REGISTERED
M. 20

ವೃತ್ತಾಂತ ಪತ್ರಿಕೆ

ಬಿಡಿ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸನ್ ೧೯೧೩ ನೇ ಇಸವಿ ಜನವರಿ ತಾರೀಖು ೨ ನೇ ಗುರುವಾರ. ಸಂಚಿಕೆ ೩೧

ಡೋಂಗರೆ ಇವರ ಬಾಲಾಮೃತ.

[115-25]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡ ಇರೋಣ, ಅಸ್ಥಿಗಳು ಕಚ್ಚಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳು ಅಶಕ್ತತೆಯ ರೋಗಗಳು ಪೂರಾ ಇಲ್ಲದಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ; ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಅಮೃತಾಂಜನ್. (Regd.)

ಇಲ್ಲಿ ವಿಶೇಷ ಲಕ್ಷ ಕೊಡಿರಿ! ವಾತ, ಸಂಧಿವಾತ, ತಲೇಸೋವು, ಸೊಂಟಸೋವು, ಶೀತ, ಕಜ್ಜಿ, ಗಂಟ್ಲುಸೋವು, ಘಾಯ, ಉಳಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರುವದು. ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ. ಬಾಟ್ಲಿ 1ಕ್ಕೆ 0–8–0.

ಅರ್ಧ ಕ್ರಯಕ್ಕಿಂತಲೂ ಕಡಮೆ.

ಹತ್ತುಲಕ್ಷ ದೊಡ್ಡ ಸೈಜು ಪೋಸ್ಟುಕಾರ್ಡುಗಳು. ಇವುಗಳು ಚಳ್ಳಗಾಗಿಯೂ ನಯವಾಗಿಯೂ ಇವೆ. 1,000 ಕ್ಕೆ ಮುಂಚಿನ ಕ್ರಯ ರೂ 2–8–0, ಈಗ 15 ಆಣೆ, ವಿ. ಪಿ. ಖರ್ಚು 12 ಆಣೆ. 500 ಕ್ಕೆ 8 ಆಣೆ. ವಿ. ಪಿ. ಖರ್ಚು 8 ಆಣೆ.

1913 ನೇ ವರ್ಷದ ಕ್ಯಾಲೆಂಡರ್ 1 ಬಾಟ್ಲಿ ಅಮೃತಾಂಜನ ತರಿಸಿಕೊಂಡವರಿಗೆ ಪುಗಸಟ್ಟೆಯಾಗಿ ರವಾನಿಸಲ್ಪಡುವದು. ಇತರರಿಗೆ ಕ್ಯಾಲೆಂಡರ್ 1ಕ್ಕೆ 1 ಆಣೆ ವಿ. ಪಿ. ಸಹಿತ [35–15]

ಅಮೃತಾಂಜನ ಡಿಪೊ, ಫೋರ್ಟು ಮುಂಬಯಿ.

1913 ನೇ ಪಾಕೆಟ್ ಡೈರಿ

ಅಂದರೆ ಆಯಾ ದಿವಸದ ಸಂಗತಿಗಳನ್ನು ಬರೆದಿಡುವದಕ್ಕೋಸ್ಕರ ಜೇಬಿನಲ್ಲಿ ಇರಿಸಿಕೊಳ್ಳುವ ಪುಸ್ತಕ. ಇದರಲ್ಲಿ ಪಂಚಾಂಗ, ಹಬ್ಬದ ದಿವಸಗಳು, ಸರಕಾರಿ ರಜಾ ದಿವಸಗಳು, ರೈಲು, ಕೋರ್ಟು, ಸ್ಟಾಂಪು, ರಿಜಿಸ್ಟ್ರು, ಟಪಾಲು ಇವಕ್ಕೆ ಸಂಬಂಧಪಟ್ಟ ಸಾಮಾನ್ಯ ವಿಷಯಗಳು, ಪ್ರಶ್ನೆ ಮುಂತಾದ ಕೆಲಸ ಕಾರ್ಯ ವಿಷಯಗಳು, ಜಮಾಖರ್ಚು ತಖ್ತೆ ಮುಂತಾಗಿ ಪ್ರತಿ ದಿನವೂ ನೋಡಿಕೊಳ್ಳಬೇಕಾದ ವಿಷಯಗಳು ಅಡಗಿವೆ.

ಎ—ಸಾದಾ ಸಣ್ಣ ಡೈರಿಗೆ 3 ಆಣೆ. ಬಿ—ಬಂಗಾರದ ಸೀಸದ ಕಡ್ಡಿಯನ್ನುಳ್ಳ ಮುಚ್ಚಳದ ಡೈರಿಗೆ 5 ಆಣೆ. ಸಿ—ಸಾದಾ ದೊಡ್ಡ ಡೈರಿಗೆ 6 ಆಣೆ. ಡಿ—ಸೀಸದ ಕಡ್ಡಿಯನ್ನುಳ್ಳ ಮುಚ್ಚಳದ ದೊಡ್ಡ ಡೈರಿಗೆ 8 ಆಣೆ.

ಜಿನೀವಾ ಡೈರಿ—ಹೊಸ ವಿನ್ಯಾಸ, ಬಹು ನೂತನ, ಗಾತ್ರ ದೊಡ್ಡದು, ವಿಷಯ ಹೆಚ್ಚು. ಉತ್ತಮವಾದ ಡೈರಿ. ಜಿ. ನಂ. 1—ಸಾದಾ 4 ಆಣೆ. ಜಿ. ನಂ. 2—ಬಂಗಾರದ ಸೀಸದ ಕಡ್ಡಿಯನ್ನುಳ್ಳ ಮುಚ್ಚಳದ ಡೈರಿಗೆ 6 ಆಣೆ. ಟಪಾಲು ಹಾಸಲು ಬೇರೆ. ಒಂದೇ ನಮೂನೆಯಲ್ಲಿ 12 ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಬಹುಮಾನವಾಗಿ ಕಳುಹಿಸುತ್ತೇವೆ.

ನಮ್ಮ ಪುಸ್ತಕಗಳ ವಿವರದ ಕ್ರಯಪಟ್ಟಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ. [5-52]

ನಮ್ಮ ವಿಳಾಸ.—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಸನ್ 1913 ನೇ ಇಸವಿಯ ಸೀತಾರಾಘವ ಪಾಕೆಟ್ ಡೈರಿ

ಬೇಗ ನೋಡಿ ಬೆಲೆ ಇಳಿಸಿದೆ ಕವಿತಾಪ್ರ್ಜ ಹೆಚ್ಚಿಸಿದೆ

ಮೊದಲೊದಲೇ ಬರೆದು ತರಿಸಿಕೊಳ್ಳಿ. ನಂ 1 ಸಣ್ಣ ಸೈಜು ಸಾದಾ ಡೈರಿಗೆ 0–4–0. ನಂ 2 ಸಣ್ಣ ಸೈಜು ಪೆನ್ಸಲ್ ಇಟ್ಟು ಮುಚ್ಚಳ ಹಾಕಿರುವ ಡೈರಿಗೆ 0–5–0. ನಂ 3 ದೊಡ್ಡ ಸೈಜು ಸಾದಾ ಡೈರಿಗೆ 0–6–0. ನಂ 4 ದೊಡ್ಡ ಸೈಜು ಪೆನ್ಸಲ್ ಇಟ್ಟು ಮುಚ್ಚಳ ಹಾಕಿರುವ ಡೈರಿಗೆ 0–8–0. ಟಪಾಲು ಖರ್ಚು ಬೇರೆ. ಒಂದೇ ತರಹದ 6 ಡೈರಿ ತರಿಸಿಕೊಂಡವರಿಗೆ ಒಂದು ಡೈರಿ ಇನಾಮು. 7 ಕ್ಕಿಂತ ಹೆಚ್ಚು ಡೈರಿಗೆ ಬರೆಯುವವರು ಅಡ್ವಾನ್ಸಾಗಿ ಒಂದು ರೂಪಾಯಿ ಕಳುಹಿಸಿದರೇನೇ ಡೈರಿಗಳನ್ನು ಬಾಕಿ ಹಣಕ್ಕೆ ವಿ. ಪಿ. ಮಾಡಲಾಗುವದು. [136 18]

ವಿವರಣೆ—(1) ಈ ವರುಷ ತಾವು ನೋಡಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವಂತೆ ಪಕ್ಕಾದ ಕಾಗದಗಳಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿ ಕ್ಯಾಲಿಕೋ (ಬಟ್ಟೆಯ) ಬೈಂಡು ಮಾಡಿಸಿದೆ. (2) ವ್ಯವಸಾಯ ವಿಚಾರದಲ್ಲಿ ಪ್ರತಿಯೊಬ್ಬರೂ ತಿಳಿಯಬೇಕಾದ ಸಾಧಕಬಾಧಕಗಳನ್ನು ತಕ್ಕಮಟ್ಟಿಗೆ ಪಂಚಾಂಗ, ಕ್ಯಾಲೆಂಡರ್, ರಾಹುಕಾಲ ಗುಳಿಕಕಾಲಗಳು, ಸಂವತ್ಸರಫಲಗಳು, ಗ್ರಹಣ, ವಾತಕರ್ಮ ಮೊದಲುಗೊಂಡು ಷೋಡಶಕರ್ಮಕ್ಕೆ ಬೇಕಾದ ಲಗ್ನ, ಇವೇ ಮುಂತಾದ ವಿಷಯಗಳು ಸುಲಭವಾಗಿ ತಿಳಿಯುವಂತೆ ಬರೆದಿದೆ. (3) ಕೋರ್ಟು ಫೀಜು ಆಕ್ಟು, ಪೋಸ್ಟಾಫೀಸಿನ ಸಂಗತಿ, ಸ್ಟಾಂಪ್ ಆಕ್ಟು, ಮುಖ್ಯವಾಗಿ ಬೇಕಾಗುವ ಮತ್ತಾವ ಡೈರಿಯಲ್ಲೂ ಹೇಳದಿರುವಷ್ಟು ಹೊಸ ವಿಷಯಗಳನ್ನೂ ಸೇರಿಸಿದೆ. (4) ಮದರಾಸ್ ಮತ್ತು ಸದರ್ನ್ ಮರಾಟಾ ರೈಲ್ವೆ, ರೈಲು ಹೊರಡುವ ಕಾಲ, ಅಳತೆ, ತೂಕ, ಮೈಸೂರು ಸಂಸ್ಥಾನದ ಮುಖ್ಯಾಧಿಕಾರಿಗಳ ಹೆಸರು, ಅವರ ತಲಬು, ಗೌರ್ನ್‌ಮೆಂಟ್ ರಜಾ ದಿವಸಗಳು, ಸಂವತ್ಸರಗಳಿಗೆ ಸರಿಯಾದ ಇಂಗ್ಲೀಷು ಸಂವತ್ಸರಗಳು, ಕೇಳತಕ್ಕ ಹಾಡಬಡ್ಡಿ, ತಲಬುಪಂಕ್ತಿಪಟ್ಟಿ ಸದಾ ಇರುತ್ತದೆ. ಮೋಟಿ ಲೆಕ್ಕ, ಹಾಲಿನ ಲೆಕ್ಕ, ಮುಖ್ಯವಾದ ವಿಷಯ, ಒಟ್ಟು ಜಮಾಖರ್ಚು, ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ. ಈ ಹೊಸ ಪ್ರಯತ್ನಕ್ಕೆ ದೇಶಾಭಿಮಾನಿಗಳ ಪ್ರೋತ್ಸಾಹ ಅತ್ಯವಶ್ಯ. ಬರೆಯುವವರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪ್ರಕಟನೆ.

163-9

ಪತ್ತಿಯ ತುಪ್ಪವು ತುಮಕೂರು, ಅರಸೀಕೆರೆ, ಹರಿಹರ, ಮತ್ತು ತಿಪ್ಟೂರು, ಈ ಸ್ಥಳಗಳಲ್ಲಿಯೂ ದೊರೆಯುವಂತೆ ಈಚೆಗೆ ಏರ್ಪಾಟು ಮಾಡಲ್ಪಟ್ಟಿದೆ.

ಬೆಂಗಳೂರು ಸಿಟಿ ಚಿಕ್ಕಪೇಟೆ ಅರ್ಕಾಟ್ ಶ್ರೀನಿವಾಸಾಚಾರ್ಯರ ಬೀದಿ 6 ನೇ ನಂಬರು ಹೊಸಮಳಿಗೆಯಲ್ಲಿ ಪತ್ತಿಯ ತುಪ್ಪ, ಹಿಂಡಿ, ಮತ್ತು ಹೊಟ್ಟು ಸುಲಭಕ್ರಯಕ್ಕೆ ದೊರೆಯುತ್ತವೆ.

ನಮ್ಮ ಕಂಪನಿಯ ಏಜಂಟರು ಮಾರುವ ಈ ಪದಾರ್ಥಗಳಲ್ಲಿ ದೋಷ ಕಂಡುಬಂದರೆ ಅದನ್ನು ನಮಗೆ ತಿಳಿಸಿದರೆ ಕೂಡಲೆ ಕ್ರಮಪಡಿಸುವೆವು. ಇತರರು ನಡಿಯಿಸಬಹುದಾದ ವ್ಯತ್ಯಾಸಗಳಿಗೆ ನಾವು ಜವಾಬ್ದಾರರಲ್ಲ.

ಶ್ರೀ ತಿರುಪತಿ ಚಂದನವು.

ಡಬ್ಬಿ 1 ಕ್ಕೆ ರೂ. 0–12–0 ಆಣೆ.

TIRUPATI CHANDANAM REGISTRED TRADE MARK KAPILA & Co. CHITTOOR

ಪವಿತ್ರವಾದ ಪರಿಮಳೋಪೇತವಾದ ಈ ಚಂದನವು ನೋಡಲಿಕ್ಕೆ ಅಂದವಾಗಿಯೂ ಶೃಂಗಾರವಾದ ಬಣ್ಣದಿಂದ ಕಣ್ಣುಗಳನ್ನು ತೃಪ್ತಿಪಡಿಸಿ ಶುಭಕಾರ್ಯಗಳಲ್ಲಿ ಅಭ್ಯಾಗತರನ್ನು ತೃಪ್ತಿಪಡಿಸುವದಲ್ಲದೆ ಶೃಂಗಾರ ರಸ ವಿನೋದಗಳಲ್ಲಿ ಉತ್ಸಾಹೋದ್ರೇಕವುಂಟುಮಾಡಿ ಪರಸ್ಪರಮೈತ್ರಿಯು ಮನೋರಂಜಕತ್ವವು ಉಂಟುಮಾಡುವದು. ರಾತ್ರಿ ಕಾಲಗಳಲ್ಲಿ ಉಪಯೋಗಿಸಿದರೆ ಜೀರ್ಣಶಕ್ತಿಯನ್ನುಂಟುಮಾಡಿ ಸೆಕೆ, ಸೊಳ್ಳೆ ಇವುಗಳ ಬಾಧೆಗಳಿಂದ ತಪ್ಪಿಸಿ ಇಂಪಾದ ನಿದ್ರೆಯನ್ನು ಕೊಟ್ಟು ಸುಖವಾಗಿಟ್ಟಿರುವದು. ಇನ್ನೂ ಶರೀರ ಕಾಂತಿಯನ್ನು ಸದಾ ಉಂಟುಮಾಡುವದು. ಒಂದು ಸಲ ತರಿಸಿ ನೋಡಿದರೆ ಅದರ ಪ್ರಭಾವವು ಗೊತ್ತಾಗುವದು. ಇನ್ನೂ ನಮ್ಮಲ್ಲಿ ಮಾರಾಟಕ್ಕೆ ತಯಾರಾಗಿರುವ ಅನೇಕ ಸಾಮಾನುಗಳು ಅಂದರೆ ಅತಿಶಯವಾದ ಸುವಾಸನೆಯುಳ್ಳ ಎಲ್ಲಾ ವಿಧ ಅತ್ತರುಗಳು, ಕುಂತಲಕ್ಕೆ ತೈಲಗಳು, ಉತ್ಕೃಷ್ಟವಾದ ಕೇಸರಿ, ಪಚ್ಚಕರ್ಪೂರ, ಕಸ್ತೂರಿ, ತಾಂಬೂಲ ಮಾತ್ರೆಗಳು ಮುಂತಾದವು ಅವೆ. ಅವುಗಳಿಗೆ ಪ್ರತ್ಯೇಕ ಬರೆದರೆ ಕ್ಯಾಟಲಾಗು ಪಟ್ಟಿಯಲ್ಲದೆ ಕಳುಹಿಸಿಕೊಡುವೆವು. ಇನ್ನು ಮಧ್ಯಮತಕ್ಕೆ ಬೇಕಾದ ಗ್ರಂಥಗಳು ಅಚ್ಚುಲಿಪಿಯಲ್ಲಿ ತಯಾರಾಗಿವೆ. ಬೇಕಾದವರು ತೀವ್ರವಾಗಿ ಬರೆದು ಕೊಳ್ಳಬೇಕು. [172 7]

ಕಪಿಲಾ ಕಂಪನಿ, ಚಿತ್ತೂರು, ಚಿತ್ತೂರು ಜಿಲ್ಲಾ.

ಇದೇ ನಿಜವಾದ ರೈಲ್ವೆ ರೆಗ್ಯುಲೇಟರೆಂಬ ಜೇಬುಗಡಿಯಾರ! ಕ್ರಿಸ್‌ಮಸ್ ಹಬ್ಬಕ್ಕೋಸ್ಕರ ಈ ಸ್ವಲ್ಪ ಬೆಲೆಗೆ ಕೊಡಲ್ಪಡುತ್ತೆ.

ನಮ್ಮ ಕಂಪನಿಯು ಪ್ರಸಿದ್ಧಿಯಾಗುವದಕ್ಕಾಗಿ 8 ರೂಪಾಯಿನ ಈ ಗಡಿಯಾರವನ್ನು 800 ಗಡಿಯಾರಗಳು ಮುಗಿಯುವ ವರಿಗೆ ಮಾತ್ರ ರೂ. 1-13-0 ಗೆ ಕೊಡಲ್ಪಡುತ್ತೆ.



ಅಸ್ಪಷ್ಟವಂತರುಗಳೆಲ್ಲವೆ ಮತ್ಯಾರಿಗೂ ದೊರೆಯಲಾರದು. ಮೋಸವೆಂದು ತಿಳಿದು ಆಲಸ್ಯಮಾಡುವವರಿಗೆ ಈ ಗಡಿಯಾರ ನಿಜವಾಗಿ ದೊರೆಯಲಾರದು. ಪತ್ತಿ ಕಂಪನಿಯವರ ನಿಜಸ್ಥಿತಿ ಈ ಗಡಿಯಾರದಿಂದಲೇ ತಿಳಿದುಕೊಳ್ಳಬಹುದು. ಜಾಗ್ರತೆ ದರಖಾಸ್ತು ಕಳುಹಿಸಿ. ಇದನ್ನು ರೈಲ್ವೆ ಉದ್ಯೋಗಸ್ಥರು ಧರಿಸತಕ್ಕದ್ದು. ಈ ಗಡಿಯಾರವು ರೈಲ್ವೆ ಅಧಿಕಾರಿಗಳಿಂದ ಹೆಸರುವಾಸಿಯನ್ನು ಪಡೆದು ಇರುತ್ತೆ. ಇದು ಇತರ ಅಲ್ಪಕ್ರಯದ ಗಡಿಯಾರಗಳ ಹಾಗಲ್ಲ. ಇದಕ್ಕೆ 6 ವರುಷ ನಾವು ಜವಾಬುದಾರರು. ರೈಲ್ ಹೊತ್ತಿಗೆ 1 ನಿಮಿಷ ಸಹ ವ್ಯತ್ಯಾಸವಿಲ್ಲದೆ ನಡೆಯುವದರಿಂದಲೇ ರೈಲ್ವೆ ಕಂಪನಿಯವರುಗಳು ಎಲ್ಲರೂ ಉಪಯೋಗಿಸುತ್ತಾರೆ. [61]

ಪತ್ತಿ ಅಂಡ್ ಕೋ, 30 ಜನರಲ್ ಮುತ್ಯಾಲಪೇಟೆ ಸ್ಟ್ರೀಟ್, ಸಾವಕಾರಪೇಟೆ, ಮದರಾಸು.

ಪ್ರುಗಟ್ಟೆ ಕೊಡಲಾಗುತ್ತೆ

10 ವರುಷ ಜಾಮೀನ್ ಉಳ್ಳ 30 ಗಂಟೆ ನಡೆಯುವ ಉತ್ಕೃಷ್ಟವಾದ ಚಲೆಯುಳ್ಳ ಲೀವರ್ ವಾಚನ್ನೂ, ಒಂದು ಸೊಗಸಾದ ಸರಪಣಿಯನ್ನೂ, 100 ಪೋಸ್ಟ್ ಕಾರ್ಡನ್ನು ಬಿಟ್ಟಿ ಕೊಡುತ್ತೇವೆ ಅರ್ಧಾಣೆ ಸ್ಟಾಂಪಿಟ್ಟು ಇಂಗ್ಲಿಷಿನಲ್ಲೇ ನಮಗೆ ಬರೆಯಿರಿ ವಿಳಾಸ —ಮೆಸ್ಸರ್ಸ್ ಎಂ ಎ ಫಟಾಲಾ ಕಂಪನಿ,

[170 6] ತಿಪ್ಪೂರು, ಉತ್ತರ ಆರ್ಕಾಟು

ಉತ್ಕೃಷ್ಟವಾದ ಮುಲಾಂ, ಟೂತ್ ಪೌಡರ್.

… ಬಳತಗಳಿಂದಲೂ ಗುಣಮಾಡುವ ನಮ್ಮಲ್ಲೇ ತಯಾರಾಗಿ ಸಿದ್ಧವಾಗಿರುವ ಕಜ್ಜಿ ಕುರು, ನವೆ ಮತ್ತು ಮೈಮೇಲಿನ ಕೆರತದ ಮುಲಾಮು … ತರಿಸಿಕೊಳ್ಳಿರಿ ಗುಣಹೊಂದಿರಿ ಉತ್ತಮವಾದ ಟೂತ್ ಪೌಡರ್ ಡಬ್ಬಿಗೆ ೨ ಆ ಪ್ರತಿ ಮುಲಾಂ ಡಬ್ಬಿಗೆ ೩ ಆ 10ಕ್ಕೆ 1 ರೂ 6 ಆ 10ಕ್ಕೆ ಮೀರಿದರೆ ಡಬ್ಬಿಗೆ ೧ ಆಣೆಯಂತೆ ವಿಳಾಸ —ಯು ಕೆ ನರಸಿಂಹಯ್ಯ

[192 1] ಮುನ್ಸೀಫ್ ಕೋರ್ಟು ಡೆಪ್ಯುಟಿ ಮುನ್ಸಿ, ಹೊಳೆನರಸೀಪುರ

ಪ್ರಸಿದ್ಧಪತ್ರಿಕ

ಪ್ರೀ ನಾರದಾ ಹಾರ್ಮೋನಿಯಂ ಸೂರಜಾಲ, ಯುನಿಯ ಕಾಟೇಜ್, ವಿ ಗ ಕೂರು ಸಿಟಿ ಈ ಸ್ಥಳದಲ್ಲಿ ಮನೋಹರವಾದ ಹಿಂದುಸ್ತಾನಿ, ಪಾರ್ಸೀ, ಮರಾಠಿ,



ಗುಜರಾತಿ ಮತ್ತು ಕನ್ನಡ ಹಾಡುಗಾರಿಕೆಯನ್ನು ಹಾರ್ಮೋನಿಯ ಸಲ್ಲಿ ನೂತನವಾಗಿಯೂ ರಸಭರಿತವಾಗಿಯೂ ಮತ್ತು ಮನಸ್ಸಿಗೆ ಗ್ರಾಹ್ಯವಾಗುವ ತೆಯೂ ಪಾಠ ಹೇಳಿಕೊಡಲ್ಪಡುತ್ತೆ ಮತ್ತು ಪ್ರೈವೇಟಾಗಿ ತಮ್ಮ ಮನೆಗಳಲ್ಲಿ ಪಾಠ ಹೇಳಿಸಿಕೊಳ್ಳ ತಕ್ಕವರಿಗೆ ಅವರವರ ಟೈಂ ಪ್ರಕಾರ ಹೇಳಿಕೊಡಲ್ಪಡುತ್ತೆ ಮತ್ತು ಮೊಲ್ಲಿನ ಸ್ಥಳದಲ್ಲಿ ಗ್ಯಾರಂಟಿಯುಳ್ಳ ಹೊಸ ಹಾರ್ಮೋನಿಯಂ ಗಳು … ಯಕ್ಕೆ ಸಿದ್ಧವಾಗಿರುತ್ತವೆ … ಉಪಯೋಗಿ … ತ ರದ ಹಾರ್ಮೋ … ರಿಪೇರಿ … ತರಿಸಿಕೊಳ್ಳಲ್ಪಡುತ್ತೆ ಮತ್ತು ಎಲ್ಲಾ ತರಹ ವಾದ್ಯ … ಗಳನ್ನು ಸುಲಭ ಕ್ರಯಗಳಿಗೆ … ಕೊಡಲಾಗುತ್ತೆ … ಮೊಲ್ಲಿನ ಅಡ್ರೆಸ್ಸಿಗೆ ಬರೆದು ಕೇಳ್ಳಬಹುದು [1…]

… ಇದು ಬಹಳ … ಸಮ್ಮ … ಪ್ರ…

ಸಾ… … ಬಹು ಸುಲಭ ಕ್ರಯ

ಪಾಕೆಟ್ ಲಿವರ್ ವಾಚು

ಇದರ ಕ್ರಯ 6 ಬಹುಮಾನಗಳ ಸಮೇತ 3 ರೂ ಮಾತ್ರ

… ವರ್ಷಗಳ ಗ್ಯಾರಂಟಿ



ಇದು ಪ್ರಪಂಚದಲ್ಲೆಲ್ಲಾ ಪ್ರಸಿದ್ಧವಾದ ಲಿವರ್ ಕೆಲಸದಿಂದ ಬಹಳ ಸಣ್ಣವಾದ ಮತ್ತು ಬಲವಾದ ಯಂತ್ರ … ಉ… ಚಿತವಾಗಿ ಬಂದಿರುತ್ತೆ ಈ … ಹೊಸದ … ಸರಿಯಾದ ಕಾಲವನ್ನು ತೋರಿಸುವುದು … ಬದಲಾವಣೆ ಅನೇಕ ವರ್ಷ … [1… 7]

ಇದರ ಆರು ಬಹುಮಾನಗಳ ತಪಸೀಲು

1 … 4 …
2 … ಉತ್ತರಮುಖಿ … ಉಂಗುರ
3 … ಮುಳ್ಳು
… ವಿಳಾಸ —

… ವೆಂಕಟಚಲಂ ಅಂಡ್ ಕಂಪನಿ,

ನಂಬರ್ 7 ಕೋಮು ವೆಂಕಟಾಚಲ ಪ್ಪಯರ … , ಮದ್ರಾಸು

ಒಳ್ಳೆ … 3 ಗಳ ಆರ್ಡರ್ … ಕೊಡದೆ ಬರೆಯಿರಿ

(1) … ಟರ್ … ಗಡಿಯಾರವನ್ನು ತಿಂಗಳ … ನಮ್ಮ ರೂ 8 ಕ್ಕೆ

ಕೊಡುತ್ತೇವೆ … ಮಾರ್ಕಿನ ಕೀಬು … ಉತ್ತರ ಮುಖಿ, ಸರಪಣಿ ಮತ್ತು … ರೂ 3 10 ಅಂಚೆ ಹಾಸಲು 8 ಆಣೆ (2) ಎಂಟು ದಿವಸಗಳಿಗೊಂದಾವರ್ತಿ ಕೀ ಕೊಡುವ … ಜೇಬು ಗಡಿಯಾರ ರೂ 8 (3) ಕೈಗೆ ಕಟ್ಟಿಕೊಳ್ಳುವ … ವಾಚಿಂಟ ಅಚ್ಚ ಬೆಳ್ಳಿಯ ಗಡಿಯಾರ ರೂ 10 … ರೂ 10-0 (4) ಬೋರ್ಡ್ ಸಂಗೀತ ಹಾಡುವ ಟೇಬಲ್ ಗಡಿಯಾರ ರೂ 10 ಗಂಟೆ ಹೊಡೆಯುವುದು ರೂ 4-8-0 … ರೂ 2 8 0 ಸಾದಾ … ರೂ 2 … ರೂ 1 4-0 (5) ಎಂಟು ದಿವಸಗಳಿಗೆ ಕೀ ಕೊಡುವ ಗಂಟೆ ಹೊಡೆಯುವ ವಾಲ್ … ಗೋಡೆಗೆ ತಗಲಿಸುವ ಗಡಿಯಾರ ರೂ 7 0 0 (6) … ರೂ 3-6 0 … 3 4-0 (7) ಕುಸುಮಕಾಂತಿ ತೈಲವು ಉತ್ತಮ ವನಸ್ಪತಿಗಳ … ಕುಸುಮಗಳಿಂದಲೂ ತಯಾರಿಸಿದ್ದರಿಂದ ಕೂದಲುಗಳ … ವಿಸ್ತಾರವಾಗಿಯೂ … ಕೂದಲಾಗಿಯೂ, ಕಪ್ಪಾಗಿಯೂ ಬೆಳೆ … ಶಂತನ್ನುಂಟುಮಾಡುತ್ತೆ, ಕ್ರಯ ಸೀಸೆ 1 ಕ್ಕೆ 8 ಆಣೆ ಡಿಸೆಂಬರ್ ಆಖೈರಿನಲ್ಲಿ 1, … 1 ನೆಯ ನಂಬರ್ ಗಡಿಯಾರಗಳನ್ನು ಗ್ರಾಹಕರಲ್ಲಿ ಯಾರಿಗೆ ಬರುತ್ತೋ ಅವರಿಗೆ ಕೊಡಲ್ಪಡುತ್ತೆ [130-20]

ನಮ್ಮ ವಿಳಾಸ —ವೆಂಕಟಾಚಲಂ ಕಂಪನಿ,

ಪ್ಯ ರೋಡ್, ವೇಪೇರಿ, ಮದ್ರಾಸು.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



ಕಳ ಹೊಟ್ಟೆ … ನೋವು, … ಭೇದಿಯಾಗುವುದು ಆಮಶಂಕೆ, … ಉಪದ್ರ … ಗಳ ನೋವು … ನಾನಾ ತರದ ಶೂಲೆಗಳು— ಈ ರೋಗಗಳನ್ನೆಲ್ಲಾ … ಈ ಪರಮಾಶ್ಚರ್ಯದ … ದ ಔಷಧವು ಜನರನ್ನು … ರುವಷ್ಟು ಮತ್ತು ಸ್ಲೋವನೂ ವ್ಯಾಧಿಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವು … ಜ್ಞಾಪಕದಲ್ಲಿಟ್ಟು ಕೊಳ್ಳಿ— ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೆ ಹೊಟ್ಟೆಯೊಳಗಿರುವ ಎಲ್ಲಾ ನೋವನ್ನೂ ಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ಪರ್ಶ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುತ್ತದೆ — ಸಣ್ಣ ಸೀಸೆಗೆ ೧ ರೂಪಾಯಿ — ದೊಡ್ಡ ಸೀಸೆಗೆ ೨ ರೂಪಾಯಿ

ನೋಡಿ! ವಿಶೇಷವಾಗಿ ಆರ್ಡರುಗಳು ಬಂದು ಸುರಿಯುತ್ತಿವೆ ಬೇಗನೆ!





12 ಬಹುಮಾನಗಳು
1 ಸರ್ಪೋಟಾರ … ಗುಂಡು
2 … ಪಾಕೆಟ್ … ಕ ಸಹಿತ ಉಳ್ಳ
3 ನಾಣ್ಯವಾದ ಕರವಸ್ತ್ರ
4 ಫೌಂಟನ್ … ಎಲೆಕ್ಟ್ರಿಕ್ … ರದ … ವುಳ್ಳ
5 … ಮೂರು
6 ಬೋ… ಉಂಗುರ
7 ಕನ್ನಡಿ ಪಾತ್ರೆಗ…
8 … ಆಟಾ …
9 …
10 ಸು … ವಾದ ಪಾತ್ರೆಗ
11 ಸು … ವಾದ ಗಡಿಯಾರ …
12 ಉತ್ತರಮುಖಿ, ನಾಣ್ಯವಾದದ್ದು





ನಾಣ್ಯವಾದ ವಾಚ್ … ಭರವಸೆಯುಳ್ಳ …

ರೈಲ್ವೆ ರಗ್ಯುಲೇಟರ್ ಲೀವರ್ ಓಪನ್ ಫೇಸ್ ವಾಚ್

ಇದರ ಕ್ರಯ ಸಂತೋಷಕರವಾದ ಹನ್ನೆರಡು ಬಹುಮಾನಗಳ ಸಮೇತ ಮೂರು ರೂಪಾಯಿ ಮಾತ್ರ

ಐದು ವರುಷಗಳ ಗ್ಯಾರಂಟಿ

ಇದು … ಲ್ವೆ … ನಾಣ್ಯವಾದ … ಸೆಕೆಂಡ್ ಮುಳ್ಳುಗಳು … ಕೆಲಸ … ತಯಾರಾದವು … ಬಹಳ … ವಾದ … [184]

… ಕ್ಕೆ ಬರೆದು ಕೂಡಲೆ ಕಳ್ಳಿ

ಹಿಸಾಸ … ಪಸ … ಅಂಡ್ ಕಂಪೆನಿ

ನಂಬರು ೧೨ ಬಾಷ್ಯಗಾರಲು ನಾಯುಡು … ಮದ…

ಮಾರಾಟಕ್ಕೆ ಸಿದ್ಧವಾಗಿದೆ.

ಒಂದು ಒಳ್ಳೇ ರಿಕ್ಷಾ ಎಂಬ ಕೈಗಾಡಿ, ಮೆ ಸೂರು … ಪ್ರೆಸ್ಸಿನಲ್ಲಿ ವಿಚಾರಿಸಿದರೆ ಗೊತ್ತಾಗುತ್ತದೆ [188 6]

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮವಿಟ್ಟುಕೊಳ್ಳುವುದು ಉತ್ತಮ

SCOTT'S EMULSION.

(ಸ್ಕಾಟ್ಸ್ ಇಮಲ್ ಷನ್)

ಘಟ್ಟ ದರ … ಪ್ಲೇಗ್, ಮಲೇರಿಯಾರೋಗ, … ಅಥವಾ … ರೋಗಗಳ ಭಯಕ್ಕೆ ಒಳಪಡುವ … ರೋಗವು … ದುರ್ಬಲರನ್ನು …

ಅಸ್ಕ ಸ … ದೂರ ಹೋಗಲಾಡಿ, ಶರೀರದಲ್ಲಿರುವ … ಭಾಗಗಳನ್ನು ಬಲಪಡಿಸಿ … ಸಂಪೂರ್ಣ … ನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧಿ … ಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲಂಡ್

ಈ ಮಾನುಷನುಷ್ಯ ಇರುವ ಔಷಧ ವನ್ನೇ ಕೊಂಡುಕೊಳ್ಳಿ

THE PLACE OF HASSAN CAPS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇ? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಳಕೆಯಾಗುತ್ತಿರುವ ಟೋಪಿಗಳೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೇಳಿ … ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳೆಲ್ಲಾ ಸೆಟ್ಟಿಗೆ ವಿಲಾಯತಿಯಿಂದಲೇ ಬರುವವು (೨) ಟೋಪಿ … ಮುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿ ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು … ದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧… ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ ೧ …

ಮುಸುಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, …

ಕನ್ನಡ ಪುಸ್ತಕಗಳು.

ಶಾಕುಂತಲ ನಾಟಕ ೧ಆ ಅನಂಗಸುಂದರಿ ೬ಆ ತಾರಾಸುಂದರಿ ಶೋಭನ ೧೨ಆ ಕಲಾವತಿ ೧ಆ ಸಾವಿತ್ರಿ ೨ಆ ಹನುಮಂತ ೨ಆ ೧ಆ ಕಲಾವತಿ ೨ಆ ಮಾಲತೀಮಧುಕರ ೭ಆ ವಸುಮತಿ ೭ಆ ೨ಆ ಚ ಪ್ರಮಾ ೧ಆ ನಕಲಿಗಳು—ಪ್ರಹಸನ ಚತುಷ್ಟಯ ೧ಆ ರಂಗ ೧ಆ ಮಹಾರಣ್ಯಪುರಾಧಿಪತ್ಯ ೧ಆ ಮಹಾಬಧಿರಪ್ರಹಸನ ೪ಆ ಇಲ್ಲದೆ ಇನ್ನೂ ಅನೇಕ ನಾಟಕಗಳು ನಮ್ಮಲ್ಲಿ ದೊರೆಯುವುವು

[187-5] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ರೋಗನಿವಾರಕ ಕಸ್ತೂರೀ ಮಾತ್ರೆಗಳನ್ನು ಮರೆಯಬೇಡಿ.

ಈ ಮಾತ್ರೆಗಳ ವಿಷಯವಾಗಿ ಬಂದಿರುವ ಸಾವಿರಾರು ಯೋಗ್ಯತಾ ಪತ್ರಗಳಲ್ಲಿ ಕೆಲವನ್ನು ಮಾತ್ರ ತಮ್ಮ ಸಂಬಗಗಾಗಿ ಇಲ್ಲಿ ವಿವರಿಸಿವೆ.

(೧) ಮ|| ಸರವಣ್ಣಯ್ಯನ ವೆಂಕಟಪ್ಪಶೆಟ್ಟರು, ಆರಕೆರೆ ಗೂಡು, ಇವರು—ತಮ್ಮ ಕಸ್ತೂರಿ ಮಾತ್ರೆಗಳನ್ನು ಯಾರ್‍ಯಾರಿಗೆ ಕೊಟ್ಟರೂ ಅವರೆಲ್ಲರೂ ಬಹಳ ಗುಣಕಾರಿ ಎಂದು ಹೇಳುವುದರಿಂದ ಇನ್ನು ೬ ಸೀಸೆಗಳನ್ನು ಕಳುಹಿಸಿಕೊಡಿ (೨) ಟಿ ಸಂಜುಂಡಯ್ಯನವರು, ಹೊಳೇನರಸೀಪುರ, ಇವರು—ಜಲ್ಲಾ ಖಾಯಿಲೆಗಳನ್ನೂ ತಮ್ಮ ಕಸ್ತೂರೀ ಮಾತ್ರೆಗಳು ಗುಣಪಡಿಸಿವೆ ನಾಲ್ಕು ಜನರ ಪ್ಲೇಗು ರೋಗಕ್ಕೂ ಸಂಜೀವನವಾಯಿತು ಇನ್ನೂ ೧೨ ಸೀಸೆಗಳನ್ನು ಕಳುಹಿಸಿ (೩) ಮ|| ಬಸಲಿಂಗಯ್ಯ ಬಸಯ್ಯ ಕಾರಾಮಾಸ್ಟರ್, ಪುಕ್ಕುಸಹಳ್ಳಿ, ವಿಜಾಪುರ, ಇವರು—ಯಾವ ಔಷಧದಿಂದಲೂ ಗುಣವಾಗದಿದ್ದ ೧೫ ವರ್ಷದ ಜ್ವರವು ತಮ್ಮ ಕಸ್ತೂರಿ ಮಾತ್ರೆಗಳಿಂದ ಗುಣವಾಗಿರುತ್ತದೆ (೪) ಮ|| ಹಿರೇಪುರದ ಪರಮ ಶೆಟ್ಟಿಯು, ಧಾರವಾಡ, ಇವರು—ತಮ್ಮ ಕಸ್ತೂರಿ ಮಾತ್ರೆಗಳು ನಮ್ಮೆಲ್ಲರಿಗೂ ಉಪಯೋಗಕ್ಕೆ ಬಂದಿರುವುದರಿಂದ ಪುನಃ ೨೫ ಸೀಸೆಗಳನ್ನು ಕಳುಹಿಸಿಕೊಡಿ (೫) ಮ|| ಎಸ್ ಎ ಸ್ವಾಮಿ, ಕಂಟ್ರಾಕ್ಟರ್ ಜಿ ಎಸ್ ಎಂ ಅ ಡ್ ಕೊ ಲಿಮಿಟೆಡ್, ಜಿಪ್ರಗ್, ಬಳ್ಳಾರಿ, ಇವರು—ತಮ್ಮ ಕಸ್ತೂರಿ ಮಾತ್ರೆಗಳಲ್ಲಿ ಥಳಜರದ ಅನೇಕ ಖಾಯಿಲೆಗಳನ್ನು ನೂಗಲಾಡಿಸುವ ಗುಣವು ಅತ್ಯುತ್ತಮವಾಗಿದೆ (೬) ಮ|| ಆರ್ ಎನ್ ಪೋಲಕ್‌ದರ್, ಸ್ಕೂಲ್ ಹೆಡ್ ಮಾಸ್ಟರ್, ಕೌಸಗಾಲ್, ಇವರು—ತಮ್ಮ ಕಸ್ತೂರೀ ಮಾತ್ರೆಗಳು ತಾವು ಹೇಳಿರುವ ಅನೇಕ ಖಾಯಿಲೆಗಳನ್ನು ಗುಣಪಡಿಸಿವೆ ಉಪಯೋಗಿಸಿದವರೆಲ್ಲರೂ ಮೆಚ್ಚಿದ್ದಾರೆ ಇನ್ನು ೧೨ ಸೀಸೆಗಳನ್ನು ಕಳುಹಿಸಿಕೊಡಿ [175 7]

ಕ್ರಯ ೨೨೦ ಮಾತ್ರೆಯುಳ್ಳ ಸೀಸೆಗೆ ೪ ಆಣೆ ೩ ಕ್ಕೆ ೧ ಇನಾಂ ೧ ರಿಂದ ೬ ವರೆಗೆ ಟಪಾಲ್ ಚಾರ್ಜು ೪ ಆಣೆ ನಿಮ್ಮ ಹೆಸರನ್ನು ಸ್ಪಷ್ಟವಾಗಿ ಬರೆಸಿ

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಮಹಾಣಕಸ ಹಳ್ಳಿಗೆ ವೈದ್ಯಶಾಲೆ ಬೇಕು

ಮೊಸಳೆಕೋಟೆ ಎಳೆ ಮಹಾಣಕಸ ಹಳ್ಳಿಯಲ್ಲಿರುವ ಶ್ಯಾನುಭೋಗರು ಪುಟ್ಟಂಣನವರ ಮಕ್ಕಳು ತಿಕ ಸರಸಿ ಯೆನವರು ಒಳಿಯಪಡಿಸುವದೇನೆಂದರೆ— ೨೦ ದಿವಸದಲ್ಲಿ ನನ್ನ ತಂಗಿ ಸೀಗಮ್ಮನು ಪ್ರಸವವಾಗಿ ಪ್ರಜ್ಞೆಯಿಲ್ಲದೆ ಸಾಮಾಜಿಕವಾಗಿ ದೇಶಪ್ರಕಟ ಮನೆ ಜನರೆಲ್ಲಾ ಕೈ ಭರವಸೆ ಬಿಟ್ಟು ತಂದಿಟ್ಟು ಕೇಶವ ನಿರಾಶೆಯಾಗುವ ನಿರೀಕ್ಷಣೆಯಲ್ಲಿದ್ದರು ನೂರಾರು ಪ್ರತಿಗಳು ಬಂದು ನೋಡಿ ಬಹಳ ದುಃಖಿಸುತ್ತಾ ಇದ್ದರು ನಂತರ ಮೊದಮ ಗ್ರಾಮದವರಾಗಿ ಸುಂಕಾ ಕೊಪ್ಪಾರು ಚೌಡಪ್ಪನವರ ಶಿಫಾರಸ್ಸಿನಿಂದ ವೈದ್ಯರಾದ ಪಂಡಿತ ವಂಶಕರಾದ ಪದ್ಮಸಾಲಿ ಬಾಪುಣ್ಣಯ್ಯನವರ ಮಕ್ಕಳು ಪಂಡಿತ ವೆಂಕಟಸ್ವಾಮಿ ಯೆನವರನ್ನು ಕರೆದುತಂದು ತೋರಿಸಲು ಅವರು ಪ್ರಮಾಣಿಸಿ ಚಿಕಿತ್ಸೆಗೆ ಪ್ರಾರಂಭವಾಡಿ ತುಂಬಾ ಮೆಹನತ್ತಿನಿಂದ ೧೫ ದಿನದಲ್ಲಿ ಆರಾಮ ಮಾಡಿರುತ್ತಾರೆ ಮತ್ತು ಈ ಊರಿಗೆ ಸಮೀಪದಲ್ಲಿ ಬಾಳೆ ಅರಸಿನವರ ಚತ್ರದ ಊರಿನಲ್ಲಿ ಪೈತ್ಯಭ್ರಮೆಯಿಂದ ವಿವೇಕಶೂನ್ಯನಾಗಿ ತಿರುಗುತ್ತಿದ್ದ ಒಕ್ಕಲಿಗರ ಮರಿಗೌಡನ ಮಗ ವ್ಯಾವನೆಂಬುವನನ್ನು ಮತ್ತು ಇದೇ ಊರಿನಲ್ಲಿರುವ ಬ್ರಾಹ್ಮಣ ಲಿಂಗಣ್ಣಯ್ಯನವರ ಮಗ ಸುಬ್ರಾಯನೆಂಬುವನಿಗೆ ವಿಷದಿಂದ ಪ್ರಜ್ಞೆಯಿಲ್ಲದೆ ಇರಲು ಮನೆಯವರುಗಳೆಲ್ಲಾ ಭರವಸೆ ಬಿಟ್ಟಿದ್ದು ಅವರು ಇಂಥಾ ಕಾಯಿಲೆಗಳನ್ನು ಸಹ ಗುಣಪಡಿಸಿರುತ್ತಾರೆ ಪರಂತು ಈ ಗ್ರಾಮಕ್ಕೆ ಸಮೀಪ ಚಿಟ್ಟನಹಳ್ಳಿ ಗ್ರಾಮದಲ್ಲಿರುವ ಅಕ್ಕಸಾಲಿಗರ ರಾಮಾಚಾರಿಯವನಿಗೆ ವಿಷಮಸನ್ನಿಪಾತದಿಂದ ಮೈಮೇಲೆ ಪ್ರಜ್ಞೆಯಿಲ್ಲದೆ ಮಾತು ನಿಂತು ೩ ದಿವಸಗಳು ಮನೆಯಿಂದ ಹೊರಗೆ ತೆಗೆದು ತಂದಿಟ್ಟಿದ್ದಂಥಾ ಕಾಯಿಲೆಯನ್ನು ಮೇಲ್ಕಂಡ ಪಂಡಿತರ ಮೂಲಕ ಚಿಕಿತ್ಸೆ ಮಾಡಿಸಿದ್ದರಿಂದ ಗುಣಹೊಂದಿರುತ್ತಾನೆ ಇದೂ ಅಲ್ಲದ ಅಗಾಧವಾದ ಅನೇಕ ಕಾಯಿಲೆಗಳು ಸುಂಕಾಪುರ, ಕೊಪ್ಪಾರು, ಕೊಡಗಳ್ಳಿ, ಸಾಗರ, ಯಡವಳಕಿಲಾರ, ದ್ಯಾವಲಾಪುರ ವಗೈರೆ ಪ್ರಾಂತಗಳಲ್ಲಿ ಇವರು ವೈದ್ಯರು ಚಿಕಿತ್ಸೆಗಳನ್ನು ನಡಿಸಿ ಗುಣಮಾಡಿ ಪ್ರಸಿದ್ಧಿಯಾಗಿರುತ್ತಾರೆ ಇವರು ಚಿಕಿತ್ಸೆ ಮಾಡತಕ್ಕ ವಿಷಯದಲ್ಲಿ ತುಂಬಾ ಮೆಹನತ್ತಿನಿಂದಲೂ ಚಟುವಟಿಕೆಯಿಂದಲೂ, ತಿಳುವಳಿಕೆಯಿಂದಲೂ, ನಮ್ರತೆಯಿಂದಲೂ ಕಾವು ಹಿಡಿದ ರೋಗಿಗಳನ್ನು ಗುಣಪಡಿಸಿರುತ್ತಾರೆ ಮತ್ತು ಇವರು ಬಹಳ ದೇಶಸಂಚಾರದಿಂದಲೂ ಅನುಭವಿಗಳಾಗಿ ಕರ್ನಾಟಕ, ಯೂನಾನಿ, ಮುಂತಾದ ರಾಜವೈದ್ಯಗಳಲ್ಲಿ ತುಂಬಾ ವೈದ್ಯ ವಿದ್ಯಾವಂತರಾಗಿ ಇರುತ್ತಾರೆ ಈ ಮೊಸಳೆಕೋಟೆ ನಮ್ಮ ಗ್ರಾಮಗಳ ಪ್ರಾಂತ್ಯ ಸರ್ಕಾರಿ ಆಸ್ಪತ್ರೆಗಳು ಬಹಳ ದೂರದಲ್ಲಿರುವದರಿಂದ ಹೋಗಿಬರುವದಕ್ಕೆ ಅನಾನುಕೂಲವಾಗಿರುತ್ತದೆ ಆದ್ದರಿಂದ ಮೈಸೂರು ಬೆಂಗಳೂರು ಟವರ್‌ಗಳಲ್ಲಿ ಕರ್ನಾಟಕ, ಯೂನಾನಿ ಆಸ್ಪತ್ರೆಗಳಿಗೆ ಮುನಿಸಿಪಲ್ ಫಂಡಿನ ಸಂಬಳಗಳು, ಔಷಧಿ ಖರ್ಚು ಸಹ ಕೊಟ್ಟು ನಡಿಸುತ್ತಾರಷ್ಟೆ ಅದರಂತೆ ಮೇಲ್ಕಂಡ ಪಂಡಿತರನ್ನು ಈ ಗ್ರಾಮದಲ್ಲಿ ನೇಮಿಸಿದರೆ ಈ ಪ್ರಾಂತ್ಯ ೪೦-೫೦ ಗ್ರಾಮಗಳ ಸಾವಿರಾರು ಪ್ರಜೆಗಳಿಗೆ ಪಕ್ಷಾಲಕ್ಕೆ ಉಪಯೋಗವಾಗುವದರಲ್ಲಿ ಏನೇನೂ ಸಂದೇಹವಿಲ್ಲ [+1]

ಕುಂತಲಾನಂದ ತೈಲವು.

147-15

ಹಿಂದುಸ್ಥಾನದ ಪೀರ ಬೇರೆ ಪ್ರದರ್ಶನಗಳಲ್ಲಿ ಮೂರು ಬೆಳ್ಳಿನ ಬಿಲ್ಲೆಗಳನ್ನು ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ತಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ

ಬಹಳ ತಿಳಿಯೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ ೧ ರೂಪಾಯಿ ೩ ಬಾಟಲಿಗೆ ೨ ರೂಪಾಯಿ ೧೦ ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಪಿ ಎಮ್. ನಾಥ ಮತ್ತು ಕಂಪನಿ,
ವೇಪೇರಿ, ಮದರಾಸ್.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳುಮಾಡಿಕೊಳ್ಳದಿರಿ

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು !

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಇದು ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶರಾಶಿ ಇದೆ ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಒಕಚಕಿಸುತಿರಬೇಕು ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು

“ಕಾಮಿನಿಯಾ ತೈಲವು.”

(ರಿಜಿಸ್ಟರ್ಡ್)



ಇದನ್ನು ತಕ್ಕದಾದ ರೀತಿಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು

ಕಾಮಿನಿಯಾ ತೈಲ— ಇದು, ಕೂದಲುಗಳನ್ನು ಚಂದಗೊಳಿಸುವ ಎಲ್ಲಾ ತೈಲಗಳಲ್ಲಿ ಮೊದಲನೆಯದು ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ ಪ್ರತಿಯೊಬ್ಬ ಸ್ತ್ರೀಯರು ಈ “ಕಾಮಿನಿಯಾ” ತೈಲವನ್ನು ಅವಶ್ಯವಾಗಿ ಉಪಯೋಗಿಸಲೇಬೇಕು ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಿನ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತವೆ

ಧಾರಣೆ ೧ ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-4 0 ಬೇರೆ ತೆರಬೇಕು

3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ

ಕಾಮಿನಿಯಾ ತೈಲದ ಕುರಿತು ಕೆಲವು ಮಹನೀಯರು ಬರೆದ ಪ್ರಮಾಣ ಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು —

28 7 11 ಮ ಎ ಡಿ ಮಾಧವಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ—ತಾವು ಕಳುಹಿಸಿಕೊಟ್ಟ “ಕಾಮಿನಿಯಾ ಓಯಲ್” ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಓಯಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು

1 7-11 ಮ|| ಎ ಆರ್ ನಾಯುಡು ಪ ವ ಡಿ ಟಾಂಬಿ, (ಬರ್ಮಾ)—ನನ್ನ ಮಿತ್ರರು “ಕಾಮಿನಿಯಾ” ತೈಲ ಸಮ್ಮಂಧವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದರಿಂದ ಕೂಡಲೆ ೬ ಸೀಸೆಗಳನ್ನು ತ್ವರ್ಯದಿಂದ ವಿ ಪಿ ಮೂಲಕ ರವಾನಿಸತಕ್ಕದ್ದು

ಸುಗಂಧದ್ರವ್ಯಗಳು

ಗುಲ್-ಷಾನ್ (ರಿಜಿಡ್.)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತ್ಯಂತ ಶ್ರೇಷ್ಠವಾದದ್ದು, ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪರಿಶೋಧಕ ಪಂಡಿತರು ಹೇಳಿದ್ದಾರೆ ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯನ್ನುಳ್ಳದ್ದು ಕ್ರಯ ಡ್ರಾಂ ಸೀಸೆಗೆ ರೂ 1-8 0

ದಿಲ್-ಬಹಾರ್ (ರಿಜಿಡ್.)—ಅತ್ಯಂತ ಅಪೂರ್ವವಾದ ಜಾಜೀ ಪುಷ್ಪಗಳಿಂದ ತಯಾರಿಸಿದ ಅಮೋಘವಾದ ಸುಗಂಧ ಡ್ರಾಂ ಸೀಸೆಗೆ ರೂ 1-8-0

“ಕಾಮಿನಿಯಾ ಸುರಂಗಿ”—ರೂ 1 4 0, “ಕಾಮಿನಿಯಾ ಮಾಲತಿ”—ರೂ 1

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು

ನೋಟ್—ನಮಗೆ ಎಲ್ಲಾ ಕಾಗದಗಳನ್ನು ಇಂಗ್ಲಿಷಿನಲ್ಲಿ ಬರೆಯಬೇಕು.

ನಮ್ಮ ವಿಳಾಸ — [8 1]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾ ಮಸ್‌ಜಿದ್, ಬೊಂಬಾಯಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

29—11—1912 ರಿಂದ 6—12—1912 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	20	18	0	0
ಮೈಸೂರು ,,	3	0	0	0
ಬೆಂಗಳೂರು ಡಿಸ್ಟ್ರಿಕ್ಟ್	19	15	0	0
ಮೈಸೂರು ,,	20	10	0	0
ಕೋಲಾರ್ ,,	0	0	6	5
ಕೋಲಾರ್ ಚಿನ್ನದ ಗಣಿಗಳು	24	15	0	0
ತುಂಕೂರು ಡಿಸ್ಟ್ರಿಕ್ಟ್	3	2	50	32
ಹಾಸನ ,,	4	5	0	0
ಚಿತ್ರದುರ್ಗ ,,	0	0	15	18
ಕಡೂರ್ ,,	5	5	0	1
ಶಿವಮೊಗ್ಗಾ ,,	6	7	9	7
ಜುಮ್ಲಾ	104	77	80	63

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ದಕ್ಷಿಣಾಯನೆ ಹೇಮಂತಋತೌ ಮಾರ್ಗಶಿರ ಬಹುಳ ಏಕಾದಶಿ ಶುಕ್ರವಾರದಿಂದ ಪುಷ್ಯ ಶುದ್ಧ ಬಿದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನ ಮಾನ ಶೇಡಿ
3	ಶುಕ್ರ	ಏಕಾದಶಿ	17 4	ವಿಶಾಖ	23-41	20
4	ಶನಿ ‡	ದ್ವಾದಶಿ	16 1	ಅನೂ	24-18	21
5	ಭಾನು ,,	ತ್ರಯೋದಶಿ	16 11	ಜ್ಯೇಷ್ಠ	26 1	22
6	ಸೋಮ †	ಚತುರ್ದಶಿ	17 40	ಮೂಲ	29 8	23
7	ಮಂಗಳ §	ಅಮಾವಾಸ್ಯೆ	20 25	ಪೂಷಾ	32 48	24
8	ಬುಧ	ಪಾಡ್ಯಮಿ	24-17	ಉತ್ತಷಾ	38-34	25
9	ಗುರು *	ಬಿದಿಗೆ	29 4	ಶ್ರವಣ	44-41	26

ದ್ವಾದಶೀತಿಥಿ, ಸರ್ವತ್ರ ಏಕಾದಶಿ, ಕೊಠಾದೋತ್ಸವಾರಂಭ, ಮಳೆ ನಕ್ಷತ್ರ—ಪೂಷಾ ೩ನೇ ಪಾದ ‡ ಶನಿಪ್ರದೋಷ ಚಲುವನಾರಾಯಣಸ್ವಾಮಿಯವರ ಪರ್ಯಂತ † ಸರ್ವತ್ರ ಅಮಾವಾಸ್ಯೆ § ದರ್ಶ ಬಾಪೆ । ಗ್ರಹಾರ ರ, ಚಂ, ಶು, ಗು * ಮಾರ್ಗಶಿರಶುಕ್ಲ ವ್ರತ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ (ಹೊಸದು) ರೂ	೧೩ ೮-೦	೧೭ ೮ ೦
ಕೆಂಬೂತಿ ಅಕ್ಕಿ ಅವಲ್ ,,	೧೪ ೦ ೦	೧೭ ೬ ೦
,, ದುಯಂ ,	೧೩ ೦-೦	೧೭ ೦-೦
ಜಾವ್ರಾಣಿ ಅಕ್ಕಿ ,	೧೧-೦-೦	೧೭-೪ ೦
ಸಣ್ಣಕ್ಕಿ ಅವಲ್ ,,	೧೫ ೦ ೦	೧೮ ೮-೦
,, ದುಯಂ ,,	೧೨-೬ ೦	೧೭ ೮ ೦
ತೊಗರಿ ಬೇಳೆ ಅವಲ್ ಪಲ್ಲಾ ೧ಕೆ	೧೩ ೦ ೦	೧೩ ೮-೦
,, ದುಯಂ ,,	೧೨ ೮ ೦	೧೨ ೮ ೦
ಹ್ಯೆಕ್ ರಾಗಿ ಪಲ್ಲಾ ೧ಕ್ಕೆ	೭ ೪-೦	೫-೦ ೦
ಕಾರ್‍ರಾಗಿ ,,	೭ ೦ ೦	೪ ೧೨ ೦
ಜೋಳ ,,	೬ ೧೨ ೦	೭ ೪ ೦
ಹುಲಸಂದೆ ಪಲ್ಲಾ ೧ಕ್ಕೆ	೧೦ ೪ ೦	೧೩ ೧೨-೦
ಬಿಳಿ ಅವರೆ ,,	೧೧-೦-೦	೧೧-೦-೦
ಹೆಸರು ,,	೧೦ ೮-೦	೧೪-೦-೦
ಉದ್ದು ,	೧೪ ೦ ೦	೧೬-೦ ೦
ಕಡಲೆ ,,	೧೨ ೦ ೦	೧೨ ೦-೦
ಎಳ್ಳು ಸೇರು ೧೨೭ಕ್ಕೆ	೨೨ ೮ ೦	೨೪-೦ ೦
ಹುರುಳಿ ಪಲ್ಲಾ ೧ಕ್ಕೆ	೬ ೧೦-೦	೭-೦-೦
ಹರಳು ೧೨೭ ಸೇರಿಗೆ	೧೩-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೩ ೮ ೦	೩-೮ ೦
ಮೆಣಸಿನಕಾಯಿ ,,	೩-೦ ೦	೩-೪-೦
,, ದುಯಂ	೨ ೮ ೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫ ೦-೦	ಮಣ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೨ ೦	೬-೬-೦
ಹರಳೆಣ್ಣೆ ,, ,,	೫ ೪ ೦	೬-೦ ೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫ ೦ ೦	೫-೪-೦
ಉಪ್ಪು ,, ,,	೨ ೮-೦	೬-೧-೦
ಹುಣಸೇ ಹಣ್ಣು ಮಣ ೧ಕ್ಕೆ	೧ ೬ ೦	೧-೪ ೦
,, ಹಳೇದು ,,	೧ ೦-೨	೦ ೧೪-೦
ಕುಪ್ಪ ಮಣ ೧ಕ್ಕೆ	೧೬ ೦ ೦	೧೯ ೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೨ ೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೬ ೬ ೦	೬ ೦ ೦
ಆಳತೀಕಾಯಿ ಮಣ ೧ಕ್ಕೆ	೧ ೪ ೦	೧ ೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೦ ೧೨ ೦	೧-೮-೦
ಚಿನ್ನ (ಪೌನ್) ಕೆಂಪು	೧೫-೮-೦	೧೫ ೮ ೦
,, ,, ಪಸಿಮೆ	೧೫ ೧೪ ೬	೧೫ ೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪ ೩-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧ ೦ ೦	೮೧ ೦ ೦

ವೃತ್ತಾಂತ ಪತ್ರಿಕೆ.

ಸನ್ ೧೯೧೩ ನೇ ಇಸವಿ ಜನವರಿ ತಾ. ೨ ನೇ ಗುರುವಾರ

ವೈಸ್‌ರಾಯರನ್ನು ಕೊಲ್ಲಬೇಕೆಂಬ ಪ್ರಯತ್ನವು.

ಹಿಂದುಸ್ಥಾನದ ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್ ಪ್ರಭುಗಳು ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಉತ್ಸವದಲ್ಲಿ ಹೊಸ ರಾಜಧಾನಿಯಾದ ದೆಹಲಿ ನಗರವನ್ನು ಪ್ರವೇಶಿಸುತ್ತಿದ್ದಾಗ ಘಾತುಕರು ಅವರನ್ನು ಕೊಲ್ಲಬೇಕೆಂದು ಅವರ ಮೇಲೆ ಸಿಡಿಮದ್ದಿನ ಗುಂಡು ಎಸೆದ ದುಃಖಕರವಾದ ವೃತ್ತಾಂತವನ್ನು ಕಳೆದ ವಾರ ಸಂಕ್ಷೇಪವಾಗಿ ತಿಳಿಸಿದೆವಷ್ಟೆ. ಈ ಘಾತುಕ ಕೃತ್ಯದ ವಿವರವನ್ನೂ, ವೈಸ್‌ರಾಯರವರು ಆರೋಗ್ಯ ಹೊಂದುತ್ತಿದ್ದಾರೆಂಬ ಸಂತೋಷವಾರ್ತೆಯನ್ನೂ ಇನ್ನೊಂದು ಕಡೆ ಪ್ರಕಟಮಾಡಿದ್ದೇವೆ. ವೈಸ್‌ರಾಯರಿಗೆ ಗಂಡಾಂತರವು ಪಾರಾಯಿತೆಂದು ಬಹಳ ಆನಂದಪಡುತ್ತೇವೆ. ಆದರೂ ಈ ಘಾತುಕಕೃತ್ಯದಿಂದ ಜೋಬ್ದಾರನು ಅಕಾಲ ಮರಣ ಹೊಂದಿದ್ದೂ, ನೋಟಕರಲ್ಲಿ ಹಲವರಿಗೆ ನಾನಾ ಗಾಯಗಳಾದದ್ದೂ ದುಃಖಕರವಾಗಿದೆ. ವೈಸ್‌ರಾಯರವರಿಗೆ ಸಂಪೂರ್ಣವಾಗಿ ವಾಸಿಯಾಗಿ ಮತ್ತೆ ಆಳ್ವಿಕೆಯನ್ನು ನಿರ್ವಹಿಸುವಂತಾಗಲು ಇನ್ನೂ ಕೆಲವು ಕಾಲ ಹಿಡಿಯುತ್ತಾದರೂ ಅವರು ಕ್ರಮವಾಗಿ ದಿನದಿನಕ್ಕೆ ಚೇತರಿಸಿಕೊಳ್ಳುತ್ತಿದ್ದಾರೆಂದು ತಿಳಿಸಲು ಬಹಳ ಸಂತೋಷಪಡುತ್ತೇವೆ.

ಇದುವರೆಗೆ ನೋಡುವಲ್ಲಿ ಆ ಮರಣಕರವಾದ ಸಿಡಿಮದ್ದಿನ ಗುಂಡನ್ನು ಎಸೆದವನ್ಯಾರೋ ಇನ್ನೂ ಸಿಕ್ಕಿಲ್ಲ. ನಾನಾ ರೀತಿಯಾದ ಊಹೆಗಳೂ, ಅನುಮಾನಗಳೂ ಹುಟ್ಟಿ ಹಬ್ಬುತ್ತಿರುವುವು. ಕೆಲವರು ಅಂತರಂಗದಲ್ಲೇ ಮಸಲತ್ತು ಮಾಡಿ ಒಬ್ಬನನ್ನು ಈ ಕೃತ್ಯನಡಸುವಂತೆ ನೇಮಿಸಿರುತ್ತಾರೆಂದು ಕೊಂಚ ಜನರೂ, ಅವನು ಉದ್ದೇಶವಿಲ್ಲದ ಘಾತುಕನೆಂದು ಕೆಲವರೂ ಊಹಿಸಿ ಹೇಳುತ್ತಾರೆ. ಹ್ಯಾಗೂ ಸತ್ಯವಂತರಾದ ಸಮಸ್ತ ಪ್ರಜೆಗಳೂ ಈ ಘೋರಕೃತ್ಯವನ್ನು ಕೇಳಿ ಅಸಹ್ಯವನ್ನೂ ಆಗ್ರಹವನ್ನೂ ಪಟ್ಟುಕೊಳ್ಳುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಇಂಥಾ ಕೃತ್ಯ ನಡೆದದ್ದು ಅಕ್ಕಪಕ್ಕಗಳಲ್ಲಿದ್ದವರಿಗೆ ಕಾಣದೆ ಹೋಯಿತೆಂಬುವುದೂ, ಹಾಗೆ ನೋಡಿದವರಲ್ಲಿ ಯಾರೂ ಆ ಕ್ರೂರಾತ್ಮನನ್ನು ಹಿಡಿಯದೆ ಹೋದರೆಂಬುವುದೂ ಆಶ್ಚರ್ಯಕರವಾಗಿದೆ. ಈ ವಿಚಾರದಲ್ಲಿ ಪೊಲೀಸಿನವರು ಮೌನಭಾವವನ್ನು ವಹಿಸಿರೋದರಿಂದ ಏನು ಹೇಳಲೂ ಸಾಧ್ಯವಿಲ್ಲ.

ಆ ದುರಾತ್ಮನು ಗೋಪ್ಯಸಂಘಾದವರ ಪ್ರೇರಣೆಯಿಂದ ಆ ಕೃತ್ಯವನ್ನು ನಡಿಸಿದವನಾಗಿದ್ದರೆ ಸರ್ಕಾರದವರು ಆ ಸಂಘದವರನ್ನು ಬೇಗನೆ ಕಂಡುಹಿಡಿದು ಈ ರಾಷ್ಟ್ರದಿಂದ ಗಡೀಪಾರು ಮಾಡಿಬಿಟ್ಟಲ್ಲಿ ಎಷ್ಟೋ ಕ್ಷೇಮವಾದೀತು. ಜನ್ಮಭೂಮಿಯು ಉದ್ಧಾರವಾಗಬೇಕೆಂದು ಅಪೇಕ್ಷಿಸುವಂಥವನು ಅಂಥಾ ದುಷ್ಟಜನರ ಮಧ್ಯೆ ಇರಲು ಎಂದಿಗೂ ಸಮ್ಮತಿಸುವುದಿಲ್ಲ. ರಾಜಭಕ್ತಿಯುಳ್ಳ ಪ್ರಜೆಗಳು ತಮ್ಮ ಕೈಲಾಗುವಷ್ಟೂ ಸಾಹಸಪಟ್ಟು ಇಂಥಾ ಕ್ರೂರಾತ್ಮರ ಗುಂಪನ್ನು ಕಂಡುಹಿಡಿದು ನ್ಯಾಯಸ್ಥಾನಕ್ಕೆ ತಿಳಿಸಿ ನಾಶಮಾಡದೆ ಬಿಡರು. ಹಾಗಲ್ಲದೆ ಆ ಕೃತ್ಯವನ್ನು ಘಾತುಕನೋ, ಬುದ್ಧಿಸ್ಥಿಮಿತವಿಲ್ಲದವನೋ ಮಾಡಿದ್ದಪಕ್ಷದಲ್ಲಿ ಅವನನ್ನು ಸಿಕ್ಕಿದಕೂಡಲೆ ಹುಚ್ಚರ ಆಸ್ಪತ್ರೆಗೆ ಕಳುಹಿಸಬೇಕು. ಹುಚ್ಚನಾಗಿದ್ದಪಕ್ಷದಲ್ಲಿ ಇದುವರೆಗೆ ಅವನನ್ನು ಹಿಡಿದುಬಿಡುತ್ತಿದ್ದರು. ಹುಚ್ಚನಿಂದ ಯಾರಿಗೂ ಕೇಡು ಉಂಟೇ ಉಂಟು. ಯಾವ ಕಾನೂನೂ ಅಂಥವನ ಕೃತ್ಯವನ್ನು ತಡೆಯಲಾರದು.

ಪೊಲೀಸಿನವರು ಆ ಕೃತ್ಯ ನಡಿಸಿದವರನ್ನು ಕಂಡುಹಿಡಿದು ಸರಿಯಾದ ಶಿಕ್ಷೆಗೆ ಗುರಿಪಡಿಸುತ್ತಾರೆಂದು ನಿರೀಕ್ಷಿಸುತ್ತೇವೆ. ವೈಸ್‌ರಾಯಿಯವರು ಬೇಗನೆ ಆರೋಗ್ಯ ಹೊಂದಿ ಯಥಾಪ್ರಕಾರ ಈ ರಾಷ್ಟ್ರದ ಆಳ್ವಿಕೆಯ ಭಾರವನ್ನು ವಹಿಸುವಂತಾಗಲೆಂದು ನಮ್ಮ ವಾಚಕರ ಕೂಡ ಏಕೀಭವಿಸಿ ಹಾರೈಸುತ್ತೇವೆ. ಅವರ ಪತ್ನೀರವರಿಗೆ ಈ ಸಂದರ್ಭದಲ್ಲಿ ಪ್ರಾಪ್ತವಾಗಿರುವ ಮನೋವ್ಯಥೆಯು ಬೇಗನೆ ನಿವಾರಣೆಯಾಗಲೆಂದು ಆರ್ತತೆಯಿಂದಲೂ ಸಂತಾಪಪೂರ್ವಕವಾಗಿಯೂ ಪ್ರಾರ್ಥಿಸುವೆವು. ಈ ಗಂಡಾಂತರಕ್ಕೆ ಅವರು ಸಿಕ್ಕದೆ ಹೋದದ್ದೂ, ಅಂಥಾ ಕಷ್ಟಕಾಲದಲ್ಲೂ ಆಕೆಯವರು ಧೈರ್ಯಸ್ಥೈರ್ಯಾದಿಗಳನ್ನು ಪ್ರಕಾಶಪಡಿಸಿದ್ದೂ ಸಕಲರಲ್ಲೂ ವಿಶೇಷವಾದ ಸಂತೋಷವನ್ನೂ ಭಕ್ತಿಪ್ರೀತಿಯನ್ನೂ ಉಂಟುಮಾಡಿದೆ.

ಹೊಸ ವರುಷವು

ಗತಿಸಿಹೋಗುತ್ತಿರುವ ಕಾಲವನ್ನು ಲೋಕದ ಬೇರೆ ಬೇರೆ ಜನಾಂಗಗಳವರು ಬೇರೆ ಬೇರೆ ರೀತಿಯಾಗಿ ಗೊತ್ತುಮಾಡುವವರಾಗಿರುತ್ತಾರೆ. ಹಿಂದುಗಳಿಗೆ ಯುಗಾದಿಯು ವರುಷದ ಪ್ರಾರಂಭವಾಗಿರುತ್ತದೆ. ಮಹಮ್ಮದೀಯರು ಬೇರೊಂದು ದಿನವನ್ನು ವರುಷದ ಆದಿಯೆಂದು ಎಣಿಸುತ್ತಾರೆ. ಸ್ವಲ್ಪ ಕಡಮೆ ಕ್ರಿಸ್ತರು ಜನವರಿ ಮೊದಲನೆಯ ತಾರೀಖನ್ನು ವರುಷದ ಪ್ರಾರಂಭವೆಂದು ಗೊತ್ತುಮಾಡಿಕೊಂಡಿರುತ್ತಾರೆ. ದಪ್ಪಾದವರಿಗೆ ಇನ್ನು ಕೆಲವು ದಿನಗಳು ಕಳೆದ ನಂತರ ಅವರ ಯುಗಾದಿಯು ಬರುವುದು. ಸ್ವಲ್ಪ ಹೆಚ್ಚುಕಡಮೆ ಎಲ್ಲರೂ ವರುಷದ ಆದಿಯನ್ನು ಉತ್ಸವದ ದಿನವಾಗಿ ಆಚರಿಸುವರು. ಇಂಥ ಕಾಲದಲ್ಲಿ ಬುದ್ಧಿವಂತರಾದ ಪುರುಷರೂ ಸ್ತ್ರೀಯರೂ ಲಕ್ಷಿಸಬೇಕಾದ ಎರಡು ಮುಖ್ಯಾಂಶಗಳಿರುತ್ತವೆ. ಅವುಗಳಲ್ಲಿ ಮೊದಲನೆಯದು—ದೇವರ ಮಹೋಪಕಾರಗಳನ್ನು ಸ್ಮರಿಸಿ ಕೃತಜ್ಞತೆಯುಳ್ಳವರಾಗಿರುವುದು, ಎರಡನೆಯದು—ಮುಂದಿನ ಹೊಸ ವರುಷದಲ್ಲಿ ನಾವು ಏನು ಮಾಡಬೇಕೆಂದು ದೇವರು ನಮ್ಮಿಂದ ಕೋರುತ್ತಾನೆ ಎಂಬುದನ್ನು ವಿಚಾರಮಾಡುವುದು.

ಮೊದಲು ದೇವರು ನಮ್ಮನ್ನು ಕಳೆದ ವರುಷವೆಲ್ಲಾ ಸುರಕ್ಷಿತವಾಗಿ ಕಾಪಾಡುತ್ತಾ ಬಂದಿರುವುದನ್ನು ಜ್ಞಾಪಕಮಾಡಿಕೊಂಡು ಉತ್ಸಾಹಪೂರ್ವಕವಾಗಿ ಆತನಿಗೆ ಕೃತಜ್ಞತೆಯುಳ್ಳವರಾಗಿರಬೇಕು. ರೋಗಾದ್ಯುಪದ್ರಗಳು ಸದಾ ನಮ್ಮನ್ನು ಆವರಿಸಿಕೊಂಡೇ ಇರುತ್ತವೆ. ಅಲ್ಲಿ ಒಬ್ಬರು ಇಲ್ಲಿ ಮತ್ತೊಬ್ಬರು ನಮ್ಮನ್ನು ಬಿಟ್ಟು ದೈವಾಧೀನರಾದರು. ನಮ್ಮನ್ನಾದರೋ ದೇವರು ಇನ್ನೂ ಜೀವದಿಂದಿಟ್ಟಿರುತ್ತಾನೆ. ನಮಗೆ ಕಷ್ಟನಷ್ಟದುಃಖಾದಿಗಳು ಪ್ರಾಪ್ತವಾಗಿದ ಬಹುದು. ಆದರೂ ದೇವರು ನಮಗೆ ಜೀವವನ್ನು ಕೊಟ್ಟಿರುವುದರಿಂದ ಕಷ್ಟಗಳ ಮಧ್ಯದಲ್ಲಿ ನಿವಿಧವಾದ ಸುಖ ಸಂತೋಷಗಳನ್ನು ಅನುಭವಿಸುತ್ತಾ ಬಂದಿರುತ್ತೇವೆ. ಕಳೆದ ವರುಷವನ್ನು ಹಿಂದಿರುಗಿ ನೋಡಿದರೆ ಅದರಲ್ಲಿ ದೇವರು ನಮಗೆ ಮಾಡಿದ ಮಹೋಪಕಾರಗಳು, ಆತನು ದಯಪಾಲಿಸಿದ ವರಪ್ರಸಾದಗಳು ಇವುಗಳೇ ವಿಶೇಷವಾಗಿ ಕಂಡುಬರುತ್ತವೆ. ಆದುದರಿಂದ ನಮ್ಮಲ್ಲಿ ಮಹದಾನಂದವು ತಾನಾಗಿ ಉಕ್ಕಿ ಬಂದು, ಹಬ್ಬವಾಚರಿಸುವಂತೆ ನಮ್ಮನ್ನು ಪ್ರೇರಿಸುತ್ತದೆ. ದೇವರಿಂದ ನಾವು ಪಡೆದುಕೊಂಡಿರುವ ಕೃಪಾವರಗಳಿಗಾಗಿ ಆನಂದಪಡುವುದೂ ಆತನು ನಮ್ಮ ಕಡೆಗೆ ಪ್ರಕಾಶಪಡಿಸಿರುವ ಆತನ ಪ್ರೇಮಾತಿಶಯ, ಸಹನ, ಒಳ್ಳೆಯತನ ಇವುಗಳನ್ನು ಸ್ಮರಿಸಿ ಪೂರ್ಣ ಕೃತಜ್ಞತೆಯುಳ್ಳವರಾಗಿರುವುದೂ ವಿಹಿತವಾಗಿರುತ್ತವೆ. ಕಳೆದ ವರುಷವೆಲ್ಲಾ ಆತನು ನಮ್ಮನ್ನು ಸುರಕ್ಷಿತನಾಗಿ ಪರಿಪಾಲಿಸಿ ನಡಿಸುತ್ತಾ ಬಂದಿರುವುದಕ್ಕಾಗಿ ನಾವು ನಮ್ರಭಾವದಿಂದ ಆತನನ್ನು ಸ್ತೋತ್ರ ಮಾಡುವುದು ನಮ್ಮ ಧರ್ಮವಾಗಿರುತ್ತದೆ.

ಆದರೆ ದೇವರು ನಮ್ಮನ್ನು ಈ ಲೋಕದಲ್ಲಿ [illegible] ಕ್ಕೆ? ನಾವು ದೇವರನ್ನೇ ಮರೆತು ಅಜಾಗರೂಕರಾಗಿಯೂ [illegible] ರಾಗಿಯೂ ಬದುಕುತ್ತಿರುವಂತೆ ಆತನು ನಮ್ಮನ್ನು [illegible] ನಿರುತ್ತಾನೋ? ಎಷ್ಟು ಮಾತ್ರಕ್ಕೂ ಅಲ್ಲ. ನಾವು ಪ್ರಯೋಜಕರಾಗಿರಬೇಕೆಂದೂ ಆತನು ನಮ್ಮಿಂದ ಕೋರುವ ಕೆಲಸಗಳನ್ನು ನಾವು ಮಾಡುವವರಾಗಿರಬೇಕೆಂದೂ ನಮ್ಮನ್ನು ಇನ್ನೂ ಜೀವದಿಂದ ಇಟ್ಟಿರುತ್ತಾನೆ. ಈ ಮುಂದಿನ ವರುಷದಲ್ಲಿ ನಾನು ನಿನಗಾಗಿ ಮಾಡಬೇಕಾಗಿರುವ ಕೆಲಸವೇನು ಎಂದು ನಾವು ದೀನಮನಸ್ಸಿನಿಂದ ಆತನನ್ನು ಪ್ರಾರ್ಥಿಸಬೇಕಾಗಿದೆ.

ನಾವೆಲ್ಲರೂ ಮಾಡಬೇಕಾದ ಒಂದು ಕೆಲಸವು ಇರುತ್ತದೆ. [illegible] ಉತ್ತಮರಾಗಿಯೂ ತ್ರಿಕರಣಶುದ್ಧರಾಗಿಯೂ ಜೀವಿಸುತ್ತಿರಬೇಕು. ನಾವೆಲ್ಲರೂ ಪುರುಷರಾದಿಯಾಗಿ ಸ್ತ್ರೀಯರೂ ಸಹ ತ್ರಿಕರಣಶುದ್ಧರಾಗಿ ಬದುಕಬೇಕೆಂಬುದೇ ದೇವರ ಕೋರಿಕೆಯಾಗಿರುತ್ತದೆ. ದೇವರು ನಮ್ಮಿಂದ ಕೋರುವ ಈ ಕೆಲಸವು ತುಂಬಾ ಶ್ರಮಸಾಧ್ಯವಾದುದು. [illegible] ಸ್ವಾರ್ಥಪರನಾಗಿಯೂ ಜೀವಿಸುವುದು ಬಹಳ ಸುಲಭ. [illegible] ಶಿಕ್ಷೆಗಳೂ ಪರೋಪಕಾರಿಗಳೂ ಸದಾ ಒಳ್ಳೆಯವನೇ ಮಾಡುವವರೂ ಆಗಿ ಬದುಕಬೇಕಾದರೆ ಬಹಳ ಶ್ರಮಪಡಬೇಕು. ನಾವು ಹೇಗಿರಬೇಕೆಂದು ದೇವರು ಕೋರುತ್ತಾನೋ ಹಾಗೆಯೇ ನಾವು ಪಡೆದುಕೊಳ್ಳಬೇಕಾದರೆ ನಮ್ಮಲ್ಲಿರುವ ದುರಭ್ಯಾಸಗಳನ್ನೆಲ್ಲಾ ನಿಗ್ರಹಿಸಿ ನಾವು ಪವಿತ್ರರೂ ಸತ್ಯಸಂಧರೂ ನಮ್ಮ ಕೈಲಾಗುವ ಎಲ್ಲಾ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನಪಡುವವರೂ ಆಗಿರಬೇಕು.

ನಾವು ಅಬಲರೂ ದಾರಿತಪ್ಪಿ ಹೋಗುವವರೂ ಆಗಿರುತ್ತೇವೆ. ನಮ್ಮ [illegible] ಶುದ್ಧರಾಗಿ ಜೀವಿಸುವುದು ಹೇಗೆ. [illegible] ಈ ವಿಷಯದಲ್ಲಿ ಕ್ರಿಸ್ತರು ನಮಗಿರುವ ಸಹಾಯವನ್ನು ತಿಳಿದುಕೊಂಡವರಾದರೆ ಮಹದಾನಂದಪಡುವುದಕ್ಕೆ ತುಂಬಾ ಆಸ್ಪದವಿರುವುದು. ಅನೇಕ ಕ್ರೈಸ್ತರು ಅದನ್ನು ತಿಳಿಯದಿರುವುದರಿಂದ ಸಂತೋಷರಹಿತರಾಗಿರುತ್ತಾರೆ. ಆದರೂ ಸ ಪಾತ್ಮರೂ ಆಗಿರುವ ಸರ್ವರಿಗೂ ಹೇಗಸರಿಗೂ ಯೇಸು ಕ್ರಿಸ್ತನು ನನ್ನ ಬಳಿಗೆ ಬನ್ನಿ, ನಾನು ರಕ್ಷಕನಾಗಿದ್ದೇನೆ. ನಿಮ್ಮನ್ನು ಪಾಪವಿಮುಕ್ತರನ್ನಾಗಿ ಮಾಡುವವನು, ನಿಮ್ಮ ನಿರ್ಬಲಾವಸ್ಥೆಗೆ ನನ್ನ ಬಲವನ್ನು ಕೊಡುವವನು ನಾನೇ. ನನ್ನನ್ನು ನಂಬಿ ನನ್ನನ್ನೇ ಆಶ್ರಯಿಸುವವರಾದರೆ ನಿಮಗೆ ದೈವಶಕ್ತಿಯನ್ನಿತ್ತು ಪ್ರಲೋಭನೆಗಳನ್ನೆಲ್ಲಾ ಜಯಿಸಿ ತ್ರಿಕರಣಶುದ್ಧರಾಗಿಯೂ ಪರೋಪಕಾರಿಗಳಾಗಿಯೂ ಜೀವಿಸುವಂತೆ ನಿಮ್ಮನ್ನು ಶಕ್ತರನ್ನಾಗಿ ಮಾಡುವೆನೆಂದು ಆತನು ಹೇಳುತ್ತಾನೆ. ಆದುದರಿಂದ ನಾವು ಬರುವ ವರುಷದಲ್ಲಿ ಯೇಸು ಕ್ರಿಸ್ತನನ್ನು ನಮ್ಮ ಆಪದ್ಬಾಂಧವನನ್ನಾಗಿಯೂ ಪರಮಮಿತ್ರನನ್ನಾಗಿಯೂ ಮಾಡಿಕೊಳ್ಳೋಣ. ನಾವು ಹೀಗೆ ಮಾಡಿದರೆ ವರುಷವೆಲ್ಲಾ ಆನಂದಭರಿತನಾಗಿಯೇ ಇರುವೆವು. ದೇವರು ನಮ್ಮನ್ನು ಯಾವ ಕೆಲಸ ಮಾಡುವುದಕ್ಕಾಗಿ ಈ ಲೋಕದಲ್ಲಿ ಇಟ್ಟಿರುತ್ತಾನೋ ಆ ಕೆಲಸವನ್ನು ಮಾಡಶಕ್ತರಾಗುವೆವು.

ಒಳದೇಶದ ವೃತ್ತಾಂತಗಳು

ಈ ವಾರದ ಪತ್ರಿಕೆಯ ಸಂಗಡ ನಮ್ಮ ಎಲ್ಲಾ ಚಂದಾದಾರರಿಗೆಲ್ಲಾ 1913ನೇ ವರುಷದ ಕ್ಯಾಲೆಂಡರನ್ನು ದಿವ್ಯವಾದ ಚಿತ್ರಪಟಗಳ ಸಹಿತ ಸೌಂದರ್ಯವತ್ತರವಾಗಿ ಅಚ್ಚುಹಾಕಿಸಿ ಬಹುಮಾನ ಕೊಟ್ಟಿರುವೆವು. ಇದಲ್ಲದೆ ಈ ತಿಂಗಳಲ್ಲಿ ಹಣಕೊಟ್ಟು ಚಂದಾದಾರರಾಗತಕ್ಕವರಿಗೂ ಸಾಧ್ಯವಾಗುವ ಮಟ್ಟಿಗೆ ಕ್ಯಾಲೆಂಡರನ್ನು ಕಳುಹಿಸುತ್ತೇವೆ. ನಮ್ಮ ವಾಚಕರಿಗೆಲ್ಲಾ ಬಾಲ್ಯ ವರುಷವು ಸಂತೋಷ ಸೌಭಾಗ್ಯಕರವಾಗಿ ಪರಿಣಮಿಸಲೆಂದು ಈ ಮೂಲಕ ಬಹಳವಾಗಿ ಕೋರುವೆವು.

* * *

ಮಹಾಮಾತೃಶ್ರೀಯವರೂ, ಮಹಾರಾಣಿಯವರೂ ಪರಿವಾರ ಸಮೇತ ಜನವರಿ ತಾ. 1 ನೇ ಬುಧವಾರ ಬೆಂಗಳೂರಿನಿಂದ ಮದರಾಸಿಗೆ ದಯಮಾಡುವವರಾಗಿದ್ದರು. ಅದಕ್ಕಾಗಿ ಅರಮನೆ ಇಲಾಖೆಯವರು ಸರಬರಾಯಿ ಮಾಡಿದ್ದರು.

* * *

ಬೆಂಗಳೂರು ಪ್ರಜೆಗಳು ಅಲ್ಲಿನ ಮೊದ್ಲಿಯಾರರ ಹಾಲ್‌ನಲ್ಲಿ ಸಭೆಸೇರಿ ಮೆ|| ದಳವಾಯಿ ದೇವರಾಜೆ ಅರಸಿನವರ ಅಕಾಲಮರಣವನ್ನು ಕುರಿತು ವಿಷಾದಪಟ್ಟು, ಅವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಯಾವುದಾದರೊಂದು ಕಾರ್ಯವನ್ನು ಮಾಡಬೇಕೆಂದು ನಿಶ್ಚಯಿಸಿಕೊಂಡಿದ್ದಾರೆ.

* * *

ಶ್ರೀಮನ್ ಮಹಾರಾಜರವರು ಅರಮನೆಯ ರಾಣಿವಾಸದವರನ್ನು ಹಿಂದಿನ ಸೋಮವಾರ ಬೆಂಗಳೂರಿನಿಂದ ಶಿವಮೊಗ್ಗಾ ಡಿಸ್ಟ್ರಿಕ್ಟು ಜೋಗಿಗೂ, ಆನೆಬಂಗಡಿಗೂ ಕರೆದುಕೊಂಡುಹೋಗಿ ಅಲ್ಲಿನ ವಿಶೇಷಗಳನ್ನು ತೋರಿಸಿ, ಶುಕ್ರವಾರ ವಾಪಸು ಬೆಂಗಳೂರಿಗೆ ದಯಮಾಡಿಸಿದರು.

ತರೀಕೆರೆಯ ಅಂಚೆ ಜವಾನನಾದ ಅಸ್ವತ್ಥಯ್ಯನೆಂಬವನು 250 ರೂಪಾಯಿನ ಇನ್‌ಷೂರ್ ಪಾರ್ಸೆಲನ್ನು ಎಲ್ಲೋ ಕಳೆದುಕೊಂಡು ಹೆದರಿಕೆಯಿಂದ ಒಂದು ಮಾವಿನ ತೋಟದ ಬಾವಿಯಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡನು. ಆ ಮನೆಯವರು ಪೋಲೀಸಿನವರಿಗೆ ಹಣ ಪಾವತಿಮಾಡಿ, ಅವನನ್ನು ಹುಡುಕಿದ್ದರು. ಅವನ ಶವವು ಸಿಕ್ಕಿತೆಂದು ಪ್ರಕಟವಾಗಿದೆ. ಮಾನಕ್ಕೂ ಪ್ರಾಣಕ್ಕೂ ಎಷ್ಟು ಸಂಬಂಧವಿದೆ ಎನ್ನುವುದು ಇದರಿಂದ ವೇದ್ಯವಾಗುತ್ತದೆ.

ರಾಜಧಾನಿಯ ಪ್ರಜೆಗಳು ಮೆ|| ಎಂ. ವಿಶ್ವೇಶ್ವರಯ್ಯನವರಿಗೆ ದಿವಾನ್ ಪದವಿ ಆದದ್ದಕ್ಕಾಗಿ ಅವರನ್ನು ಕರೆಸಿಕೊಂಡು ಸತ್ಕರಿಸಿ ಅವರಿಗೆ ಒಂದು ಅಡ್ರೆಸ್ಸನ್ನು ಒಪ್ಪಿಸುವುದರ ಮೂಲಕ ತಮ್ಮ ಸಂತೋಷವನ್ನು ಪ್ರಕಾಶಪಡಿಸಬೇಕೆಂದು ಗೊತ್ತುಮಾಡಿಕೊಂಡಿದ್ದಾರೆ. 6 ನೇ ತಾ. ಸೋಮವಾರ ಅಮಾವಾಸ್ಯೆಯಾಗಿರುವುದರಿಂದ ಈ ಸಂತೋಷೋತ್ಸವವನ್ನು ಅಲ್ಲಿಂದ ಮುಂದಕ್ಕೆ ಅವರಿಗೆ ಅನುಕೂಲವಾಗಿರುವ ದಿನ ನಡಿಸಲು ಅಪೇಕ್ಷಿಸಿ ದಿವಾನ್‌ರವರಿಗೆ ಬರೆದು ಇರುತ್ತಾರೆ. ತಾ. 7 ನೇ ಮಂಗಳವಾರ ಸಾಯಂಕಾಲ ಅಡ್ರೆಸ್ ಒಪ್ಪಿಸುವಂತೆ ಗೊತ್ತಾಗಿದೆ.

ಮುಂದೆ ಹೇಳುವ ಮುನ್‌ಸಿಫರುಗಳ ವರ್ಗಾವರ್ಗಿಯನ್ನು ಸರ್ಕಾರದವರು ಹುಕುಂ ಮಾಡಿರುತ್ತಾರೆ—ಮ|| ಎನ್. ಟಿ. ಗೋಪಾಲ ಅಯ್ಯಂಗಾರ್‌ರವರು ಮೈಸೂರಿನಿಂದ ಚಿಕ್ಕಬಳ್ಳಾಪುರಕ್ಕೆ, ಮ. ಟಿ. ವೆಂಕೋಬರಾಯರು ಚಿಕ್ಕಬಳ್ಳಾಪುರದಿಂದ ಚಿತ್ರದುರ್ಗಕ್ಕೆ, ಮೆ|| ಎಸ್. ವೆಂಕಟಕೃಷ್ಣಯ್ಯನವರು ಚಿತ್ರದುರ್ಗದಿಂದ ಮೈಸೂರಿಗೆ (ಅಡಿಷನಲ್ ಮುನ್‌ಸಿಫರಾಗಿ), ಮ. ಕೆ. ಲಕ್ಷ್ಮೀನಾರಣಪ್ಪನವರು ಮೈಸೂರಿನಿಂದ ಬೆಂಗಳೂರಿಗೆ (ಪ್ರಿನ್ಸಿಪಲ್ ಮುನ್‌ಸಿಫರಾಗಿ), ಮೆ|| ಜಿ. ಶ್ರೀನಿವಾಸ ಅಯ್ಯರವರು ಬೆಂಗಳೂರಿನಿಂದ ಮೈಸೂರಿಗೆ (ಪ್ರಿನ್ಸಿಪಲ್ ಮುನ್‌ಸಿಫರಾಗಿ).

ಕಳೆದ ವಾರ ರಾಜಧಾನಿಯ ಪ್ರಜೆಗಳು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಭೆಸೇರಿ, ವೈಸ್‌ರಾಯಿ ಪ್ರಭುಗಳಿಗೆ ಸಂಭವಿಸಿದ ದುಃಖಕರವಾದ ಅಪಾಯವನ್ನು ಕುರಿತು ದುಃಖಪಟ್ಟರು. ಸಭಾ ಅಧ್ಯಕ್ಷರಾಗಿದ್ದ ಮ|| ವೈ. ಶ್ರೀನಿವಾಸರಾಯರು, ಮ. ಎಂ. ವೆಂಕಟಕೃಷ್ಣಯ್ಯನವರು, ಹೌಲ್ಯ ದಸ್ತೀರ್‌ಸಾಹೇಬರು ಲಾರ್ಡ್ ಹಾರ್ಡಿಂಗ್‌ರವರ ಆಳ್ವಿಕೆಯ ಪೆರಿಗುಣನ್ನೂ ವಿಶದಗಳನ್ನೂ ವಿವರಿಸಿ, ಆ ಥಾ ಮಹಾನುಭಾವರ ಮೇಲೆ ದುರಾತ್ಮರು ಸಿಡಿಮದ್ದಿನ ಗುಂಡು ಹಾಕಿದ್ದು ಮಹಾ ಘಾತುಕವೆಂದು ಮನಃ ಭಾಷಣ ಮಾಡಿದರು. ಪ್ರಜೆಗಳೆಲ್ಲಾ ಎದ್ದು ನಿಂತು ವೈಸ್‌ರಾಯಿಯವರಿಗೆ ನಮ್ಮ ಸಂತಾಪವನ್ನು ಟೆಲಿಗ್ರಾಮ ಮೂಲಕ ತಿಳಿಸಬೇಕೆಂದು ತೀರ್ಮಾನಿಸಿದರು. ಆದೇ ಪ್ರಕಾರ ಒಂದು ಟೆಲಿಗ್ರಾಮು ಆ ಸಾಯಂಕಾಲ ದಿವಾನ್‌ರಿಗೆ ಕಳುಹಲ್ಪಟ್ಟಿತು.

ಪೆನ್‌ಷನ್ ಡೆಪ್ಯುಟಿ ಕಮಿಷನರ್ ಮೆ|| ಎಲ್. ರಾಮರಾವ್‌ರವರು ಕೆಲವು ಕಾಲದಿಂದ ಕಾಯಿಲೆಯಾಗಿದ್ದು ಕಳೆದ ಬಾನುವಾರ ಮಧ್ಯಾಹ್ನ ಧಾನಿಯ ತಮ್ಮ ಸ್ವಂತ ಬಂಗಲೆಯಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು 1851ನೇ ಡಿಸೆಂಬರಿನಲ್ಲಿ ಜನಿಸಿ 18ನೇ ವಯಸ್ಸಿನಲ್ಲಿ ಹಾಸನದ ಗುಮಾಸ್ತೆಯಾಗಿ ಸರ್ಕಾರಿ ನೌಕರಿಗೆ ಸೇರಿ ಬುದ್ಧಿಕುಶಲತೆ ಸಹಾಸ ಸಾಮರ್ಥ್ಯಗಳ ಮೂಲಕ ಏಳ್ಗೆ ಹೊಂದಿ 1875ನೇ ಇಸವಿಯಲ್ಲಿ ಅಮಲ್ದಾರಿಯನ್ನು ಪಡೆದು ಸರ್ವೆ ಇಲಾಖೆಯಲ್ಲೂ ದಿವಾನ್‌ರ ಆಫೀಸಿನಲ್ಲೂ ನೌಕರಿಮಾಡಿ ಒಳ್ಳೇ ಹೆಸರು ಸಂಪಾದಿಸಿ 1891ರಲ್ಲಿ ಅಸಿಸ್ಟೆಂಟ್ ಕಮಿಷನರ್, ಅನಂತರ ಡಿವಿಜನ್ ಆಫೀಸರ್, ಬಳಿಕ ಡೆಪ್ಯುಟಿ ಕಮಿಷನರ್ ಹುದ್ದೆಗಳಿಗೆ ಹತ್ತಿ ಬಹು ಚಟುವಟಿಕೆಯಾಗಿದ್ದರು. ಕಷ್ಟಸಹರಾಗಿಯೂ ಉದ್ಯೋಗವಹಿಸಿ, ಪೆನ್‌ಷನ್ ಮೇಲೆ ನಿವೃತ್ತರಾಗಿ ಶೀಘ್ರವಾಗಿ ಹೆಸರಿಗೆ ಹೊಸದಾಗಿ ಬಂಗಲೆ ಪಾರಮಾರ್ಥಿಕಕರ್ಮಗಳಲ್ಲಿ ನಿರತರಾಗಿದ್ದರು.

ಕೃಷ್ಣರಾಜಪೇಟೆ ಪ್ಲೇಗ್ ಪೀಡಿತ ಮೋಕದ್ದಮೆಯು

ಗೂಡಿನ ಹೆಂಡತಿಯ ದಂಗೆ ಮೊಕದ್ದಮೆಯು ಹಾಸನದ [illegible] ದಲ್ಲಿ ವಿಚಾರಣೆ ಆಗುತ್ತಿದೆಯಷ್ಟೆ. ಈ ಮೊಕದ್ದಮೆಗೆ ಗುರಿಪಡಿಸಲ್ಪಟ್ಟವರ ಪೈಕಿ ಇನ್ನಿಬ್ಬರನ್ನು ಹೊಸದಾಗಿ ಹಿಡಿದು ಕರೆತಂದಿದ್ದಾರೆ. ಸರಾರಿ ಆಗಿರುವವರನ್ನು ಪತ್ತೆ ಮಾಡುವುದರಲ್ಲಿ ಸರ್ಕಾರದವರು ಬಹು ಜಾಗರೂಕತೆಯಿಂದ ಯತ್ನಿಸಿದ್ದಾರೆ. 'ಪೋಲೀಸ್ ಇನ್‌ಸ್ಪೆಕ್ಟರ್ ತಿಂಗಳು' ಅರಸಿನವರು ಬಹು ಮೇಹನತ್ತು ಮಾಡುತ್ತಿದ್ದಾರೆ. [illegible] ಸರ್ಕಾರದವರು [illegible] ಕಡೆಗೆ ವ್ಯವಸ್ಥೆ ಮಾಡಿ ಪೋಲೀಸ್ ಮಾತ್ರವೇ ಅಲ್ಲ ಸರ್ಕಾರದ ಅನೇಕ ಇಲಾಖೆಗಳವರು [illegible] ಕುರಿಗಳ ಮೊಕದ್ದಮೆ ಸಂಬಂಧವಾಗಿ ಸಹಾಯಮಾಡುವವರೆಂದು ತಿಳಿದುಬಂದಿದೆ. ಗ್ರಾಮ ಪ್ರಜೆಗಳಿಗೆ ಬಹಳ ಅನ್ಯಾಯವಾಗಿರುವುದಾಗಿಯೂ, ಅನೇಕರಿಗೆ ಬಹಳ ಭೀತಿಯನ್ನು ಹುಟ್ಟಿಸಿ ಅವರುಗಳಿಂದ ನೂರಾರು ರೂಪಾಯಿ ತೆಗೆದುಕೊಂಡಿರುವುದಾಗಿಯೂ, ಇನ್ನೂ ಅನೇಕ ವಿಧವಾಗಿ ಜನರಿಗೆ ತೊಂದರೆಪಡಿಸುತ್ತಿರುವುದಾಗಿಯೂ ಇವರುಗಳ ಮೇಲೆ ಅನೇಕ ಫಿರ್ಯಾದು ಅರ್ಜಿಗಳು ಬಂದು ಅವುಗಳು ಪ್ರತ್ಯೇಕ ವಿಚಾರಣೆಯಾಗುತ್ತಿದೆ. ಮುಂದೆ ಅದರ ಫಲಿತಾಂಶ ಗೊತ್ತಾಗುವದು.

ತಾ. 27 ನೇ ಶುಕ್ರವಾರ ರಾತ್ರಿ ಪೋಲೀಸಿನ ಪುಟ್ಟಮಲ್ಲನೆಂಬುವನ ಮನೆಗೆ ಗುಲ್ಲಿನ ಮೇಲೆ ಬೆಂಕಿ ಬಿದ್ದು ಮನೆ ಸಹ ಬೆಂದುಹೋಗಿರುವದಾಗಿ ಪುಟ್ಟಮಲ್ಲನ ಹೆಂಡತಿಯು ಪೋಲೀಸಿಗೆ ರಿಪೋರ್ಟು ಮಾಡಿದ್ದಾಳೆ. ಅಮಲ್ದಾರ್ ರವರು ಈ ರಿಪೋರ್ಟು ತೆಗೆದುಕೊಂಡಿರುತ್ತಾರೆ.

ಬಾತ್ಮಿದಾರ್

ಹಿಂದುಸ್ಥಾನದ ರಾಷ್ಟ್ರ ಸಭೆಯು.

ಕಳೆದ ತಾ. 26 ನೇ ಗುರುವಾರ ಬಂಕಿಪುರದಲ್ಲಿ ಹಿಂದುಸ್ಥಾನದ ಇಪ್ಪತ್ತೇಳನೇ ಸಾರ್ವಜನಿಕ ಸಭೆಯು (ನ್ಯಾಷನಲ್ ಕಾಂಗ್ರೆಸ್) ಪ್ರಾರಂಭವಾಯಿತು. ಬೇರೆ ಬೇರೆ ಪ್ರದೇಶಗಳಿಂದ 205 ಜನ ಪ್ರತಿನಿಧಿಗಳೂ, 3,000 ಮಂದಿ ಪ್ರೇಕ್ಷಕರೂ ಹೋಗಿ ಸಭೆಯಲ್ಲಿ ಹಾಜರಾಗಿದ್ದರು. ಮಹಮ್ಮದೀಯ ಪ್ರತಿನಿಧಿಗಳು ಈ ಸಲ ಸ್ವಲ್ಪ ಹೆಚ್ಚಾಗಿದ್ದರು. ಮೆ|| ಮಜರುಲ್ ಹಕ್‌ಯವರು ಸ್ವಾಗತ ಕಮಿಟಿಯ ಮುಖಂಡರಾಗಿ ಸಭಿಕರಿಗೆ ಸುಸ್ವಾಗತವನ್ನು ಒದಗಿಸಿ ಹಿಂದುಸ್ಥಾನದ ರಾಜಕೀಯ ವಿದ್ಯಮಾನಗಳನ್ನು ಕುರಿತು [illegible] ಉಪನ್ಯಾಸ ಮಾಡಿದರು. ಬಳಿಕ [illegible] ಸಂಭವಿಸಿ ಪರಿಹಾರ [illegible] ವರುಷ ಎ. ಓ. ಹ್ಯೂಂ, ಕೃಷ್ಣಸ್ವಾಮಿ ಅಯ್ಯರ್ ಎಂಬ ಪ್ರಮುಖರು ಕಾಲವಾದದನ್ನು ವಿವರಿಸಿ ಮಹಾ ಸಭೆಯ ದುಃಖವನ್ನು ಪ್ರಕಾಶಪಡಿಸಿದರು. ಬಳಿಕ ಬಾಬು ಸುರೇಂದ್ರನಾಥ ಬ್ಯಾನರ್ಜಿಯವರು, ಮ. ಗೋಖಲೆಯವರು, ಪಂಡಿತ್ ಮದನಮೋಹನ ಮಾಲವ್ಯರವರು, ಮ. ಸುಬ್ಬರಾವ್ ಪಂತುಲು, ಮೆ

ವೃತ್ತಾಂತ ಪತ್ರಿಕೆ.

ಪ್ರತಿ ಗುರುವಾರವೂ ಮೈಸೂರು ಪಟ್ಟಣದಲ್ಲಿ ಪ್ರಕಟವಾಗುವುದು ಈ ಸಂಸ್ಥಾನದಲ್ಲೆಲ್ಲಾ ಅತ್ಯಂತ ವಿಶೇಷವಾಗಿ ಪ್ರಚಾರವಾಗುತ್ತದೆ

1913

ಚಂದಾ ವಿವರ - ೧೨ ತಿಂಗಳಿಗೆ (ಮುಂಗಡ) ರೂ ೧ ೦ ೦
, ಪೋಸ್ಟೇಜು ಸೇರಿ ೧-೧೪ ೦
ಬಿಡಿ ಪತ್ರಿಕೆ ೧ ಕ್ಕೆ ೪ ಕಾಸು

[illegible]

[illegible]

ಮಣಿಯಾರ್ಡರ್ ಮತ್ತು ವ್ಯಾಲ್ಯೂವೇಬಲ್

[illegible]



[illegible]

ಜನವರಿ		ಫೆಬ್ರವರಿ	
[illegible]		[illegible]	

[illegible]

ಜುಲೈ		ಆಗಸ್ಟ್	
[illegible]		[illegible]	

ಮೇ		ಜೂನ್	
[illegible]		[illegible]	

ನೊವೆಂಬರ್		ಡಿಸೆಂಬರ್	
[illegible]		[illegible]	

ಮೈಸೂರು ಸರ್ಕಾರದಿಂದ ಕೊಡೋಣಾದ ರಜಾ ದಿನಗಳು

ಜನವರಿ —1 [illegible] 11 ಉತ್ತರಾಯಣ ಪುಣ್ಯಕಾಲ
ಮಾರ್ಚಿ —6 ಮಹಾಶಿವರಾತ್ರಿ
ಏಪ್ರಿಲ್ —7 ಸೌರಯುಗಾದಿ
ಜೂನ್ —3 ಚಕ್ರವರ್ತಿಯವರ ವರ್ಧಂತಿ
11 ಶ್ರೀ ಮನ್ಮಹಾರಾಜರವರ ವರ್ಧಂತಿ
[illegible] —11 ಉಪಾಕರ್ಮ
[illegible]
ಅಕ್ಟೋಬರ್ —1 ನವರಾತ್ರಿ [illegible] 30 ಬಲಿಪಾಡ್ಯ
ಡಿಸೆಂಬರ್ —9 [illegible]
21 31 [illegible]

ವಿಶೇಷ ದಿನಗಳು

[illegible]

ನೋಟ್ (1) [illegible]

[illegible]



ಮೈಸೂರು ವ[illegible] ಪ್ರೆಸ್

...ಲಾಲ್, ಮೆ|| ಅಂಬಿಕಾಚರಣ ಮುಜುಂದಾರ್ ಮಹಾರಾಜಕುಮಾರ್ ..., ಇವರೆಲ್ಲಾ ನಾಸಿಕಮಾಡಿ ರಾವ್ ಬಹದೂರ್ ಆರ್ ಎನ್ ಮುಧೋಳ್ಕರವರು ಈ ವರುಷದ ಮಹಾಸಭೆಯ ಪ್ರೆಸಿಡೆಂಟರಾಗಿರಬೇಕೆಂದು ತಿಳಿಸಿದ ಸೂಚನೆಯನ್ನು ಒಪ್ಪಿದರು. ಅದರಂತೆ ಮೆ|| ಮುಧೋಳ್ಕರವರು ಹೋಗಿ ಅಧ್ಯಕ್ಷ ಕುರ್ಚಿಯಲ್ಲಿ ವಂದೇಮಾತರಂ ಗೀತಪಾಡಲ್ಪಡುತ್ತಿದ್ದಾಗ ಕುಳಿತುಕೊಂಡರು. ಪ್ರೆಸಿಡೆಂಟರಿಗೂ ಅವರ ಅಕ್ಕಪಕ್ಕಗಳಲ್ಲಿ ಕುಳಿತಿದ್ದ ಮೆ|| ಗಳಾದ ...ನರ್ಜಿ, ವಾಚಾ, ಗೋಖಲೆ, ಮಾಳವ್ಯ ಇವರಿಗೂ ಪುಷ್ಪಮಾಲಿಕೆಗಳನ್ನು ... ಪ್ರೆಸಿಡೆಂಟ್ ಮೆ|| ಮುಧೋಳ್ಕರವರು ಎದ್ದು ಭಾಷಣವನ್ನು ಮಾಡಿದರು. ಈ ಭಾಷಣದ ಮುಖ್ಯ ಭಾಗಗಳೇನೆಂದರೆ—

ಹಿಂದೂ, ಮಹಮದೀಯ, ಪಾರ್ಸಿ ಕ್ರೈಸ್ತ ಪಂಗಡಗಳವರೆಲ್ಲಾ ಏಕೀಭವಿಸಿ, ಪರಸ್ಪರ ವೈಷಮ್ಯಗಳನ್ನು ತೊರೆದು ಈ ರಾಷ್ಟ್ರದ ಏಳಿಗೆಗೆ ಸಹಕಾರಿಗಳಾದ ವಿಚಾರಗಳನ್ನು ಕುರಿತು ರಾಜನೀತಿಗೆ ವಿರೋಧವಿಲ್ಲದಂತೆ ಚರ್ಚಿಸಬೇಕು. ಈ ರಾಷ್ಟ್ರಕ್ಕೆ ಇಂಗ್ಲಿಷ್ ಪ್ರಭುತ್ವವು ದೊರೆತದ್ದರಿಂದ ಸಕಲ ಮತಸ್ಥರೂ ... ಈ ಸೀಮೆಯು ಎಲ್ಲಾ ಭಾಗಗಳಲ್ಲೂ ಏಳಿಗೆಯಾಗಲೂ ತುಂಬಾ ... ವಾಗಿದ ತುರ್ಕಿ ಬಾಲ್ಕನ್ ಯುದ್ಧದ ದೆಸೆಯಿಂದ ಮುಸಲ್ಮಾನರಿಗೆ ... ರಾಜ ಕ್ರಾಂತಿಯೂ, ಕಷ್ಟನಷ್ಟಗಳೂ ಮಹಮದೀಯರ ವಿಷಯದಲ್ಲಿ ... ಮೊದಲಾದ ಇತರ ಪಂಗಡದವರಿಗೆ ವಿಶೇಷವಾದ ಸಂತಾಪವನ್ನುಂಟುಮಾಡಿದೆ. ಹಿಂದೂಸ್ಥಾನದಲ್ಲಿ ಇಂಗ್ಲಿಷ್ ರಾಜ್ಯಭಾರವು ಪ್ರಜಾಸಮ್ಮತವಾಗಿ ...ಸುತ್ತಾ ಬಂದಿರೂ ಇದರಿಂದ ಈ ಸಭಿಕರು ಗವರ್ನ್‌ಮೆಂಟಿಗೆ ಕೃತಜ್ಞರಾಗಿದ್ದಾರೆ. ಪರದೇಶಿ ಅಧಿಕಾರಿಗಳಿಗೂ ಪ್ರಜೆಗಳಿಗೂ ಈಗಾಗ... ಪರಸ್ಪರಾನುರಾಗ ಹುಟ್ಟಿ ಹೆಚ್ಚುತ್ತಿದೆ. ಆಯಾ ಅಧಿಪತಿಗಳ ಸರ್ಕಾರ... ತಮ್ಮ ರಾಜ್ಯಾಡಳಿತವನ್ನು ವಿಸ್ತಾರಮಾಡುವುದಕ್ಕೆ ಸಂಪೂರ್ಣವಾದ ... ಇಲ್ಲದಿರೋಣದರಿಂದ ಬೇರೆ ವಿಷ್ಟ್ರಿಗಳು ಕೆಲವುಂಟಾಗಿವೆ. ಇದ... ಸರ್ಕಾರದವರು ಪರಿಹರಿಸಬೇಕಾಗಿದೆ. ಮುಂತ್ರಾಲೋಚನಾ ಸಭೆಗಳ ರಚನೆ... ... ದೋಷಗಳೂ ಕಂಡುಬರುತ್ತಿರುವವು. ಗವರ್ನ್‌ಮೆಂಟಿನವರು ಅವುಗಳನ್ನು ನಿವಾರಿಸಬೇಕು. ಹಿಂದೂಸ್ಥಾನದ ವಿದ್ಯಮಾನಗಳನ್ನು ಇಂಗ್ಲಿಷ್ ಗವರ್ನ್‌ಮೆಂಟಿಗೆ ಸರಿಯಾಗಿ ತಿಳಿಸುವುದಕ್ಕೆ ಈ ರಾಷ್ಟ್ರದ ...ವಾಗಿ ಕೆಲವು ಮೆಂಬರುಗಳನ್ನು ಇಂಗ್ಲಿಷ್ ಪಾರ್ಲಿಮೆಂಟಿಗೆ ಚುನಾಯಿಸಿ ಕಳುಹುವುದಕ್ಕೆ ಗವರ್ನ್‌ಮೆಂಟಿನವರು ಅವಕಾಶಮಾಡಿಕೊಡಬೇಕು. ಜೀವ... ಈ ಸೀಮೆಯು ಇಂಗ್ಲಿಷ್ ಸಾಮ್ರಾಜ್ಯಗಳಿಗೆ ಹೋಗಿರತಕ್ಕವರ ... ತೀರ್ಪು ಸರ್ಕಾರದವರು ಕಾಪಾಡಿಕೊಟ್ಟು, ಅ ಘನರಿಗೆ ಯಾವ ... ಸ್ಥಾನದ ತೆರಿಗೆ ಏನಾದರು ನೋಡಬೇಕು. ಹಿಂದು... ದೊಡ್ಡ ದೊಡ್ಡ ಅಧಿಕಾರಸ್ಥಾನಗಳಿಗೆ ಯೋಗ್ಯರಾದಂಥಾ ದೇಶೀಯರು ...ವಿಶೇಷವಾಗಿ ನಿಯಮಿಸಬೇಕಾಗಿದೆ. ಇದರಿಂದ ಈಗಿನ ಆಳಿಕೆಯಲ್ಲಿ ... ದೋಷಗಳು ನಿವಾರಣೆಯಾಗುವವು. ಹಿಂದೂಸ್ಥಾನ ...ಗಳಿಗೆ ಸಮರ್ಥವಾದ ವಿದ್ಯೆಯನ್ನು ಕೊಡಲು ಆರೋಗ್ಯ... ಕ್ರಮವು ಪ್ರಚಾರಕ್ಕೆ ಬರಲು ಅವಕಾಶವಿಲ್ಲದೆ ಇದೆ. ಈ ... ರಾಜಕೀಯ ವಿಚಾರಗಳನ್ನು ಕುರಿತು ಅಧ್ಯಕ್ಷರು ಭಾಷಣ... ಮೊದಲನೇ ದಿನದ ಸಭೆಯನ್ನು ಮುಕ್ತಾಯಕ್ಕೆ ತಂದರು.

ವೈಸ್‌ರಾಯರ ಮೇಲೆ ಗುಂಡುಹಾಕಿದ್ದು.

ಚಕ್ರವರ್ತಿ ಸಾರ್ವಭೌಮರವರ ಅನುಮತಿಯ ಪ್ರಕಾರ ಹಿಂದೂಸ್ಥಾನದ ರಾಜಧಾನಿಯು ಕಲ್ಕತ್ತಾ ಪಟ್ಟಣದಿಂದ ದೆಹಲಿ ನಗರಕ್ಕೆ ಕಳೆದ ತಾ 23 ನೇ ಸೋಮವಾರ ಪ್ರವೇಶ ಮಾಡಿದರು. ಆ ದಿನ ವೈಸ್‌ರಾಯಿ ಲಾರ್ಡ್ ... ಪ್ರಭುಗಳು ದೆಹಲಿ ನಗರದ ರೈಲ್ವೆ ಸ್ಟೇಷನ್ನಿಂದ ಹೊಸ ರಾಜ... ಪುರಪ್ರವೇಶವನ್ನು ಉತ್ಸವ ಪೂರ್ವಕವಾಗಿ ನೆರವೇರಿಸಬೇಕೆಂದು ನಿಶ್ಚಯಿಸಿದ ಮೆರವಣಿಗೆಯನ್ನು ನಡೆಸಿದರು. ಈ ಉತ್ಸವದಲ್ಲಿ ಆ ಪ್ರಾಂತ್ಯದ ... ರಾಜರುಗಳು ಅಧಿಪತಿಗಳೂ, ಇಂಗ್ಲಿಷ್ ... ಸಾಲುಕಟ್ಟಿ ಹೊರಟರು. ವಿಶೇಷವಾಗಿ ಅಲಂಕರಿಸಲ್ಪಟ್ಟ ಐವತ್ತು ಆನೆಗಳು ವೈಸ್‌ರಾಯಿಯವರ ಮುಂದೆಯೂ ಹಿಂದೆ... ಹೊರಟವು. ವೈಸ್‌ರಾಯಿಯವರು ಅತ್ಯಂತ ಎತ್ತರವಾದ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತರು. ಅವರ ಎಡಪಾರ್ಶ್ವದಲ್ಲಿ ಅವರ ಪತ್ನಿಯವರು ...ದರು. ಇವರಿಬ್ಬರ ಹಿಂದೆ ಛತ್ರಿ, ಚಾಮರಗಳನ್ನು ಹಿಡಿದ ಇಬ್ಬರು ... ಕುಳಿತಿದ್ದರು. ಈ ಆನೆಯು ಹಿಂಭಾಗದಲ್ಲಿದ್ದ ಆನೆಯ ಮೇಲೆ ... ಯವರ ಪುತ್ರಿಯನ್ನು ಕೂಡಿಸಿದ್ದರು. ಈ ವಿದ್ಯಮಾನದ ಉತ್ಸವವು ... ಸರಿಯಾದ ಹೊತ್ತಿನಲ್ಲಿ ರೈಲ್ವೆ ಸ್ಟೇಷನ್ನಿಂದ ಬೆಳಿಗ್ಗೆ ... 11 ಗಂಟೆಗೆ ಹೊರಟು ದಿವಾನ್ ಆಂ ಎಂಬ ದರ್ಬಾರ್ ಮಂದಿರದ ಕಡೆ ಕುರಿತು ಹೋಗುತ್ತಿತ್ತು.

ಚಾಂದನಿಚೌಕವೆಂಬ ಮುಖ್ಯ ರಸ್ತೆಯಲ್ಲಿ ಒಂದು ತಿರುವು ಇದೆ. ಆ ಸ್ಥಳದ ... ವಾಜೂದಲ್ಲಿ ದೊಡ್ಡದಾದ ಮೂರು ಅಂತಸ್ತಿನ ಒಂದು ಬಂಗಲೆ... ಇದರ ಒಂದು ಭಾಗದಲ್ಲಿ ಪಂಜಾಬ ನ್ಯಾಷನಲ್ ಬ್ಯಾಂಕ್ ಎಂಬ ... ಆಫೀಸು ಇರುತ್ತದೆ. ಇದರ ತಳಭಾಗದಲ್ಲಿ ಆಫೀಸುಗಳೂ, ... ಮಾರುವ ಅಂಗಡಿ, ಇತರ ಆಫೀಸುಗಳೂ ಮಾಡಿಕೊಂಡಿದ್ದಾರೆ. ಎರಡು ... ಅಂತಸ್ತುಗಳಲ್ಲಿ ಕೆಲವರು ಸಂಸಾರವಾಗಿರುವರು. ಆ ದಿನ ಆ ಉತ್ಸವವನ್ನು ನೋಡಲು ಆ ಮನೆಯಲ್ಲಿ ಹೆಂಗಸರು, ಮಕ್ಕಳು ಸಾವಿರ ಸುಮಾರು ... ಕೂಡಿದ್ದರು. ಕೆಲವರು ಬಾಡಿಗೆಕೊಟ್ಟು ನೋಟ ನೋಡಲು ಬಂದಿ... ಉತ್ಸವವು ಈ ತಿರುವಿಗೆ ಬಂದ ಒಡನೆಯೇ ಈ ಕಟ್ಟಡ... ಎಸೆಯಲ್ಪಟ್ಟ ಒಂದು ಸಿಡಿಮದ್ದಿನ ಗುಂಡು ವೈಸ್‌ರಾಯಿ ಲಾರ್ಡ್ ... ಪ್ರಭುಗಳು ಕುಳಿತಿದ್ದ ಆನೆಯ ಮೇಲೆ ಅಂಬಾರಿಯೊಳಕ್ಕೆ ಅಂದರೆ ... ಒರಗಿಕೊಳ್ಳುವ ಪೀಠದ ಹಿಂಭಾಗಕ್ಕೆ ಬಿದ್ದು ಒಡೆದುಹೋಯಿತು. ಅದರೊಳಗಿದ್ದ ಕಬ್ಬಿಣದ ಚೂರುಗಳು, ಸ್ಕ್ರೂ ಮೊಳೆಗಳು, ಸಣ್ಣ ತಂತಿಗಳು ಗ್ರಾಮಫೋನ್ ಸೂಜಿಗಳು ಮೊದಲಾದವುಗಳೆಲ್ಲಾ ಹರಡಿಕೊಂಡು ... ಛೋಬ್ದಾರನ ಹೊಟ್ಟೆಗೆ ಬಡಿದು ಅವನ ಕರುಳೆಲ್ಲಾ ಹೊರಕ್ಕೆ ... ತಕ್ಷಣವೇ ಅವನ ಪ್ರಾಣಹೋಯಿತು. ಮತ್ತು ಈ ಸಿಡಿಮದ್ದಿನ ಗುಂಡು ... ರಭಸದಿಂದ ಎಡಿದ ... ಹಿಂದೆ ಪೀಠದ ಹಿಂಭಾಗಕ್ಕೆ ಹಾಕಿದ್ದ ದಪ್ಪನಾದ ... ತಗಡು ಕಿತ್ತುಕೊಂಡು ಆ ಪೀಠವನ್ನು ಹಾಳುಮಾಡಿತು. ವೈಸ್‌ರಾಯಿಯವರ ... ಹಿಂಭಾಗದ ಚಪ್ಪೆ ಎಲೆ ಕೆಳಗಿನಿಂದ ಮೇಲಕ್ಕೆ ನಾಲ್ಕು ... ಉದ್ದವಾದ ಗಾಯವಾಯಿತು. ಮತ್ತು ಬಲ ಪಾರ್ಶ್ವದ ಕುತ್ತಿಗೆಯ ... ಗಾಯವಾಯಿತು. ಇದಲ್ಲದೆ ಅವರ ಬಲತೊಡೆಯ ಮೇಲ್ಭಾಗ... ನಾಲ್ಕಾರು ಸಣ್ಣ ಗಾಯಗಳಾದವು. ವೈಸ್‌ರಾಯರಿಗೆ ಇಷ್ಟು ... ಗಾಯಗಳಾಗಿದ್ದರೂ ತಮ್ಮ ಪತ್ನಿಯವರು ಕೇಳಿದಾಗ "ಏನೂ ... ನಡೆಯಲಿ" ಎಂದು ಉತ್ತರ ಕೊಟ್ಟರಂತೆ.

ಹಾಗೆ ಉತ್ಸವವು ಸುಮಾರು 150 ಗಜ ದೂರ ಹೋಗುವಷ್ಟರಲ್ಲಿ ವೈಸ್‌ರಾಯರವರಿಗೆ ಪ್ರಜ್ಞೆ ತಪ್ಪಿತೆಂದೂ ಹಿಂದಿದ್ದ ಛೋಬ್ದಾರನು ಮೃತಪಟ್ಟನೆಂದೂ ವೈಸ್‌ರಾಯಿಯವರ ಪತ್ನಿಯವರಿಗೆ ತಿಳಿಯಿತು. ಆ ಕೂಡಲೆ ಆಕೆಯವರು ಮಾವುತನಿಗೆ ಆಜ್ಞೆಮಾಡಿ ಆನೆಯನ್ನು ನಿಲ್ಲಿಸುವಂತೆ ಮಾಡಿದರು. ಅಷ್ಟರೊಳಗೆ ಉತ್ಸವದ ಅಧಿಕಾರಿಗಳಲ್ಲಿ ಗಾಬರಿಯೂ ಕಳವಳವೂ ಉಂಟಾದವು. ಕೂಡಲೇ ಆನೆಯನ್ನು ಕೂಡಿಸಲು ಸ್ವಲ್ಪ ಕಷ್ಟವೂ ಸಾವಕಾಶವೂ ಆಯಿತು. ಜೋಲಾಡುತ್ತಿದ್ದ ಛೋಬ್ದಾರನ ಶವವನ್ನು ಅಂಬಾರಿಯಿಂದ ಈಚೆಗೆ ತೆಗೆದಾಗ ಅಂಬಾರಿಯು ಹಾಳಾಗಿದ್ದದ್ದೂ, ಛತ್ರಿಯೂ ಝೂಲೂ ಛಿದ್ರವಾಗಿದ್ದದ್ದೂ ಗೊತ್ತಾಯಿತು. ವೈಸ್‌ರಾಯರ ಪತ್ನಿಯವರು ಅಂಬಾರಿಯಿಂದಿಳಿದು ರಸ್ತೆಯಲ್ಲಿ ಕುರ್ಚಿಹಾಕಿಕೊಂಡು ಕುಳಿತರು. ವೈಸ್‌ರಾಯರಾದರೋ ಅಂಬಾರಿಯೊಳಗೇ ನಡುಗುತ್ತಾ ಪ್ರಜ್ಞೆತಪ್ಪುತ್ತಾ ಜೋಲಾಡುತ್ತಿದ್ದರು. ವೈಸ್‌ರಾಯರ ಡಾಕ್ಟರಾದ ಕರ್ನಲ್ ರಾಬರ್ಟ್ಸ್‌ಯವರು ಆನೆಯ ಮೇಲೆ ಹತ್ತಿ ಅಂಬಾರಿಯೊಳಗೆ ನೋಡುವಲ್ಲಿ ವೈಸ್‌ರಾಯರ ಕುತ್ತಿಗೆಯೆಲ್ಲಾ ರಕ್ತಮಯವಾಗಿತ್ತು. ಅವರಿಗೆ ಮೈಮೇಲೆ ಸ್ಮರಣೆಯಿರಲಿಲ್ಲ. ಕೂಡಲೇ ಡಾಕ್ಟರವರು ಸಮೀಪದಲ್ಲಿದ್ದ ಮೆ|| ಸೇನರವರ ಆಸ್ಪತ್ರೆಯಿಂದ ಔಷಧವನ್ನು ತರಿಸಿಕೊಂಡು ವೈಸ್‌ರಾಯರಿಗೆ ಕುಡಿಸಿದರು. ಐದು ನಿಮಿಷಗಳ ಮೇಲೆ ಅವರಿಗೆ ಸಲ್ಪ ಪ್ರಜ್ಞೆಯುಂಟಾಯಿತು. ಅಲ್ಲಿಂದ ಡಾಕ್ಟರವರು ಅವರನ್ನು ಒಂದು ಚಾಪಾರ್ಯಿನ ಮೇಲೆ ಮಲಗಿಸಿ ಅಂಬಾರಿಯಿಂದ ಇಳಿಸಿಕೊಂಡು ಕೆಳಗೆ ಕಾದಿದ್ದ ಬರ್ದವಾನ್ ಮಹಾರಾಜರವರ ಮೋಟಾರ್ ಗಾಡಿಯಲ್ಲಿ ಮಲಗಿಸಿ ವೈಸ್‌ರಾಯರವರ ಬಿಡಾರಕ್ಕೆ ಕರೆದುಕೊಂಡು ಹೋದರು.

ವೈಸ್‌ರಾಯಿಯವರ ಪತ್ನಿ ಪುತ್ರಿಯರು ಮೊದಲೇ ಬಂಗಲೆಗೆ ದಯಮಾಡಿ ಕಾದಿದ್ದರು. ಕುಮಾರಿಯು ತಂದೆಯನ್ನು ನೋಡಬೇಕೆಂದು ಎಷ್ಟೋ ಆತುರಪಟ್ಟರೂ ಡಾಕ್ಟರು ಅದಕ್ಕೆ ಅವಕಾಶಕೊಡದೆ ಇತರ ಡಾಕ್ಟರುಗಳೊಡನೆ ಸೇರಿ ವೈಸ್‌ರಾಯರವರಿಗೆ ಔಷಧಾದಿಗಳನ್ನು ಕೊಡುತ್ತಾ ಚಿಕಿತ್ಸೋಪಚಾರಮಾಡಲಾರಂಭಿಸಿದರು.

ಉತ್ಸವವು ಅಷ್ಟಕ್ಕೇ ನಿಂತು ಹೋಗಲಿಲ್ಲ. ಚಕ್ರವರ್ತಿ ಸಾರ್ವಭೌಮರವರ ಅಪ್ಪಣೆಯಾಗಿದ್ದಂತೆ ಅಧಿಪತಿಗಳೂ ಇಂಡಿಯಾ ಗವರ್ನ್‌ಮೆಂಟಿನ ಮೆಂಬರುಗಳೂ ಉತ್ಸವಮಾಡಿಕೊಂಡು ದಿವಾನ್‌ಆಂ ಎಂಬ ರಾಜಭವನವನ್ನು ತಲುಪಿ ಮೊದಲನೇ ದರ್ಬಾರನ್ನು ನಡೆಸಿದರು. ದಿವ್ಯವಾದ ಆ ಮಹಾ ಸಭೆಯಲ್ಲಿ ಸರ್ ಗೈ ಫ್ಲೀಟ್‌ವುಡ್ ವಿಲ್ಸನ್‌ರವರು ಅಗ್ರಸ್ಥಾನವನ್ನು ವಹಿಸಿಕೊಂಡು ವೈಸ್‌ರಾಯರವರ ಭಾಷಣವನ್ನು ಓದಿ ಹೇಳಿದರು. ದೆಹಲಿ ನಗರದ ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮೇಜರ್ ಬೀಡನ್‌ರವರು ಇಂಡಿಯಾ ಗವರ್ನ್‌ಮೆಂಟು ಕಲ್ಕತ್ತೆಯಿಂದ ದೆಹಲಿ ನಗರಕ್ಕೆ ವರ್ಗವಾದ್ದಕ್ಕಾಗಿ ಆನಂದವನ್ನೂ, ಘೋರಕೃತ್ಯ ನಡೆದದ್ದಕ್ಕಾಗಿ ಮನೋವ್ಯಸನವನ್ನೂ ಪ್ರಕಾಶಪಡಿಸಿ ಒಂದು ಅಡ್ರೆಸ್ಸನ್ನು ಒಪ್ಪಿಸಿದರು. ವೈಸ್‌ರಾಯರವರ ಪ್ರತ್ಯುತ್ತರವು ಸೋಲ್ಲಂತೆ ಅವರ ಪ್ರತಿನಿಧಿಯಿಂದ ಓದಲಾಯಿತು. ಬಳಿಕ ಪಂಜಾಬ್ ಪ್ರಾಂತದ ಲೆಫ್ಟಿನೆಂಟ್ ಗವರ್ನರ್ ಸರ್ ಲೂಯಿ ಡೇನ್‌ರವರು ಇಂಡಿಯಾ ಗವರ್ನ್‌ಮೆಂಟಿಗೆ ಸುಸ್ವಾಗತವನ್ನು ಬಯಸಿ, ದೆಹಲಿ ನಗರವನ್ನೂ ಆ ಮ್ಯುನಿಸಿಪಾಲಿಟಿಯನ್ನೂ ಇಂಡಿಯಾ ಗವರ್ನ್‌ಮೆಂಟಿನ ಆಳಿಕೆಗೆ ಒಪ್ಪಿಸಿರುವುದಾಗಿ ಒಂದು ಭಾಷಣವನ್ನು ಮಾಡಿದರು. ಇದಕ್ಕೆ ವೈಸ್‌ರಾಯಿಯವರ ಉತ್ತರವು ಓದಲಾಯಿತು. ವೈಸ್‌ರಾಯಿಯವರ ನ್ಯಾಯವಿಧಾಯಕ ಕೌನ್ಸಿಲ್ಲಿನ ಪರವಾಗಿ ನವಾಬ್ ಸರ್ ಸಯ್ಯದ್ ಮಹಮದ್‌ಯವರು ಬೇರೆ ... ಮೆಂಬರುಗಳ ಕೈಸಹಿತೆಯನ್ನು ಅರಿಕೆಮಾಡಿದರು. ವೈಸ್‌ರಾಯಿಯವರ ಪ್ರತ್ಯುತ್ತರವನ್ನು ಸರ್ ಗೈ ಫ್ಲೀಟ್‌ವುಡ್ ವಿಲ್ಸನ್‌ರವರು ಓದಿಹೇಳಿದರು. ಬಳಿಕ ಕಹಳೆಗಳು ಘೋಷಿಸಿ ದೆಹಲಿಯು ಇನ್ನು ಮುಂದೆ ಹಿಂದೂಸ್ಥಾನಕ್ಕೆ ರಾಜಧಾನಿಯಾಯಿತೆಂದೂ, ಮೊದಲನೇ ದಿನದ ಆಚರಣೆಗಳೂ ದರ್ಬಾರೂ ಪೂರೈಸಿದವೆಂದೂ ಸಾರಿದವು. ಕೋಟೆ ಕೊತ್ತಲದಿಂದ ಫಿರಂಗಿಗಳು ಹಾರಿಸಲ್ಪಟ್ಟವು. ಅಲ್ಲಿಂದ ಉತ್ಸವವು ಮತ್ತೆ ಹೊರಟು ಸಮಸ್ತ ಬಿರುದುಗಳ ಸಮೇತ ಜುಮ್ಮಾ ಮಸೀದಿಯನ್ನು ದಾಟಿ ಮೋರಿಗೇಟ್ ಎಂಬ ದಾರಿಯ ಬಳಿಯಿಂದ ಬಂಗಲೆಗೆ ತಲುಪಿತು.

ಆನೆಯ ಮೇಲೆ ಅಂಬಾರಿಯಲ್ಲಿ ಸಿಡಿಮದ್ದಿನ ಗುಂಡು ತಗಲಿ ಒಡೆದದ್ದನ್ನು ಉತ್ಸವದಲ್ಲಿ ನಿಂತು ನೋಡುತ್ತಿದ್ದವರನೇಕರು ಕಂಡರು. ಅವರು ಹೇಳುವ ಪ್ರಕಾರ ಆ ಸಿಡಿಮದ್ದಿನ ಗುಂಡು ಪಂಜಾಬ ನ್ಯಾಷನಲ್ ಬ್ಯಾಂಕ್ ಎಂಬ ಮೂರು ಉಪ್ಪರಿಗೆಯ ಕಟ್ಟಡದ ಕಡೆಯಿಂದ ಎಸೆಯಲ್ಪಟ್ಟಿತೆಂದು ಗೊತ್ತಾಗುತ್ತದೆ. ಆ ಕಟ್ಟಡದಲ್ಲಿ ಆ ವೇಳೆಯಲ್ಲಿ ಸುಮಾರು ಐವತ್ತು ಜನರು ಸೇರಿದ್ದರು. ಈಗ ಅವರನ್ನೆಲ್ಲಾ ವಸ್ತಗಿರಿ ಮಾಡಿದ್ದಾರೆ. ಅವರ ಕೈಫಿಯತ್ತುಗಳನ್ನು ಬರೆದುಕೊಂಡದ್ದಾಯಿತು. ಆ ದುರಾಗತ ಕೃತ್ಯವು ನಡೆದ ಕೂಡಲೆ ಪೋಲೀಸ್ ಸೂಪರಿಂಟೆಂಡೆಂಟರು ಆ ಕಟ್ಟಡದೊಳಕ್ಕೆ ಹೋಗಿ ಇತರ ಪೋಲೀಸ್ ಸಿಬ್ಬಂದಿಯನ್ನು ಕರಸಿ ಆ ಕಟ್ಟಡವನ್ನೆಲ್ಲಾ ಶೋಧಾಯಿಸಿಕೊಂಡರು. ಅದರ ಅಕ್ಕಪಕ್ಕಗಳಲ್ಲಿ ನಿಂತು ನೋಟ ನೋಡುತ್ತಿದ್ದವರನ್ನೂ ಪೋಲೀಸಿನವರು ಬಿಡದೆ ಹಿಡಿದುಕೊಂಡರು. ಮತ್ತು ಚಾಂದನಿ ಚೌಕದ ಸುತ್ತಲೂ ಕಠಿಣವಾದ ಪೋಲೀಸ್ ಬಂದೋಬಸ್ತನ್ನು ಇಟ್ಟಿರುತ್ತಾರೆ.

ಆ ಸಿಡಿಮದ್ದಿನ ಗುಂಡು ಹಾರಿ ಒಡೆದಾಗ ಅದರೊಳಗಿದ್ದ ಚೂರುಗಳು ತಗಲಿ ... ನೋಟಕರಲ್ಲೂ 10 15 ಮಂದಿಗೆ ಬಿದ್ದವು. ಒಬ್ಬ ಹುಡುಗನು ಮೃತಪಟ್ಟನು. ಉಳಿದವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆಮಾಡಿಸಿಕೊಳ್ಳುತ್ತಿದ್ದಾರೆ. ಈಚೀಚೆಗೆ ಇನ್ನು ಕೆಲವು ಗಾಯಪಟ್ಟವರು ಒಬ್ಬೊಬ್ಬರಾಗಿ ತಾವಾಗಿಯೇ ಬಂದು ಆಸ್ಪತ್ರೆಗಳಲ್ಲಿ ಕಾಣಿಸಿಕೊಂಡು ಔಷಧ ಹಾಕಿಸಿಕೊಳ್ಳುತ್ತಿರುವರು. ಆ ಮರಣಕರವಾದ ಸಿಡಿಮದ್ದಿನ ಗುಂಡಿನ ದೆಸೆಯಿಂದ ಎಷ್ಟು ಜನರಿಗೆ ಅಪಾಯ ಸಂಭವಿಸಿತೋ ಖಂಡಿತವಾಗಿ ಹೇಳುವುದು ಇನ್ನೂ ಸಾಧ್ಯವಿಲ್ಲ.

ಈ ಅನಾಹುತವು ನಡೆದ ಮೇಲೆ ಆ ಬ್ಯಾಂಕ್ ಕಟ್ಟಡಕ್ಕೆ ... ಯನ್ನು ಒಬ್ಬ ಹುಡುಗನು ತೆಗೆಯುತ್ತಿದ್ದನು. ಅವನನ್ನು ಪೋಲೀಸಿನವರು ವಸ್ತಗಿರಿ ಮಾಡಿದ್ದಾರೆ. ಇದಲ್ಲದೆ ಗಾಯಪಟ್ಟ ಇಬ್ಬರು ಹುಡುಗರು ಅಲ್ಲಿಂದ ಇನ್ನೊಂದು ಬೀದಿಯಲ್ಲಿ ಹಾಸಿ ಓಡಿಹೋಗುತ್ತಿದ್ದರು. ಇವರೂ ಪೋಲೀಸಿನವರ ಕೈವಶರಾದರು.

ಸೋಮವಾರ ಸಾಯಂಕಾಲ 6 ಗಂಟೆಗೆ ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್‌ರವರ ದೇಹಸ್ಥಿತಿಯ ವಿಷಯದಲ್ಲಿ ಡಾಕ್ಟರುಗಳು ಪ್ರಕಟಿಸಿದ್ದೇನೆಂದರೆ— ವೈಸ್‌ರಾಯಿಯವರಿಗೆ ಕ್ಲೋರೋಫಾರಂ ಎಂಬ ನಿದ್ರಾ ಔಷಧವನ್ನು ಕೊಟ್ಟು ಶಸ್ತ್ರಚಿಕಿತ್ಸೆ ಮಾಡಲಾಯಿತು. ಎಲುಬಿನ ಚಿಪ್ಪಿನ ಗಾಯವನ್ನು ಶೋಧಿಸಿದ್ದರಲ್ಲಿ ಮೂರು ಸಣ್ಣ ಮೊಳೆಗಳೂ, ಧೂಳಿನಂಥಾ ಸಣ್ಣ ಕಬ್ಬಿಣದ ಪುಡಿಗಳೂ ಸಿಕ್ಕಿದವು. ರೋಗಿಯು ಆರೋಗ್ಯಹೊಂದುತ್ತಿದ್ದಾರೆ.

ತಾ 24 ನೇ ಸೋಮವಾರ ದೆಹಲಿಯಲ್ಲಿ ಸರ್ಕಾರಿಯಾಗಿ ಪ್ರಕಟಮಾಡಲ್ಪಟ್ಟ ಇಸ್ತಿಹಾರು ಏನೆಂದರೆ—ಚಾಂದನಿ ಚೌಕದಲ್ಲಿ ಟೌನ್ ಹಾಲ್ ಬಳಿ ಸಿಡಿಮದ್ದಿನ ಗುಂಡು ಹಾರಿ ಒಡೆಯಿತು. ಆಗ ವೈಸ್‌ರಾಯಿಯವರಿಗೂ ಅವರ ಹಿಂಭಾಗದಲ್ಲಿ ಛತ್ರ ಹಿಡಿದು ಕುಳಿತಿದ್ದ ... ಛೋಬ್ದಾರನಿಗೂ ನಡುವೆ ... ತಗಡು ಹಾಕಿದ ಪೀಠದ ಮಧ್ಯ ಆ ಗುಂಡು ಒಡೆದಂತೆ ಕಾಣುತ್ತದೆ. ಅದರ ರಭಸವನ್ನು ವೈಸ್‌ರಾಯರವರು ಕುಳಿತಿದ್ದ ಪೀಠದ ಹಿಂಭಾಗವು ಅಡ್ಡಮಾಡಿತು. ಆ ಹಿಂಭಾಗವು ಒಡೆದು ಹಾಳಾಯಿತು. ಆದರೆ ಹಿಂದಿದ್ದ ಛೋಬ್ದಾರನು ತತ್ಕ್ಷಣವೇ ಮೃತಪಟ್ಟನು. ಒಡೆದುಹೋದ ಒಂದು ಭಾಗವು ವೈಸ್‌ರಾಯರವರ ಬೆನ್ನಿನ ಬಲಭಾಗಕ್ಕೆ ಬಡಿದು ಮೇಲ್ಗಡೆಗೆ ಹೊರಟುಕೊಂಡಿತು. ಇದರಿಂದ ಆ ಸ್ಥಳದಲ್ಲಿ ನಾಲ್ಕು ಅಂಗುಲ ಉದ್ದವಾದ ಗಾಯವಾಗಿ ಬೆನ್ನಿನ ಚಿಪ್ಪು ಹೊರಗೆ ಕಾಣುವಂತಾಯಿತು. ಮತ್ತು ಅವರ ಬಲಪಾರ್ಶ್ವದ ಕತ್ತಿನ ಮೇಲೂ ಗಾಯವಾಯಿತು. ಇದಲ್ಲದೆ ಅವರ ಬಲತೊಡೆಯಲ್ಲೂ ನಾಲ್ಕು ಸಣ್ಣ ಗಾಯಗಳಾದವು—ಆ ಗುಂಡು ಒಡೆದ ರಭಸದಿಂದ ವೈಸ್‌ರಾಯಿಯವರ ಪತ್ನಿಯವರು ಮುಂದಕ್ಕೆ ದೊಬ್ಬಲ್ಪಟ್ಟರು. ಆದರೂ ಅವರಿಗೆ ಯಾವುದೊಂದು ಅಪಾಯವೂ ಸಂಭವಿಸಲಿಲ್ಲ. ಅವರ ಹಿಂಭಾಗದಲ್ಲಿ ಕುಳಿತಿದ್ದ ಎರಡನೇ ಛೋಬ್ದಾರನಿಗೆ ಮುಖದ ಮೇಲೆ ಘೋರಾ ಗಾಯಗಳಾಗಿವೆ.—ಆ ಗುಂಡು ಹಾರಿ ಒಡೆದ ಕೂಡಲೆ ವೈಸ್‌ರಾಯಿಯವರು ಉತ್ಸವ ಮುಂದೆ ಸಾಗಲಿ ಎಂದು ಅಪ್ಪಣೆ ಕೊಟ್ಟರು. ಆದರೆ ಅವರ ಪತ್ನಿಯವರು ಅವರಿಗೆ ಘೋರಾ ಗಾಯವಾಗಿರುವುದನ್ನೂ, ಸ್ಮರಣೆತಪ್ಪುತ್ತಿರುವುದನ್ನೂ, ಹಿಂದೆ ಇದ್ದ ಛೋಬ್ದಾರನು ಸತ್ತುಹೋಗಿರುವುದನ್ನೂ ನೋಡಿ, ಉತ್ಸವವನ್ನು ನಿಲ್ಲಿಸುವಂತೆ ಹೇಳಿದರು. ಡಾಕ್ಟರವರು ಚಿಕಿತ್ಸೋಪಚಾರಮಾಡಿ ವೈಸ್‌ರಾಯರವರನ್ನು ಅಂಬಾರಿಯಿಂದ ಕೆಳಗೆ ಇಳಿಸುವುದಕ್ಕೆ ಬಹಳ ಹೊತ್ತು ಹಿಡಿಯಿತು. ಯಾಕೆಂದರೆ ಆನೆಯು ಬಹಳ ಎತ್ತರವಾಗಿತ್ತು ಮತ್ತು ಬಹು ಭಾರಿಯಾಗಿತ್ತು. ಆದರೂ ಕಡೆಗೆ ವೈಸ್‌ರಾಯಿಯವರನ್ನು ಸುಖವಾಗಿ ಕೆಳಕ್ಕೆ ಇಳಿಸಿ ಮೋಟಾರಿನಲ್ಲಿ ಮಲಗಿಸಿ ಅವರ ಬಿಡಾರಕ್ಕೆ ಕರೆದುಕೊಂಡುಹೋದರು.

ಮಧ್ಯಾಹ್ನ 2 ಗಂಟೆಗೆ ಇಬ್ಬರು ಡಾಕ್ಟರುಗಳು ವೈಸ್‌ರಾಯರ ದೇಹಸ್ಥಿತಿಯನ್ನು ಕುರಿತು ಹೀಗೆ ಪ್ರಕಟಮಾಡಿದರು—ವೈಸ್‌ರಾಯರವರ ಬೆನ್ನಿನ ಚಿಪ್ಪಿಗೆ ಬಡಿದ ಲೋಹದ ತುಂಡು ಕೆಳಗಿನಿಂದ ಮೇಲಕ್ಕೆ ಹೊರಟು ಮೇಲ್ಭಾಗದಲ್ಲಿ ಬಂದಿತು. 4 ಅಂಗುಲ ಉದ್ದ ಗಾಯವಾಗಿದೆ. ಮಾಂಸ ಮತ್ತು ಎಲುಬು ಕಾಣುತ್ತಿವೆ. ಶ್ವಾಸನಾಳಗಳಿಗೆ ಅಪಾಯವಾಗಿಲ್ಲ. ಕತ್ತಿಗೆ ಒಂದು ತುಂಡು ಬಡಿದು ಗಾಯವಾಗಿರುವುದೇನೂ ಕಠಿಣವಾಗಿಲ್ಲ. ಮತ್ತು ಬಲತೊಡೆಯ ಮೇಲೆ ಮೊಳೆಗಳು ಬಡಿದು ನಾಲ್ಕು ಸಣ್ಣ ಗಾಯಗಳಾಗಿವೆ. ರಕ್ತವು ಅಷ್ಟೇನೂ ನಷ್ಟವಾಗಲಿಲ್ಲ. ಆದರೆ ಗಾಬರಿ ವಿಶೇಷವಾಯಿತು. ಆ ಗುಂಡು ಒಡೆದ ರಭಸಕ್ಕೆ ಅವರ ಕಿವಿಯು ಸ್ವಲ್ಪ ಮಂದವಾಯಿತು. ಗಾಯವಾದ ಕೂಡಲೆ ವೈಸ್‌ರಾಯಿಯವರಿಗೆ ಪ್ರಜ್ಞೆತಪ್ಪಿತು. ಸ್ವಲ್ಪ ಹೊತ್ತಿನ ಮೇಲೆ ಹುಷಾರಾದರು. ಗಾಯಗಳನ್ನು ತೊಳೆದು ಔಷಧ ಹಾಕಿದೆ. ಈಗ ಅವರು ನೆಮ್ಮದಿಯಾಗಿದ್ದಾರೆ.

ತಾ 24 ನೇ ಬೆಳಿಗ್ಗೆ 8 ಗಂಟೆಗೆ ಡಾಕ್ಟರುಗಳು ಪ್ರಕಟಮಾಡಿದ್ದೇನೆಂದರೆ—ವೈಸ್‌ರಾಯಿ ಪ್ರಭುಗಳಿಗೆ ರಾತ್ರಿ ನೆಮ್ಮದಿ ಇರಲಿಲ್ಲ. ಸುಖನಿದ್ರೆ ಇರಲಿಲ್ಲ. ರಾತ್ರಿ ಕಳೆಯುವುದು ಕಷ್ಟವಾಯಿತು. ಅಫೀಮಿನ ದ್ರಾವಕವನ್ನು ಕೊಟ್ಟು ಗಾಯದ ಬಾಧೆಯನ್ನು ಕಡಿಮೆಮಾಡಬೇಕಾಯಿತು. ರಾತ್ರಿ ಸ್ವಲ್ಪ ಜ್ವರವಿತ್ತು. ಈಗ ಜ್ವರವೇನೂ ಇಲ್ಲ. ಬೆನ್ನೆಲುಬಿನ ಗಾಯವು ಬಹು ಕಠಿಣವಾದದ್ದೆಂದು ರಾತ್ರಿ ತಿಳಿಯಿತು.—ಆ ದಿನ ಸಾಯಂಕಾಲ 4 ಗಂಟೆಯ ವರ್ತಮಾನವೇನೆಂದರೆ, ವೈಸ್‌ರಾಯರ ದೇಹಸ್ಥಿತಿ ಅನುಕೂಲವಾಗಿದೆ. ಜ್ವರವೇನೂ ಇಲ್ಲ. ಬೆಳಿಗ್ಗೆ ಸ್ವಲ್ಪ ನಿದ್ದೆಮಾಡಿದ್ದರಿಂದ ಈಗ ಸುಖವಾಗಿದ್ದಾರೆ. ಅವರ ಗಾಯಗಳಲ್ಲಿ ಸಿಕ್ಕಿದ ಲೋಹದ ಮುರುಕುಗಳೂ ಮೊಳೆಗಳೂ ಗ್ರಾಮಫೋನಿನ ಸೂಜಿಗಳೆಂದು ಗೊತ್ತಾಯಿತು.

ತಾ 25 ನೇ ಬುಧವಾರ ಸಾಯಂಕಾಲದ ವರ್ತಮಾನ—ವೈಸ್‌ರಾಯರು ಸುಖವಾಗಿದ್ದಾರೆ. ನೋವು ಬಹಳ ಕಡಿಮೆಯಾಗಿದೆ. ಗಾಯಗಳು ತೃಪ್ತಿಕರವಾಗಿ ವಾಸಿಯಾಗುತ್ತಿರುವವು. ಆಹಾರವು ರುಚಿಸುತ್ತದೆ. ತಾ 26ನೇ ಗುರುವಾರ ಬೆಳಿಗ್ಗೆ—ರಾತ್ರಿ ವೈಸ್‌ರಾಯರು ಆರೋಗ್ಯವಾಗಿದ್ದರು. ಚನ್ನಾಗಿ ನಿದ್ದೆ ಮಾಡಿದರು. ಕಿವಿ ಕಿವುಡಾಗಿದ್ದದ್ದು ವಾಸಿಯಾಗುತ್ತಿದೆ. ಗಾಯಗಳ ನೋವು ಇಲ್ಲ. ಗುರುವಾರ ಸಾಯಂಕಾಲ— ಈ ದಿನ ವೈಸ್‌ರಾಯರು ಆರೋಗ್ಯವಾಗಿದ್ದಾರೆ. ಜ್ವರವೇನೂ ಇಲ್ಲ. ಗಾಯಗಳು ವಾಸಿಯಾಗುತ್ತಿರುವವು. ತಾ 27 ನೇ ಶುಕ್ರವಾರ ಬೆಳಿಗ್ಗೆ—ವೈಸ್‌ರಾಯಿಯವರು ಬೇಗನೆ ಆರೋಗ್ಯ ಹೊಂದುತ್ತಿದ್ದಾರೆ. ಸಹಜವಾಗಿ ನಿದ್ದೆ ಬರುತ್ತದೆ. ನೋವು ಬಹಳ ಕಡಿಮೆ. ಚಲಿಸಿದರೆ ಮಾತ್ರ ನೋವು ಕಾಣುತ್ತದೆ. ಬೆನ್ನಿನ ಮೇಲಣ ದೊಡ್ಡ ಗಾಯವು ವಾಸಿಯಾಗುತ್ತಿದೆ. ಕತ್ತಿನ ಮೇಲಣ ಗಾಯ ಮಾತ್ರ ಸ್ವಲ್ಪ ತೊಂದರೆ ಕೊಡುತ್ತಿದೆ. ಸಾಯಂಕಾಲದ ವರ್ತಮಾನ—ವೈಸ್‌ರಾಯರಿಗೆ ಚನ್ನಾಗಿ ಆರೋಗ್ಯವಾಗುತ್ತಿದೆ. ಸ್ವಲ್ಪ ಹೊತ್ತು ಕುರ್ಚಿಯಲ್ಲಿ ಎದ್ದು ಕುಳಿತುಕೊಂಡಿದ್ದರು. ಜ್ವರವಿಲ್ಲ. ಶನಿವಾರ ಬೆಳಿಗ್ಗೆ 8 ಗಂಟೆಯ ವರ್ತಮಾನ—ವೈಸ್‌ರಾಯರವರು ಆರೋಗ್ಯವಾಗಿದ್ದಾರೆ. ಬಲಕಿವಿಯ ಕಿವುಡು ಸುಮಾರಾಗಿ ಗುಣಹೊಂದಿದೆ. ರಾತ್ರಿ ಸುಮಾರಾಗಿ ಕಳೆಯಿತು. ಗಾಯಗಳ ಬಾಧೆ ಅಷ್ಟು ಹೆಚ್ಚಾಗಿಲ್ಲ. ತಾ 30ನೇ ಸೋಮವಾರ ಬೆಳಿಗ್ಗೆ 8 ಗಂಟೆಯ ವರ್ತಮಾನ—ವೈಸ್‌ರಾಯಿಯವರಿಗೆ ಅಪಾಯ ಕಳೆದುಹೋಯಿತು. ಗಾಯಗಳು ಮಾಗುವುದಕ್ಕೆ ಕೆಲವು ಕಾಲ ಹಿಡಿಯುತ್ತದೆ. ಅವರು ಸ್ವಲ್ಪ ಹೊತ್ತು ಬಂಗಲೆಯ ಕೈಸಾಲೆಯಲ್ಲಿ ಕುಳಿತಿದ್ದರು. ಅವರು ಆರೋಗ್ಯಹೊಂದುತ್ತಿದ್ದಾರೆ.

ಮೇಲ್ಕಂಡ ಘಾತುಕ ಕೃತ್ಯವನ್ನು ನಡಿಸಿದಂಥಾ ಕ್ರೂರಾತ್ಮಯನ್ನು ಹಿಡಿದುಕೊಡುವವರಿಗೆ ಗವರ್ನ್‌ಮೆಂಟಿನವರು 10,000 ರೂಪಾಯಿ ಬಹುಮಾನ ಸಿಕ್ಕುವುದೆಂದೂ, ಇನ್ನೂ ಬೇರೆ ವಿಧಗಳಲ್ಲಿ ಉಪಕಾರವಾಗುವುದೆಂದೂ ಇಸ್ತಿಹಾರು ಹಾಕಿಸಿದ್ದಾರೆ. ಇದಲ್ಲದೆ ಅಂಥಾ ದುಷ್ಟರನ್ನು ಹಿಡಿದುಕೊಡುವವರಿಗೆ ಮುಂದೆ ಹೇಳುವವರೂ ಬಹುಮಾನ ಕೊಡುತ್ತೇವೆಂದು ಒಪ್ಪಿ ಪ್ರಕಟಮಾಡಿದ್ದಾರೆ—ಡಿಲ್ಲಿಯಲ್ಲಿ ಒಬ್ಬ ದೊಡ್ಡ ಮನುಷ್ಯ 5,000 ರೂಪಾಯಿ, ಡಿಲ್ಲಿ ಪುರವಾಸಿಗಳು 5,000 ರೂಪಾಯಿ, ಕಾಶ್ಮೀರ ಸಂಸ್ಥಾನದ ಮಹಾರಾಜರವರು 10,000 ರೂಪಾಯಿ, ಗ್ವಾಲಿಯರ್ ಸಂಸ್ಥಾನದ ಮಹಾರಾಜರವರು 8,000 ರೂಪಾಯಿ. ಪಾಟಿಯಾಲಾ ಸಂಸ್ಥಾನದ ಮಹಾರಾಜರವರು 30,000 ರೂಪಾಯಿ, ಬಿಕಾನಿಯರ್ ಸಂಸ್ಥಾನದ ಮಹಾರಾಜರವರು 5,000 ರೂಪಾಯಿ. ಇದಲ್ಲದೆ ಇನ್ನೂ ಇತರರು ಇನಾಮು ಕೊಡುವುದಾಗಿ ತಿಳಿಸಿರುತ್ತಾರೆ.

ಮೃತಪಟ್ಟ ಛೋಬ್ದಾರನ ಶವವನ್ನು ದೆಹಲಿ ಸಿವಿಲ್ ಸರ್ಜನ್‌ರವರು ಲಾಷ್ ಮಹಜರು ಮಾಡಿಸಿ, ಹಿಂದುಗಳ ಆಚರಣೆಯ ಪ್ರಕಾರ ಯಮುನಾ ನದಿಯ ದಡಕ್ಕೆ ಮೆರವಣಿಗೆಯಲ್ಲಿ ಸಾಗಿಸಿ ಅಲ್ಲಿ ದಹನಮಾಡಿದರು. ಕಲ್ಲಿನ ಸರ್ಕಾರಿ ಖಜಾನೆಯ ಒಬ್ಬ ನೌಕರನು ಸರ್ಕಾರದಿಂದ ಈ ಕಾರ್ಯಕ್ಕೆ ನೇಮಿಸಲ್ಪಟ್ಟಿದ್ದನು. ಶವವನ್ನು ವಿಶೇಷ ಗೌರವವಾಗಿ ಮೆರವಣಿಗೆ ಮಾಡಿದರು. ಬಹು ವಿಶೇಷವಾಗಿ ಅಲಂಕಾರಗಳನ್ನು ಮಾಡಿದ್ದರು. ಉದ್ದಕ್ಕೂ ಹೂವುಗಳನ್ನು ಎರಚುತ್ತಾ ಬ್ಯಾಂಡ್ ವಾದ್ಯದಲ್ಲಿ ಚಾಂದನಿ ಚೌಕದ ಮಾರ್ಗವಾಗಿ ನದಿಯ ತಡಿಗೆ ಸಾಗಿಸಿಕೊಂಡು ಹೋದರು.

ಇಂಥಾ ದುರಾಗತವಾದ ಕ್ರೂರಕೃತ್ಯದ ಸುದ್ದಿಯು ಆ ಕೂಡಲೇ ಪ್ರಪಂಚದ ಎಲ್ಲಾ ಕಡೆಗಳಿಗೂ ಹಬ್ಬಿಕೊಂಡು, ಸಮಸ್ತರೂ ವಿಷಾದಪಟ್ಟು ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್‌ಯವರಿಗೆ ಸಂತಾಪವನ್ನು ಸೂಚಿಸಿ ತಂತಿ ವರ್ತಮಾನಗಳನ್ನು ಕಳುಹಿಸುತ್ತಿದ್ದಾರೆ. ಹಿಂದೂಸ್ಥಾನದ ಸಕಲ ಅಧಿಕಾರಿಗಳೂ, ಸಂಸ್ಥಾನಗಳ ಪಾಲಕರೂ, ಪ್ರಜಾಕೂಟಗಳೂ, ಎಲ್ಲಾ ಕೋಮುಗಳ ಮತ್ತು ಸಮಾಜಗಳ ಪ್ರಮುಖರೂ ದುಃಖಾಕ್ರಾಂತರಾಗಿ ತಮ್ಮ ವ್ಯಸನವನ್ನು ತಂತಿ ವರ್ತಮಾನಗಳ ಮೂಲಕ ಪ್ರಕಾಶಪಡಿಸುತ್ತಿದ್ದಾರೆ. ಮತ್ತು ವೈಸ್‌ರಾಯವರಿಗೆ ಬೇಗನೆ ಆರೋಗ್ಯವನ್ನು ದಯಪಾಲಿಸುವಂತೆ ಪ್ರಾರ್ಥನೆಗಳನ್ನು ಸಮರ್ಪಿಸುತ್ತಿರುವರು.

ದೆಹಲಿಯಿಂದ ತಂತಿ ವರ್ತಮಾನ ಬಂದ ಪ್ರಕಾರ ಪೋಲೀಸಿನವರು ಕಲ್ಕತ್ತಾ ಪಟ್ಟಣದಲ್ಲಿ ಜಹರ್ ಅಲಿ ಎಂಬ ಮಹಮದೀಯನ ಮನೆಯನ್ನು ಬಹಳ ಚನ್ನಾಗಿ ಶೋಧನೆಮಾಡಿದರು. ಯಾವ ಪದಾರ್ಥವನ್ನೂ ತೆಗೆದುಕೊಂಡು ಹೋಗಲಿಲ್ಲ. ಅವರು ಯಾರನ್ನೂ ದಸ್ತಗಿರಿಮಾಡಲಿಲ್ಲ. ಈ ಘೋರ ಕೃತ್ಯವು ಮಹಮದೀಯರಿಂದ ಆಗಿರಬೇಕೆಂದು ಕೆಲವು ಪೋಲೀಸಿನವರೂ, ಹಿಂದುಗಳಿಂದ ಆದದ್ದೆಂದು ಕೆಲವು ಪೋಲೀಸಿನವರೂ ಅಭಿಪ್ರಾಯಪಡುವಂತೆ ಕಾಣುತ್ತದೆ.

ವಿಶೇಷ ಪತ್ರಿಕೆ

ಇದೇ ತಿಂಗಳು 18 ನೆಯ ತಾ॥ ಪ್ರಾತಃಕಾಲ ಸಂಭವಿಸಿದ ಚೀಫ್ ಕೌನ್ಸಿಲರ್ ಮ ದಳವಾಯಿ ಮಾದರಾಜ ಅರಸಿನವರ ಆಕಸ್ಮಿಕ ಮರಣದಿಂದ ಮೈಸೂರು ದೇಶಕ್ಕೆ ಉಂಟಾದ ನಷ್ಟವನ್ನು ಶ್ರೀಮನ್ಮಹಾರಾಜರವರು ಈ ಮೂಲಕ ಬಹಳ ವ್ಯಸನಪಡುತ್ತಾ ಪ್ರಕಟಿಸಿರುತ್ತಾರೆ ಗತಿಸಿದ ಮ ಮಾದರಾಜ ಅರಸನವರು ಮೈಸೂರು ಸರ್ಕಾರದಲ್ಲಿ ಬಹುಕಾಲ ಉದ್ಯೋಗವಾಗಿ ಪ್ರಾಶಸ್ತ್ಯವನ್ನು ಪಡೆದಿದ್ದರು 1879 ನೆಯ ಇಸವಿಯಲ್ಲಿ ಮೈಸೂರು ಕಮಿಷನ್ನಿನಲ್ಲಿ ಆಫೀಸ್ ಉದ್ಯೋಗವನ್ನು ಮೊದಲ್ಗೊಂಡು ಅಸಿಸ್ಟೆಂಟು ಕಮಿಷನರ್, ಪೊಲೀಸ್ ಸೂಪರಿಂಟೆಂಡೆಂಟ್, ಡೆಪ್ಯುಟಿ ಕಮಿಷನರ್ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಮೊದಲಾದ ವಿವಿಧೋದ್ಯೋಗಗಳಲ್ಲಿ ದಕ್ಷತೆಯಿಂದ ಕಾರ್ಯನಿರ್ವಾಹ ಮಾಡಿದ ತರುವಾಯ ಸಂಸ್ಥಾನದ ಸ್ಟೇಟ್ ಕೌನ್ಸಿಲ್ ಮೆಂಬರ್ ಎಂಬ ಉನ್ನತ ಪದವಿಗೆ ಏರಿದರು ಅವರ ಕರ್ತವ್ಯ ಪರಾಯಣತೆ, ಯೋಗ್ಯವಾದ ತಿಳುವಳಿಕೆ, ನ್ಯಾಯಶೀಲತೆ ಮತ್ತೂ ಗೌರವಾನ್ವಿತವಾದ ಗುಣಗಳು—ಇವುಗಳು ಅವರ ಸಮಾಗಮವನ್ನು ಹೊಂದಿದ ಪ್ರತಿಯೊಬ್ಬರಿಗೂ ಪ್ರೀತಿಯನ್ನು ಉಂಟುಮಾಡುತ್ತಿದ್ದವು ಇವರ ಮರಣದಿಂದ ಸಂಸ್ಥಾನಕ್ಕೆ ಅಗ್ರಗಣ್ಯರಾದ ನಿವಾಸಿಗಳಲ್ಲೊಬ್ಬರೂ, ಸರ್ಕಾರಕ್ಕೆ ಸುಬುದ್ಧಿಪೂರ್ಣರಾದ ಕೌನ್ಸಿಲರೂ, ಜನಗಳಿಗೆ ಉದಾರಾಭಿಮಾನಿಗಳಾದ ಸ್ನೇಹಿತರೂ ನಷ್ಟವಾದಂತಾಯಿತು

ಹುಕುಂ ಬಮೂಜಿಬ್,

ಕೆ ಆರ್ ಶ್ರೀನಿವಾಸಯ್ಯಂಗಾರ್

ಆಫಿಸಿಯೇಟಿಂಗ್ ಸೆಕ್ರೆಟರಿ ಟು ಗೌರ್ನಮೆಂಟು

ಧಾರವಾಡದ ಉಪಾಧ್ಯಾಯರಿಗೆ ಸತ್ಕಾರವು

ಮೈಸೂರು ನಾರ್ಮಲ್ ಸ್ಕೂಲ್ ಸ್ಟೂಡೆಂಟ್ಸ್ ಹೋಂ

ಧಾರವಾಡದ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಲ್‌ರಾದ ಮ ಎ ಬಿ ಜೋಷಿಯವರು ತಮ್ಮ 80 ಜನ ವಿದ್ಯಾರ್ಥಿಗಳನ್ನೂ ಸಹೋಪಾಧ್ಯಾಯರುಗಳನ್ನೂ ಸಂಗಡ ಕರೆದುಕೊಂಡು ಈ ಪ್ರಾಂತ್ಯ ನೋಡತಕ್ಕ ಸ್ಥಳಗಳನ್ನೆಲ್ಲಾ ಸಂಚರಿಸುತ್ತಾ ತಾ 23 ರಲ್ಲಿ ರಾಜಧಾನಿಗೂ ಬಂದು ಇಲ್ಲಿನ ವಿಶೇಷಗಳನ್ನೆಲ್ಲಾ ಮುಖ್ಯವಾಗಿ ನಾರ್ಮಲ್ ಸ್ಕೂಲನ್ನು 24 ನೇ ತಾರೀಖಿನ ದಿನ ಬಹು ಚೆನ್ನಾಗಿ ಪರಿಶೀಲಿಸಿ ನೋಡಿದರು ಇಲ್ಲಿನ ನಾರ್ಮಲ್ ಸ್ಕೂಲ್ ಹೆಡ್ ಮಾಸ್ಟರ್ ಮ ಚಿಂತಾಮಣಿರಾಯರವರು ಇವರಿಗೆಲ್ಲ ನಾರ್ಮಲ್ ಸ್ಕೂಲ್ ಸ್ಟೂಡೆಂಟ್ಸ್ ಹೋಂನಲ್ಲಿ 25 ನೇ ತಾ ವಿಶೇಷವಾದ ಒಂದು ಟೀ ಪಾರ್ಟಿಯನ್ನು ಕೊಡಿಸಿದರು ಆ ದಿನ ಸಾಯಂಕಾಲ ಅತಿಥಿಗಳು ಸುಮಾರು 100 ಜನರು, ಹೋಂ ಕಮಿಟಿ ಮೆಂಬರುಗಳು, ನಾರ್ಮಲ್ ಸ್ಕೂಲ್ ಹೆಡ್ ಮಾಸ್ಟರವರು, ಅವರ ಅ ಮಾಸ್ಟರುಗಳು, ಎಲ್ಲರೂ ಹಾಜರಾದರು ಫಲಾಹಾರ ಮುಗಿದನಂತರ ಮೇಲೆ ಗ್ರಾಮೋಫೋನಿನಲ್ಲಿ ದಿವ್ಯವಾದ ಗಾನವು, ಬಳಿಕ ಸಂಗೀತೋಪಾಧ್ಯಾಯರು ಮ ಹೆಚ್ ಬಿ ಕೃಷ್ಣರಾಯರವರ ವೀಣಾವಾದ್ಯ ಸಂಗೀತವು ಬಹು ಶ್ರಾವ್ಯವಾಗಿ ನಡೆದವು ತರುವಾಯ ಮ ಎಂ ವೆಂಕಟಕೃಷ್ಣಯ್ಯನವರು ಅತಿಥಿಗಳಿಗೆ ತಕ್ಕ ಉಪಚಾರೋಕ್ತಿಗಳನ್ನೂ, ಉಪಾಧ್ಯಾಯರಿಗೆ ಅವಶ್ಯವಾದ ಅನೇಕ ಸಂಗತಿಗಳನ್ನೂ ಉಪನ್ಯಾಸಮಾಡಿದರು ಕಡೆಯಲ್ಲಿ ಮ ಜೋಷಿಯವರು ಆ ಸತ್ಕಾರಕ್ಕಾಗಿ ಹೆಡ್ ಮಾಸ್ಟರ್ ಮೊದಲಾದ ಸರ್ವರನ್ನೂ ವಂದಿಸಿದರು ಬಳಿಕ ಸಂತೋಷದಿಂದ ಎಲ್ಲರೂ ಬೀಳ್ಕೊಂಡರು

ಶ್ರೀರಂಗಪಟ್ಟಣದ ಕಾರೊನೇಷನ್ ಕಟ್ಟಡದ ಫಂಡು

ಮೂರನೆಯ ಚಂದಾ ಪಟ್ಟಿ

ಗಾಮನಹಳ್ಳಿ ಶ್ಯಾನುಭೋಗ ಸುಬ್ಬಣ್ಣನವರು, ಅರಕೆರೆ ಜೋಗಿಗೌಡರು ಉರಫ್ ಗೋಸಾಮಿ, ಅರಕೆರೆ ಚಿಕ್ಕಚನ್ನೇಗೌಡರು, ಅಂಚೆ ಅಲಗೂಡು ಶ್ಯಾ ಲಕ್ಷ್ಮೀನಾರಾಯಣಮೂರ್ತಿಯವರು, ಮಂಡ್ಯದ ಕೊಪ್ಪಲ್ ಪ, ಉರಿಗೌಡರು, ಅರಕೆರೆ ತಮ್ಮಶೆಟ್ಟರು, ಅರಕೆರೆ ಶ್ರೀನಿವಾಸಯ್ಯಂಗಾರ್ರು, ದೇವರಹಟ್ಟಿ ಜೋತೇಗೌಡರು, ಮಹಮದ್ ಇಬ್ರಾಹಿಂ ಸಾಹೇಬರು, ಅಬ್ದುಲ್ ರಹಿಮಾನ್ ಸಾಹೇಬರು, ಕೇ ರಾಮಯ್ಯನವರು, ಬಾಬೂರಾಯನ ಕೊಪ್ಪಲ್ ರಾಮಯ್ಯನವರು, ಮರಳಾಗಾಲದ ಪ ಲಿಂಗೇಗೌಡರು, ಅಲ್ಲಾಪಟ್ಟಣದ ಪಟೇಲ್ ಸಿದ್ದೇಗೌಡರು, ಗಂಜಾಂ ನೂಲಿನ ಅಂಗಡಿ ರಾಮಯ್ಯನವರು, ಅಮೊಕೇಟ್ [illegible] ರಾಮಣ್ಣನವರು, ಒಡೇಗೌಡರು, ಗೋಪಾಲಗೌಡರು, ಸ ಸಿದ್ದೇಗೌಡರು ಸಾಹುಕಾರ ಕಲ್ವೀರೇಗೌಡರು, ಚಿಕ್ಕಪ್ಪ ಮಾದೇಗೌಡರು, ಚಿಕ್ಕಮ್ಮ ಕೋಟೆ ಬಿಡಿಸಿದ್ದಯ್ಯನವರು, ಅಬ್ದುಲ್ ಖುದ್ದೂಸ್ ಸಾಹೇಬರು, ಸೈದ್ ಇಸೂಫ್ ಸಾಹೇಬರು ಲಕ್ಷ್ಮೀಗೌಡರು, ಕುರುಬರ ಶೆಟ್ಟಿಹಳ್ಳಿ ತಾವರೇಗೌಡರು, ಪ್ಲೀಡರ್ ಎಕ್ ಸುಬ್ಬರಾಯರು ತಲಾ ರೂ 10	ರೂ	290-0-0
ಹೊಸಹಳ್ಳಿ ತಿಮ್ಮೇಗೌಡರು	,,	4-0-0
ಅರಕೆರೆ ಎಂದಿಗೌಡರು, ಸಿದ್ದೇಗೌಡರು, ಸಣ್ಣಕೆಂಪೇಗೌಡರು, ಕೆಂಪಮ್ಮನ ಮಕ್ಕಳು ವೆಂಕಟಪ್ಪನವರು ತಲಾ ರೂ 8	,,	32-0-0
ಅರಕೆರೆ ರಂಗಸ್ವಾಮಯ್ಯಂಗಾರ್ರು	,,	7-0-0
ಅರಕೆರೆ ಎಂಡಿ ಸಿದ್ದೇಗೌಡರು	,,	6-0-0
2 ನೇ ಚಂದಾಪಟ್ಟಿಯಂತೆ	,,	1,120-2-0
ಜುಮ್ಲಾ ರೂಪಾಯಿ		1,451-2-0

ಶ್ರೀರಂಗಪಟ್ಟಣ, 23-12-1912

ಜಿ ದೇವಾಜಿರಾವ್, ಆನರರಿ ಸೆಕ್ರೆಟರಿ

ಶ್ರೀಮನ್ಮಹಾರಾಜರವರ ಸರ್ಕೀಟು

ನೆಲಮಂಗಲ

ಶ್ರೀಮನ್ಮಹಾರಾಜರವರ ಸವಾರಿಯು 9 ನೇ ತಾ 11 ಘಂಟೆಗೆ ನೆಲಮಂಗಲಕ್ಕೆ ದಯಮಾಡಿಸಿ ಕಛೇರಿಯ ಬಳಿ ಶೃಂಗರಿಸಲ್ಪಟ್ಟ ಸುಂದರವಾದ ಚಪ್ಪರದ ಬಳಿ ಶ್ರೀಯವರ ಮೋಟಾರ್ ಗಾಡಿಯು ಬಂದು ನಿಂತ ಕೂಡಲೆ ಅಮಲ್ದಾರರವರು ಶ್ರೀಮನ್ಮಹಾರಾಜರವರಿಗೂ ಯುವರಾಜರವರಿಗೂ ಪುಷ್ಪ ಹಾರಗಳನ್ನು ಅರ್ಪಿಸಿದ ನಂತರ ಶ್ರೀಮನ್ಮಹಾರಾಜರವರ ಮತ್ತು ಯುವರಾಜರವರ ಸವಾರಿಯು ಮುಂದಕ್ಕೆ ದಯಮಾಡಿಸಿತು 21 ನೇ ಮೈಲಿ ಮಹದೇವಪುರದ ಬಳಿಯಲ್ಲಿ ಚಿಕ್ಕಮಧುರೆಹಳ್ಳಿ ಶ್ಯಾನು ಮ ನರಹರಿಯನವರು ಮೊದಲಾದವರಿಂದಲಂಕೃತವಾದ ಚಪ್ಪರದಲ್ಲಿ ಶ್ರೀಯವರ ಸವಾರಿಯು ಬಂದ ಕೂಡಲೆ ನರಹರಿಯನವರು ಪುಷ್ಪಹಾರಗಳನ್ನು ಅರ್ಪಿಸಿದರು ಮಹಾರಾಜರವರೂ ಯುವರಾಜರವರೂ ಅವುಗಳನ್ನು ಸ್ವೀಕರಿಸಿ ಪರಿವಾರ ಸಮೇತ ಮುಂದಕ್ಕೆ ಚಿತ್ತೈಸಿ ದೇವಸಂಚಾರವನ್ನು ಪೂರೈಸಿಕೊಂಡು 20 ನೇ ತಾ ಈ ಊರಿನ ಮಾರ್ಗವಾಗಿ ದಯಮಾಡಿ ತಾಲೂಕ್ ಆಫೀಸ್ ಚಪ್ಪರದಲ್ಲಿ ಮೋಟಾರ್ ಗಾಡಿಯನ್ನು ನಿಲ್ಲಿಸಿ ಪ್ರಜೆಗಳಿಗೆ ದರ್ಶನವನ್ನು ಕೊಟ್ಟು ಅಮಲ್ದಾರರವರು ಒಪ್ಪಿಸಿದ ಪುಷ್ಪ ಹಾರ ಮುಂತಾದವುಗಳನ್ನು ಸ್ವೀಕರಿಸಿ, ನಂತರ ಬೆಂಗಳೂರಿಗೆ ದಯಮಾಡಿಸಿದರು

ಚಿತ್ರದುರ್ಗ

ಚಿತ್ರದುರ್ಗದ ಆರ್ಫನ್ ಸ್ಟೂಡೆಂಟ್ಸ್ ಹೋಂ ಮತ್ತು ಶ್ರೀಮತ್ ಮುರಿ ಮಹಾರಾಜ ಪಂಚಮ ಸ್ಕೂಲ್ ಮ್ಯಾನೇಜರಾದ ಮ ಎಸ್ ವಿ ಹನುಮಂತರಾಜಯ್ಯನವರು ಹೋಮಿನ ಮತ್ತು ಸ್ಕೂಲಿನ ವಿದ್ಯಾರ್ಥಿಗಳನ್ನೂ ಹೋಮಿನ ಮುಖಂಡರುಗಳಾದ ಚಟ್ಟರಾಜು ಜನರನ್ನೂ ಪಂಚಮ ಸ್ಕೂಲಿಗೆ ಸಂಬಂಧಪಟ್ಟ ನೂರಾರು ಜನ ಮಾದಿಗರನ್ನೂ ಅವರ ಗುರುಗಳಾದ ಗಾಲವಮುನಿ, ಬಾಲವಮುನಿ ಸಾನಂದಮುನಿ ಎಂಬ ಜಾಂಬವರನ್ನೂ ಆ ಜನರಲ್ಲಿ ಫೋಟೋಗ್ರಾಫರಾಗಿರುವ ದೊಡ್ಡಯ್ಯನವರನ್ನೂ ಕರೆದುಕೊಂಡು ನಮ್ಮ ಪ್ರಭುಗಳಾದ ಶ್ರೀಮನ್ಮಹಾರಾಜರವರ ಭೇಟಿಗಾಗಿ ವಾಣೀವಿಲಾಸಕ್ಕೆ ಈ ಮಾಹೆ 18 ರಲ್ಲಿ ಬಂದಿದ್ದರು ವಾಣೀವಿಲಾಸ ಕೆರೆಯ ಏರಿಯ ಮೇಲಿರುವ ಚಪ್ಪರದ ಸ್ಥಳದಲ್ಲಿ ಹೊಸದುರ್ಗಕ್ಕೆ ಹೋಗುವ ರಸ್ತೆ ಹೊಂದಿರುವ ಬಳಿಯಲ್ಲಿ ಜನ ಸಂದಣಿ ಇಲ್ಲದ ಕಡೆ ಕಾದಿದ್ದರು ಈ ಮಾಹೆ 19 ನೇ ತಾ ಬೆಳಗ್ಗೆ ಕಾದಿದ್ದವರಲ್ಲಿ ಶ್ರೀಮನ್ಮಹಾರಾಜರವರು ಬ್ರಿಟಿಷ್ ರೆಸಿಡೆಂಟರವರೊಡನೆ ಮೋಟಾರಿನಲ್ಲಿ ಕೆರೆಗೆ ಚಿತ್ತೈಸಲು ದಯಮಾಡಿಸುತ್ತಾ ಈ ವಿದ್ಯಾರ್ಥಿಗಳಿದ್ದ ಕಡೆ ಕೃಪಾದೃಷ್ಟಿಯನ್ನಿಟ್ಟು ಮೋಟಾರನ್ನು ನಿಲ್ಲಿಸಿ ಎಲ್ಲರಿಗೂ ಮಹಾ ದರ್ಶನವನ್ನು ಕೊಟ್ಟು ಮ್ಯಾನೇಜರ ಕೂಡ ಹೋಮಿನ ಮತ್ತು ಸ್ಕೂಲಿನ ವಿದ್ಯಮಾನಗಳನ್ನು ಕೇಳಿ ತಿಳಿದುಕೊಂಡರು ಮಧ್ಯಾಹ್ನದ ಮೇಲೆ ಡೆಪ್ಯುಟಿ ಕಮಿಷನರ್ ಮ ಕೆ ಎಸ್ ಕೃಷ್ಣಯ್ಯರವರು ಮ್ಯಾನೇಜರನ್ನು ಕರೆಸಿಕೊಂಡು ಮಹಾರಾಜರವರ ಅಪ್ಪಣೆಯಂತೆ 100 ರೂಪಾಯಿ ಬಹುಮಾನ ದಯಪಾಲಿಸಿದರು ಮರುದಿನ ಅರ್ಚ್‌ಭಕ್ತಿ ಮ ಲಿಂಗರಾಜೇ ಅರಸಿನವರೂ, ಆ ಸೆಕ್ರೆಟರಿ ಮ ಮಿರ್ಜಾ ಸಾಹೇಬರೂ 19 ನೇ ತಾ ಸಾಯಂಕಾಲ ದಯಮಾಡಿ ವಿದ್ಯಾರ್ಥಿಗಳನ್ನೂ ಆ ಜನರನ್ನೂ ನೋಡಿ ಇವರ ಸ್ಥಿತಿಗತಿಗಳನ್ನು ವಿಚಾರಿಸಿ ತುಂಬಾ ಸಂತೋಷಪಟ್ಟು ಮ್ಯಾನೇಜರು ಸಿದ್ಧಪಡಿಸಿಕೊಂಡಿದ್ದ ಬಿನ್ನಹ ಪತ್ರಿಕೆಗಳನ್ನು ತೆಗೆದುಕೊಂಡು ಹೋದರು

ಬಾತ್ಮೀದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ವಾತ್ಮೆಗಳಿಗೆ ನಾವು ಜಾಗ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಕೆನ್ನಾ, ಬೆಂಗಳೂರು —ನಿಮ್ಮ ಆಶಯವೇನೋ ತಿಳಿಯುವುದಿಲ್ಲ

ಪೆನ್ಷನ್ ಆಫೀಸರ್, ಚಿತ್ರದುರ್ಗ —ನಿಮ್ಮ ಬಾತ್ಮಿಯನ್ನು ಪ್ರಕಟಿಸುವುದರಲ್ಲಿ ಫಲಿತಾಂಶವೇನೂ ಕಾಣುವುದಿಲ್ಲ

ಬಿ ಎಲ್ ಬಿಯನ್ನಾ, ಬೆಂಗಳೂರು —ನಿಮ್ಮ ವಾತ್ಮೆಯಿಂದ ನಿಮ್ಮ ಉದ್ದೇಶವೇನೆಂಬುವುದು ತಿಳಿಯುವುದಿಲ್ಲ

ಗ್ರಾಮಸ್ಥರು, ಅಗ್ರಹಾರದ ಕೊಪ್ಪಲು ಕೆ ಅಶ್ವತ್ಥರಾವ್ ಕಲಿಯೂರ —ಈ ವಾತ್ಮೆಗಳಲ್ಲಿ ಪ್ರಕಟನೆಗೆ ಅರ್ಹವಾದ ವರ್ತಮಾನಗಳೇನೂ ಕಾಣುವುದಿಲ್ಲ

ಸತ್ಯವಾದಿ ಪ್ರಯೋಜಕ, ಕುಂ [illegible] —ನೀವು ವಿವರಿಸುವ ವಿಷಯಗಳನ್ನೆಲ್ಲಾ ರುಜುವಾತು ಒದಗಿಸಿ ಸಿದ್ಧಾಂತಪಡಿಸಬಲ್ಲಿರಾ? ಇದಕ್ಕೆ ನೀವು ಸಿದ್ಧರಾಗಿದ್ದರೆ ನಿಮ್ಮ ಬಾತ್ಮಿಯನ್ನು ಪ್ರಕಟಮಾಡುವೆವು

ಡಿ ರಾಮಯ್ಯಂಗಾರ್, ಪಾವಗಡ —ನಿಮ್ಮ ಪ್ರಶ್ನೆಗಳು ವಿಸ್ತಾರವಾದ ಉತ್ತರಗಳನ್ನು ಒಳಗೊಂಡಿವೆ ಪುನಃ ಪ್ರಶ್ನೆಗೆ ಅವಕಾಶಕೊಡದಂಥವುಗಳಲ್ಲ ಆದಕಾರಣ ನಿಮ್ಮ ಆಶಯವನ್ನು ನೆರವೇರಿಸಲಾರೆವೆಂದು ವಿಷಾದಿಸುತ್ತೇವೆ

ದೆಹಲಿ ದರ್ಬಾರ್ ಡೇ ಉತ್ಸವದ ವೃತ್ತಾಂತಗಳು ಈ ವಾರವೂ ಕೆಲವು ನಮ್ಮಲ್ಲಿಗೆ ಬಂದಿರುತ್ತವೆ ಇದಕ್ಕಾಗಿ ಆಯಾ ಬಾತ್ಮೀದಾರರನ್ನು ವಂದಿಸಿ, ಪ್ರಕಟಮಾಡದೆಹೋದ ವಿಷಯದಲ್ಲಿ ಅವರ ಕ್ಷಮಾಪಣೆಯನ್ನು ಬೇಡುವೆವು ಸ್ಥಳಗಳಾವುವೆಂದರೆ—ಮಳವಳ್ಳಿ, ನೆಲಮಂಗಲ, ಹಿರಿಯೂರು ತಾಲ್ಲೂಕು ಮರಡಿಹಳ್ಳಿ, ಅರಸೀಕೆರೆ ತಾ॥ ಬೆಳಗುಂಬ, ಮಳವಳ್ಳಿ ತಾ॥ ಬೆಳಕವಾಡಿ

—ಎಡಿ]

ಕರೆಸ್ಪಾಂಡೆನ್ಸ್

ಪ್ರತ್ಯಕ್ಷ ಅನುಭವ ಅನುಮಾನ ಪರಿಚ್ಛೇದ

ಅಯ್ಯಾ,

1880 ನೇ ಇಸವಿಯಲ್ಲಿ ಪ್ರಿಂಟಾಗಿರತಕ್ಕ ರಘುನಾಥರಾವ್ರ ಭೂಗೋಳದಲ್ಲಿ ನಂದೀದುರ್ಗದ ಬೆಟ್ಟದ ಮೇಲೆ ರಾತ್ರಿಯಲ್ಲಿ ನಿಂತು ನೋಡಿದರೆ ಉತ್ತರ ಪಿನಾಕಿನಿಯ ಕಣಿವೆಯಲ್ಲಿ ಕೋಟ್ಯಾನು ಕೋಟಿ ದೀಪಗಳಂತೆ ಬೆಳಕು ಕಾಣುವದು ಇದಕ್ಕೆ ಕಾರಣವನು ತಿಳಿ ಎಂದು ಕೇಳಿದ್ದಕ್ಕೆ ಮಿಣ್ಕು ಹುಳುಗಳು ಎಂದು ಉದಾಹರಣೆ ಒದಗಿಸಿದ್ದರು ಅದು ಸತ್ಯವಾಗಿರಬಹುದೇ ಎಂದು ನಾನು ಒಬ್ಬ ವಿದ್ವಾಂಸರ ಸಹಾಯದಿಂದ ನಂದೀದುರ್ಗದ ಬೆಟ್ಟಕ್ಕೂ ಉತ್ತರ ಪಿನಾಕಿನಿಗೂ ಹೋಗಿ ಪರೀಕ್ಷಿಸಿದ್ದರಲ್ಲಿ ನೀರು ಹರಿಯುವ ಸ್ಥಳದಲ್ಲಿ ಕೊಂಚ ಪ್ರದೇಶದಲ್ಲಿ ಕಾಗೆ ಭಂಡಾರ ಎಂಬ ಅದುರು ಇದೆ ಮತ್ತು ಪಾದರಸವೆಂಬ ಒಂದು ವಿಧವಾದ ಎಣ್ಣೆ ಮಿಶ್ರವಾದ ನೀರು ಆ ಪ್ರದೇಶದಲ್ಲಿದ್ದ ಇಂಥಾ ಎಣ್ಣೆ ಮಿಶ್ರವಾದ ನೀರು ಭೂಮಿಯ ಗುಣದಿಂದ ಹುಟ್ಟುವದನು ವಾಚಕರು ಅನೇಕರು ನೋಡಿರಬಹುದು ಈ ನೀರು ಮತ್ತು ಕಾಗೆ ಭಂಡಾರದ ಅದುರು ಇವುಗಳಿಂದ ರಾತ್ರಿ ಕಾಲದಲ್ಲಿ ಮಿಂಚಿನಂತೆ ನಕ್ಷತ್ರಗಳೋಪಾದಿಯಲ್ಲಿ ನೀರಿನ ಮೇಲೆ ಕಾಣುತ್ತದೆಯೇ ಹೊರತು ಹುಳುವೇ ಆಗಲೀ ಇನ್ನಾವ ಕಾರಣವೇ ಆಗಲೀ ಅಲ್ಲವೆಂಬುವದನ್ನು ನಿರ್ಧರಿಸುತ್ತೇನೆ ಹೀಗಾದವರು ಕಾಲ ನಷ್ಟವಿಲ್ಲದೆ ಹೋಗಿ ಪರೀಕ್ಷಿಸಬಹುದು

ಮೈಸೂರು ಟಿ. ದಾಸಪ್ಪ

ವಿಧವಾ ವಿವಾಹನ್ನೋ ಸ್ವಯಂವರನ್ನೋ

ಒಡೆಯ,

ತಮ್ಮ ಪತ್ರಿಕೆಯ ಕಳೆದ ವಾರದ ಸಂಚಿಕೆಯಲ್ಲಿ ಮ ವೆಂಕಟರಾಮಾಪುರದ ಚನ್ನಪ್ಪಯ್ಯನವರು “ವಿಧವಾ ವಿವಾಹವೋ, ಸ್ವಯಂವರವೋ” ಎಂಬ ಅಭಿದಾನದಿಂದ ಪ್ರಕಟಿಸಿರುವ ಲೇಖನವನ್ನು ಓದಿದೆನು ವಿಧವಾ ವಿವಾಹದ ಆವಶ್ಯಕತೆಯನ್ನು ಯುಕ್ತಾಯುಕ್ತವಾಗಿ ಚರ್ಚಿಸಿ ಸಮರ್ಥಿಸುವಂಥಾ ರೀತಿಯು ನಮ್ಮಲ್ಲಿ ಶಾಸ್ತ್ರ ಕೋವಿದರಾದವರಿಗೆ ರಂಜಕವಾದರೂ, ಶಾಸ್ತ್ರ ಪ್ರಮಾಣಗಳಿಂದ ಉದ್ಧರಿಸಲ್ಪಟ್ಟ ಹೊರತು ಅನೇಕರು ಯಾವ ಸಂಘಸ್ಥರ ಕಾರಣವನ್ನೂ ಅನುಮೋದಿಸುವುದಿಲ್ಲ “ವಿಧವಾ ಪುನರ್ವಿವಾಹ” ವೆಂಬ ಪದವು ಶಾಸ್ತ್ರರೀತ್ಯಾ ಅಸಂಬದ್ಧವಾದುದೆಂದೂ, ಅಂತಹ ವಿವಾಹಕ್ಕೆ “ವಿಧವಾ ಪುನಃಸ್ವಯಂವರ” ವೆಂಬ ವಚನವು ಅನ್ವಯಿಸತಕ್ಕದ್ದೆಂದೂ ಮೊಲ್ಲಿಂದ ಲೇಖಕರು ಸೂಚಿಸಿರುವರು ಈ ವಿಷಯದಲ್ಲಿ ನನ್ನ ಆಕ್ಷೇಪಣೆ ಏನೆಂದರೆ—

ನಮ್ಮ ಶಾಸ್ತ್ರಗಳಲ್ಲಿ ವಿಧವಾ ವಿವಾಹಕ್ಕೆ ನಿಷೇಧ ಪ್ರಮಾಣಗಳಿರುವಂತೆಯೇ ಅನುಮೋದಕ ಪ್ರಮಾಣಗಳೂ ಸಹ ಇರುತ್ತವೆ ಶಾಸ್ತ್ರರೀತ್ಯಾ ಪುನಃ ಮದುವೆ ಮಾಡಿಕೊಂಡ ವಿಧವೆಯು ಸೂಚನೆಗೆ “ವಿವಾಹ” ವೆಂಬ ಶಬ್ದವನ್ನು ಶಾಸ್ತ್ರಕರ್ತರೇ ಉಪಯೋಗಿಸುತ್ತಾರೆ ಲೇಖನ ವಿಸ್ತಾರ ಭಯದಿಂದ ಅಂತಹ ಪ್ರಮಾಣಗಳಲ್ಲಿ ಕೆಲವನ್ನು ಮಾತ್ರ ಉದಹರಿಸುವೆನು (1) ಅತ್ರಿ ವಚನ—ಕನ್ಯಾ ಸಮಾಪಸಾ ವಾ ವಿಧವಾ ಸ್ತ್ರೀ ತ ವರ್ತತೇ ಪುನಸ್ತ್ರೀಣಾಂ ವಿವಾಹಸ್ತು ಕ್ಷತಂ ನಸಂಶಯಃ (2) ವಿಶ್ವಾಮಿತ್ರ ವಚನ—ಅಕ್ಷತ ಯೋನಿಃ ವಾಸಿ ಸ್ಯಾತ್ ಪತ್ಯಾಃ ಸ್ವಸ್ಯ ನಾಶೇ ಕರ್ತವ್ಯ ಪತಿರನ್ಯೋ ಯುಕ್ತಃ ಪತಿ (3) ನಾರದ ಸ್ಮೃತಿ—ನಷ್ಟೇ ಮೃತೇ ಪ್ರವ್ರಜಿತೇ ಕ್ಲೀಬೇ ಚ ಪತಿತೇ ಪತೌ ಪಂಚಸ್ವಾಪತ್ಸು ನಾರೀಣಾಂ ಪತಿರನ್ಯೋ ವಿಧೀಯತೇ

ಮಹರ್ಷಿ ಪ್ರೋಕ್ತಗಳಾದ ಸ್ಮೃತಿ ಪ್ರಮಾಣಗಳಿಂದ ಕೆಲವು ಆಪತ್ತುಗಳಲ್ಲಿ ಸ್ತ್ರೀಯರಿಗೆ ಕಲಿಯುಗದಲ್ಲೂ ಪುನರ್ವಿವಾಹವಾಗಬಹುದೆಂದು ಹೇಳಿರುವುದು ಈ ಸಂಗತಿಗಳಾ ವರ್ತಮಾನ ಮ ಚನ್ನಪ್ಪಯ್ಯನವರೇ ಮೊದಲಾದ ವಾಚಕರು ನಿಷ್ಪಕ್ಷಪಾತವಾಗಿ ಪರಿಶೀಲಿಸಬೇಕೆಂದು ಕೋರುತ್ತೇನೆ

ರಾಮೇಶ ಶಿ ಯ, ಮೈಸೂರು

ವಿಷಯ ತಿಳಿಯಬೇಕು

ಅಯ್ಯಾ

ಈ ಕೆಳಗೆ ಕಂಡ ಕೆಲ ವಿಷಯಗಳಿಗೆ ತಮ್ಮ ವಾಚಕರಲ್ಲಾರಾದರೂ ದಯವಿಟ್ಟು ಸಮರ್ಪಕ ತಿಳುವಳಿಕೆಯನ್ನು ತಮ್ಮ ಅಮೋಘವಾದ ಪತ್ರಿಕೆಯ ಮೂಲಕ ಪ್ರಕಟಿಸಿದರೆ ಬಹಳ ಕೃತಜ್ಞನಾಗಿರುವೆನು

(1) ಮೈಸೂರು ದಸರಾ ಪ್ರಜಾಪ್ರತಿನಿಧಿ ಸಭೆಯ ಚುನಾವಣೆಗಳು ಯಾವ ರೀತಿ ನಡೆಸಲ್ಪಡುತ್ತಿವೆ ಸಭೆಗೆ ಹೋಗತಕ್ಕ ಮೆಂಬರುಗಳಿಗೆ ಇರಬೇಕಾದ ಅರ್ಹತೆ ಏನು? ಚುನಾಯಿಸಲ್ಪಟ್ಟ ಬಳಿಕ ಎಷ್ಟು ಕಾಲದವರೆಗೆ ಅವರು ಆ ಸಭೆಯಲ್ಲಿ ಮೆಂಬರುಗಳಾಗಿರುತ್ತಾರೆ

(2) ಸಂಸ್ಥಾನದಲ್ಲಿಯ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಬೋರ್ಡುಗಳಿಗೆ ಚುನಾಯಿಸಲ್ಪಡುವ ಮೆಂಬರುಗಳಿಗೆ ಇರಬೇಕಾದ ಅರ್ಹತೆ ಏನು? ಆ ಚುನಾವಣೆಯು ಯಾವ ರೀತಿ ನಡಿಸಲ್ಪಡುತ್ತದೆ?

ಕೆ ಗುರುಮೂರ್ತಯ್ಯ

(1) ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳನ್ನು ಚುನಾಯಿಸತಕ್ಕವರ ಮತ್ತು ಮೆಂಬರಾಗತಕ್ಕವರ ಅರ್ಹತೆಯು ಸಂಸ್ಥಾನದಲ್ಲೆಲ್ಲಾ ಒಂದೇ ರೀತಿಯಾದದ್ದಲ್ಲ ಸರ್ಕಾರದವರು ಅರ್ಹತೆಯನ್ನು ಬೇರೆ ಬೇರೆ ತಾಲ್ಲೂಕುಗಳಲ್ಲಿ ಬೇರೆ ಬೇರೆ ತರವಾಗಿ ಮಾಡಿರುತ್ತಾರೆ ತುಮಕೂರು ತಾಲ್ಲೂಕಿನಲ್ಲಿ ಸಾಲಿಯಾನಾ 5 ರೂಪಾಯಿ ಜಮೀನ್ ಕಂದಾಯ ಅಥವಾ 17 ರೂಪಾಯಿ ಮೊಹತರ್ಫಾ ಕಂದಾಯ ಕೊಡತಕ್ಕವರು ಮತ್ತು ಅವುಗಳಿಗಿಂತ ಹೆಚ್ಚಾದ ಕಂದಾಯ ಕೊಡತಕ್ಕವರು ಮೆಂಬರುಗಳನ್ನು ಚುನಾವಣೆ ಮಾಡುವ ಅರ್ಹತೆಯನ್ನು ಪಡೆಯುತ್ತಾರೆ ಸಾಲಿಯಾನಾ 100 ರೂಪಾಯಿ ಜಮೀನ್ ಕಂದಾಯ ಅಥವಾ [illegible] ರೂಪಾಯಿ ಮೊಹತರ್ಫಾ ಕಂದಾಯ ಕೊಡತಕ್ಕವರು ಮತ್ತು ಅವುಗಳಿಗಿಂತ ಹೆಚ್ಚಾದ ಕಂದಾಯ ಕೊಡತಕ್ಕವರು ಮೆಂಬರಾಗಿ ಚುನಾಯಿಸಲ್ಪಡಲು ಅರ್ಹರಾಗಿರುತ್ತಾರೆ ತಾಲ್ಲೂಕ್ ಅಮಲ್ದಾರರು ಇಂಥಾ ಅರ್ಹತೆಯುಳ್ಳವರನ್ನೆಲ್ಲಾ ಒಂದು ಕಡೆ ಸೇರಿಸಿ,—“ನೀವುಗಳೆಲ್ಲಾ ನಿಮಗೆ ಇಷ್ಟವಿರುವ 4 ಮಂದಿಗೆ ನಿಮ್ಮ ಸಮ್ಮತಿ (ಓಟು) ಗಳನ್ನು ಹಾಕಬಹುದು” ಎಂಬ ಅರ್ಥವನ್ನು [illegible] ತ್ತಾರೆ ಈ ರೀತಿ ಹೆಚ್ಚು ಸಂಖ್ಯೆಯ ಸಮ್ಮತಿಗಳನ್ನು ಯಾವ ನಾಲ್ಕು ಜನ ಪಡೆಯುವರೋ ಅಂಥವರು ಆ ತಾಲ್ಲೂಕಿನ ಮೂರು ವರುಷಗಳ ಸಭೆಯ ಪ್ರತಿನಿಧಿ ಮೆಂಬರುಗಳೆಂದು ಎಣಿಸಲ್ಪಡುತ್ತಾರೆ ಅಂಥಾ ಚುನಾವಣೆಯ ಸಮಯದಲ್ಲಿ ಯಾವ ಸರ್ಕಾರಿ ನೌಕರನೂ ಅಧಿಕಾರಿಯೂ ಚುನಾವಣೆಗೆ ಸಂಬಂಧಪಡುವ ಯಾವುದೊಂದು ಮಾತನ್ನೂ ಆಡದೇನೂ, ಯಾರಿಗೂ ಇಂಥವರಿಗೆ ಸಮ್ಮತಿ ಹಾಕಿ ಎಂದು ಸಿಫಾರಸು ಮಾಡದೇನೂ ಚುನಾವಣೆಯಲ್ಲಿ ಅಕ್ರಮಗಳೇನೂ ನಡೆಯದಂತೆ ನೋಡಿಕೊಳ್ಳಬೇಕೆನ್ನುವದೇ ಗವರ್ನ್‌ಮೆಂಟಿನವರ ಉದ್ದೇಶವಾಗಿದೆ

(2) ತಾಲ್ಲೂಕ್ ಬೋರ್ಡುಗಳಿಗೂ, ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಮೆಂಬರುಗಳನ್ನು ಅಮಲ್ದಾರರೂ ಡೆಪ್ಯುಟಿ ಕಮಿಷನರುಗಳೂ ನೇಮಕಮಾಡ

ಪ್ರೆಸಿಡೆಂಟರಿಗೆ ಶಿಫಾರಸು ಮಾಡುತ್ತಾರೆ ಇವರ ಶಿಫಾರಸನ್ನು ಸಾಮಾನ್ಯವಾಗಿ ಸರ್ಕಾರದವರು ಸ್ವೀಕಾರ ಮಾಡುವರು. ಈ ಬೋರ್ಡುಗಳಿಗೆ ಮೆಂಬರುಗಳನ್ನು ಪ್ರಜೆಗಳು ಚುನಾಯಿಸುವುದಿಲ್ಲ. ಆಯಾ ಸ್ಥಳಗಳಲ್ಲಿ ಪ್ರಜಾಮುಖಂಡರಾಗಿಯೂ ಮಾತುಬಲದವರಾಗಿಯೂ ಇರುವ ಬೇರೊ ಪ್ರಕಾರ ದೊಡ್ಡ ಮನುಷ್ಯರು ಡೆಪ್ಯುಟಿ ಕಮಿಷನರ್‌ರ ಶಿಫಾರಸಿನ ಮೇಲೆ ಮೂರು ವರುಷ ಮೆಂಬರುಗಳಾಗಿ ನೇಮಕವಾಗುವರು. —ಎಡಿ.]

ಪುಷ್ಯೋದಯ

ಅಯ್ಯಾ,

ಈ ದಿನ (ಡಿಸೆಂಬರ್ ತಾ 25) ಕ್ರಿಸ್ಮಸ್ ಶುಭದಿವಸವಾದ್ದರಿಂದ ಈ ಸುದಿವಸದಲ್ಲಿ ಈ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಪ್ರಜೆಗಳ ಅಭಿಮತದಿಂದ ಈ ಅನುಮೋದನೆಯನ್ನು ಸೇರಿಸಿಕೊಂಡು ನಾನು ನಮ್ಮ 5 ನೇ ಜಾರ್ಜ್ ಚಕ್ರವರ್ತಿಯವರಿಗೂ, ಅವರ ಸಂತತಿಯವರಿಗೂ, ನಮ್ಮ ಪ್ರೀತಿಯುಳ್ಳ ಸಾರ್ವಭೌಮರ ಪ್ರತಿನಿಧಿಯಾಗಿ ನಮ್ಮನ್ನಾಳುತ್ತಿರತಕ್ಕ ಲಾರ್ಡ್ ಹಾರ್ಡಿಂಗ್ ಪ್ರಭುಗಳಿಗೂ, ಅವರ ಸಂತತಿಯವರಿಗೂ ಜಗತ್ಕರ್ತನಾದ ಭಗವಂತನು ದೀರ್ಘಾಯುಸ್ಸು ಆವರ ಸ್ವಂತ ವಿಷಯಕ್ಕೂ ಪ್ರಜಾಪಾಲನೆಗೂ ಸಮಸ್ತ ಅನುಕೂಲಗಳನ್ನು ಕೊಟ್ಟು ರಕ್ಷಿಸಲಿ ಎಂದು ಪ್ರಾರ್ಥಿಸುತ್ತೇವೆ.

ಈ ಸಂತೋಷದ ಶುಭದಿವಸದ ಹೊಸ ರಾಜಧಾನಿ ಸ್ಥಾಪಿಸತಕ್ಕ ಉತ್ಸವದಲ್ಲಿ ಜಯಶೀಲರಾದ ನಮ್ಮ ವೈಸ್‌ರಾಯಿ ಮತ್ತು ಗವರ್ನರ್ ಜನರಲ್ ಆಗಿ ಸಕಲ ಭಾರತಪುತ್ರರನ್ನು ರಕ್ಷಿಸುತ್ತಿರತಕ್ಕ ಲಾರ್ಡ್ ಹಾರ್ಡಿಂಗ್ ಪ್ರಭುವರ್ಯರ ಉತ್ಸವದ ಮೇಲೆ ಯಾರೋ ದುಷ್ಟರು ಕಳೆದ ತಾ 23ನೇ ಸೋಮವಾರ ದಿವಸ ಬಾಂಬ್ ..... ದಾಳಿಸಲು, ಅದರಿಂದ ಪ್ರಭುಗಳ ಸವಾರಿ ಜತೆಯಲ್ಲಿದ್ದ ... ಪ್ರಭುಗಳಿಗೆ ಪ್ರಾಣಾಪಾಯವಿಲ್ಲದ ಅಲ್ಪ ಹಿಂಸೆಯಾಯಿತೆಂದು, ಅವರೂ ಸುಖವಾಗಿ ಮುಂದಿನ ಕಾರ್ಯ ನೆರವೇರಿಸಿದರೆಂದೂ ತಿಳಿಯಿತು. ಪ್ರಜಾರಕ್ಷಣೆಗೆ ಯತ್ನಿಸಿದವರನ್ನು ಜಗತ್ಕರ್ತನಾದ ಭಗವಂತನು ಅವರ ರಕ್ಷಣೆಗೆ ಇದ್ದುದರಿಂದ ನಮ್ಮ ಬಯಕೆ ಈಗ ಸಫಲವಾಯಿತು. ಅವರೂ ಆರೋಗ್ಯವಾಗಿ ನಮ್ಮ ಪ್ರಭುವನ್ನು ತಪ್ಪಿಸಿ ಜಗತ್ತಿಗೇನೇ ಹಿತವಾದ ಸುಖಶಾಂತಿ ..... ನೆರವೇರಿಸಿದ್ದಕ್ಕಾಗಿ ಜಗತ್ಕರ್ತನನ್ನು ವಂದಿಸುತ್ತೇವೆ.

ಹೇ, ಭಾರತಮಾತೆಯೇ, ಸ್ವಾಗತ, ಗೌರವದ ಇಷ್ಟಗಳನ್ನು ನಡೆಸುವ, ಆನಂದದಿಂದ ಸತ್ಪಥದಲ್ಲಿ ನಡೆಯುತ್ತಾ, ಸರ್ವಪ್ರಾಣಿಗಳಿಗೂ ಮಾನಿಯಾಗಿ ಲೋಕಕ್ಕೆ ಎತ್ತರವಾಗಿಯೂ ನಡೆಯುತ್ತಿದ್ದ ನಿನ್ನ ಮಕ್ಕಳ ಪಾಲಿಗೆ ಈ ರೀತಿ ಬಂತೇ? ಈ ಅಪವಾದಕ್ಕೆ ನೀನೂ ನಿನ್ನ ಮಕ್ಕಳೆಲ್ಲಾ ಗುರಿಯಾಗಿರುವುದು ಸಹಜವಾದ ನಡವಳಿಕೆ ಯೋಚಿಸಿದರೆ ಅದಕ್ಕೆ ಕಾರಣವಿಲ್ಲ. ನಿನ್ನ ಮಕ್ಕಳ ಲೆಕ್ಕದಲ್ಲಿ ಅಲ್ಪಸಂಖ್ಯಾತರಾದ ಒಂದು ದುಷ್ಟಗುಂಪಿನವರು ಈ ಕೃತ್ಯ ನಡೆಸಿರುವರು. ಉಳಿದ ಜನರು ವಿದ್ಯಾವಂತರಾಗಿಯೂ, ಲೋಕಕ್ಕೆ ಹಿತವಾಗಿಯೂ ರಾಜಭಕ್ತಿಯುಳ್ಳವರಾಗಿಯೂ, ಸತ್ಪಥದ ನಡೆಯುತ್ತಿರತಕ್ಕ ಈ ನಿನ್ನ ಮಕ್ಕಳು ಈಗ ಕೆಟ್ಟದಕ್ಕೆ ಅಲ್ಪಸಂಖ್ಯಾತರುಳ್ಳ ನಮ್ಮ ಸಹೋದರರ ನಿರ್ವಾಹಕ್ಕೆ ಕಾರಣ ಇರುವದರಿಂದ ಈ ಬಯ್ಯುವಿಕೆ ನೀನೂ ನಿನ್ನ ಮಕ್ಕಳೂ ತಲೆಬಾಗಿ ಸಹಿಸಬೇಕಾಗಿದೆ. ಜಗತ್ಕರ್ತನು ನಮ್ಮ ಭಾರತಪುತ್ರರನ್ನು ಪರಿಶೋಧಿಸಿ ನಿರ್ಮಲರನ್ನಾಗಿ ಮಾಡಿ, ನಮಗೆ ಹಿತವಾಗಿರತಕ್ಕ ಇಂಗ್ಲಿಷ್ ಚಕ್ರಾಧಿಪತ್ಯವು ಶಾಶ್ವತವಾಗಿರುವಂತೆ ಆಶೀರ್ವದಿಸಲಿ ಎಂದು ನನ್ನ ಪ್ರಾರ್ಥನೆಯಾಗಿದೆ.

ಚಿತ್ರದುರ್ಗ. — ಸಿ. ಕೃಷ್ಣರಾವ್

ತಟಾಕಶಾಂತಿಯು ಅಪೂರ್ವಕೃತ.

ಅಯ್ಯಾ,

ಬಾಗೇಪಲ್ಲಿ ತಾಲ್ಲೂಕು ನಾರಪಾಳ್ಯ ಹೋಬಳಿಯಲ್ಲಿ ಕೆಲವು ತಿಂಗಳಿನ ಹಿಂದೆ ಮಳೆಯಿಲ್ಲದೆ ಬೆಳೆಯಲ್ಲಾ ಎಲ್ಲಾ ನಷ್ಟವಾಗುತ್ತಿರಲು ಗಂಟಲ ಮಲ್ಲಮ್ಮ ದೇವಸ್ಥಾನಗಳನ್ನು ಅರ್ಚಿಸಿದರೆ ಮಳೆ ಬರುತ್ತದೆಂದು ನಂಬಿ ನಾರಪಾಳ್ಯ ಕೊಟ್ಟಾಳದವರು ಪೂಜೆಗಳನ್ನು ಆಚರಿಸಿ ಮೇಕೆ ಹೋತನನ್ನು ಬಲಿಕೊಟ್ಟಾಗ್ಯೂ ಬಿದಿರಿನ ಕಾಲಕ್ಕೆ ಮಳೆ ಬಾರದೆ ಬೆಳೆಗಳು ಕರಟಿಬಿದ್ದು ಬಿದ್ದವು. ಅನಂತರ ಇಷ್ಟು ದಿನಗಳಲ್ಲಿ ಮಳೆ ಬಂದೇ ಬರಬೇಕು, ಬಂದರೆ ಸಂತರ್ಪಣೆ ಮುಂತಾದ ಸೇವೆ ಮಾಡಿಸುತ್ತೇವೆ, ಬಾರದಿದ್ದರೆ ಇನ್ನು ಮೇಲೆ ನಾವು ಈ ದೇವರ ಒಕ್ಕಲಲ್ಲ ಎಂದು ಕೆಲವರು ತಂತಮ್ಮ ಮನೆದೇವರುಗಳಿಗೆ ಹರಿಕೆ ಕಟ್ಟಿಕೊಂಡರು. ಶಾನುಭೋಗರು, ವರ್ತಕರು, ಪಾಳ್ಯಗಾರರು ಮುಂತಾದ ಕೆಲವು ಪ್ರಮುಖರು ಸೇರಿ ಕದಿರನ್ನನ ಕೆರೆಯಲ್ಲಿ ವಿರಾಟಪರ್ವವನ್ನು ಓದಿಸಿ ಪಾನಕ ಫಲಾಹಾರವನ್ನು ಮಾಡಿಸಿದರೆ ಆ ವಾಯಿದೆಯೊಳಗಾಗಿ ಮಳೆ ಬಂದು ಕೆರೆ ತುಂಬುತ್ತದೆ ಎಂದು ನಿಶ್ಚಯ ಹಾಗೆ ಮಾಡಿಸಲು ಹೋದ ವರುಷವೂ ಈ ರೀತಿಯಾಗಿ ಮಾಡಿದ್ದರೂ ಸ್ವಲ್ಪವೂ ಪ್ರಯೋಜನವಾಗಲಿಲ್ಲ. ಈ ವರುಷವಾದರೂ ಆದೀತೆಂದು ಮಾಡಿದಾಗೂ ವಾಯಿದೆ ಮೀರಿಹೋದ ಮೇಲೆ ಮಳೆ ಬಂದು ಕರುಟಿಬಿದ್ದ ಬೆಳೆಗಳಿಗೆಲ್ಲಾ ಆಶ್ಚರ್ಯಕರವಾದ ರೀತಿಯಲ್ಲಿ ಒಳ್ಳೇ ಫಲ ಫಲಿಸಿತು.

ಆದರೆ ಇದೇ ತಿಂಗಳು 12-15 ನೇ ತಾ ಗುರುವಾರ, ಭಾನುವಾರಗಳಲ್ಲಿ ನಾರಪಾಳ್ಯ, ಗುಡಿಪಲ್ಲಿ ಕೆರೆಗಳಿಗೆ "ಗಂಗಾಪೂಜೆ" ಎಂಬುದನ್ನು ನೆರವೇರಿಸಿದರು. ಇದನ್ನು ನೋಡಲು ನಾರಪಾಳ್ಯದ ದೊಡ್ಡ ಮನುಷ್ಯರೂ, ಬ್ರಾಹ್ಮಣರೂ, ಶಾನುಭೋಗರೂ, ವರ್ತಕರೂ ಮೊದಲಾದ ವಿವಿಧ ಮತಗಳ ಸ್ತ್ರೀಪುರುಷರು ಹಾಜರಿದ್ದರು. ಈ ಆಚರಣೆಗಳನ್ನು ಶಾನುಭೋಗ್ ಮ|| ಅಪ್ಪಾಸಾಮಿಯವರೂ, ಪಟೇಲ್ ಮ|| ವೆಂಕಟರೆಡ್ಡಿಯವರೂ ಪ್ರಮುಖರಾಗಿ ನಿಂತು ನೆರವೇರಿಸಿದರು. ಕೆರೆಯ ಮಧ್ಯಭಾಗದಲ್ಲಿ ಇಂಥಾ ವಿಶೇಷಕಾರ್ಯಕ್ಕಾಗಿ ನೆಡಲ್ಪಟ್ಟ ಒಂದು ಕಲ್ಲಿನ ಎನುವಾಗಿ ಒಂದು ಯೂಪಸ್ತಂಭವನ್ನು ನೆಟ್ಟು, ಅರಿಸಿನ ಕುಂಕುಮ ಹೂಮಾಲೆಗಳನ್ನು ಹಾಕಿದ ಒಂದು ಎಮ್ಮೆಕೋಣವನ್ನು ಅದಕ್ಕೆ ಬಿಗಿದು ರೆಡ್ಡಿ, ಶಾನುಭೋಗ, ನೀರಗಂಟಿ, ಮಾದಿಗ, ಈ ನಾಲ್ವರೂ ಸೇರಿ ಆಲಿ ಅಬ್ಬರಿಸಿ ಬಲಿಯನ್ನು ಮಾಡಿಸಿದರು. ಮೊದಲು ರೆಡ್ಡಿಯು ಕತ್ತಿಯನ್ನು ಹಿಡಿದು ಕೋಣವನ್ನು ಹೊಡೆಯುವ ಭಾವದಿಂದ ಮೂರು ಸಾರಿ ಅದರ ಕೊರಳಿನ ಮೇಲೆ ಇಟ್ಟು ತರುವಾಯ ಶಾನುಭೋಗ, ನೀರಗಂಟಿ ಸಹ ಹಾಗೆಯೇ ಮಾಡಿದರು. ಪ್ರತಿ ಸಾರಿಯೂ ಅಲ್ಲಿ ನಿಂತಿದ್ದವರು ಆಲಿ ಅಬ್ಬರಿಸಿದರು. ಕಡೆಯಲ್ಲಿ ಮಾದಿಗನು ಅದೇ ಕತ್ತಿಯನ್ನು ಹಿಡಿದು ಕೋಣವನ್ನು ಕಡಿದನು. ಹತ್ತಿರಲೇ ನಿಂತಿದ್ದ ಊರು ತೋಟಿಯು ಆ ತಲೆಯನ್ನು ಎತ್ತಿ ಕೆರೆಯಲ್ಲಿ ಮುಳುಗಿಸಿ ಪುನಃ ತಂದು ಸೆಟ್ಟಿ ಬಲಿಗೆ ಮುಖವಾಗಿ ಇಟ್ಟು ಅದರ ಬಾಯಿಗೆ ಕತ್ತರಿಸಿ ತಂದ ಅದರ ಮುಂಭಾಗದ ಎಡಗಾಲನ್ನು ಕಚ್ಚಿಸಿ, ಎಡಗಣ್ಣಿಗೆ ಅದರ ಹೊಟ್ಟೆಯ ಮೇಲಿನ ಪೊರೆಯನ್ನು ಅಂಟಿಸಿ, ಆ ತಲೆಯ ಮೇಲೆ ಉರಿಯುವ ಒಂದು ದೀಪವನ್ನು ಇಟ್ಟನು. ತಲೆಯು ಅವನಿಗಾಯಿತು; ಮುಂಡವು ಮಾದಿಗರಿಗಾಯಿತು. ಗುಡಿಪಲ್ಲಿ ಕೆರೆ ಏರಿಯ ಮೇಲೆ ಕಡಿಯಲ್ಪಟ್ಟ ಕೋಣವು ಕೆಲವು ದಿವಸಗಳ ಹಿಂದೆ ಮಾತ್ರ ಹಾಲು ಕುಡಿಯುವುದನ್ನು ಬಿಟ್ಟಂಥ ಎಳೇ ಕರುವಾದದ್ದರಿಂದ ಶಾನುಭೋಗರೂ, ರೆಡ್ಡಿಯವರೂ ಅದರ ಸ್ಥಿತಿಯನ್ನು ನೋಡಿ ಮರುಗಿ—ಎಲಾ, ಏನರೋ! "ಇಂಥಾ ಅನ್ಯಾಯ" ನೀವು ಮಾಡಿದ ಪಾಪವನ್ನು ನಮ್ಮ ತಲೆಯ ಮೇಲೆ ಹಾಕುತ್ತೀರೇನೋ? ಎಂದು ಕೂಗಿದಾಗ್ಯೂ, ಇಂಥಾ ಅಜಮರ್ಗಕೃತ್ಯಗಳನ್ನು ನಿಲ್ಲಿಸಿಬಿಡುವುದಕ್ಕೆ ಅವರಿಗೆ ಧೀರತ್ವವಿಲ್ಲದೆಯೋ, ಮನಸ್ಸಿಲ್ಲದೆಯೋ, ಇಲ್ಲವೇ ಮಾಡುವುದು ಅಪರಾಧವಾಗಿದ್ದಾಗ್ಯೂ ಚಿಂತೆಯಿಲ್ಲ, ಪ್ರಜೆಗಳು ಮೆಚ್ಚಿದರೆ ಅಷ್ಟೇ ಸಾಕು ಎಂಬ ಭಾವದಿಂದಲೂ ಏನೋ, ಹ್ಯಾಗೂ ಆ ಸಣ್ಣ ಕರುವನ್ನು ಕೊಲೆಗೆ ಒಪ್ಪಿಸಿದರು. ಆ ಪ್ರಾಣಿ ಎರಡು ತುಂಡಾದ ಮೇಲೆ ಮಾದಿಗರು ಕೂಡಿ—ಸ್ವಾಮಿ, ನಮ್ಮ ಭಾಗ ಬಹು ಸ್ವಲ್ಪ; ನಮಗೆ ಇನ್ನೂ ಸ್ವಲ್ಪ ಹಣ ಹೆಚ್ಚಾಗಿ ಕೊಡಬೇಕು, ಬುದ್ಧಿ" ಎಂದು ಈ ಅಧಿಕಾರಿಗಳ ಮುಂದೆ ಅಷ್ಟು ಬಿಡಾಗ್ಯೂ, ಅವರ ಮನಸ್ಸು ತೃಪ್ತಿಕರವಾದ ರೀತಿಯಲ್ಲಿ ಸಾರ್ಥಕವಾಗಲಿಲ್ಲ.

ಅನಂತರ ಎಲ್ಲರೂ ತೂಬಿಗೆ ಎದುರಾಗಿ ಕಟ್ಟೆಯ ಮೇಲೆ ಸಿದ್ಧವಾಗಿ ಕಟ್ಟಿ ಇಡಲ್ಪಟ್ಟ ಎರಡು ತೆಪ್ಪಗಳ ಬಳಿಗೆ ಬಂದರು. ಅಲ್ಲಿ ರೆಡ್ಡಿಗಳು ನೀರ ನಲ್ಲಿಳಿದು, ಅರಿಸಿನ ಕುಂಕುಮ ಪುಷ್ಪಗಳನ್ನು ಕೆರೆಯ ನೀರಿನಲ್ಲಿ ಬಿಸುಟು ಕಾಯಿ ಒಡೆದು ಮೇಲಕ್ಕೆ ಬಂದ ತರುವಾಯ ತೂಬಿಗೆ ಎದುರಾಗಿ ಒಂದು ಕೆಂಪು ಕಡಿಯಲ್ಪಟ್ಟಿತು. ಉರಿಯುವ ಜ್ಯೋತಿಯೂ, ಕಾಯಿ ಹೂವು ತಾಂಬೂಲ ಮುಂತಾದವೂ ಇಡಲ್ಪಟ್ಟ ಒಂದು ಚಿಕ್ಕ ತೆಪ್ಪವನ್ನೂ, ಒಳಗೆ ಉಪದಂಡವಾಗಿ ಮುಳುಗಿಸಿ ಬಿಗಿಯಲ್ಪಟ್ಟ ಮೇಕೆಹೋತವುಳ್ಳ ಒಂದು ದೊಡ್ಡ ತೆಪ್ಪವನ್ನೂ ನೀರಿನಲ್ಲಿಳಿಸಿ ಆರು ಮಂದಿ ನೀರುಗಂಟಿಗರು ಅವುಗಳನ್ನು ತೂಬಿನ ಸುತ್ತಲೂ ಗೋವಿಂದಗಳಿಡುತ್ತಾ, ಮೂರು ಸಾರಿ ಪ್ರದಕ್ಷಿಣೆ ಮಾಡಿ, ಚಿಕ್ಕ ತೆಪ್ಪವನ್ನು ಸ್ವಲ್ಪ ದೂರ ನೀರಿನಲ್ಲಿ ಬಿಟ್ಟು, ದೊಡ್ಡ ತೆಪ್ಪವನ್ನು ಇನ್ನೂ ಸ್ವಲ್ಪ ದೂರ ತಳ್ಳುತ್ತಾ ಪುನಃ ಹಿಂತಿರುಗಿ ತಳ್ಳಿಕೊಂಡು ಗಡ್ಡೆಗೆ ಬರುತ್ತಿದ್ದವಲ್ಲಿ ಅವರಲ್ಲಿ ವೆಂಕಟರಾಮ್ಮನೆಂಬೊಬ್ಬ ಸ್ವಿಲ್ಲೋಟ್ಟಿನು ತೆಪ್ಪದೊಳಕ್ಕೆ ಏರಿ ಆ ಮೇಕೆಹೋತನ ಮೇಲೆ ಕುಳಿತು ತನ್ನ ಬಾಯಿಯಿಂದ ಅದರ ಕಿವಿಯನ್ನು ಕಚ್ಚಿದಾಗ ಅದು ಅರಚಲು ನೀರಗಂಟಿಗಳು ಗೋವಿಂದಗಳಿಟ್ಟರು. ಹೀಗೆ ಮೂರು ಸಾರಿಯಾದ ಮೇಲೆ ಒಳಗಿರುವವನು ಅದರ ಕೊರಳನ್ನು ಕಚ್ಚಿ ಅದರ ರಕ್ತವನ್ನು ಹೀರಿ, ಮರಳಿ ಕೋಪದಿಂದ ಅದನ್ನು ಗುದ್ದಿ ಗುದ್ದಿ ಕೊಂದು ಹಾಕಿದನು. ಇದನ್ನು ನೋಡುತ್ತಿದ್ದ ಅನೇಕರು ತಂತಮ್ಮ ಮನಸ್ಸುಗಳಲ್ಲಿ ಕಳವಳಗೊಂಡರು. ಅವರು ಆ ತೆಪ್ಪದೊಂದಿಗೆ ಗಡ್ಡೆಗೆ ಸೇರಿದರು. ಆ ಪ್ರಾಣಿಯು ಅವರಿಗಾಯಿತು. ಅನೇಕ ಹಿಂದೂ ಮಾನ್ಯರಿಂದ ಪೂಜಿತಳಾದ ಗಂಗೆಯು ಇಂದು ಕ್ರೂರವಾದ ಆಹುತಿಯನ್ನು ಕೋರುವಳೋ? ಆ ದಿನ ಅಲ್ಲಿ ಸೇರಿದ್ದ ನಾರಪಾಳ್ಯದ ಬ್ರಾಹ್ಮಣಾದಿ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಇಂಥಾ ಘೋರಕೃತ್ಯಕ್ಕೆ ಹೇಗೆ ಸಮ್ಮತಿಸಿದರೋ, ದೇವರೇ?

ಪ್ರತ್ಯಕ್ಷದರ್ಶಿ.

ತಾಲ್ಲೋಕು ವರ್ತಮಾನಗಳು.

ಸೀಯ್ಯೂರು. — ಕಳೆದ ತಾ 12 ನೇ ಗುರುವಾರ ದರ್ಬಾರ್ ಡೇ ಆದ್ದರಿಂದ ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಬಾಲಕರಿಗೆ ಆಟಗಳನ್ನು ಆಡಿಸಿ ಗೆದ್ದವರಿಗೆ ಇನಾಂ ಕೊಟ್ಟರು. ನಂತರ ಬಾಲಕ ಬಾಲಕಿಯರು ಚಕ್ರವರ್ತಿ ದಂಪತಿಗಳ ಮೇಲೆ ಗಾನಮಾಡಿದರು. ಇಲ್ಲಿ ಕೆರೆಗಳು ತುಂಬಿದ್ದರೂ ಅದರೂ ನಿಷ್ಪ್ರಯೋಜನವಾಗಿದೆ. ಏತಕ್ಕೆಂದರೆ, ಜಮೀನುಗಳು ಬಹಳವಾಗಿ, ಕೆರೆಗಳು ಚಿಕ್ಕವಾಗಿರುವುದಲ್ಲದೆ ಮಣ್ಣಿನಿಂದ ಮುಚ್ಚಿಹೋಗಿ ತಟ್ಟೆಯೋಪಾದಿಯಲ್ಲಿರುತ್ತೆ. ಮೇಲಿನ ಅಧಿಕಾರಿಗಳು ಇದಕ್ಕೆ ಹಣ ಕೊಟ್ಟು ಕೆರೆಯ ಏರಿಯನ್ನು ಉಬ್ಬಾವಣೆ ಮಾಡಿಸುವರೆಂದು ನಂಬಿದೇವೆ. — ಕ್ರಾಸ್‌ಗುಂಟೆ ಕಳ್ಳತನದ ವಿಚಾರಣೆಯನ್ನು ಅಸಿಸ್ಟೆಂಟರು ಇಲ್ಲಿನ ಕಛೇರಿಯಲ್ಲಿ ನಡಸುತ್ತಾ ಇದ್ದಾರೆ.

ಚನ್ನರಾಯಪಟ್ಟಣ. — ಈಚೆಗೆ ಇಲ್ಲಿನ ಷಿನಗರ ಕೇರಿಯಲ್ಲೂ, ಮಾತೇನಹಳ್ಳಿಯಲ್ಲೂ ಇಲಿಗಳು ಸಾಯುತ್ತಲಿವೆ. ಜನರು ಶೀಘ್ರವಾಗಿ ಊರು ಬಿಟ್ಟು ಗುಡಿಸಲು ಹಾಕಿಕೊಂಡು ವಾಸಮಾಡಬೇಕೆಂದು ನಮ್ಮ ಅಮಲ್ದಾರ್ರವರು ಟಾಂಟಾಂ ಹೊಡಿಸಿರುತ್ತಾರೆ. ಧಾರಣೆಗಳು ಇನ್ನೂ ಇಳಿತರಕ್ಕೆ ಬಂದಿಲ್ಲ. — ಇದೇ ಮಾಸ 19 ನೇ ಗುರುವಾರ ಸಾಯಂಕಾಲ ಮ್ಯಾಜಿಕ್ ಪ್ರೊಫೆಸರ್ ಎಂ. ಪಿ. ಅಳಸಿಂಗ್ರಾಚಾರ್ಯರು ಇಲ್ಲಿನ ರೀಡಿಂಗ್ ರೂಂ ಕಟ್ಟಡದಲ್ಲಿ ಆಶ್ಚರ್ಯಕರವಾದ ಯುಕ್ತಿ ಮುಂತಾದ ಚಮತ್ಕಾರಗಳನ್ನು ಪ್ರದರ್ಶಿಸಿ ಪ್ರೇಕ್ಷಕರನ್ನು ತುಂಬಾ ಆನಂದಪಡಿಸಿದರು. ಇವರು ಚಿಕ್ಕ ವಯಸ್ಸಿನವರಾಗಿದ್ದೂ ಕುಶಲತೆಯನ್ನು ಅನೇಕ ಮಹನೀಯರುಗಳ ಮುಂದೆ ಪ್ರದರ್ಶಿಸಿ ಯೋಗ್ಯತಾಪತ್ರಿಕೆ, ಮೆಡಲ್ ಮುಂತಾದವುಗಳನ್ನು ಹೊಂದಿರುತ್ತಾರೆ.

ಪಾವಗಡ. — ಇಲ್ಲಿ ಧಾರಣೆ ವಾಸಿಗಳು ಇನ್ನೂ ಇಳಿಯಲಿಲ್ಲ. ಕ್ಷಾಮವನ್ನೇ ಸೂಚಿಸುತ್ತಾ ಇವೆ. ದರ್ಬಾರ್ ಡೇ ಉತ್ಸವವು ಎ. ವಿ. ಸ್ಕೂಲಿನಲ್ಲಿ ನಡೆಯಿತು. — ಕೋಆಪರೇಟಿವ್ ಸೊಸೈಟಿಯು ಬಹಳ ಅಭಿವೃದ್ಧಿ ಸ್ಥಿತಿಯಲ್ಲಿದೆ. ಹಿಂದೆ ಇದ್ದ ಅಮಲ್ದಾರ್ ಮ|| ವೆಂಕಟಸ್ವಾಮಿ ಅಯ್ಯರವರು ಏರ್ಪಾಡು ಮಾಡಿದ ರೀಡಿಂಗ್ ರೂಂ ಅತಿ ಹೀನಸ್ಥಿತಿಗೆ ಬರುತ್ತಾ ಇದೆ. — ಮ್ಯುನಿಸಿಪಾಲಿಟಿಯು ಚೆನ್ನಾಗಿಲ್ಲ. ಬ್ರಾಹ್ಮಣರ ಬೀದಿಯಲ್ಲಿ ಅಂತೂ ಹೇಳುವ ಹಾಗೆಯೇ ಇಲ್ಲ. ಬ್ರಾಹ್ಮಣರೂ ದೊಡ್ಡವರೂ ಮನೆಯ ಮುಂದೆಯೇ ಹೇಸಿಕೆ ಮಾಡುವುದು, ಮುಸರೆ ತೊಳೆಯುವುದು, ಎಂಜಲೆಲೆ ಹಾಕುವುದು ಹೀಗೆಲ್ಲಾ ಮಾಡುತ್ತಾರೆ. ಬ್ರಾಹ್ಮಣ ಕೇರಿ ಉತ್ತರ ದಕ್ಷಿಣದ ಚಂದ್ರಬೀದಿಯಲ್ಲಿ ನಡುಬೀದಿಯಲ್ಲಿ ಬಚ್ಚಲು ನೀರು ಹಳ್ಳ ಹರಿದಂತೆ ಹರಿಯುತ್ತೆ. ಆ ಬೀದಿಯಲ್ಲಿ ಒಂದು ಚರಂಡಿಯನ್ನು ಮಾಡಿದಲ್ಲಿ ಈ ಅನಾನುಕೂಲ ತಪ್ಪುವುದು. ಮ್ಯುನಿಸಿಪಾಲಿಟಿ ವಿಚಾರದಲ್ಲಿ ಅಮಲ್ದಾರ್ ಮ|| ಶ್ರೀನಿವಾಸಯ್ಯಂಗಾರ್ರವರು ಶ್ರದ್ಧೆ ವಹಿಸುವರೆಂದು ನಂಬಿರುತ್ತೇನೆ.— ನಾಲ್ಕುಡಿಕೆಯಲ್ಲಿ ಹಾಲರಾ ಸಂಪೂರ್ಣವಾಗಿ ನಿಂತು ಹೋಗಿದೆ. ಇದೂ ಅಲ್ಲದೆ ಸರ್ಕಾರದವರು ಮಾಡಿರುವ ಗೋಪುಯಿಗಳ ಪ್ರದರ್ಶನದಿಂದ ಈ ಸಲ ಇನ್ನೂ ಅತಿ ವಿಜೃಂಭಣೆಯಿಂದ ಉತ್ಸವವೂ, ದೊಡ್ಡ ಜಾತ್ರೆಯೂ ಆಗಬಹುದು. ಇಲ್ಲಿನ ಎ. ವಿ. ಸ್ಕೂಲಿನಿಂದ ಇಂಗ್ಲಿಷಿನಲ್ಲಿ 7 ಮಂದಿಯೂ, ಕನ್ನಡದಲ್ಲಿ 18 ಮಂದಿಯೂ ಕಳ್ಳಿರುತ್ತಾರೆ. ವಿದ್ಯಾಭ್ಯಾಸವು ಹೀನಸ್ಥಿತಿಯಲ್ಲಿದೆ.—ಇಲ್ಲಿನ ಡಾಕ್ಟರ್ ನರಸಿಂಹಾಚಾರ್ರು ಎಲ್ಲರಿಗೂ ಬೇಕಾದವರಾಗಿ ಒಳ್ಳೆಯವರಾಗಿದ್ದಾರೆ.

ಹುಣಸೂರು. — ಕಳೆದ ತಾ. 28 ನೇ ಶನಿವಾರ ಈ ಊರಿನ ಕೋಆಪರೇಟಿವ್ ಸೊಸೈಟಿಯ ಜನರಲ್ ಮೀಟಿಂಗು ನಡೆಯಿತು. ಸೊಸೈಟಿಯ ಪ್ರೆಸಿಡೆಂಟರಾದ ನಮ್ಮ ಅಮಲ್ದಾರ್ ಮ|| ಆರ್. ಎ. ನರಸಿಂಹಯ್ಯಂಗಾರ್ರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಇಲ್ಲಿನ ಅ|| ಇಂಜನಿಯರ್ ಮ|| ಬಿ. ನಂಜುಂಡಾರಾಧ್ಯರವರು, ಫಾರೆಸ್ಟ್ ಸಬ್ ಅ|| ಕನ್ಸರ್ವೇಟರ್ ಮ|| ಎಂ. ವೆಂಕಟನರಸಪ್ಪನವರು, ಶಿರಸ್ತೇದಾರ್ ಮ|| ಕೆ. ನಾಗೇಶಶಾಸ್ತ್ರಿಗಳು, ಸಬ್ ಅ|| ಸರ್ಜನ್ ಮ|| ಎಚ್. ಕೃಷ್ಣಮೂರ್ತಿರಾಯರು ಇನ್ನೂ ಅನೇಕ ದೊಡ್ಡ ಮನುಷ್ಯರೂ ಸಭೆಗೆ ದಯಮಾಡಿಸಿದ್ದರು. ಈ ಸೊಸೈಟಿಯ ಸೆಕ್ರೆಟರಿ ಸಂದಲ್‌ಕೋಠಿ ದರೋಗರು ಮ|| ಎಂ. ಚಿದಂಬರರಾಯರು ಮೀಟಿಂಗಿನ ಉದ್ದೇಶವನ್ನು ಸಭೆಗೆ ವಿವರಿಸಿ ಕೋಆಪರೇಟಿವ್ ಸೊಸೈಟಿಗಳ ವಿಷಯವಾಗಿ ಸ್ವಾರಸ್ಯವಾದ ಮತ್ತು ದೀರ್ಘವಾದ ಉಪನ್ಯಾಸ ಮಾಡಿದ ನಂತರ ಸೊಸೈಟಿಯ ಆರು ತಿಂಗಳ ಜಮಾಖರ್ಚು ಲೆಕ್ಕಗಳನ್ನು ಸಭೆಯಲ್ಲಿ ಸ್ಥಾಪಿಸಿದರು. ಒಟ್ಟು ಜಮಾ ರೂ. 2,900-12-11 ಪೈ; ಖರ್ಚು ರೂ. 2,100-2-11 ಪೈ. ಕ್ಯಾಷ್ ಹಾಜರಿ ರೂ. 800-0-10 ಪೈ. ಆರು ತಿಂಗಳ ಲೇವಾದೇವಿಯಲ್ಲಿ ಖರ್ಚು ಜಾತಾ 120 ರೂಪಾಯಿ ತನಕ ನಫೆ ಬಂದಿರುವಂತೆ ತಿಳಿಯುತ್ತೆ. ಕೆಲವು ರೂಲಸುಗಳನ್ನು ಬದಲಾಯಿಸಿದ್ದಲ್ಲದೆ ಕೆಲವು ಹೊಸ ರೂಲಸುಗಳನ್ನು ಏರ್ಪಡಿಸಿಕೊಂಡರು. ಈ ಸೊಸೈಟಿಯು ಒಳ್ಳೇ ಅಭಿವೃದ್ಧಿ ಸ್ಥಿತಿಯಲ್ಲಿರುವುದಕ್ಕೆ ಪ್ರೆಸಿಡೆಂಟರವರ ಮುತುವರ್ಜಿಯೇ ಕಾರಣವಾಗಿದೆ. ನಮ್ಮ ಅಮಲ್ದಾರ್ರು ಸರ್ಕಾರಿ ಕೆಲಸದಲ್ಲಿ ಮೆಹನತ್ತಿನಿಂದಲೂ ದಕ್ಷತೆಯಿಂದಲೂ ನಿಷ್ಪಕ್ಷಪಾತವಾಗಿ ಕೆಲಸಮಾಡುತ್ತಾ ಇರುವುದಲ್ಲದೆ ಪ್ರಜೆಗಳ ಹಿತಚಿಂತನೆಗಾಗಿ ಅನೇಕ ವಿಷಯಗಳನ್ನು ಮಾಡುತ್ತಾ ಇರುವುದು ತುಂಬಾ ಸಂತೋಷಪ್ರದವಾಗಿದೆ.

ಶ್ರೀರಂಗಪಟ್ಟಣ ಮತ್ತು ಗಂಜಾಂ. — ಭತ್ತದ ಸುಗ್ಗಿಯು ತಲೆದೋರುತ್ತದೆ. ಸುಗ್ಗಿಯ ಕಾಲವಾದರೂ ವರ್ತಕರು ಮತ್ತು ವಕ್ಕಲಿಗರಿಗೆ ಅನುಕೂಲವಾದ ಧಾರಣೆವಾಸಿಗಳೇ ಹೊರ್ತು ಬಡಬಗ್ಗರಿಗೆ ಅನುಕೂಲವಾಗಿಲ್ಲ. ಶ್ರೀರಂಗಪಟ್ಟಣದಲ್ಲಿ 8-10 ದಿನಗಳಿಂದ 3-4 ಜನಗಳು ಕಾಲವಾದರು. ಇದಕ್ಕಾರಣ ಪ್ಲೇಗೆಂಬ ವದಂತಿ ಹರಡಿದೆ. ಚೆನ್ನಾಗಿ ನಿರ್ಧಾರಪಟ್ಟಿಲ್ಲ. ಗಂಜಾಂನಲ್ಲಿ ಸನ್ನಿಪಾತಜ್ವರವು ಆಗಾಗ್ಗೆ ತಲೆದೋರುತ್ತಲೇ ಇದೆ. ಈಗ 10-12 ದಿವಸಗಳಿಂದ ಈ ಡಿಸ್ಟ್ರಿಕ್ಟಿನಲ್ಲಿ ನರಳಿದ ಪ್ರಜಾಪಟರಾಗಿಗಳಾದ ಮ|| ಮಂಚೇಗೌಡರಿಗೆ ಈಗ ಗುಣಮುಖಕ್ಕೆ ಬಂದದ್ದು ಸಂತೋಷವಾಗಿದೆ. ನಮ್ಮ ಸಬ್ ಪೋಸ್ಟ್ ಮಾಸ್ಟರಾಗಿರುವ ಮ|| ಸೀತಾರಾಮಯ್ಯನವರಿಗೆ ವರ್ಗವಾಗುವದೆಂದು ಕೇಳುತ್ತೇನೆ. [redacted] ಬಾಗಾಯಿತು. ಇಲಾಖೆಯವರ ಮತ್ತು ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾಗಿರುತ್ತಾರೆ.—ಇಲ್ಲಿನ ಮುನ್ಸಿಫರಾದ ಮ|| ಪಿ. ಮಹದೇವಯ್ಯನವರು ಇಲ್ಲಿಗೆ ಬಂದಾರಭ್ಯ ಒಂದೇ ರೀತಿಯಾದ ದರ್ಪದಿಂದ ಕಾರ್ಯನಿರ್ವಾಹಮಾಡುತ್ತಾ ಕಕ್ಷಿಗಾರರಿಗೆ ವಿಶೇಷ ಕಷ್ಟನಷ್ಟಗಳಿಗೆ ಅವಕಾಶವಾಗದ ರೀತಿ ಇರುತ್ತಾರೆ.—ನಮ್ಮ ಅಮಲ್ದಾರ್ರವರು ಕಾರ್ಯದಕ್ಷತೆಯಿಂದ ಸ್ವಾರ್ಥಪರಾಯಣರಾದವರ ಇಚ್ಛಾನುಸಾರ ಕೆಲಸವನ್ನು ನಡಿಸದೆ ಸ್ವತಂತ್ರ ಕಾರ್ಯ ಮಾಡುತ್ತಾ ಕೀರ್ತಿಪಡೆಯಬೇಕೆಂದು ಕೋರುತ್ತೇನೆ.—ಮುಜರೈಗೆ ಸಂಬಂಧಪಟ್ಟ ಧರ್ಮದರ್ಶಿಗಳು ಅಂತರಂಗದಲ್ಲಿ ಎರಡು ಪಾರ್ಟಿಯಾಗಿರುವಂತೆಯೂ, ಇದರಿಂದ ಆ ಬಾಬಿನ ಕಾರ್ಯಗಳು ಸಲೀಸು ನಡೆಯುವುದಿಲ್ಲವೆಂದೂ ತಿಳಿಯುತ್ತೇನೆ.— ಗಂಜಾಂನಲ್ಲಿ ಎರಡು ಪಾಠಶಾಲೆಗಳಿದ್ದರೂ ಹುಡುಗರ ವಿದ್ಯಾಭ್ಯಾಸವು ತೃಪ್ತಿಕರವಾಗಿಲ್ಲವೆಂದು ಕಾಣುತ್ತದೆ. ಅಧ್ಯಾಪಕರು ಉತ್ಸಾಹಯುತರಾಗಿ ಸರಿಯಾದ ಏರ್ಪಾಡು ಮಾಡಿಯಾರೆಂದು ನಂಬಿದೇನೆ.

ತ್ಯಾಮಗೊಂಡ್ಲು. — ಈ ಪ್ರಾಂತ್ಯ ಮಳೆ ಬೆಳೆ ಸಂತುಷ್ಟಿಯಾಗಿ ರೈತಪ್ರಜೆಗಳೆಲ್ಲಾ ಹರ್ಷಮುಖಿಗಳಾಗಿದ್ದಾರೆ.—ಕಳೆದ 12 ನೇ ತಾ. ಈ ಟೌನ್‌ನಲ್ಲಿ ದರ್ಬಾರ್ ಡೇ ಮಹೋತ್ಸವವು ಬಹು ವಿಜೃಂಭಣೆಯಿಂದ ನಡಸಲ್ಪಟ್ಟಿತು.— ಈ ಊರಿನಿಂದ ಈ ಸಾರಿ ಎಲ್. ಸೆ. ಪರೀಕ್ಷೆಗೆ ಗವರ್ನ್‌ಮೆಂಟ್ ಎ. ವಿ. ಸ್ಕೂಲಿನಿಂದ 15 ಮಂದಿಯೂ, ಪ್ರೈವೇಟಿನಲ್ಲಿ 5 ಮಂದಿಯೂ ಹೋಗಿರುತ್ತಾರೆ.— ಇದೇ ಸ್ಕೂಲಿನಲ್ಲಿ ಮಾಸ್ಟರಾಗಿರುವ ಸಂಸ್ಕೃತ ಪಂಡಿತರಾದ ವೇ|| ಬಿ. ಕೃಷ್ಣಮೂರ್ತ್ಯಾಚಾರ್ಯರು ಕಳೆದ ತಿಂಗಳು ಬನಾರಸ್ (ಕಾಶಿ) ಮಹಾ ಪಟ್ಟಣಕ್ಕೆ ಹೋಗಿದ್ದು ಅಲ್ಲಿ ನಡೆದ ಸಭೆಯಲ್ಲಿ ಉಪನ್ಯಾಸಮಾಡಿ ದ್ರವ್ಯರೂಪವಾದ ಬಹುಮಾನವನ್ನು ಹೊಂದಿ, ಉತ್ತರ ಹಿಂದೂಸ್ಥಾನದ ಅನೇಕ ಸ್ಥಳಗಳನ್ನು ಸುತ್ತಿಕೊಂಡು ಊರು ಸೇರಿದರು.—ಈ ಊರಿನಲ್ಲಿ ತಿಮ್ಮಶೆಟ್ಟಿಯವರ ಅಂಗಡಿಗೆ ಕಳೆದ ವಾರ ಬೆಂಕಿಬಿದ್ದು ನೂರಾರು ರೂಪಾಯಿ ಸಾಮಾನು ಬೆಂದು ನಷ್ಟವಾಯಿತು.—ಈ ವರುಷ ಈ ಟೌನ್‌ನಲ್ಲಿ ಬಹು ವಿಜೃಂಭಣೆಯಿಂದ ನಡೆದ ಮೊಹರಂ ಉತ್ಸವಗಳಲ್ಲಿ ಯಾವ ಗಲಾಟೆಯೂ ಆಗದಂತೆ ಪೋಲೀಸ್ ಇಲಾಖೆಯವರು ಮುತುವರ್ಜಿಯಿಂದ ಖುದ್ದಾಗಿ ನಿಂತು ಕಾರ್ಯಗಳನ್ನು ನೆರವೇರಿಸಿದರು.—ಈ ಊರಿಗೆ 2 ಫರ್ಲಾಂಗ್ ದೂರವಿರುವ ಕೇಶವನವರ ಗೋರಿಯಲ್ಲಿ ಕಳೆದ ಕಾರ್ತೀಕ ಮಾಸದ ಕಡೆಯ ಸೋಮವಾರ ಬಹು ವಿಜೃಂಭಣೆಯಿಂದ ಪೂಜಾದಿಗಳು ನಡೆದವು. ಅಲ್ಲಿ ಸುಮಾರು 2,000 ಪ್ರಜೆಗಳವರೆವಿಗೂ ಸೇರಿದ್ದರು. ಮುಂದೆ ಈ ಸ್ಥಳದಲ್ಲಿ ಜಾತ್ರೆಯ ಪರಿಷೆ ಆಗಬಹುದೆಂದು ಪ್ರಜೆಗಳು ಹೇಳುತ್ತಾರೆ.—ಈ ಊರಿನಲ್ಲಿ ಕೋಆಪರೇಟಿವ್ ಸೊಸೈಟಿ ಬ್ಯಾಂಕು ಈ ತಿಂಗಳಲ್ಲಿ ಪ್ರಾರಂಭವಾದದ್ದು ಇಲ್ಲಿನ ಬಡ ಪ್ರಜೆಗಳಿಗೆ ತುಂಬಾ ಸಹಾಯವಾಯಿತು. ಈ ಬ್ಯಾಂಕು ಶಾಶ್ವತವಾಗಿ ನಡೆಯಲೆಂದು ಹಾರೈಸುತ್ತೇನೆ.

ಹೊಸ್ತಜಾಣಾವಾರ. — ಈ ಊರಿನಲ್ಲಿ ಹಿಡಿದಿದ್ದ ಹಾವಳಿಯು ತಗ್ಗಿ ಹೋಗಿರುವುದರಿಂದ ಜನಗಳು ಎಚ್ಚರಿಕೆಯಿಂದಿರುವುದು ತುಂಬಾ ಅವಶ್ಯಕ. ಧಾರಣೆವಾಸಿಗಳು ಇನ್ನೂ ಕ್ಷಾಮಕಾಲವನ್ನೇ ಸೂಚಿಸುತ್ತಲಿವೆ. ಅವರೊಳಗೂ ಈಗಿರತಕ್ಕ ಹೊಳೆದ ಬಟ್ಟು ಮತ್ತು ಅಳತೆ ಸೇರುಗಳಿಂದ ಪ್ರಜೆಗಳಿಗೆ ನಷ್ಟವಾಗುತ್ತಿರುವ ಸಂಗತಿಯನ್ನು ವಿವರಿಸತೀರದು.— ತಾ. 11 ನೇ ಬುಧವಾರ ನಮ್ಮ ಶ್ರೀಮನ್ಮಹಾರಾಜರವರೂ ಯುವರಾಜರವರೂ ಈ ಮಾರ್ಗವಾಗಿ ತರೀಕೆರೆಗೆ ದಯಮಾಡಿಸಿದ್ದಾಗ್ಗೆ ಅಮಲ್ದಾರ್ ಮ|| ಬಿ. ಟಿ. ಸೀತಾರಾಮಯ್ಯನವರು ಪ್ರಜೆಗಳ ಸಮೇತ ಟ್ರಾವಲರ್ಸ್ ಬಂಗಲೆಯ ಹತ್ತಿರ ನಿರ್ಮಿಸಿದ್ದ ಚಪ್ಪರದಲ್ಲಿ ಹಾಜರಿದ್ದು ಮಹಾರಾಜರವರಿಗೆ ಸುಸ್ವಾಗತವನ್ನು ಬಯಸಿ ಹಾರಾ ತುರಾಯಿಗಳನ್ನು ಸಮರ್ಪಿಸಿದರು.—ತಾ. 12ನೇ ಗುರುವಾರ ಇಲ್ಲಿ ದರ್ಬಾರ್ ಡೇ ಉತ್ಸವವನ್ನು ನಡಿಸಿದರು. ಬಾಲಕ ಬಾಲಕಿಯರು ಶ್ರೀಮನ್ಮಹಾರಾಜರವರ, ಚಕ್ರವರ್ತಿ ದಂಪತಿಗಳ ಶ್ರೇಯೋದಾಯಕವಾದ ಹಾಡುಗಳಿಂದ ಪ್ರಾರಂಭಿಸಿ, ಮಧ್ಯಾಹ್ನ ಅಮಲ್ದಾರ್ರು ಸ್ಥಳೀಯ ಅಧಿಕಾರಿಗಳೂ ದೊಡ್ಡ ಮನುಷ್ಯರೂ ವರ್ತಕ ಮಹನೀಯರ ಸಮೇತ ಕೂಡಿ ಗ್ರಾಮಸ್ಥರಿಂದ ತರಿಸಲಾಗಿದ್ದ ಸಾಧನೆಯನ್ನು ನೋಡಿ ಹುಡುಗರಿಗೆ ಆಟಗಳನ್ನು ಆಡಿಸಿ, ಸರ್ವರೂ ಸ್ಕೂಲಿನಲ್ಲಿ ಸೇರಿದರು. ಕನ್ನಡದಲ್ಲಿ

ಹಿಂದುಸ್ಥಾನದಲ್ಲಿ ಬ್ರಿಟಿಷ್ ಚಕ್ರಾಧಿಪತ್ಯದ ಹಿಂದಿನ ಮತ್ತು ಈಗಿನ ಸ್ಥಿತಿಯನ್ನು ಪರಿಷ್ಕಾರವಾಗಿಯೂ ಸ್ವಾರಸ್ಯವಾಗಿಯೂ ಉಪನ್ಯಾಸಮಾಡಿದರು. ಆಟಗಳಲ್ಲಿ ಗೆದ್ದ ಬಾಲಕ ಬಾಲಕಿಯರಿಗೆ ಬಹುಮಾನ ಕೊಡಿಸಿದರು. ಸಭೆ ಅಮಲ್ದಾರರು ಕುವರಾರರು ಸಂಗೀತ ಪಾಡಿ ಕರ್ಣಾನಂದ ಮಾಡಿದರು. ಸರ್ವರೂ ಚಕ್ರವರ್ತಿ ದಂಪತಿಗಳಿಗೂ ಶ್ರೀಮನ್ಮಹಾರಾಜರವರಿಗೂ ಶ್ರೇಯಸ್ಸನ್ನು ಹಾರೈಸಿ ಸುಖಾನ್ವ ಸಂತೋಷದಿಂದ ತೆರಳಿದರು.

ಮಳವಳ್ಳಿ.—ಈ ಊರಿನಲ್ಲಿ ಕೋಟೆ ಪೇಟೆ ಎಂದು ೨ ಭಾಗ ಉಂಟು. ಆಯಾ ಸ್ಥಳದ ಮುಸಲ್ಮಾನರು ಪ್ರತ್ಯೇಕ ಪ್ರತ್ಯೇಕವಾಗಿ ಮೊಹರಂ ಹಬ್ಬ ಮಾಡಿಕೊಂಡು ಎಲ್ಲಾ ಕಡೆಯೂ ಉತ್ಸವಾದಿಗಳನ್ನು ಮಾಡಿಕೊಳ್ಳುತ್ತಿದ್ದರು. ಇವರಲ್ಲಿ ಕೋಟೆಯವರು ಪೇಟೆಗೆ ಬಂದಾಗ ಮುಂಭಾಗದಲ್ಲೂ, ಪೇಟೆಯವರು ಕೋಟೆಗೆ ಬಂದಾಗ ಮುಂಭಾಗದಲ್ಲೂ ಬರುವ ಪದ್ಧತಿಯು ಯಾವಾಗಲೂ ಮಾಮೂಲು. ಈ ವರ್ಷ ೮ ನೇ ಕತ್ತಲನಂದ ಉತ್ಸವಾದಿಗಳು ಶುರುಮಾಡಲ್ಪಟ್ಟು ನಡೆಯುತ್ತಿರುವಾಗ ೯ ನೇ ಕತ್ತ ದಿವಸ ಉತ್ಸವ ಕಾಲದಲ್ಲಿ ಪೇಟೆ ಮುಸಲ್ಮಾನರು ಪೇಟೆಯಲ್ಲಿ ಮಾಮೂಲಿಗೆ ವಿರೋಧ ನಡಿಸಿದ ಕಾರಣ ಎರಡು ಕಡೆ ಮುಸಲ್ಮಾನರಿಗೂ ಮನಸ್ತಾಪ ಹುಟ್ಟಿತು. ಬುದ್ಧಿವಂತರಾದ ಜಮೇದಾರ್ ಕೃಷ್ಣಪ್ಪನವರು ಉಪಾಯದಿಂದ ಜಗಳಕ್ಕೆ ಅವಕಾಶವಿಲ್ಲದಂತೆ ಆ ದಿವಸದ ಉತ್ಸವವನ್ನು ಪೂರೈಸಿದರು. ಕಡೇ ದಿನ ಉತ್ಸವದ ಉಸ್ತುವಾರಿಗೆ ಅಸ್ಸಿಸ್ಟೆಂಟ್ ಅಮಲ್ದಾರ್ ಮ॥ ರಾಮಚಂದ್ರಯ್ಯನವರು, ಪೊಲೀಸ್ ಇನ್ಸ್‌ಪೆಕ್ಟರವರು ಸಹ ದಯಮಾಡಿದ್ದರು. ಹಿಂದಿನ ದಿವಸ ತಪ್ಪುಮಾಡಿದ ಪೇಟೆ ಮುಸಲ್ಮಾನರಿಗೆ ಅವರ ಇಷ್ಟದಂತೆ ಉತ್ಸವ ಮಾಡಿಕೊಳ್ಳಲು ಅವಕಾಶಕೊಟ್ಟು ಕೋಟೆಯವರಿಗೆ ಮಾಮೂಲ್ ಜಾಗಗಳಲ್ಲಿ ಉತ್ಸವ ಮಾಡಿಕೊಳ್ಳಲು ಆಟಂಕಪಡಿಸುತ್ತಾ ಅವರ ಆಟಪಾಟಗಳಿಗೆ ಅವಕಾಶವೇ ಕೊಡದೆ ಹೋದರೆಂತಲೂ ಅವಮಾನವಾಯಿತೆಂತಲೂ ತಾಬೂತುಗಳನ್ನು ಪೇಟೆ ಕೋಟೆ ಮಧ್ಯದಲ್ಲಿನ ಚೌಕದಲ್ಲಿಟ್ಟು ಕೋಟೆ ಮುಸಲ್ಮಾನರೆಲ್ಲಾ ಹೊರಟು ಹೋದರು. ಮಾರನೇ ದಿವಸ ಡಿಸ್ಟ್ರಿಕ್ಟ್ ಸೂಪ್ರೆಂಟ್ ಸಾಹೇಬರು ದಯಮಾಡಿಸಿ ವೇಷಗಳೊಡನೆ ಆ ದಿವಸ ಮಾಮೂಲ್ ಜಾಗಗಳಲ್ಲಿ ಉತ್ಸವ ಮಾಡಿಕೊಳ್ಳಬಹುದೆಂದು ಅವರಿಗೆ ಹೇಳಿ ನಂಬಿಕೆ ಕೊಟ್ಟರಂತೆ. ಅವರು ವೇಷಗಳೊಡನೆ ಬಂದು ತಾಬೂತ್‌ಗಳನ್ನು ಎತ್ತಿ ಹೊರಟಾಗ ಅವರನ್ನು ಹೆದರಿಸಿ ಆ ದಿವಸವೂ ಆಟಪಾಟಗಳನ್ನು ನಡಿಸಿಕೊಳ್ಳುವದಕ್ಕೆ ಅವಕಾಶ ಕೊಡದೆ ಹೋದರಂತೆ. ಇದರಿಂದ ಜನಗಳ ಮನಸ್ಸಿಗೆ ಅಸಮಾಧಾನ ಮಾಡಿದಂತೆ ಹೇಳುತ್ತಾರೆ.—ಈ ತಾಲ್ಲೂಕು ಪೊಲೀಸ್ ಇನ್ಸ್‌ಪೆಕ್ಟರು ಇಲ್ಲಿಗೆ ಬಂದು ಸುಮಾರು ವರುಷದ ಮೇಲಾಗಿದೆ. ಮೊಹರಂ ಕಡೇ ದಿನ ಉತ್ಸವದೊಡನೆ ಅವರು ಬರುವಾಗ ಊರಿನ ಪೇಟೆ ಅಂಗಡಿ ಬೀದಿ ಜನಗಳಲ್ಲಿ ಬಹುಜನ ಯಾರೆಂದು ತಿಳಿಯುವವರಲ್ಲ. ಅಸಕ್ತರಾದ್ದರೆಂತಲೂ ಇದಕ್ಕೆ ಕಾರಣವೇನೋ ತಿಳಿಯದೆಂತಲೂ ಜನರು ಆಡಿಕೊಳ್ಳುತ್ತಾರೆ.

ಮಂಡ್ಯ ತಾ॥ ಮುತ್ತೆಗೆರೆ.—ಊರ ಮುಂದಲ ಕೆರೆ ತುಂಬಾ ಊನಸ್ಥಿತಿಯಲ್ಲಿದ್ದು ನೀರು ನಿಲ್ಲಲು ಅನುಕೂಲವಿಲ್ಲ. ಇಲ್ಲಿನ ಪೂಥರು ಮತ್ತು ಮೂರ್ನಿ ರೈತರು ಇದೇ ಕೆರೆ ಬಂದೇ ಜಮೀನಿಗೆ ಭತ್ತ ಈಗ ಒಂದು ತಿಂಗಳಲ್ಲಿ ಬಿತ್ತಿದರು. ಇನ್ನೂ ಬಿತ್ತುವದರಲ್ಲಿರುತ್ತಾರೆ. ನೀರು 10-15 ದಿವಸಕ್ಕೆ ತೀರಿಹೋಗುತ್ತೆ. ಕಡತಿ ಕೊತ್ತಂಬರಿ ಬೆಳೆಮಾಡಿದ್ದರೆ ಅನುಕೂಲವಾಗುತ್ತಿತ್ತು. ಗದ್ದೆ ಫಸಲೇನೋ ಆಗುವದಿಲ್ಲ.—ಶೀತಕಾಲ ಹವಾ ಬಹಳ ತಂಡಿಯಾಗಿ ಜ್ವರಾದಿ ಉಪರೋಗದಿಂದ ಕೆಲವರು ನರಳುತ್ತಾರೆ. ಧಾರಣೆಯು ಕ್ಷಾಮಕಾಲವನ್ನು ಸೂಚಿಸುತ್ತದೆ. ರಾಗಿ 11-14 ಸೇರು, ಭತ್ತ 14-15 ಸೇರು ಮಾರುತ್ತದೆ.—ಇಲ್ಲಿಗೆ ತಾ 21 ರಲ್ಲಿ ಪ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಸಾಹೇಬರವರು ಮತ್ತು ಅಮಲ್ದಾರ್ರವರು ಬಸರಾಳಿನಲ್ಲಿ ಜಮಾಬಂದಿಗೋಸ್ಕರ ಮೊಕ್ಕಾಂ ಮಾಡಿ, ಇಲ್ಲಿಗೆ ದಯಮಾಡಿಸಿ ಗ್ರಾಮವನ್ನು ಇನ್ಸ್‌ಪೆಕ್ಷನ್ ಮಾಡಿ ತಕರಾರು ಸ್ಥಳಗಳನ್ನು ನೋಡಿ ಸದುತ್ತರವಿತ್ತು ತಾಲ್ಲೂಕು ಜಮಾಬಂದಿಯಲ್ಲಿ ದಯಮಾಡಿಸಿದ್ದಾಗ ನಮ್ಮ ಮಂಡ್ಯದ ಅಮಲ್ದಾರ್ರು ಪ್ರಜೆಗಳಿಗೆ ಶೋಧಿಸಿ ರೆತದಿಂದ ಈ ಸಮಯ ಎತ್ತಿಯ ವರೆಗೆ ಮೂರು ಮೈಲಿ ರಸ್ತೆ ಮಾಡಿಸಿರುವದನ್ನು ಸಾಹೇಬರು ನೋಡಿ ಸಂತೋಷಪಟ್ಟರು. ಸರ್ಕಾರದಿಂದ ಆಗುವ ಅಣೆ ವಗೈರೆ ಕಾಮಗಾರಿಯನ್ನು ಮಾಡಿಸಿಕೊಡುವದಲ್ಲದೆ ನಾಗಮಂಗಲದ ಗಡಿಯಿಂದ ತಂದಸದ ಕೆರೆ ಬಳಿ ಹೆದ್ದೋಟಿಗೆ ಸೇರಿಸಿಕೂಡುವ ಬಾಕಿ ರಸ್ತೆ ಕೆಲಸವನ್ನು ಶುರುಮಾಡಿಸುತ್ತೇವೆಂದ ಅಪ್ಪಣೆ ಕೊಡಿಸಿದರು.—ಇಲ್ಲಿಗೆ ಅರ್ಧ ಮೈಲಿ ಫಾಸಲೆಯಲ್ಲಿರುವ ಹಟ್ಟಿಯಲ್ಲಿ ನೆನ್ನೆ ಒಬ್ಬ ರೈತನ ಹೊಲದ ರಾಗಿ ಮೆದೆಯನ್ನು ಹೊರುತ್ತಾ ಇದ್ದಾಗ ಅವನ ಹೆಂಡತಿಗೆ ನಾಗರಹಾವು ಕಡಿದು ಪ್ರಾಣವಿಲ್ಲದೆ ಇರಲು ಅವರ ಪರೋಪಕಾರಬುದ್ಧಿಯಿಂದ 14 ಕೋಳಿಗಳನ್ನು ತಂದು ಸವರಿ ಹಾವು ಹಲ್ಲಿಸಿದ ಕೆಡವು ಪಾಯಸಮಾಡಿದ ಸ್ಥಳಕ್ಕೆ ಸದರಿ ಕೋಳಿಯ ಹಿಂಭಾಗದಲ್ಲಿ ರಂಧ್ರವೇ ಹಾವಿ ಇದೆಯಂತೆ. ಅದನ್ನು ಸೀಂಕಿನಿಂದ ಸದರಿ ಕೋಳಿಗಳಿಗೆ ವಿಷವೆಲ್ಲಾ ಹಿಡಿದು ಕಪ್ಪುಬಣ್ಣವಾಗಿ 1-1 ಕೋಳಿಗಳು ಸತ್ತು ಹೋದವು. ಸದರಿ ಹೆಂಗಸು ಅರ್ಧ ಘಂಟೆಯಲ್ಲಿ ಹುಷಾರಾಗಿ ಹೊಲದಿಂದ ಮನೆಗೆ ಹೋದರು. ಈ ವಿಷಯವನ್ನು ವಾಚಕರೂ ಇತರರೂ ಜ್ಞಾಪಕದಲ್ಲಿಡುವದು ಉತ್ತಮ.—ಇಲ್ಲಿಗೆ ೩ ಮೈಲಿಯಲ್ಲಿರುವ ಗಂಗವಾಡಿ ಮಲ್ಲೀಗೆರೆ ಗ್ರಾಮದಲ್ಲಿ ಒಕ್ಕಲಿಗರ ದೊಡ್ಡ ಸಂಸಾರ ತಿಮ್ಮೇಗೌಡನ ತಾಯಿ ಮುದುಕಿಗೆ ಈಗ 125 ವರುಷ ವಯಸ್ಸು. ಈಗ 15 ದಿವಸದಿಂದ ಮಾತ್ರ ಅವಳಿಗೆ ಸಂಚಾರ, ಆಹಾರ ಕಮ್ಮಿ. ಅದಕ್ಕೆ ಮೊದಲು ಅವಳು ಬಹಳ ಘಟ್ಟಿಯಾಗಿ ಕೆಲಸಕಾರ್ಯಗಳೆಲ್ಲಾ ಮಾಡಿಕೊಂಡಿದ್ದಳು. ಶ್ರೀರಂಗಪಟ್ಟಣವನ್ನು ಟಿಪ್ಪುಸಾಹೇಬರಿಂದ ಇಂಗ್ಲಿಷ್‌ನವರು ಗೆದ್ದು ತೆಗೆದುಕೊಂಡಾಗ ತನ್ನ ಮದುವೆಯಾಯಿತೆಂತ ವಗೈರೆ ಜ್ಞಾಪಕಶಕ್ತಿಯಿಂದ ಮಾತುಗಳನ್ನು ಹೇಳುತ್ತಾಳೆ.—ನಾಗಮಂಗಲ ತಾಲ್ಲೂಕು ದೇವಲಾಪುರದಲ್ಲಿ ಗೌರ್ನಮೆಂಟು ಕನ್ನಡ ಸ್ಕೂಲೊಂದಿದೆ. ಅದರ ಬಾಗಿಲ ಮೇಲ್ಭಾಗದಲ್ಲಿ ಚಿಕ್ಕದಾಗಿ ಒಂದು ಬೋರ್ಡು ಕಟ್ಟಿ ಅದರಲ್ಲಿ "ಅಪ್ಪಣೆ ವಿನಾಯಿ ಯಾರೂ ಒಳಗೆ ಪ್ರವೇಶಮಾಡಕೂಡದು" ಎಂದು ಬರೆದಿರುವದನ್ನು ನೋಡಿ ತುಂಬಾ ಆಶ್ಚರ್ಯಪಡುತ್ತೇನೆ. ಸ್ಕೂಲುಗಳಿಗೂ, ಪಬ್ಲಿಕ್ ಆಫೀಸುಗಳಿಗೂ ಹೀಗೆ ನಿರ್ಬಂಧವಿಡಬಹುದೇ ತಿಳಿಯಲಪೇಕ್ಷಿಸುತ್ತೇನೆ. ಇದಕ್ಕೆ ಇನ್ಸ್‌ಪೆಕ್ಟರ ಗಮನ ಬೀಳದೇ ಇರುವದು ಯಾಕೋ ತಿಳಿಯಲಿಲ್ಲ.

ಬಿಳೂರು.—ಈ ಪ್ರಾಂತ್ಯ ಗದ್ದೆ ಬೆಳೆ ಕಟಾವಾಯಿತು. ಈ ಸಾರಿ ಒಳ್ಳೇ ಮಳೆಯಾಗಿ ಬೆಳೆಯು ಕೈಸೇರಿದ್ದಕ್ಕಾಗಿ ರೈತರು ತುಂಬಾ ಸಂತೋಷಪಡುತ್ತಾರೆ. ಧಾರಣೆಯು ಮಾತ್ರ ಬಹಳ ತುಟ್ಟಿಯಾಗಿ, ಬಡವರು ಜೀವಿಸುವದು ಬಹಳ ಕಷ್ಟವಾಗಿದೆ. ಅಕ್ಕಿ 6-6½ ಸೇರು, ರಾಗಿ 15-15½ ಸೇರು ಮಾರಾಟವಾಯಿತು.—ನಮ್ಮ ಡೆಪ್ಯುಟಿ ಅಮಲ್ದಾರ್ ಮ॥ ಸುಂದರ್‍ರಾಜಯ್ಯಂಗಾರ್‍ರು ಈ ಊರಿಗೆ ಬಂದಾರಭ್ಯ ಇಲ್ಲಿನ ಪ್ರಜೆಗಳ ಕ್ಷೇಮಚಿಂತನೆಯನ್ನೇ ಬಯಸಿ ಅನೇಕ ವ್ಯಯವಾದ ಕೆಲಸಗಳನ್ನು ಮಾಡಿಸುತ್ತಿರುವರು. ಕೋಆಪರೇಟಿವ್ ಸೊಸೈಟಿಯ ಪ್ರಯೋಜನವು ಅವರ ಪ್ರೋತ್ಸಾಹದಿಂದ ಜನಗಳಿಗೆ ತಿಳಿಯಬಂದಿದೆ. ಈ ಸೊಸೈಟಿಯನ್ನು ಅಭಿವೃದ್ಧಿಗೆ ತರಬೇಕೆಂದು ಕುತೂಹಲವುಳ್ಳವರಾಗಿದ್ದಾರೆ. ಈ ಊರಿನ ಮ್ಯುನಿಸಿಪಲ್ ಏರ್ಪಾಡುಗಳು ಪೂರ್ವಕ್ಕಿಂತಲೂ ಚೆನ್ನಾಗಿವೆ. ಪ್ರತಿ ದಿನವೂ ತಪ್ಪದೆ ದೀಪ ಹಚ್ಚುತ್ತಾ ಇದೆ.—ಇಲ್ಲಿ ದೊಡ್ಡ ಸಂತೆಯಾಗುವದರಿಂದ ಸಂತೆ ದಿವಸ ತಕ್ಕ ಕಾವಲು ಇಟ್ಟು ಪ್ರಜೆಗಳಿಗೆ ತೊಂದರೆ ಇಲ್ಲದ ಹಾಗೆ ನಡಿಸುವದಕ್ಕೆ ಬಹಳ ಸಂತೋಷಪಡಬೇಕಾಗಿದೆ. ಈ ಊರಿನಲ್ಲಿ ಸಂತೆ ಜನಗಳಿಗೆ ಕುಡಿಯುವ ನೀರಿಗೆ ಮಾತ್ರ ಅನಾನುಕೂಲವಾಗಿರುತ್ತದೆ. ಒಂದು ಬಾವಿಯಲ್ಲಿ ಮಾತ್ರ ನೀರು ಇರುತ್ತೆ. ಸಂತೆ ಜನಗಳಿಗೆ ಇದು ಸಾಕಾಗುವದಿಲ್ಲ. ಹೊಸದಾಗಿ ತಯಾರಾಗುತ್ತಿರುವ ಭಾವಿಯನ್ನು ಕಲ್ಲುಮೆಟ್ಟಿಲು ಬಾವಿ ಮಾಡಿಸಿದರೆ ಸಕಲರಿಗೂ ಅನುಕೂಲವಾದೀತು. ಇದನ್ನು ಜಾಗ್ರತೆ ತಯಾರುಮಾಡಿಸುವಂತೆ ನಮ್ಮ ಅಮಲ್ದಾರ್ರವರು ಮುತುವರ್ಜಿ ವಹಿಸಬೇಕಾಗಿ ಕೋರಿಕೆ.—ಈಗಿನ ಅಮಲ್ದಾರರ ಕಾಲದಲ್ಲಿ ಈ ಊರಿನಲ್ಲಿ ನಡೆಯುತಕ್ಕ ಕಳುವಿನ, ಇಸ್ಪೀಟು ಆಟ ಕೆಟ್ಟ ದುರಾಚಾರಗಳು, ದುಷ್ಟತನಗಳು ಅರ್ಧಕ್ಕಿಂತ ಕಮ್ಮಿಯಾಗಿರುತ್ತವೆ. ಮತ್ತು ಅವರು ಗ್ರಾಮಾಂತರ ಸಂಚಾರ ಕಾಲದಲ್ಲಿ ಹಿನ್ನೆಲೆ ಪಾತಕವನ್ನು ಆಶ್ಚರ್ಯವಾಗಿದ್ದಾರೆ. ವಕೆ ಸಂಬಂಧಿ ಗ್ರಾಮ ... ಗಿದೆ. ಇಲ್ಲಿಗೆ ಬಂದಿರುವ ಪೊಲೀಸ್ ಸಬ್ ಇನ್ಸ್‌ಪೆಕ್ಟರವರು ಬಹಳ ... ಯವರು, ಸಿಪಾಯಿಗಳು ಪಕ್ಷಪಾತವಿಲ್ಲದೆ ಮುತುವರ್ಜಿಯಿಂದ ಕೆಲಸಮಾಡುತ್ತಾರೆ. ಕುರಬಹಳ್ಳಿ ಕಾಡಿನಲ್ಲಿ ಒಬ್ಬ ಹೆಂಗಸನ್ನು ಬಲಾತ್ಕಾರವಾಗಿ ಹಿಡಿದು ಕೈಬೆರಳು ಕತ್ತರಿಸಿದ್ದ ಅಪರಾಧಿಯನ್ನು ಹಿಡಿದು ನ್ಯಾಯಸ್ಥಾನಕ್ಕೆ ಗುರಿಪಡಿಸಿರುತ್ತಾರೆ.—ಇಲ್ಲಿನ ಆಸ್ಪತ್ರೆಗೆ ಹೊಸದಾಗಿ ಬಂದಿರುವ ಡಾಕ್ಟರು ಬಹಳ ಒಳ್ಳೆಯವರು. ರೋಗಿಗಳಿಗೆ ಔಷಧಿ ವಗೈರೆಗಳನ್ನು ಕೊಟ್ಟು ಮುದ್ದು ಮಾಡುತ್ತಾರೆ. ಬಡವರ ಬಳಿಗೆ ತಾವೇ ಹೋಗಿ ವಿಚಾರಿಸಿ ಔಷಧಿ ವಗೈರೆ ಕೊಡುತ್ತಾರೆ. ಇದುವರೆಗೆ ಬಂದಿದ್ದ ಡಾಕ್ಟರುಗಳ್ಯಾರೂ ಹೀಗೆ ಜನಗಳ ಮೇಲೆ ಪ್ರೀತಿಯಾಗಿರಲಿಲ್ಲ.—ಸರ್ಕಾರಿ ಸ್ಕೂಲಿನ ತಿಮ್ಮನ ಗರ್ಭಿಣಿ ಸ್ತ್ರೀಯರನ್ನೂ, ಬಾಣಂತಿಯರನ್ನೂ ಬಹಳ ಆದರದಿಂದ ನೋಡುತ್ತಾ, ಬುದ್ಧಿವಂತಿಕೆ ಎಚ್ಚರಿಕೆ ಚಟುವಟಿಕೆಯಿಂದ ಕೆಲಸಮಾಡುತ್ತಾ ಇರುವದು ಬಹಳ ಸಂತೋಷ. ಇಲ್ಲಿನ ಕನ್ನಡ ಸ್ಕೂಲುಮನೆಯು ಬಾಡಿಗೆಯ ಮನೆ. ಹುಡುಗರಿಗೆ ಬಹಳ ಇಕ್ಕಟ್ಟು. ಆರೋಗ್ಯವೂ ಇರುವದಿಲ್ಲ.—ಕುಂದೂರು ಹೋಬಳಿ ಪ್ರಾಂತ್ಯ ಕಾಡಾನೆಗಳ ಹಾವಳಿಯು ಹೇರಳವಾಗಿದೆ. ಅವು ಬಡ ರೈತರ ಪೈರುಗಳನ್ನು ತಿಂದು ತುಳಿದು ಹಾಳುಮಾಡುತ್ತಲಿವೆ. ರೈತರು ಭಯಸ್ಥರಾಗಿ ಅವುಗಳನ್ನು ಅಟ್ಟುವದೇ ಇಲ್ಲ. ಹೋದ ವರುಷ ಒಬ್ಬ ಹುಡುಗನನ್ನು ಆನೆಯು ಕಾಡಿನಲ್ಲಿ ಕೊಂದುಹಾಕಿತು. ಇದರಿಂದ ರೈತರು ತಮ್ಮ ಪೈರು ನಷ್ಟವಾದರೂ ಸುಮ್ಮನೆ ಇರುತ್ತಾರೆ.

ಯಳಂದೂರು.—ಸುಗ್ಗಿಕಾಲವಾದ್ದರಿಂದ ರೈತರು ಭತ್ತ ಅವರೆ ಮುಂತಾದ ಪೈರುಗಳನ್ನು ಕೊಯ್ಲು ಮಾಡುತ್ತಿದ್ದಾರೆ.—ಇಲ್ಲಿನ ಸಬ್‌ರಿಜಿಸ್ಟ್ರಾರಿಗೆ ಬೇರೆ ಊರಿಗೆ ವರ್ಗವೆಂದು ವರ್ತಮಾನವಿದೆ. ಈ ರೇಂಜರ್ ಮಿ॥ ಎನ್. ಚನ್ನೈಯರವರು ಮೂರು ವರ್ಷಗಳಿಂದ ಸರ್ಕಾರಿ ಕೆಲಸಗಳನ್ನು ಮುತುವರ್ಜಿಯಿಂದ ಮಾಡುತ್ತಾ ಜನಗಳಿಗೆ ಬೇಕಾದವರಾಗಿದ್ದಾರೆ. ಇವರು ಇಲ್ಲಿನ ರೀಡಿಂಗ್ ರೂಮಿಗೆ ಪೋಷಕರಾಗಿ ಪತ್ರಿಕೆಗಳನ್ನು ತರಿಸಿಕೊಡುತ್ತಾ ತುಂಬಾ ಸಹಾಯಕರಾಗಿದ್ದರು.—ಮೈಸೂರು ಸೀಮೆಯ ಎಕ್ಸೈಸ್ ಕಮಿಷನರ್ ಮಿ॥ ಎಂ. ಕಾಂತರಾಜೆ ಅರಸಿನವರ ಆತಿಥ್ಯಕ್ಕಾಗಿ ಊರ ಒಳಗೆಲ್ಲಾ ತೋರಣ ಪತಾಕೆಗಳೂ, ಹೊರಗೆ ಚಪ್ಪರ ತೋರಣಾದಿಗಳೂ ಏರ್ಪಾಡಾಗಿದ್ದವು. ಮಹಾಸ್ವಾಮಿನವರು ಕೊಳ್ಳೇಗಾಲದ ತಾ 15 ನೇ ಡಿಸೆಂಬರು ಇಲ್ಲಿಗೆ ಪರಿವಾರ ಸಹಿತ ದಯಮಾಡಿದರು. ಊರ ಹೊರಗೆ ಹಾಕಿದ್ದ ಚಪ್ಪರದ ಬಳಿ ಪುರವಾಸಿಗಳೂ, ಸರ್ಕಾರಿ ನೌಕರರೂ ವಾದ್ಯ ಸಮೇತ ಕಾದಿದ್ದು ಅವರನ್ನು ಎದುರುಗೊಂಡು ಅವರಿಗೆ ಹಾರತುರಾಯಿಗಳನ್ನು ಅರ್ಪಿಸಿದರು. ವೈದಿಕ ಮಂಡಲಿಯವರು ಆಶೀರ್ವಾದ ರೂಪವಾಗಿ ಹರಸಿ ಕೊಟ್ಟ ಫಲ ಪುಷ್ಪಾದಿಗಳನ್ನು ಅವರು ಸ್ವೀಕರಿಸಿದರು. ಪುರವಾಸಿಗಳು ಅವರಿಗಾಗಿ ಏರ್ಪಾಟುಮಾಡಿದ್ದ ಟ್ರಾವಲರ್ಸ್ ಬಂಗ್ಲೆಕ್ಕೆ ಅವರನ್ನು ವಾದ್ಯಘೋಷದೊಡನೆ ಕರೆದುಕೊಂಡು ಹೋದರು. ಮಧ್ಯಾಹ್ನ ಊರಿನ ದೊಡ್ಡ ಮನುಷ್ಯರು ಬಂಗ್ಲೆಯಲ್ಲಿ ಮಹಾಸ್ವಾಮಿನವರ ಭೇಟಿಮಾಡಿದರು. ಅವರು ಊರಿನ ವಿದ್ಯಮಾನಗಳನ್ನು ವಿಚಾರಿಸಿಕೊಂಡು ಸಂಜೆ ಬಿಸಿಲು ಇಳಿದ ಮೇಲೆ ದಯಮಾಡಿ ತಾಲ್ಲೂಕ್ ಕಚೇರಿ, ಸರಾಯ್ ಕೋರ್ಟ್, ಆಸ್ಪತ್ರೆ, ಬಾಲಕ ಬಾಲಿಕಾ ಪಾಠಶಾಲೆ, ಕೋಆಪರೇಟಿವ್ ಸೊಸೈಟಿ, ಇವುಗಳನ್ನೆಲ್ಲಾ ಪರಾಂಬರಿಸಿದರು. ಬಳಿಕ ನಾಗೈ ರೀಡಿಂಗ್ ರೂಮ್ ಮೆಂಬರುಗಳು ಕಾದಿದ್ದು ಅಲ್ಲಿಗೆ ದಯಮಾಡಬೇಕಾಗಿ ಕೇಳಿಕೊಂಡ ಪ್ರಕಾರ ಒಳಹೊಕ್ಕು ಅಲ್ಲಿನ ಸಂಗತಿಗಳನ್ನು ವಿಚಾರಿಸಿಕೊಂಡು ಅದರೊಂದಿಗೆ ಪುಸ್ತಕಭಂಡಾರವನ್ನಿಟ್ಟುಕೊಳ್ಳುವದು ಮುಖ್ಯವಾದದ್ದೆಂದು ಮುಂತಾಗಿ ಅಭಿವೃದ್ಧಿಗೆ ಸಹಕಾರಿಯಾದ ಕೆಲವು ವಿಷಯಗಳನ್ನು ಅಪ್ಪಣೆಕೊಡಿಸಿ, ಮೆಂಬರುಗಳಿಂದ ಸನ್ಮಾನಹೊಂದಿ ಹೊರಟುಬರುತ್ತಾ ಮಾರ್ಗದಲ್ಲಿ ದೇವಾಲಯಗಳಲ್ಲಿ ಪೂಜಾದಿಗಳನ್ನು ತರಿಸಿಕೊಂಡು ಬಿಡಾರಕ್ಕೆ ದಯಮಾಡಿಸಿದರು. ಅಲ್ಲಿ ಪುರವಾಸಿಗಳೆಲ್ಲರೂ ವಸ್ತುಗಳ ಸುಂಕದ ವಿಗಳನ್ನು ವಿಚಾರಿಸುವದಕ್ಕಾಗಿ ತುಂಬಾ ಕಾತರರಾಗಿರುತ್ತೇವೆ ಎಂದು ಕೇಳಿಕೊಂಡರು. ನೀವು ಬನಾ ... ಗಳವರು ಹೇಳಿಕೊಂಡದ್ದೇನೆಂದರೆ—ಇದು ಯಳಂದೂರು ... ಬಂದಿರುವದರಿಂದ ಎಲ್ಲರೂ ಇದೊಂದು ಸಣ್ಣ ಹಳ್ಳಿ ಎಂದು ಭಾವಿಸುತ್ತಾರೆ. ಇಲ್ಲಿ ಮೊದಲು ಪೂರ್ಣ ತಾಲ್ಲೂಕ್ ಕಚೇರಿ ಇತ್ತು. ಅದನ್ನು ವಜಾಮಾಡಿದರು. ಆಗ್ಗೆ ಕೇಳಿಕೊಂಡದ್ದಕ್ಕೆ ಮುನ್ಸಿಫ್ ಕೋರ್ಟನ್ನು ಇಟ್ಟು ಕೊಡುತ್ತೇವೆ ಎಂದು ಹೇಳಿ ಸಬ್ ತಾಲ್ಲೂಕ್ ಕಚೇರಿಯನ್ನೂ ಮುನ್ಸಿಫ್ ಕೋರ್ಟನ್ನೂ ಇಟ್ಟುಕೊಟ್ಟರು. ಈಗ ಕೋರ್ಟನ್ನು ವಜಾಮಾಡಿದ್ದರಿಂದ ಜನಗಳಿಗೂ ಪುರನಿವಾಸಿಗಳ ಅನುಕೂಲಕ್ಕೂ ಅಭಿವೃದ್ಧಿಗೂ ಕುಂದಕವಾದ ವಿಷಯದಲ್ಲಿ ತಮ್ಮಲ್ಲಿ ಅರಿಕೆಮಾಡಿದರು. ಇದಕ್ಕೆ ಮಹಾಸ್ವಾಮಿ ಅರಸಿನವರು ಇದು ಮಲೆನಾಡು ಪ್ರದೇಶವಾದ್ದರಿಂದ ಛಿಲ ತರಹನಂತೆ ಆರೋಗ್ಯಕರವಾಗಿಯೂ, ದೊಡ್ಡ ಊರಾಗಿಯೂ, ಮಲೆನಾಡು ಪ್ರಾಂತ್ಯಕ್ಕೆಲ್ಲಾ ಮಧ್ಯಸ್ಥಾನವಾಗಿಯೂ ಇರುತ್ತೆ. ಇಂಥಾ ಸ್ಥಳದಲ್ಲಿ ಕಚೇರಿ, ಕೋರ್ಟು ಎರಡೂ ಇರತಕ್ಕದ್ದು ಬಹಳ ಮುಖ್ಯ. ಕೋರ್ಟು ಇರತಕ್ಕ ವಿಚಾರವು ಗವರ್ನಮೆಂಟಿನವರ ಆಲೋಚನೆಯಲ್ಲಿದೆ ಎಂಬದಾಗಿ ವಗೈರೆ ಅಪ್ಪಣೆಕೊಡಿಸಿದರು. ನಂತರ ಎಲ್ಲರೂ ಅಪ್ಪಣೆಪಡೆದು ಹೊರಟು ಬಂದರು. ಮರುದಿನ ಪುರನಿವಾಸಿಗಳು, ಮುನ್ಸಿಪಲ್ ಮೆಂಬರುಗಳು, ಎಲ್ಲರೂ ಫಲ ಪುಷ್ಪ ತಾಂಬೂಲಾದಿಗಳ ಸಮೇತ ಬಂಗ್ಲೆಕ್ಕೆ ಹೋಗಿ ಮಹಾಸ್ವಾಮಿನವರಿಗೆ ನಜರುಮಾಡಿ ಅವರನ್ನು ಮುಂದ ತರೀಕೆರೆಗೆ ಸಾಗಕಳುಹಿಸಿ ಬಂದರು.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

81 2

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧವ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದ್ದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ. ಅಂಚೆ ವೆಚ್ಚ 1 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು—(1) ಎಸ್. ಪೀಟರ್ಸ್, 37 ವಡಮಲೈಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಜೆ. ಎಸ್. ಕೆನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಕನ್ನಡ ಕಿಂಡರ್‌ಗಾರ್ಟನ್ ಬಾಲಬೋಧೆ

9-1

ಅತ್ಯುಪಯುಕ್ತವಾದ ಪುಸ್ತಕ. ಇದರಲ್ಲಿ ೬ ಬಾಲಬೋಧೆಗಳು ಅಡಕವಾಗಿವೆ. ಈಗ ಯೂರೋಪ್, ಅಮೆರಿಕಾ ದೇಶಗಳಲ್ಲಿರುವ ಫ್ರೋಬೆಲ್ಲರ ಕಿಂಡರ್‌ಗಾರ್ಟನ್ ಕ್ರಮವನ್ನನುಸರಿಸಿದೆ. ... ಉಪಯುಕ್ತ ಅನುಕೂಲವಾಗಿ ... ಉಪಯುಕ್ತವೆ. 1 ಕ್ಕೆ ತಪ್ಪು ... ಮಾಡುವದಿಲ್ಲ. ಕ್ರಯ 1 ಆಣೆ. ವರ್ತಕರಿಗೆ ಕಮಿಷನ್ ಹೆಚ್ಚು. ವಿಳಾಸ: ಕಿಂಡರ್‌ಗಾರ್ಟನ್ ಬುಕ್ ಡಿಪೋ, ಅರಕಲಗೂಡು (ಹಾಸನ ಡಿ.)

ಶ್ರೀಮನ್ನೃಸಿಂಹ ಪ್ರಯೋಗಪಾರಿಜಾತಾನುಸಾರಿ ಆಶ್ವಲಾಯನ ಪೂರ್ವಪ್ರಯೋಗ ಸಸ್ವರ ಮಂತ್ರಸಹಿತ

ಮೈಸೂರು ಕೃಷ್ಣರಾಜ ಮೊಹಲ್ಲಾ ಗುಂಡುತೋಪಿನ ಮಕ್ಕಳು ಎಂ. ನರಸಿಂಹಶಾಸ್ತ್ರಿಗಳಿಂದ ಪ್ರಕಟಿಸಲ್ಪಟ್ಟ ಮೇಲ್ಕಂಡ ಅಪರೂಪವಾದ ಗ್ರಂಥವನ್ನು ಸಜ್ಜನಗೂಡು ಶ್ರೀ ಶ್ರೀ ರವರೂ, ಮೈಸೂರು ಶ್ರೀಮನ್ಮಹಾರಾಜರವರೂ ಸ್ವೀಕರಿಸಿ ಬಹುಮಾನವನ್ನು ದಯಪಾಲಿಸಿರುತ್ತಾರಲ್ಲದೆ ಸಂಸ್ಥಾನದ ಮಹಾವಿದ್ವಾಂಸರೂ ಪಂಡಿತೋತ್ತಮರೂ ಶೋಧಿಸಿರುತ್ತಾರೆ. ಅರಮನೆ ಧರ್ಮಾಧಿಕಾರಿಗಳೂ ಸಹಾ ಬಹಳ ಸರಿಯಾದ್ದು ಮಾಡಿರುತ್ತಾರೆ. ಬೆಲೆ ರೂಪಾಯಿ 2 0 0

ಸನಾತನ ಸೂಕ್ಷ್ಮಧರ್ಮ—ಬಾಲಕ ಬಾಲಿಕೆಯರಿಗೆ ಅತಿ ಮುಖ್ಯವಾದದ್ದು. ಬೆಲೆ ೨ ಆಣೆ.

ಪತ್ರರತ್ನಾಕರ—ಇದು ಮೈಸೂರು ಕ್ರಿಮಿನಲ್ ಕೋರ್ಟು ವಕೀಲರಾಗಿದ್ದ ಎ. ವೆಂಕಟರಾಮಯ್ಯನಿಂದ ರಚಿಸಲ್ಪಟ್ಟು ಎಲ್ಲಾ ಪತ್ರಗಳ ಸಮೂನೆಗಳಿಂದ ಕೂಡಿದ 1೫ ವಿಷಯಗಳಿಂದ ಅಡಕವಾಗಿದೆ. ಬೆಲೆ 10 ಆಣೆ.

ಲೇಖ್ಯತತ್ವಪ್ರಕಾಶಿಕೆ—ಸದ್ವಿಯವರಿಂದ ರಚಿಸಲ್ಪಟ್ಟು ಎಲ್ಲಾ ವಿವಾದ ಅರ್ಜಿಗಳ ಸಮೂನೆಗಳಿಂದ ಕೂಡಿದ 7½ ವಿಷಯಗಳಿಂದ ಅಡಕವಾಗಿದೆ. ಬೆಲೆ 6 ಆಣೆ.

ಆರೋಗ್ಯಪ್ರಶ್ನೋತ್ತರ—ಸ್ಕೂಲ್ ಸೆ ತರಗತಿ ವಿದ್ಯಾರ್ಥಿಗಳಿಗೆ ಅತ್ಯಾವಶ್ಯಕವಾದದ್ದು. ಬೆಲೆ 1 ಆಣೆ. [7 1]

ಮುದ್ರಾಮಂಜರೀ ರೂ 1 8 0. ಬಿ. ವಿ. ಕಟಾವಾಯರಿಂದ ರಚಿಸಲ್ಪಟ್ಟ ರಾಜನೀತಿ ರೂ 1-10. ವಾಲ್ಮೀಕಿ ರಾಮಾಯಣ 1 1 0. ಇವೇ ಮೊದಲಾದ ಪುಸ್ತಕಗಳು ಸಹಾ ದೊರೆಯುತ್ತವೆ.

ವಿಳಾಸ – ಎಚ್. ವೆಂಕಟರಾಮಯ್ಯ, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

ಶ್ರೀಗುರುದತ್ತಾತ್ರೇಯ ಬಾಬಾಬುಡನ್‌ಸ್ವಾಮಿ ಪೀಠ

ಮೈಸೂರು ಸಂಸ್ಥಾನದಲ್ಲಿರುವ ಶ್ರೀಗುರುದತ್ತಾತ್ರೇಯ ಬಾಬಾಬುಡನ್ ಸ್ವಾಮಿಗಳವರ ಪೀಠವು ಚಿಕ್ಕಮಗಳೂರು ತಾಲ್ಲೂಕು ಬಾಬಾಬುಡನ್ ಬೆಟ್ಟದಲ್ಲಿರುವುದು ಸರಿಯಷ್ಟೆ. ಈ ಪೀಠವನ್ನು ಹಿಂದೂ, ಮಹಮದೀಯ ಜನಗಳು ಪೂಜಿಸುತ್ತಾರೆ. ಪ್ರತಿ ವರ್ಷವೂ ಈ ಪೀಠದ ಸೇವೆಗಾಗಿ ಸುಮಾರು 10,000 ಹಿಂದೂ ಮತ್ತು ಮಹಮದೀಯ ಯಾತ್ರಾರ್ಥಿಗಳು ನಾನಾ ದೇಶಗಳಿಂದ ಬರುತ್ತಾರೆ. ಹಿಂದೂ ಜನಗಳು ಬೆಟ್ಟದ ಮೇಲೆ ಇಳಿದುಕೊಳ್ಳುವದಕ್ಕೂ ಮಹಮ್ಮದೀಯರು ನಮಾಜ್ ಮಾಡುವದಕ್ಕೂ ಕಟ್ಟಡಗಳು ಇಲ್ಲದೆ, ಬಹಳ ತೊಂದರೆಯಾಗಿರುವದರಿಂದ ನಾವು ಹಿಂದೂ ಜನಗಳಿಗೆ ಒಂದು ಮುಸಾಫರ್‌ಖಾನೆಯನ್ನೂ, ಮಹಮದೀಯರಿಗೋಸ್ಕರ ಒಂದು ಮಸೀದಿಯನ್ನೂ ಕಟ್ಟಿಸುವ ಏರ್ಪಾಟು ಇಟ್ಟಿರುತ್ತೇವೆ. ಸದರಿ ಕಟ್ಟಡಗಳಿಗೆ ಅನೇಕ ಮಹನೀಯರು ಚಂದಾ ಕೊಡುತ್ತಿದ್ದಾರೆ. ಹೀಗಿರುವಾಗ್ಗೆ ದರ್ಗಾಕ್ಕೆ ಸಂಬಂಧಪಟ್ಟ ಕೆಲವರು ದರ್ಗಾದ ಹೆಸರಿನಲ್ಲಿಯೂ, ಕಟ್ಟಡಗಳಿಗೋಸ್ಕರವೂ ಚಂದಾ ವಸೂಲ್ಮಾಡಿ ತಿಂದುಹಾಕುತ್ತಿದ್ದಾರೆಂದು ನಮಗೆ ಗೊತ್ತಾಯಿತು. ... ಎಂಬುವರು ಶಾಖಾ ದರ್ಗಾದ ಏಜೆಂಟರೆಂದು ಸುಳ್ಳು ಹೇಳಿ ಚಂದಾ ವಸೂಲ್ಮಾಡುತ್ತಿದ್ದಾರೆ. ಇವರನ್ನು ಏಜೆಂಟ್ ಕೆಲಸದಿಂದ ವಜಾಮಾಡಿ ... ಇತ್ತು ವರ್ತಕರಾಗಿದ್ದ ಸೈಯದ್ ಗೋಪಾಲರಾಜ ... ಇವರು ... ಬಿಟ್ಟಿರುತ್ತಾರೆ. ಆದ್ದರಿಂದ ನಮ್ಮ ತಮ್ಮ ಸೇರುವ ಪತ್ರದಿಂದ ... ಬ್ರದರ್ ಸಹಿ ಇಲ್ಲದ ಜನಗಳಿಗೆ ಚಂದಾ ಕೊಡಕೂಡದೆಂದು ... ಇವರು ... ಕಟ್ಟಡಗಳಿಗೋಸ್ಕರ ಚಂದಾ ಕೊಡತಕ್ಕವರು ... ದರ್ಗಾದ ಅಪ್ಪಣೆಗೆ ಚಂದಾ ಕಳುಹಿಸುತ್ತಾ ಬಂದು ಪೂರ್ಣ ಸಂತೋಷವಾಗಿ ಕೊಳ್ಳಬೇಕಾಗಿ ಅಪೇಕ್ಷಿಸುತ್ತೇವೆ. [೨ 1]

ತಾ 21 12 1914 ಶ್ರೀಬಾಬಾಬುಡನ್‌ಸ್ವಾಮಿ

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಶರೀರದ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ವ್ಯಾಧಿಯು ಶರೀರಕ್ಕೆ ರೋಗವುಂಟುಮಾಡುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ—ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು. ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಚಳಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು ಮರವು, ನಿತ್ರಾಣ, ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪಸ್ರವ ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು, ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವವು. [112 17]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವವು.



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

Printed and Published by the Rev H. Gulliford, Proprietor and Manager, Wesleyan Mission Press, Mysore 2/1/1915.

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೩೬ ಮೈಸೂರು—ಸರ್ ೧೯೧೩ ನೇ ಇಸವಿ ಜನವರಿ ತಾರೀಖು ೯ ನೇ ಗುರುವಾರ. ಸಂಚಿಕೆ ೩೨

ವಾಸಿಮಾಡಿಕೊಳ್ಳುತ್ತೇನೆಂದು ಹೇಳು "

84 1

[illegible]

ಶ್ರೀ ತಿರುಪತಿ ಚಂದನವು

[illegible]

[illegible]

[173 8]

ಕಪಿಲಾ ಕಂಪನಿ, ಚಿತ್ತೂರು, ಚಿತ್ತೂರು ಜಿಲ್ಲಾ

[illegible] ಕ್ರಯ

ರೋಕೆಟಾ ಲಿವರ್ ವಾಚು

ಕ್ರಯ 6 ಬಹುಮಾನಗಳ ಸಮೇತ 3 ರೂ ಮಾತ್ರ



[illegible]

[116 8]

ಇವರ ಬರು ಬಹುಮಾನಗಳ ವಾಪಸಿಲು

[illegible] ನಮ್ಮ ವಿಳಾಸ —

[illegible] ವೆಂಕಟರಮಣ ಅಂಡ್ ಕಂಪೆನಿ,

[illegible] ವೆಂಕಟಾಚಲೈಯರ್ ವೀದಿ ಮದ್ರಾಸು

ಡೋಂಗರೆ

ಇವರ ಬಾಲಾಮೃತ.

[115 26]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಅದು ಮಧುರ (ಸಿಹಿ) ಇದ್ದದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಬಲವಾಗಿ ಗಟ್ಟಿಯಾಗಿ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಎಲುಬುಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳು ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತು ೧೦ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಅಮೃತಾಂಜನ. (Regd)

ಇಲ್ಲಿ ವಿಶೇಷ ಲಕ್ಷ ಕೊಡಿರಿ ವಾತ, ಸಂಧಿವಾತ, ತಲೇನೋವು, ಸೊಂಟನೋವು, ಶೀತ, ಕಜ್ಜಿ, ಗಂಟಲುನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣವಾಗುವದು ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ ಬಾಟ್ಲಿ 1ಕ್ಕೆ 0-8-0

ಅರ್ಧ ಕ್ರಯಕ್ಕಿಂತಲೂ ಕಡಮೆ

[illegible]

[95-16]

ಅಮೃತಾಂಜನ ಡಿಪೋ, ಪೋಸ್ಟು ಮುಂಬಯಿ.

1913 ನೇ ಪಾಕೆಟ್ ಡೈರಿ

[illegible]

ಜಿನಿವಾ ಡೈರಿ [illegible]

6 ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಬಹುಮಾನವಾಗಿ ಕಳುಹಿಸುತ್ತೇವೆ

[illegible]

[10 1]

ನಮ್ಮ [illegible] ಕಂಪನಿ. ಬೆಂಗಳೂರು ಸಿಟಿ

ಸರ್ 1913 ನೇ ಇಸವಿಯ ಶ್ರೀ ಸೀತಾರಾಘವ ಪಾಕೆಟ್ ಡೈರಿ

ಬೇಗ ನೋಡಿ ಬೆಲೆ ಇಳಿಸಿದೆ ವಿಸ್ತಾರ ಹೆಚ್ಚಿಸಿದೆ

[illegible]

[116 19]

[illegible]

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪರಿಮಳ ನಶ್ಯದಪುಡಿ.

ತಗಡಿನ ಶೀಸೆ 1 ಕ್ಕೆ 2½ ಆಣೆ. 6 ಶೀಸೆಗಳಿಗೆ ಕಮ್ಮಿಯಾಗಿ ಕಳುಹಿಸುವುದಿಲ್ಲ. 6 ಶೀಸೆಗಳಿಗೆ ಅಂಚೆಯ ಖರ್ಚು 3 ಆಣೆ. ಈ ನಕ್ಷೆಯಲ್ಲಿ ತೋರಿಸಿರುವ 1½ ತೊಲಾ ಪರಿಮಳ ನಶ್ಯ ಹಿಡಿಯತಕ್ಕ ತಗಡಿನ ಗ್ಲಾಸು ಶೀಸೆಯನ್ನು

ಉತ್ತಮ ತಗಡಿನಿಂದ ಗಟ್ಟಿಯಾಗಿ ಬಿಗಿಸಲ್ಪಟ್ಟಿರುತ್ತೆ. ಕ್ರಯ 2½ ಆಣೆ. ವರ್ತಕರು ಸೀಸೆಗೆ 1 ಆಣೆಯಂತೆ ಬಿಕರಿ ಮಾಡಿ ಲಾಭವನ್ನು ಪಡೆಯುವದಕ್ಕೆ ಅನುಕೂಲವಾಗಿರುತ್ತೆ. ಇಷ್ಟು ಸ್ವಲ್ಪ ಕ್ರಯಕ್ಕೆ ನಮ್ಮ ಕಂಪನಿ ತಪ್ಪಿ ಮತ್ತಾವ ಕಂಪನಿಯಲ್ಲಿಯೂ ದೊರೆಯಲಾರದು. ಪ್ರತಿನಿತ್ಯವೂ ಅನೇಕ ಡಜನ್ನುಗಳು ಬಿಕರಿಯಾಗುತ್ತಿವೆ.

ಮೇಲೆ ಉದಹರಿಸಿದ ಪರಿಮಳ ನಶ್ಯದಪುಡಿಯನ್ನು ಸಾದಾ ಟಿನ್ ಡಬ್ಬಿಯಲ್ಲಿ ಹಾಕಿ ತೊಲಾ 1ಕ್ಕೆ 1 ಆಣೆಯ ಮೇರೆಗೆ ಕಳುಹಿಸುತ್ತೇವೆ. ಈ ಪರಿಮಳ ನಶ್ಯವನ್ನು ಉಪಯೋಗಿಸುವುದರಿಂದ ಪೀನಸ ಒಂಟಿತಲೆನೋವು ಕಣ್ಣಿನಲ್ಲಿ ಉಂಟಾಗುವ ಸಕಲ ವಿಧವಾದ ವ್ಯಾಧಿಗಳು ನೆಗಡಿ ಕಂಠದ ಮೇಲ್ಭಾಗದಲ್ಲಿ ಉಂಟಾಗುವ 96 ವ್ಯಾಧಿಗಳು ಮತ್ತು ಮೆದುಳಿಗೆ ಸಂಬಂಧವಾದ ವ್ಯಾಧಿಗಳನ್ನು ಹೋಗಲಾಡಿಸುವದು. ಸಾಧಾರಣ ನಶ್ಯವನ್ನು ಪದೇ ಪದೇ ಹಾಕಿಕೊಳ್ಳುವುದಕ್ಕಿಂತಲೂ ಇದನ್ನು ಒಂದಾವರ್ತಿ ಹಾಕಿಕೊಂಡರೆ ಸಾಕಾಗಿರುತ್ತೆ. ಕಾಲಾಣಿ ಸಾದಾ ನಶ್ಯದಲ್ಲಿ ಇದನ್ನು ಒಂದು ಚಿಟಿಕೆ ಬರಸಿದರೆ ಪುಡಿಯು ಎಷ್ಟೋ ಪರಿಮಳಿಸುತ್ತೆ. ಈ ಪರಿಮಳ ನಶ್ಯವನ್ನು ಎಷ್ಟು ದಿವಸಗಳು ಇಟ್ಟಾಗ್ಯೂ ಇದರ ಗುಣ ಹೋಗದು. ಮತ್ತು ಕೆಡುವದಿಲ್ಲ. ಅನೇಕ ಪ್ರಭುಗಳು ದೊಡ್ಡ ಮನುಷ್ಯರು ಇದನ್ನು ಕುಟುಂಬಪ್ರಿಯ ಎಂದು ಮನೆಯಲ್ಲಿ ಇಟ್ಟುಕೊಳ್ಳುತ್ತಾರೆ.

ಮದರಾಸು ಸಾದಾ ನಶ್ಯದ ಪುಡಿ

ಸೇರು ಅಂದರೆ 24 ರೂ. ತೂಕಕ್ಕೆ		0-11-0
ಅರ್ಧ ಸೇರು 12	,, ,,	0- 6-0
ಕಾಲು ಸೇರು 6	,, ,,	0- 3-0

ಬಹಳ ಮೇಲಾದ ಅಚ್ಚ ಕರೀ ಬಣ್ಣದ ಮಧುರೆ ಜೋನಡಿ ಅಂಚಿನ ಸೀರೆಗಳು.

ಆವಲ್ ರಪಿ ಕ್ರಯ ರೂ 2-5-0 ದುಯಂ ರಪಿ ಕ್ರಯ ರೂ. 2-3-0



ಇದರಿಂದ ವರ್ತಕರಿಗೂ, ಭಾಗ್ಯವಂತರಿಗೂ, ಬಡವರಿಗೂ ತಿಳಿಸುವುದೇನೆಂದರೆ—ನಮ್ಮಲ್ಲಿನ ಕರಿಯ ಬಣ್ಣದ ಮಧುರೆ ಜೋನಡಿ ಸೀರೆಗಳು ಉಡುವುದಕ್ಕೆ ಧಡೂತಿಯಾಗಿಯೂ, ನೋಡುವುದಕ್ಕೆ ನಯವಾಗಿಯೂ ಸರ್ವರಿಗೂ ಲಾಯಖಾಗಿಯೂ, ಕೊಳ್ಳಲು ಬೆಲೆ ಬಹಳ ಸುಲಭವಾಗಿಯೂ ತಯಾರಿಸಿದೆ. ಎಷ್ಟಾವರ್ತಿ ಒಗೆದು ಉಟ್ಟರೂ ಬಣ್ಣವು ಸ್ವಲ್ಪವೂ ಬದಲಾಯಿಸುವದಿಲ್ಲ. ಇದರ ಸೆರಗುಗಳು ಬಹು ಘನವಾಗಿವೆ. ಸೀರೆಯ ಉದ್ದವು ಧಾರಾಳವಾಗಿ 18 ಮೊಳವಿದೆ. ಪರೀಕ್ಷಾರ್ಥ ಒಂದನ್ನು ತರಿಸಿದಲ್ಲಿ ನಿಮ್ಮ ನೆರೆಹೊರೆಯುವರು ಅನೇಕ ಸೀರೆಗಳಿಗೆ ಬರೆಯುವರು.

ಇದೇ ನಿಜವಾದ ರೈಲ್ವೇ ರೆಗ್ಯುಲೇಟರೆಂಬ ಜೇಬುಗಡಿಯಾರ.

ಕ್ರಯ ರೂಪಾಯಿ 1.15.0.

ನಮ್ಮ ಕಂಪನಿಯು ಪ್ರಸಿದ್ಧಿಯಾಗುವದಕ್ಕಾಗಿ 6 ರೂಪಾಯಿನ ಈ ಗಡಿಯಾರವನ್ನು 100 ಗಡಿಯಾರಗಳು ಮುಗಿಯುವ ವರೆಗೆ ಮಾತ್ರವೇ 1-15 0 ಆಣೆಗೆ



ಕೊಡಲ್ಪಡುತ್ತೆ. ಅದೃಷ್ಟವಂತರುಗಳಲ್ಲದೆ ಮತ್ತಾರಿಗೂ ದೊರೆಯಲಾರದು. ಮೋಸವೆಂದು ತಿಳಿದು ಆಲಸ್ಯಮಾಡುವವರಿಗೆ ಇದು ನಿಜವಾಗಿ ದೊರೆಯಲಾರದು. ಮ|| ರಾ| ಪಾಲ್ ಕಂಪನಿಯವರ ಇಜ್ಜತಿಯನ್ನು ಈ ಗಡಿಯಾರದಿಂದಲೇ ತಿಳಿದುಕೊಳ್ಳಬಹುದು. ಜಾಗ್ರತೆ ದರಖಾಸ್ತು ಕಳುಹಿಸಿ. ಇದನ್ನು ರೈಲ್ ನೌಕರದಾರರುಗಳು ಧರಿಸತಕ್ಕದ್ದು. ಈ ಗಡಿಯಾರವು ರೈಲ್ವೇ ಅಧಿಕಾರಿಗಳಿಂದ ಹೆಸರುವಾಸಿಯನ್ನು ಪಡೆದಿರುತ್ತೆ. ಇದು ಇತರ ಅಲ್ಪಕ್ರಯದ ಗಡಿಯಾರಗಳ ಹಾಗಲ್ಲ. ಇದಕ್ಕೆ 5 ವರುಷಗಳ ವರೆಗೆ ನಾವು ಜವಾಬುದಾರರು. ರೈಲ್ ಹೊತ್ತಿಗೆ 1 ನಿಮಿಷ ಸಹ ವ್ಯತ್ಯಾಸವಿಲ್ಲದೆ ನಡೆಯುವದರಿಂದಲೇ ರೈಲ್ವೇ ಕಂಪನಿಯವರುಗಳು ಎಲ್ಲರೂ ಉಪಯೋಗಿಸುತ್ತಲಿದ್ದಾರೆ [13-1]

ಕೈಗುಂಡ ಔಷಧಗಳು.

ಜನವರಿ ಮಹೋತ್ಸವಕ್ಕಾಗಿ ಈ ಕೆಳಗಿನ ಔಷಧಿಗಳನ್ನು ಅರ್ಧ ಕ್ರಯಕ್ಕೆ ಕೊಡಲ್ಪಡುತ್ತೆ. ಫೆಬ್ರವರಿ ಆಖೈರ್‌ವರೆಗೆ ಮಾತ್ರವೇ.

1-ಜೀವಾಮೃತ ಡಬ್ಬಿ 1 ಕ್ಕೆ 0 7 0 ತಲೆನೋವು, ಒತ್ತಲೆನೋವು, ನೆಗಡಿ, ಚಳಕು, ಬಾವು, ಎದೆನೋವು, ಉಳುಕು ಮೊದಲಾದವುಗಳು ತಪ್ಪದೆ ಗುಣವಾಗುತ್ತೆ.

2-ಗಜಕರ್ಣಮುಲಾಮು ಡಬ್ಬಿ 1 ಕ್ಕೆ 0 7-0 ಹುಳಕಡ್ಡಿಯಿಂದ ಶ್ರಮೆಪಡುವವರಿಗೆ ಇದು ರಾಮಬಾಣ. ಮೂರು ಬಳಿತದಲ್ಲಿ ಮಾಯವಾಗುತ್ತೆ. 3-ದಂತಮಂಜನ ಡಬ್ಬಿ 1 ಕ್ಕೆ 0-3 0 ಹಲ್ಲುನೋವು, ಕೀವು ರಕ್ತ ಸೋರುವದು ಮೊದಲಾದವುಗಳು ತಪ್ಪದೆ ಗುಣವಾಗುತ್ತೆ. 4-ರೋಮಹರಿ ಡಬ್ಬಿ 1 ಕ್ಕೆ 0-6 0 ಕೂದಲು ಬೇಡದ ಸ್ಥಳಗಳಲ್ಲಿ ಈ ಪುಡಿಯನ್ನು ಲೇಪನ ಹಾಕಿದರೆ 5 ನಿಮಿಷಗಳಲ್ಲಿ ಬುಡಮಟ್ಟ ಉದರಿಹೋಗುತ್ತೆ.

ಜಿ. ಎ. ಪಾಲ್ ಅಂಡ್ ಕಂಪೆನಿ,

ನುಂಗುಂಬಾಕಂ, ಮದರಾಸು.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



ಬೆನ್ನೆಲುಬಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ರಕ್ತನೋವು, ಜಜ್ಜಾದ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ. 1

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಮೈ ಜಡಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಡೆಯುತ್ತನೆ ಇರುವುದು—ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುವೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೂಳೆಯೊಳಕ್ಕೆ ವ್ಯಾಪಿಸುವದು. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ

ಲೋಕಾಮಯಹರ ಕಸ್ತೂರೀ ಮಾತ್ರೆಗಳನ್ನು ಮರೆಯಬೇಡಿ.

ಈ ಮಾತ್ರೆಗಳ ವಿಷಯವಾಗಿ ಬಂದಿರುವ ಸಾವಿರಾರು ಯೋಗ್ಯತಾ ಪತ್ರಗಳಲ್ಲಿ ಕೆಲವನ್ನು ಮಾತ್ರ ತಮ್ಮ ನಂಬುಗೆಗಾಗಿ ಇಲ್ಲಿ ಪ್ರಕಟಿಸಿದೆ. (1) ಮ, ನರಸಯ್ಯನ ವೆಂಕಟಪ್ಪಶೆಟ್ಟರು, ಆದಕಲಗೂಡು, ಇವರು—ತಮ್ಮ ಕಸ್ತೂರೀ ಮಾತ್ರೆಗಳನ್ನು ಯಾರ್ಯಾರಿಗೆ ಕೊಟ್ಟೆನೋ ಅವರೆಲ್ಲರೂ ಬಹಳ ಗುಣಕಾರಿ ಎಂದು ಹೇಳುವುದರಿಂದ ಇನ್ನು 6 ಸೀಸೆಗಳನ್ನು ಕಳುಹಿಸಿಕೊಡಿ (2) ಟಿ ನಂಜುಂಡಯ್ಯನವರು, ಹೊಳೆನರಸೀಪುರ, ಇವರು—ಜಲ್ಲಾ ಖಾಯಿಲೆಗಳನ್ನೂ ತಮ್ಮ ಕಸ್ತೂರೀ ಮಾತ್ರೆಗಳು ಗುಣಪಡಿಸಿದ ನಾಲ್ಕು ಜನರ ಪ್ಲೇಗು ರೋಗಕ್ಕೂ ಸಂಜೀವನವಾಯಿತು ಇನ್ನೂ 12 ಸೀಸೆಗಳನ್ನು ಕಳಿಸಿ. (3) ಮ| ಬಸಲಿಂಗಯ್ಯ ಬಸಯ್ಯ ಗವಟ ರಾಲಾಮಾಸ್ತರ್, ಪೃಕ್ಕೆನೂರು, ಬಿಜಾಪುರ, ಇವರು ಯಾವ ಔಷಧಗಳಿಗೂ ಗುಣವಾಗದಿದ್ದ 1½ ವರ್ಷದ ಜ್ವರವು ತಮ್ಮ ಕಸ್ತೂರಿ ಮಾತ್ರೆಗಳಿಂದ ಸಂಪೂರ್ಣ ಗುಣವಾಗಿರುತ್ತದೆ. (4) ಮ ಎರೆಮಣಿದ ನರಸಿಂಹಶೆಟ್ಟಿಯು, ನಾಸೂರು, ಧಾರವಾಡ, ಇವರು ತಮ್ಮ ಕಸ್ತೂರಿ ಮಾತ್ರೆಗಳು ನಮ್ಮಲ್ಲರಿಗೂ ಗುಣಕರವು ಬಂದಿರುವದರಿಂದ ಪುನಃ 25 ಸೀಸೆಗಳನ್ನು ಕಳಿಸಿಕೊಡಿ (5) ಮ ಪಿ ಎಸ್ ಎ. ಸ್ವಾಮಿ, ಕೇರಾಫ್ ಎ. ಎಸ್ ಎಂ ಅಂಡ್ ಕೋ ಲಿಮಿಟೆಡ್, ರಾಮರ್‌ದ್ರುಗ್, ಬಳ್ಳಾರಿ, ಇವರು ತಮ್ಮ ಕಸ್ತೂರಿ ಮಾತ್ರೆಗಳಲ್ಲಿ ಭಗಂದರ ಮೊದಲಾದ ಅನೇಕ ಖಾಯಿಲೆಗಳನ್ನು ಹೋಗಲಾಡಿಸುವ ಗುಣವು ಅತ್ಯುತ್ತಮವಾಗಿದೆ (6) ಮ ಆರ್ ಎಲ್. ಟಾಲುಕ್‌ದರ್, ಸ್ಕೂಲ್ ಹೆಡ್ ಮಾಸ್ಟರ್, ಪಾಬ್ನ, ಬೆಂಗಾಲ್, ಇವರು ತಮ್ಮ ಕಸ್ತೂರೀ ಮಾತ್ರೆಗಳು ನಾವು ಹೇಳಿರುವ ಮೇರೆ ಅನೇಕ ಖಾಯಿಲೆಗಳನ್ನು ಗುಣಪಡಿಸಿವೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದ್ದಾರೆ. ಇನ್ನು 12 ಸೀಸೆಗಳನ್ನು ಕಳಿಸಿಕೊಡಿ [175-8]

ಕ್ರಯ 220 ಮಾತ್ರೆಯುಳ್ಳ ಸೀಸೆಗೆ 1 ಆಣೆ. 3 ಕ್ಕೆ 1 ರೂ. 1 ರಿಂದ 12 ರ ವರೆಗೆ ಟಪಾಲ್ ಖರ್ಚು 4 ಆಣೆ. ನಮ್ಮ ಹೆಸರನ್ನು ಸ್ಪಷ್ಟವಾಗಿ ಬರೆ

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪಿಟೀಲ್.

162-4

ಪೂರ್ವದ ಕ್ರಯ	ರೂ. 15-0 0
ಈಗಿನ ಅರ್ಧ ಕ್ರಯ	ರೂ. 8-8 0

ಒಂದು ತಿಂಗಳವರೆಗೆ ಮಾತ್ರ

ಇದು ನಮ್ಮ ಸ್ವಂತ ಆರ್ಡರ್ ಮೇರೆಗೆ ಸೀಮೆಯಲ್ಲಿ ತಯಾರಿಸಿ ನಮ್ಮ ವಶಕ್ಕೆ ಕಳುಹಿಸಿ ಇರುತ್ತಾರೆ. ಇದು ಸಾಧಾರಣ ಪಿಟೀಲುಗಳಂಥಾದ್ದಲ್ಲ. ಇದರ ನಾದವು ಬಹಳ ಮನೋಹರವಾಗಿದೆ. ಪಿಟೀಲು ಕಲಿಯುವವರಿಗೂ, ಪಂಡಿತರುಗಳಿಗೂ, ಸ್ತ್ರೀಯರಿಗೂ ಬಹಳ ಉಪಯೋಗವಾದದ್ದು. ಈ ತರಹದ ಮೇಕರ್ ಪಿಟೀಲನ್ನು ಉಪಯೋಗಿಸುವವರು ಬೇರೆ ಪಿಟೀಲನ್ನು ಉಪಯೋಗಿಸರು !

ವಿಳಾಸ :-

ರಾಮಸ್ವಾಮಿಮತ್ತುಕಂಪನಿ,

ನಂ|| 2, ಜೊಮ್ಮಾಳ್ಯಯನ ಬೀದಿ, ಆನೆಗವುಂಡಿ ಸಮೀಪ,

ಮದರಾಸು.

ಹಿಂದುಸ್ಥಾನದಲ್ಲಿ ಮಕ್ಕಳು

ಎವರ ಉಷ್ಣ ರಾಜ್ಯವಾದದ್ದರಿಂದ ನಾನಾ ವ್ಯಾಧಿಗಳನ್ನು ತಾಳಲು ಬೇಕಾಗಿದೆ.

ಅವರ ಸಣ್ಣತನ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಹೊಂದಿ ಬೆಳೆಯುವದಕ್ಕೆ ಅವರಿಗೆ ಒಳ್ಳೆ ಬಲವಾದ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION 2

(ಸ್ಕಾಟ್ಸ್ ಇಮಲ್ಷನ್)

ಎ ಜೀವನ ಔಷಧದಲ್ಲಿ ಮಕ್ಕಳ ನರಮತ್ತು ಅಂಗಗಳನ್ನು ಬಲಪಡಿಸುವ ಧಾತು ಉತ್ಪನ್ನವಾದ ಗುಣವಿರುತ್ತದ

ಇದಕ್ಕೆ ಸಮಾನವಾದ ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುವುದ ಒಡನೆಯೇ ಬಲದ ಗುಣ ಕಾಣುವುದು.

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತಿದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್ ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ವಿನಾಮುಹರ ಇರುವ ಈ ಔಷಧದ ಗುರುತು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

32

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಬೇರೆ ಕಡೆಗಳಿಗೆಲ್ಲಾ ಹರಡಿಕೊಂಡವು ? ಹಿಂದಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಿಗ್ಗಲ್ಲಾ ಬೀಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳು ದಾರವೆಲ್ಲಾ ನೆಟ್ಟಗೆ ವಿರಾಮಯಿಂದಲೇ ಬರುವದು. (೨) ಟೋಪಿಗಳು ಮುದ್ದಾಗಿ ನಾವೇ ಸಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹು ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೆದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿ ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಜರಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ., ೧ ರೂ. ೬ ಆ., ೧ ರೂ. ೪ ಆ.

ಚುಕ್ಕಿಯುಳ್ಳ ಟೋಪಿಗಳು ರೂ. ೧_೮; ರೂ ೧_೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨.

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ ೮ ಆ , ೧ ರೂ. ೬ ಆ.

ಮುಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕೈ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಬಿಟ್ಟಿ ಕಳುಹಿಸುವೆವು. ನಮ್ಮ ವಿಳಾಸ.—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಕುಂತಲಾನಂದ ತೈಲವು

147 10

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ನೂರು ಬಿರುದಿನ ಬಿಲ್ಲೆಗಳನ್ನು ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ, ದ್ರಾಕ್ಷಭಂಗವನ್ನು ಹಿಂದಿರುಗಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ

ಇದು ಶೀತಲವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗನ್ನು ಕೇಳಿ [illegible]

ನಮ್ಮ ವಿಳಾಸ — ಪಿ. ಎಸ್. ನಾಥ ಮತ್ತು ಕಂಪೆನಿ,

ಚಿಂತಾದ್ರಿಪೇಟೆ, ಮದರಾಸ್

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ

[illegible]

ಸಮಸ್ತರಿಗೂ ಪುಕ್ಕಟೆಯಾಗಿ ಕೊಡಲ್ಪಡುವನು!

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

[illegible] ಭಾಗ್ಯಮಯವಾದ ಅಲಂಕಾರವಾಗಿದೆ [illegible] ಮತ್ತು [illegible] ಕೇಶರಾಶಿ [illegible] ಸುಂದರಿಯರು ಆದಲ್ಲದೆ ತುರುಬನ್ನು ಯಾವ ಆಕೃತಿಯಿಂದ [illegible], ಅಂದವಾಗಿಯೂ, ಪುಷ್ಕಳವಾಗಿಯೂ ಇರಬೇಕು

“ಕಾಮಿನಿಯಾ ತೈಲವು.”

(ರಜಿಸ್ಟರ್ಡ್)

ಇದನ್ನು ತಕ್ಕಷ್ಟು ದಿನ ಕ್ರಮವಾಗಿ ಉಪಯೋಗಿಸಿದರೆ ಪುರಾತನ ಕಾಲದ ಸುಂದರಿಯರ ಕೇಶರಾಶಿಗೆ ಎಂತಹ ಮಹತ್ವ ಕೊಡಲ್ಪಟ್ಟಿದೆಯೋ ಅಂಥಾ ಮಹತ್ವಕ್ಕೆ ಉಚಿತವಾದ ಕೂದಲುಗಳು [illegible] ಪ್ರದಲ್ಲಿಯೇ ಬೆಳೆಯುವವು

ಕಾಮಿನಿಯಾ ತೈಲ

ಇದು, ಕೂದಲುಗಳನ್ನು [illegible] ಮತ್ತು ಆಕೃತಿಯುಳ್ಳ, ಕೂದಲುಗಳು [illegible] ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು ಇದರಿಂದ ಕೂದಲುಗಳು [illegible] ಸೊಂಪಾಗುತ್ತವೆ [illegible] ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಬಹುದು

ಕಾಮಿನಿಯಾ ತೈಲದಿಂದ ಕೂದಲುಗಳು ನಿಪುಣವಾಗುತ್ತವೆ, ನಯವಾಗುತ್ತವೆ, ಚಕಚಕಿಸುತ್ತವೆ, ಮತ್ತು ನವಿರಾಗಿ [illegible] ಆಗಾಗ ಮುರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತವೆ

ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-4 0 ಬೇರೆ ಕೊಡಬೇಕು

3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

[illegible] ಒಂದು ಅಭಿಪ್ರಾಯ ಚೀಟನ್ನು ಕಳುಹಿಸಿ

ಕಾಮಿನಿಯಾ ತೈಲದ ಕುರಿತು ಹಲವು ಮಹನೀಯರು ಕಳುಹಿಸಿದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು —

"8711 ಮಿ ವಿ ಬಿ ಮಾದವಸಿಂಗ್, ರುಕ್ಮಿಣಿವಿಲಾಸ, ಮನ್ನಾರಗುಡಿ— ಬರೆಯುತ್ತಾರೆ "ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿ [illegible] ಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ ಮತ್ತು ಇದಕ್ಕೆ ಸಮಾನವಾದ ಹೇರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು

1711 ಮಿ [illegible] ನಾಯುಡು [illegible] ನನ್ನ [illegible] ಕಾಮಿನಿಯಾ ತೈಲವನ್ನು [illegible] ವಿಶೇಷ ಪ್ರಶಂಸೆಯನ್ನು ಮಾಡುವದರ [illegible] ಗಳನ್ನು [illegible] ಮೂಲಕ ರವಾನಿಸಬೇಕು.

ಸುಗಂಧದ್ರವ್ಯಗಳು

ಗುಲ್-ಷಾನ್ (ರಿಜಿಡ್)—ಗುಲಾಬಿ ಅತ್ತರುಗಳೆಲ್ಲಾ ಇದೇ [illegible] ಶ್ರೇಷ್ಠವಾದದ್ದು ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾಪ್ರವೀಣರ ಪಂಡಿತರು [illegible] ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮವಾದ ಸುವಾಸನೆಯನ್ನುಳ್ಳದ್ದು ಕ್ರಯ ಡ್ರಾಂ ಸೀಸೆಗೆ ರೂ 1 8 0

ದಿಲ್-ಬಹಾರ್ (ರಿಜಿಡ್)—ಅತ್ಯಂತ ಅಪೂರ್ವವಾದ ಜಾತಿ [illegible] ಗಳಿಂದ ತಯಾರಿಸಿದ ಅಮೋಘವಾದ ಸುಗಂಧ ಡ್ರಾಂ ಸೀಸೆಗೆ ರೂ 1 8 0

"ಕಾಮಿನಿಯಾ ಸುಗಂಧ"—ರೂ 1 1 0, "ಕಾಮಿನಿಯಾ [illegible]" ರೂ 1

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲೀಷಿನಲ್ಲೇ ಬರೆಯಬೇಕು

ವಿಳಾಸ — [9 4]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಮಾರಾಟಕ್ಕೆ ಸಿದ್ಧವಾಗಿದೆ.

ಒಂದು ಒಳ್ಳೇ ರಿಕ್ಷಾ ಎಂಬ ಕೈ ಗಾಡಿ, ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ವಿಚಾರಿಸಿದರೆ ಗೊತ್ತಾಗುತ್ತದೆ [188-6]

ಕನ್ನಡ ಪುಸ್ತಕಗಳು

ಕಥೆಗಳು—ಭಾರ್ಗವ ಚಾಣಕ್ಯ 6ಆ ಅನಂಗಸುಂದರಿ 8ಆ ತಾರಾಸುಂದರಿ 8ಆ ಪೋಷಿನಿ 12ಆ ಕುಮುದಿನಿ 6ಆ ಸತ್ಯರೋಹಿಣಿ 2ಆ ಭಾನುಮತಿ 2ಆ ಸಂತಾಪಕ 1ಆ ಕಳಾವತಿ 2ಆ ಮಾಲತೀಮಧುಕರ 3ಆ ವಸುಮತಿ 2ಆ ಪದ್ಮಿನಿ 3ಆ ಚಂದ್ರಮತಿ 6ಆ ನಕಲಿಗಳು—ಪ್ರಹಸನ ಚತುಷ್ಟಯ 4ಆ ಪ್ರಹಸನತರಂಗ 1ಆ ಮಹಾರಣ್ಯಪುರಾಧಿಪತ್ಯ 1ಆ ಮಹಾಧಿಕಾರಪ್ರಹಸನ 4ಆ ಇವೇ ಅಲ್ಲದೆ ಇನ್ನೂ ಅನೇಕ ನಾಟಕಗಳು ನಮ್ಮಲ್ಲಿ ದೊರೆಯುವವು

[187 6] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಪ್ರಸಿದ್ಧಪತ್ರಿಕೆ

ಶ್ರೀ ರಾಘವ ಹಾರ್ಮೋನಿಯಂ ಶಾಲಾ, ಯಲಹಂಕಾ ಗೇಟ್, ಬೆಂಗಳೂರು ಸಿಟಿ ಈ ಸ್ಥಳದಲ್ಲಿ ಮನೋಹರವಾದ ಹಿಂದೂಸ್ಥಾನಿ, ಪಾರ್ಸಿ, ಮರಾಠಿ,



ಗುಜರಾತಿ ಮತ್ತು ಕನ್ನಡ ಹಾಡುಗಾರಿಕೆಯನ್ನು ಹಾರ್ಮೋನಿಯಂನಲ್ಲಿ ನೂತನವಾಗಿಯೂ ರಸಭರಿತವಾಗಿಯೂ ಮತ್ತು ಮನಸ್ಸಿಗೆ ಗ್ರಾಹ್ಯವಾಗುವಂತೆಯೂ ಪಾಠ ಹೇಳಿಕೊಡಲ್ಪಡುತ್ತೆ ಮತ್ತು ಪ್ರತ್ಯೇಕವಾಗಿ ನಮ್ಮ ಮನೆಗಳಲ್ಲಿ ಪಾಠ ಹೇಳಿಸಿಕೊಳ್ಳತಕ್ಕವರಿಗೆ ಅವರವರ ಟೈಂ ಪ್ರಕಾರ ಹೇಳಿಕೊಡಲ್ಪಡುತ್ತೆ ಮತ್ತು ಮೊದಲಿಂದ ಸಹ [illegible] ಗ್ಯಾರಂಟಿಯುಳ್ಳ ಹೊಸ ಹ್ಯಾಂಡ್ ಹಾರ್ಮೋನಿಯಂಗಳು ಕ್ರಯಕ್ಕೆ ದೊರೆಯುತ್ತವೆ ಅಲ್ಲದೆ ನಾಟಕ ಕಂಪನಿಯವರಿಗೆ ಉಪಯೋಗವಾಗುವ [illegible] ಹಾರ್ಮೋನಿಯಂ ಬೇಕಾಗಿದ್ದರೂ ಸಿದ್ಧವಾದ ಮತ್ತು [illegible] ಸುಲಭವಾದ ಕಮೀಷನ್ ದರದ ಮೇಲೆ ಮಾಲ್ [illegible] ಟೈಂ ಪ್ರಕಾರ ತರಿಸಿಕೊಡಲ್ಪಡುತ್ತೆ ಮತ್ತು ಎಲ್ಲಾ [illegible] ಗಳನ್ನು [illegible] ರಿಪೇರಿ ಮಾಡಿಕೊಡಲ್ಪಡುತ್ತೆ ಹೆಚ್ಚು ಸಂಗತಿ ತಿಳಿಯಲಪೇಕ್ಷೆಯುಳ್ಳವರು ಮೊದಲಿಂದ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು [176 1]

[illegible] ಅರ್ಧಾಣೆ ಸ್ಟಾಂಪನ್ನು ಕಳುಹಿಸಿ ನಮ್ಮ ವಿವರವಾದ ಕ್ಯಾಟಲಾಗನ್ನು ಪಡೆಯಬಹುದು

ಒಳ್ಳೆ ಸಮಯ [illegible] ಸಾಗಿಸುವ ಸಾಮಾನ್ಯ ಕೊಡತಿ ಬರೆಯಿರಿ

(1) ಸಕ್ಕರೆಯುಳ್ಳ [illegible] ರೆಗ್ಯುಲೇಟರ್ ಲಿವರ್ ಗಡಿಯಾರವನ್ನು [illegible] ತರಿಸುವವರಿಗೆ ಸಾಟೀನ್ ಪೆಟ್ಟಿಗೆ ಸಹ ರೂ 2 ಕ್ಕೆ ಕಳುಹಿಸುತ್ತೇವೆ [illegible]



ಗಡಿಯಾರವನ್ನು [illegible], ಉತ್ತರ ಮುಖ ಸರಪಣಿ ಮತ್ತು [illegible] 3 ಗ್ಯಾರಂಟಿ ವರ್ಷ ರೂ 1 6 0 ಅಂಚೆ ಹಾಸಲು 8 ಆಣೆ (2) ಎಂಟು ದಿವಸಗಳಿಗೊಂದಾವರ್ತಿ ಕೀ ಕೊಡುವ [illegible] ಗಡಿಯಾರ ರೂ 8 (3) ಕೈಗೆ ಕಟ್ಟಿಕೊಳ್ಳುವ [illegible] ಬೆಳ್ಳಿಯ ಗಡಿಯಾರ ರೂ 5 1 0 ಎಕ್ಸಲಿಸರ್ ರೂ 1 0 1 (4) ಕ್ಲಾಕರ್ ಸಂಗೀತ ಹಾಡುವ ಟೈಮ್‌ಪೀಸ್ ಗಡಿಯಾರ ರೂ 1 1 0 [illegible] ಹೊಡೆಯುವುದು ರೂ 1 8 0 ಅಲ್ಲದೆ [illegible] ರೂ 2 8 0 ಸಾದಾ [illegible] ರೂ 2 [illegible] ರೂ 1 1 0 (5) ಎಂಟು ದಿವಸಗಳಿಗೆ ಕೀ ಕೊಡುವ ಗಂಟೆ ಹೊಡೆಯುವ [illegible] ಗೋಡೆಗೆ ತಗಲಿಸುವ ಗಡಿಯಾರ ರೂ 7 0 0 (6) ಮಧುರವಾದ [illegible] ಚಿನ್ನದ ಮದ್ರಾಸ್ ಸೀಸೆ ರೂ 2 6 0 ಅಸಲ್ ಮದ್ಯ [illegible] ರೂ 3 1 0 (7) ಕುಸುಮಕಾಂತಿ ತೈಲವು ಉತ್ತಮವಾದ [illegible] ಕುಸುಮಗಳಿಂದಲೂ ತಯಾರಿಸಿದ್ದರಿಂದ ಕೂದಲುಗಳನ್ನು [illegible] ಕಪ್ಪಾಗಿಯೂ [illegible] ತಂಪನ್ನುಂಟುಮಾಡುತ್ತೆ ಕ್ರಯ ಸೀಸೆ 1 ಕ್ಕೆ 5 ಆಣೆ [illegible] 1 2, 1 ನೆಯ ನಂಬರ್ ಗಡಿಯ ರಗಳನ್ನು ಗ್ರಾಹಕರು [illegible] ಕೊಡಲ್ಪಡುತ್ತೆ [12 21]

ನಮ್ಮ ವಿಳಾಸ —[illegible] ಕಂಪನಿ,

ಹೈ ರೋಡ್, ವೇಪೇರಿ, ಮದ್ರಾಸು

ಶ್ರೀಮನ್ನೃಸಿಂಹ ಪ್ರಯೋಗಪಾರಿಜಾತಾನುಸಾರಿ ಆಶ್ವಲಾಯನ ಪೂರ್ವಾಪ್ರಯೋಗ ಸಸ್ವರ ಮಂತ್ರಸಹಿತ

ಮೈಸೂರು [illegible] ಗುರುವಿನ ಮಕ್ಕಳು [illegible] ಪ್ರಕಟಿಸಲ್ಪಟ್ಟ ಮೊದಲಿಂದ ಅಪರೂಪವಾದ ಗ್ರಂಥವನ್ನು [illegible] ಶ್ರೀಶ್ರೀಯವರೂ, ರಾಜಗುರುಗಳಾದ [illegible] ಮೈಸೂರು [illegible] ಯವರನ್ನು ದಯಮಾಡಿಸಿ [illegible] ಮಹಾ ವಿದ್ವಾಂಸರೂ [illegible] ಮಾಡಿರುತ್ತಾರೆ ಬೆಲೆ ರೂಪಾಯಿ 2 0 0

ಸನಾತನ ಸೂಕ್ಷ್ಮಧರ್ಮ — ಬಾಲಕ ಬಾಲಕಿಯರಿಗೆ ಅತಿ ಮುಖ್ಯವಾದದ್ದು ಬೆಲೆ 3 ಆಣೆ [illegible] ರೂ 1 8 0

ಪತ್ರರತ್ನಾಕರ — ಇದು ಮೈಸೂರು ಕ್ರಿಮಿನಲ್ ಕೋರ್ಟು ವಕೀಲರಾಗಿದ್ದ [illegible] ವೆಂಕಟರಾಯರಿಂದ ರಚಿಸಲ್ಪಟ್ಟು ಎಲ್ಲಾ ಪತ್ರಗಳ ನಮೂನೆಗಳಿಂದ ಕೂಡಿದ 1 8 ವಿಷಯಗಳಿಂದ ಅಡಕವಾಗಿದೆ ಬೆಲೆ 10 ಆಣೆ

ಲೇಖ್ಯತತ್ವಪ್ರಕಾಶಿಕೆ — [illegible] ದಲೀ ರಚಿಸಲ್ಪಟ್ಟು ಎಲ್ಲಾ ಎಸ್ಟೇಟ್ [illegible] ನಮೂನೆಗಳಿಂದ ಕೂಡಿದ 72 ವಿಷಯಗಳಿಂದ ಅಡಕವಾಗಿದೆ ಬೆಲೆ 6 ಆಣೆ [illegible] ರೂ 1 1 0 [illegible] 1 4 0

ಆರೋಗ್ಯಪ್ರಶ್ನೋತ್ತರ — [illegible] ವಿದ್ಯಾರ್ಥಿಗಳಿಗೆ ಆವಶ್ಯಕವಾದದ್ದು ಬೆಲೆ 1 ಆಣೆ [7 2]

"ಶಾಂತಿರತ್ನಾಕರ" — ಮಾಸಪತ್ರಿಕೆ ಎಲ್ಲಾ ವಿಧ ಶಾಂತಿಯೂ ಇದೆ ಬೆಂಗಳೂರು ಸ್ಥಳದವರಿಗೆ ರೂ 2 ಪರಸ್ಥಳದವರಿಗೆ ರೂ 2-8 0

ವಿಳಾಸ — ಎಚ್ ವೆಂಕಟರಾಮಯ್ಯ ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

29—11—1912 ರಿಂದ 6—12—1912 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	20	18	0	0
ಮೈಸೂರು ,,	3	9	0	0
ಬೆಂಗಳೂರು ಡಿಸ್ಟ್ರಿಕ್ಟು	19	15	0	0
ಮೈಸೂರು ,,	20	10	0	0
ಕೋಲಾರ್ ,,	0	0	0	5
ಕೋಲಾರ್ ಚಿನ್ನದ ಗಣಿಗಳು	24	15	0	0
ತುಮಕೂರು ಡಿಸ್ಟ್ರಿಕ್ಟು	1	2	60	32
ಹಾಸನ ,,	4	5	0	0
ಚಿತ್ರದುರ್ಗ ,,	0	0	15	18
ಕಡೂರ್ ,,	5	5	0	1
ಶಿವಮೊಗ್ಗ ,,	6	7	0	7
ಜುಮ್ಲಾ	104	77	80	63

ಕಾಲಿವಾಹನ ಶಕ ವರುಷಗಳು 1835 ನೇ ಪರೀಧಾವಿ ಸಂವತ್ಸರೇ ದಕ್ಷಿಣಾಯನೇ ಹೇಮಂತಋತೌ ಪುಷ್ಯ ಶುದ್ಧ ತದಿಗೆ ಶುಕ್ರವಾರದಿಂದ ಪುಷ್ಯ ಶುದ್ಧ ನವಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಧನು, ಮಕರ ತೇದಿ
10	ಶುಕ್ರ	ತದಿಗೆ	34 21	ಧನಿಷ್ಠ	51 23	27
11	ಶನಿ †	ಚೌತಿ	39 38	ಶತಭಿಷ	57-56	28
12	ಭಾನು	ಪಂಚಮಿ	46 11	ಪೂಭಾ	60-0	29
13	ಸೋಮ ¶	ಷಷ್ಠಿ	50 18	ಪೂಭಾ	3 58	1
14	ಮಂಗಳ §	ಸಪ್ತಮಿ	53 12	ಉತ್ತಾ	9 17	2
15	ಬುಧ	ಅಷ್ಟಮಿ	55-46	ರೇವತಿ	13 10	3
16	ಗುರು °	ನವಮಿ	56 30	ಅಶ್ವಿನಿ	16 53	4

ಮಳೆ ನಕ್ಷತ್ರ—ಉತ್ತರಾಷಾಢ 1 ನೇ ಪಾದ † ದೊಡ್ಡಗಣಪತಿ ವ್ರತ ¶ ತುಲಸಂಕ್ರಮಣ, ಉತ್ತರಾಯಣಪುಣ್ಯಕಾಲ, ಸಮಾರಾಧನೆ, ಶಿವಗಂಗಾ ಗಂಗೋತ್ಪತ್ತಿ, ಮಳೆ ನಕ್ಷತ್ರ—ಉತ್ತರಾಷಾಢ 2 ನೇ ಪಾದ § ಕನೂಹಬ್ಬ, ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ರಥ, ತುಂಬೆಸಕಟ್ಟೆ ರಾಮಸ್ವಾಮಿ ರಥ ° ಉಡುಪಿ ಕೃಷ್ಣೋತ್ಸವ ° ಮಳೆ ನಕ್ಷತ್ರ—ಉತ್ತರಾಷಾಢ 3 ನೇ ಪಾದ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ (ಮೊದಲು) ರೂ	೧೩ ೦ ೦	೧೭ ೮ ೦
ಕೆಂಪು ಅಕ್ಕಿ ಅವಲ್ ,,	೧೩ ೮ ೦	೧೭ ೮-೦
,, ಮಧ್ಯಮ	೧೨ ೧೨ ೦	೧೭ ೦-೦
ಬೆಳ್ತಿಗೆ ಅಕ್ಕಿ	೧೨ ೧೨ ೦	೧೭ ೬ ೦
ಸಣ್ಣಕ್ಕಿ ಅವಲ ,,	೧೪-೮ ೦	೧೮ ೮-೦
,, ಮಧ್ಯಮ ,,	೧೧ ೦ ೦	೧೭ ೮ ೦
ತೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ	೧೨ ೮ ೦	೧೩ ೮-೦
,, ಮಧ್ಯಮ ,,	೧೨ ೦	೧೨ ೮ ೦
ತೊಗರಿ ಪಲ್ಲಾ ೧ಕ್ಕೆ	೮ ೮ ೦	೫ ೦-೦
ಕಾಡ್ಲಾಗಿ ,,	೭ ೮ ೦	೪-೧೨ ೦
ಜೋಳ ,,	೬ ೧೨ ೦	೭ ೪ ೦
ಹುರುಳಿ ಪಲ್ಲಾ ೧ಕ್ಕೆ	೧೦ ೮ ೦	೧೩ ೧೨ ೦
ಬಿಳಿ ಅವರೆ ,,	೯ ೮ ೦	೧೧-೦ ೦
ಹೆಸರು ,,	೧೮ ೮ ೦	೧೬-೦ ೦
ಉದ್ದು ,,	೧೩ ೮ ೦	೧೬ ೮ ೦
ಕಡಲೆ ,,	೧೨ ೦ ೦	೧೨ ೦ ೦
ಎಳ್ಳು ಸೇರು ೧೨೭ಕ್ಕೆ	೨೪ ೦ ೦	೨೬ ೦ ೦
ಹುರುಳಿ ಪಲ್ಲಾ ೧ಕ್ಕೆ	೯ ೬ ೦	೭ ೦ ೦
ಹರಳು ೧೨೭ ಸೇರಿಗೆ	೧೨ ೯ ೦	೧೧ ೦ ೦
ತೆಂಗಿನಕಾಯಿ ಮಣ ೧ಕ್ಕೆ	೩ ೮ ೦	೩ ೫ ೦
ಮೆಣಸಿನಕಾಯಿ ,,	೩ ೦ ೦	೩ ೪-೦
,, ಮಧ್ಯಮ	೨ ೮ ೦	೧ ೫ ೦
ಚಿಲ್ಲರೆ ದೊಡ್ಡ ಅಚ್ಚು ೧೦೦ಕ್ಕೆ	೪ ೦ ೦	ಮಣ ೫ ೪ ೦
ಒಳ್ಳೆಣ್ಣೆ ಮಣ ೧ಕ್ಕೆ	೬ ೨ ೦	೬ ೬ ೦
ಹರಳೆಣ್ಣೆ ,, ,,	೧ ೦	೬ ೦ ೦
ಕೊತ್ತುಂಬರಿ ಪಲ್ಲಾ ೧ಕ್ಕೆ	೮ ೦	೭ ೪ ೦
ಉಪ್ಪು ,, ,,	೮ ೦	೬ ೧ ೦
ಹುಣಿಸೆ ಹಣ್ಣು ಮಣ ೧ಕ್ಕೆ	೧ ೮ ೦	೧ ೪ ೦
,, ಮಧ್ಯಮ ,,	೧ ೦ ೦	೦ ೧೦ ೦
ಹುಷ್ಪ ಮಣ ೧ಕ್ಕೆ	೧೦ ೮ ೮	೧೯ ೦ ೦
ಸೀಮೆಹಿಟ್ಟು ಚೀಟು ೧ಕ್ಕೆ	೫ ೨ ೦	೫ ೦ ೦
ತೆಂಗಿನಕಾಯಿ ೧೦೦ಕ್ಕೆ	೬ ೮ ೦	೬ ೦ ೦
ಅಡಿಕೆಕಾಯಿ ಮಣ ೧ಕ್ಕೆ	೧ ೬ ೦	೧ ೯ ೦
ಅಲ್ಯೂಮಿನಿಯಂ ಮಣ ೧ಕ್ಕೆ	೩-೧೨ ೮	೧ ೮ ೦
ಚಿನ್ನ (ಪವನ್) ತೊಲ	೧೫ ೮ ೦	೧೫ ೮ ೦
,, ,, ಪಸಿಮ	೧೬ ೧೫-೬	೧೫ ೧೫-೬
,, ,, ಗಟ್ಟಿ ತೊಲ ೧ಕ್ಕೆ	೨ ೩ ೦	೨೬ ೩ ೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೧ ೦	೬೯ ೧ ೦

50,000
ರೂಪಾಯಿ ಬಹುಮಾನ

11 I

ಕಳೆದ 1912 ನೆಯ ಇಸವಿ ಡಿಸೆಂಬರ್ ತಾ 23 ರಲ್ಲಿ ದೆಹಲಿ ಪಟ್ಟಣದ ಚಾಂದನಿಚೌಕದಲ್ಲಿ ಭರತಖಂಡದ ವೈಸ್ ರಾಯರಾದ ಘನತೆಯನ್ನು ಹೊಂದಿದ ಲಾರ್ಡ್ ಹಾರ್ಡಿಂಗ್ ಪ್ರಭುಗಳ ಮೇಲೆ ಸಿಡಿಮದ್ದನ್ನು ಎಸೆದ ಅಪರಾಧಿ ಅಥವಾ ಅಪರಾಧಿಗಳ ದಸ್ತಗಿರಿಯ ಬಗ್ಗೆ ಅನುಕೂಲಿಸುವ ಸುದ್ದಿಯನ್ನು ಕೊಡತಕ್ಕವರಿಗೆ 50,000 ರೂಪಾಯಿಗಳ ಬಹುಮಾನವು ಕೊಡಲಾಗುವುದೆಂದು ಈ ಮೂಲಕ ಪ್ರಸಿದ್ಧಪಡಿಸಿದೆ. ಪೊಲೀಸ್ ವಿಚಾರಣೆಗೆ ಅನುಕೂಲಿಸುವ ಅಥವಾ ಮೇಲೆ ಕಂಡ ಸಿಡಿಮದ್ದನ್ನು ತಯಾರಿಸಿದ ಜನರನ್ನಾಗಲಿ ಅಥವಾ ಮೇಲೆ ಕಂಡ ದುಷ್ಕೃತ್ಯದಲ್ಲಿ ಯಾವ ವಿಧದಿಂದಲಾದರೂ ಭಾಗಿಗಳಾದ ಜನರನ್ನಾಗಲಿ ಗೊತ್ತುಮಾಡಲವಕಾಶವನ್ನುಂಟುಮಾಡುವ ಸುದ್ದಿಯನ್ನು ತಿಳಿಸತಕ್ಕವರಿಗೆ ಉದಾರವಾದ ಬಹುಮಾನಗಳು ಕೊಡಲ್ಪಡುವವು.

(ಸ್ಸೈನ್) ಡಿ. ಪೆಟ್ರಿ,

ತಾ 30-12 1912 ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ದೆಹಲಿ.

ವೃತ್ತಾಂತ ಪತ್ರಿಕೆ

ಸನ್ ೧೯೧೩ ನೇ ಇಸವಿ ಜನವರಿ ತಾ ೯ ನೇ ಗುರುವಾರ

ವಾರ್ಷಿಕ ಸಂಘಗಳೂ ಸಮಾಜಗಳೂ

ಹಳೇ ವರುಷದ ಕಡೆಯಲ್ಲೂ ಹೊಸ ವರುಷದ ಪ್ರಾರಂಭದಲ್ಲೂ ಕ್ರಿಸ್ಮಸ್ ಹಬ್ಬದ ನಿಮಿತ್ತ ದೊರಕುವ ರಜಾ ದಿನಗಳಲ್ಲಿ ಜನಗಳು ತಮ್ಮ ತಮ್ಮ ಜಾತಿ ಕುಲಾಚಾರಗಳ ಸಭೆಗಳಿಗೂ, ಇತರ ವಿಶೇಷ ಸಮಾಜಗಳಿಗೂ ಹೋಗಿ ಸೇರುವುದುಂಟು. ಕಳೆದ ಹದಿನೈದು ದಿನಗಳೊಳಗೆ ಈ ರಾಷ್ಟ್ರದ ನಾನಾ ಭಾಗಗಳಲ್ಲಿ ನಡೆದಿರುವಂಥಾ ಅನೇಕ ಸಭೆಗಳನ್ನೂ ಕೂಟಗಳನ್ನೂ ಸಮಾಜಗಳನ್ನೂ ವಿವರಿಸಿ ತಿಳಿಸುವುದು ಸುಲಭಸಾಧ್ಯವಲ್ಲ. ಕೆಲವು ಸಭೆಗಳು ರಾಜಕೀಯ ವಿಚಾರಗಳನ್ನೂ, ಕೆಲವು ಸಾಮಾಜಿಕ ವಿಚಾರಗಳನ್ನೂ ಕುರಿತು ಪರ್ಯಾಲೋಚಿಸಿದವು, ಮತವಿಚಾರವಾದ ಸಭೆಗಳು ಬಹಳವಾಗಿ ಜರುಗಿದವು. ಅವುಗಳನ್ನೆಲ್ಲಾ ನೋಡುವಲ್ಲಿ ಹಿಂದುಸ್ಥಾನವು ಸುಮಾರಾಗಿ ಈಗೀಗ ಎಚ್ಚರಗೊಂಡು ಪ್ರಕೃತವಿಷಯಗಳನ್ನು ಹಿಡಿದು ಚರ್ಚೆಮಾಡಲಾರಂಭಿಸಿರುವುದೆಂದು ಗೊತ್ತಾಗುತ್ತದೆ.

ಬಂಕಿಪುರದಲ್ಲಿ ನಾಷನಲ್ ಮಹಾಸಭೆಯು ನಡೆಯಿತು, ಆದರೆ ಈ ಸಭೆಯಲ್ಲಿ ಪ್ರಜಾಪ್ರತಿನಿಧಿಗಳ ಸಂಖ್ಯೆಯು ಎಂದಿಗಿಂತಲೂ ಬಹಳ ಕಡಮೆಯಾಗಿತ್ತು. ಅಲ್ಲಿ ನಡೆಯುವ ವಿದ್ಯಮಾನವನ್ನು ನೋಡುವುದಕ್ಕೆ ಅನೇಕರು ಹೋಗಿದ್ದರು. ಆದರೆ ಸಭೆಯಲ್ಲಿ ಚರ್ಚಿಸಲ್ಪಟ್ಟ ವಿಷಯಗಳು ಅಷ್ಟೇನೂ ಪ್ರಾಮುಖ್ಯವಾಗಿರಲಿಲ್ಲ. ಈ ಮಹಾ ಸಭೆಯನ್ನು ಹಿಂದುಸ್ಥಾನದಲ್ಲೆಲ್ಲಾ ವಿಶೇಷ ಗಣ್ಯವಾದದ್ದನ್ನಾಗಿ ಮಾಡಿಟ್ಟುಕೊಳ್ಳಬೇಕೆಂದು ದೇಶೀಯ ದೊಡ್ಡ ಮನುಷ್ಯರು ಸಾಹಸಪಟ್ಟು ಚರ್ಚೆಗಳನ್ನು ನಡೆಸುತ್ತಿದ್ದಾರೆ. ಹಿಂದುಸ್ಥಾನದ ಯೋಗಕ್ಷೇಮವನ್ನು ಕುರಿತು ಪರ್ಯಾಲೋಚಿಸುವ ಭಾಗದಲ್ಲಿ ಈ ಮಹಾ ಸಭೆಯು ದೇಶೀಯ ವಿದ್ಯಾವಂತರಲ್ಲಿ ಕೆಲವು ಮಟ್ಟಿಗೆ ಉತ್ಸಾಹವನ್ನೂ ಅಭಿಮಾನವನ್ನೂ ಉಂಟುಮಾಡಿರುತ್ತದೆಂದು ಹೇಳಬಹುದು. ಈಗಲಾದರೋ ಅಧಿಪತ್ಯಗಳ ಮಂತ್ರಾಲೋಚನಾ ಸಭೆಗಳಲ್ಲಿ ಮೆಂಬರುಗಳ ಸಂಖ್ಯೆಯು ಹೆಚ್ಚಿಸಲ್ಪಟ್ಟಿರೋಣದರಿಂದ ಅಲ್ಲಲ್ಲಿರುವ ಪ್ರಮುಖ ದೊಡ್ಡ ಮನುಷ್ಯರು ಆಯಾ ಅಧಿಪತ್ಯಕ್ಕೆ ಸಂಬಂಧಪಡುವ ವಿಚಾರಗಳನ್ನು ಕುರಿತು ಚಿಂತಿಸುವುದರಲ್ಲಿ ಆಸಕ್ತರಾಗಿರುವರು. ಆದರೂ ಸಾಮಾನ್ಯವಾಗಿ ಹಿಂದುಸ್ಥಾನದಲ್ಲೆಲ್ಲಾ ಇರತಕ್ಕ ಸಮಸ್ತ ಸ್ತ್ರೀಪುರುಷರನ್ನೂ ವಿದ್ಯಾವಂತರನ್ನಾಗಿ ಮಾಡುವುದಕ್ಕೋಸ್ಕರ ಈ ಸಾರ್ವಜನಿಕ ಸಭೆಯು ಇದ್ದೇ ಇರಬೇಕೆಂದು ನಮಗೆ ತೋರುತ್ತದೆ. ಹಿಂದುಸ್ಥಾನವು ಏಕವಾದ ಅಭಿಮತವನ್ನು ತಿಳಿಸುವುದಕ್ಕೆ ಅರ್ಹವಾದದ್ದಾಗಬೇಕು, ಹಲವು ವಿಧವಾದ ಅಭಿಮತಗಳನ್ನು ಹೊರಪಡಿಸುವಂಥಾ ಭಿನ್ನಭಾಗಗಳುಂಟಾದರೆ ಅದರಿಂದ ಕ್ಷೇಮವೆನಿಸುವ ಹಿತವಾಗಲಾರದು. ಮದರಾಸಿಗಳಲ್ಲೂ ಬಂಗಾಳಿಗಳಲ್ಲೂ ಪಂಜಾಬಿಗಳಲ್ಲೂ ಅನೇಕ ವಿಚಾರಗಳಲ್ಲಿ ಪ್ರಬಲವಾದ ಪರಸ್ಪರ ಭಿನ್ನಭೇದಗಳಿದ್ದಾಗ್ಯೂ ಎಲ್ಲರಿಗೂ ಭರತಖಂಡವೆಂಬ ತಮ್ಮ ಜನ್ಮಭೂಮಿಯ ಮೇಲೆ ಏಕವೂ ಅಚಂಚಲವೂ ಆದ ಪ್ರೀತಿಯು ಉಂಟಾಗಬೇಕು. ಆದಕಾರಣ ಈ ಸಾರ್ವಜನಿಕ ಸಭೆಯು ಈ ವಿಚಾರವನ್ನು ಮರೆಯದೆ ಕ್ರಮಪಟ್ಟು ಈ ರಾಷ್ಟ್ರದಲ್ಲಿ ಶಾಶ್ವತವಾಗಿ ಗಣ್ಯತೆಯನ್ನು ಹೊಂದುವಂತೆ ರೂಪಿಸಲ್ಪಡಲೆಂದು ಹಾರೈಸುತ್ತೇವೆ.

ಮತವಿಚಾರವನ್ನೂ ಸಂಘ ಪರಿಷ್ಕರಣವನ್ನೂ ಕುರಿತ ಸಭೆಗಳು ಈ ರಾಷ್ಟ್ರದ ಅನೇಕ ಭಾಗಗಳಲ್ಲಿ ನಡೆದವು. ಆಯಾ ವಿಚಾರಗಳಲ್ಲಿ ಅಭಿಮಾನಶಾಲಿಗಳಾದ ವಿದ್ಯಾವಂತರೂ ಪಂಡಿತರೂ ದೀರ್ಘವಾದ ಉಪನ್ಯಾಸಗಳನ್ನು ಮಾಡಿ ಬಗೆಬಗೆಯ ಶೀರ್ಮಾನಗಳನ್ನು ಮಾಡಿಕೊಂಡರು. ಆದರೂ ಅಂಥವರು ತಮ್ಮ ಅಭಿಮತವನ್ನು ಸರ್ವಸಮ್ಮತವಾಗುವಂತೆ ಮಾಡಲು ಸಾಹಸಪಟ್ಟದ್ದು ಎಷ್ಟುಮಟ್ಟಿಗೆ ಸಾರ್ಥಕವಾಯಿತೋ ನಾವು ಹೇಳಲಾರೆವು. ನಾನಾ ಹೇಳುವುದನ್ನು ಕಾರ್ಯದಲ್ಲಿ ನಡದು ತೋರಿಸುವುದಕ್ಕೆ ಸಿದ್ಧರಾಗಿರುವಂಥಾ ದೃಢಸಂಕಲ್ಪವುಳ್ಳ ಸ್ತ್ರೀಪುರುಷರು ಹಿಂದುಸ್ಥಾನದಲ್ಲಿ ಸದ್ಯ ಕಂಡುಬರುವುದಿಲ್ಲ. ಇಂಥವರು ಬರುವ ತನಕ ಈ ರಾಷ್ಟ್ರವು ಅಭಿವೃದ್ಧಿಯಾಗಲಾರದು. ಈಗ ಸಭೆಗಳಲ್ಲಿ ನಿಂತು ನಾನಾ ಅಭಿಮತಗಳನ್ನು ಬಹು ಸ್ವಾರಸ್ಯವಾಗಿಯೂ ವಿಶೇಷ ವಾಚಾಳಕತ್ವದಿಂದಲೂ ಹೊರಪಡಿಸುವಂಥವರು ಆ ರೀತಿ ತಮ್ಮ ಮನೆಗಳಲ್ಲೂ ತಮ್ಮ ನಿತ್ಯ ಕಾರ್ಯಗಳಲ್ಲೂ ಅನುಸರಿಸಿ ನಡೆದು ತೋರಿಸುತ್ತಾ ಬರುವವರಾದರೆ ಹಿಂದುಸ್ಥಾನವು ಬಹು ಬೇಗ ಅಭಿವೃದ್ಧಿ ಹೊಂದೀತು. ಬಾಲ್ಯವಿವಾಹಗಳು ನಿಂತು ಹೋಗುವವು, ಪುರುಷನಂತೆ ಸ್ತ್ರೀಯೂ ಇಷ್ಟಪಟ್ಟರೆ ಪುನರ್ವಿವಾಹ ಮಾಡಿಕೊಳ್ಳುವಳು, ಸುರಾಪಾನವು ನಿಲ್ಲುವುದು, ಸಚ್ಚರಿತ್ರೆಯು ನೆಲೆಗೊಳ್ಳುವುದು, ಸಮಸ್ತ ಸ್ತ್ರೀಪುರುಷರೂ ಸತ್ಯವಂತರಾಗಿಯೂ, ಸಚ್ಚರಿತ್ರರಾಗಿಯೂ ಆದಾರು. ಆಡುವ ಮಾತಿಗೂ ನಡೆಯುವ ನಡತೆಗೂ ಎಷ್ಟೋ ವ್ಯತ್ಯಾಸವಿರೋಣದರಿಂದ ಈ ರಾಷ್ಟ್ರದ ಶ್ರೇಯೋಭಿವೃದ್ಧಿಯು ನಿಧಾನಕ್ಕೆ ಬಿದ್ದಿದೆ.

ದಕ್ಷಿಣ ದೇಶಕ್ಕೆ ಸೇರಿದ ತಿರುವಾಡಿಯಲ್ಲಿ ನಡೆದ ಪಂಡಿತರ ಪರಿಷತ್ತು ಈಗಿನ ಕಾಲಕ್ಕೆ ಬಹು ವಿಶೇಷವಾದ ಸಭೆಯೆಂದು ಹೇಳಬಹುದು. ಇಂಥಾ ಪರಿಷತ್ತಿನಲ್ಲಿ ಹಿಂದುಸ್ಥಾನದ ಸ್ಥಿತಿಗತಿಗಳು ಯಾವ ರೀತಿ ಬದಲಾವಣೆ ಹೊಂದುತ್ತಿರುವವೋ, ಸಮಯಾನುಸಾರ ಪ್ರಜೆಗಳು ಯಾವ ರೀತಿ ತಮ್ಮ ನಡವಳಿಗಳನ್ನು ರೂಪಿಸಿಕೊಳ್ಳಬೇಕೋ ವೈದಿಕ ವಿದ್ಯಾಸಂಪನ್ನರಾದ ಪಂಡಿತರೋತ್ತಮರಿಗೆ ವೇದ್ಯವಾಗುವಂತೆ ಮಾಡಲು ಅವಕಾಶವಾಗುತ್ತದೆ. ಈ ಉದ್ದೇಶ ಕಾರ್ಯವು ಸಾರ್ಥಕವಾದ ಪಕ್ಷದಲ್ಲಿ ಸಮಯಾಚಾರ ಪರಿಷ್ಕರಣವು ಸುಲಭ ಸಾಧ್ಯವಾಗುವುದು. ವಿದ್ಯಾವಂತರಾದವರು ಅವಿವೇಕವಾದ ಮತ್ತೂ ಕೇಡುಕಾರಿಯಾದ ಅನೇಕ ಪ್ರಾಚೀನ ಆಚಾರ ವ್ಯವಹಾರಗಳನ್ನು ಅನುವರ್ತಿಸಲು ಎಂದಿಗೂ ಸಮ್ಮತಿಸುವುದೂ ಇಲ್ಲ, ಸಮ್ಮತಿಸಲೂ ಬಾರದು. ವೈದಿಕ ಪಂಡಿತರು ವಿಪರೀತವಾಗಿ ಹೋಗದಿದ್ದಲ್ಲಿ ಅವರು ಜನರನ್ನು ಬಿಟ್ಟು ಪ್ರತ್ಯೇಕರಾಗುತ್ತಾರೆ. ಈ ಸಂದರ್ಭದಲ್ಲೂ ಕೂಡ ವಾಚಾ ಚರ್ಚಿಸಿದಂತೆ ಕಾರ್ಯತಃ ನಡೆಯುವುದಾಗಬೇಕೆಂದು ಹಾರೈಸುತ್ತೇವೆ, ಇಲ್ಲವಾದರೆ ಇಂಥಾ ಪರಿಷತ್ತುಗಳಿಂದ ಯಾವದೊಂದು ಫಲಪರಿಣಾಮವೂ ಲಭ್ಯವಾಗಲಾರದು.

ಏಕಮತ್ಯ ಅಥವಾ ಅನ್ಯೋನ್ಯ

-1-

ಲೋಕದಲ್ಲಿರುವ ಸಕಲ ಆಸ್ತಿಕಮತಗಳು ದೇವರಿಗೆ ಪ್ರಾರ್ಥನೆ ಮಾಡಬೇಕೆಂತ ನಿರ್ಧರಿಸುತ್ತವೆ. ವೇದಗಳ ಕಾಲದ ಋಷಿಗಳು ತಮಗೆ ತಕ್ಕ ಕಾಲದಲ್ಲಿ ಮಳೆಗಳನ್ನೂ ದನಕರುಗಳನ್ನೂ ಪುತ್ರರನ್ನೂ ಕೊಡಬೇಕೆಂತ ದೇವತೆಗಳನ್ನು ಪ್ರಾರ್ಥಿಸುತ್ತಿದ್ದರೆಂದು ವೇದಗಳಲ್ಲಿ ನಮೂದಿಸಲ್ಪಟ್ಟಿದೆ. ಈ ಕಾಲದಲ್ಲಿಯೂ ಹಿಂದು, ಮಹಮ್ಮದಿ, ಕ್ರೈಸ್ತ, ಮುಂತಾದ ಮತಗಳು ದೇವರ ಪ್ರಾರ್ಥನೆ ಮಾಡುವ ಕರ್ತವ್ಯವನ್ನು ಬೋಧಿಸುತ್ತವೆ.

ಆದರೆ ನಾವು ಪ್ರಾರ್ಥನೆ ಮಾಡುವದು ಯಾತಕ್ಕೆ? ಮತವೂ ಅದನ್ನು ಸ್ಥಾಪನೆಮಾಡಿದವರೂ ಇಂತಿಂತಹ ಕಾರ್ಯಗಳನ್ನು ಮಾಡಬೇಕೆಂತ ವಿಧಿಸಿದರೂ ನಾವು ಅವುಗಳನ್ನು ಮಾಡುವದಕ್ಕೆ ತಕ್ಕ ಕಾರಣಗಳನ್ನು ತಿಳಿಯಬೇಕಷ್ಟೆ. ಬುದ್ಧಿಯುಳ್ಳ ಮನುಷ್ಯರಾಗಿ ನಾವು ಇರುವದರಿಂದ ಬೊಂಬೆಗಳ ಹಾಗೆ ನಾವು ಯುಕ್ತಾಯುಕ್ತಗಳನ್ನು ವಿಚಾರಿಸದೆ ಯಾವ ಕಾರ್ಯವನ್ನೂ ಮಾಡಬಾರದು. ಮೃಗಗಳ ಹಾಗೆ ಕಾರಣ ತಿಳಿಯದೆ ಪದ್ಧತಿಯ ಮೇರೆಗೆ ಕಾರ್ಯಗಳನ್ನು ಮಾಡುವದುಂಟು. ಆದರೆ ಮನುಷ್ಯನು ಬುದ್ಧಿಯನ್ನು ಪ್ರಯೋಗಿಸಿ ಕಾರ್ಯಕಾರಣಗಳನ್ನು ತಿಳಿದು ಬಲ್ಲವನಾದುದರಿಂದ ಒಂದು ಕಾರ್ಯವನ್ನು ಆರಂಭಿಸುವದಕ್ಕಿಂತ ಮುಂಚೆ ಅದಕ್ಕೆ ತಕ್ಕ ಕಾರಣವನ್ನು ತಿಳಿಯಬೇಕು. ತಿಳಿದರೆ ಆ ಕಾರ್ಯವನ್ನು ಸಾಧಿಸುವದಕ್ಕೆ ತಕ್ಕ ಪ್ರೋತ್ಸಾಹವು ಅವನಿಗೆ ಇರುತ್ತದೆ. ಕಷ್ಟನಷ್ಟಗಳು ಪ್ರಾಪ್ತಿಸಿದರೂ ಅವುಗಳಿಗೆ ಹೆದರಿ ಹಿಮ್ಮೆಟ್ಟದೆ ಕಾರ್ಯವನ್ನು ಮುಂದರಿಸುವನು. ಹಾಗಾದರೆ ನಾವು ಯಾಕೆ ಪ್ರಾರ್ಥನೆ ಮಾಡಬೇಕು? ಪ್ರತಿ ಮನುಷ್ಯನಿಗೂ ನಿತ್ಯವೂ ಬೆಳಗಿನಿಂದ ಸಂಜೆಯವರೆಗೂ ಮಾಡಿ ಮುಗಿಸಬೇಕಾದ ಅನೇಕ ಕೆಲಸಗಳುಂಟು.

ಹೀಗಿರುವಲ್ಲಿ ಅವನು ತನ್ನ ಕೆಲಸಗಳನ್ನು ಬಿಟ್ಟು ದೇವರಿಗೆ ಪ್ರಾರ್ಥನೆಮಾಡುವದರಲ್ಲಿ ಕಾಲವನ್ನು ವ್ಯಯಮಾಡಬಹುದೇ? ಪ್ರಾರ್ಥನೆ ಮಾಡುವದಕ್ಕೂ ದೇವರನ್ನು ಸೇವಿಸುವದಕ್ಕೂ ವ್ಯಯಮಾಡಿದ ಕಾಲವು ವ್ಯರ್ಥವಾಗಿ ಹೋಗಲಾಡಿಸಲ್ಪಟ್ಟ ಹಾಗೆ ತೋರುವದಿಲ್ಲವೇ? ಪ್ರಾರ್ಥನೆ ಮಾಡುವದಕ್ಕೆ ತಕ್ಕ ಕಾರಣವು ಇಲ್ಲದೆ ಇದ್ದರೆ ಅಥವಾ ಪ್ರಾರ್ಥನೆಯಿಂದ ನಮಗೆ ಯಾವ ಪ್ರಯೋಜನವೂ ಲಭವಾಗದಿದ್ದರೆ ಪ್ರಾರ್ಥನೆ ಮಾಡುವದರಲ್ಲಿ ವ್ಯಯಮಾಡಿದ ಕಾಲವು ವ್ಯರ್ಥವೆಂದೇ ಹೇಳಬೇಕಾಗಿರುವದು. ಕೆಲವರು ಇದನ್ನು ಕುರಿತು—ಓಹೋ! ನಾವು ದೇವರನ್ನು ಪ್ರಾರ್ಥಿಸಬೇಡವೆ? ಆತನಿಂದ ನಮಗೆ ಅನೇಕ ವರಗಳು ಬರಬೇಕಾಗಿದೆ. ಮಳೆ, ಬೆಳೆ, ಆರೋಗ್ಯ, ದನಕರುಗಳು, ಮುಂತಾದ ಸಕಲ ವರಗಳೂ ಆತನಿಂದಲೇ ನಮಗೆ ಬರುತ್ತವೆ. ಆದ್ದರಿಂದ ನಾವು ಆತನನ್ನು ಪ್ರಾರ್ಥನೆಮಾಡುವದು ಅತ್ಯಗತ್ಯವಾಗಿದೆ ಅನ್ನುತ್ತಾರೆ. ಈ ವರಗಳೂ, ಇವಕ್ಕಿಂತ ಅತ್ಯಮೂಲ್ಯವಾದ ಅನೇಕ ವರಗಳೂ ದೇವರಿಂದ ನಮಗೆ ಬರುತ್ತವೆಂದು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ನಾವು ಪ್ರಾರ್ಥನೆ ಮಾಡದೇ ಈ ವರಗಳನ್ನು ಆತನು ನಮಗೆ ಕೊಡಲಾರನೇ? ಈ ವರಗಳೆಲ್ಲಾ ನಮಗೆ ಬೇಕೆಂತ ಆತನಿಗೆ ತಿಳಿಯುವದು. ನಾವು ಒಬ್ಬ ಅಧಿಕಾರಿಯಿಂದ ಒಂದು ಪ್ರಯೋಜನವನ್ನು ಹೊಂದಬೇಕಾದರೆ ನಾವು ಆತನ ಬಳಿಗೆ ಹೋಗಿ—ನಮಗೆ ಇಂತಿಂತಹ ಸಹಾಯಗಳು ನಿಮ್ಮಿಂದ ಆಗಬೇಕೆಂದು ಕೇಳುವದು ಯುಕ್ತವಾಗಿದೆ. ಯಾಕೆಂದರೆ ಆ ಅಧಿಕಾರಿಯು ನಮ್ಮ ಹಾಗೆಯೇ ನರಮನುಷ್ಯನಾಗಿರುವದರಿಂದ ನಮ್ಮ ಮನೋರಥವೇನೆಂದು ಗ್ರಹಿಸಲಾರನು. ಆದರೆ ದೇವರು ಹಾಗಲ್ಲವಷ್ಟೆ. ಆತನು ನಮ್ಮ ಸಕಲ ಮನೋಗತಗಳನ್ನೂ ತಿಳಿಯತಕ್ಕ ಸರ್ವಾಂತರ್ಯಾಮಿ. ನಾವು ನಮ್ಮ ಪ್ರಾರ್ಥನೆಗಳನ್ನು ಹೇಳುವದಕ್ಕೆ ಮುಂಚೆಯೇ ಮತ್ತೂ ನಮ್ಮಲ್ಲಿ ಅವು ಅಂಕುರಿಸುವದಕ್ಕಿಂತ ಮುಂಚೆಯೇ ಆತನಿಗೆ ವೇದ್ಯವಾಗಿರುವಲ್ಲಿ ನಾವು ಆತನಿಗೇನೂ ತಿಳಿಸಬೇಕಾದ ಅಗತ್ಯವಿರುವದಿಲ್ಲ. ಅಥವಾ ಕೆಲವು ಅಧಿಕಾರಿಗಳು ಕಾಠಿಣ್ಯಹೃದಯರಾಗಿರುವದರಿಂದ ನಾವು ಅವರ ಬಳಿಗೆ ಹೋಗಿ ಅವರ ಮುಂದೆ ಕೇವಲ ದೈನ್ಯಸ್ವರದಿಂದ ಬೇಡಿ, ಕಾಡಿ, ನಮ್ಮ ಅಭೀಷ್ಟಗಳನ್ನು ಪೂರೈಸಿಕೊಳ್ಳಬೇಕಾಗುವದು. ಆದರೆ ದೇವರ ಮನಸ್ಸನ್ನು ನಾವು ಬದಲಾಯಿಸುವದಕ್ಕಾದೀತೇ? ಆತನು ಅಚಂಚಲನು, ಆತನ ನೀತಿ ನ್ಯಾಯಗಳು ಎಂದೂ ಬದಲಾಗದೆ ಸ್ಥಿರವಾಗಿರುವವು. ಅಥವಾ ಕೆಲವರು ಜನಸ್ತೋತ್ರಕ್ಕೆ ಬೆರಗಾಗಿ ಉಬ್ಬಿಕೊಂಡು ನಾವು ಕೇಳಿದ್ದನ್ನು ಕೊಡುವದುಂಟು. ದೇವರು ಹಾಗೆ ಸ್ತೋತ್ರಪ್ರಿಯನೆಂತಲೂ ನಮ್ಮ ಸ್ತೋತ್ರವನ್ನು ಕೇಳಿ ಹಿಗ್ಗಿ ನಮಗೆ ಉಪಕಾರಗಳನ್ನು ಮಾಡ್ಯಾನೆಂತಲೂ ಭಾವಿಸುವದು ಕೇವಲ ತಪ್ಪು. ಹಾಗಾದರೆ ನಾವು ಪ್ರಾರ್ಥನೆಮಾಡುವದು ಯಾತಕ್ಕೆ?

ಒಬ್ಬ ಹುಡುಗನು ತನ್ನ ತಂದೆಯಿಂದ ಬೇಡಿ, ಕಾಡಿ, ಅಥವಾ ಸ್ತೋತ್ರಮಾಡಿ ಆತನ ಸಹಾಯವನ್ನು ಪಡೆಯುತ್ತಾನೆಂದು ಭಾವಿಸೋಣ. ಆ ಹುಡುಗನು ಬುದ್ಧಿವಂತನಾಗಿಯೂ ಕರ್ತವ್ಯಜ್ಞಾನವುಳ್ಳವನಾಗಿಯೂ ಸಜ್ಜನನಾಗಿಯೂ ಇರುವವನಾದರೆ ಆ ವರಗಳು ತನ್ನ ತಂದೆಯಿಂದ ಸಿಕ್ಕಿದ ಮಾತ್ರಕ್ಕೇ ತೃಪ್ತಿಹೊಂದುವನೇ? ಆ ವರಗಳು ಹಿರಿದೋ? ಅಥವಾ ಆ ವರಗಳನ್ನು ಕೊಟ್ಟ ತಂದೆಯೋ? ತಂದೆಯೇ ಹೆಚ್ಚಲ್ಲವೇ? ತಂದೆಯ ಪ್ರೀತಿಯೂ, ತಂದೆಮಕ್ಕಳಿಗಿರುವ ಅನ್ಯೋನ್ಯವೂ ಬಿಟ್ಟು ಹೊರತು ಆ ವರಗಳು ಹೆಚ್ಚಲ್ಲವಷ್ಟೆ. ತಂದೆಯನ್ನು ಒಂದು ಕಡೆಯೂ, ತಂದೆ ಕೊಡುವ ವರಗಳ ಮೊತ್ತವನ್ನು ಇನ್ನೊಂದು ಕಡೆಯೂ ಇಟ್ಟು ಇವೆರಡರಲ್ಲಿ ನಿನಗೆ ಯಾವದು ಬೇಕು? ಆರಿಸಿ ತೆಗೆದುಕೋ ಎಂದು ಹೇಳಿದರೆ ಬುದ್ಧಿವಂತನಾದ ಮಗನು ಯಾವದನ್ನು ಆರಿಸಿಕೊಳ್ಳುವನು? ತಂದೆಯೋ, ನನಗೆ ನೀನೇ ಬೇಕು ಎಂದು ಆಲಿಂಗಿಸಿಕೊಳ್ಳುವನಲ್ಲವೆ? ದೇವರು ನಮ್ಮ ಪರಮತಂದೆಯಾಗಿದ್ದಾನೆ. ನಮಗೆ ಆತನಾದರೆ ಸಕಲವೂ ಬರುತ್ತದೆ. ಆತನಿಲ್ಲದೆ ನಾವು ಒಂದು ಕ್ಷಣವೂ ಇರಲಾರೆವು. ಆದರೂ ಆತನು ನಮಗೆ ಕರುಣಿಸುತ್ತಿರುವ ಸಕಲ ವರಗಳಿಗಿಂತ ಆತನೇ ನಮಗೆ ಪ್ರಿಯನು. ಆತನೇ ನಮಗೆ ಬೇಕು. ಆತನಲ್ಲದೆ ಆತನ ವರಗಳೆಲ್ಲವೂ ನಮಗೆ ಸಿಕ್ಕಿದರೂ ಅವು ನಮಗೆ ಬೇಡವೇ ಬೇಡ. ಆತನು ನಮಗೆ ಲಭ್ಯವಾದಲ್ಲಿ ಇತರ ವರಗಳು ನಮಗೆ ಸಿಕ್ಕದ್ದರ ಚಿಂತೆಯಿಲ್ಲ. ದೇವರನ್ನು ಹೊಂದಿಕೊಳ್ಳುವದಕ್ಕೋಸ್ಕರವಾಗಿಯೇ ನಾವು ಆತನ ಬಳಿಗೆ ಹೋಗಿ—ನಮ್ಮ ತಂದೆಯೇ, ನಮಗೆ ನಿನ್ನನ್ನೇ ಕೊಡು. ನಿನ್ನ ಸಂಗದ ಅನ್ಯೋನ್ಯವೂ ಅನುರಾಗವೂ ನಮಗಿದ್ದರೆ ಅದೇ ನಮಗೆ ಸಾಕು ಎಂದು ನಾವು ಆತನಿಗೆ ಹೇಳಬೇಕು. ದೇವರಿಗೆ ಅರ್ಪಿಸುವದಕ್ಕೆ ಯೋಗ್ಯವಾದ ಪ್ರಾರ್ಥನೆ ಇದೇ. ಒಬ್ಬ ಪರಮಭಕ್ತನು ದೇವರನ್ನು ತನ್ನ ಪುತ್ರನಾದ ನಚಿಕೇತನ ಯಿಂದ ಮುಕ್ತಿಯ ವಿಷಯದಲ್ಲಿ ದೇವರು ಅವನಿಗೆ ಪ್ರತ್ಯಕ್ಷನಾಗಿ—ನನ್ನ ಭಕ್ತನೇ, ನಿನ್ನನ್ನು ನಾನು ಮೆಚ್ಚಿದ್ದೇನೆ, ನಿನಗೆ ಏನು ಬೇಕು ಬೇಡಿಕೋ ಕೊಡುತ್ತೇನೆ ಎಂದು ಹೇಳಿದರಂತೆ. ಆಗ ಆ ಭಕ್ತನು—ನನ್ನ ತಂದೆಯೇ, ನನಗೆ ನಿನಗಿಂತಲೂ ಪ್ರಿಯನಾದವನು ಇನ್ನಾವನೂ ಇಲ್ಲ. ನೀನು ನನಗೆ ಬೇಕು. ನಿನ್ನನ್ನೇ ನನಗೆ ಕೊಡು, ಅಥವಾ ನನ್ನನ್ನು ನಿನ್ನ ಸೊತ್ತಾಗಿ ಸ್ವೀಕರಿಸಿ ನನ್ನನ್ನು ತೃಪ್ತಿಗೊಳಿಸು ಎಂದು ಹೇಳಿದನಂತೆ. ಔಗುಸ್ತೀನ್ ಎಂಬ ಮಹಾ ಬೋಧಕನು—ಸ್ವಾಮಿಯೇ, ನೀನು ನಿನಗೋಸ್ಕರವೇ ನಮ್ಮನ್ನು ಸೃಷ್ಟಿಸಿಕೊಂಡಿದ್ದೀ. ಆದ್ದರಿಂದ ನಾವು ನಿನ್ನನ್ನು ಹೊಂದುವ ತನಕ ನಮ್ಮ ಹೃದಯಗಳು ಸಂತೃಪ್ತವಾಗವು, ನಿನಗಾಗಿಯೇ ತವಕಪಡುತ್ತಿವೆ ಎಂದು ಹೇಳಿದನು. ನಾವು ದೇವರ ಪ್ರಾರ್ಥನೆಮಾಡುವಾಗ ಇದೊಂದೇ ಅಭಿಲಾಷೆಯಿರಬೇಕು. ಆತನ ಮುಂದೆ ಅದನ್ನೇ ಹೇಳಬೇಕು. ಇದೇ ಜೀವನ್ಮುಕ್ತಿ. ಇದೇ ಪರಲೋಕಸುಖ.

ದಿವಾನರವರಿಗೆ ಅಡ್ರೆಸ್ಸು ಒಪ್ಪಿಸಿದ್ದು

ಪಶ್ಚಿಮ ಬಂಗಳೂರಿನ ಪ್ರಜೆಗಳು ಮೈಸೂರು ರಾಜಧಾನಿಯ ಪ್ರಜೆಗಳು ವಿಶ್ವೇಶ್ವರಯ್ಯನವರಿಗೆ ದಿವಾನಗಿರಿ ಅದಷ್ಟಕ್ಕಾಗಿ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಅವರಿಗೆ ಒಂದು ಅಡ್ರೆಸ್ಸನ್ನು ಒಪ್ಪಿಸಿದರು. ಆ ದಿನ ಸೇರಿದ್ದ ಸಭೆಯೂ, ಈ ಉತ್ಸವದ ಕಾರ್ಯಗಳೂ ಅತಿ ಜನರಂಜಕವಾಗಿಯೂ ಸರ್ವಶ್ಲಾಘ್ಯವಾಗಿಯೂ ವಿಶೇಷ ಮೈಮೆಯಿಂದಲೂ ಜರುಗಿದ್ದು ಹಿಂದೆ ನೋಡಿದ್ದಿಲ್ಲ. ಅಡ್ರೆಸ್ಸನ್ನು ದಿವ್ಯವಾದ ಚಿತ್ರಕೆಲಸಮಾಡಿದ ಬೆಳ್ಳಿ ಕ್ಯಾಸ್ಕೆಟ್ಟಿನಲ್ಲಿಟ್ಟು ಒಪ್ಪಿಸಿದರು. ಈ ಸತ್ಕಾರ ಕಾರ್ಯವು ಅತ್ಯಂತ ಉತ್ಸಾಹಕರವಾಗಿ ಜರುಗಿತು.

ಪ್ರಜೆಗಳು ಒಪ್ಪಿಸಿದ ಅಡ್ರೆಸ್ಸು

ಸ್ವಾಮಿ,—ನಮ್ಮನ್ನಾಳುವ ಮಹಾಸ್ವಾಮಿಯವರು ತಮಗೆ ಮೈಸೂರು ಸಂಸ್ಥಾನದ ದಿವಾನ್ ಪದವಿಯನ್ನು ವಹಿಸಿರುವುದರಿಂದ ನಮ್ಮೆಲ್ಲರಿಗೆ ಉಂಟಾದ ತಕ್ಕ ಸಂತೋಷಾತಿಶಯವನ್ನು ಈ ಮೂಲಕ ನಿವೇದಿಸಿಕೊಳ್ಳುವುದಕ್ಕೆ ನಮ್ಮ ಅನುಜ್ಞೆಯನ್ನು ಬೇಡುತ್ತೇವೆ—ತಾವು ನಮ್ಮ ದೇಶೀಯರು ಮತ್ತು ನಮ್ಮ ಸಂಸ್ಥಾನದಲ್ಲಿಯೇ ವಿದ್ಯಾಭ್ಯಾಸಂಗಮಾಡಿ ಬೊಂಬಾಯಿ ಯೂನಿವರ್ಸಿಟಿಯ ಇಂಜಿನಿಯರ್ ಪರೀಕ್ಷೆಯಲ್ಲಿ ಅತ್ಯುತ್ತಮನಾಗಿ ತೇರ್ಗಡೆಯನ್ನು ಹೊಂದಿ, ಆ ಸಂಸ್ಥಾನದಲ್ಲಿಯೇ ಇರ್ರಿಗೇಷನ್, ಸ್ಯಾನಿಟೇಷನ್ ಮೊದಲಾದ ಕೆಲಸಗಳಲ್ಲಿ ಅಸಾಧ್ಯವಾದ ಸಾಮರ್ಥ್ಯವನ್ನು ತೋರಿಸಿ ಅಸಾಧಾರಣವಾದ ಕೀರ್ತಿಯನ್ನು ಪಡೆದಿರುತ್ತೀರಿ—ಇಂಗ್ಲೆಂಡ್, ಅಮೆರಿಕ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ಸಂಚಾರಮಾಡಿ ಅಲ್ಲಲ್ಲಿರತಕ್ಕ ಅನೇಕ ವಿಧವಾದ ಕೈಗಾರಿಕೆಯೇ ಮೊದಲಾದ ದೇಶಾಭ್ಯುದಯಕ್ಕೆ ಸಾಧಕವಾದ ವಿಷಯಗಳನ್ನು ತಿಳಿದುಕೊಂಡು ಬಂದು ತಮ್ಮ ಜನ್ಮಭೂಮಿಯಾದ ಈ ಮೈಸೂರು ಸಂಸ್ಥಾನಕ್ಕೆ ಚೀಫ್ ಇಂಜಿನಿಯರಾಗಿ ದಯಮಾಡಿಸಿದಿರಿ. ಅದಾಗಲೇ ಈ ಮೂರು ಸಂವತ್ಸರಗಳಿಂದ ತಾವು ವರ್ಷಿಸುವ ಶ್ರೀ ಬರಾವಷ್ಟು ಈ ಸಂಸ್ಥಾನದಲ್ಲಿ ಪದೇ ಪದೇ ಅನಾವೃಷ್ಟಿಯಿಂದುಂಟಾಗುತ್ತಿದ್ದ ದುರ್ಭಿಕ್ಷನಿವಾರಣೆ ನಿವಾರಣೆಗೋಸ್ಕರ ಕನ್ನಂಬಾಡಿ ಕಟ್ಟೆ ಆಣೆಕಟ್ಟಿನ ಕೆಲಸ, ನಾಲೆ ಎಡಪಾಲೆ, ಕೆರೆ, ಟ್ರಾಂವೇ ಮೊದಲಾದ ಅನೇಕ ಪ್ರಜೋಪಯೋಗವಾದ ಮತ್ತು ಶ್ಲಾಘನೀಯವಾದ ಕೆಲಸಗಳಿಗೆ ಉಪಕ್ರಮಿಸಿದ್ದೀರಿ. ತಾವು ಇಲ್ಲಿಗೆ ದಯಮಾಡಿದ ಬಳಿಕ ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದೂರ್ ಜಿ ಸಿ ಎಸ್ ಐ ಯವರು ಸ್ಥಾಪಿಸಿದ ಎಕನಾಮಿಕ್ ಕಾನ್ಫರೆನ್ಸಿನ ಸಹಾಯದ ಕೈಗಾರಿಕೆ ಮತ್ತು ವ್ಯಾಪಾರದ ಕಮಿಟಿಯ ಅಧ್ಯಕ್ಷರಾಗಿ ನಿಂತು, ಈ ಸಂಸ್ಥಾನದಲ್ಲಿ ಹಿಂದುಳಿದಿರುವ ಕೈಗಾರಿಕೆ ಮತ್ತು ವ್ಯಾಪಾರದ ಕಸಬುಗಳೇ ಮೊದಲಾದವುಗಳನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ತಾವು ಇದುವರೆಗೆ ತೋರಿಸಿರುವ ಆಸಕ್ತಿ ಮತ್ತು ಪ್ರೋತ್ಸಾಹಗಳಿಂದ ಸಂತುಷ್ಟರಾಗಿದ್ದೇವೆ—ತಮ್ಮಲ್ಲಿರತಕ್ಕ ರಾಜಭಕ್ತಿ, ಪ್ರಜಾನುರಾಗ ಮತ್ತೂ ವಿವೇಕಪೂರ್ವಕವಾಗಿ ಕೆಲಸಗಳಲ್ಲಿ ತೋರಿಸಿರುವ ಚಟುವಟಿಕೆಯೇ ಮೊದಲಾದ ಸದ್ಗುಣಗಳನ್ನು ಪರಾಂಬರಿಸಿ ನಮ್ಮನ್ನಾಳುವ ಮಹಾಸ್ವಾಮಿಯವರು ತಮ್ಮನ್ನು ಈ ಸಂಸ್ಥಾನಕ್ಕೆ ದಿವಾನರನ್ನಾಗಿ ನೇಮಿಸಿರುವರು—ತಮ್ಮ ಅಧಿಕಾರದಲ್ಲಿ ಇಲ್ಲಿನ ಪ್ರಜೆಗಳಿಗಿರತಕ್ಕ ವ್ಯಾಪಾರ, ಕೈಗಾರಿಕೆ ಮತ್ತು ವ್ಯವಸಾಯ, ಇವುಗಳಲ್ಲಿನ ಕೊರತೆಗಳನ್ನು ಪರಿಹರಿಸಿ, ಎಲ್ಲಾ ಭಾಗಗಳಲ್ಲಿಯೂ ಈ ಸಂಸ್ಥಾನದ ಪ್ರಜೆಗಳೇ ಮುಂದಾಳಾಗುವಂತೆಯೂ, ಐಶ್ವರ್ಯವಂತರಾಗುವಂತೆಯೂ ಮಾಡುತ್ತೀರೆಂತಲೂ, ನಮ್ಮನ್ನಾಳುವ ಮಹಾಸ್ವಾಮಿಯವರಿಗೆ ಸಂತೋಷವನ್ನುಂಟುಮಾಡಿ ಅನನ್ಯಸಾಧಾರಣವಾದ ಕೀರ್ತಿಗೆ ಪಾತ್ರರಾಗುತ್ತೀರೆಂತಲೂ ನಾವುಗಳು ದೃಢವಾಗಿ ನಂಬಿರುತ್ತೇವೆ—ತಮಗೆ ದೀರ್ಘಾಯುಸ್ಸನ್ನೂ ಆರೋಗ್ಯವನ್ನೂ ದಯಪಾಲಿಸಿ, ಮೇಲೆ ಹೇಳಿರುವ ನಮ್ಮಗಳ ಕೋರಿಕೆಗಳನ್ನು ನೆರವೇರಿಸಲು ಜಗದೀಶ್ವರನು ಅನುಗ್ರಹಿಸಲೆಂದು ನಾವು ಪ್ರಾರ್ಥಿಸುತ್ತೇವೆ ಸ್ವಾಮಿ.

ದಿವಾನರವರ ಪ್ರತ್ಯುತ್ತರ

ಮಹಾಶಯರೇ, ಈ ನಗರದಲ್ಲಿ ನನಗೆ ಪೂರ್ವದಿಂದಲೂ ಕೆಲವರು ಸ್ನೇಹಿತರಿರುವರು. ಆದರೆ ಪುರವಾಸಿಗಳಲ್ಲಿ ವಿಶೇಷ ಪರಿಚಯವೂ ಇಲ್ಲ, ಇದುವರೆಗೆ ಯಾವ ದೊಡ್ಡ ಕೆಲಸವನ್ನಾಗಲಿ ಅವರೊಡನೆ ಸೇರಿ ನಡಿಸುವ ಸಮಯವೂ ಬಂದಿಲ್ಲ. ಹೀಗಿರುವಲ್ಲಿ ತಾವುಗಳು ನನ್ನಲ್ಲಿ ವಿಶ್ವಾಸವನ್ನಿಟ್ಟು ಈ ಅಭಿನಂದನ ಪತ್ರಿಕೆಯನ್ನು ಒಪ್ಪಿಸಿದ್ದಕ್ಕಾಗಿ ನಾನು ಬಹಳ ಕೃತಜ್ಞನಾಗಿರುತ್ತೇನೆ—ತಾವುಗಳು ಅಭಿನಂದನಪತ್ರಿಕೆಯನ್ನು ಕನ್ನಡದಲ್ಲಿ ಒಪ್ಪಿಸಿರುತ್ತೀರಿ. ಮಧ್ಯೆ 28 ವರ್ಷಗಳು ಕನ್ನಡ ನುಡಿಯನ್ನೇ ಕೇಳದೆ ಹಲವು ಇತರ ಭಾಷೆಗಳ ಅಭ್ಯಾಸದಲ್ಲಿ ನನ್ನ ಕಾಲವನ್ನು ಕಳೆಯಬೇಕಾಗಿ ಬಂದದ್ದರಿಂದ ಅಚ್ಚಕನ್ನಡದ ಪ್ರಶಂಸೆಯೇ ನನಗೆ ಅ

...ಸುತು ಈ ರೀತಿ ನನಗೆ ಕನ್ನಡಭಾಷೆಯಲ್ಲಿ ವಿಶೇಷ ರೂಢಿಯಿಲ್ಲದಿದ್ದರೂ ...ಕೆರಿಸುವ ಮಹಾಜನರೆಲ್ಲರಿಗೂ ನನ್ನ ಅಭಿಪ್ರಾಯಗಳು ತಿಳಿಯಬೇಕೆಂಬ ...ದರಿಂದ ಉತ್ತರವನ್ನು ಕನ್ನಡದಲ್ಲಿಯೇ ಹೇಳಲು ಪ್ರಯತ್ನಿಸುತ್ತೇನೆ ...ಪ್ರಯತ್ನದಲ್ಲಿ ನ್ಯೂನತೆಯೇನಾದರೂ ತೋರಿಬಂದಲ್ಲಿ ಅದನ್ನು ಪರಿಗಣಿಸದೆ ...ಸನ್ನಚಿತ್ತರಾಗಿ ಕೇಳಬೇಕೆಂದು ಕೋರುತ್ತೇನೆ ಉತ್ತರವನ್ನು ಇಂಗ್ಲಿಷ್ ...ಯಲ್ಲಿಯೂ ನಾನು ಬರೆದಿರುತ್ತೇನೆ ಆ ಭಾಷೆಯಲ್ಲಿ ಪರಿಚಯವುಳ್ಳವರೆ ...ನನ ಪ್ರತಿಗಳನ್ನು ಓದಿ ನೋಡಿಕೊಳ್ಳಬಹುದು

...ರ್ವದಾ ಪ್ರಜಾಹಿತಕರಗಳಾದ ಕಾರ್ಯಗಳಲ್ಲಿ ನಿರತರಾಗಿರುತ್ತಾ ಸಕಲ ...ನರಿಗೂ ಪಾತ್ರರೂ ಉದಾರಚಿತ್ತರೂ ಎಂದು ಖ್ಯಾತಿಯನ್ನು ಪಡೆದಿರುವ ...ಮೈಸೂರು ದಿವಾನರವರ ಪ್ರಾಣಾಪಹಾರವನ್ನು ಮಾಡಬೇಕೆಂದು ಯಾವನೋ ...ದ್ರೋಹಿಯು ಈಚೆಗೆ ಮಾಡಿದ ಪರಮನೀಚವಾದ ಪ್ರಯತ್ನದ ವೃತ್ತಾಂತ ... ಈ ನಗರನಿವಾಸಿಗಳಾದ ತಾವುಗಳೆಲ್ಲರೂ ಕೇಳಿ ನಮಗಳಿಗುಂಟಾದ ...ಶ್ಚರ್ಯತನವನ್ನೂ ಧಿಕ್ಕಾರವನ್ನೂ ಮೊದಲೇ ವ್ಯಕ್ತಪಡಿಸಿ ಇರುತ್ತೀರಿ ವೈಸ್ ...ರವರು ಸಮಸ್ತಕಾರ್ಯಗಳನ್ನೂ ವಿವೇಚನೆಯಿಂದಲೂ, ಜಾಗರೂಕತೆ ...ಯೂ, ಉದಾರಹೃದಯದಿಂದಲೂ ನೆರವೇರಿಸುತ್ತಿದ್ದಾರೆ ಇಂಥಾ ಮಹ ...ರನ್ನು ಕೊಲ್ಲಬೇಕೆಂದು ಮಾಡಿದ ಪ್ರಯತ್ನವು ಪರಮನೀಚಕೃತ್ಯವೆಂದು ...ಬೇಕಿಲ್ಲವೇ ಈ ಕೃತ್ಯವು ಈ ದೇಶದ ಪ್ರಜೆಗಳೆಲ್ಲರ ಆ ರಾಜದ್ರೋಹಿ ...ಮೇಲೆ ಅತ್ಯಧಿಕವಾದ ಕೋಪವನ್ನು ಹುಟ್ಟಿಸಿರುತ್ತದೆ ನಮ್ಮ ವೈಸ್‌ರಾಯ ...ರು ಶೀಘ್ರದಲ್ಲಿಯೇ ಸಂಪೂರ್ಣವಾಗಿ ಗುಣಹೊಂದಿ ಅವರು ತಮ್ಮ ...ಪದವಿಗೆ ಸಂಬಂಧಿಸಿದ ಕಾರ್ಯಗಳನ್ನು ಪುನಃ ನೆರವೇರಿಸುತ್ತಾ ಬರಲು ...ಶಕ್ತರಾಗಲೆಂದು ನಾವೆಲ್ಲರೂ ಬಹಳ ಕುತೂಹಲದಿಂದ ನಿರೀಕ್ಷಿಸುತ್ತಿರುವೆವು ...ಅಲ್ಲದೆ ಈ ಸಂಸ್ಥಾನದ ಕೌನ್ಸಿಲರ್ ಪದವಿಯಲ್ಲಿದ್ದುಕೊಂಡು ...ಮಹಾರಾಜರವರ ಸರ್ಕಾರಕ್ಕೆ ಸಹಾಯಕರಾಗಿದ್ದ ಮಿ|| ವೆಂಕಟರಾಯ ...ರವರು ಅಕಸ್ಮಾತ್ತಾಗಿ ಅಕಾಲಮರಣಕ್ಕೆ ಗುರಿಯಾದರೆಂಬ ...ವಾರ್ತೆಯನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸಲು ನಾನು ತುಂಬಾ ವಿಷಾ...ಸೆ ಅವರಲ್ಲಿದ್ದ ಕಾರ್ಯಾಸಕ್ತಿಯೂ, ನ್ಯಾಯಕ್ಕೆ ತಪ್ಪಿನಡೆಯದ ...ಸ್ವಭಾವವೂ ನಿಷ್ಕಲ್ಪಷವಾದ ಯುಕ್ತಾಯುಕ್ತವಿವೇಚನೆಯೂ ಅವರು ...ಗಿದ್ದ ಅಲ್ಪಕಾಲದಲ್ಲಿಯೇ ಪ್ರಚಾರಕ್ಕೆ ಬಂದವು ಇಂಥ ಮಹನೀ...ಯೋಗದಿಂದ ಇವರ ಮಿತ್ರಮಂಡಲಿಯವರೆಲ್ಲರೂ ದುಃಖಾಕ್ರಾಂತರಾ...ರು, ಅವರಲ್ಲಿಯೂ ಮುಖ್ಯವಾಗಿ ಈ ಮಹನೀಯರು ಈ ರಾಜಧಾನಿ ...ಮಿತ್ರರಾಗಿಯೂ, ಜನಾನುರಾಗಕ್ಕೆ ಪಾತ್ರರಾಗಿಯೂ, ವಿಶೇಷವಾಗಿ ...ನಡೆಯುತ್ತಿರುವ ದಳವಾಯಿಮನೆತನಕ್ಕೆ ಸೇರಿದವರಾಗಿಯೂ ಇದ್ದದ್ದರಿಂದ ...ಹರ ನಿವಾಸಿಗಳಿಗೆ ಬಹಳ ವ್ಯಸನಕ್ಕೆ ಕಾರಣವಾಯಿತು

ಮೈಸೂರುನಗರದಲ್ಲಿ ಆವಶ್ಯಕವಾಗಿ ಆಗಬೇಕಾದ ಕಾರ್ಯಗಳು

...ವುಗಳೆಲ್ಲರೂ ಆಸಕ್ತಿಯಿಂದ ವಿಚಾರಮಾಡುವುದಕ್ಕೆ ಅರ್ಹವಾಗಿಯೂ, ...ಧಾನಿಗೆ ಸಂಬಂಧಪಟ್ಟವಾಗಿಯೂ ಇರುವ ಕೆಲವು ವಿಷಯಗಳನ್ನು ...ನಾನು ಈ ಸಮಯದಲ್ಲಿ ಪ್ರಸ್ತಾಪಿಸಬೇಕೆಂದು ತಮ್ಮಗಳ ಅಭಿಪ್ರಾಯ...ರುತು ಕೆಲವು ವರ್ಷಗಳಿಂದೀಚೆಗೆ ಈ ನಗರವು ಅನೇಕಭಾಗಗಳಲ್ಲಿ ...ಹಿಗೆ ಎಂದಿರುತ್ತದೆ ಕಾವೇರೀ ನದಿಯಿಂದ ಇದಕ್ಕೆ ಯಥೇಚ್ಛವಾಗಿ ...ಸರಬರಾಯಿ ಆಗುತ್ತಿದ್ದು ಊರಿನ ಕಶ್ಮಲದನೀರು ನಿರಾಗವಾಗಿ ಹೊರ ...ಸಕ್ಕೆ ಬೇಕಾದ ಈ ಕಾಲದ ನವನಾಗರಿಕತೆಗೆ ತಕ್ಕ ಏರ್ಪಾಡು ...ರ್ಯಾಲೋಚನೆಗೆ ತೆಗೆದುಕೊಂಡು ಕ್ರಮವಾಗಿ ಕೆಲಸಗಳನ್ನು ನಡಿಸು... ಈ ರಾಜಧಾನಿಯ ಬೀದಿಗಳೆಲ್ಲವೂ ಕಾವೇರಿ ವಿದ್ಯುಚ್ಛಕ್ತಿಯ ದೀಪ...ದಿಂದ ಬೆಳಗುತ್ತಿರುವವು ಶ್ರೀಮನ್ಮಹಾರಾಜರವರ ಆಜ್ಞಾನುಸಾರವಾಗಿ ...ವತ್ಸರದಲ್ಲಿಯೂ ಇಲ್ಲಿ ನಡೆಯುತ್ತಿರುವ ಪ್ರದರ್ಶನದಿಂದ ವಿಶೇಷ ...ನದ ಉಂಟೆಂದು ತಾವುಗಳು ಮಾತ್ರವೇ ಅಲ್ಲದೆ ನವರಾತ್ರಿಮಹೋತ್ಸವ ...ಲ್ಲಿ ಸಂಸ್ಥಾನದ ಸಕಲಪ್ರದೇಶಗಳಿಂದಲೂ ಈ ರಾಜಧಾನಿಗೆ ಬರುವ ಸಕಲ ...ರೂ ನನ್ನ ಭಾವಿಸುತ್ತಿರುವರು —ಈಗ ಈ ರಾಜಧಾನಿಗೆ ಸರಬರಾಯಿ ...ಗುವ ನೀರನ್ನು ಮತ್ತಷ್ಟು ಶುದ್ಧಪಡಿಸಬೇಕೆಂಬ ಉದ್ದೇಶದಿಂದ ಸರ್ಕಾರ ...ರಾಯಲ್ ಫಿಲ್ಟರ್ ಯಂತ್ರಸಾಮಗ್ರಿಯನ್ನು ಉಪಯೋಗಿಸುವುದಕ್ಕೋ ...ಸುಮಾರು 1,10,000 ರೂಪಾಯಿಗಳನ್ನು ಈಚೆಗೆ ಮಂಜೂರ್ ಮಾಡಿರು ...ಅಲ್ಲದೆ ಇಲ್ಲಿ ಈಗಿರುವ ಸರ್ಕಾರೀ ಆಸ್ಪತ್ರೆಯ ಜೊತೆಗೆ ಹೊಸದಾಗಿ ...ಯ ಉತ್ತಮವಾದ ಕಟ್ಟಡವನ್ನು ಕಟ್ಟಿಸಕೂಡದೆಂದು ಶ್ರೀಮನ್ಮಹಾ...ರು ಅಪ್ಪಣೆಕೊಡಿಸಿರುತ್ತಾರೆ ಇಲ್ಲಿ ಈಗಿರುವ ಕುಶಲವಿದ್ಯಾಶಾಲೆಗಳ ...ಒಟ್ಟುಗೂಡಿಸಿ ಟೆಕ್ನಿಕಲ್ ಇನ್ಸ್ಟಿಟ್ಯೂಟ್ ಎಂಬ ಸರ್ವಶೀಖಾಶಾಲೆ...ನ್ನು ಶೀಘ್ರದಲ್ಲಿಯೇ ಕಲ್ಪಿಸಲಾಗುವುದು ಮಹನೀಯರೇ, ಈ ...ನ್ನು ಅಭಿವೃದ್ಧಿಗೆ ತರುವ ವಿಷಯದಲ್ಲಿ ಶ್ರೀಮನ್ಮಹಾರಾಜರವರ ಸರ್ಕಾರ ...ತಮಗೆ ಸಾಧ್ಯವಾದ ಏರ್ಪಾಡುಗಳನ್ನೆಲ್ಲ ಮಾಡುತ್ತಿರುವರೆಂಬುವುದೂ, ...ಕ್ಕೆ ನಾಡಿರುವಷ್ಟು ಏರ್ಪಾಡುಗಳನ್ನು ಈ ಸಂಸ್ಥಾನಕ್ಕೆ ಸೇರಿದ ...ನ ಪಟ್ಟಣಕ್ಕೂ ಮಾಡಿಲ್ಲವೆಂಬುವುದೂ ತಮಗೆ ಇದರಿಂದ ವ್ಯಕ್ತವಾಗುವು...ದು —ಆದರೆ ಮಾಡಬೇಕಾದ ಕಾರ್ಯಗಳು ಇನ್ನೂ ಬಹಳವಾಗಿರುವವು ...ರಾಜಧಾನಿಯನ್ನು ಮತ್ತಷ್ಟು ಬಡಾಯಿಸಿ ಯಥೋಚಿತವಾದ ಕ್ರಮದಲ್ಲಿ ...ನೈರ್ಮಲ್ಯವನ್ನು ಹೆಚ್ಚಿಸುತ್ತಾ ಬರುವುದು, ಇಲ್ಲಿನ ಜನಗಳಿಗೆ ತಕ್ಕ ...ಕೆಲಸಗಳನ್ನು ಕಲ್ಪಿಸುವುದು, ಸಾಮಾನ್ಯವಿದ್ಯಾಭ್ಯಾಸಕ್ರಮವನ್ನು ಮುಖ್ಯ ...ವಿದ್ಯಾಭ್ಯಾಸಕ್ರಮವನ್ನು, ಉತ್ತಮಸ್ಥಿತಿಗೆ ತರುವುದು, ಈ ವಿಷಯ ...ಗಳು ಪರ್ಯಾಲೋಚನೆಗೆ ಅರ್ಹಗಳಾಗಿವೆ ಮೈಸೂರಲ್ಲಿ ಕೆಲವರು ಸ್ತ್ರೀ... ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ ಆದರೆ ಕಾರಣಾಂತರ ...ಸ್ತ್ರೀವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಪ್ರಯತ್ನಗಳು ಸ್ವಲ್ಪಮಟ್ಟಿಗೆ ... ಹಾಗೆಯೇ ನಿರುತ್ಸಾಹದಿಂದ ನಿಧಾನಕ್ಕೆ ಬಿದ್ದಿರುತ್ತವೆ ಸಂಸಾರ ...ಸಂಸ್ಕೃತ, ಆರೋಗ್ಯವಿಧಾನ, ಉಪಯುಕ್ತಗಳಾದ ಸಾಮಾನ್ಯಕುಶಲವಿದ್ಯೆ ...ಇತರ ವಿಷಯಗಳನ್ನು ಸ್ತ್ರೀಯರಿಗೆ ಅಭ್ಯಾಸಪೂರ್ವಕವಾಗಿ ಹೇಳಿಕೊ...ಡುವುದು ಅಪೇಕ್ಷಣೀಯವು ಈಗಿರುವ ಬಾಲಿಕಾಪಾಠ...ಶಾಲೆಗಳನ್ನು ಈ ವಿಷಯದಲ್ಲಿ ಅಭಿವೃದ್ಧಿಗೆ ತರುವುದು ಆವಶ್ಯಕವಾಗಿದೆ. ಈ ...ಷಯಗಳೂ, ಇದೇ ಸ್ವಭಾವವುಳ್ಳ ಬೇರೆ ಉದ್ದೇಶಗಳೂ ನೆರವೇರಬೇಕಾದರೆ ...ಜನಗಳು ಇನ್ನೂ ಮುಂದಾಳುಗಳಾಗಿ ನಿಲ್ಲಬೇಕೆಂದು ಸರ್ಕಾರದವರು ...ಕ್ಷಿಸುತ್ತಾರೆ ಈ ನಗರದ ವಿಷಯದಲ್ಲಿ ಅಭಿಮಾನವುಳ್ಳವರಾಗಿಯೂ, ...ಅಭಿವೃದ್ಧಿಗೆ ಬೇಕಾಗುವ ಕೆಲಸಗಳನ್ನು ನೆರವೇರಿಸಲು ಸಿದ್ಧರಾಗಿಯೂ ...ಪ್ರಮುಖರಾದ ಬುದ್ಧಿಶಾಲಿಗಳೆಲ್ಲರೂ ನಮ್ಮೊಡನೆ ಸೇರಿ ಸಹಾಯಮಾಡ...ಬೇಕೆಂಬುವುದೇ ಸರ್ಕಾರದವರ ಆಶಯವಾಗಿರುವುದು

ಮೈಸೂರು ಡಿಸ್ಟ್ರಿಕ್ಟಿಗೋಸ್ಕರ ಮಾಡಬೇಕಾದ ಕಾರ್ಯಗಳು.

...ಲ್ಲದೆ ಒಟ್ಟು ಡಿಸ್ಟ್ರಿಕ್ಟಿನ ಅಭಿವೃದ್ಧಿಗೆಸಂಬಂಧಪಟ್ಟ ವಿಷಯಗಳನ್ನೂ ...ಲೋಚಿಸಬೇಕಾಗಿದೆ ಈಗ ಮೈಸೂರುನಗರವು ಮದ್ರಾಸು ಬಂಟ ರೈಲ್ವೇ ...ಯ ಕೊನೆಯಲ್ಲಿದೆ ಆದ್ದರಿಂದ ಆಮದುರಫ್ತು ಎಲ್ಲವೂ ಬೆಂಗಳೂರು ...ಮುಖಾಂತರ ಸಾಗಬೇಕಾಗಿದೆ ಈ ರಾಜಧಾನಿಯು ಅಭಿವೃದ್ಧಿಗೆ ಬಂದು ...ವರ್ಧಿಸಿಕೊಳ್ಳಬೇಕಾದರೆ ಇಲ್ಲಿಂದ ಇತರ ದಿಕ್ಕುಗಳಿಗೆ ಎಂದರೆ ಉತ್ತರ, ...ಪಶ್ಚಿಮ ದಿಕ್ಕುಗಳಿಗೂ ನೂತನ ರೈಲ್‌ರಸ್ತೆಗಳು ಶೀಘ್ರದಲ್ಲಿ ಆಗಬೇಕು ...ಕಾಲಕ್ರಮದಲ್ಲಿ ರೈಲ್‌ರಸ್ತೆಗಳನ್ನು ಬಡಾಯಿಸುತ್ತಾ ಬರುವ ಉದ್ದೇಶ...ದೃಷ್ಟಿಯಲ್ಲಿಟ್ಟು ಅದಕ್ಕೆ ಬೇಕಾದ ಯೋಜನೆ ಮುಂತಾದ ಕಾರ್ಯಗಳ ...ಯುತ್ತಿರುವುದು ತಮಗೆ ವೇದ್ಯವೇ ಇರಬಹುದು —ಕನ್ನಂಬಾಡಿ... ಮೊದಲನೆಯಪರ್ಯಾಯದ ಕಟ್ಟಡವು ಪೂರೈಸುತ್ತಲೇ ಬೇಸಗೆಯ ವ್ಯವಸಾಯಕ್ಕೆ ಯಥೇಚ್ಛವಾಗಿ ನೀರಿನಸರಬರಾಯಿ ಆಗುವುದು ಈ ನೀರನ್ನು ಕಬ್ಬುನಡೆಲಿಗೆ ಉಪಯೋಗಿಸಿಕೊಂಡರೆ ಬಹಳ ಲಾಭವುಂಟು ಸರ್ಕಾರೀ ಉದ್ಯೋಗಸ್ಥರೂ ಪ್ರಜೆಗಳೂ ಈಗಳಿಂದಲೂ ಏಕೀಭವಿಸಿ ಕೆಲಸಮಾಡುತ್ತಾ ಬಂದರೆ ಬರುವ ಐದುವರ್ಷಗಳೊಳಗಾಗಿ ಹತ್ತುಸಾವಿರ ಎಕರೆಯಜಮೀನು ಕಬ್ಬುನಡೆಲಿ ಇಡುವುದಕ್ಕೆ ಸಿದ್ಧವಾಗುವುದು ಇದರಿಂದ ವರ್ಷವರ್ಷೇ ಈ ಡಿಸ್ಟ್ರಿಕ್ಟಿನ ಉತ್ಪತ್ತಿಯನ್ನು ಅಥವಾ ವರಮಾನವನ್ನು ೩೦ಲಕ್ಷದವರೆಗೆ ಹೆಚ್ಚಿಸಿ ದಂತಾಗುವುದು ಈ ವಿಸ್ತಾರವಾದ ಕಬ್ಬಿನವ್ಯವಸಾಯಕ್ರಮವನ್ನು ಉಪಕ್ರಮಿಸುವುದಕ್ಕೆ ಸಹಾಯಕವಾಗಿ ಕಾರ್ಯಕಾರಿಯಾಗುವ ಒಂದು ಏರ್ಪಾಡನ್ನು ಸಿದ್ಧಪಡಿಸಬೇಕಾಗಿದೆ ಈ ಏರ್ಪಾಡಿಗೆ ಅನುಸರಿಸಬೇಕಾದ ಮುಖ್ಯಕ್ರಮಗಳನ್ನೆಲ್ಲಾ ನಾನು ತಿಳಿಯಹೇಳಲು ಸಿದ್ಧನಾಗಿರುವೆನು ಆದರೆ ಸ್ಥಳೀಯಾಧಿಕಾರಿಗಳು ವ್ಯವಸಾಯದಲ್ಲಿಯೂ, ವ್ಯಾಪಾರದಲ್ಲಿಯೂ ಗಣ್ಯರಾಗಿರುವವರೊಡನೆ ಪರ್ಯಾಲೋಚಿಸಿ ಇದನ್ನು ತಪಸೀಲ್‌ವಾರಾಗಿ ನಡಿಸುತ್ತಾ ಬರುವ ಭಾರವನ್ನು ವಹಿಸಬೇಕು ಇಷ್ಟುಮಾತ್ರವಲ್ಲದೆ ಯಂತ್ರಗಳನ್ನು ಇನ್ನೂ ಹೆಚ್ಚಾಗಿ ಉಪಯೋಗಿಸುವುದು, ಕಾರ್ಖಾನೆಗಳನ್ನು ಸ್ಥಾಪಿಸುವುದು, ಸಣ್ಣಸಣ್ಣ ಕಸಬುಗಳನ್ನು ಬಳಕೆಗೆ ತರುವುದು, ಜಂಗಲ್ ಉತ್ಪತ್ತಿಯನ್ನು ಹೆಚ್ಚಿಸುವುದು, ಇವೇ ಮುಂತಾದ ಅನೇಕವಿಷಯಗಳನ್ನು ತಾವುಗಳು ವಿಮರ್ಶೆಮಾಡಬೇಕಾಗಿದೆ ಈ ವಿಧವಾದ ಪುರೋವೃದ್ಧಿಯ ಕಾರ್ಯಗಳು ನೆರವೇರಬೇಕಾದರೆ ಆಯಾಪ್ರದೇಶದ ಜನಗಳೇ ಅವುಗಳನ್ನು ಉಪಕ್ರಮಿಸಿ ಉತ್ಸಾಹದಿಂದಲೂ, ಸಾಹಸದಿಂದಲೂ ನಡೆಯಿಸಿಕೊಳ್ಳುತ್ತಾ ಬರುವುದು ಪರಮಾವಶ್ಯಕವಾಗಿದೆ

ನಮ್ಮಲ್ಲಿರುವ ನ್ಯೂನತೆಗಳು

ಕಳೆದತಿಂಗಳ 1೭ ನೆಯ ತಾ ಬೆಂಗಳೂರು ನಿವಾಸಿಗಳು ಇದೇ ರೀತಿಯಲ್ಲಿ ಅಭಿನಂದನ ಪತ್ರಿಕೆಗಳನ್ನು ಒಪ್ಪಿಸಿದ ಕಾಲದಲ್ಲಿ ನಾನು ಈ ಸಂಸ್ಥಾನಕ್ಕೆಲ್ಲ ಆವಶ್ಯಕವಾಗಿರುವ ಪ್ರಜಾಹಿತಕರಗಳಾದ ಕೆಲವು ಅಂಶಗಳನ್ನು ಕುರಿತು ಪ್ರಸ್ತಾಪಿಸುವಾಗ ಛಾಟಾವಾರ್ಗಗಳು ವಿಶೇಷವಾಗಿ ಹೆಚ್ಚುತ್ತಾ ಬಂದಕಾರಣದಿಂದ ಈಚೆಗೆ ಪದಾರ್ಥಗಳ ಧಾರಣೆವಾಸಿಗಳೂ ಹೆಚ್ಚುತ್ತಾ ಬಂದಿವೆ ಎಂದಲೂ, ನಮ್ಮ ಸ್ಥಿತಿಗತಿಗಳೂ ಕಾರ್ಯಕ್ರಮವೂ ಬದಲಾವಣೆಯನ್ನು ಹೊಂದುತ್ತಾ ಬಂದಿವೆ ಎಂತಲೂ ಸೂಚಿಸಿರುವೆನು ನಮ್ಮ ಜೀವನಸ್ಥಿತಿಗತಿಗಳು ಆಮೂಲಾಗ್ರವಾಗಿ ಬದಲಾವಣೆಯನ್ನು ಹೊಂದಿದ್ದರೂ, ನಾವು ಅನುಸರಿಸಬೇಕಾದ ಸರ್ವೋತ್ಕೃಷ್ಟ ಧರ್ಮವು ಯಾವುದೆಂಬ ವಿಷಯದಲ್ಲಿ ಮಾತ್ರ ನಮ್ಮ ಅಭಿಪ್ರಾಯವು ವ್ಯತ್ಯಸ್ತವಾಗಿಲ್ಲವೆಂದು ತಿಳಿಸಿದೆನು ಇಹಜನ್ಮವು ಪರಲೋಕದ ಸಾಧನಾರ್ಥವಾದದ್ದೇ ಹೊರತು ಇಲ್ಲಿಯೇ ಇಷ್ಟಷ್ಟು ಕಾಲ ಭೋಗಗಳನ್ನು ಅನುಭವಿಸುವುದಕ್ಕಲ್ಲವೆಂಬುವುದು ಹಿಂದೂಮತದ ಪರಮಮರ್ಮವಾಗಿದೆ —ಪಾಶ್ಚಾತ್ಯದೇಶಗಳ ಜನಾಂಗದವರು ಈ ರೀತಿಯಾದ ನಂಬುಗೆಯನ್ನಿಟ್ಟುಕೊಳ್ಳದೆ ಅರ್ಥೋತ್ಪತ್ತಿಯನ್ನೇ ಮುಖ್ಯೋದ್ದೇಶವನ್ನಾಗಿ ಎಣಿಸಿರುತ್ತಾರೆ ಇವರು ಪ್ರಜಾರಾಜಕೀಯ ಕಾರ್ಯಗಳನ್ನಾಗಲಿ, ಕೈಗಾರಿಕೆಗಳಿಗೆ ಅಥವಾ ಸಮುದ್ರವ್ಯಾಪಾರಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನಾಗಲಿ ಕೈಗೊಳ್ಳಬೇಕಾದರೆ ತಮ್ಮಲ್ಲಿರುವ ಅರ್ಥೋತ್ಪತ್ತಿಯ ಸಾಧನಗಳನ್ನು ಪ್ರಧಾನವಾಗಿ ಎಣಿಸುವರಲ್ಲದೆ ತಮ್ಮ ಸಂಪತ್ತನ್ನು ಹೆಚ್ಚಿಸಿಕೊಂಡು ಹೆಚು ಸೌಖ್ಯವನ್ನು ಪಡೆಯುವುದನ್ನೇ ಉದ್ದೇಶವನ್ನಾಗಿಟ್ಟುಕೊಂಡು ಕೆಲಸ ಮಾಡುತ್ತಾರೆ —ನಾವು ಅಭಿವೃದ್ಧಿಸ್ಥಿತಿಗೆ ಬರಲು ಯಾವರೀತಿಯಲ್ಲಿ ಕಾರ್ಯಗಳನ್ನು ನಡಿಸುತ್ತಾ ಬರಬೇಕೆಂದು ತಿಳಿದುಕೊಳ್ಳಬೇಕಾದರೆ ಈಗಾಗಲೇ ಉನ್ನತಿಗೆ ಬಂದಿರುವ ದೇಶೀಯರೊಡನೆ ನಮ್ಮನ್ನು ಹೋಲಿಸಿಕೊಂಡು ಅವರುಗಳ ಅನುಭವದಪ್ರಯೋಜನವನ್ನು ಪಡೆದುಕೊಳ್ಳುವುದಕ್ಕೆ ನಾವೂ ಅವರಂತೆಯೇ ವರ್ತಿಸಬೇಕು ಹೀಗೆ ಹೋಲಿಸಿನೋಡಿದ್ದೇ ಆದರೆ ಕೆಲವು ಆಶ್ಚರ್ಯಕರಗಳಾದ ವಿಷಯಗಳು ಗೋಚರವಾಗುವುವು ಇಂಥವಿಷಯಗಳನ್ನು ನಮ್ಮ ಜನರಿಗೆ ಎಷ್ಟು ಸಾರಿ ತಿಳಿಯಪಡಿಸುತ್ತಿದ್ದರೂ ನನಗೆ ಬೇಸರವುಂಟಾಗದು, ಮತ್ತು ಅವುಗಳು ಅವರ ಮನಸ್ಸಿನಲ್ಲಿ ಬೇರೂರಿ ನಾಟುವಂತೆ ಎಷ್ಟುಸಾರಿ ತಿಳಿಸಿದರೂ ಸಾಲದು —ಯಾವದೇಶದ ಸಂಪತ್ತೇ ಆಗಲಿ ವೃದ್ಧಿಹೊಂದಬೇಕಾದರೆ ಆ ದೇಶದಲ್ಲಿ ವಿದ್ಯಾವಂತರಾದವರ ಸಂಖ್ಯೆಯು ಹೆಚ್ಚುತ್ತಾ ಬರುವುದೇ ಸರ್ವದಾ ಬಲವತ್ತರವಾದ ಕಾರಣವಾಗಿರುವುದು ಈ ಸಂಸ್ಥಾನದಲ್ಲಿ ಯಾವದೋ ವಿದ್ಯಾವಂತರ ಸಂಖ್ಯೆಯು ಬಹಳ ಕಡಮೆಯಾಗಿರುವುದು —ಮೈಸೂರುಸಂಸ್ಥಾನದ ಪ್ರಜೆಗಳ ಪೈಕಿ ನೂರಕ್ಕೆ 9೬ ಮಂದಿಗೆ ಓದುಬರಹವೇ ಬಾರದು ಸಾಮಾನ್ಯವಾಗಿ ಅಭಿವೃದ್ಧಿಸ್ಥಿತಿಯಲ್ಲಿರುವ ದೇಶಗಳಲ್ಲಿ ಯಾವದೋ ಓದುಬರಹ ಬಾರದವರು ನೂರಕ್ಕೆ 10 15 ಮಂದಿಗಿಂತ ಹೆಚ್ಚಾಗಿರಲಾರರು —ಮೈಸೂರುಸಂಸ್ಥಾನದಲ್ಲಿ ನೂರಕ್ಕೆ 72 ಮಂದಿಗೆ ಬೇಸಾಯವೇ ಮುಖ್ಯಜೀವನೋಪಾಯವಾಗಿರುತ್ತದೆ ಇಂಗ್ಲೆಂಡಿನಲ್ಲಿ ಯಾದರೋ ಬೇಸಾಯದಿಂದ ಜೀವಿಸುವವರ ಸಂಖ್ಯೆಯು ಅತ್ಯಲ್ಪವಾಗಿರುತ್ತದೆ ಅಲ್ಲಿ ವ್ಯವಸಾಯವೇ ಮುಂತಾದ ಗ್ರಾಮವೃತ್ತಿಗಳನ್ನು ಅನುಸರಿಸಿಕೊಂಡಿರುವವರ ಸಂಖ್ಯೆಯು ನೂರಕ್ಕೆ 23 ಕ್ಕಿಂತ ಕಡಮೆಯಾಗಿರುತ್ತದೆ ಯಾವ ದೇಶದಲ್ಲಿ ಜನರು ಇಲ್ಲಿನಷ್ಟು ವಿಶೇಷವಾಗಿ ವ್ಯವಸಾಯವನ್ನೇ ಜೀವನೋಪಾಯವನ್ನಾಗಿ ನಂಬಿಕೊಂಡಿರುವರೋ ಮತ್ತು ಇಲ್ಲಿನಂತೆ ಕಾಲಕಾಲಕ್ಕೆ ಸರಿಯಾಗಿ ಮಳೆಯಾಗದಿರುವುದೋ ಅಂಥದೇಶವು ಸುಭಿಕ್ಷದೇಶವೆನಿಸಿಕೊಳ್ಳಲಾರದು —ವರ್ಷದಲ್ಲಿ ಸರಾಸರಿ ಆರುತಿಂಗಳಕಾಲ ಮೈಸೂರುಸಂಸ್ಥಾನದ ಬೇಸಾಯಗಾರರಿಗೆ ಸಾಮಾನ್ಯವಾಗಿ ಯಾವಕೆಲಸವೂ ಇರುವುದಿಲ್ಲ —ನಮ್ಮ ಕಾರೇಗಾರರ ಕಾರ್ಯಸಾಧಕಶಕ್ತಿಯು ಬಹಳ ಕಡಮೆಯಾಗಿರುತ್ತದೆ ಇವರಿಗೆ ಕಸಬಾರೀ ವಿದ್ಯೆಯಲ್ಲಿ ಸರಿಯಾದ ಶಿಕ್ಷಣವು ಇಲ್ಲ ನಾಗರಿಕದೇಶಗಳಲ್ಲಿ ಒಬ್ಬ ಕಾರೇಗಾರನು ಮಾಡಬಹುದಾದ ಕೆಲಸವನ್ನು ಮಾಡಲಿಕ್ಕೆ ಇಂಡಿಯಾ ದೇಶದ ಕಾರೇಗಾರರು ಮೂವರು ಬೇಕಾಗುವರೆಂದು ತಿಳಿದುಬಂದಿದೆ —ಮೈಸೂರು ದೇಶದ ಕಾರೇಗಾರನ ಸಂಪಾದಕಶಕ್ತಿಯು ಸಾಮಾನ್ಯವಾಗಿ ಯೂರೋಪ್‌ಖಂಡದ ಕಾರೇಗಾರನ ಸಂಪಾದಕಶಕ್ತಿಯಲ್ಲಿ ಹದಿನೈದರಲ್ಲೊಂದು ಅಂಶವಾಗಿ ಅಥವಾ ಇನ್ನೂ ಕಡಮೆಯಾಗಿ ಇರುವುದು —ಯಾವುದೊಂದುದೇಶವಾಗಲಿ ಎಷ್ಟರಮಟ್ಟಿಗೆ ಏಳಿಗೆಗೆ ಬಂದಿದೆ ಎಂದು ನಿಶ್ಚಯಿಸಬೇಕಾದರೆ ಅಲ್ಲಿ ಬಳಕೆಯಲ್ಲಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು, ಅವುಗಳು ಭಾರಿಯಾಗಿ ನಡೆಯುತ್ತಿವೆಯೇ ಮತ್ತು ಅಲ್ಲಿ ವ್ಯಾಪಾರವು ವಿಶೇಷವಾಗಿದೆಯೇ ಎಂಬೀ ಅಂಶಗಳಿಂದ ನಿರ್ಧರಿಸಬೇಕು ಈ ಅಂಶಗಳಿಗೆ ಸಂಬಂಧಪಟ್ಟ ಕರಾರುವಾಕ್ ವಿವರಗಳನ್ನು ಸೇರಿಸಿಡುವುದು ಆವಶ್ಯಕವೆಂಬುವುದು ಕೂಡ ನಮ್ಮ ಮನಸ್ಸಿಗೆ ಇನ್ನೂ ಹೊಳೆಯಲಿಲ್ಲ ಮೈಸೂರುದೇಶದಲ್ಲಿ ಮರಣಸಂಖ್ಯೆಯು ವರ್ಷದಲ್ಲಿ ಸಾವಿರಕ್ಕೆ 40ಕ್ಕಿಂತ ಹೆಚ್ಚಾಗಿರುತ್ತದೆ ಯೂರೋಪಿನಲ್ಲಿ ಯಾದರೋ 15ರಿಂದ 18ರ ವರೆಗೆ ಮಾತ್ರ ಇರುತ್ತದೆ ಮೈಸೂರು ದೇಶದಲ್ಲಿರುವವರ ಜೀವಮಾನವು ಸರಾಸರಿ 25 ವರ್ಷಕ್ಕಿಂತ ಕಡಮೆಯಾಗಿದೆ ಅಮೇರಿಕ, ಯೂರೋಪ್ ಖಂಡಗಳಲ್ಲಿರುವವರ ಜೀವಮಾನವಾದರೋ ಸರಾಸರಿ 45ರಿಂದ 51 ವರ್ಷದವರೆಗೆ ಇರುತ್ತದೆ ಮೇಲ್ಕಂಡವಿಷಯಗಳೆಲ್ಲವೂ ಪ್ರಜೆಗಳ ಮನಸ್ಸಿನಲ್ಲಿ ಚೆನ್ನಾಗಿನಾಟದಲ್ಲದೆ ಅವರು ಉತ್ತಮಸ್ಥಿತಿಯನ್ನು ಪಡೆವುದಕ್ಕೆ ಪ್ರಯತ್ನಶೀಲರಾಗುವ ಆವಶ್ಯಕತೆಯು ಅವರಿಗೆ ತೋರಿಬರಲಾರದು

ದೇಶಾಭ್ಯುದಯಕ್ಕಾಗಿ ಸ್ಥಳೀಯ ಸಂಘಗಳು

ನಾವು ಸಾಮಾನ್ಯ ಪ್ರಜೆಗಳನ್ನು ಉತ್ತಮಸ್ಥಿತಿಗೆ ತರಬೇಕಾದರೆ ಅವರಿಗೆ ಪರಾಪೇಕ್ಷೆ ಇಲ್ಲದೆ ಸ್ವಪ್ರಯತ್ನದಿಂದ ಕೆಲಸಮಾಡುವುದಕ್ಕೂ, ಸರ್ಕಾರದ ಸಹಾಯವನ್ನಪೇಕ್ಷಿಸದೆ ಕೆಲಸಗಳನ್ನು ಕೈಕೊಂಡು ನೆರವೇರಿಸುವುದಕ್ಕೂ ಉತ್ತೇಜನವನ್ನು ಕೊಡಬೇಕಾದದ್ದು ಆವಶ್ಯಕವಾಗಿದೆ ಈ ಸಂಸ್ಥಾನವು ಏಳಿಗೆಗೆ ಬರಬೇಕಾದರೆ ಹೆಚ್ಚು ಸಂಖ್ಯೆಯ ಜನರು ಅನ್ಯೋನ್ಯಸಹಾಯಕರಾಗಿ ಏಕೀಭವಿಸಿಕೊಂಡು ಒಟ್ಟಿಗೆ ಕಾರ್ಯಗಳನ್ನು ನೆರವೇರಿಸುತ್ತಾ ಬರಬೇಕು ಹಲವರು ಕೂಡಿನಾಡಿದ ಆಲೋಚನೆಯು ಯುಕ್ತಿಯುಕ್ತವಾಗಿರುವುದೆಂಬುವುದೂ, ಸಂಘದಲ್ಲಿ ಯಾವಾಗಲೂ ಶಕ್ತಿ ಇರುವುದೆಂಬುವುದೂ ನಮ್ಮ ಜನಗಳಿಗೆ ಅನುಭವದಿಂದ ಗೊತ್ತಾಗುತ್ತಾ ಬಂದಹಾಗೆಲ್ಲ ಅನ್ಯೋನ್ಯಸಹಾಯಕರಾಗಿ ಕಾರ್ಯಗಳನ್ನು ಜರುಗಿಸುತ್ತಾ ಬರುವುದರಿಂದ ವಿಶೇಷಪ್ರಯೋಜನವುಂಟೆಂಬುವುದು ಕ್ರಮೇಣ ಅವರುಗಳಿಗೆ ಹೆಚ್ಚು ಹೆಚ್ಚಾಗಿ ತಿಳಿಯಬರುವುದು —ಪ್ರಜಾಹಿತಕರಗಳಾದ ಅಂಶಗಳನ್ನು ಬುದ್ಧಿಕುಶಲರಾದ ಜನರು ಸೇರಿರುವ ಸಂಘಗಳವರು ಪರಿಶೀಲಿಸಿ ವ್ಯವಸ್ಥೆ ಮಾಡುವುದು ಬಹಳ ಉತ್ತಮವೆಂದು ನಾನು ಭಾವಿಸುತ್ತೇನೆ, ಏಕೆಂದರೆ ಹೀಗೆ ಮಾಡುವುದರಿಂದ ಅನೇಕ ವಿಷಯಗಳಲ್ಲಿ ಪರಿಶೋಧನೆಗಳನ್ನು ನಡಿಸುತ್ತಾ ಇರಲು ಸಾಧ್ಯವಾಗುವುದಲ್ಲದೆ ಅನೇಕಬುದ್ಧಿವಂತರು ಸೇರಿ ಕೆಲಸಮಾಡುವುದಕ್ಕೂ ಅವಕಾಶವುಂಟಾಗುವುದು ಇಂಥ ಸಂಘಗಳಲ್ಲಿ ಯಾವುದೊಂದು ಅಂಶವಾಗಲಿ ಮನಸ್ಸಿಗೆ ಹೊಳೆದಲ್ಲಿ ಅದನ್ನು ಕಾರ್ಯತಃ ಕೊನೆಯವರೆಗೂ ನಡಿಸಿ ಪೂರೈಸುವತನಕ ಬೇಸರಪಡದೆ ಕೆಲಸಮಾಡುವಶಕ್ತಿಯುಳ್ಳ ಸಮರ್ಥರೂ, ಉಪಪನ್ನರೂ, ಸ್ವಾರ್ಥತ್ಯಾಗಿಗಳೂ, ಮುಖ್ಯವಾಗಿ ನಡಿಸಬೇಕಾದಕಾರ್ಯವು ಇಂಥಾದ್ದೆಂದು ನಿರ್ಧರಿಸುವ ಗ್ರಾಹಕಶಕ್ತಿಯುಳ್ಳವರೂ ಆದ ಜನಗಳು ಮಾತ್ರವೇ ಇರಬೇಕು —ಪ್ರತಿಯೊಂದು ತಾಲ್ಲೂಕಿಗೆ ಅಥವಾ ಮ್ಯುನಿಸಿಪಾಲಿಟಿಗೆ ಸೇರಿದ ಜನರು ತಮ್ಮಸ್ಥಳದಲ್ಲಿಯ ನ್ಯೂನತೆಗಳನ್ನೂ, ಆಗಬೇಕಾದ ಕಾರ್ಯಗಳನ್ನೂ ವಿಚಾರಮಾಡುವುದಕ್ಕಾಗಿ ಒಂದು ಸ್ಥಾನಿಕಮಿಟಿಯನ್ನು ಏರ್ಪಡಿಸಿಕೊಂಡು ಅವುಗಳನ್ನು ತಾವೇ ಶ್ರಮಪಟ್ಟು ಕ್ರಮಪಡಿಸಿಕೊಳ್ಳುವವಿಚಾರದಲ್ಲಿ ಈಗ್ಗಿಂತ ಹೆಚ್ಚು ಪ್ರಯತ್ನಗಳನ್ನು ಮಾಡುತ್ತಾ ಬರತಕ್ಕದ್ದು ಆವಶ್ಯಕವೆಂದು ನಾನು ಭಾವಿಸುತ್ತೇನೆ ಪ್ರತಿತಾಲ್ಲೂಕಿನಲ್ಲಿಯೂ ಪ್ರಜೆಗಳ ನಂಬುಗೆಗೆ ಪಾತ್ರರಾದ ನಾಲ್ವರುಐವರು ಮುಖಂಡರು ತಮ್ಮ ಅಭ್ಯುದಯಕ್ಕಾಗಿಯೇ ಈ ರೀತಿಯ ಕಮಿಟಿಯನ್ನು ಏರ್ಪಡಿಸಿಕೊಂಡು ಕೆಲಸಮಾಡುತ್ತಾ ಬಂದಲ್ಲಿ ತಮ್ಮ ತಾಲ್ಲೂಕಿನ ಏಳಿಗೆಗಾಗಿ ವಿಶೇಷಸಹಾಯಮಾಡಬಹುದು ಬೇಕಾದರೆ ಇವರಿಗೆ ಸರ್ಕಾರದಿಂದ ಸ್ವಲ್ಪ ಧನಸಹಾಯವನ್ನು ಮಾಡಬಹುದು, ಅಥವಾ ಪ್ರಜೆಗಳು ತಾವಾಗಿಯೇ ಒಪ್ಪಿಕೊಡುವಂಥ ಸಣ್ಣತೆರಿಗೆಯನ್ನು ಹಾಕಿ ಹಣವನ್ನು ವಸೂಲ್‌ಮಾಡಿಕೊಳ್ಳಲು ಅವಕಾಶವನ್ನು ಕೊಡಬಹುದು ಇನ್ನೂ ಅನೇಕ ವಿಧಗಳಲ್ಲಿ ಪ್ರಜೆಗಳು ತಾವಾಗಿಕೊಡುವ ಸಹಾಯದ್ರವ್ಯವನ್ನು ಸೇರಿಸಿ ಮೂಲಧನವನ್ನು ಹೆಚ್ಚಿಸಿಕೊಳ್ಳಬಹುದು ಕಾರ್ಯಗಳನ್ನು ಚಲಾಯಿಸುವುದಕ್ಕೆ ಒಬ್ಬಿಬ್ಬರು ಸರ್ಕಾರಿ ನೌಕರರನ್ನು ಬೇಕಾದರೂ ಸಹಾಯಕ್ಕೆ ಕೊಡಬಹುದು ಇಂಥ ಪ್ರತಿಕಮಿಟಿಯವರೂ ವರ್ಷಕ್ಕೊಂದು ಸಾರಿ ಜನಸಂಖ್ಯೆಯು ಎಷ್ಟುಹೆಚ್ಚಿದೆ, ವಿದ್ಯಾಭ್ಯಾಸವು ಎಷ್ಟರಮಟ್ಟಿಗೆ ಪ್ರಸರಿಸಿದೆ, ಬೇಸಾಯದವಿಷಯದಲ್ಲಿ ಯಾವಯಾವ ಅಭಿವೃದ್ಧಿಕಾರ್ಯಗಳನ್ನು ನಡಿಸಲಾಗಿದೆ, ಕಾರ್ಖಾನೆಗಳೂ ಜಾಯಿಂಟ್ ಸ್ಟಾಕ್ ಕಂಪನಿಗಳೂ ಸಂಖ್ಯೆಯಲ್ಲಿ ಹೆಚ್ಚಿರುತ್ತವೆಯೇ, ತಯಾರಾದ ಸರಕುಗಳು ಅಥವಾ ರಫ್ತ್ ಆದ ಪದಾರ್ಥಗಳು ಎಷ್ಟರಮಟ್ಟಿಗೆ ಹೆಚ್ಚಿವೆ, ಹೊಸದಾಗಿ ಆಬಾದ್ ಆದ ಸಣ್ಣಸಣ್ಣ ಕೆರೆಗಳ ಸಂಖ್ಯೆ ಎಷ್ಟು, ನೀರುಸರಬರಾಯಿ ಆದ ಜಮೀನಿನ ವಿಸ್ತೀರ್ಣವೆಷ್ಟು, ಎಂಬಿವೇ ಮುಂತಾದ ವಿವರಗಳನ್ನು ಕುರಿತು ರಿಪೋರ್ಟು ಬರೆದುಕಳುಹಿಸುವಂತೆ ಏರ್ಪಾಡುಮಾಡಬಹುದು ಇಂಥ ರಿಪೋರ್ಟು ಪ್ರಾರಂಭದಲ್ಲಿ ಎರಡುಮೂರು ಪುಟಗಳಷ್ಟುಮಾತ್ರವೇ ಇದ್ದರೂ ಬಾಧಕವಿಲ್ಲ —ಈ ಉದ್ದೇಶಕ್ಕಾಗಿ ಸಂಸ್ಥಾನವನ್ನೆಲ್ಲ ತಾಲ್ಲೂಕುಗಳನ್ನೂ ಮ್ಯುನಿಸಿಪಾಲಿಟಿಗಳನ್ನೂ ಸೇರಿಸಿಕೊಂಡು ಸುಮಾರು 85 ಅಥವಾ 90 ಭಾಗಗಳಾಗಿ ಏರ್ಪಡಿಸಿಕೊಳ್ಳಬಹುದು. ಮುಖ್ಯ, ಮೂರುವರ್ಷಗಳ ಕಾಲದಲ್ಲಿ ಪ್ರತಿತಾಲ್ಲೂಕಿನಲ್ಲಿಯೂ ವಿದ್ಯಾವಂತರ ಸಂಖ್ಯೆಯು ಎಂದುಸಾವಿರದವರೆಗೆ ಹೆಚ್ಚಿದಲ್ಲಿ, ರಫ್ತ್ ಆದ ಯಾ ತಯಾರಾದ ಪದಾರ್ಥಗಳ ಬೆಲೆಯು ಒಂದುಲಕ್ಷರೂಪಾಯಿಯವರೆಗೆ ಜಾಸ್ತಿಯಾದಲ್ಲಿ ಮತ್ತು ನಾಲ್ಕೈದು ಸಣ್ಣಕೆರೆಗಳು ಹೊಸದಾಗಿ ಆಬಾದಿಗೆಬಂದಲ್ಲಿ ಸಂಸ್ಥಾನಕ್ಕೆಲ್ಲ ವಿಶೇಷವಾಗಿ ಲಾಭವುಂಟಾದಂತೆ ಆಗುವುದು ವರ್ಷಂಪ್ರತಿ ಸ್ವಲ್ಪಸ್ವಲ್ಪವಾಗಿಮಾಡಿದ ಅಭಿವೃದ್ಧಿಕಾರ್ಯಗಳು ಕೆಲವುವರ್ಷಗಳೊಳಗಾಗಿ ವಿಶೇಷವೆನ್ನಿಸಿಕೊಳ್ಳುವುವು ಒಂದೊಂದುಪ್ರದೇಶದಲ್ಲಿಯೂ ಸ್ವಲ್ಪಸ್ವಲ್ಪವಾಗಿಮಾಡಿದ ಕಾರ್ಯಗಳೆಲ್ಲವೂ ಸೇರಿದರೆ ಸಂಸ್ಥಾನಕ್ಕೆಲ್ಲ ಮಹಾಕಾರ್ಯವನ್ನು ನೆರವೇರಿಸಿದಂತೆ ಆಗುವುದು ಒಬ್ಬರಲ್ಲಿಯೇ ವಿಶೇಷಕಾರ್ಯದಕ್ಷತೆಯು ಇಲ್ಲದ ಇದ್ದರೂ ಅನೇಕಜನರು ಒಟ್ಟುಗೂಡಿ ಪರಸ್ಪರಸಹಾಯಕರಾಗಿ ನಿಯತವಾದ ಮಾರ್ಗದಲ್ಲಿಯೂ, ಉದ್ದೇಶಪೂರ್ವಕವಾಗಿಯೂ ಕೆಲಸಗಳನ್ನು ನಡಿಸುತ್ತಾ ಬಂದರೆ ಇದರಿಂದ ವಿಶೇಷ ಕಾರ್ಯಸಾಧಕಶಕ್ತಿಯನ್ನು ಒದಗಿಸಿಕೊಂಡು ಹೆಚ್ಚು ಕೆಲಸವನ್ನು ಮಾಡಲು ಸಾಧ್ಯವಾಗುವುದು —ಈ ರೀತಿ ನಾನು ವಿವರಿಸಿರುವ ಏರ್ಪಾಡಿನಮೇರೆಗೆ ಆಯಾಪ್ರದೇಶದಲ್ಲಿಯ ಜನರು ಪರಸ್ಪರ ಸಹಾಯಕರಾಗಿ ಕೆಲಸಮಾಡುತ್ತಾ ಬಂದಲ್ಲಿ ಸಂಸ್ಥಾನಕ್ಕೆಲ್ಲ ಸಂಬಂಧಪಡುವ ಕಾರ್ಯಗಳನ್ನು ಪ್ರತಿನಿಧಿಸಭೆಯವರೂ, ನ್ಯಾಯವಿಧಾಯಕಸಭೆಯವರೂ, ಸೆಂಟ್ರಲ್ ಕಮಿಟಿಗಳವರೂ ಪರಿಶೀಲನೆಮಾಡಬಹುದು ಆಯಾ ಡಿಸ್ಟ್ರಿಕ್ಟಿಗೆಮಾತ್ರ ಸಂಬಂಧಪಡುವ ಕಾರ್ಯಗಳನ್ನು ಹಾಲಿ ಇರುವ ಡಿಸ್ಟ್ರಿಕ್ಟು ಬೋರ್ಡುಗಳವರೂ, ಕಮಿಟಿಗಳವರೂ ನಡಿಸಿಕೊಂಡುಬರಬಹುದು ತಾಲ್ಲೂಕ್‌ಬೋರ್ಡುಗಳವರೂ ಕಮಿಟಿಗಳವರೂ ಆಯಾ ತಾಲ್ಲೂಕಿಗೆಮಾತ್ರ ಸಂಬಂಧಪಟ್ಟ ಚಿಕ್ಕಚಿಕ್ಕ ವಿಷಯಗಳನ್ನು ವ್ಯವಸ್ಥೆ ಮಾಡಬಹುದು —ಈ ಏರ್ಪಾಡಿಗೆಸಂಬಂಧಪಟ್ಟ ಸರಿಯಾದಕ್ರಮವನ್ನೂ, ಮೇಲ್ಕಂಡಸಂಘಗಳಿಗೆ ಮೆಂಬರುಗಳನ್ನು ಚುನಾಯಿಸುವ ಮತ್ತು ನಿಯಮಿಸುವ ವಿಧಾನಗಳನ್ನೂ ಉತ್ತರೋತ್ತರ ನಿರ್ಧರಿಸಿಕೊಳ್ಳಬಹುದು, ಆದರೂ ಸದ್ಯಕ್ಕೆ ಅದರ ಸ್ಥೂಲಕ್ರಮದಲ್ಲಿ ತಾಲ್ಲೂಕ್‌ಕಮಿಟಿಗಳವರೂ ಪ್ರಾವಿನ್ಸಿಯಲ್ ಕಮಿಟಿಗಳವರೂ ಏಕೀಭವಿಸಿ ಎಲ್ಲವೂ ಸಂಸ್ಥಾನದ ಏಳಿಗೆಗೆ ಸಹಕಾರಿಯಾಗುವಂತೆ ನೋಡಿಕೊಳ್ಳಬೇಕು

ಉಪಸಂಹಾರ

ಅಭಿವೃದ್ಧಿಸ್ಥಿತಿಯಲ್ಲಿರುವ ಇತರ ದೇಶಗಳೊಡನೆ ನಮ್ಮದೇಶವನ್ನು ಹೋಲಿಸಿದಲ್ಲಿ ನಮ್ಮವರ ಕಾರ್ಯಸಾಧಕಶಕ್ತಿಯು ಪರಿಮಿತವಾಗಿದೆ, ಸಂಪಾದಕಶಕ್ತಿಯು ಸ್ವಲ್ಪವಾಗಿದೆ, ನಮ್ಮವರು ಜೀವನಕ್ಕೆ ಸ್ವಲ್ಪವೇ ಸಾಕೆಂದು ತೃಪ್ತರಾಗಿರುವರು, ಸಾಮಾನ್ಯವಾಗಿ ಅನೇಕರು ಅಲ್ಪವಯಸ್ಸಿನಲ್ಲಿಯೇ ಮೃತರಾಗುವರು, ಬೇಸಾಯದಿಂದ ಜೀವಿಸುವವರು ಮೌಢ್ಯದಲ್ಲಿ ಮುಳುಗಿರುವರು, ಎಂಬೀ ಅಂಶಗಳು ವಿದಿತವಾಗುವುವು ನಾವುಗಳೊಡನೆ ಸದರೀ ದೇಶಗಳಲ್ಲಿಯಷ್ಟು ವಿಶೇಷಾಭಿವೃದ್ಧಿಯನ್ನು ಪಡೆಯುವುದು ಸಾಧ್ಯವಾಗದೆ ಇರಬಹುದು, ಅಥವಾ ಆದೇಶಗಳಲ್ಲಿ ಪ್ರಚಾರದಲ್ಲಿರುವ ಏರ್ಪಾಡುಗಳನ್ನು ಅವುಗಳು ಇದ್ದವು ಇದ್ದಂತೆಯೇ ವ್ಯತ್ಯಾಸ ಮಾಡದೆ ಇಲ್ಲಿಯೂ ಪ್ರಚಾರಕ್ಕೆ ತರುವುದು ಯುಕ್ತವಲ್ಲದೆಯೂ ಇರಬಹುದು, ಆದರೂ ನಾವುಗಳು ನಮ್ಮನಮ್ಮ ಕರ್ತವ್ಯಗಳನ್ನು ತೃಪ್ತಿಕರವಾಗಿ ನೆರವೇರಿಸಬೇಕಾದರೆ, ಪಾಶ್ಚಾತ್ಯದೇಶಗಳಲ್ಲಿ ನಾಗರಿಕಸ್ಥಿತಿಯಲ್ಲಿರುವ ಜನರು ಅನುಸರಿಸುತ್ತಿರುವ ಮಾರ್ಗಗಳನ್ನೂ ಅವರಿಗೆ ಲಭಿಸಿರುವ ಮಹತ್ಫಲಗಳನ್ನೂ ಸರ್ವದಾ ನಮ್ಮ ದೃಷ್ಟಿಯಲ್ಲಿಟ್ಟುಕೊಂಡು ಅದೇರೀತಿಯಲ್ಲಿ ವರ್ತಿಸುತ್ತಾ ಅವರಂತೆಯೇ ಅಭಿವೃದ್ಧಿಗೆಬರುವುದಕ್ಕೆ ಅನುಕೂಲವಾಗುವಹಾಗೆ ಪ್ರಯತ್ನಗಳನ್ನು ಮಾಡುತ್ತಾ ಬರಬೇಕು —ದೇಶೋನ್ನತಿಗೆ ಸಹಕಾರಿಯಾದ ಯಾವುದಾದರೂ ಮುಖ್ಯವಾದ ಏರ್ಪಾಡು ಯಾರೊಬ್ಬರ ಆಲೋಚನೆಗಾಗಲಿ ತೋರಿದಲ್ಲಿ, ಅವರು ಆಯಾಕಾಲದಲ್ಲಿ ಇರುವ ಸ್ಥಳೀಯಸಂಘದವರಿಗಾಗಲಿ ಕಮಿಟಿಯವರಿಗಾಗಲಿ ಅದನ್ನು ತಿಳಿಸಬೇಕು, ಅಥವಾ ಹೊಸದಾಗಿ ಒಂದುಸಂಘವನ್ನು ಏರ್ಪಡಿಸಿ ತನ್ಮೂಲಕ ಪ್ರಜೆಗಳಿಗೆ ಅದನ್ನು ಗ್ರಹಿಸುವಂತೆ ಬೋಧಿಸುವಪ್ರಯತ್ನಮಾಡಿ ಈವಿಷಯವನ್ನು ಸರ್ಕಾರದವರಿಗೂ ತಿಳಿಯಪಡಿಸಿ ಕಾರ್ಯವನ್ನು ಸಫಲಗೊಳಿಸಬೇಕು ರಾಜ್ಯಭಾರನಿರ್ವಹಣಕ್ಕೆ ಅಥವಾ ಅರ್ಥೋತ್ಪತ್ತಿಗೆ ಸಂಬಂಧಪಟ್ಟವಿಷಯಗಳಲ್ಲಿ ಸಾಧ್ಯವಾಗುವ ಏರ್ಪಾಡನ್ನು ಕುರಿತು ಯಾರಾದರೂ ಕೊಡಬಹುದಾದ ಸಲಹೆಯು ಬಹುಜನೋಪಯುಕ್ತವಾದದ್ದಾಗಿಯೂ ಪ್ರಮುಖರಾದಜನರಿಂದ ಅನುಮೋದಿತವಾಗಿಯೂ ಇರುವಂಥಾದ್ದಾದರೆ ಅಂಥಸಲಹೆಯನ್ನು ಸರ್ಕಾರದವರು ವಿಶೇಷಆದರಪೂರ್ವಕವಾಗಿ ಪರ್ಯಾಲೋಚನೆಗೆತೆಗೆದುಕೊಳ್ಳುವರೆಂತ ದೃಢವಾಗಿನಂಬಬಹುದೆಂದು ತಮಗೂ, ತಮ್ಮಮುಖಾಂತರ ಈಸಂಸ್ಥಾನದ ಸಮಸ್ತಪ್ರಜೆಗಳಿಗೂ ತಿಳಿಯಪಡಿಸಬೇಕೆಂದು ಶ್ರೀಮನ್ಮಹಾರಾಜಾಸಾಹೇಬ್ ಬಹಾದುರವರು ನನಗೆ ಆಜ್ಞಾಪಿಸಿರುತ್ತಾರೆ.

ಬಹುಮಾನ ವಿನಿಯೋಗ ಸಭೆಯು

ಕಳೆದ ತಾ ೩೧ ರಲ್ಲಿ ಶಿವಮೊಗ್ಗ ವೆಸ್ಲಿಯನ್ ಮಿಷನ್ ಪೇಟೆ ಗಂಡುಮಕ್ಕಳ ಪಾಠಶಾಲೆಯಲ್ಲಿ ಮಕ್ಕಳಿಗೆ ಬಹುಮಾನಗಳನ್ನು ಕೊಟ್ಟರು. ತಕ್ಕಮಟ್ಟಿಗೆ ಸ್ಕೂಲನ್ನು ಅಲಂಕರಿಸಿದ್ದರು. ಬಾಲಕರೂ ದೊಡ್ಡ ಮನುಷ್ಯರೂ ಸಭೆಗೆ ಬಂದಿದ್ದರು. ರೆವ್ ಕಾರ್ಟ್‌ಲೆಡ್ಜ್ ದೊರೆಯವರು ಪತ್ನಿ ಪುತ್ರಿಯರೊಡನೆ ದಯಮಾಡಿದ್ದರು. ಭಗವತ್ಪ್ರಾರ್ಥನೆ ನಡೆದ ನಂತರ ಸ್ಕೂಲ್ ಹೆಡ್ ಮಾಸ್ಟರ್ ಫಣಿಯಪ್ಪನವರು ಈ ಪಾಠಶಾಲೆಯು ಪ್ರಾರಂಭಿಸಿ ಅರ್ಧ ಶತಮಾನವಾಗುತ್ತಾ ಬಂದಾಗ್ಯೂ ವರ್ತಕರ ಮತ್ತು ಬಡವರ ಮಕ್ಕಳೇ ಈ ಸ್ಕೂಲಿಗೆ ಬರುತ್ತಿರುವದರಿಂದಲೂ, ಸ್ಕೂಲಿಗೆ ಸೇರಿದ ಕೆಲವು ವರ್ಷಗಳಲ್ಲಿಯೇ ವಿದ್ಯಾವಂತರಾದೆವೆಂಬ ಅಭಿಪ್ರಾಯದಿಂದಲೂ ಸ್ಕೂಲ್ ಬಿಡುತ್ತಾ ಬಂದಿರುವ ವಾಡಿಕೆಯು ಮೊದಲಿನಿಂದಲೂ ಮತ್ತು ಈಗಲೂ ನಡೆಯುತ್ತಾ ಬಂದಿರುವದರಿಂದ ಪರೀಕ್ಷೆಗೆ ಸೇರಿ ಯಾರೂ ತೇರ್ಗಡೆ ಹೊಂದಿರಲಿಲ್ಲ. ಆದರೆ ಕಳೆದ ವರುಷ ಒಬ್ಬ ವಿದ್ಯಾರ್ಥಿ ತೇರ್ಗಡೆಯಾದನು. ಈ ವರುಷ ಇಬ್ಬರು ಪರೀಕ್ಷೆಗೆ ಹೋಗುತ್ತಾರೆ. ಕಳೆದ ವರ್ಷ ಸ್ಕೂಲಿನಲ್ಲಿ ಮಕ್ಕಳ ಸಂಖ್ಯೆ ೯೧ ಇದ್ದದ್ದು ಈಗ ೧೩೫ ಆಗಿರುತ್ತೆ ಎಂಬ ಅಭಿಪ್ರಾಯ ಸೂಚಿತವಾದ ಪಾಠಶಾಲೆಯ ರಿಪೋರ್ಟನ್ನು ಓದಿದರು. ಬಳಿಕ ಮಕ್ಕಳು ಸಭಿಕರಿಗೆ ಹೂಮಾಲೆ ಹಾಕಿ ಅಭಿನಯ ಗೀತ, ಹಾಡು, ಆರೋಗ್ಯ ವಿಷಯವಾದ ಸಂಭಾಷಣೆ ಮುಂತಾದವುಗಳಿಂದ ಸಭಿಕರನ್ನು ಸಂತೋಷಪಡಿಸಿದರು. ಆ ಮೇಲೆ ವೇ॥ ಶೇಷಶಾಸ್ತ್ರಿಗಳು ವಿದ್ಯಾವಿಷಯವಾದ ಉಪನ್ಯಾಸ ಮಾಡಿದರು. ಪರೀಕ್ಷೆಯಲ್ಲಿ ಪಾಸ್ ಆಗಿದ್ದ ಬಾಲಕರಿಗೂ, ಕ್ರಮವಾಗಿ ಸ್ಕೂಲಿಗೆ ಬಂದ ಬಾಲಕರಿಗೂ ತಕ್ಕ ಬಹುಮಾನಗಳನ್ನು ರೆವ್ ಸ್ಟಿಲಿಂಗ್‌ಲ ದೊರೆಯವರು ಕೊಟ್ಟ ನಂತರ ಬಾಲಕರು ಬಹುಮಾನ ಪಡೆದ ಹಾಡನ್ನು ಹೇಳಿ ಸಭಿಕರಿಗೆ ಶ್ರೇಯಃಪ್ರಾರ್ಥನೆಯನ್ನು ಮಾಡಲು ಸಭಾಧ್ಯಕ್ಷರಾದ ರೆವ್ ಕಾರ್ಟ್‌ಲೆಡ್ಜ್ ದೊರೆಯವರು ಇವುಗಳನ್ನೆಲ್ಲಾ ನೋಡಿ ಸಂತೋಷಕರವಾದ ಮಾತುಗಳನ್ನಾಡಿ ಬಳಿಕ ಸಭೆಯನ್ನು ಮುಕ್ತಾಯ ಮಾಡಿದರು.

ಅಪಾಯಕರವಾದ ಹೊಲಸು ವಾಡಿಕೆಗಳು

ರೈಲ್ವೆ ಗಾಡಿಯಲ್ಲಿ ಯಾ ಜಟಕಾದಲ್ಲಿ ಪ್ರಯಾಣ ಮಾಡುವಾಗ ಇಲ್ಲವೆ ಅಂಗಡಿಗಳಲ್ಲಿ ವ್ಯಾಪಾರ ಸಾಗಾರ ಮಾಡುವಾಗ ಕೆಲವರು ಅವಸರದಿಂದ ಮುಕ್ಕಾಲು, ಆಣೆ, ರೂಪಾಯಿ ಮೊದಲಾದ ನಾಣ್ಯಗಳನ್ನು ಬಾಯಲ್ಲಿ ಕಚ್ಚಿಕೊಳ್ಳುವದು ಎಲ್ಲರೂ ನೋಡಿಯೇ ಇದ್ದಾರೆ. ಚಿಕ್ಕಂದಿನಿಂದ ಹಿಡಿದು ದೊಡ್ಡವರಾಗುವವರೆಗೂ ನಾಣ್ಯಗಳು ದೊಡ್ಡವರಿಂದಲೂ ತಿಳಿಯದಂಥ ಬಿಕ್ಕಟ್ಟಿನಿಂದಲೂ [illegible] ಸಲ ಥೂ ಎಂದು ಹೊಲಸು ಜೊಲ್ಲು ಮಾಡಿ ಹೊಲಸು ಜೇಬಿಗೆ ಬೀಳುವಂಥದ್ದು, ಬಹು ಜನರ ಕೊಳಕು ರೋಗ ಪೀಡಿತರ ಕೈಯಿಂದ ಇಟ್ಟಿರುವಂಥದ್ದು. ಜನರ ಕೈಯಲ್ಲಿ ಬಂದು ಸೇರುವ ಒಂದು ನಾಣ್ಯವು ಅವರ ಕೈ ಸೇರುವ ಮೊದಲು ಸಾವಿರಾರು ಜನರ ಹೊಲಸು ಕೈಗಳನ್ನು ದಾಟಿಕೊಂಡು ಬಂದಂತಹದಲ್ಲವೇ? ಇಂತಹ ನಾಣ್ಯಗಳನ್ನು ಜನರು ಮುಟ್ಟುವುದೇ ಅಪಾಯ, ಅವರಲ್ಲಿಯೂ ಬಾಯಲ್ಲಿ ಇಡುವುದು ಎಂತಹ ಹೊಲಸು ಕೆಲಸ! ಮನುಷ್ಯನನ್ನು ಕಾಡಿಸುವ ಅನೇಕ ರೋಗಗಳಿಗೆ ಅವರ ಈ ವಿಧದ ಹೊಲಸು ವಾಡಿಕೆಗಳೇ ಕಾರಣವಾಗಿವೆ. ಮಕ್ಕಳಿಗೆ ಆಟಕ್ಕೆ ಇಂತಹ ಹೊಲಸು ನಾಣ್ಯಗಳನ್ನು ಕೊಡುವ ಪದ್ಧತಿಯು ಜನರಲ್ಲಿ ಹೋಗಿಲ್ಲ. ಇಂತಹ ಪದ್ಧತಿಯು ಮಕ್ಕಳಲ್ಲಿ ವಿವಿಧ ರೋಗಗಳನ್ನು ಹುಟ್ಟಿಸುತ್ತದೆ ಮಾತ್ರವಲ್ಲ, ಇದು ಅನಾಯಕರವಾದ ಹೊಲಸೂ ಆಗಿದೆ.

ಟಪ್ಪಾಲು ಚೀಟುಗಳನ್ನು ನಾಲಗೆಯಲ್ಲಿ ಮುಟ್ಟಿಸಿ ಲಕೋಟೆಗಳಿಗೆ ಅಂಟಿಸುವ ಇನ್ನೊಂದು ವಾಡಿಕೆಯು ದೇಶದಲ್ಲಿ ವಿದ್ಯಾವಿಹೀನರಿಂದ ಹಿಡಿದು ವಿದ್ಯಾವಂತರವರೆಗೆ ರೂಢಿಯನ್ನು ಹೊಂದಿದೆ. ಈ ಪದ್ಧತಿಯು ಒಳ್ಳೆಯದೇ? ಚೀಟುಗಳ ಮೇಲೆ ಅಂಟಿಸಿರುವ ಗ್ಲೂ ಅಂಟು ಯಾವುದರಿಂದ ತಯಾರಿಸಲ್ಪಟ್ಟಿದ್ದು? ಮೃಗಗಳ ಕೊಬ್ಬು, ಗೊರಸು, ಚರ್ಮಗಳ ಕ್ರೋಢೀಕರಣದಿಂದಲ್ಲವೇ? ಶಾಕಾಹಾರಿಗಳಾದ ಜನರು ಇದನ್ನು ಲಕ್ಷಿಸದೆ ನಾಲಗೆಯಲ್ಲಿ ಅದನ್ನು ನೆಕ್ಕುವದು ಎಂತಹ ಹೊಲಸು! ನಾಲಗೆಯ ಬದಲಿಗೆ ಬೆರಳನ್ನು ನೀರಿಗೆ ಮುಳುಗಿಸಿ ಚೀಟನ್ನು ಒದ್ದೆ ಮಾಡಿ ಲಕೋಟೆಗೆ ಅಂಟಿಸುವುದು ಉಚಿತವಲ್ಲವೇ? ಒಂದು ಸಲ ಆರೋಗ್ಯವು ಕೆಟ್ಟು ಹೋದರೆ ಅದನ್ನು ಪುನಃ ಗಳಿಸಿಕೊಳ್ಳುವುದು ಎಷ್ಟೋ ಕಷ್ಟ. ಜನರಿಗೆ ಈ ವಿಷಯ ತಿಳಿದಿದ್ದರೂ ತಿಳಿಯದವರ ಹಾಗೆ ಇಂತಹ ಅನೇಕ ಹೊಲಸು ವಾಡಿಕೆಗಳನ್ನು ಆಚರಿಸೋಣದರಿಂದ ರೋಗಗ್ರಸ್ತರಾಗುವರು. ಆದದರಿಂದ ಅಂಥಾ ದುರಾಚಾರಗಳನ್ನು ತ್ಯಜಿಸಿ ಆರೋಗ್ಯವನ್ನು ಕಾಪಾಡಿಕೊಳ್ಳುವ ಹಾಗೆ ಪ್ರಯತ್ನಿಸುವವರಾಗಬೇಕಾಗಿದೆ.

ಚಿತ್ರದುರ್ಗ ಡಿಸ್ಟ್ರಿಕ್ಟ್ ಉಪಾಧ್ಯಾಯ ಸಂಘ

ವಾರ್ಷಿಕೋತ್ಸವವೂ, ವಿದ್ಯಾಶಾಲೆಯ ಪ್ರದರ್ಶನವೂ.

ಈ ಉತ್ಸವವು ಡಿಸೆಂಬರ್ ತಾ ೨೮ ಮತ್ತು ೨೯ ರಲ್ಲಿ ನಡೆಯಿತು. ಆ ದಿನಗಳಲ್ಲಿ ಎ ವಿ ಸ್ಕೂಲ್ ಹೊಸ ಕಟ್ಟಡದ ಮುಂಭಾಗದಲ್ಲಿ ಕದಳೀಸ್ತಂಭ ತೋರಣ ಬಾವುಟಾಗಳಿಂದ ಅಲಂಕರಿಸಿ, ಪರಸ್ಥಳಗಳ ಉಪಾಧ್ಯಾಯರು ಇಳಿದುಕೊಳ್ಳುವುದಕ್ಕೂ, ಅವರ ಊಟಕ್ಕೂ ಬೇರೆ ಬೇರೆ ಸ್ಥಳಗಳನ್ನು ಏರ್ಪಡಿಸಿದ್ದರು. ತಾ ೨೮ನೇ ಶನಿವಾರ ಬೆಳಿಗ್ಗೆ ಸಂಘದ ಪ್ರೆಸಿಡೆಂಟ್ ಮ್ಹ॥ ತಿರುಮಲಾಚಾರ್ಯರು, ಮ॥ ಲಕ್ಷ್ಮೀಪತಯ್ಯನವರು, ಡಿಸ್ಟ್ರಿಕ್ಟ್ ಅಧಿಕಾರಿಗಳು, ಬ್ರಾಂಚ್ ಸಂಘಗಳ ಸೆಕ್ರೆಟರಿಗಳು, ಮೆಂಬರುಗಳು, ವರ್ತಕರು ಎ ವಿ ಸ್ಕೂಲ್ ಹಾಲು ಕಿಕ್ಕಿರಿಯುವಂತೆ ಹಾಜರಾಗಿದ್ದರು. ಪ್ರೆಸಿಡೆಂಟರವರು ಅಗ್ರಾಸನವನ್ನು ವಹಿಸಿ ಆ ದಿನದ ಕಾರ್ಯಗಳನ್ನು ಪ್ರಾರಂಭಿಸಿದರು. ದೇವರ ಪ್ರಾರ್ಥನೆಯು ನಡೆದ ತರುವಾಯ ಸೆಕ್ರೆಟರಿಯವರು ಕಳೆದ ವರ್ಷ ನಡಿಸಿದ ಮುಖ್ಯಾಂಶಗಳನ್ನು ರಿಪೋರ್ಟಿನ ಮೂಲಕ ಓದಿಹೇಳಿದರು. ರಿಪೋರ್ಟಿನ ಮುಖ್ಯಾಂಶಗಳೇನೆಂದರೆ, ಸಂಘದ ಉದ್ದೇಶ, ಮೆಂಬರುಗಳ ಸರಾಸರಿ ಹಾಜರಿ, ನಡಿಸಿದ ಉಪನ್ಯಾಸಗಳು, ಪ್ರಾಕ್ಟಿಕಲ್ ಕ್ಲಾಸುಗಳು, ವಾಲಂಟಿಯರ ಸ್ಕೂಲು, ಸಂಘದ ಅಭಿವೃದ್ಧಿಯ ಮಾರ್ಗಗಳು, ಪ್ರಯೋಜನಾಂಶಗಳು. ಅನಂತರ ಪ್ರೆಸಿಡೆಂಟರು ಸಂಘದ ಪ್ರಯೋಜನ, ಅದರ ಅಭಿವೃದ್ಧಿಯ ವಿಚಾರಗಳನ್ನು ಕುರಿತು ದೀರ್ಘವಾಗಿ ಪ್ರಸ್ತಾಪಮಾಡಿದರು.

ಮಧ್ಯಾಹ್ನ ೧ ಘಂಟೆಯಿಂದ ಮೆಂಬರುಗಳು ಹೈ ಸ್ಕೂಲ್ ಕಟ್ಟಡದಲ್ಲಿ ಸೇರಿದರು. ಆಗ್ಗೆ ಹೈ ಸ್ಕೂಲು ಮತ್ತು ಇತರ ಸ್ಕೂಲುಗಳ ವಿದ್ಯಾರ್ಥಿಗಳು ಕೂಡಿದರು. ಮ॥ ಎಂ ಕೃಷ್ಣಯ್ಯಂಗಾರ್ಯರವರು ಸೈನ್ಸ್ ಶಾಸ್ತ್ರದಲ್ಲಿ ಕೆಲವು ಪ್ರಯೋಜನಾಂಶಗಳನ್ನೂ ಮತ್ತು ಆಶ್ಚರ್ಯಕರವಾದ ಅಂಶಗಳನ್ನೂ ತಕ್ಕ ಉಪಕರಣಗಳಿಂದ ತಿಳಿಸಿದರು. ಹೈಡ್ರೋಜನ್, ಕಾರ್ಬನ್ ಮೊದಲಾದ ಅನಿಲಗಳನ್ನು ಸೀಸೆಗಳಲ್ಲಿ ಹಿಡಿದು ಅವುಗಳ ಪ್ರಯೋಜನಗಳನ್ನು ತೋರಿಸ್ದು ಮೊದಲನೆಯದು, ಡೈನಮೊ ಎಂಬ ವಿದ್ಯುಚ್ಛಕ್ತಿಯ ಮಹತ್ಕಾರ್ಯಗಳು, ಬಾರಾಮಿಟರ್, ಏರ್ ಪ್ರೆಷರ್, ಸೆವೆನ್ ಕಲರ್ಸ್, ಟೆಲಿಸ್ಕೋಪ್, ಇವನ್ನು ವಿವರಿಸಿದರು. ಸಾಯಂಕಾಲ ಟೆನ್ನಿಸ್, ಬ್ಯಾಡ್ಮಿಂಟನ್, ಫುಟ್‌ಬಾಲ್, ಕ್ರಿಕೆಟ್, ಕಾಯಿಡ್ಸ್ ಮೊದಲಾದ ಆಟಗಳಲ್ಲಿ ಪಂದ್ಯಗಳೇರ್ಪಡಿಸಿದ್ದರು. ಪ್ರೆಸಿಡೆಂಟರವರು ಹೈ ಸ್ಕೂಲಿನಿಂದ ಎಲ್ಲಾ ಮೆಂಬರುಗಳ ಸಮೇತ ಬಂದು ಎಲ್ಲವನ್ನೂ ನೋಡಿಕೊಂಡು ಬಿಡಾರಗಳಿಗೆ ತೆರಳಿದರು.

ತಾ ೨೯ನೇ ಭಾನುವಾರ ಬೆಳಿಗ್ಗೆ ಪುನಃ ಎಲ್ಲರೂ ಸಭೆ ಸೇರಿದರು. ಅ॥ ಡೆಪ್ಯುಟಿ ಇನ್ಸ್‌ಪೆಕ್ಟರ್ ಮ್ಹ॥ ದಾವೂದ್‌ಸಾಹೇಬರವರು ಅಗ್ರಾಸನವನ್ನು ವಹಿಸಿದರು. ಮ॥ ವೀರಭದ್ರಪ್ಪನವರು ಕಿಂಡರಗಾರ್ಟನ್ ಪದ್ಧತಿಯ ವಿಸ್ತಾರವಾಗಿ ಉಪನ್ಯಾಸಮಾಡಿದರು. ಎ ವಿ ಸ್ಕೂಲ್ ಅ॥ ಮಾಸ್ಟರವರು ಮಕ್ಕಳ ಒಂದು ಕ್ಲಾಸನ್ನು ಕರೆತಂದು ಮೇಲೆ ಹೇಳಿದ ಕೆಲವಂಶಗಳನ್ನು ತೋರಿಸಿದರು. ತರುವಾಯ ಛೇರ್‌ಮನ್ ಮ॥ ದಾವೂದ್‌ಸಾಹೇಬರವರು ಈ ನವೀನ ಪದ್ಧತಿಯನ್ನು ವಿವರಿಸಿ ಸಭೆಯನ್ನು ಮುಕ್ತಾಯಮಾಡಿದರು.

ಮಧ್ಯಾಹ್ನ ವಿದ್ಯಾ ವಸ್ತುಪ್ರದರ್ಶನಶಾಲೆಯನ್ನು ಪ್ರಾರಂಭಿಸಿದರು. ಅಡ್ವೋಕೇಟ್ ಮ॥ ವೆಂಕಟರಾಮಣ್ಣನವರು ಇದನ್ನು ನೆರವೇರಿಸಿದರು. ಮಧ್ಯಾಹ್ನ ೩ ಘಂಟೆಗೆ ಎ ವಿ ಸ್ಕೂಲು ಹಾಲಿನಲ್ಲಿ ಕೆಲವು ರಾಯರುಗಳು, ಪೆನ್ಷನ್ ಆಫೀಸರುಗಳು, ಅಮಲ್ದಾರರು, ಶ್ರೀ ವರ್ತಕರು, ಮೆಂಬರುಗಳು ಎಲ್ಲಾ ಕೂಡಿದರು. ಸೆಕ್ರೆಟರಿಯವರು ಚೇರ್‌ಮನ್ ರಾಗಿ ನಂಜು ವೆಂಕಟರಾಮಣ್ಣನವರು ಈ ಕಾರ್ಯಗಳನ್ನು ನೆರವೇರಿಸಲು ಒಪ್ಪಿದ್ದಕ್ಕಾಗಿ ಸಂಘದ ಎಲ್ಲಾ ಮೆಂಬರುಗಳಿಗೂ ಉಂಟಾಗಿರುವ ಸಂತೋಷವನ್ನು ತಿಳಿಯಪಡಿಸಿ ಪ್ರದರ್ಶನಗಳ ಪ್ರಯೋಜನವನ್ನು ಕೊಂಚ ಹೇಳಿ ಯಾವ್ಯಾವ ಸ್ಕೂಲಿನವರು ಸಾಮಾನುಗಳನ್ನು ಕಳುಹಿಸಿರುವರು, ಎಂಥೆಂಥಾ ವಸ್ತುಗಳು ಪ್ರದರ್ಶನಕ್ಕಾಗಿ ಬಂದಿವೆ ಎಂಬುದನ್ನು ವಿವರಿಸಿ ಹೇಳಿದರು. ತರುವಾಯ ಸಂಘದ ಪ್ರೆಸಿಡೆಂಟರವರು ಸಂಗಡಿಗೆ ಪ್ರದರ್ಶನ ಸಮಾಯ, ಆಗ್ಗೆ ಪ್ರಯೋಜನ ಇವುಗಳನ್ನು ಕುರಿತು ವಿಸ್ತಾರವಾಗಿ ವಿವರಿಸಿದರು. ಚೇರ್‌ಮನ್‌ರವರು ಸಮಯೋಚಿತವಾಗಿ ಕೆಲವು ಮಾತುಗಳನ್ನು ಹೇಳಿ ಕುಳಿತುಕೊಂಡರು. ತಾಂಬೂಲಾದಿಗಳು ಹಂಚಲ್ಪಟ್ಟ [illegible] ಆಗುತ್ತಿರುವಲ್ಲಿ ಛೇರ್‌ಮನ್ ಮ॥ ವೆಂಕಟರಾಮಣ್ಣನವರು ಎಲ್ಲರೊಡಗೆ ಹೊರಟು ಪ್ರದರ್ಶನಶಾಲೆಯನ್ನು ತೆರೆದು ಕ್ರಮವಾಗಿ ಎಲ್ಲವನ್ನೂ ನೋಡುತ್ತಾ ಚಿತ್ರವಿಚಿತ್ರವಾದ ವಸ್ತುಗಳನ್ನು ಸ್ತೋತ್ರಮಾಡುತ್ತಾ ಬಹಳ ಆನಂದಪಟ್ಟರು. ಆ ದಿನ ಸಾಯಂಕಾಲದ ವರೆಗೂ ಪಟ್ಟಣದ ಜನರೂ ವಿದ್ಯಾರ್ಥಿಗಳೂ ತಂಡತಂಡವಾಗಿ ಬಂದು ಪ್ರದರ್ಶನವಸ್ತುಗಳನ್ನು ನೋಡಿಕೊಂಡು ಹೋದರು. ವಾಲಂಟಿಯರುಗಳು ಇದ್ದು ಎಲ್ಲರಿಗೂ ವಸ್ತುಗಳನ್ನು ವಿವರಿಸಿ ಹೇಳುವದು ಏರ್ಪಾಟಾಗಿತ್ತು. ಗ್ರಾಮಾಂತರಗಳಿಂದಲೂ ತಾಲ್ಲೂಕುಗಳಿಂದಲೂ ಬಂದಿದ್ದ ಅನೇಕ ಜನ ಉಪಾಧ್ಯಾಯರು ಈ ಉತ್ಸವಕ್ಕೆ ಕಾರಣರಾಗಿ ನೆರವೇರುವ ವರೆಗೂ ಅತ್ಯಂತ ಸಂತೋಷಪಡುತ್ತ ಕೊನೆಯ ಸುಮಾರಾಗಿ [illegible] ತಮ್ಮ ತಮ್ಮ ಊರುಗಳಿಗೆ ತೆರಳಿದರು.

ಮರುದಿನ ಗರ್ಲ್ಸ್ ಸ್ಕೂಲ್ ಹೆಡ್ ಮಿಸ್ಟ್ರೆಸ್ ರವರು ಸಭಾಮಧ್ಯದಲ್ಲಿ [illegible] ಉತ್ಸಾಹದಿಂದ ಊರಲ್ಲಿರುವ ಎಲ್ಲ ಹೆಂಗಸರನ್ನೂ ಮತ್ತು ಹುಡುಗಿಯರನ್ನೂ ಕರೆಸಿಕೊಂಡು ಪ್ರದರ್ಶನದ ವಸ್ತುಗಳನ್ನೆಲ್ಲಾ ತೋರಿಸಿದರು. ಆ ದಿನ ಸುಮಾರು ೫೦೦ ಜನ ಸ್ತ್ರೀಯರು ಬಂದು ನೋಡಿ ಸಂತೋಷಪಟ್ಟರು.

ಈ ವಿಶೇಷ ಕಾರ್ಯಗಳು ಮೂರು ದಿನಗಳು ನೆರವೇರಿದ ಬಳಿಕ ಉಪಾಧ್ಯಾಯರುಗಳಿಗೆಲ್ಲಾ ಮ॥ [illegible] ರವರು ಸಂತೋಷದಿಂದ ಸುಭೋಜನ ಮಾಡಿಸಿದರು. ಇವರ ಉದಾರತೆ ಪ್ರಸ್ತೋತ್ರಾರ್ಹವಾಗಿದೆ. ಮತ್ತು ಹೊರಗಿನಿಂದ ಬಂದ ಬ್ರಾಹ್ಮಣ ಉಪಾಧ್ಯಾಯರುಗಳಿಗೆಲ್ಲಾ ನಮ್ಮ ಅಮಲ್ದಾರ್ ಮ॥ ವೆಂಕಟರಾಯರವರೂ, ಡೆಪ್ಯುಟಿ ಇನ್ಸ್‌ಪೆಕ್ಟರ್ ಮ॥ ತಿರುಮಲಾಚಾರ್ಯರೂ ಅತ್ಯಂತ ವಿಶ್ವಾಸದಿಂದ ಭೋಜನಾದಿಗಳಿಗೆ ಅನುಕೂಲಪಡಿಸಿದ್ದಕ್ಕಾಗಿ ಮೆಂಬರುಗಳೆಲ್ಲಾ ಕೃತಜ್ಞರಾಗಿರುವರು.

ಸೀತಾ ಫಣಿಯಪ್ಪ, ಸೆಕ್ರೆಟರಿ

ಪ್ರಾಥಮಿಕ ಮತ್ತು ಬಲಾತ್ಕಾರ ಬಾಲ್ಯವಿದ್ಯಾಭ್ಯಾಸ

ಯಾವ ದೇಶವೇ ಆಗಲಿ ಉಚ್ಛ್ರಾಯ ಸ್ಥಿತಿಯಲ್ಲಿ ಇರುವುದಕ್ಕೂ ನಾಗರೀಕತೆಯಲ್ಲಿ ಪ್ರಾಶಸ್ತ್ಯವನ್ನು ಪಡೆದಿರುವುದಕ್ಕೂ ವಿದ್ಯೆಯು ಮುಖ್ಯ ಕಾರಣವಾಗಿದೆ ಎಂಬ ಅಂಶವು ದೇಶದ ಏಳಿಗೆಗೆ ಬದ್ಧಕಂಕಣರಾಗಿರತಕ್ಕ ಮುಖಂಡರೆಲ್ಲರಿಗೂ ತಿಳಿದಿದೆ. ಯಾವ ದೇಶದಲ್ಲಿ ಬಹು ಮಂದಿ ವಿದ್ಯಾವಂತರಾಗಿರುವರೋ ಆ ದೇಶವು ಉತ್ತಮಸ್ಥಿತಿಯಲ್ಲಿದೆ ಎಂದು ಧಾರಾಳವಾಗಿ ಹೇಳಬಹುದು. ಪ್ರಕೃತ ನಮ್ಮ ಈ ಭರತಖಂಡದಲ್ಲಿ ಎಲ್ಲೆಲ್ಲೂ ಬಲಾತ್ಕಾರ ಬಾಲ್ಯವಿದ್ಯಾಭ್ಯಾಸದ ಆವಶ್ಯಕತೆಯನ್ನು ವಿದ್ಯಾಪಕ್ಷಪಾತಿಗಳೆಲ್ಲರೂ ಕಣ್ಣುತೆರೆದು ನೋಡುತ್ತಿರುವುದು ಸರಿಯಷ್ಟೆ. ಆದ್ದರಿಂದ ನಮ್ಮ ಮಾಹ್ನನೀಯರಾದ ಮಹಿಸೂರು ಸಂಸ್ಥಾನದಲ್ಲಿಯೂ, ಅಂಥಾ ವಿದ್ಯೆಯ ಫಲವನ್ನು ನಮ್ಮ ಸಂಸ್ಥಾನಕ್ಕೆ ಸೇರಿದ ಪ್ರತಿಯೊಬ್ಬ ಬಾಲಕನೂ—ಅವನು ಶ್ರೀಮಂತನಾಗಲಿ, ಬಡವನಾಗಲಿ, ಬ್ರಾಹ್ಮಣನಾಗಲಿ, ಇತರ ಮತದವನಾಗಲಿ, ಅನುಭವಿಸಬೇಕೆಂದು ಅಂಥಾ ವಿದ್ಯೆಯ ಬೀಜವನ್ನು ಹಾಕುವುದಕ್ಕೆ ಭೂಮಿಯನ್ನು ನಮ್ಮ ಸರಕಾರದವರು ಸಿದ್ಧಮಾಡಲು ತೊಡಗಿರುತ್ತಾರೆ. ಇದು ಶ್ಲಾಘ್ಯವಾದದ್ದೇ ಸರಿ. ಆದರೆ ಈ ವಿಷಯದಲ್ಲಿ ನವನಾಗರಿಕ ಕಾಲದ ಜನಗಳ ಅಭಿಪ್ರಾಯವು ಹಾಗಿರಲಿ. ಪೂರ್ವ ಕಾಲದವರು ಯಾವ ರೀತಿಯಲ್ಲಿ ಅಭಿಪ್ರಾಯಪಡುತ್ತಾರೆಂಬ ವಿಷಯವನ್ನು ಸ್ವಲ್ಪ ಪರ್ಯಾಲೋಚಿಸೋಣ.

ಸಾಧಾರಣವಾಗಿ ಯಾರಾದರೂ ಒಬ್ಬ ಪೂರ್ವ ಕಾಲದ ವ್ಯಕ್ತಿಯು ಸಂಗಡ ಯಾತಕ್ಕೆ ನಿನ್ನ ಮಗನನ್ನು ಮಠಕ್ಕೆ ಕಳುಹಿಸಲಿಲ್ಲವೆಂದು ಕೇಳಿದರೆ "ಯಾವ ಚಾಕರಿಗೆ ಹೋಗಬೇಕು?" ಎಂಬ ಉತ್ತರವು ತಕ್ಷಣವೇ ಬರತಕ್ಕದ್ದು. ಪರೀಕ್ಷಿಸಿ ನೋಡತಕ್ಕ ವಿಚಾರಪರರಿಗೆಲ್ಲಾ ತಿಳಿಯದ ಅಂಶವಲ್ಲ. ಇದರಿಂದ ಒಂದು ವಿಷಯವನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳಬಹುದು. ಸರ್ವಸಾಧಾರಣವಾಗಿ ಸ್ವಲ್ಪ ಮಂದಿ ವಿನಾ ನಾಗರಿಕನೇ ಆಗಲಿ, ಅನಾಗರಿಕನೇ ಆಗಲಿ ರಾಜಕಾರ್ಯದಲ್ಲಿ ಅಂದರೆ ಸರಕಾರದ ನೌಕರನಾಗಿದ್ದರೆ ಪರಿಣಾಮವೇ ಹೊರತು ಇತರ ಮಾರ್ಗದಲ್ಲೂ ಗೌರವವೂ, ಪರಿಣಾಮವೂ ಇಲ್ಲವೆಂಬ ಅಭಿಪ್ರಾಯವು ಅವರ ಮನಸ್ಸಿನಲ್ಲಿ ಅಂಕುರಿಸಿ ಅವರ ರಕ್ತಗಣಗಳೊಡನೆ ಸೇರಿಹೋಗಿದೆ. ಆದರೆ ಸರಕಾರ ನೌಕರಿಯು ಅಗೌರವವೆಂದು ಎಣಿಸತಕ್ಕದ್ದಾಗಲಿ, ಅಥವಾ ಗೌರವ ಕಸುಬು ಆಗಲಿ ಅಗೌರವವೆಂದು ಅಭಿಪ್ರಾಯಪಡತಕ್ಕದ್ದೇ ಆಗಲಿ ಉಚಿತವಲ್ಲ. ಆದ್ದರಿಂದ ಮೇಲೆ ಹೇಳಿದ ಅಭಿಪ್ರಾಯವು ಬಹು ಮಂದಿಯ ಮನಸ್ಸಿನಲ್ಲಿ ಬೇರೂರಿರುವುದರಿಂದ ಅಂಥಾ ಅಭಿಪ್ರಾಯವನ್ನು ಹೋಗಲಾಡಿಸಿ ಬಾಲ್ಯವಿದ್ಯೆಯೇ ಆಗಲಿ ಪ್ರೌಢವಿದ್ಯೆಯೇ ಆಗಲಿ ಸರಕಾರದ ಉದ್ಯೋಗಮಾಡುವುದಕ್ಕೇ ಅಲ್ಲ, ಇತರ ಉದ್ದಿಷ್ಟಗಳು ಮತ್ತು ಫಲಗಳು ಬಹಳವಾಗಿವೆ ಎಂಬ ಅಂಶಗಳನ್ನು ವಿದ್ಯಾವಂತರಲ್ಲದ ಜನಗಳಲ್ಲಿ ಅಂಕುರಿಸುವ ಹಾಗೆ ಮಾಡಬೇಕು. ಹೇಗೆ ಮಾಡಿದರೆ ಸಾಧ್ಯವೇ? ಅದರಿಂದ ಫಲವುಂಟೇ? ಎಂಬ ಪ್ರಶ್ನೆಗಳಿಗೆ ಸಮುತ್ತರವು ದೊರೆಯುತ್ತದೆಯೇ ಸ್ವಲ್ಪ ಹೊತ್ತು ಗಮನಿಸೋಣ. ಆದರೂ ಅವಿದ್ಯಾವಂತರಿಗೆ ಅಂದರೆ ಅನಕ್ಷರಸ್ಥರಿಗೆ ಈ ಹೊಸ ವಿಷಯವನ್ನು ಅವರು ಮನನಮಾಡುವ ಹಾಗೆ ತಿಳಿಸಬೇಕಾದದ್ದು ವಿದ್ಯಾವಂತರ ಮುಖ್ಯ ಕರ್ತವ್ಯವಾಗಿದೆ. ಆಗಾಗ್ಗೆ ವಿದ್ಯಾಭ್ಯಾಸದ ಇಲಾಖಾ ಪರೀಕ್ಷಾಕರ್ತರೂ, ಉಪಾಧ್ಯಾಯರುಗಳೂ, ಗ್ರಾಮಸ್ಥರನ್ನು ಒಟ್ಟಾಗಿ ಕೂಡಿಸಿ ಉಪನ್ಯಾಸಗಳ ಮೂಲಕ ಅವರಿಗೆ ಸುಲಭವಾಗಿ ಬೋಧೆಯಾಗುವ ಹಾಗೆ ಯುಕ್ತಿಯುಕ್ತವಾಗಿ ವಿಷಯಗಳನ್ನು ಹೇಳಬೇಕು. [illegible] ತ್ಕಾರವಿದ್ಯಾಭ್ಯಾಸಮಾಡಿಸುವುದರಿಂದ ಅನಕ್ಷರಸ್ಥರಾದ ಗ್ರಾಮಸ್ಥರನ್ನು ಒಪ್ಪಿಸತಕ್ಕದ್ದು. ಅನವಶ್ಯಕವೆಂದೂ, [illegible] ಕಲವರು ಅಭಿಪ್ರಾಯಪಡುವರು. ಆದರೆ ಅದರಿಂದ ಸ್ವಲ್ಪ ಪ್ರಯೋಜನವಿದೆ ಎಂದು ದೂರಾಲೋಚನೆ ಮಾಡಿದರೆ ಗೊತ್ತಾಗುವುದು. ಅನಕ್ಷರಸ್ಥರಾದ ಕೆಲವು ಅಲ್ಪಮತಿಗಳು ವಿದ್ಯೆಯ ಪ್ರಯೋಜನವನ್ನು ತಿಳಿದುಕೊಳ್ಳದೆ, ತಮ್ಮ ತಮ್ಮ ಮಕ್ಕಳನ್ನು ಮುಂದೆ ಸರಕಾರದಿಂದ ಕಾನೂನು ಅನುಸರಿಸಿ ಆಗತಕ್ಕ ಶಿಕ್ಷೆಗೂ ಗಮನಿಸದೆ, ಇಲ್ಲದ ಕಾರಣಗಳನ್ನು ಹೇಳಿ ಮಕ್ಕಳನ್ನು ಮನೆಯಲ್ಲೇ ಇಟ್ಟುಕೊಳ್ಳುವರು. ಆದರೆ ಮೊದಲು ಹೀಗೆ ಮಾಡುತ್ತಾರೆಂದೂ, ಶಿಕ್ಷೆಯಾದ ನಂತರ ಅವರವರೇ ಕಳುಹಿಸುತ್ತಾರೆಂದೂ ಹೇಳಬಹುದು. ಅದು ನಿಜವೇ. ಆದರೂ ಅಂಥಾ ಸಂಭವ ಸಾಧ್ಯವಾದಷ್ಟು ಒದಗದ ಹಾಗೆ ಅವರು ವಿದ್ಯೆ ಹೇಳಿಸುವುದು ಶ್ರೇಯಸ್ಕರ. ಅಥವಾ ಉದ್ಯೋಗಕ್ಕೆ ಅಲ್ಲವೆಂಬ ಅಭಿಪ್ರಾಯವನ್ನು ಮನನಮಾಡುವ ಈ ವಿಷಯಗಳನ್ನು ತಿಳಿಯಪಡಿಸುತ್ತಲೇ ಇರಬೇಕು. ಇದರಿಂದ ಸರಕಾರ ಶಿಕ್ಷೆಯ ಭಯವಿಲ್ಲದೆ ತಮ್ಮ ಮಕ್ಕಳನ್ನು ಕಳುಹಿಸುವುದು ತಪ್ಪಿ, [illegible] ಯನ್ನು ತಿಳಿದು ಸಾರಲು [illegible] ಇದು ಸರಕಾರಕ್ಕೆ ಭಾರವಾಗಿಯೂ ಪ್ರಜೆಗಳಿಗೆ ಉಪಕಾರಕವಾಗಿಯೂ [illegible] ಆಗುತ್ತದೆ. ಇದರ ಸ್ವಲ್ಪ ಫಲವುಂಟೆಂದು ಈಗ ಹೇಳಬಹುದು.

ನಮ್ಮ ಈ ಭರತ ಖಂಡದ ಪ್ರಜೆಗಳಲ್ಲಿ ಬಹುಮಂದಿ ವ್ಯವಸಾಯವಿದ್ಯೆಯನ್ನು [illegible] ನಮ್ಮ ಮನಸ್ಸಿಗೆ ಬಂದು ಕೇವಲ ಇತರ ವಿಷಯಗಳನ್ನು [illegible] ಗ್ರಾಮಸ್ಥರಾದ [illegible] ಗಾರರ ಮತ್ತು ಇತರ [illegible] ಮಕ್ಕಳಿಗೆ ಅಂಥಾ ವಿದ್ಯೆಯ [illegible] ಮುಖ್ಯವಾಗಿ ಕಲಿಸಬೇಕಾಗಿದೆ. ನಮ್ಮ ದೇಶದಲ್ಲಿ ಗ್ರಾಮಗಳೇ ಹೆಚ್ಚು [illegible] ಆದ್ದರಿಂದ ಅವರಿಗೆ ತಕ್ಕಂಥಾ [illegible] ಕೆ ಗಾರಿಕೆ ಕಲಿಸ [illegible] ಅವರು ಮುಖ್ಯವಾಗಿ [illegible] ಓದುವುದು, [illegible] ಬರೆಯುವುದು, ಲೆಕ್ಕ, ಇವು [illegible] ಸ್ಥಳ ಸುತ್ತುಮುತ್ತ ಪ್ರದೇಶಗಳೂ [illegible] ವಿಷಯವೂ ಕಲಿಸಬೇಕು. ತಮ್ಮ ತಮ್ಮ ನಿಜವಾದ ಮತವನ್ನು ಅನುಸರಿಸಿ [illegible] ಅಲ್ಲಿಯೂ ಗುರುಗಳಿಯರಲ್ಲಿಯೂ ಭಕ್ತಿಯುಂಟಾಗ [illegible] ಮಾಡತಕ್ಕದ್ದು ಮುಖ್ಯವೆಂದು ಆವಶ್ಯಕವಾದ ವಿಷಯ. ಅಲ್ಲದೆ ಆಯಾ ಗ್ರಾಮದ ಅಭ್ಯಾಸವು ಅವರಲ್ಲಿ ನಾಟುವ ಹಾಗೆ ಉಪಾಧ್ಯಾಯರುಗಳು ಬೋಧಿಸುವ ಹೊಸ ವಿಧಾನ ಕ್ರಮವನ್ನು ಅನುಸರಿಸಬೇಕು. ಈ ರೀತಿಯನ್ನು ಅನುಸರಿಸಿ ಬಲಾತ್ಕಾರ ಬಾಲ್ಯವಿದ್ಯಾಭ್ಯಾಸವನ್ನು ಎಲ್ಲಾ ಬಾಲಕರೂ ಹೊಂದುವ ಹಾಗೆ ಮಾಡಿ ಅದರಿಂದ ಅವರ ಧನಾರ್ಜನೆ ಶಕ್ತಿ ಹೆಚ್ಚುವುದು. ಕಸಬುಗಳು ವೃದ್ಧಿಗೆ ಬರುವುವು. ಪ್ರೌಢವಿದ್ಯಾಭ್ಯಾಸ ಮಾಡಿದರೂ ತಮ್ಮ ತಮ್ಮ ಗ್ರಾಮಕ್ಕೆ ಬಂದು ತಿಳುವಳಿಕೆಯನ್ನು ಇತರರಿಗೆ ಉಪದೇಶಿಸಿ ಹಿತಶೋಧಕರಾದ ತಮ್ಮ ಗ್ರಾಮಕ್ಕೆ ಕೊಟ್ಟು ಗ್ರಾಮವನ್ನು ಸರ್ವ ವಿಧದಲ್ಲಿಯೂ ವೃದ್ಧಿಗೆ ತಂದು, ಪಟ್ಟಣ ಸೌಭಾಗ್ಯಕ್ಕೆ ಬೇರೆಗಾಗಿ ಅಲ್ಪವೇತನಕ್ಕೆ ಸರಕಾರದಲ್ಲಿದ್ದು ಕೆಲಸಕ್ಕೆ ತಪ್ಪಿ, ತಾವೂ ಧನವನ್ನು ಸಂಪಾದಿಸಿ ಗ್ರಾಮಕ್ಕೂ ಉಪಕಾರ ಮಾಡಿ, ಸಕಲ ದೇಶಕ್ಕೂ ಉಪಕಾರವಾಗುವಂಥಾ ಮುಂದಿನ ಸಂತಾನಗಳಾಗುವರು.

ಬಿ ಎಸ್ ಜಿ

ವರ್ತಮಾನಕಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ವರ್ತಮಾನಗಳಿಗೆ ನಾವು ಸ್ಥಳಗ ಕೊಡಲಾರೆವು. ಆದಕಾರಣ ವರ್ತಮಾನಕಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ವರ್ತಮಾನವನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ವರ್ತಮಾನಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಬುಧಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ವರ್ತಮಾನಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂದು ಭರವಸೆ ಕೊಡೆವು. ವರ್ತಮಾನಗಳು ಹೆಚ್ಚು ಸಂಕ್ಷೇಪವಾಗಿರಬೇಕೆಂದು ಹೇಳುತ್ತೇವೆ.

ವರ್ತಮಾನಕಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹಿಡುವಳಿದಾರ್, ತುಮಕೂರು ತಾ॥ ಮರಳೂರು — ನಮ್ಮಲ್ಲಿಗೆ ಗುರು [illegible] ಹಿಡುವಳಿದಾರರು ಏಕನಾಗಿ ಅಮಲ್ದಾರರಿಗೆ ತಮ್ಮ ಅಹವಾಲನ್ನು [illegible]

ಪ್ರಯೋಜಕವೇ ಕು, ಇಲ್ಲವೇ ನೂತನ್ನ ಅರಿಕೆ ಮಾಡಿಕೊಳ್ಳಬೇಕು ಪ್ರಜೆಗಳ ಕಷ್ಟನಷ್ಟಗಳನ್ನು ನಿವಾರಣೆ ಮಾಡುವುದಕ್ಕೆ ಅಧಿಕಾರಿಗಳು ನೇಮಕ ಮಾಡಿ ಎಡನ್ನು ಮರೆಯಬಾರದು

ಚಂದಾದಾರ, ಬೆಳ್ಳಕೆರೆ ರೀಡಿಂಗ್ ರೂಂ — ನೀವು ಹೇಳುವ ಅಭಿಪ್ರಾಯವನ್ನು ಪ್ರಕಟಿಸಲು ನಮಗೆ ಅಭಿಪ್ರಾಯವಿಲ್ಲ ಅಲ್ಲಿನ ಸ್ಥಾನಾಂತರಕ್ಕೆ ಚಂದಾದಾರರು ಮೊದಲು ಸೆಕ್ರೆಟರಿಯವರಿಗೂ ಕಮಿಟಿ ಮೆಂಬರುಗಳಿಗೂ ತಿಳಿಸಿದರೆ ಅವರು ಸರ್ವಸಮ್ಮತವಾದ ರೀತಿ ನಡಿಸುತ್ತಾರೆ ಪರಸ್ಪರ ಐಕಮತ್ಯವೂ, ಸ್ನೇಹಭಾವವೂ, ಸರ್ವಸಮ್ಮತವೂ ಇದ್ದ ಹೊರತು ಏರ್ಪಾಡುಗಳು ಅಭಿವೃದ್ಧಿ ಹೊಂದಲಾರವು

ಒಬ್ಬ ಯಾತ್ರಾರ್ಥಿ, ಪೆಂಗಳೂರು ಸಿಟಿ — ನೀವು ತಿಳಿಸುವಂತೆ ಆ ದುರ್ನಡತೆಯ ಪ್ರವರ್ತಕರಿಗೆ ತಕ್ಕ ಶಿಕ್ಷೆಯಾಗಿದ್ದರೂ ನಿಮ್ಮ ಹೆಸರು ಪ್ರಕಟಿಸಿದ ಮಾತ್ರಕ್ಕೆ ನಮೆ ಮಾಡುವುದಾಗಲೋ ತಿಳಿಯದು ಇಂಥಾ ಬಾತ್ಮಿಯನ್ನು ನಾವು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ

ಪ್ರತಿಭೋಪಕಾರಿ, ತುಮಕೂರು — ನೀವು ಬರೆಯುವ ಸಂಗತಿಗಳನ್ನು ಮೊದಲು ಅಲ್ಲಿನ ಸಿವಿಲ್ ಸರ್ಜನ್‌ರವರಿಗೆ ತಿಳಿಸಿ ಅವರನ್ನು ಒಪ್ಪಿಸಿದರೆ ಅವರು ಆ ಮರ್ಯಾದೆಗಳನ್ನು ಅಂಗೀಕರಿಸುತ್ತಾರೆನ್ನುವುದಕ್ಕೆ ಅನುಮಾನವಿಲ್ಲ

ತ್ರಿಕಾಲದ ವೇ ಪದ್ಮನಾಭಾಚಾರ್ರವರು ರಚಿಸಿರುವ ನಮ್ಮ ಮಹಾಪ್ರಭುವಿನ ಶ್ರೇಯಃಪ್ರಾರ್ಥನಾ ಶ್ಲೋಕಗಳು ಅರ್ಥಸಹಿತವಾಗಿ ನಮ್ಮಲ್ಲಿಗೆ ಕಳುಹಿಸಲ್ಪಟ್ಟಿವೆ ಇದಕ್ಕಾಗಿ ನಮ್ಮ ಕೃತಜ್ಞತೆಯನ್ನು ವಂದಿಸಿ, ಕವನಗಳನ್ನು ಪ್ರಕಟಿಸಲು ಸಾಧ್ಯವಿಲ್ಲವೆಂದು ವ್ಯಸನಪಡುತ್ತೇವೆ

—ಎಡಿ]

ಕರೆಸ್ಪಾಂಡೆನ್ಸ್.

ಸತ್ಯವು ತಿಳಿಯಬೇಕು.

ಸ್ವಾ,

ಜನ್ಮ ಮಾಹೆ ೩ನೇ ತಾ ವೃತ್ತಾಂತ ಪತ್ರಿಕೆಯಲ್ಲಿ (1) ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ ಮತ್ತು (2) ಸಂಸ್ಥಾನ ಮಳೆಯ ತಾಲ್ಲೂಕು ಬೋರ್ಡು ಮೆಂಬರ್ ಚುನಾವಣೆ ವಿಚಾರವಾಗಿ ತಾವು ಅಪ್ರಕಟಿಸಿರುವ ಸಂಗತಿಗಳಾದರೂ ಎಲ್ಲವೂ ಸರಿಯಾಗಿ ಸ್ಪಷ್ಟವಾಗಿದೆ ಇದಕ್ಕೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ

ಆದರೆ ದಸರಾ ಮೀಟಿಂಗ್ ಚುನಾವಣೆಯಲ್ಲಿ ಮೆಂಬರುಗಳಾಗಿ ಚುನಾಯಿತರು ಆಸ್ಥಾನದ ಮತ್ತು ಬಹಾಯಕ ಪರ್ಕಾದ ಜನಗಳು ಗಾಡಿಯಾನಾಡಾಗಿ 100 ರೂಪಾಯಿ ಮತ್ತು ಅದಕ್ಕೆ ಮೇಲ್ಪಟ್ಟು ಮತ್ತು ಎರಡನೆಯವರಲ್ಲಿ ೫೦ ರೂಪಾಯಿ ಮತ್ತು ಮೇಲ್ಪಟ್ಟು ಜಮಾ ಕಂದಾಯ ಕೊಡುವವರು ಅರ್ಹರೆಂದು ಎರಸೋಣವಾಗಿದೆ ಈ ಕಂದಾಯವು ಒಟ್ಟು ತಾಲ್ಲೂಕಿನೊಳಗೆ ಕೊಡಬೇಕಾಗಿದೆಯೋ ಅಥವಾ ಒಂದು ಗ್ರಾಮಕ್ಕೆ ಅಷ್ಟು ಕೊಡಬೇಕೋ ಸ್ಪಷ್ಟಪಡಿಸಿದರೆ ಮಹೋಪಕಾರವಾದೀತು

ಕೆ ಗುರುಮೂರ್ತಯ್ಯ

[ಈ ಕಂದಾಯದ ಮೊತ್ತವು ತಾಲ್ಲೂಕಿನೊಳಗೆಯೇ ಹೊರತು ಒಂದು ಗ್ರಾಮಕ್ಕೆ ಮಾತ್ರ ಅಲ್ಲ —ಎಡಿ]

ಬೆಂಗಳೂರು ಶಾಸ್ತ್ರಬೋಧನಾ ವಿದ್ಯಾಶಾಲೆಯು

ಸ್ವಾ,

ಶಿಲ್ಪಶಾಸ್ತ್ರ ಶಾಸ್ತ್ರಾಭ್ಯಾಸವಾಗುವುದಕ್ಕಾಗಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಎಂಬ ಶಾಸ್ತ್ರಾಲಯವು ಪ್ರಾರಂಭಿಸಲ್ಪಟ್ಟಿರುವುದನ್ನು ಇಂದಿನ ದೇಶದಲ್ಲಿ ಕಲಿಯಲು ಸಾಧ್ಯವಾದ ಅನೇಕ ಶಾಸ್ತ್ರಗಳನ್ನು ಅಲ್ಲಿ ಕಲಿಸುವುದಾಗಿಯೂ, ಅಲ್ಲಿನ ವಿದ್ಯಾರ್ಥಿಗಳೂ ಕೂಡ ಶಾಸ್ತ್ರದಲ್ಲಿ ವಿಶೇಷ ಜ್ಞಾನವನ್ನು ಪಡೆದು ಎಂ ಎ ಪರೀಕ್ಷೆಯನ್ನು ಮಾಡಿದವರಾಗಿಯೂ ಇರುವರೆಂದು ಕೇಳುತ್ತೇನೆ ಅಲ್ಲಿ ಸದ್ಯದಲ್ಲಿ ಪ್ರಾರಂಭಿಸತಕ್ಕ ಭಾಗಗಳಲ್ಲಿ ದೇಶಾಭಿವೃದ್ಧಿಗೆ ಬಹು ಮುಖ್ಯವಾದ ಅಕ್ರಿಕಲ್ಚರ್ ಕೆಮಿಸ್ಟ್ರಿಯ ಭಾಗಕ್ಕೆ ವಿದ್ಯಾರ್ಥಿಗಳೇ ಇಲ್ಲವೆಂತಲೂ, ಓಮ್ಮತ್ತಷ್ಟೇ ಒಬ್ಬಿಬ್ಬರು ವಿದ್ಯಾರ್ಥಿಗಳೂ ಪರಾಮೃಷ್ಟರೆಂದೂ ಕೇಳಿಸುತ್ತಿದೆ ಇಂಡಿಯಾ ದೇಶದ ಎಲ್ಲಾ ಭಾಗಗಳಿಂದಲೂ ಪಂಡಿತರು ಬಂದು ಓದತಕ್ಕ ಮತ್ತು ಮೈಸೂರು ಗವರ್ನಮೆಂಟಿನಿಂದಲೂ, ಇತರ ಸಂಸ್ಥಾನಗಳಿಂದಲೂ ಬಹುವಾಗಿ ಸಹಾಯವನ್ನು ಪಡೆಯುತ್ತಿರುವ, ದೇಶೋದ್ಧಾರಕ್ಕೆ ಬಹು ಮುಖ್ಯವಾದ, ಇಂತಹ ಭಾಗದಲ್ಲಿಯೇ ಹೀಗೆ ವಿದ್ಯಾರ್ಥಿಗಳಿಲ್ಲವೆಂದು ಹೇಳುವುದು ಆಶ್ಚರ್ಯವಾಗಿದೆ ಇದು ನಿಶ್ಚಯವೇ ಅಥವಾ ಹೀಗೆ ವಿದ್ಯಾರ್ಥಿಗಳು ಇಲ್ಲದಿರುವುದಕ್ಕೆ ಕಾರಣವೇನಿರಬಹುದು ಎಂಬುದನ್ನು ತಾವೇ ಆಗಲಿ, ತಮ್ಮ ವಾಚಕರಲ್ಲಿ ಯಾರೇ ಆಗಲಿ ತಿಳಿಸಿದರೆ ಉಪಕಾರವಾಗುವುದಲ್ಲದೆ ಮುಂದೆ ಅಲ್ಲಿ ಸೇರತಕ್ಕ ವಿದ್ಯಾರ್ಥಿಗಳಿಗೆ ಅನುಕೂಲವೂ ಆದೀತೆಂದು ಕೋರುವುದು

ನರಸಿಂಹಶಾಸ್ತ್ರಿ

[ಮೇಲ್ಕಂಡ ವಿದ್ಯಾನಿಲಯದಲ್ಲಿ ನಡೆಯುವ ವಿದ್ಯಮಾನಗಳು ನಮಗೆ ಸರಿಯಾಗಿ ತಿಳಿದುಬಂದಿಲ್ಲ ಅವನ್ನು ಹೊಗಳಿಯೂ, ಆಕ್ಷೇಪಣೆಮಾಡಿಯೂ ಬೇರೆ ಬೇರೆ ಬಾತ್ಮಿಗಳನ್ನು ಪತ್ರಿಕೆಗಳಲ್ಲಿ ಓದಿರುತ್ತೇವೆ ಯಥಾರ್ಥ ವಿದ್ಯಮಾನಗಳನ್ನು ಪ್ರಕಟಿಸಲು ಕುತೂಹಲವುಳ್ಳವರಾಗಿರುವೆವು —ಎಡಿ]

ತಾಲ್ಲೂಕು ವರ್ತಮಾನಗಳು.

ಕೃಷ್ಣರಾಜಪೇಟೆ ತಾ|| ಸಿಂಧುಘಟ್ಟ.—ಬೆಳಗಿನಲ್ಲಿ ಚಳಿಯು ಜಾಸ್ತಿಯಾಗುತ್ತಿದೆ ಸುಗ್ಗಿಯ ಕಾಲವೂ, ನೀರಿನ ಅನುಕೂಲವೂ ಉಲ್ಲಾಸವನ್ನುಂಟುಮಾಡುತ್ತಿದೆ —ಇಲ್ಲಿ ವಿದ್ಯಾಭ್ಯಾಸಂಗ ಮಾಡಿ ಜೀವನೋಪಾಯಕ್ಕಾಗಿ ಮಲೆನಾಡು ಪ್ರಾಂತ್ಯ ಸ್ಕೂಲ್ ಮಾಸ್ಟರಾಗಿರುವ ಶ್ರೀಯುತರು ಅಲ್ಲಿನ ವಿಷಯವನ್ನು ಕುರಿತು ಕಳೆದ ಮಾಹೆ ತಾ ೨೫ ರಲ್ಲಿ ಕಾಶೀಪ್ರಾಂತ್ಯಕ್ಕೆ ಹೋಗಿದ್ದ ಎಸ್ ನಂಜಪ್ಪನವರು ಮಧ್ಯದಾರಿಯಲ್ಲಿ ತಮಗೆ ಲಭಿಸಿದ ಅನುಭವದ ವಿಷಯದಲ್ಲಿ ಉಪನ್ಯಾಸ ಮಾಡಿದ ವಿಚಾರವು ತುಂಬಾ ಸ್ತೋತ್ರಾರ್ಹವಾಗಿಯೂ, ಭಕ್ತಿ ಉಂಟುಮಾಡತಕ್ಕದ್ದಾಗಿಯೂ ಇತ್ತು —ಇಲ್ಲಿ ಹೊಸದಾಗಿ ಸ್ಕೂಲ್ ಕಟ್ಟಲು ಸರ್ಕಾರದವರು ಏರ್ಪಾಡು ಮಾಡುತ್ತಿರುವದು ತುಂಬಾ ಸಂತೋಷಕರವಾಗಿದೆ —ಹಾಲಿ ಸಂತೆ ಕಟ್ಟುತ್ತಿರುವ ಸ್ಥಳವು ಎರಡು ಭಾಗದಲ್ಲೂ ಕೆರೆಗೆ ಹೋಗುವವರಿಗೆ ತೊಂದರೆಯಾಗಿದೆ ಈ ಭಾಗವನ್ನು ಗ್ರಾಮದ ಮುಖಂಡರು ಸರಿಪಡಿಸಿದರೆ ತುಂಬಾ ಉಪಕಾರವಾಗುತ್ತೆ —ತಾಲ್ಲೂಕಿಗೆ ಸಮಾಚಾರವೆನ್ನುವದೇ ಹೊರತು ಪೋಲೀಸು ಉಸ್ತುವಾರಿ ಸಾಲದು ಬಹಳ ದಿವಸಗಳಿಂದ ರಜದ ಮೇಲಿದ್ದ ಪೋಲೀಸು ಇನ್‌ಸ್ಪೆಕ್ಟರು ಪುನಃ ಕೆಲಸದ ಮೇಲೆ ವಾಪಸು ಬಂದಿದ್ದಾರೆ

ನಾಗಡಿ —ಇಲ್ಲಿಯ ಕೆರೆಯ ನೀರು ಯಥಾಪ್ರಕಾರ ಕೋಡಿಯಿಂದ ಹರಿದುಹೋಗುತ್ತಲೇ ಇದೆ ಇದಲ್ಲದೆ ಕೆರೆಯ ನೀರನ್ನು ಜನರು ನಾನಾ ರೀತಿ ಕೆಡಿಸುವದನ್ನು ಸರ್ಕಾರದವರು ತಡೆಯಲಿಲ್ಲ ಪ್ರಜೆಗಳು ಕೊಳಕು ನೀರನ್ನೇ ಎಲ್ಲಾ ಕೆಲಸಗಳಿಗೂ ಉಪಯೋಗಿಸಬೇಕಾಗಿರುವದರಿಂದ ಪುನಃ ಸಾಂಕ್ರಾಮಿಕ ಜಾಡ್ಯಗಳು ಊರಲ್ಲಿ ಹುಟ್ಟಲಿಕ್ಕೆ ಮಾರ್ಗ ಕೊಟ್ಟಂತಾಗುತ್ತೆ ಇದೂ ಅಲ್ಲದೆ ಇಲ್ಲಿ ಕೆಲವು ಸಂದಿಗಳಲ್ಲಿ ಕಚರಾ ಆಚೆಗೆ ಹೋಗದೆ, ಇದ್ದ ಸ್ಥಳದಲ್ಲಿಯೇ ಇದ್ದು ಕೊಳೆತು ದುರ್ವಾಸನೆಯಾಗಿ ಸದರಿ ಸಂದಿಗಳಲ್ಲಿ ತಲೆ ಇಡದೆ ಹಾಗಾಗಿದೆ ನಮ್ಮ ಅಮಲ್ದಾರ್ರವರು ಆಗಾಗ್ಗೆ ರಸ್ತೆ ಮತ್ತು ಸಂದಿಗಳಲ್ಲಿ ಸಂಚರಿಸುತ್ತಾ ಇದ್ದರೆ ಎಷ್ಟೋ ಉಪಕಾರವಾದೀತು —ಇಲ್ಲಿ ಈ ಸಲ ಕಾಶೀ ವಿಶ್ವೇಶ್ವರ ದೇವಾಲಯದಲ್ಲಿ ಕಾರ್ತೀಕ ಬಹುಳ ದ್ವಾದಶಿ ಉತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು ಪಟ್ಟವರ್ಧನ ನಂಜುಂಡಶಾಸ್ತ್ರಿಗಳೂ, ಯಜಮಾನ್ ವೆಂಗಟರಂಗಶೆಟ್ರಿ, ಜ್ಞಾನಾಪುರದ ಚೆನ್ನಪ್ಪಶೆಟ್ರು ಇನ್ನೂ ಅನೇಕ ದೊಡ್ಡ ಮನುಷ್ಯರು ಕಾರ್ಯಭಾರವನ್ನು ವಹಿಸಿ ಉತ್ಸವಾದಿಗಳನ್ನು ಬಹಳ ದಕ್ಷತೆಯಿಂದ ನಡಿಸಿದರು —ಪತ್ರ ರೀಡಿಂಗು ರೂಮು ಹೊಸಸ್ಥಿತಿಯಲ್ಲಿದ್ದದ್ದನ್ನು ನೋಡಿ ಕೆಲವು ವೈಶ್ಯಮತಾಭಿಮಾನಿಗಳು ದಯವಿಟ್ಟು ಸಹಾಯ ಮಾಡಿದ್ದರಿಂದ ಡಿಸೆಂಬರ್ ತಾ 1 ರಲ್ಲಿ ಸ್ಥಾಪಿಸಲ್ಪಟ್ಟಿತು ಮುಂದೆಯೂ ಅವರು ಅದಕ್ಕೆ ಸಹಾಯ ಮಾಡಿ ಅದನ್ನು ಅಭಿವೃದ್ಧಿಗೆ ತಂದಾರೆಂದು ನಿರೀಕ್ಷಿಸುತ್ತೇವೆ

ಹಿರಿಯೂರು ತಾ|| ಮರಡಿಹಳ್ಳಿ ಡಿಸೆಂಬರ್ ತಾ 17 ರಲ್ಲಿ ಚಿತ್ರದುರ್ಗದಿಂದ ವಾಪಸ್ಸೀಗೆ ನಮ್ಮ ಶ್ರೀಮನ್ ಮಹಾರಾಜರವರೂ, ಯುವರಾಜರವರೂ, ರೆಸಿಡೆಂಟ್ ಸಾಹೇಬರವರೂ ಮತ್ತು ಅವರ ಮಿತ್ರವರ್ಗದವರೂ ದಯಮಾಡಿಸಿದ್ದರು ಮಾರ್ಗಸ್ಥೇನ ಸಿಕ್ಕಿದ ಮರಡಿಹಳ್ಳಿ ಗ್ರಾಮದ ರಸ್ತೆ ಪಕ್ಕದಲ್ಲಿ ಸದರಿ ಗ್ರಾಮಸ್ಥರೂ, ಎಲ್ಲಾ ಸ್ಕೂಲ್ ಮಾಸ್ಟರುಗಳೂ, ಬಾಲಕ ಬಾಲಕಿಯರೊಂದಿಗೆ ಮಹಾ ಪ್ರಭುಗಳವರ ಭೇಟಿಗೋಸ್ಕರ ಕಾದಿದ್ದರು ಪ್ರಭುಗಳವರು ಅಲ್ಲಿಗೆ ಬಂದ ತಕ್ಷಣವೇ ಮೋಟಾರನ್ನು ನಿಲ್ಲಿಸಿ ಸರ್ವರ ವಂದನೆಗಳನ್ನು ಅಂಗೀಕರಿಸಿ ಗ್ರಾಮಸ್ಥರು ಒಪ್ಪಿಸಿದ ಹಾರ ತುರಾಯಿಗಳನ್ನು ಬಹಳ ಸಂತೋಷದಿಂದ ಸ್ವೀಕರಿಸಿದರು ತರುವಾಯ ಅಲ್ಲಿ ನೆರೆದಿದ್ದ ಸ್ಕೂಲ ಬಾಲಕ ಬಾಲಕಿಯರನ್ನು ವಿಚಾರಿಸಿ ಸಗ ಅಭಿವೃದ್ಧಿ ಹೊಂದುತ್ತಲಿರುವ ಸ್ಕೂಲುಗಳ ಸ್ಥಿತಿಯನ್ನು ಸಮಾಧಾನ ಚಿತ್ತಕ್ಕೆ ತಂದುಕೊಂಡು, ಸದರಿ ವಿದ್ಯಾರ್ಥಿಗಳಿಗೆ ಕೆಲವು ಪ್ರಶ್ನೆಗಳನ್ನು ಬಹುಮಾನವಾಗಿ ಸ್ವಹಸ್ತ ದಯಪಾಲಿಸಿದರು ಇಷ್ಟು ದೊಡ್ಡ ಮರ್ಯಾದೆಯು ಲಭಿಸಿದುದಕ್ಕಾಗಿ ಗ್ರಾಮಸ್ಥರೂ, ವಿದ್ಯಾರ್ಥಿಗಳೂ ಪಟ್ಟ ಸಂತೋಷಕ್ಕೆ ಪಾರವೇ ಇಲ್ಲ ಸದರಿ ಮೊಬಲಗಿನ ಜೊತೆಗೆ ಗ್ರಾಮಸ್ಥರು ಇಷ್ಟಪಟ್ಟು ಕೊಡುವ ಹಣವನ್ನೂ ಸೇರಿಸಿ ಸ್ಕೂಲಿನ ಬಾಲಕ ಬಾಲಕಿಯರಿಗೆ ವಿನಿಯೋಗಿಸುವವರ ಮೂಲಕ ನಮ್ಮ ಮಹಾ ಪ್ರಭುಗಳವರಲ್ಲಿ ಬಡರೈತರುಗಳ ಮಕ್ಕಳ ಮೇಲಿರುವ ದಯಾದ ಅನುರಾಗವನ್ನು ಪ್ರಕಾಶಪಡಿಸಬೇಕೆಂದು ಇಲ್ಲಿನ ಗ್ರಾಮಸ್ಥರು ಅಭಿಪ್ರಾಯಪಟ್ಟಿರುತ್ತಾರೆ ಇದು ನಿಜವಾದ ರಾಜಭಕ್ತಿಯಲ್ಲವೇ ?

ಚಿತ್ರದುರ್ಗ.—ಛಳಿ ಬಹಳ ಜಾಸ್ತಿ ಇದರಿಂದ ಈ ಡಿಸ್ಟ್ರಿಕ್ಟಿನ ಪ್ರತಿ ಸ್ಥಳದಲ್ಲೂ ಛಳಿಜ್ವರ ವಗೈರೆ ಶೀತ ಸಂಬಂಧವಾದ ಕಾಯಿಲೆಗಳು ವ್ಯಾಪಿಸಿ, ಈ ವರ್ಷ ಉತ್ಕೃಷ್ಟವಾಗಿ ಬೆಳೆದಿರತಕ್ಕ ಪಸಲನ್ನು ರೈತರು ಶೇಖರಿಸಿ ಮಾಡಿಕೊಳ್ಳಲು ಅನುಕೂಲವಿಲ್ಲದೆ ರೈತರು ಸಂಕಟಪಡುತ್ತಲಿದ್ದಾರೆ ಅನಾರೋಗ್ಯದಿಂದಲೂ ಜೋರಾಗಿ ಕಾಯಿಲೆ ಹರಡುವುದರಿಂದ ಕೂಲಿಮಾಡಲು ಅನುಕೂಲವಿಲ್ಲದೆ ಬಡವರು ಸಂಕಟಪಡುತ್ತಿರುವರು ವಿಷಮ ಛಳಿಕಾಲದಲ್ಲಿ ಹೀಗಾಯಿತು ಇದ ಕಳೆದ ಡಿಸೆಂಬರ್ ೨೯ನೇ ತಾ ರಾತ್ರಿ 10 ಘಂಟೆಯಲ್ಲಿ ಪೋಲೀಸ್ ಸೂಪರಿಂಟೆಂಡೆಂಟರವರ ಬಂಗಲೆ ಸಮೀಪದ ಒಂದು ಚರಂಡಿಯಲ್ಲಿ ಒಬ್ಬ ಹೆಂಗಸು ಆಗತಾನೇ ಹುಟ್ಟಿದ್ದ ಒಂದು ಮಗುವನ್ನು ಹಾಕಿ ಓಡಿಹೋದಳಂತೆ ಆ ಶಿಸುವು ಅತ್ತದ್ದೂ, ಹೆಂಗಸು ಓಡಿಹೋದದ್ದೂ ನೋಡಿದ ಮುಸಲ್ಮಾನರು ಪುಕಾರುಮಾಡಿದ್ದರ ಮೇಲೆ ಜನಗಳೂ ಪೋಲೀಸಿನವರೂ ಆ ಸ್ಥಳಕ್ಕೆ ಹೋಗಿ ನೋಡಿದ್ದರಲ್ಲಿ ಅದು ಒಂಭತ್ತು ತಿಂಗಳು ತೀರದ ಹುಟ್ಟಿದ ಗಂಡು ಶಿಸುವಾಗಿ ಜೀವದಿಂದ ಇತ್ತು ಅದನ್ನು ಸಾಕಿಕೊಳ್ಳಲು ಪೋಲೀಸಿನವರು ಮುಸಲ್ಮಾನರಿಗೆ ಕೊಟ್ಟುಬಿಟ್ಟರು ಕೂಸು ಚೆನ್ನಾಗಿ ಬೆಳೆಯುತ್ತಾ ಇದೆ —ಕಳೆದ ಡಿಸೆಂಬರು ೨೯ ೩೦ನೇ ತಾರೀಖುಗಳಲ್ಲಿ ಟೀಚರ್ಸ್ ಅಸೋಸಿಯೇಷನ್ ವಾರ್ಷಿಕೋತ್ಸವವು ಈ ಊರು ಎ ವಿ ಸ್ಕೂಲಿನಲ್ಲಿ ನಡೆಯಿತು ಡೆಪ್ಯುಟಿ ಇನ್‌ಸ್ಪೆಕ್ಟರವರು ಈ ಕಾರ್ಯಕ್ಕೆ ಅಧ್ಯಕ್ಷರಾಗಿ ನಿತ್ಯ ಉಪ್ಪೇಕ್ಷಕಾರ್ಯಗಳನ್ನು ಸಾಂಗವಾಗಿ ನೆರವೇರಿಸಿದರು ಈ ಸಭಾಕ್ಕೆ ಬಂದಿದ್ದ ೫೦ ೬೦ ಜನ ಟೀಚರುಗಳಲ್ಲಿ ಬ್ರಾಹ್ಮಣರಿಗೆ ಸರ್ಕಾರಿ ಅನ್ನಛತ್ರದಲ್ಲಿಯೂ, ಬಾಕಿಯವರಿಗೆಲ್ಲಾ ಪಾರಮಾರ್ಥಿಕರಾದ ಸಾಹುಕಾರ್ ಕಾವಪ್ಪನವರ ಮನೆಯಲ್ಲೂ ಊಟಕ್ಕೆ ಏರ್ಪಾಡುಮಾಡಿದ್ದರು.

ತರೀಕೆರೆ.—ಈಗ ಸುಮಾರು ಒಂದುವರೆ ತಿಂಗಳಿಂದ ಸಿಡುಬಿನ ಅವಾಂತ್ರ ಹೆಚ್ಚುತ್ತಾ ಇದೆ ಅನೇಕ ಮಕ್ಕಳು ಈ ಉಪದ್ರಕ್ಕೆ ತುತ್ತಾದದ್ದು ತುಂಬಾ ವ್ಯಸನ. ಇನ್ನೂ ಮರಣಗಳಾಗುತ್ತಾ ಇವೆ ಉಪದ್ರವು ಮಕ್ಕಳಿಗೆ ಮಾತ್ರವಲ್ಲದೆ ದೊಡ್ಡವರಿಗೂ ಕಾಣಿಸಿಕೊಳ್ಳುತ್ತಾ ಇದೆ ಇಲ್ಲಿನ ವ್ಯಾಕ್ಸಿನೇಟರವರು ಟವರ್ನಲ್ಲಿ ಸುಮಾರು 100 ಮಕ್ಕಳಿಗೆ ಟೀಕಾ ಹಾಕಿರುವದಾಗಿ ಕೇಳುತ್ತೇನೆ ಇದು ಸಾಲದು ಇನ್ನೂ ಅನೇಕ ಮಕ್ಕಳಿಗೆ ಹಾಕಬೇಕಾಗಿದೆ ವ್ಯಾಕ್ಸಿನೇಟರವರಿಗೆ ಇಲ್ಲಿನ ಪಟೇಲರವರ, ಸ್ಯಾನಿಟರಿ ಇನ್‌ಸ್ಪೆಕ್ಟರವರ ಮತ್ತು ಒಬ್ಬ ಪೋಲೀಸ್ ಜವಾನನ ಕುಮಕು ಇದ್ದರೆ ಅನೇಕ ಮಕ್ಕಳು ಅಕಾಲಮರಣವನ್ನು ತಪ್ಪಿಸಿಕೊಳ್ಳುತ್ತಾರೆಂಬುವದರಲ್ಲಿ ಯಾವ ಸಂದೇಹವಿಲ್ಲ ಪ್ಲೇಗ್ ಕಾಲದಲ್ಲಿ ಇನಾಕ್ಯುಲೇಷನ್ ಮಾಡುವದಕ್ಕಾಗಿ ಡಾಕ್ಟರವರಿಗೆ ಅಮಲ್ದಾರ್ರವರೂ, ಸ್ಯಾನಿಟರಿ ಇನ್‌ಸ್ಪೆಕ್ಟರವರೂ, ಪಟೇಲರೂ ಸಹಾಯ ಮಾಡಿದ್ದರಿಂದ ಎಷ್ಟೋ ಪ್ರಯೋಜನವಾಯಿತು ಅದರಂತೆ ಇದಕ್ಕೂ ಮಾಡಿದರೆ ಎಷ್ಟೋ ಉಪಕಾರವಾಗುವದು ಇದಕ್ಕೆ ನಮ್ಮ ಅಮಲ್ದಾರ್ರವರು ಸಹಾಯ ಕೊಡುವರೆಂದು ಕೋರುತ್ತೇನೆ —ನಮ್ಮ ವೈಸ್‌ರಾಯರಾದ ಲಾರ್ಡ್ ಹಾರ್ಡಿಂಜ್ ರವರಿಗೆ ಡಿಲ್ಲಿಯಲ್ಲಿ ಸಂಭವಿಸಿದಂಥಾ ಅಪತ್ತನ್ನು ಇಲ್ಲಿನ ಮಹಮದೀಯರು ಕೇಳಿ ತುಂಬಾ ವ್ಯಸನಪಟ್ಟದ್ದು ಮಾತ್ರವಲ್ಲದೆ ಡಿಸೆಂಬರ್ ತಾ ೨೭ ನೇ ಶುಕ್ರವಾರ ಜುಮ್ಮಾಮಸೀತಿಯಲ್ಲಿ ನಮಾಜ್ ಆದನಂತರ ಖಾಜೀ ಹಾಜೀ ಹಜರತ್ ಸೈಯದ್ ಅಬ್ದುಲ್ ರವೂಫ್ ಸಾಹೇಬರು, ಚಿಕ್ಕಮಸೀತಿ ಮೆಂಬರ್ ಹಯಾತ್ ಸಾಹೇಬರು, ಮೆಂಬರ್ ಬಾಬಾ ಸಾಹೇಬರು, ಮೆಂಬರ್ ಜವೇ ಹುಸೇನ್ ಸಾಹೇಬರು ಮುಂತಾದವರೆಲ್ಲಾ ಸೇರಿ ವೈಸ್‌ರಾಯಿಯವರಿಗೆ ಶೀಘ್ರದಲ್ಲಿ ಗುಣವಾಗಲೆಂದು ಭಗವತ್ಪ್ರಾರ್ಥನೆ ಮಾಡಿದರೆಂದು ಕೇಳಲು ತುಂಬಾ ಸಂತೋಷಪಡುತ್ತೇನೆ ಇದು ಮಾತ್ರವಲ್ಲದೆ ಇದೇ ತಿಂಗಳು ೩ ನೇ ತಾ ಶುಕ್ರವಾರ ಅದೇ ಮಸೀತಿಯಲ್ಲಿ ನಮಾಜ್ ಆದನಂತರ ಪ್ರಭುಗಳಿಗೆ ಗುಣವಾದದ್ದಕ್ಕಾಗಿ ಸಂತೋಷಪಟ್ಟು ಭಗವತ್ಪ್ರಾರ್ಥನೆ ಮಾಡಿದರೆಂದು ಕೇಳಲು ಮತ್ತೂ ಸಂತೋಷವಾಗುವದು

ದೊಡ್ಡಬಳ್ಳಾಪುರ —ಈ ಊರಲ್ಲಿರುವ ಸರಾಫ್ ಸಿ ನಂಜಪ್ಪನವರ ಏಕಪುತ್ರನಾದ ಮೂರು ವರ್ಷದ ಗಂಡು ಮಗುವು ಭಾನುವಾರ ಸಾಯಂಕಾಲ ಅಕಸ್ಮಾತ್ ಭಾವಿಯಲ್ಲಿ ಬಿದ್ದು ತೀರಿಹೋಯಿತು ಸರಾಫ್ ಪುಟ್ಟಪ್ಪನವರು ಊಹೆಯ ಮೇಲೆ ಭಾವಿಗೆ ಇಳಿಸಿ ಹುಡುಕಿಸಿದಾಗ್ಗೆ ಮಗುವಿನ ಶವವು ಸಿಕ್ಕಿ ಸಮಾಧಿ ಮಾಡಲಾಯಿತು —ಈ ತಿಂಗಳು 1 ನೇ ತಾ ಬೆಳಿಗ್ಗೆ ಮುದಿಗೊಂಡನಹಳ್ಳಿ ಗೌಡನ ಮಗ ಕೆಂಪನೆಂಬ ಒಬ್ಬನು ಪೇಟೆಗೆ ಬಾಳೆ ಹಣ್ಣುಗಳನ್ನು ಮಾರಲಿಕ್ಕೆ ಬಂದಿದ್ದಾಗ್ಗೆ ಸುಮಾರು 7 ಜನಗಳು ಸೇರಿ ಆ ಗೌಡನ ಹಣ್ಣುಗಳನ್ನು ಲೂಟಿ ಮಾಡಿದರೆಂಬದಾಗಿ ಇವರನ್ನು ಹಿಡಿದು ಪೋಲೀಸ್ ಲಾಕಪ್‌ನಲ್ಲಿ ಇಟ್ಟಿದ್ದು ಈಚೆಗೆ ಜಾಮೀನ್ ಮೇಲೆ ಬಿಟ್ಟಿರುತ್ತಾರೆ —ಈ ಊರಲ್ಲಿ ನೀರಿನ ಕೊರತೆ ಬಹಳವಾಗಿರೋಣದರಿಂದ ಗತಿಸಿದ ಮ|| ಡಿ ದೇವರಾಜೆ ಅರಸಿನವರ ಜ್ಞಾಪಕಾರ್ಥವಾಗಿ ನೀರಿನ ಸರಬರಾಜು ಮಾಡುವ ಏರ್ಪಾಡಿಗೋಸ್ಕರ ಈ ಊರಿನ ಪ್ರಮುಖರೂ ಸೇರಿ ಆಗಲೇ ಒಂದೆರಡು ಮೀಟಿಂಗುಗಳನ್ನು ನಡಿಸಿ ತೀರ್ಮಾನಿಸಿರುವದೇನಂದರೆ, ಸರ್ಕಾರದವರು ಆಗಲೇ ಮಂಜೂರು ಮಾಡಿರುವ 15 ಸಾವಿರ ರೂಪಾಯಿನ ಸ್ಕೀಮಿನ ಅರ್ಧಭಾಗವನ್ನು ಗ್ರಾಮಸ್ಥರೂ ಮ್ಯುನಿಸಿಪಾಲಿಟಿಯವರೂ ಒದಗಿಸುವಂತೆಯೂ, ಈ ಹಣವನ್ನು ಈ ಗ್ರಾಮದ ಕೋಮುವಾರು ಮುಖಸ್ಥರು ಆಯಾ ಕೋಮುಗಳ ಜನರಿಂದ ಎರಡು ವರುಷದ ಮ್ಯುನಿಸಿಪಲ್ ಕಂದಾಯವನ್ನು ವಸೂಲ್ಮಾಡುವದರ ಮೂಲಕ ಜಮಾಯಿಸತಕ್ಕದ್ದೆಂತಲೂ, [ಇದು ನಿಜವಿರಬಹುದೇ —ಎಡಿ] ಈ ಮುಖ್ಯಸರ ಮೀಟಿಂಗು 11 ನೇ ತಾ ಸೇರತಕ್ಕದ್ದೆಂತಲೂ ನಿರ್ಣಯವಾಗಿದೆ ಮುಖ್ಯವಾಗಿ ಗ್ರಾಮಕ್ಕೆ ನೀರೆಂಬುದೇ ಅತ್ಯಂತ ಅವಶ್ಯಕವಾಗಿದೆ ಮತ್ತು ಈ ಕೆಲಸವನ್ನು ಮನಃಪೂರ್ವಕವಾಗಿ ಒಪ್ಪಿ ಅದಕ್ಕೆ ಸಹಾಯಮಾಡತಕ್ಕ ಧರ್ಮೋತ್ತರರಾದ ದೊಡ್ಡ ಮನುಷ್ಯರೂ ಕೆಲವು ಮಂದಿ ಇರುತ್ತಾರೆ ಆದರೆ ಪ್ರತಿ ಒಂದು ಕುಟುಂಬದವರೂ ನೀರಿನಕಷ್ಟ ನಿವಾರಣೆಗೆ ಒಂದೆರಡು ರೂಪಾಯಿ ಕೊಡುವದೇನೂ ಕಷ್ಟವಲ್ಲ

ಯಡವೊರೆ ತಾ|| ಮಿರ್ಲೆ —ಬಹಳ ಛಳಿ ಛತ್ರದ ಒಕ್ಕಣೆ ನಡೆಯುತ್ತಾ ಇದೆ —ಗ್ರಾಮದ ಮೂನಿಯನ್ ಕೆಲಸ ತೃಪ್ತಿಕರವಾಗಿಲ್ಲ ಮೆಂಬರುಗಳು ಇನ್ನೂ ಹೆಚ್ಚು ಮುತುವರ್ಜಿ ವಹಿಸಬೇಕು —ಗ್ರಾಮದಲ್ಲಿ ಪ್ರಜಾಸಂಖ್ಯೆ ಹೆಚ್ಚು ವಾಸಕ್ಕೆ ಮನೆಯಿಲ್ಲ ಒಂದೊಂದು ಮನೆಯಲ್ಲಿ ೪ ೫ ಒಕ್ಕಲುಗಳು ಇವೆ ಇದಕ್ಕಾಗಿ ಗ್ರಾಮಸ್ಥರು ಮೇಲ್ಭಾಗದಲ್ಲಿ ಮನೆ ಕಟ್ಟಿಕೊಳ್ಳುವದಕ್ಕೆ ಅಭಿಪ್ರಾಯಪಟ್ಟು ಸರ್ಕಾರಕ್ಕೆ ಮನವಿಮಾಡಿಕೊಳ್ಳಲು ಹೊಲಗಳನ್ನು ಬಿಡಿಸಿಕೊಡುತ್ತೇವೆಂತಲೂ, ಇಷ್ಟವುಳ್ಳವರು ಜಾಗಾಕ್ಕೆ ಡಿಪಾಜಟ್ಟು ಕಟ್ಟಬೇಕೆಂತಲೂ ಹೇಳಿದ್ದ ಮೇಲೆ ಅನೇಕ ಜನರು ಸುಮಾರು ೯೦೦ ರೂಪಾಯಿಗಳ ವರೆಗೂ ಡಿಪಾಜಟ್ಟು ಸಹಾ ಕಟ್ಟಿದರು ಇದುವರಿಗೂ ಸದರಿ ಜಮೀನು ಬಿಡಿಸಿ ಕೊಡಲಿಲ್ಲ ಗ್ರಾಮಸ್ಥರು ವಾಸಿಸಲು ಸ್ಥಳವಿಲ್ಲದೆ ತುಂಬಾ ತೊಂದರೆಪಡುತ್ತಾ, ೫-೬ ವರುಷಗಳಿಂದಲೂ ಸರ್ಕಾರಕ್ಕೆ ಮನವಿಮಾಡಿಕೊಳ್ಳುತ್ತಲೇ ಇದ್ದಾರೆ ದಯಾಳುಗಳಾದ ಸರ್ಕಾರದವರು ಕೂಡಲೆ ಸ್ಥಳಾನುಕೂಲಮಾಡಿಕೊಡುತ್ತಾರೆಂದು ನಂಬಲ್ಪಟ್ಟಿದೆ —ಈ ಗ್ರಾಮಕ್ಕೆ ಸಮೀಪ ನಾಲ್ಕು ಮೈಲಿ ದೂರದಲ್ಲಿ ಹಿಂದುಗಳ ಯಾತ್ರಾಸ್ಥಳವಾದ ಚುಂಚನಕಟ್ಟೆಯಲ್ಲಿ ಈ ಮಾಹೆ ತಾ ೧೬ ಲಾಗಾಯತು ೧೫ ದಿನಗಳು ಜಾತ್ರೆಯು ನಡೆಯುತ್ತದೆ ದನಗಳು ಮತ್ತು ಜನಗಳ ಗುಂಪು ಅಪರಿಮಿತವಾಗಿ ಸೇರುವುದು ಸಾಲೀಯಾನಾ ಈ ಜಾತ್ರೆಯಿಂದ ಸದರಿ ಶ್ರೀರಾಮದೇವರ ಹುಂಡಿಗೆ ಸುಮಾರು ೩,೦೦೦ ರೂಪಾಯಿ ತನಕ ಅಂಗಡಿ ಮತ್ತು ದನಗಳು ವಗೈರೆಯಿಂದ ವಸೂಲಾಗುವುದು ಯಾತ್ರಾರ್ಥಿಗಳಾಗಿ ಬರತಕ್ಕ ಜನಗಳಿಗೆ ವಸತಿಯಾದ ಜಾಗಗಳು ಇಲ್ಲ ಇದು ಆದುಪ್ರದೇಶವಾಗಿದೆ ಅಲ್ಲದೆ ಅನೇಕ ಭಿಕ್ಷಗಾರರು, ಕೈಕಾಲು ಇಲ್ಲದೆ ಇರುವವರು, ಕುಂಟರು, ಕುರುಡರೂ ಸಹಾ ಬಂದು ಸೇರುತ್ತಾರೆ ಇಂಥಾವರಿಗೆ ಅನ್ನ ಹಾಕುವ ಏರ್ಪಾಡು ಮಾಡಿದಲ್ಲಿ ಎಷ್ಟೋ ಸ್ತೋತ್ರಾರ್ಹವಾಗಿರುತ್ತು ಹೋರಿವಾಳ ವಗೈರೆ ಕಡೆ ಲಾಂದ್ರದ ಬೆಳಕು ಮುಂತಾದ್ದು ಇಟ್ಟಿಲ್ಲ ಬೆಳಕಿನ ದೆಸೆಯಿಂದ ಕಳ್ಳತನಗಳು ಕಮ್ಮಿ ಆಗುತ್ತವೆ ಮುಖ್ಯವಾಗಿ ಅಂಗಹೀನರಿಗೆ ಅನ್ನಹಾಕುವುದರಿಂದ ಸಂಡಿತವಾಗಿಯೂ ದೇವರು ಮೆಚ್ಚುತ್ತಾನೆ ಅಧಿಕಾರಿಗಳು ಈ ಭಾಗಕ್ಕೆ ನಿಗಾ ಕೊಡುತ್ತಾರೆಂದು ಪ್ರಾರ್ಥನೆ

ತ್ಯಾಮಗೊಂಡ್ಲು —ಈ ಪ್ರಾಂತ್ಯ ಛತ್ರದ ಸುಗ್ಗಿಯು ತಲೆದೋರುತ್ತಾ ಇದೆ ಇಂಥಾ ಸುಗ್ಗಿಯಲ್ಲೂ ಧಾರಣೆಮಾಡಿಗಳು ಮಾತ್ರ ವ್ಯಾಪಾರಸ್ಥರ ಮತ್ತು ದಲ್ಲಾಳಿಗಳ ಸಹಾಯಕ್ಕೆ ಅನುಕೂಲವಾಗಿವೆಯೇ ಹೊರತು ಬಡಪ್ರಜೆಗಳಿಗೆ ಅನುಕೂಲವಾಗಿಲ್ಲ —ಈ ಊರಿನಲ್ಲಿ ವಿದ್ಯಾಭ್ಯಾಸವು ತಕ್ಕಮಟ್ಟಿಗೆ ತೃಪ್ತಿಕರವಾಗಿದೆ ಈ ಟವನ್ನಿನ ಹಿರಿಕೆರೆಯ ಹತ್ತಿರ ಸಮಾಧಿಯಾಗಿರುವ ಮತ್ತು ಪ್ರತಿ ಶುಕ್ರವಾರ ಮಂಗಳವಾರ ಪೂಜೆ ನಡೆಯುವ ತೇಜಪ್ಪಸ್ವಾಮಿಯವರ ಜಾತ್ರೆಯು ಕಳೆದ ತಿಂಗಳು ತಾ ೨೧ರ ರಿಂದ ೩೧ರ ವರೆಗೆ ನಡೆಯಿತು ಈ ಜಾತ್ರೆಯಲ್ಲಿ ಯಾವ ಗಲಾಟೆಗೂ ಅವಕಾಶವಿಲ್ಲದಂತೆ ಪಟೇಲ್ ಮ|| ಅಪ್ಪಾಜಪ್ಪನವರು ಖುದ್ದಾಗಿ ನಿಂತು ಕಾರ್ಯಗಳನ್ನು ನೆರವೇರಿಸಿದರು ಜಾತ್ರೆಯಲ್ಲಿ ೪-೫ ಸಾವಿರದ ವರೆಗೆ ಎತ್ತುಗಳು ಸೇರಿದ್ದವು ಸುಮಾರು ೩೦-೪೦ ಸಾವಿರ ರೂಪಾಯಿ ವ್ಯಾಪಾರ ಜಮಾಖರ್ಚು ನಡೆಯಿತು ೩೧ ನೇ ತಾ ಮಂಗಳವಾರ ನಮ್ಮ ಅಮಲ್ದಾರ್ರವರು, ಡಾಕ್ಟರವರು, ಪಟೇಲ್ ಅಪ್ಪಾಜಪ್ಪನವರು, ಇನ್ನೂ ಇತರ ದೊಡ್ಡ ಮನುಷ್ಯರು ಗೋರಿಯ ಹತ್ತಿರ ಹೋಗಿ ಅಲ್ಲಿ ಇರಿಸಿದ್ದ ಕಾಣಿಕೆ ಡಬ್ಬಿಯನ್ನು ಒಡೆಯಿಸಿ ಅದರಲ್ಲಿದ್ದ 35 ಚಿಲ್ಲರೆ ರೂಪಾಯನ್ನು ಪಟೇಲರವಶಕ್ಕೆ ಕೊಟ್ಟು, ಗೋರಿಯ ಸಮೀಪದಲ್ಲಿಯೇ ಮ|| ಸವರ್ ವೆಂಕಟಪ್ಪನವರು ತೆಗೆಯಿಸಿರುವ ಭಾವಿಯನ್ನು ಪರಾಂಬರಿಸಿ ಸಂತೋಷಪಟ್ಟು ಹಿಂತಿರುಗಿದರು ಈ ಜಾತ್ರೆಯು ಮೊದಲಿನ ವರುಷವೇ ಇಷ್ಟು ವೃದ್ಧಿಯನ್ನು ಹೊಂದಲು ಮುಂದೆ ಇನ್ನೆಷ್ಟರ ಮಟ್ಟಿಗೆ ವೃದ್ಧಿಯಾಗಬಹುದೆಂದು ಹೇಳಬೇಕಾಗಿಲ್ಲ. ಮುಂದೆ ಈ ಜಾತ್ರೆಯು ನಡೆಯುವಾಗ್ಗೆ ಇಲ್ಲಿ ಮಂಟಪಗಳೂ, ಅನ್ನಛತ್ರಗಳೂ,

ತಿಂಪಪ್ಪಸ್ವಾಮಿಯವರ ಉತ್ಸವಕ್ಕೆ ರಥವು ಸಿದ್ಧವಾಗುವವೆಂದು ಜಾತ್ರೆಯಲ್ಲಿ ಸೇರಿದ್ದ ಮಹಾಜನಗಳು ಹೇಳಿಕೊಳ್ಳುತ್ತಿದ್ದರು —ಈ ಟನ್ನಿನ ಕೋಟೆಯಲ್ಲಿರುವ ಶಿವಸೂಭಟ್ಟರ ಮತ್ತು ಅಂಜನಿಭಟ್ಟರ ಮನೆಗೆ ಕಳ್ಳರು ಬಿದ್ದು ಕೆಲವು ಸಾಮಾನುಗಳನ್ನು ತೆಗೆದುಕೊಂಡು ಹೋಗಿ ಮತ್ತೆ ಕೆಲವನ್ನು ಕೋಟೆಗೆ ಸಮೀಪವಾಗಿರುವ ಹಳ್ಳದಲ್ಲಿ ಬಿಸಾಟಿದ್ದರು ಬೆಳಗ್ಗೆ ಈ ವರ್ತಮಾನವು ಊರೆಲ್ಲೆಲ್ಲಾ ಹರಡಿ ಅನೇಕ ಜನಗಳು ಅಲ್ಲಿಗೆ ಹೋಗಿ ನೋಡಲಾಗ್ಗೆ ಕಳ್ಳತನವಾದ ರಾತ್ರಿ ದೀಪಗಳೇ ಹಚ್ಚಿರಲಿಲ್ಲವೆಂತಲೂ, ಪೋಲೀಸಿನವರ ಸುಳಿವೇ ಕೋಟೆಯಲ್ಲಿರಲಿಲ್ಲವೆಂತಲೂ ನೆರೆಹೊರೆಯ ಮನೆಯವರು ಅಂದುಕೊಳ್ಳುತ್ತಿದ್ದರು ಇನ್ನು ಮುಂದಾದರೂ ನಮ್ಮ ಪೋಲೀಸ್ ಇಲಾಖೆಯವರು ಇಂಥ ಕಳ್ಳತನಗಳಿಗೆ ಆಸ್ಪದವಿಲ್ಲದಂತೆ ಉಸ್ತುವಾರಿ ಮಾಡುತ್ತಾರೆಂದು ನಂಬುತ್ತೇವೆ

ಒಳದೇಶದ ವೃತ್ತಾಂತಗಳು

ಮೈಸೂರು ಗಾಯನ ಸಮಾಜದವರು ಕಳೆದ ಬುಧವಾರ ರಾತ್ರಿ ವೇ|| ನಾರಾಯಣಶಾಸ್ತ್ರಿಗಳಿಂದ ಹರಿಕಥೆಯನ್ನು ಟೌನ್ ಹಾಲಿನಲ್ಲಿ ಮಾಡಿಸಿ ಅವರಿಗೆ ಒಂದು ಭಂಗಾರದ ಮೆಡಲನ್ನು ಕೊಟ್ಟು ಸನ್ಮಾನಮಾಡಿದರು

ಶ್ರೀಮನ್ ಮಹಾರಾಜರವರು ಸರ್ದಾರ್ ಎಂ ಕಾಂತರಾಜೆ ಅರಸಿನವರಿಗೆ ಸಂಸ್ಥಾನದ ಎರಡನೇ ಕೌನ್ಸಿಲರ್ ಪದವಿಯನ್ನು ದಯಪಾಲಿಸಿದ್ದು ಸಕಲ ಪ್ರಜೆಗಳಿಗೂ ಸಮ್ಮತವಾಗಿದೆ ಎಂದು ತಿಳಿಸಲು ಸಂತೋಷಪಡುತ್ತೇವೆ

ಮಹಾಮಾತೃಶ್ರೀಯವರೂ ಅರಮನೆಯ ರಾಣೀವಾಸದವರೂ ಕಳೆದ ಗುರುವಾರ ಬೆಳಗ್ಗೆ ಮದರಾಸಿಗೆ ದಯಮಾಡಿದರು ಶ್ರೀಮನ್ ಮಹಾರಾಜರವರು ಯುವರಾಜರ ಸಮೇತ ದಯಮಾಡಿ ಮದರಾಸಿನಲ್ಲಿ ಸೆಂಟ್ ಜಾರ್ಜ್ ಮಹಾರಾಜರವರ ಎದೆಕಟ್ಟೆಯನ್ನು ಬೆಳಸುವವರಾಗಿದ್ದರು ಶ್ರೀಮನ್ ಯುವರಾಜರವರು ಕಳೆದ ಶುಕ್ರವಾರ ಬೆಳಗ್ಗೆ ಬೆಂಗಳೂರಿಂದ ರಾಜಧಾನಿಗೆ ದಯಮಾಡಿದರು

ಶಿವಮೊಗ್ಗಾ ಡಿಸ್ಟ್ರಿಕ್ಟು ಸಕ್ರೆಬೈಲಿನಲ್ಲಿ ಹರಾಜು ಹಾಕಿದ 17 ಆನೆಗಳಿಂದ 25,000 ರೂಪಾಯಿ ಉತ್ಪತ್ತಿಯಾಯಿತು ಒಂದು ಆನೆಯನ್ನು ಅರಮನೆಗೆ ಇಟ್ಟುಕೊಂಡರು ಒಂದು ಆನೆಯನ್ನು ಲಂಡನ್ ಪಟ್ಟಣದ ಮೃಗಾಲಯಕ್ಕೆ ಕಳುಹಿಸುವವರಾಗಿದಾರೆ ಈ ಕೆಡ್ಡಾ ಏರ್ಪಾಡಿನಿಂದ ರೈತ ಪ್ರಜೆಗಳಿಗೆ ಶಾಶ್ವತವಾದ ನೆಮ್ಮದಿಯೂ, ಸರ್ಕಾರಕ್ಕೆ ಲಾಭವೂ ಲಭ್ಯವಾದದ್ದಕ್ಕಾಗಿ ಸಂತೋಷಪಡುವೆವು

ದಿವಾನ್ ಮ ಎಂ ವಿಶ್ವೇಶ್ವರೈಯನವರು ಪರಿವಾರ ಸಮೇತ ಮೊನ್ನೆ ಮಂಗಳವಾರ ಬೆಳಗ್ಗೆ ಬೆಂಗಳೂರಿಂದ ರಾಜಧಾನಿಗೆ ದಯಮಾಡಿದರು ಅವರು ಈ ದಿನ ರಾಜಧಾನಿಯಲ್ಲಿರುವ ಕಾಲೇಜು, ಹೈಸ್ಕೂಲು ಮುಂತಾದವುಗಳಿಗೆ ದಯಮಾಡಿ ಪರಾಂಬರಿಸುವರೆಂದೂ, ನಾಳೆ ಕನ್ನಂಬಾಡಿಗೆ ಹೋಗಿ ಹೊಸ ಕೆರೆಯ ಕಾಮಗಾರಿಯನ್ನು ನೋಡಿಕೊಂಡು ಬರುವರೆಂದೂ, ನಾಳೆ ನಂಜನಗೂಡಿಗೆ ಹೋಗಿ ಬಂದು, ರಾತ್ರಿ ಬೆಂಗಳೂರಿಗೆ ತೆರಳುವರೆಂದೂ ಕೇಳುತ್ತೇವೆ

ಒಬ್ಬ ಬಾತ್ಮೀದಾರರು ಬರೆಯುವುದು —ಮೈಸೂರು ಪರ್ಚಾರೆ ಅಂಗಡಿಯ ಕೃಷ್ಣಂ ಅಪ್ಪಯ್ಯಶೆಟ್ರು ಕಾಲವಾದದ್ದರಿಂದ ಮ|| ಬೂದಗುಂಟೆ ರಾಮಶೆಟ್ರ ಛತ್ರದಲ್ಲಿ, ದಿವಾನರ ಬಂಗಲೆಯಲ್ಲಿ 2,000 ಜನ ಬಡಬಗ್ಗರಿಗೆ ಅನ್ನ ಹಾಕಿಸಿದರು ಬೈರಾಗಿ ಸಾಧುಜನಗಳಿಗೆ ಧಾರಾಳವಾದ ಸಮಾವತ್ತು ಕೊಟ್ಟರು ಅಂಗಹೀನರಿಗೆ ಬಟ್ಟೆಗಳನ್ನು ಕೊಟ್ಟರು ಕಿವುಡಮೂಗರ ಸ್ಕೂಲ್ ವಿದ್ಯಾರ್ಥಿಗಳಿಗೆ ಬಟ್ಟೆಗಳನ್ನು ಕೊಟ್ಟರು ಇಷ್ಟು ವಿಸ್ತಾರವಾದ ಧರ್ಮವನ್ನು ವೈಶ್ಯರಲ್ಲಿ ಇನ್ನಾರೂ ಮಾಡಿದ್ದಿಲ್ಲ

ಒಬ್ಬ ಬಾತ್ಮೀದಾರರಿಂದ —ಟರ್ಕೀ ಮತ್ತು ಬಾಲ್ಕನ್ ಯುದ್ಧದಲ್ಲಿ ಮರಣ ಹೊಂದಿದವರ ವಿಧವೆಗಳ ಮತ್ತು ಮಕ್ಕಳ ಸಹಾಯಾರ್ಥವಾಗಿಯೂ, ಅನಾಥರ ಪೋಷಣೆಗೋಸ್ಕರವೂ ವೀರರಾಜೇಂದ್ರಪೇಟೆಯ ಮಹಮ್ಮದಿ ಜನಗಳೆಲ್ಲರೂ ಸಭೆ ಸೇರಿ ಅವರವರ ಮನಸ್ಸು ತಿಳಿದು ಕಳೆದ ವಾರ ರೂ 1,001-8-0 ಯನ್ನು ರೆಡ್ ಕ್ರೆಸೆಂಟ್ ಸೊಸೈಟಿಗೆ ಮದ್ರಾಸಿನ ಟೆಲಿಗ್ರಾಫ್ ಕಾನ್ಸಲರ ಮೂಲಕ ಕಳುಹಿಸಿರುತ್ತಾರೆ ಇದಲ್ಲದೆ ಇನ್ನೂ ಕೆಲವು ಚಂದಾ ಹಣಗಳನ್ನು ಕೂಡಿಸಿ ಪುನಃ ಕಳುಹಿಸುವರು

ಒಬ್ಬ ಬಾತ್ಮೀದಾರರು ಬರೆಯುವುದು —ಅರಸೀಕೆರೆ ತಾ ಲೋಕಲ್ ಮೆಂಬರಾಗಿರುವ ನಾಗಲಿಂಗಪ್ಪನವರ ಮಗ ಸುಮಾರು 18 ವಯಸ್ಸಿನ ನರಸಪ್ಪ ಉರುಫ್ ಪುಟಿಯ ನೆಂಬ ಹುಡುಗನು ಈಗ್ಗೆ 1½ ತಿಂಗಳ ಕೆಳಗೆ ಮನೆವಾರ್ತೆಯನ್ನು ಬಿಟ್ಟು ಎಲ್ಲಿಗೋ ಹೊರಟುಹೋದನು ಇವನನ್ನು ಹುಡುಕಲು ಹೋಗಿದ್ದ ಇವನ ತಾಯಿ ನಂಜಮ್ಮನು ಹಾವು ಕಡಿಯಲ್ಪಟ್ಟು ಬೆಂಗಳೂರಿನಲ್ಲಿ ಮೃತಪಟ್ಟಳು ಈಕೆಯ ಕರ್ಮಾಂತರ ನಡೆಯಲು ಅವಕಾಶವಿಲ್ಲದ್ದರಿಂದ ಆ ಹುಡುಗನನ್ನು ಪತ್ತೆಮಾಡಿ ವರ್ತಮಾನ ಕೊಡುವವರಿಗೆ ಮುಳವಳ್ಳಿಯಲ್ಲಿರುವ ಜಮೀನ್‌ದಾರ್ ಮ|| ಸುಬ್ಬರಾವ್ ಮಲ್ಲಯ್ಯನವರು ೫ ರೂಪಾಯಿ ಬಹುಮಾನ ಕೊಡುತ್ತಾರೆ

ಮೈಸೂರು ಗೆಜೆಟ್ ಸಂಗ್ರಹ

ಚಿಕ್ಕಮಗಳೂರು ತಾಲ್ಲೂಕು ಅತ್ತಿಗುಂಡಿ, ಸಿಟ್ಟುಕೆರೆಪಳ್ಳಿ, ಛತ್ರಹಳ್ಳಿ, ಹಾಸನ್ ತಾಲ್ಲೂಕು ಗ್ರಾಮ, ಅರಸೀಕೆರೆ ತಾಲ್ಲೂಕು ಅಗ್ಗುಂದ, ಚನ್ನರಾಯಪಟ್ಟಣ ತಾಲ್ಲೂಕು ಬೈರಾಪುರ ಮತ್ತು ಕುಂಬಾರಹಳ್ಳಿ, ಈ ಸ್ಥಳಗಳಲ್ಲಿ ಪ್ಲೇಗ್ ಉಪದ್ರವಿದೆ ಎಂದು ತಿಳಿಯತಕ್ಕದ್ದು

ಮುಂದೆ ಹೇಳುವ ಸ್ಥಳಗಳಲ್ಲಿ ನಡೆಯುವ ಜಾತ್ರೆ ಉತ್ಸವಾದಿಗಳಿಗೆ ಪ್ಲೇಗ್ ಇರುವ ಸ್ಥಳಗಳಿಂದ ಹೋಗುವ ಜನರನ್ನು ಬಿಡುವುದಿಲ್ಲ —ಹಾಸನ್ ತಾಲ್ಲೂಕು ಬಲ್ಲಿಕೆರೆ, ಮಂಜರಾಬಾದ್ ತಾ ಮಾವಿನಹಳ್ಳಿ, ಅರಸೀಕೆರೆ ತಾ ಗೊಲ್ಲರಹಟ್ಟಿ ಮತ್ತು ಸಿದ್ಧರಹಟ್ಟಿ, ಚನ್ನರಾಯಪಟ್ಟಣದ ತಾ. ಕೆಂಬಾಳು, ಬಾಗೂರು ಮತ್ತು ದಾಸೇನಹಳ್ಳಿ, ಚಿಕ್ಕಮಗಳೂರು ತಾ ಕುರುವಂಗಿ, ಯಗಟಿ ತೊರೆ ತಾ ಬುಂಚನಕಟ್ಟೆ, ಸಿರಾ ತಾ, ಪಟ್ನಾಯಕನಹಳ್ಳಿ

ಅ|| ಕಂಟ್ರೋಲರಾ ಮ|| ಬಿ ಶ್ರೀನಿವಾಸೈಯಂಗಾರ್ರಿಗೆ ಜನವರಿ ತಾ 3 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಪ್ರಿವಿಲೆಜ್ ರಜಾ ಕೊಟ್ಟಿದೆ ಅವರು ಕ್ರಿಸ್ಮಸ್ ರಜವನ್ನೂ ಉಪಯೋಗಿಸಿಕೊಳ್ಳಬಹುದು.

ಸೆನ್ಸಸ್ ಸೂಪರಿಂಟೆಂಡೆಂಟರವರ ಅಸಿಸ್ಟೆಂಟ್ ಮ|| ಕೆ. ಆರ್ ಕೃಷ್ಣಸ್ವಾಮೈಯಂಗಾರ್‍ರವರು ಅ|| ಕಂಟ್ರೋಲರಾಗಿ ಬದಲಿ ನೋಡತಕ್ಕದ್ದು

ಅ|| ಅ|| ಸರ್ಜನ್ ಮ|| ಪಿ ಎಸ್ ರಾಮಚಂದ್ರ ಅಯ್ಯರವರಿಗೆ ಜನವರಿ ತಾ 15 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಹಾಸನ್ ಡಿಸ್ಟ್ರಿಕ್ಟ್ ಸ್ಕೂಲುಗಳ ಡೆಪ್ಟಿ ಇನ್ಸ್‌ಪೆಕ್ಟರ್ ಮ|| ಕೆ. ಎನ್ ವೀರಭದ್ರೈಯನವರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಅವರ ಇಷ್ಟಪ್ರಕಾರ ರದ್ದು ಮಾಡಿದೆ.

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಮ|| ಎಚ್ ಎಚ್. ಸ್ಪಾರ್ಕ್ಸ್‌ಯವರಿಗೆ ಕೊಟ್ಟಿದ್ದ ಆರು ತಿಂಗಳ ಕಾಯಿಲೆ ರಜವನ್ನು ಇನ್ನೆರಡು ತಿಂಗಳು ಅಂದರೆ 1914 ನೇ ಅಕ್ಟೋಬರ್ ತಾ 16ರ ತನಕ ಜಾಸ್ತಿಮಾಡಿದೆ ಆ ತಾರೀಖಿನಿಂದ ಲಾಗಾಯಿತು ಮ ಸ್ಪಾರ್ಕ್ಸ್‌ಯವರು ಸರ್ಕಾರದಿಂದ ಪೆನ್ಷನ್ ಮೇಲೆ ನಿವೃತ್ತರಾಗುತ್ತಾರೆ

ಮ ಬಿ ಸಿ ಕೃಷ್ಣಶಾಸ್ತ್ರಿಯವರು ಅ|| ಕಮಿಷನರ್‌ರಾಗಿ ಕೆಲಸಮಾಡುವಾಗ್ಗೆ ಅಥವಾ ಮತ್ತೊಂದು ಹುಕುಂ ಕೊಡುವ ತನಕ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಪ್ರೊಬೇಷನರ್ ಮ. ಬಿ ಮೊಹಿದೀನ್ ಷರೀಫ್‌ಯವರು ಕೋಲಾರ್ ತಾಲ್ಲೂಕಿನ ಅಮಲ್ದಾರ್ ಮತ್ತು 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು.

ಮ|| ಎಚ್ ಎಚ್ ಸ್ಪಾರ್ಕ್ಸ್‌ಯವರು ಕೆಲಸದಿಂದ ನಿವೃತ್ತರಾದಕಾರಣ ಮುಂದೆ ಹೇಳುವ ಏರ್ಪಾಡು ಹುಕುಂಮಾಡಿದೆ —(1) ಮ|| ಸಿ ಶ್ರೀಕಂಠೇಶ್ವರಅಯ್ಯರವರು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರಾಗಿರತಕ್ಕದ್ದು, (2) ಮ|| ಕೆ ಆರ್ ಶ್ರೀನಿವಾಸೈಯಂಗಾರ್ರು 1 ನೇ ಗ್ರೇಡ್ ಡೆಪ್ಟಿ ಕಮಿಷನರ್‌ರಾಗಿಯೂ, ಮ|| ಕೆ ಚಾಂಡಿಯವರು 2 ನೇ ಗ್ರೇಡ್ ಡೆಪ್ಟಿ ಕಮಿಷನರ್‌ರಾಗಿಯೂ ಖಾಯಂ ಮಾಡಿದೆ.

ಮ|| ವೈ ಅಶ್ವತ್ಥನಾರಾಯಣರಾಯರು ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನಲ್ಲಿ ನೌಕರಿಮಾಡುವ ಕಾಲದಲ್ಲಿ ಎಗ್ಸಿಕ್ಯುಟಿವ್ ಇಂಜನಿಯರಾಗಿರುವಂತೆ ಬಡ್ತಿ ಮಾಡಲ್ಪಟ್ಟಿದಾರೆ

ಎಗ್ಸಿಕ್ಯುಟಿವ್ ಇಂಜನಿಯರ್ ಮ|| ಸಿ ಮಾಧವರಾಯರನ್ನು ಉತ್ತರ ಸರ್ಕಲಿನ ಸೂಪರಿಂಟೆಂಡಿಂಗ್ ಇಂಜನಿಯರಾಗಿ ಬಡ್ತಿಯಿಂದ ನೇಮಕ ಮಾಡಿದೆ

ಅ|| ಇಂಜನಿಯರ್ ಮ|| ಎನ್ ಶ್ರೀನಿವಾಸಅಯ್ಯರವರನ್ನು ಕಾವೇರಿ ವಲಾವ್ ಡಿವಿಜನ್‌ನಿಂದ ಮೈಸೂರು ಅರಮನೆ ಡಿವಿಜನ್‌ಗೆ ವರ್ಗಮಾಡಿದೆ

ಚಿಕ್ಕಬಳ್ಳಾಪುರದ ತಾಲ್ಲೂಕು ಅಮಲ್ದಾರ್ ಮ|| ಮಹಮದ್ ಸೈಯದ್ ಷರೀಫ್‌ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ರಜಾ ಕೊಟ್ಟಿದೆ

ಶಿರಸ್ತೇದಾರ್ ಮ ಜಿ ಶ್ರೀನಿವಾಸರಾಯರು ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು

ಇಂಡಿಯಾ ದೇಶದ ವೃತ್ತಾಂತಗಳು

ಕಲ್ಕತ್ತಾ ಪಟ್ಟಣದ ಟಂಕಸಾಲೆ ಆಫೀಸಿನಲ್ಲಿ ಮೂವರು ನೌಕರಮಾನೀರುಗಳು 14,000 ರೂಪಾಯಿನ ಕರೆನ್ಸಿ ನೋಟುಗಳನ್ನು ಅಪಹರಿಸಿರುತ್ತಾರೆಂದು ಪೋಲೀಸಿನವರಿಗೆ ತಿಳಿದು ಅವರನ್ನು ದಸ್ತಗಿರಿ ಮಾಡಲ್ಪಟ್ಟಿರುತ್ತಾರೆ ಮೊಕದ್ದಮೆ ಇನ್ನೂ ತನಿಖೆಯಾಗುತ್ತಿದೆ

ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್‌ಯವರ ಆರೋಗ್ಯವಿಷಯದಲ್ಲಿ ತಾ. 6 ನೇ ಸೋಮವಾರ ಬೆಳಗ್ಗೆ ಪ್ರಕಟವಾದ ತಂತೀ ವರ್ತಮಾನದ ಸಾರಾಂಶವೇನೆಂದರೆ—ವೈಸ್‌ರಾಯರವರ ದೇಹಸ್ಥಿತಿಯು ಚೆನ್ನಾಗುತ್ತಿದೆ ಶಕ್ತಿಕೊಡುತ್ತಿರುವುದು ಸಣ್ಣ ಗಾಯಗಳು ವಾಸಿಯಾಗುತ್ತಿವೆ ಬೆನ್ನು ಮತ್ತು ಕತ್ತಿನ ದೊಡ್ಡ ಗಾಯಗಳು ನಿಧಾನವಾಗಿ ವಾಸಿಯಾಗುತ್ತಿರುವವು ನಿನ್ನೆಯೂ ಇವತ್ತೂ ವೈಸ್‌ರಾಯರವರು ಕೆಲವು ಕಾಲ ಉದ್ಯಾನವನದಲ್ಲಿ ಸಂಚಾರಮಾಡಿದರು ರಾತ್ರಿ ಸುಖವಾಗಿ ಕಳೆಯಿತು

ಬೊಂಬಾಯಿ ಪಟ್ಟಣದ ವಿಲ್ಸನ್ ಸರ್ಕಸ್ ಕಂಪನಿಯಲ್ಲಿ ಪಿಯಾನೊ ವಾದ್ಯವನ್ನು ಬಾರಿಸುವ ಕೆಲಸದಲ್ಲಿದ್ದ ಮಿಸ್ ಫ್ಲಾರೆನ್ಸ್ ಈಡಿತ್ ಸಿಸಲ್ ಎಂಬುವಳು ಅಲ್ಲಿನ ಹೋಟೇಲಿನಲ್ಲಿದ್ದು ಕಳೆದ ವಾರ ಗುಂಡಿನಿಂದ ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡಳು ಅವಳು ಬರೆದಿಟ್ಟಿರುವ ಕಾಗದ ಸಿಕ್ಕಿತು ಅದರಲ್ಲಿ "ದೇವರೇ ನನ್ನ ಕೃತ್ಯವನ್ನು ಕ್ಷಮಿಸಲಿ ಕುಡುಕತನವೇ ನನ್ನನ್ನು ಈ ಗತಿಗೆ ತಂದಿತು ಕುಡಿಯುವಿಕೆಯ ಹೆಂಗಸಿನ ವಿಷಯದಲ್ಲಿ ಯಾರಿಗಾದರೂ ಕನಿಕರವುಂಟೇ ? ನನ್ನಲ್ಲಿ ಆ ದುರಭ್ಯಾಸವಿರೋದರಿಂದ ಯಾವ ಪುರುಷನೂ ನನ್ನನ್ನು ಕನಿಕರಿಸಲಿಲ್ಲ" ಎಂದು ಬರೆದಿರುತ್ತಾಳೆ

ಹಿಂದುಸ್ಥಾನದಲ್ಲಿ ಸರ್ಕಾರಿ ನೌಕರಿಗಳಿಗೆ ಬ್ರಿಟಿಷ್ ಗವರ್ನ್‌ಮೆಂಟಿನವರು ದೇಶೀಯರನ್ನು ಎಷ್ಟು ಮಟ್ಟಿಗೆ ಯಾವ ಯಾವ ಖಾತೆಗಳಲ್ಲಿ ಹೆಚ್ಚು ಹೆಚ್ಚಾಗಿ ನೇಮಿಸಬಹುದು ಎಂಬುವುದನ್ನು ತನಿಖೆಯಿಂದ ಗೊತ್ತುಮಾಡಿ ರಿಪೋರ್ಟು ಬರೆದುಕೊಡಬೇಕೆಂದು ಒಂದು ಪಂಚಾಯತಿಯನ್ನು ಸರ್ಕಾರದವರು ನೇಮಕ ಮಾಡಿರುತ್ತಾರೆ ಈ ಪಂಚಾಯತಿಗೆ ಲಾರ್ಡ್ ಇಸ್ಲಿಂಗ್‌ಟನ್‌ರವರು ಪ್ರೆಸಿಡೆಂಟರಾಗಿರುವರು ಈ ಪಂಚಾಯತಿ ಕೋರ್ಟು ನಿನ್ನೆಯಿಂದ ಮದರಾಸಿನಲ್ಲಿ ಪ್ರಾರಂಭವಾಗಿ ಯೂರೋಪ್ಯಿಯನ್ ಮತ್ತು ದೇಶೀಯ ಅಧಿಕಾರಿಗಳ ಮತ್ತು ಬೇರೋಜುಗಾರ ದೊಡ್ಡ ಮನುಷ್ಯರುಗಳ ಅಭಿಮತವನ್ನು ಬರೆದುಕೊಳ್ಳುತ್ತಿದಾರೆ

ಉತ್ತರ ಮಲಬಾರಿಗೆ ಸೇರಿದ ಪಯ್ಯನೂರಿನಲ್ಲಿ ಅಪ್ಪೋತಿ ಎಂಬೊಬ್ಬ ಮಾಪಿಳ್ಳೆಯು ಮಸೀತಿಯಲ್ಲಿ ಇತರ ಮಹಮದೀಯರ ಕೂಡ ನಮಾಜುಮಾಡುತ್ತಿದ್ದಾಗ ಇದ್ದಕ್ಕಿದ್ದ ಹಾಗೇ ರೇಗಿದವನಾಗಿ ಒಂದು ಚಾಕುವಿನಿಂದ ಮೂರುನಾಲ್ಕು ಮಂದಿ ಮಾಪಿಳ್ಳೆಗಳನ್ನು ತಿವಿದು ಘೋರ ಗಾಯಮಾಡಿ, ಅಲ್ಲಿಂದ ಹೊರಟು ರೈಲ್ವೆ ಸ್ಟೇಷನ್‌ಗೆ ಹೋಗಿ ಹುಚ್ಚು ಹಿಡಿದವನಂತೆ ಗಲಭೆಮಾಡಿದಾಗ ಮೂರು ಜನ ಪೋಲೀಸಿನವರು ಅವನನ್ನು ಹಿಡಿಯಬೇಕೆಂದು ಸಾಹಸಪಟ್ಟರು ಅವನು ಆ ಮೂರು ಮಂದಿಯನ್ನೂ ತಿವಿದು ಗಾಯಮಾಡಿ, ನಾಲ್ಕನೆಯವನ ಮೇಲೆ ನುಗ್ಗಿ ಹೋಗುತ್ತಿದ್ದಾಗ ಕಲೆಕ್ಟರವರು ಬಂದೂಕು ಬಾರ್‌ಮಾಡಿ ಹೊಡೆದು ಅವನನ್ನು ಕೊಂದುಬಿಟ್ಟರು

ವಾಯುವ್ಯ ಸರಹದ್ದು ಪ್ರಾಂತಕ್ಕೆ ಸೇರಿದ ಹಜಾರಾ ಡಿಸ್ಟ್ರಿಕ್ಟಿನಲ್ಲಿ ಬಫಾ ಎಂಬ ಊರಿನೊಳಗೆ ಹಿಂದೂ ಮಹಮ್ಮದೀಯರಿಗೆ ಒಂದು ಹೊಸ ಜಗಳವಾಯಿತು ಒಬ್ಬ ಮಹಮದೀಯನು ಹಿಂದುವಿನ ಅಂಗಡಿಗೆ ಹೋಗಿ ಅಕ್ಕಿ ಕೊಂಡುಕೊಂಡನು ಅಕ್ಕಿ ರಾಶಿಯಲ್ಲಿ ಎರಡು ಕೋಳಿಮೊಟ್ಟೆಗಳು ಇದ್ದವು. ಅವುಗಳ ಮೇಲೆ ಕಾಲಿನಾ ಹಿಂದು ಆತನನ್ನು ಬಿರಿದಿದ ರಿಂದ ಆ ಅನಸು ಮಹಮದೀಯನಿಗೆ ಕೋಪ ಆ ಹಿಂದು ವರ್ತಕನನ್ನು ಚೈದು ಹೊಡೆಯಲಾರಂಭಿಸಿದನು ಈ ಕಲಹ ದೊಡ್ಡದಾಗಿ ಬೆಳೆದು ಹದಿನಾರು ಅಂಗಡಿಗಳೂ ಒಂದು ಧರ್ಮಶಾಲೆಯೂ ಲೂಟಿಯಾದವು ನಿನ್ನೆರಡು ಮಂದಿ ಹಿಂದುಗಳಿಗೂ ಇಬ್ಬರು ಪೋಲೀಸಿನವರಿಗೂ ಏಟುಗಳು ಬಿದ್ದವು ಆಸ್ಪತ್ರೆ ಪೋಲೀಸಿನವರು ಬೇಗ ಹೋಗಿ ದೊಂಬಿಯನ್ನು ಚದರಿಸಿದರು

ಧೃಗಸುಟ್ಟೆ ಕೊಡಲಾಗುತ್ತೆ.

10 ವರುಷ ಗ್ಯಾರಂಟಿ ಉಳ್ಳ 30 ಗಂಟೆ ನಡೆಯುವ ಉತ್ತಮವಾದ ಬೆಲೆಯುಳ್ಳ ಲೀವರ್ ವಾಚನ್ನೂ, ಒಂದು ಸೊಗಸಾದ ಸರಪಳಿಯನ್ನೂ, 100 ಫ್ರೀಸ್ ಕಾರ್ಡನ್ನೂ ಬಿಟ್ಟಿ ಕೊಡುತ್ತೇವೆ ಅರ್ಧಾಣೆ ಸ್ಟಾಂಪಿಟ್ಟು ಇಂಗ್ಲಿಷಿನಲ್ಲೇ ನಮಗೆ ಬರೆಯಿರಿ. ವಿಳಾಸ —ಮೆಸ್ಸರ್ಸ್ ಎಂ ಎ ಘಟಾಲಾ ಕಂಪನಿ,

[179-7] ಚಿತ್ತೂರು, ಉತ್ತರ ಆರ್ಕಾಟು

"ವೃತ್ತಾಂತ ಪತ್ರಿಕೆ" ಕ್ಯಾಲೆಂಡರು

ಈ ಜನವರಿ ತಿಂಗಳಲ್ಲಿ ಚಂದಾ ಕಟ್ಟಿ ವೃತ್ತಾಂತ ಪತ್ರಿಕೆಯ ಚಂದಾದಾರರಾಗುವವರಿಗೆ 1914 ನೇ ಇಸವಿ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು ಈ ಕ್ಯಾಲೆಂಡರಿನಲ್ಲಿ ಗುಬ್ಬಿಯಲ್ಲಿರುವ ಬಾಲಿಕಾ ಬೋರ್ಡಿಂಗು, ಬೆಂಗಳೂರಿನಲ್ಲಿರುವ ನಾರ್ಮಲ್ ಸ್ಕೂಲಿನ, ಉಪಾಧ್ಯಾಯಿನಿಯರ, ಸ್ಟೇಷನ್‌ನಲ್ಲಿರುವ ಒಂದು ಪರ್ವತ ಸ್ಥಳದ ಮತ್ತು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನ ಚಿತ್ರಗಳು ಬಹಳ ಸೊಗಸಾಗಿ ಅಚ್ಚಾಗಿರುತ್ತವೆ

ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ ಮೈಸೂರು

ಪ್ರಕಟನೆ.

163-10

ಪತ್ತಿಯ ತುಪ್ಪವು ತುಮಕೂರು, ಅರಸೀಕೆರೆ, ಹಾಸನ, ಮತ್ತು ತಿಪ್ಟೂರು, ಈ ಸ್ಥಳಗಳಲ್ಲಿಯೂ ದೊರೆಯುವಂತೆ ಈಚೆಗೆ ಏರ್ಪಾಟು ಮಾಡಲ್ಪಟ್ಟಿದೆ.

ಬೆಂಗಳೂರು ಸಿಟಿ ಚಿಕ್ಕಪೇಟೆ ಅಕ್ಕಿಪೇಟೆ ಶ್ರೀನಿವಾಸಾಚಾರ್ಯರ ಬೀದಿ ೧ ನೇ ನಂಬರು ಹೊಸಮಳಿಗೆಯಲ್ಲಿ ಪತ್ತಿಯ ತುಪ್ಪ, ಹಿಂಡಿ, ಮತ್ತು ಹೊಟ್ಟು ಸುಲಭಕ್ರಯಕ್ಕೆ ದೊರೆಯುತ್ತವೆ

ನಮ್ಮ ಕಂಪನಿಯ ಏಜಂಟರು ಮಾರುವ ಈ ಪದಾರ್ಥಗಳಲ್ಲಿ ದೋಷ ಕಂಡುಬಂದರೆ ಅದನ್ನು ನಮಗೆ ತಿಳಿಸಿದ್ದು ಕೂಡಲೆ ಕ್ರಮಪಡಿಸುವೆವು ಇತರರು ನಡಿಯಿಸಬಹುದಾದ ವ್ಯತ್ಯಾಸಗಳಿಗೆ ನಾವು ಜವಾಬ್ದಾರರಲ್ಲ.

ಜರ್ಮನ್ ಜೇಬು ದೀಪ.

ಬೆಲೆ ರೂ 1–15–0

ಈ ನಕ್ಷೆಯಲ್ಲಿ ಕಾಣಿಸಿರುವ ಜರ್ಮನ್ ಜೇಬು ದೀಪಗಳು ಜರ್ಮನ್ ದೇಶದ ಶಾಸ್ತ್ರಜ್ಞರಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟು ಈಗತಾನೇ ನಮ್ಮ



ಹಿಂದೂ ದೇಶಕ್ಕೆ ಕಳುಹಿಸುತ್ತಾರೆ ಇದು ವಿದ್ಯುಚ್ಛಕ್ತಿಯ ಜ್ಯೋತಿಯಿಂದ ಪ್ರಕಾಶಮಾನವಾಗಿ ಉರಿಯುತ್ತೆ ಇದನ್ನು ಹಚ್ಚುವದಕ್ಕೆ ಬೆಂಕಿ ಕಡ್ಡಿ ಅವಶ್ಯಕವಿಲ್ಲ ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿಂದ ಒತ್ತಿದರೆ ದೀಪವು ಕಣ್ಣಿಗೆ ಕಾಣಿಸುತ್ತೆ ಮುಚ್ಚಳವನ್ನು ತೆರೆದುಕೊಂಡು ನೋಡುವವರಿಗೆ ಆಶ್ಚರ್ಯವಾಗುವಹಾಗೆ ಉರಿಯುತ್ತೆ [193-8]

ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗಲೂ ದೀಪದ ಕಡಿ ಅವಶ್ಯಕವೇ ಇರುವದಿಲ್ಲ ಜನರಿಗೆ ಇದು ಬಹಳ ಉಪಯೋಗ ಇದು ಇತರ ದೀಪಗಳನ್ನು ಹಚ್ಚುವದಕ್ಕೂ, ಪ್ರಯಾಣ ಮಾಡುವಾಗ ಜೇಬಿನಲ್ಲಿ ಇಟ್ಟುಕೊಂಡು ಬೇಕಾದಾಗ ಬೇಕಾದ ವಸ್ತುಗಳನ್ನು ಹುಡುಕುವದಕ್ಕೂ ಬಹಳ ಉಪಯೋಗವಾಗುತ್ತದೆ ಇದನ್ನು ಸುಲಭವಾಗಿ ಉಪಯೋಗಿಸಬಹುದು ಅದರಿಂದ ಯಾವ ಅಪಾಯವೂ ಆಗುವದಿಲ್ಲ

ವಿಳಾಸ — ಟಿ ಆರ್ ರಾವ ಕಂಪನಿ, ನಂ 30,
ರಾಮುನಾಯ್ಕನ ಬೀದಿ ಸುಂಗುವಾರ್‍ಪೇಟೆ, ಮದರಾಸು.

ನಿನಗೆ ಸ್ವಸ್ಥವಿಲ್ಲವೋ ?

ನನಗೆ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನನಗೆ ಯಾವ ನೋವೇ ಉಂಟಾಗಿರಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೋ ?" ಎಂದು ನಿನ್ನನ್ನು ನೀನೇ ಕೇಳಿಕೊ.



(೧೨ ಆಣೆ ಬುಡ್ಡಿ ಪರಿಮಾಣ)

ಹಾಗ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವಾಗ ತೆಗೆದುಕೊ ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಸ್ವಸ್ಥವಾಗುವುದು ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇ ಉಂಟಾಗುವುದೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ ಪಿತ್ತಕೋಶದ ರೋಗ, ಪಿತ್ತ ಪಿತ್ತಜ್ವರ, ಅಜೀರ್ಣ ಅಗ್ನಿಮಾಂದ್ಯ, ಗಾಬರಿ ಅಶಕ್ತಿ, ಎದೆಯು ತಲ್ಲಣಿಸುವುದು, ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ, ಮುಟ್ಟಿನ ಹೊಟ್ಟೆನೋವು ಹೆಂಗಸರ ವ್ಯಾಧಿಗಳು ಇವೇ ಮೊದಲಾದವುಗಳು ಗೆಡ್ಡೆ ಎಟ್ಟು ಬಿಟ್ಟರೆ ರಕ್ತವು ಕೆಟ್ಟು ಅರೋಗ್ಯವು ನಾಶವಾಗಿ ಹೋಗುವುದು

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಕೋಶದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [12-18]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು, ಅಥವಾ ಡೋನ್, ಪಿ ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

Printed and Published by the Rev H Gulliford, Proprietor and Manager, Wesleyan Mission Press, Mysore 9/1/1914

REGISTERED

ವೃತ್ತಾಂತ ಪತ್ರಿಕೆ

ಬಿಡಿ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸನ್ ೧೯೧೩ ನೇ ಇಸವಿ ಜನವರಿ ತಾರೀಖು ೧೬ ನೇ ಗುರುವಾರ. ಸಂಚಿಕೆ ೩೩

ಡೋಂಗರೆ ಇವರ ಬಾಲಾಮೃತ.

[115-27]

ಸಣ್ಣ ಮಕ್ಕಳಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದ ಮಕ್ಕಳು ಬಹಳ ಆನಂದದಿಂದ ತೆಗೆದುಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡ ದೋಣ, ಅಸ್ಥಿಗಳು ಶಕ್ತಿಯಿಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳು ಅಶಕ್ತತೆಯ ರೋಗಗಳು ಪೂರಾ ಇಲ್ಲ ದಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ; ಟಪಾಲ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ

ಅಮೃತಾಂಜನ್. (Regd.)



ಇಲ್ಲಿ ವಿಶೇಷ ಲಕ್ಷ್ಯ ಕೊಡಿರಿ! ವಾತ, ಸಂಧಿವಾತ, ತಲೇಶೂಲೆ, ಸೊಂಟಶೂಲೆ, ಶೀತ, ಕಜ್ಜಿ, ಗಂಟು ಶೂಲೆ, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣವಾಗುವದು. ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ. ಬಾಟ್ಲಿ 1ಕ್ಕೆ 0-8-0.

ಅರ್ಧ ಕ್ರಯಕ್ಕಿಂತಲೂ ಕಡಮೆ.

ಹತ್ತು ಲಕ್ಷ ದೊಡ್ಡ ಸೈಜು ಫೋಟೋ ಕ್ಯಾಲೆಂಡರುಗಳು. ಇವುಗಳು ಚಿತ್ರಗಳಾಗಿಯೂ ಸಹ ಬಾಗಿಯೂ ಇವೆ. 1,000 ಕ್ಕೆ ಮುಂಗಡ ಕ್ರಯ ರೂ. 2-8-0; ಈಗ 15 ಆಣೆ, ವಿ. ಪಿ. ಖರ್ಚು 12 ಆಣೆ. 500 ಕ್ಕೆ 8 ಆಣೆ. ವಿ. ಪಿ. ಖರ್ಚು 8 ಆಣೆ.

1913 ನೇ ವರ್ಷದ ಕ್ಯಾಲೆಂಡರ್ 8 ಬಾಟ್ಲಿ ಅಮೃತಾಂಜನ ತರಿಸಿಕೊಂಡವರಿಗೆ ಧರ್ಮಾರ್ಥವಾಗಿ ರವಾನಿಸಲ್ಪಡುವದು. ಇತರರಿಗೆ ಕ್ಯಾಲೆಂಡರ್ 1ಕ್ಕೆ 4 ಆಣೆ ವಿ. ಪಿ. ಸಹಿತ [45-47]

ಅಮೃತಾಂಜನ ಡಿಪೋ, ಫೋರ್ಟ್ ಮುಂಬಯಿ.



1913 ನೇ ಪಾಕೆಟ್ ಡೈರಿ

ಆ ಆ ದಿನದ ಸಂವಾದಗಳನ್ನು ಬರೆಯುವದಕ್ಕೋಸ್ಕರ ಖಾಲಿ ಹಾಳೆ ... ಪಂಚಾಂಗ; ಹಬ್ಬದ ದಿನಗಳು, ಸರ್ಕಾರಿ ... ರೈಲು, ಟೆಲಿಗ್ರಾಫ್, ಸ್ಟಾಂಪು, ರಿಜಿಸ್ಟರು, ಟಪಾಲು ಇವಕ್ಕೆ ... ಪ್ರಶ್ನೆ ಮುಂತಾದ ಕೆಲವು ... ತಪ್ಪದೆ ಮುಖ್ಯವಾಗಿ ಪ್ರತಿ ದಿನವೂ ನೋಡಿಕೊಳ್ಳಬೇಕಾದ ವಿಷಯಗಳು ಅಡಗಿವೆ.

ಎ ಸಾದಾ ಸಣ್ಣ ಡೈರಿಗೆ 4 ಆಣೆ. ಬಿ ಒಂದಾಣೆಯ ... ಕಟ್ಟಿಯುಳ್ಳ ಮುಚ್ಚಳದ ಡೈರಿಗೆ 5 ಆಣೆ. ಸಿ ಸಾದಾ ದೊಡ್ಡ ಡೈರಿಗೆ 6 ಆಣೆ. ... ಕಟ್ಟಿಯುಳ್ಳ ಮುಚ್ಚಳದ ದೊಡ್ಡ ಡೈರಿಗೆ 8 ಆಣೆ.

ಜಿನಿವಾ ಡೈರಿ.—ಹಿಡಿಯ ವಸ್ತ್ರ, ಶೈಂಡು ಸೂತನ, ಗಾತ್ರ ದೊಡ್ಡದು, ವಿಷಯ ಹೆಚ್ಚು, ಉತ್ತಮವಾದ ಡೈರಿ. ಜಿ. ನಂ 1—ಸಾದಾ 4 ಆಣೆ. ಜಿ. ನಂ. 2—ಒಂದಾಣೆಯ ... ಕಟ್ಟಿಯುಳ್ಳ ಮುಚ್ಚಳದ ಡೈರಿಗೆ 6 ಆಣೆ. ಟಪಾಲು ಹಾಸಲು ಬೇರೆ. ಒಂದೇ ನಮೂನೆಯಲ್ಲಿ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಬಹುಮಾನವಾಗಿ ಕಳುಹಿಸುತ್ತೇವೆ.

ನಮ್ಮ ಪುಸ್ತಕಗಳ ವಿವರ ಕ್ರಯಪಟ್ಟಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ. [10-2]

ನಮ್ಮ ವಿಳಾಸ.—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಸನ್ 1913 ನೇ ಇಸವಿಯ ಸೀತಾರಾಘವ ಪಾಕೆಟ್ ಡೈರಿ

ಬೇಗ ನೋಡಿ ಬೆಲೆ ಇಳಿಸಿದ ಶಫಿಯತ್ ಹೆಚ್ಚಿಸಿದ

ಮೊದಮೊದಲೇ ಬರೆದು ತರಿಸಿಕೊಳ್ಳಿ. ನಂ. 1. ಸಣ್ಣ ಸೈಜು ಸಾದಾ ಡೈರಿಗೆ 0-3-0. ನಂ. 2. ಸಣ್ಣ ಸೈಜು ಪೆನ್ಸಲ್ ಇಟ್ಟು ಮುಚ್ಚಳವುಳ್ಳ ಡೈರಿಗೆ 0-5-0. ನಂ. 3 ದೊಡ್ಡ ಸೈಜು ಸಾದಾ ಡೈರಿಗೆ 0-4-0 ನಂ. 4 ದೊಡ್ಡ ಸೈಜು ಪೆನ್ಸಲ್ ಇಟ್ಟು ಮುಚ್ಚಳ ಹಾಕಿರುವ ಡೈರಿಗೆ 0-8-0. ಟಪಾಲು ಖರ್ಚು ಬೇರೆ. ಒಂದೇ ಸರಿಯೆ 6 ಡೈರಿ ತರಿಸಿಕೊಂಡವರಿಗೆ ಒಂದು ಡೈರಿ ಇನಾಮು. 7 ಕ್ಕಿಂತ ಹೆಚ್ಚು ಡೈರಿಗೆ ಬರೆಯುವರು ಅಡ್ವಾನ್ಸಾಗಿ ಒಂದು ರೂಪಾಯಿ ಕಳುಹಿಸಿದರೇನೇ ಡೈರಿಗಳನ್ನು ಬಾಕಿ ಹಣಕ್ಕೆ ವಿ. ಪಿ. ಮಾಡಲಾಗುವದು. [136-20]

ವಿವರಣೆ—(1) ಈ ವರೆಗೆ ತಾವು ನೋಡಿರುವ ಡೈರಿಗಳೆಲ್ಲಕ್ಕಿಂತಲೂ ಅನುಕೂಲವಾಗುವಂತೆ ಹೊಸದಾದ ಕಾಗದಗಳಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿದ ಕ್ಯಾಲಿಕೋ (ಬಟ್ಟೆಯ) ಬೈಂಡು ಮಾಡಿಸಿದೆ. (2) ದೇಹಸೌಖ್ಯವಿಚಾರದಲ್ಲಿ ಪ್ರತಿಯೊಬ್ಬರೂ ತಿಳಿಯಬೇಕಾದ ಸಾಧಕಬಾಧಕಗಳನ್ನು ತಕ್ಕಮಟ್ಟಿಗೆ ... ಪಂಚಾಂಗ, ಕ್ಯಾಲೆಂಡರ್; ರಾಹುಕಾಲ ಗುಳಿಕಕಾಲಗಳು, ಸಂವತ್ಸರಫಲಗಳು, ಗ್ರಹಣ, ಜಾತಕವು ಮೊದಲುಗೊಂಡು ಜ್ಯೋತಿಷಶಾಸ್ತ್ರಕ್ಕೆ ಬೇಕಾದ ... ಇವೇ ಮುಂತಾದ ವಿಷಯಗಳು ಸುಲಭವಾಗಿ ತಿಳಿಯುವಂತೆ ಬರೆದಿದೆ (3) ಕೋರ್ಟುಫೀಜ್ ಅಕ್ಟು, ಪೋಸ್ಟಾಫೀಸಿನ ಸಂಗತಿ, ಸ್ಟಾಂಪ್ ಅಕ್ಟು, ... ಮುಖ್ಯವಾಗಿ ಬೇಕಾಗುವ ಮತ್ತಾವ ಡೈರಿಯಲ್ಲೂ ಹೇಳದಿರುವಷ್ಟು ಹೊಸ ವಿಷಯಗಳನ್ನೂ ಸೇರಿಸಿದೆ. (4) ಮುಹರಾಸ್ ಮತ್ತು ಸದರ್ನ ಮರಾಠಾ ರೈಲ್ವೆ, ರೈಲು ಹೊರಡುವ ಕಾಲ, ಅಳತೆ, ತೂಕ, ಮೈಸೂರು ಸಂಸ್ಥಾನದ ಮುಖ್ಯಾಧಿಕಾರಿಗಳ ಹೆಸರು, ಅವರ ತಲಬು, ಗೌರ್ನಮೆಂಟ್ ರಜಾ ... ಹಿಂದೂ ಸಂವತ್ಸರಗಳಿಗೆ ಸರಿಯಾದ ಇಂಗ್ಲೀಷು ಸಂವತ್ಸರಗಳು, ಕೋಷ್ಟಕ ಹಣದಬಡ್ಡಿ, ತಲಬುಜಂತ್ರಿಪಟ್ಟಿ ಸಹಾ ಇರುತ್ತವೆ. ದೋಬಿ ಲೆಕ್ಕ, ಹಾಲಿನ ... ಮುಖ್ಯವಾದ ವಿಷಯ, ಬಟ್ಟೆ ಜಮಾಖರ್ಚು, ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ. ಈ ಹೊಸ ಪ್ರಯತ್ನಕ್ಕೆ ದೇಶಾಭಿಮಾನಿಗಳ ಪ್ರೋತ್ಸಾಹ ಅತ್ಯವಶ್ಯ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮಿದುಳನ್ನೂ ಹಾಳುಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು !

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯವುಳ್ಳವಾದ ಅಲಂಕಾರವಾಗಿವೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶರಾಶಿ ಇದೆ ? ಕೇಶರಾಶಿಯನ್ನು ಸುಂದರವಾಗಿ ತೆಂದುಬರಬೇಕಾದರೆ ಅದು ರೀತಿಯಂತೆ ಮೃದುವಾಗಿ ಚಕಚಕಿಸುತ್ತಿರಬೇಕು; ಅದಲ್ಲದೆ ಕುರುಬನ್ನು ಯಾವ ಆಕೃತಿಯಿಂದ ಲಾದರೂ ಕಟ್ಟುವಂತೆ, ಅದು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರಿಯರ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಸಾಧನವಾದ ಕೂದಲುಗಳು ಶೀಘ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೆಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯೂ ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇಬೇಕು. ಇದರಿಂದ ಕೂದಲುಗಳು ಎಷ್ಟು ಮೃದುವಾಗುತ್ತವೆ ಅಂದರೆ, ಈಗಿನ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತವೆ, ನಯವಾಗುತ್ತವೆ, ಚಕಚಕಿಸುತ್ತವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತವೆ.

ಇದರ ಬೆಲೆ 1 ಸೀಸೆಗೆ ರೂ. 1-0-0. ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು.
3 ಸೀಸೆಗಳಿಗೆ ರೂ. 2-10-0. ಅಂಚೆಯ ವೆಚ್ಚ 0-7-0.

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಕಾಮಿನಿಯಾ ತೈಲದ ಕುರಿತು ಸಲವು ಮಹಾಶಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು :—

28-7-11. ಮೆ|| ಬಿ. ಡಿ. ಮಾಧವಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ—ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸಾಟಿಯಾದ ಹೇರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಾಗಿದೆ.

1-7-11. ಮೆ|| ಸಿ. ಆರ್. ನಾಯುಡು ಪ. ವ. ಡಿ. ಟಾಪಿ, (ಬರೋಡ)—ನನ್ನ ಮಿತ್ರರು "ಕಾಮಿನಿಯಾ" ತೈಲದ ಸಂಬಂಧವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದರಿಂದ ಕೂಡಲೆ 6 ಸೀಸೆಗಳನ್ನು ತ್ವರೆಯಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

ಸುಗಂಧದ್ರವ್ಯಗಳು

ಗುಲ್-ಷಾನ್ (ರೆಜಿಡ್.)—ಗುಲಾಬಿ ಅತ್ತರುಗಳೆಲ್ಲಾ ಇದೇ ಅತ್ಯಂತ ಶ್ರೇಷ್ಠವಾದದ್ದು, ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪರಿಶೋಧಕ ಪಂಡಿತರು ಹೇಳಿದ್ದಾರೆ. ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯನ್ನುಳ್ಳದ್ದು. ಕ್ರಯ ಡ್ರಾಂ ಸೀಸೆಗೆ ರೂ. 1-8-0.

ದಿಲ್-ಬಹಾರ್ (ರೆಜಿಡ್.)—ಅತ್ಯಂತ ಅಪೂರ್ವವಾದ ತಾಜಾ ಪುಷ್ಪಗಳಿಂದ ತಯಾರಿಸಿದ ಅಮೋಘವಾದ ಸುಗಂಧ. ಡ್ರಾಂ ಸೀಸೆಗೆ ರೂ. 1-8-0.

"ಕಾಮಿನಿಯಾ ಸುರಂಗಿ"—ರೂ. 1-4-0; "ಕಾಮಿನಿಯಾ ಪೌಡರ್"—ರೂ. 1.

ಎಲ್ಲಾ ಸ್ಥಳಗಳಲ್ಲಿಯೂ ಏಜೆಂಟರು ಬೇಕು.

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲೇ ಬರೆಯಬೇಕು.

ನಮ್ಮ ವಿಳಾಸ :— [8-3]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.

ಕುಂತಳಾನಂದ ತೈಲವು

147 1.

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಒಂದು ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ — ಬಿ ಎಮ್ ನಾಥ ಮತ್ತು ಕಂಪನಿ,
ವೇಪೇರಿ, ಮದರಾಸ್

CHAMBERLAIN'S COUGH REMEDY.

ಚೇಂಬರ್ಲೇನ್ನವರು ಕಂಡುಹಿಡಿದ ಕೆಮ್ಮಿನ ಔಷಧವು.

13

ಶೀತದ ಕೆಮ್ಮು, ಗಂಟಲು ಗಾರೆಸ್ಸುವುದು, ಮಡಿಗೆಮ್ಮು, ನಾಯಿಗೆಮ್ಮು ಎಲ್ಲಾ ತರದ ಶೀತ ... ಹುಟ್ಟುವ ಸಮಸ್ತ ವ್ಯಾಧಿಗಳು ಇವಕ್ಕೆಲ್ಲಾ ಈ ಔಷಧವು ಬಹು ಶ್ರೇಯಸ್ಕರವಾದ್ದು

ಆ ಕೆಮ್ಮನ್ನು ಅಲಕ್ಷ್ಯ ಮಾಡಿದರೆ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೂಲ ನ್ಯೂಮೋನಿಯ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ಶ್ವಾಸಾಶಯ ಉಗುಳಿನಲ್ಲಿ ರಕ್ತಬೀಳುವುದು ಹಾಗೂ ಕ್ಷಯರೋಗ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ... ಹಿಡಿಯುವುದನ್ನೂ ಶೀಘ್ರವಾಗಿ ಸಮಾಧಾನಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೆ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ರೋಗವನ್ನು ಇಲ್ಲದಂತೆ ಮಾಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿ ಮಾಡುವುದು ಕೆಮ್ಮನ್ನು ಶಮನವಾಗಿಸಿ ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳಿಂದ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು — ಸಣ್ಣ ಸೀಸೆಗೆ ೧ ರೂಪಾಯಿ — ದೊಡ್ಡ ಸೀಸೆಗೆ ೨ ರೂಪಾಯಿ

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

84 11

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಆರತವ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆಸ್ಸುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಸಜ್ಜು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಗ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅವನು ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅವನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯೊಂದಿಗೆ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದ್ದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ವಾಪಸು ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಲ್ ಪೀಟರ್ಸ್, 37 ವಡಮಲೈಪಿಳ್ಳೈ ಬೀದಿ, ಪುರಸೈವಾಕಂ, ವೇಪೇರಿ, ಮದರಾಸ್ (2) ಜಿ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಪ್ರಸಿದ್ಧಪತ್ರಿಕೆ

ಶ್ರೀ ಶಾರದಾ ಹಾರ್ಮೋನಿಯಂ ಶಾಲೆ, ಯಲಹಂಕ ಗೇಟ್, ಬೆಂಗಳೂರು ಸಿಟಿ ಈ ಸ್ಥಳದಲ್ಲಿ ಮನೋಹರವಾದ ಹಿಂದುಸ್ತಾನಿ, ಪಾರ್ಸಿ, ಮರಾಠಿ,



ಗುಜರಾತಿ ಮತ್ತು ಕನ್ನಡ ಹಾಡುಗಾರಿಕೆಯನ್ನು ಹಾರ್ಮೋನಿಯಂನಲ್ಲಿ ನೂತನವಾಗಿಯೂ ರಸಭರಿತವಾಗಿಯೂ ಮತ್ತು ಮನಸ್ಸಿಗೆ ಗ್ರಾಹ್ಯವಾಗುವಂತೆಯೂ ಪಾಠ ಹೇಳಿಕೊಡಲ್ಪಡುತ್ತೆ ಮತ್ತು ಪ್ರೈವೇಟಾಗಿ ತಮ್ಮ ಮನೆಗಳಲ್ಲಿ ಪಾಠ ಹೇಳಿಸಿಕೊಳ್ಳತಕ್ಕವರಿಗೆ ಅವರವರ ಟೈಂ ಪ್ರಕಾರ ಹೇಳಿಕೊಡಲ್ಪಡುತ್ತೆ ಮತ್ತು ಮೊಲ್ಕಂಡ ಸ್ಥಳದಲ್ಲಿ ಗ್ಯಾರಂಟಿಯುಳ್ಳ ಹೊಸ ಹ್ಯಾಂಡ್ ಹಾರ್ಮೋನಿಯಂಗಳು ಕ್ರಯಕ್ಕೆ ಸಿದ್ಧವಾಗಿರುತ್ತವೆ ಅಲ್ಲದೆ ನಾಟಕ ಕಂಪನಿಯವರಿಗೆ ಉಪಯೋಗವುಳ್ಳಂಥಾ ಯಾವ ತರಹಾ ಹಾರ್ಮೋನಿಯಂ ಬೇಕಾಗಿದ್ದರೂ ಖಾತ್ರಿಯಾದ ಮತ್ತು ಗ್ಯಾರಂಟಿಯುಳ್ಳ ಮಾಲನ್ನು ಸುಲಭವಾದ ಕಮಿಷನ್ ದರದ ಮೇಲೆ ಮಾಲ್ ತಯಾರಾಗುವ ಸ್ಥಳದಿಂದ ಶೀಘ್ರ ಪ್ರಕಾರ ತರಿಸಿಕೊಡಲ್ಪಡುತ್ತೆ ಮತ್ತು ಎಲ್ಲಾ ತರದ ಹಾರ್ಮೋನಿಯಂಗಳನ್ನು ಸುಲಭ ಚಾರ್ಜಿಗೆ ಖಾತ್ರಿಯಾಗಿ ರಿಪೇರಿ ಮಾಡಿಕೊಡಲ್ಪಡುತ್ತೆ ಹೆಚ್ಚು ಸಂಗತಿ ತಿಳಿಯಲಪೇಕ್ಷೆಯುಳ್ಳವರು ಮೊಲ್ಕಂಡ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು [176 7]

ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳುಹಿಸಿ ನಮ್ಮ ವಿಶದವಾದ ಕ್ಯಾಟಲಾಗನ್ನು ಪಡೆಯಬಹುದು

ಶ್ರೀ ತಿರುಪತಿ ಚಂದನವು

ತಪ್ಪ ೧ ಕ್ಕೆ ರೂ ೦-೧೨-೦ ಆಣೆ

ಪವಿತ್ರವಾದ ಪರಿಮಳಯುಕ್ತವಾದ ಈ ಚಂದನವು ನೋಡಲಿಕ್ಕೆ ಅಂದವಾಗಿಯೂ ಶೃಂಗಾರವಾದ ಬಣ್ಣದಿಂದ ಕಣ್ಣುಗಳನ್ನು ತೃಪ್ತಿಪಡಿಸಿ ಶುಭಕಾರ್ಯಗಳಲ್ಲಿ ಅತಿಥಿ ಅಭ್ಯಾಗತರನ್ನು ತೃಪ್ತಿಪಡಿಸುವುದಲ್ಲದೆ ಶೃಂಗಾರ ರಸ ವಿನೋದಗಳಲ್ಲಿ ಉತ್ಸಾಹೋತ್ಪ್ರೇಕವುಂಟುಮಾಡಿ ಪರಸ್ಪರವು ಪ್ರಿಯ ಮನೋರಂಜಕತ್ವವು ಉಂಟುಮಾಡುವದು ರಾತ್ರಿ ಕಾಲಗಳಲ್ಲಿ ಉಪಯೋಗಿಸಿದರೆ ಜೀರ್ಣಶಕ್ತಿಯನ್ನುಂಟುಮಾಡಿ ತಿಗಣೆ, ಸೊಳ್ಳೆ ಇವುಗಳ ಬಾಧೆಗಳಿಂದ ತಪ್ಪಿಸಿ ಇಂಪಾದ ನಿದ್ರೆಯನ್ನು ಕೊಟ್ಟು ಸುಖವಾಗಿಟ್ಟಿರುವದು ಇನ್ನೂ ಶರೀರ ಕಾಂತಿಯನ್ನು

ಸಹಾ ಉಂಟುಮಾಡುವದು ಒಂದು ಸಲ ತರಿಸಿ ನೋಡಿದರೆ ಅದರ ಪ್ರಭಾವವು ಗೊತ್ತಾಗುವದು ಇನ್ನೂ ನಮ್ಮಲ್ಲಿ ಮಾರಾಟಕ್ಕೆ ತಯಾರಾಗಿರುವ ಅನೇಕ ಸಾಮಾನುಗಳು ಅಂದರೆ ಅತಿಶಯವಾದ ಸುವಾಸನೆಯುಳ್ಳ ಎಲ್ಲಾ ವಿಧ ಅತ್ತರುಗಳು, ಕುಂತಲಕ್ಕೆ ತೈಲಗಳು, ಉತ್ಕೃಷ್ಟವಾದ ಕೇಸರಿ, ಪಚ್ಚಕರ್ಪೂರ, ಕಸ್ತೂರಿ, ಕಾಂಬಾಲಿ ಮಾತ್ರೆಗಳು ಮುಂತಾದವು ಅವೆ ಅವುಗಳಿಗೆ ಪ್ರತ್ಯೇಕ ಬರೆದರೆ ಕ್ಯಾಟಲಾಗು ಬೆಲೆಯಿಲ್ಲದೆ ಕಳುಹಿಸಿಕೊಡುವೆವು ಇನ್ನು ಸುದ್ಧಮತಕ್ಕೆ ಬೇಕಾದ ಗ್ರಂಥಗಳು ಆಂಧ್ರಲಿಪಿಯಲ್ಲಿ ತಯಾರಾಗಿವೆ ಬೇಕಾದವರು ತೀವ್ರವಾಗಿ ಬರೆದುಕೊಳ್ಳಬೇಕು [172 9]

ಕಪಿಲಾ ಕಂಪನಿ, ಚಿತ್ತೂರು, ಚಿತ್ತೂರು ಜಿಲ್ಲಾ

ಪ್ರಗಸಟ್ಟೆ ಕೊಡಲಾಗುತ್ತೆ.

10 ವರುಷ ವಾರಂಟ್ ಉಳ್ಳ 30 ಗಂಟೆ ನಡೆಯುವ ಉತ್ಕೃಷ್ಟವಾದ ಬೆಲೆಯುಳ್ಳ ಲೀವರ್ ವಾಚನ್ನೂ, ಒಂದು ಸೊಗಸಾದ ಸರಪಣಿಯನ್ನೂ, 100 ಫ್ರೀ ಕಾರ್ಡನ್ನೂ ಬಿಟ್ಟಿ ಕೊಡುತ್ತೇವೆ ಅರ್ಧಾಣೆ ಸ್ಟಾಂಪಿಟ್ಟು ಇಂಗ್ಲಿಷಿನಲ್ಲಿ ನಮಗೆ ಬರೆಯಿರಿ ವಿಳಾಸ ಮೆಸರ್ಸ್ ಎಂ ಎ ಪಠಾಣಾ ಕಂಪನಿ, [179 8] ಚಿತ್ತೂರು, ಉತ್ತರ ಆರ್ಕಾಟು

ಒಳ್ಳೆ ಸಮಯ ತಿಂಗಳ ೩೦ ರ ವರೆಗೆ ಮಾತ್ರ ಕೂಡಲೆ ಬರೆಯಿರಿ

(1) ನಕ್ಕಲಿನ್ನಿ ಹೊಳೆಯುವ ರೋಲ್ಡ್ ಗೋಲ್ಡ್ ಕಿಲ್ ಟರ್ ಲಿವರ್ ಗಡಿಯಾರವನ್ನು ತಿಂಗಳು ಆಖೈರಿನೊಳಗಾಗಿ ತರಿಸುವವರಿಗೆ ಪಾರ್ಸಲ್ ಕೂಲಿ ಸಹ ರೂ 2 ಕ್ಕೆ ಕಳುಹಿಸುತ್ತೇವೆ ರೆಲ್ವೆ ರಿಜಸ್ಟರ್ ಮಾರ್ಕು ರೋಬು ಗಡಿಯಾರವನು ಪಟಗೆ, ಉತ್ತರ ಮುಖಿ, ಸಪಪಣ ಮತ್ತು ಟೇಬಲ್ ಟೈಂಪೀಸುಗಳೊಡನೆ ತಿಂಗಳಾಖೈರ್ ವರಿಕೆ ಕ್ರಯ ರೂ 3 6 0 ಅಂಚೆ ಹಾಸಲು 8 ಆಣೆ (2) ಎಂಟು ದಿವಸಗಳಿಗೊಂದಾವರ್ತಿ ಕೀ ಕೊಡುವ ಕ್ಲಾಕ್ ಜೇಬು ಗಡಿಯಾರ ರೂ 3 (3) ಕೈಗೆ ಕಟ್ಟಿಕೊಳ್ಳುವ ಲೋಹ ಸಾಕೆಟ್ ಅಚ್ಚ ಬೆಳ್ಳಿಯ ಗಡಿಯಾರ ರೂ 5 10 ನಿಕ್ಕಲಿನದು ರೂ 4 0 0 (4) ಮೋಕರಿ ಸಂಗೀತ ಹಾಡುವ ಟೇಬಲ್ ಗಡಿಯಾರ ರೂ 6 1 0 ನ ಟಿ ಹೊಡೆಯುವುದು ರೂ 4 8 0 ಅರ್ಕನೋನಿಯಾ ಬೀಟ್ ಕ್ವಿನ್ ರೂ 4 ... ಸಾದಾ ವಿ ಟಿ ಕ್ವಿನ್ ರೂ 3 ಬವರ್ ಟೆಂಪ್ ರೂ 1 4 0 (5) ಎಂಟು ದಿವಸಗಳಿಗೆ ಕೀ ಕೊಡುವ ಗಂಟೆ ಹೊಡೆಯುವ ಸಾಲ ... ಗೋಡೆಗೆ ತಗಲಿಸುವ ಗಡಿಯಾರ ರೂ 7 0 0 (6) ಮಧುರೆಕರದ ಕೆಂಪು ಚುಕ್ಕೆ ಮದ್ರಾಸ್ ... ರೂ 2 6 0, ಅಸಲ್ ಮಧುರೆಯದು ರೂ 3 1 0 (7) ಕುಸುಮಕಾಂತ ತೈಲವು ಉತ್ತಮ ವನಸ್ಪತಿಗಳಿಂದಲೂ ಸುಗಂಧ ಕುಸುಮಗಳಿಂದಲೂ ತಯಾರಿಸಿದ್ದರಿಂದ ಕೂದಲುಗಳ ಬೇರನ್ನು ಭದ್ರಪಡಿಸಿ ದಟ್ಟವಾಗಿಯೂ, ಕರುಪಾಗಿಯೂ ಕಪ್ಪಾಗಿಯೂ ಬೆಳೆಸಿ, ಮಿದುಳಿಗೆ ತಂಪನ್ನುಂಟುಮಾಡುತ್ತೆ ಕ್ರಯ ಸೀಸೆ 1 ಕ್ಕೆ 8 ಆಣೆ ಡಿಸೆಂಬರ್ ಆಖೈರಿನಲ್ಲಿ 1, 2, 3 ನೆಯ ನಂಬರ್ ಗಡಿಯಾರಗಳನ್ನು ಗ್ರಾಹಕರಲ್ಲಿ ಯಾರಿಗೆ ಬರುತ್ತೋ ಅವರಿಗೆ ಕೊಡಲ್ಪಡುತ್ತೆ [120 22]

ನಮ್ಮ ವಿಳಾಸ — ವೆಂಕಟಾಚಲಂ ಕಂಪನಿ,
ಹೈರೋಡ್, ವೇಪೇರಿ, ಮದ್ರಾಸು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

1-1

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಸೆಟ್ಟಿಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು ಕಪ್ಪು, ಪಚ್ಚೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧–೮, ರೂ ೧–೧೨

ಕೇಶ್ಮೀ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ

ಕೂಸುಗಳ ಟೋಪಿ, ಫುಲ್ ಮೋಜೋಡು, ಅರ್ಧ ಮೋಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಹಾಸನ

"ವೃತ್ತಾಂತ ಪತ್ರಿಕೆ" ಕ್ಯಾಲೆಂಡರು

ಈ ಜನವರಿ ತಿಂಗಳಲ್ಲಿ ಚಂದಾ ಕಟ್ಟಿ ವೃತ್ತಾಂತ ಪತ್ರಿಕೆಯ ಚಂದಾದಾರರಾಗುವವರಿಗೆ 1913 ನೇ ಇಸವಿ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು ಈ ಕ್ಯಾಲೆಂಡರಿನಲ್ಲಿ ಗುಬ್ಬಿಯಲ್ಲಿರುವ ಬಾಲಿಕಾ ಪಾಠಶಾಲೆಯ, ಬೆಂಗಳೂರಿನಲ್ಲಿರುವ ನಾರ್ಮಲ್ ಸ್ಕೂಲಿನ, ಲಂಬಾಣಿಗರ ಕುಣಿತದ, ಸ್ಪಿಟ್ಸರ್ಲೆಂಡಿನಲ್ಲಿರುವ ಒಂದು ಪರ್ವತ ರೈಲಿನ ಮತ್ತು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನ ಚಿತ್ರಗಳು ಬಹಳ ಸೊಗಸಾಗಿ ಅಚ್ಚಾಗಿರುತ್ತವೆ

ವಿಳಾಸ — ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಪ್ರಕಟನೆ.

161 11

ಹತ್ತಿಯ ತುಪ್ಪವು ತುಮಕೂರು, ಅರಸೀಕೆರೆ, ಹಾಸನ, ಮತ್ತು ತಿಪಟೂರು, ಈ ಸ್ಥಳಗಳಲ್ಲಿಯೂ ದೊರೆಯುವಂತೆ ಈಚೆಗೆ ಏರ್ಪಾಟು ಮಾಡಲ್ಪಟ್ಟಿದೆ

ಬೆಂಗಳೂರು ಸಿಟಿ ಚಿಕ್ಕಪೇಟೆ ಅರ್ಕಾಟ್ ಶ್ರೀನಿವಾಸಾಚಾರ್ಯರ ಬೀದಿ ೬ ನೇ ನಂಬರು ಹೊಸಮಳಿಗೆಯಲ್ಲಿ ಹತ್ತಿಯ ತುಪ್ಪ, ಹಿಂಡಿ, ಮತ್ತು ಹೊಟ್ಟು ಸುಲಭಕ್ರಯಕ್ಕೆ ದೊರೆಯುತ್ತವೆ

ನಮ್ಮ ಕಂಪನಿಯ ಏಜಂಟರು ಮಾರುವ ಈ ಪದಾರ್ಥಗಳಲ್ಲಿ ದೋಷ ಕಂಡುಬಂದರೆ ಅದನ್ನು ನಮಗೆ ತಿಳಿಸಿದರೆ ಕೂಡಲೆ ಕ್ರಮಪಡಿಸುವೆವು ಇತರರು ನಡಿಯಿಸಬಹುದಾದ ವ್ಯತ್ಯಾಸಗಳಿಗೆ ನಾವು ಜವಾಬ್ದಾರರಲ್ಲ

ವಿಳಾಸ - ದಿ ಇಂಡಿಯನ್ ಕೋಆಪರೇಟಿವ್
ಸ್ಟೋರ್ಸ್ ಕಂಪನಿ, ಲಿಮಿಟೆಡ್,
1?, ಕಿಲಾರಿ ರೋಡ್, ಬೆಂಗಳೂರು ಸಿಟಿ

ಲೋಕಾಮಯಹರ ಕಸ್ತೂರೀ ಮಾತ್ರೆಗಳನ್ನು ಮರೆಯಬೇಡಿ.

ಈ ಮಾತ್ರೆಗಳ ವಿಷಯವಾಗಿ ಬಂದಿರುವ, ಸಾವಿರಾರು ಯೋಗ್ಯತಾ ಪತ್ರಗಳಲ್ಲಿ ಕೆಲವನ್ನು ಮಾತ್ರ ತಮ್ಮ ನಂಬುಗೆಗಾಗಿ ಇಲ್ಲಿ ವಿವರಿಸಿದೆ.

(1) ಮ॥ ಸರನ್ನೆಯ್ಯನ ವೆಂಕಟಪ್ಪಶೆಟ್ಟರು, ಅಕಲಗೂಡು, ಇವರು—ತಮ್ಮ ಕಸ್ತೂರೀ ಮಾತ್ರೆಗಳನ್ನು ಯಾರ್ಯಾರಿಗೆ ಕೊಟ್ಟೆನೋ ಅವರೆಲ್ಲರೂ ಬಹಳ ಗುಣಕಾರಿ ಎಂದು ಹೇಳುವುದರಿಂದ ಇನ್ನು 6 ಸೀಸೆಗಳನ್ನು ಕಳುಹಿಕೊಡಿ (2) ಟಿ ನಂಜುಂಡಯ್ಯನವರು, ಹೊಳೇನರಸೀಪುರ, ಇವರು—ಎಲ್ಲಾ ಖಾಯಿಲೆಗಳನ್ನೂ ತಮ್ಮ ಕಸ್ತೂರೀ ಮಾತ್ರೆಗಳು ಗುಣಪಡಿಸಿವೆ ನಾಲ್ಕು ಜನರ ಪ್ಲೇಗು ರೋಗಕ್ಕೂ ಸಂಜೀವಿನಿಯಾಯಿತು ಇನ್ನೂ 12 ಸೀಸೆಗಳನ್ನು ಕಳಿಸಿ (3) ಮ॥ ಬಸಲಿಂಗಯ್ಯ ಬಸಯ್ಯ ಗವಟಿ ಸ್ಕೂಲಮಾಸ್ಟರ್, ಪುಣ್ಯಮನಹಳ್ಳಿ, ಬಿಜಾಪುರ, ಇವರು—ಯಾವ ಔಷಧಗಳಿಗೂ ಗುಣವಾಗದಿದ್ದ 1½ ವರ್ಷದ ಜ್ವರವು ತಮ್ಮ ಕಸ್ತೂರಿ ಮಾತ್ರೆಗಳಿಂದ ಸಂಪೂರ್ಣ ಗುಣವಾಗಿರುತ್ತದೆ (4) ಮ॥ ಹಿರೇಮಠದ ಪರಮೇಶ್ವರಯ್ಯ, ಮಾಸೂರು ಧಾರವಾಡ, ಇವರು—ತಮ್ಮ ಕಸ್ತೂರಿ ಮಾತ್ರೆಗಳು ನಮ್ಮಲ್ಲಿ ಬಹಳ ಗುಣಕಾರಿ ಬಂದಿರುವುದರಿಂದ ಪುನಃ 25 ಸೀಸೆಗಳನ್ನು ಕಳುಹಿಸಿಕೊಡಿ (5) ಮ॥ ಪಿ ಎಸ್ ಎಂ ಸ್ವಾಮಿ, ಕೇರಾಫ್ ಜಿ ಎಸ್ ಎಂ ಅಂಡ್ ಕೋ ಲಿಮಿಟೆಡ್, ರಾಮದುರ್ಗ, ಬಳ್ಳಾರಿ, ಇವರು—ತಮ್ಮ ಕಸ್ತೂರಿ ಮಾತ್ರೆಗಳಲ್ಲಿ ಛಳಿಜ್ವರ ಮೊದಲಾದ ಅನೇಕ ಖಾಯಿಲೆಗಳನ್ನು ಹೋಗಲಾಡಿಸುವ ಗುಣವು ಅತ್ಯುತ್ತಮವಾಗಿದೆ (6) ಮ॥ ಆರ್ ಎನ್ ಟಾಲುಕ್‌ದಾರ್, ಸ್ಕೂಲ್ ಹೆಡ್ ಮಾಸ್ಟರ್, ಷಾರಿಲ್, ಬೆಂಗಾಲ್, ಇವರು—ತಮ್ಮ ಕಸ್ತೂರೀ ಮಾತ್ರೆಗಳು ತಾವು ಹೇಳಿರುವ ಮೇರೆ ಅನೇಕ ಖಾಯಿಲೆಗಳನ್ನು ಗುಣಪಡಿಸಿವೆ ಉಪಯೋಗಿಸಿದವರೆಲ್ಲರೂ ಹೊಗಳುತ್ತಿದ್ದಾರೆ ಇನ್ನು 12 ಸೀಸೆಗಳನ್ನು ಕಳಿಸಿಕೊಡಿ [175 9]

ಕ್ರಯ 30 ಮಾತ್ರೆಯುಳ್ಳ ಸೀಸೆಗೆ 1 ಆಣೆ 6 ಕ್ಕೆ 1 ಇನಾಂ 1 ರಿಂದ 12 ರ ವರೆಗೆ ಟಪಾಲ್ ಛಾರ್ಜು 4 ಆಣೆ ನಮ್ಮ ಹೆಸರನ್ನು ಸ್ಪಷ್ಟವಾಗಿ ಬರೆ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಭೂಗೋಳದ ನೋಟ್ಸ್

111

ಈಗ ಪರಿಷ್ಕೃತ ಪಠ್ಯಕ್ರಮಕ್ಕನುಸಾರವಾಗಿ ಪ್ರಶ್ನೆ ಪತ್ರಿಕೆಗಳಿಗೆ ಉತ್ತರಗಳು ಬರೆಯಲ್ಪಟ್ಟಿರುವುದರಿಂದ ವಿದ್ಯಾರ್ಥಿಗಳಿಗೆ ಬಹಳ ಉಪಯೋಗವಾಗಿರುವುವು ಜನವರಿ ಅಖೈರಿನೊಳಗೆ ಬರೆಯಲ್ಪಡುವುವು ಪ್ರತಿಗಳು ಮಾತ್ರ ಮುದ್ರಿಸಲ್ಪಡುವುದರಿಂದ ಮುಂಚಿತವಾಗಿ ಬಂದ ಅರ್ಜಿಗಳಿಗೆ ಮೊದಲು ಪ್ರತಿಗಳು ಕಳುಹಿಸಲ್ಪಡುವುವು ವಿಳಾಸ — ಎಂ ಪಿ ಕೃಷ್ಣಯ್ಯ, ಹೆಡ್ ಮಾಸ್ಟರ್, ಎ ವಿ ಸ್ಕೂಲ್, ಇಟ್ಟಿಗೆಗೂಡು, ಮೈಸೂರು

ಕನ್ನಡ ಪುಸ್ತಕಗಳು.

ಕಥೆಗಳು—ಯೋಗ್ಯ ಬಾಲಕ್ಕೆ ೧೪ ಅನಂಗಸುಂದರಿ ೩೪ ತಾರಾಸು ದರಿ ಮೋಹನ ೧೨೪ ಕುಮುದಿನಿ ೧೪ ನಿತಂಬೋಪಾಖ್ಯಾನ ೨೪ ಭಾಸುಮತಿ ೨೪ ... ೧೪ ಕಳಾವತಿ ೨೪ ಸಾವಿತ್ರಿಮದನ ೨೪ ವಸುಮತಿ ೨೪ ... ೪ ಜ ಪ್ರಮತಿ ೧೪ ನಾಟಕಗಳು—ಪ್ರವಾಸ ಚತುಷ್ಟಯ ೧೪ ... ೧— ಮನೋಹರ ಕುದಾರಿಪತ್ರ ೧೪ ಮಹಾಬುದ್ಧಿಪ್ರಭಾವ ೧೪ ... ಇನ್ನೂ ಅನೇಕ ನಾಟಕಗಳು ನಮ್ಮಲ್ಲಿ ದೊರೆಯುವುವು

[877] ಸಮ ... —ಚಂದ್ರಿಕಾ ಬುಕ್ ಸ್ಟಾಲ್ ಮೈಸೂರು

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶದ ಮೂಲಕ ಮಲಿನವನ್ನು ಬಿಡಿಸುವ ರಕ್ತದಿಂದ ವೀಪಣೆಯ ... ತಪ್ಪುತ್ತಿರುವವರಿಗೂ ಪರಿಪೂರ್ಣ ಆರೋಗ್ಯವಾಗಿರುವುದು ... ದೌರ್ಬಲ್ಯ ... ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ... ಶರೀರಕ್ಕೆ ರೋಗಪ್ರಾಪ್ತಿಯಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ... ಇರುವುದು, ಮೂತ್ರವು ಸ್ವಲ್ಪವಾಗಿಯೋ ... ಬಿಟ್ಟುಬಿಟ್ಟೋ ಇಳಿಯುವುದು, ವಿಪರೀತ ಬಾಯಾರಿಕೆ, ... ತಲೆಸುತ್ತುವುದು ತಲೆನೋವು, ಗಾಬರಿ, ಕಣ್ಣುಮಂಜು ... ಕಾಲುಗಳು ಊತ, ನಿದ್ರೆ ಇಲ್ಲದೆ ... ಮಾಡಿದರೆ ಮೂತ್ರಪಿಂಡವ್ರಣ, ವಾಯು, ಮಧುಮೇಹ, ಉರುಮೂತ್ರ ... ಕ್ಷಯ ರೋಗಗಳು, ... ಸಂಬಂಧವಾದ ... ರೋಗಗಳು ಇವೆಲ್ಲ ಉಂಟಾಗುವುವು

ಡೋನ್ಸ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರ... ಹರಿಸಿ, ರಕ್ತದಿಂದ ಮಲಿನವನ್ನು ಹೊರಕ್ಕೆ ತಳ್ಳಿ ... ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [11-16]

ಮೂತ್ರಕೋಶವು ಆರೋಗ್ಯವಾಗಬೇಕು ... ಡೋನ್ಸ್ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು

೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ದೊಡ್ಡ ಪಟ್ಟಣಗಳಲ್ಲೆಲ್ಲೆಯೂ ದೊರೆಯುವುದು ಅಥವಾ ಡೋನ್ಸ್, ಡಿಪೋ ..., ಬೊಂಬಾಯಿ ಇವರಲ್ಲಿ ದೊರೆಯುವುದು

ಪೇಟೆ ಧಾರಣೆ

ದಿನಸು	ಮೈಸೂರು	ಬೆಂಗಳೂರು
... ಪಲ್ಲಾ ೧ಕ್ಕೆ (...) ರೂ	೧೨-೦-೦	೧೭ ೮ ೦
... ಅಕ್ಕಿ ಅವ...	೧೪ ೦ ೦	೧೭ ೮ ೦
ಮಧ್ಯ	೧೦ ೧೨-೦	೧೭-೦-೦
... ಅಕ್ಕಿ ,,	೧೨ ... ೦	೧... ೦
... ಅವರೆ ,	೧೪ ೮ ೦	೧೬ ೮-೦
ಮಧ್ಯ ,	೧... ೦ ೦	೧೭ ೮-೦
... ಅವರೆ ... ೧ಕ್ಕೆ	೧೨ ... ೦	೧೩ ೮ ...
ಮಧ್ಯ	೧೨ ೦	೧೨ ೮ ...
... ಪಲ್ಲಾ ೧ಕ್ಕೆ	೭ ೮ ೦	೫ ೦ ೦
... ,	... ೦ ೦	... ೧೨ ೦
,,	೬ ೧೨-೦	೭ ೪-೦
... ಪಲ್ಲಾ ೧ಕ್ಕೆ	೧೦ ೮ ೦	೧೩-೧೨-೦
... ,,	೧೧-೦ ೦	೧೧ ೦ ೦
,,	೧೧ ... ೦	೧೪-೦-೦
,,	೧೩ ... -೦	೧೭ ೦ ೦
,,	೧೨-... ೦	೧೨ ೦-೦
... ೧೭೭ಕ್ಕೆ	೨೫ ೦ ೦	೨೪ ೦ ೦
... ಪಲ್ಲಾ ೧ಕ್ಕೆ	೬ ೦ ೦	೭ ೦ ೦
... ಸೇರಿಗೆ	೧೨ ೦-೦	೧೪ ೦-೦
... ಮಣ ೧ಕ್ಕೆ	೩-೫ ೦	೩ ೮ ೦
... ,,	೨ ೦ ೦	೩-೪-೦
ಮಧ್ಯ	೨ ೮ ೦	೧ ೮ ೦
... ಅಚ್ಚು ೧೦೦ಕ್ಕೆ	೫ ೦ ೦	ಮಾ ೫ ೮ ೦
... ಮಣ ೧ಕ್ಕೆ	೬ ೦ ೦	೬ ೬-೦
,, ,,	೪ -೦	೬-೦-೦
... ಪಲ್ಲಾ ೧ಕ್ಕೆ	೪-೬ ೦	೫ ೪ ೦
,, ,	೫ ೮ ೦	೬ ೦ ೦
... ಮಣ ೧ಕ್ಕೆ	೧ ೮-೦	೧-೪-೦
... ,,	೧ ೦-೦	೦ ೧೪-೦
... ೧ಕ್ಕೆ	೧೭ ೦-೦	೧೯-೦ ೦
... ಪಲ್ಲ ೧ಕ್ಕೆ	೫ ೨-೦	೫ ೦-೦
... ೧೦೦ಕ್ಕೆ	೬ ೮ ೦	೬-೦-೦
... ಮಣ ೧ಕ್ಕೆ	೧ ೪ ೦	೧ ೦ ೦
... ಮಣ ೧ಕ್ಕೆ	೦-೧೨-೦	೧ ೮-೦
... ಕೆಂಪು	೧೫ ೮ ೦	೧೫-೮-೦
,, ಪಸಿಮ	೧೫ ೧೪-೬	೧೫ ೧೪-೬
,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪ ೩ ೦
... ೧೦೦ಕ್ಕೆ	೮೧-೦-೦	೮೧-೦-೦

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

27—12—1912 ರಿಂದ 1—1—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು ಪಟ್ಟಣ	10	10	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	6	3	0	0
ಮೈಸೂರು ,,	12	37	51	24
ಕೋಲಾರ್ ,,	11	8	0	1
ಕೋಲಾರ್ ಚಿನ್ನದ ಗಣಿಗಳು	30	20	0	0
ತುಮಕೂರು ಡಿಸ್ಟ್ರಿಕ್ಟು	1	1	3	2
ಹಾಸನ ,,	7	3	0	0
ಚಿತ್ರದುರ್ಗ ,,	0	0	3	1
ಕಡೂರ್ ,,	27	17	0	0
ಶಿವಮೊಗ್ಗ ,,	6	6	5	5
ಜುಮ್ಲಾ	163	105	62	33

ಶಾಲಿವಾಹನ ಶಕ ವರುಷಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೆ ಹೇಮಂತಋತೌ ಪುಷ್ಯ ಶುದ್ಧ ದಶಮಿ ಶುಕ್ರವಾರದಿಂದ ಪುಷ್ಯ ಬಹುಳ ಪಾಡ್ಯಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಕರ ಮಾಸ ತೇದಿ
17	ಶುಕ್ರ	ದಶಮಿ	56 24	ಭರಣಿ	18 46	5
18	ಶ ‡	ಏಕಾದಶಿ	55 0	ಕೃತ್ತಿಕೆ	19 28	6
19	ಭಾನು	ದ್ವಾದಶಿ	52 11	ರೋಹಿಣಿ	18-59	7
20	ಸೋಮ †	ತ್ರಯೋದಶಿ	18-25	ಮೃಗಶಿರ	17 27	8
21	ಮಂಗಳ §	ಚತುರ್ದಶಿ	13 11	ಆರಿದ್ರ	11 51	9
22	ಬುಧ	ಪೌರ್ಣಮಿ	18 29	ಪುನರ್ವಸು	11-16	10
23	ಗುರು *	ಪಾಡ್ಯಮಿ	12 51	ಪುಷ್ಯ	8 7	11

‡ ಸ್ಮಾರ್ತರ ಏಕಾದಶಿ, ಬುಕ್ಕಪಟ್ಟಣದಲ್ಲಿ ಶ್ರೀ ರಂಗನಾಥಸ್ವಾಮಿ ... ವೈಷ್ಣವ ಏಕಾದಶೀ, ... ಮಳೆ ನಕ್ಷತ್ರ— ಉತ್ತರಾ 1 ನೇ ಪಾದ † ಸೋಮ ಪ್ರದೋಷ, ಮೂಗೂರು ತೇರು § ... ಗೌರೀವ್ರತ, ಮೂಗೂರು ... ಮೇಲುಕೋಟೆಯಲ್ಲಿ ಪುನರ್ವಸೂತ್ಸವ, ಶ್ರೀರಂಗಪಟ್ಟಣದಲ್ಲಿ ರಥ ... * ಮಳೆ ನಕ್ಷತ್ರ—ಶ್ರವಣ 1 ನೇ ಪಾದ

ಅಭಿನಂದನ ಪದ್ಯಗಳು

ಅನ ... ದಶದಿಶೆಸಂಚರಣದಿಂ ವಿದ್ಯಾವಿಶೇಷಂಗಳೊಳ್
ಪಾಪೋ ... ಬರೆದಿರ್ಪನೆಗೆ ಸೇರುವುದಂ ಮತ್ತಾವನಾಚೆಸೆ ಸಂ ||
... ಸಜ್ಜನ ರಕ್ಷಾದ್ಧಿಪರ ನಾನಿರ್ಪೀ ಶ್ರೀ ರಾಜ್ಯ ಧುರ |
... ಮಂತ್ರಿಪದಕ್ಕೆ ಬಂದನೆನಲಿಂತೇಂ ಪುಣ್ಯವಿಶಾದಿನಾ ||1||

ಈ ಕರ್ನಾಟಕರಾಜ್ಯದೇಶದ ಶಿರಸ್ತಾಸೀಯನಾದೆನ್ನುಯಾ |
... ತ್ತೋತ್ತಮ ಕೃಷ್ಣರಾಜನನಿ ಸಂರಕ್ಷಣಾಧಿಗನಾ ||
... ಕೋಟಿತಮುಸ್ತ ... ವಿಶ್ವೇಶ್ವರಾಖ್ಯಂ ಮಹೀ
... ಪ್ರಸಾರದಿ ಯುತ್ಕೃಷ್ಟಾ ಮಹಾಮಂತ್ರೀಶ್ವರಂ ||2||

... ಮಹತ್ತರಾಧಿಕೃತಿಯೊಳ್ ಸತ್ಕೀರ್ತಿಯಂ ಸೇರುತ
... ದಯಾವಿಶದ್ಗುಣಯುತ ಶ್ರೀಕೃಷ್ಣರಾಜೋತ್ತಮಂ
... ಮಂತ್ರಿವರಂಗವಾದಮಂದಮಂ ವಿಶ್ವೇಶ್ವರಾಖ್ಯಂಗೆ ಕ
ಲ್ಪಾಂತಂಬರಮಿಳೆಗೆ ನಲವಿಂ ದೀರ್ಘಾಯುರಾರೋಗ್ಯಮಂ ||3

ಆಸ್ಥಾನ ಮಹಾವಿದ್ವಾನ್ "ಕವಿತಿಲಕ" ಅಯ್ಯಾಶಾಸ್ತ್ರಿ"

ವಿದೇಶದ ವೃತ್ತಾಂತಗಳು

ಇಂಗ್ಲಾಂಡಿನ ದಕ್ಷಿಣ ಭಾಗದಲ್ಲಿ ವಿಶೇಷವಾದ ಮಳೆ ಸುರಿದು ಥೇಂಸ್ ಎಂಬ ಮಹಾ ನದಿಯು ಉಕ್ಕೇರಿ ಪ್ರವಾಹಗಳ ದೆಸೆಯಿಂದ ಸಾವಿರಾರು ಜಮೀನುಗಳು ನೀರಿನಲ್ಲಿ ಮುಳುಗಿಹೋಗಿರುತ್ತವೆ

*

ಜಮೈಕಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದಲ್ಲಿ ಕಳೆದ 1907 ನೆ ಇಸವಿಯಿಂದ ಗವರ್ನರಾಗಿರುವ ಸರ್ ಸಿಡ್ನಿ ಆಲಿವಿಯರ್‌ಯವರನ್ನು ಚಕ್ರವರ್ತಿ ಸಾರ್ವಭೌಮರವರು ಸಿಲೋನ್ (ಲಂಕಾ) ದ್ವೀಪದ ಗವರ್ನರ್ ಪದವಿಗೆ ನೇಮಕಮಾಡಿರುತ್ತಾರೆ

*

ಇಂಗ್ಲಾಂಡಿನ ಫುಟ್‌ಬಾಲ್ ಚಂಡಾಟದ ಪಂದ್ಯಗಾರರು ದಕ್ಷಿಣ ಆಫ್ರಿಕಕ್ಕೆ ಹೋಗಿ ಅಲ್ಲಿನ ಆಟಗಾರರ ಮೇಲೆ ಕಳೆದ ಶನಿವಾರ ಪಂದ್ಯವನ್ನು ಆಡಿ ಸೋತುಬಿಟ್ಟರು ಈ ಪಂದ್ಯವನ್ನು ನೋಡಲು ಸುಮಾರು 10,000 ಜನರು ಮೈದಾನದಲ್ಲಿ ಸೇರಿದ್ದರೆಂದು ತಿಳಿದುಬಂದಿದೆ

*

ಆಸ್ಟ್ರಿಯಾ ದೇಶಕ್ಕೆ ಸೇರಿದ ಕ್ಲೈವೇಲ್ಯಾಂಡ್ ಎಂಬ ಹಡಗು ಸಮುದ್ರದ ಮೇಲೆ ಕಠಿಣವಾದ ಬೆಂಕಿಯು ಆಕಸ್ಮಿಕವಾಗಿ ಹತ್ತಿ ಕೆಟ್ಟುಹೋಯಿತು ನಾಲವತ್ತು ವ್ಯಾಗನ್ ... ಭರ್ತಿಯಾದ ... ಸಕ್ಕರೆಯೂ, ಬೆಲೆಯುಳ್ಳ ಜವಳಿಗಳೂ, ಅನೇಕ ವ್ಯಾಪಾರಸರಕುಗಳೂ ಸುಟ್ಟು ನಾಶವಾದವು

ದಕ್ಷಿಣ ಆಫ್ರಿಕಕ್ಕೆ ಸೇರಿದ ನೆಟಾಲಿನಲ್ಲಿಯೂ, ಕೇಪ್ ಕಾಲನಿಯ ಕೆಲವು ಡಿಸ್ಟ್ರಿಕ್ಟುಗಳಲ್ಲಿಯೂ ಅಪೂರ್ವವೂ ಅಪಾರವೂ ಆದ ಮಳೆಗಳು ಸುರಿದು, ಅನೇಕ ಕೆರೆ ಕಟ್ಟೆ ಕಾಲುವೆ ಹೊಳೆಗಳು ತುಂಬಿಹರಿದು, ಸಸ್ಯಭರಿತವಾದ ಜಮೀನುಗಳನ್ನೂ ಗೋಮಾಯಿಗಳನ್ನೂ ಕೊಚ್ಚಿ ನಾಶವಾಗಿದೆಯೆಂದು ತಂತೀ ವರ್ತಮಾನ ಬಂದಿದೆ

*

ಇಟಲಿ ರಾಜ್ಯದ ಮಾಜಿ ರಾಣಿಯವರ ಶವವನ್ನು ಟ್ಯೂರಿನ್ ಪಟ್ಟಣದ ಹೊರಪಾರ್ಶ್ವದಲ್ಲಿ ಸಮಾಧಿಮಾಡಿದ್ದರು ದುಷ್ಕರ್ಮಿಗಳು ಆ ಸಮಾಧಿಯನ್ನು ಬಗೆದು ಪೆಟ್ಟಿಗೆಯಲ್ಲಿ ಶವದ ಮೈಮೇಲೆ ಧರಿಸಿದ್ದ ಬಹು ಬೆಲೆಯುಳ್ಳ ನಗಗಳನ್ನು ಅಪಹರಿಸಿಕೊಂಡು ಹೋದರೆಂದೂ, ಅವರ ಸುಳುವೇ ಇನ್ನೂ ಪತ್ತೆ ಆಗಿಲ್ಲವೆಂದೂ ಪ್ರಕಟವಾಗಿದೆ

*

ಸರ್ ... ಎಂಬಾತನು ವಿಲಾಯಿತಿಯಲ್ಲಿರುವ ಕೇಂಬ್ರಿಡ್ಜ್ ಸರ್ವವಿದ್ಯಾನಿಲಯದ ಮೂಲಧನಕ್ಕೆ 15 ಲಕ್ಷ ರೂಪಾಯನ್ನೂ, ಮತಪ್ರಚಾರಕ ಕಾರ್ಯಗಳಿಗೆ 15 ಲಕ್ಷ ರೂಪಾಯನೂ ತನ್ನ ಆಸ್ತಿಯಿಂದ ವಿನಿಯೋಗಿಸಬೇಕೆಂದೂ, ಆ ಪೈಕಿ ಯಾವ ಕಾರ್ಯಕ್ಕಾಗಲಿ ತನ್ನ ಹೆಸರನ್ನು ಕಾಣಿಸಕೂಡದೆಂದೂ ಮರಣಶಾಸನವನ್ನು ಬರೆದಿರುತ್ತಾನೆ

*

ಪೋರ್ಚುಗಲ್ ರಾಜ್ಯದಲ್ಲಿ ಕೆಲವು ವರುಷಗಳ ಹಿಂದೆ ಸ್ವದೇಶದ ಪ್ರಜೆಗಳ ಮುಖಂಡರೂ ದೊರೆಯನ್ನೂ ರಾಣಿಯನ್ನೂ ದೇಶಭ್ರಷ್ಟರನ್ನಾಗಿಮಾಡಿ, ಪ್ರಜಾಪ್ರತಿನಿಧಿ ಸರ್ಕಾರವನ್ನು ಸ್ಥಾಪಿಸಿಕೊಂಡು ರಾಜ್ಯಭಾರ ನಡೆಸುತ್ತಾ ಬಂದಿರುವರು ಈಗ ಈ ಪ್ರಜಾಪ್ರತಿನಿಧಿಗಳಲ್ಲಿ ಬೇರೆ ಬೇರೆ ಗುಂಪುಗಳಾಗಿ ಪರಸ್ಪರ ವಿರೋಧಗಳು ಹುಟ್ಟಿರುತ್ತವೆಂದೂ, ಇಷ್ಟರಲ್ಲೇ ಇನ್ನೊಂದು ಗಲಭೆ ಹುಟ್ಟುವುದಾಗಿದೆ ಎಂದೂ ತಂತೀವರ್ತಮಾನ ಬಂದಿದೆ

*

ಫ್ರಾನ್ಸ್ ರಾಜ್ಯಕ್ಕೆ ಸೇರಿದ ಸೇಂಟ್ ಆಗಸ್ಟಿನ್ ಎಂಬ ಮೆಯಿಲ್ ಹಡಗು ಜಿನೋವಾ ಎಂಬ ರೇವಿನಿಂದ ಸುಮಾರು 10 ಮೈಲ ದೂರ ಸಮುದ್ರದಲ್ಲಿ ಅಕಸ್ಮಾತ್ತಾಗಿ ಮುಳುಗಿಹೋಯಿತು ಅದರಲ್ಲಿದ್ದ ಸಾಮಾನುಗಳೂ ಅಂಚೆ ಚೀಟ್ಟಿಗಳೂ ಸಮುದ್ರದ ಪಾಲಾದವು ಆದರೆ ಅದರೊಳಗೆ ಕುಳಿತು ಪ್ರಯಾಣ ಹೊರಟಿದ್ದವರನ್ನೂ ಅದರಲ್ಲಿನ ನೌಕರಮಾಲೆಗಳನ್ನೂ ಟ್ರೈಡಾ ಎಂಬ ಹಡಗು ಒಮ್ಮೆಗೇ ಕರೆದುಕೊಂಡು ಓಡಿತು

*

ಇಂಗ್ಲಾಂಡಿಗೆ ಸೇರಿದ ... ಡಿಸ್ಟ್ರಿಕ್ಟಿನ ... ನಗರಿಗೆ ಒಳಪಟ್ಟಿರುವ 8,000 ಕಸುಬುದಾರರು ತಮ್ಮ ಕೂಲಿಯ ದರವನ್ನು ಹೆಚ್ಚಿಸಿಕೊಡದಿದ್ದರೆ ಕೆಲಸಕ್ಕೆ ಬರುವುದಿಲ್ಲವೆಂದು ಮುಷ್ಕರ ಹಿಡಿದು ಕಾರ್ಖಾನೆಗಳ ಯಜಮಾನರಿಗೆ ತಿಳಿಸಿದಾರೆ ಯಜಮಾನರು ಈ ವಿಚಾರವನ್ನು ಬೇಗನೆ ಇತ್ಯರ್ಥಮಾಡದೆ ಹೋದಲ್ಲಿ ಕಾರ್ಖಾನೆಗಳ ಕೆಲಸವು ನಿಂತು, ಸುಮಾರು 50,000 ಜನರಿಗೆ ಜೀವನ ತಪ್ಪುವುದೆಂದು ತಂತೀ ವರ್ತಮಾನ ಬಂದಿದೆ

*

ಜರ್ಮನಿಯಲ್ಲಿ ಹೋಟಲುಗಳನ್ನು ಇಟ್ಟು ನಡೆಸುವವರಿಗೂ, ಅವುಗಳಲ್ಲಿ ನೌಕರಿಗೆ ಸೇರಿಕೊಳ್ಳತಕ್ಕವರಿಗೂ ಆ ಕೆಲಸಕ್ಕೆ ತಕ್ಕಂಥಾ ವಿದ್ಯವನ್ನು ಕಲಿಸುವುದಕ್ಕಾಗಿ ಒಂದು ವಿದ್ಯಾಶಾಲೆಯನ್ನು ಪ್ರಾರಂಭಿಸುವವರಾಗಿದಾರೆ ಈ ವಿದ್ಯಾಶಾಲೆಯ ಸಂಬಂಧ ಹೋಟೆಲ್ ಮ್ಯಾನೇಜರುಗಳು ಚಂದಾ ಕೊಡಿಸುತ್ತಿರುವರು ಇದುವರೆಗೆ ಸುಮಾರು ಎರಡು ಲಕ್ಷ ರೂಪಾಯಿ ವಸೂಲಾಗಿದೆ ಈ ವಿದ್ಯಾಶಾಲೆಯಲ್ಲಿ ಪರೀಕ್ಷಿತರಾಗಿ ತೇರ್ಗಡೆ ಹೊಂದಿದವರಿಗೆ ಡಿ ಎಚ್ (ಅಂದರೆ ಹೋಟೆಲ್ ಕೆಲಸದ ಪಂಡಿತ) ಎಂಬ ಬಿರುದನ್ನು ಕೊಡುತ್ತಾರೆ

*

ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳಲ್ಲಿ ಈಚೆಗೆ ಚುನಾವಣೆ ನಡೆದು ಪ್ರೆಸಿಡೆಂಟ್ ಸ್ಥಾನಕ್ಕೆ ಡಾಕ್ಟರ್ ವುಡ್ರೋ ವಿಲ್ಸನ್ ಎಂಬವರು ನೇಮಿಸಲ್ಪಟ್ಟಿದ್ದಾರಷ್ಟೆ ಇವರು ಸ್ಟ್ಯಾಂಟನ್ ಎಂಬ ... ದಲ್ಲಿ ಒಂದು ಸಭೆ ನಡೆದಾಗ ಉಪನ್ಯಾಸಮಾಡುವಾಗ್ಗೆ ಫಿಲಿಪ್ಪೈನ್ ದ್ವೀಪಗಳಿಗೆ ಸ್ವತಂತ್ರ ರಾಜ್ಯಭಾರವನ್ನು ಕೊಡುವುದೇ ಉತ್ತಮವೆಂದು ಹೇಳಿದರು ಈಗ ಆ ದ್ವೀಪಗಳು ಅಮೇರಿಕದವರ ಅಧಿಕಾರಕ್ಕೆ ಸೇರಿದ್ದಾಗಿದೆ ಡಾಕ್ಟರ್ ವಿಲ್ಸನ್‌ರವರು ಇನ್ನೂ ಅಧಿಕಾರವನ್ನು ವಹಿಸಿಕೊಂಡಿಲ್ಲ ಅವರು ಪ್ರೆಸಿಡೆಂಟರಾದ ಬಳಿಕ ಮೇಲ್ಕಂಡ ವಿಚಾರದಲ್ಲಿ ತಮ್ಮ ಅಭಿಮತವನ್ನು ಪೂರ್ಣವಾಗಿ ತಿಳಿಸುವಂತೆ ಹೇಳಿದಾರೆ

*

ಅಮೇರಿಕಕ್ಕೆ ಸೇರಿದ ಇಂಡಿಯಾನಾಪೋಲೀಸ್‌ನಲ್ಲಿ ಡೈನಮೈಟ್ ಮದ್ದು ಹಾಕಿ ಅನಾಹುತವನ್ನು ಕಲ್ಪಿಸಬೇಕೆಂದು ಮಸಲತ್ತು ಮಾಡಿದ್ದ ಗುಂಪಿನ ಮುಖಂಡನಾದ ರಯಾನ್ ಎಂಬವನಿಗೆ 7 ವರುಷ ದಂಡನೆಯನ್ನೂ ಉಳಿದ ಮೂವತ್ತೇಳು ಮಂದಿಗೆ ಸಜಾ ಶಿಕ್ಷೆಯನ್ನೂ ವಿಧಿಸಿದ್ದರು ಇವರೆಲ್ಲಾ ಈಗ ಅಪೀಲ್ ಮಾಡಿಕೊಂಡಿರೋದರಿಂದ ಆ ಕೋರ್ಟಿನ ತೀರ್ಪು ಆಗುವವರೆಗೆ ಶಿಕ್ಷೆಯನ್ನು ನಿಲ್ಲಿಸಿ ಅವರನ್ನೆಲ್ಲಾ ಜಾಮೀನ್ ಮೇಲೆ ಬಿಡುಗಡೆ ಮಾಡಿಸಿರುತ್ತಾರೆ ರಯಾನ್ ಎಂಬವನು 2,10,000 ರೂಪಾಯಿಗೂ, ಉಳಿದವರೆಲ್ಲಾ ತಲಾ 10,000 ರೂಪಾಯಿಗೂ ಜಾಮೀನ್ ಕೊಟ್ಟಿದಾರೆ ಈ ಮೊಕದ್ದಮೆಯು ಅಮೇರಿಕದಲ್ಲಿ ದುಂಬಾ ಉತ್ಸಾಹವನ್ನುಂಟುಮಾಡಿದೆ

*

ಟಿಬೆಟ್ ರಾಜ್ಯದ ರಾಜಧಾನಿಯಾದ ಲಾಸಾ ಪಟ್ಟಣದಿಂದ ಬುರಿಯಾಟ್ ಡೋರ್ಜೀಫ್ ಎಂಬೊಬ್ಬ ಅಧಿಕಾರಿಯು ರಷ್ಯಾ ರಾಜಧಾನಿಯಾದ ಸೇಂಟ್ ಪೀಟರ್ಸ್‌ಬರ್ಗಿಗೆ ಹೋಗಿ ಅಲ್ಲಿನ ಒಂದು ಮುಖ್ಯವಾದ ವರ್ತಮಾನ ಪತ್ರಿಕೆಗೆ ತಿಳಿಸಿರುವುದೇನೆಂದರೆ—ಟಿಬೆಟ್ ರಾಜ್ಯವು ಸ್ವತಂತ್ರ ರಾಜ್ಯವಾಗಿ ಸ್ಥಾಪನೆಯಾಗಿ ತಳಾಯಿ ಲಾಮಾ ಎಂಬ ಮಹಾಗುರುವಿಗೆ ಪಟ್ಟಾಭಿಷೇಕವಾಯಿತು ನಾನು ಮಾಂಗೋಲಿಯಾಕ್ಕೂ ಟಿಬೆಟ್ಟಿಗೂ ಮಧ್ಯಸ್ಥಿಕೆ ಮಾಡಿ ಕರಾರು ಮಾಡಿಸಬೇಕೆಂತಲೂ, ರಷ್ಯಾ ಮತ್ತು ಇಂಗ್ಲಿಷ್ ಗವರ್ನ್‌ಮೆಂಟುಗಳ ಕೂಡ ನಾನು ಸಂಧಾನ ಮಾಡಿ ಆ ಎರಡು ರಾಜ್ಯಗಳೂ ಟಿಬೆಟ್ಟನ್ನು ಕಾಪಾಡುವ ಹಾಗೆ ಒಪ್ಪಂದ ಮಾಡಿಸಬೇಕೆಂತಲೂ ಟಿಬೆಟ್ಟಿನವರು ನನಗೆ ಅಧಿಕಾರ ವಹಿಸಿರುತ್ತಾರೆ ಈ ಒಪ್ಪಂದಗಳು ನಡೆದ ಪಕ್ಷದಲ್ಲಿ ರಷ್ಯಾ ಮತ್ತು ಇಂಗ್ಲಿಷ್ ವರ್ತಕರ ಸರಕುಗಳಿಗೆ ಟಿಬೆಟ್ಟಿನಲ್ಲಿ ಸುಂಕ ಹಾಕುವುದಿಲ್ಲವೆಂದೂ, ಆ ಎರಡು ರಾಜ್ಯಗಳವರೂ ಟಿಬೆಟ್ಟಿನಲ್ಲಿ ರೈಲ್ ಹಾಕಿ ಟೆಲಿಗ್ರಾಫ್ ತಂತಿಗಳನ್ನು ಕಟ್ಟಿ ಖನಿಜಗಳನ್ನು ಹೊರಗಿಸಿಕೊಳ್ಳುವಂತೆ ರಿಯಾಯಿತಿಯನ್ನು ತೋರಿಸುವುದಕ್ಕೆ ದಳಾಯಿ ಲಾಮಾ ಪ್ರಭುವು ಸಮ್ಮತಿಸುತ್ತಾನೆ ಎಂಬುದೇ

ಐವತ್ತು ಸಾವಿರ
ರೂಪಾಯಿ ಬಹುಮಾನ

ಕಳೆದ 1912 ನೆಯ ಇಸವಿ ಡಿಸೆಂಬರ್ ತಾ 23 ರಲ್ಲು ದೆಹಲಿ ಪಟ್ಟಣದ ಚಾಂದನಿಚೌಕದಲ್ಲಿ ಭರತಖಂಡದ ವೈಸ್ ರಾಯರಾದ ಘನತೆಯನ್ನು ಹೊಂದಿದ ಲಾರ್ಡ್ ಹಾರ್ಡಿಂಗ್ ಪ್ರಭುಗಳ ಮೇಲೆ ಸಿಡಿಮದ್ದನ್ನು ಎಸೆದ ಅಪರಾಧಿ ಅಥವಾ ಅಪರಾಧಿಗಳ ದಸ್ತಗಿರಿಯ ಬಗ್ಗೆ ಅನುಕೂಲಿಸುವ ಸುದ್ದಿಯನ್ನು ಕೊಡತಕ್ಕವರಿಗೆ 50,000 ರೂಪಾಯಿಗಳ ಬಹುಮಾನವು ಕೊಡಲಾಗುವುದೆಂದು ಈ ಮೂಲಕ ಪ್ರಸಿದ್ಧಪಡಿಸಿದೆ. ಪೋಲೀಸ್ ವಿಚಾರಣೆಗೆ ಅನುಕೂಲಿಸುವ ಅಥವಾ ಮೇಲೆ ಕಂಡ ಸಿಡಿಮದ್ದನ್ನು ತಯಾರಿಸಿದ ಜನರನ್ನಾಗಲೀ ಅಥವಾ ಮೇಲೆ ಕಂಡ ದುಷ್ಕೃತ್ಯದಲ್ಲಿ ಯಾವ ವಿಧದಿಂದಲಾದರೂ ಭಾಗಿಗಳಾದ ಜನರನ್ನಾಗಲಿ ಗೊತ್ತುಮಾಡಲವಕಾಶವನ್ನುಂಟುಮಾಡುವ ಸುದ್ದಿಯನ್ನು ತಿಳಿಸತಕ್ಕವರಿಗೆ ಉದಾರವಾದ ಬಹುಮಾನಗಳು ಕೊಡಲ್ಪಡುವವು.

(ಸ್ವೈ) ಸಿ. ಪೆಟ್ರಿ,

ತಾ 30-12 1912. ಆಫೀಷಿಯಲ್ ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ದೆಹಲಿ.

ವೃತ್ತಾಂತ ಪತ್ರಿಕೆ
ಶಕ ೧೮೩೪ ನೇ ಇಸವಿ ಜನವರಿ ತಾ ೧೬ ನೇ ಗುರುವಾರ

ಮೈಸೂರು ಸಂಸ್ಥಾನದ ಐಶ್ವರ್ಯಾಭಿವೃದ್ಧಿಯು.

ಮೈಸೂರು ಸಂಸ್ಥಾನದ ಸಂಪತ್ತನ್ನು ಅಭಿವೃದ್ಧಿಮಾಡಬೇಕೆಂಬ ವಿಚಾರವು ಈಚೆಗೆ ಹಲವು ವೇಳೆ ಸೂಚಿಸಲ್ಪಡುತ್ತಿರುವುದನ್ನು ನೋಡಿ ಸಂತೋಷಪಡುತ್ತೇವೆ. ಸಂಸ್ಥಾನದ ದಿವಾನರವರು ರಾಜಧಾನಿಯ ಪ್ರಜೆಗಳು ಒಪ್ಪಿಸಿದ ಅಡ್ರೆಸ್ಸಿಗೆ ಪ್ರತ್ಯುತ್ತರವನ್ನು ಹೇಳುವಾಗ್ಗೆ ಈ ವಿಷಯವನ್ನು ಕುರಿತು ಪ್ರಾಮುಖ್ಯವಾಗಿ ಪ್ರಸ್ತಾಪಮಾಡಿದರು. ಅವರು ಪ್ರಜೆಗಳ ಸೌಖ್ಯಸ್ಥಿತಿಯನ್ನು ಸೂಚನೆಮಾಡಿ ಈ ಸೀಮೆಯಲ್ಲಿ ನೂರಕ್ಕೆ ತೊಂಭತ್ತನಾಲ್ಕು ಜನರು ಓದುಬರಹವನ್ನು ಕಂಡವರಲ್ಲವೆಂದು ಹೇಳಿದರು. ಇಂಥಾ ಸ್ಥಿತಿಯು ಎದುವರೆಗೆ ಊರ್ಜಿತವಾಗಿರುತ್ತದೋ ಅದುವರೆಗೂ ದೇಶದ ಐಶ್ವರ್ಯಾಭಿವೃದ್ಧಿಯ ನಿರೀಕ್ಷೆಗೆ ಅವಕಾಶವೇ ಕಂಡುಬರುವುದಿಲ್ಲ. ಆದಕಾರಣ ಪ್ರಜೆಗಳನ್ನು ವಿದ್ಯಾವಂತರನ್ನಾಗಿ ಮಾಡುವಂಥಾ ಸಕಲ ಪ್ರಯತ್ನಗಳಿಗೂ ಮೈಸೂರು ಗವರ್ನಮೆಂಟಿನವರು ಪ್ರೋತ್ಸಾಹಪಡಿಸಿ ಸಹಾಯಮಾಡುವುದು ಒಳ್ಳೇದು. ಈಗ ವಿದ್ಯಾಪ್ರಚಾರದಲ್ಲಿ ಉದ್ಯುಕ್ತರಾಗಿರುವಂಥವರಿಗೆ ಗವರ್ನಮೆಂಟಿನಿಂದ ದೊರಕುವ ಪ್ರೋತ್ಸಾಹವೂ ಸಹಾಯವೂ ಅಷ್ಟೇನೂ ತೃಪ್ತಿಕರವಾದದ್ದಾಗಿರುವಂತೆ ಕಾಣುವುದಿಲ್ಲ. ಅಭಿವೃದ್ಧಿಯಾಗಬೇಕಾದದ್ದು ಪರಮಾವಶ್ಯವಾಗಿರೋಣದರಿಂದ ಸರ್ಕಾರದವರು ಹೊರಗಿನ ಸಹಾಯ ಸಂಪತ್ತುಗಳನ್ನು ವಿಶೇಷ ಆದರದಿಂದಲೂ ಪ್ರೀತಿಪುರಸ್ಸರವಾಗಿಯೂ ಅಂಗೀಕರಿಸುವವರಾಗಬೇಕು. ವಿದ್ಯೆ ಕಲಿಸುವುದಕ್ಕೆ ಪ್ರಜೆಗಳನ್ನು ಬಲಾತ್ಕಾರಪಡಿಸುವಂಥಾ ಕಾನೂನೇನೂ ಸದ್ಯ ಆವಶ್ಯವಿಲ್ಲ. ಯಾಕಂದರೆ ಉಪಾಧ್ಯಾಯರನ್ನೂ ಸ್ಕೂಲ್ ಮನೆಗಳನ್ನೂ ಒದಗಿಸಿಕೊಡುವುದಾದರೆ ಈಗಲೇ ಸಾವಿರಾರು ಮಕ್ಕಳು ಬಂದು ವಿದ್ಯೆ ಕಲಿಯಲು ಸಿದ್ಧರಾಗಿರುವರು. ಆದಕಾರಣ ಬಲಾತ್ಕಾರದ ಕಾನೂನಿನ ಆವಶ್ಯಕತೆಯೇ ನಮಗೆ ಕಾಣುವುದಿಲ್ಲ.

ಕೂಲಿಕಂಬಳಿಗಳನ್ನು ಮಾಡಿ ಜೀವನಮಾಡತಕ್ಕವರ ವಿಷಯದಲ್ಲಿ ದಿವಾನರವರು—"ಅವರ ಸಾಮರ್ಥ್ಯವು ಅಲ್ಪಮಾತ್ರದ್ದಾಗಿರುತ್ತದೆ. ಅವರು ಶಿಕ್ಷಣಹೊಂದಿದವರಲ್ಲ. ಅವರಿಗೆ ಕ್ರಮವಂಬುವುದು ತಿಳಿಯದು. ನಾಗರಿಕ ದೇಶಗಳಲ್ಲಿ ಒಬ್ಬ ಕೆಲಸಗಾರನು ಮಾಡತಕ್ಕಷ್ಟು ಕೆಲಸವನ್ನು ಮಾಡಲಿಕ್ಕೆ ಇಂಡಿಯಾ ದೇಶದವರು ಮೂರು ಮಂದಿ ಬೇಕಾಗುವರೆಂದು ಎಣಿಸಲ್ಪಟ್ಟಿದೆ" ಎಂದು ತಿಳಿಸಿದಾರೆ. ಅವರು ಹೇಳಿದ ಈ ಮಾತುಗಳು ಯಥಾರ್ಥವಾದವುಗಳೆಂದು ನಾವೂ ಹೇಳಬೇಕಾಗಿರುವುದು. ಈ ಮಾತು ನಿಜವಾಗಿರುವ ತನಕ ಸಂಪದಭಿವೃದ್ಧಿಯು ನೆಲೆಗೊಳ್ಳಲಾರದು. ಬುದ್ಧಿಕುಶಲರಾದ ಕಾರ್ಯಗಾರರು ಇಲ್ಲದೆ ಕಸಬುಗಳು ನಡೆಯುವ ಬಗೆ ಹ್ಯಾಗೆ? ಕೆಲವು ವೇಳೆ ಕಾರ್ಯಗಾರನ ಅವಿವೇಕದಿಂದ ಬಹಳ ನಷ್ಟ ಸಂಭವಿಸುವುದುಂಟು. ಅಂಥಾ ಕಾರ್ಯಗಾರನನ್ನಿಟ್ಟುಕೊಂಡು ಲಾಭಸಂಪಾದನೆ ಮಾಡುವುದು ಸಾಧ್ಯವಾದೀತೇ? ತಯಾರಿಯಲ್ಲಿ ಕೆಟ್ಟುಹೋಗಿರುವಂಥಾ ಸರಕನ್ನು ಯಾರು ತಾನೇ ಕೊಂಡು ಪ್ರೋತ್ಸಾಹಪಡಿಸುತ್ತಾರೆ? ಇಂಥಾ ವಸ್ತುಗಳನ್ನಿಟ್ಟುಕೊಂಡು ವ್ಯಾಪಾರವನ್ನು ಅಭಿವೃದ್ಧಿಮಾಡಲಾಗುವುದೇ?

ಮೈಸೂರು ಗವರ್ನಮೆಂಟಿನವರು ಕಾರ್ಯಗಾರನ ಕೈಚಳಕವನ್ನೂ, ಅವನ ಬುದ್ಧಿಕುಶಲತೆಯನ್ನೂ, ಅವನ ಸಾಮರ್ಥ್ಯವನ್ನೂ ಉತ್ತಮತರವಾಗಿ ಮಾಡಬೇಕೆಂದು ಕುತೂಹಲಪಡುತ್ತಾರೆ. ಆದರೆ ಇವರಲ್ಲಿ ನಮಗೆ ಒಂದು ಕಷ್ಟ ಕಂಡುಬರುತ್ತಿದೆ. ಶರೀರವನ್ನು ದಂಡಿಸಿ ಕೆಲಸ ಕಲಿತುಕೊಳ್ಳುವುದಕ್ಕೆ ಅಭಿಲಾಷೆಪಡುವಂಥಾ ಯುವಕರಾದ ಬಾಲಕರು ಸಿಕ್ಕುವುದು ಕಷ್ಟಸಾಧ್ಯವಾಗಿದೆ. ಮೈಬಗ್ಗಿ ದೀರ್ಘಕಾಲ ದುಡಿಯುವುದನ್ನು ಸಾಮಾನ್ಯವಾಗಿ ಹಿಂತೆಗೆಯುವರು. ಕಾರ್ಯಗಾರರು ಸಂಬಳವನ್ನು ಹೆಚ್ಚಿಸಿಕೊಳ್ಳುವುದರಲ್ಲಿ ತೋರಿಸುವಷ್ಟು ಉತ್ಸಾಹವನ್ನು ದುಡಿಯುವುದರಲ್ಲಿ ತೋರಿಸುವುದಿಲ್ಲ. ಇದಲ್ಲದೆ ದಿವಾನರವರು ಹೇಳಿದಂತೆ ಕಾರ್ಯಗಾರನಿಗೆ ನಿರ್ಬಂಧವನ್ನು ಕಂಡರಾಗದು. ಆದಕಾರಣ ಕಾರ್ಯಗಾರನ ಬರೇ ಸಾಮರ್ಥ್ಯವನ್ನು ವೃದ್ಧಿಮಾಡುವುದರಲ್ಲಿ ಫಲಕಾಣುವುದಿಲ್ಲ. ಅವನ ಶೀಲಸ್ವಭಾವವನ್ನೂ ಅವನ ಧರ್ಮಜ್ಞಾನವನ್ನೂ ಉತ್ತಮವಾಗಿ ಮಾಡಬೇಕು.

ಎಲ್ಲಾ ಬಾಬುಗಳಲ್ಲೂ ನಂಬಿಕೆಗೆ ಅರ್ಹರಾದಂಥಾ ಕಾರ್ಯಗಾರರು ಸಿಕ್ಕುವುದು ದುಸ್ತರವಾಗಿದೆ. ಯಾವ ಕೆಲಸವಾಗಲಿ ಮಾಡತಕ್ಕವನಿಗೆ ಅದನ್ನು ವಹಿಸಿದಲ್ಲಿ ಅವನು ಅದನ್ನು ತೃಪ್ತಿಕರವಾಗಿಯೂ ಮನಃಪೂರ್ವಕವಾಗಿಯೂ ಚನ್ನಾಗಿಯೂ ಮಾಡದ್ದ ಪಕ್ಷಕ್ಕೆ ಅದು ಅಭಿವೃದ್ಧಿಗೆ ಬರುವುದಿಲ್ಲ. ಕಾರ್ಯಗಾರನು ಅಸತ್ಯವಂತನಾಗಿದ್ದರೂ ಅಥವಾ ಅವನು ಅಯೋಗ್ಯನಾಗಿದ್ದರೂ ಯಾವ ಕಸಬೂ ವೃದ್ಧಿಯಾಗಲಾರದು, ಅಂಥವನ ದೆಸೆಯಿಂದ ಆ ಕಸಬೇ ಹಾಳಾಗುತ್ತದೆ. ಮೊದಲು ಸದ್ಗುಣಿಗಳೂ ಸಚ್ಚರಿತ್ರರೂ ಆಗಿದ್ದ ಪಕ್ಷದಲ್ಲಿ ಅಂಥವರನ್ನು ತರಪೇತುಮಾಡುವುದರಿಂದ ಯಾವ ತರದ ಶಿಕ್ಷಣವಾಗಲಿ ಸಾರ್ಥಕವೂ ಫಲಕಾರಿಯೂ ಆದೀತು. ಚನ್ನಾಗಿ ಶಿಕ್ಷಣಹೊಂದಿದ, ಕಷ್ಟಪಟ್ಟು ಕೆಲಸಮಾಡುವ, ಸತ್ಯವಂತರಾದ ಮತ್ತೂ ಬೇಗಬೇಗನೆ ಅಭಿವೃದ್ಧಿಯಾಗಬೇಕೆಂದು ಕುತೂಹಲಪಡುವ ಜನಗಳು ಸಂಸ್ಥಾನದಲ್ಲಿ ಹೆಚ್ಚು ಹೆಚ್ಚಾಗಿ ದೊರಕುತ್ತಾ ಬಂದಪಕ್ಷದಲ್ಲಿ ಆಗ್ಗೆ ದೇಶದ ಸಂಪದಭಿವೃದ್ಧಿಯು ನೆಲೆಗೊಂಡೀತೆಂದು ನಿಶ್ಚಿತವಾಗಿ ತಿಳಿದುಕೊಳ್ಳಬಹುದು

ಕೃಪಾಸಾಗರ

ಸಾಗರದ ನೀರು ಕಡುಕ್ಷಾರವಾಗಿರುವದರಿಂದ ಕುಡಿಯುವದಕ್ಕೆ ಆಗುವದಿಲ್ಲವಷ್ಟೆ. ಆದುದರಿಂದ ಮಹಾ ಸಾಗರಗಳ ಮೇಲೆ ಅನೇಕ ದಿನಗಳ ವರೆಗೆ ಯಾನಮಾಡತಕ್ಕವರು ತಮ್ಮ ಹಡಗುಗಳಲ್ಲಿ ತಮ್ಮ ಪ್ರಯಾಣದ ಉದ್ದಕ್ಕೂ ಸಾಕಾಗುವಷ್ಟು ಕುಡಿಯುವ ನೀರನ್ನು ತೆಗೆದುಕೊಂಡು ಹೋಗಬೇಕಾಗಿದೆ. ಸಿಹಿನೀರು ಹಿಡಿಯುವ ಅನೇಕ ದೊಡ್ಡ ದೊಡ್ಡ ತೊಟ್ಟಿಗಳನ್ನು ಹಡಗಿನಲ್ಲಿ ಈ ಉಪಯೋಗಕ್ಕಾಗಿ ಮಾಡಿರುತ್ತಾರೆ.

ಕೆಲವು ಸಂವತ್ಸರಗಳ ಹಿಂದೆ ಇಂಥಾದ್ದೊಂದು ಹಡಗು ಯೂರೋಪ್ ಖಂಡವನ್ನು ಬಿಟ್ಟು ದಕ್ಷಿಣ ಅಮೇರಿಕಾದಲ್ಲಿರುವ ಒಂದು ರೇವು ಪಟ್ಟಣವನ್ನು ಕುರಿತು ಅಟ್ಲಾಂಟಿಕ್ ಮಹಾ ಸಾಗರದ ಮೇಲೆ ಯಾನಮಾಡುತ್ತಿದ್ದಿತು. ಆದರೆ ರೇವನ್ನು ಮುಟ್ಟುವದಕ್ಕೆ ಅದರ ನಾವಿಕರು ಅಂದಾಜುಕಟ್ಟಿದ್ದ ಕಾಲದೊಳಗಾಗಿ ಆ ಹಡಗು ರೇವನ್ನು ತಲಪಲಿಲ್ಲ. ಯಾಕಂದರೆ ಅನೇಕ ಸರ್ತಿ ಬಿರುಗಾಳಿ ಅದಕ್ಕೆದುರಾಗಿ ಬಡಿದು ತೊಂದರೆಮಾಡಿದ್ದರಿಂದ ಪ್ರಯಾಣವು ನಿಧಾನವಾಯಿತು. ಹೀಗಿರುವಲ್ಲಿ ಆ ಹಡಗಿನಲ್ಲಿದ್ದ ಸಿಹಿನೀರು ಎಲ್ಲಾ ಖರ್ಚಾಗಿ ಪ್ರಯಾಣಿಕರು ಬೇರೆಲ್ಲಿಯೂ ಕುಡಿಯುವ ನೀರನ್ನು ಕಾಣದೆ ದಾಹಪೀಡಿತರಾಗಿ ಬಹಳ ಕಷ್ಟ ನಷ್ಟಗಳಿಗೆ ಗುರಿಯಾದರು. ಮತ್ತು ತಾವು ರೇವನ್ನು ಸೇರುವದಕ್ಕಿಂತ ಮುಂಚೆ ಪ್ರಾಣಸಂಕಟಕ್ಕೆ ಈಡಾಗಿ ಅನೇಕರು ಅಸ್ವಸ್ಥರಾದರು. ಕೆಲವರು ಸತ್ತೇಹೋದರು.

ಅವರು ಇಂತಹ ಸ್ಥಿತಿಗೆ ಸಿಕ್ಕಿ ನರಳುತ್ತಿರುವಾಗ ಅವರ ಕಡೆಗೆ ಬರುತ್ತಿರುವ ಮತ್ತೊಂದು ಹಡಗನ್ನು ಅವರು ಆಕಸ್ಮಿಕವಾಗಿ ಕಂಡು ಧೈರ್ಯವನ್ನೂ ಸಂತೋಷವನ್ನೂ ತಾಳಿ ತಮ್ಮ ಪರಿತಾಪಕರವಾದ ಸ್ಥಿತಿಯನ್ನು ತಮ್ಮ ಎದುರಿಗೆ ಬರುತ್ತಿರುವ ಹಡಗಿನವರಿಗೆ ಸೂಚಿಸಬೇಕೆಂದು ಬಾವುಟಗಳನ್ನು ಎತ್ತಿಕಟ್ಟಿ "ನಾವು ಕುಡಿಯುವ ನೀರಿಲ್ಲದೆ ದಾಹಪೀಡಿತರಾಗಿ ಸಾಯುತ್ತಿದ್ದೇವೆ" ಎಂದು ಅವರಿಗೆ ಅರಿಕೆಮಾಡಿದರು. ಎದುರು ಹಡಗಿನಲ್ಲಿದ್ದವರಾದರೋ "ನಿಮ್ಮ ಸುತ್ತಮುತ್ತಲೂ ನೀರೇ ನಿಮ್ಮನ್ನು ಆವರಿಸಿಕೊಂಡಿದೆ. ತವರಾದದೆ ಕೊಡಗಳನ್ನು ಬಿಟ್ಟು ತುಂಬಿಕೊಂಡು ಕುಡಿಯಿರಿ" ಎಂದು ಕೂಗಿ ಹೇಳಿದರು. ಇತ್ತ ಇವರಾದರೋ "ಇದು ಹಾಸ್ಯವಾಡುವ ಕಾಲವಲ್ಲ, ದಯಮಾಡಿ ಬೇಗ ನಮಗೆ ಸಹಾಯಮಾಡಿ ಪ್ರಾಣಸಂರಕ್ಷಣೆಮಾಡಿರಿ" ಎಂದು [illegible]ತ್ತಿರಲು, ಎದುರು ಹಡಗಿನವರು "ನಾವು ನಿಮ್ಮನ್ನು ಹಾಸ್ಯಮಾಡುವವರೋ ನಿಜಹೇಳುವವರೋ ಪರೀಕ್ಷೆಮಾಡಿ ನಂತರ ನೀವೇ ಹೇಳಿ" ಎಂದರು. ಇವರು ಅವರ ಮಾತನ್ನು ಇನ್ನೂ [illegible] ಅವಮಾನಮಾಡಬಾರದೆಂದು ಸಮುದ್ರದ ನೀರನ್ನು ಮೊಗೆದು ಕುಡಿದು ನೋಡಿದಾಗ ಅದು ಸವಿನೀರಾಗಿತ್ತು. ಆಗವರು ತವಕತವಕದಿಂದ ಬೇಕಾದಷ್ಟನ್ನು ಕುಡಿದು ಸಂತೃಪ್ತರಾಗಿ ತಮ್ಮ ತೊಟ್ಟಿಗಳನ್ನು ತುಂಬಿಕೊಂಡರು.

ಅನಂತರ ಅವರು ಚಕಿತರಾಗಿ—ಸಾಗರದಲ್ಲಿ ಎಲ್ಲಿಂದ ಎಲ್ಲಿಯವರೆಗೆ ನೋಡಿದರೂ ಉಪ್ಪುನೀರೇ ಮಯವಾಗಿದೆ. ಇಲ್ಲಿ ಸಿಹಿನೀರು ಹ್ಯಾಗೆ ಬಂದಿತೆಂದು ವಿಚಾರಿಸುವಲ್ಲಿ ತಿಳಿದುಬಂದುದೇನೆಂದರೆ—ದಕ್ಷಿಣ ಅಮೇರಿಕಾದಲ್ಲಿ ಅಟ್ಲಾಂಟಿಕ್ ಸಾಗರಕ್ಕೆ ಬೀಳುವ ಅಮೇಜಾನ್ ಎಂಬ ನದಿಯು ಲೋಕದಲ್ಲಿರುವ ಸಕಲ ನದಿಗಳಿಗಿಂತ ವಿಸ್ತಾರವಾದುದು. ಈ ನದಿಯು ಬೇರೆ ನದಿಗಳಿಗಿಂತ ಆಳ ಅಗಲದಲ್ಲಿ ಹೆಚ್ಚಾಗಿದೆ ಮತ್ತು ಯೂರೋಪ್ ಖಂಡದ ಸಕಲ ನದಿಗಳು ಸೇರಿ ಸಮುದ್ರಕ್ಕೆ ತಂದು ಬಿಡುವ ನೀರಿಗಿಂತಲೂ ಇದೊಂದೇ ನದಿ ತಂದು ಬಿಡುವ ನೀರು ಹೆಚ್ಚಾಗಿದೆ. ಆದ್ದರಿಂದ ಆ ಪ್ರದೇಶದಲ್ಲಿ ನೂರು ಮೈಲುಗಳ ಅಗಲಕ್ಕೆ ಅಂದರೆ ಸುಮಾರು ಬೆಂಗಳೂರಿನಿಂದ ಹಿಡಿದು ನಂಜನಗೂಡಿನ ವರೆಗೂ ಇರುವ ಫಾಸಲೆಯಷ್ಟು ಅಗಲವಾಗಿ ನೂರಾರು ಮೈಲುಗಳ ಉದ್ದಕ್ಕೂ ಈ ಮಹಾನದಿಯ ನೀರು ವಿಸ್ತರಿಸಿಕೊಂಡು ಆ ಪ್ರಾಂತ್ಯ ಯಾನಮಾಡುತ್ತ ತಮ್ಮನ್ನು ರಕ್ಷಿಸಿರು ಎಂದು ಮುಂದಿಟ್ಟು ಮಾಡಿಕೊಂಡರು.

ದೇವರನ್ನು ಹೊಗಳುವರೂ ಮುಕ್ತಿ ಹೊಂದಿಕೊಳ್ಳಬೇಕು, ಆತನ ಸಾನ್ನಿಧ್ಯವನ್ನು ಅನುಭವಿಸಬೇಕೆಂದು ಲೋಕದಲ್ಲಿರುವ ಸಕಲ ಮನುಷ್ಯರು ಪ್ರಯತ್ನಿಸುತ್ತಿರುವರು. ಈ ಅಪೇಕ್ಷೆಯನ್ನು ಮನುಷ್ಯನ ಮನಸ್ಸಿನಲ್ಲಿ ದೇವರು ಹುಟ್ಟಿಸಿರುವನು. ಆತನನ್ನು ಹೊಂದಿದರೆ ವಿನಾ ಮನುಷ್ಯನ ದೇಹದೊಳಗಿನ ಜೀವಾತ್ಮನು ತೃಪ್ತಿಯನ್ನು ಹೊಂದಲಾರನು. ಒಬ್ಬಾನೊಬ್ಬ ಪರಮಭಕ್ತನಿಗೆ ದೇವರು ದರ್ಶನವಿತ್ತು, ನಿನ್ನ ಭಕ್ತಿಗೆ ನಾನು ಮೆಚ್ಚಿದೆನು, ನಿನಗೇನುಬೇಕೋ ಬೇಡಿಕೋ ಎಂದು ಹೇಳಿದ್ದಕ್ಕೆ ಆ ಭಕ್ತನು—ಸ್ವಾಮಿ, ನಿನ್ನ ಹೊರತು ನಾನೇನೂ ಬೇಡ, ನೀನೇ ನನಗೆ ಬೇಕು ಎಂತ ಹೇಳಿದನಂತೆ. ಇನ್ನೊಬ್ಬ ಮಹಾ ಬೋಧಕನು—ಸ್ವಾಮಿಯೇ, ನಿನಗೋಸ್ಕರವಾಗಿಯೇ ನಮ್ಮನ್ನು ನಿರ್ಮಾಣಮಾಡಿಕೊಂಡಿದ್ದಿ. ನಿನ್ನನ್ನು ಕಂಡುಕೊಳ್ಳುವ ವರೆಗೂ ನಮ್ಮ ಜೀವಾತ್ಮನು ತಳಮಳಪಡುತ್ತಾನೆ ಎಂದು ಹೇಳಿದ್ದಾನೆ.

ದೇವರ ನಿರ್ಮಾಣದ ಕೆಲಸಗಳನ್ನು ನೋಡಿದರೆ ಎಲ್ಲವೂ ಒಂದಕ್ಕೊಂದು ಸಂಬಂಧಿಸುವ ರೀತಿಯಲ್ಲಿಯೇ ಆತನು ಸಕಲವನ್ನು ಸೃಷ್ಟಿಸಿದ್ದಾನೆ. ನೋಡಿ, ಆತನು ಬಹು ಚಮತ್ಕಾರವಾದ ಕಣ್ಣನ್ನು ನಿರ್ಮಿಸಿ ನಮಗೆ ಕೊಟ್ಟಿರುವದಲ್ಲದೆ ಅದಕ್ಕೆ ವಿಷಯವಾದ ಬೆಳಕನ್ನು ದಯಪಾಲಿಸಿದ್ದಾನೆ. ಹಸಿವು ದಾಹಗಳಿಂದ ನಮ್ಮಲ್ಲಿ ಆಹಾರ ಪಾನಗಳ ಮೇಲೆ ಅಪೇಕ್ಷೆಯನ್ನು ಹುಟ್ಟಿಸಿರುವನು. ಅಲ್ಲದೆ ಅದಕ್ಕೆ ವಿಷಯಗಳಾದ ಅನ್ನವನ್ನೂ ನೀರನ್ನೂ ಕೊಟ್ಟಿದ್ದಾನಷ್ಟೆ. ಆದರೆ ಆತನನ್ನು ಹೊಂದಬೇಕೆಂಬ ಅಪೇಕ್ಷೆಯು ನಮ್ಮಲ್ಲಿರುವ ಸರ್ವ ಅಪೇಕ್ಷೆಗಳಿಂತ ಅತಿ ಪ್ರಾಮುಖ್ಯವಾದುದು. ಬೇರೆ ಬೇರೆ ಅಪೇಕ್ಷೆಗಳನ್ನು ನಮ್ಮಲ್ಲಿ ಹುಟ್ಟಿಸಿ ಆ ಅಪೇಕ್ಷೆಗಳನ್ನು ತೃಪ್ತಿಗೊಳಿಸುವ ವಿಷಯಗಳನ್ನು ನಮಗೆ ದೇವರು ಕೊಡುವಲ್ಲಿ ತನ್ನನ್ನೇ ಹೊಂದಬೇಕೆಂಬ ದಿವ್ಯಾಪೇಕ್ಷೆಯನ್ನು ನಮ್ಮಲ್ಲಿ ಹುಟ್ಟಿಸಿ ಆ ಅಪೇಕ್ಷೆಯನ್ನು ತೃಪ್ತಿಪಡಿಸುವ ವಿಷಯವಾದ ತನ್ನನ್ನು ನಮಗೆ ಕೊಡದಿರುವನೇ?

[illegible] ಹುಡುಕುತ್ತಿರುವ ಪಾಟಕರೇ, ದೇವರೇ ನಿಮ್ಮನ್ನು ಹುಡುಕಿಕೊಂಡು [illegible] ಬಂದನೆ ಹೇಳಿದರೆ ಆಶ್ಚರ್ಯವಾದೀತೋ? ನಾವು ಆತನ [illegible] ದಾರಿಯಲ್ಲಿ ಅಲೆದಾಡಿ ನಮ್ಮ ತಂದೆಯ ಮನೆಯನ್ನು ಬಿಟ್ಟು ಎಲ್ಲಿ ಬೇಸತ್ತು ಹೋಗಿದ್ದೇವೆ. ಆದರೆ ಆತನು ನಮ್ಮನ್ನು ಕಳೆದುಕೊಂಡು [illegible] ದುಃಖಾಕ್ರಾಂತನಾಗಿ ತನ್ನ ಅರಮನೆಯನ್ನು ಬಿಟ್ಟು ನಮ್ಮನ್ನು ಹುಡುಕಿಕೊಂಡು ಬಂದನು. ಕ್ರಿಸ್ತನು ಈ ವಿಷಯವಾಗಿ ಹೇಳಿರುವ ಸಾಮ್ಯ ಮನೋಹರವಾಗಿದೆ. ಅದೇನಂದರೆ—ಯಾವ ಮನುಷ್ಯನು ನೂರು ಕುರಿಗಳಲ್ಲಿ ಒಂದನ್ನು ತಪ್ಪಿಸಿಕೊಂಡರೆ ಅದು ಸಿಕ್ಕುವ ತನಕ ಅದನ್ನು ಹುಡುಕಿಕೊಂಡು ಹೋಗದೆ ಇದ್ದಾನು? ಅದು ಸಿಕ್ಕಿದ ಮೇಲೆ ಸಂತೋಷದಿಂದ ಹೆಗಲ ಮೇಲೆ ಅದನ್ನು ಇಟ್ಟುಕೊಂಡು ಮನೆಗೆ ಬಂದು ನೆರೆಹೊರೆಯ ಸ್ನೇಹಿತರನ್ನು ಕರೆದು ತಪ್ಪಿಹೋಗಿದ್ದ ನನ್ನ ಕುರಿ ಸಿಕ್ಕಿತು ನನ್ನ ಸಂಗಡ ಸಂತೋಷಪಡಿರಿ ಎಂದನ್ನನೇ? ಅದರಂತೆ ದೇವರ ಕಡೆಗೆ ತಿರುಗಿಕೊಳ್ಳುವ ಒಬ್ಬ ಪಾಪಿಯ ವಿಷಯದಲ್ಲಿ ಪರಲೋಕದಲ್ಲಿ ಸಂತೋಷ ಉಂಟಾಗುವದು ಎಂದು ನಿಮಗೆ ಹೇಳುತ್ತೇನೆ

ಒಳದೇಶದ ವೃತ್ತಾಂತಗಳು

ಮೈಸೂರು ಸಂಸ್ಥಾನದ ಸಿವಿಲ್ ಕೋರ್ಟುಗಳು ಈ ಸಲ ಬೇಸಗೆ ರಜೆಕ್ಕೋಸ್ಕರ ಏಪ್ರೆಲ್ ತಾ. 14 ನೇ ಸೋಮವಾರದಿಂದ ಮೇ ತಾ. 24 ನೇ ಶನಿವಾರದವರೆಗೂ, ಚೀಫ್ ಕೋರ್ಟು ಏಪ್ರೆಲ್ ತಾ 14 ರಿಂದ ಜೂನ್ ತಾ 14 ರ ವರೆಗೂ ಉಭಯ ದಿನಗಳೂ ಸೇರಿ ಮುಚ್ಚಲ್ಪಡುವವು.

* * *

ಶ್ರೀಮನ್ ಯುವರಾಜರವರು ನಿಜಪರಿವಾರ ಸಮೇತ ಮಾರ್ಚಿ ತಿಂಗಳಲ್ಲಿ ಬೊಂಬಾಯಿನಲ್ಲಿ ಹಡಗು ಹತ್ತಿ ಯೂರೋಪ್ ಖಂಡಕ್ಕೂ ವಿಲಾಯತಿಗೂ ಪಯಣಮಾಡಿ, ಅಲ್ಲಿನ ರಾಜ್ಯಾಡಳಿತಗಳನ್ನೂ ಕಸಬುಗಳನ್ನೂ ಜನಗಳ ಸ್ಥಿತಿಗತಿ ಮುಂತಾದವುಗಳನ್ನೂ ನೋಡಿಕೊಂಡು ಬರುವವರಾಗಿದ್ದಾರೆ. ಅವರ ಕೂಡ ಡಾಕ್ಟರ್ ಮಗ್ಗ್ರಿಯವರೂ, ಹುಜೂರು ಸೆಕ್ರೆಟರಿ ಮ|| ಸಿ. ರಾಘವೇಂದ್ರರಾಯರೂ ಪ್ರಯಾಣಮಾಡುವರೆಂದು ತಿಳಿಯುತ್ತದೆ.

* * *

ಮೈಸೂರು ಮಹಾರಾಜಾ ಕಾಲೇಜಿನ ಇಂಗ್ಲಿಷ್ ಬೋಧಕರಾದ ಮೆ|| ಆರ್. ಸಿ. ಮೆಕೆಂಜಿಯವರು ಬಿಹಾರ್ [illegible] ಇಲಾಖೆಯಲ್ಲಿ ಅಧಿಕಾರವನ್ನು ಅಂಗೀಕರಿಸಿ, ಅಲ್ಲಿಗೆ ತೆರಳುವವರಾಗಿದ್ದಾರೆ. ಅವರ ಸ್ಥಾನಕ್ಕೆ ನಮ್ಮ ಸರ್ಕಾರದವರು ಮೆ|| ಆಂಡ್ರೂಸನ್ ಯವರನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ ವರ್ಗಮಾಡಿ, ಬೆಂಗಳೂರು ಕಾಲೇಜಿಗೆ ಸೀಮೆಯಿಂದ ಹೊಸದಾಗಿ ಒಬ್ಬ ಪಂಡಿತರನ್ನು ಕರೆಸಿ ನೇಮಕಮಾಡುವರೆಂದು ಕೇಳುತ್ತೇವೆ.

* * *

ಮೈಸೂರು ಸಂಸ್ಥಾನದ ವಿದ್ಯಾ ಇಲಾಖೆಯಲ್ಲಿ ಅನೇಕ ವರುಷಗಳ ಕಾಲ ಇನ್ಸ್‌ಪೆಕ್ಟರಾಗಿದ್ದು, ಪೆನ್ಷನ್ ಪಡೆದು ರಾಜಧಾನಿಯಲ್ಲಿದ್ದ ಮೆ|| ಎಚ್. ಕೇಶವಯ್ಯನವರು ಕಳೆದ 7 ನೇ ತಾ. ಮಂಗಳವಾರ ಸುಮಾರು 68 ನೇ ವಯಸ್ಸಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಅಧಿಕಾರದಲ್ಲಿದ್ದಾಗ್ಗೆ ಸದ್ಗುಣಶಾಲಿಗಳಾಗಿಯೂ, ನಿಸ್ಪೃಹರಾಗಿಯೂ ಇದ್ದು, ಮೂರು ಡಿಸ್ಟ್ರಿಕ್ಟಿನ ಉಪಾಧ್ಯಾಯರುಗಳ ಪ್ರೀತಿಗೌರವಗಳನ್ನು ಸಂಪಾದಿಸಿಕೊಂಡಿದ್ದರು.

ಮೈಸೂರು ಸರ್ಕಾರದವರು ಅ॥ ಕಮಿಷನರ್ ರ ಹುದ್ದೆಗೆ ಇನ್ನು ಮುಂದೆ ನೇಮಕನಾಗತಕ್ಕವರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕೆಂದೂ, ಈ ಪರೀಕ್ಷೆಯು ಎರಡು ವರುಷಕ್ಕೊಂದಾವರ್ತಿ ನಡಿಸಲ್ಪಡುವುದೆಂದೂ, ಪರೀಕ್ಷೆಗೆ ಬರತಕ್ಕವರು ಮೈಸೂರಿನ ಪ್ರಜೆಗಳಾಗಿ ಬಿ ಎ ಪರೀಕ್ಷೆ ಕೊಟ್ಟವರಾಗಿರಬೇಕೆಂದೂ ನಿಬಂಧನೆ ಮಾಡಿ ಈ ವಾರದ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ ಈ ಹೊಸ ನಿಬಂಧನೆಯ ಪ್ರಕಾರ ಈ ವರುಷ ಪರೀಕ್ಷೆ ನಡೆಯುವುದಾಗಿದೆ

* * *

ಒಬ್ಬ ವರ್ತಮಾನದಾರರಿಂದ — ಜಗಳೂರು ತಾಲ್ಲೂಕು ಅರಸನೂರು ಎಂಬ ಗ್ರಾಮದಲ್ಲಿ ರೈತರು ಪೈರುಗಳನ್ನು ಕಟಾವುಮಾಡಿ, ತುಳಿಸುವುದಕ್ಕೆ ಕಣಕ್ಕೆ ಹಾಕಿದ ಕಾಲದಲ್ಲಿ ಬೆಂಕಿಬಿದ್ದು ಒಂಭತ್ತು ಕಣಗಳು ಸುಟ್ಟುಹೋಗಿವೆ, ಅಂದರೆ ಸುಮಾರು ಏಂಬತ್ತು ಬಂಡಿಗೆ ದವಸವೂ, ಮೇವೂ ಸಹ ಸುಟ್ಟುಹೋಯಿತು ಯಾರೋ ಹುಡುಗರು ಬೀಡಿ ಸೇದುತ್ತಿದ್ದರೆಂದು ಹಚ್ಚಿರಬಹುದೆಂದು ಕಾಣುತ್ತೆ ಈ ದೇಶದಲ್ಲಿ ಚಿಕ್ಕ ಹುಡುಗರು ಬೀಡಿ ಸೇದುವುದು ಬಹಳ ಜಾಸ್ತಿಯಾಗಿರುವುದರಿಂದ ಅನಾಹುತಗಳು ಬಹಳವಾಗಿ ಆಗುತ್ತವೆ ಹುಡುಗರು ಬೀಡಿ ಸೇದುವುದನ್ನು ಸರ್ಕಾರದವರು ತಪ್ಪಿಸುವ ಹಾಗೆ ಏರ್ಪಾಡುಮಾಡಿದರೆ ರೈತರಿಗೆ ಬೆಂಕಿಯ ಭಯ ಸಲ್ಪ ಕಡಮೆಯಾಗುವುದು

* * *

ಒಬ್ಬ ವರ್ತಮಾನದಾರರಿಂದ — ಕುನಿಗಲ್ ಕೋಆಪರೇಟಿವ್ ಸೊಸೈಟಿಯ ಪ್ರೆಸಿಡೆಂಟ್ ಮತ್ತು ಸೆಕ್ರೆಟರಿಗಳಿಗೆ ಸರಿಬೀಳದೆ ಸೊಸೈಟಿಯು ಈವರೆಗೆ ಸ್ವಲ್ಪ ಅಸ್ತವ್ಯಸ್ತವಾಗಿತ್ತೆಂದು ರಿಜಿಸ್ಟ್ರಾರ್ ರವರೂ ಅವರ ಅಸಿಸ್ಟೆಂಟ್ ಮ॥ ರಾ॥ ರಂಗರಾಯರವರೂ, ಮೆ ಸಿ ಸುಬ್ಬರಾಯರವರೂ ಇಲ್ಲಿಗೆ ಬಂದು ಜನರಲ್ ಮೀಟಿಂಗ್ ನಡಿಸಿದರು ಓಟು ವಿಷಯದಲ್ಲಿ ಗುಬ್ಬಿ ಮ॥ ವೆಂಕಟರಮಣಯ್ಯನವರು ಪ್ರೆಸಿಡೆಂಟರಾಗಿಯೂ, ಮ ಎ ವೆಂಕಟರಾಮಯ್ಯನವರು ಸೆಕ್ರೆಟರಿಯಾಗಿಯೂ, ಮ ವೆಂಕಟನಾರಾಯಣಪ್ಪನವರು ಟ್ರೆಷರರಾಗಿಯೂ, ಮ ಕಪನೂರು ಕೃಷ್ಣಪ್ಪನವರೂ ಮ ಆನೆಕೆರೆ ವೆಂಕಣ್ಣಯ್ಯನವರೂ ಡೈರೆಕ್ಟರುಗಳಾಗಿಯೂ ಇರುವಂತೆ ಗೊತ್ತಾಯಿತು ಜನೋಪಯೋಗವಾದ ಈ ಸೊಸೈಟಿ ಇನ್ನು ಮುಂದೆ ಚನ್ನಾಗಿ ನಡೆದೀತೆಂದು ನಂಬಿ ಇದೆ

* * *

ಈ ವಾರ ರಾಜಧಾನಿಯ ದೇವರಾಜ ಮಾರ್ಕೆಟ್ಟಿನಲ್ಲಿ ಶಾಂತವೇರಿ ಜುಪಸ್ಪತ್ರೆ ಮೊದಲಾದವರು ತಾಗಿಕೊಂಡು ಇಬ್ಬರು ಕಾಲರಾದಂತೆ ತಿಳಿದುಬಂದಿದೆ ಜನರು ಆಹಾರವಿಹಾರಗಳಲ್ಲಿ ಸ್ವಲ್ಪ ಜಾಗರೂಕರಾಗಿರಬೇಕು ನೀರನ್ನು ಚನ್ನಾಗಿ ಕುದಿಸದೆ ಕುಡಿಯಬಾರದು, ಗೆಡ್ಡೆ ಸೊಪ್ಪು ಮುಂತಾದ ತರಕಾರಿಗಳನ್ನು, ಬಹಳ ತಳಿತುಹೋದ ಹಣ್ಣುಗಳನ್ನು, ತಂಗಳನ್ನು, ಚನ್ನಾಗಿ ಬೇಯದ ಆಹಾರ ಪದಾರ್ಥಗಳನ್ನು ತಿನ್ನಬಾರದು ಹೆಲ್ತ್ ಆಫೀಸರವರು ಹೋಟೇಲ್ ಮುಂತಾದ ಕಡೆಗಳಲ್ಲಿ ನೈರ್ಮಲ್ಯಕ್ಕೆ ಅನುಕೂಲವಾದ ಏರ್ಪಾಡು ಮಾಡುವುದಲ್ಲದೆ ಅವರು ಬೆಳಸಿದ ಮತ್ತು ಕೊಳತುಹೋದ ಆಹಾರ ವಸ್ತುಗಳನ್ನು ವಿಕರಿಸತಕ್ಕ ಅಂಗಡಿಗಳನ್ನು ಪರೀಕ್ಷಿಸಿ ಮುಚ್ಚಿಸುತ್ತಾರೆಂದು ನಿರೀಕ್ಷಿಸುತ್ತೇವೆ. ನಲ್ಲಿ ನೀರನ್ನು ಶೋಧನೆಗಾಗಿ ಹೆಲ್ತ್ ಆಫೀಸರು ಮದರಾಸಿಗೆ ಕಳುಹಿಸಿದ್ದರು, ಅದರಲ್ಲಿ ರೋಗದ ಕ್ರಿಮಿಗಳಿಲ್ಲವೆಂದು ಕಂಡುಬಂದಿದೆ ಎಂದೂ ತಿಳಿದಿದೆ

ಸರ್ಕಾರದವರು ರಾಜಧಾನಿಯ ಸಬ್ ಜಡ್ಜ್ ಮೆ ಬಿ ಎಂ ನರಸಿಂಗರಾಯರನ್ನು ಬಡ್ತಿಯಿಂದ ಗವರ್ನ್ಮೆಂಟಿನ ಡೆಪ್ಯುಟಿ ಸೆಕ್ರೆಟರಿ ಕೆಲಸಕ್ಕೆ ನೇಮಕ ಮಾಡಿದ್ದು ಕೇಳಿ ಅನೇಕರು ಸಂತೋಷಪಡುತ್ತಾರೆ ಇವರು ಬಹಳ ಚತುರರು, ಮೇಧಾಶಕ್ತಿಯುಳ್ಳವರು, ಎಲ್ಲಾ ಬಾಬುಗಳಲ್ಲೂ ವಿಶೇಷ ಅನುಭವವುಳ್ಳವರು ಅಂತೆ ಇವರು ಮೈಸೂರು ಸರ್ಕಾರದ ಅಪ್ಪಣೆಯಂತೆ ಹೋಗಿ ಇಂಡಿಯಾ ಗವರ್ನ್ಮೆಂಟಿನ ಸೆಕ್ರೆಟೇರಿಯಟ್ ಆಫೀಸಿನ ಕ್ರಮಗಳನ್ನು ಕಲಿತು ಅದರಂತೆಯೇ ಮೈಸೂರು ಗವರ್ನ್ಮೆಂಟಿನ ಸೆಕ್ರೆಟೇರಿಯಟ್ಟನ್ನು ಸ್ಥಾಪಿಸಿ ಹೆಸರುವಾಸಿಯನ್ನು ಪಡೆದಿರುತ್ತಾರೆ ಈಚೆಗೆ ಕಾಶ್ಮೀರ ಸಂಸ್ಥಾನದ ಮಹಾರಾಜರವರ ಗವರ್ನ್ಮೆಂಟಿನವರು ಇವರನ್ನು ಕರೆಸಿಕೊಂಡು ದೊಡ್ಡ ಅಧಿಕಾರಕ್ಕೆ ನೇಮಿಸಿಕೊಳ್ಳಬೇಕೆಂದು ಅಪೇಕ್ಷೆಪಟ್ಟದ್ದನ್ನು ನೋಡಿ ನಮ್ಮ ಸರ್ಕಾರದವರು ಅವರನ್ನು ಬಿಟ್ಟುಕೊಡದೆ ಅವರಿಗೆ ಬಡ್ತಿಕೊಟ್ಟು ಇಲ್ಲೇ ಇಟ್ಟುಕೊಂಡದ್ದು ಎಲ್ಲರಿಗೂ ಸಮ್ಮತವಾಗಿದೆ

* * *

ಕಳೆದ ವಾರ ದಿವಾನ್ರವರು ರಾಜಧಾನಿಯಲ್ಲಿರುವ ಸಮಸ್ತ ವಿದ್ಯಾ ಇಲಾಖೆಯನ್ನು ಮೆ॥ ಎಂ ರಾಮರಾಯರ ಕೂಡ ದಯಮಾಡಿ ಪರಾಂಬರಿಸಿ ಅಲ್ಲಲ್ಲಿ ಸಿಕ್ಕುವ ವಿದ್ಯಮಾನಗಳನ್ನು ಗ್ರಹಿಸಿಕೊಂಡರು ವೆಸ್ಲಿಯನ್ ಮಿಷನ್ ಪ್ರೆಸ್ಸನ್ನು ತನಿಖೆಮಾಡಿ, ಅದರಲ್ಲಿ ನಡೆಯುವ ಕೆಲಸಗಳನ್ನು ನೋಡಿ ಬಹಳವಾಗಿ ಮೆಚ್ಚಿಕೊಂಡರು ಮಹಾರಾಣಿಯವರ ಕಾಲೇಜ್, ವಿಧವಾ ಸದನ, ಶಿವಪುರ ಬಾಲಿಕಾ ಸ್ಕೂಲು, ನಾರ್ಮಲ್ ಸ್ಕೂಲು ಮೊದಲಾದ ವಿದ್ಯಾಶಾಲೆಗಳ ವಿದ್ಯಾರ್ಥಿನಿಯರಿಗೆ ಅಲ್ಪಾಹಾರಕ್ಕಾಗಿ ದಿವಾನ್ರವರು ಕೆಲಕೆಲವು ದ್ರವ್ಯವನ್ನು ಕೊಟ್ಟಿರುತ್ತಾರೆ ತಾ 8 ನೇ ಬುಧವಾರ ಮೈಸೂರು ಇನ್ಫೆಂಟ್ರಿಯ ಕಮ್ಯಾಂಡರ್ ಮೆ॥ ಬಿ ಸಿ ಕೃಷ್ಣೆಅರಸೆರವರು ತಮ್ಮ ಕೈಕೆಳಗಿನ ಹದಿನೂರು ಮಂದಿ ಸಿಪಾಯಿಗಳ ಸಮೇತ ಹೋಗಿ ದಿವಾನ್ರವರ ಭೇಟಿಮಾಡಿದರು ದಿವಾನ್ರವರು ಆ ಪಟಾಲಮ್ಮಿನ ಸ್ಥಿತಿಗತಿಯನ್ನೆಲ್ಲಾ ಚನ್ನಾಗಿ ಕೇಳಿ ತಿಳಿದುಕೊಂಡರೆಂದೂ, ಸಿಪಾಯಿಗಳ ಸಂಬಳದ ದರಗಳನ್ನು ಒತ್ತಿಮಾಡುವ ವಿಚಾರದಲ್ಲಿ ಪರ್ಯಾಲೋಚನೆ ಮಾಡುವುದಾಗಿ ಅಪ್ಪಣೆಕೊಟ್ಟರೆಂದೂ ತಿಳಿದುಬಂದಿದೆ

ಮೈಸೂರು ಗೆಜೆಟ್ ಸಂಗ್ರಹ

ಮೈಸೂರು ಮಹಾರಾಣಿಯವರ ಕಾಲೇಜಿನ ಮೇಲ್ವಿಚಾರಣೆ ಕಮಿಟಿಗೆ ಮೆ॥ ವೆಂಕಟಕೃಷ್ಣಯ್ಯನವರನ್ನು ಒಬ್ಬ ಮೆಂಬರಾಗಿ ನೇಮಕಮಾಡಿದೆ

ಕ್ರಿಮಿನಲ್ ಕೋರ್ಟುಗಳ ಜಡ್ಜ್ಮೆಂಟ್ ಕಾಪಿ ಎಷ್ಟುದೊಡ್ಡದಾಗಿದ್ದರೂ ಒಂದು ಆಣೆ ಮಾತ್ರ ಫೀಜು ತೆಗೆದುಕೊಂಡು ಕೊಡತಕ್ಕದ್ದೆಂದು ವಿಧಿಸಿದೆ

ಅ॥ ಕಂಟ್ರೋಲರ್ ಮೆ॥ ಎಲ್ ಫಡ್ನೀಸ್ ಬಾದಾಮಿಯವರಿಗೆ ಡಿಸೆಂಬರ್ ತಾ. 29 ರಿಂದ ಒಂಭತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿತ್ತು

ಸರ್ಜನ್ ಮೆ॥ ಬಿ ಡಿ ರಾಘವೇಂದ್ರರಾಯರಿಗೆ ಜನವರಿ ತಾ 10 ರಿಂದ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಅ॥ ಸರ್ಜನ್ ಮೆ॥ ಬಿ ನಂಜಪ್ಪನವರು ಅವರ ಕೆಲಸದ ಛಾರ್ಜನ್ನು ವಹಿಸಿರತಕ್ಕದ್ದು

3 ನೇ ಕೌನ್ಸಿಲರವರ ಪರ್ಸನಲ್ ಅಸಿಸ್ಟೆಂಟ್ ಮೆ॥ ಜಿ ಶಾಂತವೀರಪ್ಪನವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹಿರಿಯೂರು ತಾಲ್ಲೂಕಿನ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಮೆ॥ ಕೆ ನರಸಿಂಹ ಅಯ್ಯಂಗಾರ್ರನ್ನು ನಾರಿಕಣಿವೆ ತಲಾವಿನ ಕೆಳಗೆ ನೀರಾವರಿ ವ್ಯವಸಾಯವನ್ನು ಕ್ರಮಪಡಿಸುವುದಕ್ಕೆ ನೇಮಕನಾಗಿರುವರು

ಶ್ರೀಮನ್ ಮಹಾರಾಜರವರು ಎಕ್ಸೈಸ್ ಕಮಿಷನರ್ ಮೆ॥ ಎಂ ಕಾಂತರಾಜೆ ಅರಸಿನವರನ್ನು ಎರಡನೆಯ ಕೌನ್ಸಿಲರಾಗಿ ನೇಮಕಮಾಡಿರುತ್ತಾರೆ

ಮೆ॥ ಟಿ ಎ ಆರುಮುಗಂ ಮೊದಲಿಯಾರ್ರವರು ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರಾಗಿರುವ ಕಾಲದಲ್ಲಿ ಮೆ॥ ಸಿ ಎ ನಂಜಪ್ಪನವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಆಫೀಸರಾಗಿ ಬದಲಿ ನೋಡತಕ್ಕದ್ದು

ಮುಂದೆ ಹೇಳುವವರನ್ನು ಹಂಗಾಮಿಯಾಗಿ ವರ್ಗಮಾಡಿದೆ — ಮ॥ ಟಿ ಗೋವಿಂದರಾಯರನ್ನು ದಿವಾನ್ರವರ ಪ್ರೈವೇಟ್ ಸೆಕ್ರೆಟರಿ ಕೆಲಸದಿಂದ ಗವರ್ನ್ಮೆಂಟ್ ಅ॥ ಸೆಕ್ರೆಟರಿಯಾಗಿ, ಮೆ॥ ಎಸ್ ಹಿರಿಯಣ್ಣಯ್ಯನವರನ್ನು ಅ॥ ಸೆಕ್ರೆಟರಿ ಕೆಲಸದಿಂದ ದಿವಾನ್ರವರ ಪ್ರೈವೇಟ್ ಸೆಕ್ರೆಟರಿಯಾಗಿ

ಶ್ರೀಮನ್ ಮಹಾರಾಜರವರು ಮೈಸೂರು ಇಂಪೀರಿಯಲ್ ಸರ್ವಿಸ್ ಟ್ರಾನ್ಸ್ಪೋರ್ಟ್ ಕೋರ್ ಜಮಾದಾರ್ ಮಹಮದ್ ಅಜೀಮ್ ಖಾನ್ರವರನ್ನು 1912 ನೇ ಜೂನ್ ತಾ 1 ರಿಂದ ಜಮಾದಾರ್ ಅಡ್ಜುಟೆಂಟಾಗಿ ಬಡ್ತಿ ಮಾಡಿದಾರೆ

ಅ॥ ಇಂಜನಿಯರ್ ಮೆ॥ ಎಸ್ ಶ್ರೀನಿವಾಸ ಅಯ್ಯರವರನ್ನು ಕಾವೇರಿ ತಲಾವ್ ಡಿವಿಜನ್ನಿಂದ ಅರಮನೆ ರೇಂಜಿಗೆ ವರ್ಗಮಾಡಿದೆ

ದಕ್ಷಿಣ ಸರ್ಕಲ್ ಸೂಪರಿಂಟೆಂಡಿಂಗ್ ಇಂಜನಿಯರ್ ಮೆ॥ ವಿ ರಂಗಸ್ವಾಮಿ ಅಯ್ಯಂಗಾರ್ರವರಿಗೆ ಜನವರಿ ತಾ 1 ರಿಂದ ಹದಿನಾಲ್ಕು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ ಸ್ಯಾನಿಟರಿ ಇಂಜನಿಯರ್ ಮೆ॥ ಜೆ ಘೋರ್ಯವರು ಅವರ ಆಫೀಸ್ ಛಾರ್ಜನ್ನು ವಹಿಸಿರತಕ್ಕದ್ದು

ಇಂಡಿಯಾ ದೇಶದ ವೃತ್ತಾಂತಗಳು

ಮೋರಿಯಾ ಎಂಬ ಹಡಗು 67,32,700 ರೂಪಾಯಿನ ಚಿನ್ನವನ್ನೂ, ಅರೇಬಿಯಾ ಎಂಬ ಹಡಗು 60 ಲಕ್ಷ ರೂಪಾಯಿನ ಚಿನ್ನವನ್ನೂ, ಮಾರ್ಮೋರಾ ಎಂಬ ಹಡಗು 12 ಲಕ್ಷ ರೂಪಾಯಿನ ಚಿನ್ನವನ್ನೂ ಹಿಂದೂಸ್ಥಾನಕ್ಕೆ ತರುತ್ತಿರುವವು

* * *

ಪಂಜಾಬ್ ಆದಿಪತ್ಯಕ್ಕೆ ಸೇರಿದ ಜೇಂದ್ ಸಂಸ್ಥಾನದ ರಾಜರವರು ವೈಸ್ರಾಯರ ಮೇಲೆ ಸಿಡಿಮದ್ದಿನ ಗುಂಡನ್ನು ಎಸೆದ ಘಾತುಕನನ್ನು ಹಿಡಿದುಕೊಡುವವರಿಗೆ ಇನಾಂ ಕೊಡುವುದಕ್ಕಾಗಿ ಎಂಭತ್ತು ಸಾವಿರ ರೂಪಾಯನ್ನು ಡಿಹಲಿ ಅಧಿಕಾರಿಗಳಿಗೆ ಕಳುಹಿಸಿಕೊಟ್ಟರೆಂದು ತಿಳಿಯುವುದು

* * *

ರಾಜಪುಟಾನಾ ಮಾಳಾ ರೈಲ್ ರಸ್ತೆಯಲ್ಲಿ ಕಳೆದ ವಾರ ತಾರಿಂಗಾ ಸ್ಟೇಷನ್ನಿಂದ ಹೊರಟ ಒಂದು ರೈಲ್ ಗಾಡಿಯು ಕಂಬಿ ಬಿಟ್ಟು ನೆಲದ ಮೇಲೆ ಹರಿದು ಅಪಾಯ ಸಂಭವಿಸಿತು ಗಾಡಿ ನಡಿಸುವವನು ತಕ್ಷಣ ಮೃತಪಟ್ಟನು ಅವನ ಕೂಡ ಇದ್ದವನಿಗೆ ಗಾಯವಾಗಿ ಮರುದಿನ ಆಸ್ಪತ್ರೆಯಲ್ಲಿ ಕಾಲವಾದನು

* * *

ವರ್ಮಿಂಕ್, ಪೌರ್ಪ್ರ ಎಂಬಿಬ್ಬರು ಫ್ರೆಂಚ್ ಸವಾರಿಗಾರರು ಕಲ್ಕತ್ತಾ ಪಟ್ಟಣಕ್ಕೆ ಬಂದು ತಮ್ಮ ವಿಮಾನಯಂತ್ರಗಳಲ್ಲಿ ಕುಳಿತು ಅಂತರಿಕ್ಷದಲ್ಲಿ ಸಂಚಾರಮಾಡುತ್ತಾ ತಮ್ಮ ಸಾಮರ್ಥ್ಯವನ್ನು ಪ್ರಕಾಶಪಡಿಸುತ್ತಿದಾರೆ ಅಲ್ಲಿರುವ ಲಕ್ಷಾಂತರ ಪ್ರಜೆಗಳು ಈ ನೋಟವನ್ನು ನೋಡುವುದರಲ್ಲಿ ವಿಶೇಷ ಉತ್ಸಾಹಶೀಲರಾಗಿರುವರು

* * *

ಬೊಂಬಾಯಿ ಆದಿಪತ್ಯದ ಗವರ್ನರಾದ ಲಾರ್ಡ್ ಜಾರ್ಜ್ ಕ್ಲಾರ್ಕ್ರವರ ಅಧಿಕಾರದ ಅವಧಿಯು ಪೂರೈಸುತ್ತಾ ಬಂದಿರುವುದನ್ನು ಚಕ್ರವರ್ತಿ ಸಾರ್ವಭೌಮರವರು ಪರಾಂಬರಿಸಿ ಅವರ ಸ್ಥಾನಕ್ಕೆ ಲಾರ್ಡ್ ವಿಲ್ಲಿಂಗ್ಡನ್ರವರನ್ನು ನೇಮಕ ಮಾಡಿರುತ್ತಾರೆ ಲಾರ್ಡ್ ವಿಲ್ಲಿಂಗ್ಡನ್ರವರು ಸದ್ಗುಣಗಳಿಂದೂ ವಿಶೇಷ ಐಶ್ವರ್ಯವಂತರೆಂದೂ ಪ್ರಜಾಹಿತ ಚಿಂತಕರೆಂದೂ ಹೆಸರು ಪಡೆದವರಾಗಿರುತ್ತಾರೆ

* * *

ವೈಸ್ರಾಯಿ ಲಾರ್ಡ್ ಹಾರ್ಡಿಂಗ್ರವರ ದೇಹಸ್ಥಿತಿಯ ವಿಷಯದಲ್ಲಿ ಕಳೆದ ವಾರ ಪ್ರಕಟವಾದ ತಂತಿವರ್ತಮಾನಗಳ ಸಾರಾಂಶವೇನೆಂದರೆ — ಅವರು ದಿನೇ ದಿನೇ ಆರೋಗ್ಯ ಹೊಂದುತ್ತಿದಾರೆ ಭಾನುವಾರ ಮಧ್ಯಾಹ್ನ ಅವರು ಸ್ವಲ್ಪ ಹೊತ್ತು ಸಾರೋಟಿನಲ್ಲಿ ಸ್ವಲ್ಪ ದೂರ ದಯಮಾಡಿದ್ದರು ಸೋಮವಾರ ರಾತ್ರಿ ಸರಿಯಾಗಿ ನಿದ್ದೆ ಬರಲಿಲ್ಲ, ಗಾಯದ ಬಾಧೆ ಸ್ವಲ್ಪ ಹೆಚ್ಚಾಗಿತ್ತು ಬಲ ತೋಳಿನಲ್ಲಿ ಸ್ವಲ್ಪ ನೋವು ಕಾಣಿಸಿಕೊಂಡಿದೆ

* * *

ಅಸಂತಪಯುಸ ಸಂಸ್ಥಾನದಲ್ಲಿ ಹೊಸದಾಗಿ ನರ್ಮದಾ ನದಿಗೆ ಅಡ್ಡ ಕಟ್ಟೆ ಹಾಗಿ ಒಂದು ಭಾರೀ ನೀರಾವರಿ ಕಾಮಗಾರಿಯನ್ನು ಮಾಡಿರುತ್ತಾರಷ್ಟೆ ಈ ನೀರಾವರಿಯ ಕೆಳಗೆ ಎಂಟು ಸಾವಿರ ಎಕರೆ ಜಮೀನನ್ನು ಒಂದು ಕಂಪನಿಯವರು ಪಡೆದುಕೊಂಡು ಅಲ್ಲಿ ಟೀ ತೋಟ ಮಾಡುವವರಾಗಿದಾರೆ ಈ ಕಂಪನಿಯ ಷೇರುಗಳನ್ನು ವಿಕರಿಮಾಡಿ ಮೂವತ್ತು ಲಕ್ಷ ರೂಪಾಯಿ ಕೂಡಿಸಿದ ಕೂಡಲೇ ವ್ಯವಸಾಯವು ಪ್ರಾರಂಭವಾಗುವುದು

* * *

ಬ್ಯಾರಿಸ್ಟರ್ ಲಾಲಾ ಬಲಾಕಿರಾಂ ಎಂಬಾತನ ಎರಡನೇ ಮಗನೂ, ಅಲ್ಲಹಾಬಾದ್ ನ್ಯಾಯಾಲಯದ ರಾಜದ್ರೋಹಾಪರಾಧದಲ್ಲಿ ಅಪರಾಧಿಯಾಗಿ ಸಿಕ್ಕಿಬಂಕೋಲ ಶಿಕ್ಷೆಯಾಗಿರುವ ನಂದನಗೋಪಾಲನ ತಮ್ಮನೂ ಆದ ರಾಮನಾಥನೆಂಬುವನನ್ನು ಡಿಹಲಿ ಘಾತುಕಕೃತ್ಯದ ಪತ್ರತರದೂದಿನಲ್ಲಿ ಪೋಲೀಸಿನವರಿಗೆ ಸಹಾಯವಾಗುವುದಕ್ಕೋಸ್ಕರ ಡಿಹಲಿಗೆ ಕರೆದುಕೊಂಡುಹೋಗಿರುತ್ತಾರೆಂದು ಡೇರಾದೂನ್ ಪಟ್ಟಣದಿಂದ ತಂತಿವರ್ತಮಾನ ಬಂದಿದೆ

* * *

ಕಲ್ಕತ್ತಾ ಪಟ್ಟಣದ ಬಳಿ ನಾರಾಯಣಗಂಜಿನ ನದಿಪೋಲೀಸಿನವರ ಪೈಕಿ ಒಬ್ಬ ಹೆಡ್ ಕಾನ್ಸ್ಟೆಬಲೂ, ಇಬ್ಬರು ಪ್ಯಾದೆಗಳೂ ಅನಾವಶ್ಯವಾಗಿ ಒಬ್ಬ ಗೃಹಸ್ಥನ ಮನೆಯನ್ನು ಪ್ರವೇಶಿಸಿ ಮನೆಯವರನ್ನು ಗಾಬರಿ ಪಡಿಸಿ ಮನೆಯನ್ನೆಲ್ಲಾ ಶೋಧನೆ ಮಾಡಿದರು ಆ ಮನೆಯವರು ಅವರ ಮೇಲೆ ಫಿರ್ಯಾದು ಮಾಡಿದರು ಮ್ಯಾಜಿಸ್ಟ್ರೇಟರು ದರ್ಯಾಪ್ತಿ ಮಾಡಿ ಹೆಡ್ ಕಾನ್ಸ್ಟೆಬಲಿಗೆ ಎರಡು ತಿಂಗಳ ಸಜಾ ವಿಧಿಸಿ, ಇಬ್ಬರು ಪ್ಯಾದೆಗಳಿಗೂ ಐವ್ವತ್ತು ರೂಪಾಯಿ ಜುಲ್ಮಾನೆ ಹಾಕಿದರು

* * *

ಮುರ್ಷದಾಬಾದಿನ ನವಾಬರವರು ತಮ್ಮ ಜಮೀನ್ದಾರಿಯಲ್ಲಿ ಮುಸಲ್ಮಾನರ್ಯಾರೂ ಬಕ್ರೀದ್ ಹಬ್ಬದಲ್ಲಿ ಇನ್ನು ಮೇಲೆ ಗೋಹತ್ಯ ಮಾಡಕೂಡದೆಂದು ಆಜ್ಞಮಾಡಿ ನಿಲ್ಲಿಸಿಬಿಟ್ಟರು ಈ ವಿಷಯವನ್ನು ಕೇಳಿ ಕಲ್ಕತ್ತಾ ಪಟ್ಟಣದಲ್ಲಿರುವ ಹಿಂದೂ ಮಹಮದೀಯ ದೊಡ್ಡ ಮನುಷ್ಯರು ಸಂತೋಷಪಟ್ಟು ಎಲ್ಲರೂ ಸೇರಿ ಮುರ್ಷದಾಬಾದಿಗೆ ಹೋಗಿ ನವಾಬರವರನ್ನು ವಂದಿಸಿ, ಇನ್ನು ಮುಂದೆ ಹಿಂದೂ ಮುಸಲ್ಮಾನರು ಸ್ನೇಹಿತರಾಗಿಯೂ, ಪರಸ್ಪರ ಹಿತಚಿಂತಕರಾಗಿಯೂ ಇರುವಂತೆ ನಿಶ್ಚಯಿಸಿಕೊಂಡು ಬಂದರು

* * *

ಕನ್ಯಾಕುಮಾರಿಯ ಬಳಿ ಐದಾಮಲಿ ಎಂಬ ಪೋಲೀಸ್ ಸ್ಟೇಷನ್ನೊಳಗೆ ಅರಕಾನ್ ಪಿಳ್ಳೆ ಎಂಬ ಒಬ್ಬ ಪೋಲೀಸಿನವನು ಮಾತ್ರವೇ ಇದ್ದ ಸಮಯವನ್ನು ನೋಡಿಕೊಂಡಿದ್ದು ಆ ಪ್ರಾಂತ್ಯದಲ್ಲಿ ಸಂಚರಿಸುತ್ತಿರುವ ಒಂದು ಹುಲಿಯು ಸ್ಟೇಷನ್ ಒಳಕ್ಕೆ ನುಗ್ಗಿತು ಅವನು ಅದನ್ನು ಓಡಿಸಬೇಕೆಂದು ಎಷ್ಟು ಸಾಹಸಪಟ್ಟರೂ ಪ್ರಯೋಜನವಾಗಲಿಲ್ಲ ಹುಲಿಯು ಅವನನ್ನು ಬಹಳವಾಗಿ ಹೊಡೆದು ಜಗಿದು ಕೊಲ್ಲುವಷ್ಟರೊಳಗೇ ಜನರು ಸೇರಿ ಗಾಬರಿಮಾಡಿದ್ದರಿಂದ ಓಡಿಹೋಯಿತು ಗಾಯಪಟ್ಟ ಪೋಲೀಸಿನವನು ಆಸ್ಪತ್ರೆಯಲ್ಲಿದ್ದು ಬದುಕುವುದು ಕಷ್ಟವಾಗಿದೆ

* * *

ಪಿಪ್ರೀಚ್ ಪಟ್ಟಣದ ಸೆಷನ್ಸ್ ಕೋರ್ಟಿನ ಹೆಡ್ ಕ್ಲಾರ್ಕ್ ಬಾಬು ಬಾಯಿತ್ ರಾಮನೂ, ಸಬ್ ಜಡ್ಜರವರ ಕ್ಲಾರ್ಕ್ ಗುಣವಂತನೂ, ಇನ್ನೊಬ್ಬನೂ ಸೇರಿ ಸರ್ ಚೀನೂಬಾಯಿ ಮಾಧವಲಾಲ್ ಎಂಬ ದೊಡ್ಡ ಮನುಷ್ಯರ ಮನೆಯಲ್ಲಿ ಸುಮಾರು 8,500 ರೂಪಾಯಿನ ಬೆಲೆ ಬಾಳುವ ಕೆಲವು ಭಂಗಾರದ ವಿಗ್ರಹಗಳನ್ನು ಅಪಹರಿಸಿದರೆಂದು ಮೊಕದ್ದಮೆ ಆಗಿ ಅಹಮದಾಬಾದಿನ ಸೆಷನ್ಸ್ ಜಡ್ಜರು ದರ್ಯಾಪ್ತಿ ಮಾಡಿದ್ದರಲ್ಲಿ ಅಪರಾಧ ರುಜುವಾತಾದದ್ದರಿಂದ ಬಾಯಿತ್ ರಾಮನಿಗೆ ಎರಡು ವರುಷವೂ, ಉಳಿದ ಇಬ್ಬರಿಗೂ ತಲಾ ಆರು ತಿಂಗಳೂ ಕಠಿಣಸಜಾ ವಿಧಿಸಿರುತ್ತಾರೆ

* * *

ಜೇಲಂ ಡಿಸ್ಟ್ರಿಕ್ಟಿನ ಚಕ್ವಾಲ್ ತಹಸೀಲ್ನಲ್ಲಿ ಹದಿನಾರು ಜನ ಪಠಾಣರು ಸೇರಿ ಭಯಂಕರವಾದ ಡಕಾಯಿತಿ ನಡಿಸಿದರು ಆ ಪೈಕಿ ಗುಲಾಂ ಮಹಮದ್ ಎಂಬವನಿಗೆ ಪೋಲೀಸಿನವರು ಕ್ಷಮಾಪಣೆ ಕೊಡುವುದಾಗಿ ವಾಗ್ದಾನಮಾಡಿದ್ದರಿಂದ ಅವನ ಮೂಲಕ ಹದಿಮೂರು ಜನರು ಸಿಕ್ಕಿಬಿದ್ದರು ಡೆಪ್ಯುಟಿ ಕಮಿಷನರು ಇವರಿಗೆಲ್ಲಾ ತಲಾ ಏಳು ವರುಷ ಕಠಿಣ ಸಜವನ್ನೂ, 200 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿ, ಗುಲಾಂ ಮಹಮ್ಮದನನ್ನು ಖುಲಾಸ್ ಮಾಡಿರುತ್ತಾರೆ ಈಚೆಗೆ ಉಳಿದ ಇಬ್ಬರು ಅಪರಾಧಿಗಳೂ ಕಾಶ್ಮೀರ ಸಂಸ್ಥಾನದಲ್ಲಿ ಸಿಕ್ಕಿ ವಸ್ತಗಿರಿಮಾಡಲ್ಪಟ್ಟರೆಂದು ವರ್ತಮಾನ ಬಂದಿದೆ

* * *

ಅಮೃತಸಾರ ಡಿಸ್ಟ್ರಿಕ್ಟಿನಲ್ಲಿ ಅನೇಕ ದರೋಡೆಗಳನ್ನೂ ಕೊಲೆಗಳನ್ನೂ ನಡಿಸಿ ನಾಲ್ಕಾರು ವರುಷಗಳಿಂದ ಸಿಕ್ಕದೆ ತಪ್ಪಿಸಿಕೊಂಡಿದ್ದ ಬರಕತ್ ಅಲಿ ಎಂಬವನನ್ನು ಕಳೆದ ವಾರ ಪೋಲೀಸಿನವರು ಹಿಡಿದು ಇರುತ್ತಾರೆ ಸುಪರಿಂಟೆಂಡ್ ಪೋಲೀಸ್ ಮೊಹಿಯುದ್ದೀನ್ ಎಂಬವನು ಕೆಲವು ಗ್ರಾಮಸ್ಥರ ಸಮೇತ ಆ ದುಷ್ಟನನ್ನು ಐದು ಮೈಲಿ ದೂರ ಓಡಿಸಿಕೊಂಡು ಹೋಗಿ, ಅವನ ಕೂಡ ಹೋರಾಡಿ ಕಡೆಗೆ ಹಿಡಿದುಕೊಂಡನು ಅಪರಾಧಿಯು ಕತ್ತಿಯನ್ನು ಹಿಡಿದು ಬಹಳ ಹೊತ್ತು ಸಿಕ್ಕದಂತೆ ತುಂಬಾ ಸಾಹಸಪಟ್ಟರೂ ಪ್ರಯೋಜನವಾಗದೆ ಕಡೆಗೆ ಸಿಕ್ಕಿಬಿದ್ದನು ಸರ್ಕಾರದವರು ಪ್ರಕಟಮಾಡಿದ್ದಂತೆ ಬಹುಮಾನದ್ರವ್ಯವನ್ನು ಅವರಿಗೆಲ್ಲಾ ಹಂಚಿಕೊಡುವವರಾಗಿದಾರೆ

* * *

ಕಲ್ಕತ್ತಾ ಪಟ್ಟಣದಲ್ಲಿ ಸುರೇಂದ್ರನಾಥ ಬ್ಯಾನರ್ಜಿ, ಎ ಸಿ ಘೋಸಾಲ್ ಎಂಬಿಬ್ಬರು ನಾರಿನ ಭಾರೀ ವರ್ತಕರು ಪೇಟೆಗೆ ಹೋಗಿ ಒಂದು ಮೋಟಾರ್ ಕಾರನ್ನು ಬಾಡಿಗೆಗೆ ತೆಗೆದುಕೊಂಡು ಅದರಲ್ಲಿ ಕುಳಿತು ಬಡ್ ಎಡ್ಜಿನಲ್ಲಿರುವ ನಾರಿನ ಕಾರ್ಖಾನೆಗೆ ಹೋಗುತ್ತಿದ್ದಾಗ ಆ ಮೋಟಾರ್ ಗಾಡಿಯು ಒಂದು ಎತ್ತಿನಗಾಡಿಗೆ ಎಡಿದು, ಹೋಗಿ ಒಂದು ಚರಂಡಿಯಲ್ಲಿ ಮಗುಚಿಕೊಂಡಿತು ಅದರೊಳಗೆ ಕುಳಿತಿದ್ದ ಇಬ್ಬರು ವರ್ತಕರೂ ಅದರ ಕೆಳಗೆ ಸಿಕ್ಕಿ ಮೃತಪಟ್ಟರು ಮತ್ತು ಆ ಮೋಟಾರಿನಲ್ಲಿದ್ದ ಬೆಂಕಿಯು ಕೂಡ್ಲೆ ಹತ್ತಿಕೊಂಡು ಅವರ ದೇಹಗಳನ್ನು ಸಂಪೂರ್ಣವಾಗಿ ಸುಟ್ಟುಬಿಟ್ಟಿತು ಬರೀ ಮೂಳೆಗಳು ಮಾತ್ರ ಸಿಕ್ಕಿದವು ಆ ಮೋಟಾರ್ಗಾಡಿ ನಡಿಸುತ್ತಿದ್ದವನಿಗೂ ಪೂರಾ ಜಖಂ ಆಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟನು ಇವನೂ ಬದುಕುವಹಾಗಿಲ್ಲ.

* * *

ಕಲ್ಕತ್ತಾ ಪಟ್ಟಣದ ಪೋಲೀಸಿನವರ ಯೋಗ್ಯತೆಯನ್ನೂ ಸಾಮರ್ಥ್ಯವನ್ನೂ ಕುರಿತು ಪ್ರಸ್ತಾಪಮಾಡುವಾಗ್ಗೆ ಮುಂದೆ ಹೇಳುವ ಯಥಾರ್ಥವಾದ ಸಂಗತಿಯು ಹೊರಪಟ್ಟಿದೆ ಅದೇನೆಂದರೆ, ಈಚೆಗೆ ಒಂದಾನೊಂದು ದಿನ ಏಳು ವರುಷದ ಒಬ್ಬ ಹುಡುಗನನ್ನು ಕಲ್ಕತ್ತೆಯ ಪೋಲೀಸಿನವರು ಹಿಡಿದುಕೊಂಡು ಹೋಗಿ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿ — ಇವನ ಬಳಿ ಒಂದು ಚೀಲ ಆಲೂಗೆಡ್ಡೆಗಳಿದ್ದವು ಅದು ಎಲ್ಲಿಯದೆಂದು ಕೇಳಿದರೆ ಸರಿಯಾದ ಉತ್ತರ ಕೊಡಲಿಲ್ಲ ಎಂದು ದೂರು ಹೇಳಿದರು ಮ್ಯಾಜಿಸ್ಟ್ರೇಟರು ಆ ಹುಡುಗನನ್ನು ಕುರಿತು ಆಲೂಗೆಡ್ಡೆ ಎಲ್ಲಿಯದೆಂದು ಕೇಳಿದರು ಆ ಹುಡುಗನು ಅದನ್ನು ಒಂದು ಅಂಗಡಿಯಲ್ಲಿ ಕ್ರಯಕ್ಕೆ ತೆಗೆದುಕೊಂಡೆನೆಂದು ಹೇಳಿದನು ಆ ಅಂಗಡಿಯವನ ಹೆಸರು ಹೇಳಬಲ್ಲೆಯಾ ಎಂದು ಮ್ಯಾಜಿಸ್ಟ್ರೇಟರು ಪ್ರಶ್ನೆಮಾಡಿದ್ದಕ್ಕೆ ಹುಡುಗನು ಅಂಗಡಿಯವನ ಹೆಸರು ಹೇಳಿದನು ಅವನನ್ನು ಕೋರ್ಟಿಗೆ ಕರಸಿಕೊಂಡು ಆ ಹುಡುಗನಿಗೆ ಆಲೂಗೆಡ್ಡೆ ಮಾರಿದ್ದುಂಟೆ ಎಂದು ಕೇಳಿದ್ದಕ್ಕೆ ವರ್ತಕನು ಹೌದೆಂದು ಒಪ್ಪಿಕೊಂಡನು ಆ ಮೇಲೆ ಮ್ಯಾಜಿಸ್ಟ್ರೇಟರು ಪೋಲೀಸಿನವರನ್ನು ಕುರಿತು — ಈ ಮೊಕದ್ದಮೆಯನ್ನು ಯಾಕೆ ತಂದಿರೋ ತಿಳಿಯುವುದಿಲ್ಲ. ಹುಡುಗನು ಆಲೂಗೆಡ್ಡೆಯನ್ನು ಕೊಂಡುಕೊಂಡೆನೆಂದೂ, ವರ್ತಕನು ಅದನ್ನು ಅವನಿಗೆ ವಿಕರಿಮಾಡಿದೆನೆಂದೂ ಹೇಳುತ್ತಾರೆ ಎಂದು ಕೇಳಿದರು ಆಗ ಪೋಲೀಸ್ ಹೆಡ್ ಕಾನ್ಸ್ಟೆಬಲು ಮ್ಯಾಜಿಸ್ಟ್ರೇಟರಿಗೆ — ಸ್ವಾಮಿ, ಅಂಗಡಿಯವನು ಅದೇ ಆಲೂಗೆಡ್ಡೆಯನ್ನು ವಿಕರಿಮಾಡಿದನೆಂದು ಗುರುತು ಹಿಡಿಯಲಾರದೆ ಹೋದದ್ದರಿಂದ ಈ ಹುಡುಗನನ್ನು ಹಿಡಿದುಕೊಂಡು ಬಂದೆನೆಂದು ಉತ್ತರ ಕೊಟ್ಟನು ಇಂಥಾ ಮಂದಬುದ್ಧಿಯುಳ್ಳ ಪೋಲೀಸಿನವರನ್ನು ಶಿಕ್ಷಿಸುವುದಕ್ಕೆ ಅವಕಾಶವಿಲ್ಲವಲ್ಲಾ ಎಂದು ಮ್ಯಾಜಿಸ್ಟ್ರೇಟರು ಮರುಗಿ ಸುಮ್ಮನಾದರು

ಕಣ್ಣಾಗಾಲದ ದಂಗೆ ಮೊಕದ್ದಮೆ.

ಮೂಗೂರು ತುಂಟರಿಂದಾದ ಕಣ್ಣಾಗಾಲದ ದಂಗೆ ಮೊಕದ್ದಮೆಯಲ್ಲಿ ಸಾಕ್ಷಿಗಳ ವಿಚಾರಣೆಯು ಸ್ವಲ್ಪ ಹೆಚ್ಚೂ ಕಡಮೆ ಪೂರೈಸುತ್ತಾ ಬಂದಿರುವದಾಗಿ ಸಮಾಚಾರ. ಅಪರಾಧಿಗಳ ವಿಚಾರಣೆ ಇನ್ನೂ ಸ್ವಲ್ಪ ಕಾಲ ಹಿಡಿದೀತು. ಆಗಿನ ವರೆಗೂ ವಾರನ್‌ಡಾರ್ರಿಗೆ ಬತ್ತಿ ಚಾತ್ರ ಮುಗಿಯದೆ ನಗರದ ಹಾದಿ ತಿಂಗಿ ತ೦೧ ಕಾಲುಗಳು ಸವೆದುಹೋಗುವಂತಾಗಿದೆ. ಸರಾರಿ ಆಗಿರುವ ಮುಖಂಡ ಅಪರಾಧಿಗಳ ಮನೆಗಳಿಗೆ ಸರ್ಕಾರದವರು ಒಂದು ಇಸ್ತಿಹಾರನ್ನು ಹತ್ತಿಸಿದಾರೆ. ಅದರಲ್ಲಿ ಒಂದು ತಿಂಗಳ ವಾಯಿದೆ ಹಾಕಿದೆ. ಅಷ್ಟರೊಳಗೆ ಹಾಜರಾಗಿ ರಿಕ್ವೆಗಳನ್ನು ಹೊಂದತಕ್ಕದೆಂತಲೂ, ಅದಕ್ಕೆ ತಪ್ಪಿದವರ ಸ್ವತ್ತುಗಳನ್ನೆಲ್ಲಾ ಜಪ್ತಿ ಮಾಡಿ ಸರ್ಕಾರದವರ ಸ್ವಾಧೀನಕ್ಕೆ ತೆಗೆದುಕೊಳ್ಳುವದಾಗಿಯೂ ಪ್ರಕಟಿಸಿದಾರೆ ವಾರಂಟ್ ಆಗಿರುವವರ ಪೈಕಿ ಮತ್ತೆ ನಾಲ್ಕು ಜನರನ್ನು ಇನ್ಸ್‌ಪೆಕ್ಟರ್ ರಂಗರಾವ್ ಅರಸಿನವರು ಬಹು ಮುತುವರ್ಜಿಯಿಂದ ಹಿಡಿಸಿ ಅಪರಾಧಿಗಳ ಗುಂಪಿಗೆ ಕೂಡಿಸಿರುವದಾಗಿಯೂ, ಆ ಪೈಕಿ ಅನೇಕ ದಫಾ ಶಿಕ್ಷೆಗಳನ್ನು ಅನುಭವಿಸಿ ಬಂದಿರುವ ತೊಟ್ಟಿಅಯ್ಯನೆಂಬುವನೂ ಸಿಕ್ಕಿರುವದಾಗಿಯೂ ಜನರು ಹೇಳಿಕೊಳ್ಳುತ್ತಾರೆ. ಅಡಗಿಕೊಂಡಿರುವ ಪುಟ್ಟಸುಬ್ಬೇಗೌಡ, ಕಾಶೀಪತಯ್ಯ, ಇವರು ತಾವಾಗಿಯೇ ಬರುತ್ತಾರೆಯೋ, ಅಥವಾ ಪೋಲೀಸಿನವರು ಹಿಡಿದು ತರಬೇಕೋ ಗೊತ್ತಿಲ್ಲ. ಇವರು ಬುದ್ಧಿವಂತರಾದರೆ ತಾವಾಗಿಯೇ ಬಂದು ನ್ಯಾಯವಿಮರ್ಶೆ ಮಾಡಿಕೊಳ್ಳುವದು ಒಳ್ಳೇದೆಂತ ತೋರುತ್ತೆ. ಪುಟ್ಟಸುಬ್ಬೇಗೌಡರು ಒಬ್ಬ ಪಾಳೇಗಾರನ ಹಾಗಿದ್ದು ಸುತ್ತುಮುತ್ತಲಿನ ಅನೇಕ ಗ್ರಾಮದ ಜನರಿಗೆ ಕೊಡುತ್ತಿದ್ದ ತೊಂದರೆಗಳನ್ನು ಕುರಿತು ನಂಜನಗೂಡು ಸಬ್ ಡಿವಿಜನ್ ಆಫೀಸರವರ ಮತ್ತು ನಗರದ ಅಮಲ್ದಾರ್‌ರವರ ಮೊನ್ನೆ ಉನ್ಮತ್ತೂರಿನ ಗ್ರಾಮಸ್ಥರು ಅಲ್ಲಿನ ಛತ್ರದಲ್ಲಿ ನೆರೆದಿದ್ದ ನೂರಾರು ಜನರ ಮುಂದೆ ಅಂಕೆ ಮಾಡಿಕೊಂಡದ್ದಲ್ಲದೆ ನಮ್ಮ ಗ್ರಾಮದಲ್ಲಿಯೂ ಪಾರ್ಟಿವ್ಯಾಜ್ಯ ಹುಟ್ಟುವದಕ್ಕೂ ಅತನೇ ಕಾರಣನೆಂತಲೂ ಘಂಟಾಘೋಷ ಹೇಳಿಕೊಂಡರು. ಸುಬ್ಬಶೆಟ್ಟಿ ಮೊದಲಾದವರ ಕಾಟವು ಸಂಪೂರ್ಣವಾಗಿ ನಿಂತು ಹೋಯಿತೆಂದೂ, ಇವರ ಮೇಲೆ ಈ ವಿಷಯವಾಗಿ ತರಲ್ಪಟ್ಟಿರುವ ಅರ್ಜಿಗಳು ವಿಚಾರಣೆಯಾಗುತ್ತಾ ಇವೆ ಎಂದೂ ತಿಳಿಯುತ್ತದೆ.

ಬಾತ್ಮಿದಾರ್

ಶ್ರೀರಾಮಕೃಷ್ಣ ಬಾಲಸನ್ಮಾರ್ಗ ಸಭಾ.

ಬೆಂಗಳೂರು ನಂದು ಯಲ್ಲೇಗೌಡನಪಾಳ್ಯ.

ಈ ಬೀದಿನಲ್ಲಿ « ಶ್ರೀರಾಮಕೃಷ್ಣ ಬಾಲಸನ್ಮಾರ್ಗ ಸಭಾ » ಎಂಬಭಿಧಾನದಿಂದ ಒಂದು ಸಭೆಯು ಸ್ಥಾಪಿಸಲ್ಪಟ್ಟಿದೆ. ಈ ಸಭೆಯ ಮುಖ್ಯೋದ್ದೇಶಗಳು:— ನಂದಲೆ—ಮುದ್ದೆ ಹಬ್ಬದಿಗಳಿಗೆ ಎದುರಾದರೆ ಸರ್ವರೂ ಸೇರಿ ಭಗವತ್ಪ್ರಾರ್ಥನೆಯನ್ನು ಮಾಡುವುದು. ಪತ್ರಿಕೆಗಳನ್ನೂ ಪುಸ್ತಕಗಳನ್ನೂ ಶೇಖರಿಸಿ ಸಕಲರೂ ಉಚಿತವಾಗಿ ಓದಿಕೊಳ್ಳಲು ಅನುಕೂಲಪಡಿಸುವುದು. ಹಗಲುಹೊತ್ತು ಕೆಲಸಮಾಡುವವರಿಗೂ ರಾತ್ರಿವೇಳೆ ಸಹ ಉಚಿತವಾಗಿ ವಿದ್ಯೆಯನ್ನು ಹೇಳುವುದು. ಧರ್ಮಾರ್ಥವಾಗಿ ಸಹಾಯಮಾಡುವದು. ಅನಾಥರೋಗಿಗಳಿಗೆ ಸಹಾಯೋಪಚಾರಗಳನ್ನು ಮಾಡುವುದು. ಶ್ರೀರಾಮನವಮಿ, ಶ್ರೀಕೃಷ್ಣಜಯಂತಿ, ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರವರ ಮತ್ತು ಸ್ವಾಮಿ ವಿವೇಕಾನಂದರವರ ವರ್ಧಂತಿಗಳನ್ನು ವಿಶೇಷೋತ್ಸವದೊಡನೆ ನೆರವೇರಿಸುವುದು. ಈ ಉದ್ದೇಶಗಳ ಪರಿಪಾಲನೆಗಾಗಿ ಎಲ್ಲಾ ಕಡೆಯಲ್ಲಿಯೂ ಪ್ರಚುರವಾಗುವಹಾಗೆ ಅಲ್ಲಲ್ಲಿ ಉಪನ್ಯಾಸಗಳನ್ನೇರ್ಪಡಿಸುವುದು.

ಈ ಉದ್ದೇಶಗಳಂತೆಯೇ ಇದುವರೆಗೂ ನಡೆಯುತ್ತಾ ಬಂದಿರುವ ಕಾರ್ಯಗಳ್ಯಾವುವೆಂದರೆ ಪ್ರತಿಸೋಮವಾರವೂ ಸಿತ್ಯಾರ್ಥನಾಮಾವಳಿಯಲ್ಲಿ ಭಗವದ್ಭಜನೆಯನ್ನು ನಡೆಸುವುದು. ಭಾನುವಾರ ಭಜನೆಯಮೂಲಕ ನಗರ ಸಂಕೀರ್ತನೆ ಮಾಡುವುದು. ಏಕಾದಶಿದಿನಗಳಲ್ಲೆಲ್ಲಾ ಭಜನೆಯನ್ನು ನಡೆಸುವುದು. ಪ್ರತಿಸಲವೂ ಭಕ್ತಿ, ಜ್ಞಾನ, ವೈರಾಗ್ಯ, ಸದಾಚಾರ, ವಿದ್ಯೆ ಮುಂತಾದ ವಿಷಯಗಳಲ್ಲಿ ಉಪನ್ಯಾಸಗಳನ್ನು ಮಾಡುತ್ತಿರುವುದಲ್ಲದೆ ಸ್ವಾಧ್ಯಾಯನಾರ್ಥವೂ ಗ್ರಂಥಾಲಯವೂ ನಡೆಯುತ್ತಿರುವುದು. ಇಂಗ್ಲೀಷ್, ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಎಂಟು, ನಾಲ್ಕು, ಎರಡು, ಮೂರು, ಪತ್ರಿಕೆಗಳು ಬರುತ್ತಿರುವುದಲ್ಲದೆ ಮೇಲ್ಕಂಡ ಎಲ್ಲಾ ಭಾಷೆಗಳಲ್ಲೂ ಜ್ಞಾನಾಭಿವೃದ್ಧಿಯಾದ ಗ್ರಂಥಗಳು ಶೇಖರಿಸಲ್ಪಟ್ಟಿರುವುದು. ಅನಾಥಬಾಲಕರು, ಹಗಲುಹೊತ್ತು ಕೆಲಸಮಾಡುವ ಯುವಕರು ಮೊದಲಾಗಿ ಅನೇಕರು ಕರ್ಣಾಟಕಾಂಗ್ಲೇಯ ದ್ವಿಭಾಷಾಪಾಠಗಳಲ್ಲಿ ಉಚಿತವಾಗಿ ವಿದ್ಯೆಯನ್ನು ಕಲಿಯುತ್ತಿರುವರು. ಕೂಲಿಜನಾಳ್ಗಳಿಗೆ ಯಥಾಶಕ್ತಿಯಾಗಿ ಸಹಾಯಮಾಡುತ್ತಿರುವುದು. ಕ್ರಿಸ್ಮಸ್ ಸಹಾಯದೊರೆತ ಹಾಗೆಲ್ಲಾ ಅಭಿವೃದ್ಧಿಪಡಿಸಲಾಗುವುದು. ವಿಶೇಷದಿನಗಳಲ್ಲಿ ವಿಶೇಷೋತ್ಸವಗಳು, ಭಗವನ್ನಾಮ ಪಾರಾಯಣ, ಪರಿಶುದ್ಧ ಸಂಕೀರ್ತನೆಗಳು, ಬಡವರಿಗೆ ಅನ್ನದಾನ, ಉಪನ್ಯಾಸಗಳೇ ಮುಂತಾದ ಕಾರ್ಯಗಳು ನಡೆದಿರುವುದಲ್ಲದೆ ಇನ್ನು ಮುಂದೆಯೂ ನಡೆಯಲು ಸಿದ್ಧವಾಗಿರುವುದು.

ಇಂಥಾ ಪ್ರಯೋಜನಕರವಾದ ಉದ್ದೇಶಗಳನ್ನಿಟ್ಟುಕೊಂಡ ಈ ಸಭೆಯು ನಡೆಸುತ್ತಿರುವ ಅಮೋಘವಾದ ಕಾರ್ಯಗಳನ್ನು ಸಾಕ್ಷಾತ್ತಾಗಿ ಪರೀಕ್ಷಿಸಿದ ದೊಡ್ಡಮನುಷ್ಯರುಗಳು ಅವರುಗಳ ಘನವಾದ ಅಭಿಪ್ರಾಯಗಳನ್ನು ಬರೆದಿರುವರು. ಅಲ್ಲದೆ ಅನೇಕ ಗ್ರಂಥಕರ್ತರು ತಮ್ಮ ಗ್ರಂಥಗಳನ್ನೂ, ಪತ್ರಿಕಾಕರ್ತರು ಪತ್ರಿಕೆಗಳನ್ನೂ ಉಚಿತವಾಗಿ ಕಳುಹಿಸುತ್ತಿರುವುದಲ್ಲದೆ ಉಪವಸ್ತ್ರರಾದ ದಾನಿಯರು ದ್ರವ್ಯಸಹಾಯದ ಮೂಲಕವೂ ಪ್ರೋತ್ಸಾಹಪಡಿಸುತ್ತಲಿರುವರು. ಮಹನೀಯರುಗಳು ಯಥಾಶಕ್ತಿಯಾಗಿ ಸಹಾಯ ಮಾಡಿ, ಪ್ರೋತ್ಸಾಹಿಸಬೇಕೆಂದು ಈ ಸಭೆಯವರು ಅತ್ಯಂತ ವಿನಯದೊಡನೆ ಪ್ರಾರ್ಥಿಸುತ್ತಾರೆ.

ಅಗ್ನಿಗುಂಡದ ಉತ್ಸವ.

ಗೋರೀಬಿದನೂರು ತಾಲ್ಲೂಕು ಕಸಬಾ ಹೋಬಳಿ ಗ್ರಾಮದಲ್ಲಿ ಡಿಸೆಂಬರ್ ತಾ. ೧೦ ರಲ್ಲಿ ಯಾವಾಗಲೂ ಇಟ್ಟಂತೆ ಬಾಣೇಯನ ಹಬ್ಬಗಳು ಇದ್ದು ಶ್ರೀನಂದಕರವಾಗಿ ಮಂಟಪವನ್ನು ಕಟ್ಟಿ ಅಲಂಕಾರವಾಗಿ ಗ್ರಾಮದ ಚಾವಡಿ ಶೃಂಗಾರವನ್ನು ಮಾಡಿ ತಾ. ೧೭ ನೇ ಮಂಗಳವಾರ ಉತ್ಸವ, ತಾ. ೧೯ ನೇ ಗುರುವಾರ ೨ನೇ ಕೆಲಸವನ್ನೂ ಮಾಡಿ, ತಾ. ೨೦ ನೇ ಶುಕ್ರವಾರದ ದಿನ ಮಧ್ಯಾಹ್ನ ೨ ಗಂಟೆಗೆ ಉತ್ಸವದಿಂದ ಮಂಟಪವನ್ನು ಕೆರೆಯ ಬಳಿಗೆ ತೆಗೆದುಕೊಂಡು ಹೋಗಿದ್ದರು. ಅಲ್ಲಿ ಆರುನೂರು ಪ್ರಜೆಗಳವರೆಗೂ ಸೇರಿದ್ದರು. ಅಲ್ಲಿಂದ ರಾತ್ರಿ ೯ ಗಂಟೆಗೆ ಗ್ರಾಮಕ್ಕೆ ಬಂದು ಸೇರಿದರು. ತಾ ೨೨ ನೇ ಭಾನುವಾರ ಪುನಹ ಗುದ್ದಲಿಹಾಕಿ ೧ ವರ್ಷದಿಂದ ನಡೆಯುತ್ತಲಿರುವ ಭೂಮಿಯಲ್ಲಿ ಸಿಕ್ಕಿದ್ದ ಬೆಳ್ಳಿ ವಸ್ತುವನ್ನು ಇದೇ ಗ್ರಾಮದ ಹಾಲಿ ಚಾವಡಿಯಲ್ಲಿ ಶೃಂಗಾರಮಂಟಪದಲ್ಲಿರಿಸಿ ತೆಂಗಿನ ಗರಿ ಸರ್ವರುಗಳಿಂದಲೂ ತೋರಣಗಳಿಂದಲೂ ನಾನಾ ಕೆಲಸಗಳಿಂದಲೂ ಅಲಂಕಾರ ಮಾಡಿ ಸ್ಥಾಪನೆಯಿಂದ ಇಳಿಸಿದ್ದರು. ತಾ ೨೭ ನೇ ಶುಕ್ರವಾರ ೫ ನೇ ಕಣವನ್ನು ಮಾಡಿದರು. ತಾ. ೨೯ ನೇ ಭಾನುವಾರ ೭ ನೇ ಕಣವನ್ನು ಗ್ರಾಮದಲ್ಲಿ ಉತ್ಸವಾದಿಗಳಿಂದ ರಾತ್ರಿ ೭ ಗಂಟೆಯಿಂದ ಮರುದಿವಸ ೧ ಗಂಟೆಯ ವರೆಗೆ ಬಾಣ ಬಿರುಸು ಹಗಲುಬತ್ತಿ ಮತ್ತು ಕೊಂಬು ವಾದ್ಯಗಳಿಂದ ಉತ್ಸವಮಾಡಿಕೊಂಡು ಗ್ರಾಮದಲ್ಲಿ ಪೂರೈಸಿದ ನಂತರ ವೈಚಾಕೂರೆಂಬ ಗ್ರಾಮಕ್ಕೆ ಹೋಗಿ ಅಲ್ಲಿ ಉತ್ಸವವನ್ನು ತೀರಿಸಿಕೊಂಡು ಬಂದು ಅಗ್ನಿಗುಂಡದಲ್ಲಿ ಸಮಸ್ತ ಜನಗಳೂ ಇಳಿದು ಅಲ್ಲಿಂದ ಹಸುವು ಸಿಕ್ಕಿದ ಚನ್ನಕೇಶವಸ್ವಾಮಿಯ ಭೂಮಿ ಬಳಿಗೆ ಹೋಗಿ ಅಲ್ಲಿ ಭೇಟಿಯನ್ನು ಮಾಡಿಕೊಂಡು ಬಂದು ಗ್ರಾಮವನ್ನು ಪ್ರವೇಶಿಸಿದರು. ಇದನ್ನು ಮೂರು ಸಾವಿರದವರೆಗೂ ಪ್ರಜೆಗಳು ಸೇರಿ ನೋಡಿದರು. ಮುಸಲ್ಮಾನರು ಮುನ್ನೂರು ಜನದವರೆಗೂ ಇದ್ದರು. ಅನೇಕ ಜನಗಳು ದೂರದಿಂದ ಗಾಡಿಗಳನ್ನು ಕಟ್ಟಿಕೊಂಡು ಬಂದು—ಹರಕೆಗಳನ್ನು ಮಾಡಿಕೊಂಡಿದ್ದವು. ಭಗವಂತನು ನಮಗೆ ಒಳ್ಳೆಯದನ್ನು ಮಾಡಿದನು ಎಂದು ಸಕ್ಕರೆ ಬುರುಗುಗಳನ್ನು ನೆರೆದಿದ್ದ ಜನಗಳಿಗೆಲ್ಲಾ ಹಂಚಿ ದೇವರಿಗೆ ದೊಡ್ಡಾಗಿ ಸರಗಳನ್ನು ಹಾಕಿ ಹೋದರು. ತಾ ೧೪ ನೇ ಮಂಗಳವಾರ ರಾತ್ರಿ ೭ ಗಂಟೆಗೆ ಅಗ್ನಿಗುಂಡದಲ್ಲಿ ಐದು ಗಾಡಿ ಕಟ್ಟಿಗೆಯನ್ನು ಹಾಕಿ ಬೆಂಕಿಹಾಕಿ ನೂರಾರು ಜನಗಳವರೆಗೂ ವಡೇರರು ಗೆಡೆಗಳನ್ನು ಕಟ್ಟಿದ್ದರು. ಅನೇಕ ಜನಗಳು ವೇಷಗಳನ್ನು ಹಾಕಿದ್ದರು. ರಾತ್ರಿ ೩ ಗಂಟೆ ಸಮಯದಲ್ಲಿ ಹರಕೆಮಾಡಿಕೊಂಡಿದ್ದ ೬೦ ಜನಗಳು ಬಂದು ಅಗ್ನಿಗುಂಡದಲ್ಲಿ ಇಳಿದು ನಿಂತುಕೊಂಡು ಕೆಂಡಗಳನ್ನು ಸುತ್ತಲೂ ಕೈಗಳಿಂದ ಎತ್ತಿ ಎರಚಿದರು. ನಂತರ ಇಪ್ಪತ್ತು ಜನದವರೆಗೂ ಪರಸ್ಥಳಗಳಿಂದ ಬಂದಿದ್ದು ಹರಿಕೆಯನ್ನು ಮಾಡಿದ್ದ ಜನಗಳೂ ರವಿಕೆ ಮೇಲೆ ಒಂದು ಪಂಚೆಯನ್ನು ಸುತ್ತಿಕೊಂಡು ಅಗ್ನಿಗುಂಡದ ಸುತ್ತಲೂ ಕೂತುಕೊಂಡು ಹೊಂಬಿಯ ಸಂಗಡ ಕೆಂಡಗಳನ್ನು ತಲೆಯ ಮೇಲೆ ಸುರಿಯಿಸಿದರು. ಅನಂತರ ದೇವರುಗಳನ್ನು ಎತ್ತಿ ೫ ವರ್ಷದ ಹುಡುಗರಿಗೆ ಕೊಟ್ಟಿದ್ದರು. ಅವರುಗಳು ಪೇಟೆಯಿಂದ ಉತ್ಸವವನ್ನು ಮಾಡಿಕೊಂಡು ಬರುತ್ತಿರಲು ಪದೇ ಪದೇ ಬಂದು ಅಗ್ನಿಗುಂಡದಲ್ಲಿ ಇಳಿದು ಪೇಟೆ ಕೋಟೆಗೆ ಹೋಗುತ್ತಲಿದ್ದರು. ಈ ದಿನ ಸಾಯಂಕಾಲ ೩ ಗಂಟೆಯ ವರೆಗೆ ಪರಸ್ಥಳದ ಜನಗಳು ಬಂದು ಮಾಳಿಗೆಗಳ ಮೇಲೂ ಮನೆಗಳ ಮುಂಭಾಗದ ಅಂಗಳಗಳಲ್ಲಿಯೂ ಸೇರಿದ್ದರು. ಸುಮಾರು ಪರಸ್ಥಳಗಳಿಂದ ನಾಲ್ಕು ಸಾವಿರ ಪ್ರಜೆಗಳವರೆಗೂ ಬಂದು ಸೇರಿದ್ದರು. ಈ ದಿನ ದೇವರಿಗೆ ಚರುವುಮಾಡಿಕೊಂಡು ರಾಶಿ ಹಾಕಿದ್ದ ಬುರುಗೂ, ಸಕ್ಕರೆಯೂ ಸಹ ಪರ್ವತಪ್ರಾಯವಾಗಿಯಲ್ಲಿ ಬಿದ್ದಿತ್ತು. ಬೆಳಗಿನ ೫ ಗಂಟೆಗೆ ಸರಿಯಾಗಿ ಪ್ರತಿಷ್ಠಾಪನೆ ಚನ್ನಕೇಶವಸ್ವಾಮಿಯ ಭೂಮಿ ಬಳಿಗೆ ಉತ್ಸವದಿಂದ ಹೋಗಿ ಪಡದಲ್ಲಿ ದೇವರುಗಳನ್ನು ನಿಲ್ಲಿಸಿ ಮಂತ್ರಗಳಿಂದ ಚರುವು ಮಾಡುವ ಸಮಯದಲ್ಲಿ ಸೂರ್ಯೋದಯ ತೆಪ್ಪೋತ್ಸವದಿಂದ ಪಕ್ಷವು ಮೇಲಕ್ಕೆ ಬಂದು ೫ ನಿಮಿಷಗಳ ಕಾಲ ತೆಪ್ಪದ ೩ ಸುತ್ತಿನ ಮೇಲೆ ನಿಂತಿದ್ದು ಸಮಸ್ತ ಜನಗಳೂ ಕಾಣುತ್ತಾ ಇದ್ದು ನಂತರ ಸೂರ್ಯನಲ್ಲಿಯೇ ಅದೃಶ್ಯನಾಯಿತು. ಅನಂತರ ಸೂರ್ಯ ಉದಯವಾಗುವ ಸಮಯಕ್ಕೆ ಉತ್ಸವದಿಂದ ಸ್ವಾಮಿಯ ಕೊಂಬು ತಮಟೆ ವಾದ್ಯಗಳಿಂದಲೂ, ಬಾಣ ಬಿರುಸು ಹಗಲುಬತ್ತಿ ವಾದ್ಯಗಳಿಂದಲೂ ಗ್ರಾಮದಲ್ಲೆಲ್ಲಾ ಉತ್ಸವವನ್ನು ಮಾಡಿಕೊಂಡು ಬಂದು ಶೃಂಗಾರಮಂಟಪವಾಗಿ ಮಾಡಿದ್ದ ಚಾವಡಿಯಲ್ಲಿ ಯಥಾಪ್ರಕಾರವಾಗಿ ದೇವರನ್ನು ನಿಲ್ಲಿಸಿದರು. ಜನವರಿ ತಾ. ೧ ನೇ ಬುಧವಾರ ಮಧ್ಯಾಹ್ನ ಮೂರು ಗಂಟೆಯಿಂದ ಪೇಟೆಯಲ್ಲಿ ಹುಲಿಯ ವೇಷಗಳನ್ನು ಅನೇಕ ತರಹಾ ಆಟಪಾಟಗಳನ್ನೂ ಮಾಡಿ ಜನಗಳಿಗೆ ಆನಂದವನ್ನು ಮಾಡಿದರು. ೫ ಗಂಟೆಯಿಂದ ಉತ್ಸವದಿಂದ ಭೂಮಿ ಬಳಿಗೆ ಹೋಗಿ ಪಲ್ಲಕ್ಕಿ ಮಾಡಿಕೊಂಡು ರಾತ್ರಿ ೫ ಗಂಟೆಗೆ ಗ್ರಾಮಕ್ಕೆ ಬಂದು ಸೇರಿದರು. ದೇವರಿಗೆ ಹರಕೆಯಿಂದ ಅನೇಕವಾಗಿ ದೂಡ್ಡಿಗೆ, ಚಾವಲಿ, ರೂಪಾಯಿ ಸರಗಳು ಬಂದು ಇರುತ್ತವೆ. ಈ ಉತ್ಸವದ ಕೆಲಸ ಕಾರ್ಯಗಳಿಗೆಲ್ಲಾ ಇದೇ ಗ್ರಾಮದ ಪಟೇಲ್ ಸೀನಪ್ಪನವರೂ, ರಾಮನಾಗಪ್ಪನವರೂ, ಸಾಹುಕಾರ್ ಚಂದ್ರಪ್ಪನವರೂ, ಅರಳಿ ಉಗ್ರನರಸಪ್ಪನವರೂ ಅಧ್ಯಕ್ಷರಾಗಿ ನಿಂತು ಜನಗಳಿಗೆಲ್ಲಾ ಬಹಳ ಸಂತೋಷವಾಗುವ ಹಾಗೆ ಎಲ್ಲಾ ಕಾರ್ಯಗಳನ್ನೂ ಸಾಂಗವಾಗಿ ನಡೆಸಿದ್ದಕ್ಕಾಗಿ ಜನಗಳೆಲ್ಲರೂ ಅವರನ್ನು ಕೊಂಡಾಡುತ್ತಾರೆ.

ಪ್ರತ್ಯಕ್ಷದರ್ಶಿ.

ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ಹೊಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಹೊಳಲ್ಕೆರೆ ತಾ|| ಹೊರಕೆರೆ ದೇವರಪುರ—ಇದು ಬಹಳ ಹಳೇ ವಿಷಯ.

ದೇವನಹಳ್ಳಿ ತಾ|| ಬೂದಿಗೆರೆ ಮತ್ತು ಮದ್ದಗಿರಿ ತಾ|| ಕೆಲವೀರಪುರ—

ಈ ಬಾತ್ಮಿಗಳಲ್ಲಿ ಪ್ರಕಟನೆಗೆ ಅರ್ಹವಾದ ವರ್ತಮಾನವೇನೂ ಕಾಣುವುದಿಲ್ಲ.

ಅರಸಿಕೆರೆ ತಾ|| ಗಂಡಸಿ ಹೋಬಳಿಯಲ್ಲಿ ಇಷ್ಟರಿಂದ ಪ್ರಜೆಗಳಿಗೆ ತುಂಬಾ ಕಷ್ಟನಷ್ಟಗಳುಂಟಾಗುತ್ತಿವೆ ಎಂದು ಒಬ್ಬ ಬಾತ್ಮಿದಾರರು ಬರೆದಿದ್ದಾರೆ. ಇದು ನಿಜವಾದ ಪಕ್ಷದಲ್ಲಿ ಪ್ರಜೆಗಳು ವಿಶೇಷವಾಗಿ ಅಂಥಾ ಕಂಟಕರ ವಿಷಯದಲ್ಲಿ ಪೋಲೀಸಿಗೂ, ಅಮಲ್ದಾರರಿಗೂ ಅರ್ಜಿ ಮಾಡಿ ಅವರಿಗೆ ಯಥಾರ್ಥವಾದ ಕಾರಣಗಳನ್ನು ಮನದಟ್ಟು ಮಾಡಿದರೆ, ಧೈರ್ಯದಿಂದಲೂ ತಿಳಿಸದೆ ಇರುವುದಾದರೆ ಕೋಗೊತ್ತಾಗಲಿಲ್ಲ. ಪ್ರಜಾ ನೆಮ್ಮದಿಯನ್ನು ಕಾಪಾಡುವುದಕ್ಕೆ ನೇಮಕವಾಗಿರುವವರು ಅದರ ನಿಜಾಂಶವನ್ನು ತಿಳಿಯಲು ಪ್ರಯತ್ನಿಸುವರೆಂದು ನಿರೀಕ್ಷಿಸಲ್ಪಟ್ಟಿದೆ.

—ಎಡಿ]

ಕರೆಸ್‌ಪಾಂಡೆನ್ಸ್

ತಪ್ಪುತಿದ್ದುಪಡು.

ಅಯ್ಯಾ,

ತಾ ೨ ನೇ ತಮ್ಮ ಪತ್ರಿಕೆ ೭ ನೇ ಪುಟ ಕರೆಸ್‌ಪಾಂಡೆನ್ಸಿನಲ್ಲಿ « ಕಟಾಕಾಪುರ —ಅಘೋರಕೃತ್ಯ » ಎಂಬ ನನ್ನ ಬಾತ್ಮಿಯಲ್ಲಿ ದಯಮಾಡಿ ಸ್ವಲ್ಪ ಬದಲಾವಣೆ ಮಾಡಬೇಕಾಗಿ ಬರುವ ಪತ್ರಿಕೆಯಲ್ಲಿ ಈ ಕೆಳಗಿನ ವಾಕ್ಯಗಳನ್ನು ಮಾತ್ರ ಪ್ರಕಟಿಸಬೇಕೆಂದು ವಿಜ್ಞಾಪನೆ:—

ಚಿಕ್ಕ, ರಾಮಭೋಗ, ನಾಗಗಂಟಿ, ಮಾದಿಗ, ಈ ನಾಲ್ವರು ಸೇರಿ ಆಳಿ ಆಬ್ಬರಿಸಲಿಲ್ಲ. ಕೋಣನನ್ನು ಕಡಿಯುವ ವಿಚಾರದಲ್ಲಿ ರಾಮಭೋಗ ಕತ್ತಿಯನ್ನು ಹಿಡಿಯಲಿಲ್ಲ. ಇದರಲ್ಲಿ ಕೇಳಿದ್ದೂ ಉಂಟು, ನೋಡಿದ್ದೂ ಉಂಟು.

ಪ್ರತ್ಯಕ್ಷದರ್ಶಿ

ಅಸುರಕೃತ್ಯಗಳಂತೆ.

ಅಯ್ಯಾ,

ಕಳೆದ ಮಾಸ ತಾ ೨೦ ರಲ್ಲಿ ಕೃಷ್ಣರಾಜಪೇಟೆ ತಾ ಸಿಂಧುಘಟ್ಟ ಗ್ರಾಮದಲ್ಲಿ ಬಲಗ್ಗ ಎನ್ನುವವನನ್ನು ಅದೇ ಜಾತಿಯವರಾದ ಚಲುವ ವಗೈರೆಯು ಹಿಡಿದು ಗುದ್ದುಗಳನ್ನು ಮಾಡಿದ್ದಲ್ಲದೆ ತಲೆಯ ಮೇಲೆ ಕೊಡಲಿಯಿಂದ ಹೊಡೆದು ಬದುಕುವುದೇ ದುಸ್ತರವಾಗಿ ನಂತರ ಇಂಟೆಲ್ಲೀಜೆಂಟ್ ಮೆಡಿಕಲ್ ಆಫೀಸರವರ ಜನರನ್ನು ಪೋಲೀಸಿನವರು ಕಳುಹಿಸಲಾಗಿ ಡಾಕ್ಟರವರ ಅಪಾಯದಲ್ಲಿ ಬಿದ್ದ ಕೊಡಲಿಯ ಗಾಯವು ಅಲ್ಪವಾಗಿ ತೀರಿದ ಸಂಗತಿ. ಮಾಡಿದ್ದರ ಮೇಲೆ ಪೋಲೀಸಿನವರು ಆಲಾಯಿದಾ ಫಿರ್ಯಾದು ಮಾಡಿರೋ ಎಂದು ಹೇಳಿ ಕಳುಹಿಸಿದರೆಂದು ಕೇಳುತ್ತೇವೆ. ಮತ್ತು ಕಳೆದ ಮಾಸ ತಾ. ೨೦ ನೇ ರಾತ್ರಿ ಬೆಳಗಿನ ಝಾಮದಲ್ಲಿ ಬಲಗ್ಗ ಬಾಬು ಎಂಬುವನ ರಾಗಿ ಮೆದೆಗೆ ದೊಡ್ಡ, ತಿಂಗ್ರಿ, ಚಲುವ ಎನ್ನುವ ಅದೇ ಜಾತಿಯವರು ಬೆಂಕಿ ಹಚ್ಚಿ ನಷ್ಟಪಡಿಸಿದ ಸಂಗತಿ, ಕೂಡಲೆ ಪೋಲೀಸ್ ಇನ್ಸ್‌ಪೆಕ್ಟರವರು ಬಂದು ತನಿಖೆ ಮಾಡಿದ ಹಾಗೂ, ಸವರಿಸುವಷ್ಟು ತಿಳುವಳಿಕೆ ಇರಲಿ ವಿಚಾರಣೆ ಹೇಳಿಕೊಳ್ಳುವಷ್ಟರಲ್ಲಿ ಅಲ್ಲಿಗೆ ಸರ್ಕಲ್ ಬಿ ವಿಷ್ಣು ಪೋಲೀಸ್ ರಾ, ಜನರಲ್ ಸಾಕ್ಷಿಬರಹ ಆಪ್ಪಣೆ ಮೇರೆ ಸಬ್ ಡಿವಿಜನ್ ಪೋಲೀಸ್ ಸೂಪರಿಂಟೆಂಡೆಂಟರು ಗ್ರಾಮಕ್ಕೆ ದಯಮಾಡಿ ಸ್ಥಳ ತನಿಖೆ ಎಂದು, ಇನ್ಸ್‌ಪೆಕ್ಟರವರಿಗೆ ಹೊಂದಿದ್ದ ನಾವನ್ನು ಕೈಬಿಟ್ಟು ವಿಚಾರಿಸಿ ಹಿಡಿದು ತನಿಖೆ ಮಾಡಿ ಮೇಜಿಸ್ಟ್ರೇಟರಿಗೆ ವರದಿ ಮಾಡಿದರೂ ಕೇಳುತ್ತೇವೆ ಮುಂದೆ ಏನಾಗುವುದೋ ನೋಡಬೇಕು.

ಬಾತ್ಮಿದಾರ್

ಸಮುನಕ್ಷತ್ರಿಯರ ಸಭೆ

ಅಯ್ಯಾ,

ಇದೇ ಜನವರಿ ತಾ ೫ ರಲ್ಲಿ ನಡೆದ ಸಮುನಕ್ಷತ್ರಿಯರ ಸಭಾಯ ವಿಚಾರವೇನೆಂದರೆ ಈ ರಾಜಧಾನಿಯಲ್ಲಿ ಹಿಂದೆ ಒಂದು ಸನಾತನ ಧರ್ಮ ಸಭಾ ಎಂದು ಒಂದು ಧರ್ಮಶಾಲೆಯನ್ನು ಸ್ಥಾಪಿಸಿದ್ದನ್ನು ಕೆಲವರು ಸೇರಿ ಅದಕ್ಕೆ ಅನ್ಯಾಯವನ್ನುಂಟುಮಾಡಿ ತಪ್ಪಿಸಿ ಬಿಟ್ಟಿದ್ದರು. ಇದನ್ನು ನೋಡಿ ಮತಾಭಿಮಾನಿಗಳಾದ ಕೆಲವರು ಬಿಲಗಾಗುತ್ತಿರುವ ಪೂರ್ವಾಚಾರದ ಧರ್ಮವನ್ನು ಅಭಿವೃದ್ಧಿಪಡಿಸಬೇಕೆಂದೂ, ಸಮುನಕ್ಷತ್ರಿಯ ಬಡಯಾತ್ರ ಮಕ್ಕಳಿಗೆ ಧರ್ಮಾರ್ಥವಾಗಿ ಅನ್ನ ಬಟ್ಟೆ ಕೊಡುವದಲ್ಲದೆ ಅವರವರು ಕಲಿಯಬೇಕಾದ ವಿದ್ಯೆಗಳನ್ನು ಕಲಿಸಬೇಕೆಂದೂ, ರಾಜಧಾನಿಯಲ್ಲಿ ನಡೆಯತಕ್ಕ ನವರಾತ್ರಿ ವರ್ಧಂತಿ ಮುಂತಾದ ಮಹೋತ್ಸವಗಳಿಗೆ ಪರಸ್ಥಳದಿಂದ ಬರತಕ್ಕ ನಮ್ಮ ಜಾತಿ ಜನಗಳಿಗೆ ಧರ್ಮಾರ್ಥವಾಗಿ ಅನ್ನೋದಕಗಳನ್ನು ಕೊಟ್ಟು ಮೇಲ್ಕಂಡ ಧರ್ಮವನ್ನು ಸ್ಥಾಪಿಸಬೇಕೆಂದೂ ಬದ್ಧಕಂಕಣರಾಗಿರುವರು. ಮತ್ತು ನಮ್ಮ ಅನ್ಯರು ಹೋಲಿಯುವವರು ನಮ್ಮ ಮತಸಂಬಂಧವಾದ ಗ್ರಂಥಗಳನ್ನೂ, ನಮ್ಮ ವಂಶಾನುಕ್ರಮಣಿಕೆಯನ್ನೂ ನಾವುಗಳು ಪ್ರಚುರಪಡಿಸುವ ಹೋಟಲುಗಳನ್ನೂ ವಡ್ಡಜನಾಂಗದಲ್ಲಿ ನಾವು ಶ್ರೇಷ್ಠರಾಗಿರುವದನ್ನು ತಿಳಿಯದೆ ನಮ್ಮನ್ನು ಪತ್ರಿಕೆಯಲ್ಲಿ ಬಿಡೋನು ಜಾತಿಯವನೆಂದು ನಿಕೃಷ್ಟ ಮಾಡಿ ಬರೆದಿರುತ್ತಾರೆ. ಇದಕ್ಕಾಗಿ ಕೆಲವರು ವಾದಮಾಡಬೇಕೆಂತಲೂ, ಕೆಲವರು ಪಂತಕಟ್ಟಿ ಮಾಡಬೇಕೆಂತಲೂ, ಇನ್ನು ಕೆಲವರು ಈ ವಿಷಯವನ್ನು ಸಮಸ್ತ ದೇಶಗಳಲ್ಲಿರುವ ನಮ್ಮ ಜಾತಿಯವರಿರುವ ಕುಲಸ್ಥರಿಗೆ ಮನವಿ ಮಾಡಿ ಅವರುಗಳ ಒಪ್ಪಿದಂತೆ ಕಟ್ಟು ಮಾಡಬೇಕೆಂದು ತಗ್ಗಿದ ನಿಬಂಧನೆಗಳನ್ನು ಮಾಡಿ ಎಲ್ಲರಿಗೂ ಕಾಗದಗಳನ್ನು ಬರೆಯಬೇಕೆಂದು ನಿಲ್ಲಿಸಿರುತ್ತಾರೆ. ಮುಂದಿನ ವಿಷಯಗಳನ್ನು ನಡೆಯತಕ್ಕ ಸಭಾವಸಾನವನ್ನು ಮತ್ತೊಂದು ಪತ್ರಿಕೆಯಲ್ಲಿ ತಿಳಿಸುತ್ತೇವೆ.

ಬಿ ಪುಟ್ಟಯ್ಯ, ದೊಡ್ಡಪೇಟೆ, ಮೈಸೂರು

ರೈಲ್ವೆಗಾರ್ಡುಗಳೂ ಸ್ಟೇಷನ್ ವಿಷಯವೂ.

ಅಯ್ಯಾ,

ಕಳೆದ ೮ ನೇ ತಾ ಸೋಮವಾರ ನಾನು ದೊಡ್ಡಕುರುಗೋಡು ಡಿ ಚೆನ್ನಪ್ಪನವರ ಜೊತೆ ಬೆಂಗಳೂರು ಮತ್ತು ಮೈಸೂರು ಮುಂತಾದ ದೇಶಗಳಲ್ಲಿ ಪ್ರಯಾಣವಾದ ಬೇಕೆಂಬ ಉದ್ದೇಶದಿಂದ ಬೆಂಗಳೂರಿಗೆ ೯ ಗಂಟೆಗೆ ಸಾಯಂಕಾಲ ಪ್ರತಿದಿನವೂ ಸೇರುವ ಪ್ಯಾಸೆಂಜರ್‌ನಲ್ಲಿ ಪ್ರಯಾಣಮಾಡುತ್ತಿದ್ದೆನು. ಗೋರೀಬಿದನೂರ್ ಸ್ಟೇಷನ್‌ನಲ್ಲಿ ಗಾಡಿ ನಿಂತಾಗ ನಾನು ಕೂತಿದ್ದ ಗಾಡಿಯಿಂದ ಒಬ್ಬ ದಕ್ಷಿಣದಿಂದ ಸ್ಥಾನದ ಸುಮಾರು ೩೦ ವರ್ಷದ ಹೊಸಮಹಿಯವನು ಇಳಿದು ತನಗೆ ಸಂಬಂಧಪಟ್ಟ ಒಬ್ಬ ಹೆಂಗಸು ಕೂತಿದ್ದ ಹೆಂಗಸರಗಾಡಿಯಲ್ಲಿ ಹೋದಬಿಟ್ಟನು. ಈ ಗಾಡಿಯಲ್ಲಿ ನಮಗೆ ಸಂಬಂಧಪಟ್ಟ ಕೆಲವು ಹೆಂಗಸರುಗಳು ಕೂತಿದ್ದ ಕಾರಣದಿಂದ ನಾನು ತಕ್ಷಣ ಇಳಿದು ಚೀಫ್ ಗಾರ್ಡರವರಿಗೆ ಈ ಸಮಾಚಾರವನ್ನು ಕೆಳಗಿನ ಪ್ರಕಾರ ತಿಳಿಸಿದೆನು. ನಾನು—ಅಯ್ಯಾ, ಯಾರೋ ಒಬ್ಬ ಹೊಸಮನುಷ್ಯನು ಹೆಂಗಸರ ಗಾಡಿಯಲ್ಲಿ ಕೂರಿರುತ್ತಾನೆ, ನೋಡಿ ಶಿಕ್ಷಿಸಿ. ಗಾರ್ಡು—ನಾನು ಏನುಮಾಡಬೇಕು ? ಇದು ನನ್ನ ಕೆಲಸವಲ್ಲ. ನೀನೇ ಹೋಗಿ ಕೇಳು. ಇಷ್ಟರಲ್ಲೇ ಅಲ್ಲಿಗೆ ಅಂಡರ್ ಗಾರ್ಡರು ಬಂದರೆ ಅವರಿಗೆ ಇವರು—ಇದು ಎಂಥಾ ಹುಕುಂ ಇದೆ ನೋಡಿ ಎಂದು ಹೇಳಿ, ನಾನು ಹೇಳಿದ ಮಾತುಗಳನ್ನು ಪುನಃ ಹೇಳುತ್ತಿರುವಾಗ

ವರು ಇಷ್ಟುಮಟ್ಟಿಗೆ ತಿಳಿದುಕೊಂಡಿರುವುದನ್ನು ನೋಡಿ ಕೂತಲೇ ಗಾಡಿ ಹತ್ತಿರ ಹೋದಾಗ ಮಜಕೂರ್ ಮಹಮ್ಮದೀಯನು ನಾನು ಕರೆದುಕೊಂಡು ಬರುತ್ತೇನೆಂದು ತಿಳಿದುಕೊಂಡು ಇಳಿದು ಬಂದನು. ಇಳಿದನ್ನು ಗಾರಡು ನೋಡಿ ಹತ್ತಿರ ಬಂದು, ತಿರುಗಿ ಕೆಳಗಿನ ಪ್ರಕಾರ ಕೇಳಿದನು. ಗಾರಡು (ಕೋಪದಿಂದ)—ಏನಯ್ಯ, ಮಾತನಾಡುವುದ ಹೆಂಗಸರ ಗಾಡಿಯಲ್ಲಿ ಹೋಗಬಾರದೇ? ನಾನು— ಟಿಕೇಟು ಹತ್ತಿರ ಮಾತನಾಡಬಹುದು ಒಳಗೆ ಹೋಗುವುದಕ್ಕೆ ಕಾರಣವೇನು? ಗಾರಡು (ಕೋಪದಿಂದ)—ತನ್ನ ಹುಡುಗಿಯು ಒಂದು ಚನ್ನಾಗಿದ್ದರೆ ಎಲ್ಲಿ ಕೂತರೇನು? ನಾನು—ಮಹಮ್ಮದೀಯರಲ್ಲಿ ಹಾಗಾಗಬಾರದು. ಅದು ಕಟ್ಟಿದ್ದು ಗಾರಡು—ನೀನು ತಿಳಿದುಕೊಂಡಿರುವುದು ಹಾಗೆ ಎಂದು ಹೇಳಿಕೊಂಡು ಹೊರಟುಬಿಟ್ಟರು ಮತ್ತು ಗಾಡಿಬಿಟ್ಟಿತು ಗಾರಡರ ಮೇಲೆ ಇವರಿಗೆ ಗೋಸಾ ಎಂಬುವುದು ಎಷ್ಟುಮಟ್ಟಿಗೆ ತಿಳಿದಿರಬ ನೀವೇ ಯೋಚಿಸಿ ಹುಡುಗಿಯು ಚೆನ್ನಾಗಿದ್ದರೆ ಮಹಮ್ಮದೀಯರಲ್ಲೇ? ಮತ್ತು ಯಾವ ಜಾತಿಯಲ್ಲಾಗಲಿ ಹೆಂಗಸರು ಕೂತಿರುವ ಕಡೆ ಕೂತುಕೊಳ್ಳುವುದು ಸಾಧ್ಯವೋ? ಮತ್ತು ಇಂಥಾ ಬಾಬುಗಳಲ್ಲಿ ಮಾಲಾಮಾಲಿಯಾಗುವುದು ಆಶ್ಚರ್ಯವೇನು? ನಾನು ಈಗ ರೈಲ್ವೆ ಇಲಾಖೆಯ ಮೇಲ್ಪಟ್ಟ ಅಧಿಕಾರಿಗಳು ಇಂಥಾ ಬಾಬುಗಳಿಗೆ ಗಮನ ಕೊಟ್ಟು ತಕ್ಕ ಬಂದೋಬಸ್ತು ಮಾಡುವ ಹಾಗೆ ಕೇಳಿಕೊಳ್ಳುತ್ತೇನೆ

ದೊಡ್ಡಬಳ್ಳಾಪುರ — ಕೆ ಸೈಯದ್ ಮಹಮದ್.

ಅಕ್ರಮ ಕೂಟವಂತೆ

ಸ್ವಾ,

ಬೇಲೂರು ತಾಲ್ಲೂಕು ಮಾದೀಹಳ್ಳಿ ಹೋಬಳಿ ಹಾಲ್ತೊರೆ ಗ್ರಾಮದಲ್ಲಿ ನೇ ನಂಬರ್ ಹನುಮಂತದೇವರ ಖೊಡ್ಡೆ ತರೀ ಜಮೀನು ಆ ದೇವರನ್ನು ಆದಿಯಿಂದಲೂ ವಂಶಾನುಕ್ರಮವಾಗಿ ಮಾಡಿಕೊಂಡಿದ್ದವರು ಪಡೆಕಾರರು ಈಚೆಗೆ ೫-೬ ವರುಷಗಳಿಂದಲೂ ಈ ಗ್ರಾಮಸ್ಥರೇ ಹತ್ತು ಸೇರಿ ಆಲೋಚಿಸಿ, ತಮ್ಮಲ್ಲಿಯೇ ೪ ಮಂದಿಯನ್ನು ಚುನಾಯಿಸಿ, ಅವರಲ್ಲೊಬ್ಬರೂ ಪ್ರತಿ ವರ್ಷವಲ್ಲಿಯೂ ೩-೩ ತಿಂಗಳಿನಂತೆ ಆ ದೇವರನ್ನು ನಡಿಸುತ್ತಾ ಬರಬೇಕೆಂದೂ, ಜಮೀನಿನ ಫಸಲನ್ನು ಆ ನಾಲ್ಕು ಜನರೂ ಸಮಭಾಗವಾಗಿ ಅನುಭವಿಸುತ್ತಾ ಬರಬೇಕೆಂದೂ ತೀರ್ಮಾನಮಾಡಿ ಜಮೀನುಗಳ ಸಾಗುವಳಿ ಮುಂತಾದ ಜವಾಬ್ದಾರಿಯು ಆ ಗ್ರಾಮದಲ್ಲಿ ಸಾಹುಕಾರ್ ನರಸಿಂಹಾಚಾರ್ಯರ ವಶದಲ್ಲಿ ಒಪ್ಪಿಸಲ್ಪಟ್ಟಿತು ಕ್ರಮಾನುಸಾರವಾಗಿ ಕಳೆದ ವರ್ಷದವರೆಗೂ ನಡೆಯುತ್ತಿದಿತು. ಪೂಜೆಮಾಡ ಫಸಲು ಸರಿಯಾಗಿ ಸಲ್ಲದೆ ಅಡಚಣೆಯಾಗುತ್ತಾ ಬಂದುದರಿಂದಲೂ, ಯು ಸಸಲಾಯಿತೆಂದು ವರ್ಷ ವರ್ಷಕ್ಕೆ ತಕರಾರು ಹೆಚ್ಚಿದ್ದರಿಂ ದೇವರ ಅರ್ಚಕರಾದ ನಾಲ್ಕು ಮಂದಿಯೂ ದೇವರ ಪೂಜೆ ಜವಾಬ್ದಾರಿ ತಮ್ಮ ವರೆಗೇ ವಹಿಸ್ಸ ಜವಾಬ್ದಾರಿಯೊಡನೆ ವಹಿಸಿಕೊಡಬೇಕೆಂದು ಕೇಳಿದರು ಇದಕ್ಕೆ ಸಾಹುಕಾರ್ ನರಸಿಂಹಾಚಾರ್ಯರು ಒಪ್ಪದೆ ಜಮೀನಿನ ವರ್ಷದ ಫಸಲನ್ನೆಲ್ಲಾ ತಾವೇ ತೆಗೆದುಕೊಳ್ಳಬೇಕೆಂದು ಪ್ರಯತ್ನಿಸುತ್ತಿದ್ದನ್ನು ಇಷ್ಟಬ್ಬರು ಅರ್ಚಕರಿಂದ ರಂಗಾಚಾರ್ಯರ ಮಗ ನರಸಿಂಹಾಚಾರ್ಯರೂ, ತಿರುಮಲಾಚಾರ್ಯರೂ ತಡೆಮಾಡಬೇಕೆನ್ನಿಸಿದರು. ಇದನ್ನು ತಿಂಡ ನರಸಿಂಹಾಚಾರ್ಯರು ಕೆಲವು ಜನಗಳ ಸಹಾಯದಿಂದ ಸುಮಾರು ೨೦೦ ಜನರೂ ಹೊಲೆಯರು ಮುಂತಾದ ಜನರನ್ನು ಆಯುಧಗಳೊಡನೆ ಕರೆದುಕೊಂಡು ಹೋಗಿ ಫಸಲನ್ನೆಲ್ಲಾ ಡಿಸೆಂಬರ್ ತಾ ೫ ನೇ ಭಾನುವಾರ ಹಗಲಿನ ಲೂಟಿಮಾಡಿಸಿ ತೂರಿಸಿಕೊಂಡು ಹೋದರು ಈ ಕಾಲದಲ್ಲಿ ಉಭಯ ಪಕ್ಷದವರಿಗೂ ಭಯಂಕರವಾದ ಜಗಳವಾಗುತ್ತಿದ್ದದ್ದು ಹಾಲ್ತೊರೆ ಗ್ರಾಮದ ಪಟೇಲ್ ಶ್ಯಾನುಭೋಗರ ಸಾಹಸಪ್ರಯತ್ನಗಳಿಂದ ನಿಂತಿತು ಈ ದಂಗೆ ವಿಷಯವನ್ನು ಪಟೇಲರು ಬೇಲೂರು ತಾಲ್ಲೂಕಿಗೆ ಅದೇ ದಿನ ರಿಪೋರ್ಟು ಮಾಡಿದನು ಅರ್ಚಕರ ಪೈಕಿ ರಂಗಾಚಾರ್ಯರ ಮಗ ನರಸಿಂಹಾಚಾರ್ಯರು ಪೋಲೀಸಿನಲ್ಲಿ ಅದೇ ತಾ ೯ ನೇ ಸೋಮವಾರ ಅರ್ಜಿ ಕೊಟ್ಟಿದ್ದಾರೆ ಅದರ ಮೇಲೆ ತಾಲ್ಲೂಕು ಜಮಾದಾರ್ರು ಒಂದು ದಿನ ಆ ಗ್ರಾಮಕ್ಕೆ ಬಂದು ಕೃತ್ಯವಿಚಾರಣೆ ಕ್ರಮವೇನೂ ನಡಸದೆ ತೆರಳಿದರು ಆ ದಂಗೆಯನ್ನು ನೋಡಿದವರು ಕಣ್ಣಾರೆ ಕಾಲದ ಕೂಟವನ್ನು ಚಾಪಿಸಿಕೊಳ್ಳುತ್ತಿದ್ದರು ಈ ಸಂಗತಿಯನ್ನು ಸರ್ಕಾರದವರ ಗಮನಕ್ಕೆ ಬಂದು, ದುಷ್ಟರಿಗೆ ಶಿಕ್ಷೆಯೂ ಶಿಷ್ಟರಿಗೆ ರಕ್ಷೆಯೂ ಲಭ್ಯವಾಗುವದೆಂದು ಹಾರೈಸುತ್ತೇನೆ.

ಬ. ಕ. ವ

ತಾಲ್ಲೂಕು ವರ್ತಮಾನಗಳು.

ನೆಲಮಂಗಲ ತಾ|| ಚಿಕ್ಕಹನಾರಸಮುದ್ರ.—ಶ್ರೀಮನ್ಮಹಾರಾಜರವರು ಬೆಂಗಳೂರಿಂದ ನೆಲಮಂಗಲದ ಮಾರ್ಗವಾಗಿ ಬರುದಿದ್ದಾಗ ಮೈಲಿ ಮಧ್ಯೆ ಸೇಂದಿ ಕಂಟ್ರಾಕ್ಟರ್ ಮ|| ಚನ್ನವಾರೇಗೌಡರು ಬಹು ವಿಶಾಲವಾದ ಚಪ್ಪರ ಹಾಕಿಸಿದ್ದರು ಶ್ರೀಯವರ ಸವಾರಿಯು ಆ ಚಪ್ಪರದಲ್ಲಿ ನಿಲ್ಲುವುದೆಂಬ ಆಶೆಯಿಂದ ಅನೇಕ ವಿಧವಾದ ಹಣ್ಣು ಹಂಪಲು ಪುಷ್ಪ ಮಾಲೆಯು ಮೊದಲಾದವುಗಳನ್ನು ಸಿದ್ಧಮಾಡಿಕೊಂಡು ಮ|| ಚನ್ನವಾರೇಗೌಡರೂ ಗ್ರಾಮಸ್ಥರೂ ಎಲ್ಲಾ ಬಹು ಉತ್ಸಾಹದಿಂದ ಕಾದಿದ್ದರು, ಆದರೆ ಸವಾರಿಯು ನಿಲ್ಲದೆ ಮುಂದಕ್ಕೆ ಸವಾರಿಯು ಚಿತ್ತೈಸಿತು ಪುನಃ ದರ್ಶನವು ಎಂದಿಗಾಗುವದೋ ಎಂದು ನಿರೀಕ್ಷಿಸಿಕೊಂಡಿದ್ದಾರೆ

ಸೊಗಡಪಟ್ಟಣ.—ಇಲ್ಲಿ ಹದಿನೈದು ತಿಂಗಳ ಹಿಂದೆ ಇಲಿ ಸಾಯುತ್ತಾ ಕೆಲವು ವಾರಗಳಲ್ಲಿ ೧೦-೧೫ ಜನರು ಪ್ಲೇಗಿನಿಂದ ಮೃತರಾದರು ಶ್ರೀರಂಗಪಟ್ಟಣದಲ್ಲಿ ಈ ರೋಗವು ಶಮನವಾಗಿರುವಂತೆ ತೋರಿದರೂ ಕಿರಂಗೂರು, ದರಸಕುಪ್ಪೆ, ನೆಲಮನೆ, ಪಾಲಹಳ್ಳಿ, ಮೊದಲಾಗಿ ಪ್ಲೇಗೂ, ಕಾಲರಾ ಎರಡೂ ಪ್ರಬಲವಾಗಿ ಹಲವು ಮರಣಗಳಾಗುತ್ತಾ ಇವೆಯೆಂದು ತಿಳಿದುಬರುತ್ತೆ ಹೀಗಿದ್ದರೂ ಈ ಟವನಿನ ನೀರಿನ ಶುದ್ಧತೆಗೂ ಯಾವ ಏರ್ಪಾಟುಗಳೂ ಇಲ್ಲದೆ ತಟಸ್ಥರಾಗಿರುವದು ಆಶ್ಚರ್ಯವು, ಅಧಿಕಾರಿಗಳ ಅಶ್ರದ್ಧೆಯೂ ಅಂತ ಹೇಳದರೆ ದೋಷವಿಲ್ಲ. ಮುಂದೆಯಾದರೂ ಈ ವಿಚಾರಕ್ಕೆ ಗಮನಕೊಡುವರೆಂದು ನಂಬುತ್ತೇವೆ.—ಈ ಊರಿನ ಕೆಲವು ಶರಾಬ್ ದುಕಾನುಗಳಲ್ಲಿ ಸರ್ಕಾರ ದರಕ್ಕೆ ಮಾರಿ ದುಪ್ಪಟ್ಟಾಗೆ ಎರಡೂಕಾಲು ಆಣೆಯಂತೆ ಬೆಲೆ ಮಾಡುತ್ತಾರೆಂಬ ವದಂತಿ ಹುಟ್ಟಿರುತ್ತೆ. ವಿಚಾರಿಸತಕ್ಕದ್ದು.

ಹೊಳಲ್ಕೆರೆ.—ಈ ಊರಲ್ಲಿ ಮಳೆ ನಿಂತು ಸುಮಾರು ಎರಡು ತಿಂಗಳಾದವು ಆದರೂ ಬೆಟ್ಟಜಾಗಿನ ಶೀತದ ದೆಸೆಯಿಂದ ಅನೇಕರು ಮನೆಗಳಲ್ಲಿ ಖಾಯಿಲೆ ಬಿದ್ದಿರುತ್ತಾರೆ ನಮ್ಮ ಡಾಕ್ಟರ್ ಪಾಲ್‌ಪಿಂಟರವರು ಜನಗಳ ವಿಷಯದಲ್ಲಿ ಬಹಳ ಮುತುವರ್ಜಿಯನ್ನು ವಹಿಸಿ ಖಾಯಿಲೆ ಜನರನ್ನು ಸಾಧ್ಯವಾದ ಮಟ್ಟಿಗೂ ಗುಣಪಡಿಸುತ್ತಾರೆ ಆದರೆ ಇಲ್ಲಿನ ಅನೇಕರು ಆಸ್ಪತ್ರೆಗೆ ಬಾರದೆ ಕಾಡುಗೆಡ್ಡೆ ಮೊದಲಾದವುಗಳನ್ನು ಉಪಯೋಗಿಸಿ, ನಂತರ ಬಹಳ ಬಿಗಡಿದ ಮೇಲೆ ಆಸ್ಪತ್ರೆಗೆ ಬರುವರು. ಹೀಗಿದ್ದರೂ ಕೂಡ ಅನೇಕರು ಗುಣಹೊಂದುತ್ತಿರುತ್ತಾರೆ—ಈ ಊರಿಗೆ ಎರಡು ಸಾರಿ ಕಾಲರಾ ತಲೆಹಾಕಿತ್ತು ಆದರೂ ಈ ರೋಗವು ಅಷ್ಟಕ್ಕೇ ನಿಂತುಹೋಗುವುದಕ್ಕಾಗಿ ಡಾಕ್ಟರವರು ಹೆಚ್ಚಾದ ಕ್ರಮವನ್ನು ತೆಗೆದುಕೊಂಡರು ಸುತ್ತುಮುತ್ತ ಇರುವ ಹಳ್ಳಿಗಳಲ್ಲಿಯೂ ಈ ರೋಗವು ವ್ಯಾಪಿಸಿಕೊಂಡರೂ ಅಲ್ಲಿಗೆ ಹೋಗಿ ತಕ್ಕ ಏರ್ಪಾಡುಗಳನ್ನು ಮಾಡಿಸಿ ರೋಗ ನಿಂತುಹೋಗುವಂತೆ ಮಾಡಿರುತ್ತಾರೆ—ಈ ಊರಲ್ಲಿ ಇಸ್ಪೀಟು ಆಡುವವರು ಬಹಳ ಹೆಚ್ಚಾಗುತ್ತಾ ಇರುತ್ತಾರೆ ಅಮಲ್ದಾರ್ರವರು ಸಾಧ್ಯವಾದ ಮಟ್ಟಿಗೂ ಊರನ್ನು ಉತ್ತಮ ಸ್ಥಿತಿಗೆ ತರುತ್ತಲಿದ್ದಾರೆ. ಇವರು ಬಂದು ಕೆಲವು ದಿನಗಳು ಮಾತ್ರ ಆದರೂ ಅನೇಕ ಒಳ್ಳೇ ಕಾರ್ಯಗಳನ್ನು ಮಾಡಿರುತ್ತಾರೆ.—ಇಲ್ಲಿ ಹೊಸದಾಗಿ ಒಂದು ರೀಡಿಂಗ್ ರೂಮನ್ನು ಸ್ಥಾಪಿಸಬೇಕೆಂದು ಅಭಿಪ್ರಾಯಪಟ್ಟಿರುತ್ತಾರೆ ಇವರ ಕಾಲದಲ್ಲಿಯಾದರೂ ಈ ಊರು ಸುಸ್ಥಿತಿಗೆ ಬರುವುದೆಂದು ನಂಬುತ್ತೇವೆ

ತಿ|| ನರಸೀಪುರ — ಈ ಪ್ರಾಂತ್ಯ ಛತ್ರದ ಬಳಿಗೆ ಯಾವ ನಷ್ಟವೂ ಇಲ್ಲದೆ ಚನ್ನಾಗಿ ಫಸಲಾಯಿತು ಅಕ್ಕಿ ರೂಪಾಯಿಗೆ ೪ ಸೇರು, ರಾಗಿ ೧೮-೨೦ ಸೇರು ಮಾರುತ್ತೆ. ಹೆಸರು, ಹುರುಳಿ, ತೊಗರಿ, ಅವರೇ ಫಸಲುಗಳು ಚನ್ನಾಗಿರುತ್ತೆ ಕಡ್ಲೆ ಮಾತ್ರ ನಷ್ಟವಾಯಿತು.—ಇಲ್ಲಿ ಹೊಳೆನೀರು ತಗ್ಗಿ ಪ್ರಯಾಣಿಕರು ಕಾಲು ನಡೆಯಾಗಿ ಸಂಚಾರ ಮಾಡುವಂತಾಗಿದೆ. ೧೯೧೧ ನೇ ಇಸವಿಯಲ್ಲಿ ತಿರುಮಕೂಡಲು ನರಸೀಪುರದ ಅನೇಕ ಮನೆಗಳು ಹಾಳಾದವನ್ನು ಇನ್ನೂ ಕೆಲವರು ಬಿದ್ದು ಹೋದ ಮನೆಗಳನ್ನೇ ಮತ್ತೆ ಕಟ್ಟಿಕೊಂಡು ವಾಸಮಾಡುತ್ತಾ ಇದ್ದಾರೆ ಇದು ಮುಂದೆಯೂ ಬಹು ಅಪಾಯವೆಂತ ತೋರುತ್ತೆ.—ಸೋಸಲೆ ಗ್ರಾಮದ ಬಳಿ ಒಂದು ಛತ್ರದ ಕಣದಲ್ಲಿ ರಾಶಿಗೆ ಕಾವಲಿದ್ದ ಇಬ್ಬರನ್ನು ೧೦-೧೨ ಜನ ಕಳ್ಳರು ಬಂದು ಪೂರಾ ಹೊಡೆದು ಸುಮಾರು ೩-೪ ಪಲ್ಲಾ ಭತ್ತವನ್ನು ಹೊತ್ತುಕೊಂಡು ಹೋದರೆಂತಲೂ, ಪೆಟ್ಟು ತಿಂದವರ ಪೈಕಿ ಒಬ್ಬನು ಆಸ್ಪತ್ರೆಯಲ್ಲಿ ಇಲಾಜು ಮಾಡಿಸಿಕೊಳ್ಳುತ್ತಿದ್ದಾನೆಂತಲೂ ವರ್ತಮಾನ — ಮೂಗೂರಿನ ಜಾತ್ರೆ ಈ ೩೦ ನೇ ತಾರೀಖಿಗೆ ಹೊಡೆಯೂ, ೨೨ ಕ್ಕೆ ಘಂಟಿ ಜಾತ್ರೆಯೂ ಪ್ರಾರಂಭವಾಗುವದು ಈ ಜಾತ್ರೆಗೆ ಬಹು ದೂರದಿಂದ ಜನರು ಬರುವ ವಾಡಿಕೆಯುಂಟು. ಮೂಗೂರಿನವರ ದಂಗೆ ಮೊಕದ್ದಮೆ ಯಾರೂ ಭಯಪಡಬಾರದು ತುಂಟರು ಮಾತ್ರ ಈ ಜಾತ್ರೆಯಲ್ಲಿರುವದಿಲ್ಲ ಸಾಧುಪ್ರವೃತ್ತಿಗಳಲ್ಲದವರು ಊರಲ್ಲಿ ಇದ್ದಾರೆ ಸರ್ಕಾರದವರೇ ನಿಂತು ಈ ಜಾತ್ರೆಯನ್ನು ನಡಸುವದರಿಂದ ಎಲ್ಲಾ ಉತ್ಸವಾದಿಗಳು ಕ್ರಮವಾಗಿ ನಡೆಯುವವು

ಅರಕಲಗೂಡು.—ಮಳೆ ಹಿತಕರವಾಗಿದೆ. ರೈತಾಪಿ ಜನಗಳು ಕಿರಾಣಿ ದಿನಸನ್ನೂ, ಭತ್ತವನ್ನೂ ಶೇಖರಮಾಡುವುದರಲ್ಲಿ ನಿರತರಾಗಿದ್ದಾರೆ. ಸುಗ್ಗಿಕಾಲದ ಸವಿಪನೆ ತೋರುತ್ತಿದ್ದರೂ ಧಾರಣೆಯು ಇಳಿತರವಾಗದೆ ಇರುವುದು ತುಂಬಾ ಶೋಚನೀಯವಾಗಿದೆ —ಪೋಲೀಸ್ ಅಧಿಕಾರಿಗಳ ಉಸ್ತುವಾರಿಯು ಇರುವುದರಿಂದ ಜೂಜುಕೋರರ ಹಾವಳಿಯು ಕಡಿಮೆಮಟ್ಟಿಗೂ ಕಡಿಮೆಯಾಗಿರುವುದು ಸಂತೋಷಪ್ರದವಾಗಿದೆ—ಈ ಸಾರಿ ನಡೆದ ರಾಮನಾಥಪುರದ ಜಾತ್ರೆಯಲ್ಲಿ ಅಲ್ಲಿನ ಹೊಳೆಯಲ್ಲಿರತಕ್ಕ ಗೋಪುರಕಲ್ಲಿನ ಬಳಿ ಒಂದು ಭೀಷಣ ರಂಧ್ರದಲ್ಲಿ ಯಾತ್ರಾರ್ಥಿಗಳು ನುಗ್ಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಬರುವುದು ರೂಢಿಯಾಗಿದೆ ಹೀಗೆ ಮಾಡಿದರೆ ಪಾಪವು ಪರಿಹಾರವಾಗುತ್ತಂತೆ ಈ ಸಂದರ್ಭದಲ್ಲಿ ಒಬ್ಬ ತಿನಾಬಾರದ(?) ಹೆಂಗಸು ನುಗ್ಗಿ ಮೃತಪಟ್ಟಿದ್ದು ತುಂಬಾ ದುಃಖಕರವಾಗಿದೆ ಇಂಥಾ ನಾಗರೀಕ ಕಾಲದಲ್ಲಿ ಸಹ ಕೆಲವರು ಈ ರೀತಿ ಮಾಡುವುದು ಅಷ್ಟು ಸಮರ್ಪಕವಾದ ಕಾರ್ಯವಲ್ಲ. - ಮೈಸೂರು ದೇಶದ ಕೋಆಪರೇಟಿವ್ ಸಂಘದ ರೆಜಿಸ್ಟ್ರಾರ್ ಸಾಹೇಬರು ಹಾಸನದಿಂದ ಇದೇ ಮಾಹೆ ತಾ. ೯ ನೇ ಬೆಳಿಗ್ಗೆ ಬಂದು ಆ ದಿನವೆಲ್ಲಾ ಊರಿನ ಮತ್ತು ಸಮೀಪದಲ್ಲಿರತಕ್ಕ ಮೆಂಬರುಗಳನ್ನು ಕರೆಸಿ ಅವರ ಅನುಕೂಲ ಅನಾನುಕೂಲಗಳನ್ನು ಕುರಿತು ಅವರ ಕೂಡ ಚರ್ಚಿಸಿ ಅದೇ ಸಾಯಂಕಾಲ ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಒಂದು ಸಭೆಯಲ್ಲಿ ಈ ದೇಶಾಭಿವೃದ್ಧಿಗೆ ನಾವೆಲ್ಲರೂ ಕಾರಣರಾಗಬೇಕಾಗಿದ್ದರೆ ನಮ್ಮಲ್ಲಿ ಪರಸ್ಪರ ಮೈತ್ರೀಭಾವವೂ, ಒಗ್ಗಟ್ಟೂ, ಸತ್ಪ್ರಯತ್ನವೂ ಇರಬೇಕೆಂತಲೂ, ವ್ಯಸನ, ದ್ವೇಷ, ಅಸೂಯೆ ಎಂಬೀ ಅವಗುಣಗಳು ಇರದೆಹೋಗಬೇಕೆಂತಲೂ, ಸಾಲವೆಂಬ ಸಾಗರದಲ್ಲಿ ಮುಳುಗಿರತಕ್ಕ ಈ ಕೃಷಿಕರಿಗೆ ಈ ಸಂಘವು ಒಂದು ಹಡಗುಪ್ರಾಯವಾಗಿದೆಯಾಗಿ ಯಾವ ಹೆಂಗಸಾಗಲಿ, ಗಂಡಸಾಗಲಿ ಈ ಸಂಘಕ್ಕೆ ಸೇರಿ ಊರ್ಜಿತಸ್ಥಿತಿಗೆ ಬರಬಹುದೆಂಬೀ ರೀತಿಯಾಗಿ ಅನೇಕ ರಸಯುಕ್ತವಾದ ಮಾತುಗಳನ್ನು ಹೇಳಿ ಸಭಿಕರನ್ನು ಸಂತೋಷಪಡಿಸಿದರು ಮಾರನೇ ಬೆಳಿಗ್ಗೆ ಅವರು ಅಕ್ಕಿಹೆಬ್ಬಾಳಿಗೆ ಅಮಲ್ದಾರರ ಸಮೇತ ದಯಮಾಡಿ ಊರಿನಲ್ಲಿನ ಸಂಘವನ್ನು ಕುರಿತು ವಿಚಾರಿಸಿ ಅದು ತೃಪ್ತಿಕರವಾದ ಸ್ಥಿತಿಯಲ್ಲಿರುವುದನ್ನು ಕೇಳಿ ಸಂತೋಷಿಸಿದ್ದಲ್ಲದೆ ವಿಶೇಷವಾಗಿ ಸಾಲದಲ್ಲಿ ಭೂಗತರಾಗಿದ್ದ ಅಲ್ಲಿನ ಹೊಲೆಯರನ್ನು ಮುಂದಕ್ಕೆ ತರಲು ಸತ್ಪ್ರಯತ್ನಗಳಿಂದ ಬುದ್ಧಿ ಹೇಳಿ ಅವರಿಗೆ ಸುಮಾರು ೧,೫೦೦ ರೂಪಾಯಿ ತನಕ ಅತಿ ಸುಲಭಬಡ್ಡಿಯಲ್ಲಿ ಸಾಲ ಕೊಡಿಸುವದಾಗಿ ಹೇಳಿ ಹಿಂತಿರುಗಿದ್ದು ತುಂಬಾ ಸಂತೋಷಕರವಾಗಿದೆ ಬಳಿಕ ಅವರು ರಾಮನಾಥಪುರ, ಬಸವಾಪಟ್ಟಣ ಇವುಗಳನ್ನು ನೋಡಿಕೊಂಡು ಅಲ್ಲಿಂದ ಹಾಸನದ ಕಡೆಗೆ ಪ್ರಯಾಣಮಾಡಿದರು —ಈ ಕಡೆ ಕಾರೋನೇಷನ್ ಡೇ ಉತ್ಸವವನ್ನು ಪ್ರಜೆಗಳು ಅಧಿಕ ಭಯಭಕ್ತಿಯಿಂದಲೂ, ಉತ್ಸಾಹಪೂರ್ವಕವಾಗಿಯೂ ಆಚರಿಸಿ ತಂತಮ್ಮ ಭಕ್ತಿಯನ್ನು ವ್ಯಕ್ತಪಡಿಸಿದರು. ಅಕ್ಕಿಹೆಬ್ಬಾಳಿಯಲ್ಲಿಯೂ ಇದೇ ರೀತಿ ನಡೆಯಿತು

ಫ್ರೆಂಚ್‌ರಾಕ್ಸ್.—ಬೆಳಿಗ್ಗೆ ಛಳಿಯೂ, ಕೊರತವೂ ಜಾಸ್ತಿ. ರೈತರು ರಾಗಿ ಮೆದೆ ಹಾಕಿದ್ದಾಯಿತು ಭತ್ತ ಬಡಿಯುವದಲ್ಲಿಯೂ ಮಾರಾಟ ಮಾಡುವದರಲ್ಲೂ ಆಸಕ್ತರಾಗಿದ್ದಾರೆ —ಎರಡು ವಾರಗಳಿಂದ ಸಮೀಪ ಗ್ರಾಮಗಳಾದ ದರಸಕುಪ್ಪೆ, ಕೆನ್ನಾಳು, ಕ್ಯಾತನಹಳ್ಳಿ, ಹರವುಗಳಲ್ಲಿ ಕಾಲರಾ ಉಪದ್ರ ತಲೆದೋರಿ ಇಪ್ಪತ್ತು ಮೂವತ್ತು ಮರಣಗಳಾದಂತೆ ತಿಳಿದು ಬಂದಿದೆ ಸರ್ಕಾರದವರು ಈ ಟವನಿನ ಕೆಲವು ಭಾವಿಗಳನ್ನು ಔಷಧಿಗಳಿಂದ ಶುದ್ಧಿಮಾಡಿಸಿ ನೀರನ್ನು ಕಾಯಿಸಿ ಕುಡಿಯುವಂತೆ ಎಚ್ಚರಿಕೆ ಕೊಟ್ಟಿದ್ದಾರೆ. ಸಂತೆಯನ್ನು ಊರಿಗೆ ಒಂದು ಮೈಲಿ ದೂರ ವರ್ಗಾಯಿಸಿದರು ಆದರೂ ಕಳೆದ ವಾರ ಇಲ್ಲಿನ ಕುರೋಡೆಯಲ್ಲಿ ಮೂರೂ, ಪೋಲೀಸ್ ಕ್ವಾರ್ಟರಿನಲ್ಲಿ ಒಂದೂ ಕಾಲರಾ ಕೇಸುಗಳಾದವೆ ಎಂದು ಗೊತ್ತಾಗುತ್ತೆ ಆದರೆ ಈಗನವರಿಗೆ ಮರಣಗಳಿಲ್ಲ. ಈ ಪೈಕಿ ಕುರೋಡೆಯಲ್ಲಿ ನಮ್ಮ ಡಾಕ್ಟರವರ ಚಿಕಿತ್ಸೆಯಿಂದ ಒಬ್ಬರೂ, ಹಾಜಗಾಬರ(?) ಚಿಕಿತ್ಸೆಯಿಂದ ಒಬ್ಬರೂ ಗುಣಹೊಂದಿರುವದು ತುಂಬಾ ಸಂತೋಷವಾಗಿದೆ ಮುಂದೆಯೂ ಇಂಥಾ ರೋಗಗಳಿಗೆ ಇಂಥ ಕೂಡಲೆ ಇವರುಗಳಲ್ಲಿ ಚಿಕಿತ್ಸೆ ಹೊಂದಿದರೆ ಗುಣಕಾರಿಯಾಗಿರುತ್ತೆ —ಸಂತೆಯನ್ನು ಊರ ಹೊರಗೆ ಒಂದು ಮೈಲಿ ದೂರಕ್ಕೆ ವರ್ಗಾಯಿಸಿದ್ದು ರೋಗಾದ್ಯುಪದ್ರಗಳ ಸೋಂಕಿಗೆ ತಡೆಯಾಗಿದೆ ಎಂಬ ಸಂತೋಷವಿದ್ದರೂ, ಸಂತೆ ಕೂಡುವ ಸ್ಥಳ ತುಂಬಾ ಕಿಷ್ಕಿಂಧವಾಗಿದೆ ಜನರ ದೊಂಬಿ, ನೂಕಾಟ ಜಾಸ್ತಿ. ಮೋಸ, ಅನ್ಯಾಯ, ಅಲ್ಪ ವಿಷಯಗಳಿಗೆ ಝಗಳ, ಹೊಡೆಯುವದು, ಉಗಿಯುವದು, ಈ ಮೊದಲಾದ ಹೋರಾಟಗಳಾಗುತ್ತವೆ. ಊರಿನಲ್ಲಿ ದೊಡ್ಡವರ ಮತ್ತು ಪೋಲೀಸಿನವರ ಸಂಚಾರ ಅಷ್ಟಿಷ್ಟು ಇತ್ತು ಅದರಲ್ಲಿ ಈ ಕಚ್ಚಾಟಗಳಿದ್ದರೂ ಈಗ ಊರ ಹೊರಗಡೆ ಕೇಳುವವರೇ ಇಲ್ಲ ಸರ್ಕಾರದವರು ಕಟ್ಟು ಮಾಡಿ ಇಂಥಿಂಥಾ ವ್ಯಾಪಾರಿಗಳು ಇಂಥಿಂಥಾ ಕಡೆ ಇರತಕ್ಕದೆಂದೂ, ಗಾಡಿಗಳು ಇಂಥಾ ಕಡೆ ನಿಲ್ಲತಕ್ಕದ್ದೆಂದೂ ಗೊತ್ತುಮಾಡಿ, ಸಂತೆಯ ಸ್ಥಳವನ್ನೂ ವ್ಯಾಪಾರಿಗಳನ್ನೂ ಕ್ರಮಪಡಿಸಿ, ಕೆಲವು ಜನ ಪೋಲೀಸಿನವರನ್ನೂ ನೇಮಿಸುವದು ಪ್ರಯೋಜನಕರವಾಗಿದೆ

ಚಿತ್ರದುರ್ಗ.—ಛಳಿ ದಿನೇದಿನೇ ಜಾಸ್ತಿಯಾಗುತ್ತಾ ಅದರ ಬಾಧೆ ಈ ವರುಷ ಪ್ರಜೆಗಳು ಸಹಿಸತಕ್ಕದ್ದೇ ಕಷ್ಟವಾಗಿದೆ ಶೀತ ಸಂಬಂಧವಾದ ಕಾಯಿಲೆಗಳು ಈ ವರುಷ ಕರ್ನಾಟಕ ವೈದ್ಯರಿಗೆ ಚನ್ನಾಗಿ ಜೀವನವಾಡಿಸಿತು. ಆಸ್ಪತ್ರೆಗಿಂತಲೂ ಕಾಯಿಲೆಯವರು ತುಂಬೇ ಇರುತ್ತಾರೆ.—ಪವಸಧಾರಣೆ ಕ್ಷಾಮಕಾಲದಂತೆಯೇ ಇದೆ ಇದರಿಂದ ಬಡವರ ಜೀವನ ಬಹಳ ಕಷ್ಟಕರವಾದುದಾಗಿ ಇದೆ —ಈ ವರುಷ ಒಳ್ಳೆಯ್ಯೇ ಮಳೆಗಳು ಬಂದದ್ದರಿಂದ ಹತ್ತಿ ಫಸಲು ವಿನಹ ಬಾಕಿ ಧಾನ್ಯಗಳೆಲ್ಲಾ ಉತ್ಕೃಷ್ಟವಾಗಿ ಆಗಿದೆ. ಸರ್ಕಾರದವರು ಕೊಟ್ಟ ಕ್ಯಾಂಬೋಡಿಯಾ ಹತ್ತಿಬೀಜ ಈ ಡಿಸ್ಟ್ರಿಕ್ಟಿನಲ್ಲಿ ಬಹಳ ಜನಗಳು ಪೇರಾವು ಮಾಡಿದ್ದಾರೆ ಅದರ ಗಿಡಗಳೇನೋ ಬಹಳ ಸೊಂಪಾಗಿ ಬೆಳೆದಿವೆ ಅದರಲ್ಲಿ ಹೂವು ಕಾಯಿ ಮಾತ್ರ ಈ ವರಿವಿಗೂ ಬಿಟ್ಟಿಲ್ಲ ಈ ವಿಷಯ ಕೆಲವು ದಿವಸಗಳ ಕೆಳಗೆ ಇಲ್ಲಿಗೆ ಬಂದಿದ್ದ ವ್ಯವಸಾಯದ ಇಲಾಖೆಯ ಅಧಿಕಾರಿಗಳಾದ ಮ|| ಎಚ್ ವಿ ಕೃಷ್ಣಯ್ಯನವರಲ್ಲಿ ರೈತರು ಗೋಳಿಟ್ಟುಕೊಂಡಿದ್ದಾರೆ ಬಾಕೀ ಹತ್ತಿ ಫಸಲು ಈ ವರುಷದ ಹೆಚ್ಚು ಮಳೆಯಿಂದ ಕೆಟ್ಟುಹೋಯಿತು.—ಈ ಡಿಸ್ಟ್ರಿಕ್ಟಿನಲ್ಲಿ ಸತ್ಯವಾದ ನಡವಳಿಕೆಗೂ ಪ್ರಜೆಗಳಿಗೆ ನ್ಯಾಯ ಮಾಡತಕ್ಕದ್ದರಲ್ಲಿಯೂ ದಕ್ಷರಾಗಿದ್ದ ಮುನ್‌ಸಿಫ್ ಮ|| ಎಸ್ ವೆಂಕಟಕೃಷ್ಣಯ್ಯನವರು ಇಲ್ಲಿಂದ ವರ್ಗವಾಗಿ ಮೈಸೂರಿಗೆ ತೆರಳಿದರು ಅವರನ್ನು ಅಗಲಿದ್ದು ಮ|| ಕೆ ಚಾಂಡಿಸಾಹೇಬರನ್ನು ಅಗಲಿದಂತೆಯೇ ಈ ಡಿಸ್ಟ್ರಿಕ್ಟಿನ ಪ್ರಜೆಗಳು ಸಂಕಟಪಡುತ್ತಿದ್ದಾರೆ.—ಈ ಊರಲ್ಲಿ ಪೂರ್ವದಲ್ಲಿದ್ದ ಹಿಂದೂಸ್ಥಾನಿ ಸ್ಕೂಲಿನ ಸರ್ಕಾರಿ ಬಾಬತು ತಗೆ ಕಟ್ಟಿದ ಕಿತ್ತು ಅದನ್ನು ಹೊಸದಾಗಿ ತಯಾರ್ ಮಾಡಿಸಿ ಅದರಲ್ಲಿ ಎ. ವಿ ಸ್ಕೂಲ್ ಬಾಲಕರಿಗೋಸ್ಕರ ಅದೇ ಕಾಂಪೌಂಡಿನಲ್ಲಿ ನೂತನವಾಗಿ ಸಿದ್ಧಪಡಿಸತಕ್ಕ ಟೆನ್ನಿಸ್ ಆಟಕ್ಕೆ ಸ್ಥಳ ದೊಡ್ಡದು ಆಕ್ರಮಿಸಿಕೊಂಡರು. ಇದರಿಂದ ಹಿಂದೂಸ್ಥಾನಿ ಸ್ಕೂಲ್ ಬಾಲಕರು ಆರೋಗ್ಯಕರವಾದ ಸ್ಥಳವಿಲ್ಲದೆ ಬಾಡಿಗೆ ಕಟ್ಟಡಗಳಲ್ಲಿ ಇದ್ದುಕೊಂಡು ಅನಾನುಕೂಲಪಡುತ್ತಿದ್ದಾರೆ. ಟೆನ್ನಿಸ್ ಕೋರ್ಟು ದೊಡ್ಡದಾದ್ದರಿಂದ ಇತರೇ ಆಟಗಳಿಗೂ ಕೂಡ ಅನುಕೂಲವಿಲ್ಲದೆ ಇರುವುದಕ್ಕಾಗಿ ಎ ವಿ ಸ್ಕೂಲ್ ಹುಡುಗರೂ ಅನಾನುಕೂಲಪಡುತ್ತಾ ಇದ್ದಾರೆ. ಅ|| ಕಮೀಷನರ್ ಮ|| ಆರ್. ನಾರಾಯಣರಾಯರವರು ಚಿತ್ರದುರ್ಗದ ತಾಲ್ಲೂಕಿನ ಹುಜೂರು ಜಮಾಬಂದಿ ಮಾಡುತ್ತಾ ಇದ್ದಾರೆ.

ಹಾಸನ.—ಬೇಳೆ ಹೆಚ್ಚು ಧಾರಣೆವಾಸಿಗಳು ಇನ್ನೂ ಕ್ಷಾಮಕಾಲವನ್ನು ಸೂಚಿಸುತ್ತಲಿವೆ ನಮ್ಮ ಸರ್ಕಾರದವರು ೫೦ ರೂಪಾಯಿಗೆ ಒಳಪಟ್ಟ ಸಂಬಳಗಾರರಿಗೆಲ್ಲಾ, ಮದರಾಸ್ ಪ್ರಸಿಡೆನ್ಸಿಯಲ್ಲಿ, ಬೆಂಗಳೂರು ದಂಡಿನಲ್ಲಿಯೂ, ಕೊಡುತ್ತಿರುವಂತೆ ಕ್ಷಾಮಕಾಲದ ಅಲೋಯನ್ಸನ್ನು ಕೊಡುತ್ತಾ ಬರುವಂತೆ ಸರ್ವತ್ರ ಏರ್ಪಾಡು ಮಾಡಿದರೆ ತುಂಬಾ ಉಪಕಾರವಾಗುತ್ತದೆ— ನೆನ್ನೆ ೩ ನೇ, ೪ ನೇ ತಾ. ಇಲ್ಲಿ ದನಗಳ ಪ್ರದರ್ಶನವೂ, ತೂರುವ ಯಂತ್ರ, ಜೋಳದಗಿಡವನ್ನು ಕತ್ತರಿಸುವ ಯಂತ್ರ, ಇತ್ಯಾದಿ ಪರೀಕ್ಷೆಗಳೂ ವಿಜೃಂಭಣೆಯಿಂದ ನಡೆದವು. ಸಾವಿರಾರು ದನಗಳು ಪ್ರದರ್ಶಿಸಲ್ಪಟ್ಟಿದ್ದವು ಶನಿವಾರ ಬೆಳಿಗ್ಗೆ ಈ ಡಿಸ್ಟ್ರಿಕ್ಟಿನ ಅನ್ಯೋನ್ಯ ಸಹಾಯ ಸಂಘಗಳ ಪರಿಷತ್ತು ಸೇರಿ ನಮ್ಮ ಡೆಪ್ಯುಟಿ ಕಮೀಷನರ್ ಮ|| ವೆದರಾಲ್ ಸಾಹೇಬರ ಅಧ್ಯಕ್ಷತೆಯಲ್ಲಿ ನಡಿಸಲ್ಪಟ್ಟಿತು ಈ ಪರಿಷತ್ತು ಶನಿವಾರ ಭಾನುವಾರ ಸಹ ನಡೆದು, ಸಂಘಸೂಕ್ತವಾದ ಅನೇಕ ಸಂಗತಿಗಳು ಚರ್ಚಿಸಲ್ಪಟ್ಟು ತೀರ್ಮಾನವಾಗುವವು. ಮಧ್ಯಾಹ್ನ ಈ ಡಿಸ್ಟ್ರಿಕ್ಟಿನ ತಾಲ್ಲೂಕುಗಳೆಲ್ಲವುಗಳಿಂದಲೂ ಕರೆಸಲ್ಪಟ್ಟಿದ್ದ ಅಮಲ್ದಾರರುಗಳು ಮುಂತಾದ ಕಾರ್ಯನಿರ್ವಾಹಕರೆಲ್ಲಾ ಪ್ರದರ್ಶನ ಮೈದಾನದಲ್ಲಿ ಸೇರಿದರು. ನಮ್ಮ ಡೆಪ್ಯುಟಿ ಕಮೀಷನರ್‌ರವರೂ ಅ|| ಕಮೀಷನರುಗಳೂ ಸಭೆಯನ್ನಲಂಕರಿಸಿ ವಿಧವಿಧವಾದ ಆಟಗಳನ್ನೂ ನೋಟಗಳನ್ನೂ ಕಲ್ಪಿಸಿದ್ದಪ್ರಕಾರ ಎಲ್ಲವೂ ಬಹು ವಿನೋದವಾಗಿ ನಡೆದವು ಪ್ರದರ್ಶಕರೂ, ನೋಟಕರೂ, ಅನ್ಯೋನ್ಯ ಸಹಾಯಕ ಸಂಘಗಳ ಪ್ರತಿನಿಧಿಗಳೂ ಅಲ್ಲದೆ ಎತ್ತು ಹಸು ಕರುಗಳನ್ನು ಕೊಳ್ಳುವ ಮಾರುವವರೆಲ್ಲರೂ ಸೇರಿ, ಸುಮಾರು ಹತ್ತುಸಾವಿರ ಜನರವರೆಗೂ ಸೇರಿದ್ದರು ಮಾರಾಟದ ರಾಸುಗಳಿಗೆ ಪ್ರತಿಯೊಂದಕ್ಕೂ ಒಂದಾಣೆಯಂತೆ ವಸೂಲಾದ ಹಣವು ಈ ವರೆಗೆ ಸುಮಾರು ೩೫೦ ರೂಪಾಯಿ ಆಯಿತೆಂದು ತಿಳಿದುಬಂದಿದೆ. ಈ ಸಂಸ್ಥಾನದ ಕೋಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರ್ ಮ|| ಎ. ಎ. ನಾರಾಯಣಯ್ಯಂಗಾರ್ರವರು ಶನಿವಾರದೊಡನೆ ಬಂದು ಪ್ರತಿನಿಧಿಗಳ ಪರಿಷತ್ತಿನಲ್ಲಿ ಹಾಜರಿದ್ದು, ಪ್ರತಿನಿಧಿಗಳ ಸಲಹೆಗಳನ್ನು ಅಂಗೀಕರಿಸಿ ಸಮಯೋಚಿತವಾದ ತಿಳುವಳಿಕೆಗಳನ್ನೂ ಸಮಜಾಯಿಷಿಗಳನ್ನೂ ಹೇಳಿ ಸಂತೃಪ್ತಿಪಡಿಸಿದರು, ಹೀಗೆ ನಮ್ಮ ಡೆಪ್ಯುಟಿ ಕಮೀಷನರವರೂ, ಈ ಮಹನೀಯರೂ, ಫಸ್ಟ್ ಅ|| ಕಮೀಷನರ್ ಮ|| ಅಮೀರ್ ಹುಸೇನ್ ಸಾಹೇಬರವರೂ, ಇತರ ಕಾರ್ಯನಿರ್ವಾಹಕರೂ ಸೇರಿ ಚತುರತೆಯಾಗಿಯೂ, ಶ್ರದ್ಧೆಯಿಂದಲೂ, ಸರಳ ಹೃದಯದಿಂದಲೂ ವಿಶೇಷ ಕಾರ್ಯಗಳನ್ನೂ ನೆರವೇರಿಸಿದರು. ಇಂಥಾ ಪ್ರದರ್ಶನಗಳೂ, ಕೋಆಪರೇಟಿವ್ ಸೊಸೈಟಿಗಳ ಕಾನ್ಫರೆನ್ಸೂ ಪ್ರತಿ ವರ್ಷವೂ ಹೀಗೆಯೇ ನಡೆಯುತ್ತಾ ಬಂದರೆ ಪ್ರಜೆಗಳಿಗೆ ಲೌಕಿಕಜ್ಞಾನವೂ, ಅನ್ಯೋನ್ಯತೆಯ ಪ್ರಯೋಜನವೂ ಉಂಟಾಗಿ ಸುಖ ಸಂಪತ್ತುಗಳು ಹೆಚ್ಚುತ್ತಾ ಬರುವುದರಲ್ಲಿ ಸಂದೇಹವಿಲ್ಲ —ಈ ಸ್ಥಳದಲ್ಲಿ ನಾಟಕದ ಮೂರು ಕಂಪನಿಗಳಿವೆ. ಇಂಗ್ಲಿಷ್‌ನದು ಒಂದು, ಕನ್ನಡದ್ದು ಎರಡು.

ಇವುಗಳಲ್ಲದೆ ಗುಬ್ಬಿ ನಾಟಕ ಕಂಪನಿಯೂ, ಸಿನೇಮೋಟೋಗ್ರಾಫ್ ಒಂದೂ, ಈ ಉತ್ಸವ ಸಂದರ್ಭದಲ್ಲೆಲ್ಲಾ ನಾಟಕಪ್ರದರ್ಶನಗಳನ್ನು ಮಾಡುತ್ತಲಿವೆ ಇಷ್ಟು ಮಾತ್ರವಲ್ಲದೆ ಜೂಜುಗಾರರ ಕೂಟವೂ ಅಲ್ಲಲ್ಲಿ ಕೂಟತ್ತು ಈ ಶ್ಲಾಘನೀಯವಾದ ಧಾರ್ಮಿಕಾಚರಣೆಗಳ ಸಮಯದಲ್ಲೂ ಈ ನೋಟಗಳಿಗೆ ಮುನ್ನು ತೆರುತ್ತಲಿರುವ ಬಡ ಜನಗಳ ವಿವೇಕವನ್ನು ಏನೆಂದು ಹೇಳೋಣ ! ದವಸ ಧಾನ್ಯಗಳಿಗೆ ಕೊಡಲು ಕಾಸಿಲ್ಲದವರೂ ಸಹ ಸಾಲವನ್ನಾದರೂ ಮಾಡಿ ನೋಟಗಳಿಗೆ ಹೋಗುವುದು ದುಃಖಕರವಾಗಿದೆ ಕೆಲವು ಹುಡುಗರು ಸ್ಕೂಲ್ ಫೀಜುಗಳಿ, ಪುಸ್ತಕಗಳಿಗೂ ಬೇಕೆಂದು ತಾಯಿತಂದೆಗಳಿಂದ ದುಡ್ಡು ತೆಗೆದುಕೊಂಡು ನಾಟಕಗಳಿಗೆ ದಾಕೆ ಕೆಡುತ್ತಾರೆ ನಾಟಕಾದಿಗಳಿಗೆ ಲೈಸೆನ್ಸು ಕೊಡುವ ಅಧಿಕಾರಿಗಳು ಪ್ರಜಾಹಿತಚಿಂತನೆಯಿಂದ ಪ್ರತಿ ಕಂಪನಿಗೂ ೨ ೩ ನಾಟಕಗಳಿಗೆ ಅವಕಾಶ ಕೊಡುವುದು ಉತ್ತಮವೆಂದು ತೋರುತ್ತದೆ

ದಾಣೆಬೆನ್ನೂರು ತಾ|| ಚಿಕ್ಕಮಾಗನೂರು —ಈ ಚಿಕ್ಕ ಗ್ರಾಮವು ನದೀ ತೀರದಲ್ಲಿದೆ ಇಲ್ಲಿ ಡಿಸೆಂಬರ್ ತಾ. ೩೧ ರಲ್ಲಿ ಮಹೇಶ್ವರನ ಜಾತ್ರೆಯು ನಡೆಯಿತು ಈ ಜಾತ್ರೆಗೆ ಬರತಕ್ಕ ಪರಸ್ಥಳದ ಮಹಾಜನಗಳಿಗೆ ಇಲ್ಲಿನ ಸಾಹುಕಾರ್ ಮ್ಹ|| ಮುದಿಗೆಪ್ಪಶೆಟ್ರು, ಮ್ಹ|| ಗೂಳಪ್ಪನವರು, ಮೆ|| ಪಟೇಲ್ ಬಸವೆಗೌಡ್ರು, ಮ|| ಮುದಿಗೌಡ್ರು ಮುಂತಾದ ಮುಖಂಡಜನಗಳು ಸೇರಿ ಆ ದಿವಸ ಸುಮಾರು ಒಂದು ಸಾವಿರ ವೀರಶೈವಜನಗಳಿಗೆ ನದೀತೀರದ ತೋಪುಗಳಲ್ಲಿ ಸುಭೋಜನವನ್ನು ಮಾಡಿಸಿದರು ಮರುದಿವಸ ವೀರಶೈವರಿಗೂ ಅರ್ಕಾಚಾರಿಯವರಿಗೂ ಮರಗೆಲಸದವರಿಗೂ ಕಮ್ಮಾರರಿಗೂ ಸಹ ಅದೇ ಸ್ಥಳದಲ್ಲಿಯೇ ಸಾವಿರಾರು ಜನಗಳಿಗೆ ಸುಭೋಜನವನ್ನು ಮಾಡಿಸಿದರು ೩ ನೇ ದಿವಸ ಉತ್ಸವವಾದನೆ ಊರೊಳಗಿರುವ ಮಠಕ್ಕೆ ಬಂದು, ಊರಿನಲ್ಲಿರುವ ಎಲ್ಲಾ ಕೋಮಿನ ಜನಗಳ ಮನೆಗೆ ಜಾತ್ರೆಗಾಗಿ ಬಂದಿದ್ದ ಮಹಾಜನಗಳಿಗೂ, ಊರಿನವರಿಗೂ, ಹೆಂಗಸರಿಗೂ, ಮಕ್ಕಳಿಗೂ ಸಹ ಸಾಯಂಕಾಲವೆಲ್ಲಾ ಸುಮಾರು ಎರಡು ಸಾವಿರ ಜನಗಳವರೆಗೂ ಸುಭೋಜನವನ್ನೇ ಮಾಡಿಸಿದರು ಈಗ ಸುಮಾರು ೮ ೧೦ ವರ್ಷದಿಂದಲೂ ಇದೇ ಪ್ರಕಾರ ನಡೆಸುತ್ತಾ ಬಂದಿರುವ ಇವರ ಉದಾರಗುಣವು ಸ್ತೋತ್ರಾರ್ಹವಾಗಿದೆ —ಅಲ್ಲದೆ ಈ ಊರಿನಲ್ಲಿರುವ ರೈತರು ಸುಖಾವಸ್ಥೆಗಳಾಗಿ, ಚಿಕ್ಕವರ್ಷಕ್ಕೆ ನೆಮ್ಮದಿಯಾಗಿರುತ್ತಾರೆಂತಲೂ ಗ್ರಾಮದಿಂದ ಸಿವಿಲ್ ವ್ಯಾಜ್ಯವೇ ಆಗಲಿ ಕ್ರಿಮಿನಲ್ ವ್ಯಾಜ್ಯವೇ ಆಗಲಿ ತಾಲ್ಲೂಕು ಕೋರ್ಟು ಮುಂತಾದ ನ್ಯಾಯಸ್ಥಾನಕ್ಕೆ ಈಗ ಸುಮಾರು ೭೦ ೮೦ ವರ್ಷದಿಂದಲೂ ದುವ್ಯವಹಾರ ತೆಗೆದುಕೊಂಡು ಹೋಗಿಲ್ಲವೆಂತಲೂ ಯಜಮಾನರುಗಳಿಂದ ತಿಳಿಯಬರುತ್ತೆ ಇಂಥಾ ಸದ್ಗ್ರಾಮದ ರೈತರುಗಳನ್ನೂ ಮುಖಂಡರುಗಳನ್ನೂ ಕೊಂಡಾಡತಕ್ಕದ್ದಾಗಿದೆ ಈ ಗ್ರಾಮದ ರೈತರುಗಳಂತೆಯೇ ನಮ್ಮ ದೇಶದಲ್ಲಿರುವ ಗ್ರಾಮದ ರೈತರುಗಳೂ ಇವರ ಮೇಲುಪಜ್ಞೆಯನ್ನು ಅನುಸರಿಸಲೆಂದು ಹಾರೈಸುತ್ತೇವೆ

ವಿದೇಶದ ವೃತ್ತಾಂತಗಳು

ಆಂಟ್ವೆರ್ಪ್ ಎಂಬೊಂದು ಜಹಜು ಬೆಲ್ಜಿಯಂಗೆ ಸೇರಿದ ನದಿಯೊಳಗೆ ಮೀನು ಹಿಡಿಯುವುದಕ್ಕಾಗಿ ಹೋಗುತ್ತಿದ್ದ ಸಣ್ಣ ದೋಣಿಗೆ ಬಡಿದು ಅದನ್ನು ಮುಳುಗಿಸಿಬಿಟ್ಟಿತು ಅದರಲ್ಲಿದ್ದ ಹತ್ತು ಜನ ಬೆಸ್ತರು ನದಿಯ ಪಾಲಾದರು

* * *

ಇಂಗ್ಲಾಂಡಿಗೆ ಸೇರಿದ ಯಾರ್ಕ್ ಪಟ್ಟಣದಲ್ಲಿ ಮೆ| ವಾಂಡರ್‌ಬಿಲ್ಟ್ ಎಂಬಾತನು ಸಣ್ಣ ಮಕ್ಕಳಿಗಾಗಿಯೇ ಒಂದು ನಾಟಕಶಾಲೆಯನ್ನು ಕಟ್ಟಿಸಲಾರಂಭಿಸಿದ್ದಾನೆ ಅದು ೩೦೦ ಮಂದಿ ಮಕ್ಕಳು ಕುಳಿತು ನಾಟಕ ನೋಡುವುದಕ್ಕೆ ಅನುಕೂಲಿಸುತ್ತದೆ ವಯಸ್ಸಾದವರನ್ನು ಒಳಗೆ ಬಿಡುವುದಿಲ್ಲ

* * *

ಅಮೇರಿಕಕ್ಕೆ ಸೇರಿದ ಕ್ಯಾಲಿಫೋರ್ನಿಯಾ ಸೀಮೆಯಲ್ಲಿ ಹಿಮ ಸುರಿದು ಸ್ಯಾನ್ ಬಾರ್ನೆಡಿನೋನಿಂದ ಲಾಸ್ ಆಂಜಲೀಸ್‌ವರೆಗೆ ರೈತರು ಬೆಳೆಮಾಡಿದ್ದ ನಿಂಬೆ ಮತ್ತು ಕಿತ್ತಳೆ ಫಲವೆಲ್ಲಾ ಹಾಳಾಗಿದೆ ಎಂದೂ, ವ್ಯವಸಾಯಗಾರರು ಸುಮಾರು ಆರು ಕೋಟಿ ದ್ರವ್ಯದ ಫಸಲನ್ನು ಕಳೆದುಕೊಂಡಿದ್ದಾರೆಂದೂ ತಿಳಿದು ಬಂದಿದೆ

* * *

ನ್ಯೂಜಿಲೆಂಡಿಗೆ ಸೇರಿದ ಆಕ್‌ಲಾಂಡಿನಲ್ಲಿ ಏಳೂವರೆ ಲಕ್ಷ ರೂಪಾಯಿ ಖರ್ಚಿಸಿ ಒಂದು ದಿವ್ಯವಾದ ಎಂಗಡಿಯನ್ನು ಕಟ್ಟಬೇಕೆಂದು ಪ್ರಯತ್ನಮಾಡುತ್ತಿದ್ದಾರೆ ಆ ಕಟ್ಟಡದ ಒಂದು ಅಂತಸ್ತಿನಲ್ಲಿ ಅಪೂರ್ವವಾದ ಚಿತ್ರಪಟಗಳನ್ನು ಇಡಿಸುವರು ಇನ್ನೊಂದು ಉಪ್ಪರಿಗೆಯನ್ನು ನಾಟಕಶಾಲೆ ಮಾಡುವರು, ಮೂರನೇ ಅಂತಸ್ತಿನಲ್ಲಿ ದಿವ್ಯವಾದ ಉದ್ಯಾನವನವನ್ನು ಕಲ್ಪಿಸುತ್ತಾರೆ

* * *

ಇಂಗ್ಲಾಂಡಿಗೆ ಸೇರಿದ ಲಿವರ್‌ಪೂಲ್ ವೈದ್ಯವಿದ್ಯಾಶಾಲೆಯ ಪಂಡಿತರಾದ ಡಾಕ್ಟರ್ ಯೋರ್ಕ್‌ಯವರು ಕಳೆದ ತಿಂಗಳು ಲಂಡನ್ ಪಟ್ಟಣದ ಪಂಡಿತ ಸಭೆಯಲ್ಲಿ ನಿದ್ರಾರೋಗವನ್ನು ಕುರಿತು ಉಪನ್ಯಾಸಮಾಡುತ್ತಾ, ಈ ರೋಗವು ಭಾರೀ ಕ್ರೂರಜಂತುಗಳ ಪ್ರಬಲವೆಸೆಯಿಂದ ಹರಡಿಕೊಳ್ಳುತ್ತಿದೆ ಎಂದೂ, ಅಂಥಾ ಮೃಗಗಳನ್ನು ಕೊಲ್ಲುವುದು ಸಹಜವಲ್ಲದ ಪಕ್ಷಕ್ಕೆ ಅವನ್ನು ಕಾಡುಗಳಲ್ಲಿ ಬಹಳ ದೂರಪ್ರದೇಶಕ್ಕೆ ಅಂದರೆ ಮನುಷ್ಯನ ವಾಸಕ್ಕೆ ಸಮೀಪದಲ್ಲಿಲ್ಲದಂತೆ ಓಡಿಸಿಬಿಡಬೇಕೆಂದೂ, ಈ ಉಪಾಯದಿಂದ ಆ ಉಪದ್ರವೇನಾದರೂ ಶಮನವಾದೀತೇನೋ ಪರೀಕ್ಷಿಸಿ ನೋಡತಕ್ಕದ್ದಾಗಿದೆ ಎಂದೂ ಹೇಳಿದರು

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವುದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ನೀವೆಂದ ಬೇಗನೆ ಬೆಳೆದು ಪುಷ್ಟರಾಗಿಯೂ ಆರೋಗ್ಯ ಉಳ್ಳವರಾಗಿಯೂ ಇರಬೇಕೆಂದು ಬಯಸಿದರೆ

SCOTT'S EMULSION

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧವನ್ನು ಕೊಡಬೇಕು

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವುದು

ಅದು ಸಂತೋಷವೂ ಆನಂದವೂ ಪಡುವವಾಗಿ ಆಹಾರದ ರುಚಿ ಹೊಂದಿ ಸುಖ ಚಿಹ್ನೆ ತೋರಿಸುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧಮಾರುವವರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಬ್ರಂ|| ಶ್ರೀ|| ದೊಡ್ಡಬೆಲೆ ನಾರಾಯಣಶಾಸ್ತ್ರಿಗಳವರಿಂದ ಬರೆಯಲ್ಪಟ್ಟ "ಜೈಮಿನಿ ಭಾವಪ್ರಭೆ" ಎಂಬ ಟೀಕಾತಾತ್ಪರ್ಯಸಹಿತವಾದ

ಕರ್ನಾಟಕ ಜೈಮಿನಿ ಭಾರತವು

ಶುದ್ಧಪ್ರತಿ, ಉತ್ತಮ ಕಾಗದ ಇದು ಪದ್ಯ, ಪ್ರತಿಪದಾರ್ಥ, ತಾತ್ಪರ್ಯ, ಅವಯವಾರ್ಥ, ಸಂಧಿ, ಸಮಾಸ, ಅಲಂಕಾರ, ಛಂದೋವಿವರಣೆ ಮೊದಲಾದವುಗಳಿಂದೊಡಗೂಡಿ ಸ್ಕೂಲಿನಲ್ಲಿ ಓದುವ ವಿದ್ಯಾರ್ಥಿಗಳು ಮೊದಲು ಮಾಡಿ ಪ್ರೌಢ ವಿದ್ವಾಂಸರ ವರೆಗಿನ ಎಲ್ಲ ಸ್ತ್ರೀ ಪುರುಷರು ಓದಲು ಅನುಕೂಲವಾಗಿದೆ ಕರ್ನಾಟಕ ಭಾಷೆಯ ಕವಿಸಾರ್ವಭೌಮನಾದ ಲಕ್ಷ್ಮೀಶ ಕವಿಯ ಜೈಮಿನಿ ಭಾರತವು ಪದಲಾಲಿತ್ಯ, ಅರ್ಥಗಾಂಭೀರ್ಯ, ಮಾಧುರ್ಯ, ಶೈಲಿ ಸರಸತೆ, ಅರ್ಥಚಮತ್ಕೃತಿ, ಭಾವವೈಚಿತ್ರ್ಯ, ಅಲಂಕಾರ, ಪ್ರೌಢಿಮೆ, ಪ್ರಸ್ತುತಿ ಮುಂತಾದವುಗಳೊಡಗೂಡಿ ಸರಸ ಸಮ್ಮಿಳಿತವಾಗಿರುವುದೆಂಬುದು ಕನ್ನಡ ನಾಡಿಗೇ ಗೊತ್ತಾಗಿರುವುದರಿಂದ ವಿಶೇಷ ಬರೆಯುವುದು ಅನಾವಶ್ಯಕ ಮುಖ್ಯವಾಗಿ ಇದನ್ನು ಅಚ್ಚುಹಾಕಿಸುವುದರಲ್ಲಿಯೂ ಪಂಡಿತರ ಸಹಾಯವನ್ನು ಹೊಂದಿದ್ದವಾಗಿ ಇದರಲ್ಲಿ ದೋಷಗಳೇ ಇಲ್ಲ ಸಂಪೂರ್ಣವಾಗಿ ಅಂದರೆ ೩೪ ಸಂಧಿಗಳನ್ನೊಡಗೊಂಡ ೯೭೦ ಪುಟಗಳುಳ್ಳ ದೊಡ್ಡ ಸೈಜು ಬೆಲೆ ೧ ಕ್ಕೆ ೪ ರೂಪಾಯಿ ಟಪಾಲ್ ಹಾಸಲು ೮ ಆಣೆ

ಸಟೀಕಾ ಹರಿಕಥಾಮೃತಸಾರ.

ಶುದ್ಧ ಪ್ರತಿ, ಉತ್ತಮ ಕಾಗದ, ಹೊಸ ಪುಸ್ತಕ, ೩೪೪ ಪುಟ, ೩೨ ಸಂಧಿ ಈ ಗ್ರಂಥವು ಭಗವದ್ಭಕ್ತರಾದ ಜಗನ್ನಾಥದಾಸರಿಂದ ಭಾಮಿನೀಷಟ್ಪದಿ ರೂಪದಿಂದ ರಚಿಸಲ್ಪಟ್ಟಿರುವದು ಸರ್ವರಿಗೂ ವೇದ್ಯವೇ ಇದ ಇದರಲ್ಲಿ ಕೇವಲವಾಗಿ ಪರಮಾತ್ಮನ ಧ್ಯಾನ ವಿನಹ ಬೇರೆ ವಿಷಯ ಇರಲಾರದು ಇದು ಮುಮುಕ್ಷುಗಳಿಗೆ ಅತ್ಯಂತ ಉಪಯೋಗವಾದದ್ದು ಇದರಲ್ಲಿರುವ ೩೨ ಸಂಧಿಯಲ್ಲಿ ದೇವರ ಧ್ಯಾನ, ವೈರಾಗ್ಯ ಮಾಡತಕ್ಕ ವಿಧಿ, ಆ ಒಳ್ಳೆಯದನ್ನು ಹ್ಯಾಗೆ ಮಾಡುವದು, ಅದನ್ನು ಯಾರ್ಯಾರು ಮಾಡಿದರು ಅವರಿಗೆ ಹ್ಯಾಗೆ ಮೋಕ್ಷವಾಯಿತು ಎಂಬೀ ವಿಷಯಗಳು ಸ್ಪಷ್ಟವಾಗಿ ಬರೆಯಲ್ಪಟ್ಟಿವೆ ಪ್ರತಿ ಒಂದು ಸಂಧಿಯಲ್ಲಿರುವ ಪ್ರತಿ ಪದ್ಯಕ್ಕೆ ಸರಿಯಾದ ತಾತ್ಪರ್ಯವು ಟೀಕೆ ಪುರಾಣ ವೇದಶಾಸ್ತ್ರಗಳ ಅನುಭವವೂ ಸಹ ಕ್ರಮೇಣ ಬರೆಯಲ್ಪಟ್ಟಿವೆ ಇದನ್ನು ಸರಸ ಸ್ತ್ರೀ ಪುರುಷರಿಗೆ ಓದಲು ಎಷ್ಟು ಅನುಕೂಲವಾದ ಶಾಸ್ತ್ರ ಪುರಾಣ ಅರ್ಥ ಸೂಚಿಸುವೆ ಇದು ಸರ್ವರಿಗೂ ಅತ್ಯವಶ್ಯಕವಾದದ್ದು ಮೋಕ್ಷಕಾಮಿಗಳಿಗೆ ಅತ್ಯಂತ ಸಹಾಯವಾದದ್ದು ಇದನ್ನು ಸರ್ವರೂ ಅವಶ್ಯಕವಾಗಿ ಅಂಗೀಕರಿಸತಕ್ಕದ್ದು ಸುಂದರವಾದ ಅಕ್ಷರದಿಂದ ಕೂಡಿದೆ ಅಪೇಕ್ಷೆಯುಳ್ಳವರು ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು ಬೆಲೆ ೧ ಕ್ಕೆ ರೂ ೧-೪-೦ ಟಪಾಲ್ ಹಾಸಲು ೪ ಆಣೆ [13 1]

ಜೈಮಿನಿ ಭಾರತವನ್ನು ತರಿಸಿಕೊಂಡವರಿಗೆ ೧೨ ಆಣೆ ಕ್ರಯ ಬಾಳುವ ಚಾರ್ ದರ್ವೇಷ್ ಎಂಬ ೪ ಜನ ಫಕೀರರ ಕಥೆ ಮುಫತ್ತಾಗಿ ದೊರೆಯುತ್ತೆ ಸಟೀಕಾ ಹರಿಕಥಾಮೃತಸಾರ ತರಿಸಿಕೊಂಡವರಿಗೆ ಸೋಮಶೇಖರ ಎಂಬ ಕಥೆಯು ಮುಫತ್ತಾಗಿ ದೊರೆಯುತ್ತೆ ಮತ್ತು ನಮ್ಮಲ್ಲಿ ಅನೇಕ ಪುಸ್ತಕಗಳು ದೊರೆಯುತ್ತವೆ ವಿಳಾಸ —

ಹಿ ಎಸ್ ಕೃಷ್ಣಯ್ಯಶೆಟ್ಟಿ, ಬುಕ್ ಡಿಪೋ, ಒಕ್ಕಲಪೇಟೆ ಬೆಂಗಳೂರು ಸಿಟಿ

ಜರ್ಮನ್ ಜೇಬು ದೀಪ.

ಬೆಲೆ ರೂ ೧-೧೨ ೦

ಈ ಪಕ್ಕದಲ್ಲಿ ತೋರುವ ಜರ್ಮನ್ ಜೇಬು ದೀಪಗಳು ಜರ್ಮನಿ ದೇಶದ ಕಾರ್ಖಾನೆಯಿಂದ ಹೊಸದಾಗಿ ತರಿಸಲ್ಪಟ್ಟಿವೆ ಇದನ್ನು



ಒಂದು ಪೆಟ್ಟಿಗೆಯೊಳಗೆ ಇಟ್ಟರೆ ಇದು ವಿದ್ಯುಚ್ಛಕ್ತಿಯು ದೀಪದಿಂದ ಪ್ರಕಾಶಮಾನವಾಗಿ ಉರಿಯುತ್ತೆ ಇದನ್ನು ಹಚ್ಚುವದಕ್ಕೆ ಬೆಂಕಿ ಕಡ್ಡಿ ಅವಶ್ಯಕವಿಲ್ಲ ದೀಪದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿಂದ ಒತ್ತಿದರೆ ದೀಪ ಪ್ರಕಾಶಿಸುತ್ತೆ ಬೆಳಕನ್ನು ತೆರೆದುಬೇಕಾದ ಹೊತ್ತಿನಲ್ಲಿ ಅಪ್ಪಣೆಯಾಗುವ ಹಾಗೆ ಹತ್ತಿ ಉರಿಯುತ್ತೆ [11 1] ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗಲೂ ದೀಪದ ಕಡ್ಡಿ ಅವಶ್ಯಕವೇ ಇರುವದಿಲ್ಲ ಜನಗಳಿಗೆ ಇದು ಬಹಳ ಉಪಯೋಗ ಇದು ಇತರ ದೀಪಗಳನ್ನು ಹಚ್ಚುವದಕ್ಕೂ ಪ್ರಯಾಣ ಮಾಡುವಾಗ ಜೇಬಿನಲ್ಲಿ ಇಟ್ಟುಕೊಂಡು ಬೇಕಾದಾಗ ಬೇಕಾದವುಗಳನ್ನು ಹುಡುಕುವದಕ್ಕೂ ಬಹಳ ಉಪಯೋಗವಾದದ್ದು ಇದನ್ನು ಸುಲಭವಾಗಿ ಉಪಯೋಗಿಸಬಹುದು ಅದರಿಂದ ಯಾವ ಕೆಡಕೂ ಉಂಟಾಗುವದಿಲ್ಲ

ವಿಳಾಸ.—ಜಿ ಆರ್ ರಾವ್ ಕಂಪನಿ, ನಂ ೨೦,

ರಾಮನಾಯ್ಕನ್ ಬೀದಿ, ಸುಂಗುವಾರ್ಕೆಂ, ಮದರಾಸು

ಶ್ರೀಮನ್ನೃಸಿಂಹ ಪ್ರಯೋಗಪಾರಿಜಾತಾನುಸಾರಿ

ಆಶ್ವಲಾಯನ ಪೂರ್ವಪ್ರಯೋಗ ಸಸ್ವರ ಮಂತ್ರಸಹಿತ

ಮೈಸೂರು ಕೃಷ್ಣರಾಜಪೇಟೆ ಗುಂಡಪ್ಪ ಜೋಯಿಸರ ಮಕ್ಕಳು ವಿ ಎಂ ನರಸಿಂಹಶಾಸ್ತ್ರಿಗಳಿಂದ ಪ್ರಕಟಿಸಲ್ಪಟ್ಟ ಮೇಲ್ಕಂಡ ಅಪೂರ್ವವಾದ ಗ್ರಂಥವನ್ನು ನಂಜನಗೂಡು ಶ್ರೀ ಶ್ರೀ ಅವರೂ, ರಾಜಗುರುಗಳಾದ ಪರಕಾಲಸ್ವಾಮಿಗಳವರೂ, ಮೈಸೂರು ಶ್ರೀಮನ್ಮಹಾರಾಜರವರೂ ಪರೀಕ್ಷಿಸಿ ಬಹುಮಾನವನ್ನು ದಯಪಾಲಿಸುತ್ತಾರಲ್ಲದೆ ಸಂಸ್ಥಾನದ ಮಹಾ ವಿದ್ವಾಂಸರೂ ಪಂಡಿತೋತ್ತಮರೂ ಶೋಧಿಸಿರುತ್ತಾರೆ ಅನೇಕ ಪತ್ರಿಕಾಧಿಪತಿಗಳು ಪ್ರಶಂಸಿಸಿ ಪ್ರಶಂಸೆ ಮಾಡಿರುತ್ತಾರೆ ಬೆಲೆ ರೂಪಾಯಿ ೨ ೦ ೦

ಸನಾತನ ಸೂಕ್ಷ್ಮಧರ್ಮ —ಬಾಲಕ ಬಾಲಕಿಯರಿಗೆ ಅತಿ ಮುಖ್ಯವಾದದ್ದು ಬೆಲೆ ೩ ಆಣೆ ಮುದ್ರಣಯಂತ್ರ ರೂ ೧-೯-೦

ಪತ್ರರತ್ನಾಕರ —ಇದು ಮೈಸೂರು ಕ್ರಿಮಿನಲ್ ಕೋರ್ಟು ವಕೀಲರಾಗಿದ್ದ ಎಂ ವೆಂಕಟರಾಯರಿಂದ ರಚಿಸಲ್ಪಟ್ಟು ಎಲ್ಲಾ ಪತ್ರಗಳ ನಮೂನೆಗಳಿಂದ ಕೂಡಿದ ೧೨೫ ವಿಷಯಗಳಿಂದ ಅಡಕವಾಗಿದೆ ಬೆಲೆ ೧೦ ಆಣೆ

ಲೇಖ್ಯತತ್ವಪ್ರಕಾಶಿಕೆ —ಸದ್ರಿಯವರಿಂದಲೇ ರಚಿಸಲ್ಪಟ್ಟು ಎಲ್ಲಾ ವಿಧವಾದ ಲೇಖನ ನಮೂನೆಗಳಿಂದ ಕೂಡಿದ ೭೨ ವಿಷಯಗಳಿಂದ ಅಡಕವಾಗಿದೆ ಬೆಲೆ ೬ ಆಣೆ ರಾಜಪೇಪರ್ ರೂ ೧ ೧ ೦ ದೇವನಾಗರಿ ೧ ೧ ೦

ಆರೋಗ್ಯಪ್ರಶ್ನೋತ್ತರ —ಎಂ ಸಿ ಎಲ್ ೩ ಸಂಗತಿಗಳಿಗೆ ಅತ್ಯಾವಶ್ಯಕವಾದದ್ದು ಬೆಲೆ ೩ ಆಣೆ ಸ್ವಾಮಿವೇದಾಂತ ರೂ ೧ ೦ ೦

“ಶಾಂತಿರತ್ನಾಕರ” —ಮಾಸಪತ್ರಿಕೆ ಎಲ್ಲಾ ವಿಷಯಗಳೂ ಇವೆ ವಿದ್ಯಾರ್ಥಿಗಳಿಗೆ ರೂ ೨ ಪರಸ್ಥಳದವರಿಗೆ ರೂ ೨-೮-೦ [7 2]

ವಿಳಾಸ —ಎಸ್ ವೆಂಕಟರಾಮಯ್ಯ, ಎನ್ಸೈಕ್ಲೋ ಬುಕ್ ಡಿಪೋ, ಮೈಸೂರು

೧೯೦೧ ನೇ ಇಸವಿ ೭ ನೇ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ದರಖಾಸ್ತಿನ ನೋಟೀಸ್ ನಮೂನೆ ನಂಬರ್ ೭೧, ಸಿವಿಲ್

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ

ಸನ್ ೧೯೧೨ ೧೧ ನೇ ಫೈಲು ಮಿಸ್ಲೇನಿಯಸ್ ಅರ್ಜಿ ನಂಬರ್ ೩೧

ಮೃತಪಟ್ಟ ಸಾಹುಕಾರ್ ಬೊಜ್ಜಣ್ಣನವರ ಆಸ್ತಿ ವಿಷಯದಲ್ಲಿ

ಅರ್ಜಿದಾರರು ಸಾಹುಕಾರ್ ಬೊಜ್ಜಣ್ಣನವರ ಮಕ್ಕಳು ನರಸಿಂಹಯ್ಯ ಉರುಫ್ ಕೋಟಪ್ಪನವರು ಮೃತಪಟ್ಟ ಸದರಿ ಸಾಹುಕಾರ ಬೊಜ್ಜಣ್ಣನವರ ಮಗನು ಆಗಬೇಕೆಂಬ ಪಕ್ಷದಾರಿ ಮೇಲೆ ನರಸಿಂಹಯ್ಯ ಉರುಫ್ ಕೋಟಪ್ಪನವರು ಮೈಸೂರು ಸ್ಟೇಟ್ ದ ಸಾಹುಕಾರರಿಗೆ ಮೃತಪಟ್ಟ ಸಾಹುಕಾರ ಬೊಜ್ಜಣ್ಣನವರ ಸಂಬಂಧವಾಗಿ ಬರತಕ್ಕ ೨,೧೮೭ ೯ ೦ ರೂಪಾಯಿಗಳ ಸಾಲವನ್ನು ವಸೂಲ್ ಮಾಡುವುದಕ್ಕೆ ೧೯೦೧ ನೇ ಇಸವಿ ೭ ನೇ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ದಾಖಲ್ ಮಾಡಿರುತ್ತಾರೆ [16 1]

ಸದರಿ ದರಖಾಸ್ತುದಾರರಾದ ನರಸಿಂಹಯ್ಯ ಉರುಫ್ ಕೋಟಪ್ಪನವರ ಅರ್ಜಿಯನ್ನು ಸನ್ ೧೯೧೩ ನೇ ಇಸವಿ ಜನವರಿ ತಿಂಗಳು ೩೧ ನೇ ತಾರೀಖು ಶುಕ್ರವಾರದಲ್ಲು ಕೇಳಿ ಸರ್ಟಿಫಿಕೇಟ್ ನಡೆಯತಕ್ಕ ವಾದ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ ಆ ಕಾಲದಲ್ಲಿ ಸದರಿ ಮೃತಪಟ್ಟ ಸಾಹುಕಾರ್ ಬೊಜ್ಜಣ್ಣನವರ ಆಸ್ತಿಗೆ ಹಕ್ಕುದಾರರಾದ ಎಲ್ಲರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ

ಸನ್ ೧೯೧೩ ನೇ ಇಸವಿ ಜನವರಿ ತಿಂಗಳು ೧೧ ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತಿನ ಕೂಡಾ ಆಗಿದೆ

R. B. PLUMER,

ಡಿಸ್ಟ್ರಿಕ್ಟ್ ಜಡ್ಜ್

Mellin's Food

ಮೆಲಿನ್ಸ್ ಆಹಾರವು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಕೈಸೋಕದೆ ತಯಾರಾದದ್ದು.

ಮೆಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಗಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ

[14-1] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H. Gulliford, Proprietor and Manager Wesleyan Mission Press, Mysore. 16/1/1913

REGISTERED
M. 30

ವೃತ್ತಾಂತ ಪತ್ರಿಕೆ

ಮೂಲ್ಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಪುಸ್ತಕ ೨೬ ಮೈಸೂರು—ಸನ್ ೧೯೧೩ ನೇ ಇಸವಿ ಜನವರಿ ತಾರೀಖು ೨೩ ನೇ ಗುರುವಾರ. ಸಂಚಿಕೆ ೩೪

ಭೂಗೋಳದ ನೋಟ್ಸ್.

13 2

...ನ ಪರೀಕ್ಷಾ ಪತ್ರಿಕೆಗಳನುಸಾರವಾಗಿ ಪ್ರಾಕೃತಿಕ ಭೂಗೋಳದ ಅನೇಕ ...ಶ್ನೆ ಉತ್ತರಗಳು ಬರೆಯಲ್ಪಟ್ಟಿರುವುದರಿಂದ ವಿದ್ಯಾರ್ಥಿಗಳಿಗೆ ಬಹಳ ...ವಾಗುವುದು. ... ಸಿದ್ಧವಾಗುತ್ತದೆ ... ಪ್ರತಿಗಳು ಮಾತ್ರ ಮುದ್ರಿಸಲ್ಪಡುವುದರಿಂದ ಮುಂಚಿತವಾಗಿ ಬಂದ ...ಗಳಿಗೆ ಮೊದಲು ಪ್ರತಿಗಳು ಕಳುಹಿಸಲ್ಪಡುತ್ತವೆ. ವಿಳಾಸ :—ಎಂ. ವಿ ...ಕೃಷ್ಣ, ಹೆಡ್ ಮಾಸ್ಟರ್, ಎ. ವಿ. ಸ್ಕೂಲ್, ಅಟ್ಟಿಗೆಗೂಡು, ಮೈಸೂರು

ಸೊಗಸಾದ ಕನ್ನಡ ಪುಸ್ತಕಗಳು.

ಉನ್ಮತ್ತೆ ... ಆಣೆ ಬಂಗಾಳೀ ನಾವಲ್ ನವಾಬ ಸಿರಾಜನ ಒಬ್ಬ ...ಲೋಸ್ವರನ ಮಗಳನ್ನು ಕೆಣಕಿ ಅವಮಾನಪಟ್ಟು ಆಕೆಯ ಗಂಡನನ್ನು ...ಲು ಆಕೆಗೆ ಬುದ್ಧಿಭ್ರಮೆ, ಸಿರಾಜನ ವನವಾಸ, ಗಂಗೆಯ ದಂಗ... ...ನ ವರ್ಣನೆ, ಉನ್ಮತ್ತೆಯು ಸಿರಾಜನ ಮಗುವನ್ನು ಸಾಕುವುದು ...ಉತ್ತಮ.—... ಆಣೆ ಸಂಸಾರದಲ್ಲಿ ದಂಪತಿಗಳಿಗುಂಟಾಗುವ ...ಗಳು, ಅವನ್ನು ಪರಿಹರಿಸಿಕೊಳ್ಳುವವಿಧ, ಇವನ್ನೆಲ್ಲ ತಿಳಿಸುವ ಮನೋ... ಕಥೆ ಜಪಾನ್ ಸಾಮ್ರಾಜ್ಯ —6 ಆಣೆ. ಅದ್ಭುತವಾದ ...ಯ ರಾಜ್ಯವಿಚಾರ. ಸುಂದರ ಚಿತ್ರಗಳುಂಟು

[1...] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಶ್ರೀ ... ನಾರಾಯಣ ಶಾಸ್ತ್ರಿಗಳವರಿಂದ ಬರೆಯಲ್ಪಟ್ಟ ... ಎಂಬ ಟೀಕಾತಾತ್ಪರ್ಯಸಹಿತವಾದ

ಕರ್ಣಾಟಕ

ಜೈಮಿನಿ ಭಾರತವು

... ಪ್ರ. ಉತ್ತಮ ಕಾಗದ ಇದು ಪದ್ಯ, ಪ್ರತಿಪದಾರ್ಥ, ತಾತ್ಪರ್ಯ, ...ಭಾವಾರ್ಥ, ... ಸಮಾಸ, ಅಲಂಕಾರ, ಛಂದೋವಿವರಣ... ...ವರುಗಳು ... ಸ್ಕೂಲಿನಲ್ಲಿ ಓದುವ ವಿದ್ಯಾರ್ಥಿಗಳು ಮೊದಲು ... ವರೆಗಿನ ಎಲ್ಲ ... ಓದಲು ಅನುಕೂಲ ... ಕರ್ಣಾಟಕ ... ಕವಿಗಳ ... ಭಾರತವು ... ಅರ್ಥಗಾಂಭೀರ್ಯ, ಮಾಧುರ್ಯ, ... ಸರಳತೆ, ... ಅಲಂಕಾರ, ... ಮುಂತಾ... ಮೊದಲಾದ ... ಕನ್ನಡ ನಾಟಗೆ... ಅನಾವಶ್ಯಕ ಮುಖ್ಯವಾಗಿ ... ಪಂಡಿತರ ... ಸಂಪೂರ್ಣವಾಗಿ ... 910 ಪುಟಗಳುಳ್ಳ ದೊಡ್ಡ ಸೈಜು, ಪುಲ್ ಕ್ಯಾಲಿಕೋ ಬೈಂಡ್ ... ಟಪಾಲ್ ಹಾಸಲು ... ಆಣೆ

... ಲಕ್ಷ್ಮೀಶ ... ಬರೆಯಲ್ಪಟ್ಟ ಟೀಕಾ

ಹರಿಕಥಾಮೃತಸಾರ.

... ಪ್ರತಿ, ಉತ್ತಮ ಕಾಗದ, ಹೊಸ ಪುಸ್ತಕ, 344 ಪುಟ, 32 ಸಂಧಿ ... ಭಗವದ್ಭಕ್ತರಾದ ಜಗನ್ನಾಥದಾಸರಿಂದ ... ರೂಪದಿಂ... ...ರುವುದು ಸರ್ವರಿಗೂ ... ಇದೆ. ಇದರಲ್ಲಿ ಕೇವಲವಾಗಿ ... ಧ್ಯಾನ ... ಇದು ಮುಮುಕ್ಷು... ...ತ್ಯಂತ ಉಪಯೋಗವಾದದ್ದು. ಇದರಲ್ಲಿರುವ 32 ಸಂಧಿಯಲ್ಲಿ ದೇವರ ... ನಾಮಪೋಷಕ ... ಭಕ್ತಿಯು ... ಹಾಗೆ ಮಾಡು... ಅವನ್ನು ಯಥಾರ್ಥ ... ಅವರಿಗೆ ... ಮೋಕ್ಷವಾಯಿತು ... ವಿಷಯಗಳು ... ಬರೆಯಲ್ಪಟ್ಟಿವೆ. ಪ್ರತಿ ... ಸಂಧಿಯಲ್ಲಿ ... ಪದಕ್ಕೆ ಸರಿಯಾದ ತಾತ್ಪರ್ಯವು ಅನೇಕ ಪುರಾಣ ... ... ಬರೆಯಲ್ಪಟ್ಟಿವೆ. ಇದನ್ನು ... ...ವರಿಗೆ ... ವಿಷಯಕ್ಕೆ ಅನುಸಾರವಾದ ... ಇದು ಸರ್ವರಿಗೂ ಅತ್ಯವಶ್ಯಕವಾದದ್ದು ... ಮೋಕ್ಷಸಾಧನಕ್ಕೆ ...ಹಾಯವಾದದ್ದು. ಇದನ್ನು ಸರ್ವರೂ ಅವಶ್ಯಕವಾಗಿ ಅಂಗೀಕರಿಸ... ... ಸುಂದರವಾದ ಅಕ್ಷರದಿಂದ ಕೂಡಿದ್ದು. ಅಪೇಕ್ಷೆಯುಳ್ಳವರು ಈ ... ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಅತಿ ಸುಂದರ ... ಬೆಲೆ ರೂ 1-4-0 ಟಪಾಲ್ ಹಾಸಲು 3 ಆಣೆ. [15-2]

... ಭಾರತವನ್ನು ತರಿಸಿಕೊಂಡವರಿಗೆ 12 ಆಣೆ ಕ್ರಯ ಬಾಳುವ ... ಎಂಬ 1 ಜನ ಫಕೀರರ ಕಥೆ ಮುಫತ್ತಾಗಿ ದೊರೆಯುತ್ತೆ. ...ಕಥಾಮೃತಸಾರ ತರಿಸಿಕೊಂಡವರಿಗೆ ... 1 ನೇ ಭಾಗ ...ಶ್ರ, 2 ನೇ ಭಾಗ ... ಎಂಬ ಕಥೆಯು ಮುಫತ್ತಾಗಿ ... ಮತ್ತು ನಮ್ಮಲ್ಲಿ ಅನೇಕ ಪುಸ್ತಕಗಳುದೊರೆಯುತ್ತವೆ

... ಕೃಷ್ಣಯ್ಯ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ :—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹಚ್ಚು ...ಬೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೆ ನೋವು, ಸಂದುಗಳ ನೋವು, ಮೈ ಕಾಲು ಹೊರತ (ಭಾರ), ಮೈ ನಡುಕ, ... ತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ... ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತ ವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತ, ಎಂತಹ ... ದವರನ್ನಾದರೂ ... ಬಾಯಿ ... ದಾಹಿಕೊಡದೆ, ... ರಕ್ತದಲ್ಲಿಯ ದೋಷ ವನ್ನು ತೆಗೆದು ಬುದ್ಧಿವಾದಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುದೋಷ. ಮಕ್ಕಳ ... ಜ್ವರ, ಸನ್ನಿಜ್ವರ, ಕ್ಷಯರೋಗಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ... ಒಳ್ಳೇ ಶಕ್ತಿವರ್ಧಕವಾಗಿದೆ — 20 ಮಾತ್ರೆಗಳುಳ್ಳ ಕುಪ್ಪಿಗೆ 1 ಆ, 7 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 1 ಆಣೆ. [1...-21]

೨ ವೈಶ್ವಾನರಾಸವ (ಕಾಲರಾ ಔಷಧ).

ಸಾಂಕ್ರಾಮಿಕ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ... ತೋರಿದಾ ಗಲೂ ... ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಬೇಟಾಡಬೇಕಿ ... ಒಂದು ಬುದ್ದಿಯು ನಮ್ಮಲ್ಲಿರಲಿ ... ಸಮಯವನ್ನು ... ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುತ್ತದೆ. ಬೆಲೆ ರೂ. 1, ಟಪಾಲ್ ಖರ್ಚ ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹೊಸ ವರ್ಷದ ಬಹುಮಾನ ! ... ಪ್ರಕಟನೆ ಅಲ್ಲ ! ಮುಂಚಿಹೋದ ಮೇಲೆ ಚಿಂತಿಸಬೇಕು !!!

... ಒಂದೇ ಪ್ರತಿ ಸಾಕು. ಟಪಾಲು ಖರ್ಚು ಇಲ್ಲ. ಉತ್ತಮವಾಗಿದ್ದರೆ ಎಲ್ಲರೂ ಕೊಂಡುಕೊಳ್ಳಿ

ನಿಮಗೂ, ನಿಮ್ಮ ಬಾಲಕ ಬಾಲಕಿಯರು ಮತ್ತು ಸ್ನೇಹಿತರಿಗೂ ಅತ್ಯಂತ ಉಪಯೋಗವಾದ

ಮದ್ರಾಸು ಸಕಲ ವಿದ್ಯಾ... **ENGLISH SELF-INSTRUCTOR.** ಐದು ಭಾಗಗಳುಳ್ಳ ಇಂಥ

... ಹೊಂದಿದ ... ತರ ಅಭಿಪ್ರಾಯದ ಮೇರೆಗೆ **ಆಂಗ್ಲ ಭಾಷಾ ಪ್ರಕಾಶಿಕೆ.** ಒಳ್ಳೇ ದೊಡ್ಡ ಪುಸ್ತಕ ಈ ವರೆಗೆ ಪ್ರಕಟವೇ ಇಲ್ಲ.

ಕ್ರಯ ರೂ ೧—೮—೦ ಅನ್ಯರ ಸಹಾಯವಿಲ್ಲದೆ ಸುಲಭವಾಗಿ ಇಂಗ್ಲೀಷ್ ಕಲಿಯುವ ಪುಸ್ತಕ. ಕ್ರಯ ರೂ. ೧—೮—೦.

ಈ ಹೊಸ ಪುಸ್ತಕದಲ್ಲಿ ೧ ನೇ ಭಾಗ, ೨ ನೇ ಭಾಗ, ೩ ನೇ ಭಾಗ, ೪ ನೇ ಭಾಗ, ೫ ನೇ ಭಾಗ— ಈ ೫ ಭಾಗಗಳೂ ಅಡಕವಾಗಿವೆ. ಬಾಲಕ ಬಾಲಕಿಯರು ... ವಿದ್ಯಾರ್ಥಿಗಳು ಮತ್ತು ವರ್ತಕರು ಮುಂತಾದವರಿಗೂ ಬೇರೊಬ್ಬರ ಸಹಾಯವಿಲ್ಲದೆ ಓದುವುದು, ಬರೆಯುವುದು, ಮಾತಾಡುವುದು ಸುಲಭವಾಗಿ ಕಲಿಯಬಹುದು. ಕನ್ನಡ ತಿಳಿದಿದ್ದರೆ ಸಾಕು. ಇಂಗ್ಲೀಷ್ ಅಕ್ಷರಾಭ್ಯಾಸ, ಶಬ್ದಸಂಯೋಜನ, ಸ್ವರಾಕ್ಷರಗಳ ವಿವಿಧ ... ಪಾಠಶಾಲೆಯಲ್ಲಿ ... ಕಲಿಯುವವನ್ನು ವ್ಯಾಕರಣ ಕ್ರಮಗಳು ಮತ್ತು ಅಭ್ಯಾಸಗಳು, ಇಂಗ್ಲೀಷ್ ಭಾಷೆಯಲ್ಲಿ ಬಗೆಬಗೆಯಾದ ವಾಕ್ಯಗಳನ್ನು ಮಾಡುವ ಕ್ರಮ ಮತ್ತು ನೂರಾರು ಅಭ್ಯಾಸಗಳು, ... ವಿಷಯಗಳನ್ನು ಕುರಿತು ಪ್ರಶ್ನೋತ್ತರ ಸಂಭಾಷಣೆಗಳು ..., ಪ್ರಪಂಚದ ಸರ್ವವಿಷಯಗಳನು ಕುರಿತು ಸಂಭಾಷಣೆ ಮಾಡುವಾಗ ಬೇಕಾಗುವ ಆಯಾ ವಿಷಯಕ್ಕೆ ತಕ್ಕ ಇಂಗ್ಲೀಷ್-ಕನ್ನಡ, ಕನ್ನಡ-ಇಂಗ್ಲೀಷ್ ಶಬ್ದಕೋಶ (ಡಿಕ್ಷನರಿ), ... ಮತ್ತು ... ತಕ್ಕ ಅಭ್ಯಾಸಗಳು, ಕನ್ನಡ ಗಾದೆಗಳಿಗೆ ಸರಿಯಾದ ಇಂಗ್ಲೀಷ್ ಗಾದೆಗಳು, ಪತ್ರವ್ಯವಹಾರದಲ್ಲಿ ಉಪಯೋಗಿಸುವ ಸಾಂಕೇತಿಕ ಶಬ್ದಗಳು ... ಮುಂತಾದ ವಿಷಯ ಗಳನ್ನು ಕುರಿತು ... ಮತ್ತು ಕಾಗದಪತ್ರಗಳನ್ನು ಬರೆಯುವ ಅನೇಕ ಕ್ರಮಗಳು ಮತ್ತು ..., ಇವುಗಳಿಗೆ ಸ್ಫುಟವಾದ ಕನ್ನಡ ಅಕ್ಷರದಲ್ಲಿ ಉಚ್ಚಾರಣೆ ಮತ್ತು ಅರ್ಥಸಹ ಉಳ್ಳದ್ದು. ಈ ಪುಸ್ತಕ ನಮ್ಮಲ್ಲಿ ಮಾತ್ರ ದೊರೆಯುತ್ತೆ. ಕೆಲವು ಪ್ರತಿಗಳು ಮಾತ್ರ ಉಳಿದಿವೆ ... [17-1]

ವಿಳಾಸ :—ಮ್ಯಾನೇಜರ್. ಬಾಲಕೃಷ್ಣ ಬುಕ್ ಡಿಪೋ, ಜೋಡಿಪೇಟೆ, ಬೆಂಗಳೂರು ಸಿಟಿ.

ಬಿಟ್ಟಿ! ಫ್ರಗೆಸಟ್ಟೆ! ಬಿಟ್ಟಿ!

ಪ್ರಪಂಚವೆಲ್ಲೆಲ್ಲಾ ಪ್ರಖ್ಯಾತಿ ಹೊಂದಿರುವ ಒಂದು ದರ್ಬಾರ್ ಲೀವರ್ ವಾಚನ್ನು ರೂ. ೩-೪-೦ ಗೆ ಕೊಂಡುಕೊ ಳ್ಳುವವರಿಗೆಲ್ಲಾ ಕೆಳಗೆ ಹೇಳುವ ೧೨ ಬಹುಮಾನಗಳು ಸಿಕ್ಕುವವು. ಇದರಲ್ಲಿ ಮೋಸ ಸ್ವಲ್ಪವೂ ಇಲ್ಲ.



(೧) ಒಂದು ಸೊಗಸಾದ ಸರಪಣಿ.
(೨) ಒಂದು ಹೊಸ ಚೀಲ
(೩) ಒಂದು ಚಾಕು.
(೪) ಒಂದು ತಮಾಷಿ ಪೆಟ್ಟಿಗೆ
(೫) ಒಂದು ಮಡಿಚುವ ಕತ್ತರಿ
(೬) ಒಂದು ಫೌಂಟೆನ್ ಲೇಖನಿ.
(೭) ಒಂದು ಕೈ ಚೀಲ.
(೮) ಒಂದು ಜೊತೆ ಕಾಲುಚೀಲ.
(೯) ಒಂದು ಸುಂದರವಾದ ಉಂಗುರ.
(೧೦) ಒಂದು ಸೊಗಸಾದ ಬೀಸಣಿಗೆ
(೧೧) ಒಂದು ಸೆಟ್ ಷರಟುಗುಂಡಿ.
(೧೨) ಒಂದು ಕತ್ತಿ ಸಹಿತ.

[34-1] ವಿಳಾಸ :—ಪಿ. ಎ. ರಜಾಕ್ ಅಂಡ್ ಕೋ., ೧೧ ಎಸ್‌ಪ್ಲೇನೇಡ್ ರೋಡ್. ಮದರಾಸ್.

ಪ್ರಸಿದ್ಧಪತ್ರಿಕೆ.

ಶ್ರೀ ಶಾರದಾ ಹಾರ್ಮೋನಿಯಂ ಶಾಲೆ, ಯಲಹಂಕಾ ಗೇಟ್, ಬೆಂಗಳೂರು ಸಿಟಿ ಈ ಸ್ಥಳದಲ್ಲಿ ಮನೋಹರವಾದ ಹಿಂದುಸ್ತಾನಿ, ಪಾರ್ಸಿ, ಮರಾಠಿ,



ಗುಜರಾತಿ ಮತ್ತು ಕನ್ನಡ ಹಾಡುಗಾರಿಕೆಯನ್ನು ಹಾರ್ಮೋನಿಯಂನಲ್ಲಿ ನೂತನವಾಗಿಯೂ ರಸಭರಿತವಾಗಿಯೂ ಮತ್ತು ಮನಸ್ಸಿಗೆ ಗ್ರಾಹ್ಯವಾಗುವಂತೆಯೂ ಪಾಠ ಹೇಳಿಕೊಡಲ್ಪಡುತ್ತೆ ಮತ್ತು ಪ್ರೈವೇಟಾಗಿ ತಮ್ಮ ಮನೆಗಳಲ್ಲಿ ಪಾಠ ಹೇಳಿಸಿಕೊಳ್ಳತಕ್ಕವರಿಗೆ ಅವರವರ ಟೈಂ ಪ್ರಕಾರ ಹೇಳಿಕೊಡಲ್ಪಡುತ್ತೆ ಮತ್ತು ಮೇಲ್ಕಂಡ ಸ್ಥಳದಲ್ಲಿ ಗ್ಯಾರಂಟಿಯುಳ್ಳ ಹೊಸ ಬ್ಯಾಂಡ್ ಹಾರ್ಮೋನಿಯಂಗಳು ಕ್ರಯಕ್ಕೆ ಸಿದ್ಧವಾಗಿರುತ್ತವೆ ಅಲ್ಲದೆ ನಾಟಕ ಕಂಪನಿಯವರಿಗೆ ಉಪಯೋಗವುಳ್ಳಂಥಾ ಯಾವ ತರಹಾ ಹಾರ್ಮೋನಿಯಂ ಬೇಕಾಗಿದ್ದರೂ ಖಾತ್ರಿಯಾದ ಮತ್ತು ಗ್ಯಾರಂಟಿಯುಳ್ಳ ಮಾಲನ್ನು ಸುಲಭವಾದ ಕಮಿಷನ್ ದರದ ಮೇಲೆ ಮಾಲ್ ತಯಾರಾಗುವ ಸ್ಥಳದಿಂದಲೇ ಟೈಂ ಪ್ರಕಾರ ತರಿಸಿಕೊಡಲ್ಪಡುತ್ತೆ ಮತ್ತು ಎಲ್ಲಾ ತರಹ ಹಾರ್ಮೋನಿಯಂಗಳನ್ನು ಸುಲಭ ಛಾರ್ಜಿಗೆ ಖಾತ್ರಿಯಾಗಿ ರಿಪೇರಿ ಮಾಡಿಕೊಡಲ್ಪಡುತ್ತೆ ಹೆಚ್ಚು ಸಂಗತಿ ತಿಳಿಯಲಪೇಕ್ಷೆಯುಳ್ಳವರು ಮೇಲ್ಕಂಡ ಅಡ್ರೆಸ್ಸಿಗೆ ಬರೆದು ತಿಳಿದುಕೊಳ್ಳಬಹುದು [176-8]

ಬೇಕಾದವರು ಅರ್ಧಾಣೆ ಸ್ಟಾಂಪಿನ್ನು ಕಳುಹಿ ನಮ್ಮ ವಿಶದವಾದ ಕ್ಯಾಟಲಾಗನ್ನು ಪಡೆಯಬಹುದು

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



ಕೆಳ ಹೊಟ್ಟೆಯ ನೋವು, ಬರೀ ಬೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಸಿಸಿರುವಷ್ಟು ಮತ್ತು ನೋವನ್ನು ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವು

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

84 .1

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರತಲೆ, ಕತಿನೋವುಗಳು ಯಾವ ಕಾರಣದ ಪುಟ್ಟುವ ವ್ಯಾಧಿಯಾಗಲಿ, ಉಬ್ಬಸ, ಹಲ್ಲುನೋವು, ಗಟ್ಟಿ ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು ಉಳುಕು ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ, ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡಬೇಕೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಇದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 4 ಆಣೆ 4 ಅಥವಾ ಹೆಚ್ಚು ಬಾಟ್ಲಿ ಬೇಕಾದವರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 17 ವಡಮಳಿಸಿಲ್ಲಿ ಬೀದಿ, ಪುರಶವಾಕಂ, ವೇಪೇರಿ, ಮದರಾಸ್ (2) ಜಿ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

ಕುಂತಳಾನಂದ ತೈಲವು.

147

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಪದಕನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವ

ಮಾನ ಪತ್ರಿಕೆಗಳೂ ಅನೇಕಾನೇಕ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ಇದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಇದು ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 4 ಬಾಟ್ಲಿ 3 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪನಿ, ವೇಪೇರಿ, ಮದರಾಸು

ಪ್ರಕಟನೆ.

163 12

ಹತ್ತಿಯ ತುಪ್ಪವು ತುಮಕೂರು, ಅರಸೀಕೆರೆ, ಹರಿಹರ, ಮತ್ತು ತಿಪಟೂರು, ಈ ಸ್ಥಳಗಳಲ್ಲಿಯೂ ದೊರೆಯುವಂತೆ ಈಚೆಗೆ ಏರ್ಪಾಟು ಮಾಡಲ್ಪಟ್ಟಿದೆ

ಬೆಂಗಳೂರು ಸಿಟಿ ಚಿಕ್ಕಪೇಟೆ ಲಕ್ಕಾಟ್ ಶ್ರೀನಿವಾಸಾಚಾರ್ಯರ ಬೀದಿ ೯ ನೇ ನಂಬರು ಹೊಸಮಳಿಗೆಯಲ್ಲಿ ಹತ್ತಿಯ ತುಪ್ಪ, ಹಿಂಡಿ, ಮತ್ತು ಹೊಟ್ಟು ಸುಲಭಕ್ರಯಕ್ಕೆ ದೊರೆಯುತ್ತವೆ

ನಮ್ಮ ಕಂಪನಿಯ ಏಜಂಟರು ಮಾರುವ ಈ ಪದಾರ್ಥಗಳಲ್ಲಿ ದೋಷ ಕಂಡುಬಂದರೆ ಅದನ್ನು ನಮಗೆ ತಿಳಿಸಿದರೆ ಕೂಡಲೆ ಕ್ರಮಪಡಿಸುವೆವು ಇತರರು ನಡಿಯಿಸಬಹುದಾದ ವ್ಯತ್ಯಾಸಗಳಿಗೆ ನಾವು ಜವಾಬ್ದಾರರಲ್ಲ

ವಿಳಾಸ-ದಿ ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
೧೦, ಕಿಲಾರಿ ರೋಡ್, ಬೆಂಗಳೂರು ಸಿಟಿ

ಡೋಂಗರೆ ಇವರ ಬಾಲಾಮೃತ.

[115-28]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತು ೧೨ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 1

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ; ೧ ರೂ ೬ ಆ ; ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧–೮, ರೂ ೧–೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಮುಚ್ಚಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಅಮೃತಾಂಜನ್. (Regd)

ಇಲ್ಲಿ ವಿಶೇಷ ಲಕ್ಷ್ಯ ಕೊಡಿರಿ! ವಾತ, ಸಂಧಿವಾತ, ತಲೇನೋವು, ಸೊಂಟನೋವು, ಶೀತ, ಕಜ್ಜಿ, ಗಂಟುನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರುವದು ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ. ಬಾಟ್ಲಿ 1ಕ್ಕೆ 0–8–0

ಅರ್ಧ ಕ್ರಯಕ್ಕಿಂತಲೂ ಕಡಿಮೆ

ಹತ್ತುಲಕ್ಷ ದೊಡ್ಡಸೈಜು ಪೋಸ್ಟುಕಾರ್ಡುಗಳು ಇವುಗಳು ಬೆಳ್ಳಗಾಗಿಯೂ ನಯವಾಗಿಯೂ ಇವೆ 1,000 ಕ್ಕೆ ಮುಂಚಿನ ಕ್ರಯ ರೂ 2–8–0, ಈಗ 1೦ ಆಣೆ, ವಿ ಪಿ ಖರ್ಚು 12 ಆಣೆ 500 ಕ್ಕೆ 8 ಆಣೆ ವಿ ಪಿ ಖರ್ಚು 8 ಆಣೆ

1913 ನೆಯ ವರ್ಷದ ಕ್ಯಾಲೆಂಡರ್ 8 ಬಾಟ್ಲಿ ಅಮೃತಾಂಜನ ತರಿಸಿಕೊಂಡವರಿಗೆ ಪುಗಸಟ್ಟೆಯಾಗಿ ರವಾನಿಸಲ್ಪಡುವದು ಇತರರಿಗೆ ಕ್ಯಾಲೆಂಡರ್ 1ಕ್ಕೆ 1 ಆಣೆ ವಿ ಪಿ ಸಹಿತ [15 48]

ಅಮೃತಾಂಜನ ಡಿಪೋ, ಪೋಸ್ಟು, ಮುಂಬಯಿ.

1913 ನೇ ಪಾಕೆಟ್ ಡೈರಿ

ಅಂದರೆ ಆಯಾ ದಿನದ ನಡವಳಿಕೆಗಳನ್ನು ಬರೆದಿಡುವದಕ್ಕೋಸ್ಕರ ಜೇಬಿನಲ್ಲಿರಿಸಿಕೊಳ್ಳುವ ಪುಸ್ತಕ ಇದರಲ್ಲಿ ಪಂಚಾಂಗ, ಹಬ್ಬದ ದಿನಗಳು ಸರ್ಕಾರಿ ರಜಾ ದಿನಗಳು, ರೈಲು, ಕೋರ್ಟು, ಸ್ಟಾಂಪು, ರಿಜಿಸ್ಟರು, ಟಪಾಲು ಇವುಗಳ ಸಂಬಂಧಪಟ್ಟ ಸಾಮಾನ್ಯ ವಿಷಯಗಳು, ಪ್ರಶ್ನೆ ಮುಂತಾದ ಕೆಲವು ಸಾ ವಿಷಯಗಳು, ಜಮಾಖರ್ಚು ಪಟ್ಟಿ ಮುಂತಾಗಿ ಪ್ರತಿ ದಿನವೂ ನೋಡಬೇಕಾದ ವಿಷಯಗಳು ಅಡಗಿವೆ

ಎ–ಸಾದಾ ಸಣ್ಣ ಡೈರಿಗೆ 3 ಆಣೆ ಬಿ ಒಂದಾಣೆಯ ಸೀಸದ ಕಡ್ಡಿಯನ್ನುಳ್ಳ ಮುಚ್ಚಳದ ಡೈರಿಗೆ 6 ಆಣೆ ಸಿ–ಸಾದಾ ದೊಡ್ಡ ಡೈರಿಗೆ 6 ಆಣೆ ಡಿ–ಒಂದಾಣೆಯ ಸೀಸದ ಕಡ್ಡಿಯನ್ನುಳ್ಳ ಮುಚ್ಚಳದ ದೊಡ್ಡ ಡೈರಿಗೆ 8 ಆಣೆ

ಜಿನೀವಾ ಡೈರಿ —ಕಾಗದ ದಪ್ಪ, ಛಾಪು ನೂತನ, ಗಾತ್ರ ದೊಡ್ಡದು, ವಿಷಯ ಹೆಚ್ಚು, ಉತ್ತಮವಾದ ಡೈರಿ ಜಿ ನಂ 1—ಸಾದಾ ಡೈರಿಗೆ 4 ಆಣೆ ಜಿ ನಂ 2—ಒಂದಾಣೆಯಸೀಸದ ಕಡ್ಡಿಯನ್ನುಳ್ಳ ಮುಚ್ಚಳದ ಡೈರಿಗೆ 6 ಆಣೆ ಟಪಾಲು ಹಾಸಲು ಬೇರೆ ಒಂದೇ ನಮೂನೆಯ

6 ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಬಹುಮಾನವಾಗಿ ಕಳುಹಿಸುತ್ತೇವೆ.

ನಮ್ಮ ಪುಸ್ತಕಗಳ ವಿವರಣ ಪಟ್ಟಿಯನ್ನು ಬರೆದರೆ ಉಚಿತವಾಗಿ ಕಳುಹಿಸುತ್ತೇವೆ [10 3]

ನಮ್ಮ ವಿಳಾಸ.—ವಿಜಯಮುಕ್ತಾಸು ಕಂಪನಿ, ಬೆಂಗಳೂರು ಸಿಟಿ.

ಪ್ರಗಸಟ್ಟೆ ಕೊಡಲಾಗುತ್ತೆ.

10 ವರುಷ ಜವಾಬ್ ಉಳ್ಳ 30 ಗಂಟೆ ನಡೆಯುವ ಉತ್ಕೃಷ್ಟವಾದ ರಿಸ್ಟ್ ಲೀವರ್ ವಾಚನ್ನೂ ಒಂದು ಸೊಗಸಾದ ಸರಪಳಿಯನ್ನೂ, 100 ಪೋಸ್ಟ್ ಕಾರ್ಡನ್ನೂ ಬಿಟ್ಟಿ ಕೊಡುತ್ತೇವೆ ಅರ್ಧಾಣೆ ಸ್ಟಾಂಪಿಟ್ಟು ಇಂಗ್ಲೀಷಿನಲ್ಲಿ ಬರೆಯಿರಿ ವಿಳಾಸ —ಮೆಸ್ಸರ್ಸ್ ಎಂ ಎ ಪಟೇಲು ಕಂಪನಿ,

[179 9] ಚಿತ್ತೂರು, ಉತ್ತರ ಆರ್ಕಾಟು

"ವೃತ್ತಾಂತ ಪತ್ರಿಕೆ" ಕ್ಯಾಲೆಂಡರು

ಈ ಜನವರಿ ತಿಂಗಳಲ್ಲಿ ಚಂದಾ ಕಟ್ಟಿ ವೃತ್ತಾಂತ ಪತ್ರಿಕೆಯ ಚಂದಾದಾರರಾದವರಿಗೆ 1913 ನೇ ಇಸವಿ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು ಕ್ಯಾಲೆಂಡರಿನಲ್ಲಿ ಗುಪ್ಪಿಯಲ್ಲಿರುವ ಬಾಲಿಕಾ ಪಾಠಶಾಲೆಯ, ಬೆಂಗಳೂರಿನ ನಾರ್ಮಲ್ ಸ್ಕೂಲಿನ, ಲಾಲಬಾಗಿನ ಕಳಸ, ಬ್ರಿಟಿಷ್ ರಸಿಡೆಂಟ್ ಬಂಗಲೆಯ ಒಂದು ಪರ್ವತ ರೈಲಿನ ಮತ್ತು ಮೈಸೂರು ವೆಸ್ಲಿಯನ್ ಮಿಷನ್ ನ ಚಿತ್ರಗಳು ಬಹಳ ಸೊಗಸಾಗಿ ಅಚ್ಚಾಗಿರುತ್ತವೆ

ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ ಮೈಸೂರು

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ

ಈ ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳುಮಾಡಿಕೊಳ್ಳದಿರಿ

ನಮೂನೆಯು ಪುಕ್ಸಟೆಯಾಗಿ ಕೊಡಲ್ಪಡುವದು !

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶರಾಶಿ ಇದೆ ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಷ್ಮೆಯ ಹಾಗೆ ನುಣುಪಾಗಿ ಚಕಚಕಿಸುತಿರಬೇಕು ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದ ಬೇಕಾದರೂ ಕಟ್ಟುವಂತೆ ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು,

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಇದನ್ನು ತಕ್ಕುದಾದ ಜೊತೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶಪಾಶಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅ ಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು

ಕಾಮಿನಿಯಾ ತೈಲ— ಇದು ಕೂದಲುಗಳನ್ನು ತಂಪಗೆಯುವ ಸರ್ವ ತೈಲಗಳಲ್ಲಿ ಮೊದಲನೆಯದು ಮತ್ತು ಅತ್ಯುತ್ಕೃಷ್ಟ ಕೂದಲುಗಳು ಬೆಳೆಯಲು ಇರಲು ಪ್ರತಿಯೊಬ್ಬ ಸ್ತ್ರೀಯರು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು ಇದರಿಂದ ಕೂದಲುಗಳು ಎಷ್ಟು ನುಣುಪಾಗುತ್ತವೆ ಅಂದರೆ, ಈಗಿನ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ ಚಕಚಕಿಸುತ್ತಿವೆ, ಮತ್ತು ಬಿಳಿ ಕೂದಲು ಬಾರದಿಂದೊಡಗೂಡಿ, ಆಗಾಗೆ ಹರಿದು ಬಿದ್ದು ಹೋಗದೆ ದಟ್ಟವಾಗಿರುತ್ತವೆ

ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಬೀಲಿ ತರಬೇಕು

3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ

ಕಾಮಿನಿಯಾ ತೈಲದ ಕುರಿತು ಕೆಲವು ಮಹನೀಯರು ಬರೆದ ಪ್ರಮಾಣ ಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು —

ತಾ 7 11 ಮಿ ಎ ಬಿ ಮಾಧವಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ— ಕೇಳುವಿಕೆಯೇನಂದರೆ "ಕಾಮಿನಿಯಾ ಓಯಲ್" ಅತ್ಯಂತ ಉತ್ಕೃಷ್ಟವಾಗಿ ಮಾರ್ಕೆಟ್ಟಿನಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿರುತ್ತದೆ ಮತ್ತು ಇದಕ್ಕೆ ಸರಿಸಮಾನವಾದ ಹೇಯರ್ ಓಯಲ್ ಬೇರೆ ಇಲ್ಲ ಎಂದು ಅನುಭವಿಸಿರುವದು

ತಾ 7 11 ಮೆ|| ಆರ್ ನಾಯುಡು ಎ ವ ಡಿ ಟಾಪಿಎ (ಬರ್ಮಾ)—ನನ್ನ ಮಿತ್ರನು "ಕಾಮಿನಿಯಾ" ತೈಲ ಸಮ್ಬಂಧವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದರಿಂದ ದಯವಿಟ್ಟು 6 ಶಿಸೆಗಳನ್ನು ತ್ವರ್ಯದಿಂದ ವಿ ಪಿ ಮೂಲಕ ರವಾನಿಸತಕ್ಕದ್ದು

ಸುಗಂಧದ್ರವ್ಯಗಳು

ಗುಲ್-ಷಾನ್ (ರೆಜಿಡ್)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತಿ ಶ್ರೇಷ್ಠವಾದದ್ದು, ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪಂಡಿತರು ಹೇಳುವಾರೆ ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ಕೃಷ್ಟವಾದ ಸುವಾಸನೆಯನ್ನುಳ್ಳದ್ದು ಕ್ರಯ ಡ್ರಾಂ ಸೀಸೆಗೆ ರೂ 1-8 0

ದಿಲ್-ಬಹಾರ್ (ರೆಜಿಡ್)—ಅತ್ಯಂತ ಅಪೂರ್ವವಾದ ಜಾಜೀ ಹೂವಿನ ತಯಾರಿಂದ ಅಮೋಘವಾದ ಸುಗಂಧ ಡ್ರಾಂ ಸೀಸೆಗೆ ರೂ 1-8-0

"ಕಾಮಿನಿಯಾ ಸುರ ಗಿ" ರೂ 1-4-0 "ಕಾಮಿನಿಯಾಮಾಲತಿ"—ರೂ 1

ಎಲ್ಲಾ ಸ್ಥಳಗಳಲ್ಲಿಯೂ ಏಜೆಂಟರು ಬೇಕು

ಸೂಚನೆ—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲಿ ಬರೆಯಬೇಕು ವಿಳಾಸ — [8-4]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ, ಜುಮ್ಮಾಮಸೀದ್, ಬೊಂಬಾಯಿ.

Classes for Indian Music.

It is proposed to start classes under the auspices of the INSTITUTE of MUSIC Mysore for giving *free* instruction in vocal and instrumental music and that applications from intending students should be addressed to the undersigned on or before the 10th February 1913 Forms of application will be supplied on applying to

[21 1] The HON SECRETARIES,
The Institute of Music, Mysore

ಮನರು ಆಸ್ತಿ ವಿಷಯವಾಗಿ ಅಡ್ಮಿನಿಸ್ಟ್ರೇಷನ್ ಸರ್ಟಿಫಿಕೇಟ್ ಬಗ್ಗೆ ಕೊಡುವ ಅರ್ಜಿ ಬಾಬತು ನೋಟೀಸ್ ನಮೂನೆ ನ ಬರು 77, ಸಿವಿಲ್

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ

ಸನ್ 1912 ನೇ ಇಸವಿ ಮಿಸ್ಕು ಅರ್ಜಿ ನಂಬರ್ 33

ಅರ್ಜಿದಾರ ನಂಜನಗೂಡು ತಾಲ್ಲೂಕು ಕಳಲೆಯಲ್ಲಿರುವ ಗುಡಿ ಶ್ರೀನಿವಾಸಯ್ಯಂಗಾರ್ಯರ ಮಕ್ಕಳು ಕೆ ಎಸ್ ರಾಮಾನುಜಾಚಾರ್ ಮಂಜರಾಬಾದು ತಾಲ್ಲೂಕು ಯಸಳೂರು ಹೋಬಳಿ ಕೊತ್ತನಹಳ್ಳಿ ಗ್ರಾಮದ ಮೈನರಾದ ಹಾಲಿ ನಂಜನಗೂಡು ತಾಲ್ಲೂಕು ಕಳಲೆ ಸ್ಥಳದ ಗೋಪಾಲಾಚಾರ್ಯರ ದತ್ತು ಮಗ ಚಕ್ರವರ್ತಿ ರಾಮಸ್ವಾಮಿಯಂಗಾರ್ಯನ ಆಸ್ತಿ ವಿಷಯದಲ್ಲಿ

ಸದರಿ ಮೈನರಾದ ಚಕ್ರವರ್ತಿ ರಾಮಸ್ವಾಮಿಯಂಗಾರ್ಯನು ಕೆ ಎಸ್ ರಾಮಾನುಜಾಚಾರ್ಯನಿಗೆ ಜನಕತಮ್ಮನು ಆಗಬೇಕೆಂಬ ಪಕ್ಷಿನ ಮೇಲೆ ನಂಜನಗೂಡು ತಾಲ್ಲೂಕು ಕಳಲೆ ಸ್ಥಳದ ಕೆ ಎಸ್ ರಾಮಾನುಜಾಚಾರ್ಯನು ಸದರಿ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾನೆ ಸದರಿ ಅರ್ಜಿ ಹಿಯರಿಂಗ್ ಬಗ್ಗೆ ಸನ್ 1913 ನೇ ಇಸವಿ ಫಿಬ್ರವರಿ 21 ನೇ ತಾರೀಖು ಶುಕ್ರವಾರ ಮೊಕರರು ಮಾಡಿ ಇರುವದಾಗಿ ಇದರಿಂದ ನೋಟೀಸ್ ಕೊಡೋಣವಾಗಿದೆ [20 1]

ಸನ್ 1913 ನೇ ಇಸವಿ ಜನವರಿ ತಿಂಗಳು 14 ನೇ ತಾರೀಖಿನಲ್ಲಿ ಕೋರ್ಟಿನ ಮೊಹರು ದಸ್ತಕತ್ತು ಸಹ ಕೊಡೋಣವಾಗಿದೆ

R. B. PLUMER,
ಡಿಸ್ಟ್ರಿಕ್ಟ್ ಜಡ್ಜ್.

ಶ್ರೀಮನ್ನೃಸಿಂಹ ಪ್ರಯೋಗಪಾರಿಜಾತಾನುಸಾರೀ ಆಶ್ವಲಾಯನ ಪೂರ್ವಪ್ರಯೋಗ ಸಸ್ವರ ಮಂತ್ರಸಹಿತ

ಮೈಸೂರು ಕೃಷ್ಣರಾಜಮೊಹಲ್ಲಾ ಗುಂಡಪ್ಪೋಯಿಸರ ಮಕ್ಕಳು ವೇ|| ಎಂ ನರಸಿಂಹಶಾಸ್ತ್ರಿಗಳಿಂದ ಪ್ರಕಟಿಸಲ್ಪಟ್ಟ ಮೇಲಂದ ಅಪೂರ್ವವಾದ ಗ್ರಂಥವನ್ನು ನ ಜನಗೂಡು ಶ್ರೀಶ್ರೀಗಳವರೂ ರಾಜಗುರುಗಳಿಂದ ಪರಕಾಲಸ್ವಾಮಿಗಳವರೂ, ಮೈಸೂರು ಶ್ರೀ ಮನ್ ಮಹಾರಾಜರವರೂ ಸ್ವೀಕರಿಸಿ ಬಹುಮಾನವನ್ನು ದಯಪಾಲಿಸುತ್ತಾರಲ್ಲದೆ ಸಂಸ್ಥಾನದ ಮಹಾ ವಿದ್ವಾಂಸರೂ ಪಂಡಿತೋತ್ತಮರೂ ಕೊಂಡಿರುತ್ತಾರೆ ಅರಮನೆ ದರ್ಬಾರಿನಿಕಾರಿಗಳೂ ಪರಾಂಬರಿಸಿ ಸರಟಿಫಿ ಮಾಡಿರುತ್ತಾರೆ ಬೆಲೆ ರೂಪಾಯಿ 2 0-0

ಸನಾತನ ಸೂಕ್ಷ್ಮಧರ್ಮ —ಬಾಲಕ ಬಾಲಕಿಯರಿಗೆ ಅತಿ ಮುಖ್ಯವಾದದ್ದು ಬೆಲೆ 3 ಆಣೆ ಮುದ್ರಾಮಂಜೂಷ ರೂ 1 8 0

ಪತ್ರರತ್ನಾಕರ —ಇದು ಮೈಸೂರು ಸ್ಪೆಷಲ್ ಕೋರ್ಟಿನ ವಕೀಲರಾಗಿದ್ದ ಎಂ ವೆಂಕಟರಾಯರಿಂದ ರಚಿಸಲ್ಪಟ್ಟು ಎಲ್ಲಾ ಪತ್ರಗಳ ನಮೂನೆಗಳಿಂದ ಕೂಡಿದ 175 ವಿಷಯಗಳಿಂದ ಅಡಕವಾಗಿದೆ ಬೆಲೆ 10 ಆಣೆ

ಲೇಖ್ಯತತ್ವಪ್ರಕಾಶಿಕೆ —ಪಟ್ವಾರಿಯವರಿಂದಲೇ ರಚಿಸಲ್ಪಟ್ಟು ಎಲ್ಲಾ ವಿಧವಾದ ಅರ್ಜಿಗಳ ನಮೂನೆಗಳಿಂದ ಕೂಡಿದ 72 ವಿಷಯಗಳಿಂದ ಅಡಕವಾಗಿದೆ ಬೆಲೆ 1 ಆಣೆ ರಾಜಸಿಂಹ ರೂ 1 1-0 ದೇವಿಚೌಧುರಾಣಿ 1 1-0

ಆರೋಗ್ಯಪ್ರಶ್ನೋತ್ತರ —ಲೋ|| ಸೆ, ತರಗತಿ ವಿದ್ಯಾರ್ಥಿಗಳಿಗೆ ಅತಾವಶ್ಯಕವಾದದ್ದು ಬೆಲೆ 1 ಆಣೆ ನ್ಯಾಯದರ್ಪಣ ರೂ 1-0-0

ಶಾಂತಿರತ್ನಾಕರ" —ಮಾಸಪತ್ರಿಕೆ ಎಲ್ಲಾ ವಿಧ ಶಾಂತಿಯೂ ಇದೆ ಚಂದಾ ಸ್ಥಳದವರಿಗೆ ರೂ 2 ಪರಸ್ಥಳದವರಿಗೆ ರೂ 2 8 0 [7 3]

ವಿಳಾಸ —ಎಚ ವೆಂಕಟರಾಮಯ್ಯ ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ದಬ್ಬುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶ ಶರೀರಕ್ಕೇ ತೊಂದರೆಯುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು ಎದ್ದೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಸಿಯಾಗಿಯೋ ಇಳಿಯುವುದು, ಎದೆಯ ಬಾಯಾರಿಕೆ ಬಳಲಿಕೆ ಎದೆ ತಲ್ಲಣಿಸುವುದು, ಕಣ್ಣಿನ ಕೆಳಗೆ ಕಪ್ಪು ಬೊಬ್ಬೆ, ತಲೆ ತಿರುಗುವಿಕೆ ಮೈ ನೋವು ಕೀಲುನೋವು ಮರವು ನಿದ್ರಾಣ ಇವೇ ಮೊದಲಾದವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ನಾಯು, ಮೈಬಾವು ಉರುಮೂತ್ರ ಮೂತ್ರಕೋಶದ ಕ್ಷಯಿಸಿಯೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [112 20]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦ ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು ಅಥವಾ ಡೋನ್ಸ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

13—12—1912 ರಿಂದ 20—1—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	18	8	0	0
ಮೈಸೂರು ,,	2	3	0	0
ಬೆಂಗಳೂರು ಡಿಸ್ಟ್ರಿಕ್ಟ್	11	14	0	0
ಮೈಸೂರು ,,	26	21	9	7
ಕೋಲಾರ್ ,,	2	1	16	14
ಕೋಲಾರ್ ಚಿನ್ನದ ಗಣಿಗಳು	51	46	0	0
ತುಂಕೂರು ಡಿಸ್ಟ್ರಿಕ್ಟ್	0	2	0	0
ಹಾಸನ ,,	3	2	0	0
ಚಿತ್ರದುರ್ಗ ,,	0	0	1	2
ಕಡೂರ್ ,,	20	18	6	5
ಶಿವಮೊಗ್ಗ ,,	2	0	6	5
ಜುಮ್ಲಾ	151	116	35	33

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೇ ಹೇಮಂತಋತೌ ಪುಷ್ಯ ಬಹುಳ ಬಿದಿಗೆ ಶುಕ್ರವಾರದಿಂದ ಪುಷ್ಯ ಬಹುಳ ನವಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಕರ ಮಾಸ ತೇದಿ
24	ಶುಕ್ರ *	ಬಿದಿಗೆ	26 56	ಆಶ್ಲೇಷ	1 1	12
25	ಶನಿ ‡	ತದಿಗೆ	20 58	ಹುಬ್ಬ	55 39	13
26	ಭಾನು †	ಚೌತಿ	15 7	ಉತ್ತರಾ	51 47	14
27	ಸೋಮ	ಪಂಚಮಿ	9 21	ಹಸ್ತ	48 23	15
28	ಮಂಗಳ	ಷಷ್ಠಿ	3 0	ಚಿತ್ತ	45 1	16
29	ಬುಧ §	ಸಪ್ತಮಿ	0-52	ಉಸರಿ	36 11	17
30	ಗುರು	ನವಮಿ	51 56	ವಿಶಾಖ	13-0	18

* ದಿ ತೀಯಾ ತಿಥಿ, ಮೂಗೂರು ರಥ

‡ ತಿಥಿದ್ವಯಂ, ಸಂಕಟಹರಚತುರ್ಥಿ, ಮೂಗೂರು ಚಿಗುರುಕಡಿಯುವುದು

† ಮಳೆ ನಕ್ಷತ್ರ—ಶ್ರವಣ 3 ನೇ ಪಾದ

§ ತಿಸ್ರೋಷ್ಟಕಾ, ಮಳೆ ನಕ್ಷತ್ರ—ಶ್ರವಣ 4 ನೇ ಪಾದ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ (ಹೊಸದು) ರೂ	೧೩ ೦ ೦	೧೭ ೮-೦
ಕೆಂಬೂತಿ ಅಕ್ಕಿ ಅವಲ್	೧೩ ೮ ೦	೧೭ ೮ ೦
,, ದುಯಂ	೧೨ ೧೨ ೦	೧೭ ೦-೦
ಜೀಪ್ರಾಣಿ ಅಕ್ಕಿ	೧೨ ೧೨ ೦	೧೭ ೪ ೦
ಸಣ್ಣಕ್ಕಿ ಅವಲ್	೧೪ ೬ ೦	೧೮ ೮-೦
,, ದುಯಂ	೧೪ ೦ ೦	೧೭ ೮ ೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೧೨ ೮ ೦	೧೩ ೮ ೦
,, ದುಯಂ	೧೨ ೦ ೦	೧೨ ೮ ೦
ಹೈಬ್ರಿಡ್ ರಾಗಿ ಪಲ್ಲಾ ೧ಕ್ಕೆ	೬ ೧೨ ೦	೫ ೦ ೦
ಕಾರ್ರಾಗಿ ,,	೭ ೦ ೦	೬ ೧೨ ೦
ಜೋಳ ,,	೬ ೧೨ ೦	೭ ೪ ೦
ಹಲಸಂದೆ ಪಲ್ಲಾ ೧ಕ್ಕೆ	೧೦ ೧೨ ೦	೧೩ ೧೨ ೦
ಬಿಳೀ ಅವರೆ ,,	೧೦ ೦ ೦	೧೧ ೦ ೦
ಹೆಸರು ,,	೧೧ ೦ ೦	೧೪ ೦ ೦
ಉದ್ದು ,,	೧೩ ೮ ೦	೧೬-೦ ೦
ಕಡಲೆ ,,	೧೨ ೦ ೦	೧೨ ೦ ೦
ಎಳ್ಳು ಸೇರು ೧೨೭ಕ್ಕೆ	೨೪ ೦ ೦	೨೪ ೦ ೦
ಹುರುಳಿ ಪಲ್ಲಾ ೧ಕ್ಕೆ	೬ ೦-೦	೭ ೦ ೦
ಹರಳು ೧೨೭ ಸೇರಿಗೆ	೧೨ ೦ ೦	೧೪ ೦-೦
ಸೀಗೇಕಾಯಿ ಮಣ ೧ಕ್ಕೆ	೩ ೮ ೦	೪ ೮ ೦
ಮೆಣಸಿನಕಾಯಿ ,,	೩ ೦ ೦	೨-೪ ೦
,, ದುಯಂ	೨ ೮ ೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫ ೬ ೦	ಮಣ ೫ ೮-೦
ಒಳ್ಳೆಣ್ಣೆ ಮಣ ೧ಕ್ಕೆ	೬ ೨ ೦	೬-೬ ೦
ಹರಳೆಣ್ಣೆ ,, ,,	೫ ೪ ೦	೬ ೦ ೦
ಕೊತ್ತುಂಬರಿ ಪಲ್ಲಾ ೧ಕ್ಕೆ	೪ ೧೨ ೦	೫ ೪ ೦
ಉಪ್ಪು ,, ,,	೫ ೮ ೦	೬ ೦-೦
ಹುಣಸೆ ಹಣ್ಣು ಮಣ ೧ಕ್ಕೆ	೧ ೮ ೦	೧ ೪-೦
,, ಹಳೇದು ,,	೧ ೦ ೦	೦ ೧೪ ೦
ತುಪ್ಪ ಮಣ ೧ಕ್ಕೆ	೧೬ ೦ ೦	೧೯ ೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫ ೨ ೦	೫ ೦ ೦
ತೆಂಗಿನಕಾಯಿ ೧೦೦ಕ್ಕೆ	೬ ೮ ೦	೬ ೦ ೦
ಅಡಕೇಕಾಯಿ ಮಣ ೧ಕ್ಕೆ	೧ ೪ ೦	೧ ೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೦ ೧೨ ೦	೧ ೮ ೦
ಚಿನ್ನ (ಪಾರ್) ಕೆಂಪು	೧೫ ೮ ೦	೧೫ ೮ ೦
,, ,, ಪವನು	೧೫ ೧೩-೬	೧೫ ೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪ ೩ ೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧ ೨-೦	೮೧ ೦ ೦

ತಾವಾಗಿ ಇಂಗ್ಲೀಷ್ ಕಲಿಯುವ ಪುಸ್ತಕ—೨ನೇ ಭಾಗ.

ಬೆಲೆ ರೂ 1-4-0 ಬರುವ ಮಾರ್ಚಿ ಆಖೈರ್‌ವರೆಗೆ ಅನಂತರ ರೂ 1-8-0

ಇದರಲ್ಲಿ ಅಕ್ಷರಗಳನ್ನು ಗುರುತು ಕಂಡುಹಿಡಿಯುವುದು, ಕೆಲವು ದಿವಸದಲ್ಲಿಯೇ ಇಂಗ್ಲೀಷನ್ನು ಓದುವುದಕ್ಕೂ ಬರೆಯುವುದಕ್ಕೂ ಮಾತನಾಡುವುದಕ್ಕೂ ಒಬ್ಬರ ಸಹಾಯವಿಲ್ಲದೆ ಕಲಿಸುತ್ತದೆ. ವ್ಯಾಕರಣ ವಿಷಯ, ಕಥೆಗಳು, ಅರ್ಜಿ ಬರೆಯುವ ವಿಧಾನ, ಇನ್ನು ಅನೇಕ ಸಂಗತಿಗಳು ಅಡಗಿವೆ. ವಿಳಾಸ—

ಮ್ಯಾನೇಜರ್, ಕರ್ನಾಟಕ ಬುಕ್ ಡಿಪೋ, ಲಕ್ಕೂರ್ ಪೋಸ್ಟ್, ಮಾಲೂರ್, ಕೋಲಾರ

[21-1]

ವೆಂಕಟರಮಣಸ್ವಾಮಿ ಸಹಾಯ.

ಸುಲಭೋಪಾಯ ಆದಾಯ.

ಈ ಹೊಸ ಏರ್ಪಾಡಿಗೆ ದೇಶಾಭಿಮಾನಿಗಳ ಪ್ರೋತ್ಸಾಹವು ಬೇಕು. ಪೇಮ ಎಕ್ಸ್‌ಭರ್‌ಚಾರ್ಜ್ ಮುಂಕಿಮಾಕೇನ ಟಿಕ್ಕೆಟ್ ೧ಕ್ಕೆ ೩ ಆಣೆ ೬ ಪೈಗೆ ಹೊಂದುವ ರೀತಿ ಹೇಗೆಂದರೆ—ನಮ್ಮ ವಿಳಾಸಕ್ಕೆ ನಿಮ್ಮ ಅಡ್ರೆಸ್ಸಿನೊಡನೆ ೩ ಆಣೆ ೬ ಪೈಯನ್ನು ಕಳುಹಿಸಿದರೆ ನಿಮಗೆ ಒಂದು ಕೂಪನ್ ಕಳುಹಿಸುತ್ತೇವೆ. ಆ ಕೂಪನ್ನಿನ ಹಿಂಭಾಗದಲ್ಲಿ ನಿಮ್ಮ ಅಡ್ರೆಸ್ ಬರೆದು ಈ ಕೂಪನ್ನಿನೊಡನೆ ೧೪ ಆಣೆ ಕಳುಹಿಸಿದರೆ ಅಂಥಾ ೪ ಕೂಪನ್‌ಗಳನ್ನು ಕಳುಹಿಸುತ್ತೇವೆ. ಆ ಕೂಪನ್‌ಗಳನ್ನು ನಿಮಗೆ ಬೇಕಾದ ೪ ಜನಗಳಿಗೆ ಕೂಪನ್ ೧ಕ್ಕೆ ೩ ಆಣೆ ೬ ಪೈಯಂತೆ ವಿಕರಯಮಾಡಿ ಆಗುವ ೧೪ ಆಣೆಯನ್ನು ನೀವೇ ಇಟ್ಟುಕೊಂಡುಬಿಡಿ. ಮೊದಲು ನಿಮ್ಮಿಂದ ಕೂಪನ್‌ಗಳನ್ನು ಹೊಂದುವಾಗ್ಗೆ ನೀವು ಕಳುಹಿಸಿದ ೧೪ ಆಣೆ ನಿಮಗೆ ಬಂದಹಾಗಾಯಿತು. ನಿಮ್ಮಿಂದ ಕೂಪನ್ ಪಡೆದ ಪ್ರತಿ ಒಬ್ಬರೂ ಕೂಪನ್ನಿನ ಸಂಗಡ ೧೪ ಆಣೆ ಕಳುಹಿಸುವಂತೆ ಹೇಳಬೇಕು. ಪ್ರತಿ ಒಬ್ಬರೂ ಅವರ ಅಡ್ರೆಸ್ ಸಮೇತವಾದ ಕೂಪನ್ನನ್ನು ೧೪ ಆಣೆಗಳೊಡನೆ ಕಳುಹಿಸಿದರೆ ನಾವು ನಿಮಗೆ ಮೇಲ್ಕಂಡ ಭರ್ತಿ ಎಕ್ಸ್ ಟನ್ನನ್ನು ಕೊಡುವದಲ್ಲದೆ ಆ ಪ್ರತಿ ಒಬ್ಬರಿಗೂ ೪-೪ ಕೂಪನ್‌ಗಳನ್ನು ಸಹ ಕೊಡುತ್ತೇವೆ. ನಿಮ್ಮಂತೆಯೆ ಆ ಪ್ರತಿ ಒಬ್ಬರೂ ಮಾಡಿದರೆ ಇದೇ ಪ್ರಯೋಜನವನ್ನು ಹೊಂದುತ್ತಾರೆ.

[20-1] ವಿಳಾಸ—ಜಿ. ಎಸ್. ವೆಂಕಟರಮಣಮೂರ್ತಿ, ನಂ 11, ಸುಂದರೈಯರ್ ಬೀದಿ, ಹಳೇ ಅಗ್ರಹಾರ, ಮೈಸೂರು

NOTICE.

In accordance with the rules published in Government Notifications Nos. 773-5275 and 773-5276 dated the 29th June, 1912, applications are invited from qualified persons desirous of carrying on house service work, as Licensed Plumbers in the Cities of (1) Bangalore and (2) Mysore. The applications should reach the Executive Engineer, Water Supply and Stores Division on or before the 15th February, 1913.

Due intimation will be given to the selected candidates, and they will be required to execute the agreement within 8 days, depositing a sum of Rs 100/- as a security, together with another sum of Rs. 10/-, being the fee for license, failing which, their names will be removed from the list of selected candidates. [21-1]

JOHN BHORE, Esq., A.M.I.C.E.,

Sanitary Engineer,

In-charge of the Superintending Engineer's Office, Southern Circle.

ರಾಜಧಾನಿ ರಸಾಯನ ಗೊಬ್ಬರದ ಕಾರ್ಖಾನೆ (ಲಿಮಿಟೆಡ್), ರಾಣಿಪೇಟೆ.

ಮೇಲ್ವಿಚಾರಣೆ ಅಧಿಕಾರಿಗಳು—ಪ್ಯಾರಿ ಅಂಡ್ ಕಂಪನಿ, ಮದರಾಸ್

ಪ್ರಕಟನೆ

ಇದರಿಂದ ತಿಳಿಯಪಡಿಸುವದೇನಂದರೆ, ಉತ್ತರಾರ್ಕಾಡು ಜಿಲ್ಲಾ ವಾಲಾಜಾ ತಾಲ್ಲೂಕಾ ರಾಣಿಪೇಟೆಯಲ್ಲಿರುವ ರಾಜಧಾನಿ ರಸಾಯನ ಗೊಬ್ಬರದ ಕಾರ್ಖಾನೆಯಲ್ಲಿ ಎಲ್ಲಾ ಕುಷ್ಕಿ, ತರಿ, ತೋಟದ ಪೈರುಗಳಿಗೂ, ಗಿಡ, ಬಳ್ಳಿ ವಗೈರಾಗಳಿಗೂ ಶಾಸ್ತ್ರೋಕ್ತವಾಗಿ ಗೊಬ್ಬರವನ್ನು ತಯಾರುಮಾಡಿ ವಿಕ್ರಯಿಸುತ್ತೇವೆ. ಆ ಜಮೀನಿನ ಮಾದರಿ ಮಣ್ಣು ಮುಂತಾದವುಗಳನ್ನು ಮುಂಚಿತವಾಗಿ ತರಿಸಿ, ಮೇಲೆ ಹೇಳಿದ ಗೊಬ್ಬರವನ್ನು ಕೊಂಡುಕೊಳ್ಳುವ ರೈತರಿಗೆ ಮಜೂರಿ ಇಲ್ಲದೆ ಅಜಮಾಯಿಷಿಮಾಡಿ, ಪೈರು, ಗಿಡ ವಗೈರೆಗಳಿಗೆ ತಕ್ಕ ಹಾಗೆ ಗೊಬ್ಬರ ತಯಾರಿಸಿಕೊಡುತ್ತೇವೆ. ರಸಾಯನಗೊಬ್ಬರಗಳು ಸಾಧಾರಣವಾದ ಜಮೀನುಗಳಲ್ಲಿ ಉಪಯೋಗಪಡಿಸಿದರೆ ಎಂಥೆಂಥಾ ಲಾಭಕರವಾದ ಫಲವನ್ನು ಕೊಡುವುದು? ಆದುದರಿಂದ ನಮ್ಮ ಗೊಬ್ಬರವನ್ನು ಪರೀಕ್ಷಾರ್ಥವಾಗಿ ಉಪಯೋಗಿಸುವವರು ಸಾಧಾರಣ ಜಮೀನಿನಲ್ಲಿ ಉಪಯೋಗಿಸಿ ಈ ಗೊಬ್ಬರಕ್ಕೂ ದೊಡ್ಡಿ ಗೊಬ್ಬರಕ್ಕೂ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕು—ಹೊಲ ಮುಂತಾದ ಕೃಷಿ ಸಂಬಂಧವಾದ ಜಮೀನುಗಳಿಗೆ ಆ ಜಮೀನಿನ ಮಾದರಿ ಮಣ್ಣನ್ನು ಚೆನ್ನಾಗಿ ಅಜಮಾಯಿಷಿಮಾಡಿ ಮೇಲ್ಕಂಡ ಜಮೀನುಗಳನ್ನು ಕೃಷಿಮಾಡುವುದಕ್ಕೆ ಯೋಗ್ಯವಾದ ದಾರಿಯನ್ನು ಸೂಚಿಸುತ್ತೇವೆ. ನಮ್ಮಲ್ಲಿನ ರಸಾಯನ ಗೊಬ್ಬರವನ್ನು ಎಷ್ಟು ಕಾಲ ಇಟ್ಟಿದ್ದರೂ ಕೆಟ್ಟುಹೋಗವು. ಆದರೆ ಅದನ್ನು ತೇವ ತಗಲದ ಹಾಗೆ ಇಟ್ಟಿರಬೇಕು. ಮೇಲ್ಕಂಡ ಗೊಬ್ಬರಗಳು ಪೈರುಗಳ ಬೆಳೆಯುವ ಕಾಲ ಮುಂತಾದ ಗುಣಾವಗುಣಗಳಿಗೆ ತಕ್ಕಹಾಗೆ ಮಾಡಲ್ಪಡುತ್ತವೆ—ಆದುದರಿಂದ ಮೇಲ್ಕಂಡ ಗೊಬ್ಬರ ಬೇಕಾದವರು ತಾವು ಕೃಷಿಮಾಡುವ ಜಮೀನಿನ ಮಾದರಿ ಮಣ್ಣನ್ನು ಮುಂಚಿತವಾಗಿ ಕಳುಹಿಸುವದಲ್ಲದೆ ಬೇಕಾದ ಸಮಾಚಾರಗಳೊಡನೆ ಇಂಡೆಂಟು ಫಾರಮನ್ನು ಪೂರ್ತಿಮಾಡಿ ಕಳುಹಿಸುವ ಪಕ್ಷದಲ್ಲಿ ಮೇಲ್ಕಂಡ ಗೊಬ್ಬರವನ್ನು ಅವರ ಇಷ್ಟಪ್ರಕಾರ ಕಳುಹಿಸಲ್ಪಡುವದು. [19-1]

ವೃತ್ತಾಂತ ಪತ್ರಿಕೆ

—o—

ಸನ್ ೧೯೧೩ ನೇ ಇಸವಿ ಜನವರಿ ತಾ ೨೩ ನೇ ಗುರುವಾರ

ಬಾಲ್ಕನ್ ಯುದ್ಧವು

ಟರ್ಕಿ ಬಾಲ್ಕನ್ ಯುದ್ಧವು ಕರಾರಿನ ನಿರೀಕ್ಷಣೆಯಿಂದ ನಿಲ್ಲಿಸಲ್ಪಟ್ಟಿದ್ದದ್ದನ್ನೂ, ಉಭಯ ರಾಜ್ಯಗಳ ಪ್ರತಿನಿಧಿಗಳು ಲಂಡನ್ ಪಟ್ಟಣದಲ್ಲಿ ಸೇರಿ ಸುಮಾರು ನಾಲ್ಕಾರು ವಾರಗಳಿಂದ ಕರಾರಿನ ಕಲಮುಗಳನ್ನು ಕುರಿತು ಚರ್ಚೆ ಮಾಡುತ್ತಿದ್ದದ್ದನ್ನೂ ನಮ್ಮ ವಾಚಕರಿಗೆ ತಿಳಿಸಲಾಗಿದೆಯಷ್ಟೆ. ಕರಾರಿನ ವಿಷಯವಾಗಿ ಆ ಪ್ರತಿನಿಧಿಗಳೊಳಗೆ ಚರ್ಚೆ ನಡೆದದ್ದರಲ್ಲಿ ಒಬ್ಬರ ಸಲಹೆಗಳು ಎದುರು ಕಕ್ಷಿಯವರಿಗೆ ಸಮ್ಮತವಾಗದೆ ಈ ಸಭೆಯು ನಿರರ್ಥಕವಾಗಿ ಪರಿಣಮಿಸಿತೆಂದು ಕಳೆದ ಶನಿವಾರ ತಿಳಿದು ಎಲ್ಲಾ ಕಡೆಗಳಲ್ಲೂ ವ್ಯಥೆಯನ್ನುಂಟುಮಾಡಿದೆ. ಈಗ ಯುದ್ಧಕಾರ್ಯಗಳು ಮತ್ತೆ ಪ್ರಾರಂಭವಾಗುವವೋ, ಅಥವಾ ಯೂರೋಪ್ಪಿಯನ್ ರಾಜ್ಯಗಳವರು ಮುಂದೆ ಬಂದು ಅವರವರಿಗೆ ಮಧ್ಯಸ್ಥಿಕೆಯನ್ನು ಮಾಡಲೆತ್ನಿಸುವರೋ ಸದ್ಯ ಊಹಿಸಿ ಹೇಳುವುದು ಸಾಧ್ಯವಲ್ಲ.

ಬಹುಶಾ ಟರ್ಕಿಯವರು ಇದುವರೆಗೆ ದೊರಕಿದ ವಿರಾಮವನ್ನು ನೋಡಿ ತಮ್ಮ ಕಡೆ ಚೆನ್ನಾಗಿ ತರಪೇತಾದ ಹೊಸ ಸೈನ್ಯಗಳನ್ನು ಹೆಚ್ಚಾಗಿ ಸಾಗಿಸಿಕೊಂಡು ಬಂದು ಯುದ್ಧವನ್ನು ಮತ್ತೆ ಪ್ರಾರಂಭಿಸಬಹುದೆಂದೂ, ಯುದ್ಧದಲ್ಲಿ ತಮಗೆ ಜಯಪ್ರದವಾದೀತೆಂಬ ಅಭಿಮಾನ ಉಂಟಾಗಿದೆ ಎಂದೂ ಕಾಣುತ್ತದೆ. ಬಲ್ಗೇರಿಯದವರಾದರೋ ಇದುವರೆಗೆ ಟರ್ಕಿಯವರ ಮೇಲೆ ಯುದ್ಧ ನಡೆಸಿದ್ದರಲ್ಲೇ ಬಹಳ ದಣಿದು ನಷ್ಟಪಟ್ಟಿರುತ್ತಾರೆ, ಅವರೂ ಬಲ್ಗೇರಿಯಾದವರು ಅಷ್ಟು ಅಪಾರವಾದ ಜನರನ್ನೂ ದ್ರವ್ಯವನ್ನೂ ಕಳೆದುಕೊಂಡು ಯುದ್ಧಮಾಡಿ ಗೆದ್ದುಕೊಂಡಿರುವಂಥಾ ಸ್ಥಳಗಳನ್ನೂ ಪ್ರದೇಶಗಳನ್ನೂ ಸುಲಭವಾಗಿ ಬಿಟ್ಟುಕೊಡುವವರಾಗಿಲ್ಲ. ಇದುವರೆಗೆ ಬಲ್ಗೇರಿಯವರು ಒಬ್ಬರೇ ಟರ್ಕಿಯವರ ಮೇಲೆ ಯುದ್ಧಮಾಡಿದರು. ಈಗ ಅವರು ಶಕ್ತಿ ಕುಂದಿದವರಾಗಿರುವುದನ್ನು ನೋಡಿ ಸರ್ವಿಯಾ ಮತ್ತು ಗ್ರೀಸ್ ರಾಜ್ಯಗಳವರು ಅವರ ಸಹಾಯಕ್ಕೆ ಹೊರಡುವರೆಂದು ಹೇಳಬಹುದಾಗಿದೆ. ಆದಕಾರಣ ಟರ್ಕಿಯವರು ಇದುವರೆಗೆ ಯುದ್ಧದಲ್ಲಿ ಸೋತುಬಿಟ್ಟಿರುವವುಗಳ ಪೈಕಿ ಯಾವುವನ್ನೂ ಮತ್ತೆ ಗೆದ್ದುಕೊಳ್ಳುವುದು ಸಾಧ್ಯವೆಂದು ತೋರುವುದಿಲ್ಲ.

ಅಡ್ರಿಯಾನೋಪಲ್ ಪಟ್ಟಣವು ಯಾರಿಗೆ ಸೇರಬೇಕೆಂಬ ವಿಷಯದಲ್ಲಿ ಅವರವರಿಗೆ ಜಿಜ್ಞಾಸ ನಡೆದಿರುತ್ತದೆ. ಅದು ಇನ್ನೂ ಬಲ್ಗೇರಿಯದವರಿಗೆ ಸ್ವಾಧೀನವಾಗಿಲ್ಲ. ಅದು ಟರ್ಕಿಗೆ ಸೇರಿದ್ದು. ಅದಕ್ಕೆ ಬಲ್ಗೇರಿಯದವರು ಮುತ್ತಿಗೆ ಹಾಕಿಕೊಂಡಿದಾರೆ. ಯುದ್ಧಕಾರ್ಯಗಳು ನಿಲ್ಲುವ ಸಮಯದಲ್ಲಿ ಅಂದರೆ ಸುಮಾರು ಒಂದು ತಿಂಗಳ ಹಿಂದೆ ಆ ಪಟ್ಟಣವು ಒಂದೆರಡು ದಿನಗಳೊಳಗಾಗಿ ಬಲ್ಗೇರಿಯಾದವರ ವಶವಾಗುತ್ತದೆಂಬ ಸ್ಥಿತಿಯಲ್ಲಿತ್ತು. ಅಂಥಾ ಪ್ರಾಮುಖ್ಯವಾದ ಪಟ್ಟಣವನ್ನು ಟರ್ಕಿಯವರು ಬಿಟ್ಟುಕೊಡಲೊಲ್ಲರು, ಬಲ್ಗೇರಿಯಾದವರಾದರೋ ಟರ್ಕಿಯವರ ಐಶ್ವರ್ಯ ಎಲ್ಲ ಕಟ್ಟು ಕಾನ್‌ಸ್ಟಾಂಟಿನೋಪಲ್ ಪಟ್ಟಣಕ್ಕಿಂತ ಬಹಳ ದೂರವಾಗಿರಕೂಡದೆಂದು ಹೇಳುತ್ತಾರೆ, ಅಂದರೆ ಟರ್ಕಿಯವರ ರಾಜ್ಯ ವಿಸ್ತೀರ್ಣವನ್ನು ಯೂರೋಪ್ ಖಂಡದಲ್ಲಿ ಬಹಳ ಕೊಂಚಕ್ಕೆ ಇಳಿಸಬೇಕೆಂದು ಹಟಹಿಡಿದಿದಾರೆ. ಪರರಾಜ್ಯಗಳವರು ಅಡ್ರಿಯನೋಪಲ್ ಪಟ್ಟಣವನ್ನು ಟರ್ಕಿಯವರು ಬಲ್ಗೇರಿಯಾದವರಿಗೆ ಬಿಟ್ಟುಕೊಡುವುದೇ ಸರಿಯೆಂದು ಅಭಿಪ್ರಾಯಪಡುವಂತೆ ಕಾಣುತ್ತದೆ.

ಪರರಾಜ್ಯಗಳವರೆಲ್ಲಾ ಚರ್ಚಾಸ್ಪದವಾದ ವಿಚಾರಗಳಲ್ಲಿ ಏಕಾಭಿಪ್ರಾಯವುಳ್ಳವರಾಗಿದ್ದಂತೆ ಕಾಣುವುದಿಲ್ಲ; ಯಾಕಂದರೆ ಅವರ ಅಭಿಮತವು ಒಂದಾಗಿದ್ದಪಕ್ಷಕ್ಕೆ ಈ ಹೋರಾಟವನ್ನು ಇತ್ಯರ್ಥಪಡಿಸುವುದೇನೂ ಕಷ್ಟವಾಗಲಾರದು. ಇಂಗ್ಲಾಂಡ್, ಫ್ರಾನ್ಸ್, ರಷ್ಯಾ, ಈ ಮೂರು ರಾಜ್ಯಗಳವರೂ ಏಕವಾಗಿದ್ದು ಒಪ್ಪಿಕೊಳ್ಳುವುದಕ್ಕೆ ಜರ್ಮನಿ, ಆಸ್ಟ್ರಿಯ, ಇಟಲಿ ರಾಜ್ಯಗಳವರು ಒಂದಾಗಿ ಸಮ್ಮತಿಸದೆ ಇದಾರೆ. ಬಾಲ್ಕನ್ ರಾಜ್ಯಗಳ ಮೇಲೆ ಟರ್ಕಿಯವರಿಗೆ ಯಾವ ವಿಧವಾದ ಅಧಿಕಾರ ಸ್ವಾತಂತ್ರ್ಯವೂ ಇಲ್ಲದಂತೆ ಮಾಡಬೇಕೆನ್ನುವುದು ಮೊದಲನೇ ಮೂರು ರಾಜ್ಯಗಳವರ ಅಭಿಮತವಾಗಿರುವಂತೆಯೂ ಅಲ್ಲಿನ ರಾಜ್ಯಭಾರ ಕ್ರಮವನ್ನು ಅಷ್ಟು ವಿಶೇಷವಾಗಿ ರೂಪಾಂತರ ಮಾಡಬೇಕಾದ ಅಗತ್ಯವಿಲ್ಲವೆಂದು ಎರಡನೇ ಮೂರು ರಾಜ್ಯಗಳವರು ಅಭಿಪ್ರಾಯಪಡುವಂತೆ ತಿಳಿದುಬರುತ್ತದೆ. ಅದು ಹ್ಯಾಗಾದರೂ ಇರಲಿ. ಇಟಲಿಯವರು ಮೊನ್ನೆತಾನೇ ಟರ್ಕಿಯವರ ಮೇಲೆ ಅಕ್ರಮಣ ಮಾಡಿ ಅವರ ದೇಶವನ್ನು ಕಿತ್ತುಕೊಂಡು, ಈಗ ಟರ್ಕಿಯವರ ಪಕ್ಷವನ್ನೇ ವಹಿಸಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

ಈ ಟರ್ಕಿ ಬಾಲ್ಕನ್ ಯುದ್ಧದಿಂದ ಒಂದು ವಿಷಯ ಪ್ರಪಂಚಕ್ಕೆ ಚೆನ್ನಾಗಿ ವೇದ್ಯವಾಯಿತು. ಬಾಲ್ಕನ್ ಸಂಸ್ಥಾನಗಳು ಎಂದರೆ—ಬಲ್ಗೇರಿಯ, ಸರ್ವಿಯ, ಮಾಂಟಿನೀಗ್ರೊ ಈಚೆಗೆ ಬಹಳ ಅಭಿವೃದ್ಧಿಸ್ಥಿತಿಗೆ ಬಂದಿರುತ್ತವೆ. ಹಿಂದಲ್ಲಿ ಈ ಸಂಸ್ಥಾನಗಳನ್ನೂ ಮ್ಯಾಸಿಡೋನಿಯ ಮತ್ತು ಥ್ರೇಸ್ ಅಧಿಪತ್ಯಗಳನ್ನೂ ಟರ್ಕಿ ಗವರ್ನಮೆಂಟಿನ ಅಧೀನದಲ್ಲಿಯೇ ಇಟ್ಟಿರುವುದು ಸಹಜವಲ್ಲವೆಂದೂ ಈ ಯುದ್ಧದಿಂದ ನಿರ್ಧಾರವಾಯಿತು. ಆದರೂ ಯುದ್ಧವಾಗುವುದು ನಿಲ್ಲಿಸಿ ಕರಾರು ಮಾಡಿಸುವಂತೆ ಮತ್ತೆ ಸಂಧಾನಗಳು ಆಗುವವೆಂದೂ, ಟರ್ಕಿ ಗವರ್ನಮೆಂಟಿನವರು ಹಟಹಿಡಿಯದೆ ವಿವೇಕಶಾಲಿಗಳಾಗಿ ವರ್ತಿಸುವಂತಾಗಲೆಂದೂ ಹಾರೈಸುತ್ತೇವೆ.

ಪರಮ ತಂದೆ

—:—

ನಮ್ಮ ಪೂರ್ವಿಕರಿಂದ ಅನಾದಿ ಕಾಲದಿಂದಲೂ ಬಂದ ಹಿಂದೂ ಮತದಲ್ಲಿ ನಿಜ ಒಬ್ಬನೇ ದೇವರನ್ನು ಸ್ತ್ರೀ ರೂಪವಾಗಿ ಉಪಾಸನೆಮಾಡುತ್ತಿದ್ದರು. ಭೂಮಾತೆ ಅಥವಾ ಭೂಮಿತಾಯಿ ಎಂದು ಹೇಳುವುದು ನಮ್ಮಲ್ಲಿ ಬಹು ರೂಢಿಯಾಗಿದೆಯು. ಹೀಗೆ ಹೇಳುವಲ್ಲಿ ಭೂಮಿಯು ಒಂದು ಚೈತನ್ಯ ಸ್ವರೂಪವಾದ ತಾಯಿಯಾಗಿ ಇಂದು ನಾವು ನಂಬುವುದಿಲ್ಲ. ಅದು ಬರೀ ಜಡವಸ್ತುವೆಂದು ನಾವು ಬಲ್ಲೆವು. ಜಡವಸ್ತುವಿಗೆ ಚೈತನ್ಯರೋಪಣೆ ಮಾಡುವುದು ನಮ್ಮ ಪದ್ಧತಿಯಾಗಿದೆ. ಇದರಂತೆ ಪರಮ ತಂದೆ ಎಂದು ಹೇಳುವಾಗ ಅದು ದೇವರಿಗೆ ಕೊಡಲ್ಪಟ್ಟ ಉತ್ಪ್ರೇಕ್ಷಾಲಂಕಾರದ ನಾಮವೆಂದು ಭಾವಿಸಿಕೊಳ್ಳಬಾರದು. ಅದು ಆತನಿಗೆ ಸಹಜವಾಗಿಯೂ ಸಲ್ಲತಕ್ಕ ಅರ್ಥಗರ್ಭಿತವಾದ ನಾಮಧೇಯವಾಗಿದೆ ಎಂದು ತಿಳಿಯತಕ್ಕದು.

ನಾವು ಲೋಕದಲ್ಲಿ ಯಾರನ್ನು ತಂದೆಯೆಂದು ಕರೆಯುತ್ತೇವೆ? ಯಾವನು ನಮ್ಮನ್ನು ಹುಟ್ಟಿಸಿದನೋ ಅವನನ್ನೇ ಅಲ್ಲವೇ? ನಮ್ಮನ್ನು ಹುಟ್ಟಿಸಿದವನು ಹೊರತು ಯಾರಾದರೂ ನಿಜವಾಗಿ ನಮ್ಮ ತಂದೆಯೇ ಆಗಲಾರರು. ಅವರು ನಮ್ಮನ್ನು ಬಹಳವಾಗಿ ಪ್ರೀತಿಸಬಹುದು, ಅಂಥವರನ್ನು ಒಂದುವೇಳೆ ನಾವು ತಂದೆಯೆಂದೇ ಕರೆಯಬಹುದು. ಆದರೂ ಅದು ಬರೀ ಭಾವನೆಯೇ ಹೊರತು ಸಹಜವಾದ ಸಂಬಂಧವಾಗಿರದು. ಇದರಂತೆ ನಾವು ದೇವರನ್ನು ಪರಮ ತಂದೆಯೆಂದು ಕರೆಯುವಾಗ ಆ ಬರೀ ಭಾವನೆಯನ್ನು ಮಾತ್ರ ಇಟ್ಟುಕೊಳ್ಳದೆ ಆತನು ಎಲ್ಲವನ್ನೂ ನಮ್ಮನ್ನೂ ಸೃಷ್ಟಿಸಿದಾತನಾಗಿರೋದರಿಂದ ಸಹಜವಾಗಿಯೂ ನಮ್ಮ ತಂದೆಯೇ ಆಗಿದ್ದಾನೆಂದು ನಂಬಬೇಕಾಗಿದೆ.

ದೇವರು ಸೃಷ್ಟಿಕರ್ತನೆಂದು ನಂಬದಿರುವವರು ಕೆಲವರಿರುತ್ತಾರೆ. ಈ ಲೋಕದಲ್ಲಿ ಏನೂ ಇಲ್ಲದಿರುವಾಗ ದೇವರು ಈ ಪ್ರಪಂಚವನ್ನು ಸೃಷ್ಟಿಸಿದನೆಂದು ಅವರು ಒಪ್ಪುವುದಿಲ್ಲ. ದೇವರೊಬ್ಬನೇ ನಿಜವಸ್ತು, ಜೀವ ಎಲ್ಲಾ ಮಿಥ್ಯವೆಂದು ನಂಬುವವರೂ ಕೆಲವರಿರುತ್ತಾರೆ. ಮತ್ತು ಆತ್ಮಗಳು ಸ್ವಯಂಭು, ಅವು ಜನ್ಮಾಂತರಗಳನ್ನು ಹೊಂದುತ್ತವೆಯೇ ಹೊರತು ಅವಕ್ಕೆ ಜನನ ಮರಣಗಳಿಲ್ಲ. ನಾನೂ ದೇವನೂ ಒಂದೇ ಎಂದೂ ನಂಬುವವರೂ ಕೆಲವರಿರುತ್ತಾರೆ. ಇಂಥ ನಂಬಿಕೆಯುಳ್ಳವರೆಲ್ಲರೂ ದೇವರು ಸರ್ವ ಸೃಷ್ಟಿಕರ್ತನಾಗಿರುವ ನಮ್ಮ ಪರಮ ತಂದೆ ಎಂಬುವುದಕ್ಕೆ ಒಪ್ಪಲಾರರು. ಆದರೆ ಕ್ರೈಸ್ತರು ದೇವರು ಏನೂ ಇಲ್ಲದುದರಿಂದ ಈ ಜಗತ್ತನ್ನೂ ಅದರಲ್ಲಿರುವ ಸಕಲ ಚರಾಚರವಸ್ತುಗಳನ್ನೂ ಮನುಷ್ಯರ ದೇಹಾತ್ಮಗಳನ್ನೂ ಕೂಡ ಸೃಷ್ಟಿಸಿದನೆಂದೇ ನಂಬುವುದರಿಂದ ದೇವರು ಸಹಜವಾಗಿಯೂ ತಮ್ಮನ್ನು ಹುಟ್ಟಿಸಿದ ಪರಮ ತಂದೆಯೆಂದು ದೃಢವಾಗಿ ನಂಬಿದವರಾಗಿರುತ್ತಾರೆ.

ಪರಮ ತಂದೆಯು ನಮ್ಮನ್ನು ಹುಟ್ಟಿಸಿದುದು ಮಾತ್ರವಲ್ಲದೆ ನಮ್ಮನ್ನು ಸಂರಕ್ಷಣೆಮಾಡುತ್ತಾ ಬರುವವನೂ ಆಗಿರುತ್ತಾನಷ್ಟೆ. ಮಕ್ಕಳಿಗೆ ಬೇಕಾದ ಅನ್ನವಸ್ತ್ರಗಳನ್ನು ಮಾತ್ರವಲ್ಲದೆ ಸಮಸ್ತವನ್ನೂ ಕೊಡುವಾತನು ತಂದೆಯೇ ಆಗಿರುತ್ತಾನೆ. ತಂದೆಯು ಮಕ್ಕಳಿಗಾಗಿ ಏನೆ ಇಷ್ಟು ಕಷ್ಟಗಳನ್ನನುಭವಿಸುತ್ತಾನೆ. ಮಕ್ಕಳು ತಂದೆಗೆ ಪ್ರತಿಯಾಗಿ ಏನು ಮಾಡುತ್ತಾರೆ? ಮಕ್ಕಳು ತಂದೆಗೆ ಪ್ರತಿಯಾಗಿ ಏನಾದರೂ ಮಾಡ ಅಶಕ್ತರಾಗಿದ್ದರೂ ಅವರು ತನ್ನ ಮಕ್ಕಳಾಗಿರೋ ಹುರಿಂದಲೇ ತಂದೆಯು ಅವರನ್ನು ಪ್ರೀತಿಸಿ ಅವರಿಗಾಗಿ ತನ್ನ ಕೈಲಾಗುವುದನ್ನೆಲ್ಲಾ ಮಾಡದೇ ಬಿಡುವುದಿಲ್ಲವಷ್ಟೆ. ಇದರಂತೆಯೇ ನಮ್ಮ ಜೀವೋತ್ಪತ್ತಿಮೂಲ ಕಾರಣನು ನಮ್ಮ ಪರಮ ತಂದೆಯೇ ಆಗಿರುವುದಲ್ಲದೆ ನಮ್ಮ ಜನನ ಮೊದಲ್ಗೊಂಡು ಜೀವಾಂತ್ಯದವರೆಗೂ ನಮ್ಮನ್ನು ಪರಿಪಾಲಿಸುತ್ತಾ ಬರುವವನು ಆತನೇ ಆಗಿರುತ್ತಾನೆ. ಆತನಿಂದಲೇ ಸೂರ್ಯನ ಬಿಸಿಲೂ ಕಾಲಕಾಲಕ್ಕೆ ಮಳೆಯು ಬೆಳೆಯೂ ನಮಗೆ ಬರುತ್ತವೆ. ನಮ್ಮ ಉಚ್ಛ್ವಾಸ ನಿಶ್ವಾಸಗಳಿಗೂ ಕಾರಣನು ಆತನೇ. ಆತನ ಪರಾಮರಿಕೆಯು ತಪ್ಪಿದರೆ ಕ್ಷಣಮಾತ್ರ ಜೀವಿಸುವುದೂ ನಮಗೆ ಸಾಧ್ಯವಲ್ಲವು.

ಮನುಷ್ಯರಿಗೆ ಸಂಭವಿಸುವ ಸುಖದುಃಖಾದಿಗಳೆಲ್ಲವೂ ಅವರವರ ಪೂರ್ವಾರ್ಜಿತ ಕರ್ಮದ ಫಲಾಫಲಗಳೇ ಅಥವಾ ಅವರವರ ಅದೃಷ್ಟವೇ ಎಂದು ನಂಬಿಕೊಂಡಿರುವವರು ಕೆಲವರಿರುತ್ತಾರೆ. ಪ್ರತಿಯೊಬ್ಬನ ಕರ್ಮಾನುಸಾರವಾಗಿ ದೇವರು ಅವನವನಿಗೆ ಸುಖವನ್ನಾಗಲಿ ದುಃಖವನ್ನಾಗಲಿ ಕ್ಷೇಮವನ್ನಾಗಲಿ ರೋಗವನ್ನಾಗಲಿ ಕೊಡುತ್ತಾ ಬರುತ್ತಾನೆ. ಹೊರತು ಅದನ್ನು ಬಿಟ್ಟು ಬೇರೆ ಏನೂ ಮಾಡಲಾರನೆಂದು ನಂಬುತ್ತಾರೆ. ಆದುದರಿಂದ ತಮಗೆ ಏನೇ ಸುಖಸಂಪತ್ತುಗಳು ಪ್ರಾಪ್ತವಾದರೂ ಅವುಗಳಿಗೆ ತಮ್ಮ ಅದೃಷ್ಟವೇ ಕಾರಣವೆಂದು ಹೇಳುವರಲ್ಲದೆ ದೇವರು ಕಾರಣನೆಂದು ಹೇಳರು. ಇಂಥವರು ದೇವರ ಉಪಕಾರಗಳನ್ನು ಸ್ಮರಿಸಿ ಆತನಿಗೆ ಕೃತಜ್ಞರಾಗಿ ಜೀವಿಸುವುದು ಹೇಗೆ? ದೇವರು ತಮ್ಮನ್ನು ಪರಿಪಾಲಿಸುವ ಪರಮ ತಂದೆಯೆಂಬುದು ಇವರಿಗೆ ಒಪ್ಪಿಗೆಯಲ್ಲದ ಮಾತಾಗಿರುವುದು.

ಕ್ರೈಸ್ತಮತವು ದೇವರು ಜಗತ್ತೆಲ್ಲವನ್ನೂ ನಮ್ಮನ್ನೂ ಸೃಷ್ಟಿಸಿ ಪರಿಪಾಲಿಸುತ್ತಾ ಬರುವ ಪರಮ ತಂದೆಯೆಂದು ಸ್ಪಷ್ಟವಾಗಿ ಬೋಧಿಸುತ್ತದೆ. ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ದೇವರ ಪ್ರಾರ್ಥನೆಯನ್ನು ಕಲಿಸಿಕೊಟ್ಟಾಗ್ಗೆ ದೇವರನ್ನು "ಪರಲೋಕದಲ್ಲಿರುವ ನಮ್ಮ ತಂದೆಯೇ" ಎಂದು ಕರೆಯುವಂತೆ ಹೇಳಿಕೊಟ್ಟನು ಮತ್ತು "ನಮ್ಮ ಪ್ರಾಣಧಾರಣೆಗೆ ಏನು ಊಟಮಾಡಬೇಕು, ಏನು ಕುಡಿಯಬೇಕು, ನಮ್ಮ ದೇಹರಕ್ಷಣೆಗೆ ಏನು ತೊಡಬೇಕು ಎಂದು ಚಿಂತೆಮಾಡಬೇಡಿರಿ. ಊಟಕ್ಕಿಂತ ಪ್ರಾಣವು ಉಡುಪಿಗಿಂತ

...ಮಾಡದಷ್ಟಲ್ಲವೇ ? ಆಕಾಶದಲ್ಲಿ ಹಾರಾಡುವ ಹಕ್ಕಿಗಳನ್ನು ನೋಡಿ ಅವು ಬಿತ್ತುವದಿಲ್ಲ, ಕೊಯ್ಯುವದಿಲ್ಲ, ಕಣಜಗಳಲ್ಲಿ ತುಂಬಿಟ್ಟುಕೊಳ್ಳುವದಿಲ್ಲ, ಆದಾಗ್ಯೂ ಪರಲೋಕದಲ್ಲಿರುವ ನಿಮ್ಮ ತಂದೆಯು ಅವುಗಳನ್ನು ಸಲಹುತ್ತಾನೆ. ಅವುಗಳಿಗಿಂತ ನೀವು ಎಷ್ಟೋ ಹೆಚ್ಚಿನವರಲ್ಲವೇ ? ...ದ ಹೂವುಗಳು ಬೆಳೆಯುವ ರೀತಿಯನ್ನು ಯೋಚಿಸಿರಿ. ಅವು ದುಡಿಯುವದಿಲ್ಲ, ನೂಲುವದಿಲ್ಲ, ಆದಾಗ್ಯೂ ಈ ಹೂವುಗಳಲ್ಲಿ ಒಂದಕ್ಕಿರುವಷ್ಟು ಅಲಂಕಾರ ಅರಸನಾದ ಸೊಲೊಮೋನನಿಗೆ (ಕುಬೇರನಂಥವನು) ಸಹ ಅವನು ತನ್ನ ವೈಭವದಿಂದ ಇರುವಾಗಲೂ ಇರಲಿಲ್ಲವೆಂದು ನಿಮಗೆ ಹೇಳುತ್ತೇನೆ. ಅಲ್ಪವಿಶ್ವಾಸಿಗಳೇ ಈ ಹೊತ್ತು ಇದ್ದು ನಾಳೆ ಒಲೆಯ ಪಾಲಾಗುವ ಅಡವಿಯ ಹುಲ್ಲಿಗೆ ದೇವರು ಹೀಗೆ ಉಡಿಸಿದರೆ ಅದಕ್ಕಿಂತ ಎಷ್ಟೋ ಹೆಚ್ಚಾಗಿ ನಿಮಗೆ ಉಡಿಸಿ ತೊಡಿಸುವನಲ್ಲವೇ ? ... ನಿಮ್ಮಲ್ಲಿ ಯಾವನಾದರೂ ರೊಟ್ಟಿಯನ್ನು ಕೇಳುವ ಮಗನಿಗೆ ಕಲ್ಲನ್ನು ಕೊಟ್ಟಾನೇ ? ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೇ ಪದಾರ್ಥಗಳನ್ನು ಕೊಡಬಲ್ಲವರಾದರೆ, ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೇ ವರಗಳನ್ನು ಕೊಡುವನಲ್ಲವೇ ? ... ಇದೆಲ್ಲಾ ನಿಮಗೆ ಬೇಕಾಗಿದೆ ಎಂದು ಪರಲೋಕದಲ್ಲಿರುವ ನಿಮ್ಮ ತಂದೆಗೆ ತಿಳಿದೇ ಇರುವುದರಿಂದ, ನೀವು ಮೊದಲು ಆತನ ರಾಜ್ಯವನ್ನೂ ನೀತಿಯನ್ನೂ ಪಡೆಕೊಳ್ಳುವದಕ್ಕೆ ಮೊದಲು ಪ್ರಯತ್ನಿಸಿರಿ. ಅಲ್ಲಿಂದ ಇವೆಲ್ಲಾ ನಿಮಗೆ ದೊರಕುವವು" ಎಂದು ಯೇಸು ಕ್ರಿಸ್ತನು ಹೇಳಿದನು. ಆದುದರಿಂದ ಕ್ರೈಸ್ತರು ತಮಗೆ ಸಿಕ್ಕುವ ಎಲ್ಲಾ ಸುವರಗಳು ಪರಲೋಕದ ತಂದೆಯಿಂದಲೇ ಬರುತ್ತವೆಂದು ನಂಬಿ ಆತನ ಮಹದುಪಕಾರಗಳನ್ನು ಸ್ಮರಿಸಿ ಕೃತಜ್ಞತಾಸ್ತುತಿಯನ್ನು ಸಲ್ಲಿಸುತ್ತಾ ಬರುತ್ತಾರೆ.

ಒಳದೇಶದ ವೃತ್ತಾಂತಗಳು.

ಚೀಫ್ ಜಡ್ಜ್ ಮಿ|| ಪಿ ಎಸ್ ಕೃಷ್ಣರಾಯರ ಏಕ ಪುತ್ರನು ... ಮದರಾಸಿನಲ್ಲಿ ಕಾಲವಾದನೆಂದು ತಿಳಿಸಲು ವಿಷಾದಿಸುತ್ತೇವೆ.

* * *

...ನಗಳೂರು ಸಿಟಿ ಶೃಂಗೇರಿ ಮಠದ ವೇ|| ಸುಬ್ರಹ್ಮಣ್ಯ ಶಾಸ್ತ್ರಿಗಳಿಗೆ ಮಹಾ...ಪಾಧ್ಯಾಯ ಎಂಬ ಬಿರುದೂ, ಮದರಾಸಿನ ಆಯುರ್ವೇದ ಪಂಡಿತರು ...ನಾಚಾರ್ಯರಿಗೆ ವೈದ್ಯರತ್ನ ಎಂಬ ಬಿರುದೂ ದೊರಕಿದವು.

* * *

...ನಗರೂರು ಸುಲ್ತಾನ್ ಪೇಟೆಯ ಫೋಂಡೋಜಿರಾಯನೆಂಬವನು ಒಂದು ...ವನ್ನು ಕದ್ದದ್ದಕ್ಕಾಗಿ ಸೆಷನ್ಸ್ ಜಡ್ಜಿ ಅವನಿಗೆ ಹಿಂದೆ ಪದಾವರ್ತಿ ...ಗಿದ್ದನ್ನು ತಿಳಿದು ಹನ್ನೊಂದು ವರುಷಗಳ ಕಠಿಣಶಿಕ್ಷೆಯನ್ನು ...ದ್ದಾರೆ.

* * *

...ಕೃಷ್ಣರಾಜಪೇಟೆ ತಾಲ್ಲೂಕು ಹೇಮಗಿರಿಯಲ್ಲಿ ಶ್ರೀ ವೆಂಕಟರಮಣಸ್ವಾಮಿ ...ಯ ಕಾಲದಲ್ಲಿ ಫೆಬ್ರುವರಿ ತಾ 13 ನೇ ಗುರುವಾರ ದನಗಳ ಪ್ರದರ್ಶನ ...ವುದು. ಶ್ರೇಷ್ಠವಾದ ದನಗಳಿಗೆ 100 ರೂಪಾಯಿ ತನಕ ಬಹುಮಾನ ...ಕೊಡಲ್ಪಡುವವು.

* * *

ಶ್ರೀಮದ್ಯುವರಾಜರವರು ಈ ತಿಂಗಳು 27 ನೇ ತಾ ಸೋಮವಾರ ...ರು ಸಿಟಿ ಶ್ರೀನಿವಾಸಮಂದಿರದ ಅನಾಥಾಲಯದ ಕಟ್ಟಡಕ್ಕೆ ಅಸ್ತಿಭಾರ ...ಹಾಕುವರೆಂದೂ, ತಾ 29 ನೇ ಬುಧವಾರ ಸುಲ್ತಾನ್‌ಪೇಟೆ ಎ ವಿ ...ಶಾಲೆಗೆ ಬಹುಮಾನಗಳನ್ನು ವಿನಿಯೋಗಿಸುವರೆಂದೂ ತಿಳಿಯುತ್ತದೆ.

* * *

...ನಿಯ ರೈಲ್ವೇ ಸ್ಟೇಷನ್ ಎದುರು ಪಾರ್ಶ್ವದಲ್ಲಿ ಕಟ್ಟುತ್ತಿರುವ ...ಮಹಾರಾಜ ಕುಮಾರಿಯವರ ಭವನವು ತಯಾರಾಗಿ ಸಿದ್ಧವಾಗಿರೋಣ ...ಫೆಬ್ರುವರಿ ತಾ 10 ನೇ ಸೋಮವಾರ ದಿನ ಗೃಹಪ್ರವೇಶೋತ್ಸವವನ್ನು ...ವಾಗಿ ನೆರವೇರಿಸುವಂತೆ ಏರ್ಪಾಡಾಗುತ್ತಿದೆ.

* * *

...ಪಟ್ಟಣದ ಬಳಿ ಕೊಂಡಾಪುರದಲ್ಲಿ ಹಿಂದಿನ ಸೋಮವಾರ ಒಬ್ಬ ...ಹೊಲದಲ್ಲಿದ್ದಾಗ ದುರಾತ್ಮ ಯಾರೋ ಅವನ ಚಿಕ್ಕ ವಯಸ್ಸಿನ ಮಗ...ನನ್ನೂ ಕೊಂದುಹಾಕಿ ಅವನನ್ನೂ ಹೊಡೆದು ಘೋರ ಘಾಯ ...ಮಾಡಿರುವರು. ಘಾತುಕರನ್ನು ಹಿಡಿಯಲು ಪೋಲೀಸಿನವರು ಸಾಹಸ ...ದಾರೆ.

* * *

...ಸೋಲಿನಲ್ಲಿ ಮುನ್ಸೀಫರಾಗಿದ್ದು ರಾಜಧಾನಿಗೆ ವರ್ಗವಾಗಿ ಬಂದಿರುವ ...ಶ್ರೀನಿವಾಸ ಅಯ್ಯರವರನ್ನು ಬೆಂಗಳೂರು ಲಾಯರ್ ಸಂಘದವರು ...ಕರೆದುಕೊಂದು ಮ|| ಗುಬ್ಬಿತೋಟದಪ್ಪನವರ ಧರ್ಮಸತ್ರದಲ್ಲಿ ಅವರಿಗೆ ...ಸನ್ಮಾನ ಮಾಡಿ ಅವರಲ್ಲಿ ತಮಗಿರುವ ಭಕ್ತಿ ಪ್ರೀತಿ ಸ್ನೇಹಭಾವಗಳನ್ನು ...ಸಿದರು.

* * *

...ಸರ್ಕಾರಿ ನೌಕರಿಯಲ್ಲಿದ್ದು ರೀಕದಾರಿ ಕೆಲಸಕ್ಕೆ ಲಾಯಕ್ಕಾಗಲು ಮೈಸೂರು ...ನ ಸರ್ಕಾರಿ ಇಂಜಿನಿಯರಿಂಗ್ ಸ್ಕೂಲಿನಲ್ಲಿ ವ್ಯಾಸಂಗ ಮಾಡತಕ್ಕವ...ರಿಗೆ ೧೯೧೨ ನೇ ಇಸವಿ ಜೂಲೈ ಗುತ್ತೆಲಾಗಾಯ್ತು ಮೂರು ವರುಷ ...ಫೀಜು ಕೊಡಬೇಕಾದ ಅವಶ್ಯಕವಿಲ್ಲವೆಂದು ಮಹಾರಾಜಾ ಸರ್ಕಾರ ...ಕಪ್ಪನೆ ದಯಪಾಲಿಸಿರುತ್ತಾರೆ.

* * *

...ನಿವಾಸಿಯ ದೇವರಾಜ ಮಾರ್ಕೆಟ್ಟಿನ ಪೋಲೀಸ್ ಸ್ಟೇಷನ್ ಎದುರಿಗೆ ...ಮಾರ್ಕೆಟ್ ಉತ್ತರದಾರದ ಪಕ್ಕದಲ್ಲಿರುವ ಸಾಹುಕಾರ ಕಾಂತಸೇಟರ ...ಯ ಅಂಗಡಿಗೂ, ಮೊದಲನೇ ಅಗ್ರಹಾರದಲ್ಲಿ ಗುಂಡಪ್ಪನವರ ಮನೆಗೂ ...ಕಳ್ಳರು ನುಗ್ಗಿ ನೂರಾರು ರೂಪಾಯಿನ ಮಾಲುಗಳನ್ನು ಅಪಹರಿಸಿ... ಪೋಲೀಸಿನವರು ಪತ್ತೆ ತರದೂದು ನಡಿಸುತ್ತಿರುವರು.

* * *

...ಪಾರ್ತಿದಾರಿಂದ—ಬೆಂಗಳೂರು ಸಿಟಿ ಅಕ್ಕಿಪೇಟೆಯಲ್ಲಿರುವ ...ಮ|| ಮತ್ತಿಗಿರಿ ನಂಜಪ್ಪಶೆಟ್ಟರವರು ತಮ್ಮ ಅಣ್ಣನವರು ಮರಣಹೊಂದಿದ ...ಅವರ ಜ್ಞಾಪಕಾರ್ಥವಾಗಿ ಕಳೆದ ತಾ 19 ನೇ ಭಾನುವಾರ ಸುಮಾರು ...ಮೂರು ಸಾವಿರ ಬಡ ಪ್ರಜೆಗಳಿಗೆ ಸುಭೋಜನಮಾಡಿಸಿದರು. ಹೀಗೆ ...ಮಾಡಿದವರು ಈ ಸಿಟಿಯ ವೈಶ್ಯರ ಪೈಕಿ ಇದೇ ಮೊದಲನೆಯದಾಗಿದೆ. ...ದುದು ಶ್ಲಾಘ್ಯವಾದದ್ದು.

* * *

...ನಾ ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರಾಗಿ ರಜದ ಮೇಲೆ ಹೋಗಿದ್ದ ...ಕಟ್ಟಯವರನ್ನು ಸರ್ಕಾರದವರು ಬೆಂಗಳೂರು ಸೆಂಟ್ರಲ್ ಜೈಲ್ ...ಸೂಪರಿಂಟೆಂಡೆಂಟರಾಗಿಯೂ, ಸಿಡುಬಿನ ಹಾಲು ತಯಾರಾಗುವ ಇಲಾಖೆಯ ...ಮುಖ್ಯರಾಗಿಯೂ ನೇಮಕಮಾಡಿರುತ್ತಾರೆ. ಇವರು ಕಳೆದ ವಾರ ಹೊಸ ...ಛಾರ್ಜನ್ನು ವಹಿಸಿಕೊಂಡರು. ಇದುವರೆಗೆ ಸೆಂಟ್ರಲ್ ಜೈಲ್ ಸೂಪ...ರಿಂಟೆಂಡೆಂಟಾಗಿದ್ದ ಅ|| ಕಮಿಷನರ್ ಮಿ|| ಟಿ ಬೋಳಣ್ಣನವರು ಎರಡು ...ತಿಂಗಳು ರಜ ತೆಗೆದುಕೊಂಡಿದ್ದಾರೆ. ಬಳಿಕ ಇವರನ್ನು ರೆವಿನ್ಯೂ ಇಲಾಖೆಗೆ ವರ್ಗ...ಮಾಡುವರೆಂದು ಕೇಳುತ್ತೇವೆ.

ಮೈಸೂರು ಗವರ್ನಮೆಂಟಿನವರು ಬೆಂಗಳೂರು ಸಿಟಿ ವಿಕ್ಟೋರಿಯಾ ಆಸ್ಪತ್ರೆಯ ಬಳಿ ವೈಸ್‌ರಾಯರಾಗಿದ್ದ ಲಾರ್ಡ್ ಮಿಂಟೋ ಪ್ರಭುಗಳ ಹೆಸರಿನ ಮೇಲೆ ಕಟ್ಟಿಸುತ್ತಿದ್ದ ಕಣ್ಣಾಸ್ಪತ್ರೆಯು ಸಿದ್ಧವಾಗಿರೋಣದರಿಂದ ಶ್ರೀಮನ್ಮಹಾರಾಜರವರು ಈ ತಿಂಗಳು ತಾ 31 ನೇ ಶುಕ್ರವಾರ ಆ ಕಟ್ಟಡದ ಪ್ರವೇಶೋತ್ಸವವನ್ನು ನಡಿಸಿ, ಮಿಂಟೋ ಪ್ರಭುಗಳ ದಿವ್ಯವಾದ ತಸ್ವೀರನ್ನು ಆ ಕಟ್ಟಡದಲ್ಲಿ ಪ್ರತಿಷ್ಠೆಮಾಡುವವರಾಗಿದಾರೆ.

* * *

ಶ್ರೀಮನ್ಮಹಾರಾಜರವರು ಫೆಬ್ರವರಿ ತಾ 3 ರಲ್ಲಿ ಬೆಂಗಳೂರಿಂದ ಸರ್ಕೀಟು ದಯಮಾಡಿ ಕಡೂರು ಡಿಸ್ಟ್ರಿಕ್ಟಿನ ಕೆಲವು ಸ್ಥಳಗಳಲ್ಲಿ ಸಂಚಾರ ಮಾಡಿಕೊಂಡು ಅದೆ ತಾ 7 ಕ್ಕೆ ವಾಪಸು ರಾಜಧಾನಿಗೆ ಚಿತ್ತೈಸುವವರಾಗಿದಾರೆ. ಅವರು ಈ ಸರ್ಕೀಟಿನಲ್ಲಿ ಬೀರೂರು, ಕಲ್ಲತ್ತಿಗಿರಿ, ದತ್ತಾತ್ರೇಯ ಪೀಠ, ಚಿಕ್ಕಮಗಳೂರು, ಮುಳ್ಳಯ್ಯನಗಿರಿ, ಈ ಸ್ಥಳಗಳಲ್ಲಿ ತಂಗಿದ್ದು, ಅಲ್ಲಲ್ಲಿನ ವಿದ್ಯಮಾನಗಳನ್ನು ಪರಾಂಬರಿಸುವರು.

* * *

ಶ್ರೀಮನ್ಮಹಾರಾಜರವರು ಮೂರನೇ ಮಹಾರಾಜ ಕುಮಾರಿಯವರ ಸಮೇತ ಮೊನ್ನೆ ಸೋಮವಾರ ಮಧ್ಯಾಹ್ನ ಪೇಟಾರ್ ಗಾಡಿಯಲ್ಲಿ ಬೆಂಗಳೂರಿಂದ ಹೊರಟು ಸಾಯಂಕಾಲಕ್ಕೆ ಮುಂಚೆ ರಾಜಧಾನಿಯನ್ನು ಸುರಕ್ಷಿತರಾಗಿ ತಲಪಿದರು. ಅವರು ಈ ದಿನ ಬೆಂಗಳೂರಿಗೆ ಚಿತ್ತೈಸಬಹುದೆಂದು ಕಾಣುತ್ತದೆ. ಮದರಾಸಿನಲ್ಲಿರುವ ನಮ್ಮ ಮಹಾ ಮಾತೃಶ್ರೀಯವರೂ ಮಹಾರಾಣಿಯವರೂ ಪರಿವಾರ ಸಮೇತ ಫೆಬ್ರವರಿ ತಾ 3 ಕ್ಕೆ ವಾಪಸು ಬೆಂಗಳೂರಿಗೆ ದಯಮಾಡುವವರಾಗಿದಾರೆಂದು ಕೇಳುತ್ತೇವೆ.

* * *

ಚಾಮರಾಜನಗರದ ತಾಲ್ಲೂಕು ಕಣ್ಣೇಗಾಲದ ದಂಗೆ ಮೊಕದ್ದಮೆಯಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರು ನಗರದಲ್ಲಿ ಪ್ರಥಮ ವಿಚಾರಣೆಯನ್ನು ನಡಿಸಿಕೊಂಡುಬಂದರು. ಈ ವಾರ ಅವರು ತಮ್ಮ ತೀರ್ಮಾನವನ್ನು ತಿಳಿಯಪಡಿಸುವರು. ಈ ಮೊಕದ್ದಮೆಗೆ ಸಂಬಂಧಪಟ್ಟ ಸುಮಾರು 180 ಜನ ಅಪರಾಧಿಗಳನ್ನು ನೆನ್ನೆ ಚಾಮರಾಜನಗರದಿಂದ ಪಹರೆಯಲ್ಲಿ ರಾಜಧಾನಿಗೆ ಕರೆದುತಂದು ಇಲ್ಲಿನ ಬಂದೀಖಾನೆಯಲ್ಲಿ ಇಡುವಂತೆ ಏರ್ಪಾಡಾಗಿತ್ತು. ಈ ಮೊಕದ್ದಮೆಯ ಸೆಷನ್ಸ್ ವಿಚಾರಣೆಯು ಯಾವಾಗ ಪ್ರಾರಂಭವಾದೀತೋ ಇನ್ನೂ ಗೊತ್ತಾಗಲಿಲ್ಲ.

* * *

ಬೆಂಗಳೂರಿನಲ್ಲಿರುವ ಮ|| ಬಿ ಎಸ್ ಸಂಜೀವರಾಯರು ಮ್ಯುನಿಸಿಪಾಲಿಟಿಯವರ ಒತ್ತಾಯದ ಮೇರೆಯಿಂದ ತಮ್ಮ ಸಣ್ಣ ಗಂಡುಕೂಸಿಗೆ ದೇವೀ ಸಿಡುಬು ಹಾಕಿಸಿದ್ದರಿಂದ ಸಿಡುಬು ಏಳದೆ ಮಗುವು ದೀರ್ಘವಾಗಿ ನರಳಿ ಡಾಕ್ಟರುಗಳಿಂದ ಚಿಕಿತ್ಸೆ ಮಾಡಿಸಿದಾಗ್ಯೂ ಗುಣವಾಗದೆ ತೀರಿಹೋಯಿತೆಂದೂ, ಸಿಡುಬಿನ ಹಾಲು ಒಳ್ಳೆಯದಲ್ಲವೆಂದೂ, ಅದನ್ನು ತನಿಖೆಯಿಂದ ಕ್ರಮಪಡಿಸಬೇಕೆಂದೂ ದಿವಾನ್‌ರವರಿಗೆ ಮಹಜರ್ ಅರ್ಜಿಯನ್ನು ಬರೆದುಕೊಂಡರು. ದಿವಾನ್‌ರವರು ಮಗು ತೀರಿಹೋದದ್ದಕ್ಕಾಗಿ ಸಂತಾಪಪಟ್ಟು ಅವರಿಗೆ ಜವಾಬು ಕೊಟ್ಟಿದಾರೆಂದು ಕೇಳುತ್ತೇವೆ.

* * *

ಕುರುಬರ ಯಜಮಾನ್ ಬೋಜಪ್ಪನವರೂ ಯಜಮಾನ್ ಲಕ್ಕಪ್ಪನವರೂ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಒಕ್ಕಲಿಗರ ಪತ್ರಿಕೆಯ ಮೇಲೆ ಹೂಡಿರುವ ಮೊಕದ್ದಮೆಯು ಕಳೆದ ಬುಧವಾರ ವಿಚಾರಣೆಗೆ ಬಂತು. ಆದರೆ ಅಪರಾಧಿಗಳ ಪ್ರಥಮಸ್ಥಾನದಲ್ಲಿರುವ ಬೋರ್‌ಯವರಿಗೆ ಸಮನ್ ಜಾರಿ ಆಗಲಿಲ್ಲವೆಂದು ತಿಳಿದು ಮ್ಯಾಜಿಸ್ಟ್ರೇಟರು ಮೊಕದ್ದಮೆಯನ್ನು ಮೊನ್ನೆ ತಾ 21 ನೇ ಮಂಗಳವಾರಕ್ಕೆ ಹೀರಿಂಗು ಇಟ್ಟು ಹಾಜರಾಗಿದ್ದ ಉಳಿದ ಅಪರಾಧಿಗಳಿಂದ ತಲಾ 100 ರೂಪಾಯಿನ ಸ್ವಂತ ಮುಚಳಿಕೆ ಜಾಮೀನ್ ತೆಗೆದುಕೊಂಡು ಬಿಟ್ಟರು.

* * *

ಬೆಂಗಳೂರು ದಂಡಿನಲ್ಲಿ ಮಕ್ಕಳ ಸಾವನ್ನು ಕಡಮೆ ಮಾಡಬೇಕೆಂದು ಮ್ಯುನಿಸಿಪಾಲಿಟಿಯವರು ಕೂಲಿ ಕೆಂಬಳಕ್ಕೆ ಹೋಗುವ ಹೆಂಗಸರ ಮಕ್ಕಳನ್ನು ಕಾಪಾಡುವುದಕ್ಕಾಗಿ ಒಂದು ಏರ್ಪಾಡು ಮಾಡಿದಾರೆ. ಪ್ರಾಸ್‌ಪೆಕ್ಟ್ ಪೋಲೀಸ್ ಸ್ಟೇಷನ್ ಬಳಿ ಒಂದು ಮನೆಯನ್ನು ಸ್ಥಾಪಿಸಿದಾರೆ. ಕೂಲಿಪಾಡಿಗೆ ಹೋಗುವ ಹೆಂಗಸರು ತಮ್ಮ ಮಕ್ಕಳನ್ನು ಆ ಮನೆಯಲ್ಲಿ ಬಿಟ್ಟುಹೋಗುವರು. ಅಲ್ಲಿ ಮ್ಯುನಿಸಿಪಾಲಿಟಿಯಿಂದ ನೇಮಕವಾಗಿರುವ ದಾದಿಯರು ಆ ಮಕ್ಕಳಿಗೆ ಹಾಲು ಮುಂತಾದ್ದು ಹೊಯಿದು ತಾಯಂದಿರು ವಾಪಸು ಬರುವ ತನಕ ಪಾಲಿಸುತ್ತಾ ಬರುತ್ತಾರೆ. ಈ ಶ್ರೇಷ್ಠವಾದ ಪಗಡಿತ ಕಾರ್ಯವು ಕಳೆದ ತಾ 20 ನೇ ಸೋಮವಾರದಿಂದ ಪ್ರಾರಂಭವಾಗಿ ನಡೆಯುತ್ತಿದೆ. ಆ ಮೊದಲನೇ ದಿನ ಹತ್ತು ಮಂದಿ ತಾಯಂದಿರು ತಮ್ಮ ಮಕ್ಕಳನ್ನು ಆ ಮನೆಯಲ್ಲಿ ದಾದಿಯರ ವಶಕ್ಕೆ ಒಪ್ಪಿಸಿ ತಮ್ಮ ಕೆಲಸಗಳಿಗೆ ಹೋಗಿದ್ದರೆಂದು ತಿಳಿದುಬರುತ್ತದೆ.

* * *

ಸೀನಿಯರ್ ಕೌನ್ಸೆಲರ್ ಮತ್ತು ಚೀಫ್ ಜಡ್ಜರಾದ ಮಿ|| ಎಚ್ ವಿ ನಂಜುಂಡಯ್ಯನವರು ಮೊನ್ನೆ ಸೋಮವಾರ ಬೆಂಗಳೂರಿಂದ ರಾಜಧಾನಿಗೆ ದಯಮಾಡಿ, ಇಲ್ಲಿನ ಸಿವಿಲ್ ಕೋರ್ಟುಗಳ ಕಾರ್ಯಭಾಗಗಳನ್ನು ಅಜಮಾಯಿಷಿ ಮಾಡಿದರು. ಇವರು ನೆನ್ನೆ ರಾತ್ರಿ ಬೆಂಗಳೂರಿಗೆ ತೆರಳುವವರಾಗಿದ್ದರು.—ಎರಡನೇ ಕೌನ್ಸೆಲರು ಮತ್ತು ಎಕ್ಸೈಸ್ ಕಮಿಷನರರಾದ ಸರ್ದಾರ್ ಎಂ ಕಾಂತರಾಜ ಅರಸಿನವರು ಕಳೆದ ಭಾನುವಾರ ಬೆಳಿಗ್ಗೆ ಬೆಂಗಳೂರಿಂದ ಇಲ್ಲಿಗೆ ದಯಮಾಡಿ, ಮ್ಯುನಿಸಿಪಲ್ ಮತ್ತು ಎಕ್ಸೈಸ್ ಇಲಾಖೆಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ತನಿಖೆ ಮಾಡುತ್ತಿದಾರೆ. ಇವರು ಈ ದಿವಸವೋ ನಾಳೆಯೋ ವಾಪಸು ಬೆಂಗಳೂರಿಗೆ ತೆರಳುವವರಾಗಿದಾರೆ.—ಸಂಸ್ಥಾನದ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ಮಿ|| ಟಿ ವಿ ಅಮೃತಂ ಮೊದಲಿಯಾರ್ರವರು ಕಳೆದ ಸೋಮವಾರ ಮಧ್ಯಾಹ್ನ ಬೆಂಗಳೂರಿಂದ ರಾಜಧಾನಿಗೆ ದಯಮಾಡಿ, ಸಾಯಂಕಾಲ ಬಂದೀಖಾನೆಗೆ ಹೋಗಿ ಅಲ್ಲಿ ನಡೆಯುವ ಕಾರ್ಯಗಳನ್ನೂ ಬಂದೀವಾನರ ಭೋಜನ ಸೌಕರ್ಯಗಳನ್ನೂ ತನಿಖೆ ಮಾಡಿಕೊಂಡು ಬಂದು, ಭಾನುವಾರ ಬೆಳಿಗ್ಗೆ ಕನ್ನಂಬಾಡಿಗೆ ಹೋಗಿ ಅಲ್ಲಿನ ಆಸ್ಪತ್ರೆ ಕೆಲಸಗಳನ್ನೂ ಪ್ಲೇಗ್ ಉಪದ್ರವದ ಸ್ಥಿತಿಯನ್ನೂ ಪರಾಂಬರಿಸಿಕೊಂಡು ಬಂದು, ಆ ಸಾಯಂಕಾಲವೇ ರೈಲು ಹತ್ತಿ ಬೆಂಗಳೂರನ್ನು ಕುರಿತು ಪ್ರಯಾಣಮಾಡಿದರು. ಇವರು ಮತ್ತೆ ಸರ್ಕಾರಿ ಕೆಲಸದ ನಿಮಿತ್ತ ಮುಂದಿನ ಭಾನುವಾರ ಬರುವವರಾಗಿದಾರೆಂದು ವರ್ತಮಾನವಿದೆ.

ಮೈಸೂರು ಗೆಜೆಟ್ ಸಂಗ್ರಹ

ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗೋರಿಬಿದನೂರು, ಬಾಗೆಪಲ್ಲಿ, ಗುಡಿಬಂಡೆ, ಈ ಟವನ್‌ಗಳ ಮ್ಯುನಿಸಿಪಲ್ ಸರಹದ್ದಿನಲ್ಲಿ 1913 ನೇ ಮಾರ್ಚಿ ತಾ 1 ರಿಂದ ಎರಡು ವರುಷಗಳ ತನಕ ಪ್ರಜೆಗಳನ್ನು ಬಲಾತ್ಕರಿಸಿ ದೇವೀ ಸಿಡುಬು ಹಾಕುವ ಕಾನೂನು ಜಾರಿಯಲ್ಲಿರತಕ್ಕದ್ದು.

ಮ|| ಬಿದರೆ ವೆಂಕಟಸುಬ್ಬಯ್ಯನವರೂ, ಮ|| ಕೋಟಿಕನ್ಯಾದಾನಂ ಶ್ರೀನಿವಾಸ ತಾತಾಚಾರ್ಯರೂ ತಲಕಾಡು ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಲ್ಪಟ್ಟಿದಾರೆ.

ಮ|| ಜಿ ಎಸ್ ಮುನಿಗಪ್ಪನವರು ಗುಬ್ಬಿ ಮ್ಯುನಿಸಿಪಲ್ ಕೌನ್ಸಿಲ್ ಬೋರ್ಡಿನಿಂದ ಗುಬ್ಬಿ ತಾಲ್ಲೂಕ್ ಬೋರ್ಡ್ ಮೆಂಬರಾಗಿ ಚುನಾಯಿಸಲ್ಪಟ್ಟಿದಾರೆ.

ಮ|| ಗಳಾದ ನಾರಾಯಣರಾಯರೂ, ಜೋಡಿದಾರ್ ರಾಘಣ್ಣನವರೂ, ಕೋಟಾಜ ಮರ್ಗಪ್ಪನವರೂ, ಮಿ|| ಕಟೂರಿ ಸಾಹೇಬರವರೂ ಮೊಳಕಾಲ್ಮೂರು ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಲ್ಪಟ್ಟಿದಾರೆ.

ಮೂಡಿಗೆರೆ ಆಸ್ಪತ್ರೆಯ ಅ|| ಸರ್ಜನ್ ಮಿ|| ಎಫ್ ನೊರೋನಾಯವರಿಗೆ ಜನವರಿ ತಾ 17 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ|| ಸರ್ಜನ್ ಮಿ|| ಎಫ್ ಫರ್ನಾಂಡಿಸ್‌ಯವರಿಗೆ ಜನವರಿ ತಾ 20 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಅ|| ಸರ್ಜನ್ ಮಿ|| ಎನ್ ಎಸ್ ನಂಜುಂಡಯ್ಯನವರನ್ನು ಹಂಗಾಮಿಯಾಗಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಿಂದ ಸಕಲೇಶಪುರದ ಆಸ್ಪತ್ರೆಯ ಛಾರ್ಜಿಗೆ ವರ್ಗಮಾಡಿದೆ.

ನಂಜನಗೂಡು ಆಸ್ಪತ್ರೆಯ ಅ|| ಸರ್ಜನ್ ಮಿ|| ಬಿ ಕೃಷ್ಣಮೂರ್ತಿರಾಯರಿಗೆ ಜನವರಿ ತಾ 15 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಿ|| ಬಿ ಜಿ ಶ್ರೀನಿವಾಸಾಚಾರ್ಯರನ್ನು ಒಂದು ವರುಷ ಹಂಗಾಮಿಯಾಗಿ 2 ನೇ ಕ್ಲಾಸ್ ಅ|| ಸರ್ಜನ್ ಕೆಲಸಕ್ಕೆ ನೇಮಕಮಾಡಿದೆ.

ರೆವಿನ್ಯೂ ಕಮಿಷನರ್ ಮಿ|| ಕೆ ಎಸ್ ಚಂದ್ರಸಾಮಿ ಅಯ್ಯರವರನ್ನು ಸಂಘದಭಿವೃದ್ಧಿ ಸಮಾಜದ ವ್ಯವಸಾಯ ಶಾಖೆಯ ಕಮಿಟಿ ಪ್ರೆಸಿಡೆಂಟರಾಗಿ ನೇಮಿಸಿದೆ.

ಮೈಸೂರು ಡಿವಿಜನ್ ಅ|| ಇಂಜಿನಿಯರ್ ಮಿ|| ಎಂ ಎ ಆನಂದಾಚಾರ್‌ಯವರಿಗೆ ಜನವರಿ ತಾ 1 ರಿಂದ ಎರಡು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಪಾಟಿಯಾಲಾ ಸಂಸ್ಥಾನದ ಮಹಾರಾಜರವರಿಗೆ ಕಳೆದ ವಾರ ಯುವರಾಜ ಪುತ್ರಸಂತಾನವಾಯಿತು. ಅನೇಕ ಸಂತೋಷೋತ್ಸವಗಳು ನಡೆಯುತ್ತಲಿವೆ.

* * *

ಕಲ್ಕತ್ತಾ ಪಟ್ಟಣದಲ್ಲಿರುವ ಹೇಸ್ಟಿಂಗ್ಸ್ ಎಂಬ ಸಾರಿನ ಕಾರ್ಖಾನೆಯ ನೌಕರವರ್ಗದವರುಗಳು ಹಟಹಿಡಿದು ಎಲ್ಲಾ ನಿಂತುಬಿಟ್ಟದ್ದರಿಂದ ಕಾರ್ಖಾನೆಯ ಬಾಗಿಲು ಮುಚ್ಚಬೇಕಾಯಿತು.

* * *

ಮೊನ್ನೆ ಬಂದಿರುವ ತಂತೀವರ್ತಮಾನದಿಂದ ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್‌ಯವರಿಗೆ ದಿನೇ ದಿನೇ ವಾಸಿಯಾಗುತ್ತಿದೆ ಎಂದೂ, ಭುಜದ ಮೇಲಣ ಗಾಯವು ಮಾತ್ರ ಇನ್ನೂ ಗುಣವಾಗಿಲ್ಲವೆಂದೂ ತಿಳಿಯುವುದು.

* * *

ಭೋಪಾಲ್ ಸಂಸ್ಥಾನದ ಬೇಗಂಸಾಹೇಬಾಯವರು ಡೆಹಲಿ ನಗರದಲ್ಲಿ ಭಾರಿಯಾದ ಒಂದು ಸ್ತ್ರೀ ವಿದ್ಯಾಶಾಲೆಯನ್ನು ಸ್ಥಾಪಿಸಬೇಕೆಂದು ಫಂಡನ್ನು ಕೂಡಿಸುತ್ತಿದಾರೆ. ಈ ಫಂಡಿಗೆ ಅವರೇ 1,25,000 ರೂಪಾಯಿ ಚಂದಾ ಕೊಟ್ಟದ್ದಲ್ಲದೆ ಈ ರಾಷ್ಟ್ರದ ಹಲವು ದೇಶೀಯ ಸಂಸ್ಥಾನಗಳ ಮಹಾರಾಣಿಯರು, ರಾಣಿಯರು, ಬೇಗಂರು ಮೊದಲಾದ ರಾಣಿವಾಸಗಳ ಸ್ತ್ರೀಯರುಗಳಿಂದ ಚಂದಾ ಎತ್ತಿರುತ್ತಾರೆ. ಅವರ್ಯಾರೆಂದರೆ, ಗ್ವಾಲಿಯರ್ ಮಹಾಮಾತೃಶ್ರೀ ಮಹಾರಾಣಿಯವರು 1,50,000 ರೂಪಾಯಿ, ಹೈದರಾಬಾದ್ ನೈಜಾಮರವರೂ ಗ್ವಾಲಿಯರ್ ಮಹಾರಾಣಿಯವರೂ ತಲಾ 50,000 ರೂಪಾಯಿ, ಭೋಪಾಲದ ಕೆ ಸಾರ್ ದುಲಾಹಿನ್ ಸಾಹೆಬಾಯವರು 7,000 ರೂಪಾಯಿ, ಧಾರ್ ಸಂಸ್ಥಾನದ ರಾಣಿಯವರೂ ಭೋಪಾಲದ ಸರ್ದಾರ್ ದುಲಾಹಿನ್ ಸಾಹೇಬಾಯವರೂ ಸಹಾಬಾನೊಬೇಗಂ ಸಾಹಿಬಾಯವರೂ ತಲಾ 5,000 ರೂಪಾಯಿ, ಜಂಜೀರಾ ಸಂಸ್ಥಾನದ ಬೇಗಂರಾಣಿಯವರೂ ನರಸಿಂಘರ್ ಸಂಸ್ಥಾನದ ರಾಣಿಸಾಹೆಬಾಯವರೂ ತಲಾ 3,000 ರೂಪಾಯಿ, ರಾಜಘಡದ ರಾಣಿಸಾಹೆಬಾಯವರು 2,000 ರೂಪಾಯಿ, ಈ ರೀತಿ ನಾಲ್ಕು ಲಕ್ಷ ರೂಪಾಯಿ ಚಂದಾ ವಸೂಲಾಗಿದೆ.

ವಿದೇಶದ ವೃತ್ತಾಂತಗಳು.

75 ಸಹಸ್ರ ರೂಪಾಯಿನ ನಾಣ್ಯಗಳು ಭರ್ತಿಯಾಗಿ ರೈಲಿನ ಮೇಲೆ ಸಾಗಿ ಹೋಗುತ್ತಿದ್ದ ಒಂದು ಪೆಟ್ಟಿಗೆಯು ಯೂರೋಪ್ ಖಂಡದಲ್ಲಿ ಬರ್ಲಿನ್ ಪಟ್ಟಣಕ್ಕೂ ಹಾಂಬರ್ಗಿಗೂ ನಡುವೆ ಕಳುವಾಯಿತು. ಈಗ್ಗೆ ಎರಡು ತಿಂಗಳ ಹಿಂದೆ ಆ ಮಾರ್ಗದ ರೈಲಿನಲ್ಲಿ ಕೆಲವು ಸಹಸ್ರ ರೂಪಾಯಿನ ಬೆಳ್ಳಿ ಬಂಗಾರದ ಗಟ್ಟಿಗಳನ್ನು ಯಾರೋ ಅಪಹರಿಸಿದರು. ಈ ವಿಷಯಗಳು ಆ ಪ್ರಾಂತ್ಯದಲ್ಲಿ ಕಳವಳವನ್ನುಂಟುಮಾಡಿದೆ.

* * *

ರಷ್ಯಾ ಚಕ್ರಾಧಿಪತ್ಯದಲ್ಲಿ 1907 ನೇ ಜನವರಿ 1 ರಿಂದ 1912 ನೇ ಜನವರಿ 1 ರ ವರೆಗಿನ ಐದು ವರುಷಗಳ ಪೋಲೀಸ್ ರಿಪೋರ್ಟು ಪ್ರಕಟವಾಗಿದೆ. 18,094 ದರೋಡೆಗಳೂ, ಹಿಂಸಾಪೂರ್ವಕವಾದ ಕಳುವುಗಳೂ, ಸಾಮಾನ್ಯ ಕೊಲೆಗಳೂ ನಡೆದಿರುತ್ತವೆ. ಸರ್ಕಾರಿ ಅಧಿಕಾರಿಗಳೂ ನೌಕರಮಾಡೆಯರಲ್ಲಿ 1,719 ಜನರೂ, ಪ್ರಜೆಗಳಲ್ಲಿ 3,907 ಜನರೂ ಕೊಲ್ಲಲ್ಪಟ್ಟರು. 1912 ನೇ ವರುಷದ ಒಂಭತ್ತು ತಿಂಗಳಲ್ಲಿ ಒಟ್ಟು 2,141 ದರೋಡೆಗಳೂ, ಕೊಲೆಗಳೂ, ಕ್ರೂರ ಹಿಂಸೆಗಳೂ ನಡೆದಿರುವವು.

* * *

ವಿಲಾಯತಿಯಲ್ಲಿ ಸ್ತ್ರೀಯರಿಗೆ ರಾಜಕೀಯ ವಿಚಾರಗಳಲ್ಲಿ ಕೆಲವು ಸ್ವಾತಂತ್ರ್ಯಗಳನ್ನು ಕೊಡಬೇಕೆಂದು ಹಲವು ಸ್ತ್ರೀಯರು ಹೋರಾಡುತ್ತಿದಾರಷ್ಟೆ. ಈ ಪೈಕಿ ಕೆಲವರು ದುಷ್ಟಕಾರ್ಯಗಳನ್ನು ನಡಿಸುತ್ತಾ ಬಂದಿರುವುದೂ, ಅದಕ್ಕೆ ಅಂಥವರಿಗೆ ಸರ್ಕಾರದವರು ಶಿಕ್ಷೆಗಳನ್ನು ವಿಧಿಸುತ್ತಿರುವುದೂ ಅಪರೂಪವಲ್ಲ. ಅಂಚೆ ಕಾಗದಗಳ ಪೆಟ್ಟಿಗೆಗಳಲ್ಲಿ ದ್ರಾವಕಗಳನ್ನು ಸುರಿದು ಪ್ರಜೆಗಳ ಕಾಗದಗಳನ್ನು ಕೆಡಿಸಿ ಹಾಳುಮಾಡಿದ ಸ್ತ್ರೀಯರಿಬ್ಬರಿಗೆ ಕಳೆದ ವಾರ ಮ್ಯಾಜಿಸ್ಟ್ರೇಟರು ತಲಾ ಎಂಟು ತಿಂಗಳ ಸಜವನ್ನು ವಿಧಿಸಿದರು.

* * *

ಜಮೇಕಾ ದ್ವೀಪದ ಮಂತ್ರಿಸಭೆಯಲ್ಲಿ ಗವರ್ನರವರು ಪ್ರಕಟಮಾಡಿದ್ದೇನೆಂದರೆ—ಈಗ ಕೆಲವು ತಿಂಗಳ ಹಿಂದೆ ನಮ್ಮ ದ್ವೀಪದಲ್ಲಿ ಪ್ರಾಪ್ತವಾದ ಭಯಂಕರವಾದ ಸುಂಟರಗಾಳಿಯ ದೆಸೆಯಿಂದ 19,000 ಸಣ್ಣ ಮನೆಗಳು ನಾಶಹೊಂದಿದವು. ರೈತಪ್ರಜೆಗಳಿಗೆ ಮನೆಮಠಗಳನ್ನು ಕಟ್ಟಿಕೊಳ್ಳುವುದಕ್ಕೆ ಸರ್ಕಾರದಿಂದ ಎರಡೂವರೆ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದೆ. ಈ ಸುಂಟರಗಾಳಿಯಿಂದ ರಸ್ತೆಗಳೂ, ಸರ್ಕಾರಿ ಕಟ್ಟಡಗಳೂ, ಸ್ಕೂಲುಗಳೂ ಕಟ್ಟುಹೋಗಿ ಎರಡೂವರೆ ಲಕ್ಷ ರೂಪಾಯಿ ತನಕ ನಷ್ಟವಾಯಿತು. ಕಬ್ಬಿನ ವ್ಯವಸಾಯಗಾರರಿಗೆ ತುಂಬಾ ನಷ್ಟ ಸಂಭವಿಸಿದ್ದರಿಂದ ಸರ್ಕಾರದವರು ಅವರಿಗೂ ಸಾಲಗಳನ್ನು ಕೊಡುವದಕ್ಕೆ ಗೊತ್ತುಮಾಡಿದಾರೆ. ಅಂತು ಚಾಲ್ತಿ ವರುಷದ ಉತ್ಪತ್ತಿಯಲ್ಲಿ ಸರ್ಕಾರಕ್ಕೆ ಸುಮಾರು ಹತ್ತು ಲಕ್ಷ ರೂಪಾಯಿ ಕಡಮೆಯಾದೀತೆಂದು ಅಂದಾಜು ಮಾಡಲಾಗಿದೆ.

ವಾಂತಿಭೇದಿ ಉಪದ್ರವದ ಸೂಚನೆ

ಮೈಸೂರು ಪಟ್ಟಣದ ಹೆಲ್ತ್ ಆಫೀಸರ್ ಮೆ|| ವಿ. ಎಲ್. ವಾಂಕರವರು ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನಂದರೆ —ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕಾಲರಾ ಉಪದ್ರವದಿಂದ ಜನಗಳು ಸಾಯುತ್ತಿರುವುದರಿಂದಲೂ, ಕಾಲರಾ ರೋಗವು ತಗಲಿದ ಸ್ಥಳಗಳಿಂದ ಮೈಸೂರು ಸಿಟಿಗೆ ಜನಗಳು ಬಂದುಹೋಗುತ್ತಿರುವುದರಿಂದಲೂ ಮೈಸೂರು ಸಿಟಿಯಲ್ಲಿ ಕಾಲರಾ ತಲೆದೋರುವ ಸಂಭವವು ವಿಶೇಷವಾಗಿರುತ್ತೆ.

ಕಾಲರಾ ರೋಗವು ಉತ್ಪತ್ತಿಯಾಗಿ ಹರಡದಂತೆ ಮಾಡುವುದಕ್ಕೆ ಉಪಾಯಗಳ್ಯಾವವೆಂದರೆ—ಪ್ರಜೆಗಳು ಕುಡಿಯುವ ನೀರನ್ನು ಮತ್ತು ಹಾಲು ಮುಂತಾದ ದ್ರವಪದಾರ್ಥಗಳನ್ನು ಚೆನ್ನಾಗಿ ಐದು ನಿಮಿಷಗಳ ವರೆಗೆ ಕುದಿಸಬೇಕು ಮತ್ತು ಅವುಗಳನ್ನು ಪಾತ್ರೆಗಳಲ್ಲಿ ಹಾಕಿ ಮುಚ್ಚಿಡಬೇಕು ಎಲ್ಲಾ ತಿಂಡಿಯ ಪದಾರ್ಥಗಳನ್ನೂ, ಆಹಾರಕ್ಕೆ ಉಪಯೋಗಿಸುವ ಪದಾರ್ಥಗಳನ್ನೂ ನೊಣಗಳಿಗಾಗಲಿ, ಧೂಳಿಗಾಗಲೀ ಆಸ್ಪದವಿಲ್ಲದಂತೆ ಮುಚ್ಚಿಟ್ಟಿರಬೇಕು. ಹಸಿ ಕಾಯಿಗಳನ್ನಾಗಲೀ, ಕೊಳತ ಹಣ್ಣುಗಳನ್ನಾಗಲೀ, ಬೇಯಿಸದೆ ಇರುವ ಮೂಲಂಗಿ ಮುಂತಾದ ತರಕಾರಿಗಳನ್ನಾಗಲೀ, ತಂಗಳು ಅನ್ನ ಮೊದಲಾದ ಪದಾರ್ಥಗಳನ್ನಾಗಲೀ ಉಪಯೋಗಿಸಕೂಡದು. ಸದ್ಯಕ್ಕೆ ಕಾಲರಾ ತಗಲಿದ ಸ್ಥಳಗಳಿಗೆ ಹೋಗುವುದು, ಅಂಥಾ ಸ್ಥಳಗಳಿಂದ ಬಂದ ಜನಗಳಿಗೆ ಮನೆಯಲ್ಲಿ ವಾಸಮಾಡಲು ಆಶ್ರಯ ಕೊಡುವುದು ಸರಿಯಾದ್ದಲ್ಲ ಕೆರೆ, ಕೊಳ ಮತ್ತು ಭಾವಿ ನೀರುಗಳನ್ನು ಕುಡಿಯುವುದಕ್ಕಾಗಲೀ, ಅಡಿಗೆಗಾಗಲೀ ಉಪಯೋಗಿಸಕೂಡದು ಪಾತ್ರೆಗಳನ್ನು ತೊಳೆಯುವುದಕ್ಕೂ, ಬಾಯಿಮುಕ್ಕಳಿಸುವುದಕ್ಕೂ, ಸ್ನಾನಕ್ಕೂ ಅಶುದ್ಧವಾದ ಯಾವ ನೀರನ್ನೂ ಉಪಯೋಗಿಸಬಾರದು

"ಪರಸ್ಪರ ಸಹಾಯ ಪತ್ರಿಕೆ"

ಪರಸ್ಪರ ಸಹಾಯ ವಿಷಯಗಳು ನಮ್ಮ ಸಂಸ್ಥಾನದ ಸಾಮಾನ್ಯ ಪ್ರಜೆಗಳಿಗೆಲ್ಲಾ ಮನವರಿಕೆಯಾದಲ್ಲದೆ ಇಲ್ಲಿನ ಯಾವ ಕಸಬೂ ಅಭಿವೃದ್ಧಿಹೊಂದಲಾರದು ಈ ವಿಚಾರವನ್ನು ಕನ್ನಡಿಗರಿಗೆ ತಿಳಿಸುವುದಕ್ಕೆ ಸರ್ಕಾರದವರು ನಾನಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ ಬೆಂಗಳೂರು ನಿ ಕೆ ಎಸ್ ಕೃಷ್ಣಯ್ಯರ್, ಬಿ ಎ ಯವರು ಮೇಲ್ಕಂಡ ಹೆಸರಿನ ಒಂದು ಮಾಸಿಕ ಪುಸ್ತಕವನ್ನು ಹೊರಡಿಸಲು ಪ್ರಯತ್ನಪಟ್ಟು, ಮೊದಲನೇ ಸಂಚಿಕೆಯನ್ನು ನಮ್ಮಲ್ಲಿಗೆ ಕಳುಹಿಸಿರುವರು ಇದರ ವಾರ್ಷಿಕ ಚಂದಾ ಟಪ್ಪಾಲು ವೆಚ್ಚ ಸೇರಿ ಒಂದು ರೂಪಾಯಿ ಇಟ್ಟಿರುವುದು ಬಹಳ ಸುಲಭವಾಯಿತು ನಮ್ಮ ಮುಂದಿರುವ ಸಂಚಿಕೆಯಲ್ಲಿ ಈ ಮಾಸಪತ್ರಿಕೆಯ ಉದ್ದೇಶವನ್ನು ಕುರಿತು ಅವರು ಬರೆದಿರುವುದೇನೆಂದರೆ—

"ಪರಸ್ಪರ ಸಹಾಯಕ್ರಮವು ಜನರಲ್ಲಿ ನೆಲೆಗೊಂಡು ಕಾರ್ಯಕಾರಿಯಾಗಬೇಕಾದರೆ ಏಕಮತ್ಯ, ಮಿತವ್ಯಯ, ತಮ್ಮಲ್ಲಿ ತಮಗೆ ಭರವಸೆ, ಮನೋಧಾರ್ಢ್ಯ, ದೂರದೃಷ್ಟಿ ಮೊದಲಾದ ಗುಣಗಳಿರುವುದು ಮಾತ್ರವೇ ಅಲ್ಲದೆ, ಪರದೇಶಗಳಲ್ಲಿ ಈ ಕ್ರಮವು ಹೇಗೆ ಅಭಿವೃದ್ಧಿಹೊಂದಿ ಪ್ರಯೋಜನಕಾರಿಯಾಗುತ್ತಿದೆ ಎಂಬ ಜ್ಞಾನವು ಅವರ ಮನಸ್ಸಿನಲ್ಲಿ ನಾಟಬೇಕು ಪರಸ್ಪರ ಸಹಾಯದ ಅನೇಕ ರೀತಿಗಳೂ, ಬೇರೆ ಬೇರೆ ಸಂಘಗಳವರು ಅನುಸರಿಸುತ್ತಿರುವ ಬೇರೆ ಬೇರೆ ಮಾರ್ಗಗಳೂ, ಅವುಗಳ ಅನುಕೂಲ ಪ್ರತಿಕೂಲಗಳೂ ಜನಗಳಿಗೆ ತಿಳಿದು, ಆ ಮೂಲಕ ಅವರಲ್ಲಿ ವಿಚಾರಣಾಶಕ್ತಿಯೂ, ಉತ್ಸಾಹವೂ ಹುಟ್ಟಬೇಕು ಆ ತಿಳುವಳಿಕೆಯನ್ನುಂಟುಮಾಡಿಕೊಡಲು ಇಂಗ್ಲಿಷ್ ಮೊದಲಾದ ಅನ್ಯ ಭಾಷೆಗಳಲ್ಲಿ ಅನೇಕ ಪುಸ್ತಕಗಳೂ ಪತ್ರಿಕೆಗಳೂ ಇವೆ ಆದರೆ ಕನ್ನಡದಲ್ಲಿ ಇದುವರೆಗೂ ಅಂತಹ ಸಾಧನಗಳು ಇರಲಿಲ್ಲ ಈ ಪತ್ರಿಕೆಯ ಉದ್ದೇಶವು ಜನರಲ್ಲಿ ಪರಸ್ಪರ ಸಹಾಯ ಬುದ್ಧಿಯನ್ನೂ, ಮೇಲೆ ಹೇಳಿದಂತೆ ಸಹಾಯಕ್ರಮದ ತಿಳುವಳಿಕೆಯನ್ನೂ ಉಂಟುಮಾಡಬೇಕೆಂಬುದೇ. ಈ ಪತ್ರಿಕೆಯಲ್ಲಿ ಸಾಮಾನ್ಯವಾಗಿ ಪ್ರಕಟವಾಗಬಹುದಾದ ವಿಷಯಗಳಾವುವೆಂದರೆ —ಸಂಸ್ಥಾನದ ಮತ್ತು ಇತರ ಪರಸ್ಪರ ಸಹಾಯ ಸಂಘಗಳ ವರ್ತಮಾನಗಳು, ಅವುಗಳ ಆದಾಯ ವ್ಯಯಗಳು, ಕಾರ್ಯಕ್ರಮಗಳು ರಿಜಿಸ್ಟ್ರಾರ್‌ಅವರ ಮತ್ತು, ಇನ್‌ಸ್ಪೆಕ್ಟರುಗಳ ಕಾರ್ಯಗಳು, ಅಭಿಪ್ರಾಯಗಳು ಅನೇಕ ಅವಸ್ಥೆಗಳಲ್ಲಿ ನಡೆಯುವ ಪರಸ್ಪರ ಸಹಾಯ ಸಂಘಗಳ ವಾರ್ಷಿಕ ಸಮ್ಮೇಲನಗಳ ವೃತ್ತಾಂತಗಳು ಪ್ರಸಿದ್ಧವಾದ ಪರಸ್ಪರ ಸಹಾಯಸಂಘಗಳ ಚರಿತ್ರೆಗಳು ಪರಸ್ಪರ ಸಹಾಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕುರಿತ ಉಪನ್ಯಾಸಗಳು, ಇವೇ ಮೊದಲಾದವು ನಮ್ಮ ದೇಶದ ಪರಸ್ಪರ ಸಹಾಯಕರು ಈ ವಿಷಯಗಳನ್ನು ಆದರದಿಂದ ಓದಿ, ಇತರರಿಂದ ಓದಿಸಿ, ಓದಲಾರದವರಿಗೆ ಬೋಧಿಸಿ, ಅವುಗಳನ್ನು ಕುರಿತು ಈ ಪತ್ರಿಕೆಯಲ್ಲಿ ಚರ್ಚಿಸಿ, ನಮ್ಮ ದೇಶಕ್ಕೆ ಅನುಕೂಲವಾದ ಪರಸ್ಪರ ಸಹಾಯ ಕ್ರಮಗಳನ್ನು ನಿರ್ಧರಿಸಿ, ಎಲ್ಲಾ ವಿಧದಲ್ಲಿಯೂ ಪರಸ್ಪರ ಸಹಾಯ ಸಂಪ್ರದಾಯವು ಜನರಲ್ಲಿ ಸ್ಥಿರಗೊಳ್ಳುವಂತೆ ಮಾಡಿದರೆ ಈ ಪತ್ರಿಕೆಯ ಪ್ರಕಟನೆಯು ಸಾರ್ಥಕವಾಗುವುದು"

ಆಹಾರ ವಸ್ತುಗಳು

(1) ಬಾಳೆಹಣ್ಣಿನ ಪುಡಿ.

ಬಾಳೆಹಣ್ಣುಗಳಿಂದ ತಯಾರಿಸಲ್ಪಡುವ ಆಹಾರಪದಾರ್ಥಗಳೆಲ್ಲವೂ ರುಚಿಯಾಗಿಯೂ, ಪುಷ್ಟಿಕರವಾಗಿಯೂ ಇರುತ್ತವೆ ಅನೇಕರು ಒಣಗಿದ ಬಾಳೆಹಣ್ಣುಗಳನ್ನು ಅಂಜೂರದ ಹಣ್ಣಿಗಿಂತಲೂ ಹೆಚ್ಚಾಗಿ ತಿನ್ನುತ್ತಾರೆ ಹಣ್ಣನ್ನು ಚೂರುಚೂರಾಗಿ ಕತ್ತರಿಸಿ ಒಣಗಿಸಿ ಪುಡಿಮಾಡಿ ಆ ಹಿಟ್ಟಿನಿಂದ ಗಂಜಿ ಕಾಯಿಸಿ ಮಕ್ಕಳಿಗೂ, ಬಾಯಿಲೆಯವರಿಗೂ, ಅಜೀರ್ಣ ರೋಗದಿಂದ ನರಳುತ್ತಿರುವವರಿಗೂ ಕುಡಿಸುತ್ತಾರೆ ಜಮೇಕಾ ದೇಶದಲ್ಲಿರುವ ನಿಗ್ರೋ ಹೆಂಗಸರು ತಮ್ಮ ಮಕ್ಕಳಿಗೆ ಈ ಗಂಜಿಯನ್ನೇ ಹಾಲಿಗೆ ಬದಲಾಗಿ ಕುಡಿಸುತ್ತಾರೆ. ಬಾಳೆಹಣ್ಣು ಚನ್ನಾಗಿ ಪಕ್ವವಾಗಿರುವಾಗ್ಗೆ ಅದನ್ನು ನಿಧಾನವಾಗಿ ಅಗಿದು ತಿಂದರೆ ಬಹಳ ಪುಷ್ಟಿಕಾರಿಯಾಗಿರುತ್ತದೆ. ಅದರೆ ಅದು ಪಕ್ವವಾಗಿಲ್ಲದಾಗ ಅದನ್ನು ಗಬಗಬನೆ ತಿಂದರೆ ಅದು ಸುಲಭವಾಗಿ ಜೀರ್ಣವಾಗದೆ ಬಹಳ ತೊಂದರೆಕೊಡುವುದು

(2) ತಯಾರಿಸಿದ ಹಾಲು

ಪ್ರಸಿದ್ಧರಾದ ಮೂರುಜನ ಜರ್ಮನಿ ರಸಾಯನಶಾಸ್ತ್ರಜ್ಞರು ಕಳೆದ ಮೂರು ವರ್ಷಗಳಿಂದಲೂ ಪ್ರಯತ್ನಪಟ್ಟು ಹಾಲನ್ನು ತಯಾರು ಮಾಡುವದನ್ನು ಕಂಡು ಹಿಡಿದಿರುತ್ತಾರೆ. ಸೋಯಾ ಅವರೆಯ ಮತ್ತು ಇತರ ಕೊಬ್ಬಿನ ಅಂಶವೂ ಮತ್ತು ಸಕ್ಕರೆಯೂ ಸೇರಿ ಈ ರೀತಿ ಹಾಲಾಗುತ್ತದೆ ಇದಕ್ಕಾಗಿ ತಯಾರಿರುವಣಿರುವ ಒಂದು ಯಂತ್ರದಲ್ಲಿ ಮೇಲ್ಕಂಡ ಪದಾರ್ಥಗಳನ್ನು ಸುಮಾರು ಏಳು ಗಂಟೆಗಳ ಕಾಲ ಹಾಕಿ ಕಾಯಿಸಿದರೆ ಶುದ್ಧವಾದ ಹಾಲು ಸಿಕ್ಕುವುದು ಹಾಲನ್ನು ತಯಾರಿಸುವಾಗ ಪದಾರ್ಥಗಳನ್ನು ಕೈಯಿಂದ ಮುಟ್ಟುವುದಿಲ್ಲ, ಮತ್ತು ತಯಾರಾದಮೇಲೆಯೇ ಇದನ್ನು ಸೀಸೆಗಳೊಳಗೆ ಹಾಕಿ ಬಾಯಿಮುಚ್ಚಿ ಅರಗುಹಾಕಿ ಮೊಹರುಮಾಡುತ್ತಾರೆ. ಅನಂತರ ಈ ಹಾಲನ್ನು ಯಾವಾಗ ಬೇಕಾದರೂ ಉಪಯೋಗಿಸಬಹುದು ಈ ಹಾಲು ಮಂದವಾಗಿ ಸಮಸ್ತ ಭಾಗದಲ್ಲೂ ಹಸುವಿನ ಹಾಲಿನಂತೆಯೇ ಇರುತ್ತದೆ ಇದು ಅತಿ ರುಚಿಯಾಗಿಯೂ ಪುಷ್ಟಿಕರವಾಗಿಯೂ ಇರುತ್ತದೆ ಈ ಹಾಲನ್ನು ಎಷ್ಟು ಮುಂದವಾಗಿ ಬೇಕಾದರೂ ಇರುವಂತೆ ತಯಾರಿಸಬಹುದು ಈಗ ಜರ್ಮನಿಯಲ್ಲಿ ಉಪಯೋಗಿಸುತ್ತಿರುವ ಈ ಹಾಲು ಅತ್ಯುತ್ತಮವಾದ ಹಸುವಿನ ಹಾಲಿಗಿಂತಲೂ ಹದಿನೈದರಷ್ಟು ಪುಷ್ಟಿಕರವಾಗಿರುವುದೆಂದೂ ತಿಳಿಯಬರುತ್ತದೆ ಈಚೆಗೆ ಇಂಗ್ಲೆಂಡ್ ದೇಶದಲ್ಲಿ ಸಹ ಈ ರೀತಿಯಾಗಿ ಹಾಲನ್ನು ತಯಾರು ಮಾಡಿ ಬಿಕರಿಮಾಡಲು ಕಾರ್ಖಾನೆಗಳನ್ನು ಇಡುವುದರಲ್ಲಿದ್ದಾರೆ ಈ ಹಾಲಿಗೂ, ಹಸುವಿನ ಹಾಲಿಗೂ ಇರುವ ವ್ಯತ್ಯಾಸವೇನೆಂದರೆ, ಈ ಹಾಲಿನಲ್ಲಿ ಮಾತ್ರ ಬೆಣ್ಣೆಯನ್ನು ತೆಗೆಯುವದಕ್ಕೆ ಆಗುವುದಿಲ್ಲ ಆದರೆ ಈ ಹಾಲಿನಿಂದ ಕೆನೆಯನ್ನು ತೆಗೆಯಬಹುದು ಈ ಕೆನೆಯು ಪೌಂಡಿಗೆ ಮೂರು ಆಣೆಯಂತೆ ಬಿಕರಿಯಾಗುತ್ತಿದೆ ಈ ಹಾಲು ಹಸುವಿನ ಹಾಲು ಹುಳಿಯಾಗಬಹುದಾದ ಎರಡರಷ್ಟು ಕಾಲದಲ್ಲಿ ಹುಳಿ ಹಿಡಿಯುವುದು, ಮತ್ತು ಇದನ್ನು ಹಸುವಿನ ಹಾಲಿನಂತೆಯೇ ಕಾಫಿ, ಟೀ ಮೊದಲಾದವುಗಳನ್ನು ತಯಾರಿಸಲು ಉಪಯೋಗಿಸಬಹುದು ಇನ್ನು ಸ್ವಲ್ಪ ಕಾಲದಲ್ಲಿಯೇ ಲಂಡನ್ ಪಟ್ಟಣದಲ್ಲಿ ಈ ಹಾಲನ್ನು ತಯಾರು ಮಾಡಲು ಒಂದು ಕಾರ್ಖಾನೆಯು ಸ್ಥಾಪಿಸಲ್ಪಡುವ ಸಂಭವವಿದೆ ಈ ಕೈಗಾರಿಕೆಯು ಅನೇಕ ಜನರಿಗೆ ಕೆಲಸ ಸಿಕ್ಕಲು ಅವಕಾಶಕೊಡುವುದಲ್ಲದೆ ಈಗ ಶುದ್ಧವಾದ ಹಾಲು ಸಿಕ್ಕದೆ ಜನಗಳಿಗೆ ಉಂಟಾಗುತ್ತಿರುವ ತೊಂದರೆಯೂ ಇದರಿಂದ ನಿವಾರಣೆಯಾಗುವುದರಲ್ಲಿ ಸಂಶಯವಿಲ್ಲ

ಅಗ್ನಿಮಾಂದ್ಯ, ಅಜೀರ್ಣ, ಅರುಚಿ.

"ನನಗೆ ಹಸಿವೆ ಇಲ್ಲ," "ನನಗೆ ಬಾಯಿರುಚಿ ಇಲ್ಲ" ಎಂಬ ಮಾತುಗಳು ಈಗ ಎಲ್ಲೆಲ್ಲಿಯೂ ಕೇಳಬರುತ್ತಿವೆ. ಇಂಥವರಿಗೆ ಅಗ್ನಿದೀಪನ (ಹಸಿವೆಯನ್ನುಂಟುಮಾಡುವ) ಔಷಧಗಳನ್ನೂ, ಜೀರ್ಣಕರಣಗಳಿಗೆ ಶಕ್ತಿಪ್ರದವಾದ ಔಷಧಗಳನ್ನೂ ಸೇವಿಸುವಂತೆ ಮಾಡಿದರೆ ಆಹಾರವನ್ನೇ ಉಪೇಕ್ಷಿಸುವ ಜೀರ್ಣಕರಣಗಳು ಒತ್ತಾಯದಿಂದ ಸೇವಿಸಲ್ಪಡುವ ಔಷಧರೂಪವಾದ ಈ ಆಹಾರಗಳಿಂದ ಅಸಹ್ಯಪಟ್ಟು ಹೆಚ್ಚಿನ ರೋಗಗಳನ್ನುಂಟುಮಾಡುವವು ಹೀಗಾದಲ್ಲಿ ಹಣಾ ಬದಲಾಯಿಸುವುದರಿಂದ ಉಪಯೋಗವಾಗಬಹುದೆಂದು ನಿರೀಕ್ಷಿಸಿ ದ್ವೀಪಾಂತರಕ್ಕಾಗಲಿ, ಪರ್ವತಶಿಖರಗಳಿಗಾಗಲಿ, ಕಡಲತಡಿಗಾಗಲಿ ರೋಗಿಯನ್ನು ಕಳುಹಿಸುವರು. ಇದರಿಂದ ಶರೀರಕ್ಕೂ ಮನಸ್ಸಿಗೂ ವಿಶ್ರಾಮ ಲಭಿಸಿ ಸ್ವಲ್ಪ ಪ್ರಯೋಜನ ತೋರಿದರೂ ಅಗ್ನಿಮಾಂದ್ಯವೂ, ಅದರ ಸಂಗಡ ಇರುವ ಅಜೀರ್ಣ ಅರುಚಿಗಳೂ ಯಥಾಪ್ರಕಾರವೇ ಇರುವವು —ಸರ್ವದಾ ಕೆಲಸಮಾಡುವವನು ದಣಿಯುತ್ತಾನೆ, ದಣಿದವನಿಗೆ ವಿಶ್ರಾಂತಿ ಬೇಕು ವಿಶ್ರಮಿಸಿಕೊಳ್ಳದೆ ಕೆಲಸಮಾಡುವುದು ಅಸಾಧ್ಯ ವಿಶ್ರಮಿಸಿಕೊಳ್ಳದೆ ಕೆಲಸಮಾಡತೊಡಗಿದವನು ಬದುಕಲಾರನು ಕೆಲಸಮಾಡುತ್ತಿರುವಾಗ ಹೆಚ್ಚಾಗಿ ಉಪಯೋಗಿಸಲ್ಪಡುತ್ತಿರುವ ಅಂಗವು ಬೇಗನೇ ದಣಿಯುವುದು ನಡೆಯುವವನಿಗೆ ಕಾಲೂ, ಕಡಿಯುವವನಿಗೆ ತೋಳೂ, ಬರೆಯುವವನಿಗೆ ಬೆರಳುಗಳೂ ಆಯಾಸಗೊಳ್ಳುವವು ಅಂಗಗಳ ವಿಷಯದಲ್ಲಿ ಹೇಗೋ ಇಂದ್ರಿಯಗಳ ವಿಷಯದಲ್ಲಿಯೂ ಹಾಗೆಯೇ ಎಂಥಾ ಮನಮೋಹನವಾದ ಗಾಯನವಾದರೂ ಎಡೆಬಿಡದೆ ಆಲಿಸುತ್ತಾ ಇರುವವನಿಗೆ ಆಯಾಸವನ್ನುಂಟುಮಾಡಿ, ವಿಶ್ರಾಂತಿಯ ಬಯಕೆಯನ್ನು ಹುಟ್ಟಿಸುತ್ತದೆ ಇತರ ಇಂದ್ರಿಯಗಳ ಸ್ಥಿತಿಯು ಸಹ ಹೀಗೆಯೇ ಅಂತರಿಂದ್ರಿಯವೆಂಬ ಮನಸ್ಸು ಸಹ ಇದೇ ನಿಯಮಗಳಿಗೆ ವಿಧೇಯವಾಗಿರುತ್ತದೆ —ಒಂದೇ ವಿಷಯವನ್ನು ಕುರಿತು ಯೋಚಿಸಲಾರಂಭಿಸಿದರೆ ಮನಸ್ಸು ಕೂಡಲೇ ಆಯಾಸಗೊಂಡು ಪ್ರಮೇಯವನ್ನು ಆಯಾ ಮನುಷ್ಯನಿಗೆ ಗೋಚರವಾಗುವದಕ್ಕೆ ಮೊದಲೇ ಬದಲಿಸಿಬಿಡುತ್ತವೆ ಇದನ್ನೆಲ್ಲಾ ಯೋಚಿಸುವಾಗ ಕೆಲಸಮಾಡುವ ಸಕಲ ಅಂಗಗಳಿಗೂ ವಿಶ್ರಾಂತಿ ಬೇಕೇಬೇಕೆಂದು ವ್ಯಕ್ತವಾಗುತ್ತದೆ —ಎಲ್ಲಾ ಅಂಗಗಳಿಗೂ ಇಂದ್ರಿಯಗಳಿಗೂ ಮಾತೃರೂಪವಾದ ಜೀರ್ಣಕರಣಗಳಿಗೆ ಅಂಥಾ ವಿಶ್ರಾಂತಿಯು ಅತ್ಯಗತ್ಯವೆಂದು ಹೇಳಬೇಗಿಲ್ಲ ಆದ್ದರಿಂದ ಮೇಲೆ ಹೇಳಿದ ರೋಗಗಳಿಂದ ಪೀಡಿತರಾದವರು ಅಂಥಾ ವಿಶ್ರಾಂತಿಯನ್ನು ಕೊಡದೆ ತಪ್ಪಿದವರೆಂತಲೂ, ಆದುದರಿಂದಲೇ ಶಿಕ್ಷಾರ್ಹರಾದರೆಂತಲೂ ತಿಳಿಯಬೇಕು ನವನಾಗರಿಕತೆಯ ಪ್ರತಾಪದಿಂದ "ಲಂಘನಂ ಪರಮೌಷಧಂ" ಎಂಬ ಗಾದೆಗೆ ಎಡೆ ಸಿಕ್ಕುವುದೇ ಇಲ್ಲ —ಜೀರ್ಣಕರಣಗಳಿಗೆ ಮನುಷ್ಯನು ಆರೋಗ್ಯವಂತನಾಗಿರುವಾಗ ವಿಶ್ರಾಂತಿ ಕೊಡುವದಂತಿರಲಿ ರೋಗಗ್ರಸ್ತನಾಗಿ ಪಚನಶಕ್ತಿಯಿಲ್ಲದೆ ಆಹಾರವು ವಿಷಪ್ರಾಯವಾಗಿ ತೋರುತ್ತಿರುವ ಕಾಲದಲ್ಲಿ ಸಹ ರೋಗಿಯ ಪ್ರಾಣ ಕುಂದದೋಪಾದಿಯಲ್ಲಿ ಆಹಾರಪದಾರ್ಥಗಳನ್ನು ಹೊಟ್ಟೆಗೆ ತುಂಬುತ್ತಿರುವರು ಸಾಕಾದ ಹಸಿವು ಇಲ್ಲದಿರುವಾಗ ಆಹಾರವು ಯಥಾ ಯೋಗ್ಯವಾಗಿ ಪಚನವಾಗುವುದಿಲ್ಲವೆಂದೂ, ರೋಗಿಗೆ ಹಸಿವೆ ಇಲ್ಲದಿರುವಾಗ ಆಹಾರಕೊಡುವುದರಿಂದ ಉಪದ್ರವೇ ಹೊರತು ಉಪಕಾರವಾಗದೆಂದೂ ಸ್ವಯಂ ವ್ಯಕ್ತವಾದರೂ ಯಾರೂ ರೋಗಿಯನ್ನು ಅವನ ಅಪೇಕ್ಷೆಯ ಮೇರೆಗೆ ನಿರಾಹಾರಿಯಾಗಿರಗೊಡಿಸಲು ಇಷ್ಟಪಡುವುದಿಲ್ಲ ಅನೇಕ ರೋಗಗಳು ಹುಟ್ಟುವುದೂ, ಬಂದ ರೋಗಗಳು ಬೇಗನೆ ಗುಣವಾಗದಿರುವುದೂ ಈ ದೋಷದಿಂದಲೇ ಎಂದು ತಿಳಿಯಬೇಕು —ಉಪವಾಸವಿರುವುದರಿಂದ ಜೀರ್ಣಕರಣಗಳಿಗೆ ವಿಶ್ರಾಂತಿ ಲಭಿಸುವುದು, ವಿಶ್ರಾಂತಿಯಿಂದ ಅವುಗಳ ಆಯಾಸವೂ ತತ್ಫಲವಾದ ದೌರ್ಬಲ್ಯವೂ ಪರಿಹಾರವಾಗುವವು; ಅವು ಬಲಗೊಳ್ಳುತ್ತಲೇ ಕ್ಷುದ್ಬಾಧೆಯು ತಾನಾಗಿ ತಲೆದೋರುವುದು ಬಹುಕಾಲ ರೋಗಪೀಡಿತರಾಗಿ ಅದರ ಮೂಲಕ ಆಹಾರ ತೆಗೆದುಕೊಳ್ಳಲಾಗದೆ ನಿರಾಹಾರಿಗಳಂತೆ ಇದ್ದವರಿಗೆ ರೋಗ ಗುಣವಾಗುತ್ತಲೇ ತಾನಾಗಿ ಹುಟ್ಟುವ ಹಸಿವೆಯೂ, ಬಾಯಿರುಚಿಯೂ, ಪಚನಶಕ್ತಿಯೂ ಇದಕ್ಕೆ ಉದಾಹರಣೆಯಾಗಿವೆ —ಶರೀರವು ತನಗೆ ಉಪಯುಕ್ತವಾದ ಕಾಲದಲ್ಲಿ ಆಹಾರವನ್ನು ಅಪೇಕ್ಷಿಸಲಿಕ್ಕೂ ಉಪದ್ರವಾಗುವ ಕಾಲದಲ್ಲಿ ತ್ಯಜಿಸಲಿಕ್ಕೂ ಬಲ್ಲುದು, ಆಹಾರಾಪೇಕ್ಷೆಯನ್ನು ಮನ್ನಿಸುವಂತೆ ಆಹಾರದ ಮೇಲೆ ಉಂಟಾಗುವ ಉಪೇಕ್ಷೆಯನ್ನು ಸಹ ನಾವು ಮನ್ನಿಸಿ ನಡೆಕೊಂಡರೆ, ವೈದ್ಯರಿಗೆ ಕೊಡುವ ಹಣವೂ, ನಾವು ಅನಂತರ ಅನುಭವಿಸಬೇಕಾಗುವ ಸಂಕಟವೂ ಉಳಿಯುವವು —ಮತಾಚಾರಗಳನ್ನು ಸಾಧ್ಯವಿರುವ ಮಟ್ಟಿಗೆ ಆರೋಗ್ಯ ಸೂತ್ರಕ್ಕನುಕೂಲವಾಗಿ ಏರ್ಪಡಿಸಿರುವ ಹಿಂದೂ ಶಾಸ್ತ್ರಕರ್ತರು, ಭೋಜನಪ್ರಿಯರಾಗಿ ಪ್ರತಿನಿತ್ಯವೂ ಮನೆಗಳಲ್ಲಿ ಆಕಾಲದಲ್ಲಿ ಲಭಿಸುವ ಅಜೀರ್ಣಕರವಾದ ಪಂಚಭಕ್ಷ್ಯ ಪರಮಾನ್ನ ವಿಶೇಷಗಳಿಂದ ಮಿತಗೆಟ್ಟು ಹೊಟ್ಟೆತುಂಬಿಕೊಳ್ಳುತ್ತಿರುವ ಬ್ರಾಹ್ಮಣರು ಹದಿನೈದು ದಿನಕ್ಕೊಂದು ದಿನ ನಿರಾಹಾರದಿಂದಿರಬೇಕಾದ ಏಕಾದಶೀ ವ್ರತವನ್ನು ಏರ್ಪಡಿಸಿದ್ದಾರೆ. ಬ್ರಾಹ್ಮಣರಲ್ಲಿ ಈ ಪೂರ್ವ ಪದ್ಧತಿಯನ್ನನುಸರಿಸುತ್ತಿರುವವರಿಗೆ ಅಜೀರ್ಣ ಅರುಚಿ, ಕ್ಷುಧಾರಹಿತತೆ ಎಂಬೀ ದೋಷಗಳು ಅಷ್ಟು ಅಪರೂಪ ಎಂಬುದು ವಿಚಾರಿಸಿ ನೋಡಿದವರಿಗೆ ಗೊತ್ತಾಗದೆ ಇರದು —ಕ್ಷುಧಾರಹಿತರು, ಅರುಚಿಯವರು, ಆಹಾರಪಚನಶಕ್ತಿ ಇಲ್ಲದವರು ಹಸಿವೆಯಾಗದ ಎಷ್ಟು ಕಾಲದವರೆಗಾದರೂ ಆಹಾರವನ್ನು ವರ್ಜಿಸಿಬಿಡಬೇಕು ಆಹಾರ ಶಕ್ತಿಯುಂಟಾದಾಗ ತಾನಾಗಿ ಹಸಿವೆ ಹುಟ್ಟುವುದು ಹಸಿದವನಿಗೆ ಆಹಾರ ರುಚಿಸುವುದು. "ಹಸಿವೆಗೆ ಬಾಯ್ಸವಿ ಬೇಡ, ನಿದ್ದೆಗೆ ಹಾಸಿಗೆ ಬೇಡ" ಎಂಬ ನಾಣ್ಣುಡಿ ನಿಜವಾದದ್ದಲ್ಲವೇ?

ಸರ್ವಶ್ರುದ್ಧಿ

ಮೈಸೂರು ಪುರನಿವಾಸಿಗಳಿಗೆ.

ಮನಗಳನ್ನು ಆರೋಗ್ಯಕರವಾಗಿ ಮಾಡಿಕೊಳ್ಳುವ ಸಮಯ

ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಈ ಮೈಸೂರು ಪಟ್ಟಣದ ಗಲೀಜು ನಿವಾರಣೆಮಾಡಿ ಊರನ್ನು ಒಳ್ಳೆ ಆರೋಗ್ಯಕರವಾದ ಸ್ಥಿತಿಯಲ್ಲಿಡುವ ಹಾಗೆ ಮಾಡುವುದಕ್ಕೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿರುವುದು ಎಲ್ಲರಿಗೂ ತಿಳಿದಿರುವುದಷ್ಟೆ ಈಗ ಏಳೆಂಟು ವರುಷದಿಂದ ಟ್ರಸ್ಟ್ ಬೋರ್ಡಿನವರು ಕಟ್ಟುತ್ತಿದ್ದ ಸಿಮೆಂಟ್ ಚರಂಡಿಯಲ್ಲಿ ಮನೆಗಳ ಕಕ್ಕಲಸ ನೀರು ಹೋಗುವುದಕ್ಕಿಂತಲೂ ಇಂಥಾ ನೀರು ಮೇಲಕ್ಕೆ ಕಾಣಿಸದೆ ಭೂಮಿ ಒಳಗೇ ತೆಗೆದುಕೊಂಡು ಹೋದರೆ ಇನ್ನೂ ಉತ್ತಮವೆಂದು ತೀರ್ಮಾನಿಸಿದ್ದಾರೆ ಮತ್ತು ಈ ವರುಷದಿಂದ ಚರಂಡಿ ಕಟ್ಟುವುದನ್ನು ತಪ್ಪಿಸಿ ಭೂಮಿಯೊಳಗೆ ನಲ್ಲಿಯನ್ನು ಹಾಕುವುದಕ್ಕೆ ವರುಷ ಒಂದಕ್ಕೆ ಮೂರು ಲಕ್ಷರೂಪಾಯಿಯಂತೆ ಇನ್ನೂ ಏಳೆಂಟು ವರುಷಗಳ ವರೆಗೆ ಕೊಡುವುದಕ್ಕೆ ಸರ್ಕಾರದವರು ಸಿದ್ಧರಾಗಿದ್ದಾರೆ ಅವರು ಇಷ್ಟು ಭಾರಿ ಮೊಬಲಗನ್ನು ಖರ್ಚುಮಾಡಿದಾಗ್ಯೂ ಊರಿನಲ್ಲಿರತಕ್ಕ ಮನೆಗಳ ಮಾಲೀಕರು ಟ್ರಸ್ಟ್ ಬೋರ್ಡಿನವರಿಗೆ ಈ ಭಾಗಕ್ಕೆ ಸರಿಯಾದ ಸಹಾಯಮಾಡದ ಹೊರತು ಪಟ್ಟಣದ ರೊಚ್ಚು ಸಾಗಿಸೋ ಈ ಕೆಲಸವು ಸಾರ್ಥಕವಾಗುವುದಿಲ್ಲ ಸರ್ಕಾರದವರು ಹೊರಗೆ ಬೀದಿಗಳಲ್ಲಿ ಎಷ್ಟು ಕೆಲಸಮಾಡಿದಾಗ್ಯೂ ಮನೆಗಳಲ್ಲಿ ಬರುವ ಬಚ್ಚಲರೊಚ್ಚು ಕೊಳಕು ಮುಂತಾದ ಕಶ್ಮಲಗಳು ಮನೆಗಳೊಳಗೇ ಹರಿಯೋದರೆ ನಲ್ಲಿಯಿಂದ ಪ್ರಯೋಜನವೇನು ಅಂಥಾ ರೊಚ್ಚನ್ನು ನಲ್ಲಿ ಅಥವಾ ಬಚ್ಚಲ ಮೂಲಕ ಹೊರಕ್ಕೆ ತಂದು ಸರ್ಕಾರದವರು ಕಟ್ಟುವ ದೊಡ್ಡ ನಲ್ಲಿಗಳಿಗೆ ಸೇರಿಸಿಬಿಟ್ಟರೆ ಆ ರೊಚ್ಚೆಲ್ಲಾ ಸಾಗಿಹೋಗುತ್ತದೆ ಮುಂಬಾಯಿ, ಕಲ್ಕತ್ತಾ ಮುಂತಾದ ದೊಡ್ಡ ಪಟ್ಟಣಗಳಲ್ಲಿ ಪ್ರತಿಯೊಬ್ಬ ಮನೆಯವರೂ ತಮ್ಮ ಮನೆಯಲ್ಲಿ ಒಳ್ಳೆ ಅಡಿಗೆ ಮನೆ, ಬಚ್ಚಲ ಮನೆ, ಉತ್ತಲ ಮನೆಗಳ ರೊಚ್ಚಿನ ನೀರನ್ನು ಒಂದು ತೊಟ್ಟಾದರೂ ಮನೆಯೊಳಗೆ ಇಂಗಿಹೋಗದ ಹಾಗೆ ಕಾಡೀ ಹೊರಕ್ಕೆ ಸಾಗಿಸಿ ತಂದು ಸರ್ಕಾರದವರು ಬೀದಿಯಲ್ಲಿ ಹಾಕಿರುವ ನಲ್ಲಿಗಳಿಗೆ ಸ್ವಂತ ಖರ್ಚಿನಲ್ಲಿ ತೆಗೆದುಕೊಂಡು ಬಂದು ಸೇರಿಸಬೇಕೆಂತ ನಿರ್ಬಂಧಪಡಿಸಲ್ಪಟ್ಟಿರುತ್ತಾರೆ ಆದ್ದರಿಂದ ಇಂಥಾ ಸಮಯವನ್ನು ಬಿಡದೆ ಪ್ರತಿ ಒಂದು ಮನೆಯವರೂ ತಮ್ಮ ತಮ್ಮ ಮನೆಯ ನೀರನ್ನು ಬೀದಿಯಲ್ಲಿ ಹಾಕುವ ನಲ್ಲಿಗೆ ತೆಗೆದುಕೊಂಡು ಒಂದು ಸೇರಿಸುವುದಕ್ಕೆ ಆಗಬೇಕಾದ ಅವಶ್ಯಕವಾದ ಕೆಲಸಗಳನ್ನು ಮಾಡಿಕೊಳ್ಳಬೇಕು ಹತ್ತೆಂಟು ಮನೆಗಳಿಗೆ ಇಂಥಾ ಕೆಲಸಗಳನ್ನು ಮಾಡಿ ಮಧ್ಯೆ ಒಂದೊಂದು ಬಿಟ್ಟುಹೋದರೂ ಆ ಒಂದು ಮನೆಯ ಕೊಳಕು ನಿಂತಿರುವ ಆ ಮನೆಯವರು ಅನಾರೋಗ್ಯವಾಗುವುದು ಮಾತ್ರವಲ್ಲದೆ ಅಕ್ಕಪಕ್ಕದ ಮನೆಗಳಿಗೂ ಸಹ ಈ ಅನಾರೋಗ್ಯವು ಹರಡಿಕೊಳ್ಳುವುದು ಆದ್ದರಿಂದ ಯಾವ ಬೀದಿಯಲ್ಲಾದರೂ ಒಂದು ಮನೆಯೂ ಬಿಡದ ಹಾಗೆ ಎಲ್ಲಾ ಮನೆಗಳಿಗೂ ಆಯಾ ಮನೆಯ ಮುತುವರ್ಜಿಯಾಗಿ ಟ್ರಸ್ಟ್ ಬೋರ್ಡಿನ ನೌಕರರಿಗೆ ತಿಳಿಸಿ ಸರಿಯಾದ ಕೆಲಸಗಳನ್ನು ಮಾಡಿಸಿಕೊಳ್ಳಬೇಕು

ಈ ಕೆಲಸಗಳ್ಯಾವವೆಂದರೆ—ಅಡಿಗೇ ಮನೆ, ಬಚ್ಚಲು ಮನೆಯಲ್ಲಿ ತಕ್ಕ ಗಲೀಜು ನೀರು ನಿಲ್ಲದಷ್ಟೇ ಅಗಲಿ, ಗೋಡೆಯತ್ತಲೇ ಅಗಲಿ ಹಿಂದಿರುವ ಹಾಗೆ ನೆಲಕ್ಕೂ ಗೋಡೆಗೂ ಚಪ್ಪಡಿಯನ್ನಾದರೂ ಹಾಕಿ, ಅಥವಾ ಸಿಮೆಂಟ್ ಗಿಲಾವನ್ನಾದರೂ ಮಾಡಿ ಆ ನೀರನ್ನು ಸಿಮೆಂಟ್ ಚರಂಡಿಯಿಂದ ಬೀದಿ ತನಕ ತಂದು ಅಲ್ಲಿಂದ ನಲ್ಲಿ ಹಾಕಿ ಬೀದಿಯಲ್ಲಿ ಸರ್ಕಾರದವರು ಹಾಕುವ ದೊಡ್ಡ ನಲ್ಲಿಗೆ ಸೇರಿಸಬೇಕು ಹೀಗೆಯೇ ಪಾಯಿಖಾನೆ, ಜಲಬಾಧೆ ಮನೆಗಳಿಗೂ ಸಹಾ ಕೆಲಸ ಮಾಡಬೇಕು ಇಂಥಾ ಕೆಲಸಗಳನ್ನು ಜನಗಳು ತಾವಾಗಿ ಮಾಡಿಕೊಂಡರೆ ಕಾಮಗಾರಿ ಕೆಲಸ ದುಬಾರಿ ಬೀಳುವುದಲ್ಲದೆ ಒಬ್ಬೊಬ್ಬರು ಒಂದೊಂದು ವಿಧವಾಗಿ ಮಾಡಿಕೊಂಡು ಅಗ್ಗದಾರೆಗೋಸ್ಕರ ಕೆಲಸವನ್ನು ಕೆಡಿಸಿಕೊಳ್ಳಬಹುದು. ಅಲ್ಲದೆ ಈ ಕಾಮಗಾರಿ ಕೆಲಸಗಳನ್ನು ಬೀದಿಯಲ್ಲಿ ಹಾಕುವ ಕಂಟ್ರಾಕ್ಟರುಗಳು ಮಾಡಿದರೆ ಮನೆಯವರಿಗೆ ಖರ್ಚು ಸುಲಭವಾಗುವುದಲ್ಲದೆ ಕೆಲಸ ಕೆಡಿಸಿದರೆ ಖರ್ಚು ಕೊಂಚವಾದರೂ ಕೊಡುವುದಿಲ್ಲ, ಭೀತಿಯಿಂದ ಕೆಲಸವನ್ನು ಚನ್ನಾಗಿ ಮಾಡುತ್ತಾರೆ ಮತ್ತು ಎಲ್ಲಾ ಬೀದಿಗಳಲ್ಲೂ ಎಲ್ಲಾ ಮನೆಗಳಲ್ಲೂ ಒಂದೇ ರೀತಿಯಾದ ಮತ್ತು ತೃಪ್ತಿಕರವಾದ ಕಾಮಗಾರಿ ನಡೆಯುವುದಕ್ಕೆ ಸಹಾಯವಾದೀತು ಬಾಕಿ ಇರುವುದಕ್ಕೆ ಸರ್ಕಾರದವರು ಕೆಲಸ ಮಾಡಿಸಿಕೊಟ್ಟರೆ ಖರ್ಚಾಗುವ ಮೊಬಲಗಿಗಿಂತ ಹೆಚ್ಚಾಗಿ ಶೇಕಡ 10 ರುಪಾಯಿ ವಸೂಲ್ಮಾಡುತ್ತಾರೆ ಆದರೆ ಇಲ್ಲಿ ಟ್ರಸ್ಟ್ ಬೋರ್ಡಿನವರು ಮಾತ್ರ ಬಿದ್ದಷ್ಟು ಖರ್ಚು ತೆಗೆದುಕೊಳ್ಳುವುದಲ್ಲದೆ ಒಂದೊಂದು ಮನೆಗೆ ಎಷ್ಟೆಷ್ಟು ಖರ್ಚಾಗುತ್ತೆಂದು ಅಂದಾಜು ಮಾಡುವುದಕ್ಕೋಸ್ಕರ ಇಂಜಿನಿಯರಿಂಗ್ ನೌಕರರನ್ನು ಕಳುಹಿಸಿಕೊಡುತ್ತಾರೆ ಇವರುಗಳಿಂದ ಆಯಾ ಮನೆಯವರು ಅಂದಾಜು ಮಾಡಿಸಿಕೊಂಡು ಆಗುವ ಖರ್ಚನ್ನು ಟ್ರಸ್ಟ್ ಬೋರ್ಡು ಎಗ್ಸಿಕ್ಯುಟಿವ್ ಇಂಜಿನಿಯರವರ ಆಫೀಸಿನಲ್ಲಿ ಡಿಪಾಜಿಟ್ ಕಟ್ಟಿದರೆ ಅವರು ಆಯಾ ಬೀದಿಗಳಲ್ಲಿ ನಲ್ಲಿಗಳನ್ನು ಹಾಕುತ್ತಿರುವಾಗ್ಗೆ ಆಯಾ ಬೀದಿಯಲ್ಲಿರುವ ಮನೆಗಳ ಕೆಲಸಗಳನ್ನೂ ಸಹಾ ಮಾಡಿಸುವುದಕ್ಕೆ ತುಂಬಾ ಸಹಾಯವಾಗುತ್ತದೆ

ಈ ವರುಷ ಟ್ರಸ್ಟ್ ಬೋರ್ಡಿನವರು ದೇವರಾಜ ಮೊಹಲ್ಲೆಗೆ ಸೇರಿದ ಬೀದಿಗಳಲ್ಲಿ ನಲ್ಲಿ ಹಾಕುವ ಕೆಲಸಗಳನ್ನು ತಕ್ಷಣ ಆರಂಭಿಸಿ ಇನ್ನು ಒಂದು

ಪ್ರಾರಂಭ ಮಾಡುವವರಾಗಿದ್ದಾರೆಂದು ತಿಳಿದುಬಂದಿದೆ ಆ ಪಟ್ಟಣದ ಮನೆಗಳ ಮಾಲೀಕರು ಇಷ್ಟರೊಳಗಾಗಿ ಟ್ರಸ್ಟ್ ಬೋರ್ಡಿನವರಿಗೆ ಮುಚ್ಚಳಿಕೆ ಬರೆಸಿಕೊಟ್ಟು ತಮಗೆ ಬೇಕಾದ ಕೆಲಸಗಳನ್ನು ಮಾಡಿಕೊಳ್ಳಬಹುದೆಂದು ಸೂಚಿಸುತ್ತೇವೆ ಸಬ್ ಓವರ್ಸಿಯರುಗಳು ಮನೆಗಳ ಅಂದಾಜುಮಾಡಿ ಕಾಮಗಾರಿ ಪಟ್ಟಿ ತಯಾರು ಮಾಡುವರು ಅವರ ಅಂದಾಜುಗಳು ಯಾವ ಮನೆಯವರಿಗಾದರೂ ದುಬಾರಿಯಾಗಿದೆ ಎಂದು ತೋರಿಬಂದರೆ ಆಗಲಿ, ಅಥವಾ ಇನ್ಯಾವುದಾದರೂ ಅನುಮಾನಗಳು ಪರಿಹಾರ ಮಾಡಿಕೊಳ್ಳಬೇಕಾದರೆ ಆಗಲಿ ಅವರು ಅಂಥಾ ವಿಷಯವನ್ನೆಲ್ಲಾ ಬೋರ್ಡ್ ಎಗ್ಜಿಕ್ಯುಟಿವ್ ಇಂಜನಿಯರವರಿಗೆ ತಿಳಿಸಿದಲ್ಲಿ ಅವರು ಮನೆಗಳಿಗೆ ಖುದ್ದಾಗಿ ಬಂದು ಮನೆ ಮಾಲೀಕರಿಗೆ ಸಾಧ್ಯವಾದಷ್ಟು ಅನುಕೂಲಗಳನ್ನು ಮಾಡಿಕೊಡುತ್ತಾರೆ ಮತ್ತು ಬಹಳ ಬಡವರಾಗಿದ್ದು ತಮ್ಮ ಕಾಮಗಾರಿಯನ್ನು ಮಾಡಿಸಲು ಸಾಧ್ಯವಿಲ್ಲವೆಂದು ಕಂಡುಬರುವ ಪಕ್ಷದಲ್ಲಿ ಸರ್ಕಾರದವರು ಅಷ್ಟಸ್ವಲ್ಪ ರಿಯಾಯಿತಿಯನ್ನು ತೋರಿಸದೆ ಇರಲಾರರು ಆ ಪಟ್ಟಣದ ಆರೋಗ್ಯವನ್ನು ಅಭಿವೃದ್ಧಿ ಮಾಡಬೇಕೆಂಬ ಶ್ರೇಷ್ಠ ಉದ್ದೇಶದಿಂದ ಟ್ರಸ್ಟ್ ಬೋರ್ಡಿನವರು ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡುತ್ತಿರುವಲ್ಲಿ ಈ ಪುರನಿವಾಸಿಗಳಾದ ಪ್ರಜೆಗಳು ಏಕೀಭವಿಸಿ ಆ ಉದ್ದೇಶವನ್ನು ಸಾರ್ಥಕಪಡಿಸುವುದಕ್ಕೆ ಅವರಿಗೆ ಸಹಾಯಮಾಡುತ್ತಾ ಬಂದಾರೆಂದು ನಂಬುತ್ತೇವೆ

ಬಾತ್ಮಿದಾರರಿಗೆ ನೋಟೀಸ್

ಯಾವ ವಿಳಾಸವಿಲ್ಲದೆ ಬರುವ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಕಡೆಗಳಲ್ಲಿ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರ ಬೆಳಿಗ್ಗೆ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಅದೇ ವಾರದಲ್ಲಿ ಪ್ರಕಟವಾಗುವವೆಂಬ ನಂಬಿಕೆಯಿಲ್ಲ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬುದಾರರಾಗುವುದಿಲ್ಲ ಎಂಬುದನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಅಥವಾ ಅಪಾಹುಪ್ನೋ, ಸ್ವಯಂವರವೋ

ಕಳೆದ ವಾರ ತಮ್ಮ ಪತ್ರಿಕೆಯಲ್ಲಿ ವಿಧವಾ ವಿವಾಹವು ಕಲಿಯುಗದಲ್ಲಿಯೂ ಶಾಸ್ತ್ರಕ್ಕೆ ಆಧಾರವಿರುವ ಕೆಲವು ಸ್ಮೃತಿಗಳನ್ನು ಮೈಸೂರು ರಾಮೋಕ್ಷೆ ಯವರು ಪ್ರಕಟಿಸಿದರಷ್ಟೆ ಈ ಗ್ರಂಥಗಳು ಯಾವ ಯಾವ ಸ್ಮೃತಿಗಳಲ್ಲಿವೆ ಎಂಬುದು ಕೆಲವು ಗ್ರಂಥಗಳ ಅವಲೋಕನದಿಂದ ಲಭಿಸಲಿಲ್ಲ ದಯವಿಟ್ಟು ತಿಳಿಸುವರೆಂತ ನಂಬಿದ್ದೇನೆ ಪರಾಶರಸ್ಮೃತಿಯ ಗ್ರಂಥಗಳಲ್ಲಿ ಈ ಶ್ಲೋಕ ಆಪಾತವಾಗಿ ಸೂಚಿತವಾಗುವವುಗಳಿಗೆ ವ್ಯಾಖ್ಯಾತೃಗಳಾದ ಮುಪ್ಪಕರ ತರಕ್ಕೆ ತಾತ್ಪರ್ಯವಾಡಿದ್ದಾರೆ ದಯವಿಟ್ಟು ತಿಳಿಸಬೇಕು

ವಿದ್ಯಾರ್ಥಿ ಶೃಂಗೇರಿ

ಮಹಾರೋಗವೂ, ಪರಿಹಾರವೂ

ಮಹಾರೋಗವೆಂಬುದು ಕೇವಲ ಅಸಹ್ಯವಾದ ವ್ಯಾಧಿಯು. ನೀರಿನ ಸಮೀಪದಲ್ಲಿ, ಆ ಮನೆಯ ಹತ್ತಿರದಲ್ಲಾಗಲಿ ರೋಗಿಯು ಇದ್ದಾಗ ಈ ರೋಗವು ಹೆಚ್ಚುತ್ತಲೇ ಸಕಲ ಸ್ಥಳಗಳ ಸರಗಳೆಲ್ಲಾ ಬಿಗಿಹಿಡಿದು ಬಹು ಜನರು ತಿಂದು ಅನ್ನ ತಿರಿಕೊಳ್ಳುತ್ತಾರೆ ಈ ರೋಗದ ಪ್ರಾಬಲ್ಯವನ್ನು ಕಡಮೆ ಮಾಡಲು ಅನುಭವಸಿದ್ಧವಾದ ಖರ್ಚಿಲ್ಲದ ಈ ಔಷಧಿಯನ್ನು ತಾತ್ಸಾರಮಾಡದೆ ಉಪಯೋಗಿಸುವುದರಲ್ಲಿ ತೀವ್ರವಾಗಿಯೇ ಖಂಡಿತವಾಗಿಯೂ ಗುಣಬರುವುದು ಅಚ್ಚ ಹಸುವಿನ ಸಗಣಿಯನ್ನು ಬಿರುಸಾಗಿ ಒಣಗಿಸಿ ಬೆಂಕಿಯಲ್ಲಿ ಸುಟ್ಟು ಬೂದಿ ಮಾಡಿ, ಅದನ್ನು ಗಂಡು ಎಕ್ಕೆಗಿಡದ ಹಾಲಿನಲ್ಲಿ ಚೆನ್ನಾಗಿ ಕಲಸಿ ಒಣಗಿಸಬೇಕು ಇದೇ ರೀತಿ ನೆರಳಿನಲ್ಲಿ ಮೂರು ದಿನ ಕಲಸಿ ಒಣಗಿಸಿದ ಬೂದಿ ಭಸ್ಮವನ್ನು ಈ ರೋಗ ಪ್ರಾಪ್ತವಾದವರಿಗೆ ಆ ಕೂಡಲೇ ಒಂದು ಚಿಟಿಕೆಯನ್ನು ಮೂಗಿನಲ್ಲಿಟ್ಟು ಊದುವ ಕೊಳವೆಯಿಂದ ಬಲವಾಗಿ ಮಿದುಳು ಸೇರುವಂತೆ ಊದಿ ಅವರ ಕೈಕಾಲುಗಳನ್ನು ಬಲವಾಗಿ ಹಿಡಿದುಕೊಳ್ಳಬೇಕು ಈ ರೀತಿ ಎರಡಾವರ್ತಿ ಮಾಡುವುದರೊಳಗಾಗಿ ಖಂಡಿತವಾಗಿಯೂ ಗುಣಕ್ಕೆ ಬರುವುದು ಸದರಿ ರೋಗಪೀಡಿತರ ಸಮೀಪಸ್ಥರು ಇದನ್ನು ಅವರಿಗೆ ಪ್ರಯೋಗಿಸಿದಲ್ಲಿ ಈ ರೋಗದ ಬಾಧೆಯನ್ನು ತಪ್ಪಿಸಿಕೊಳ್ಳಬಹುದೆಂದು ನಂಬಿದ್ದೇನೆ

ವೈ ಹಿರಿಯಣ್ಣಯ್ಯ

ತರೀಕೆರೆಯ ಮಸೀತಿಗಳು

ಕಳೆದ ಡಿಸೆಂಬರ್ ಮಾಹೆ 12 ನೇ ತಾ ಪತ್ರಿಕೆಯಲ್ಲಿ ತರೀಕೆರೆ ಜಾಕ್ ಸಾಹೇಬರು ಮತ್ತು ತೊಗರಿ ಹಂಕಲ್ ಮೊಹದೀನ್ ಮಸೀತಿಗೆ ಬಿಟ್ಟುಕೊಟ್ಟಿರುವ ಚರಸ್ಥಿರ ಆಸ್ತಿಗಳು ಅನ್ಯಾಕ್ರಾಂತವಾಗುತ್ತಿರುವ ಬಗ್ಗೆ ಬರೆದು ಇರುವದು ನೋಡಿ ಬಹಳ ವ್ಯಸನವಾಯಿತು ಶೇಕ್ ಜಾಕ್ ಸಾಹೇಬರು ಮಸೀತಿಗೆ ಬಿಟ್ಟುಕೊಟ್ಟಿರುವ ಆಸ್ತಿಗೆ ಈ ಮಸೀತಿಗೆ ಸಂಬಂಧಪಟ್ಟ ಒಂದು ದೊಡ್ಡ ಮನುಷ್ಯರ ಕಮಿಟಿಯು ಏರ್ಪಾಡು ಆಗಿ ಆಸ್ತುಗಳು ಕಮಿಟಿ ಸ್ವಾಧೀನಕ್ಕೆ ಬರುವಾಗ್ಗೆ 100 ರೂಪಾಯಿ ಬೆಲೆ ಇದ್ದ ಅಡಿಕೆ ತೋಟ ಕಮಿಟಿಯವರ ಸಾಧೀನಕ್ಕೆ ಬಂದನಂತರ ಹರಾಜ್‌ನಲ್ಲಿ 625 ರೂಪಾಯಿ ಗೇಣಿಗೆ ಕೊಟ್ಟಿದ್ದಾಗಿದೆ ಈ ಕಮಿಟಿಯವರು ವಿಚಾರಣೆಗೆ ತೆಗೆದುಕೊಳ್ಳುವದಕ್ಕೆ ಮುಂಚೆ ಈ ಆಸ್ತಿ ಮೇಲೆ ಇದ್ದ ಸುಮಾರು 700 ರೂಪಾಯಿ ಸಾಲವನ್ನು ಕಮಿಟಿಯವರು ತೀರಿಸಿ ಮಸೀತಿ ಮತ್ತು ತೋಟಗಳ ಆಬಾದ್ ಕೆಲಸಗಳನ್ನು ಕಾಲವರಿತು ನಡಿಸಿಕೊಳ್ಳುತ್ತಾ ಬರುತ್ತಾ ಇದಾರಲ್ಲದೆ ಈ ಬಗ್ಗೆ ಪ್ರೆಸಿಡೆಂಟ್, ಸೆಕ್ರೆಟರಿ, ಟ್ರೆಜರರ್ ವಗೈರೆ ಅಧಿಕಾರಿಗಳನ್ನು ನೇಮಿಸಿರುವರು ಮಾಡಿ ಒಂದು ಕಾಸೂ ಸಹ ಅನ್ಯಾಕ್ರಾಂತವಾಗದಂತೆ ಆಗಾಗ್ಗೆ ಮೀಟಿಂಗುಗಳನ್ನು ನಡಿಸುತ್ತಾ ವರುಷಕ್ಕೆ ಒಂದಾವರ್ತಿ ರಂಜಾನ್ ತಿಂಗಳು 27 ನೇ ರಾತ್ರಿ ಪಬ್ಲಿಕ್ ಎದುರಿಗೆ ಪೂರಾ ವರುಷದ ಜಮಾ ಖರ್ಚು ಲೆಕ್ಕಗಳನ್ನು ಓದಿ ತಿಳಿಸುತ್ತಾರೆ ತೊಗರಿಹಂಕಲ್ ಮೊಹದೀನ್ ಸಾಹೇಬರು ಮಸೀತಿಗೆ ಬಿಟ್ಟಿರತಕ್ಕ ಸ್ವತ್ತುಗಳು ಅವರು ಮೃತಪಡುವದಕ್ಕೆ ಮುಂಚೆ ಬರೆದು ಇರುವ ವಿಲ್ ಪ್ರಕಾರ ನಡೆಯುತ್ತಾ ಇದೆ ಹೀಗೆ ಇರುವಲ್ಲಿ ತಮ್ಮ ಪತ್ರಿಕೆಯ ಅನ್ಯಾಕ್ರಾಂತವೆಂಬ ಶಬ್ದವನ್ನು ಕೇಳಿ ತರೀಕೆರೆ ಮುಸಲ್ಮಾನರು ಬಹಳವಾಗಿ ವ್ಯಸನಪಡುತ್ತಾರೆ

ದೇಶಾಭಿಮಾನಿ

ತಾಲ್ಲೋಕು ವರ್ತಮಾನಗಳು

ಯಡತೊರೆ ತಾ॥ ಮಿರ್ಲೆ — ಈ ಗ್ರಾಮದ ಹವಾ ಕೊಂಚವಾಗಿ ಕೆಡುತ್ತಾ ಬರುವಂತೆ ಕಾಣುತ್ತಲಿದೆ, ಕೂಡಲೇ ಯೂನಿಯನ್ ಮೆಂಬರುಗಳು ನಿಗಾಕೊಡಬೇಕು — ಗ್ರಾಮದಲ್ಲಿ ಎತ್ತುಗಳ ಕಳುವು ಹೊಸದಾಗಿ ನಡೆಯಲು ಉಪಕ್ರಮವಾಗಿದೆ ಯಾರೋ ಕಳ್ಳರು ಮನೆಯಲ್ಲಿ ಕಟ್ಟಿಹಾಕಿದ್ದ ಎರಡು ಜೊತೆ ಎತ್ತುಗಳನ್ನು ಅಪಹರಿಸಿಕೊಂಡುಹೋಗಿದ್ದಾರೆ ಮಾಲೀಕರು ತುಂಬಾ ಬಡವರು ಮಾಲೀಕರು ಎಷ್ಟು ಹುಡುಕಿದಾಗ್ಯೂ ಎತ್ತುಗಳು ಸಿಕ್ಕಲಿಲ್ಲ ಇಂಥಾ ಕಡೆ ಪೋಲೀಸ್ ಸ್ಟೇಷನ್ ಇಲ್ಲದೆ ಇರುವುದು ತುಂಬಾ ತೊಂದರೆ — ಇಲ್ಲಿ ಒಂದು ನೇಟಿವ್ ವೈದ್ಯಶಾಲೆ ಇರಬೇಕೆಂಮಸ್ಕೂ, ಈ ಗ್ರಾಮವನ್ನು ಮೊದಲಿನಂತೆ ಸಮೀಪಗ್ರಾಮವನ್ನು ಸೇರಿಸುವುದರ ಮೂಲಕ ಮುನಿಸಿಪಾಲಿಟಿ ಮಾಡಬೇಕೆಂದುಸ್ಕೂ ಯೂನಿಯನ್ ಮೆಂಬರುಗಳು ಮೀಟಿಂಗುಗಳಲ್ಲಿ ಚರ್ಚಿಸುತ್ತಾ ಇರುವುದು ತುಂಬಾ ಸಂತೋಷಕಾರಿಯಾದದ್ದೇ ಈಗಿರುವ ಏರ್ಪಾಡಿನಿಂದ ಝಾಡಮಾಲಿ ವಗೈರೆ ನೌಕರಮಾನೇರಿಗೆ ಸಕಾಲಕ್ಕೆ ಸಂಬಳ ಪಾವತಿ ಆಗದೆ ಗ್ರಾಮದ ಹಾಕೀಜಾ ಕೆಲಸಗಳು ತೃಪ್ತಿಕರವಾಗಿ ನಡೆಯಲು ಅವಕಾಶವಿಲ್ಲದೆ ಇವೆ ಆದುದರಿಂದ ಮೆಂಬರುಗಳು ಸಲಹೆ ಕೊಡುವ ಕೆಲಸಗಳಿಗೆ ದಯಾಳುಗಳಾದ ಸರ್ಕಾರದವರು ನಿಗಾ ತೆಗೆದುಕೊಂಡಲ್ಲಿ ಟವನ್ ಉತ್ಪತ್ತಿ ಹೆಚ್ಚಿ ಪ್ರಜಾನುಕೂಲವಾಗುವುದರಲ್ಲಿ ಸಂದೇಹವಿಲ್ಲ

ತಿಪಟೂರು — ಈ ಪ್ರಾಂತ್ಯವೆಲ್ಲಾ ಪೈರುಗಳು ಕಟಾವಾಗಿ ರೈತರು ತಮ್ಮ ಕೆಲಸದಲ್ಲಿದ್ದಾರೆ ಅಕ್ಕಿ ರೂಪಾಯಿಗೆ 7 ಸೇರು, ರಾಗಿ 20 ಸೇರು ಮಾರುತ್ತಿದೆ — ಈಚೆಗೆ ಪೇಟೆಯಲ್ಲೂ ಕೋಟೆಯಲ್ಲೂ ಪಾರ್ಟಿಗಳೂ ಕಲಹಗಳೂ ಹುಟ್ಟಿ ದೊಡ್ಡ ಮನುಷ್ಯರೇ ಕಚೇರಿಗೆ ಎರುತ್ತಿದ್ದಾರೆ ಇಲ್ಲಿಗೆ ಪರಸ್ಥಳದಿಂದ ಎಂದು ಜೂಜು, ಮೂರೆಲೆ ಇಸ್ಪೀಟು, ಬಲಗ್ ಆಟ ಆಡಿ ಕೆಡುತ್ತಿದ್ದಾರೆ ಇವರನ್ನು ಕೇಳುವರೇ ದಿಕ್ಕಿಲ್ಲದಂತಾಗಿದೆ ಮುನಿಸಿಪಾಲಿಟಿ ವಿಚಾರವಂತೂ ಹೇಳತಾಗದು ಅಮಲ್ದಾರರವರು ಟವನ್ ಸಣ್ಣ ಸಣ್ಣ ಗಲ್ಲಿಗಳಿಗೆ ಶೀಘ್ರಕೊಟ್ಟಿರೆ ತಿಕ್ಕಕ್ಕೆ ವೇದ್ಯವಾಗಿ ಮ್ಯುನಿಸಿಪಾಲಿಟಿ ಕೆಲಸಗಳು ಕ್ರಮಪಡುತ್ತವೆ — ಈ ಊರಲ್ಲಿ 1½ ತಿಂಗಳಿಂದಲೂ ನಾಟಕಗಳು ಆಡುತ್ತಿದ್ದ ಮದ್ರಾಸ್ ಅರವ ನಾಟಕದ ಕಂಪನಿಯವರು ಮುಂದಕ್ಕೆ ದಾವಣಗೆರೆಗೆ ಹೋದರು ಈ ಕಂಪನಿ ಏಜೆಂಟ್ ಮ॥ ಗೋವಿಂದಸ್ವಾಮಿನಾಯ್ಡರ ದೈವಭಕ್ತಿಯೂ ದೇಶಾಭಿಮಾನವೂ ವಿಶೇಷವಾಗಿರುತ್ತೆ ಇವರು ಒಂದೊಂದು ದಿನದ ನಾಟಕದ ಉತ್ಪತ್ತಿಯೆಲ್ಲಾ ಒಂದೊಂದು ಧರ್ಮಕ್ಕೆ ಕೊಟ್ಟರು ಈ ಊರಲ್ಲಿ ಪಂಚಮರ ಸ್ಕೂಲು ಕಟ್ಟಡಕ್ಕಾಗಿ 650 ರೂಪಾಯಿ, ಶ್ರೀರಾಮ ಮಂದಿರಕ್ಕೆ 600 ರೂಪಾಯಿ, ತುಂಕೂರಲ್ಲಿ ಕಟ್ಟತಕ್ಕ ಕಾರೊನೇಷನ್ ಹಾಲಿನ ಕಟ್ಟಡದ ಫಂಡಿಗೆ 200 ರೂಪಾಯಿ, ಈ ಊರು ಕೆರೆ ಕೋಡಿ ಬಳಿ ಮಹಮ್ಮದೀಯರು ಮಕಾನ್ ಬಳಿ ಕಟ್ಟತಕ್ಕ ಭಾವಿ ಕೆಲಸಕ್ಕೆ 300 ರೂಪಾಯಿ, ಈ ರೀತಿ ಸಹಾಯ ಮಾಡಿರುತ್ತಾರೆ ಮತ್ತು ಅವರು ಊರಿನ ವರ್ತಕರ ಪ್ರೀತಿ ವಿಶ್ವಾಸಗಳಿಗೂ ಪಾತ್ರರಾದದ್ದರಿಂದ ಕೆಲವು ದೊಡ್ಡ ಮನುಷ್ಯರು ಭಂಗಾರದ ಪದಕಗಳನ್ನು ಮ॥ ಗೋವಿಂದಸ್ವಾಮಿನಾಯ್ಡರಿಗೆ ಕೊಟ್ಟು ಬಹಳವಾಗಿ ಮರ್ಯಾದೆ ಮಾಡಿ ದಾವಣಗೆರೆಗೆ ಪ್ರಯಾಣ ಮಾಡಿಸಿದರು ಅಂತೂ ಈ ಊರಲ್ಲಿ ಇವರ ನಾಟಕವನ್ನು ನೋಡುವದಕ್ಕೆ ರಾತ್ರಿಯೋ ಪಾದಿಯಲ್ಲಿ ಪರಸ್ಥಳದಿಂದ ಜನರು ತಂಡತಂಡವಾಗಿ ಬರುತ್ತಿದ್ದರು

ನಂಜನಗೂಡು — ಈ ಊರಿನಲ್ಲಿ ಛಳಿಯು ಬಹಳ ಜೋರಾಗಿರುವದರಿಂದ ಸಹಿಸುವದು ತುಂಬಾ ಕಷ್ಟವಾಗಿರುತ್ತೆ ನಾಲಾ ನೀರನ್ನು ಕಟ್ಟಿಬಿಟ್ಟದ್ದರಿಂದ ಟವನ್‌ನಲ್ಲಿ ಇಟ್ಟಿರುವ ನಲ್ಲಿಗಳಲ್ಲಿ ನೀರು ನಿಂತುಹೋಗಿ ಜನಗಳಿಗೆ ನೀರಿಗೆ ತುಂಬಾ ಕಷ್ಟಕ್ಕೆ ಕಾರಣವಾಗಿದೆ — ಕಳೆದ ವಾರ ನಮ್ಮ ದಿವಾನ್ ಸಾಹೇಬರವರ ಸವಾರಿಯು ದಯಮಾಡಿ ಈ ಟವನ್‌ನಲ್ಲಿರುವ ಎಲ್ಲಾ ಸ್ಕೂಲುಗಳನ್ನೂ ಪರೀಕ್ಷಿಸಿದ್ದಲ್ಲದೆ ಜನಗಳ ಅಹವಾಲನ್ನು ಸಾವಧಾನಚಿತ್ತದಿಂದ ಕೇಳಿ ಈ ಟವನ್‌ಗೆ ಬೇಸಗೆಕಾಲದಲ್ಲಿ ನೀರಿಗೆ ಉಂಟಾಗುವ ತೊಂದರೆಯನ್ನು ನಿವಾರಣೆ ಮಾಡಿಕೊಂಡುವದಾಗಿ ಅಪ್ಪಣೆ ದಯಪಾಲಿಸಿದ್ದಲ್ಲದೆ, ಮುಖ್ಯಾಸ್ಥರ ಅರ್ಜಿಗಳನು ಕೊಡುವವರು ಇದ್ದರೆ ಬರಬಹುದೆಂದು ಅಪ್ಪಣೆ ಮಾಡಿದ ಪ್ರಕಾರ ಕೆಲವರು ಅರ್ಜಿಗಳನ್ನು ಕೊಟ್ಟುಕೊಂಡರು — ಕಪಿಲಾ ನದಿಯ ದಡದಲ್ಲಿ ಆನೆಗಳನ್ನು ಕಟ್ಟಿ ಹಾಕುವದರಿಂದ ಇವುಗಳು ನೀರು ಕುಡಿಯುವದಕ್ಕೆ ಹೋದಾಗ ನೀರಿನಲ್ಲಿ ಲದ್ದಿ ಹಾಕಿ ಅದು ಕೊಳೆಯುತ್ತಾ ನೀರು ಕೆಟ್ಟುಹೋಗುವದಕ್ಕೆ ಅವಕಾಶವುಂಟಾಗಿರುತ್ತೆ ಹಿಂದೆ ಇದ್ದ ಅಮಲ್ದಾರ್ ಮ॥ ಧರ್ಮರಾಯರವರ ಕಾಲದಲ್ಲಿ ಆನೆಗಳನ್ನು ಈ ಸ್ಥಳದಲ್ಲಿ ಕಟ್ಟಕೂಡದೆಂದು ಹುಕುಂ ಮಾಡಿ ನೀರು ಕೆಡದ ಹಾಗೆ ನೋಡಿಕೊಳ್ಳುತ್ತಾ ಇದ್ದರು ಈಗ ಈ ವಿಷಯದಲ್ಲಿ ಯಾರೂ ನಿಗಾಕ್ಕೆ ತಂದುಕೊಂಡಿರುವಂತೆ ಕಾಣುವದಿಲ್ಲ — ಕಾರ್ಯದ ಮೂನಿ ಹೋಬಳಿ ಯಲ್ಲಿ ಆ ಗ್ರಾಮದ ಪಟೇಲನು ಸುಳ್ಳು ಕೈಫಿಯತ್ತು ಕೊಟ್ಟನೆಂದು ಸೆಷನ್ಸ್ ಜಡ್ಜಿಯವರು ಪ್ರಾಸಿಕ್ಯೂಷನ್‌ಗೆ ಆರ್ಡರ್ ಮಾಡಿರುತ್ತಾರೆಂತಲೂ, ಅಮಲ್ದಾರರವರ ಕೈಫಿಯತ್ತಿನ ನಿಷಯದಲ್ಲಿ ಗೌರ್ನಮೆಂಟಿಗೆ ಬರೆಯುವಂತೆ ಜಡ್ಜಮೆಂಟಿನಲ್ಲಿ ಆರ್ಡರ್ ಮಾಡಿರುತ್ತಾರೆಂತಲೂ ತಿಳಿಯಬಂದಿದೆ — ಈ ಟವನ್ ಮುನ್ಸಿಪಲ್ ಚುನಾವಣೆಯು ಅಕ್ಟೋಬರ್ ತಿಂಗಳಿನಲ್ಲಿ ನಡೆದಾಗ್ಯೂ ಅದ್ಯಾಪಿ ಮೆಂಬರುಗಳು ಇಂಥಾವರೆಂದು ಗೊತ್ತಾಗಿರುವದಿಲ್ಲ — ಇಲ್ಲಿ ಹೊಸದಾಗಿ ಮುನ್ಸಿಫ್ ಕೋರ್ಟು ಕಟ್ಟಡದ ಕೆಲಸವು ಪೂರೈಸುತ್ತಾ ಬಂದಿದೆ ಇನ್ನು ಸ್ವಲ್ಪ ದಿವಸದಲ್ಲಿಯೇ ಕೋರ್ಟು ಅಲ್ಲಿಗೆ ಹೋಗುವದಾಗಿ ತಿಳಿಯಬರುತ್ತೆ ಕಟ್ಟಡದ ಬಳಿ ಕಕ್ಷಿಗಾರರಿಗೆ ಕೂತುಕೊಳ್ಳುವದಕ್ಕೆ ನೆರಳಾಗಲಿ, ಕುಡಿಯುವದಕ್ಕೆ ನೀರಾಗಲಿ ಇರುವದಿಲ್ಲ — ಕಳೆದ ವಾರ ಇಲ್ಲಿ ವೈಶ್ಯರ ತಮ್ಮಶೆಟ್ಟಿ ಮಗ ಕಾಮಾಕ್ಷಿಭಾಸ್ಕರಶೆಟ್ಟಿ ಎಂಬವನು ನಾಗಮ್ಮನೆಂಬವಳಿಗೆ ಹಣ ಕೊಡಬೇಕಾಗಿದ್ದು ಮೋಸಪಡಿಸುವದಕ್ಕೆ ಪ್ರಯತ್ನಮಾಡಿದನೆಂದು ವಾರಂಟಿನಿಂದ ಹಿಡಿಯಲ್ಪಟ್ಟು ಮೈಸೂರು ಸಿವಿಲ್ ಜೈಲಿನಲ್ಲಿ ಹಾಕಲ್ಪಟ್ಟನು.

ಶೃಂಗೇರಿ — ಅಡಿಕೆ ಕೊಯಿಲು ಪೂರೈಸುತ್ತಾ ಬಂದಿತು ಅಡಿಕೆ ಧಾರಣೆ ಮಣಕ್ಕೆ 9 ರಿಂದ 11 ರೂಪಾಯಿವರಿಗೆ ಇದೆ ಇಲ್ಲಿ ಬೆಳೆಯುವ ಭತ್ತವೆಲ್ಲಾ ಮಂಗಳೂರು ಕಡೆಗೆ ಸಾಗಿಹೋಗುತ್ತೆ ಆದುದರಿಂದ ಭತ್ತದ ಧಾರಣೆಯು ವಿಶೇಷ ತಗ್ಗುವದಿಲ್ಲ — ಮಠದ ಚಂದ್ರಮೌಳೀಶ್ವರ ದೇವಾಲಯವು ಪೂರೈಸುತ್ತಾ ಬಂದಿತು ಶಾರದಾಂಬಾ ದೇವಸ್ಥಾನದ ಗರ್ಭಗುಡಿಯು ಆಗಿದೆ ಇದು ಪೂರೈಸಲು ಇನ್ನೂ 12 ವರ್ಷಗಳು ಬೇಕೆಂತ ಕಾಣುತ್ತೆ ಮೊದಲಿನಂತೆ ಕೆಲಸ ಅಷ್ಟು ನಡೆಯುವದಿಲ್ಲ ನರಸಿಂಹ ವನದಲ್ಲಿ ಸಮಾಧಿಯ ಮೇಲೆ ಕಟ್ಟುವ ಕಟ್ಟಡಕ್ಕೆ ಕೊಪ್ಪ, ಎಡೆಹಳ್ಳಿ ಮುಂತಾದ ಊರುಗಳಲ್ಲಿಯೂ, ಈ ಜಹಗೀರಿಯಲ್ಲಿಯೂ ಚಂದಾ ವಸೂಲಾಯಿತು ಮದರಾಸ್ ಪ್ರೆಸಿಡೆನ್ಸಿಯ ಕೆಲವು ಭಾಗಗಳಲ್ಲಿ ಚಂದಾ ಹಾಕಿಸಲು ಮಠದ ಏಜೆಂಟರು ಹೊರಟುಹೋಗಿದ್ದಾರೆ ಬದಲಿಯಲ್ಲಿ ಸರ್ಕಾರಿ ವಿಶಿಷ್ಟ ಕೆಲಸವನ್ನೂ ಅಮಲ್ದಾರರು ನೋಡುತ್ತಾರೆ ಸನ್ನಿಧಾನದಲ್ಲಿ ಕಾರ್ಯವನ್ನು ಬದಲಿಯಾಗಿ ನಂಜನಗೂಡು ಚಂದ್ರಶಾಸ್ತ್ರಿಗಳು ನೋಡುತ್ತಾರೆ ನಮ್ಮ ಡೆಪ್ಯುಟಿ ಅಮಲ್ದಾರರು ಸರ್ಕಾರಿ ಕೆಲಸದಂತೆ ಮುಜರಾಯಿ ಇಲಾಖೆಯಲ್ಲೂ ಸ್ವಲ್ಪ ವಿಚಾರ ನಡಿಸುತ್ತಾ ಬಂದರೆ ಒಳ್ಳೇದಾದೀತು — ಮ್ಯುನಿಸಿಪಾಲಿಟಿ ವಿಚಾರಣೆಯು ಸ್ವಲ್ಪ ನಿದಾನವಾಗಿದೆ ಪ್ರೆಸಿಡೆಂಟರು ಇನ್ನೂ ಚನ್ನಾಗಿ ನಿಗಾ ಕೊಡಬೇಕು — ಡಿ॥ ಫಾರೆಸ್ಟ್ ಆಫೀಸರ್ ಮ॥ ರಾಮಯ್ಯಂಗಾರ್ರವರು ದಯಮಾಡಿಸಿ ಗಂಗಾಮೂಲ ವಗೈರೆ ಪ್ರಾಂತ್ಯದ ಕಾಡುಗಳನ್ನು ಇನ್‌ಸ್ಪೆಕ್ಷನ್ ಮಾಡಿಕೊಂಡು ಇಲ್ಲಿ ಒಂದು ದಿನ ಇದ್ದು ಮೊನ್ನೆ ಕೊಪ್ಪದ ಕಡೆ ಪ್ರಯಾಣ ಮಾಡಿದರು — ಕಳೆದ ಬುಧವಾರ ಎ ವಿ ಸ್ಕೂಲ್ ಹಾಲಿನಲ್ಲಿ ಪೂನಾದಿಂದ ಬಂದಿದ್ದ ಮ॥ ಅಪ್ಪಾಜಿ ಎಂಬುವರು ವಿದ್ಯಾ ವಿಚಾರವಾದ ಉಪನ್ಯಾಸವನ್ನು ಇಂಗ್ಲೀಷಿನಲ್ಲಿ ಕೊಟ್ಟರು ಮ॥ ರಮಣಸರಸ್ವತಿಗಳವರು ಅಗ್ರಾಸನವನ್ನು ವಹಿಸಿ ಅವರ ಉಪನ್ಯಾಸದ ಜೊತೆಯಲ್ಲಿ ತಮ್ಮ ಅಮೌಲ್ಯವಾದ ಅನುಭವವನ್ನು ತಿಳಿಸಿದ್ದಲ್ಲದೆ ವಿದ್ಯೆಯನ್ನು ಹೇಗೆ ಕಲಿಯಬೇಕು, ಎಂಥಾ ವಿದ್ಯೆಯಿಂದ ನಮಗೆ ಪ್ರಯೋಜನವುಂಟಾಗುತ್ತದೆ ಎಂಬ ವಿಚಾರವಾಗಿ ಚೆನ್ನಾಗಿ ವಿವರಿಸಿದರು — ಇಲ್ಲಿಗೆ ವರ್ಗವಾಗಿ ಬಂದ ಹೆಡ್ ಮಾಸ್ತರು ಮ॥ ತಿಮ್ಮಪ್ಪಯ್ಯನವರು ಛಾರ್ಜನ್ನು ವಹಿಸಿಕೊಂಡರು ಸದ್ಗುಣಿಗಳೂ, ಸನ್ಮಿತ್ರರೂ ಆಗಿದ್ದ ಮ॥ ಬಾಲಕೃಷ್ಣರಾಯರನ್ನು ಮಿತ್ರಮಂಡಲಿಯವರೂ, ಅಭಿಮಾನಿಗಳೂ ನಾನಾ ವಿಧವಾಗಿ ಉಪಚಾರ, ಔತಣ, ಮರ್ಯಾದೆಗಳಿಂದ ಸತ್ಕರಿಸಿದರು ವೈಕುಂಠಪುರದ ಹೋಟೇಲದಲ್ಲಿ ಶಾಸ್ತ್ರಿಗಳವರೇ ಆದಿಯಾದ ದೊಡ್ಡ ಮನುಷ್ಯರುಗಳು ಟೀಪಾರ್ಟಿಯನ್ನು ಕೊಟ್ಟರು ಮರುದಿವಸ ಸಬ್ ಓವರ್ಸಿಯರ್ ಮ॥ ಶ್ರೀಕಂಠಶಾಸ್ತ್ರಿಗಳವರ ಮನೆಯಲ್ಲಿ ಸಮಸ್ತ ದೊಡ್ಡ ಮನುಷ್ಯರೊಡನೆ ಇವರಿಗೆ ಮತ್ತೊಂದು ಔತಣವು ನಡೆದು, ಅದೇ ದಿನ ಸ್ನೇಹದ ಜ್ಞಾಪಕಾರ್ಥವಾಗಿ ಸಮಸ್ತರೊಡನೆ ಫೋಟೋ ತೆಗೆಯಲಾಯಿತು ಸಾಯಂಕಾಲ ರೀಡಿಂಗ್ ರೂಮಿನಲ್ಲಿ ಸಭೆ ಸೇರಿ ವರ್ಗವಾದ ಹೆಡ್ ಮಾಸ್ತರ ಗುಣಕಥನವನ್ನು ಮಾಡಿ ತಾಂಬೂಲಾದಿಗಳನ್ನು ಕೊಟ್ಟು ಸತ್ಕರಿಸಿದರು ಇವರ ವಿಯೋಗದಿಂದ ಅನೇಕರು ವ್ಯಸನಪಡುತ್ತಿರುವರು ಮ॥ ತಿಮ್ಮಪ್ಪಯ್ಯನವರೇ ಪುನಹ ಇಲ್ಲಿಗೆ ಬಂದದ್ದರಿಂದ ಎಲ್ಲರಿಗೂ ಸಂತೋಷವಾಯಿತು ಇವರೂ ಅವರಲ್ಲಿನ ಗುಣಗಳನ್ನೇ ಹೊಂದಿ, ಜನಸಹಾಯಕರಾಗಿರುತ್ತಾರೆ

ಚಿಕ್ಕಮಗಳೂರು — ನಮ್ಮ ಶ್ರೀಮನ್ ಮಹಾರಾಜರೂ ಯುವರಾಜರೂ ಬರುವ ತಿಂಗಳಿನ ಪ್ರಾರಂಭದಲ್ಲಿ ಇಲ್ಲಿಗೆ ಚಿತ್ತೈಸುವವರಾಗಿರುವುದರಿಂದ ಚಿಕ್ಕಮಗಳೂರಿನ ಪ್ರಜೆಗಳೆಲ್ಲಾ ಅವರ ಆಗಮನಕ್ಕಾಗಿ ಸಿದ್ಧಪಡಿಸಿಕೊಳ್ಳುವದಕ್ಕಾಗಿ ವಿರಾಮವಿಲ್ಲದೆ ಕೆಲಸ ಮಾಡುತ್ತಿದ್ದಾರೆ ಮುಖ್ಯವಾಗಿ ಮಹಾರಾಜರು ಇಲ್ಲಿಗೆ ದಯಮಾಡಿಸತಕ್ಕ ಕಾಲದಲ್ಲಿ ನೂತನವಾಗಿ ಕಟ್ಟಲ್ಪಟ್ಟ ಯುವರಾಜ ಮೆಮೋರಿಯಲ್ ಹಾಲ್ ಎಂಬ ಸುಂದರವಾದ ಭವನವನ್ನು ಪ್ರತಿಷ್ಠೆ ಮಾಡುವರು ಆದಕ್ಕಾಗಿ ತಕ್ಕ ಏರ್ಪಾಡುಗಳು ನಡೆಯುತ್ತಲಿವೆ ಆ ಕಟ್ಟಡವು ಚೆನ್ನಾಗಿ ಕಾಣುವಂತೆ ಅದರ ಮುಂಭಾಗದಲ್ಲಿದ್ದ ಕೆಲವು ಮರಗಳನ್ನು ಕಡಿದ್ದುಹಾಕಿ ಲಾಲ್‌ಬಾಗಿನ ರಸ್ತೆಗಳನ್ನು ವಿಸ್ತರಿಸಿ ದುರುಸ್ತು ಮಾಡುತ್ತಿದ್ದಾರೆ ಟವನ್ನಿನ ಕೆಲವು ಭಾಗಗಳಲ್ಲಿ ಧ್ವಜಸ್ತಂಭಗಳನ್ನು ಹಾಕಿ ತೋರಣಗಳನ್ನು ಕಟ್ಟುವುದಕ್ಕೆ ಏರ್ಪಾಡುಗಳು ನಡೆಯುತ್ತಲಿವೆ ಅಂತೂ ಶ್ರೀಮನ್ ಮಹಾರಾಜರೂ ಯುವರಾಜರೂ ಇಲ್ಲಿಗೆ ದಯಮಾಡಿಸುವುದು ಮಹಾಪ್ರಸಾದವೆಂದು ಭಾವಿಸಿ ಅವರನ್ನು ಸ್ವೀಕಾರ ಮಾಡಿಕೊಳ್ಳುವ ಉದ್ದೇಶ ಇಲ್ಲಿನ ಪ್ರಜೆಗಳು ನಡಿಸಿರುವ ಕಾರ್ಯಭಾಗಗಳು ಅವರ ರಾಜಭಕ್ತಿಯನ್ನು ಪ್ರಕಾಶಕ್ಕೆ ತರುವುದರಲ್ಲಿ ಸಂಶಯವೇನೂ ಇಲ್ಲ — ಕಳೆದ ಶುಕ್ರವಾರ ಇಲ್ಲಿನ ಹೈ ಸ್ಕೂಲಿನಲ್ಲಿ ಒಂದು ವಿಶೇಷವಾದ ಕೂಟವು ನಡೆಯಿತು ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರು ಅಗ್ರಾಸನವನ್ನು ವಹಿಸಿದ್ದರು ಇಲ್ಲಿನ ಸರ್ಕಾರದ ಹುದ್ದೆದಾರರೂ ಇತರ ದೊಡ್ಡ ಮನುಷ್ಯರೂ ಸಭೆಯನ್ನಲಂಕರಿಸಿದ್ದರು ಚರ್ಚಿಸಲ್ಪಟ್ಟ ವಿಷಯವು ಯಾವುದೆಂದರೆ — ಇಲ್ಲಿನ ಸಿವಿಲ್ ಆಸ್ಪತ್ರೆಯಲ್ಲಿ ಬ್ರಾಹ್ಮಣರೇ ಮುಂತಾದ ಉತ್ತಮ ಜಾತಿಯ ಹಿಂದುಗಳ ಉಪಯೋಗಕ್ಕಾಗಿ ಒಂದು ಪ್ರತ್ಯೇಕವಾದ ವಾರ್ಡನ್ನು ಕಟ್ಟಿಸಬೇಕೆಂಬುವುದೇ ಇಲ್ಲಿನ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾದ ಡಾಕ್ಟರ್ ಡೇವಿಡ್ ಸಾಹೇಬರು ಈ ಸ್ಥಳಕ್ಕೆ ದಯಮಾಡಿದ ಲಾಗಾಯ್ತು ಉತ್ತಮ ಜಾತಿಯ ರೋಗಿಗಳನ್ನು ಉಪಚರಿಸತಕ್ಕ ಒಂದು ವಾರ್ಡ್ ಇಲ್ಲವೆಂಬ ನ್ಯೂನತೆಯನ್ನು ಕಂಡು ಅದರ ನಿವಾರಣೆಗೆ ತಕ್ಕ ಕಾರ್ಯಗಳನ್ನು ಕುರಿತು ಯೋಚಿಸುತ್ತಲೇ ಇದ್ದರು ಈಗ ಅವರ ಯೋಚನೆಯು ಫಲಕಾರಿಯಾಗಿ ಪರಿಣಮಿಸಿರುವದು ತುಂಬಾ ಸಂತೋಷಪ್ರದವಾಗಿದೆ ಅವರ ಪ್ರೇರಣೆಯಿಂದ ಇಲ್ಲಿನ ದೊಡ್ಡ ಮನುಷ್ಯರು ಒಂದು ಸಭೆಯನ್ನು ನಡಿಸಿ ಆ ಕಾರ್ಯವು ಸಿದ್ಧಿಗೆ ಬರುವಂತೆ ಮಾಡಿದ್ದಾರೆ ನಮ್ಮ ಡೆಪ್ಯುಟಿ ಕಮಿಷನರ್ ಮ॥ ಸುಬ್ರಹ್ಮಣ್ಯ ಅಯ್ಯರವರು ಇದನ್ನು ಪ್ರೋತ್ಸಾಹಪಡಿಸಿ ಇದಕ್ಕೆ ಪ್ರೆಸಿಡೆಂಟರಾಗಿರುವುದು ಸ್ತೋತ್ರಾರ್ಹವಾಗಿದೆ ಕಳೆದ ಶುಕ್ರವಾರ ನಡೆದ ಕೂಟದಲ್ಲಿ ಹಾಜರಾಗಿದ್ದ ಮಹನೀಯರು ಸುಮಾರು 500 ರೂಪಾಯಿಗಳ ವರೆಗೆ ಚಂದಾ ಹಾಕಿದರು ಕಟ್ಟಡಕ್ಕೆ ಸುಮಾರು ರೂ 10,000 ದಿಂದ ರೂ 15,000 ವರೆಗೂ ಬೇಕಾಗಬಹುದೆಂದು ಅಂದಾಜು ಆಗಿದೆ ಈ ಮೊಬಲಗನ್ನು ಚಂದಾ ಮೂಲಕ ಎತ್ತಿ ಮೇಲೆ ಕಂಡ ವಾರ್ಡನ್ನು ಹೇಗಾದರೂ ಕಟ್ಟಿಸಬೇಕೆಂತಲೂ, ನಮ್ಮ ಶ್ರೀಮನ್ ಮಹಾರಾಜರು ಇಲ್ಲಿಗೆ ದಯಮಾಡಿಸತಕ್ಕ ಕಾಲದಲ್ಲಿ ಆ ಕಟ್ಟಡಕ್ಕೆ

ಅವರ ಹಸ್ತದಿಂದ ಅಸ್ತಿಭಾರದ ಕಲ್ಲನ್ನು ಇಡಿಸಬೇಕೆಂತಲೂ ತೀರ್ಮಾನವಾಗಿದೆ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರೂ, ಡಾಕ್ಟರ್ ಡೇವಿಡ್ ಸಾಹೇಬರೂ, ಇತರ ಶ್ರೇಷ್ಠ ಮನುಷ್ಯರೂ ಪ್ರಾರಂಭಿಸಿರತಕ್ಕ ಈ ಕಾರ್ಯಕ್ಕೆ ಜಯಪ್ರದ ವಾಗಬೇಕೆಂದು ಎಲ್ಲರೂ ಹಾರೈಸುವವರಾಗಿದ್ದಾರೆ

ದೊಡ್ಡಬಳ್ಳಾಪುರ — ಈ ತಿಂಗಳು 1ನೇ ತಾರೀಖಿನಲ್ಲಿ ಮಹಾರಾಜ ದಿವಾನ್ ಸಾಹೇಬರವರು ಘಾಟಿಸುಬ್ರಹ್ಮಣ್ಯದ ಜಾತ್ರೆಗೆ ದಯಮಾಡಿಸಿ ಅಲ್ಲಿಗೆ ಕೂಡಿಬಂದಿದ್ದ 40-50 ಸಾವಿರ ಜನರನ್ನೂ ಲಕ್ಷಾಂತರ ದನಗಳ ಪರಿಷೆಯನ್ನೂ ನೀರಿಗೂ ಸ್ಥಳವಸತಿಗೂ ಉಂಟಾಗಿರುವ ಕಷ್ಟವನ್ನೂ ಸಹ ತಾವೇ ಪರಾಂಬರಿಸಿ, ಅಲ್ಲಿ ಒಂದು ಕೆರೆಯನ್ನೂ ಛತ್ರವನ್ನೂ ಕಟ್ಟುವಂತೆಯೂ ಮಹಾದ್ವಾರವನ್ನೂ ರಸ್ತೆಗಳನ್ನೂ ಅನುಕೂಲಪಡಿಸುವಂತೆಯೂ ಒಟ್ಟು 15 ಸಾವಿರ ರೂಪಾಯಿ ಸಹ ಮಂಜೂರು ಮಾಡುವಂತೆಯೂ ಈ ಕೆಲಸವು ಇನ್ನು ಆರು ವಾರಗಳಲ್ಲಿ ಪ್ರಾರಂಭಿಸಿ ಮುಂದಿನ ಜಾತ್ರೆಕಾಲದೊಳಗಾಗಿ ಮುಗಿಸುವಂತೆಯೂ ತಮ್ಮ ಜೊತೆಯಲ್ಲಿದ್ದ ಡೆಪ್ಯುಟಿ ಕಮಿಷನರವರಿಗೆ ಅಪ್ಪಣೆ ಕೊಡಿಸಿದರೆಂದವಾಗಿ ಪ್ರಜೆಗಳು ತಿಳಿದು ಆನಂದಪರವಶರಾಗಿರುತ್ತಾರೆ ಅದೇ ದಿನ ಸಾಯಂಕಾಲ ದಿವಾನ್ ಸಾಹೇಬರನ್ನು ದೊಡ್ಡಬಳ್ಳಾಪುರದ ಕೆಲವು ಪ್ರಮುಖರು ಮುನಿಸಿಪಲ್ ಎಂಗಿಂಟ ಬಳಿ ಭೇಟಿ ತೆಗೆದುಕೊಂಡಾಗ ದಿವಾನ್‌ರವರು ಪಟ್ಟಣದ ಕ್ಷೇಮಲಾಭಗಳನ್ನು ವಿಚಾರಿಸಿ ಪ್ರಜೆಗಳಿಗೆ ಅತ್ಯಂತ ಅವಶ್ಯವಾಗಿರುವ ನೀರಿನ ಸರಬರಾಯಿಯನ್ನೂ ಮುನಿಸಿಪಲ್ ಕೌನ್ಸಿಲ್‌ನ್ನೂ ಈ ಊರಿಗೆ ಕಲ್ಪಿಸುವ ಪ್ರಯತ್ನದ ವಿಷಯದಲ್ಲಿ ಸಮ್ಮತಿಯನ್ನು ದಯಪಾಲಿಸಿರುವುದಲ್ಲದೆ, ಪ್ರಜೆಗಳು ನೀರಿನ ಸರಬರಾಜುಗೋಸ್ಕರ ಸಾವಿರಾರು ರೂಪಾಯಿ ಕೊಡುತ್ತೇವೆಂತ ತಿಳಿಸಿದ ವಾಗ್ದಾನವನ್ನು ಕೇಳಿ ಬಹಳ ಸಂತೋಷಪಟ್ಟು, ಊರೊಳಗೆ ಪ್ರವೇಶ ಮಾಡಿ ಬೆಂಗಳೂರಿಗೆ ದಯಮಾಡಿದರು ಬಹು ಕಾಲದಿಂದಲೂ ಪ್ರಜೆಗಳು ಬೇಡಿಕೊಳ್ಳುತ್ತಿದ್ದ ಸುಪ್ರಸಿದ್ಧವಾದ ನೀರಿನ ಸರಬರಾಜನ್ನೂ ಮುನಿಸಿಪಾಲಿಟಿ ಕಟ್ಟುವದನ್ನೂ ದಿವಾನ್ ರವರು ಪಡೆದ ಒಂದೇ ಕೊಡಲಿ ಸೃಷ್ಟಿಯಾ ಪರಾಂಬರಿಸಿ, ಒದಗಿಸಿ ಮೂಡಿಸುವುದನ್ನು ಮಾಡುವದನ್ನು ಪ್ರಜೆಗಳು ಬಹು ಇಂಥಾ ಪ್ರೀತಿಯುಕ್ತವಾದ ದಿವಾನ್‌ರವರನ್ನು ಬಹಳವಾಗಿ ಸ್ಮರಿಸಿ ಸಾರುತ್ತಿದ್ದಾರೆ —ಕಳೆದ 17 ನೇ ತಾ ಬೆಂಗ್ಳ ರುವಾರು 10 ಘಂಟೆಯಲ್ಲಿ ಮೈಸೂರಿನ ಶ್ರೀಮನ್ ಮಹಾರಾಜರವರು ತಮ್ಮ ಪ್ರೈವೇಟ್ ಸೆಕ್ರೆಟರಿಯವರಾದ ಕರ್ನಲ್ ಕ್ಯಾಂಬೆಲ್ ರವರ ಸಹ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಮತ್ತು ಇತರರೊಡನೆ ಸಂಗಡ ಸುಬ್ಬಣ್ಣ ವಾಟಿಗೆ ದಯಮಾಡಿಸಿ ಮಾರ್ಗದ ಎರಡೂ ಬದಿಯಲ್ಲಿ ಮತ್ತು ಬಂಗ್ಲೆ ಮಿಷನ್‌ಗಳ ಪ್ರತಿನಿಧಿಗಳು ಪ್ರಸಂಗಿಸುತ್ತಿರುವಾಗ್ಗೆ ಅಲ್ಲಿ ತಮ್ಮ ಮೋಟಾರ್ ಕಾರನ್ನು ಕೆಲವು ಕಾಲ ನಿಲ್ಲಿಸಿ ಲಂಡನ್ ಮಿಷನ್ ನ ಸಂಕೀರ್ತನ ಪರದಿಂದ ಕೆಲವು ಸಂಗತಿಗಳನ್ನು ಕೇಳಿದು ಮುಂದಕ್ಕೆ ಹೊರಟು ದಾರಿ ಬದಿಯ ಎಲ್ಲ ಪ್ರದರ್ಶನಶಾಲೆಯಲ್ಲೂ ಕೊಂಚ ಹೊತ್ತು ನೋಟವನ್ನು ನಿಲ್ಲಿಸಿ, ಡೆಪ್ಯುಟಿ ಕಮಿಷನರ್‌ರವರ ಮೂಲಕ ಪ್ರದರ್ಶನ ಶಾಲೆಯ ವಿದ್ಯಮಾನಗಳನ್ನು ಕೇಳಿ ಪ್ರಜೆಗಳನ್ನು ಸ್ವತಹಾ ಪರಾಂಬರಿಸಿ ನಾನಾ ವಿಧಗಳಿಂದ ಸತ್ಕರಿಸಿದರು ಶ್ರೀಮನ್ ಮಹಾರಾಜರಿಗೆ ಪ್ರಜೆಗಳ ಮೇಲಿರುವ ಅಪಾರವಾದ ಪ್ರೇಮ ವಿಶ್ವಾಸಗಳನ್ನು ಜಾತ್ರೆಯ ಜನರೆಲ್ಲರೂ ಅರಿತು ಆನಂದಪರವಶರಾದರು ಮಹಾ ಸ್ವಾಮಿಯವರು ನಮ್ಮ ಪ್ರಜೆಗಳ ಕಷ್ಟವನ್ನು ಸ್ವತಹಾ ಪರಾಂಬರಿಸುವರು ಬಹು ಶ್ಲಾಘನೀಯವಾಗಿರುತ್ತದೆ ಅವರು ದಿನ ಎರಡುಗಳ ಪ್ರದರ್ಶನದ ಅಲ್ಲಿ ಸುಮಾರು 11 ಘಂಟೆಯಿಂದ ಪ್ರಾರಂಭವಾಯಿತು ಸುಮಾರು ಏಳು ಅತ್ಯುತ್ತಮ ಶ್ರೇಷ್ಠವಾದ ಎತ್ತುಗಳು ಪ್ರದರ್ಶನಶಾಲೆಗೆ ಕೊಡಬಂದವು ಅವುಗಳಲ್ಲಿ ಕೆಲವು ಏಳು 700 ಆದಾಯದ 1,000 ರೂಪಾಯಿವರೆಗೂ ಬೆಲೆ ಬಾಳತಕ್ಕವುಗಳಾಗಿದ್ದವು ಅವುಗಳನ್ನೆಲ್ಲಾ ಬೇಗಳೂರಿಂದ ಬಂದಿದ್ದ ಡಾಕ್ಟರವರೂ ಕಮಿಟಿ ಮೆಂಬರುಗಳೂ ಪರಾಂಬರಿಸಿ ಉತ್ತಮವಾದ ಎತ್ತುಗಳಿಗೆ ನಾಲ್ಕು ಭಂಗಾರದ, ಎಂಟು ಬೆಳ್ಳಿಯ ಮೆದಲುಗಳನ್ನೂ ನಗದು ಹಣ ಮತ್ತು ಸರ್ಟಿಫಿಕೇಟುಗಳನ್ನೂ ಬಹುಮಾನವಾಗಿ ಕೊಟ್ಟರಲ್ಲದೆ ಶ್ರೀಮನ್ ಮಹಾರಾಜರವರು ಆಕಸ್ಮಾತ್ ದಯಮಾಡಿಸಿ ಪ್ರಜೆಗಳಿಗೆ ಭೇಟಿಕೊಟ್ಟ ಸಂತೋಷಕ್ಕಾಗಿ ಮತ್ತೆರಡು ಸ್ಪೆಷಲ್ ಬಹುಮಾನಗಳನ್ನು ನಮ್ಮ ಅಮಲ್ದಾರ್ ಮತ್ತು ಇತರ ಅಧಿಕಾರಿಗಳವರು ದಯಪಾಲಿಸಿದರು ಈ ಸಾರಿ ಬೆಂಗಳೂರಲ್ಲಿ ನಡೆದ ಕೈಗಾರಿಕೆಗಳ ಪ್ರದರ್ಶನದಲ್ಲಿ ತೇಗದ ಹೊಂದಿದಂಥಾ ದೊಡ್ಡಬಳ್ಳಾಪುರದ ನೇಯಿಗೆ ಸ್ಕೂಲಿನ ಇಬ್ಬರು ಹುಡುಗರಿಗೆ ಒಳ್ಳೇ ಬಹುಮಾನಗಳು ದೊರೆತವು —ಈ ತಿಂಗಳು 27 ನೇ ತಾ ಸಾಯಂಕಾಲ ದೊಡ್ಡಬಳ್ಳಾಪುರದ ಹಳೆ ಕಚೇರಿಯಲ್ಲಿ ನೀರಿನ ವಿಷಯವಾದ ಒಂದು ದೊಡ್ಡ ಕಮಿಟಿಯು ನಡೆಯಬೇಕೆಂತ ಕಮಿಟಿ ಪ್ರೆಸಿಡೆಂಟರು ಅಮಲ್ದಾರರವರು ಸದ ರಿ ವಿಷಯಗಳಿಗೆ ಸಮಸ್ತ ಅಭಿಮಾನಿಗಳೆಲ್ಲರೂ ಬರಬೇಕೆಂತ ನೋಟೀಸುಕೊಟ್ಟಿರುತ್ತಾರೆ— ಈ ಸಲ ಘಾಟಿ ಜಾತ್ರೆಯಲ್ಲಿ ಮೊದಲಿನ ಇಸ್ಪೀಟಿನ ಜೂಜಾಟವು ಅಲ್ಲಲ್ಲಿ ತಲೆದೋರಿದ್ದವು ಅನೇಕರು ಬಹಳ ಹಣವನ್ನು ಕಳೆದುಕೊಂಡು ಕಣ್ಣೀರು ಬಿಡುತ್ತಿದ್ದದ್ದನ್ನು ಕೆಲವರು ನೋಡಿ ಬಹಳವಾಗಿ ವ್ಯಸನಪಟ್ಟರು ನಮ್ಮ ಪೊಲೀಸ್ ಇನ್ಸ್‌ಪೆಕ್ಟರವರು ದಯವಿಟ್ಟು ಮುತುವರ್ಜಿ ವಹಿಸಿ ಈ ಜೂಜುಕೋರರ ನಿಷಯ ಕಣ್ಣಿಡುವನಂತ ನಿರೀಕ್ಷಿಸಲಾಗಿದೆ —ಮ್ಯುನಿಸಿಪಾಲಿಟಿಯಲ್ಲಿ ಅಲ್ಲಲ್ಲಿ ಕೊಳೆತ ನೀರೂ ಹೊಲಸೆಯೂ ಬರಬರ ಹೆಚ್ಚಾಗುತ್ತಿದೆ ನಮ್ಮ ಸ್ಯಾನಿಟರಿ ಇನ್ಸ್‌ಪೆಕ್ಟರವರು ಈ ವಿಷಯದಲ್ಲಿ ಕೊಂಚ ಹೆಚ್ಚು ಮುತುವರ್ಜಿ ವಹಿಸಿದರೆ ಗ್ರಾಮಪಂಚಾಯಿತಿ ಚೆನ್ನಾಗಿ ನಡೆಯುವದು ಕನ್ನಡ, ಗರ್ಲ್ಸ್ ಸ್ಕೂಲ್, ಉರ್ದು ಸಾ... ಸ್ಕೂಲುಗಳಿರುವ ಹಳೇ ಕಚೇರಿಯು ಎಳಿ ಯಾವಾಗ ನೋಡಿದರೂ ಅಸಹ್ಯವಿಷ್ಟೇ ಇರುತ್ತೆ

ಮಕ್ಕಳ ಹಿತಕಾರಿ

ಎಂದು

SCOTT'S EMULSION 2-1

(ಸ್ಕಾಟ್ಸ್ ಇಮಲ್‌ಷನ್)

ಎಂಜೀ ಸೇವನಾ ವಿಷದಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ ಯಾಕಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳಸಿರುತ್ತದೆ

ಇದು ಬಹಳ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆ ಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ ಮಾಡುವುದು ಅಶಕ್ತರಾದ ಮಕ್ಕಳನ್ನು ಬಲಿಷ್ಟರನ್ನಾಗಿ ಮಾಡುವುದು

ಕೈಸೋಕದೆ ತಯಾರಾದದ್ದು

ಎಲ್ಲಾ ವಿಷದವ್ಯಾಪಾರಸ್ಥರಲ್ಲಿ ಚಿಕರಿಯಾಗುತ್ತದೆ

—

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್ ಔಷಧಗಳ ಕಾರ್ಖಾನೆ ಲಂಡನ್, ಇಂಗ್ಲೆಂಡ್.

ಈ ಮಿನಮುವನ್ನು ಇರುವ ಔಷಧವನ್ನೇ ಕೊಂಡುಕೊಳ್ಳಿ

ಇದೇ ನಿಜವಾದ ರೈಲ್ವೆ ರೆಗ್ಯುಲೇಟರ್ ಜೇಬುಗಡಿಯಾರ!

ಕ್ರಿಸ್‌ಮಸ್ ಹಬ್ಬಕ್ಕೋಸ್ಕರ ಈ ಸ್ವಲ್ಪ ಬೆಲೆಗೆ ಕೊಡಲ್ಪಡುತ್ತೆ

ನಮ್ಮ ಕಂಪನಿಯು ಪ್ರಸಿದ್ಧಿಯಾಗುವದಕ್ಕಾಗಿ ೯ ರೂಪಾಯಿನ ಈ ಗಡಿಯಾರವನ್ನು 800 ಗಡಿಯಾರಗಳು ಮುಗಿಯುವ ವರೆಗೆ ಮಾತ್ರ ರೂ 1 13 0 ಗೆ ಕೊಡಲ್ಪಡುತ್ತೆ ಅದೃಷ್ಟವಂತರುಗಳಲ್ಲದೆ ಮತ್ತಾರಿಗೂ ದೊರೆಯಲಾರದು ಮಾ ಸನೇ ಮೊದಲು ಎಲ್ಲರೂ ಆರ್ಡರ್ ಮಾಡುವವರಿಗೆ ಈ ಗಡಿಯಾರ ನಿಜವಾಗಿ ದೊರೆಯಬಹುದು ಮತ್ತು ಕಂಪನಿಯವರ ಹೆಸರು ಈ ಗಡಿಯಾರದ ಮೇಲೆ ಇರುವುದು ಕಳುಹಿಸು ಮತ್ತು ವಾರಂಟಿ ಕೊಡುವರು ಇದನ್ನು ಕೆಲವು ದಿವಸಗಳಲ್ಲಿ ಯಾರೂ ಸರಕಸ್ಥರು ಅಧಿಕಾರಿಗಳಿಂದ ಪಡೆಯಬಹುದಾಗಿದೆ ಇದು ಇತರ ಅಲ್ಪಕ್ರಯದ ಗಡಿಯಾರಗಳ ಹಾಗಲ್ಲ ಇದಕ್ಕೆ 6 ವರುಷ ವಾರಂಟಿ ಕೊಡುವರು ಒಳ್ಳೆ ಹೊತ್ತಿಗೆ 1 ನಿಮಿಷ ಸಹ ವ್ಯತ್ಯಾಸವಿಲ್ಲದ ನಡೆಯುವದರಿಂದ ರೈಲ್ವೆ ಕಂಪನಿಯವರುಗಳು ಎಲ್ಲರೂ ಉಪಯೋಗಿಸುತ್ತಾರೆ [1-2]



ಸತ್ಯ ಅಂಡ್ ಕೋ, 19 ಜನರಲ್ ಮುತ್ಯಾಲುಪೇಟೆ ಸ್ಟ್ರೀಟ್, ಸಾವುಕಾರಪೇಟೆ, ಮದರಾಸು

ಕೈಗುಣದ ಔಷಧಗಳು

ಜನವರಿ ಮಹೋತ್ಸವಕ್ಕಾಗಿ ಈ ಕೆಳಗಿನ ಔಷಧಿಗಳನ್ನು ಅರ್ಧ ಕ್ರಯಕ್ಕೆ ಕೊಡಲ್ಪಡುತ್ತೆ ಸಿಬ್ಬಂದಿ ಅಪೀಲುಗಾಗಿ ಮಾತ್ರವೇ

1 ಜೀವಾಮೃತ ಡಬ್ಬಿ 1 ಕ್ಕೆ 0 7 0 ತಲೆನೋವು, ಹೊಟ್ಟೆನೋವು, ನೆಗಡಿ ಚಳಕು ಬಾಧೆ ನರನೋವು ಉಳುಕು ಮೊದಲಾದವುಗಳು ಕ್ಷಣದಲ್ಲಿ ಗುಣವಾಗುತ್ತೆ 2 ಸುಜಕಣಾಮೃತಮು ಡಬ್ಬಿ 1 ಕ್ಕೆ 0 7 0 ತಲೆಕಡಿತದಿಂದ ಕ್ರಮಿಸಹವಾದ ಇದು ರಾಮಬಾಣದಂತೆ ಗುಣವಾಗುತ್ತೆ 3 ದಂತಮಂಜನ ಡಬ್ಬಿ 1 ಕ್ಕೆ 0 4 ಹಲ್ಲುನೋವು, ಬಾಯಿ ರಕ್ತಸ್ರಾವ ಮೊದಲಾದವುಗಳು ತಕ್ಷಣ ಗುಣವಾಗುತ್ತೆ 4 ರೋಮ ಡಬ್ಬಿ 1 ಕ್ಕೆ 0 6 0 ಕೂದಲು ಬೀಳದ ಸ್ಥಳಗಳಲ್ಲಿ ಈ ಪುಡಿಯನ್ನು ಲೇಪಿಸಿ ನಾಲ್ಕೇ ದಿವಸಗಳಲ್ಲಿ ಬುಡಮಟ್ಟ ಉದುರಿಹೋಗುತ್ತೆ ವಿಳಾಸ—

ಒಡೆಯರ್ ಕೆಮಿಕಲ್ ವೈದ್ಯಶಾಲೆ, ಸುಂಗಂಬಾಕಂ, ಮದರಾಸು

ಇದೇ ನಿಜವಾದ ರೈಲ್ವೇ ರೆಗ್ಯುಲೇಟರ್ ಜೇಬುಗಡಿಯಾರ

ಕ್ರಯ ರೂಪಾಯಿ 1-15-0

ನಮ್ಮ ಕಂಪನಿಯು ಪ್ರಸಿದ್ಧಿಯಾಗುವದಕ್ಕಾಗಿ 6 ರೂಪಾಯಿನ ಈ ಗಡಿಯಾರವನ್ನು 500 ಗಡಿಯಾರಗಳು ಮುಗಿಯುವ ವರೆಗೆ ಮಾತ್ರವೇ 1 15 0 ಕ್ಕೆ ಕೊಡಲ್ಪಡುತ್ತೆ ಅದೃಷ್ಟವಂತರುಗಳಲ್ಲದೆ ಮತ್ತಾರಿಗೂ ದೊರೆಯಲಾರದು ನಿಜವಾದ ಮೈದು ಅಲಕ್ಷ್ಯಮಾಡುವವರಿಗೆ ಇದು ನಿಜವಾಗಿ ದೊರೆಯಲಾರದು ಮತ್ತು ರಾಜ್ಯ ನಾಲ್ ಕಂಪನಿಯು ಎರಡು ತಿಂಗಳನ್ನು ಈ ಗಡಿಯಾರದಿಂದೇ ಅಲ್ಲ ಕೋಲ್ಡ್ ಬಗೆಯ ಜಾಗ್ರತೆ ವಹಿಸುವುದು ಕಳುಹಿ ಇದನ್ನು ರೈಲ್ವೆ ನೌಕರರುಗಳ ರುಗಳು ಸಹ ತಕ್ಕದ್ದು ಈ ಗಡಿಯಾರವು ಕೈಲಿ ಅಧಿಕಾರಿಗಳಿಂದ ಹೆಸರುವಾಸಿಯನ್ನು ಪಡೆದಿರುತ್ತೆ ಇತರ ಅಲ್ಪಕ್ರಯದ ಗಡಿಯಾರಗಳ ಹಾಗಲ್ಲ ಇದಕ್ಕೆ 5 ವರುಷಗಳಿಗೆ ವಾರಂಟಿ ಕೊಡುವರು ರೈಲು ಹೊತ್ತಿಗೆ 1 ನಿಮಿಷ ಸಹ ವ್ಯತ್ಯಾಸವಿಲ್ಲದೆ ನಡೆಯುವದರಿಂದ ರೈಲ್ವೆ ಕಂಪನಿ ಯವರುಗಳು ಎಲ್ಲರೂ ಉಪಯೋಗಿಸುತ್ತಾರೆ [1-2]



ವಿಳಾಸ— ಜೆ ಎ ಪಾಲ್ ಕಂಪನಿ ಸುಂಗಂಬಾಕಂ ಮದರಾಸು

ಬಹಳ ಸುಂದರವಾದ ಅಚ್ಚ ಕರೀ ಒಣ್ಣದ ಮಧು ಚುಂಗಡಿ ಅಂಚಿನ ಸೀರೆಗಳು.

ಅಸಲ್ ರಜು ಕ್ರಯ ರೂ 2-6-0

ಇವು ಸುಂದರವಾಗಿಯೂ, ನಾಗರಿಕರಿಗೂ, ಬಡವರಿಗೂ ತಕ್ಕಿರುವ ದರ—ಮುಸ್ಲಿನ್ ಕರಿಯ ಒಣ್ಣದ ಮಧುರೆ ಚುಂಗಡಿ ಸೀರೆಗಳು ಉಡುವುದಕ್ಕೆ ಬಹಳ ಅನುಕೂಲವಾಗಿಯೂ ಸರ್ವರಿಗೂ ಬಾಯ ಗಿರುತ್ತೆ ಕರಿ ... ಬೆಲೆ ಹೆಚ್ಚಾಗಿದೆ ಎನ್ನಾದ ಒಳ್ಳೆ ಬಟ್ಟೆ ರಜಾ ಸ್ವಲ್ಪ ಬದಲಾಯಿಸುತ್ತಿದ್ದೇವೆ ಇವರ ಸರಿಬರುವ ಪ್ರತಿ ವರ್ಣದ ಪ್ರತಿ ಒಂದನ್ನು ಖರೀದಿಮಾಡಿ 18 ಎಳೆಯ ಕಾರ್ಡು ... ನಮ್ಮ ಸೀರೆಯನ್ನು ಪಡೆಯುವವರು ಅದನ್ನು ಬರೆಯಬೇಕು ವಿಳಾಸ—

ಜೆ ಎ ಪಾಲ್ ಕಂಪನಿ, ಸುಂಗಂಬಾಕಂ, ಮದರಾಸು.

ಪರಿಮಳ ದ್ರವ್ಯದ ಪ್ರತಿ

ಬರುವ ... ಅಕ್ಕೆ ... ಈ ಸಲ್ಲಿ ಹಬ್ಬಕ್ಕಾಗಿ ಪರಿಮಳ ದ್ರವ್ಯದ ಪುಡಿ ಇದನ್ನು ... ಸೇರುವ 1 ತೊಲೆ ಪರಿಮಳ ದ್ರವ್ಯ ಡಬ್ಬಿಯಿಂದ ಲಕ್ಷಕ್ಕೆ ಅಡಿಯ ಗ್ರಾಸು ದುಡಿಯ ಉತ್ತಮ ತರುಪಿಸುವಂತೆ ಗಟ್ಟಿಯಾಗಿ ಮಿಸಲ್ಪಟ್ಟಿದೆ ಕ್ರಯ 2 ಆಣೆ ವರ್ತಕರು ಎಲ್ಲರೂ ಯಾರೆ ಜಿಜ್ಞಾಸ ಮಾಡಿ ಅದನ್ನು ಪಡೆಯಲು ಅನುಕೂಲವಾಗುತ್ತೆ ಇದು ಪಲ್ಲಕ್ಕಿ ನಮ್ಮ ಕಂಪನಿ ... ಮಹಾ ದ ಕರಡೆಯೂ ಮೊದಲುಗಳಾದ ಪ್ರಸ್ತುತ ದ ದಿವಸಗಳ ವಿಕರಿಯಾಗುತ್ತದೆ



ಮಾಲು ಉಪಯೋಗಿಸಿದ ಪರಿಮಳ ಪ್ರದ ರ್ಶನ ರಾಜು ಕೆ ಬಿಟ್ಟಯಲ್ಲಿ ಹಾಕಿ ಲಾ 1 ಕ್ಕೆ 1 ಆಣೆಯ ಮಿ ರೆ ಕಳುಹಿಸುತ್ತೆ ... ಇದನ್ನು ... ನಾಗರಿಕರಿಗೆ ಸರಿ ... ಪುಡಿಯು ಎಷ್ಟೋ ಪರಿಮಳಿಸುತ್ತೆ ಈ ಪರಿಮಳ ವನ್ನು ಎಳ ದಿನಸಗಳು ಇಟ್ಟಿದ್ದರೆ ಇದರ ಗುಣ ಹೋಗದು ಮತ್ತು ಕೆಟ್ಟಿಲ್ಲ ಅನೇಕ ಪ್ರಜೆಗಳೂ ದೊಡ್ಡ ಮನುಷ್ಯರೂ ಇದನ್ನು ಕಟ್ಟಿಕೊಂಡು ಎಂದು ಪುಡಿಯಲ್ಲಿ ಇಟ್ಟುಕೊಳ್ಳುತ್ತಾರೆ

ಮದರಾಸು ನಾಚಾ ಸಗ್ಗದ ಪುಡಿ

ಸೇರು ಅಂದರೆ 24 ರೂ ತೂಕಕ್ಕೆ		0 11 0
ಅರ್ಧ ಸೇರು 12 ,,		0 6 0
ಕಾಲು ಸೇರು 6 ,,	,,	0 4 0

ವಿಳಾಸ—

ಸಂಬಾಸಂ ಗಂಧದ್ರವ್ಯವ್ಯಾಪಾರಿ, ಸುಂಗಂಬಾಕಂ, ಮದರಾಸು

Mellin's Food

ಮೆಲ್ಲಿನ್ಸ್ ಆಹಾರವು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಕೈಸೋಕದೆ ತಯಾರಾದದ್ದು.

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲಿ ಬಿಕರಿಯಾಗುತ್ತಲಿವೆ

ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೇಳಿದ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಗಸಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ

[11-3] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H Gulliford Proprietor and Manager Wesleyan Mission Press Mysore — 1/191

REGISTERED
M 30

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. **ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು** ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—ಸೆ ೧೯೧೩ ನೇ ಇಸವಿ ಜನವರಿ ತಾರೀಖು ೩೦.ನೇ ಗುರುವಾರ. ಸಂಚಿಕೆ ೩೫

ಡೋಂಗರೆ ಇವರ ಬಾಲಾಮೃತ.

[115-29]

ಸಣ್ಣ ಮಕ್ಕಳಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದದ ರಿಂದ ಮಕ್ಕಳು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡ ದಿರೋಣ, ಎಲುಬುಗಳು ಕಟ್ಟಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲ ದಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧-೦ ಆಣೆ, ಟಪಾಲ್ ಖರ್ಚು 8 ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಅಮೃತಾಂಜನ. (Regd)

ಇಲ್ಲಿ ವಿಶೇಷ ಲಕ್ಷ್ಯ ಕೊಡಿರಿ! ವಾತ, ಸಂಧಿವಾತ, ತಲೆನೋವು, ಸೊಂಟನೋವು, ಶೀತ, ಕಜ್ಜಿ, ಗಂಟಲು ನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣವಾಗುವವು ಎಲ್ಲಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ ಬಾಟ್ಲಿ 1ಕ್ಕೆ 0-8-0

ಅರ್ಧ ಕ್ರಯಕ್ಕಿಂತಲೂ ಕಡಮೆ

ಹತ್ತು ಲಕ್ಷ ದೂಷ್ಯ ಮಬು ಪೋಸ್ಟು ಕಾರ್ಡುಗಳು ಇವುಗಳು ಚೆಲ್ವಾಗಿಯೂ ನಯವಾಗಿಯೂ ಇವೆ 1,000 ಕ್ಕೆ ಮುಂಚಿನ ಕ್ರಯ ರೂ 2-8-0, ಈಗ 1 ರೂ ... 12 ಆಣೆ 500 ಕ್ಕೆ 8 ಆಣೆ ... ಖರ್ಚು 8 ಆಣೆ

1913 ನೆಯ ವರ್ಷದ ಕ್ಯಾಲೆಂಡರ್ 6 ಬಾಟ್ಲಿ ಅಮೃತಾಂಜನ ತರಿಸಿಕೊಂಡವರಿಗೆ ಪುಗಸಟ್ಟೆಯಾಗಿ ರವಾನಿಸಲ್ಪಡುವದು ಇತರರಿಗೆ ಕ್ಯಾಲೆಂಡರ್ 1ಕ್ಕೆ 1 ಆಣೆ ... ಸಹಿತ [35 19]

ಅಮೃತಾಂಜನ ಡಿಪೋ, ಫೋರ್ಟ್, ಮುಂಬಯಿ.

1913 ನೇ ಪಾಕೆಟ್ ಡೈರಿ

... ವರ್ಷದ ದಿನದ ಸವರಣೆ ... ಬರೆದಿಡುವದಕ್ಕೋಸ್ಕರ ಜೇಬಿನಲ್ಲಿ ಇಟ್ಟುಕೊಳ್ಳುವ ಪುಸ್ತಕ ... ಹಬ್ಬದ ದಿನಗಳು ಸರ್ಕಾರಿ ರಜಾ ದಿನಗಳು ... ರಿಜಿಸ್ಟರು, ಟಪಾಲು ಇವಕ್ಕೆ ಸಂಬಂಧಪಟ್ಟ ಸಾಧಾರಣ ವಿಷಯಗಳು, ಪ್ರಶ್ನೆ ಮುಂತಾದ ಕೆಲವು ಶಾಸ್ತ್ರ ವಿಷಯಗಳು ಜನಸಾಮಾನ್ಯ ತಪ್ಪದೆ ... ಪ್ರತಿ ದಿನವೂ ನೋಡಿಕೊಳ್ಳ ಬೇಕಾದ ವಿಷಯಗಳು ಅಡಗಿವೆ

... 1 ಆಣೆ ... ಕಟ್ಟಿರುವ ... ಮುಚ್ಚಳದ ... ಆಣೆ ...-ಸಾದಾ ದೊಡ್ಡ ಡೈರಿಗೆ 6 ಆಣೆ ... ಮುಚ್ಚಳದ ದೊಡ್ಡ ...

ಜಿನೀವಾ ಡೈರಿ —ಕಾಗದ ದಪ್ಪ, ಪ್ರಿಂಟು ನೂತನ, ಗಾತ್ರ ದೊಡ್ಡದು, ವಿಷಯ ಹೆಚ್ಚು ಉತ್ತಮವಾದ ... ಸಂ 1—ಸಾದಾ ... ಆಣೆ ... ಒಂದಾಣೆ ... ಕಟ್ಟಿಯುಳ್ಳ ಮುಚ್ಚಳದ ಡೈರಿಗೆ ... ಟಪಾಲು ಹಾಸಲು ... ಒಂದೇ ನಮೂನೆಯಲ್ಲಿ ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಬಹುಮಾನವಾಗಿ ಕಳುಹಿಸುತ್ತೇವೆ

ನಮ್ಮ ಪುಸ್ತಕಗಳ ವಿವರ ಕ್ರಯಪಟ್ಟಿ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ

[10 4]

ನಮ್ಮ ವಿಳಾಸ —ವಿಜಯ ... ಕಂಪನಿ, ಬೆಂಗಳೂರು ಸಿಟಿ

... ಪ್ರಕಟನೆ ಅಲ್ಲ ... ಮಿಂಚಿಹೋದ ಮೇಲೆ ಚಿಂತಿಸಬೇಡಿ ...

... ಒಂದು ... ನೋಡಲು ಒಂದು ಪ್ರತಿ ಸಾಕು ಟಪಾಲು ಖರ್ಚು ಇಲ್ಲ ಉತ್ತಮವಾಗಿದ್ದರೆ ಎಲ್ಲರೂ ತರಿಸಿಕೊಳ್ಳಿ

ನಿಮಗೂ, ನಿಮ್ಮ ಬಾಲಕ ಬಾಲಕಿಯರು ಮತ್ತು ಸ್ನೇಹಿತರಿಗೂ ಅತ್ಯಂತ ಉಪಯೋಗವಾದ

ಗಮನಿಸಿ

ENGLISH SELF-INSTRUCTOR.
ಆಂಗ್ಲ ಭಾಷಾ ಪ್ರಕಾಶಕ.

ಗಮನಿಸಿ

... ಸಕಲ ವಿದ್ಯಾ ... ಐದು ಭಾಗಗಳುಳ್ಳ ಇಂಥ ಒಳ್ಳೇ ದೊಡ್ಡ ಪುಸ್ತಕ ಈ ವರೆಗೆ ಪ್ರಕಟವೇ ಇಲ್ಲ

... ಬೇರೆಯವರ ಸಹಾಯವಿಲ್ಲದೆ ಸುಲಭವಾಗಿ ಇಂಗ್ಲೀಷ್ ಕಲಿಯುವ ಪುಸ್ತಕ ಕ್ರಯ ರೂ ೧—೮—೦

ಈ ದೊಡ್ಡ ಪುಸ್ತಕದಲ್ಲಿ ೧ ನೇ ಭಾಗ ೨ ನೇ ಭಾಗ, ೩ ನೇ ಭಾಗ, ೪ ನೇ ಭಾಗ ೫ ನೇ ಭಾಗ ಈ ೫ ಭಾಗಗಳೂ ಅಡಕವಾಗಿವೆ ಬಾಲಕ ಬಾಲಕಿಯರು ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳು ಮತ್ತು ವರ್ತಕರು ಮುಂತಾದವರು ಬೋಧಕರ ಸಹಾಯವಿಲ್ಲದೆ ಓದುವದು, ಬರೆಯುವದು ಮಾತಾಡುವದು ಸುಲಭವಾಗಿ ಕಲಿಯಬಹುದು ಕನ್ನಡ ... ಸಾಕು ಇಂಗ್ಲೀಷ್ ಅಕ್ಷರಾಭ್ಯಾಸ, ಶಬ್ದಸಂಯೋಜನ, ... ವಿವಿಧ ಶಬ್ದಾಭ್ಯಾಸ, ಪಾಠಶಾಲೆಯಲ್ಲಿ ... ಕಲಿಯುವದನ್ನು ವ್ಯಾಕರಣ ಕ್ರಮಗಳು ಮತ್ತು ಅಭ್ಯಾಸಗಳು, ಇಂಗ್ಲೀಷ್ ಭಾಷೆಯಲ್ಲಿ ಬಗೆಬಗೆಯಾದ ವಾಕ್ಯಗಳನ್ನು ಮಾಡುವ ಕ್ರಮ ಮತ್ತು ನೂರಾರು ... ಸರ್ವವಿಷಯಗಳನ್ನು ಕುರಿತು ಪ್ರಶ್ನೋತ್ತರ ಸಂಭಾಷಣೆಗಳು ... ಪ್ರಪಂಚದ ಸರ್ವವಿಷಯಗಳನ್ನು ಕುರಿತು ಸಂಭಾಷಣೆ ಮಾಡುವಾಗ ಬೇಕಾಗುವ ... ವಿಷಯಕ್ಕೆ ತಕ್ಕ ಇಂಗ್ಲೀಷ್ ಕನ್ನಡ, ಕನ್ನಡ ಇಂಗ್ಲೀಷ್ ಶಬ್ದಕೋಶ (ಡಿಕ್ಷನರಿ) ಭಾಷಾಜ್ಞಾನ ಮತ್ತು ಅರ್ಥಜ್ಞಾನಕ್ಕೆ ತಕ್ಕ ಅಭ್ಯಾಸಗಳು, ಕನ್ನಡ ... ಸರಿಯಾದ ಇಂಗ್ಲೀಷ್ ... ಪತ್ರವ್ಯವಹಾರದಲ್ಲಿ ಉಪಯೋಗಿಸುವ ... ಶಬ್ದಗಳು ಕ್ಷೇಮಸಮಾಚಾರ, ... ಮುಂತಾದ ವಿಷಯ ... ಕುರಿತು ... ಮತ್ತು ... ಕಾಗದಪತ್ರಗಳನ್ನು ಬರೆಯುವ ಅನೇಕ ಕ್ರಮಗಳು ಮತ್ತು ನಮೂನೆಗಳು, ಇವುಗಳಿಗೆ ಸ್ಫುಟವಾದ ಕನ್ನಡ ಅಕ್ಷರದಲ್ಲಿ ... ಮತ್ತು ಅರ್ಥ ... ಈ ಪುಸ್ತಕ ನಮ್ಮಲ್ಲಿ ಮಾತ್ರ ದೊರೆಯುತ್ತೆ ಕೆಲವು ಪ್ರತಿಗಳು ಮಾತ್ರ ಉಳಿದಿವೆ ತ್ವರೆಮಾಡಿ [17 2]

ವಿಳಾಸ:—ಎ. ವಿ. ರಾಯಲು, ಬಾಲಕೃಷ್ಣ ಬುಕ್ ಡಿಪೋ, ಜೋಡಿಪೇಟೆ, ಬೆಂಗಳೂರು ಸಿಟಿ.

"ವೃತ್ತಾಂತ ಪತ್ರಿಕೆ" ಕ್ಯಾಲೆಂಡರು.

ಮುಂದೆ ಫೆಬ್ರವರಿ ತಿಂಗಳಲ್ಲಿ ಚಂದಾ ಕಟ್ಟಿ ವೃತ್ತಾಂತ ಪತ್ರಿಕೆ ಚಂದಾದಾರರಾಗುವವರಿಗೆ 1913 ನೇ ಇಸವಿ ಕ್ಯಾಲೆಂಡರನ್ನು ಉಚಿತವಾಗಿ ಕೊಡುವೆವು. ಈ ಕ್ಯಾಲೆಂಡರಿನಲ್ಲಿ ಗುಬ್ಬಿಯಲ್ಲಿರುವ ಬಾಲಿಕಾ ಪಾಠಶಾಲೆಯು, ಬೆಂಗಳೂರಿನಲ್ಲಿರುವ ನಾರ್ಮಲ್ ಸ್ಕೂಲಿನ, ಲಂಬಾಣಿಗರ ... ಸ್ಪೆನ್ಸರ್ ... ಲ್ಲಿರುವ ... ಮತ್ತು ಮೈಸೂರು ವೆಸ್ಲಿಯನ್ ಮಿಷನ್ ಪ್ರೆಸ್ಸಿನ ಚಿತ್ರಗಳು ಬಹಳ ಸೊಗಸಾಗಿ ಅಚ್ಚಾಗಿರುತ್ತವೆ ಕೆಲವೇ ಉಳಿದಿವೆ.

ವಿಳಾಸ —ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಪ್ರಾಕೃತಿಕ ಭೂಗೋಳದ ನೋಟ್ಸ್.

27 1

ಸ್ಕೂಲ್ ಮಾಸ್ತರುಗಳು ಮತ್ತು ವಿದ್ಯಾರ್ಥಿಗಳಲ್ಲಿ ವಿಜ್ಞಾಪನೆ —ತಾವುಗಳು ಸ್ವಲ್ಪ ಕಾಲದಲ್ಲಿಯೇ ಬೇಗಾಗಿ ಆರ್ಡರುಗಳನ್ನು ಕಳುಹಿಸಿ ನನ್ನನ್ನು ಪ್ರೋತ್ಸಾಹಿಸಿರುವದಕ್ಕಾಗಿ ಬಹಳ ಕೃತಜ್ಞನಾಗಿರುತ್ತೇನೆ ಈ ಪುಸ್ತಕವು ಅನೇಕ ಸರ್ಟಿಗಳನ್ನೊಳಗೊಂಡಿರುತ್ತದೆ ಮತ್ತು ಅನೇಕ ಪ್ರಶ್ನೆಗಳಿಗೆ ಉತ್ತರಗಳು ಬರೆಯಲ್ಪಟ್ಟಿರುವದರಿಂದ ಈಗಿನ ಪರೀಕ್ಷಾ ಪ್ರಶ್ನೆ ಪತ್ರಿಕೆಗಳಿಗೆ ಉತ್ತರಗಳನ್ನು ಬರೆಯಲು ತುಂಬಾ ಸಹಕಾರಿಯಾಗಿರುತ್ತೆ ಫೆಬ್ರವರಿ ... ಸಿದ್ಧವಾಗುವದು ಸ್ವಲ್ಪ ಪ್ರತಿಗಳು ಮಾತ್ರ ಪ್ರಿಂಟಾಗುವದರಿಂದ ಆರ್ಡರುಗಳಿಗೆ ಮೊದಲು ಕಳುಹಿಸಲ್ಪಡುವವು ಕ್ರಯ 1 ಆಣೆ 6 ಪೈ ವಿಳಾಸ—ಎಂ ಪಿ ಲಿಂಗಪ್ಪಯ್ಯ, ಹೆಡ್ ಮಾಸ್ಟರ್, ... ಸ್ಕೂಲ್, ಇಟ್ಟಿಗೆಗೂಡು, ಮೈಸೂರು

ಬ್ರ॥ ಶ್ರೀ॥ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳವರಿಂದ ಬರೆಯಲ್ಪಟ್ಟ "ಜೈಮಿನಿ ಭಾವಪ್ರಕಾಶ" ಎಂಬ ಟೀಕಾತಾತ್ಪರ್ಯಸಹಿತವಾದ

ಕರ್ಣಾಟಕ
ಜೈಮಿನಿ ಭಾರತವು

ಶುದ್ಧ ಪ್ರತಿ, ಉತ್ತಮ ಕಾಗದ ಇದು ಪದ್ಯ ಪ್ರತಿಪದಾರ್ಥ, ತಾತ್ಪರ್ಯ ಅನ್ವಯಾರ್ಥ ... ಅಲಂಕಾರ, ... ಪಾಠಗಳಿಂದೊಡಗೂಡಿ ... ಮೊದಲು ನಾಡಿನ ... ಅನುಕೂಲವಾಗಿದೆ ... ಕವಿಯ ಜೈಮಿನಿ ಭಾರತವು ಪದಲಾಲಿತ್ಯ, ... ಮಾಧುರ್ಯ, ... ಸರಸತೆ, ಅರ್ಥಗಾಂಭೀರ್ಯ, ... ಅಲಂಕಾರ, ... ಮುಂತಾದವುಗಳಿಂದೊಡಗೂಡಿ ... ಸಮಿಳಿತವಾಗಿರುವುದರಿಂದ ಕನ್ನಡ ಸಾಹಿತ್ಯಕ್ಕೆ ಗೌರವವಾಗಿರುವುದರಿಂದ ... ಅನಾವಶ್ಯಕ ... ಇದನ್ನು ಅಚ್ಚುಹಾಕಿಸುವದರಲ್ಲಿಯೂ ಪಂಡಿತರ ಸಹಾಯವನ್ನು ಹೊಂದಿದ್ದರಿಂದ ವಾಗಿ ಇದರಲ್ಲಿ ದೋಷಗಳೇ ಇಲ್ಲ ಸಂಪೂರ್ಣವಾಗಿ ಅಂದರೆ 34 ಸಂಧಿಗಳನ್ನೊಳಗೊಂಡ 9?0 ಪುಟಗಳುಳ್ಳ ದೊಡ್ಡ ಸೈಜು, ಫುಲ್ ಕ್ಯಾಲಿಕೋ ಬೈಂಡ್ ಪ್ರತಿ 1 ಕ್ಕೆ 4 ರೂಪಾಯಿ ಟಪಾಲ್ ಹಾಸಲು 6 ಆಣೆ

ವೇ॥ ಲಕ್ಕೂರು ಸುಬ್ಬರಾಮಾಚಾರ್ಯರಿಂದ ಬರೆಯಲ್ಪಟ್ಟ ಸಟೀಕಾ

ಹರಿಕಥಾಮೃತಸಾರ.

ಶುದ್ಧ ಪ್ರತಿ, ಉತ್ತಮ ಕಾಗದ, ಹೊಸ ಪುಸ್ತಕ, 341 ಪುಟ, 32 ಸಂಧಿ ಈ ಗ್ರಂಥವು ಭಗವದ್ಭಕ್ತರಾದ ಜಗನ್ನಾಥದಾಸರಿಂದ ಭಾಮಿನೀಷಟ್ಪದಿ ರೂಪದಿಂದ ರಚಿಸಲ್ಪಟ್ಟಿರುವದು ಸರ್ವರಿಗೂ ವೇದ್ಯವೇ ಇದೆ ಇದರಲ್ಲಿ ಕೇವಲವಾಗಿ ಪರಮಾತ್ಮನ ಧ್ಯಾನ ವಿನಹ ಬೇರೆ ವಿಷಯ ಇರಲಾರದು ಇದು ಮುಮುಕ್ಷುಗಳಿಗೆ ಅತ್ಯಂತ ಉಪಯೋಗವಾದದ್ದು ಇದರಲ್ಲಿರುವ 32 ಸಂಧಿಯಲ್ಲಿ ದೇವರ ಧ್ಯಾನ ದೇವರಲ್ಲಿ ಮಾಡತಕ್ಕ ಭಕ್ತಿ, ಆ ಭಕ್ತಿಯನ್ನು ಹ್ಯಾಗೆ ಮಾಡುವದು ಅದನ್ನು ಯಾರ್ಯಾರು ಮಾಡಿದರು, ಅವರಿಗೆ ಹ್ಯಾಗೆ ಮೋಕ್ಷವಾಯಿತು ಎಂಬೀ ವಿಷಯಗಳು ಸ್ಪಷ್ಟವಾಗಿ ಬರೆಯಲ್ಪಟ್ಟಿವೆ ಪ್ರತಿ ಒಂದು ಸಂಧಿಯಲ್ಲಿರುವ ಪ್ರತಿ ... ಕ್ಕೆ ಸರಿಯಾದ ತಾತ್ಪರ್ಯವು ಅನೇಕ ಪುರಾಣ ವೇದಶಾಸ್ತ್ರಗಳ ಆನುಕೂಲ್ಯ ... ಬರೆಯಲ್ಪಟ್ಟಿವೆ ಇದನ್ನು ... ಮಾಡತಕ್ಕವರಿಗೆ ... ಅನುಸಾರವಾದ ಶಾಸ್ತ್ರಪ್ರಮಾಣ ಅಲ್ಲೇ ಸೂಚಿಸಿದೆ ಇದು ಸರ್ವರಿಗೂ ಅತ್ಯವಶ್ಯಕವಾದದ್ದು ಮೋಕ್ಷಮಾರ್ಗಕ್ಕೆ ಅತ್ಯಂತ ಸಹಾಯವಾದದ್ದು ಇದನ್ನು ಸರ್ವರೂ ಅವಶ್ಯಕವಾಗಿ ... ಗೀಕರಿಸತಕ್ಕದ್ದು ಸುಂದರವಾದ ಅಕ್ಷರದಿಂದ ಕೂಡಿದ್ದು ಅಪೇಕ್ಷೆಯುಳ್ಳವರು ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಅತಿ ಸುಂದರವಾದ ಬೈಂಡ್ ಪ್ರತಿ ರೂ 1ಕ್ಕೆ 1 4 0 ಟಪಾಲ್ ಹಾಸಲು ? ಆಣೆ [15 1]

ಜೈಮಿನಿ ಭಾರತವನ್ನು ತರಿಸಿಕೊಂಡವರಿಗೆ 12 ಆಣೆ ಕ್ರಯ ಬಾಳುವ ಚಾರ್ ದರ್ವೇಶ್ ಎಂಬ 4 ಜನ ಫಕೀರರ ಕಥೆ ಮುಫತ್ತಾಗಿ ದೊರೆಯುತ್ತೆ ಸಟೀಕಾ ಹರಿಕಥಾಮೃತಸಾರ ತರಿಸಿಕೊಂಡವರಿಗೆ ... 1 ನೇ ಭಾಗ ಜನಾರ್ದನತಂತ್ರ, 2 ನೇ ಭಾಗ ... ಎಂಬ ಕಥೆಯು ... ದೊರೆಯುತ್ತೆ ಮತ್ತು ನಮ್ಮಲ್ಲಿ ಅನೇಕ ಪುಸ್ತಕಗಳು ದೊರೆಯುವು ...

ಟಿ ... ಕೃಷ್ಣಯ್ಯಶೆಟ್ಟಿ ... ಬೆಂಗಳೂರು ಸಿಟಿ.

ಇದೇ ನಿಜವಾದ ರೈಲ್ವೆ ರೆಗ್ಯುಲೇಟರೆಂಬ ಜೇಬು ಗಡಿಯಾರ!

ಕ್ರಿಸ್‌ಮಸ್ ಹಬ್ಬಕ್ಕೋಸ್ಕರ ಈ ಸ್ವಲ್ಪ ಬೆಲೆಗೆ ಕೊಡಲ್ಪಡುತ್ತೆ

ನಮ್ಮ ಕಂಪನಿಯು ಪ್ರಸಿದ್ಧಿಯಾಗುವದಕ್ಕಾಗಿ 8 ರೂಪಾಯಿನ ಈ ಗಡಿಯಾರವನ್ನು 800 ಗಡಿಯಾರಗಳು ಮುಗಿಯುವ ವರಿಗೆ ಮಾತ್ರ ರೂ. 1-13-0 ಗೆ



ಕೊಡಲ್ಪಡುತ್ತೆ. ಅದೃಷ್ಟವಂತರುಗಳಲ್ಲವೆ ಮತ್ತಾರಿಗೂ ದೊರೆಯಲಾರದು. ಮೋಸವೆಂದು ತಿಳಿದು ಆಲಸ್ಯಮಾಡುವವರಿಗೆ ಈ ಗಡಿಯಾರ ನಿಜವಾಗಿ ದೊರೆಯಲಾರದು. ಪತ್ರ ಕಂಪನಿಯವರ ನಿಜಸ್ಥಿತಿ ಈ ಗಡಿಯಾರದಿಂದಲೇ ತಿಳಿದುಕೊಳ್ಳಬಹುದು. ಜಾಗ್ರತೆ ದರಖಾಸ್ತು ಕಳುಹಿಸಿ. ಇದನ್ನು ರೈಲ್ವೆ ಉದ್ಯೋಗಸ್ಥರು ಧರಿಸತಕ್ಕದ್ದು. ಈ ಗಡಿಯಾರವು ರೈಲ್ವೆ ಅಧಿಕಾರಿಗಳಿಂದ ಹೆಸರುವಾಸಿಯನ್ನು ಪಡೆದು ಇರುತ್ತೆ. ಇದು ಇತರ ಅಲ್ಪಕ್ರಯದ ಗಡಿಯಾರಗಳ ಹಾಗಲ್ಲ. ಇದಕ್ಕೆ 6 ವರುಷ ನಾವು ಜವಾಬುದಾರರು. ರೈಲ್ ಹೊತ್ತಿಗೆ 1 ನಿಮಿಷ ಸಹ ವ್ಯತ್ಯಾಸವಿಲ್ಲದೆ ನಡೆಯುವದರಿಂದಲೇ ರೈಲ್ವೆ ಕಂಪನಿಯವರುಗಳು ಎಲ್ಲರೂ ಉಪಯೋಗಿಸುತ್ತಾರೆ. [6 1]

ಪತ್ರ ಬಂದ್ ಕೋ, 10 ಒನರಲ್

ಮುನ್ಸಿಪಾಲಿಟಿ [illegible], ಶಾಪಕಾರರಸ್ಟ್ರೀಟ್, ಮದರಾಸು

ಪ್ರಸಿದ್ಧಪತ್ರಿಕೆ

[illegible] ಬೆಂಗಳೂರು [illegible] ಮದ್ರಾಸು, [illegible], ಸುರಾಬ, [illegible] ಮತ್ತು ಕನ್ನಡ ದಾಸವಾರಿಕೆಯು



[illegible] [176 9]

[illegible]

CHAMBERLAIN'S PAIN BALM.

ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವು



ಚಿನ್ನೆಲುಬಿನ ನೋವು, ಕೀಲುಗಳಲ್ಲಿ ಆಗುವ ನೋವು, [illegible] ನೋವು, ತಲೆನೋವು, [illegible] ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ಗುಣಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕೆಂಪಾಗಿ [illegible] ಇರುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೆಲ್ಲಾ [illegible] ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ [illegible] ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. [illegible] ಉಜ್ಜುತ್ತಾ ಬಂದರೆ ಈ ವಾಯುವಿನ ಬುಡ್ಡನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದರೇನೂ ಚಿಲ್ಲ

ಇದು ಎಲ್ಲೆಲ್ಲೂ ವಿಕ್ರಯವಾಗುವದು   ಸಣ್ಣ ಸೀಸೆಗೆ ೧ ರೂಪಾಯಿ   ದೊಡ್ಡ ಸೀಸೆಗೆ ೨ ರೂಪಾಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹಸಿದ [illegible], ಚಿನ್ನದ [illegible], ಉತ್ತಮವಾದ ಕಸ್ತೂರಿ ಮೊದಲಾದ [illegible]

[illegible] ಕೆಮ್ಮು, [illegible] ಒಳ್ಳೆ ರಕ್ತವರ್ಧಕಗಳಾಗಿದೆ. 120 ಮಾತ್ರೆಗಳ ಕುಪ್ಪಿಗೆ 1 ರೂ [illegible] [1 2]

೨ ವೈಶ್ವಾನರಾಸವ (ಕಾಲರಾ ಔಷಧ)

[illegible]

ಅನುಪಾನ ಪತ್ರವು ವಿಷಯವಾದನೆ [illegible] ಬೆಲೆ ರೂ 1 [illegible]

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.   ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಕನ್ನಡ ಪುಸ್ತಕಗಳು.

[illegible] ಭಾಸುಮತಿ [illegible]

[187 9]   ನಮ್ಮ ವಿಳಾಸ—ಚಂದ್ರಿಕಾ ಬುಕ್ ಡಿಪೋ, ಮೈಸೂರು

ರಾಸ್‌ಕೋಪ್ ಸಿಸ್ಟಂ ಲೀವರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ



ಈ ಗಡಿಯಾರವು ಬಲವಾದ [illegible] ತಯಾರುಮಾಡಲ್ಪಟ್ಟದ್ದು. [illegible] [2 1]

ಮುಖ್ಯವಾಗಿ ಗಮನಿಸಿ ಓದಿರಿ

೧ ಬಹುಮಾನ ಸಹಿತ ಗಡಿಯಾರ

ಈ ನಕ್ಷೆಯಲ್ಲಿ ಕಂಡ [illegible] ಲೀವರ್ [illegible] 5 ವರುಷಗಳ ಗ್ಯಾರಂಟಿ [illegible] ಗಡಿಯಾರ [illegible] ಚರ್ಮದ ಪಟ್ಟಿ ಸಹಿತ ಕ್ರಯ ರೂ 1-12 0 ಇದನ್ನು [illegible] 10 [illegible] ಒಂದನ್ನು [illegible] ಕೊಡಲ್ಪಡುತ್ತೆ

ವಿಳಾಸ —ಸುಪೀರಿಯರ್ ವಾಚ್ ಕಂಪನಿ,

ಪೋಸ್ಟ್ ಬಾಕ್ಸ್ ನಂ 167, ಮದರಾಸು

ಸೊಗಸಾದ ಕನ್ನಡ ಪುಸ್ತಕಗಳು.

ಉನ್ಮತ್ತೆ —[illegible] ಬಂಗಾಳಿ ನಾವೆಲ್ [illegible] ಸಿರಾಜನ [illegible] ಉನ್ಮತ್ತೆಯು [illegible] ಇತ್ಯಾದಿ **ಉತ್ತಮ** —[illegible] **ಜಪಾನಿನ ಸಾಮ್ರಾಜ್ಯ** —[illegible] ಸುಂದರ ಚಿತ್ರವುಂಟು [1 0]

ವಿಳಾಸ - ಎ ಕೃಷ್ಣಶಾಸ್ತ್ರಿ, [illegible], ಮೈಸೂರು

ರಾಜಗ್ರಾಂ [illegible] ಗೊಬ್ಬರದ ಕಾರ್ಖಾನೆ (ಲಿಮಿಟೆಡ್), ರಾಣಿಪೇಟೆ

ಮೇಲ್ ಎಜೆಂಟ್ ಅಧಿಕಾರಿಗಳು—ಪ್ಯಾರಿ ಅಂಡ್ ಕಂಪನಿ, ಮದರಾಸ್

ಪ್ರಕಟನೆ

ಇದರಿಂದ ತಿಳಿಯಪಡಿಸುವದೇನೆಂದರೆ, [illegible] ಗೊಬ್ಬರವನ್ನು [illegible] ಗೊಬ್ಬರಗಳು [illegible] ಉಪಯೋಗಿಸುವ [illegible] ಕಳುಹಿಸಲ್ಪಡುವದು [10 2]

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-5

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು [illegible] ತಯಾರಾದವು. ಎಲ್ಲಿಂದ ಇತರ ಕಡೆಗಳಿಗೆಲ್ಲಾ ಸರಬರಾಜಾದವು [illegible] ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ [illegible] ಟೋಪಿಗಳ ಮಾರಾಟ [illegible] ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಮುಖ್ಯವಾಗಿ ನಾವೇ [illegible] ಚೆನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕ [illegible] ಆರಿಸಿ ಕಳುಹಿಸುತ್ತೇವೆ

ಒಳ್ಳೆಯವು, ಚೆನ್ನಾಗಿ ಹೆಣೆದ, ಬಹಳ ಬಾಳಿಕೆಯುಳ್ಳ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚೆನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ; ೧ ರೂ ೬ ಆ., ೧ ರೂ. ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧—೮, ರೂ ೧—೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಪಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ. ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೊಡಗಿನ ಟೋಪಿ, ಪೂರ್ತಿ ಮೋಜೋಡು, ಅರ್ಧ ಮೋಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಕುಂತಲಾನಂದ ತೈಲವು

147 10

ಹಿಂದುಸ್ಥಾನದ ಎಲ್ಲಾ ಪ್ರದರ್ಶನಗಳಲ್ಲಿ ಮೂರು ಬಿರುದಿನ ಪತಕ ಗಳನ್ನೂ ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತ

ಮಾನ ಪತ್ರಿಕೆಗಳೂ ಅನೇಕಾನೇಕ ಪ್ರಸಿದ್ಧ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತಿರೆಯಾಗಿಯೂ ಬೆಳೆಯಿಸಿ ತಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಶೀತ [illegible] ಆಗಿದ್ದ ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಪ್ರತಿ ಬಾಟ್ಲಿಗೆ 1 ರೂಪಾಯಿ 1 ಬಾಟಲಿಗೆ ಅಂಚೆ 10 ಆಣೆ [illegible] ನಮ್ಮ ಪೂರ್ತ ಕನ್ನಡ ಕ್ಯಾಟಲಾಗ್ ನೋಡಿರಿ

ಕ್ಯಾಪ್ಟನ್ ಬಿ ಎಸ್ ನಾಥ ಮತ್ತು ಕಂಪನಿ,

ಪೇಪರಿ, ಮದರಾಸ್

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ

ಕೆಳ ಎಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮನಸನ್ನೂ ಹಾಳುಮಾಡಿಕೊಳ್ಳದಿರಿ

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು

ವರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

[illegible] ನೂ ಸಂಪನ್ನವಾದ ಮತ್ತು ವಿಪುಲವಾದ ಕೇಶರಾಶಿ [illegible] ಮುಖದಲ್ಲಿ [illegible] ಯಾವ ಆಕ್ಷರಿಯಿಂದ [illegible] ಪುಸ್ತಕರೂಪವಾಗಿಯೂ [illegible]

ಕಾಮಿನಿಯಾ ತೈಲವು."

(ರಜಿಸ್ಟರ್ಡ್)

[illegible] ತಕ್ಕವಾದ ಪ್ರೋತ್ಸಾಹ ಹಿಂದಿನ ಪುರಾತನ ಕಾಲದ ಸುಂದರವಾದ ಕೇಶವಾಮುಕ್ತ [illegible] ಮಹತ್ವ [illegible] ಮಹತ್ವಕ್ಕೆ ಉತ್ತಮವಾದ [illegible] ಕೂದಲುಗಳು [illegible] ತಿಳಿಯುವವು

ಕಾಮಿನಿಯಾ ತೈಲ—ಇದು ಕೂದಲುಗಳನ್ನು ಚಂದಗೆಯು [illegible] ಮೊದಲನೆಯದು ಮತ್ತು ಅದು [illegible], ಕೂದಲುಗಳು ಹಾಗೂ ಇರಲಿ ಪ್ರತಿಯೊಬ್ಬ ಸ್ತ್ರೀಯೂ ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು ಇದರಿಂದ ಕೂದಲುಗಳು [illegible] ಅಂದರೆ ಈಗ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ನಾನಾ ಆಕ್ಷಿಂಗಳಿಂದ [illegible] ಕಳೆಯುತ್ತದೆ

ಕಾಮಿನಿಯಾ ತೈಲದಿಂದ ಕೂದಲು [illegible] ವೃದ್ಧಿಯಾಗುತ್ತವೆ, [illegible] ಬೆಳೆಯುತ್ತವೆ ಮತ್ತು [illegible] ಹರಿದು ಬಿದ್ದು ಹೋಗದೆ ಪಟ್ಟವಾಗಿ [illegible]

[illegible] 1 [illegible] ಅಂಚೆಯ ವೆಚ್ಚ 0-10 [illegible]

3 [illegible] 2 1 0 0 ಅಂಚೆಯ ವೆಚ್ಚ 0 7 0

[illegible] ಆರ್ಡರ್‌ಗೆ ಚೀಟನ್ನು ಕಳುಹಿ

ಕಾಮಿನಿಯಾ ತೈಲದ ಕುರಿತು ಹಲವು ಮಹನೀಯರು ಎರೆದ ಪ್ರಮಾಣ ಪತ್ರ ಕೆಲವನ್ನು ಇಲ್ಲಿ ಕೊಡುವೆವು —

23-7-11 [illegible] ನಾದಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ—[illegible] "ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿ [illegible] ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿ ಮತ್ತು ಇದಕ್ಕೆ ಸರಿಸಮಾನವಾದ ಹೇರ್ ಓಯಿಲ್ ಬೇರೆ ಇಲ್ಲ ಎಂದು ಅಭಿಮತವಿರುವದು

[illegible] ಆರ್ [illegible] (ಬರ್ಮಾ)—ನನ್ನ [illegible] ಕಾಮಿನಿಯಾ ತೈಲ ಸಮ್ಯಗ್ರೂಪವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದ [illegible] ಗಳನ್ನು ತ್ವರಿತದಿಂದ ವಿ ಪಿ ಮೂಲಕ ರವಾನಿಸತಕ್ಕದ್ದು

ಸುಗಂಧದ್ರವ್ಯಗಳು

ಗುಲ್-ಷಾನ್ (ರಿಜಿಡ್)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಶ್ರೇಷ್ಠವಾದದ್ದು, ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ [illegible] ಪಂಡಿತರು ಹೇಳಿದಾರೆ ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮವಾದ ಸುವಾಸನೆಯನ್ನುಳ್ಳದ್ದು ಕ್ರಯ ಡ್ರಾಂ ಸೀಸೆಗೆ ರೂ 1-8-0

ದಿಲ್-ಬಹಾರ್ (ರಿಜಿಡ್)—ಅತ್ಯಂತ ಅಪೂರ್ವವಾದ ಜಾಜಿ [illegible] ಅಮೋಘವಾದ ಸುಗಂಧ ಡ್ರಾಂ ಸೀಸೆಗೆ ರೂ 1-8-0

ಕಾಮಿನಿಯಾ ಸುತಾಗಿ "—ರೂ 1-4-0, "ಕಾಮಿನಿಯಾಮಾಲತಿ "—ರೂ 1

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲೇ ಬರೆಯಬೇಕು

ವಿಳಾಸ — [8-5]

ಆಂಗ್ಲೋ-ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

"[illegible] ಸಿವಾಟಿ ಕೊಳ್ಳುತ್ತೇನೆ [illegible] ಹೇಳು"

[illegible] ನೆಗಡಿ [illegible] ಕೊಳ್ಳುವನೆಂದು ಹೇಳು [illegible] ಕೆಮ್ಮು, ಉಬ್ಬಸ, [illegible] ಮೊದಲಾದ ಕಾರಣದಿಂದ ಮಟ್ಟುಬಾಧೆ ಪಡಾಗಿ, ಉಬ್ಬಸ, [illegible] ಗಾರೆಸ್ಸುವುದು, ಕೆಮ್ಮುಗಳು [illegible] ಕ್ಷಯರೋಗ, ಜಪ್ಪು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನು ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಪಾದಿ [illegible] ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಅಲ್ಪಾಂತರ ಜನರು ಗುಣಹೊಂದಿದ [illegible] ಖಂಡಿತವಾಗಿ ಗುಣವಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ 1 ಅಥವಾ ಹೆಚ್ಚು ಬಾಟ್ಲಿ [illegible] ಪ್ಯಾಕಿಂಗ್ ಪೋಸ್ಟೇಜ್ ಸಹಿತ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು—(1) ಎಸ್ ಪೀಟರ್ಸ್, 37 ವರದಮುತ್ತಿಯಪ್ಪನ್ ಬೀದಿ ಪುದುಪಾಕಂ, ಪೇಪೇರಿ, ಮದರಾಸ್, (2) ಜೆ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಶ್ರೀಮನ್ಮೈಸೂರು ಪ್ರಯೋಗಪಾರಿಜಾತಾನುಸಾರಿ ಆಶ್ವಲಾಯನ ಪೂರ್ವಪ್ರಯೋಗ ಸಸ್ವರ ಮಂತ್ರಸಹಿತ

[illegible]

ಕ್ರಯ ರೂ 2 0 0

ಸನಾತನ ಸೂಕ್ಷ್ಮಧರ್ಮ [illegible] ಕ್ರಯ ರೂ 1 8 0

ವೃತ್ತರತ್ನಾಕರ [illegible] ವೆಂಕಟರಾಮಯ್ಯನವರು [illegible] ಅಂಚೆ 10 ಆಣೆ

ಲೋಕ್ಯತತ್ವಪ್ರಕಾಶಿಕೆ [illegible] ರೂ 1 1 0 ದೇಶಿ ಬೌಂಡಾಗಿ 1-4-0

ಆರೋಗ್ಯಪ್ರಶ್ನೋತ್ತರ [illegible] ರೂ 1 0 0

ಶಾಂತಿರತ್ನಾಕರ [illegible] ಎಲ್ಲಾ ವಿಧ ಶಾಂತಿಯೂ [illegible] ರೂ 2 8 0 [7-1]

[illegible] ವೆಂಕಟರಾಮಯ್ಯ [illegible], ಮೈಸೂರು

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ [illegible] ಸ್ವಸ್ಥವಿಲ್ಲವೆ—ಎಂದರೆ, ನಿನಗೆ ಯಾವ ರೋಗವೇ ಉಂಟಾಗಿರಲಿ ನಿನಗೆ ದಿನಕ್ಕೆ ಒಂದು ಸಾರಿಯಾದರೂ ಮಲಪ್ರವೃತ್ತಿಯಾಗುತ್ತಿದೆಯೋ ಎಂದು ನಿನ್ನನ್ನು ನೀನೇ ಕೇಳಿಕೊ ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು



(೧೨ ಆಣೆ ಬುದ್ಧಿ ಮಡಿಯಾಣ)

ಮಲಬಂಧವೆಂಬುವದರ ಅರ್ಥವಾನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಎಷ್ಟೋ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶದ ರೋಗ ಪಿತ್ತ ಪಿತ್ತಜ್ವರ ಅಜೀರ್ಣ ಅಗ್ನಿಮಾಂದ್ಯ ಗಾಬರಿ, ಅಶಕ್ತಿ, ಎದೆಯು ತಲ್ಲಣಿಸುವುದು ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆನೋವು, ಹಂಗುರ ವ್ಯಾಧಿಗಳು ಇವೇ ಮೊದಲಾದವು ಹೀಗೆಯೇ ಬಿಟ್ಟು ಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನು ಕಲ್ಮಷವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಬಿಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ರೋಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [43 21]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುವಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಎಲ್ಲೆಲ್ಲಾ ದೊರೆಯುವುದು, ಅಥವಾ ಡೋನ್, ಪಿ ಒ ಬಾಕ್ಸ್ ೨೦ ಬೊಂಬಾಯಿ—ಇವರಲ್ಲಿ ದೊರೆಯುವುದು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

10—1—1913 ರಿಂದ 17—1—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	[illegible]
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	14	12	0	0
ಮೈಸೂರು ,,	39	36	10	12
ಕೋಲಾರ್ ,,	11	10	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟ್	1	0	0	0
ಹಾಸನ ,	4	3	0	0
ಚಿತ್ರದುರ್ಗ ,,	0	0	5	2
ಕಡೂರ್ ,,	17	14	0	0
ಶಿವಮೊಗ್ಗ ,	12	22	0	0
ಜುಮ್ಲ	142	97	48	34

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೇ ಹೇಮಂತಋತೌ ಪುಷ್ಯ ಬಹುಳ ದಶಮಿ ಶುಕ್ರವಾರದಿಂದ ಪುಷ್ಯ ಬಹುಳ ಅಮಾವಾಸ್ಯೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಜನವರಿ ಮತ್ತು ಫೆಬ್ರವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಕರ ಮಾಸ ತೇದಿ
31	ಶುಕ್ರ	ದಶಮಿ	5 51	ಅನೂರಾಧ	1 20	19
1	ಶನಿ ‡	ಏಕಾದಶಿ	54 16	ಜ್ಯೇಷ್ಠ	41 18	20
2	ಭಾನು †	ದ್ವಾದಶಿ	[illegible] 14	ಮೂಲ	47 32	21
3	ಸೋಮ *	ತ್ರಯೋದಶಿ	[illegible] 33	ಪೂರ್ವಾ	51 23	22
4	ಮಂಗಳ	ಚತುರ್ದಶಿ	40 0	ಉತ್ತರಾ	56 36	23
	ಬುಧ §	ಚತುರ್ದಶಿ	[illegible] 12	ಶ್ರವಣ	60 0	24
6	ಗುರು	ಅಮಾವಾಸ್ಯೆ	[illegible] 5[illegible]	ಶ್ರವಣ	2 59	25

‡ ಸ್ಮಾರ್ತರ ಶ್ರೀಪತ್ನಿ ಏಕಾದಶಿ

† ವಾಮನ ಏಕಾದಶಿ, ಹರಿವಾಸರ [illegible] ನಕ್ಷತ್ರ ಶ್ರವಣ 1 ನೇ ಪಾದ

* ಸೋಮಪ್ರದೋಷ ಮಾಸಶಿವರಾತ್ರಿ

§ ಸರ್ವತ್ರ ತೈಯ ಅಮಾವಾಸ್ಯೆ ಮಳೆ ನಕ್ಷತ್ರ—ಧನಿಷ್ಠ 1 ನೇ ಪಾದ ಗರುಡವಾಹನ ಪ್ರತಾಪದ [illegible] ದಿನ

ಪೇಟೆ ಧಾರಣೆ

ದಿನಸು	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ (ಹೊಸದು) ರೂ	೧೬ ೦ ೦	೧೭ ೮ ೦
ಕೆಂಪು ಅಕ್ಕಿ ಅವಲ್ ,,	೧೫ ೮ ೦	೧೭ ೨ ೦
,, ದೊಡ್ಡು ,	೧೨ ೦ ೦	೧೭ ೦-೦
ಬಾಸ್ಮತಿ ಅಕ್ಕಿ ,,	೧೪-೦ ೦	೧೭ ೪ ೦
ಸಣ್ಣಕ್ಕಿ ಅವಲ್ ,	೧೬-೦ ೦	೧೭ ೨ ೦
,, ದೊಡ್ಡು ,,	೧೪-೮ ೦	೧೭ ೮ ೦
ತೊಗರಿ ಬೇಳೆ ಅವಲ್ ಪಲ್ಲ ೧ಕ್ಕೆ	೧೩ ೦ ೦	೧೩ ೮-೦
,, ದೊಡ್ಡು ,,	೧೨ ೮-೦	೧೨ ೨ ೦
ಹೆಸರ ರಾಗಿ ಪಲ್ಲಾ ೧ಕ್ಕೆ	೬ ೫ ೦	೫ ೦ ೦
ಜೋಳ ,,	೭ ೦ ೦	೪-೧೨ ೦
ಕೊಬ್ಬರಿ ,,	೬ ೧೨ ೦	೭ ೪-೦
ಕಡಲೆಬೇಳೆ ಪಲ್ಲಾ ೧ಕ್ಕೆ	೧೦ ೧೨ ೦	೧೩ ೧೨ ೦
ಬಿಳಿ ಅವರೆ ,,	೧೦-೦-೦	೧೧ ೦-೦
ಹೆಸರು ,,	೧೧ ೦ ೦	೧೪ ೦ ೦
ಉದ್ದು ,,	೧೩ ೮ ೦	೧೬-೦-೦
ಕಡಲೆ ,,	೧೧ ೦ ೦	೧೨ ೦ ೦
ಎಳ್ಳು ಸೇರು ೧೨೭ಕ್ಕೆ	೨೪ ೦ ೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೬ ೦ ೦	೭ ೦-೦
ಹರಳು ೧೨೭ ಸೇರಿಗೆ	೧೨ ೦ ೦	೧೪-೦-೦
ಸೀಗೆ ಕಾಯಿ ಮಣ ೧ಕ್ಕೆ	೩ ೮-೦	೩ ೮ ೦
ಮೆಣಸಿನಕಾಯಿ ,	೩ ೦ ೦	೩-೪-೦
,, ದೊಡ್ಡು	೨ ೮ ೦	೧ ೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫ ೮-೦	ಮಣ ೫ ೮-೦
ಒಳ್ಳೆಣ್ಣೆ ಮಣ ೧ಕ್ಕೆ	೬ ೨ ೦	೬-೬-೦
ಹರಳೆಣ್ಣೆ ,, ,,	೫ ೪ ೦	೬ ೦ ೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫ ೦-೦	೫ ೪-೦
ಉಪ್ಪು ,, ,,	೫ ೮ ೦	೬ ೦-೦
ಹುಣಿಸೇ ಹಣ್ಣು ಮಣ ೧ಕ್ಕೆ	೧ ೮ ೦	೧-೪-೦
,, ಹಳೇದು ,,	೧ ೦-೦	೦ ೧೪-೦
ತುಪ್ಪ ಮಣ ೧ಕ್ಕೆ	೧೬ ೦-೦	೧೯-೦ ೦
ಸೀಮೆಹಿಟ್ಟು ಚೀಲ ೧ಕ್ಕೆ	೫-೭ ೦	೫ ೦-೦
ತೆಂಗಿನಕಾಯಿ ೧೦೦ಕ್ಕೆ	೬ ೦ ೦	೬-೦-೦
ಅಡಿಕೆಕಾಯಿ ಮಣ ೧ಕ್ಕೆ	೧ ೪ ೦	೧ ೦-೦
ಅಂಟುವಾಳದಕಾಯಿ ಮಣ ೧ಕ್ಕೆ	೦-೧೨ ೦	[illegible] ೧ ೮-೦
ಚಿನ್ನ (ಪೌನ್) ತೊಲ	೧೫ ೮-೦	೧೫ ೮-೦
,, ,, ಪವನು	೧೫ ೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧ ೦-೦	೮೧ ೦ ೦

ವೃತ್ತಾಂತ ಪತ್ರಿಕೆ.

ಸನ್ ೧೯೧೩ ನೇ ಇಸವಿ ಜನವರಿ ತಾ ೩೦ ನೇ ಗುರುವಾರ

ಟರ್ಕಿ ರಾಜ್ಯದ ಸ್ಥಿತಿಯು

ಕಳೆದ ವಾರ ಟರ್ಕಿಗೂ ಬಾಲ್ಕನ್ ಸಂಸ್ಥಾನಗಳಿಗೂ ಬೇಗ ಕರಾರು ನಡೆದು ಯುದ್ಧಪ್ರಮೇಯವು ಕೊನೆಗಾಣುವುದೆಂದು ತೋರಿ ಇದ್ದಿತು, ಆದರೆ ಈ ವಾರದಲ್ಲಿ ಟರ್ಕಿ ರಾಜಧಾನಿಯಾದ ಕಾನ್‌ಸ್ಟಂಟಿನೋಪಲ್ ನಗರದಲ್ಲಿ ನಡೆದಿರುವ ಕಾರ್ಯಗಳನ್ನು ನೋಡಲಾಗಿ ಅವರವರಿಗೆ ಕರಾರು ಆಗುವುದು ಬಹಳ ಕಷ್ಟವೆಂದು ಕಂಡುಬರುತ್ತಿದೆ. ಟರ್ಕಿ ಗವರ್ನ್‌ಮೆಂಟಿನವರು ಪ್ರಜೆಗಳ ಮುಖಂಡರನ್ನು ಕರಸಿ ಅವರ ಸಲಹೆಯನ್ನು ಕೇಳಿದ್ದಕ್ಕೆ ಆ ಸಭೆಯವರೆಲ್ಲಾ ಯುರೋಪಿನ ರಾಜ್ಯಗಳವರು ಸೂಚಿಸಿರುವ ಕರಾರನ್ನು ಒಪ್ಪಿಕೊಳ್ಳುವುದೇ ಸಮಂಜಸವಾಗಿ ಗವರ್ನ್‌ಮೆಂಟಿಗೆ ತಿಳಿಸಿದರು. ಈ ಅಭಿಪ್ರಾಯವು ಹೊರಪಟ್ಟ ಕೂಡಲೇ ಯುದ್ಧವನ್ನು ಮುಂದರಿಸಬೇಕೆಂಬ ಟರ್ಕಿಯವರು ರಾಜಧಾನಿಯ ಸರ್ಕಾರಿ ಆಫೀಸುಗಳ ಬಳಿ ಗುಂಪುಕೂಡಿಕೊಂಡು—ಕ್ಯಾಮಿಲ್ ಪಾಷಾಯವರು ಯುದ್ಧವನ್ನು ನಿಲ್ಲಿಸದೆ ಮುಂದರಿಸಬೇಕು, ಇಲ್ಲದಿದ್ದರೆ ಅವರು ಕೂಡಲೇ ರಾಜೀನಾಮೆಕೊಟ್ಟು ತಮ್ಮ ಮಂತ್ರಿಪದವಿಯನ್ನು ಬಿಟ್ಟುಬಿಡಬೇಕು ಎಂದು ತಿಳಿಸಿದರು. ಪಾಷಾಯವರು ಮಂತ್ರಿಸ್ಥಾನವನ್ನು ಬಿಟ್ಟುಬಿಟ್ಟರು. ಬಳಿಕ ಅಲ್ಲಿ ಸೇರಿದ್ದ ಜನರಲ್ಲಿ [illegible] ಸೈನ್ಯಾಧಿಪತಿಯಾದ ನಾಜಿಂ ಪಾಷಾಯವರೂ ಬೇರೆ ಮೂರು ಜನರೂ ಗುಂಡಿನ ಏಟುಗಳು ಬಿದ್ದು ಕೊಲ್ಲಲ್ಪಟ್ಟರು.

ಈಗ ಟರ್ಕಿಯಲ್ಲಿ ಗವರ್ನ್‌ಮೆಂಟಿನ ಮುಖ್ಯ ಅಧಿಕಾರ ಸ್ಥಾನಗಳಿಗೆ ಹೊಸಬರು ನೇಮಕನಾಗಿದಾರೆ. ಇವರೆಲ್ಲಾ ಕರಾರು ಮಾಡಿಕೊಳ್ಳುವುದಕ್ಕೆ ಇಷ್ಟಪಡತಕ್ಕವರಲ್ಲವೆಂದೂ, ಯುದ್ಧವನ್ನು ಮುಂದರಿಸಿ ನಡೆಸಬೇಕೆಂತಲೇ ಹೇಳತಕ್ಕವರಾಗಿರುವರೆಂದೂ ಕಾಣುತ್ತದೆ. ಏಡ್ರಿಯಾನೋಪಲ್ ಪಟ್ಟಣವನ್ನು ಟರ್ಕಿಯವರು ಬಲ್ಗೇರಿಯಾದವರಿಗೆ ಒಪ್ಪಿಸಿಬಿಡಬೇಕೆಂದು ಯುರೋಪಿನ ರಾಜ್ಯಗಳವರು ಟರ್ಕಿಗೆ ತಿಳಿಸಿ ಬರೆದಿರುತ್ತಾರಷ್ಟೆ. ಟರ್ಕಿಯವರು ಯುದ್ಧವನ್ನು ಪುನಃ ಪ್ರಾರಂಭಿಸುವುದಕ್ಕಿಂತ ಮುಂಚೆ ಯುರೋಪಿಯನ್ ರಾಜ್ಯಗಳವರ ಕಾಗದಕ್ಕೆ ಜವಾಬು ಕೊಡಬೇಕಾಗುವುದು. ಲಂಡನ್ ಪಟ್ಟಣದಲ್ಲಿ ಬಾಲ್ಕನ್ ಸಂಸ್ಥಾನಗಳ ಪ್ರತಿನಿಧಿಗಳು ಟರ್ಕಿ ರಾಜ್ಯದ ಪ್ರತಿನಿಧಿಗಳ ಕೂಡ ಕರಾರಿನ ವಿಷಯಗಳನ್ನು ಕುರಿತು ಚರ್ಚೆಮಾಡುವುದನ್ನು ನಿಲ್ಲಿಸಿಬಿಟ್ಟು, ಟರ್ಕಿ ಗವರ್ನ್‌ಮೆಂಟಿನವರ ಪ್ರತ್ಯುತ್ತರವನ್ನೇ ನಿರೀಕ್ಷಿಸುತ್ತಿದಾರೆ.

ಕರಾರು ಬೇಕಿಲ್ಲವೆಂದೂ ಯುದ್ಧವನ್ನೇ ಮುಂದರಿಸಬೇಕೆಂದೂ ಅನೇಕ ಮುಸಲ್ಮಾನರು ಖಂಡಿತ ಮಾಡಿಕೊಂಡಿರುವಂತೆ ಕಾಣುತ್ತದೆ. ಹಿಂದುಸ್ಥಾನದಲ್ಲಿರುವ ಅನೇಕ ಮಹಮ್ಮದೀಯರ ಅಭಿಮತವೂ ಟರ್ಕಿಯವರು ಯುದ್ಧ ಮಾಡುವುದೇ ಅವಶ್ಯವೆಂದು ಹೇಳುವಂತಿದೆ. ಹೀಗೆ ಒತ್ತಾಯ ಮಾಡುವುದು ಎಷ್ಟು ಮಾತ್ರಕ್ಕೂ ಒಳ್ಳೆಯದಲ್ಲವೆಂದು ನಮಗೆ ತೋರುತ್ತದೆ. ಟರ್ಕಿಯವರು ಸೋತುಹೋಗಿರುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಇಂಥಾದ್ದರಲ್ಲೂ ಅವರು ಕರಾರು ಮಾಡಿಕೊಳ್ಳುವುದನ್ನು ತ್ಯಜಿಸಿ ಯುದ್ಧವನ್ನು ಮುಂದರಿಸುವುದರಿಂದ ಏನು? ಈಗಿನ ಸ್ಥಿತಿಯಲ್ಲಿ ಕರಾರು ನಡೆಯುವುದೇ ಟರ್ಕಿಗೆ ಕ್ಷೇಮ. ಹಾಗಿಲ್ಲದೆ ಟರ್ಕಿಯು ಪತ್ತೆ ಯುದ್ಧವನ್ನೇ ಮುಂದರಿಸುವುದಾದರೆ ಪರರಾಜ್ಯಗಳವರ ಹಿತಚಿಂತನೆಯು ತಪ್ಪಿಹೋದೀತು. ಯಾಕೆಂದರೆ ಬಾಲ್ಕನ್ ಸಂಸ್ಥಾನಗಳು ಕೇಳುವಂತೆ ಟರ್ಕಿಯವರು ಏಡ್ರಿಯಾನೋಪಲ್ ಪಟ್ಟಣವನ್ನು ಅವರಿಗೆ ಒಪ್ಪಿಸಿಬಿಡುವುದೇ ಕ್ಷೇಮಕರವೆಂದು ಗ್ರೇಟ್ ಬ್ರಿಟನ್, ಜರ್ಮನಿ, ಫ್ರಾನ್ಸ್, ರಷ್ಯ, ಆಸ್ಟ್ರಿಯ, ಇಟಲಿ ರಾಜ್ಯಗಳವರು ಒಪ್ಪಿ ಹೇಳುತ್ತಿರುವರು.

ಯುರೋಪಿಯನ್ ರಾಜ್ಯಗಳ ಸ್ನೇಹ ಹಿತಚಿಂತನೆಗಳನ್ನು ಕಳೆದುಕೊಂಡು ಟರ್ಕಿ ಗವರ್ನ್‌ಮೆಂಟಿನವರು ಯುದ್ಧವನ್ನು ಮುಂದರಿಸುವುದಾದರೆ ಈ ಯುದ್ಧದಿಂದ ಟರ್ಕಿಯವರು ಬಹುಶಃ ಯುರೋಪಿನಿಂದ ಹೊರಡಿಸಲ್ಪಡುತ್ತಾರೆಂದೂ, ರಾಜಧಾನಿಯಾದ ಕಾನ್‌ಸ್ಟಂಟಿನೋಪಲನ್ನೂ ಕಳೆದುಕೊಳ್ಳುತ್ತಾರೆಂದೂ ಹೇಳಬೇಕಾಗುತ್ತದೆ. ಈಗಿನ ನಡವಳಿಕೆಯಲ್ಲೇ ಟರ್ಕಿಯವರು ಪರರ ಪ್ರೀತಿವಿಶ್ವಾಸಗಳನ್ನು ಬಹುಮಟ್ಟಿಗೆ ಕಳೆದುಕೊಂಡಿದಾರೆ. ಅವರನ್ನು ಶತ್ರುಗಳು ಯುರೋಪಿನಿಂದ ಹೊರಡಿಸಿಬಿಟ್ಟ ಪಕ್ಷದಲ್ಲಿ ಅವರ ವಿಷಯದಲ್ಲಿ ಯಾರೂ ಪಶ್ಚಾತ್ತಾಪಪಡುವುದಿಲ್ಲವೆಂಬುವುದು ಖಂಡಿತ.

ಹಿಂದುಸ್ಥಾನದ ಮುಸಲ್ಮಾನರು ಟರ್ಕಿಯವರನ್ನು ಯುದ್ಧಕ್ಕೆ ಹುರಿಗಟ್ಟುವ ಮಾರ್ಗವನ್ನು ತ್ಯಜಿಸಿ, ಕರಾರು ಮಾಡಿಕೊಂಡು ನೆಮ್ಮದಿಯಾಗಿ ಬಾಳುವಂತೆ ಟರ್ಕಿಗೆ ವಿವೇಕ ಹೇಳುವವರಾಗಲೆಂದು ನಾವು ಪ್ರಾರ್ಥಿಸುತ್ತೇವೆ. ಪರರನ್ನು ಯುದ್ಧಕ್ಕೆ ಹುರಿಗಟ್ಟಿ ಹೊರಡಿಸುವುದು ಸುಲಭ. ಸ್ವತಃ ಯುದ್ಧಕ್ಕೆ ಹೋಗಿ ರಣರಂಗದಲ್ಲಿ ನಿಂತು ಕಡಿದಾಡಿ ನಷ್ಟ ಸಂಕಟಗಳನ್ನು ಅನುಭವಿಸುವುದು ಪ್ರಯಾಸ. ಇನ್ನಾದರೂ ಟರ್ಕಿಯಲ್ಲೂ ಇತರ ಕಡೆಗಳಲ್ಲೂ ಮುಸಲ್ಮಾನ್ ಮುಖಂಡರಿಗೂ ಪ್ರಜೆಗಳಿಗೂ ವಿವೇಕವಿವೇಚನೆಯುಂಟಾಗಲೆಂದೂ, ಅವರು ಶತ್ರುಗಳ ಕೂಡ ಕರಾರು ಮಾಡಿಕೊಂಡು ಸುಖದಿಂದ ಬಾಳುವಂತಾಗಲೆಂದೂ ಪ್ರಾರ್ಥಿಸುತ್ತೇವೆ.

ದೇವರ ಸಂಗಡ ಅನ್ಯೋನ್ಯವಾಗುವದು ಅಂದರೇನು?

ನಾವು ದೇವರನ್ನು ಪ್ರಾರ್ಥನೆಮಾಡುವದು ಮುಖ್ಯವಾಗಿ ಆತನ ವರಗಳನ್ನು ಹೊಂದುವದಕ್ಕಲ್ಲ. ಆದರೆ ಆತನಿಗೂ ನಮಗೂ ಇರುವ ತಂದೆ ಮಕ್ಕಳ ಸಂಬಂಧವನ್ನು ಅಬಾಧಿತವಾಗಿ ಕಾಪಾಡಿಕೊಳ್ಳುವದಕ್ಕಾಗಿಯೇ ನಾವು ಪ್ರಾರ್ಥನೆಮಾಡುತ್ತಿರಬೇಕೆಂಬುವದು ಸ್ಪಷ್ಟವಾಗಿದೆ. [illegible] ನಮಗೆ ಏನು ಬೇಕಾಗಿದೆಯೆಂದು ನಾವು ಆತನ ಮುಂದೆ ಬಿನ್ನೈಸಿಕೊಳ್ಳುವದಕ್ಕಿಂತ ಮೊದಲೇ ಆತನಿಗೆ ನಮ್ಮ ಕೊರತೆಗಳೆಲ್ಲವೂ [illegible] ವಾಗಿರುತ್ತವೆ. ಮತ್ತು ಇಹಲೋಕದಲ್ಲಿ ತಂದೆಗಳು ತನ್ನ ಮಕ್ಕಳಿಗೆ [illegible] ವಾಗುವವನ್ನು ವರಗಳನ್ನು ಕೊಡುವದು [illegible] ನಮ್ಮ ಪರಲೋಕದ ತಂದೆಯು ಎಷ್ಟೋ ಹೆಚ್ಚಾಗಿ ತನ್ನ ವರಗಳನ್ನು ಕೊಡುವನಲ್ಲವೇ? ಇದೂ ಅಲ್ಲದೆ ಕೆಲವು ಮಕ್ಕಳು ತಮಗೆ ಅನವಶ್ಯಕವಾದ ಅಥವಾ [illegible] ಹಾನಿಕರವಾದ ವರಗಳನ್ನು ಬೇಡುವದುಂಟು. ಅಂತಹ ಸಂದರ್ಭದಲ್ಲಿ [illegible] ಇಲ್ಲದ ಕಲವು ತಂದೆಗಳು ಮಕ್ಕಳು ಬೇಡುವ ವರಗಳನ್ನು ಕೊಟ್ಟು ಅವರ ಹಾನಿಗೆ [illegible]. ನಮ್ಮ ತಂದೆಯಾದ ದೇವರು ತನ್ನ [illegible] ಯಿಂದ ನಮಗೆ [illegible] ತಿಳಿದು ಕೊಡುವನು. [illegible] ನಾವು ಪ್ರಾರ್ಥನೆಯಲ್ಲಿ ಯಾವ ಯಾವ ವರಗಳನ್ನು ಬೇಡಬೇಕು [illegible] ನಮಗೆ ಇರುವ ದಿವ್ಯಸಂಬಂಧವನ್ನು [illegible] ಅಭಿವೃದ್ಧಿಗೊಳಿಸುವ ವರಗಳನ್ನೇ ನಾವು ಬೇಡಬೇಕಾಗಿದೆ. [illegible] ಆತನ ಸಂಗಡ ನಮಗಿರುವ [illegible] ದವನ್ನು [illegible] ಇವುಗಳು ಎಷ್ಟು ಮಟ್ಟಿಗೆ ಆಗತಕ್ಕ[illegible] ಆತನು ತನ್ನ [illegible] ನಮಗೆ ಕೊಡಲಿ. ನಾವು ಇವುಗಳಿಗೋಸ್ಕರವಾಗಿ ಆತನನ್ನು ಕಾಡದೆ, ಆತನು ತನ್ನ ಪವಿತ್ರಾತ್ಮನನ್ನು ನಮ್ಮಲ್ಲಿರಿಸಿ ಆತನ ಸಂಗಡ ನಾವು ಅಚಂಚಲವಾದ ಅನ್ಯೋನ್ಯ ಏಕಮತವನ್ನು ಹೊಂದುವ ಹಾಗೆ ಆತನನ್ನು ಬೇಡುತ್ತಿರಬೇಕು.

ಆದರೆ ಅನ್ಯೋನ್ಯ ಅಥವಾ ಏಕಮತ ಎಂದರೇನು? ಐಕ್ಯ ಅಥವಾ ಏಕತ್ವವು ನಾನಾವಿಧಗಳಾಗಿರುತ್ತದೆ. ಒಂದು ಮನೆಯನ್ನು ನೋಡಿರಿ. ಅದನ್ನು ಕಟ್ಟುವದಕ್ಕೆ ಮಣ್ಣು, ಕಲ್ಲು, ಮರ, ಕಬ್ಬಿಣ ಮುಂತಾದ ವಸ್ತುಗಳನ್ನು ಪ್ರಯೋಗಿಸಿದ್ದಾರೆ. ಬೇರೆ ಬೇರೆ ವಸ್ತುಗಳು ಬೇರೆ ಬೇರೆ ಸ್ವಭಾವ, ಗುಣ, ಲಕ್ಷಣಗಳುಳ್ಳವಾಗಿರುತ್ತವೆ. ಕಬ್ಬಿಣ, ಕಲ್ಲು, ಮರ ಮುಂತಾದವು ವಿವಿಧ ಜಾತಿಯ ವಸ್ತುಗಳು. ಮತ್ತು ಇವುಗಳಲ್ಲಿ ಕೆಲವನ್ನು ನಾವು ಬಯಾಮಿಲ್ಲ [illegible] ಮುಂತಾದ [illegible] ನಮ್ಮ ಮನಸ್ಸಿಗೆ ಒಪ್ಪುವ ನಕ್ಷೆಯನ್ನು ಅನುಸರಿಸಿ ಆ ವಸ್ತುಗಳನ್ನು ಜೋಡಿಸಿದ್ದೇವೆ. ಅವುಗಳಲ್ಲಿ ಕೆಲವನ್ನು ನಾವು ಕಿತ್ತು, ಬೇರೆ ವಿಧವಾದ ರೂಪವುಳ್ಳ ಮನೆಯಾಗಿ ಜೋಡಿಸಿ ಕಟ್ಟಬಹುದು. ಅವುಗಳಲ್ಲಿ ಕೆಲವು ವಸ್ತುಗಳು ನಮಗೆ ಬೇಕಿಲ್ಲವಾಗಿ ತೋರಿಬಂದರೆ ಅವುಗಳನ್ನು ಪ್ರಯೋಗಿಸದೆ ಬಿಡಬಹುದು. ಆದರೆ ಇಷ್ಟೆಂದು ವ್ಯತ್ಯಾಸಕ್ಕೆ ಸಿಕ್ಕುವ ವಸ್ತುಗಳಿಂದ ಕಟ್ಟಿದ ಮನೆಯನ್ನು ನಾವು ನೋಡಿ ಅದು ಒಂದೇ ಮನೆಯೆಂದು ಭಾವಿಸುತ್ತೇವೆ. ಯಾಕೆಂದರೆ ಅದರಲ್ಲಿ ಏಕತ್ವವುಂಟು. ಮತ್ತು ಒಂದು ಮರವನ್ನು ನೋಡಿರಿ. ಅದಕ್ಕೆ ಬೇರುಗಳು, ಬುಡ, ಕೊಂಬೆ, ರೆಂಬೆ, ಎಲೆ, ಹೂ, ಕಾಯಿ ಮೊದಲಾದ ಅನೇಕ ಭಾಗಗಳಿರುತ್ತವೆ. ಆದರೂ ಅದು ಒಂದೇ ಮರವಷ್ಟೆ. ಆದರೆ ಮನೆಯ ರೂಪವನ್ನು ಬದಲಾಯಿಸಿ ಬೇರೆ ರೂಪವಾಗಿ ಕಟ್ಟಬಹುದು. ಈ ಮರದ ರೂಪವನ್ನು ಬದಲಾಯಿಸಿ ಇತ್ತಕಡೆ ಇರುವ ರೆಂಬೆಗಳನ್ನು ಕಡಿದು ಅತ್ತಕಡೆ ಕಟ್ಟಿ ಅತ್ತಕಡೆ ಇರುವವುಗಳನ್ನು ಇತ್ತಕಡೆ ತಂದಿಡುವದಕ್ಕಾಗುವದಿಲ್ಲ. ಇದಲ್ಲದೆ ಮನೆಯ ಒಂದು ಕೋಣೆಯನ್ನು ನಮಗೆ ಬೇಡವೆಂತ ಕಿತ್ತು ಹಾಕಬಹುದು. ಮರದ ಯಾವ ಭಾಗವನ್ನು ಕಿತ್ತು ಹಾಕಿದರೂ ಒಟ್ಟು ಮರಕ್ಕೆ ಹಾನಿಯಾಗುವದು. ಬೇರುಗಳಿಲ್ಲದ ಮರ ಬದುಕುವದಿಲ್ಲವಷ್ಟೆ. ಮತ್ತು ರೆಂಬೆಗಳಿಲ್ಲದ ಬರೀ ಬೇರುಗಳು ಯಾತಕ್ಕೆ? ರೆಂಬೆಗಳನ್ನು ಕಡಿದ ಮರಕ್ಕೆ ಅಲಂಕಾರವಿಲ್ಲ. ರೆಂಬೆಗಳ ಸಹಾಯವಿಲ್ಲದ ಬೇರುಗಳು ಪ್ರಯೋಜನವಿಲ್ಲದವುಗಳಾಗಿಯೂ ಯಾವ ಫಲವನ್ನೂ ಕೊಡಲಾರದವುಗಳಾಗಿಯೂ ಒಣಗಿ ಹೋಗುತ್ತವೆ. ಮರದ ಏಕತ್ವವು ಸ್ವಭಾವವಾದದ್ದು, ಜೀವಕರವಾದದ್ದು, ಬೆಳೆದು ಬೆಳೆದು ಹೆಚ್ಚಾಗುತ್ತಿರುವಂಥಾದ್ದು. ಮರದ ಬೇರೆ ಬೇರೆ ಭಾಗಗಳಲ್ಲಿ ಏಕಮತ್ಯವಿದೆಯೆಂತ ಹೇಳಿದರೂ ಒಪ್ಪುವದು. ಆದರೆ ಇಂಥಾ ಮರದಿಂದ ಕೆಲವು ಬೀಜಗಳು ಉದುರಿ ಅದರಂತಹ ಬೇರೆ ಕೆಲವು ಮರಗಳು ಕೆಲವು ವರುಷಗಳೊಳಗಾಗಿ ಬೆಳೆದು ಒಂದೇ ಜಾತಿಯ ಮರಗಳದೊಂದು ತೋಪು ಆಯಿತೆಂತ ಭಾವಿಸೋಣ. ಆ ತೋಪಿನ ಕೆಲವು ಗಿಡಗಳಿಗೆ ಒಂದು ವಿಧವಾದ ಕೊಳೆರೋಗವು ಅಥವಾ ನುಸಿಯು ಹತ್ತಿ ಒಣಗಿ ಹೋದರೆ ಮೊದಲನೆಯ ಮರಕ್ಕಾದರೂ ಅಥವಾ ಇತರ ಜೊತೆ ಗಿಡಗಳಿಗಾದರೂ ವ್ಯಸನವುಂಟಾಗುವದೋ? ಅಥವಾ ಅವು ಸರ್ಕಾರ ಉಪಚಾರ ಮಾಡುತ್ತವೆಯೋ? ನಾವು ಆ ಮರಗಳನ್ನು ಒಂದೊಂದಾಗಿ ಕಡಿದು ಹಾಕಿದರೂ ಉಳಿದವುಗಳಿಗೆ ಚಿಂತೆಯಾದರೂ ಸಂತಾಪವಾದರೂ ಹುಟ್ಟುವದೋ? ಇಲ್ಲವಷ್ಟೆ. ಆದರೆ ಒಂದು ಕುಟುಂಬದಲ್ಲಿ ಹೆಂಡತಿಗಾಗಲಿ ಮಕ್ಕಳಿಗಾಗಲಿ ವಿಪತ್ತು ರೋಗ ಸಂಭವಿಸಿದರೆ ಉಳಿದವರು ಮನಸ್ಸಿನ ಸಂತಾಪವುಳ್ಳವರಾಗಿ ತಮ್ಮ ಶಕ್ತಿಯುಂಟಾದಷ್ಟು ಔಷಧೋಪಚಾರಗಳನ್ನು ಮಾಡಿ ಸಂತಾಪವನ್ನೂ ಸುಖವನ್ನೂ ಪ್ರಕಾಶಪಡಿಸಿ ಸಾಧ್ಯವಾದರೆ ಆ ರೋಗವನ್ನು ತಾವೇ ತೆಗೆದುಕೊಂಡು ತಮ್ಮ ಪ್ರಿಯರನ್ನು ರಕ್ಷಿಸುವರಲ್ಲ? ಇದೇ ನಿಜವಾದ ಅನ್ಯೋನ್ಯ ಅಥವಾ ಏಕಮತ್ಯ.

ಒಂದು ಕುಟುಂಬವಿದೆಯೆನ್ನುಟು. ಆ ಕುಟುಂಬದ ಯಜಮಾನನೂ ತಂದೆಯೂ ದೇವರೇ. ಈ ಲೋಕದ ಸಕಲ ಬಂಧುತ್ವವೂ ಕುಟುಂಬಗಳೂ ಆ ನಿಜಕುಟುಂಬದಿಂದ ಹೊರಟವುಗಳೂ ಆ ಕುಟುಂಬಕ್ಕೆ ಸೇರಿದವುಗಳೂ ಆಗಿವೆ. ಈ ಕುಟುಂಬದ ನಿಕಟಮಿತ್ರತ್ವಕ್ಕೂ, ಸಮೃದ್ಧಿಗೂ, ಅಭಿವೃದ್ಧಿಗೂ ಪಾಪವೆಂಬ ನುಸಿ ಹತ್ತಿ ಅದನ್ನು ಕೆಡಿಸುವದಾಯಿತು. ಪಾಪದಿಂದ ತಂದೆಯ ವಿಷಯವಾದ ಇಷ್ಟ ಸಖ್ಯವೆಲ್ಲ ಮರೆತುಹೋಯಿತು. ಅನ್ಯೋನ್ಯವೂ ಪ್ರೀತಿಯೂ ಭ್ರಾತೃಸ್ನೇಹವೂ ಕಳೆದುಹೋಗಿ ಪರಸ್ಪರ ಭೇದಗಳು, ಹಗೆ, ಜಗಳ, ಮೋಸ, ಭ್ರಾತೃಹತ್ಯೆ ಮುಂತಾದ ಪಾಪದ ಫಲಗಳು ಆ ಕುಟುಂಬವನ್ನು ಪೀಡಿಸುತ್ತಿರಲು ತಂದೆಯಾದ ದೇವರು ತನ್ನ ಕುಟುಂಬಕ್ಕೆ ಸಂಭವಿಸಿದ ವಿಪತ್ತನ್ನು ನೋಡಿ, ಸಲಾರದೆ ಪಾಪಕ್ಕೆ ಸಿಕ್ಕದ ತನ್ನ ಬಳಿಯಲ್ಲಿ ಅನಾದಿಯಿಂದ ಇದ್ದ ಪ್ರೀತಿಯ ಕುಮಾರನಾದ ಯೇಸು ಕ್ರಿಸ್ತ ಸ್ವಾಮಿಯನ್ನು ಈ ಭೂಲೋಕಕ್ಕೆ ಕಳುಹಿಸಿಕೊಟ್ಟನು. ಯೇಸು ಸ್ವಾಮಿಯು ಪಾಪವನ್ನು ಜಯಿಸಿ ಪಾಪಕ್ಕೆ ಸಿಕ್ಕಿಬಿದ್ದ ತನ್ನ ಸಹೋದರರನ್ನು ಪಾಪದ ಶಕ್ತಿಯಿಂದ ರಕ್ಷಿಸಿದನು. ಈಗ ಯಾರು ಪಾಪದ ಬಂಧನದಿಂದ ತಪ್ಪಿಸಿಕೊಂಡು ದೇವರ ಕುಟುಂಬಕ್ಕೆ ಸೇರಿ ಆತನ ಸಂಗಡ ಅನ್ಯೋನ್ಯವನ್ನೂ ಏಕಮತ್ಯವನ್ನೂ ಹೊಂದಬೇಕೆಂದು ಬಯಸುತ್ತಾರೋ ಅವರೆಲ್ಲರೂ ಯೇಸು ಸ್ವಾಮಿಯ ಮುಖಾಂತರ ತಂದೆಯಾದ ದೇವರನ್ನು ಸೇರಬಹುದು.

ಒಳದೇಶದ ವೃತ್ತಾಂತಗಳು

ಮಡಿಕೇರಿ ತಾಲ್ಲೂಕು [illegible] ಯಲ್ಲಿ [illegible] ಯನ್ನು ಸರ್ಕಾರದವರು ವಜಾ ಮಾಡಿರುತ್ತಾರೆ.

* *

[illegible] ಸರ್ಕಾರದವರು ಕಳೆದ ವಾರ [illegible] ಬಂಗಳೂರಿಗೆ ದಯಮಾಡಿದರು.

*

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ನಡೆದ [illegible] ವಿಚಾರಣೆಯು ಈ ವಾರ ಸೆಷನ್ಸ್ ಕೋರ್ಟಿನಲ್ಲಿ [illegible] ಅಪರಾಧಿಗಳಿಗೂ ಬಿಡುಗಡೆಯಾಯಿತು.

* *

[illegible] ಇವರನ್ನು ಸರ್ಕಾರದವರು [illegible] ಇನ್ನು ಮುಂದೆ [illegible] ಮುನಿಸಿಪಲ್ ಪ್ರೆಸಿಡೆಂಟರಾಗಿರತಕ್ಕದ್ದೆಂದು ಹುಕುಂ ಮಾಡಿದಾರೆ.

*

ರಾಜಧಾನಿಯ ಬಹುಮಟ್ಟಿಗೆ ಹತ್ತಿರದಲ್ಲಿರುವ [illegible] ಗ್ರಾಮದಲ್ಲಿ ಒಂದು ಕೊಲೆ ನಡೆದಿತ್ತು. ಪೋಲೀಸಿನವರು ಮೂರು ಮಂದಿಯನ್ನು ಹಿಡಿದು ಅವರ ಮೇಲೆ ಕೊಲೆಯ ಅಪರಾಧವನ್ನು ಹೊರಿಸಿ ವಿಚಾರಣೆಗೆ ತಂದರು. ಸೆಷನ್ಸ್ ಜಡ್ಜ್ ರವರು ವಿಚಾರಣೆಮಾಡಿ ಅಪರಾಧವು ರುಜುವಾತಾಗಲಿಲ್ಲವೆಂದು ಅವರನ್ನೆಲ್ಲಾ ಬಿಡುಗಡೆಮಾಡಿರುತ್ತಾರೆ.

* *

ಸಬ್ ಜಡ್ಜಿ ಸ್ಥಾನದಿಂದ ಗವರ್ನ್‌ಮೆಂಟ್ ಮೆಜಿಸ್ಟ್ರೇಟ್ ಅಧಿಕಾರಕ್ಕೆ ಬದಲಾಗಿ ವರ್ಗಮಾಡಲ್ಪಟ್ಟ ಮಿ. ಡಿ. ಎಂ. ನರಸಿಂಗರಾಯರಿಗೆ ರಾಜಧಾನಿಯ ಲಾಯರುಗಳು [illegible] ಒಂದು ಅಡ್ರೆಸ್ಸನ್ನು ಒಪ್ಪಿಸಿ ಅವರ ಬುದ್ಧಿಕುಶಲತೆ, ಚಟುವಟಿಕೆ, ಸಾಮರ್ಥ್ಯಾದಿಗಳನ್ನು ಕೊಂಡಾಡಿ ಅವರಲ್ಲಿ ತಮಗಿರುವ ಭಕ್ತಿವಿಶ್ವಾಸಗಳನ್ನು ಪ್ರಕಾಶಪಡಿಸಿದರು.

*

ರಾಜಧಾನಿಯ ಮಾರ್ಕೆಟಿನ ಎದುರಿಗೆ [illegible] ಸ್ಟೇಟರ ಅಂಗಡಿಯಲ್ಲಿ ಕಳವಾಗಿದ್ದ ಮಾಲುಗಳ ಸಮೇತ ಅಪರಾಧಿಗಳನ್ನು ಪೋಲೀಸಿನವರು ಪತ್ತೆಮಾಡಿರುತ್ತಾರೆಂದೂ, ಅವರ ಬಳಿ ಸೇರಿದ [illegible] ಒಂದು ಬೀಗದ ಅಂಗಡಿಯ [illegible] ಮನೆಯಲ್ಲಿ ಸುಮಾರು ಎರಡು ವರುಷಗಳ ಹಿಂದೆ ಕಳುವಾಗಿದ್ದ ಕೆಲವು ಮಾಲುಗಳೂ ಸಿಕ್ಕಿದವೆಂದೂ ತಿಳಿದುಬಂದಿದೆ.

*

ಸ್ಪೆನ್ಸರ್ ಕಂಪೆನಿಯ [illegible] ಹಾರ್ಟಿಂಗ್‌ಟನ್‌ರವರು ಪಾಶ್ಚಿಮಾತ್ಯ ದೇಶದಿಂದ ಬಿಡುವಿಕೊಂಡು ತಕ್ಕಮಟ್ಟಿಗೆ ಆರೋಗ್ಯಹೊಂದಿ ಪುನಃ ಹಿಂದುಸ್ಥಾನಕ್ಕೆ ಬಂದು ಮದರಾಸು ನಗರದಲ್ಲಿ ಪ್ರಾರಂಭವಾದ [illegible] ಸೇರಿ ಮೈಸೂರಿಗೆ ದಯಮಾಡಿ ಅಲ್ಲಿ ಸ್ವಸ್ಥಾನಕವಾಗಿ ತಮ್ಮ ಕಾರ್ಯಗಳನ್ನು ಪ್ರಾರಂಭಿಸಿದರು. ಅವರಿಗೆ ಇಷ್ಟುಮಟ್ಟಿಗೆ ಆರೋಗ್ಯ [illegible] ನಮ್ಮ ಸರ್ಕಾರದವರು [illegible] ಅನುಗ್ರಹಿಸಿದರು.

* *

ಕಳೆದ ಸೋಮವಾರ ಬೆಳಗ್ಗೆ ಶ್ರೀಮನ್ ಯುವರಾಜರವರು ಬೆಂಗಳೂರು ಶ್ರೀನಿವಾಸ ಮಂದಿರಕ್ಕೆ ಸೇರಿದ ಅನಾಥಶಾಲೆಯ ಕಟ್ಟಡಕ್ಕೆ ವಿಧ್ಯುಕ್ತವಾದ ಸಭಾ ಮಂಡಲಿಯ ಸಾಕ್ಷ್ಯತ್ವಾಗಿ ಅಸ್ತಿಭಾರ ಕಲ್ಲನ್ನು ಪ್ರತಿಷ್ಠೆಮಾಡಿ ಸಮಯೋಚಿತವಾದ ಭಾಷಣವನ್ನು ಮಾಡಿದರು. ಈ ಮಂದಿರದ ಅಧ್ಯಕ್ಷರು ಹೊಸ ಕಟ್ಟಡದ ನಕ್ಷೆಯನ್ನೂ, ಅನಾಥರ ಫೋಟೋವನ್ನೂ, ರಿಪೋರ್ಟನ್ನೂ ನೆನಪಿನ ಕುರುಹಾಗಿ ಅಚ್ಚುಹಾಕಿಸಿ ಸನ್ನಿಧಿಗೆ ಕಳುಹಿಸಿಕೊಟ್ಟರು.

* *

ಕಳೆದ ಬುಧವಾರ ಬೆಳಗ್ಗೆ ರಾಜಧಾನಿಯ ಲಷ್ಕರ್ ಮೊಹಲ್ಲಾ ಕ್ವೀನ್ಸ್ ಸ್ಟ್ರೀಟ್ ರಸ್ತೆಯಲ್ಲಿ ಅರಮನೆ ಗಜಶಾಲೆಯ ಒಂದು ಆನೆಯು ಹೋಗುತ್ತಿದ್ದಾಗ ಅದು ರಸ್ತೆಯಲ್ಲಿ ನಿಂತಿದ್ದ 8-10 ವರುಷದ ಒಬ್ಬ ಹುಡುಗನನ್ನು ಸೊಂಡಿಲಿನಿಂದ ಹಿಡಿದು ಎತ್ತಿಕೊಂಡು ಮಾವುತನು ಎಷ್ಟು ಪ್ರಯತ್ನಪಟ್ಟರೂ ಎಡದೆ ಬಹಳದೂರ ಹೋಗಿ ಕಡೆಗೆ ಬಿಟ್ಟುಬಿಟ್ಟಿತೆಂದೂ, ಆ ಹುಡುಗನಿಗೆ ಗಾಯವಿಲ್ಲದೆ ಪ್ರಾಣಭಯವೇನೂ ಆಗಲಿಲ್ಲವೆಂದೂ ತಿಳಿದುಬಂದಿದೆ.

ದಾವಣಗೆರೆಯಲ್ಲಿ ಬಹುಮಾನ ಸಭೆಯು

ಇಲ್ಲಿರುವ ವೆಸ್ಲಿಯನ್ ಮಿಷನ್ ಬಾಲಿಕೆಯರುಗಳಿಗೆ ಬಹುಮಾನ ಕೊಡುವುದಕ್ಕಾಗಿ ರೆವ್ ವಿಟ್ರೀಕ್‌ಬ್ಯಾಂಕ್‌ಯವರು ತಾರೀಖು ... ಇಲ್ಲಿಗೆ ದಯಮಾಡಿ ಮರುದಿನ ಹರಿಹರದ ಗರ್ಲ್‌ಸ್ಕೂಲಿಗೆ ಹೋಗಿ ಬಾಲಿಕೆಯರುಗಳಿಗೆ ಬಹುಮಾನಗಳನ್ನು ಕೊಟ್ಟು ಪುನಹ ತಾ ೧೯ ರ ಮಿಷನ್ ಗರ್ಲ್ ಸ್ಕೂಲಿಗೆ ಬ್ರಾಂಚ್ ಸ್ಕೂಲ್ ಬಾಲಿಕೆಯರುಗಳನ್ನು ಕರೆಸಿ ಸಭೆ ನಡಸಿದರು. ಆ ಸಮಯದಲ್ಲಿ ಕದಳೀ ತೋರಣಗಳಿಂದಲೂ ಸಾರ್ವಭೌಮರವರ ಮತ್ತು ನಮ್ಮ ಮಹಾರಾಜರವರ ಫೋಟೋಗಳಿಂದಲೂ ವಿವಿಧಾಲಂಕಾರವಾದ ಫೋಟೋಗಳಿಂದಲೂ ಶೃಂಗರಿಸಲ್ಪಟ್ಟ ಮೇಜಿನ ಬಳಿಗೆ ದಯಮಾಡಿಸಿದ್ದರು. ಆಗ್ಗೆ ಇಲ್ಲಿನ ಸರ್ಕಾರಿ ಮುಖ್ಯಾಧಿಕಾರಿಗಳಾದ ... ಸಾಹೇಬರು, ಅಮಲ್ದಾರ್ ಮಿ॥ ವೇದಾಂತಯ್ಯಂಗಾರ್ರವರು, ... ರವರು, ಮೆಡಿಕಲ್ ಆಫೀಸರು ಸಾಹುಕಾರರು, ವರ್ತಕರು ಮೊದಲಾದವರನ್ನು ಆಹ್ವಾನ ಮಾಡಿದ್ದರು. ರೆವ್ ವಿಟ್ರೀಕ್‌ಬ್ಯಾಂಕ್‌ಯವರು ಪ್ರಾರ್ಥನೆ ಮಾಡಿದ ನಂತರ ಮಿಷನ್ ಸ್ಕೂಲಿನ ಹೆಡ್ ಮಾಸ್ಟರರು ವಿದ್ಯಾಭಿವೃದ್ಧಿಯ ರಿಪೋರ್ಟನ್ನು ಓದಿದರು. ಬಳಿಕ ಬಾಲಿಕೆಯರು ಇಂಗ್ಲೀಷಿನಲ್ಲಿ ಸಂಭಾಷಣೆ ಬೆಳಸಿದರು. ಮಿಷನ್‌ನವರ ಉಪಾಧ್ಯಾಯಿನಿ ..., ನೀತಿ, ಪತಿವ್ರತಾಧರ್ಮ, ಇವುಗಳನ್ನು ಕುರಿತು ... ಗಾನಗಳಿಂದ ಸಾರ್ವಭೌಮರ ಮತ್ತು ಮಹಾರಾಜರವರ ... ಪಾಡುಗಳನ್ನು ಹೇಳಿದರು. ತರುವಾಯ ಬಾಲಿಕೆಯರುಗಳಿಗೆ ... ರವರ ಅಮಲ್ದಾರ್ರವರು ಬಹುಮಾನವನ್ನು ಸಹಸ್ತದಿಂದ ಸುಮಾರು ೧೦೦ ಬಾಲಿಕೆಯರುಗಳ ... ಹೇಳಿದ ... ಯವರು ಅಗತ ... ವಿದ್ಯಾಭ್ಯಾಸ ಮಾಡುವುದರಿಂದ ... ನಿಯಮಗಳು ... ಹೆಚ್ಚು ... ಮಿಷನ್ ಸ್ಕೂಲಿನವರು ವಿದ್ಯಾಭ್ಯಾಸ ... ಮುಖ್ಯಸ್ಥರು ಈ ಸಭೆಯ ... ತಮ್ಮ ... ಪ್ರಾರಂಭ ... ಮಾಡಿದರು ... ಈ ಸಭೆಗೆ ... ನಮ್ಮ ಮಿಷನ್‌ನವರು ಈ ಊರಿನಲ್ಲಿ ಈ ಶಾಲೆಯನ್ನು ... ಧನ್ಯವಾದ ... ಮಾಡಿದರು ... ಹೆಣ್ಣು ಮಕ್ಕಳಿಗೆ ವಿದ್ಯೆ ... ಈ ಸಭೆಯಲ್ಲಿ ... ಹೂವು, ಪಾನಸುಪಾರಿ, ಗಂಧ ... ಸಂತೋಷಪಡಿಸಿದರು. ... ಮುಕ್ತಾಯವಾಯಿತು.

ಹಾವೇರಿಯ ದುಸ್ಥಿತಿ—ಜವಾಬು

... ಹಾವೇರಿಯ ... "ಪ್ರಜಾಬಂಧು"ಯು ಪತ್ರಿಕೆಯ ೧೯೧೨ ನೇ ಡಿಸೆಂಬರ್ ೧೨ ನೇ ... ೭ ನೇ ಪುಟದಲ್ಲಿ ಪ್ರಕಟವಾಗಿರುತ್ತದೆ. ಈ ಬಗ್ಗೆ ... ತಿಂಗಳಲ್ಲಿ ... ವರ್ತಮಾನ ... ಈ ಗ್ರಾಮದ ... ವರ್ತಮಾನ ... ಸತ್ಯವಾದುದಲ್ಲ. ... ಕಾರ್ತೀಕ ಮಾಸ ... ಮತ್ತು ... ಸಕಾಲದಲ್ಲಿ ಮಳೆ ಬಾರದೆ ... ಈ ಪ್ರಾಂತದಲ್ಲಿ ಬೆಳೆ ... ಆದರೂ ... ಬೆಲೆಯು ... ವ್ಯಾಪಾರ ... ಕಾರಣವಾಗಿ ... ಕೆಲಸವಿಲ್ಲದೆ ... ಬಡವರು ... ಊರುಗಳಿಗೆ ... ಜನರು ... ಆಹಾರ ... ಸರ್ಕಾರದವರು ... ಈ ವಿಷಯದಲ್ಲಿ ... ಸ್ಥಳೀಯ ... ಕೆಲಸಗಳನ್ನು ... ಈ ಸಂಬಂಧ ... ಪ್ರೆಸಿಡೆಂಟರು ... ಈ ಮುನಿಸಿಪಾಲಿಟಿ ... ದಯಾಪರಿಪೂರ್ಣನಾದ ಭಗವಂತನು ಕೊಟ್ಟಲ್ಲ

ಕ್ಕಾಗುವದೇಯಾದರೆ "ಪ್ರಜಾಬಂಧು"ಯ ಉಕ್ತ ರೀತಿ ವರ್ಣನೆಯಲ್ಲಿ ಇವೆಯೇ ಹೊರತು ವಸ್ತುತಃ ಸುತರಾಂ ಇಲ್ಲ.—ನಾಗಲಮಡಿಕೆಯಲ್ಲಿ ಕಾಲರಾ ಉಪದ್ರವು ಈಗ್ಗೆ ಎರಡು ತಿಂಗಳುಗಳ ಕೆಳಗೆ ತಲೆದೋರಿತ್ತು. ಈ ಗ್ರಾಮದ ಸುತ್ತು ಮುತ್ತಲಿರುವ ಕೆಲವು ಸಣ್ಣ ಗ್ರಾಮಗಳಲ್ಲಿ ಈ ರೋಗವು ಇದ್ದುದರಿಂದ ಈ ಗ್ರಾಮವಾಸಿಗಳ ಸಂಪರ್ಕದಿಂದ ನಾಗಲಮಡಿಕೆಗೂ ರೋಗ ಆವರಿಸಿತು ... ಈ ರೋಗ ಆದರಿಂದ ... ಈ ಸಂಗತಿಯು ... ನಾಗಲಮಡಿಕೆಯಲ್ಲಿ ವಿಶೇಷ ಹರಡಲಿಲ್ಲ. ಒಟ್ಟು ಮೂರು ಜನರಿಗೆ ತಗಲಿ ಇಬ್ಬರು ಮೃತಪಟ್ಟರು. ಒಬ್ಬನು ಉಳಿದನು. ತಾಲ್ಲೂಕ್ ಅನುಭವಸ್ಥರ ಮುಂಜಾಗರೂಕತೆಯ ... ಅದು ವಿಶೇಷ ಹರಡದೆ ಅಡಗಿತು ... ಈ ರೀತಿ ... ಪ್ರಕಟವಾದ ಸುದ್ದಿಗಳು ... ಈ ವಿಷಯಗಳನ್ನು ... ಸ್ಥಳೀಯ ... ಗಳನ್ನು ... ಜಾಗರೂಕರಾಗಿರಬೇಕಾಗಿ ನಾನು ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ

ಮಿಥ್ಯಾವಾದಿ ಖಂಡನ

ಕನ್ನಗಳ್ಳರ ದೊಂಬಿ ಮೊಕದ್ದಮೆಯು.

ಸಬ್ ಡಿವಿಷನಲ್ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ

ಚಾಮರಾಜನಗರದ ತಾಲ್ಲೂಕು ಕಸ್ತೂರ ... ಪ್ರತಿಗಳು ಕಳೆದ ೧೯೧೨ ನೇ ನವಂಬರ್ ತಾ ೬ ರಲ್ಲಿ ... ಕೊಳೆ ಮುಂತಾದ ಕ್ರೂರ ಕೃತ್ಯಗಳನ್ನು ನಡಸಿದರಷ್ಟೆ. ಇದಕ್ಕೆ ಕಾರಣ ಹೇಳುವುದೇನೆಂದರೆ ... ಗುಂಡಪ್ಪನೆಂಬವನ ... ಬ್ರಾಹ್ಮಣ ... ತೆಗೆಯಿಸಿ ... ಬ್ರಾಹ್ಮಣರು ಹುಲ್ಲುಗಾವಲನ್ನು ... ಕೆರೆಯ ... ಊರಿನ ... ಒಂದು ಕುರಿಯನ್ನು ... ಈ ಸಮಯದಲ್ಲಿ ... ಬ್ರಾಹ್ಮಣರ ಜಮೀನನ್ನು ... ಕಟ್ಟಿ ಮಾಡಿದರು ... ಸುಮಾರು ... ಕನ್ನಗಾಲಕ್ಕೆ ಹೋಗಿ ಮೊಲ್ಲಂಡ ... ಈ ಸಂದರ್ಭದಲ್ಲಿ ... ನಂತ, ಮಾದ ... ಇಬ್ಬರು ... ಗಾಯ ... ನಾಯಿತು.

ಈ ದೊಂಬಿ ಮೊಕದ್ದಮೆಯಲ್ಲಿ ೧೯೦ ಜನರಿಗೆ ವಾರಂಟು ಹುಟ್ಟಿ ಮೊದಲು ೧೭೧ ಜನರು ದಸ್ತಗಿರಿ ಮಾಡಲ್ಪಟ್ಟರು. ಆ ಬಳಿಕ ಮೂರು ಮಂದಿ ತಾವಾಗಿಯೇ ಮ್ಯಾಜಿಸ್ಟ್ರೇಟರ ಮುಂದೆ ಬಂದು ಪೋಲೀಸಿನವರ ... ಈಚೆಗೆ ೯ ಮಂದಿಯನ್ನು ದಸ್ತಗಿರಿ ಮಾಡಿದರು. ಪೋಲೀಸಿನವರು ... ನನ್ನು ಕಳೆದ ವಾರ ರಾಜಧಾನಿಯ ಒಂದು ಹೋಟೆಲು ಅಂಗಡಿಯಲ್ಲಿ ಹಿಡಿದರು. ಇದುವರೆಗೆ ವಾರಂಟಿಗೆ ಸಿಕ್ಕದೆ ಇದ್ದ ಮಳ್ಳಿ ಸುಬ್ಬಯ್ಯನೆಂಬವನು ಮೊನ್ನೆ ... ಬಂಗಲೆಯಲ್ಲಿ ಪ್ರಾರಂಭವಾಗಿರುವ ಮೊಲ್ಲಂಡ ಸ್ಪೆಷಲ್ ಮ್ಯಾಜಿಸ್ಟ್ರೇಟರ ಎದುರಿಗೆ ತಾನಾಗಿಯೇ ಹಾಜರಾಗಿ ... ಅಂತು ಇದುವರೆಗೆ ೧೮೩ ಮಂದಿ ಅಪರಾಧಿಗಳು ದಸ್ತಗಿರಿ ಆಗಿರುತ್ತಾರೆ. ಇನ್ನೂ ವಾರಂಟಾಗಿರುವ ೧೦ ಜನರು ತಲೆತಪ್ಪಿಸಿಕೊಂಡಿರುವರು. ಈಗ ಸಿಕ್ಕಿರುವವರಲ್ಲಿ ... ಗೌಂಡರು ... ಮತ್ತು ನಾಯಕರು ... ಮಂದಿ ... ೧ ಜನರು, ಉಳಿದವರು ಕುರುಬರು, ಒಕ್ಕಲಿಗರು, ಹೊಲೆಯರು, ನಾಯಿಂದರು ಎಂದು ತಿಳಿದುಬಂದಿದೆ.

ತಾ ೨೦ ನೇ ಸೋಮವಾರ ಮಧ್ಯಾಹ್ನ ಸುಮಾರು ೧೨ ಗಂಟೆಗೆ ರಾಜಧಾನಿಯ ... ಬಳಿ ಇರುವ ಟ್ರಾವಲರ್ಸ್ ಬಂಗಲೆಯಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರು ಕೋರ್ಟನ್ನು ಪ್ರಾರಂಭವಾದರು. ಮೊಲ್ಲಂಡ ಅಪರಾಧಿಗಳನ್ನೆಲ್ಲಾ ... ಪೋಲೀಸಿನವರು ... ಹಾಜರುಮಾಡಿದರು. ಮೈಸೂರು ಪಬ್ಲಿಕ್ ಪ್ರಾಸಿಕ್ಯೂಟರ್ ಮಿ॥ ... ಕೃಷ್ಣಮಾಚಾರ್ಯರು ಹಾಜರಾಗಿ ಮ್ಯಾಜಿಸ್ಟ್ರೇಟರನ್ನು ಕುರಿತು ಈ ಮೊಕದ್ದಮೆಯಲ್ಲಿ ನಾನು ಸರ್ಕಾರಿ ತರಫ ... ಅಪರಾಧಿಗಳ ಪೈಕಿ ೧೯ ಮಂದಿಯ ಮೇಲೆ ... ಪ್ರತ್ಯೇಕವಾದ ಕೇಸಿನಲ್ಲಿ ಪ್ರಾಸಿಕ್ಯೂಟಿಂಗ್ ಇನ್‌ಸ್ಪೆಕ್ಟರುಗಳಾದ ಮಿ॥ ಎಚ್ ಟಿ ನಾರಣ ಯ್ಯಂಗಾರ್ರು, ಮಿ॥ ... ರಾಮ ... ರಾಯರು ... ಸಿದ್ಧ ... ವಿಚಾರಣೆ ... ಮ್ಯಾಜಿಸ್ಟ್ರೇಟರು ... ಕೊಂಡು, ಈ ಮೊಕದ್ದಮೆಯಲ್ಲಿ ... ಹೇಳುವುದಾಗಿ ... ನಡದು

ಈ ದೊಂಬಿ ಮೊಕದ್ದಮೆಯಲ್ಲಿ ೧೫೦ ಜನ ಸಾಕ್ಷಿಗಳು ಸರ್ಕಾರದ ತರಫು ಕೆ ... ಬರಲಿರುತ್ತಾರೆಂದು ತಿಳಿಯಿತು.

ಮ್ಯಾಜಿಸ್ಟ್ರೇಟರು ಚಾರ್ಜು ಮಾಡಿದ್ದು

ತರುವಾಯ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮಿ॥ ... ನಾಡ್ ... ರಾಯರು ಚಾರ್ಜು ಆರ್ಡರನ್ನು ಬರೆದು ಓದಲಾರಂಭಿಸಿದರು. ಇದರ ವಿವರವೇನೆಂದರೆ—

೧ ನೇ ಅಪರಾಧಿ ಕೆಂಚಯ್ಯನನ್ನು ಮ್ಯಾಜಿಸ್ಟ್ರೇಟರು ಎದುರಿಗೆ ನಿಲ್ಲಿಸಿಕೊಂಡು ಅವನನ್ನು ಕುರಿತು—ನೀನು ಅಕ್ರಮಕೂಟದಲ್ಲಿ ಸೇರಿದ್ದೆ, ದೊಂಬಿಯನ್ನು ನಡಸಿದೆ, ... ಕೊಲ್ಲುವುದರಲ್ಲಿ ಸೇರಿದ್ದೆ, ಮತ್ತು ... ಗಾಯ ಮಾಡುವುದರಲ್ಲಿ ಸೇರಿದ್ದೆ. ಆದ ಕಾರಣ ನಿನ್ನ ಕೇಸ್ ವಿಚಾರಣೆಗೆ ಗುರಿಪಡಿಸಲ್ಪಟ್ಟಿರುತ್ತೀಯೆ ಎಂಬ ಅರ್ಥಕ್ಕೆ ಆರ್ಡರನ್ನು ಓದಿ ಹೇಳಿದರು. ಆದಕ್ಕೆ ಅಪರಾಧಿಯು—ಸ್ವಾಮಿ, ನಾನು ಹಾಗೆ ನೀವು ಅಂಥಾ ಕೃತ್ಯಗಳನ್ನು ನಡಸಿದವನಲ್ಲ. ನನ್ನ ಕಡೆ ಸಾಕ್ಷಿಗಳಿರುತ್ತಾರೆ. ... ಕೋರ್ಟಿನಲ್ಲಿ ಲಾಯರನ್ನು ಇಟ್ಟು ವ್ಯವಹಾರ ಮಾಡುತ್ತೇನೆ ಎಂದು ಹೇಳಿಕೊಂಡನು.

೨ ನೇ ಅಪರಾಧಿ ಸಂಟರಾಜಸೆಟ್ಟಿಯನ್ನು ಎದುರಿಗೆ ನಿಲ್ಲಿಸಿಕೊಂಡು ಮ್ಯಾಜಿಸ್ಟ್ರೇಟರು ಅವನನ್ನು ಕುರಿತು—ಮೊಲ್ಲಂಡದಂತೆಯೇ ನಿನ್ನ ಮೇಲೂ ಅಪರಾಧಗಳು ಹೊರಿಸುತ್ತವೆ. ಏನು ಹೇಳುತ್ತೀ? ಎಂದು ಪ್ರಶ್ನೆಮಾಡಿದಾಗ ಅವನು—ನಾನು ಅಪರಾಧವಮಾಡಿದವನಲ್ಲ. ಮೂರು ತಿಂಗಳಿಂದ ನನ್ನನ್ನು ಕರಿಯಂತೆ ಬಂಧನದಲ್ಲಿ ಕೂಡಿಕೊಂಡಿದೀರಿ. ನಾನು ಜಾಮೀನ್ ಕೊಡಬಲ್ಲೆನು. ಜಾಮೀನಿನ ಮೇಲೆ ಬಿಟ್ಟುಕೊಡಬೇಕು. ನಾನು ಲಾಯರನ್ನು ಇಟ್ಟು ಮುಂದಿನ ಕೋರ್ಟಿನಲ್ಲಿ ವಾದಿಸುತ್ತೇನೆ. ಹೀಗೆ ನನ್ನನ್ನು ತಡೆದಿಟ್ಟುಕೊಂಡಿದ್ದರೆ ನಾನು ಲಾಯರನ್ನು ಇಡುವುದಕ್ಕೂ, ಸಾಕ್ಷಿಗಳನ್ನು ಇಡುವುದಕ್ಕೂ ಅವಕಾಶವಾಗುವುದಿಲ್ಲ ಎಂಬ ರೀತಿ ಹೇಳಿಕೊಂಡನು. ಅದಕ್ಕೆ ಮ್ಯಾಜಿಸ್ಟ್ರೇಟರು—ನಿನ್ನ ಮೇಲೆ ಬಂದಿರುವ ಅಪರಾಧವು ಜಾಮೀನಿನ ಮೇಲೆ ಬಿಡುವಂಥಾದ್ದಲ್ಲ ಎಂದು ಹೇಳಿದರು.

೩ ನೇ ಅಪರಾಧಿ ಘಟ್ಟಿರಾಜಸೆಟ್ಟಿಯನ್ನು ಮ್ಯಾಜಿಸ್ಟ್ರೇಟರು ಎದುರಿಗೆ ನಿಲ್ಲಿಸಿಕೊಂಡು, ಅವನ ಮೇಲೂ ಮೊಲ್ಲಂಡ ಅಪರಾಧಿಗಳಿಗೆ ಹೊರಿಸಿದ ಆರ್ಡರನ್ನು ಓದಿ ಹೇಳಿದರು. ಅವನು—ಸ್ವಾಮಿ, ನಾನು ಅಂಥಾ ಅಪರಾಧ ಮಾಡಿದವನಲ್ಲ. ನನ್ನ ಕಡೆ ಸಾಕ್ಷಿಗಳಿದ್ದಾರೆ. ನಾನು ಲಾಯರನ್ನು ಇಟ್ಟು ಮೇಲಣ ಕೋರ್ಟಿನಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ ಎಂದು ಹೇಳಿದನು.

ಅಲ್ಲಿಗೆ ಕೋರ್ಟು ಬರಖಾಸ್ತಾಯಿತು.

ವಿದೇಶದ ವೃತ್ತಾಂತಗಳು.

ಆಸ್ಟ್ರೇಲಿಯಾ ಪಟ್ಟಣದ ಒಂದು ಉಗ್ರಾಣದ ಮನೆಗೆ ಬೆಂಕಿ ಬಿದ್ದು ಅದರಲ್ಲಿ ತುಂಬಿದ್ದ ಎಳೆಯವರ ಆಕ್ಷೆ ರಸಾಯನ ೧,೫೦೦ ಗಜ್ಜಾಗಳ ಹತ್ತಿಯು ಸುಟ್ಟು ಹೋಯಿತು.

ಫ್ರಾನ್ಸ್ ಪ್ರಜಾಪ್ರಭುತ್ವದಲ್ಲಿ ಕಳೆದ ವಾರ ಚುನಾವಣೆಗಳು ನಡೆದು ಮಾನ್ ಸರ್ ಪಾಯಿನ್ ಕೇರಿಯವರು ಪ್ರೆಸಿಡೆಂಟರಾಗಿ ಬಹುಮತದಿಂದ ಚುನಾವಣೆಯಾಗಿ ಸೇರಿಸಲ್ಪಟ್ಟರು

ದಕ್ಷಿಣ ಅಫ್ರಿಕಕ್ಕೆ ಸೇರಿದ ರೊಡೇಸಿಯಾ ಸೀಮೆಯಲ್ಲಿ ಒಂದು ಸರ್ಕಾರಿ ಗಣಿಯಲ್ಲಿ ಡೈನಮೈಟ್ ಮದ್ದು ದಾರಿ ಅನಾಹುತ ನಡೆದು ಇಬ್ಬರು ಬಿಳೀ ಜನರೂ, ಇಪ್ಪತ್ತೇಳು ಮಂದಿ ಕಪ್ಪು ಜನರೂ ತಕ್ಷಣ ಮೃತಪಟ್ಟರು

ವಾಕ್ ಸಾಬ್ ಎಂಬ ಜಹಜಿನಲ್ಲಿ ಪ್ರಯಾಣ ಮಾಡುತ್ತಿದ್ದ ಜರ್ಮನಿಯ ಮೂವರು ಅಕ್ಕತಂಗಿಯರು ಕಳೆದ ವಾರ ಸಿಂಗಪುರದಲ್ಲಿ ಸಮುದ್ರದಲ್ಲಿ ಬಿದ್ದು ಏಕಕಾಲದಲ್ಲಿ ಆತ್ಮಹತ್ಯ ಮಾಡಿಕೊಂಡರು. ಅವರ ಉದ್ದೇಶವೇನೂ ಹೊರ ಪಡಲಿಲ್ಲ.

ಅಮೇರಿಕಕ್ಕೆ ಸೇರಿದ ಸಿಂಗನ್ ಟಿಸಿ ... ಕಿನಲ್ಲಿ ಆಸ್ಪತ್ರೆಯಾದಲ್ಲಿ ಒಂದು ಜಹಜು ಸಮುದ್ರದ ಮೇಲೆ ಸುಟ್ಟರಿಗಾಗಿ ಸಿಕ್ಕಿ ಒಡೆದುಹೋಗಿ ಅದರಲ್ಲಿದ್ದ ಅಪಾರವಾದ ವ್ಯಾಪಾರಸರಕುಗಳೂ ಮೂವತ್ತಾರು ಜನರೂ ನೀರಿನ ಪಾಲಾದರು

ಫ್ರಾನ್ಸ್ ಪ್ರಜಾಪ್ರಭುತ್ವದ ಸರ್ಕಾರದಲ್ಲಿ ಇದುವರೆಗೆ ಕಾಂಟ್ರಿಬ್ಯೂಟ ... ನಗರಗಳನ್ನು ಬಲಪಡಿಸಲ್ಪಟ್ಟದ್ದರು. ಇನ್ನು ಮುಂದೆ ಅದನ್ನು ತಪ್ಪಿಸಿ ಸಿಕ್ಕಲ್ ... ನಗರಗಳನ್ನು ಜಾರಿಗೆ ತರುವಂತೆ ಮಂತ್ರಿ ಸಭೆಯವರು ತೀರ್ಮಾನ ಮಾಡಿರುತ್ತಾರೆ

ಅಮೇರಿಕದಲ್ಲಿ ಆಹೋ ಬಿಲ್ ಎಂಬೊಬ್ಬ ನ್ಯಾಯಾಧಿಪತಿಯು ಕೆಲವು ಕೈದಿ ... ಮೊಕದ್ದಮೆಗಳನ್ನು ದರ್ಯಾಪ್ತು ಮಾಡುವಲ್ಲಿ ಏಳು ಮೊಕದ್ದಮೆಗಳಲ್ಲಿ ಕತ್ತಿಗಾರಿಂದ ಲಂಚ ತೆಗೆದುಕೊಂಡದ್ದು ರುಜುವಾತಾದ ಕಾರಣ ಗವರ್ನಮೆಂಟಿನವರು ಅವನನ್ನು ಕೆಲಸದಿಂದ ವಜಾ ಮಾಡಿರುತ್ತಾರೆ

ಚೀನಾ ಸರ್ಕಾರದವರು ಆ ರಾಜ್ಯದ ಯಾವ ಪಟ್ಟಣ ಗ್ರಾಮ ಊರುಗಳಲ್ಲೂ ಪ್ರಜೆಗಳ ಪೈಕಿ ಯಾರೊಬ್ಬರೂ ಅಫೀಮು ಸೇದಕೂಡದೆಂತಲೂ, ಆ ವಸ್ತುವನ್ನು ಬೆಳೆ ಮಾಡುವ ಅಂಗಡಿಗಳನ್ನೆಲ್ಲಾ ಮುಚ್ಚಿಬಿಡಬೇಕೆಂದೂ ಇಸ್ತಿಹಾರ್ನಾಮೆಯನ್ನು ಪ್ರಕಟಿಸಿರುವಂತೆ ತಿಳಿದು ಬರುತ್ತದೆ

ಗ್ರೇಟ್ ಬ್ರಿಟನ್ ರಾಜ್ಯದೊಳಗೆ ಪ್ರಜೆಗಳು ಉಪಯೋಗಿಸುವ ಟೀ, ಸಕ್ಕರೆ, ಮೊದಲಾದ ಆಹಾರ ವಸ್ತುಗಳ ಮೇಲೆ ಸರ್ಕಾರದವರು ಹಾಕಿರುವ ಸುಂಕವನ್ನು ಕಡಮೆ ಮಾಡಬೇಕೆಂದು ಪಾರ್ಲಿಮೆಂಟಿನ ೧೭೩ ಮೆಂಬರುಗಳು ಸೇರಿ ಖಜಾನಾ ಮಂತ್ರಿಯಾದ ಮಿ॥ ಲಾಯಿಡ್ ಜಾರ್ಜಿಯವರಿಗೆ ಒಂದು ಅರ್ಜಿಯನ್ನು ಬರೆದು ಒಪ್ಪಿಸಿರುತ್ತಾರೆ

ಎಡ್ವರ್ಡ್ ಮಲಿಯಸ್ ಎಂಬವನು ಜಾರ್ಜ್ ಸಾರ್ವಭೌಮರ ಮೇಲೆ ಅಸತ್ಯವಾದ ಅಪವಾದವನ್ನು ತಂದು ಬಂದೀಖಾನೆಯಲ್ಲಿ ಇದ್ದು ಈಚೆಗೆ ಬಿಡುಗಡೆ ಹೊಂದಿ ಅಮೇರಿಕಕ್ಕೆ ಹೋಗಿ ಇಳಿದನು. ಅಮೇರಿಕದ ಅಧಿಕಾರಿಗಳು ಇವನ ಚರಿತ್ರೆಯನ್ನು ಗೊತ್ತುಮಾಡಿ, ಅವನನ್ನು ಅಮೇರಿಕಕ್ಕೆ ಸೇರಿಸಕೂಡದೆಂದು ಅಲ್ಲಿಂದ ಹೊರಡಿಸಿಬಿಟ್ಟರು

ಜರ್ಮನಿಯ ಪ್ರೊಫೆಸರ್ ... ಎಂಬೊಬ್ಬ ಪ್ರಸಿದ್ಧ ರಸಾಯನ ಶಾಸ್ತ್ರಜ್ಞನು ತನು ... ಹೊರಡುವ ... ಪಟ್ಟಣಗಳ ಬೀದಿಗಳಲ್ಲಿ ರಾತ್ರಿ ಹೊತ್ತು ದೀಪ ಹಚ್ಚುವ ವಿಧಾನವನ್ನು ಕಂಡು ಹಿಡಿದಿರುತ್ತಾನೆ. ಅಮೇರಿಕಕ್ಕೆ ಸೇರಿದ ಬ್ರೂಕ್ಲಿನ್ ನಗರದಲ್ಲಿ ಇದಕ್ಕಾಗಿ ಒಂದು ಕಾರ್ಖಾನೆಯನ್ನು ಏರ್ಪಾಡು ಮಾಡಿರುವರು

ಚೀನಾ ಪ್ರಜಾಪ್ರಭುತ್ವದ ಸರ್ಕಾರದ ಅಧಿಕಾರಿಗಳು ಮೂವತ್ತೊಂಭತ್ತು ಮಂದಿ ... ಸೌರ ... ಹಾಕಿದ್ದ ಒಂದು ಹಡಗಿಗೆ ... ಸುಡಿಸಿದರು ... ಈ ದುಷ್ಕರ್ಮದ ... ಸಾವಿರಾರು ಪ್ರಜೆಗಳು ಗುಂಪು ಸೇರಿ ... ವರ್ತಮಾನ ಬಂದಿದೆ

ಬೆಂಗಾಲ್ ಪಟ್ಟಣದಲ್ಲಿ ಸಿಗರೇಟ್ ... ಮಹಮದಿಯರು ೧೦,೦೦೦ ಮಂದಿ ... ಮತ್ತು ... ಹೊಟೆಲುಗಳ ಬಳಿ ಜನರ ... ಆಹಾರವಾಗಿದೆ ಎಂದೂ, ... ಗ್ರಾಮಾಂತರಗಳಲ್ಲಿ ಹೆಂಗಸರು ಮಕ್ಕಳು ಹೊಟ್ಟೆಗಿಲ್ಲದೆ ಸಂಕಟಪಡುತ್ತಾ ರೆಂದೂ, ... ಲಂಡನ್ ಪಟ್ಟಣದಲ್ಲಿ ... ಕ ಸ್ವಲ್ಪ ಹೆಚ್ಚು ಚಂದಾ ವಸೂಲಾಗಿದೆ

ಚನ್ನಪಟ್ಟಣದ ಹೈಸ್ಕೂಲ್

ಚನ್ನಪಟ್ಟಣವು ಮೈಸೂರು ಸಂಸ್ಥಾನದಲ್ಲಿ ಬೆಂಗಳೂರು ಮೈಸೂರು ನಗರಗಳನ್ನು ಬಿಟ್ಟರೆ ಮೂರನೆಯ ಪಟ್ಟಣವಾಗಿರುವ ಕಾರಣ ಹಿಂದೆ ಮುಖ್ಯವಾಗಿ ಮಹಮ್ಮದೀಯ ಪ್ರಜೆಗಳ ಪ್ರಯತ್ನವಿಶೇಷದಿಂದ ಇಲ್ಲಿ ಹೈಸ್ಕೂಲ್ ಸ್ಥಾಪಿತವಾಯಿತು. ಪ್ರಜಾಸಂಖ್ಯೆ ಅಧಿಕವಾಗಿದ್ದರೂ ವ್ಯಾಪಾರ ಮತ್ತು ಕೈಗಾರಿಕೆಗಳಿಗೆ ಬಹು ಅನುಕೂಲವಾಗಿರುವ ಈ ಊರಿನಲ್ಲಿ ಹೈಸ್ಕೂಲ್ ತರಗತಿಗಳೊಳಗ ವ್ಯಾಸಂಗಮಾಡುವ ಸ್ಥಳದ ವಿದ್ಯಾರ್ಥಿಗಳ ಸಂಖ್ಯೆಯು ಕಡಮೆಯೇ. ಹಿಂ ಮುಕ್ ಸಿಫ್ ಕೋರ್ಟು ಸಬ್ ಡಿವಿಷನ್ ಆಫೀಸೂ ಇದ್ದರೆ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಿಗೆ ಸಮಾನವಾಗಿರುತ್ತಿತ್ತು. ಆದರೂ ಸರ್ಕಾರದವರು ದಯವಿಟ್ಟು ಇಲ್ಲಿಗೆ ಹೈಸ್ಕೂಲನ್ನು ಕೊಟ್ಟು ನಡೆಯಿಸಿಕೊಂಡು ಬರುತ್ತಿದ್ದಾರೆ. ಪರಸ್ಥಳದ ವಿದ್ಯಾರ್ಥಿಗಳು ಬಂದು ಸೇರುವುದಕ್ಕೆ "ಸ್ಟೂಡೆಂಟ್ಸ್ ಹೋಂ" ಇಲ್ಲದಿರುವುದೇ ಮುಖ್ಯ ಕಾರಣ. ಇದರಿಂದ ವಿದ್ಯಾರ್ಥಿಗಳ ಸಂಖ್ಯೆ ಕಡಮೆಯಾಗಿರುತ್ತದೆ. ಆದಕಾರಣ ಹೈಸ್ಕೂಲನ್ನು ಇಲ್ಲಿಂದ ತೆಗೆದುಬಿಡುತ್ತಾರೆಂಬ ವರ್ತಮಾನವು ಈಗ್ಗೆ ೫ ೬ ವರುಷಗಳಿಂದಲೂ ಇದ್ದೇ ಇದೆ. ಇರುವ ಹೈಸ್ಕೂಲನ್ನು ಕಳೆದುಕೊಳ್ಳಲು ಯಾರಿಗೆ ತಾನೇ ಇಷ್ಟವಿರುತ್ತದೆ. ಆದುದರಿಂದ ಈ ಊರಿನ ಹಿರಿಯ ವರ್ತಕರೂ ವಕೀಲರೂ ಅಧಿಕಾರಿಗಳೂ ಸಭೆ ಮಾಡಿ ಆಲೋಚಿಸಿ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಬೇಕೆಂದೂ ಬಡ ಹುಡುಗರಿಗೆ ದ್ರವ್ಯರೂಪವಾಗಿಯೂ ಸಹಾಯ ಮಾಡಲು "ಪೂರ್ ಫಂಡ್" ಎಂಬ ಹೆಸರಿನಿಂದ ಸಾಧ್ಯವಾದಷ್ಟು ದ್ರವ್ಯವನ್ನು ಶೇಖರ ಮಾಡಬೇಕೆಂದೂ ಸಿದ್ಧಾಂತ ಮಾಡಿದರು. ಸಾಹುಕಾರ್ ಮ॥ ರಾ॥ ಸಂಜೀವ ರಾಮಯ್ಯನವರು ಹೊಸದಾಗಿ ಕಟ್ಟಡಕ್ಕೋಸ್ಕರ ಎರಡು ಸಾವಿರ ರೂಪಾಯಿಗಳನ್ನು ಕೊಡುವಂತೆ ವಾಗ್ದಾನ ಮಾಡಿದರಲ್ಲದೆ ಸರ್ಕಾರದ ಸಹಾಯವನ್ನೂ ಪಡೆದು ಆ ಕಟ್ಟಡವನ್ನು ತಾವೇ ನಿಂತು ಕಟ್ಟಿಸಿಕೊಡಬೇಕೆಂದು ಸಂಕಲ್ಪಿಸಿ ಸರ್ಕಾರದ ಅಪ್ಪಣೆಯನ್ನು ನಿರೀಕ್ಷಿಸುತ್ತಿದ್ದಾರೆ. ಇವರ ವಿದ್ಯಾಭಿಮಾನವು ಸ್ತೋತ್ರಾರ್ಹವಾದುದು. ವಿದ್ಯಾಭಿಮಾನಿಗಳೂ ದಕ್ಷರೂ ಪ್ರಾಮಾಣಿಕರೂ ಆಗಿರುವ ನಮ್ಮ ಅಮಲ್ದಾರ್ ಮ॥ ರಾ॥ ಬಿ. ಕೃಷ್ಣಸಿಂಗರವರು ಈ ಕಾರ್ಯದಲ್ಲಿ ಉತ್ಸಾಹಯುಕ್ತರಾಗಿ ಕಟ್ಟಡಕ್ಕೆ ತಕ್ಕ ಸ್ಥಳವನ್ನು ಗೊತ್ತುಮಾಡಿದ್ದಾರೆ. ಅಪ್ಪಣೆ ಬಂದೊಡನೆಯೇ ಕಟ್ಟಡವನ್ನು ಕಟ್ಟುವುದಕ್ಕೆ ಆರಂಭಿಸುವರು. ಅತ್ಯಲಾಗಿ ಫೂರ್ ಫಂಡಿಗೋಸ್ಕರ ಆ ದಿನದ ಸಭೆಯಲ್ಲಿ ಅಗ್ರಾಸನವನ್ನು ಅಲಂಕರಿಸಿದ್ದ ಮ॥ ರಾ॥ ಹೆಡ್ ಮಾಸ್ಟರವರು ಇಪ್ಪತ್ತೈದು ರೂಪಾಯಿಗಳನ್ನು ತತ್ಕ್ಷಣವೇ ಕೊಟ್ಟುಬಿಟ್ಟರು. ಯಜಮಾನ್ ಮ॥ ನರಸಿಂಹಯ್ಯನವರೇ ಮೊದಲಾದ ಉದಾರಿಗಳು ಯಥಾಶಕ್ತಿ ಸಹಾಯ ಮಾಡಿದರು. ಇದಲ್ಲದೆ ಸರ್ಕಾರದ ಉದ್ಯೋಗಸ್ಥರಿಂದಲೂ ಪ್ರಜೆಗಳಿಂದಲೂ [illegible] ಧನವನ್ನು ಎತ್ತಿ ಈ ಕೆಲಸ ಬಡ ಹುಡುಗರಿಗೆ ಕೊಡುತ್ತಿದ್ದಾರೆ. ಇದಕ್ಕೋಸ್ಕರ ಒಂದು ಕಮಿಟಿ ಏರ್ಪಾಟಾಗಿದೆ. ಹೈಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ಮ॥ ರಾ॥ ಎನ್. ಸುಬ್ಬರಾವ್ ಬಿ. ಎ. ಯವರು ಕಾರ್ಯದರ್ಶಿ (ಸೆಕ್ರೆಟರಿ) ಯಾಗಿ ಬಹು ಆಸಕ್ತಿಯಿಂದ ಕೆಲಸ ಮಾಡುತ್ತಿರುವರು. ಸ್ಟೂಡೆಂಟ್ಸ್ ಹೋಂನ ಕಟ್ಟಡವು ಬೇಗನೆ ಸಿದ್ಧವಾದರೆ ಬೆಂಗಳೂರು ಮೈಸೂರು ನಗರಗಳಿಗಿಂತ ಇಲ್ಲಿ ವಿದ್ಯಾರ್ಥಿಗಳಿಗೆ ಊಟ ವಸತಿ [illegible] ವಸ್ತುಗಳ ಸೌಕರ್ಯವು ಸುಲಭವಾಗುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ.

ಇದೇ ಕಾಲಕ್ಕೆ ಸರಿಯಾಗಿ ಬೇರೆ ಊರಿಂದ ಹೆಡ್ ಮಾಸ್ಟರಾಗಿ ಬಂದಿರುವ ಮ॥ ರಾ॥ ಕೃಷ್ಣಸ್ವಾಮಯ್ಯರ್ ಬಿ. ಎ. ಇವರು ಹೆಡ್ ಮಾಸ್ಟರಾಗಿ ಬಂದು ಮಾಡಿಸಿ ಹೋದರೂ ಪಾಠಶಾಲೆಯನ್ನು ಅಭಿವೃದ್ಧಿಗೆ ತರಬೇಕೆಂದು ಸಹೋಪಾಧ್ಯಾಯರುಗಳೊಡನೆ ಸೇರಿ ಬಹು ಉತ್ಸಾಹದಿಂದ ಕೆಲಸ ಮಾಡುತ್ತಿರುವರು. ಈ ಸಮಯದಲ್ಲಿ ಪುರವಾಸಿಗಳು ಮಾಡುತ್ತಿರುವ ಪ್ರಯತ್ನಕ್ಕೆ ಫಲವನ್ನು ಕೊಡುವ ಸರ್ಕಾರದ ಸಹಾಯವೂ ದೊರೆತು ಚನ್ನಪಟ್ಟಣದ ಹೈಸ್ಕೂಲು ಉತ್ತಮಸ್ಥಿತಿಗೆ ಬರಲಿ. ದೊಡ್ಡ ಪಟ್ಟಣಗಳ ವಿದ್ಯಾರ್ಥಿಗಳಿಗೆ ಉಪಯೋಗಕರವಾದ ರೀತಿಯಲ್ಲಿ ವಾಚನಾಲಯಾದಿಗಳು ನಡೆಯುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿ ಸಮಸ್ತರ ಪ್ರೀತಿಗೌರವಗಳಿಗೆ ಪಾತ್ರವಾಗಿ ಕೀರ್ತಿಯನ್ನು ಪಡೆಯಬೇಕೆಂದು ಹಾರೈಸುತ್ತೇವೆ.

ಯಥಾರ್ಥವಾದಿ

ಸೊರಬದಲ್ಲಿ ಬೆಂಕಿಯಿಂದಾದ ನಷ್ಟ

ಜಾನುವಾರುಗಳೂ, ದವಸಗಳೂ ನಷ್ಟವಾದದ್ದು

ಸೊರಬ ಟೌನ್ಗೆ ಸುಮಾರು 1½ ಮೈಲು ದೂರದಲ್ಲಿರುವ ಹಳೇ ಸೊರಬದೊಳಗೆ 11 ನೇ ಭಾನುವಾರ ರಾತ್ರಿ ಸುಮಾರು 10½ ಘಂಟೆ ಸಮಯದಲ್ಲಿ ಪ್ರತಿ ಮನೆಯವರೂ (ಗ್ರಾಮಸ್ಥರು) ಗದ್ದೆಗೆ ಒಕ್ಕಲು ಕೆಲಸಕ್ಕೆ ಹೋಗಿರುವ ವೇಳೆಯಲ್ಲಿ ಬೆಂಕಿಯು ಮೊದಲು ಒಂದು ಹುಲ್ಲಿನಮನೆಗೆ ಯಾವ ವಿಧದಿಂದಲೋ ಬಿದ್ದು ಆ ಬೀದಿಯಲ್ಲಿರುವ ಅನೇಕ ಮನೆಗಳನ್ನು ಏಕಕಾಲದಲ್ಲಿ ಆವರಿಸಿಕೊಂಡು, ಬಹಳ ದೂರದವರೆಗೆ ಬೆಂಕಿಯ ಬೆಳಕು ಕಾಣಿಸಿ ಎಲ್ಲಾ ಕಡೆಯಲ್ಲಿ ಹಾಹಾಕಾರ ಉಂಟಾಯಿತು. ನದಿ ಹಳೇ ಸೊರಬವು ಕಾನಿನ ಸಮೀಪದಲ್ಲಿರುವುದರಿಂದ ಈ ಬೆಳಕು ಟೌನ್ನಲ್ಲಿರುವವರಿಗೆ ದೊಡ್ಡದಾದ ಪರ್ವತವ ಹಾಗೂ ಬೆಂಕಿಯ ಸಮೀಪಕ್ಕೆ ಹೋಗಿ ನೋಡುವಾಗ್ಗೆ ಗ್ರಾಮದ ದಹನದ ರೀತಿಯಲ್ಲೂ ಭ್ರಮೆಗೊಳಿಸುವಂತಿದ್ದಿತು. ಈ ಬೆಳಕು ಸೊರಬಕ್ಕೆ ಕಂಡಕೂಡಲೆ ಪೊಲೀಸ್ ಇನ್ಸ್ಪೆಕ್ಟರವರೂ, ರೇಂಜು ಫಾರೆಸ್ಟ್ ಆಫೀಸರವರೂ, ಮೆಡಿಕಲ್ ಆಫೀಸರವರೂ, ಮ॥ ಸಾಹುಕಾರರು ಲಕ್ಷ್ಮಣರಾಯರವರೂ, ಮುನಿಸಿಪಾಲಿಟಿ ಮೆಂಬರುಗಳಲ್ಲಿ ಕೆಲವರೂ, ಇನ್ನೂ ಅನೇಕರು ಸಮೂಹ ಸೇರಿ ಆತುರದಿಂದ ದಯಮಾಡಿಸಿ, ಹೊಸ ಹೊಸದಾಗಿ ಬೆಂಕಿಯು ಪ್ರವೇಶಮಾಡಿದ್ದ ಮನೆಗಳನ್ನು ಯುಕ್ತ ಸ್ಥಿತಿಗಳಿಂದ ಬಗೆಗಳಿಂದ ರಕ್ಷಿಸಿದರು. ಪ್ರತಿ ಮನೆಯ ಮೇಲಿದ್ದ ಹುಲ್ಲು ಮುಂತಾದ್ದು ಸುಟ್ಟು ಕೆಳಗೆ ಬಿದ್ದ ಕೂಡಲೆ ತೊಲೆಗಳ ಮುಂಡಿಗೆಗಳು ಬುಡದಿಂದ ತುದಿಯವರೆಗೆ ಉರಿಯುತ್ತಿದ್ದುದೂ, ಬತ್ತ ರಾಗಿ ಮುಂತಾದ ದವಸಗಳು ಸುಡುವುದೂ ನೋಡಿದವರ ಪ್ರತಿಯೊಬ್ಬರಿಗೂ ವ್ಯಥೆಯುಂಟುಮಾಡುತ್ತಲಿದ್ದಿತು. ಸುಮಾರು 20–25 ಮನೆಗಳೂ, ಕೆಲವು ಕೊಟ್ಟಿಗೆಗಳೂ ಅಲ್ಲದೆ, ಸುಗ್ಗಿ ಕಾಲವಾಗಿದ್ದುದರಿಂದ 1,300 ಪಲ್ಲ ಸೇರಿನ ಅಳತೆಯ ಸುಮಾರು 30 ಖಂಡುಗ ಧಾನ್ಯವೂ ನಷ್ಟವಾಗಿರಬಹುದೆಂದು ಜನರು ಅಂದುಕೊಳ್ಳುತ್ತಿದ್ದರು. ಈವರೆಗೆ ವರ್ತಮಾನ ತಿಳಿದಮಟ್ಟಿಗೆ 1 ಹೆಂಚಿನ ಮನೆಯೂ, 13 ಹುಲ್ಲಿನ ಮನೆಗಳೂ, 1 ಕೊಟ್ಟಿಗೆಯೂ, 3 ಕಾಲ್ದಡೆಗಳೂ, ಬತ್ತ ರಾಗಿ ಮುಂತಾದ ಪ್ರತಿಯೊಂದು ಸಾಮಾನೂ (ಧಾನ್ಯದ ಅಳತೆ ನಿಷ್ಕರ್ಷೆಯಾಗಿ ಹೇಳಲು ಅಸಾಧ್ಯ) ಸುಟ್ಟುಹೋಗಿವೆ ಎಂದು ತಿಳಿಯಬಂತು. ಈ ಧಾನ್ಯದ ಕಾಳುಗಳನ್ನು ಉಳಿಸಿಕೊಳ್ಳಬೇಕೆಂದು ರೈತರು ನೀವು ಎಚ್ಚರಿಲ್ಲದೆ ಪ್ರಯತ್ನಪಟ್ಟಾಗ್ಯೂ ಸಾಧ್ಯವಾಗದೆ ಗೋಳಾಡುತ್ತಿದ್ದವರು ಇವರು ಗೋಳಾಡುವುದನ್ನು ನೋಡಲಾರದೆ ಅನೇಕರು—"ಭಯಪಡಬೇಡಿರಿ, ನಾವು ಸಹಾಯ ಮಾಡುತ್ತೇವೆ" ಎಂದು ಹೇಳುತ್ತಿದ್ದರು. ಅಯ್ಯೋ! ಪಾಪ! ಈ ಜನರಿಗೆ ಹೊದ್ದುಬಟ್ಟೆ ನಿನಪ ಮನೆಗಳಲ್ಲಿನ ಯಾವ ಸಾಮಾನೂ ಉಳಿದಿರಲಾರದು. ಈ ಸ್ಥಳದ ಪಟೇಲ್ ಮ॥ ಛತ್ರಪ್ಪ ಗೌಡರು ದನಕರುಗಳನ್ನು ತಪ್ಪಿಸುವುದಕ್ಕೂ, ಜನರನ್ನು ಒದಗಿಸುವುದಕ್ಕೂ ಬಹಳ ಮುತುವರ್ಜಿ ವಹಿಸಿದಂತೆ ತಿಳಿಯಿತು. ಈ ಬೆಂಕಿಯನ್ನು ಆರಿಸುವುದಕ್ಕೆ ಮನೆಯ ಮೇಲೆ ಹತ್ತಿದ ಟೌನ್ ಜನರೊಡನೆ ಮೆಡಿಕಲ್ ಆಫೀಸರವರು ತಾವು ಒಬ್ಬ ಆಫೀಸರು ಎಂಬ ಭಾವನೆಯಿಂದ ಕಾಣಿಸಿಕೊಳ್ಳದೆ, ಕಾಲಿನಲ್ಲಿದ್ದ ಬೂಟುಗಳು ಸಹ ತೆಗೆಯದೆ ಆತುರದಿಂದ ಹಂಚಿನ ಮನೆಯ ಮೇಲೆ ಹತ್ತಿ, ಒಕ್ಕ ಹುಡುಗರೊಡನಾದಿಯಲ್ಲಿ ಚಟುವಟಿಕೆಯಿಂದ ಓಡಿಯಾಡಿ ನೀರು ತುಂಬಿದ ಕೊಡಗಳನ್ನು ತೆಗೆದುಕೊಂಡು ಹೋಗಿ ಯಾವ ಯಾವ ಸ್ಥಳಕ್ಕೆ ಬೇಕಾದರೂ ನೀರು ಒದಗಿಸುತ್ತಿದ್ದರಲ್ಲದೆ, ಖಾಲಿ ಕೊಡಗಳನ್ನು ವಾಪಸ್ ಕೊಡುವುದೂ ಉರಿಯುತ್ತಿದ್ದ ತೊಲೆಗಳ ಮುಂತಾದವುಗಳನ್ನು ನೆಲಕ್ಕೆ ಕೆಡವುತ್ತಿದ್ದುದೂ ನೋಡಿದವರೆಲ್ಲಾ ಇವರ ಧೈರ್ಯ ಸಾಹಸಗಳನ್ನೂ ಬಡವರ ಮೇಲೆ ಇವರಿಗಿರತಕ್ಕ ಅಂತಃಕರುಣೆಯನ್ನೂ ಕೊಂಡಾಡುತ್ತಿದ್ದರು. ರಾತ್ರಿಯ ಕಾಲವಾಗಿ ಬೆಂಕಿಯ ಪ್ರಕಾಶವಿದ್ದು, ಗಾಳಿ ಬೀಸದುದರಿಂದಲೂ, ಜನಗಳು ಸಾಹಸದಿಂದ ಇತರ ಮನೆಗಳ ಮೇಲಿನ ಹುಲ್ಲು ಕೆಳಗೆ ಕೆಡವಿದುದರಿಂದಲೂ ಮೂರು ನಾಲ್ಕು ಹೆಂಚಿನ ಮನೆಗಳನ್ನು ಉಳಿಸಿಕೊಂಡರು. ಈ ಮನೆಗಳ ಹಿಂಭಾಗದಲ್ಲಿದ್ದ ಕೆಂಗೇರಿ ಮತ್ತು ಹಳ್ಳಿಯ ಅನೇಕ ಮನೆಗಳು ಉಳಿಯದಿದ್ದ ಪಕ್ಷದಲ್ಲಿ ಈಗ ಸುಟ್ಟುಹೋದ ಸುಮಾರು 18–20 ಮನೆಗಳಿಗಿಂತಲೂ ಇನ್ನೂ ಹೆಚ್ಚಿಗೆಯೇ ನಷ್ಟ ಉಂಟಾಗುತ್ತಿತ್ತೆಂದು ಹೇಳಲು ಯಾವ ಅಭ್ಯಂತರವೂ ಇಲ್ಲ.

ಈ ನಿಮಿತ್ತವಾಗಿ ಮನೆಮಠಾದಿಗಳನ್ನು ಸುಟ್ಟುಕೊಂಡ ಜನರಿಗೆ ಇನ್ನು ಒಂದು ವರುಷದ ವರೆಗೂ ಅನ್ನ ವಸ್ತ್ರಗಳು ದೊರೆಯುವುದು ಬಹಳ ಕಷ್ಟವಾಗುವುದೆಂದು ತೋರಬರುತ್ತಿದೆ. ಇವರಿಗೆ ಸಹಾಯ ಮಾಡುತ್ತೇವೆಂದು ಹೇಳಿದ ಮಹನೀಯರು ದಯವಿಟ್ಟು ಕಾಪಾಡಬೇಕಲ್ಲದೆ ... ದ್ರವ್ಯವನ್ನಾದರೂ ಕೊಡಿಸಿ ಯಾವ ಯಾವ ಉಪಕಾರಿಗಳು ಮನಸ್ಸು ಮಾಡುವರೋ ಅವರಲ್ಲೂ ಕೈಬಿಡಬಾರದೆಂದು ಪ್ರಾರ್ಥಿಸುತ್ತೇನೆ. ಸರಸ್ಥಳಗಳ ದ ಈ ಬಡ ರೈತರಿಗೆ ಬೇಕಾದ ದ್ರವ್ಯ ಸಹಾಯ ಮಾಡಬೇಕೆಂಬ ಅಪೇಕ್ಷೆಯುಳ್ಳ ಮಹನೀಯರು ಆದ ಪ್ರಕೃತ ವಿಷಯದಲ್ಲಿ ಕೇಳತಕ್ಕುವು ನಮ್ಮ ಸೊರಬದ ಮೆಡಿಕಲ್ ಆಫೀಸರವರ ಹೆಸರಿಗೆ ಹಣವನ್ನು ಕಳುಹಿಸಿದಲ್ಲಿ ಆ ಹಣವನ್ನು ಈ ಬಡರೈತರಿಗೆ ಯೋಗ್ಯವಾದ ಉಪಯೋಗಕ್ಕೆ ಬರುವಂತೆ ಮಾಡಿಸಲು ಮುತುವರ್ಜಿ ವಹಿಸಿಕೊಳ್ಳುವರೆಂದು ನಂಬಿದ್ದೇನೆ. ಅನೇಕ ಹಳ್ಳಿಗಳಲ್ಲಿ ಹೇರಳವಾಗಿರುವ ಕೆರೆ ಕುಂಟೆಗಳ ನೀರು ಅಥವಾ ರಾಗಿದ್ದರೂ ಸೇದುವ ಬಾವಿಗಳು ಇಲ್ಲದಿರುವುದರಿಂದಲೇ ಪ್ರಜೆಗಳು ಇಂತಹ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಮುನಿಸಿಪಾಲಿಟಿ ಕಳೆದ ಕೆಲವು ಇದಕ್ಕಾಗಿ ಪ್ರತಿ ಮನೆಯ ಮುಂದುಗಡೆಯಲ್ಲಿ ನೀರು ತುಂಬಿದ ಒಂದೆರಡು ಕೊಡಗಳನ್ನೂ ಏಣಿಗಳನ್ನೂ ಗ್ರಾಮಾಧಿಕಾರಿಗಳು ಏರ್ಪಡಿಸಿಟ್ಟು ಇಡಿಸಿದಲ್ಲಿ ಈ ಕೇಡಿನಿಂದ ಯಾವ ಪ್ರಜೆಯಾದರೂ ಬಹು ಬೇಗ ತಪ್ಪಿಸಿಕೊಳ್ಳಬಹುದು. ಬೆಂಕಿ ಬಿದ್ದ ಸ್ಥಳವನ್ನು ನೋಡಲಿಕ್ಕೆ ಹೋದ ಪ್ರತಿ ಮನುಷ್ಯನೂ ತನ್ನ ಕೈಯಲ್ಲಾದಷ್ಟು ಸಹಾಯ ಮಾಡಬೇಕಾದುದು ಬೆಂಕಿಯು ಪ್ರಬಲವಾಗಿ ಒಬ್ಬನಿಗೆ ಒಬ್ಬ ಸಲ್ಲದ ಮೇಟಿಗೆ ಕಂಡಿದೆ. ಇತರರಿಗೆ ಯಾವ ಬಾಧಕವೂ ಆಗದೆ ಇದ್ದುದಕ್ಕೆ ಬಹಳ ಸಂತೋಷವಾಗಿದೆ.

ವಾರ್ತಾದಾರ್

ವಾರ್ತಾದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರುವ ವಾರ್ತೆಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ವಾರ್ತಾದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು; ಮತ್ತು ವಾರ್ತೆಯನ್ನು ಕಾಗದದ ಎರಡು ಪಕ್ಕಗಳಲ್ಲಿ ಬರೆಯಕೂಡದು; ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ವಾರ್ತೆಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಸೋಮವಾರ, ಬುಧವಾರಗಳಲ್ಲಿ ನಮಗೆ ಬರುವ ವಾರ್ತೆಗಳು ಆಯಾ ವಾರದಲ್ಲೇ ಪ್ರಕಟವಾಗುವುವೆಂಬ ಭರವಸೆ ಕೊಡಲಾರೆವು. ವಾರ್ತೆಗಳು ಬಹಳ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ವಾರ್ತಾದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ತಿಪಟೂರಿನಲ್ಲಿ ನಡೆದ ಕೆಲವು ಅಲ್ಪವಿಚಾರಗಳನ್ನು ಕುರಿತು ಬರೆದು ಬಂದಿರುವ ವಾರ್ತೆಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ.

ಶಿವಮೊಗ್ಗಾ ಡಿಸ್ಟ್ರಿಕ್ಟ್, ಹೊಳೆಹೊನ್ನೂರಿನ ಬಾಲಿಕಾ ಪಾಠಶಾಲೆಯ ವಿಚಾರದಲ್ಲಿ ಅಲ್ಲಿನ ಪ್ರಜೆಗಳು ಸ್ಕೂಲ್ ಇನ್ಸ್ಪೆಕ್ಟರಿಗೂ, ಇನ್ಸ್ಪೆಕ್ಟರ್ ಜನರಲ್ ರವರಿಗೂ ಬರೆದುಕೊಂಡಿರುವ ಅರ್ಜಿಗಳ ನಕಲುಗಳು ನಮ್ಮಲ್ಲಿಗೆ ತಲುಪಿರುತ್ತವೆ. ಆ ಅಧಿಕಾರಿಗಳು ದಯಮಾಡಿ ಜವಾಬು ಕೊಡುವವರೆಗೆ ಅರ್ಜಿದಾರರು ನಿರೀಕ್ಷಿಸುವುದು ಒಳ್ಳೇದು.

—ಎಡಿ]

ಕರೆಸ್‌ಪಾಂಡೆನ್ಸ್

ರಾತ್ರಿ ಕಾವಲು—ಪ್ರಶ್ನೆ

ಅಯ್ಯಾ,

ಹಳ್ಳಿಗಳಲ್ಲಿ ರಾತ್ರಿ ವೇಳೆ ಸರದಿ ಕಾವಲು (ಚಾವಡಿ ಯಾ ಇತರ ಪಬ್ಲಿಕ್ ಸ್ಥಳಗಳಲ್ಲಿ) ಬಗ್ಗೆ ಏರ್ಪಡಿಸಿರುವುದು ಸರಿಯಷ್ಟೆ. ಈ ಕಾವಲಿಗಾಗಿ ಮಲಗಲಿಕ್ಕೆ ಹೋಗಬೇಕಾದವರ ಪೈಕಿ ಬ್ರಾಹ್ಮಣ ಮತಸ್ಥರನ್ನು ವಿನಾಯಿತಿ ಇರುವ ಹಾಗೆ ಕೇಳುತ್ತೇನೆ. ಈ ಅಂಶ ರೆಗ್ಯುಲೇಷನ್, ಸರ್ಕ್ಯುಲರ್ ಎಂಬ ಬಗ್ಗೆ ವಿಶದವಾಗಿ ತಮ್ಮ ಪತ್ರಿಕೆಯಲ್ಲಿ ಪ್ರಚಾರಗೊಳಿಸುವಿರೆಂದು ನಂಬಿ ವಿಜ್ಞಾಪಿಸಿದೇನೆ.

ರಾಮಯ್ಯ, ಗುಂಡೂರು

ಅನ್ಯಾಯದ ಬ್ರಾಹ್ಮಣರು

ಅಯ್ಯಾ,

ಮೇಲಿನ ಹೆಸ್ರಿನ ಹಾಕಿಕೊಂಡು ಬೊಂಬಾಯಿನಲ್ಲಿ ಪಬ್ಲಿಷ್ ಆಗುತ್ತಿರುವ ಇದೇ ೨೨ ನೇ ತಾರೀಖಿನ ಆಂಧ್ರ ಪತ್ರಿಕೆಯಲ್ಲಿ ಸಮಾಚಾರವಾಗಿರತಕ್ಕ ಭರತ ಖಂಡಕ್ಕೇನೇ ಸಂಬಂಧಿಸಿದ್ದು ಮತ್ತು ಈ ಪ್ರಶ್ನೆಯು ಬ್ರಾಹ್ಮಣೇತರರು ಅವರ ಅಭಿಪ್ರಾಯ ತಿಳಿಸಬೇಕೆಂತ ಆ ಪೇಪರಿನ ಆಪೇಕ್ಷಿಸಿ ಇದ್ದಾರೆ. ನಿಷ್ಪಕ್ಷಪಾತದ ವಿಷಯ ಸಮಸ್ತ ಪ್ರಜೆಗಳ ಸೌಖ್ಯಕ್ಕೂ ವಾಡಿಕೆಯಿಂದ ಪ್ರಥಮತಃ ಮೇಲ ಹೇಳಿದತಕ್ಕ ಪೇಪರಿನಲ್ಲಿ ನಮೂದಿರುವ ವಿಷಯದ [illegible] ಸಂಕ್ಷೇಪವಾಗಿ ಈ ಕೆಳಗೆ ಹೇಳಿ ಅನಂತರ ಈ ಬಗ್ಗೆ ನನ್ನ ಅನುಭವವನ್ನು ಹೇಳುತ್ತೇನೆ.

ಪೇಪರಿನಲ್ಲಿ ನಮೂದಿರತಕ್ಕ ವಿಷಯ — ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಸಮಕ್ಷಮದಲ್ಲಿ ಮದ್ರಾಸು ಪಟ್ಟಣದ ರೆವಿನ್ಯೂ ಡಿವಿಜನಲ್ ಆಫೀಸರ ರಾವ್ ಸಾಹೇಬ್ ಬಲಿಜ ರಾವ್ ನಾಯುಡುಯವರು ಸಾಕ್ಷಿ ಕೊಟ್ಟದ್ದರಲ್ಲಿ ರೈತಪ್ರಜೆಗಳು ಬ್ರಾಹ್ಮಣೇತರ ಅಧಿಕಾರಿಗಳನ್ನೇ ಅಪೇಕ್ಷಿಸುತ್ತಿದ್ದಾರೆ. ಬ್ರಾಹ್ಮಣ ಅಧಿಕಾರಿಯು ರೈತರ ವಿಷಯದಲ್ಲಿ ಸರಿಯಾದ ನ್ಯಾಯ ಕೊಡೋದಿಲ್ಲ. ಅವರಿಗೆ ಶಕ್ಯವಾಗಿಯೂ ಇರುವುದಿಲ್ಲ ... ಇದು ಬೇರು ಕಡಲು ತಿಳಿಯಬೇಕಾದ ಅವಶ್ಯ ಉಳ್ಳವರು ಆ ಪೇಪರು ಓದಬಹುದು.

ನನ್ನ ಅನುಭವ — ಒಂದೇ ಬಿಟು ಬ್ರಾಹ್ಮಣ ಜಾತಿಗೇನೇ ಹೊರೆತು ನ್ಯಾಯವಲ್ಲ. ಅದರಲ್ಲೂ ಜಾತಿಯಿಂದ ಕೆಲಸವೆ, ಪ್ರಕೃತವಾಗಿರುವರು ಬಹಳ ದಿನ ಬೇರೆ ಮನುಷ್ಯರಿದ್ದಾರೆ. ಆದರೆ ಈ ವಿಷಯದಲ್ಲಿ ಹೇಳಿದ ಪ್ರಜೆಗಳು ಬಲಿಜ ರಾವ್ ನಾಯುಡುಯವರು ಹೇಳಿರುವ ಪಕ್ಷಪಾತದ ಕಥೆ ಕೇಳುವರು ಇರಬಹುದು. ಅದಕ್ಕೆ ಕಾರಣವೆ ನೆಂದರೆ— ನಮ್ಮ ಭರತ ಖಂಡದಲ್ಲಿ ವಾಸಮಾಡುತ್ತಿರತಕ್ಕ ಹಿಂದೂಗಳೆಲ್ಲಾ ಜಾತಿ ಮತ ಆಚಾರ ಇತ್ಯಾದಿಗಳಲ್ಲೇ ಬಹಳ ನಿಬಂಧನೆಗಳನ್ನಿಟ್ಟುಕೊಂಡು ನಮ್ಮ ಅಭಿವೃದ್ಧಿ ಪರಸ್ಪರ ಅನ್ಯೋನ್ಯಭಾವ, ಪರದೇಶಗಮನ ಇತ್ಯಾದಿಗಳನ್ನು ಕಳೆಕೊಳ್ಳುತ್ತಿರತಕ್ಕದ್ದಾಗಿದೆ. ಈ ನಿಂದಿಕೆ ಹಾಕಿದವರೇ ಬ್ರಾಹ್ಮಣರು. ಈ ನಿಂದಿಕೆಯು ಅತಿ ನಷ್ಟಕ್ಕೆ ನಡವಳಿಕೆಯು ಅವರ ಉತ್ಕೃಷ್ಟದಲ್ಲಿ ಬ್ರಾಹ್ಮಣರು ಬಿಡುಗಡೆ ಆದ ಪ್ರಕೃತ ಹೇಳುವುದಿಲ್ಲ. ಗ್ರಂಥಗಳಲ್ಲಿ ಮಾತ್ರ ಒಡೆತಾ ಇದ್ದಾರೆ. ಆದರೆ ಆ ಕಾಲದಲ್ಲಿ ಯಾವ ಬ್ರಾಹ್ಮಣರೂ ಪ್ರಜಾಕರ್ಷಕ ಅಂತ್ಯಜಾನವಾದ ಆಗದುಳ್ಳ ಆ ಪುಸ್ತಕಗಳಿಂದಲೇ ಗೊತ್ತಾಗುತ್ತದೆ. ನಮ್ಮ ಅನುಭವ ಇನ್ನೂ ಈಗ ಆ ವರ್ಷಕ್ಕೆ ಒಂದೇ ಪ್ರಾಯಶ್ಚಿತ್ತ ಗುರುತಿಸಿದಷ್ಟೇ ಇದೆ. ವೈದಿಕರಿಂದಲೂ, ಕೆಲವರು ಲೌಕಿಕರಿಂದಲೂ ಮಾಡಿಕೊಂಡು ಬರೆಯುವ ಗವರ್ನಮೆಂಟ್ ಸರ್ವಿಸ್ ಬರುತ್ತಿರಲಿಲ್ಲ. ಬರದೆಯಿರುವ ಪ್ರತಿ ಇತರ ಜಾತಿಗಳವರ ಜೊತೆ ಸೇರಿ ಈಗಿನ [illegible] ಉಪಯೋಗಿಸುವ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಅವರಲ್ಲೂ ಯಾವ ಪಕ್ಷಪಾತವೂ ಇರುವ ಜಗಳ ಕಾಣದ ನಿಯಮಗಳಿಂದ [illegible] ನಡವಳಿಕೆಯು ಆ ಕಾಲದಲ್ಲಿ ಇವರಿಂದ ನಡೆಯುತ್ತಿರಲಿಲ್ಲ.

ಈಗ ಗವರ್ನಮೆಂಟ್ ಆಳಿಕೆಯಿಂದ ನಾವೆಲ್ಲರು ಹೇಳುವುದು ಗವರ್ನಮೆಂಟು [illegible] ಅದಕ್ಕೆ ತಕ್ಕ ಬ್ರಾಹ್ಮಣರು ಉಪಕಾರವಾಗಿ ... ಲೌಕಿಕ ಎಂಬ ಬ್ರಾಹ್ಮಣರು ವಿಶೇಷವಾಗಿ ಲೌಕಿಕ ಕಾರ್ಯಗಳಲ್ಲಿ ಪ್ರವೇಶಿಸಿ ಉದ್ಯೋಗಗಳನ್ನು ಹೊಂದಿ ಸರ್ಕಾರದ ಕಾರ್ಯಗಳನ್ನು ನಿರ್ವಹಿಸುತ್ತಾ ಬಂದದ್ದರಿಂದ ಅವರ ಪಕ್ಷಪಾತವೆ ನಮಗೆ ಕಾಣಿಸುವುದು. ಅಷ್ಟು ಮಾತ್ರವಲ್ಲದೆ ಸಂಕಟಪಟ್ಟು ಆದರೆ ... ತವನ್ನು—ನಮ್ಮ ಮನಸ್ಸು ಬಹಳವಾಗಿ ಕಕ್ಕುಲಿಕೆ ಆರಂಭಿಸಿತು. ಅದರಲ್ಲೂ ಈ ಮುಖ್ಯ ವಾದ ಸಂಸ್ಥಾನಗಳಲ್ಲಿ ವಿಶೇಷವಾಗಿ ಇದ ಜಾತಿ ಪಕ್ಷಪಾತಗಳೂ, ... ಗಳೂ ... ಒಂದು ನಡವಳಿಕೆ ಒಂದು, ಈ ವಿಷಯದಲ್ಲಿ ನಮ್ಮ ಸರ್ಕಾರದವರು ಬಿಟ್ಟು ಸರಿಯಾಗಿ ಇರತಕ್ಕ ಅನುಭವನ್ನು ಕಲಿತ ಹೊರತು ಇವರು ಮೇಲು ನಮಗೆ ದೊರೆಯುವುದಿಲ್ಲ. ಅದು ತಪ್ಪಿದ ಹೊರತು ಪ್ರಜೆಗಳ ಉನ್ನತಿಗೆ ಅವಕಾಶವಾಗುವುದಿಲ್ಲ. ಅದನ್ನು ಬಿಡತಕ್ಕದ್ದು ಕಷ್ಟವಾದ ಈಗಿನ ನಮ್ಮ ಬೇರೆಯವರಿಗೂ ಬ್ರಾಹ್ಮಣರಿಗೂ ಸಂಬಂಧ ... ಕಾಗದದ ಅಂಶವನ್ನು ತಿಳಿಸತಕ್ಕದ್ದು.

ಎನ್ ಪ್ರೆಸ್ ಬೆಕ್ಷರ್ ಆಫೀಸರ್

ತಾಲ್ಲೋಕು ವರ್ತಮಾನಗಳು

ಚಿಕ್ಕನಾಯಕನಹಳ್ಳಿ —ಈ ಪ್ರಾಂತ್ಯದಲ್ಲೆಲ್ಲಾ ಪೈರು ಕಟಾವಾಗಿ ರೈತರು ತಮ್ಮ ಕೆಲಸದಲ್ಲಿದ್ದಾರೆ. ಅಕ್ಕಿ 6½ 7 ಸೇರು, ರಾಗಿ 18 20 ಸೇರು ಮಾರುತ್ತಿದೆ—8–10 ದಿನಗಳಿಂದಲೂ ಇಲ್ಲಿ ಇಲಿ ಬೀಳುತ್ತದೆಂದೂ, ಆದರೆ ಕೆಲವರು ಪ್ಲೇಗ್ ಬೀಳುತ್ತಿರುವುದನ್ನು ಮರೆಮಾಡುತ್ತಿದ್ದಾರೆಂದೂ ವದಂತಿ ಇದೆ. ಹಿಂದೆ 7 ವರ್ಷಗಳಿಂದ ಜನಗಳು ಗುಡಿಸಲುಗಳಲ್ಲಿ ಶ್ರಮಪಟ್ಟಿದ್ದು ಅವರಿಗೆ ಅನುಭವವಿಲ್ಲವೇ? ಈ ಕಾಲದಲ್ಲಿ ಸರ್ವರೂ ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದು ಒಳ್ಳೆಯದು —ನೆನ್ನೆ 19 ನೇ ತಾ॥ ಭಾನುವಾರ ಕೆಲವು ಮಂದಿ ಮಹನೀಯರು ಸೇರಿ ಈ ಊರಲ್ಲಿ ಒಂದು ಕೋಆಪರೇಟಿವ್ ಟ್ರೇಡಿಂಗ್ ಅಸೋಸಿಯೇಷನ್ನನ್ನು ಏರ್ಪಡಿಸಬೇಕೆಂದು ಒಂದು ಮೀಟಿಂಗನ್ನು ನಡಿಸಿದರು. ಇದರ ಷೇರುಗಳನ್ನು ರಿಜಿಸ್ಟ್ರಾರವರ ಪರವಾನಗಿ ಬಗ್ಗೆ ಠರಾವು ಮಾಡಿರುತ್ತಾರೆ. ಇದು ಕೆಲವು ಮಂದಿ ವರ್ತಕರಿಗೆ ಅಸೂಯೆಯನ್ನುಂಟು ಮಾಡುತ್ತದೆ. ಆದರೆ ಇದು ಸಾರ್ವೋದ್ಧಾರವಾಗಿ ನಡೆಯುವುದಕ್ಕೆ ತಕ್ಕ ಪ್ರಯತ್ನಗಳನ್ನು ಮುಖಂಡರು ಮಾಡುತ್ತಾರೆಂದು ನಂಬಿದೇನೆ.

ಬೆಂಗಳೂರು —ಬೆಂಗಳೂರಿಗೆ ಸುಮಾರು ಎರಡು ಮೈಲಿ ದೂರದಲ್ಲಿ ಅಂದರೆ ಪೂರ್ವಕ್ಕೆ ಲಾಲ್‌ಬಾಗ್ ಕಡೆಯಲ್ಲಿ ತೀಗಡಿತೋಪು ಎಂಬುವ ಸ್ಥಳದಲ್ಲಿ ಪ್ರತಿ ಭಾನುವಾರವೂ ದಂಡಿನ ಮತ್ತು ಬೆಂಗಳೂರಿನ ಜನಗಳು ಸೇರಿ ಜೂಜಾಡುವುದೂ, ಮತ್ತು ಕೋಳಿಗಳ ಪಂದ್ಯವಾಡುವುದೂ ಸಾಧಾರಣವಾಗಿ ವಾಡಿಕೆಯಾಗಿದೆ. ಆದರೆ ಇದಕ್ಕೆ ಸರಕಾರದವರ ಲೈಸೆನ್ಸು ಇಲ್ಲದ ಹಾಗೆ ಕಾಣುತ್ತದೆ. ಇದು ಇಲ್ಲದುದರಿಂದಲೇ ಇದೇ ತಿಂಗಳು 26 ನೇ ತಾ॥ ಹಿಂದೆ ನಡೆಯುತ್ತಿದ್ದ ಮೇರೆಗೆ ಜನಗಳೆಲ್ಲಾ ಸೇರಿ ಬಂದಿದ್ದರು. ಕಡೆಯಲ್ಲಿ ಜೂಜಾಡುತ್ತಿದ್ದ ಜನಗಳಲ್ಲಿ ಜಗಳ ಉಂಟಾಗಿ ಬಹಳ ಮಾರಾಮಾರಿ ನಡೆಯಿತು. ಇದರಲ್ಲಿ

...ನಿತ ಇಬ್ಬರು ಜನಗಳಿಗೆ ಬಹಳ ಗಾಯಗಳಾದವು. ಒಬ್ಬನು ತತಿ ಒಡೆ ...ಸತ್ತವನಂತೆ ಬಿದ್ದಿದ್ದನು. ಮತ್ತೊಬ್ಬನ ಎರಡು ಹಲ್ಲುಗಳು ಮುರಿ...ದ್ದವು. ಇವರುಗಳನ್ನು ಹೊಡೆದವರು ದಂಡಿನ ಜನಗಳಂತೆ. ಆ ವೇಳೆ ...ಆ ಸ್ಥಳದಲ್ಲಿ ಇವರುಗಳನ್ನು ವಿಚಾರಿಸುವವರು ಯಾರೂ ಇರಲಿಲ್ಲ. ...ನೋಟವು ಬಹಳ ಭಯಂಕರವಾಗಿತ್ತು. ಇವರ ವಿಷಯದಲ್ಲಿ ಇನ್ನು ...ಸರ್ಕಾರದವರು ಹೆಚ್ಚು ಗಮನಕೊಡುವರೆಂದು ನಂಬಿರುತ್ತೇವೆ.

...ಹೊಸೂರು —ಶಾಂಟೂನಾ ಎಂಬ ಗುಡಗಳು ಹಾಳು ಸವೆದ ...ಬೀದಿ ಬೀದಿಯಲ್ಲಿ ಓಡಾಡಿಕೊಂಡಿವೆ. ಬೇಸಗೆ ಕಾಲ ಸಮೀಪಿಸಿ ಇರೋದರಿಂದ ...ದಿನಂತೆ ಮನೆಗಳಿಗೆ ಅಗ್ನಿಭಯ ಸಂಭವಿಸಬಹುದೋ ಏನೋ ಎಂದು ...ದುಮಾಡಿದೆ — ಸ್ನಾನಪಾನವಾಡುವ ಧರ್ಮಛತ್ರದ ನೀರಿನ ಸಮೀಪ ...ದವು ಮೇತೆ ಜನಗಳು ಶೌಚಕ್ಕೆ ಮಾಡುವುದರಿಂದ ಬಹಳ ಅಸಹ್ಯ ...ದಿಯೂ, ಆರೋಗ್ಯಕ್ಕೆ ಕುಂದಕವೂ ಆಗಿದೆ. ಮರದ ಕೇರಿಯಿಂದ ...ಖಾನೆಗೆ ಹೋಗುವ ರಸ್ತೆಗಳಲ್ಲಿ ಗಲೀಜುಮಾಡುವದು ತಪ್ಪಲಿಲ್ಲ. ...ಲದಲ್ಲಿ ಮುಹೆನಾಲಿನ ದಿನ 9-10 ಘಂಟೆ ಒಳಗಾಗಿ ಇಲ್ಲವಾ...ವರ್ತಕರು ಹೇಳುತ್ತಾರೆ. ಇವುಗಳನ್ನೆಲ್ಲಾ ವಿಚಾರಿಸಿ ಸರಿಪಡಿ...ಕರು ಇವ್ವಾಗ್ಯೂ ಯಾಕೆ ಬಿಟ್ಟಿರುವರೋ ತಿಳಿಯದು —ತಾಲ್ಲೂಕು ...ದವರು ಸಪ್ಪ ಹತ್ತುದಿವಸ ರಾಜಕಾರ್ಯ ನಿರ್ವಾಹಕರೂ, ಪಯಾಳು ...ಮೊದಲಾದವರೂ ಎಂದಿನಾಗಿ ಜನಗಳು ಕೊಂಡಾಡುವದು ಕೇಳಿ ಸಂತೋ...ಷವು ಪೋಲೀಸ್ ಸ್ಟೇಷನ್ ಕಾನ್ಸ್ಟೇಬಲ್‌ಗಳು ಬೀಫ್ರನ್ಸಿಂದ ಸಂಚ...ರ, ರಾತ್ರಿ ಕಾಲದಲ್ಲಿ ಟವನ್ನನ್ನು ಪಾತವೆ ಇರುವದೂ ಜನಾವಾತ್ರ...ವಾಗಿ ಮುಂದೆ ನೋಡ ಬೇಕು.

...ಟೂರು —ಪನಾ ಚನಿವ್ನಗಿದೆ ಬೇಗೆಯು ಪ್ರಾರಂಭವಾಗಿ ಬೆಳೆಯು ...ಸಿಹುತ್ತರುವದು ರೈತರು ಕೆಲಸದಲ್ಲಿ ಆಸಕ್ತರಾಗಿರುವದರಿಂದ ...ಧಾರಣೆಗಳು ಇಳಿದಿಲ್ಲ. ಅಕ್ಕಿ 6-7 ಸೇರು, ರಾಗಿ 16-18 ...ವುತ್ತ —ಸ್ಯಾನಿಟರಿ ಇಲಾಖೆಯವರು ತುಂಬಾ ಮುತುವರ್ಜಿ ವಹಿಸಿ ...ಕೆಲಸಗಳನ್ನು ಮಾಡುತ್ತಿರುವರು. ಗಲ್ಲಿಗಳಲ್ಲಿ ಗಲೀಜು ಇರುವ ...ಅಂಥಾ ಗಲ್ಲಿಗಳನ್ನು ಅಗಲಮಾಡಿ ಕನ್ಸರ್ವೆನ್ಸಿ ರೋಡನ್ನು ...ವಕ್ಕೆ ಬಾಡಿಗಳ ಸಂಖ್ಯೆಯನ್ನು ಹೆಚ್ಚಿಸಿ ಸಾಕಷ್ಟು ಅಭಿ...ತಕ್ಕದ್ದು ಮ್ಯುನಿಸಿಪಾಲಿಟಿಯ ಮತ್ತು ಪ್ರಜೆಗಳ ಕರ್ತವ್ಯವಾಗಿರು...ಪೋಲೀಸ್ ಇಲಾಖೆಯವರು ರಸ್ತೆಯ ಗಲ್ಲಿಗಳಲ್ಲಿ ಪ್ರಜೆಗಳು ಹೇಸಿಗೆ ...ಹಾಗೆ ಇದನ್ನು ಉಪಯೋಗಿಸದೆ ಕೇವಲ ಅವಶ್ಯ —ಇಲ್ಲಿನ ಒಬ್ಬ ...ವರ್ತಕರು ಸಿನೆಮಟೋಗ್ರಾಫ್ ಎಂಬ ನೂತನ ಬೊತಕನ್ನಡಿ ...ಈ ತಿಂಗಳ ಟವನ್ನಿನಲ್ಲಿ ಪ್ರದರ್ಶನಮಾಡುವವರಾಗಿದ್ದಾರೆ — ...ವು ಇಲಾಖೆಯವರು ಈ ದಿನ ಮಾಡಿ ನಾಳೆ ಇಲ್ಲಿಗೆ ಬಂದು ನವಸಾಯ ...ದಲ್ಲಿ ನೂತನ ಯಂತ್ರಗಳಿಂದ ಮಾಡತಕ್ಕ ವಿಧಾನವನ್ನು ...ತೋರಿಸಿ ಕೊಡುವವರಾಗಿರುವರೆಂದೂ, ಇದಕ್ಕಾಗಿ ಯಂತ್ರ ...ಕೃಷಿ ಕೆಲಸದ ಸಾಧನಗಳನ್ನು ಕಳುಹಿಸಿಕೊಟ್ಟಿದಾರೆಂದೂ ತಿಳಿದು ...

...ಧಾನ್ಯಗಳ ಧಾರಣೆಗಳು ಯಥಾಪ್ರಕಾರವಿದೆ. ವ್ಯಾಪಾರಗಳ ಹೆಚ್ಚು ...ಒಡವರು ಜೀವನವಾಡುವುದು ಬಹು ತೊಂದರೆಯಾಗಿದೆ ...ಸರ್ಕಾರದವರು ಈ ವಿಷಯವನ್ನು ಅಂಗೀಕರಿಸಿ ಈ ಕೊರತೆ ...ಪರಿಹಾರಮಾಡಿಕೊಡಬೇಕಾಗಿ ಕೋರುತ್ತೇವೆ —ಮ್ಯುನಿಸಿಪಾಲಿಟಿ ...ಗಳ ಮೇಲೆ ಒಬ್ಬ ಜವಾನನನ್ನು ಏರ್ಪಡಿಸಿರುವುದರಿಂದ ಇನ್ನೂ ...ಗೆ ಎರಬಹುದೆಂಬ ನಿರೀಕ್ಷೆ ಇದೆ. ಮುಂದಕ್ಕೆ ಸುಮಾರು 3-4-5 ...ಹೊರವಲ್ಲಿರತಕ್ಕ 5-6 ಗ್ರಾಮಗಳಲ್ಲಿ ಕಾಲರಾ ರೋಗವು ವ್ಯಾಪಿಸಿ ...ನ್ನು ಕೊಂದುಬಿಟ್ಟಿತು. ಅಮಲ್ದಾರರೂ, ಡಾಕ್ಟರವರೂ, ಪೋಲೀಸ್ ...ರವರೂ ಆಯಾ ಸ್ಥಳಗಳನ್ನು ಹೊಕ್ಕು ಜನರಿಗೆ ವಿವೇಕವನ್ನು ಹೇಳಿ ...ಔಷಧಿಗಳನ್ನು ಮಾಡಿದ್ದರಲ್ಲಿ ಕೆಲವರು ಉಳುಕೊಂಡದ್ದು ಸಂತೋಷಕರ ...ಸರ್ಕಾರದವರು ನಡುವ ಪ್ರಯತ್ನಗಳಿಗೆ ಪ್ರಜೆಗಳು ಮನೆಯಿದ್ದರೆ ...ಹೀಗೆ ಏನು ಮಾಡ್ಯಾರು.— ತಾ 11 ನೇ ರಾತ್ರಿ ಈ ಊರಿನ ಮಧ್ಯೆ ...ದು ಒಂದು ಅಂಗಡಿಗೆ ಬೆಂಕಿ ಬಿದ್ದು ಠಲಾಗಿ ಹವಾಲ್ದಾರ್ ಬೋಳೆನಾದಂ ...ಕು ತುಂಬಾ ಮುಹನತ್ತಿನಿಂದ ಎಲ್ಲರನ್ನೂ ಎಚ್ಚರಗೊಳಿಸಿ ವಮ್ಮ ಕೆಲಸ ...ಗಿ ಸರ್ಕಾರದವರು ಆತನಿಗ ಬಹುಮಾನವನ್ನು ದಯಪಾಲಿಸಿದ್ದು ...ಸಂತೋಷ — ಅತಿ ಸಾರದ ಮಧ್ಯ ಎಲಿಯೂರು ಎಂಬ ಗ್ರಾಮದಲ್ಲಿ ...ಡ ಹುಡುಗನು ತೆಂಗಿನ ಮರವನ್ನು ಹತ್ತುತ್ತಾ ಇದ್ದು ಕೆಳಗೆ ಬಿದ್ದು ...ಮೃತಪಟ್ಟನು. ತಾ 21 ರಲ್ಲಿ ಸಾತನೂರು ಎಂಬ ಗ್ರಾಮದಲ್ಲಿ ...ಒಬ್ಬ ಹುಡುಗಿ ಕೆರೆಗೆ ಹೋಗಿದ್ದು ಆಕಸ್ಮಾತ್ತಾಗಿ ಬಿದ್ದು ಸತ್ತಳೆಂಬ ...ತಂದೆ ತಾಯಿಗಳಿಗೆ ದುಃಖವನ್ನುಂಟುಮಾಡಿದೆ —ಈ ತಾಲ್ಲೂಕಿಗೆ ...ಅನೇಕ ಗ್ರಾಮಗಳಲ್ಲಿ ದನಗಳಿಗೆ ಒಂದು ತೆರನಾದ ರೋಗವು (ಅಂದರೆ— ...ನೆ, ಶರೀರದ ಕೆಲವು ಭಾಗಗಳು ಊತುಕೊಳ್ಳುವುದು, ರೋಗ ತಗ...ಲಿದ ದಿನಗಳೊಳಗಾಗಿ ಸತ್ತುಹೋಗುವುದು.) ಈ ವಿಧವಾದ ರೋಗವು ...ಅನೇಕ ಜಾನುವಾರುಗಳ ನಷ್ಟವನ್ನುಂಟುಮಾಡಿತು. ಮಂಡ್ಯ, ನಾಗಮಂ...ಗಲ, ಮದ್ದೂರ್ ಈ ಭಾಗಗಳಿಗೆಲ್ಲಾ ಮುಂದೆಯೂ ಮನುಷ್ಯರ ...ವಿಷಯದ ಮೇಲೆ ಸರ್ಕಾರದವರು ಇಲ್ಲಿ ಒಂದು ಪಶುವೈದ್ಯ ಚಿಕಿತ್ಸಾ...ಲಯವನ್ನು ಏರ್ಪಡಿಸಿದರೆ ತುಂಬಾ ಸಹಾಯವೂ ಪರ್ಮಾರ್ಥವೂ ಆಗಿರುವದು ...ಹಾಸ —ಸದ್ಯ ಸಾಂಕ್ರಾಮಿಕ ವ್ಯಾಧಿಗಳೇನೂ ಕಾಣುತ್ತಿಲ್ಲ. ಧಾನ್ಯ...ದ ಕ್ಷಾಮಕಾಲದಂತೆಯೇ ಇದೆ. ಮ್ಯುನಿಸಿಪಾಲಿಟಿಯ ಕಾರ್ಯಗಳು ...ಸಮರ್ಪಕವಾಗಿ ನಡೆಯುತ್ತಿಲ್ಲ —ಈ ಊರು ನಿವಾಸಿಯಾದ ಕಾಡಿ...ಬವಳ ಅಳಿಯ ಚನ್ನಬಂಗಯ್ಯ ಎಂಬವನನ್ನು ತಾ. 14 ನೇ ಸೋಮ...ವಾರ ರಾತ್ರಿ ಈ ಟವನ್ನಿಗೆ ಸುಮಾರು ಅರ್ಧಮೈಲಿ ದೂರದಲ್ಲಿರುವ ...ದ ಹೊಲದ ಹೊಲಗೇರಿ ಸಮೀಪದ ಇಟ್ಟಿಗೆ ಸಿದ್ಧನ ಗದ್ದೆಯಲ್ಲಿ ...ಸು 5-6 ಮಂದಿ ಸೇರಿಕೊಂಡು ಬಹು ಕ್ರೂರವಾದ ರೀತಿಯಲ್ಲಿ ...ಕೊಂದರು. ಇದು ಮಾರನೇ ದಿನ ಗೊತ್ತಾಗಿ ವಾರಸುದಾರರೂ ಪೋಲೀ...ಸರೂ ಹೋಗಿ ನೋಡಲಾಗಿ ಆ ಶವವು ತುಂಡು ತುಂಡಾಗಿ ಕತ್ತರಿಸಲ್ಪ...ಟ್ಟಿದ್ದಿತು. ತಾಳಿ ಮುತ್ತೈಯೂ ಆಗ ಶವವು ದಫನ್‌ಗೆ ಕೊಡಲ್ಪ...ಟ್ಟಿತು. ಪತ್ತೆ ತಂದೂ ನಡೆದು, ಖಲಂದರ್‌ಸಾಬಿ, ದಸ್ತಗಿರಿ ...ಸಿಂಗ, ಹಾಸನ, ಒಬ್ಬ ಹೆಂಗಸು ದಸ್ತಗಿರಿಯವನಾಗಿ ಜೈಲಿನಲ್ಲಿಡಲ್ಪಟ್ಟ...ರು. ಕೈಕೆ ನಿಂಗ ಎಂಬವನು ಮಾತ್ರ ಕೃತ್ಯವನ್ನು ಒಪ್ಪಿಕೊಳ್ಳುತ್ತಾ ...ನಂತೆ. ಇನ್ನೊಬ್ಬನು ಆ ದಿನವೇ ಎಲ್ಲಿಯೋ ಪರಾರಿಯಾಗಿದ್ದಾನೆ. ಈ ಕೊಲೆಯಲ್ಲಿ ಮೃತನಾದವನು ಈಗ್ಗೆ ಕೆಲವು ದಿನಗಳಿಂದಲೂ ಈ ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳಿಗೆ ತನ್ನ ಹಗೆಗಳ ಹೆಸರನ್ನು ನಮೂದಿಸಿ. ಅವರು ತನ್ನನ್ನು ಶೀಘ್ರವಾಗಿ ಕೊಲ್ಲುವದಕ್ಕೆ ಹುನಾರು ಮಾಡಿಕೊಂಡಿದಾರೆಂದೂ, ತನಗೆ ಪೋಲೀಸ್ ಬಂದೋಬಸ್ತು ದಯಪಾಲಿಸಬೇಕೆಂದೂ 5-6 ಅರ್ಜಿಗಳನ್ನು ಬರೆದುಕೊಂಡಿದ್ದನಂತೆ. ಮತ್ತು ಇವನು ಖೂನಿಯಾದ ದಿವಸದ ಹಗಲಿನಲ್ಲಿಯೂ ಕೊಡ ತಾಲ್ಲೂಕಿಗೆ ಅಂಥಾ ಒಂದು ಅರ್ಜಿಯನ್ನು ಕೊಟ್ಟಿದ್ದನಂತೆ. ಅವನ ಅರ್ಜಿಗಳಿಗೆ ಸರ್ಕಾರದವರು ಎಷ್ಟುಮಟ್ಟಿಗೆ ಗಮನಕೊಟ್ಟರೋ ತಿಳಿಯಲಿಲ್ಲ. ಈ ಕೊಲೆಗೆ ಒಂದು ಜಮೀನಿನ ವ್ಯಾಜ್ಯವೇ ಮೂಲಕಾರಣವೆಂದು ತಿಳಿದು ಬಂದಿದೆ. ಇನ್ನು ಮುಂದೆ ವಿಚಾರಣೆಯಲ್ಲಿ ಇದು ಹೇಗೆ ಪರಿಣಮಿಸುವುದೋ ನಿರೀಕ್ಷಿಸಬೇಕಾಗಿದೆ —ಕಳೆದ ವಾರ ಆಲೂರು ಸಂತೆಗೆ ಹೋಗಿ ಬರುತ್ತಿದ್ದ ಒಬ್ಬ ಹೆಂಗಸನ್ನು ಕೆಲವು ಮಂದಿ ಪೋಕರಿಗಳು ಸೇರಿಕೊಂಡು, ಈ ಊರಿಗೆ ಸಮೀಪದಲ್ಲಿ ಎಮರಿಸಿ ಪುಸಲಾಯಿಸಿದ್ದಾಗಿಯೂ, ಅವಳು ಒಪ್ಪದೆ ಹೋದುದರಿಂದ 3-4 ಮಂದಿಯೂ ಸೇರಿ ಅವಳಿಗೆ ನಾನಾತರದ ಹಿಂಸೆಮಾಡಿ ಪರಾರಿಯಾಗಿರುವುದಾಗಿಯೂ ವರ್ತಮಾನವಿದೆ. ಸರ್ಕಾರದವರು ಈ ಕೃತ್ಯ ನಡಿಸಿದವರನ್ನು ಪತ್ತೆ ಮಾಡಿ ಶಿಕ್ಷಿಸಿ ಕೀರ್ತಿ ಪಡೆಯಬೇಕಾಗಿದೆ —ಕಳೆದ [illegible] ಈ ಊರು ಮಧ್ಯಭಾಗದಲ್ಲಿಯೇ ಇರುವ ವಿಸ್ತರ ಬೀದಿಯಲ್ಲಿ [illegible] ಕಾನ್ಸ್ಟೇಬಲ್ ಈರ ಎಂಬವನನ್ನು ಖಾಸಿ, ದೊಡ್ಡ, ಇನ್ನಿಬ್ಬರು ಸಹ ಸೇರಿಕೊಂಡು, ಕೊಲೆಮಾಡ ಬೇಕೆನ್ನಿಸಿ ಹೊಡೆದ ಪೆಟ್ಟು ಆಕಸ್ಮಾತ್ತಾಗಿ ತಪ್ಪಿ ಕೆನ್ನೆ ಮೇಲೆ ಬಿದ್ದು, ಅಷ್ಟರಲ್ಲಿಯೇ ಜನಗಳು ಸೇರಿ ಬಿಡಿಸಿಕೊಂಡುದರಿಂದ ಅವನ ಪ್ರಾಣ ಉಳಿದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಲಿದ್ದಾನೆ —ಶಿವಮೊಗ್ಗಾ ಡಿಸ್ಟ್ರಿಕ್ಟಿನ ಕೆಲವು ಗ್ರಾಮಗಳಲ್ಲಿ ಒಬ್ಬನು ಪೋಲೀಸು ಸೂಪರಿಂಟೆಂಡೂ, ಪೋಸ್ಟಲ್ ಇನ್ಸ್ಪೆಕ್ಟರೆಂದೂ ಸುಳ್ಳು ವೇಷಹಾಕಿಕೊಂಡು ಸರಬರಾಯಿ ಮಾಡಿಸಿಕೊಳ್ಳುತ್ತಾ ತಿರುಗುತ್ತಿದ್ದು ಸಿಕ್ಕಿರುತ್ತಾನೆ. ಕೆಲ್‌ಸನ್ ಎಂಬ ಚಟ್ಟಿಗಾರನನ್ನು ಇಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ವಿಚಾರಣೆಗಾಗಿ ಇಟ್ಟುಕೊಂಡಿದ್ದಾರೆ. ಈ ಮೊಕದ್ದಮೆ ನಾಳೆ ವಿಚಾರಣೆಯಾಗುವುದಾಗಿದೆ.

ಇಂಡಿಯಾ ದೇಶದ ವೃತ್ತಾಂತಗಳು.

ಚೈನಾ ಎಂಬ ಜಹಜು 82,57,500 ರೂಪಾಯಿನ ಚಿನ್ನವನ್ನು, ಮೆಡೀನಾ ಎಂಬ ಜಹಜು 54,60,000 ರೂಪಾಯಿನ ಚಿನ್ನವನ್ನು ಹಿಂದುಸ್ಥಾನಕ್ಕೆ ತರುತ್ತಿರುವವು.

ಮಧುರೆ ಜಿಲ್ಲಾ ಪುತ್ತೂರು ಗ್ರಾಮದಲ್ಲಿ ಬೆಂಕಿಬಿದ್ದು ಐವತ್ತು ಮನೆಗಳು ಸಂಪೂರ್ಣವಾಗಿ ಸುಟ್ಟುಹೋದವು. ಗ್ರಾಮಸ್ಥರು ಮನೆಗಳಲ್ಲಿ ತುಂಬಿಕೊಂಡಿದ್ದ ಧಾನ್ಯವೆಲ್ಲಾ ನಾಶವಾಗಿ ಬಹಳ ಸಂಕಟಪಡುತ್ತಿದ್ದಾರೆ.

ಮದರಾಸ್ ಆಧಿಪತ್ಯದಲ್ಲಿ ಬಾಲ ವಿದ್ಯಾಭ್ಯಾಸವನ್ನು ಹರಡುವುದಕ್ಕೋಸ್ಕರ ಇಂಡಿಯಾ ಗವರ್ನ್‌ಮೆಂಟಿನವರು ಇನ್ನು ಮುಂದೆ ಪ್ರತಿ ವರುಷವೂ 25,000 ರೂಪಾಯಿನಂತೆ ಗ್ರಾಂಟು ಕೊಡುವುದಾಗಿ ಸ್ಯಾಂಕ್ಷನ್ ಮಾಡಿದ್ದಾರೆ.

ನಮ್ಮ ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್ ಪ್ರಭುಗಳಿಗೆ ಸಂಭವಿಸಿದ ಗಂಡವನ್ನು ಕೇಳಿ ಚೀನಾ ಪ್ರಜಾಪ್ರಭುತ್ವದ ಪ್ರೆಸಿಡೆಂಟರಾದ ಯುವಾನ್‌ಷಿಕಾಯಿಯವರು ವಿಷಾದಪಟ್ಟು ಅವರಿಗೆ ತಮ್ಮ ಸಂತಾಪವನ್ನು ತಂತಿಯ ಮೂಲಕ ತಿಳಿಸಿರುತ್ತಾರೆ.

ಬಿಕನೀರ್ ಸಂಸ್ಥಾನದ ರಾಜರು ತಮ್ಮ ಸಹೋದರಿಯನ್ನು ಪಾಲ್ಗಾಣ ವಿಧಿ ರಾಜರಿಗೆ ಕೊಟ್ಟು ಮೊನ್ನೆ ಮಂಗಳವಾರ ವಿವಾಹಮಾಡಿದರು. ಈ ವಿವಾಹಕ್ಕೆ ಗಂಡಿನ ಕಡೆಯವರು ಎರಡು ಲಕ್ಷ ರೂಪಾಯಿ ಖರ್ಚುಮಾಡಿರುತ್ತಾರೆ. ಉತ್ಸವಗಳು ಈ ವಾರವೆಲ್ಲಾ ಜರುಗುವವು.

ಪೂರ್ವ ಬಂಗಾಳಕ್ಕೆ ಸೇರಿದ ಪಬ್ನಾ ಡಿಸ್ಟ್ರಿಕ್ಟಿನ ಒಂದು ಗ್ರಾಮದಲ್ಲಿ ಇಪ್ಪತ್ತನಾಲ್ಕು ಜನ ಕಳ್ಳರು ವೇಷಮರಸಿಕೊಂಡು ವಾಬುಯಮುನವಾರ ಅಧಿಕಾರಿ ಎಂಬ ಸಾಹುಕಾರನ ಮನೆಗೆ ನುಗ್ಗಿ ಸುಮಾರು 3,000 ರೂಪಾಯಿನ ಆಸ್ತಿಯನ್ನು ದೋಚಿಕೊಂಡು ಹೋದರು.

ಕಲ್ಕತ್ತಾ ಪಟ್ಟಣದಲ್ಲಿ ನವಾಬ್ ಸೈಯದ್ ಅಸ್ಗರ್ ಎಂಬ ಮಹಮ್ಮದೀಯ ದೊಡ್ಡ ಮನುಷ್ಯನ ಬಳಿ ಕೋಕೈನ್ ಎಂಬ ಮದ್ದಿನ ಕೆಲವು ಪೊಟ್ಟಣಗಳು ಸಿಕ್ಕಿ ಪೋಲೀಸಿನವರು ಆತನನ್ನು ದಸ್ತಗಿರಿ ಮಾಡಿದರು. ಮ್ಯಾಜಿಸ್ಟ್ರೇಟರು ಆ ನವಾಬನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಪೂರ್ವಬಂಗಾಳಕ್ಕೆ ಸೇರಿದ ಪತ್ರಾ ಎಂಬ ಊರಿನಲ್ಲಿ ನಾಲ್ವತ್ತು ಜನ ಕಳ್ಳರು ಸೇರಿ ಭಾರಿ ಜಮೀನ್‌ದಾರನೂ ಹಣವಂತನೂ ಆದ ಬಾಬುಕಾಳೀಚಂದ್ ಕುಂಡು ಎಂಬವರ ಮನೆಗೆ ನುಗ್ಗಿ ಆ ಊರಿನವರನ್ನೆಲ್ಲಾ ಗಾಬರಿಪಡಿಸಿ ಸುಮಾರು 41,000 ರೂಪಾಯಿನ ನಗನಾಣ್ಯಗಳನ್ನು ದೋಚಿಕೊಂಡು ಹೋದರು.

ಕಳೆದ ಡಿಸೆಂಬರ್ ತಿಂಗಳಲ್ಲಿ ಕಲ್ಕತ್ತಾ ಪಟ್ಟಣದೊಳಗೆ ಇಪ್ಪತ್ತೆಂಟು ಕಡೆಗಳಲ್ಲಿ ಬೆಂಕಿಬಿದ್ದು ಲಕ್ಷಾಂತರ ರೂಪಾಯಿನ ಸರಕುಗಳು ಸುಟ್ಟುಹೋದವು. ಈ ಜನವರಿ ತಿಂಗಳಲ್ಲಿ ಕೂಡ ಹದಿನೈದು ಕಡೆಗಳಲ್ಲಿ ಬೆಂಕಿಬಿದ್ದಿದೆ. ಕಳೆದ ವಾರ ಹವಿನಾರನೆಯ ಕಡೆ ಬೆಂಕಿಬಿದ್ದು ಸುಮಾರು 10,000 ಹತ್ತಿ ಮೂಟೆಗಳು ನಾಶವಾದವು.

ಪೂರ್ವಬಂಗಾಳಕ್ಕೆ ಸೇರಿದ ಕೊಮಿಲಾ ಪಟ್ಟಣದಲ್ಲಿ ಬಾಬುಚಂದ್ರ ಕುಮಾರಘೋಷ್ ಎಂಬ ವಕೀಲನ ಕುಮಾರನಾದ ದೇವೇಂದ್ರನೆಂಬವನನ್ನು ಅವನು ಒಂದು ಡಕಾಯಿತಿ ಮೊಕದ್ದಮೆಯಲ್ಲಿ ಪೋಲೀಸಿನವರಿಗೆ ಸಂಗತಿಗಳನ್ನು ತಿಳಿಸಿದನೆಂಬ ಆಗ್ರಹದ ಮೇಲೆ ಅವನ ವೈರಿಗಳ್ಯಾರೋ ರಾತ್ರಿ ಅವನು ಮನೆಗೆ ಹೋಗುತ್ತಿದ್ದಾಗ ಗುಂಡಿನಿಂದ ಹೊಡೆದು ಕೊಂದುಹಾಕಿ ಪರಾರಿಯಾದರು. ಈ ಘಾತುಕರ್ಯಾರೋ ಇನ್ನೂ ಪತ್ತೆ ಆಗಲಿಲ್ಲ.

ಮಧುರೆ ಜಿಲ್ಲಾ ಅಮ್ಮಯ್ಯನಾಯಕನೂರಿನಲ್ಲಿ ಒಂದು ದನಗಳ ಕೊಟ್ಟಿಗೆಗೆ ಬೆಂಕಿ ಹಾಕಿದ ಚಿದಂಬರ ಮಣಿಯನನ್ನು ಒಬ್ಬ ಪೋಲೀಸಿನವನು ಹಿಡಿಯುವುದಕ್ಕೆ ಹೋದಾಗ ಅವನು ಪೋಲೀಸಿನವನನ್ನು ಚಾಕುವಿನಿಂದ ತಿವಿದು ಘೋರಾ ಗಾಯಮಾಡಿದನು. ಇದಕ್ಕಾಗಿ ಅವನಿಗೆ ಹದಿನೆಂಟು ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟಿತು.

ಆಗ್ರಾ ಪಟ್ಟಣದಲ್ಲಿರುವ ಸೆಂಟ್ ಜಾನ್ ಎಂಬ ವಿದ್ಯಾಶಾಲೆಯಲ್ಲಿ ಶಾಸ್ತ್ರ ಬೋಧನೆಗೆ ಅನುಕೂಲವಾದ ಒಂದು ಭಾಗವನ್ನು ಕಟ್ಟುವುದಕ್ಕೆ ಚಂದಾ ಮೂಲಕ ಒಂದು ಲಕ್ಷ ರೂಪಾಯಿ ಕೂಡಿಸಿದ ಪಕ್ಷಕ್ಕೆ ಆ ಫಂಡಿಗೆ 15,000 ರೂಪಾಯಿ ಚಂದಾ ಕೊಡುತ್ತೇನೆಂದು ಡಾಕ್ಟರ್ ಹಂಟರ್‌ರವರು ಇಂಗ್ಲಾಂಡಿನಿಂದ ಬರೆದು ತಿಳಿಸಿದ್ದಾರೆ.

ಕನ್ನಾನೂರಿನಲ್ಲಿರುವ 88 ನೇ ಕರ್ನಾಟಕ ಸಿಪಾಯಿ ಸೈನ್ಯದ ಇಲಾಖೆಯಲ್ಲಿ ಸರ್ಕಾರದವರು ಹಲವು ಮಂದಿ ಉದ್ಯೋಗದಾರರನ್ನೂ, ನಾನ್ ಕಮಿಷನ್ ಆಫೀಸರುಗಳನ್ನೂ ದಸ್ತಗಿರಿಮಾಡಿಸಿ ತನಿಖೆ ನಡಿಸುತ್ತಿದ್ದಾರೆ. ಈ ಉದ್ಯೋಗದಾರರೆಲ್ಲಾ ಸೇರಿ ಆ ರೆಜಿಮೆಂಟಿನ ಹಣದಲ್ಲಿ ಸುಮಾರು 12,000 ರೂಪಾಯಿ ತಮಗೆ ದುರುಪಯೋಗಪಡಿಸಿರುತ್ತಾರೆಂದು ಪ್ರಕಟವಾಗಿದೆ.

ಆಗ್ರಾ ಪಟ್ಟಣದ ಆಸ್ಪತ್ರೆಯಲ್ಲಿ ವೈದ್ಯನಾಗಿದ್ದ ಕ್ಲಾರ್ಕ್ ಎಂಬವನು ಫುಲ್‌ಹಾಂ ಎಂಬಾತನ ಹೆಂಡತಿಯ ಕೂಡ ಸೇರಿಕೊಂಡು ಕೊಲೆಕಾರರಿಂದ ತನ್ನ ಹೆಂಡತಿಯನ್ನು ಕೊಲ್ಲಿಸಿದನೆಂದೂ, ಅವರಿಬ್ಬರೂ ಒಂದಾಗಿ ಫುಲ್‌ಹಾಂ ಎಂಬಾತನನ್ನು ವಿಷಹಾಕಿ ಕೊಂದರೆಂದೂ ಮೊಕದ್ದಮೆ ಬಂದು ಸೆಷನ್ಸ್ ವಿಚಾರಣೆಗೆ ಗುರಿಮಾಡಲ್ಪಟ್ಟಿದಾರೆ. ಅವರಿಬ್ಬರ ಪತ್ರಗಳೂ ಆ ಕೃತ್ಯ ನಡೆದದ್ದನ್ನು ಸವಿಸ್ತಾರವಾಗಿ ವಿವರಿಸಿ ವಾಙ್ಮೂಲ ಕೊಟ್ಟಿರುವರು.

ಬರ್ಮಾ ಆಧಿಪತ್ಯದ ಮೆತ್ತಾ ಇಲಾಖೆಯಲ್ಲಿ ಆನೆಗಳ ಬೆಳೆ ಹಣವನ್ನು ತಿಂದುಹಾಕಿದರೆಂದು ಫ್ರೆಸ್ಕೊ ಬರ್ಟ್, ಡಿ ಗುಪ್ತ, ಮುಖರ್ಜಿ ಎಂಬೀ ಮೂರು ಮಂದಿ ನೌಕರರಿಗೂ ಏಳೈದು ವರುಷ ಕಠಿಣಸಜಾ ಆಗಿತ್ತು. ಇವರು ಬಂದೀಖಾನೆಯಲ್ಲಿ ಬಹಳ ಸಭ್ಯರಾಗಿಯೂ, ಒಳ್ಳೆ ವಿಧೇಯತೆಯಿಂದಲೂ ನಡೆದುಕೊಂಡು ಬಂದಿರುತ್ತಾರೆಂಬ ಸಂಗತಿಯನ್ನು ಗವರ್ನ್‌ಮೆಂಟಿನವರು ತಿಳಿದು ಬಾಕಿ ಉಳಿದಿದ್ದ ಎರಡೂವರೆ ವರುಷದ ಸಜವನ್ನು ಮಾಫ್ ಮಾಡಿ ಅವರನ್ನು ಜೈಲಿನಿಂದ ಬಿಡಿಸಿಬಿಟ್ಟರು.

ರಾವಲ್‌ಪಿಂಡಿಯಲ್ಲಿರುವ ಪ್ರತಿನಿಧಿ ಬ್ರಾಹ್ಮಣ ಮಹಾ ಸಭೆಯ ಮುಖಂಡರು ಕಳೆದ ವಾರ ಹಿಂದುಸ್ಥಾನದ ಸರ್ವಸೇನಾಪತಿಯ ಬಳಿಗೆ ಹೋಗಿ ಅವರ ಭೇಟಿಮಾಡಿ, ಇನ್ನು ಮುಂದೆ ಹಿಂದುಸ್ಥಾನದ ಸೈನ್ಯಕ್ಕೆ ಬ್ರಾಹ್ಮಣರನ್ನು ಸಿಪಾಯಿ ಕೆಲಸಕ್ಕೆ ನೇಮಕಮಾಡಿಕೊಳ್ಳಬೇಕೆಂದು ಕೇಳಿಕೊಂಡರು. ಸೇನಾಪತಿಯು ಅವರನ್ನು ಮನ್ನಿಸಿ, ಸೈನ್ಯದಲ್ಲಿ ಬ್ರಾಹ್ಮಣ ಉದ್ಯೋಗದಾರರು ಬಹಳ ಚಟುವಟಿಕೆಯಿಂದ ಕೆಲಸಮಾಡುತ್ತಿದ್ದಾರೆಂದೂ, ಅವರ ಪ್ರಾರ್ಥನೆಯನ್ನು ನೆರವೇರಿಸಲು ತಮ್ಮ ಕೈಲಾಗುವ ಮಟ್ಟಿಗೂ ಪ್ರಯತ್ನಮಾಡುತ್ತೇವೆಂದೂ ಜವಾಬು ದಯಪಾಲಿಸಿದರು.

ಸಂಯುಕ್ತ ಆಧಿಪತ್ಯಗಳ ಗವರ್ನ್‌ಮೆಂಟಿನವರು ಅಲ್ಲಿನ ಸರ್ಕಾರಿ ನೌಕರರೆಲ್ಲರಿಗೂ ಆಜ್ಞೆಮಾಡಿರುವುದೇನೆಂದರೆ—ರಾಜಕೀಯ ವಿಷಯಗಳನ್ನು ಕುರಿತು ಚರ್ಚಿಸುವುದರಲ್ಲಿ ಸರ್ಕಾರಿ ಉದ್ಯೋಗಸ್ಥರ್ಯಾರೂ ಭಾಗಿಗಳಾಗಕೂಡದು, ನ್ಯಾಯವಿಧಾಯಕ ಕೌನ್ಸಿಲ್ ಮೆಂಬರುಗಳ ಚುನಾವಣೆ ನಡೆದಾಗ ಕೆಲವು ನೌಕರರು ಸಮ್ಮತಿ ಹಾಕಿಸುವುದರಲ್ಲಿ ಪ್ರಜೆಗಳಿಗೆ ಸಹಾಯ ಮತ್ತು ಪ್ರೋತ್ಸಾಹ ಮಾಡಿದರೆಂದು ಗೊತ್ತಾಗಿದೆ. ಈ ರೀತಿ ಯಾವ ನೌಕರನು ವರ್ತಿಸಿದ್ದರಿಂದ ಸರ್ಕಾರದವರು ಆತನಿಗೆ ಇನ್ನೊಂದು ವರುಷ ಸಂಬಳ ಬಡ್ತಿ ಮಾಡದಂತೆ ನಿಲ್ಲಿಸಿರುತ್ತಾರೆ.

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಸಿಂಧುದೇಶದಲ್ಲಿ ಮಹಮ್ಮದೀಯರು ತಮ್ಮ ಮಕ್ಕಳಿಗೆ ವಿದ್ಯೆ ಕಲಿಸುವುದಕ್ಕೆ ಪ್ರತ್ಯೇಕವಾದ ತೆರಿಗೆಯನ್ನು ಸರ್ಕಾರಕ್ಕೆ ಕೊಡಲು ಒಪ್ಪಿಕೊಂಡಿದ್ದಾರೆ. ಜಮೀನ್‌ದಾರರೂ, ಜಹಗೀರುದಾರರೂ, ವ್ಯಾಪಾರಸ್ಥರೂ, ನೌಕರಮಾನ್ಯರುಗಳೂ, ಬೇರೆ ಬೇರೆ ಸಂಘಗಳವರೂ ಸಭೆಗಳನ್ನು ನಡಿಸಿ, ಸರ್ಕಾರದವರು ವಿದ್ಯೆಯನ್ನು ಹರಡಬೇಕೆಂದೂ, ಇದಕ್ಕಾಗಿ ತೆರಿಗೆ ಹಾಕಿದರೆ ಕೊಡಲು ಸಿದ್ಧರಾಗಿದ್ದೇವೆಂದೂ ಗವರ್ನರವರಿಗೆ ಅರಿಕೆ ಮಾಡಿಕೊಂಡಿದ್ದಾರೆ. ಗವರ್ನ್‌ಮೆಂಟಿನವರು ಆ ಅರ್ಥಕ್ಕೆ ಒಂದು ಮಸೂದೆ ಕಾನೂನ್ ತಯಾರುಮಾಡಿಸಿ, ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ಇಟ್ಟಿರುವರು.

ಬೊಂಬಾಯಿ ಅಧಿಪತ್ಯಕ್ಕೆ ಸೇರಿದ ಅಹಮದ್‌ನಗರ ಜಿಲ್ಲೆಯಲ್ಲಿ ಎರಡು ತಾಲ್ಲೂಕುಗಳು ವಿನಾ ಉಳಿದ ಕಡೆಗಳಲ್ಲೆಲ್ಲಾ ಮೂರು ವರುಷಗಳಿಂದಲೂ ಮಳೆ ಬಾರದೆ ಪ್ರಜೆಗಳು ಕಷ್ಟಪಡುತ್ತಿರುವುದಲ್ಲದೆ ಮೇವಾಗಲಿ ನೀರಾಗಲಿ ಇಲ್ಲದೆ ಅನೇಕಾನೇಕ ಗೋಕಾಯಿಗಳು ಸತ್ತುಹೋದವು. ಸರ್ಕಾರದವರು ಇತರ ಕಡೆಗಳಿಂದ ಹುಲ್ಲನ್ನು ತರಿಸಿ ಒದಗಿಸುತ್ತಿದ್ದಾರಾದರೂ ಆ ಮೂಗುಪ್ರಾಣಿಗಳು ನಾಶವಾಗುತ್ತಿವೆ. ಈಗ ಆ ಪ್ರಾಂತ್ಯದಲ್ಲಿ ಉಳಿದಿರುವ ಗೋಕಾಯಿಗಳು ಬಹಳ ಕೃಶಹೊಂದಿ ದುಃಖಕರವಾದ ಸ್ಥಿತಿಯಲ್ಲಿರುವವು. ಮುಖ್ಯವಾಗಿ ನೀರಿನ ಕ್ಷಾಮವು ಅಲ್ಲಿ ನಿವಾರಿಸಲಶಕ್ಯವಾಗಿದೆ ಎಂಬದಾಗಿ ಆ ಜಿಲ್ಲಾ ಕಲೆಕ್ಟರವರು ಪ್ರಕಟಮಾಡಿರುತ್ತಾರೆ.

ಡೆಹಲಿ ಪಟ್ಟಣದ ಚಾಂದನಿ ಚೌಕದಲ್ಲಿ ಯಾವ ಬಂಗಲೆ ಕಟ್ಟಡದಿಂದ ವೈಸ್‌ರಾಯರ ಮೇಲೆ ಸಿಡಿಮದ್ದಿನ ಗುಂಡು ಎಸೆಯಲ್ಪಟ್ಟಿತೋ ಆ ಕಟ್ಟಡವನ್ನೆಲ್ಲಾ ಡೆಹಲಿ ಮ್ಯುನಿಸಿಪಾಲಿಟಿಯವರು ಮಾಲೀಕರಿಂದ ಕೊಂಡುಕೊಂಡು ಕೆಡವಿ ಬಿಟ್ಟು, ನೆಲಸಮಮಾಡಿ, ಎಂದೆಂದಿಗೂ ಆ ಸ್ಥಳವು ಅವಮಾನಕರವಾದ ಪ್ರದೇಶವೆಂದು ಗೊತ್ತಾಗುವಂತೆ ಮಾಡಬೇಕೆಂದೂ, ಇನ್ನು ಮುಂದೆ ಆ ಚೌಕದ ಮಾರ್ಗವಾಗಿ ಗವರ್ನ್‌ಮೆಂಟಿನ ಯಾವ ಉತ್ಸವಗಳೂ ಹಾದುಹೋಗ ಕೂಡದೆಂದೂ ಡೆಹಲಿ ಮ್ಯುನಿಸಿಪಾಲಿಟಿಯವರು ನಿಶ್ಚಯಿಸಿಕೊಂಡು, ಆ ಬಂಗಲೆಯ ಕ್ರಯದ ಹಣವನ್ನು ಹೊಸ ಕಂದಾಯದ ಮೂಲಕ ಪ್ರಜೆಗಳಿಂದ ಎತ್ತಬೇಕೆಂದು ಯೋಚಿಸುತ್ತಿದ್ದಾರೆ.

ಸಿಲೋನ್ ದ್ವೀಪಕ್ಕೆ ಸೇರಿದ ಊವಾ ಎಂಬ ಪ್ರಾಂತ್ಯದಲ್ಲಿ ಕಳೆದ ಎರಡು ವಾರಗಳಲ್ಲಿ ಬಹಳ ಹವಾ ಬದಲಾವಣೆ ಹೊಂದಿತು ಅಪಾರವಾದ ನಷ್ಟವುಂಟಾಗಿದೆ ಏಳು ಗಂಟೆ ಹೊತ್ತಿನೊಳಗಾಗಿ ಏಳು ಅಂಗುಲ ಪ್ರಮಾಣ ಮಳೆ ಸುರಿದು ಪೈರು ಪಚ್ಚೆಗಳೆಲ್ಲಾ ಮುಳುಗಿ ನಾಶವಾದವು ರಸ್ತೆಗಳು ಕೆಟ್ಟು ಹೋದವು ಇನ್ನೆರಡು ತಿಂಗಳ ತನಕ ಅವುಗಳನ್ನು ಸರಿಯಾಗಿ ನಡೆಯುವುದಿಲ್ಲ 150 ಅಡಿ ಉದ್ದದ ಸೇತುವೆ ಕೊಚ್ಚಿ ಹೋಯಿತು ಪ್ರಜೆಗಳು ಭಯಂಕರವಾದ ಕ್ಷಾಮದಿಂದ ಕೊರಗುತ್ತಿದ್ದಾರೆ ಸರ್ಕಾರದವರೂ ಪುಣ್ಯವಂತರೂ ದ್ರವ್ಯವನ್ನು ಕೂಡಿಸಿ ಆ ಪ್ರಜೆಗಳನ್ನು ಕಾಪಾಡುತ್ತಾ ಬಂದಿದ್ದಾರೆ ಈ ಜನವರಿ ತಿಂಗಳು ಸಿಲೋನ್ ದ್ವೀಪದಲ್ಲಿ ಮಹಾ ಘೋರಸಂಕಟವಾದ ಕಾಲವೆಂದು ಎಣಿಸಲ್ಪಡುತ್ತದೆ

ಕಳೆದ ಡಿಸೆಂಬರ್ ತಾ ೨೩ರಲ್ಲಿ ದೆಹಲಿ ನಗರವನ್ನು ಪ್ರವೇಶಮಾಡುವ ಉತ್ಸವಸಂಭ್ರಮದ ಕಾಲದಲ್ಲಿ ದುರಾತ್ಮರಿಗಳ್ಯಾರೋ ಸಿಡಿಮದ್ದಿನ ಗುಂಡನ್ನು ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್ ಪ್ರಭುಗಳ ಮೇಲೆ ಎಸೆದರಷ್ಟೆ ದೇವರ ದಯದಿಂದ ಅವರಿಗೆ ಪ್ರಾಣಭಯವೇನೂ ಇಲ್ಲದೆ ಈಗ ಸುಖವಾಗುತ್ತಿದ್ದಾರೆ ಅಂಥಾ ಕಷ್ಟಸಮಯದಲ್ಲಿ ಅವರ ಪತ್ನೀರವರು ಸ್ವಲ್ಪವೂ ಕಳವಳಪಡದ ಬಹಳ ಧೈರ್ಯವನ್ನೂ ಸ್ಥೈರ್ಯವನ್ನೂ ಪ್ರಕಾಶಪಡಿಸಿ ಅವರ ಶೈತ್ಯೋಪಚಾರಕ್ಕೆ ಬೇಕಾದ ಸಹಾಯಸಂಪತ್ತುಗಳನ್ನು ಮಾಡುತ್ತಾ ಬಂದದ್ದನ್ನು ನೋಡಿ ಹಿಂದುಸ್ಥಾನದ ಮಹಿಳೆಯರು ಎಲ್ಲಾ ಕಡೆಗಳಲ್ಲೂ ಕೂಟಗಳನ್ನು ನಡಿಸಿ ಆ ಕೆಯವರಿಗೆ ಬಹುಮಾನ ಸಹಿತವಾದ ಒಂದು ಅಡ್ರೆಸ್ಸನ್ನು ಒಪ್ಪಿಸಬೇಕೆಂದು ಏರ್ಪಾಡು ಮಾಡುತ್ತಿದ್ದಾರೆ ಕಲ್ಕತ್ತಾ, ಬೊಂಬಾಯಿ, ದೆಹಲಿ, ಲಾಹೋರ್, ಕರಾಚಿ, ಕೊಲಂಬೋ ಪಟ್ಟಣಗಳಲ್ಲಿ ಸ್ತ್ರೀಯರ ಸಭೆಗಳು ನಡೆದವು ಇತರ ಕಡೆಗಳಲ್ಲೂ ಸ್ತ್ರೀಯರು ಸಭೆಗಳನ್ನು ಮಾಡಲು ಸನ್ನಾಹವಾಗುತ್ತಿದ್ದಾರೆ

ಭಾವಲ್‌ಪುರ ಸಂಸ್ಥಾನದ ರೀಜೆನ್ಸಿ ಕೌನ್ಸಿಲಾದವರು ಆ ಸಂಸ್ಥಾನದಲ್ಲಿ ಪ್ರಜೆಗಳಿಂದ ಅವರ ಆದಾಯದ ಮೇಲೆ ತೆರಿಗೆಯನ್ನು (ಇನ್‌ಕಂಟ್ಯಾಕ್ಸ್) ಹಾಕಿ ವಸೂಲ್ಮಾಡುವಂತೆ ತೀರ್ಮಾನಿಸಿ ಜಾರಿಗೆ ತಂದರು ಈ ತೆರಿಗೆ ಹಾಕಕೂಡದೆಂದು ಅಲ್ಲಿನ ಹಿಂದೂ ಪ್ರಜೆಗಳು ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದು ಮ ಘಾಯಿಲಾಲ್‌ಯವರ ಮೂಲಕ ಪಂಜಾಬ ಲೆಫ್ಟಿನೆಂಟ್ ಗವರ್ನರವರಿಗೆ ಒಪ್ಪಿಸಿದರು ಗವರ್ನರವರು ಅವರ ಅರ್ಜಿಗೆ ಜವಾಬು ಕೊಟ್ಟಿರುವುದೇನೆಂದರೆ—ಸಂಸ್ಥಾನದಲ್ಲಿ ವ್ಯಾಪಾರವು ಹೆಚ್ಚುತ್ತಾ ಇದೆ ಸಟ್ಲೆಜ್ ಬೇಯಿನ್ ನೀರಾವರಿ ಕಾಮಗಾರಿಗೆ ಎರಡು ಮೂರು ಕೋಟಿ ರೂಪಾಯಿ ತನಕ ಬೇಕಾಗುವುದು ಆ ಸಂಸ್ಥಾನದಲ್ಲಿ ಪ್ರಜೆಗಳು ಕೊಡುವ ಕಂದಾಯಗಳು ಇತರ ಕಡೆಗಳಿಗಿಂತ ಹೆಚ್ಚೆಂದು ಪರಿಷ್ಕಾರವಾಗಿ ಕಂಡು ಬಂದ ಹೊರತು ಲೆಫ್ಟಿನೆಂಟ್ ಗವರ್ನರವರು ಆ ಸಂಸ್ಥಾನದ ಒಳ ಆಳಿಕೆಯ ವಿಷಯಕ್ಕೆ ಪ್ರವೇಶಿಸುವುದಿಲ್ಲ ಈ ತೆರಿಗೆಯ ವಿಷಯದಲ್ಲಿ ಅರ್ಜಿದಾರರು ತಮ್ಮ ಸಂಸ್ಥಾನದಲ್ಲಿರುವ ರೆವಿನ್ಯೂ ಕೋರ್ಟುಗಳಲ್ಲೂ ಬ್ರಿಟಿಷ್ ರೆಸಿಡೆಂಟರವರಲ್ಲೂ ವ್ಯವಹರಿಸಿಕೊಳ್ಳ ತಕ್ಕದ್ದಾಗಿದೆ ರೆಸಿಡೆಂಟರು ಈ ಹೊಸ ತೆರಿಗೆ ರೂಲಸು ಯಾವ ರೀತಿ ಪರಿಣಮಿಸುವುದೆಂದು ರಿಪೋರ್ಟನ್ನು ಆಗಾಗ್ಗೆ ತರಿಸಿಕೊಳ್ಳುವರು ಲೆಫ್ಟಿನೆಂಟ್ ಗವರ್ನರವರು ಆ ವಿಚಾರಗಳನ್ನೆಲ್ಲಾ ಮೇಲ್ವಿಚಾರಣೆ ನೋಡಿಕೊಳ್ಳುತ್ತಾ ಬರುತ್ತಾರೆ ಎಂಬುದೇ

ಸೇಂಟ್ ಆರ್ಥರಿಂದ ಗ್ರಾಮಕ್ಕೆ?

ಕಾಲದ ಪರೀಕ್ಷೆ
ಮೂವತ್ತೈದು ವರ್ಷ ಗಳಿಗಿಂತಲೂ ಹೆಚ್ಚಾಗಿ

SCOTT'S EMULSION 25
(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಿಯನ್ನು ಹಳೆ ಪಂಡಿತರೆಲ್ಲಾ ಅನೇಕ ಸಾರಿ ಪರೀಕ್ಷೆ ದನೆ ಮಾಡಿ ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಆಕ್ರಮಣಗಳು ನಾನಾ ತರದ ಕೆಮ್ಮಲು
ಸಕಲವಿಧ ಶೈತ್ಯಗಳು ದೌರ್ಬಲ್ಯದಿಂದಾಗುವ ಕ್ಷಯೆ

ಆಹಾರದಲ್ಲಿ ಅರುಚಿ
ಇದಲ್ಲದೆ ತಂದೆಗೂ ಮಗನಿಗೂ ಎಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವೂ ಇದೇ

ಕೈಸೋಕದೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ
ವಿಕರಿ ಮಾಡುವರು

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲಂಡ್

ಈ ಮಾರ್ಕಿನ ಮನುಷ್ಯನ ಗುರುತಿನ ಔಷಧವನ್ನೇ ಕೊಂಡುಕೊಳ್ಳಿ

ಗೃಹಕೃತ್ಯದ ನೋಟೀಸು

ಎಡತೊರೆ ಪುರದಲ್ಲಿರುವ ದೇವಾಂಗದ ಗೋಪಾಲಶೆಟ್ಟಿರ ಚನ್ನಶೆಟ್ಟರ ಮಕ್ಕಳಾದ ತಿಮ್ಮಪ್ಪಶೆಟ್ಟಿ ಮತ್ತು ಚನ್ನಕೃಷ್ಣಪ್ಪ ಸಹ ಇದರಿಂದ ಸರ್ವರಿಗೂ ತಿಳಿಯಪಡಿಸುವದೇನೆಂದರೆ—ಈ ಟೌನಲ್ಲೂ ಅರಳಿಕುಪ್ಪೆ ಹಳ್ಳಿಯಲ್ಲೂ ಕರೇನಹಳ್ಳಿಯಲ್ಲೂ ಇರುವ ನಮ್ಮ ಪಿತರಾರ್ಜಿತವಾದ ಸ್ವತ್ತುಗಳನ್ನು ನಮ್ಮ ತಂದೆ ಚನ್ನಶೆಟ್ಟರು ತಮ್ಮ ಕಡೇ ಕಾಲದಲ್ಲಿ ನಾರಾಯಣಿ ಎಂಬವಳ ದುರ್ಬೋಧನೆಯಿಂದ ಮೇಲ್ಕಂಡ ಸ್ಥಳಗಳಲ್ಲಿರುವ ಅಂಗಡಿ, ಮನೆ, ಹೊಲಗಳು ಮುಂತಾದ ಸ್ಥಿರಸ್ವತ್ತುಗಳನ್ನು ಮೋಸದ ಕ್ರಯ ವಗೈರೆ ಮೂಲಕ ಅನ್ಯರಿಗೆ ಕೊಡುವಂತೆ ತಿಳಿಯಬಂದಿರುವುದರಿಂದ ಮೇಲ್ಕಂಡ ಪಿತರಾರ್ಜಿತ ಸ್ವತ್ತುಗಳಿಗೆ ನಾವು ವಾರಸರೋ ಹೊರತು ನಮ್ಮ ತಂದೆಯಲ್ಲವು ಆದ್ದರಿಂದ ಯಾರಾಗಲೀ ಮೇಲ್ಕಂಡ ಸ್ವತ್ತುಗಳನ್ನು ಮೇಲ್ಕಂಡ ಚನ್ನಶೆಟ್ಟರಿಂದ ಪಡೆಕೊಂಡಲ್ಲಿ ಅವರ ಹಕ್ಕು ಜಾರಿಯಾಗಲಾರದು ನಮ್ಮ ತಂದೆ ಚನ್ನಶೆಟ್ಟರು ಈಗ ಹತ್ತು ವರ್ಷಗಳಿಂದ ಪ್ರತ್ಯೇಕವಾಗಿ ಜೀವಿಸುತ್ತಾರೆ ಅವರು ಮಾಡುವ ಸಾಲಗಳಿಗೆ ನಾವಾಗಲೀ ಮೇಲ್ಕಂಡ ಸ್ವತ್ತುಗಳಾಗಲೀ ಹೊಣೆಯಾಗಲಾರವು [31 1]

ದೊಡ್ಡಬಳ್ಳಾಪುರ, ತಾ 27 1 1913 ಚನ್ನಕೃಷ್ಣಪ್ಪ, ತಿಮ್ಮಪ್ಪಶೆಟ್ಟಿ

ಗೃಹಕೃತ್ಯದ ನೋಟೀಸು.

ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ಬಿಳುಗವಳ್ಳಿ ವಾಸಸ್ಥನಾದ ನಾಗೇಗೌಡನ ಮಗ ರಾಮೇಗೌಡನು ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—ಸದರಿ ಬಿಳುಗವಳ್ಳಿ ಗ್ರಾಮದಲ್ಲಿ ನನ್ನ ಪಿತರಾರ್ಜಿತವಾಗಿ ನನ್ನ ಸ್ವಾಧೀನಾನುಭವದಲ್ಲಿರುವ ನನ್ನ ದೊಡ್ಡಪ್ಪನ ಮಗ ಅಕ್ಕೇಗೌಡನ ಹೆಸರಿಗೆ ಖಾತೆ ಇದ್ದು ಸ್ವಸಲಕ್ಕೆ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುವ ಸದರಿ ಅಕ್ಕೇಗೌಡನ ಹೆಂಡತಿ ಮಲ್ಲಮ್ಮನು ಅಪುತ್ರವಂತಳಾಗಿದ್ದು ಕೆಲಂದ್ರು, ನಮ್ಮ ಕುಟುಂಬದ ನಮ್ಮ ಸ್ಥಿರಾಸ್ತಿಗಳನ್ನೆಲ್ಲಾ ಖಾತೆದಾರಳೆಂಬ ಅಧಿಕಾರದ ಮೇಲೆ ಖರೀದಿ, ಆಧಾರ ವಗೈರೆಗಳ ಮೂಲಕ ಪರಾಧೀನ ಮಾಡಬೇಕೆಂಬ ದುರುದ್ದೇಶವುಳ್ಳವಳಾಗಿರುವಳು ಇವಳಿಗೆ ಸದರಿ ನಮ್ಮ ಪಿತರಾರ್ಜಿತವಾದ ಮೇಲ್ಕಂಡ ಸ್ವತ್ತಿನಲ್ಲಿ ಯಾವ ವಿಧವಾದ ಹಕ್ಕು ಬಾಧ್ಯತೆಯೂ ಇರುವುದಿಲ್ಲ ಎಲ್ಲಾ ಆಸ್ತಿಗೂ ನಾನೇ ವಾರಸುದಾರನಾಗಿರುವೆನು ಆದುದರಿಂದ ಯಾರಾದರೂ ಅರಿಯದೆ, ಅವಳ ಮತ್ತು ಅವಳ ಕಡೆಯವರ ದುಷ್ಟತನಕ್ಕೆ ಮರುಳಾಗಿ ಸದರಿ ನಮ್ಮ ಸ್ವತ್ತುಗಳನ್ನು ಅವಳಿಂದ ಆಧಾರ, ಖರೀದಿ ವಗೈರೆ ಮಾಡಿಸಿಕೊಂಡಲ್ಲಿ ಅದು ಅಸಿದ್ಧವಾಗುವುದಲ್ಲದೆ ಅದರಿಂದ ನನಗುಂಟಾಗುವ ನಷ್ಟಕ್ಕೆಲ್ಲಾ ಅವರು ಜವಾಬ್ದಾರರಾಗಬೇಕಾಗುವದೆಂದು ಈ ಮೂಲಕ ಎಚ್ಚರಿಸಿದ್ದೇನೆ

25–1–1913 [10 1] ಬಿಳುಗವಳ್ಳಿ ರಾಮೇಗೌಡ

ನೋಟೀಸು

ಎಸ್ಕೂರ್ ಎಂಬಿಲ್ಲೇಕು ತಿಪನಾಳ ಸಮ್ಮತಿ ಪಡೆದಿರುವ ಶ್ರೀ ಸಲ್ಲೇಲ್ ಗಲ್ಲರು ಏ ರಂಗಪ್ಪನು ತಿಳಿಯಪಡಿಸುವುದೇನಂದರೆ—ಶ್ರೀ ಸಕ್ಕಾರ್ ಆಫ್ ಕ್ಷಣಿಗೂ ನನಗೂ ಪೂರ್ವಾಚಾರವು ಇನ್ನೂ ತೀರ್ಮಾನವಾಗದೆ ಅವರಿಂದ ಕೆಲಸ ಕಾರ್ಯಗಳನ್ನು ತಡಮಾಡುತ್ತಿರುವನು ಮೇಲ್ಕಂಡದ್ದರಲ್ಲಿ ಯಾರಾದರು ಪ್ರೈವೇಟ್ ಆಗಿ ಇಟ್ಟರೆ ನನ್ನ ಎಲ್ಲಾ ಬಾಕಿ ಜವಾಬ್ದಾರರಾಗಬೇಕಾಗುತ್ತೆ ಎಂದು ಈ ಮೂಲಕ ಎಚ್ಚರಿಸಲ್ಪಟ್ಟಿದೆ

[28–1] ಶ್ರೀ ಮಾಸ್ಟರ್ ಬಿ ರಂಗಪ್ಪ

ಆರ್ಯಾಪ್ರಪಾಧ್ಯಾಮಂದಿರಂ ಶ್ರೀ ಶೃಂಗಗಿರಿ

1 ಒಂದನೆ ನಂಬರ ಅರಗಂಧಾವಲೇಹ ಸುಮಸ್ವಯಂ, ಕಾಮಾಲೆ, ಗುಲ್ಮ, ಪಿತ್ತರೋಗ ವಾತರೋಗ, ಇವನ್ನು ಹೋಗಲಾಡಿಸುವುದಲ್ಲದೆ ಪುಷ್ಟಿಯನ್ನೂ ಅಗ್ನಿಬಲವನ್ನೂ ಕಾಂತಿಯನ್ನೂ ರಕ್ತವೃದ್ಧಿಯನ್ನೂ ಉಂಟುಮಾಡುತ್ತೆ ಬಹಳ ಜನಗಳು ಗುಣಹೊಂದಿದ್ದಾರೆ ಇಷ್ಟು ಅಲ್ಪಕ್ರಯಕ್ಕೆ ಉತ್ತಮವಾದ ಈ ಔಷಧ ಎಲ್ಲಿಯೂ ದೊರಕಲಾರದು ಒಂದು ಸೇರಿಗೆ 3 ರೂಪಾಯಿ (2) ದಂತರಕ್ತ, ಜೀರ್ಣಕ್ಕೆ ಅದ್ಭುತವಾದ ಔಷಧ ತೊಲಗೆ 1 ರೂ (3) ನವಾಸಂಪತ್ತಿ ರಸ — ಸಕಲ ಸನ್ನಿಪಾತ ಜ್ವರಕ್ಕೆ ಮಾತ್ರೆ 1 ರೂ (4) ಸಲನಮಂಗ್ಲಿ ಮಾಡಿಮುಂದೂರ — ಮೇಹ, ಪ್ರಮೇಹ, ಜರದ ತೊ 2 ರೂ ಅಂಚೆ ವೆಚ್ಚ ಪ್ರತ್ಯೇಕ ಕ್ಯಾಟಲಾಗು ಮುಫತ್ತು [..]

ವಿಳಾಸ—ಆಯುರ್ವೇದಪಕ್ಷಪಾದ ಕೆ ಕೆ ಶಾಸ್ತ್ರಿ, ಶೃಂಗೇರಿ

ಇಸ್ತಿಹಾರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸಕೆಂಡೆಯಲ್ಲಿ ಇರುವ ಒಕ್ಕಲಗಂಟಿ ಸೂರಶೆಟ್ಟಿರ ಪತ್ನಿ ನಾಗವೆಂಕಟಗಿರಿಯಮ್ಮ ಆದ ನಾನು ಮೈಸೂರು ಸಬ್ ರಿಜಿಸ್ಟ್ರಾರವರ ಆಫೀಸಿನಲ್ಲಿ ತಾ 17 1 1913ರಲ್ಲು ರಿಜಿಸ್ಟರ್ ಆಗಿರುವ ಜನರಲ್ ಪವರ್ ಆಫ್ ಅಟಾರ್ನಿ ಮೂಲಕ ನನ್ನ ಆಸ್ತಿ ಆದಾಯವನ್ನೆಲ್ಲಾ ನಡಿಸುವುದಕ್ಕೆ ಮೈಸೂರು ಹಳೇ ಅಗ್ರಹಾರದಲ್ಲಿರುವ ಅರಸ್ ಶ್ರೀನಿವಾಸದಾಸರ ಮಕ್ಕಳು ಪಂಡಿತ ವೆಂಕಟರಮಣದಾಸರಿಗೆ ಸರ್ವಾಧಿಕಾರವನ್ನು ವಹಿಸಿರುತ್ತೇನೆ ನಾನು ಅವರಿಗೆ ಕೊಡಬೇಕಾದ ರೆಹನ್ ದ ಆಧಾರದ ಬಾಬತ್ತು ಮೂರು ಸಾವಿರ ರೂಪಾಯಿಗಳು ಮತ್ತು ಅದರ ಬಡ್ಡಿಯನ್ನು ಆ ಆಧಾರ ನಡೆಸುವದಲ್ಲಿ ಲೆಕ್ಕ ಮಾಡಿಕೊಳ್ಳುವ ಅಧಿಕಾರವನ್ನು ಅವರಿಗೆ ವಹಿಸಿರುತ್ತೇನೆ ಅವರ ಹೊರತಾಗಿ ಬೇರೆ ಯಾರು ಯಾವ ವಿಧವಾದ ಕಾಗದಪತ್ರಗಳನ್ನು ಬರೆಸಿಕೊಂಡರೂ ಅವುಗಳು ಅನರ್ಹವಾದವು ಆದ್ದರಿಂದ ಅವುಗಳು ಅಸಿಂಧುವಾಗುವವು ಈ ಮೂಲಕ ಎಲ್ಲರಿಗೂ ಎಚ್ಚರಿಸಿದೆ [35 1]

ಮೈಸೂರು, ತಾ 1–1 1913 (ರುಜು) ವೆಂಕಟಗಿರಿ

ಇದೇ ಸಿಜವಾದ ರೈಲ್ವೇ ರಗ್ಗುಲೇಟರುಂಬ ಜೇಬುಗಡಿಯಾರ

ಕ್ರಯ ರೂಪಾಯಿ 1 15 0

ನಮ್ಮ ಕಂಪನಿಯ ಪ್ರಸಿದ್ಧಿಯಾಗುವದಕ್ಕಾಗಿ 6 ರೂಪಾಯಿನ ಈ ಗಡಿಯಾರವನ್ನು ಕೆಲವು ಗಡಿಯಾರಗಳು ಮುಗಿಯುವ ವರಿವಿಗೆ ಮಾತ್ರವೇ 1 15 0

ಕೊಡಲ್ಪಡುತ್ತೆ ಅದ ಸ್ಟವ ಕರುಗಳಲ್ಲಿ ಕ್ಕಾಗಿಯೂ ದೊರೆಯಲಾರದು ಮೋಸವಿಲ್ಲ ದೆ ಅಲಸ್ಯ ಮಾಡುವವರಿಗೆ ಇದು ಬಾರಾಗ ಬರಲಾರದು ಮ ಶ್ಯಾ ನಾಲ್ ಕೆಲಸದ ಇದಯನ್ನು ಈ ಗಡಿಯಾರವಾದರೆ ಕೆಟ್ಟು ಹೋದ ಹಾಗೆ ದಯಮಾಡಿ ಕಳು ಇದನ್ನು ರೈಲ್ ನೌಕರಸ್ವಾಮಿಗಳು ರಕ್ಷ ಡಿಪಾರ್ಟ್ಮೆಂಟ್ ರೈಲ್ವೇ ಅದಿಗಳಿಂದ ಸಸರಿವಾಗಿದುನ್ನು ನಡೆಯುತ್ತೆ ಇತರ ಅಪ್ಸಕ್ರಯದ ಗಡಿಯಾರಗಳ ಹಾಗೆ ಇದಕ್ಕೆ 3 ವರುಷಗಳ ವರೆಗೆ ನಾವು ಜವಾಬ್ದಾರರು ರಲ್ ಹೊತ್ತಿಗೆ ಸರಿಯಾಗಿ ನಡೆಯುವದು ಜತೆ ಚೆಲ್ಲೆ ಕೆಂಪ ಮುಂದುಗಳು ಉಪಯೋಗಿಸುತ್ತೇವೆ [43 1]

ವಿಳಾಸ—ಜಿ ಎ ಪಾಲ್ ಕಂಪನಿ, ಸುಂಗಂಬಾಕಂ ಮದರಾಸು

ಜರ್ಮನ್ ಜೇಬು ದೀಪ.

ಬೆಲೆ ರೂ 1–15–0

ಈ ಚಿತ್ರದಲ್ಲಿ ತೋರುವ ಜರ್ಮನ್ ಜೇಬು ದೀಪಗಳು ಜರ್ಮನಿ ದೇಶದ ವಿಜ್ಞಾನಿಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟು ಈಗತಾನೇ ಹಿಂದೂ ದೇಶಕ್ಕೆ ಕಳುಹಿಸಿರುವರೆ ಇದು ವಿದ್ಯುಚ್ಛಕ್ತಿಯಿಂದ ಪ್ರಕಾಶಮಾನವಾಗಿ ಉರಿಯುತ್ತೆ ಇದನ್ನು ಹಚ್ಚುವದಕ್ಕೆ ಬೆಂಕಿ ಕಡ್ಡಿ ಅವಶ್ಯಕವಿಲ್ಲ



ಸದ ಮಧ್ಯದಲ್ಲಿ ಇರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ನೋಡುವವರಿಗೆ ಆಶ್ಚರ್ಯವಾಗುವ ಹಾಗೆ ಹತ್ತಿ ಉರಿಯುತ್ತೆ [19] ಈ ದೀಪ ಒಂದನ್ನು ಕೊಂಡರೆ ಯಾವಾಗ್ಲೂ ದೀಪದ ಕಡ್ಡಿ ಅವಶ್ಯಕವೇ ಇರುವದಿಲ್ಲ ಜನರಿಗೆ ಬಹಳ ಉಪಯೋಗ ಇದು ಇತರ ದೀಪಗಳನ್ನು ಹಚ್ಚುವದಕ್ಕೂ, ಪ್ರಯಾಣ ಮಾಡುವಾಗ ಜೇಬಿನಲ್ಲಿ ಇಟ್ಟುಕೊಂಡು ಬೇಕಾದಾಗ ಬೇಕಾದವುಗಳನ್ನು ಹುಡುಕುವದಕ್ಕೂ ಬಹಳ ಉಪಯೋಗವಾದದ್ದು ಇದನ್ನು ಸುಲಭವಾಗಿ ಉಪಯೋಗಿಸಬಹುದು ಅದರಿಂದ ಯಾವ ಕೆಡಕೂ ಉಂಟಾಗುವದಿಲ್ಲ.

ವಿಳಾಸ — ಜಿ ಆರ್ ರಾವ್ ಕಂಪನಿ, ನಂ 20, ರಾಮನಾಯ್ಕನ ಬೀದಿ, ಸುಂಗಂಬಾಕಂ, ಮದರಾಸ

Mellin's Food

ಕೈಸೋಕದೆ ತಯಾರಾದದ್ದು. ಮೆಲ್ಲಿನ್ಸ್ ಆಹಾರವು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ವಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಗಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ

[1–1] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H Gulliford Proprietor and Manager Wesleyan Mission Press Mysore 30/1/1913

REGISTERED M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಪು ೨೬ ಮೈಸೂರು—೧೯೧೩ ನೇ ಇಸವಿ ಫೆಬ್ರವರಿ ತಾರೀಖು ೬ ನೇ ಗುರುವಾರ. ಸಂಚಿಕೆ ೩೬

ಅದ್ವೈತಸಿದ್ಧಾಂತಮಂದಿರಂ, ಶ್ರೀ ಶೃಂಗಗಿರಿ

(1) ಶ್ರೀಶಾರದಾ ಗಂಧಾನಲೇಪ ಸರ್ವಸ್ವಮೋಹ, ಜ್ವರ, ಚಳಿ, ಉರಿ, ಗುಲ್ಮ, ಪಿತ್ತರೋಗ, ವಾತರೋಗ, ಇವನ್ನು ಹೋಗಲಾಡಿಸಿ ದೇಹಕ್ಕೆ ಅಗ್ನಿಯನ್ನೂ ಕಾಂತಿಯನ್ನೂ ಸ್ಥಿರಚಿತ್ತತೆಯನ್ನೂ ಉಂಟು ಮಾಡುವ ಕಡಿಮೆ ಕ್ರಯಕ್ಕೆ ಈ ಔಷಧ ಎಲ್ಲಿಯೂ ದೊರಕಲಾರದು. ಬಾಟ್ಲಿ ಒಂದಕ್ಕೆ ರೂ. 1 (2) ಅಮೃತಾಮಲಕತೈಲ ಅಭ್ಯಂಜನಕ್ಕೆ ಅತ್ಯುತ್ತಮ 1 ರೂ (3) ಸಾನಂದಜ್ವರನರಸ—ಸಕಲ ಸನ್ನಿಪಾತ ಜ್ವರಕ್ಕೆ 50 1 ರೂ (4) ಸಮುನುಗ್ಗಿ ಮುಖವಮಂಡೂರ—ನ್ಯೆಬಾತ, ಜ್ವರಗಡ್ಡೆಗೆ 1 ರೂ ಅ ಬೇ ತೆಚ್ಚ ಪ್ರತ್ಯೇಕ ಕ್ಯಾಟಲಾಗು ಮುಖತ್ತು [21 2]

ವಿಳಾಸ—ಆಯುರ್ವೇದಭಿಷಕ್ ಕೆ. ಕೆ ಪರಾಶಾಸ್ತ್ರಿ, ಶೃಂಗೇರಿ

ಶ್ರೀಮನ್ನಾರಾಯಣ ಪ್ರಯೋಗಪಾರಿಜಾತಾನುಸಾರಿ ನಾರಾಯಣ ಪೂರ್ವಪ್ರಯೋಗ ಸಸ್ವರ ಮಂತ್ರಸಹಿತ

ಮೈಸೂರು ಕೃಷ್ಣರಾಜವಿಲಾಸ ಗುಂಡಜೋಯಿಸರ ಮಕ್ಕಳು ವೇ|| ಎಂ ಶ್ರಿನ್ನಗಳಿಂದ ಪ್ರಕಟಿಸಲ್ಪಟ್ಟ ಮೇಲ್ಕಂಡ ಅಪರೂಪವಾದ ಗ್ರಂಥವನ್ನು ಮೂಡು ಶ್ರೀಶ್ರೀರವರೂ, ರಾಜಗುರುಗಳಾದ ಪರಕಾಲಸ್ವಾಮಿಗಳವರೂ, ಶ್ರೀಮನ್ಮಹಾರಾಜರವರೂ ಸ್ವೀಕರಿಸಿ ಬಹುಮಾನವನ್ನು ದಯ ಮಾಡಿರುವರು. ಈ ಸ್ಥಾನದ ಮಹಾ ವಿದ್ವಾಂಸರೂ ಪಂಡಿತೋತ್ತಮರೂ ಭಿಕ್ಷಾರ್ಥ ಅರಮನೆ ದರ್ಬಾರಧಿಕಾರಿಗಳೂ ಪರಾಂಬರಿಸಿ ಸರಟಿಫಿಕೇಟ್ ಮಾಡಿ ಕ್ರಯ ರೂಪಾಯಿ 2-0 0

ಸನಾತನ ಸೂಕ್ಷ್ಮಧರ್ಮ—ಬಾಲಕ ಬಾಲಕಿಯರಿಗೆ ಅತಿ ಉಪಯುಕ್ತವಾದದ್ದು ಬೆಲೆ 2 ಆಣೆ ಮುದ್ರಾಮಂಜೂಷ ರೂ 1 8 0

ಸ್ವರತ್ನಾಕರ ಇದು ಮೈಸೂರು ಕ್ರಿಮಿನಲ್ ಕೋರ್ಟು ವಕೀಲ ಶ್ರೀ ಎಂ ವೆಂಕಟರಾಯರಿಂದ ರಚಿಸಲ್ಪಟ್ಟು, ಎಲ್ಲಾ ಪತ್ರಗಳ ನಮೂನೆ ಕೊಡುವ 158 ವಿಷಯಗಳಿಂದ ಅಡಕವಾಗಿದೆ ಬೆಲೆ 10 ಆಣೆ

ಲೇಖ್ಯತತ್ವಪ್ರಕಾಶಿಕೆ ಸದ್ವಿಷಯವರಿಂದಲೇ ರಚಿಸಲ್ಪಟ್ಟು ಎಲ್ಲಾ ಪತ್ರ ಅರ್ಜಿಗಳ ನಮೂನೆಗಳು ಕೊಡುವ 72 ವಿಷಯಗಳಿಂದ ಅಡಕವಾಗಿದೆ. ಬೆಲೆ 6 ಆಣೆ ರಾಜಸಿದ್ಧ ರೂ 1 1 0 ದೇವೀಭಾಗವತ ಪುರಾಣ 1 1 0

ಆರೋಗ್ಯಪ್ರಶ್ನೋತ್ತರ—ಲೋ ಸೆ ತರಗತಿ ವಿದ್ಯಾರ್ಥಿಗಳಿಗೆ ಪ್ರಕಟವಾದದ್ದು ಬೆಲೆ 1 ಆಣೆ ನ್ಯಾಯದರ್ಪಣ ರೂ 1-0 0

'ಶಾಂತಿರತ್ನಾಕರ' ಮಾಸಪತ್ರಿಕೆ ಎಲ್ಲಾ ವಿಧ ಶಾಂತಿಯೂ ಒಂದು ವರುಷಕ್ಕೆ ರೂ 2 ವರುಷ ಅರವರಿಗೆ ರೂ 2 8 0 [7 5]

—ಎಚ್ ವೆಂಕಟರಾಮಯ್ಯ, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

ದಿ ಪೂನಾ ರಸಾಯನ ಗೊಬ್ಬರದ ಕಾರ್ಖಾನೆ (ಲಿಮಿಟೆಡ್), ರಾಣಿಪೇಟೆ ಮುಖ್ಯ ಏಜೆಂಟ್ ಅಧಿಕಾರಿಗಳು—ಪ್ಯಾರಿ ಅಂಡ್ ಕಂಪನಿ, ಮದರಾಸ್.

ಪ್ರಕಟನ್

ಇದರಿಂದ ತಿಳಿಯಪಡಿಸುವದೇನೆಂದರೆ, ಉತ್ತರಾರ್ಕಾಡು ಜಿಲ್ಲಾ ವಾಲಾಜಾ ಪೇಟೆ ರಾಣಿಪೇಟೆಯಲ್ಲಿರುವ ರಾಸಾಯನ ರಸಾಯನ ಗೊಬ್ಬರದ ಕಾರ್ಖಾನೆ ಎಲ್ಲಾ ಕಬ್ಬು, ತರಿ ತೋಟದ ಪೈರುಗಳಿಗೂ, ಗಿಡ, ಬಳ್ಳಿ ವಗೈರಾ ಗಳಿಗೋಸ್ಕರ ಗೊಬ್ಬರವನ್ನು ತಯಾರುಮಾಡಿ ವಿಕ್ರಯಿಸುತ್ತೇವೆ ಆ ಗೊಬ್ಬರವನ್ನು ಮಾದರಿ ಮಣ್ಣು ಮುಂತಾದವುಗಳನ್ನು ಮುಂಚಿತವಾಗಿ ತರಿಸಿ, ಮೇಲೆ ಆ ಗೊಬ್ಬರವನ್ನು ಕೊಂಡುಕೊಳ್ಳುವ ರೈತರಿಗೆ ಮಜೂರಿ ಇಲ್ಲದೆ ಅವರ ಜಮೀನು, ಪೈರು, ಗಿಡ ವಗೈರೆಗಳಿಗೆ ತಕ್ಕ ಹಾಗೆ ಗೊಬ್ಬರ ತಯಾರಿಸಿಕೊಡು ತ್ತೇವೆ. ರಸಾಯನಗೊಬ್ಬರಗಳು ಸಾಧಾರಣವಾದ ಜಮೀನುಗಳಲ್ಲಿ ಉಪಯೋಗ ಮಾಡಿದರೆ ಶಕ್ತ್ಯಂಥಾ ಲಾಭಕರವಾದ ಫಲವನ್ನು ಕೊಡುವುದು. ಆದುದ ರಿಂದ ನಮ್ಮ ಗೊಬ್ಬರವನು ಪರೀಕ್ಷಾರ್ಥವಾಗಿ ಉಪಯೋಗಿಸುವವರು ಸಾಧಾ ರಣವಾಗಿ ಜಮೀನಿನಲ್ಲಿ ಉಪಯೋಗಿಸಿ ಈ ಗೊಬ್ಬರಕ್ಕೂ ದೊಡ್ಡಿ ಗೊಬ್ಬರಕ್ಕೂ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕು—ಚೌಳು ಮುಂತಾದ ಕ್ಷಾರ ಭೂಮಿಯಾದ ಜಮೀನುಗಳಿಗೆ ಆ ಜಮೀನಿನ ಮಾದರಿ ಮಣ್ಣನ್ನು ಚನ್ನಾಗಿ ಅಜ ಮಾಯಿಸಿ ಮೇಲ್ಕಂಡ ಜಮೀನುಗಳನ್ನು ಕೃಷಿಮಾಡುವುದಕ್ಕೆ ಯೋಗ್ಯವಾದ ಮಾರ್ಗವನ್ನು ಸೂಚಿಸುತ್ತೇವೆ ನಮ್ಮಲ್ಲಿನ ರಸಾಯನ ಗೊಬ್ಬರವನ್ನು ಎಷ್ಟು ವರ್ಷದವರೆಗೂ ಕೆಟ್ಟುಹೋಗವು ಆದರೆ ಅದನ್ನು ತೇವ ತಗಲದ ಹಾಗೆ ಇಡಬೇಕು ಮೇಲ್ಕಂಡ ಗೊಬ್ಬರಗಳು ಪೈರುಗಳ ಬೆಳೆಯುವ ಕಾಲ ಮುಂತಾ ದ ವಿಷಯಗಳಿಗೆ ತಕ್ಕಹಾಗೆ ಮಾಡಲ್ಪಡುತ್ತವೆ—ಆದುದರಿಂದ ಮೇಲ್ಕಂಡ ಗೊಬ್ಬರ ಬೇಕಾದವರು ತಾವು ಕೃಷಿಮಾಡುವ ಜಮೀನಿನ ಮಾದರಿ ಮಣ್ಣನ್ನು ನಮಗೆ ಕಳುಹಿಸುವದಲ್ಲದೆ ಬೇಕಾದ ಸಮಾಚಾರಗಳೊಡನೆ ಇಂಡೆಂಟು ಗಳನ್ನು ಕಳುಹಿಸುವ ಪಕ್ಷದಲ್ಲಿ ಮೇಲ್ಕಂಡ ಗೊಬ್ಬರವನ್ನು ತಕ್ಕ ಮಟ್ಟಿಗೆ ಕಳುಹಿಸಲ್ಪಡುವದು [19 4]

ಸುಳ್ಳಿಗೆ ನೂರಾರು ದಾರಿ! ನಿಜಕ್ಕೆ ಒಂದೇ ದಾರಿ!!

ಯಾವುದೂ ಪರೀಕ್ಷೆ ಮಾಡಬೇಕು.

ಪರೀಕ್ಷೆಗೆ ಒಂದೇ ಮಾತು ವ್ಯರ್ಥ ಹಣ ಖರ್ಚು ಮಾಡಬೇಡಿ ಮೊದಲು ಒಂದು ಪ್ರತಿ ಸಾಕು ಟಪಾಲು ಖರ್ಚು ಇಲ್ಲ ಉತ್ತಮವಾಗಿದ್ದರೆ ಎಲ್ಲರೂ ತರಿಸಿಕೊಳ್ಳಿ

ನಿಮಗೂ, ನಿಮ್ಮ ಬಾಲಕ ಬಾಲಕಿಯರು ಮತ್ತು ಸ್ನೇಹಿತರಿಗೂ ಅತ್ಯಂತ ಉಪಯೋಗವಾದ

ಗಮನಿಸಿ

ಮದ್ರಾಸು ಸಕಲ ವಿದ್ಯಾ ಶಾಲೆಯ ಪದವಿ ಹೊಂದಿದ ಪಂಡಿತರ ಅಭಿಪ್ರಾಯದ ಮೇರೆಗೆ

ENGLISH SELF-INSTRUCTOR.
ಆಂಗ್ಲ ಭಾಷಾ ಪ್ರಕಾಶಕ.

ಗಮನಿಸಿ

ಐದು ಭಾಗಗಳುಳ್ಳ ಇಂಥ ಒಳ್ಳೇ ದೊಡ್ಡ ಪುಸ್ತಕ ಈ ವರೆಗೆ ಪ್ರಕಟವೇ ಇಲ್ಲ

ಕ್ರಯ ರೂ ೧—೮—೦ ಅನ್ಯರ ಸಹಾಯವಿಲ್ಲದೆ ಸುಲಭವಾಗಿ ಇಂಗ್ಲೀಷ್ ಕಲಿಯುವ ಪುಸ್ತಕ ಕ್ರಯ ರೂ ೧—೮—೦

ಈ ದೊಡ್ಡ ಪುಸ್ತಕದಲ್ಲಿ ೧ ನೇ ಭಾಗ ೨ ನೇ ಭಾಗ, ೩ ನೇ ಭಾಗ, ೪ ನೇ ಭಾಗ, ೫ ನೇ ಭಾಗ—ಈ ೫ ಭಾಗಗಳೂ ಅಡಕವಾಗಿವೆ ಬಾಲಕ ಬಾಲಕಿಯರು ಪಾಠಶಾಲೆಯಲ್ಲಿ ಓದುವ ವಿದ್ಯಾರ್ಥಿಗಳು ಮತ್ತು ವರ್ತಕರು ಮುಂತಾದವರು ಬೋಧಕರ ಸಹಾಯವಿಲ್ಲದೆ ಓದುವುದು, ಬರೆಯುವುದು, ಮಾತಾಡುವುದು ಸುಲಭವಾಗಿ ಕಲಿಯಬಹುದು ಕನ್ನಡ ತಿಳಿದಿದ್ದರೆ ಸಾಕು ಇಂಗ್ಲೀಷ್ ಅಕ್ಷರಾಭ್ಯಾಸ, ಶಬ್ದಸಂಯೋಜನ, ಸ್ವರಾಕ್ಷರಗಳ ವಿಧವಿಧ ಶಬ್ದಾಭ್ಯಾಸ, ಪಾಠಶಾಲೆಯಲ್ಲಿ ೫ ವರ್ಷ ಕಲಿಯುವಷ್ಟು ವ್ಯಾಕರಣ ಕ್ರಮಗಳು ಮತ್ತು ಅಭ್ಯಾಸಗಳು ಇಂಗ್ಲೀಷ್ ಭಾಷೆಯಲ್ಲಿ ಬಳಕೆಯಾದ ವಾಕ್ಯಗಳನ್ನು ಮಾಡುವ ಕ್ರಮ ಮತ್ತು ನೂರಾರು ಅಭ್ಯಾಸಗಳು ಸರ್ವವಿಷಯಗಳನ್ನು ಕುರಿತು ಪ್ರಶ್ನೋತ್ತರ ಸಂಭಾಷಣೆಗಳು ೨೦೦, ಪ್ರಪಂಚದ ಸರ್ವವಿಷಯಗಳನ್ನು ಕುರಿತು ಸಂಭಾಷಣೆ ಮಾಡುವಾಗ ಬೇಕಾಗುವ ಆಯಾ ವಿಷಯಕ್ಕೆ ತಕ್ಕ ಇಂಗ್ಲೀಷ್-ಕನ್ನಡ, ಕನ್ನಡ ಇಂಗ್ಲೀಷ್ ಶಬ್ದಕೋಶ (ಡಿಕ್ಷನರಿ), ಭಾಷಾಜ್ಞಾನ ಮತ್ತು ಅರ್ಥಜ್ಞಾನಕ್ಕೆ ತಕ್ಕ ಅಭ್ಯಾಸಗಳು ಕನ್ನಡ ಗಾದೆಗಳಿಗೆ ಸರಿಯಾದ ಇಂಗ್ಲೀಷ್ ಗಾದೆಗಳು, ಪತ್ರವ್ಯವಹಾರದಲ್ಲಿ ಉಪಯೋಗಿಸುವ ಸಾಂಕೇತಿಕ ಶಬ್ದಗಳು ಕ್ಷೇಮಸಮಾಚಾರ, ಲೇವಾದೇವಿ ಮುಂತಾದ ವಿಷಯ ಗಳನ್ನು ಕುರಿತು ತಂತಿವರ್ತಮಾನ ಮತ್ತು ಕಾಗದಪತ್ರಗಳನ್ನು ಬರೆಯುವ ಅನೇಕ ಕ್ರಮಗಳು ಮತ್ತು ನಮೂನೆಗಳು, ಇವುಗಳಿಗೆ ಸ್ಫುಟವಾದ ಕನ್ನಡ ಅಕ್ಷರದಲ್ಲಿ ಉಚ್ಚಾರಣೆ ಮತ್ತು ಅರ್ಥಸಹ ಉಳ್ಳದ್ದು ಈ ಪುಸ್ತಕ ನಮ್ಮಲ್ಲಿ ಮಾತ್ರ ದೊರೆಯುತ್ತೆ ಕೆಲವು ಪ್ರತಿಗಳು ಮಾತ್ರ ಉಳಿದಿವೆ ತ್ವರೆಮಾಡಿರಿ. [17 3]

ವಿಳಾಸ:—ಎ. ವಿ ರಾಮುಲು. ಬಾಲಕೃಷ್ಣ ಬುಕ್ ಡಿಪೋ. ಜೋಡಿಪೇಟೆ, ಬೆಂಗಳೂರು ಸಿಟಿ.

ಟ್ರಾಂವೆ ರೆಗ್ಯುಲೇಟರ್ ಲಿವರ್ ಗಡಿಯಾರ

ಇದು ಹೊಸ ನಮೂನೆ! ಸಲ್ಪ ಬೆಲೆ! ಬಹಳ ಅಂದವಾದದ್ದು!!!

ಇವಕ್ಕೆ 4 ವರುಷ ಗ್ಯಾರಂಟಿ ಚೀಟಿ ಉಂಟು.

ಕ್ರಯ ರೂ 1–13 0 ಕ್ರಯ ರೂ. 1–13–0



ಈ ಗಡಿಯಾರ ಗೌರ್ನ ಮೆಂಟು ಮತ್ತು ಟ್ರಾಂವೇ ನೌಕರ ಜನರಿಗೆ ಮಾತ್ರವೇ ಸಪ್ಲೈ ಮಾಡಲ್ಪಡುತ್ತೆ ಇದನ್ನು ಅಮೇರಿಕಾದಿಂದ ಒಟ್ಟಾಗಿ ತರಿಸಿರುವದರಿಂದ ಇಷ್ಟು ಸ್ವಲ್ಪ ಬೆಲೆಗೆ ಕೊಡುವದು ಇದೇ ಇದರ ಕಾರಣ ಇದು ನೋಡುವದಕ್ಕೆ ಅಂದವಾಗಿಯೂ ಕಾಲವನ್ನು ಸೊಂತ ಸರಿಯಾಗಿಯೂ ತೋರಿಸುತ್ತದೆ

Rs1-13-0

[6-4]

ಪತ್ತಿ ಅಂಡ್ ಕೋ,
ನಂ 39, ಜನರಲ್ ಮುತ್ಯಾಮೊದಲಿ ಬೀದಿ,
ಸಾಹುಕಾರ್ ಪೇಟೆ, ಮದ್ರಾಸ್

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

84 47

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ಕೀಲು, ಅರತಲೆ, ತಲೆನೋವುಗಳು. ಯಾವ ಕಾರಣದಿಂದ ಹುಟ್ಟುವ ವಾಧೆ ಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋ ಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿ ರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳ ವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು—(1) ಎಸ್ ಸೀಟನ್, 37 ತಂಬುಚೆಟ್ಟಿ ಬೀದಿ, ಫುಸಿವಾಕಂ, ವೇಪೇರಿ, ಮದರಾಸ್, (2) ಜಿ. ಎಸ್ ಕೆನ್ನಯ್ಯ ಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಪ್ರಾಕೃತಿಕ ಭೂಗೋಳದ ನೋಟ್ಸ್.

27 3

ಸ್ಕೂಲ್ ಮಾಸ್ತರುಗಳು ಮತ್ತು ವಿದ್ಯಾರ್ಥಿಗಳಲ್ಲಿ ವಿಜ್ಞಾಪನೆ—ತಾವು ಗಳು ಸ್ವಲ್ಪ ಕಾಲದಲ್ಲಿಯೇ ಹೆಚ್ಚಾಗಿ ಆರ್ಡರುಗಳನ್ನು ಕಳುಹಿಸಿ ನನ್ನನ್ನು ಪ್ರೋತ್ಸಾಹಿಸಿರುವುದಕ್ಕಾಗಿ ಬಹಳ ಕೃತಜ್ಞನಾಗಿರುತ್ತೇನೆ ಈ ಪುಸ್ತಕವು ಅನೇಕ ನಕ್ಷೆಗಳನ್ನೊಳಗೊಂಡಿರುತ್ತದೆ ಮತ್ತು ಅನೇಕ ಪ್ರಶ್ನೆಗಳಿಗೆ ಉತ್ತರಗಳು ಬರೆಯಲ್ಪಟ್ಟಿರುವುದರಿಂದ ಈಗಿನ ಪರೀಕ್ಷಾ ಪ್ರಶ್ನೆ ಪತ್ರಿಕೆಗಳಿಗೆ ಉತ್ತರಗಳನ್ನು ಬರೆಯಲು ತುಂಬಾ ಸಹಕಾರಿಯಾಗಿರುತ್ತೆ ಸ್ವಲ್ಪ ಪ್ರತಿಗಳು ಮಾತ್ರ ಪ್ರಿಂಟಾಗು ವವರಿಂದ ಆರ್ಡರುಗಳಿಗೆ ಮೊದಲು ಕಳುಹಿಸಲ್ಪಡುವವು ಕ್ರಯ 1 ಆಣೆ 6ಪೈ

ವಿಳಾಸ—ಎಂ ಪಿ ಲಿಂಗಪ್ಪಯ್ಯ, ಹೆಡ್ ಮಾಸ್ಟರ್, ಎ ವಿ. ಸ್ಕೂಲ್, ಇಟ್ಟಿಗೂಡು, ಮೈಸೂರು.

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯ ದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾ ರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ.— ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ವಿಳಂಬವಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು, ಮರವೆ, ನಿತ್ರಾಣ, ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರಸ್ರೀಪದ್ರವ, ವಾಯು ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳು ವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [142 23]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦. ಔಷಧ ಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಓ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಕುಂತಳಾನಂದ ತೈಲವು

147 20

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ

ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನು ಹೋಗಗೊಳಿಸುತ್ತದೆ ಸದ್ಯಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕುದಾಗಿದೆ ಶೀಶೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಪಿ ಎಮ್ ನಾಥ ಮತ್ತು ಕಂಪೆನಿ,

ವೇಪೆರಿ, ಮದರಾಸ್.

CHAMBERLAIN'S COUGH REMEDY.

ಚೇಂಬರ್ಲೇನಿಯವರು ಕಂಡುಹಿಡಿದ ಕೆಮ್ಮಿನ ಔಷಧವು.

16

ಶೀತದ ಕೆಮ್ಮು, ಗಂಟಲು ಗಾರೆಸ್ಸುವುದು, ನಡಿಗಮ್ಮು ನಾಯಿಗಮ್ಮು, ಎಲ್ಲಾ ತರದ ಶೀತ, ಗಂಟಲನಲ್ಲೂ ಎದೆಯ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಪ್ತಾಯವಾವೆ

ಆ ಕಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿ ಎಂಬ ಅತಿ ಕಠಿನವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗ ಆಸ್ಪದವಾಗುವುದು

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ತನಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರ ಕೆಮ್ಮಿನ ರಬ್ಬವನ್ನು ನಿಲ್ಲಿಸುತ್ತದೆ ಎದೆ ಒಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ಶಾಂತಮಾಡಬಲ್ಲದು ಶೀತ ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮು ಸೇರಿಸಿರುವುದಿಲ್ಲ

ಈ ಔಷಧವು ಪವಸ್ಥತಿಗೆ ಬಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ವಿಕ್ರಯವಾಗುವುದು | ಸಣ್ಣ ಶೀಸೆಗೆ ೧ ರೂಪಾಯಿ | ದೊಡ್ಡ ಶೀಸೆಗೆ ೨ ರೂಪಾಯಿ

ರಾಸ್‌ಕೋಪ್ ಸಿಸ್ಟಂ ಲೀವರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2 4 0 ಮಾತ್ರ, 5 ವರುಷಗಳ ಗ್ಯಾರಂಟಿ



ಈ ಗಡಿಯಾರವು ಬೇರೆ ಬೇರೆ ಗಡಿಯಾರಗಳಿಂದ ಕಡಿಮೆಯಾದವಲ್ಲದ್ದು ನೋಡುವವರಿಗೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಎಂಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರಮಾಡಿದಾಗೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಟಲೆ ಗಡಿಯಾರಗಳು ಖರ್ಚಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಮಾತ್ರಿಯಾದ ಗಡಿಯಾರ ಕೂಡಲೆ ಬರೆದು ತರಿಸಿಕೊಳ್ಳಿ [6 3]

ಮುಖ್ಯವಾಗಿ ಗಮನಿಸಿ ಓದಿರಿ

^ ಬಹುಮಾನ ಸಹಿತ ಗಡಿಯಾರ

ಈ ಪಕ್ಕದಲ್ಲಿ ಕಂಡ ರಿಸ್ಟ್ ವಾಚ್ ಕೀಲೆಸ್ ಲೀವರ್ ನಿಕ್ಕಲ್ ಕೇಸು ಕ್ಯಾಂಬರ್‌ಸೇಷನ್ ಬ್ಯಾಲೆನ್ಸು ಬಹು ಬಲವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಕ್ರಯ ರೂ 4 12 0 ಇದನ್ನು ಏಪ್ರಿಲ್ ಅಖೈರುವರೆಗಾಗಿ ತರಿಸಿಕೊಳ್ಳುವವರಿಗೆ 10 ಗಂಟೆಗೊಂದಾವರ್ತಿ ಬೇಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ ಸುಪೀರಿಯರ್ ವಾಚ್ ಕಂಪನಿ,

ಪೋಸ್ಟ್ ಬಾಕ್ಸ್ ನಂ 107 ಮದರಾಸು

ಡೋಂಗರೆ ಇವರ ಬಾಲಾಮೃತ.

[115 30

ಸ್ತ್ರೀ ಮಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋದು, ಹೊಟ್ಟೆಯು ದೊಡ್ಡದಾಗಿರೋದು ಎಲುಬುಗಳು ಶಕ್ತಿಯಿಂತೆ ಇರೋದು, ಪಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೨ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಅಮೃತಾಂಜನ. (Regd.)

ಇಲ್ಲಿ ವಿಶೇಷ ಲಕ್ಷ್ಯ ಕೊಡಿರಿ! ವಾತ, ಸಂಧಿವಾತ, ತಲೇನೋವು, ಸೊಂಟನೋವು, ಶೀತ, ಕಫ, ಗಂಟು ನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣವಾಗುವದು ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನದ ಬಾಟ್ಲಿ 1ಕ್ಕೆ ೦-೯-೦

ಅರ್ಧ ಕ್ರಯಕ್ಕಿಂತಲೂ ಕಡಮೆ

ಹತ್ತುಲಕ್ಷ ದೊಡ್ಡಸ್ಟೂಲು ಪೋಸ್ಟು ಕಾರ್ಡುಗಳು ಇವುಗಳು ಬೇಗನಾಗಿಯೂ ನಯವಾಗಿಯೂ ಇವೆ 1,000 ಕ್ಕೆ ಮುಂಚಿನ ಕ್ರಯ ರೂ 2 ೩-೦ ಈಗ 1 ಆಣೆ ವಿ ಪಿ ಖರ್ಚು 12 ಆಣೆ 100 ಕ್ಕೆ 8 ಆಣೆ ವಿ ಪಿ ಖರ್ಚು 8 ಆಣೆ

1913 ನೆಯ ವರ್ಷದ ಕಾಲೆಂಡರ್ 1 ಬಾಟ್ಲಿ ಅಮೃತಾಂಜನ ತರಿಸಿಕೊಂಡವರಿಗೆ ಪುಗಸಟ್ಟೆಯಾಗಿ ಕೊಡಲಾಗುವದು ಇತರರಿಗೆ ಕಾಲೆಂಡರ್ 1ಕ್ಕೆ 1 ಆಣೆ ವಿ ಪಿ ಸಹಿತ [35-10]

ಅಮೃತಾಂಜನ ಡಿಪೋ, ಫೋರ್ಟು, ಮುಂಬಯಿ.



1913 ನೇ ಪಾಕೆಟ್ ಡೈರಿ

ಅಂದರೆ ಆಯಾ ದಿವಸದ ನಡವಳಿಕೆಗಳನ್ನು ಬರೆದಿಡುವದಕ್ಕೋಸ್ಕರ ಜೇಬಿನಲ್ಲಿ ಇರಿಸಿಕೊಳ್ಳುವ ಪುಸ್ತಕ ಇದರಲ್ಲಿ ಪಂಚಾಂಗ ಹಬ್ಬದ ದಿನಗಳು ಸರ್ಕಾರ ರಜಾ ದಿನಗಳು ರೈಲು, ಕೋರ್ಟು, ಸ್ಟಾಂಪು, ರಿಜಿಸ್ಟರು, ಟಪಾಲು ಇವುಗಳ ಸಂಬಂಧಪಟ್ಟ ಸಾಮಾನ್ಯ ವಿಷಯಗಳು ಪ್ರಶ್ನೆ ಮುಂತಾದ ಕೆಲವು ಸಾಧಾರಣ ವಿಷಯಗಳು ಜಮಾಖರ್ಚು ಪಟ್ಟಿ ಮುಂತಾಗಿ ಪ್ರತಿ ದಿವಸವೂ ನೋಡಬೇಕಾದ ವಿಷಯಗಳು ಅಡಗಿವೆ

ಎ—ಸಾದಾ ಸಣ್ಣ ಡೈರಿಗೆ 3 ಆಣೆ ಬಿ ಒಂದಾಣೆಯ ಸೀಸದ ಕಡ್ಡಿಯುಳ್ಳ ಮುಚ್ಚಳದ ಡೈರಿಗೆ 5 ಆಣೆ ಸಿ ಸಾದಾ ದೊಡ್ಡ ಡೈರಿಗೆ 6 ಆಣೆ ಡಿ—ಒಂದಾಣೆಯ ಸೀಸದ ಕಡ್ಡಿಯುಳ್ಳ ಮುಚ್ಚಳದ ದೊಡ್ಡ ಡೈರಿಗೆ 8 ಆಣೆ

ಜಿನಿವಾ ಡೈರಿ —ಕಾಗದ ದಪ್ಪ, ಅಂದು ನೂತನ ಗಾತ್ರ ದೊಡ್ಡದು, ವಿಷಯ ಹೆಚ್ಚು, ಉತ್ತಮವಾದ ಫ್ಯಾಂಸಿ ಜಿ ನಂ 1—ಸಾದಾ ಡೈರಿಗೆ 4 ಆಣೆ ಜಿ ನಂ 2—ಒಂದಾಣೆಯ ಸೀಸದ ಕಡ್ಡಿಯುಳ್ಳ ಮುಚ್ಚಳದ ಡೈರಿಗೆ 6 ಆಣೆ ಟಪಾಲು ಹಾಸಲು ಬೇರೆ ಒಂಟೇ ನಮೂನೆಯಲ್ಲಿ 6 ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಬಹುಮಾನವಾಗಿ ಕಳುಹಿಸುತ್ತೇವೆ

ನಮ್ಮ ಪುಸ್ತಕಗಳ ವಿವರ ಕ್ರಯಪಟ್ಟಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ [10 0]

ನಮ್ಮ ವಿಳಾಸ —ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 0

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಯವಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಖಾಕಿ ಬಣ್ಣಗಳ ಟೋಪಿಗಳು ೧ ರೂ ೮ ಆ; ೧ ರೂ ೬ ಆ, ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧_೮, ರೂ ೧_೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೂಸುಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ ಹೊಟ್ಟೇ ನೋವು, ಸಂದುಗಳ ನೋವು, ಕೈ ಕಾಲು ಜೋಮು (ಭಾರ), ಮೈ ನಮಕ, ಶೀತ ಸಗಳ ಬಾಧೆ, ಅಜೀರ್ಣ ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ಸನ್ನಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಶೀಘ್ರವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಬೂವ ಶಾಯಿಲೆಗೂ ವಾರಿಕೆಯಿದೆ, ರೋಗಗಳ ಮಹಾ ಎದಲುವಣೆಯನು ನಿವಾರಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಗುಹುರೋಗ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕ್ಷಯ ರೋಗಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ 320 ಮಾತ್ರೆಗಳಿರುವ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 1 ಆಣೆ [116 23]

೨ ವ್ಯಾಘ್ರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅತೀಸಾರ ಭೇದಿಗಳಿಗೆ ಈ ವ್ಯಾಘ್ರಾಸವವು ಸಂಜೀವನವಾಗಿದೆ ಕೈಬಿಟ್ಟಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಕೆ ಮೂತ್ರ ಕಟ್ಟಿದರೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ ಒಂದೇ ಒಂದು ಬುದ್ಧಿಯ ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. **ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು**

ವೆಂಕಟರಮಣಸ್ವಾಮಿ ಸಹಾಯ.

ಸುಲಭೋಪಾಯ ಆದಾಯ.

ಈ ಹೊಸ ಏರ್ಪಾಟಿಗೆ ಪಾಠಾಭಿಮಾನಿಗಳ ಪ್ರೋತ್ಸಾಹವು ಬೇಕು. ನಮ್ಮ ಎಣ್ಣೆ ಪುಡಿ ಮುಂತಾದ ಮಾರ್ಕೆಟ್ ಬೆಲೆ ೧ಕ್ಕೆ ೩ ಆಣೆ ೬ ಪೈಗೆ ಹೊಂದುವ ರೀತಿ ಮಾಡಿದೆ —ನಮ್ಮ ವಿಳಾಸಕ್ಕೆ ನಿಮ್ಮ ಅಡ್ರೆಸ್ಸಿನೊಡನೆ ೩ ಆಣೆ ೬ ಪೈಯನ್ನು ಕಳುಹಿಸಿದರೆ ನಿಮಗೆ ಒಂದು ಕೂಪನ್ ಕಳುಹಿಸುತ್ತೇವೆ. ಆ ಕೂಪನ್ನಿನ ಹಿಂಭಾಗ ದಲ್ಲಿ ನಿಮ್ಮ ಅಡ್ರೆಸ್ ಬರೆದು ಈ ಕೂಪನ್ನಿನೊಡನೆ ೧೪ ಆಣೆ ಕಳುಹಿಸಿದರೆ ಅಂಥಾ ಕೂಪನ್‌ಗಳನ್ನು ಕಳುಹಿಸುತ್ತೇವೆ. ಆ ಕೂಪನ್‌ಗಳನ್ನು ನಿಮಗೆ ಬೇಕಾದವರಿಗೆ ಕೂಪನ್ ೧ಕ್ಕೆ ೩ ಆಣೆ ೬ ಪೈಯಂತೆ ವಿಕ್ರಯಮಾಡಿ ಆಗುವ ೧೪ ಆಣೆ ಯನ್ನು ನೀವೇ ಇಟ್ಟುಕೊಂಡುಬಿಡಿ. ಮೊದಲು ನಿಮ್ಮಿಂದ ಕೂಪನ್‌ಗಳನ್ನು ಹೊಂದಿದ್ದ ನೀವು ಕಳುಹಿಸಿದ ೧೪ ಆಣೆ ನಿಮಗೆ ಬಂದಹಾಗಾಯಿತು. ನಿಮ್ಮಿಂದ ಕೂಪನ್ ಪಡೆದ ಪ್ರತಿ ಒಬ್ಬರೂ ಕೂಪನ್ನಿನ ಸಂಗಡ ೧೪ ಆಣೆ ಕಳುಹಿಸುವಂತೆ ಹೇಳಿರಿ. ಪ್ರತಿ ಒಬ್ಬರೂ ಅವರ ಅಡ್ರೆಸ್ ಸಮೇತವಾದ ಕೂಪನ್ನನ್ನು ೧೪ ಆಣೆ ಸಹಿತ ಕಳುಹಿಸಿದರೆ ನಾವು ನಿಮಗೆ ಮೇಲ್ಕಂಡ ಧರ್ಮ ಎಣ್ಣೆ ಟಿನ್ನನ್ನು ಕೊಡುವುದಲ್ಲದೆ ಪ್ರತಿ ಒಬ್ಬರಿಗೂ ೪ ೪ ಕೂಪನ್‌ಗಳನ್ನು ಸಹ ಕೊಡುತ್ತೇವೆ. ನಮ್ಮಂತೆ ಪ್ರತಿ ಒಬ್ಬರೂ ಮಾಡಿದರೆ ಇದೇ ಪ್ರಯೋಜನವನ್ನು ಹೊಂದುತ್ತಾರೆ.

[20-3] ವಿಳಾಸ—ಜಿ ಎಸ್ ವೆಂಕಟರಮಣಮೂರ್ತಿ,

ನಂ 13, ಸುಂದರಪ್ಪಯ್ಯರ್ ಬೀದಿ, ಹಳೇ ಅಗ್ರಹಾರ ಮೈಸೂರು

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ

ಕೆಳಗಿನ ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಕಾಪಾಡಿಕೊಳ್ಳಿರಿ

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು !

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಇದೇ ಪ್ರತಿಯೊಬ್ಬ ಹೆಂಗಸಿನ ಶೋಭಾಗ್ಯವುಳ್ಳದಾದ ಅಲಂಕಾರವಾಗಿದೆ. ಪ್ರತಿ ಸ್ತ್ರೀಯರಿಗೆ ತಾನು ಸುಂದರಳಾದ ಮತ್ತು ಗಟ್ಟಿಯಾದ ಕೇಶರಾಶಿ ಯು ಕೇಶಪಾಶವು ಸುಂದರವಾಗಿ ಕಾಣಬೇಕೆಂಬ ಅಪೇಕ್ಷೆಯು ಸ್ವಭಾವವಾಗಿ ಇರುತ್ತದೆ. ಅದಲ್ಲದೆ ತುರುಬನ್ನು ಜನರ ಆಕೃತಿಯಿಂದ ಕಟ್ಟಿದಂತೆ, ಅತಿ ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಇದನ್ನು ತಕ್ಕದಾದ ರೀತಿಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶವಾಮಕ್ಕೆ ಎಂಥದು ಮಹತ್ವವು ಕೊಡಲ್ಪಟ್ಟಿದೆಯೋ, ಆ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ತೈ ಪ್ರದೇಶದಲ್ಲಿಯೂ ಬೆಳೆಯುವವು

ಕಾಮಿನಿಯಾ ತೈಲ —

ಇದು ಕೂದಲುಗಳನ್ನು ಚಂದಗೊಳಿಸುವ ಸರ್ವ ತೈಲಗಳಲ್ಲಿಯೂ ಶ್ರೇಷ್ಠವಾದದ್ದು ಮಾತ್ರ ಅಲ್ಲ, ಕೂದಲುಗಳು ರೋಗದಿಂದ ಪ್ರತಿಯೊಬ್ಬ ಸ್ತ್ರೀಯರು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು. ಇದರಿಂದ ಕೂದಲುಗಳು ಎಷ್ಟು ನಯವಾಗುತ್ತವೆ ಅಂದರೆ, ಈಗಿನ ಸುಧಾರಕರ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ತುರುಬನ್ನು ಕಟ್ಟಲಾಗುತ್ತದೆ

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತವೆ, ನಯವಾಗುತ್ತವೆ, ಚಕಚಕಿಸುತ್ತವೆ, ಮತ್ತು ನಿಬಿಡವಾಗಿ ಬೆಳೆಯುತ್ತವೆ. ಅಲ್ಲದೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತವೆ

ಬಾಟಲಿ 1 ಕ್ಕೆ ಬೆಲೆ ರೂ 1-0-0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು

3 ಬಾಟಲಿಗೆ ರೂ 2-10-0 ಅಂಚೆಯ ವೆಚ್ಚ 0-7-0

ಮೂರಕ್ಕಿಂತ ಹೆಚ್ಚು ತರಿಸುವರು ಅಧಿಕಾರಿಯ ಲಿಸ್ಟನ್ನು ಕೇಳುವುದು

ಕಾಮಿನಿಯಾ ತೈಲದ ಕುರಿತು ಕೆಲವು ಮಹನೀಯರು ಬರೆದ ಪ್ರಮಾಣ ಪತ್ರದ ಕೆಲವನ್ನು ಇಲ್ಲಿ ಕೊಡುವೆವು —

3-7-11 ಮಿ ಎ ಪಿ ಮಾಧವಸಿಂಗ್, ಡಿಕ್ಟ್ರಿಕ್ಟ್, ಮುನ್ಸಿಫ್— ಬರೆಯುತ್ತಾರೆ "ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ ಮತ್ತು ಇದಕ್ಕೆ ಸರಿಸಮಾನವಾದ ಹೇರ್ ಓಯಿಲ್ ಬೇರೆ ಇಲ್ಲ ಎಂದು ತಿಳಿಸುತ್ತಿರುವದು

17-11 ಮಿ ಆರ್ ನಾರಾಯಣ ಶಾಸ್ತ್ರಿ (ಬನಾರಸ್) ನನ್ನ ಶ್ರೀ "ಕಾಮಿನಿಯಾ" ತೈಲವು ನಮ್ಮ ಆಧಾರವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದಕ್ಕೆ ಯೋಗ್ಯವಾಗಿದೆ ತಮ್ಮ ಕಡೆಯಿಂದ ಮೂರು ಬಾಟಲಿಗಳನ್ನು ಕಳುಹಿಸಬೇಕು

ಸುಗಂಧದ್ರವ್ಯಗಳು

ಗುಲ್-ಷಾನ್ (ರಿಜಿಡ್) —ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತಿ ಶ್ರೇಷ್ಠವಾದದು, ಮಹಾ ಸುಗಂಧವುಳ್ಳದು ಎಂದು ಸುಪ್ರಸಿದ್ಧವಾದ ವೈದ್ಯ ಪಂಡಿತರು ಹೇಳಿರುವರು. ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮವಾದ ಸುವಾಸನೆಯನ್ನುಳ್ಳದು. ಕ್ರಯ ಡ್ರಾಂ ೧ಕ್ಕೆ ರೂ 1-4-0

ದಿಲ್-ಬಹಾರ್ (ರಿಜಿಡ್.) —ಅತ್ಯಂತ ಅಪೂರ್ವವಾದ ಬಾಜಾರಿನಲ್ಲಿ ದೊರೆಯುವ ಅನೇಕ ಪುಷ್ಪಗಳ ಮನೋಹರವಾದ ಸುಗಂಧ ಡ್ರಾಂ ೧ಕ್ಕೆ ರೂ 1-4-0

ಕಾಮಿನಿಯಾ ಸುಗಂಧ ಬಿ. ರೂ 1-4-0 "ಕಾಮಿನಿಯಾ ಪೌಡರ್" ರೂ 1

ಎಲ್ಲಾ ಸ್ಥಳಗಳಲ್ಲಿಯೂ ಏಜೆಂಟರು ಬೇಕು

ಸೂಚನೆ—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲಿ ಬರೆಯಬೇಕು

ವಿಳಾಸ — [9-6]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಬ್ರಂ॥ ಶ್ರೀ॥ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳವರಿಂದ ಬರೆಯಲ್ಪಟ್ಟ "ಜೈಮಿನಿ ಭಾರತ" ಎಂಬ ಟೀಕಾತಾತ್ಪರ್ಯಸಹಿತವಾದ

ಕರ್ಣಾಟಕ ಜೈಮಿನಿ ಭಾರತವು

ಶುದ್ಧ ಪ್ರತಿ, ಉತ್ತಮ ಕಾಗದ, ಇದು ಪದ್ಯ, ಪ್ರತಿಪದಾರ್ಥ, ತಾತ್ಪರ್ಯ, ಅನ್ವಯಸಾರ್ಥ, ಸಂಧಿ, ಸಮಾಸ, ಅಲಂಕಾರ, ಛಂದೋವಿವರಣೆ ಮೊದಲಾದವುಗಳೊಡಗೂಡಿ ಸ್ಕೂಲಿನಲ್ಲಿ ಓದುವ ವಿದ್ಯಾರ್ಥಿಗಳು ಮೊದಲು ಮಾಡಿ ಪ್ರೌಢ ವಿದ್ವಾಂಸರ ವರೆಗಿನ ಎಲ್ಲಾ ಸ್ತ್ರೀ ಪುರುಷರೂ ಓದಲು ಅನುಕೂಲವಾಗಿದೆ. ಕರ್ನಾಟಕ ಭಾಷೆಯ ಕವಿಸಾರ್ವಭೌಮನಾದ ಲಕ್ಷ್ಮೀಶ ಕವಿಯ ಜೈಮಿನಿ ಭಾರತವು ಪದಲಾಲಿತ್ಯ, ಅರ್ಥಗಾಂಭೀರ್ಯ, ಮಾಧುರ್ಯ, ಶೈಲಿ ಸಂಪತ್ತಿ, ಅರ್ಥಚಮತ್ಕೃತಿ, ಭಾವವೈಚಿತ್ರ್ಯ, ಅಲಂಕಾರ, ವೈಖರಿ, ಶ್ರಾವ್ಯತೆ ಮುಂತಾದವುಗಳೊಡಗೂಡಿ ಸರಸ ಸಂಮಿಳಿತವಾಗಿರುವುದೆಂಬುದು ಕನ್ನಡ ನಾಡಿಗೇ ಗೊತ್ತಾಗಿರುವುದರಿಂದ ವಿಶೇಷ ಬರೆಯುವುದು ಅನಾವಶ್ಯಕ. ಮುಖ್ಯವಾಗಿ ಇದನ್ನು ಅಚ್ಚುಹಾಕಿಸುವುದರಲ್ಲಿಯೂ ಪಂಡಿತರ ಸಹಾಯವನ್ನು ಹೊಂದಿದ್ದಾಗಿ ಇದರಲ್ಲಿ ದೋಷಗಳೇ ಇಲ್ಲ. ಸಂಪೂರ್ಣವಾಗಿ ಅಂದರೆ 34 ಸಂಧಿಗಳನ್ನೊಳಗೊಂಡ 910 ಪುಟಗಳುಳ್ಳ ದೊಡ್ಡ ಸೈಜು, ಫುಲ್ ಕ್ಯಾಲಿಕೋ ಬೈಂಡ್. ಬೆಲೆ 1 ಕ್ಕೆ 4 ರೂಪಾಯಿ. ಟಪಾಲ್ ಹಾಸಲು 8 ಆಣೆ

ವೇ॥ ಲಕ್ಕೂರು ಸುಬ್ಬಣ್ಣಾಚಾರ್ಯರಿಂದ ಬರೆಯಲ್ಪಟ್ಟ ಸಟೀಕಾ

ಹರಿಕಥಾಮೃತಸಾರ.

ಶುದ್ಧ ಪ್ರತಿ, ಉತ್ತಮ ಕಾಗದ, ಹೊಸ ಪುಸ್ತಕ, 344 ಪುಟ, 32 ಸಂಧಿ. ಈ ಗ್ರಂಥವು ಭಗವದ್ಭಕ್ತರಾದ ಜಗನ್ನಾಥದಾಸರಿಂದ ಭಾಮಿನೀಷಟ್ಪದಿ ರೂಪದಿಂದ ರಚಿಸಲ್ಪಟ್ಟಿರುವದು. ಸರ್ವರಿಗೂ ವೇದ್ಯವೇ ಇದ. ಇದರಲ್ಲಿ ಕೇವಲವಾಗಿ ಪರಮಾತ್ಮನ ಧ್ಯಾನ ವಿನಹ ಬೇರೆ ವಿಷಯ ಇರಲಾರದು. ಇದು ಮುಮುಕ್ಷುಗಳಿಗೆ ಅತ್ಯಂತ ಉಪಯೋಗವಾದದು. ಇದರಲ್ಲಿರುವ 32 ಸಂಧಿಯಲ್ಲಿ ದೇವರ ಧ್ಯಾನ, ದೇವರಲ್ಲಿ ಮಾಡಬೇಕಾದ ಭಕ್ತಿ, ಆ ಭಕ್ತಿಯನ್ನು ಹ್ಯಾಗೆ ಮಾಡುವದು, ಅದನ್ನು ಯಾರ್ಯಾರು ಮಾಡಿದರು, ಅವರಿಗೆ ಹ್ಯಾಗೆ ಮೋಕ್ಷವಾಯಿತು ಎಂಬೀ ವಿಷಯಗಳು ಸ್ಪಷ್ಟವಾಗಿ ಬರೆಯಲ್ಪಟ್ಟಿವೆ. ಪ್ರತಿ ಒಂದು ಸಂಧಿಯಲ್ಲಿರುವ ಪ್ರತಿ ಪದಕ್ಕೆ ಸರಿಯಾದ ತಾತ್ಪರ್ಯವು ಅನೇಕ ಪುರಾಣ ವೇದಶಾಸ್ತ್ರಗಳ ಅನುಭವವೂ ಸಹ ಕ್ರೋಢೀಕರಿಸಿ ಬರೆಯಲ್ಪಟ್ಟಿದೆ. ಇದನ್ನು ಪಠನ ಶ್ರವಣ ಮಾಡತಕ್ಕವರಿಗೆ ಆ ಮಹಾ ವಿಷಯಕ್ಕೆ ಅನುಸಾರವಾದ ಶಾಸ್ತ್ರ ಪ್ರಮಾಣ ಅಲ್ಲೇ ಸೂಚಿಸಿದೆ. ಇದು ಸರ್ವರಿಗೂ ಹಿತವರ್ಧಕವಾದದು. ಮೋಕ್ಷಮಾರ್ಗಕ್ಕೆ ಅತ್ಯಂತ ಸಹಾಯವಾದದು. ಇದನು ಸರ್ವರೂ ಅವಶ್ಯಕವಾಗಿ ಅಂಗೀಕರಿಸತಕ್ಕದು. ಸುಂದರವಾದ ಅಕ್ಷರದಿಂದ ಕೂಡಿದ್ದು, ಇಚ್ಛೆಯುಳ್ಳವರು ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಅತಿ ಸುಂದರವಾದ ಬೈಂಡ್ ಬೆಲೆ 1ಕ್ಕೆ 1-1-0 ಟಪಾಲ್ ಹಾಸಲು 3 ಆಣೆ [15-1]

ಜೈಮಿನಿ ಭಾರತವನ್ನು ತರಿಸಿಕೊಂಡವರಿಗೆ 12 ಆಣೆ ಕ್ರಯ ಬಾಳುವ ಚಾರು ಪರ್ವೀನ ಎಂಬ 1 ಚಿನ ನಾಟಕದ ಕಥೆ ಮುಪತ್ತಾಗಿ ದೊರೆಯುತ್ತೆ. ಸಟೀಕಾ ಹರಿಕಥಾಮೃತಸಾರ ತರಿಸಿಕೊಂಡವರಿಗೆ ಸೋಮನಾಥ 1 ನೇ ಭಾಗ ಪಂಚತಂತ್ರ 2 ನೇ ಭಾಗ ಕರುಣಾನಿಧಾನ ಎಂಬ ಕಥೆಯು ಮುಪತ್ತಾಗಿ ದೊರೆಯುತ್ತೆ. ಮತ್ತು ನಮ್ಮಲ್ಲಿ ಅನೇಕ ಪುಸ್ತಕಗಳು ದೊರೆಯುತ್ತವೆ

ಟಿ ಎನ್ ಕೃಷ್ಣಯ್ಯಸೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಪೇಟೆ ಧಾರಣೆ

ವಿವರ	ಮೈಸೂರು	ಬೆಂಗಳೂರು
ಕಡಿ ಅಕ್ಕಿ ಪಲ್ಲಾ ೧ಕ್ಕೆ (ಹೊಸದು) ರೂ	೧೪-೦-೦	೧೭-೮-೦
ಕೆ ಎಂ ಅಕ್ಕಿ ಆವಲ್ ,,	೧೪-೮-೦	೧೭-೫-೦
,, ಮಧ್ಯ	೧೩-೦-೦	೧೭-೦-೦
ಬುಟ್ಟಿ ಅಕ್ಕಿ	೧೩-೦-೦	೧೭-೪-೦
ಸಣ್ಣಕ್ಕಿ ಆವಲ್ ,,	೧೫-೦-೦	೧೮-೮-೦
ಮಧ್ಯ ,,	೧೪-೮-೦	೧೭-೮-೦
ತೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ	೧೨-೧೦-೦	೧೩-೮-೦
,, ಮಧ್ಯಮ ,,	೧೨-೮-೦	೧೨-೮-೦
ಪೆರ್ ರಾಗಿ ಪಲ್ಲಾ ೧ಕ್ಕೆ	೭-೮-೦	೫-೦-೦
ಕಾರ್ರಾಗಿ ,,	೭-೦-೦	೪-೧೨-೦
ಜೋಳ ,,	೬-೧೨-೦	೭-೪-೦
ಹುಸಂದೆ ಪಲ್ಲಾ ೧ಕ್ಕೆ	೧೧-೦-೦	೧೩-೧೨-೦
ಬಿಳೀ ಅವರೆ ,,	೧೦-೦-೦	೧೧-೦-೦
ಹೆಸರು	೧೧-೦-೦	೧೪-೦-೦
ಉದ್ದು ,,	೧೪-೦-೦	೧೬-೦-೦
ಕಡಲೆ ,,	೧೦-೦-೦	೧೨-೦-೦
ಎಳ್ಳು ಸೇರು ೧೨೭ಕ್ಕೆ	೨೪-೦-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೬-೨-೦	೭-೦-೦
ಪದಳು ೧೨೭ ಸೇರಿಗೆ	೧೨-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೩-೪-೦	೩-೮-೦
ಸೊಸೇಸಾಯಿ ,	೩-೦-೦	೩-೪-೦
,, ಮಧ್ಯ	೨-೮-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫-೮-೦	ಮಣ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೨-೦	೬-೬-೦
ಹರಳೆಣ್ಣೆ ,, ,,	೫-೪-೦	೬-೦-೦
ಕೆಂಪು-ಬಿ ಪಲ್ಲಾ ೧ಕ್ಕೆ	೪-೮-೦	೫-೪-೦
ಉಪ್ಪು ,, ,,	೫-೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧-೮-೦	೧-೪-೦
,, ಹಳೇದು ,,	೧-೦-೦	೦-೧೪-೦
ತುಪ್ಪ ಮಣ ೧ಕ್ಕೆ	೧೬-೦-೦	೧೯-೦-೦
ಸೀಮೆಯೆಣ್ಣೆ ಡಬಿ ೧ಕ್ಕೆ	೫-೭-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೬-೦-೦	೬-೦-೦
ಆಳಲೇಕಾಯಿ ಮಣ ೧ಕ್ಕೆ	೧-೪-೦	೧-೦-೦
ಆಕ್ರೋಟಪಕ್ಕಿ ಮಣ ೧ಕ್ಕೆ	೦-೧೨-೦	೧-೮-೦
ಚಿನ್ನ (ಪವನ್) ಕೆಂಪು	೧೫-೮-೦	೧೫-೮-೦
,, ,, ಪಂಚು	೧೫-೧೪-[illegible]	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೩-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦-೦	೮೧-೦-೦

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

17—1—1913 ರಿಂದ 24—1—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು.
ಬೆಂಗಳೂರು ಪಟ್ಟಣ	9	10	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	27	14	0	0
ಮೈಸೂರು ,,	58	33	20	14
ಕೋಲಾರ್ ,,	10	10	0	0
ಕೋಲಾರ್ ಚಿನ್ನದ ಗಣಿಗಳು	13	14	0	0
ತುಂಕೂರು ಡಿಸ್ಟ್ರಿಕ್ಟು	3	3	0	0
ಹಾಸನ ,,	8	7	0	0
ಚಿತ್ರದುರ್ಗ ,,	0	0	14	4
ಕಡೂರ್ ,,	10	8	0	0
ಶಿವಮೊಗ್ಗ ,,	25	16	0	0
ಜುಮ್ಲಾ	163	115	34	18

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೆ ಶಿಶಿರಋತೌ ಮಾಘ ಶುದ್ಧ ಪಾಡ್ಯಮಿ ಶುಕ್ರವಾರದಿಂದ ಮಾಘ ಶುದ್ಧ ಸಪ್ತಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಫೆಬ್ರವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಕರ ಕುಂಭ ತೇದಿ
7	ಶುಕ್ರ	ಪಾಡ್ಯಮಿ	13-26	ಧನಿಷ್ಠ	9-35	26
8	ಶನಿ ‡	ಬಿದಿಗೆ	18 42	ಶತಭಿಷ	16-0	27
9	ಭಾನು †	ತದಿಗೆ	24-46	ಪೂಭಾ	22-17	28
10	ಸೋಮ	ಚೌತಿ	28 15	ಉ ಭಾ	27-51	29
11	ಮಂಗಳ *	ಪಂಚಮಿ	31-19	ರೇವತಿ	32-33	30
12	ಬುಧ §	ಷಷ್ಠಿ	33-12	ಅಶ್ವಿನಿ	36-1	1
13	ಗುರು ,,	ಸಪ್ತಮಿ	34 31	ಭರಣಿ	38-16	2

‡ ಪೂರ್ಣತಿಥಿ, ಕೈಲಾಸಗೌರೀ ವ್ರತ, ಮಳೆ ನಕ್ಷತ್ರ— ಧನಿಷ್ಠ 2 ನೇ ಪಾದ

† ತೃತೀಯಾ ತಿಥಿ, ಪೌರ್ಣಗೌರೀ ವ್ರತ, ಶ್ರೀರಂಗದಲ್ಲಿ ತೆಪ್ಪೋತ್ಸವಾರಂಭ.

* ತರಳಪಂಚಮಿ, ಮಳೆ ನಕ್ಷತ್ರ—ಧನಿಷ್ಠ 3 ನೇ ಪಾದ § ಕುಮಾರಷಷ್ಠಿ.

,, ರಥಸಪ್ತಮಿ

ವಿದೇಶದ ವೃತ್ತಾಂತಗಳು.

ಲಾಯಿಡ್ ಎಂಬ ಇಂಗ್ಲಿಷ್ ಹಡಗಿನ ಕಂಪನಿ ಯವರಿಗೆ ಕಳೆದ 1912 ನೇ ವರುಷದಲ್ಲಿ ಹಡಗುಗಳು ಮುಳುಗಿ ನಷ್ಟಪಟ್ಟು 10 ಕೋಟಿ 50 ಲಕ್ಷ ರೂಪಾಯಿ ಲುಕ್ಸಾನು ಆಗಿರುತ್ತದೆ. ಆ ವರುಷ ಒಟ್ಟು 6,031 ಪ್ರಯಾಣಿಕರೂ, ಹಡಗುಗಳ ನೌಕರರೂ ಸಮುದ್ರದ ಪಾಲಾದರು. 228 ಹಡಗುಗಳು ಸಂಪೂರ್ಣವಾಗಿ ನಾಶಹೊಂದಿದವು. ಆ ಪೈಕಿ 82 ಹಡಗುಗಳು ಇಂಗ್ಲಿಷರದು

* * *

ಇಂಗ್ಲಾಂಡಿನಿಂದ ದಕ್ಷಿಣ ಆಫ್ರಿಕವನ್ನು ಕುರಿತು ಹೋಗುತ್ತಿದ್ದ ವೆರೋನೀಸ್ ಎಂಬ ಹಡಗು ಸಮುದ್ರದ ಮೇಲೆ ವಿಶೇಷವಾದ ಮಳೆಗಾಳಿಗೆ ಸಿಕ್ಕಿ ನಷ್ಟಪಟ್ಟಿತು. ಅದರಲ್ಲಿ ಕುಳಿತು ಪ್ರಯಾಣಮಾಡುತ್ತಿದ್ದ 213 ಜನರ ಪೈಕಿ 50 ಮಂದಿ ವಿನಾ ಉಳಿದವರನ್ನೆಲ್ಲಾ ಬಹಳ ಸಾಹಸಪಟ್ಟು ಕರೆತಂದು ಬದುಕಿಸಿದರು. ಸುಮಾರು 50 ಜನರು ಸಮುದ್ರದಲ್ಲಿ ಕೊಚ್ಚಿ ಮೃತಪಟ್ಟರು

* * *

ಆಫ್ರಿಕಾಖಂಡದ ಉತ್ತರ ಭಾಗದಲ್ಲಿ ಫ್ರೆಂಚರಿಗೆ ಸೇರಿದ ಮೊರಾಕೋದಲ್ಲಿ ಮೂರ್ ಎಂಬ ಸಮೀಪಿಗಳು ರಾಜದ್ರೋಹವನ್ನು ನಡಿಸಿ ದಂಗೆ ಎದ್ದಿದ್ದಾರೆ. ಹೋದ ತಿಂಗಳಲ್ಲಿ ಫ್ರೆಂಚ್ ಸೈನಿಕರು ಆ ದಂಗೇಕೋರರನ್ನು ಸಂಧಿಸಿ ಯುದ್ಧಮಾಡಿ 600 ಜನರನ್ನು ಕೊಂದುಹಾಕಿದರು. ಈ ಕದಿಪಾಟದಲ್ಲಿ ಸೈನಿಕರ ಪೈಕಿ 12 ಮಂದಿ ಕೊಲೆಯಾದರು, 60 ಮಂದಿಗೆ ಗಾಯಗಳಾದವು

* * *

ಮೋಟಾರ್ ಗಾಡಿಗಳನ್ನು ನಡಿಸುವುದಕ್ಕೆ ಪೆಟ್ರೋಲ್ ಎಂಬ ಜ್ವಾಲಾದ್ರಾವಕವು ಅವಶ್ಯವಾಗಿದೆ. ಇದರ ಕ್ರಯವು ಹೆಚ್ಚುತ್ತಾ ಇರೋಣದರಿಂದ ಅದಕ್ಕೆ ಪ್ರತಿಯಾಗಿ ಇನ್ಯಾವುದಾದರೂ ಅಗ್ಗವಾದ ದ್ರಾವಕವನ್ನು ಕಂಡುಹಿಡಿದು ಒದಗಿಸುವಂಥಾ ರಸಾಯನ ಶಾಸ್ತ್ರ ಶೋಧಕನಿಗೆ ಮೂರು ಲಕ್ಷ ರೂಪಾಯಿ ಬಹುಮಾನ ಕೊಡುತ್ತೇವೆಂದು ಯೂರೋಪ್ ಖಂಡದ ಮೋಟಾರ್ ಸಂಘಗಳವರು ಸೇರಿ ಪ್ರಕಟಿಸಿರುತ್ತಾರೆ

* * *

ಜರ್ಮನಿ ರಾಜ್ಯದಲ್ಲಿ ಜನರು ಸಿಗರೆಟ್ ಎಂಬ ಹೊಗೆಸೊಪ್ಪು ಸೇದುವುದು ವರುಷೇ ವರುಷ ಹೆಚ್ಚುತ್ತಾ ಇದೆ. 1907 ನೇ ಇಸವಿಯಲ್ಲಿ ಆ ರಾಜ್ಯದ ಕಾರ್ಖಾನೆಗಳಲ್ಲಿ 561 ಕೋಟಿ 10 ಲಕ್ಷ ಸಿಗರೆಟ್ಟುಗಳು ತಯಾರಾಗಿ ಉಪಯೋಗಿಸಲ್ಪಟ್ಟವು. 1911 ನೇ ಇಸವಿಯಲ್ಲಾದರೋ 936 ಕೋಟಿ 20 ಲಕ್ಷ ಸಿಗರೆಟ್ಟು ತಯಾರಾದವು. ನಾಲದೆ ಇತರ ಕಡೆಗಳಿಂದ 56 ಕೋಟಿ 70 ಲಕ್ಷ ಸಿಗರೆಟ್ಟುಗಳನ್ನು ಜರ್ಮನಿಗೆ ತರಿಸಿಕೊಂಡಿದ್ದಾರೆ

* * *

ಸರ್ವಿಯಾ ರಾಜಧಾನಿಯಾದ ಬೆಲ್‌ಗ್ರೇಡ್ ಪಟ್ಟಣದಲ್ಲಿರುವ ಜರ್ಮನಿ ರಾಯಭಾರಿಯ ಪತ್ನಿಯು ಲಂಡನ್ ಪಟ್ಟಣಕ್ಕೆ ವ್ಯಾಪಾರ ಕೆಲಸದ ನಿಮಿತ್ತವಾಗಿ ಹೋಗಿದ್ದಾಗ ಅಲ್ಲಿನ ಪೋಲೀಸಿನವರು ಆಕೆಯನ್ನು ಸ್ತ್ರೀರೂಪದಲ್ಲಿರುವ ಗೂಢಚಾರನೆಂದು ಬಾಹಿರ ದಸ್ತಗಿರಿ ಮಾಡಿ ಠಾಣ್ಯದಲ್ಲಿ ಹಾಕಿಕೊಂಡರು. ಎರಡು ಗಂಟೆಯಾದ ಮೇಲೆ ಆಕೆಯ ಪತಿಯು ಹೋಗಿ ಪೋಲೀಸಿನವರಿಗೆ ಆಕೆ ತನ್ನ ಪತ್ನಿಯೆಂದು ಸಾಕ್ಷಿಪೂರ್ವಕವಾಗಿ ರುಜುವಾತುಕೊಟ್ಟು ಆಕೆಯನ್ನು ಸೆರೆಯಿಂದ ಬಿಡಿಸಿಕೊಂಡುಹೋದನು

ವೃತ್ತಾಂತ ಪತ್ರಿಕೆ.

ಸನ್ ೧೯೧೩ ನೇ ಇಸವಿ ಫೆಬ್ರವರಿ ತಾ ೬ ನೇ ಗುರುವಾರ

ಮಕ್ಕಳ ಸಾವು

ಸರ್ಕಾರದವರು ಬರಸಿ ಇಡುವ ಜನನ ಮರಣಗಳ ಲೆಕ್ಕವನ್ನು ಪರೀಕ್ಷೆ ಮಾಡಿ ನೋಡಿದ ಪಕ್ಷದಲ್ಲಿ ಆ ಮರಣ ಸಂಖ್ಯೆಯಲ್ಲಿ ಐದು ವರುಷದೊಳಗಿನ ಮಕ್ಕಳ ಸಾವು ಬಹಳ ಹೆಚ್ಚಾಗಿದೆ ಎಂದು ಪರಿಷ್ಕಾರವಾಗಿ ಗೊತ್ತಾಗುತ್ತದೆ ಮಕ್ಕಳು ಜನಿಸುತ್ತಾರೆ, ಆದರೆ ಹುಟ್ಟಿದ ಮಕ್ಕಳು ಬದುಕಿ ಬೆಳೆವಳಿಗೆಗೆ ಬರುವುದಿಲ್ಲ ಹೀಗಾಗಲು ಕಾರಣವೇನೆಂದು ಕೇಳಬಹುದು

ಹೀಗೆ ಮಕ್ಕಳ ಸಾವು ಹೆಚ್ಚಾಗಿರುವುದಕ್ಕೆ ವೈದ್ಯರನ್ನು ಕಂಡು ಕೇಳಿದರೆ ಅವರು ಹಲವು ಕಾರಣಗಳನ್ನು ಹೇಳುತ್ತಾರೆ ಆ ಪೈಕಿ ಹೆಣ್ಣು ಮಕ್ಕಳು ಬಹಳ ಚಿಕ್ಕ ವಯಸ್ಸಿನಲ್ಲೇ ಮಕ್ಕಳ ತಾಯಂದಿರಾಗೋದರಿಂದ ಮಕ್ಕಳನ್ನು ಹೆರುವುದಕ್ಕೆ ಅವರಿಗೆ ಕಾಯಪುಷ್ಟಿ ಇರುವುದಿಲ್ಲವೆನ್ನುವುದು ಒಂದು ಕಾರಣವಾಗಿದೆ ಈ ಮಾತು ಸುಳ್ಳಲ್ಲ ಹೆಣ್ಣು ಮಕ್ಕಳನ್ನು ಹಡೆದಿರುವ ಮಾತಾಪಿತೃಗಳು ಹದಿನೆಂಟು ಹತ್ತೊಂಭತ್ತು ವಯಸ್ಸಾಗುವುದಕ್ಕೆ ಮುಂಚೆ ಅವರಿಗೆ ವಿವಾಹ ಮಾಡದಂತೆ ನೋಡಿಕೊಳ್ಳಬೇಕು

ಇವಕ್ಕಿಂತಲೂ ವಿಶೇಷವಾದ ಕಾರಣ ಇನ್ನೊಂದುಂಟು ತಾಯಂದಿರಿಗೆ ತಮ್ಮ ಮಕ್ಕಳನ್ನು ಸರಿಯಾದ ರೀತಿಯಲ್ಲಿ ಸಾಕಿ ಬೆಳೆಸುವ ಕ್ರಮಗಳೇ ತಿಳಿಯದು ಅದದ್ದರಿಂದಲೇ ಮಕ್ಕಳು ಹೆಚ್ಚಾಗಿ ಸಾಯಲು ಕಾರಣವಾಗಿದೆ

ಮಕ್ಕಳನ್ನು ಹೆತ್ತವರು ತಮ್ಮ ಶಿಶುಗಳಿಗೆ ಹಾಲು ಹಾಕಬೇಕಾದನ್ನು ಅವಶ್ಯವೆಂದು ತಿಳಿದದಾರೆ ಆದರೆ ಅಂಥಾ ಹಾಲು ನಿರ್ಮಲವಾಗಿದೆಯೇ ಎಂದು ನೋಡುವುದಿಲ್ಲ ಸಾಮಾನ್ಯವಾಗಿ ಕವಾಡಿಗರೂ ಇತರರೂ ಹಸುಗಳನ್ನು ಕಟ್ಟಿ ಸಾಕುವ ಕ್ರಮಗಳನ್ನು ನೋಡಿದರೆ ಅಂಥವರಿಂದ ಕೊಂಡುಕೊಳ್ಳುವ ಹಾಲು ಎಷ್ಟುಮಾತ್ರಕ್ಕೂ ಒಳ್ಳೇದಲ್ಲವೆಂದು ಖಂಡಿತವಾಗಿ ಹೇಳಬಹುದಾಗಿದೆ ಈಗಿನ ಆಚರಣೆಗಳನ್ನು ನೋಡುವಲ್ಲಿ ಒಳ್ಳೇ ಹಾಲು ಸಿಕ್ಕುವುದೇ ಪ್ರಯಾಸ ಹಸುವಿನ ಕೊಟ್ಟಿಗೆಯು ಸಾಮಾನ್ಯವಾಗಿ ಕತ್ತಲುಮನೆಯಾಗಿದೆ, ಅದರೊಳಕ್ಕೆ ಸೂರ್ಯರಶ್ಮಿ ಬೀಳುವುದೇ ಇಲ್ಲ ಹಸುವಿನ ಗಂಜಳ ರೊಚ್ಚು ಕೊಟ್ಟಿಗೆಯಿಂದ ಹೊರಗೆ ಸಾಗಿ ಹೋಗಲು ಅವಕಾಶವಿಲ್ಲದೆ ಅಲ್ಲೇ ಇಂಗುತ್ತದೆ ಇದರಿಂದ ಕೊಟ್ಟಿಗೆಯೊಳಗೂ ಸುತ್ತುಮುತ್ತಲೂ ನಾನಾ ದುರ್ಗಂಧಗಳು ಹುಟ್ಟುವವು ತೇವವಾಗಿಯೂ ಶೀತವಾಗಿಯೂ ಇರುವ ಭೂಮಿಯಲ್ಲಿ ಬಗೆಬಗೆಯ ರೋಗಕ್ರಿಮಿಗಳು ಹುಟ್ಟಿ ಹಾಲಿನೊಳಗೆ ಸೇರಿಕೊಂಡು ಮಕ್ಕಳಿಗೆ ಭೇದಿಯೇ ಮೊದಲಾದ ಕಾಯಿಲೆಗಳನ್ನು ತರುವವು

ಸಾಮಾನ್ಯವಾಗಿ ಜನರು ವಾಸಮಾಡುವಂಥಾ ಮನೆಗಳಲ್ಲಿ ದನಗಳನ್ನು ಕಟ್ಟಿಕೊಂಡು ಸಾಕಬೇಕಾರದು ಗಂಜಳವೇ ಮೊದಲಾದ ರೊಚ್ಚು ಸಾಗಿಹೋಗುವುದಕ್ಕೂ ಬಿಸಿಲು ಬೆಳಕು ಗಾಳಿ ವಿಶೇಷವಾಗಿ ಬರುವುದಕ್ಕೂ ಅವಕಾಶವಿರುವಂಥಾ ಮೈದಾನುಗಳಲ್ಲಿ ಊರ ಹೊರಗಡೆ ದೊಡ್ಡ ದೊಡ್ಡ ಕೊಟ್ಟಿಗೆಗಳನ್ನು ಕಟ್ಟಬೇಕು ಈ ಸಂದರ್ಭದಲ್ಲಿ ರಾಜಧಾನಿಯ ಮ್ಯುನಿಸಿಪಾಲಿಟಿಯವರು ಕರೆಯುವ ಹಸುಗಳನ್ನು ಕಟ್ಟುವುದಕ್ಕೂ ಅವುಗಳ ಪಾಲನೆಗೂ ತೃಪ್ತಿಕರವಾದ ಏರ್ಪಾಡನ್ನು ಮಾಡಿ, ನಿರ್ಮಲವಾದ ಹಾಲನ್ನು ಒದಗಿಸುವುದಕ್ಕೆ ಅನುಕೂಲಪಡಿಸುವವರಾಗಿದಾರೆಂದು ತಿಳಿದು ಆನಂದಪಡುತ್ತೇವೆ ಇದು ಬಹಳ ಅಗತ್ಯವಾಗಿ ಮಾಡಬೇಕಾದ ಕಾರ್ಯವು ಇಂಥಾ ಒಳ್ಳೆಯ ಹಾಲು ಒದಗಿ ಮಕ್ಕಳಿಗೆ ಹಾಕುವಂತಾದರೆ ಮಕ್ಕಳ ಸಾವು ಬಹುಮಟ್ಟಿಗೆ ನಿವಾರಣೆಯಾದೀತೆಂದು ಹೇಳಬಲ್ಲೆವು ಕವಾಡಿಗರೂ ಹಸು ಎಮ್ಮೆಗಳನ್ನು ಕಟ್ಟಿಕೊಂಡು ಹಾಲು ಮಾರುತ್ತಿರುವವರೂ ಮ್ಯುನಿಸಿಪಾಲಿಟಿಯವರು ಹೇಳುವಂತೆ ನಡೆದುಕೊಂಡು ಅವರಿಗೆ ಸಹಾಯಮಾಡುತ್ತಾ ಒಂದ ಪಕ್ಷದಲ್ಲಿ ರಾಜಧಾನಿಯಲ್ಲಿ ಜನಿಸುವ ಮಕ್ಕಳಿಗೆ ಒಳ್ಳೇ ಆರೋಗ್ಯಕರವಾದ ಹಾಲು ಒದಗುವುದಕ್ಕೂ, ಈಗಿನಂತೆ ಅಂಥಾ ಮಕ್ಕಳು ನೈತವಲ್ಲೇ ಸತ್ತುಹೋಗದೆ ಸುಖವಾಗಿ ಬೆಳೆಯುವುದಕ್ಕೂ ಅನುಮಾನವಿಲ್ಲ.

ಬಾಲ್ಕನ್ ಸಂಸ್ಥಾನಗಳೂ ಟರ್ಕಿಯೂ

ಇದುವರೆಗೆ ಬಂದಿರುವ ತಂತಿ ವರ್ತಮಾನಗಳಿಂದ ಯುದ್ಧವು ಮತ್ತೆ ಪ್ರಾರಂಭವಾಗಿಲ್ಲವೆಂದು ಗೊತ್ತಾಗುತ್ತದೆ ಯೂರೋಪಿನ ರಾಜ್ಯಗಳವರು ಟರ್ಕಿಯವರಿಗೆ ವಿವೇಕ ಹೇಳಿ ಅವರು ಕಾಲಾನುಗುಣ್ಯವಾದ ಈಗಿನ ಸ್ಥಿತಿಯನ್ನು ಒಪ್ಪಿಕೊಂಡು ವರ್ತಿಸುವಂತೆ ಮಾಡಬಲ್ಲರೆಂದು ತೋರುವುದು ಟರ್ಕಿಯ ಹೊಸ ಗವರ್ನಮೆಂಟಿನವರು ಕೊಟ್ಟಿರುವ ಜವಾಬನ್ನು ನೋಡುವಲ್ಲಿ ಇನ್ನು ಮುಂದ ದೊಡ್ಡ ಯುದ್ಧಗಳೇನೂ ನಡೆಯದೆ ಕರಾರು ಆಗಬಹುದೆಂದು ಎಲ್ಲರೂ ನಿರೀಕ್ಷಿಸುತ್ತಾರೆ.

ಜೀವೋತ್ಪತ್ತಿ

ನಾವು ಜಲದಲ್ಲಿ ಮಣ್ಣು, ಕಲ್ಲು, ಕಬ್ಬಿಣ, ತಾಂಬ್ರ ಮುಂತಾದ ಲೋಹಗಳು ಇರುತ್ತವೆ ಮತ್ತು ಸಸಿ, ಗಿಡ, ಮರ, ಮೀನು, ಪಕ್ಷಿ, ಪಶುವೇ ಮುಂತಾದ ಪ್ರಾಣಿಗಳೂ ಇರುತ್ತವೆ ಅಂತೂ ಭೂಮಂಡಲದಲ್ಲಿರುವ ಸಕಲ ವಸ್ತುಗಳನ್ನೂ ನಿರ್ಜೀವ ವಸ್ತುಗಳೆಂದೂ ಸಜೀವ ಪ್ರಾಣಿಗಳೆಂದೂ ಎರಡು ದೊಡ್ಡ ರಾಶಿಗಳಾಗಿ ವಿಂಗಡಿಸಬಹುದು ಇದು ಸರ್ವರೂ ಸುಲಭ ಸಾಧ್ಯವಾಗಿ ತಿಳಿಯತಕ್ಕ ವಿಷಯವಾಗಿದೆ ನಿರ್ಜೀವ ವಸ್ತುಗಳು ಅನೇಕ ಜಾತಿಗಳಾಗಿ ವಿಂಗಡವಾಗಿ ಒಂದು ವಸ್ತುವಿನ ಸೂಕ್ಷ್ಮ ಭಾಗಗಳು ಇನ್ನೊಂದು ವಸ್ತುವಿನ ಸೂಕ್ಷ್ಮಭಾಗಗಳಿಗೆ ಒಪ್ಪದೆ ಇರುತ್ತವೆ ಕಲ್ಲು ಕಬ್ಬಿಣ ಚಿನ್ನಗಳು ಬೇರೆ ಬೇರೆ ವರ್ಗದ ವಸ್ತುಗಳಾಗಿಯೂ ಒಂದರಲ್ಲಿರುವ ಗುಣಗಳು ಇನ್ನೊಂದರಲ್ಲಿಲ್ಲದೆ ಇರುತ್ತವೆ ಆದರೆ ಸಾಮಾನ್ಯವಾಗಿ ಇವುಗಳೆಲ್ಲೊಂದರಲ್ಲೂ ಜೀವವಿಲ್ಲದಿರುವುದರಿಂದ ಇವುಗಳೆಲ್ಲವನ್ನೂ ಒಂದೇ ರಾಶಿ ಮಾಡಿ ಇವುಗಳಿಗೆ ನಿರ್ಜೀವ ವಸ್ತುಗಳೆಂದು ಹೆಸರಿಡುತ್ತೇವೆ ಹಾಗೆಯೇ ಪ್ರಾಣಿವರ್ಗದಲ್ಲಿ ಭೇದವುಂಟು ಬೀಜದಿಂದ ಹುಟ್ಟತಕ್ಕ [illegible] ಮೊಟ್ಟೆಯೊಡೆದು ಹುಟ್ಟುವ [illegible] ಗರ್ಭದಿಂದ ಹುಟ್ಟುವ ಪಶುಪ್ರಾಣಿಗಳು [illegible] ಇವುಗಳೆಲ್ಲದರಲ್ಲಿಯೂ [illegible] ಗುಣ ಸ್ವಭಾವ ಭೇದಗಳಿಂದ ಕೆಲವು [illegible] ಸಕಲ ಜಾತಿಯ ಪ್ರಾಣಿಗಳ ಉತ್ಪತ್ತಿ ಸ್ವಭಾವ ಲಕ್ಷಣಗಳನ್ನು [illegible] ಎಂದಿದ್ದಾರೆ ಅವರು [illegible] ಈಗ ಪ್ರಾಣಿಗಳಲ್ಲಿ ಬೇರೆ ಬೇರೆ ತರದ ಲಕ್ಷಾಂತರ ಪ್ರಾಣಿಗಳಿದ್ದರೂ ಇವೆಲ್ಲಾ ಆದಿಯಲ್ಲಿದ್ದ ಒಂದೇ ಜೀವದಿಂದ ಉತ್ಪತ್ತಿಯಾಗಿ ಆಮೇಲೆ ಪ್ರದೇಶದ ಭೋಗ, ಆಹಾರ, ಹವೆ ಮುಂತಾದ ಭೇದಗಳಿಂದ ಕ್ರಮೇಣ ಬೇರೆ ಬೇರೆ ವರ್ಗದ ಪ್ರಾಣಿಗಳಾಗಿ ಪರಿಣಮಿಸಿದವು ಮತ್ತು ಒಂದು ವರ್ಗದ ಪ್ರಾಣಿಯು ಅದಕ್ಕಿಂತ ಹಿಂದಿನ ಪ್ರಾಣಿವರ್ಗಕ್ಕಿಂತ ಉತ್ತಮತರವಾಗಿಯೂ [illegible] ಕೋಟ್ಯಂತರ ವರುಷಗಳ ತರುವಾಯ ಮನುಷ್ಯಜಾತಿಯು ಉತ್ಪತ್ತಿಯಾಯಿತೆಂದೂ ಹೇಳುತ್ತಾರೆ

ಪ್ರಾಣಿವರ್ಗಗಳಲ್ಲಿರುವ ವ್ಯತ್ಯಾಸಗಳಂತೂ ಹೀಗಾದವೆನ್ನಿ ಆದರೆ ಪ್ರಾಣವು ಮೊದಲು ಎಲ್ಲಿಂದ ಬಂದಿತು ನಿರ್ಜೀವ ವಸ್ತುಗಳಾದ ಲೋಹರಾಶಿಗಳ ನಡುವೆ ಹುಟ್ಟಿ ಮೊದಲು ಸಜೀವವಾದ ಪ್ರಾಣಿ ಈ ಲೋಕದಲ್ಲಿ ಹೇಗೆ ಬಂತು ಈ ಪ್ರಾಣ ವರ್ಗಗಳಲ್ಲಿ ಒಂದು ಅಂತಸ್ತಿನ ಪ್ರಾಣಿಗಳಿಗೂ ಅದರ ಅನಂತರ ಭೂಮಿಯ ಮೇಲೆ ಕಂಡುಬಂದ ಇನ್ನೊಂದು ಪ್ರಾಣಿವರ್ಗಕ್ಕೂ ಇರುವ ವ್ಯತ್ಯಾಸಗಳನ್ನು ಬಹು ಸೂಕ್ಷ್ಮದೃಷ್ಟಿಯಿಂದ ಶಾಸ್ತ್ರಜ್ಞರು ಪರಿಶೋಧಿಸಿ ಪ್ರಾಣಿವರ್ಗಗಳಲ್ಲಿ ಕ್ರಮೇಣ ಉಂಟಾಗುತ್ತಿದ್ದ ಉತ್ತಮತರದ ಅಭಿವೃದ್ಧಿಯನ್ನೂ ಕಟ್ಟಕಡೆಗೆ ಉತ್ಪತ್ತಿಯಾದ ಸಕಲ ಪ್ರಾಣಿಗಳಲ್ಲಿ ಉತ್ಕೃಷ್ಟಮಾತ್ರಮಲ್ಲ ಪ್ರಾಣಿಗಳಲ್ಲಿ ಕಿರೀಟಪ್ರಾಯನೂ ಆದ ಮನುಷ್ಯನೇ ಹೊರಹೊರಟು ಬಂದದ್ದನ್ನೂ ಈ ಶಾಸ್ತ್ರಜ್ಞರು ವಿಚಾರಿಸಿ ತಿಳಿದಿದ್ದಾರೆ ಆದರೆ ಪ್ರಾಣವುಳ್ಳ ಮೊದಲನೇ ಜಂತು ಮೊದಲು ಈ ಲೋಕದಲ್ಲಿ ಪ್ರಾಣೋತ್ಪತ್ತಿಯನ್ನು ಪಡೆದುದು ಹೇಗೆ ಈಗ ಸುಮಾರು ಇನ್ನೂರು ವರುಷಗಳಿಂದ ಅವಿಚ್ಛಿನ್ನವಾಗಿ ಈ ವ್ಯಾಜ್ಯವು ನಡೆಯುತ್ತ ಬರುತ್ತಿದ್ದು ಈಗ ಅದು ತೀರ್ಮಾನವನ್ನು ಹೊಂದಿದೆ ಮೊದಲು ಟಿಂಡಯಲ್ ಎಂಬ ಶಾಸ್ತ್ರಕಾರನು ಕೆಲವು ಶೋಧನ ಕಾರ್ಯಗಳನ್ನು ನಡಿಸಿ ಪ್ರಾಣಿಗಳು ಇತರ ಪ್ರಾಣಿಗಳ ಸಂಪರ್ಕವಿಲ್ಲದೆ ತಮ್ಮಷ್ಟಕ್ಕೆ ತಾವೇ ಉತ್ಪತ್ತಿಯಾಗುತ್ತವೆ ಎಂದು ಪ್ರಕಟಿಸಿದನು ಇದನ್ನು ಕೇಳಿದ ಅನೇಕ ಶಾಸ್ತ್ರಕಾರರು ಈ ವಿಷಯವನ್ನು ವಿಚಾರಿಸಿ ಪರೀಕ್ಷಿಸಿದ ಮೇಲೆ ಅದು ಸುಳ್ಳೆಂತಲೂ ಪ್ರಾಣಿಗಳ ಸಂಪರ್ಕವಿಲ್ಲದೇ ತಮ್ಮಷ್ಟಕ್ಕೆ ತಾವೇ ಉತ್ಪನ್ನವಾಗುವವೇ ಇಲ್ಲವೆಂತಲೂ ಸಿದ್ಧಾಂತಪಡಿಸಿದರು ದೇವರ ಕ್ರಮದ ಪ್ರಕಾರ ಈ ಲೋಕದಲ್ಲಿ ಆತನು ನಿಯಮಿಸಿರುವ ನಿರ್ವಿಕಾರವಾದ ಸೂತ್ರಗಳನ್ನನುಸರಿಸಿ ಪ್ರಾಣಿಗಳು ಅಭಿವೃದ್ಧಿಯಾಗುತ್ತಿರುವ ದೇಹೋ ಎಷ್ಟು ಆದರೆ ಮೊದಲು ನಿರ್ಜೀವವಾಗಿದ್ದ ವಸ್ತುಗಳಲ್ಲಿ ಜೀವವನ್ನು ತಂದಿಟ್ಟವನು ಅನಾದಿಯಿಂದ ಜೀವಿಸುತ್ತಿದ್ದ ದೇವರೇ ಎಂಬುವದು ಸಿದ್ಧಾಂತವಾಯಿತು

ಸರ್ವ ಜೀವಜಂತುಗಳಲ್ಲಿರುವ ಜೀವವು ಹೇಗೆ ಮೊದಲು ದೇವರಿಂದ ಉತ್ಪನ್ನವಾಗಿ ಲೋಕದಲ್ಲಿ ಕಾಣಿಸಿಕೊಂಡಿತೋ ಹಾಗೆಯೇ ಮನುಷ್ಯನಲ್ಲಿ ಇರಬೇಕಾದ ಪಾರಮಾರ್ಥಿಕ ಜೀವವು ಸಹ ದೇವರಿಂದ ಕೊಡಲ್ಪಡಬೇಕೇ ವಿನಾ ಮನುಷ್ಯನು ತಾನಾಗಿ ಅದನ್ನು ಸಂಪಾದಿಸಿಕೊಳ್ಳಲಾರನು ಕೆಲವರು ಹೇಳುವದೇನಂದರೆ—ಮನುಷ್ಯನಿಗೆ ತಕ್ಕ ವಿದ್ಯೆ ಬುದ್ಧಿಗಳನ್ನೂ, ನಾಗರಿಕತೆಯನ್ನೂ, ನೀತಿಯ ಉಪದೇಶವನ್ನೂ ಅಭ್ಯಾಸಮಾಡಿಸುತ್ತಾ ಬಂದರೆ ಅವನು ಸತ್ಪುರುಷನೂ ದೇವಭಕ್ತನೂ ಆಗಬಹುದೆಂದು ಹೇಳುತ್ತಾರೆ ಆದರೆ ಲೋಕದಲ್ಲಿ ವಿದ್ಯೆ, ನಾಗರಿಕತೆ, ಉಪದೇಶ ಮುಂತಾದ ಸತ್ಸಾಧನಗಳಿದ್ದರೂ ಅವುಗಳ ನಡುವೆ ಇದ್ದು ಕೊಂಡಿರುವ ಜನಗಳು ಅಭಕ್ತರಾಗಿಯೂ ಪಾಪದಲ್ಲಿ ಮುಳುಗಿ ಕೀಳುವವರಾಗಿಯೂ ಇದ್ದಾರೆ. ಮತ್ತು ಇಂಥವರು ತಮಗೆ ಸಿಕ್ಕಿದ ನಾಗರಿಕತೆ, ವಿದ್ಯೆ, ಮುಂತಾದ ಸಾಧನಗಳನ್ನು ತಮ್ಮ ದುರ್ವಿಷಯಕ್ಕೆ ಪ್ರಯೋಗಿಸಿ ಕೆಟ್ಟುಹೋಗುತ್ತಿದ್ದಾರೆ

ಇದರಿಂದ ತಿಳಿದುಬರುವದೇನಂದರೆ—ಮನುಷ್ಯನಿಗೆ ಸ್ವಾಭಾವಿಕವಾದ ಜೀವವು ಸಕಲ ಜೀವಾಧಾರಕನಾದ ದೇವರಿಂದ ಬಂದಿರುವ ಮೇರೆಗೆ ಆತ್ಮೀಯವಾದ ಜೀವವು ಹೊಸದಾಗಿ ದೇವರಿಂದ ಅವನಿಗೆ ಲಭ್ಯವಾಗಬೇಕು ಯೇಸುಸ್ವಾಮಿ ಹೇಳುವದನ್ನು ಕೇಳಿ) ಒಬ್ಬನು ಹೊಸದಾಗಿ ಅಥವಾ ಮೇಲಿನಿಂದ ಹುಟ್ಟದಿದ್ದರೆ ದೇವರ ರಾಜ್ಯವನ್ನು ಕಾಣಲಾರನು ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟಬೇಕು ದೇಹದಿಂದ ಹುಟ್ಟಿದ್ದು ದೇಹವೇ ಆತ್ಮನಿಂದ ಹುಟ್ಟಿದ್ದು ಆತ್ಮವೇ ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸಿದಾತನ ಬಿಡುವನು ನಿತ್ಯಜೀವವನ್ನು ಹೊಂದಿದ್ದಾನೆ ದೇವರ ಕುಮಾರನನ್ನು ಹೊಂದಿದವನು ಜೀವವನ್ನು ಹೊಂದಿದ್ದಾನೆ ನಾನೇ ಜೀವಕೊಡುವ ರೊಟ್ಟಿಯಾಗಿದ್ದೇನೆ ಆ ರೊಟ್ಟಿಯು ಪರಲೋಕದಿಂದ ಇಳಿದುಬಂದು ಲೋಕಕ್ಕೆ ಜೀವಕೊಡುವ ನಿರ್ಜೀವ ವಸ್ತುಗಳಲ್ಲಿ ಪ್ರಾಣೋತ್ಪತ್ತಿಯಾಗಿರುವ ಮೇರೆಗೆ ಆತ್ಮೀಯ ವಿಲ್ಲದ ಮನುಷ್ಯನು ತಾನಾಗಿ ಜೀವವನ್ನು ಹೊಂದಲಾರನು ಆದರೆ ಅದ ಹೊಂದುವದಕ್ಕೆ ಒಂದೇ ಒಂದು ಮಾರ್ಗವುಂಟು ಅದೇನಂದರೆ—ಲೋಕರಕ್ಷಣೆಗೆಂದು ದೇವರು ನೇಮಿಸಿದ ಯೇಸು ಸ್ವಾಮಿಯನ್ನು ಆಶ್ರಯಿಸುವ

ಬಿಳಿದೇಶದ ವೃತ್ತಾಂತಗಳು

ರಾಜಧಾನಿಯಲ್ಲಿ ಮಹಮದೀಯ ಪ್ರಜೆಗಳು ಟರ್ಕೀ ಜನರ ಕಷ್ಟನಿವಾರಣೆಗಾಗಿ ಚಂದಾ ಕೂಡಿಸಿ ಡಿಸೆಂಬರ್ ತಿಂಗಳಲ್ಲಿ 3,000 ರೂಪಾಯನ್ನೂ, ವಾರದಲ್ಲಿ 770 ರೂಪಾಯನ್ನೂ ಕಳುಹಿಸಿಕೊಟ್ಟದಾರೆಂದು ತಿಳಿದುಬಂದಿದೆ

ಕಳೆದ ಸೋಮವಾರ ರಾತ್ರಿ ಶ್ರೀಮನ್ ಮಹಾರಾಜರವರೂ ಯುವರಾಜರವರೂ ಪರಿವಾರ ಸಮೇತ ಕಡೂರು ಚಿಕ್ಕಮಗಳೂರು ಪ್ರಾಂತ್ಯ ಸಂಚಾರ ಮಾಡಿದರು ಅವರು ಸಂಚಾರವನ್ನು ಮುಗಿಸಿಕೊಂಡು ನಾಳೆ ರಾಜಧಾನಿಗೆ ಹಿಂದಿರುಗುವವರಾಗಿದಾರೆ

ಸರ್ ಶರ್ ಅಮುಲ್ಲಾ ಮಿ| ಚೌಡಯ್ಯನವರು ಕಲವು ದಿನಗಳಿಂದ ವ್ಯಾಧಿ [illegible] ಕಳೆದ ವಾರ ರಾಜಧಾನಿಯ [illegible] ತಮ್ಮ ಸ್ವಂತ ಮನೆಯಲ್ಲಿ ಕಾಲವಾದರೆಂದು ತಿಳಿಸಲು ವಿಷಾದಪಡುತ್ತೇವೆ

ಸರ್ಕಾರದವರು ಬೆನಿಫಿಟ್ ಡಿಸ್ಟ್ರಿಕ್ಟ್ ಫಾರೆಸ್ಟ್ ಮಿ| ಎಸ್ ಕೆ ರಾಮರಾವ್ ಇವರಿಗೆ ಅವರು [illegible] ತಾರೀಖಿನಿಂದ ಮೂರು ತಿಂಗಳು ಪ್ರಿವಿಲೇಜ್ ರಜಾ ಕೊಟ್ಟು, ಮಿ| ಬಿ ರಾಜಾರಾಯರು ಅವರ ಕೆಲಸವನ್ನು ನೋಡುವದಕ್ಕೆ ಹುಕುಂ ಕೊಟ್ಟಿದಾರೆ

ಈ [illegible] ಉಪನ್ಯಾಸ [illegible] ಕೆಲವರು [illegible] ಕೆಲವರಿಗೆ ಮಾನ್ಯವಾಗಿದೆ ಪ್ರಜೆಗಳು ಆಡಿಗೂ ಕುಡಿಯುವುದಕ್ಕೂ ನೀರನ್ನು ಚೆನ್ನಾಗಿ ಕುದಿಸಿ ಉಪಯೋಗಿಸದೆ ಇರತಕ್ಕದ್ದೆಂದೂ, ಹಳಸಿದ ಆಹಾರ ವಸ್ತುಗಳನ್ನೂ ವಿಶೇಷಕವಾಗಿರುವ ಹಣ್ಣು ಹಂಪಲನ್ನೂ ತಿನ್ನಬಾರದೆಂದೂ, ಭೋಜನದಲ್ಲೂ ಶುಚಿಯಲ್ಲೂ ಬಹಳ ಕ್ರಮವಾಗಿರಬೇಕೆಂದೂ ಸೂಚಿಸುತ್ತೇವೆ

ಬೆಂಗಳೂರು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪನಿಯ ಛೇರ್ಮನ್ ರಾಗಿದ ಮಿ|| ವಿ ಶ್ರೀನಿವಾಸಯ್ಯಂಗಾರ್ರವರು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟದ್ದರಿಂದ ಕಳೆದ ಜನವರಿ ತೈರೆಕ್ಟರುಗಳು ಮೀಟಿಂಗ್ ಮಾಡಿ ಅವರ ಸ್ಥಾನಕ್ಕೆ ಮಿ| ಕೆ ಪಿ ಪುಟ್ಟಣ್ಣ ಚೆಟ್ಟಿಯವರನ್ನು ಚುನಾವಣೆಯಿಂದ ನೇಮಕ ಮಾಡಿಕೊಂಡದ್ದಲ್ಲದೆ ಲೈಟ್ ರೈಲ್ವೆ ಕಾಮಗಾರಿಯ ವಿಚಾರದಲ್ಲಿ ರೈಲ್ವೆ ಚೀಫ್ ಇಂಜನಿಯರ್ ಮಿ| ವಿಶ್ಯಯವರ ಸಲಹೆಯನ್ನು ಒಪ್ಪಿಕೊಂಡು ಕಾಮಗಾರಿಯನ್ನು ಮೈಸೂರು ಗವರ್ನಮೆಂಟ್ ರೈಲ್ವೆ ಇಲಾಖೆಗೆ ವಹಿಸುವಂತೆ ತೀರ್ಮಾನ ಮಾಡಿದರು

ಕಳೆದ ೨ ನೇ ತಾ ಭಾನುವಾರ ಬೆಳಗ್ಗೆ ಮಹಾರಾಣಿ ಕೆಂಪನಂಜಮ್ಮಣ್ಣಿಯವರೂ ಅರಮನೆಯ ರಾಣಿವಾಸದವರೂ ಮದರಾಸಿನಿಂದ ಪರಿವಾರ ಸಮೇತ ಬೆಂಗಳೂರಿಗೆ ಬಂದು ಆ ರಾತ್ರಿಯೇ ಅಲ್ಲಿಂದ ಸ್ಪೆಷಲ್ ರೈಲಿನಲ್ಲಿ ಹೊರಟು ಸೋಮವಾರ ಬೆಳಗಿನಝಾವದ ೫-೩೦ಕ್ಕೆ ರಾಜಧಾನಿಯನ್ನು ತಲಪಿದರು ಮದರಾಸ್ ಟಾಕರ್ ಗಾರ್ಡನ್‌ನಲ್ಲಿ ಇವರೆಲ್ಲಾ ಇಳುಕೊಂಡಿದ್ದಾಗ ಕಳ್ಳರ್ಯಾರೋ ಕ್ಯಾಂಪಿಗೆ ಬಿದ್ದು ಸೇವಕಾಳಿಗಳ ಎಳೆ ಇದ್ದ ಸುಮಾರು 100 ರೂಪಾಯನ್ನು ಅಪಹರಿಸಿದರೆಂದೂ, ಸೋಮವಾರ ಬೆಳಗಿನಝಾವದಲ್ಲಿ ಸ್ಪೆಷಲ್ ರೈಲು ರಾಜಧಾನಿಯ ರೈಲ್ವೆ ಸ್ಟೇಷನ್‌ಗೆ ಬಂದ ಮೇಲೆ ಸಾಮಾನ್ ಸಾಗಿಸುವ ಸಂದರ್ಭದಲ್ಲಿ ಪರ್ಲ್ ಭಕ್ಷೀಯವರ ನಾಲ್ಕು ನಗನಾಣ್ಯಗಳಿದ್ದ ಒಂದು ಕೈಪೆಟ್ಟಿಗೆಯು ಕಳುವಾಯಿತೆಂದೂ, ಸೇವಕಾಳಿಗಳ ಪೈಕಿ ಕಾಯಿಲೆ ಇದ್ದ ಸೇರ್ವೆಗಾರ ನರಸಿಂಹಯ್ಯನೆಂಬವನು ರೈಲ್ವೇ ಘಂಟೆಯಲ್ಲಿ ಕಾಲವಾದನೆಂದೂ ತಿಳಿಯುತ್ತದೆ

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ಗುರುವಾರ ಬೆಳಗ್ಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳು ಇಲ್ಲಿನ ಟೌನ್‌ಹಾಲ್ ಬಂಗಲೆಯಲ್ಲಿ ಸಾ| ಸೇರಿ ತಿಂಗಳು ಕಟ್ಲೆಯ ಮೀಟಿಂಗನ್ನು ನಡಿಸಿದರು ಕಳೆದ ಡಿಸೆಂಬರ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ 11,189 ರೂಪಾಯಿ ಜಮಾ ಆಯಿತು 13,217 ರೂಪಾಯಿ ಖರ್ಚಾಗಿದೆ ಆ ತಿಂಗಳಲ್ಲಿ ಜನನ 192 ಮರಣ—ಪ್ಲೇಗ್ 4, ಸಿಡುಬು 1, ಜ್ವರ 9, ಇತರ ಕಾರಣಗಳು 168, ಒಟ್ಟು 172 ಅಕ್ಟ್ರಾಯ್ ಸುಂಕ ವಸೂಲಾಗುವುದರಲ್ಲಿ ಬಹಳ ಮೋಸವಿದೆ ಎಂದು ಆಡಿಟರವರು ಸೂಚಿಸಿದ್ದರ ಮೇಲೆ ಈ ಬಾಬನ್ನು ಸರಿಪಡಿಸುವುದಕ್ಕೆ ಒಂದು ಕಮಿಟಿಯು ನೇಮಕವಾಯಿತು. ಅಂಗಡಿಗಳ ಮೊಹತರ್ಫಾ ಕಂದಾಯದ ಮೇಲೆ ನೀರಿನ ತೆರಿಗೆ ವಸೂಲ್ಮಾಡತಕ್ಕದ್ದೆಂದು ಮೆಂಬರುಗಳು ಗೊತ್ತುಮಾಡಿದರು —ಮೈಸೂರಿನಲ್ಲಿ ಬೆಂಗಳೂರಿನಲ್ಲೂ ಧರ್ಮಾರ್ಥವಾದ ಕಟ್ಟಡಗಳಿಗೆ ನೀರಿನ ತೆರಿಗೆ ರೂಲನ್ನು 1913 ನೇ ಜೂನ್ ತನಕ ಜಾರಿಗೆ ತರಬೇಕಾದದ್ದಿಲ್ಲವೆಂದೂ, ಆಯಾ ಧರ್ಮಕರ್ತರು ಅಷ್ಟರೊಳಗೆ ಸರ್ಕಾರಕ್ಕೆ ಅರ್ಜಿ ಬರೆದುಕೊಂಡು ನೀರಿನ ತೆರಿಗೆ ವಿಚಾರವನ್ನು ಇತ್ಯರ್ಥ ಮಾಡಿಕೊಳ್ಳಬೇಕೆಂದೂ ಗವರ್ನಮೆಂಟಿನವರು ಹುಕುಂ ಕೊಟ್ಟದಾರೆ —ಶ್ರೀವ್ಸ್ ಕಂಪನಿಯ ಎದುರಿಗೆ ಉತ್ತರ ಪಶ್ಚಿಮಕ್ಕೆ ಇರುವ ಸಣ್ಣ ಗಲ್ಲಿಯನ್ನು ಪಕ್ಕದಲ್ಲಿರುವ ಕಟ್ಟಡಕ್ಕೆ ಸೇರಿಸಿಕೊಂಡು ಕಟ್ಟಡವನ್ನೆಲ್ಲಾ ಧರ್ಮಕ್ಕಾಗಿ ಬಿಟ್ಟುಕೊಡುವುದಾಗಿಯೂ, ಅದರ ಪಕ್ಕದಲ್ಲಿರುವ ಮೂರು ಮೂಲೆಯ ಸಣ್ಣ ಉದ್ಯಾನದಲ್ಲಿ ಪಬ್ಲಿಕ್ ಜನರಿಗೆ ಸ್ನಾನಕ್ಕಾಗಿ ತೊಟ್ಟಿಗಳನ್ನು

...ಸಾಲಿಟಿಯವರು ಹೇಳುವ ಪ್ರಕಾರ ಕಟ್ಟಿ ಮನ್ನಣೆಮಾಡುವುದಾಗಿಯೂ ಸಾಹುಕಾರ್ ಕಾವೇಟಿಪಟ್ನಂ ಸುಬ್ರಾಯಶೆಟ್ಟಿರವರು ಅಪೇಕ್ಷಿಸಿ ಬರೆದು ...ತು ಮೆಂಬರುಗಳು ಆ ... ಗಳನ್ನು ... ಶೆಟ್ಟಿರವರಿಗೆ ಮುಪ ... ತಕ್ಕದ್ದೆಂದು ತೀರ್ಮಾನ ಮಾಡಿದ್ದಾರೆ — ಮನೆ ಕಟ್ಟುವುದಕ್ಕೆ ...ಕ್ಕೆ ಲೈಸೆನ್ಸು ಕೊಡುವ ಅಧಿಕಾರವನ್ನು ಹೆಲ್ತ್ ಆಫೀಸರವರೇ ...ತು, ಅಂಥಾ ಪ್ರತಿ ಒಂದು ಅರ್ಜಿ ವಿಷಯದಲ್ಲೂ ಟ್ರಿಸ್ಟ ... ಇಂಜನಿಯರವರ ಸಲಹೆಯನ್ನು ತೆಗೆದುಕೊಂಡು ಲೈಸೆನ್ಸು ಕೊಡ ...ಂದು ಗೊತ್ತಾಯಿತು

... ಸ್ಟೇಷನ್ ಬಳಿ ಯುರ್ಸ್ಟ್ರ್ ಹೋಟೇಲಿನ ಪಕ್ಕದ ಖಾಲಿ ನಿವೇ... ಕೊಟ್ಟರೆ ಅಲ್ಲಿ ಛತ್ರ ಕಟ್ಟುವ ಕೀರ್ಮಾನೆಯನ್ನು ಇಡುವುದಾಗಿ ...ಟಿಯ ಟಿ ಪಿ ಅಣ್ಣಯ್ಯನವರು ಅರ್ಜಿ ಬರೆದುಕೊಂಡಿದ್ದರು ಆ ...ನ್ನು ಅವರಿಗೆ ಕೊಡಬಹುದೆಂದು ತೀರ್ಮಾನವಾಯಿತು — ನಾಯಿಗಳನ್ನು ... ವಿಚಾರದಲ್ಲಿ ಕೋಲಾರ್ ಚೆನ್ನಪಟ್ಟಣಗಳಲ್ಲಿ ಇರುವಲ್ಲಿರುವ ರೂಲ ... ರಾಜಧಾನಿಯಲ್ಲಿ ಸದ್ಯಕ್ಕೆ ಜಾರಿಗೆ ತರತಕ್ಕ ಅವಶ್ಯವಿಲ್ಲವೆಂದು ಮೆಂಬ... ಅಭಿಪ್ರಾಯಪಟ್ಟರು — ಜನನ ಮರಣ ಲೆಕ್ಕಗಳನ್ನು ಕೊಡಿಸುವ ...ಗೆ ೨ ರೂಪಾಯಿಯಂತೆ ಸಂಬಳ ಬಳ್ತಿಮಾಡಬಹುದೆಂದು ಒಪ್ಪಲಾಯಿ... ಅವರನೆ ಎಸ್ ರಾವತ ಸುಬ್ಬಣ್ಣನು ಲೈಸೆನ್ಸ್ ಇಲ್ಲದ ಪಳ್ಳದಕೇರಿ ... ಮನೆಯೊಳಗೆ ಹಾಕಿಕೊಂಡಿರುವ ಗೋಡೆಯನ್ನು ಒಡೆದುಹಾಕಿಸ ... ತೀರ್ಮಾನವಾಗಿದೆ — ಒಂಟಿಕೊಪ್ಪಲು ಮೂಲಕ ಹೋಗುವ ಯುವ ...ಸ್ತೆಯನ್ನು ಮೂರನೇ ಮಹಾರಾಜ ಕುಮಾರಿಯವರ ಬಂಗಲೆಯ ಆವರ ... ಕೊಡಬಹುದೆಂದೂ, ಅವರು ಸ್ವಂತ ಖರ್ಚಿನಿಂದ ಇನ್ನೊಂದು ...ನ್ನು ತಯಾರುಮಾಡಿಸಿಕೊಡಬೇಕೆಂದೂ ಮೆಂಬರುಗಳು ಒಪ್ಪಿಕೊಂಡರು ... ಗಳಿಗೆ ಎದುರಾಗಿ ಕಾಣುವಂತೆ ಯಾವ ಗೋಡೆಗಳಿಗೆ ಸಗಣಿಯಿಂದ ...ನ್ನು ತಟ್ಟಕೊಡದೆಂದು ರೂಲು ಮಾಡಿದ್ದದ್ದನ್ನು ಸರ್ಕಾರದ ಸ್ವಾಂ... ಕಳುಹಿಸಿರುತ್ತಾರೆ — ಪಟ್ಟಣದಲ್ಲಿ ಯಾವ ಮನೆಗಳನ್ನು ಒಡೆಯ... ಯಾವ ಮನೆಗಳನ್ನು ಯಾವ ರೀತಿ ಬದಲಾವಣೆ ಮಾಡಬೇಕು, ಹೊಸ ...ನ್ನು ಯಾವ ರೀತಿ ಕಟ್ಟಬೇಕು ಎಂಬೀ ವಿಷಯಗಳನ್ನು ಆಲೋಚಿಸಿ ...ಳಿಸುವುದಕ್ಕಾಗಿ ಒಂದು ಸಬ್ ಕಮಿಟಿಯು ನೇಮಕವಾಯಿತು — ... ಎಮ್ಮೆಗಳನ್ನು ಹಾಲು ಮಾರುವವರು ಎಂಥಾ ಸ್ಥಳದಲ್ಲಿ ಕಟ್ಟಬೇಕು, ... ಸಾಕಬೇಕು, ಹಾಲು ಕರೆಯುವ ಕ್ರಮ ಹ್ಯಾಗೆ, ಎಂಬೀ ವಿಚಾರ ... ಸಾಕ್ಷಾತ್ತಾಗಿ ತೋರಿಸಿ ಕಲಿಸುವುದಕ್ಕಾಗಿ ಮೊದಲು ಮುನಿಸಿಪಾಲಿಟಿ ...ಂದು ಆರೋಗ್ಯಕರವಾದ ಕೊಟ್ಟಿಗೆಯನ್ನು ಕಟ್ಟಿಸಿ ತೋರಿಸಬೇಕೆಂದು ...ಗಳು ತೀರ್ಮಾನ ಮಾಡಿದರು ಮನೆಗಳಲ್ಲಿ ಕೊಳಕಾದ ಬಚ್ಚಲ ... ಸಾಗಿಸಿ ಹೊರಕ್ಕೆ ತರಿಸು, ಟ್ರಿಸ್ಟ್ ಬೋರ್ಡಿನವರು ರಸ್ತೆಗಳಲ್ಲಿ ಹಾಕಿ... ನಲ್ಲಿಗಳಿಗೆ ಬೀಳುವಂತೆ ಮಾಡಬೇಕಾಗಿದೆ ಈ ಭಾಗದಲ್ಲಿ ... ಇಂಜನಿಯರವರು ಮನೆಗಳ ಮಾಲೀಕರಿಗೆ ಅವಶ್ಯವಾದ ...ಗಳನ್ನು ಕೊಡಬಹುದೆಂದು ಮೆಂಬರುಗಳು ಒಪ್ಪಿರುತ್ತಾರೆ

...ಮ್ಯುನಿಸಿಪಲ್ ಕೌನ್ಸಿಲರ್ ಮ॥ ಎ ಅಣ್ಣಯ್ಯಪಂಡಿತರವರು ಈರನಗೆರೆ ...ಟು ನಿವೇಶನದಲ್ಲಿ ಆಸ್ಪತ್ರೆಯ ಕಟ್ಟಡವನ್ನು ಸುಮಾರು ಮೂರು ...ಪಾಯಿ ಮುಟ್ಟಿಸಿ ಕಟ್ಟಿಸಿ ಮ್ಯುನಿಸಿಪಾಲಿಟಿಗೆ ಒಪ್ಪಿಸುವುದಾಗಿ ಸೂಚ... ಮೆಂಬರುಗಳು ಅವರ ಸಲಹೆಯನ್ನು ಅಂಗೀಕರಿಸಿ ಅವರಿಗಾಗಿ ಅವ... ಪಡಿಸಿರುತ್ತಾರೆ — ದೇವರಾಜ ಮಾರ್ಕೆಟ್ಟಿನ ಪಶ್ಚಿಮ ಭಾಗದಲ್ಲಿ ಆಗೋ... ...ವ ಕೆಲವು ಕಾಮಗಾರಿಗಳನ್ನು ಮಾಡಿಸಲು ಮ್ಯುನಿಸಿಪಾಲಿಟಿಯಿಂದ ... ರೂಪಾಯಿ ಖರ್ಚುಮಾಡಬಹುದೆಂದು ಒಪ್ಪಲಾಯಿತು — ಮ॥ ...ರ್ಯಾರಿಗೆ ಮ್ಯುನಿಸಿಪಲ್ ಇಂಜನಿಯರ್ ಕೆಲಸವನ್ನು ವಹಿಸಿದಾರಭ್ಯ ... ಕಾಮಗಾರಿಗಳು ಬಹಳ ಚಟುವಟಿಕೆಯಿಂದಲೂ ತೃಪ್ತಿಕರವಾಗಿಯೂ ...ತ್ತಾ ಇವೆ ಎಂತಲೂ, ಎಗ್ಸಿಕ್ಯುಟಿವ್ ಇಂಜನಿಯರವರೂ ಅವರ ... ಸಾಮರ್ಥ್ಯಾದಿಗಳನ್ನು ಮೆಚ್ಚಿಕೊಂಡಿದಾರೆಂತಲೂ, ಆದಕಾರಣ ...ನ್ನು ಆ ಕೆಲಸದಲ್ಲಿ ಖಾಯಮಾಗಿ ನೇಮಕ ಮಾಡಿಕೊಳ್ಳುವಂತೆ ... ಆಗಬೇಕೆಂತಲೂ ಗವರ್ನಮೆಂಟಿನವರನ್ನು ಕೇಳಿಕೊಳ್ಳತಕ್ಕದ್ದೆಂದು ...ಗಳೆಲ್ಲಾ ಏಕವಾಕ್ಯತೆಯಿಂದ ಅಭಿಪ್ರಾಯಪಟ್ಟರು.

ಮಿಂಟೋ ಕಣ್ಣಾಸ್ಪತ್ರೆಯು

ಶ್ರೀಮತ್ ಮಹಾರಾಜರವರು ಪ್ರತಿಷ್ಠೆ ಮಾಡಿದ್ದು.

[ನಮ್ಮ ಬಾತ್ಮೀದಾರರಿಂದ.]

...ಂಗಳೂರು ಪಟ್ಟಣದಲ್ಲಿ ವಿಕ್ಟೋರಿಯಾ ಆಸ್ಪತ್ರೆಯ ಬಳಿ ಮೈಸೂರು ...ಮೆಂಟಿನವರು ಬಹು ನೇತ್ರಾನಂದಕರವಾಗಿ ಕಟ್ಟಿಸಿರುವ ಮೇಲ್ಕಂಡ ಆಸ್ಪತ್ರೆಯನ್ನು ನಮ್ಮ ಶ್ರೀಮತ್ ಮಹಾರಾಜರವರು ಕಳೆದ ಜನವರಿ ...ನೇ ಶುಕ್ರವಾರ ಸಾಯಂಕಾಲ ದಯಮಾಡಿ ಪ್ರತಿಷ್ಠೆ ಮಾಡಿ ಚಿಕಿತ್ಸಾ ...ಗಳನ್ನು ಪ್ರಾರಂಭ ಮಾಡಿದರು ಈ ಕಾರ್ಯವು ಅತ್ಯಂತ ಸಂತೋಷ ...ವಾಗಿಯೂ, ಸರ್ವಸಮರ್ಪಕವಾಗಿಯೂ ನೆರವೇರಿತು ಆ ದಿನ ಈ ಉತ್ಸ...ದಲ್ಲಿ ಮುಖ್ಯರಾದ ಯೂರೋಪಿಯನ್ ಮತ್ತು ದೇಶೀಯ ದೊಡ್ಡ...ರು ಹಾಜರಾಗಿದ್ದಲ್ಲದೆ ಸಾವಿರಾರು ಮಂದಿ ಸಾಮಾನ್ಯ ಪ್ರಜೆಗಳು ...ಂಗಳದಲ್ಲೂ ಸುತ್ತುಮುತ್ತಿನಲ್ಲೂ ಸೇರಿದ್ದರಿಂದ ನೇತ್ರ ರೋಗಗ...ಳಿಂದ ಪೀಡಿಸುವವರಿಗೆ ಇಂಥಾ ಶ್ರೇಷ್ಠತರವಾದ ಆಸ್ಪತ್ರೆಯಲ್ಲಿ ಚಿಕಿತ್ಸೆಯೂ, ...ಪಚಾರವೂ ದೊರಕುವಹಾಗಾಯಿತೆಂದು ಆನಂದಪಡುವವರಾದರು ಈ ...ದಲ್ಲಿ ಆ ದಿನ ನಡೆದ ವಿದ್ಯಮಾನಗಳನ್ನೆಲ್ಲಾ ನಾನು ವಿವರಿಸಲಾ...ದರೂ ನಿಮ್ಮ ವಾಚಕರು ತಿಳಿಯಬೇಕಾಗಿರುವ ಮುಖ್ಯ ವಿಷಯಗಳನ್ನು ...ವಾಗಿ ಬರೆಯುತ್ತೇನೆ.

ಮೊದಲು ಚೀಫ್ ಇಂಜನಿಯರ್ ಮಿ॥ ಕೆ. ಶ್ರೀನಿವಾಸರಾಯರವರು ಈ ...ನ್ನು ಕಟ್ಟಿ ಸಿದ್ಧಮಾಡಿದ ವೃತ್ತಾಂತವನ್ನು ಶ್ರೀಮತ್ ಮಹಾರಾಜರವರ ...ತ್ತರವಾಗಿ ಅರಿಕೆಮಾಡಿದರು ಬಳಿಕ ಆಫೀಸಿಯೇಟಿಂಗ್ ಸೀನಿಯರ್ ಸರ್ಜನ್ ...॥ ಟಿ ವಿ ಆಮುಗಂ ಮುದಲಿಯಾರ್ರವರು ಒಂದು ಅಡ್ರೆಸ್ಸನ್ನು ...ಆಸ್ಪತ್ರೆಯೊಳಗೆ ನಡೆಯತಕ್ಕ ಚಿಕಿತ್ಸಾಕಾರ್ಯಕ್ರಮಗಳನ್ನು ವಿವರಿಸಿ ...ಲ್ಲದೆ ಅವರು ಒಂದು ಉತ್ತಮೋತ್ತಮವಾದ ಹೆಂಗಸರ ಆಸ್ಪತ್ರೆ ...ಳೂರಿನಲ್ಲಿ ಇಲ್ಲದಿರೋಣದರಿಂದ ತುಂಬಾ ಅನಾನುಕೂಲವುಂಟಾ...ಗಿದೆ ಎಂದೂ, ಅಂಥಾ ಆಸ್ಪತ್ರೆಯನ್ನು ಅದಕ್ಕಾಗಿ ಬಿಂಗಡಿಸಿಟ್ಟಿರುವ ಈ ಆಸ್ಪತ್ರೆಯ ಪಕ್ಕದ ಸ್ಥಳದಲ್ಲೇ ಕಟ್ಟಿಸಬೇಕೆಂದೂ ಅರಿಕೆಮಾಡಿದರು ಇಷ್ಟೇ ಅಲ್ಲ ಅವರು ಮೈಸೂರು ಗವರ್ನಮೆಂಟಿನಲ್ಲಿ ನೌಕರಿಮಾಡುತ್ತಿರುವಂಥಾ ಡಾಕ್ಟರುಗಳು ಯಾವ ರೀತಿ ತಮ್ಮ ಕರ್ತವ್ಯಗಳನ್ನು ನಡಿಸಬೇಕೆಂಬುವುದನ್ನು ಕುರಿತೂ ತಮ್ಮ ಅಡ್ರೆಸ್ಸಿನಲ್ಲಿ ಕಾಣಿಸಿರುತ್ತಾರೆ ಮೈಸೂರು ಸಂಸ್ಥಾನದಲ್ಲಿ ಭಾರಿಯಾದ ಮತ್ತು ನವೀನವಾದ ಆಸ್ಪತ್ರೆ ಕಟ್ಟಡಗಳು ಇರೋಣದರಿಂದಲೇ ಅವುಗಳಲ್ಲಿ ನೇಮಕವಾಗಿರುವ ಡಾಕ್ಟರುಗಳಿಗೆ ಪ್ರಶಸ್ತಿ ಬರುವುದಿಲ್ಲವೆಂದೂ, ಪ್ರಜೆಗಳು ... ಕಾರಿಗೆಳಿಸಲಾರರೆಂದೂ ಹೇಳಿದಾರೆ ಯಾವ ಡಾಕ್ಟರುಗಳು ಸರ್ವದಾ ಮನಃಪೂರ್ವಕವಾದ ಮತ್ತೂ ಕಿಂಚಿತ್ತಾದರೂ ಸ್ವಾರ್ಥತೆಯಿಲ್ಲದ ಉತ್ಸಾಹಶೀಲರಾಗಿದ್ದು, ನಾನಾ ರೋಗಗಳಿಂದ ಪೀಡಿತರಾಗಿ ತಮ್ಮ ಬಳಿಗೆ ಬರುವವರ ವಿಷಯದಲ್ಲಿ ಕನಿಕರಪಟ್ಟು ಹಿತಕರವಾದ ಔಷಧೋಪಚಾರಾದಿಗಳನ್ನು ಮಾಡುತ್ತಾ ಬರುವರೋ ಅಂಥಾ ಡಾಕ್ಟರುಗಳೇ ಈ ಸಂಸ್ಥಾನದ ಯಶಸ್ಸನ್ನು ಎಲ್ಲಾ ಕಡೆಗಳಿಗೂ ಹರಡತಕ್ಕವರಾಗುತ್ತಾರೆ ಅವರೇ ಮಹೋಪಕಾರಿಗಳೆನಿಸುವರು ಎಂಬದಾಗಿ ಸೀನಿಯರ್ ಸರ್ಜನ್ರವರು ಹೇಳಿದರು ಇವು ಬಹು ಅಮೂಲ್ಯವಾದ ವಾಕ್ಯಗಳೆಂದೂ, ಈ ಮಾತುಗಳಲ್ಲಿ ಬಹು ಶ್ರೇಷ್ಠವಾದ ಅಭಿಪ್ರಾಯಗಳುಂಟೆಂದೂ ನಾವು ಹೇಳಬೇಕಾದದ್ದಿಲ್ಲ. ಈ ಅಡ್ರೆಸ್ಸನ್ನು ಕೇಳಿ ಆ ಮಹಾಸಭೆಯವರೆಲ್ಲಾ ಬಹಳ ಆನಂದಪಟ್ಟರು ಡಾಕ್ಟರ್ ಆಮುಗಂ ಮುದಲಿಯಾರ್ರವರು ಓದಿ ಶ್ರೀಮತ್ ಮಹಾರಾಜರವರ ಸಮ್ಮುಖದಲ್ಲಿ ಅರಿಕೆಮಾಡಿದ ಈ ಅಡ್ರೆಸ್ಸು ಸಕಲರಿಗೂ ಸಂತೋಷವನ್ನೂ ಸಂತೃಪ್ತಿಯನ್ನೂ ಉಂಟುಮಾಡಿತೆನ್ನುವುದಕ್ಕೆ ಸಂಶಯವಿಲ್ಲ

ಈ ಸಂತೋಷೋತ್ಸವದಲ್ಲಿ ನಡೆದ ಕಾರ್ಯಗಳಲ್ಲೆಲ್ಲಾ ಶ್ರೀಮತ್ ಮಹಾರಾಜರವರು ದಯಪಾಲಿಸಿದ ವಾಕ್ಯಗಳು ಸರ್ವಶ್ರೇಷ್ಠವಾಗಿಯೂ ಬಹು ಪ್ರಧಾನವಾಗಿಯೂ ಇದ್ದವು ಅವರ ಕಂಠವು ಉಚ್ಚವಾಗಿಯೂ, ಅವರ ವಾಕ್ಯಗಳು ಸ್ಫುಟವಾಗಿಯೂ ಇರುತ್ತವೆ ಅವರ ಬಾಯಿಯಿಂದ ಹೊರಡತಕ್ಕ ಮಾತುಗಳು ಅವರ ಮನೋಗತವನ್ನು ಒತ್ತಿ ತಿಳಿಸುವವು ಮಹಾರಾಜರವರು ಹಿಂದುಸ್ಥಾನದ ಮಾಜಿ ವೈಸರಾಯಿ ಲಾರ್ಡ್ ಮಿಂಟೋ ಪ್ರಭುಗಳ ಸದ್ಗುಣಗಳನ್ನು ಕೊಂಡಾಡಿದರು ಈ ಕಣ್ಣಾಸ್ಪತ್ರೆಯಲ್ಲಿ ನೌಕರಿ ಮಾಡುವಂಥಾ ಡಾಕ್ಟರುಗಳನ್ನು ಕುರಿತು — ನೀವುಗಳೆಲ್ಲಾ ಲಾರ್ಡ್ ಮಿಂಟೋ ಪ್ರಭುಗಳ ಹೆಸರನ್ನೂ ಅವರು ಹಿಂದುಸ್ಥಾನದ ಪ್ರಜೆಗಳ ಶ್ರೇಯಸ್ಸನ್ನು ಬಯಸಿ ಮಾಡಿದ ನಿರ್ದುಷ್ಟವಾದ ಪರಿಹಿತ ಕಾರ್ಯಗಳನ್ನೂ ಸ್ಮರಿಸಿಕೊಳ್ಳುತ್ತಿರಬೇಕೆಂದು ಮಹಾರಾಜರವರು ಅಪ್ಪಣೆಯನ್ನಿತ್ತರು ಪ್ರಭುಗಳು ಇತರ ವಿಚಾರಗಳನ್ನು ಕುರಿತು ಅಪ್ಪಣೆಕೊಟ್ಟ ಪ್ರಕಾರವೆಂದರೆ — ರಾಜಧಾನಿಯಲ್ಲಿ ದೊಡ್ಡ ಆಸ್ಪತ್ರೆಯ ಕಾಮಗಾರಿಯನ್ನು ಪೂರೈಸಿದ ತರುವಾಯ ಬೆಂಗಳೂರಿನಲ್ಲಿ ಬಾರಿ ಹೆಂಗಸರ ಆಸ್ಪತ್ರೆಯನ್ನು ಕಟ್ಟುವ ಯೋಚನೆ ಮಾಡಬಹುದು ಇದಲ್ಲದೆ ಸಣ್ಣ ಸಣ್ಣ ಊರು ಗ್ರಾಮಗಳ ಪ್ರಜೆಗಳ ಕುಂದುಕೊರತೆಗಳನ್ನು ನೀಗಿಸುವ ಪ್ರಯತ್ನ ಮಾಡಬೇಕಾಗುವುದೆಂದೂ, ಅದರಲ್ಲೂ ಮಲೆನಾಡಿನ ರೋಗೋಪದ್ರವಗಳ ನಿವಾರಣೆಗೆ ತಕ್ಕ ಏರ್ಪಾಡು ಮಾಡಬೇಕಾಗಿದೆ ಎಂದೂ ಅಪ್ಪಣೆಕೊಟ್ಟರು ಈ ರೀತಿಯಾಗಿ ನಮ್ಮ ಮಹಾರಾಜರವರೂ ದಿವಾನ್ರವರೂ ಈ ಸಂಸ್ಥಾನದ ಗ್ರಾಮಾಂತರಗಳ ಯೋಗಕ್ಷೇಮವನ್ನು ಕುರಿತು ವಿಶೇಷವಾಗಿ ಚಿಂತಿಸುತ್ತಿರುವುದನ್ನು ಪ್ರಜೆಗಳು ಕೇಳಿ ಆನಂದಪಟ್ಟಾರೆನ್ನುವುದಕ್ಕೆ ಸಂಶಯವಿಲ್ಲ ಯಾಕೆಂದರೆ ಮಲೆನಾಡಿನ ಪ್ರಜಾಸಂಖ್ಯೆಯು ಕ್ರಮೇಣ ಕಡಮೆಯಾಗುತ್ತಿದೆ ಎಂದು ಎಲ್ಲರಿಗೂ ವೇದ್ಯವಾಗಿದೆ ಈಗಿನ ಕೆಲವು ಗವರ್ನ್ಮೆಂಟ್ ಆಸ್ಪತ್ರೆ ಕಟ್ಟಡಗಳು ಕತ್ತಲಾಗಿಯೂ, ಅನಾರೋಗ್ಯಕರವಾಗಿಯೂ ಇರುತ್ತವೆ ಇನ್ನು ಕೆಲವು ಆಸ್ಪತ್ರೆಗಳಲ್ಲಿ ಬೇಕಾದಷ್ಟು ಔಷಧೋಪಚಾರದ ಸಲಕರಣೆಗಳು ಇರುವುದಿಲ್ಲ ಬೆಂಗಳೂರಿನಲ್ಲಿ ಒಂದು ದಿವ್ಯವಾದ ಆಸ್ಪತ್ರೆ ಇರಬೇಕಾದದ್ದೇನೋ ಅವಶ್ಯವೇ ಸರಿ ಆದರೆ ಸಂಸ್ಥಾನದ ನಾನಾ ಮೂಲೆಗಳಲ್ಲಿ ಇರುವ ಸಣ್ಣ ಆಸ್ಪತ್ರೆಗಳೂ ಕೂಡ ಆರೋಗ್ಯಕರವಾಗಿಯೂ, ಈಗಿನ ಕಾಲಕ್ಕೆ ತಕ್ಕಂತೆ ಉಪಕರಣ ಸಹಿತವಾಗಿಯೂ ಇರುವಂತೆ ಮಾಡಬೇಡವೇ ?

ಗ್ರಾಮಾಂತರಗಳ ಪ್ರಜೆಗಳಿಗೆ ವೈದ್ಯ ಮತ್ತು ವಿದ್ಯೆಗಳಲ್ಲಿ ಹೆಚ್ಚಾದ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂಬದಾಗಿ ನಮ್ಮ ಮಹಾರಾಜರವರು ಉದ್ದೇಶಪಟ್ಟಿರುವುದನ್ನು ಓದಿ ನಮ್ಮ ವಾಚಕರೆಲ್ಲಾ ಪರಮಾನಂದಪಡುತ್ತಾರೆನ್ನುವುದಕ್ಕೆ ಅನುಮಾನವಿಲ್ಲ ಹೈಸ್ಕೂಲುಗಳು, ಕಾಲೇಜುಗಳು, ಬಾರಿ ಆಸ್ಪತ್ರೆಗಳು, ಇವುಗಳಿಗೆಲ್ಲಾ ಇದುವರೆಗೆ ಬಹಳ ವಿಶೇಷವಾಗಿ ದ್ರವ್ಯವನ್ನು ವಿನಿಯೋಗಿಸಲಾಗಿದೆ ಇನ್ನು ಮುಂದಕ್ಕೆ ಮೈಸೂರು ಗವರ್ನಮೆಂಟಿನವರು ಗ್ರಾಮಾಂತರ ಪಾಠಶಾಲೆಗಳಿಗೂ, ಸಣ್ಣ ವೈದ್ಯಶಾಲೆಗಳಿಗೂ ಗಮನಕೊಟ್ಟು ತುಂಬಾ ಹಣವನ್ನು ಖರ್ಚು ಮಾಡಿಯಾರೆಂದು ನಿರೀಕ್ಷಿಸಬಹುದು

ಶ್ರೀಮತ್ ಮಹಾರಾಜರವರ ಸ್ಮಾರಕ್ಯವಾದ ಈ ಭಾಷಣದಲ್ಲಿ ಇನ್ನೊಂದು ವಿಷಯವಿದೆ ಅದನ್ನು ನಿಮ್ಮ ವಾಚಕರು ಗಮನವಿಟ್ಟು ಓದಿಕೊಂಡಾರೆಂದು ಹಾರೈಸುತ್ತೇನೆ ಆರೋಗ್ಯಾಭಿವೃದ್ಧಿ, ವಿದ್ಯಾಭಿವೃದ್ಧಿ, ಇವೆರಡು ಭಾಗಗಳಲ್ಲೂ ಪ್ರಜೆಗಳು ಮುಂದೆ ಬಂದು ತಾವೇ ಅನುಕೂಲತೆಗಳನ್ನು ಕಲ್ಪಿಸಿಕೊಳ್ಳುವಂತೆ ಆಗಬೇಕೆಂದು ಶ್ರೀಮನ್ಮಹಾರಾಜರವರು ಕುತೂಹಲಪಡುತ್ತಾರೆ ಸಕಲ ಪ್ರಜೆಗಳೂ — ಅವರಲ್ಲೂ ಐಶ್ವರ್ಯವಂತರಾದವರು, ಈ ಭಾಗವನ್ನು ಕುರಿತು ಪರ್ಯಾಲೋಚಿಸಬೇಕಾಗಿದೆ ಈಗಲಾದರೋ ಐಶ್ವರ್ಯವಂತರ ಮಕ್ಕಳಿಗೂ ಕೂಡ ಗವರ್ನಮೆಂಟಿನವರೇ ವಿದ್ಯೆ ಕಲಿಸಬೇಕೆಂದೂ, ಅವರ ರೋಗಾದಿಗಳನ್ನು ಮುಫತ್ತಾಗಿ ಸರ್ಕಾರಿ ಆಸ್ಪತ್ರೆಗಳಲ್ಲೇ ವಾಸಿಮಾಡಬೇಕೆಂದೂ ಹೇಳುತ್ತಾರೆ ಐಶ್ವರ್ಯವಂತರು ಹೀಗೆ ಹೇಳುವುದು ನ್ಯಾಯವಾಗಿದ್ದೀತೇ ? ಗವರ್ನಮೆಂಟಿನವರು ಪ್ರಜೆಗಳ ಮಾನ ಪ್ರಾಣ ಧನಗಳಿಗೆ ಕೇಡು ಬಾರದಂತೆ ಸಂಸ್ಥಾನದಲ್ಲಿ ನೆಮ್ಮದಿಯನ್ನು ಕಾಪಾಡಿಕೊಂಡು ಬಂದಿರುವುದರಿಂದ ಅನೇಕ ಪ್ರಜೆಗಳು ಸಾಹುಕಾರರಾಗಿ ತಮ್ಮ ಧನವನ್ನು ವೃದ್ಧಿಮಾಡಿಕೊಳ್ಳುವಂತಾಯಿತು ಆದಕಾರಣ ಅಂಥಾ ಐಶ್ವರ್ಯವಂತರು ಸರ್ಕಾರದಿಂದ ಮುಫತ್ತಾಗಿ ಮೇಲ್ಕಂಡಂಥಾ ಉಪಕಾರಗಳನ್ನು ಪಡೆಯಬೇಕೆಂದು ಅಪೇಕ್ಷಿಸುವುದು ತರವಲ್ಲ ಅವರು ಅದಕ್ಕೆ ಪ್ರತಿಯಾಗಿ ಆಯಾ ಸ್ಥಳದಲ್ಲಿ ಅಲ್ಪಸ್ವಲ್ಪ ದ್ರವ್ಯವನ್ನು ಖರ್ಚುಮಾಡಿ ಆಸ್ಪತ್ರೆಗಳನ್ನೂ, ಪಾಠಶಾಲೆಗಳನ್ನೂ ಕಟ್ಟಿಸಿಕೊಡಬೇಕು ಇದು ಐಶ್ವರ್ಯವಂತರು ಮಾಡಬೇಕಾದ ಕರ್ತವ್ಯವಾಗಿದೆ ಈ ಪ್ರಕಾರ ನಮ್ಮ ಮಹಾರಾಜರವರು ಅಪ್ಪಣೆಕೊಟ್ಟಿರುವುದನ್ನು ಓದಿಕೊಂಡು ಈ ಸೀಮೆಯ ಎಲ್ಲಾ ಪ್ರಾಂತ್ಯಗಳಲ್ಲೂ ಇರುವಂಥಾ ಐಶ್ವರ್ಯವಂತರಾದ ಪ್ರಜೆಗಳು ಬಡವರಿಗೆ ವಿದ್ಯಾಭ್ಯಾಸ ಮಾಡಿಸುವುದಕ್ಕೂ, ರೋಗಿಗಳ ಸಂಕಟವನ್ನು ಪರಿಹರಿಸುವುದಕ್ಕೂ ಉದಾರವಾಗಿ ದ್ರವ್ಯಸಹಾಯಮಾಡಿ ಸ್ಕೂಲು ಮತ್ತು ಆಸ್ಪತ್ರೆಗಳನ್ನು ಕಟ್ಟಿಸಿ ನಡಿಸುತ್ತಾ ಬಂದಾರೆಂದು ನಿರೀಕ್ಷಿಸುತ್ತೇವೆ

ಶ್ರೀಮತ್ ಮಹಾರಾಜರವರ ಭಾಷಣವು.

ಕಳೆದ ಶುಕ್ರವಾರ ಸಾಯಂಕಾಲ ಶ್ರೀಮತ್ ಮಹಾರಾಜರವರು ಮೇಲ್ಕಂಡ ಆಸ್ಪತ್ರೆಯ ಸಭಾಮಧ್ಯದಲ್ಲಿ ಅಪ್ಪಣೆಕೊಡಿಸಿದ ವಾಕ್ಯಗಳೇನೆಂದರೆ—

ಮಿಂಟೋ ಪ್ರಭುಗಳ ಹೆಸರಿನ ಮೇಲೆ ನೇತ್ರ ರೋಗಚಿಕಿತ್ಸೆಗಾಗಿ ಒಂದು ಆಸ್ಪತ್ರೆಯನ್ನು ಕಟ್ಟಬೇಕೆಂದು ನಾವು ಎರಡು ವರುಷಗಳ ಹಿಂದೆ ಅದರ ಅಸ್ತಿಭಾರಶಿಲೆಯನ್ನು ಪ್ರತಿಷ್ಠೆ ಮಾಡಿದೆವು ಆ ಸಂತೋಷ ಸಮಯದಲ್ಲಿ ನಮ್ಮ ಕೂಡ ಇದ್ದ ನಮ್ಮ ಪೈಕಿ ಬಹುಮಂದಿ ಇಷ್ಟು ಬೇಗನೆ ಈ ವಿಶಾಲವೂ ಸುಂದರವೂ ಆದ ಕಟ್ಟಡವು ಪೂರೈಸಿರುವುದನ್ನು ನೋಡಿ ಸಂತೋಷಪಡುತ್ತೀರೆನ್ನುವುದಕ್ಕೆ ಸಂಶಯವಿಲ್ಲ ಈ ಕಾರ್ಯಭಾರವನ್ನು ವಹಿಸಿಕೊಂಡು ಇಷ್ಟು ಜಾಗ್ರತೆಯಾಗಿ ಕಾಮಗಾರಿಯನ್ನು ಪೂರೈಸಿರುವಂಥಾ ಇಂಜನಿಯರುಗಳು ವಂದನೀಯರಾಗಿದಾರೆ ಇದರ ನಕ್ಷೆಯನ್ನು ತಯಾರುಮಾಡಿ ಕಟ್ಟಡವನ್ನು ಪೂರೈಸಿದ ಮಿ॥ ಕೃಷ್ಣ ಅಯ್ಯಂಗಾರ್ರವರನ್ನೂ, ಮಿ। ರೈಸ್‌ಯವರನ್ನೂ ಈ ಸಂದರ್ಭದಲ್ಲಿ ವಂದಿಸಬೇಕಾಗಿದೆ ಲೆಫ್ಟಿನೆಂಟ್ ಕರ್ನಲ್ ಜೆ ಸ್ಮಿತ್‌ಯವರು ಈ ದಿನ ಇಲ್ಲಿ ಹಾಜರಾಗಿದ್ದ ಪಕ್ಷದಲ್ಲಿ ಅವರು ಈ ಕಟ್ಟಡವನ್ನು ನೋಡಿ ಆನಂದಪಡುತ್ತಿದ್ದರೆನ್ನುವುದಕ್ಕೆ ಸಂದೇಹವಿಲ್ಲ ಡಾಕ್ಟರ್ ರಾಮಸ್ವಾಮಿ ಅಯ್ಯಂಗಾರ್ರವರು ನೇತ್ರ ರೋಗಿಗಳ ಚಿಕಿತ್ಸೆಗೋಸ್ಕರ ಇಷ್ಟು ವಿಶೇಷವಾದ ಸೌಕರ್ಯಗಳೆಲ್ಲಾ ಇರುವಂಥಾ ಕಟ್ಟಡಗಳು ದೊರಕಿದ ಭಾಗದಲ್ಲಿ ತುಂಬಾ ಸಂತೋಷಪಡುತ್ತಾರೆ

ನಮ್ಮ ಮಾತೃಶ್ರೀಯವರು ತಮ್ಮ ರೀಜನ್ಸಿ ದವಲತ್ತಿನಲ್ಲಿ ಪ್ರಾರಂಭಿಸಿ, ನಡೆಯುತ್ತಾ ಬಂದಿರುವ ದೊಡ್ಡದಾದ ವಿಕ್ಟೋರಿಯಾ ಆಸ್ಪತ್ರೆಯ ಪಕ್ಕದಲ್ಲೇ ಈ ಕಣ್ಣಾಸ್ಪತ್ರೆಯೂ ಇರುವುದು ನ್ಯಾಯವೂ ಸೂಕ್ತವೂ ಆಗಿದೆ ಮೈಸೂರಿನಲ್ಲಿ ಕೂಡ ಒಂದು ದೊಡ್ಡ ಆಸ್ಪತ್ರೆಯನ್ನು ಇಷ್ಟರಲ್ಲೇ ಕಟ್ಟುತ್ತಾರೆ. ಅದು ಪೂರೈಸಿದ ಬಳಿಕ ಈಗ ಸೀನಿಯರ್ ಸರ್ಜನ್ರವರು ಸೂಚಿಸಿರುವಂಥಾ ಹೆಂಗಸರ ಆಸ್ಪತ್ರೆಯನ್ನು ಬಹುಶಾ ಕಟ್ಟಲು ಏರ್ಪಡಾಗಬಹುದು ಆದರೆ ಈಗ ಆಸ್ಪತ್ರೆಯ ಕಟ್ಟಡಗಳಿಗೆ ಬಹಳ ಹಣ ಖರ್ಚುಮಾಡುತ್ತಿದೆಯಾದಕಾರಣ ಇನ್ನು ಮುಂದೆ ಆಸ್ಪತ್ರೆಗಳಿಗೆ ಒದಗಬಹುದಾದ ಹಣವನ್ನು ಹೊರಗಡೆ ಡಿಸ್ಟ್ರಿಕ್ಟುಗಳಲ್ಲಿ ಕಾಯಿಲೆಗಳ ನಿವಾರಣೆಗಾಗಿ — ಅದರಲ್ಲೂ ವಿಶೇಷವಾಗಿ ಮಲೆನಾಡು ಪ್ರದೇಶಗಳ ರೋಗಪರಿಹಾರಕ್ಕೆ ವಿನಿಯೋಗಿಸಬೇಕಾದೀತೆಂದು ಕಾಣುವುದು. ಯಾಕೆಂದರೆ ಅಂಥಾ ಪ್ರದೇಶಗಳಲ್ಲಿ ಬಹುಕಾಲದಿಂದ ಪ್ರಜಾಕ್ಷೋಭೆಯುಂಟಾಗಿರುವುದನ್ನು ನೋಡಿ ನಮ್ಮ ಗವರ್ನಮೆಂಟಿನವರು ವಿಶೇಷ ಚಿಂತಾಕ್ರಾಂತರಾಗಿದಾರೆ

ನಮ್ಮ ವೈದ್ಯ ಇಲಾಖೆಯ ಅಧಿಕಾರಿಗಳಲ್ಲಿ ನಮಗೆ ಎಲ್ಲಾ ಭಾಗಗಳಲ್ಲೂ ನಂಬಿಕೆಯೂ ಭರವಸೆಯೂ ಉಂಟು ಆ ಅಧಿಕಾರಿಗಳಲ್ಲಿ ಅನೇಕರು ಇಂಗ್ಲಾಂಡಿನಲ್ಲೂ ಯೂರೋಪಿಯನ್ ರಾಜ್ಯಗಳಲ್ಲೂ ವೈದ್ಯವಿದ್ಯಾ ಪ್ರಾವೀಣ್ಯತೆಯನ್ನು ಪಡೆದುಬಂದವರಾಗಿರುತ್ತಾರೆ ಈ ಇಲಾಖೆಯ ಅಧಿಕಾರಿಗಳೆಲ್ಲಾ ಸಾಹಸಪಟ್ಟು ಈಗಿನಕಾಲಕ್ಕೆ ತಕ್ಕಂತೆ ಚಾಕಚಕ್ಯತೆಯನ್ನು ಪ್ರಕಾಶಪಡಿಸುತ್ತಾ ತಮ್ಮ ಇಲಾಖೆಯ ಪ್ರಯೋಜನವನ್ನೂ ಕೀರ್ತಿಯನ್ನೂ ವಿಶೇಷವಾಗಿ ಹರಡುತ್ತಾ ಬಂದಾರೆಂದು ನಾವು ದೃಢವಾಗಿ ನಿರೀಕ್ಷಿಸುತ್ತೇವೆ ಈ ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಖಾಸಗೀ ವೈದ್ಯರು ಹೆಚ್ಚಿ ಚಿಕಿತ್ಸಾದಿಗಳನ್ನು ನಡಿಸುವಂತಾಗಬೇಕೆಂದು ಹಾರೈಸುವೆವು ಮತ್ತು ಆರೋಗ್ಯ ವಿಚಾರದಲ್ಲೂ ವಿದ್ಯೆಯ ವಿಷಯದಲ್ಲೂ ನಮ್ಮ ಪ್ರಜೆಗಳು ಹೆಚ್ಚು ಹೆಚ್ಚಾಗಿ ಆತ್ಮಾವಲಂಬಿಗಳಾಗುವುದನ್ನು ನೋಡಬೇಕೆಂದು ಬಹಳ ಅಭಿಲಾಷೆಪಡುತ್ತೇವೆ.

ಈ ಆಸ್ಪತ್ರೆಯನ್ನು ಲಾರ್ಡ್ ಮಿಂಟೋಯವರ ಹೆಸರಿನ ಮೇಲೆ ಕಟ್ಟಿದ್ದಾಗಿದೆ ಆ ಪ್ರಭುಗಳು ವೈಸರಾಯರಾಗಿದ್ದಾಗ ಮೂರು ವರುಷಗಳ ಹಿಂದೆ ಇಲ್ಲಿಗೆ ದಯಮಾಡಿ ನಮಗೆಲ್ಲಾ ಮಹದಾನಂದವನ್ನುಂಟುಮಾಡಿದರು ಮತ್ತು ಅವರು ಈ ಸಂಸ್ಥಾನದ ಶ್ರೇಯಸ್ಸನ್ನು ಬಯಸಿ ಮಾಡಿರುವ ಹಲವು ಕಾರ್ಯಗಳು ನಮ್ಮ ದೃಷ್ಟಾಂತಕ್ಕೆ ಬಂದಿರುವವು

ಈಗ ಈ ಆಸ್ಪತ್ರೆಯನ್ನು ಪ್ರತಿಷ್ಠೆ ಮಾಡಿ, ಇದರಲ್ಲಿ ಉದ್ಯೋಗ ನಡಿಸುವಂಥಾ ಜವಾಬ್ದಾರಿಯನ್ನು ವಹಿಸಿರುವ ಅಧಿಕಾರಿಗಳೂ ನೌಕರಿಮಾನೇರುಗಳೂ ಈ ಆಸ್ಪತ್ರೆಯು ಪಡೆದಿರುವ ಘನತರವಾದ ಹೆಸರನ್ನು ಸರ್ವದಾ ತಮ್ಮ ಸ್ಮರಣೆಯಲ್ಲಿಟ್ಟುಕೊಂಡು, ತಮ್ಮ ಕಾರ್ಯಗಳ ಮೂಲಕ ಆ ಮಹಾಪ್ರಭುಗಳಾದ ಲಾರ್ಡ್ ಮಿಂಟೋಯವರಿಗೂ ಈ ಸಂಸ್ಥಾನಕ್ಕೂ ಇದ್ದ ಸ್ನೇಹಭಾವವನ್ನೂ ಅವರು ಹಿಂದುಸ್ಥಾನದ ಪ್ರಜಾಕೋಟಿಗಳಿಗೆ ಮಾಡಿರುವ ಮಹದುಪಕಾರಗಳನ್ನೂ ಘನಪಡಿಸುವುದಕ್ಕೆ ಅರ್ಹವಾದ ರೀತಿಯಲ್ಲಿ ವರ್ತಿಸುತ್ತಾ ಬರುವವರಾಗಲೆಂದು ಹಾರೈಸುತ್ತೇವೆ

ಮಿಂಟೋ ಕಣ್ಣಾಸ್ಪತ್ರೆಯನ್ನು ಶ್ರೀಮತ್ ಮಹಾರಾಜರವರು ಕಳೆದ ಶುಕ್ರವಾರ ಸಾಯಂಕಾಲ ಪ್ರತಿಷ್ಠೆಮಾಡಿದ ಬಳಿಕ ಲಂಡನ್ ಪಟ್ಟಣದಲ್ಲಿರುವ ಅರ್ಲ್ ಆಫ್ ಮಿಂಟೋಯವರಿಗೆ ಕಳುಹಿಸಿಕೊಟ್ಟ ತಂತೀ ಸಮಾಚಾರವೇನೆಂದರೆ—

"ಮಿಂಟೋ ಕಣ್ಣಾಸ್ಪತ್ರೆಯನ್ನು ನಾವು ಈ ದಿನ ಪ್ರತಿಷ್ಠೆಮಾಡಿರುತ್ತೇವೆ ಈ ಕಟ್ಟಡವು ಸುಂದರವಾಗಿರುವುದಲ್ಲದೆ ನಮ್ಮ ಸಂಸ್ಥಾನದ ವಿಷಯದಲ್ಲಿ ತಾವು ಇಟ್ಟುಕೊಂಡಿರುವ ಪ್ರೀತಿವಿಶ್ವಾಸವನ್ನೂ ಈ ಭರತಖಂಡಕ್ಕೆ ತಾವು ಮಾಡಿರುವ ಅಮೋಘವಾದ ಉಪಕಾರಗಳನ್ನೂ ಚಿರಸ್ಮರಣೀಯಗಳಾಗಿ ಮಾಡಲು ಯೋಗ್ಯವಾಗಿ ಇರುವುದು."

ಮೆಡಿಟರೇನಿಯನ್ ಸಮುದ್ರತೀರದಲ್ಲಿರುವ ಫ್ರಾನ್ಸಿಗೆ ಸೇರಿದ ಟೌಲೋನ್ ಪಟ್ಟಣದಲ್ಲಿ ಮಾನ್ಷರ್ ರಾಯಿಟರ್ ವಾರ್ಥೋನ್ಸ್ ಎಂಬಾತನು ಅನಾಥೆಯರಾದ ಹುಡುಗಿಯರು ಯೋಗ್ಯರಾಗಿ ಹಡಗುಗಳಲ್ಲಿ ನೌಕರಿಮಾಡುವವರನ್ನು ವರಿಸಿ ಮದುವೆಮಾಡಿಕೊಳ್ಳುವುದಕ್ಕೆ ಸಹಾಯವಾಗುವಂತೆ ವಿವಾಹದ ಖರ್ಚು ಒದಗಿಸಬೇಕೆಂದು ತನ್ನ ಆಸ್ತಿಯನ್ನು ಬಿಟ್ಟುಹೋಗಿರುತ್ತಾನೆ ಪ್ರತಿವರ್ಷವೂ ಯೋಗ್ಯಳಾದ ಬಡಹುಡುಗಿಯನ್ನು ಗೊತ್ತುಮಾಡಬೇಕು ಹಡಗುಗಳ ಸೈನ್ಯಾಧಿಪತಿಯು ತನ್ನ ಇಲಾಖೆಯಲ್ಲಿ ಒಳ್ಳೆಯವನೆನ್ನಿಸಿಕೊಂಡಿರುವ ನೌಕರನನ್ನು ಚುನಾಯಿಸಬೇಕು ಈ ರೀತಿ ಚುನಾಯಿಸಲ್ಪಟ್ಟ ಗಂಡು ಹೆಣ್ಣು ವಿವಾಹವಾದ ಮೇಲೆ ಕಡೇಪಕ್ಷ ನಾಲ್ಕು ಮಕ್ಕಳನ್ನಾದರೂ ಪಡೆಯುವಂತೆ ಒಪ್ಪಿಕೊಳ್ಳಬೇಕು ಇಷ್ಟಾದ ಮೇಲೆ ಮೇಲ್ಕಂಡ ದಾತೃವಿನ ಫಂಡಿನಿಂದ ಪುರಿಹಾರಕ ಹಣವನ್ನು ತೆಗೆದುಕೊಂಡು ವಿವಾಹವನ್ನು ನಡಿಸಬೇಕಾಗುತ್ತದೆ

ಕನ್ನಾಗಾಲದ ದಂಗೆ ಮೊಕದ್ದಮೆಯು.

ಸ್ಪೆಷಲ್ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ

ರಾಜಧಾನಿಯು ಈರನಗೆರೆ ಆಚೆ ಇರುವ ಟ್ರಾವೆಲರ್ಸ್ ಬಂಗಲೆಯಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮಿ| ಎಚ್ ಫಾದವರಾಯರು ಮೇಲ್ಕಂಡ ದಂಗೆ ಮೊಕದ್ದಮೆಯಲ್ಲಿ ತನಿಖೆಯನ್ನೆಲ್ಲಾ ಕಳೆದ ಶನಿವಾರಕ್ಕೆ ಪೂರೈಸಿದರು

ಈ ಮೊಕದ್ದಮೆಗೆ ಸಂಬಂಧಪಟ್ಟ ಮೊದಲನೇ ತಕ್ಷೀರಿನ ವಿಷಯವನ್ನು ಅವರು ಹಿಂದೆಯೇ ದರ್ಯಾಫ್ತಿ ಮಾಡಿದ್ದು, ಕಳೆದ ೩೧ ನೇ ತಾ ಬುಧವಾರ ಜಡ್ಜ್ ಮೆಂಟನ್ನು ಓದಿ ಹೇಳಿದರು ಈ ಮೊಕದ್ದಮೆಯ ವಿದ್ಯಮಾನಗಳೇನೆಂದರೆ ಕನ್ನಾಗಾಲವು ಒಂದು ಇನಾಂ ಗ್ರಾಮ ಬ್ರಾಹ್ಮಣರು ಇನಾಂದಾರರಾಗಿದ್ದಾರೆ ಸುಬ್ಬಯ್ಯ ಗುಂಡಪ್ಪ, ಕಡಸಟ್ಟಿ, ನಂಜುಂಡೈಯ ಎಂಬ ಅಪರಾಧಿಗಳು ಆ ಗ್ರಾಮದಲ್ಲೇ ವಾಸಮಾಡುವವರು ಶಾನುಭೋಗ ಪಟೇಲ ಮೊದಲಾದವರು ಬೇರೆ ಸ್ಥಳದವರು ಗ್ರಾಮವಾಸಿಗಳೆಲ್ಲಾ ಸುಮಾರಾಗಿ ಪರಿವಾರದವರು ಇವರು ಬ್ರಾಹ್ಮಣರ ಜಮೀನು ಸಾಗುವಳಿ ಮಾಡುತ್ತಾರೆ ಕಳೆದ ಯುಗಾದಿ ಹಬ್ಬದಿಂದ ಬ್ರಾಹ್ಮಣರಿಗೂ ಪರಿವಾರದವರಿಗೂ ಮನಸ್ತಾಪ ಹುಟ್ಟಿತು ಈ ತಕ್ಷೀರು ಆ ಮನಸ್ತಾಪಕ್ಕೆ ಸಂಬಂಧಪಟ್ಟದ್ದಾಗಿದೆ ಪರಿವಾರದವರಿಗೂ ಅಗಸರಿಗೂ ದ್ವೇಷ ಹುಟ್ಟಿ ಇವರು ಪರಿವಾರದವರ ಬಟ್ಟೆ ಒಗೆಯುವುದಿಲ್ಲವೆಂದು ಕಟ್ಟುಮಾಡಿಕೊಂಡರು ಪರಿವಾರದವರು ತಮ್ಮ ಕಷ್ಟವನ್ನು ಬ್ರಾಹ್ಮಣರಿಗೆ ಹೇಳಿಕೊಂಡರು ಇವರು ಅವರ ಹೇಳಿಕೆಯನ್ನು ಅಸಡ್ಡೆಮಾಡಿಬಿಟ್ಟರು ಮಾರಿಹಬ್ಬದ ಕಾಲದಲ್ಲಿ ಪರಿವಾರದವರಿಗೆ ಸಲ್ಲುತ್ತಿದ್ದ ಕುರಿ, ತೆಂಗಿನಕಾಯಿ, ಅಕ್ಕಿ ಮುಂತಾದದ್ದು ತಪ್ಪಿಹೋಯಿತು ಬ್ರಾಹ್ಮಣರ ಮೇಲೆ ಅವರಿಗೆ ಸಿಟ್ಟು ಬಂತು ಗೌರಿ ಹಬ್ಬದಲ್ಲಿ ಬ್ರಾಹ್ಮಣರ ಗೌರಿಯನ್ನು ತರುವುದಕ್ಕೆ ಪರಿವಾರದವರು ಹೋಗದೆ ನಿಂತುಬಿಟ್ಟರು ಬ್ರಾಹ್ಮಣರೇ ಗೌರಿಯನ್ನು ಕೆರೆಯಿಂದ ಊರಿಗೆ ಹೊತ್ತು ತರಬೇಕಾಯಿತು ಗೌರಿಯನ್ನು ಬಿಡುವದಕ್ಕೆ ಪಾಲಕಿ ಹೊರಲು ಬ್ರಾಹ್ಮಣರು ಪರಗ್ರಾಮಗಳ ಜನರ ಸಹಾಯ ಪಡೆಯುವಂತಾಯಿತು ಇಷ್ಟಾದ ಮೇಲೆ ಬ್ರಾಹ್ಮಣರು ಪರಿವಾರದವರ ದನಗಳು ಮೇಯುತ್ತಿದ್ದ ಗೋಮಾಳವನ್ನು ಹರಾಜು ಹಾಕಬೇಕೆಂದು ಏರ್ಪಾಡು ಮಾಡಿ ತಮ್ಮಲ್ಲೇ ಒಬ್ಬರ ಹೆಸರಿಗೆ ಹರಾಜಿನ ಬೀಟು ನಿಲ್ಲಿಸಿಕೊಂಡು ಪರಿವಾರದವರ ದನಗಳು ಮೇಯುವುದಕ್ಕೆ ತಲೆಗೆ ಒಂದು ರೂಪಾಯಿಯಂತೆ ದುಸುಂ ವಿಧಾಯಕ ಮಾಡಿದರು ಪರಿವಾರದವರು ಅದಕ್ಕೂ ಸಗ್ಗಲಿಲ್ಲ ಅವರೊಬ್ಬರೂ ಹರಾಜಿಗೆ ಹೋಗಲಿಲ್ಲ ಬ್ರಾಹ್ಮಣರನ್ನು ದ್ವೇಷಿಸಿದರು ಅವರ ಮನೆಗೆ ಹಾಲು ಮೊಸರು ತರುವುದನ್ನೂ, ಅವರ ಮನೆ ಕೊಟ್ಟಿಗೆ ಅಂಗಳ ಗುಡಿಸುವುದನ್ನೂ ಅವರ ದನ ಮೇಯಿಸುವುದನ್ನೂ ಬಿಟ್ಟುಬಿಟ್ಟರು ಆಗ ಬ್ರಾಹ್ಮಣರು ಅವರಿಗೆ ಜಮೀನು ಕೊಡದಂತೆ ಶಪಥಮಾಡಿಕೊಂಡರು ತಮ್ಮ ಸ್ವಂತ ರೆವೆನ್ಯೂ ಮಾಡಿದ್ದ ರಾಗಿ ಪೈರನ್ನು ಹೊರಗಿನಿಂದ ಜನರನ್ನು ಕರಸಿ ಕೊಯಿಲು ಮಾಡಿಸುತ್ತೇವೆಂದರು ಸಿದ್ದನೆಂಬೊಬ್ಬ ಪರಿವಾರದವನು ತನ್ನ ಜಮೀನಿನ ಪೈರು ಕೊಯಿಲು ಮಾಡುವ ವಿಷಯದಲ್ಲಿ ಬ್ರಾಹ್ಮಣರು ಮಾಡಿದ ಏರ್ಪಾಡನ್ನು ತನ್ನ ಕುಲದ ಯಜಮಾನನಿಗೆ ತಿಳಿಸಿ ಹೇಳಿಕೊಂಡನು ಅಷ್ಟರಲ್ಲಿ ಬ್ರಾಹ್ಮಣರು ಮೂಗೂರಿನಿಂದ ಕೆಲವು ಜನರನ್ನು ಕೊಯಿಲಿಗೆ ಕರಸಿದರು ಆಗ ಪರಿವಾರದವರ ಯಜಮಾನನು ಶಾನುಭೋಗನನ್ನು ಕರೆ ಕಳುಹಿಸಿ ಪೋಲಕ್ಕೆ ಕರೆ ಪಂಚಾಯಿತಿ ಸೇರಿಸಿದನು ಈ ಪಂಚಾಯಿತಿಯಿಂದ ಪ್ರಯೋಜನವೇನೂ ಆಗುವುದಿಲ್ಲವೆಂದು ಪರಿವಾರದವರು ಆ ಜಮೀನಿಗೆ ಹೋಗಿ ದೊಂಬಿ ಮಾಡಿ ಕೊಯ್ಯುವವರನ್ನು ಹೊಡೆದು ಬಡಿದು ವಾಪಸು ಓಡಿಸಿಬಿಟ್ಟರು ಈ ದೊಂಬಿ ಕೆಲಸವನ್ನು ನೋಡಿ ಪಂಚಾಯತಿ ಮಾಡುತ್ತಿದ್ದ ಶಾನುಭೋಗ ಮುಂತಾದವರೆಲ್ಲಾ ಓಡಿಹೋದರು ಈ ದೊಂಬಿ ಕೆಲಸದಲ್ಲಿ ಮೂಗೂರಿನಿಂದ ಬಂದಿದ್ದ ನಾಲ್ವರಿಗೆ ಗಾಯಗಳಾದವು ಅವರಿಗೆ ಆಸ್ಪತ್ರೆಯಲ್ಲಿ ಇಲಾಜು ಮಾಡಿಸಲಾಯಿತು ಈ ಮೊಕದ್ದಮೆಯಲ್ಲಿ ಸರ್ಕಾರದವರು ಸುಬ್ಬಯ್ಯನೇ ಮೊದಲಾದ 19 ಜನರನ್ನು ಹಿಡಿದು ಅವರ ಮೇಲೆ ಕಳುಹಿಸಿ ಅಪರಾಧ ತಂದರು ಸ್ಪೆಷಲ್ ಮ್ಯಾಜಿಸ್ಟ್ರೇಟರು ದರ್ಯಾಫ್ತಿ ಮಾಡಿ 18 ಮಂದಿಯನ್ನು ಖುಲಾಸ್ ಮಾಡಿ ಸುಬ್ಬಯ್ಯನೆಂಬ ಅಪರಾಧಿಗೆ ನಾಲ್ಕು ತಿಂಗಳ ಕಠಿಣ ಸಜಾ ವಿಧಿಸಿದರು ಮೇಲ್ಕಂಡಂತೆ ಬಿಡುಗಡೆಯಾದ 18 ಮಂದಿಯ ಪೈಕಿ 11 ಜನರು ಕನ್ನಾಗಾಲದ ದಂಗೆ ಮೊಕದ್ದಮೆಯಲ್ಲಿ ಸೇರಿದವರು

ಸೆಷನ್ಸ್ ವಿಚಾರಣೆಗೆ ಗುರಿಪಡಿಸಿದ್ದು

ತರುವಾಯ ಸ್ಪೆಷಲ್ ಮ್ಯಾಜಿಸ್ಟ್ರೇಟರು ಅಪರಾಧಿಗಳ ಮೇಲೆ ಸಾಕ್ಷಿಗಳು ಕೈಫಿಯತ್ತು ಬರಸಿದ್ದ ಪ್ರಕಾರ ಆಲೋಚನೆ ಮಾಡಿ ಪೀನಲ್ ಕೋಡಿನ ಶಿಕ್ಷಾಕ್ರಮವನ್ನನುಸರಿಸಿ ಅವರವರ ಮೇಲೆ ಅಪರಾಧಗಳು ಬಂದಿರುವುದನ್ನು ವಿವರಿಸಿ ಅವರನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸುವುದಾಗಿ ತೀರ್ಮಾನಮಾಡಿದರು. ಸಾಮಾನ್ಯವಾಗಿ ಎಲ್ಲಾ ಅಪರಾಧಿಗಳ ಮೇಲೂ ನಾಲ್ಕು ಅಪರಾಧಗಳು ಸ್ಥಾಪಕವಾದವು ಯಾವವೆಂದರೆ—(1) ಅಕ್ರಮಕೂಟದಲ್ಲಿ ಸೇರಿ ದಂಗೆಮಾಡಿದ್ದು, (2) ನಂಜನೆಂಬವನನ್ನು ಕೊಂದದ್ದು, (3) ಮಾದನೆಂಬವನನ್ನು ಕೊಂದದ್ದು, (4) ಸಿದ್ದನೆಂಬವನನ್ನು ಹೊಡೆದು ಜಖಂಮಾಡಿದ್ದು ಇವಲ್ಲದೆ ಕೆಲವರ ಮೇಲೆ ಮನೆಗಳಿಗೆ ಬೆಂಕಿಹಾಕಿ ಸುಟ್ಟರೆಂಬ ಅಪರಾಧವೂ, ಕಳುವುಮಾಡಿದ ಅಪರಾಧವೂ ಹೊರಿಸಲ್ಪಟ್ಟವು 5 ನೇ ಅಪರಾಧಿ ಗೊಜ್ಜೆ ಸಿದ್ದರಂಗನ ಮೇಲೆ 6 ಛಾರ್ಜುಗಳೂ, 6 ನೇ ಬಿಳಕಪಾಡಿ ಪುಟ್ಟಶೆಟ್ಟಿಯ ಮೇಲೆ 11 ಛಾರ್ಜುಗಳೂ, 8 ನೇ ದೊಡ್ಡ ಅಪ್ಪಯ್ಯನ ಮೇಲೆ 10 ಛಾರ್ಜುಗಳೂ 26 ನೇ ಬಕ್ಕ ನಿಂಗಶೆಟ್ಟಿಯ ಮೇಲೆ 8 ಛಾರ್ಜುಗಳೂ, 10 ನೇ ಲಕ್ಕ 36 ನೇ ರಾಚಶೆಟ್ಟಿ, 40 ನೇ ಚಿಕ್ಕರಂಗ ಬಿನ್ ಮಾಸ 41 ನೇ ಮುಲ್ಲುಬ್ಬ, 19 ನೇ ತಿಮ್ಮ ಬಿನ್ ಮಾದ, ಇವರ ಮೇಲೆ ತಲಾ 4 ಛಾರ್ಜುಗಳೂ 11 ನೇ ಚಿಕ್ಕಸಿದ್ದ, 14 ನೇ ಪಿಂಡಾರಮಾದ 11 ನೇ ಗಾಣಿಗರ ಬಸಶೆಟ್ಟಿ, ಇವರ ಮೇಲೆ ತಲಾ 7 ಛಾರ್ಜುಗಳೂ, 37 ನೇ ಆರೇಪುರದ ಮಾದ ಮತ್ತು 39 ನೇ ಮುಸ್ತಫಾಸಾಬಿ, ಇವರ ಮೇಲೆ ತಲಾ 12 ಛಾರ್ಜುಗಳೂ ಹೊತ್ತುಮಾಡಿದರು ಈ ಪ್ರಕಾರ ಮ್ಯಾಜಿಸ್ಟ್ರೇಟರು 17 ಮಂದಿ ಅಪರಾಧಿಗಳ ಮೇಲೆ ಛಾರ್ಜು ಮಾಡಿರುವದಾಗಿ ತಿಳಿಸಿದರು

25 ನೇ ಅಪರಾಧಿ ಪುಟ್ಟಮಾದ ಚಿಕ್ಕ 71 ನೇ ಪೈರೋಜ ಸಿದ್ದ, 116 ನೇ ಪುಟ್ಟ 144 ನೇ ಎದ್ದ, 176 ನೇ ದೊಡ್ಡಪುಟ್ಟ—ಈ 5 ಮಂದಿಯೂ ತಲಾ 500 ರೂಪಾಯಿನ ಎರಡೆರಡು ಜಾಮೀನುಗಳನ್ನು ಕೊಟ್ಟರೆ ಅವರನ್ನು ಖುಲಾಸ್ ಮಾಡುವುದಾಗಿ ತಿಳಿಸಿದರು

ಬಿಡುಗಡೆ ಹೊಂದಿದವರು

60 ನೇ ಅಪರಾಧಿ ಸುಣ್ಣದುಡಿ ಬಸವ, 90 ನೇ ವೀರಭದ್ರ, 91 ನೇ ಗಂಜ, 105 ನೇ ಬಸವನ ಮಗ ಪಿರ 122 ದಾಸಶೆಟ್ಟಿ ಮಗ ರಂಗ, 170 ನೇ ಮಂಚಯ್ಯನ ರಾಚ, 171 ನೇ ಸಿದ್ದಯ್ಯನ ರಾಚ, 194 ನೇ ಪಟೇಲನ ಮಗ ದೊಡ್ಡಪುಟ್ಟಸ್ವಾಮಿ—ಈ 8 ಜನರ ಮೇಲೂ ಸಾಕ್ಷ್ಯವು ಬಲವಾಗಿಲ್ಲವೆಂದು ಹೇಳಿ ಮ್ಯಾಜಿಸ್ಟ್ರೇಟರು ಅವರನ್ನೆಲ್ಲಾ ಪೊಲೀಸ್ ನಿರ್ಬಂಧದಿಂದ ಬಿಡಿಸಿ ಖುಲಾಸ್ ಮಾಡಿಸಿರುತ್ತಾರೆ

ತಾವಾಗಿ ಬಂದ ಅಪರಾಧಿಗಳ ಕೈಫಿಯತ್ತು

(1) 177 ನೇ ಅಪರಾಧಿ ದೇವರಾಜ ಬಸವೈಯನು ವಾರಂಟಿಗೆ ಸಿಕ್ಕದೆ ಇದ್ದು ತಾನಾಗಿಯೇ ಮ್ಯಾಜಿಸ್ಟ್ರೇಟರ ಮುಂದೆ ಹಾಜರಾಗಿ ಕೈಫಿಯತ್ತು ಬರೆಸಿರುವುದೇನೆಂದರೆ—ಇದುವರೆಗೆ ನನ್ನ ಮೇಲೆ ಸಾಕ್ಷಿಗಳು ಹೇಳಿರುವುದನ್ನೇ ಇಟ್ಟುಕೊಂಡು ಮುಂದಿನ ಕ್ರಮ ಜರುಗಿಸಬಹುದು ಮತ್ತೆ ಸಾಕ್ಷಿಗಳ ವಿಚಾರಣೆ ಅವಶ್ಯವಿಲ್ಲ ನಾನು ಈ ದೊಂಬಿಯಲ್ಲಿ ಸೇರಿದವನಲ್ಲ ನಾನು ಆಗ ಊರಿನಲ್ಲೇ ಇರಲಿಲ್ಲ ಪಟ್ಟಕ್ಕೆ ಹೋಗಿದ್ದೆ ವೀರಶೆಟ್ಟಿ ಮಗನು ಜಿದ್ದಿನಿಂದ ನನ್ನ ಮೇಲೆ ಹೇಳಿದ್ದಾನೆ ಅವನ ತಮ್ಮ ಬಂದಿ ಕೇಳಿಸಿಕೊಂಡದ್ದಕ್ಕೆ ನಾನು ಸಾಕ್ಷಿ ಹೇಳಿದ್ದೆ ಆಗ ಅವನಿಗೆ ನನ್ನ ಮೇಲಣ ಜಿದ್ದಿಗೆ ಕಾರಣ ನಾನು ಸಿದ್ದನೊಡನೆ ತಿಗೆದುಕೊಂಡು ಹೋದವನಲ್ಲ ಮತ್ತು ಹೊಡೆಯುವ ಪದ್ಧತಿಗೆ ವಿರೋಧವಾಗಿ ಕೆರೆಗೆ ನೀರು ಹರಿಗೆಯುವುದಕ್ಕೆ ಬಂದಾಗ ನಾನು ಅವರನ್ನು ಕೆರೆಗೆ ಬರಕೂಡದೆಂದೂ, ಅದು ಸಾಮೂಹಿಕ ವಿರೋಧವೆಂದೂ ಅಡ್ಡಿಮಾಡಿದಾಗ ಸಾಧ್ರಿ ಸಾಹೇಬರು ಬಂದು ನನ್ನ ಕಡೆ ನ್ಯಾಯದ ತೀರ್ಪುಮಾಡಿದರು ಅದರಿಂದ ಸಾಧ್ರಿ ಸಾಹೇಬರಿಗೆ ನನ್ನ ಮೇಲೆ ದ್ವೇಷ ಹುಟ್ಟಿ ಅವರು ನನ್ನ ಮೇಲೆ ಸಾಕ್ಷಿ ಹೇಳಿದ್ದಾರೆ ಇಷ್ಟರಿಂದ ಸಾನ್ಯಾಸಿ ಸಾಧ್ರಿ ಸಾಹೇಬರಿಗೂ ಅವರಿಗೆ ನನ್ನ ಗುರುತು ಎಲ್ಲಿಯದು ? ಅವರೆಲ್ಲಾ ದ್ವೇಷಕ್ಕಾಗಿ ನನ್ನ ಮೇಲೆ ಸಾಕ್ಷಿ ಹೇಳಿದ್ದಾರೆ ನಾನು ಒಂದೂ ಕಂಡವನಲ್ಲ ನನ್ನ ಕಡೆ ಸಾಕ್ಷಿಗಳು ಇದ್ದಾರೆ ಸೆಷನ್ಸ್ ಕೋರ್ಟಿನಲ್ಲಿ ಅವರನ್ನು ಇಟ್ಟು ರುಜುವಾತು ಕೊಡುತ್ತೇನೆ ಎಂದು ಹೇಳಿ ಬರಸಿ ಪೊಲೀಸಿನವರ ವಶವರ್ತಿಯಾದನು

(2) 179 ನೇ ಅಪರಾಧಿ ಕನಕಪ್ಪನು ತನ್ನ ಮೇಲೆ ವಾರಂಟು ಹುಟ್ಟಿರುವುದನ್ನು ತಿಳಿದು ಇದುವರೆಗೆ ತಪ್ಪಿಸಿಕೊಂಡಿದ್ದು ಕೋರ್ಟಿಗೆ ತಾನಾಗಿಯೇ ಹಾಜರಾಗಿ ಮ್ಯಾಜಿಸ್ಟ್ರೇಟರ ಮುಂದೆ ಹೇಳಿ ಬರೆದ ಕೈಫಿಯತ್ತಿನ ಮುಖ್ಯಾಂಶವೇನೆಂದರೆ—ಇದುವರೆಗೆ ಸಾಕ್ಷಿಗಳು ಹೇಳಿರುವುದನ್ನು ಇಟ್ಟುಕೊಂಡು ಮುಂದಿನ ಕ್ರಮ ನಡಿಸಬಹುದು ನನಗೋಸ್ಕರ ಮತ್ತೆ ಆ ಸಾಕ್ಷಿಗಳನ್ನು ಕರಸಿ ಅವರ ಜಾಬ್ತೆ ಬರೆದುಕೊಳ್ಳಬೇಕಾದದ್ದಿಲ್ಲ ದೊಂಬಿ ನಡೆದ ಕಾಲದಲ್ಲಿ ನಾನು ಊರಲ್ಲಿ ಇರಲಿಲ್ಲ, ಮಾರ್ಗದ ಪಟ್ಟಕ್ಕೆ ಹೋಗಿದ್ದೆನು ಪೊಲೀಸಿನವರು ಹೊಡೆದುಬಡಿದು ಹಿಂಸೆ ಮಾಡುವರೆಂದು ಹೆದರಿ ತಪ್ಪಿಸಿಕೊಂಡು ಹೋಗಿ ಕಾಡಿನಲ್ಲಿದ್ದೆನು ಈರಶೆಟ್ಟಿ ಮಗ ಸುಬ್ಬಪ್ಪನ ತೋಟವನ್ನು ನಾನು ಗುತ್ತಿಗೆಗೆ ತೆಗೆದುಕೊಂಡಿದ್ದೆ ಈ ಗುತ್ತಿಗೆ ಹಣದ ವಿಚಾರದಲ್ಲಿ ಆ ಅಣ್ಣತಮ್ಮಂದಿರಲ್ಲೇ ವ್ಯಾಜ್ಯವಾಗಿ ಅವರಿಗೆ ನನ್ನ ಮೇಲೆ ಸಿಟ್ಟು ಬಂದು ಆ ದ್ವೇಷದಿಂದ ಅವನೂ ಅವನ ತಿಳುವಳಿಕೆಯವರೂ ನನ್ನ ಮೇಲೆ ಸಾಕ್ಷಿ ಹೇಳಿದ್ದಾರೆ ನಾನು ಒಂದೂ ಕಂಡವನಲ್ಲ ಎಂದು ಕೈಫಿಯತ್ತು ಹೇಳಿ ಬರಸಿ ಪೊಲೀಸಿನವರ ವಶವರ್ತಿಯಾದನು

(3) 173 ನೇ ಅಪರಾಧಿ ಪಟೇಲ್ ಪುಟ್ಟಸ್ವಾಮಿಗೌಡನು ಕಳೆದ ಶುಕ್ರವಾರ ಮಧ್ಯಾಹ್ನ ಸುಮಾರು 1 ಗಂಟೆಗೆ ಕೋರ್ಟಿಗೆ ಹಾಜರಾಗಿ ತಾನಾಗಿಯೇ ಒಪ್ಪಿಸಿಕೊಳ್ಳಬೇಕೆಂದು ಕೋರ್ಟಿನ ಆವರಣದೊಳಕ್ಕೆ ಬಂದದ್ದನ್ನು ಕಾವಲಿದ್ದ ಪೊಲೀಸಿನವರು ಗುರುತಿಸಿ ವಶಗಿರಿಮಾಡಿ ತಾವೇ ಅವನನ್ನು ಹಿಡಿದಂತೆ ರಿಪೋರ್ಟು ಬರೆದುಕೊಂಡು ಮ್ಯಾಜಿಸ್ಟ್ರೇಟರ ಹುಜೂರಿಗೆ ದಾಖಲುಮಾಡಿದರು ಮ್ಯಾಜಿಸ್ಟ್ರೇಟರು ಆ ರಿಪೋರ್ಟನ್ನು ನೋಡದೆ ಪೊಲೀಸಿನವರನ್ನು ಹಿಂದಕ್ಕೆ ಕಳುಹಿಸಿ ದಾಖಲಾದ ಪುಟ್ಟಸ್ವಾಮಿಗೌಡನನ್ನು ವಾಕೆಫ್ದಾರಿಯ ವಿಚಾರವಾಗಿ ಪ್ರಶ್ನೆಮಾಡಿ ಅವನ ಕೈಫಿಯತ್ತನ್ನು ಬರೆದುಕೊಂಡರು ಆ ಕೈಫಿಯತ್ತಿನ ಸಾರಾಂಶವೇನೆಂದರೆ—ಹಿಂದೆ ನನ್ನ ಮೇಲೆ ಸಾಕ್ಷಿಗಳು ಏನೇನು ಹೇಳಿದ್ದಾರೆಯೋ ನನಗೆ ತಿಳಿಯದು ಅವರನ್ನು ಮತ್ತೆ ಕರಸಿ ನನ್ನ ಎದುರೂ ವಿಚಾರಣೆ ಮಾಡಬೇಕು ನನ್ನ ಕಡೆ ಲಾಯರು ಇದ್ದಾರೆ ಇಲ್ಲಿ ಸಾಕ್ಷಿಗಳ ಸವಾಲ್ ಮಾಡಿ ಜರುಗಿಸಲು ಆಗಬೇಕು ನಾನು ಇದುವರೆಗೆ ಎಲ್ಲಿ ಹೋಗಿದ್ದೆ ಎಂಬ ಕುರಿತು ಇರುತ್ತಿದ್ದೆ ನಾನು ಜನಗಳನ್ನು ಆಯುಧ ಸಮೇತ ಊಟ ಮುಂತಾದದ್ದು ಮಾಡುವುದಕ್ಕಾಗಿ ಕನ್ನಾಗಾಲಕ್ಕೆ ಕಳುಹಿಸಲಿಲ್ಲ ಸಾಕ್ಷಿಗಳು ಹೇಳುವುದು ಸುಳ್ಳು ನಾನು ಆಗ ಊರಲ್ಲೇ ಇರಲಿಲ್ಲ ದೊಂಬಿ ನಡೆದ ನಂತರ ನಾನು ಆ ಜನಗಳನ್ನು ಎದುರುಗೊಳ್ಳುವುದಕ್ಕೆ ಅಷ್ಟಹಳ್ಳದ ಹತ್ತಿರ ಹೋಗಿದ್ದೆನೆಂಬುದೂ ಸುಳ್ಳು 150 ಜನರ ಸಾಕ್ಷಿಗಳನ್ನು ಮತ್ತೆ ಕರಸಿ ವಿಚಾರಣೆಮಾಡುವುದಕ್ಕೆ ದೀರ್ಘಕಾಲ ಹಿಡಿಯುತ್ತೆಂದು ಹೇಳುವುದಾದರೆ ದಣಿತಕ್ಕಂತೆ ಮಾಡಬಹುದು ನನ್ನ ಎದುರಿನಲ್ಲಿ 150 ಜನರೂ ನನ್ನ ಮೇಲೆ ಹೇಳಿಲ್ಲ 30 ಜನ ಮಾತ್ರ ಹೇಳಿದಂತಿದ್ದೀತು ಅವರು ನನ್ನ ಗೈರ್ ಹಾಜರಿಯಲ್ಲಿ ನನ್ನ ಮೇಲೆ ಏನು ಹೇಳಿದ್ದಾರೆಯೋ ನನಗೆ ಗೊತ್ತಿಲ್ಲ ಎಂದು ಹೇಳಿ ಬರಸಿ ಪೊಲೀಸಿನವರ ವಶವರ್ತಿಯಾದನು ಮ್ಯಾಜಿಸ್ಟ್ರೇಟರು ಇವನ ಮೇಲೆ ಮೇಲ್ಕಂಡಂತೆ 6 ಛಾರ್ಜುಗಳನ್ನು ಮಾಡಿದರು ಆಗ ಅವನು—ಶಾನುಭೋಗನೂ ಮತ್ತು ವೀರಶೆಟ್ಟಿ ಇವರಿಬ್ಬರಿಗೂ ನನಗೂ ಬಹಳ ಕಾಲದಿಂದ ದ್ವೇಷವುಂಟು ಈ ದ್ವೇಷದಿಂದ ನನ್ನನ್ನು ಈ ದೊಂಬಿಗೆ ಸೇರಿಸಿದ್ದಾರೆ ಎಂದು ಹೇಳಿಕೊಂಡನು

ಇನ್ನೂ ಸಿಕ್ಕದ ಇರುವವರು

ವಾರಂಟು ಆಗಿರುವ ಇನ್ನೂ 13 ಜನರು ಇನ್ನೂ ಸಿಕ್ಕಿ ಇಲ್ಲ ಈ ಪೈಕಿ ಕೆಲವರಾದರೂ ಈ ವಾರ ತಾವಾಗಿಯೇ ಮ್ಯಾಜಿಸ್ಟ್ರೇಟರ ಮುಂದೆ ಹಾಜರಾಗುತ್ತಾರೆಂದು ಊಹಿಸಲ್ಪಟ್ಟಿದೆ

ಸ್ಪೆಷಲ್ ಮ್ಯಾಜಿಸ್ಟ್ರೇಟರ ತೀರ್ಮಾನ

ನಾಳೆ ೭ ನೇ ತಾ ಮಂಗಳವಾರ ಸ್ಪೆಷಲ್ ಮ್ಯಾಜಿಸ್ಟ್ರೇಟರು ಅಪರಾಧಿಗಳನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸುವ ಆರ್ಡರನ್ನು ಹೇಳುವವರಾಗಿದ್ದಾರೆ

ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಅಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಹೇಳುತ್ತೇವೆ

" ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಕರೆಸ್ಪಾಂಡೆನ್ಸ್

ಶ್ಯಾನುಭೋಗರ ವಾಸಸ್ಥಳವು

ಅಯ್ಯಾ,

ನಂಜನಗೂಡು ತಾಲ್ಲೂಕಿನಲ್ಲಿ ಶ್ಯಾನುಭೋಗರುಗಳು ಅವರವರ ಬವರ್ಗ ಗ್ರಾಮಗಳಲ್ಲಿ ವಾಸವಾಗಿಲ್ಲದ ಕಾರಣ ಕಂದಾಯದ ವಸೂಲು ಕಾಲವು ಪ್ರಾಪ್ತವಾಗಿದೆ ಶ್ಯಾನುಭೋಗರುಗಳು ಮನಸ್ಸು ಬಂದಾಗ ಒಂದೋ ಕಂದಾಯ ಕೇಳೋದು, ಹೊರಟುಹೋಗುವದು, ನೋಟೀಸು ಮಾಡುವುದು ನೋಟೀಸು ಜಪ್ತಿ ಛಾರ್ಜು ರೈತರ ತಲೆ ಮೇಲೆ ಹೊರಿಸುವದು—ಹೀಗೆ ಆಗುತ್ತಾ ಇದೆ ಶ್ಯಾನುಭೋಗರು ಗ್ರಾಮದಲ್ಲಿ ಸಂಸಾರಮಾಡಿಕೊಂಡು ನಿತ್ಯ ಚಾವಡಿಯಲ್ಲಿ ಕುಳಿತರೆ ಒಂದು ದಿವಸ ಅನುಕೂಲವಾಗದಿದ್ದರೆ ಮತ್ತೊಂದು ದಿವಸ ಕಂದಾಯ ಕೊಡಬಹುದು ಹಾಗಿಲ್ಲದೆ ಒಂದು ಬಸ್ತಿಗೆ ಒಂದು ದಿವಸ ವಸೂಲಾತಿಗೆ ಯಾವಾಗಲೋ ಬರುವದು, ರೈತರು ತಮ್ಮ ತಮ್ಮ ಆರಗೃಹಕೃತ್ಯ ಕೆಲಸಗಳಿಗೆ ಹೋಗಿರುವದು, ಹೀಗಾಗಿ ಕಂದಾಯ ಬಾಕಿ ಬೀಳುವುದಿಲ್ಲ ಪೇಟೆಗೆ ಮಾತ್ರ ತಿನ್ನುವದಕ್ಕೆ, ಬೇರೆ ಗ್ರಾಮದಲ್ಲಿ ಖುದ್ದಾಗಿ ಕಾಲಕಳೆಯುವದೂ, ಇವಕ್ಕೆಲ್ಲಾ ಅವಕಾಶ ಆಗಿದೆ ತಾಲ್ಲೂಕು ಅಮಲ್ದಾರರು ಈ ವಿಷಯದಲ್ಲಿ ಈಗಲಾದರೂ ಗಮನಿಸಿ ತೆಗೆದುಕೊಂಡಾರೆಂಬವಾಗಿ ಪ್ರಾರ್ಥಿಸುತ್ತೇವೆ

ಒಕ್ಕಲಿಗ [illegible]

[ಶ್ಯಾನುಭೋಗರು ಕಂದಾಯ ವಸೂಲ್ಮಾಡತಕ್ಕವರಲ್ಲ ಲೆಕ್ಕಗಳ ಮಾತ್ರ ಇಡತಕ್ಕವರು ಅವರು ಕಂದಾಯ ಎತ್ತಕೂಡದೆಂದೂ, ರೈತರು ಪಟೇಲನಿಗೆ ಕಂದಾಯ ಪಾವತಿಮಾಡಬೇಕೆಂದೂ ಸರ್ಕಾರದವರು ಹುಕುಂ ಮಾಡಿದ್ದಾರೆ ಆದಾಗ್ಯೂ ರೈತರು ಆ ರೀತಿ ಮಾಡದೆ ಶ್ಯಾನುಭೋಗರ ಬಳಿ ಯಾಕ ಸರಿಕಟ್ಟುತ್ತಾರೋ ತಿಳಿಯುವುದಿಲ್ಲ —ಎಡಿ]

ಗೋಪ್ಟೈ ಚಿಕ್ಕಪುರದ ವಿಷಯಗಳು

ಅಯ್ಯಾ,

ಇಲ್ಲಿ ಬಾಯಿಬೇನೆ ವಗೈರೆ ಏನೂ ಇಲ್ಲ ಮುನಿಸಿಪಲ್ ಲಾಂದ್ರಗಳು ತಮ್ಮ ಕಾಂತಿಯನ್ನು ಪ್ರಜೆಗಳಿಗೆ ತೋರ್ಪಡಿಸದೆ ಮೌನವಾಗಿರುತ್ತವೆ ಬೀದಿಗಳಲ್ಲಿರುವ ಒಂದೆರಡು ಲಾಂದ್ರಗಳ ಬೆಳಕು ಮಾತ್ರ ಸಕ್ಕತ್ತಾಗಿ ಮಿಣುಗುಟ್ಟುತ್ತೆ ಮುನಿಸಿಪಾಲಿಟಿ ಚೊಕ್ಕಟವಾಗಿಲ್ಲದಿರೋದರಿಂದ ಮುಂದೆ ಸಾಂಕ್ರಾಮಿಕ ರೋಗಗಳು ಒದಗಬಹುದೆಂದು ತೋರುತ್ತೆ ಟವನ್ ಹಾಲು, ಕಳ್ಳಭಟ್ಟಿ ವಗೈರೆ ಪ್ರೈವೇಟುಗಳಿಗೆ ಅವಕಾಶವಿಲ್ಲದೆ ಅನುಮಾನದ ಸೇಲ್ ಇನ್ಸ್‌ಪೆಕ್ಟರವರು ಗಾಡಾ ಇಟ್ಟಿರುತ್ತಾರೆ ಪ್ರಿನ್ಸುಪ್ರಾಪ್ರೈಟರಿಯಲ್ಲಿ ಮೂರೆಲೆ ಇಸ್ಪೀಟುಗಳಿಗೆ, ಇತರ ಜೂಜುಗಳಿಗೆ, ಕಳ್ಳರಿಗೆ ನಡೆಯಲು ಅವಕಾಶವಿಲ್ಲದೆ ಪೋಲೀಸ್ ಇನ್ಸ್‌ಪೆಕ್ಟರವರು ಏರ್ಪಾಡುಮಾಡಿ ರಾತ್ರಿ ಹಗಲೂ ತಿರುಗುತ್ತಿದ್ದರು ಈ ಸ್ಥಳಕ್ಕೆ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರೂ, ಅಸಿಸ್ಟೆಂಟ್ ಸಾಹೇಬರವರೂ ಬಂದು ಮಾಡಿಸಿ ಎಲ್ಲಾ ವಿಚಾರಣೆಗಳನ್ನೂ ಪೂರೈಸಿಕೊಂಡು ಹೊರಟುಹೋದ ಹಾಗಿರುವಲ್ಲಿ ಆ ಪಟಿಗಳು ಅಲ್ಲಲ್ಲಿ ತಲೆದೋರಿದ್ದಾವೆ ಕೆಲವರು, ದಾಸೋಹ ಕಳೆದುಕೊಂಡು ಕಣ್ಣೀರು ಇಡುತ್ತಾರೆಂದೂ ತಾವು ಸ್ವೀಕರಿಸಿದ ೨ ನೇ ತಾ ಶನಿವಾರದ ಪತ್ರಿಕೆಯಲ್ಲಿ ಹಾಕಿರುತ್ತಾರೆ ಎಲ್ಲಿಯೋ ತಲೆದೋರಿದ ಜಡಿಮಳೆಯಲ್ಲಿ ಹೋಗಿ ಹಣ ಕಳೆದುಕೊಂಡವರು ಅಲ್ಲಿದ್ದ ಸರ್ಕಾರದ ಅಧಿಕಾರಿಗಳಲ್ಲಿಯೂ ಹೇಳದೆ ಸುಮ್ಮನೆ ಇದ್ದದ್ದು ನೋಡಿದರೆ ಕಣ್ಣೀರು ಸುರಿಯುತ್ತಿದ್ದಷ್ಟು ಎಷ್ಟರಮಟ್ಟಿಗೆ ನಿಜವೋ ಊಹಿಸಿಕೊಳ್ಳಬೇಕು ಈ ಜಾತ್ರೆಯಲ್ಲಿ ಸರ್ಕಾರದವರು ಈ ದಫಾ ಮಾಡಿದ್ದ ಪ್ರಬಂಧ ಏರ್ಪಾಡೂ ಸ್ತೋತ್ರಾರ್ಹವಾಗಿ ತೋರುತ್ತದೆ ಆಕೆ ಗಣೆ ದಾಬು ಯಾವುದೂ ಇರಲಿಲ್ಲ

ಪ್ರತ್ಯಕ್ಷದರ್ಶಿ

ರಾತ್ರಿ ಕಾವಲು —ಉತ್ತರ

ಅಯ್ಯಾ,

ತಮ್ಮ ಕಳೆದ ವಾರದ ಸಂಚಿಕೆಯಲ್ಲಿ ಮ ರಾಮಯ್ಯ ಗುಂಜೂರು ಎಂಬವರು ರಾತ್ರಿಕಾಲದಲ್ಲಿ ಕಾವಲು ಕಾಯತಕ್ಕ ವಿಷಯದ ರೂಲ್ಸು ಬ್ರಾಹ್ಮಣರ ಆದರಿಂದ ಏನಾದರೂ ಇದೆಯೋ ಹ್ಯಾಗೆಂದು ಕೇಳಿದ್ದಾರೆ ಈ ಸದನಳಿಕೆ ಇಂಡಿಯಾ ಗೌರ್ನಮೆಂಟು 1874 ನೇ ಇಸವಿ ಏಪ್ರಿಲ್ 10 ನೇ ಮಾರ್ಚಿ 20 ನಂಬರು ಆರ್ಡರು ಪ್ರಕಾರ ನಮ್ಮ ಮೈಸೂರು ದೇಶದಲ್ಲಿ ಜಾರಿಗೆ ಬಂದ ಈ ರೂಲಿನಲ್ಲಿ 18 ವರುಷ ವಯಸ್ಸಿಗೆ ಒಳಪಟ್ಟ ಬಾಲಕರನ್ನೂ, 60 ವರುಷ ಮೇಲ್ಪಟ್ಟ ವೃದ್ಧರನ್ನೂ ಈ ಕಾವಲಿಗೆ ನೇಮಿಸಕೂಡದೆಂತ ನಮೂದಿಸಿದೆ ಹೊರತು ಜಾತಿಯ ಯಾರನ್ನೂ ವಿನಾಯಿಸಿಲ್ಲ ಈ ರೂಲು ತಾಲ್ಲೂಕು ಹೆಡ್ ಕ್ವಾರ್ಟರ್ ಸ್ಥಳದಲ್ಲೂ ಜಾರಿಯಲ್ಲಿತ್ತು 1880 81 ನೇ ಇಸವಿಯಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟು ಹೊಸದುರ್ಗದ ಬ್ರಾಹ್ಮಣರು ತಮ್ಮನ್ನು ರೂಲಿನಿಂದ ವಿನಾಯಿಸಬೇಕೆಂತ ನಮ್ಮ ಗೌರ್ನಮೆಂಟನವರನ್ನು ಕೇಳಿಕೊಂಡದ್ದಕ್ಕೆ ಇಂಡಿಯಾ ಗೌರ್ನಮೆಂಟನವರ ಆರ್ಡರಿನಲ್ಲಿ ತಾವು ಪ್ರವೇಶಿಸಲು ತಮಗೆ ಅಧಿಕಾರವಿಲ್ಲವೆಂತ ಗೌರ್ನಮೆಂಟನವರು ಅವರಿಗೆ ಜವಾಬು ಕೊಟ್ಟರು 1891 ನೇ ಇಸವಿಯಲ್ಲಿ ದಿವಾನ್ರಾಗಿದ್ದ ಸರ್ ಶೇಷಾದ್ರಿಯರವರು ಈ ಕಲಿನ ವಿಚಾರವು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲೂ ಟವನ್ ಪೋಲೀಸ್ ಇರತಕ್ಕ ಸ್ಥಳಗಳಲ್ಲೂ ಜಾರಿಮಾಡತಕ್ಕ ಅವಶ್ಯವಿಲ್ಲವೆಂತ ಪ್ರೊಸೀಡಿಂಗ್ಸ್ ಮಾಡಿದರು ಆ ಲಾಗಾಯ್ತು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಈ ಗಲಾಟೆ ತಪ್ಪಿತು ಈ ರೂಲಿಗೆ ಬ್ರಾಹ್ಮಣರೂ ಒಳಪಟ್ಟಿದ್ದಾರೆ ಆದರೆ ಈಚೆಗೆ ನಮ್ಮ ಗೌರ್ನಮೆಂಟಿನವರು ದೊಡ್ಡ ದೊಡ್ಡ ಪಟ್ಟಣಗಳನ್ನು ಯೂನಿಯನ್ ಎಂತ ಮಾಡಿ ಅವರಲ್ಲಿ ಮುನಿಸಿಪಲ್ ನಿಬಂಧನೆ, ಸ್ಯಾನಿಟೇಷನ್ ರೂಲ್ಸುಗಳನ್ನು ಜಾರಿಯಲ್ಲಿ ತಂದಿದ್ದಾರೆ ಅವುಗಳಲ್ಲಿ ಈ ಕಾವಲಿನ ರೂಲು ಜಾರಿಯಲ್ಲಿ ಇದ್ದಾರೆಯೋ ಇಲ್ಲವೋ ಗೊತ್ತಿಲ್ಲ ಆ ವಿಷಯ ಗೌರ್ನಮೆಂಟಿನವರಿಂದ ತಿಳಿದುಕೊಳ್ಳತಕ್ಕದ್ದಾಗಿದೆ

ಒಬ್ಬ ರಿಟೈರ್ಡ್ ಆಫೀಸರ್

ತಾಲ್ಲೋಕು ವರ್ತಮಾನಗಳು

ಚಾಮರಾಜನಗರ —ಈ ಊರಲ್ಲಿ ಕೆಲವಾ ಕೇಸುಗಳು ಸುಮಾರು ... ವಾಗೂ ಆಯಿತು 2 3 ಪ್ಲೇಗ್ ಕೇಸುಗಳೂ ಆದವು ಆದಕಾರಣ ... ಊರು ಬಿಡುವ ಯೋಚನೆಯಲ್ಲಿದಾರೆ ಒಬ್ಬಿಬ್ಬರು ಊರು ಬಿಟ್ಟಿ... —ಈ ಊರು ವೆಂಕಟಶೆಟ್ಟಿಯವರ ಮಗ ಗೋಪಾಲ ಕೃಷ್ಣಾಶೆಟ್ಟಿ ... ಮೈಸೂರು ಕಪ್ ಕುಸ್ತಿಗಳಲ್ಲಿ ಗೆದ್ದು, ನಮ್ಮ ಮಹಾರಾಜರವರಿಂದ ... 100 ರೂಪಾಯಿ ಬಾಳುವ ಒಂದು ಬೆಳ್ಳಿ ಬಟ್ಟಲು ನಗದು 100 ... ಬಹುಮಾನ ಪಡಕೊಂಡುಬಂದನು ಆ ಬಟ್ಟಲನ್ನೂ ಆತನನ್ನೂ ... ವಾದ್ಯಗಳೊಡನೆ ಮೆರವಣಿಗೆ ಮಾಡಿಸಿದರು ವರ್ತಕವಂಡ ... ಸ್ನೇಹಿತರಲ್ಲಿ ಪ್ರತಿ ಒಬ್ಬರೂ ಸಂತೋಷಕ್ಕಾಗಿ ಆತನಿಗೆ ರೇಷ್ಮೆ ... ಇನಾಂ ಕೊಟ್ಟರು

ಸಿಂಗನಲ್ಲೂರು ತಾ|| ಯಳಂದೂರು —ಇಲ್ಲಿನ ಹವ ಬಹಳ ಚನ್ನಾ ... ರೈತರು ಕಾರ್ತೀಕ ಬೆಳೆಯನ್ನೆಲ್ಲಾ ಮುಗಿಸಿ, ವೈಶಾಖದ ಬೆಳೆಮಾಡುವುದ ... ಬಹಳ ಹರುಷದಿಂದ ಸಾಗುವಳಿ ಮಾಡುತ್ತಲಿದಾರೆ —ಇಲ್ಲಿ ಸ್ಯಾನಿಟೇಷನ್ ಸರಿಯಾಗಿರುವುದಕ್ಕಾಗಿ ಪ್ರತಿ ಸತ್ಯಸ್ಥ ಇಲ್ಲಿನ ಮೆಡಿಕಲ್ ... ಮತ್ತು ಮೆಂಬರುಗಳು ಪ್ರತಿ ಒಂದು ಮನೆಗೂ ಹೋಗಿ ನೋಡಿಕೊಂ... ಹೀಗೆ ಮಾಡುವುದರಿಂದ ಊರಿನ ಕಚರಾ ವಗೈರೆ ಹೋಗಿ ... ಯಾವ ವಿಧವಾದ ಖಾಯಿಲೆ ಮತ್ತು ಪ್ಲೇಗ್ ಉಪದ್ರವು ತಲೆ... ಅವಕಾಶವಾಗುವುದಿಲ್ಲವೆಂದು ನಂಬುತ್ತೇನೆ —ಇಲ್ಲಿಗೆ ಹೊಸದಾಗಿ ... ಪೋಲೀಸ್ ಆಫೀಸರು ಮ ರಾ ರಾ ಕೃಷ್ಣಯ್ಯಂಗಾರ್ಯ ಬಹಳ ... ಯೂ ಘನಸ್ಥರಾಗಿಯೂ ಇದಾರೆ

... ತಾ|| ಜಕ್ಕನಹಳ್ಳಿ ... ಇಲ್ಲಿನ ಹವಾ ... ರೈತರೆಲ್ಲರೂ ಬತ್ತದ ಪೈರನ್ನು ಕೊಯ್ದು ಮೆದೆಗಳಾಗಿ ಒಟ್ಟಿ ... ಕೆಲವು ಕಡೆ ಪೈರನ್ನು ಒಕ್ಕುತ್ತಲೂ ಇರುವರು ಕಾಫೀ ತೋಟ... ಕಾಫೀ ಕಾಳುಗಳನ್ನು ಬಿಡಿಸಿ ಒಣಗಿಸುತ್ತಲಿರುವರು ಈ ಸಲಕ್ಕೆ ವ್ಯಾಪಾ... ಕಾಫಿಯು ಹಿಂದೆ ಕಳೆದ ವರುಷಕ್ಕಿಂತಲೂ ಅರ್ಧ, ಮುಕ್ಕಾಲು ... ಎಂದು ಹೇಳಬಹುದು ಬತ್ತದ ಬೆಲೆ ಈ ಸಾರಿ ಚನ್ನಾಗಿ ... ಕಡಿಮೆ ... ಇಲ್ಲ ಇದರ ಕಾರಣವೇನೋ ಗೊತ್ತಾಗಲೊಲ್ಲ ... ಪೋಸ್ಟ್ ಮಾಸ್ಟರ್ ಮತ್ತು ಪೋಸ್ಟ್ ಮಾಸ್ಟರಾಗಿದ್ದ ಮ|| ಮೇ ಮೊಲಾ ... ಬಸ್ತಿಯಿಂದ ಬೇರೆ ಕಡೆಗೆ ವರ್ಗವಾದಂತೆ ಕೇಳುತ್ತೇವೆ ಇವರು ... ವಿದ್ಯಾರ್ಥಿಗಳಲ್ಲಿ ತುಂಬಾ ಪ್ರೀತಿ ಉಳ್ಳವರಾಗಿದ್ದರು —ಪೇಟೆ ... ಅಕ್ಕಿ ರೂಪಾಯಿಗೆ 6 ಸೇರು, ರಾಗಿ 15 ಸೇರು ಸಿಕ್ಕುವುದು

... —ಈ ಟವರ್ನಿನ ಒಂದು ಓಣಿಯಲ್ಲಿ ಮಹಮದೀಯರ ... ಮನೆಗೆ ಸೀಮೆ ಎಣ್ಣೆ ದೀಪ ಬಿಂಕಿ ಬಿದ್ದು ಮುಕ್ಕಾಲು ಭಾಗ ಉರಿದು ... ಸುತ್ತುಮುತ್ತಲಿನ ಮನೆಗಳವರು ತಕ್ಷಣವೇ ಸೇರಿ ಸಾಹಸಪಟ್ಟು ... ಎರಚುತ್ತಾ ಜ್ವಾಲೆಯು ನೆರೆಹೊರೆ ಮನೆಗಳಿಗೆ ವ್ಯಾಪಿಸದಂತೆ ... ಆ ಮನೆಯಲ್ಲಿ ಕೆಲವು ಭಾಗ ಉಳಿಯುವಂತೆ ಮಾಡಿದ್ದು ಸ್ತೋತ್ರ... —ಅರಸೀಕೆರೆಗೆ ಇಲ್ಲಿಂದ ಹೋಗುವ ಮಾರ್ಗದಲ್ಲಿ 21 ನೇ ಮೈಲಿ ... ಯಾರೋ ದರುಳರು ಮೂರು ಮಂದಿಯನ್ನು ಕೊಲೆಮಾಡಿದಾ... ಅವರ ತಲೆಗಳು ಪತ್ತೆಯೇ ಇಲ್ಲವಂತೆ ಎಲ್ಲಿಯೋ ಬಚ್ಚಿಟ್ಟಿದಾರೆಂದೂ ... ಯಾವುದೋ ದ್ವೇಷದಿಂದ ಆ ಮಾರ್ಗದಲ್ಲಿ ಒಬ್ಬನನ್ನು ... ನಲೆಯನ್ನು ಮರೆಮಾಡಿದಾರೆಂದು ಮಾತ್ರ ಸರಿಯಾದ ವರ್ತ... ಇಷ್ಟಲ್ಲದೆ ಇಲ್ಲಿಂದ ತಿಪಟೂರಿಗೆ ಹೋಗುವ ಮಾರ್ಗದಲ್ಲಿಯೂ ... ಕೊಲೆಮಾಡಿದಾರೆಂದು ಹೇಳುವರು ನಿಜಾ ಂಶವು ಇನ್ನೂ ಹೊರ...

ಮಡಕಶಿರೆ ತಾ ... —ಈ ಗ್ರಾಮದಲ್ಲಿ ಪ್ಲೇಗು ಗಲಾಟೆ ... ನಾಶವು ... ಕಳಗಿರುವ ಜನಗಳೆಲ್ಲಾ ಊರು ಬಿಟ್ಟು ಒಂದು ತಿಂಗ... ಎಲ್ಲರೂ ಪಟ್ಟಿನಲ್ಲಿದ್ದಂತೆ ಆದರೆ ನಾಶ ಹೊಂದಿರುವ ರೈತರು ... ಮನೆಗಳಲ್ಲಿ ಇಲಿಗಳು ವಿಪರೀತ ... ಮನೆ ಬಿಟ್ಟಿಲ್ಲ ಈ ಗಲಾಟೆಯಿಂದ ... ಕಳ್ಳತನವು ಈ ಕಾಲದಲ್ಲಿ ಅಂದರೆ ತಾ 10 ನೇ ಗುರುವಾರ ... ಪ್ಪನವರ ಮತ್ತು ಕೃಷ್ಣಪ್ಪನವರ ಮನೆ ಬೀಗವನ್ನು ಯಾರೋ ಕಳ್ಳರು ... ಮನೆಯಲ್ಲಿದ್ದುದೆಲ್ಲವನ್ನೂ ದೋಚಿಕೊಂಡು ಹೋಗಿರುತ್ತಾರೆ ... ಯು, ಕಳ್ಳರ ಕಾಟ ಈ ಎರಡರ ಮಧ್ಯೆ ಸಿಕ್ಕಿಕೊಂಡಿರುವ ಜನಗಳ ... ವನ್ನು ವಿವರಿಸಲಾಗದು ಈ ಗ್ರಾಮದ ಪಟೇಲನು ಬಹಳ ಗಟ್ಟಿಗನಾಗಿದ್ದು ... ಕಳ್ಳತನವೇ ಆಗುವುದಿಲ್ಲ ಆದಾಗ್ಯೂ ಈಗ ನಡೆದಿರುವ ಕಳುವ... ಮಾಡಲಿಲ್ಲವು ಸರ್ಕಾರದವರನ್ನು ಕಂಡು ಹೇಳೋಣವೆಂದರೆ ಅವ... ದೂರದಲ್ಲಿದಾರೆ ಊರಿಗಾದರೂ ಹೋಗೋಣವೆಂದರೆ ಸೋಂಕು ... ಆದ್ದರಿಂದ ಸರ್ಕಾರದವರು ಈ ಗ್ರಾಮಸ್ಥರನ್ನು ಕಾಪಾಡ... ಪ್ರಾರ್ಥಿಸುತ್ತೇನೆ

... ಸೂರು ತಾ|| ಯಗಟಿ —ತಾ 10 ನೇ ಗುರುವಾರ ಈ ಗ್ರಾಮ... ಸಭೆಯು ದೊಡ್ಡ ಮೇಟೀಕುಕೆರೆ ಬಸವೇಶ್ವರ ಸಹಾಯ ಸಂಘದ ... ರಾಗಿಯೂ, ಅರಸೀಕೆರೆಯ ಪುರಸಭಾ ಮೆಂಬರಾಗಿಯೂ ಇರುವ ... ಡಾರ್ ಮಿ ಎಂ ಎಚ್ ಹರಿಯಣ್ಣನವರಿಂದ ಏರ್ಪಡಿಸಲ್ಪಟ್ಟಿತು ... ಸಭೆಯಲ್ಲಿ ಮಿ|| ಎಂ ಎಚ್ ಹರಿಯಣ್ಣನವರು ಅನ್ಯೋನ್ಯ ಸಹಾಯ ... ವನ್ನು ಏರ್ಪಡಿಸುವುದರಿಂದ ಪ್ರಜೆಗಳಿಗುಂಟಾಗುವ ಅನುಕೂಲತೆಗಳನ್ನು ... ತಿಳಿಯಪಡಿಸಿ ಸರ್ವರಿಗೂ ಟೀಪಾರ್ಟಿಯನ್ನು ಕೊಟ್ಟರು ಇಂಥ ... ಕಾರದಲ್ಲಿ ಪ್ರಮೋದಪಡುವ ಎಂ|| ಹರಿಯಣ್ಣನವರನ್ನು ಎಲ್ಲರೂ ಕೊಂಡಾ... —ಈ ಊರಿನಲ್ಲಿ ಸುಮಾರು 30 40 ಮಂದಿ ಬಾಲಕರು ಸಿಡುಬಿನಿಂದ ... ರು ಸರ್ಕಾರದವರು ಸಿಡುಬು ಹಾಕಿಸುವುದಕ್ಕೆ ಬೇಕಾದ ಅನುಕೂ... ದಯಪಾಲಿಸಿದಾಗ್ಯೂ ಸಿಡುಬು ಹಾಕಿಸದೆ ಬಾಲಕರನ್ನು ಅಕಾಲ ... ಗುರಿಮಾಡಿಕೊಳ್ಳುವವರನ್ನು ನೋಡಿದರೆ ಜನಗಳ ಮೌಢ್ಯವೇ ಕಾರಣ —ಪೋಲೀಸ್ ಜಮೇದಾರ್ ಅಪ್ಪೂರಾಯರು ಜನಗಳ ಪ್ರೀತಿಪಾತ್ರರಾಗಿ ... ನಡೆಯುತ್ತಿರುವುದು ಸ್ತುತ್ಯವಾಗಿದೆ —ಊರ ಮುಂದಿನ ಕೆರೆಯ ನೀರು ... ಹೋಗಿ ಅನೇಕ ಜನಗಳು ರೋಗದಿಂದ ನರಳುತ್ತಿದಾರೆ ನದಿಯ ನೀರನ್ನು ... ಉಪಯೋಗಿಸುವುದು ಉತ್ತಮ

... ಗೊಂಡ್ಲು —ಹವಾ ಚನ್ನಾಗಿದೆ ಬೇಸಗೆಯು ಪ್ರಾರಂಭವಾ... ದಿಂದ ಸೆಕೆಯು ದಿನೇ ದಿನೇ ಹೆಚ್ಚುತ್ತಿದೆ ಕೆರೆಗಳೆಲ್ಲ ಕಣಗಿಲಸದಲ್ಲಿ ಆಸಕ್ತರಾಗಿರುವುದರಿಂದ ಈ ಊರಿನಲ್ಲಿ ಧಾರಣೆವಾಸಿಗಳು ಇಳಿದಿಲ್ಲ ಅಕ್ಕಿ ರೂಪಾಯಿಗೆ 6 7 ಸೇರು, ರಾಗಿ 16 17 ಸೇರು ಮಾರುತ್ತಿದೆ —ಕಳೆದ ತಾ 29 ರಲ್ಲಿ ಈ ಊರಿಗೆ ಸಬ್ ಡಿವಿಜನ್ ಸಾಹೇಬರು ದಯಮಾಡಿ ಜಮಾಬಂದಿ ತೀರಿಸಿಕೊಂಡು ಇಲ್ಲಿನ ಗೌ|| ಎ ವಿ ಸ್ಕೂಲನ್ನು ಪರಾಂಬರಿಸಿ ಮುಂದೆ ನೆಲಮಂಗಲ ಮಾರ್ಗವಾಗಿ ಪ್ರಯಾಣಮಾಡಿದರು —ನಮ್ಮ ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್ ಮಹಾಪ್ರಭುಗಳಿಗೆ ಸಂಭವಿಸಿದ್ದ ಗಂಡಾಂತರವನ್ನು ಕೇಳಿ ಬಹು ದುಃಖಸಾಗರದಲ್ಲಿ ಮುಳುಗಿದ್ದ ಈ ಊರಿನ ಸಮಸ್ತ ಪ್ರಜೆಗಳೂ ಅವರಿಗೆ ಸಂಪೂರ್ತಿಯಾಗಿ ಸಮಸ್ತ ಗಾಯಗಳೂ ವಾಸಿಯಾದುವೆಂಬ ಶುಭ ವರ್ತಮಾನವನ್ನು ಕೇಳಿ ಸಂತೋಷಭರಿತರಾದರು ಭಗವಂತನು ನಮ್ಮ ವೈಸ್‌ರಾಯಿ ಮಹಾಪ್ರಭುಗಳನ್ನೂ ಅವರ ಕುಟುಂಬದವರನ್ನೂ ಅನವರತ ರಕ್ಷಿಸಲೆಂದು ಹಾರೈಸುತ್ತೇವೆ —ಈ ಊರಿಗೆ ಸ್ವಲ್ಪ ದೂರದಲ್ಲಿ ಸಮಾಧಿಯಾಗಿರುವ ರೇವಪ್ಪಸ್ವಾಮಿಯ ಗದ್ದುಗೆಗೆ ಪ್ರತಿ ಮಂಗಳವಾರ ಶುಕ್ರವಾರವೂ ಬಹು ವಿಜೃಂಭಣೆಯಿಂದ ಪೂಜಾದಿಗಳು ನಡೆಯುವುದರಿಂದ 15 20 ಚಿಲ್ಲರೆ ಅಂಗಡಿಗಳು ಇಡಲ್ಪಡುವವು ಈ ಸ್ಥಳದಲ್ಲಿ ಭಾವಿ ತೆಗಿಸುತ್ತಿದ್ದ ಮ|| ದೇವಾಂಗದ ಸವರ್ ವೆಂಕಟಪ್ಪನವರು ಕೆಲಸವನ್ನು ನಿಲ್ಲಿಸಿದ್ದರು ಈ ಭಾವಿಯ ಕೆಲಸವನ್ನು ಪೂರೈಸಿ ಕೀರ್ತಿಗೊಂಡುವರೆಂದು ನಂಬುತ್ತೇವೆ

ಹರಿಹರ ತಾ|| ಮಲೆಬೆನ್ನೂರು —ಈ ಗ್ರಾಮವು ಮೊದಲು ಮೈನರ್ ಮ್ಯುನಿಸಿಪಾಲಿಟಿಯಾಗಿದ್ದು ಈಚಿಗೆ ಯೂನಿಯನ್ ಮಾಡಿದಾರೆ ಈ ಯೂನಿಯನ್ನಲ್ಲಿ ನಾಲ್ಕು ಲಾಂದ್ರಾಕಂಬಗಳು ಮಾತ್ರ ನಿಂತಿರುತ್ತವೆ ಶಿವಾಯ ದೀಪಾ ಹಚ್ಚಿದ್ದು ಬೇರೆ ಕಣ್ಣಿನಿಂದ ನಾವು ನೋಡಿ ಇಲ್ಲ ರಸ್ತೆಗಳಿಗೆ ಕಂಕರಾ ಹಾಕದೆ ಎಷ್ಟೋ ದಿವಸವಾಯಿತು ಬೇಗಾರರು ಬೆಳಿಗ್ಗೆ 8 ಘಂಟೆ ಮೇಲೆ 2 3 ದೊಡ್ಡ ರಸ್ತೆಗಳಲ್ಲಿ ಮಾತ್ರ ಕಸಾ ಗುಡಿಸುತ್ತಾರೆ ಅದರ ಇದರ ಧೂಳು ಸಹಿಸುವದು ಅಸಾಧ್ಯ ಮತ್ತು ಸಣ್ಣ ಸಣ್ಣ ರಸ್ತೆಗಳಲ್ಲಿ ಕಸಾ ಹೊಡೆಯುವ ಪದ್ಧತಿಯನ್ನೇ ಇಟ್ಟಿಲ್ಲ ಗ್ರಾಮಸ್ಥರಿಂದ ಯೂನಿಯನ್ ತೆರಿಗೆ ವಸೂಲ್ ಮಾಡಿ ಯಾತಕ್ಕೆ ಉಪಯೋಗಿಸುತ್ತಾರೋ ಗೊತ್ತಾಗಲಿಲ್ಲ ಮೆಂಬರುಗಳು ಸಹಾ ಜನರ ಅನುಕೂಲಗಳು ಮಾಡಿಸಿ ಕೊಡುವದಿಲ್ಲ —ಮತ್ತು ಊರಿನ ಒಳಗೆ ಗ್ರಾಮಸ್ಥರಿಗೆ ಕುಡಿಯುವ ನೀರಿನ ಭಾವಿಯ ಮೇಲೆ ಎರಡು ಕಡೆ ಹಾಕಿದ 3 ಕೊಳವೆಗಳ ಪೈಕಿ ಒಂದು ಭಾಗದ ತೊಲೆ ಒಡೆದು ಹೋಗಿದೆ ಮತ್ತು ಅದರ ಮೇಲೆ ಹಾಕಿದ ಗಡಗು ಕೊಡ ಯಾರೋ ಒಯ್ದುಬಿಟ್ಟಿದಾರೆ ಜನಗಳು ನೀರು ಸೇದುವದಕ್ಕೆ ತುಂಬಾ ಅನಾನುಕೂಲವಾಗಿದೆ ಇದು ಸರ್ಕಾರದಿಂದ ಕಾಮಗಾರಿ ಮಾಡಿದ್ದು ಇದಕ್ಕೆ ಸರ್ಕಾರದವರು ನಿಗಾಕೊಟ್ಟು ದುರಸ್ತು ಮಾಡಿ ಕೊಟ್ಟರೆ ಬೇಸಿಗೆ ಕಾಲವಾದ್ದರಿಂದ ನೀರುಸೇದುವದಕ್ಕೆ ಅನುಕೂಲವಾದೀತು — ಈ ಗ್ರಾಮದಲ್ಲಿ ಜಗಳಿ ಬಸಣ್ಣ ಎಂಬಾತನು ಹಿತ್ತಲಲ್ಲಿ ಮಲಗಿರುವಾಗ್ಗೆ ಗುಡಿಸಲು ಬಳಿಯಲ್ಲಿ ಮಲಗಿದ್ದ ಒಂದು ನಾಯಿಯನ್ನು ಹಿಡಿಯಲು ಬಂದ ಹುಲಿಯನ್ನು ಆತನು ಧೈರ್ಯದಿಂದ ಒಂದು ಸೊಪ್ಪಿನ ಕಿವಡು ತೆಗೆದುಕೊಂಡು ಬಿಡದೆ ಬಾಗಲು ಬಿಟ್ಟು ಹೋಗುವ ವರೆಗೂ ಸೊಪ್ಪಿನ ಕಿವಡಿನಿಂದ ಹೊಡಕೊಂಡು ಹೋಗಿ ತನ್ನ ಕೈಲಿ ಯಾವ ಪ್ರಕಾರವೂ ಸಿಕ್ಕದ್ದರಿಂದ ಬಾಜು ಇದ್ದವರನ್ನು ಎಬ್ಬಿಸಲು ಗಲಾಟೆಯಾಗಿ ಸದರಿ ಹುಲಿಯು ಓಡಿಹೋಯಿತು ಈತನ ಧೈರ್ಯಸ್ಥೈರ್ಯಗಳಿಗೆ ಎಣೆಯಿದ್ದಂತೆ ಕಾಣುವದಿಲ್ಲ ಅಲ್ಲದೆ ಈ ಹಿಂದೆ ಯಾವಾಗಲೂ ಮಿಕ್ಕ ಜಾತಿಗಳ ಬೇಟೆಯಾಡುವದರಲ್ಲಿ ಈತನು ಬಹಳ ಧೈರ್ಯಸ್ಥನಾಗಿದಾನೆ

ಕುಣಿಗಲ್ ತಾ|| ಅಮೃತೂರು —ಧಾರಣೆವಾಸಿಗಳು ಕ್ಷಾಮಗಾಲದ ರೀತಿ ಇವೆ ಈ ಊರನ್ನು ದಯಾಳುಗಳಾದ ನಮ್ಮ ಸರ್ಕಾರದವರು ಯೂನಿಯನ್ ಮಾಡಿ ಮೂರು ವರ್ಷಗಳಾದವು ಈ ವರೆಗೂ ಯೂನಿಯನ್ ಸಂಬಂಧವಾದ ಯಾವ ಕೆಲಸವಾಗಲಿ ಪೂರ್ತಿಯಾಗಿ ನಡೆದಿಲ್ಲ ಬಡಬಗ್ಗರಾದ ರೈತರು ಯೂನಿಯನ್ ಕಂದಾಯ ಕೊಟ್ಟು ಸಾಕಾಗಿದಾರೆ ಗ್ರಾಮದ ಪಾಕೀಜಾ ವಿಷಯ ತೃಪ್ತಿಕರವಾಗಿಲ್ಲ ಪೋಲೀಸ್ ವಿಚಾರವು ಸಮರ್ಪಕವಾಗಿಲ್ಲ ರಾತ್ರಿ ಕಾಲದಲ್ಲಿ ಇವರು ಬೀಟ್ ಬಂದ ವಿವರವೇ ಕಾಣೆವು ನಮ್ಮ ಪೋಲೀಸ್ ಇನ್ಸ್‌ಪೆಕ್ಟರು ಈ ವಿಷಯವನ್ನು ಸರಿಪಡಿಸಿಯಾರೆಂದು ನಂಬಿದೇನೆ — ಈ ಊರಲ್ಲಿರುವ ಬಾಯ್ಸ್ ಸ್ಕೂಲ್ ಮತ್ತು ಗರ್ಲ್ಸ್ ಸ್ಕೂಲ್ ಉತ್ತಮಸ್ಥಿತಿಯಲ್ಲಿದ್ದದ್ದು ಈಚಿಗೆ ಕೇವಲ ಹೀನಸ್ಥಿತಿಗೆ ಬರುತ್ತಾ ಇದೆ ಈ ವಿಷಯದಲ್ಲಿ ನಮ್ಮ ಸ್ಕೂಲು ಹೆಡ್ ಮಾಸ್ಟರುಗಳು ತುಂಬಾ ನಿಗಾ ಕೊಟ್ಟು ಸರಿಪಡಿಸುತ್ತಾರೆಂದು ನಂಬಿದೇನೆ —ಇಲ್ಲಿ ಸಾಂಕ್ರಾಮಿಕ ರೋಗಗಳೇನೂ ಇಲ್ಲ ಇಷ್ಟು ದೊಡ್ಡ ಊರಿಗೆ ನೀರಿನ ಭಾವಿ ಯಾವುದೂ ಸಮೀಪದಲ್ಲಿಲ್ಲ ಗ್ರಾಮಸ್ಥರೂ, ಸರ್ಕಾರದವರೂ ಸೇರಿ ಒಂದು ಭಾವಿ ತೋಡಿಸಿದರೆ ಪ್ರಜೆಗಳಿಗೆ ತುಂಬಾ ಉಪಯೋಗವಾಗುವ ವಿಷಯದಲ್ಲಿ ಸಂದೇಹವಿಲ್ಲ —ಘನವನ್ನು ಹೊಂದಿರುವ ಇಂಡಿಯಾದೇಶದ ರಾಜ ಪ್ರತಿನಿಧಿಗಳಾದ ಲಾರ್ಡ್ ಹಾರ್ಡಿಂಜ್ ಪ್ರಭುಗಳು ಸುಮಾರು ಒಂದು ತಿಂಗಳ ಕೆಳಗೆ ದೆಹಲಿ ಪಟ್ಟಣದಲ್ಲಿ ತಮಗೆ ಸಂಭವಿಸಿದ ವಿಪತ್ತಿನಿಂದ ಗುಣವನ್ನು ಹೊಂದಿ ತಮ್ಮ ಕೆಲಸದ ಮೇಲೆ ದಯಮಾಡಿರುವ ಸಂತೋಷಪ್ರದರ್ಶನಾರ್ಥವಾಗಿ ಈ ಊರಿನ ಎಲ್ಲಾ ಸ್ಕೂಲುಗಳ ಬಾಲಕರೂ, ಬಾಲಕಿಯರೂ, ಉಪಾಧ್ಯಾಯರುಗಳೂ ಗೌ|| ಬಾಯ್ಸ್ ಸ್ಕೂಲಿನಲ್ಲಿ ಸಭೆ ಸೇರಿ ಮುಂದೆ ಹೇಳುವ ತಂತಿ ವರ್ತಮಾನವನ್ನು ರಾಜ ಪ್ರತಿನಿಧಿಗಳಿಗೆ ಕಳುಹಿಸಿಕೊಡಬೇಕೆಂದು ಒಂದು ರೆಜಲ್ಯೂಷನ್ ಮಾಡಿದರು ಅದರಂತೆ ತಂತಿಯೂ ಕಳುಹಿಸಲ್ಪಟ್ಟಿತು ಏನೆಂದರೆ " ಮಹಾ ಘನವನ್ನು ಹೊಂದಿರುವ ಇಂಡಿಯಾ ದೇಶದ ರಾಜಪ್ರತಿನಿಧಿಗಳವರಿಗೆ ಮಹಾ ಪ್ರಭುಗಳು ಬಾಂಬಿನ ಅನರ್ಥವಿಂದು ಒದಗಿದ ಅಪಾಯದಿಂದಲೂ ಅಸೌಖ್ಯದಿಂದಲೂ ನಿವೃತ್ತರಾಗಿ ತಮ್ಮ ಮಹಮಹೋದ್ಯೋಗ ಸಂಬಂಧವಾದ ಕರ್ತವ್ಯಗಳನ್ನು ಪುನಃ ವಹಿಸಿದ್ದಕ್ಕೋಸ್ಕರ ಮೈಸೂರು ಸೀಮೆಯಲ್ಲಿ ಅಮೃತೂರು ಗ್ರಾಮದಲ್ಲಿರುವ ಸ್ಕೂಲು ಬಾಲಕರೂ ಬಾಲಕಿಯರೂ ಉಪಾಧ್ಯಾಯರುಗಳೂ ಆದ ನಾವು ಮನಃಪೂರ್ವಕವಾದ ರಾಜಭಕ್ತಿ ವಿನಯದಿಂದ ನಮ್ಮ ಮಹಾ ಸಂತೋಷವನ್ನು ಅರ್ಪಿಸಿ ಮಹಾ ಪ್ರಭುಗಳಿಂದ ಇವುಗಳು ಪರಮಾನುಗ್ರಹದಿಂದ ಅಂಗೀಕರಿಸಲ್ಪಡಬಹುದೆಂದು ಕೋರುತ್ತೇವೆ "

ದೊಡ್ಡಬಳ್ಳಾಪುರ —ಈ ವಾರದಲ್ಲಿ ದೊಡ್ಡಬಳ್ಳಾಪುರದ ನೇರಿನ ವಸತಿ ಮುಂತಾದ ಸ್ಥಳೀಯ ಸಂಗತಿಗಳನ್ನು ಕುರಿತು ಹ| ದಿವಾನ್ ಸಾಹೇಬರವರಲ್ಲಿ ಮೊಬಲಗು ಮಾತನಾಡುವಂತೆ ಪ್ರಜೆಗಳಿಂದ 27 ನೇ ತಾ ನಡೆದ ಪಬ್ಲಿಕ್ ಮೀಟಿಂಗಿನಲ್ಲಿ ಚುನಾಯಿಸಲ್ಪಟ್ಟ 11 ಮಂದಿ ಪ್ರತಿನಿಧಿಗಳು ಬೆಂಗಳೂರಿಗೆ ಹೋಗಿ ಬಂದಿರುತ್ತಾರೆ ಫಲಿತಾಂಶವು ನಮಗೆ ತಿಳಿಯ ಬರುವದು —ಕೆಲವು ದಿವಸಗಳ ಹಿಂದೆ ಈ ಊರು ಚಿಕ್ಕ ಅಂಗಡಿ ಮುದ್ದನಂಜಪ್ಪನವರ ಅಂಗಡಿಯಲ್ಲಿ ಒಬ್ಬ ಮುಸಲ್ಮಾನರ ಹುಡುಗನು ಕೊಂಚ ಅಕ್ಕಿ ತೆಗೆದುಕೊಂಡು ಓಡುತ್ತಿದ್ದನ್ನು ಮುದ್ದನಂಜಪ್ಪ ಕಂಡು ಸದರಿ ಹುಡುಗನನ್ನು ಹೊಡದಂತೆಯೂ, ಆ ಹುಡುಗನು ಒಂದೆರಡು ದಿನಗಳಲ್ಲಿ ಮೃತಪಟ್ಟನೆಂತಲೂ, ಪುಕಾರು ಹುಟ್ಟಿ ಹೂಣಲ್ಪಟ್ಟಿದ್ದ ಶವವನ್ನು 8 10 ದಿವಸಗಳ ಮೇಲೆ ಇಲ್ಲಿನ ಆಸ್ಪತ್ರೆಯವರು ಪರೀಕ್ಷಿಸಿದಂತೆಯೂ ತಿಳಿಯಿತು ಅಲ್ಲದೆ ಈ ಸಂಗತಿಯು ಸೂಪರಿಂಟೆಂಟ್ ಸಾಹೇಬರಿಗೆ ತಿಳಿದು ಮೇಲ್ಕಂಡ ಮುದ್ದನಂಜಪ್ಪನನ್ನು ಹಿಡಿದು ವಿಚಾರಣೆ ನಡಿಸುವಂತೆ ಕಾಣುತ್ತದೆ ಮೃತಪಟ್ಟ ಮೇಲ್ಕಂಡ ಮುಸಲ್ಮಾನ್ ಹುಡುಗನ ತಂದೆಯು ಫಿರ್ಯಾದು ಮಾಡಿರಲಿಲ್ಲವೆಂತಲೂ, ಯಾರೋ ಹೆಸರಿಲ್ಲದ ಅರ್ಜಿ ಬರೆದದ್ದರ ಮೇಲೆ ಇವೆಲ್ಲಾ ನಡೆಯುತ್ತಿವೆ ಎಂದೂ ಕೇಳಲಾಗಿದೆ — ಈ ಊರು ಪಾಠಶಾಲೆಗಳ ಪೈಕಿ ಮಾದಿಗರ ಪಾಠಶಾಲೆಗೆ ಮಹೇಯಾಸಾ ಖರ್ಚುಮಾಡುವ ಹಣ ಅನ್ಯಾಯವೆಂತ ತೋರುತ್ತೆ ಯಾವಾಗ ನೋಡಿದರೂ ಉಪಾಧ್ಯಾಯನು ಪಾಠಶಾಲೆಯಲ್ಲಿರುವದೇ ಅಪರೂಪವಾಗಿದೆ ಅಲ್ಲದೆ ಹುಡುಗರ ಸಂಖ್ಯೆಯೂ ಅವರ ವಿದ್ಯಾಭಿವೃದ್ಧಿಯೂ ತೀರಾ ಕಮ್ಮಿ ಈ ಹೊಲೆಯರ ಮಾದಿಗರ ಪಾಠಶಾಲೆಗಳಿಗೆ ತಕ್ಕ ಮೇಲ್ವಿಚಾರಣೆಯೂ ಪ್ರೋತ್ಸಾಹವೂ ಇಲ್ಲವಾದರೆ ಅವುಗಳು ಅಭಿವೃದ್ಧಿಗೆ ಬರಲಾರವು —ತೂಬಗೆರೆಯಲ್ಲಿ ಬೆಸ್ತರ ನರಸಮ್ಮನೆಂಬವಳು ತನ್ನ ಮಗುವನ್ನು ಕೆರೆಯೊಳಗೆ ಮುಳುಗಿಸಿ ಕೊಂದಂತೆ ಪೋಲೀಸಿನವರಿಂದ ಪತ್ತೆ ನಡೆದು ಮೊಕದ್ದಮೆ ತರಲಾಗಿದೆ —ತಾ 27 ನೇ ಸೋಮವಾರ ಬೆಳಿಗ್ಗೆ ದೊಡ್ಡಬಳ್ಳಾಪುರದ ಹಳೇ ಕಛೇರಿಯಲ್ಲಿ ಸಭೆ ಸೇರಿ ನಡೆದ ವಿಷಯವೇನೆಂದರೆ— ವೈಸ್‌ರಾಯಿ ಸಾಹೇಬರವರು ದೈವಾನುಗ್ರಹದಿಂದ ಆರೋಗ್ಯಭಾಗ್ಯವುಳ್ಳವರಾಗಿ ದೆಹಲೀ ಪಟ್ಟಣದಲ್ಲಿ ಮೊದಲನೆಯಸಾರಿ ಮಂತ್ರಾಲೋಚನಾ ಸಭೆಯನ್ನು ನಡೆಯಿಸುವರೆಂಬ ಅಂಶವನ್ನು ಪ್ರೆಸಿಡೆಂಟ್ ಮ|| ಎ ಕೃಷ್ಣೇ ಅರಸಿನವರು ಅಪ್ಪಣೆಕೊಡಿಸಿದರು ಘನವನ್ನು ಹೊಂದಿದ ವೈಸ್‌ರಾಯರವರು ಸನ್ 1912ನೇ ಇಸವಿ ಡಿಸೆಂಬರ್ ತಾ 23 ರಲ್ಲಿ ದೆಹಲೀ ಪುರಪ್ರವೇಶಮಾಡುವ ಮಹೋತ್ಸವ ಕಾಲದಲ್ಲಿ ಯಾರೋ ಹೇಡಿಯು ನಡಿಸಿದ ಕ್ರೂರಕೃತ್ಯವನ್ನು ಈ ಸಭೆಯವರೆಲ್ಲರೂ ಸಂದೇಹ ತಮ್ಮಗಳ ಅನುತಾಪವನ್ನು ಘನವನ್ನು ಹೊಂದಿದ ವೈಸ್‌ರಾಯರವರಿಗೆ ಸಮರ್ಪಿಸುವುದಲ್ಲದೆ ಅವರು ದೇವರ ಕೃಪೆಯಿಂದ ಆರೋಗ್ಯವನ್ನು ಹೊಂದಿ ಹೊಸ ಮಂತ್ರಾಲೋಚಕ ಸಭೆಯಲ್ಲಿ ಸಾಕ್ಷಾತ್ತಾಗಿ ಅಧ್ಯಕ್ಷತೆಯನ್ನು ವಹಿಸುವ ಮಹೋತ್ಸವ ಸಂದರ್ಭದಲ್ಲಿ ನಮ್ಮಗಳ ರಾಜಭಕ್ತಿಪುರಸ್ಸರವಾದ ಆನಂದವನ್ನು ಅರಿಕೆಮಾಡಲು ಪ್ರಾರ್ಥಿಸುತ್ತೇವೆ ಎಂದು ಮ|| ಆಲಂಪಲ್ಲಿ ವೆಂಕಟನಾರಾಯಣಶೆಟ್ಟರು ಸೂಚಿಸಲು ಸರಾಫ್ ಪುಟ್ಟಸ್ವಾಮಿಶೆಟ್ಟರು ಅನುಮೋದಿಸಿದ್ದನ್ನು ಎಲ್ಲರೂ ಒಪ್ಪಿದರು ಈ ವಿಷಯಗಳನ್ನೆಲ್ಲಾ ಆ ದಿನವೇ ಟೆಲಿಗ್ರಾಂ ಮೂಲಕ ಸ್ಮರಿಸಪಡಿಸಬೇಕೆಂದು ಮ| ರುದ್ರಾಚಾರಿ ರುದ್ರಪ್ಪನವರು ಸೂಚಿಸಿದ್ದನ್ನು ಮ| ಆಲಂಪಲ್ಲಿ ಆದಿನಾರಾಯಣಶೆಟ್ಟರು ಅನುಮೋದಿಸಲು ಎಲ್ಲರೂ ಒಪ್ಪಿದರು ಆ ರೀತಿ ತಂತೀ ಮೂಲಕ ಅರಿಕೆಮಾಡಲಾಯಿತು

ಕೋಲಾರ —ನಮ್ಮ ಮ್ಯುನಿಸಿಪಾಲಿಟಿಯ ಆಡಳಿತವು ತೃಪ್ತಿಕರವಾಗಿಲ್ಲ ನಾಶಕೋರಿದ ಕತ್ತಾಳೆಯು ಪುನಹ ಆವರಿಸಿಕೊಳ್ಳುತ್ತಾ ಬಂದಿರುವುದು ದಿನೇ ದಿನೇ ಈ ಊರು ಕತ್ತಾಳೆಯಿಂದ ಆವರಿಸಿಕೊಳ್ಳುವದರಲ್ಲಿ ಸಂದೇಹವೇ ಇಲ್ಲ ಬೆಳಕು ಬೇಕಾದ ಸ್ಥಳದಲ್ಲಿ ದೀಪದ ಕಂಭವೇ ಇಲ್ಲ ಕೊಚ್ಚೆ ನೀರು ನಿಲ್ಲುವ ಸ್ಥಳಗಳಲ್ಲಿ ಸರಿಯಾದ ಚರಂಡಿ ಇಲ್ಲ ನೀರು ಅತ್ಯವಶ್ಯಕವಾದ ಸ್ಥಳದಲ್ಲಿ ನಲ್ಲಿಗಳಿಲ್ಲ ಅನುದು ರಪ್ಪ ಇರತಕ್ಕ ಸ್ಥಳಗಳಲ್ಲಿ ವಸ್ತಿಗಳ ರಿಪೇರಿ ಇಲ್ಲ ಪಾಕೀಜಾ ಸರಿಯಾಗಿ ನಡೆಯುವದಿಲ್ಲ ಕಸ್ಮಲವು ಅಲ್ಲಲ್ಲಿಯೇ ಬಿದ್ದಿರುತ್ತೆ ಈಗಾಗಲೇ ಎಲ್ಲಿ ನೋಡಿದರೂ ಮಾರೀ ಉಪದ್ರವ ತಲೆಹಾಕಿದೆ ಪ್ಲೇಗ್ ವ್ಯಾಧಿಯಿಂದ ನಾಲ್ಕು ಮರಣಗಳಾಗಿವೆ ಅಲ್ಲದೆ ಸುತ್ತುಮುತ್ತಲೂ ಪ್ಲೇಗ್ ವ್ಯಾಧಿಯು ಹಬ್ಬುತ್ತಿದೆ ಪಾಕೀಜಾ, ಕತ್ತಾಳೆ ತೆಗಿಸುವುದು ಮುಂತಾದ ಕೆಲಸಗಳಲ್ಲಿ ಆಫೀಸರುಗಳ ಶ್ರದ್ಧೆಯು ತೋರುವದಿಲ್ಲ ಊರಿಗೆ ರೈಲ್ವೆ ಬರುವದರಿಂದ ಇದು ದೊಡ್ಡ ಊರಾದೀತೆಂಬ ಭರವಸೆಯಿಂದ ಹಿಂದೂಗಳಿಗೂ ಮುಸಲ್ಮಾನರಿಗೂ ವಿಶೇಷ ದ್ರವ್ಯ ಖರ್ಚುಮಾಡಿ ಎಡಾವಣೆಗಳನ್ನು ಏರ್ಪಡಿಸಿ ಹೊಸದಾಗಿ ಮನೆ ಕಟ್ಟತಕ್ಕವರು ಊರಿನ ಹೊರಗೆ ಸ್ಯಾನಿಟೇರಿ ರೂಲಸು ಅನುಸರಿಸಿ ಕಟ್ಟಬೇಕೆಂಬ ಅಭಿಪ್ರಾಯದಿಂದಲೂ ಮತ್ತೆ ಊರೊಳಗೆ ಬಹಳ ಕೊಳೆಯಾಗಿಯೂ ಒತ್ತಾಗಿಯೂ ಇರುವ ಮನೆಗಳ ಮತ್ತು ಅಂಗಡಿಗಳ ಮಧ್ಯೆ ಗಾಳಿಯಾಡುವದಕ್ಕಾಗಿ ಏರ್ಪಾಡು ಮಾಡುವದಕ್ಕಾಗಿಯೂ ಹಿಂದೆ ಇದ್ದವರು ಊರಿನಲ್ಲಿ ಮನೆ ಮತ್ತು ಅಂಗಡಿಗಳನ್ನು ಕಟ್ಟಲು ಲೈಸೆನ್ಸು ಕೊಡುತ್ತಿರಲಿಲ್ಲ ಆದರೆ ಈಗಿರತಕ್ಕ ಅಧಿಕಾರಿಗಳು ಲೈಸೆನ್ಸುಗಳನ್ನು ಊರಿನಲ್ಲಿ ಹೊಸ ಕಟ್ಟಡಗಳಿಗೆ ಕೊಟ್ಟಿದಾರೆ ಊರು ಅಲಂಕಾರವಾಗಿ ತೋರುವ ಸ್ಥಳಗಳಿಗೆ ಕೊಡುತ್ತಿಲ್ಲ ಮನೆ ಅಂಗಡಿಗಳನ್ನು ಕಟ್ಟುವ ವಿಚಾರದಲ್ಲಿ ಲೈಸೆನ್ಸು ಕೊಡುವ ಅಧಿಕಾರವನ್ನು ಸ್ಯಾನಿಟೇರಿ ಆಫೀಸರಿಗೆ ಮ್ಯುನಿಸಿಪಲ್ ಬೋರ್ಡಿನವರು ವಹಿಸುವುದುತ್ತಮ ಮೊಹತರ್ಫಾ ಕಂದಾಯವನ್ನು ವಸೂಲಾಗುತ್ತಿದ್ದ ವ್ಯಾಸು ಭಾಗನು ಸರಿಯಾದ ಲೆಕ್ಕ ಇಡದಿದ್ದದ್ದರಿಂದಲೂ ಮತ್ತು ಆಯಾಯ ವರ್ಷದ ಕಂದಾಯ ಇಷ್ಟೆಂದು ಸರಿಯಾಗಿ ಜನಗಳಿಗೆ ತಿಳಿಸದೆಯೂ ಅನೇಕರು ಮ್ಯುನಿಸಿಪಾಲಿಟಿ ಕಂದಾಯ ಬಾಕೀದಾರರಾಗಿ ಅದರಲ್ಲಿ ಬಹುಮುಖ್ಯ ಕೆಲವರು ಪ್ರಾಸಿಕ್ಯೂಷನ್‌ಗೆ ಅರ್ಹರಾಗಿರುತ್ತಾರೆ ಹೀಗಿದ್ದಾಗ್ಯೂ ಜನಗಳಿಗೆ ನಾನಾ ತರಹ ಅಂದರೆ ಬಾಗಿಲು ಕಿತ್ತು ತರುವುದು, ಗಾಡಿ ಕೊಂಡ ತರುವುದು, ಎತ್ತಾ ಗಾಡಿಯವರು ಜೀವನ ನಡಿಸತಕ್ಕ ಗಾಡಿ ತರುವುದು, ಈ ಪ್ರಕಾರ ಕಂದಾಯವನ್ನು ವಸೂಲ್ಮಾಡುತ್ತಿರುವರು ಧಾರಣೆವಾಸಿ ಕ್ಷಾಮಕಾಲದಂತೆಯೇ ಇದೆ. ಇಂಥಾದ್ದರಲ್ಲಿ ಇವರು ಜೀವನ ನಡಿಸಿಕೊಳ್ಳುವ ಪದಾರ್ಥಗಳನ್ನೇ ಮ್ಯುನಿಸಿಪಾಲಿಟಿಯವರು ತಂದುಬಿಟ್ಟರೆ ಬಡಪಾಯಿಗಳು ಹೇಗೆತಾನೇ ಜೀವನ ನಡಿಸಿಕೊಳ್ಳಬೇಕೋ ತಿಳಿಯಲಿಲ್ಲ —ಈ ತಾಲ್ಲೂಕಿನ ಜಮಾಬಂದಿಯನ್ನು ಇಲ್ಲಿನ ಟ್ರೆಜರಿ ಆಫೀಸರವರು ನಡಿಸುತ್ತಿರುವರು ಈಗ ಎರಡು ತಿಂಗಳಿಂದ ಬಾಕೀಪಟ್ಟಿ ನೋಡುವುದರಲ್ಲೇ ಸರಿಹೋಗಿದೆ ಜಮಾಬಂದಿ ಜಾಗ್ರತೆ ಪೂರ್ತಿಯಾದರೆ ಜನಗಳಿಗೂ ತಾಲ್ಲೂಕು ಅಧಿಕಾರಿಗಳಿಗೂ ಸೌಲಭ್ಯ —ಈ ಡಿಸ್ಟ್ರಿಕ್ಟಿನಲ್ಲಿ ತರೀ ಬೆಳೆಯು ಹೊಗೆಸೊಪ್ಪಿನಿಂದ ಆಗತಕ್ಕದ್ದೆಂದು ಎಲ್ಲರಿಗೂ ತಿಳಿದಿದೆ ಅದಕ್ಕೆ ಮೊದಲು ಇದ್ದದಕ್ಕಿಂತ ಹೆಚ್ಚಾಗಿ ವಸೂಲ್ಮಾಡುತ್ತಿರುವರು ಇದು ರೈತರಿಗೆ ಬಹಳ ತೊಂದರೆಯಾಗಿದೆ ಅಲ್ಲದೆ ಹೊಗೆಸೊಪ್ಪನ್ನು ಎಲೆ ಎಲೆ ಬಿಡಿಸಿಯೂ ಹು... ಹೋಗಬೇಕೆಂದು ಹೇಳಿದಂತೆ ಪುಕಾರು ಇದೆ ಇದು ನಿಜವಿರಲಾರದೆಂದು ನಂಬುತ್ತೇನೆ ಯಾಕೆಂದರೆ ಅದು ಅಸಾಧ್ಯವೆಂದು ಯಾರಿಗೂ ತಿಳಿದೀತು

ಹುಣಸೂರು —ಇದು ಸುಗ್ಗೀಕಾಲವಾಗಿದ್ದರೂ ಧಾರಣೆವಾಸಿಗಳು ಇಳಿದಿಲ್ಲ ಅಕ್ಕಿ ಹೊಸದು 7 8 ಸೇರು, ರಾಗಿ 15 ಸೇರು ಮಾರಾಟವಾಗುತ್ತಿದೆ —ಕಳೆದ ತಿಂಗಳ ಅಂತ್ಯಭಾಗದಲ್ಲಿ ಈ ಸರ್ಕಲ್ ಇನ್ಸ್‌ಪೆಕ್ಟರು ಎ ವಿ ಗೌ|| ಎ ವಿ ಸ್ಕೂಲನ್ನು ಮಾತ್ರ ಸ್ವಲ್ಪಮಟ್ಟಿಗೆ ಪರೀಕ್ಷಿಸಿದರು ...

ಪಟ್ಟಣದ ಕಡೆ ಹೊರಟುಹೋದರು —ಇಲ್ಲಿನ ಕೋಆಪರೇಟಿವ್ ಸೊಸೈಟಿಯು ತುಂಬಾ ಅಭಿವೃದ್ಧಿ ಸ್ಥಿತಿಯಲ್ಲಿದೆ ಎರಡು ಸಾವಿರ ಷೇರುಗಳ ಪೈಕಿ 1500 ಷೇರುಗಳು 6-7 ತಿಂಗಳಲ್ಲೇ ಬಿಕರಿಯಾಗಿವೆ ಬಾಕಿ ಷೇರುಗಳು ಅದನ್ನು ತ್ವರೆಯಲ್ಲಿ ಬಿಕರಿಯಾಗುವುದರಲ್ಲಿ ಅನುಮಾನವಿಲ್ಲ ಇಲ್ಲಿನ ಬಡರೈತರಿಗೆ ಗೂ ಭಾಗ್ಯವಂತರಿಗೂ ಇದರಿಂದ ಹೇರಳ ಪ್ರಯೋಜನಗಳು ಲಭಿಸಿ ಎಲ್ಲಾ ವಿಷಯಗಳಲ್ಲಿ ಇದು ಅಭಿವೃದ್ಧಿಗೆ ಬರುವಂತೆ ಈ ತಾಲ್ಲೋಕಿನ ಸಮಸ್ತ ಪ್ರಜೆಗಳೂ ಏಕಮತದಿಂದಲೂ ಚಟುವಟಿಕೆಯಾಗಿಯೂ ಸಾಧಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಕಳೆದ ಮಾಹೆ 18ನೇ ರವಿವಾರ ಯೂರೋಪ್ ಪರಸ್ಥಳದ ಒಬ್ಬ ಅಕ್ಕಸಾಲಿಗ ಜಾತಿಯ ಸುಂದರರೂಪನಾದ ಯುವಕನು ಮುಸಾಫರ್ ಖಾನೆಯ ಆಚೆ ಇರುವ ಅದೇ ಅಕ್ಕಸಾಲಿಗ ಜಾತಿಯ ವಾಸಾಚಾರಿಯೊಬ್ಬನ ಹೊಲದಲ್ಲಿರುವ ಒಂದು ಗಂಜಿಗಲು ಮರಕ್ಕೆ ನೇಣುಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡಿದ್ದನು ಆತನು ಎಲ್ಲಿಯವನೋ, ಯಾವ ಕಾರಣಕ್ಕಾಗಿ ಹೀಗೆ ತಾನೇ ತೂಗುಹಾಕಿಕೊಂಡು ಸತ್ತುಹೋದನೋ ಸರಿಯಾಗಿ ಹೊರಪಡಲಿಲ್ಲ. ಮಾರನೇ ದಿನ ಪೋಲೀಸಿನವರು ಹೆಣವನ್ನು ಇಳಿಸಿ ಮಹಜರ್‌ಮಾಡಿ ಡಾಕ್ಟರ್ ಮೂಲಕ ಲಾಷ್ ಪರೀಕ್ಷೆ ನಡೆದು ದಫನ್ ಮಾಡಲಿಕ್ಕೆ ಅಪ್ಪಣೆ ಕೊಟ್ಟರು — ಅದೇ ಕಳೆದ ತಿಂಗಳ 29ನೇ ತಾ. ಬುಧವಾರ ಮಧ್ಯಾಹ್ನಾ ತ್ವರ ಇಲ್ಲಿನ ಒಂದು ಕಾರ್ಖಾನೆಯ ಪ್ರೊಪ್ರೈಟರಾದ ಮಿ ಡಬ್ಲ್ಯೂ. ಪಿ ಹೇ ಸಾಹೇಬರವರು ತಮ್ಮ ಕೆಲಸದವರೊಂದಿಗೆ 200 ಮಂದಿ ಆಳುಗಳ ಸಮೇತ ಜಂಗಲಿಗೆ ಹೋಗಿ ನಾಲ್ಕು ಮೈಲುಗಳ ಸಮೀಪದಲ್ಲಿಯೇ ಒಂದು ಭಾರೀ ಹೆಣ್ಣು ಹುಲಿಯನ್ನು ಕೊಂದು ಅದೇ ಸಾಯಂಕಾಲ ಪಟ್ಟಣಕ್ಕೆ ತಂದರು. ಈ ಟೌನ್ ಪ್ರಜೆಗಳಲ್ಲಿ ಅನೇಕರು ಅದನ್ನು ನೋಡಿ ಸಾಹಸಕಾರ್ಯಕ್ಕಾಗಿ ಅವರನ್ನು ಬಹಳ ಕೊಂಡಾಡಿದರು ಇಂತಹ ಕ್ರೂರಮೃಗವನ್ನು ಕೊಲ್ಲುವುದು ಸಾಮಾನ್ಯವಾದ ಕೆಲಸವಲ್ಲ. ತಮ್ಮ ಪ್ರಾಣದ ಮೇಲಣ ಆಸೆಯನ್ನು ತೊರೆದು ಪ್ರಜೆಗಳ ಕ್ಷೇಮ ನೆಮ್ಮದಿಗಾಗಿ ಧೈರ್ಯದಿಂದ ಶಿಕಾರಿ ಮಾಡಿದರೆಂದು ಹೇಳತಕ್ಕದ್ದು. ಆದುದರಿಂದ ಸರ್ಕಾರದವರು ಇಂತಹ ಸಾಹಸಕೃತ್ಯಕ್ಕಾಗಿ ಇವರನ್ನು ಪ್ರೋತ್ಸಾಹಗೊಳಿಸಿ ಇವರ ಶ್ರಮಕ್ಕೆ ಪ್ರತಿಫಲ ಕೊಟ್ಟಾರೆಂದು ನಿರೀಕ್ಷಿಸಬಹುದು. ಇವರ ಜೊತೆಯಲ್ಲಿ ಇವರ ಸಹಾಯಕರಾದ ಮಿ| ಅಲೆಕ್ಸಾಂಡರ್, ಎಲ್ ಜಾರ್ಜ್ ಎಂಬವರೂ ಹೋಗಿದ್ದರು.— ಇಲ್ಲಿನ ನೀರಿನ ಸಪ್ಲೈ ವಿಷಯ ಇಲ್ಲಿನ ಪ್ರಜೆಗಳ ಮೇಲಿಗಾಗಿ ತಕ್ಕ ಶಾಶ್ವತವಾದ ಏರ್ಪಾಟನ್ನು ಸರ್ಕಾರದವರು ಮಾಡಿದರೆ ಎಷ್ಟೋ ಉಪಕಾರವಾಗುವುದು. ಇನ್ನು ಮುಂದೆ ಬಿಸಿಲು ಧ್ಯುಳವನ್ನು ಸಹಿಸುವುದು ಅಸಾಧ್ಯ ಆಗ್ಗೆ ನೀರಿನ ಆವಶ್ಯಕತೆ ಎಷ್ಟೆಂದು ಹೇಳಬೇಕಾಗಿಲ್ಲ ನಲ್ಲಿಗಳೆಲ್ಲಾ ಕೆಟ್ಟುಹೋಗಿರುತ್ತವೆ. ಒಂದು ಕೊಡ ನೀರು ತುಂಬಬೇಕಾದರೆ 1 ಗಂಟೆ ಹೊತ್ತಾಗುವುದೆಂದು ಹೇಳಲು ಉಪೇಕ್ಷೆಯಿಲ್ಲ ಹಾಲಿ ನೀರನ್ನು ತೀಯಾರ ಮಾಡುವುದಕ್ಕಾಗಿ ಕಟ್ಟಿರುವ ಕೊಳವು ಒಂದು ಗಲೀಜಾದ ಹಳ್ಳದ ಮಧ್ಯದಲ್ಲಿರುತ್ತದೆ ಬ್ರಾಹ್ಮಣರ ಕೇರಿಯಲ್ಲಿ ಮಾತ್ರ 2-3 ನಲ್ಲಿಗಳುಂಟು. ಅವರಿಗೆ ಇದರ ಮೂಲಕ ಕಷ್ಟವಾದರೆ ಹೊಳೆಯೂ ಕೇವಲ ಸನಿಹದಲ್ಲಿರುವುದರಿಂದ ಬಹುಮಟ್ಟಿಗೆ ಅವರಿಗೆ ಮಾತ್ರ ಅನುಕೂಲವಾಗಿರಬಹುದು. ಮಿಕ್ಕ ಇಲ್ಲಿನ ಪೇಟೆಯ ಪ್ರಜೆಗಳು ನೀರಿಗಾಗಿ ಕೊಡ ಇಲ್ಲವೇ ಕಾವಡಿಗಳನ್ನು ಹೊತ್ತು ಅಷ್ಟುದೂರ ಹೊಳೆಗೆ ಇಲ್ಲವೇ ನಲ್ಲಿಗಳಿಗೆ ಹೋಗಬೇಕು. ಆದುದರಿಂದ ಧರ್ಮಪ್ರಭುಗಳಾದ ಸರ್ಕಾರದವರು ಬುದ್ಧಿವಂತರಾದ ಇಂಜನಿಯರನ್ನು ನೇಮಿಸಿ ನೀರಿನ ಕೊಳವನ್ನು ಎತ್ತರವಾದ ಸ್ಥಳದಲ್ಲಿ ಕಟ್ಟಿಸಿ, ಮುಖ್ಯ ಮುಖ್ಯವಾದ ಕಡೆಗಳಲ್ಲೆಲ್ಲಾ ನಲ್ಲಿಗಳನ್ನಿಡಿಸಿ ಪ್ರಜೆಗಳಿಗಿರುವ ನೀರಿನ ತೊಂದರೆಯನ್ನು ತಪ್ಪಿಸಿದರೆ ಪ್ರಜೆಗಳೆಲ್ಲಾ ಕೊಂಡಾಡುವರು.

—

ಜರ್ಮನಿ ರಾಜ್ಯದ ರಾಜಧಾನಿಯಾದ ಬರ್ಲಿನ್ ನಗರಕ್ಕೆ ಪಶ್ಚಿಮ ದಿಕ್ಕಿನಲ್ಲಿ ಚಕ್ರವರ್ತಿಯವರು ಬೇಸಗೆಯನ್ನು ಕಳೆಯುವ ಪಾಟ್ಸ್‌ಡಾಂ ಪಟ್ಟಣದ ಅರಮನೆಗೆ ಬೆಂಕಿ ಬಿದ್ದು ಬಹಳ ನಷ್ಟವನ್ನುಂಟುಮಾಡಿತು ಚಕ್ರವರ್ತಿಯವರೂ ಚಕ್ರವರ್ತಿನಿಯವರೂ ಬೆಂಕಿಯನ್ನಾರಿಸುವ ಸೇವಕರಿಗೆ ಖುದ್ದಾಗಿ ನಿಂತು ತುಂಬಾ ಪ್ರೋತ್ಸಾಹಪಡಿಸಿ ಬಹುಮಾನಗಳನ್ನು ದಯಪಾಲಿಸಿದರು. ಅರಮನೆಯಲ್ಲಿದ್ದ ಬಹು ಅಮೂಲ್ಯವಾದ ಅನೇಕ ವಸ್ತುಗಳೂ ಸಾಮಾನುಗಳೂ ಬೆಂಕಿ ಮತ್ತು ನೀರಿನಿಂದ ಕೆಟ್ಟುಹೋದವು

ಕನ್ನಡ ಪುಸ್ತಕಗಳು.

ಕಥೆಗಳು—ನಿರ್ಭಾಗ್ಯ ಚಾಣಕ್ಯ 6ಆ ಅನಂಗಸುಂದರಿ 8ಆ. ತಾರಾಸುಂದರಿ 8ಆ. ಶೋಭನೆ 12ಆ. ಕುಮುದಿನಿ 6ಆ ಸತೀರೋಹಿಣಿ 2ಆ ಭಾನುಮತಿ 2ಆ. ಸಂತಾಪಕ 4ಆ. ಕಳಾವತಿ 2ಆ. ಮಾಲತೀಮಧುಕರ 2ಆ. ವಸುಮತಿ 2ಆ. ಪದ್ಮಿನಿ 2ಆ ಚಂದ್ರಮುಖಿ 6ಆ ನಕಲಿಗಳು—ಪ್ರಹಸನ ಚತುಷ್ಟಯ 4ಆ ಪ್ರಹಸನತರಂಗ 1ಆ. ಮಹಾರಣ್ಯಪುರಾಧಿಪತ್ಯ 4ಆ. ಮಹಾಬಧಿರಪ್ರಹಸನ 4ಆ. ಇವೇ ಅಲ್ಲದೆ ಇನ್ನೂ ಅನೇಕ ನಾಟಕಗಳು ನಮ್ಮಲ್ಲಿ ದೊರೆಯುವುವು.

[187-9] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ತಾನಾಗಿ ಇಂಗ್ಲೀಷ್ ಕಲಿಯುವ ಪುಸ್ತಕ— ೨ನೇ ಭಾಗ.

ಬೆಲೆ ರೂ. 1 1 0 ಬರುವ ಮಾರ್ಚಿ ಆಖೈರ್‌ವರೆಗೆ ಅನಂತರ ರೂ 1 8 0

ಇದರಲ್ಲಿ ಅಕ್ಷರಗಳನ್ನು ಗುರುತು ಹಿಡಿಯುವುದು, ಕೆಲವು ದಿವಸದಲ್ಲಿಯೇ ಇಂಗ್ಲೀಷನ್ನು ಓದುವುದಕ್ಕೂ ಬರೆಯುವುದಕ್ಕೂ ಮಾತನಾಡುವುದಕ್ಕೂ ಒಬ್ಬರ ಸಹಾಯವಿಲ್ಲದೆ ಕಲಿಸುತ್ತದೆ. ಪಾಠಗಳು ವಿಷಯ, ಕಥೆಗಳು, ಅರ್ಜಿ ಬರೆಯುವ ವಿಧಾನ, ಇನ್ನು ಅನೇಕ ಸಂಗತಿಗಳು ಅದರಲ್ಲಿ ವಿಳಾಸ—

ಮ್ಯಾನೇಜರ್, ಕರ್ನಾಟಕ ಬುಕ್ ಡಿಪೋ, ಲಕ್ಷ್ಮೀ ಪ್ರೆಸ್ಸು,

[24-2] ಮಾಲೂರ್, ಕೋಲಾರ.

ವಿಕ್ಟೋರಿಯಾ ಲೈಫ್ ಅಷೂರೆನ್ಸ್ ಕಂಪನಿ ಲಿಮಿಟೆಡ್.

(1912 ನೇ ಪ್ರಾವಿಡೆಂಟ್ ಸೊಸೈಟಿ ಆಕ್ಟಿನಂತೆ ರೆಜಿಸ್ಟರಾದದ್ದು)

ಮೂಲಧನ—10,00,000 ರೂಪಾಯಿ (ಹತ್ತು ಲಕ್ಷ).

ಹೆಡ್ ಆಫೀಸ್—18, ಕ್ಲೈವ್ ಸ್ಟ್ರೀಟ್, ಕಲ್ಕತ್ತಾ

ದಕ್ಷಿಣ ದೇಶ ಮತ್ತು ಸಿಲೋನ್‌ಗೆ ಬ್ರಾಂಚ್ ಆಫೀಸು—ಚೂಳೈ, ಮದರಾಸ್.

“ವಿಕ್ಟೋರಿಯಾ”—ಮಹಾರಾಜರುಗಳಿಂದಲೂ, ರಾಜರುಗಳಿಂದಲೂ, ಬಂಗಾಳದ ಮುಖಂಡ ದೊಡ್ಡ ಮನುಷ್ಯರಿಂದಲೂ ಪೋಷಿಸಲ್ಪಡುತ್ತಿದೆ.

“ವಿಕ್ಟೋರಿಯಾ”—ಡೈರೆಕ್ಟರುಗಳೆಲ್ಲಾ ಲೆಕ್ಕಾಚಾರಗಳನ್ನು ಬಲ್ಲವರೆಂದು ಪ್ರಖ್ಯಾತರಾಗಿರುವ ದೊಡ್ಡ ಮನುಷ್ಯರಾಗಿರುವರು

ಧಾರಾಳವಾದ ಬೋನಸ್ಸುಂಟು, ಬಹಳ ಬೇಗನೆ ಹಣ ಪಾವತಿಯಾಗುವುದು, ನಂತುಹೋದ ಪಾಲಿಸಿಗಳನ್ನು ಸುಲಭ ದರಗಳಲ್ಲಿ ಪುನರುಜ್ಜೀವಿಸಬಹುದು ಇವೇ “ವಿಕ್ಟೋರಿಯಾ” ದ ಪ್ರಧಾನ ಲಕ್ಷಣಗಳಾಗಿರುತ್ತವೆ

ಪ್ರಾಸ್ಪೆಕ್ಟಸ್, ಪ್ರಪೋಜಲ್ ಫಾರಂ, ಬೋನಸ್ ಪಟ್ಟಿಗಳನ್ನು ಅಪೇಕ್ಷಿಸತಕ್ಕವರು ಈ ವಿಳಾಸಕ್ಕೆ ಬರೆಯಬೇಕು [35-1]

“ವಿಕ್ಟೋರಿಯಾ” ಕಂಪನಿ ಸೆಕ್ರೆಟರಿ, ಚೂಳೈ, ಮದರಾಸ್.

ಚೀಫ್ ಮತ್ತು ಡಿಸ್ಟ್ರಿಕ್ಟ್ ಏಜೆಂಟರುಗಳು ಬೇಕು ಧಾರಾಳವಾದ ಕಮಿಷನ್ ಮತ್ತು ಕೈ ತುಂಬಾ ಸಂಬಳ.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು.

ಶ್ವಾಸಕೋಶಗಳು ಬಲಹೀನವಾಗಿವೆಯೆಂದು ಇದರಿಂದ ತೋರಿಬರುತ್ತದೆ ಅವನ್ನು ಬೇಗನೆ ಬಲಪಡಿಸತಕ್ಕದ್ದು ಬಹು ಆವಶ್ಯಕ.

SCOTT'S EMULSION 2-6

(ಸ್ಕಾಟ್ಸ್ ಇಮಲ್ಷನ್)

ಎಂಬ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ.

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್.

ಬಹಳ ಮೃದುವಾದ ಅಚ್ಚು ಕರೀ ಬಣ್ಣದ ವಧುವಿನ ಚಾಂದನಿ ಅಂಚಿನ ಸೀರೆಗಳು.

[34-1]

ಅವಲ್ ರಕಂ ಕ್ರಯ ರೂ 24-0-0. ದುಯ್ಯಂ ರಕಂ ಕ್ರಯ ರೂ 2-8-0

ಇದರಿಂದ ವರ್ತಕರಿಗೂ, ಭಾಗ್ಯವಂತರಿಗೂ, ಬಡವರಿಗೂ ತಿಳಿಸುವುದೇನೆಂದರೆ—ನಮ್ಮಲ್ಲಿನ ಕರಿಯ ಬಣ್ಣದ ಮಖಮಲ್ ಚಾಂದನಿ ಸೀರೆಗಳು ಉಡುವುದಕ್ಕೆ ಹಗುರವಾಗಿಯೂ, ನೋಡುವುದಕ್ಕೆ ನಯವಾಗಿಯೂ, ಸರ್ವರಿಗೂ ರಾಯಸವಾಗಿಯೂ, ಕೊಳ್ಳಲು ಬೆಲೆ ಬಹಳ ಸುಲಭವಾಗಿಯೂ ತಯಾರಿಸಿವೆ ಎಷ್ಟಾವರ್ತಿ ಒಗೆದು ಉಟ್ಟರೂ ಬಣ್ಣವು ಸ್ವಲ್ಪವೂ ಬದಲಾಯಿಸುವದಿಲ್ಲ ಇವರ ಸೆರಗುಗಳು ಬಹು ಪಸಂದಾಗಿವೆ ಸೀರೆಯ ಉದ್ದವು ಧಾರಾಳವಾಗಿ 18 ಮೊಳವಿದೆ. ಸ್ಯಾಂಪಲ್ಲಿಗೆ ಒಂದನ್ನು ತರಿಸಿದಲ್ಲಿ ನಮ್ಮ ನೆರೆಹೊರೆಯವರು ಅನೇಕ ಸೀರೆಗಳನ್ನು ಬರೆಯುವರು

ವಿಳಾಸ—

ಜೆ. ಎ ಪಾಲ್ ಕಂಪನಿ, ಸುಂಗಂಬಾಕಂ, ಮದರಾಸು.

ಪರಿಮಳ ನಸ್ಯದಪುಡಿ.

ತರುಪಿನ ಡಬ್ಬಿ 1 ಕ್ಕೆ 2½ ಆಣೆ. 6 ತಿಂಗಳಿಗೆ ಕಮ್ಮಿಯಾಗಿ ಕಳುಹುವುದಿಲ್ಲ 6 ತಿಂಗಳಿಗೆ ಅಂಚೆಯ ಖರ್ಚು 3 ಆಣೆ ಈ ನಸ್ಯದಲ್ಲಿ ತರುಪ 1½ ತೊಲಾ ಪರಿಮಳ ನಸ್ಯ ಹಿಡಿಯತಕ್ಕ ತರುಪಿನ ಗ್ಲಾಸು ಸೀಸೆಯು

ಉತ್ತಮ ತರುಪಿನಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟಿದೆ. ಕ್ರಯ 2½ ಆಣೆ. ವರ್ತಕರು ಸಗಟಿನಲ್ಲಿ ಕೊಂಡು ಚಿಲ್ಲರೆ ಮಾರಿ ಲಾಭವನ್ನು ಪಡೆಯುವುದಕ್ಕೆ ಅನುಕೂಲವಾಗಿರುತ್ತದೆ ಇದು ನಸ್ಯಕ್ಕೆ ನಮ್ಮ ಕಂಪನಿ ತಪ್ಪಿ ಮತ್ತಾವ ಕಂಪನಿಯೂ ಸೂರೆಯುಳಾರದು ಪ್ರತಿನಿತ್ಯವೂ ಅನೇಕ ದಜನ್ನುಗಳು ಬಿಕರಿಯಾಗುತ್ತಿವೆ

ಮೇಲೆ ಉದಹರಿಸಿದ ಪರಿಮಳ ನಸ್ಯವನ್ನು ಸಾದಾ ಟಿನ್ ದಬ್ಬಿಯಲ್ಲಿ ಹಾಕಿ ತೊಲಾ 1 ಕ್ಕೆ 1 ಆಣೆಯ ಮೇರೆಗೆ ಕಳುಹಿಸುತ್ತೇವೆ.

ಮದರಾಸು ಸಾದಾ ನಸ್ಯದ ಪುಡಿ

ಸೇರು ಅಂದರೆ 24 ರೂ. ತೂಕಕ್ಕೆ			0-12-0
ಅರ್ಧ ಸೇರು 12	,,	,,	0- 6-0
ಕಾಲು ಸೇರು 6	,,	,,	0- 3 0

ವಿಳಾಸ

ಜೆ. ಎ ಪಾಲ್ ಕಂಪನಿ, ಸುಂಗಂಬಾಕಂ, ಮದರಾಸು

ಇದೇ ನಿಜವಾದ ರೈಲ್ವೇ ರೆಗ್ಯುಲೇಟರ್ ಜೇಬು ಗಡಿಯಾರ

ಕ್ರಯ ರೂಪಾಯಿ 1-15-0

ಇದು ಅನೇಕ ಷ್ವಿಟ್ಸ್ ರೆಗ್ಯುಲೇಟರ್ ಎಂದು ಹೆಸರಿಟ್ಟುಕೊಂಡು ಪ್ರಕಟಿಸುತ್ತಲಿರುವ ಗಡಿಯಾರಗಳಂಥಾದ್ದಲ್ಲ. ಇದನ್ನು ನಾವು ಪೂರ್ವದಲ್ಲಿ 2-10 ಆಣೆಗೆ ಮಾರುತ್ತಲಿದ್ದು ಇತರರ ಬರವಣಿಗೆಯನ್ನು ಇಷ್ಟಪಟ್ಟು ಇಷ್ಟಹಾಗೆಯೇ ಪ್ರಕಟಿಸಿ ಕ್ರಯವನ್ನು ಮಾತ್ರ ತಗ್ಗಿಸಿ ರೈಲ್ವೇ ರೆಗ್ಯುಲೇಟರ್ ಎಂಬ ಹೆಸರು ಇಟ್ಟುಕೊಂಡು ಪೊಳ್ಳುಪ್ರಕಟಣೆಗಳನ್ನು ಪ್ರಕಟಿಸುತ್ತಲಿರುವರು. ಅಂಥಾ ಪ್ರಕಟಣೆಗಳನ್ನು ನಂಬಿ ಮೋಸಹೋಗದೆ ಈ ನಮ್ಮ ನಿಜವಾದ ರೈಲ್ವೇ ರೆಗ್ಯುಲೇಟರ್ ಗಡಿಯಾರವನ್ನು ಆಲಸ್ಯಮಾಡದೆ ತರಿಸಿಕೊಳ್ಳಿರಿ ವಿಳಾಸ

ಜೆ ಎ. ಪಾಲ್ ಕಂಪನಿ, ಸುಂಗಂಬಾಕಂ, ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ.

ಕೈಗೆ ಕಟ್ಟಿಕೊಳ್ಳುವ ಬೆಳ್ಳಿ ಲೇಡಿ ವಾಚು

ಕ್ರಯ ರೂಪಾಯಿ 1-14 0.

ಸ್ಟೀಲ್ ಲಿವರ್ ಕಂಪೆನ್‌ಸೇಷನ್ ಬ್ಯಾಲೆನ್ಸ್, ಚಿಕ್ಕಸೈಜು, ಸೂಕ್ಷ್ಮವಾದ ನಕಾಸ್ ಕೆಲಸವುಳ್ಳದ್ದು, ಬಲಿಷ್ಠವಾದ ಯಂತ್ರೋಪಕರಣ, ಚೊಕ್ಕ ಬೆಳ್ಳಿ ಮುಚ್ಚಳ, ನೋಡಲು ಸುಂದರಾಕಾರವಾದದ್ದು, 3 ವರುಷಗಳ ಗ್ಯಾರಂಟಿ ಇದು ಕೈಯಲ್ಲಿ ಸಹ ಕಟ್ಟಿಕೊಳ್ಳಬಹುದು ಜೇಬಿನಲ್ಲಿ ಸಹ ಹಾಕಿಕೊಳ್ಳಬಹುದು

ಇದೇ ತರಹ ನಿಕಲ್‌ಬೆಳ್ಳಿಯ ಲೇಡಿ ವಾಚು ಕ್ರಯ ರೂಪಾಯಿ 3-8-0

ವಿಳಾಸ—ಜೆ ಎ ಪಾಲ್ ಕಂಪನಿ, ಸುಂಗಂಬಾಕಂ ಮದರಾಸು

ಪರಿಮಳ ಕೇಶವರ್ಧಿನಿ.

ಸೀಸೆ 1ಕ್ಕೆ 10 ಆಣೆ.

6 ಸೀಸೆಗಳನ್ನು ಒಂದೇ ಸಲ ತರಿಸಿಕೊಂಡರೆ 1 ಸೀಸೆ ಇನಾಂ

ನಿಮಗೆ ಸುವಾಸನೆ ಉಳ್ಳ ಎಣ್ಣೆ ಬೇಕೆಂದರೆ, ತಂಪಾದ ಮಿದುಳು ಬೇಕೆಂದರೆ, ನವಿಲುಗರಿಯಂತೆ ಥಳಥಳಿಸುವ ಕಪ್ಪು ಕೂದಲು ಬೇಕೆಂದರೆ, ಕೂದಲುಗಳು ತಲೆಯಲ್ಲೆಲ್ಲಾ ತುಂಬಿರಬೇಕೆಂದರೆ, ಪರಿಮಳ ಕೇಶವರ್ಧಿನಿಯನ್ನು ಉಪಯೋಗಿಸಿ ಇದನ್ನು ಪ್ರತಿನಿತ್ಯವೂ ಸವರಿಕೊಳ್ಳುವದರಿಂದ ಅಧಿಕ ಪರಿಮಳವೂ ಮನಸ್ಸಿಗೆ ಆನಂದವನ್ನೂ ಉತ್ಸಾಹವನ್ನುಂಟುಮಾಡಿ ಕಣ್ಣು ತಲೆ ಉರಿತವು ಕಣ್ಣಿನಲ್ಲಿ ನೀರು ಸುರಿಯುವಿಕೆಯನ್ನೂ ಸಮೀಪದೃಷ್ಟಿ ಮೊದಲಾದವುಗಳನ್ನು ಹೋಗಲಾಡಿಸುತ್ತೆ.

ವಿಳಾಸ.-

ಜೆ. ಎ. ಪಾಲ್ ಕಂಪನಿ, ಸುಂಗಂಬಾಕಂ, ಮದರಾಸು

Mellin's Food

ಕೈಸೋಕದೆ ತಯಾರಾದದ್ದು.

ಮೆಲಿನ್ಸ್ ಆಹಾರವು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರಿ ಆಹಾರಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

“ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ” ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ.

[14-1] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. H. Gulliford Proprietor and Manager, Wesleyan Mission Press Mysore. 6/2/1913.

REGISTERED
M 20

ವೃತ್ತಾಂತ ಪತ್ರಿಕೆ

[illegible] ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—೧೯೧೪ ನೇ ಇಸವಿ ಫೆಬ್ರವರಿ ತಾರೀಖು ೧೨ ನೇ ಗುರುವಾರ. ಸಂಚಿಕೆ [illegible]

[illegible]ಕಂಡ ಮೂರು ಪ್ರಖ್ಯಾತ ಔಷಧಗಳು.

[illegible]ಸರ ಮಲೆನಾಡು ಜ್ವರಮಾತ್ರೆಗಳು [illegible] ಅಥವಾ [illegible] ಎಲ್ಲಾ [illegible] ಸಂಪೂರ್ಣವಾಗಿಯೂ [illegible] ವಾಡುತ್ತೆಂದು ಪ್ರಖ್ಯಾತಿ [illegible] ಮಾತ್ರೆಗಳು [illegible] ಕ್ರಯ [illegible] ಡಬಿ 1ಕ್ಕೆ ರೂಪಾಯಿ 1 0 0

[illegible]ಸರ ಉಬ್ಬಸದ ಔಷಧ—[illegible], ಕರೆಗಾವಾದ ಕೆಮ್ಮು [illegible] ಶ್ವಾಸಕೋಶದ [illegible]ಗಳಿಗೂ, [illegible] ಗಡ್ಡೆಗಳಿಗೂ ಬಹಳ ಉತ್ತ[illegible] ಮತ್ತು [illegible]ವಾಗಿ ಗುಣಕೊಡುವ ಔಷಧ ಕ್ರಯ ಬಾಟ್ಲು 1ಕ್ಕೆ ರೂ 1 0 0 [161]

[illegible]ಸರ ನಾಯಿಕೆಮ್ಮಿನ ಸಿದ್ಧೌಷಧ—[illegible] ಮತ್ತು ಅಮೋಘವಾದ ಔಷಧ [illegible]ವಾಗಿಯೂ [illegible] ಗುಣಕೊಡುವಂಥಾದ್ದು ಕ್ರಯ ಬಾಟ್ಲು 1ಕ್ಕೆ ರೂ 1 0 0

[illegible], ಪೋಸ್ಟೇಜು [illegible] ಪ್ರತ್ಯೇಕ ಈ ಔಷಧಗಳ [illegible] ವಿವರಿಸುವ ಹಸ್ತಪತ್ರಗಳನ್ನು ಕೇಳಿದವರಿಗೆ ಬಿಟಿ ಕಳುಹಿಸುವೆವು

[illegible] ಸ್ಪೆಯರ್ಸ್,

[illegible] ಮದರಾಸ್

[illegible] ಸಿಕ್ಕುತ್ತವೆ—(1) [illegible] ಕಂಪನಿ [illegible]ಪೇಟೆ, ಬೆಂಗಳೂರು [illegible] ಕಂಪನಿ, [illegible]ಳೂರು [illegible] (3) [illegible] ಕಂಪನಿ, [illegible] (4) [illegible] ಕಂಪನಿ [illegible]

ತ್ವರಿತವಾಗಿ ಇಂಗ್ಲೀಷ್ ಕಲಿಯುವ ಪುಸ್ತಕ— ೨ ನೇ ಭಾಗ.

[illegible] ರೂ 1 [illegible] ಆಖೈರ್‌ವರೆಗೆ [illegible] ರೂ 1 8 0

ಇದರಲ್ಲಿ ಅಕ್ಷರಗಳನ್ನು ಗುರುತು ಕಂಡುಹಿಡಿಯುವುದು, ಕೆಲವು ದಿವಸದಲ್ಲಿಯು ಇಂಗ್ಲೀಷನ್ನು ಓದುವುದಕ್ಕೂ ಬರೆಯುವುದಕ್ಕೂ ಮಾತನಾಡುವುದಕ್ಕೂ ಬೇರೆ ಸಹಾಯವಿಲ್ಲದೆ ಕಲಿಸುತ್ತದೆ ವ್ಯಾಕರಣ ವಿಷಯ, ಕಥೆಗಳು, [illegible] ಇನ್ನು ಅನೇಕ ಸಂಗತಿಗಳು ಅಡಗಿವೆ ವಿಳಾಸ—

ಮ್ಯಾನೇಜರ್, ಕರ್ನಾಟಕ ಬುಕ್ ಡಿಪೋ, ಲಕ್ಕೂರ್ ಪೋಸ್ಟ್

[214] ಮಾಲೂರ್, ಕೋಲಾರ

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ ' ಕನ್ನಡಕ್ಕೆ ಸುಲಭವಾದ ದಾರಿ '

ಮೈಸೂರು ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕ [illegible] ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಕ್ಷೇಪವಾಗಿ [illegible] ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ [illegible] ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ 3 ಆಣೆ [illegible] ಉಚಿತ

[187 10] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

" ವಾಸಿಮಾಡಿಕೊಳ್ಳುತ್ತೇನೆಂದು ಹೇಳು "

84 10

[illegible] ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, [illegible], ಅರಶಲಿ, [illegible]ಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, [illegible], ಗಟ್ಟಿ [illegible], ಕೆಮ್ಮುಗಳು, [illegible], ಶ್ವಾಸರೋಗ, ಜಪ್ಪು, ಉಳಕು ಛಳುಕು [illegible] ಕಡಿದ ಬಾಧೆ, [illegible] ಮೊದಲಾದ ಎಲ್ಲಾ ತರದ ನೋವನ್ನು ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೊ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೊ ಈ ಯುಕ್ತಿಯಿಂದ ವಾಸಿಮಾಡುವ ಔಷಧವು [illegible] ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದ್ದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

" ಕ್ಲೆಮೆಂಟರ ಮ್ಯಾಜಿಕ್ ಬಾಂ " ಎಂಬ ಹೆಸರನ್ನು ಮರೆಯಬೇಡ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 1 ಆಣೆ [illegible] ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ [illegible], 37 [illegible] ಬೀದಿ [illegible], [illegible], ಮದರಾಸ್ (2) ಜಿ ಎಸ್ [illegible] ಜನರಲ್ ಮರ್ಚೆಂಟ್, ತುಮಕೂರು

[illegible] ಅಡ್ರೆಸ್ 'ತಿರುಪತಿ,' ಹರಿಹರ

ಜಾಗ್ರತೆ ತೆಕೊಳ್ಳಿ

ಬೇಸಿಗೆ ಕಾಲ ಸಮೀಪಿಸುತ್ತಾ ಬರುತ್ತೆ

ತ್ವರೆಮಾಡಿರಿ

ಬೇಳಿನ ಹಾವಳಿ ಪ್ರಾರಂಭವಾಯಿತು.

ಅದ್ಭುತವಾದ ಇನಾಮು.

ಒಂದು ಲಕ್ಷ ರೂಪಾಯಿಗಳು ಹಂಚಲ್ಪಡುತ್ತವೆ

[illegible] ಇನಾಂದಾರರವರು ತಯಾರು ಮಾಡಿದ " [illegible] " ಎಂಬ ಬೇಳಿನ ಔಷಧವನ್ನು ಸಮಸ್ತ ದೇಶಗಳಲ್ಲಿಯೂ ಹರಡುವದಕ್ಕೂ, ಅದರ ಗುಣವನ್ನು ಅನುಭವಕ್ಕೆ ತರುವದಕ್ಕೂ ಈ ಇನಾಮಿನ [illegible] ಈ ಬೇಳಿನ ಔಷಧವು ಅತಿ [illegible] ಗುಣವನ್ನು ಕೊಟ್ಟು ರೋಗಿಯನ್ನು ಸಗುವಂತೆ ಮಾಡಲ್ಪಟ್ಟಿದೆ ಪ್ರಪಂಚದಲ್ಲಿ [illegible] ಅದಕ್ಕೆಲ್ಲ [illegible] ಈ ಔಷಧಿಯನ್ನು [illegible] ಎಂದು ಸಮಸ್ತರೂ [illegible] ಇದನ್ನು ಪ್ರಚುರಪಡಿಸಬೇಕೆಂದು ಅಭಿಪ್ರಾಯಪಟ್ಟ ಮೇರೆಗೆ ಈ ಮೂಲಕವಾಗಿ ಸಮಸ್ತರ ಉಪಯೋಗಕ್ಕೂ ಪ್ರಕಟಿಸಲ್ಪಟ್ಟಿದೆ ಖಂಡಿತ [illegible] ಬೇಳಿನ ಮದ್ದು ಇಲ್ಲವೆಂದು ಖಂಡಿತವಾಗಿ ಹೇಳಿದ್ದೇವೆ

ಹಿಸ್ ಎಕ್ಸ [illegible], [illegible] ಮತ್ತು [illegible] ಬ್ಯಾಂಕ, [illegible] ಸೆಕ್ರೆಟರಿ [illegible], ಇವರುಗಳು [illegible] ಇನಾಂದಾರ್ [illegible]ಯನ್ನು [illegible] ಹೋಗಿದ್ದಾರೆ

ಇನಾಂಗಳ ವಿವರ —ಇದೇ 1914 ನೇ ಫೆಬ್ರವರಿಯು [illegible] ಹನ್ನೆರಡು ಲಕ್ಷ " [illegible] " ಎಂಬ ಬೇಳಿನ ಔಷಧವನ್ನು ಇನಾಮು ಮೂಲಕ [illegible] ಎಂಟಾಣೆ ಮಾತ್ರವೇ [illegible] ಹಾಸಲು ಪ್ಯಾಕಿಂಗ್ [illegible]

		ರೂಪಾಯಿ			ರೂಪಾಯಿ
[illegible] ಇನಾಂ	[illegible] ಬಾಟ್ಲು ತೆಗೆದುಕೊಳ್ಳುವವರಿಗೆ 1914 ನೇ ಏಪ್ರಿಲ್ ಆಖೈರೊಳಗಾಗಿ	1,000	1 ನೆ ಇನಾಂ	2 ಗ್ರೋಸ್ ಬಾಟ್ಲು ತೆಗೆದುಕೊಳ್ಳುವವರಿಗೆ 1914 [illegible] ಆಖೈರೊಳಗಾಗಿ	7 000
,,	1 ಗ್ರೋಸ್ ,,	8,000	2 ನೇ	1 ಗ್ರೋಸ್ ,, ,,	6 000
,,	[illegible] ಡಜನ್	7 [illegible]00	3 ನೇ	[illegible] ಡಜನ್ ,, ,,	[illegible],500
,,	3 ಡಜನ್ ,, ,,	[illegible],100	4 ನೆ ,,	3 ಡಜನ್	5 000
,,	2 ಡಜನ್ ,, ,,	1,[illegible]00	[illegible] ನೇ	[illegible] ಡಜನ್ ,, ,, ,, ,,	4,500
,,	1 ಡಜನ್ ,,	6 000	[illegible] ನೇ	1 ಡಜನ್ ,,	[illegible] 000
,,	[illegible] ಬಾಟಲುಗಳು	[illegible]	7 ನೇ	[illegible] ಬಾಟ್ಲುಗಳು ,,	3 [illegible]00
	[illegible]	[illegible] 000	[illegible] ನೇ	ಬಾಟ್ಲುಗಳು ,,	[illegible]
,,	2 [illegible]	[illegible] 500	[illegible] ನೇ	2 ಬಾಟ್ಲುಗಳು ,, ,,	2 500
		[illegible] 000			[illegible] 000

ಒಟ್ಟು ರೂ 1 00,000 ಲಕ್ಷ ಮಾತ್ರವೇ ?

ಯಾವನಾದರೂ [illegible] ಇನಾಂ ಕಲಂಗಳಿಗೆ [illegible] ಒಬ್ಬರಿಗಿಂತ ಜಾಸ್ತಿಯಾಗಿದ್ದರೆ ಆ ಇನಾಂ ಕಲಂನ್ನು ಎಲ್ಲರಿಗೂ ಒಂದೇ ಸಮನಾಗಿ ಹಂಚಿಕೊಡಲ್ಪಡುತ್ತದೆ ಮತ್ತು ಒಂದೆ [illegible] ಇನಾಮ ಕಲಮಿನಲ್ಲಿ [illegible]ಗಳನ್ನು ಅವರವರಿಗೇ ಕೊಡಲ್ಪಡುತ್ತವೆ [illegible] ತೆಗೆದುಕೊಳ್ಳುವ ಪ್ರತಿ ಒಬ್ಬರಿಗೂ ಇನಾಂನ ಸರ್ಟಿಫಿಕೇಟನ್ನು ಆಯಾಯ ಇನಾಂ ಕಲ ವಾರು ಪ್ರಕಾರ ತೆಗೆದುಕೊಂಡ ಬಾಟ್ಲುಗಳ [illegible]ಯನ್ನು [illegible] ಇನಾಂನ್ನು ಕೊಡುತ್ತೇವೆಂದು ಭರವಸೆ ಕೊಟ್ಟು [illegible] ನಮ್ಮ ಇನಾಮು ಕಲಮಿನ [illegible]ನಲ್ಲಿ ಕಾಣಿಸಿರುವ ಮೇರೆಗೆ ಬಾಟ್ಲುಗಳನ್ನು ಕೊಂಡುಕೊ[illegible] [illegible] ಹನ್ನೆರಡು ಲಕ್ಷ ಬಾಟ್ಲುಗಳು [illegible] ಇನಾಂಗಳು ಹಂಚಲ್ಪಡುತ್ತೆ ಒಂದು ವೇಳೆ ಪೂರಾ ಹನ್ನೆರಡು ಲಕ್ಷ ಬಾಟ್ಲುಗಳು [illegible] ಖರ್ಚಾಗಿರುವ [illegible] ಪ್ರಕಾರ ಆಗತಕ್ಕಷ್ಟು ಮಾತ್ರ ಇನಾಂಗಳು ಹಂಚಲ್ಪಡುತ್ತವೆ ಇನಾಂಗಳು ಹಂಚುವ ತಾರೀಖು ಇದೇ 1914 ನೇ ಇಸ ಆಗಸ್ಟ್ [illegible] ಇದೇ ಪತ್ರಿಕೆಯಲ್ಲಿ [illegible]

[illegible] ತಾನು ಕೊಡುವ ಕಿಮ್ಮತ್ತಿಗೆ ಸರಿಯಾಗಿ ಔಷಧ ಬಾಟ್ಲಿಯನ್ನು ಪಡೆಯುವದಲ್ಲದೆ ಇನಾಂಗೂ ಅರ್ಹನಾಗುತ್ತಾನೆ ಇದರಲ್ಲಿ ಸಲ್ಪವು [illegible] [illegible] ತೋರಿದೆ [illegible] ಪೂರ್ಣವಾಗಿ ಎಲ್ಲಾ ಬಾಟ್ಲುಗಳು ಖರ್ಚಾಗುವದರಲ್ಲಿ ಸಂದೇಹ ತೋರುವದಿಲ್ಲ

ಏಜಂಟರುಗಳು ಬೇಕಾಗಿದೆ ಸಂಬಳ ನೂರು ರೂಪಾಯಿ ಮತ್ತು ಅಲೋಯನ್ಸು ಇಪ್ಪತ್ತು ರೂಪಾಯಿ

[illegible] ವಿಳಾಸಕ್ಕೆ ಟಪಾಲುದ್ವಾರ ಕಾಗದಗಳನ್ನು ಬರೆದು ಆರ್ಡರು ಕಳಿಸಿ ಬಾಟ್ಲುಗಳನ್ನು ತರಿಸಿಕೊಳ್ಳಬಹುದು —

[41]

ಮೆಸ್ಸರ್ಸ್ ತಿರುಪತಿ ಗುಜರ್ ಅಂಡ್ ಕೋ., ಸೋಲ್ ಏಜಂಟ್ಸ್ [illegible] ಡೆಪೋ, ಹರಿಹರ, ಮೈಸೂರು ಪ್ರಾವಿನ್ಸು.

ಕುಂತಲಾನಂದ ತೈಲವು.

147 21

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿವೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಲವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ. 10 ಆಣೆ ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೆನ್ ಯವರು ಹೊಟ್ಟೆಕೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



1-7

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತವೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಕೆಡಿಸುವುದು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡುವುದು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದು ಜ್ಞಾಪಕದಲ್ಲಿಟ್ಟುಕೊಳ್ಳಿ— ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ನೋವನ್ನೂ ನಿಲ್ಲಿಸಿಬಿಡುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ.

ರಾಸ್‌ಕೋಪ್ ಸಿಸ್ಟಂ ಲೀವರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ
ರೂ. 2-4-0 ಮಾತ್ರ. 5 ವರುಷಗಳ ಗ್ಯಾರಂಟಿ.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ಖರ್ಚಾಗುತ್ತ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ. [26-3]

ಮುಖ್ಯವಾಗಿ ಗಮನಿಸಿ ಓದಿರಿ.

೧. ಬಹುಮಾನ ಸಹಿತ ಗಡಿಯಾರ

ಈ ಚಿತ್ರದಲ್ಲಿ ಕಂಡ ರಿಸ್ಟ್ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪರ್ ಸೇಷನ್ ಬ್ಯಾಲೆನ್ಸು. ಬಹು ಬಲಸ್ಥವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ. ಕ್ರಯ ರೂ 1-12-0. ಇದನ್ನು ಏಪ್ರಿಲ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 10 ಗಂಟೆಗೊಂದಾವರ್ತಿ ಕೀ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ —ಸುಪೀರಿಯರ್ ವಾಚ್ ಕಂಪನಿ,
ಪೋಸ್ಟ್ ಬಾಕ್ಸ್ ಸಂ. 167, ಮದರಾಸು.

ಡೋಂಗರೆ ಇವರ ಬಾಲಾಮೃತ.

[115-3

ಸಣ್ಣ ಮಕ್ಕಳಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ (ಸವಿ) ಇರುವದರಿಂದ ಮಕ್ಕಳು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಆಸ್ತಿಗಳು ಕಟ್ಟಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳು ಅಶಕ್ತತೆಯ ರೋಗಗಳು ಪೂರಾ ಗುಣವಂತಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧-೦ ಆಣೆ; ಟಪಾಲ್ ಖರ್ಚು ೬ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಅಮೃತಾಂಜನ್. (Regd.)



ಎಲ್ಲ ವಿಶೇಷ ಲಕ್ಷ ಕೂಡಿರಿ! ವಾತ, ಸಂಧಿವಾತ, ತಲೇನೋವು, ಸೊಂಟನೋವು, ಶೀತ, ಕಫ, ಗಂಟಲನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣವಾಗುವವು. ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ. ಬಾಟ್ಲಿ 1ಕ್ಕೆ 0-8-0.

ಅರ್ಧ ಕ್ರಯಕ್ಕಿಂತಲೂ ಕಡಮೆ.

ಹತ್ತುಲಕ್ಷ ದೊಡ್ಡಸೈಜು ಪೋಸ್ಟು ಕಾರ್ಡುಗಳು. ಅವುಗಳು ಬೆಳ್ಳಗಾಗಿಯೂ ನಯವಾಗಿಯೂ ಇವೆ. 1,000ಕ್ಕೆ ಮುಂಚಿನ ಕ್ರಯ ರೂ. 2-8-0, ಈಗ 15 ಆಣೆ, ವಿ. ಪಿ. ಖರ್ಚು 12 ಆಣೆ 500ಕ್ಕೆ 8 ಆಣೆ ವಿ. ಪಿ. ಖರ್ಚು 8 ಆಣೆ.

1913 ನಯ ವರ್ಷದ ಕ್ಯಾಲೆಂಡರ್ 1 ಬಾಟ್ಲಿ ಅಮೃತಾಂಜನ ತರಿಸಿಕೊಂಡವರಿಗೆ ಧರ್ಮಾರ್ಥವಾಗಿ ರವಾನಿಸಲ್ಪಡುವದು. ಇತರರಿಗೆ ಕ್ಯಾಲೆಂಡರ್ 1ಕ್ಕೆ 1 ಆಣೆ ವಿ. ಪಿ. ಸಹಿತ. [35-51

ಅಮೃತಾಂಜನ ಡಿಪೋ, ಫೋರ್ಟು, ಮುಂಬಯಿ.

1913 ನೇ ಪಾಕೆಟ್ ಡೈರಿ



ಅಂದರೆ ಆಯಾ ದಿವಸ ನಡವಳಿಕೆಗಳನ್ನು ಬರೆದಿಡುವದಕ್ಕೋಸ್ಕರ ಜೇಬಿನಲ್ಲಿ ಇರಿಸಿಕೊಳ್ಳುವ ಪುಸ್ತಕ. ಇದರಲ್ಲಿ ಪಂಚಾಂಗ; ಹಬ್ಬದ ದಿನಗಳು, ಸರಕಾರಿ ರಜಾ ದಿನಗಳು; ರೈಲು, ಕೋರ್ಟು, ಸ್ಟಾಂಪು, ರಿಜಿಸ್ಟರು, ಟಪಾಲು ಸಂಬಂಧಪಟ್ಟ ನಾನಾ ವಿಷಯಗಳು, ಪ್ರಶ್ನೆ ಮುಂತಾದ ಕೆಲವು ವಿಷಯಗಳು, ಜಮಾಖರ್ಚು ತಖ್ತೆ ಮುಂತಾಗಿ ಪ್ರತಿ ದಿನವೂ ನೋಡಬೇಕಾದ ವಿಷಯಗಳು ಅಡಗಿವೆ.

ಎ—ಸಾದಾ ಸಣ್ಣ ಡೈರಿಗೆ 3 ಆಣೆ. ಬಿ—ಒಂದಾಣೆಯ ಸೀಸದ ಕಡ್ಡಿಯುಳ್ಳ ಮುಚ್ಚಳದ ಡೈರಿಗೆ ೯ ಆಣೆ. ಸಿ ಸಾದಾ ದೊಡ್ಡ ಡೈರಿಗೆ 6 ಆಣೆ. ಡಿ—ಒಂದಾಣೆಯ ಸೀಸದ ಕಡ್ಡಿಯುಳ್ಳ ಮುಚ್ಚಳದ ದೊಡ್ಡ ಡೈರಿಗೆ 8 ಆಣೆ

ಜಿನಿವಾ ಡೈರಿ —ಕಾಗದ ದಪ್ಪ, ಬೈಂಡು ನೂತನ, ಗಾತ್ರ ದೊಡ್ಡದು, ವಿಷಯ ಹೆಚ್ಚು, ಉತ್ತಮವಾದ ಡೈರಿ. ಜಿ. ಸಂ. 1—೫ ಡೈರಿಗೆ 1 ಆಣೆ. ಜಿ ಸಂ 2—ಒಂದಾಣೆಯ ಸೀಸದ ಕಡ್ಡಿಯುಳ್ಳ ಮುಚ್ಚಳದ ಡೈರಿಗೆ 6 ಆಣೆ ಟಪಾಲು ಹಾಸಲು ಬೇರೆ. ಒಂದೇ ನಮೂನೆಯ 6 ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಬಹುಮಾನವಾಗಿ ಕಳುಹಿಸುತ್ತೇವೆ.

ನಮ್ಮ ಪುಸ್ತಕಗಳ ವಿವರದ ಕ್ರಯಪಟ್ಟಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ [10-

ನಮ್ಮ ವಿಳಾಸ.—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-7

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ...—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ; ೧ ರೂ ೬ ಆ., ೧ ರೂ. ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧—೮; ರೂ ೧—೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨.

ದಾರದ ಟೋಪಿಗಳು ೧ ರೂ. ೧೨ ಆ, ೧ ರೂ. ೮ ಆ; ೧ ರೂ. ೬ ಆ.

ಮುಸುಕಿನ ಟೋಪಿಗಳು ೧ ರೂ. ೮ ಆ; ೧ ರೂ. ೬ ಆ.

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಶಕ್ತಿಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಜೋಮು (ಭಾರ), ಮೈ ನಡುಕ, ಶೀತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ಸೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಶೀಘ್ರವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸಹಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕ್ಷಯಕ್ಷಗಳನ್ನು ಗುಣಪಡಿಸುವುದು ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳ ಕುಪ್ಪಿಗೆ 1 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ. [146-24]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕ್ಷಣಮಾತ್ರದಲ್ಲಿ ಎಲ್ಲರಿಗೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರ ಮೂತ್ರವು ಕಟ್ಟಿದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿ ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಸೂರಾರು ದಾರಿ! ನಿಜಕ್ಕೆ ಒಂದೇ ದಾರಿ!! ಯಾವುದೂ ಪರೀಕ್ಷೆ ಮಾಡಬೇಕು.

ಒಂದೇ ಪ್ರಾತಃ ವ್ಯದಾಪಣ ಖರ್ಚು ಮಾಡಬೇಕು ಮೊದಲು ಒಂದೇ ಪ್ರತಿ ಸಾಕು ಟಪಾಲು ಖರ್ಚು ಇಲ್ಲ. ಉತ್ತಮವಾಗಿದ್ದರೆ ಎಲ್ಲರೂ ತರಿಸಿಕೊಳ್ಳಿ.

ನಿಮಗೂ, ನಿಮ್ಮ ಬಾಲಕ ಬಾಲಕಿಯರು ಮತ್ತು ಸ್ನೇಹಿತರಿಗೂ ಅತ್ಯಂತ ಉಪಯೋಗವಾದ

ಗಮನಿಸಿ ಗಮನಿಸಿ.

ENGLISH SELF-INSTRUCTOR.

ಆಂಗ್ಲ ಭಾಷಾ ಪ್ರಕಾಶಕ.

ಐದು ಭಾಗಗಳುಳ್ಳ ಇಂಥ ಒಳ್ಳೇ ದೊಡ್ಡ ಪುಸ್ತಕ ಈ ವರಿವಿಗೆ ಪ್ರಕಟವೇ ಇಲ್ಲ

ರೂ ೧-೮-೦ ಅನ್ಯರ ಸಹಾಯವಿಲ್ಲದೆ ಸುಲಭವಾಗಿ ಇಂಗ್ಲೀಷ್ ಕಲಿಯುವ ಪುಸ್ತಕ ಕ್ರಯ ರೂ. ೧-೮-೦.

ಈ ದೊಡ್ಡ ಪುಸ್ತಕದಲ್ಲಿ ೧ ನೇ ಭಾಗ, ೨ ನೇ ಭಾಗ, ೩ ನೇ ಭಾಗ, ೪ ನೇ ಭಾಗ, ೫ ನೇ ಭಾಗ ಈ ೫ ಭಾಗಗಳೂ ಅಡಕವಾಗಿವೆ ಬಾಲಕ ಬಾಲಕಿಯರು ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳು ಮತ್ತು ವರ್ತಕರು ಮುಂತಾದವರು ಬೋಧಕರ ಸಹಾಯವಿಲ್ಲದೆ ಓದುವುದು, ಬರೆಯುವುದು, ಮಾತಾಡುವುದು ಸುಲಭವಾಗಿ ತಿಳಿಯಬಹುದು ಕನ್ನಡ ತಿಳಿದವರು ಸಾಕು ಇಂಗ್ಲೀಷ್ ಅಕ್ಷರಾಭ್ಯಾಸ, ಶಬ್ದ ಸಂಯೋಜನ, ಸ್ವರಾಕ್ಷರಗಳ ವಿವಿಧ ಶಬ್ದಾಭ್ಯಾಸ, ವಾರವಾರಿಯಲ್ಲಿ ತಿಳಿಯುವನ್ನು ವ್ಯಾಕರಣ ಕ್ರಮಗಳು ಮತ್ತು ಅಭ್ಯಾಸಗಳು, ಇಂಗ್ಲೀಷ್ ಭಾಷೆಯಲ್ಲಿ ಬಗೆಬಗೆಯಾದ ವಾಕ್ಯಗಳನ್ನು ಮಾಡುವ ಕ್ರಮ ಮತ್ತು ನೂರಾರು ವಿಷಯಗಳು, ಸರ್ವವಿಷಯಗಳನ್ನು ಕುರಿತು ಪ್ರಶ್ನೋತ್ತರ ಸಂಭಾಷಣೆಗಳು ೮೦೦, ಪ್ರಪಂಚದ ಸರ್ವವಿಷಯಗಳನ್ನು ಕುರಿತು ಸಂಭಾಷಣೆ ಮಾಡುವಾಗ ಬೇಕಾಗುವ ವಿಷಯಕ್ಕೆ ತಕ್ಕ ಇಂಗ್ಲೀಷ್-ಕನ್ನಡ, ಕನ್ನಡ-ಇಂಗ್ಲೀಷ್ ಶಬ್ದಕೋಶ (ಡಿಕ್ಷನರಿ), ಭಾಷಾಜ್ಞಾನ ಮತ್ತು ಅರ್ಥಜ್ಞಾನಕ್ಕೆ ತಕ್ಕ ಅಭ್ಯಾಸಗಳು, ಕನ್ನಡಕ್ಕೆ ಸರಿಯಾದ ಇಂಗ್ಲೀಷ್ ಗಾದೆಗಳು, ಪತ್ರವ್ಯವಹಾರದಲ್ಲಿ ಉಪಯೋಗಿಸುವ ಸಾಂಕೇತಿಕ ಶಬ್ದಗಳು ಕ್ಷೇಮಸಮಾಚಾರ, ಶಾಲಾದಿ ವಿ ಮುಂತಾದ ವಿಷಯ ಕುರಿತು ಚಂವರ್ತಮಾನ ಮತ್ತು ಕಾಗದಪತ್ರಗಳನ್ನು ಬರೆಯುವ ಅನೇಕ ಕ್ರಮಗಳು ಮತ್ತು ನಮೂನೆಗಳು, ಇವುಗಳಿಗೆ ಸ್ಫುಟವಾದ ಕನ್ನಡ ಅಕ್ಷರದಲ್ಲಿ ಮತ್ತು ಅರ್ಥಸಹ ಉಚ್ಚರಿಸುವುದು ಈ ಪುಸ್ತಕ ನಮ್ಮಲ್ಲಿ ಮಾತ್ರ ದೊರೆಯುತ್ತೆ ಕೆಲವು ಪ್ರತಿಗಳು ಮಾತ್ರ ಉಳಿದಿವೆ ತ್ವರೆಮಾಡಿರಿ. [17-4]

ವಿಳಾಸ: ಎ. ವಿ. ರಾಂವೆಲು. ಬಾಲಕೃಷ್ಣ ಬುಕ್ ಡಿಪೋ. ಜೋರಿಪೇಟೆ, ಬೆಂಗಳೂರು ಸಿಟಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

೨೫—೧—೧೯೧೩ ರಿಂದ ೩೧—೧—೧೯೧೩ ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	14	7	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	21	19	0	0
ಮೈಸೂರು ,,	31	23	12	9
ಕೋಲಾರ್ ,,	10	5	0	0
ಕೋಲಾರ್ ಚಿನ್ನದ ಗಣಿಗಳು	17	13	0	0
ತುಮಕೂರು ಡಿಸ್ಟ್ರಿಕ್ಟು	1	0	0	0
ಹಾಸನ ,,	5	4	3	3
ಚಿತ್ರದುರ್ಗ ,,	0	0	9	5
ಕಡೂರ್ ,,	40	18	0	0
ಶಿವಮೊಗ್ಗಾ ,,	14	14	0	0
ಜುಮ್ಲಾ	146	103	24	17

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೆ ಶಿಶಿರಋತೌ ಮಾಘ ಶುದ್ಧ ಅಷ್ಟಮಿ ಶುಕ್ರವಾರದಿಂದ ಮಾಘ ಶುದ್ಧ ಚತುರ್ದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1913 ನೇ ಫೆಬ್ರವರಿ.

ತಾ.	ವಾರ.	ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ	ಕುಂಭ ಮಾಸ ತೇದಿ
14	ಶುಕ್ರ ∴	ಅಷ್ಟಮಿ	31-5	ಕೃತ್ತಿಕೆ	39-16	3
15	ಶನಿ ‡	ನವಮಿ	32-25	ರೋಹಿಣಿ	38-59	4
16	ಭಾನು	ದಶಮಿ	29-35	ಮೃಗಶಿರ	37-41	5
17	ಸೋಮ †	ಏಕಾದಶಿ	25-44	ಆರಿದ್ರ	35-23	6
18	ಮಂಗಳ *	ದ್ವಾದಶಿ	21-3	ಪುನರ್ವಸು	32-21	7
19	ಬುಧ §	ತ್ರಯೋದಶಿ	15-50	ಆಶ್ಲೇಷ	28-45	8
20	ಗುರು ,,	ಚತುರ್ದಶಿ	10-5	ಪುಷ್ಯ	24-41	9

∴ ಭೀಷ್ಮಾಷ್ಟಮಿ ‡ ಮಧ್ವನವಮಿ, ಮುದುಕುತೊರೆ ಮಲ್ಲಿಕಾರ್ಜುನಸ್ವಾಮಿ ರಥ, ಮಳೆ ನಕ್ಷತ್ರ—ಧನಿಷ್ಠ 4 ನೇ ಪಾದ † ಏಕಾದಶೀ ತಿಥಿ, ಸರ್ವತ್ರ ಭೀಷ್ಮೈಕಾದಶಿ, ತಿಲಕಪದ್ಮವ್ರತ * ತಿಲದ್ವಯ, ಪ್ರದೋಷ, ತೊಂಡನೂರು ಗೋಪಾಲಕೃಷ್ಣಸ್ವಾಮಿ ರಥ, ಮಳೆ ನಕ್ಷತ್ರ—ಶತಭಿಷ 1 ನೇ ಪಾದ § ಚತುರ್ದಶೀ ತಿಥಿ, ಕ್ರಿಸೋಸ್ವರಸ್ವಾಮಿ ರಥ. ,, ವಿನಾಯಕನ, ಚಿಕತಿರು ಲಕ್ಷ್ಮೀನರಸಿಂಹಸ್ವಾಮಿ ರಥ

ಬೇರೆ ಬೇರೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ (ಹೊಸದು) ರೂ	೧೨-೮-೦	೧೭-೮-೦
ಕೆಂಬೂತಿ ಅಕ್ಕಿ ಅವಲ್ ,,	೧೫-೦-೦	೧೭-೮-೦
,, ದುಯು ,,	೧೪-೦-೦	೧೭-೦-೦
ಜಾಪತ್ರಿನೆ ಅಕ್ಕಿ ,,	೧೪-೦-೫	೧೭-೪-೦
ಸಣ್ಣಕ್ಕಿ ಅವಲ್ ,,	೧೬-೦-೦	೧೯-೮-೦
,, ದುಯು ,,	೧೫-೦-೦	೧೭-೮-೦
ತೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ	೧೩-೦-೦	೧೪-೮-೦
,, ದುಯು ,,	೧೨-೮-೦	೧೨-೮-೦
ಹೈಬ್ರೆ ರಾಗಿ ಪಲ್ಲಾ ೧ಕ್ಕೆ	೬-೮-೦	೫-೦-೦
ಕಾರ್ರಾಗಿ ,,	೬-೦-೦	೪-೧೨-೦
ಜೋಳ ,,	೬-೧೨-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ	೧೧-೦-೦	೧೩-೧೨-೦
ಬಿಳೀ ಅವರೆ ,,	೯-೮-೦	೧೧-೦-೦
ಹೆಸರು ,,	೧೧-೦-೦	೧೪-೦-೦
ಉದ್ದು ,,	೧೪-೮-೦	೧೬-೦-೦
ಕಡಲೆ ,,	೯-೧೨-೦	೧೨-೦-೦
ಎಳ್ಳು ಸೇರು ೧೩೭ಕ್ಕೆ	೨೪-೦-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೬-೦-೦	೭-೦-೦
ಹರಳು ೧೨೭ ಸೇರಿಗೆ	೧೨-೮-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೨-೮-೦	೩-೮-೦
ಮೆಣಸಿನಕಾಯಿ ,,	೩-೦-೦	೩-೪-೦
,, ದುಯು	೨-೮-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫-೦-೦	ಮಣ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೨-೦	೬-೬-೦
ಹರಳೆಣ್ಣೆ ,, ,,	೫-೧೨-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೪-೮-೦	೫-೪-೦
ಉಪ್ಪು ,, ,,	೫-೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧-೪-೦	೧-೪-೦
,, ಹಳೇದು ,,	೧-೦-೦	೦-೧೪-೦
ಕುಪ್ಪ ಮಣ ೧ಕ್ಕೆ	೧೬-೦-೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೭-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೬-೦-೦	೬-೦-೦
ಆಲೇಕಾಯಿ ಮಣ ೧ಕ್ಕೆ	೧-೪-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೦-೧೨-೦	೧-೮-೦
ಚಿನ್ನ (ಪೌನ್) ಕೆಂಪು	೧೫-೮-೦	೧೫-೮-೦
,, ,, ಪಸಿಮೆ	೧೫-೧೪-೬	೧೫-೧೪-೬
,, ,, ಗಟ್ಟಿ ತೋಲ ೧ಕ್ಕೆ	೨೪-೩-೦	೨೪-೩-೦
ಬೆಳ್ಳಿ ಗಟ್ಟಿ ತೋಲ ೧೦೦ಕ್ಕೆ	೮೧-೦-೦	೮೧-೦-೦

ಆರ್ಯವೈದ್ಯಮಂದಿರಂ, ಶ್ರೀ ಶೃಂಗಗಿರಿ.

1. ೩ ನೇ ನಂಬರ್ ಅಶ್ವಗಂಧಾವಲೇಹ ಸಮಸ್ತಮೇಹ, ಜೀರ್ಣಜ್ವರ, ಮೂಲವಿಕೆ, ಗುಲ್ಮ, ಪಿತ್ತರೋಗ, ವಾತರೋಗ, ಇವನ್ನು ಹೋಗಲಾಡಿಸಿ ಮನ್ನು ಅಗ್ನಿಬಲವನ್ನೂ ಕಾಂತಿಯನ್ನೂ ಸ್ಥಿರಚಿತ್ತತೆಯನ್ನೂ ಉಂಟು ಮಾಡುತ್ತೆ ಬಹಳ ಜನಗಳು ಗುಣಹೊಂದಿದಾರೆ. ಇಷ್ಟು ಅಲ್ಪಕ್ರಯಕ್ಕೆ ಇಂತಾದ ಈ ಔಷಧಿ ಎಲ್ಲಿಯೂ ದೊರಕಲಾರದು. ಖಾತ್ರಿಯಾದದ್ದು 1೨ ಡೋಸು. (2) ಅಮೃತಾಮಳಕತೈಲ ಅಭ್ಯಂಜನಕ್ಕೆ ಅದ್ಭುತವು 1 ರೂ. (3) ಸಾನಂದಪ್ರಿಯರಸ —ಸಕಲ ಸನ್ನಿಪಾತ ಜ್ವರಕ್ಕೆ 50 11 ರೂ. (4) ಸ್ವಯಮಗ್ನಿಮುಖಮಂಡೂರ —ಮೈಬಾತ, ಜ್ವರಗಡ್ಡೆಗೆ 1 ರೂ ಅ ಚೇ ಪತ್ರ ಪ್ರತ್ಯೇಕ ಕ್ಯಾಟಲಾಗು ಮುಫತ್ತು [20-3]

ಸ—ಆಯುರ್ವೇದಕ್ಸ್ಪರ್ತ ಕೆ ಲೇಖಶಾಸ್ತ್ರಿ, ಶೃಂಗೇರಿ.

ಸಂವ ರೆಗ್ಯುಲೇಟರ್ ಲಿವರ್ ಗಡಿಯಾರ.

ಹೊಸ ನಮೂನೆ' ಸ್ವಲ್ಪ ಬೆಲೆ'' ಬಹಳ ಅಂದವಾದದ್ದು'''

ಇದಕ್ಕೆ 4 ವರುಷ ಗ್ಯಾರಂಟೆ ಚೀಟಿ ಉಂಟು.

ರೂ. 1-13-0. ಕ್ರಯ ರೂ. 1 13 0.



ಈ ಗಡಿಯಾರ ಗೌರ್ನ್‌ಮೆಂಟ್ ಮತ್ತು ಟ್ರಾಂವೇ ನೌಕರ ಜನರಿಗೆ ಮಾತ್ರವೇ ಸಪ್ಲೈ ಮಾಡಲ್ಪಡುತ್ತೆ. ಇದನ್ನು ಅಮೇರಿಕಾದಿಂದ ಒಟ್ಟಾಗಿ ತರಿಸುವದರಿಂದ ಇಷ್ಟು ಸ್ವಲ್ಪ ಬೆಲೆಗೆ ಕೊಡುವದು ಇದೇ ಇದರ ಕಾರಣ ಇದು ನೋಡುವದಕ್ಕೆ ಅಂದವಾಗಿಯೂ ಕಾಲವನ್ನು ಸಹಿತ ಸರಿಯಾಗಿಯೂ ತೋರಿಸುತ್ತದೆ

[ ] ಸತ್ತ ಆಂಡ್ ಕೋ,

ನಂ. 39, ಜನರಲ್ ಮುತ್ತ್ಯಾಮೊದಲಿ ಬೀದಿ,

ಸಾಹುಕಾರ್ ಪೇಟೆ, ಮದ್ರಾಸ್.

ಶ್ರೀಮನ್ನೃಸಿಂಹ ಪ್ರಯೋಗಪಾರಿಜಾತಾನುಸಾರೀ ಸ್ಥಾಲೀಪಾಕದ ಪೂರ್ವಾಪರ ಪ್ರಯೋಗ. ಸಸ್ವರ ಮಂತ್ರಸಹಿತ

ಮೈಸೂರು ಕೃಷ್ಣರಾಜವೊಡೆಯರು ಗುಂಡಜೋಯಿಸರ ಮಕ್ಕಳು ವೇ|| ಎಂ. ಗ್ರಾಂಗಳಿಂದ ಪ್ರಕಟಿಸಲ್ಪಟ್ಟ ಪೂರ್ಣಂಡ ಅನರೂಪವಾದ ಗ್ರಂಥವನ್ನು ಸ್ವಾಮಿ ಶ್ರೀಶ್ರೀಯವರೂ, ರಾಜಗುರುಗಳಾದ ಪರಕಾಲಸ್ವಾಮಿಗಳವರೂ, ಶ್ರೀಮನ್ಮಹಾರಾಜರವರೂ ಸ್ವೀಕರಿಸಿ ಬಹುಮಾನವನ್ನು ದಯ ಪಾಲಿಸುತ್ತಾರಲ್ಲದೆ ಸಂಸ್ಥಾನದ ಮಹಾ ವಿದ್ವಾಂಸರೂ ಪಂಡಿತೋತ್ತಮರೂ ಸುತ್ತಾರೆ ಅರಮನೆ ಧರ್ಮಾಧಿಕಾರಿಗಳೂ ಪರಾಂಬರಿಸಿ ಸರಿಪಡಿಸಿ, ಮಾಡಿ ಬೆಲೆ ರೂಪಾಯಿ ೨-೦-೦

ಸನಾತನ ಸೂಕ್ಷ್ಮಧರ್ಮ —ಬಾ ಕ ಬಾಲಕಿಯರಿಗೆ ಅತಿ ಸ್ಥಾನದ್ದು ಬೆಲೆ ೪ ಆಣೆ ಮುದ್ರಾಮಂಜೂಷ ರೂ 1-8-0.

ಪತ್ರರತ್ನಾಕರ —ಇದು ಮೈಸೂರು ಕ್ರಿಮಿನಲ್ ಕೋರ್ಟು ವಕೀಲ ಸ್ಸ ಎಂ. ವೆಂಕಟರಾಯರಿಂದ ರಚಿಸಲ್ಪಟ್ಟು ಎಲ್ಲಾ ಪತ್ರಗಳ ನಮೂನೆ ಕೂಡಿದ 178 ವಿಷಯಗಳಿಂದ ಅಡಕವಾಗಿದೆ ಬೆಲೆ 10 ಆಣೆ.

ಲೌಕ್ಯತತ್ವಪ್ರಕಾಶಿಕೆ:—ಸದ್ವಿಯವರಿಂದಲೇ ರಚಿಸಲ್ಪಟ್ಟು ಎಲ್ಲಾ ಅರ್ಜಿಗಳ ನಮೂನೆಗಳಿಂದ ಕೂಡಿದ 72 ವಿಷಯಗಳಿಂದ ಅಡಕ ಬೆಲೆ 6 ಆಣೆ. ರಾಜಸಿಂಹ್ಮ ರೂ 1-1-0. ದೇವೀಚೌಧುರಾಣಿ 1-1-0

ಆರೋಗ್ಯಪ್ರಶ್ನೋತ್ತರ:—ಲೋ|| ಸೆ|| ತರಗತಿ ವಿದ್ಯಾರ್ಥಿಗಳಿಗೆ ಮುಖ್ಯವಾದದ್ದು. ಬೆಲೆ 1 ಆಣೆ. ನ್ಯಾಯದರ್ಪಣ ರೂ. 1-0-0.

"ಶಾಂತಿರತ್ನಾಕರ":—ಮಾಸಪತ್ರಿಕೆ. ಎಲ್ಲಾ ವಿಧ ಶಾಂತಿಯೂ ಸ್ಥಳದವರಿಗೆ ರೂ. ೨, ಪರಸ್ಥಳದವರಿಗೆ ರೂ. ೨-೩-೦ [7-6]

—ಎಚ್. ವೆಂಕಟರಾಮಯ್ಯ, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಜೀವವನ್ನು ಮೆದುಳನ್ನೂ ಹಾಳುಮಾಡಿಕೊಳ್ಳದಿರಿ.

ನಮೂನೆಯು ಪುಕ್ಸಟೆಯಾಗಿ ಕೊಡಲ್ಪಡುವದು!

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯವುಳ್ಳವಾದ ಅಲಂಕಾರವಾಗಿದೆ ಆದರೆ ಎಷ್ಟು ಸ್ತ್ರೀಯರಿಗೆ ತಾವೇ ಸುಂದರವಾದ ಮತ್ತು ಸಿಬ್ಬವಾದ ಕೇಶರಾಶಿ ಇದೆ? ಕೇಶಪಾಶವು ಸುಂದರವಾಗಿ ಕಾಣಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು, ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದ ಬೇಕಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಇದನ್ನು ತಕ್ಕುದಾದ ಬೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು

ಕಾಮಿನಿಯಾ ತೈಲ— ಇದು, ಕೂದಲುಗಳನ್ನು ಚಂದಗೈಯುವ ಸರ್ವ ತೈಲಗಳಲ್ಲಿ ಮೊದಲನೆಯದು ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಿನ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಅಗಾಗ್ಗೆ ಹರಿದು ಬಿದ್ದು ಹೋಗದ ದಟ್ಟನಾಗಿ ಬೆಳೆಯುತ್ತವೆ

ಇದರ ಬೆಲೆ 1 ಸೀಸೆಗೆ ರೂ. 1-0-0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು, 3 ಸೀಸೆಗಳಿಗೆ ರೂ 2-10-0. ಅಂಚೆಯ ವೆಚ್ಚ 0 7-0

ನಮೂನೆಯು ಬೇಕೆಂದರೆ ಒಂದು ಆಣೆಯ ಚೀಟಿನ್ನು ಕಳುಹಿಸಿರಿ

ಕಾಮಿನಿಯಾ ತೈಲದ ಕುರಿತು ಕೆಲವು ಮಹನೀಯರು ಬರೆದ ಪ್ರಮಾಣ ಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು —

28-7-11. ಮ|| ಬಿ ಡಿ ಮಾಧವಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ—ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲ್ಯಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ ಮತ್ತು ಇದಕ್ಕೆ ಸರಿಸಮಾನವಾದ ಹೇಯರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1-7-11 ಮ|| ಸಿ ಆರ್. ನಾಯುಡು ಪ ವ. ಡಿ. ಟಾಶಿಬ, (ಬರ್ಮಾ)—ನನ್ನ ಮಿತ್ರರು "ಕಾಮಿನಿಯಾ" ತೈಲ ಸಮ್ಬಂಧವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದರಿಂದ ಕೂಡಲೆ 6 ಶೀಸೆಗಳನ್ನು ತ್ವರ್ಯದಿಂದ ವಿ ಪಿ. ಮೂಲಕ ರವಾನಿಸತಕ್ಕದ್ದು.

ಸುಗಂಧದ್ರವ್ಯಗಳು

ಗುಲ್-ಹಾನ್ (ರೆಜಿಡ್)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತ್ಯಂತ ಶ್ರೇಷ್ಠವಾದದ್ದು, ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪರಿಶೋಧಕ ಪಂಡಿತರು ಹೇಳಿವಾರೆ. ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯನ್ನುಳ್ಳದ್ದು. ಕ್ರಯ ದ್ರಾಂ ಸೀಸೆಗೆ ರೂ. 1-8-0

ದಿಲ್-ಬಹಾರ್ (ರೆಜಿಡ್)—ಅತ್ಯಂತ ಅಪೂರ್ವವಾದ ಜಾಜೀ ಪುಷ್ಪಗಳಿಂದ ತಯಾರಿಸಿದ ಅನೋಘವಾದ ಸುಗಂಧ. ದ್ರಾಂ ಸೀಸೆಗೆ ರೂ 1 8-0

"ಕಾಮಿನಿಯಾ ಸುರಂಗಿ"—ರೂ. 1-4-0; "ಕಾಮಿನಿಯಾ ವಾಲಿಸಿ"—ರೂ 1

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ನೋಟ್—ನಮಗೆ ಎಲ್ಲಾ ಕಾಗದಗಳನ್ನು ಇಂಗ್ಲೀಷಿನಲ್ಲೇ ಬರೆಯಬೇಕು

ನಮ್ಮ ವಿಳಾಸ:— [8-7]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

Office of the Excise Commissioner in Mysore

No 6017 Dated Bangalore, 5-6th February, 1913

NOTICE.

Tenders are hereby invited for the exclusive privilege of the manufacture in the Government Central Distillery at Bangalore of Arrack and other Country Spirits for supply throughout the Territories of Mysore and the Civil and Military Station of Bangalore, for a period of three years from 1st July, 1913, to 30th June, 1916

2 Every tender should be accompanied by a deposit of Rs 5000 and should reach the undersigned on or before noon of Monday, the 10th March, 1913, on which date they will be opened by the Excise Commissioner at 12 noon

3 The quantity of Arrack required for consumption in the State is estimated between four and four and a half lakhs of gallons per annum

4 For conditions and further particulars see Notification No Fl 4348 S R 140-12 18, dated 3rd February, 1913 published in Part I of the Mysore Gazette [38 1]

5 Copy of Notification and form of application may be had on requisition to the undersigned

M KANTARAJ URS

Excise Commissioner

ವೃತ್ತಾಂತ ಪತ್ರಿಕೆ

ಸನ್ ೧೯೧೩ ನೇ ಇಸವಿ ಫೆಬ್ರವರಿ ತಾ ೧೩ ನೇ ಗುರುವಾರ

ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗಳು

ಮೈಸೂರು ಸರ್ಕಾರದವರು ಕಸಬುಗಳ ಮತ್ತು ವ್ಯಾಪಾರದ ಒಂದು ಇಲಾಖೆಯನ್ನು ಕಲ್ಪಿಸಿ, ಅದಕ್ಕೆ ಮಿ| ಎ ಚಾಟರ್ಟನ್ನವರನ್ನು ಡೈರೆಕ್ಟರಾಗಿ ನೇಮಕ ಮಾಡಿರುತ್ತಾರೆ ಈ ಸಂಸ್ಥಾನದಲ್ಲಿ ಕಸಬುಗಳನ್ನು ಕಲಿಸಿ ವೃದ್ಧಿಪಡಿಸಬೇಕೆಂದೂ ಈ ಸೀಮೆಯ ಉತ್ಪನ್ನವನ್ನು ಹೊರಕ್ಕೆ ತೆಗೆದು ಪ್ರಜೆಗಳನ್ನು ಐಶ್ವರ್ಯವಂತರನ್ನಾಗಿ ಮಾಡಬೇಕೆಂದೂ ಮೈಸೂರು ಗವರ್ನಮೆಂಟಿನವರು ಕುತೂಹಲಪಟ್ಟು ನಾನಾ ಪ್ರಯತ್ನಗಳನ್ನು ಮಾಡುತ್ತಿರುವುದು ನಮಗೆ ತುಂಬಾ ಸಂತೋಷವನ್ನುಂಟುಮಾಡಿದೆ ಜನರಿಗೆ ಬೇಕಾಗುವಂಥಾ ಸಾಮಾನುಗಳನ್ನು ಮಾಡಿ ಒದಗಿಸುವುದಕ್ಕೆ ಕಸಬುದಾರಿ ಕಾರ್ಖಾನೆಗಳನ್ನು ಇಡಬೇಕೆಂದು ಕುತೂಹಲಪಡತಕ್ಕವರಿಗೂ, ಕೈಗಾರಿಕೆ ಕಾರ್ಖಾನೆಗಳಲ್ಲಿ ಹಣ ಹಾಕಬೇಕೆಂದು ಅಪೇಕ್ಷಿಸತಕ್ಕವರಿಗೂ ಸಾಧ್ಯವಾಗುವಷ್ಟು ಸಹಾಯ ಸಂಪತ್ತುಗಳನ್ನು ಒದಗಿಸಿಕೊಟ್ಟು ಪ್ರೋತ್ಸಾಹಪಡಿಸಬೇಕು ಆದರೆ ಈ ಬಾಗದಲ್ಲಿ ಗವರ್ನಮೆಂಟಿನವರು ಮಾಡಿರುವ ಏರ್ಪಾಡು ಸಮರ್ಪಕವಾದದ್ದೆಂದು ಹೇಳಲು ನಾವು ಸಂಶಯಪಡುತ್ತೇವೆ

ಮೈಸೂರು ಗವರ್ನಮೆಂಟಿನವರು ಈಚೆಗೆ ಸಂಪದಭಿವೃದ್ಧಿಯ ಸಮಾಜವೆಂಬ ಸಭೆಯನ್ನು ನಿರ್ಮಾಣಮಾಡಿದರು ಈ ಸಭೆಯವರು ಸಂಸ್ಥಾನದ ಕಸಬು ಕೈಗಾರಿಕೆಗಳೂ ವ್ಯವಸಾಯವೂ, ವಿದ್ಯಾಭ್ಯಾಸವೂ ಯಾವ ಸ್ಥಿತಿಯಲ್ಲಿವೆ ಎಂಬುದನ್ನು ತನಿಖೆಯಿಂದ ಗೊತ್ತುಮಾಡುವುದಕ್ಕೆ ಬಹಳ ಹಣವನ್ನು ವಿನಿಯೋಗಿಸಿರುತ್ತಾರೆ ಈ ಸಮಾಜದ ಕಾರ್ಯವು ಮುಕ್ತಾಯಹೊಂದಿ, ವಿಸರ್ಜನೆಯಾಗಬೇಕಾದ ಕಾಲವು ಬರಗಿರಬೇಕೆಂದು ಊಹಿಸುತ್ತೇವೆ ಸರ್ಕಾರದವರು ಸೆಂಟ್ರಲ್ ಮತ್ತು ಡಿಸ್ಟ್ರಿಕ್ಟ್ ಕಮಿಟಿಗಳನ್ನು ಅವಶ್ಯವಿದ್ದಾಗ ಕೂಡಿಸಿ ಮೆಂಬರರ ಅಭಿಪ್ರಾಯವನ್ನು ಕೇಳಿ ತಿಳಿಯುವಂತಾದರೆ ಸಾಕೆಂದು ಕಾಣುವುದು ಕೈಗಾರಿಕೆ ಶಾಖೆಯ ಕಾರ್ಯಗಳನ್ನು ಈಗ ತಾನೇ ಕಲ್ಪಿಸಲ್ಪಟ್ಟಿರುವ ಹೊಸ ಇಲಾಖೆಗೂ, ವ್ಯವಸಾಯ ಶಾಖೆಯ ಕೆಲಸಗಳನ್ನು ಸರ್ಕಾರಿ ವ್ಯವಸಾಯದ ಇಲಾಖೆಗೂ, ವಿದ್ಯಾಶಾಖೆಯ ಕಾರ್ಯಗಳನ್ನು ವಿದ್ಯಾಭ್ಯಾಸದ ಇಲಾಖೆಗೂ ವಹಿಸಿಬಿಡಬಹುದಾಗಿದೆ ಈ ರೀತಿ ಮಾಡಿಬಿಡುವುದಾದರೆ ಈ ಸಂಪದಭಿವೃದ್ಧಿ ಸಮಾಜವೆಂಬುದು ಪ್ರತ್ಯೇಕವಾದ ಖರ್ಚುಮಾಡುವ ಸಂಘವಾಗಿರುವುದು ತಪ್ಪಿಹೋದೀತು

ಕಸಬುಗಳನ್ನು ಅಭಿವೃದ್ಧಿಮಾಡುವ ವಿಚಾರದಲ್ಲಿ ಗವರ್ನಮೆಂಟಿನವರು ಸ್ವತಂತ್ರಿಸಿ ಯಾವ ಕಸಬನ್ನೂ ಪ್ರಾರಂಭಿಸಿ ನಡಿಸಬಾರದೆಂಬುವುದು ನಮ್ಮ ಅಭಿಮತವಾಗಿದ ಗವರ್ನಮೆಂಟಿನವರ ಅಭಿಮತವೂ ಹೀಗೇ ಇರಬಹುದೆಂದು ಎಣಿಸುತ್ತೇವೆ ಆತ್ಮಾವಲಂಬಿಗಳಾಗಿ ನಿಂತು ಕಾರ್ಯಗಳನ್ನು ಮಾಡತಕ್ಕವರಿಗೆ ಸರ್ಕಾರದವರು ಸಹಾಯಮಾಡಲು ಅಪೇಕ್ಷಿಸಬಹುದಾಗಿರಬಹುದು ಹೀಗೆ ಮಾಡುವುದೇನೋ ನ್ಯಾಯವೂ ನಿರಾಕ್ಷೇಪಣೀಯವೂ ಆಗಿದೆ ಆದರೆ ಹೀಗೆ ಮಾಡುವುದರಲ್ಲಿ ಹಿಂದೆ ವ್ಯವಸಾಯದ ಬ್ಯಾಂಕುಗಳಿಗೆ ಮಾಡಿದ ಸಹಾಯದಂತೆ ಸ್ವಲ್ಪವಾಗದೆ ಬಹಳ ಹಣ ನಷ್ಟವಾದರೂ ಆಗಬಹುದು

ಈ ಸಂಸ್ಥಾನದಲ್ಲಿ ಈಗ ಕಸಬುಗಳನ್ನು ಕಲಿಸುವುದಕ್ಕೆ ಹಲವು ಸ್ಕೂಲುಗಳನ್ನು ಇಟ್ಟಿದ್ದಾರೆ ಈ ಸ್ಕೂಲುಗಳಿಗೆ ಹುಡುಗರು ಬೇಕಾದಷ್ಟು ಮಂದಿ ಹೋಗುತ್ತಿದ್ದಾರೆಯೋ? ಕಸಬು ಕಲಿಯತಕ್ಕವರಿಗೆ ವೇತನಗಳನ್ನು ಕೊಡಬೇಕಾದದ್ದು ಅವಶ್ಯವೋ? ಅಥವಾ ತಂದೆ ತಾಯಿಗಳೂ ಪೋಷಕರೂ ತಮ್ಮ ಮಕ್ಕಳು ಕಸಬು ಕಲಿಯಲೆಂದು ಫೀಜು ಕೊಡಲು ಒಪ್ಪುವರೋ? ಕಸಬನ್ನು ಕಲಿತವರು ಆಯಾ ಕಸಬನ್ನು ಅವಲಂಬಿಸಿಕೊಂಡು ಜೀವನ ಮಾಡಲು ಅವಕಾಶವುಂಟೋ, ಇಲ್ಲವೇ ಕಸಬು ಕಲಿತವರು ಅದರಿಂದ ಜೀವನವಾಗದೆ ಬೇರೆ ಕಸಬನ್ನು ಅವಲಂಬಿಸುವರೋ? ಹುಡುಗರಿಗೆ ಕಲವು ಕಸಬುಗಳನ್ನು ಕಲಿಸಿ ತಂದೆ ತಾಯಿಗಳ ವಶಮಾಡುವುದರಲ್ಲಿ ಆದಾಯ ಏನುಂಟು, ಹಾಗೆ ತರಪೇತಾದವರಿಗೆ ಅಂಥಾ ಕಸಬಿನಲ್ಲಿ ಜೀವನ ದೊರಕುವುದಿಲ್ಲವೆಂದೂ ಸಮಗ ತೋರುತ್ತದೆ ಹುಡುಗರನ್ನು ಕಸಬುಗಳಲ್ಲಿ ತರಪೇತು ಮಾಡಿ ಅವರು ಜೀವನ ಮಾಡಿಕೊಳ್ಳಲು ಆ ಕಸಬೇ ಇಲ್ಲದಿದ್ದರೆ ಅಂಥ ಶಿಕ್ಷಣದಿಂದ ಪ್ರಯೋಜನವೇನೂ ಆಗುವುದಿಲ್ಲ ಇದಲ್ಲದೆ ತರಪೇತಾಗಿರತಕ್ಕವರು ಆಯಾ ಕಸಬುಗಳಲ್ಲೇ ಇದ್ದುಕೊಂಡು ಜೀವನ ಮಾಡುತ್ತಿರುವ ಪಕ್ಷಕ್ಕೆ ಈಗಿರುವ ಕಸಬುದಾರಿ ಪಾಠಶಾಲೆಗಳು ಇರಬೇಕು ಮತ್ತು ಅವುಗಳನ್ನು ಇನ್ನೂ ಅಭಿವೃದ್ಧಿ ಮಾಡಬೇಕಾದದ್ದು ಅವಶ್ಯವೇ ಸರಿ ಇಲ್ಲದಿದ್ದರೆ ಈ ಸ್ಕೂಲುಗಳಿಗೆ ಖರ್ಚಾಗುವ ಹಣವನ್ನೆಲ್ಲಾ ಗವರ್ನಮೆಂಟಿನವರು ಉಳಿಸಿಕೊಳ್ಳುವುದು ನ್ಯಾಯವೇ ಎಂದು ಹೇಳಬೇಕಾಗಿದೆ ತಂದೆತಾಯಿಗಳು ಕಸಬು ಕಲಿಯುವುದಕ್ಕಾಗಿ ತಮ್ಮ ಮಕ್ಕಳಿಗೆ ಕಲವು ಕಾಲ ಫೀಜು ಕೊಡಲೊಪ್ಪಬೇಕು ಗವರ್ನಮೆಂಟಿನವರು ಬಡವರಾದ ಕಲವು ಬಾಲಕರಿಗೆ ವೇತನಗಳನ್ನು ಕೊಡಬಹುದು ಮತ್ತು ಕಸಬುಗಳನ್ನು ಕಲಿಯತಕ್ಕ ಹುಡುಗರು ಇರುವಂಥಾ ಸ್ಥಳಗಳಲ್ಲಿ ಸರ್ಕಾರದವರು ರಾತ್ರಿ ಪಾಠಶಾಲೆಗಳನ್ನು ಇಡಿಸಬಹುದು

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ವಿಚಾರಮಾಡಿಕೊಳ್ಳಬೇಕಾಗಿದೆ ಮೈಸೂರು ಸಂಸ್ಥಾನದ ಜನಗಳು ಕೈಗಾರಿಕೆ ಕಾರ್ಖಾನೆಗಳಿಗೆ ಹಣ ಹಾಕತಕ್ಕವರಾಗಿದ್ದಾರೆಯೋ? ಮತ್ತು ಅಂಥಾ ಕಾರ್ಖಾನೆಗಳನ್ನು ನಡಿಸುವುದಕ್ಕೆ ಸಮರ್ಥರಾದವರು ಸಿಕ್ಕುತ್ತಾರೆಯೋ? ಯಾಕೆಂದರೆ ಈ ಸಂಸ್ಥಾನದಲ್ಲಿರುವ ಕಾರ್ಖಾನೆಗಳ ವಾರ್ಷಿಕ ರಿಪೋರ್ಟನ್ನು ಸರ್ಕಾರದವರು ಈಗ ತಾನೇ ಪ್ರಕಟಮಾಡಿರುವುದನ್ನು ಓದಿನೋಡಿದರೆ ಬೆಂಗಳೂರಿನಲ್ಲಿ ಕಂಬಳಿ ನೂಲುಗಳ ಸರಕುಗಳು ತಯಾರಾಗುವ ಎರಡು ಕಾರ್ಖಾನೆಗಳಲ್ಲಿ ಈ ಸ್ಥಿತಿ ಒಂದು ಕಾರ್ಖಾನೆಯು ಹಣಗಳು ಹುದಗಿಸಿನ ಬಿನ್ನಿ ಕಂಪನಿಯವರು ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹುಣಸೂರಿನಲ್ಲಿರುವ ಒಂದು ಕಾರ್ಖಾನೆಯು ಅಸ್ಪಷ್ಟೀಯರದಾಗಿದ ಚಿತ್ರದುರ್ಗ ಡಿಸ್ಟ್ರಿಕ್ಟನ್ನು ನೋಡಿದರೆ ದಾವಣಗೆರೆಯಲ್ಲಿ ಮೂರು ಹತ್ತಿಯ ಕಾರ್ಖಾನೆಗಳಿರುವವು ಅದರಲ್ಲಿ ಒಂದು ಕಾರ್ಖಾನೆಯು ಪಾರ್ಸಿಗಳಿಗೆ ಸೇರಿದ್ದಾಗಿದ ಕೋಲಾರಕ್ಕೆ ಸೇರಿದ ಗೋರೂರಿನ ಸೂರಿನಲ್ಲಿರುವ ಸಕ್ಕರೆ ಕಾರ್ಖಾನೆಯಾದರೋ ವರುಷದಲ್ಲಿ ಕೆಲವು ತಿಂಗಳು ಮುಚ್ಚೇ ಇರುವುದು ಮೇಲ್ಕಂಡ ಕಾರ್ಖಾನೆಗಳ ಲ್ಲಿ ಒಟ್ಟು ೨,೦೭೧ ಜನರು ಕೆಲಸಮಾಡುವರೆಂದು ಈ ವರದಿಯಿಂದ ಗೊತ್ತಾಗುವುದು ಈ ಸಂಸ್ಥಾನದ ಐವತ್ತು ಲಕ್ಷ ಪ್ರಜಾಸಂಖ್ಯೆಗೂ ಈ ಎರಡು ಸಾವಿರಕ್ಕೂ ತಾರತಮ್ಯವೇನುಂಟು?

ಈ ಕಾರ್ಖಾನೆಗಳಲ್ಲೆಲ್ಲಾ ಧಣಿಗಳಿಗೆ ಸರಿಯಾದ ಲಾಭ ಉತ್ಪತ್ತಿಯಾಗುತ್ತಿದೆಯೋ ಇಲ್ಲವೋ ಈ ಸರ್ಕಾರಿ ರಿಪೋರ್ಟಿನಿಂದ ಗೊತ್ತಾಗುವುದಿಲ್ಲ ಈ ಕಾರ್ಖಾನೆಗಳಿಗೆ ಹಾಕಿರುವ ಹಣಕ್ಕೆ ಶೇಕಡಾ ವರುಷಕ್ಕೆ ಐದು ರೂಪಾಯಿನಂತಾದರೂ ಬಡ್ಡಿ ಉತ್ಪತ್ತಿಯಾಗದಿದ್ದರೆ ಜನರು ಹಣಕೊಡುವುದಕ್ಕೆ ಹ್ಯಾಗೆತಾನೇ ಇಷ್ಟಪಟ್ಟಾರು? ಲೇವಾದೇವಿಯಿಂದ ಶೇಕಡಾ ೧೨ ರ ಲೆಖ್ಖಾಯಿತು ೨೦ ರೂಪಾಯಿ ವರೆಗೆ ಸಂಪಾದನೆ ಮಾಡುವ ಸಾಹುಕಾರರು ಶೇಕಡಾ ಐದು ರೂಪಾಯಿ ಬಡ್ಡಿ ಬರುವ ಕಾರ್ಖಾನೆಗೆ ಹಣ ಕೊಡಲು ಒಪ್ಪುವರೇ? ಸರ್ಕಾರದವರು ಈಗ ಏರ್ಪಾಡು ಮಾಡಿರುವ ಮೇಲ್ಕಂಡ ಹೊಸ ಇಲಾಖೆಯ ಕೆಲಸವು ಸುಲಭವಾದದ್ದೆಂದು ಹೇಳಕೂಡದು ಶೇಕಡಾ ೪ ಅಥವಾ ೬ ರೂಪಾಯಿನಂತೆ ಉತ್ಪತ್ತಿಯಾಗುವ ಕಸಬುಗಳನ್ನಾದರೂ ಆ ಇಲಾಖೆಯು ತೋರಿಸಿಕೊಡಬೇಕಾಗಿದೆ ಮಿ ಚಾಟರ್ಟನ್ನವರೂ ಅವರ ಇಲಾಖೆಯವರೂ ಮೈಸೂರು ಸಂಸ್ಥಾನದ ಐಶ್ವರ್ಯವನ್ನು ವೃದ್ಧಿಮಾಡತಕ್ಕ ಮಾರ್ಗಗಳನ್ನೂ, ಪ್ರಜೆಗಳು ಹಾಕತಕ್ಕ ಹಣ ಮುಳುಗಿಹೋಗದೆ ಸರಿಯಾದ ಬಡ್ಡಿ ಉತ್ಪತ್ತಿಯಾಗುವಂಥ ನಂಬಿಕೆಯಾದ ಕಸಬುಗಳನ್ನೂ ಬೇಗನೆ ತೋರಿಸಿಕೊಡುವರೆಂದು ನಿರೀಕ್ಷಿಸುತ್ತೇವೆ

ಟರ್ಕಿ ಬಾಲ್ಕನ್ ಯುದ್ಧವು

ಈ ಯುದ್ಧವು ಹಿಂದಿನಂತೆ ಎಂತು ಮುಗಿಯಬಹುದೆಂದು ನಾವು ನಿರೀಕ್ಷಿಸಿದೆವು ಅದರ ಕಡೆಯ ಕಲಹವು ಅವರವರಿಗೆ ಸಮ್ಮತವಾಗದೆ ಹೋಯಿತು ಎಂದು ಹಾರಿ ಯುದ್ಧವು ಪುನಃ ಪ್ರಾರಂಭವಾಗಿ ಕೆಲವು ರಣಗಳಲ್ಲಿ [illegible] ನಡೆಯುತ್ತಾ ಇದೆ [illegible] ಯಾನೋಪಲ್ [illegible] ಬಾಲ್ಕನ್ ಸೈನಿಕರು ಮುತ್ತಿಗೆ ಹಾಕಿಕೊಂಡು [illegible] [illegible] ಗುಂಡುಗಳನ್ನು ಸುರಿಸುತ್ತಿದ್ದಾರೆ [illegible] [illegible] ಯಲ್ಲಿ ರಾಜಧಾನಿಯಾದ ಕಾನ್ಸ್ಟಾಂಟಿನೋಪಲ್ [illegible] [illegible] ನಲ್ಲಿ ಕದನಗಳು ನಡೆಯುತ್ತಿವೆ ಯುದ್ಧಭೂಮಿಯಿಂದ ಬರುವ ವರ್ತಮಾನಗಳು ಸಮರ್ಪಕವಾಗಿಲ್ಲದೆ ಹೋದರೂ ಈ ಕದನಗಳ ಪರಿಣಾಮ ಹೀಗೆಂದು ನಿಶ್ಚಿತವಾಗಿ ಹೇಳಲಾಗದು [illegible] ಸೈನಿಕರು ನುಗ್ಗಿ ಹೋಗಿ [illegible] [illegible] ಎಂದಕ್ಕೆ [illegible] ಪ್ರಯತ್ನಪಟ್ಟರೆಂದೂ ಅದರ [illegible] [illegible] ಕೈಗೂಡದೆ ಹೋಯಿತು [illegible] [illegible] ಎಂದು ವರ್ತಮಾನದಿಂದ ಗೊತ್ತಾಗುತ್ತದೆ [illegible] [illegible] ಗಾಲಿಪೋಲಿ [illegible] [illegible] ಯುದ್ಧ [illegible] ಪರ್ಯಾಯ ದ್ವೀಪ [illegible] [illegible] ನೋಡಿದರೆ [illegible] ಯುದ್ಧ [illegible] [illegible] ಹೋಗುತ್ತದೆ [illegible] [illegible] [illegible] ಕೊಂಡಿರು ತಮ್ಮ [illegible] ಸೈನ್ಯವನ್ನು [illegible] [illegible] ಇನ್ನೊಂದು ಕಡೆ ಮಾಂಟಿನಿಗ್ರೋ ಸೈನಿಕರು [illegible] ಮುತ್ತಿಗೆ ಹಾಕಿ ಅದನ್ನು [illegible] ಕೊಳ್ಳಬೇಕೆಂದು ಸಾಹಸಪಡುತ್ತಿದ್ದಾರೆ ಗ್ರೀಕ್ ಸೈನಿಕರು [illegible] ನಗರವನ್ನು ಆವರಿಸಿಕೊಂಡು [illegible] [illegible] ಪ್ರಯತ್ನ ಮಾಡಿದ್ದಾರೆ ಹೀಗೂ ಎಂದರೆ [illegible] ಯುದ್ಧಗಳು [illegible] [illegible] [illegible] ಆದರೂ [illegible] ಹೋದಲ್ಲಿ ಈ ಯುದ್ಧವು [illegible] [illegible] ನಡೆಯುತ್ತಾ ಇರುವುದೆಂದೂ, ಬಳಿಕ ಟರ್ಕಿಯವರು ತಮ್ಮ ಸೈನಿಕರ [illegible] [illegible] ನಡಿಸಲು [illegible] [illegible] ಹೋಗುವರೆಂದೂ [illegible] ಕಾಗುತ್ತದೆ

ಹಿಂದೂ ವಿಧವೆಯರೂ ದಿಕ್ಕಿಲ್ಲದ ಹೆಣ್ಣುಮಕ್ಕಳೂ

ನಮ್ಮಲ್ಲಿಗ [illegible] [illegible] [illegible] ಒಂದು ಪತ್ರದ [illegible] ಓದುವಲ್ಲಿ ಕಲವು ಹಿಂದೂ [illegible] [illegible] [illegible] [illegible] [illegible] [illegible] [illegible] ಸಂರಕ್ಷಣೆ ಮಾಡಿ ಅವರನ್ನು [illegible] [illegible] ವುದರಲ್ಲಿ [illegible] [illegible] ತೊಡಗುತ್ತಿದ್ದಾರೆಂದು ತಿಳಿದು ಸಂತೋಷಪಡುತ್ತೇವೆ

ರಾಜಧಾನಿಯಾದ ಮೈಸೂರು ಪಟ್ಟಣದಲ್ಲಿ ಒಂದು [illegible] [illegible] ಯಲ್ಲಿ [illegible] [illegible] ಮಾತ್ರ ಇರುವುದು [illegible] ಕೇಳಿ [illegible] ಅವರು [illegible] [illegible] ಮಾಡಿಕೊಂಡು [illegible] ಕಲಿಯುವರು [illegible] ಯಲ್ಲೇ ನಡೆಯುವ [illegible] ಮ|| [illegible] ಸಿಂಹಯ್ಯಂಗಾರ್ರವರು ಈ [illegible] [illegible] ನಡೆಸುವುದರಲ್ಲೂ ವಿಶೇಷವಾದ ಪ್ರೀತಿ ಉತ್ಸಾಹಗಳನ್ನು [illegible] ರುತ್ತಾರೆ ಅದರಲ್ಲಿ ೬ ಮಂದಿ [illegible] [illegible] ಮಂದಿ ವಿಧವೆಯರೆಂದೂ, ೧ ಮಂದಿ ಮದುವೆಯಿಲ್ಲದವರೆಂದೂ ೧೧ ಮಂದಿ ಮದುವೆಯಾದವರೆಂದೂ ತಿಳಿಯುತ್ತದೆ

ಬೆಂಗಳೂರಿನಲ್ಲಿ ೧೯೧೧ ನೇ ಸಪ್ಟಂಬರ್ ತಿಂಗಳಲ್ಲಿ ದಿಕ್ಕಿಲ್ಲದ ಹೆಣ್ಣುಮಕ್ಕಳನ್ನು ಸಾಕಿ ಬೆಳೆಸುವುದಕ್ಕೋಸ್ಕರ ಹಿಂದೂ [illegible] ಶ್ರಮವೆಂಬ ನಿಲಯವನ್ನು ಪ್ರಾರಂಭಮಾಡಿದರು ಈ [illegible] ದಲ್ಲಿ ಸೇರತಕ್ಕವರು ಯಾವ ಜಾತಿಯವರಾದರೂ [illegible] ಮದು ಅಲ್ಲ [illegible] ಇದ್ದರೆ [illegible] [illegible] ಸೇವಕರು ಅಲ್ಲ ಅವರನ್ನು ಪೋಷಣ [illegible] ಕಸಬುಗಳನ್ನು ಹೇಳಿಕೊಡುತ್ತಾರೆ [illegible] ಹೋಗರಾಗಿ [illegible] [illegible] ಕಾರ್ಯಗಳಲ್ಲಿ ಆಸಕ್ತರಾದಾರೆಂದು [illegible] ಸಲಾಗಿದೆ [illegible] ವು ಜನರು [illegible] ಮಾಡಿಕೊಂಡು ಈ [illegible] ನಡಿಸುವರು [illegible] [illegible] [illegible] [illegible] ಬಂಗಳೂರು [illegible] [illegible] [illegible] ಮ|| ಕ [illegible]

ಚಂದ್ರರಾಯರು ಮೈಸೂರು ಪ್ರಾಂತದ ಗವರ್ನಮೆಂಟು ಪ್ರಸ್ತಿನ ಮ|| ಸಿ. ರಂಗಪರತ್ನ್ಯರು ಅಂಗಾರು ಎ ಬಿರರಾಗಿದಾರ

ಈ ನವವಾದ ನಿಯಮಗಳನ್ನು ಸ್ಥಾಪಿಸಿ ನಡಸುವುದರಲ್ಲಿ ಜನರು ಕೈತೂಪಸುವ ಪರಾಗಿನಾರೆಂದು ತಿಳಿದು ಸಂತೋಷ ಪಡುತ್ತೇನೆ ಸಂಸ್ಥಾನಾಧೀಶ ಶಕ್ತಿಯಿಲ್ಲದವರನ್ನೂ ದುರ್ಮಾರ್ಗ ಪ್ರವರ್ತಕರನ್ನೂ ನಾನಾಬಗೆ ಕಷ್ಟದಿಂದ ಬಿಡಿಸುವ ವಿಷಯದಲ್ಲಿ ಸೇರಿಸತಕ್ಕ ಎರಡು ಘಟಕರನ್ನು ವಿಶೇಷವಾದ ಉತ್ಸಾಹದಿಂದ ಕಾರ್ಯವನ್ನು ಪ್ರವರ್ತಿಸುವವರನ್ನು ನೋಡಬೇಕೆಂದು ಆಶೆಪಡುತ್ತೇನೆ

ಕ್ರೈಸ್ತ ಮತವೂ ಹಿಂದು ಮತವೂ

ಕ್ರೈಸ್ತ ಮತವೆಂಬುದರ ವಿಷಯ ಅನೇಕರು ದುರಭಿಪ್ರಾಯವುಳ್ಳವರಾಗಿರುತ್ತಾರೆ ಅವರಿಗೆ ಹಿಂದು ಮತವೆಂಬುದು ಸಹ ತಿಳಿದಿರುವುದಿಲ್ಲ ಹಿಂದು ಮತವೆಂದರೆ ಏನೆಂಬುದು ಸುಲಭವಾದ ಪ್ರಶ್ನೆಯಲ್ಲ ಅದು ಸನಾತನ ಧರ್ಮ ಅಥವಾ ಜಾತಿ ಎಂದು ಅನೇಕರು ಹೇಳುವರು ವೇದಾದ್ಯಂತಗಳನ್ನು ಓದುವವರು, ವೇದಗಳ ನಿಯಮವನ್ನನುಸರಿಸಿ ನಡೆಯುವವರ ಸಂಖ್ಯೆಯು ಕೇವಲ ಸ್ವಲ್ಪ ಹೀಗಿದ್ದಾಗ್ಯೂ ವೇದಗಳೇ ಹಿಂದು ಮತಕ್ಕೆ ಮೂಲಾಧಾರವೆಂದು ಬೇರೆ ಜನರು ಅಭಿಪ್ರಾಯಪಡುವರು ಇನ್ನು ಕೆಲವರು ಹಿಂದು ಮತವು ತತ್ವಜ್ಞಾನ ಸ್ವರೂಪವೆಂದು ಹೇಳುವರು ಹಿಂದಿನ ಪಕ್ಷದಲ್ಲಿ ಮಹಾ ಜ್ಞಾನಿಗಳೂ ತತ್ವಜ್ಞಾನಿಗಳೂ ಆಗಿರುವವರು ಮಾತ್ರ ಇದನ್ನು ಗ್ರಹಿಸಿಕೊಳ್ಳಬಲ್ಲರು ಜನರು ತಮ್ಮ ನಂಬಿಕೆಯನ್ನು ಬದಲಾಯಿಸಿಕೊಂಡುದರಿಂದಲ್ಲ, ಕುಟುಂಬದ ವ್ಯವಹಾರಕ್ಕೆ ಸಂಬಂಧಪಟ್ಟ ಕಾರಣಗಳಿಂದಲೇ ಹಿಂದು ಮತದಿಂದ ಬಹಿಷ್ಕೃತರಾದವರೆಂದು ಕೆಲವು ನಿದರ್ಶನಗಳು ಉಂಟೆಂಬುದಿದೆ

ಇದನ್ನು ನೋಡುವಲ್ಲಿ ಹಿಂದು ಮತವು ಮನುಷ್ಯನಿಗೆ ಪಾರಮಾರ್ಥಿಕ ಶ್ರೇಯಸ್ಸನ್ನುಂಟುಮಾಡುವಂಥಾ ಅವನು ದೇವರ ಆಜ್ಞೆಗಳನ್ನು ತಿಳಿದುಕೊಂಡು ನಡೆಯುವುದಕ್ಕೆ ಸಹಕಾರಿಯಾಗಿರುವಂಥಾ ಮತವಾಗಿರುವುದು ತಿಳಿದುಕೊಳ್ಳುವುದು ಬಹಳ ಕಷ್ಟ ಹಿಂದು ಮತವು ಸಾಮಾಜಿಕ ಪದ್ಧತಿಯಾಗಿದ್ದರೂ ಅಥವಾ ತತ್ವಜ್ಞಾನ ಸ್ವರೂಪವಾಗಿದ್ದರೂ ಅದು ಸರ್ವರಿಗೂ ಅನುಕೂಲವಾದುದಲ್ಲವೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ ಒಬ್ಬನು ದೇವರನ್ನು ತಿಳಿದುಕೊಳ್ಳುವುದಕ್ಕೂ ಅವನನ್ನು ಸೇವಿಸುವುದಕ್ಕೂ ತ್ರಿಕರಣಶುದ್ಧನಾಗಿ ನಡೆಯುವುದಕ್ಕೂ ಇಂತಹ ಮತವು ಹೇಗೆ ಸಹಾಯಕೊಡಬಲ್ಲುದೋ ನಮಗೆ ತಿಳಿಯದು

ಕ್ರೈಸ್ತ ಮತವನ್ನು ಅವಲಂಬಿಸಿದ ಒಬ್ಬನು ಮತಸಂಬಂಧವಾದ ಕಾರಣಗಳಿಂದಲ್ಲ ಕುಟುಂಬದ ವ್ಯವಹಾರಕ್ಕೆ ಸಂಬಂಧಪಟ್ಟ ಕಾರಣಗಳಿಂದ ಜಾತಿಯಿಂದ ಬಹಿಷ್ಕೃತನಾದರೆ, ಆತನನ್ನು ಅವನ ಸ್ವಂತ ಮನೆಯಿಂದ ಏಕೆ ಹೊರಡಿಸಬೇಕೆಂಬುದೇ ನಮಗೆ ತಿಳಿಯದು ಅವನು ತನ್ನ ಮನೆಯಲ್ಲಿಯೇ ಇದ್ದರೆ, ಏನು ಮಾಡುತ್ತಾ ಇದ್ದಂತೆ ಮುಂದೆಯೂ ತನ್ನ ಮನೆಯನ್ನು ಉದ್ಧಾರಮಾಡುತ್ತಿದ್ದನು ಅವನನ್ನು ಮನೆಯಿಂದ ಬಲಾತ್ಕಾರಮಾಡಿ ಹೊರಡಿಸಿಬಿಡುವುದು ಧಾರ್ಮಿಕವಾಗಿರುವ ನೀತಿಯ ದಿವ್ಯತ್ವಕ್ಕೆ ವಿರುದ್ಧವಾಗಿರುವುದು ಇದರಿಂದ ಯಾವ ಫಲವೂ ಕಾಣುವುದಿಲ್ಲ ಒಬ್ಬನನ್ನು ಬಹಿಷ್ಕಾರಮಾಡುವ ಮತದ ಬಂಧವಾದ ಯಾವ ಕಾರಣವೂ ಇಲ್ಲದಿದ್ದರೆ, ಕುಟುಂಬದ ವ್ಯವಹಾರಕ್ಕೆ ಸಂಬಂಧಪಟ್ಟ ಕಾರಣಗಳಿಂದ ಅವನನ್ನು ಬಿಡದವನಾಗಿ ಮನೆಯಲ್ಲಿಯೇ ಇಟ್ಟುಕೊಳ್ಳಬೇಕಾಗುವುದು

ಸಾಮಾಜಿಕ ಪದ್ಧತಿಯನ್ನಾಗಲೀ ತತ್ವಜ್ಞಾನವನ್ನಾಗಲೀ ಉಪದೇಶಿಸುವುದು ಕ್ರೈಸ್ತ ಮತದ ಮುಖ್ಯೋದ್ದೇಶವಲ್ಲ ಅದು ಮನುಷ್ಯನು ದೇವರ ಬಳಿಗೆ ಹೋಗತಕ್ಕ ದಾರಿಯನ್ನು ತೋರಿಸುತ್ತದೆ ಆದಕಾರಣ ಅವನು ನಿಷ್ಕಪಟನಾಗಿಯೂ ತ್ರಿಕರಣಶುದ್ಧನಾಗಿಯೂ ನಡೆಯುವುದಕ್ಕೆ ಇದು ಅವನಿಗೆ ಸಹಾಯಕೊಡುತ್ತದೆ ಯೇಸು ಕ್ರಿಸ್ತನು ಸಕಲ ಮಾನವರಿಗೆ—ಪುರುಷರಿಗೂ ಸ್ತ್ರೀಯರಿಗೂ, ಬಡವರಿಗೂ ಬುದ್ಧಿವಂತರಿಗೂ ವಿದ್ಯಾಹೀನರಿಗೂ ನಿರಕ್ಷರಕುಕ್ಷಿಗಳಿಗೂ, ಎಲ್ಲಾ ಕುಲದವರಿಗೂ ಹೇಳುವುದೇನೆಂದರೆ ನೀವು ನಿಮ್ಮ ಪಾಪದ ಮಾರ್ಗವನ್ನು ಬಿಟ್ಟುಬಿಡುತ್ತೀರಿ ಆತನ ಸನ್ನಿಧಿಯೇ ನಿಮ್ಮೆಲ್ಲರಿಗೂ ಹೊಸ ಮಾರ್ಗಪ್ರವರ್ತಕನಾಗಿದೆ ನಿಮ್ಮ ಮನಸ್ಸಿನಲ್ಲಿ ಪಾಪ ಚಿಂತನೆಗಳು ತುಂಬಿಕೊಂಡಿರುತ್ತವೆ ಅಶುದ್ಧವೂ ಅಪವಿತ್ರವೂ ಆಗಿರುವ ಧರ್ಮಗಳು ನಿಮ್ಮ ಹೃದಯದಿಂದ ಹೊರಡುತ್ತವೆ ಆದ್ದರಿಂದ ನೀವು ದುಷ್ಕೃತ್ಯಗಳನ್ನು ಮಾಡುತ್ತಲೇ ಬರುತ್ತೀರಿ ನೀವು ದೇವರನ್ನು ತಿಳಿದುಕೊಳ್ಳಬೇಕೆಂಬ ಮನಸ್ಸುಳ್ಳವರಾದರೆ, ನಿಮ್ಮ ಮನಸ್ಸುಗಳನ್ನು ದೇವರ ಕಡೆಗೆ ತಿರುಗಿಸಬೇಕು ಎಂಬುದೇ ಮನೋವಾಕ್ಕಾಯಗಳಲ್ಲಿ ಮಾಡುತ್ತಾ ಬಂದಿರುವ ಪಾಪಗಳ ಫಲವನ್ನು ಬಿಡಬೇಕು ಅವುಗಳನ್ನು ವಿಸರ್ಜಿಸಿಬಿಡುವುದಕ್ಕೆ ನಿಮ್ಮ ಅಪೇಕ್ಷೆಯು ಇರಬೇಕು ಪ್ರತಿಯೊಬ್ಬರೂ ಈ ಮಾರ್ಗವನ್ನನುಸರಿಸಿ ನಿಮ್ಮ ಮನಸ್ಸುಗಳನ್ನು ದೇವರ ಕಡೆಗೆ ತಿರುಗಿಸಿಕೊಳ್ಳಬೇಕು

ನೀವು ಪಾಪವನ್ನು ಬಿಟ್ಟುಬಿಡುವುದಕ್ಕೆ ಮನಸ್ಸುಮಾಡಿ ದೇವರ ಕಡೆಗೆ ತಿರುಗಿದರೆ ಆತನು ನಿಮಗೆ ಸಹಾಯಮಾಡುವನೆಂದು ಯೇಸು ಕ್ರಿಸ್ತನು ತನ್ನ ಬೋಧನೆಯಿಂದಲೂ ಮಾದರಿಯಿಂದಲೂ ತಿಳಿಸಿರುತ್ತಾನೆ ಆತನನ್ನು ನಂಬಿ ಪ್ರಾರ್ಥಿಸುವವರಿಗೆ ಆತನು ಏನು, ಅವರ ಪಾಪದ ಹೊರೆಯನ್ನು ತೆಗೆದು ದೇವರ ಪ್ರೀತಿಯನ್ನು ಪ್ರಕಟಪಡಿಸಿ ದೇವರು ನಮ್ಮ ತಂದೆ ಎಂಬುದನ್ನು ತೋರಿಸಿ, ಪಾಪವನ್ನು ನಿಗ್ರಹಿಸುವುದಕ್ಕೆ ಶಕ್ತಿಯನ್ನು ದಯಪಾಲಿಸುವನು ದೇವರನ್ನು ತಿಳಿದುಕೊಳ್ಳುವುದಕ್ಕೂ ತ್ರಿಕರಣಶುದ್ಧರಾಗಿ ಜೀವಿಸುವುದಕ್ಕೂ ಇದು ಹೊರತು ಬೇರೊಂದು ಮಾರ್ಗವನ್ನು ನಮಗೆ ತಿಳಿದಿರುವುದಿಲ್ಲ ಆದಕಾರಣ ಸ್ತ್ರೀ—ಪುರುಷರು ಮಾತ್ರವಲ್ಲದೆ ಸ್ತ್ರೀಯರೂ ಸಹ ಯೇಸು ಕ್ರಿಸ್ತನನ್ನು ನಂಬಿಕೊಳ್ಳಬೇಕು ದೇವರ ಬಳಿಗೆ ಹೋಗತಕ್ಕ ದಾರಿಯನ್ನು ಆತನು ತೋರಿಸಿಕೊಡುವನು

ಒಬ್ಬನು ದೇವರನ್ನು ಆಲಿಸಿಕೊಂಡವನಾದರೆ, ಆತನ ಆಜ್ಞೆಗೆ ವಿಧೇಯನಾಗುವನು ಅವನು ದೇವರಿಗೆ ವಿಧೇಯನಾಗಿ ನಡೆದುಕೊಳ್ಳುವಲ್ಲಿ ತನ್ನ ಬಂಧುಮಿತ್ರರುಗಳು ನಡೆದುಕೊಳ್ಳುತ್ತಿರುವ ರೀತಿಗೆ ವ್ಯತಿರಿಕ್ತನಾಗಿ ನಡೆದುಕೊಳ್ಳಬೇಕಾಗುವುದು ಆಗಲೆಂದು ತಿಳಿದುಕೊಂಡರೆ, ಅವನು ಸ್ವಾಭಾವಿಕವಾಗಿ ಮೊದಲು ದೇವರಿಗೆ ವಿಧೇಯನಾಗುವನು ಕ್ರೈಸ್ತ ಮತವೆಂದರೆ ಜಾತಿಯ ಕಟ್ಟಳೆಯನ್ನು ಮುರಿಯುವುದೆಂದು ಅನೇಕರು ಅಭಿಪ್ರಾಯಪಡುತ್ತಿರುತ್ತಾರೆ ಆದರೆ ಕ್ರೈಸ್ತ ಮತದ ಉದ್ದೇಶವು ಅದಲ್ಲ ಜನರು ಪಾಪವನ್ನು ವಿಸರ್ಜಿಸಿ ದೇವರನ್ನು ಪ್ರೀತಿಸಬೇಕೆಂಬುದೇ ಕ್ರೈಸ್ತ ಮತದ ಮುಖ್ಯ ಗುರಿಯಾಗಿರುತ್ತದೆ ಆದಕಾರಣ ಇದು ಸರ್ವರೂ ಅನುಸರಿಸತಕ್ಕದ್ದು ನಮಗೆ ತಿಳಿದಿರುವ ಮಟ್ಟಿಗೆ ಮನುಷ್ಯನು ತ್ರಿಕರಣಶುದ್ಧನಾಗಿರುವುದಕ್ಕೂ ಸತ್ಯಸಂಧನೂ ಆಗುವುದಕ್ಕೆ ಇದು ಹೊರತು ಬೇರೊಂದು ಮಾರ್ಗವು ಇರುವುದೇ ಇಲ್ಲ

ಸ್ವದೇಶದ ವೃತ್ತಾಂತಗಳು.

ಬೆಂಗಳೂರು ಪೇಟೆಯ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಗೋವಿಂದ ರ ಮನೆಗೆ ಕಳ್ಳರು ಬಿದ್ದು ಕೆಲವು ಪದಾರ್ಥಗಳನ್ನು ಅಪಹರಿಸಿರುತ್ತಾರೆ

ಕೆಳ್ಳಗಾಲದ ಹಗೆ ಪೊಲೀಸ್ ಪದ್ಧತಿಯನ್ನು ದಯಾರ್ದ್ರವಾಗಿ ಮಾಡುವುದಕ್ಕೆ ಸರ್ಕಾರದವರು ಮಿ|| ಬಿ.ಆರ್. ತಂಜಾ ಪ್ರಸಿಡೆಂಟ್ ಯವರನ್ನು ಸ್ಪೆಷಲ್ ಸರ್ವೀಸ್ ಜಡ್ಜರಾಗಿ ನೇಮಕಮಾಡಿರುತ್ತಾರೆ ಆ ಕಾಲದಲ್ಲಿ ಮಿ|| ಬಿ. ಎಸ್. ಕೃಷ್ಣಸ್ವಾಮಿಯಂಗಾರ್ಯರು ಸಿವಲ್ ಸರ್ವೀಸ್ ಜಡ್ಜರಾಗಿ ಬದಲಿ ನೋಡುವರು

ನಗರದ ತಾಲೂಕಿನಲ್ಲಿ ಮರೆಟೆ ಕೋಟಿ ಜನರನ್ನು ಹೆಚ್ಚು ಹೆಚ್ಚಾಗಿ ಕರೆದು ತಂದು ಅವರಿಂದ ಕುಮುರಿ ವ್ಯವಸಾಯವನ್ನು ವೃದ್ಧಿ ಮಾಡುವುದಕ್ಕೆ ಸಹಾಯ ಮಾಡಬೇಕೆಂದು ಫಾರೆಸ್ಟ್ ಕನ್ಸರ್ವೇಟರವರು ಮಾಡಿದ ಶಿಫಾರಸನ್ನು ಸರ್ಕಾರದವರು ಒಪ್ಪಿ ಅದಕ್ಕಾಗಿ ಮೂರು ವರುಷಕಾಲ ವರುಷಕ್ಕೆ ೩,೦೦೦ ರೂಪಾಯಿ ನಂತೆ ಖರ್ಚು ಮಾಡಬಹುದೆಂದು ಸ್ಯಾಂಕ್ಷನ್ ಮಾಡಿದ್ದಾರೆ

ಕಳೆದ ಶುಕ್ರವಾರ ಅರಸೀಕೆರೆ ಮುಸಾಫರ್ ಬಂಗಲೆಯ ಬಳಿ ಟ್ರೈಲ್ ಗಾಡಿಯು ವೇಗವಾಗಿ ಹೋಗುತ್ತಿದ್ದಾಗ ಒಬ್ಬ ಬ್ರಾಹ್ಮಣ ಯುವತಿಯು ಯಾವ ಕಾರಣದಿಂದಲೋ ಕಂಬಿಗಳ ಮೇಲೆ ಅಡ್ಡವಾಗಿ ಮಲಗಿದ್ದಳು ಗಾಡಿ ನಡೆಸುತ್ತಿದ್ದ ಮಿ|| ಸಗುಣಸ್ ಎಂಬಾತನು ಅದನ್ನು ಕಂಡು ತಕ್ಷಣವೇ ಸಾಹಸಪಟ್ಟು ಟ್ರೈಲ್ ಗಾಡಿಯನ್ನು ನಿಲ್ಲಿಸಿ ಆಕೆಯ ಪ್ರಾಣವನ್ನು ಕಾಪಾಡಿದರು ಆತನ ಸಾಹಸವನ್ನು ಜನರು ಕೊಂಡಾಡುವರೆಂದು ಒಬ್ಬ ವಾರ್ತಾದಾರರು ತಿಳಿಸುವರು

ಮಂಗಳೂರು ಸಿಟಿ ಮ್ಯಾಜಿಸ್ಟ್ರೇಟರವರ ಮುಂದೆ ಒಬ್ಬ ವರ್ತಕನು ಇತರ ಪದಾರ್ಥಗಳು ಮಿಶ್ರವಾದ ತುಪ್ಪವನ್ನು ವಿಕ್ರಯಮಾಡಿದನೆಂದು ರುಜುವಾತಾದದ್ದರಿಂದ ಸಿಟಿ ಮ್ಯಾಜಿಸ್ಟ್ರೇಟರು ಅವನಿಗೆ ೫೦ ರೂಪಾಯಿ ಜುಲ್ಮಾನೆ, ಇಲ್ಲವೇ ೩ ತಿಂಗಳ ಕಠಿಣ ಸಜಾ ಎಂಬ ಶಿಕ್ಷೆಯನ್ನು ಮೊನ್ನೆ ಮಂಗಳವಾರ ವಿಧಿಸಿರುತ್ತಾರೆ ಆ ತುಪ್ಪವನ್ನು ಸರ್ಕಾರಿ ಕೆಮಿಕಲ್ ಎಗ್ಜಾಮಿನರು ಪರೀಕ್ಷೆ ಮಾಡಿ ನೋಡಿದ್ದರಲ್ಲಿ ಅದರಲ್ಲಿ ಶೇಕಡಾ ೯೧ ರಷ್ಟು ಇತರ ಪದಾರ್ಥಗಳು ಮಿಶ್ರ ಮಾಡಿದ್ದುದಾಗಿ ಗೊತ್ತಾಯಿತು

ಹಿಂದೂ ವಿವಾಹ ಪರಿಷ್ಕರಣ ಸಂಘಗಳನ್ನು ಎಲ್ಲಾ ಕಡೆಗಳಲ್ಲೂ ಕಲ್ಪಿಸಿ, ಕಾಲಾನುಗುಣ್ಯವಾಗಿ ಹಿರಿಯರ ಸಂಪ್ರದಾಯಗಳನ್ನು ತಿದ್ದಿಕೊಳ್ಳುವಂತೆ ಪ್ರೋತ್ಸಾಹಪಡಿಸುತ್ತಿರುವ ಮಿಸ್ ಸಿ. ಎ. ಟೆನ್ನಂಟ್ ಯವರು ಈಗ ಬೆಂಗಳೂರಿಗೆ ಬಂದು ಅಲ್ಲಿ ಹಿಂದೂ ಸ್ತ್ರೀಯರನ್ನೂ, ಪುರುಷರನ್ನು ಕೂಡಿ ಉಪನ್ಯಾಸ ಮಾಡುತ್ತಿದ್ದಾರೆ ಈಕೆಯು ನಾಳೆ ರಾಜಧಾನಿಗೆ ಬಂದು ಟೌನ್ ಹಾಲ್ ಬಂಗಲೆಯಲ್ಲಿ ದೊಡ್ಡ ಮನುಷ್ಯರ ಕೂಟವನ್ನೂ, ನಾಡಿದ್ದು ಸ್ತ್ರೀಯರ ಸಭೆಯನ್ನೂ ನಡಿಸುವರೆಂದು ಕೇಳುತ್ತೇವೆ

ರಾಜಧಾನಿಯ ಕೃಷ್ಣ ಸ್ಕ್ವೇರ್ ಪಕ್ಕದಲ್ಲಿ ಕಟ್ಟಿ ತಯಾರಾಗಿರುವ ದಿವ್ಯವಾದ ಬಂಗಲೆಯಲ್ಲಿ ಕಳೆದ ವಾರ ಗೃಹಪ್ರವೇಶೋತ್ಸವಗಳು ನಡೆದವು ಶುಕ್ರವಾರ ಮಧ್ಯಾಹ್ನ ನಾನಾರು ಬ್ರಾಹ್ಮಣರಿಗೆ ಸಮಾರಾಧನೆಯೂ ಭೂರಿಯೂ ಜರಿಗಿದವು ಸೋಮವಾರ ಅರಸುಗಳಿಗೆ ಔತಣವಾಯಿತು ಶ್ರೀಮನ್ ಮಹಾರಾಜರವರು ದಯಮಾಡಿ ಪಾನಪೂಜೆಯನ್ನು ಸ್ವೀಕರಿಸಿದರು ಅರಮನೆಯ ರಾಣೀವಾಸದವರೂ ಶ್ರೀಮನ್ ಯುವರಾಜರವರೂ ದಯಮಾಡಿದ್ದರು ಅಂದಿನಿಂದ ಮೂರನೇ ಮಹಾರಾಜಕುಮಾರಿಯವರು ನೂತನ ಗೃಹದಲ್ಲಿ ವಾಸಮಾಡುತ್ತಿದ್ದಾರೆ

ಬೆಂಗಳೂರು ಸಿಟಿ ಶೇಷಾದ್ರಿ ಮೆಮೋರಿಯಲ್ ಬಂಗಲೆಯಲ್ಲಿ ಕಳೆದ ಗುರುವಾರ ಸಾಯಂಕಾಲ ಸ್ತ್ರೀಯರ ಒಂದು ಸಭೆಯು ನಡೆಯಿತು ದಂಡು ಮತ್ತು ಸಿಟಿಯಲ್ಲಿರುವ ಎಲ್ಲಾ ಕೋಮುಗಳ ಮುಖ್ಯರಾದ ಸ್ತ್ರೀಯರು ಸೇರಿದ್ದರು ಬ್ರಿಟಿಷ್ ರೆಸಿಡೆಂಟರವರ ಪತ್ನಿಯವರು ಸಭೆಯ ಅಗ್ರಾಸನವನ್ನು ವಹಿಸಿದ್ದರು ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್ ಪ್ರಭುಗಳಿಗೆ ದೆಹಲಿಯಲ್ಲಿ ಸಂಭವಿಸಿದ ಕ್ರೂರಕೃತ್ಯದ ಕಷ್ಟಕಾಲದಲ್ಲಿ ಅವರ ಪತ್ನಿಯವರು ಧೈರ್ಯಸ್ಥೈರ್ಯಗಳನ್ನು ಪ್ರಕಾಶಪಡಿಸಿದ್ದನ್ನು ಕುರಿತು ಸ್ತುತಿಸಿ ಕೊಂಡಾಡಿ, ಆಕೆಯವರಿಗೆ ಬೆಂಗಳೂರಿನ ಸ್ತ್ರೀಯರ ಪರವಾಗಿ ಒಂದು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಬೇಕೆಂದು ತೀರ್ಮಾನವಾಯಿತು

ರಾಜಧಾನಿಯಲ್ಲಿ ಸಾಬೂಸಿಯಾ ಎಂಬ ಸಾಹುಕಾರರು ವ್ಯಾಪಾರಾದಿಗಳನ್ನು ನಡಿಸಿ ನಾಲ್ಕಾರು ಲಕ್ಷ ರೂಪಾಯಿ ಕೂಡಿಸಿಟ್ಟು ಸುಮಾರು ಹತ್ತು ವರುಷಗಳ ಹಿಂದೆ ಕಾಲವಾದಾರಷ್ಟೆ ಅವರ ಆಸ್ತಿಯ ಹಂಚಿಕೆಯ ವಿಷಯದಲ್ಲಿ ಅವರ ನಾಲ್ವರು ಮಕ್ಕಳಿಗೂ ವ್ಯಾಜ್ಯ ನಡೆಯುತ್ತಾ ಇದೆ ಈ ಮಧ್ಯೆ ಇಬ್ಬರು ಮಕ್ಕಳು ಸುಳ್ಳಾದ ಮರಣಶಾಸನವನ್ನು ಬರೆಸಿದರೆಂದು ಮೊಕದ್ದಮೆ ಹುಟ್ಟಿ ವಿಚಾರಣೆಯಾದ ಮೇಲೆ ಮೊನ್ನೆ ಸೋಮವಾರ ಡಿಸ್ಟ್ರಿಕ್ಟ್ ಸೆಷನ್ಸ್ ಜಡ್ಜರಾದ ಮಿ|| ಎಚ್. ಟಿ. ಗೋಪಾಲಯ್ಯಂಗಾರ್ಯರು ತೀರ್ಮಾನವನ್ನು ಹೇಳಿದರು ಆ ಮರಣಶಾಸನವು ಫೋರ್ಜರಿ ಎಂದು ನಿರ್ಣಯಿಸಲ್ಪಟ್ಟಿತು ಸಾಹುಕಾರರ ಇಬ್ಬರು ಮಕ್ಕಳಿಗೆ ಅಂದರೆ ಮಹಮ್ಮದ್ ಮಸೂದ್ ಮತ್ತು ಅಬ್ದುಲ್ ಅಜೀಸ್ ಎಂಬವರಿಗೆ ತಲಾ ೫ ವರುಷ ಕಠಿಣ ಸಜಾ, ೧,೦೦೦ ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿತು ಆ ಉಯಿಲನ್ನು ಬರೆದ ಲಕ್ಷ್ಮೀನಾರಾಯಣನೆಂಬ ಬ್ರಾಹ್ಮಣನಿಗೆ ೧ ವರುಷ ಕಠಿಣ ಸಜಾ, ೨೦೦ ರೂಪಾಯಿ ಜುಲ್ಮಾನೆಯೂ ಆಯಿತು ಅದಕ್ಕೆ ಸಾಕ್ಷಿ ಹಾಕಿದ ಅಬ್ದುಲ್ ಖಾಲಿಕ್, ಸೆಯ್ದ್ ಗೌಸ್ ಎಂಬವರಿಗೂ, ಸೀತಾರಾಮಯ್ಯನೆಂಬ ಬ್ರಾಹ್ಮಣನಿಗೂ ತಲಾ ೧೮ ತಿಂಗಳ ಕಠಿಣ ಸಜಾ, ೧೦೦ ರೂಪಾಯಿ ಜುಲ್ಮಾನೆಯೂ ಆಗಿದೆ ಅಪರಾಧಿಗಳು ಅಪೀಲ್ ಮಾಡುವವರಾಗಿದ್ದಾರೆ

ರೆವಿನ್ಯೂ ಕಮಿಷನರವರ ಹುಕುಂಗಳು.

(೧) ತಾಲ್ಲೂಕ್ ನೌಕರರ ವರ್ಗಾವರ್ಗ

ಹೋಬಳಿ ಶೇಕದಾರರುಗಳು ಮತ್ತು ತಾಲ್ಲೂಕು ನೌಕರದಾರರುಗಳನ್ನು ಒಂದೇ ತಾಲ್ಲೂಕಿನಲ್ಲಿ ದೀರ್ಘಕಾಲ ಇಟ್ಟಿರುವುದು ಕಾರ್ಯಾಂತರಗಳಿಂದ ಸಮರ್ಪಕವಾಗಿ ಕಂಡುಬರುವುದಿಲ್ಲ ಸಾಧಾರಣವಾಗಿ ಒಬ್ಬ ನೌಕರನನ್ನು ಒಂದು ತಾಲ್ಲೂಕಿನಲ್ಲಿ ಐದು ವರುಷಗಳಿಗಿಂತ ಜಾಸ್ತಿಕಾಲ ಇಡಕೂಡದು — ಯಾವನಾದರೊಬ್ಬ ನೌಕರನ ಸಡತೆಯು ಕೇವಲ ಸಮರ್ಪಕವಾಗಿರುವ ಸಂದರ್ಭಗಳಲ್ಲಿ ಅಂತಹವನನ್ನು ಇನ್ನು ಎರಡು ವರುಷಗಳ ಕಾಲ ಇಟ್ಟಿರಬಹುದು ಇದಕ್ಕಿಂತ ಹೆಚ್ಚಾಗಿ ಇಡಬೇಕಾದ ಅವಶ್ಯಕತೆ ಇದ್ದಲ್ಲಿ, ಹಾಗೆ ವರ್ಗಾಯಿಸದೆ ಇರುವುದಕ್ಕೆ ಮುಖ್ಯ ಕಾರಣಗಳನ್ನು ನಮೂದಿಸಿ ಒಂದು ರೆಕಾರ್ಡು ಮಾಡತಕ್ಕದ್ದು ಹೀಗೆ ಮಾಡಿದ ರೆಕಾರ್ಡಿನ ನಕಲನ್ನು ದಾಖಲೆ ಬಗ್ಗೆ, ರೆವಿನ್ಯೂ ಕಮಿಷನರವರ ಅಧಿಕಾರದಲ್ಲಿರುವ ನೌಕರಿಗಳು ಖಾಲಿಬಿದ್ದಾಗ ಬಡತಿಮಾಡತಕ್ಕ ವಿಷಯದಲ್ಲಿ ಆಲೋಚಿಸತಕ್ಕ ಬಗ್ಗೆ ರೆವಿನ್ಯೂ ಕಮಿಷನರವರಿಗೆ ಕಳುಹಿಸತಕ್ಕದ್ದು

(೨) ಭೂಮಿ ಹೋಗರೂ, ಕಂದಾಯದ ವಸೂಲಾತಿಯೂ

ಸಂಸ್ಥಾನದ ಅನೇಕ ಗ್ರಾಮಗಳಲ್ಲಿ ಜಮೀನ್ ಕಂದಾಯವನ್ನು ಭೂಮಿ ಭೋಗಸ್ತರುಗಳೇ ವಸೂಲ್ ಮಾಡುತ್ತಿದ್ದಾರೆ ಇದರಿಂದ ಭೂಮಿ ಹೋಗರುಗಳು ತಾವು ವಸೂಲ್ ಮಾಡಿದ ಹಣವನ್ನು ದುರುಪಯೋಗಪಡಿಸುವುದು ಹೆಚ್ಚುತ್ತಾ ಇದೆ ಹೀಗೆ ಕಂದಾಯವನ್ನು ಪಟೇಲರುಗಳಲ್ಲದೆ ಭೂಮಿ ಹೋಗರುಗಳು ವಸೂಲು ಮಾಡುವುದು ಅಕ್ರಮವಾಗಿಯೂ, ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್‌ಗೆ ವಿರುದ್ಧವಾಗಿಯೂ ಇರುತ್ತದೆ ಆದ್ದರಿಂದ ಡೆಪ್ಯುಟಿ ಕಮಿಷನರುಗಳು ಇನ್ನು ಮುಂದೆ ಕಂದಾಯವನ್ನು ಭೂಮಿಭೋಗಸ್ತರುಗಳು ವಸೂಲ್ ಮಾಡುವ ಪದ್ಧತಿಯನ್ನು ತಪ್ಪಿಸಿ, ಪಟೇಲರೇ ವಸೂಲು ಮಾಡುವಂತೆ ಕಟ್ಟುಮಾಡಿಸಬೇಕು.

ಶ್ರೀಮನ್ ಮಹಾರಾಜರವರ ಸರ್ಕೀಟು.

ಶ್ರೀಮನ್ ಮಹಾರಾಜರವರೂ ಶ್ರೀಮನ್ ಯುವರಾಜರವರೂ ಹಿಂದಿನ ವಾರ ಪರಿವಾರ ಸಮೇತ ಚಿಕ್ಕಮಗಳೂರು ಪ್ರಾಂತ್ಯದಲ್ಲಿ ಸಂಚಾರವಾಡಿಕೊಂಡು ಕಳೆದ ಶುಕ್ರವಾರ ಸಾಯಂಕಾಲ ರಾಜಧಾನಿಗೆ ದಯಮಾಡಿದರು ಕಡೂರು ಡೆಪ್ಯುಟಿ ಕಮಿಷನರಾದ ಮಿ|| ಎ. ಸುಬ್ರಹ್ಮಣ್ಯಯ್ಯರವರು ರಾಜಸಹೋದರರಿಗೆ ದಿವ್ಯವಾದ ಔತಣವನ್ನು ಮಾಡಿಸಿದರು ಚಿಕ್ಕಮಗಳೂರು ಮ್ಯುನಿಸಿಪಾಲಿಟಿಯವರು ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು ಮಹಾರಾಜರವರು ಟೌನ್ ಹಾಲ್ ಬಂಗಲೆಯ ಗೃಹಪ್ರವೇಶವನ್ನೂ, ಲಿಂಗಾಯತ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆಯನ್ನೂ ಮಾಡಿದರು

ಮ್ಯುನಿಸಿಪಲ್ ಅಡ್ರೆಸ್ಸು

ಮಹಾಸ್ವಾಮಿಯವರಿಗೂ ಶ್ರೀಮನ್ ಯುವರಾಜರವರಿಗೂ ಚರಿತ್ರಾರ್ಹವಾದ ಈ ಊರಿಗೆ ನಾವು ಸುಸ್ವಾಗತವನ್ನು ಬಯಸುತ್ತೇವೆ ನಮ್ಮ ಶ್ರೀಮನ್ ಯುವರಾಜರವರು ಈ ಊರಿಗೆ ದಯಮಾಡಿಸಿರುವುದು ಇದೇ ಮೊದಲನೆಯ ಸಾರಿ ಮಹಾಸ್ವಾಮಿಯವರ ಪ್ರಜೆಗಳ ಅಭಿವೃದ್ಧಿಗೆ ಸಾಧಕಗಳಾದ ಅನೇಕ ಏರ್ಪಾಡುಗಳನ್ನು ಮಹಾಸ್ವಾಮಿಯವರ ಸರ್ಕಾರದವರು ಮಾಡಿರುವುದಕ್ಕಾಗಿ ನಾವು ತುಂಬಾ ಕೃತಜ್ಞತೆಯುಳ್ಳವರಾಗಿರುತ್ತೇವೆ ಕಳೆದ ಹದಿನೈದು ವರುಷಗಳಲ್ಲಿ ಕಾಫೀ ವ್ಯಾಪಾರವು ಹಿಂದಕ್ಕೆ ಬಿದ್ದುದರಿಂದಲೂ ಪ್ಲೇಗ್ ಮೊದಲಾದ ಸಾಂಕ್ರಾಮಿಕ ಜಾಡ್ಯಗಳು ತಲೆಹಾಕಿದ್ದರಿಂದಲೂ ಇನ್ನೂ ಇತರ ಕಾರಣಗಳಿಂದಲೂ ಈ ಊರಿನ ಸ್ಥಿತಿಯು ವಿಷಾದಾಸ್ಪದವಾಗಿದ್ದಿತು ಆದರೆ ಮಹಾಸ್ವಾಮಿಯವರ ಅನುಗ್ರಹದಿಂದ ಭವಿಷ್ಯದಲ್ಲಿ ಒಳ್ಳೆಯ ಕಾಲದೇಶಗಳು ನಮಗೆ ಒದಗುತ್ತಿರುವವು ಕಾಫೀ ವ್ಯಾಪಾರವು ತಲೆಯೆತ್ತುತ್ತಿರುವುದು ಕಡೂರಿನಿಂದ ಶ್ರೀರಂಗಪಟ್ಟಣಕ್ಕೆ ಹಾಕಬೇಕೆಂದಿರುವ ರೈಲ್ವೆ ಲೈನಿನಲ್ಲಿ ಈ ಊರನ್ನು ಸೇರಿಸುವುದರಿಂದ ಕಾಫೀ ವ್ಯಾಪಾರಕ್ಕೆ ಮತ್ತಷ್ಟು ಪ್ರೋತ್ಸಾಹವು ದೊರೆಯುವುದು ಸಾಕಾದಷ್ಟು ನೀರಿನ ಸರಬರಾಜಿಗೂ ಡ್ರೇನೇಜಿಗೂ ಅವಕಾಶವಿಲ್ಲದಿರುವುದು. ಈ ಊರಿನಲ್ಲಿ ನೀರಿನ ಸರಬರಾಜು ಕೆಲಸವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಮಹಾಸ್ವಾಮಿಯವರ ಸರ್ಕಾರದವರು ೧೦,೦೦೦ ರೂಪಾಯಿಗಳನ್ನು ಕೊಟ್ಟಿರುವುದಕ್ಕಾಗಿ ತಮಗೂ ತಮ್ಮ ಸರ್ಕಾರದವರಿಗೂ ನಾವು ಬಹಳ ಕೃತಜ್ಞರಾಗಿರುತ್ತೇವೆ ಡ್ರೇನೇಜ್ ಕೆಲಸಗಳಿಗೋಸ್ಕರ ೧೨,೫೦೦ ರೂಪಾಯಿಗಳೂ, ಜನರಿಗೆ ಕಂಪೆನ್ಸೇಷನ್ ಕೊಡುವುದಕ್ಕಾಗಿ ೨೦,೦೦೦ ರೂಪಾಯಿಗಳೂ ತಗಲುವುದಾಗಿ ಹಿಂದೆಯೇ ಅಂದಾಜು ಮಾಡಲ್ಪಟ್ಟಿದ್ದರೂ ದ್ರವ್ಯಾಭಾವದಿಂದ ಅದನ್ನು ಮುಸ್ತಾವಣೆ ಮಾಡಬೇಕಾಗಿರುತ್ತೆ ನೋಡುವುದಕ್ಕೆ ಅರ್ಹವಾಗಿಯೂ, ಆರೋಗ್ಯಪ್ರದವಾಗಿಯೂ ಇರುವ ಬಾಬಾಬುಡನ್ ಬೆಟ್ಟಕ್ಕೆ ಮಹಾಸ್ವಾಮಿಯವರ ಮತ್ತು ಶ್ರೀಮನ್ ಯುವರಾಜರವರ ಸವಾರಿಯು ದಯಮಾಡಿಸಿದ ಕಾಲದಲ್ಲಿ ಅಲ್ಲಿನ ನೋಟವಿಶೇಷಗಳು ತಮಗಳಿಗೆ ವಿಶೇಷವಾದ ಸಂತೋಷವನ್ನುಂಟುಮಾಡಿದವೆಂದು ನಾವು ಕೋರುತ್ತೇವೆ ಇಷ್ಟು ರಮಣೀಯವಾದ ಪ್ರದೇಶವನ್ನು ಮಹಾಸ್ವಾಮಿಯವರು ಇನ್ನು ಮುಂದೆ ಬೇಸಿಗೆಯಲ್ಲಿ ವಾಸಮಾಡುವುದಕ್ಕಾಗಿ ಏರ್ಪಡಿಸಲು ಅವಕಾಶವಾಗಬೇಕೆಂದು ಅರಿಕೆಮಾಡಿಕೊಳ್ಳಲು ಮಹಾಸ್ವಾಮಿಯವರನ್ನು ಪ್ರಾರ್ಥಿಸುತ್ತೇವೆ

ಶ್ರೀಮನ್ ಮಹಾರಾಜರವರ ಪ್ರತ್ಯುತ್ತರ

ಚರಿತ್ರಾರ್ಹವಾದ ಈ ಚಿಕ್ಕಮಗಳೂರು ಮ್ಯುನಿಸಿಪಾಲಿಟಿಯವರು ಒಪ್ಪಿಸಿದ ವಿಜ್ಞಾಪನಾಪತ್ರಿಕೆಯನ್ನು ನಾವು ಅತ್ಯಾದರದಿಂದ ಕಾಲಿಂದೆವು ನೀವುಗಳು ಭಕ್ತಿಪುರಸ್ಸರವಾಗಿ ಮಾಡಿರುವ ಸತ್ಕಾರವು ನಮಗೆ ಅಪಾರವಾದ ಸಂತೋಷವನ್ನುಂಟುಮಾಡಿರುವುದು ಸಂಸ್ಥಾನದ ನಾನಾ ಕಾಮಗಾರಿಗಳನ್ನೂ, ವೈಶ್ಯಗಳನ್ನೂ, ಕೈಗಾರಿಕೆಗಳನ್ನೂ ಅಭಿವೃದ್ಧಿಪಡಿಸುವ ವಿಚಾರದಲ್ಲಿ ನಮ್ಮ ಗೌರ್ನಮೆಂಟಿನವರು ಮಾಡುತ್ತಿರುವ ತರಪೂಡುಗಳು ನಿಮ್ಮಗಳಿಗೆಲ್ಲಾ ಸಮ್ಮತವಾಗಿರುವುದಲ್ಲದೆ ನಮ್ಮ ಪ್ರಜೆಗಳ ಸುಖಸಂಪತ್ತುಗಳನ್ನು ಹೆಚ್ಚಿಸುವುದಕ್ಕೆ ಇವು ಕಾರಣಭೂತವಾದವುಗಳೆಂದು ನಿಮ್ಮಗಳಿಗೆ ತೋರಿರುವುದು ಸಂತೋಷಕರವಾದುದೇ ಸರಿ ನಿಮ್ಮ ಪಟ್ಟಣದ ಸ್ಥಿತಿಯು ಕಳೆದ ಹದಿನೈದು ವರುಷಗಳಿಂದಲೂ ವಿಷಾದಾಸ್ಪದವಾಗಿದ್ದರೂ ಇನ್ನು ಮುಂದೆಯಾದರೂ ನಿಮಗೆ ಒಳ್ಳೆಯ ದಾದೀತೆಂದು ನಾವು ಮನಃಪೂರ್ವಕವಾಗಿ ಕೋರುತ್ತೇವೆ ಚಿಕ್ಕಮಗಳೂರು ಹಾಸನ ಇವುಗಳನ್ನು ರೈಲುಮಾರ್ಗಗಳಿಂದ ಕಡೂರಿಗೆ ಸಂಬಂಧಿಸುವ ವಿಚಾರವು ಪರ್ಯಾಲೋಚನೆಯಲ್ಲಿರುವುದು ನಿಮ್ಮ ಆಶೆಯನ್ನು ಪೂರ್ತಿಗೊಳಿಸುವ ವಿಷಯವು ಸಂಪೂರ್ಣವಾಗಿಯೂ ಪರ್ಯಾಲೋಚಿಸಲ್ಪಡುವುದೆಂದು ನಾವು ಭರವಸೆಕೊಡಬಲ್ಲೆವು ಈ ಪಟ್ಟಣಕ್ಕೆ ನೀರುಸರಬರಾಜು ಮಾಡುವ ವಿಚಾರದಲ್ಲಿ ನಮ್ಮ ಗೌರ್ನಮೆಂಟಿನವರು ತೋರಿಸಿರುವ ಉದಾರತೆಯು ನಿಮ್ಮಗಳ ಮೆಚ್ಚಿಕೆಯನ್ನು ಹೊಂದಿರುವುದು ನಮಗೆ ಸಂತೋಷವನ್ನುಂಟುಮಾಡಿರುವುದು ಈಗ ಹೊಸದಾಗಿ ಕಟ್ಟಬೇಕಾಗಿರುವ ಅಣೆಕಟ್ಟು ಪೂರೈಸಿದರೆ ನಿಮಗೆ ಬೇಕಾಗುವಷ್ಟು ಶುದ್ಧವಾದ ನೀರಿನ ಸರಬರಾಜಿಗೆ ಅವಕಾಶವುಂಟಾಗುವುದು ಈ ಊರಿಗೆ ಡ್ರೇನೇಜ್ ಒದಗಿಸುವ ವಿಚಾರವು ನಮ್ಮ ಗೌರ್ನಮೆಂಟಿನವರ ಯೋಚನೆಯಲ್ಲಿದ್ದರೂ ನೀರಿನ ಸರಬರಾಜಿನ ಕೆಲಸವು ಪೂರೈಸಲ್ಪಡುವವರೆಗೂ ದ್ರವ್ಯಾಭಾವದಿಂದ ಕೈಗೊಳ್ಳಲು ಸಾಧ್ಯವಿರುವುದಿಲ್ಲ ಬಾಬಾಬುಡನ್ ಬೆಟ್ಟದ ವನ ಮತ್ತು ನೋಟಗಳು ಬಹು ರಮಣೀಯವಾಗಿದ್ದು ನಮಗೂ ನಮ್ಮ ಸಹೋದರರಾದ ಶ್ರೀಮನ್ ಯುವರಾಜರಿಗೂ ವಿಶೇಷ ಉಲ್ಲಾಸವನ್ನುಂಟುಮಾಡಿರುತ್ತವೆ ಈ ಭಾಗದ ಪುರೋಭಿವೃದ್ಧಿಗೆ ವಿಶೇಷವಾಗಿ ಸಹಾಯ ಮಾಡಿರತಕ್ಕ ಪ್ಲಾಂಟರುಗಳನ್ನು ಈ ಸಮಯದಲ್ಲಿ ಇಲ್ಲಿ ಎದುರುಗೊಳ್ಳುವುದಕ್ಕೆ ನಮಗೆ ಬಹಳ ಸಂತೋಷವುಂಟಾಗಿರುವುದು ನಮ್ಮ ತಂದೆಯವರಾದ ಶ್ರೀಮನ್ ಯುವರಾಜರವರ ನಾಮಾಂಕಿತದಿಂದ ಪ್ರಸಿದ್ಧವಾಗಿರುವ ಈ ಟೌನ್ ಹಾಲ್ ಕಟ್ಟಡವನ್ನು ನೋಡುವುದಕ್ಕೆ ಕಾಲವನ್ನು ನಾವು ಆತುರದಿಂದ ನಿರೀಕ್ಷಿಸುತ್ತಿದ್ದೆವು ಈ ಊರಿಗೆ ಒದಗಿಯೋಗ್ಯವಾಗಿಯಲ್ಲಿರುವ ವಿಸ್ತಾರವಾದ ಈ ಕಟ್ಟಡವನ್ನು ಪೂರ್ಣವಾಡಿಸುದಕ್ಕಾಗಿ ನಾವು ನಿಮ್ಮಗಳೆಲ್ಲರನ್ನೂ ಅಭಿನಂದಿಸುತ್ತೇವೆ ನಮ್ಮ ತಮ್ಮಂದಿರಾದ ಶ್ರೀಮನ್ ಯುವರಾಜರವರ ವಿವಾಹ ಮಹೋತ್ಸವದ ಜ್ಞಾಪಕವನ್ನು ಶಾಶ್ವತಗೊಳಿಸುವುದಕ್ಕೋಸ್ಕರ ಈ ರೀತಿ ಏರ್ಪಡಿಸುವುದು ಕ್ಕೋಸ್ಕರವೂ ನಿಮ್ಮ ರಾಜಭಕ್ತಿಯೂ ವಿಶ್ವಾಸವೂ ನಮಗೆ ಬಹಳ ಸಂತೋಷವನ್ನುಂಟುಮಾಡಿರುವುದು ನಮಗೂ ನಮ್ಮ ಸಂತತಿಯವರಿಗೂ ನೀವು ದೀರ್ಘಾಯುರಾರೋಗ್ಯಗಳನ್ನು ಬಯಸುವುದಕ್ಕಾಗಿ ನಿಮ್ಮಗಳಿಗೆ ವಂದಿಸುತ್ತೇವೆ

ವೀರಶೈವ ವಿದ್ಯಾರ್ಥಿ ನಿಲಯವನ್ನು ಕಟ್ಟುವುದಕ್ಕೆ ಅಸ್ತಿವಾರ ಕಲ್ಲನ್ನು ಹಾಕುವಾಗ ಶ್ರೀಮನ್ ಮಹಾರಾಜರವರು ಅಪ್ಪಣೆ ಕೊಡಿಸಿದ್ದೇನೆಂದರೆ—

ನಾವು ಯಾವುದೋ ಒಂದು ಸಂದರ್ಭದಲ್ಲಿ ಶೇಖರಿಸಿದ ಹಣವನ್ನು ಜಾಗ್ರತೆಯಲ್ಲಿ ಇಟ್ಟುಕೊಂಡು ವಿದ್ಯಾರ್ಥಿಗಳು ಉಪಯುಕ್ತರಾಗುವುದನ್ನು ತಿಳಿದು ನಮ್ಮ ಮನಸ್ಸಿಗೆ ಬಹಳ ಸಂತೋಷವುಂಟಾಗಿದೆ ನಿಮ್ಮಗಳಲ್ಲಿಯೇ ನೀವು ಚಂದಾ ಹಣವನ್ನು ಎತ್ತಿದ್ದಲ್ಲದೆ ನಮ್ಮ ಮಠಾಧಿಪತಿ ಸ್ವಾಮಿಗಳವರಿಂದಲೂ ಸಹಾಯ ಹೊಂದಿರುವದು ಬಹಳ ತೃಪ್ತಿಕರವಾಗಿರುತ್ತೆ ಈ ಸ್ವಾಮಿಗಳಿಗೆ ಇದಕ್ಕಾಗಿ ನೀವು ಬಹಳ ಕೃತಜ್ಞರಾಗಿರಬೇಕು ಈಗ ನಾವು ಪ್ರತಿಷ್ಠೆಯನ್ನು ಸ್ಥಾಪನೆಮಾಡಿರುವ ವಿದ್ಯಾರ್ಥಿನಿಲಯವು ದಿನೇ ದಿನೇ ಅಭಿವೃದ್ಧಿಸಿ ನಮ್ಮ ದೇಶದ ಇತರೆಡೆಗಳಲ್ಲಿರುವ ಇತರ ಜನಾಂಗಗಳಿಗೆ ಉದಾಹರಣೆಯಾಗಿರಬೇಕೆಂದು ಕೋರುವೆವು ವಿದ್ಯಾರ್ಥಿನಿಲಯಗಳು ಅವರ ನಾನಾ ಕಟ್ಟಡಗಳು ಮತ್ತು ಇವುಗಳು ಅಭಿವೃದ್ಧಿಗೆ ಬರುವುದು ಸಂತೋಷಕರವಾದ ಅಂಶವಾಗಿರುತ್ತೆ ಇಂತಹ ಸಾಹಸಗಳಿಗೆ ನಮ್ಮ ಸರ್ಕಾರದವರ ಪ್ರೋತ್ಸಾಹವು ಉಂಟಾಗಲೂ ಪ್ರೋತ್ಸಾಹಿಸುವವರಲ್ಲಿ ಯಾವ ಸಂದೇಹವೂ ಇರುವುದಿಲ್ಲ

ದಕ್ಷಿಣ ದೇಶದಲ್ಲಿ ಉಪಯೋಗಿಸತಕ್ಕ ಗೊಬ್ಬರಗಳು.

ದಕ್ಷಿಣ ಇಂಡಿಯಾದಲ್ಲಿ ಪ್ರಿಯರು ಮುಖ್ಯ ಜಮಾನುಗಳಿಗೆ ಗೊಬ್ಬರ ಹಾಕುವುದೇ ಇಲ್ಲವೆಂದೂ, ಇನ್ನು ಕೆಲವು ವರುಷಗಳ ಕಾಲ ಉಪಯೋಗಿಸುವ ಸಂಭವವೂ ಇಲ್ಲವೆಂಬದಾಗಿ ಮಿ ಬ್ಯಾಂಕರ್ ರವರು ಹೇಳುತ್ತಾರೆ. ಮುಖ್ಯ ಜಮಾನುಗಳ ಉತ್ಪತ್ತಿಯು ಬಹಳ ಕಡಮೆಯಾಗಿರುವುದೂ, ಆ ಜಮೀನುಗಳ ವ್ಯವಸಾಯಗಾರರು ಸಾಧಾರಣವಾಗಿ ಹಣವಂತರಾಗಿಲ್ಲದಿರುವುದೂ, ಹಾಗೆ ಸ್ವಲ್ಪ ಹಣವಂತರಾಗಿರುವವರಿಗೆ ತರಿ, ಮುಖ್ಯ, ಬಾಗಾಯಿತು ಜಮೀನುಗಳ ತಯಾರಿಯಿಂದ ಅವರು ಸಿಕ್ಕುವ ಗೊಬ್ಬರವನ್ನೆಲ್ಲಾ ಹೆಚ್ಚು ಆದಾಯ ಕೊಡತಕ್ಕ ತರಿ ಮತ್ತು ಬಾಗಾಯಿತು ಜಮೀನುಗಳಿಗೆ ಉಪಯೋಗಿಸುವುದೂ ಇದಕ್ಕೆ ಕಾರಣವೆಂದು ಹೇಳಬಹುದು. ದಕ್ಷಿಣ ಇಂಡಿಯಾದ ಜಮೀನುಗಳೆಲ್ಲಾ ಈಗ ಇರುವುದಕ್ಕಿಂತಲೂ ಹೆಚ್ಚು ಉತ್ಪತ್ತಿಯನ್ನು ಕೊಡತಕ್ಕವುಗಳಾಗಿವೆ. ಆದ್ದರಿಂದ ಆಹಾರ ದಿನಸಿಗಳ ಧಾರಣೆನಾಸಿಯು ಹೆಚ್ಚಾದಾಗ್ಗೆ ರೈತರು ತರಿ ಮತ್ತು ಬಾಗಾಯಿತು ಜಮೀನುಗಳ ಉತ್ಪತ್ತಿಯನ್ನು ಜಾಸ್ತಿಮಾಡಲು ಮೊದಲು ಪ್ರಯತ್ನಪಡುತ್ತಾರೆ. ಮುಖ್ಯ ಇವುಗಳಲ್ಲಿ ಪೂರ್ಣವಾದ ಉತ್ಪತ್ತಿಯು ದೊರೆಯುವ ವರಿವಿಗೂ ಮುಖ್ಯ ವ್ಯವಸಾಯವು ಅಭಿವೃದ್ಧಿಯಾಗುವ ಸಂಭವವು ಕಡಮೆಯಾಗಿರುತ್ತದೆ. ಮುಖ್ಯವಾಗಿ ಬತ್ತದ ಪೈರಿಗೆ ಮಾತ್ರ ಎಕ್ಕ, ಕಾಡುನೀಲಿ, ಹೊಂಗೆ ಮೊದಲಾದ ಅಥವಾ ಅವುಗಳಂತೆ ಗಿಡಗಳ ಸೊಪ್ಪನ್ನು ಹಸುರು ಗೊಬ್ಬರವಾಗಿ ಹಾಕುತ್ತಾರೆ. ಕೆಲವು ಸ್ಥಳಗಳಲ್ಲಿ ದನಗಳ ಕೊಟ್ಟಿಗೆ ಗೊಬ್ಬರ ಮತ್ತು ಸೊಪ್ಪನ್ನು ಗೊಬ್ಬರವಾಗಿ ಹಾಕುವುದುಂಟು. ಅಂತಹ ಪಾಲದವರು, ಕೊಯಮುತ್ತೂರು ಡಿಸ್ಟ್ರಿಕ್ಟ್‌ಗಳಲ್ಲಿ ವಾಸಿಸುತ್ತಿರುವ ಜಮೀನುದಾರರು ಈ ರೀತಿ ಹಸುರು ಗೊಬ್ಬರ ಹಾಕುವುದರಿಂದ ಬತ್ತದ ಉತ್ಪತ್ತಿಯು ಶೇಕಡ ೧೫ ೨೦ ರಷ್ಟು ಜಾಸ್ತಿಯಾಗುವುದೆಂದು ತಿಳಿಯಬರುತ್ತದೆ. ಮತ್ತು ಹಸುರು ಗೊಬ್ಬರಕ್ಕೆ ಬಹಳ ಕಡಮೆ ಖರ್ಚಾಗುವುದು ತಿಳಿಯುತ್ತದೆ.

(೧) ಹರಳೆಣ್ಣೆಯ ಹಿಂಡಿಗಳೆಲ್ಲಾ ಉತ್ತಮವಾದವು. ಬತ್ತ, ಕಬ್ಬು, ಎಲೆ ಮೊದಲಾದ ಪೈರುಗಳಿಗೆ ಮಾತ್ರ ಈ ಗೊಬ್ಬರವನ್ನು ಹಾಕುತ್ತಾರೆ. ಗೋದಾವರಿ ಡಿಸ್ಟ್ರಿಕ್ಟಿನ ರೈತರು ಬತ್ತದ ಪೈರಿಗೆ ಹರಳು ಹಿಂಡಿಯನ್ನು ಬಹಳವಾಗಿ ಹಾಕುವುದರಿಂದ ಈ ಡಿಸ್ಟ್ರಿಕ್ಟಿನವರು ಇದನ್ನು ಬಹಳವಾಗಿ ಹೊರಗಿನಿಂದ ತರಿಸಿಕೊಳ್ಳುತ್ತಾರೆ. (೨) ಬೇವಿನ ಹಿಂಡಿಯನ್ನು ಕೊಡಲು ಕಾಫಿ ಮತ್ತು ಟೀ ಗಿಡಗಳಿಗೆ ಮಾತ್ರ ಗೊಬ್ಬರವಾಗಿ ಹಾಕುತ್ತಿದ್ದರು. ಕೆಲವು ವರುಷಗಳಿಂದೀಚೆಗೆ ತಿನ್ನೆವೆಲ್ಲಿ ಡಿಸ್ಟ್ರಿಕ್ಟಿನ ರೈತರು ಬತ್ತದ ಪೈರಿಗೂ ಬೇವಿನ ಹಿಂಡಿಯನ್ನು ಬಹಳವಾಗಿ ಗೊಬ್ಬರವಾಗಿ ಹಾಕುತ್ತಾರೆ. ಇದು ಹಸುರುಗೊಬ್ಬರಕ್ಕಿಂತ ಹೆಚ್ಚು ಲಾಭಕರವೆಂದು ತಿಳಿಯತಕ್ಕದ್ದಾಗಿದೆ. ಆದರೆ ಕಬ್ಬಿನ ಪೈರಿಗೆ ಕೊಟ್ಟಿಗೆ ಗೊಬ್ಬರ ಮತ್ತು ತಯಾರಿಸಿದ ಗೊಬ್ಬರಗಳ ಕಿ ಇದು ಬಹಳ ಉತ್ತಮವಾದದ್ದೆಂದು ತಿಳಿಯಬರುತ್ತದೆ. (೩) ಜೋಳ, ರಾಗಿ, ಅರಿಸಿನ ಮತ್ತು ಮೆಣಸಿನ ಪೈರುಗಳಿಗೆ ಹರಳು ಹಿಂಡಿಯು ಒಳ್ಳೆ ಗೊಬ್ಬರವಾಗಿದೆ. ಹತ್ತಿ ಬೆಳೆಗೆ ಹರಳು ಹಿಂಡಿಯಿಂದ ಸ್ವಲ್ಪವೂ ಪ್ರಯೋಜನವಿಲ್ಲ. (೪) ಮೀನಿನ ಗೊಬ್ಬರವು ಎಲ್ಲಾ ತರಹದ ಪೈರಿಗೂ ಬಹಳ ಉತ್ತಮವಾದ ಮತ್ತು ಅಗ್ಗವಾದ ಗೊಬ್ಬರ. ಇದನ್ನು ಮರದ ಬೂದಿಯೊಡನೆ ಬೆರಸಿದರೆ ಕಬ್ಬು ಮತ್ತು ಮೆಣಸಿನ ಪೈರುಗಳಿಗೆ ಅತ್ಯುತ್ತಮವಾದ ಗೊಬ್ಬರವಾಗುವುದು. ಈ ಗೊಬ್ಬರವನ್ನು ಬತ್ತದ ಪೈರಿಗೆ ಹಾಕಿದರೆ ಶೇಕಡ ೩೨ ರಷ್ಟು ಬತ್ತವಲ್ಲದೆ, ೫೧ ರಷ್ಟು ಹುಲ್ಲಿನಲ್ಲೂ ಉತ್ಪತ್ತಿಯು ಜಾಸ್ತಿಯಾಗುವುದು.

ಕಣ್ಣಾಗಾಲದ ದಂಗೆ ಮೊಕದ್ದಮೆಯು.

ಸೆಷನ್ ಜಡ್ಜ್ ಮಿಸ್ಟರ್ ಜೀಟರವರ ಕೋರ್ಟಿನಲ್ಲಿ

ಕಳೆದ ೨೬ನೇ ತಾರೀಖಿನ ದಿನ ಮಧ್ಯಾಹ್ನ ಸೆಷನ್ ಜಡ್ಜ್ ಮಿಸ್ಟರ್ ಜೀಟರವರ ಮುಂದೆ ಕಣ್ಣಾಗಾಲದ ದಂಗೆ ನಡೆದ ಮೊಕದ್ದಮೆಯಲ್ಲಿ ತೀರ್ಮಾನವನ್ನು ಹೇಳಿ, ೧೭೯ ಮಂದಿ ಅಪರಾಧಿಗಳನ್ನು ಸೆಷನ್ ವಿಚಾರಣೆಗೆ ಗುರಿಮಾಡಿದರು. ಈ ಮೊಕದ್ದಮೆಯಲ್ಲಿ ಯಾರ ಯಾರ ಮೇಲೆ ಯಾವ ಯಾವ ಅಪರಾಧಗಳು ಸಾಕ್ಷಿಗಳ ಹೇಳಿಕೆಯ ಪ್ರಕಾರ ಹೊರತುತ್ತವೆ ಎಂಬುದನ್ನು ಕಳೆದ ವಾರ ಕೊಟ್ಟಿದ್ದ ಸುದ್ದಿಯಲ್ಲಿ ವಿವರವಾಗಿ ತಿಳಿಸಿರುತ್ತೇವೆ.

೧೭೨ನೇ ನಂಬರಾ ಅಪರಾಧಿ ಕಾಶೀರಂಗನನ್ನು ಸಬ್ ಪೊಲೀಸಿನವರು ಕೈಕೋಳ ಹಾಕಿ ಸರದಿಗೆ ನಿಲ್ಲಿಸಿ ಕರೆದುತಂದರು. ಧರ್ಮಾಧ್ಯಕ್ಷ ಸೆಷನ್ ಜಡ್ಜ್ ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಮಾಡಿದರು. ಮ್ಯಾಜಿಸ್ಟ್ರೇಟರು ಆತನ ಕೈಕೋಳ ಬಿಡಿಸಿಕೊಂಡರು. ಆತನು ಹೇಳಿದ್ದು: ನಾನು ನಿರಪರಾಧಿ. ನನ್ನ ಹೆಸರು ಕಾಶೀರಂಗ, ವಯಸ್ಸು ೩೨, ತಂದೆ ನಂಜುಂಡಪ್ಪ, ಜೀವನ ಜಿರಾಯತು. ಸಾಕ್ಷಿಗಳು ನನ್ನ ಮೇಲೆ ಏನು ಹೇಳಿದ್ದಾರೆಯೋ ತಿಳಿಯದು. ಅವರನ್ನೆಲ್ಲಾ ಮತ್ತೆ ಕರೆ ವಿಚಾರಣೆ ಮಾಡಬೇಕಾದದ್ದಿಲ್ಲ. ಅವರು ಇದುವರೆಗೆ ಹೇಳಿರುವ ಸಾಕ್ಷ್ಯವನ್ನು ಇಟ್ಟುಕೊಂಡು ಮುಂದಿನ ಕ್ರಮ ಜರುಗಿಸಬಹುದು. ನಾನು ದಂಗೆ ಮಾಡಲಾದ ಕೃತ್ಯಗಳನ್ನು ನಡೆಸಿದವನಲ್ಲ. ನೆನ್ನೆ ಸಾಯಂಕಾಲ ೫೧ ಗಂಟೆಗೆ ಈ ಕೋರ್ಟಿನ ಕಟ್ಟೆಯ ಬಳಿಗೆ ಬಂದಿದ್ದೆ. ನಾಳೆ ಕೋರ್ಟು ಎಂದು ತಿಳಿಯದ್ದರಿಂದ ಹೊರಟುಹೋದೆನು. ಈಗ ತಾವು ಬಂದು ಕೋರ್ಟು ನಡೆಯುತ್ತದೆ ಎಂದು ತಿಳಿದು ನಾನಾಗಿಯೇ ಕೋರ್ಟಿಗೆ ಬರುತ್ತಿದ್ದೆ. ಇಲ್ಲಿಗೆ ಎದುರಾಗಿ ಒಂದು ಫರ್ಲಾಂಗ್ ದೂರದಲ್ಲಿ ನಾನು ಬರುತ್ತಿದ್ದಾಗ ಬೀದಿಯಲ್ಲಿ ಪೊಲೀಸಿನವರು ನನ್ನನ್ನು ಹಿಡಿದುಕೊಂಡು ಕೋರ್ಟಿಗೆ ಹೋಗಬೇಕೆಂದು ಹೇಳಿ ಕರೆದುಕೊಂಡು ಹೋದರು. ಈ ಮೊಕದ್ದಮೆಯಲ್ಲಿ ನನ್ನ ಮೇಲೆ ಸಾಕ್ಷಿಗಳವಾರೆ ಸೆಷನ್ ಕೋರ್ಟಿನಲ್ಲಿ ಅವರನ್ನು ಕರೆಸಿಕೊಂಡು ವಿಚಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಎಂಬ ರೀತಿ ಹೇಳಿದನು. ಮ್ಯಾಜಿಸ್ಟ್ರೇಟರು ಕೈಕೋಳಗಳನ್ನು ತೆಗಿಸಿಹಾಕಿ ಕೈಫಿಯತ್ತಿಗೆ ರುಜು ಮಾಡಿಸಿಕೊಂಡು—ನಿನ್ನ ಮೇಲೆ (೧) ಅಕ್ರಮ ಕೂಟದಲ್ಲಿ ಸೇರಿ ದಂಗೆ ಮಾಡಿದ್ದು, (೨) ನಂಜಸಿಂಬವನನ್ನು ಕೊಂದದ್ದು, (೩) ಮಾದಿಸಿಂಬವನನ್ನು ಕೊಂದದ್ದು, (೪) ಸಿದ್ದಸಿಂಬವನನ್ನು ಹೊಡೆದು ಜಖಂ ಮಾಡಿದ್ದು, ಈ ನಾಲ್ಕು ಚಾರ್ಜುಗಳನ್ನು ಹೊರಿಸಿ, ನಿಮ್ಮನ್ನು ಸೆಷನ್ ಕೋರ್ಟಿನಲ್ಲಿ ವಿಚಾರಣೆ ನಡೆಯಬೇಕಾದ್ದು ಎಂಬುದಾಗಿ ಹುಕುಂ ಮಾಡಿರುತ್ತೇನೆ ಎಂದು ತಿಳಿಸಿ, ಸೈಲಿಗೆ ಇತರ ಅಪರಾಧಿಗಳ ಕೂಡ ಕಳುಹಿಸಿದರು.

ಮ್ಯಾಜಿಸ್ಟ್ರೇಟರವರು ಓದಿದ ತೀರ್ಮಾನದಲ್ಲಿ ಈ ದಂಗೆಯ ಪೂರ್ವೋತ್ತರವನ್ನು ಕುರಿತು ಪ್ರಸ್ತಾಪಮಾಡಿ ಕಾರ್ಯಕಾರಣಗಳನ್ನು ಸವಿಸ್ತಾರವಾಗಿ ಕಾಣಿಸಿರುತ್ತಾರೆ. ಕಣ್ಣಾಗಾಲದಲ್ಲಿ ಪರಿವಾರದವರಿಗೂ ಬ್ರಾಹ್ಮಣರಿಗೂ ಉಂಟಾದ ವೈಮನಸ್ಸು, ಬ್ರಾಹ್ಮಣರು ಗ್ರಾಮದ ಪೂರ್ವಾಚಾರವಾಗಿ ಗೋವರ್ಧನವನ್ನು ಹರಾಜುಹಾಕಿ ಪರಿವಾರದವರು ಒಂದೊಂದು ರೂಪಾಯಿ ಮುಟ್ಟಲಿಲ್ಲ ಕೊಡುವ ತೆರಿಗೆ ಇನ್ನು ಮುಂದೆ ತನ್ನ ಜನರನ್ನು ಪರಿವಾರದವರ ವಶಕ್ಕೆ ಕೊಡದೆ ತಾನೆ ಕಟ್ಟುಮಾಡಿಕೊಂಡದ್ದು, ಪಿಟೀಷನುಗಳನ್ನು ಮಾಡಿದ್ದು, ಪಂಚಾಯಿತಿ ಸೇರಿಸಿದ್ದು, ಅಲ್ಲಿ ನಿರ್ಣಯವನ್ನು ಮುರಿದು ಬ್ರಾಹ್ಮಣರಿಗೆ ತೊಂದರೆ ಕೊಟ್ಟದ್ದು, ಪಂಚಾಯಿತಿ ವಿಚಾರದಲ್ಲಿ ದ್ವೇಷದಿಂದ ಕಚೇರಿಗೆ ಹೋಗಿ ದೂರುಕೊಟ್ಟದ್ದು ಇವೇ ಮೊದಲಾದ ವಿಚಾರಗಳನ್ನು ತಿಳಿಸಿ ಈ ದಂಗೆ ನಡೆದ ಕಾರಣವನ್ನು ವಿವರಿಸಿರುತ್ತಾರೆ. ಈ ಅಪರಾಧಿಗಳು ಪಂಚಾಯಿತಿ ಮಾಡಿ ಬ್ರಾಹ್ಮಣರ ಮೇಲೆ ಮುಯ್ಯಿ ತೀರಿಸಿಕೊಳ್ಳಬೇಕೆಂದು ಕಾಶೀರಂಗನ ಮನೆಯಲ್ಲಿ ಗುಂಪುಕೂಡಿ ನಿರ್ಧರಿಸಿ, ದೊಣ್ಣೆ, ಕತ್ತಿ ಮುಂತಾದ ಆಯುಧಗಳನ್ನು ತೆಗೆದುಕೊಂಡು ಕೂಗುತ್ತಾ ಬ್ರಾಹ್ಮಣರ ಮನೆಗಳನ್ನು ಮುತ್ತಿ ಹೊಡೆದು ಬಡಿದು ಕೊಂದದ್ದು, ಅನೇಕ ಮನೆಗಳನ್ನು ಲೂಟಿಮಾಡಿದ್ದು, ೭೦೦ ರಿಂದ ೮೦೦ ಜನರು ದೊಣ್ಣೆ, ಕೊಡಲಿ, ಕತ್ತಿ ಮುಂತಾದವುಗಳ ಸಮೇತ ಬಂದು ಜಮಾಯಿಸಿದ್ದು, ಇದೆಲ್ಲಾ ಈಗ ಕಾಣಿಸಿಕೊಂಡ ಸಾಕ್ಷಿಗಳಿಂದ ಸ್ಥಾಪಿತವಾಗಿರುವುದಾಗಿ ತೀರ್ಮಾನದಲ್ಲಿ ಹೇಳಿರುತ್ತಾರೆ.

ಅಲ್ಲಿನ ಮುಂದಕ್ಕೆ ನ್ಯಾಯಾಧಿಪತಿಗಳು ಈ ಮೊಕದ್ದಮೆಯಲ್ಲಿ ಬ್ರಾಹ್ಮಣರ ಅಪರಾಧ ಏನಿದ್ದರೂ ಇಲ್ಲವೆಂದು ಸಮರ್ಥಿಸಿ, ೧೭೯ ಮಂದಿ ಅಪರಾಧಿಗಳನ್ನೂ ಸೆಷನ್ ವಿಚಾರಣೆಗೆ ಗುರಿಮಾಡಿರುತ್ತಾರೆ. ಈ ದಂಗೆಯ ವಿಚಾರದಲ್ಲಿ ಪೊಲೀಸಿನವರು ಮಾಡಿದ ತನಿಖೆಯ ಕ್ರಮವನ್ನೂ, ಮೈಸೂರು ಸರ್ಕಾರದ ಅಮಲ್ದಾರರು ಮುಂತಾದವರ ವರ್ತನೆಯನ್ನೂ ಕುರಿತು ಹೇಳಿರುತ್ತಾರೆ.

ದೊಂಬಿ ನಡೆದ ಮೇಲೆ ತಾಲ್ಲೂಕು ಮ್ಯಾಜಿಸ್ಟ್ರೇಟರು ಅಮಲ್ದಾರರು, ಇನ್ಸ್‌ಪೆಕ್ಟರ್ ಮುಂತಾದವರು ಕಣ್ಣಾಗಾಲಕ್ಕೆ ಹೋದರು. ಅಲ್ಲಿ ಅವರು ನಡೆದುಕೊಂಡ ರೀತಿ ಸರಿಯಾಗಿರಲಿಲ್ಲವೆಂದೂ, ದೊಂಬಿ ನಡೆದ ಸುದ್ದಿ ತಿಳಿದ ಕೂಡಲೇ ಅಮಲ್ದಾರರು ತಮ್ಮ ಕೂಡ ಪೊಲೀಸಿನವರನ್ನು ಕರೆದುಕೊಂಡು ಹೋಗಿ ಸಾಕ್ಷಿಗಳ ಹೇಳಿಕೆಯನ್ನು ಬರೆದುಕೊಳ್ಳಲಿಲ್ಲವೆಂದೂ ಹೇಳುತ್ತಾರೆ. ಅಮಲ್ದಾರರು ವಿಚಾರಣೆ ಮಾಡಿದ್ದರೆ ಅವರು ಈ ದೊಂಬಿಯ ವೃತ್ತಾಂತವನ್ನು ಸಮಂಜಸವಾಗಿ ಹೇಳಬಲ್ಲರಲ್ಲವೆಂದು ಸೂಚಿಸಿರುತ್ತಾರೆ. ಮತ್ತು ಅವರು ಸಂತೆ ನಡೆಯಿತು ಎಂದು ನೆಪಮಾಡಿ ಅಲ್ಲಿಗೆ ಹೋಗಲಿಲ್ಲ—ಜಮಾದಾರನು ತನಗೆ ಹೇಳಿದ ವಿವರವನ್ನು ಬರೆದುಕೊಳ್ಳಲಿಲ್ಲ. ಮತ್ತು ಅವನು ಕಳುಹಿಸಿದ ರಿಪೋರ್ಟಿನಲ್ಲಿಯೂ ಆದ ಘಟನೆಗಳನ್ನು ಬರೆದಿದ್ದರೂ ಇಲ್ಲದ ವಿಷಯಗಳನ್ನು ತಿಳಿಸಿದ್ದಾರೆ. ಇನ್ಸ್‌ಪೆಕ್ಟರಿಗಾಗಲಿ, ಮಹಲ್ ಜಮಾದಾರನಿಗಾಗಲಿ ಸರಿಯಾದ ಕ್ರಮದಲ್ಲಿ ಸಮಾಚಾರ ಮುಟ್ಟಿಸಲಿಲ್ಲ. ಒಂದು ವೇಳೆ ಮೂಗೂರು ತಮ್ಮ ತಾಲ್ಲೂಕಿನ ಸರಹದ್ದಿಗೆ ಸೇರಿದ್ದಲ್ಲವೆಂಬ ಯೋಚನೆ ಇದ್ದರೆ ಕೃತ್ಯ ನಡೆದ ಸುದ್ದಿಯನ್ನು ನರಸೀಪುರದ ಪೋಲೀಸಿನವರಿಗೆ ತಿಳಿಸಬಹುದಾಗಿತ್ತು. ಅವರು ಇದನ್ನೂ ಮಾಡಲಿಲ್ಲ. ಆದರೂ ಇವರಿಗೆ ಆ ರೀತಿ ಮಾಡಬೇಕೆಂಬ ಯೋಚನೆ ಹೊಳೆಯಲಿಲ್ಲವೆಂದೂ ಹೇಳಬೇಕಾಗಿದೆ.

ನರಸೀಪುರದ ಅಮಲ್ದಾರರ ಮತ್ತು ಇನ್ಸ್‌ಪೆಕ್ಟರ ವರ್ತನೆಯ ವಿಷಯದಲ್ಲಿ ಮ್ಯಾಜಿಸ್ಟ್ರೇಟರು ಕೃತ್ಯ ನಡೆದ ದಿನ್ನ, ಮರುದಿನ ಅವರಿಗೆ ಸುದ್ದಿ ತಿಳಿದಾಗ್ಯೂ ಸೂಪರಿಂಟೆಂಡೆಂಟರು ಹೇಳಕಳುಹಿಸುವ ವರೆಗೆ ಅವರು ಮೂಗೂರಿಗೆ ಹೋಗಲಿಲ್ಲ. ಇನ್ಸ್‌ಪೆಕ್ಟರು ಸರಿಯಾದ ವರ್ತಮಾನ ತಿಳಿಯಲಿಲ್ಲವೆಂದು ಹೇಳುತ್ತಾರೆ. ೪ ಮೈಲಿ ದೂರದಲ್ಲಿ ನಡೆದ ಕೃತ್ಯದ ವಿಷಯ ೩ ಮೈಲಿ ದೂರದಲ್ಲಿರುವ ಸೂಪರಿಂಟೆಂಡೆಂಟಿಗೆ ತಿಳಿಯುವ ತನಕ ಇನ್ಸ್‌ಪೆಕ್ಟರಿಗೆ ತಿಳಿಯದೆ ಹೋಯಿತೆಂದರೆ ಅವರ ಮುತುವರ್ಜಿಯೂ ವರ್ತನೆಯೂ ಎಷ್ಟು ಮಟ್ಟಿನದಾಗಿತ್ತೆಂದು ಊಹಿಸಿಕೊಳ್ಳಬಹುದು. ಸೂಪರಿಂಟೆಂಡೆಂಟರು ಸ್ಥಳಕ್ಕೆ ಹೋಗಿ ಹೇಳ ಕಳುಹಿದ ಮೇಲೆ ಇನ್ಸ್‌ಪೆಕ್ಟರು ಅಲ್ಲಿಗೆ ಹೋಗಬೇಕಾಯಿತು. ಇನ್ಸ್‌ಪೆಕ್ಟರು ಕೃತ್ಯ ನಡೆದಾಗ ಊರಿನಲ್ಲಿ ಇರಲಿಲ್ಲ. ನರಸೀಪುರಕ್ಕೆ ಬಂದ ಮೇಲೆ ವರ್ತಮಾನ ತಿಳಿದಾಗ ಅವರು ಜಮಾದಾರನನ್ನು ಮಾತ್ರ ನೇಮಿಸಿಕೊಂಡು ಬರುವಂತೆ ಮೂಗೂರಿಗೆ ಕಳುಹಿಸಿಬಿಟ್ಟು ಸುಮ್ಮನಾದರು. ಅಮಲ್ದಾರರಂತೆಯೇ ಇವರೂ ಕೃತ್ಯ ನಡೆದ ದಿನವೇ ಮೂಗೂರಿಗೆ ಹೋಗಿದ್ದರೆ ಮುಖ್ಯವಾದ ಅಪರಾಧಿಗಳನ್ನು ಪತ್ತೆಮಾಡಬಹುದಾಗಿತ್ತು. ಇದರಿಂದ ತನಗೆ ಬಂದ ಸುದ್ದಿಯು ನಿಜವಲ್ಲವೆಂದೂ ಅದರಿಂದ ಅವರು ಜಾಗ್ರತೆಪಟ್ಟು ಕೆಲಸಮಾಡಲಿಲ್ಲವೆಂದೂ ಹೇಳುವರು. ಅವರು ಅವರು ಕೃತ್ಯ ನಡೆದ ೩ ದಿನಗಳ ವರೆಗೆ ಅಲ್ಲಿಗೆ ಹೋಗದೆ ಯಾಕೆ ಸುಮ್ಮನಾದರೋ ಗೊತ್ತಾಗುವುದಿಲ್ಲ ಎಂದು ಬರೆದಿರುತ್ತಾರೆ.

ಬಾತ್ಮಿದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರುವ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು. ಆದಕಾರಣ ಬಾತ್ಮಿದಾರರು ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರುವ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವದೆಂದು ಭರವಸೆ ಕೊಡೆವು.

ಬಾತ್ಮಿದಾರರು ವರದಿಗಳಲ್ಲಿ ತೋರಿಸುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲ.

ಕರೆಸ್ಪಾಂಡೆನ್ಸ್

ಆಟಿಟೆರುಗಳು

ಅಯ್ಯಾ,

ಕೆಲವು ಗ್ರಾಮಗಳಲ್ಲಿ ಇರುವ ಆಟಿಟೆರುಗಳು ಬಂದು ಪಕ್ಕಗಳನ್ನು ಆಡಿ ಹೋಗುವುದಲ್ಲದೆ ಇರುವಂತೆ ತೋರುತ್ತೆ. ಆದರೆ ಇನ್ನು ಕೆಲವು ಆಟಿಟೆರುಗಳು ಅಪರೂಪವಾಗಿ ಬಂದು ಹೋಗುತ್ತಿರುತ್ತವೆ. ಇವುಗಳು ಆಡುವುದನ್ನು ನಿರ್ಬಂಧಪಡಿಸಬೇಕೆಂದು ಗೊತ್ತಾಗುವುದಿಲ್ಲ. ಅಲ್ಲದೆ ಪಕ್ಕಗಳನ್ನು ಆಡುವ ಮಾತ್ರದಿಂದ ಇಲ್ಲವೆಂತಲೂ ಅನ್ನುತ್ತಾರೆ. ಆದರೆ ಮೂರು ವರ್ಷಕ್ಕೆ ಒಂದಾವರ್ತಿಯಾದರೂ ಪ್ರತಿಯೊಂದು ಇಲಾಖೆಯನ್ನು ನಿರ್ಣಯವಾಗಿ ಆಡಿಟ್ ಮಾಡಿಸುವುದರಿಂದ ಅನೇಕ ಗುಣದೋಷಗಳು ತಿಳಿಯಬಹುದು. ಈ ವಿಷಯಕ್ಕೆ ಗಮನ ಕೊಡಬೇಕೆಂದು ನಂಬುತ್ತೇನೆ.

ತಾಲ್ಲೂಕ್ ವಾಸಿ

ಅನಾವರಣವು ಕಷ್ಟವು ಸೇರಿತರಾದ ರೈತರು

ಅಯ್ಯಾ,

ತುಂಕೂರು ತಾಲ್ಲೂಕು ಹೆಬ್ಬೂರು ಹೋಬಳಿಗೆ ಸೇರಿದ ಸೂರೇಹಳ್ಳಿ, ದೊಡ್ಡಸಾಬಿಹಳ್ಳಿ, ಬಾಗಿಮುದ್ದನಹಳ್ಳಿ, ಈ ಗ್ರಾಮದ ರೈತರು ಹೇಳಿಕೊಳ್ಳುವ ದೇನೆಂದರೆ—ಮೇಲ್ಕಂಡ ಕೆಂಬಳ್ಳಿ ಮಾಸಿಕೆರೆಗೆ ನಾವುಗಳೆಲ್ಲರೂ ಖಾತೆದಾರರಾಗಿ ತರಿ ಜಮೀನುಗಳನ್ನು ಅನುಭವಿಸುತ್ತಾ ಇದ್ದೇವೆ. ಈ ಕೆರೆ ಹಿಂದೆ ಇರತಕ್ಕ ಜಮಾಬಂದಿ ೧೩ ಸಾವಿರ ರೂಪಾಯಿ ಆಗಬಹುದು. ಈ ಕೆರೆಯಲ್ಲಿ ನಿಲ್ಲತಕ್ಕ ನೀರು ಹಿಂದಿನ ದಿನಗಳಲ್ಲಿ ಮಳೆಗಾಲದಲ್ಲ ಆಗುತ್ತ ಹೋದರು ಬೇಸಿಗೆಯಲ್ಲಿ ನೀರೇ ಇಲ್ಲ. ಕೆಲವು ಜಮೀನುಗಳಿಗೆ ಮಳೆಗಾಲದಲ್ಲಿ ಫಸಲಿಟ್ಟರೆ ಕೊನೆ ನೀರು ಹರಿದು ನಮಗೆ ಕಟ್ಟುಹೋಗುತ್ತೆ. ಬೇಸಿಗೆಯಲ್ಲಿ ಇಟ್ಟರೆ ನೀರು ಇಲ್ಲದೆ ಒಣಗಿ ಹೋಗುತ್ತೆ. ಇದೇ ರೀತಿಯಾಗಿ ಅನೇಕ ವರುಷದಿಂದ ನಮ್ಮ ಫಸಲು ನಷ್ಟವಾಗಿ ಹೋಗುತ್ತೆ. ತಾಲ್ಲೂಕಿಗೆ ಡಿಸ್ಟ್ರಿಕ್ಟಿಗೆ ಅರ್ಜಿ ಕೊಟ್ಟು ಎಷ್ಟು ಹೇಳಿಕೊಂಡರೂ ನೀರು ಬಿಡುತ್ತೇವೆ ಎಂದು ಹೇಳಿದರೇ ಹೊರ್ತು ನೀರು ಬಿಡಲಿಲ್ಲ. ಈ ಸಾಲಿನಲ್ಲಿ ಮುಖ್ಯರು ವರ್ತಮಾನದಿಂದಲ್ಲಿ

...ಕೊಟ್ಟು ಮೇಲೂ ದಿನಕ್ಕೆ ಮೂರು ಬಂದು ನೋಡುತ್ತೇವೆ ಎಂದು ...ರು ಇಷ್ಟರೊಳಗೆ ಅವರ ಮಾರಿ ಬರಲಿಲ್ಲ. ಈಗ ೬೦ ೭೦ ೮೦ ಸಾವಿರ ...ರು ಇಲ್ಲದೆ ಹೋಗಿದೆ. ಗೌಡನನ್ನು ನೀರು ಬಿಡಿ ಎಂದು ಕೇಳಿದರೆ ...ತೆಗೆಯುತ್ತೇನೆ, ನೀರು ಕೆರೆಯೊಳಗೇ ಉಳಿಯಿತು ಎಂದು ನೀರು ಬಿಡು...ವಾದ್ದರಿಂದ ಈ ನೀರು ಎರಡಕ್ಕೂ ಮೂರಡಿ ನ ತೋಟದಲ್ಲಿ ಇದ್ದ ...ವನ್ನು ಮುಚ್ಚಿಬಿಡುತ್ತದೆ. ಈವರೆಗೆ ನಮ್ಮ ಕೆರೆಗಳಲ್ಲಿ ಬರುತ್ತಾ ಇತ್ತು. ...ಹೆಡ್ಡಿಂ ರಿಂಗಿಸ್ಟ್ರಿಯವರು ಇಲ್ಲಿ ಬರುವುದಿಲ್ಲ. ಈ ತೂಬಿನಿಂದ ...ಬರುವುದು ನಮ್ಮ ಪಾಲಿಗೆ ಎಲ್ಲಿ ಬರಬೇಕೋ ತಿಳಿಯದು. ನೀರು ...ದಕ್ಕೆ ಈ ತೊಂದರೆ ಆಗಿದೆ. ಮೈಸೂರು ಗವರ್ನಮೆಂಟಿಗೆ ನಾವು ವಿನ...ಯ ಮಾಡಬಯಸುತ್ತೇವೆ. ನಾವು ಮುಂದೆ ಕೇಳುವ ಯಾವದರಲ್ಲಿ ಕೊಡ... ಇದುವರೆಗೂ ಕೇಳುವುದನ್ನೂ ಕೊಟ್ಟು ಬಹಳ ಬಡವರಾಗಿದ್ದೇವೆ. ...ಗಳಿಂದ ಗವರ್ನಮೆಂಟಿನವರು ನಾವುಗಳು ಬೇಡುವ ಅಂಶಗಳಲ್ಲಿ ...ದರೂ ಮಾಡಿಸಿ ಕೊಟ್ಟರೆ ನಾವು ಉಳುಕೊಳ್ಳುತ್ತೇವೆ. (೧) ...ಮೇಲ್ಭಾಗದಲ್ಲಿ ತರೂರು ಕೆರೆ ಇದೆ. ಅದರಿಂದ ಈ ಕೆರೆಗೆ ನೀರು ಬಿಡಿಸ... (೨) ಈ ಕೆರೆಯನ್ನು ಉದ್ಧಾರ ಮಾಡಿಸಿ ಕೊಡಲಿ. (೩) ಸೂರೇನ ...ಪಕ್ಕದಲ್ಲಿ ಇರತಕ್ಕ ಕೋಲಾರದ ರಂಗಣ್ಣನವರ ಹಣೆಯನ್ನು ಕಲ್ಲು...ದ ಮಾಡಿ ಗಾರೆಯಿಂದ ಇಟ್ಟರೆ ಮೇಲೆ ಬರತಕ್ಕ ನೀರು ಸಲೀಸು ನಮ್ಮ...ಕ್ಕೆ ಬರುತ್ತೆ. ಇಲ್ಲದೆ ಇದ್ದರೆ ವರುಷೇ ವರುಷ ಒಡೆದು ಹೋಗುತ್ತೆ. ...ಆಗುವ ನಷ್ಟ ಹತ್ತಕ್ಕೆಲ್ಲಾ ತರೀ ರೇಟು ಮಾಡಿಸಿ ಕಟ್ಟಿ...ಮಾಡಿ ಕೊಡಲಿ. ಈಗ ಬಂದಿರುವ ದಿವಾನ್ ಸಾಹೇಬರವರು ಹಣವಾದ...ತ ಹು ಏನಾದರೂ ಮಾಡಿ ಕೊಡುತ್ತಾರೆಂದು ನಿಶ್ಚಿತನಾಗಿ ...ಇರುತ್ತೇವೆ.

ಮ ಕಾಶಿ ಬು, ಕೆ ರ ಗಸ್ಲು, ದೊಡ್ಡನಾಗಬು

ಹೊಸ... ಕರ್ನಾಟಕ ಬ್ರಾಹ್ಮಣರು ಮತ್ತು ವರಗಳು

ಸ್ವಾಮಿ,

ಕಾಲಾನುಗುಣವಾಗಿ ಆಚಾರ ವ್ಯವಹಾರಗಳನ್ನು ಬದಲಾಯಿಸಿಕೊಳ್ಳುವ ...ಸ್ಕರ ಸಹ ಪಿದ್ಯಾವಂತರು ನಮ್ಮ ಜನಾಂಗದಲ್ಲಿ ಅಲ್ಲಲ್ಲಿ ಸಂಘಗಳನ್ನು ಏರ್ಪಡಿಸಿಕೊಂಡು ರಾಜ್ಯಾಧಾರವನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿರು... ಕೆಲವು ಮಂದಿ ರಾಜ್ಯಾದಾರಬೇಡ ನಸಿಲವೆಂದೂ ಶಾಸ್ತ್ರವನ್ನು ಪಾಂಡಿತ್ಯ...ದ ಯಾವ ರೀತಿಯಲ್ಲಾದರೂ ಕಲ್ಪನಾರ್ಥ ಮಾಡಬಹುದೆಂದೂ, ಅದ...ಬಿಟ್ಟು ಕಾಲಾನುಸಾರ ಯುಕ್ತಾಯುಕ್ತವಾಗಿ ಕೆಲವು ಬದಲಾವಣೆ ಮಾಡ...ಬೇಕೆಂದೂ ಅಭಿಪ್ರಾಯಪಡುತ್ತಿರುವರು. ಮೇಲ್ಕಂಡ ಪಂಗಡದ ಕೆಲವು ...ರು ಕೆಲವು ವರ್ಷಗಳ ಹಿಂದೆ ತಮ್ಮ ಪಂಗಡದ ವಿದ್ಯಾಭಿವೃದ್ಧಿಗೆ ತಕ್ಕ ...ಮಾರ್ಗಗಳನ್ನು ಮಾಡಿ ಸಾರ್ಥಕಗೊಳಿಸದೆ ತಟಸ್ಥರಾದರು. ಈ ಸತ್ಕಾರ್ಯ...ಕ್ಕೆ ಕೈಕೊಂಡ ಮುಖ್ಯಸ್ಥರು ನಮ್ಮ ಶ್ರೀಮನ್ ಮಹಾರಾಜರವರು ಹೊಸದಾಗಿ ...ಗ ಚಿಕಿತ್ಸಾಲಯವನ್ನು ತೆರೆದಾಗ ಹೇಳಿದ ಒಂದು ಮುಖ್ಯವಾದ ...ಗೆ ಗಮನಕೊಟ್ಟರೆ ಸ್ವಲ್ಪ ಮನಸ್ಸಿಗೆ ಹತ್ತಬಹುದೆಂದು ತೋರುತ್ತದೆ ...ಷ್ಟಿ ಮತ್ತು ಆರೋಗ್ಯ ಈ ವಿಷಯಗಳಲ್ಲಿ ಪ್ರಜೆಗಳೇ ಹೆಚ್ಚು ಹೆಚ್ಚಾಗಿ ...ವಲಂಬಿಗಳಾಗಬೇಕು". ಇದರಂತೆ ವಿವಾಹಾಭಿವೃದ್ಧಿಗೆ ಅನುಕೂಲವನ್ನು ...ವಿದು ವರ್ಷದ ಸಂಖ್ಯೆಯನ್ನು ಹೆಚ್ಚಿಸಿದರೆ ಸದ್ಯ ಫಲವಿಲ್ಲದೇ ಹೋದರೂ ...ಕೆ ಆ ಫಲವನ್ನು ಅನುಭವಿಸಬಹುದು. ಅಲ್ಲದೆ ಈ ಬ್ರಾಹ್ಮಣ ಪಂಗ...ಕ್ಕು, ಕನ್ನಡಿಗರೆಂಬ ಮತ್ತೊಂದು ಬ್ರಾಹ್ಮಣ ಪಂಗಡಕ್ಕೂ ನಡೆ, ನುಡಿ, ...ಕು, ವ್ಯವಹಾರ, ಕೊಡುವ ರೂಪು, ಯಾವುದರಲ್ಲೂ ಎಳ್ಳಷ್ಟಾದರೂ ವ್ಯತ್ಯಾಸವಾಗಿ ಕಂಡುಬರುವುದಿಲ್ಲ. ಈ ಎರಡು ಪಂಗಡದವರೂ ಕಲೆತು ಹೊಂದಿ...ಕೊಳ್ಳುವ ಪದ್ಧತಿಯನ್ನು ಆಚರಿಸಿ ತಂದರೆ ಬಹುಮಟ್ಟಿಗೆ ವರಗಳ ...ಕೊರತೆಯು ಕಡಮೆಯಾಗುವುದೆಂದು ಊಹಿಸಬಹುದು. ಈ ಪಂಗಡದವರ ...ಸ್ಪರ ಸಂಬಂಧ ಬೆಳೆಸಕೂಡದೆಂಬ ಶಾಸ್ತ್ರಸಮ್ಮತವಾದ ನಿರ್ಬಂಧವೇನೂ ಇಲ್ಲ. ...ವಿನ ಕಾಲದಲ್ಲಿ ಪರಸ್ಪರರ ಹಾವಳಿಗೋಸ್ಕರ ಒಂದೂರಿನಿಂದ ಆಗಲಿ ...ಸ ಬೇರೆ ಊರುಗಳಲ್ಲಿ ಸೇರಿಕೊಂಡು ರಸ್ತೆ, ರೈಲು ಮಾರ್ಗಗಳೂ ಯಾವುದೂ ...ದ್ದರಿಂದ ಪರಸ್ಪರ ಸೇರಲು ಅಸ್ಪದವಿಲ್ಲದೆ ತಮ್ಮ ತಮ್ಮ ಪಂಗಡದ ಪರಿಶುದ್ಧತೆ ಕೆಟ್ಟು ಹೋಗುತ್ತೆಂಬ ಭಯದಿಂದ ಅನೇಕ ಕಾಲ ಅಗಲಿದ ಮನಸ್ಸಿನ ...ಬಲ್ಯದಿಂದ ಪರಸ್ಪರ ಸಂಬಂಧ ಬೆಳಸದೆ ತಟಸ್ಥರಾಗಿದ್ದರು. ಈಗ ಅಂಥಾ ...ವರೆಗೇನೆ ಲೇಶಮಾತ್ರವೂ ಆಸ್ಪದವಿಲ್ಲ. ಕಾರಣವೂ ಇಲ್ಲ. ಹೀಗಿರುವಲ್ಲಿ ...ರಡು ಪಂಗಡದ ಮುಖ್ಯಸ್ಥರೂ ಏಕೀಭವಿಸಿ ಆಲೋಚನೆ ಮಾಡಿ, ಕೊಟ್ಟು ...ವ ಪದ್ಧತಿಯನ್ನು ಆಚರಿಸಿದರೆ ತಕ್ಕ ವಿದ್ಯೆಯುಳ್ಳ ವರಗಳ ಸಂಖ್ಯೆಯು ...ಗುವದಕ್ಕೆ ಆಸ್ಪದವಾಗಿ ಸಹೋದರಭಾವವು ವೃದ್ಧಿ ಹೊಂದಿ ದೇಶದ ಏಳಿಗೆ ...ಅವಕಾಶವಾದೀತು. ಈ ರೀತಿ ಸಂಘ ಸಂಸ್ಕಾರವು ಪ್ರಾರಂಭವಾದರೆ ಇತರ ...ಅನುಗುಣ್ಯವಾದ ಮತ್ತು ಆವಶ್ಯಕತೆಯುಳ್ಳ ಇನ್ನೂ ಅನೇಕ ಬದಲಾವಣೆಗ...ನ್ನು ಮಾಡಿಕೊಳ್ಳಬಹುದು.

ಕರ್ನಾಟಕ-ಶರ್ಮ.

[ಈ ಬಾತ್ಮಿಯಲ್ಲಿದ್ದ ಕೆಲವು ಅಪ್ರಕೃತವಾದ ಅಂಶಗಳನ್ನು ಸ್ಥಳಸಂಕೋಚದಿಂದ ಬಿಟ್ಟಿರುತ್ತೇವೆ - ಎಡಿ]

ಬೆಂಗಳೂರು ಮಾಗಡಿ ಕುಣಿಗಲು ರೈಲ್ವೆ

ಸ್ವಾಮಿ,

ಈಗ ೧೬ ತಿಂಗಳ ಹಿಂದೆ ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ...ನ ಪ್ರಮೋಟರ್ ಸುಬ್ಬರಾಯರು ಬೆಂಗಳೂರಿನಿಂದ ಮಾಗಡಿ ಮಾರ್ಗವಾಗಿ ...ಗಲ್ ಕಸಬೆ ವರೆಗೆ ಇರುವ ೫೫ ಮೈಲಿಗೆ ರೈಲು ಹಾಕಬೇಕೆಂದು ಪ್ರಕಟ...ದಾರೆ. ಈಗಿರುವ ಪ್ರೈವೇಟಿನ ಮೇಲೆಯೇ ಕಂಬಿಗಳನ್ನು ಹಾಕುವದಕ್ಕೆ ...ಕಮ್ಮಿ ವೆಚ್ಚಾಗುತ್ತದೆ. ಚಿಕ್ಕಬಳ್ಳಾಪುರದ ರೈಲಿಗೆ ಮೈಲಿಗೆ ೨೦,೦೦೦ ...ಯಿ ಬೇಕಾಗಿರುತ್ತೆಂದೂ, ಪ್ರೈವೇಟಿನ ಮೇಲೆಯೇ ಕಂಬಿ ಹಾಕಿ ರೈಲು ...ವದಕ್ಕೆ ೧೦,೦೦೦ ರೂಪಾಯಿ ಮಾತ್ರ ಖರ್ಚು ತಗಲುವದೆಂದೂ ಹೇಳು...ರೆ. ಈ ಹತ್ತು ಸಾವಿರ ರೂಪಾಯಿನಲ್ಲಿಯೇ ಕಂಬಿಹಾಕುವುದೂ, ಸ್ಟೇಷನ್ ...ಕಟ್ಟುವುದೂ, ಇಂಜಿನ್ ವ್ಯಾಗನ್ ಪ್ಯಾಸೆಂಜರ್ ಗಾಡಿಗಳನ್ನೂ ತಯಾರಿಸುವುದೂ ಸಾಧ್ಯವೆಂದು ತಿಳಿಸಿದಾರೆ. ಈ ಚಿಕ್ಕ ರೈಲು ಗಂಟೆಗೆ ೧೦ ...ಕಮ್ಮಿ ಇಲ್ಲದೆ ಸಾಮಾನು ಮತ್ತು ಪ್ರಯಾಣಿಕರನ್ನು ಸಾಗಿಸುವುದು ...ಸಾಧ್ಯವಾಗಿದೆ. ನಮ್ಮ ಮಾಗಡಿಯಿಂದ ಬೆಂಗಳೂರಿಗೆ ಇರುವ ೨೮ ಮೈಲಿ ರಸ್ತೆಯಲ್ಲಿ ತುಂಬಾ ಉವರ್ ಬಿದಾಷ್ಠಗಳಿದ್ದು, ಪ್ರಯಾಣಿಕರಿಗೂ ಮುಗಿಸ ಪ್ರಾಣಿಗಳಾದ ಎತ್ತುಗಳಿಗೂ ಇರುವ ಕಷ್ಟವು ಅಷ್ಟಿಷ್ಟೆಂದು ಹೇಳತೀರದು. ಮಾಗಡಿ ಮುಖಾಂತರ ಕುಣಿಗಲಿಗೆ ಈ ರೈಲ್ ರೋಡು ಆದಲ್ಲಿ ಪ್ರಯಾಣಿಕರಿಗೂ ವ್ಯಾಪಾರಕ್ಕೂ ತುಂಬಾ ಅನುಕೂಲವಾದೀತು. ಇದೂ ಅಲ್ಲದೆ ಮಾಗಡಿಯಲ್ಲಿ ಆದಿಯಿಂದ ನಡೆದುಬಂದಿರುವ ಕೈಗಾರಿಕೆಯು ಈಗ ಮೂಲೆಗೆ ಬಿದ್ದಿರುತ್ತೆ. ಇಂತಹ ರೈಲು ಆದಲ್ಲಿ ಸಾಮಾನುಗಳನ್ನು ತಯಾರುಮಾಡಿ ದೂರದೇಶಗಳಿಗೆ ರಫ್ತು ಮಾಡುವುದಕ್ಕೆ ಅವಕಾಶವುಂಟಾಗಿ ಕೈಗಾರಿಕೆಯು ಅಭಿವೃದ್ಧಿಗೆ ಬರುತ್ತದೆ. ಕುಣಿಗಲಿನಲ್ಲಿ ಕುದುರೆ ಲಾಯವಿರುವುದರಿಂದ ಆಫೀಸರುಗಳ ಸಹವಾಸ ಜಾಸ್ತಿಯಾಗಿದೆ. ಅಲ್ಲಿ ಬತ್ತ ಮತ್ತು ಬೆಲ್ಲದ ವ್ಯಾಪಾರವು ಬಹಳ ಜಾಸ್ತಿಯಾಗುತ್ತೆ. ಈಗ ಅದು ರಸ್ತೆಯಲ್ಲಾ ಕುಂಕೂರು ಮುಖಾಂತ್ರ ನಡೆಯಬೇಕಾಗಿ, ಪ್ರಜೆಗಳಿಗೆ ತುಂಬಾ ಕಷ್ಟವಾಗಿದೆ. ಈ ಹೊಸ ರೈಲು ಬೆಂಗಳೂರಿಂದ ನೆಲಮಂಗಲ, ಸೋಲೂರು, ಮಾಗಡಿ ಮುಖಾಂತರ ಕುಣಿಗಲ್ ಕಸಬೆ ವರೆಗೆ ಹಾಕಬೇಕು. ಈ ಮಾಗಡಿಯಿಂದ ಬೆಂಗಳೂರಿಗೆ ನಿತ್ಯವೂ ನೂರಾರು ಗಾಡಿಗಳಿಗೆ ಕಮ್ಮಿಯಿಲ್ಲದೆ ಭರ್ತಿ ಸೌದೆ ಗಾಡಿಗಳು ಹೋಗುತ್ತವೆ. ರೈಲು ಆದಲ್ಲಿ ಸೌದೆಯು ಬಹಳವಾಗಿ ಭರ್ತಿಮಾಡಲು ಮಾರ್ಗವಾದೀತು. ಈ ರೈಲನ್ನು ಪ್ರೈವೇಟಿನ ಮೇಲೆಯೇ ಹಾಕುವದರಿಂದ ಬಹಳ ಜಾಗ್ರತೆಯಾಗಿ ಮುಗಿಸಬಹುದು. ಆದ್ದರಿಂದ ನಮ್ಮ ಪ್ರಾಂತ್ಯದ ಅಂದರೆ ಕುಣಿಗಲ್, ಮಾಗಡಿ, ನೆಲಮಂಗಲ, ಬೆಂಗಳೂರು ಪ್ರಜೆಗಳು ಈ ವಿಚಾರದಲ್ಲಿ ಜಾಗ್ರತೆಯಾಗಿ ಷೇರುಗಳನ್ನು ಹಾಕಿ ದ್ರವ್ಯ ಸಹಾಯಮಾಡಿದಲ್ಲಿ ಒಂದು ವರುಷದೊಳಗಾಗಿ ಈ ರೋಡನ್ನು ಪೂರೈಸಬಹುದು. ಇದಕ್ಕೆ ಪ್ರಜಾವಾತ್ಸಲ್ಯಶೀಲರು ಬಹುಬೇಗ ಸಹಾಯಮಾಡುತ್ತಾರೆಂದೂ, ನಮ್ಮ ಶ್ರೀಮನ್ ಮಹಾರಾಜರವರ ಮತ್ತು ದಿವಾನ್ ಸಾಹೇಬರವರ ಗಮನವು ಈ ಭಾಗದಲ್ಲಿ ಬಹು ಜಾಗ್ರತೆಯಾಗಿ ಸಹಾಯಮಾಡುವರೆಂದೂ ಹಾರೈಸುತ್ತೇನೆ.

ಮಾಗಡಿ ಪುರವಾಸಿ

[ಪ್ರಜೆಗಳು ಹಣವನ್ನು ಕೂಡಿಸಿ ನಷ್ಟ ಪ್ರಯೋಜಕವಾದ ಒಡವೆವಸ್ತುಗಳ ಮೇಲೆ ಹಾಕುವ ದುರಭ್ಯಾಸವನ್ನು ಬಿಟ್ಟು, ಕಂಪನಿಗಳನ್ನು ಮಾಡಿಕೊಂಡು ಷೇರುಗಳ ಮೂಲಕ ಹಣವನ್ನು ಶೇಖರಮಾಡಿ ರೈಲ್ ರಸ್ತೆಗಳನ್ನು ಹಾಕಿಸುವುದರಲ್ಲಿ, ತ್ಯಜಿಸುತ್ತಿರುವ ಕಸಬುಗಳನ್ನು ಜೀರ್ಣೋದ್ಧಾರಮಾಡುವುದರಲ್ಲೂ, ಆಮದು ರಫ್ತು ಎಂಬ ವ್ಯಾಪಾರವನ್ನು ವೃದ್ಧಿಮಾಡುವುದರಲ್ಲೂ ಹಿನ ಪ್ರಯೋಗಿಸುತ್ತಾ ಬಂದರೆ ದೇಶಕ್ಕೆ ಬಹು ಉತ್ತಮಸ್ಥಿತಿಯಾಗುವುದಲ್ಲದೆ ದೇಶದ ಐಶ್ವರ್ಯವು ವಿಶೇಷವಾಗಿ ಹೆಚ್ಚುತ್ತದೆ. ಸರ್ಕಾರದ ಹಣದಿಂದಲೇ ಎಲ್ಲಾ ಆಗಬೇಕೆಂದು ನಿರೀಕ್ಷಿಸುವುದು ಫಲಕಾರಿಯಾದದ್ದಲ್ಲ. ಪ್ರಜೆಗಳು ಧನವನ್ನು ಒದಗಿಸಿದಲ್ಲಿ ಸರ್ಕಾರದವರು ಬೇಕಾಗುವ ಸಹಾಯ ಸಂಪತ್ತುಗಳನ್ನು ಒದಗಿಸುತ್ತಾರೆನ್ನುವುದಕ್ಕೆ ಸಂಶಯವಿರಲಾರದು - ಎಡಿ]

ರಿಜಿಸ್ಟ್ರೇಷನ್ ಖಾತೆಯಲ್ಲಿರತಕ್ಕ ಅನಾನುಕೂಲಗಳು

ಆಯ್ಯಾ,

ಖರೀದಿ, ಆಧಾರವೇ ಮೊದಲಾದ ಪತ್ರಗಳನ್ನು ಬರೆಯಬೇಕಾದರೆ ಪತ್ರದಲ್ಲಿ ನಮೂದಿಸಲ್ಪಡುವ ಖರೀದಿ ಯಾ ಆಧಾರದ ಮೊಬಲಗಿನ ಮೇಲೆ ಇಷ್ಟಿಷ್ಟು ಕ್ರಯದ ಛಾಪಾಕಾಗದವೆಂದೂ, ಅದರಲ್ಲಿ ಬರೆಯಲ್ಪಡತಕ್ಕ ಸರತ್ತುಗಳು ಈ ರೀತಿಯೇ ಇರಬೇಕೆಂದೂ ವಿಧಿಯುಂಟಷ್ಟೆ. ಇವುಗಳಲ್ಲಿ ಯಾವ ವಿಷಯದಲ್ಲಿ ತಪ್ಪಿದರೂ ಆ ಬಗ್ಗೆ ನ್ಯಾಯವಾಗಿ ಆಗಬೇಕಾದ ಛಾಪಾಕಾಗದದ ಮೊಬಲಗನ್ನು ತೆಗೆದುಕೊಳ್ಳುವುದಲ್ಲದೆ (ಇಂಪೌಂಡು ಮಾಡುವುದಲ್ಲದೆ) ಸದರಿ ತಪ್ಪನ್ನು ಮಾಡಿದ್ದಕ್ಕಾಗಿ ಡೆಪ್ಯುಟಿ ಕಮಿಷನರ್‌ರವರ ಇಷ್ಟಬಂದ ಪ್ರಕಾರ ಜೆನಲ್ಟಿ (ದಂಡ) ವಸೂಲ್ಮಾಡಬೇಕೆಂಬ ವಿಧಿ ಇರುವುದಾಗಿಯೂ, ಅಂಥ ತಪ್ಪಿತವು ತಿಳುವಳಿಕೆ ಇದ್ದೂ ಮಾಡಲ್ಪಟ್ಟಿದೆಯೋ ಅಲ್ಲವೋ ಎಂಬ ವಿವೇಚನೆಯಿಂದ ಇತ್ಯರ್ಥಪಡಿಸಬೇಕೆಂಬ ನಿರ್ಬಂಧವಿಲ್ಲವೆಂದೂ ಕೇಳುತ್ತೇನೆ. ನಮ್ಮ ದೇಶದ ವಿದ್ಯಾವಂತರಲ್ಲಿ ಕಾನೂನುಗಳನ್ನು ತಿಳಿದವರು ಶೇಕಡ ೫೦ ಜನಗಳು. ಇವರೆಲ್ಲರೂ ಸರ್ಕಾರಿ ನೌಕರಿಯಲ್ಲಿಯೇ ಸೇರಿಹೋಗಿದಾರೆಂದು ಹೇಳಬಹುದು. ಉಳಿದವರೆಲ್ಲರೂ ವಿದ್ಯಾವಂತರಲ್ಲದೆ ಹೋದಾಗ್ಯೂ ಇಹಲೋಕದ ಮತ್ತು ಸಾಂಸಾರಿಕ ವ್ಯಾಪಾರಗಳನ್ನು ಬಿಟ್ಟು ವಿರಕ್ತರೆನ್ನುವುದು ಹೇಗೆ ಸಾಧ್ಯ. ಇಂತಹವರೇ ಹೆಚ್ಚಾಗಿ ಲೇವಾದೇವಿಗಳನ್ನು ಜಮೀನುಗಳ ವಿಲೇವಾರಿಗಳನ್ನೂ ಮಾಡುತ್ತಲೇ ಇರಬೇಕಾಗುತ್ತದೆ. ಈ ಸಂದರ್ಭಗಳಲ್ಲಿ ಇವರು ತಮ್ಮ ಅಕ್ಕಪಕ್ಕದಲ್ಲಿರತಕ್ಕವರ ಪೈಕಿ ಸಾಮಾನ್ಯ ಲೌಕಿಕಜ್ಞಾನವುಳ್ಳಂಥವರ ಹೇಳಿಕೆಯ ಮೇರೆಗೆ ಪತ್ರಗಳನ್ನು ಬರೆಯಿಸಿಕೊಂಡು ಬರುತ್ತಾರೆಯೇ ಹೊರತು ಇಂತಹ ವಿಧಿನಿಷೇಧಗಳ ಪರಿಶೀಲನೆಮಾಡುತ್ತಿರುವುದು ಕೇವಲ ವಿರಳ. ಇಂತಹ ವಿಧಿನಿಷೇಧಗಳ ನಿರ್ಬಂಧವಾದರೋ ಕಾನೂನುಗಳಲ್ಲಿ ಬಹಳವಾಗಿರುತ್ತದೆ. ಇಂತಹ ಪತ್ರಗಳನ್ನು ರಿಜಿಸ್ಟರ್ ಬಗ್ಗೆ ರಿಜಿಸ್ಟ್ರಾರರವರ ಕೈಗೆ ಕೊಟ್ಟಲ್ಲಿ ಅವರು ಅದನ್ನು ಇಂಪೌಂಡು ಮಾಡಿಸುವುದೇ ವಿನಹ ಎಷ್ಟು ಕೇಳಿಕೊಂಡಾಗ್ಯೂ ವಾಪಸು ಪತ್ರವನ್ನು ಕೊಡಕೂಡದೆಂಬ ನಿರ್ಬಂಧವಿರುವುದಾಗಿ ಆಫೀಸಿನವರು ಹೇಳುತ್ತಾರೆ. ಇಂತಹ ವಿಧಿಯು ಏರ್ಪಡಿಸಲ್ಪಡಲು ಕಾರಣವೇನೋ ತಿಳಿಯಲಿಲ್ಲ. ಆದರೆ ಸರ್ಕಾರದ ಪ್ರತಿ ಇಲಾಖೆಯಲ್ಲಿಯೂ ಏರ್ಪಟ್ಟಿರುವ ನಿಬಂಧನೆಗಳೆಲ್ಲವೂ ಪ್ರಯೋಜನಕಾರಿಯಾದವುಗಳೆಂತಲೇ ಸರ್ವರೂ ನಂಬುತ್ತಾರೆ. ಆದರೆ ಈ ನಿಬಂಧನೆಯು ಸರ್ಕಾರಕ್ಕೆ ವಿಶೇಷ ಸಹಾಯಕವಲ್ಲದಿದ್ದರೂ ಪ್ರಜೆಗಳಿಗೆ ತುಂಬಾ ನಷ್ಟಕಾರಿಯೆಂದು ಕಾಣುತ್ತದೆ. ಹೇಗೆಂದರೆ ಮೇಲ್ಕಂಡ ಸಂದರ್ಭಗಳಲ್ಲಿ ಮೂಢರಾದ ಬಡರೈತರು ಹೆಚ್ಚಾದ ನಷ್ಟ ಸಂಭವಿಸಬಹುದೆಂಬ ಭೀತಿಯಿಂದ ಅಂಥಾ ತೊಂದರೆಯನ್ನು ತಪ್ಪಿಸಿಕೊಳ್ಳಲು ಲಂಚವೆಂಬ ರಾಕ್ಷಸನ ಸಹಾಯದಿಂದ ನಿಷ್ಕೃಷ್ಟರಾದ ಅಧಿಕಾರಿಗಳನ್ನು ದುರ್ಮಾರ್ಗಪ್ರವರ್ತಕರನ್ನಾಗಿ ಮಾಡಲು ಪ್ರಯತ್ನಿಸುತ್ತಾರೆ. ಹಾಗಲ್ಲದೆ ನೌಕರವರ್ಗದವರು ಲಂಚಕೋರರೇ ಆಗಿದ್ದ ಪಕ್ಷದಲ್ಲಿ ರೈತರನ್ನು ಬೆದರಿಸಿ ಅವರಿಂದ ಲಂಚ ಕಿತ್ತುಕೊಳ್ಳುವುದರಲ್ಲಿ ಸಹಕಾರಿಯಾಗಿದೆ. ಅಂತಹ ಲಂಚಕೋರರು ಲಂಚ ತಿಂದು ಮೇಲ್ಪಟ್ಟ ಆಫೀಸರುಗಳಿಗೆ ತಿಳಿಯದಂತೆ ಅಲ್ಲಿಯೇ ಕ್ರಮಪಡಿಸಿಬಿಡುತ್ತಾರೆ. ಇಂತಹ ನೀಚಪ್ರವರ್ತಕರನ್ನು ಸರಿಯಾದ ವಿಚಾರಣೆಗೆ ಗುರಿಪಡಿಸಿದ ಹೊರತು ಇವರ ಪುಂಡು ಅಡಗುವುದಿಲ್ಲವೆಂದು ನಮ್ಮ ಡಿಸೆಂಬರ್ ೨೬ನೇ ತಾ ನ ಪತ್ರಿಕೆಯಲ್ಲಿ ಪ್ರಕಟಿಸಿದೆ. ಆದರೆ ಇಂತಹ ಲಂಚಕೋರರುಗಳು ತಾವು ತೆಗೆದುಕೊಂಡ ಲಂಚಕ್ಕೆ ರಶೀತಿಯನ್ನು ಕೊಡುವರೇ? ಅಥವಾ ಇತರರ ಎದುರಿಗೆ ಲಂಚ ತೆಗೆದುಕೊಂಡಾರೋ? ಯಾವುದೂ ಇಲ್ಲ. ಲಂಚ ಕೊಟ್ಟವನು ಕೊಟ್ಟ ಮೇಲೆ ಕ್ರಮ ನಡಿಸಿದರೆ ಅವನೇ ತೊಂದರೆ ಪಡಲೇ ಬೇಕೋ ಏನೋ ಎಂಬುದರಿಂದ ರುಜುವಾತುಪಡಿಸಲ್ಲ. ಒಂದುವೇಳೆ ವಿಚಾರಣೆಗೆ ಗುರಿಪಡಿಸಿದರೆ ಸಾಕ್ಷಿಗಳಿಲ್ಲದೇ ಹೋದ ಮಾತ್ರದ ಕಾರಣದಿಂದಲೇ ರುಜುವಾತಾಗದೆ ಹೋದರೆ ಅವನ ಗತಿ ಅಧೋಗತಿ. ಹೀಗಿರುವಲ್ಲಿ ಲಂಚಕೋರರನ್ನು ಬಯಲಿಗೆ ತರಲು ಯಾರಿಗೆ ತಾನೇ ಸಾಧ್ಯ? ಇಲ್ಲದೆ ಹೋಗಿದ ಪಕ್ಷದಲ್ಲಿ ಕೊಟ್ಟೂ ಕೆಟ್ಟು ಸಂಕಟಪಡುತ್ತಿರುವ ಬಡರೈತರು ಸುಮ್ಮನಿರುತ್ತಾರೆ.

ಮೇಲ್ಕಂಡ ನಿಬಂಧನೆಯು ತಪ್ಪಿತಸ್ಥನು ಶಿಕ್ಷಿಸಲ್ಪಡಬೇಕೆನ್ನುವದಕ್ಕಾಗಿಯೆಂದರೆ ಬಡವರಿಗೆ ಇಷ್ಟು ತೊಂದರೆಯಾಗದಂತೆ ಹಾಗೆ ತಪ್ಪಾದ ಪತ್ರವನ್ನು ವಾಪಸ್ಸುಮಾಡಿ ಅಂತಹ ಛಾಪಾಕಾಗದದ ಮೊಬಲಗನ್ನು ರೀಫಂಡ್ ಮಾಡುವುದನ್ನು ನಿಲ್ಲಿಸಿದರೆ ಶಿಕ್ಷೆಯಾದಂತಾಗುವುದಿಲ್ಲವೇ? ಕಾನೂನು ತಿಳುವಳಿಕೆಯಿಲ್ಲದೆ ಕಳ್ಳತನಮಾಡಿದರೆ ತಪ್ಪಿತಸ್ಥನಲ್ಲವೆಂದು ಹೇಗೆ ಬಿಡುವುದಕ್ಕಾದೀತೆಂದು ಕೆಲವರು ಆಕ್ಷೇಪಿಸಬಹುದು. ಇದರಿಂದ ಕಳ್ಳತನದಿಂದುಂಟಾದಂತೆ ಯಾವ ವಿಶೇಷವಾದ ತೊಂದರೆಯೂ ಜನರಿಗುಂಟಾಗುವುದಿಲ್ಲ. ಪೋಸ್ಟ್ ಇಲಾಖೆಯವರು ಸರಿಯಾದ ಮೇಲ್ವಿಳಾಸ ಬರೆಯದಿರುವ ಕಾಗದವನ್ನು ದೇಶವಲ್ಲೆಲ್ಲಾ ಹೊತ್ತು ತಿರುಗಿಸಿ ವಿಳಾಸದಾರರು ಪತ್ತೆಯಾಗದಿದ್ದಲ್ಲಿ ಬರೆದವನಿಗೇ ವಾಪಸು ಕಳುಹಿಸುವುದಿಲ್ಲವೇ? ಮತ್ತು ತಂತಿ ವರ್ತಮಾನ ಕಳುಹಿಸುವವನು ತನಗೆ ತಿಳುವಳಿಕೆ ಇಲ್ಲದಿದ್ದರೆ ಆ ಇಲಾಖೆಯ ನೌಕರರು ಅವನಿಗೆ ಸರಿಯಾದ ತಿಳುವಳಿಕೆ ಕೊಡಬೇಕೆಂಬ ನಿರ್ಬಂಧನೆ ಇರುವುದಾಗಿ ಕೇಳುತ್ತೇನೆ. ಇದೇ ರೀತಿಯಲ್ಲಿ ಪ್ರಜಾನುಕೂಲ ಕೆಲ್ಸನೆಯಲ್ಲಿ ಅಗ್ರಗಣ್ಯರಾದ ನಮ್ಮ ಸರ್ಕಾರದವರು ತಪ್ಪಾಗಿ ಬರೆಯಲ್ಪಟ್ಟಿರುವ ಪತ್ರವನ್ನು ವಾಪಸು ಕೊಟ್ಟು ಇಲಾಖೆಯವರೇ ಅವರಿಗೆ ಸರಿಯಾದ ತಿಳುವಳಿಕೆ ಕೊಡಬೇಕೆಂಬ ನಿರ್ಬಂಧವನ್ನು ಮಾಡಿದಲ್ಲಿ ಬಹುಮಟ್ಟಿಗೆ ಅನುಕೂಲವಾದೀತು. ಹಾಗಿಲ್ಲದ ಪಕ್ಷದಲ್ಲಿ ಬಡರೈತರು ಈಗಿನಂತೆ ಬಹಳ ಕಷ್ಟನಷ್ಟಗಳಿಗೆ ಗುರಿಯಾಗುವರು. ಜಾರಿಗೆ ಬಂದ ಕಾನೂನುಗಳನ್ನು ತಿಳಿದುಕೊಂಡಿರಬೇಕಾದದ್ದು ಪ್ರತಿ ಒಬ್ಬನ ಕರ್ತವ್ಯವೆಂದು ಹೇಳಬಹುದು. ಆದರೆ ಹಿಂದಿನ ಶಾನುಭೋಗರ ಖಾಸಾ ಕಾನೂನು ಜಾರಿಗೆ ಬಂದ ಕೆಲವು ಕಾಲಾನಂತರ ಇಂತಹ ಹೇಳಿಕೆಯು ಫಲಕಾರಿಯಾದೀತೇ ವಿನಹ ಅದುವರೆಗೆ ಖಂಡಿತವಾಗಿಯೂ ಪ್ರಯೋಜನಕಾರಿಯಾಗಲಾರದೆಂದು ನಂಬುತ್ತೇನೆ. ನಮ್ಮ ಘನವಿದ್ದ ಸರ್ಕಾರದವರು ನಾನು ಕೇಳಿಕೊಂಡ ರೀತಿಯಲ್ಲಾಗಲಿ, ಅಥವಾ ಸರ್ಕಾರದಿಂದ ಗೊತ್ತುಮಾಡಲ್ಪಟ್ಟ ಒಬ್ಬನಿಂದಲೇ ಪತ್ರವನ್ನು ಬರೆಸಬೇಕೆಂಬದಾಗಿಯಾಗಲಿ, ಅಥವಾ ಪ್ರಜಾನುಕೂಲವಾಗುವ ಮತ್ತಾವುದಾದರೂ ಏರ್ಪಾಡುಮಾಡಿ ಪ್ರಜೆಗಳಿಗೆ ಉಂಟಾಗುತ್ತಿರುವ ತೊಂದರೆಯನ್ನು ತಪ್ಪಿಸಬೇಕೆಂದು ಪ್ರಾರ್ಥಿಸುವ

ಬಡ ರೈತ

ತಾಲ್ಲೂಕು ವರ್ತಮಾನಗಳು.

ಶಿವಮೊಗ್ಗೆ.—ಜನವರಿ ತಾ ೧೬ ರಲ್ಲಿ ಮಸರಹಳ್ಳಿಯ ರೈಲ್ವೆ ಪೋಲೀಸ್ ಕಾನ್‌ಸ್ಟೆಬಲ್ ಆಗಿದ್ದ ವೆಂಕಟಿ ಎಂಬುವನು ಮಸರಹಳ್ಳಿ ಸ್ಟೇಷನ್ ಮಾಸ್ಟರವರ ಒಂದು ಗಡಿಯಾರವನ್ನೂ, ದಾವಣಗೆರೆ ಸಾಹುಕಾರರ ಒಂದು ಹತ್ತು ರೂಪಾಯಿ ನೋಟನ್ನೂ, ಒಂದು ಶಾಲನ್ನೂ ಸಹಾ ಕಳವು ಮಾಡಿಕೊಂಡು ಪರಾರಿ ಆದವನನ್ನು ರೈಲ್ವೆ ಪೋಲೀಸ್ ಹೆಡ್ ಕಾನ್‌ಸ್ಟೇಬಲ್‌ರು ಸೀರಾ ತಾಲ್ಲೂಕಿಗೆ ಹೋಗಿ ಆಸಾಮಿಯನ್ನು ಪತ್ತೆಮಾಡಿ ಹಿಡಿದುಕೊಂಡು ಬಂದು ಶಿವಮೊಗ್ಗ ಮ್ಯಾಜಿಸ್ಟ್ರೇಟರವರಲ್ಲಿ ವಿಚಾರಣೆಯಾಗುತ್ತಿದೆ.—ಇದೇ ತಾ ೨ ರಲ್ಲಿ ಶಿವಮೊಗ್ಗಾ ಸ್ಟೇಷನ್‌ನಲ್ಲಿ ಎರಡು ಎಣ್ಣೆ ವ್ಯಾಗನ್‌ಗಳಿಗೆ ಬೆಂಕಿ ಬಿದ್ದು ಸುಟ್ಟುಹೋಗಿ ಸರಕು ನಷ್ಟವಾಯಿತು. ಕಾರಣ ತಿಳಿಯಲಿಲ್ಲ.

ನಂಜನಗೂಡು.—ಈ ನಂಜನಗೂಡು ಟೌನ್‌ನಲ್ಲಿ ಕೆಲವು ಕಡೆ ಬೀಗಗಳನ್ನು ತೆಗೆದುಹಾಕಿ ಯಾವ ಮಾಲನ್ನೂ ಅಪಹರಿಸದೆ ಕಳ್ಳರು ಹೊರಟುಹೋಗುತ್ತಿದ್ದರು. ಇಂಥಾ ಕಳ್ಳರನ್ನು ಕಂಡುಹಿಡಿಯಬೇಕೆಂದು ಟೌನ್ ದಫೇದಾರ್ರು ಮತ್ತು ಕಾನ್‌ಸ್ಟೇಬಲ್‌ಗಳು ಮುತುವರ್ಜಿಯಿಂದ ಗಸ್ತುಮಾಡುತ್ತಾ ಇದ್ದರು. ಇದೇ ತಾ ೩ ನೇ ರಾತ್ರಿ ಯಾರೋ ದುಷ್ಟರು ಸಾಹುಕಾರ್ ಪಾಪಣ್ಣನವರ ಮಳಿಗೆಯ ಬೀಗವನ್ನು ತೆಗೆದು ಕೆಲವು ಅಡಿಕೆ ಮೂಟೆ ವಗೈರೆ ೧೦೦ ೧೫೦ ರೂಪಾಯಿನ ಮಾಲುಗಳನ್ನು ತೆಗೆದು ಇರಿಸಿದ್ದದ್ದನ್ನು ಆ ರಾತ್ರಿ ೩ ಘಂಟೆ ಸಮಯದಲ್ಲಿ ಗಸ್ತಿಗೆ ಬಂದಿದ್ದ ಕಾನ್‌ಸ್ಟೇಬಲ್ ರಾಮಯ್ಯ, ಟೌನ್ ದಫೇದಾರ್ ಸೈಯದ್ ಹುಸೇನ್ ಸಾಹೇಬರು ಸಹ ನೋಡಿ ಸದರಿ ಮಾಲಿನ ಬಗ್ಗೆ ಕಳ್ಳರು ಉಸ್ತುವಾರಿ ಇಟ್ಟು ಮಾಲೀಕರಿಗೆ ಕೂಡಲೇ ತಿಳಿಸಿದ್ದರ ಮೇಲೆ ಸದರಿ ಸಾಹುಕಾರ್ರು ಬಂದು ನೋಡಿ ಬೇಗ್ಗೆ ಈ ಟೌನ್ ಕೆ ೩ ಕಾಳ ಮತ್ತು ಇವನ ಭಾವ ನಂಜುಂಡೈಯ್ಯನ ಮನೆಗಳನ್ನು ಝಡತಿ ಮಾಡಿಸಿದ್ದರಲ್ಲಿ ೩೦೦ ೭೦೦ ರೂಪಾಯಿನ ಮಾಲುಗಳು ಸದರಿ ಸಾಹುಕಾರ್ರ ಬಾಬ್ತು ದೊರೆತಿರುತ್ತೆ. ಇವರು ಇದೇ ರೀತಿ ಈ ಟೌನ್‌ನಲ್ಲಿ ಜೂಜಾಟವಾಡುವ ದುಷ್ಟರ ಮೇಲೂ ಕೇಸ್ ಮಾಡಿಸಿ ಜೂಜಾಟವನ್ನು ಬಂದುಮಾಡಿಸುತ್ತಾರೆಂದು ನಂಬಿದೇನೆ.

ಚಿತ್ರದುರ್ಗ.—ದಿನಸಿ ಧಾರಣೆಗಳು ದಿನೇ ದಿನೇ ಹೆಚ್ಚುತ್ತಾ ಇದೆಯೇ ಹೊರತು ಕಮ್ಮಿಯಾಗಲಿಲ್ಲ. ಬೆಳಗೇನೋ ಸಮೃದ್ಧಿಯಾಗಿ ಆಗಿದೆ. ಬಡಜನರಿಗೆ ಈಗಿನ ಸುಗ್ಗಿ ಕಾಲಕ್ಕಿಂತಲೂ ಈಗ್ಗೆ ೧೫ ವರ್ಷದ ಹಿಂದೆ ಬಂದಿದ್ದ ಕ್ಷಾಮಕಾಲವೇ ಅನುಕೂಲವಾಗಿತ್ತು. ಈಗ ರೂಪಾಯಿಗೆ ೬ ಸೇರು ಹೊಸಕ್ಕಿ, ೭½ ಸೇರು ಹಳೆ ಅಕ್ಕಿ, ರಾಗಿ ೧೭ ೧೮ ಸೇರು, ಬಾಕಿ ದಿನಸಿಗಳು ತುಟ್ಟಿಯಾಗೇ ಇವೆ.—ನಮ್ಮ ಡೆಪ್ಯುಟಿ ಕಮಿಷನರ್‌ರವರು ಜಮಾಬಂದಿಗೋಸ್ಕರ ಜಗಳೂರಿಗೆ ಹೋಗಿದಾರೆ. ಸೆಷನ್ಸ್ ಜಡ್ಜಿ ಸಾಹೇಬರು ಮೊಕದ್ದಮೆಗಳನ್ನು ಪೂರೈಸಿಕೊಂಡು ವಾಪಸು ತೆರಳಿದರು. ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಮಿ ಬಿ ದಾಸಪ್ಪನವರು ಇಲ್ಲಿಗೆ ಬಂದಿದ್ದು ಅವರ ಇಲಾಖೆ ಕಾರ್ಯಗಳನ್ನು ತೀರಿಸಿಕೊಂಡು ವಾಪಸು ಹೋದರು. ಈ ಆಫೀಸರರ ನಡವಳಿಕೆ ನಿಜಕ್ಕೆ ಇವುಗಳ ವಿಷಯದಲ್ಲಿ ಪ್ರಜೆಗಳು ಇವರನ್ನು ಶ್ಲಾಘಿಸುತ್ತಾ ಇದಾರೆ. ಆದರೆ ಇವರು ಕೇವಲ ಆರೋಗ್ಯಸ್ಥಿತಿಯಲ್ಲಿರತಕ್ಕ ಮುಖಮ್ಮದೀಯ ಬಾಲಕರಿಗೆ ಹೊಸ ಕಟ್ಟಡದಲ್ಲಿ ಜಾಗಾ ಕೊಡಿಸಲಿಲ್ಲ. ಆ ಹುಡುಗರ ಮತ್ತು ಎ ವಿ ಸ್ಕೂಲ್ ಹುಡುಗರ ಆಟದ ಜಾಗಾ ದೊಡ್ಡ ಮನುಷ್ಯರ ವಶಕ್ಕೆ ಸೇರಿ ಹುಡುಗರಿಗೆ ತೊಂದರೆಯಾಗಿರತಕ್ಕದ್ದನ್ನು ಅವರು ತಪ್ಪಿಸಲಿಲ್ಲ.—ಈ ಊರು ಸಾಹುಕಾರ ಮ|| ಎಂ ಕಾಡಪ್ಪನವರ ಮೇಲೆ ಪಾಮೂಲಿನಂತೆ ಈಗಲೂ ಮ್ಯುನಿಸಿಪಾಲಿಟಿಯವರು ರಿಪೋರ್ಟು ಪೋಲೀಸ್ ಇಲಾಖೆಯವರೆಲ್ಲಾ ಸೇರಿ ೧-೧ ಕ್ರಿಮಿನಲ್ ಫಿರ್ಯಾದುಗಳನ್ನು ತಂದಿದಾರೆ. ಅತನ ದಸ್ತಗಿರಿಗೆ ಸಬ್ ಡಿವಿಷನ್ ಮ್ಯಾಜಿಸ್ಟ್ರೇಟರವರು ವಾರಂಟು ಕೊಟ್ಟಿದಾರೆ. ಸಾಹುಕಾರನು ಪತ್ತೆಯೇ ಇಲ್ಲ. ಆತನ ಮನೆಯವರು ಗೋಳಾಡುತ್ತಿದಾರೆ.

ಮಂಜರಾಬಾದು ತಾ|| ಹೋಗಿಗಲ್.—ಶ್ರೀಮನ್ ಮಹಾರಾಜರವರೂ ಶ್ರೀಮನ್ ಯುವರಾಜರವರೂ ಪರಿವಾರದೊಡನೆ ತಾ ೭ ರಲ್ಲಿ ಚಿಕ್ಕಮಗಳೂರಿಂದ ಮೈಸೂರಿಗೆ ಪಯಣಮಾಡುತ್ತಾರೆಂದು ಅಂತು ಕಾಪಿಪ್ಲಾಂಟರ್

ಮ|| ಡಿ ರಾಂತಮಲ್ಲೀಗೌಡರ? ಅವರ ಸಹೋದರರಾದ ಮ ಡಿ ನಂಜೇಗೌಡರೂ ಮಂಜರಾಜಾಪು ಕೋಟೆ ಬಳಿ ಒಪು ಸುಂದರವಾದ ಮಂಟಪವನ್ನು ಕಟ್ಟಿ ಅಲಂಕರಿಸಿ ಮಂಗಳಕರವಾದ್ಯ ಬಿರುದಾವಳಿಗಳ ಸಮೇತ ಸ್ಕೂಲ್ ಬಾಲಕ ಬಾಲಕಿಯರಿಂದಲೂ ಪುರಜನರೊಡನೆಯೂ ಕಾದಿದ್ದರು ಆಗ್ಗೆ ಇಕ್ಸಿಕ್ಯೂಟಿವ್ ಇಂಜನಿಯರ್ ಮ|| ಎ ಪುಟ್ಟುಸ್ವಾಮಯ್ಯನವರೂ, ಸಬ್ ಡಿವಿಜನ್ ಆಫೀಸರ್ ಮ|| ಸಿ ವಸಾಬ್ಯಯನವರೂ ಅಮಲ್ದಾರ್ ಮ|| ಎಸ್ ಗೋಪಾಲಕೃಷ್ಣಯ್ಯಂಗಾರ್ಯರೂ ಇಂಜನಿಯರ್ ಮ|| ರಾಮಾನುಜನಾಯುಡುಯವರೇ ಮುಂತಾದ ಅಧಿಕಾರಿಗಳೂ ಸದರಿ ಮಂಟಪಕ್ಕೆ ಬಂದು ಸೇರಿದರು ಸರ್ವರೂ ಈ ರೀತಿ ಸಹಸ್ರಾರು ಜನ ಸಮೂಹದೊಡನೆ ಎದುರು ನೋಡುತ್ತಿರುವಲ್ಲಿ ದಿವ್ಯಸವಾರಿಯು ಸುಮಾರು 1 ಘಂಟೆ ಸಮಯಕ್ಕೆ ಮಂಗಳವಾದ್ಯ ಘೋಷದೊಡನೆ ಚಿತ್ತೈಸಿತು ಸ್ಕೂಲ್ ಬಾಲಕ ಬಾಲಕಿಯರಿಂದ ಶ್ರೀಯುತಪ್ರಾರ್ಥನ ಮಂಗಳವಾಗುತ್ತಿರುವಲ್ಲಿ ಮಹಾಸ್ವಾಮಿಯವರಿಗೆ ಮೇಲ್ಕಂಡ ಸಹೋದರರೂ ಆಫೀಸರುಗಳೂ ಹಾರ ತುರಾಯಿ ನಜರು ಒಪ್ಪಿಸಿದ್ದನ್ನು ಬಹು ವಿಶ್ವಾಸದಿಂದ ಸ್ವೀಕರಿಸಿ ಕುಶಲಪ್ರಶ್ನೆಯುಂಗೈದು ಮಂಗಳವಾದ್ಯ ಮೊಳಗುತ್ತಿರುವಲ್ಲಿ ಮಹಾಸ್ವಾಮಿಯವರ ದಿವ್ಯಸವಾರಿಯು ಮುಂದಕ್ಕೆ ಚಿತ್ತೈಸಿತು ಎಳಕ ಮೇಲ್ಕಂಡ ಸಹೋದರರು ಆಫೀಸರುಗಳನ್ನು ಅಲ್ಪಾಹಾರದಿಂದ ತೃಪ್ತಿಪಡಿಸಿದರು ಈ ಸಹೋದರರು ಮಾಡಿದ ಅಮೋಘವಾದ ಏರ್ಪಾಡು ಮರ್ಯಾದೆ ಮತ್ತು ಉಪಚಾರಕ್ಕೆ ಸಂತೋಷಪಟ್ಟು ಅವರನ್ನು ವಂದಿಸಿ ತೆರಳಿದರು

ಫ್ರೆಂಚ್‌ರಾಕ್ — ಪಟ್ಟಣ ಇನ್ನೂ ಅಷ್ಟು ಆರೋಗ್ಯಕರವಾಗಿಲ್ಲ ಸುತ್ತುಮುತ್ತಲಿನ ಗ್ರಾಮಾಂತರಗಳಲ್ಲಿ ಕಾಲರಾ ಉಪದ್ರವ ಸ್ವಲ್ಪಮಟ್ಟಿಗೆ ಕಮ್ಮಿಯಾಗಿರುವಂತೆ ಕಾಣುತ್ತದೆ ಬೆಳಲಿನ ಬಗೆಯು ಬಹಳ ಹೆಚ್ಚಾಗಿದೆ ಧಾರಣೆ ವಾಸಿಗಳಂತೂ ಹೆಚ್ಚಾಗುತ್ತಿದೆಯೇ ಹೊರತು ಕಡಮೆಯಾಗಲಿಲ್ಲ ಅಕ್ಕಿ ರೂ 1-7 ಸೇರೂ, ರಾಗಿ 11 ಸೇರೂ ಇದೆ — ತಾ ೪ ನೇ ಬುಧವಾರದ ದಿವ ರಾತ್ರಿಯಲ್ಲಿ ಬಜಾರಿನಲ್ಲಿರುವ ಚಿಕ್ಕನಂಜಶೆಟ್ಟರ ದೊಡ್ಡ ಅಂಗಡಿಗೆ ಅಕಸ್ಮಾತ್ತಾಗಿ ಬೆಂಕಿ ಬಿದ್ದು ಅಂಗಡಿಯಲ್ಲಿದ್ದ ಸಾಮಾನುಗಳೆಲ್ಲಾ ಸಂಪೂರ್ಣವಾಗಿ ಸುಟ್ಟುಹೋಯಿತು ನಮ್ಮ ಸಬ್ ಇನ್‌ಸ್ಪೆಕ್ಟರವರು ಕೂಡ್ಲೆ 8 ಜನ ಪೊಲೀಸಿನವರನ್ನು ಕರೆದುಕೊಂಡು ಹೋಗಿ ಬೆಂಕಿಯನ್ನು ಆರಿಸುವದಕ್ಕೆ ಪ್ರಯತ್ನಪಟ್ಟರು ಮತ್ತು ಊರಿನ ಜನಗಳೂ ಹೋಗಿ, ಇತರ ಮನೆಗಳಿಗೆ ಬೆಂಕಿ ವ್ಯಾಪಿಸದಂತೆ ಸಾಹಸಪಟ್ಟದ್ದು ಸಂತೋಷವಾಗಿದೆ — ಇಲ್ಲಿಗೆ ಸುಮಾರು 3 ಮೈಲಿ ದೂರದಲ್ಲಿರುವ ಹಿರೀಮರಳಿ ಗ್ರಾಮದಲ್ಲಿ ಹನುಮನೇಬುನವನು ಮತ್ತೊಬ್ಬನನ್ನು ಪಿಚ್ಚುಕೊಡಲಿ ಕಾವಿನಿಂದ ಹೊಡೆದದ್ದು ರುಜುವಾತಾಗಿ ಕಳೆದ 11 ನೇ ತಾ ಸದರಿ ಹನುಮನಿಗೆ ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಸಜಾವೂ ಜುಲ್ಮಾನೆಯೂ ಆಯಿತು

ಪ್ರಾಕೃತಿಕ ಭೂಗೋಳದ ನೋಟ್ಸ್.

27

ಸ್ಕೂಲ್ ಮಾಸ್ತರುಗಳು ಮತ್ತು ವಿದ್ಯಾರ್ಥಿಗಳಲ್ಲಿ ವಿಜ್ಞಾಪನೆ — ತಾವುಗಳು ಸ್ವಲ್ಪ ಕಾಲದಲ್ಲಿಯೇ ಪರೀಕ್ಷಾ ಆರ್ಡರುಗಳನ್ನು ಕಳುಹಿ ನನ್ನನ್ನು ಪ್ರೋತ್ಸಾಹಿಸುವುದಕ್ಕಾಗಿ ಬಹಳ ಕೃತಜ್ಞನಾಗಿರುತ್ತೇನೆ ಈ ಪುಸ್ತಕವು ಅನೇಕ ನಕ್ಷೆಗಳನ್ನೊಳಗೊಂಡಿರುತ್ತದೆ ಮತ್ತು ಅನೇಕ ಪ್ರಶ್ನೆಗಳಿಗೆ ಉತ್ತರಗಳು ಬರೆಯಲ್ಪಟ್ಟಿರುವುದರಿಂದ ಈಗಿನ ಪರೀಕ್ಷಾ ಪ್ರಶ್ನೆ ಪತ್ರಿಕೆಗಳಿಗೆ ಉತ್ತರಗಳನ್ನು ಬರೆಯಲು ತುಂಬಾ ಸಹಕಾರಿಯಾಗಿರುತ್ತೆ ಸ್ವಲ್ಪ ಪ್ರತಿಗಳು ಮಾತ್ರ ಪ್ರಿಂಟಾಗುವುದರಿಂದ ಆರ್ಡರುಗಳಿಗೆ ಮೊದಲು ಕಳುಹಿಸಲ್ಪಡುವುವು ಕ್ರಯ 1 ಆಣೆ ೬ ಪೈ

ವಿಳಾಸ ಎಂ ಪಿ

ಲಿಂಗಪ್ಪಯ್ಯ, ಹೆಡ್ ಮಾಸ್ಟರ್, ಎ ವಿ ಸ್ಕೂಲ್, ಇಟ್ಟಿಗೆಗೂಡು, ಮೈಸೂರು

ವೆಂಕಟರಮಣಸ್ವಾಮಿ ಸಹಾಯ.

ಸುಲಭೋಪಾಯ ಉಪಾಯ

ಈ ಹೊಸ ವರ್ಷಾದಿಗೆ ದೇಶಾಭಿಮಾನಿಗಳ ಪ್ರೋತ್ಸಾಹವು ಬೇಕೆಂದು ಎಷ್ಟು ಖ್ಯಾತಿಯಾದ ಮಂಕೆಯುರ್ವೇದನ ಟಿನ್ ೧ಕ್ಕೆ ೩ ಆಣೆ ೬ ಪೈ ಬರುವ ರೀತಿ ಹೇಗೆಂದರೆ — ನಮ್ಮ ವಿಳಾಸಕ್ಕೆ ನಿಮ್ಮ ಅಡ್ರೆಸ್ಸಿನೊಡನೆ ೩ ಆಣೆ ೬ ಸ್ಟಾಂಪನ್ನು ಕಳುಹಿಸಿದರೆ ನಿಮಗೆ ಒಂದು ಕೂಪನ್ ಕಳುಹಿಸುತ್ತೇವೆ ಆ ಕೂಪನ್ನಿನ ಹಿಂಭಾಗದಲ್ಲಿ ನಿಮ್ಮ ಅಡ್ರೆಸ್ ಬರೆದು ಈ ಕೂಪನ್ನಿನೊಡನೆ ೧೪ ಆಣೆ ಕಳುಹಿಸಿದರೆ ಆಗ ೪ ಕೂಪನ್‌ಗಳನ್ನು ಕಳುಹಿಸುತ್ತೇವೆ ಆ ಕೂಪನ್‌ಗಳನ್ನು ನಿಮಗೆ ಬೇಕಾದ ೪ ಜನಗಳಿಗೆ ಕೂಪನ್ ೧ಕ್ಕೆ ೩ ಆಣೆ ೬ ಪೈ ಯಂತೆ ವಿಕರಿಯಾಗಿ ಆಗುವ ೧೪ ಆಣೆಯನ್ನು ನೀವೇ ಇಟ್ಟುಕೊಂಡುಬಿಡಿ ಮೊದಲು ನಮ್ಮಿಂದ ಕೂಪನ್‌ಗಳನ್ನು ಹೊಂದುವಾಗ್ಗೆ ನೀವು ಕಳುಹಿಸಿದ ೧೪ ಆಣೆ ನಿಮಗೆ ಬಂದಹಾಗಾಯಿತು ನಿಮ್ಮಿಂದ ಕೂಪನ್ ಪಡೆದ ಪ್ರತಿ ಒಬ್ಬರೂ ಕೂಪನ್ನಿನ ಸಂಗಡ ೧೪ ಆಣೆ ಕಳುಹಿಸುವಂತೆ ಹೇಳಬೇಕು ಪ್ರತಿ ಒಬ್ಬರೂ ಅವರ ಅಡ್ರೆಸ್ ಸಮೇತವಾದ ಕೂಪನ್ನನ್ನು ೧೪ ಆಣೆಗಳೊಡನೆ ಕಳುಹಿಸಿದರೆ ನಾವು ನಿಮಗೆ ಹೇಳಿದಂತೆ ಘೃತ ಎಣ್ಣೆ ಟಿನ್ನನ್ನು ಕೊಡುವದಲ್ಲದೆ ಆ ಪ್ರತಿ ಒಬ್ಬರಿಗೂ ೪ ೪ ಕೂಪನ್‌ಗಳನ್ನು ಸಹ ಕೊಡುತ್ತೇವೆ ಎಮ್ಮಂತೆಯೆ ಆ ಪ್ರತಿ ಒಬ್ಬರೂ ಮಾಡಿದರೆ ಇದೇ ಪ್ರಯೋಜನವನ್ನು ಹೊಂದುತ್ತಾರೆ

[20-1] ವಿಳಾಸ — ಪಿ ಎಸ್ ವೆಂಕಟರಮಣಯ್ಯರ್,

ನಂ 13, ಸುಂದರೈಯರ್ ಬೀದಿ, ಹಳೇ ಅಗ್ರಹಾರ ಮೈಸೂರು

ವಿಕ್ಟೋರಿಯಾ ಲೈಫ್ ಅಶೂರೆನ್ಸ್ ಕಂಪನಿ ಲಿಮಿಟೆಡ್.

(1912 ನೇ ಪ್ರಾವಿಡೆಂಟ್ ಸೊಸೈಟಿ ಆಕ್ಟಿನಂತೆ ರೆಜಿಸ್ಟರಾದದ್ದು)

ಮೂಲಧನ — 10,00,000 ರೂಪಾಯಿ (ಹತ್ತು ಲಕ್ಷ)

ಹೆಡ್ ಆಫೀಸ್ — ೧೫, ಕ್ಲೈವ್ ಸ್ಟ್ರೀಟ್, ಕಲ್ಕತ್ತಾ

ದಕ್ಷಿಣ ಇಂಡಿಯಾ ಮತ್ತು ಸಿಲೋನ್‌ಗೆ ಬ್ರಾಂಚ್ ಆಫೀಸು — ಚೂಳೈ, ಮದರಾಸ್

"ವಿಕ್ಟೋರಿಯಾ" — ಮಹಾರಾಜರುಗಳಿಂದಲೂ, ರಾಜರುಗಳಿಂದಲೂ ಬಂಗಾಳದ ಮುಖಂಡ ದೊಡ್ಡ ಮನುಷ್ಯರಿಂದಲೂ ಪ್ರೋತ್ಸಹಿಸಲ್ಪಡುತ್ತಿದೆ

"ವಿಕ್ಟೋರಿಯಾ" — ಡೈರೆಕ್ಟರುಗಳೆಲ್ಲಾ ಲೋಕ್ಯಾಚಾರಗಳನ್ನು ಬಲ್ಲವರೆಂದು ಪ್ರಖ್ಯಾತರಾಗಿರುವ ದೊಡ್ಡ ಮನುಷ್ಯರಾಗಿದಾರೆ

ಧಾರಾಳವಾದ ಬೋನಸ್ಸುಂಟು, ಬಹಳ ಬೇಗನೆ ಹಣ ಸಾಮುಯಾಗುವುದು, ನಿಂತುಹೋದ ಪಾಲಿಸಿಗಳನ್ನು ಸುಲಭ ದರಗಳಲ್ಲಿ ಪುನರುಜ್ಜೀವಿಸಬಹುದು ಇವೇ "ವಿಕ್ಟೋರಿಯಾ"ದ ಪ್ರಧಾನ ಲಕ್ಷಣಗಳಾಗಿರುತ್ತವೆ

ಪ್ರಾಸ್ಪೆಕ್ಟಸ್, ಪ್ರಪೋಜಲ್ ಫಾರಂ, ಬೋನಸ್ ಪಟ್ಟಿಗಳನ್ನು ಅಪೇಕ್ಷಿಸತಕ್ಕವರು ಈ ವಿಳಾಸಕ್ಕೆ ಬರೆಯಬೇಕು— [16-3]

"ವಿಕ್ಟೋರಿಯಾ" ಕಂಪನಿ ಸೆಕ್ರಟರಿ, ಚೂಳೈ, ಮದರಾಸ್.

ಜೀವ ಮತ್ತು ಡಿವಿಜನ್ ಏಜಂಟರುಗಳು ಬೇಕು— ಧಾರಾಳವಾದ ಕಮೀಷನ್ ಮತ್ತು ಕೈ ತುಂಬಾ ಸಂಬಳ

ರಾಜಧಾನಿ ರಸಾಯನ ಗೊಬ್ಬರದ ಕಾರ್ಖಾನೆ (ಲಿಮಿಟೆಡ್), ರಾಣಿಪೇಟೆ

ಮೇಲ್ವಿಚಾರಣೆ ಅಧಿಕಾರಿಗಳು — ಪ್ಯಾರಿ ಅಂಡ್ ಕಂಪನಿ, ಮದರಾಸ್

ಪ್ರಕಟನೆ

ಇದರಿಂದ ತಿಳಿಯಪಡಿಸುವದೇನಂದರೆ, ಉತ್ತರಾರ್ಕಾಟು ಜಿಲ್ಲಾ ವಾಲಾಜಾ ತಾಲ್ಲೂಕಾ ರಾಣಿಪೇಟೆಯಲ್ಲಿರುವ ರಾಜಧಾನಿ ರಸಾಯನ ಗೊಬ್ಬರದ ಕಾರ್ಖಾನೆಯಲ್ಲಿ ಎಲ್ಲಾ ಕಬ್ಬು, ತರಿ, ತೋಟದ ಪೈರುಗಳಿಗೂ, ಗಿಡ, ಬಳ್ಳಿ ಪನೆಗಳಿಗೂ ವಿಶೇಷವಾಗಿ ಗೊಬ್ಬರವನ್ನು ತಯಾರಿಸಿ ವಿಕ್ರಯಿಸುತ್ತೇವೆ ಆ ಜಮೀನಿನ ಮಣ್ಣು ಮುಂತಾದವುಗಳನ್ನು ಮುಂಚಿತವಾಗಿ ತರಿಸಿ, ಮೇಲೆ ಹೇಳಿದ ಗೊಬ್ಬರವನ್ನು ಕೊಂಡುಕೊಳ್ಳುವ ರೈತರಿಗೆ ಮಜೂರಿ ಇಲ್ಲದೆ ಅವರ ಜಮೀನಿನ ಗಿಡ ಪೈರುಗಳಿಗೆ ತಕ್ಕ ಹಾಗೆ ಗೊಬ್ಬರ ತಯಾರಿಸಿಕೊಡುತ್ತೇವೆ ರಸಾಯನಗೊಬ್ಬರಗಳು ಸಾಧಾರಣವಾದ ಜಮೀನುಗಳಲ್ಲಿ ಉಪಯೋಗಪಡಿಸಿದರೆ ತಕ್ಕಂಥಾ ಲಾಭಕರವಾದ ಫಲವನ್ನು ಕೊಡುವುದು ಆದುದರಿಂದ ನಮ್ಮ ಗೊಬ್ಬರವನ್ನು ಸರಿ ಪ್ರಮಾಣವಾಗಿ ಉಪಯೋಗಿಸುವವರು ಸಾಧಾರಣ ಜಮೀನಿನಲ್ಲಿ ಉಪಯೋಗಿಸಿ ಈ ಗೊಬ್ಬರಕ್ಕೆ ಬೇಕಾದ ಗುಣಗಳು ಇರುವ ಪ್ರಮಾಣವನ್ನು ತಿಳಿಯಬೇಕು — ಹೊಲ ಮುಂತಾದ ಕ್ಷೇತ್ರ ಸಂಬಂಧವಾದ ಜಮೀನುಗಳಿಗೆ ಆ ಜಮೀನಿನ ಮಾದರಿ ಮಣ್ಣನ್ನು ಕಳುಹಿಸಿದರೆ ಮೇಲ್ಕಂಡ ಜಮೀನುಗಳನ್ನು ಕೃಷಿಮಾಡುವುದಕ್ಕೆ ಯೋಗ್ಯವಾದ ದಾರಿಯನ್ನು ಸೂಚಿಸುತ್ತೇವೆ ನಮ್ಮಲ್ಲಿನ ರಸಾಯನ ಗೊಬ್ಬರವನ್ನು ಎಷ್ಟು ಕಾಲ ಇಟ್ಟರೂ ಕೆಟ್ಟು ಹೋಗದು ಆದರೆ ಅದನ್ನು ತೇವ ತಗಲದ ಹಾಗೆ ಇಟ್ಟಿರಬೇಕು ಮೇಲ್ಕಂಡ ಗೊಬ್ಬರಗಳು ಪೈರುಗಳ ಬೆಳೆಯುವ ಕಾಲ ಮುಂತಾದ ಗುಣಾವಗುಣಗಳಿಗೆ ತಕ್ಕಹಾಗೆ ಮಾಡಲ್ಪಡುತ್ತವೆ — ಆದುದರಿಂದ ಮೇಲ್ಕಂಡ ಗೊಬ್ಬರ ಬೇಕಾದವರು ತಾವು ಕೃಷಿಮಾಡುವ ಜಮೀನಿನ ಮಾದರಿ ಮಣ್ಣನ್ನು ಮುಂಚಿತವಾಗಿ ಕಳುಹಿಸುವದಲ್ಲದೆ ಬೇಕಾದ ಸಮಾಚಾರಗಳೊಡನೆ ಇಂಡೆಂಟು ಫಾರಮನ್ನು ಪೂರ್ಣಮಾಡಿ ಕಳುಹಿಸುವ ಪಕ್ಷದಲ್ಲಿ ಮೇಲ್ಕಂಡ ಗೊಬ್ಬರವನ್ನು ಅವರ ಇಷ್ಟ ಪ್ರಕಾರ ಕಳುಹಿಸಲ್ಪಡುವದು [19 3]

ಔಷಧಿ ತೆಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 27

(ಸ್ಕಾಟ್ಸ್ ಇಮಲ್‌ಷನ್)

ಘಟ್ಟ ಶರೀರವುಳ್ಳವರ್ಯಾರೂ ಪ್ಲೇಗ್, ಮಹಾಮಾರಿರೋಗ ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ.

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಶಾಲಿಗಳಾಗಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ಮಾರ್ಕನ್ನು ನೋಡಿ ಕೇಳಿ ಕೊಳ್ಳಿ

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ ಬಳಲಿಕೆ, ಎದೆ ತಲ್ಲಣಿಸುವುದು ತಲೆನೋವು, ಗಾಬರಿ ಕಣ್ಣುಮಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು ಮರವು, ನಿತ್ರಾಣ ಇವೇ ಮೊದಲಾದವು ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಅಧುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [12 23]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಮಾಡುವುವು



ರೂ 2—0—0, ಅಥವಾ 6 ಬುಡ್ಡಿಗಳಿಗೆ ರೂ 10—8—0 ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು ಅಥವಾ ಡೋನ್ಸ್ ಪಿ ಓ ಬಾಕ್ಸ್ 80, ಬೊಂಬಾಯಿ — ಇವರಲ್ಲಿ ದೊರೆಯುವುವು

ಈಗತಾನೆ ಬಂದಿರುತ್ತೆ ಸಂತೋಷಕರವಾದ ವಾಚ್"

ರೈಲ್ವೆ ರೆಗ್ಯುಲೇಟರ್ ವಾಚ್

ಸುಂದರವಾದ ವಾಚ್ ಸರಪಣಿ ಸಮೇತ ಕ್ರಯ ರೂ 3.

ಇದು ಪ್ರಸಿದ್ಧವಾದ ಮತ್ತು ಮಜಬೂತಾದ ಲೀವರ್ ಕೆಲಸದಿಂದಲೂ ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ ನಾಜೂಕಾದ ಮತ್ತು ವಿಚಿತ್ರವಾದ ನಾಲು ತಲೆಯಲ್ಲಿ ಬಿಗಿಯಲ್ಪಟ್ಟು ಬಿಳುಪು ಮತ್ತು ಕೆಂಪು ಕೆತ್ತಿರುತ್ತ ಕೆತ್ತಿರುವ ವಾಚ್ ಶ್ರೇಷ್ಠವಾದದ್ದು



ಸರಿಯಾದ ಕಾಲವನ್ನು ತೋರಿಸತಕ್ಕದ್ದು ಮತ್ತು ದೀರ್ಘಕಾಲ ಬಾಳಿಕೆ ಬರುವಂಥಾದ್ದು ಎಂಬುವದು ಸರ್ವಜನರಿಗೂ ತಿಳಿದ ವಿಷಯವೇ ಸರಿ, ಹೀಗಿರುವದರಲ್ಲಿ ಈ ವಾಚ್ ವಿಷಯವಾಗಿ ಹೆಚ್ಚು ಮಾತುಗಳು ಬರೆಯುವದು ಯಾಕೆ ಮುಳ್ಳು ಧೂಳು ಸೇರದಂತೆ ಒಳಗೆ ಗ್ಲಾಸ್ ಡೋಮ್ (ಅಂದರೆ ಕನ್ನಡಿ ಮುಚ್ಚಳ) ಎಂದು ಮುದ್ರಿತ ಈ ವಾಚಿನ ಮುಂಭಾಗದಲ್ಲಿ ಇರುವ "ಅಂದರ ಗುರುತು" ಇದ್ದು ಈ ಪ್ರಕಟನೆಯಲ್ಲಿ ಕಾಣಿಸಿರುವ ... ಈ ವಾಚ್‌ಗೆ ಗುರುತು

ಇದಕ್ಕಿಂತಲೂ ಕಮ್ಮಿ ಬೆಲೆಯುಳ್ಳ ರೈಲ್ವೆ ರೆಗ್ಯುಲೇಟರ್ ಲೀವರ್ ವಾಚ್‌ಗಳು ರೂ 1-12-0, ರೂ 1-11-0 ಯಲ್ಲಿಯೂ ರಾಸ್ಕೋಪ್ ವಾಚ್ ಮುಂತಾದವುಗಳು ರೂ 1-12-0, ರೂ 1-11-0 ಯಲ್ಲಿಯೂ ನಮ್ಮಲ್ಲಿ ದೊರೆಯುತ್ತೆ ಆದರೆ ಅವು ಈ ವಾಚಿನಷ್ಟು ನಾಣ್ಯವಾದ ವಾಚ್ ಅಲ್ಲ ಆದ್ದರಿಂದ ವಾಚ್ ತೆಗೆಯುವವರೆಲ್ಲಾ ಇದನ್ನು ತೆಗೆದು ಸಂತೋಷಪಡಬೇಕಾಗಿ ಕೋರುತ್ತೇವೆ [17 1]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ — ಬಿ ಆರ್ ವೆಂಕಟರಮಣ ಅಂಡ್ ಕಂಪನಿ, ನಂ 7, ಕೋಸ್ ವೆಂಕಟಾಚಲಯರ್ ಬೀದಿ, ಮದರಾಸು

Mellin's Food

ಮೆಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ವಿಕ್ರಯವಾಗುತ್ತಲಿದೆ

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೇಳಿ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಗಸಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ Messrs. OAKES & Company, Mount Road, Madras

[11-3] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. H. GULLIFORD, Proprietor and Manager Wesleyan Mission Press, Mysore 13/2/1913

REGISTERED
M. 20

ವೃತ್ತಾಂತ ಪತ್ರಿಕೆ

ಟ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸಿ ೧೯೧೩ ನೇ ಇಸವಿ ಫೆಬ್ರುವರಿ ತಾರೀಖು ೨೦ ನೇ ಗುರುವಾರ. ಸಂಚಿಕೆ ೩೮

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಉ ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳುಮಾಡಿಕೊಳ್ಳದಿರಿ

ಮೆಯು ಪುಕ್ಕಟೆಯಾಗಿ ಕೊಡಲ್ಪಡುವದು !

ಸವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿವೆ ಸ್ತ್ರೀಯರಿಗೆ ತಾನು ಸುಂದರವಾದ ಮತ್ತು ನಿಬಿಡವಾದ ಕೇಶರಾಶಿ ಸಾರವು ಸುಂದರವಾಗಿ ಕಾಣಬರಬೇಕಾದರೆ ಅವು ರೇಶಿಮೆಯಂತೆ ಚಕಚಕಿಸುತಿರಬೇಕು, ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದ ಟ್ಟುವಾತ, ಅವು ಸಮನಾಗಿಯೂ, ಪುಷ್ಕಳವಾಗಿಯೂ ಇರಬೇಕು.

ಕಾಮಿನಿಯಾ ತೈಲವು."
(ರಿಜಿಸ್ಟರ್ಡ್)

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶರಾಶಿಗೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂತಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೆಯುವ ಸರ್ವ ತೈಲಗಳಲ್ಲಿ ಮೊದಲನೆಯದು ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೋಗದ ಇರಲಿ ಪ್ರತಿಯೊಬ್ಬ ಸ್ತ್ರೀಯರು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಬೇಕು ಇದರಿಂದ ಕೂದಲುಗಳು ಎಷ್ಟು ಉದ್ದವಾಗುತ್ತವೆ ಅಂದರೆ, ಈಗ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ತುರುಬನ್ನು ಕಟ್ಟಲಾಗುತ್ತದೆ

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತವೆ, ನಯವಾಗುತ್ತವೆ, ಚಕಚಕಿಸುತ್ತವೆ, ಮತ್ತು ನಿಬಿಡವಾಗಿ ಬೆಳೆಯುತ್ತವೆ, ಆಗಾಗ್ಗೆ ಹಿಂದು ಬಿದ್ದುಹೋಗದೆ ದಟ್ಟವಾಗಿ ...

1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು.
3 ಸೀಸೆಗಳಿಗೆ ರೂ 2-10-0. ಅಂಚೆಯ ವೆಚ್ಚ 0.7.0

ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿ ತೈಲದ ಕುರಿತು ಕೆಲವು ಮಹನೀಯರು ಬರೆದ ಪ್ರಮಾಣಪತ್ರವನ್ನು ಇಲ್ಲಿ ಕೊಡುವೆವು —

... ವಿ. ವಿ. ಮಾದವಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ—"ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿರುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ ಇದಕ್ಕೆ ಸರಿಸಮಾನವಾದ ಹೇರ್ ಓಯಿಲ್ ಬೇರೆ ಇಲ್ಲ ಎಂದು ಹೇಳುವದು

ಮ್ಮ ಸಿ ಆರ್ ನಾಯುಡು ಪ ವ. ಬಿ ಟೌನ್, (ಬರ್ಮಾ)—ನನ್ನ ಕಾಮಿನಿಯಾ ತೈಲ ಸಮ್ಬಂಧವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದ 6 ಸೀಸೆಗಳನ್ನು ತ್ವರಿತವಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

ಸುಗಂಧದ್ರವ್ಯಗಳು

...ಹಾನ್ (ರಿಜಿಡ್)—ಗುಲಾಬಿ ಅತ್ತರುಗಳೆಲ್ಲಾ ಇದೇ ಶ್ರೇಷ್ಠವಾದದ್ದು, ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ... ಹೇಳಿವಾರೆ ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮ ಸುವಾಸನೆಯನ್ನುಳ್ಳದ್ದು ಕ್ರಯ ಡ್ರಾಂ ಸೀಸೆಗೆ ರೂ 1-8-0

...ಬಹಾರ್ (ರಿಜಿಡ್.)—ಅತ್ಯಂತ ಅಪೂರ್ವವಾದ ಬಾಜೀ ... ಯುಕ್ತವಾದ ಅಪೂರ್ವವಾದ ಸುಗಂಧ ಡ್ರಾಂ ಸೀಸೆಗೆ ರೂ. 1-8-0. ... ಸುರಂಗಿ "—ರೂ. 1-4-0; "ಕಾಮಿನಿಯಾಮಾಲತಿ"—ರೂ 1.

... ಸ್ಥಳಗಳಲ್ಲಿಯೂ ಏಜಂಟರು ಬೇಕು.

—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲೇ ಬರೆಯಬೇಕು.

[8-8]

...—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
...ಮಸ್‌ಜಿದ್, ಬೊಂಬಾಯಿ.

ಬಿಟ್ಟಿ! ಫ್ರೀ ಗಿಫ್ಟ್! ಬಿಟ್ಟಿ!

ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿ ಹೊಂದಿರುವ ಒಂದು ದರ್ಬಾರ್ ಲೀವರ್ ವಾಚನ್ನು ರೂ ೩-೮-೦ಗೆ ಕೊಂಡುಕೊಳ್ಳುವವರುಗಳಿಗೆಲ್ಲಾ ಕೆಳಗೆ ಹೇಳುವ ೧೨ ಬಹುಮಾನಗಳು ಸಿಕ್ಕುವವು. ಇದರಲ್ಲಿ ಮೋಸ ಸ್ವಲ್ಪವೂ ಇಲ್ಲ.



(೧) ಒಂದು ಸೊಗಸಾದ ಸರಪಣಿ.
(೨) ಒಂದು ಹಣದ ಚೀಲ.
(೩) ಒಂದು ಚಾಕು
(೪) ಒಂದು ತಮಾಷಿ ಪೆಟ್ಟಿಗೆ
(೫) ಒಂದು ಮಡಿಚುವ ಕತ್ತರಿ
(೬) ಒಂದು ಫೌಂಟೆನ್ ಲೇಖನಿ.
(೭) ಒಂದು ಕೈ ಬೀಸಣಿಗೆ.
(೮) ಒಂದು ಜೊತೆ ಕಾಲುಚೀಲ
(೯) ಒಂದು ಸುಂದರವಾದ ಉಂಗುರ.
(೧೦) ಒಂದು ಸೊಗಸಾದ ಬೀಸಣಿಗೆ.
(೧೧) ಒಂದು ಸೆಟ್ ಷರಟುಗುಂಡಿ
(೧೨) ಒಂದು ಕತ್ತಿ ನಪಟ್ಟಿ.

[23-2] ವಿಳಾಸ.—ಪಿ. ಎ. ರಜಾಕ್ ಅಂಡ್ ಕೋ., ೧೦ ಎಸ್ಪ್ಲೇನೇಡ್ ರೋಡ್, ಮದರಾಸ್.

ಗುಣಕಂಡ ಮೂರು ಪ್ರಖ್ಯಾತ ಔಷಧಗಳು.

ನ್ಯಾಕ್ಸರ ಮಲೆನಾಡು ಜ್ವರಮಾತ್ರೆಗಳು ಶೀತಪ್ರದೇಶಗಳಲ್ಲಿ ಬಿಟ್ಟುಬರುವ ಅಥವಾ ದೀರ್ಘವಾದ ಶೀತಜ್ವರ ಎಲ್ಲಾ ಜಾತಿಯ ಚಳಿ ಜ್ವರಗಳನ್ನೂ ಖಂಡಿತವಾಗಿಯೂ ಸಂಪೂರ್ಣವಾಗಿಯೂ ಗುಣಮಾಡುತ್ತವೆಂದು ಪ್ರಖ್ಯಾತಿಯೊಂದಿರುವ ಮಾತ್ರೆಗಳೇ ಇವು ಕ್ರಯ ಡಬ್ಬಿ 1ಕ್ಕೆ ರೂಪಾಯಿ 1-0-0

ನ್ಯಾಕ್ಸರ ಉಬ್ಬಸದ ಔಷದ— ಉಬ್ಬಸ, ಕಠಿಣವಾದ ಕೆಮ್ಮು ಮೊದಲಾದ ಶ್ವಾಸಕೋಶದ ವ್ಯಾಧಿಗಳಿಗೂ, ಶೀತದ ಗಡ್ಡೆಗಳಿಗೂ ಬಹಳ ಉತ್ತಮವಾದ ಮತ್ತು ಶೀಘ್ರವಾಗಿ ಗುಣಕೊಡುವ ಔಷದ ಕ್ರಯ ಬಾಟ್ಲು 1ಕ್ಕೆ ರೂಪಾಯಿ 1-0-0.

[36-2]

ನ್ಯಾಕ್ಸರ ನಾಯಿಕೆಮ್ಮಿನ ಸಿದ್ಧೌಷಧ—ಇದು ಪಾತ್ರವಾದ ನಂಬಿಕೆಯುಳ್ಳ ಮತ್ತು ಅಮೋಘವಾದ ಔಷಧ. ಬೇಗನೆ ಖಂಡಿತವಾಗಿಯೂ ಸಂಪೂರ್ಣವಾದ ಗುಣಕೊಡುವಂಥಾದ್ದು ಕ್ರಯ ಬಾಟ್ಲು 1ಕ್ಕೆ ರೂ 1-0-0.

ಪ್ಯಾಕಿಂಗ್, ಪೋಸ್ಟೇಜ್, ವಿ. ಪಿ. ಚಾರ್ಜು ಪ್ರತ್ಯೇಕ ಈ ಔಷಧಗಳ ಗುಣಾದಿಗಳನ್ನು ವಿವರಿಸುವ ಹಸ್ತಪತ್ರಗಳನ್ನು ಕೇಳಿದವರಿಗೆ ಬಿಟ್ಟಿ ಕಳುಹಿಸುವೆವು.

ವಿಳಾಸ —ಜೆ. ಎಸ್. ಸ್ಟೀಯರ್ಸ್,
117 ಪ್ರೋಮಿನಾಂಡ್ ಬ್ರಾಡ್ವೇ, ಮದರಾಸ್

ಇವರಲ್ಲೂ ಸಿಕ್ಕುತ್ತವೆ—(1) ಎವ್ವರ್ ಕಂಪನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ, (2) ಸ್ಪೆಯ್ಡ್ ಉಸ್ಮಾನ್ ಕಂಪನಿ, ಬೆಂಗಳೂರು ದಂಡು, (3) ಕೆ ವಿಟ್ಟಲ್‌ರಾವ್ ಕಂಪನಿ, ಮಂಗಳೂರು, (4) ಎಲ್. ವಿಳ್ಳ ಕಂಪನಿ, ಪಾಲಘಾಟ್, (5) ಬಾಯಿಸ್ ಕಂಪನಿ, ಕಲ್ಲಿಕೋಟೆ.

ವಿಕ್ಟೋರಿಯಾ ಲೈಫ್ ಅಷೂರೆನ್ಸ್ ಕಂಪನಿ ಲಿಮಿಟೆಡ್.

(1912 ನೇ ಪ್ರಾವಿಡೆಂಟ್ ಸೊಸೈಟಿ ಆಕ್ಟಿನಂತೆ ರೆಜಿಸ್ಟರಾದದ್ದು)

ಮೂಲಧನ—10,00,000 ರೂಪಾಯಿ (ಹತ್ತು ಲಕ್ಷ).

ಹೆಡ್ ಆಫೀಸ್—98, ಕ್ಲೈವ್ ಸ್ಟ್ರೀಟ್, ಕಲ್ಕತ್ತಾ.

ದಕ್ಷಿಣ ದೇಶ ಮತ್ತು ಸಿಲೋನ್ ಗೆ ಬ್ರಾಂಚ್ ಆಫೀಸು—ಚೂಳೈ, ಮದರಾಸ್.

"ವಿಕ್ಟೋರಿಯಾ"—ಮಹಾರಾಜರುಗಳಿಂದಲೂ, ರಾಜರುಗಳಿಂದಲೂ, ಬಂಗಾಳದ ಮುಖಂಡ ದೊಡ್ಡ ಮನುಷ್ಯರಿಂದಲೂ ಪೋಷಿಸಲ್ಪಡುತ್ತದೆ

"ವಿಕ್ಟೋರಿಯಾ"—ದ ರೆಕ್ಟರುಗಳೆಲ್ಲಾ ಲೆಕ್ಕಾಚಾರಗಳನ್ನು ಬಲ್ಲವರೆಂದು ಪ್ರಖ್ಯಾತರಾಗಿರುವ ದೊಡ್ಡ ಮನುಷ್ಯರಾಗಿದ್ದಾರೆ

ಧಾರಾಳವಾದ ಬೋನಸ್ಸುಗಳು, ಬಹಳ ಬೇಗನೆ ಹಣ ಪಾವತಿಯಾಗುವದು, ನಿಂತುಹೋದ ಪಾಲಿಸಿಗಳನ್ನು ಸುಲಭ ದರಗಳಲ್ಲಿ ಪುನರುಜ್ಜೀವಿಸಬಹುದು.—ಇವೇ "ವಿಕ್ಟೋರಿಯಾ"ದ ಪ್ರಧಾನ ಲಕ್ಷಣಗಳಾಗಿರುತ್ತವೆ.

ಪ್ರಾಸ್ಪೆಕ್ಟಸ್, ಪ್ರಪೋಸಲ್ ಫಾರಂ, ಬೋನಸ್ ಪಟ್ಟಿಗಳನ್ನು ಅಪೇಕ್ಷಿಸತಕ್ಕವರು ಈ ವಿಳಾಸಕ್ಕೆ ಬರೆಯಬೇಕು—

[35-3]

"ವಿಕ್ಟೋರಿಯಾ" ಕಂಪನಿ ಸೆಕ್ರೆಟರಿ, ಚೂಳೈ, ಮದರಾಸ್.

ಚೀಫ್ ಮತ್ತು ಡಿವಿಜನ್ ಏಜಂಟರುಗಳು ಬೇಕು—ಧಾರಾಳವಾದ ಕಮೀಷನ್ ಮತ್ತು ಕೈ ತುಂಬಾ ಸಂಬಳ.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

84 39

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಆರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ, ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು —(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಜೆ. ಎಸ್. ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಟ್ರಾಂವೆ ರೆಗ್ಯುಲೇಟರ್ ಲಿವರ್ ಗಡಿಯಾರ.

ಇದು ಹೊಸ ನಮೂನೆ! ಸ್ವಲ್ಪ ಬೆಲೆ!! ಬಹಳ ಅಂದವಾದದ್ದು!!!

ಇದಕ್ಕೆ 4 ವರುಷ ಗ್ಯಾರಂಟಿ ಚೀಟಿ ಉಂಟು.

ಕ್ರಯ ರೂ. 1-13-0

ಕ್ರಯ ರೂ. 1-13-0.



Rs1-13-0

ಈ ಗಡಿಯಾರ ಗೌರ್ನಮೆಂಟ್ ಮತ್ತು ಟ್ರಾಂವೇ ನೌಕರ ಜನರಿಗೆ ಮಾತ್ರವೇ ಸಪ್ಲೈ ಮಾಡಲ್ಪಡುತ್ತೆ. ಇದನ್ನು ಅಮೇರಿಕಾದಿಂದ ಒಟ್ಟಾಗಿ ತರಿಸಿರುವದರಿಂದ ಇಷ್ಟು ಸ್ವಲ್ಪ ಬೆಲೆಗೆ ಕೊಡುವದು. ಇದೇ ಇದರ ಕಾರಣ. ಇದು ನೋಡುವದಕ್ಕೆ ಅಂದವಾಗಿಯೂ ಕಾಲವನ್ನು ಸರಿಯಾಗಿಯೂ ತೋರಿಸುತ್ತದೆ.

[6-6]

ಪತ್ತಿ ಅಂಡ್ ಕೋ.,
ನಂ. 39, ಜನರಲ್ ಮುತ್ತ್ಯಾಮೊದಲಿ ಬೀದಿ,
ಸಾಹುಕಾರ್ ಪೇಟೆ ಮದ್ರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

31—1—1913 ರಿಂದ 7—2—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	25	19	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	5	4	0	0
ಮೈಸೂರು ,,	37	24	10	7
ಕೋಲಾರ್ ,,	1	1	4	4
ಕೋಲಾರ್ ಚಿನ್ನದ ಗಣಿಗಳು	10	5	0	0
ತುಂಕೂರು ಡಿಸ್ಟ್ರಿಕ್ಟ್	0	0	0	0
ಹಾಸನ ,,	13	6	0	0
ಚಿತ್ರದುರ್ಗ ,,	0	0	0	0
ಕಡೂರ್ ,,	14	10	0	0
ಶಿವಮೊಗ್ಗ ,,	7	6	0	0
ಜುಮ್ಲಾ	112	75	14	11

ಶಾಲಿವಾಹನ ಶಕೆ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೆ ಶಿಶಿರಋತೌ ಮಾಘ ಶುದ್ಧ ಪೌರ್ಣಮಿ ಶುಕ್ರವಾರದಿಂದ ಮಾಘ ಬಹುಳ ಸಪ್ತಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಫೆಬ್ರವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕುಂಭ ಮಾಸ ತೇದಿ
21	ಶುಕ್ರ *	ಪೌರ್ಣಮಿ	1-19	ಆಶ್ಲೇಷ	51-0	10
22	ಶನಿ ‡	ಬಿದಿಗೆ	52-19	ಮಖ	11-21	11
23	ಭಾನು	ತದಿಗೆ	16-19	ಉತ್ತರ	12-27	12
24	ಸೋಮ †	ಚೌತಿ	11-53	ಹಸ್ತ	9-0	13
25	ಮಂಗಳ	ಪಂಚಮಿ	37-17	ಚಿತ್ತ	6-10	14
26	ಬುಧ ¶	ಷಷ್ಠಿ	14-13	ಸ್ವಾತಿ	4-10	15
27	ಗುರು	ಸಪ್ತಮಿ	12-31	ವಿಶಾಖ	3-8	16

* ಮಾಘಸ್ನಾನ, ಮಳೆ ನಕ್ಷತ್ರ—ಶತಭಿಷ 2 ನೇ ಪಾದ

‡ ಕಲ್ಯಾಣಪಟ್ಟದ ಶ್ರೀನಿವಾಸಸ್ವಾಮಿ ರಥ

† ಸಂಕಟಹರಚತುರ್ಥಿ ಮಳೆ ನಕ್ಷತ್ರ ಶತಭಿಷ 3 ನೇ ಪಾದ

¶ ವ್ಯತೀ

ಕೋಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ (ಹೊಸದು) ರೂ	೧೪ ೧೨ ೦	೧೭-೮-೦
ಕೆಂಪುರತ ಅಕ್ಕಿ ಅವಲ್ ,,	೧೫ ೨ ೦	೧೭-೬-೦
,, ದುಯ್ಯ ,,	೧೫ ೦ ೦	೧೭-೦ ೦
ಜುಪ್ಪಣೆ ಅಕ್ಕಿ ,,	೧೪ ೬-೦	೧೭-೪-೦
ಸಣ್ಣಕ್ಕಿ ಅವಲ್ ,,	೧೬ ೮-೦	೧೮ ೮ ೦
,, ದುಯ್ಯ ,,	೧೬ ೦-೦	೧೭ ೮-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೧೩ ೦ ೦	೧೩-೮-೦
,, ದುಯ್ಯಂ ,,	೧೨-೮-೦	೧೨-೮-೦
ಹೈಕ್ ರಾಗಿ ಪಲ್ಲಾ ೧ಕ್ಕೆ	೬-೬-೦	೫-೦ ೦
ಕಾರಾಗ್ರಿ ,,	೬-೦-೦	೪-೧೨-೦
ಜೋಳ ,,	೬ ೧೨ ೦	೭-೪-೦
ಹುಲಸಂದೆ ಪಲ್ಲಾ ೧ಕ್ಕೆ	೧೧ ೦-೦	೧೨-೧೨-೦
ಬೇ ಅವರೆ ,,	೯ ೮ ೦	೧೧-೦-೦
ಹೆಸರು ,,	೧೧-೮-೦	೧೪-೦-೦
ಉದ್ದು ,,	೧೬-೮ ೦	೧೬ ೦ ೦
ಕಡಲೆ ,,	೯-೧೨-೦	೧೨ ೦-೦
ಎಳ್ಳು ಸೇರು ೧೨೭ಕ್ಕೆ	೨೪-೦ ೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೬-೦ ೦	೭-೦-೦
ಹರಳು ೧೨೭ ಸೇರಿಗೆ	೧೨ ೮-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೨-೮-೦	೩-೮-೦
ಮೆಣಸಿನಕಾಯಿ ,,	೩ ೦-೦	೩-೪-೦
,, ದುಯ್ಯಂ	೨-೮-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫-೦-೦	ಮಣ ೫ ೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೨-೦	೬ ೬-೦
ಹರಳೆಣ್ಣೆ ,, ,,	೫-೧೨ ೦	೬-೨-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೪-೮-೦	೫-೪-೦
ಉಪ್ಪು ,, ,,	೫ ೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧-೪-೦	೧-೪-೦
,, ಹಳೇದು ,,	೧ ೨-೦	೦ ೧೪-೦
ತುಪ್ಪ ಮಣ ೧ಕ್ಕೆ	೧೬ ೦-೦	೧೯-೦-೦
ಸೀಮೆಯೆಣ್ಣೆ ಪಟ್ಟೆ ೧ಕ್ಕೆ	೫-೭-೦	೫ ೦ ೦
ತೆಂಗಿನಕಾಯಿ ೧೦೦ಕ್ಕೆ	೬ ೦-೦	೬-೦-೦
ಅಡಕೇಕಾಯಿ ಮಣ ೧ಕ್ಕೆ	೧-೪-೦	೧-೦-೦
ಆಂಟ್ವಾಳದಕಾಯಿ ಮಣ ೧ಕ್ಕೆ	೦-೧೨-೦	೧ ೮-೦
ಚಿನ್ನ (ಪವನ್) ಕೆಂಪು	೧೫ ೮-೦	೧೫ ೮-೦
,, ,, ಪವನು	೧೫ ೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪ ೨-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦-೦	೮೧-೩-೦

CHAMBERLAIN'S PAIN BALM



ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

ಬೆನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಟಾದ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡ ಇಳಿಯುವುದು, ವಿಶ್ರಾಂತಿ ತೋಚದೆ ಇರುವುದು, ಸಪ್ಪಳತೆ ಇರುವುದು ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವು ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸು ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಾಗ್ಗೆ ಉಜ್ಜುತ್ತಾ ಬಂದರೆ ಈ ವಾಯುವಿನ ಸುಟಿನೇ ಕಿತ್ತುಹಾಕಿಬಿಡುವುದು

ಇದು ಪಾಶ್ಚಿಮಾತ್ಯರಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುತ್ತದೆ ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಡೋಂಗರೆ ಇವರ ಬಾಲಾಮೃತ.

[115-3

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಅತಿ ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಆನಂದದಿಂದ ತೆಗೆದುಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ ಹೊಟ್ಟೆಯು ದೊಡ್ಡದಾಗಿರೋಣ, ಅಸ್ಥಿಗಳು ಶಕ್ತಿಹೀನ ಇರೋಣ, ಹಳೇ ಕೆಮ್ಮು ಮುಂತಾದವುಗಳು ಅಶಕ್ತತೆಯ ರೋಗಗಳು ಪೂರಾ ನಾಶವಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೮ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ

ಅಮೃತಾಂಜನ್. (Regd.)



ಎಲ್ಲ ಬಗೆಯ ಉಕ್ಕ ಕೂಟು ವಾತ, ಸಂಧಿವಾತ, ತಲೆನೋವು, ಸೊಂಟನೋವು, ಶೀತ, ಕಫ, ಗಂಟಲುನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣವಾಗುವುದು ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ. ಬಾಟ್ಲಿ 1 ಕ್ಕೆ 0-8-0

ಅರ್ಧ ಕ್ರಯಕ್ಕಿಂತಲೂ ಕಡಮೆ

ಪತ್ತು ಲಕ್ಷ ಮೊದಲ್ಲ ಪೋಸ್ಟು ಚಾರ್ಜುಗಳು ಇವುಗಳು ಬೆಳಗಾಗಿಯೂ ನಯವಾಗಿಯೂ 1,000 ಕ್ಕೆ ಮುಂಚಿನ ಕ್ರಯ ರೂ 2-8-0 ಈಗ 15 ಆಣೆ, ... 12 ಆಣೆ 500 ಕ್ಕೆ 8 ... 4 ಆಣೆ

1913 ನೆಯ ವರ್ಷದ ಕ್ಯಾಲೆಂಡರ್ 4 ಬಾಟ್ಲಿ ಅಮೃತಾಂಜನ ತರಿಸಿಕೊಂಡವರಿಗೆ ಪ್ರಸಿದ್ಧಿ ಕಳುಹಿಸಲ್ಪಡುವುದು ಇತರರಿಗೆ ಕ್ಯಾಲೆಂಡರ್ 1 ಕ್ಕೆ 1 ಆಣೆ ... ಸಹಿತ [15-

ಅಮೃತಾಂಜನ ಡಿಪೋ, ಪೋರ್ಟು, ಮುಂಬಯಿ.



1913 ನೇ ಪಾಕೆಟ್ ಡೈರಿ

ಆ ವರ್ಷ ಆಯಾ ದಿನದ ನಡವಳಿಕೆಗಳನ್ನು ಬರೆದಿಡುವದಕ್ಕೋಸ್ಕರ ಬೇಕಾಗಿರುವ ಪುಸ್ತಕ ಇದರಲ್ಲಿ ಪಂಚಾಂಗ, ಹಬ್ಬದ ದಿನಗಳು, ರಜಾ ದಿನಗಳು ರೈಲು, ಕೋರ್ಟು, ಸ್ಟಾಂಪು, ರಿಜಿಸ್ಟರು, ಟಪಾಲು ಸಂಬಂಧಪಟ್ಟ ಸಾಧಾರಣ ವಿಷಯಗಳು, ಪ್ರಶ್ನೆ ಮುಂತಾದ ಕೆಲವು ವಿಷಯಗಳು, ಜನಸಾಮಾನ್ಯ ತಪ್ಪು ಮುಂತಾಗಿ ಪ್ರತಿ ದಿನವೂ ನೋಡಬೇಕಾದ ವಿಷಯಗಳು ಅಡಗಿವೆ

೧ ಸಾದಾ ಸಣ್ಣ ಡೈರಿಗೆ 1 ಆಣೆ ೨—ಒಂದಾನೆಯ ಸೀಸದ ಕಡ್ಡಿಯುಳ್ಳ ಮುಚ್ಚಳದ ಡೈರಿಗೆ ೨ ಆಣೆ ೩—ಸಾದಾ ದೊಡ್ಡ ಡೈರಿಗೆ ... ೪—ಒಂದಾನೆಯ ಸೀಸದ ಕಡ್ಡಿಯುಳ್ಳ ಮುಚ್ಚಳದ ದೊಡ್ಡ ಡೈರಿಗೆ ೩ ಆಣೆ

ಜೇಬಿನಾ ಡೈರಿ — ... ದಪ್ಪ, ಚಂದದ ನೂತನ, ಗಾತ್ರ ದೊಡ್ಡದು, ವಿಷಯ ಹೆಚ್ಚು, ಉತ್ತಮವಾದ ಡೈರಿ ಜ ನಂ 1— ಡೈರಿಗೆ 1 ಆಣೆ ... ನಂ 2—ಒಂದಾನೆಯ ಸೀಸದ ಕಡ್ಡಿಯುಳ್ಳ ಮುಚ್ಚಳದ ಡೈರಿಗೆ 1 ಆಣೆ ಟಪಾಲು ಹಾಸಲು ಬೇರೆ ಒಂದೇ ನಮೂನೆ 6 ಪ್ರತಿಗಳನ್ನು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಬಹುಮಾನವಾಗಿ ಕಳುಹಿಸುತ್ತೇವೆ.

ನಮ್ಮ ಪುಸ್ತಕಗಳ ವಿವರ ಕ್ರಯಪಟ್ಟಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ. [1

ನಮ್ಮ ವಿಳಾಸ.—ವಿಜಯಕೇಸರಿ ಕಂಪನಿ ಬೆಂಗಳೂರು ಸಿಟಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಅಜೀರ್ಣ, ಜ್ವರ, ಹೊಟ್ಟೆ ನೋವು, ಸಂದುಗಳ ನೋವು, ಕೈಕಾಲು ಹೊಡೆತ (ಜಾರ), ಮೈ ನಡುಕ, ತಲೆ ಬಾಧೆ ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ಸೆಗಟ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಬೇಗ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತದೆ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ಹವಾ ಎದೆಯುವಣೆಯನ್ನು ಸರಿಪಡಿಸಿ, ರಕ್ತದಲ್ಲಿರುವ ವಿಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಸೂತಕರೋಗ, ಮಕ್ಕಳ ಎಳಪು, ಜ್ವರ, ನಿತ್ಯಜ್ವರ, ಕಫಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —೩೦ ಮಾತ್ರೆ ಕುಪ್ಪಿಗೆ 1 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 1 ಆಣೆ [1

೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕ್ರಿಮಿನಾಶಕೆಂದು ಗಲೂ ಆಶ್ಚರ್ಯಕರವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯ ಮೂತ್ರವು ಕಟ್ಟದೆ ಕೊಟ್ಟ ವೇದಲನೇವೇಳೆಯಲ್ಲೇ, ಗುಣವು ತೋರುತ್ತದೆ ಗಮನದಲ್ಲಿ ಪ್ರೇಷಣೆ ಒಡನೇ ಒಂದು ನಿಮ್ಮಲ್ಲಿರಲಿ ವಿಷಘೋರಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಸೀಸೆ ರೂ 1, ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈ

ಸುಲಭವಾಗಿ ಇಂಗ್ಲೀಷ್ ಕಲಿಯುವ ಪುಸ್ತಕ— ೨ನೇ ಭಾಗ.

(ಕ್ರಯ 1-4-0) ಬರುವ ಮಾರ್ಚಿ ಆಖೈರ್‌ವರೆಗೆ ಅನಂತರ ರೂ. 1-8-0 ಇದರಲ್ಲಿ ಅಕ್ಷರಗಳನ್ನು ಗುರ್ತು ಕಂಡುಹಿಡಿಯುವುದು, ಕೆಲವು ದಿವಸ ದೊಳಗೆ ಇಂಗ್ಲೀಷನ್ನು ಓದುವುದಕ್ಕೂ ಬರೆಯುವುದಕ್ಕೂ ಮಾತನಾಡುವುದಕ್ಕೂ ಉಪಾಧ್ಯಾಯರ ಸಹಾಯವಿಲ್ಲದೆ ಕಲಿಸುತ್ತದೆ. ಸಂಭಾಷಣ ವಿಷಯ, ಕಥೆಗಳು, ಕಾಗದ ಬರೆಯುವ ವಿಧಾನ, ಇನ್ನು ಅನೇಕ ಸಂಗತಿಗಳು ಅಡಗಿವೆ. ವಿಳಾಸ—

ಮ್ಯಾನೇಜರ್, ಕರ್ನಾಟಕ ಬುಕ್ ಡಿಪೋ, ಅಕ್ಷರ್ ಪ್ರೆಸ್, ಮಾಲೂರ್, ಕೋಲಾರ

[31-4]

ಲಕ್ಷ್ಮೀನರಸಿಂಹ ಆಯುರ್ವೇದ ವೈದ್ಯಶಾಲಾ

ಜ್ವರಮುರಾರಿ ಸಕಲ ವಿಧವಾದ ಜ್ವರಗಳಿಗೆ ಅಂಕುಶವಾಗಿದೆ. ಇದ ನ್ನುಪಯೋಗಿಸಿದೊಡನೆ ಸಕಲವಿಧವಾದ ಜ್ವರಗಳನ್ನೂ ಹತಮಾಡುವದು. ಇದು ಔಷಧಿಯಾಗಿರುವ ಹಸುರುಸೊಪ್ಪುಗಳು ಬೇರುಗಳು ಮೊದಲಾದ ಕ್ಷಾರದಿಂದ ಮಾಡಲ್ಪಟ್ಟದ್ದು. ರಸ, ಗಂಧಕ, ಪಾಷಾಣಾದಿಗಳೊಂದೂ ಈ ಔಷಧಕ್ಕೆ ಸೇರಿದ್ದು ದಿಲ್ಲ. ನಮ್ಮ ಪೂರ್ವಿಕರು (ಸಿದ್ಧರು)ಗಳಿಂದ ಕಲಿತ ಸಿದ್ಧಪ್ರಯೋಗ. ಈ ದವಾ ಪಥ್ಯ ಪಾನಾದಿಗಳೇನೂ ಇಲ್ಲ. ಈ ಔಷಧವನ್ನು ಒಂದು ಸಾರಿ ತರಿಸಿ ನೋಡಿದ ಒಡನೆ ಅವರಿಗೆ ನಮ್ಮ ಸ್ನೇಹಿತರುಗಳಿಗೆ ತಿಳಿಸಿ ಸಂತೋಷಪಡುವರು. ಇದು ಮದರಾಸಿನಲ್ಲಿ ಅನೇಕ ಸಾವಿರ ಜನಗಳು ಉಪಯೋಗಿಸಿದ ಸಿದ್ಧೌಷಧ. ಪ್ರತಿ ದಿವಸ ಅನೇಕ ಜನಗಳು ಉಪಯೋಗಿಸುತ್ತಲೂ ಇದ್ದಾರೆ. ಈ ಔಷಧಿ ಕ್ರಮವು ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಎಂಥಾ ಜ್ವರವನ್ನೂ 8 10 12 16 ಪೊಟ್ಟಣ ಔಷಧದಲ್ಲಿ ನಿಶ್ಶೇಷವಾಗಿ ಜಯಿಸಿ ಶರೀರವನ್ನು ರೋಗರಹಿತ ಮಾಡಿ ಬಲಹೀನವನ್ನು ಹೋಗ ಲಾಡಿಸುವದು. ಇದರ ಬೆಲೆ 12 ಪೊಟ್ಟಣಗಳ ಡಜನ್ 1 ಕ್ಕೆ 12 ಆಣೆ. ಟಪ್ಪಾಲು ಪಾರ್ಸಲ್ ಛಾರ್ಜು ಪ್ರತ್ಯೇಕ [21-1]

ದಂತದಾವನ ರತ್ನಾಕರಂ —ಇದು ಹಲ್ಲುಗಳಿಗೆ ಬಾಧಾಕರವಾದ ಪದಾರ್ಥಗಳು ಯಾವವೂ ಸೇರಿಸದೆ ಅನೇಕ ಮೂಲಿಕೆಗಳಿಂದ ತಯಾರುಮಾಡಿದ ಮತ್ತು ರುಚಿ ಸುವಾಸನೆಯಾಗಿರುವದು. ಇದರಿಂದ ಹಲ್ಲು ಉಜ್ಜಿಕೊಂಡರೆ ಹಲ್ಲುಗಳಲ್ಲಿ ಹುಟ್ಟುವ ರೋಗಾದಿಗಳು ಹೋಗಲಾಡಿಸಿ ವಾತಪಿತ್ತ ಶ್ಲೇಷ್ಮಗಳನ್ನು ಶಮನಮಾಡಿ ಹಲ್ಲುನೋವು, ಬಾಯಿನಾತ, ಹಲ್ಲುಜೋಮು, ಹಲ್ಲಿನಲ್ಲಿ ರಕ್ತಕ್ಕೆ ಇಳಿವುದು, ಹಲ್ಲಿನಲ್ಲಿ ರಕ್ತಬರುವದು ಹುಳುಕುಹಲ್ಲು, ಇಗುರುಬಾವು ಮೊದಲಾದವುಗಳನ್ನು ಪರಿಹರಿಸಿ ಹಲ್ಲು ದಂತಗಳನ್ನು ದಟ್ಟವಾಗಿ ಸೇರಿಸಿ ಕಳೆಕೊಟ್ಟು ಒಳ್ಳೆ ಗುಣವನ್ನುಂಟುಮಾಡುವದು. ಈ ಪುಡಿಯನ್ನು ಹೊಟ್ಟೆಗೂ ತೆಗೆದುಕೊಳ್ಳಬಹುದು. ಇದರ ಬೆಲೆ ಡಬ್ಬಿ 1 ಕ್ಕೆ 4 ಆಣೆ. ಟಪ್ಪಾಲ್, ಪಾರ್ಸಲ್ ಛಾರ್ಜು ಪ್ರತ್ಯೇಕ. ವಿಳಾಸ—

ವೈದ್ಯಂ ಮೈಸೂರು ಪಂಡಿತರು ಎಂ. ಕೆ. ಶೇಷಾಚಾರ್ಯ, ನಂ 93, ಬೈನಾಬಜಾರ್ ರೋಡ್, ಮದರಾಸ್

ಪ್ರಾಕೃತಿಕ ಭೂಗೋಳದ ನೋಟ್ಸ್.

27-4

ಸ್ಕೂಲ್ ಮಾಸ್ಟರುಗಳು ಮತ್ತು ವಿದ್ಯಾರ್ಥಿಗಳಲ್ಲಿ ವಿಜ್ಞಾಪನೆ —ತಾವು ಗಳು ಸ್ವಲ್ಪ ಕಾಲದಲ್ಲಿಯೇ ಹೆಚ್ಚಾಗಿ ಆರ್ಡರುಗಳನ್ನು ಕಳುಹಿಸಿ ನನ್ನನ್ನು ಪ್ರೋತ್ಸಾಹಿಸಿರುವುದಕ್ಕಾಗಿ ಬಹಳ ಕೃತಜ್ಞನಾಗಿರುತ್ತೇನೆ. ಈ ಪುಸ್ತಕವು ಅನೇಕ ನಕ್ಷೆಗಳನ್ನೊಳಗೊಂಡಿರುತ್ತದೆ. ಮತ್ತು ಅನೇಕ ಪ್ರಶ್ನೆಗಳಿಗೆ ಉತ್ತರಗಳು ಬರೆಯಲ್ಪಟ್ಟಿರುವುದರಿಂದ ಈಗಿನ ಪರೀಕ್ಷಾ ಪ್ರಶ್ನೆ ಪತ್ರಿಕೆಗಳಿಗೆ ಉತ್ತರಗಳನ್ನು ಬರೆಯಲು ತುಂಬಾ ಸಹಕಾರಿಯಾಗಿರುತ್ತೆ. ಸ್ವಲ್ಪ ಪ್ರತಿಗಳು ಮಾತ್ರ ಪ್ರಿಂಟಾಗು ವುದರಿಂದ ಆರ್ಡರುಗಳಿಗೆ ಮೊದಲು ಕಳುಹಿಸಲ್ಪಡುವವು. ಕ್ರಯ 4 ಆಣೆ. 6ಪೈ

ವಿಳಾಸ—ಎಂ. ಪಿ

ಲಿಂಗಪ್ಪಯ್ಯ, ಹೆಡ್ ಮಾಸ್ಟರ್, ಎ ವಿ. ಸ್ಕೂಲ್, ಇಟ್ಟಿಗೆಗೂಡು, ಮೈಸೂರು

Office of the Excise Commissioner in Mysore

No 6011 Dated Bangalore, 5 6th February, 1913.

NOTICE.

Tenders are hereby invited for the exclusive privilege of the manufacture in the Government Central Distillery at Bangalore of Arrack and other Country Spirits for supply throughout the Territories of Mysore and the Civil and Military Station of Bangalore, for a period of three years from 1st July, 1913, to 30th June, 1916.

2. Every tender should be accompanied by a deposit of Rs. 5,000 and should reach the undersigned on or before noon of Monday, the 10th March, 1913, on which date they will be opened by the Excise Commissioner at 12 noon.

3. The quantity of Arrack required for consumption in the State is estimated between four and four and a half lakhs of gallons per annum.

4. For conditions and further particulars see Notification No FI 4348 S R 140-12-18, dated 3rd February, 1913, published in Part I of the Mysore Gazette. [38-2]

5. Copy of Notification and form of application may be had on requisition to the undersigned.

M. KANTARAJ URS

Excise Commissioner.

ಆರ್ಯಭೈಷಜ್ಯಮಂದಿರಂ, ಶ್ರೀ ಶೃಂಗಗಿರಿ.

1. 2 ನೇ ನಂಬರ್ ಅಶ್ವಗಂಧಾವಲೇಹ. ಸಮಸ್ತಮೇಹ, ಜೀರ್ಣಜ್ವರ, ಮೈ ಒಣಗುವಿಕೆ, ಗುಲ್ಮ, ಪಿತ್ತರೋಗ, ವಾತರೋಗ, ಇವನ್ನು ಹೋಗಲಾಡಿಸಿ ಪುಷ್ಟಿಯನ್ನೂ ಅಗ್ನಿಬಲವನ್ನೂ ಕಾಂತಿಯನ್ನೂ ಸ್ಥಿರಚಿತ್ತತೆಯನ್ನೂ ಉಂಟು ಮಾಡುತ್ತೆ. ಬಹಳ ಜನಗಳು ಗುಣಹೊಂದಿದ್ದಾರೆ. ಇಷ್ಟು ಅಲ್ಪಕ್ರಯಕ್ಕೆ ಉತ್ತಮವಾದ ಈ ಲೇಹವು ಎಲ್ಲಿಯೂ ದೊರಕಲಾರದು. ಖಾತ್ರಿಯಾದದ್ದು ಸೇರಿಗೆ 2 ರೂಪಾಯಿ. (2) ಅಮೃತಾಮಳಕತೈಲ —ಅಭ್ಯಂಜನಕ್ಕೆ ಅತ್ಯುತ್ತಮ ಶೀಸೆಗೆ 1 ರೂ. (3) ಮಹಾನಂದಭೈರವರಸ —ಸಕಲ ಸನ್ನಿಪಾತ ಜ್ವರಕ್ಕೆ 50 ಮಾತ್ರೆ 1 ರೂ. (4) ಸ್ವಯಮಗ್ನಿಮುಖಿಮಂಡೂರ —ಮೈಬಿಳಿತ, ಜ್ವರಗಡ್ಡೆಗೆ 1 ಸೇ 2 ರೂ. ಅಂಚೆ ವೆಚ್ಚ ಪ್ರತ್ಯೇಕ. ಕ್ಯಾಟ್ಲಾಗು ಮುಫತ್ತು. [29-4]

ವಿಳಾಸ—ಆಯುರ್ಭಿಷಗ್ವರ ಕೆ. ಶೇಷಶಾಸ್ತ್ರೀ, ಶೃಂಗೇರಿ.

ಈಗತಾನೆ ಬಂದಿರುತ್ತೆ! ಸಂತೋಷಕರವಾದ ವಾಚ್!!

ಸ್ವಿಸ್ ರೆಗ್ಯುಲೇಟರ್ ವಾಚ್.

ಸುಂದರವಾದ ವಾಚ್ ಸರಪಣಿ ಸಮೇತ ಕ್ರಯ ರೂ. 3.

ಇದು ಪ್ರಸಿದ್ಧವಾದ ಮತ್ತು ಹೊಸದೊರತಾದ ಲೀವರ್ ಕೆಲಸದಿಂದಲೂ ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ನಾಜೂಕಾದ ಮತ್ತು ಖಾತ್ರಿಯಾದ ಮಾಲು



ತಳಿಯಲ್ಲಿ ಬೀಗವುಳ್ಳದ್ದು. ಚಕ್ರದ ಮೇಲೆ ಕೆಂಪು ಕೆತ್ತಿರುತ್ತೆ. ಕೆಂಪು ಕೆತ್ತಿರುವ ವಾಚ್ ಶ್ರೇಷ್ಠವಾದದ್ದು. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಮತ್ತು ದೀರ್ಘಕಾಲ ಬಾಳಿಕೆ ಬರುವಂಥಾದ್ದು ಎಂಬುವದು ಸರ್ವಜನರಿಗೂ ತಿಳಿದ ವಿಷಯವೇ ಸರಿ. ಹೀಗಿರುವದರಲ್ಲಿ ಈ ವಾಚ್ ವಿಷಯವಾಗಿ ಹೆಚ್ಚು ಮಾತುಗಳು ಬರೆಯುವದು ಜಾಸ್ತಿ. ಮಣ್ಣು ಧೂಳು ಸೇರದಂತೆ ಒಳಗೆ ಗ್ಲಾಸ್ ಡೋಮ್ (ಅಂದರೆ ಕನ್ನಡಿ ಮುಚ್ಚಳ) ದಿಂದ ಮುಚ್ಚಿರುತ್ತೆ. ಈ ವಾಚಿನ ಮುಂಭಾಗದಲ್ಲಿ ಇಂಜಿನ್ ವಾಚ್ ಅಂದರೆ ಗುರುತು ಇರುತ್ತೆ. ಈ ಪ್ರಕಟನೆಯಲ್ಲಿ ಕಾಣಿಸಿರುವ ವಾಚ್ ಮುದ್ರದಲ್ಲಿ ನೋಡಿ ಅದೇ ನಾಜೂಕಾದ ಈ ವಾಚ್‌ಗೆ ಗುರುತು.

ಇದಕ್ಕಿಂತಲೂ ಕಮ್ಮಿ ಬೆಲೆಯುಳ್ಳ ಸ್ವಿಸ್ ರೆಗ್ಯುಲೇಟರ್ ಲೀವರ್ ವಾಚ್‌ಗಳು ರೂ. 1-12-0, ರೂ 1-13-0 ಯಲ್ಲಿಯೂ, ರಾಸ್ಕೋಪ್ ವಾಚ್ ಮುಂತಾದವುಗಳು ರೂ 1-12-0, ರೂ 1-13-0 ಯಲ್ಲಿಯೂ, ನಮ್ಮಲ್ಲಿ ದೊರೆಯುತ್ತೆ. ಆದರೆ ಅವು ಈ ವಾಚಿನಷ್ಟು ನಾಜೂಕಾದ ವಾಚ್ ಅಲ್ಲ. ಆದ್ದರಿಂದ ಇದು ತೆಗೆಯುವವರೆಲ್ಲಾ ಇದನ್ನು ತೆಗೆದು ಸಂತೋಷಪಡಬೇಕಾಗಿ ಕೋರುತ್ತೇವೆ. [37-2]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—ಬಿ ಆರ್. ವಂಕಟರಮಣ ಅಂಡ್ ಕಂಪೆನಿ, ನಂ 7, ಕೋಪ್ ವೆಂಕಟಾಚಲಯರ್ ಬೀದಿ, ಮದರಾಸು.

ಗ್ರಾಂ ಅಡ್ರೆಸ್ —'ತಿರುಪತಿ,' ಹರಿಹರ ಜಾಗ್ರತೆ ತೆಕ್ಕೊಳ್ಳಿ. ತ್ವರೆಮಾಡಿರಿ.

ಬೇಸಿಗೆ ಕಾಲ ಸಮೀಪಿಸುತ್ತಾ ಬರುತ್ತೆ.

ಬೇಳಿನ ಹಾವಳಿ ಪ್ರಾರಂಭವಾಯಿತು.

ಅದ್ಭುತವಾದ ಇನಾಮು.

ಒಂದು ಲಕ್ಷ ರೂಪಾಯಿಗಳು ಹಂಚಲ್ಪಡುತ್ತವೆ

ಡಾಕ್ಟರ್ ಯು. ವಿ. ಇನಾಂದಾರ್‌ರವರು ತಯಾರು ಮಾಡಿದ "ಸ್ಕಾರ್ಪಿಯೊನಿಯೋ" ಎಂಬ ಚೇಳಿನ ಔಷಧವನ್ನು ಸಮಸ್ತ ದೇಶಗಳಲ್ಲಿಯೂ ಹರಡುವದಕ್ಕೂ, ಅದರ ಗುಣವನ್ನು ಅನುಭವಕ್ಕೆ ತರುವದಕ್ಕೂ ಈ ಇನಾಮಿನ ಮೂಲಕವಾಗಿ ಪ್ರಸಿದ್ಧಿ ಮಾಡಲ್ಪಟ್ಟಿದೆ. ಈ ಚೇಳಿನ ಔಷಧವು ಅತಿ ಶೀಘ್ರವಾಗಿ ಗುಣವನ್ನು ಕೊಟ್ಟು, ರೋಗಿಯನ್ನು ನಗುವಂತೆ ಮಾಡಲ್ಪಟ್ಟಿದೆ. ಪ್ರಪಂಚದಲ್ಲಿ ಎಷ್ಟು ಚೇಳಿನ ಔಷಧಗಳಿವೆಯೋ ಅವಕ್ಕೆಲ್ಲಾ ಶ್ರೇಷ್ಠವೆಂದು ಎಣಿಸಿಕೊಂಡು ಇಟ್ಟಿರುವವರಿಂದ ಈ ಔಷಧಿಯನ್ನು ವ್ಯಕ್ತಿಕ ನೆರೆ ಎಂದು ಸಮಸ್ತರೂ ಪ್ರಾಮುಖ್ಯತೆಯಾದೆನಿಸಿ ಇದನ್ನು ಪ್ರಚುರಪಡಿಸಬೇಕೆಂದು ಅಭಿಪ್ರಾಯಪಟ್ಟ ಮೇರೆಗೆ ಈ ಮೂಲಕವಾಗಿ ಸಮಸ್ತರ ಉಪಯೋಗಕ್ಕೂ ಪ್ರಕಟಿಸಲ್ಪಟ್ಟಿದೆ. ಖಂಡಿತ ವಾಗಿ ಇದಕ್ಕೆ ಸಮಾನವಾದ ಚೇಳಿನ ಮದ್ದು ಇಲ್ಲವೆಂದು ಖಂಡಿತವಾಗಿ ಹೇಳಿದ್ದಾನೆ.

ಹಿಸ್ ಎಕ್ಸಲೆನ್ಸಿ ಲಾರ್ಡ್ ಕಿಚ್ನರ್, ಲೇಟ್ ಕಮ್ಯಾಂಡರು ಇನ್ ಚೀಫ್, ಇಂಡಿಯ, ಮತ್ತು ಕರ್ನಲ್ ವಿಕ್ಟರ್ ಬ್ರಿಕ್, ಲೇಟ್ ಮಿಲಿಟರಿ ಸೆಕ್ರೆಟರಿ ಟು ದಿ ವೈಸರಾಯಿ, ಇವರುಗಳು ಡಾಕ್ಟರು ಯು. ವಿ. ಇನಾಂದಾರ್ ಔಷಧಿಯನ್ನು ಬಹಳವಾಗಿ ಹೊಗಳಿದಾರೆ.

ಇನಾಂಗಳ ವಿವರ —ಇದೇ 1913 ನೇ ಫೆಬ್ರವರಿಯಿಂದ ಜೂನ್ನ ತಾರೀಖು 31 ರ ವರೆವಿಗೂ ಹನ್ನೆರಡು ಲಕ್ಷ "ಸ್ಕಾರ್ಪಿಯೊನಿಯೋ" ಎಂಬ ಚೇಳಿನ ಔಷಧವನ್ನು ಇನಾಂ ಮೂಲಕವಾಗಿ ಬಿಕ್ರಿ ಮಾಡಲು ಏರ್ಪಡಿಸಿದ ಬಾಟ್ಲಿ 1ಕ್ಕೆ ಬೆಲೆ ಎಂಟಾಣೆ ಮಾತ್ರವೇ. ಟಪಾಲು ಹಾಸಲು, ಪ್ಯಾಕಿಂಗ್ ಚಾರ್ಜು, ವಿ ಪಿ ಚಾರ್ಜು ಬೇರೆ.

						ರೂಪಾಯಿ								ರೂಪಾಯಿ.
1 ನೇ ಇನಾಂ	2 ಗ್ರೋಸ್ ಬಾಟ್ಲಿ	ತೆಗೆದುಕೊಳ್ಳುವವರಿಗೆ	1913 ನೇ ಏಪ್ರಿಲ್	ಆಖೈರೊಳಗಾಗಿ		9,000	1 ನೇ ಇನಾಂ	2 ಗ್ರೋಸ್ ಬಾಟ್ಲಿ	ತೆಗೆದುಕೊಳ್ಳುವವರಿಗೆ	1913 ನೇ ಜೂನ್	ಆಖೈರೊಳಗಾಗಿ			7,000
2 ,,	1 ಗ್ರೋಸ್ ,,	,,	,,	,,		8,000	2 ನೇ ,,	1 ಗ್ರೋಸ್ ,,	,,	,,	,,			6,000
3 ,,	6 ಡಜನ್ ,,	,,	,,	,,		7,500	3 ನೇ ,,	6 ಡಜನ್ ,,	,,	,,	,,			5,500
4 ,,	3 ಡಜನ್ ,,	,,	,,	,,		7,000	4 ನೇ ,,	3 ಡಜನ್ ,,	,,	,,	,,			5,000
5 ,,	2 ಡಜನ್ ,,	,,	,,	,,		6,500	5 ನೇ ,,	2 ಡಜನ್ ,,	,,	,,	,,			4,500
6 ,,	1 ಡಜನ್ ,,	,,	,,	,,		6,000	6 ನೇ ,,	1 ಡಜನ್ ,,	,,	,,	,,			4,000
7 ,,	6 ಬಾಟ್ಲಿಗಳು	,,	,,	,,		5,500	7 ನೇ ,,	4 ಬಾಟ್ಲಿಗಳು	,,	,,	,,			3,500
8 ,,	3 ಬಾಟ್ಲಿಗಳು	,,	,,	,,		5,000	8 ನೇ ,,	3 ಬಾಟ್ಲಿಗಳು	,,	,,	,,			3,000
9 ,,	2 ಬಾಟ್ಲಿಗಳು	,,	,,	,,		4,500	9 ನೇ ,,	2 ಬಾಟ್ಲಿಗಳು	,,	,,	,,			2,500
						59,000								41,000

ಒಟ್ಟು ರೂ. 1,00,000 ಲಕ್ಷ ಮಾತ್ರವೇ?

ಯಾವದಾದರೂ ಒಂದು ಇನಾಂ ಕಲಂಗಳ ಪೈಕಿ ಒಬ್ಬರಿಗಿಂತ ಜಾಸ್ತಿಯಾಗಿದ್ದರೆ ಆ ಇನಾಮಿನ ಕಲಮನ್ನು ಎಲ್ಲರಿಗೂ ಒಂದೇ ಸಮನಾಗಿ ಹಂಚಿಕೊಡಲ್ಪಡುತ್ತದೆ. ಮತ್ತು ಒಂದೆ ವೇಳೆ ಒಬ್ಬರೇ ಇದ್ದರೆ ಆ ಪೂರ್ತಿ ಇನಾಂನ ಕಲಮಿನಲ್ಲಿರುವ ಹಣವನ್ನು ಅವರೊಬ್ಬರಿಗೇ ಕೊಡಲ್ಪಡುತ್ತದೆ. ಎರಡು ಬಾಟ್ಲಿಗಳು ಜಾಸ್ತಿಯಾಗಿ ಕೊಂಡುಕೊಳ್ಳುವ ಪ್ರತಿ ಒಬ್ಬರಿಗೂ ಇನಾಂನ ಸರ್ಟಿಫಿಕೇಟನ್ನು ಆಯಾಯ ಇನಾಂ ಕಲಂವಾರು ಪ್ರಕಾರ ತೆಗೆದುಕೊಂಡ ಬಾಟ್ಲಿಗಳ ಸಂಖ್ಯೆಯನ್ನು ಅವರಿಗೆ ಖಂಡಿತವಾಗಿಯೂ ಇನಾಂನ್ನು ಕೊಡುತ್ತೇವೆಂದು ಭರವಸೆ ಕೊಟ್ಟು ಬರೆದುಕೊಡಲ್ಪಡುತ್ತೆ. ನಮ್ಮ ಇನಾಮು ಕಲಮಿನ ಲಿಸ್ಟಿನಲ್ಲಿ ಕಾಣಿಸಿರುವ ಮೇರೆಗೆ ಬಾಟ್ಲಿಗಳನ್ನು ಕೊಂಡುಕೊಳ್ಳುವರಿಗೆ ವಿನಹ ಬಾಕಿ ಯಾರಿಗೂ ಕೊಡಲ್ಪಡುವದಿಲ್ಲ. ಈ ಹನ್ನೆರಡು ಲಕ್ಷ ಬಾಟ್ಲಿಗಳು ಖರ್ಚಾದ ಕೂಡ್ಲೆ ಲಿಸ್ಟನ್ನು ಖೈದುಮಾಡಿ, ಇನಾಂಗಳು ಹಂಚಲ್ಪಡುತ್ತೆ. ಒಂದು ವೇಳೆ ಪೂರಾ ಹನ್ನೆರಡು ಲಕ್ಷ ಬಾಟ್ಲಿಗಳು ಖರ್ಚಾಗದೆ ಹೋದರೆ ಮುಂದೆ ಹಾಯಿದೆಯನ್ನು ಹೆಚ್ಚಿಸದೆ ಎಷ್ಟು ಖರ್ಚಾಗಿರುತ್ತವೋ ಅಷ್ಟಕ್ಕೇ ದಾಮಾಷಾ ಪ್ರಕಾರ ಆಗತಕ್ಕಷ್ಟು ಮಾತ್ರ ಇನಾಂಗಳು ಹಂಚಲ್ಪಡುತ್ತವೆ. ಇನಾಂಗಳು ಹಂಚುವ ತಾರೀಖು ಇದೇ 1913 ನೇ ಇಸ್ವಿ ಆಗಸ್ಟ್ ತಿಂಗಳು 15 ಕ್ಕೆ ಇದೇ ಹರಿಹರದಲ್ಲಿ ಬಹಿರಂಗವಾಗಿ ಹಂಚುತ್ತೆ.

ಪ್ರತಿ ಒಬ್ಬ ಮನುಷ್ಯನಿಗೂ ತಾನು ಕೊಡುವ ಕಿಮ್ಮತ್ತಿಗೆ ಸರಿಯಾಗಿ ಔಷಧ ಬಾಟ್ಲಿಯನ್ನು ಪಡೆಯುವದಲ್ಲದೆ ಇನಾಂಗೂ ಅರ್ಹನಾಗಿರುತ್ತಾನೆ. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಈವಾಗಲೇ ವಿಶೇಷ ಆರ್ಡರುಗಳು ಬರುವ ತೊಂದರೆ ಕಾರಿಂದ ಅದ್ದರಿಂದ ಪೂರ್ತಿಯಾಗಿ ಎಲ್ಲಾ ಬಾಟ್ಲಿಗಳು ಖರ್ಚಾಗುವದರಲ್ಲಿ ಸಂದೇಹ ತೋರುವದಿಲ್ಲ.

ಏಜಂಟರುಗಳು ಬೇಕಾಗಿದೆ. ಸಂಬಳ ನೂರು ರೂಪಾಯಿ ಮತ್ತು ಅಲೋಯನ್ಸು ಇಪ್ಪತ್ತು ರೂಪಾಯಿ

ಈ ವಿಳಾಸಕ್ಕೆ ಟಪಾಲುದ್ವಾರ ಕಾಗದಗಳನ್ನು ಬರೆದು ಆರ್ಡರು ಕಳಿಸಿ ಬಾಟ್ಲಿಗಳನ್ನು ತರಿಸಿಕೊಳ್ಳಬಹುದು:— [33-2]

ಮೆಸ್ಸರ್ಸ್ ತಿರುಪತಿ ಗುಜರ್ ಅಂಡ್ ಕೋ., ಸೋಲ್ ಏಜಂಟ್ಸ್ ಸ್ಕಾರ್ಪಿಯೊನಿಯೋ ಡೆಪೋ, ಹರಿಹರ, ಮೈಸೂರು ಪ್ರಾವಿನ್ಸು.

NOTICE.

The Secretary for the Madras Branch of The Victoria Life Insurance Company Ld is expected to arrive at Mysore during the 1st week of March to plant Agencies Intending persons may apply to the Secretary C/o Editor Vrittanta Patrike

ಗ್ರಾಪಕ್ಕತ್ರದ ನೋಟೀಸ್

[illegible]

[11 1] [illegible]

Office of the Military Secretary to His Highness the Maharajah of Mysore

Dated Bangalore 1st February 191

NOTICE

Tenders will be received by the Military Secretary to His Highness the Maharajah at 12 noon on the 28th February 191 , for the supply of the following felloes spokes and planks, required for the Mysore Imperial Service Transport Workshop

The tenderers should produce samples of wood they are to supply with their quotations making a note at the same time the date within which the articles can be supplied

The details of size required can be ascertained at the Imperial Service Transport Workshop Cubbon Park Bangalore

Sawn teak or honney felloes	1,080
Do teak or honney spokes	[illegible]
Do teak planks [2 x 1 6 x 1 4]	540

Sd A JONES Lt Col
For Military Secretary

[59 1]

ವೃತ್ತಾಂತ ಪತ್ರಿಕೆ

ಶಕ ೧೯೧೩ ನೆ [illegible] ಗುರುವಾರ

ಮೈಸೂರು ಸೀಮೆಯ ವ್ಯವಸಾಯವು

ಮೈಸೂರು ಗವರ್ನಮೆಂಟಿನವರು ಪ್ರಕಟಿಸಿರುವ [illegible] ರಿಪೋರ್ಟುಗಳಲ್ಲಿ [illegible] ಬಹಳ ವಿಶೇಷವಾದದ್ದೆಂದು ಹೇಳುತ್ತೇವೆ ಯಾಕೆಂದರೆ ಈ ಸೀಮೆಯಲ್ಲಿ ವಿಶೇಷ ಭಾಗದ ಪ್ರಜೆಗಳು ವ್ಯವಸಾಯದಿಂದ ಜೀವನ ಮಾಡುತ್ತಾರೆ ಮತ್ತು ರೈತರು ಮಾಡುವ ಜಮೀನಿನ ಕಸಬಿನಿಂದಲೆ ಈ ಸಂಸ್ಥಾನದ ಪ್ರತಿ ಒಬ್ಬ ಪ್ರಜೆಗೂ ಆಹಾರ ದಾನ್ಯಗಳು ದೊರಕಬೇಕಾಗಿದೆ ಆದಕಾರಣ ವ್ಯವಸಾಯ ವಿಚಾರವು ಪ್ರಾಧಾನ್ಯವಾದದ್ದೆಂದು ಗೊತ್ತಾಗುವುದು ಈ ವಿಚಾರಕ್ಕೆ ಗವರ್ನಮೆಂಟಿನವರು ಬಹು ವಿಶೇಷವಾದ ಗಮನವನ್ನು ಕೊಡಬೇಕಾಗಿದೆ ಸರ್ಕಾರದವರು ಈ ಇಲಾಖೆಯ ಕಾರ್ಯಗಳನ್ನು ಇನ್ನೂ ಅಭಿವೃದ್ಧಿಸ್ಥಿತಿಗೆ ತರಬೇಕೆಂತಲೂ ಡಾಕ್ಟರ್ [illegible] ರವರು ವಹಿಸಿಕೊಂಡು ಬಂದ ತರುವಾಯ ಅವರನ್ನು ಈ ಇಲಾಖೆಗೆ ಡೈರೆಕ್ಟರಾಗಿ ನೇಮಕ ಮಾಡಬೇಕೆಂತಲೂ ನಿಶ್ಚಯ ಮಾಡಿಕೊಂಡಿದ್ದಾರೆಂದು ತಿಳಿಸಲು ಸಂತೋಷಪಡುತ್ತೇವೆ

ಹೊಸ ವಿಚಾರಗಳನ್ನು ಗ್ರಹಿಸಿಕೊಳ್ಳುವುದರಲ್ಲಿ ಮೈಸೂರು ಸೀಮೆಯ ರೈತನ ಪ್ರಕೃತಿಯು ತಾಮಸವಾದದ್ದು ಅವನು ಅಷ್ಟೊಂದು ಆತುರಪಡುವವನಾಗಿಲ್ಲ ಅವರೆ ಉಳುವುದು ಗೊಬ್ಬರ ಗೋಡು ಹಾಕಿ ಜಮೀನನು ಸಿದ್ಧಪಡಿಸುವುದು, ಬಿತ್ತನೆಯ ಬೀಜವನ್ನು ಆಯ್ದು ಕೂಡಿಸುವುದು ಇವೇ ಮೊದಲಾದ ರೀತಿಯಲ್ಲಿ ಹೆಚ್ಚು ಖರ್ಚಿಲ್ಲದೆ ಉತ್ತಮವಾದ ಮತ್ತು ಹುಲುಸಾದ ಬೆಳೆಯನ್ನು ಮಾಡತಕ್ಕಂಥಾ ನೂತನ ವಿಧಾನಗಳನ್ನು ರೈತನಿಗೆ ದೃಷ್ಟಾಂತಪಡಿಸಿ ತೋರಿಸಿಕೊಡುವ ಪಕ್ಷದಲ್ಲಿ ಅವನು ಕ್ರಮೇಣ ಆ ರೀತಿ ಅನುಸರಿಸತಕ್ಕವನಾಗಿದ್ದಾನೆ ಇಂಥಾ ಕೆಲಸಕ್ಕೆ ಸಹಕಾರಿಯಾಗುವ ಕಾರ್ಯಗಳನ್ನು ಸರ್ಕಾರದವರು ಊರ್ಜಿತಪಡಿಸಿ ಹೆಚ್ಚು ಹೆಚ್ಚಾಗಿ ಹರಡಲು ಸಾಹಸಪಡುತ್ತಿರುವುದು ಸಂತೋಷಪ್ರದವಾಗಿದೆ ಈ ಉದ್ದೇಶದಿಂದ ಗವರ್ನಮೆಂಟಿನವರು ಹೆಬ್ಬಾಳದ ಪರೀಕ್ಷಾ ಕ್ಷೇತ್ರವನ್ನು ಇನ್ನೂ ವಿಸ್ತಾರ ಮಾಡಿದ್ದಾರೆ, ಮತ್ತು ಸಂಸ್ಥಾನದ ಉಳುಮೆಯ ವಿಧಾನವನ್ನು ರೈತನಿಗೆ ಸಾಕ್ಷಾತ್ತಾಗಿ ಮಾಡಿ ತೋರಿಸುತ್ತಿರುವರು ಉಳುವ ಕ್ರಮವನ್ನು ನೋಡುವುದಕ್ಕಾಗಿ ರೈತನು ತನ್ನ ಗ್ರಾಮವನ್ನು ಬಿಟ್ಟು ಬಹಳ ದೂರ ಹೋಗಬೇಕಾದ್ದರಿಲ್ಲ ಅವರೆ ಅವನ್ನು ಅವನ ಗ್ರಾಮದಲ್ಲೇ ಸಾಕ್ಷಾತ್ತಾಗಿ ಮಾಡಿ ತೋರಿಸಿದ ಪಕ್ಷದಲ್ಲಿ ಅವನು ನೋಡಿ ಅದನ್ನು ಬೇಗನೆ ಗ್ರಹಿಸಿಕೊಳ್ಳುತ್ತಾನೆ ಆದಕಾರಣ ಗ್ರಾಮಾಂತರಗಳಲ್ಲಿ ಉಳುಮೆಯನ್ನು ಮಾಡಿ ತೋರಿಸುತ್ತಾ ಬಂದರೆ ಅದರಿಂದ ತಕ್ಷಣವಷ್ಟೇ ಫಲವಾಗದಿದ್ದರೂ ಕ್ರಮೇಣ ಅದು ಅವರಿಗೆ ಒಂದು ಫಲದಾಯಕವಾದೀತು ಈ ಸಂಸ್ಥಾನದಲ್ಲಿ ಒಕ್ಕಲಿಗರ ಪುರೋಭಿವೃದ್ಧಿಗಾಗಿಯೇ ಏರ್ಪಟ್ಟಿರುವ ಒಕ್ಕಲಿಗರ ಸಂಘದವರು ಈ ವಿಧಾನದ ಕಾರ್ಯದಲ್ಲಿ ಸರ್ಕಾರದವರ ಕೂಡ ಸೇರಿ ಕೆಲಸ ಮಾಡುವುದನ್ನು ನೋಡಲು ಅಪೇಕ್ಷಿಸುವೆವು ಈ ಸಂಘದ ಪರವಾಗಿ ರೈತರ ಹಿತಚಿಂತನೆಯುಳ್ಳ ಕೆಲವು ಮುಖಂಡರುಗಳು [illegible] ಸರ್ಕಾರದವರ [illegible] ಕಾರ್ಯಗಳ [illegible] ರೈತರಿಗೆ [illegible] ಬಂದರೆ ಸರ್ಕಾರದವರು ಉಳುಮೆಯ [illegible] ನೂತನ ಕ್ರಮಗಳನ್ನು ಸಿದ್ಧ ಮಾಡಿ ತೋರಿಸುವುದಕ್ಕೂ ಹಾಗೆ ತೋರಿಸಿದ್ದು ಸಾರ್ಥಕವಾಗುವುದಕ್ಕೂ ಅನುಕೂಲವಾಗುವುದು

ಈ ಸಂಸ್ಥಾನದ ಹಲವು ಭಾಗಗಳಲ್ಲಿ ಬತ್ತ ಪ್ರಧಾನವಾಗಿ ಬೆಳೆಯುವುದು [illegible] ರೈತರು ಪೂರ್ವಕಾಲದಿಂದಲೂ ಒಂದೇ ರೀತಿಯ ವ್ಯವಸಾಯ ಕ್ರಮಗಳನ್ನು ಬಿಟ್ಟು ನೂತನವಾದ ರೀತಿಯಲ್ಲಿ ವ್ಯವಸಾಯ ಮಾಡುವುದಾದರೆ ಬಹಳ ಹುಲುಸಾದ ಪೈರನ್ನು ಬೆಳೆಯಬಹುದೆಂದು [illegible] ರೈತರು ಚೆನ್ನಾಗಿ ತಿಳಿದಿರಬೇಕಾದ ವಿಷಯಗಳು ಮೂರು (1) ಆಳವಾಗಿ ಉಳುವುದು (2) ಹುಲುಸಾದ ಗೊಬ್ಬರವನ್ನು ಹಾಕುವುದು (3) ಪೈರಿಗೆ ಹಿಡಿಯುವ ಹುಳ ಮೊದಲಾದ ಕ್ರಿಮಿಕೀಟಗಳನ್ನು ನಾಶಪಡಿಸುವುದು ಈಗ ಉಳುವುದರಲ್ಲಿ ರೈತನು ಒಳ್ಳೆಯ ನೇಗಿಲನ್ನು ಉಪಯೋಗಿಸುವುದು ಕ್ರಮೇಣ ಏರ್ಪಡಿಕೊಳ್ಳುತ್ತಾ ಇದೆ ಕಳೆದ ಸಾಲಿನಲ್ಲಿ ಸರ್ಕಾರದವರು ಇಡಿಸಿರುವ [illegible] ರೈತರು ಹೊಸದಾಗಿ ನೇಗಿಲುಗಳನ್ನು ಕೊಂಡುಕೊಂಡಿರುತ್ತಾರೆಂದು ತಿಳಿಯುತ್ತೇವೆ ಈ ವಿಚಾರವನ್ನು ರೈತರಿಗೆ ಇನ್ನೂ ಚೆನ್ನಾಗಿ ಒತ್ತಿ ಹೇಳಬೇಕು [illegible] ಪೈರಿಗೆ ಹಸುರು ಗೊಬ್ಬರವು ಬಹಳ ಉಪಯುಕ್ತವಾದ್ದೆಂದು ನಿಶ್ಚಿತವಾಗಿದೆ ಇದು ರೈತನಿಗೆ ಸುಲಭವಾಗಿ ಸಮೀಪದಲ್ಲೇ ಸಿಕ್ಕುವುದಾದರೆ ಅವನು ಅದನ್ನು ತಂದು ಹಾಕುವುದಿಲ್ಲ ಕೆಲವು ಪೈರುಗಳನ್ನು ಹಿಡಿದು ಹಾಳುಮಾಡುವ ಹುಳ ಹುಪ್ಪಟೆಗಳ ಪ್ರವೃತ್ತಿ [illegible] ಇಲಾಖೆಯವರು ಗೊತ್ತುಮಾಡಿ ಅವುಗಳಿಗೆ ತಕ್ಕ ಪರಿಹಾರ ಮಾರ್ಗಗಳನ್ನು ತೋರಿಸಿ ಕೊಟ್ಟರೆ ಅಂಥಾ ಹುಳ ಹುಪ್ಪಟೆಗಳನ್ನು ಹಿಡಿದು ಕೊಲ್ಲುವ ಬಾಗದಲ್ಲಿ ರೈತರಿಗೆ ವಿಶೇಷವೂ ಪ್ರೋತ್ಸಾಹವೂ ಸಹಾಯವೂ ಬೇಕು ಗವರ್ನಮೆಂಟಿನವರು ಒಳ್ಳೆಯ ಬಿತ್ತನೆ ಬೀಜಗಳನ್ನು ವಿತರಣೆ ಮಾಡುವುದಕ್ಕೆ ಒಂದು ಡಿಪ್ಪೋವನ್ನು ಇಟ್ಟಿದ್ದಾರೆ ರೈತರು ಈ ಡಿಪ್ಪೋದಿಂದ ಇನ್ನೂ ಹೆಚ್ಚು ಹೆಚ್ಚಾಗಿ ಬಿತ್ತನೆ ಬೀಜಗಳನ್ನು ತರಿಸಿಕೊಳ್ಳುವಂತೆ ಅವರಿಗೆ ವಿವೇಕ ಹೇಳುವವರಾಗಬೇಕು

ಸರ್ಕಾರದವರು ಈ ಭಾಗದಲ್ಲಿ ರೈತಪ್ರಜೆಗಳಿಗೆ ಒದಗಿಸಿ ಕೊಟ್ಟಿರುವ ಸೌಕರ್ಯಗಳಿಗಾಗಿ ನಾವು ಅವರನ್ನು ವಂದಿಸುವೆವು ಅನೇಕವೇಳೆ ರೈತರು ಮುಖ್ಯ ರಹಿತರು ಹೊಸ ವಿಷಯಗಳಿಗೆ ಗಮನಕೊಡದೇನೂ ಸರ್ಕಾರದವರು ಅವರ ಹಿತಚಿಂತನೆಯಿಂದ ಮಾಡತಕ್ಕಂಥಾ ಸಹಾಯಾದಿಗಳನ್ನು ಲಕ್ಷ್ಯಮಾಡದೇನೂ ಮೌಢ್ಯವನ್ನೂ ಅವಿವೇಕವನ್ನೂ ಪ್ರಕಾಶಪಡಿಸಬಹುದು ಅಂಥಾ ಸಂದರ್ಭಗಳು ಒದಗಿದಾಗಲೂ ಇಲಾಖೆಯವರು ಸಿಟ್ಟುಗೊಳ್ಳದೆ ತಾಳ್ಮೆಯಿಂದಲೂ ಸ್ಥಿರಚಿತ್ತರಾಗಿಯೂ ಪ್ರೀತಿಸುತರಾಗಿಯೂ ಸಹಿಸಿಕೊಂಡು ಅವರಿಗೆ ಬುದ್ಧಿ ವಿವೇಕಗಳುಂಟಾಗುವಂತೆ ಸಾಹಸಪಡಬೇಕು ಈ ವಿಚಾರದಲ್ಲಿ ಸರ್ಕಾರದ ನಡವಳಿಕೆಯೂ ಕಾಗದ ಪತ್ರಗಳೂ ಯಾವುದೊಂದೂ ರೈತನ ತಿಳುವಳಿಕೆಗೆ ಬಾರದಂತೆ ಇರಕೂಡದು ಸಂದರ್ಭಬಿದ್ದಾಗ ರೈತನು ತನ್ನ ಅನುಮಾನವನ್ನೂ ಅನುಭವವನ್ನೂ ಧಾರಾಳವಾಗಿ ತಿಳಿಸುವುದಕ್ಕೆ ಅವಕಾಶವಿರಬೇಕು ವ್ಯವಸಾಯ ವಿಚಾರದಲ್ಲಿ ತನ್ನ ಹಿತಚಿಂತಕರೂ ತನಗೆ ಸಹಾಯಮಾಡತಕ್ಕವರೂ ಅನೇಕರಿದ್ದಾರೆಂದು ರೈತನಿಗೆ ತಿಳಿಯುವಂತಾಗಬೇಕು ಇಲಾಖೆಯವರು ಈ ರೀತಿಯಾದ ಉದ್ದೇಶದಿಂದ ಕಾರ್ಯಗಳನ್ನು ನಡಿಸುತ್ತಾ ಬಂದರೆ ಅದರಿಂದ ಬಹಳ ಮೇಲಾದೀತು ಹಾಗಿಲ್ಲದೆ ಅಮಲ್ದಾರರುಳ್ಳ ಅಧಿಕಾರಸ್ಥಾನದಲ್ಲಿ ಅದರ ಸಾಹಸ ಕ್ರಿಯೆಗಳೆಲ್ಲಾ ವ್ಯರ್ಥವಾಗುವವು

ಟರ್ಕೀ ಬಾಲ್ಕನ್ ಯುದ್ಧವು

[illegible]

ಕಾಪ್ಟನ್ ಸ್ಕಾಟ್‌ರವರ ಮರಣವು

[illegible]

ಕಣ್ಣಿದ್ದರೂ ಕಾಣುವದಿಲ್ಲ

[illegible]

ಕೆಲವರು ತಮ್ಮ ಪಾರಮಾರ್ಥಿಕ ವೃದ್ಧಿಯನ್ನು ಸರಿಯಾಗಿ ಬೆಳಸಬೇಕೆಂಬ ಆಶೆಯುಳ್ಳವರಾಗಿದ್ದಾರೆ ಅವರು ತಮ್ಮ ದೈವವನ್ನೂ ಅವರ [illegible]

...ಗಿ ಪ್ರತಿಯೊಬ್ಬನು ದೃಢಕಾಯರಾಗಿರಬಹುದು. ಆದರೆ ಅವರು ತಾವು ಎಲ್ಲಿಂದ ಬಂದೆವು, ಇಲ್ಲಿ ಯಾತಕ್ಕೆ ಬಂದಿದ್ದೇವೆ? ಈ ಲೋಕವನ್ನೂ, ಅದರಲ್ಲಿರುವ ಸಕಲವನ್ನೂ ನನ್ನನ್ನೂ ನಿರ್ಮಾಣಮಾಡಿರುವವನು ಯಾರು? ಆತನು ನನ್ನಿಂದ ಅಪೇಕ್ಷಿಸುವ ಕರ್ತವ್ಯವೇನು? ನಾನು ಈ ಲೋಕವನ್ನು ಬೇಗ ಬಿಟ್ಟು ಮೇಲೆ ಎಲ್ಲಿಗೆ ಹೋಗುತ್ತೇನೆ? ನನಗೆ ಅಲ್ಲೇನು ಸಂಭವಿಸುವದು? ಎಂದು ಯೋಚನೆಮಾಡದೆ ಇದ್ದಾರೆ. ದೇವರು ಅಗೋಚರನಾಗಿ ... ಆತನು ಪ್ರತಿ ನಿತ್ಯವೂ ನಡಿಸುತ್ತಲಿರುವ ಕಾರ್ಯಗಳು ಆತನನ್ನು ಕುರಿತು ಸಾಕ್ಷಿ ಹೇಳುತ್ತವೆ. ಅವರು ಅವುಗಳನ್ನೆಲ್ಲಾ ನೋಡುತ್ತಲಿದ್ದರೂ ಅವುಗಳ ಕಾರ್ಯಕರ್ತನಾದವನನ್ನು ಗ್ರಹಿಸುವದಿಲ್ಲ. ಅವರಿಗೆ ಕಣ್ಣಿದ್ದರೂ ಕಾಣುವದಿಲ್ಲ. ನೋಡಲೊಲ್ಲದವನಿಗೆ ನೋಡುವದಕ್ಕೆ ಮನಸ್ಸಿಲ್ಲದವನಿಗೆ ದೃಷ್ಟಿ ಇಲ್ಲದೆ ಹೋಗುವದು ಆಶ್ಚರ್ಯವಲ್ಲ. "ಓ ಸ್ವಾಮಿಯೇ ನೀನು ನನ್ನನ್ನು ಶೋಧಿಸಿ ತಿಳುಕೊಂಡಿದ್ದೀ. ನಾನು ಕೂತ್ಕೊಳ್ಳುವದನ್ನೂ ಏಳುವದನ್ನೂ ನನ್ನ ಯೋಚನೆಗಳನ್ನೂ ನೀನು ದೂರದಿಂದ ಗ್ರಹಿಸಿಕೊಂಡಿದ್ದೀ. ಹಿಂದೆಯೂ ಮುಂದೆಯೂ ನನ್ನನ್ನು ಇರಿಕಿ ನಿನ್ನ ಕೈಯನ್ನು ನನ್ನ ಮೇಲೆ ಇಟ್ಟಿದ್ದೀ. ನಾನು ನಿನ್ನ ಆತ್ಮಕ್ಕೆ ತಪ್ಪಿ ಎಲ್ಲಿಗೆ ಹೋಗಲಿ. ನಾನು ಆಕಾಶಕ್ಕೆ ಏರಿ ಹೋದರೆ ನೀನು ಅಲ್ಲಿ ಇದ್ದೀ. ಪಾತಾಳಕ್ಕೆ ಹೋದರೆ ಅಗೋ ನೀನು ಅಲ್ಲಿ ಇದ್ದೀ. ಸಮುದ್ರದ ಕಟ್ಟಕಡೆಯಲ್ಲಿ ವಾಸಮಾಡಿದರೆ ಅಲ್ಲಿಯೂ ನಿನ್ನ ಕೈ ನನ್ನನ್ನು ನಡಿಸುವದು, ನಿನ್ನ ಬಲಗೈ ನನ್ನನ್ನು ಹಿಡಿಯುವದು." ಈ ರೀತಿಯಾಗಿ ದೇವರು ಸದಾ ಸರ್ವತ್ರ ಪ್ರಸನ್ನನಾಗಿದ್ದು ನೋಡುತ್ತಾನೆಂದು ತಿಳಿಯುವವನು ತನಗೆ ಆ ದೇವರ ದಯೆಯು ಲಭ್ಯವಾಗುವಂತೆ ನಡೆಯುವನು. ಅವನಿಗೆ ಅದೃಶ್ಯನಾದವನನ್ನು ನೋಡುವದಕ್ಕೆ ಪಾರಮಾರ್ಥಿಕ ದೃಷ್ಟಿಯುಂಟು. ಆದರೆ ದೇವರನ್ನು ತನಗೆ ತರವೆ ಆತನನ್ನು ಕುರಿತು ತಿಳಿಯುವದಕ್ಕೆ ಅಭ್ಯಾಸವನ್ನು ಮಾಡದವನಿಗೆ ದೇವರು ಇಲ್ಲ, ಸತ್ಯವೂ ಇಲ್ಲ, ನೀತಿಯೂ ಇಲ್ಲ. ಅವನು ಗುಹಾಂಧಕಾರದಲ್ಲಿದ್ದು ದೀಪದ ಪ್ರಕಾಶವನ್ನು ಹೋಗಲಾಡಿಸಿಕೊಂಡ ಪ್ರಾಣಿಯಂತೆಯೇ ಇದ್ದಾನೆ. ಅವನು ಉಂಡು ಕುಡಿದು, ಉಟ್ಟು ಅನುಭೋಗಿಸಿಟ್ಟು ಸಾಯುವನು. ದೇವರ ಸಂಗಡ ನಿತ್ಯಜೀವದಲ್ಲಿ ಅವನಿಗೆ ಭಾಗವೂ ಬಾಧ್ಯತೆಯೂ ಇಲ್ಲ. ಪಾಪಕ ಮರಣದ ಜೀವವೂ ಜೀವನ್ನು ಕೊಡುವವನೂ ಇದ್ದಾನೆಂದು ಅವನು ನಂಬಲೂ ಇಲ್ಲ. ಅದಕ್ಕಾಗಿ ಅವನು ಪ್ರಯಾಸಪಡಲೂ ಇಲ್ಲ.

ಬಹದೇಶದ ವೃತ್ತಾಂತಗಳು

ಪ್ರಿನ್ಸ್ ಡೆ ಪಟರನವರೂ, ದಿವಾನ್ ಮಿ ಎಂ ವಿಶ್ವೇಶ್ವರಯ್ಯನವರೂ ಹಿಂದಿನ ವಾರ ಬೆಂಗಳೂರಿಂದ ರಾಜಧಾನಿಗೆ ದಯಮಾಡಿದರು.

ಮೈಸೂರು ಪಟ್ಟಣದಲ್ಲಿ ಪ್ರಜೆಗಳ ಮಕ್ಕಳಿಗೆ ಬಲಾತ್ಕಾರದ ವಿದ್ಯಾಭ್ಯಾಸ ಮಾಡಿಸುವ ಕಾನೂನನ್ನು ೧೯೧೩ನೇ ಜುಲೈ ತಿಂಗಳ ಮೊದಲನೇ ತಾರೀಖಿನಿಂದ ಜಾರಿಗೆ ತರುವದಕ್ಕೆ ಆಗಿದೆ.

ಮಿ ಎಚ್ ಕೃಷ್ಣರಾಯರವರು ಬಹಳ ದಿನದಿಂದ ರಜೆಯನ್ನು ಪಡೆದು ಈಗ ಬೆಂಗಳೂರು ಚೀಫ್ ಕೋರ್ಟಿನಲ್ಲಿ ಚೀಫ್ ಜಡ್ಜ್ ರ ಕೆಲಸದ ಛಾರ್ಜನ್ನು ತೆಗೆದುಕೊಂಡು ನಿಜಮೊದಲಿನ ಯಥಾಸ್ಥಿತಿಯ ಹುದ್ದೆಯನ್ನು ವಹಿಸಿಕೊಂಡಿದಾರೆ.

ಈ ವರ್ಷದ ಬಜೆಟ್ ಖರ್ಚುಗಳಲ್ಲಿ ವೆಚ್ಚವನ್ನು ಕಡಿಮೆಮಾಡುವದರಿಂದ ಉಳಿದ ಹಣವನ್ನು ಎರಡನೇ ಸರತಿ ಬರೆದು ಕೇಳುವವರೆಲ್ಲಾ ಉಚಿತವಾಗಿ ಕೊಡಬೇಕೆಂದು ಪ್ರೆಸಿಡೆಂಟ್ ಆಫ್ ಕಮಿಟಿಯ ಸರ್ಕಾರದವರು ...ತ್ತಾರೆ.

ರಾಜಧಾನಿಯಲ್ಲಿ ಲೇಟ್ ...ಬಳೂರು ... ಇಬ್ಬರು ಮಕ್ಕಳಿಗೆ ... ಹೈಕೋರ್ಟಿನವರು ಅವರನ್ನು ... ಇವರ ಅಪೀಲ್ ಮೋಕದ್ದಮೆಯು ... ನಡೆಯಬಹುದೆಂದು ಕೇಳುತ್ತೇವೆ.

ಇಂಡಿಯಾ ಸ್ಟೇಟ್ ಸೆಕ್ರೆಟರಿ ಕೌನ್ಸಿಲಿನ ಅಸಿಸ್ಟೆಂಟ್ ಸೆಕ್ರೆಟರಿ ಮಿ ಮಾಂಟಿಗ್ಯು ತನ್ನ ಸಹೋದರರ ಕೂಡ ಈ ವಾರ ರಾಜಧಾನಿಗೆ ದಯಮಾಡಿ, ... ಪ್ರಾಂತ್ಯದಲ್ಲಿ ಸಂಚಾರಮಾಡಿಕೊಂಡು ಬಂದು, ಮೈಸೂರಿಗೆ ... ನಮ್ಮ ಮಹಾರಾಜರವರು ಆತನನ್ನು ಸತ್ಕಾರಮಾಡುತ್ತಾರೆ.

ಬರೋಡಾ ಮಹಾರಾಜರವರು ತಮ್ಮ ಕುಮಾರ್ತೆಯ ವಿವಾಹವನ್ನು ... ಈ ಉತ್ಸವಕ್ಕೆ ನಮ್ಮ ಮಹಾರಾಜರವರನ್ನು ದಯಮಾಡಬೇಕೆಂದು ಕರೆಯುವದಕ್ಕಾಗಿ ತಮ್ಮ ಕಡೆ ಸರದಾರರನ್ನು ರಾಜಧಾನಿಗೆ ಕಳುಹಿಸುತ್ತಾರೆ. ಇವರು ... ಬಂಗಲೆಯಲ್ಲಿ ಅರಮನೆಯ ಅತಿಥಿಗಳಾಗಿ ಇಳಿದಿದ್ದಾರೆ.

ಈ ವಾರ ಶಿವಮೊಗ್ಗ ಡಿಸ್ಟ್ರಿಕ್ಟ್ ... ಟೌನ್‌ನಲ್ಲಿ ವ್ಯವಸಾಯ ... ಕೆಲಸಗಳ ಆದಾಯ ಮತ್ತು ದನಗಳ ಪ್ರದರ್ಶನವೂ, ಪರಸ್ಪರ ... ವಿಷಯದಲ್ಲಿಯೂ ದನಗಳ ... ವಿಷಯದಲ್ಲಿ ... ತಿಳುವಳಿಕೆ ಕೊಟ್ಟು ಅವುಗಳನ್ನು ಅಭಿವೃದ್ಧಿಪಡಿಸುವದಕ್ಕೆ ಒಂದು ಸಭೆಯೂ ನಡೆಯುತ್ತವೆ. ಡೆಪ್ಯುಟಿ ಕಮಿಷನರ್ ಮಿ ... ಸಭೆಯ ಅಗ್ರಾಸನವನ್ನು ವಹಿಸುವರು.

ಒಬ್ಬ ಸ್ವಾತ್ವಿಕನಿಂದ—ದಾವಣಗೆರೆಯ ವೀರಶೈವರುಗಳಲ್ಲಿ ಮುಖ್ಯರೂ, ಐಶ್ವರ್ಯವಂತರೂ, ಮಹೋಪಕಾರಿಗಳೂ, ಪರೋಪಕಾರಿಗಳೂ ಆಗಿದ್ದ ... ಚನ್ನವೀರಪ್ಪನವರು ತಾ ೧೨ನೆಯ ಬುಧವಾರ ಕಾಯಿಲೆಯಿಂದ ಕಾಲವಾದರು. ಇವರ ಸಮಾಧಿ ಉತ್ಸವಕ್ಕೆ ೨೦೦೦ ಜನ ಸೇರಿತ್ತು. ಇವರಿಗೆ ೬೨ ವರ್ಷವಾಗಿರಬಹುದು. ಇಂಥಾ ಸತ್ಪಾತ್ರರು ಅಲ್ಪಕಾಲದಲ್ಲೇ ಮರಣಹೊಂದಿದ್ದು ಎಲ್ಲಾಜನಗಳಿಗೆ ಬಹಳಾ ವ್ಯಸನವನ್ನುಂಟುಮಾಡಿದೆ.

ಅಮೇರಿಕದ ಮಿಸ್ ಸಿ ಎ ಟಿನ್ನೆಂಟೀಯವರು ಕಳೆದ ವಾರ ರಾಜಧಾನಿಯಲ್ಲಿ ಎರಡು ಸಭೆಗಳನ್ನು ನಡಿಸಿ ಸಕಲ ಪ್ರಜೆಗಳೂ ಹೆಣ್ಣು ಮಕ್ಕಳಿಗೆ ವಿದ್ಯೆ ಕಲಿಸಬೇಕೆಂದೂ, ಬಾಲ್ಯವಿವಾಹವನ್ನು ತ್ಯಜಿಸಬೇಕೆಂದೂ ಉಪನ್ಯಾಸವನ್ನು ಮಾಡಿದರು. ಶ್ರೀಮದ್ಯುವರಾಜರವರು ಅಗ್ರಾಸನವನ್ನು ವಹಿಸಿದ್ದು ಸರಿಯಾದ ಸಲಹೆಗಳನ್ನು ಕೊಂಡಾಡಿ, ಪ್ರಾಜ್ಞರು ಅಕೆಯ ಉಪದೇಶವನ್ನು ಗ್ರಹಿಸಿದರೆ ಇತರರೂ ಅವರ ಮೇಲ್ಪಂಕ್ತಿಯನ್ನು ಅನುಸರಿಸಲು ಸಹಾಯವಾಗುವದೆಂದು ಮುಂತಾಗಿ ಅಪ್ಪಣೆ ಕೊಟ್ಟರು.

ಆನ ತಲೆಯ ಬಳಿ ... ದಾರರು ಬರೆಯುವುದು—ಅರಕಲಗೂಡು ... ವಿದ್ವಾನ್ ಲಕ್ಷ್ಮೀನರಸಿಂಹಾಚಾರ್ಯರಿಗೆ ದಾನವರ್ಮ ... ಕೀರ್ತಿಪತಿ ಮತ್ತು ಸುಲ್ತಾನ್ ಮಹಾರಾಜ ರಾಮರಾಜ ... ರವರು ... ಯೋಗ್ಯತೆಯನ್ನು ಪರೀಕ್ಷೆಮಾಡಿ ಸಂತೋಷಪಟ್ಟು ... ಮುಂತಾದ ಬಹುಮಾನಗಳನ್ನೂ ಸರ್ಟಿಫಿಕೇಟನ್ನೂ ದಯಪಾಲಿಸಿದರು. ಈ ವಿದ್ವಾಂಸರು ಕೊಚ್ಚಿಗೆ ಪ್ರಯಾಣಮಾಡಿರುತ್ತಾರೆ. ಇವರು ಮೈಸೂರು, ಬರೋಡಾ ಸಂಸ್ಥಾನಗಳಲ್ಲಿ ವಿದತ್ಪರೀಕ್ಷೆಯನ್ನು ಕೊಟ್ಟು ಸರ್ಟಿಫಿಕೇಟು ಹೊಂದಿರುವರು.

ದೆಹಲಿಯಲ್ಲಿ ಘನವಸ್ನೈದಿದ ವೈಸರಾಯಿ ದಂಪತಿಗಳ ಪ್ರಾಣಾಪಹಾರ ಮಾಡಬೇಕೆಂದು ನಡೆದ ಘಾತುಕಕೃತ್ಯವು ದೇವರ ದಯದಿಂದ ತಪ್ಪಿಹೋದದ್ದನ್ನು ತಿಳಿದು ರಾಜಧಾನಿಯ ಸ್ತ್ರೀಮಂಡಲಿಯವರು ತಮಗುಂಟಾಗಿರುವ ಪರಮಾನಂದವನ್ನು ಘನವಸ್ನೈದಿದ ಲೇಡಿ ಹಾರ್ಡಿಂಗ್‌ರವರಿಗೆ ಮೊನ್ನೆ ತಂತಿಯ ಮೂಲಕ ಅರಿಕೆಮಾಡಿದರು. ಇದಕ್ಕಾಗಿ ರಾಜಧಾನಿಯ ಸ್ತ್ರೀಮಂಡಲಿಯವರು ಸೋಮವಾರ ಸಾಯಂಕಾಲ ಮಹಾರಾಣಿ ಕಾಲೇಜಿನಲ್ಲಿ ಒಂದು ಸಭೆ ನಡಿಸಿದರು. ನಮ್ಮ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರ ಪತ್ನೀರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು.

ಕೃಷ್ಣರಾಜಪೇಟೆ ತಾಲ್ಲೂಕ್ ಬೂಕನಕೆರೆಯಲ್ಲಿ ಕಳೆದ ೧೧ನೇ ತಾ ಮಂಗಳವಾರ ಮಧ್ಯಾಹ್ನ ಸುಬ್ಬಶೆಟ್ಟಿ ಹೆಂಡತಿಯು ತೋಟಕ್ಕೆ ಹೋಗಿದ್ದಾಗ್ಗೆ ಕಳ್ಳರು ಮನೆಗೆ ಪ್ರವೇಶಿಸಿ ಸುಮಾರು ಒಂದೂವರೆ ಸಾವಿರ ರೂಪಾಯಿನಷ್ಟು ನಗನಾಣ್ಯಗಳನ್ನು ಅಪಹರಿಸಿರುತ್ತಾರೆ. ಇಲ್ಲಿನ ದೊಡ್ಡಕೆರೆ ಬಳಿ ಈಗ್ಗೆ ಕೊಂಚ ದಿವಸದಲ್ಲಿ ಡೈನಮೈಟ್ ಹೊಡೆದಂತೆ ದಬ್ಬವಾಯಿತು. ಹೋಗಿ ನೋಡುವಲ್ಲಿ ಪ ಭಂಡೆಯಷ್ಟು ಕಲ್ಲುಗಳು ಸಮೀಪದ ಅರೆಬಂಡೆಯಿಂದ ಒಡೆದು ಚೂರಾಗಿ ಬಿದ್ದದ್ದವು. ಜನಗಳು ಹೋಗಿ ನೋಡುತ್ತಿರುವಲ್ಲಿ ಪುನಹ ದೊಡ್ಡ ಶಬ್ದವಾಗಿ ಕಲ್ಲುಗಳು ಹಾರಿ ಸಮೀಪದಲ್ಲಿಯೇ ಬಿದ್ದವು. ಅಗ್ಗಿ ಸೀಳು ಬಿಟ್ಟು ಎರಡು ದೊಡ್ಡ ಚಪ್ಪಡಿಗಳು ಈಗ ೨ ಅಡಿಯಷ್ಟು ಆರೆಬಿಟ್ಟು ಮೇಲಕ್ಕೆ ಎದ್ದಿವೆ ಎಂದು ಒಬ್ಬ ವಾತ್ಮದಾರರು ಬರೆಯುತ್ತಾರೆ.

ಮೈಸೂರು ಗೆಜೆಟ್ ಸಂಗ್ರಹ

ಶಿವಮೊಗ್ಗ ಡಿಸ್ಟ್ರಿಕ್ಟ್ ಖಜಾನೆ ಅ॥ ಕಮಿಷನರ್ ಮಿ॥ ಡಿ ಶ್ರೀನಿವಾಸೈಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಕೋಲಾರ ಚಿನ್ನದಗಣಿಗಳ ಪೋಲೀಸ್ ಸೂಪರಿಂಟೆಂಡೆಂಟ್ ಮಿ, ಎಸ್ ಎ ಪ್ರಿಡರ್ಡ್‌ರವರಿಗೆ ಫೆಬ್ರವರಿ ತಾ ೧೦ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಪೋಲೀಸ್ ಇನ್‌ಸ್ಪೆಕ್ಟರ್ ಮಿ ಆರ್ ರಾಮರಾಯರು ಬದಲಿ ನೋಡತಕ್ಕದ್ದು.

ಮುಂದೆ ಹೇಳುವ ಅಮಲ್ದಾರ್ರುಗಳ ತಾತ್ಕಾಲಿಕ ಬಡ್ತಿ ಹುಕುಂ ಮಾಡಿದೆ—ಮಿ ಎ ವಿ ಕೃಷ್ಣರಾಯರು ೧ನೇ ಕ್ಲಾಸಿಗೆ, ಮಿ॥ ಜಿ ಬಾಲ್‌ರವರು ೨ನೇ ಕ್ಲಾಸಿಗೆ ಮಿ॥ ಎಚ್ ಪಿ ಗಂಗಾಧರಪ್ಪನವರು ೩ನೇ ಕ್ಲಾಸಿಗೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್ ರಾದ ಮಿ ವಿ ಆರ್ ಹಂಪಾ ಹುಸೇನ್ ರವರನ್ನು ಮೈಸೂರು ಡಿವಿಜನ್‌ಗೆ ಅಡಿಷನಲ್ ಸೆಷನ್ಸ್ ಜಡ್ಜಿಯಾಗಿ ವರ್ಗಮಾಡಿದೆ. ಮತ್ತೊಂದು ಹುಕುಂ ಕೊಡಲ್ಪಡುವ ತನಕ ಸಬ್ ಜಡ್ಜ್ ಮತ್ತು ಅ ಕಮಿಷನರ್ ಮಿ ಎ ಎಸ್ ಕೃಷ್ಣಸ್ವಾಮಿಅಯ್ಯಂಗಾರ್ರವರು ಶಿವಮೊಗ್ಗ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್ ರಾಗಿರತಕ್ಕದ್ದು.

ಗವರ್ನಮೆಂಟ್ ಅಸಿಸ್ಟೆಂಟ್ ಸೆಕ್ರೆಟರಿಯಾಗಿ ನೇಮಕವಾದ ಮಿ॥ ಜಿ ಎಂ ನರಸಿಂಗರಾಯರ ಜಾಗಕ್ಕೆ ಬೆಂಗಳೂರು ಅಡಿಷನಲ್ ಮಿ ಬಿ ಸುಬ್ಬಣ್ಣನವರನ್ನು ಸಬ್ ಜಡ್ಜಿಯಾಗಿ ನೇಮಕಮಾಡಿದೆ.

ಅ ಕಮಿಷನರ್ ಮಿ॥ ಪಿ ಎಸ್ ರಾಜಗೋಪಾಲಾಚಾರಿಯವರನ್ನು ಡಿಸೆಂಬರ್ ತಾ ೮ರಿಂದ ೩ನೇ ಕ್ಲಾಸಿಗೆ ಬಡ್ತಿಮಾಡಿದೆ.

ಮುಂದೆ ಹೇಳುವ ಅ ಕಮಿಷನರುಗಳ ವರ್ಗಾವರ್ಗಿ ಹುಕುಂ ಮಾಡಿದೆ—ಮಿ ಜಿ ಹನುಮಂತರಾಯರನ್ನು ಎಕ್ಸೈಸ್ ಇಲಾಖೆಯಿಂದ ಶಿವಮೊಗ್ಗ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ, ಮಿ॥ ಟಿ ರಾಯಲುಚೆಟ್ಟಿಯವರನ್ನು ರೆವಿನ್ಯು ಇಲಾಖೆಯಿಂದ ತುಮಕೂರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿ, ಮಿ ಟಿ ಆರ್ ನಾರಾಯಣರಾಯರನ್ನು ಚಿತ್ರದುರ್ಗದ ಡಿಸ್ಟ್ರಿಕ್ಟ್ ಖಜಾನೆ ಛಾರ್ಜಿನಿಂದ ದಾವಣಗೆರೆ ಸಬ್ ಡಿವಿಜನ್‌ಗೆ, ಸರ್ವೆ ಸೂಪರಿಂಟೆಂಡೆಂಟರಾಗಿದ್ದ ಮಿ ಎಂ ಸದಾಶಿವರಾಯರನ್ನು ಅ ಕಮಿಷನರಾಗಿ ನೇಮಿಸಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ಖಜಾನೆ ಛಾರ್ಜಿಗೆ ವರ್ಗಮಾಡಿದೆ.

ಮುಂದೆ ಹೇಳುವ ಸಬ್ ಜಡ್ಜಿಗಳ ವರ್ಗಾವರ್ಗಿ ಹುಕುಂ ಮಾಡಿದೆ—ಮಿ ಎ ನಾಗಪ್ಪನವರು ಬೆಂಗಳೂರಿಂದ ಶಿವಮೊಗ್ಗೆಗೆ, ಮಿ ಬಿ ಸುಬ್ಬಣ್ಣನವರು ಮೈಸೂರಿಗೆ, ಮಿ॥ ಬಿ ಎನ್ ಕೃಷ್ಣಸ್ವಾಮಿ ಅಯ್ಯಂಗಾರ್ರವರು ಬೆಂಗಳೂರಿಗೆ, ಮಿ ಎನ್ ಟಿ ಗೋಪಾಲೈಯಂಗಾರ್ರು ಬೆಂಗಳೂರು ಸಬ್ ಜಡ್ಜಿಯಾಗಿ ಬದಲಿ ನೋಡತಕ್ಕದ್ದು.

ಸಬ್ ಅಸಿಸ್ಟೆಂಟ್ ಇಂಜಿನಿಯರ್ ಮಿ ಎ ಪಿ ಪಟಕರ್ ಯವರನ್ನು ಅರಮನೆ ಕೇಂಜಿನಿಂದ ಕಾವೇರಿ ತಲಾವ್ ಡಿವಿಜನ್‌ಗೆ ವರ್ಗಮಾಡಿದೆ.

ಮಂಡ್ಯ ತಾಲ್ಲೂಕು ಅಮಲ್ದಾರ್ ಮಿ॥ ಎನ್ ಶ್ರೀನಿವಾಸಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೇದಾರ್ ಮಿ ಎ ವಿ ರಾಮರಾಯರು ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು.

ತಾಲ್ಲೂಕು ವರ್ತಮಾನಗಳು

ಹೊಳೆನರಸೀಪುರ—ಶ್ರೀಮನ್ ಮಹಾರಾಜರವರೂ ಶ್ರೀಮದ್ಯುವರಾಜರವರೂ ಹಿಂದಿನ ವಾರ ಪರಿವಾರ ಸಮೇತ ಚಿಕ್ಕಮಗಳೂರು ಪ್ರಾಂತ್ಯದಲ್ಲಿ ಸಂಚಾರಮಾಡಿಕೊಂಡು ಕಳೆದ ೭ನೇ ತಾ ಶುಕ್ರವಾರ ಸಾಯಂಕಾಲ ೬ ಘಂಟೆ ವೇಳೆ ಅರಕಲಗೂಡು ಮಾರ್ಗವಾಗಿ ಈ ಊರಿಗೆ ದಯಮಾಡಿದರು. ನಮ್ಮ ಅಮಲ್ದಾರ್ ಮಿ॥ ತಿರುನಾರಾಯಣಯ್ಯಂಗಾರ್ರೇ ಮೊದಲಾದ ದೊಡ್ಡ ಮನುಷ್ಯರುಗಳಿಂದ ಈ ಊರು ಟೌನ್ ಹಾಲ್ ಮುಂಭಾಗದಲ್ಲಿ ಅತಿ ವಿಚಿತ್ರವಾಗಿ ಅಲಂಕರಿಸಲ್ಪಟ್ಟಿದ್ದ ಚಪ್ಪರದಲ್ಲಿ ಸಕಲ ಮರ್ಯಾದೆಗಳೊಡನೆ ಕಾದಿದ್ದು ಫಲ, ಹಾರ, ತುರಾಯಿ ಮೊದಲಾದವುಗಳನ್ನು ಒಪ್ಪಿಸಿದರು. ಈ ಊರ ಎ ವಿ ಸ್ಕೂಲ್ ವಿದ್ಯಾರ್ಥಿಗಳೂ, ವರ್ನಾಕ್ಯುಲರ್ ಮಿಡ್ಲ್ ಗರ್ಲ್ಸ್ ಸ್ಕೂಲ್ ವಿದ್ಯಾರ್ಥಿನಿಯರೂ ಮತ್ತು ಕಂಗ್ರಾಕೆ ಸ್ಕೂಲುಗಳ ವಿದ್ಯಾರ್ಥಿಗಳು ಸಹಾ ಶ್ರೀಮನ್ ಮಹಾರಾಜರವರ ಶ್ರೇಯಃ ಪ್ರಾರ್ಥನೆ ಮೊದಲಾದ ಹಾಡುಗಳನ್ನೂ ಪದ್ಯಗಳನ್ನೂ ಅತಿ ಮನೋಹರವಾಗಿ ಹಾಡಿದರು. ನಮ್ಮ ಅಮಲ್ದಾರ್ರವರು ಅರಕಲಗೂಡು ರಸ್ತೆ ಬಂಗ್ಲೆಯಿಂದ ಈ ತಾಲ್ಲೂಕು ... ಸರಹದ್ದಿನ ವರೆಗೂ ಆನಂದಕರವಾದ ಚಪ್ಪರಗಳೇ ಮೊದಲಾದ ಏರ್ಪಾಡುಗಳನ್ನು ಮಾಡಿದ್ದರು. ಈ ಊರಿನ ಹವಸದ್ದಲ್ಲಿ ಆರೋಗ್ಯವಾಗಿದ್ದು ಭಾರತೀವಾಸಿಗಳು ಇಂಥಾ ಸುಗ್ಗಿಕಾಲದಲ್ಲಿ ಜನಗಳೆಲ್ಲಾ ತಣ್ಣಗಿರುವ ಮಾಡುತ್ತಾರೆ. ಇದನ್ನು ನಮ್ಮ ಅಮಲ್ದಾರ್ರವರು ಸಂತೆಕಡೆ ಸಹ ನಗ್ ಕೊಟ್ಟು ಘಂಡುವಾಡತಕ್ಕ ಜನಗಳನ್ನು ಬಿಡದೆ ಈಗಿನ ಸ್ಥಿತಿಯಲ್ಲಿ ಹಾಗೆ ಮಾಡಬಹುದೋ ಅದರಂತೆ ನಡೆಸಲು ಅಪ್ಪಣೆಮಾಡಿದರೆ ಬಡಜನಗಳಿಗೆ ಬಹಳ ಪ್ರಯೋಜನವಾಗುವದರಲ್ಲಿ ಯಾವ ಸಂದೇಹವೂ ಇಲ್ಲ. — ಈ ಊರು ಜೈಲ್ ಪ್ಲೀಡರ್ ಸುಬ್ಬಣ್ಣನವರ ಕುಟುಂಬ ... ನವರ ಮನೆ ಹಿಂದುಗಡೆ ಸಹಾ ಜನಗಳಿಗೂ ಉಪಯುಕ್ತವಾದ ಭಾವಿ ... ಸುತ್ತಲೂ ಹೇಗೆ ವ್ಯಾಪ್ತಿ ಮಾಡಿ ಬಳಸುವ ... ಕೊಂದರಪಡಿಸುವ ... ಸ್ಯಾನಿಟರಿ ರೂಲ್ಸ್ ಮೇರೆ ಕ್ರಮ ಜರುಗಿಸಿದರೆ ಪ್ರಜಾ ಆರೋಗ್ಯ ಉಂಟುಮಾಡಿದ ಪುಣ್ಯ ಬರುವುದು. ಬಡವರು ಯಾರಾದರೂ ಮಾಡಿದ್ದರೆ ಅಷ್ಟು ಹೊತ್ತಿಗೆ ಅವರನ್ನು ಎಷ್ಟೋ ತೊಂದರೆಗೆ ಗುರಿಮಾಡುತ್ತಿದ್ದರು.

ಚಿಕ್ಕಮಗಳೂರು—ಇಲ್ಲಿಗೆ ನಮ್ಮ ಶ್ರೀಮನ್ ಮಹಾರಾಜರವರು ಯುವರಾಜರವರೊಂದಿಗೆ ದಯಮಾಡಿಸಿದ್ದೇ ಒಂದು ವಿಶೇಷ. ಇದರ ವಿಷಯ ಕಳೆದ ವಾರದ ಪತ್ರಿಕೆಯಲ್ಲಿ ತಕ್ಕಮಟ್ಟಿಗೂ ತಿಳಿಸಲ್ಪಟ್ಟಿದೆ. ಈ ವಾರ ಅವರ ಸವಾರಿಯು ಈ ಪ್ರಾಂತ್ಯ ಚಿತ್ತೈಸಿದ ವೇಳೆಯಲ್ಲಿ ನಡೆದ ಕೆಲವು ವಿಷಯಗಳನ್ನು ತಿಳಿಸುತ್ತೇವೆ. ಕಳೆದ ೫ನೇ ತಾ ಬುಧವಾರ ಮಧ್ಯಾಹ್ನ ಶ್ರೀಮನ್ ಮಹಾರಾಜರವರೂ ಶ್ರೀಮದ್ಯುವರಾಜರವರೂ ಇತರ ಹುದ್ದೇದಾರರೂ ಕಲ್ಹತ್ತಿಗಿರಿ ಮುಸಾಫರಿ ಬಂಗಲೆಯನ್ನು ಬಿಟ್ಟು ಅಶ್ವಾರೂಢರಾಗಿ ಅಲ್ಲಿಗೆ ೪ ಮೈಲಿ ದೂರದಲ್ಲಿರುವ ಪನ್ನಾತ್ರೇಯ ಪೀಠಕ್ಕೆ ಸುಮಾರು ಸಾಯಂಕಾಲ ೪½ ಘಂಟೆಗೆ ದಯಮಾಡಿಸಿದರು. ಕುದುರೆ ಸವಾರಿಯಲ್ಲಿ ಮುಂದಾದವರು ನಮ್ಮ ಮಹಾರಾಜರವರೇ. ಎರಡನೆಯವರು ಯುವರಾಜರು, ಅನಂತರ ಇತರ ಹುದ್ದೇದಾರರೂ ಬಂದರು. ಈ ೪ ಮೈಲಿ ಕುದುರೆ ಸವಾರಿಯು ಬಹಳ ಕಷ್ಟಸಾಧ್ಯವಾಗಿತ್ತು. ಏಕೆಂದರೆ ಅದೇ ಸಮಯದಲ್ಲಿ ಒಂದು ಪ್ರಚಂಡಮಾರುತವು ಎದ್ದು ಪ್ರಭುಗಳ ಪ್ರಯಾಣಕ್ಕೆ ಅಡಚಣೆಯನ್ನುಂಟುಮಾಡುವಂಥಾದ್ದಾಗಿತ್ತು. ಆದಾಗ್ಯೂ ಭಗವದನುಗ್ರಹದಿಂದ ಯಾವುದೊಂದೂ ಅಪಾಯವಾಗದೆ ಪ್ರಭುಗಳೂ ಹುದ್ದೇದಾರರೂ ಸುರಕ್ಷಿತವಾಗಿ ಸ್ಥಳ ಸೇರಿದರು. ಮಹಾರಾಜರವರು ಕಲ್ಹತ್ತಿಯಿಂದ ಪೀಠಕ್ಕೆ ಸವಾರಿಮಾಡಿದ ರಸ್ತೆಯು ಹೊಸದಾಗಿ ಮಾಡಲ್ಪಟ್ಟಿತ್ತು. ಎರಡು ವಾರಗಳೊಳಗಾಗಿ ಬಂಡೆಗಳನ್ನು ಕಡಿದು ರಸ್ತೆಮಾಡಿಸಿದ್ದು ಇಂಜಿನಿಯರ್ ಇಲಾಖೆಯವರ ಮಹತ್ತನ್ನು ಪ್ರಕಾಶಪಡಿಸುತ್ತದೆ. ಶ್ರೀಮನ್ ಮಹಾರಾಜರವರು ಪೀಠವಿರುವ ಜಾಗಕ್ಕೆ ಹೋಗಿ ಪರಿವಾರ ಸಮೇತ ಪೀಠವಿರುವ ಗುಹೆಯನ್ನು ಪ್ರವೇಶಿಸಿ ಅಲ್ಲಿರುವ ಗುರುಗಳಿಗೆ ನಾಲ್ಕು ... ಬಹುಮಾನವಾಗಿ ದಯಪಾಲಿಸಿದರು. ಅಲ್ಲಿ ಸುಮಾರು ಅರ್ಧ ಗಂಟೆಯ ಹೊತ್ತು ವಿಶ್ರಾಂತಿಹೊಂದಿ ಫಲಾಹಾರಗಳನ್ನು ಸ್ವೀಕರಿಸಿ ಅಲ್ಲಿಂದ ತಿರುಗಿ ಮೋಟಾರ್ ಗಾಡಿಯಲ್ಲಿ ಸುಮಾರು ೬ ಗಂಟೆಗೆ ಚಿಕ್ಕಮಗಳೂರಿಗೆ ದಯಮಾಡಿದರು. ಊರನ್ನು ಉತ್ತರ ಬಾಗಿಲಿನಿಂದ ಪ್ರವೇಶಿಸಿ ಮ್ಯುನಿಸಿಪಾಲಿಟಿಯವರು ಹಾಕಿಸಿದ್ದ ತೋರಣದ ಮುಖಾಂತರ ನಿರ್ದಿಷ್ಟ ಸ್ಥಳಕ್ಕೆ ಸೇರಿದರು. ಇತರ ದೊಡ್ಡ ಮನುಷ್ಯರಿಂದಲೂ ಅಲಂಕರಿಸಲ್ಪಟ್ಟವರಾಗಿ ಪೇಟೆಯ ಉದ್ದಕ್ಕೂ ಹಾಕಿದ್ದ ಚಪ್ಪರಗಳನ್ನೂ ಕಮಾನುಗಳನ್ನೂ ನೋಡಿ, ಅವರಿಂದ ಅನೇಕ ಸನ್ಮಾನಗಳನ್ನು ಹೊಂದಿ ರಸ್ತೆಯ ಎರಡು ಕಡೆಗಳಲ್ಲೂ ಬೆಳಗುತ್ತಿದ್ದ ದೀಪಾವಳಿಯನ್ನು ಪರಾಂಬರಿಸಿ ಸಂತೋಷಪಟ್ಟು ತಮಗಾಗಿ ಏರ್ಪಡಿಸಿದ್ದ ಬಿಡಾರವನ್ನು ಸೇರಿದರು. ಮರುದಿನ ಬೆಳಿಗ್ಗೆ ಊರಲ್ಲಿರುವ ಮುಖ್ಯಸ್ಥಳಗಳನ್ನು ಅಂದರೆ ಸಂದಲ್ ಕೋಠಿ, ಅಂಜುಮಾನ್ ಇಸ್ಲಾಮಿಯಾ ಗೌರ್ನಮೆಂಟ್ ಬಾಲಿಕಾ ಪಾಠಶಾಲೆ, ಹೆಂಗಸರ ಆಸ್ಪತ್ರೆ, ಎ ವಿ ಸ್ಕೂಲು, ಸಿವಿಲ್ ಆಸ್ಪತ್ರೆ, ಇವುಗಳನ್ನು ಪರಾಂಬರಿಸಿದರು. ಪಾಠಶಾಲೆಗಳು ಉತ್ತಮಸ್ಥಿತಿಯಲ್ಲಿರುವುದನ್ನೂ ಆಸ್ಪತ್ರೆಗಳಲ್ಲಿ ಸರಿಯಾಗಿ ಚಿಕಿತ್ಸೆ ನಡೆಸುವ ಡಾಕ್ಟರುಗಳೇ ಮುಂತಾದವರು ಜನಾನುರಾಗಿಗಳಾಗಿರುವುದನ್ನೂ ಕಂಡು ತೃಪ್ತಿಹೊಂದಿ ಸಂತೋಷಭರಿತರಾದರು. ಆ ದಿನ ಸಾಯಂಕಾಲ ೫ ಗಂಟೆಗೆ ಶ್ರೀಮನ್ ಮಹಾರಾಜರವರೂ ಯುವರಾಜರವರೂ ಮೋಟಾರ್ ಗಾಡಿಯಲ್ಲಿ ಕುಳಿತು ಮೋಯೋ ಪಾರ್ಕಿನಲ್ಲಿ ನೂತನವಾಗಿ ಕಟ್ಟಲ್ಪಟ್ಟಿರುವ ನರಸಿಂಹರಾಜ ಒಡೆಯರ್ ಟೌನ್ ಹಾಲ್ ಎಂಬ ಮಂದಿರಕ್ಕೆ ದಯಮಾಡಿ ಅಲ್ಲಿ ನಾವಿದ್ದ ಮ್ಯುನಿಸಿಪಲ್ ಮೆಂಬರುಗಳಿಗೆ ದರ್ಶನಕೊಟ್ಟು ನೂತನ ಗೃಹ ಪ್ರವೇಶಮಾಡಿ ತಮಗಾಗಿ ಏರ್ಪಡಿಸಿದ್ದ ಸಿಂಹಾಸನಗಳ ಮೇಲೆ ಕುಳಿತುಕೊಂಡು ದರ್ಬಾರ್ ನಡಿಸಿದರು. [ಆ ಕಾಲದಲ್ಲಿ ಮೆಂಬರುಗಳು ಒಪ್ಪಿಸಿದ ವಂದನಾ ಪತ್ರಿಕೆಯೂ, ಅದಕ್ಕೆ ಮಹಾರಾಜರವರು ಕೊಟ್ಟ ಪ್ರತಿ ಜವಾಬೂ ಕಳೆದ ವಾರ ಪ್ರಕಟವಾಗಿದೆ.] ಆ ಸುಂದರವಾದ ಭವನದ ಒಳಗೂ ಹೊರಗೂ ಜನರು ಕಿಕ್ಕಿರಿಯುತ್ತಿದ್ದರು. ಇವರೆಲ್ಲರೂ ದರ್ಬಾರಿಗೆ ಬಂದ ಅತಿಥಿಗಳೇ. ಸುಮಾರು ೩೦೦೦ ವರೆಗೂ ಜನ ಸೇರಿತ್ತು. ಇತರ ಜನರೆಲ್ಲರನ್ನೂ ಮೇಯೋ ಪಾರ್ಕಿನಿಂದಾಚೆಯೇ ನಿಲ್ಲಿಸಿದರು. ವಂದನಾ ಪತ್ರಿಕೆಯು ಓದಿದ ನಂತರ ಅದನ್ನು ಸುಂದರವಾಗಿ ಚಿತ್ರಿಸಿದ ... ಮಹಾರಾಜರಿಗೆ ಒಪ್ಪಿಸಿದರು. ಬಳಿಕ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರು ಮ್ಯುನಿಸಿಪಲ್ ಮೆಂಬರುಗಳನ್ನು ಒಬ್ಬೊಬ್ಬರನ್ನಾಗಿ ಪ್ರಭುಗಳಿಗೆ ಭೇಟಿಮಾಡಿಸಿದರು. ಮೆಂಬರುಗಳೆಲ್ಲಾ ಪದ್ಧತಿಯ ಪ್ರಕಾರ ಮುಜರೆಮಾಡಿದರು. ಕಡೆಯಲ್ಲಿ ಮಹಾರಾಜರವರು ರಸಭರಿತವಾದ ಭಾಷಣವನ್ನು ಮಾಡಿ ಪ್ರತಿಷ್ಠಾಕಾರ್ಯವನ್ನು ನೆರವೇರಿಸಿದರು. ಅಲ್ಲಿಂದ ಶ್ರೀಮನ್ ಮಹಾರಾಜರೇ ಯುವರಾಜರೂ ಹೊರಟು ಈ ಡಿಸ್ಟ್ರಿಕ್ಟಿನಲ್ಲಿ ತಯಾರಾಗುವ ಕೈಗಾರಿಕೆ ಮತ್ತು ವ್ಯವಸಾಯ ವಸ್ತುಗಳ ಪ್ರದರ್ಶನವನ್ನು ಪರಾಂಬರಿಸಿ, ಫೈನ್ ಇಲಾಖೆಯಲ್ಲಿ ಬಹಳ ಮಹನತ್ತಿನಿಂದ ಕೆಲಸಮಾಡಿದ ನೌಕರರಿಗೆ ಇನಾಮುಗಳನ್ನು ಸ್ವಹಸ್ತದಿಂದ ದಯಪಾಲಿಸಿ, ಮೇಯೋ ಪಾರ್ಕಿಗೆ ದಕ್ಷಿಣ ಭಾಗದಲ್ಲಿರುವ ಯೂರೋಪಿಯನ್ ಪ್ಲಾಂಟರುಗಳ ಕ್ಲಬ್ಬಿಗೆ ಬಿಜಯಮಾಡಿಸಿದರು. ಆ ಸಮಯದಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರು ದರ್ಬಾರಿಗೆ ಬಂದಿದ್ದ ಯೂರೋಪಿಯನ್ ಮತ್ತು ದೇಶೀಯ ಅತಿಥಿಗಳಿಗೆ ಮೇಯೋ ಪಾರ್ಕಿನಲ್ಲಿ ಫಲಾಹಾರ ಮುಂತಾದವುಗಳನ್ನು ಕೊಟ್ಟು ಸಂತೋಷಪಡಿಸಿದರು. ರಾತ್ರಿ ೭½ ಗಂಟೆಗೆ ಡಿಸ್ಟ್ರಿಕ್ಟ್ ಆಫೀಸಿನ ಮುಂಭಾಗದ ಮೈದಾನಕ್ಕೆ ಶ್ರೀಮನ್ ಮಹಾರಾಜರೂ ಅವರ ಸಂಗಡಿಗರೂ ದಯಮಾಡಿಸಲು ಅಲ್ಲಿ ದಿವ್ಯವಾದ ಬಾಣ ಬಿರುಸುಗಳ ಪ್ರದರ್ಶನವು ನಡೆಯಿತು. ಶುಕ್ರವಾರ ಬೆಳಿಗ್ಗೆ ಶ್ರೀಮನ್ ಮಹಾರಾಜರವರೂ ಯುವರಾಜರೂ ಪ್ರೈವೇಟ್ ಸೆಕ್ರೆಟರಿ ಮಿ ಆರ್ ಎಚ್ ಕ್ಯಾಂಪ್ಬೆಲ್ ರವರೂ ಅಶ್ವಾರೂಢರಾಗಿ ಸ್ಕೌಟ್ ... ಲಿನ ಮೈದಾನಕ್ಕೆ ದಯಮಾಡಿ, ನೂತನವಾಗಿ ಕಟ್ಟಲ್ಪಡುವ ... ವಿದ್ಯಾರ್ಥಿನಿಲಯಕ್ಕೆ ಪ್ರತಿಷ್ಠಾವಿಧಿಯನ್ನು ಸ್ಥಾಪನೆಮಾಡಿದರು. ಆ ಕಾಲದಲ್ಲಿ ... ಮಂಡಲಿಯವರು ಒಂದು ವಂದನಾ ಪತ್ರಿಕೆಯನ್ನು ಸಮರ್ಪಿಸಿದರು. ಈ ಕಾರ್ಯ ಜರುಗಿದ ನಂತರ ಪ್ರಭುಗಳು ಹಿರೇಮಗಳೂರಿಗೆ ದಯಮಾಡಿ ಅಲ್ಲಿನ ಪ್ರಜೆಗಳು ಮಾಡಿದ ಸನ್ಮಾನವನ್ನು ಸ್ವೀಕರಿಸಿ ಚಿಕ್ಕಮಗಳೂರಿಗೆ ಹಿಂತಿರುಗಿ ಕಡೂರು ರಸ್ತೆಗೆ ಬಂದು ... ಕೆರೆಯ ಏರಿಯ ಮೇಲೆ ... ಚಿಕ್ಕಮಗಳೂರು ದೊಡ್ಡಪೇಟೆಯಲ್ಲಿ ... ಮಿಷನ್ ... ಬಾಲಿಕಾ ಪಾಠಶಾಲೆಗೆ ಬಿಜಯಮಾಡಿದರು. ಪಾಠಶಾಲೆಯನ್ನು ಪರೀಕ್ಷಿಸಿ, ಬಾಲಕಿಯರು ಹಾಡಿದ ಮಂಗಳ ಗೀತಗಳನ್ನು ಕೇಳಿ ಸಂತೋಷಪಟ್ಟು ತಮ್ಮ ಬಿಡಾರಕ್ಕೆ ತೆರಳಿದರು. ಭೋಜನಾನಂತರ ಸುಮಾರು ೧೧ ಗಂಟೆಗೆ ಮಹಾರಾಜರವರೂ ಯುವರಾಜರವರೂ ಪರಿವಾರ ಸಮೇತ ಪ್ರಯಾಣ ಬೆಳಸಿ ಮೂಡಿಗೆರೆ ಹೊಳೆನರಸೀಪುರದ ಮಾರ್ಗವಾಗಿ ರಾಜಧಾನಿಯನ್ನು ಕುರಿತು ಚಿತ್ತೈಸಿದರು.—ಶ್ರೀಮನ್ ಮಹಾರಾಜರವರು ಈ ಊರಿಗೆ ಭೇಟಿ ದಯಪಾಲಿಸಿದ ಸಂತೋಷಾರ್ಥವಾಗಿ ಇಲ್ಲಿನ ಎಲ್ಲಾ ಸ್ಕೂಲುಗಳ ಬಾಲಕ ಬಾಲಕಿಯರಿಗೆ ಕಳೆದ ಗುರುವಾರ ಬೆಳಿಗ್ಗೆ ಮಿಠಾಯಿ ಹಣ್ಣು ವಗೈರೆಗಳನ್ನು ಹಂಚಿದರು. ಮತ್ತು ಆ ದಿನ ಸಾಯಂಕಾಲ ಡಿಸ್ಟ್ರಿಕ್ಟ್ ಆಫೀಸಿನ ಮೈದಾನದಲ್ಲಿ ಸ್ಕೂಲು ಹುಡುಗರಿಗೆ ಆಟಪಾಟಗಳನ್ನು ಕಲ್ಪಿಸಿ ಆ ದಿನವನ್ನು ಎಲ್ಲರೂ ಸಂತೋಷವಾಗಿ ಕಳೆದರು.—ಕಳೆದ ವಾರ ಸೀನಿಯರ್ ಸರ್ಜನ್ ರಾದ ಮ॥ ಡಾಕ್ಟರ್ ಆಯ್ಯಂಗಾರ್ ಮೊದಲಿಯಾರ್ರು, ಸೆಷನ್ಸ್ ಜಡ್ಜ್ ರಾದ ಮಿ ಹಂಜಾ ಹುಸೇನ್‌ರವರೂ, ರೆವ್ ಸ್ಪೆನ್ಸರ್ ಸಾಹೇಬರೂ ದಯಮಾಡಿದ್ದರು. ಕಳೆದ ಶನಿವಾರ ಸಾಯಂಕಾಲ ರೆವ ಸ್ಪೆನ್ಸರ್ ಸಾಹೇಬರು ಗೌರ್ನಮೆಂಟ್ ಹೈ ಸ್ಕೂಲಿನಲ್ಲಿ ಮತವಿಚಾರವನ್ನು ಕುರಿತು ... ವಾಗಿ ಉಪನ್ಯಾಸಮಾಡಿದರು. ಆಗ ಮಿ ಹಂಜಾ ಹುಸೇನ್ ಸಾಹೇಬರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಸಭಿಕರಲ್ಲಿ ಅನೇಕರಿಗೆ ಆ ಉಪನ್ಯಾಸದಿಂದ ಬಹಳಾ ಪ್ರಯೋಜನವಾಯಿತು.

ಗತಿಸಿದ ಮಿ॥ ಜಿ. ಅರ್ಬತ್‌ನಾಟ್‌ಯವರು.

ಚಿತ್ರದುರ್ಗದಲ್ಲಿ ವಾಸವಾಗಿದ್ದ ಪರೋಪಕಾರಿಯಾಗಿದ್ದ ಪೆನ್‌ಷನ್ ಹೈಸ್ಕೂಲ್ ಹೆಡ್ ಮಾಸ್ಟರ್ ಮಿ. ಜಿ. ಅರ್ಬತ್ನಾಟ್ ಸಾಹೇಬರವರು ಈ ತಿಂಗಳು 10 ನೇ ತಾ. ಸೋಮವಾರ ಪ್ರಾತಃಕಾಲ ವೃದ್ಧಾಪ್ಯದ ದೆಸೆಯಿಂದ ಕಾಲವಾದರು. ಇಲ್ಲಿನ ಸ್ಥಳೀಯಾಧಿಕಾರಿಗಳೆಲ್ಲರೂ, ಲಾಯರುಗಳು, ವರ್ತಕರು, ಸ್ಕೂಲ್ ಮಾಸ್ಟರುಗಳು, ವಿದ್ಯಾರ್ಥಿಗಳು ಮೊದಲಾಗಿ ಎಲ್ಲಾ ಕೋಮುಗಳ ಜನರೂ ಸಾವಿರಾರು ಮಂದಿ ಸೇರಿ 11 ನೇ ತಾ. ಪ್ರಾತಃಕಾಲ ೯ ಘಂಟೆಗೆ ಕಳೇಬರ ಸಹಿತವಾದ ಪೆಟ್ಟಿಗೆಯನ್ನು ಬಂಡಿಯಲ್ಲಿಟ್ಟು ಮೆರವಣಿಗೆ ಮಾಡಿಕೊಂಡು ಕ್ರಿಶ್ಚಿಯನ್ನರ ಗೋರಿ ಕಾಂಪೌಂಡಿಗೆ ತೆಗೆದುಕೊಂಡು ಹೋಗಿ 10 ಘಂಟೆಗೆ ಸಮಾಧಿ ಮಾಡಿದರು. ಸಮಾಧಿ ಮಾಡುವಾಗ್ಗೆ ಅವರ ಒಬ್ಬ ಕುಮಾರನೂ ಇಬ್ಬರು ಹೆಣ್ಣು ಮಕ್ಕಳೂ ಒಬ್ಬ ನಾದಿನಿಯೂ ಹಾಜರಿದ್ದರು. ವೆಸ್ಲಿಯನ್ ಮಿಷನ್ ಉಪದೇಶಿ ಮಿ. ಮಾಸಿಲಾಮಣಿಯವರು ದೇವರ ಪ್ರಾರ್ಥನೆ ಮಾಡಿ ಕಳೇಬರವನ್ನು ಸಮಾಧಿಯಲ್ಲಿಡಿಸಿದರು.—ಈ ಸತ್ಪುರುಷರ ಜೀವಿತ ಕಾಲದಲ್ಲಿ ಇವರಿಂದ ಜಾತಿ ಭೇದಗಳಿಲ್ಲದೆ ಅನಾಥರಿಗೂ ಅಶಕ್ತರಿಗೂ ಆಗುತ್ತಿದ್ದ ದ್ರವ್ಯಸಹಾಯ, ವಿವೇಕವಿಲ್ಲದವರಿಗೂ ತಪ್ಪುಮಾರ್ಗದಲ್ಲಿ ನಡೆಯುತ್ತಿರತಕ್ಕವರಿಗೂ ಸಿಕ್ಕುತ್ತಿದ್ದ ಬುದ್ಧಿವಾದ, ಕಾಯಿಲೆಯವರಿಗೆ ಇವರಿಂದ ದೊರಕುತ್ತಿದ್ದ ಸಹಾಯ, ಇವರ ಮರಣಾನಂತರ ಜಾತಿಭೇದವಿಲ್ಲದೆ ಎಲ್ಲಾ ಜನರೂ ಸೇರಿ ತೋರಿಸಿದ ಭಕ್ತಿಯೇ ಆ ಸತ್ಪುರುಷರ ಪರಾರ್ಥ ಬುದ್ಧಿಯನ್ನು ಸ್ಪಷ್ಟಪಡಿಸುವುವು. ಇವರ ಜನ್ಮಚರಿತ್ರೆ ತಪಸೀಲ್ ನನಗೆ ತಿಳಿಯದಿದ್ದರೂ ಇವರ ಕೆಲಸಗಳನ್ನು ನೋಡಿ ಸೂಕ್ಷ್ಮವಾಗಿ ಈ ಕೆಳಗೆ ಹೇಳುತ್ತೇನೆ.

ಮಿ॥ ಜಿ. ಅರ್ಬತ್‌ನಾಟ್‌ಯವರು ಮದರಾಸ್ ಪಟ್ಟಣದಲ್ಲಿ 1840 ನೇ ಇಸವಿಯಲ್ಲಿ ಜನ್ಮಿಸಿದರು. ಇವರ ತಂದೆಯು ಕಲೆಕ್ಟರ್ ಅಧಿಕಾರದಲ್ಲಿದ್ದವರಾದಾಗ್ಯೂ ಈ ಸುಪುತ್ರನಿಗಾಗಲಿ, ಈತನ ಜೊತೆಯಲ್ಲಿ ಹುಟ್ಟಿದ ಇನ್ನಿಬ್ಬರು ಗಂಡು ಮಕ್ಕಳಿಗಾಗಲಿ ಆ ತಂದೆಯು ಹೆಚ್ಚು ಆಸ್ತಿ ಇಟ್ಟವರಲ್ಲ. ಮತ್ತು ಅವರು ಹೆಚ್ಚು ಕಾಲ ಇವರ ಬಾಲ್ಯದಲ್ಲಿ ಜೀವಿತರಾಗಿದ್ದು, ಈ ಮಕ್ಕಳಿಗೆ ಸಹಾಯಕರಾಗಿಯೂ ಇರಲಿಲ್ಲ. ಸ್ವಶಕ್ತಿಯಿಂದ ನಮ್ಮ ಲೇಟ್ ಮಿ. ಜಿ. ಅರ್ಬತ್‌ನಾಟ್‌ಯವರು ಮದರಾಸಿನಲ್ಲಿರತಕ್ಕ ಎಸ್‌ಪಿಜಿ ಗ್ರಾಂಟ್ ಸ್ಕೂಲಿನಲ್ಲಿ ಓದಿ ದಕ್ಕಮಟ್ಟಿಗೆ ವಿದ್ಯಾವಂತರಾಗಿ ಅಲ್ಲಿಂದ ಬೆಂಗಳೂರಿಗೆ ಬಂದು ಎಸ್‌ಪಿಜಿ ಕಾಲೇಜ್ ಸ್ಕೂಲಿನಲ್ಲಿ ಅ॥ ಮಾಸ್ಟರಾಗಿದ್ದುಕೊಂಡು ಪ್ರೈವೇಟಿನಲ್ಲಿ ಓದಿ ಬಿ. ಎ. ಪ್ಯಾಸ್ ಮಾಡಿದರು. ಆಗ ಇವರಿಗೆ 26 ವರ್ಷ ವಯಸ್ಸು. ನಂತರ ಇವರು ಕೆಡಸಾದಲ್ಲಿ ಹೈಸ್ಕೂಲ್ ಹೆಡ್ ಮಾಸ್ಟರಾಗಿ ಎರಡು ವರುಷ ಇದ್ದು ಅಲ್ಲಿನ ಹವಾ ಸರಿಬೀಳದೆ ಮೈಸೂರು ಸಂಸ್ಥಾನಕ್ಕೆ ಬಂದು ಹಾಸನದಲ್ಲಿ 14 ವರುಷ ಹೈಸ್ಕೂಲ್ ಹೆಡ್ ಮಾಸ್ಟರ್ ಆಗಿದ್ದು ಅಲ್ಲಿ ಸೂಪರಿಂಟೆಂಡೆಂಟ್ ಹೋದ ಇಂಡಸ್ಟ್ರಿಯಲ್ ಸ್ಕೂಲ್ ಮುಂತಾದ ಪ್ರತಿಯೊಂದು ಸಲಹೆಗಳನ್ನು ಮಾಡಿಸಿ, ಅಲ್ಲಿಂದ ಚಿತ್ರದುರ್ಗಕ್ಕೆ 1891 ನೇ ಇಸವಿಯಲ್ಲಿ ಹೈಸ್ಕೂಲ್ ಹೆಡ್ ಮಾಸ್ಟರಾಗಿ ಬಂದು 1905 ನೇ ಇಸವಿ ವರೆವಿಗೂ ಕೆಲಸಮಾಡಿ ಪೆನ್‌ಷನ್ ಪಡೆದು ಈ ಊರಿನಲ್ಲೇ ಕುಟುಂಬ ಸಮೇತ ವಾಸಮಾಡಿಕೊಂಡಿದ್ದರು. ಇವರಿಗೆ ಒಬ್ಬ ಹೆಂಡತಿಯೂ, ಇಬ್ಬರು ಹೆಣ್ಣು ಮಕ್ಕಳು ಒಬ್ಬ ಗಂಡು ಮಗ ಈ ರೀತಿ 4 ಜನ ಮಕ್ಕಳೂ ಇವರಿಗೆ 30 ವರ್ಷ ವಯಸ್ಸಿನ ಮೇಲ್ಪಟ್ಟ ಮಗನು ಈಗ ಇಂಜಿನಿಯರ್ ಇಲಾಖೆಯಲ್ಲಿ 40 ರೂಪಾಯಿ ಸಂಬಳದ ನೌಕರಿಗೆ ಸೇರಿಕೊಂಡು ಕನ್ನಂಬಾಡಿಯಲ್ಲಿ ಕೆಲಸಮಾಡುತ್ತಿದ್ದಾರೆ. ಗತಿಸಿದ ಈ ಸತ್ಪುರುಷನ ಸಹಾಯಹೊಂದದೆ ಇದ್ದವರು ಚಿತ್ರದುರ್ಗದ ಟೌನಿನಲ್ಲಿ ಇಲ್ಲವೇ ಇಲ್ಲವೆಂತ ಖಂಡಿತವಾಗಿ ಹೇಳಬೇಕಾಗಿದೆ. ಸ್ವಶಕ್ತಿ ಇಲ್ಲದವರೆಲ್ಲಾ ಈತನ ಆಶ್ರಯಹೊಂದಿ ತಮ್ಮ ಕಷ್ಟವನ್ನು ಪರಿಹರಿಸಿಕೊಳ್ಳುತ್ತಿದ್ದರು. ಈತನಿಂದ ಅನೇಕ ಜನರು ವಿದ್ಯಾವಂತರಾಗಿ ದೊಡ್ಡ ಪದವಿಗಳಿಗೆ ಬಂದಿರುತ್ತಾರೆ. ಈತನಲ್ಲಿ ಸಿಟ್ಟು ಇರಲಿಲ್ಲ. ಈತನ ತಾಳ್ಮೆ, ದಯೆ, ನಿಷ್ಪಕ್ಷಪಾತತೆ ಮುಂತಾದ ಗುಣಗಳು ಪ್ರತಿಯೊಬ್ಬರಿಗೂ ತಿಳಿದಿದೆ. ಈ ಮಹನೀಯನ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲೆಂದೂ, ಇವರ ಕುಟುಂಬಕ್ಕೆ ಸೌಖ್ಯ ಸಮಾಧಾನಗಳನ್ನುಂಟುಮಾಡಲೆಂದೂ ಹಾರೈಸುತ್ತೇನೆ.

ಒಬ್ಬ ಆಶ್ರಿತ

ಮೈಸೂರು ಸರ್ಕಾರಿ ಹುಕುಮುಗಳು

ರೇಂಜ್ ಪರೀಕ್ಷೆ.—ರೇಂಜ್ ಪರೀಕ್ಷೆಗೆ ತರಪೇತಾಗಲು ಮೈಸೂರು ಇಂಜನಿಯರಿಂಗ್ ಸ್ಕೂಲಿಗೆ ಬಂದು ಸೇರಿಕೊಳ್ಳತಕ್ಕ ಸರ್ಕಾರಿ ನೌಕರರಿಂದ 1912 ನೇ ಜೂಲೈ ಒಂದನೆಯ ತಾರೀಖಿನಿಂದ ಈಚೆಗೆ ವರುಷಕಾಲ ಫೀಜನ್ನು ವಸೂಲ್ಮಾಡಬೇಕಾದದ್ದಿಲ್ಲವೆಂದೂ, ಅಂಥವರಿಗೆ ರಿಯಾಯಿತಿ ಮಾಡಬೇಕೆಂದೂ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

ಕನ್ನಡ ಪಂಡಿತಪರೀಕ್ಷೆ.—ಮೆಜಿಸ್ಟ್ರೇಟ್ ಮೆಂಬರು ಮ. ಎಂ. ಜಿ. ರಾಮ್ಸ್ವಾಮಿ ಅಯ್ಯಂಗಾರ್ಯ 1911 ನೇ ಇಸವಿ ಪ್ರತಿನಿಧಿ ಸಭೆಯಲ್ಲಿ ವಿದ್ವತ್ ಪರೀಕ್ಷೆಯ ಒಂದು ಭಾಗದಲ್ಲಿ ತೇರ್ಗಡೆ ಹೊಂದಿರುವವರಿಗೆ ಕನ್ನಡ ಪಂಡಿತ ಪರೀಕ್ಷೆಗೆ ಹೋಗಲು ಅವಕಾಶಮಾಡಿಕೊಡಬೇಕೆಂದು ಕೇಳಿದ್ದರು. ಸರ್ಕಾರದವರು ಇನ್ಸ್‌ಪೆಕ್ಟರ್ ಜನರಲ್‌ರವರಿಂದ ಅಭಿಪ್ರಾಯವನ್ನು ತರಿಸಿಕೊಂಡು—ಇನ್ನು ಮುಂದೆ ವಿದ್ವತ್ಪರೀಕ್ಷೆಯ ಒಂದು ಭಾಗದಲ್ಲಿ ತೇರ್ಗಡೆಹೊಂದಿರುವಂಥವರು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಪಕ್ಷದಲ್ಲಿ ಅಂಥವರನ್ನು ಕನ್ನಡಪಂಡಿತ ಪರೀಕ್ಷೆಗೆ ಸೇರಿಸಿಕೊಳ್ಳಬಹುದು ಎಂಬದಾಗಿ ರೂಲನ್ನು ಬದಲಾವಣೆ ಮಾಡಿರುತ್ತಾರೆ.

ಮೈಸೂರು ಸಿಟಿ ಮುನಿಸಿಪಾಲಿಟಿ.—ರಾಜಧಾನಿಯ ಮುನಿಸಿಪಲ್ ಫಂಡಿನಿಂದ ಮುಂದಿನೊಳಗಾಗಿ ಹಿಂದುಸ್ಥಾನಿ ರಾತ್ರಿ ಪಾಠಶಾಲೆಗೆ ತಿಂಗಳಿಗೆ 8 ರೂಪಾಯಿ ಗ್ರಾಂಟು ಸ್ಯಾಂಕ್ಷನ್ ಆಗಿದೆ. ಮತ್ತು ಸ್ಕೂಲ್ ಪ್ರೆಸಿಡೆಂಟರ ಗುಮಾಸ್ತೆಯ ಸಂಬಳವನ್ನು 8 ರಿಂದ 12 ರೂಪಾಯಿಗೆ ಬಡ್ತಿಮಾಡಿ, ಆ ಪ್ರೆಸಿಡೆಂಟರು 6 ರೂಪಾಯಿ ಸಂಬಳದಮೇಲೆ ಒಬ್ಬ ಜವಾನನನ್ನು ನೇಮಿಸಿಕೊಳ್ಳಬಹುದೆಂದು ಸ್ಯಾಂಕ್ಷನ್ ಆಗಿದೆ. ರಾಜಧಾನಿಯಲ್ಲಿರುವ 26 ಮುನಿಸಿಪಲ್ ಸ್ಕೂಲುಗಳಿಗೆ ರೂ. 519-8-0 ಗ್ರಾಂಟೂ, 13 ಪಾಠಶಾಲೆಗಳಿಗೆ 111 ರೂಪಾಯಿ ಗ್ರಾಂಟೂ ಮಾಹೆಯಾನಾ ಕೊಡತಕ್ಕದ್ದೆಂದು ತೀರ್ಮಾನವಾಗಿದೆ. ಅಂತೂ ಮುನಿಸಿಪಲ್ ಫಂಡಿನಿಂದ ವಿದ್ಯಾಭ್ಯಾಸಕ್ಕಾಗಿ ವರುಷಕ್ಕೆ 7,793 ರೂಪಾಯಿ ವಿನಿಯೋಗಿಸಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದಾರೆ.

ಪ್ರತಿಯೊಂಸಕಾರದ ಕಾಮಗಾರಿಗಳು.—ಮೈಸೂರು ಡಿಸ್ಟ್ರಿಕ್ಟಿನ 11 ಮುನಿಸಿಪಾಲಿಟಿಗಳಲ್ಲಿ ಕೆಲಕೆಲವು ಮಟ್ಟಿಗೆ ಕಾಮಗಾರಿ ನಡೆದು ಹಣವಿಲ್ಲದ ದೆಸೆಯಿಂದ ಪೂರೈಸದೆ ಉಳಿದಿರುವ ಕೆಲಸಗಳನ್ನೂ, ಹಿಂದೆಯೇ ಸ್ಯಾಂಕ್ಷನ್ ಆಗಿದ್ದರೂ ಇನ್ನೂ ಪ್ರಾರಂಭವಾಗದೆ ಇರುವ ಕಾಮಗಾರಿಗಳನ್ನೂ, ಚಾಲ್ತಿಸಾಲಿನಲ್ಲಿ ಪ್ರಾರಂಭಿಸಿ ಮುಗಿಸುವುದಕ್ಕೋಸ್ಕರ ಸರ್ಕಾರದವರು ರೂ. 5,183-8-6 ಹಣವನ್ನು ಸ್ಯಾಂಕ್ಷನ್ ಮಾಡಿದ್ದಾರೆ. ಈ ಹಣವನ್ನು ಆಯಾ ಮುನಿಸಿಪಲ್ ಫಂಡಿನಿಂದ ಸಾಲವಾಗಿ ಮಾಡತಕ್ಕದ್ದೆಂದು ತೀರ್ಮಾನವಾಗಿದೆ. ಅವರ ಹಂಚಿಕೆ ಹ್ಯಾಗೆಂದರೆ—ಯಡತೊರೆ ರೂ. 80, ಗುಂಡ್ಲುಪೇಟೆ ರೂ. 683-0-9 ಪೈ, ಪಿರಿಯಾಪಟ್ಟಣ ರೂ. 126, ತಲಕಾಡು ರೂ. 700, ಫ್ರೆಂಚ್‌ರಾಕ್ಸ್ ರೂ. 896-14-0, ನಾಗಮಂಗಲ ರೂ. 131, ಕೃಷ್ಣರಾಜಪೇಟೆ ರೂ. 173-6-0, ಮಳವಳ್ಳಿ ರೂ. 139-11-6 ಪೈ, ಶ್ರೀರಂಗಪಟ್ಟಣ ರೂ. 90, ಹುಣಸೂರು ರೂ. 305-5-3, ಚಾಮರಾಜನಗರ ರೂ. 261-9-0, ನಂಜನಗೂಡು 1,771-0-0, ಟಿ. ನರಸೀಪುರ ರೂ. 72.

ಬೀಜದ ಹೋರಿಗಳು.—ಚಿಕ್ಕಮಗಳೂರು ಮೆಂಬರು ಮ॥ ಸಿ. ವಾಸುದೇವರಾಯರು 1911 ನೇ ಇಸವಿಯ ಪ್ರತಿನಿಧಿ ಸಭೆಯಲ್ಲಿ—ಹಳ್ಳಿಗಾಡುಗಳ ಗೋಕಾಯಿಗಳ ಜಾತಿಯನ್ನೂ, ತಳಿಗಳ ಜಾತಿಯನ್ನೂ ಚೆನ್ನಾಗಿಮಾಡಿಕೊಳ್ಳುವುದಕ್ಕೆ ಸರ್ಕಾರದವರು ಪಶುವೈದ್ಯದ ಪ್ರತಿ ಒಂದು ಆಸ್ಪತ್ರೆಯಲ್ಲೂ ಒಂದೊಂದು ಬೀಜದ ಹೋರಿಯನ್ನೂ ಬೀಜದ ಕುದುರೆಯನ್ನೂ ಕಳುಹಿಸಿ ಇಡಿಸಿದರೆ ಪ್ರಜೆಗಳಿಗೆ ತುಂಬಾ ಸಹಾಯವಾಗುತ್ತದೆ ಎಂದು ಕೇಳಿಕೊಂಡರು. ಸರ್ಕಾರದವರು ಈ ವಿಷಯದಲ್ಲಿ ರೆವಿನ್ಯೂ ಕಮಿಷನರವರ ಅಭಿಪ್ರಾಯವನ್ನು ತರಿಸಿಕೊಂಡು ಹುಕುಂ ಕೊಟ್ಟಿರುವುದೇನೆಂದರೆ.—ಗ್ರಾಮಾಂತರಗಳಲ್ಲಿ ರೈತಪ್ರಜೆಗಳ ಜಾನುವಾರುಗಳ ರಾಸುಗಳಲ್ಲಿ ಉತ್ತಮ ತಳಿಯಲ್ಲಿರಬೇಕಾದದ್ದು ಪರಮಾವಶ್ಯಕವಾಗಿದೆ. ಸಂಸ್ಥಾನದ ಪ್ರತಿ ಒಂದು ಪಶುವೈದ್ಯದ ಆಸ್ಪತ್ರೆಯಲ್ಲೂ ಒಂದು ಬೀಜದ ಹೋರಿಯನ್ನು ಇಟ್ಟಿರುವಂತೆ ಹುಕುಂ ಮಾಡಿದೆ. ಆದರೆ ಅಂಥಾ ಬೀಜದ ಹೋರಿಯ ಅರ್ಧ ಕ್ರಯವನ್ನು ಆಯಾ ಡಿಸ್ಟ್ರಿಕ್ಟ್ ಬೋರ್ಡಿನವರು ಕೊಡುವದಕ್ಕೂ, ಅದರ ರಾತಿಬ ಖರ್ಚಿನಲ್ಲೂ ಅರೆವಾಸಿಯನ್ನು ಅವರೇ ವಹಿಸಿಕೊಳ್ಳುವುದಕ್ಕೂ ಒಪ್ಪಬೇಕು. ಡಿಸ್ಟ್ರಿಕ್ಟ್ ಬೋರ್ಡಿಗೂ ರೆವಿನ್ಯೂ ಕಮಿಷನರಿಗೂ ಸರಿಕಂಡೆಂದು ತೋರುವ ದರವನ್ನು ಗೊತ್ತುಮಾಡಿ, ಅಂಥಾ ಬೀಜದ ಹೋರಿಯನ್ನು ಹಾರಿಸಿಕೊಳ್ಳುವ ರೈತರಿಂದ ರುಸುಂ ವಸೂಲ್ಮಾಡಬೇಕು. ಈ ರೀತಿ ವಸೂಲಾಗುವ ರುಸುಮಿನಲ್ಲಿ ಅರೆವಾಸಿ ಸರ್ಕಾರಕ್ಕೂ ಅರೆವಾಸಿ ಡಿಸ್ಟ್ರಿಕ್ಟ್ ಫಂಡಿಗೂ ಜಮಾ ಕಟ್ಟತಕ್ಕದ್ದು. ಈ ಭಾಗದಲ್ಲಿ ರೆವಿನ್ಯೂ ಕಮಿಷನರು ತನಿಖೆಮಾಡಿ, ನಡಿಸಬೇಕಾದ ಕ್ರಮಗಳನ್ನು ಸರ್ಕಾರಕ್ಕೆ ತಿಳಿಸಬೇಕಾಗಿದೆ.

ಆಕ್ಟ್ರಾಯಿ ಸುಂಕ.—ದಾವಣಗೆರೆಯ ಒಬ್ಬ ಹವಳ ವರ್ತಕನು ಪಯಂಪೇಟೆಯಿಂದ ಒಂದು ಮೂಟೆ ಹವಳ ತರಿಸಿ, ಮುನಿಸಿಪಲ್ ಆಫೀಸಿನ ಹಿಂದೆಯನ್ನು ಒಡೆದು ಕೆಲವು ನಗಗಳನ್ನು ಸುಂಕ ತೆರಿಸಿ ತೆಗೆದುಕೊಂಡು ಹೋಗಿ ಉಳಿದ ಹವಳಯನ್ನು ಮೂಟೆ ಕಟ್ಟಿ ಮುನಿಸಿಪಾಲಿಟಿಯವರ ಸ್ವಾಧೀನದಲ್ಲಿಟ್ಟಿದನು. ಕೆಲವು ಕಾಲಾನಂತರ ಆ ಉಳಿದ ಹವಳಯನ್ನೆಲ್ಲಾ ವಾಪಸು ಪಯಂಪೇಟೆ ವರ್ತಕನಿಗೆ ಕಳುಹಿಸಲಪೇಕ್ಷಿಸಿದನು. ಅಮಲ್ದಾರರು ಅದಕ್ಕೂ ಆಕ್ಟ್ರಾಯಿ ಸುಂಕ ಕೊಡಬೇಕೆಂದರು. ಅದರ ಮೇಲೆ ವರ್ತಕನು ಅಪೀಲ್ ಹೋದನು. ಡಿಪ್ಯುಟಿ ಕಮಿಷನರು ಆ ಹವಳಿಗೆ ಸುಂಕ ಕೊಡಬೇಕಾದ ಅಗತ್ಯವಿಲ್ಲವೆಂದರು. ಬಳಿಕ ಡಿವಿಷನ್ ಕಮಿಷನರಿಗೆ ತಿಳಿದು ಅವರಿಗೂ ಅನುಮಾನ ಕಂಡುಬಂದದರಿಂದ ಅವರು ಈ ವಿಚಾರವನ್ನು ಗವರ್ನ್‌ಮೆಂಟಿಗೆ ರಿಪೋರ್ಟ್ ಮಾಡಿದರು. ಗವರ್ನ್‌ಮೆಂಟಿನವರು ಅ॥ ಕಮಿಷನರವರಂತೆಯೇ ತೀರ್ಮಾನ ಮಾಡಿ, ಹುಕುಂ ಕೊಟ್ಟಿರುವುದೇನೆಂದರೆ:—ಹಾಗೆ ಆ ವರ್ತಕನು ಬಿಕ್ರಿ ಮಾಡದೆ ವಾಪಸು ಕಳುಹಿಸಿದ ಹವಳಿಗೆ ಅವನಿಂದ ತೆಗೆದುಕೊಂಡಿರುವ ಆಕ್ಟ್ರಾಯಿ ಸುಂಕವನ್ನು ಅವನಿಗೆ ವಾಪಸು ಕೊಟ್ಟುಬಿಡಬೇಕು. ಮುನಿಸಿಪಲ್ ಸರಹದ್ದಿನೊಳಗೆ ಬಿಕ್ರಿ ಆಗದ ಇರುವಂಥಾ ಸರಕುಗಳಿಗೆ ಸುಂಕವನ್ನು ಹಾಕಕೂಡದು. ಇದರಿಂದ ಮುನಿಸಿಪಾಲಿಟಿಗೆ ಮೋಸವೇನೂ ಆಗುವುದಿಲ್ಲ. ಮುನಿಸಿಪಾಲಿಟಿಯವರು ಅಂಥಾ ಸರಕನ್ನು ದಾಸ್ತಾನು ಇಡುವುದಕ್ಕೆ ಒಂದು ಉಗ್ರಾಣವನ್ನು ಮಾಡಬೇಕು. ಅದರಲ್ಲಿ ವರ್ತಕರು ತಮ್ಮ ಸರಕನ್ನು ಪರಸ್ಥಳದ ಬಿಕರಿಗಾಗಿ ತಂದಿಡಬಹುದೆಂದೂ, ಅದಕ್ಕೆ ಮುನಿಸಿಪಾಲಿಟಿಗೆ ಅವರು ಸ್ವಲ್ಪ ಬಾಡಿಗೆಯನ್ನು ಕೊಡಬೇಕೆಂದೂ, ಹಾಗೆ ಸರಕು ಇಟ್ಟುಕೊಳ್ಳುವುದಕ್ಕೆ ಒಂದು ಮಾಮೂಲಿಯನ್ನು ಗೊತ್ತುಮಾಡಬೇಕೆಂದೂ, ಅವರು ಸ್ಥಳ ಬಿಕರಿಗಾಗಿ ಉಗ್ರಾಣದಿಂದ ತೆಗೆದುಕೊಂಡು ಹೋಗುವ ಸರಕಿಗೆ ಮಾತ್ರ ಸುಂಕ ಕೊಡಬೇಕೆಂದೂ ವಿಧಾಯಕ ಮಾಡಿ ತಿಳಿಸಿದ್ದಾರೆ.

ಕುಮರಿ ವ್ಯವಸಾಯಕ್ಕೆ ಪ್ರೋತ್ಸಾಹ.—ಫಾರೆಸ್ಟ್ ಕನ್ಸರ್ವೇಟರವರ ಶಿಫಾರಸನ್ನು ಒಪ್ಪಿಕೊಂಡು ಸರ್ಕಾರದವರು ಅಪ್ಪಣೆ ಕೊಟ್ಟಿರುವುದೇನೆಂದರೆ—ನಾಗರದ ತಾಲ್ಲೂಕು ಕೆರೂರು ಮತ್ತು ಭರಂಗಿ ಹೋಬಳಿಗಳಲ್ಲಿ ಮರಾಟಿ ಮತ್ತು ಕುಣಬಿ ಸಂಸಾರಗಳನ್ನು ತಂದಿಟ್ಟು ಅವರಿಗೆ ಬೇಕಾಗುವ ಸಹಾಯಗಳನ್ನು ಒದಗಿಸಿ ಅವರು ಅಲ್ಲೇ ನಿಂತು ಜರಾಯತುದಾರರಾಗಿ ಬಾಳಿ ಬದುಕುವಂತೆ ಮಾಡಬೇಕೆಂದು 1908 ನೇ ಫೆಬ್ರವರಿಯಲ್ಲಿ ಕೆಲವು ಹಣವನ್ನು ಅಡ್ವಾನ್ಸಾಗಿ ಸ್ಯಾಂಕ್ಷನ್ ಮಾಡಿದರು. ಇದುವರೆಗೆ ಈ ಸಹಾಯದಿಂದ ಆ ಸ್ಥಳದಲ್ಲಿ 40 ಸಂಸಾರಗಳು ನಿಂತಿರುತ್ತವೆ. ಅವರಲ್ಲಿ ದೊಡ್ಡವರು 101 ಜನರು, ಮಕ್ಕಳು 171 ಮಂದಿ ಇರುವರು. ಇವರನ್ನೆಲ್ಲಾ ತಂದು ನಿಲ್ಲಿಸಿ ಇವರಿಗೆ ವ್ಯವಸಾಯಕ್ಕೆ ಬೇಕಾದ ಎಮ್ಮೆ, ಎತ್ತು, ಬೀಜದ ಭತ್ತ ಮುಂತಾದವನ್ನು ಕೊಂಡು ಒದಗಿಸಿದ್ದಕ್ಕೆ ಇದುವರೆಗೆ ಸರ್ಕಾರಕ್ಕೆ 5,570 ರೂಪಾಯಿ ಖರ್ಚಾಗಿದೆ. ಇಂಥಾ ರಿಯಾಯಿತಿಯನ್ನು ತಿಳಿದು ಇತರರೂ ಬಂದು ಅಲ್ಲಿ ನೆಲೆಯಾಗಿ ನಿಲ್ಲಬೇಕೆಂದು ಕುತೂಹಲಪಡುತ್ತಾರೆ. ಆದಕಾರಣ ಇನ್ನು ಮೂರು ವರುಷಗಳ ತನಕ ಪ್ರತಿ ವರುಷವೂ 5,000 ರೂಪಾಯಿನಂತೆ ಇಂಥಾ ಪ್ರೋತ್ಸಾಹಕ್ಕಾಗಿ ಸ್ಯಾಂಕ್ಷನ್ ಮಾಡುವಂತೆ ಹುಕುಂ ಆಗಿದೆ. ಹಾಗೆ ಅಲ್ಲಿ ಬಂದು ನಿಂತು ವ್ಯವಸಾಯಗಳನ್ನು ಮಾಡತಕ್ಕವರಿಗೆ ಅವರು ಹೂಡುವ ಜಮೀನಿಗೆ ಕಂದಾಯವನ್ನು ಐದು ವರುಷ ಮಾಫಿ ಬಿಡತಕ್ಕದ್ದೆಂದು ತಿಳಿಸಿದ್ದಾರೆ. ಆ ಜನಗಳಿಗೆಲ್ಲಾ ಅನುಕೂಲವಾದ ಸ್ಥಳದಲ್ಲಿ 50 ರೂಪಾಯಿ ಮುಟ್ಟಿಸಿ ಒಂದು ದೇವಸ್ಥಾನವನ್ನು ಕಟ್ಟಿಸಿ ಕೊಡತಕ್ಕದ್ದೆಂದೂ, 25 ರೂಪಾಯಿ ಸಂಬಳದ ಒಬ್ಬ ಫಾರೆಸ್ಟ್ ನೌಕರನನ್ನು ಈ ವ್ಯವಸಾಯಾಭಿವೃದ್ಧಿಗಾಗಿಯೇ ನೇಮಿಸಿ ಅವನಿಗೆ 15 ರೂಪಾಯಿ ನಂತೆ ಪ್ರಯಾಣದ ಅಲೋಯನ್ಸನ್ನು ಸಾವತಿ ಮಾಡುತ್ತಾ ಬರಬಹುದೆಂದೂ, ಈ ಏರ್ಪಾಟಿನ ಸಾಲಿಯಾನ ರಿಪೋರ್ಟನ್ನು ಕನ್ಸರ್ವೇಟರವರು ಪ್ರತಿ ವರುಷವೂ ಜೂನ್ ತಿಂಗಳಲ್ಲಿ ಸರ್ಕಾರಕ್ಕೆ ಕಳುಹಿಸಬೇಕೆಂದೂ ಸರ್ಕಾರದವರು ಅಪ್ಪಣೆ ಕೊಡಿಸಿದ್ದಾರೆ.

ಹಿಂದುದೇಶಕ್ಕೊಂದು ಸಾರ್ವಜನಿಕವಾದ ಭಾಷೆ

[ಡಿ. ಎಸ್. ಎಸ್. ಯವರು ಬರೆದದ್ದು.]

ಹಿಂದುದೇಶದಲ್ಲಿ ಈಗ 117 ಭಾಷೆಗಳು ಪ್ರಚಾರದಲ್ಲಿವೆ. ಬಂಗಾಳಿ, ಹಿಂದಿ, ಪಂಜಾಬಿ, ಮರಾಠಿ, ಗೂರ್ಜರ, ಅರವ, ತೆಲುಗು, ಕನ್ನಡ, ಮಲೆಯಾಳ ಮುಂತಾದ ಮುಖ್ಯ ಭಾಷೆಗಳೂ, ಇತರ ಅನೇಕ ಭಾಷಾ ಶಾಖೆಗಳೂ ನಾನಾ ಭಾಗಗಳಲ್ಲಿ ಆಯಾ ಪ್ರದೇಶದ ಪ್ರಜೆಗಳಿಂದ ಮಾತನಾಡಲ್ಪಡುತ್ತವೆ. ಹೀಗೆ ಜನಗಳು ನಾನಾ ಭಾಷೆಗಳನ್ನು ಮಾತನಾಡುವುದರಿಂದ ಅವರೊಳಗೆ ಒಗ್ಗಟ್ಟು ಏರ್ಪಡುವುದು ಕಷ್ಟ. ಭಾರತೀಯರೆಲ್ಲಾ ಒಂದೇ ಭಾಷೆಯನ್ನಾದರೂ ಕಲಿತರೆ ಒಗ್ಗಟ್ಟು ಸುಲಭದಲ್ಲಿ ಜನಿಸುವುದು. ಆಂಗ್ಲೇಯರ ಭಾಷೆಯನ್ನು ಕಲಿತ ಅನೇಕರು ಈಗ ಆ ಭಾಷೆಯನ್ನೇ ತಮ್ಮೆಲ್ಲರ ಮಧ್ಯದ ಭಾಷೆಯಾಗಿ ಉಪಯೋಗಿಸುವರು. ಹಾಗೆ ಆ ಭಾಷೆಯನ್ನು ಸಾರ್ವಜನಿಕವಾಗಿ ಉಪಯೋಗಿಸುವುದರಿಂದಲೇ ಕಾಂಗ್ರೆಸ್ ಮಹಾಸಭೆಯಂಥಾ ಸಭೆಗಳು ಜರುಗಲು ಅವಕಾಶ ಉಂಟಾಗಿದೆ. ಆ ಸಾರ್ವಜನಿಕವಾದ ಭಾಷೆಯು ಇಲ್ಲದಿದ್ದರೆ ಮೇಲ್ಕಂಡ ನಾನಾ ಭಾಷೆಗಳನ್ನಾಡುವ ಜನಗಳು ಪರಸ್ಪರ ಅಭಿಪ್ರಾಯಗಳನ್ನು ತಿಳಿಸಲು ಮಾರ್ಗವಿಲ್ಲದಂತಾಗುವುದು. ಇದರಿಂದುಂಟಾಗುವ ಅನಾನುಕೂಲಗಳನ್ನು ಎಲ್ಲರೂ ಅರಿತವರಾಗಿಯೇ ಇರುವರು. ಆಂಗ್ಲೇಯರ ಭಾಷೆಯು ಅನ್ಯಭಾಷೆಯಾದ್ದರಿಂದ ಅದು ಸಾರ್ವಜನಿಕ ಭಾಷೆಯಾಗಿ ಎಂದಿಗೂ ಪರಿಣಮಿಸಲಾರದು. ಆ ಭಾಷೆಯಲ್ಲಿ ಒಂದು ಅಕ್ಷರಕ್ಕೆ ಒಂದು ಉಚ್ಚಾರಣೆ ಎಂಬ ನಿಯಮವಿಲ್ಲದೆ ಅನೇಕ ಅಕ್ಷರಗಳಿಂದ ಒಂದು ಉಚ್ಚಾರಣೆಯೂ, ಅನೇಕ ಉಚ್ಚಾರಣೆಗಳಿಂದ ಒಂದು ಅಕ್ಷರವೂ ಸೂಚಿಸಲ್ಪಟ್ಟು ಅದನ್ನು ಕಲಿಯುವವರನ್ನು ತಲ್ಲಣಿಸಿ, ಬಹುಶ್ರಮಕ್ಕೊಳಪಡಿಸುವ ಅನ್ಯಭಾಷೆಯಾದದ್ದರಿಂದ ನಮ್ಮ ದೇಶೀಯರಲ್ಲಿ ಕೇವಲ ಕಿರಿಯರೇ ಆ ಭಾಷೆಯನ್ನು ಕಲಿಯಲು ಸಾಧ್ಯವು. ಆದ್ದರಿಂದ ದೇಶದ ಜನಗಳು ವಾಡಿಕೆಯಾಗಿ ಆಡುವ ಭಾಷೆಗಳಲ್ಲೊಂದನ್ನು ಆರಿಸಿ, ಅದನ್ನು ದೇಶದ ಸರ್ವಜನರೂ ಕಲಿಯಬೇಕು. ಹೀಗೆ ಆರಿಸಲ್ಪಡಲು ತಕ್ಕ ಭಾಷೆಯು ಯಾವುದೆಂದು ಆಲೋಚಿಸಿದರೆ ಅದು ಹಿಂದೀ ಭಾಷೆಯೇ ಎಂದು ಮನಸ್ಸಿಗೆ ತೋರದೆ ಇರಲಾರದು. ಆದರೆ ಹಿಂದೀ ಭಾಷೆಗೆ ಮಾತೃಭಾಷೆಯಾದ ಸಂಸ್ಕೃತವಿರುವಲ್ಲಿ ಇದಕ್ಕೆ ಯಾವ ಕಾರಣದಿಂದ ಅಷ್ಟೊಂದು ಪ್ರಾಧಾನ್ಯತೆಯನ್ನು ಕೊಟ್ಟು ಮಾತನಾಡುವಿರೆಂದು ನಮ್ಮಲ್ಲಿ ಕೆಲವರು ಪ್ರಶ್ನಿಸಬಹುದು. ಆಂಗ್ಲಭಾಷೆಯು ಬಹು ಶ್ರಮದಿಂದ ಬಹು ಕೊಂಚಜನಗಳಿಂದ ಮಾತ್ರ ಕಲಿಯಲ್ಪಡಲು ಸಾಧ್ಯವಾದದ್ದೆಂದು ಹಿಂದೆ ಸೂಚಿಸಿದಂತೆ ಸಂಸ್ಕೃತವೂ, ಅದರಲ್ಲಿ ಸೇರಿಕೊಂಡಿರುವ ಲಿಂಗತೊಡಕುಗಳಿಂದ ಉನ್ನತವರ್ಗಗಳಿಂದ ಅದನ್ನು ಸಾಮಾನ್ಯವಾಗಿ ಎಲ್ಲರೂ ಸುಲಭವಾಗಿ ಅಭ್ಯಾಸಿಸಲು ಸಾಧ್ಯವಿಲ್ಲದೆ ತೀಕ್ಷ್ಣಮತಿಗಳಾದ ಕೆಲವರಿಗೆ ಮಾತ್ರ ಸಾಧ್ಯವಾದ ಭಾಷೆಯಾಗಿರುತ್ತವೆ. ಈಗಿನ ಕಾಲದಲ್ಲಿ ಕೆಲರು ಹೇಳುವಂತೆ ನಮ್ಮ ಸಂಸ್ಕೃತ ಭಾಷೆಯು ಜೀವವಿಲ್ಲದ ಭಾಷೆಯಲ್ಲ. ಪ್ರಸ್ತುತದಲ್ಲಿ ನಾವುಗಳೆಲ್ಲರೂ ಆಂಗ್ಲಭಾಷೆಯನ್ನು ಜೀವವುಳ್ಳ ಭಾಷೆಯೆಂದು ಒಪ್ಪಿಕೊಳ್ಳುವೆವು. ಈಗ ಈ ಭಾಷೆಯನ್ನಾಡುವುದರಿಂದ ಮಾತನಾಡಲ್ಪಡುವ ಶೈಲಿಗೂ, ಪೂರ್ವದಲ್ಲಿ ಛಾಸರ್, ಮಿಲ್ಟನ್, ವರಕವಿ ಷೇಕ್ಸ್ಪಿಯರ್ ಮುಂತಾದವರಿಂದ ಆದಲ್ಪಟ್ಟ ಭಾಷೆಯ ಶೈಲಿಗೂ ಎಷ್ಟೊಂದು ವ್ಯತ್ಯಾಸವಿದೆ! ಮತ್ತು ಇಂಗ್ಲೆಂಡ್ ದೇಶದಲ್ಲಿ ಲಂಡನ್ ನಗರದಲ್ಲಿ ಆಡಲ್ಪಡುವ ಆಂಗ್ಲಭಾಷೆಯ ಶೈಲಿಗೂ, ಶೈರ್‌ಗಳೆಂಬ ಆ ದೇಶದ ನಾನಾ ಜಿಲ್ಲೆಯ ವಿಭಾಗಗಳಲ್ಲಿ ಆಡಲ್ಪಡುವ ಆಂಗ್ಲಭಾಷೆಗೂ ಎಷ್ಟೊಂದು ವ್ಯತ್ಯಾಸ! ನಗರಗಳಲ್ಲಿ ನಾವು ಆಡುವ ಕನ್ನಡಕ್ಕೂ, ಹಳ್ಳಿಗಾಡಿನವರು ಮಾತನಾಡುವ ಕನ್ನಡಕ್ಕೂ ವ್ಯತ್ಯಾಸವಿಲ್ಲವೆ! ಮೈಸೂರಿನಲ್ಲಿ ನಾವು ಭಾಷಿಸುವ ಕನ್ನಡಕ್ಕೂ, ಮಂಗಳೂರು ದಕ್ಷಿಣಕನ್ನಡ ಜಿಲ್ಲೆಗಳ ನಿವಾಸಿಗಳು ಭಾಷಿಸುವ ಕನ್ನಡಕ್ಕೂ ಎಷ್ಟೊಂದು ವ್ಯತ್ಯಾಸವಿದೆ. ಇದರಂತೆಯೇ ಉತ್ಕೃಷ್ಟ ಸಂಸ್ಕೃತ ಭಾಷೆಗೂ ಅದರ ಅಪಭ್ರಂಶಗಳಾದ ಪ್ರಾಕೃತಗಳಿಗೂ ಇರುವ ವ್ಯತ್ಯಾಸವುಂಟು. ಈ ಪ್ರಾಕೃತಗಳಲ್ಲಿ ಎಲ್ಲರಿಂದಲೂ ಸುಲಭಗ್ರಾಹ್ಯವಾದದ್ದು ಹಿಂದೀ ಭಾಷೆಯು. ಉತ್ಕೃಷ್ಟ ಸಂಸ್ಕೃತದಲ್ಲಿ ಕಠಿಣವಾದ ಕವಲುಗಳೆಂಬುವ ಲಿಂಗತೊಡಕುಗಳು ನಿವಾರಿಸಲ್ಪಟ್ಟ ರೂಪಾಂತರವೇ ಹಿಂದೀ ಭಾಷೆಯಾಗಿ ಪರಿಣಮಿಸಿದೆ. ಗುಜರಾತಿಯವನ ಭಾಷೆಯನ್ನು ಮರಾಠಿಯವನು ತಿಳಿದುಕೊಳ್ಳಲಾರನು. ಅದರಂತೆಯೇ ಗುಜರಾತಿಯವನು ಮರಾಠಿಯವನ ಭಾಷೆಯನ್ನು ಗ್ರಹಿಸಲಾರನು. ಆದರೆ ಇವರಿಬ್ಬರೂ ಹಿಂದೀ ಭಾಷೆಯನ್ನು ಮಾತನಾಡುವವನ ಅಭಿಪ್ರಾಯವನ್ನು ಸುಲಭವಾಗಿ ಗ್ರಹಿಸಬಲ್ಲರು. ದಕ್ಷಿಣದೇಶದ ಪಂಚದ್ರಾವಿಡರುಗಳಾದ ನಾವು ಸಹ ಇತರ ಸಂಸ್ಕೃತ, ಮರಾಠಿ, ಬಂಗಾಳಿ, ಆಂಗ್ಲ ಮುಂತಾದ ಭಾಷೆಗಳನ್ನು ಅಭ್ಯಸಿಸುವುದಕ್ಕಿಂತಲೂ ಕಡಿಮೆ ಕಾಲದಲ್ಲೂ ಕಡಿಮೆ ಶ್ರಮದಿಂದಲೂ ಹಿಂದೀ ಭಾಷೆಯನ್ನು ಕಲಿಯುವುದು ಸಾಧ್ಯವೆಂದು ಉತ್ತರ ಹಿಂದುಸ್ಥಾನದಲ್ಲಿ ಸಂಚರಿಸಿ ಹಿಂದೀ ಭಾಷೆಯನ್ನೂ ಇತರ ಭಾಷೆಗಳನ್ನೂ ಅರಿತಿರುವ ಒಬ್ಬ ದೊಡ್ಡ ಮನುಷ್ಯರು ತಿಳಿಸಿರುವರು. ಇಷ್ಟೊಂದು ಸೌಮ್ಯಗುಣಗಳಿಂದ ಕೂಡಿರುವುದರಿಂದಲೇ ನಾವು ಹಿಂದೀ ಭಾಷೆಯನ್ನೇ ಮಾತನಾಡಲು ಪ್ರಯತ್ನ ಮಾಡೆನು. ಒಂದಾನೊಂದು ಕಾಲದಲ್ಲಿ ಸಂಸ್ಕೃತವು ಸರ್ವಸಾಮಾನ್ಯವಾಗಿ ಎಲ್ಲರಿಂದಲೂ ಮಾತನಾಡಲ್ಪಡುತ್ತಿರಲಿಲ್ಲವೇ ಎಂಬ ಪ್ರಶ್ನೆಯು ಈ ಸಂದರ್ಭದಲ್ಲಿ ಹುಟ್ಟುವುದು. ಈ ಪ್ರಶ್ನೆಗೆ ಒಂದು ಕಾಲದಲ್ಲಿ ಎಲ್ಲರೂ ಈಗ ನಾವು ನಮ್ಮ ಸ್ವಭಾಷೆಗಳಾದ ಕನ್ನಡ, ಅರವ, ತೆಲುಗು ಮುಂತಾದವುಗಳನ್ನು ಆಡುವಂತೆ ಸಂಸ್ಕೃತವನ್ನೂ ಮಾತನಾಡುತ್ತಿದ್ದರೆಂದಾಗಲೀ ಯಾವ ಕಾಲದಲ್ಲೂ ಹಾಗೆ ಸರ್ವರೂ ಆ ಭಾಷೆಯನ್ನಾಡಲಿಲ್ಲವೆಂದಾಗಲೀ ಖಂಡಿತವಾದ ಉತ್ತರವನ್ನು ಹೇಳಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಒಂದು ಮಾತ್ರ ಚೆನ್ನಾಗಿ ವ್ಯಕ್ತಪಡುತ್ತದೆ. ಸಂಸ್ಕೃತವು ಎಲ್ಲರಿಂದಲೂ ಸುಲಭವಾಗಿ ಕಲಿಯಲ್ಪಡಲಾರದಷ್ಟು ಕಠಿಣವಾಗಿದೆ. ಆದ್ದರಿಂದ ಸುಗಮವಾದ ಹಿಂದೀ ಭಾಷೆಯೇ ಸರಳ ಸಂಸ್ಕೃತವು.

ಹಿಂದೀ ಭಾಷೆಯು ಪ್ರಾಚೀನ ಸಂಸ್ಕೃತದ ಆಭಾಸವು. ಈ ದೇಶದಲ್ಲಿ ಇತರ ಭಾಷೆಗಳನ್ನಾಡುವ ಜನರಿಗಿಂತಲೂ ಹಿಂದೀ ಭಾಷೆಯನ್ನಾಡುವವರು ಹೆಚ್ಚು ಮಂದಿಯಾಗಿರುವರು. ಇದೂ ಅಲ್ಲದೆ ಉತ್ತರ ಮತ್ತು ಪಶ್ಚಿಮ ಹಿಂದುಸ್ಥಾನದ ಜನಗಳು ಆಡುವ ಬಂಗಾಳಿ, ಪಂಜಾಬಿ, ಮರಾಠಿ ಮುಂತಾದ ಭಾಷೆಗಳಿಗೆ ಸಂಸ್ಕೃತ ಭಾಷೆಯು ಆಧಾರವಾದ್ದರಿಂದ ಅವುಗಳಿಗೂ ಹಿಂದೀ ಭಾಷೆಗೂ ಹೆಚ್ಚು ವ್ಯತ್ಯಾಸವಿಲ್ಲದೆ ಸರ್ವರಿಂದಲೂ ಹಿಂದೀ ಭಾಷೆಯು ಸುಲಭಗ್ರಾಹ್ಯವಾದದ್ದಾಗಿದೆ. ತೆಲುಗು, ಕನ್ನಡ, ಅರವ, ಮಲೆಯಾಳ ಮುಂತಾದ ದ್ರಾವಿಡ ಭಾಷೆಗಳಿಗೂ, ಹಿಂದೀ ಭಾಷೆಗೂ ಯಾವ ಸಂಬಂಧವೂ ಇರುವುದಿಲ್ಲ. ಆದರೂ ಸಂಸ್ಕೃತದಿಂದ ಪಡೆದಿರುವ ಪದಗಳು ಇವುಗಳಲ್ಲಿ ಬಹಳವಾಗಿರುವುದರಿಂದ ದ್ರಾವಿಡರು ಸಹ ಹಿಂದೀ ಭಾಷೆಯನ್ನು ಕಲಿಯಬೇಕೆ ಬಹಳ ಕಷ್ಟವಿಲ್ಲವೆಂದು ಕೆಲವರ ಅಭಿಪ್ರಾಯ. ಮದರಾಸಿನ ಹೈಕೋರ್ಟ್ ಜಡ್ಜಿಯವರಾದ ಘನಸ್ಯ ಸದಾಶಿವ ಅಯ್ಯರವರೂ ಇದೇ ಅಭಿಪ್ರಾಯವನ್ನು ಅನುಮೋದಿಸುವರು. ಭಾರತೀಯರೆಲ್ಲರೂ ಹಿಂದೀ ಭಾಷೆಯನ್ನು ಸಾರ್ವಜನಿಕವಾಗಿ ಕಲಿಯಬೇಕೆಂಬ ಅಭಿಪ್ರಾಯವನ್ನಿಟ್ಟು ಮೊದಲು ಉತ್ತರ ಹಿಂದುಸ್ಥಾನದಲ್ಲಿ ಹುಟ್ಟಿತು. ವಂಗದೇಶದ ಹೈಕೋರ್ಟ್ ಜಡ್ಜಿಗಳಲ್ಲೊಬ್ಬರಾಗಿದ್ದ ಮಾನ್ಯರಾದ ಶಾರದಾಚರಣ ಮಿತ್ರರವರು ಈ ಅಭಿಪ್ರಾಯವನ್ನು ಹರಡುವುದರಲ್ಲಿ ಹೆಚ್ಚು ಮುತುವರ್ಜಿಯನ್ನು ತೋರಿಸುತ್ತಿದ್ದರು. ಪಂಜಾಬಿನ ಆರ್ಯಸಮಾಜದವರೂ ಈ ಪ್ರಯತ್ನದಲ್ಲಿ ಹೆಚ್ಚು ಶ್ರದ್ಧೆಯನ್ನು ಪ್ರಕಟಿಸುವರು. ಹಿಂದೂ ಮತ್ತು ಮಹಮ್ಮದೀಯರ ನಡುವೆ ಹಿಂದೀ ಭಾಷೆಯನ್ನು ಸಾರ್ವಜನಿಕ ಭಾಷೆಯನ್ನಾಗಿ ಮಾಡಲು ಪ್ರಯತ್ನ ಹೆಚ್ಚಾಗಿ ಕಂಡುಬರುವುದಿಲ್ಲ. ಆದರೂ ಮಹಾರಾಷ್ಟ್ರರೂ, ಗೂರ್ಜರ ದೇಶೀಯರೂ ಇಂಥಾ ದೇಶೋನ್ನತಿಯ ಪ್ರಯತ್ನದಲ್ಲಿ ತಕ್ಕದ ಅಭಿಮಾನವನ್ನು ತೋರಿಸಲಾರರು.

ಭಾರತೀಯರೆಲ್ಲಾ ಅಥವಾ ಮಹಮ್ಮದೀಯರ ಬಿಟ್ಟುಳಿಯುವ ಹಿಂದುಗಳೆಲ್ಲಾ ಹಿಂದೀ ಭಾಷೆಯನ್ನು ಭಾಷಿಸಲೂ ಬರೆಯಲೂ ಕಲಿತರೆ ಹಿಂದೂ ದೇಶೀಯರು ಏಕಮತ್ಯದಿಂದ ಒಂದುಗೂಡುವ ಸಂಭವ ಹೆಚ್ಚಾಗುವುದು. ನಮ್ಮ ಮುಸಲ್ಮಾನ್ ಸಹೋದರರಿಗೆ ಉರ್ದು ಭಾಷೆಯಲ್ಲಿ ವಿಶೇಷ ಅಭಿಮಾನವಿರುವುದು. ಉರ್ದು ಭಾಷೆಯನ್ನು ಬಿಟ್ಟು ಹಿಂದೀ ಭಾಷೆಯನ್ನು ಕಲಿಯಲು ಇವರು ಒಪ್ಪುವರೆಂದು ತೋರುವುದಿಲ್ಲ. ಆದರೆ ಈಗ ಮುಸಲ್ಮಾನರ ಮನೋಭಾವವು ಹಿಂದುಗಳೊಂದಿಗೆ ಬೆರೆತು ಭಾರತೀಯರೆಂಬ ಒಂದೇ ಜನಾಂಗವಾಗಿ ಪರಿಣಮಿಸಲು ಕೊಂಚಮಟ್ಟಿಗೆ ಬಾಗಿದ್ದಾಗಿ ತೋರಿದರೂ, ಸಂಪೂರ್ಣವಾಗಿ ಹಾಗೆ ಪರಿಣಮಿಸಲು ತಕ್ಕದಾಗಿ ಇರುವುದಾಗಿ ಕಂಡುಬರುವುದಿಲ್ಲ. ಆದ್ದರಿಂದ ಮುಸಲ್ಮಾನರಲ್ಲದೆ 25 ಕೋಟಿ ಸಂಖ್ಯೆಯುಳ್ಳ ಹಿಂದೂ ಜನಗಳು ಹಿಂದೀ ಭಾಷೆಯನ್ನು ಸಾರ್ವಜನಿಕವಾದ ಭಾಷೆಯಾಗಿ ಒಪ್ಪಿ ಅದನ್ನು ಮಾತನಾಡುವುದಕ್ಕೂ ಬರೆಯುವುದಕ್ಕೂ ಕಲಿತರೆ ಹಿಂದುಗಳು ಲೋಕದ ಜನಾಂಗಗಳಲ್ಲಿ ಬಲವನ್ನೂ ಗೌರವವನ್ನೂ ಪಡೆದವರಾಗುತ್ತಾರೆ. ಅಥವಾ ದಕ್ಷಿಣದೇಶದ ದ್ರಾವಿಡರಾದ ನಾಲ್ಕೈದು ಕೋಟಿ ಜನಗಳು ಹಿಂದೀ ಭಾಷೆಯನ್ನು ಕಲಿಯದೆ ನಿಂತುಬಿಟ್ಟರೂ ಬಾಕಿ ಉಳಿಯುವ 20 ಕೋಟಿ ಹಿಂದುಗಳು ಒಂದೇ ಭಾಷೆಯನ್ನು ತಮ್ಮ ಮಾತೃಭಾಷೆಯಂತೆ ಆಚರಿಸುವುದಾದರೆ ಹಿಂದುದೇಶವು ಮುಂದಕ್ಕೆ ಮಹಾ ಪ್ರಾಬಲ್ಯವನ್ನೂ ಗೌರವವನ್ನೂ ಪಡೆದದ್ದಾಗುವುದು. ಆದರೆ ಹೀಗೆ ಪರಿಣಮಿಸುವುದು ಸಾಧ್ಯವೇ? ಅನೇಕ ಶತಮಾನಗಳಿಂದ ಬೇರೆಬೇರೆ ಭಾಷೆಗಳನ್ನು ಮಾತನಾಡುವ ಜನಗಳು ಬೇರೆಬೇರೆ ಪಂಗಡದವರಂತೆ ಪರಸ್ಪರ ಸಂಪರ್ಕವಿಲ್ಲದೆ ಪ್ರತ್ಯೇಕವಾಗಿ ಅವರವರ ಸೌಕರ್ಯಕ್ಕೆ ತಕ್ಕಂತೆ ಭಾಷೆ, ವೇಷ, ವಿದ್ಯೆ, ಗುಣಗಳಲ್ಲಿ ಅಭಿವೃದ್ಧಿಹೊಂದಿರುವರು. ನಮ್ಮ ಕನ್ನಡಿಗರೂ ತಮಿಳರೂ ತೆಲುಗರೂ ಉತ್ತರ ಹಿಂದುಸ್ಥಾನದ ಹಿಂದೀ ಭಾಷೆಯನ್ನಾಡುವ ಜನಗಳೊಂದಿಗೆ ಬಳಕೆಯನ್ನಿಟ್ಟುಕೊಂಡಿದ್ದವರಲ್ಲ. ಮೊಗಲಾಯಿ ಚಕ್ರವರ್ತಿಗಳ ಕಾಲದಲ್ಲಿ ಉತ್ತರ ಹಿಂದುಸ್ಥಾನದ ಮೇಲಂತಸ್ತಿನವರಲ್ಲಿ ಕೆಲವರು ಮುಸಲ್ಮಾನರೊಂದಿಗೆ ಸ್ವಲ್ಪಮಟ್ಟಿಗೆ ಬೆರೆತಿರಬಹುದು. ಆದರೂ ಮಧ್ಯ, ದಕ್ಷಿಣ ಹಿಂದುಸ್ಥಾನದ ಪ್ರಜೆಗಳು ಯಾವ ಸಂಪರ್ಕವನ್ನೂ ಹೊಂದದೆ ಬೇರೆ ಜನಾಂಗದವರಂತೆ ಜೀವಿಸುತ್ತಿದ್ದರು.

ಬ್ರಿಟಿಷರ ಸಾಮ್ರಾಜ್ಯವು ನಮ್ಮ ದೇಶದಲ್ಲಿ ಸ್ಥಾಪಿಸಲ್ಪಡುವುದಕ್ಕೆ ಮುಂಚೆ ಯಾತ್ರಾರ್ಥವಾಗಿ ದೇಶಾಟನವು ಬಹುಮಟ್ಟಿಗೆ ನಮ್ಮಲ್ಲಿ ರೂಢಿಯಲ್ಲಿದ್ದರೂ

...ವಸಕ್ಕೆ ತಕ್ಕ ರೀತಿಯಾಗಿರುವ ಹಡಗುಗಳೂ, ಧೂಮಶಕಟವೂ, ...ಟೆಲಿಗ್ರಾಫ್ ಮೋಟಾರ್ ರಥಗಳೆಂಬ ನವೀನ ಪ್ರಯಾಣೋಪಕರಣಗಳೂ ವಿಶೇಷ ...ಈ ಬ್ರಿಟಿಷರ ಪ್ರಭುತ್ವದಲ್ಲೇ ಹೆಚ್ಚು ನಮ್ಮ ಹಿಂದೂದೇಶದ ನಾನಾ ಭಾಗ ...ವಾಸಿಸುವ ಜನಗಳು ಪರಸ್ಪರ ವಿಶೇಷವಾಗಿ ಒಳಕೆಯನ್ನಿಟ್ಟುಕೊಳ್ಳಲು ...ದಾಯಿತು. ತೆಲುಗರೂ ತಮಿಳರೂ ೫೦ ವರುಷಗಳಿಂದೀಚೆಗೆ ಉತ್ತರ ಹಿಂದು ...ದಲ್ಲಿ ಸಂಚರಿಸುವ ಪದ್ಧತಿಯನ್ನಿಟ್ಟುಕೊಂಡಿರುವರು. ನಮ್ಮ ಕನ್ನಡಿಗರು ...೨೫ ವರುಷಗಳ ಹಿಂದೆ ಕರ್ನಾಟಕದೇಶದ ಸುತ್ತುಮುತ್ತಲಿರುವ ಪ್ರದೇಶ ...ಕೂಡ ವಿಶೇಷ ಸಂಚರಿಸಿದವರಲ್ಲ. ಈಗಲೂ ನಮ್ಮ ಗ್ರಾಮವಾಸಿಗಳು ...ಪ್ರದೇಶಗಳಿಗೆ ಸಂಚಾರಹೋಗುವವರಲ್ಲ. ಹಿಂದೂದೇಶದಲ್ಲಿ ಹೆಚ್ಚು ಜನ ...ಗ್ರಾಮವಾಸಿಗಳಾಗಿಯೇ ಇರುವರು. ಇದಲ್ಲದೆ ಭರತಖಂಡದ ಮುಖ್ಯ ...ಭಾಷೆಗಳ ಸಮೂಹಗಳು ಅನೇಕ ಕೋಟಿ ಪ್ರಜಾಬಾಹುಳ್ಯವನ್ನು ಪಡೆ ...ದು, ಆಯಾ ಭಾಷೆಗಳಲ್ಲಿ ಪೂರ್ವದಿಂದಲೂ ಮಹನೀಯರಿಂದ ರಚಿಸಲ್ಪಟ್ಟ ...ಶ್ರೇಷ್ಠವಾದ ಗ್ರಂಥಗಳು ಹೇರಳವಾಗಿ ಇರುತ್ತವೆ. ಇಂಥವುಗಳನ್ನೆಲ್ಲಾ ಮರೆ ...ತು ಬೇರೆ ಭಾಷೆಯನ್ನು ಅಭ್ಯಾಸಮಾಡಲು ಉದ್ಯುಕ್ತರಾಗುವುದು ಸುಲಭಸಾಧ್ಯ ...ವಾಗುವ ಸಂಭವವಿಲ್ಲ. ದೃಷ್ಟಾಂತವಾಗಿ, ಕನ್ನಡಭಾಷೆಯನ್ನು ಮಾತ ...ನಾಡುವವರು ಸಂಖ್ಯೆಯಲ್ಲಿ ಸುಮಾರು ಒಂದು ಕೋಟಿಯಿರುವರು. ಕನ್ನಡ ...ಗದ್ಯ ಪದ್ಯ ವ್ಯಾಕರಣ ಕಾವ್ಯ ನಾಟಕ ಕಾದಂಬರಿಗಳು ಪಂಪ, ಪೊನ್ನ, ...ನೇಮಿಚಂದ್ರ, ನ್ಯಾಯಸೇನ, ನಾಗಚಂದ್ರ, ಅಗ್ಗಳ, ವಿರೂಪಾಕ್ಷಪಂಡಿತ, ...ದೇವವ್ಯಾಸ, ಕುಮಾರ ವಾಲ್ಮೀಕಿ, ವಿಠಲನಾಥ, ಪುರಂದರದಾಸ, ಕನಕದಾಸ, ...ಸರ್ವಜ್ಞ, ಷಡಕ್ಷರಿದೇವ, ತಿರುಮಲರಾಯ, ಗುಬ್ಬಿಭಟ್ಟ, ಜೈಮಿನಿ ...ಭಾರತ ಗ್ರಂಥಕರ್ತರಾದ ಲಕ್ಷ್ಮೀಶರೇ ಮುಂತಾದ ಮಹಾಕವಿಗಳಿಂದಲೂ ಮಹಾ ...ಮುಂದಲೂ ರಚಿಸಲ್ಪಟ್ಟು, ಅವುಗಳಲ್ಲಿ ನಾವು ಅನಾದೃಶವಾದ ಭಕ್ತಿಯ ...ಅಭಿಮಾನವನ್ನೂ ಇಟ್ಟುಕೊಂಡಿರುವೆವು. ಇದರಂತೆಯೇ ಇತರ ಜನಗಳೂ ...ತಮ್ಮ ಭಾಷೆಗಳಲ್ಲಿ ಸಹಜವಾದ ಭಕ್ತಿಯನ್ನೂ, ಪ್ರೇಮವನ್ನೂ ಇಟ್ಟಿರುವರು ...ಆ ಜನಗಳನ್ನು ತಮಗೆ ಪೂರ್ವದಿಂದಲೂ ಬಂದಿರುವ ಮಾತೃಭಾಷೆಗಳನ್ನು ...ಬಿಟ್ಟು ಮಾತೃ ನೂತನಭಾಷೆಯನ್ನು ಒಪ್ಪುವಂತೆ ಮಾಡುವುದು ಅಸಾಧ್ಯ ...ವೆಂದು ಎಣಿಸುತ್ತೇನೆ. ಆದರೂ ತತ್ಕಾಲಕ್ಕೆ ಒಂದು ಭಾಷೆಯನ್ನು ಕಲ್ಲಿ ...ಸಲು ನಗರಗಳಲ್ಲಿರುವ ಪ್ರಜೆಗಳಾದರೂ ಹಿಂದೀ ಭಾಷೆಯನ್ನು ಬರೆಯು ...ವುದು ಓದುವುದಕ್ಕೂ ಕಲಿಯುವುದು ಹೀಗೆ ಕಲಿಯುವುದು ಅವರ ...ಸ್ವಾತಂತ್ರ್ಯಕ್ಕಾಗಿ ಕೊಂಡಕವಾಗಿ ಪರಿಣಮಿಸಕೂಡದು. ಹಿಂದೀ ಭಾಷೆಯನ್ನು ...ಕಡ್ಡಾಯದಂತೆ ದೇಶದ ಎಲ್ಲಾ ಜನಗಳಿಗೂ ಕಲಿಸಬೇಕೆಂದೂ, ದೇಶೀಯರು ...ಅದನ್ನು ಕಲಿಯುವುದರಿಂದ ಹೊಣೆಗಾರರೂ ಹೊಂದಿರುವ ಸಹೋದರಿಗಳೆಂದು ...ನು ಭಾವಿಸುವಂತೆ ಹಿಂದೀಭಾಷೆಯನ್ನು ಈಗ ನಾಡಿಕೆಯಲ್ಲಿರುವಂತೆಯೇ ...ಮುಂದೆ ಕಲಿಸಬೇಕೆಂದೂ ಕೆಲವರು ಅಭಿಪ್ರಾಯಪಡುವರು. ಹಿಂದೀಭಾಷೆ ...ಯನ್ನು ನಮ್ಮವರು ಪ್ರಸ್ತುತದಲ್ಲಿ ಕಲಿಯುವುದು ಅನೇಕ ಕಾರಣಗಳಿಂದ ಪ್ರಶ್ನೆ ...ಗೆ ಅತೀತವಾಗಿ ಪರಿಣಮಿಸಿದೆ. ಅದರೊಂದಿಗೆ ಹಿಂದೀ ಭಾಷೆಯನ್ನು ...ಕಲಿಯುವಂತೆ ಕಲಿಯುವುದು ಹೊರಲಾದ ಭಾರವಾಗಿ ಪರಿಣಮಿಸುತ್ತದೆ.

ಹಿಂದೂದೇಶದ ಮುಂದಣ ಗತಿಯು ಯಾವರೀತಿ ಪರಿಣಮಿಸುವುದೆಂದು ಈಗ ...ಹೇಳುವುದು ಸಾಧ್ಯವಲ್ಲ. ನಮ್ಮ ಮತ, ಆಚಾರ, ಭಾಷೆ ಮುಂತಾದ ...ವನ್ನು ಬೇರೆಬೇರೆಯಾಗಿ ಒಂದು ದೊಡ್ಡ ಮಡಕೆಯಲ್ಲಿ ಹಾಕಿ ಕಾಯಿಸುತ್ತಲಿ ...ದ್ದರೆ ...ವರೆಗೂ ಬೆರತು ಕೊನೆಗೆ ಒಂದಾಗಿಯೇ ಪರಿಣಮಿಸುವವೋ ...ವಾ ಅನ್ಯ ...ಗಳಾಗಿಯೇ ನಿಂತುಬಿಡುವವೋ ಹೇಳಲು ಈಗ ಯಾರಿಂದ ...ಆದ್ದರಿಂದ ಪ್ರಸ್ತುತದಲ್ಲಿ ನಮ್ಮ ದೇಶದ ಕ್ಷೇಮಕ್ಕೂ, ಅಭಿವೃದ್ಧಿಗೂ ...ಬೇಕಾದವುಗಳನ್ನೇ ನಾವು ಆಲೋಚಿಸೋಣ. ಹಿಂದೀ ಭಾಷೆಯು ಭರತಖಂಡದ ...ರಾಷ್ಟ್ರಕ ಭಾಷೆಯಾಗಿ ಪರಿಣಮಿಸಬೇಕೆಂಬುವುದು ಪ್ರಶಂಸಾರ್ಹವಾದರೂ ...ಕ್ಷವಾದ ಆದರ್ಶವು. ಒಂದು ರೀತಿ ಒಂದೇ ರಾಷ್ಟ್ರಭಾಷೆಗಳಿಂದಾಚೆಗೆ ...ಹೇಳುವುದಿಲ್ಲ. ಒಂದೇ ಭಾಷೆಯನ್ನಾಡುವವರಾಗಿ ಪರಿಗಣಿಸಬಹುದು. ...ಇಂಗ್ಲೆಂಡ್, ವೇಲ್ಸ್, ಸ್ಕಾಟ್ಲೆಂಡ್, ಐರ್ಲೆಂಡ್, ಈ ನಾಲ್ಕು ದೇಶಗಳ ಪ್ರಜೆ ...ಗಳು ಪೂರ್ವದಲ್ಲಿ ಪ್ರತ್ಯೇಕ ಪ್ರತ್ಯೇಕ ಭಾಷೆಗಳನ್ನಾಡುತ್ತಿದ್ದರು. ಈಗ ಅಲ್ಲಿ ...ಜನರು ಇಂಗ್ಲಿಷ್ ಭಾಷೆಯನ್ನೇ ಆಡುವರು. ಆದರೂ ಈ ಜನಗಳು ಕೊಂಚ ಜನ ...ವಾಗಿರುವುದರಿಂದಲೂ, ಆ ದೇಶಗಳು ಸಣ್ಣ ಸಣ್ಣವುಗಳಾಗಿರುವುದರಿಂದಲೂ ಹೀಗೆ ...ಒಂದಾಗಿ ಪರಿಣಮಿಸಿದ್ದು ಆಶ್ಚರ್ಯವಲ್ಲ. ನಮ್ಮ ಭರತಖಂಡವೋ ...ವಿಶಾಲವಾದ ದೇಶವು. ಇದರಲ್ಲಿರುವ ಪ್ರತಿ ಸಮೂಹವೂ ಕೋಟಿ ಸುಕೋಟಿ ...ಜನಗಳನ್ನೊಳಗೊಂಡಿದೆ. ಅನೇಕ ಶತಮಾನಗಳಿಂದ ಪ್ರತ್ಯೇಕವಾಗಿ ಅದರದ್ದೇ ...ಪ್ರತ್ಯೇಕವಾದ ನಾಗರಿಕ, ಆಚಾರ, ಚರಿತ್ರೆ, ಮತಗಳನ್ನು ಹೊಂದಿರು ...ವೆ. ಈ ಚರಿತ್ರೆಗೂ, ಮತಕ್ಕೂ, ನಾಗರಿಕಕ್ಕೂ ಸಂಬಂಧಪಡುವ ಆಯಾ ಭಾಷೆ ...ಗಳು ಬೆಳೆದಿರುವುವು. ಇದನ್ನೆಂದು ಹೊಸ ಭಾಷೆಯನ್ನು ಅನುಸರಿಸಬೇಕೆಂಬು ...ದು ದೇಶಭಕ್ತರ ಆದರದಿಂದ ಕೂಡಿದ ಮನೋಗತವಾಗಿದ್ದರೂ ಆಯಾ ಸಮೂ ...ಹದ ಅಭಿವೃದ್ಧಿಯ ಕಾರ್ಯಕ್ಕೆ ಸಹಕಾರಿಯಾದದ್ದಲ್ಲ.

ಬಾತ್ಮೀದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಬೇನಾಮಿ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ನಿಜವಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಕಡೆಗಳಲ್ಲಿ ಬರೆಯಕೂಡದು; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮ ವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧ ವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ನಂಬಿಕೆ ಕಡಮೆ. ಬಾತ್ಮಿಗಳು ಬಹಳ ಸಂಕ್ಷೇಪವಾಗಿರಬೇಕೆಂದು ಅಪೇಕ್ಷಿ ಸುತ್ತೇವೆ.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ವೆಂಬುದನ್ನು ಸಕಲರೂ ತಿಳಿಯತಕ್ಕದ್ದು.

ನಾವು ಕನ್ನಡಿಗರ ಪಂಗಡ ಮೊಕದ್ದಮೆಯನ್ನು ವಿವರಿಸುವಲ್ಲಿ ಅಪರಾಧಿ ಗಳಲ್ಲಿರುವವರೊಳಗೆ ಮಾರ್ಕರ್ವಾಡಿಗಳು ಕೆಲವರಿದ್ದಾರೆಂದು ಕಾಣಿಸಿದ್ದೆವು ...ವಾಚಕರಲ್ಲಿ ಕೆಲವರು "ಮಾರ್ಕರ್ವಾಡಿಗಳು" ಎಂಬ ಪದವು ನಿಂದ್ಯ ...ವೆಂದೂ, "ಕರ್ನಾಟಕ ಬ್ರಾಹ್ಮಣರು" ಎಂದು ಬರೆಯಬೇಕಾಗಿತ್ತೆಂದೂ ...ಬರೆದರು. ಆ ಮೊಕದ್ದಮೆಯ ವಿಸ್ತಾರವಾದ ವಿವರಗಳನ್ನು ತಿಳಿಸಬೇಕೆಂಬುವುದು ...ನಮ್ಮ ಉದ್ದೇಶವೇ ಹೊರತು ಆ ಮೂಲಕ ಯಾರಿಗೂ ಯಾವ ವಿಧವಾಗಿಯೂ ...ಮಾನಹಾನಿಯನ್ನಾಗಲಿ ಮನೋವ್ಯಥೆಯನ್ನಾಗಲಿ ಉಂಟುಮಾಡಬೇಕೆಂಬುವುದು ...ನಮ್ಮ ಅಭಿಮತವಲ್ಲವೆಂದು ಸ್ಪಷ್ಟಪಡಿಸುತ್ತೇವೆ. —ಎಡಿ.]

ಕರೆಸ್ಪಾಂಡೆನ್ಸ್.

ವೀರಶೈವರೂ ಏಕಮತ್ಯವೂ.

ಸ್ವಾ

ಈ ಮತಾವಲಂಬಿಗಳು ವಿದ್ಯಾಹೀನರಾಗಿರುವುದರಿಂದ ಪ್ರಕೃತಕ್ಕೆ ಬರಲು ...ಇಲ್ಲವಿರುವುದಕ್ಕಾಗಿ ವಿಷಾದಪಡಬೇಕಾಗಿದೆ. ಸದ್ಯದಲ್ಲಿ ಏಕಮತವೆಂಬು ...ದು ಕಾಣುವುದಿಲ್ಲ. ಹೊಸದುರ್ಗದ ತಾಲ್ಲೂಕು ಗವೀ ರಂಗಾಪುರದ ...ಲ್ಲಿ ಈ ಮತದ ಮುಖಂಡ ಮಹನೀಯರುಗಳು ಸುಮಾರು ನಾಲ್ಕೈದು ವೇಳೆ ಮೀಟಿಂಗ್ ನಡಿಸಿ ಸಾವಿರಾರು ರೂಪಾಯಿ ಖರ್ಚುಮಾಡಿ ಯಾವುದೊಂದು ಫಲಿತಾಂಶವೂ ಇಲ್ಲದೆ ಇರೋಣದರಿಂದಲೂ, ಈ ಸಂಘದ ಮುಖ್ಯೋದ್ದೇಶವೇ ನೆಂಬುದೂ ಮತಾವಲಂಬಿಗಳಲ್ಲಿ ಅನೇಕರಿಗೆ ತಿಳಿಯದೇ ಇರೋಣದರಿಂದಲೂ ಮತ್ತು ಇದರ ಫಲಿತಾಂಶವಿಂಥದ್ದೆಂದು ತಿಳಿಯದೇ ಇರೋಣದರಿಂದಲೂ ಇವ ರಲ್ಲಿ ಏಕಮತವಿಲ್ಲವೆಂಬುದು ವ್ಯಕ್ತವಾಗುತ್ತದೆ. ಇದಲ್ಲದೆ ಹಳ್ಳಿಗಳಲ್ಲಿರುವ ವಿದ್ಯಾವಿಹೀನರಂತೆ ಮತವಾತ್ಸಲ್ಯಶೀಲರಾದ ಒಬ್ಬಿಬ್ಬರು ವಿದ್ಯಾವಂತರು ದೇಶಾ ಭ್ಯುದಯಕ್ಕೆ ವಿದ್ಯಾಪ್ರಚುರ ಪ್ರೋತ್ಸಾಹವನ್ನುಂಟುಮಾಡದೆ ತಟಸ್ಥರಾಗಿರು ವುದೇ ಮತ್ತೊಂದು ಕಾರಣವಾಗಿರುತ್ತದೆ. ಪ್ರಸ್ತುತದಲ್ಲಿ ಬೇಲೂರು ತಾಲ್ಲೂ ಕು ನಮ್ಮ ಎಲಹಂಕದ ಮಠದ ಶ್ರೀ ಶಿವನಂಜುಂಡ ದೇಶಿಕೇಂದ್ರ ಮಹಾಸ್ವಾ ಮಿಗಳವರು ವಿದ್ಯಾಪ್ರೋತ್ಸಾಹಕ್ಕೆ ತಕ್ಕ ಏರ್ಪಾಡುಮಾಡಿ ನಮ್ಮ ಪ್ರಭುಗಳವ ರಾದ ಶ್ರೀಮನ್ ಮಹಾರಾಜರವರ ಹಸ್ತದಿಂದ ಚಿಕ್ಕಮಗಳೂರಿನಲ್ಲಿ ಈ ಫೆಬ್ರ ವರಿ 7ನೇ ತಾ. ವೀರಶೈವ ವಿದ್ಯಾರ್ಥಿ ನಿಲಯವನ್ನು ಕಟ್ಟುವುದಕ್ಕೆ ಅಸ್ತಿಭಾರ ಶಿಲೆಯನ್ನು ಹಾಕಿಸಿರುವುದೂ, ಆ ನಮ್ಮ ಪ್ರಭುಗಳು ದಯಪಾಲಿಸಿರುವ ಅಪ್ಪ ಣೆಯೂ, ಆ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸುವುದಕ್ಕೆ ನಾಲ್ಕು ಸಾವಿರ ರೂಪಾಯನ್ನು ದಯಪಾಲಿಸಿರುವುದೂ ನೋಡಿದರೆ ಬಡ ಶೈವಪ್ರಜೆಗಳಾದ ನಮ್ಮ ಮೇಲೆ ಅವರಿಗೆ ಇರುವ ವಾತ್ಸಲ್ಯವು ವ್ಯಕ್ತವಾಗುತ್ತದೆ. ಈಗ ನಮ್ಮ ಎಲಹಂ ಕದ ಶ್ರೀ ಸ್ವಾಮಿಗಳವರು ಪ್ರಜೆಗಳಿಂದ ಚಂದಾ ವಸೂಲ್ಮಾಡಿ ತಾವೂ ಸಹಾಯ ಮಾಡಿ ನಮ್ಮ ದಯಾಳುಗಳಾದ ಸರ್ಕಾರದವರಿಂದಲೂ ಸಹಾಯಹೊಂದಿ ವಿದ್ಯಾ ಭಿವೃದ್ಧಿಗೆ ತಕ್ಕ ಏರ್ಪಾಡು ಮಾಡಿರುವಂತೆ ನಮ್ಮ ಶ್ರೀ ಸ್ವಾಮಿಗಳವರ ಮೇಲ್ಪ ಙ್ತಿಯನ್ನನುಸರಿಸಿ ನಮ್ಮ ಗೋಟಿಕೆರೆ ಚರಪಟ್ಟಾಧ್ಯಕ್ಷ ಶ್ರೀ ಸ್ವಾಮಿಗಳವರೂ, ಯಳನಡು ಶ್ರೀ ಸ್ವಾಮಿಗಳವರೂ, ಮಹಾ ಸಾಧುಪ್ರಭು ಗುಬ್ಬಿ ಹೊಸಳ್ಳಿ ಹೊನ್ನಸ್ವಾಮಿ ಅರಸಿನವರೂ, ಮ ನಾಡಿಗ ಶಿದ್ರಾಮೇಗೌಡರವರೂ, ಇನ್ನೂ ಮತಾವಲಂಬಿಗಳಾದ ಮಹನೀಯರುಗಳೆಲ್ಲರೂ ದೇಶಾಭ್ಯುದಯಕ್ಕೆ ತಕ್ಕ ವಿದ್ಯಾ ಪ್ರಚುರಕಾರ್ಯವನ್ನವಲಂಬಿಸಿ ನಮ್ಮ ದಯಾಳುಗಳಾದ ಮೈಸೂರು ಸರ್ಕಾರದ ವರ ಸಹಾಯದಿಂದ ಅಭಿವೃದ್ಧಿಗೆ ತರಬಹುದೆಂದು ನಂಬಿರುವ

ಮತಾಭಿಮಾನಿ.

ಪಂಚಮಾ ಸ್ಕೂಲುಗಳ ವಿಚಾರ.

ಅಯ್ಯಾ

ತಮ್ಮ ೧ ನೇ ತಾ ಪತ್ರಿಕೆಯಲ್ಲಿ ದೊಡ್ಡಬಳ್ಳಾಪುರದ ಪಂಚಮಾ ಸ್ಕೂಲ್ ಕೆಟ್ಟಿರುತ್ತೆಂದೂ.- ಈ ಸ್ಕೂಲುಗಳಿಗೆ ತಕ್ಕ ಮೇಲ್ವಿಚಾರಣೆಯೂ ಪ್ರೋತ್ಸಾ ಹವೂ ಇಲ್ಲದಿದ್ದರೆ ಅವು ಅಭಿವೃದ್ಧಿಗೆ ಬರಲಾರವು" ಎಂದೂ ಇದ್ದದ್ದನ್ನು ಓದಿದೆ. ಪತ್ರಿಕೆಗಳಲ್ಲಿ ಪ್ರಕಟಿಸುತ್ತಿರುವುದರಿಂದಲಾದರೂ ಪಂಚಮಾ ಸ್ಕೂಲುಗಳು ಕಷ್ಟಪಟ್ಟು ಕೆಲಸ ಮಾಡುವುವೆಂದು ಯೋಚಿಸುವುದು ಯುಕ್ತವೇ ಸರಿ. ತಿನ್ನುವ ಉಪ್ಪಿಗೆ ದ್ರೋಹಮಾಡುವುದು ಯಾರಿಗೂ ನ್ಯಾಯವಲ್ಲ. ಆ ಮಾಸ್ಟರು ಯಾತ ಕ್ಕಾಗಿ ದಾಗ ಮಾಡುತ್ತಾರೋ ತಿಳಿಯದು. ಈಗಲೂ ಅವರು ಎಚ್ಚರಗೊಳ್ಳ ದಿದ್ದರೆ ಉತ್ತಮವಾಗಿರುತ್ತೆ. ಪಂಚಮಾ ಬಡಹುಡುಗರಿಗೆ ಸ್ಲೇಟು ಪುಸ್ತಕಗ ಳನ್ನು ಮುಫತ್ ಕೊಡುತ್ತಾರೆ. ಅನೇಕರಿಗೆ ಸ್ಕಾಲರ್‌ಷಿಪ್ಪುಗಳು ದೊರಕಿವೆ. ಇದಕ್ಕಾಗಿ ಒಂದು ಕಮಿಟಿ ಏರ್ಪಾಡಾಗಿರುತ್ತೆ. ಇವರಿಗಾಗಿಯೇ ಮೈಸೂರಲ್ಲಿ ಒಂದು ಬೋರ್ಡಿಂಗ್ ಸ್ಕೂಲು ತೆರೆಯಲ್ಪಡುವುದೆಂದೂ, ಅಲ್ಲಿ ಇಷ್ಟಪಟ್ಟು ಓದಲು ಹೋಗುವವರಿಗೆ ಆಹಾರ ಉಡುಪುಗಳನ್ನು ಮುಫತ್ ಕೊಡುವುದಲ್ಲದೆ ಇತರ ಕಸುಬನ್ನೂ ಕಲಿಸಿ ಕೊಡುವುದಾಗಿಯೂ ಮುಖಂಡರುಗಳು ಸಾರಿದರಾಗಿರುವವು. ಪ್ರಭುಸರಕಾರವು ಇವರಿಗಾಗಿ ಇಷ್ಟು ಮಾಡುತ್ತಿರುವುದಲ್ಲದೆ ಇನ್ನೂ ಮಾಡಬೇಕಾದ ಪ್ರೋತ್ಸಾಹವನ್ನು ಪರ್ಯಾಲೋಚನೆ ಮಾಡುತ್ತಿರುವುದು. ಇನ್ನೆಷ್ಟು ಪ್ರೋತ್ಸಾ ಹ ಬೇಕೋ ತಿಳಿಯದು.--ಒಬ್ಬ ಪಂಚಮಾ ಸ್ಕೂಲ್ ಮಾಸ್ಟರು ಎಂದಿಗೂ ಸ್ವತಂತ್ರ ನಲ್ಲ. ಇವನ ಮುಖ್ಯ ಮೇಲ್ವಿಚಾರಣಾಕರ್ತರು ಮೂವರಿರುವರು. ಇವರು ತಮ್ಮ ಪೌರನ್ನು ಸಲಿಸಾಗಿ ಚಲಾಯಿಸಿ ಬಿಡುತ್ತಾರೆ. ಇತರ ಕೆಲವು ಡಿಪಾರ್ಟ್ ಮೆಂಟುಗಳೂ ವಿದ್ಯಾಭಿವೃದ್ಧಿ ವಿಷಯದಲ್ಲಿ ತನಗೆ ಕುಮ್ಮಕ್ಕಾಗಿರಬೇಕೆಂದು ಈ ಇಲಾಖೆ ಅಪೇಕ್ಷಿಸುತ್ತಿದೆ. ಅವಕಾಶವಾದಾಗಲೆಲ್ಲಾ ಸಬ್ ಅಸಿಸ್ಟೆಂಟ್ ಸರ್ಜನ್‌ರು ಬಾಲಕರ ಆರೋಗ್ಯ ವಿಷಯ ತನಿಖೆಮಾಡಲು ಸ್ಕೂಲಿಗೆ ಬರುತ್ತಾರೆ. ಇವರೆಲ್ಲಾ ಸಾಲದೆ ಆಯಾ ಊರಿನ ಎ. ವಿ. ಮೊದಲಾದ ಸ್ಕೂಲುಗಳ ಹೆಡ್ ಮಾಸ್ಟರುಗಳು ಪಂಚಮಾ ಸ್ಕೂಲುಗಳ ಮೇಲ್ವಿಚಾರಣೆ ಮಾಡಬೇಕೆಂತಲೋ, ಅಥವಾ ಆಯಾ ಊರಲ್ಲಿ ಸಂಚರಿಸುವ ಸ್ಯಾನಿಟರಿ ಇನ್‌ಸ್ಪೆಕ್ಟರು, ಅಮಲ್ದಾರರು, ಪಟೇಲ್ ಶಾನು ಭೋಗರು, ತೋಟ ತಳವಾರ ಮೊದಲಾದವರುಗಳು ಇವರುಗಳು ಸೂಪರ್‌ವೈಸರು ಗಳಾಗಿರಬೇಕೆಂತಲೋ ಹೇಗೋ ನಮ್ಮ ಬಾತ್ಮೀದಾರರು ಅಭಿಪ್ರಾಯ ಪಡುವುದು ವಾಗಿ ತೋರುತ್ತದೆ. ತನ್ನ ಕರ್ತವ್ಯವನ್ನು ನಿರ್ವಂಚನೆಯಿಂದ ಮಾಡುವ ಪಂಚ ಮಾ ಸ್ಕೂಲ್ ಮಾಸ್ಟರು ಇವರ ಬಳಿಗೆಯಿಂದ ಕೊಡಹೊಂದಲು ಸಂದೇಹ ವಿಲ್ಲ. ಇತರ ಇನ್ನೂ ಅನೇಕ ಒಬ್ಬೊಬ್ಬ ಮಾಸ್ಟರನ್ನುಳ್ಳ ಸ್ಕೂಲುಗಳನ್ನು ಬಿಟ್ಟು ಪಂಚಮಾ ಸ್ಕೂಲುಗಳಿಗೇನೇ ಈಗಿರುವುದಕ್ಕಿಂತಲೂ ಮೇಲ್ವಿಚಾರಣೆ ಬೇಕೆಂಬುವುದು ಯಾವ ನ್ಯಾಯ? ಯಾವದು ಕೆಟ್ಟದೆಯೋ ಅದು ಒಳ್ಳೆ ದಾಗಲು ಸಲಹೆ ಕೊಡಬೇಕು. ಅದರ ಜೊತೆಗೆ ಎಲ್ಲವನ್ನೂ ಸೇರಿಸುವುದು ಧರ್ಮವಲ್ಲ. ಮುಂದಾದರೂ ನಮ್ಮ ಪ್ರಿಯಮಿತ್ರರಾದ ದೊಡ್ಡಬಳ್ಳಾಪುರದ ಬಾತ್ಮೀದಾರರು ಈ ಬಾ ಬರವಣಿಗೆಗೆ ಮನಕೊಡಲಾರರೆಂದು ನಂಬಿದ್ದೇನೆ.

ಒಬ್ಬ ಪಂಚಮಾ ಸ್ಕೂಲ್ ಮಾಸ್ಟರು.

ಬೆಂಗಳೂರು ಕೋಆಪರೇಟಿವ್ ಸೊಸೈಟಿ

ಅಯ್ಯಾ,

ಈ ಸಂಘವು ಶುರುವಾಗಿ ಹೆಚ್ಚು ಸುಮಾರು ೮-೯ ವರುಷವಾಗುತ್ತಾ ಬಂತು. ಇದು ಶುರು ಆದ ಕೊಂಚ ದಿವಸ ಮ|| ರಾಮಸ್ವಾಮಯ್ಯನವರು ಸೆಕ್ರೆಟರಿ ಯಾಗಿದ್ದರು. ಅವರು ಕೆಲಸ ನೋಡುವಾಗ್ಗೆ ಹೆಚ್ಚು ಕಮ್ಮಿ ಇಲ್ಲದೆ ವ್ಯಾಪಾರ ನಡೆಯುತ್ತಾ ಇತ್ತು. ಈಚೆಗೆ ಅವರು ಬಿಟ್ಟ ತರುವಾಯ ೫-೬ ನೇ ಸೆಕ್ರೆಟರಿ ಗಳ ಕಾಲದಲ್ಲಿ ಸೊಸೈಟಿಯ ಕಾರುಬಾರುಗಳು ಅಷ್ಟೇನೂ ಸಮರ್ಪಕವಾಗಿ ನಡೆಯಲಿಲ್ಲವೆಂದು ಹೇಳಿದರು. ಈಚೆಗೆ ಮ|| ಸುಬ್ಬರಾಯರು ಸೆಕ್ರೆಟರಿಯಾಗಿ ಬಂದ ಲಾಗಾಯಿತು ಸೊಸೈಟಿಯು ಅಭಿವೃದ್ಧಿಗೆ ಬಂದದ್ದು ನೋಡಿದರೆ ಸೊಸೈ ಟಿಯನ್ನೂ ಮತ್ತು ಸುಬ್ಬರಾಯರನ್ನೂ ಎಷ್ಟು ಕೊಂಡಾಡಿದಾಗ್ಯೂ ತೀರದು. ಅಲ್ಲದೆ ಸೊಸೈಟಿಯಿಂದ ಮೈಸೂರು ಸಿಮೆಯ ಪ್ರಜೆಗಳಿಗೆ ವಿಶೇಷ ಪ್ರಯೋಜನ ವಿದೆ ಎಂಬುದನ್ನು ಸೂಚಿಸಿತ್ತು. ಅವರ ತರುವಾಯ ಮ|| ಶ್ರೀಕಂಠಯ್ಯನವರು ಸೆಕ್ರೆಟರಿ ಕೆಲಸಕ್ಕೆ ಬಂದು ಮ|| ಸುಬ್ಬರಾಯರು ಮಾಡಿದ್ದ ಏರ್ಪಾಡುಗಳಿಗೆ ನ್ಯೂನತೆ ಬರದಂತೆಯೂ ಬಡವರಿಗೆ ಆಧಾರವಾಗಿಯೂ ಸೊಸೈಟಿಯು ಮೇಲ್ಕೆ ಉತ್ಥಾನ ಇಲ್ಲದಂತೆ ತಾವೇ ಖುದ್ದಾಗಿ ಜವಾಬ್ದಾರಿ ವಹಿಸಿಕೊಂಡು ಬಜಾರು ದರಿಗೆ ಧಾರಣೆ ವಿಚಾರಿಸಿ ವ್ಯಾಪಾರಸ್ಥರಿಗಿಂತ ಕಡಿಮೆ ಬೆಲೆಗೆ ಮಾರಿಸುವದಲ್ಲದೆ ಉತ್ಕೃಷ್ಟವಾದ ಸಾಮಾನುಗಳನ್ನು ಸರಿಯಾದ ಅಳತೆ ತೂಕದಿಂದ ಮೆಂಬರು ಗಳಿಗೆ ತುಂಬಾ ನಷ್ಟವನ್ನು ತೋರಿಸುತ್ತಾ ಇದ್ದರು ಮತ್ತು ಕಚೇರಿ ಹೊತ್ತು ವಿನಾಯಿತಿ ಸದಾ ಕಾಲವೂ ಸೊಸೈಟಿಯಲ್ಲಿಯೇ ಕೆಲಸ ಮಾಡುತ್ತಾ ಜನಗಳ ಪ್ರೀತಿಯನ್ನು ಮತ್ತು ಸೊಸೈಟಿಯ ವೃದ್ಧಿಯನ್ನೂ ದಿನರಾತ್ರಿಯಲ್ಲಿಯೂ ಪುರ ಸತ್ತು ಇಲ್ಲದಂತೆ ನೋಡುತ್ತಿದ್ದರು. ಈಚೆಗೆ ಇವರು ಯಾವ ಕಾರಣವೋ ಸೆಕ್ರೆ ಟರಿ ಕೆಲಸವನ್ನು ಬಿಟ್ಟು ಇರುತ್ತಾರೆ. ಈಗ ರಿಜಿಸ್ಟ್ರಾರ್ ಡೆಪ್ಯುಟಿ ರಿಜಿಸ್ಟ್ರಾರ್ ರಾದ ಮ|| ಎ. ನಾರಾಯಣಸ್ವಾಮಿ ನಾಯುಡುರವರು ಮತ್ತು ಎಟಿ ಪ್ರಾಪ್ರೈಟರ್ ಆಗಿದ್ದು ಪೆನ್‌ಷನ್ ಪಡೆದಿರುವ ಮ|| ಸಿ. ರಾಮರಾಯರು ಸೆಕ್ರೆಟರಿಗಳಾಗಿ ನೇಮಕವಾಗಿದ್ದಾರೆ. ಇವರು ಬಹಳ ಐಶ್ವರ್ಯವಂತರು ಮತ್ತು ಭಾರಿ ಉದ್ಯೋಗದಲ್ಲಿದ್ದವರು. ಇವರು ಪೇಟೆಯಲ್ಲಿ ಧಾರಣೆ ವಿಚಾರಿಸುವರಲ್ಲ. ಮತ್ತು ತಿರಗಲು ಹೋಗತಕ್ಕವರಲ್ಲ. ಅಲ್ಲದೆ ಭಾರೀ ಉದ್ಯೋಗದಲ್ಲಿದ್ದು ವಿಶ್ರಾಂತಿ ಸುಖವನ್ನು ಅನುಭವಿಸುವ ಕಾಲದಲ್ಲಿ ಬಡವರಿಗೆ ಆಧಾರವಾಗಿ ಇರು ವ ಸೊಸೈಟಿಯಲ್ಲಿ ಕೆಲಸವನ್ನು ನೋಡಲು ಆಗುವದಿಲ್ಲ. ಮತ್ತು ಸೊಸೈಟಿಯೇ ತಮ್ಮ ಮನೆಯ ವಿಚಾರವೆ ಎಂದು ತಿಳಿದು ಮೆಂಬರುಗಳಿಗೆ ಬರತಕ್ಕವರು ಬೆಳಿಗ್ಗೆ ಯಾಗಾಯಿತು 11 ಘಂಟೆವರಿವಿಗೂ ಕಾದಾಗ್ಯೂ ಸೆಕ್ರೆಟರಿ ಸಾಹೇಬರು ಬರು ವದೇ ಇಲ್ಲ. ಕಾದುಕಾದು ಹೊರಟು ಹೋಗಬೇಕಾಗಿದೆ. ಅಲ್ಲದೆ ಸಾಮಾನು ಗಳನ್ನು ಸೊಸೈಟಿಯ ಕ್ಲರ್ಕುಗಳು ಮತ್ತು ಜವಾನರು ತರುವ ಏರ್ಪಾಡು ಮಾಡಿರು ತ್ತಾರೆ. ಇಂಥಾದರೆಲ್ಲಾ ಹೋಗಿ ವ್ಯಾಪಾರ ತರುವದಾದರೆ ವ್ಯಾಪಾರಸ್ಥರಿಗೆ ಮೆಂಬರುಗಳಿಗೆ ಸೊಸೈಟಿಯಲ್ಲಿ ಒಳ್ಳೇ ಸರಕು ಅನುಕೂಲವಾಗಿ ಎಕ್ಕುತ್ತೆಂಬ ಹೆಸರಿಗೆ ಕುಂದಕಬರಬಹುದು. ಘನವನ್ನು ಹೊಂದಿದ ಡೈರೆಕ್ಟರುಗಳು ಇದನ್ನೆ ಲ್ಲಾ ವಿಚಾರಿಸಿ ಸೆಕ್ರೆಟರಿಗಳು ಸೊಸೈಟಿಯಲ್ಲಿ ಇರುವಂತೆಯೂ, ಸಾಮಾನುಗಳ ನ್ನು ಸೆಕ್ರೆಟರಿಯವರೇ ತರುವಂತೆಯೂ ಏರ್ಪಾಡು ಮಾಡಿ ಸೊಸೈಟಿಯು ಅಭಿವೃ ದ್ಧಿಗೆ ಬರುವಂತೆಯೂ, ಮೆಂಬರುಗಳಿಗೆ ಸುಲಭವಾಗಿ ಸಾಮಾನುಗಳು ಸಿಕ್ಕು ವಂತೆಯೂ, ಸೊಸೈಟಿಗೆ ಕೆಟ್ಟ ಹೆಸರು ಬಾರದಂತೆಯೂ ಮಾಡಿಸುತ್ತಾರೆಂದು ಕೋರುತ್ತೇನೆ.

ಸೊಸೈಟಿಯ ಮೆಂಬರು ಬಸಪ್ಪ.

ತಾಲ್ಲೂಕು ವರ್ತಮಾನಗಳು.

ಚನ್ನರಾಯಪಟ್ಟಣ.—ಇಲ್ಲಿ ಬಿಸಿಲ ತಾಪವೂ, ದನಗಳ ಧಾರಣಿಯೂ ದಿನೇ ದಿನೇ ಹೆಚ್ಚುತ್ತಲೇ ಇದೆ.—ಈ ನಾಮದ 3 ನೇ ತಾ ಸೋಮವಾರ ಹಾಸನ ಡಿಸ್ಟ್ರಿಕ್ಟ್ ಡೆ|| ಕಮಿಷನರ್ ಮ|| ಅಪ್ಪಣ್ಣಯ್ಯಂಗಾರ್ರು ವಿವೇಕಾ ನಂದ ಸ್ವಾಮಿಗಳ ವರ್ಷ ವರ್ಧಂತಿ ಕಟ್ಟಲೆ ಪ್ರಯುಕ್ತ ಈ ಊರಿನಲ್ಲಿ 200-300 ಜನರಿಗೆ ಅನ್ನದಾನ ಬಡಜನಗಳಿಗೆ ಬಟ್ಟೆ ವಗೈರೆ ಕೊಡಿಸಿ ಜನಗ ಳನ್ನು ತುಂಬಾ ಸಂತೋಷಪಡಿಸಿರುತ್ತಾರೆ. ಈ ಜನಗಳ ಜೊತೆಯಲ್ಲಿ ಕನ್ನಂಬಾ ಡಿಗೆ ಕೆಲಸಕ್ಕಾಗಿ ಹೋಗುವುದಕ್ಕೆ ಬಂದಿದ್ದ ಕೂಲಿಜನಗಳನ್ನೂ ಸೇರಿಸಿ ಊಟ ಮತ್ತು ಬಟ್ಟೆಗಳಿಂದ ತೃಪ್ತಿಪಡಿಸಿರುತ್ತಾರೆ. ಇವರ ಔದಾರ್ಯವನ್ನು ನೋಡಿ ಜನಗಳೆಲ್ಲಾ ಕೊಂಡಾಡುತ್ತಿದ್ದಾರೆ.

ಹಾಸನ.—ಇಲ್ಲಿನ ವೆಸ್ಲಿಯನ್ ಮಿಷನ್ ಕೋಡ್ ಮತ್ತು ಪಾಟಿ ಬಾಲಿಕಾ ಪಾಠಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಸಾಲಿನ ಬಹುಮಾನಗಳು ಕೊಡಲ್ಪಟ್ಟವು. ಮಿ|| ಪರೇರಾಲ್ ಫೋರೆಸ್ಟರು ದಯಮಾಡಿ ಆ ಸಭೆಯ ಅಗ್ರಾಸನವನ್ನು ವಹಿಸಿದ್ದರು. ಈ ಸಂತೋಷಕೂಟಗಳು ಬಹು ತೃಪ್ತಿಕರವಾಗಿ ಜರುಗಿದವು. ಈಗ್ಗೆ ೬ ವರ್ಷಗಳಿಂದ ಸೆಂಟ್ರಲ್ ಕೋಆಪರೇಟಿವ್ ಸೊಸೈಟಿ ಎಂಬ ಒಂದೇ ಸಂಘವಿತ್ತು. ಈಚೆಗೆ ಇನ್ನೂ ಎರಡು ಸೊಸೈಟಿಗಳು ಏರ್ಪಟ್ಟವು. ಈಗ ಮತ್ತೊಂದನ್ನು ಏರ್ಪಡಿಸಲು ಯೋಚನೆಗಳು ನಡೆಯುತ್ತಲಿವೆ. ಇದಕ್ಕಿಂತ ಪ್ರಾಮುಖ್ಯವಾದ ಒಂದನ್ನೇ ಒಳ್ಳೇ ಅಭಿವೃದ್ಧಿಗೆ ತರುತ್ತಾ, ವ್ಯಾಪಾರ ಕೆಗಾ ರಿಕೆಗಳ ಉದ್ದಿಷ್ಟ ಪ್ರತ್ಯೇಕ ಶಾಖೆಗಳನ್ನು ಸ್ಥಾಪಿಸಿಕೊಂಡು ಸರ್ವತ್ರ ಏಕಮತ ಬೆಳೆವಂತೆ ಮಾಡಿದ ಪಕ್ಷದಲ್ಲಿ ಕೋಆಪರೇಟಿವ್ ಸೊಸೈಟಿಗಳಿಂದ ಲಭ್ಯವಾಗ ಬೇಕಾದ ಪರಸ್ಪರ ಸ್ನೇಹಭಾವವೂ, ಹಿತಕಾಂಕ್ಷೆಯೂ, ಕ್ರಮೋನ್ನತಿ ವೃದ್ಧಿಯೂ ಹೊಂ ದುತ್ತಾ ಬರುವುದಲ್ಲವೇ?—ಸರ್ಕಲ್ ಇನ್‌ಸ್ಪೆಕ್ಟರವರು ಬಂದು ಸ್ಕೂಲುಗ ಳನ್ನು ಪರೀಕ್ಷೆ ಮಾಡುತ್ತಿದ್ದಾರೆ. ಇತರ ಶಾಲೆಗಳನ್ನೂ ನೋಡುತ್ತಾರೆಂದು ತೋರುತ್ತದೆ.—ಮುತ್ತಿಗೆ ಎಂಬ ಗ್ರಾಮದಲ್ಲಿ ಒಬ್ಬ ರೈತನ ಮನೆಯಲ್ಲಿ ರಾಗಿ ಯನ್ನು ಆಹಾರಕ್ಕೆ ಉಪಯೋಗಿಸಿದ್ದರಲ್ಲಿ ಒಬ್ಬ ಹೆಂಗಸು ಹೊರತು ಮಿಕ್ಕವ ರಿಗೆಲ್ಲಾ ವಾಂತಿಭೇದಿಯಾಗಿ ಚಿಕಿತ್ಸೆಯಲ್ಲಿದ್ದಾರೆ. ಆ ರಾಗಿಯನ್ನು ಪರೀಕ್ಷೆ ಗಾಗಿ ಬೆಂಗಳೂರಿಗೆ ಕಳುಹಿಸಿರುವರು.

ಬೆಂಗಳೂರು ತಾ|| ಚಿಕ್ಕಬಾಣಾವಾರ.—ಕಳೆದ ರಥಸಪ್ತಮಿ ಹಬ್ಬದ ದಿನ ಈ ಗ್ರಾಮದ ಬ್ರಾಹ್ಮಣರ ಬೀದಿಯಲ್ಲಿರುವ ಈಶ್ವರ ದೇವರ ರಥೋತ್ಸವವನ್ನು ಬಹಳ ವಿಜೃಂಭಣೆಯಾಗಿ ನಡಿಸಿದ್ದು ಅಲ್ಲದೆ ಅದೇ ದಿನ ನಾಲ್ಕು ಚಕ್ರಗಳು ಕಟ್ಟಿ ಮೇಲೆ ಅನೇಕ ಚಿತ್ರಕೆಲಸದಿಂದ ನಮ್ಮ ಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ ಮಹಾರಾಜರವರ ಫೋಟೋಗಳನ್ನು ಇಟ್ಟು ಬಾಕಿ ಫೋಟೋಗಳನ್ನು ಕೆಳಕ್ಕೆ ಇಟ್ಟು ಪುಸ್ತಕಗಳಿಂದ ಬಹಳ ಸಮಾ ಜೆಯಾಗಿ ಅಲಂಕಾರವಮಾಡಿ ಉತ್ಸವಗಳನ್ನು ಮಾಡಿದ್ದಕ್ಕಾಗಿ ಇದೇ ಮೊದಲನೆ ಯದಾದ್ದರಿಂದ ಅನೇಕ ಜನಗಳು ಸಂತೋಷಭರಿತರಾದರು.—ಮೊನ್ನೆ ಇದ ತಾರೀ ಖಿನಲ್ಲಿ ಈ ಗ್ರಾಮದ ಸಂತೆಬೀದಿ ಬಳಿ ಇರುವ ಹಾಳುಮಂಟಪದ ಹತ್ತಿರ ಈ ಊರಿನ ಕೆಲವು ಹುಡುಗರು ಚೆಂಡಾಡುತ್ತಿರುವಾಗ್ಗೆ ಯಾವನೋ ಒಬ್ಬನಿಂದ ಕಲ್ಲಿನ ಮಂಟಪದ ಮೇಲೆ ಚೆಂಡು ಬೀಳಲು ಅದನ್ನು ತೆಗೆಯಲು ಶ್ರೀನಿವಾ ಸಯ್ಯ ಎಂಬ ೧೫ ವರುಷದ ಹುಡುಗನು ಮಂಟಪದ ಮುಂಭಾಗದ ಕಲ್ಲು ಎತ್ತ ರದಲ್ಲಿ ಇದ್ದ ಆರು ಅಡಿ ಉದ್ದ ಅದರ ಅಡಿಯಿಂದ ಸ್ವಲ್ಪ ಜರುಗಿದ್ದ ಕಲ್ಲು ಮೇಲಕ್ಕೆ ಹಾರಿ ಹಿಡಿಯಲು ಅದು ಜಾರಿಬಂದು ತಕ್ಷಣ ಕೈಬಿಟ್ಟ ಈ ಹುಡು ಗನು ಬೋರ್ಗಲು ಅವನ ಬೆನ್ನಿನ ಮೇಲೆ ಬಿದ್ದು ಮೂರು ತುಂಡಾಗಲು ಇವನಿಗೆ ಜ್ಞಾನತಪ್ಪಿ ಕೆಳಗೆ ಬೀಳಲು ಮುರಿದ ಕಲ್ಲು ಕೈ ಮೇಲೆ ಬಿದ್ದು ಎರಡು ಬೆರಳು ಕತ್ತರಿಸಿಬಿಟ್ಟಿವೆ. ಇವನನ್ನು ತಕ್ಷಣ ಪಕ್ಕದಲ್ಲಿದ್ದ ಕೆರೆಗೆ ತೆಗೆದುಕೊಂಡು ಹೋಗಿ ನೀರಿನಲ್ಲಿ ಇಟ್ಟು ಸ್ವಲ್ಪ ಉಸಿರು ತಿರುಗಿದ ಬಳಿಕ ಡೋಲಿ ಕಟ್ಟಿ ಮಲ ಗಿಸಿಕೊಂಡು ಹತ್ತಾರು ಜನರು ಹೊತ್ತು ನೂರಾರು ಜನರು ಸಂಗಡ ಹೋಗಿ ಸಮೀಪದಲ್ಲಿರುವ ಆಸ್ಪತ್ರೆಗೆ ತೆಗೆದುಕೊಂಡು ಹೋಗುವಾಗ್ಗೆ ದಾರಿಯಲ್ಲಿ ಜ್ಞಾನ ತಪ್ಪಿಬಿಟ್ಟಿತು. ಸ್ವಲ್ಪ ಹೊತ್ತಿನ ಮೇಲೆ ಕೂಡಿಕೊಂಡಿತು. ನಂತರ ನಮ್ಮ ಡಾಕ್ಟರ್ ಸಾಹೇಬರೂ ಕಾಂಪೌಂಡರೂ ಬಹಳ ಮುತುವರ್ಜಿಯಿಂದ ಶ್ರಮ ಪಟ್ಟು ಚಿಕಿತ್ಸೆಮಾಡಿದ್ದಲ್ಲದೆ ದಿನವೂ ಮನೆಗೆ ಹೋಗಿ ಇಲಾಜುಮಾಡುತ್ತಾ ಇರುವುದರಿಂದ ಈ ಹುಡುಗನು ದಿನೇ ದಿನೇ ಗುಣಹೊಂದುತ್ತಾ ಇದ್ದಾನೆ.

ಹೊಸದುರ್ಗ ತಾ|| ಬೆಲಗೂರು.—ಈ ವರ್ಷ ರೈತರಿಗೆ ಪೈರು ಉತ್ಕೃಷ್ಟವಾಗಿರುತ್ತದೆ. ಕೆರೆಯಲ್ಲಿ ಒಂದು ತೊಟ್ಟಾದರೂ ನೀರಿಲ್ಲ. ಸೇದು ವ ಬಾವಿಗಳಲ್ಲಿ ಕುಡಿಯುವದಕ್ಕೆ ಮಾತ್ರ ನೀರಿರುತ್ತದೆ. ಬಟ್ಟೆ ಒಗೆಯು ವದಕ್ಕೆ ನೀರೇ ಇಲ್ಲ. ಇಂಥಾದ್ದರಲ್ಲಿ ಬೆಂಕಿಯು ತಗಲಿದರೆ ಉಂಟಾಗುವ ಕಷ್ಟವು ಹೇಳತೀರದು. ಈ ಗ್ರಾಮದಲ್ಲಿ ಧನಿಕರಿದ್ದಾರೆ. ಭಾವಿ ತೆಗಿಸುವದಕ್ಕೆ ಯಾರಿಗೂ ಮನಸ್ಸು ಬಾರದು. ಸರ್ಕಾರದವರಂತೂ ಈ ದೊಡ್ಡ ಗ್ರಾಮವನ್ನು ನೋಡುವಂತಿಲ್ಲ. ನೀರಿಲ್ಲದ ಕೆರೆಗೆ ಮುಖ್ಯ ಕಾಮಗಾರಿ ಮಾಡುವಂತೆ ವೃತ್ತ ರಿಗೆ ತಗಾದೆ ಬಂದಿದೆ.—ಈ ಗ್ರಾಮದಲ್ಲಿ 1908 ನೇ ಇಸವಿಯಿಂದ ಮ್ಯೂನಿ ಸಿಪಲ್ ಆಗಿ ಮನೆಗಳಿಂದ ಕಂದಾಯ ವಸೂಲಾಗುತ್ತಾ ಇದ್ದ ಮುಟ್ಟು ವೇಳೆಯಲ್ಲಿ ಈ ಗ್ರಾಮಕ್ಕೆ ಯಾವ ಉಪಕಾರವಾದ ಕೆಲಸವೂ ನಡೆಸಿರುವದಿಲ್ಲ. ಜನರು ವೃಥಾ ಕಂದಾಯ ತೆರಬೇಕೆಂದು ಕೊರಗುತ್ತಿರುವಲ್ಲಿ ಹೊಸ ಪಟ್ಟಿ ತಯಾರು ಮಾಡಿಸಿ ಹಿಂದಿದ್ದ ಕಂದಾಯಕ್ಕಿಂತ ಹೆಚ್ಚು ಕಂದಾಯವನ್ನು ವಸೂಲು ಮಾಡು ರುತ್ತಾರೆ.—ಈ ನಾಮದ ತಾ. 3 ರಲ್ಲಿ ಈ ಗ್ರಾಮಕ್ಕೆ ಚಾರ್ಮಗೆರ ಡೆ|| ಕಮಿ ಷನರವರು ದಯಮಾಡಿ ಜಮಾಬಂದಿ ನಡಿಸಿದರು. ಸೇಂದಿ ಅಂಗಡಿ ಕೂಲವನ್ನೂ ಮನೆ ಕಂದಾಯ ಹೆಚ್ಚಾಗಿರುವದನ್ನೂ ಕುರಿತು ಅರ್ಜಿಗಳು ಕೊಡ ಲ್ಪಟ್ಟಿವೆ.—ಈ ಗ್ರಾಮದ ದೇವಾಂಗದ ಸಂಕಮ್ಮ ನೆಂಬುವರು ನಿಕರಲ್ಲದಿ ದ್ದರೂ ಈ ಗ್ರಾಮದಲ್ಲಿ ಒಂದು ಧರ್ಮ ಛತ್ರವನ್ನು ಕಟ್ಟಿಸುತ್ತಿದ್ದಾಳೆ. ಸರ್ಕಾರದವರು ಜಾಗಾ ಕೊಡಿಸಬೇಕೆಂತಲೂ ಜಮಾಬಂದಿ ... ... ಕೊಟ್ಟು ಕೇಳಿಕೊಂಡರು. ಸ್ವಾಮಿಯು ಇವರಿಗೆ ಇಂಥಾ ಸುಬುದ್ಧಿಯನ್ನು

ಕೊಟ್ಟದ್ದೂ ಇವರು ಪರೋಪಕಾರಕ್ಕೆ ಮನಸ್ಸು ಮಾಡಿದ್ದೂ ತುಂಬಾ ಸಂತೋಷವಾದದ್ದಾಗಿದೆ.—ಈ ಗ್ರಾಮದವರು ಪೋಲೀಸ್ ಸ್ಟೇಷನ್ ಕಟ್ಟಿಸುವ ಬಗ್ಗೆ ಸರ್ಕಾರದವರ ವರಕ್ಕೆ ಹಣ ಪಾವತಿ ಮಾಡಿ ಬಹಳ ದಿನವಾದಾಗ್ಯೂ ಇನ್ನೂ ಕಟ್ಟಿಸುವುದಕ್ಕೆ ಪ್ರಯತ್ನಿಸಿದಂತೆ ಕಾಣಲಿಲ್ಲ. ಜಾಗ್ರತೆ ಮಾಡ್ಯಾರೆಂದು ಕೋರಿದೆ.—ಈ ಗ್ರಾಮದಲ್ಲಿ ದನಕರುಗಳಿಗೆ ಕಾಲುಬಾಯಿ ಜ್ವರ ಪ್ರಾಪ್ತವಾಗಿ ಸಾಯುತ್ತಿರುವದರಿಂದ ಈ ಕಣಕಾಲದಲ್ಲಿ ರೈತರ ಕೆಲಸಕ್ಕೆ ತುಂಬಾ ತೊಂದರೆಯಾಗಿದೆ. ಆದರೆ ದನಗಳು ಹೆಚ್ಚು ಸಾಯುತ್ತಿಲ್ಲ.—ವರುಷಂಪ್ರತಿ ಈ ಗ್ರಾಮದಲ್ಲಿ ನಡೆಯುತ್ತಿದ್ದ ಶ್ರೀ ಪ್ರಸನ್ನ ರಾಮೇಶ್ವರ ರಥೋತ್ಸವವು ಕಳೆದ ವರ್ಷ ನಡೆಯದೇ ನಿಂತು ಹೋಯಿತು. ಈ ವರ್ಷವಾದರೂ ಗ್ರಾಮದ ರೈತರೆಲ್ಲಾ ಒಂದೇ ಮನಸ್ಸಿನಿಂದ ಉತ್ಸವವನ್ನು ನಡಿಸ್ಯಾರೆಂದು ನಂಬಿದೇನೆ.

ದೊಡ್ಡಬಳ್ಳಾಪುರ.—ಈ ಊರಲ್ಲಿ ಕೋಆಪರೇಟಿವ್ ಸಂಘವು ಪ್ರಾರಂಭಿಸಿ ಆಗಲೇ ಒಂದೆರಡು ವಾರಗಳಾದಾಗ್ಯೂ 700 ಷೇರುಗಳ ತನಕ ಜಮಾಯಿಸಿ ಲೇವಾದೇವಿಗೆ ಶುರುವಾಗಲಿಕ್ಕೆ ಅನುಕೂಲವಾಗಿದೆ. ಈ ಮಧ್ಯೆ ಒಬ್ಬ ಆಡಿಟರವರು ಕೆಲಸಕ್ಕೆ ಆಗಲೇ ರಾಜಿನಾಮೆ ಕೊಟ್ಟರಂತೆ.—ಸ್ಕೂಲಿನ ವಸತಿ ವಿಷಯದಲ್ಲಿ ಮ್ಯ॥ ದಿವಾನ್ ಸಾಹೇಬರವರು ಸ್ಥಳದ ಮುಖಂಡರ ಸಂಗಡ ಸಂಭಾಷಣೆ ನಡಿಸಿ ಅರ್ಧ ವೆಚ್ಚಗಳನ್ನು ಊರಿನವರು ಕೊಟ್ಟರೆ ಸರ್ಕಾರದಿಂದ ಅರ್ಧ ಕೊಡುವಂತೆ ಅಪ್ಪಣೆ ಕೊಡಿಸಿರುತ್ತಾರೆ. ಮುಂದಣ ಕಾರ್ಯಭಾಗವು ಪ್ರಜೆಗಳ ಮುಖಂಡರ ಮೇಲೆ ಬಿದ್ದಿದೆ.—ರಾತ್ರಿಕಾಲಗಳಲ್ಲಿ ಕೆಲವು ಘಟಿಂಗರು ಕಳ್ಳತನಗಳನ್ನು ನಡಿಸುತ್ತಿರುವದರಿಂದ ಊರಿನವರಲ್ಲಿ ಅನೇಕರಿಗೆ ನಾನಾ ವಿಧವಾದ ಕಷ್ಟಪರಂಪರೆಗಳು ಪ್ರಾಪ್ತಿಸುತ್ತಿವೆ. ಕಳೆದ ವಾರ ಬೆಂಗಳೂರಿಂದ ರೆವ್ ಎ. ಬ್ರಾಕ್ ಬ್ಯಾಂಕ್, ರೆವ್ ಗಾರ್ಲ್ಯಾಂಡ್ ಧೊರೆಗಳು ಈ ಊರಿಗೆ ಬಂದು ಇಲ್ಲಿ ನಡೆಯುವ ಮಿಷನ್ ಕೆಲಸಗಳನ್ನೂ ನೋಡಿಕೊಳ್ಳುವವರ ಯೋಗ್ಯತೆಯನ್ನೂ ನೋಡಿದವರಾಗಿ ಗುರುವಾರವೂ ಶುಕ್ರವಾರವೂ ಇಲ್ಲಿನ ಹಳೇ ಕಛೇರಿ ಕಟ್ಟಡದಲ್ಲೂ, ಮ್ಯ॥ ಬುಮ್ಮಾಶಿ ರುದ್ರಪ್ಪನವರ ಛತ್ರದಲ್ಲೂ ಭೂತಕನ್ನಡಿಯಲ್ಲಿ ಯೇಸುಕ್ರಿಸ್ತನ ದಿವ್ಯೋಪದೇಶಗಳನ್ನು ಸ್ಥಳಿಕ ಉಪದೇಶಕರ ಸಹಾಯದಿಂದ ತೋರಿಸಿದರು. ಸುಮಾರು 400 ಮಂದಿ ವರೆಗೂ ಜನರು ಸೇರಿ ಉಪನ್ಯಾಸವನ್ನು ಕೇಳಿ ಚೆನ್ನಾಗಿ ಗ್ರಹಿಸಿಕೊಂಡರು.

ಅನೇಕಲ್ ತಾ॥ ರಾಜನಾಯಕನಹಳ್ಳಿ.—ಈ ಗ್ರಾಮದಲ್ಲಿ ಶ್ರೀ ಬಸವೇಶ್ವರಸ್ವಾಮಿಯ ಹೆಸರಿನಲ್ಲಿ ಸ್ಥಾಪನೆಯಾಗಿರುವ ಕೋಆಪರೇಟಿವ್ ಸೊಸೈಟಿಯ ಪ್ರಥಮ ವರ್ಷದ ಜನರಲ್ ಮೀಟಿಂಗು ಕಳೆದ ತಾ॥ 23 ನೇ ಗುರುವಾರ ನಡೆಯಿತು. ಆ ದಿನ ದೇವಸ್ಥಾನದ ಮುಂದೆ ವಿಶಾಲವಾದ ಮೈದಾನದಲ್ಲಿ ದೊಡ್ಡ ಚಪ್ಪರವನ್ನು ಹಾಕಿಸಿ ನೇತ್ರಾನಂದಕರವಾಗಿ ಅಲಂಕರಿಸಿದ್ದರು. ಈ ಮೀಟಿಂಗಿಗೆ ಈ ಸಂಘದ ಮೆಂಬರುಗಳೂ, ಇತರ ದೊಡ್ಡ ಮನುಷ್ಯರೂ, ಬಾಜೂ ಸೊಸೈಟಿಯ ಮೆಂಬರುಗಳೂ ದಯಮಾಡಿದ್ದರು. ಅಲ್ಲದೆ ಬೆಂಗಳೂರಿನಿಂದ ಈ ಸಂಘಗಳ ರೆಜಿಸ್ಟ್ರಾರ್ ಸಾಹೇಬರವರೂ, ಅಸಿಸ್ಟೆಂಟ್ ರಿಜಿಸ್ಟ್ರಾರ್ ಮ॥ ಬಿ. ವೆಂಕಟರಾಮಯ್ಯನವರೂ ದಯಮಾಡಿದ್ದರು. ಸಭಿಕರ ಪ್ರಾರ್ಥನೆಯಂತೆ ರೆಜಿಸ್ಟ್ರಾರ್ ಮ॥ ಎಂ. ಎ. ನಾರಾಯಣ ಅಯ್ಯಂಗಾರ್ಯರು ಅಗ್ರಾಸನವನ್ನಲಂಕರಿಸಿದೊಡನೆ ಈ ಸೊಸೈಟಿಯ ಸೆಕ್ರೆಟರಿ ಮ॥ ರಾಮಯ್ಯನವರು ಸಂಘದ ೬ ತಿಂಗಳ ಅವಧಿಯ ರಿಪೋರ್ಟನ್ನು ಸಭಿಕರ ತಿಳುವಳಿಕೆ ಬಗ್ಗೆ ಓದಿ ಹೇಳಿದರು. ಅನಂತರ ಸೊಸೈಟಿಯ ಅಭಿವೃದ್ಧಿಯ ವಿಚಾರವಾಗಿ ಅಗ್ರಾಸನಾಧಿಪತಿಗಳು ಕೆಲವು ಬುದ್ಧಿವಾದಗಳನ್ನು ಹೇಳಿದರು. ಛೇರ್ಮನ್‌ರವರಿಗೆ ಹಾಗೂ ಪುರಾಯಿ ಸಭಿಕರ ವಂದನಾಪೂರ್ವಕವಾಗಿ ಅರ್ಪಿಸಲ್ಪಟ್ಟದ್ದಲ್ಲದೆ ಶ್ರೀಬಸವೇಶ್ವರಸ್ವಾಮಿಯ ಮಂಗಳಾರತಿಯೂ, ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲಾದಿಗಳೂ ಹಂಚಲ್ಪಟ್ಟು ಸಭೆಯನ್ನು ಬರಖಾಸ್ತು ಮಾಡಿದರು. ಈ ರೀತಿಯಾಗಿ ಗ್ರಾಮಾಂತರಗಳಲ್ಲಿ ಸ್ಥಾಪನೆಯಾಗತಕ್ಕ ಅನ್ಯೋನ್ಯ ಸಹಾಯ ಸಂಘಗಳು ಪ್ರಜೆಗಳಿಗೆ ಎಷ್ಟರ ಮಟ್ಟಿಗೆ ಅನುಕೂಲವಾಗಿವೆಯೋ ನೋಡಬೇಕೆಂಬ ಉದ್ದೇಶದಿಂದ ರೆಜಿಸ್ಟ್ರಾರ್ ಸಾಹೇಬರವರೇ ಸ್ವತಃ ದಯಮಾಡಿ ಇಲ್ಲಿನ ಜನರು ಅತ್ಯಂತ ವಿನಯಪೂರ್ವಕವಾಗಿ ಮಾಡಿಕೊಂಡ ವಿಜ್ಞಾಪನೆಯಂತೆ ಅಗ್ರಾಸನವನ್ನಲಂಕರಿಸಿ ಸಭಿಕರು ಕೇಳಿದ ಅನೇಕ ವಿಧವಾದ ಪ್ರಶ್ನೆಗಳಿಗೆಲ್ಲಾ ಬಹು ತಾಳ್ಮೆಯಿಂದ ಸದುತ್ತರಗಳನ್ನು ದಯಪಾಲಿಸಿ, ಎಲ್ಲರ ಮನಸ್ಸನ್ನೂ ಸಂತೋಷಪಡಿಸಿದ್ದಲ್ಲದೆ ಮುಖ್ಯವಾಗಿ ಬಡತನದಲ್ಲಿ ಮುಳುಗಿರುವವರನ್ನೆಲ್ಲಾ ಒಳ್ಳೇ ಸ್ಥಿತಿಗೆ ತರಬೇಕೆಂಬ ವಿಷಯವನ್ನೇ ಬೋಧಿಸುತ್ತಿದ್ದದ್ದು ಬಹಳ ಆನಂದವನ್ನುಂಟುಮಾಡಿತು. ಇವರು ಮಾಡಿದ ಬೋಧನೆಯಿಂದ ಗ್ರಾಮಾಂತರಗಳಲ್ಲಿದ್ದ ವೈಮನಸ್ಯವೆಂಬುದು ಜನರಿಂದ ತೊಲಗಿ ಐಕಮತ್ಯವೆಂಬುದು ಅಭಿವೃದ್ಧಿಯಾಗುತ್ತೆಂದು ಎಲ್ಲರೂ ನಂಬಿರುತ್ತಾರೆ. ಇದೇ ರೀತಿ ನಮ್ಮ ರೆಜಿಸ್ಟ್ರಾರ್ ಸಾಹೇಬರವರು ಪ್ರತಿ ಸೊಸೈಟಿಗೂ ದಯಮಾಡಿ ವಿವೇಕವನ್ನು ತಿಳಿಸಿ ಪ್ರೋತ್ಸಾಹಕೊಡುತ್ತಾ ಬಂದಲ್ಲಿ ನಮ್ಮ ಸಂಸ್ಥಾನವು ಇನ್ನೂ ಅಭಿವೃದ್ಧಿ ಸ್ಥಿತಿಗೆ ಬರುವುದರಲ್ಲಿ ಏನೂ ಸಂದೇಹವಿರುವದಿಲ್ಲ. ಈ ಗ್ರಾಮಕ್ಕೆ ಈ ಸಂಘಗಳ ಆಸಿಸ್ಟೆಂಟ್ ರೆಜಿಸ್ಟ್ರಾರ್ ಮ॥ ಬಿ. ವೆಂಕಟರಾಮಯ್ಯನವರು ೨-೩ ವರ್ಷ ದಯಮಾಡಿ ಇಲ್ಲಿನ ಜನಗಳನ್ನು ಪ್ರೋತ್ಸಾಹಿಸಿ ಸೊಸೈಟಿಯನ್ನು ಸ್ಥಾಪನೆ ಮಾಡಿ ಕೀರ್ತಿಭಾಜನರಾಗಿರುವುದು ಬಹಳ ಸಂತೋಷವಾಗಿದೆ.

ಹೊಳೆನರಸೀಪುರ ತಾ॥ ಚೀತನಹಳ್ಳಿ.—ಈ ಊರಿನ ಆರೋಗ್ಯವಿಚಾರವು ತಕ್ಕಮಟ್ಟಿಗೆ ತೃಪ್ತಿಕರವಾಗಿದೆ. ಇದಲ್ಲದೆ ಧಾರಣೆ ವಾಸಿಗಳು ಕೂಡ ಮೊದಲಿಗಿಂತಲೂ ಸ್ವಲ್ಪ ಇಳಿಮುಖವಾದವು. ಅಕ್ಕಿ ರೂಪಾಯಿಗೆ ೬-೯। ಇಂದ 7-7। ರಾಗಿ 12 ರಿಂದ 15ಸೇರು ಆಗಿದೆ. ಮತ್ತು ಈ ಪ್ರಾಂತ್ಯದಲ್ಲಿ ಬಹುಕಾಲದಿಂದ ಸವೆದು ಕಡಮೆಯಾಗಿದ್ದ ಹಳೇ ರೀತಿಗಳನ್ನೂ ಬಟ್ಟೆಗಳನ್ನೂ ನಮ್ಮ ದಯವುಳ್ಳ ಅಮಲ್ದಾರರು ಕ್ರಮಪಡಿಸಿ ಹೊಸ ಸಾಮಾನುಗಳನ್ನು ಒದಗಿಸಿಕೊಡಿಸುವದರಿಂದ ನಾವುಗಳು ತುಂಬಾ ಕೃತಜ್ಞರಾಗಿದ್ದೇವೆ.—ಇಲ್ಲಿಗೆ ಹೊಸದಾಗಿ ಬಂದಿರುವ ಪೋ॥ ಜಮಾದಾರರಾದ ಬಿ. ಕೆ. ಸುಂದರರಾಯರೂ, ಹೊಸದಾಗಿ ಚಾರಿಗೆ ಬಂದಿರುವ ಸೀರು ಮತ್ತು ಬಟ್ಟೆಗಳನ್ನು ಬಹು ನಿಗಾದಿಂದ ಪರಿಕ್ಷೆ ಮಾಡಿಸುತ್ತಾ ಇದ್ದಾರೆ. ಹಾಗೆಯೇ ದಫೇದಾರರೂ ಮತ್ತು ಕಾನ್‌ಸ್ಟೇಬಲರೂ ಪ್ರತಿ ಅಂಗಡಿಗಳನ್ನೂ ಸುತ್ತಿ ಪರೀಕ್ಷಿಸಿ ಹಳೆಯವುಗಳನ್ನು ಯಾರಾದರೂ ತಿಳಿಯದ ಉಪಯೋಗಿಸುತ್ತಾ ಇರುವ ಸಂಶಯ ಜನರನ್ನು ನೋಡಿದರೆ ಅವರನ್ನು ಗದರಿಸದೆ ಅವರಿಗೆ ಬುದ್ಧಿ ಹೇಳಿ ಇನ್ನು ಮುಂದೆ ಅವುಗಳನ್ನು ಉಪಯೋಗಿಸಕೂಡದೆಂದು ಎಚ್ಚರಿಸುತ್ತಾ ಇದ್ದಾರೆ. ಈ ವಾರ್ತೆಯನ್ನು ಕೇಳಿದವರು ಮತ್ತೆ ಬರುವಾಗ್ಗೆ ಅವುಗಳನ್ನು ಬಿಟ್ಟು ಹೊಸ ಸಾಮಾನುಗಳನ್ನೇ ತರುತ್ತಾ ಇದ್ದಾರೆ.—ಅನೇಕ ದಿವಸಗಳಿಂದ ರಾತ್ರಿ ವೇಳೆ ಯಾರೋ ಕಳ್ಳರು ಮನೆಗಳಿಗೆ ಕನ್ನಗಳನ್ನು ಕೊರೆದು ಪ್ರಜೆಗಳ ಸೊತ್ತುಗಳನ್ನು ಅಪಹರಿಸುತ್ತಾ ತುಂಬಾ ತೊಂದರೆ ಪಡಿಸುತ್ತಾ ಇದ್ದರು. ರಾತ್ರಿ ಕಾಲಗಳಲ್ಲಿ ಪ್ರಜೆಗಳಿಗೆ ನಿದ್ರೆ ಇಲ್ಲದೆ ತೊಂದರೆಗೆ ಕಾರಣವಾಗಿತ್ತು. ಈಗ ಕೆಲವು ದಿವಸಗಳ ಕೆಳಗೆ ಒಂದು ದಿನ ಈ ಊರು ಪಾಜಿಸಾಹೇಬರ ಮನೆಯಲ್ಲಿ ಯಾರೋ ಕಳ್ಳರು ಬಂದರೆಂಬ ಕೂಗು ಹುಟ್ಟಿದ ಮೇಲೆ ಗಸ್ತುಮಾಡುತ್ತಾ ಇದ್ದ ಪೋಲೀಸಿನವರು ಕೂಡ್ಲೆ ದಫೇದಾರರಿಗೆ ತಿಳಿಸಿದರು. ದಫೇದಾರ್ ಕೆ. ಮುನಿಸ್ವಾಮಯ್ಯನವರ ಸಮೇತ ಊರುಗಸ್ತು ಹೊರಟು ಬಹುಜನ ಮಂದಿ ಬಳಿ ಪಾಜಿಸಾಹೇಬರ ಮನೆಗೆ ನುಗ್ಗಿದ್ದ ಅಪರಾಧಿ ಮುನಿಯಪ್ಪ ಎಂಬುವವನನ್ನು ದಸ್ತಗಿರಿ ಮಾಡಿ ಲಾಕಪ್ಪಿನಲ್ಲಿ ಹಾಕಿ, ಮತ್ತಾರಾದರೂ ಕಳ್ಳರು ಇರಬಹುದೆಂಬ ಗುಮಾನಿಯಿಂದ ಸದರಿ ದಫೇದಾರರು ಹಾಯದ್ ಖಾನ್ ಎಂಬ 31 ನೇ ನಂಬರ್ ಕಾನ್‌ಸ್ಟೇಬಲ್ ಸಹ ಪುನಃ ಊರುಗಸ್ತು ಹೊರಟು ನೋಡುವಲ್ಲಿ ಕೆ. ಡಿ. ಸೀರು ಎಂಬುವವನು ೮ ತಿಂಗಳು ಲಾಗಾಯತು ಪರಾರಿಯಾಗಿದ್ದವನು ಆ ದಿನ ರಾತ್ರಿ ಅಕಸ್ಮಾತ್ತು ಬೀದಿಯಲ್ಲಿ ಸಿಕ್ಕಿದ್ದರ ಮೇಲೆ ಕೂಡಲೇ ಅವನನ್ನು ಹಿಡಿದು ಸ್ಟೇಷನಿಗೆ ತಂದು ಸದರೀ ದಫೇದಾರ್ ಕಾನ್‌ಸ್ಟೇಬಲನ ಸಹಿತ ಸದರಿ ಕೆ. ಡಿ. ಸೀರುವಿನಿಂದ ಹಿಂದಿನ ೩-೪ ಕೇಸುಗಳು ಪತ್ತೆ ತೆಗೆದು, ಮರುದಿವಸ ಹೊಸದಾಗಿ ಬಂದ ಪೋ॥ ಜಮಾದಾರ್ ಬಿ. ಕೆ. ಸುಂದರರಾವ್ ಯವರಿಗೆ ತಿಳಿಸಿ ಸದರಿ ಕಳವು ಮಾಲುಗಳು ಚೀತಮಂಗಲದಲ್ಲಿಯೂ ರಾಬರ್ಟ್‌ಸನ್ ಪೇಟೆಯಲ್ಲಿಯೂ ಪತ್ತೆ ಮಾಡಿಸಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೇಲೆ ಕಂಡ ಮುನಿಯನಿಗೆ ೩ ತಿಂಗಳು ಕಠಿಣ ಸಜಾ ಮತ್ತು ಕೆ. ಡಿ. ಸೀರುವಿಗೆ ೨ ವರುಷಗಳ ಕಠಿಣ ಸಜಾ ಮಾಡಿಸಿರುತ್ತಾರೆ. ಈಚೆಗೆ ಊರಿನಲ್ಲಿ ಕಳ್ಳರ ಅವಾಂತ್ರ ಏನೂ ಇರುವದಿಲ್ಲ.

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—ನಿನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೋ ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋನ್ಸ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಮಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮರಾದೆಯಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ:—ಪಿತ್ತಕೋಶದ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಬರಿ, ಅಶಕ್ತಿ, ಎದೆಯು ತಲ್ಲಣಿಸುವುದು, ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ; ಹುಳಿತೇಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್ಸ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕೆಟ್ಟದಾದ ವಾಯುವನ್ನೂ ಮರಾದೆಯಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ರೋಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [12-21]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ಪಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುವು, ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು.

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ಬಾಧಕಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ.

ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನ ಔಷಧವನ್ನು ಕೊಡುವುದು ಅವಶ್ಯಕ.

SCOTT'S EMULSION 28

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

Always get the Emulsion with this mark the Fishman —the mark of the "Scott" process!

ವಿಮಾಪುರುಷನು ಇರುವ ಈ ಔಷಧದ ಗುರುತು

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವವು.

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಿದೆ

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ 34

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಸೆಟ್ಟಿಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಮುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಜರಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ., ೧ ರೂ. ೪ ಆ.

ಚುಕ್ಕಿಯುಳ್ಳ ಟೋಪಿಗಳು ರೂ. ೧-೮, ರೂ. ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ. ೨

ದಾರದ ಟೋಪಿಗಳು ೧ ರೂ. ೧೨ ಆ., ೧ ರೂ. ೮ ಆ., ೧ ರೂ. ೬ ಆ.

ಮುಸುಕಿನ ಟೋಪಿಗಳು ೧ ರೂ. ೮ ಆ., ೧ ರೂ. ೬ ಆ.

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ:—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಕುಂತಳಾನಂದ ತೈಲವು.

147-22

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬೆಳ್ಳಿಯ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ. 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪನಿ, ವೇಪೇರಿ, ಮದರಾಸ್.

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಗಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. **Messrs. OAKES & Company, Mount Road, Madras.**

[14-6] **ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.**

Printed and Published by the Rev. H. Gulliford, Proprietor and Manager, Wesleyan Mission Press, Mysore. 20/2/1913.

REGISTERED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—೧೯೧೩ ನೇ ಇಸವಿ ಫೆಬ್ರವರಿ ತಾರೀಖು ೨೭ ನೇ ಗುರುವಾರ. ಸಂಚಿಕೆ ೩೯

ಟಾಕಂಡ ಮೂರು ಪ್ರಖ್ಯಾತ ಔಷಧಗಳು.

ಸ್ವಾಕ್ಸರ ಮಲೆನಾಡು ಜ್ವರಮಾತ್ರೆಗಳು ಶೀತಪ್ರದೇಶಗಳಲ್ಲಿ [illegible] ಅಥವಾ ಜೀರ್ಣವಾದ ಶೀತಪಿತ್ತ ಎಲ್ಲಾ ಜಾತಿಯ ಚಳಿ ಜ್ವರಗಳ [illegible] ಖಂಡಿತವಾಗಿಯೂ ಸಂಪೂರ್ಣವಾಗಿಯೂ ವಾಸಿಮಾಡುತ್ತದೆ [illegible] ಮಾತ್ರೆಗಳು ಇರುವ ಕ್ರಯ ಡಬ್ಬಿ 1ಕ್ಕೆ ರೂಪಾಯಿ 1 0 0

ಸ್ವಾಕ್ಸರ ಉಬ್ಬಸದ ಔಷಧ ಉಬ್ಬಸ [illegible] ಕಫ [illegible] ಶ್ವಾಸಕೋಶದ ವ್ಯಾಧಿಗಳಿಗೂ [illegible] ಗಳಿಗೂ [illegible] ಉತ್ತಮ ಮತ್ತು [illegible] ಗುಣಕೊಡುವ ಔಷಧ ಕ್ರಯ ಬಾಟ್ಲಿ 1ಕ್ಕೆ [illegible] 1 0 0 [16-1]

ಸ್ವಾಕ್ಸರ ನಾಯಿಕೆಮ್ಮಿನ ಸಿದ್ಧೌಷಧ—ಇದು [illegible] ಮತ್ತು [illegible] ಬೇಗನೆ ಖಂಡಿತವಾಗಿಯೂ [illegible] ಗುಣಕೊಡುವ [illegible] ಕ್ರಯ ಬಾಟ್ಲಿ 1ಕ್ಕೆ ರೂ 1 0 0 [illegible] ಪೋಸ್ಟೇಜು [illegible] ಪ್ರತ್ಯೇಕ ಈ ಔಷಧಗಳ [illegible] ವಿವರಿಸುವ [illegible] ಪತ್ರಗಳನ್ನು ಕೇಳುವವರಿಗೆ ಬಿಟ್ಟಿ ಕಳುಹಿಸುವೆವು

[illegible]

117 [illegible] ಮದರಾಸ್

[illegible] (1) [illegible] ಕಂಪನಿ, [illegible] ಬೆಂಗಳೂರು [illegible] ಕಂಪನಿ, ಬೆಂಗಳೂರು [illegible] (2) [illegible] ಕಂಪನಿ, [illegible] (3) [illegible] ಕಂಪನಿ [illegible] ಕಲ್ಲಕೋಟೆ

ವಿಕ್ಟೋರಿಯಾ ಲೈಫ್ ಅಷೂರೆನ್ಸ್ ಕಂಪನಿ ಲಿಮಿಟೆಡ್.

(1912 ನೇ [illegible] ಸೂಸೈಟಿ ಆಕ್ಟಿನಂತೆ ರಿಜಿಸ್ಟರಾದದ್ದು)

ಮೂಲಧನ—10,00,000 ರೂಪಾಯಿ (ಹತ್ತು ಲಕ್ಷ)

ಹೆಡ್ ಆಫೀಸ್—[illegible], ಕಲ್ಕತ್ತಾ

ದಕ್ಷಿಣ ದೇಶ ಮತ್ತು ಸಿಲೋನಿಗೆ ಬ್ರಾಂಚ್ ಆಫೀಸು—ಚೂಳೈ, ಮದರಾಸ್

“ವಿಕ್ಟೋರಿಯಾ”—ಮಹಾರಾಜರುಗಳಿಂದಲೂ, ರಾಜರುಗಳಿಂದಲೂ, ಬಂಗಾಳದ ಮುಖಂಡ ದೊಡ್ಡ ಮನುಷ್ಯರಿಂದಲೂ [illegible] ಸಲ್ಪಡುತ್ತದೆ

“ವಿಕ್ಟೋರಿಯಾ”—[illegible] ಗಳೆಲ್ಲಾ [illegible] ಗಳನ್ನು ಬಲ್ಲವರೆಂದು ಪ್ರಖ್ಯಾತರಾಗಿರುವ ದೊಡ್ಡ ಮನುಷ್ಯರಾಗಿದಾರೆ

ದಾರಾಳವಾದ [illegible], [illegible] ಬೇಗನೆ [illegible] ಪಾವತಿಯಾಗು [illegible], [illegible] ಪಾಲಿಸಿಗಳನ್ನು ಸುಲಭ ದರಗಳಲ್ಲಿ [illegible] ಇವೇ “ವಿಕ್ಟೋರಿಯಾ” ದ ಪ್ರಧಾನ ಲಕ್ಷಣಗಳಾಗಿರುತ್ತವೆ

ಪ್ರಾಸ್ಪೆಕ್ಟಸ್, ಪ್ರಪೋಸಲ್ ಫಾರಂ, [illegible] ಪಟ್ಟಿಗಳನ್ನು ಅಪೇಕ್ಷಿಸ [illegible] ಈ ವಿಳಾಸಕ್ಕೆ ಬರೆಯಬೇಕು— [35-1]

“ವಿಕ್ಟೋರಿಯಾ” ಕಂಪನಿ ಸೆಕ್ರೆಟರಿ, ಚೂಳೈ, ಮದರಾಸ್

[illegible] ಮತ್ತು [illegible] ಏಜೆಂಟರುಗಳು ಬೇಕು—ಧಾರಾಳವಾದ [illegible] ಮತ್ತು ಕೈ ತುಂಬಾ ಸಂಬಳ

“ವಾಸಿಮಾಡಿಕೊಳ್ಳುತ್ತೇನೆಂದು ಹೇಳು”

84 40

ಎಂದಾ ಸೋಬಿನದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, [illegible], ಅರಶಿನ, ಕಲೆಕೋಪುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಿದ ಪಲ್ಲಿಸೋತ, ಗಂಟಲು ಗಾರೆಸ್ಸುವದು, ಕೆಮ್ಮುಗಳು, [illegible], ಶಾಸರೋಗ, [illegible], ಉಳುಕು, ಛಳುಕು, [illegible] ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನು ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿಸುಕೋ ಸಮೀಪದಲ್ಲಿರುವ ವರ್ತಕನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

“ಕ್ಲೆಮೆಂಟರ ಮ್ಯಾಜಿಕ್ ಬಾಂ” ಎಂಬ ಹೆಸರನ್ನು ಮರೆಯಬೇಡ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು—(1) ಎಸ್ [illegible], 37 [illegible], ಪುರಸವಾಕಂ, [illegible], ಮದರಾಸ್ (2) ಜಿ ಎಸ್. [illegible], ಜನರಲ್ ಮರ್ಚೆಂಟ್, ತುಮಕೂರು

ಟ್ರೇಡ್ ಮಾರ್ಕ್—“ತಿರುಪತಿ,” ಹರಿಹರ

ಜಾಗ್ರತೆ ತೆಕ್ಕೊಳ್ಳಿ

ಜೇಸಿಗೆ ಕಾಲ ಸಮೀಪಿಸುತ್ತಾ ಬರುತ್ತೆ

ತ್ವರೆಮಾಡಿರಿ

ಚೇಳಿನ ಹಾವಳಿ ಪ್ರಾರಂಭವಾಯಿತು.

ಅದ್ಭುತವಾದ ಇನಾಮು.

ಒಂದು ಲಕ್ಷ ರೂಪಾಯಿಗಳು ಹಂಚಲ್ಪಡುತ್ತವೆ

ಡಾಕ್ಟರ [illegible] ಇನಾಂದಾರ್‌ರವರು ತಯಾರು ಮಾಡಿದ “ಸ್ಕಾರ್ಪಿಯಾನಿಯೋ” ಎಂಬ ಚೇಳಿನ ಔಷಧವನ್ನು ಸಮಸ್ತ ದೇಶಗಳಲ್ಲಿಯೂ ಹರಡುವದಕ್ಕೂ, ಅದರ ಗುಣವನ್ನು ಅನುಭವಕ್ಕೆ ತರುವದಕ್ಕೂ ಈ ಇನಾಮಿನ [illegible] ಪ್ರಸಿದ್ಧ ಮಾಡಲ್ಪಟ್ಟದೆ ಈ ಚೇಳಿನ ಔಷಧವು ಅತಿ ಶೀಘ್ರವಾಗಿ ಗುಣವನ್ನು ಕೊಟ್ಟು, ರೋಗಿಯನ್ನು ನಗುವಂತೆ ಮಾಡಲ್ಪಟ್ಟದೆ ಪ್ರಪಂಚದಲ್ಲಿ ಎಷ್ಟು ಚೇಳಿನ ಔಷಧಗಳಿವೆಯೋ ಅದಕ್ಕೆಲ್ಲಾ ಶ್ರೇಷ್ಠವೆಂದು ಎಣಿಸಿಕೊಂಡು [illegible] ಈ ಔಷಧಿಯನ್ನು ವೃಶ್ಚಿಕ ವೈರಿ ಎಂದು ಸಮಸ್ತರೂ ಪ್ರಾಮುಖ್ಯತೆಯಿಂದ [illegible] ಇದನ್ನು ಪ್ರಚುರಪಡಿಸಬೇಕೆಂದು ಅಭಿಪ್ರಾಯಪಟ್ಟ ಮೇಲೆ ಈ ಮೂಲಕವಾಗಿ ಸಮಸ್ತರ ಉಪಯೋಗಕ್ಕೂ ಪ್ರಕಟಿಸಲ್ಪಟ್ಟದೆ [illegible] ಇದಕ್ಕೆ ಸಮಾನವಾದ ಚೇಳಿನ ಮದ್ದು ಇಲ್ಲವೆಂದು ಖಂಡಿತವಾಗಿ ಹೇಳಿದ್ದಾರೆ

ಹಿಸ್ ಎಕ್ಸಲೆನ್ಸಿ ಲಾರ್ಡ್ ಕಿಚ್ನರ್, ಚೀಫ್ ಕಮಾಂಡರು ಇನ್ ಚೀಫ್, ಇಂಡಿಯ, ಮತ್ತು ಕರ್ನಲ್ ವಿಕ್ಟರ್ ಬ್ರಿಕ್, ಚೀಫ್ ಮಿಲಿಟರಿ ಸೆಕ್ರೆಟರಿ ಟು ದಿ ವೈಸರಾಯ್, ಇವರುಗಳು ಡಾಕ್ಟರು [illegible] ಇನಾಂದಾರ್ [illegible] ಯನ್ನು ಬಹಳವಾಗಿ ಹೊಗಳಿದಾರೆ

ಇನಾಂಗಳ ವಿವರ—ಇದೇ 1913 ನೇ ಫೆಬ್ರವರಿಯಿಂದ ಜುಲೈ ತಾರೀಖು 31 ರ ವರಿವಿಗೂ ಹನ್ನೆರಡು ಲಕ್ಷ “ಸ್ಕಾರ್ಪಿಯಾನಿಯೋ” ಎಂಬ ಚೇಳಿನ ಔಷಧವನ್ನು ಇನಾಮು ಮೂಲಕವಾಗಿ ಬಿಕ್ರಿ ಮಾಡಲು ಏರ್ಪಡಿಸಿದೆ ಬಾಟ್ಲಿ [illegible] ಎಂಟಾಣೆ ಮಾತ್ರವೆ ಟಪಾಲು ಹಾಸಲು, ಪ್ಯಾಕಿಂಗ್ ಚಾರ್ಜು, ವಿ ಪಿ ಚಾರ್ಜು ಬೇರೆ

ಇನಾಮು	ಬಾಟ್ಲಿ		ರೂಪಾಯಿ	ಇನಾಮು	ಬಾಟ್ಲಿ		ರೂಪಾಯಿ.
ನೇ ಇನಾಮ	2 ಗ್ರೋಸ್ ಬಾಟ್ಲಿ	ತೆಗೆದುಕೊಳ್ಳುವವರಿಗೆ 1913 ನೇ ಏಪ್ರಿಲ್ ಆಖ್ಯೆರೊಳಗಾಗಿ	9,000	1 ನೇ ಇನಾಂ	2 ಗ್ರೋಸ್ ಬಾಟ್ಲಿ	ತೆಗೆದುಕೊಳ್ಳುವವರಿಗೆ 1913 ನೇ ಜೂನ್ ಆಖ್ಯೆರೊಳಗಾಗಿ	7,000
ನೇ ,,	1 ಗ್ರೋಸ್	,, ,, ,,	8,000	2 ನೇ ,,	1 ಗ್ರೋಸ್	,, ,, ,,	6,000
ನೇ ,,	6 ಡಜನ್	,, ,, ,,	7,500	3 ನೇ ,,	6 ಡಜನ್	,, ,, ,,	5,500
ನೇ ,,	3 ಡಜನ್	,, ,, ,,	7,000	4 ನೇ ,,	3 ಡಜನ್	,, ,, ,,	5,000
ನೇ ,,	2 ಡಜನ್	,, ,, ,,	6,500	5 ನೇ ,,	2 ಡಜನ್	,, ,, ,,	4,500
ನೇ ,,	1 ಡಜನ್	,, ,, ,,	6,000	6 ನೇ ,,	1 ಡಜನ್	,, ,, ,,	4,000
ನೇ ,,	6 ಬಾಟ್ಲಿಗಳು	,, ,, ,,	5,500	7 ನೇ ,,	6 ಬಾಟ್ಲಿಗಳು	,, ,, ,,	3,500
ನೇ ,,	4 ಬಾಟ್ಲಿಗಳು	,, ,, ,,	5,000	8 ನೇ ,,	4 ಬಾಟ್ಲಿಗಳು	,, ,, ,,	3,000
ನೇ ,,	2 ಬಾಟ್ಲಿಗಳು	,, ,, ,,	4,500	9 ನೇ ,,	2 ಬಾಟ್ಲಿಗಳು	,, ,, ,,	2,500
			59,000				41,000

ಒಟ್ಟು ರೂ 1,00,000 ಲಕ್ಷ ಮಾತ್ರವೇ ?

ಯಾವದಾದರೂ ಒಂದು ಇನಾಂ ಕಲಂಗೆ ಪ್ರತಿ ಒಬ್ಬರಿಗಿಂತ ಜಾಸ್ತಿಯಾಗಿದ್ದರೆ ಆ ಇನಾಂನ ಕಲಮನ್ನು ಎಲ್ಲರಿಗೂ ಒಂದೇ ಸಮನಾಗಿ ಹಂಚಿಕೊಡಲ್ಪಡುತ್ತದೆ ಮತ್ತು ಒಂದೆ ವೇಳೆ ಒಬ್ಬರೇ ಇದ್ದರೆ ಆ ಪೂರ್ತಿ ಇನಾಂನ ಕಲಮಿನಲ್ಲಿನ ಮೊಬಲಗನ್ನು ಅವರೊಬ್ಬರಿಗೇ ಕೊಡಲ್ಪಡುತ್ತದೆ ಎರಡು ಬಾಟ್ಲಿಗಳು ಜಾಸ್ತಿಯಾಗಿ ಕೊಂಡುಕೊಳ್ಳುವ ಪ್ರತಿ ಒಬ್ಬರಿಗೂ ಇನಾಂನ ಸರ್ಟಫಿಕೇಟನ್ನು ಆಯಾಯ ಇನಾಂ ಕಲಂವಾರು ಪ್ರಕಾರ ತೆಗೆದುಕೊಂಡ ಬಾಟ್ಲಿಗಳ ಸಂಖ್ಯೆಯನ್ನು [illegible] ಖಂಡಿತವಾಗಿಯೂ ಇನಾಂನ್ನು ಕೊಡುತ್ತೇವೆಂದು ಭರವಸೆ ಕೊಟ್ಟು ಬರೆದುಕೊಡಲ್ಪಡುತ್ತೆ ನಮ್ಮ ಇನಾಮು ಕಲಮಿನ ಲಿಸ್ಟಿನಲ್ಲಿ ಕಾಣಿಸಿರುವ ಮೇರೆಗೆ ಬಾಟ್ಲಿಗಳನ್ನು ಕೊಂಡುಕೊಳ್ಳುವರಿಗೆ ವಿನಹ ಬಾಕಿ ಯಾರಿಗೂ ಕೊಡಲ್ಪ[illegible] ಈ ಹನ್ನೆರಡು ಲಕ್ಷ ಬಾಟ್ಲಿಗಳು ಖರ್ಚಾದ ಕೂಡಲೆ ಲಿಸ್ಟುವನ್ನು ಜಾಹೀರುಮಾಡಿ, ಇನಾಂಗಳು ಹಂಚಲ್ಪಡುತ್ತೆ ಒಂದು ವೇಳೆ ಪೂರಾ ಹನ್ನೆರಡು ಲಕ್ಷ ಬಾಟ್ಲಿಗಳು ಖರ್ಚಾಗದೆ ಹೋದರೆ ಮುಂದೆ ವಾಯಿದೆಯನ್ನು ಹೆಚ್ಚಿಸದೆ ಎಷ್ಟು [illegible] ಖರ್ಚಾಗಿರುತ್ತವೆಯೋ ಅಷ್ಟಕ್ಕೇ ದಾಮಾಷಾ ಪ್ರಕಾರ ಆಗತಕ್ಕಷ್ಟು ಮಾತ್ರ ಇನಾಂಗಳು ಹಂಚಲ್ಪಡುತ್ತದೆ ಇನಾಂಗಳು ಹಂಚುವ ತಾರೀಖು ಇದೇ 1913 ನೇ ಇಸ್ವಿ ಆಗಸ್ಟ್ ತಿಂಗಳು 15 ಕ್ಕೆ ಇದೇ ಹರಿಹರದಲ್ಲಿ ಬಹಿರಂಗವಾಗಿ [illegible]

ಪ್ರತಿ ಒಬ್ಬ ಮನುಷ್ಯನಿಗೂ ತಾನು ಕೊಡುವ ಕಿಮ್ಮತ್ತಿಗೆ ಸರಿಯಾಗಿ ಔಷಧ ಬಾಟ್ಲಿಯನ್ನು ಪಡೆಯುವದಲ್ಲದೆ ಇನಾಂಗೂ ಅರ್ಹನಾಗಿರುತ್ತಾನೆ ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ ಈವಾಗಲೇ ವಿಶೇಷ ಆರ್ಡರುಗಳು ಬರುವ [illegible] ತೋರಿದೆ ಆದ್ದರಿಂದ ಪೂರ್ತಿಯಾಗಿ ಎಲ್ಲಾ ಬಾಟ್ಲಿಗಳು ಖರ್ಚಾಗುವದರಲ್ಲಿ ಸಂದೇಹ ತೋರುವದಿಲ್ಲ

ಏಜಂಟರುಗಳು ಬೇಕಾಗಿದೆ. ಸಂಬಳ ನೂರು ರೂಪಾಯಿ ಮತ್ತು ಅಲೋಯನ್ಸು ಇಪ್ಪತ್ತು ರೂಪಾಯಿ.

[illegible] ವಿಳಾಸಕ್ಕೆ ಟಪಾಲುಮೂಲಕ ಕಾಗದಗಳನ್ನು ಬರೆದು ಆರ್ಡರು ಕಳಿಸಿ ಬಾಟ್ಲಿಗಳನ್ನು ತರಿಸಿಕೊಳ್ಳಬಹುದು —

[33 3]

ಮೆಸ್ಸರ್ಸ್ ತಿರುಪತಿ ಗುಜರ್ ಅಂಡ್ ಕೋ., ಸೋಲ್ ಏಜಂಟ್ಸ್ ಸ್ಕಾರ್ಪಿಯಾನಿಯೋ ಡೆಪೋ, ಹರಿಹರ, ಮೈಸೂರು ಪ್ರಾವಿನ್ಸು.

Office of the Excise Commissioner in Mysore

No 6014 Dated Bangalore, 5-6th February, 1913.

NOTICE.

Tenders are hereby invited for the exclusive privilege of the manufacture in the Government Central Distillery at Bangalore of Arrack and other Country Spirits for supply throughout the Territories of Mysore and the Civil and Military Station of Bangalore, for a period of three years from 1st July, 1913, to 30th June 1916

2 Every tender should be accompanied by a deposit of Rs 5,000 and should reach the undersigned on or before noon of Monday, the 10th March 1913, on which date they will be opened by the Excise Commissioner at 12 noon

3 The quantity of Arrack required for consumption in the State is estimated between four and four and a half lakhs of gallons per annum

4. For conditions and further particulars see Notification No Fl 4348 S R 140 12-18, dated 3rd February, 1913, published in Part I of the Mysore Gazette [38-3]

5 Copy of Notification and form of application may be had on requisition to the undersigned

M KANTARAJ URS,
Excise Commissioner

ಈಗತಾನೆ ಬಂದಿರುತ್ತೆ   ಸಂತೋಷಕರವಾದ ಸಮಾಚಾರ

ರೈಲ್ವೆ ರೆಗ್ಯುಲೇಟರ್ ವಾಚ್

ಸುಂದರವಾದ ವಾಚ್ ಸರಪಣಿ ಸಮೇತ ಕ್ರಯ ರೂ. 3

ಇದು ಪ್ರಸಿದ್ಧವಾದ ಮತ್ತು ಮಜಬೂತಾದ ಲೀವರ ಕೆಲಸದಿಂದಲೂ ನಾನಾ ವಿಧ ಯಂತ್ರ ... ತಯಾರಾಗಿ ಬಂದಿರುತ್ತೆ ...



... ವಾದ ಮತ್ತು ಖಾತ್ರಿಯಾದ ವಾಚು. ತಲೆಯಲ್ಲಿ ಬೀಗಹಾಕುವ ... ಕೀಲಿ ಕೊಡುತ್ತೆ ... ಕೈಯಿಂದ ... ಸರಿಯಾದ ಕಾಲವನ್ನು ತೋರಿಸತಕ್ಕದ್ದು ಮತ್ತು ದೀರ್ಘಕಾಲ ಬಾಳಿಕೆ ಬರುವಂಥಾದ್ದು ಎಂಬುದು ಸರ್ವಜನರಿಗೂ ತಿಳಿದ ವಿಷಯವೇ ಸರಿ ಹೀಗಿರುವದರಲ್ಲಿ ಈ ವಾಚ್ ವಿಷಯವಾಗಿ ಹೆಚ್ಚು ಮಾತು ... ಬರೆಯುವದು ಯಾಕೆ ... ಧೂಳು ಸೇರದಂತೆ ಒಳಗೆ ಗ್ಲಾಸ್ ಡೋಮ್ (ಅಂದರೆ ...) ... ಮುಚ್ಚಿರುತ್ತೆ ಈ ವಾಚಿನ ಮುಂಭಾಗದಲ್ಲಿ ... ಗುರುತು ಇರುತ್ತೆ ಈ ಪ್ರಕಟನೆಯಲ್ಲಿ ಕಾಣಿಸುವ ... ಈ ವಾಚ್‌ಗೆ ಗುರುತು

ಇದಕ್ಕೆ ... ಲೀವರ ವಾಚುಗಳು ರೂ 1-12-0, ರೂ 1-13-0 ಯಲ್ಲಿಯೂ ... ವಾಚ್ ಮುಂತಾದವುಗಳು ರೂ 1-12-0 ರೂ 1-13-0 ಯಲ್ಲಿಯೂ, ನಮ್ಮಲ್ಲಿ ದೊರೆಯುತ್ತೆ ... ಈ ವಾಚನ್ನು ... ತೆಗೆದು ಸಂತೋಷಪಡತಕ್ಕದ್ದಾಗಿ ಕೋರುತ್ತೇವೆ [17-1]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—ಎ ಆರ್ ವಂಕಟರಮಣ ಅಂಡ್ ಕಂಪೆನಿ, ನಂ 7, ಕೋಮಟಿ ವೆಂಕಟಾಚಲ್ಲಿಯರ್ ಬೀದಿ, ಮದರಾಸು

ಶ್ರೀಲಕ್ಷ್ಮೀನರಸಿಂಹ ಆಯುರ್ವೇದ ವೈದ್ಯಶಾಲಾ

ಜ್ವರಮುರಾರಿ —ಸಕಲ ವಿಧವಾದ ಜ್ವರಗಳಿಗೆ ಅಂಕುಶವಾಗಿದೆ ಇದನ್ನು ಉಪಯೋಗಿಸಿದೊಡನೆ ಸಕಲವಿಧವಾದ ಜ್ವರಗಳನ್ನೂ ಹತಮಾಡುವದು ಇದು ಬಹಳ ಕಹಿಯಾಗಿರುವ ಹಸುರುಸೊಪ್ಪುಗಳು ಬೇರುಗಳು ಮೊದಲಾದ ಕ್ಷಾರದಿಂದ ಮಾಡಲ್ಪಟ್ಟದ್ದು ರಸ, ಗಂಧಕ, ಪಾಷಾಣಾದಿಗಳಿಂದ ಈ ಔಷಧಕ್ಕೆ ಸಂಬಂಧವಿಲ್ಲ ಇದು ನಮ್ಮ ಪೂರ್ವಿಕರು (ಸಿದ್ಧರು)ಗಳಿಂದ ಕಲಿತ ಸಿದ್ಧಪ್ರಯೋಗ ಈ ಔಷಧಕ್ಕೆ ಪಥ್ಯ ಪಾನಾದಿಗಳೇನೂ ಇಲ್ಲ ಈ ಔಷಧವನ್ನು ಒಂದು ಸಾರಿ ತರಿಸಿ ಪರೀಕ್ಷಿಸಿದ ಒಡನೆ ಅವರಾಗಿ ತಮ್ಮ ಸ್ನೇಹಿತರುಗಳಿಗೆ ತಿಳಿಸಿ ಸಂತೋಷಪಡುವರು ಇದು ಮದರಾಸಿನಲ್ಲಿ ಅನೇಕ ಸಾವಿರ ಜನಗಳು ಉಪಯೋಗಿಸಿದ ಸಿದ್ಧೌಷಧ ಪ್ರತಿ ದಿವಸ ಅನೇಕ ಜನಗಳು ಉಪಯೋಗಿಸುತ್ತಲೂ ಇದಾರೆ ಈ ಔಷಧ ಸೇವನೆ ಕ್ರಮವು ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು ಎಂಥಾ ಜ್ವರವನ್ನು 8-10-12-16 ಘಂಟೆಗಳ ವಿಷಯದಲ್ಲಿ ನಿಶ್ಶೇಷವಾಗಿ ಜಾಣಿಗಿಸಿ ಅನ್ನವೇಳನವನ್ನು ಹೋಗಲಾಡಿಸಿ ಹಸಿವನ್ನುಂಟುಮಾಡಿ, ಬಲಹೀನವನ್ನು ಹೋಗಲಾಡಿಸುವದು ಇದರ ಬೆಲೆ 12 ಘಂಟೆಗಳ ದವೆಗೆ 1 ಕ್ಕೆ 12 ಆಣೆ ಟಪ್ಪಾಲ್, ಪಾರ್ಸಲ್ ಛಾರ್ಜು ಪ್ರತ್ಯೇಕ [10-3]

ದಂತಧಾವನ ರತ್ನಾಕರಂ —ಇದು ಹಲ್ಲುಗಳಿಗೆ ಬಾಧಕರವಾದ ಪದಾರ್ಥಗಳು ಯಾವವೂ ಸೇರಿಸದೆ ಅನೇಕ ಮೂಲಿಕೆಗಳಿಂದ ತಯಾರುಮಾಡಿದ ಹಲ್ಲು ಪುಡಿ ಸುವಾಸನೆಯಾಗಿರುವದು ಇದರಿಂದ ಹಲ್ಲು ಉಜ್ಜಿ ಕೊಂಡರೆ ದಂತಗಳಲ್ಲಿ ಹುಟ್ಟಿದ ರೋಗಗಳು ಹೋಗಲಾಡಿಸಿ ನಾಶಪಿತ್ತ ಶ್ಲೇಷ್ಮಗಳನ್ನು ಶಮನಮಾಡಿ ಹಲ್ಲುನೋವು, ಬಾಯಿನಾತ, ಹಲ್ಲುಜೋಲು, ಹಲ್ಲಿನಲ್ಲಿ ರಕ್ತ ಸುರಿಯುವದು, ಹಲ್ಲಿನಲ್ಲಿ ರಕ್ತ ಬರುವದು, ಹುಳುಕುಹಲ್ಲು, ಇಸುರುಬಾವು ಮೊದಲಾದದ್ದನ್ನು ಪರಿಹರಿಸಿ ಹಲ್ಲು ಸಂದುಗಳನ್ನು ದಟ್ಟವಾಗಿ ಸೇರಿಸಿ ಕೆಲಕಾಲ ದೇಹಕ್ಕೆ ಒಳ್ಳೆ ಗುಣಾನ್ನುಂಟುಮಾಡುವದು ಈ ಪುಡಿಯನ್ನು ನೋಟ್ಸಿಗೂ ತೆಗೆದುಕೊಳ್ಳಬಹುದು ಇದರ ಬೆಲೆ ಡಬ್ಬಿ 1 ಕ್ಕೆ 1 ಆಣೆ ಟಪ್ಪಾಲ್, ಪಾರ್ಸಲ್ ಛಾರ್ಜು ಪ್ರತ್ಯೇಕ. ವಿಳಾಸ —

ರಾಜವೈದ್ಯಂ ಮೈಸೂರು ಪಂಡಿತರು ಎಂ. ಕೆ. ಶೇಷಾಚಾರ್ಯ, ನಂ 93, ಚೈನಾಬಜಾರ್ ರೋಡ್, ಮದರಾಸ್

CHAMBERLAIN'F COUGH FEMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು



1-9

ಶೀತದ ಕೆಮ್ಮು, ಗಂಟಲು ಗೊರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ರೋಗ, ಗಂಟಲಿನಲ್ಲಿ ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವದು ತರುವಾಯ ಉಗುಳಿನಲ್ಲಿ ರಕ್ತಬೀಳುವದು ಹಾಗೆಯೇ ಕ್ಷಯರೋಗ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ತವಾಗಿ ಸವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರ ಕೆಮ್ಮಿನ ರಭಸವನ್ನು ನಿಲ್ಲಿಸೀಮುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೇ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು   ಸಣ್ಣ ಸೀಸೆಗೆ ೧ ರೂಪಾಯಿ   ದೊಡ್ಡ ಸೀಸೆಗೆ ೨ ರೂಪಾಯಿ

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮಾನವನ್ನೂ ಹಾಳುಮಾಡಿಕೊಳ್ಳದಿರಿ

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು '

ಸುಂದರವಾದ ಕೇಶರಾಶಿಯು! ಅಂದವಾದ ಕೂದಲುಗಳು!!

ಇದೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ... ಕೇಶರಾಶಿ ಇದೆ? ಕೇಶಪಾಶವು ಸುಂದರವಾಗಿ ... ತುದಿಯಿಲ್ಲದೆ ... ಮೃದುವಾಗಿ ಚಕಚಕಿಸುತ್ತಿರಬೇಕು, ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದ ಬಾಚಿದರೂ ಕಟ್ಟಿದರೂ, ಅದು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಇದನ್ನು ತಪ್ಪದೆ ... ದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶವಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೇಶಗಳು ... ಪ್ರವಲ್ಲಿಯೇ ತಿಳಿಯುವವು

ಕಾಮಿನಿಯಾ ತೈಲ— ಇದು ಕೂದಲುಗಳನ್ನು ... ನ ಪಕ್ಕೆ ... ಮತ್ತು ... ಕೂದಲುಗಳು ... ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇಬೇಕು ಇದರಿಂದ ಕೂದಲುಗಳು ... ನ್ನು ಪುಷ್ಪ ... ಕ್ಕೆ ಬಂದಿರುವ ವಿಸ್ತ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತವೆ, ನಯವಾಗುತ್ತವೆ, ಚಕಚಕಿಸುತ್ತವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗಾಗ್ಗೆ ಹರಿದು ಬಿದ್ದು ಹೋಗದೆ ದಟ್ಟವಾಗಿ ಬೆಳೆಯುತ್ತವೆ

ಇದರ ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0 1-0 ಬೇರೆ ತರಬೇಕು.
3 ಸೀಸೆಗಳಿಗೆ ರೂ 2-10-0 ಅಂಚೆಯ ವೆಚ್ಚ 0 7-0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟಿನ್ನು ಕಳುಹಿಸಿರಿ

ಕಾಮಿನಿಯಾ ತೈಲದ ಕುರಿತು ಕಲವು ಮಹನೀಯರು ಬರೆದ ಪ್ರಮಾಣ ಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು —

28-7-11 ಮೆ|| ಬಿ. ಡಿ ಮಾಧವಸಿಂಗ್, ರುಕ್ಮಿಣಿವಿಲಾಸ, ಮುನ್ನರಗುಡಿ— ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಓಯಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಓಯಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು

1-7-11 ಮೆ|| ಸಿ ಆರ್ ನಾಯುಡು ಪ ವ ಡಿ ಟಾಸಿಬ (ಬರ್ಮಾ)—ನನ್ನ ಮಿತ್ರರು "ಕಾಮಿನಿಯಾ" ತೈಲ ಸಮ್ಬಂಧವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದರಿಂದ ಕೂಡಲೆ 6 ಸೀಸೆಗಳನ್ನು ತ್ವರಿತದಿಂದ ವಿ ಪಿ ಮೂಲಕ ರವಾನಿಸತಕ್ಕದ್ದು

ಸುಗಂಧದ್ರವ್ಯಗಳು

ಗುಲ್-ಷಾನ್ (ರಿಜಿಡ್)—ಗುಲಾಬಿ ಅತ್ತರುಗಳಲ್ಲೆಲ್ಲಾ ಇದೇ ಅತ್ಯಂತ ಶ್ರೇಷ್ಠವಾದದ್ದು, ಮಹಾ ಸುಗಂಧವುಳ್ಳದ್ದು ಎಂದು ಸುವಾಸನಾದ್ರವ್ಯ ಪರಿಶೋಧಕ ಪಂಡಿತರು ಹೇಳಿದಾರೆ ಬಿಳಿಯ ಮತ್ತು ಕೆಂಪು ಗುಲಾಬಿಯ ಉತ್ತಮೋತ್ತಮವಾದ ಸುವಾಸನೆಯುಳ್ಳದ್ದು ಕ್ರಯ ಡ್ರಾಂ ಸೀಸೆಗೆ ರೂ 1-8-0

ದಿಲ್-ಬಹಾರ್ (ರಿಜಿಡ್)—ಅತ್ಯಂತ ಅಪೂರ್ವವಾದ ತಾಜಾ ಪುಷ್ಪಗಳಿಂದ ತಯಾರಿಸಿದ ಅಪೂರ್ವವಾದ ಸುಗಂಧ ಡ್ರಾಂ ಸೀಸೆಗೆ ರೂ. 1-8-0

"ಕಾಮಿನಿಯಾ ಸುರಂಗಿ"—ರೂ 1-4-0, "ಕಾಮಿನಿಯಾಮಾಲತಿ"—ರೂ 1

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲೇ ಬರೆಯಬೇಕು.

ಮ್ಮ ವಿಳಾಸ — [8-5]

ಅಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ, ಜುಮ್ಮಾಮಸ್‌ಜಿದ್, ಬೊಂಬಾಯಿ.

ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪು.

ಇದು ಆಶ್ಚರ್ಯಕರವಾದ ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪು ಪ್ರತಿ ಒಂದು ಮನೆಯಲ್ಲಿಯೂ ಅವಶ್ಯವಾಗಿ ಇರಬೇಕಾದದ್ದು ಇದನ್ನು



ಉಪಯೋಗಕ್ಕೆ ಎಣ್ಣೆ, ಬತ್ತಿ ದೀಪದ ಕಡ್ಡಿ ಇವುಗಳೇನೂ ಅವಶ್ಯವಿಲ್ಲ ... ಪದಾರ್ಥಗಳಿಗೆ ಅರಿ ಹೋಗುವ ಭಯವಿಲ್ಲ ... ದ ಕ ... ಸೂರ್ಯಕಿರಣಕ್ಕೆ ಸಮಾನವಾಗಿದೆ ನಾವು ಇದನ್ನು ... ದ ತೋರಿಸುತ್ತೇವೆ ... ಅನೇಕರು ತರಿಸುತ್ತಿರುವ ... ದ ವಿಷಯ ಸ್ಪಷ್ಟವಾಗಿರುತ್ತೆ ಇದು ... ಗಳು ... ಮತ್ತು ಇವರು ಇದನ್ನು ... ರ ಅನೇಕ ಜನಗಳಿಗೂ ಬಹಳ ಉಪಯೋಗವಾದದ್ದು ಇದರಲ್ಲಿ ಒಂದನ್ನು ನೋಡಿದರೆ ಇದರ ಗುಣವು ನಿಮಗೇ ತಿಳಿಯುತ್ತೆ [15-1]

ಇದರ ಬೆಲೆ 1 ಕ್ಕೆ 1 12 0

ವಿಳಾಸ ... ಅಂಡ್ ... ಸಂದಂಬಾಕಂ ಗ್ರಾಮ ... ತಾಲ್ಲೂಕು, ಪರಂಗಿಮಲೈ ಪೋಸ್ಟು, ಮದ್ರಾಸ

೧೦೯ ಕದ '   ಪೂರ್ವಗ್ರಂಥ ''   ೭೧೭ ಪುಟಗಳು ''

ಪ್ರತಾಪಕಂಠೀರವಚರಿತ್ರೆ

ಇದರಲ್ಲಿ (1) - ದರ್ಮಕ್ಕಾಗಿ ಪರಪಾಯ ಉಂಟಾಗುವುದರಿಂ, ಅವರ ಯತ್ನಗಳಿಗೆ ತಾನಿಂದ ಬಂದರೂ ... (2) ... ಧರ್ಮ - ಬುದ್ಧಿಶಕ್ತಿ, ... ಯುಕ್ತಿ ಸಾಹಸ ... ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು (4) ವನ ... ಆರಾಮಾದಿ ವರ್ಣನೆಗಳು (5) ಮನುಷ್ಯಯತ್ನಕ್ಕೆ ಮೀರಿದ ... ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳ ... ಸುಲಭವಾದ ಶೈಲಿ (7) ಸರಸಗಾಯಿತ ಒಂದಕ್ಕೊಂದು ... ಬಿಟ್ಟು ಮನಸ್ಸನ್ನು ಎಳೆಯುವ ಕಥಾ ಭಾಗಗಳು, ಇವು ಕೂಡಿವೆ

... ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗು ಬಿಡುವದಕ್ಕೆ ಮನಸ್ಸಾಗುವದಿಲ್ಲ ... ಹೇಳುವದರಿಂದೇನು? ... ನೋಡಿದರೆ ತನ್ನ ... ತಾನಾಗಿ ಗೊತ್ತಾಗುವದು

ಕ್ರಯ ... ಭಾಗ ... ನೇ ಭಾಗ ೧೦ ಆಣೆ, ಒಟ್ಟು ಪ್ರತಿಗೆ ೧ ರೂಪಾಯಿ ಟಪಾಲು ಹಾಸಲು ಬೇರೆ [16-1]

ನಮ್ಮ ವಿಳಾಸ ವಿಜಯಕೇಸರಿ ಕಂಪನಿ. ಬೆಂಗಳೂರು ಸಿಟಿ

ಬಹಳ ಉತ್ತಮವಾದ ಅಚ್ಚ ಕರೀ ಬಣ್ಣದ ಮಧುರೆ ಚಿಂನಡಿ ಅಂಚಿನ ಸೀರೆಗಳು.

[44-1]

ಅಸಲ್ ರಮ್ ಕ್ರಯ ರೂ 24-0



ಇದರಿಂದ ಸರ್ಕಾರದಿಂದ, ... ವಿಲಾಯತಿ ... ದರ ... ನಮ್ಮಲ್ಲಿ ... ಕರಿಯ ಬಣ್ಣದ ಮಧುರೆ ಚಿಂನಡಿ ಸೀರೆಗಳು ... ಧರಿಸುವುದಕ್ಕೆ ನಯವಾಗಿಯೂ, ... ಗಿಯೂ, ... ಬೆಲೆ ಬಹಳ ಸುಲಭವಾಗಿಯೂ ತಯಾರಿಸಿದೆ ... ಒಗೆದು ... ಬಣ್ಣವು ... ಬದಲಾಯಿಸುವುದಿಲ್ಲ ಇದರ ... ಬಹು ... 18 ಮೊಳದ ... ಕ್ಕಾಗಿ ಒಂದನ್ನು ತರಿಸಿದಲ್ಲಿ ... ಅನೇಕ ... ಬರೆಯುವರು. ವಿಳಾಸ —

ಜೆ ... ಅಂಡ್ ಕಂಪನಿ, ಸಂಗಂಬಾಕಂ, ಮದರಾಸು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರದು ತರಿಸಿಕೊಳ್ಳಿ

ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗೆ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ...

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಧಾರಣೆ ... ಅವು ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ... ಉಪಯೋಗಿಸುವರು

... ನೋಡಿ — (೧) ನಮ್ಮಲ್ಲಿ ತಯಾರಾಗುವ ಟೋಪಿಗಳ ... ಬಹುದು (೨) ಟೋಪಿಗಳನ್ನು ... ಅಪೇಕ್ಷಿಸುವವರಿಗೆ ಬಹಳ ...

... ಚೆನ್ನಾಗಿ ಹೊಲೆದ, ... ಟೋಪಿಗಳು ... ನಮಗೆ ಬೇಗ ಬರದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲ ... ನಮ್ಮಲ್ಲಿ ದೊರೆಯುವುದಿಲ್ಲ

ನಾನಾ ಕೆಂಪು, ಕಪ್ಪು, ... ಬಣ್ಣಗಳ ಟೋಪಿಗಳು ೧ ರೂ ೮ ಆ, ... ೧ ರೂ ೪ ಆ

... ಟೋಪಿಗಳು ... ೧ ೮ ... ೧ ೧೨

... ಟೋಪಿಗಳು ರೂ ೨

... ಟೋಪಿಗಳು ೧ ರೂ ೧೨ ಆ ೧ ರೂ ೮ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೬ ಆ ೧ ರೂ ೬ ಆ

... ಕತ್ತಿನ ... ನಮ್ಮನ್ನು ಕೇಳುವಂಥವರಿಗೆ ಕೊಟ್ಟು ...

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಮಾರಾಟದ ಹೊಸ ಪುಸ್ತಕಗಳು.

ಉತ್ತಮ—ಬಹು ಸ್ವಾರಸ್ಯವಾದ ಕಥೆ ಈಗತಾನೆ ಅಚ್ಚಾಗಿದೆ 1 ಆಣೆ **ಜಪಾನ್ ಸಾಮ್ರಾಜ್ಯ** ಅದ್ಭುತವಾದ ಸೂರ್ಯೋದಯ ರಾಜ್ಯದ ವಿಷಯ, ಸುಂದರವಾದ ಒಂದು ಪಠವೂ ಇದೆ, ... 6 ಆಣೆ **ಉನ್ನತಿ** ... 4½ ಆಣೆ **ಕಿಂಡರ್‌ಗಾರ್ಟನ್ ಕಥೆಗಳು**, ವಿನೋದಕರವಾದ ಕಥೆಗಳಿಂದಲೇ ಅನೇಕ ವಿಷಯಗಳು ತಿಳಿಯುವವು 10 ಆಣೆ **ಬೋಧನಕ್ರಮಸಂಗ್ರಹ**—ಪ್ರತಿ ಸ್ಕೂಲ್ ಮಾಸ್ಟರಿಗೂ ಬೇಕಾದದ್ದು 1½ ಆಣೆ **ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತರ ಬರೆಯುವ ವಿಧಾನ** 1 ಆಣೆ [17 1]

ವಿಳಾಸ — ... ಕೃಷ್ಣಶಾಸ್ತ್ರಿ, ಬಿ. ಎ., ನಾರ್ಮಲ್ ಸ್ಕೂಲ್, ಮೈಸೂರು

ಟ್ರಾಂವೆ ರೆಗ್ಯುಲೇಟರ್ ಲಿವರ್ ಗಡಿಯಾರ.

ಇದು ಹೊಸ ನಮೂನೆ ಸ್ವಲ್ಪ ಬೆಲೆ!! ಬಹಳ ಅಂದವಾದದ್ದು!!!

ಇದಕ್ಕೆ 4 ವರುಷ ಗ್ಯಾರಂಟಿ ಚೀಟಿ ಉಂಟು

ಕ್ರಯ ರೂ 1-13-0 ಕ್ರಯ ರೂ 1-13-0



Rs1-13-0

[6-7]

ಈ ಗಡಿಯಾರ ಗವರ್ನ್‌ಮೆಂಟ್ ಮತ್ತು ಟ್ರಾಂವೇ ನೌಕರ ಜನರಿಗೆ ಮಾತ್ರವೇ ಸಪ್ಲೈ ಮಾಡಲ್ಪಡುತ್ತೆ ಇದನ್ನು ಅಮೇರಿಕಾದಿಂದ ಒಟ್ಟಾಗಿ ತರಿಸಿರುವದರಿಂದ ಇಷ್ಟು ಸ್ವಲ್ಪ ಬೆಲೆಗೆ ಕೊಡುವದು ಇದೇ ಇದರ ಕಾರಣ ಇದು ನೋಡುವದಕ್ಕೆ ಅಂದವಾಗಿಯೂ ಕಾಲವನ್ನು ಸರಿಯಾಗಿಯೂ ತೋರಿಸುತ್ತದೆ

ಪತ್ರ ಬರೆಯಿರಿ ... ಕೋ., ನಂ 39 ಜನರಲ್ ಮುತ್ಯಾಮೊದಲಿ ಬೀದಿ, ಸಾಹುಕಾರ್ ಪೇಟೆ, ಮದ್ರಾಸ್

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

7—2—1913 ರಿಂದ 14—2—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು ಪಟ್ಟಣ	14	15	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	14	14	0	0
ಮೈಸೂರು ,,	12	13	54	30
ಕೋಲಾರ್ ,,	5	3	0	0
ಕೋಲಾರ್ ಚಿನ್ನದ ಗಣಿಗಳು	10	8	0	0
ತುಂಕೂರು ಡಿಸ್ಟ್ರಿಕ್ಟ್	11	2	0	0
ಹಾಸನ ,,	13	5	0	0
ಚಿತ್ರದುರ್ಗ ,,	0	0	0	0
ಕಡೂರ್ ,,	16	16	0	0
ಶಿವಮೊಗ್ಗ ,,	9	8	0	0
ಜುಮ್ಲಾ	104	83	54	30

ಶಾಲಿವಾಹನ ಶಕ ವರುಷಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೆ ಶಿಶಿರಋತೌ ಮಾಘ ಬಹುಳ ಅಷ್ಟಮಿ ಶುಕ್ರವಾರದಿಂದ ಮಾಘ ಬಹುಳ ಚತುರ್ದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಫೆಬ್ರವರಿ ಮತ್ತು ಮಾರ್ಚಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಹಿಜರಿ ಮಾಸ ತೇದಿ
28	ಶುಕ್ರ *	ಅಷ್ಟಮಿ	21 37	ಅನೂ	1 10	17
1	ಶನಿ	ನವಮಿ	31 55	ಜ್ಯೇಷ್ಠ	4 20	18
2	ಭಾನು	ದಶಮಿ	19 9	ಮೂಲ	4 20	19
3	ಸೋಮ †	ಏಕಾದಶಿ	3 14	ಪೂರ್ವಾ	10 39	20
4	ಮಂಗಳ	ದ್ವಾದಶಿ	19 50	ಉತ್ತರಾ	15 36	21
5	ಬುಧ ‡	ತ್ರಯೋದಶಿ	15 8	ಶ್ರವಣ	21 14	22
6	ಗುರು ⁑	ಚತುರ್ದಶಿ	1 27	ಧನಿಷ್ಠ	27 35	23

* ಚಲುವಾಪಿಳ್ಳೆನ್ನುವರ 1 ನೇ ಕುಂಭಾರ್ಕ ... ಮಳೆ ನಕ್ಷತ್ರ ಶತಭಿಷ 1 ನೇ ಪಾದ † ಸರ್ವತ್ರ ಏಕಾದಶಿ ಮಳೆ ನಕ್ಷತ್ರ—ಪೂರ್ವಾಭಾದ್ರ 1 ನೇ ಪಾದ ‡ ಪ್ರದೋಷ ⁑ ಮಹಾಶಿವರಾತ್ರಿ ಮಳೆ ನಕ್ಷತ್ರ—ಪೂರ್ವಾಭಾದ್ರ 2 ನೇ ಪಾದ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಶಿಡ್ಡ ಅಕ್ಕಿ ಪಲ್ಲಾ ೧ಕ್ಕೆ (ಹೊಸದು) ರೂ	೧೪-೧೨-೦	೧೭-೮-೦
ಕೆಂಬೂತಿ ಅಕ್ಕಿ ಅವಲ್ ,,	೧೫-೪-೦	೧೭-೮-೦
,, ದುಯಂ	೧೫-೦-೦	೧೭-೦-೦
ಜೀಪ್ರಾಣಿ ಅಕ್ಕಿ ,	೧೪-೨-೦	೧೭-೪-೦
ಸಣ್ಣಕ್ಕಿ ಅವಲ್ ,	೧೭-೮-೦	೧೮-೪-೦
,, ದುಯಂ ,,	೧೬-೦-೦	೧೭-೮-೦
ಕೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ	೧೩-೦-೦	೧೩-೮-೦
,, ದುಯಂ ,,	೧೨-೮-೦	೧೨-೮-೦
ಹೈಕ ರಾಗಿ ಪಲ್ಲಾ ೧ಕ್ಕೆ	೬-೧೨-೦	೫-೦-೦
ಕಾರ್ರಾಗಿ ,,	೬-೦-೦	೫-೧೨-೦
ಜೋಳ ,,	೬-೧೨-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ	೧೧-೦-೦	೧೩-೧೨-೦
ಬಿಳೀ ಅವರೆ ,,	೯-೮-೦	೧೧-೦-೦
ಹೆಸರು ,,	೧೧-೮-೦	೧೪-೦-೦
ಉದ್ದು ,,	೧೫-೨-೦	೧೬-೦-೦
ಕಡಲೆ ,,	೯-೧೨-೦	೧೨-೦-೦
ಎಳ್ಳು ಸೇರು ೧೨೭ಕ್ಕೆ	೨೫-೦-೦	೨೪-೦-೦
ಹುರುಳೀ ಪಲ್ಲಾ ೧ಕ್ಕೆ	೬-೪-೦	೭-೦-೦
ಹರಳು ೧೨೭ ಸೇರಿಗೆ	೧೨-೬-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೪-೮-೦
ಮೆಣಸಿನಕಾಯಿ ,,	೪-೦-೦	೪-೪-೦
,, ದುಯಂ	೨-೮-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫-೦-೦	ಮಣ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೦-೦	೬-೬-೦
ಹರಳೆಣ್ಣೆ ,, ,,	೫-೧೨-೦	೬-೦-೦
ಕೊತ್ತಂಬರಿ ಪಲ್ಲಾ ೧ಕ್ಕೆ	೫-೦-೦	೫-೪-೦
ಉಪ್ಪು ,, ,,	೫-೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧-೪-೦	೧-೪-೦
,, ಹಳೇದು ,,	೧-೦-೦	೦-೧೪-೦
ತುಪ್ಪ ಮಣ ೧ಕ್ಕೆ	೧೭-೦-೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೧೧-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೬-೨-೦	೬-೦-೦
ಅಳಲೀಕಾಯಿ ಮಣ ೧ಕ್ಕೆ	೧-೪-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೦-೧೨-೦	೧-೮-೦
ಚಿನ್ನ (ಪೌನ್) ಕೆಂಪು	೧೫-೮-೦	೧೫-೮-೦
,, ,, ಪಸಿಮೆ	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೪-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦-೦	೭೧-೪-೦

ಡೋಂಗರೆ ಇವರ ಬಾಲಾಮೃತ.

[115-33]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗೋಣ ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ

ಅಮೃತಾಂಜನ್. (Regd)

ಎಲ್ಲ ವಿಶೇಷ ಲಕ್ಷ ಕೊಡಿರಿ! ವಾತ, ಸಂಧಿವಾತ, ತಲೇನೋವು, ಸೊಂಟನೋವು, ಶೀತ, ಕಟ್ಟು, ಗಂಟು ನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರುವದು ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ. ಬಾಟ್ಲಿ 1ಕ್ಕೆ 0-8-0

ಅರ್ಧ ಕ್ರಯಕ್ಕಿಂತಲೂ ಕಡಮೆ

ಸತ್ತಲಕ್ಷ ದೊಡ್ಡಸ್ಟಾಂಪ ಪೋಸ್ಟು ಕಾರ್ಡುಗಳು ... ಬೆಳ್ಳಗಾಗಿಯೂ ನಯವಾಗಿಯೂ ಇವೆ. 1000ಕ್ಕೆ ಮುಂಗಡ ಕ್ರಯ ರೂ 3-8-0, ಈಗ 1 ... 12 ... 500ಕ್ಕೆ 8 ... ವಿ. ಪಿ. ... 8 ಆಣೆ

1913 ನಯ ವರ್ಷದ ಕ್ಯಾಲೆಂಡರ ೪ ಬಾಟ್ಲಿ ಅಮೃತಾಂಜನ ತರಿಸಿಕೊಂಡವರಿಗೆ ಪುಗಸಟ್ಟೆಯಾಗಿ ರವಾನಿಸಲ್ಪಡುವದು ಇತರರಿಗೆ ಕ್ಯಾಲೆಂಡರ 1ಕ್ಕೆ 1 ಆಣೆ ವಿ. ಪಿ. ಸಹಿತ [12-1]

ಅಮೃತಾಂಜನ ಡಿಪೊ, ಫೋರ್ಟು, ಮುಂಬಯಿ.

ವೈದ್ಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ರೋಗಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಪವಳದ ... ಚಿನ್ನದ ... ಉತ್ತಮವಾದ ಕಸ್ತೂರಿ ಈ ದಲಾದ ಪಟ್ಟು ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಭಗಂದರ, ಜ್ವರ, ಹೊಟ್ಟೇ ನೂಲಿ, ಸಂದುಗಳ ನೋವು, ಮೈ ಕಾಲು ಬಾವು, ... (ಭಾರ), ಮೈ ನಡುಕ, ... ತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ... ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳಿಗೆ ಹೊಸ ಬಲವನ್ನು ಕೊಡುವುದಲ್ಲದೆ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಮುಟ್ಟುದೋಷ, ಮಕ್ಕಳ ... ಜ್ವರ, ... ಜ್ವರ, ಕೈಸತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —320 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ, ... ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 1 ಆಣೆ [136 26]

ಎ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಯಿಂದ ... ಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡದೇ ಒಂದೇ ಒಂದು ಬುದ್ದಿಯು ... ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ

ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ವೃತ್ತಾಂತ ಪತ್ರಿಕೆ.

ಸನ್ ೧೯೧೩ ನೇ ಇಸವಿ ಫೆಬ್ರವರಿ ತಾ ೨೭ ನೇ ಗುರುವಾರ.

ಮೈಸೂರು ಸಂಪದಭಿವೃದ್ಧಿಯ ಮಹಾ ಸಭೆಯು.

ಮೈಸೂರು ಸರ್ಕಾರದವರು ಸಂಪದಭಿವೃದ್ಧಿಯ ಮಹಾ ಸಭೆಯ ವಿಷಯ ಹೊಸ ಕ್ರಮಗಳನ್ನು ಪ್ರಕಟಿಸಿದ್ದಾರೆಂದು ತಿಳಿದು ಸಂತೋಷಪಡುತ್ತೇವೆ ಈ ಮಹಾ ಸಭೆಗೆ ದಿವಾನರವರು ಅಧ್ಯಕ್ಷರಾಗಿಯೂ ಕೌನ್ಸಿಲ್ ಮೆಂಬರುಗಳು ಉಪಾಧ್ಯಕ್ಷರುಗಳಾಗಿಯೂ ಬೇರೆ ಬೇರೆ ಇಲಾಖೆಗಳ ಮುಖ್ಯಾಧಿಕಾರಿಗಳಲ್ಲಿ ಚುನಾಯಿಸಲ್ಪಟ್ಟವರು, ನ್ಯಾಯವಿಧಾಯಕ ಸಭೆಯ ಮೆಂಬರುಗಳು, ಪೆನ್ಷನ್ ಪಡೆದಿರುವ ಸರ್ಕಾರಿ ಅಫೀಸರುಗಳಲ್ಲಿ ಚುನಾಯಿಸಲ್ಪಟ್ಟವರು, ಡಿ|| ಕಮಿಟಿಯವರುಗಳು, ಆರು ಮಂದಿಗೆ ಕಡಮೆ ಇಲ್ಲದೆಯೂ ಒಂಬತ್ತು ಮಂದಿಗೆ ಹೆಚ್ಚಿಲ್ಲದೆಯೂ ಚುನಾಯಿಸಲ್ಪಟ್ಟ ಬೇರೆ ಜನರು ಇವರುಗಳು ಸದಸ್ಯರುಗಳಾಗಿಯೂ ಇರತಕ್ಕದು ಈ ಮಹಾ ಸಭೆಯು ವರುಷಕ್ಕೊಂದು ಸಾರಿ ಜೂನ್ ತಿಂಗಳಲ್ಲಿ ಸೇರುವದು

ಮೂರು ಪ್ರಾಮುಖ್ಯವಾದ ಉಪಸಭೆಗಳಿರತಕ್ಕದು ಒಂದು ವ್ಯವಸಾಯಕ್ಕೆ ಸಂಬಂಧಪಟ್ಟದು, ಮತ್ತೊಂದು ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟದು, ಮೂರನೆಯದು ಕೈಗಾರಿಕೆ ಮತ್ತು ವ್ಯಾಪಾರಗಳಿಗೆ ಸಂಬಂಧಪಟ್ಟದು ಮಹಾ ಸಭೆಯ ಐದು ಮಂದಿ ಸದಸ್ಯರುಗಳೂ ಪ್ರತಿಯೊಂದು ಉಪಸಭೆಗೆ ಆರು ಮಂದಿಗಿಂತಲೂ ಹೆಚ್ಚಿಲ್ಲದೆ ಮಹಾ ಸಭೆಯ ಅಧ್ಯಕ್ಷರಿಂದ ಚುನಾಯಿಸಲ್ಪಡುವ ಬೇರೆ ಜನರೂ ಈ ಉಪಸಭೆಗಳ ಸದಸ್ಯರುಗಳಾಗಿರುವರು ಉಪಸಭೆಗಳಿಗೂ ಸರ್ಕಾರದ ಬೇರೆ ಬೇರೆ ಇಲಾಖೆಗಳಿಗೂ ಯಾವ ಸಂಬಂಧವಾದರೂ ಇರುವುದಿಲ್ಲವೆಂದೂ ಇವುಗಳು ಸ್ವತಂತ್ರವಾಗಿ ತಮ್ಮ ಕಾರ್ಯಗಳನ್ನು ನಡಿಸುತ್ತಿರುವವೆಂದೂ ತಿಳಿದು ಬರುತ್ತದೆ. ಇದು ಸರಿಯಲ್ಲವೆಂದು ನಾವು ಅಭಿಪ್ರಾಯಪಡುತ್ತೇವೆ ಈ ಉಪಸಭೆಗಳು ಬೇರೆ ಬೇರೆ ಇಲಾಖೆಗಳೊಂದಿಗೆ ಏಕೀಭವಿಸಿ ತಮ್ಮ ಕಾರ್ಯಗಳನ್ನು ನಡಿಸುತ್ತಾ ಬರಬೇಕಾದುದು ಅತ್ಯಾವಶ್ಯಕ ಹೀಗಿಲ್ಲದ ಪಕ್ಷದಲ್ಲಿ ಸರ್ಕಾರದವರು ಒಂದನ್ನು ಮಾಡಿದರೆ, ಉಪಸಭೆಗಳವರು ಬೇರೊಂದನ್ನು ಮಾಡುವರು ಇಂತಹ ಕಷ್ಟಗಳು ಪ್ರಾಪ್ತವಾಗುವವು. ಸಿರಂಕುಶವಾಗಿ ವರ್ತಿಸುವ ಎರಡು ಸಮಾಜಗಳು ಒಂದು ಕಾರ್ಯವನ್ನು ಮಾಡಲುಪಕ್ರಮಿಸಿದರೆ, ತುಂಬಾ ಗಲಿಭೆಗೂ ವ್ಯರ್ಥ ಖರ್ಚಿಗೂ ಕಾರಣವಾಗುವುದು

ದೃಷ್ಟಾಂತವಾಗಿ ವಿದ್ಯಾಭ್ಯಾಸದ ಇಲಾಖೆಗೆ ಒಳಪಟ್ಟಿರುವ ವಿಷಯಗಳನ್ನೆಲ್ಲಾ ಆ ಇಲಾಖೆಯವರೇ ಇತ್ಯರ್ಥ ಮಾಡಬೇಕು. ಸಂಪದಭಿವೃದ್ಧಿಯ ಮಹಾ ಸಭೆ, ಮತ್ತು ಸರ್ಕಾರಿ ಇಲಾಖೆ ಎಂಬೀ ಉಭಯ ಪಕ್ಷಗಳವರು ಇರುವಲ್ಲಿ ಅಧಿಕಾರವನ್ನು ವಹಿಸತಕ್ಕವರು ಯಾರು ? ಸರ್ಕಾರಿ ಇಲಾಖೆಯವರೇ ಅಧಿಕಾರವನ್ನು ವಹಿಸಿರುವ ಪಕ್ಷದಲ್ಲಿ ಸಂಪದಭಿವೃದ್ಧಿ ಮಹಾ ಸಭೆಯ ಸಹಾಯವರು ಆ ಇಲಾಖೆಯವರೊಂದಿಗೆ ಸಂಮಿಳಿತವಾಗಿ ಕೆಲಸಮಾಡಬೇಕಾಗುವದು ಹೀಗಿಲ್ಲದಿದ್ದರೆ, ವೃಥಾಶ್ರಮವೂ ದುಬಾರಿ ಖರ್ಚೂ ಉಂಟಾಗುವದು.

ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಇಪ್ಪತ್ತು ಸದಸ್ಯರುಗಳಿಗಿಂತಲೂ ಹೆಚ್ಚಾಗಿಲ್ಲದ ಒಂದೊಂದು ಉಪಸಂಘಗಳಿರತಕ್ಕದು ಇವರು ಪ್ರಾಮುಖ್ಯವಾದ ಉಪಸಂಘದವರು ನೇಮಿಸುವ ಕಾರ್ಯಗಳನ್ನು ಮಾಡುತ್ತಾ ಬರುವುದಲ್ಲದೆ ತಾವು ಮಾಡಬೇಕೆಂದು ಅಪೇಕ್ಷಿಸತಕ್ಕ ಇತರ ಕಾರ್ಯಗಳನ್ನು ಸಹ ಮಾಡುವರು ಈ ಕಾರ್ಯಗಳಿಗೆ ತಕ್ಕಷ್ಟು ಕಾಲವನ್ನು ವಿನಿಯೋಗಿಸುವ ಅನುಕೂಲತೆಯು ಯಾರಿಗೆ ಇರುತ್ತದೆಯೋ ಅಂಥವರುಗಳನ್ನೇ ನೇಮಕ ಮಾಡುವರೆಂದು ನಂಬುತ್ತೇವೆ

ಪ್ರಾಮುಖ್ಯವಾದ ಉಪಸಭೆಗಳೂ ಡಿಸ್ಟ್ರಿಕ್ಟುಗಳ ಉಪಸಭೆಗಳೂ ಐವತ್ತು ಮಂದಿ ಸಹಾಯಕರುಗಳನ್ನು ನೇಮಿಸಿಕೊಳ್ಳಬಹುದು ಇವರು ಉಪಸಭೆಗಳ ಕಾರ್ಯಭಾರವನ್ನು ವಹಿಸಿಕೊಂಡಿರುವ ಪ್ರತಿಯೊಬ್ಬ ಸದಸ್ಯರುಗಳಿಗೂ ಸಹಕಾರಿಗಳಾಗಿರತಕ್ಕದು.

ಮಹಾ ಸಭೆಗೂ ಉಪಸಭೆಗಳಿಗೂ ತಕ್ಕ ಕಾರ್ಯದರ್ಶಿಗಳನ್ನು ಸರ್ಕಾರದವರೇ ನೇಮಕ ಮಾಡುವರು ಇವರು ಕಾರ್ಯದರ್ಶಿಗಳನ್ನು ನಿಯಾಮಕ ಮಾಡಬೇಕಾದ ಅವಶ್ಯಕತೆಯು ನಮಗೆ ಕಂಡು ಬರುವುದಿಲ್ಲ ಈ ಕಾರ್ಯಭಾರವನ್ನು ವಹಿಸಲು ಸಮರ್ಥರಾದ ಆಫೀಸರುಗಳು ಪ್ರತಿಯೊಂದು ಇಲಾಖೆಯಲ್ಲಿಯೂ ಇದ್ದೇ ಇರಬೇಕು ಇಂಥವರಿಗೆ ಸಾಧಾರಣವಾದ ಅವರ ಕೆಲಸವನ್ನು ಸ್ವಲ್ಪ ಹಗುರಮಾಡಿ ಕೊಟ್ಟಲ್ಲಿ ಈ ಕೆಲಸವನ್ನು ನಡಿಸುವರು ಇಂತಹ ಏರ್ಪಾಡನ್ನು ಮಾಡುವುದರಿಂದ ಖರ್ಚು ಕಡಮೆಯಾಗಿ ರಾಜ್ಯಕ್ಕೆ ಫಾಯಿದೆ ಆಗುವುದು

ಈಗ ಆಗತಕ್ಕ ಬದಲಾವಣೆಗಳೆಲ್ಲಾ ಸ್ವಲ್ಪ ಕಡಮೆ ಶ್ಲಾಘನೀಯವಾದುವುಗಳಾಗಿಯೇ ಇರುತ್ತವೆ ಮಹಾ ಸಭೆಯು ಕೈಕೊಂಡಿರುವ ಕಾರ್ಯಕ್ಕೆ ಇವುಗಳೆಲ್ಲಾ ಸಹಕಾರಿಗಳಾಗಿಯೇ ಇರತಕ್ಕದು. ಈ ಸಭೆಗಳೆಲ್ಲಾ ಸರ್ಕಾರದ ಬೇರೆ ಬೇರೆ ಇಲಾಖೆಗಳೊಂದಿಗೆ ಏಕೀಭವಿಸಿ ಕೆಲಸಮಾಡುತ್ತಾ ಬರುವುದನ್ನು ನೋಡಲಪೇಕ್ಷಿಸುತ್ತೇವೆ

ಟರ್ಕಿ ಬಾಲ್ಕನ್ ಯುದ್ಧವು.

ಕಳೆದ ವಾರದಲ್ಲಿ ಮಳೆ ಮತ್ತು ಶೀತವಾಗಳ ದೆಸೆಯಿಂದ ಯುದ್ಧ ಕಾರ್ಯಗಳು ವಿಶೇಷವಾಗಿ ನಡೆದಿರುವುದಿಲ್ಲ ಶತ್ರುಗಳು ಏಡ್ರಿಯನೋಪಲಿಗೆ ಇನ್ನೂ ಗುಂಡುಗಳನ್ನು ಹೊಡೆಯುತ್ತಲೇ ಬರುತ್ತಾರೆ ಬಲ್ಗೇರಿಯರ ಒಂದು ಆಕಾಶವಿಮಾನವು ಶತ್ರುಗಳ ಕೈವಶವಾಯಿತೆಂದು ಸಮಾಚಾರ ಬಂದಿದೆ

ತುರ್ಕಿಯವರು ಕಾನ್‌ಸ್ಟಾಂಟಿನೋಪಲ್‌ನಲ್ಲಿ ಸರ್ಕಾರದ ಸಾಮಾನುಗಳನ್ನು ವಿಕ್ರಯಿಸಿ ದ್ರವ್ಯಾರ್ಜನೆ ಮಾಡಿಕೊಂಡರುವುದಾಗಿ ತಿಳಿದುಬರುತ್ತದೆ ಇಂತಹ ಕಾರ್ಯವನ್ನು ಅವರು ಪದೇ ಪದೇ ಮಾಡುವುದಕ್ಕಾಗುವುದಿಲ್ಲ ತುರ್ಕಿಯವರಿಗೆ ಸಮಾಧಾನಮಾಡಿಕೊಳ್ಳಬೇಕೆಂಬ ಅಪೇಕ್ಷೆಯು ಈಗಲೂ ಇದೆಯಂತೆ ಇದರಿಂದ ಶತ್ರುಗಳಾದ ಬಲ್ಗೇರಿಯರನ್ನು ಹಿಂದಕ್ಕೆ ಓಡಿಸುವುದು ಇವರಿಗೆ ಅಸಾಧ್ಯವಾಗಿದೆ ಎಂಬುದು ಸಷ್ಟವಾಗಿ ಕಂಡುಬರುತ್ತದೆ

ಅರಸನು ಮಕ್ಕಳನ್ನು ಸತ್ಕರಿಸಿದ್ದು

ನಮ್ಮ ಚಕ್ರವರ್ತಿಯವರಾದ ಐದನೇ ಜಾರ್ಜ್ ಪ್ರಭುಗಳನ್ನು ಆ ದೇಶ ಪಟ್ಟಣದ ಬಾಲಕ ಬಾಲಕಿಯರು "ಮಕ್ಕಳ ದೊರೆಯವರು" ಎಂದು ಹೆಸರಿಟ್ಟುಕೊಂಡು ಕರೆಯುತ್ತಾರೆ ಹೀಗೆ ಕರೆಯುವುದಕ್ಕೆ ಕಾರಣವೇನೆಂದರೆ ಕಳೆದ 1911ನೇ ಇಸ್ವಿ ಜೂನ್ ತಿಂಗಳಲ್ಲಿ ಸಾರ್ವಭೌಮರು ಆ ಮಹಾ ನಗರದಲ್ಲಿರುವ ಸಾವಿರಾರು ಮಕ್ಕಳನ್ನು ತಮ್ಮ ಅರಮನೆಗೆ ಕರೆಸಿಕೊಂಡು ಅವರನ್ನೆಲ್ಲಾ ದಿವ್ಯವಾದ ಭಕ್ಷ್ಯ ಭೋಜ್ಯಗಳಿಂದ ಸತ್ಕರಿಸಿ ತೃಪ್ತಿಪಡಿಸಿದರು ಆ ಮಕ್ಕಳಲ್ಲಿ ಅನೇಕರು ಬಡವರು ಅರಮನೆಯ ಬಾಗಿಲವರೆಗಾದರೂ ಬರುವುದಕ್ಕೆ ಅವರು ಎಂದೂ ಪ್ರಯತ್ನಪಟ್ಟವರಲ್ಲ ಇಂಥಾ ಗಂಡು ಹೆಣ್ಣುಮಕ್ಕಳು ನೆಟ್ಟಗೆ ಅರಮನೆಯೊಳಕ್ಕೆ ಚಕ್ರವರ್ತಿ ದಂಪತಿಗಳು ಅವರ ಕುಮಾರ ಕುಮಾರ್ತೆಗಳು ಕುಳಿತಿರುವಲ್ಲಿಗೆ ಹೋಗಿ ಆ ರಮಣೀಯವಾದ ಅರಮನೆಯನ್ನು ನೋಡಿ ಅವರ ಸಂಗಡ ಪಂಕ್ತಿಯಲ್ಲಿ ಕೂತುಕೊಂಡು ಸಹಭೋಜನವನ್ನು ಮಾಡುವದಕ್ಕೆ ತಕ್ಕ ಅನುಕೂಲವನ್ನು ಮಾಡಿಕೊಟ್ಟ ಚಕ್ರವರ್ತಿಯವರ ಪ್ರೀತಿಯನ್ನು ಸ್ಮರಿಸಿ ಅವರನ್ನು ಹಾಗೆ ಕರೆಯುವದು ಆಶ್ಚರ್ಯವಲ್ಲವಷ್ಟೆ ಅರಸುಗಳಿಗೂ ಪ್ರಜೆಗಳಿಗೂ ಇಂತಹ ಅನ್ಯೋನ್ಯವೂ ಆತಿಥ್ಯಸತ್ಕಾರಗಳು ಬೆಳೆಯುತ್ತಿರಲೆಂದು ಹಾರೈಸುತ್ತೇವೆ

ಐದನೇ ಜಾರ್ಜ್ ಪ್ರಭುಗಳು ಕೆಲವು ಸಾವಿರ ಮಕ್ಕಳನ್ನು ತಮ್ಮ ರಾಜಧಾನಿಯ ಪ್ರಾಸಾದಮಹತದವರಿಂದ ಕರೆಯಿಸಿ ಅವರನ್ನು ಒಂದು ದಿನ ಸತ್ಕರಿಸಿದರು ಅವರು ತಮ್ಮ ಪ್ರಜೆಗಳೆಲ್ಲರನ್ನೂ ಕರೆಸಬೇಕೆಂದೂ ಎಲ್ಲರೂ ಅನ್ನವಸ್ತ್ರಗಳಿಗೆ ಕೊರತೆ ಪಡದೆ ಸುಖವಾಗಿರಬೇಕೆಂದೂ ಅಪೇಕ್ಷೆಪಟ್ಟಾಗ್ಯೂ ಹಾಗೆ ಎಲ್ಲರನ್ನೂ ಕರಿಸಿ ಅವರನ್ನೂ ಸತತವೂ ಸತ್ಕರಿಸುವದು ಮನುಷ್ಯಮಾತ್ರದವರಿಗೆ ಅಸಾಧ್ಯವಷ್ಟೆ

ಈ ಭೂಲೋಕದಲ್ಲಿ ಹುಟ್ಟಿದ ಯಾವನೋ ಒಬ್ಬನು ಎಲ್ಲರನ್ನೂ ಕರೆಸಿ ಅವರನ್ನೆಲ್ಲಾ ಒಂದು ದಿನವಲ್ಲ, ಒಂದು ವಾರ ಅಥವಾ ತಿಂಗಳಲ್ಲ, ಪ್ರತಿನಿತ್ಯವೂ ಅವರ ಜೀವಿತ ಕಾಲವೆಲ್ಲವೂ ಎಂದೆಂದಿಗೂ ಹಸಿವು ದಾಹಗಳಿಲ್ಲದಂತೆ ಪೋಷಿಸಿ ಕಾಪಾಡುತ್ತೇನೆಂದು ಹೇಳಿದರೆ ಅದು ನಮಗೆ ಬಹಳ ಆಶ್ಚರ್ಯವನ್ನುಂಟುಮಾಡುವದಲ್ಲವೆ ? ಇಂತಹ ಶಕ್ತಿಯು ಮನುಷ್ಯಮಾತ್ರದವರಿಗೆ ಅಸಾಧ್ಯವಾದದ್ದು

ಆದರೆ ಒಬ್ಬ ಮನುಷ್ಯನಿದ್ದನು ಆತನು ಮುಂದೆ ಬರುವ ರೀತಿಯಾಗಿ ತಾನು ಹೋದ ಕಡೆಯಲ್ಲೆಲ್ಲಾ ಎಲ್ಲರೂ ಕೇಳುವ ಹಾಗೆ ಸಾರುತ್ತಿದ್ದನು "ಜೀವ ಕೊಡುವ ರೊಟ್ಟಿಯು ನಾನೇ ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ ಪರಲೋಕದಿಂದ ಇಳಿದು ಬರುವ ಜೀವವುಳ್ಳ ರೊಟ್ಟಿಯು ನಾನೇ, ಈ ರೊಟ್ಟಿಯನ್ನು ಯಾವನಾದರೂ ತಿಂದರೆ ಅವನು ಸದಾಕಾಲ ಬದುಕುವನು ದುಡಿಯಿರಿ ಆದರೆ ಕೆಟ್ಟುಹೋಗುವ ಆಹಾರಕ್ಕಾಗಿ ದುಡಿಯಬೇಡಿರಿ ಇಂಥಾ ಆಹಾರವನ್ನು ಮನುಷ್ಯಕುಮಾರನಾದ ನಾನು ನಿಮಗೆ ಕೊಡುವೆನು ಇದಕ್ಕಾಗಿ ತಂದೆಯಾದ ದೇವರು ನನ್ನನ್ನು ನೇಮಿಸಿ ಮುದ್ರೆ ಹಾಕಿದ್ದಾನೆ ಪರಲೋಕದಿಂದ ಇಳಿದು ಬರುವ ರೊಟ್ಟಿ ಎಂಥಾದ್ದೆಂದರೆ ಅದನ್ನು ತಿಂದವನು ಸಾಯುವದಿಲ್ಲ" ವೆಂದು ಸಾರಿದನು

ಇದು ಪಾರಮಾರ್ಥಿಕವಾದ ಆತ್ಮೀಯ ಜೀವವನ್ನು ಕುರಿತು ಹೇಳಿದೆ ಎಂದು ಪರಿಷ್ಕಾರವಾಗಿ ತಿಳಿಯುತ್ತದೆ ನಾವು ಎಷ್ಟು ಒಳ್ಳೆ ಆಹಾರವನ್ನು ಊಟ ಮಾಡಿದರೂ ದೇಹವನ್ನು ಜೀವಾತ್ಮನು ಒಂದು ದಿನ ಬಿಟ್ಟು ಹೋಗಬೇಕು ಈ ಜಡದೇಹದಿಂದೊಡಗೂಡಿ ಯಾವಾಗಲೂ ನಾವು ಬದುಕಿರಬೇಕೆಂದು ಯಾರೂ ಅಪೇಕ್ಷಿಸಬಾರದು ಆದರೆ ದೇವರಲ್ಲಿ ಜೀವಾತ್ಮನು ಅನ್ಯೋನ್ಯವನ್ನು ಹೊಂದಿ ಆತನ ಸಂಗಡ ಸದಾ ನಿತ್ಯಜೀವವನ್ನು ಹೊಂದಿ ಇರುವದೇ ಪ್ರತಿಯೊಬ್ಬ ಮನುಷ್ಯನ ಉದ್ದೇಶವಾಗಿರಬೇಕು ಜೀವ ಕೊಡುವ ರೊಟ್ಟಿ ನಾನೇ ಎಂದು ಸಾರಿದವನು ಯೇಸು ಸ್ವಾಮಿಯೇ ಆತನು ಇನ್ನೂ ಹೇಳಿದ್ದನ್ನು ಕೇಳಿರಿ ನನ್ನನ್ನು ಹಿಂಬಾಲಿಸಿ ನನ್ನ ಶಿಷ್ಯನಾಗುವವನು ನನ್ನಲ್ಲಿ ಇರುತ್ತಾನೆ ನಾನು ಅವನಲ್ಲಿ ಇರುತ್ತೇನೆ ಜೀವ ಸ್ವರೂಪನಾದ ನನ್ನ ತಂದೆಯು ನನ್ನನ್ನು ಕಳುಹಿಸಿ ಕೊಟ್ಟಿರಲಾಗಿ ನಾನು ತಂದೆಯಿಂದ ಜೀವಿಸುತ್ತೇನೆ ಆದರಂತೆ ನನ್ನ ಶಿಷ್ಯನಾಗುವವನು ನನ್ನಿಂದ ಜೀವಿಸುವನು ಎಂಬುವದೇ

ಇಂಥಾ ಅಮಾನುಷವಾದ ವಾಗ್ದತ್ತವನ್ನು ಮಾಡಿ ಹೀಗೆಂತ ಲೋಕದ ಸಕಲ ಜನಗಳನ್ನೂ ನಿತ್ಯಜೀವ ಹೊಂದುವದಕ್ಕೆ ತನ್ನ ಬಳಿಗೆ ಬರಬೇಕೆಂದು ಕರೆಯುವದಕ್ಕೆ ಯೇಸು ಕ್ರಿಸ್ತನು ಯಾರು ? ಹೀಗೆ ಸಕಲರನ್ನೂ ತನ್ನ ಬಳಿಗೆ ಬಂದರೆ ತೃಪ್ತಿಪಡಿಸುವ ಶಕ್ತಿಯುಳ್ಳವನಾಗಿ ಆತನು ಇದ್ದಾನೋ ? ವಾಚಕರು ಈ ವಿಷಯಗಳನ್ನು ಕುರಿತು ಯೋಚಿಸಬೇಕೆಂದು ಅಭಿಲಾಷಿಸುತ್ತೇವೆ ಆತನು ಹೇಳುವ ಈ ಮಾತುಗಳು ನಿಜವೋ ? ಅಲ್ಲವೋ ? ಎಂದು ತಿಳಿಯುವದಕ್ಕೆ ಒಂದೇ ಒಂದು ಮಾರ್ಗವುಂಟು ಅದೇನಂದರೆ ಯೇಸು ಸ್ವಾಮಿಯನ್ನು ತಮ್ಮ ಗುರುವೆಂತ ಒಪ್ಪಿಕೊಂಡು ಆತನ ಶಿಷ್ಯರಾಗುವದೇ ಹೀಗೆ ಆತನು ಪರೀಕ್ಷಿಸಿದವರು ಅನೇಕರಿದ್ದಾರೆ ಅವರು ತಮ್ಮ ಅನುಭವದಿಂದ ಯೇಸುಸ್ವಾಮಿ ಹೇಳಿರುವ ಮಾತುಗಳು ಸತ್ಯವಾಗಿವೆಯೆಂದು ಸಾಕ್ಷಿ ಹೇಳುತ್ತಿದ್ದಾರೆ ಯೇಸುಸ್ವಾಮಿಯನ್ನು ನಂಬಿ ಆತನ ಶಿಷ್ಯನಾದದ್ದರಿಂದ ನನಗೆ ಪಾಪಪರಿಹಾರವು ದೇವರ ಸಂಗಡ ಅನ್ಯೋನ್ಯವೂ ಲಭ್ಯವಾದವೆಂತ ಸಂದೇಹಪಡದೆ ಹೇಳುತ್ತಾರೆ ವಾಚಕರು ತಾವೇ ಖುದ್ದಾಗಿ ಈ ವಿಷಯವನ್ನು ಪರೀಕ್ಷಿಸಿ ಅನುಭವಪೂರ್ವಕವಾಗಿ ತಮ್ಮನ್ನು ತೃಪ್ತಿಗೊಳಿಸಿಕೊಳ್ಳಬಹುದು

ಆದರೆ ಈ ವಿಷಯಗಳನ್ನು ಕೇಳಿ ತಿಳಿದ ಮೇಲೆ ಲಕ್ಷ್ಯವಿಡದೆ ಪರೀಕ್ಷಿಸದೆ ಹೋಗಿಲ್ಲದೆ ಇದ್ದರೆ ಏನು ? ಈ ವಿಷಯದಲ್ಲಿ ಪುನಃ ಯೇಸು ಸ್ವಾಮಿಯ ಮಾತುಗಳನ್ನೇ ಕೇಳಿರಿ ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು ಆತನನ್ನು ನಂಬುವವನಿಗೆ ತೀರ್ಪಾಗುವದಿಲ್ಲ ಆದರೆ ನಂಬದವನಿಗೆ ದೇವರ ಒಬ್ಬನೇ ಮಗನನ್ನು ನಂಬದೆ ಹೋದದರಿಂದ ಆಗಲೆ ತೀರ್ಪು ಆಗಿಹೋಯಿತು ಆ ತೀರ್ಪು ಏನಂದರೆ- ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟವುಗಳಾಗಿರುವದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು ಕೆಟ್ಟದ್ದನ್ನು ಮಾಡುವವರು ಬೆಳಕನ್ನು ಸಹಿಸುವದಿಲ್ಲ ತಮ್ಮ ಕೃತ್ಯಗಳು ದುಷ್ಕೃತ್ಯಗಳಾಗಿ ತೋರಿಬಂದಾವೆಂದು ಬೆಳಕಿಗೆ ಬರುವದಿಲ್ಲ

ಬಳ್ಳೇಕರದ ವೃತ್ತಾಂತಗಳು

ಶ್ರೀಮದ್ಯುವರಾಜರವರು ಬರುವ ತಿಂಗಳು 22ಕ್ಕೆ ಇಂಗ್ಲಾಂಡಿಗೆ ಪ್ರಯಾಣಬೆಳಿಸುವುದಾಗಿ ತಿಳಿದು ಬರುತ್ತದೆ

* * *

ಸರ್ವೆ ಸೂಪರೆಂಟರಾದ ಮಿ ರಾಮರಾಯರು ರಜಾ ಪಡೆದಿರುವುದರಿಂದ ಅವರು ಬರುವವರೆಗೂ ಮಿ|| ವಾರದಾಚಾರಯರು ಅವರ ಕೆಲಸಕ್ಕೆ ನೇಮಕವಾಗುತ್ತಾರೆ

* * *

I ನೇ ಕೌನ್ಸಿಲರ್ ಮಿ ಹೆಚ್ ವಿ ನಂಜುಂಡಯ್ಯನವರು ಬೆಂಗಳೂರಲ್ಲಿ ತಮ್ಮ ಕುಮಾರ್ತೆಯ ಲಗ್ನಮಹೋತ್ಸವ ಕಾರ್ಯವನ್ನು ವಿಜೃಂಭಣೆಯಿಂದ ನಡಿಸುತ್ತಿರುವರು

* * *

ಶೃಂಗೇರಿ ಮಠದ ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳವರು ಈ ಸಂಸ್ಥಾನದ ಸಿವಿಲ್ ಕೋರ್ಟುಗಳಿಗೆ ತಾನೇ ಖುದ್ದಾಗಿ ದಯಮಾಡಿಸಬೇಕಾದುದಿಲ್ಲವೆಂದು ವಿನಾಯಿಸಲ್ಪಟ್ಟಿದ್ದಾರೆ

* * *

ರಾಜಧಾನಿಯ ಮುನಿಸಿಪಾಲಿಟಿಯು ನಗರದಲ್ಲಿ ಒಲಿತ್ತರಿಸಿ ಎಮ್ಮೆ ಹಾಕುವುದು 1911 ನೇ ಇಸವಿ ಜೂನ್ ಆಖೈರ್ ವರೆಗೆ ಬಾಲ್ತಿಯಲ್ಲಿರಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿರುತ್ತಾರೆ

* * *

ಬಾಬು ಎಂಬ ಒಬ್ಬ ಕೂಲಿಯವನು ಎರಡು ತೊಲ ಗಾಂಜವನ್ನು ಲೈಸೆನ್ಸ್ ಇಲ್ಲದೆ ಬೆಂಗಳೂರಿಗೆ ತಂದದ್ದಕ್ಕಾಗಿ ಮ್ಯಾಜಿಸ್ಟ್ರೇಟರು ಅವನಿಗೆ ನಾಲ್ಕು ರೂಪಾಯಿ ಜುಲ್ಮಾನೆ ವಿಧಿಸಿದರು

* * *

ನಂಜನಗೂಡಿನಲ್ಲಿ ಕಾಲರಾ ಉಪದ್ರವು ತಲೆದೋರಿ ದಿನ ಒಂದಕ್ಕೆ 10 ಮರಣಗಳಾಗುತ್ತಿರುವ ಹಾಗೂ ಕಳೆದ ಪೌರ್ಣಮಿಯಲ್ಲಿ ಅಲ್ಲಿನ ಉತ್ಸವಕ್ಕೆ ಹೋಗಿ ಹಿಂತಿರುಗಿ ರಾಜಧಾನಿಗೆ ಬಂದ ಅನೇಕರಿಗೆ ಅನುಮಾನಾಸ್ಪದವಾದ ಜಾಡ್ಯ ಆಗುತ್ತಿರುವ ಹಾಗೂ ಅವರಲ್ಲಿ ಕೆಲವರು ತೀರಿಹೋದ ಹಾಗೂ ತಿಳಿದು ಬರುತ್ತದೆ

* * *

ರಾಜಧಾನಿಯಲ್ಲಿ ಪ್ರಾಟೆಸ್ಟಾಂಟ್ ಕ್ರೈಸ್ತಮಂಡಲಿಯವರು ಬಹುದಿಂದಲೂ ತಮ್ಮ ಪಾಲಕರಾಗಿದ್ದು ಈಗ ಕೆಲಸದಿಂದ ನಿವೃತ್ತರಾಗಿರುವ ರೆ ಪಾದ್ರಿಗಳಾದ ಟಿ ಲೂಕ್ಕಿಯನವರಿಗೆ ಕಳೆದ ೨೧ ನೇ ಶುಕ್ರವಾರ ಸಾಯಂಕಾಲ ಒಂದು ವಂದನಾ ಪತ್ರಿಕೆಯನ್ನು ಒಪ್ಪಿಸಿ ಅವರಲ್ಲಿ ತಮಗಿದ್ದ ಭಕ್ತಿ ವಿಶ್ವಾಸಗಳನ್ನು ಪ್ರಕಾಶಪಡಿಸಿದರು

* * *

ಗುಬ್ಬಿ ತಾಲ್ಲೂಕು ಚೆನ್ನಬಸವಯ್ಯನ ಮಗ ಸುಮಾರು ಹತ್ತು ವರುಷದ ಶಿವರಾಮು ಎಂಬುವನು ರಾತ್ರಿಯಲ್ಲಿ ತನ್ನ ಮನೆಯಲ್ಲಿ ಗಾಡಿಗಳು ತಿರುಗಾಡುವ ಬೀದಿಯಲ್ಲಿ ಮಲಗಿರಲು ಆ ಮಾರ್ಗವಾಗಿ ಬಂದ ಯಾವುದೋ ಒಂದು ಗಾಡಿ ಚಕ್ರವು ಆ ಹುಡುಗನ ಹೊಟ್ಟೆಯ ಮೇಲೆ ಹರಿದು ತುಂಬಾ ಜಖಂ ಮಾಡಿದಂತೆ ಕೂಡಲೆ ಅವನನ್ನು ಆಸ್ಪತ್ರೆಗೆ ಸಾಗಿಸಿದರೆಂದೂ ತಿಳಿದು ಬರುತ್ತದೆ

* * *

ಬೆಂಗಳೂರು ದಂಡಿನಲ್ಲಿ ಪಚ್ಚಗಾಡು ಎಂಬುವನು ಮುನಿಸಾಮಿಯೊಂದಿಗೆ ಜಗಳಮಾಡುತ್ತಿರುವಲ್ಲಿ ಚಾಕನ್ನು ತೆಗೆದು ಅವನ ಎದೆಯ ಮೇಲೆ ಮೂರು ಆ ಗುಲ ಆಳವಾದ ಗಾಯಮಾಡಿದನು ಕೂಡಲೇ ಮುನಿಸಾಮಿ ಪ್ರಜ್ಞೆ ತಪ್ಪಿದ್ದರಿಂದ ಆಸ್ಪತ್ರೆಗೆ ತೆಗೆದುಕೊಂಡು ಹೋದರು ಪಚ್ಚಗಾಡು ಈ ಘೋರ ಕೃತ್ಯವನ್ನು ನಡಿಸಿದ್ದಕ್ಕಾಗಿ ಅವನಿಗೆ ಮೂರು ತಿಂಗಳ ಕಠಿಣ ಸಜಾ ಶಿಕ್ಷೆಯು ವಿಧಿಸಲ್ಪಟ್ಟಿದೆ

* * *

ಮೈಸೂರು ಸರ್ಕಾರದವರು ತುಮಕೂರು ಡಿಸ್ಟ್ರಿಕ್ಟ್ ದೇವರಾಯದುರ್ಗ ಸ್ಟೇಟ್ ಫಾರೆಸ್ಟಿನಲ್ಲಿ ಬೇಟೆಯಾಡಬಾರದೆಂದು ಹಿಂದೆ ಕೊಟ್ಟಿದ್ದ ಹುಕುಮನ್ನು ಖಾಯಂ ಮಾಡಿರುತ್ತಾರೆ ಆದಕಾರಣ ಸರ್ಕಾರದವರ ಅಪ್ಪಣೆಯಿಲ್ಲದೆ ಯಾರಾದರೂ ಅಲ್ಲಿ ಬಂದೂಕಿನಿಂದ ಹೊಡೆಯುವುದಾಗಲಿ, ಮೀನು ಹಿಡಿಯುವುದಾಗಲಿ, ಬೇರೆ ಯಾವ ರೀತಿಯಲ್ಲಾಗಲಿ ಬೇಟೆಯಾಡಕೂಡದೆಂದು ಹುಕುಂ ಕೊಟ್ಟಿರುತ್ತಾರೆ

ಬೆಂಗಳೂರಲ್ಲಿ ಅಬ್ದಾರ್ ಉದ್ದೀನ್ ರಹೀಂ ಎಂಬ ಒಬ್ಬ ಪೋಸ್ಟಾಫೀಸ್ ಗುಮಾಸ್ತನ ಮೇಲೆ ಅವನು ಎರಡು ಭಾಗಗಳನ್ನು ಬೇರೆ ಬೇರೆ ತಾರೀಖುಗಳಲ್ಲಿ ಹಣವನ್ನು ಅಥವಾ ದುರುಪಯೋಗಪಡಿಸಿದನು ಎಂಬ ಎರಡು ಚಾರ್ಜುಗಳು ಹಾಕಲ್ಪಟ್ಟು ಇವರಡರಲ್ಲಿಯೂ ಅವನು ಅಪರಾಧಿಯೆಂದು ಕಂಡು ಬಂದುದರಿಂದ ಮ್ಯಾಜಿಸ್ಟ್ರೇಟರು ಅವನಿಗೆ ಆರು ತಿಂಗಳ ಕಠಿಣ ಸಜಾ 50 ರೂಪಾಯಿ ಜುಲ್ಮಾನೆ, ಜುಲ್ಮಾನೆಯನ್ನು ಕೊಡದೆ ಇದ್ದ ಪಕ್ಷಕ್ಕೆ ಇನ್ನೊಂದು ತಿಂಗಳ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿರುತ್ತಾರೆ

* * *

ಶಿವಗಂಗಾ ರೋಮನ್ ಕೆಥೋಲಿಕರ ದೇವಸ್ಥಾನದಲ್ಲಿ ಈ ಕೆಳಗೆ ಹೇಳಿದ ಎರಡು ಸಾಮಾನುಗಳು ಕಳುವಾಗಿರುತ್ತವೆಂದೂ ಅವುಗಳನ್ನು ಪತ್ತೆಮಾಡಿದವರಿಗೆ ಅಲ್ಲಿನ ಫಾದರ್ ಪಾಲ್‌ನಾಯುಸ್ ರವರು ಒಂದು ನೂರು ರೂಪಾಯಿ ಬಹುಮಾನ ಕೊಡುವುದಾಗಿ ಪ್ರಕಟಿಸಿರುತ್ತಾರೆ ಆ ಪದಾರ್ಥಗಳೇನೆಂದರೆ ಅವರು ಆರಾಧನೆಗಾಗಿ ಉಪಯೋಗಿಸುತ್ತಿದ್ದ ಗಿಲ್ಟ್ ಮಾಡಿದ ಚಾಲಿಸ್ ಎಂಬ ಒಂದು ಪಾತ್ರೆಯು ಮೇಲ್ಭಾಗ ಸುಮಾರು 30 40 ರೂಪಾಯಿ ಬೆಲೆಯುಳ್ಳದ್ದು ಎರಡನೇದು ಪುಸ್ತಕ ಇಡುವ ಗಿಲ್ಟ್ ಮಾಡಿದ ಪಿತ್ತಾಳೆಯ ಪೆಟ್ಟಿಗೆ ಒಂದು ಇದಕ್ಕೆ ಹಸುರು ಗಾಜಿನ ಹಿಡಿಯಿರುವುದು ಅದರ ಮಧ್ಯೆ ಇಂಗ್ಲೀಷ್ ಅಕ್ಷರಗಳನ್ನು ಕೆತ್ತಿರುವುದು ಇದರ ಕ್ರಯ 30 ರೂಪಾಯಿ

* * *

ಬೆಂಗಳೂರು ತಾ|| ಕೆತ್ತಿಪೇಟೆಯಲ್ಲಿ ಕಾಡು ಎಂಬ ಆರು ವರುಷದ ಒಬ್ಬ ಹುಡುಗನೂ ನಾಗಮ್ಮ ಎಂಬ ನಾಲ್ಕು ವರುಷದ ಒಬ್ಬ ಹುಡುಗಿಯೂ ತಮ್ಮ ಮನೆ ಸಮೀಪದಲ್ಲಿದ್ದ ದನ ಕಟ್ಟುವ ಒಂದು ಹುಲ್ಲು ಜೋಪಡಿಯಲ್ಲಿ ಆಟವಾಡುತ್ತಿರುವಾಗ ಕಾಡು ಎಂಬವನು ವಿನೋದಕ್ಕಾಗಿ ಒಂದು ಬೆಂಕಿ ಕಡ್ಡಿಯನ್ನು ಹಚ್ಚಿ ಅಲ್ಲಿದ್ದ ಹುಲ್ಲಿನ ರಾಶಿಗೆ ಇಟ್ಟನು ಸ್ವಲ್ಪ ಹೊತ್ತಿನೊಳಗಾಗಿ ಹೊಗೆ ಸುತ್ತಿಕೊಂಡದ್ದರಿಂದ ಹೊರಗೆ ಬರುವುದಕ್ಕೆ ದಾರಿಯನ್ನು ಕಾಣದೆ ಅವರು ಬೆಂಕಿಯಲ್ಲಿ ಸಿಕ್ಕಿಕೊಂಡರು ಕೂಡಲೇ ಹತ್ತಿರ ಇದ್ದವರು ಓಡಿಬಂದು ಬಹು ಸಾಹಸಪಟ್ಟು ಆ ಇಬ್ಬರು ಮಕ್ಕಳನ್ನು ಬೆಂಕಿಯಿಂದ ಹೊರಗೆ ತೆಗೆದರು ಅಷ್ಟರಲ್ಲಿ ಅವರ ಮೈ ಬಹಳ ಸುಟ್ಟುಹೋಗಿತ್ತು ಅವರನ್ನು ಈಗ ಆಸ್ಪತ್ರೆಯಲ್ಲಿಟ್ಟು ಇಲಾಜು ಮಾಡುತ್ತಿದ್ದಾರೆ

ಮೈಸೂರು ಗೆಜೆಟ್ ಸಂಗ್ರಹ

ಗುಡಿಬಂಡೆ ಆಕ್ಟಿಂಗ್ ಮೆ|| ಅಮಲ್ದಾರ್ ಮಿ|| ಟಿ ಟಿ ರಾಮಚಂದ್ರಯ್ಯನವರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜವನ್ನು ಇನ್ನೂ ಇಪ್ಪತ್ತೆಂಟು ದಿನಗಳವರೆಗೂ ಹೆಚ್ಚು ಮಾಡಿದೆ

ತುಮಕೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರ್ ಬಿ ಎಸ್ ನಂಜಪ್ಪನವರನ್ನು ಬೆಂಗಳೂರು ವಿಕ್ಟೋರಿಯ ಆಸ್ಪತ್ರೆಗೂ, ಬೆಂಗಳೂರು ವಿಕ್ಟೋರಿಯ ಆಸ್ಪತ್ರೆ ಅ|| ಸರ್ಜನ್ ಮಿ|| ಸಿ ಅಪ್ಪಾದುರೈ ಮೊದಲಿಯಾರ್ ರವರನ್ನು ತುಮಕೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರಾಗಿ ತುಮಕೂರು ಡಿಸ್ಟ್ರಿಕ್ಟಿಗೂ ವರ್ಗವಾಗಿರುತ್ತಾರೆ

ಅ|| ಸರ್ಜನ್ ಮಿ|| ಎಫ್ ಸೋರೋನಾ ರವರು ತಮ್ಮ ರಜಾ ಪೂರೈಸಿದ ಬಳಿಕ ಬೆಂಗಳೂರು ಗೌರ್ನಮೆಂಟ್ ತಿರುಬಿನ ಶಾಲನ್ನು ತಯಾರುಮಾಡುವ ಶಾಲೆಯ ಚಾರ್ಜನ್ನು ತೆಗೆದುಕೊಳ್ಳಬೇಕಾಗಿ ನೇಮಿಸಲ್ಪಟ್ಟಿರುತ್ತಾರೆ

ಹೊಸಕೋಟೆ ತಾಲ್ಲೂಕು ಅಮಲ್ದಾರ್ ಮಿ|| ಕೇಶವಾಚಾರ್ಯರವರಿಗೆ ಇದೇ ಮಾರ್ಚಿ 11 ನೇ ತಾರೀಖು ಲಾಗಾಯ್ತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯ್ತು ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ

ಮದರಾಸ್ ರಾಯಪುರಂ ಮೆಡಿಕಲ್ ಸ್ಕೂಲಿನ ವಾರ್ಷಿಕೋತ್ಸವ

ಕಳೆದ 22 ನೇ ತಾರೀಖು ಶನಿವಾರವು ಸದರಿ ಸ್ಕೂಲಿನ ವಿದ್ಯಾರ್ಥಿಗಳಿಗೆಲ್ಲಾ ವಿನೋದಕರವಾದ ದಿವಸವಾಗಿತ್ತು ಈ ಸ್ಕೂಲಿನ ವಿದ್ಯಾರ್ಥಿ ಆಲಯದ ಸಮೀಪದಲ್ಲಿರುವ ಮೈದಾನವು ತೋರಣಗಳಿಂದಲೂ ಬಾವುಟಗಳಿಂದಲೂ ಚೆಲುವಾಗಿ ಅಲಂಕರಿಸಲ್ಪಟ್ಟಿತ್ತು ಮೈದಾನದ ಮಧ್ಯದಲ್ಲಿ ಅತಿಥಿಗಳನ್ನು ಕುಳ್ಳಿರಿಸಿಕೊಳ್ಳುವುದಕ್ಕೋಸ್ಕರ ಒಂದು ಡೇರೆ ಹಾಕಲ್ಪಟ್ಟಿತ್ತು ಇದರ ಸಮೀಪದಲ್ಲೇ ವಿದ್ಯಾರ್ಥಿ ಆಲಯದ ಕಟ್ಟಡದ ಮಧ್ಯದಲ್ಲಿ ತಯಾರುಮಾಡಿದ ರಂಗಸ್ಥಳವು ಮೈದಾನದಲ್ಲಿ ಇರುವವರ ಮತ್ತು ಮೈದಾನದ ಆಚೆ ಕಡೆ ಟ್ರಾಂ ಗಾಡಿಯಲ್ಲಿ ಓಡುವ ಭಾಷೆಯ ವರ್ಗದಲ್ಲಿ ಸಂಚರಿಸತಕ್ಕವರ ಕಣ್ಣುಗಳನ್ನು ತನ್ನ ಕಡೆಗೆ ಆಕರ್ಷಿಸುತ್ತಿತ್ತು ಮಧ್ಯಾಹ್ನ 11 ಘಂಟೆಯಿಂದ 4 ರವರೆಗೂ ವಿದ್ಯಾರ್ಥಿಗಳೆಲ್ಲಾ ಬಂದು ಕೂಡಿದರು ನಂತರ 4½ ಘಂಟೆಗೆ ಒಂದು ಎರಡು ಮತ್ತು ಮೂರನೆ ವರುಷದ ಹುಡುಗರು, 4 ನೇ ವರುಷದ ಹುಡುಗರನ್ನು ತಿಂಡಿತೀರ್ಥ ಮುಂತಾದವುಗಳಿಂದ ಆದರಿಸಿ ಅತ್ಯಂತ ದುಃಖದಿಂದಲೂ ಮತ್ತು ಅತ್ಯಂತ ಸಂತೋಷದಿಂದಲೂ ಅಗಲಿದರು ಇಷ್ಟು ದಿವಸದಿಂದಲೂ ತಮಗಿಂತ ಕೆಳಗಿನ ತರಗತಿಗಳಲ್ಲಿ ಇರುವ ವಿದ್ಯಾರ್ಥಿಗಳನ್ನು ಆಸ್ಪತ್ರೆಯಲ್ಲಿ ಮತ್ತು ಸ್ಕೂಲಿನಲ್ಲೂ ಬಹಳವಾಗಿ ಆದರದಿಂದ ಸಹಾಯಮಾಡುತ್ತಾ ಬುದ್ಧಿವಾದವನ್ನು ಹೇಳಿಕೊಡುತ್ತಾ ಇದ್ದ 4 ನೇ ವರುಷದ ಹುಡುಗರನ್ನು ಅಗಲಿದ ದುಃಖಕ್ಕೆ ಕಾರಣ. ಸಂತೋಷವಾದ್ದಕ್ಕೆಂದರೆ—ಇವರು ಇನ್ನು ಕೆಲವು ದಿನಗಳಲ್ಲೇ ಸಬ್ ಅಸಿಸ್ಟೆಂಟ್ ಸರ್ಜನ್ನರಾಗಿ, ಇಂಡಿಯಾ ಮತ್ತು ಬರ್ಮಾ ದೇಶದ ನಾನಾ ಕಡೆಗಳಿಗೆ ಹೋಗಿ, ತಮ್ಮ ವಿದ್ಯಾಕುಶಲತೆಯಿಂದ ಎಲ್ಲರಿಗೂ ಬೇಕಾಗಿರುವ ವೈದ್ಯ ಚಿಕಿತ್ಸೆಯನ್ನು ಮಾಡಿ, ತಮಗೂ ಕೀರ್ತಿಯನ್ನು ಈ ಕೆಲಸಕ್ಕೆ ಆಸ್ಪದರನ್ನಾಗಿ ಮಾಡಿದ ಈ ವಿದ್ಯಾಲಯಕ್ಕೂ ಕೀರ್ತಿಯನ್ನು ತರುವರೆಂಬ ಆಶೆಯೇ ಈ ಸಮಯದಲ್ಲಿ ಸಹಾಯೋಪಾಧ್ಯಾಯರಾದ ಮ|| ಆರ್ ಮಹದೇವೈಯರ್ ಎಮ್ ಬಿ ಸಿ ಎಮ್ ರವರು ಸಂತೋಷದಿಂದ 4 ನೇ ವರುಷದ ಹುಡುಗರಿಗೆ ತಮ್ಮ ಅನುಭವಯುಕ್ತ ಉಪನ್ಯಾಸದಿಂದ ಬಹಳ ಉಪಯೋಗಕರವಾದ ಬುದ್ಧಿವಾದವನ್ನು ಹೇಳಿದರು ತರುವಾಯ 5½ ಘಂಟೆ ತನಕ ಆಟಪಾಟಗಳು ನಡೆದವು ಇದನ್ನು ನೋಡುವುದಕ್ಕೆ ಜನಗಳು ಕಿಕ್ಕಿರಿಯುವಂತೆ ನೆರೆದಿದ್ದರು ವಿದ್ಯಾರ್ಥಿ ಆಲಯದ ಸಮೀಪ ಬೇರೆ ವಿದ್ಯಾರ್ಥಿಗಳು, ಅತಿಥಿಗಳು ಮುಂತಾದವರುಗಳಿಗೆಲ್ಲಾ ಫಲಾಹಾರ, ರೊಟ್ಟಿ ಬಿಸ್ಕತ್ತು, ಲಾಡು, ಬಾದಾ ಬೂಂದಿ ಮುಂತಾದ ಪದಾರ್ಥಗಳು, ಸೋಡಾ, ಲೆಮನೇಡು, ಲೈಂಜೂಸ್ ಮೊದಲಾದ ಪಾನೀಯಗಳು ಧಾರಾಳವಾಗಿ ಹಂಚಲ್ಪಟ್ಟವು ತರುವಾಯ ಮದರಾಸ್ ಗೌರ್ನಮೆಂಟಿನ ಸರ್ಜನ್ ಜನರಲ್ ರವರಾದ ಡಬ್ಲ್ಯು ಬಿ ಬಾನರ್ಮನ್ ಎಮ್ ಡಿ, ಸಿ ಎಸ್ ಐ, ಐ ಎಮ್ ಎಸ್ ರವರು ಅಗ್ರಾಸನವನ್ನು ಅಲಂಕರಿಸಿದರು ಇವರ ಧರ್ಮಪತ್ನಿಯವರು ಇವರ ಪಕ್ಕದಲ್ಲೇ ಇದ್ದರು ಸದರಿ ಸ್ಕೂಲಿನ ಸೂಪರಿಂಟೆಂಡೆಂಟರು ಮತ್ತು ಅವರ ಪತ್ನಿಯವರು ಉಪಾಧ್ಯಾಯರುಗಳು ಮತ್ತು ಇತರ ಹಿಂದೂ ಮುಸಲ್ಮಾನ್ ಮತ್ತು ಯುರೋಪಿಯನ್ ಅತಿಥಿಗಳು ರಂಗಸ್ಥಳದ ಸಮೀಪದಲ್ಲಿ ಕೂತಿದ್ದರು ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮ|| ಎ ಎಮ್ ರಾಮನಾಥ ಮೊದಲಿಯಾರ್ ಎಲ್ ಎಮ್ ಎಸ್ ರವರು ಆಟಪಾಟಗಳಲ್ಲಿ ಗೆದ್ದ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಕೂಗಿ ಕರೆದರು ಸರ್ಜನ್ ರವರ ಧರ್ಮಪತ್ನಿಯವರೇ ತಮ್ಮ ಸ್ವಹಸ್ತದಿಂದ ಇವರಿಗೆಲ್ಲಾ ಬಹುಮಾನಗಳನ್ನು ಹಂಚಿದರು ಇದಾದ ಮೇಲೆ ಜಯಧ್ವನಿಗಳ ಮಧ್ಯದಲ್ಲಿ ಸರ್ಜನ್ ರವರು ಎದ್ದು ನಿಂತು ಈ ವಿದ್ಯಾಲಯದಲ್ಲಿ ಓದುವವರೆಲ್ಲರಿಗೂ ಹೇಳಿದ ಉಪನ್ಯಾಸದ ಸಾರಾಂಶವೇನೆಂದರೆ —

ಈ ರಾಯಪುರಂ ಮೆಡಿಕಲ್ ಸ್ಕೂಲು ಬಹಳ ಚತುರರಾದ ಉಪಾಧ್ಯಾಯರುಗಳಿಂದ ಕೂಡಿದ್ದಾಗಿ, ಈಗಿನ ಕಾಲಕ್ಕೆ ಈ ದೇಶದಲ್ಲಿ ಅತ್ಯವಶ್ಯಕವಾದ ಈ ವಿದ್ಯೆಯನ್ನು ಹರಡುವದರಲ್ಲಿ ಪ್ರಖ್ಯಾತಿಹೊಂದಿದೆ ಬಡವರಿಗೂ ಮತ್ತು ನರಳುವವರಿಗೂ ಸಹಾಯಮಾಡುವ ಈ ಘನವಾದ ಕೆಲಸಕ್ಕೆ ನಿಮ್ಮನ್ನು ತರಬೇತಿ ಯತ್ತು ಮಾಡಿದ ಈ ವಿದ್ಯಾಲಯದ ಖ್ಯಾತಿಯನ್ನು ಸರ್ವದಾ ಕಾಪಾಡುವದು ನಿಮ್ಮ ಕರ್ತವ್ಯವಾಗಿದೆ ನೀವು ಆಟಪಾಟದಲ್ಲಿ ಎಷ್ಟು ಚಟುವಟಿಕೆಯಾಗಿರುತ್ತೀರೋ ಹಾಗೆಯೇ ನಿಮ್ಮ ವೈದ್ಯದ ಕಾರ್ಯದಲ್ಲೂ ಇರಬೇಕು ಮದರಾಸಿನಲ್ಲಿ ತಯಾರಾದ ಸಬ್ ಅಸಿಸ್ಟೆಂಟ್ ಸರ್ಜನ್ನರುಗಳು ಇತರ ಕಡೆ ತಯಾರಾಗಿರುವವರಿಗಿಂತ ಉತ್ತಮರಾಗಿರುತ್ತಾರೆ ಈ ಸಂದರ್ಭದಲ್ಲಿ ತಾವು ಬರ್ಮಾದಲ್ಲಿರುವಾಗ್ಗೆ ತಮ್ಮ ಕೈ ಕೆಳಗೆ ಮದರಾಸಿನಲ್ಲಿ ಅಲ್ಲದೆ ಎಲ್ಲೋ ಉತ್ತರ ದೇಶದಲ್ಲಿ ತಯಾರಾದ ಸಬ್ ಅಸಿಸ್ಟೆಂಟ್ ಸರ್ಜನ್ ಇದ್ದದ್ದರಿಂದ ತಮ್ಮ ಕಾರ್ಯಗಳು ಸರಿಯಾಗಿ ನಡೆಯದೆ ಇದ್ದ ತಮ್ಮ ಅನುಭವವನ್ನು ನೆನಸಿಕೊಂಡು, ನಾನು ನನ್ನ ಕೈಕೆಳಗೆ ಒಬ್ಬ ನೇಟಿವ್ ಹಕೀಂನನ್ನ ಕೆಲಸಕ್ಕೆ ಇಟ್ಟುಕೊಂಡ ಹಾಗಿತ್ತೇ ಹೊರತು ಇಂಗ್ಲೀಷ್ ರೀತಿಯಲ್ಲಿ ವಿದ್ಯಾಭ್ಯಾಸಪಡೆದ ಸಬ್ ಅಸಿಸ್ಟೆಂಟ್ ಸರ್ಜನ್ನನ್ನ ಕೆಲಸಕ್ಕೆ ಇಟ್ಟುಕೊಂಡಹಾಗಿರಲಿಲ್ಲವೆಂದು ಹೇಳಿದರು ಗೆದ್ದಂಥಾವರಿಗೆ ಕೊಟ್ಟ ಬಹುಮಾನದ ವಿಷಯದಲ್ಲಾದರೋ ಹೀಗೆ ಬಹುಮಾನವನ್ನು ಕೊಡುವ ಪದ್ಧತಿಯು ಕ್ರಿ ಪೂ 700 ವರುಷಗಳ ಹಿಂದೆ ಗ್ರೀಸ್ ದೇಶದಲ್ಲಿ ಮೊದಲಾದದ್ದು ಆ ಕಾಲದಲ್ಲಿ ಬಹುಮಾನವಾಗಿ ಕೊಡತಕ್ಕ ಪದಾರ್ಥವು ಅತ್ಯಲ್ಪ ಬೆಲೆ ಬಾಳತಕ್ಕದ್ದಾದರೂ ಅದನ್ನು ಗೆದ್ದವರನ್ನು ರಾಜಾನುರಾಜರೆಲ್ಲಾ ಮರ್ಯಾದಿಸುತ್ತಿದ್ದರು ಬಹುಮಾನವು ಅದರ ಬೆಲೆಗೋಸ್ಕರವಲ್ಲ ಅದನ್ನು ಪಡೆದದ್ದರಿಂದ ಉಂಟಾಗತಕ್ಕ ಆನಂದಕ್ಕೂ ಮತ್ತು ಗೌರವಕ್ಕೋಸ್ಕರವೇ ಎಂದು ಸೂಚಿಸಿದರು ತರುವಾಯ ತಮ್ಮ ಉಪನ್ಯಾಸದ ಕೊನೆಯಲ್ಲಿ ತಾವು ಈ ರೀತಿಯಲ್ಲಿ ಸತ್ಕರಿಸಲ್ಪಟ್ಟದ್ದರಿಂದ ತಮ್ಮ ಮತ್ತು ತಮ್ಮ ಪತ್ನಿಯವರ ಆನಂದವನ್ನೂ ಮತ್ತು ವಂದನೆಯನ್ನೂ ವ್ಯಕ್ತಪಡಿಸಿದರು ರಾತ್ರಿ 9 ಘಂಟೆವರೆಗೂ ಷೇಕ್ಸ್‌ಪಿಯರ್ ಕವಿ ರಚಿತವಾದ "ರೋಮಿಯೋ ಮತ್ತು ಜೂಲಿಯೆಟ್" ಎಂಬ ನಾಟಕವನ್ನು ವಿದ್ಯಾರ್ಥಿ ಮಂಡಲಿಯವರೇ ಪ್ರದರ್ಶಿಸಿದರು ಈ ರೀತಿಯಲ್ಲಿ ಈ ವರ್ಷದ ಉತ್ಸವವು ಕಳೆದ ವರ್ಷಗಳಿಗಿಂತ ಬಹಳ ವಿಜೃಂಭಣೆಯಾಗಿ ಜರುಗಿತು

ಎಮ್ ವೆಂಕಟರಾವು

ಇಂಡಿಯಾ ದೇಶದ ವೃತ್ತಾಂತಗಳು.

ಇದೇ ತಿಂಗಳ 20 ನೇ ತಾರೀಖಿನಲ್ಲಿ ಬೊಂಬಾಯಿ ಪಟ್ಟಣದಲ್ಲಿ ಜಾರ್ಜ್ ಮಿಲ್ ಮತ್ತು ಬ್ರ್ಯುಯಲ್ ಅಂಡ್ ಕೊ ಎಂಬ ಎರಡು ಹತ್ತಿ ಕಾರ್ಖಾನೆಗಳಿಗೆ ಹೇಗೋ ಬೆಂಕಿಬಿದ್ದು ಒಂದರಲ್ಲಿ 15,000 ಮತ್ತೊಂದರಲ್ಲಿ 1,50,000 ರೂಪಾಯಿಗಳು ನಷ್ಟವಾಗಿರುತ್ತವೆ

* * *

ಸೌತ್ ಇಂಡಿಯನ್ ರೈಲ್ವೆಯನ್ನು ಮನ್ನಾರ್ ಎಂಬ ಸ್ಥಳದ ವರೆಗೂ ಬಡಾವಣೆ ಮಾಡಿದ ಮೇಲೆ ಇಂಡಿಯಾ ಮತ್ತು ಸಿಲೋನ್‌ಗೆ ಹೋಗಿಬರತಕ್ಕ ಮೇಲ್ ಮತ್ತು ಪ್ಯಾಸೆಂಜರ್ ಗಾಡಿಗಳು ಎರಡೆರಡು ಸಾರಿ ಓಡ್ಯಾಡುವವೆಂದೂ ಇದರಿಂದ ಪ್ರಯಾಣಿಕರಿಗೂ ವ್ಯಾಪಾರಕ್ಕೂ ತುಂಬಾ ಅನುಕೂಲವಾಗುವುದೆಂದೂ ತಿಳಿದು ಬರುತ್ತದೆ

* * *

ಕರಾಚಿಯಲ್ಲಿ ಒಬ್ಬ ಹಿರಿದು ವಿಧವೆಯು ಅವಳ ಬಂಧುಗಳು ಅವಳ ಗಂಡನ ತಮ್ಮನನ್ನು ಪುನರ್ವಿವಾಹ ಮಾಡಿಕೊಳ್ಳುವಂತೆ ನಿರ್ಬಂಧಪಡಿಸಿದುದರಿಂದ ಅದಕ್ಕೆ ಒಪ್ಪದೆ ತನ್ನ ಮೈ ಮೇಲೆ ಸೀಮೆಎಣ್ಣೆಯನ್ನು ಹೊಯಿದು ಬೆಂಕಿ ಹಚ್ಚಿ ಆತ್ಮಹತ್ಯಮಾಡಿಕೊಂಡಳೆಂದೂ ಅವಳನ್ನು ನಿರ್ಬಂಧಪಡಿಸಿದವರನ್ನು ಈಗ ವಿಚಾರಣೆಗೆ ಗುರಿಮಾಡಿದ್ದಾರೆಂದೂ ತಿಳಿದು ಬರುತ್ತದೆ

* * *

ಪಂಜಾಬಿನಿಂದ ಕಲ್ಕತ್ತಾದ ಬಾರಾಬಜಾರಿಗೆ ಬರುತ್ತಿದ್ದ 300 ರೆಜಿಸ್ಟರ್ ಮತ್ತು ಇನ್ಷೂರೆನ್ಸ್ ಕಾಗದಗಳುಳ್ಳ ಒಂದು ಅಂಚೆ ಬಸ್ತು ದಾರಿಯಲ್ಲಿ ಕಳುವಾಗಿ ಅದಕ್ಕೆ ಬದಲಾಗಿ ಬೇರೊಂದು ಚೀಲವು ಬಂದು ಸೇರಿತೆಂದೂ ಕಳುವು ಹೋದ ಆ ಚೀಲದಲ್ಲಿದ್ದ ಕಾಗದಗಳು ಸುಮಾರು ನಾಲ್ಕು ಲಕ್ಷ ರೂಪಾಯಿ ಬಾಳತಕ್ಕವುಗಳಾಗಿದ್ದವೆಂದೂ ತಿಳಿದು ಬರುತ್ತದೆ

* * *

ಇಂಡಿಯಾದಲ್ಲಿ ಚಾಲ್ತಿಗೆ ಬರುವದಕ್ಕೆ ಚಿನ್ನದ ನಾಣ್ಯಗಳ ಪೈಕಿ ಇಂಗ್ಲೀಷ್ ಸವರಿನ್ ಎಂಬತಕ್ಕ ನಾಣ್ಯವೇ ಅತ್ಯುತ್ತಮವಾದುದೆಂದೂ ಬೊಂಬಾಯಿ ಟಂಕಸಾಲೆಯವರು ಈ ಇಂಗ್ಲೀಷ್ ನಾಣ್ಯವನ್ನು ಮಾಡದೆ ಇರುವ ಪಕ್ಷಕ್ಕೆ ಹತ್ತು ರೂಪಾಯಿಗಳ ಬೆಲೆಯುಳ್ಳ ಚಿನ್ನದ ನಾಣ್ಯಕ್ಕೆ ಬದಲಾಗಿ ಇಂಗ್ಲೀಷ್ ಸವರನ್ನಿನಷ್ಟು ಪರಿಮಾಣವೂ ತೂಕವೂ ಉಳ್ಳ ಇಂಡಿಯನ್ ಸವರನ್ನನ್ನು ಮಾಡುವುದು ಉತ್ತಮವೆಂದು ಕರಾಚಿಯ ವರ್ತಕಮಂಡಲಿಯವರು ಅಭಿಪ್ರಾಯಪಟ್ಟಿರುತ್ತಾರೆ

* * *

ಕಾಶ್ಮೀರಕ್ಕೆ ಹೋಗಿಬರುವ ಕಣಿವೆ ಮಾರ್ಗದಲ್ಲಿ ಬಂಡಿಗಳಿಗೆ ಕಟ್ಟುವ ಕುದುರೆ ಎತ್ತುಗಳಿಗೆ ಭೂತದಯೆಪಶ್ಚಾತ್ತಾಪವಿಲ್ಲದೆ ಕ್ರೂರವಾಗಿ ಹಿಂಸೆಮಾಡುತ್ತಾರೆಂಬ ಪುಕಾರು ಆಗಾಗ್ಗೆ ಬರುತ್ತಿತ್ತು ಆದಕಾರಣ ಅಲ್ಲಿನ ಸರ್ಕಾರದವರು ಈ ವಿಷಯಕ್ಕೆ ಸಂಬಂಧಪಟ್ಟ ಒಂದು ಶಾಸನವನ್ನು ಜಾರಿಗೆ ತಂದಿರುತ್ತಾರೆ ಇದರಿಂದ ಮೂಗ ಪ್ರಾಣಿಗಳನ್ನು ಕ್ರೂರವಾಗಿ ಹೊಡೆಯುವವರೂ ಮಿತಿಮೀರಿದಷ್ಟು ಪೂರ ಅವುಗಳನ್ನು ಗಾಡಿಗೆ ಕಟ್ಟಿ ಹೊಡೆಯುವವರೂ ಹೆಚ್ಚಾದಷ್ಟು ಹೊರೆಯನ್ನು ಅವುಗಳ ಮೇಲೆ ಹೇರುವವರೂ ಪಶುಗಳನ್ನು ನೇಗಿಲಿಗೆ ಕಟ್ಟಿ ಉಳುವವರೂ ೧ ರೂಪಾಯಿಗಳ ಜುಲ್ಮಾನೆ ಅಥವಾ ಸಜಾ ಶಿಕ್ಷೆಗಳಿಗೆ ಗುರಿಯಾಗತಕ್ಕದ್ದೆಂದು ವಿಧಿಸಲ್ಪಟ್ಟಿರುತ್ತದೆ

* * *

ದೆಹಲಿ ಪಟ್ಟಣದಲ್ಲಿ ಪ್ರಾಣಾಪತ್ತಿಗೆ ಸಿಕ್ಕಿದ್ದ ನಮ್ಮ ವೈಸ್‌ರಾಯಿ ಪ್ರಭುಗಳು ಈಗ ಸ್ವಲ್ಪ ಕಡಮೆ ಪೂರ್ಣ ಆರೋಗ್ಯಭಾಗ್ಯವನ್ನು ಪಡೆಯುತ್ತಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ ಅವರು ಈಗ ಮೊದಲನೆಯ ಸಾರಿ ಬಹಿರಂಗದಲ್ಲಿ ತಮ್ಮ ಪ್ರಜೆಗಳಿಗೆ ಸುದರ್ಶನವನ್ನು ಕೊಟ್ಟದಕ್ಕಾಗಿ ಅನೇಕಾನೇಕ ಮಹನೀಯರುಗಳು ಸಾವಿರಾರು ರೂಪಾಯಿಗಳನ್ನು ಚಂದಾ ಹಾಕಿ ಈ ಹಣವನ್ನು ವೈಸ್‌ರಾಯಿ ಪ್ರಭುಗಳು ತಮ್ಮ ಇಷ್ಟಬಂದ ಧರ್ಮಕಾರ್ಯಗಳಿಗಾಗಿ ವಿನಿಯೋಗಿಸತಕ್ಕದೆಂದು ವಿಜಾಪಿಸಿಕೊಂಡು ಈ ಮೂಲಕವಾಗಿ ತಮ್ಮಗಳಿಗುಂಟಾಗಿರುವ ಸಂತೋಷವನ್ನೂ ಕೃತಜ್ಞತೆಯನ್ನೂ ಪ್ರಕಟಪಡಿಸಿರುತ್ತಾರೆ ಸದ್ಯಕ್ಕೆ ಈ ಹಣವು ಲೇಡಿ ಹಾರ್ಡಿಂಜ್‌ರವರ ಧರ್ಮಫಂಡಿಗೆ ಸೇರಿಸಲ್ಪಟ್ಟಿದೆ

* * *

ಚಕ್ರವರ್ತಿ ಸಾರ್ವಭೌಮರವರು ಏಡೆನ್‌ಗೆ ದಯಮಾಡಿಸಿದ್ದ ಕಾರ್ಯವನ್ನು ಚಿರಕಾಲ ಸ್ಮರಿಸತಕ್ಕುದಾಗಮಾಡುವುದಕ್ಕೆ ಅಲ್ಲಿನ ಪುರವಾಸಿಗಳು ಕೆಲವು ದಿನಗಳ ಕೆಳಗೆ ಒಂದು ಸಭೆಯನ್ನು ನಡಿಸಿದರು ಆ ಸಭೆಯಲ್ಲಿ ಇಂಡಿಯಾ ದೇಶೀಯರೂ ಅರಬ್ಬೀಯರೂ ಆಂಗ್ಲೇಯರೂ ನೆರೆದುಬಂದಿದ್ದರು ಈ ವಿಷಯಕ್ಕೆ ಸಂಬಂಧಪಟ್ಟ ಅನೇಕ ಭಾಷಣಗಳು ನಡೆದ ಮೇಲೆ ಚಕ್ರವರ್ತಿಗಳವರ ಹೆಸರನ್ನು ಏಡೆನ್‌ನಲ್ಲಿ ಚಿರಸ್ಥಾಯಿಯನ್ನಾಗ ಮಾಡುವುದಕ್ಕೆ ಒಂದು ಮಂದಿರವನ್ನು ಕಟ್ಟಬೇಕೆಂದು ತೀರ್ಮಾನವಾಯಿತು ಇದಕ್ಕಾಗಿ ಆ ಸಭೆಯಲ್ಲಿಯೇ 8,000 ರೂಪಾಯಿಗಳು ವಸೂಲಾದುವು ಅಲ್ಲಿ ಹೆಂಗಸರ ಒಂದು ಆಸ್ಪತ್ರೆಯು ಅತ್ಯವಶ್ಯಕವಾಗಿರುವುದರಿಂದ ಈ ಹಣವನ್ನು ಅದಕ್ಕಾಗಿ ವಿನಿಯೋಗಿಸುವರೆಂದು ನಿರೀಕ್ಷಿಸಲ್ಪಟ್ಟಿದೆ

* * *

ಕಳೆದ ಶುಕ್ರವಾರ ಬಂಗಾಳದಲ್ಲಿ ಬರುನಿ ಎಂಬ ರೈಲ್ವೆ ಸ್ಟೇಷನ್ ಬಳಿಯಲ್ಲಿ ಕೂಲಿ ಆಳುಗಳಿಂದ ತುಂಬಿದ್ದ ಒಂದು ರೈಲ್, ಸಮಾರಿಯಾ ಘಾಟಿಗೆ ಹೋಗಬೇಕಾಗಿದ್ದ ಒಂದು ಮೇಲ್ ಗಾಡಿಗೆ ಲೈನ್ ಬಿಟ್ಟು, ಪಕ್ಕದ ಲೈನ್ ಮೇಲೆ ನಿಂತಿತ್ತು ಸ್ವಲ್ಪ ಹೊತ್ತಾದ ಮೇಲೆ ಇದ್ದಕ್ಕಿದ್ದಹಾಗೆ ನಿಂತಿದ್ದ ಗಾಡಿಯಲ್ಲಿದ್ದ ಕೂಲಿಯವರೆಲ್ಲಾ ತುಂಬಾ ಗಾಬರಿಯಿಂದ ಬೀಳುವುದನ್ನು ಕಾಣದೆ ಹೊರಗೆ ಓಡಿಬರುವಷ್ಟರಲ್ಲೇ ಮೇಲ್ ಗಾಡಿಯು ಬಂದುಬಿಟ್ಟದ್ದರಿಂದ ಅನೇಕರು ಗಾಡಿಗೆ ಸಿಕ್ಕಿ ಮೃತಪಟ್ಟರು ಮೇಲ್ ಗಾಡಿಯು ಬಂದು ಕೂಲಿಯವರಿದ್ದ ಗಾಡಿಗೆ ಬಡಿದು ಅನಾಹುತವಾಗುವದಕ್ಕಿದೆ ಎಂದು ಯಾರೋ ಆ ಕೂಲಿಯವರಿಗೆ ಗಾಬರಿ ಹುಟ್ಟಿಸಿದ್ದರಿಂದಲೂ ಮೇಲ್ ಗಾಡಿಯನ್ನು ಬ್ರೇಕ್ ಹಾಕಿ ನಿಲ್ಲಿಸುವುದು ಅಸಾಧ್ಯವಾದುದರಿಂದಲೂ ಇಂಥಾ ಅನಾಹುತವಾಯಿತೆಂದು ತಿಳಿದು ಬಂದಿದೆ.

* * *

ದೆಹಲಿ ಪಟ್ಟಣದಲ್ಲಿ ಕಿರಾತಸಿಂಗನೆಂಬೊಬ್ಬ ಪೋಲೀಸ್ ಜವಾನನು ಕೆಲಸದ ಮೇಲೆ ಇರುವಾಗ ಕುಡಿದಿದ್ದನೆಂದು ತಿಳಿದುಬಂದುದರಿಂದ ಒಂದು ರಾತ್ರಿಯೆಲ್ಲಾ ಅವನನ್ನು ನೆಲಮಾಳಿಗೆಯಲ್ಲಿ ಹಾಕಿದ್ದರು ಮರುದಿನ ಹೊತ್ತಾರೆ ಅವನು ಹೇಗೋ ತಪ್ಪಿಸಿಕೊಂಡು ಬಂದು ಬಂದೂಕವನ್ನು ತೆಗೆದುಕೊಂಡು ತನ್ನ ಮೇಲೆ ರಿಪೋರ್ಟುಮಾಡಿದ್ದ ಹೆಡ್ ಕಾನ್‌ಸ್ಟೆಬಲನ್ನು ಮೊದಲು ಹೊಡೆದು ಕೊಂದು ಹಾಕಿದನು ಅಲ್ಲಿಂದ ಇನ್‌ಸ್ಪೆಕ್ಟರ ಮನೆಗೆ ನುಗ್ಗಿ ಅವರನ್ನೂ ಬಂದೂಕದಿಂದ ಹೊಡೆದನು ದೈವವಶಾತ್ ಅವರು ತಪ್ಪಿಸಿಕೊಂಡರೂ ಅವರ ಪಕ್ಕದಲ್ಲಿದ್ದ ಇಬ್ಬರಿಗೆ ಅದು ತಗಲಿ ಅವರಲ್ಲಿ ಒಬ್ಬನು ಸತ್ತುಹೋದನು ಇನ್ನೊಬ್ಬನಿಗೆ ತುಂಬಾ ಗಾಯಗಳಾದುವು ಇನ್‌ಸ್ಪೆಕ್ಟರವರು ಇವನನ್ನು ಪಿಸ್ತೋಲಿನಿಂದ ಹೊಡೆದರು ಅದು ಇವನಿಗೆ ತಗಲಲಿಲ್ಲ ತರುವಾಯ ಅವರು ಬಂದೂಕನ್ನು ತರುವುದಕ್ಕೆ ಪೋಲೀಸ್ ಲೈನಿಗೆ ಓಡಿಹೋಗುತ್ತಿರಲು ಇವನು ಅವರ ಬೆನ್ನಟ್ಟಿದನು. ರಿಜರ್ವ್ ಪೋಲೀಸ್ ಇನ್‌ಸ್ಪೆಕ್ಟರವರು ಇದನ್ನು ಕಂಡಕೂಡಲೇ ಆ ಜವಾನನ್ನು ಬಂದೂಕಿನಿಂದ ಹೊಡೆದರು ಅದೂ ಗುರಿತಪ್ಪಿಹೋಯಿತು ಕಡೆಗೆ ಕಿರಾತಸಿಂಗನು ಖಾಲಿಯಾಗಿದ್ದ ಕೊಠಡಿಯೊಳಕ್ಕೆ ನುಗ್ಗಿ ಬಾಗಿಲುಮುಚ್ಚಿ ತನ್ನ ತಲೆಗೆ ಗುರಿಕಟ್ಟಿ ಹೊಡಕೊಂಡು ಆತ್ಮಹತ್ಯಮಾಡಿಕೊಂಡನು

ವಿದೇಶದ ವೃತ್ತಾಂತಗಳು.

ಪರ್ಶಿಯಾ ಎಂಬ ಹಡಗು 22,52,150 ರೂಪಾಯಿಗಳ ಬಂಗಾರವನ್ನು ಹಿಂದುದೇಶಕ್ಕೆ ತರುತ್ತಾ ಇದೆ.

* * *

ಮೆಕ್ಸಿಕೊ ಪಟ್ಟಣದಲ್ಲಿ ಸೈನಿಕರು ದಂಗೆ ಎದ್ದು ಅರಮನೆ ಮುಂತಾದ ಪ್ರಾಮುಖ್ಯವಾದ ಕಟ್ಟಡಗಳನ್ನು ಮುತ್ತಿಗೆ ಹಾಕಿ, ಪ್ರೆಸಿಡೆಂಟರ ಸಹೋದರರನ್ನು ಸೆರೆಹಿಡಿದಿದ್ದಾರೆಂದು ತಿಳಿದು ಬರುತ್ತದೆ.

* * *

ಕೆಲವು ದಿನಗಳ ಕೆಳಗೆ ಕಾನ್‌ಸ್ಟಾಂಟಿನೋಪಲ್‌ನಲ್ಲಿ ಆಯುಧ ಶಾಲೆಗಳಿದ್ದ ಪ್ರದೇಶಕ್ಕೆ ಹೇಗೋ ಬೆಂಕಿ ಬಿದ್ದು ಇನ್ನೂರು ಮನೆಗಳು ಸುಟ್ಟುಹೋದವೆಂದೂ ಅಗ್ಗ ಪರದೇಶಗಳ ನಾವಿಕರು ಬಂದು ತುಂಬಾ ಸಹಾಯ ಮಾಡಿದರೆಂದೂ ತಿಳಿದು ಬರುತ್ತದೆ.

* * *

ಸೌತ್ ಕೆನ್‌ಸಿಂಗ್‌ಟನ್ ವಸ್ತುಪ್ರದರ್ಶನ ಶಾಲೆಯ ಆಭರಣಗಳ ಕೊಠಡಿಯಲ್ಲಿ ಆರು ತಿಂಗಳುಗಳ ವರೆಗೂ ಪ್ರದರ್ಶನಪಡಿಸುವದಕ್ಕಾಗಿ ಬರೋಡಾ ಮಹಾರಾಜರವರು ಮುತ್ತುಖಚಿತವಾದ ಒಂದು ಜಮಖಾನವನ್ನು ಕಳುಹಿಸಿಕೊಟ್ಟಿರುವರು ಲಾರ್ಡ್ ಕರ್ಜನ್‌ರವರು ದೆಹಲಿಯಲ್ಲಿ ದರ್ಬಾರ್ ನಡಿಸಿದಾಗ ಇದು ಅಲ್ಲಿ ಪ್ರದರ್ಶಿಸಲ್ಪಟ್ಟಿತ್ತು

* * *

ಇಂಡಿಯಾದಲ್ಲಿ ರೈಲ್ವೆ ಇಲಾಖೆಗಳು ಬಹಳ ಕಡಮೆಯಾಗಿವೆಯೆಂದು ಮೆ|| ಕಾಟ್ನೆಯವರು ಹೌಸ್ ಆಫ್ ಕಾಮನ್ಸ್ ಎಂಬ ಮಹಾ ಸಭೆಯಲ್ಲಿ ದೀರ್ಘವಾಗಿ ಪ್ರಶ್ನೆಮಾಡಿದರು ಮೆ|| ಬಾಕರ್‌ರವರು ಅದಕ್ಕೆ ಪ್ರತ್ಯುತ್ತರವಾಗಿ ಇಂಡಿಯಾ ಸರ್ಕಾರದವರು 1913 1914 ನೆಯ ವರುಷಗಳಲ್ಲಿ 15,80,40,000 ರೂಪಾಯಿಗಳನ್ನು ಬೇರೆ ಬೇರೆ ಇಲಾಖೆಗಳಿಗೆ ಖರ್ಚುಮಾಡಬೇಕೆಂದಿದ್ದಾರೆಂದೂ ಇದರಿಂದ ರೈಲ್ವೆ ಇಲಾಖೆಯೂ ಅಭಿವೃದ್ಧಿಸ್ಥಿತಿಗೆ ಬರುವುದೆಂದೂ ಉತ್ತರ ಕೊಟ್ಟರು

* * *

ಸ್ಟ್ಯಾಂಬೂಲ್ ಎಂಬ ಸ್ಥಳದಲ್ಲಿ ತುರ್ಕಿಯ ಸ್ತ್ರೀಯರು ತಮ್ಮ ದೇಶಸಂರಕ್ಷಣೆಗಾಗಿ ತಾವುಗಳು ಮಾಡತಕ್ಕದ್ದೇನು ಎಂಬೀ ವಿಷಯ ವಿಚಾರಮಾಡುವುದಕ್ಕೆ ಒಂದು ಮಹಾ ಸಭೆಯನ್ನು ನಡಿಸಿ, ದೇಶಾಭಿಮಾನವನ್ನು ಕುರಿತು ರಸಿಕವಾದ ಭಾಷಣಗಳನ್ನು ಮಾಡಿದ ತರುವಾಯ ಅವರಲ್ಲಿ ಅನೇಕರು ತಮ್ಮ ಆಭರಣಗಳನ್ನು ಯುದ್ಧದ ಖರ್ಚಿಗಾಗಿ ವಿನಿಯೋಗಿಸತಕ್ಕದೆಂದು ಕೊಟ್ಟುಬಿಟ್ಟರು ಹೀಗೆ ಅವರುಗಳು ಕೊಟ್ಟಿರುವ ಆಭರಣಗಳ ಒಟ್ಟು ಬೆಲೆಯು 30,000 ರೂಪಾಯಿಗಳೆಂದು ಅಂದಾಜು ಮಾಡಲ್ಪಟ್ಟಿದೆ

* * *

ರಂಗೂನ್ ಪಟ್ಟಣದಲ್ಲಿ ಓರಿಯಂಟಲ್ ಕಂಪನಿಯ ಮ್ಯಾನೇಜರಾಗಿಯೂ ಹರಾಜು ಮತ್ತು ಸಗಟು ವ್ಯಾಪಾರವನ್ನು ಮಾಡುವವನಾಗಿಯೂ ಇದ್ದ ಮೆ|| ಹೆಚ್ ಸಿ ಬ್ರೌನ್ ಎಂಬುವನು ಮೆ|| ಗಳಾದ ಹಿಲ್ಲಾಂಡರ್ಸ್ ಮತ್ತು ಆರ್ಬತ್‌ನಾಟ್ ಕಂಪನಿಗಳವರಿಂದ ಕೆಲವು ಯಂತ್ರ ಮುಂತಾದ ಸಾಮಾನುಗಳನ್ನು ಹರಾಜು ಮಾಡುವುದಕ್ಕೆ ತೆಗೆದುಕೊಂಡು ಹಣವನ್ನು ಕೊಡದೆ ಕಾಲವಿಳಂಬಮಾಡಿ ವಿಶ್ವಾಸಘಾತಕ ಕೃತ್ಯ ನಡಿಸಿದ್ದನೆಂದೂ ಇದರಿಂದ ಮಾಲೀಕರಿಗೆ 1,120 ರೂಪಾಯಿಗಳು ನಷ್ಟವಾಗಿವೆಯೆಂದೂ ಅವನ ಮೇಲೆ ದಾವಾ ಮಾಡಲಾಯಿತು. ಮ್ಯಾಜಿಸ್ಟ್ರೇಟರು ವಿಚಾರಣೆ ಮಾಡಿ ಅವನಿಗೆ ಒಂಭತ್ತು ತಿಂಗಳ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿದರು

ಮೈಸೂರಲ್ಲಿ ನಡೆದ ಸ್ತ್ರೀಯರ ಮಹಾ ಸಭೆಯು.

ಮಹಾ ನಗರದಲ್ಲಿ 1912 ನೇ ಡಿಸೆಂಬರ್ ತಾರೀಖು 3ರಲ್ಲಿ ಘನವನ್ನೈದಿದ ವೈಸ್‌ರಾಯಿ ದಂಪತಿಗಳ ಪ್ರಾಣಾಪಹಾರ ಮಾಡಬೇಕೆಂದು ನಡೆದ ಘಾತುಕ ಕೃತ್ಯವು ದೇವರ ದಯದಿಂದ ತಪ್ಪಿಹೋದ ಕಾರಣ ಮೈಸೂರು ನಗರದ ಸ್ತ್ರೀಮಂಡಲಿಗೆ ಉಂಟಾಗಿರುವ ಪರಮಾನಂದವನ್ನು ಘನವನ್ನೈದಿದ ಲೇಡಿ ಹಾರ್ಡಿಂಜ್ ಯವರಿಗೆ ಅರಿಕೆ ಮಾಡುವುದಕ್ಕೋಸ್ಕರ ಇದೇ ತಿಂಗಳು 17 ನೇ ತಾರೀಖು ಸೋಮವಾರ ಸಾಯಂಕಾಲ 5 ಘಂಟೆಗೆ ರಾಜಧಾನಿಯ ಮಹಾರಾಣಿಯವರ ಕಾಲೇಜಿನಲ್ಲಿ ಸ್ತ್ರೀಯರ ಒಂದು ಮಹಾ ಸಭೆಯು ನಡೆಯಿತು ಮೆ ಆರ್ ವೆಬ್ ಕ್ಯಾಂಪ್‌ಬೆಲ್‌ರವರು ಕಳುಹಿಸಿದ್ದ ಆಹ್ವಾನ ಪತ್ರಿಕೆಯನ್ನು ಕಂಡು 700 ಮಂದಿಗಿಂತಲೂ ಹೆಚ್ಚು ಸ್ತ್ರೀಯರುಗಳು ದಯಮಾಡಿಸಿದ್ದರು ಇಷ್ಟು ದೊಡ್ಡ ಸ್ತ್ರೀಯರ ಸಭೆಯು ರಾಜಧಾನಿಯಲ್ಲಿ ಇದುವರೆಗೂ ಕೂಡಿರುವುದಿಲ್ಲ. ಮಿಸೆಸ್ ಕ್ಯಾಂಪ್‌ಬೆಲ್‌ರವರು ಅಗ್ರಾಸನವನ್ನು ವಹಿಸಿದ್ದರು ಮಿಸೆಸ್ ಹೂಕ್ಸ್‌ಯವರು, ಮಿಸ್ ಗಳಾದ ಕ್ಯಾಂಬಲ್, ಪಾರ್ಕ್, ಪಾರ್ಸನ್ಸ್ ಯವರುಗಳು, ಮಿಸೆಸ್‌ಗಳಾದ ಚಾಂಡಿಯವರು, ಕೃಷ್ಣಸ್ವಾಮಿರಾವ್‌ಯವರು ಮಹದೇವ ಶಾಸ್ತ್ರಿಯವರು, ಶ್ರೀನಿವಾಸರಾವ್‌ಯವರು, ಮಾಧವರಾವ್‌ಯವರು, ರಂಗಮ್ಮಯವರು, ರಾಮರಾವ್‌ಯವರು ಕೃಷ್ಣರಾವ್‌ಯವರು, ಭೀಮರಾವ್‌ಯವರು, ಶ್ರೀ ರುಕ್ಮಿಣಿಯಮ್ಮ ಬಿ ಎ ಯವರು, ಸೌ. ಸುಬ್ಬಮ್ಮ ಎ ಎ ಯವರು ಇವರುಗಳೇ ಮುಂತಾದವರು ಸಭೆಯಲ್ಲಿ ಹಾಜರಾಗಿದ್ದರು

ಪ್ರಾರಂಭದಲ್ಲಿ ಅಗ್ರಾಸನರು ಸಭೆಯು ನೆರೆದು ಬಂದ ಉದ್ದೇಶವನ್ನು ತಿಳಿಸಿ, ಅಷ್ಟು ದೊಡ್ಡ ಸಭೆಯು ಸೇರುವುದಕ್ಕಾಗಿ ಸಹಕರಿಸಿದ್ದವರನ್ನು ವಂದಿಸಿದರು ತರುವಾಯ ಅವರು ಲೇಡಿ ಹಾರ್ಡಿಂಜ್‌ಯವರಿಗೆ ಕಳುಹಿಸಬೇಕಾಗಿದ್ದ ಪತ್ರಿಕೆಯನ್ನು ಓದುವಂತೆ ಮಿಸ್ ಪಾರ್ಸನ್ಸ್‌ಯವರನ್ನು ಕೇಳಿಕೊಂಡರು ಅದು ತುಂಬಾ ಶ್ಲಾಘನೀಯವಾಗಿದ್ದಿತು ಇದರ ಕನ್ನಡ ಪ್ರತಿಯನ್ನು ಸೌ ಸುಬ್ಬಮ್ಮನವರು ಓದಿದರು ಒಬ್ಬ ಮಹಮ್ಮದೀಯರು ಇದರ ಹಿಂದೂಸ್ಥಾನಿ ಭಾಷಾಂತರವನ್ನು ಓದಿದರು ಕಡೆಯಲ್ಲಿ ಅಗ್ರಾಸನರು ಈ ಪತ್ರವು ಸಭಿಕರ ಅನುಮತಿಯನ್ನು ಕೇಳಲು ಅದು ಸರ್ವಸಮ್ಮತವಾಯಿತೆಂದು ಎಲ್ಲರೂ ಏಕವಾಕ್ಯತೆಯಿಂದ ಒಪ್ಪಿಕೊಂಡರು ನಮ್ಮ ವಾಚಕ ಮಹಾಶಯರ ತಿಳುವಳಿಕೆಗಾಗಿ ಆ ಪತ್ರಿಕೆಯನ್ನು ಇಲ್ಲಿ ಪ್ರಕಟಿಸುತ್ತೇವೆ

ಮಹಾಮಾನ್ಯ ಆಲಿವಿನ

ಲೇಡಿ ಹಾರ್ಡಿಂಗ್ ಆಫ್ ಪೆನ್ಸ್‌ಹರ್ಸ್ಟ್ ಸಿ ಐ ಇವರ ಸನ್ನಿಧಾನಕ್ಕೆ

ಘನವ ವೈಸ್‌ರಾಯ್‌ರವರ ಮೇಲೆ ದುಷ್ಕೃತ್ಯದ ಪ್ರಯೋಗವಾಯಿತೆಂಬ ಘೋರ ವಾರ್ತೆ [illegible] ಹಿಂದೂಸ್ಥಾನದೊಳಗಿನ ನಾವೆಲ್ಲ ಜಾತಿಯ ಸ್ತ್ರೀಯರು ಏಕಮನಸ್ಸಿನಿಂದ ನಮ್ಮ ಖೇದವನ್ನು ವ್ಯಕ್ತಪಡಿಸುತ್ತೇವೆ

ತಾವಿಬ್ಬರೂ ಪ್ರಾಣಸಂಕಟದೊಳಗಿಂದ ಪಾರಾದಿರೆಂದು ನಾವು ಅಂತಃಕರಣಪೂರ್ವಕವಾಗಿ ತಮ್ಮ ಅಭಿನಂದನ ಮಾಡುತ್ತೇವೆ ಮತ್ತು ಘನವುಳ್ಳ ವೈಸ್‌ರಾಯರವರು ಶೀಘ್ರವಾಗಿ ಸಂಪೂರ್ಣ ಗುಣಹೊಂದಿ ಅವರು ಮೊದಲಿನ ಸುಖಾಭಿವೃದ್ಧಿಯು ಸಲುವಾಗಿ ಮೊದಲಿನಂತೆ ತಮ್ಮ ಪರಿಶ್ರಮವನ್ನು ಉತ್ಸಾಹದಿಂದ ಮಾಡಲಿಕ್ಕೆ ಸಮರ್ಥರಾಗಬೇಕೆಂದು ನಾವು ಮನಮುಟ್ಟಿ ದೇವರ ಪ್ರಾರ್ಥನೆ ಮಾಡುತ್ತೇವೆ

ತಾವು ಬಹಳ ಚಿಂತೆಯಲ್ಲಿ ದಿವಸ ಕಳೆಯಬೇಕಾಯಿತೆಂದು ತಮ್ಮ ವಿಷಯದಲ್ಲಿ ನಮಗೆ ಪೂರ್ಣ ಸಹಾನುಭೂತಿಯಿದೆ, ಮತ್ತು ಎಲ್ಲ ಜಾತಿಯ ಮತ್ತು ಎಲ್ಲ ದೇಶದ ಸ್ತ್ರೀಯರಿಗೆ ತಾವು ಆ ಘೋರಪ್ರಸಂಗದಲ್ಲಿ ತೋರಿಸಿಕೊಟ್ಟ ಧೈರ್ಯ ಮತ್ತು ಸಮಯಸೂಚಕತೆಯು ಸ್ತುತ್ಯ ಉದಾಹರಣೆಯು ನಮ್ಮ ಮನಸ್ಸಿನಲ್ಲಿ ಚನ್ನಾಗಿ ನೆಟ್ಟಿರುತ್ತದೆ

ಇಂಥ ಉದಾಹರಣೆಯನ್ನು ಈ ಪ್ರಕಾರ ಹಾಕಿಕೊಟ್ಟದ್ದು ನೋಡಿ ಎಲ್ಲ ಜನರು ಪ್ರಶಂಸೆ ಮಾಡುವುದು ಸ್ವಾಭಾವಿಕವಿದೆ, ಮತ್ತು ತಾವು ತೋರಿಸಿದ ಆ ಶೀಲ ಸ್ವರೂಪವು ಎಲ್ಲ ಸ್ತ್ರೀಯರಿಗೂ ಅಭಿಮಾನಾಸ್ಪದವಿದೆ

ಹಿಂದೂಸ್ಥಾನದೊಳಗಿನ ನಾವೆಲ್ಲ ಸ್ತ್ರೀಯರು ಎಲ್ಲ ಕಡೆಗೂ ಸಭೆಗಳನ್ನು ಕೂಡಿಸಿ ಹೀಗೂ ಬೇರೆ ಬೇರೆಯಾಗಿ ತೋರಿಸಿದ ಈ ನಮ್ಮ ಸಹಾನುಭೂತಿಯನ್ನು ಮತ್ತು ನಿಸ್ಸೀಮ ಪ್ರೇಮವನ್ನು ತಾವು ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತೇವೆ, ಮತ್ತು ತಾವು ಎಲ್ಲ ಕಾಳಜಿಯಿಂದ ನಿಃಶಂಕ ಮುಕ್ತರಾಗಿ ಈ ಮುಂದೆ ಎಲ್ಲ ತರದ ಸುಖವನ್ನು ಅನುಭವಿಸಬೇಕೆಂದು ನಾವೆಲ್ಲರೂ ಮನಃಪೂರ್ವಕವಾಗಿ ಬಯಸುತ್ತೇವೆ

ಮೈಸೂರು ಸರ್ಕಾರಿ ಹುಕುಮುಗಳು

ಜೋಡಿ ಗ್ರಾಮಗಳ ಸೌದೆ ಲೈಸೆನ್ಸ್—ಜೋಡಿದಾರರು ತಮ್ಮ ಗ್ರಾಮಗಳಲ್ಲಿ ಸೌದೆ ಕಡಿಯಬೇಕಾಗಿದ್ದರೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಿಂದ ಲೈಸೆನ್ಸ್ ಪಡೆಯಬೇಕಾಗಿತ್ತು ಇವರು ಹೆಡ್‌ಕ್ವಾರ್ಟರ್ ಮುಂತಾದವರ ಮಹಜರಿ ಇಲ್ಲದೆ ಲೈಸೆನ್ಸ್ ಕೊಡುತ್ತಿರಲಿಲ್ಲ ಇದರಿಂದ ಕಾಲವಿಳಂಬವಾಗಿ ಜೋಡಿದಾರರುಗಳಿಗೆ ಸಮಯಕ್ಕೆ ಸೌದೆ ಸಿಕ್ಕದೆ ತೊಂದರೆಯಾಗುತ್ತಿತ್ತು ಈ ಕಷ್ಟವನ್ನು ನೀಗಿಸಿಕೊಡುವುದಕ್ಕೆ ಇನ್ನು ಮುಂದೆ ಇನಾಂ ಗ್ರಾಮಗಳು ಯಾವ ತಾಲ್ಲೂಕಿಗೆ ಸೇರಿರುತ್ತವೆಯೋ ಆ ತಾಲ್ಲೂಕಿನ ಅಮಲ್ದಾರರು ಆ ಗ್ರಾಮಗಳಿಗೆ ಸೇರಿದ ಜಂಗಲಿನಲ್ಲಿ ಸೌದೆ ಕಡಿಯುವುದಕ್ಕೆ ಲೈಸೆನ್ಸ್ ಕೊಡಬೇಕೆಂದು ಸರ್ಕಾರದವರು ಹುಕುಂ ಮಾಡಿರುತ್ತಾರೆ ಹೀಗೆ ಲೈಸೆನ್ಸ್ ಕೊಡತಕ್ಕವರು ಲೈಸೆನ್ಸಿನ ಒಂದು ಪ್ರತಿಯನ್ನು ದಾಖಲೆಗಾಗಿ ತನ್ನಲ್ಲಿಟ್ಟು ಮತ್ತೊಂದನ್ನು ಕೂಡಲೇ ಫಾರೆಸ್ಟ್ ರೇಂಜ್ ಆಫೀಸರಿಗೆ ರವಾನಿಸತಕ್ಕದ್ದು ಇನಾಂ ಗ್ರಾಮದ ಸಮೀಪದಲ್ಲಿರುವ ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿ ಮರಗಳನ್ನು ಕಡಿಯದಂತೆ ಫಾರೆಸ್ಟ್ ಆಫೀಸರು ನೋಡಿಕೊಳ್ಳುವರು

ತಾಲ್ಲೂಕು ನೌಕರದಾರರುಗಳಿಗೆ ಕೊಡಬೇಕಾದ ಮೈಲೇಜು ಅಥವಾ ಅಲೋಯನ್ಸ್—ತಾಲ್ಲೂಕು ಸಿಬ್ಬಂದಿಯು ಹೆಡ್ ಕ್ವಾರ್ಟರನ್ನು ಬಿಟ್ಟು ತಮ್ಮ ತಾಲ್ಲೂಕಿನ ಸರಹದ್ದಿನಲ್ಲಿ ಕೆಲಸದಮೇಲೆ ಪ್ರಯಾಣಮಾಡುವಾಗ ಮೈಲೇಜಾಗಲಿ ಅಲೋಯನ್ಸ್ ಆಗಲಿ ಅವರಿಗೆ ಸಿಕ್ಕುತ್ತಿರಲಿಲ್ಲ ರೈಲ್ ಇರುವ ಕಡೆಗಳಲ್ಲಿ ರೈಲ್‌ಚಾರ್ಜು ಮಾತ್ರ ಸಿಕ್ಕುತ್ತಾ ಇತ್ತು ಮತ್ತು ತಾಲ್ಲೂಕು ಅಮಲ್ದಾರರು ಪ್ರಯಾಣಮಾಡುವಾಗ ಅವರ ಜೊತೆಯಲ್ಲಿ ಇಷ್ಟೇ ಮಂದಿ ಹೋಗಬೇಕೆಂಬ ನಿಯಮ ಇರಲಿಲ್ಲ ಈ ವಿಷಯಗಳು 1909, 1910, 1911 ನೇ ವರುಷಗಳಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಟ್ಟಮೇಲೆ ಸರ್ಕಾರದವರು ರೆವಿನ್ಯೂ ಕಮಿಷನರವರ ಶಿಫಾರಸಿನ ಮೇರೆಗೆ ಇತರ ಇಲಾಖೆಗಳ ನೌಕರದಾರರುಗಳಿಗೆ ದೊರೆಯತಕ್ಕ ಅಲೋಯನ್ಸ್ ಅಥವಾ ಮೈಲೇಜು ತಾಲ್ಲೂಕು ನೌಕರರಿಗೂ ದೊರೆಯಬೇಕೆಂದೂ ಒಂದು ಪ್ರಯಾಣದಲ್ಲಿ ಅಮಲ್ದಾರರ ಜೊತೆಯಲ್ಲಿ ಹೋಗತಕ್ಕ ಒಬ್ಬ ಗುಮಾಸ್ತೆ ಒಬ್ಬ ಜವಾನ ಇವರಿಗೆ ಮಾತ್ರ ಈ ಅಲೋಯನ್ಸ್ ಅಥವಾ ಮೈಲೇಜು ಸಿಕ್ಕುವುದೆಂದೂ ಹುಕುಂಕೊಟ್ಟಿರುತ್ತಾರೆ ಈ ಬದಲಾವಣೆಯು 1912ನೇ ಇಸವಿ ಅಕ್ಟೋಬರ್ ತಾರೀಖು 11ರ ಲಾಗಾಯಿತು ಜಾರಿಯಲ್ಲಿ ಬಂದಿರುವುದು ಈ ಬಾಬಿಗಾಗಿ ಸರ್ಕಾರದವರು 10,000 ರೂಪಾಯಿಗಳನ್ನು ಬದಗಿಸಿಕೊಟ್ಟಿರುತ್ತಾರೆ ಪ್ರಾಯಶಃ ಈ ಹಣವು ಹೆಚ್ಚಿನ ಖರ್ಚಿಗೆ ಸಾಕಾಗಬಹುದು ಒಂದು ವೇಳೆ ಸಾಲದೆ ಇದ್ದಪಕ್ಷಕ್ಕೆ ರೆವಿನ್ಯೂ ಕಮಿಷನರವರು ಎಷ್ಟು ಬೇಕಾಗುತ್ತದೆಂದು ತಿಳಿಸತಕ್ಕದ್ದು

ತೂಕದ ಬಟ್ಟುಗಳೂ ಅಳತೆಯ ಸೇರುಗಳೂ—ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರ್‌ರವರು ಈ ವಿಷಯ 1912ನೇ ಇಸವಿ ಅಕ್ಟೋಬರ್ ತಾರೀಖು 9-10ರಲ್ಲಿ ವಿಚಾರಮಾಡಿದ್ದರ ಮೇಲೆ ಬೆಂಗಳೂರು ಸೆಂಟ್ರಲ್ ಜೈಲ್ ಸೂಪರೆಂಟೆಂಡರವರು ತಯಾರಾದ ತೂಕದ ಬಟ್ಟುಗಳನ್ನೂ ಅಳತೆಯ ಸೇರುಗಳನ್ನೂ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರ ಮತ್ತು ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರುಗಳ ಆಫೀಸುಗಳಿಗೂ ಪ್ರತಿಯೊಬ್ಬ ಅಮಲ್ದಾರರ ಆಫೀಸಿಗೂ ಪೋಲೀಸ್ ಸ್ಟೇಷನ್‌ಗೂ ಕಳುಹಿಸಿಕೊಡಬೇಕೆಂದು ಹುಕುಂಮಾಡಿರುತ್ತಾರೆ ಮೇಲೆ ಕಂಡ ಆಫೀಸುಗಳವರು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರೆಂಟೆಂಡ್‌ರವರಿಗೆ ಬರೆದುಕೊಂಡರೆ ಅವರು ತಯಾರಾದ ಎಲ್ಲಾ ತೂಕದ ಬಟ್ಟುಗಳನ್ನೂ ಅಳತೆಯ ಸೇರುಗಳನ್ನು ಕಳುಹಿಸಿಕೊಟ್ಟು ಈ ವಿಷಯವನ್ನು ಸರ್ಕಾರದವರಿಗೆ ರಿಪೋರ್ಟು ಮಾಡಬೇಕೆಂದು ಅವರಿಗೆ ಅಪ್ಪಣೆಮಾಡಿರುತ್ತದೆ ಡಿಸ್ಟ್ರಿಕ್ಟುಗಳ ಡೆಪ್ಯುಟಿಕಮಿಷನರುಗಳು ಸೆಂಟ್ರಲ್ ಜೈಲ್ ಸೂಪರೆಂಟೆಂಡರಿಗೆ ಬರೆಯುವಾಗ ಆಯಾ ಡಿಸ್ಟ್ರಿಕ್ಟುಗಳಲ್ಲಿರುವ ಅಮಲ್ದಾರರುಗಳ ಮತ್ತು ಪೋಲೀಸ್ ಸ್ಟೇಷನ್‌ಗಳ ಆಫೀಸುಗಳ ಉಪಯೋಗಕ್ಕೆ ಎಷ್ಟೆಷ್ಟು ಬೇಕಾಗಿವೆ ಎಂಬುದನ್ನು ನಮೂದಿಸತಕ್ಕದ್ದು

ವಾಸಕ್ಕಾಗಿ ಉಪಯೋಗಿಸಲ್ಪಡುವ ಸರ್ಕಾರಿ ಕಟ್ಟಡಗಳಿಗೆ ಮುನಿಸಿಪಲ್ ತೆರಿಗೆಯು—ವಾಸಕ್ಕಾಗಿ ಉಪಯೋಗಿಸಲ್ಪಡತಕ್ಕ ಸರ್ಕಾರಿ ಕಟ್ಟಡಗಳು ಅವು ಎಲ್ಲೇ ಇದ್ದಾಗ್ಯೂ ಮುನಿಸಿಪಲ್ ಮನೆ ಕಂದಾಯವನ್ನು ದೀಪದ ತೆರಿಗೆಯನ್ನೂ ಕೊಡಬೇಕು ಇಂಥ ಕಟ್ಟಡಗಳಲ್ಲಿ ವಾಸಮಾಡುವವರು ವಾಡಿಗೆ ಕೊಡುವವರಾಗಿದ್ದ ಪಕ್ಷಕ್ಕೆ ಅವರು ವಾಸವಾದತಕ್ಕ ಮನೆಗಳ ಮತ್ತು ದೀಪಗಳ ಕಂದಾಯವನ್ನೂ ಅವರು ಉಪಯೋಗಿಸಿಕೊಳ್ಳುವ ನೀರಿನ ಖರ್ಚನ್ನೂ ಮರಮತ್ತು ಇಲಾಖೆಯವರು ಕೊಡತಕ್ಕದ್ದು ಇಂಥ ಕಟ್ಟಡಗಳು ವಾಡಿಗೆ ಇಲ್ಲದ ವಾಸಕ್ಕಾಗಿ ಕೊಡಲ್ಪಟ್ಟ ಪಕ್ಷದಲ್ಲಿ ಅವುಗಳಲ್ಲಿ ವಾಸಮಾಡುವ ಆಫೀಸರುಗಳು ಯಾವ ಯಾವ ಇಲಾಖೆಯವರಾಗಿರುತ್ತಾರೆಯೋ ಆಯಾ ಇಲಾಖೆಗಳವರು ಈ ಕಂದಾಯಗಳನ್ನು ಕೊಡತಕ್ಕದ್ದು

ಕೃಷ್ಣರಾಜ ಕೃಷಿವಿದ್ಯಾಭಿವರ್ಧಕ ಸಮಾಜ

ಕರಸ್ಪಾಂಡಿಂಗ್ ಸೆಕ್ರೆಟರಿ [illegible]

ಮನೆಗೂಡಿದರೆ ಹಳ್ಳಿ ಕೆಡೆಗೂಡಿದರೆ ಛತ್ರ ಎಂಬ ಗಾದೆಯು ಜನರ ಅನೇಕ ವಿದ್ಯಾವಂತರುಗಳ ಸಂತ ಸಮಾಲೋಚನೆಯಿಂದುಂಟಾದ ಅಭಿಪ್ರಾಯ ಒಗ್ಗಟ್ಟಿನಲ್ಲಿರತಕ್ಕ ಬಲವನ್ನು ಕುರಿತು ಉಪಾಧ್ಯಾಯರುಗಳು ಮಕ್ಕಳಿಗೆ ಅನೇಕ ಉದಾಹರಣೆಗಳನ್ನು ಕೊಟ್ಟು, ಮಕ್ಕಳ ನಡತೆಯನ್ನು ಸರಿಪಡಿಸಲು ಯತ್ನಿಸುತ್ತಿದ್ದಾರೆ ಉಪನ್ಯಾಸ ಮಂದಿರಗಳಲ್ಲಿ ಐಕಮತ್ಯದ ವಿಚಾರವಾಗಿ ಸಂಭಾಷಣೆಗಳು ಕೇಳಿಸದೆ ಜರಗುತ್ತಿವೆ ಇಷ್ಟಾಗಿಯೂ ತಿಳುವಳಿಕೆಗೂ ನಡವಳಿಕೆಗೂ ಕಟ್ಟು ಎಂಬ ಅತ್ಯುತ್ತಮವಾದ ಹೇಳಿಕೆಯನ್ನು ಅನೇಕರು ನೆನಪಿನಲ್ಲಿಟ್ಟಿರುವಂತೆ ಕಂಡುಬರುವುದಿಲ್ಲ ವಿದ್ಯಾರ್ಥಿಗಳಾಗಿರುವಾಗ ಶಾಲೆಗಳಲ್ಲಿ ತಾವು ಕಲಿತ ವಿಷಯಗಳನ್ನು ನಡವಳಿಕೆಯಲ್ಲಿ ಉಪಯೋಗಿಸದೇ ಇರತಕ್ಕವರ ಸಂಖ್ಯೆ ಏನೂ ಕಡಮೆಯಾಗಿಲ್ಲ

ಆತ್ಮ ತನ್ನಿಂದಿರ ಕಲಹ, ಗ್ರಾಮದಲ್ಲಿ ಪಾರ್ಟಿಸ್ವಾರ್ಥ ಇವುಗಳು ದೇಶದಲ್ಲಿ ಕಡಮೆಯಾಗದಿರುವುದರ ಕಾರಣವು ಜನರಲ್ಲಿ ಒಗ್ಗಟ್ಟಿಲ್ಲದಿರುವುದರಿಂದಲ್ಲದೆ ಮತ್ತೇನೂ ಅಲ್ಲ ಜೀವಮಾನದ ಪ್ರಥಮಾವಸ್ಥೆಯಲ್ಲಿರುವ ಎಳೆ ವಿಯಮದ ಬಾಲಕರುಗಳು ತಮ್ಮ ನಡತೆಗಳನ್ನು ತಿದ್ದಿಕೊಳ್ಳುವ ಉದ್ದೇಶ ಶಾಲೆಗಳಲ್ಲಿ ಒಗೆಬಗೆಯ ಸಂಘಗಳನ್ನೇರ್ಪಡಿಸಿಕೊಂಡು ತಮ್ಮೊಳಗೆ ಸಲ ಹೊಂದುತ್ತಿರುತ್ತಾರೆ ಅನೇಕರು ಒಂದೆಡೆಯಲ್ಲಿ ಸೇರಿ, ತಮ್ಮ ತಿಳುವಳಿಕೆಗೆ ತಕ್ಕಂತೆ ಕಾಯಿದೆಗಳನ್ನೇರ್ಪಡಿಸಿಕೊಂಡು, ಎಲ್ಲರೂ ಒಂದೇ ವಿಧವಾದ ನಡೆ ನುಡಿಗಳನ್ನು ಪಾಡಿಕೆಯಲ್ಲಿಡುವುದರಿಂದ ಜನರಲ್ಲಿ ಏಕಮತ್ಯವು ನೆಲೆಗೊಳ್ಳುವುದರಲ್ಲಿ ಸಂದೇಹವಿಲ್ಲ ಸೋದರಭಾವ, ಕನಿಕರ, ಸತ್ಯ, ಅನ್ಯೋನ್ಯ ಸಹಾಯಮಾಡೋಣ ಎಂಬೀಗುಣಗಳು ಏಕಮತ್ಯವಿಲ್ಲಿರುವುದೋ ಅಲ್ಲಿ ನಿಸ್ಸಂದೇಹವಾಗಿ ಬೇರೂರಿರುವುವು

ಈ ಸದ್ಗುಣಗಳಲ್ಲವೇ ರಾಜ್ಯಾಭಿವೃದ್ಧಿಗೂ ಪ್ರಜಾ ನೆಮ್ಮದಿಗೂ ಕಾರಣ? ನಾಗರೀಕತೆಯ ಸ್ವಭಾವ ಪುರುಷ ಇತರ ಸೌಖ್ಯಕ್ಕೆ ಮಾರ್ಗ? ಭಗವತ್ಪ್ರೀತಿಗೆ ಆಚರಣೆ? ಸ್ವದೇಶಾಭಿಮಾನಿಯಾದ ಪ್ರತಿಯೊಬ್ಬ ದೊಡ್ಡ ಮನುಷ್ಯನೂ ಮಾದರಿಗಾಗಿ ಮೇಲ್ಕಂಡ ನಡವಳಿಕೆಗಳನ್ನು ಜಾರಿಯಲ್ಲಿಟ್ಟುಕೊಂಡು ಇತರರನ್ನೂ ತನ್ನ ಮಾರ್ಗಕ್ಕೆಳೆಯುತ್ತ ಬಂದರೆ ರಾಜ್ಯಾಭಿವೃದ್ಧಿಯಾಗುವುದಕ್ಕೆ ಅನುಮಾನವಿಲ್ಲ

ಬಾಲ್ಯದಲ್ಲಿ ಕಲಿತ ಸನ್ಮಾರ್ಗಗಳನ್ನು ಯೌವನದಲ್ಲಿ ನಡವಳಿಕೆಗಳಲ್ಲುಪಯೋಗಿಸಿದರೆ ಚಿನ್ನದಲ್ಲಿ ಕೆತ್ತಿದ ವಜ್ರದಂತೆ ಆ ವಿದ್ಯಾಭ್ಯಾಸವು ಪ್ರಕಾಶಗೊಳ್ಳುವುದೇ ಸಹಜ ಶಾಲೆಗಳಲ್ಲಿನ ಸಂಘಗಳು ವಿದ್ಯಾರ್ಥಿಯ ನಡತೆಗೆ ಕಾರಣವೆಂಬ ವಿಚಾರವನ್ನು ಹಿಂದೆಯೇ ತಿಳಿಸಿತಷ್ಟೆ ಪಸ್ತುದ ದ್ವಿತೀಯಾವಸ್ಥೆಯಾದ ಯೌವನದಲ್ಲಿ ಇನ್ನೂ ಉತ್ತಮವಾದ ಸಂಘಗಳು ಅತ್ಯವಶ್ಯಕವು ಜನನಾರಭ್ಯ ಅಂತ್ಯಕಾಲದ ವರೆಗೂ ಮನುಷ್ಯನು ಕಲಿಯಬೇಕಾದ ವಿಷಯಗಳು ಅನೇಕವಿರುವುದರಿಂದ ಶಾಲೆಯನ್ನು ಬಿಟ್ಟ ಮಾತ್ರಕ್ಕೆ ಪುರುಷನಿಗೆ ಸಂಘದ ಅವಶ್ಯಕತೆ ಇಲ್ಲವೆನ್ನಕೂಡದು ಈ ಉದ್ದೇಶಕ್ಕಾಗಿಯೇ ನಮ್ಮ ಪ್ರಭುಗಳವರು ಅಲ್ಲಲ್ಲಿ ಅನ್ಯೋನ್ಯ ಸಹಾಯ ಸಂಘಗಳನ್ನೇರ್ಪಡಿಸಿದಾರೆ ಈ ಸಂಘಗಳ ಉದ್ದೇಶವು ಶಾಲೆಗಳಲ್ಲಿನ ಸಂಘಗಳ ಉದ್ದೇಶದಂತೆಯೇ ಆದರೂ ಇವು ಇನ್ನೂ ಹೆಚ್ಚು ಕೆಲಸಗಳನ್ನು ಮಾಡಬೇಕಾಗಿದೆ

ಅನ್ಯೋನ್ಯ ಸಹಾಯ ಸಂಘವು ಪ್ರತಿ ಗ್ರಾಮದಲ್ಲಿಯೂ ಒಂದೊಂದಿರಬೇಕು ಮತ್ತು ಪ್ರಪಂಚ ಜ್ಞಾನವುಳ್ಳ ಪ್ರತಿಯೊಬ್ಬ ಮನುಷ್ಯನೂ ಸಂಘಕ್ಕೆ ಸೇರಬೇಕು. ಸದ್ಯದಲ್ಲಿ ವಾಡಿಕೆಯಲ್ಲಿರುವ ಲೇವಾದೇವಿ ಮತ್ತು ವ್ಯಾಪಾರಗಳು ಮಾತ್ರವೇ ಸಂಘದ ಮುಖ್ಯೋದ್ದೇಶಗಳಾಗಿರಬಾರದು. ಲಾಭ ಪಡೆಯಬೇಕೆಂಬ ಉದ್ದೇಶದಿಂದಾಗಲಿ ಅಥವಾ ಸಾಲ ತೆಗೆಯುವುದಕ್ಕಾಗಿಯೇ ಆ ಸಂಘವನ್ನೇರ್ಪಡಿಸಿದರೆ ಆ ಸಂಘಕ್ಕೆ ಅನ್ಯೋನ್ಯ ಸಹಾಯ ಸಂಘವೆಂಬ [illegible] ರು ಅನ್ವರ್ಥವಾಗಲಾರದು ಮೂಲಧನವು ಕಡಮೆಯಾಗದಂತೆಯೂ ಕ್ರಮಾನುಗುಣ್ಯವಾಗಿ ಆತ್ಮವಶ್ಯಕತೆಯುಳ್ಳವರಿಗೆ ಅದು ಉಪಯೋಗಕ್ಕೆ ಬರುವಂತೆ ಜೋಪಾನವಾಗಿ ನೋಡಿಕೊಳ್ಳುತ್ತಾ ಬರಬೇಕು ನಾಟಕಶಾಲೆಯ ಉಪನ್ಯಾಸಮಂದಿರವೂ ಸಂಘದ ಭಾಗಗಳಾಗಿರಬೇಕು ರಾಜಭಕ್ತಿಗೂ ಸನ್ಮಾರ್ಗ ಬೋಧಕಗಳಾದ ಉಪನ್ಯಾಸಗಳು ಆಗಾಗ್ಗೆ ಜರಗುತ್ತಿರಬೇಕು ಸಂಘದ ಕೆಲಸಕ್ಕೆ ಪ್ರತಿಯೊಬ್ಬನೂ ಬಾಗಿಯಾಗಿದ್ದುಕೊಂಡು ಅಸೂಯೆ ಮತ್ತು ಅನಾದರಣೆಗಳನ್ನು ತೊರೆದು ಕೆಲಸಮಾಡುತ್ತಾ ಬರಬೇಕು ಹೀಗೆ ಮಾಡುವುದರಿಂದ ಪೆಯಾಗುಗಳಾದ ನಮ್ಮ ರಾಜ್ಯಾಧಿಪರ ಉದ್ದೇಶವು ನೆರವೇರುವುದಲ್ಲದೆ ದೇಶವೂ ಉತ್ತಮ ಸ್ಥಿತಿಗೆ ಬಂದು ಪ್ರಜಾನೆಮ್ಮದಿಯು ನೆಲೆಗೊಳ್ಳುವುದು

ದಯಾಳುಗಳಾದ ಸರಕಾರದವರು ಪ್ರಾರಂಭಾವಸ್ಥೆಯಿಂದ ಸಹಾಯ ಸಂಘಗಳಿಗೆ ಅತಿಯಾಗಿ ಪ್ರೋತ್ಸಾಹ ಕೊಡುತ್ತಿರುವುದಕ್ಕಾಗಿ ನಾವುಗಳು ತುಂಬ ಕೃತಜ್ಞರಾಗಿರಬೇಕು ಈ ಇಲಾಖೆಯ ಮೊಕ್ತೇಸರರವರು ತುಂಬಾ ಮುತುವರ್ಜಿಯಿಂದ ಹೊಸ ಸಂಘಗಳನ್ನೇರ್ಪಡಿಸುತ್ತಿರುವುದು ನಮ್ಮನ್ನಾಳುವ ಪ್ರಭುಗಳವರಿಗೂ, ನಮಗಳಿಗೂ ತುಂಬ ಸಂತೋಷವನ್ನುಂಟುಮಾಡಿದೆ ಇಂತಹ ಬೆಲೆಯುಳ್ಳ ಕಾಲದಲ್ಲಿ ನಮ್ಮ ಸಂಘವನ್ನಭಿವೃದ್ಧಿಪಡಿಸಿಕೊಳ್ಳಲು ನಾವು ಶ್ರಮ ತೆಗೆದುಕೊಳ್ಳದೆ ಇದ್ದರೆ ನಮ್ಮ ಮೇಲೆ ನಿಷ್ಕರುಣೆಯ ಗುಟ್ಟಿದ್ದಿಲ್ಲ.

[illegible]

ಸ್ತ್ರೀವಿದ್ಯಾಭ್ಯಾಸವೂ ಮತ್ತು ವಿವಾಹದ ತಿದ್ದುಪಾಟುಗಳು

[illegible] ರವರು ಸಭ್ಯರು 17 ರಲ್ಲಿ ಮೈಸೂರು ಮಹಾರಾಣಿ ಕಾಲೇಜಿನಲ್ಲಿ ನಡೆಸಿದ ಉಪನ್ಯಾಸ

ಸಭಾಧ್ಯಕ್ಷರೇ ಮತ್ತು ಮಹನೀಯರಾದ ಸ್ತ್ರೀಯರೇ ಕಳೆದ ಹತ್ತು ವರ್ಷಗಳಲ್ಲಿ ಇಂಡಿಯಾ ದೇಶದ ದೊಡ್ಡ ಪಟ್ಟಣಗಳಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಅನೇಕ ಸ್ತ್ರೀಯರುಗಳ ಪಾಠಶಾಲೆಗಳ ಮತ್ತು ಕಲಾಶಾಲೆಗಳ ಮೂಲಕ ಸ್ತ್ರೀವಿದ್ಯಾಭ್ಯಾಸದ ವಿಷಯದಲ್ಲಿ ಜನಗಳಿಗೆ ಇರುವ ಮರುಭಿಮಾನತ್ವ ನಾಶವಾಗಿ ಅವರಲ್ಲಿ ಅಭಿರುಚಿಯು ಹೆಚ್ಚುವುದನ್ನು ನೋಡಿದರೆ ಸ್ತ್ರೀಯರ ಸ್ವಾಧೀನತೆಗೆ ಹಕ್ಕಿಗೆ ಪ್ರಕಟವಾಗಿದ್ದ ಸಾಮಾಜಿಕ ವ್ಯವಹಾರಗಳಲ್ಲಿ ತಿದ್ದುಪಾಟುಗಳು ಮಾರ್ಗವಿಸಲೆಂದು ನಂಬಿಕೆಯುಂಟಾಗುತ್ತದೆ

ಪ್ರತಿ ಸಂವತ್ಸರವು ನಡೆಯುತ್ತಿರುವ ಭಾರತ ಮಹಾಸಭೆಯಲ್ಲಿ ನಾನಾ ದೇಶಗಳ ಮತ್ತು ಕುಲಗಳ ಸ್ತ್ರೀಯರು ಒಟ್ಟು ಸೇರಿ ಈ ವಿಷಯಗಳನ್ನು ವಿಚಾರ ಮಾಡಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಸೂಚಿಸುತ್ತಾರೆ ಇಂಥಾ ಸಭೆಗಳಿಂದ ನಮ್ಮ ದೇಶದ ಸ್ತ್ರೀಯರ ಸ್ಥಿತಿಯು ಅಭಿವೃದ್ಧಿಯನ್ನು ಹೊಂದುತ್ತದೆ [illegible] ವಿಷಯವನ್ನು ಚೆನ್ನಾಗಿ ವಿಚಾರಮಾಡಿ ಅದರಿಂದ ನಮ್ಮ ದೇಶಕ್ಕೆ ಬರತಕ್ಕ ಕೇಡುಗಳನ್ನು ಅರಿತುಕೊಳ್ಳಬಹುದು ಆಗ ತಮ್ಮ ತಮ್ಮ ಮಕ್ಕಳಿಗೆ ಪ್ರೌಢವಿದ್ಯೆಯನ್ನು ಕಲಿಸುವುದರಲ್ಲಿ ಹಿಂಜರಿಯಲಾರರು

ಕಳೆದ ಸಲ ಅಂದರೆ 1911 ನೇ ಇಸವಿಯ ಅಕ್ಟೋಬರು ತಿಂಗಳಲ್ಲಿ ನಮ್ಮ ಪಟ್ಟಣಕ್ಕೆ ಬಂದು ಹೋದನಂತರ ಅನೇಕ ಪಟ್ಟಣಗಳಲ್ಲಿ ಹಿಂದೂ ವಿಧವೆಯರು ಹಾಗೂ ಸಾಮಾನ್ಯ ಸಂಘದ ಸಭೆಗಳನ್ನು ಏರ್ಪಡಿಸಿರುವರು ಈಗ 11 ವರುಷದ ಕೆಲವು ಪಟ್ಟಣಗಳಲ್ಲಿ ಸ್ತ್ರೀಯರು ಸಭೆಗಳನ್ನು ಏರ್ಪಡಿಸುವುದಕ್ಕಾಗಿ ಇಷ್ಟದ್ದರಿಂದ ಕೆಲವು ಸ್ತ್ರೀಯರುಗಳು ಮಾತ್ರ ಸೇರಿದ್ದರು ಅಂಥಾ ಸ್ಥಳಗಳಲ್ಲಿ ಪ್ರತಿ ತಿಂಗಳಲ್ಲಿಯೂ ಮೀಟಿಂಗುಗಳು ನಡೆಯುತ್ತಾ ಇರುವುದೆಂದು ಹೇಳುವುದರಲ್ಲಿ ನನಗೆ ಬಹಳ ಸಂತೋಷವಾಗುತ್ತದೆ ಈ ಸಂಘದ ಉದ್ದೇಶಗಳ ವಿಷಯವಾಗಿ ಶಾಸ್ತ್ರಸಮ್ಮತವಾದ ಉಪನ್ಯಾಸಗಳನ್ನು ಅನೇಕ ಸ್ತ್ರೀಯರು ಕೊಟ್ಟಿರುತ್ತಾರೆ ಅವುಗಳಲ್ಲಿ ಕೆಲವು ಎಲ್ಲರಿಗೂ ದೊರೆಯುವಂತೆ ಅಚ್ಚುಹಾಕಲ್ಪಟ್ಟಿವೆ ಕಸೂತಿ ಪಾಠಗಳನ್ನು ಹೇಳಿಕೊಡುವುದಕ್ಕೆ ಅಲ್ಲಲ್ಲಿ ತಕ್ಕ ಏರ್ಪಾಡುಗಳನ್ನು ಮಾಡಿರುತ್ತಾರೆ ಕಳೆದ ಡಿಸೆಂಬರ್ ತಿಂಗಳಲ್ಲಿ ಕಾಣ್ಪುರು ಪಟ್ಟಣದ ಮಹಿಳೆಯರು ತಾವು ತಯಾರುಮಾಡಿದ ವಸ್ತುಗಳ ಪ್ರದರ್ಶನವನ್ನು ನಡೆಯಿಸಿದರು ಸ್ತ್ರೀಯರು ವಿದ್ಯಾಭ್ಯಾಸಕ್ಕೂ, ಮತ್ತು ಗೃಹಕಾರ್ಯಗಳಿಗೂ ತಕ್ಕಷ್ಟಾಗಿರು ಎತ್ತಲ್ಲಿ ಅವಶ್ಯಕವೋ ಅಲ್ಲಲ್ಲಿ ಉಪಾಧ್ಯಾಯಿನಿಯರಾಗಿ ಹೋಗುವುದಕ್ಕೆ ಸಿದ್ಧರಾಗಿರಬೇಕು ಮೈಸೂರು ಸಂಸ್ಥಾನದಲ್ಲಿ ಸ್ತ್ರೀವಿದ್ಯಾಭ್ಯಾಸಕ್ಕೆ ಬಹಳ ಮಟ್ಟಿಗೆ ಪ್ರೋತ್ಸಾಹವಿರುತ್ತದೆ ಇದರಿಂದ ಬಾಲ್ಯವಿವಾಹವು ಕ್ರಮೇಣ ತಪ್ಪಿಹೋಗುವುದು

ಹೊಸದಾಗಿ ನಮೂದಿಸಿದ ಸಂಖ್ಯೆಗಳ ಪ್ರಕಾರ ಈ ಸಂಸ್ಥಾನದಲ್ಲಿ ಸ್ತ್ರೀಯರ ಪಾಠಶಾಲೆಗಳು 284 ರಿಂದ 400 ಕ್ಕೆ ಹೆಚ್ಚಿವೆ ಮಹಾರಾಣಿ ಕಾಲೇಜಿನ ಒಬ್ಬ ವಿದ್ಯಾರ್ಥಿನಿಯು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರುತ್ತಾಳೆ ಮತ್ತೊಬ್ಬಳು ಸಂಸ್ಕೃತದಲ್ಲಿ ಪಂಡಿತ ಪರೀಕ್ಷೆಯನ್ನು ಕೊಟ್ಟಿರುತ್ತಾಳೆ ಈ ಸಂಸ್ಥಾನದ ಹಾಗೆ ಇತರ ಸ್ವದೇಶ ಸಂಸ್ಥಾನಗಳಲ್ಲಿ ಈಗ ಕಡಮೆಯಾಗಿರುವ ಸ್ತ್ರೀಯರ ಪಾಠಶಾಲೆಗಳ ಸಂಖ್ಯೆಯು ಹೆಚ್ಚಿ ಅಲ್ಲಿಗೆ ಬೇಕಾದ ಉಪಾಧ್ಯಾಯಿನಿಯರುಗಳನ್ನು ತರಬೇತು ಮಾಡುವುದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ಹಾರೈಸುತ್ತೇನೆ

ಹಾಗೆಯೇ ತಂದೆತಾಯಿಗಳು ತಮ್ಮ ಹೆಣ್ಣು ಮಕ್ಕಳಿಗೆ ಹದಿನೈದು ಅಥವಾ ಹದಿನಾರು ವರ್ಷಗಳಾಗುವ ವರೆಗೂ ವಿದ್ಯಾಭ್ಯಾಸ ಮಾಡಿಸುವುದರ ಮೂಲಕ ಬುದ್ಧಿಯಲ್ಲಿಯೂ, ದೇಹದಾರ್ಢ್ಯದಲ್ಲಿಯೂ ಚೆನ್ನಾಗಿ ಪುಷ್ಟಿಯನ್ನು ಹೊಂದುವ ಹಾಗೆ ಮಾಡುವರೆಂದು ಕೋರುತ್ತೇನೆ

ಬಾಲ್ಯವಿವಾಹವು ಈಗ ಹೆಚ್ಚಾಗಿರುವದರಿಂದ ನಮ್ಮ ದೇಶದಲ್ಲಿ ಒಂದರಿಂದ ಹದಿನೈದು ವರ್ಷಗಳುಳ್ಳ ತೊಂಭತ್ತು ಲಕ್ಷ ವಿವಾಹಿತರಾದ ಬಾಲೆಯರೂ, ಹನ್ನೊಂದು ವರ್ಷಗಳಿಗೆ ಕಡಮೆಯಾದ ಇಪ್ಪತ್ತೈದು ಲಕ್ಷ ವಿವಾಹಿತರಾದ ಬಾಲೆಯರೂ ಇರುತ್ತಾರೆಂಬುವುದರಲ್ಲಿ ಏನು ಆಶ್ಚರ್ಯ? ಈ ಪೈಕಿ ನಾಲ್ಕು ಲಕ್ಷ ವಿಧವೆಯರಿರುತ್ತಾರೆ ಈ ಬಾಲ ವಿಧವೆಯರ ಅವಸ್ಥೆಯು ಬಹಳ ಶೋಚನೀಯವಾದದ್ದು ಇವರು ತಮ್ಮ ಬುದ್ಧಿ ಗೋಚರವಾಗುವುದಕ್ಕೆ ಮುಂಚೆಯೇ ತಮಗೆ ಮದುವೆ ಮಾಡಿದರಿಂದ ಯಾವತ್ತೂ ಗೋಳಾಡುತ್ತಿರುವರು ಈ ವಿಚಾರಗಳಲ್ಲಿ ತಿದ್ದುಪಾಟುಗಳು ಅವಶ್ಯಕಗಳೆಂದು ಉಪನ್ಯಾಸ ಮಾಡುವವರೂ, ಘನತೆ ಮತ್ತು ಅಧಿಕಾರ ಸಂಪತ್ತು ಉಳ್ಳವರೂ ಮುಂದೆ ತಮ್ಮ ಕುಲದ ಜ

...ಉಪಯೋಗತಕ್ಕ ಅನಾನುಕೂಲ್ಯಗಳನ್ನು ಲಕ್ಷ್ಯಮಾಡದೆ ಮುಂದಾಳುಗಳ ಪ್ರಯತ್ನವನ್ನು ಸಾಧಿಸದೆ ಬಡವರಾಗಿರತಕ್ಕ ಅವರ ಬಂಧುಮಿತ್ರಾದಿಗಳ ವರ್ತನವನ್ನು ಅವಲಂಬಿಸುವರು ಈಚೆಗೆ ಭಾವನಗರದ ಸಂಸ್ಥಾನದಲ್ಲಿ ಸ್ತ್ರೀ ಸ್ವಾತಂತ್ರ್ಯಪೂರ್ಣವಾದ ವಿವಾಹವು ನಡೆಯಿತು. ಭಾವನಗರದ ಸಂಸ್ಥಾನದ ಪ್ರಭುವಿನ ಒಬ್ಬಳೆ ಕುಮಾರಿಯನ್ನು ಪನ್ನಾ ದೇಶದ ಮಹಾರಾಜರಿಗೆ ವಿವಾಹವು ನಡೆಯಿತು. ಆ ರಾಜಪುತ್ರಿಯು ಹದಿನಾರು ವರ್ಷಗಳ ಪ್ರಾಯವುಳ್ಳವಳಾದಾಗ್ಯೂ ಇಂಗ್ಲೀಷು ಭಾಷೆಯಲ್ಲಿ ಒಳ್ಳೆಯ ಜ್ಞಾನ ಸಂಪಾದಿಸಿಕೊಂಡಿರುತ್ತಾಳೆ. ಆರಂಭದಲ್ಲಿ ದೇಶಭಾಷೆಯನ್ನು ಕಲಿತು ಆ ತರುವಾಯ ಒಳ್ಳೆಯ ಉಪಾಧ್ಯಾಯರ ಹತ್ತಿರ ಇಂಗ್ಲೀಷು ಭಾಷೆಯ ಅಭ್ಯಾಸಮಾಡಿದಳು. ಅವಳು ಸಂಗೀತದಲ್ಲಿಯೂ, ಮತ್ತು ಇತರ ವಿದ್ಯೆಗಳಲ್ಲಿಯೂ ಪಾಂಡಿತ್ಯವನ್ನು ಸಂಪಾದಿಸಿಕೊಂಡಿರುವಳಲ್ಲದೆ ಈ ದೇಶದ ಕಲಾಮಯವಾದ ಪ್ರದರ್ಶನಗಳಲ್ಲಿಯೂ ಒಂಭತ್ತು ಚಿನ್ನದ ಪದಕಗಳನ್ನು ಬಹುಮಾನವನ್ನಾಗಿ ಹೊಂದಿರುತ್ತಾಳೆ. ಇದು ಎಲ್ಲಾ ಸ್ತ್ರೀಯರುಗಳಿಗೂ ಮಾದರಿಯಾಗಿದ್ದಾಗ್ಯೂ, ತಂದೆತಾಯಿಗಳು ತಮ್ಮ ಮಕ್ಕಳುಗಳನ್ನು ಬಾಲ್ಯದಲ್ಲಿಗೇ ಲಗ್ನ ಮಾಡದೆ ಸಾಧ್ಯವಾದಷ್ಟು ಮಟ್ಟಿಗೆ ವಿದ್ಯೆಯನ್ನು ಕಲಿಸಿದರೆ ಅವರುಗಳ ಜೀವನ ಕಾಲಕ್ಕೆ ಬಹಳ ಉಪಯೋಗವಾಗುವುದು. ತಂದೆತಾಯಿಗಳು ತಮ್ಮ ಮಕ್ಕಳಿಗೆ ವಿವಾಹಮಾಡುವ ಹಣದಲ್ಲಿ ಒಂದು ಭಾಗವನ್ನು ಅವರ ವಿದ್ಯಾಭ್ಯಾಸಕ್ಕೆ ಕೊಡಬೇಕಾದದ್ದು ಆವಶ್ಯಕ. ವಿದ್ಯೆಯ ಕಲಿಸಿದ ಬಳಿಕ ಬಿ. ಎ. ಪರೀಕ್ಷೆಯನ್ನು ಕೊಟ್ಟಿರುವ ಪುರುಷ ಮದುವೆಯಾಗುವ ಕಾಲದಲ್ಲಿ ಕೊಡಬೇಕಾದ ವರದಕ್ಷಿಣೆಯೇ ಮೊದಲಾದ ಖರ್ಚು ವೆಚ್ಚಗಳನ್ನು ಸ್ತ್ರೀವಿದ್ಯಾಭ್ಯಾಸವು ಬಹುಮಟ್ಟಿಗೆ ಕಡಮೆ ಮಾಡಬಹುದು.

ಈ ಸಂಘದ ಉದ್ದೇಶಗಳನ್ನು ನಾವು ಅನುವರ್ತಿಸಿದರೆ ಅನೇಕ ಕಷ್ಟಗಳು ನಿವಾರಣೆಯಾಗುವುದರಲ್ಲಿ ಸಂದೇಹವಿಲ್ಲ. ಈ ಉದ್ದೇಶಗಳನ್ನು ನಡೆಸುವ ವಿಚಾರದಲ್ಲಿ ಎಲ್ಲಾ ಸ್ತ್ರೀಯರೂ ಸಹಾಯಮಾಡುವರೆಂದು ನಂಬಿದ್ದೇವೆ. ಈ ಸಂಘದ ಮುಖ್ಯೋದ್ದೇಶಗಳು ಯಾವುವೆಂದರೆ —

(೧) ಈ ದೇಶದ ಹುಡುಗರ ಮತ್ತು ಹುಡುಗಿಯರ ವಿವಾಹದ ವಯಸ್ಸು ಹೆಚ್ಚುಮಾಡುವುದೂ, ಸ್ತ್ರೀಯರ ವಿದ್ಯಾಭ್ಯಾಸವನ್ನು ಈಗಿನ ಸ್ಥಿತಿಗಿಂತ ಅಭಿವೃದ್ಧಿಪಡಿಸುವುದೂ.

(೨) ಈ ವಿಷಯದ ತಮ್ಮ ಸಾಟಿಗಳ ವಿಚಾರಗಳನ್ನು ಉಪನ್ಯಾಸಗಳ ಮೂಲಕ ಪತ್ರಿಕೆಗಳ ಮೂಲಕ ಎಲ್ಲಾ ಜನಗಳಿಗೂ ತಿಳಿಸುವುದು.

(೩) ಈ ಎರಡು ವಿಷಯವನ್ನು ಶೀಘ್ರಕಾಲದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ನಡೆಸುವುದಕ್ಕೆ ಅನುಕೂಲವಾಗುವ ಹಾಗೆ ಎಂದೂ ಮಹಾಜನಗಳ ಪ್ರಮುಖರನ್ನು ಒಟ್ಟು ಸೇರಿಸುವುದು.

(೪) ವರದಕ್ಷಿಣೆಗಳನ್ನೂ ವರಶುಲ್ಕಗಳನ್ನೂ ಕಡಮೆಮಾಡುವುದು.

(೫) ಈ ಮೇಲೆ ಕಂಡ ಉದ್ದೇಶಗಳ ಪ್ರಚಾರಕ್ಕೆ ಎಲ್ಲಾ ವಿಧವಾದ ಪ್ರಯತ್ನ ಮಾಡುವುದು.

ಬಾತ್ಮೀದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಕಡೆಯಲ್ಲೂ ಬರೆಯಕೂಡದು. ಈ ಕ್ರಮಗಳಿಗೆ ನಾವು ಜಾಗಾ ಕೊಡಲಾರೆವು. ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ನಂಬಿಕೆ ಇಡಕೂಡದು. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ. ಈ ವಿಷಯವನ್ನು ಸಕಲರೂ ತಿಳಿಯತಕ್ಕದ್ದು.

ಶ್ರೀ ಸುಬ್ಬಯ್ಯ, ನಂಜನಗೂಡು. ನೀವು ಕೇಳಿರುವ ವಿಷಯಗಳನ್ನು ಕಮಿಷನರ್ ಅಥವಾ ದಿವಾನರವರಿಂದ ತಿಳಿಯತಕ್ಕದ್ದು.

ಶ್ರೀ ಕೃಷ್ಣಶೆಟ್ಟಿಯ್ಯ, ಮೈಸೂರು. ನೀವು ಬರೆದಿರುವ ವಿಷಯವನ್ನು ಮುನಿಸಿಪಾಲ್ ಪ್ರೆಸಿಡೆಂಟರ ತಿಳುವಳಿಕೆಗೆ ತರುವುದು ಉತ್ತಮ.

ಕೆ. ಸೈಯದ್ ಹಮೀದ್, ದೊಡ್ಡಬಳ್ಳಾಪುರ. ನಿಮ್ಮ ಆಕ್ಷೇಪಣೆ ಪುಸ್ತಕದ ಗ್ರಂಥಕರ್ತರಿಗೆ ಬರೆದರೆ, ಅವರು ನಿಮಗೆ ತಕ್ಕ ಉತ್ತರವನ್ನು ಕೊಡುವರು.

—ಎಡಿ.]

ಕರೆಸ್ಪಾಂಡೆನ್ಸ್

ಅರಿಕೆ ಮಾಡುತ್ತಾರೆ

ಅರಕಲಗೂಡು ತಾ|| ಗೂಡದೂರು ಗ್ರಾಮ—ಈ ಪ್ರಾಂತ ಬೆಟ್ಟಗಳನ್ನು ಬೆಟ್ಟ ಊರು ನಿವೇಶನವನ್ನು ಖಾಸ್ತಾ ಹಾಕಿ ಅಳತೆ ಮಾಡುವದಲ್ಲದೆ ಎಕರೆ ಹೊಸ ಪಾಡಿ ಜಮೀನಿಗೆ ೩೦೦ ಕಂದಾಯ ಬೀಳುತ್ತೆ. ಅದಕ್ಕಾಗಿ ಭತ್ತದ ನೆಲ ಹೇಳಿಕೊಂಡು ರೈತರನ್ನು ತೊಂದರೆ ಪಡಿಸುತ್ತಾ ಇರುವರು. ಇದಕ್ಕಾಗಿ ರೈತರು ತುಂಬಾ ಭಯಪಟ್ಟು ಇವರ ಅವಾಂತ್ರ ತಡೆಯಲಾರದೆ ಗವಿಯಲ್ಲಿ ವಾಸಮಾಡುತ್ತಾರೆ. ಇದರ ನಿಜಸ್ಥಿತಿ ತಿಳಿಯಬೇಕಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಮಾಡಿ ಈ ವಿಚಾರ ತಿಳಿಯುವ ಹಾಗೆ ಮಾಡಬೇಕಾಗಿ ಕೋರುತ್ತೇನೆ.

ಪ್ರಜಾಹಿತಚಿಂತಕ

ಮೈಸೂರು—ಹುಣಸೂರು—ಮಡಕೇರಿಯ ರೈಲು ದಾರಿ ಸುಮಾರು ೮೦ ಮೈಲು ದೂರವಿರುವುದು.

ಈ ಮೈಸೂರು ಪ್ರಾಂತ್ಯದ ಹಲವು ಕಡೆಗಳಲ್ಲಿನ ಪ್ರಜೆಗಳ ಮನಸ್ಸಿನಲ್ಲಿ ರೈಲ್ ಹಾಕಬೇಕು ಅಲ್ಲಿ ರೈಲ್ ಹಾಕಬೇಕು ಇಂಥಿಂಥ ಅನುದು ರಸ್ತೆ ಬಹಳವಾಗಿ ನಡೆಯಬೇಕು. ಹೀಗೀಗೆ ಕಂಪನಿಯವರಿಗೆ ಆದಾಯವೂ ಪ್ರಜೆಗಳಿಗೆ ಸುಖವೂ ಆಗಬೇಕು ಎಂದು ಬಹು ತವಕದಿಂದ ಹಾರೈಸುತ್ತಲಿರುತ್ತಾರೆ. ಅದಕ್ಕನುಗುಣವಾಗಿ ಕೆಲವೆಡೆಗಳಲ್ಲಿ ರೈಲ್ ರೋಡಿಗಾಗಿ ಸರ್ವೇ ಮಾಡುತ್ತ ಇರುತ್ತಾರೆ. ಹಾಗೆಯೇ ಮೈಸೂರು ಹುಣಸೂರು ಮಡಿಕೇರಿಯ ಕಡೆ ರೈಲು ಹಾಕುವುದಕ್ಕೆ ಈ ಸೀಮೆಯ ಸರ್ಕಾರದವರ ಗಮನವು ಈ ಕಡೆ ಯಾಕೆ ಬೀಳುವುದಿಲ್ಲವೋ ಕಾರಣವು ತಿಳಿಯದು. ಹುಣಸೂರಿನ ಅನೇಕ ಪ್ರಜೆಗಳ ಅಭಿಪ್ರಾಯವು ಯಾವುದೆಂದರೆ—ಮೈಸೂರಿನಿಂದ ಹುಣಸೂರು ಮಾರ್ಗವಾಗಿ ಮಡಿಕೇರಿಗೆ ರೈಲು ಬಿದ್ದರೆ ಇತರ ಕಡೆಗಳಲ್ಲಿ ರೈಲು ಹಾಕಿ ಕಂಪನಿಯವರು ಹೊಂದಿಕೊಳ್ಳಬಹುದಾದ ಆದಾಯಕ್ಕಿಂತಲೂ ಹೆಚ್ಚು ಆದಾಯವು ಸಂದೇಹವಿಲ್ಲದೆ ದೊರೆಯುವುದೆಂಬುವುದೇ. ಯಾಕೆಂದರೆ ಪ್ರತಿ ನಿತ್ಯವೂ ನೂರಾರು ಗಾಡಿಗಳು ತಿರುಗುತ್ತಾ ಇರುತ್ತವೆ. ಹೆಗ್ಗಡದೇವನಕೋಟೆ ಕಾಕನಕೋಟೆ ಕೊಡಗಿನ ಜಂಗಲುಗಳಿಂದ ವಿಶೇಷ ಬೆಲೆ ಬಾಳುವ ಬಹು ಉಪಯುಕ್ತವಾದ ಲೆಕ್ಕವಿಲ್ಲದ ನಾಟಾಗಳು ಹುಣಸೂರು ಮಾರ್ಗವಾಗಿ ಮೈಸೂರು, ಬೆಂಗಳೂರು ಕಡೆಗೆ ಸಾಗಿಹೋಗುತ್ತಾ ಇರುತ್ತವೆ. ನೂರು ಗಾಡಿಗಳು ಬೇಕಾದಷ್ಟು ತಿರುಗುತ್ತವೆ. ರಾತ್ರಿ ಹಗಲು ಮೋಟಾರ್‌ಗಳಲ್ಲಿ ಪ್ಲಾಂಟರುಗಳು ಸಂಚರಿಸುತ್ತಾ ಇರುವರು. ಅಮದು ರಫ್ತು ಬಹಳ ನಡೆಯುತ್ತಾ ಇರುತ್ತದೆ. ಕೊಡಗಿನ ಕಿತ್ತಲೆ ಹಣ್ಣುಗಳು ಈಗ ಸಾಗುವುದಕ್ಕಿಂತಲೂ ಹೆಚ್ಚಾಗಿ ಮೈಸೂರು ಬೆಂಗಳೂರು ಕಡೆಗಳಿಗೆ ಸಾಗಿ ವಿಕ್ರಯವಾಗಿ ಲಾಭ ದೊರಕುವುದು. ಕಾಫೀ, ಟೀ, ರಬ್ಬರ್ ಇವೆಲ್ಲಾ ಸುಲಭವಾಗಿ ಸಾಗಬಹುದು. ಮಡಿಕೇರಿಯ ಸುತ್ತುವಳಯದಲ್ಲಿ ಅನೇಕ ತೋಟಗಳು ಇರುತ್ತವೆ. ಪ್ಲಾಂಟರುಗಳು ರಬ್ಬರ್ ಟೀ ಕಾಫಿಯನ್ನು ಬೆಳೆಮಾಡುತ್ತಾ ಇರುತ್ತಾರೆ. ಇವರಿಗೆ ಅನೇಕ ಉಪಯುಕ್ತವಾದ ವಿಲಾಯಿತಿಯ ಯಂತ್ರೋಪಕರಣಗಳೂ ಪದಾರ್ಥಗಳೂ ಆಗಿಂದಾಗ್ಗೆ ಬೇಕಾಗಿರುವುವು. ಅವುಗಳನ್ನು ಈಗ ತರಿಸುವುದು ಕೇವಲ ತಾಮಸವೂ ಶ್ರಮಸಾಧ್ಯವೂ ಆಗಿರುತ್ತದೆ. ಹುಣಸೂರಿಗೆ ೧೨ ೧೪ ೧೮ ಮೈಲುಗಳ ದೂರದಲ್ಲಿ ಇರುವ ಕೆಲವು ತಾಲ್ಲೋಕುಗಳಿಂದ ಪ್ರಯಾಣಿಕರೂ ಜಿನಸಿಗಳೂ ಸುಲಭದಲ್ಲಿ ಸಾಗಬಹುದು. ಈಗ ಪ್ರಯಾಣಿಕರು ದಿನಕ್ಕೆ ಸರಾಸರಿ 20 ಜನರಾದರೆ ರೈಲು ಬಿದ್ದರೆ 100 ಜನರವರೆಗೂ ಪ್ರಯಾಣಮಾಡುವರು. ಸ್ವದೇಶ ಪ್ರಯಾಣಿಕರೂ ವಿದೇಶ ಪ್ರಯಾಣಿಕರೂ ಹೆಚ್ಚುವರು. ಈಗಿನ ಪ್ರಯಾಣವು ತುಂಬಾ ಕಷ್ಟಕರವಾದುದು. ರಾತ್ರಿಯೆಲ್ಲಾ ಗಾಡಿಯವರಿಗೂ ಪ್ರಯಾಣಿಕರಿಗೂ ನಿದ್ದೆಗೇಡು ಮೈಕೈಗಳೆಲ್ಲಾ ನೋವು. ರಾತ್ರಿ ಸುಮಾರು ೮ ಗಂಟೆಗೆ ಹುಣಸೂರು ಬಿಟ್ಟರೆ ಮೈಸೂರಿಗೆ ಬೆಳಗ್ಗೆ 7 8 ಘಂಟೆಗೆ ಸೇರಬೇಕು. ಸುಮಾರು 12 ಘಂಟೆ ಕಾಲ ಹಿಡಿಯುವುದು. ಇಷ್ಟು ದೀರ್ಘಕಾಲದ ಪ್ರಯಾಣವು ತಪ್ಪಿ ಪ್ರಜೆಗಳಿಗೆ ಸಮಸ್ತ ಭಾಗದಲ್ಲೂ ಲಾಭವಾಗಬೇಕಾದರೆ ರೈಲು ಬೀಳಬೇಕು. ಹುಣಸೂರಿನಲ್ಲಿ ಎರಡು ಕಾರ್ಖಾನೆಗಳುಂಟು. ಇವುಗಳಿಂದ ಅನೇಕ ಪದಾರ್ಥಗಳನ್ನು ಬೇರೆ ಬೇರೆ ಕಡೆ ಕಳುಹಿಸುವುದಕ್ಕೂ ಬೇಕಾದ ಪದಾರ್ಥಗಳನ್ನು ತರಿಸಿಕೊಳ್ಳುವುದಕ್ಕೂ ಎಷ್ಟೋ ಅನುಕೂಲವೂ ಕಂಪನಿಯವರಿಗೆ ಆದಾಯವೂ ದೊರೆಯುವುವು. ಈಗ ಮೈಸೂರಿನಿಂದ ಮಡಿಕೇರಿಯ ವರೆಗಿರುವ ಓಂಗಾ ಸರ್ವೀಸಿನಿಂದ ಸಾಮಾನ್ಯ ಪ್ರಜೆಗಳಿಗೆ ಯಾವ ವಿಧದಲ್ಲೂ ಪ್ರಯೋಜನವಿಲ್ಲ. ನೇರಾ ಮೈಸೂರಿನಿಂದ ಮಡಿಕೇರಿಗೂ, ಅಲ್ಲಿಂದ ಮೈಸೂರಿಗೂ ಪ್ರಯಾಣಮಾಡತಕ್ಕ ಕೆಲವು ಮಂದಿ ಸರದಾರರಿಗೆ ಮಾತ್ರ ಅನುಕೂಲ. ದುಬಾರಿ ಚಾರ್ಜ್ ಕೊಡಬೇಕು. ಒಂದೊಂದು ವೇಳೆ ಕೇಳಿದರೂ ಅಲ್ಲಿ ಸೀಟ್ ಸಿಕ್ಕದೆ ಕಾದರೆ ಸ್ಪೆಷಲ್ ಮಾಡಿ ಸ್ಪೆಷಲ್ ಆರ್ಡರ್ ಪಡೆಯಬೇಕು. ಹೀಗೆ ಆಲೋಚಿಸಿದರೆ ಎಲ್ಲಾ ಭಾಗದಲ್ಲೂ ಪ್ರಜೆಗಳಿಗೆ ಕಷ್ಟ ನಷ್ಟ, ಅನಾನುಕೂಲಗಳು ಇರುತ್ತವೆ. ಇವೆಲ್ಲಾ ನಿವಾರಣೆಯಾಗುವ ಉಪಾಯವು ರೈಲು ಬೀಳುವದೊಂದೇ ಹೊರತು ಅನ್ಯಥಾ ಇಲ್ಲವು. ಮೈಸೂರು ಸಂಪದಭಿವೃದ್ಧಿ ಸಮಾಜದವರು ವಾಸ್ತವ್ಯವಾಗಿ ಮೈಸೂರು ಸೀಮೆ ಸಂಪತ್ತನ್ನು ವೃದ್ಧಿಮಾಡಬೇಕಾದರೆ ಹಾಳಿ ಇರುವ ಅನೇಕ ಮಾರ್ಗಗಳಲ್ಲಿ ಮೈಸೂರು ಹುಣಸೂರು ಮಡಿಕೇರಿಯ ರೈಲು ಮಾರ್ಗವನ್ನು ಏರ್ಪಡಿಸುವುದು ಒಂದು ಉತ್ತಮವಾದ ಸಲಹೆಯೆಂದು ಸರ್ವರಿಗೂ ತೋರಲಾರದೆ ಇರುವುದೇ. ಸರ್ಕಾರದವರು ಈ ಕಡೆ ತಮ್ಮ ಗಮನವನ್ನಿಟ್ಟು ಪ್ರಜೆಗಳನ್ನು ಪ್ರೋತ್ಸಾಹಪಡಿಸಿದಲ್ಲಿ ಮೈಸೂರಿನಲ್ಲೂ ಹುಣಸೂರಿನಲ್ಲೂ ಮಡಿಕೇರಿಯಲ್ಲೂ ಅನೇಕ ಭಾಗ್ಯವಂತರು ಷೇರುಗಳನ್ನು ಹಾಕಿ ಈ ಕಡೆ ರೈಲುಹಾಕುವ ಈ ಭಾರಿ ಕೆಲಸವನ್ನು ಒಪ್ಪಿಕೊಳ್ಳುವರೆಂಬುವುದರಲ್ಲಿ ಅನುಮಾನವೇ ಇಲ್ಲವು.

ಪುರವಾಸಿ

ತಾಲ್ಲೋಕು ವರ್ತಮಾನಗಳು

ಮದ್ದೂರು.—ಈ ಊರಿನಲ್ಲಿ ಬಿಸಿಲಿನ ತಾಪವು ದಿನೇ ದಿನೆ ಹೆಚ್ಚುತ್ತಲಿದೆ. ಕೆಲವು ಕೈಗಳಲ್ಲಿ ಜ್ವರದ ಪ್ರಮಾಣವೂ ಪ್ರಜೆಗಳಿಗೆ ಬೇಸಿಗೆ ತಪಾಸಣೆಯಲ್ಲೇ ಉಂಟಾಗಿರುತ್ತೆ. ಸಂತೆ ಮಾರಾಟ—ಧಾರಣೆವಾಸಿ ರೂಪಾಯಿ 1ಕ್ಕೆ ರಾಗಿ 16 ಸೇರು ಅಕ್ಕಿ ೮ ಸೇರು ಜೋಳ 15 ಸೇರು ಇರುತ್ತೆ. ಭಾರಿ ಸಂಸಾರಿಗಳಾದ ಜನಗಳಿಗೆ ತುಂಬಾ ಕಷ್ಟ ಉಂಟಾಗಿರುತ್ತೆ. ಜಲಾಧಾರವಾಗಿರುವ ಚೋಳೇನಹಳ್ಳಿ ತಲಾವಿಗೆ ಈ ಸಲವೂ ನೀರು ಬರಲಿಲ್ಲ. ದ್ವಿವ ಪೈರು ಬಾಗಾಯಿತುಗಳು ನೀರಿಲ್ಲದೆ ಒಣಗುತ್ತಿರುತ್ತವೆ. ತರಿ ಫಸಲು ಕೆಂಡು ಎರಡು ವರ್ಷಗಳಾಯಿತು. ಈ ಮಧ್ಯ ಕಂದಾಯದ ಅವಾಂತರ ಬೇರೆ ಪ್ರಾರಂಭವಾಗಿರುತ್ತೆ. ದಯವನ್ನು ಹೊಂದಿದ ಸರ್ಕಾರದವರು ಈ ಸಾಲಿನಲ್ಲಿಯಾದರೂ ತರಿ ಬಾಗಾಯ್ತು ಜಮೀನುಗಳಿಗೆ ಕಂದಾಯದ ರಿಯಾಯಿತಿ ತೋರಿಸುವರೆಂದು ಪ್ರಜೆಗಳು ಹಾರೈಸುತ್ತಿರುವರು.

ತಿಪಟೂರು.—ಬಿಸಿಲಿನ ಧಗೆ ಈಗಲೇ ಚೈತ್ರ ವೈಶಾಖಮಾಸಾದಿಯಲ್ಲಿರುತ್ತೆ. ಈ ಪ್ರಾಂತ್ಯ ರೈತರಿಗೆ ಕಣದ ಕೆಲಸ ಪೂರೈಸುತ್ತಾ ಬಂತು. ಪಟೇಲ್ ಶಾನುಭೋಗರು ಕಂದಾಯ ವಸೂಲ್ ಮಾಡುತ್ತಿದ್ದಾರೆ. ತಾಲ್ಲೋಕು ಪೊಲೀಸ್ ರೇಂಜ್ ಜಮಾದಾರ್‌ರವರು ಅಕ್ರಮ ಸ್ತ್ರೀ ಸಂಗವನ್ನು ಮಾಡಿದರೆಂಬ ಅಪವಾದಕ್ಕಾಗಿ ಪೊಲೀಸ್ ಸೂಪರೆಂಟ್ ಮೆ| ಹೇಸ ಸಾಹೇಬರು ಬಂದು ತನಿಖೆ ನಡೆಸಿ ಡಿಪ್ಯುಟಿ ಜಮಾದಾರ್ರಿಗೆ ಸಸ್ಪೆಂಡ್‌ಮಾಡಿ ಜಾರ್ಜ್ ಮೇಲೆ ಕ್ರಿಮಿನಲ್ ಛಾರ್ಜಿಗೆ ಗುರಿಮಾಡಿದ್ದಾರೆ. ಫಲಿತಾರ್ಥ ಮುಂದೆ ನೋಡಬೇಕು. ಸದ್ಯಕ್ಕೆ ಬೆಂಗಳೂರಿಂದ ಇವರ ಬದ್ಲಿಗಾಗಿ ಟ್ರೈನಿಂಗ್ ಕ್ಲಾಸಿನಲ್ಲಿ ತರಬೇತಾದ ಹೊಸ ಜಮಾದಾರ್ ಬಂದಿದ್ದಾರೆ. ಲಿಂಗಾಯಿತರ ಅಡಿವಿ ಎಂಬುವ ಯೌವನಸ್ಥನು ವೈಶ್ಯರ ಲಕ್ಷ್ಮಿ ಎಂಬುವಳನ್ನು ಬಲಾತ್ಕಾರ ಪ್ರಯೋಗಮಾಡಿದನೆಂದು ಫಿರ್ಯಾದಾಗಿರುತ್ತದೆ. ಈಚೆಗೆ ಕೋರ್ಟಿನಲ್ಲಿ ಜೂಜುಗಾರರ ಹಾವಳಿ ಜೋರಾಗಿದೆ. ಪರಸ್ಥಳದಿಂದ ಬಂದು ಜೂಜಾಡಿ ಕೆಡುತ್ತಿದ್ದಾರೆ. ಈ ಮಧ್ಯೆ ಆಂಜನೇಯಸ್ವಾಮಿ ದೇವಸ್ಥಾನಕ್ಕೂ ಕಾಶಿ ಈಶ್ವರನ ಗುಡಿಗೂ ಕಳ್ಳರು ನುಗ್ಗಿ ಕೆಲವು ಬೆಳ್ಳಿ ಆಭರಣಗಳನ್ನು ಚೋರಿಮಾಡಿದ್ದಾರೆ. ಇವರನ್ನು ವಿಚಾರಿಸುವವರೇ ಇಲ್ಲ. ಇನ್ನಾದರೂ ನಮ್ಮ ಪೊಲೀಸ್ ಇನ್‌ಸ್ಪೆಕ್ಟರವರು ಈ ಜೂಜುಗಾರರನ್ನು ವಿಚಾರಿಸಿ ಕ್ರಮಪಡಿಸಲಾರರೇ? ಈ ಊರು ಸಾಹುಕಾರ್ ಮ್ಯಾ|| ಶಿಂಗ್ರಿ ನಂಜಪ್ಪನವರ ಹೊಸ ಮನೆ ಗೃಹಪ್ರವೇಶ ಮಹೋತ್ಸವವೂ ಇವರ ಮನೆ ಲಗ್ನವೂ ಬಹು ವಿಜೃಂಭಣೆಯಿಂದ ಆದವು. ಇಲ್ಲಿ ಭಾರಿವರ್ತಕರಾಗಿದ್ದ ಪಲ್ಲಾಘಟ್ಟಿ ಮ್ಯಾ|| ಚನ್ನವೀರಪ್ಪನವರು ದಾವಣಗೆರೆಯಲ್ಲಿ ತಮ್ಮ ಗೃಹದಲ್ಲಿ ಕಾಲವಾದರೆಂದು ಕೇಳಿ ಈ ಊರಲ್ಲಿ ಬಹು ಜನರು ಮರಗುತ್ತಿದ್ದಾರೆ.

ಚಿತ್ರದುರ್ಗ.—ದಿನೇ ದಿನೇ ಬಿಸಲು ಜಾಸ್ತಿಯಾಗುತ್ತಾ ಇದೆ. ಊರಲ್ಲಿ ಹುಚ್ಚು ನಾಯಿಗಳ ಪೀಡೆ ಬಹಳ ಜಾಸ್ತಿಯಾಗಿದೆ. ಈಗ್ಗೆ ೩ ದಿವಸಕ್ಕೆ ಹಿಂದೆ ಒಂದು ದಿನ ದೊಡ್ಡ ಬೀದಿಯಲ್ಲಿ ವರ್ತಕ ಹಾಲಪ್ಪನ ಮಗಳನ್ನು ಹುಚ್ಚು ನಾಯಿ ಕಡಿದು ಅದರಿಂದ ಆ ಹುಡುಗಿ ತುಂಬಾ ಬಾಧೆಪಡುತ್ತಾಳೆ. ಈಗ ಮ್ಯುನಿಸಿಪಾಲಿಟಿಯವರು ಎಚ್ಚತ್ತುಕೊಂಡು ಪೋಲೀ ನಾಯಿಗಳನ್ನು ಕೊಲ್ಲಲಿಕ್ಕೆ ಆರಂಭಿಸಿದ್ದಾರೆ. ಆದರೂ ಅವುಗಳ ಭಯ ಊರಲ್ಲಿ ಜಾಸ್ತಿಯಾಗಿದೆ. ದಿನಸಿ ಧಾರಣೆ ತುಟ್ಟಿಯಾಗಿಯೇ ಇದೆ. ಈಚೆಗೆ ಗೌರ್ನಮೆಂಟಿನವರು ಏರ್ಪಡಿಸಿರತಕ್ಕ ಹೊಸ ಅಳತೆ ಸೇರುಗಳು ತೂಕದ ಬೊಟ್ಟುಗಳು ಜಾರಿಯಲ್ಲಿ ಬಂದವು. ಆದರೂ ಅವುಗಳಲ್ಲೂ ವ್ಯತ್ಯಾಸವಿದೆ ಎಂತ ಜನಗಳು ಹೇಳಿಕೊಳ್ಳುತ್ತಿದ್ದಾರೆ. ಊರಲ್ಲಿ ಛಳಿಜ್ವರ ಮುಂತಾದ ಕಾಯಿಲೆಗಳು ಸ್ವಲ್ಪ ಕಮ್ಮಿಯಾಗಿದೆ. ಈ ಟೌನಿಗೆ ನೀರು ಸರಬರಾಯಿ ಆಗುತ್ತಿರತಕ್ಕ ಕೆರೆಯಲ್ಲಿ ಈ ವರ್ಷಕ್ಕೆ ಆಗುವಷ್ಟು ನೀರು ಇರುವುದರಿಂದ ಪ್ರಜೆಗಳೆಲ್ಲಾ ಅದೊಂದು ವಿಷಯದಲ್ಲಿ ಧೈರ್ಯವಾಗಿದ್ದಾರೆ.—ಈ ಡಿಸ್ಟ್ರಿಕ್ಟಿನಲ್ಲಿ ಕಳ್ಳರು ರಾತ್ರಿ ಕಾಲಗಳಲ್ಲಿ ಮಾಲ್‌ಗಳನ್ನು ಬಂದು ಮನೆಗಳನ್ನು ದೋಚಿಕೊಂಡು ಹೋಗುತ್ತಿದ್ದಾರೆಂಬ ವದಂತಿ ಜೋರಾಗಿ ಹುಟ್ಟಿದೆ. ದಾವಣಗೆರೆ ತಾಲ್ಲೂಕು ಅಣಜಿಯಲ್ಲಿ ಒಂದು ಕೂಸೇಸಿದಕಾಯಿತಿ, ಜಗಳೂರು ತಾಲ್ಲೂಕು ಗಾಲಹಳ್ಳಿಯಲ್ಲಿ ಒಂದು ದಕಾಯಿತಿ, ಮೊಳಕಾಲ್ಮುರು ತಾಲ್ಲೂಕಿನಲ್ಲಿ ಒಂದು ದಕಾಯಿತಿ ಈ ಮೇರೆ ನಡೆಯಿತೆಂದ ತಿಳಿಯಬರುತ್ತೆ. ಕೆಲವು ಕಡೆಗಳ ಕಳವು ಕೇಸುಗಳಂತೂ ನಡೆಯುತ್ತಲೇ ಇವೆ.—ಡಿವಿಸನ್ ಕಮೀಷನರ ಸಾಹೇಬರವರೂ, ಡಿಪ್ಯುಟಿ ಕಮೀಷನರ್ ಇಲಾಖಾ ಸರ್ಕಲ್ ಇನ್‌ಸ್ಪೆಕ್ಟರ್ ಸಾಹೇಬರವರೂ ಇಲ್ಲಿಗೆ ಬಂದು ಇದ್ದಾರೆ.

ಯಳಂದೂರು ತಾ|| ಬಿಳಿಗಿರಿ.—ಬಿಸಿಲಿನ ತಾಪ ಹೆಚ್ಚು. ತಲಾವಿನ ನೀರು ಕೆಡಲುಪಕ್ರಮವಾಗಿದೆ. ಆದುದರಿಂದ ಯೂನಿಯನ್ ಮೆಂಬರುಗಳು ಈ ವಾರದ ಯೂನಿಯನ್ ಮೀಟಿಂಗಿನಲ್ಲಿ ಆವಶ್ಯಕವಾಗಿ ಈ ವಿಷಯವನ್ನು ಚರ್ಚಿಸಿ ಹೊಸ ನೀರು ಕೆರೆಗೆ ಸಪ್ಲೈ ಆಗುವಂತೆ ಇಂಜನಿಯರ್ ಇಲಾಖೆಗೆ ಬರೆಸುವುದರ ಮೂಲಕ ತಲಾವಿನ ನೀರು ಶುದ್ಧಿಯಾಗಿ ಜನಾರೋಗ್ಯವಾಗುವಂತೆ ನಿಗಾಯಿಟ್ಟು ಈ ಕೆಲಸ ಮಾಡಬೇಕು. ತಲಾವ್ ನೀರಿನ ದೆಸೆಯಿಂದ ಗ್ರಾಮದಲ್ಲಿ ನೆಗಡಿ ಕೆಮ್ಮಲು ಜ್ವರ ಇವುಗಳು ಹೆಚ್ಚಲುಪಕ್ರಮವಾಗಿದೆ. ರಾತ್ರಿ ವೇಳೆ ಊರೊಳಗೆ ಸಂಚಾರಮಾಡಲು 10 15 ದಿನಗಳಿಂದ ಬಹು ತೊಂದರೆ ಆಗಿದೆ. ಯಾತಕ್ಕೆಂದರೆ ಕೆಲವು ಜನ ಪುಂಡರು ಸೇರಿ ಮನೆಗಳ ಮೇಲೆ ಕಲ್ಲುಗಳನ್ನು ಯಾವ ಕಾರಣದಿಂದಲೋ ಎಸೆದು ಮನೆಯ ಹೆಂಚುಗಳನ್ನೆಲ್ಲಾ ಹಾಳುಮಾಡುತ್ತಿದ್ದಾರೆ. ಈ ವಿಷಯದಲ್ಲಿ ಪೊಲೀಸ್ ಪಟೇಲರು ನಿಗಾಯಿಟ್ಟು ಪುಂಡರನ್ನು ಹಿಡಿದು ಅವರ ನಡತೆ ವಿಷಯದಲ್ಲಿ ಸರ್ಕಾರಕ್ಕೆ ತಿಳಿಸಿ ಬಂದೋಬಸ್ತು ಮಾಡಿಸಿದರೆ ನಿರ್ಭಯವಾಗಿ ರಾತ್ರಿ ವೇಳೆ ಸಂಚಾರಮಾಡಬಹುದು. ಊರ ಸಮೀಪದಲ್ಲೇ ಸತ್ತ ದನಗಳನ್ನು ಕುಯ್ಯುತ್ತಾರೆ. ಇದನ್ನು ತಪ್ಪಿಸುವುದು ಆರೋಗ್ಯ. ಇಲ್ಲಿ ಸ್ಥಾಪಿತವಾಗಿ ಇರುವ ಶ್ರೀ ಕೃಷ್ಣರಾಜೇಂದ್ರ ಪರಸ್ಪರ ಸಹಾಯಕ ಸಂಘದ ಕೆಲಸವು ತೃಪ್ತಿಕರವಾಗಿ ನಡೆಯುತ್ತಲಿರುವುದು. ಕಳೆದ ವಾರ ದನಗಳನ್ನು ಕದ್ದು ಹೊಡೆದುಕೊಂಡು ಹೋಗಿದ್ದಾರೆಂದು ತಮ್ಮ ಪತ್ರಿಕೆಯಲ್ಲಿ ಪ್ರಚುರಪಡಿಸಿದ್ದುದು ಸರಿಯಷ್ಟೆ. ಈವರೆಗೆ ೩೦ ದಿವಸಗಳು ಹೋಗಿರುತ್ತೆ. ಮಾಲೀಕರುಗಳು ಎಷ್ಟು ಅರಸಿದಾಗ್ಯೂ ಸಿಕ್ಕಲಿಲ್ಲ. ಹೀಗೆ ಆಗಲು ಕಾರಣ ಇನ್ನೂ ಗೊತ್ತಾಗಿಲ್ಲ. ಈ ಸ್ಥಳವು ತುಂಬಾ ಪ್ರಜಾಸಂಖ್ಯೆಯುಳ್ಳದ್ದಾಗಿ ಭಾರಿ ಗ್ರಾಮವಾದುದರಿಂದ ಇಲ್ಲಿ ಪೊಲೀಸ್ ಸ್ಟೇಷನ್ ಇರುವುದು ಅತ್ಯವಶ್ಯಕವಾಗಿದೆ. ಧಾರಣೆ ವಾಸಿಗಳು ದಿನೇ ದಿನೇ ಹೆಚ್ಚುತ್ತಲಿದೆ.

ಹುಣಸೂರು.—ಈ ಊರಲ್ಲಿ ಆರೋಗ್ಯಕ್ಕೆ ಭಂಗ ಮಾತ್ರ ಕೊಂಚ ತಂಗಾಳಿಯು ಬೀಸುವುದು. ಈಗಾಗಲೇ ಬಿಸಿಲು ಧೂಳಿನಿಂದ ಕೂಡಿದೆ. ಧಾರಣೆ ವಾಸಿಗಳು ಮಧ್ಯಮಸ್ಥಿತಿಯಲ್ಲಿರುವವು. ಕಳೆದ ತಿಂಗಳು 11 12 13 ನೇ ತಾರೀಖುಗಳಲ್ಲಿ ಈ ಊರಿಗೆ ಇಬ್ಬರು ಜನಾಬ ಮೌಲ್ವಿಗಳೂ ಮೌಲಾ ಫರ್ಸಿಂಗರವರೂ ತಮ್ಮ ಸಹಾಯಕರೊಂದಿಗೆ ಬಂದು ಮೊಕ್ಕಾಂ ಮಾಡಿ ಹಿಂದೂಸ್ಥಾನಿ ಗರ್ಲ್ಸ್ ಸ್ಕೂಲ್ ಸ್ಟೇಜ್ ಮಾಡಿ ಅನೇಕ ಮಹಮ್ಮದೀಯರ ಮನೆಗಳನ್ನು ಸಂಧಿಸಿ ಗೋಸಾಸ್ತ್ರೀಯರಿಗೆ ಬುದ್ಧಿವಾದಗಳನ್ನು ಹೇಳಿದರು. ಇಲ್ಲಿನ ವೆಸ್ಲಿಯನ್ ಗರ್ಲ್ಸ್ ಸ್ಕೂಲಿನಲ್ಲಿ ಅನೇಕ ಮಹಮ್ಮದೀಯರನ್ನು ಕರೆಯಿಸಿಕೊಂಡು ಮತಸಂಬಂಧವಾಗಿ ಉತ್ಕೃಷ್ಟವಾದ ಭಾಷಣಗಳನ್ನು ಹಿಂದೂಸ್ಥಾನಿ ಭಾಷೆಯಲ್ಲಿ ಪ್ರಸಂಗ ಮಾಡಿದರು. ಸಂತೆಬಯಲಲ್ಲೂ ಉಪನ್ಯಾಸ ಮಾಡಿದರು. ಕೆಲವು ಸುವಾರ್ತಾ ಗ್ರಂಥಗಳನ್ನು ವಿಕ್ರಯಿಸಿ ಅನೇಕ ಕೈಪತ್ರಗಳನ್ನು ಕೊಟ್ಟರು. ಕೆಲವು ಸಾಮಾನ್ಯವಾದ ಸಂಭಾಷಣೆಗಳು ನಡೆದವು. 14 ನೇ ತಾರೀಖು ಶುಕ್ರವಾರ ಬೆಂಗಳೂರು ಕಡೆ ಪ್ರಯಾಣ ಮಾಡಿದರು. ಇಲ್ಲಿ ಕಳೆದ ೨೦ ೩೦ ವರುಷಗಳಿಂದ ಮಹಮ್ಮದೀಯರಲ್ಲಿ ಎರಡು ಪಾರ್ಟಿಗಳಿದ್ದವು. ಇದರ ಸಲುವಾಗಿ ವೈಷಮ್ಯಾದಿಗಳೂ ಮಾರಾಮಾರಿಗಳೂ ಆಗುತ್ತಿದ್ದವು. ಇಂತಹ ದ್ವೇಷಾಸೂಯೆಗಳನ್ನು ಹೋಗಲಾಡಿಸಿ ಇವರಲ್ಲಿ ಐಕಮತ್ಯವನ್ನು ಉಂಟುಮಾಡುವುದಕ್ಕಾಗಿ ಇಲ್ಲಿನ ಅಮಲ್ದಾರ್ ಮೆ| ನರಸಿಂಹಯ್ಯಂಗಾರ್ಯರು ತುಂಬಾ ಮೆಹನತ್ತು ತೆಗೆದುಕೊಂಡರು. ಇದಕ್ಕಾಗಿ ಮಹಮ್ಮದೀಯ ಪ್ರಮುಖರು ಮ್ಯಾ|| ನರಸಿಂಹಯ್ಯಂಗಾರ್ಯರನ್ನೂ ಸಬ್ ರೆಜಿಸ್ಟ್ರಾರ್‌ಯವರನ್ನೂ ಸಂದಲ್ ಕೋಠಿ ದರೋಗರನ್ನು ಕರೆಯಿಸಿಕೊಂಡು ಕಳೆದ ವಾರ ಒಂದು ಮಸೀದಿಯಲ್ಲಿ ಬಹು ಗಂಭೀರವಾದ ಭಕ್ತಿಭಾವದಿಂದ ನಮಾಜ್ ಮಾಡಿದರು. ನಮ್ಮ ಅಮಲ್ದಾರರವರು ಮೆ| ಚಿದಂಬರರಾಯರಿಂದ ಕೆಲಸದ ಗೌರವ ಎಂಬ ಶಿರೋಭಿಧಾನವುಳ್ಳ ಉತ್ಕೃಷ್ಟವಾದ ಉಪನ್ಯಾಸವನ್ನು ಹಿಂದೂಸ್ಥಾನಿ ಭಾಷೆಯಲ್ಲಿ ಕೊಡಿಸಿದರು. ಎಲ್ಲರೂ ಕೇಳಿ ಸಂತೋಷದಿಂದ ತಮ್ಮ ಅವಗಾಹನೆಗೆ ತಕ್ಕಂತೆ ಉಭಯ ಪಂಗಡದವರು ಅನ್ಯೋನ್ಯಭಾವದಿಂದ ಒಬ್ಬೊಬ್ಬರು ಒಂದೊಂದು ಕಡೆ ಫಾತೆಯವನ್ನು ನಡೆಯಿಸಿದರು. ಅಮಲ್ದಾರರವರ ನಿಷ್ಪಕ್ಷಪಾತವಾದ ಬುದ್ಧಿವಾದಗಳನ್ನು ಕೊಂಡಾಡಿ ತಮ್ಮ ತಮ್ಮಲ್ಲಿದ್ದ

ಅಸೂಯೆಗಳನ್ನು ಬಿಡುತ್ತೇವೆಂದು ಒಪ್ಪಿ ಮುಚ್ಚಳಿಕೆ ಬರೆದು ಕೊಟ್ಟಿರುತ್ತಾರೆ ಈ ಭಾವವು ಇಲ್ಲಿನ ಮಹಮ್ಮದೀಯರಲ್ಲಿ ಶಾಶ್ವತವಾಗಿ ನಿಲ್ಲುವಂತಾಗಬೇಕು ಈದೇ ನಮ್ಮ ಕೋರಿಕೆ 27 ನೇ ತಾರೀಖು ಶನಿವಾರ ಮಧ್ಯಾಹ್ನ 1 ಘಂಟೆಗೆ ಸರ್ದಾರ್ ಮ|| ಕಾಂತರಾಜೇ ಅರಸಿನವರು ಹುಣಸೂರಿಗೆ ಎಕ್ಸೈಸ್ ಇಲಾಖಾ ಮತ್ತು ರೆಜಿಸ್ಟ್ರೇಷನ್ ಬಾಬತು ಲೆಕ್ಕಾಚಾರಗಳನ್ನು ಇನ್‌ಸ್ಪೆಕ್ಟ್ ಮಾಡಿಕೊಂಡು ಪುರಪ್ರಮುಖರಾದ ಸರ್ಕಾರಿ ಮತ್ತು ಇತರ ದೊಡ್ಡ ಮನುಷ್ಯರಿಂದ ಸನ್ಮಾನಿತರಾಗಿ 1 ಘಂಟೆಗೆ ಮೈಸೂರು ಕಡೆ ಪ್ರಯಾಣ ಬೆಳೆಯಿಸಿದರು ಹಾಗೆಯೇ ಫಾರೆಸ್ಟ್ ಇಲಾಖೆಯ ಕೆಲಸ ಕಾರ್ಯಗಳ ಇನ್‌ಸ್ಪೆಕ್ಷನ್ ಬಗ್ಗೆ ರಾಯ ಬಹದ್ದೂರ್ ಕನ್‌ಸರ್ವೇಟರ್ ಮ|| ಮುತ್ತಣ್ಣನವರು ದಯಮಾಡಿಸಿ ಎಲ್ಲಾ ಕಾರ್ಯಗಳನ್ನು ಪರಾಂಬರಿಸಿ ಸಂತುಷ್ಟರಾಗಿ ಈ ದಿನ ಬೆಳಗ್ಗೆ ಇತರ ಕಡೆಗಳಿಗೆ ಸಂಚಾರಕ್ಕಾಗಿ ಹೊರಟು ಹೋದರು ಹೀಗೆ ಆಗಿಂದಾಗ್ಗೆ ದೊಡ್ಡ ಆಫೀಸರುಗಳೂ ಬ್ರಿಟಿಷ್ ರೆಸಿಡೆಂಟರೂ ಈ ಸ್ಥಳಕ್ಕೆ ಬರುತ್ತಾ ಹೋಗುತ್ತಾ ಇರುತ್ತಾರೆ ಈ ಟವರ್ ಪ್ರಜೆಗಳಿಗಿರುವ ನೀರಿನ ತೊಂದರೆಯನ್ನು ಕುರಿತು ಕೆಲವು ಸಾರಿ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರೂ ಅದು ಸರ್ಕಾರದವರ ಗಮನಕ್ಕೆ ಬಂತೋ ಇಲ್ಲವೋ ತಿಳಿಯದು ಯಾವ ಮಹನೀಯರು ಇಲ್ಲಿನ ಪ್ರಜೆಗಳಿಗಿರುವ ನೀರಿನ ಕಷ್ಟವನ್ನು ಪರಿಹರಿಸಿ ಶಾಶ್ವತವಾದ ಕೀರ್ತಿಗೆ ಭಾಜನರಾಗುವರೋ · ಅಂತಹ ಕಾಲ ಯಾವಾಗ ಬರುವುದೋ ಎಂದು ಹಾರೈಸುತ್ತೇವೆ

ಚಾಮರಾಜನಗರ —ಈ ಊರಿನಲ್ಲಿ ಪ್ಲೇಗ್ ಮತ್ತು ಕಾಲರಾ ಎರಡೂ ಪ್ರಾರಂಭವಾಗಿ ಸುಮಾರು ಒಂದು ತಿಂಗಳಾಯಿತು ಅಧಿಕಾರಿಗಳೂ ಕೆಲವು ಕಚೇರಿ ಜನರೆಲ್ಲಾ ರಾಮಸಮುದ್ರ ಮುಂತಾದ ಸ್ಥಳಗಳಿಗೆ ಸೇರಿಕೊಂಡಿದ್ದಾರೆ ದೇವಾಂಗದ ಕೇರಿಯೆಲ್ಲಾ ಗುಡ್ಡಗಳಿಗೆ ಹೊರಟು ಹೋಯಿತು ವರ್ತಕರೂ ಬೇರೆ ಜನರೂ ಬೇರೆ ಬೇರೆ ಕಡೆ ಗುಡ್ಲಗಳನ್ನು ಕಟ್ಟಿದ್ದಾರೆ ಕೆಲವರು ಕಟ್ಟುತ್ತಾ ಇದ್ದಾರೆ ಗಳ, ಬೊಂಬು ಮುಂತಾದೆಲ್ಲಾ ಅರ್ಧ ಕ್ರಯಕ್ಕೆ ಸರ್ಕಾರದವರು ಕೊಡುತ್ತಾಯಿದ್ದಾರೆ ಮೈಸೂರಿಂದ ಹೆಲ್ತ್ ಆಫೀಸರವರು ಬಂದು ವಿಚಾರಿಸಿಕೊಂಡು ಕೆಲವರಿಗೆ ಮಾತ್ರ ಇನಾಕ್ಯುಲೇಷನ್ ಹಾಕಿ ಹೋದರು ಈ ಪ್ರಾಂತ್ಯದ ಜನರು ಹೆಚ್ಚಾಗಿ ತಮ್ಮ ದೇವತೆಗಳಲ್ಲಿ ನಂಬಿಕೆ ಇಡುತ್ತಾರೆಯೇ ಹೊರತು ಇನಾಕ್ಯುಲೇಷನ್ ಹಾಕಿಸಿಕೊಳ್ಳುವದಕ್ಕೆ ತುಂಬಾ ಹೆದರುತ್ತಾರೆ ಇದರ ಪ್ರಯೋಜನವನ್ನು ಕುರಿತು ಎಷ್ಟಾಗಿ ಉಪದೇಶಮಾಡಿದರೂ ಚನ್ನಾಗಿ ಮನಸ್ಸು ಕೊಡುವದಿಲ್ಲ ಊರಿನಲ್ಲಿ ಗ್ರಾಮಶಾಂತಿ ಮಾಡುತ್ತಲೇ ಇದ್ದಾರೆ ಮ್ಯುನಿಸಿಪಾಲಿಟಿಯು ಇನ್ನೂ ಹೆಚ್ಚು ಶ್ರದ್ಧೆ ತೆಗೆದುಕೊಳ್ಳಬೇಕಾಗಿದೆ ಅನೇಕ ಚರಂಡಿ ಬಚ್ಚಲುಗಳು ಕೊಳಚೆ ಬೀದಿಯಲ್ಲಿಯೇ ಕೊಳೆಯುತ್ತಾ ದುರ್ವಾಸನೆ ಬಡಿಯುತ್ತಾ ಇವೆ ತಿಪ್ಪೆಗಳು ತುಂಬಾ ಇವೆ ಕಡ್ಲೆಕಾಯಿ ಎಣ್ಣೆ ಇಲ್ಲಿ ವಿಶೇಷವಾಗಿರುವದರಿಂದ ತಿನ್ನುವ ಪದಾರ್ಥಗಳೆಲ್ಲಾ ಅಂಗಡಿಗಳಲ್ಲಿ ಅದರಿಂದ ತಯಾರಿಸಿ ಮಾರುತ್ತಾರೆ ಮಿಠಾಯಿ ಮುಂತಾದ ಅಂಗಡಿಗಳಲ್ಲಿ ಹಳೇ ಪದಾರ್ಥಗಳು ತುಂಬಿವೆ ನೊಣಗಳು ಬೀದಿಯ ಧೂಳು ಅವರಲ್ಲಿ ತುಂಬಿಕೊಂಡಿರುತ್ತವೆ ಜನರು ಅವುಗಳನ್ನು ತಿಂದರೆ ಕಾಲರಾ ಪಾತ್ರವಾಗಿಯೇಯಿರುತ್ತವೆ ಕಡಲೇಕಾಯಿ ತಿಂದರೇ ಪಿತ್ತ, ಕೆಟ್ಟದ್ದು ಸ್ವಲ್ಪಾ ಹಾಕಿ ಗಾಣವಾಡಿ ಎಣ್ಣೆ ತೆಗೆದು ತಿಂದರೆ ಮತ್ತಷ್ಟು ಪಿತ್ತ ಜಾಸ್ತಿ ಜೋರಾಗುತ್ತದೆ ಹೆಂಡದ ಅಂಗಡಿ ಟವರ್‌ನಲ್ಲಿದೆ ಸುತ್ತಲೂ ತುಂಬಾ ಕಚರಾ ಗಲೀಜು ತುಂಬಿದೆ ಕೆಲವು ವೇಳೆ ಕೆಲವರು ಕುಡಿದು ಶಾಂತಿ ಮಾಡುತ್ತಾ ಹೊರಳಾಡುವದನ್ನು ನೋಡಿದೆನು ಈ ಸೋಂಕು ರೋಗಗಳ ಕಾಲದಲ್ಲಿ ಅಧಿಕಾರರು ಇದ್ದೀಗ ಬೀರಿ ಕಣ್ಣಿಟ್ಟು ಗ್ರಾಮದ ಆರೋಗ್ಯವನ್ನು ಕಾಪಾಡುವರೆಂದು ನಂಬಿದ್ದೇನೆ

Office of the Military Secretary to His Highness the Maharajah of Mysore

Dated Bangalore, 1st February, 1913

NOTICE.

Tenders will be received by the Military Secretary to His Highness the Maharajah at 12 noon on the 28th February, 1913, for the supply of the following felloes spokes and planks, required for the Mysore Imperial Service Transport Workshops

The tenderers should produce samples of wood they are to supply with their quotations making a note, at the same time the date within which the articles can be supplied

The details of size required can be ascertained at the Imperial Service Transport Workshops, Cubbon Park, Bangalore

Sawn teak or honney felloes	1,980
Do teak or honney spokes	3,335
Do teak planks, [2 x 1'-6' x 1-4	340

Sd/ A JONES, Lt Col,
For Military Secretary

[39 2]

NOTICE.

The Secretary for the Madras Branch of The Victoria Life Insurance Company Ltd is expected to arrive at Mysore during the 1st week of March to plant Agencies Intending persons may apply to the Secretary, C/o Editor, 'Vrittanta Patrike'

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳದಂತೆ ಕೇಳದ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION 39

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವುದು

ಅದು ಸಂತೋಷವೂ ಆನಂದವೂ ಸಮವಾಗಿ ಆಹಾರದ ರುಚಿ ಹೊಂದಿ ಸುಖ ಜಿಹ್ವೆ ತೋರಿಸುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧಮಾರುವವರಲ್ಲೂ ಸಿಕ್ಕುತ್ತವೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ವಸ್ಥವಾಗುವದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಸ್ವಾಭಾವಿಕ ಶರೀರಕ್ಕೇ ರೋಗವುಂಟಾಗುತ್ತದೆ

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ— ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಸಿಯಾಗಿಯೋ ಇಳಿಯುವುದು ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ ಮೈನೋವು, ಕೀಲುನೋವು, ಮುಂತಾದ ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರಾತಿಸ್ರವ, ವಾಯು, ಮಧುಮೇಹ, ಉರಿಮೂತ್ರ, ಮೂತ್ರಕೋಶ ಕಲ್ಲು ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ಅಂಗಗಳಿಂದ ಸಂಭವಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [112 25]

ಆರೋಗ್ಯ ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು

ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು ಅಥವಾ ಡೋನ್ಸ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುತ್ತವೆ

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ ! ಕನ್ನಡಕ್ಕೆ ಸುಲಭವಾದ ದಾ[illegible]

ಮೈಸೂರು ಲೋವರ್ ಸೆಕೆಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣ ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ 3 ಆಣೆ ಅರಕೊಳ್ಳೊಂದು ಉಚಿತ

[18 11] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಗೃಹಕೃತ್ಯದ ನೋಟೀಸು.

ಬೆಂಗಳೂರು ತಾಲ್ಲೂಕು ಚಿಕ್ಕಬಾಣಾವಾರದಲ್ಲಿರುವ ಚಿತ್ತರ ಜಂಗಮಯ್ಯ ಹೆಂಡತಿ ಸುಬ್ಬಮ್ಮ ತಿಳಿಯಪಡಿಸುವದೇನೆಂದರೆ ನನ್ನ ಗಂಡ ಮೊದಲನೆ ಪ್ಲೇಗಿನಲ್ಲಿ ಮೃತಪಟ್ಟನು ಈ ಕೆಳಗೆ ಕಂಡ ಚಕ್ಕುಬಂದಿಯುಳ್ಳ ನನ್ನ ಬಾಬತು ವರಾಂದದಲ್ಲಿಯೇ ಬಾಗಾಯತಿನಿಂದಲೂ ನಾನು ವಾಸಮಾಡಿಕೊಂಡಿದ್ದೇನೆ ವರಾರದ ಮಾರೆಯನ್ನು ನನ ಅತ್ತೆ ಸುಬ್ಬಮ್ಮನ ಮರಣಾನಂತರ ನನ್ನ ಗಂಡ ಅಕ್ಕ ಪುಟ್ಟಮ್ಮನೆಂಬುವಳು ನನಗೆ ಮೋಸಪಡಿಸಬೇಕೆಂದು ಇರಾದೆಯಿಂದ ತನ್ನ ಹೆಸರಿಗೆ ಮಾಡಿಸಿಕೊಂಡು ತನ್ನ ತಂಗಿಯ ಮಕ್ಕಳಿಗೆ ಸದರಿ ಸ್ವತ್ತನ್ನು ಪರಾಧೀನ ಮಾಡುವದಾಗಿ ಎಗ್ರಿಮೆಂಟ ವರ್ತಮಾನ ಕೇಳುತ್ತೇನೆ ಈಕೆಗೆ ಈ ಸ್ವತ್ತಿನಲ್ಲಿ ಯಾವ ವಿವಾದ ಹಕ್ಕುಬಾಧ್ಯತೆಗಳೂ ಇಲ್ಲವಾಗಿ ಇದನ್ನು ಈಕೆಯಿಂದ ಯಾರು ಯಾವ ವಿಧವಾಗಿ ಪರಾಧೀನಮಾಡಿಕೊಂಡಾಗ್ಯೂ ಊರ್ಜಿತವಾಗತಕ್ಕದ್ದಲ್ಲ ಈ ಸ್ವತ್ತಿನಲ್ಲಿ ನನ್ನ ವಿನಹ ಯಾರಿಗೂ ಯಾವ ವಿಧವಾದ ಹಕ್ಕುಬಾಧ್ಯತೆಯೂ ಇಲ್ಲವೆಂದು ಈ ಮೂಲಕ ತಿಳಿಸಿರುತ್ತೇನೆ ಚಕ್ಕುಬಂದಿ —ಪೂರ್ವಕ್ಕೆ ಕುಂಬಾರ ಬಾಲಪ್ಪನ ಮನೆ ಪಶ್ಚಿಮಕ್ಕೆ ಚಿಲಕವಾದ್ಯರಡಲುವಪ್ಪನ ಮನೆ, ಉತ್ತರಕ್ಕೆ [illegible] ದಕ್ಷಿಣಕ್ಕೆ ಕುಂಬಾರ ನಂಜುಂಡಪ್ಪನ ಮನೆ—ಈ ಮಧ್ಯೆ ಇರುವ [illegible] ಹುಲ್ಲುಮನೆ ಮತ್ತು ಇದಕ್ಕೆ ಸೇರಿದ ಅಂಗಳ ಸಹ [19 1]

ಈ () ಎಲೇ ಗುರುತಿನ ರುಜುವು ಸುಬ್ಬಮ್ಮ ಹಾಕಿದ್ದು

ಇದೇ ನಿಜವಾದ ರೈಲ್ವೇ ರೆಗ್ಯುಲೇಟರ್ ಜೇಬು ಗಡಿಯಾರ

ಕ್ರಯ ರೂಪಾಯಿ 1-12 0

ಇದು ಅನೇಕ ರೈಲ್ವೇ ರೆಗ್ಯುಲೇಟರ್ ಎಂದು ಹೆಸರಿಟ್ಟು ಕೊಡುವ ಪ್ರ[illegible] ಸುತ್ತಲಿರುವ ಗಡಿಯಾರಗಳಂತಾದ್ದಲ್ಲ ಇದನ್ನು ನಾವು ಪೂರ್ವದಲ್ಲಿ 2 [illegible]



ಆಣೆಗೆ ಮಾರುತ್ತಲಿದ್ದು ಇತರರ ಬಡವಾಗೆಯನ್ನು [illegible] ದ್ದು ಇದ್ದ ದಾಗ್ಯೂ ಪ್ರಕಟಿಸಿ ಕ್ರಯವನ್ನು ಮಾತ್ರ [illegible] ರೈಲ್ವೇ ರೆಗ್ಯುಲೇಟರ್ ಎಂಬ ಹೆಸರು ಇಟ್ಟುಕೊಂಡು ಪ್ಲೇಟ್ ಪ್ರಕಟಣೆಗಳನ್ನು ಪ್ರಕಟಿಸುತ್ತಲಿರುವರು [illegible] ಪ್ರಕಟಣೆಗಳನ್ನು ನಂಬಿ ಮೋಸಹೋಗದೆ ಈ ನಮ್ಮ ನಿಜವಾದ ರೈಲ್ವೇ ರೆಗ್ಯುಲೇಟರ್ ಗಡಿಯಾರವನ್ನು [illegible]

ಮಾದರಿ ಬೇಕಾದ್ದರಿ [111] ವಿಳಾಸ —

ಜಿ. ಎ ನಾಯ್ ಕಂಪನಿ, ನುಂಗಂಬಾಕಂ, ಮದರಾಸು

ಟಿಕ್ಸೋ ಬಿರ್ ರೈಲ್ವೆ ರೆಗ್ಯುಲೇಟರ್ ಜೇಬುಗಡಿಯಾರ

ಮ್ಯಾಜಿಕ ಪೇನಾಕತ್ತಿ ಬಹುಮಾನ ಸಹಿತ ಕ್ರಯ ರೂ 1 15 0
ಬಹುಮಾನ ವಿಲ್ಲದೆ ಕ್ರಯ ರೂ 1-12 0



ಇದು ಈ ನಕ್ಕೆಗೆ ಸ್ವಲ್ಪವೂ ವ್ಯತ್ಯಾಸವೇ ಇರುವದಿಲ್ಲ ದ್ವೈನಮೋಶ ಕ್ಷೈಲ್ ಮುದ್ರೆಯನ್ನು ಹಾಕಿರುತ್ತೆ ಮತ್ತು [illegible] ಸ್ಥವಾದ ಸಾಮಾನುಗಳಿಂದ ತಯಾರಿಸಲ್ಪಟ್ಟಿರುತ್ತೆ 3 ವರುಷಗಳವರಿಗೆ ಗ್ಯಾರಂಟಿ ಕೊಡಲ್ಪಡುತ್ತೆ ಇದು ಪ್ರೋಪರ್ [illegible] ಕೆಂಪನಿ ಸೆಂಟ್ರಲ್ ಬ್ರಾಂಚ್ ಒದಗಿದ ಹಿಂಜನ್ನು ನಮಗೆ [illegible] ಸ್ವಲ್ಪಕ್ರಯದ ಗಡಿಯಾರಗಳು ಅನೇಕವಾಗಿ ಹೊರಟಿರುವದರಿಂದ ಈ ಭಾರೀ ಕ್ರಯದ ಗಡಿಯಾರವನ್ನು ಇದು ಸ್ವಲ್ಪ ಕ್ರಯಕ್ಕೆ ಮಾರಾಟ ಆಖರುವರಿಗೆ ಮಾತ್ರವೇ ಕೊಡುತ್ತೇವೆ ವಿಳಾಸ —

ಯಂ|| ಪದ್ಮನಾಭಂ,
ನಂ|| 66 ಸ್ವಾಮಿನಾಯ್ಕನ ರೋಡ್
[48-1] ಚಿಂತಾದ್ರಿಪೇಟೆ ಮದರಾಸು

ಕುಂತಳಾನಂದ ತೈಲವು.

[47 2]

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ಸದ್ಯಾಭಂಗವನ್ನು [illegible] ವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲ್ 2 ರೂಪಾಯಿ. 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ—ಬಿ ಎಮ್ ನಾಥ ಮತ್ತು ಕಂಪನಿ,
ಪೇರ್ನಿಂ, ಮದರಾಸ್.

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ವಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕ್ಕಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. **Messrs. OAKES & Company, Mount Road, Madras.**

[14-7] **ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.**

Printed and Published by the Rev H Gulliford, Proprietor and Manager, Wesleyan Mission Press, Mysore 27/2/1913

REGISTERED

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—೧೯೧೩ ನೇ ಇಸವಿ ಮಾರ್ಚಿ ತಾರೀಖು ೬ ನೇ ಗುರುವಾರ. ಸಂಚಿಕೆ ೪೦

ಪ್ರಸಿದ್ಧವಾದ ಅಗ್ಗದ ತೈಲಗಳು ಈಗ ಎಲ್ಲೆಲ್ಲೂ ... ಕೆರಿಯಾಗು ...ವೆ ನಮ್ಮ ಕಪಟವರ್ತನವನ್ನು ಆ ಕಡೆ ಹಾಕಿ ಕೇಳಿಕೊಳ್ಳಿರಿ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಆಗಾಗ ಎಣ್ಣೆಯ ಹಾಕು ... ದಾರ್ಢ್ಯ ... ಕೂದಲು ... ಹೋಗುತ್ತೆ ... ಗಿಯೂ ... ಕಾಮಿನಿಯಾ ತೈಲ ... ಕೂದಲಿಗೆ ... ಕೊಡುತ್ತೆ, ... ಕೊಡುತ್ತೆ ... ಮತ್ತು ಸಾಮಾನ್ಯ ಕೂದಲನ್ನು ... ಕೂದಲು ... ವಿಪುಲವಾಗಿ ಸರಿಯಾಗಿ, ... ಹಾಗೆ ... ಹೋಗದ ... ಕೂದಲಿಗೆ ... ಬುರುಡೆಯನ್ನು ಶುದ್ಧ ಮಾಡುತ್ತೆ ಸುಂದರ ... ಉತ್ತಮವಾದ ಸುಗಂಧವುಳ್ಳ ... ಕೂದಲಿಗೆ ... ಕೊಳ್ಳ ... ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ... ಗಂಧ ... ತಡವು ಬಲಪಡಿಸಿ ಸರಿಕೂದಲನ್ನು ... ತಿರುಗಿಸಿ ಕೇಶವನ್ನು ... ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ... ಕಾಮಿನಿಯಾ ... ಉತ್ತಮವಾದ ಕೂದಲಿನ ... ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ...ವಾಗಿರುತ್ತೆ

ಬಿ 1 ಸೀಸೆಗೆ ರೂ 1 ... ಅಂಚೆಯ ವಚ್ಚ 0-4-0 ಬೇರೆ ಸೇರುವುದು 3 ಸೀಸೆಗಳಿಗೆ ರೂ 2-10-0 ಅಂಚೆಯ ವಚ್ಚ 0 7 0

...ಯು ಬೇಕೆಂದರೆ ಒಂದು ಆದರ್ಶನೀಯ ಚೀಟನ್ನು ಕಳುಹಿಸಿ ... ನಲ್ಲಿ ... ಗೆ ಚಿನ್ನದ ಮೆಡಲೂ, ಅಲ್ಲದಾವಾದ ... ನಲ್ಲಿ ... ಪತ್ರಿಕೆಯೂ ದೊರಕಿರುತ್ತವೆ ಇವರಿಂ... ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯುವಂಕು ... ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಜದೆ ನಮಗ ಈ ... ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ಮನ್ನಾರ್‌ಗುಡಿ ... ಸೆಕ್ರೆಟರಿ ಮಿ|| ... ರವರು ಬರೆಯುವದು— ದಯಮಾಡಿ ... ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯು ... ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನಮ್ಮ ಮನೆ ಹೆಂಗಸರು ವಿಶೇಷವಾಗಿ ಆನಂದಪಟ್ಟು ಹೊಗಳಿಕೊಳ್ಳುತ್ತಾರೆ— ಎರುಮಸ... ಹೈ ಸ್ಕೂಲ್ ಹೆಡ್ ಮಾಸ್ಟರ್ ಮಿ|| ಎಂ ಸುಬ್ರಹ್ಮಣ್ಯ ... ಬರೆಯುವದು— ನಿಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿ... ಮಾಡಿದೇನೆ ಅದು ಕೂದಲನ್ನು ಹುಟ್ಟಿಸಿ ಅಂದವಾಗಿಯೂ, ಕೋಮಲ... ಸಹ—ವಾಗಿಯೂ ... ದೆಂದು ... ನಿಶ್ಚಯವಾಗಿ ಹೇಳಬಲ್ಲೆನು ... ಇನ್ನು ಮೂರು ಬಾಟ್ಲಿ ... ಕಳುಹಿಸಿಕೊಡಿ— ... ಆಫೀಸ್ ಮಿ| ಗೋಪಾಲರಾವ್ ಜೋಷಿಯವರು ಬರೆಯುವದು— ... ನಿಮ್ಮ ಕಾಮಿನಿಯಾ ... ಆರು ಬಾಟ್ಲಿ ಕಳುಹಿಸಿಕೊಡಿ ಒಂದು ... ನೀವು ಕಳಿಸಿದ ಬಾಟ್ಲಿಗಳು ಮುಗಿದುಹೋಯಿತು ಇದು ಉತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇ... ಅವಕಾಶ ನೀವು ಒಂದು ಸಲ ತರಿಸಿ ಪರಿಕ್ಷೆ ಮಾಡಿ

...ರಿಕೆ—ಹೊಸದಾಗಿ ಇಟ್ಟಿರುವ ಸಾಪುಗಳಲ್ಲೆಲ್ಲಾ ಕಾಮಿನಿಯಾ ... ನಿಮ್ಮ ಸ್ಥಳದ ಸಾಪುಕೀಪರಲ್ಲಿ ಅದು ಇಲ್ಲದಿದ್ದರೆ ಅವನ ಹೆಸರು ... ನಮಗೆ ತಿಳಿಸಿ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ... ಇದೇ ಹೆಸರಿಟ್ಟು ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ ... ಇದು ಒಳ್ಳೇದು ಎಂದು ಹೇಳಿ ಮೋಸಮಾಡುವರು ಇಂಥಾ ... ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ... ನೋಡಿ ಕೊಂಡುಕೊಳ್ಳಿ

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು

...—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲಿಷಿನಲ್ಲೇ ಬರೆಯಬೇಕು

[8 10]

...—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ, ...ಮ್ಮಾಮಸ್‌ಜಿದ್, ಬೊಂಬಾಯಿ.

ಒಂದೇ ಪದ! ಅಪೂರ್ವಗ್ರಂಥ!! ...೭೬ ಪುಟಗಳು!!!

ಪ್ರತಾಪಕಂಠೀರವಚರಿತ್ರೆ

ಇದರಲ್ಲಿ (1) ... ಪರಿಪಾಲಿಸುವುದರಿಂದ ... ಯತ್ನಗಳಿಗೆ ... ಎಂದರೂ ತೊಂದರೆಯಾಗುತ್ತವೆ ಎಂಬ ನೀತಿ, (2) ಪ್ರಥಮ ... ಬುದ್ಧಿಕೌಶಲ್ಯ ... ಯುಕ್ತಿ ... ಮೊದಲ ..., (3) ಚಿತ್ರವಿಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು, (4) ವನ, ಸರಸು, ಆರಾಮಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ವಿರೋಧವಾಗಿರ ... ಶಕ್ತಿ ವಿಷಯಗಳು (6) ಎಲ್ಲರೂ ಓದಿ ತಿಳಿದುಕೊಳ್ಳು ... ವಾದ ನೀತಿ, (7) ... ಕ್ಕೆ ಒಂದಕ್ಕೊಂದು ಹೋಲಿಸಲ್ಪಟ್ಟು ... ಬೆಳೆಯುವಂಥಾ ಕಥಾ ಭಾಗಗಳು ಇವು ಕೂಡಿವೆ

... ಓದುವುದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವುದಕ್ಕೆ ಮನಸ್ಸಾಗುವದಿಲ್ಲ ಹೆಚ್ಚಾಗಿ ಹೇಳುವದರಿಂದೇನು? ಓದಿ ನೋಡಿದರೆ ಕಥೆಯು ... ವಾಗಿ ಗೊತ್ತಾಗುವದು

ಕ್ರಯ —... ೧೦ ಅಣೆ, ಒಟ್ಟು ... ೧ ರೂಪಾಯಿ ಟಪಾಲು ಹಾಸಲು ಬೇರೆ [16 2]

ನಮ್ಮ ವಿಳಾಸ—ವಿಜಯಕೇಸರಿ ಕಂಪನಿ ಬೆಂಗಳೂರು ಸಿಟಿ

ಕುಂತಳಾನಂದ ತೈಲವು

147 24

ಹಿಂದೂಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೆಟ್ಟುಗಳನ್ನೂ ಪಡೆದಿರ ... ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸುವರು ಈ ತೈಲವು ಕೂದಲನ್ನು ಒತ್ತಾಗಿಯೂ ತ್ವರೆಯಾಗಿಯೂ ಬೆಳೆಯಿ... ಸರ್ವ ... ಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಹೊರಗೂ ಸುವಾಸನೆಯೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಪ್ರತಿ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಅಣೆ ಅಂಚೆ ... ನಮ್ಮ ... ಕನ್ನಡ ಕ್ಯಾಟ... ಪಟ್ಟಿ ನೋಡಿರಿ

ನಮ್ಮ ವಿಳಾಸ—ಬಿ ಎಸ್ ... ಮತ್ತು ಕಂಪನಿ, ವೇಪೇರಿ ಮದರಾಸ್

ಡೋಂಗರೆ ಇವರ ಬಾಲಾಮೃತ.

[115-34]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಆನಂದದಿಂದ ತೆಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ ... ಕಟ್ಟಿಯಂತೆ ಇರೋಣ ... ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಅಮೃತಾಂಜನ. (Regd.)

ಇಲ್ಲಿ ವಿಶೇಷ ಲಕ್ಷ ಕೊಡಿರಿ! ವಾತ, ಸಂಧಿವಾತ, ತಲೇನೋವು, ಸೊಂಟನೋವು, ಶೀತ, ಕಜ್ಜಿ, ಗಂಟ್ಲುನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಮಾತ್ರಿಯಾಗಿ ಗುಣಬರುವದು ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ ಬಾಟ್ಲಿ 1ಕ್ಕೆ 0-8-0.

ಅರ್ಧ ಕ್ರಯಕ್ಕಿಂತಲೂ ಕಡಮೆ.

ಹತ್ತುಲಕ್ಷ ದೊಡ್ಡ ಸ್ವಿಚು ಪೋಸ್ಟು ಕಾರ್ಡುಗಳು ಇವುಗಳು ಚೆಳ್ಳಗಾಗಿಯೂ ನಯವಾಗಿಯೂ ಇವೆ. 1,000 ಕ್ಕೆ ಮುಂಚಿನ ಕ್ರಯ ರೂ 2 8-0, ಈಗ 15 ಅಣೆ, ವಿ ಪಿ ಖರ್ಚು 8 ಅಣೆ ... ಖರ್ಚು 12 ಅಣೆ 500 ಕ್ಕೆ 8 ಅಣೆ

1913 ನೆಯ ವರ್ಷದ ಕ್ಯಾಲೆಂಡರ್ 8 ಬಾಟ್ಲಿ ಅಮೃತಾಂಜನ ತರಿಸಿಕೊಂಡವರಿಗೆ ಪುಗಸಟ್ಟೆಯಾಗಿ ರವಾನಿಸಲ್ಪಡುವದು ಇತರರಿಗೆ ಕ್ಯಾಲೆಂಡರ್ 1ಕ್ಕೆ 1 ಅಣೆ ವಿ ಪಿ. ಸಹಿತ

[12-2]

ಅಮೃತಾಂಜನ ಡಿಪೋ, ಪೋಸ್ಟು, ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತನಾಡಿಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಶ್ಯಕ್ತಿ, ಆರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹು ಹೊತ್ತು ಸುವಾಸನೆಯಾಗಿರುತ್ತದೆ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ಹವಾ ಬಲಬಲವನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕೃಶತ್ವಗಳನ್ನು ಗುಣಪಡಿಸುತ್ತವೆ ಇವನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ— 120 ಮಾತ್ರೆಗಳುಳ್ಳ ಕುಪ್ಪಿಗೆ 1 ಅಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 13 ಕುಪ್ಪಿ ವರೆಗೆ ಪೋಸ್ಟೇಜು 1 ಅಣೆ

[136 27]

...೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮಾರಿತನದ ... ಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಸಹಾಯವಾಗಬೇಕಾದರೆ ... ನಿಮ್ಮಲ್ಲಿರಲಿ ವಿಷಭೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

14—2—1913 ರಿಂದ 21—2—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	6	9	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	22	22	0	0
ಮೈಸೂರು ,,	19	11	84	50
ಕೋಲಾರ್ ,,	5	4	1	1
ಕೋಲಾರ್ ಚಿನ್ನದ ಗಣಿಗಳು	15	12	0	0
ತುಂಕೂರು ಡಿಸ್ಟ್ರಿಕ್ಟು	1	6	0	0
ಹಾಸನ ,,	11	10	0	0
ಚಿತ್ರದುರ್ಗ ,,	0	0	0	0
ಕಡೂರ್ ,	15	10	0	0
ಶಿವಮೊಗ್ಗ ,,	1	2	0	0
ಜುಮ್ಲಾ	95	8[illegible]	8[illegible]	51

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೆ ಶಿಶಿರಋತೌ ಮಾಘ ಬಹುಳ ಅಮಾವಾಸ್ಯೆ ಶುಕ್ರವಾರದಿಂದ ಫಾಲ್ಗುಣ ಶುದ್ಧ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಮಾರ್ಚಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕುಂಭ ವಿಷ್ಣು ತೇದಿ
7	ಶುಕ್ರ *	ಅಮಾವಾಸ್ಯೆ	55 31	ಶತಭಿಷ	14 16	24
8	ಶನಿ	ಪಾಡ್ಯಮಿ	60 0	ಪೂರ್ವಾ	10 37	25
9	ಭಾನು §	ಪಾಡ್ಯಮಿ	0 12	ಉತ್ತರಾ	16 13	26
10	ಸೋಮ ¶	ಬಿದಿಗೆ	1	ರೇವತಿ	51 30	27
11	ಮಂಗಳ	ತದಿಗೆ	15	ಅಶ್ವಿನಿ	5 26	28
12	ಬುಧ	ಚೌತಿ	10 6	ಭರಣಿ	57 58	29
13	ಗುರು †	ಪಂಚಮಿ	11 56	ಕೃತ್ತಿಕೆ	59 11	1

* ಸರ್ವತ್ರ ಅಮಾವಾಸ್ಯೆ § ಶಾ ಪಮ್ಲೋಪ ... 3 ನೇ ಕುಮಾರ ... ರವಿ ... ¶ ಮಳೆ ನಕ್ಷತ್ರ—ಪೂರ್ವಾಭಾದ್ರ 1 ನೇ ಪಾದ † ಶಾರ್ ... ಪುಣ್ಯಕಾಲ, ... ಗೌರೀವ್ರತ, ಮಳೆ ನಕ್ಷತ್ರ ... 4 ನೇ ಪಾದ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ (ಹೊಸದು) ರೂ	೧೪ ೧೨-೦	೧೭ ೮ ೦
ಕೆಂಬೂತಿ ಅಕ್ಕಿ ಅವಲ್ ,,	೧೫ ೨-೦	೧೭-೮ ೦
,, ದುಯಂ ,,	೧೫ ೦ ೦	೧೭ ೦-೦
ಜೀಪತ್ರಿಸೆ ಅಕ್ಕಿ ,,	೧೪-೮-೦	೧೭ ೪-೦
ಸಣ್ಣಕ್ಕಿ ಅವಲ್ ,,	೧೭ ೮ ೦	೧೨ ೮-೦
,, ದುಯಂ ,,	೧೬ ೦-೦	೧೭ ೮-೦
ತೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ	೧೩ ೦ ೦	೧೩ ೮-೦
,, ದುಯಂ ,,	೧೨ ೮-೦	೧೨ ೬ ೦
ಕ್ಯೆಕ್ ರಾಗಿ ಪಲ್ಲಾ ೧ಕ್ಕೆ	೬ ೧೨ ೦	೫ ೦-೦
ಕಾರಸ್ತ್ರಿಗಿ ,,	೬ ೪-೦	೭ ೧೨ ೦
ಜೋಳ ,,	೬ ೧೨ ೦	೭ ೪-೦
ಹುಲಸಂದೆ ಪಲ್ಲಾ ೧ಕ್ಕೆ	೧೦ ೧೨-೦	೧೩-೧೨-೦
ಬೀಳೀ ಅವರೆ ,,	೯ ೮ ೦	೧೧ ೦-೦
ಹೆಸರು ,,	೧೧ ೮ ೦	೧೪ ೦ ೦
ಉದ್ದು ,,	೧೪-೮ ೦	೧೬-೦-೦
ಕಡಲೆ ,,	೧೦ ೦ ೦	೧೨ ೦-೦
ಎಳ್ಳು ಸೇರು ೧೨೭ಕ್ಕೆ	೨೪-೦ ೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೬ ೫ ೦	೭-೦-೦
ಹರಳು ೧೨೭ ಸೇರಿಗೆ	೧೨-೮-೦	೧೪ ೦ ೦
ಶೀಗೇಕಾಯಿ ಮಣ ೧ಕ್ಕೆ	೨-೪-೦	೩ ೮ ೦
ಮೆಣಸಿನಕಾಯಿ ,,	೩ ೦-೦	೩ ೪-೦
,, ದುಯಂ	೨ ೮ ೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫-೦-೦	ಮಣ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೨ ೦	೬-೬ ೦
ಹರಳೆಣ್ಣೆ ,, ,,	೫ ೧೨-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫ ೦ ೦	೫-೪ ೨
ಉಪ್ಪು ,, ,,	೫ ೮-೦	೬-೦ ೦
ಹುಣಸೇ ಹಣ್ಣು ಮಣ ೧ಕ್ಕೆ	೧ ೪-೦	೧-೪ ೦
,, ಹಳೇದು ,,	೧-೦ ೦	೦ ೧೪-೦
ತುಪ್ಪ ಮಣ ೧ಕ್ಕೆ	೧೭ ೮-೦	೧೯-೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೧೧ ೦	೫ ೦-೦
ತೆಂಗಿನಕಾಯಿ ೧೦೦ಕ್ಕೆ	೬-೪-೦	೬-೦-೦
ಆಲೆಬೇಕಾಯಿ ಮಣ ೧ಕ್ಕೆ	೧-೪ ೦	೧ ೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೦-೧೨-೦	೧ ೮-೦
ಚಿನ್ನ (ಪೌನ್) ಕೆಂಪು	೧೫ ೮-೦	೧೫ ೮-೦
,, ,, ಪಸಿಮ	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪ ೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦-೦	೮೧-೩-೦

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



1 10

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವದು, ಆಮಶಂಕೆ, ವಾಂತಿಭೇದಿ ಉಪದ್ರ, ಕಾಲುಗಳ ನೋವು, ಹೊಟ್ಟೆ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬ... ಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಯಾವ ಔಷಧವೂ ಮಾಡಿರುವುದಿಲ್ಲ ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ಶ... ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕ್ರಿಯಿಂದ ಸ್ವಲ್ಪವೂ ಕೆಟ್ಟದ್ದಿಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ ' ಕನ್ನಡಕ್ಕೆ ಸುಲಭವಾದ ದಾರಿ '

ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆಗಳಿಗೆ ಆವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ... ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭರೀತಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ 1 ಆಣೆ ಆರಕಾಸು ... ಉಚಿತ

[187 12] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್ ಮೈಸೂರು

ಗೃಹಕೃತ್ಯದ ನೋಟೀಸು

ಬೆಂಗಳೂರು ತಾಲ್ಲೂಕು ಚಿಕ್ಕಜಾಲ ... ವಾಸವಾಗಿರುವ ... ಲಿಂಗಮ್ಮಯ ... ಎಂದರೆ ... ನನ್ನ ಗಂಡ ... ಈ ಕೆಳಗೆ ... ನನ್ನ ... ವರುಷದಲ್ಲಿ ... ನಾನು ವಾಸಮಾಡಿಕೊಂಡಿರುತ್ತೇನೆ ಈ ... ನನ್ನ ಅತ್ತೆ ... ಮರಣಾನಂತರ ನನ್ನ ... ಅಕ್ಕ ... ನನಗೆ ... ಇರಾದೆಯಿಂದ ತನ್ನ ... ತನ್ನ ... ಸತ್ತನು ... ಈ ... ಯಾವ ... ಯಾರು ಯಾವ ... ವಿಧವಾಗಿ ... ಈ ... ನನ್ನ ... ಯಾರಿಗೂ ಯಾವ ... ಇಲ್ಲವೆಂದು ಈ ಮೂಲಕ ತಿಳಿಸಿರುತ್ತೇನೆ ಚಕ್ಕುಬಂದಿ ಪೂರ್ವಕ್ಕೆ ಕುಂಬಾರ ... ಮನೆ ... ಉತ್ತರಕ್ಕೆ ... ದಕ್ಷಿಣಕ್ಕೆ ಕುಂಬಾರ ... ಮನೆ ಈ ಮಧ್ಯೆ ಇರುವ ... ಮನೆ ... ಇದಕ್ಕೆ ಸೇರಿದ ಅಂಗಳ ಸಹ [112]

ಈ ... ಬಳೀ ಗುತಿ, ನ ... ಮುತ್ತಮ್ಮ ...

THE PLACE FOR HASSAN CAPS IS HASSAN.

ನಿಮ್ಮ ತಲೆಯು ಬೋಳಿರುವುದೇನು ?

ಹಾಸನದ ಟೋಪಿ ಇಲ್ಲವೋ ?

ಹಾಗಾದರೆ ಬೇಗ ಬರದು ತರಿಸಿಕೊಳ್ಳಿ

1 10

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಆದ್ದರಿಂದ ಹಾಸನದ ಟೋಪಿಗಳಿಂದು ಎಲ್ಲರೂ ಕೊಂಡುಕೊಂಡು ನೋಡುತ್ತಿರುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೆಯದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಹಸುರು, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ, ೧ ರೂ ೬ ಆ, ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧-೮, ರೂ ೧ ೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ, ೧೨ ಆ, ೧ ರೂ ೮ ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

" ವಾಸಿಮಾಡಿಕೊಳ್ಳುತ್ತೇನೆಂದು ಹೇಳು "

88 41

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ಕೀಲು, ಆರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ... ಯಾಗಲಿ, ಉಳುಕು, ಹಲ್ಲುನೋವು, ಗಟ್ಟಿ ... ಕೆಮ್ಮು ... ಶೀತನೆಗಡಿ, ... ರೋಗ, ... ಊತ, ಥಳುಕು, ಬೇಳು ಕಡಿತ ... ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ... ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ... ರುವ ವ್ಯಸನ ಅಂಗಡಿಗೆ ಹೋಗು ಕ್ಲೈಮುಟರ ಮ್ಯಾಜಿಕ್ ಬಾಂ ... ಬಾಟ್ಲಿ ಕೊಡಿ ಎಂದು ಕೇಳು ಅದನ್ನು ... ಸ್ವಲ್ಪ ... ತಿರಸ್ಕರಿಸಿ ಅದನ್ನೇ ಕೊಡಬೇಕೆಂದು ಕೇಳಿ ತೆಗೆದುಕೋ ಈ ... ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋ... ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜ... ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

ಕ್ಲೈಮುಟರ ಮ್ಯಾಜಿಕ್ ಬಾಂ ಎಂಬ ಹೆಸರನ್ನು ಮರೆಯಬೇ... ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 1 ಆಣೆ 1 ಅಥವಾ ಹೆ... ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಕೊಡುತ್ತೇವೆ ವಿಳಾಸಗಳು (1) ಎಸ್ ಪೀಟರ್ಸ್, ... ಬೀದಿ, ಪುರಸವಾಕಂ, ವೇಪೇರಿ, ಮದರಾಸ್ (2) ಬಿ ... ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

ಗುಣಕಂಡ ಮೂರು ಪ್ರಖ್ಯಾತ ಔಷಧಗಳು

ನ್ಯಾಕ್ಸರ ಮಲೆನಾಡು ಜ್ವರಮಾತ್ರೆಗಳು ... ಬಿಟ್ಟು ಬರುವ ಅಥವಾ ... ಎಲ್ಲಾ ಜಾತಿಯ ಚಳಿ ಜ್ವರ ... ಪೂರ್ಣವಾಗಿಯೂ ವಾಸಿಮಾಡುತ್ತದೆಂದು ಪ್ರಖ್ಯಾತಿ ... ಹೊಂದಿರುವ ಮಾತ್ರೆಗಳು ಇದರ ಕ್ರಯ ಡಬಿ 1ಕ್ಕೆ ರೂಪಾಯಿ 1 0 0

ನ್ಯಾಕ್ಸರ ಉಬ್ಬಸದ ಔಷಧ ಉಬ್ಬಸ ... ಮೊದಲಾದ ... ಗಡ್ಡೆಗಳಿಗೂ ಬಹಳ ... ಮವಾದ ಮತ್ತು ... ಗುಣಕೊಡುವ ಔಷಧ ಕ್ರಯ ಬಾಟ್ಲಿ 1 ರೂಪಾಯಿ 1 0 0 [8 4]

ನ್ಯಾಕ್ಸರ ನಾಯಿಕೆಮ್ಮಿನ ಸಿದ್ಧೌಷಧ ಇದು ... ಮಕ್ಕಳಿಗೆ ... ಅಮೋಘವಾದ ಔಷಧ ... ಖಂಡಿತವಾಗಿ ಸಂಪೂರ್ಣವಾದ ಗುಣಕೊಡುವ... ಕ್ರಯ ಬಾಟ್ಲಿ 1ಕ್ಕೆ ರೂ 1...

... ಈ ಔಷಧ ... ಗುಣಾದಿಗಳನ್ನು ವಿವರಿಸುವ ಪತ್ರಗಳನ್ನು ಕೇಳುವವರಿಗೆ ಬಿಟ್ಟಿ ಕಳುಹಿಸುವೆವು

ವಿಳಾಸ —ಜಿ ... ಸ್ಟೆಯರ್ಸ್,

11 ಪ್ರೋಫೆನಾಡ್ ... , ಮದರಾಸ್

ಇವರಲ್ಲೂ ಸಿಕ್ಕುತ್ತವೆ (1) ಎಡ್ವರ್ಡ್ ಕಂಪನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ, (2) ... ಕಂಪನಿ, ಬೆಂಗಳೂರು ದಂಡು, (3) ... ಕಂಪನಿ, ಮಂಗಳೂರು, (4) ಎಲ್ ... ಕಂಪನಿ ... (5) ಬಾಯಸ್ ಕಂಪನಿ ಕಲ್ಲಿಕೋಟೆ

ವಿಕ್ಟೋರಿಯಾ ಲೈಫ್ ಅಷೂರೆನ್ಸ್ ಕಂಪನಿ ಲಿಮಿಟೆಡ್.

(1912 ನೇ ... ಸೊಸೈಟಿ ಆಕ್ಟಿನಂತೆ ರಿಜಿಸ್ಟರಾದದ್ದು)

ಮೂಲಧನ— 10 00,000 ರೂಪಾಯಿ (ಹತ್ತು ಲಕ್ಷ)

ಹೆಡ್ ಆಫೀಸ್ ... ಕಲ್ಕತ್ತಾ

ದಕ್ಷಿಣ ದೇಶ ಮತ್ತು ... ಗೆ ಬ್ರಾಂಚ್ ಆಫೀಸು—ಚೂಳೆ, ಮದರಾಸ್

ವಿಕ್ಟೋರಿಯಾ ... ಮಹಾರಾಜರುಗಳಿಂದಲೂ, ರಾಜರುಗಳಿಂದ ... ಬಂಗಾಳದ ಮುಖ್ಯ ದೊಡ್ಡ ಮನುಷ್ಯರಿಂದಲೂ ಪೋಷಿಸಲ್ಪಡುತ್ತಿದೆ

ವಿಕ್ಟೋರಿಯಾ ... ಡೈರೆಕ್ಟರುಗಳೆಲ್ಲಾ ಚಿಕ್ಕಾಚಾರಗಳನ್ನು ಬಲ್ಲವರೂ ಪ್ರಖ್ಯಾತರಾಗಿರುವ ದೊಡ್ಡ ಮನುಷ್ಯರಾಗಿದ್ದಾರೆ

ಧಾರಾಳವಾದ ... ಬಹಳ ... ಕಡಿಮೆ ... ದರಗಳಲ್ಲಿ ... ಇದು ವಿಕ್ಟೋರಿಯಾ ದ ಪ್ರಧಾನ ಲಕ್ಷಣಗಳಾಗಿರುತ್ತವೆ

ಪ್ರಾಸ್ಪೆಕ್ಟಸ್, ಪ್ರಪೋಸಲ್ ಫಾರಂ, ಬೋನಸ್ ಪಟ್ಟಿಗಳನ್ನು ಅಪೇಕ್ಷಿಸತಕ್ಕವರು ಈ ... ಬರೆಯಬೇಕು [5—6]

ವಿಕ್ಟೋರಿಯಾ ಕಂಪನಿ ಸೆಕ್ರೆಟರಿ, ಚೂಳೆ, ಮದರಾಸ್

... ಏಜಂಟರುಗಳು ಬೇಕು ಧಾರಾಳವಾದ ಕಮಿಷನ್ ಮತ್ತು ಕೈ ತುಂಬಾ ಸಂಬಳ

ಟೆಲಿಗ್ರಾಂ ಅಡ್ರೆಸ್—"ತಿರುಪತಿ," ಹರಿಹರ | ಜಾಗ್ರತೆ ತೆಕ್ಕೊಳ್ಳಿ | ತ್ವರೆಮಾಡಿರಿ

ಜೋಸಿಗೆ ಕಾಲ ಸಮೀಪಿಸುತ್ತಾ ಬರುತ್ತೆ

ಚೀಳಿನ ಹಾವಳಿ ಪ್ರಾರಂಭವಾಯಿತು.

ಅದ್ಭುತವಾದ ಇನಾಮು.

ಒಂದು ಲಕ್ಷ ರೂಪಾಯಿಗಳು ಹಂಚಲ್ಪಡುತ್ತವೆ

ಡಾಕ್ಟರ್ ಯಂ. ಪಿ. ಇನಾಂದಾರ್‌ರವರು ತಯಾರು ಮಾಡಿದ "ಸ್ಕಾರ್ಪಿಯಾನಿಯೋ" ಎಂಬ ಚೇಳಿನ ಔಷಧವನ್ನು ಸಮಸ್ತ ದೇಶಗಳಲ್ಲಿಯೂ ಹರಡುವದಕ್ಕೂ, ಅದರ ಗುಣವನ್ನು ಅನುಭವಕ್ಕೆ ತರುವದಕ್ಕೂ ಈ ಇನಾಮಿನ ಮೂಲಕವಾಗಿ ಪ್ರಸಿದ್ಧ ಮಾಡಲ್ಪಟ್ಟಿದೆ. ಈ ಚೇಳಿನ ಔಷಧವು ಅತಿ ಶೀಘ್ರವಾಗಿ ಗುಣವನ್ನು ಕೊಟ್ಟು, ರೋಗಿಯನ್ನು ನಗುವಂತೆ ಮಾಡಲ್ಪಟ್ಟಿದೆ. ಪ್ರಪಂಚದಲ್ಲಿ ಎಷ್ಟು ಚೇಳಿನ ಔಷಧಗಳಿವೆಯೋ ಅವಕ್ಕೆಲ್ಲಾ ಶ್ರೇಷ್ಠವೆಂದು ಎನಿಸಿಕೊಂಡು ಇಲ್ಲಿತನಕ ಪ್ರಸಿದ್ಧಿಪಟ್ಟಿರುವದರಿಂದ ಈ ಔಷಧಿಯನ್ನು ವ್ಯಕ್ತಿಕ ಸ್ವತ್ತು ಎಂದು ಸಮಸ್ತರೂ ಪ್ರಾನುಭವಿಸಬೇಕೆಂದೂ ಇದನ್ನು ಪ್ರಚುರಪಡಿಸಬೇಕೆಂದು ಅಭಿಪ್ರಾಯಪಟ್ಟ ಮೇರೆಗೆ ಈ ಮೂಲಕವಾಗಿ ಸಮಸ್ತರ ಉಪಯೋಗಕ್ಕೂ ಪ್ರಕಟಿಸಲ್ಪಟ್ಟಿದೆ. ಖಂಡಿತ ವಾಗಿಯು ಇದಕ್ಕೆ ಸಮಾನವಾದ ಚೇಳಿನ ಮದ್ದು ಇಲ್ಲವೆಂದು ಖಂಡಿತವಾಗಿ ಹೇಳಬಹುದು.

ಹಿಸ್ ಎಕ್ಸಲೆನ್ಸಿ ಲಾರ್ಡ್ ಕಿಚ್ನರ್, ಲೇಟ್ ಕಮ್ಯಾಂಡರು ಇನ್ ಚೀಫ್, ಇಂಡಿಯಾ, ಮತ್ತು ಕರ್ನಲ್ ವಿಕ್ಟರ್ ಬ್ರೂಕ್, ಲೇಟ್ ಮಿಲಿಟರಿ ಸೆಕ್ರೆಟರಿ ಟು ಧಿ ವೈಸರಾಯಿ, ಇವರುಗಳು ಡಾಕ್ಟರು ಯಂ. ಪಿ. ಇನಾಂದಾರ್ ಚಿಕಿತ್ಸೆಯನ್ನು ಬಹಳವಾಗಿ ಹೊಗಳಿದಾರೆ.

ಇನಾಂಗಳ ವಿವರ:— ಇದೆ 1914ನೇ ಫೆಬ್ರವರಿಯಿಂದ ಜೂನ್ ತಾರೀಖು 31ರ ವರೆಗೂ ಹನ್ನೆರಡು ಲಕ್ಷ "ಸ್ಕಾರ್ಪಿಯಾನಿಯೋ" ಎಂಬ ಚೇಳಿನ ಔಷಧವನ್ನು ಇನಾಂ ಮೂಲಕವಾಗಿ ವಿಕ್ರಿ ಮಾಡಲು ಏರ್ಪಾಡಿಸಿದೆ. ಬಾಟ್ಲಿ ಒಂದರ ಕ್ರಯ ಎಂಟಾಣೆ ಮಾತ್ರವೇ. ಟಪಾಲು ಹಾಸಲು, ಪ್ಯಾಕಿಂಗ್ ಚಾರ್ಜು, ವಿ. ಪಿ. ಚಾರ್ಜು ಬೇರೆ.

						ರೂಪಾಯಿ								ರೂಪಾಯಿ.
1ನೇ ಇನಾಂ	2 ಗ್ರೋಸ್ ಬಾಟ್ಲಿ	ತೆಗೆದುಕೊಳ್ಳುವವರಿಗೆ	1913 ನೇ	ಏಪ್ರಿಲ್	ಆಖೈರೊಳಗಾಗಿ	9,000	1 ನೇ ಇನಾಂ	2 ಗ್ರೋಸ್ ಬಾಟ್ಲಿ	ತೆಗೆದುಕೊಳ್ಳುವವರಿಗೆ	1913 ನೇ	ಜೂನ್	ಆಖೈರೊಳಗಾಗಿ		7,000
2ನೇ ,,	1 ಗ್ರೋಸ್	,,	,,	,,	,,	8,000	2 ನೇ ,,	1 ಗ್ರೋಸ್	,,	,,	,,	,,		6,000
3ನೇ ,,	6 ಡಜನ್	,,	,,	,,	,,	7,500	3 ನೇ ,,	6 ಡಜನ್	,,	,,	,,	,,		5,500
4ನೇ ,,	3 ಡಜನ್	,,	,,	,,	,,	7,000	4 ನೇ ,,	3 ಡಜನ್	,,	,,	,,	,,		5,000
5ನೇ ,,	2 ಡಜನ್	,,	,,	,,	,,	6,500	5 ನೇ ,,	2 ಡಜನ್	,,	,,	,,	,,		4,500
6ನೇ ,,	1 ಡಜನ್	,,	,,	,,	,,	6,000	6 ನೇ ,,	1 ಡಜನ್	,,	,,	,,	,,		4,000
7ನೇ ,,	6 ಬಾಟ್ಲಿಗಳು	,,	,,	,,	,,	5,500	7 ನೇ ,,	6 ಬಾಟ್ಲಿಗಳು		,,	,,	,,		3,500
8ನೇ ,,	3 ಬಾಟ್ಲಿಗಳು	,,	,,	,,	,,	5,000	8 ನೇ ,,	3 ಬಾಟ್ಲಿಗಳು		,,	,,	,,		3,000
9ನೇ ,,	2 ಬಾಟ್ಲಿಗಳು	,,	,,	,,	,,	4,500	9 ನೇ ,,	2 ಬಾಟ್ಲಿಗಳು		,,	,,	,,		2,500
						59,000								41,000

ಒಟ್ಟು ರೂ. 1,00,000 ಲಕ್ಷ ಮಾತ್ರವೇ ?

ಯಾವನಾದರೂ ಮೇಲಿನ ಇನಾಂ ಕಲಂಗಳ ಪ್ರಕಾರ ಒಬ್ಬರಿಗಿಂತ ಜಾಸ್ತಿಯಾಗಿದ್ದರೆ ಆ ಇನಾಂನ ಹಣವನ್ನು ಎಲ್ಲರಿಗೂ ಒಂದೇ ಸಮನಾಗಿ ಹಂಚಿಕೊಡಲ್ಪಡುತ್ತದೆ. ಮತ್ತು ಒಂದೇ ವೇಳೆ ಒಬ್ಬರೇ ಇದ್ದರೆ ಆ ಪೂರ್ಣ ಇನಾಂನ ಹಣವನ್ನೂ ಅವನಿಗೆ ಕೊಡಲ್ಪಡುತ್ತದೆ. ಎರಡು ಬಾಟ್ಲಿಗಳು ಜಾಸ್ತಿಯಾಗಿ ಕೊಂಡುಕೊಳ್ಳುವ ಪ್ರತಿ ಒಬ್ಬರಿಗೂ ಇನಾಂನ ಸರ್ಟಿಫಿಕೇಟನ್ನು ಆಯಾಯ ಇನಾಂ ಕಲಂ ವಾರು ಪ್ರಕಾರ ತೆಗೆದುಕೊಂಡ ಬಾಟ್ಲಿಗಳ ಸಂಖ್ಯೆಯನ್ನು ಬರೆದು ಖಂಡಿತವಾಗಿಯೂ ಇನಾಂನ್ನು ಕೊಡುತ್ತೇವೆಂದು ಭರವಸೆ ಕೊಟ್ಟು ಬರೆದುಕೊಡಲ್ಪಡುತ್ತೆ. ನಮ್ಮ ಇನಾಮು ಕಲಮಿನ ಲಿಸ್ಟಿನಲ್ಲಿ ಕಾಣಿಸಿರುವ ಮೇರೆಗೆ ಬಾಟ್ಲಿಗಳನ್ನು ಕೊಂಡುಕೊಳ್ಳುವವರಿಗೆ ವಿನಹ ಬಾಕಿ ಯಾರಿಗೂ ಕೊಡಲ್ಪಡುವದಿಲ್ಲ. ಈ ಹನ್ನೆರಡು ಲಕ್ಷ ಬಾಟಲುಗಳು ಖರ್ಚಾದ ಕೂಡ್ಲೆ ಲಿಸ್ಟನ್ನು ಪ್ರಕಟಮಾಡಿ, ಇನಾಂಗಳು ಹಂಚಲ್ಪಡುತ್ತೆ. ಒಂದು ವೇಳೆ ಪೂರಾ ಹನ್ನೆರಡು ಲಕ್ಷ ಬಾಟ್ಲಿಗಳು ಖರ್ಚಾಗದೆ ಹೋದರೆ ಮುಂದೆ ವಾಯಿದೆಯನ್ನು ಹಚ್ಚಿಸದೆ ಎಷ್ಟು ಬಾಟ್ಲಿಗಳು ಖರ್ಚಾಗಿರುತ್ತವೆಯೋ ಅದಕ್ಕೇ ಮಾಮೂಲು ಪ್ರಕಾರ ಆಗತಕ್ಕಷ್ಟು ಮಾತ್ರ ಇನಾಂಗಳು ಹಂಚಲ್ಪಡುತ್ತವೆ. ಇನಾಂಗಳು ಹಂಚುವ ತಾರೀಖು ಇದೇ 1913ನೇ ಇಸ್ವಿ ಆಗಸ್ಟ್ ತಿಂಗಳು 15 ಕ್ಕೆ ಇದೇ ಹರಿಹರದಲ್ಲಿ ಬಹಿರಂಗವಾಗಿ ಹಂಚಲ್ಪಡುತ್ತೆ.

ಪ್ರತಿ ಒಬ್ಬ ಮನುಷ್ಯನಿಗೂ ತಾನು ಕೊಡುವ ಕಿಮ್ಮತ್ತಿಗೆ ಸರಿಯಾಗಿ ಔಷಧ ಬಾಟ್ಲಿಯನ್ನು ಪಡೆಯುವದಲ್ಲದೆ ಇನಾಂಗೂ ಅರ್ಹನಾಗಿರುತ್ತಾನೆ. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಈವಾಗಲೇ ವಿಶೇಷ ಆರ್ಡರುಗಳು ಬರುವ ಹಾಗೆ ತುಂಬಾ ತೋರಿದೆ. ಆದ್ದರಿಂದ ಪೂರ್ತಿಯಾಗಿ ಎಲ್ಲಾ ಬಾಟ್ಲಿಗಳು ಖರ್ಚಾಗುವವರಲ್ಲಿ ಸಂದೇಹ ತೋರುವದಿಲ್ಲ.

ಏಜಂಟರುಗಳು ಬೇಕಾಗಿದೆ. ಸಂಬಳ ನೂರು ರೂಪಾಯಿ ಮತ್ತು ಅಲೋಯನ್ಸು ಇಪ್ಪತ್ತು ರೂಪಾಯಿ

ಈ ಕೆಳಗಿನ ವಿಳಾಸಕ್ಕೆ ಟಪಾಲುದ್ವಾರ ಕಾಗದಗಳನ್ನು ಬರೆದು ಆರ್ಡರು ಕಳಿಸಿ ಬಾಟ್ಲಿಗಳನ್ನು ತರಿಸಿಕೊಳ್ಳಬಹುದು:— [33-4]

ಮೆಸ್ಸರ್ಸ್ ತಿರುಪತಿ ಗುಜರ್ ಅಂಡ್ ಕೋ., ಸೋಲ್ ಏಜಂಟ್ಸು ಸ್ಕಾರ್ಪಿಯಾನಿಯೋ ಡೆಪೋ, ಹರಿಹರ, ಮೈಸೂರು ಪ್ರಾವಿನ್ಸು.

WANTED

Agents on liberal Commission and handsome [illegible] for the Provident Fund Department of the [illegible] Life Insurance Co. Ltd. (Calcutta). The Company possesses Government Securities.

Apply to

THE SECRETARY,
Madras Branch, Chowdry, Madras.

[illegible] ಬಂದಿರುತ್ತೆ ! ಸಂತೋಷಕರವಾದ ವಾಚ್ !!

ರೈಲ್ವೆ ರೆಗ್ಯುಲೇಟರ್ ವಾಚ್

[illegible]ವಾದ ವಾಚ್ ಸರಪಣಿ ಸಮೇತ ಕ್ರಯ ರೂ 3

[illegible] ಪ್ರಸಿದ್ಧವಾದ [illegible] ಮಾಡಿರುವ ಕಲಸದಿಂದಲೂ [illegible] ಯಂತ್ರ [illegible] ತಯಾರಾಗಿ ಬಂದಿರುತ್ತೆ.



[illegible] ಮತ್ತು ಸುಂದರವಾದ ಮೂಲು [illegible] ವಿಗಳುಳ್ಳದು [illegible] [illegible] ಕೊಡು ಕರ್ತವ್ಯ [illegible] ಕೆತ್ತಿರುವ ವಾಚ್ ಶ್ರೇಷ್ಠವಾದದ್ದು. ಸರಿಯಾದ ಕಾಲವನ್ನು ತೋರಿಸತಕ್ಕದ್ದು ಮತ್ತು ದೀರ್ಘಕಾಲ ಬಾಳಿಕೆ ಬರುವಂಥಾದ್ದು. ಎಲ್ಲಾ [illegible] ಸರ್ವರಿಗೂ [illegible] 70 [illegible] ಈ ವಾಚ್ [illegible]ವಾಗಿ ಹಚ್ಚು ಮಾತುಗಳು ಬರೆಯುವದು [illegible] [illegible] ಒಳಗೆ "ಹೋಮ್" (ಅಂದರೆ ಕನ್ನಡ ಮುಖ) [illegible] ಮುದ್ರಿಸುತ್ತೆ. ಈ [illegible] ಮುಂಭಾಗದಲ್ಲಿ [illegible] ಅಂದರೆ ಗುರುತು [illegible] ಈ [illegible] ಕಾಣಿಸಿರುವ [illegible] [illegible] ಗುರುತು.

[illegible] ಕೆಮ್ಮಿ [illegible] ರೆಗ್ಯುಲೇಟರ್ ಲೀವರ್ ವಾಚ್ [illegible] 1-12-0, ರೂ 1-10-0 ಯಲ್ಲಿಯೂ ರಾಸ್ಕೋಫ್ ವಾಚ್ [illegible] ರೂ 1-2-0 ರೂ 1-0-0 ಯಲ್ಲಿಯೂ, [illegible] [illegible] [illegible] ವಾದ ವಾಚ್ [illegible] [illegible] ತೆಗೆದುಕೊಳ್ಳುವವರಿಗೆ ಇದನ್ನು ತೆಗೆದು ಸಂತೋಷಪಡಬೇಕಾಗಿ [illegible] [47-4]

[illegible] ಬರೆದು ತರಿಸಿಕೊಳ್ಳಿ - ಎ. ಆರ್. ವೆಂಕಟರಮಣ ಅಂಡ್ [illegible] 7, ಕೋಪ್ ವೆಂಕಟಾಚಲ [illegible] ವಿ. ಡಿ., ಮದರಾಸು

Office of the Military Secretary to His Highness the Maharajah of Mysore

Dated Bangalore 1st February, 1913

NOTICE.

Tenders will be received by the Military Secretary to His Highness the Maharajah at 12 noon on the 28th February 1913, for the supply of the following felloes, spokes and planks, required for the Mysore Imperial Service Transport Workshops.

The tenderers should produce samples of wood they are to supply with their quotations, making a note, at the same time, the date within which the articles can be supplied.

The details of size required can be ascertained at the Imperial Service Transport Workshops, Cubbon Park, Bangalore.

Sawn teak or honney felloes	1,980
Do. teak or honney spokes	3,335
Do. teak planks [2 x 1 6 x 1 4	340

Sd. A. JONES, Lt. Col.,
For Military Secretary.

[59-1]

ಹತ್ತಿಯ ಹಿಂಡಿ! ಹತ್ತಿಯ ಹಿಟ್ಟು!

ಶಾಸ್ತ್ರಜ್ಞರ ಅಭಿಪ್ರಾಯ

[illegible] ಸಂಶೋಧಿಸಿದ್ದರಲ್ಲಿ ಇದು ದನಗಳಿಗೆ ಉತ್ಕೃಷ್ಟವಾದ ಆಹಾರವಾಗಿದೆ. [illegible] ತಯಾರಾಗುವ [illegible] ಶ್ರೇಷ್ಠವಾಗಿದೆ. ಹತ್ತಿಯ ಬೀಜಕ್ಕಿಂತ ಇದು ಬಹಳ ಪುಷ್ಟಿಕಾರಿ. ಇದಕ್ಕಿಂತ ಉತ್ತಮವಾಗಿ [illegible] ಬೊಂಬಾಯಿ ವ್ಯವಸಾಯದ ಇಲಾಖೆಯ [illegible], [illegible] ವ್ಯವಸಾಯದ ಕಲಾಶಾಲೆಯ ಅಧ್ಯಕ್ಷರೂ ಆದ ಡಾಕ್ಟರ್ ಮಾನ್ ಎಂಬ [illegible] ಅಭಿಪ್ರಾಯಪಡುತ್ತಾರೆ. [59-1]

[illegible] ಹಾಲು ಕರೆಯುವ ದನಗಳಿಗಾಗಿ [illegible] ಕೊಡುತ್ತಾರೆ [illegible] ಕೆಲಸಮಾಡುವ [illegible] ಈ ಹಿಟ್ಟಿನ [illegible] ಅತ್ಯವಶ್ಯಕ.

ಎಲ್ಲಾ [illegible], [illegible], ತರಕಾರಿ, ಹೂವಿನ [illegible] ಒಪ್ಪ [illegible] ಗೊಬ್ಬರ [illegible]

[illegible] ಕೋ-ಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, 1 [illegible] ರೋಡ್, ಬೆಂಗಳೂರು ಸಿಟಿ

ಆರ್ಯ ಭೈಷಜ್ಯ ಮಂದಿರಂ, ಶ್ರೀಶೃಂಗಗಿರಿ.

[51-4]

1 ಸ್ವಯಮಗ್ನಿ ಮುಖಿ ಮಂಡೂರಂ—ಎಲ್ಲಾ ಕಾಯಿಲೆ ಪಾಂಡು, ಅರಿಸಿನ ಮುಂಟಿಗೆ, ಅಜೀರ್ಣ, ಮೈಊದು (ಶೋತ), ವಾಂತಿ, ಅತಿಸಾರ, ಎಲ್ಲಾ ಹಳೇ ಜ್ವರ, ಎಲ್ಲಾ ಜ್ವರಗಡ್ಡೆಗಳು, ವಾಯು, ಕಫ, ಕ್ರಿಮಿ, ಕ್ಷಯ, ಕ್ಷಯರೋಗ, ಇವನ್ನು ಹರಿಸಿ ಬಲವನ್ನೂ ಜೀರ್ಣಶಕ್ತಿಯನ್ನೂ ಉಂಟುಮಾಡುತ್ತೆ. ಅನೇಕರು ಮೈಊದು, ಪಾಂಡು ಮತ್ತು ಜ್ವರಗಡ್ಡೆಗಳಿಂದ ನರಳುತ್ತಾರೆ. ಅದಕ್ಕೆಲ್ಲಾ ಸಂಜೀವಿನೀ. ಈ ರೋಗಗಳು ಗುಣವಾಗದಿದ್ದರೆ ಹಣ ವಾಪಸ್ ಮಾಡುತ್ತೇವೆ. ಈ ರೋಗಗಳಿಗೆ ಇದು ಉತ್ತಮ ಔಷಧವೆಂದು ಹಿಂದೂ ವೈದ್ಯಶಾಸ್ತ್ರವು ಸಾರುತ್ತದೆ. ಕ್ರಯ 1 ತೋಲಾ 2 ರೂ. ಮಾತ್ರ. (2) ಅಶ್ವಗಂಧಾವಲೇಹ—ಪುಷ್ಟಿ, ಅಗ್ನಿಬಲ [illegible] ಸೇರು 2 ರೂ. (3) [illegible] ಮಾತ್ರೆ, 30 ಕ್ಕೆ ರೂ 1. ನಮ್ಮಲ್ಲಿ ಎಲ್ಲಾ ರೋಗಕ್ಕೂ ಶಾಸ್ತ್ರೀಯವಾದ ಔಷಧ ದೊರಕುತ್ತೆ. [illegible] ಮುಂತಾದ [illegible] ಬೇರೆ ಏಜಂಟರಾಗಲು ಇಷ್ಟಪಟ್ಟವರು ಕಾಗದ ಬರೆಯಬಹುದು. ಕಮಿಷನ್ ಲಾಭವಿದೆ.

ವಿಳಾಸ— ಕೆ. [illegible]ಶಾಸ್ತ್ರೀ, ಆಯುರ್ವೇದ ಶಿಕ್ಷಕ, ಶೃಂಗೇರಿ.

ಟ್ರಾಂಪ ರೆಗ್ಯುಲೇಟರ್ ಲಿವರ್ ಗಡಿಯಾರ.

ಇದು ಹೊಸ ನಮೂನೆ ! ಸ್ವಲ್ಪ ಬೆಲೆ !! ಬಹಳ ಅಂದವಾದದ್ದು !!!

ಇದಕ್ಕೆ 4 ವರುಷ ಗ್ಯಾರಂಟಿ ಚೀಟಿ ಉಂಟು.

ಕ್ರಯ ರೂ. 1-13-0 | ಕ್ರಯ ರೂ 1-13-0



Rs 1-13-0

ಈ ಗಡಿಯಾರ ಗೌರ್ನಮೆಂಟ್ ಮತ್ತು ಟ್ರಾಂವೇ ನೌಕರರ ಉಪಯೋಗಕ್ಕೆ ಮಾತ್ರವೇ ಸಪ್ಲೈ ಮಾಡಲ್ಪಡುತ್ತೆ. ಇದನ್ನು ಅಮೇರಿಕಾದಿಂದ ಒಟ್ಟಾಗಿ ತರಿಸಿರುವದರಿಂದ ಇಷ್ಟು ಸ್ವಲ್ಪ ಬೆಲೆಗೆ ಕೊಡುವದು ಇದೇ ಇದರ ಕಾರಣ. ಇದು ನೋಡುವದಕ್ಕೆ ಅಂದವಾಗಿಯೂ ಕಾಲವನ್ನು ಸರಿಯಾಗಿಯೂ ತೋರಿಸುತ್ತದೆ.

[1-5]

ಪತ್ತಿ ಅಂಡ್ ಕೋ.,
ನಂ 31 ಜನರಲ್ ಮುತ್ತ್ಯಾಲಪೇಟೆ ಬೀದಿ
ಸಾಹುಕಾರ್ ಪೇಟೆ, ಮದ್ರಾಸ್.

ವೃತ್ತಾಂತ ಪತ್ರಿಕೆ.

ಶಕೆ ೧೮೩೪ನೇ ಇಷವ ಮಾಘ ತಾ. ೬ನೇ ಗುರುವಾರ.

ಶ್ರೀಮತ್ ಯುವರಾಜರವರು

ಪ್ರಜೆಗಳು ತಿಳಿದುಕೊಳ್ಳತಕ್ಕಂಥಾ ಇಸ್ತಿಹಾರ್ನಾಮೆ ಯಾವುದೂ ಇದುವರೆಗೆ ಪ್ರಕಟವಾಗದ ಹೋದರೂ ಮೈಸೂರು ಸಂಸ್ಥಾನದ ಯುವರಾಜರಾದ ಸರ್ ಶ್ರೀ ಕಂಠೀರವ ನರಸರಾಜ ಒಡೆಯರವರು ಈ ತಿಂಗಳ ಅಂತ್ಯಭಾಗದಲ್ಲಿ ಬೊಂಬಾಯಿನಲ್ಲಿ ಜಹಜುಹತ್ತಿ ಯೂರೋಪ್ ಖಂಡಕ್ಕೂ ಗ್ರೇಟ್ ಬ್ರಿಟನ್ನಿಗೂ ದಯಮಾಡಿ ಬರುವವರಾಗಿದ್ದಾರೆಂದು ತಿಳಿದಿದೆ. ಈ ರೀತಿ ಅವರು ಪಶ್ಚಿಮ ದೇಶಗಳಲ್ಲಿ ಸಂಚಾರಮಾಡಿ ತಮ್ಮ ತಿಳುವಳಿಕೆ ಜ್ಞಾನ ಸಂಪಾದನೆಗಳನ್ನು ಇನ್ನೂ ಹೆಚ್ಚಾಗಿ ವೃದ್ಧಿಪಡಿಸಿಕೊಳ್ಳುವವರಾಗಿರುವುದನ್ನು ನೋಡಿ ನಾವು ಬಹಳ ಸಂತೋಷಪಡುತ್ತೇವೆ. ಶ್ರೀಮತ್ ಯುವರಾಜರವರು ಈ ಭರತ ಖಂಡದ ಹಲವು ಭಾಗಗಳಲ್ಲಿ ಸಂಚಾರ ಮಾಡಿರುತ್ತಾರಲ್ಲದೆ ಪೂರ್ವದಿಗ್ದೇಶವಾದ ಜಪಾನ್ ರಾಜ್ಯಕ್ಕೂ ದಯಮಾಡಿಸಿದ್ದು ಅಲ್ಲಿನ ವಿದ್ಯಮಾನಗಳನ್ನು ಅರಿತವರಾಗಿರುತ್ತಾರೆ. ಇದರಿಂದ ಪೂರ್ವದಿಗ್ದೇಶಗಳ ಸ್ಥಿತಿಗತಿಯೂ ಮನೋಗತವೂ ಜೀವನಾದಿಗಳೂ ಅವರಿಗೆ ತಕ್ಕಮಟ್ಟಿಗೂ ಸಾಕ್ಷಾತ್ತಾಗಿ ಪರಿಚಯವಾಗಿರುವುದು. ಈ ಅನುಭವದ ಜೊತೆಗೆ ಅವರು ಈಗ ಪಶ್ಚಿಮ ರಾಜ್ಯಗಳಲ್ಲಿ ಸಂಚಾರಮಾಡಿ ಅಲ್ಲಿನ ವಿದ್ಯಮಾನಗಳನ್ನು ಸಾಕ್ಷಾತ್ತಾಗಿ ಪರಾಂಬರಿಸಿ ತಮ್ಮ ಅನುಭವ ಜ್ಞಾನಾದಿಗಳನ್ನು ವೃದ್ಧಿಮಾಡಿಕೊಳ್ಳಬೇಕೆಂದು ಪ್ರಯತ್ನಪಟ್ಟಿರುವುದು ಶ್ಲಾಘ್ಯವಾಗಿರುತ್ತದೆ.

ಶ್ರೀಮತ್ ಯುವರಾಜರವರು ಇದುವರೆಗೆ ಅನೇಕ ಯೂರೋಪಿಯನ್ ಸರದಾರರ ಪರಿಚಯಮಾಡಿಕೊಂಡಿರುತ್ತಾರಲ್ಲದೆ ಹಿಂದುಸ್ಥಾನದಲ್ಲಿ ವೈಸ್‌ರಾಯರವರೇ ಮೊದಲಾದ ಅನೇಕ ದೊಡ್ಡ ದೊಡ್ಡ ಅಧಿಕಾರಿಗಳ ಸ್ನೇಹವನ್ನು ಬೆಳಸಿರೋಣದರಿಂದ ಅವರು ಯೂರೋಪಿಯನ್ ಜನಗಳ ಮನೋಧರ್ಮವನ್ನು ತಕ್ಕಮಟ್ಟಿಗೂ ಬಲ್ಲವರಾಗಿದ್ದಾರೆ. ಆದರೂ ಅವರು ಆ ಜನಾಂಗದ ಮಧ್ಯೆ ಹೋಗಿ ಇರುವಾಗ್ಗೆ ಆ ಜನಗಳ ನಡವಳಿಕೆಯೂ ಮನೋಗತವೂ ಯಾವ ರೀತಿ ಇರುತ್ತದೆಂಬುವುದನ್ನು ಪರಿಷ್ಕಾರವಾಗಿ ಕಂಡುಕೊಳ್ಳುತ್ತಾರೆ. ಮತ್ತು ಯುವರಾಜರವರು ಹೊಸ ವಿಷಯಗಳನ್ನು ಗ್ರಹಿಸಿಕೊಳ್ಳುವುದರಲ್ಲಿ ನಿಪುಣರಾಗಿರೋಣದರಿಂದ ಅವರು ಈ ಸಮುದ್ರಯಾನ ಕಾಲದಲ್ಲೂ ಯೂರೋಪಿಯನ್ ರಾಜ್ಯಗಳ ಮೇಲೆ ಸಂಚಾರಮಾಡುವಾಗಲೂ ತಮ್ಮ ದೃಷ್ಟಿಪಥಕ್ಕೆ ಬೀಳುವ ಸಕಲ ವಿದ್ಯಮಾನಗಳನ್ನು ಬಹಳ ಚೆನ್ನಾಗಿ ಗ್ರಹಿಸಿಕೊಳ್ಳುತ್ತಾರೆಂದು ಹೇಳಬಲ್ಲೆವು. ಅವರ ಮಾರ್ಗದಲ್ಲಿ ಸಿಕ್ಕುವ ಸೂಯೆಸ್ ಪಟ್ಟಣ, ಸೂಯೆಸ್ ಕಾಲುವೆಯಲ್ಲಿ ನುಗ್ಗಿ ಹೋಗುವುದು, ಮಾರ್ಸೇಲ್ಸ್ ಎಂಬ ಮೊದಲನೇ ಯೂರೋಪಿಯನ್ ತೀರಪಟ್ಟಣ, ಈ ಮುಂತಾದ ನೋಟಗಳು ಅವರಿಗೆ ವಿಶೇಷವಾದ ಉತ್ಸಾಹವನ್ನೂ ನೇತ್ರಾನಂದವನ್ನೂ ಉಂಟುಮಾಡುವವೆನ್ನುವುದಕ್ಕೆ ಸಂಶಯವಿಲ್ಲ.

ಯೂರೋಪಿಯನ್ ರಾಜ್ಯಗಳಲ್ಲಿ ಸಂಚಾರಮಾಡಿ ಅನುಭವಪಡೆದಿರುವವರು ಯಾರು ಯುವರಾಜರವರ ಸಂಗಡ ಹೋಗುತ್ತಾರೆಯೋ ನಮಗೆ ತಿಳಿಯದು. ಆದರೂ ಅವರು ಸಂಚರಿಸುವ ಕಡೆಗಳಲ್ಲಿ ಉತ್ತಮೋತ್ತಮವಾದ ಮತ್ತೂ ಉತ್ಸಾಹಪ್ರದವಾದ ಸ್ಥಳಗಳನ್ನೂ ಇತರ ವಿದ್ಯಮಾನಗಳನ್ನೂ ಅವರಿಗೆ ತೋರಿಸಿಕೊಡುವಂಥವರನ್ನು ಅವರು ತಮ್ಮ ಕೂಡ ಇಟ್ಟುಕೊಳ್ಳುವರೆಂದು ನಂಬುತ್ತೇವೆ. ಯಾಕಂದರೆ ಗ್ರೇಟ್ ಬ್ರಿಟನ್ನಿನಲ್ಲೂ ಯೂರೋಪಿಯನ್ ರಾಜ್ಯಗಳಲ್ಲೂ ನೋಡಿ ಕೇಳಿ ಮುಂದಟ್ಟುಮಾಡಿಕೊಳ್ಳುವ ಪ್ರಯೋಜನಕರಗಳಾದ ವಿಚಾರಗಳು ಅನೇಕವಾಗಿರುವವೆಂದು ನಾವು ಹೇಳಬೇಕಾದದ್ದಿಲ್ಲ.

ಶ್ರೀಮತ್ ಯುವರಾಜರವರು ಮೈಸೂರು ಸಂಸ್ಥಾನದ ಶ್ರೇಯೋಭಿವೃದ್ಧಿಯ ಹಲವು ವಿಚಾರಗಳಲ್ಲಿ ವಿಶೇಷವಾದ ಕುತೂಹಲವನ್ನೂ ಉತ್ಸಾಹವನ್ನೂ ದೃಷ್ಟಾಂತಮಾಡಿ ತೋರಿಸಿರುತ್ತಾರೆ. ಸಣ್ಣ ವಯಸ್ಸಿನ ಬಾಲಕರು ಅಂಗಸಾಧನೆ ಮಾಡಿ ಶರೀರಪುಷ್ಟಿಯುಳ್ಳವರಾಗಬೇಕೆಂದು ಅಭಿಲಾಷೆಪಟ್ಟು ಅವರಿಗೆ ಪ್ರೋತ್ಸಾಹಪಡಿಸಿದ್ದಾರೆ; ಮತ್ತು ವಿವಾಹ ಪರಿಷ್ಕರಣದ ವಿಷಯದಲ್ಲಿ ಅವರಿಗಿರುವ ಮನೋಗತವು ಮೊನ್ನೆ ರಾಜಧಾನಿಯಲ್ಲಿ ಜರುಗಿದ ಮಿಸ್ ಟೆನ್ನೆಂಟರವರ ಉಪನ್ಯಾಸ ಸಭೆಯಲ್ಲಿ ಅಗ್ರಸ್ಥಾನವನ್ನು ವಹಿಸಿ, ಆವಶ್ಯವೂ ಸ್ತೋತ್ರಾರ್ಹವೂ ಆದ ಭಾಷಣವನ್ನು ಮಾಡಿರುವುದು ದೃಷ್ಟಾಂತವಾಗಿದೆ. ಈಗ ಮಹಾಸ್ವಾಮಿಯವರು ಪಶ್ಚಿಮದೇಶಗಳಲ್ಲಿ ಸಂಚಾರಮಾಡುವವರಾಗಿರೋಣದರಿಂದ ಅವರ ಜ್ಞಾನವೂ ಪರಿಪಕ್ವತೆಯೂ ಸಾಮರ್ಥ್ಯವೂ ಬಹಳಮಟ್ಟಿಗೆ ಹೆಚ್ಚುವುದೆಂಬದು, ಅಲ್ಲಿ ತಾವು ನೋಡಿ ತಿಳಿಯುವ ಯಾವ ಯಾವ ವಿಚಾರಗಳು ಎಷ್ಟೆಷ್ಟು ಮಟ್ಟಿಗೆ ನಮ್ಮ ಸಂಸ್ಥಾನದಲ್ಲಿ ರೂಢಿಸಲ್ಪಡತಕ್ಕವೆಂಬ ಭಾಗವನ್ನು ವಿವೇಕಪೂರ್ವಕವಾಗಿ ತಿಳಿದುಕೊಳ್ಳಲು ಸಮರ್ಥರಾಗುತ್ತಾರೆನ್ನುವುದಕ್ಕೆ ಸಂಶಯವಿಲ್ಲ.

ಪ್ರಪಂಚವು ದಿನಕ್ರಮೇಣ ಸಣ್ಣದಾಗುತ್ತಾ ಬರುತ್ತಿರುವುದು. ಒಂದು ತಿಂಗಳಿನ್ನೊಳಗಾಗಿ ಪ್ರಪಂಚವನ್ನೆಲ್ಲಾ ಸುತ್ತಿಕೊಂಡು ಬರುವಂತಾಗಿದೆ. ಕೆಲವು ವರುಷಗಳ ಹಿಂದೆ ಈಗಿನಷ್ಟು ಅನುಕೂಲಗಳು ಇದ್ದವಾಗಿರಲಿಲ್ಲ; ದೂರದೇಶಾಂತರ ಪ್ರಯಾಣ ಮಾಡಿದಲ್ಲದೆ ಈ ಭೂಗೋಳವನ್ನು ಪ್ರದಕ್ಷಿಣೆ ಮಾಡುವುದು ಸಾಧ್ಯವಾಗಿರಲಿಲ್ಲ. ಆದಕಾರಣ ಇಂಥಾ ನವನಾಗರಿಕಕಾಲದಲ್ಲಿ ದೇಶಾಟನ ಮಾಡುವುದರಿಂದ ಜ್ಞಾನವೂ ಬುದ್ಧಿಯೂ ಬಹುಮಟ್ಟಿಗೂ ವಿಕಸಿತವಾಗುವವು. ಶ್ರೀಮತ್ ಯುವರಾಜರವರು ಯೂರೋಪಿನಲ್ಲೂ ಗ್ರೇಟ್ ಬ್ರಿಟನ್ನಿನಲ್ಲೂ ಸಂಚಾರ ಮಾಡುವ ಸಮಯದಲ್ಲಿ ಮೈಸೂರು ಸಂಸ್ಥಾನಕ್ಕೂ ಪ್ರಜೆಗಳ ಶ್ರೇಯಸ್ಸಿಗೂ ಸಹಕಾರಿಗಳಾದ ಹಲವು ವಿಚಾರಗಳನ್ನು ಮುಂದಟ್ಟು ಮಾಡಿಕೊಳ್ಳಬಲ್ಲರೆಂದು ನಂಬುತ್ತೇವೆ. ಅವರಿಗೆ ಒದಗಿರುವ ಇಂಥಾ ಒಳ್ಳೇ ಸಮಯವನ್ನು ಈ ಸಂಸ್ಥಾನಕ್ಕೆ ಬಹಳ ಫಲಕಾರಿಯಾಗುವಂತೆ ವಿನಿಯೋಗಿಸುತ್ತಾರೆಂಬ ನಂಬಿಕೆಯೂ ನಿರೀಕ್ಷೆಯೂ ನಮಗೆ ಉಂಟು. ಅವರಿಗೆ ಈ ಪ್ರಯಾಣ ಕಾಲದಲ್ಲಿ ದೇಹಾರೋಗ್ಯವು ಸುಸಂತೋಷಪ್ರದವಾಗಿರಲೆಂದೂ, ಸಮುದ್ರಯಾನ ಮಾಡುವಾಗ್ಗೆ ಅಲೆಗಳೂ ಗಾಳಿಗಳೂ ಶಾಂತವೃತ್ತಿಯನ್ನು ಹೊಂದಿ ಅವರನ್ನು ಸುರಕ್ಷಿತವಾಗಿ ಕಾಪಾಡಿಸಲೆಂದೂ ಬಹಳವಾಗಿ ಹಾರೈಸುತ್ತೇವೆ.

ಯುವರಾಜರವರು ಈಗ ಪ್ರಯಾಣ ಮಾಡಿಕೊಂಡು ಬರುವಂತೆ ಇನ್ನು ಕೆಲವು ಕಾಲದೊಳಗಾಗಿ ನಮ್ಮ ಶ್ರೀಮತ್ ಮಹಾರಾಜರವರೂ ಯೂರೋಪಿಗೆ ದಯಮಾಡಿ ಜ್ಞಾನ ವಿವೇಕ ಸಾಮರ್ಥ್ಯಾದಿಗಳನ್ನು ಪರಿಪಕ್ವಮಾಡಿಕೊಂಡು ಬರುವಂತಾಗಲೆಂದು ನಂಬಿ ನಿರೀಕ್ಷಿಸುವೆವು. ಮಹಾಪ್ರಭುಗಳು ಸೀಮೆಗೆ ಪ್ರಯಾಣ ಮಾಡಿದಲ್ಲಿ ಎಲ್ಲಾ ಕಡೆಗಳಲ್ಲೂ ಅವರನ್ನು ವಿಶೇಷ ಆನಂದದಿಂದಲೂ, ಸಗೌರವವಾಗಿಯೂ ಕಂಡು ಆದರಿಸುತ್ತಾರೆಂದು ಖಂಡಿತವಾಗಿ ಹೇಳಬಲ್ಲೆವು.

ಟರ್ಕಿ ಬಾಲ್ಕನ್ ಯುದ್ಧವು.

ಯುದ್ಧಭೂಮಿಯಲ್ಲಿ ಮರಳಿಯೂ ಕೃತ್ಯವು ಪ್ರಾರಂಭವಾಗಿ ಹೋಣದರಿಂದ ಕಠಿಣವಾದ ಯುದ್ಧಗಳು ನಡೆಯುವಂತೆ ಅವಕಾಶವುಂಟಾಗಿದೆ. ಜಾನೀನಾದಲ್ಲಿ ಮಾತ್ರ ಟರ್ಕಿಯವರಿಗೂ ಗ್ರೀಕರಿಗೂ ಒಂದು ಯುದ್ಧವಾಯಿತು. ಈ ಯುದ್ಧದಲ್ಲಿ ಟರ್ಕಿಯ ಸೈನಿಕರು ಸೋತುಹೋದಂತೆ ತಿಳಿಯುತ್ತದೆ. ಯುದ್ಧಭೂಮಿಯಲ್ಲಿ ಕಾದಾಡುವವರ ಕೂಡ ಪತ್ರಿಕಾವರದಿಗಾರರು ಯಾರೂ ಇಲ್ಲದಿರೋಣದರಿಂದ ಖಂಡಿತವಾದ ಸಮಾಚಾರಗಳನ್ನು ತಿಳಿಯುವುದು ಕಷ್ಟವಾಗಿದೆ.

ಈಗ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡುವಲ್ಲಿ ಟರ್ಕಿಯವರು ಕರಾರುಮಾಡಿಕೊಳ್ಳಬೇಕೆಂದು ಸಾಹಸಪಡುತ್ತಿರುವಂತೆ ಕಾಣುತ್ತದೆ. ಈಗ ಬಂದಿರುವ ಹಲವು ಸಮಾಚಾರಗಳು ಈ ಅರ್ಥವನ್ನು ಸೂಚಿಸುವವು. ಕಾದಾಡುವ ಉಭಯ ಪಕ್ಷದ ಶತ್ರುಗಳೂ ಒಪ್ಪಿ ಅಪೇಕ್ಷಿಸಿದಲ್ಲಿ ಯೂರೋಪಿಯನ್ ರಾಜ್ಯಗಳವರು ಮಧ್ಯಸ್ಥಿಕೆ ಮಾಡಿ ಅವರವರಿಗೆ ಕರಾರುಮಾಡಿಸುವುದಕ್ಕೆ ಸಿದ್ಧರಾಗಿದ್ದಾರೆ. ಇದಕಾರಣ ಟರ್ಕಿಯವರು ಈಗಿನ ಸ್ಥಿತಿಯಲ್ಲಿ ತಮಗೆ ಅನುಕೂಲವಾಗಿರುವುದನ್ನು ನೋಡಿಕೊಂಡು ಬೇಗನೆ ಕರಾರುಮಾಡಿಕೊಳ್ಳುವುದೇ ಬುದ್ಧಿವಂತಿಕೆಯಾಗಿದೆ. ಯಾಕಂದರೆ ಸಾವಕಾಶ ಮಾಡಿದಷ್ಟೂ ಟರ್ಕಿಗೆ ನಷ್ಟಕರವಾಗಿ ಪರಿಣಮಿಸುವುದು.

ಪಿತೃದ್ರೋಹ

ಇಂಗ್ಲಿಷ್ ಕವೀಶ್ವರರಲ್ಲಿ ಅಗ್ರೇಸರನಾದ ಷೇಕ್ಸ್‌ಪಿಯರನೆಂಬ ಮಹಾಕವಿಯ ವಿಷಯವಾಗಿ ವಾಚಕರಲ್ಲಿ ಕೆಲವರು ಓದಿಯಾದರೂ ಅಥವಾ ಕೇಳಿಯಾದರೂ ಇರುವರು. ಈ ಕವಿಕುಲತಿಲಕನು ಬರೆದಿರುವ ನಾಟಕಗಳನ್ನು ಓದಿದರೆ ಅವು ಎಷ್ಟು ರಮಣೀಯವಾಗಿಯೂ ನೀತಿಬೋಧಕವಾಗಿಯೂ ಇರುವವೆಂದು ತಿಳಿಯುವುದು. ಇಲ್ಲಿ ಆತನು ಬರೆದಿರುವ ಒಂದು ನಾಟಕದ ಕಥೆಯನ್ನು ಸಂಕ್ಷೇಪವಾಗಿ ಬರೆಯುತ್ತೇವೆ.

ಪೂರ್ವ ಕಾಲದಲ್ಲಿ ಲೀಯರನೆಂಬ ಅರಸನು ಬ್ರಿಟನ್ನಿನ ದೊರೆಯಾಗಿ ರಾಜ್ಯಭಾರಮಾಡುತ್ತಿದ್ದನು. ದೊರೆಯು ವೃದ್ಧನಾಗುತ್ತ ಬರಲು ತನ್ನ ತರುವಾಯ ರಾಜ್ಯಭಾರವನ್ನು ವಹಿಸುವುದಕ್ಕೆ ಯುವರಾಜನಿಲ್ಲದೆ ಇದ್ದುದರಿಂದ ತನಗಿದ್ದ ಮೂವರು ರಾಜಕುಮಾರಿಯರಿಗೂ ಸಮಭಾಗಗಳಾಗಿ ರಾಜ್ಯವನ್ನು ಹಂಚಿ ಅವರಿಗೆ ರಾಜ್ಯದ ಆಡಳಿತವನ್ನು ಒಪ್ಪಿಸಿ ತಾನು ಒಬ್ಬೊಬ್ಬ ಕುಮಾರಿಯ ಅರಮನೆಯಲ್ಲಿ ಒಂದೊಂದು ತಿಂಗಳು ಕಾಲಕ್ಷೇಪಮಾಡುತ್ತ ತನ್ನ ವೃದ್ಧಾಪ್ಯವನ್ನು ರಾಜ್ಯಭಾರದ ಚಿಂತೆಗಳಿಲ್ಲದೆ ಕಳೆಯುವೆನೆಂದು ನಿಶ್ಚಯಿಸಿಕೊಂಡು ಮೊದಲು ತನ್ನ ಕುಮಾರಿಯರು ತನ್ನನ್ನು ಯಾವ ರೀತಿಯಲ್ಲಿ ಪ್ರೀತಿಸುವರು? ತನ್ನನ್ನು ತಕ್ಕ ಹಾಗೆ ಸನ್ಮಾನಿಸಿ ಪ್ರೀತಿಸುವರೋ ಎಂದು ಅವರ ಮನೋಭಿಪ್ರಾಯಗಳನ್ನು ತಿಳಿಯುವೆನೆಂದು ಅವರನ್ನು ಕರೆಸಿ ವಿಚಾರಿಸಲು ಮೊದಲನೇ ಎರಡನೇ ರಾಜಕುಮಾರಿಯರು ಮಹಾ ಕಪಟೋಪಾಯವನ್ನು ಪ್ರಯೋಗಿಸಿ ಅತಿ ವಿನಯವನ್ನೂ ನಮ್ರತೆಯನ್ನೂ ಅಂತು ಮೃದುನುಡಿಗಳಿಂದ ಮಹಾ ಪ್ರಭುವೇ! ತಾವು ನಮ್ಮನ್ನು ಪಡೆದು ಸಲಹಿದ ಪಿತಾಮಹರೂ ಆಳುವ ದೊರೆಯವರು ಆಗಿದ್ದೀರಿ. ನಾವು ತಮ್ಮ ಭೃತ್ಯರು; ಆಜ್ಞಾಧಾರಕರು. ತಮ್ಮನ್ನು ಈ ನಮ್ಮ ಕಣ್ಣುಗೊಂಬೆಗಳಿಗಿಂತಲೂ ಈ ನಮ್ಮ ಪ್ರಾಣಗಳಿಗಿಂತಲೂ ಅತಿಶಯವಾಗಿ ಪ್ರೀತಿಸಿ ಸೇವಿಸುವದಕ್ಕೆ ಬದ್ಧಕಂಕಣರಾಗಿದ್ದೇವೆಂದು ನಟಿಸೋಕ್ತಿಗಳಿಂದ ವೃದ್ಧರಾಜನನ್ನು ನಂಬಿಸಿದರು. ದೊರೆಯು ಇವರ ಟಕ್ಕನ್ನು [illegible] ಸಲಾರದ ಅರುವುವಯಸ್ಸಿನಿಂದ ರಾಜ್ಯಭಾರವನ್ನು ಅವರಿಗೊಪ್ಪಿಸಿದನು. ಅನಂತರ ಕೆಲವು ಕಾಲ ಹಿರಿಯ ಪುತ್ರಿಯ ಅರಮನೆಯಲ್ಲಿದ್ದುಕೊಂಡು ಬಳಿಕ [illegible] ನು ಎರಡನೆ ಅರಸನು ಅಲ್ಲಿ ಬಿಡಾರವನ್ನು ಮಾಡಲು ಕೆಲವು ದಿನಗಳಲ್ಲಿಯೇ [illegible] ಈ ಮುದುಕನು ಭಾರವಾಗಿ ಎಲ್ಲರಿಗೂ ಬೇಸರವನ್ನುಂಟುಮಾಡುತ್ತಿರುವ [illegible] ಇವನನ್ನು ಸಲಹುವದು ಕಷ್ಟವಾಗಿದೆಯೆಂದು ನಾನಾ ನಿಷ್ಠುರೋಕ್ತಿಗಳನ್ನು ಬೀರುತ್ತ, ಚನ್ನಾಗಿ ಮಾತನಾಡದೆ ಕೇಳದ್ದಕ್ಕೆ ಮುಖವನ್ನು ತಿರುಗಿಸುತ್ತ ಹಾಸ್ಯಮಾಡುತ್ತ ತಿರಸ್ಕರಿಸಲಾರಂಭಿಸಿದರು. ವೃದ್ಧರಾಜನು ಇದನ್ನು ತಾಳ[illegible] ದುಃಖಾಕ್ರಾಂತನಾಗಿ—ನನ್ನ ಎರಡನೇ ಕುಮಾರಿಯು ಸತ್ಕಾರವನ್ನು [illegible] ಸ್ವೀಕರಿಸುವೆನೆಂದು ಆಕೆಯ ಮನೆಗೆ ಬರಲು ಆಕೆಯು ತನ್ನ ಅಕ್ಕ[illegible] ಗಿಂತಲೂ ಕಠಿಣೋಕ್ತಿಗಳಿಂದ ಹೀ[illegible] ಅವನನ್ನು ಸ್ವೀಕರಿಸದೆಯೇ ಹೊ[illegible] ಕ್ಕೆ ತಳ್ಳಿದಳು. ಆಗಾಗಲೇ ಸಂಜೆಯಾಗಿ ಕತ್ತಲು ಕವಿಯುತ್ತಿದ್ದಿತು. ಆ[illegible] ನು ಭಗ್ನಮನೋರಥನಾಗಿ ಮೂರನೇ ಕುಮಾರಿಯ ಮನೆಗಾದರೂ [illegible] ಹೋಗಿ ಅಲ್ಲಿ ರಾತ್ರಿಯನ್ನು ಕಳೆಯುವೆನೆಂದು ಬಾಗಿಲು ತೆರೆಯಬೇಕೆಂದು [illegible] ಬಹು ದೀನಾಲಾಪನೆಯಿಂದ ಮಗಳನ್ನು ಬೇಡಿದನು. ಕತ್ತಲಿನಲ್ಲಿ ಬಿರುಗಾಳಿ ಬೀಸುತ್ತ ಮಳೆಗರೆಯುವುದಕ್ಕೆ ಆರಂಭಿಸಿತು. ದೊರೆಯು ಮಳೆಯಲ್ಲಿ [illegible] ಗಾಳಿ ಚಳಿಯ ಏಟಿಗೆ ತಾಳಲಾರದೆ ನಡುಗುತ್ತ ರಾತ್ರಿ ಮಲಗುವದಕ್ಕಾದರೂ ಸ್ವಲ್ಪ ಸ್ಥಳ ಕೊಡಬೇಕೆಂತ ಬೇಡಿದರೂ ಆ ಕಲ್ಲೆದೆಯುಳ್ಳ ಕುಮಾರಿಯು ಬಾಗಿಲನ್ನು ತೆರೆದು ಆತನನ್ನು ಒಳಗೆ ಸೇರಿಸಿಕೊಳ್ಳದೆ ಹೋದಳು. ಇಂತ[illegible] ಕಠೋರಚಿತ್ತರಾದ ಮಕ್ಕಳು ಪಿತೃದ್ರೋಹಿಗಳು, ಪಾಪಗ್ರಸ್ತರು ಎಂದು ಸಂದೇಹವಿಲ್ಲದೆ ಹೇಳಬೇಕಲ್ಲವೆ?

ಈ ನವನಾಗರಿಕ ಕಾಲದಲ್ಲಿ ಇಂಥಾ ಪಿತೃದ್ರೋಹವೂ ರಾಜದ್ರೋಹ[illegible] ಲೋಕದಲ್ಲಿ ಉಂಟೆಂದು ಹೇಳಬಹುದೆ? ನಾವೆಲ್ಲರೂ ರಾಜಭಕ್ತರೂ ಪಿ[illegible] ವ ಕರ್ತವ್ಯಪಾಲನೆಮಾಡುವವರೂ ಆಗಿ ಈ ಲೋಕವನ್ನು ನಮ್ಮ ಸದ್ಗುಣಗಳಿಂ[illegible] ಅಲಂಕರಿಸುವವರಾಗಬೇಕು.

ಇದರ ಕೇಳಿರಿ—ಒಬ್ಬ ಅರಸನಿದ್ದಾನೆ. ಆತನು ರಾಜಾಧಿರಾಜನಾ[illegible] ದೇವರು. ಆತನು ನಮ್ಮೆಲ್ಲರನ್ನು ಪಡೆದು ಪಾಲಿಸುತ್ತಿರುವ ಪಿತನು. ಆತ[illegible] ನಾವು ಹೇಗೆ ನಮ್ಮ ಪಿತೃಭಕ್ತಿಯನ್ನು ತೋರಿಸಿದ್ದೇವೆ. ಆತನಿಗೆ ನಮ್ಮ ಭಕ್ತಿ[illegible] ವಿಧೇಯತೆ, ಸೇವಾಯುಕ್ತವಾದ ಪ್ರೀತಿಗಳು ನ್ಯಾಯವಾಗಿ ಸಲ್ಲಬೇಕು. ಆತ[illegible] ಎಂದಾದರೂ ನಮ್ಮ ಬಳಿಗೆ ಬಂದು ನನಗೆ ಇಂತಿಂತಹ ಸಹಾಯಗಳು ನಿಮ್ಮಿಂ[illegible] ಆಗಬೇಕು, ಮಾಡುವಿರೋ? ಎಂತ ಕೇಳಿದರೆ ಯಾರಾದರು ಆತನನ್ನು ಉಲ್ಲ[illegible] ಘನೆ ಮಾಡಲಾರರು. ಆತನು ಹಾಗೆ ಬಂದು ನಮ್ಮ ಸಹಾಯವು ತನಗೆ ಬೇಕೆಂ[illegible] ಸೂಚಿಸಿದರೆ ನಾವು ನಮ್ಮ ಕೆಲಸವನ್ನೆಲ್ಲಾ ಬಿಟ್ಟು ಆತನ ಸೇವೆಯನ್ನು ಮೊದ[illegible] ಮಾಡಿ ಅನಂತರ ಬೇರೆ ಯಾವ ಕೆಲಸವಿದ್ದರೂ ನೋಡಿಕೊಳ್ಳುವೆವು ಅನ್ನುವಿ[illegible]

ಸತ್ಯವೇದದಲ್ಲಿ—ಇಗೋ ನಾನು ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತೇ[illegible] ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒ[illegible] ಅವನ ಬಳಿಗೆ ಬಂದು ಅವನ ಸಂಗಡ ಊಟಮಾಡುವೆನು. ಅವನು ನನ್ನ ಸಂ[illegible] ಊಟಮಾಡುವನು ಎಂದು ಬರೆದಿದೆ. ಈ ಮಾತುಗಳನ್ನು ಹೇಳುವವ[illegible] ಯಾರು? ಪ್ರಭುವಾದ ಅರಸನಾಗಿದ್ದು ಸ್ವರ್ಗಾಧಿಪತ್ಯದ ನೆಲೆಯಿಂದ ಮನು[illegible] ಷ್ಯರನ್ನು ಹುಡುಕುವುದಕ್ಕೋಸ್ಕರ ಹೊರಟು ಹೋಗಿ ತನ್ನ ರಾಜ್ಯವನ್ನೂ ಆಸ್ತಿಯನ್ನೂ ಕಳೆದುಕೊಂಡು [illegible] ಯಿಲ್ಲದೆ ನನ್ನನ್ನು ನಿಮ್ಮ ಮನೆಯಲ್ಲಿ ಸೇರಿಸಿಕೊಂಡು ನನ್ನನ್ನು ಉಪಚರಿಸಿ[illegible] ಎಂದು ದಿಕ್ಕಿಲ್ಲದವನಾಗಿ ಬಂದಿದ್ದಾನೋ? ಆತನು ಯಾರೆಂದರೆ—ಸ್ವರ್ಗ[illegible] ಮರ್ತ್ಯ ಪಾತಾಳ ಲೋಕಗಳ ಬೀಗದ ಕೈಗಳನ್ನು ತನ್ನ ಸೊಂಟಕ್ಕೆ ಕಟ್ಟಿಕೊಂ[illegible] ಡಿರುವವನೂ ಯಾರೂ ಮುಚ್ಚಕೂಡದ ಹಾಗೆ ತೆರೆಯುವವನೂ ಯಾರೂ [illegible] ಯದಂತೆ ಮುಚ್ಚುವವನೂ ಸತ್ಯವೂ ನಿಜವಾಗಿ ಇರುವಾತನೂ ನಂಬತಕ್ಕ ಸ[illegible] ಸಾಕ್ಷಿಯೂ ಸಕಲ ಸೃಷ್ಟಿಗೆ ಮೂಲನೂ ಆದ ಆತನು ಬಾಗಿಲಿನ ಮುಂ[illegible] ನಿಂತು ತಟ್ಟುತ್ತಾನೆ. ಯಾವ ಬಾಗಿಲು? ನಮ್ಮ ಹೃದಯವೆಂಬ ಮನೆ[illegible] ಬಾಗಿಲನ್ನು ತಟ್ಟಿ, ನನ್ನನ್ನು ನಿಮ್ಮ ಹೃದಯದಲ್ಲಿ ಸೇರಿಸಿಕೊಳ್ಳಿ ಎಂದು ಬೇಡುತ್ತಾ ನಿಂತಿದ್ದಾನೆ.

ಆದರೆ ಆತನಿಗೆ ಏನು ಕಡಿಮೆ? ಎಲ್ಲವೂ ಇರುವವನೂ ಎಲ್ಲವನ್ನೂ ಹಿಡಿದು ನಿಲ್ಲಿಸಿಕೊಂಡಿರುವ ಆತನಿಗೆ ನಮ್ಮಿಂದ ಯಾವ ಸಹಾಯ ತಾನೆ ಬೇ[illegible] ಗಿರುವದು? ಆತನು ಕೊರತೆಪಡುವವನಾಗಿ ನಮ್ಮ ಸಹಾಯವನ್ನು ಬೇಡ[illegible] ದಕ್ಕಾಗಿ ಬಂದವನಲ್ಲ. ನಮ್ಮ ಕೊರತೆಯನ್ನು ನೋಡಿ ನಮಗೆ ಸಹಾಯಮಾ[illegible] ನಮ್ಮನ್ನು ರಕ್ಷಿಸಬೇಕೆಂದು ಬಂದಿದ್ದಾನೆ. ಆತನು ಹೇಳುವದೇನಂದರೆ—[illegible] ವಿಷಯದಲ್ಲಿ ನಾನು ಐಶ್ವರ್ಯವಂತನು, ಸಂಪನ್ನನು, ಒಂದರಲ್ಲಿಯೂ ಕೊ[illegible] ರತೆಯಿಲ್ಲದವನು ಎಂದು ನಂಬಿಕೊಂಡಿರುತ್ತೀ? ಆದರೆ ನೀನು ಕೇವಲ ದುರ[illegible] ವಸ್ಥೆಯಲ್ಲಿ ಬಿದ್ದಿರುವವನು. ದೌರ್ಭಾಗ್ಯನು, ದರಿದ್ರನು, ಕುರುಡನು, ಬತ್ತ[illegible] ಲೆಯವನು ಎಂದು ತಿಳಿ, ಮತ್ತು ನನ್ನನ್ನು ಬಾಗಿಲು ತೆರೆದು ಸೇರಿಸಿಕೊಂಡರೆ ನೀ[illegible] ಐಶ್ವರ್ಯವಂತನಾಗುವಂತೆ ಬೆಂಕಿಯಲ್ಲಿ ಪುಟಮಾಡಿದ ಚಿನ್ನವನ್ನು ನಾ[illegible] ಕೊಡುವೆನು. ನಿನ್ನ ಬೆತ್ತಲೆಯು ಕಾಣದಂತೆ ಹೊದ್ದುಕೊಳ್ಳುವದಕ್ಕಾಗಿ ಶು[illegible] ವಸ್ತ್ರಗಳನ್ನೂ ನಿನ್ನ ಕಣ್ಣು ಕಾಣುವಂತೆ ಹಚ್ಚಿಕೊಳ್ಳುವದಕ್ಕೆ ಅಂಜನವ[illegible] ನಿನಗೆ ಕೊಡುವೆನು ಎಂದು ಬುದ್ಧಿ ಹೇಳುತ್ತಾನೆ. ಹಾಗಾದರೆ, ಇಂಥಾ [illegible] ಈಗ ನಮ್ಮ ಹೃದಯದ ಬಾಗಿಲನ್ನು ತೆರೆಯುವದಿಲ್ಲವೆ?

ಒಳದೇಶದ ವೃತ್ತಾಂತಗಳು

ಚಿಕ್ಕನಾಯಕನಹಳ್ಳಿ ಸೊಮವಾರ ಶ್ರೀರಂಗೇರಿಯಲ್ಲಿ 10 ವರುಷದ ಒಬ್ಬ ಹುಡುಗನ ಹೊಳೆಯಲ್ಲಿ ಈಜುತ್ತಿದ್ದು ಅಲ್ಲಿ ಮುಳುಗಿ ಮೃತಪಟ್ಟನೆಂದು ತಿಳಿದಿದೆ

* * *

ಚಿಕ್ಕಮಗಳೂರು ಮ್ಯುನಿಸಿಪಲ್ ಸರಹದ್ದಿನಲ್ಲಿ ಪ್ರತಿಗಳ ಮಕ್ಕಳಿಗೆ ಟಿಪ್ಪಣಿ ಹಾಕುವ ರೂಲನ್ನು ಮೂರು ವರುಷ ಜಾರಿಯಲ್ಲಿಡಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ

* * *

ಶಿವಮೊಗ್ಗ ಸೊಮವಾರ ವಿಜ್ಞಾಪನೆ ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಸರ್ಕೀಟು ಹೊರಡುವರು ಸಾಗರ, ತೀರ್ಥಹಳ್ಳಿ, ಕೊಪ್ಪ, ಮೂಡಿಗೆರೆ, ನರಸಿಂಹರಾಜಪುರ, ತರೀಕೆರೆ, ಹರಿಹರಪುರ, ಹಾಸನ, ಈ ಪ್ರಾಂತ್ಯ ಸಂಚಾರ ಮಾಡಿಕೊಂಡು ಮಾರ್ಚಿ ಬೆಂಗಳೂರನ್ನು ತಲುಪುತ್ತಾರೆ

* * *

ತುಪ್ಪುನ್ನಾಗಗಳನ್ನು ಶಿಕಾರಿ ಮಾಡಿದವರಿಗೆ ಮುಂದೆ ಹೇಳುವ ದರಗಳಿಗೆ ಡೆಪ್ಯುಟಿ ಕಮಿಷನರುಗಳು ಸರ್ಕಾರದಿಂದ ಇನಾಮು ಕೊಡಬಹುದೆಂದು ಆರ್ಡರ್ ಆಗಿದೆ ಹುಲಿಗೆ 15 ರೂ, ಚಿರತೆ 20 ರೂ, ಕಾಡುನಾಯಿಗೆ, ತೋಳ 10 ರೂ ಹುಲಿಮರಿ 5 ರೂ, ಕಾಡುಬೆಕ್ಕು 2 ರೂಪಾಯಿ

* * *

ಹಾಸನ ಸ್ವಪ್ನದಲ್ಲಿ ಸಬ್ ಅಸಿಸ್ಟೆಂಟ್ ಸರ್ಜನ್ ಮಿ ರಾಯರು ಕಾಯಿಲೆಯನ್ನು ಉಪಚರಿಸುತ್ತಿದ್ದಲ್ಲಿ ಅವರಿಗೆ ಆ ರೋಗ ತಗಲಿ ಕಳೆದ ವಾರ ಮೃತಿಯನ್ನು ಹೊಂದಿದರೆಂದು ತಿಳಿಸಲು ವಿಷಾದಪಡುತ್ತೇವೆ ಇವರು ದೊಡ್ಡ ಕುಟುಂಬಿಯೂ ಗುಣವಂತರಾಗಿಯೂ ಇದ್ದು ಜನರ ಪ್ರೀತಿ ಗೌರವಗಳನ್ನು ಸಂಪಾದಿಸಿದ್ದರು

* * *

ಡಾಬಸ್ ಪೇಟೆಯಲ್ಲಿ ಸಾ ಬಸಪ್ಪನವರ ಕುಮಾರರು ವಿವಾಹೋತ್ಸವವನ್ನು ವಿಶೇಷ ಅಟ್ಟಹಾಸವಾಗಿ ಮಾಡಿ ಬರುವ ಅತಿಥಿಗಳೂ ಎಲ್ಲಾ ಕೋಮುಗಳ ಮೊದ ಮನುಷ್ಯರೂ ಸಕ್ಕರೆ ಹಂಚಲ್ಪಟ್ಟರು ವಧೂವರರ ಮೆರವಣಿಗೆಯು ಊರೆಲ್ಲಾ ಬಹು ಸಂಭ್ರಮದಿಂದ ನಡೆಯಿತು

* * *

ಶಿವಮೊಗ್ಗದ ಡಿಸ್ಟ್ರಿಕ್ಟ್ ಸಾನಿಟರಿ ಆಫೀಸರಾದ ಮಿ ಎಂ ಜಿ ಸ್ವಾಮಿಯವರು ಎಂ ಡಿ ಸಿ ಎಂ ರವರು ನ ಜನಗೊಡು ಮುಂತಾದ ಕಡೆಗಳಲ್ಲಿ ಪ್ಲೇಗು ಉಪದ್ರವ ಬಹು ಕಡಿಮೆಯಾಗಿದೆ ಎಂದು ಕೇಳಿ ಸಂತೋಷಪಟ್ಟು ರೋಗ ಪರಿಹಾರದ ವಿಷಯದಲ್ಲಿ ಅವರು ರಚಿಸಿರುವ ಹಸ್ತಪ್ರತಿಯನ್ನು ನಮ್ಮ ಪತ್ರಿಕೆಗಾಗಿ ಕಳುಹಿಸಿಕೊಟ್ಟಿದಾರೆ

* * *

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟ್ ಸ್ಥಾನದಲ್ಲಿದ್ದು ನಿವೃತ್ತರಾದ ಡೆಪ್ಯುಟಿ ಕಮಿಷನರ್ ಮಿ| ಬಿ ಜಿ ಕುಮಾರಸ್ವಾಮಿನಾಯಕರವರಿಗೆ ಮ್ಯುನಿಸಿಪಲ್ ಕೌನ್ಸಿಲರುಗಳು ಕಳೆದ ಸೋಮವಾರ ಸಾಯಂಕಾಲ ಲಾಲ್‌ಬಾಗಿನ ಭವನದಲ್ಲಿ ವಿದ್ಯಾಸಾದ ಗಾರ್ಡನ್ ಪಾರ್ಟಿಯನ್ನು ನಡಿಸಿ ತಮ್ಮ ಕೃತಜ್ಞತೆ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸಿದರು

* * *

ಶ್ರೀಮನ್ ಮಹಾರಾಜರವರು ಪೊನ್ನಂಪೇಟೆ ಸರ್ಕೀಟು ದಯಮಾಡಿದ್ದಾಗ್ಗೆ ಹೆಗ್ಗಡದೇವನಕೋಟೆ ಡಿಸ್ಟ್ರಿಕ್ಟಿಗೆ ಸೇರಿದ ಆಯರಹಳ್ಳಿಯಲ್ಲೂ, ಅಪ್ಪಾಪುರದಲ್ಲೂ ಪ್ರಜೆಗಳು ಕುಡಿಯುವ ನೀರಿಗೆ ಕಷ್ಟಪಡುತ್ತಿರುವುದನ್ನು ಪರಾಂಬರಿಸಿ ಕೇಳಲ್ಪಟ್ಟ ಬಾವಿಯನ್ನು ತೋಡಿಸಿಕೊಡಬೇಕೆಂದು ಅಪ್ಪಣೆ ಕೊಟ್ಟು ಅದಕ್ಕೆ 3000 ರೂಪಾಯಿ ದಯಪಾಲಿಸಿರುವರು

* * *

ಶ್ರೀಮನ್ ಯುವರಾಜರವರು ಈ ತಿಂಗಳು ಸುಮಾರು 10 ನೇ ತಾರೀಖಿನ ವೇಳೆಯಲ್ಲಿ ಕಲ್ಕತ್ತೆಗೆ ಹೋಗಿ ತಾ 22 ರಲ್ಲಿ ಜಹಜು ಹತ್ತಿ ಸೀಮೆಗೆ ಪ್ರಯಾಣ ಮಾಡುವುದಾಗಿ ಗೊತ್ತಾಗಿದೆ ಅವರ ಸಂಗಡ ಸರ್ದಾರ್ ವಾಳ ಅರಸಿನವರೂ, ಹುಜೂರು ಸೆಕ್ರೆಟರಿ ಮಿ| ಪಿ ರಾಘವೇಂದ್ರರಾಯರೂ, ಮೈಸೂರು ಸಿವಿಲ್ ಸರ್ಜನ್ ಮಿ ಉಸ್ಮಾನ್‌ರವರೂ ಸೀಮೆಗೆ ಹೊರಡುವರು

* * *

1ನೇ ಕ್ಲಾಸ್ ರೈಲ್ವೆ ಪ್ರಯಾಣಿಕರ ಸೌಕರ್ಯಕ್ಕಾಗಿ ರೈಲ್ವೆ ಕಂಪನಿಯವರು ಈ ತಿಂಗಳ ಪ್ರಾರಂಭದಿಂದ ಬೆಂಗಳೂರಿನಿಂದಲೂ ಮೈಸೂರಿನಿಂದಲೂ ಹೊತ್ತು ಎರಡನೆ ಸಲ ಗಾಡಿಗಳನ್ನು ಬಿಡಲಾರಂಭಿಸಿದಾರೆ ಬೆಂಗಳೂರಿನಿಂದ ರಾತ್ರಿ 9 ಗಂಟೆಗೆ ಹೊರಡುವ ರೈಲು ಬೆಳಗಿನ ಝಾಮದ 11 ಗಂಟೆಗೆ ಮೈಸೂರನ್ನೂ, ಮೈಸೂರಿನ ರಾತ್ರಿ 10½ ಗಂಟೆಗೆ ಹೊರಡುವ ರೈಲುಗಾಡಿ ಬೆಳಗ್ಗೆ 6½ ಗಂಟೆಗೆ ಬೆಂಗಳೂರನ್ನೂ ಸಲುಪುತ್ತವೆ

* * *

ಹರಿಹರದ ಟವರ್ ಹರಿಹರೇಶ್ವರ ಸ್ವಾಮಿ ಜಾತ್ರೆ ಕಾಲದಲ್ಲಿ ಅಂದರೆ ಮಾರ್ಚಿ 24, 25 ನೇ ತಾರೀಖುಗಳಲ್ಲಿ ದೇವಸ್ಥಾನದ ಮುಂಭಾಗದ ಬಯಲಿನಲ್ಲಿ ಜಾನುವಾರುಗಳ ಪ್ರದರ್ಶನ ನಡೆಯುವುದು ಜಾತ್ರೆಗೆ ವಿಶೇಷವಾಗಿ ಜನಗಳು ಸೇರುವುದರಿಂದ ದನ ಮೊದಲಾದವುಗಳ ಮಾರಾಟಕ್ಕೆ ಒಳ್ಳೆಯ ಅನುಕೂಲವಾಗುವುದು ಮತ್ತು ಹೊಸ ತರದ ಉತ್ತಮವಾದ ನೇಗಿಲನ್ನು ಪ್ರದರ್ಶನದಲ್ಲಿ ಅವುಗಳಿಂದ ಆಗತಕ್ಕ ಕೆಲಸಗಳನ್ನು ತೋರಿಸಲು ಏರ್ಪಾಡು ಮಾಡುವರೆಂದು ತಿಳಿಯುವುದು

* * *

ಶ್ರೀಮನ್ ಯುವರಾಜರವರು ಮಹಾರಾಣಿಯವರನ್ನೂ ಮೂರನೇ ಮಹಾರಾಜಕುಮಾರಿಯವರನ್ನೂ ಸರ್ದಾರ್ ಲಕ್ಷ್ಮೀಕಾಂತರಾಜೆ ಅರಸಿನವರನ್ನೂ ಸರ್ದಾರ್ ಗೋಪಾಲರಾಜೆ ಅರಸಿನವರನ್ನೂ ಬರೋಡೆಯಲ್ಲಿ ನಡೆಯುವ ಗಾಯಕವಾಡ್ ಮಹಾರಾಜರವರ ಕುಮಾರರ ವಿವಾಹ ಮಹೋತ್ಸವಕ್ಕೆ ಕರೆದುಕೊಂಡು ಹೋಗಿದಾರೆ ಅವರೆಲ್ಲಾ ಅಲ್ಲಿಂದ ರಾಜಕೋಟೆಗೆ ಪ್ರಯಾಣ ಮಾಡಿ ಅಲ್ಲಿ ಠಾಕೂರ್ ಸಾಹೇಬರವರ ಕುಮಾರರ (ಅಂದರೆ ನಮ್ಮ ಮಹಾರಾಣಿಯವರ ಸಹೋದರರು) ವಿವಾಹೋತ್ಸವವನ್ನು ತೀರಿಸಿಕೊಂಡು ಈ ತಿಂಗಳ ಮೂರನೇ ವಾರದಲ್ಲಿ ವಾಪಸು ರಾಜಧಾನಿಗೆ ದಯಮಾಡುವವರಾಗಿದಾರೆ

ರಾಜಧಾನಿಯಲ್ಲಿ ಬಿಸಿಲು ತೀಕ್ಷ್ಣವಾಗಿದ್ದರೂ ಸಾಯಂಕಾಲದ ಹೊತ್ತು ಮೋಡಗಳಾಡುತ್ತಾ ಬೇಗನೆ ಮಳೆ ಬರುವ ಸೂಚನೆಯುಂಟಾಗಿದೆ ಸುಗ್ಗಿಯ ಕಾಲವಾದರೂ ದಿನಸಿಗಳ ಧಾರಣೆ ಬಹಳ ಹೆಚ್ಚು, ಇನ್ನೂ ಹೆಚ್ಚುವುದರಲ್ಲೇ ಇದೆ ಸುತ್ತಮುತ್ತಲೂ ಸಾಂಕ್ರಾಮಿಕ ಉಪದ್ರವರೋಗವಿರುವುದರಿಂದ ಹಲವರು ಹೊರಗಿನಿಂದ ಉಪದ್ರವನ್ನು ತಂದುಬಿಟ್ಟಿದಾರೆ ರಾಜಧಾನಿಯಲ್ಲೂ ದಿನದಿನ ಒಂದೆರಡು ಮರಣಗಳಾಗುವವು ಆರೋಗ್ಯವನ್ನು ಕಾಪಾಡುವುದಕ್ಕೆ ನೇಮಕವಾಗಿರುವ ಪುರಾಧಿಕಾರಿಗಳು ಮುಕ್ತವಾದ ಹಾಗೂ ಕೆಟ್ಟದಾದ ಆಹಾರಪದಾರ್ಥಗಳು ಅಂಗಡಿಗಳಲ್ಲಿ ಬಿಕರಿಯಾಗದಂತೆ ನೋಡಿಕೊಳ್ಳಬೇಕಾಗಿದೆ ಮತ್ತು ಪ್ರತಿಗಳು ಆಹಾರ ವಿಷಯಗಳಲ್ಲಿ ಸ್ವಲ್ಪ ಜಾಗರೂಕರಾಗಿರುವುದು ಅವಶ್ಯ

ಮೈಸೂರು ಗೆಜೆಟ್ ಸಂಗ್ರಹ

ಕೊಂಡಜ ಗ್ರಾಮದ ಪಟೇಲ್ ಮಿ ನರಸಪ್ಪನವರು ಹರಿಹರ ತಾಲ್ಲೂಕ್ ಬೋರ್ಡ್ ಮೆಂಬರಾಗಿ ಚುನಾಯಿಸಲ್ಪಟ್ಟಿದಾರೆ

ಮೊಳಕಾಲ್ಮೂರು ತಾಲ್ಲೂಕ್ ಬೋರ್ಡಿನವರು ಮಿ| ತಿಪ್ಪಸ್ವಾಮಿಯವರನ್ನು ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿ ಚುನಾಯಿಸಿರುತ್ತಾರೆ

ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್ ಸೂಪರಿಂಟೆಂಡೆಂಟರಾದ ರಾಜಕಾರ್ಯಪ್ರಸಕ್ತ ರಾವ್ ಬಹದೂರ್ ಮಿ| ಡಿ ಶಾಮರಾಯರಿಗೆ ಫೆಬ್ರವರಿ ತಾ 5 ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮಿ| ಡಿ ಕೆ ದಾಸಪ್ಪಾಚಾರವರು ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ತಮ್ಮ ಕೆಲಸಗಳೊಂದಿಗೆ ಸೂಪರಿಂಟೆಂಡೆಂಟರ ಆಫೀಸ್ ಛಾರ್ಜನ್ನೂ ವಹಿಸಿರತಕ್ಕದ್ದು

ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮಿ| ವೈ ಸೀತಾರಾಮಯ್ಯನವರಿಗೆ ಫೆಬ್ರವರಿ ತಾ 11 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅ|| ಕನ್ಸರ್ವೇಟರ್ ಮಿ ಎಂ ಮುಸ್ತಾಫ್ ಆಲಿಯವರು ತಮ್ಮ ಕೆಲಸಗಳೊಂದಿಗೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನ ಛಾರ್ಜನ್ನೂ ವಹಿಸಿರತಕ್ಕದ್ದು

ಶಿವಮೊಗ್ಗ ಡಿಸ್ಟ್ರಿಕ್ಟ್ ಆಸ್ಪತ್ರೆಯಲ್ಲಿರುವ ಅ|| ಸರ್ಜನ್ ಮಿ| ಎಸ್ ಕೆ ಹನುಮಂತರಾಯರಿಗೆ ಫೆಬ್ರವರಿ ತಾ 2 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಶಿವಮೊಗ್ಗ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಮಿ ಪಿ ಸಲ್ಡಾನರವರಿಗೆ ಕೊಟ್ಟಿದ್ದ ಒಂದು ವರುಷ, ಎರಡು ತಿಂಗಳು, ಇಪ್ಪತ್ತೈದು ದಿನಗಳ ರಜವನ್ನು ಇನ್ನೂ ಆರು ದಿನ ಜಾಸ್ತಿ ಮಾಡಿದೆ

ಮೈಸೂರು ರೆವಿನ್ಯೂ ಪ್ರೊಬೇಷನರ್ ಮಿ ವೇಲೂರ್ ಮೊಹಿಯುದ್ದೀನ್ ಷರೀಫ್‌ಯವರನ್ನು ಪಾವಗಡ ತಾಲ್ಲೂಕಿನ ಆಕ್ಟಿಂಗ್ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಕಮಾಡಿದೆ ಮಿ ಎಚ್ ಶ್ರೀನಿವಾಸಯ್ಯಂಗಾರ್ರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರರಾಗಿ ವಾಪಸು ಹೋಗತಕ್ಕದ್ದು

ಶಿವಮೊಗ್ಗ ಅ| ಕಮಿಷನರ್ ಮಿ ಜಿ ಹನುಮಂತರಾಯರಿಗೆ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ವಹಿಸಿದೆ

ಮಿ| ಎನ್ ಎಸ್ ಸಂಜೀವಯ್ಯನವರನ್ನು 1909 ನೇ ಜುಲೈ ತಾ 1 ರಿಂದ 7 ನೇ ಕ್ಲಾಸ್ ಅ ಸರ್ಜನ್‌ರಾಗಿ ಖಾಯಂ ಮಾಡಿದೆ

ಗುಬ್ಬಿ ಸಬ್ ಡಿವಿಜನ್ ಅ ಕಮಿಷನರ್ ಮಿ ಎ ಕೆ ತಾಪಸೀರನ್‌ರವರನ್ನು ನವಂಬರ್ ತಾ 11 ರಿಂದ 1 ನೇ ಕ್ಲಾಸಿಗೆ ಬಡ್ತಿ ಮಾಡಿದೆ.

ಮಿ ಕೆ ಆರ್ ಕೃಷ್ಣಸ್ವಾಮಿಅಯ್ಯಂಗಾರ್ರು ಅ ಕೆಮಿಕಲ್ ಎಗ್ಸಾಮಿನರ್ ಮತ್ತು ಬಾ ಕ್ಟೀರಿಯಾಲಜಿಸ್ಟ್ ಆಗಿರತಕ್ಕದ್ದು

ಮಿ| ಎಚ್ ಟಿ ಗೋಪಾಲಯ್ಯಂಗಾರ್ರವರು ಇತರ ಕೆಲಸದ ಮೇಲಿರುವಾಗ ಮುಂದೆ ಹೇಳುವವರನ್ನು ಮುನ್ಸೀಫರಾಗಿ ನೇಮಿಸಿದೆ —(1) ಮಿ| ಡಿ ಅಳಸಿಂಗ್ರಾಚಾರ್ರು ಚಿಕ್ಕಬಳ್ಳಾಪುರದ ಪ್ರಿನ್ಸಿಪಲ್ ಮುನ್ಸೀಫರಾಗಿಯೂ (2) ಮಿ| ಎಚ್ ಎಂ ಕೃಷ್ಣಸ್ವಾಮಿಯವರು ಚಿಕ್ಕಬಳ್ಳಾಪುರದ ಅಡಿಷನಲ್ ಮುನ್ಸೀಫರಾಗಿಯೂ ಇರತಕ್ಕದ್ದು

ಮುಂದೆ ಹೇಳುವ ಸಬ್ ರಿಜಿಸ್ಟ್ರಾರರುಗಳ ವರ್ಗಾವರ್ಗಿ ಹುಕುಂ ಮಾಡಿದೆ —ಮಿ ವಿ ವಿ ನಾರಣಯ್ಯಂಗಾರ್ರು ತಿಪ್ಟೂರಿನಿಂದ ಮದ್ದಗಿರಿಗೆ ಮಿ|| ಎ ಎನ್ ಕೃಷ್ಣಮೂರ್ತಿಯವರು ತರೀಕೆರೆಯಿಂದ ತಿಪ್ಟೂರಿಗೆ ಮಿ|| ಎ ಆರ್ ಭೀಮಸೇನರಾಯರು ತರೀಕೆರೆಗೆ

ಮಿ|| ಪಿ ಎಸ್ ಅಚ್ಯುತರಾಯರವರು ಮಿ ಟಿ ವಿ ಅಮ್ಮಂಗಾರ್ರವರ ರಜಾಕಾಲದಲ್ಲಿ ಆರ್ಯರವರಿಂದ ಸಂಸ್ಥಾನದ ಸೀನಿಯರ್ ಸರ್ಜನ್ ಕೆಲಸದ ಛಾರ್ಜನ್ನು ಫೆಬ್ರವರಿ ತಾ 18 ರಲ್ಲಿ ವಹಿಸಿಕೊಂಡರು

ಕಾವೇರಿ ತಲಾಸ್ ಡಿವಿಜನ್ ಅ ಇಂಜನಿಯರ್ ಮಿ|| ಕೆ ಆರ್ ಶೇಷಾಚಾರ್ಯರಿಗೆ ಫೆಬ್ರವರಿ ತಾ 20 ರಿಂದ ಒಂದೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅ|| ಇಂಜನಿಯರ್ ಮಿ| ಎನ್ ರಾಮರಾಯರಿಗೆ ಕೊಟ್ಟಿರುವ ಐದು ತಿಂಗಳ ಕಾಯಿಲೆ ರಜವನ್ನು ಇನ್ನು ಮೂರು ತಿಂಗಳು ಜಾಸ್ತಿಮಾಡಿದೆ

ಮುಂದೆ ಹೇಳುವ ಇಂಜನಿಯರುಗಳ ವರ್ಗಾವರ್ಗಿ ಹುಕುಂ ಮಾಡಿದೆ —ಮಿ|| ಆರ್ ಎಸ್ ನವರತ್ನರವರನ್ನು ಕಡೂರಿನಿಂದ ಚಿತ್ರದುರ್ಗಕ್ಕೆ, ಮಿ| ಸಿ ಕೃಷ್ಣಯ್ಯಂಗಾರ್ರನ್ನು ಚಿತ್ರದುರ್ಗದಿಂದ ತುಂಕೂರಿಗೆ ಮಿ|| ಕೆ ಪೊನ್ನಪ್ಪನವರನ್ನು ತುಂಕೂರಿನಿಂದ ಕಡೂರಿಗೆ ಅ| ಇಂಜನಿಯರ್ ಮಿ| ಸಿ ವಿಜಯರಂಗಂ ನಾಯುಡುರವರನ್ನು ಬೆಂಗಳೂರಿನಿಂದ ತುಂಕೂರು ಡಿವಿಜನ್‌ಗೆ

ಚಿತ್ರದುರ್ಗದ ಡಿವಿಜನ್ ಎಗ್ಸಿಕ್ಯುಟಿವ್ ಇಂಜನಿಯರ್ ಮಿ| ಸಿ ಕೃಷ್ಣಯ್ಯಂಗಾರ್ರವರಿಗೆ ಫೆಬ್ರವರಿ ತಾ 10 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅ ಇಂಜನಿಯರ್ ಮಿ ಎಸ್ ಎ ರಾಮಸ್ವಾಮಿ ಅಯ್ಯರವರು ತಮ್ಮ ಕೆಲಸಗಳೊಂದಿಗೆ ಎಗ್ಸಿಕ್ಯುಟಿವ್ ಇಂಜನಿಯರವರ ಆಫೀಸ್ ಛಾರ್ಜನ್ನೂ ವಹಿಸಿರತಕ್ಕದ್ದು

ಬೌರಿಂಗ್‌ಪೇಟೆ ತಾಲ್ಲೂಕು ಅಮಲ್ದಾರ ಮಿ|| ಎಚ್ ಎಸ್ ರಾಮಸ್ವಾಮಯ್ಯನವರಿಗೆ ಫೆಬ್ರವರಿ ತಾ 15 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಆ ತಾಲ್ಲೂಕಿನ ಪ್ರೊಬೇಷನರ್ ಮಿ| ಎಂ ಅಬ್ದುಲ್ ಹಕೀಂಯವರು ತಾಲ್ಲೂಕಿನ ಛಾರ್ಜನ್ನು ವಹಿಸಿರತಕ್ಕದ್ದು

ಬೆಂಕಿಯ ಅನಾಹುತ

ನಾಲ್ವತ್ತೈದು ಮನೆಗಳು ಸುಟ್ಟುಹೋದವು

ನೂರಾರು ಬಡಜನರು ಸಂಕಟಪಡುವುದು

ಚಿತ್ರದುರ್ಗ ಡಿಸ್ಟ್ರಿಕ್ಟು ಹೊಸದುರ್ಗದ ತಾಲ್ಲೂಕು ಬೆಲಗೂರು ಗ್ರಾಮದ ಕೋಟೆಯಲ್ಲಿ 14-15 ಮನೆಗಳು ಬೇಗಾರರು ಒಂದು ಪಾರ್ಶ್ವದಲ್ಲಿ ಹಟ್ಟಿ ಕಟ್ಟಿಕೊಂಡು ನೂರಾರು ವರುಷಗಳಿಂದಲೂ ವಾಸಮಾಡುತ್ತಿದ್ದರು ಇವರು ತೆಂಗಿನ ಸೋಗೆ ಗರಿಗಳಿಂದಲೂ, ಈಚಲು ಮುಟ್ಟಿನಿಂದಲೂ ದೊಡ್ಡದಾಗಿ ಮನೆಗಳನ್ನು ಕಟ್ಟಿಕೊಂಡು, ಇವರ ಮನೆಗಳ ಮಧ್ಯೆ ದುರ್ಗಿ, ಅಂತರಗಟ್ಟಿ, ಲಕ್ಷ್ಮಿ ಈ ದೇವತೆಗಳ ಗುಡಿಗಳನ್ನೂ ಸೋಗೆಯಿಂದಲೇ ಕಟ್ಟಿಕೊಂಡು ಇದ್ದರು ಇವರಲ್ಲಿ ಅನೇಕರು ಜಮೀನ್‌ದಾರರಾಗಿಯೂ, ಕೆಲವರು ಕೂಲಿಯವರಾಗಿಯೂ ಇರುತ್ತಾರೆ ಈ ಕುಳವಾಡಿ ಜನರ ಪೈಕಿ ಬೊಮ್ಮ ಲಕುಮ ಎಂಬುವನ ಮನೆಗೆ ತಾ 27 ನೇ ಗುರುವಾರ ಮಧ್ಯಾಹ್ನ 12 ಘಂಟೆಗೆ ಬೆಂಕಿ ತಗಲಿ ಉರಿಯಲಾರಂಭಿಸಿತು ಆ ಸಮಯದಲ್ಲೇ ಒಂದು ಸುಂಟರ ಗಾಳಿಯು ಹುಟ್ಟಿ ಬೆಂಕಿಯನ್ನು ಹರಡಿದ್ದರಿಂದ ಬಾಜೂ ಮನೆಗಳಿಗೂ ಬೆಂಕಿ ತಗಲಿ ಒಂದು ಮನೆಯಿಂದ ಮತ್ತೊಂದು ಮನೆಗೆ ಹತ್ತಿಕೊಳ್ಳುತ್ತಾ, ಈ ಜನರ ವಾಸದ ಮನೆಗಳೂ, ದೇವರ ಮನೆಗಳೂ ದನದ ಮನೆಗಳೂ ಒಟ್ಟು 40 ಮನೆಗಳು ಸುಟ್ಟು ಬೂದಿಯಾದವು. ಇವರ ಹಟ್ಟಿಯೆಲ್ಲಾ ಸುಟ್ಟು ಬಾಜೂ ಜಸ್ತರ ಕೊಳವಾರರ ಮನೆಗಳಿಗೆ ಬೆಂಕಿ ತಗಲಿ ಇವರ 5 ಮನೆಗಳೂ ಸಹಾ ಸುಟ್ಟುಹೋದವು ಅಷ್ಟರಲ್ಲಿ ಗ್ರಾಮದವರೂ ಆಸ್‌ಪಾಸ್ ಗ್ರಾಮದವರೂ 700-800 ಜನಗಳ ವರಿಗೂ ಕೂಡಿ ಮುಂದಿನ ಮನೆಗಳನ್ನು ಕೆಡವಿ ಬೆಂಕಿಯು ಮುಂದಕ್ಕೆ ಹಾಯದಂತೆ ಮಾಡಿದರು ಈ ಬೆಂಕಿಯು 3 ದಿನಗಳ ವರಿಗೂ ನಿಲ್ಲದೇ ಉರಿಯುತ್ತಿತ್ತು

ಈ ಮಾದಿಗರು ತಮ್ಮ ತಮ್ಮ ಕೆಲಸಗಳಿಗೆ ಊಟ ಮಾಡಿಕೊಂಡು ಹೊರಗೆ ಹೋಗಿದ್ದರಿಂದ ಕೆಲವು ಮನೆಗಳಲ್ಲಿ ಗಂಡಸರು ಇರಲಿಲ್ಲ ಹೆಂಗಸರೂ ಇದ್ದ ಗಂಡಸರೂ ಸಹಾ ಹಟ್ಟಿಯ ಸಾಮಾನುಗಳನ್ನೂ, ಮಕ್ಕಳು ಮರಿಗಳನ್ನೂ ಸಾಗಿಸಲು ಸಾಧ್ಯವಾಗಲಿಲ್ಲ ಸೋಗೆ ಮನೆಗಳಾದ್ದರಿಂದ ಜಾಗ್ರತೆಯಾಗಿ ಎಲ್ಲಾ ಮನೆಗಳಿಗೂ ಆವರಿಸಿಕೊಂಡಿತು ಇವರು ಹಟ್ಟಿಯಲ್ಲಿ ಬೆಂಕಿ ತಪ್ಪಿಸಿಕೊಂಡು ಬರುವ ಗಲಾಟೆಯಲ್ಲಿ ಸಣ್ಣ ಹನುಮನ 3 ತಿಂಗಳ ಒಂದು ಗಂಡು ಮಗುವನ್ನು ಬಿಟ್ಟು ಬಂದದ್ದರಿಂದ ಅದು ಬೆಂಕಿ ಪರವಾಗಿ ಸತ್ತುಹೋಯಿತು ಕರಿಯನೆಂಬ ಒಬ್ಬನಿಗೆ ಮೈಯೆಲ್ಲಾ ಸುಟ್ಟುಹೋಗಿರುತ್ತದೆ 15 ಮೇಕೆಗಳೂ, ಅನೇಕ ಕೋಳಿ ವಗೈರೆ ಬೆಂಕಿಗೆ ಸಿಕ್ಕಿ ಸತ್ತುಹೋದವು ಇವರು ಈಗ ಸುಗ್ಗಿ ಮುಗಿಸಿಕೊಂಡು ತಮ್ಮ ದವಸ ಧಾನ್ಯವನ್ನೆಲ್ಲಾ ಇನ್ನೂ ಚೀಲಗಳಲ್ಲೂ, ಮೂಡೆಗಳಲ್ಲೂ ತಮ್ಮ ಮನೆಗಳಲ್ಲಿಯೇ ಇಟ್ಟುಕೊಂಡಿದ್ದರಾದ್ದರಿಂದ ಈ ವರ್ಷ ಇವರು ಬೆಳೆದ ದವಸವೆಲ್ಲಾ ಬೆಂಕಿಯ ಪಾಲಾದಂತೆ ಆಯಿತು ಇದೂ ಅಲ್ಲದ ಹೊದಿಯುವ ಬಟ್ಟೆ ಬರೆಯೂ, ಪಾತ್ರೆಪರಟೆಯೂ, ಮರಾ ಮುಟ್ಟೂ, ದವಸ ಧಾನ್ಯ, ಇವೇ ಮೊದಲಾದ ಎಲ್ಲಾ ಸಾಮಾನುಗಳೂ ಸುಟ್ಟು ಬೂದಿಯಾದವು ದೇವಸ್ಥಾನಗಳಲ್ಲಿ ಬೆಳ್ಳಿಯ ವಿಗ್ರಹಗಳೂ, ಚಿನ್ನದ ಒಡವೆಗಳೂ, ಚತ್ರಿ, ಪಕ್ಕೇ ಮೊದಲಾದವು ಎಲ್ಲಾ ಸುಟ್ಟು ಉಂಡೆಯಾಗಿವೆ

ಈ ರೀತಿ ಒಟ್ಟು ಈ ಮಾದಿಗರಿಗೆ ನಾಲ್ಕು ಸಾವಿರ ರೂಪಾಯಿಗಳೂ ಕೊಳವಾರರಿಗೆ 300 400 ರೂಪಾಯಿಗಳೂ ಈ ಬೆಂಕಿಯ ಅನಾಹುತದಿಂದ ಲುಕ್ಸಾನು ಆಗಿರುತ್ತದೆ ಇವರು ಹಾಲಿ ಮನೆ ಮಠಗಳಿಲ್ಲದೆ, ಹೊದಿಯುವುದಕ್ಕೆ ಬಟ್ಟೆ ಇಲ್ಲದೆ, ತಿನ್ನುವುದಕ್ಕೆ ಅನ್ನವಿಲ್ಲದೆ, ತುಂಬಾ ಸಂಕಟಪಡುತ್ತಿದಾರೆ ಬೆಂಕಿ ಎದ್ದ ರಾತ್ರಿಯೇ ಒಬ್ಬ ಹೆಂಗಸಿಗೆ ಪ್ರಸವವಾಯಿತು ಹಾಲಿ 10 12 ಜನ ಬಾಣಂತಿಯರೂ, ಕೆಲವು ತುಂಬಿದ ಬಸರಿಯರೂ, ಸಣ್ಣ ಸಣ್ಣ ಕೂಸುಗಳೂ ಇರುತ್ತಾರೆ ಹಾಲಿ ಕೆರೆ ಅಂಗಳದಲ್ಲಿ ಇವರು ಬೈಲಿನಲ್ಲಿ ಹೆಂಗಸರು ಮಕ್ಕಳನ್ನೂ ಸುಟ್ಟ ಪದಾರ್ಥಗಳನ್ನೂ ಇಟ್ಟುಕೊಂಡು ತಿರುಪೆ ಎತ್ತಿ ಜೀವಿಸುತ್ತಿದಾರೆ ಇವರ ಗೋಳಾಟವನ್ನೂ ಕಷ್ಟಗಳನ್ನೂ ನೋಡಿ ಪೇಟೆಯ ವರ್ತಕರು ವಲಿಯುವರೆಲ್ಲಾ ಸೇರಿ ಸೋಗೆ ಮಡಿಕೆ, ಹೊಸ ಬಟ್ಟೆ, ಸೀರೆ ಕುಪ್ಪಸ, ಅಕ್ಕಿ, ಉಪ್ಪು, ರಾಗಿ ವಗೈರೆ ದಿನಸಿಯೂ ತಮ್ಮ ಮನೆಗಳಲ್ಲಿದ್ದ ಬಟ್ಟೆ ಬರೆ, ಕಂಬಳಿ, ಜಂಖಾನ, ಚೀಲಗಳು ವಗೈರೆ ಅನೇಕರು ತಮತಮಗೆ ತಿಳಿದ ರೀತಿ ಧರ್ಮ ಸಹಾಯಮಾಡಿದರು ಬೂದಿ ಹಾಲ್ ರೇಂಜು ಇನಾಮ್‌ದಾರ್ ಬಿ ಕೃಷ್ಣರಾಯರು ಬಂದು ಈ ಬಡವರಿಗೆ ಸಂಭವಿಸಿರುವ ಕಷ್ಟವನ್ನು ನೋಡಿ ಇವರಿಗೆ ಧೈರ್ಯ ಹೇಳಿ, ಮಹಜರಿನ ರಿಪೋರ್ಟನ್ನೂ ಮನೆ ಸುಟ್ಟಿರುವ ರಿಪೋರ್ಟನ್ನೂ ಪ್ರತಿ ಒಬ್ಬರಿಗೆ ಲುಕ್ಸಾನಾಗಿರುವುದನ್ನೂ ಮಹಜರು ವಗೈರೆ ರಿಪೋರ್ಟ್ ಮಾಡುತ್ತಿದಾರೆ

ಮನೆಗಳು ಸುಡುತ್ತಿರುವಾಗ್ಗೆ ದಫೇದಾರ್ ವಗೈರೆಯು ಬಹಳ ಸಾಹಸಪಟ್ಟು ಜನರನ್ನು ಪ್ರೋತ್ಸಾಹಿಸಿ ಬೆಂಕಿ ಆರಿಸುವದಕ್ಕೆ ವಿಶೇಷ ಸಾಹಸಪಟ್ಟರು ಕೆರೆಯಲ್ಲಿ ನೀರು ಇರುವದಿಲ್ಲ ಬಾವಿಗಳಲ್ಲಿ ನೀರು ಸೇದಿ ತಂದು ಸುರಿಯಬೇಕಾದ್ದರಿಂದ ಜಾಗ್ರತೆಯಾಗಿ ಬೆಂಕಿ ಆರಿಸಲು ಸಾಧ್ಯವಾಗಲಿಲ್ಲ ಈ ಬಡವರಿಗೆ ಇಂಥಾ ಕಷ್ಟ ಸಂಭವಿಸಿದ್ದು ಈ ಪ್ರಾಂತ್ಯದ ಎಲ್ಲಾ ಜನರಿಗೂ ತುಂಬಾ ವ್ಯಸನವುಂಟಾಗಿರುತ್ತದೆ ಈ ಸ್ಥಳದಿಂದ ಇವರನ್ನು ತಪ್ಪಿಸಿ ಗ್ರಾಮ ಹೊರಕ್ಕೆ ಕಳುಹಿಸಬೇಕೆಂದು ರಿಪೋರ್ಟ್ ನಡೆಯುತ್ತಿತ್ತು ಈಗ ಮನೆ ಸುಟ್ಟು ಬೈಲಾಗಿರುವದರಿಂದ ಈಗ ಈ ಜಾಗಾ ಬಿಟ್ಟು ಊರಿಗೆ ದೂರದಲ್ಲಿ ಮನೆಗಳನ್ನು ಕಟ್ಟಬೇಕೆಂದು ಮಾಡಿದಾರೆ ಇವರ ಹೊಸ ಮನೆಗಳಿಗೆ ಮರಮುಟ್ಟು, ಗರಿಗಳನ್ನೂ ಕೊಡಿಸಿಕೊಡುವಂತೆ ಅರ್ಜಿಗಳನ್ನು ಬರೆದುಕೊಂಡಿರುತ್ತಾರೆ ಇಂಥಾ ಕಷ್ಟಕಾಲದಲ್ಲಿ ಇವರಿಗೆ ಸರ್ಕಾರದವರು ಸಹಾಯಮಾಡಿದರೆ ಬಡವರನ್ನು ಉದ್ಧಾರ ಮಾಡಿದಂತೆ ಆಗುತ್ತದೆ

ಈ ಬೆಲಗೂರು ಗ್ರಾಮದಲ್ಲಿ ಮಾದಿಗರ ಹಟ್ಟಿ ಎಂಬ ಹೆಸರಿನಲ್ಲಿ ಇರುವ ಸುಮಾರು 10 30 ಮನೆಗಳೆಲ್ಲಾ ಸೋಗೇ ಮನೆಗಳಾಗಿರುತ್ತವೆ ಈ ಮನೆಗಳು ಒಂದಕ್ಕೊಂದು ಒತ್ತಾಗಿ ಇಕ್ಕಟ್ಟಾಗಿರುತ್ತವೆ ಈ ಮನೆಗಳಲ್ಲಿ ಅಡಿಗೆ ಸಹಾ ಮಾಡುತ್ತಾರೆ ಇವರಿಗೆ ಬೆಂಕಿಯ ಭಯವಿಲ್ಲವೆಂದು ಕಾಣುತ್ತದೆ ಇವರು ತಕ್ಕಮಟ್ಟಿಗೆ ಧನಿಕರಾಗಿರುವದರಿಂದ ಹೆಂಚಿನ ಮನೆಗಳನ್ನು ಕಟ್ಟುವುದು ಬಹಳ ಉತ್ತಮವಾಗಿರುತ್ತದೆ ಇದೂ ಅಲ್ಲದೆ ಈ ಬೆಲಗೂರು ಗ್ರಾಮದಲ್ಲಿ ಮನೆಗಳ ಮಗ್ಗುಲಲ್ಲೇ ಹುಲ್ಲು ಬಣವೆಗಳನ್ನು ಅನೇಕರು ಇಟ್ಟುಕೊಂಡಿರುತ್ತಾರೆ ಇವುಗಳನ್ನೆಲ್ಲಾ ಗ್ರಾಮದವರೂ, ಸರ್ಕಾರದವರೂ ದೂರ ಹಾಕಿಸದಿದ್ದಲ್ಲಿ ಬೆಂಕಿಯ ಭಯವು ತಪ್ಪಲೆಂದು ಯಾರಿಗೂ ಹೇಳಲಾಗದು ಸರ್ಕಾರದವರು ಅಕಸ್ಮಾತ್ ಲುಕ್ಸಾನು ಪಟ್ಟಿರುವ ಈ ಬೀದಿಯ ಜನರ ಗೋಳಾಟವನ್ನು ನೋಡಿ ಇನ್ನು ಮುಂದೆ ಎಚ್ಚರಿಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ

ಕೆ ವೆಂಕಟರಾಮಯ್ಯ, ಬೆಲಗೂರು

ಕೃತಜ್ಞತಾ ಪ್ರದರ್ಶನವು

ಪ್ರಜಾಭಿಮಾನವುಳ್ಳ ಒಬ್ಬ ವೈದ್ಯರು

ಮೊಳಕಾಲ್ಮೂರಿನಲ್ಲಿ ಡಾಕ್ಟರಾಗಿದ್ದ ಮಿ॥ ಪಾಲ್ ಪೀಟರ್ರವರು ಇಲ್ಲಿಂದ ನೇತಮಂಗಲಕ್ಕೆ ವರ್ಗಾಯಿಸಲ್ಪಟ್ಟ ಕಾರಣ ಇಲ್ಲಿನ ಸಕಲ ಪ್ರಜೆಗಳೂ ಮತ್ತು ರಾಯದುರ್ಗ ಮೊದಲಾದ ಕುಂಪಣೀ ಸೀಮೆಯ ಜನಗಳೂ ಮೊದಲಾಗಿ ಅನೇಕ ಗ್ರಾಮಸ್ಥರೂ ತುಂಬಾ ಚಿಂತೆಗೊಳಪಟ್ಟರು ದಯಾಳುಗಳಾದ ಇವರು ಪ್ರಜೆಗಳನ್ನು ತುಂಬಾ ಮರ್ಯಾದೆಯಿಂದಲೂ, ತಾಳ್ಮೆಯಿಂದಲೂ, ಪ್ರೀತಿಪೂರ್ವಕವಾಗಿಯೂ ಕಾಣುತ್ತಿದ್ದದ್ದು ಮಾತ್ರವಲ್ಲದೆ ಎಂಥಾ ಕಠಿಣ ರೋಗಿಗಳನ್ನಾಗಲೀ ರೋಗದಿಂದ ನಿವಾರಣೆ ಮಾಡಬೇಕೆಂಬುವುದೇ ಇವರ ಮುಖ್ಯ ಗುಣವಾಗಿತ್ತು ಇವರು ಕಳೆದ ತಿಂಗಳು 18 ನೇ ತಾ ಈ ಊರನ್ನು ಬಿಟ್ಟು ತಮ್ಮ ಸ್ಥಳಕ್ಕೆ ಹೊರಡಬೇಕಾಗಿದ್ದುದರಿಂದ ತಾ 17 ನೇ ಸಾಯಂಕಾಲ ಇಲ್ಲಿನ ಎ ವಿ ಸ್ಕೂಲ್ ಹಾಲಿನಲ್ಲಿ ಇವರಿಗೆ ಒಂದು ಅಡ್ರೆಸ್ಸನ್ನು ಇಲ್ಲಿನ ಗ್ರಾಮಸ್ಥರೆಲ್ಲರೂ ಸೇರಿ ಕೊಡಬೇಕೆಂದು ಗೊತ್ತುಮಾಡಿಕೊಂಡು, ಸಕಾಲಕ್ಕೆ ಇವರನ್ನು ಬರಮಾಡಿಕೊಂಡು, ಇವರೂ ಇವರ ಮಿತ್ರಮಂಡಲಿಯವರೂ ಸೇರಿ ಫೋಟೋ ತೆಗಿಸಿಕೊಂಡರು ಬಳಿಕ ಇಲ್ಲಿನ ಛತ್ರದಲ್ಲಿ ಸಕಲರಿಗೂ ಕಾಫಿ ಫಲಾಹಾರ ಮುಂತಾದವುಗಳು ಕೊಡಲಾದವು ನಂತರ ಸ್ಕೂಲ್ ಹಾಲಿನಲ್ಲಿ ಸಕಲರೂ ಸಭೆ ಸೇರಿದರು ಇಲ್ಲಿನ ಅಮಲ್ದಾರ್ರವರು ಅಗ್ರಾಸನವನ್ನು ವಹಿಸಿದರು ಸಂಗೀತ ಮೊದಲಾದವುಗಳು ಬೆಳೆದ ನಂತರ ಅಮಲ್ದಾರ್ರವರು ಮಿ॥ ಪಾಲ್ ಪೀಟರವರ ಗುಣಗಳನ್ನು ಕುರಿತು ಇಂಗ್ಲೀಷಿನಲ್ಲಿ ವಿವರಿಸಿ ಹೇಳಿದರು ನಂತರ ಇಲ್ಲಿನವರೆಲ್ಲರೂ ಸೇರಿ ಮಿ॥ ಪಾಲ್ ಪೀಟರವರಿಗೆ ಮಾಡಿಸಿದ್ದ 30 ರೂಪಾಯಿಯ ಭಂಗಾರದ ಮೆಡಲನ್ನು ದಯಪಾಲಿಸಿದರು ಆ ಮೇಲೆ ಇಂಗ್ಲಿಷಿನಲ್ಲಿ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು ಮಿ॥ ಪಾಲ್ ಪೀಟರವರು ಮನಸ್ಸುಕರಗಿ ಸಂಕ್ಷೇಪವಾಗಿ ಕೆಲವು ಮಾತುಗಳನ್ನಾಡಿದರು ನಮ್ಮ ಊರಿಗೆ ಬಂದಿದ್ದ ಡಾಕ್ಟರುಗಳ ಪೈಕಿ ಯಾರೇ ಆಗಲಿ ಇಷ್ಟು ಮರ್ಯಾದೆಯನ್ನು ಹೊಂದದೆ ಇದ್ದುದು ಮಾತ್ರವಲ್ಲದೆ ಭಂಗಾರದ ಮೆಡಲನ್ನು ಪಡೆದವರಲ್ಲಿ ಮಿ॥ ಪಾಲ್ ಪೀಟರವರೇ ಮೊದಲನೆಯವರು ಮಿ॥ ಪಾಲ್ ಪೀಟರವರು ಇದೇ ರೀತಿ ನೇತಮಂಗಲದಲ್ಲಿಯೂ ಹೆಸರುವಾಸಿಯನ್ನು ಹೊಂದಬೇಕೆನ್ನುವುದೇ ನಮ್ಮಗಳ ಅಭಿಲಾಷೆಯಾಗಿದೆ

ಬಾತ್ಮಿದಾರ್

ಮೈಸೂರು ಸರ್ಕಾರಿ ಹುಕುಮುಗಳು.

ಸಂಸ್ಥಾನದಲ್ಲಿ ಕೈಗಾರಿಕೆಗೆ ಸಂಬಂಧಪಟ್ಟ ಕಾರ್ಯಗಳಿಗೆ ಪ್ರೋತ್ಸಾಹಕೊಡಬೇಕೆಂಬ ಉದ್ದೇಶದಿಂದ ಕೈಗಾರಿಕೆ ಮತ್ತು ವ್ಯಾಪಾರಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಏರ್ಪಾಡುಗಳನ್ನು ನಡಿಸುವದಕ್ಕಾಗಿ ಸರ್ಕಾರದವರು ಒಂದು ಇಲಾಖೆಯನ್ನು ಏರ್ಪಡಿಸಿ ಮಿ ಎ ಚಾಟರ್ಟನ್, ಸಿ ಐ ಇ ಯವರನ್ನು ಕೈಗಾರಿಕೆ ಮತ್ತು ವ್ಯಾಪಾರದ ಇಲಾಖೆಯ ಡೈರೆಕ್ಟರಾಗಿ ನೇಮಕಮಾಡಿ ಅವರು ಈ ಸಂಸ್ಥಾನದಲ್ಲಿ ಕೆಲಸಮಾಡುವ ವರೆಗೆ ಸದರಿ ಇಲಾಖೆಯ ಛಾರ್ಜನ್ನು ವಹಿಸತಕ್ಕದ್ದೆಂದು ಹುಕುಂ ಮಾಡಿರುತ್ತಾರೆ ಈ ಕೈಗಾರಿಕೆ ಮತ್ತು ವ್ಯಾಪಾರದ ಇಲಾಖೆಯ ಡೈರೆಕ್ಟರವರ ಮುಖ್ಯ ಕರ್ತವ್ಯಗಳು ಯಾವವೆಂದರೆ —

(1) ಕೈಗಾರಿಕೆಗಳನ್ನು ಪ್ರಾರಂಭಿಸುವುದರಲ್ಲಿಯೂ ಯಂತ್ರಗಳು, ಅಚ್ಚಿನ ಗಾಣಗಳು, ನೀರು ಹಾಯಿಸುವ ಮತ್ತು ನೀರನ್ನು ಎತ್ತುವ ಯಂತ್ರಗಳು, ಎಣ್ಣೆಯ ಬಲದಿಂದ ನಡಿಸುವ ಯಂತ್ರಗಳು, ಬತ್ತಕುಟ್ಟುವ ಯಂತ್ರ ವಗೈರೆಗಳನ್ನು ಹೊಸದಾಗಿ ಸ್ಥಾಪಿಸುವದೇ ಮೊದಲಾದ ಕೆಲಸಗಳಲ್ಲಿಯೂ ಖಾಸಗಿ ಜನಗಳಿಗೆ ತಿಳುವಳಿಕೆಯನ್ನು ಕೊಡುವುದು, ಸಾಲವನ್ನು ಕೊಡುವುದು ಅಥವಾ ಅವಶ್ಯಕವಾದ ಇತರ ವಿಧದಲ್ಲಿ ಅವರಿಗೆ ಸಹಾಯ ಮಾಡುವುದು (೨) ಕೈಗಾರಿಕೆ ಮತ್ತು ವ್ಯಾಪಾರ ಸಂಬಂಧವಾದ ಜಾಯಿಂಟ್ ಸ್ಟಾಕ್ ಕಂಪನಿಗಳನ್ನು ಪ್ರಾರಂಭಿಸಲು ಕುತೂಹಲವುಳ್ಳ ವರ್ತಕರಿಗೂ ಸಂಘಗಳವರಿಗೂ ಅಂದಾಜುಗಳನ್ನೂ, ವಿಧಾನಗಳನ್ನೂ, ಪ್ರಸಿದ್ಧ ಪತ್ರಿಕೆಗಳನ್ನೂ, ಸಂಘದ ನಿಬಂಧನೆಗಳನ್ನೂ ಬೇಕಾದ ಮುಸ್ಸಗೂ ಉಚಿತವಾಗಿ ಒದಗಿಸಿ ಕೊಡುವುದು (೩) ಸರ್ಕಾರದವರು ಇನ್ನು ಮುಂದೆ ಪ್ರಾರಂಭಿಸುವ ಆಲೆಯ ಯಂತ್ರಸಾಮಗ್ರಿಗಳು, ಮರವನ್ನು ಕಡಿಯುವ ತರಪೆಗಳು, ರೇಷ್ಮೆಯನ್ನು ನೂಲುವ ಯಂತ್ರಗಳು ಇವೇ ಮೊದಲಾದವುಗಳನ್ನು ಕೈಗಾರಿಯ ಕಾರ್ಯಗಳಿಗಾಗಿಯೂ, ಪ್ರಯಾರಿಗಾಗಿಯೂ ಸರ್ಕಾರದವರ ಖರ್ಚಿನಿಂದಾಗಲಿ ಖಾಸಗಿ ಜನಗಳ ಖರ್ಚಿನಿಂದಾಗಲಿ ಅಜಮಾಯಿಷಿಗಾಗಿ ಸ್ಥಾಪಿಸುವುದು (೪) ವ್ಯಾಪಾರ ವಾಣಿಜ್ಯಗಳ ಅಭಿವೃದ್ಧಿಯ ದಾರಿನಲ್ಲಿ ಇದರ ಕೆಳಗಡ ವಿಷಯಗಳನ್ನು ಸೇರಿಸಬಹುದು—ಸಂಸ್ಥಾನದಲ್ಲಿ ಎಲ್ಲಕ್ಕೂ ಮುಖ್ಯವಾದ ವ್ಯಾಪಾರ ಸ್ಥಳಗಳಿಗೂ ಸಂಬಂಧಪಡುವ ಕೈಗಾರಿಕೆ ಮತ್ತು ವ್ಯಾಪಾರ ವಿಷಯಕವಾದ ಕರಪಾಲಾ ಲೆಕ್ಕಪತ್ರಗಳನ್ನು ತಯಾರಿಸಿ ಇಟ್ಟುಕೊಂಡಿರುವುದು, ಕೈಗಾರಿಕೆಯ ವಿಷಯಗಳನ್ನು ವಿಚಾರಮಾಡಿ ಸಂಗ್ರಹಿಸುವುದು, ಕೈಗಾರಿಕೆಗೆ ಸಂಬಂಧಪಟ್ಟ ಒಂದು ಸೆಂಟ್ರಲ್ ಡಿಪೋವನ್ನು ಏರ್ಪಡಿಸುವುದು, ಕೈಗಾರಿಕೆಗೆ ಸಂಬಂಧಪಟ್ಟ ಯಂತ್ರಗಳೂ ವ್ಯಾಪಾರ ವಸ್ತುಗಳೂ ಇರುವ ಪ್ರದರ್ಶನ ಶಾಲೆಯನ್ನಿಡುವುದು ತಿಳುವಳಿಕೆಗಳನ್ನು ಕೊಡುವ ಬಗ್ಗೆ ಒಂದು ಆಫೀಸನ್ನು ಏರ್ಪಡಿಸುವುದು, ಮತ್ತು ಈ ಸಂಸ್ಥಾನದಲ್ಲಿ ಉತ್ಪತ್ತಿಯಾದ ಪದಾರ್ಥಗಳಿಗೆ ಗಿರಾಕಿ ದೊರೆಯುವ ವ್ಯಾಪಾರ ಸ್ಥಳಗಳನ್ನು ನಿರ್ಧರಿಸಿ ತಿಳಿದುಕೊಳ್ಳುವುದು

ತುಮಕೂರು ಡಿಸ್ಟ್ರಿಕ್ಟ್ ಉಪಾಧ್ಯಾಯ ಸಂಘ

ಪ್ರಾರಂಭೋತ್ಸವ

ಕಳೆದ 23 ನೇ ತಾ ಸಭೆ ಸೇರಬೇಕೆಂದು ಏರ್ಪಟ್ಟಿದ್ದ ಮೇರೆಗೆ ತುಮಕೂರು ಎ ವಿ ಸ್ಕೂಲಿನಲ್ಲಿ ಇಲ್ಲಿನ ಮತ್ತು ಗ್ರಾಮಾಂತರ ಪಾಠಶಾಲೆಗಳ ಉಪಾಧ್ಯಾಯರುಗಳು ಸುಮಾರು 40 ಜನದ ಮೇಲೆ ಹಾಜರಾದ್ದು ಈ ಸಂದರ್ಭದಲ್ಲಿ ಇಲ್ಲಿನ ಡೆಪ್ಯುಟಿ ಇನ್ಸ್ಪೆಕ್ಟರ್ ಮ॥ ಎಚ್ ಎನ್ ವೆಂಕಟರಾಮಯ್ಯನವರು ಅಗ್ರಾಸನವನ್ನು ವಹಿಸಲು ಅನನುಕೂಲವಾದುದರಿಂದ ಆ ಸ್ಥಳದ ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮ॥ ಟಿ ವಿಶ್ವೇಶ್ವರಯ್ಯನವರಿಗೆ ವಹಿಸಲ್ಪಟ್ಟಿತು ಇಲ್ಲಿನ ಎಂಟ್ರೆನ್ಸ್ ಗರ್ಲ್ಸ್ ಸ್ಕೂಲು ಇಂಗ್ಲಿಷ್ ಟೀಚರು ಮ॥ ಪಿ ಎನ್ ವೆಂಕಟರಾಯರು ಮೊಲ್ಲದ ಉದ್ದೇಶವು ನೆರವೇರಬೇಕಾದರೆ - ಉಪಾಧ್ಯಾಯರು ಒಂದು ಸೇರಬೇಕೆಂದು ಹೇಳಿ ಅದರ ಅವಶ್ಯಕತೆಯನ್ನು ಕುರಿತು ಬರೆದುತಂದ ಉಪನ್ಯಾಸವನ್ನು ಓದಿದರು ಅದು ಸಹಜವಾಗಿಯೂ ಎಲ್ಲರಿಗೂ ಮನಮುಟ್ಟುವ ಹಾಗೆ ಬೋಧಿಸಿದುದರಿಂದಲೂ, ಅದನ್ನೇ ಪ್ರತಿಪಾದಿಸಿ ಅಗ್ರಾಸನಾಧಿಪತಿಗಳೂ ಉದಾಹರಣೆಗಳನ್ನು ಕೊಟ್ಟುದರಿಂದಲೂ ಅಲ್ಲಿದ್ದ ಉಪಾಧ್ಯಾಯರುಗಳು ಅಂತಹ ಸಭೆಯ ಸ್ಥಾಪನೆಗೆ ಏಕಕಂಠದಿಂದ ಒಪ್ಪಿದರು ಆಗ ಸಭೆಯು ಸ್ಥಾಪಿಸಲ್ಪಟ್ಟು, ಎಲ್ಲರೂ ಸಂತೋಷಪಡುತ್ತಿರುವಾಗ ತುಮಕೂರು ಡಿಸ್ಟ್ರಿಕ್ಟ್ ಉಪಾಧ್ಯಾಯ ಸಂಘ" ಎನ್ನುವ ಹೆಸರನ್ನು ಇರಿಸಿತು ತರುವಾಯ ಸಂಘದ ಕಾರ್ಯ ನಡವಳಿಕೆಗೆ ತಕ್ಕ ಏರ್ಪಾಡುಗಳಾದವು ಇದಕ್ಕೆ ಉಪಾಧ್ಯಾಯರಲ್ಲದೆ ವಿದ್ಯಾಭಿಮಾನಿಗಳಾದ ಯಾರೇ ಆಗಲಿ ಸಾಮಾಜಿಕರಾಗಬಹುದು ಸಾಮಾಜಿಕರು ಮಾಸಿಕವಾಗಿ ಒಂದು ಆಣೆ ಚಂದಾ ಕೊಡಬೇಕು ಯಾರು ಬೇಕಾದರೂ ಪುಸ್ತಕ ಹಣ ಮೊದಲಾದ ಯಾವ ರೂಪದಲ್ಲಾದರೂ ಸಹಾಯಮಾಡಬಹುದು ಸಭೆಯು ತಿಂಗಳಿಗೊಂದಾವೃತ್ತಿ ಸೇರಬೇಕು ಆಗ ಬೋಧನಾ ಕ್ರಮದ ಅತ್ಯುತ್ತಮವಾದ ಪದ್ಧತಿಗಳನ್ನು ಕುರಿತು ಚರ್ಚಿಸಲಾಗುವುದು ಮತ್ತು ಆಗಾಗ್ಗೆ ಅಚ್ಚಾಗುತ್ತಿರುವ ಪುಸ್ತಕಗಳನ್ನು ಗ್ರಂಥಕರ್ತರು ಕಳುಹಿದರೆ ಅವನ್ನು ಸಮಗ್ರವಾಗಿ ಓದಿ ಅವುಗಳ ವಿಷಯವಾಗಿ ಅಭಿಪ್ರಾಯ ಕೊಡುವುದು ಎಂದು ನಿರ್ಧರಿಸಲ್ಪಟ್ಟಿತು ಇದಕ್ಕೆ ಅನುಸಾರವಾಗಿ ಮಾರ್ಚಿ ತಾ 23 ನೇ ಭಾನುವಾರ ಸಾಮಾಜಿಕರು ಸಭೆ ಸೇರುತ್ತಾರೆ ಆಗ ಕನ್ನಡ 1 ನೇ ತರಗತಿಯ ಬೋಧನೆಯ ಪಾಠದ ವಿಷಯವಾಗಿ ಎ ವಿ ಸ್ಕೂಲು ಅ॥ ಮಾ॥ ಮ॥ ಎಚ್ ಮಾಧವರಾಯರೂ, ಗಣಿತದ ಮೊದಲು ಭಾಗದಲ್ಲಿರುವ ಹೊಸ ಹೊಸ ಕ್ರಮಗಳ ವಿಷಯವಲ್ಲಿ ಮ॥ ಪಿ ಎನ್ ವೆಂಕಟರಾಯರೂ, ಕೇವಲ ನವೀನವಾದ ಡಾಕ್ಟರ್ ಮಾಂಟಿಸೋರಿ ಬೋಧನಾ ಕ್ರಮದ ವಿಷಯವಾಗಿ ಮ॥ ಟಿ ವಿಶ್ವೇಶ್ವರಯ್ಯನವರೂ ಉಪನ್ಯಾಸಿಸುತ್ತಾರೆ

ಪಿ ಎನ್ ವೆಂಕಟರಾವ್, ಅ॥ ಸೆಕ್ರೆಟರಿ

ಕಸುಬುದಾರಿಯನ್ನು ಅಭಿವೃದ್ಧಿಮಾಡುವುದು.

ಐಶ್ವರ್ಯವಂತರ ಸಹಾಯ ಬೇಕು

ನಮ್ಮನ್ನು ದಿವಾರಾತ್ರಿಯಲ್ಲೂ ಸಂರಕ್ಷಣೆಮಾಡುವ ಜಗದೀಶ್ವರನು ಯಾತಕ್ಕಾಗಿ ನಮ್ಮಗಳಿಗೆ ಐಶ್ವರ್ಯವನ್ನು ಕೊಟ್ಟು ಇದನ್ನು ಹ್ಯಾಗೆ ವೃದ್ಧಿಪಡಿಸಿ ಇದರ ಫಲವನ್ನು ಹ್ಯಾಗೆ ಅನುಭವಿಸಬೇಕೆಂಬ ವಿಷಯವನ್ನು ಪಾಶ್ಚಿಮಾತ್ಯ ದೇಶದವರು ಚೆನ್ನಾಗಿ ಅರಿತವರಾಗಿ ಅದರಂತೆಯೇ ಆಚರಣೆಗೆ ತಂದಿರುವುದು ಸಕಲರಿಗೂ ವಿದಿತವಾಗಿಯೇ ಇದೆ ಅವರು ಆರ್ಜನೆಮಾಡಿದ ದ್ರವ್ಯವನ್ನು ದುಂದುಮಾಡುವುದಿಲ್ಲ ದುರ್ವ್ಯಾಪಾರಗಳಿಗೆ ಖರ್ಚುಮಾಡುವುದಿಲ್ಲ ಕೋರ್ಟಿಗೆ ಹೋಗಿ ಅನ್ಯಾಯವಾಗಿ ಖರ್ಚುಮಾಡುವುದಿಲ್ಲ ಒಬ್ಬರಿಗೊಬ್ಬರು ಪರಸ್ಪರ ಮೈತ್ರಿಯನ್ನು ಇಟ್ಟುಕೊಂಡು "ಪರೋಪಕಾರಾರ್ಥಮಿದಂ ಶರೀರಂ" ಎಂಬ ಶಾಸ್ತ್ರವಚನ ರೀತ್ಯಾ ಪರರಿಗಾಗಿಯೇ ಒಳ್ಳೇ ಕೆಲಸಗಳಲ್ಲಿ ಬೀಜ ಹಾಕಿ ಅದರಿಂದ ಹೆಚ್ಚಿದ ಮೂಲಧನದಲ್ಲಿಯೇ ಬಡವರಾದ ಜನಗಳಿಗೆ ಜೀವನೋಪಾಯವನ್ನುಂಟುಮಾಡಿ ತಾವು ಖರ್ಚುಮಾಡಿದ ಮೂಲಧನವನ್ನು ಹಿಂದಿರುಗಿಸಿಕೊಳ್ಳುತ್ತಾ ಪುನಃಪುನಃ ಕುಶಲವಿದ್ಯೆಗಳಿಗೂ ಕೃಷಿ ವಾಣಿಜ್ಯಾದಿ ಕಾರ್ಯಗಳಿಗೂ ವಿನಿಯೋಗಮಾಡಿ ಪುನಃ ಶೇಖರಿಸುತ್ತಾ ಬರುವರು ಇದಲ್ಲವೇ ದೇವರು ಐಶ್ವರ್ಯ ಕೊಟ್ಟದ್ದಕ್ಕೆ ಸಾರ್ಥಕ - ಇವರಿಂದ ಎಷ್ಟು ಪ್ರಾಣಿಗಳಿಗೆ ಜೀವನವೂ, ಸುಲಭ ಬೆಲೆಗೆ ಪದಾರ್ಥಗಳು ಸಿಕ್ಕುವುದೂ ಆದದ್ದಾಗಿ ಅವರು ಪರೋಪಕಾರಿಗಳಾಗಿ ಇರುತ್ತಾರೆ - ನಮ್ಮ ದೇಶದ ಅಧುನಿಕ ಮಹಾಶಯರು ಅದರ ಮೌಲ್ಯವನ್ನು ಇಟ್ಟುಕೊಂಡು ಪರಸ್ಪರ ಮೈತ್ರಿಯನ್ನು ಹೊಂದಿಕೊಂಡು ತಾವು ಗಳಿಸಿ ಇರುವ ದ್ರವ್ಯವನ್ನು ಉತ್ತಮ ಗತಿಗಳಾದ ಕೃಷಿ, ವಾಣಿಜ್ಯ, ಕೈಗಾರಿಕೆ ಮುಂತಾದ ಕೆಲಸಗಳಿಗೆ ಮೂಲಧನವಾಗಿ ಕೊಟ್ಟು ಪಾಶ್ಚಿಮಾತ್ಯ ದೇಶದವರ ಆಚರಣೆಯನ್ನೇ ಕೈಕೊಂಡರೆ ನಾವುಗಳೂ ನಮ್ಮಗಳನ್ನು ನಂಬಿದ ಬಡವರುಗಳೂ ಕೂಡ ಐಶ್ವರ್ಯವಂತರಾಗಿ ಪರಸ್ಪರ ಅನುರಾಗವುಳ್ಳವರಾಗಿ ಆಗುತ್ತಾರೆ ಈ ಬಗೆಯು ನಮ್ಮ ಮಹಾರಾಜಾ ಸರ್ಕಾರದವರು ಕೋಆಪರೇಟಿವ್ ಸೊಸೈಟಿಗಳ ಮೂಲಕ ಆಚರಣೆಗೆ ತರಲು ಮೇಲ್ಪಂಕ್ತಿಯನ್ನು ಹಾಕಿಕೊಟ್ಟು ಇರುತ್ತಾರೆ ಇದಕ್ಕಿಂತಲೂ ಸಹಾಯ ಮತ್ತು ಪರೋಪಕಾರವು ಮತ್ತೊಂದು ಇರುವುದೇ - ಇಂಥಾ ಸುಸಮಯದಲ್ಲಿಯೂ ನಮ್ಮ ದೇಶದ ಅಧುನಿಕ ಮಹಾಶಯರು ತಮ್ಮ ದ್ರವ್ಯವನ್ನು ಉತ್ತಮ ಸ್ಥಿತಿಗಳಲ್ಲಿ ನಡೆದುಬರುತ್ತಲಿರುವ ಸಂಘಗಳಿಗೆ ಕೊಂಚ ಭಾಗವಾಗಿ ಸೇರಿಕೊಟ್ಟು ಬಂಡವಾಳವನ್ನು ಹೆಚ್ಚಿಸುತ್ತಾ ಬಂದಲ್ಲಿ ಅದು ಕೃಷಿ, ಕೈಗಾರಿಕೆ, ವಾಣಿಜ್ಯವೇ ಮೊದಲಾದ ಕೆಲಸಗಳು ಹೆಚ್ಚಿ, ತನ್ಮೂಲಕ ದೇಶವು ಅಭಿವೃದ್ಧಿಗೆ ಬರುತ್ತದೆ ಇಂಥಾ ಸಂಘಗಳ ಮೂಲಧನಗಳು ಹೆಚ್ಚಿದ ಹಾಗೆಲ್ಲಾ ನಮ್ಮ ದೇಶಕ್ಕೆ ಆಗಬೇಕಾದ ರೈಲು ಮುಂತಾದ ಸೌಕರ್ಯಗಳನ್ನು ನಾವುಗಳೇ ಈ ಸಂಘದ ಮುಖೇನ ಹೆಚ್ಚಿಸಿಕೊಳ್ಳಬಹುದು ಪ್ರತಿ ಒಂದು ಕೆಲಸವನ್ನೂ ಮಾಡಬೇಕಾಗಿದ್ದರೂ ನಮ್ಮ ಸರ್ಕಾರದಿಂದ ಮೂಲಧನವನ್ನು ಒದಗಿಸಿಕೊಂಡು ತತ್ಕಾಲದಲ್ಲಿ ಕೆಲಸಮಾಡಬೇಕಾಗಿದೆ ನಮ್ಮ ಸರ್ಕಾರದವರು ಯಾವ ಯಾವ ಕೆಲಸಗಳಿಗೆ ಎಷ್ಟೆಷ್ಟು ಮೊಬಲಗನ್ನು ಒದಗಿಸಿ ಕೊಟ್ಟಿರುತ್ತಾರೆ ಇನ್ನೆಷ್ಟು ಪ್ರಯೋಜಕವಾದ ಕೆಲಸಗಳನ್ನು ಮಾಡುತ್ತಾರೆ ಆದುದರಿಂದ ಅವರ ಜೊತೆಗೆ ಅಧುನಿಕ ಮಹಾಶಯರು ಸಂಯುಕ್ತವಾಗಿ ಪರೋಪಕಾರ ಕೆಲಸಗಳಿಗೆ ಸಹಾಯವಾಗಿ ಅವರೂ ಈ ಯಶಸ್ಸಿಗೆ ಭಾಗಿಗಳಾಗುತ್ತಾರೆಂದು ನಂಬಿ ಇದ್ದೇನೆ ಈ ಪರಸ್ಪರ ಸಹಾಯ ಸಂಘವು ಜನರನ್ನು ದುರ್ವ್ಯಾಪಾರಕ್ಕೆ ಬಿಡದು, ಹಣ ಮಿತವ್ಯಯ ಮಾಡಿಸದು, ಪರಸ್ಪರ ಮೈತ್ರಿಯನ್ನು ಹುಟ್ಟಿಸುವುದು, ಅಪಾರ ಅಸಾಧ್ಯಗಳನ್ನು ತಪ್ಪಿಸುವುದು ಸಣ್ಣ ಸಣ್ಣ ವ್ಯಾಜ್ಯಗಳನ್ನು ಸಂಘದಲ್ಲಿಯೇ ಫೈಸಲ್ ಮಾಡುವುದು ಇದು ಕ್ರಮಕ್ರಮೇಣ ಸಕಲ ಕೆಲಸಗಳಿಗೂ ಮಾತೃಸಂಸ್ಥೆಯೇ ನಿಂತು ಕಾಪಾಡುವುದು ಆದಕಾರಣ ದೇಶಬಾಂಧವರು ಕೊಂಚವೂ ಆಲಸ್ಯಮಾಡದೆ ಪರೋಪಕಾರಕ್ಕೆ ಬುದ್ಧಿಯನ್ನು ಎಳಸಿ ಬಡತನವನ್ನು ನೀಗಿಸಲಿ

ಬಡವರ ಹಿತಚಿಂತಕ

ಅಪಾಯಗಳೂ ಪರಿಹಾರಗಳೂ

ಡಾ॥ ... ಉಪನ್ಯಾಸವು

ಒನೆಕಲ್ಲಿನ ... ಕನ್ನಡ ಸ್ಕೂಲ ಹಾಲಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾದ ಡಾಕ್ಟರ್ ಮುತ್ತುಸಾಮಿ ದಾಸ್ರವರು ಫೆಬ್ರವರಿ ತಾ 23 ರಲ್ಲಿ ಮನುಷ್ಯರಿಗೆ ದೇಹದಲ್ಲಿ ಉಂಟಾಗುವ ಅಪಾಯಗಳನ್ನು ಅವರವರೇ ಪರಿಹಾರಮಾಡಿಕೊಳ್ಳಲು ಕೆಲವು ಕಾರಣಗಳನ್ನು ತಿಳಿಸಲು ಉಪನ್ಯಾಸ ಮಾಡಿದರು ಅದರ ಸಾರಾಂಶವೇನೆಂದರೆ—

ಪೂರ್ವಕಾಲದ ಗ್ರೀಕರಲ್ಲಿ ಇದ್ದ ಉದ್ದೇಶವೇನೆಂದರೆ, ಅವರು ಆರೋಗ್ಯವೇ ಎಲ್ಲಾ ಆಸ್ತಿಗಿಂತಲೂ ಶ್ರೇಷ್ಠವಾದದ್ದೆಂತಲೂ, ಅಂಥಾ ಆರೋಗ್ಯವನ್ನು ಕಾಪಾಡಿಕೊಳ್ಳುವುದೇ ಮನುಷ್ಯರಿಗೆ ಅತ್ಯವಶ್ಯಕವೆಂತಲೂ ತಿಳಿದಿದ್ದರು ಹಾಗೆಯೇ ಈ ನಮ್ಮ ಶರೀರವು ರುಂಡ, ಮುಂಡ, ಕೈಕಾಲುಗಳ ವಿಭಾಗ ಉಳ್ಳದ್ದಾಗಿದೆ ಎಂಬದಾಗಿ ಸೂಚಿಸಿ, ರಕ್ತವು ದೇಹದಲ್ಲಿ ಯಾವ ಸ್ಥಾನಾಗಿ ಎಲ್ಲಾ ಕಡೆಯಲ್ಲಿಯೂ ಸುತ್ತುತ್ತಾ ಮೊದಲು ಹೃದಯದಿಂದ ಹೋಗುವ ಶುದ್ಧ ರಕ್ತನಾಳಗಳ ಮಾರ್ಗವಾಗಿ ಹರಿದು ಶ್ವಾಸಕೋಶನಾಳಗಳಲ್ಲಿ ಪ್ರವೇಶಿಸಿ ಮಲಿನ ರಕ್ತನಾಳಗಳನ್ನು ಮೊಕ್ಕು ಶರೀರವೆಲ್ಲಾ ಸಂಚರಿಸಿ ಪುನಃ ಹೃದಯಕ್ಕೆ ಬಂದು ಸೇರುತ್ತದೆ ಎಂಬುವದನ್ನು ವಿವರಿಸಿದರು — ಉಸ್ವಾಸ, ನಿಶ್ವಾಸಗಳಲ್ಲಿ ಕೆಲವು ದೃಷ್ಟಾಂತರಗಳನ್ನು ವಿಸ್ತರಿಸಿ ಹೇಳಿದ ನಂತರ ಆಹಾರವು ಜೀರ್ಣವಾಗಿ ಶರೀರಕ್ಕೆ ಸೇರುವ ಕ್ರಮವನ್ನು ಕುರಿತು ಸಲ್ಪ ಹೊತ್ತು ವಿವರಿಸಿ ಹೇಳಿದರು ಒಬ್ಬ ಮನುಷ್ಯನು ಆಕಸ್ಮಾತ್ತಾಗಿ ಕೆರೆಯಲ್ಲಿ ಬೀಳುತ್ತಾನೆ ಅವನು ಬಿದ್ದನಂತರ ನೀರನ್ನು ... ಕುಡಿದಿರುತ್ತಾನೆ ಅವನಿಗೆ ಪ್ರಾಣಹೋಗದೆ ಇರುವ ಹಾಗೆ ಇದ್ದಲ್ಲಿ ಅವನು ಕುಡಿದಿರುವ ನೀರನ್ನು ಈಚೆಗೆ ತೆಗೆಯಲು ಉಪಾಯವೇನೆಂದರೆ, ನೀರನ್ನು ಕುಡಿದ ಮನುಷ್ಯನನ್ನು ಅಂಗತವಾಗಿ ಮಲಗಿಸಿ ಹೊಟ್ಟೆಯನ್ನು ... ಹೊತ್ತು ಒತ್ತಿದರೆ ಆ ನೀರು ಈಚೆಗೆ ಎಂದು ಆ ಮನುಷ್ಯರಿಗೆ ಒಳ್ಳೇದನ್ನು ಮಾಡುತ್ತದೆ ಎಂಬುದಲ್ಲೂ, ಅಲ್ಲದೆ ಈ ಪ್ರಕಾರವಾಗಿಯೇ ಇನ್ನೊಂದು ಕಾರಣವನ್ನೂ ನಹಾ ದೃಷ್ಟಾಂತದಿಂದ ಸೂಚಿಸಿದರು ಒಬ್ಬ ಮನುಷ್ಯನು ನೇಣು ಹಾಕಿಕೊಂಡಿದ್ದರೆ ಅಂಥವನನ್ನು ನೋಡಿ ಹೊರಟು ಹೋಗದೆ ಅವನನ್ನು ಮೇಲಕ್ಕೆ ಎತ್ತಿ ನೇಣುಹಾಕಿಕೊಂಡಿರುವ ಹಗ್ಗದ ಕುಣಿಕೆಯನ್ನು ಸಡಿಲಿಸಿ ಗಂಟಿಗೆ ಸರಿಯಾಗಿ ಹಗ್ಗವನ್ನು ಕತ್ತರಿಸಿದರೆ ಒಳ್ಳೇದು ಎಂದು ಸೂಚಿಸಿದರು ಒಬ್ಬ ಮನುಷ್ಯನಿಗೆ ಕಾರಣಾಂತರದಿಂದ ಶರೀರದಲ್ಲಿರುವ ಮೂಳೆಗಳ ಪೈಕಿ ಮುಖ್ಯವಾದ ಮೂಳೆಗೆ ಬಲವಾಗಿ ಏಟುಬಿದ್ದು ಮೂಳೆಯು ಕತ್ತರಿಸಿ ಹೋದದ್ದೇ ಆದರೆ ಕತ್ತರಿಸಿರುವ ಮೂಳೆಯನ್ನು ಹಾಗೆಯೇ ಬಿಟ್ಟುಬಿಟ್ಟರೆ ಆ ಭಾಗದಲ್ಲಿರುವ ರಕ್ತವೆಲ್ಲ ಸೋರಿಹೋಗಿ ಜಾಗ್ರತೆಯಲ್ಲಿ ಪ್ರಾಣಹೋಗುತ್ತೆ ಆದ್ದರಿಂದ ಪ್ರಾಣಕ್ಕೆ ಅಪಾಯವಿಲ್ಲದ ಹಾಗೆ ಮಾಡಬೇಕಾದರೆ ಕತ್ತರಿಸಿಹೋದ ಮೂಳೆಯ ಮೇಲುಗಡೆ ಧೋತ್ರದಿಂದಲಾಗಲಿ, ಬಟ್ಟೆಯಿಂದಲಾಗಲಿ ಒಂದು ಕಟ್ಟನ್ನು ಬಿಗಿಯಾಗಿ ಕಟ್ಟಿದ್ದರೆ ಅದರಿಂದ ಒಳ್ಳೇದಾಗುತ್ತೆ ಎಂದು ಹೇಳಿದರು -ಒಂದು ಮನೆಯು ಬೆಂಕಿ ಬಿದ್ದು ಸುಟ್ಟುಹೋಗುತ್ತಾ ಇದ್ದರೆ ಆ ಮನೆಯಲ್ಲಿರುವವರನ್ನು ಕಾಪಾಡಬೇಕೆಂದು ಇಷ್ಟಪಡುವ ಮನುಷ್ಯರು ಸುಡುತ್ತಿರುವ ಬೆಂಕಿಯ ಹೊಗೆಗೂ ಇತರ ಅಪಾಯಗಳಿಗೂ ಸಿಕ್ಕದೆ ಇರುವ ಹಾಗೆ ಮಲಗಿಕೊಂಡು ಹೊಟ್ಟೆಯಲ್ಲಿಯೇ ದೇಕಿಕೊಂಡು ಹೋಗಿ ಅವರನ್ನು ಕಾಪಾಡಿದ್ದೇ ಆದರೆ ಒಳ್ಳೇದಾಗುತ್ತೆ —ಅಲ್ಲದೆ ಒಂದು ಮಗುವಿಗೆ ಬೆಂಕಿ ಬಿದ್ದು ಸುಡುತ್ತಿರುವಾಗ ಉರಿಯನ್ನು ನಿಲ್ಲಿಸಬೇಕಾದರೆ ಹೊರಗಿನ ವಾಯುವು ಆ ಮಗುವಿಗೆ ಸೋಕದೆ ಇರುವ ಹಾಗೆ ಆ ಮಗುವಿಗೆ ಕಂಬಳಿಯಿಂದ ತುಂಬಾ ಮುಸುಕು ಹಾಕಬೇಕು ಈ ರೀತಿ ಮಾಡಿದರೆ ಉರಿಯುವದು ನಿಂತುಹೋಗಿ ಮಗುವಿಗೆ ಒಳ್ಳೇದು ಆಗುತ್ತೆ ಎಂದು ಸೂಚಿಸಿದರು —ಮೂರ್ಛೆರೋಗ, ಬಹಳ ಮದ್ಯಪಾನ, ಜ್ಞಾನತಪ್ಪಿರುವದು, ವಿದ್ಯುಚ್ಛಕ್ತಿಯ ಸ್ತಂಭವನ್ನು ಹಿಡಿದುಕೊಂಡು ಮತಪಟ್ಟವರು ಇವರುಗಳನ್ನು ರಕ್ಷಿಸುವ ರೀತಿಯನ್ನೂ ಸೂಚಿಸಿ, ಚೇಳು ಜಂತುಗಳ ಕಡಿತದಿಂದುಂಟಾಗುವ ತೊಂದರೆಗೆ ನಿವಾರಣವನ್ನೂ ಮೃತ್ಯುವನ್ನೂ 'ಚರಿಪ ಉದ್ದವನ್ನು ಕ... ಸ್ಥಳಕ್ಕೆ ಹಚ್ಚಿದರೆ ಗುಣವಾಗುತ್ತೆ ಎಂಬುವೇ ಮೊದಲಾದ ಅನೇಕ ವಿಷಯಗಳನ್ನು ದೃಷ್ಟಾಂತರಗಳಿಂದ ಸೂಚಿಸಿದರು

ಇಲ್ಲಿ ಪ್ಲೇಗು ಗಲಾಟೆ ನಿವಾರಣೆ ಆಗಲಿಲ್ಲ ಡಾಕ್ಟರ್ ಮುತ್ತುಸಾಮಿ ದಾಸ್ರವರು ಕೆಲವರಿಗೆ ಇನಾಕ್ಯುಲೇಷನ್ ಮಾಡಿದರು ನಂತರ ಈ ಊರಿಗೆ ಸಮೀಪದಲ್ಲಿರುವ ಕರ್ಪೂರು ಗ್ರಾಮದಲ್ಲಿ ಸುಮಾರು 40 ಜನಕ್ಕೆ ಇನಾಕುಲೇಷನ್ ಮಾಡಿರುತ್ತಾರೆ

ಡಿ ಪಿ

ಬಾತ್ಮಿದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ಪತ್ರಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲಿ ಬರೆಯಕೂಡದು ಇಂಥ ಪತ್ರಗಳಿಗೆ ನಾವು ಜಾಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಿಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಎಸ್ ಎಚ್ ಪಿ , ಉಳವಿ , ನಿಸ್ಪಕ್ಷಪಾತಿ, ದೇವನಹಳ್ಳಿ ಎ ರಿಟೈರ್ಡ್ ಆಫೀಸರ್ —ಇ ಬಾತ್ಮಿಗಳನ್ನು ಪ್ರಕಟಿಸುವುದರಲ್ಲಿ ಹಿತವೇನೂ ಕಾಣುದಿಲ್ಲ

ತುಮಕೂರು ತಾಲ್ಲೂಕ್ ಕಚೇರಿಯಲ್ಲಿ ಅರ್ಜಿದಾರರಿಗೆ ಕಷ್ಟವಿದೆ ಎಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ ಅವರು ಈ ವಿಚಾರವನ್ನು ಹೆಚ್ಚು ಸಮೀಪದಲ್ಲಿರುವ ಡೆಪ್ಯುಟಿ ಕಮಿಷನರಿಗೆ ಅರ್ಜಿ ಬರೆದುಕೊಂಡರೂ ಅಥವಾ ಮೌಖಿಕವಾಗಿ ಅರಿಕೆ ಮಾಡಿಕೊಂಡರೂ ಅವರು ತಮ್ಮಿಂದ ಕೃತಾರ್ಥರಾಗುತ್ತಾರೆನ್ನುವುದಕ್ಕೆ ಸಂಶಯವಿಲ್ಲ

ಹುಳಿಯಾರು, ಚಿಕ್ಕನಾಯಕನಹಳ್ಳಿ, ಅಪ್ಪೂರು, ಹೊಸದುರ್ಗ, ತರೀಕೆರೆ, ಅಜ್ಜಂಪುರ, ಈ ಮೊದಲಾದ ಸ್ಥಳಗಳಿಂದ ಜಾಗ ಮುಂತಾದ ಸರಕನ್ನು ತೆಗೆದುಕೊಂಡು ತಿಂತರಣಿಟ್ಟೆ ಜಾತ್ರೆಗೆ ಹೋಗಿದ್ದ ವರ್ತಕರು ಅಲ್ಲಿನ ದೇವಸ್ಥಾನದ ಬಳಿ ಅಂಗಡಿ ಇಟ್ಟುಕೊಂಡಿದ್ದಾಗ ಸ್ಥಳಾಧಿಕಾರಿಗಳು ಎರಡು ರೂಪಾಯಿ ವರ್ತನೆ ... ಳವಾಡಿಗೆ ವಸೂಲ್ಮಾಡಿದರೆಂದೂ, ಅವರಿಗೆ ಇನ್ನೂ ಕೆಲವು ನಷ್ಟಗಳಾದುವೆಂದೂ ಒಬ್ಬ ಬಾತ್ಮಿದಾರರು ಬರೆದಿದ್ದಾರೆ ಈ ಬಾತ್ಮಿದಾರರು ಈ

ವನ್ನು ವಿವರವಾಗಿ ಬರೆದು ಮೊದಲು ಡೆಪ್ಯುಟಿ ಕಮೀಷನರಿಂಗೆ ತಿಳಿಸಬೇಕು, ಅವರು ತನಿಖೆಯಿಂದ ಕ್ರಮಪಡಿಸದಿದ್ದರೆ ಬಳಿಕ ನಾವು ಅದನ್ನು ಪ್ರಕಟಿಸುವುದೆಂದೂ ನಿಶ್ಚಯಿಸುತ್ತೇವೆ.

—ಎಡಿ.]

ಕರೆಸ್ಪಾಂಡೆನ್ಸ್.

ಪರೀಕ್ಷಾ ವಿದ್ಯಾರ್ಥಿಗಳಿಗೆ ಭೋಜನ.

ಸ್ವಾಮಿ,

ಬರುವ ಏಪ್ರಿಲ್ ಎರಡನೇ ವಾರದಲ್ಲಿ ನಡೆಯುವ ಲೋವರ್ ಸೆಕೆಂಡರಿ ಪರೀಕ್ಷೆಗೆ ಚಿತ್ರದುರ್ಗಕ್ಕೆ ಗ್ರಾಮಾಂತರಗಳಿಂದ ಬರತಕ್ಕ ಪರೀಕ್ಷೆಯ ಮತ್ತು ಊಟವಸತಿಗೆ ಸಮಸ್ತ ವಿದ್ಯಾರ್ಥಿಗಳಿಗೂ ಚಿತ್ರದುರ್ಗದ ಸಾಹುಕಾರ್ ಮೇಗಳಮನೆ ಕೊಡಪ್ಪನವರು ಉದಾರವಾಗಿ ಮಾಮೂಲಿನಂತೆ ಆರು ಭೋಜನಾದಿಗಳಿಗೆ ಏರ್ಪಾಡು ಮಾಡಿದಾರೆ. ಬರತಕ್ಕ ವಿದ್ಯಾರ್ಥಿಗಳೂ, ಉಪಾಧ್ಯಾಯರು ಕ್ಲಾರಕರೂ ಒಂದು ವಾರ ಮುಂಚಿತವಾಗಿ ತಿಳಿಸಬೇಕೆಂದು ಕೋರಿದೆ.

ನಾಟಿ ಹಾಲಪ್ಪ, ಚಿತ್ರದುರ್ಗ

ಆಕ್ಷೇಪಣೆಗೆ ಜವಾಬು.

ಸ್ವಾಮಿ,

ಫೆಬ್ರವರಿ ತಾ 12 ನೇ ಗುರುವಾರದ ಪತ್ರಿಕೆಯಲ್ಲಿ ಪಾವಗಡ ತಾಲ್ಲೂಕು ಕ್ಷಾಮವು ತಲದೋರಿರುವುದೆಂದೂ, ನಾಗಲ್ಮಡಿಕೆ ಪ್ರಾಂತ್ಯ ಕಾಲರಾ ಪ್ರಾರಂಭವಾಗಿದೆ ಎಂದೂ ಎರಡು ಅಂಶಗಳು ಪ್ರಕಟಿಸಲ್ಪಟ್ಟಿತ್ತು. ಅದಕ್ಕೆ ವರ್ತಮಾನದಾರರು ಪಾವಗಡ ತಾ. 19 ನೇ ಗುರುವಾರದ ಪತ್ರಿಕೆಯಲ್ಲಿ ನನ್ನ ಆಕ್ಷೇಪಿಸಿರುವರು. ಈ ವರ್ತಮಾನದಾರರು ಕ್ಷಾಮದ ವಿಷಯವಂತರದ ವಿಷಯದಲ್ಲಿ ಒಪ್ಪಿಕೊಂಡು, ಪುನಹ ಇಲ್ಲವೆಂದು ಹೇಳುತ್ತಾರೆ. ಈ ಊರ ನಾಗಲ್ಮಡಿಕೆಯಲಿ ಕಾಲರಾ ಪ್ರಾರಂಭವಾಗಿದೆ ಎಂದು ಪ್ರಕಟಿಸಿ ಹೊರತು ಇನ್ನೇನೂ ಇಲ್ಲ. ಆ ಪುರವಾಸಿಗಳಲ್ಲಿ ಕೆಲವರು ಹೊಟ್ಟೆ ನೋವು ಬೇನೆಯನ್ನು ಅಂದುದರಿಂದ ಕಾಲರಾ ಬಂತೆಂದು ಹೇಳಿದೆ. ಇದ ರೀತಿ ಮಾತ್ರ ಆಯ್ತು ಎಂದು ಬರೆದಿದಾರೆ. ಒಂದಾದರೇನು, ಎರಡಾದರೇನು ಪ್ರಾರಂಭವಾಯಿತೆನ್ನುವುದರಲ್ಲಿ ಏನು ದೋಷವಿದೆಯೋ ಗೊತ್ತಿಲ್ಲ. ನಾಗಲ್ಮಡಿಕೆಯಲ್ಲಿ ಕೆರೆ ತುಂಬಿರುವುದೇನೋ ನಿಜ. ಈ ಪಾವಗಡದ ಸುತ್ತಲ ಕೆರೆ ಕುಂಟೆಗಳು ತುಂಬಿರುತ್ತವೋ ಇಲ್ಲವೋ ಆ ವರ್ತಮಾನದಾರರೇ ಯೋಚನೆ ಮಾಡಬಹುದು. ಕೆರೆ ಕುಂಟೆಗಳು ತುಂಬಿಲ್ಲವೆಂದು ನಾನು ಹೇಳಿಲ್ಲ. ಹೀಗೆ ಇಲ್ಲದ ಇರುವುದನ್ನು ಆರೋಪಣೆ ಮಾಡಿರುವುದು ಸರಿಯಲ್ಲ. ಹೀಗೆ ಯೋಚನೆ ದೋಷಕಯಿಂದ ಪ್ರಕಟಿಸಿದ್ದು ಬಾಧಕವಾಗಿದೆ.

ಸತ್ಯವಾದಿ.

ಹುಣಸೂರಿನಲ್ಲಿ ಕುಡಿಯುವ ನೀರು

ಸ್ವಾಮಿ,

ಈ ಕೆಲವು ದಿವಸಗಳಿಂದ ಈ ಟೌನ್‌ನಲ್ಲಿ ಕಾಲರಾ ಪ್ರಾರಂಭವಾಗಿ ಕೆಲವು ಮರಣಗಳು ನಡೆಯುತ್ತಾ ಇವೆ. ಈ ರೋಗವು ಸಾಮಾನ್ಯವಾಗಿ ನೀರಿನಿಂದ ಹುಟ್ಟತಕ್ಕದ್ದು. ಇಲ್ಲಿಯ ನೀರು ತುಂಬಾ ಕಶ್ಮಲವಾಗಿರುತ್ತದೆ. ಹೊಳೆಯಲ್ಲಿ ನೀರು ತುಂಬಾ ಕಮ್ಮಿ. ಇದರಲ್ಲಿ ಕೆಲಸ ಮಾಡುವವರು ಕಂಬಳಿಯನ್ನು ತೊಳೆಯುತ್ತಾರೆ. ಎಮ್ಮೆಗಳನ್ನು ಹೊಳೆಗೆ ಮಧ್ಯಾಹ್ನದಲ್ಲಿ ಹೊಡೆಯುತ್ತಾರೆ. ಜಾನುವಾರುಗಳನ್ನು ತೊಳೆಯುತ್ತಾರೆ. ಜನರು ಬಟ್ಟೆಬರೆಯನ್ನು ಒಗೆಯುತ್ತಾರೆ. ಪಾತ್ರೆಗಳನ್ನು ತೊಳೆಯುತ್ತಾರೆ. ಮೀನು ಹಿಡಿಯುವವರು ಮೀನು ಹಿಡಿಯುತ್ತಾರೆ. ಹೊಳೆಯಲ್ಲಿ ನೀರು ಹರಿಯುವುದು ಇಲ್ಲ. ಇಂತಾ ಕಶ್ಮಲವಾದ ನೀರನ್ನು ಕುಡಿದರೆ ಹ್ಯಾಗೆ ರೋಗ ಬಾರದೆ ಇದ್ದೀತು? ಇನ್ನು ರಿಜರ್ವಾಯರ್ ನೋಡಿದರೆ ಇನ್ನೂ ಶೋಚನೀಯವಾಗಿದೆ. ನೀರು ತುಂಬಾ ಕಶ್ಮಲವಾಗಿದೆ. ಈ ನೀರಿಗೆ ಸರಿಯಾದ ಕಾವಲೂ ಇಲ್ಲ ಮತ್ತು ಚೆನ್ನಾಗಿ ತೊಳೆದೂ ಇಲ್ಲ. ಚಿಕ್ಕಹುಣಸೂರು ಕೆರೆಯಿಂದಲೇ ರಿಜರ್ವಾಯರಿಗೆ ನೀರು ಬರುತ್ತದೆ. ಅದು ಹೂಳು ಹೋಗಿದೆ, ಸತ್ತೆಯು ತುಂಬಾ ಬೆಳೆದಿದೆ. ಹೊಳೆಯಿಂದ ಕಾಲುವೆ ಬರತಕ್ಕ ಕಡೆಯೇ ಕೆರೆ ಕೋಡಿ ಇದೆ. ಒಳಗೆರೆಯು ಮಟ್ಟವು ಕಟ್ಟೆಯ ಮಟ್ಟಕ್ಕೆ ಇರುವದರಿಂದ ಕಾಲುವೆಯಲ್ಲಿ ನೀರು ಬಿಟ್ಟರೆ ಕೋಡಿಯಲ್ಲೇ ಬಹಳ ಮಟ್ಟಿಗೆ ಹರಿದು ಹೋಗುತ್ತದೆ. ಇದರಿಂದ ಕೆರೆಗೆ ನೀರು ಬರುವುದೇ ಕಡಮೆಯಾಯಿತು; ಅಥವಾ ಕಾಲುವೆಗೆ ಬಂದಕ್ಕೆ ನೀರು ನಿಲ್ಲುತ್ತದೆ. ಕೆರೆಯು ಕೋಡಿಬಿದ್ದೂ ದಶವರ್ಷ ನಿಲ್ಲುವಾಗಿವೆ. ಈ ಮೊದಲಾದ ತೊಂದರೆಗಳೆಲ್ಲಾ ಇರುವಾಗ್ಗೆ ಒಳ್ಳೇ ನೀರು ಹ್ಯಾಗೆತಾನೆ ಬಂದೀತು? ನಲ್ಲಿಗಳ ಮೇಲ್ವಿಚಾರಣೆ ಇಲ್ಲ. ವರ್ಷಂಪ್ರತಿಯೂ ಇವುಗಳ ಅಂದರೆ ಮುಖ್ಯ ಕೆರೆಯ ರಿಪೇರಿಗೆ ಸ್ವಲ್ಪ ಖರ್ಚುಮಾಡುತ್ತಾ ಇದ್ದಿದ್ದರೆ ಕೆರೆಯು ಇಷ್ಟು ದುಸ್ಥಿತಿಗೆ ಬರುತ್ತಾ ಇರಲಿಲ್ಲ. ಮೀನು ಹಿಡಿಯುವವರಿಗೆ ಈಚೆಗೆ ರಿಕ್ಷೆಯೂ ಸಿಕ್ಕಿ ಭಯತಪ್ಪಿ, ಅವರು ನೀರುಕೆಡಿಸುತ್ತಾ ಇದಾರೆ. ಪ್ರಜೆಗಳ ಹಿತಚಿಂತಕರಾಗಿ ಇರುವ ಸರ್ಕಾರದ ಅಧಿಕಾರಿಗಳೂ, ಪ್ರಜೆಗಳ ಪ್ರತಿನಿಧಿಗಳೆಂದು ಇರುವವರಾಗುವವರಕ್ಕೆ ವಿಶ್ವಪ್ರಯತ್ನ ಮಾಡುವ ಮಹನೀಯರೂ ಈಗಲಾದರೂ ಈ ಸ್ಥಿತಿಗಳಿಗೆ ಗಮನಕೊಟ್ಟು ಸರಿಪಡಿಸಿದಲ್ಲಿ ಈಗ ತಲೆದೋರುತ್ತಾ ಇರುವ ಕಾಲರಾ ಜಾಗ್ರತೆಯಲಿ ಶಮನವಾದೀತೆಂದು ನಂಬುತ್ತೇನೆ.

ಪುರವಾಸಿ.

ತಾಲ್ಲೂಕು ವರ್ತಮಾನಗಳು.

ಹೊಸದುರ್ಗದ ತಾ|| ಬೂದಿಹಾಳ್.—ಫೆಬ್ರವರಿ ತಾ 27 ನೇ ಗುರುವಾರ ಈ ಗ್ರಾಮಕ್ಕೆ ಅರಸೀಕೆರೆ ತಾಲ್ಲೂಕ್ ದಸರಾ ಮೆಂಬರಾಗಿಯೂ ತಿಮ್ಮಾಪುರ ಬಸವೇಶ್ವರ ಸಹಾಯ ಸಂಘದ ಸೆಕ್ರೆಟರಿಯಾಗಿಯೂ ಇರುವ ಮ|| ಎಂ ಎಚ್ ಹರಿಯಣ್ಣನವರು ದಯಮಾಡಿಸಿ ಈ ಗ್ರಾಮದಲ್ಲಿ ಗೌರ್ನಮೆಂಟ್ ಗರ್ಲ್ಸ್‌ಸ್ಕೂಲ್ ಬಾಲಿಕೆಯರನ್ನು ಪರೀಕ್ಷಿಸಿ ವಿದ್ಯಾರ್ಥಿನಿಯರಿಗೂ ಬಹುಮಾನಗಳನ್ನು ಹಂಚಿದರು.—ನಂತರ ಗ್ರಾಮದ ದೊಡ್ಡ ಮನುಷ್ಯರುಗಳಾದ ಜಮೀನ್‌ದಾರರುಗಳು, ಸರ್ಕಾರಿ ಉದ್ಯೋಗಸ್ಥರುಗಳು, ವರ್ತಕರು, ಇನ್ನೂ ಮುಂತಾದವರುಗಳನ್ನು ಬರಮಾಡಿಕೊಂಡು ಒಂದು ಸಭೆ ನಡಿಸಿ, ಅನ್ಯೋನ್ಯಸಹಾಯ ಸಂಘದಿಂದ ಪ್ರಜೆಗಳಿಗೆ ಉಂಟಾಗಿರುವ ಅನುಕೂಲ್ಯಗಳನ್ನು ತಿಳಿಯಪಡಿಸಿ, ಈ ಗ್ರಾಮದಲ್ಲಿ ಒಂದು ಸಂಘವನ್ನೇರ್ಪಡಿಸಿಕೊಳ್ಳುವುದಕ್ಕೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಟ್ಟರು. ಇವರ ಪರೋಪಕಾರ ಬುದ್ಧಿಯನ್ನು ಎಲ್ಲರೂ ಕೊಂಡಾಡುತ್ತಾರೆ.

ಬೆಂಗಳೂರು ತಾ|| ಯಲಹಂಕ.—ಬಿಸಿಲಿನ ಧಗೆ ಈಗಲೇ ಚೈತ್ರ ವೈಶಾಖ ಮಾಸದೋಪಾದಿಯಲ್ಲಿ ಇದೆ. ಈ ಸ್ಥಳದ ರೈತರಿಗೆ ಕಣದ ಕೆಲಸವೂ ಮತ್ತು ಬೇಸಿಗೆ ಸಾಗುವಳಿ ಕೆಲಸ ಸಹಾ ಮುಗಿದಿರುತ್ತವೆ. ಇಲ್ಲಿನ ಪಟೇಲ್ ಶಾನುಭೋಗರು ಬಹಳ ಪ್ರಯಾಸದಿಂದ ಕಂದಾಯವನ್ನು ವಸೂಲ್ ಮಾಡುತ್ತಿದಾರೆ. ಇಲ್ಲಿಗೆನೇ 27 ತಾ. ಗುರುವಾರ ಶ್ರೀ ಶಿವಗಂಗಾಸ್ವಾಮಿಗಳವರ ಸವಾರಿಯು ಚಿತ್ತೈಸಿತ್ತು. ಇವರು ಜಾವದಿಂದ ಪ್ರಾತಃಕಾಲ 8 ಘಂಟೆಗೆ ಹೊರಟು 10 ಘಂಟೆಗೆ ಸರಿಯಾಗಿ ಈ ಸ್ಥಳಕ್ಕೆ ದಯಮಾಡಿಸಿದರು. ಇಲ್ಲಿ ಮೊದಲೇ ಅಮಲ್ದಾರ್ ಸಾಹೇಬರವರು ಪೊಲೀಸ್ ಇನ್‌ಸ್ಪೆಕ್ಟರವರು ಗ್ರಾಮದ ದೊಡ್ಡ ಮನುಷ್ಯರುಗಳೆಲ್ಲಾ ಸೇರಿ ಏರ್ಪಡಿಸಿದ್ದಂತೆ ಮಹಾಸ್ವಾಮಿಯವರ ಪರಿವಾರವೆಲ್ಲವೂ ಶ್ರೀವೇಣು ಗೋಪಾಲಸ್ವಾಮಿಯವರ ದೇವಸ್ಥಾನದಲ್ಲಿಯೂ ಶ್ರೀ ಸ್ವಾಮಿಗಳವರು ಕಸಬಾ ವೆಂಗಟಪ್ಪನವರ ಮನೆಯಲ್ಲಿಯೂ ಬಿಜಮಾಡಿಸಿದರು. ನಂತರ 5 ಘಂಟೆಗೆ ಮಹಾಸ್ವಾಮಿಯವರು ಭಕ್ತಿ ಮಾರ್ಗವೆಂಬ ಉಪನ್ಯಾಸವನ್ನು ಕನ್ನಡದಲ್ಲಿ ಸರ್ವರಿಗೂ ತಿಳಿಯುವಂತೆ ಬಹು ಸ್ವಾರಸ್ಯವಾಗಿ ಅಪ್ಪಣೆ ಕೊಟ್ಟರು. ಮಾರನೇ ದಿನ ಶ್ರೀ ಸ್ವಾಮಿಯವರ ಸವಾರಿಯು ಪರಿವಾರ ಸಮೇತ ಬೆಂಗಳೂರಿಗೆ ಚಿತ್ತೈಸಿತು

ಹುಣಸೂರು.—ಕಳೆದ ಗುರುವಾರದ ಹುಣಸೂರು ಟಿಪ್ಪಣಿಯಲ್ಲಿ ಸಂದಲ್ ಕೋತಿ ದರೋಗ್ ಮ ಚಿದಂಬರರಾಯರು ಒಂದು ಉಪನ್ಯಾಸವನ್ನು ಕೆಲಸದ ಗೌರತೆ ಎಂಬ ಶಿರನಾಮೆಯಿಂದ ಕೊಟ್ಟರೆಂದು ಬರೆದಿತ್ತು. ಆ ಉಪನ್ಯಾಸವನ್ನು ಅವರು ಮಾಡಲಿಲ್ಲವೆಂದು ತಿಳಿಯತಕ್ಕದ್ದು.—ಈ ಸಂವತ್ಸರ ಮುಂಗಾರು ಹಿಂಗಾರು ಮಳೆಗಳೆಲ್ಲಾ ಸಕಾಲಕ್ಕೆ ವರ್ಷಿಸಿ ಭತ್ತ, ರಾಗಿ ಮುಂತಾದ ಎಲ್ಲಾ ಧಾನ್ಯಗಳೂ ಸಮೃದ್ಧಿಯಾಗಿ ಈ ಪ್ರಾಂತ್ಯ ಆಗಿದ್ದರೂ ಸಂತೆಯಲ್ಲಿ ಈದಿನ 2 ಸಂತೆಗಳಲ್ಲಿ 7½-8 ಸೇರು ಅಕ್ಕಿ ಮಾರುತ್ತಾ ಇದ್ದದ್ದು ಕಳೆದ ಸಂತೆಯಲ್ಲಿ 6½ 6½ ಸೇರು ಮಾರಿದರು. ಇನ್ನೂ ಫಸಲು ಕೈಸೇರಿ ಒಂದು ತಿಂಗಳು ಮಾತ್ರ ಆಗಿದೆ. ಬಡಬಗ್ಗರೂ ಮಧ್ಯಮ ನೌಕರರೂ ಜೀವಿಸುವುದು ತುಂಬಾ ಕಷ್ಟಕ್ಕೆ ಬಂತು. ವರ್ತಕರು ಹೇಳಿದ್ದೇ ಧಾರಣೆಯಾಗಿದೆ. ನಮ್ಮ ಅಮಲ್ದಾರರು ಇದನ್ನು ತಮ್ಮ ಅವಗಾಹನೆಗೆ ತಂದುಕೊಂಡು ತಕ್ಕ ರೀತಿಯಲ್ಲಿ ತನಿಖೆ ಮಾಡಿ ವರ್ತಕರಿಗೆ ಬುದ್ಧಿವಾದಗಳನ್ನು ಹೇಳಿದರೆ ಗರೀಬರಿಗೆ ಸಹಾಯ ಮಾಡಿದಂತಾಗುವುದು.—ಕಾಲರಾ ಜಾಡ್ಯದ ಸೂಚನೆ ತೋರುತ್ತದೆ. ಇದು ಸ್ಥಳದಲ್ಲಿ ಉತ್ಪತ್ತಿಯಾದದ್ದಲ್ಲ. ಕೊಡಗು ಪೆರಿಯಾಪಟ್ಣ ಈ ಕಡೆಗಳಿಂದ ಬಂದದ್ದಾಗಿದೆ. ಆದರೂ ಡಾಕ್ಟರವರು ನೀರನ್ನು ಚನ್ನಾಗಿ ಕುದಿಸಿ ಪಾನಮಾಡತಕ್ಕದ್ದೆಂದು ಅಲ್ಲಲ್ಲಿ ಜನರಿಗೆ ಹೇಳುತ್ತಿದಾರೆ. ಮೂರು ದೀಸಗಳಲ್ಲಿ ನಲ್ಲಿಯ, ಭಾವಿಯ, ಹೊಳೆಯ ನೀರುಗಳನ್ನು ಭರ್ತಿಮಾಡಿ ಬೆಂಗಳೂರು ಕೆಮಿಕಲ್ ಎಗ್ಜಾಮಿನರಾಬಳಿಗೆ ರವಾನಿಸಿರುತ್ತಾರೆ. ಡಾಕ್ಟರವರು ಭೂತದಯೆ ಪಕ್ಷಾತ್ತಾಪವುಳ್ಳವರು. ಅವರಿಗೆ ಬಡವರು ಬಲ್ಲಿದರೆಂಬ ಭೇದವಿಲ್ಲ.—ಇಲ್ಲಿನ ತಾಲ್ಲೂಕ್ ಆಫೀಸಿಗೆ ಇನ್ನು ಮೇಲೆ ವರ್ತಕರೆಲ್ಲರೂ ಸರ್ಕಾರದ ಮೊಹರುಳ್ಳ ಸರಿಯಾದ ತೂಕದ ಬಟ್ಟುಗಳನ್ನೂ ಅಳತೇ ಸೇರುಗಳನ್ನೂ ಇಟ್ಟುಕೊಳ್ಳಬೇಕೆಂಬ ಹುಕುಂ ಶ್ರೀಮನ್ಮಹಾರಾಜಾ ಸರ್ಕಾರದವರಿಂದ ಬಂದಿದೆ. ಆದರೆ ಅವುಗಳನ್ನು ಜಾರಿಯಲ್ಲಿ ತರುವಂತೆ ಇನ್ನೂ ಆ ಯೂನಿಫಾರಂ ಬಟ್ಟುಗಳನ್ನೂ ಸೇರುಗಳನ್ನೂ ಹರಿಸಿಕೊಂಡಿಲ್ಲ. ಇದರಿಂದ ಕೊಳ್ಳುವ ಮಾರುವ ಉಭಯತ್ರರಿಗೂ ಬೇಗ ಹಿತಕರವಾದದ್ದು.

ಅನೇಕಲ್ ತಾ|| ಮುಷ್ಟೂರು.—ಈ ಗ್ರಾಮದಲ್ಲಿ ಒಂದು ಪರಸ್ಪರ ಸಹಾಯಕ ಸಂಘವು ಏರ್ಪಾಡಾಗಿ 6-7 ತಿಂಗಳಾಯಿತು. ಈ ಸೊಸೈಟಿಯಲ್ಲಿ ಈಗ 119 ಜನ ಮೆಂಬರುಗಳಿದಾರೆ. ಮೆಂಬರುಗಳ ಬಂಡವಾಳವು 2 ಸಾವಿರ ರೂಪಾಯಿನ ಷೇರುಗಳು ಜಮಾಯಿಸಿದೆ. ಮೆಂಬರುಗಳು ವ್ಯವಸಾಯ ಮತ್ತು ಜಾಸ್ತಿ ಬಡ್ಡಿ ಸಾಲ ತೀರಿಸುವದಕ್ಕಾಗಿ 6 ಸಾವಿರ ರೂಪಾಯಿ ಸಾಲವನ್ನು ಸೆಂಟ್ರಲ್ ಕೋಆಪರೇಟಿವ್ ಸೊಸೈಟಿಯಿಂದ ತಂದು ಮೆಂಬರುಗಳಿಗೆ ಸಾಲ ಕೊಟ್ಟು ಇರುತ್ತಾರೆ. ಈ ಸೊಸೈಟಿ ಇನ್‌ಸ್ಪೆಕ್ಷನ್‌ಗಾಗಿ ರೆಜಿಸ್ಟ್ರಾರ್ ಸಾಹೇಬರವರು ದಯಮಾಡಿದ್ದಾಗ ಈ ಗ್ರಾಮದಲ್ಲಿ ದಿನ ಒಂದಕ್ಕೆ ರೂಪಾಯಿಗೆ ಒಂದು ಕಾಸಿನಂತೆ ಬಡ್ಡಿ ಹಾಕಿ ಸಾಲ ಕೊಡುತ್ತಿದ್ದ ಲಬ್ಬೆಯವರ ಬೇನಾಮಿಯನ್ನು ನೋಡಿ ಕನಿಕರದಿಂದ ಬಡ ಪ್ರಜೆಗಳ ಕಷ್ಟನಿವಾರಣೆಗಾಗಿ ಪ್ಯಾಸೂದಾಂಬಾ ಎಂಬ ಹೆಸರಿನಿಂದ ಒಂದು ಪರಸ್ಪರ ಸಹಾಯಕ ಸಂಘವನ್ನು ಹೊಸದಾಗಿ ಸ್ಥಾಪನೆ ಮಾಡಿ ಲಬ್ಬೆಯವರ ಸಾಲವನ್ನು ತೀರಿಸಿ ಪ್ರತಿ ಒಬ್ಬರೂ ದಿನ ಒಂದಕ್ಕೆ 6 ಪೈ ನಂತೆ ಷೇರು ಕೊಡಲು ಏರ್ಪಾಡು ಮಾಡಿದರು. ಈ ಏರ್ಪಾಡಿನಿಂದ ಪ್ರಜೆಗಳಿಗೆ ಬಹಳ ಉಪಕಾರವಾಯಿತು.—ಈ ತಾಲ್ಲೂಕಿನ ಜಮಾಬಂದಿಯು ಪೂರೈಸಿತು. ನಮ್ಮ ಅಮಲ್ದಾರವರು ಪ್ರಜೆಗಳ ಕಷ್ಟ ಸುಖಗಳನ್ನು ಬಹಳ ಕನಿಕರದಿಂದ ವಿಚಾರಿಸುತ್ತಿದಾರೆ.—ಈ ಗ್ರಾಮದ ಶ್ರೀಮದ್ದೂರಮ್ಮನ ಜಾತ್ರೆಯು ಮಾರ್ಚಿ 28 ರಿಂದ ಏಪ್ರಿಲ್ 2 ರ ತನಕ ನಡೆಯುತ್ತೆ. ಅನೇಕ ಕಡೆಗಳಿಂದ ಜನ ಜಾನುವಾರುಗಳು ವಿಶೇಷವಾಗಿ ಬರುವದಲ್ಲದೆ ಈ ಗ್ರಾಮದ ಕೆರೆಯಲ್ಲಿ ನೀರಿನ ವಸತಿ ಚೆನ್ನಾಗಿದೆ. ಈ ಪ್ರಾಂತ್ಯ ಪ್ಲೇಗ್ ಗಲಾಟೆಯೇನೂ ಇಲ್ಲ.—ಈ ಗ್ರಾಮದಲ್ಲಿ ಮಾಮೂಲಾಗಿ ನಡೆಯುತ್ತಾ ಇದ್ದ ಸಂತೆಯು ಶನಿವಾರ ಸಂತೆ ದೆಸೆಯಿಂದ ನಿಂತುಹೋಗಿ, ಈ ಪ್ರಾಂತ್ಯದ ವರ್ತಕರಿಗೂ ಜನಗಳಿಗೂ ತುಂಬಾ ತೊಂದರೆಯಾಗಿದೆ. ಗೌರ್ನಮೆಂಟು ಹುಕುಂ ಪ್ರಕಾರ ಶನಿವಾರ ಸಂತೆಯನ್ನು ವಜಾಮಾಡಿದಲ್ಲಿ ಈ ತಾಲ್ಲೂಕಿನಲ್ಲಿ ಮಾಮೂಲಾಗಿ ನಡೆಯುತ್ತಾ ಇದ್ದ ಸಂತೆಗಳು ಅಭಿವೃದ್ಧಿ ಸ್ಥಿತಿಗೆ ಬರುತ್ತೆ. ಈ ಕೊರತೆಯನ್ನು ದಯಾಳುಗಳಾದ ಸರ್ಕಾರದವರು ನಿವಾರಣೆ ಮಾಡುವರೆಂದು ಹಾರೈಸುತ್ತೇವೆ.

ಅರಸೀಕೆರೆ.—ಕೆಲವು ವರುಷಗಳಿಂದ ನಿಲಿಂಬಾಗಿದ್ದ ಟೆನ್ನಿಸ್ ಕೋರ್ಟ್ ಮುಸಾಫರಿ ಬಂಗಲೆಯ ಕಾಂಪೌಂಡಿನಲ್ಲಿ ಈಗ ನೂತನವಾಗಿ ತಯಾರಿಸಲ್ಪಡುತ್ತಾ ಇದೆ. ಇದರ ಮೂಲಕ ವಿದ್ಯಾವಂತರಾದ ತಾಲ್ಲೂಕು ಮತ್ತು ರೈಲ್ವೆ ನೌಕರರು ಕೇವಲ ಅನ್ಯೋನ್ಯ ಪ್ರೀತಿಯಿಂದ ಕೆಲಯುವ ಪ್ರಸಂಗವಾಯಿತು. ಈ ಭಾಗದಲ್ಲಿ ಶಿರಸ್ತೇದಾರರ ಮೆಹನತ್ತು ತುಂಬಾ ಸಂತೋಷವಾಗಿದೆ.—ಹಾಸನದ ರೋಡಿನಲ್ಲಿ ರೈಲ್ವೆ ಗೇಟಿಂದ ತಾಲ್ಲೂಕ್ ಕಚೇರಿ ಆಸ್ಪತ್ರೆವರೆಗೂ ರಸ್ತೆ ಕೇವಲ ಉತಾರಾಗಿಯೂ ಇಕ್ಕಟ್ಟಾಗಿಯೂ ಇದ್ದದ್ದರಿಂದ ಸಂತೆಗೆ ಬರುವ ಗಾಡಿಗಳಿಗೂ ಜನರಿಗೂ ಆಗಾಗ್ಗೆ ಅಪಾಯಗಳು ಸಂಭವಿಸುತ್ತಾ ಇದ್ದವು. ಎಗ್ಜಿಕ್ಯುಟಿವ್ ಇಂಜನಿಯರ್ ಮ|| ನಿಜಗಲ್ ವೆಂಕಟರಾಯರು ತಮ್ಮ ಕಾಲದಲ್ಲಿ ಇದಕ್ಕೆ ಗಮನಕೊಟ್ಟು ಮ|| ಡಿ ನಂಜುಂಡಯ್ಯನವರ ಮೇಲ್ವಿಚಾರಣೆಯಿಂದ ರಸ್ತೆಯನ್ನು ಬಹು ಮಟ್ಟಿಗೆ ಬದಾವಣೆ ಮಾಡಿ ಬೆಂಗಳೂರು ಹೊನ್ನಾವಾರ ರೋಡಿನವರೆಗೂ ಉಭಯ ಪಾರ್ಶ್ವಗಳಲ್ಲಿಯೂ ವಿಸ್ತಾರವಮಾಡಿರುವದು ಶ್ಲಾಘನೀಯವು. ಆದರೆ ಗೇಟಿನಿಂದ ಸ್ವಲ್ಪ ದೂರದವರಿವಿಗೂ ಉತಾರಿಗೆ ಭರ್ತಿಮಾಡಿರುವ ಪ್ರದೇಶವನ್ನು ಉದ್ದಕ್ಕೂ ದೊಡ್ಡದಾಗಿ ಮಾಡುವುದರಿಂದ ರಸ್ತೆಯ ಅನುಕೂಲವನ್ನು ಮತ್ತಷ್ಟು ಹೆಚ್ಚಿಸಿದಂತಾಗುವದು. ಇಲ್ಲವೇ ಗೇಟಿನಿಂದ ಉತಾರು ಕಡೆಗಾಣುವ ತನಕ ಕಟಕಟೆಯನ್ನಾಗಲಿ ಇಡಿಸತಕ್ಕದ್ದು ಅವಶ್ಯಕವು. ಇದಕ್ಕೆ ಹಾಸನದ ಎಗ್ಜಿಕ್ಯುಟಿವ್ ಇಂಜನಿಯರ್ ಸಾಹೇಬರು ಗಮನಕೊಟ್ಟು ತೀರ್ಮಾನ ಮಾಡಬಹುದು.—ಕಾರೊನೇಷನ್ ಜ್ಞಾಪಕಾರ್ಥವಾಗಿ ಈ ತಾಲ್ಲೂಕಿನ ಮಹಾಜನಗಳು ಆ ದಿನ ದರ್ಬಾರ್‌ನಲ್ಲಿ ಶಾಶ್ವತವಾದ ಏರ್ಪಾಡುಗಳ ನಿಮಿತ್ತ ಯೋಗ್ಯತಾನುಸಾರವಾಗಿ ವಾಗ್ದಾನಗಳನ್ನು ಮಾಡಿದರೆಂಬುವದು ಸರ್ವರಿಗೂ ತಿಳಿದ ಸಂಗತಿ. ಈ ಪೈಕಿ ಸಾಹುಕಾರ್ ಚೌಡಪ್ಪನವರು ವಹಿಸಿಕೊಂಡು ದಿನದಿನಕ್ಕೆ ಅಭಿವೃದ್ಧಿಗೆ ತರುತ್ತಿರುವ ಕಾರೊನೇಷನ್ ಪಾರ್ಕ್, ಇದರೊಳಗೆ ತೆಗಿಸುತ್ತಿರುವಂಥಾ ಸೀಸೇರಿಸ ಭಾವಿ. ಇವುಗಳ ಕೆಲಸ ಮಾತ್ರ ಜನರ ಕಣ್ಣುಗಳನ್ನು ಆಕರ್ಷಿಸುತ್ತಿರುವವೇ ಹೊರತು ಬೇರೆ ಕೆಲಸಗಳು ಗೋಚರವಿಲ್ಲ. ಉಳಿದ ಮಹನೀಯರ ವಾಗ್ದಾನಗಳು ಶೀಘ್ರದಲ್ಲಿಯೇ ಗೋಚರವಾಗುವವೆಂದು ನಿರೀಕ್ಷಿಸಲ್ಪಟ್ಟಿದೆ.—ಈ ಊರಿನ ರೀಡಿಂಗ್ ರೂಮ್ ಮ|| ಲಕ್ಷ್ಮೀಕಾಂತಯ್ಯಂಗಾರ್ರಿಂದ ಸ್ಥಾಪಿಸಲ್ಪಟ್ಟು ಬಹು ಚೆನ್ನಾಗಿ ನಡೆಯುತ್ತಾ ಬಂತು. ಇವರು ಹೋದ ಕೆಲವು ಕಾಲಾನಂತರ ಹೀನ ಸ್ಥಿತಿಗೆ ಬರುವಂತಾಯಿತು. ಚಂದಾ ಹಣವು ಬಾಕಿ ನಿಲ್ಲುತ್ತಾ ಬಂತು. ಆದರೆ ನಮ್ಮ ಈಗಿನ ಸಬ್ ರೆಜಿಸ್ಟ್ರಾರವರ ಮೆಹನತ್ತಿನಿಂದ ಬಾಕಿ ನಿಂತಿದ್ದ ಚಂದಾ ಹಣವೆಲ್ಲಾ 100 ರೂಪಾಯಿವರೆಗೂ ವಸೂಲಾಗಿ ರೂಮಿನ ಕೆಲಸ ಕಾರ್ಯಗಳೆಲ್ಲಾ ತೃಪ್ತಿಕರವಾಗಿ ನಡೆಯುತ್ತಿವೆ. ಇದು ಸರ್ವರಲ್ಲೂ ಸಂತೋಷವನ್ನುಂಟುಮಾಡಿದೆ. ನಮ್ಮ ಮಹಾರಾಜರವರ ಹೆಸರಿನಲ್ಲಿ ಸ್ಥಾಪಿತವಾದ ಈ ರೀಡಿಂಗ್ ರೂಮ್ ಏಳಿಗೆ ಹೊಂದಲೆಂದು ಹಾರೈಸುವೆನು.

ಟಿ. ನರಸೀಪುರ.—ಹವಾ ಈಗಿನ ವರೆಗೂ ಅನುಕೂಲವಾಗಿತ್ತು. ಫಾರಿನ್ ವಾಸಿಗಳು ತಕ್ಕಮಟ್ಟಿಗೆ ಅನುಕೂಲವಾಗಿದೆ. ಮೂಗೂರು ಮತ್ತು ಸುತ್ತುಮುತ್ತಲಿನ ಗ್ರಾಮಗಳಲ್ಲಿ ಬೆಂಕಿಯ ಅವಾಂತ್ರ ಬಹಳವಾಗಿದೆ. ಈಗಿನವರೆಗೆ ಸುಮಾರು 15 ರಾಗಿ ಮೆದೆಗಳು ಬೆಂದುಹೋದವು. 9 ನೇ ತಾ ಮಧ್ಯಾಹ್ನ 12 ಘಂಟೆಯಲ್ಲಿ ಪುಟ್ಟಸುಬ್ಬೇಗೌಡನ ಮನೆ ಇರುವ ಮೂಡ ಕೇರಿಯಲ್ಲಿ 4 ಮೆದೆಗಳು ಹತ್ತಿಕೊಂಡು ಬಾಜು 1-2 ಮನೆಗಳು ಸಹಾ ಹತ್ತಿ ಉರಿಯುತ್ತಿದ್ದವು. ಅಷ್ಟರಲ್ಲೇ ಸ್ಪೆಷಲ್ ಪೊಲೀಸ್ ಇನ್‌ಸ್ಪೆಕ್ಟರ್ ಮ, ರಂಗರಾಜೆ ಅರಸಿನವರು 25 ಜನ ಪೊಲೀಸಿನವರೊಂದಿಗೆ ಹೋಗಿ ಬಹು ಸಾಹಸದಿಂದ ಬೆಂಕಿಯನ್ನು ಆರಿಸಿದರು. ಅವರು ಇಷ್ಟು ಮುತುವರ್ಜಿಯನ್ನು ವಹಿಸದಿದ್ದರೆ 50 60 ಮನೆಗಳು ಸುಟ್ಟು ಹೋಗುತ್ತಿದ್ದವು. ಒಬ್ಬ ಹೆಂಗಸು ಸಹಾ ಬೆಂಕಿಯಲ್ಲಿ ಸುಟ್ಟು ಹೋಗುತ್ತಿದ್ದಳು. ಇನ್‌ಸ್ಪೆಕ್ಟರವರು ಧೈರ್ಯವಾಗಿ ನುಗ್ಗಿ ಆವಳನ್ನು ಎಳೆದು ತಂದು ಬದುಕಿಸಿದರು.—ಚಾಮರಾಜನಗರದ ತಾಲ್ಲೂಕು ತೆಳ್ಳನೂರು ಗ್ರಾಮದಲ್ಲಿ ಪ್ಲೇಗ್ ಉಪದ್ರದಿಂದ ಸುಮಾರು 45 ಜನ ವರೆಗೂ ಸತ್ತುಹೋದರು. ಜನರೆಲ್ಲಾ ಷಡ್ಡುಗಳಲ್ಲಿದ್ದರು. ಊರಿನಲ್ಲಿ ಜನಸಂಚಾರವೇ ಇಲ್ಲದ ಕಾರಣ ಹ್ಯಾಗೋ ಒಂದು ದೊಡ್ಡ ಚಿರತೆಯು ಬಂದು ತನ್ನ 2 ಮರಿಗಳ ಜೊತೆ ಮನೆಯಲ್ಲಿ ಸೇರಿಕೊಂಡು ಊರಿನಲ್ಲಿ ಓಡಾಡುತ್ತಾ ಪುನಹ ಅದೇ ಮನೆಯೊಳಗೆ ಸೇರಿಕೊಂಡಿತ್ತು. ಈ ಸಂಗತಿಯನ್ನು ಮೂಗೂರಿನ ಪೋ. ಇನ್. ಮ ರಂಗರಾಜೆ ಅರಸಿನವರಿಗೆ ತಿಳಿಸಿದರು. ಅವರು ಕೂಡಲೆ ಬಂದೂಕುಗಳ ಸಮೇತ ಕೆಲವು ಪೊಲೀಸಿನವರೊಂದಿಗೆ ಹೋಗಿ ಆ ಮನೆಯನ್ನು ಮುತ್ತಿಕೊಂಡು ಇನ್ನು ಕೆಲವರು ಮನೆಯ ಮೇಲೆ ಹತ್ತಿ ಹೆಂಚುಗಳನ್ನು ತೆಗೆದು ನೋಡಲು ಒಳಗೆ ಚಿರತೆ ಕೂತುಕೊಂಡಿತ್ತು. ಕೂಡಲೆ ಸ್ಪೆ. ರಿ. ಪೊ ನಾಯಕ್ ಅಬ್ದುಲ್ ಅಜೀಜ್‌ಖಾನ್ ಸಾಬರು ಅದನ್ನು ಒಂದೇ ಗುಂಡಿನಿಂದ ಹೊಡೆದು ಕೊಂದರು. ಇವರಿಗೆ 20 ರೂಪಾಯಿ ಇನಾಂ ಸಹ ಬಂತು. ಮುಡುಕುತೊರೆ ಜಾತ್ರೆಯು ಜನಭರಿತವಾಗಿ ಬಹು ವಿಜೃಂಭಣೆಯಿಂದ ನಡೆಯುತ್ತಿತ್ತು. ಆದರೆ 19 ನೇ ತಾ. ಅಲ್ಲಿ ವಾಂತಿಭ್ರಾಂತಿ ಹುಟ್ಟಿ ಇಬ್ಬರು ಮೃತಪಟ್ಟರಂತೆ. ಜಾತ್ರೆಯೆಲ್ಲಾ ಘಾಬರಿಯಾಗಿ ಚದರಿ ಹೋಯಿತು. 20-21 ನೇ ತಾ 5-6 ಜನರು ಸತ್ತರೆಂದು ಹೇಳುತ್ತಾರೆ. ಈಗ ಸುತ್ತುಮುತ್ತಲಿನ ಅನೇಕ ಗ್ರಾಮಗಳಿಗೆ ಈ ರೋಗವು ಹರಡಿಕೊಂಡು ಮೂಗೂರಲ್ಲಿ 23 ನೇ ತಾ. ಇಬ್ಬರು ಸತ್ತರು. ಇನ್ನು ನಾಲ್ಕು ಜನರಿಗೆ ತಗಲಿದೆಯಂತೆ.—ಈ ಜಾತ್ರೆಯಲ್ಲಿ ಕೆಲವು ಜೂಜಾಟಕ್ಕೆ ಲೈಸೆನ್ಸ್ ಕೊಟ್ಟಿದ್ದ ಹಾಗೆ ವರ್ತಮಾನವಿದೆ. ಈ ಆಟಗಳಿಂದ ಅನೇಕ ಜನರಿಗೆ ಬಹಳ ನಷ್ಟವಾದ ಹಾಗೆ ಹೇಳಿಕೊಳ್ಳುತ್ತಾರೆ. ಯಾವ ಜೂಜಾಟಕ್ಕಾದರೂ ಲೈಸೆನ್ಸ್ ಕೊಡದಿದ್ದರೆ ಸರ್ಕಾರಕ್ಕೆ ಅಷ್ಟೇನೂ ನಷ್ಟವಾಗದೆ ಪ್ರಜೆಗಳಿಗೆ ತುಂಬಾ ಉಪಕಾರವಾಗುವುದು.—ಸರ್ದಾರ್ ದೇವರಾಜೆಅರಸಿನವರು ಪುತ್ರ ಪರಿವಾರ ಸಹಿತ ಮೂಗೂರಿಗೆ ದಯಮಾಡಿಸಿ ಇಲ್ಲಿರುವ ತಮ್ಮ ಮನೆ ದೇವರುಗಳ ಹರಕೆಯನ್ನು ನೆರವೇರಿಸಿ ಬ್ರಾಹ್ಮಣರಿಗೆ ಬಹು ವಿಶೇಷವಾದ ಸಂತರ್ಪಣೆ ನಡಿಸಿದರು.

ಮುಳವಳ್ಳಿ.—ರಾಗಿ ಒಕ್ಕಣೆ ಪೂರೈಸುತ್ತಾ ಬಂತು. ಭತ್ತದ ಕೆಲಸವು ಈಗೀಗ ಪ್ರಾರಂಭವಾಗಿದೆ.—ಮುಡುಕತೊರೆ ಜಾತ್ರೆಗೆ ಹೋಗಿದ್ದ ಜನಗಳು ಕಲರಾ ಬೀಜವನ್ನು ತಂದು ನೆಟ್ಟು ಅದು ಪ್ರಬಲವಾಗುತ್ತಿದೆ. ದಿನವಹಿ 2-3 ಜನರು ಮೃತಪಡುತ್ತಲಿದಾರೆ. ಇದಕ್ಕೆ ಸಹಾಯವಾಗಿ ಕುಡಿಯುವ ನೀರೂ ಕೆಟ್ಟುಹೋಗಿರುತ್ತೆ. ಸರ್ಕಾರದವರು ಭಾವಿಗಳನ್ನು ತೆಗಿಸಿ ಜನರು ಕುಡಿಯುವುದಕ್ಕೆ ಅನುಕೂಲವಾದ ನೀರನ್ನು ಕಲ್ಪಿಸಿ ಕೊಡುತ್ತಾರೆಂದು ನಂಬಿರುತ್ತೇನೆ.—ಕಳೆದ ಸಾಲಿನಲ್ಲಿ ಮಾರೇಹಳ್ಳಿಗ್ರಾಮದ ಕನಗಲ್ ಅಣೆಕಟ್ಟಿನಲ್ಲಿ ಕೆಲವು ರಿಪೇರಿ ಮಾಡಿಸಿದ್ದರು. ಅದಕ್ಕಾಗಿ ಆ ನಾಲಾ ಕೆಳಗಿನ ರೈತರು ರೂಪಾಯಿಗೆ ರೂ. 2-5-4 ಪೈ ಕಂಟ್ರಿಬ್ಯೂಷನ್ ಮೇಲೆ ಕೊಡಬೇಕೆಂದು ಹುಕುಂ ಕೊಟ್ಟರು. ಕಳೆದ ಸಾಲಿನಲ್ಲಿ ಮಳೆ ಇಲ್ಲದೆ ಕೆರೆ ತುಂಬದೆ ಅಕಾಲದಲ್ಲಿ ನೆಟ್ಟ ಪೈರು ಕಾಲು ಪಾಲು ಬೆಳೆ ಆಗುವುದೇ ದುರ್ಲಭವಾಯಿತು. ರೈತರ ಕಷ್ಟವನ್ನು ನೋಡಿ ವಸೂಲಿಗೆ ಇನ್ನೊಂದು ಸಾಲ್ ಫುರಸತ್ತು ಕೊಟ್ಟಾರೆಂದು ನಿರೀಕ್ಷಿಸಿದೆ.—ಈ ತಾಲ್ಲೂಕು ಹಲಗೂರಿನಲ್ಲಿ ಒಬ್ಬ ರೈತನು ತನ್ನ ಹೆಂಡತಿಯನ್ನು ಖೂನ್ ಮಾಡಿ ಹೂಣಿಟ್ಟ ವಿಚಾರ ವಿಸ್ತೋಟಕಾಗಿ ಪತ್ತೆ ಬಗ್ಗೆ ಅಮಲ್ದಾರ್ರು ಅಲ್ಲಿಗೆ ದಯಮಾಡಿಸಿರುತ್ತಾರೆ.—ಇಲ್ಲಿನ ಎ. ವಿ ಸ್ಕೂಲಿನಲ್ಲಿ ಬಾಲಕರ ಸಂಖ್ಯೆ ಕಮ್ಮಿಯಾ

[illegible]

[illegible]

ಕಲ್ಲಾಗಾಲದ ದಂಗೆ ಮೊಕದ್ದಮು

[illegible]

[illegible]

[illegible]

ಮಕ್ಕಳ ಹಿತಕಾರಿ

SCOTT'S EMULSION

(ಸ್ಕಾಟ್ಸ್ ಇಮಲ್‌ಷನ್)

ಎಂಬ ಸೇವನಾ ವಿಷಯದಲ್ಲಿ ಕೊಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದಾರೆ. ಯಾಕಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ ದೇಹವನ್ನು ಪುಷ್ಟಿಯಾಗಿ ಬೆಳೆಸುತ್ತದೆ.

ಕೈಸೋಕದೆ ತಯಾರಾದದ್ದು

ಸ್ಕಾಟ್ ಅಂಡ್ ಬೌ, ಲಿಮಿಟೆಡ್

ಲಂಡನ್, ಇಂಗ್ಲೆಂಡ್.

ಬಹಳ ಮೇಲಾದ ಅಚ್ಚ ಕಲೀ ಜ್ವಾಲೆ ಪಾದುರ ಚೌಂಕಡಿ ಅಂಚಿನ ಸೀರೆಗಳು.

[11 2]

[illegible]

ವಿ. ವಿ. ಸಾಲ್ ಕಂಪೆನಿ, ಸುಂಗಂಪಾಳ್ಯಂ, ಮದರಾಸು

ನಮ್ಮ ವಿಳಾಸ — ಸಂ... ಬುಕ್ ಡಿಪ್ರೋ,

ಶೃಂಗಾರ ವಿಳಾಸ, ...

[illegible]

(1) ಕಪ್ಪುರಾಯುಪುಡಿ ಪೊಟ್ಟ 50 ಕ್ಕೆ 1 ಆಣೆ

[illegible]

ಶ್ರೀಲಕ್ಷ್ಮೀನರಸಿಂಹ ಆಯುರ್ವೇದ ವೈದ್ಯಶಾಲೆ

[illegible]

ದಂತದಾವನ ರತ್ನಾಕರಂ ...

[illegible]

ರಾಜವೈದ್ಯಂ ಮೈಸೂರು ಪಂಡಿತರು ಎಂ. ಕೆ. ಶೀನಿವಾಸಾಚಾರ್ಯರು

ನಂ 93 ಚೈನಾಬಜಾರ್ ರೋಡ್, ಮದರಾಸ್

ಸ್ವಸ್ಥವಾಗುವುದಕ್ಕೆ ಉಪಾಯವು

[illegible]

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರು ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲಿ ವಿಕ್ರಯಿಸಲ್ಪಡುತ್ತವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕರವಾದ ಪುಸ್ತಕವನ್ನು ಅಪೇಕ್ಷಿಸಿ ಕೇಳಿದ ಎಲ್ಲರಿಗೂ ಉಚಿತವಾಗಿ ಕಳುಹಿಸಲಾಗುವುದು.

Messrs. OAKES & Company, Mount Road, Madras.

[14-5] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.



ಕ್ರಯ ೨-೦-೦, ... ದೊರೆಯುವುದು.

ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

Printed and Published by the Rev H Gulliford, Proprietor and Manager, Wesleyan Mission Press, Mysore. 6/3/1913.

ವೃತ್ತಾಂತ ಪತ್ರಿಕೆ

ವರ್ಷಕ್ಕೆ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು • ಕ್ರಯ ೧ ದುಡ್ಡು.

ಸಂಪುಟ ೨೬. ಮೈಸೂರು—ಸನ್ ೧೯೧೩ ನೇ ಇಸವಿ ಮಾರ್ಚಿ ತಾರೀಖು ೧೩ ನೇ ಗುರುವಾರ. ಸಂಚಿಕೆ ೪೧

ಶ್ರೀ ನರಸಿಂಹ ಆಯುರ್ವೇದ ವೈದ್ಯಶಾಲೆ

ರಮುರಾರಿ ಸಕಲ ವಿಧವಾದ ಒ ರಗಳಿಗೆ ಅಂಕುಶವಾಗಿ ಇದ ರೋಗಿ ಮೊದಲೆ ಸಕಲವಿಧವಾದ ಒ ರಗಳನ್ನೂ ಹತಮಾಡುವದು ಇದು ಯಾಗಿರುವ ಹಸುರುಸೊಪ್ಪುಗಳು ಬೇರುಗಳು ಮೊದಲಾದ ಪ್ಪರದಿಂದ ಟ್ಟಿದ್ದು ರಸ, ಗಂಧಕ, ಪಾಷಾಣಾದಿಗಳೊಂದೂ ಈ ಔಷಧಕ್ಕೆ ಸೇರಿಲ್ಲ ಮ ನಮ್ಮ ಗುರುಗಳು (ಸಿದ್ಧರು)ಗಳಿಂದ ಕಲಿತ ಸಿದ್ಧಪ್ರಯೋಗ ಈ ಷ್ಟ ಪಾನಾದಿಗಳೇನೂ ಇಲ್ಲ ಈ ಔಷಧವನ್ನು ಒಂದು ಸಾರಿ ತರಿಸಿ ಒಡನೆ ಅವರಾಗಿ ತಮ್ಮ ಸ್ನೇಹಿತರುಗಳಿಗೆ ತಿಳಿಸಿ ಸಂತೋಷಪಡು ಈ ಮದರಾಸಿನಲ್ಲಿ ಅನೇಕ ಸಾವಿರ ಜನಗಳು ಉಪಯೋಗಿಸಿದ ಸಿದ್ಧ ದಿವಸ ಒಳಗೆ ಜನಗಳು ಉಪಯೋಗಿಸುತ್ತಲೂ ಇರುತ್ತಾರೆ ಈ ವಸೆ ಕ್ರಮವು ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಎಂಥಾ ೬ 10 12 ಗಂಟೆಗಳ ಒಳಗೆ ನಿಶ್ಚಯವಾಗಿ ಜ್ವರ, ಷವನ್ನು ಹೋಗಲಾಡಿಸಿ ದೇಹವನ್ನು ಟೊಮಾಟಿ, ಬಲಹೀನವನ್ನು ಹೋಗ ದು ಇದರ ಬೆಲೆ 12 ಪೊಟ್ಟಣಗಳ ಡಬ್ಬಿ 1 ಕ್ಕೆ 12 ಆಣೆ ಟಪಾ ಹಸೂಲ್ ಬಾಬತು ಪ್ರತ್ಯೇಕ [10-1]

ದಂತದಾವನ ರತ್ನಾಕರಂ ಇದು ಹಲ್ಲುಗಳಿಗೆ ಬಾಧಾಕರವಾದ ಗಳು ಯಾವದೂ ಸೇರದೆ ಅನೇಕ ಮೂಲಿಕೆಗಳಿಂದ ತಯಾರುಮಾಡಿದ ಮಿಳು ಸುವಾಸನೆಯಾಗಿರುವದು ಇದರಿಂದ ಹಲ್ಲು ಉಜ್ಜಿ ಕೊಂಡರೆ ಹುಟ್ಟುವ ರೋಗಗಳು ರೋಗಲಾಧಿಃ ನಾಶವಿತ್ತ ಶ್ರೇಷ್ಠಗಳನು ಪಿ ಹಲ್ಲುನೋವು, ಒಸಡಿನ ಊತ, ಹಲ್ಲುಜೋವು, ಹಲ್ಲಿನಲ್ಲಿ ರಕ್ತ ಹಲ್ಲಿನಲ್ಲಿ ರಕ್ತಬರುವದು ಹುಳುಕುಹಲ್ಲು, ಇಸುರುಬಾಧೆ ಮುಂ ಕಿರುಮಿ ಹಲ್ಲು ಸಂದುಗಳನ್ನು ಬಿಗಿಯಾಗಿ ಸೇರಿಸಿ ಕಳೆಕೊಟ್ಟು ಟ್ಟ ಗುಣಪಡಿಸುವದು ಈ ಪುಡಿಯನ್ನು ನೋಡಿ ಬಿಡುವುದು ಇದರ ಬೆಲೆ ಡಬ್ಬಿ 1 ಕ್ಕೆ 1 ಆಣೆ ಟಪಾ ಲ್, ಪಾರ್ಸ ಲ್ ಪ್ರತ್ಯೇಕ ವಿಳಾಸ —

ವೈದ್ಯಂ ಮೈಸೂರು ಪಂಡಿತರು ಎಂ ಕೆ ಶೇಷಾಚಾರ್ಯ್ಸ,
'ನಂ 9', ಬೈನಾಬಜಾರ್ ರೋಡ್, ಮದರಾಸ್

THE PLACE FOR HASSAN CAPS IS HASSAN.

ನಿಮ್ಮ ತಲೆಯು ಖಾಲಿಯಿರುವದೇನು?

ಹಾಸನದ ಟೋಪಿ ಅಲ್ಲವೋ? ಹಾಗಾದರೆ ಬೇಗ ಒಂದು ತರಿಸಿಕೊಳ್ಳಿ [11]

ಟೋಪಿಗಳು ಯಾವುವು? ಯಾರಿಗೆ ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಹೊಸದು ಎಷ್ಟು ದಿನ ಬಾಳಿದರೂ ... ಗಿಲ್ಲ ಹರಿಯದೆ ... ಸುಂದರವಾಗಿಯೂ ... ಎಂದು

... ಇತರ ಕಡೆಗಳಲ್ಲಿ ತಯಾರಿಸಲ್ಪಡುತ್ತಿರುವ ಟೋಪಿ ... ದರ ... ಆದರೆ ಹಾಸನದ ಟೋಪಿಗಳಂದು ಎಲ್ಲರೂ ಕೊಂಡುಕೊಂ ... ಹೋಗುವರು

... ಇಲ್ಲಿ ನೋಡಿ —(೧) ... (೨) ... ಉಪ ... ತರಗಳನ್ನು ... ತಿಳಿಸಿದ್ದೇವೆ

... ಚನ್ನಾಗಿ ... ಬಿಸಿಲ ಬಾಳಿಕೆಯುಳ್ಳ ಟೋಪಿಗಳು ... ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗದ ... ಚನ್ನಾಗಿ ... ನಮ್ಮಲ್ಲಿ ದೊರೆಯುವವು.

... ಕೆಂಪು, ಕಪ್ಪು, ..., ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ... ಆ, ೧ ರೂ ೪ ಆ.

... ಯುಳ್ಳ ಟೋಪಿಗಳು ರೂ ೧ ೮, ರೂ ೧ ೧೨

... ಚುಕ್ಕಿಯುಳ್ಳ ಟೋಪಿಗಳು ರೂ ೨

... ಟೋಪಿಗಳು ೧ ರೂ ೧೨ ಆ; ೧ ರೂ ೪ ಆ, ೧ ರೂ ೬ ಆ.

... ಟೋಪಿಗಳು ೧ ರೂ ೮ ಆ, ೧ ರೂ ೬ ಆ

... ಟೋಪಿ, ... ಮೋಜೋದು, ... ಮೋಜೋದು, ... ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ... ನಮ್ಮ ವಿಳಾಸ —

..., ಹಾಸನದ ಟೋಪಿ ಕಾರ್ಖಾನೆ, ಹಾಸನ.

ಬಾಲ್ಯದಿಂದ ಹೋದದ ಅಗ್ರದ ಕೆಲವು ಎಣ್ಣೆಗಳು ಈಗ ಎಲ್ಲಿಯೂ ... ತೈಲ ನಿಮ್ಮ ಕೇಶಾಲಂಕಾರವನ್ನು ಅವಶ್ಯ ದಾಕಿ ಕಳೆದುಕೊಳ್ಳಬೇಡಿ

“ಕಾಮಿನಿಯಾ ತೈಲವು.”

(ರಿಜಿಸ್ಟರ್ಡ್)



ಅಗ್ಗವಾಗಿ ಸಿಕ್ಕುವ ಕೆಲವು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತುಹೋಗುತ್ತೆ. ಆದಕಾರಣ ಸರ್ವೋತ್ತಮವಾಗಿಯೂ ಪ್ರಸಿದ್ಧವಾಗಿಯೂ ಇರುವ “ಕಾಮಿನಿಯಾ ತೈಲ”ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ..., ಕೊಡುತ್ತೆ, ಪ್ರಾಣಕೊಡುತ್ತೆ ... ಮತ್ತು ... ಯ ಕೂದಲನ್ನು ... ಮುಟ್ಟಿಸಿ ಬೆಳೆಸುತ್ತೆ ಕೂದಲು ... ನಿಷ್ಫಲವಾಗಿ, ನಯವಾಗಿ, ಹೊಳೆಯುವವು, ..., ... ದಿಂದ ಕೂಡಿ, ಅಗಾಗ್ಗೆ ಹರಿದು ಬಿದ್ದು ಹೋಗದೆ ಬಲವಾಗಿ ಬೆಳೆಯು ... ಕೂದಲಿಗೆ ಹೊಳಪುಕೊಡುತ್ತೆ ... ಹುರುಡೆಯನ್ನು ಶುದ್ಧಮಾಡುತ್ತೆ ... ಹೊಟ್ಟನ್ನು ... ಉತ್ತಮವಾದ ... ಗಂಧವುಳ್ಳ ... ಕೂದಲು ... ಮನಸ್ಸಿಗೆ ಆನಂದವನ್ನೂ ... ಕೊಡುತ್ತದೆ ... ಕೂಡ ... ಶರೀರ ಬಲಪಡಿಸಿ, ನರೆಕೂದಲನ್ನು ಕಪ್ಪಾಗಿಯೇ ತಿರುಗಿಸಿ ಕೇಶರಾಶಿಯನ್ನು ಸವಿದವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳೆಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ತೈಲವನ್ನೇ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ

ಇದರ ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಮೂರು ತರಿಸಿದರೆ 3 ಸೀಸೆಗಳಿಗೆ ರೂ 2-10-0 ಅಂಚೆಯ ವೆಚ್ಚ 0-7-0

ನಮೂನೆಯು ಬೇಕಾದರೆ ಒಂದು ಅಣೆಯ ಸ್ಟಾಂಪನ್ನು ಕಳುಹಿಸಿ ಮೈಸೂರು ... ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ... ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದ ... ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ ಮನ್ನಾರಗುಡಿ ... ಬರೆಯುವದು— ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಇದನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಅನುಸರಿಸ್ಟು ಹಚ್ಚಿಕೊಳ್ಳುತ್ತಾರೆ ವಿರುದುನಗರ ಕೆ ಪಿ ಎಸ್ ಹೈಸ್ಕೂಲ್ ಹೆಡ್ ಮಾಸ್ಟರ್ ಮಿ|| ಎಂ ಸುಬ್ರಹ್ಮಣ್ಯಯ್ಯನವರು ಬರೆಯುವದು— ನನ್ನ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ಪರಿಕ್ಷೆಮಾಡಿದೇನೆ ಅದು ಕೂದಲನ್ನು ಹುಟ್ಟಿಸಿ ಅಂದವಾಗಿಯೂ, ಕೋಮಲವಾಗಿಯೂ, ... ವಾಗಿಯೂ ಬೆಳೆಸುತ್ತದೆಂದು ಖಂಡಿತವಾಗಿ ಹೇಳಬಲ್ಲೆನು ... ಕಳಿಸಿಕೊಡಿ ... ಒಂದು ... ಮುಗಿದುಹೋಯಿತು ಇದೇ ಉತ್ತಮೋತ್ತಮವಾದ ಎಣ್ಣೆ ... ಸಂತೋಷದಿಂದಲೂ ಹೇಳಬಲ್ಲೆನು ... ಒಂದು ಸಲ ತರಿಸಿ ಪರಿಕ್ಷೆಮಾಡಿ

ಎಚ್ಚರಿಕೆ— ... ಇದ್ದರೆ ... ಕಾಮಿನಿಯಾ ... ಅವನ ಹೆಸರು ವಿಳಾಸದ ಸಮೇತ ನಮಗೆ ... ಸ್ವಂತ ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ವಿಕ್ರಯಮಾಡುತ್ತಾರೆಂಬುದನ್ನು ಮರೆಯಬೇಡಿ “ಇದು ಅಗ್ಗ, ಇದು ಒಳ್ಳೆಯದು” ಎಂದು ಹೇಳಿ ಮೋಸಮಾಡುವರು ಇಂಥಾ ಮೋಸಕ್ಕೆ ... ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ಕೇಳಿ ಕೊಂಡುಕೊಳ್ಳಿ.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲೀಷಿನಲ್ಲಿ ಬರೆಯಬೇಕು

ನಮ್ಮ ವಿಳಾಸ — [8-11]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಶಬ್ದದರ್ಪಣದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಿರಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು. ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ. ಕ್ರಯ ... ಆಣೆ. ಅಂಚೆಕೂಲಿ ಉಚಿತ

[187 13] ಸಿಕ್ಕುವ ಸ್ಥಳ— ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಗೃಹಕೃತ್ಯದ ನೋಟೀಸು.

ಬೆಂಗಳೂರು ತಾಲ್ಲೂಕು ಚಿಕ್ಕಬಾಣಾವಾರದಲ್ಲಿರುವ ಬಿಸ್ತರ ಜಂಗಮಯ್ಯನ ಹೆಂಡತಿ ಮುಚ್ಚಮ್ಮ ತಿಳಿಯಪಡಿಸುವದೇನೆಂದರೆ ನನ್ನ ಗಂಡ ಮೊದಲನೆಯು ಪ್ಲೇಗಿನಲ್ಲಿ ಮೃತಪಟ್ಟನು ಈ ಕೆಳಗೆ ಕಂಡ ಚಕ್ಕುಬಂದಿಯುಳ್ಳ ನನ್ನ ಬಾಬತು ವಠಾರದಲ್ಲಿ ಯಾರ ಅಗಾಯಿತಿಯಿಂದಲೂ ನಾನು ಅನುಭವಮಾಡಿಕೊಂಡಿರುತ್ತೇನೆ ಈ ವಠಾರದ ಪಾಲನ್ನು ನನ್ನ ಅಕ್ಕ ಮುಚ್ಚಮ್ಮನ ಮರಣಾನಂತರ ನನ್ನ ಗಂಡನ ಅಕ್ಕ ಮುಚ್ಚಮ್ಮನೆಂಬುವಳು ನನಗೆ ಮೋಸಪಡಿಸಬೇಕೆಂಬ ಇರಾದೆಯಿಂದ ತನ್ನ ಹೆಸರಿಗೆ ಮಾಡಿಸಿಕೊಂಡು ತನ್ನ ತಂಗಿಯ ಮಕ್ಕಳಿಗೆ ಸದರಿ ಸ್ವತ್ತನ್ನು ಪರಾಧೀನ ಮಾಡುವದಾಗಿ ವಗೈರೆ ವರ್ತಮಾನ ಕೇಳುತ್ತೇನೆ ಈಕೆಗೆ ಈ ಸ್ವತ್ತಿನಲ್ಲಿ ಯಾವ ವಿಧವಾದ ಹಕ್ಕುಬಾಧ್ಯತೆಗಳೂ ಇಲ್ಲವಾಗಿ ಅದನ್ನು ಈಕೆಯಿಂದ ಯಾರು ಯಾವ ವಿಧವಾಗಿ ಪರಾಧೀನಮಾಡಿಕೊಂಡರೂ ಅದು ಅರ್ಜಿತವಾಗತಕ್ಕದ್ದಲ್ಲ ಈ ಸ್ವತ್ತಿನಲ್ಲಿ ನನ್ನ ಹೊರತು ಯಾರಿಗೂ ಯಾವ ವಿಧವಾದ ಹಕ್ಕುಬಾಧ್ಯತೆಯೂ ಇಲ್ಲವೆಂದು ಈ ಮೂಲಕ ತಿಳಿಸಿರುತ್ತೆ. ಚಕ್ಕುಬಂದಿ —ಪೂರ್ವಕ್ಕೆ ಕುಂಬಾರ ಬಾಲಪ್ಪನ ಅವಿಗೆ ಮನೆ, ಪಶ್ಚಿಮಕ್ಕೆ ಶ್ಯಾನುಭೋಗ ವೆಂಕಟರಮಣಪ್ಪನ ಮನೆ, ಉತ್ತರಕ್ಕೆ ಹೆದ್ದಾರಿ, ದಕ್ಷಿಣಕ್ಕೆ ಕುಂಬಾರ ಸಂಜೀವಪ್ಪನ ಮನೆ— ಈ ಮಧ್ಯೆ ಇರುವ ಐದು ಅಂಕಣದ ಹುಲ್ಲುಮನೆ ಮತ್ತು ಇದಕ್ಕೆ ಸೇರಿದ ಅಂಗಳ ಸಹ [19 1]

ಈ () ಎಳೆ ಗುರುತಿನ ರುಜುವು ಮುಚ್ಚಮ್ಮ ಹಾಕಿದ್ದು

ಕುಂತಳಾನಂದ ತೈಲವು

147-21

ಹಿಂದೂಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ಸುವಾಸನೆಗಳನ್ನು ಪರಿಮಳಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 1 ಬಾಟಲಿಗೆ 4 ರೂಪಾಯಿ. 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಟಿ ಎಸ್. ಸಾಧು ಮತ್ತು ಕಂಪನಿ,
ಸೌಕಾರ್‌ಪೇಟೆ, ಮದರಾಸ್.

ಬಂದಿದೆ! ಅಪೂರ್ವಗ್ರಂಥ!! ೭೧೭ ಪುಟಗಳು!!!

ಪ್ರತಾಪಕಂಠೀರವಚರಿತ್ರೆ

ಇದರಲ್ಲಿ (1) ... (2) ... (3) ... ಚಿತ್ರವಿಚಿತ್ರವಾದ ... ಕಥಾ ಸಂದರ್ಭಗಳು, (4) ನವ, ನವರಸ್ಯ, ... ವರ್ಣನೆಗಳು, (5) ಮನುಷ್ಯ ಯತ್ನಕ್ಕೆ ... ಈಗಿನ ... ತರ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳತಕ್ಕಂಥಾ ಸುಲಭವಾದ ಶೈಲಿ, (7) ... ಮನಸ್ಸನ್ನು ಎಳೆಯುವಂಥಾ ಕಥಾ ಭಾಗಗಳು, ಇವು ಕೂಡಿವೆ

... ಮುಗಿಯುವ ವರೆಗೂ ... ಕಥೆಯ ಸ್ವಾರಸ್ಯ ತಾನಾಗಿ ಗೊತ್ತಾಗುವದು.

ಕ್ರಯ —೧ನೇ ಭಾಗ ೬ ಆಣೆ, ೨ನೇ ಭಾಗ ೧೦ ಆಣೆ, ಒಟ್ಟು ಪ್ರತಿಗೆ ೧ ರೂಪಾಯಿ ಟಪಾಲು ಹಾಸಲು ಬೇರೆ [10 3]

ನಮ್ಮ ವಿಳಾಸ ... ಕಂಪನಿ, ಬೆಂಗಳೂರು ಸಿಟಿ

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ

ಮೈಸೂರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ಒಂದು ವರುಷಕ್ಕೆ

(ಅಡ್ವಾನ್ಸು) ರೂ ೧—೦—೦

ತರಿಸುವವರು ಆಫೀಸಿನಿಂದ ಅಂಚೆಯ ಮೂಲಕ ತರಿಸಿ ಕೊಂಡಲ್ಲಿ ಒಂದು ಪ್ರತಿಗೆ ೧೨ ತಿಂಗಳಿಗೆ ಪೋಸಲ್ ಸೇರಿ ರೂ ೧—೧೪—೦

,, ,, ೬ ,, ,, ೦—೧೫—೦

ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸಗಳನ್ನು ಬದಲಾಯಿಸುವಾಗಲೂ, ಚಂದಾ ಕಟ್ಟುವಾಗಲೂ ತಮಗೆ ಪಾವತಿ ಆಗುವ ಪತ್ರಿಕೆಯ ವಿಳಾಸದಲ್ಲಿ ಎಡ ಕಡೆ ಕಾಣಿಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು.

ಪ್ರಕಟನೆ ನೋಟೀಸುಗಳ ದರಗಳು

"ವೃತ್ತಾಂತ ಪತ್ರಿಕೆ"ಯಲ್ಲಿ ಏದು ಪಂಕ್ತಿಗೆ ಮೀರದ ಪ್ರಕಟನೆ ಅಥವಾ ನೋಟೀಸಿಗೆ ಒಂದು ವಾರಕ್ಕೆ ಒಂದು ರೂಪಾಯಿ ಛಾರ್ಜು ಬೀಳುವುದು, ಅಂದರೆ ಪ್ರತಿ ಒಂದು ಅಂಗುಲದ ಪ್ರಮಾಣದ ಸ್ಥಳಕ್ಕೂ ಒಂದು ಸಲಕ್ಕೆ ಒಂದು ರೂಪಾಯಿನಂತೆ ಕೊಡಬೇಕು. ಹೆಚ್ಚು ಸ್ಥಳವನ್ನು ಅಪೇಕ್ಷಿಸುವವರು ಕಂಟ್ರಾಕ್ಟು ದರಗಳನ್ನು ಮ್ಯಾನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ನಮ್ಮ ವಿಳಾಸ—ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಹತ್ತಿಯ ಹಿಂಡಿ! ಹತ್ತಿಯ ಹಿಟ್ಟು!

ಶಾಸ್ತ್ರಜ್ಞರ ಅಭಿಪ್ರಾಯ

"ಈ ಪದಾರ್ಥಗಳನ್ನು ಪರಿಶೋಧಿಸಿದ್ದರಲ್ಲಿ ಇದು ದನಗಳಿಗೆ ಉತ್ಕೃಷ್ಟವಾದ ಆಹಾರವಾಗಿದೆ ... ಇದು ಬಹಳ ಪುಷ್ಟಿಕಾರಿ. ಇವಕ್ಕಿಂತ ಉತ್ತಮವಾಗಿ ತಯಾರಿಸಲ್ಪಡುವುದು ಅಸಾಧ್ಯ" ಎಂದು ಮುಂಬಾಯಿ ವ್ಯವಸಾಯದ ಇಲಾಖೆಯ ರಸಾಯನಶಾಸ್ತ್ರಜ್ಞರೂ, ಪೂನಾ ವ್ಯವಸಾಯದ ಕಲಾಶಾಲೆಯ ಅಧ್ಯಕ್ಷರೂ ಆದ ಡಾಕ್ಟರ್ ಮ್ಯಾನ್ ಎಂಬ ದೊಡ್ಡ ಪಂಡಿತರು ಬರೆದಿರುವರು. [೫೦ ೨]

ಒಂದೇ ಭಾಗ ಹಿಂಡಿಗೆ ನಾಲ್ಕು ಭಾಗ ಹೊಟ್ಟು ಬೆರಸಿ ದನಗಳಿಗೂ ಕುದುರೆಗಳಿಗೂ ಕೊಡುತ್ತಾ ಬಂದರೆ ಬಲಹೆಚ್ಚಿ ದೇಹವು ಕದನೋಲ್ಲಾಸವಾಗುವುದು ಕರೆಯುವ ಎಮ್ಮೆ ಹಸುಗಳಿಗಂತೂ ಈ ಹೊಟ್ಟು ಹಿಂಡಿಯೂ ಅತ್ಯವಶ್ಯಕ.

ಎಲ್ಲಾ ಬಗೆಯ ಪೈರುಗಳಿಗೂ, ಕಬ್ಬು, ತರಕಾರಿ, ಹೂವಿನ ಗಿಡಗಳಿಗೂ ಇವು ಕೇವಲ ಅತ್ಯವಶ್ಯವಾದ ಗೊಬ್ಬರ. ನಮ್ಮ ವಿಳಾಸ —

ಇಂಡಿಯನ್ ಕೋ-ಆಪರೇಟಿವ್ ಸ್ಟೋರ್ಸ್ ಕಂಪನಿ ಲಿಮಿಟೆಡ್ (೧) ಕಲಾಸಿಪಾಳ್ಯ ರೋಡ್, ಬೆಂಗಳೂರು ಸಿಟಿ

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

H 12

ಎಂಥಾ ಪೆಟ್ಟು ಬಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರತಿ ಇವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಳುಕು, ಸೊಂಟನೋವು, ಗಂಟಲು ಕಟ್ಟುವುದು, ಕೆಮ್ಮುಗಳು, ಶೀತನೆಗಡಿ ಪಾರ್ಶ್ವರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವರ್ತಕನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸು. ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯೋಜಿತ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 4 ಆಣೆ. 1 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು :— (1) ಎಸ್. ಪೀಟರ್ಸ್, 97 ವರದಮುತ್ತಿಯಪ್ಪನ್ ಬೀದಿ, ಪುರಸವಾಕಂ, ವೇಪೇರಿ, ಮದರಾಸ್. (2) ಜಿ. ಎಸ್. ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು.

ವಿಕ್ಟೋರಿಯಾ ಲೈಫ್ ಅಷೂರೆನ್ಸ್ ಕಂಪನಿ ಲಿಮಿಟೆಡ್.

(1912 ನೇ ಪ್ರಾವಿಡಂಟ್ ಸೊಸೈಟಿ ಆಕ್ಟಿನಂತೆ ರಿಜಿಸ್ಟರಾದದ್ದು)

ಮೂಲಧನ—10,00,000 ರೂಪಾಯಿ (ಹತ್ತು ಲಕ್ಷ)

ಹೆಡ್ ಆಫೀಸ್—೫, ಕ್ಲೈವ್ ಸ್ಟ್ರೀಟ್, ಕಲ್ಕತ್ತಾ

ದಕ್ಷಿಣ ದೇಶ ಮತ್ತು ಸಿಲೋನ್‌ಗೆ ಬ್ರಾಂಚ್ ಆಫೀಸು— ಚೂಳೈ, ಮದರಾಸ್

"ವಿಕ್ಟೋರಿಯಾ"—ಮಹಾರಾಜರುಗಳಿಂದಲೂ, ರಾಜರುಗಳಿಂದಲೂ, ಬಂಗಾಳದ ಮುಖಂಡ ದೊಡ್ಡ ಮನುಷ್ಯರಿಂದಲೂ ಪೋಷಿಸಲ್ಪಡುತ್ತದೆ.

"ವಿಕ್ಟೋರಿಯಾ" ಡೈರೆಕ್ಟರುಗಳೆಲ್ಲಾ ಲಕ್ಷಾಧಿಕಾರಿಗಳನ್ನು ಒಳಗೊಂಡ ಪ್ರಖ್ಯಾತರಾಗಿರುವ ದೊಡ್ಡ ಮನುಷ್ಯರಾಗಿದ್ದಾರೆ.

ಧಾರಾಳವಾದ ಬೋನಸ್ಸಂಟು, ಬಹಳ ಬೇಗನೆ ಹಣ ಪಾವತಿಯಾಗುವುದು, ನಿಂತುಹೋದ ಪಾಲಿಸಿಗಳನ್ನು ಸುಲಭ ದರಗಳಲ್ಲಿ ಪುನರುಜ್ಜೀವಿಸಬಹುದು — ಇವೇ "ವಿಕ್ಟೋರಿಯ"ದ ಪ್ರಧಾನ ಲಕ್ಷಣಗಳಾಗಿರುತ್ತವೆ.

ಪ್ರಾಸ್ಪೆಕ್ಟಸ್, ಪ್ರೊಪೋಜಲ್ ಫಾರಂ, ಬೋನಸ್ ಪಟ್ಟಿಗಳನ್ನು ಅಪೇಕ್ಷಿಸತಕ್ಕವರು ಈ ವಿಳಾಸಕ್ಕೆ ಬರೆಯಬೇಕು— [೩೦]

"ವಿಕ್ಟೋರಿಯಾ" ಕಂಪನಿ ಸೆಕ್ರೆಟರಿ, ಚೂಳೈ, ಮದರಾಸ್

ಏಜೆಂಟ್ ಮತ್ತು ... ... ಬೇಕು— ಪ್ರಾಮಾಣಿಕವಾದ ಕಮಾರ್ಷ ಮತ್ತು ... ಸಂಬಳ

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



ಬೆನ್ನು ಬಿಗಿತದ ನೋವು, ಪಕ್ಕಗಳಲ್ಲಿ ಆಗುವ ನೋವು, ಕೀಲುಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ನೋವು ವಾಯುನೋವು— ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಾಂಸಖಂಡಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಳೆಯುವ ಬಾಧೆ, ಮೈ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ರೆ ಹತ್ತದೆ ಇರುವುದು—ಇವೇ. ಇವೆಲ್ಲಾ ನಿಮಗೆ ಯಾವಾಗ ಅಂಟುವುವೋ, ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೇ ಹಿತಕರವಾದ ಒಂದು ತರಹ ಕಾವು ಮೂಡಿಕೊಳ್ಳುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಆದೇನೇ ಆಗಿಂದಾಗ್ಗೆ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕ್ರಯ ದ ಮುಟ್ಟಿನ್ನೇನೂ ಇಲ್ಲ.

ಇದು ಎಲ್ಲಿಲ್ಲೂ ಮಾರಲ್ಪಡುವುದು   ಸಣ್ಣ ಸೀಸೆಗೆ ೧ ರೂಪಾಯಿ   ದೊಡ್ಡ ಸೀಸೆಗೆ ೨ ರೂಪಾಯಿ

ಡೋಂಗರೆ ಇವರ ಬಾಲಾಮೃತ.

[115 3]

ಸಣ್ಣ ಮಕ್ಕಳಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ (ಸವಿ) ಇರುವುದರಿಂದ ಮಕ್ಕಳು ಬಹಳ ಆನಂದದಿಂದ ತೆಗೆದುಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ಥಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ

ಅಮೃತಾಂಜನ. (Regd)

ಎಲ್ಲ ವಿಧವಾದ ತಲೆಶೂಲೆ, ವಾತ, ಸಂಧಿವಾತ, ತಲೆನೋವು, ಸೊಂಟನೋವು, ಶೀತ, ಕಫ, ಗಂಟಲುನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣವಾಗುವವು. ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ. ಬಾಟ್ಲಿ 1ಕ್ಕೆ 0—8—0

ಅರ್ಧ ಕ್ರಯಕ್ಕಿಂತಲೂ ಕಡಮೆ

ಹತ್ತು ಲಕ್ಷ ದೊಡ್ಡ ಸೈಜು ಪೋಸ್ಟುಕಾರ್ಡುಗಳು ಅವುಗಳು ಬೆಳ್ಳಗಾಗಿಯೂ ನಯವಾಗಿಯೂ ಇವೆ. 1,000 ಕ್ಕೆ ಮುಂಚಿನ ಕ್ರಯ ರೂ 2—8—0, ಈಗ 1 ರೂ. ವಿ. ಪಿ. ಖರ್ಚು 12 ಆಣೆ 500 ಕ್ಕೆ 8 ಆಣೆ ವಿ. ಪಿ. ಖರ್ಚು 8 ಆಣೆ

1913 ನೆಯ ವರ್ಷದ ಕ್ಯಾಲೆಂಡರ್ ೪ ಬಾಟ್ಲಿ ಅಮೃತಾಂಜನ ತರಿಸಿಕೊಂಡವರಿಗೆ ಪ್ರಗಸ್ಟ್ಯೆಯರ ವರ್ಣಚಿತ್ರವುಳ್ಳ ಬಹುರಂಗ ಕ್ಯಾಲೆಂಡರ್ 1ಕ್ಕೆ 1 ಆಣೆ ವಿ. ಪಿ. ಸಹಿತ [48 1

ಅಮೃತಾಂಜನ ಡಿಪೋ, ಫೋರ್ಟು, ಮುಂಬಯಿ.

ಲೇವಾದೇವಿಯ ಕಷ್ಟ ಪರಿಹಾರ.

ಕಾನೂನು ಜ್ಞಾನವನ್ನು ತಿಳಿದುಕೊಳ್ಳದೆ ಅನೇಕರು ಪತ್ರಗಳನ್ನು ಬರೆಯಲು ಪಕ್ರಮಿಸಿ ಲೇವಾದೇವಿ ಮಾಡುವವರಿಗೆ ನಾನಾ ವಿಧವಾದ ದಂಡಗಳು ಬೀಳುವವು ಮತ್ತು ಅಂಥ ಪತ್ರಗಳನ್ನು ರಿಜಿಸ್ಟ್ರೇಷನ್ ಆಫೀಸಿನವರು ಇಂಪೌಂಡ್ ಮಾಡಿ ಜುಲ್ಮಾನೆಗೆ ಗುರಿಮಾಡುತ್ತಾರೆ. ಆದ್ದರಿಂದ ಸರ್ಕಾರದವರು ಕೆಲವು ಪಟ್ಟಣ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಾದರೂ ಸಬ್ ರಿಜಿಸ್ಟ್ರೇಷನ್ ನೌಕರರನ್ನಾಗಲಿ ರಿಜಿಸ್ಟ್ರೇಷನ್ ವ್ಯಾಸಂಗ ಮಾಡಿ ಲೈಸೆನ್ಸ್ ಪಡೆದವರನ್ನು ಪತ್ರ ಬರೆಯಲು ನೇಮಕ ಮಾಡಿಕೊಡಬೇಕೆಂದು ಬಹು ಮಂದಿ ಪತ್ರಿಕೆಗಳಲ್ಲಿ ಪ್ರಲಾಪಿಸುತ್ತಿರುವರು. ಇದು ಸಾಧ್ಯವಲ್ಲದ ಕೋರಿಕೆ. ಇನ್ನಾದರೂ ಪರದುದ್ದು ಕೊಡುವುದು ತಪ್ಪುವುದಿಲ್ಲ. ಆದ್ದರಿಂದ ಸ್ಟಾಂಪು ಮತ್ತು ರಿಜಿಸ್ಟ್ರೇಷನ್ ಕಾನೂನುಗಳನ್ನು ಚೆನ್ನಾಗಿ ಪರಿಶೀಲಿಸಿ ಅನುಭವಶಾಲಿಗಳಾದ ರಿಜಿಸ್ಟ್ರೇಷನ್ ನೌಕರರಿಂದ ಬರೆಯಲ್ಪಟ್ಟು, ಗವರ್ನಮೆಂಟಿನವರಿಂದ ರಿಜಿಸ್ಟ್ರೇಷನ್ ಮ್ಯಾನ್ಯುಯಲ್ ಎಂದು ಕರೆಯಲ್ಪಟ್ಟ "ಲೇಖನಪ್ರಕಾಶಿಕಾ" ಎಂಬ ಅತ್ಯುಪಯುಕ್ತವಾದ ಪುಸ್ತಕ ಒಂದನ್ನು ಪ್ರತಿ ಒಬ್ಬರೂ ತರಿಸಿಟ್ಟುಕೊಂಡರೆ ಅನೇಕ ದಂಡಗಳನ್ನು ಖಂಡಿತವಾಗಿಯೂ ತಪ್ಪಿಸಿಕೊಳ್ಳಬಹುದು. ಪ್ರತಿ ವ್ಯಾನುಫೋರ್ ಹಟೀಲ್, ಸ್ಕೂಲ್ ಮಾಸ್ಟರ್, ಲೇವಾದೇವಿ ಮಾಡುವವರು ಸಹಾ ಅವಶ್ಯಕವಾಗಿ ತರಿಸಿಕೊಳ್ಳಬೇಕು. ಇದರಲ್ಲಿ ಪತ್ರ ಬರೆಯತಕ್ಕ ನಮೂನೆಗಳಲ್ಲದೆ ಸ್ಟಾಂಪು ಮತ್ತು ರಿಜಿಸ್ಟ್ರೇಷನ್ ವಿಷಯಗಳನ್ನು ಬಹಳ ಚೆನ್ನಾಗಿ ವಿವರಿಸಿದೆ. ಮಾರ್ಚ್ ಆಖೈರೊಳಗೆ ಪಡೆಯುವವರಿಗೆ ಕ್ರಯ ಅಂಚೆ ವೆಚ್ಚ ಸೇರಿ ರೂ 1 8 0 ನಂತರ ರೂ ...

[52 1]   ವಿಳಾಸ—ಕೆ. ಮುಟ್ಟಮರಿ ಮತ್ತು ಕಂಪನಿ, ಶಿವಮೊಗ್ಗ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕೋಪಕಾರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಹೊಟ್ಟೆ ನೋವು, ಸಂಧುಗಳ ನೋವು, ಮೈ ಶಾಲು ರೋಗ (ಘಾರ), ಮೈ ನಡುಕ, ಶೀತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ಸೆಗಣಿ, ನಿಸ್ತ್ರಾಣ, ಆರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣವಾಗುತ್ತದೆ. ಊಟಕ್ಕೆ ಮುಂಚೆ ಅಥವಾ ಆಗಿಯೂ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಅವಕಾಶಕೊಡದೆ, ನರಗಳ ಹಾಗೂ ಎಲುಬಿನ ಶಕ್ತಿಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಬುದ್ಧಿ ವಾತ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುದೋಷ, ಮಕ್ಕಳ ... ಜ್ವರ ಸಣ್ಣಜ್ವರ, ಕ್ಷಯ ಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ. 320 ಮಾತ್ರೆಗಳ ಕುಪ್ಪಿಗೆ 1 ಆಣೆ. ಕುಪ್ಪಿಗೆ ಒಂದು ಕುಪ್ಪಿ ಸೇರ್ಪು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 1 ಆಣೆ. [1 ೫ ೨೮]

೦ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ಔಷಧ ಸರ್ವದಾ ಸಂಜೀವನವಾಗಿದೆ. ಕ್ಷಣಮಾತ್ರದಲ್ಲಿ ರೋಗಿಗಳೂ ಆಶ್ಚರ್ಯವಾಗುವ ತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಕ್ಕೆ ಮೂತ್ರವು ಕಟ್ಟಿದ ಕೂಡಲೆ ಕೊಡಬೇಕು ... ಗುಣವು ತೋರುತ್ತದೆ. ಸಮಯದಲ್ಲಿ ಹುಡುಕಬೇಡಿ ... ಒಂದು ಬುಡ್ಡಿಯನ್ನು ಮನೆಯಲ್ಲಿ ಇಟ್ಟುಕೊಂಡಿರಬೇಕು. ಔಷಧೋಪಚಾರ ಸಹಾಯವಿಲ್ಲದ ಹಳ್ಳಿ ಕಡೆ ಕಾಲರಾವನ್ನು ಬೇಗನೆ ಗುಣಪಡಿಸುವ ಅಮೃತ ಇದೊಂದು.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ 1 ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ   ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲೆ, ಮೈಸೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

31—1—1913 ರಿಂದ 28—2—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	8	8	1	1
ಮೈಸೂರು "	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	16	11	8	4
ಮೈಸೂರು "	24	16	198	119
ಕೋಲಾರ್ "	4	5	0	0
ಕೋಲಾರ್ ಚಿನ್ನದ ಗಣಿಗಳು	11	8	0	0
ತುಮಕೂರು ಡಿಸ್ಟ್ರಿಕ್ಟು	9	6	0	0
ಹಾಸನ "	0	0	14	7
ಚಿತ್ರದುರ್ಗ "	0	0	0	0
ಕಡೂರ್ "	8	4	0	0
ಶಿವಮೊಗ್ಗ "	7	5	0	0
ಜುಮ್ಲಾ	86	44	221	131

ಶಾಲಿವಾಹನ ಶಕ ವರುಷಂಗಳು 1835 ನೆ ಪರೀಧಾವಿ ಸಂವತ್ಸರೇ ಉತ್ತರಾಯಣೆ ಶಿಶಿರಋತೌ ಫಾಲ್ಗುಣ ಶುದ್ಧ ೯ ಶುಕ್ರವಾರದಿಂದ ಫಾಲ್ಗುಣ ತ್ರಯೋದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಮಾರ್ಚಿ

ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಹಾನ ಮಾಸ ತೇದಿ
ಶುಕ್ರ 7	ಷಷ್ಠಿ	10 19	ರೋಹಿಣಿ	59 18	2
ಶನಿ 8	ಸಪ್ತಮಿ	8 10	ಮೃಗಶಿರ	58 11	1
ಭಾನು 9	ಅಷ್ಟಮಿ	4 15	ಆರ್ದ್ರಾ	56 1	4
ಸೋಮ 10	ನವಮಿ	1-11	ಪುನರ್ವಸು	53 47	5
ಮಂಗಳ	ಏಕಾದಶಿ	52 0	ಪುಷ್ಯ	49 33	1
ಬುಧ "	ದ್ವಾದಶಿ	46-1	ಆಶ್ಲೇಷ	45 28	7
ಗುರು 13	ತ್ರಯೋದಶಿ	40-7	ಮಖ	41-11	8

ಮೇಲುಕೋಟೆಯಲ್ಲಿ ಕಲ್ಯಾಣೋತ್ಸವ, ಮೋಹಿನಿನಾಟ ೯ ಮಳೆ —ಉತ್ತರಾಭಾದ್ರ 1 ನೇ ಪಾದ + ನಂಜನಗೂಡಿನಲ್ಲಿ ಶ್ರೀಕಂಠನಮುಡಿ ೯ ಸ್ಮಾರ್ತ ಏಕಾದಶಿ, ಮೇಲುಕೋಟೆಯಲ್ಲಿ ವೈರಮುಡಿ ಉತ್ಸವ, ರಾಮಕೃಷ್ಣಯವರ ಜಯಂತಿ, ವೈಷ್ಣವ ಏಕಾದಶಿ, ಉಪವಾಸದ ದಿವಸ, ನಂಜನಗೂಡಿನಲ್ಲಿ ಶ್ರೀಕಂಠೇಶ್ವರ ರಥ, ತಿರುಮಕೂಡ್ಲು ಅಗಸ್ತ್ಯೇಶ್ವರ ರಥ, ಶಿವನಸಮುದ್ರದ ಸೋಮೇಶ್ವರ ರಥ, ಮಳೆ ನಕ್ಷತ್ರ—ಉತ್ತರಾಭಾದ್ರ 2 ನೇ ಪಾದ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಅಕ್ಕಿ ಪಲ್ಲಾ ೧ಕ್ಕೆ (ಹೊಸದು) ರೂ	೧೫ ೦-೦	೧೭ ೮ ೦
ಅಕ್ಕಿ ಅವಲ	೧೫ ೨-೦	೧೭ ೮ ೦
" ದೊಡ್ಡು	೧೫ ೦ ೦	೧೭ ೦ ೦
ಜಿರಿಗೆ ಅಕ್ಕಿ	೧೪ ೮ ೦	೧೭ ೪ ೦
" ಅವಲ್ "	೧೭-೨ ೦	೧೮ ೮ ೦
" ದೊಡ್ಡು "	೧೬ ೦ ೦	೧೭ ೮ ೦
ಸಣ್ಣ ಬೇಳೆ ಅವಲ್ ಪಲ್ಲ ೧ಕ್ಕೆ	೧೪-೦ ೦	೧೩ ೮ ೦
" ದೊಡ್ಡು "	೧೩ ೦ ೦	೧೨ ೮ ೦
ರಾಗಿ ಪಲ್ಲಾ ೧ಕ್ಕೆ	೬ ೧೨ ೦	೫ ೦ ೦
"	೬ ೪-೦	೪ ೧೨ ೦
"	೬ ೧೨ ೦	೭ ೪-೦
ಕಡಲೆ ಪಲ್ಲ ೧ಕ್ಕೆ	೧೦ ೪ ೦	೧೩ ೧೨ ೦
ಅವರೆ "	೯ ೮ ೦	೧೧ ೦-೦
"	೧೧ ೨ ೦	೧೪-೦ ೦
"	೧೪ ೮ ೦	೧೬ ೦ ೦
"	೧೦ ೮ ೦	೧೨-೦ ೦
ಬೆಲ್ಲ ೧೨ಒಕ್ಕೆ	೨೪ ೦ ೦	೨೪ ೦ ೦
ಹುರಳಿ ಪಲ್ಲಾ ೧ಕ್ಕೆ	೬ ೧೦ ೦	೭-೦ ೦
ಸಕ್ಕರೆ ೧೨೭ ಸೇರಿಗೆ	೧೨ ೮ ೦	೧೪ ೦ ೦
ಹರಳು ಮಣ ೧ಕ್ಕೆ	೨ ೪ ೦	೩ ೮ ೦
ಎಳ್ಳು "	೦ ೮	೩ ೪-೦
" ದೊಡ್ಡು	೩ ೦ ೦	೧ ೮-೦
ತೆಂಗಿನ ಬಟ್ಟು ೧೦೦ಕ್ಕೆ	೫ ೦ ೦	ಮಣ ೫ ೮-೦
ಹೊಗೆ ಮಣ ೧ಕ್ಕೆ	೩-೨ ೦	೬ ೬ ೦
" "	೫ ೧೨ ೦	೬ ೦ ೦
ತೊಗರಿ ಪಲ್ಲಾ ೧ಕ್ಕೆ	೫ ೦-೦	೫ ೪ ೦
" "	೫ ೮ ೦	೬ ೦ ೦
ಹುಣಿಸೆ ಮಣ ೧ಕ್ಕೆ	೧ ೮ ೦	೧ ೪-೦
ಮೆಣಸು "	೧ ೦-೦	೦ ೧೪-೦
ಮಣ ೧ಕ್ಕೆ	೧೮ ೦-೦	೧೯-೦-೦
ತುಪ್ಪ ಪೆಟ್ಟು ೧ಕ್ಕೆ	೫-೧೧ ೦	೫ ೦-೦
ತೆಂಗಿನಕಾಯಿ ೧೦೦ಕ್ಕೆ	೬ ೪ ೦	೬ ೦ ೦
ಸಾಸುವೆ ಮಣ ೧ಕ್ಕೆ	೧-೪ ೦	೧ ೦ ೦
ಕೊತ್ತುಂಬರಿ ಮಣ ೧ಕ್ಕೆ	೦ ೧೨ ೦	೧ ೮ ೦
" ಕೆಂಪು	೧೫-೮-೦	೧೫ ೮-೦
" ಬಿಳಿದು	೧೫ ೧೪-೬	೧೫-೧೪-೬
" ಗಟ್ಟಿ ಕೋಲು ೧ಕ್ಕೆ	೨೪-೩-೦	೨೪-೦-೦
ಕೋಲು ೧೦೦ಕ್ಕೆ	೮೧-೨ ೦	೭೧ ೩ ೦

"ವೃತ್ತಾಂತ ಪತ್ರಿಕೆ" ಏಜಂಟರಿಗೆ ನೋಟಿಸ್

ವೃತ್ತಾಂತ ಪತ್ರಿಕೆಯ 1912-13 ನೇ ವರುಷದ ಮೂರನೇ ಕ್ವಾರ್ಟರು ಕಳೆದ ಫೆಬ್ರವರಿ ತಿಂಗಳಿಗೆ ಪೂರೈಸಿದೆ. ಏಜಂಟರು ಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಬೈಂಡುಮಾಡಿ, "ಬಿ" ಫಾರಂಗಳಿಗೆ ಸುತ್ತ ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃತಪಡಿಸಿದೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು

ನಿಮಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನನಗೆ ಯಾವ ರೋಗವೂ ಉಂಟಾಗಿರಲಿಲ್ಲ, ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೋ ಎಂದು ನಿನ್ನನ್ನು ನೀನೇ ಕೇಳಿಕೋ, ಹಾಗೆ ಆಗದಿದ್ದರೆ ಡೋಯನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ನುಂಗಿಕೊ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.



(೧೨ ಆಣೆ ಬುಡ್ಡಿ ಪರಿಷತಾ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ —ಪಿತ್ತಕೋಶದ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಬರಿ, ಅಶಕ್ತಿ, ಎದೆಯು ತಲ್ಲಣಿಸುವುದು, ತಲೆತಿರುಗುವುದು, ಹಬೆನೋವು, ಹೊಟ್ಟೆಯುಬ್ಬರ, ಮುಖಕಳೆಗುಂದುವಿಕೆ, ಹೊಟ್ಟೆನೋವು, ಹೆಂಗಸರ ವ್ಯಾಧಿಗಳು ಇವೇ ಮೊದಲಾದವು. ರೋಗಿಯು ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋಯನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಿಸಲ್ಪಟ್ಟು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕೆಟ್ಟ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [13 27]

೨೭ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧವನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು ಅಥವಾ ಡೋಯನ್, ಪಿ. ಒ. ಬಾಕ್ಸ್ ೩೦ ಬೊಂಬಾಯಿ—ಇವರಲ್ಲಿ ದೊರೆಯುವುದು

ಸನ್ ೧೮೭೬ ರಿಂದ ೧೯೧೩ ವರೆಗೆ

ಕಾಲ ಪರೀಕ್ಷೆ,

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 2-11

(ಸ್ಕಾಟ್ಸ್ ಇಮಲ್ಷನ್)

ಎಂದಿಗೂ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರೀಕ್ಷೆ ಮಾಡಿ ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಇದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಆಕ್ರಮಣಗಳು ನಾನಾ ತರದ ಕೆಮ್ಮಲು,

ಸಕಲವಿಧ ರಕ್ತ ಗಳು ಮಾಂಸಖಂಡಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ

ಇವುಗಳಿಗೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವು ಇದೇ

ಕೈಸೋಕದೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕರಿಯಾಗುವುದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ತಯಾರಕರು,

ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೇಳಿ ಪಡೆಯಿರಿ

ಚಿತ್ರದುರ್ಗ ಡಿಸ್ಟ್ರಿಕ್ಟು ಉಪಾಧ್ಯಾಯ ಸಂಘ

ಮಾರ್ಚಿ ತಿಂಗಳ ಮೀಟಿಂಗು

ಈ ಸಂಘದ ಮೆಂಬರುಗಳು ಈ ತಿಂಗಳು ತಾ ೨ ನೇ ಭಾನುವಾರ ಮಧ್ಯಾಹ್ನ 1 ಘಂಟೆಗೆ ಚಿತ್ರದುರ್ಗದ ಎ. ವಿ. ಸ್ಕೂಲು ಹಾಲಿನಲ್ಲಿ ತಿಂಗಳ ಮೀಟಿಂಗನ್ನು ನಡಸಿದರು. ತಾಲ್ಲೂಕುಗಳಿಂದ ಸುಮಾರು ೫೦ ಜನ ಉಪಾಧ್ಯಾಯರುಗಳಲ್ಲದೆ ಬಂದಿದ್ದರು. ಡಾಯಿಂಟ್ ವೈಸ್ ಪ್ರೆಸಿಡೆಂಟ್ ಮ|| ಲಕ್ಷ್ಮಿಪತ್ಯಯನವರು ಅಗ್ರಾಸನವನ್ನು ವಹಿಸಿ ಆ ದಿನದ ಕಾರ್ಯಗಳನ್ನು ಗೊತ್ತು ಮಾಡಿದರು.

ಕೆಲವು ಜನ ಹೋಬಳಿ ಸ್ಕೂಲ್ ಮಾಸ್ಟರುಗಳು ಕೇವಲ ಅನುಭವದಿಂದ ಒಂದು ನವೀನ ಬಾಲಬೋಧೆ ಎಂಬ ಚಿಕ್ಕ ಪುಸ್ತಕವನ್ನು ತಯಾರಿಸಿ ತಂದಿದ್ದರು. ಚಿತ್ರಸಹಿತವಾದ ಈ ಪುಸ್ತಕವನ್ನು ಇತರ ಎಲ್ಲಾ ಮೆಂಬರುಗಳೂ ಪರಿಶೋಧಿಸಿ ತಮ್ಮ ಉತ್ತಮವಾದ ಅಭಿಪ್ರಾಯಗಳನ್ನು ಕೊಟ್ಟರು. ಮುಂದಿನ ಪಾಠಗಳೆಲ್ಲಾ ಬಂದನಂತರ ಕ್ರಮಪಡಿಸಿ ಸಂಘದ ಹೆಸರಿನಿಂದ ಪ್ರಿಂಟು ಮಾಡಿಸಲು ಏರ್ಪಾಡಾಗಿದೆ.

ಮ|| ಲಕ್ಷ್ಮೀಪತ್ಯಯನವರು ಭೂವಿವರಣೆ ಪಾಠದಲ್ಲಿ ಒಂದು ಉಪನ್ಯಾಸ ಮಾಡಿದರು. ಧ್ರುವವೃತ್ತಗಳು, ಉತ್ತರ ದಿಕ್ಕು, ಅಕ್ಷಾಂಶ ರೇಖಾಂಶಗಳು, ಇವುಗಳನ್ನು ವಿವರಿಸಿದರು. ಹಗಲು ರಾತ್ರಿಗಳಲ್ಲಿ ಕೆಲವು ಭೂಭಾಗದಲ್ಲಿ ವ್ಯತ್ಯಾಸಕ್ಕೆ ಕಾರಣವನ್ನು ಹೇಳಿದರು. ರೇಖಾಂಶ ಅಕ್ಷಾಂಶಗಳಿಂದ ಊರಿಂದೂರಿಗೆ ಇರುವ ದೂರಘಾಸಲೆಯನ್ನು ಸುಲಭವಾಗಿ ಕಂಡು ಹಿಡಿಯುವ ಮಾರ್ಗವನ್ನು ಸುಲಭ ಕ್ರಮದಲ್ಲಿ ತೋರಿಸಿದರು. ಭೂಭಾಗದ ಹವ, ಪ್ರಾಣಿಸಸ್ಯಗಳ ಬೆಳವಣಿಗೆ, ಇವುಗಳೆಲ್ಲಾ ವಿವರಿಸಲ್ಪಟ್ಟವು.

ಬೆಂಗಳೂರು ಡಿಸ್ಟ್ರಿಕ್ಟ್ ಅ|| ಡೆಪ್ಯುಟಿ ಇನ್ಸ್ಪೆಕ್ಟರ್ ಮ|| ಅನಂತಸುಬ್ಬರಾಯರವರು ರಜಾದ ಮೇಲೆ ಈ ಪ್ರಾಂತ್ಯ ದಯಮಾಡಿದ್ದರು. ಇವರು ಮೆಂಬರುಗಳ ಕೋರಿಕೆಯಂತೆ ಇಂಗ್ಲಿಷ್ ಸಾಲ್ಸಿನ್ ತರಗತಿಯ ವಿದ್ಯಾರ್ಥಿಗಳನ್ನು ಕರೆಸಿಕೊಂಡು ಮುಂದಿನ ಅಂಶಗಳನ್ನು ಬೋಧಿಸಿ ತೋರಿಸಿದರು —ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ದಕ್ಷಿಣ ಅಮೆರಿಕಾ ಖಂಡದಲ್ಲಿ ಹರಿಯುವ ಅಮೆಜಾನ್ ಎಂಬ ನದಿಯ ಉತ್ಪತ್ತಿಗೆ ಕಾರಣ, ಅದು ಹರಿಯುವ ರೀತಿ, ನದಿಗಳ ಪ್ರಯೋಜನ, ಈ ಸಂಗತಿಗಳನ್ನು ಕುರಿತು ಉತ್ತಮವಾದ ರೀತಿಯಲ್ಲಿ ಶಾಸ್ತ್ರೋಕ್ತವಾಗಿ ಬೋಧಿಸಿದ್ದು ಮಾದರಿಯಾಗಿತ್ತು.

ಮೇಲ್ಕಂಡ ಉಪನ್ಯಾಸಕರನ್ನೂ, ಪಾಠಬೋಧಕರನ್ನೂ ಎಲ್ಲಾ ಮೆಂಬರುಗಳು ಕೃತಜ್ಞತಾ ಪೂರ್ವಕವಾಗಿ ವಂದಿಸಿ, ಮುಂದಿನ ತಿಂಗಳು ಏಪ್ರಿಲ್ ತಾ ೬ ನೇ ಭಾನುವಾರ ಮೀಟಿಂಗ್ ನಡೆಯುವಂತೆ ಗೊತ್ತುಮಾಡಿ, ಆ ದಿನ ನಡೆಯತಕ್ಕ ಕಾರ್ಯಗಳನ್ನು ನಿಷ್ಕರ್ಷೆಮಾಡಿ ಮೀಟಿಂಗನ್ನು ಮುಕ್ತಾಯ ಮಾಡಿದರು.

ವೀರಭದ್ರಪ್ಪ, ಸೆಕ್ರೆಟರಿ

ಬಾತ್ಮೀದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ವಾರ್ತೆಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ಉಪಯೋಗಕ್ಕೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಕಾಗದದ ಒಂದೇ ಕಡೆ ಮಾತ್ರ ಬರೆಯತಕ್ಕದ್ದು. ಕಾಗದವನ್ನು ಕಾಗದದ ಎರಡು ಕಡೆಗಳಲ್ಲೂ ಬರೆಯಕೂಡದು. ಅಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ವಾರ್ತೆಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ವಾರ್ತೆಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಿಮೆ. ಬಾತ್ಮಿಗಳು ಸಾಧ್ಯವಾದಷ್ಟು ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಬಾತ್ಮೀದಾರರು ಹಿಡಿವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ಎಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಅ ವ ಸಬ್, ಗಣೇಶ್ವರಿ ಸಂಘ ಹೇಳುವ ವಿಚಾರವನ್ನು ಪ್ರಜೆಗಳು ಬರೆದುಕೊಂಡಿರುವ ಅರ್ಜಿಗಳಿಗೆ ಇನ್ನೂ ಆಫೀಸರುಗಳು ತಾವೇ ಯಾವ ರೀತಿ ಇತ್ಯರ್ಥಮಾಡುವರೋ ಪರೀಕ್ಷಿಸುವುದು ಉತ್ತಮ.

ಪ್ರತ್ಯಕ್ಷದರ್ಶಿ, ಉಕ್ಕಲಗೆರೆ—ನಮ್ಮ ಕಡೆಯ ಮೆಂಬರು ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನಲ್ಲಿ ನೀವು ಹೇಳುವ ವಿಚಾರವನ್ನು ಚರ್ಚೆಗೆ ತಂದು ಕೃತಕೃತ್ಯರಾದರೆ ನಿಮ್ಮ ಉದ್ದೇಶವು ಸಾರ್ಥಕವಾಗುವುದು.

—ಎಡಿ.]

ಕರೆಸ್ಪಾಂಡೆನ್ಸ್

ಒಂದು ಸಲಹೆ

ಅಯ್ಯಾ,

ಈ ಹಾಸನ ಡಿಸ್ಟ್ರಿಕ್ಟಿನಲ್ಲಿ ಬೇಲೂರು ಯಾತ್ರಾಸ್ಥಳವಾಗಿಯೂ ಸಕಲೇಶಪುರ, ಮಂಜರಾಬಾದು, ಚಿಕ್ಕಮಗಳೂರು, ಅರಸೀಕೆರೆ, ಹಾಸನ, ಈ ತಾಲ್ಲೂಕುಗಳಿಗೆ ಮಧ್ಯಸ್ಥಳವಾಗಿಯೂ ಸಕಲ ವಿಧ ಜನರ ಕ್ಷೇತ್ರಗಳನ್ನು ಸೇರಿಯುವ ಪುರಾತನ ವಿಚಿತ್ರ ದೇವಾಲಯವುಳ್ಳದ್ದಾಗಿಯೂ ಇರುತ್ತದೆ. ಈ ಬೇಲೂರಿನಲ್ಲಿ ಬರುವ ಏಪ್ರಿಲ್ ತಾ 17ನೇ ಗುರುವಾರ ಬ್ರಹ್ಮರಥದ ಜಾತ್ರೆ ನಡೆಯುವುದು. ಆ ಕಾಲದಲ್ಲಿ ದನಗಳ ಪ್ರದರ್ಶನವನ್ನು ಏರ್ಪಡಿಸಿದರೆ ತೋಟ ಹೊಲದ ಸುತ್ತಮುತ್ತಲಿನ ತಾಲ್ಲೂಕಿನವರೆಲ್ಲರೂ ತಮ್ಮ ತಮ್ಮ ಪ್ರಾಂತಗಳಲ್ಲಿನ ಹೊಸ ನಾರುಗಳನ್ನು ತಂದು ಪ್ರದರ್ಶನ ಮಾಡುವುದಕ್ಕೂ, ಇನ್ನು ಮುಂದೆ ಹೆಚ್ಚು ಜನರು ದನಕರುಗಳನ್ನು ಚೆನ್ನಾಗಿ ಸಾಕುತ್ತಾ ಪ್ರದರ್ಶನಕ್ಕೆ ಅರ್ಹವಾಗುವಂತೆ ಕಾಪಾಡುತ್ತಾ ಬರುವುದಕ್ಕೂ ಸಹಕಾರಿಯಾಗುತ್ತದೆ. ದನಕರುಗಳು ಕುರಿ ಮೇಕೆಗಳು ಮಾತ್ರವಲ್ಲದೆ ಎಮ್ಮೆ, ಕೋಣ, ಕುದುರೆ, ಕತ್ತೆ, ಇವುಗಳನ್ನೂ ಪ್ರದರ್ಶನಕ್ಕೆ ಯೋಗ್ಯವಾಗುವಂತೆ ಸಾಕುವುದಕ್ಕೆ ಪ್ರೋತ್ಸಾಹವಾಗುವುದಕ್ಕೋಸ್ಕರ ಅವುಗಳಲ್ಲಿಯೂ ಉತ್ತಮವಾದವುಗಳಿಗೆ ಬಹುಮಾನಕೊಡುವರೆ? ಇದುವರೆಗೆ ಯಾರೂ ಅಷ್ಟು ಒಳ್ಳೆ ವಿಚಾರಮಾಡಿರುವಂತೆ ಕಾಣುವುದಿಲ್ಲವಾದ್ದರಿಂದ ಅವುಗಳ ಸಂತಾನವೂ ಈ ಸೀಮೆಯಲ್ಲಿ ಅಷ್ಟು ತೃಪ್ತಿಕರವಾಗಿಲ್ಲ. ನಮ್ಮ ಡೆಪ್ಯುಟಿಕಮೀಷನರವರೂ, ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳೂ ಆಲೋಚಿಸಿ ಈ ವರ್ಷವೇ ಅದಕ್ಕೆ ತಕ್ಕ ಏರ್ಪಾಡುಮಾಡಿ ಕೀರ್ತಿಪಡೆಯುವವರೆಂದು ಎಲ್ಲರೂ ಹಾರೈಸುತ್ತಾರೆ. ಬಹುಮಾನ ಕೊಡುವುದನ್ನು ಪ್ರಕಟಿಸಿದರೆ ಎಲ್ಲರೂ ಕೇವಲ ತುಚ್ಛವಾಗಿ ಎಣಿಸುತ್ತಿರುವ ಬಡಪ್ರಾಣಿಗಳಾದ ಮತ್ತು ಕಷ್ಟ ಸುಖಗಳಾದ ಕೆಲಸಗಳ ಲಾಲನೆಪಾಲನೆಗಳು ಚೆನ್ನಾಗಿ ನಡೆಯಲು ಅನುಕೂಲವಾಗುವುದಲ್ಲದೆ ಅವುಗಳ ಕಾಟ ಪ್ರಜೆಗಳಿಗೆ ತಪ್ಪಿಸುವುದಕ್ಕೆ ಸಂಶಯವಿಲ್ಲ. ಇದರಿಂದ ಆ ಬಡಪ್ರಾಣಿಗಳ ಅಭಿವೃದ್ಧಿಯನ್ನುಂಟುಮಾಡಿದ ಕೀರ್ತಿಯು ನಮ್ಮ ಡೆಪ್ಯುಟಿಕಮೀಷನರವರೇ ಮೊದಲಾದ ಮಹನೀಯರಿಗೆ ಲಭ್ಯವಾಗುವುದು.

ಪ್ರಾಣಿಹಿತಚಿಂತಕ

ವೃತ್ತಾಂತ ಪತ್ರಿಕೆ

ಸನ್ ೧೯೧೩ ನೇ ಇಸವಿ ಮಾರ್ಚಿ ತಾ ೧೩ ನೇ ಗುರುವಾರ

ವಾಂತಿಭೇದಿ, ಮಲೇರಿಯಾ ಮುಂತಾದ ರೋಗಗಳು

ರೋಗವೆಂಬುವುದು ಸಮೂಲವಾಗಿ ಎಲ್ಲವನ್ನೂ ಹಿಡಿದು ಕಾಡುವಂಥಾ ಪೀಡೆಯಾಗಿದೆ, ಆದರೂ ಅನೇಕ ರೋಗಗಳನ್ನು ನಾವು ಸುಲಭವಾಗಿ ಅಣಗಿಸಿ ಬಿಡಬಹುದು ಜನಗಳು ಸ್ವಲ್ಪಮಟ್ಟಿಗೆ ಜಾಗರೂಕರಾಗಿದ್ದು ಸರಿಯಾದ ಔಷಧವನ್ನು ಸೇವಿಸಿದರೆ ರೋಗದಲ್ಲಿ ನರಳಬೇಕಾದ ಅಗತ್ಯವಿಲ್ಲ

ಅನೇಕಾನೇಕ ಜನರಿಗೆ ಜ್ವರಬರುವುದುಂಟು, ಚಳಿಜ್ವರವಷ್ಟು ಉಲ್ಬಣವಾದ ರೋಗ ಇನ್ನೊಂದಿಲ್ಲ ಆದಾಗ್ಯೂ ಯಾರಿಗೂ ಈ ರೋಗ ಬಾರದಂತೆ ಮಾಡಿಕೊಳ್ಳಬಹುದಾಗಿದೆ ಸಬ್ ಅ॥ ಸರ್ಜನ್ ಮ॥ ಎಂ ಗುರುರಾಯರು ಜ್ವರವು ಹ್ಯಾಗೆ ಒಂದು ವಿಧ ಸೊಳ್ಳೆಯ ಮೂಲಕ ಒಬ್ಬರಿಂದೊಬ್ಬರಿಗೆ ವ್ಯಾಪಿಸುತ್ತದೆಂದು ತಿಳಿಸಿರುತ್ತಾರೆ ಈ ಜಾತಿಯ ಸೊಳ್ಳೆಯನ್ನು ನಾಶಪಡಿಸುವುದಕ್ಕೆ ನಮ್ಮ ಕೈಲಾಗುವಷ್ಟು ಸಾಹಸಪಡಬೇಕು ಈ ವಿಧವಾದ ಸೊಳ್ಳೆಯು ನಿಂತ ನೀರುಗಳ ಮೇಲೂ ಕೊಚ್ಚೆ ಗುಂಡಿಗಳಲ್ಲೂ ಮೊಟ್ಟೆಗಳನ್ನಿಡುತ್ತವೆ ಪ್ರತಿ ದಿವಸವೂ ಮನೆಯಲ್ಲಿರುವ ಪ್ರತಿ ಒಂದು ಪಾತ್ರೆಯನ್ನೂ ಬರಿದು ಮಾಡಿ ನಿರ್ಮಲವಾಗಿಟ್ಟುಕೊಳ್ಳಬೇಕು ಸಣ್ಣ ಸಣ್ಣ ಹಳ್ಳಗಳನ್ನೆಲ್ಲಾ ಮುಚ್ಚಿಬಿಟ್ಟು ನೀರು ನಿಲ್ಲದಂತೆ ಮಾಡಿಕೊಳ್ಳಬೇಕಲ್ಲದೆ ಕೊಳೆಯುವ ನೀರನ್ನು ತಪ್ಪಿಸಲಾಗದಿದ್ದರೆ ಅದರ ಮೇಲೆ ಆಗಾಗ್ಗೆ ಸೀಮೆ ಎಣ್ಣೆಯನ್ನು ಎರಚುತ್ತಿರಬೇಕು ಈ ಎಣ್ಣೆಯು ಸೊಳ್ಳೆಗಳನ್ನೆಲ್ಲಾ ನಾಶಮಾಡುತ್ತದೆ

ಜನರು ಜ್ವರವನ್ನನುಭವಿಸುತ್ತಿದ್ದರೂ ಜ್ವರಬರುವ ಸೂಚನೆಗಳನ್ನು ಕಂಡರೂ ಕ್ವಿನೇನನ್ನು ಸೇವನೆ ಮಾಡಬೇಕು ಈ ಔಷಧವು ರಕ್ತದಲ್ಲಿರುವ ಜ್ವರದ ಕ್ರಿಮಿಗಳನ್ನು ನಾಶಮಾಡಬಲ್ಲದ್ದಾಗಿದೆ ಸುತ್ತುಮುತ್ತಲೂ ಜ್ವರವು ಹರಡಿಕೊಂಡಿರುವ ಕಾಲದಲ್ಲಿ ದಿವಸಾ ಎರಡು ಗ್ರೇಯಿನ್ ತೂಕವಷ್ಟು ಕ್ವಿನೇನನ್ನು ಸೇವಿಸುತ್ತಾ ಬಂದರೆ ಜ್ವರವೇ ಬಾರದಂತೆ ತಪ್ಪಿಸಿಕೊಳ್ಳಬಹುದು ಈ ಜ್ವರದ ಔಷಧವು ಎಲ್ಲೆಲ್ಲೂ ಸಿಕ್ಕುತ್ತದೆ ಇದರ ಬೆಲೆ ಬಹಳ ಸುಲಭವಾಗಿದೆ ಪ್ರತಿ ಒಬ್ಬರೂ ಸ್ವಲ್ಪ ಔಷಧವನ್ನು ಮನೆಯಲ್ಲಿ ತಂದಿಟ್ಟುಕೊಂಡೇ ಇರಬೇಕು ವಾಚಕರೆಲ್ಲಾ ಮ॥ ಗುರುರಾಯರು ಬರೆದಿರುವ ವಿಷಯಗಳನ್ನು ಬಹಳ ಚೆನ್ನಾಗಿ ಓದಿ ತಿಳಿದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆ

ಕಲರಾ ಅಥವಾ ವಾಂತಿಭೇದಿ ಉಪದ್ರವು ಬಹಳ ಕ್ರೂರವಾದದ್ದು ಅನೇಕ ಸಂದರ್ಭಗಳಲ್ಲಿ ಅದರಿಂದ ತಪ್ಪಿಸಿಕೊಳ್ಳಲಸಾಧ್ಯವಾಗಿದ್ದವರಿಗೂ ಈ ಉಪದ್ರ ಪ್ರಾಪ್ತವಾಗುತ್ತದೆ ಡೆಪ್ಯುಟಿ ಕಮಿಷನರ್ ಮಿ॥ ಚಾಂಡಿಯವರು ಒಂದು ನೋಟೀಸನ್ನು ಪ್ರಕಟಿಸಿ ಪ್ರತಿ ಒಂದು ಗ್ರಾಮಕ್ಕೂ ಕಳುಹಿಸಿರುತ್ತಾರೆ ಅದನ್ನು ಇನ್ನೊಂದು ಭಾಗದಲ್ಲಿ ಪ್ರಕಟಿಸಿರುವೆವು ಅದರಲ್ಲಿ ಅವರು ಹೇಳಿರುವ ಸಂಗತಿಗಳ್ಯಾವೂ ಕಷ್ಟವಾದವುಗಳಲ್ಲ ಪ್ರಜೆಗಳು ಆ ರೀತಿ ನಡೆದುಕೊಳ್ಳುವುದಾದರೆ ಆ ಉಪದ್ರವವು ನಿಂತುಹೋದೀತು ಇದಲ್ಲದೆ ಕೋಲಾರದ ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರಾದ ಮಿ॥ ಎಂ ಜೆ ನ್ಯಾಮ್ಯುಯಲ್‌ರವರು ಕೆಲವು ಸಂಗತಿಗಳನ್ನು ಬಹಳ ಸುಲಭವಾಗಿ ತಿಳಿಸಿರುತ್ತಾರೆ ಆಹಾರದಿಂದ ಅಥವಾ ನೀರಿನಿಂದ ಈ ಉಪದ್ರದ ಕ್ರಿಮಿಗಳು ಹರಡುತ್ತವೆ ಅನೇಕ ಜನರು ನಾನಾಕಡೆಯಿಂದ ಆ ವಿಷಕ್ರಿಮಿಗಳನ್ನು ತಮ್ಮ ಕೂಡ ತೆಗೆದುಕೊಂಡು ಹೋಗಿ ಹರಡುತ್ತಿರುವರು ಕಲರಾ ಇರುವ ಸ್ಥಳಕ್ಕೆ ಹೊರಗಿನವರ್ಯಾರೂ ಹೋಗಬೇಕಾದರೆ ಎಷ್ಟೇ ಆತುರವಾದ ಕೆಲಸವಿದ್ದರೂ ಸ್ವಲ್ಪ ನಿದಾನಿಸಿಕೊಂಡು ಹೋಗಬೇಕು ಹಾಗೆ ಹೋಗಬೇಕಾದದ್ದು ಪರಮಾವಶ್ಯವಾಗಿದ್ದ ಪಕ್ಷದಲ್ಲಿ ಅಂಥವರು ಅಲ್ಲಿ ಉಪಯೋಗಿಸುವ ನೀರನ್ನು ಬಹಳ ಚೆನ್ನಾಗಿ ಕುದಿಸಬೇಕು ಬೆಂಕಿಯ ಸೆಕೆಯು ವಿಷಕ್ರಿಮಿಗಳನ್ನು ಕೊಂದುಹಾಕುತ್ತದೆ ಇದಲ್ಲದೆ ಅಂಥವರು ಅನ್ನ ತಿನ್ನುವ ಆಹಾರ ಪದಾರ್ಥಗಳ ವಿಷಯದಲ್ಲಿ ಬಹಳ ಎಚ್ಚರಿಕೆಯಾಗಿರಬೇಕು ಮದುವೆ ಮನೆಗಳಲ್ಲಿ ಕಾಲವಿಲ್ಲದೆಯೂ ಮಿತಿಯಿಲ್ಲದೆಯೂ ಭೋಜನ ಮಾಡುತ್ತಾರೆ ಅದಕಾರಣ ಆಹಾರ ವಿಷಯದಲ್ಲಿ ಬಹಳ ಜಾಗರೂಕರಾಗಿರಬೇಕಲ್ಲದೆ ಅಸಹ್ಯವಾದ ಅಥವ ಬಹಳ ಕಳಿತ ಹಣ್ಣು ಹಂಪಲನ್ನು ತಿನ್ನಕೂಡದು ಇಷ್ಟು ಸುಲಭವೂ ಸ್ಪಷ್ಟವೂ ಆದ ವಿಷಯಗಳಿಗೆ ಪ್ರಜೆಗಳು ಗಮನಕೊಟ್ಟು ನಡೆದುಕೊಂಡ ಪಕ್ಷದಲ್ಲಿ ಈ ಉಪದ್ರದಿಂದ ಬಹು ತರವಾಗಿ ತಪ್ಪಿಸಿಕೊಳ್ಳಬಹುದು

ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಬರುವಂಥಾ ಸರ್ಕಾರಿ ನೌಕರರಿಗೆ ಜನರು ಎಲ್ಲಾ ಸ್ಥಳಗಳಲ್ಲೂ ಸಹಾಯ ಮಾಡಬೇಕು ಅನೇಕ ಸಂದರ್ಭಗಳಲ್ಲಿ ಡಾಕ್ಟರೋ ಇತರ ನೌಕರರೋ ಬಂದು ವಿಚಾರಿಸಿದರೆ ಜನಗಳು ಪ್ಲೇಗೂ ಇಲ್ಲ, ಕಲರಾನೂ ಇಲ್ಲ ಎಂದು ಹೇಳಿಬಿಡೋಣದರಿಂದ ಅವರು ಏನೂ ಮಾಡದೆ ಹೋಗುವರು ಜನಗಳು ತಮಗೆ ತಿಳಿದ ಸಂಗತಿಯನ್ನು ಅವರಿಗೆ ಹೇಳಿ, ತಾವು ಬಳಸುವ ನೀರಿನ ಭಾವಿ ಕೊಳ ಕೆರೆಯನ್ನು ತೋರಿಸಿಕೊಟ್ಟರೆ ಅವರು ಬೇಗನೆ ಕಲರಾವನ್ನು ನಿಲ್ಲಿಸಿಬಿಡಲು ಸಾಹಸಪಡುತ್ತಾರೆ ಅವರು ರೋಗದ ಕ್ರಿಮಿಗಳನ್ನು ಕೊಲ್ಲುವವರ ಮೂಲಕ ಅಂಥಾ ಜಲಾಶ್ರಯವನ್ನು ಶುದ್ಧಮಾಡುತ್ತಾರೆ

ಅಂಟುರೋಗಗಳು ಹರಡುತ್ತಿರುವಾಗ ಪ್ರತಿ ಒಬ್ಬನೂ ಬಹಳ ಜಾಗರೂಕನಾಗಿರಬೇಕು ಹೀಗೆ ಎಲ್ಲರೂ ಸಹಾಯಕರಾಗಿ ನಿಂತು ಪ್ರಯತ್ನಪಟ್ಟರೆ ಇಂಥಾ ಅನೇಕ ಅಂಟುರೋಗಗಳು ತಲೆಯೆತ್ತಲಾರದೆ ಅಣಗಿಹೋಗುತ್ತವೆ

ಟರ್ಕಿ ಬಾಲ್ಕನ್ ಯುದ್ಧವು

ಈ ವಾರ ಯುದ್ಧಭೂಮಿಯಿಂದ ... ರುವ ವರ್ತಮಾನ ... ಇಲ್ಲ ಬಲ್ಗೇರಿಯಾದವರು ಇನ್ನೂ ಅಡ್ರಿಯಾನೋಪಲ್ ಪಟ್ಟಣಕ್ಕೆ ಮುತ್ತಿಗೆ ಹಾಕಿಕೊಂಡೇ ಇದ್ದಾರೆ ಗ್ರೀಕರ ಸೈನ್ಯಗಳು ... ನಾ ಪಟ್ಟಣವನ್ನು ಗೆದ್ದುಕೊಳ್ಳುವುದಕ್ಕಾಗಿ ಆ ಪಟ್ಟಣಕ್ಕೆ ಹೋಗುವ ಮಾರ್ಗದಲ್ಲಿ ಸಮುದ್ರತೀರದೊಳಗಿರುವ ನಾಲ್ಕು ಕಾರ್‍ಟೆಗಳ ಪಟ್ಟಣಕ್ಕೆ ಬಹುಬಗೆಯ ಗುಂಡುಹೊಡೆದು ಟರ್ಕಿಯವರ ಸಿಂಗಿ ಸೇನವನ್ನು ... ತಮ್ಮ ಸೇನವನ್ನು ಆ ಪಟ್ಟಣ ದೆಸೆಕಡೆ ಇಳಿ ... ಬಳಿಕ ೨೦೦೦ ಗುಂಡುಗಳನ್ನು ಗ್ರೀಕ್ ಸೈನಿಕರು ... ಪಟ್ಟಣಕ್ಕೆ ಸುರಿಸಿ ಟರ್ಕಿಯವರನ್ನು ... ಪೂರ್ಣವಾಗಿ ಸಾಹಸದಿ ... ಅಲ್ಲಿಂದ ಮುಂದೆ ಬಹು ಪರಾಕ್ರಮದಿಂದ ನುಗ್ಗಿಹೋಗಿ ... ನಾ ಪಟ್ಟಣವನ್ನು ಮುತ್ತಿಕೊಂಡು ಯುದ್ಧಮಾಡಿ ಶತ್ರುಗಳನ್ನು ಹತಮಾಡಿ ಸಾಟಿಯಿಲ್ಲದೆ ಕೊಂಡಿದ್ದಾರೆ ... ನಾ ಎಂಬ ಪಟ್ಟಣವು ಬಹಳ ಬಲವಾಗಿ ಕಟ್ಟಿರುವ ಕೋಟೆ ಕೊತ್ತಲಗಳನ್ನುಳ್ಳದ್ದಾಗಿಯೂ, ಎಪಿರಸ್ ಎಂಬ ಆ ಪ್ರಾಂತ್ಯಕ್ಕೆಲ್ಲಾ ಮುಖ್ಯ ನಗರವಾಗಿಯೂ ಇರುತ್ತದೆ ಈ ಯುದ್ಧದಲ್ಲಿ ಗ್ರೀಕರಿಗೆ ೩೨,೦೦೦ ಟರ್ಕಿ ಸೈನಿಕರು ಮತ್ತು ಗುಂಡುಗಳ ಸಮೇತ ಕೈಸೆರೆಯಾದರೆಂದು ತಿಳಿಯುವುದು ಗ್ರೀಕರು ಈ ಪಟ್ಟಣವನ್ನು ಗೆದ್ದುಕೊಂಡದ್ದನ್ನು ಕೇಳಿ ಅವರ ಗವರ್ನಮೆಂಟಿನವರು ಆನಂದಪಟ್ಟು ಅನೇಕ ಸಂತೋಷೋತ್ಸವಗಳನು ಮಾಡಿದರು ಈಚೆಗೆ ಶುಕ್ರವಾರದ ದಿನ ಗ್ರೀಕರ ಎರಡು ಪಟಾಲಂ ಕುದುರೆ ಸವಾರರು ಜನಿನಾದಿಂದ ಹೊರಟು ಸುತ್ತುಮುತ್ತಲಲ್ಲಿ ಯುದ್ಧಕಾರ್ಯಗಳನ್ನು ನಡಿಸಿ ೩,೧೦೦ ಟರ್ಕಿ ಸೈನಿಕರನ್ನು ಕೈಸೆರೆಹಿಡಿದು ತಂದರು ಈಗ ಎಪಿರಸ್ ಪ್ರಾಂತ್ಯದಲ್ಲಿ ಒಂದು ಲಕ್ಷ ಟರ್ಕಿ ಸೈನ್ಯಗಳು ಗ್ರೀಕರ ಕೈಸೆರೆಯಾಗಿರುವಂತೆ ಕಾಣಬರುತ್ತದೆ ಗ್ರೀಕರು ಜನಿನಾದಲ್ಲಿ ತಮ್ಮ ಗವರ್ನಮೆಂಟನ್ನು ಸ್ಥಾಪಿಸಿ ಜನರಲ್ ... ಎಂಬಾತನನ್ನು ಗವರ್ನರಾಗಿ ನೇಮಿಸಿದ್ದಾರೆ

ಅತ್ತಲಾಗಿ ಸಾಲೋನಿಕಾ ಡಿಸ್ಟ್ರಿಕ್ಟಿನಲ್ಲಿ ಬಲ್ಗೇರಿಯಾದವರಿಗೂ ಗ್ರೀಕರಿಗೂ ಪರಸ್ಪರ ಹೋರಾಟವಾಗಿ ಅವರವರಿಗೇ ಕಾದಾಟವೂ ಯುದ್ಧವೂ ನಡೆದಂತೆಯೂ, ಹಲವರು ಈ ಯುದ್ಧದಲ್ಲಿ ಗಾಯಪಟ್ಟಂತೆಯೂ ಸಮಾಚಾರ ಬಂದಿದೆ

ಕರಾರು ನಡೆಯುವ ಭಾಗದಲ್ಲಿ ಚರ್ಚೆಗಳೂ ಆಲೋಚನೆಗಳೂ ಇನ್ನೂ ಪೂರೈಸಿಲ್ಲ ಟರ್ಕಿ ಗವರ್ನಮೆಂಟಿನವರು ಅಡ್ರಿಯಾನೋಪಲ್ ಪಟ್ಟಣವನ್ನು ಶತ್ರುಗಳಿಗೆ ಬಿಟ್ಟುಕೊಡಲೊಪ್ಪಿರುವರೆಂದೂ, ಶತ್ರುಗಳ ಯುದ್ಧದ ಖರ್ಚನ್ನು ಮಾತ್ರ ತಾವು ಕೊಡತಕ್ಕವರಲ್ಲವೆಂಬ ಅಭಿಪ್ರಾಯಪಡುತ್ತಾರೆಂದೂ ಒಂದು ತಂತಿ ವರ್ತಮಾನ ಹೇಳುವುದು ರೋಮ್‌ನಿಂದ ಬಂದಿರುವ ವರ್ತಮಾನವೇನೆಂದರೆ—ಟರ್ಕಿಯವರು ಅಡ್ರಿಯಾನೋಪಲ್, ಸ್ಕುಟಾರಿ, ಜಾನೀನಾ ಎಂಬೀ ಪಟ್ಟಣಗಳನ್ನೂ ಗ್ಯಾಲಿಪೋಲಿ ಎಂಬ ಪರ್ಯಾಯ ದ್ವೀಪವನ್ನೂ ಈಜಿಯನ್ ದ್ವೀಪಗಳನ್ನೂ ಒಪ್ಪಿಸಿ, ಕ್ರೀಟ್ ದ್ವೀಪವನ್ನು ಗ್ರೀಕರಿಗೆ ಸೇರಿಸಿಕೊಟ್ಟು, ಯುದ್ಧದ ವಿಚಾರವೆಲ್ಲಾ ಮಾಡತಕ್ಕದ್ದಾದರೆ ಶತ್ರು ಸಮುದಾಯದವರು ಕರಾರುಮಾಡಿಕೊಳ್ಳುವುದಕ್ಕೆ ಒಪ್ಪುತ್ತಾರಲ್ಲವೆ ಅನ್ಯಥಾ ಆಗಲಾರದೆಂದು ತಿಳಿಯುವರು ಹೀಗಿರುವಲ್ಲಿ ಪರರಾಜ್ಯಗಳವರು ಅವರವರಿಗೆ ಯಾವ ರೀತಿ ಸಮಾಧಾನವನ್ನುಂಟುಮಾಡಿ ಕರಾರು ಮಾಡಿಸುತ್ತಾರೆಯೋ ನೋಡಬೇಕು ಹ್ಯಾಗೂ ಕಾಮಸವಾಡಿದಷ್ಟು ಟರ್ಕಿಯವರಿಗೆ ಹೆಚ್ಚು ನಷ್ಟವಾಗುತ್ತನ್ನುವುದರಲ್ಲಿ ಸಂಶಯ ಕಾಣುವುದಿಲ್ಲ

ಸಾರ್ವಜನಿಕವಾದ ಮತವೊಂದರೇನು ?

ನಾವು ಲೋಕದ ಯಾವ ಕಡೆಗೆ ಹೋಗಿ ನೋಡಿದಾಗೂ ಜನಗಳಲ್ಲಿ ತಮಗಿಂತಲೂ ಮೇಲ್ಪಟ್ಟಾತನು ಒಬ್ಬನು ಇದ್ದಾನೆಂಬ ನಂಬಿಕೆಯು ಇದ್ದೇ ಇರುತ್ತದೆ ಆತನು ಒಳ್ಳೆಯವನೆಂದು ಅನೇಕರು ಅಭಿಪ್ರಾಯಪಡುತ್ತಾರೆ ಆತನು ಕೆಟ್ಟವನೆಂದು ಅಭಿಪ್ರಾಯಪಡುವವರೂ ಅನೇಕರಿರುತ್ತಾರೆ ಆತನ ವಿಷಯ ಇಂತಹ ಭಿನ್ನಾಭಿಪ್ರಾಯಗಳು ಜನಗಳಲ್ಲಿ ಇದ್ದಾಗ್ಯೂ ಸರ್ವರೂ ಹೇಗಾದರೂ ಆತನನ್ನು ಮೆಚ್ಚಿ ತಾವು ಅವನ ದಯೆಗೆ ಪಾತ್ರರಾಗಬೇಕೆಂದು ಪ್ರಯತ್ನಪಡುವವರಾಗಿರುತ್ತಾರೆ ಇದು ಅವರ ಮತವಾಗಿದೆ ಎಂದು ನಾವು ಹೇಳಬಹುದು ಎಲ್ಲರಿಗೂ, ಅಂದರೆ ಪುರುಷರಿಗೆ ಮಾತ್ರವೇ ಅಲ್ಲ ಸ್ತ್ರೀಯರಿಗೂ ಸಹ ಯಾವುದಾದರೊಂದು ಮತವು ಇರಬೇಕಾದುದು ಅವಶ್ಯ ಆದರೆ ಸರ್ವರ ಅಂಗೀಕಾರಕ್ಕೆ ಯೋಗ್ಯವಾದ ಸಾರ್ವಜನಿಕವಾದದ್ದೊಂದು ಮತವು ಇರುತ್ತದೆಯೋ

ನಾವು ಲೋಕದಲ್ಲಿರುವ ಹಲವು ಮತಗಳನ್ನು ಪರೀಕ್ಷಿಸಿ ನೋಡಿ ... ಅವುಗಳಲ್ಲಿ ಕೆಲವು ಕೆಲವು ನಿಕೃಷ್ಟವಾಗಿರುತ್ತವೆ ಉತ್ತಮವಾಗಿ ಜೀವಿಸಬೇಕೆಂದಿರುವವನು ಇಂತಹ ಮತವನ್ನು ಎಂದಿಗೂ ಅವಲಂಬಿಸಲಾರನು ... ಮತಗಳಲ್ಲಿ ಭೂತ, ಪಿಶಾಚಗಳಿಗೆ ಪೂಜೆಮಾಡುವುದೇ ಹೊರತು ಬೇರೆ ... ದರೂ ಇರುವುದಿಲ್ಲ ಉತ್ತಮರಾದ ಪುರುಷ ಸ್ತ್ರೀಯರುಗಳು ಇಂತಹ ... ದೈವಗಳನ್ನು ಆರಾಧಿಸುವುದಕ್ಕೆ ಎಂದಿಗೂ ಒಪ್ಪಲಾರರು

ಬೇರೆ ಅನೇಕ ಮತಗಳಲ್ಲಿ ವಿಗ್ರಹಾರಾಧನಾಚಾರಗಳೇ ತುಂಬಿರುತ್ತವೆ ... ಗಳನ್ನು ಕೈಕೊಳ್ಳುವುದಕ್ಕೆ ಕಾರಣವೇನೆಂಬುವದನ್ನು ಆಯಾ ಮತಗಳು ... ವುದೇ ಇಲ್ಲ ಆದ ಕಾರಣ ಇಂತಹ ಮತಸ್ಥರು ಆಚಾರಶೀಲರಾಗಿದ್ದ ... ತಾವು ಏಕೆ ಅವುಗಳನ್ನು ಕೈಕೊಳ್ಳುತ್ತೇವೆಂಬುದರ ವಿಷಯ ಅವರಿಗೆ ... ವಾದರೂ ತಿಳುವಳಿಕೆ ಇರುವುದೇ ಇಲ್ಲ ಇಂಥವರನ್ನು ನೀವು ಏಕೆ ಈ ... ಚಾರಗಳನು ಕೈಕೊಳ್ಳುತ್ತೀರೆಂದು ಕೇಳಿದರೆ, ಇವು ನಮ್ಮ ಹಿರಿಯರ ... ದಿಂದ ಹಿಂಗೆಯೇ ನಡೆದು ಬಂದಿವೆ ಎಂದು ಹೇಳುವರಲ್ಲದೆ ಬೇರೆ ... ಕೊಡಲಾರರು ಬುದ್ಧಿ ವ್ಯಾಪರಿಸುವವನು ಇಂತಹ ಮತವನ್ನು ಅವಲಂಬಿಸಲಾರನು

ಬೇರೆ ಕೆಲವು ಮತಗಳಿರುತ್ತವೆ ಒಂದು ಕುಲದಲ್ಲಿ ಅಥವಾ ಜಾತಿಯಲ್ಲಿ ಹುಟ್ಟಿದವನು ಮಾತ್ರ ಅವುಗಳಿಗೆ ಸೇರುತ್ತಾರೆ ಇಂತಹ ಮತಗಳ ಆಚಾರ... ಯನ್ನೂ ಆಚಾರಗಳನ್ನೂ ನಡಿಸುವುದಕ್ಕೆ ಒಂದೊಂದು ಗೊತ್ತಾದ ಮನೆತನದವ... ನಾತ್ರ ಹಕ್ಕಿರುವುದೇ ಹೊರತು ಎಲ್ಲರಿಗೂ ಅಂತಹ ಹಕ್ಕಿರುವುದಿಲ್ಲ

ಮೇಲೆ ಹೇಳಿದ ಈ ಮತಗಳೆಲ್ಲವೂ ಸಾರ್ವಜನಿಕವಾದವುಗಳಲ್ಲ ... ಬಹು ಸ್ಪಷ್ಟವಾಗಿ ಕಂಡುಬರುತ್ತವೆ ಇವುಗಳು ಸರ್ವರಿಗೂ ಅನುಕೂಲವಾ... ವುಗಳಲ್ಲ ಸರ್ವರೂ ಇಂತಹ ಮತಗಳನ್ನು ಅವಲಂಬಿಸುವುದಕ್ಕಾಗುವುದಿಲ್ಲ

ಹಾಗಾದರೆ ಸರ್ವರೂ ಅಂದರೆ ಸ್ತ್ರೀಪುರುಷರೂ ಹೆಂಗಸರೂ, ಬಲ್ಲಿದರೂ ಬಡವರೂ ಎಲ್ಲಾ ರೀತಿಯವರೂ, ಪಕ್ಷಪಾತವಿಲ್ಲದೆ ಸೇರಬಹುದಾದ ಸಾರ್ವಜನಿಕವಾದ ಮತಗಳು ಇರುತ್ತವೆಯೋ ? ಈಗಿರುವ ಮೂರು ಮತಗಳಿರುತ್ತವೆ ... ಗಳು ಯಾವುವೆಂದರೆ ಬೌದ್ಧಮತ, ಮಹಮ್ಮದೀಯ ಮತ, ಕ್ರೈಸ್ತ ಮತ ... ಈ ಒಂದು ಮತವು ಸಾರ್ವಜನಿಕವಾದುದಲ್ಲ ಏಕೆಂದರೆ ಒಂದು ಜಾತಿಯಲ್ಲಿ ಹುಟ್ಟಿದವರಿಗೆ ಮಾತ್ರ ಆದು ಮತಾಚಾರಗಳನ್ನು ಕೈಕೊಳ್ಳುವ ಹಕ್ಕಿರುತ್ತದೆ ... ಮತವು ತನಗೆ ಸೇರಿದವರನ್ನು ಬಿಟ್ಟು ಬೇರೆ ... ಪರಸ್ಪರದಲ್ಲಿ ವಾಸಿಗಳಾಗುವಂತೆ ಆಜ್ಞಾಪಿಸುವುದೇ ಇಲ್ಲ

ಮುಂದೆ ಹೇಳಿದ ಸಾರ್ವಜನಿಕವಾದ ಮೂರು ಮತಗಳ ಮುಖ್ಯಾಂಶಗಳೇನು

ದೇವರೇ ಇಲ್ಲ, ಮನುಷ್ಯನು ಅನೇಕ ಜನನ ಮರಣಗಳನ್ನು ದಾಟಿ ... ಯಲ್ಲಿ ನಿರ್ವಾಣ ಸುಖವನ್ನನುಭವಿಸುತ್ತಾನೆ ಎಂಬುದು ಬೌದ್ಧಮತದ ... ವಾಗಿರುತ್ತದೆ ಆ ಮತವು ಒಂದು ಕಾಲದಲ್ಲಿ ಈ ಭರತ ಖಂಡದಲ್ಲಿ ಪ್ರಸಿದ್ಧಿಯುಳ್ಳದ್ದಾಗಿತ್ತು ಆದರೂ ಇದರಿಂದ ಮನುಷ್ಯನ ಮನಸ್ಸಿಗೆ ಸಂತೃಪ್ತಿ ... ವುದಿಲ್ಲ

ಮಹಮ್ಮದೀಯ ಮತವು ದೇವರು ಒಬ್ಬನೇ ಮನುಷ್ಯನು ಎಂಥವರೂ ದೇವರಿಗೆ ಅಧೀನನಾಗಿರತಕ್ಕದ್ದು ಎಂಬೀ ಪ್ರಾಮುಖ್ಯವಾದ ಸತ್ಯವನ್ನು ಬೋಧಿಸುತ್ತದೆ ದೇವರು ಪ್ರೀತಿಸ್ವರೂಪನು, ಆತನು ನನ್ನ ತಂದೆ, ... ಪಾಪಗಳು ಕ್ಷಮಿಸಲ್ಪಟ್ಟಿವೆ ಎಂಬೀ ವಿಷಯಗಳಲ್ಲಿ ಯಾವ ಮಹಮ್ಮದೀಯನಿಗಾದರೂ ಸ್ಪಷ್ಟವಾದ ತಿಳುವಳಿಕೆಯು ಇರುವುದಿಲ್ಲ ಅವನು ಪ್ರಾರ್ಥನೆ ಮಾಡಿ ಖುರಾನು ಓದಬೇಕು ಆದರೂ ದೇವರು ತನ್ನನ್ನು ಸ್ವೀಕರಿಸಿಕೊಳ್ಳುವನೋ ತಳ್ಳಿಬಿಡುತ್ತಾನೋ ಎಂಬುದು ಅವನಿಗೆ ಖರವಾದ ಅನುಭವವು ... ಆದಕಾರಣ ತಾನು ರಕ್ಷಣೆಹೊಂದುತ್ತೇನೆಂಬುವದಕ್ಕೆ ತಕ್ಕ ಆಧಾರವಾದ ... ಅವನಿಗೆ ಇರುವುದಿಲ್ಲ

ಯೇಸು ಕ್ರಿಸ್ತನು ತಾನು ದೇವರ ಬಳಿಯಿಂದ ಬಂದವನೆಂತಲೂ ನ... ದೇವರ ಬಳಿಗೆ ಹೋಗತಕ್ಕ ದಾರಿಯನ್ನು ನಮಗೆ ತೋರಿಸುವುದಕ್ಕೆ ತಾನು ... ನಾಗಿದ್ದೇನೆಂತಲೂ ಹೇಳುತ್ತಾನೆ ಆತನೇ ದೇವರ ಬಳಿಗೆ ಹೋಗುವ ಮಾರ್ಗವಾಗಿರುತ್ತಾನೆ ದೇವರ ಕಡೆಯಿಂದ ಬಂದ ಸತ್ಯೋಪದೇಶಕನೂ ಜೀವದಾಯಕನೂ ಆತನೇ ಮನುಷ್ಯನು ತನ್ನ ಪಾಪದ ದೆಸೆಯಿಂದ ದೇವರಿಂದ ವಿಯೋಗವಾಗಿದ್ದಾನೆಂದೂ ಹೀಗಿದ್ದರೂ ದೇವರು ಅವನನ್ನು ಪ್ರೀತಿ ರಕ್ಷಿಸಬೇಕೆಂಬ ಅಪೇಕ್ಷೆಯುಳ್ಳವನಾಗಿರುತ್ತಾನೆಂದೂ ಯೇಸು ಕ್ರಿಸ್ತನು ನಮಗೆ ತಿಳಿಸಿರುತ್ತಾನೆ ಮನುಷ್ಯನು ರಕ್ಷಿಸಲ್ಪಡಬೇಕಾದರೆ ತನ್ನ ಪಾಪಗಳನು ವಿಸರ್ಜಿಸಿಬಿಡುವುದರ ... ಮನಸ್ಸುಮಾಡಿ, ಪೂರ್ಣ ಮನಸ್ಸಿನಿಂದ ದೇವರ ಕಡೆಗೆ ತಿರುಗಿಕೊಳ್ಳಬೇಕು ಯೇಸು ಕ್ರಿಸ್ತನು ಬಡವನಾಗಿದ್ದಾಗ್ಯೂ ತನ್ನ ಸಮ್ಮತಿಯಿಂದ ದೇವರು ... ಒಳ್ಳೆಯವನೂ ಪವಿತ್ರನೂ ಸತ್ಯಸಂಧನೂ ಆಗಿರುತ್ತಾನೆಂಬುದನ್ನು ಪ್ರಕಾಶಪಡಿಸಿರುತ್ತಾನೆ ಪಾಪವು ಎಷ್ಟು ಹೇಯವಾದುದೆಂಬುದು ಆತನ ಮರಣದಿಂದ ತಿಳಿದುಬರುತ್ತದೆ ಮತ್ತು ಆತನು ತನ್ನ ಮರಣದ ಮೂಲಕವಾಗಿ ಮಾನವರೆಲ್ಲರೂ ದೇವರ ಬಳಿಗೆ ಹೋಗುವ ಮಾರ್ಗವನ್ನು ಏರ್ಪಡಿಸಿರುತ್ತಾನೆ ಆತನು ಹೊಂದಿದ ಪಾಪಗಳನ್ನು ಕ್ಷಮಿಸಿಬಿಡುವುದಲ್ಲದೆ, ಮನಸ್ಸನ್ನು ಶುದ್ಧಿಮಾಡಿ, ... ವನ್ನು ವಿಸರ್ಜಿಸುವುದಕ್ಕೂ ತ್ರಿಕರಣಶುದ್ಧರಾಗಿ ಜೀವಿಸುವುದಕ್ಕೂ ಶಕ್ತಿಯನ್ನು ದಯಪಾಲಿಸುವನು ಯೇಸು ಕ್ರಿಸ್ತನ ಮೂಲಕವಾಗಿ ಮನುಷ್ಯನು ದೇವರು ತನ್ನ ತಂದೆಯಾಗಿದ್ದಾನೆಂದು ತಿಳಿದು ತ್ರಿಕರಣಶುದ್ಧನಾಗಿ ಜೀವಿಸುವುದಕ್ಕೆ ... ನಂದ ಸಹಾಯವನ್ನು ಹೊಂದುವನು ಆದಕಾರಣ ಕ್ರಿಸ್ತ ಮತವು ಸಾರ್ವಜನಿಕವಾದುದು ನಿನ್ನ ಜಾತಿ ಯಾವುದು? ನಿನ್ನ ಸ್ಥಿತಿ ಏನು? ಎಂದು ಕ್ರಿಸ್ತ ಮತವು ಯಾರನ್ನಾದರೂ ಕೇಳದೆ, ನೀನು ಪಾಪಿ ಎಂಬುದನ್ನು ತಿಳಿದುಕೊ... ಪ್ರಿಯಾ, ನೀನು ಪಾಪವಿಮುಕ್ತನಾಗಬೇಕೋ? ಎಂದು ಕೇಳುತ್ತದೆ ನೀ... ಇಂಥವನೆಂದೂ ಇಂತಹ ವರಪ್ರಸಾದವು ನನಗೆ ಬೇಕೆಂದೂ ನೀನು ತಿಳಿದಿದ್ದರೆ, ಯೇಸು ಕ್ರಿಸ್ತನೇ ನಿನಗೆ ಬೇಕಾಗಿರುವ ರಕ್ಷಕನಾಗಿರುತ್ತಾನೆ ಆತನು ಹೇಳಿರುವುದೇನೆಂದರೆ—"ನನ್ನ ಬಳಿಗೆ ಬರುವವನನು ನಾನು ತಳ್ಳಿಬಿಡುವುದೇ ಇಲ್ಲ"

ಐವತ್ತು ವರುಷಗಳ ದಾಂಪತ್ಯವು.

ರೆವ ಟಿ ಮತ್ತು ಮಿಸೆಸ್ ಲೂಕ್ ದಂಪತಿಗಳು

ರಾಜಧಾನಿಯಲ್ಲಿರುವ ರೆವ್ ಟಿ ಮತ್ತು ಮಿಸೆಸ್ ಲೂಕ್ ದಂಪತಿಗಳು ದಾಂಪತ್ಯ ಜೀವನ ಐವತ್ತು ವರುಷಗಳು ತುಂಬಿದ ಆನಂದವನ್ನು ಅವರ ಮಕ್ಕಳೂ ಮೊಮ್ಮಕ್ಕಳೂ ಮರಿಮಕ್ಕಳೂ ಸೇರಿ ಕಳೆದ ಸೋಮವಾರ ಬಹು ವಿ...

ಉತ್ಸವ ಪ್ರಸಂಗಕನಾಗಿ ಪ್ರಕಾಶಪಡಿಸಿದರು. ಆ ಎಸ ಅವರ ಬಂಧುಬಳಗ ಸಮಾನಸ್ಥನಾಗಿ ಕ್ರೈಸ್ತಮಂಡಲಿಗೂ ದಿವ್ಯವಾದ ಸುಭೋಜನ ಮಾಡಿಸಿತು. ಸಾಯಂಕಾಲ ಅತ್ಯಂತ ಮನೋಜ್ಞವಾದ ದೇವರ ಆರಾಧನೆಯೂ ನಡೆಯಿತು. ಅಗ್ಗೆ ವೈಸ್ ಬರಿಸಿದ್ದರುವ ಯೂರೋಪ್ಯರ್ ಮತ್ತು ಸ್ಥಳೀಯ ಕ್ರೈಸ್ತಸಹೋದರ ಸಹೋದರಿಯರೂ ಕೆಲವು ದಂಪತಿಗಳೂ ಈ ಸಭೆಯಲ್ಲಿ ಹಾಜರಾಗಿದ್ದರು. ರೆವ್. ಟಿ. ಮತ್ತು ಮಿಸೆಸ್ ಲೂಕ್ ರವರುಗಳನ್ನು ಅಗ್ರಸ್ಥಾನದಲ್ಲಿ ಕೂಡಿಸಿ, ರೆವ್. ಸಾದೇಯುಪತೇ ಮೊದಲಾದ ಯೂರೋಪ್ಯರ್ ಮತ್ತು ದೇಶೀಯ ಕ್ರೈಸ್ತಪ್ರಮುಖರು ಸತ್ಯವೇದ ಪಾರಾಯಣ, ಕೀರ್ತನೆ, ಪ್ರಾರ್ಥನಾದಿಗಳನ್ನು ನಡಿಸಿ, ಆ ವೃದ್ಧ ದಂಪತಿಗಳಿಗೆ ದೇವರ ಆಶೀರ್ವಾದಗಳನ್ನು ಕೋರಿದರು. ಆ ದಂಪತಿಗಳ ಸಚ್ಚರಿತ್ರೆ, ಅವರ ಸತ್ಕಾರ್ಯಗಳಿಂದುಂಟಾಗಿರುವ ದಿವ್ಯವಾದ ಮೇಲ್ಪಂಕ್ತಿಯೂ, ಪ್ರಸಿದ್ಧಿಯೂ, ಅವರಲ್ಲಿರುವ ಪರಿಶುದ್ಧ ಚಿಂತನೆಯೂ ಆ ದಿನ ಸಭೆಯಲ್ಲಿ ಹೇಳಲ್ಪಟ್ಟು ಸಕಲರಲ್ಲಿ ಆನಂದವನ್ನುಂಟುಮಾಡಿದವು. ಕಡೆಯಲ್ಲಿ ರೆವ್. ಲೂಕ್ಸಮಯವರು ತಮ್ಮ ಪತ್ನಿಯವರ ಮತ್ತು ತಮ್ಮ ಪರವಾಗಿ ಸಮಯೋಚಿತವಾದ ಕೆಲವು ಮಾತುಗಳನ್ನು ಹೇಳಿ, ದೇವರಿಗೆ ದೈನ್ಯವಾದ ಪ್ರಾರ್ಥನೆಯನ್ನೂ, ಸಭಾಮಂದಿರದಲ್ಲಿ ಹಾಜರಾಗಿದ್ದವರಿಗೆಲ್ಲಾ ಕೃತಜ್ಞತಾ ಪೂರ್ವಕ ವಂದನೆಗಳನ್ನೂ ಸಲ್ಲಿಸಿದರು. ಬಳಿಕ ಅವರ ರಕ್ತಸಂಬಂಧಿಗಳು ಅವರಿಗೆ ಮಾಲಿಕೆಗಳನ್ನು ಹಾಕಿ ಬಹುಮಾನಗಳನ್ನು ಒಪ್ಪಿಸಿ ತಮ್ಮ ಆನಂದವನ್ನು ಪ್ರಕಟಿಸಿದರು. ಯೂರೋಪ್ಯರ್ ಮಿಷನರಿಗಳೂ ಇತರರೂ ಆ ವೃದ್ಧರ ಮೇಲೆ ತಮಗಿರುವ ಪ್ರೇಮಾತಿಶಯವನ್ನು ಸಾಕ್ಷಾತ್ತಾಗಿ ತೋರಿಸಿದರು. ಸಭಿಕರು ಇಂಥಾ ಸಂಪ್ರಮಯುಕ್ತವಾದ ಕೂಟವು ಮೈಸೂರಿನಲ್ಲಿ ಇದು ನಡೆದಿಲ್ಲವೆಂದೂ, ದೇವರು ಆ ವೃದ್ಧ ದಂಪತಿಗಳನ್ನು ಇನ್ನೂ ಅನೇಕ ವರ್ಷ ಸುಖ ಸಂತೋಷಗಳಿಂದ ದೀರ್ಘಕಾಲ ಬಾಳಿಸುತ್ತಾ ಬರಲೆಂದೂ ಹಾರೈಸುತ್ತಾ ತೆರಳಿದರು.

ಒಳದೇಶದ ವೃತ್ತಾಂತಗಳು.

ಮೊತ್ತ ನಿಜಾಮ್ ಸಂಸ್ಥಾನದ ಸಿವಿಲ್ ಕೋರ್ಟುಗಳ ಡಿಕ್ರಿಗಳನ್ನು ಮೈಸೂರು ಸಂಸ್ಥಾನದಲ್ಲಿ ಜಾರಿ ಮಾಡಬಹುದೆಂದು ನಮ್ಮ ಸರ್ಕಾರದವರು ಹೇಳಿದ್ದಾರೆ.

• • •

ರಾಜಧಾನಿಯ ಪ್ರಜಾಭಿವೃದ್ಧಿಯುಳ್ಳ ಬಾಪುಜಿ ಬೆಟ್ಟದ ಆಸ್ಪತ್ರೆಯ ಚರಕಗಳು ಸೇರಿಕೊಂಡು ಅದೇ ವೇಳೆಯಲ್ಲಿ ಪಟ್ಟಣವಾಸಕ್ಕೂ ಪ್ರವೇಶಿಸುತ್ತವೆ ಎಂದು ವರ್ತಮಾನವಿದೆ.

• • •

ಶ್ರೀಮನ್ ಮಹಾರಾಜರವರು ಡಾಕ್ಟರ್ ಮೆಗ್ಗಿನ್ ದಂಪತಿಗಳ ಸಮೇತ ಸೋಮವಾರ ರಾಜಧಾನಿಯಿಂದ ಮೋಟಾರ್ ಗಾಡಿಗಳಲ್ಲಿ ನೀಲಗಿರಿಗೆ ಹೊರಟು ಹೋದರು. ಅವರು ಈ ವಾರವೇ ಅಲ್ಲಿಂದ ವಾಪಸು ಚಿತ್ತೈಸುವವರಾಗಿದ್ದಾರೆ.

• • •

ಬೆಂಗಳೂರು ಪ್ರಜೆಗಳು ಮೈಸೂರು ಸಬ್ ಜಡ್ಜರಾಗಿ ನೇಮಕವಾಗಿರುವ ಮ॥ ಸುಬ್ಬಣ್ಣನವರನ್ನೂ, ಬೆಂಗಳೂರಿಂದ ಶಿವಮೊಗ್ಗೆಗೆ ವರ್ಗವಾಗಿರುವ ಸಬ್ ಜಡ್ಜ್ ಮ॥ ನಾಗಪ್ಪನವರನ್ನೂ ಕರಸಿಕೊಂಡು ಸನ್ಮಾನಮಾಡಿ ತಮ್ಮ ಭಕ್ತಿಯನ್ನು ತೋರಿಸಬೇಕೆಂದು ಗೊತ್ತುಮಾಡಿದ್ದಾರೆ.

• • •

ನಂಜನಗೂಡಿನಲ್ಲಿ ಈ ತಿಂಗಳ ಅಂತ್ಯಭಾಗದಲ್ಲಿ ದೊಡ್ಡ ಜಾತ್ರೆ ನಡೆಯೋಣವಿದೆ. ತಾ 21 ರಿಂದ ಮೂರು ದಿನ ಅಲ್ಲಿ ದನಗಳ ಪ್ರದರ್ಶನ ಜರುಗುವುದು. ಆದರೂ, ಅಲ್ಲಿ ಕಾಲರಾ ಉಪದ್ರವಿರೋಣದರಿಂದ ಯಾತ್ರಿಕರ್ಯಾರಾಗಲಿ ಹೋಗುವುದು ಅಪಾಯಕರವೆಂದೂ ಡೆಪ್ಯುಟಿ ಕಮಿಷನರ್‌ರವರು ತಿಳಿಸುತ್ತಾರೆ.

• • •

ಬೆಂಗಳೂರಿಗೆ ಬಂದಿದ್ದ ಶಿವಗಂಗಾ ಶ್ರೀ ಸ್ವಾಮಿಗಳವರು ಹಲಸೂರು ವಾಸಿ ವೇ॥ ಕಾಶಿ ಕೃಷ್ಣ ಶಾಸ್ತ್ರಿಗಳಿಗೆ ಅವರ ಆಯುರ್ವೇದ ಪಾಂಡಿತ್ಯವನ್ನು ನೋಡಿ ಸಂತೋಷಪಟ್ಟು ಒಂದು ಭಂಗಾರದ ಮೆಡಲನ್ನು ದಯಪಾಲಿಸಿದರೂ, ಬೆಂಗಳೂರು ಸಂಸ್ಕೃತ ಕಾಲೇಜಿಗೆ 5,000 ರೂಪಾಯಿ ಕೊಡಿಸಿದರೆಂದು ಕೇಳುತ್ತೇವೆ.

• • •

ಕಾನಕಾನಹಳ್ಳಿ ತಾಲ್ಲೂಕು ಕೋಡಿಹಳ್ಳಿ ಸಮ್ಮತು ಅರಕೆರೆ ಎಂಬ ಗ್ರಾಮದಲ್ಲಿ ಕಳೆದ ಭಾನುವಾರ ಒಂದು ಜಮೀನಿನ ವ್ಯಾಜ್ಯಕ್ಕಾಗಿ ಬಸವಯ್ಯ, ಸಿದ್ದಬಸವಯ್ಯ, ಮುನಿತಿಕ ಎಂಬೀ ಮೂರು ಜನರು ಸೇರಿ ಶಿವಶಂಕರಯ್ಯ, ಶಂಕರಯ್ಯ ಎಂಬಿಬ್ಬರನ್ನು ಕಡಿದುಹಾಕಿದರೆಂದು ವರ್ತಮಾನಬಂದದ್ದರಿಂದ ಪೋಲೀಸ್ ಸೂಪರಿಂಟೆಂಡೆಂಟರು ಬೆಂಗಳೂರಿಂದ ಅಲ್ಲಿಗೆ ಹೋಗಿರುತ್ತಾರೆ.

• • •

ಗಾಯಕವಾಡಿ ಮಹಾರಾಜರವರ ಜ್ಯೇಷ್ಠಪುತ್ರರ ವಿವಾಹೋತ್ಸವಕ್ಕೆ ದಯಮಾಡಿದ್ದ ನಮ್ಮ ಶ್ರೀಮನ್ ಯುವರಾಜರವರು ಅದನ್ನು ತೀರಿಸಿಕೊಂಡು ಕಳೆದ ಭಾನುವಾರ ಮಧ್ಯಾಹ್ನ ವಾಪಸು ಬಂದರು. ರಾಜಕೋಟೆಗೆ ರಾಣಾಸಾಹೇಬರ ಕುಮಾರರ ವಿವಾಹೋತ್ಸವಕ್ಕಾಗಿ ಪ್ರಯಾಣಮಾಡಿರುವ ನಮ್ಮ ಮಹಾರಾಣಿಯವರು ಪರಿವಾರ ಸಮೇತ ಮುಂದಿನ ವಾರ ರಾಜಧಾನಿಗೆ ದಯಮಾಡುವರೆಂದು ಕೇಳುತ್ತೇವೆ.

• • •

ರಾಜಧಾನಿಯಲ್ಲಿ ವರ್ತಕರಾಗಿಯೂ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಮುನಿಸಿಪಲ್ ಕೌನ್ಸಿಲರಾಗಿಯೂ ಇರುವ ಮಿ॥ ಸಟ್ವಾಜಿ ರಾಯರ ಮೇಲೆ ಲೈಸೆನ್ಸ್ ಇಲ್ಲದೆ ಸ್ಪಿರಿಟ್ಸ್ ಎಂಬ ದ್ರಾವಕವನ್ನು ಇಟ್ಟುಕೊಂಡಿದ್ದರೆಂಬ ಮೊಕದ್ದಮೆ ಬಂದು, ಸಿಟಿ ಮ್ಯಾಜಿಸ್ಟ್ರೇಟರು ವಿಚಾರಣೆಯಿಂದ ಅವರಿಗೆ ಸಾವಿರ ರೂಪಾಯಿ ಜುಲ್ಮಾನೆ ಹಾಕಿದರಷ್ಟೆ. ಮಿ॥ ಸಟ್ವಾಜಿರಾಯರು ಅದರ ಮೇಲೆ ಚೀಫ್ ಕೋರ್ಟಿನಲ್ಲಿ ಅಪೀಲ್‌ಮಾಡಿರುತ್ತಾರೆಂದು ತಿಳಿದುಬಂದಿದೆ.

• • •

ಸರ್ಕಾರದವರು ಪ್ರತಿ ಒಂದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಿನಲ್ಲೂ ಒಂದೊಂದು ಆಸ್ಪತ್ರೆಯಲ್ಲಿ ಒಂದೊಂದು ಬೀಜದ ಹೋರಿಯನ್ನು ಇಟ್ಟುಕೊಳ್ಳಬಹುದೆಂದು ಸ್ಯಾಂಕ್ಷನ್ ಮಾಡಿ, ಚಿತ್ರದುರ್ಗದ ಡೆಪ್ಯುಟಿ ಕಮಿಷನರ್‌ರಿಗೂ ತಿಳಿಸಿದರು. ಆ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಈ ವಿಚಾರ ಚರ್ಚೆಗೆ ಬಂದಾಗ ಅಂಥಾ ಬೀಜದ ಹೋರಿಯ ಅರ್ಧಕ್ರಯವನ್ನೂ ಅದರ ರಾತೀಪಿನ ಖರ್ಚನ್ನೂ ವಹಿಸಲಾಗದೆ ತಮ್ಮ ಡಿಸ್ಟ್ರಿಕ್ಟಿಗೆ ಬೀಜದ ಹೋರಿಯೇ ಅನಾವಶ್ಯಕವೆಂದು ತೀರ್ಮಾನಮಾಡಿರುತ್ತಾರೆ.

• • •

ಸರ್ಕಾರದವರು ಜಾರಿಗೆ ತರಬೇಕಾದ ಅಳತೆ ತೂಕಗಳ ಕಾನೂನಿಗೆ ಅನುಸಾರವಾಗಿ ಅಳತೆಯ ಮತ್ತು ತೂಕದ ಸಾಧನಗಳನ್ನು ತಯಾರುಮಾಡಿಸಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಸುಲಭ ಕ್ರಯಕ್ಕೆ ವಿಕ್ರಯ ಮಾಡುತ್ತಿದ್ದಾರೆ ಮತ್ತು ಅಂಥಾ ಒಂದೊಂದು ಸಾಧನವನ್ನು ಎಲ್ಲಾ ತಾಲ್ಲೂಕುಗಳಿಗೂ ಪೋಲೀಸ್ ಸ್ಟೇಷನ್‌ಗಳಿಗೂ ಕಳುಹಿಸಿರುವಂತೆ ತಿಳಿಯುತ್ತೇವೆ. ವರ್ತಕರೂ ಪ್ರಜೆಗಳೂ ಈ ಭಾಗದಲ್ಲಿ ಇನ್ನು ಮುಂದೆ ಆಕ್ಷೇಪನೆ ಮಾಡದಂತೆ ಸರ್ಕಾರದವರು ಸಂತೆಗಳಲ್ಲೂ ಪೇಟೆಗಳಲ್ಲೂ ದಂಡಕವಾದ ಕ್ರಮವನ್ನಿಟ್ಟಿರೆಂದು ನಿರೀಕ್ಷಿಸಬಹುದು.

• • •

ರಾಜಧಾನಿಯ ಮಿಷನ್ ಹೈಸ್ಕೂಲಿನಲ್ಲಿ ನಾಲ್ಕು ವರುಷ ಬಹು ಉತ್ಸಾಹದಿಂದಲೂ ಪ್ರೀತಿಯಾಗಿಯೂ ಉಪಾಧ್ಯಾಯರಾಗಿ ಕೆಲಸಮಾಡಿ, ಈಗ ಸರ್ಕಾರದ ನೌಕರಿಯನ್ನು ಒಪ್ಪಿಕೊಂಡಿರುವ ಮ॥ ಟಿ. ಎನ್. ರಾಮಸ್ವಾಮಿ ಅಯ್ಯರವರನ್ನು ಹೈಸ್ಕೂಲಿನ ವಿದ್ಯಾರ್ಥಿಗಳು ಕರೆಸಿಕೊಂಡು ಒಂದು ದಿವ್ಯವಾದ ಸಂತೋಷಕೂಟವನ್ನು ನಡಿಸಿ ಅವರಿಗೆ ಭಕ್ತಿ ಪ್ರೀತಿಯುಕ್ತವಾದ ಅಡ್ರೆಸ್ಸನ್ನು ಓದಿ ಒಪ್ಪಿಸಿ ಒಂದು ಬೆಳ್ಳಿಯ ಬಟ್ಟಲನ್ನು ತಮ್ಮ ಜ್ಞಾಪಕಾರ್ಥವಾಗಿ ಕೊಟ್ಟರು. ಈ ಸಂತೋಷ ಕೂಟವು ಬಹು ಸ್ವಾರಸ್ಯವಾಗಿಯೂ, ವಿಶೇಷ ಆಹ್ಲಾದಕರವಾಗಿಯೂ ಜರುಗಿತು.

• • •

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯ ಸೆಕ್ರೆಟರಿ ಮ॥ ಎಚ್. ಕೆ. ವೀರಬಸವಯ್ಯನವರು ತಿಳಿಸುವುದೇನೆಂದರೆ—ಬೆಂಗಳೂರು ಶ್ರೀಕರಿಸಿದ್ಧೇಶ್ವರ ಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀಮದ್ವೀರಶೈವ ಸಂಸ್ಕೃತ ಪಾಠಶಾಲೆಗೆ ಪೋಷಕರಾದ ವೇ॥ ಚನ್ನಬಸವಸ್ವಾಮಿಗಳವರು ಒಂದು ವರ್ಷದಿಂದಲೂ ಭಿಕ್ಷಾಟನೆಯಿಂದ ಸಹಾಯಮಾಡುತ್ತಿದ್ದು, ಈಚೆಗ 1-3 ತಿಂಗಳಿಂದ ಶ್ರೀಮದ್ವೀರಶೈವ ವಿದ್ಯಾವರ್ಧಕ ಫಂಡ್ ಅಸೋಸಿಯೇಷನ್ ಸೆಕ್ರೆಟರಿಯವರಲ್ಲಿಗೆ ತಿಂಗಳಿಗೆ 10 ರೂಪಾಯಿಯಂತೆ ಕಳುಹಿಸಿ ಸದರಿ ಪಾಠಶಾಲೆಯ ವಿನಿಯೋಗಕ್ಕಾಗಿ ಉಪಯೋಗವಾಗುವಂತೆ ಮಾಡುತ್ತಿರುವರು. ವಿದ್ಯಾಭಿಮಾನಶಾಲಿಗಳು ಸಂಸ್ಕೃತ ವಿದ್ಯಾಭ್ಯಾಸ ವಿಷಯದಲ್ಲಿ ಪ್ರೋತ್ಸಾಹಕೊಟ್ಟು ಪೋಷಕರಾಗಬೇಕಾಗಿ ಪ್ರಾರ್ಥನೆ.

• • •

ಕೆಸ್ತಾಗಾಲದ ದಂಗೆ ಮೊಕದ್ದಮೆಯ ಸೆಷನ್ಸ್ ವಿಚಾರಣೆಯು ಮೊನ್ನೆ ಸೋಮವಾರದಿಂದ ರಾಜಧಾನಿಯಲ್ಲಿ ಪ್ರಾರಂಭವಾಗಿ ನಡೆಯುತ್ತಿದೆ. ಆ ಮೂರು ದಿನಗಳಿಂದ ಸೆಷನ್ಸ್ ಜಡ್ಜ್ ಮಿ॥ ನಿಸಾರ್ ಹಂಜಾ ಹುಸೇನ್‌ರವರು ಅಪರಾಧಿಗಳನ್ನು ಒಬ್ಬೊಬ್ಬರಾಗಿ ಕೂಗಿಸಿ ನಿಲ್ಲಿಸಿಕೊಂಡು—ನಿನ್ನ ಮೇಲೆ ಇಂಥಿಂಥಾ ತಕ್ಸೀರುಗಳು ಬಂದಿವೆಯಲ್ಲಾ, ಏನು ಹೇಳುತ್ತೀ ಎಂದು ಕೇಳುತ್ತಲೂ, ಅವರು—ನಾವು ಆ ತಕ್ಸೀರು ಮಾಡಿದವರಲ್ಲವೆಂದು ಹೇಳುತ್ತಲೂ ಬಂದಿದ್ದಾರೆ. ಈ ರೀತಿಯಾಗಿ 188 ಮಂದಿ ಅಪರಾಧಿಗಳ ವಿಚಾರಣೆ ಪೂರೈಸುವುದಕ್ಕೆ ಇನ್ನೂ ಒಂದೆರಡು ದಿನ ಹಿಡಿಯುವುದೆಂದೂ, ಆ ತರುವಾಯ ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಮ॥ ಎಂ. ಸಿ. ರಂಗಯ್ಯಂಗಾರ್ಯರವರು ಪ್ರಾಸಿಕ್ಯೂಷನ್ (ಸರ್ಕಾರಿ) ತರಫಿನಲ್ಲಿ ಈ ಮೊಕದ್ದಮೆಯ ವಿದ್ಯಮಾನಗಳನ್ನು ಜಡ್ಜಿಯವರಿಗೆ ವಿವರಿಸಿ ಹೇಳುವುದು ಒಂದೆರಡು ದಿನಗಳಾದರೂ ಹಿಡಿಯುವುದೆಂದೂ, ಬಳಿಕ ಕ್ರಮ ದರ್ಯಾಪ್ತಿ ಪ್ರಾರಂಭವಾದೀತೆಂದೂ ತಿಳಿದುಬಂದಿದೆ.

ಮೈಸೂರು ಗೆಜೆಟ್ ಸಂಗ್ರಹ.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಡೆಪ್ಯುಟಿ ಕಮಿಷನರ್‌ರವರು ಪ್ರೆಸಿಡೆಂಟರಾಗಿರುವುದನ್ನು ಮಾರ್ಚಿ ತಾ 15 ರಿಂದ ಮನ್ನಾಮಾಡಿ, ಎಗ್ಸಿಕ್ಯುಟಿವ್ ಇಂಜನಿಯರ್ ಮಿ॥ ಟಿ. ಜಿ. ಲಕ್ಷ್ಮೀನರಾಯರವರನ್ನು ಆ ಕಾರ್ಯಕ್ಕಾಗಿ ಪ್ರೆಸಿಡೆಂಟಾಗಿ ತಂಗಾಮಿ ನೇಮಕ ಮಾಡಿದೆ. ಮತ್ತು ನಗರಾಭಿವೃದ್ಧಿಯ ಟ್ರಸ್ಟ್ ಬೋರ್ಡಿಗೆ ಡೆಪ್ಯುಟಿ ಕಮಿಷನರ್‌ರವರು ಚೇರ್ಮನ್‌ರಾಗಿರುವುದನ್ನು ಅದೇ ತಾರೀಖಿನಿಂದ ವಜಾ ಮಾಡಿ, ಮಿ॥ ಟಿ. ಜಿ. ಲಕ್ಷ್ಮೀನರಾಯರವರನ್ನು ಆ ಸ್ಥಾನಕ್ಕೆ ನೇಮಿಸಲಾಗಿದೆ.

ಮಿ॥ ನಾರಾಯಣರಾಯರು ಹೊಳೆನರಸೀಪುರ ತಾಲ್ಲೂಕ್ ಬೋರ್ಡಿನ ಮೆಂಬರಾಗಿ ಚುನಾಯಿಸಲ್ಪಟ್ಟಿದ್ದಾರೆ.

ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ ಅಗರ ಮತ್ತು ಅಗಳಬಾಗಲು ಗ್ರಾಮಗಳನ್ನು ಕೂಡಿಸಿ ಮುಂದಿನ ಜೂಲೈ ಒಂದನೇ ತಾರೀಖಿನಿಂದ ಒಂದು ಯೂನಿಯನ್ ಪಂಚಾಯತಿ ಮಾಡಿರುತ್ತೆ.

ಜಮೀನ್‌ದಾರ್ ಮಿ॥ ವೆಂಕಟನಾರಣಪ್ಪನವರನ್ನು ನೆಗ್ಗಡದೇವನಕೋಟೆ ತಾ॥ ಸರಗೂರು ಯೂನಿಯನ್ ಪಂಚಾಯತಿ ಮೆಂಬರಾಗಿ ನೇಮಿಸಿರುತ್ತೆ.

ಕೋಲಾರದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮಿ॥ ಎಚ್. ರಾಮಯ್ಯನವರಿಗೆ ಕೊಟ್ಟಿರುವ ಪ್ರಿವಿಲೆಜ್ ರಜಾ ಜೊತೆಗೆ ಮೂರು ತಿಂಗಳ ಫರ್ಲೋ ರಜಾ ಕೊಟ್ಟಿದೆ. ಈಗ ಮಾಡಿರುವ ಬದಲಿ ಏರ್ಪಾಡು ಜಾರಿಯಲ್ಲಿರತಕ್ಕದ್ದು.

ಸೀನಿಯರ್ ಅ॥ ಕಮಿಷನರ್ ಮತ್ತು ಸೆನ್ಸಸ್ ಸೂಪರಿಂಟೆಂಡೆಂಟ್ ಮಿ॥ ವಿ. ಆರ್. ತ್ಯಾಗರಾಜ ಅಯ್ಯರವರನ್ನು ತುಮಕೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್‌ರಾಗಿಯೂ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿಯೂ ನೇಮಿಸಿದೆ.

ಡಾಕ್ಟರ್ ಎಚ್. ಸಿ. ಕೋಲ್‌ಮನ್‌ರವರನ್ನು ಮೈಸೂರು ಸಂಸ್ಥಾನದ ವ್ಯವಸಾಯದ ಇಲಾಖಾ ಡೈರೆಕ್ಟರಾಗಿ ಫೆಬ್ರವರಿ ತಾ. 15 ರಿಂದ ನೇಮಕ ಮಾಡಿದೆ. ಇವರು ಮಿ॥ ಎಚ್. ವಿ. ಕೃಷ್ಣಯ್ಯನವರಿಂದ ಇಲಾಖೆಯ ಛಾರ್ಜನ್ನು ವಹಿಸಿಕೊಂಡಿದ್ದಾರೆ.

ಚಿತ್ರದುರ್ಗದ ಆಕ್ಟಿಂಗ್ ಅ॥ ಕಮಿಷನರ್ ಮಿ॥ ಎಂ. ಸದಾಶಿವರಾಯರಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಸೀನಿಯರ್ ಅ॥ ಕಮಿಷನರ್ ಮಿ॥ ಜಿ. ಆರಾವಮುದು ಅಯ್ಯಂಗಾರ್ಯರವರನ್ನು ಮುಜರಾಯಿ ಸೂಪರಿಂಟೆಂಡೆಂಟರಾಗಿ ನೇಮಕ ಮಾಡಿದೆ.

ತುಮಕೂರು ಡೆಪ್ಯುಟಿ ಕಮಿಷನರ್‌ರಾಗಿರುವ ಮಿ॥ ಸಿ. ಎಸ್. ಬಾಲಸುಂದರಂ ಅಯ್ಯರವರನ್ನು ಮೈಸೂರು ಸಂಪದಭ್ಯುದಯ ಸಮಾಜದ ಸೆಕ್ರೆಟರಿಯಾಗಿ ನೇಮಿಸಿದೆ. ಮಿ॥ ಕೆ. ಸುಬ್ಬರಾಯರು ಅ॥ ಸೆಕ್ರೆಟರಿಯಾಗಿರತಕ್ಕದ್ದು.

ಕುಣಿಗಲ್ ಡೆಪ್ಯುಟಿ ಅಮಲ್ದಾರ್ ಮಿ॥ ಸಿ. ಬಿ. ರಾಮಯ್ಯನವರನ್ನು ಫ್ರೆಂಚ್ ರಾಕ್ಸ್ ಸಬ್ ತಾಲ್ಲೂಕಿಗೆ ವರ್ಗಮಾಡಿದೆ.

ಬೆಂಗಳೂರು ತಾಲ್ಲೂಕು ರೆವಿನ್ಯೂ ಪ್ರೊಬೇಷನರ್ ಮಿ॥ ಹೈದರಲ್ಲಿಖಾನ್‌ರವರನ್ನು ಕುಣಿಗಲ್ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿದೆ.

ಮುಂದೆ ಹೇಳುವ ಅ॥ ಕಮಿಷನರ್‌ಗಳ ವರ್ಗಾವರ್ಗಿ ಹುಕುಂ ಮಾಡಿದೆ—(1) ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಆಫೀಸರ್ ಮಿ॥ ಸಿ. ವೆಂಕಟರಾಯರನ್ನು ಗವರ್ನ್‌ಮೆಂಟ್ ಅಂಡರ್ ಸೆಕ್ರೆಟರಿಯಾಗಿ ನೇಮಿಸಿದೆ; (2) ಮಿ॥ ಟಿ. ಇ. ಜಯರಾಮ ಅಯ್ಯರವರನ್ನು ಮಾಲೂರಿನಿಂದ ದೊಡ್ಡಬಳ್ಳಾಪುರದ ಸಬ್‌ಡಿವಿಜನ್ ಛಾರ್ಜಿಗೆ ವರ್ಗಮಾಡಿದೆ, (3) ರಜದ ಮೇಲಿರುವ ಮಿ॥ ಟಿ. ಚೊಕ್ಕಣ್ಣನವರು ಮಾಲೂರು ಸಬ್ ಡಿವಿಜನ್ ಛಾರ್ಜನ್ನು ವಹಿಸತಕ್ಕದ್ದು.

ಮುಂದೆ ಹೇಳುವ ಅಮಲ್ದಾರ್ರುಗಳ ವರ್ಗಾವರ್ಗಿ ಹುಕುಂ ಮಾಡಲಾಗಿದೆ—ಮಿ॥ ಎನ್. ಶ್ರೀನಿವಾಸರಾಯರನ್ನು ನಂಜನಗೂಡು ತಾಲ್ಲೂಕಿನಿಂದ ಕೊಪ್ಪಕ್ಕೆ; (2) ಮಿ॥ ಬಿ. ಭೀಮರಾಯರನ್ನು ಕೊಪ್ಪದಿಂದ ನಂಜನಗೂಡು ತಾಲ್ಲೂಕಿಗೆ.

ಮಿ॥ ಎಚ್. ವಿ. ನಂಜುಂಡಯ್ಯನವರಿಂದ ರಾವ್ ಬಹದೂರ್ ಮಿ॥ ಪಿ. ಎಸ್. ಕೃಷ್ಣರಾಯರು ಫೆಬ್ರವರಿ ತಾ 15 ರಲ್ಲಿ ಚೀಫ್ ಜಡ್ಜ್ ಕೆಲಸದ ಛಾರ್ಜನ್ನು ವಹಿಸಿಕೊಂಡಿದ್ದಾರೆ.

ರಾವ್ ಬಹದೂರ್ ಮಿ॥ ಪಿ. ಎಸ್. ಕೃಷ್ಣರಾಯರು ಉಪಯೋಗಿಸಿಕೊಳ್ಳದೆ ಇರುವ ಒಂದು ತಿಂಗಳು ಮೂರು ದಿನಗಳ ಸಂಬಳವಿಲ್ಲದ ರಜವನ್ನು ರದ್ದುಮಾಡಿದೆ.

ಅ॥ ಇಂಜನಿಯರ್ ಮಿ॥ ಎಂ. ಜಿ. ರಂಗಯ್ಯನವರನ್ನು ರೈಲ್ವೆ ಇಲಾಖೆಯಿಂದ ಇಂಜನಿಯರ್ ಇಲಾಖೆಗೆ ಸ್ಪೆಷಲ್ ಅಸಿಸ್ಟೆಂಟಾಗಿ ವರ್ಗಮಾಡಿದೆ.

ಮೈಸೂರು ನಗರಾಭಿವೃದ್ಧಿಯ ಡಿವಿಜನ್ ಎಗ್ಸಿಕ್ಯುಟಿವ್ ಇಂಜನಿಯರ್ ಮಿ॥ ವೈ. ಅಶ್ವತ್ಥನಾರಾಯಣರಾಯರನ್ನು ತಂಗಾಮಿಯಾಗಿ ಕಾವೇರಿ ಚಾನಲ್ ಡಿವಿಜನ್‌ಗೆ ವರ್ಗಮಾಡಿದೆ.

ಮಿ॥ ಡಿ. ಎಂ. ನರಸಿಂಗರಾಯರು ಗವರ್ನ್‌ಮೆಂಟ್ ಡೆಪ್ಯುಟಿ ಸೆಕ್ರೆಟರಿಯಾಗಿ ನೇಮಕವಾದ್ದರಿಂದ ಮೈಸೂರು ಸಬ್ ಜಡ್ಜ್ ಮಿ॥ ಬಿ. ಸುಬ್ಬಣ್ಣನವರನ್ನು ರೂಲ್ ಕಮಿಟಿಯ ಮೆಂಬರಾಗಿ ಚೀಫ್ ಕೋರ್ಟಿನವರು ನೇಮಿಸಿರುತ್ತಾರೆ.

ಇಂಡಿಯಾ ದೇಶದ ವೃತ್ತಾಂತಗಳು.

ಪಾಟಿಯಾಲಾ ಸಂಸ್ಥಾನದ ಮಹಾರಾಜರವರಿಗೆ ಪುತ್ರಸಂತಾನವಾದ ಸಂತೋಷಕ್ಕಾಗಿ ಪಂಜಾಬಿನಲ್ಲಿರುವ ಹಲವು ಧರ್ಮಕಾರ್ಯಗಳಿಗೆ ಅವರು ೫೦ ಸಾವಿರ ರೂಪಾಯನ್ನು ಹಂಚಿ ಕೊಟ್ಟಿದ್ದಾರೆ.

• • •

ರಂಗೂನ್ ಪಟ್ಟಣದಲ್ಲಿ 10 ರೂಪಾಯಿನ ಖೋಟಾ ನೋಟುಗಳು ಚಲಾವಣೆಯಲ್ಲಿ ಸಿಕ್ಕಿದವು. ಪೋಲೀಸಿನವರು ಪತ್ತೆ ತರಹೂದು ನಡಿಸಿದ್ದರಲ್ಲಿ ಬಡೀವಿಯಾದೊಳಗೆ ಒಬ್ಬ ಚೀನಿಯವನು ಸಿಕ್ಕಿಬಿದ್ದನು. ಅವನ ಬಳಿ ಅಂಥಾ ಅನೇಕ ಕಳ್ಳ ನೋಟುಗಳೂ, 131 ಖೋಟಾ ನಾಣ್ಯಗಳೂ, ಯಂತ್ರೋಪಕರಣಗಳೂ ಸಿಕ್ಕಿದವು. ಈಗ ಅವನ ಮೇಲೆ ಮೊಕದ್ದಮೆ ತಂದಿರುತ್ತಾರೆ.

• • •

ರಂಗೂನ್ ಪಟ್ಟಣದಲ್ಲಿ ಬಹಳ ಹಳಬನೆನಿಸಿಕೊಂಡಿದ್ದ ಇಬ್ರಾಹಿಂ ಅಲ್ಲಿ ಮುಲ್ಲಾ ಎಂಬ ಭಾರೀ ಸಾಹುಕಾರನು ಕಳೆದ ವಾರ ಕಾಲವಾದನು. ಇವನು ವ್ಯಾಪಾರದಲ್ಲಿ ವಿಶೇಷವಾದ ಐಶ್ವರ್ಯವನ್ನು ಸಂಪಾದನೆ ಮಾಡಿ ಅನೇಕ ಧರ್ಮಕಾರ್ಯಗಳಿಗೆ ಕೊಟ್ಟು ಸಕಲರಲ್ಲೂ ಪ್ರೀತಿ ಸನ್ಮಾನಗಳನ್ನು ಪಡೆದಿದ್ದನು. ಈತನ ಮರಣದಿಂದ ಅವನ ಮಗನಿಗೆ 40 ಲಕ್ಷ ರೂಪಾಯಿನ ಆಸ್ತಿ ಕೈಸೇರಿರುತ್ತದೆ.

• • •

ಕಳೆದ ವಾರ ಬರ್ಮಾ ಅಧಿಪತ್ಯದಲ್ಲಿ ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಸುಮಾರು ಐದು ನಿಮಿಷಗಳ ತನಕ ಭೂಮಿಯು ಕಂಪಿಸಿ, ಅನೇಕ ಮನೆಗಳೂ ಬಂಗಲೆಗಳೂ ಅಲುಗಿಹೋದವು. ಕೋರ್ಟು ಕಚೇರಿಗಳಲ್ಲಿ ಕೆಲಸಮಾಡುತ್ತಿದ್ದ ನೌಕರರೂ, ಜಡ್ಜಿಗಳೂ, ಮನೆಗಳಲ್ಲಿದ್ದ ಪ್ರಜೆಗಳೂ ಗಾಬರಿಯಿಂದ ಬೀದಿಗೆ ಓಡಿಹೋದರು. ಪೆಗೂ ಪಟ್ಟಣದಲ್ಲಿ ಒಂದು ಬರ್ಮಾ ದೇವಸ್ಥಾನದ ಮೇಲ್ಭಾಗದಲ್ಲಿದ್ದ ಭಂಗಾರದ ಸುಮಾರು ಎಂಟು ಲಕ್ಷ ರೂಪಾಯಿನ ಛತ್ರಿಯು ಕಳಚಿಬಿದ್ದುಹೋಯಿತು.

• • •

ಈ ತಿಂಗಳು 1 ನೇ ತಾ. ಗೆ ಆಖೈರಾದ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ 8,142 ಜನರು ಪ್ಲೇಗ್ ಉಪದ್ರವದಲ್ಲಿ ಕಾಲವಾದರು. ಅಂದರೆ, ಹಿಂದಿನ ವಾರದ ಮರಣಸಂಖ್ಯೆಗಿಂತ 1,596 ಕಡಮೆ. ಮರಣಸಂಖ್ಯೆಯ ವಿವರ ಹ್ಯಾಗೆಂದರೆ—ದೆಹಲಿ (ಗ್ರಾಮಾಂತರ) 10, ಬೊಂಬಾಯಿ 339, ಮದರಾಸ್ 143, ಬಂಗಾಳಾ 21, ಬೀಹಾರ್ 2,709 ಸಂಯುಕ್ತ ಅಧಿಪತ್ಯಗಳು 4,886, ಪಂಜಾಬ್ 115, ಬರ್ಮಾ 137, ಮಧ್ಯಪ್ರಾಂತ್ಯಗಳು 29, ಮೈಸೂರು 86, ಹೈದರಾಬಾದ್ 64, ರಾಜಪುಟಾನ 110, ಕಾಶ್ಮೀರ 11.

• • •

ಸಂಯುಕ್ತ ಅಧಿಪತ್ಯಗಳಿಗೆ ಸೇರಿದ ಆಗ್ರಾಪಟ್ಟಣದಲ್ಲಿ ಲೆಫ್ಟಿನೆಂಟ್ ಕ್ಲಾರ್ಕ್ ಎಂಬೊಬ್ಬ ಡಾಕ್ಟರೂ ಫುಲ್‌ಹಾಂ ಎಂಬಾತನ ಹೆಂಡತಿಯೂ ಒಂದಾಗಿ ಫುಲ್‌ಹಾಂ ಎಂಬಾತನಿಗೆ ವಿಷಕೊಟ್ಟು ಕೊಂದರೆಂದೂ, ಕ್ಲಾರ್ಕನ ಹೆಂಡತಿಯನ್ನೂ ಕೊಲ್ಲಿಸಿದರೆಂದೂ ಮೊಕದ್ದಮೆ ಬಂದು ಸುಮಾರು 3-4 ತಿಂಗಳಿಂದ ದರ್ಯಾಪ್ತಿಯಾಗುತ್ತಿತ್ತು. ಕಡೆಗೆ ಅಪರಾಧಿಗಳಿಬ್ಬರೂ ತಾವು ಆ ರೀತಿ ಕೊಲೆ ಮಾಡಿದ್ದುಂಟೆಂದು ಜಡ್ಜಿಯ ಮುಂದೆ ಒಪ್ಪಿ ಹೇಳಿಬಿಟ್ಟರು. ಜಡ್ಜಿಯವರು ಅವರಿಬ್ಬರಿಗೂ ಮರಣದಂಡನೆಯನ್ನು ಕಳೆದ ಸೋಮವಾರ ವಿಧಿಸಿದರು. ಆ ಸಮಯದಲ್ಲಿ ಫುಲ್‌ಹಾಂ ಎಂಬುವಳು ಗರ್ಭಿಣಿಯಾಗಿದ್ದಾಳೆಂದು ತಿಳಿಯಬಂದ ಕಾರಣ ಅವಳಿಗೆ ಮರಣದಂಡನೆ ತಪ್ಪಿಸಿ ಜೀವಾವಧಿ ಸಜಾ ವಿಧಿಸಿದರು.

ಕಾಲರಾ ಉಪದ್ರವು

ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರ್ ಮಿ॥ ಕೆ ಚಾಂಡಿಯವರು ಎಲ್ಲಾ ಗ್ರಾಮಗಳ ಪಟೇಲರುಗಳಿಗೂ ನೋಟೀಸು ಕೊಟ್ಟು ತಿಳಿಸುವುದೇನೆಂದರೆ— (1) ಕಾಲರಾ ಜಾಡ್ಯವು ನೀರಿನಿಂದ ಬರುವದರಿಂದ ಪರಿಶುದ್ಧವಾದವರು ನೀವು ಉಪಯೋಗಿಸುವ ನೀರಿನ ಆಸರೆಯನ್ನು ಮುಟ್ಟುವದಕ್ಕೆ ಬಿಂದಿಕೆ ಅವಕಾಶ ಕೊಡಕೂಡದು ನಿಮ್ಮ ಕಡೆಯವರೇ ಅವರಿಗೆ ನೀರನ್ನು ಒದಗಿಸಿಕೊಡಬೇಕು —(2) ನೀರು ಹಾಲು ವಗೈರೆ ಪಾನೀಯಗಳನ್ನು ಚೆನ್ನಾಗಿ ಕಾಯಿಸಿ ಕುಡಿಯಬೇಕು ತಣ್ಣಗಿರು ತಂಗಳು ಅಪಕ್ವವಾದ ಮತ್ತು ಕೊಳೆತ ಕಾಯಿ ಹಂಪಲುಗಳನ್ನು ತಿನ್ನಕೂಡದು —(3) ಸಾಧ್ಯವಾದ ಮಟ್ಟಿಗೂ ಭಾವಿ ನೀರನ್ನೇ ಉಪಯೋಗಿಸಬೇಕು ಇತರ ಕೊಳ, ಕಟ್ಟೆ, ನದಿ ನೀರು ಆದರೆ ಬಾಯಿ ತೊಳೆಯುವದಕ್ಕೂ ಕೂಡ ಕಾಯಿಸಿದ ನೀರನ್ನೇ ಉಪಯೋಗಿಸಬೇಕು —(4) ನಿಮ್ಮ ಗ್ರಾಮದಲ್ಲಿ ಅಕಸ್ಮಾತ್ತಾಗಿ ಈ ಖಾಯಿಲೆ ತಲೆದೋರಿದರೆ ಆ ಕೂಡಲೆ ಸರ್ಕಾರಕ್ಕೆ ತಿಳಿಸುವದಲ್ಲದೆ ಖಾಯಿಲೆ ಮನೆಯವರಿಂದ ನೀರಿನ ಆಶ್ರಯವನ್ನು ಮುಟ್ಟಿಸದೆ ಅವರಿಗೂ ನೀರು ಒದಗಿಸಿಕೊಡಬೇಕು —(5) ಸಿ-ಬೇಯನ್ನು ಹುಳಿಮಜ್ಜಿಗೆ ಇವುಗಳನ್ನು ಉಪಯೋಗಿಸುವದು ಒಳ್ಳೇದು

ನೂರು ವರುಷ ತುಂಬಿದ ದಂಪತಿಗಳು

ಶ್ರೀಮನ್ಮಹಾರಾಜರವರು ಬಹುಮಾನಮಾಡಿದ್ದು.

ತುಮಕೂರು ಡಿಸ್ಟ್ರಿಕ್ಟು ಸಿರಾ ತಾಲ್ಲೂಕು ಚಿಕ್ಕನಹಳ್ಳಿ ವಾಸಸ್ಥರಾದ ವೈದಿಕ ಬ್ರಾಹ್ಮಣ ವೇ ವೆಂಕಟರಾಮಭಟ್ಟರೆಂಬುವರು ಇದೇ ಸಂವತ್ಸರದ ಮಾಘ ಶುದ್ಧ ೧೦ (ತಾ॥ 16-2-1913) ರಲ್ಲಿ ನೂರು ವರುಷಕ್ಕೆ ಮೇಲ್ಪಟ್ಟ ವಯಸ್ಸುಳ್ಳ ತಮ್ಮ ತಂದೆ ವೆಂಕಟಾಚಲಭಟ್ಟರಿಗೂ, ಸ್ವಲ್ಪ ಕಡಮೆ ಅದೇ ವಯಸ್ಸಿನ ತಮ್ಮ ತಾಯಿಯವರಿಗೂ ಶತಮಾನ ಜೀವಿತ ಸಹಸ್ರ ಚಂದ್ರ ದರ್ಶನ ಶಾಂತಿ ಎಂಬ ಕರ್ಮವನ್ನು ಮಾಡುವ ಉದ್ದೇಶದಿಂದ ಕಾರ್ಯ ಸಂಪಲ್ಲಕ್ಕೆ ತಕ್ಕ ಸಾಧನ ಯೋಗ್ಯತೆ ಸಾಲದೆ ಪತ್ರಿಕಾ ಮೂಲಕ ನಮ್ಮನ್ನಾಳುವ ಮಹಾಸ್ವಾಮಿಯವರ ಸನ್ನಿಧಾನಕ್ಕೆ ವಿಜ್ಞಾಪನೆಮಾಡಿಕೊಂಡು ಅವರಿಂದ ಅನುಕೂಲವಾದ ಸಹಾಯ ಸಂಪತ್ತಿಯನ್ನು ಪಡೆದು ಆ ದಿನ ನಡೆಸಬೇಕಾದ ಕರ್ಮಗಳೆಲ್ಲವೂ ವೇದೋಕ್ತ ಧರ್ಮಗಳನ್ನನುಸರಿಸಿ ನಡೆಯುತ್ತಿರುವಾಗ್ಗೆ ಈ ತಾಲ್ಲೂಕು ಶಿರಸ್ತೆದಾರ್ ಮ॥ ವೆಂಕಟನಾರಣಪ್ಪಯ್ಯರವರು ಸಕಾಲಕ್ಕೆ ದಯಮಾಡಿ ಸ್ಥಳಾಲಂಕೃತರಾಗಿ ನಮ್ಮ ಶ್ರೀಮನ್ಮಹಾರಾಜರವರಿಂದ ದಯಪಾಲಿಸಲ್ಪಟ್ಟ ಅಮೂಲ್ಯ ನಾಣ್ಯವಸ್ತ್ರಗಳನ್ನು ಆ ವೃದ್ಧ ದಂಪತಿಗಳಿಗೆ ಸಮರ್ಪಿಸಿದರು ಸಭೆಯಲ್ಲಿ ನೆರೆದ್ದ ಸಮಸ್ತ ಬ್ರಾಹ್ಮಣ ಮಂಡಲಿಯಿಂದ ಶ್ರೀಮನ್ ಮಹಾರಾಜರವರ ಶ್ರೇಯೋಭಿವೃದ್ಧಿ ಪುರಸ್ಸರವಾದ ವೇದೋಕ್ತಾಶೀರ್ವಾದಗಳೂ, ಕಡವಗೆರೆ ಗವರ್ನಮೆಂಟ್ ಎ ವಿ ಸ್ಕೂಲ್ ಬಾಲಕಿಯರಿಂದ ಪ್ರಾರ್ಥನಾರೂಪ ಮಂಗಳ ಪದಗಳೂ ಹೇಳಲ್ಪಟ್ಟವು ತರುವಾಯ, ಮಹಾಸ್ವಾಮಿಯವರ ಜಯ ಸಂತೋಷಾದಿಗಳನ್ನು ಕೇಳಿದ್ದಲ್ಲಿ, ಸರ್ವತ್ರ ಜಯಘೋಷವನ್ನು ಮಾಡಿದರು ಆ ದಿನದ ಸಂತೋಷವು ಅಪರಿಮಿತವಾದದ್ದಾಗಿತ್ತು ನಂತರ ಸರ್ವರಿಗೂ ಭೋಜನ ತಾಂಬೂಲಾದಿಗಳು ನಡೆಸಲ್ಪಟ್ಟವು ಇಂಥಾ ಸಾತ್ವಿಕ ಧರ್ಮಗಳಿಗೆ ಮಹಾಸ್ವಾಮಿಯವರು ದಯಮಾಡಿದ ಸಹಾಯಪೂರ್ವಕ ಪ್ರೋತ್ಸಾಹವು ಕೀರ್ತಿಪ್ರದವಾಗಿದೆ

ಪ್ರತ್ಯಕ್ಷದರ್ಶಿ

ಬಹುಮಾನ ವಿನಿಯೋಗ

ಬೇಲೂರು ತಾ॥ ಹಂದಿನಹಾಳ್ ಗ್ರಾಮ

ಈ ಹಂದಿನಹಾಳ್ ಸ್ಕೂಲಿನಲ್ಲಿ ಮಾರ್ಚಿ ತಾ 4 ನೇ ಮಂಗಳವಾರ ಬಾಲಕರಿಗೆ ಬಹುಮಾನಗಳು ವಿನಿಯೋಗಿಸಲ್ಪಟ್ಟವು ಈ ಉತ್ಸವವನ್ನು ನೆರವೇರಿಸಲು ಅಮಲ್ದಾರ್ ಮ॥ ಕೇಶವಯ್ಯನವರು ದಯಮಾಡಿ ಅಗ್ರಾಸನವನ್ನು ವಹಿಸಿದ್ದರು ಸಭೆಯು ಪ್ರಾರಂಭವಾದ ಕೂಡಲೆ ಮಾಸ್ಟರ್ ನ ನರಸಿಂಹಯ್ಯಂಗಾರಿಯರು ಸ್ಕೂಲು ರಿಪೋರ್ಟನ್ನು ಓದಿದರು ಬಾಲಕರಿಂದ ಸಂಭಾಷಣೆ ಹಾಡು, ಕಥೆ ಮೊದಲಾದ ಕಲಾ ವಿಷಯಗಳು ನಡೆಸಲ್ಪಟ್ಟವು ಬಾಲಕರಿಂದ ನಟಿಸಲ್ಪಟ್ಟ ಕನ್ನಡ ಟೆಲಿಗ್ರಾಮ್ ಎಂಬುದು ಸಭಾಧ್ಯಕ್ಷರಿಗೂ ಸಭಿಕರಿಗೂ ಪರಮಾಶ್ಚರ್ಯವನ್ನುಂಟುಮಾಡಿತು ಗಾಣದಹಳ್ಳಿ ಶ್ರೀನಿವಾಸಶಾಸ್ತ್ರಿಗಳು ಧರ್ಮವಿಚಾರವನ್ನೂ, ಮ॥ ನೀಲಕಂಠರಾಯರು ವಿದ್ಯಾ ವಿಷಯವನ್ನೂ ಕುರಿತು ಮಾಡಿದ ಉಪನ್ಯಾಸಗಳು ಬಹು ಸ್ವಾರಸ್ಯವಾಗಿದ್ದವು ಸಭಾಧ್ಯಕ್ಷರೂ ಬಾಲಕರಿಗೆ ವಿದ್ಯೆಯಿಂದುಂಟಾಗತಕ್ಕ ಪ್ರಯೋಜನಗಳನ್ನು ತಿಳಿಸಿದರು ಬಹುಮಾನ ಪುಸ್ತಕಗಳು ಹಂಚಲ್ಪಟ್ಟವು ಉದಾರಿಗಳಾದ ಅಮಲ್ದಾರರವರೂ ಬಾಲಕ ಬಾಲಕಿಯರಿಗೆ ಕೆಲವು ಬಹುಮಾನ ಪುಸ್ತಕಗಳನ್ನು ತಮ್ಮ ಸ್ವಂತವಾಗಿ ದಯಪಾಲಿಸಿದರು ಶ್ರೀಯುತ ಸ್ವಾರ್ಥ ನಾಡಿಗಳು ನಡೆದ ಎರಡು ಮೂರು ಕೇಸವಾವಧಾನಿಗಳು ಹಗಲುವೇಷದವರು ನರಸಿಂಹಯ್ಯಂಗಾರಿಯರು ಈ ಗ್ರಾಮಕ್ಕೆ ಬಂದು 3½ ವರುಷಗಳಾದವೆಂತಲೂ, ಮೊದಲು ಸ್ಕೂಲು ಹೀನ ಸ್ಥಿತಿಯಲ್ಲಿತ್ತೆಂತಲೂ, ಈ ಗ್ರಾಮಕ್ಕೆ ಸ್ಕೂಲು ಬಂದಾರಭ್ಯ ಇದೇ ಮೊದಲನೇ ಸಾರಿ ನಡೆದ ಬಹುಮಾನ ಪುಸ್ತಕಗಳ ಉತ್ಸವನೆಂತಲೂ ತಿಳಿಸಿದ್ದಲ್ಲದೆ ಈ ಮಾಸ್ಟರು ಬಂದ ಮೇಲೆ ಹೊಸದಾಗಿ ಕೈ ತೋಟ, ಕಾರ್ಡು ಬೋರ್ಡು ಕೆಲಸ, ಕ್ಲೇ ಮಾಡಲಿಂಗ್, ಪೇಪರು ಪೋಲ್ಡಿಂಗ್, ಹಗ್ಗ ಹುರಿ ಮಾಡುವುದು, ಹುಲ್ಲಿನ ಹೆಣೆಗೆ ಕೆಲಸ ಮುಂತಾದ ಕೈಗಾರಿಕೆಗಳು ನಡೆಯುತ್ತವೆಂದೂ ಕಳೆದ ವರ್ಷ ಲೋ ಸೆ. ಪರೀಕ್ಷೆಗೆ ಕಳುಹಿದ್ದ ಇಬ್ಬರೂ ತೇರ್ಗಡೆಯಾದರೆಂದೂ ತಿಳಿಸಿದರು ಸಭಾಧ್ಯಕ್ಷರು ಒಬ್ಬ ಮಾಸ್ಟರು ಮಾತ್ರ ಇದ್ದು ಕೊಂಡು ಇಷ್ಟು ವಿಷಯಗಳಿಗೆ ಗಮನಕೊಟ್ಟು ಉತ್ಸಾಹಶಾಲಿಗಳಾಗಿ ಕೆಲಸಮಾಡಿರುವುದು ಶ್ಲಾಘ್ಯವೆಂದು ಹೇಳಿದರು ಅವಕ್ಕೆ ಮಾಸ್ಟರು ಇದಕ್ಕೆಲ್ಲಾ ಗ್ರಾಮಸ್ಥರು ಉಪಾಧ್ಯಾಯರಿಗೆ ಬೇಕಾದ ಅನುಕೂಲತೆಗಳನ್ನು ಒದಗಿಸಿ ಕೊಡುತ್ತಿದ್ದಾರೆಂದೂ, ಅವರಿಗಿರುವ ಉತ್ಸಾಹ ಪ್ರೀತಿ ಅನ್ಯೋನ್ಯತೆಗಳೇ ಕಾರಣಗಳೆಂದೂ ತಿಳಿಸಿದರು ಸಭೆಯು ಮುಕ್ತಾಯವಾಯಿತು

ಬಾತ್ಮಿದಾರ್.

ಶ್ರೀ ಕೃಷ್ಣರಾಜ ಕೃಷಿಸಮಾಜ.

ಆಲೂಗೆಡ್ಡೆ.

ಈಗೀಗ ಇದರ ವ್ಯವಸಾಯವು ನಮ್ಮ ದೇಶದಲ್ಲಿ ಅಲ್ಲಲ್ಲಿ ನಡೆಯುತ್ತಿದೆ. ಇದರಿಂದುಂಟಾಗುವ ಲಾಭವು ಅನೇಕರ ತಿಳುವಳಿಕೆಗೆ ಬಂದಿರೊದರು ಅನೇಕರು ಇದನ್ನು ಬೆಳೆಯಲು ಅವಕಾಶವಾಗಲಾರದು ನಮ್ಮ ದೇಶೀಯರ ಅನುಕೂಲತೆಗಾಗಿ ನಾವು ಧಾರವಾಡ ಮತ್ತು ಬೆಳಗಾವಿ ವ್ಯವಸಾಯದ ಫಾರಂಗಳಲ್ಲಿ ಕಂಡು ಕೇಳಿದ ವಿಚಾರಗಳನ್ನೂ ನಮ್ಮ ಪ್ರಯತ್ನಗಳಿಂದುಂಟಾದ ನಮ್ಮ ತಿಳುವಳಿಕೆಯನ್ನೂ ಪ್ರಚುರಪಡಿಸುವೆವು

ಆಲೂಗೆಡ್ಡೆಯನ್ನು ಸಾಧಾರಣವಾಗಿ ಎಲ್ಲಾ ಕಡೆಯಲ್ಲೂ ಒಂಟಿಯಾಗಿಯೇ ಬೆಳೆಯುವ ಪದ್ಧತಿಯು ವಾಡಿಕೆಯಲ್ಲಿದೆ ಇದು ಮುಖ್ಯವಾಗಿ ಬಿಡಿಯಾದ ಮಣ್ಣಿನಲ್ಲಿ ಬೆಳೆದರೂ ಜೌಗುನೀರು ಹರಿದುಹೋಗಲು ಅವಕಾಶವಿರುವ ಆಳವಾದ ಮರಳು ಮಣ್ಣಿನಲ್ಲಿ ಅತ್ಯುತ್ತಮವಾದ ಬೆಳೆಯಾಗುವುದೆಂದು ತಿಳಿಯಬಂದಿದೆ ಪೂನಾ ಡಿಸ್ಟ್ರಿಕ್ಟಿನಲ್ಲಿ ನೀರಾವರಿ ಪೈರುಗಳನ್ನು ಬೆಳೆದ ಸಂಕರ ಪರಿವರ್ತನೆಯ ಕ್ರಮದಲ್ಲಿ ಇದನ್ನು ಬೆಳೆಯುವರು ವರ್ಷಕ್ಕೆರಡಾವರ್ತಿ ಇದನ್ನು ಬೆಳೆಯುವ ವಾಡಿಕೆಯು ಮೈಸೂರು ದೇಶದಲ್ಲಿದೆ

ಕರೀಹತ್ತಿಮಣ್ಣುಗಳಲ್ಲಿ ಆಲೂಗೆಡ್ಡೆಯನ್ನು ಬೆಳೆಯುವ ಕ್ರಮವು ಬೊಂಬಾಯಿ ಅಧಿಪತ್ಯದಲ್ಲುಂಟು ಜಮೀನನ್ನು ಮಳೆಗಾಲದಲ್ಲಿ ಹಾಗೆಯೇ ಬಿಟ್ಟಿದ್ದು ಜೂನ್ ತಿಂಗಳ ಆಗಾಯಿತು ಸೆಪ್ಟಂಬರ್ ತಿಂಗಳ ವರೆಗೆ ಮಣ್ಣನ್ನು 3 4 ಸಲ ಉಳುವರು ಮೂರನೆಯ ಸಲ ಉಳುವುದಕ್ಕೆ ಮೊದಲು ಎಕರೆ ಒಂದಕ್ಕೆ 10 ಗಾಡಿಯಷ್ಟು ಚೆನ್ನಾಗಿ ಕೊಳೆತ ದನದ ಗೊಬ್ಬರವನ್ನು ಚಲ್ಲಿ ಮಣ್ಣು ಗೊಬ್ಬರವು ಬೆರೆಯುವುದಕ್ಕಾಗಿ ಕುಂಟೆಯನ್ನುಪಯೋಗಿಸುವರು

ಬೀಜದ ಗೆಡ್ಡೆಗಳು ಅತಿ ದೊಡ್ಡದಾಗಿಯೂ ಅಥವಾ ಚಿಕ್ಕದಾಗಿಯೂ ಇರದೆ ಚೆನ್ನಾಗಿ ಹುಟ್ಟಿದ ಕಣ್ಣುಗಳುಳ್ಳವುಗಳಾಗಿರಬೇಕು ಪ್ರತಿ ಹೋಳಿನಲ್ಲಿಯೂ ಒಂದು ಕಣ್ಣಾದರೂ ಇರುವಂತೆ ಒಂದು ಗೆಡ್ಡೆಯನ್ನು 4 6 ಹೋಳುಗಳಾಗಿ ಕತ್ತರಿಸಬೇಕು ಒಂದು ಎಕರೆ ಜಮೀನಿಗೆ ಸುಮಾರು ಒಂದು ಸಾವಿರ ಪೌಂಡು ಗೆಡ್ಡೆಗಳು ಬಿತ್ತನೆಗೆ ಬೇಕಾಗುವುವು ನಾಯನೇಗಿಲಿನಿಂದ ಸಾಲುಹೊಡೆದು ಅವುಗಳಲ್ಲಿ ಬೀಜಗಳನ್ನು ಬಿತ್ತಬೇಕು ಒಂದು ಸಾಲನ್ನು ಬಿಟ್ಟು ಒಂದು ಸಾಲಿನಲ್ಲಿ ಸುಮಾರು 9 ಅಂಗುಲಗಳ ಅಂತರದಲ್ಲಿ ಬೀಜಗಳನ್ನು ಬಿತ್ತಬೇಕು ಬಿತ್ತಿದ ಬಳಿಕ ನಂತರ ಜಮೀನನ್ನು ಸಮಮಾಡಿ ನೀರು ಕಟ್ಟುವುದಕ್ಕೆ ಸುಮಾರು 12 ಅಡಿ ಅಗಲವಿರುವ ಪಾತಿಗಳನ್ನು ಮಾಡಿ ಪಾರಕ್ಕೊಂದಾವರ್ತಿ ನೀರುಕಟ್ಟುತ್ತಾ ಬರಬೇಕು ಆದರೆ ಮರಳುಮಣ್ಣಿನಲ್ಲಿ ಬಿತ್ತಿದ್ದರೆ ವಾರಕ್ಕೆರಡಾವರ್ತಿ ನೀರು ಕಟ್ಟಬೇಕು ಆಗಾಗ್ಗೆ ಕೈಯಿಂದ ಕಳೆಗಳನ್ನು ಕಿತ್ತು ಪಾತಿಗಳನ್ನು ಚೊಕ್ಕಟವಾಗಿಟ್ಟುಕೊಳ್ಳುತ್ತಿರಬೇಕು

ಅಕ್ಟೋಬರ್ ತಿಂಗಳಲ್ಲಿ ನಾಟಿದ ಪೈರು ಸುಮಾರು ಮಾರ್ಚಿ ತಿಂಗಳಲ್ಲಿ ಪಕ್ವವಾಗುವುದಕ್ಕೆ ಆರಂಭವಾಗುವುದು ನಂತರ ನೀರು ಕಟ್ಟುವುದನ್ನು ನಿಲ್ಲಿಸಿ ನೇಗಿಲಿನಿಂದ ಉತ್ತು ಗೆಡ್ಡೆಗಳನ್ನು ತೆಗೆಯಬೇಕು ನಿಡಗ ಸಾಲಿನಲ್ಲಿ ಉತ್ತು ನಂತರ ಅಡ್ಡಲಾಗಿ ಉತ್ತರೆ ಎಲ್ಲಾ ಗೆಡ್ಡೆಗಳೂ ಹೊರಗೆ ಬರುತ್ತವೆ ಪೂನಾ ಫಾರಂನಲ್ಲಿ ಒಂದಾವರ್ತಿ ಪರೀಕ್ಷಿಸಿದಾಗ ಎಕರೆ ಒಂದಕ್ಕೆ 200 ರೂಪಾಯಿ ಬೆಲೆ ಬಾಳುವ 10,200 ಪೌಂಡು ಗೆಡ್ಡೆಗಳಾದವೆಂದು ತಿಳಿದುಬಂದಿದೆ

ನಮ್ಮ ಸರ್ಕಾರದವರು ಇಟಲಿ ದೇಶದ ಆಲೂಗೆಡ್ಡೆಗಳನ್ನು ತರಿಸಿ ಬಿತ್ತನೆ ಮಾಡಿ ಪರೀಕ್ಷಿಸಬೇಕೆಂದು ನಮ್ಮಲ್ಲಿ ಕಳುಹಿಸುತ್ತಾರೆ ಇದರ ವಿಚಾರವನ್ನು ಮುಂದೆ ತಿಳಿಸುತ್ತೇವೆ ಮುಖ್ಯ ಆಲೂಗೆಡ್ಡೆಯು ಲಾಭಕರವಾದ ಪೈರಾದ್ದರಿಂದ ರೈತರು ಇದನ್ನು ಬೆಳೆಯುವುದು ಉತ್ತಮ

ಎಸ್ ವಿ ನಾರಾಯಣರಾವ್, ಹಾಸನ

ಕಾಲರ ವಾಂತಿಭೇದಿ ಉಪದ್ರವು ಅದರ ನಿವಾರಣೆ

ಇಂಡಿಯ ದೇಶದಲ್ಲಿ ಪ್ರತಿ ವರುಷವೂ ಎರಡು ಕೋಟಿ ಪ್ರಜೆಗಳು ಮುಖ್ಯವಾಗಿ ನಿವಾರಣೆ ಮಾಡಿಕೊಳ್ಳಬಹುದಾದ ರೋಗಗಳಿಂದ ಸಾಯುತ್ತಿರುವರು ಇಂಥಾ ರೋಗಗಳಲ್ಲಿ ಕಾಲರ ಅಥವಾ ವಾಂತಿಭೇದಿಯು ಮುಖ್ಯವಾಗಿರುವದು ಇದು ಅಂಟುರೋಗವಾಗಿಯೂ, ಒಂದು ಕಡೆ ಕಾಣಿಸಿಕೊಂಡು ಎಷ್ಟು ಜಾಗ್ರತೆಯಿಂದ ಎಲ್ಲಾ ಕಡೆ ವ್ಯಾಪಿಸುವದಾಗಿಯೂ, ರೋಗವು ಬಂದನಂತರ ಎಷ್ಟು ಕೆಟ್ಟದು ಮಹಾ ಪ್ರಾಣಹಾನಿಯಾಗಿಯೂ ಇರುವ ಸಂಗತಿ ಸರ್ವರಿಗೂ ತಿಳಿದಿರುವುದು

ವಾಂತಿಭೇದಿ ರೋಗಕ್ಕೆ ಅಣುಪರಿಮಾಣವಿರುವ ಜೀವಸ್ಥ ಜಂತುಗಳೇ ಮೂಲಕಾರಣವೆಂದು ಪ್ರಕೃತ ವೈದ್ಯರಿಂದ ಕಂಡು ಹಿಡಿಯಲ್ಪಟ್ಟಿರುತ್ತದೆ ಮಲವಿಸರ್ಜನೆಯಿಂದ ಜನಿಸಿದ ಈ ಕಾಲರ ವಿಷಕ್ರಿಮಿಗಳು ಮನುಷ್ಯರು ಕುಡಿಯುವ ನೀರಿನಲ್ಲಿ ಸೇರಿ ಆ ಮೂಲಕ ದೇಹದೊಳಗಿನ ಕರುಳಿನೊಳಗೆ ವ್ಯಾಪಿಸಿ ಅಲ್ಲಿ ಯಥೇಚ್ಛೆಯಿಂದ ವೃದ್ಧಿಯಾಗಿ ವಾಂತಿ ಮತ್ತು ಭೇದಿಗೆ ಕಾರಣವಾಗುತ್ತವೆ—ವಿಷಕ್ರಿಮಿಗಳು ಮನುಷ್ಯನ ಕರುಳಿನೊಳಗೆ ಹೊರಗಿನಿಂದ ಸೇರುವವರೆಗೂ ರೋಗವು ಎಂದಿಗೂ ಪ್ರಾರಂಭವಾಗುವುದಿಲ್ಲ ಈ ಪ್ರವೇಶಕ್ಕೆ ಕುಡಿಯುವ ನೀರೇ ಮುಖ್ಯ ಆಧಾರವಾಗಿರುವುದು —ಪ್ರಯಾಣಿಕರಿಂದ ರೋಗವು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹರಡುವುದೆಂಬುದು ಈಗ ಸಿದ್ಧಾಂತವಾಗಿರುವುದು ತಿರುಪತಿ ಮುಂತಾದ ಯಾತ್ರಾಸ್ಥಳಗಳಿಗೆ ದಂಡೋಪದಂಡವಾಗಿ ಹೋಗಿಬರುವ ಯಾತ್ರಿಕರಿಂದಲೂ ಬಿಸಿಲು ಕಾಲದಲ್ಲಿ ಅನೇಕ ಕಡೆ ನಡೆಯುವ ಜಾತ್ರೆ, ಪರಿಷೆ, ಸಂತೆ ಮುಂತಾದ ವ್ಯಾಪಾರ ಸ್ಥಳಗಳಲ್ಲಿ ನಾನಾ ಸ್ಥಳಗಳಿಂದ ಬಂದು ಕೂಡುವ ಜನಸಮೂಹದಿಂದಲೂ, ಕುಡಿಯುವ ನೀರು ಕೆಟ್ಟು ಅಂಥ ನೀರು ಸಿಕ್ಕುವದೂ ಪ್ರಯಾಸವಾದ್ದರಿಂದ ಅದನ್ನೇ ಜನಗಳು ಉಪಯೋಗಿಸುವದರಿಂದ ರೋಗವು ಉತ್ಪತ್ತಿಯಾಗಿ ಜನಗಳು ಪುನಹ ತಮ್ಮ ಸ್ಥಳಗಳಿಗೆ ವಿಷಕ್ರಿಮಿಗಳಿಂದ ಬಂತಿರುಗಿ ರೋಗವನ್ನು ದೇಶದಲ್ಲೆಲ್ಲಾ ಹರಡುವರು ರೋಗಪೀಡಿತ ಪ್ರದೇಶದಿಂದ ಬರುವ ಮನುಷ್ಯನು ಕಶ್ಮಲವಾದ ತನ್ನ ಬಟ್ಟೆಗಳನ್ನು ಅಲ್ಲಲ್ಲಿ ನೀರಿರುವ ಕಡೆ ಒಗೆಯುವದರಿಂದಲೂ, ವಿಷಭರಿತವಾದ ತನ್ನ ಪಾತ್ರೆಗಳನ್ನು ಅಲ್ಲಲ್ಲಿ ಭಾವಿ, ಕೆರೆ, ಕೊಳಗಳಲ್ಲಿ ಅದ್ದುವದರಿಂದಲೂ ನೀರಿನಲ್ಲೆಲ್ಲಾ ವಿಷವು ವ್ಯಾಪಿಸುವುದು ಸ್ವಲ್ಪ ಹೆಪ್ಪಿನಿಂದ ಅನೇಕ ಸೇರು ಹಾಲು ಮೊಸರಾಗುವಂತೆ ಸ್ವಲ್ಪ ವಿಷವನ್ನು ಕದಡುವದರಿಂದ ಕೆರೆ ಭಾವಿ ನೀರೆಲ್ಲಾ ಕೆಟ್ಟುಹೋಗುವದು ಆ ನೀರನ್ನು ಕುಡಿಯುವ ಜನಗಳಿಗೆ ಕಾಲರಾ ಪ್ರಾಪ್ತಿಯಾಗುವದು —ಸೂಕ್ಷ್ಮದರ್ಶಕ ಭೂತಕನ್ನಡಿಯಿಂದ ಕೆಟ್ಟಿರುವ ನೀರಿನ ಒಂದು ತೊಟ್ಟನ್ನು ನೋಡಿದರೆ ಸಾವಿರಾರು ವಿಷಪ್ರಾಣಿಗಳನ್ನು ಕಾಣಬಹುದು ಇವುಗಳು ಬಹಳ ಸೂಕ್ಷ್ಮವಾದವುಗಳು ನೀರಿನಲ್ಲಿ ಮೀನಿನ ಹಾಗೆ ಅತಿ ವೇಗದಿಂದ ಆಹಾರಕ್ಕಾಗಿ ಸಂಚರಿಸುತ್ತಿರುವವು ಬಹು ಜಾಗ್ರತೆಯಾಗಿ ವೃದ್ಧಿಯಾಗುವವು. ಒಂದು ಕ್ರಿಮಿಯಿಂದ ಒಂದು ದಿವಸಕ್ಕೆ ಲಕ್ಷಾಂತರ ಕ್ರಿಮಿಗಳು ಉತ್ಪತ್ತಿಯಾಗುವವು. ಹಾವು, ಚೇಳು ಮುಂತಾದ ಜಂತುಗಳಿಗೆ ಹ್ಯಾಗೆ ವಿಷವು ಹುಟ್ಟುತ್ತದೋ ಹಾಗೆಯೇ ಈ ಸಣ್ಣ ಕ್ರಿಮಿಗಳು ದೇಹದೊಳಗೆ ಪ್ರವೇಶಿಸಿದಾಗ್ಯೆ ನಮ್ಮ ವಾದ ಒಂದು ವಿಷವನ್ನು ಕಾರುವವು —ಈ ವಿಷಕ್ರಿಮಿಗಳನ್ನು ನುಂಗಿದ ಹೊಟ್ಟೆಯೊಳಗೂ ಕರುಳುಗಳೊಳಗೂ ವಿಷವು ವ್ಯಾಪಿಸಿ ರೋಗದ ಚಿಹ್ನೆಗಳು ತೋರುವವು ಖಾಯಿಲೆಯಿಂದ ವ್ಯಾಪಿಸಿದ್ದ ಮನುಷ್ಯನ ದೇಹವನ್ನು ಪರೀಕ್ಷಿಸಿ ಕರುಳಿನೊಳಗಿನ ಒಂದು ಬಿಂದುಮಾತ್ರವನ್ನು ಭೂತಕನ್ನಡಿಯಿಂದ ನೋಡಿ ನೀರಿನಲ್ಲಿ ಕಂಡಂತೆ ಲಕ್ಷಾಂತರ ಕ್ರಿಮಿಗಳನ್ನು ಕಾಣಬಹುದು

ಒಂದು ಸ್ಥಳದಲ್ಲಿ ಮನೆಯಿಂದ ಮನೆಗೆ ರೋಗವನ್ನು ಹರಡುವ ನೊಣಗಳು ಬಹಳವಾಗಿ ಸಹಾಯ ಮಾಡುತ್ತವೆ ರೋಗಿಗಳ ವಾಂತಿ ಭೇದಿಯ ಮೇಲೆ ನೊಣಗಳು ಕುಳಿತು ಕಾಲು ರೆಕ್ಕೆಗಳಿಗೆ ವಿಷಜಂತುಗಳನ್ನು ಅಂಟಿಸಿಕೊಂಡು ಆರೋಗ್ಯದಲ್ಲಿರುವವರ ಮನೆಗಳಲ್ಲಿ ಆಹಾರ ಪದಾರ್ಥಗಳ ಮೇಲೆ ಬಂದು ಕೂಡುವದರಿಂದ ಆಹಾರವು ವಿಷಮಯವಾಗಿ ಅದನ್ನು ಸೇವಿಸುವವರು ಕಾಲರ ತಗಲಿ ವ್ಯಥೆಪಡುವರು

ನಿವಾರಣೆ —ಕಾಲರ ರೋಗವು ಸಾಧಾರಣವಾಗಿ ಕುಡಿಯುವ ನೀರಿನ ಮೂಲಕವಾಗಿರುವ ಬಿಸಿಲು ಕಾಲದಲ್ಲಿ ಕಾಣಿಸಿಕೊಳ್ಳುತ್ತದೆ ಆಗ್ಗ ಬಹು ಎಚ್ಚರಿಕೆಯಿಂದರಬೇಕು

ನಿವಾರಣೆಯ ಕ್ರಮಗಳು —(1) ಪ್ರತಿಯೊಂದು ಗ್ರಾಮದಲ್ಲಿಯೂ ಕುಡಿಯುವ ನೀರಿನ ಭಾವಿಯ ಸುತ್ತಲೂ ಸುಮಾರು 30 ಗಜಗಳ ದೂರದಲ್ಲಿರುವ ಗೂಡ್ಲಿರ ಕಸ ಕೊಳೆ ಮುಂತಾದವುಗಳನ್ನು ಸಂಪೂರ್ಣವಾಗಿ ತೆಗೆದು ಚೆನ್ನಾಗಿ ಶುಚಿಮಾಡಿ ಒಳ್ಳೆ ಮರಳು ಮತ್ತು ಜಲ್ಲಿಕಲ್ಲು ಹಾಕಿ ದಮ್ಮಸ್ಸು ಮಾಡಬೇಕು ನೀರಿನಲ್ಲಿ ಬಿದ್ದಿರುವ ಕಡ್ಡಿ ಸೊಪ್ಪುಗಳನ್ನು ತೆಗೆದು ಹಾಕಬೇಕು ಭಾವಿಯ ಹತ್ತಿರ ಕೆಸರಾಗದಂತೆಯೂ, ಬಟ್ಟೆಗಳನ್ನು ಒಗೆಯದಂತೆಯೂ ಪಾತ್ರೆಗಳನ್ನು ತೊಳೆಯದಂತೆಯೂ ನೋಡಿಕೊಳ್ಳಬೇಕು (2) ದೂರದಿಂದ ಬರುವ ಪ್ರತಿ ಒಬ್ಬ ಪ್ರಯಾಣಸ್ಥನನ್ನೂ ಗ್ರಾಮದ ಭಾವಿಯ ಹತ್ತಿರ ಬಿಡದಂತೆ ನೋಡಿಕೊಳ್ಳಬೇಕು ಏತಕ್ಕೆಂದರೆ ಅವನು ತನ್ನೊಡನೆ ವಾಂತಿಭೇದಿಯ ವಿಷಕ್ರಿಮಿಗಳನ್ನು ತಂದು ನೀರನ್ನು ಕೆಡಿಸಬಹುದು (3) ಪ್ರತಿ ಒಬ್ಬ ಪ್ರಯಾಣಸ್ಥನು ತನ್ನ ಬಟ್ಟೆಗಳನ್ನೂ, ಪಾತ್ರೆಗಳನ್ನೂ ಚೆನ್ನಾಗಿ ಬಿಸಿಲಿನಲ್ಲಿ ಒಣಗಿಸದ ವಿನಾ ಅವನನ್ನು ಗ್ರಾಮದೊಳಗೆ ಬಿಡಕೂಡದು ಸೂರ್ಯರಶ್ಮಿಗಳಿಂದ ಕಾಲರ ಕ್ರಿಮಿಗಳು ಸತ್ತುಹೋಗುವವು (4) ರೋಗವಿರುವ ಸ್ಥಳದಿಂದ ಬಂದವರ ವಸ್ತ್ರಗಳನ್ನು ಕೂಡಲೆ ಕೆರೆ, ಕೊಳ, ನಾಲೆಗಳಲ್ಲಿ ಒಗೆಯಬಾರದು ಒಂದು ದಿವಸ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ನಂತರ ದೂರದಲ್ಲಿ ನೀರು ತೆಗೆದುಕೊಂಡು ಹೋಗಿ ಒಗೆಯಬೇಕು (5) ತಿರುಪತಿ ಮುಂತಾದ ಯಾತ್ರಾಸ್ಥಳಗಳಿಗೆ ಹೋಗುವ ಪ್ರಯಾಣಸ್ಥರು ಕುಡಿಯುವ ನೀರನ್ನು ಕೆಡಿಸದಂತೆ ಒಬ್ಬಲ್ಲ ಅರವಟ್ಟಿಗಳನ್ನಿಡುವದು ಧರ್ಮಕಾರ್ಯವಾಗಿಯೂ, ಆರೋಗ್ಯಕ್ಕೆ ಅನುಕೂಲವಾಗಿಯೂ ಇರುವದು —ಸದರಿ

ಎಂ ಪಿ ಸ್ಯಾಮುಯಲ್, ಎಂ ಬಿ, ಡಿ ಪಿ ಎಚ್,
ಶಾನಿಟರ್ ಡಿ॥ ಸ್ಯಾನಿಟರಿ ಆಫೀಸರ್

ದಿವಾನರವರ ಸರ್ಕೀಟು

ಶಿವಮೊಗ್ಗ

ಮೈಸೂರು ಸಂಸ್ಥಾನದ ದಿವಾನ್ ಸಾಹೇಬರವರಾದ ಮಿ॥ ಎಂ ವಿಶ್ವೇಶ್ವರಯ್ಯನವರು ಮಾರ್ಚಿ ತಾ 4 ನೇ ಮಂಗಳವಾರ ಬೆಳಿಗ್ಗೆ 8 ಘಂಟೆ ಮೆಯಿಲ್ ಟ್ರೈಯಿನ್‌ನಲ್ಲಿ ದಯಮಾಡಿಸಿ 9 ಘಂಟೆ ಸಮಯಕ್ಕೆ ಟೌನ್‌ನಲ್ಲಿ ಇಳಿದು ಅಲ್ಲಲ್ಲಿ ಮುಖ್ಯ ವಿಷಯಗಳನ್ನು ಗುರುತುಮಾಡಿಕೊಂಡು ಹೆಂಗಸರ ಆಸ್ಪತ್ರೆ ಮ॥ ಮಿಸೆಸ್ ಗಲಾಗರ್ ಸ್ಕೂಲು ಮೊದಲಾದವುಗಳನ್ನು ನೋಡಿಕೊಂಡು ಮುನಿಸಿಪಲ್ ವಾಟರ್ ವರ್ಕ್ಸನ್ನು ಪರಾಂಬರಿಸಿ ಸಿವಿಲ್ ಆಸ್ಪತ್ರೆಗೆ ದಯಮಾಡಿಸಿ ಅದನ್ನು ನೋಡಿಕೊಂಡು ಟ್ರಾವಲರ್ಸ್ ಬಂಗ್ಲೆಗೆ ಎಂದಿರು ಮಧ್ಯಾಹ್ನ 5 ಘಂಟೆಗೆ ಟವನ್‌ಹಾಲ್‌ನಲ್ಲಿ ನಡೆಯತಕ್ಕ ಮುನಿಸಿಪಲ್ ಮೀಟಿಂಗಿಗೆ ಅವರು ದಯಮಾಡಿಸಿ ಕೆಲವು ಮುಖ್ಯ ವಿಷಯಗಳನ್ನು ಗುರುತುಮಾಡಿಕೊಂಡು ಭಾಷಣವಾಸಿಯನ್ನು ವಿಚಾರಿಸಿ ಕೆಮ್ಮಿ ಸಂಬಳದ ಒಡನೆ ಕರದ ಜನದ ವಿಷಯದಲ್ಲಿ ಬಹಳ ಪರಿತಾಪಪಟ್ಟರು ತಾ 5 ನೇ ಬುಧವಾರ 7½ ಘಂಟೆಗೆ ಮೋಟಾರ್ ಗಾಡಿಯಲ್ಲಿ ಟೋನಿ ಕಡೆ ಹೊರಟು ಅಲ್ಲಿನ ಮ್ಯಾಂಗನೀಸ್ ಗುದ್ದವನ್ನು ಪರೀಕ್ಷಿಸಿ ವಾಪಸು ಬಂದವರು ಮಧ್ಯಾಹ್ನ 2 ಘಂಟೆಗೆ ಪುನಹ ಸವಾರಿ ಹೊರಟು ತಾಲ್ಲೂಕ್ ಕಚೇರಿ ಡಿಸ್ಟ್ರಿಕ್ಟ್ ಕಚೇರಿ ಮುಂತಾದವುಗಳನ್ನು ನೋಡಿಕೊಂಡು ಹಿಂದೂಸ್ತಾನ ಹಾಯಸ್ಕೂಲ್, ಗೌರ್ನಮೆಂಟ್ ಎ ವಿ ಸ್ಕೂಲ್ ಮತ್ತು ಪೈ ಸ್ಕೂಲುಗಳನು ನೋಡಿಕೊಂಡು 5½ ಘಂಟೆಗೆ ಟವನ್‌ಹಾಲ್ ಎದುರು ಇರತಕ್ಕ ಟೆನ್ನಿಸ್ ಕೋರ್ಟಿಗೆ ದಯಮಾಡಿಸಿ ದೊಡ್ಡವರಿಂದ ಆಡಲ್ಪಟ್ಟ ಚಂಡಾಟವನ್ನೂ ಗರಡಿಯವರ ಕುಸ್ತಿಯನ್ನೂ ಪರಾಂಬರಿಸಿ ನಂತರ ಮುನಿಸಿಪಲ್ ಪಾರ್ಕಿನಲ್ಲಿ ಅವರಿಗಾಗಿ ಏರ್ಪಡಿಸಿದ್ದ ಟೀ ಪಾರ್ಟಿಗೆ ದಯಮಾಡಿಸೋಣವಾಯಿತು ಅನಂತರ ದಿವಾನ್‌ರವರು ದೊಡ್ಡ ಮನುಷ್ಯರಿಂದಲೂ ಪುರವಾಸಿಗಳಿಂದಲೂ ಕಿಕ್ಕಿರಿಯುತ್ತಿದ್ದ ಟವನ್‌ಹಾಲನ್ನು ಪ್ರವೇಶಿಸಿ ಅಲ್ಲಿ ನಡೆಸಲ್ಪಟ್ಟ ವೀಣಾ ಬ್ಯಾಂಡು ಮೊದಲಾದ ಗಾಯನವನ್ನು ಪರಾಂಬರಿಸಿ ಗಂಧ ಪುಷ್ಪ ತಾಂಬೂಲಾದಿಗಳನ್ನು ಸ್ವೀಕರಿಸಿ ಸಭಿಕರ ವಿನಯಪೂರ್ವಕವಾದ ಶ್ರೇಯಃಪ್ರಾರ್ಥನೆಯೊಂದಿಗೆ ಹೊರಗೆ ದಯಮಾಡಿಸಿದರು ಅಲ್ಲಿ ಮದ್ದು ಬಿರುಸು ಆಕಾಶಬುಟ್ಟಿ ಮೊದಲಾದವುಗಳನ್ನು ಪರಾಂಬರಿಸಿ ಬಿಡಾರಕ್ಕೆ ತೆರಳಿದರು

ಸೊರಬ.

ಇಲ್ಲಿ ಹವಾ ಸಾಧಾರಣವಾಗಿದೆ ಮಧ್ಯಾಹ್ನದ ಬಿಸಿಲಿನ ತಾಪವನ್ನು ಸೈರಿಸುವುದಕ್ಕೆ ಈಗಲೇ ಅಸಾಧ್ಯವಾಗಿದೆ ಜನರ ಆರೋಗ್ಯ ಸಾಧಾರಣವಾಗಿದೆ ಆರೋಗ್ಯ ವಿಷಯದಲ್ಲಿ ನಮ್ಮ ಡಾಕ್ಟರವರು ಬಹಳ ಮುತುವರ್ಜಿ ವಹಿಸುತ್ತಾರೆ —ದಿವಾನ್ ಸಾಹೇಬರವರ ಸವಾರಿಯು ಬರುವುದಾಗಿ ಈಗ 15 ದಿನಗಳಿಂದಲೂ ವರ್ತಮಾನವಿದ್ದದ್ದರಿಂದ ಟವನ್ ಪಾರಿಶುದ್ಧ ವಿಷಯದಲ್ಲಿ ನಮ್ಮ ಅಮಲ್ದಾರರವರು ಬಹಳ ಮುತುವರ್ಜಿ ವಹಿಸುತ್ತಾರೆ ಈಗಿನಂತೆ ಎಲ್ಲಾ ಕಾಲದಲ್ಲಿಯೂ ಇದ್ದರೆ ಅಂಟುರೋಗಗಳಿಗೆ ಅವಕಾಶವಿರಲಾರದು —ನಮ್ಮ ದಿವಾನ್ ಸಾಹೇಬರವರ ಸವಾರಿಯು ತಾ 6 ನೇ ಗುರುವಾರ ಮಧ್ಯಾಹ್ನ 3½ ಘಂಟೆ ಸುಮಾರು ಟ್ರಾವಲರ್ಸ್ ಬಂಗಲೆಗೆ ದಯಮಾಡಿಸಿತು. ಅಲ್ಲಿ ಮುನಿಸಿಪಲ್ ಮೆಂಬರು ಮುಂತಾದ ದೊಡ್ಡ ಮನುಷ್ಯರು ಅವರನ್ನು ಮರ್ಯಾದೆಯಿಂದ ಎದುರುಗೊಂಡರು ಅವರು ಬಂಗಲೆಯಲ್ಲಿ ಅರ್ಧ ಘಂಟೆ ವಿಶ್ರಾಂತಿ

...ಂತು ಅಲ್ಲಿಂದ ಪೋಲೀಸ್ ಠಾಣೆಗೆ ಹೋಗಿ ಮೆಡಿಕಲ್ ಆಫೀಸರವರನ್ನು ಭೇಟಿಮಾಡಿ ಅದನ್ನೆಲ್ಲಾ ವಿಚಾರಿಸಿಕೊಂಡು, ಇದರಲ್ಲಿ ೪ ಜನ ರೋಗಿಗಳಿದ್ದು ಅವರು ಗುಣಹೊಂದುತ್ತಿರುವುದನ್ನು ನೋಡಿ ಇದೇ ರೀತಿಯಾಗಿ ಈ ...ಗೆ ಬಂದ ರೋಗಿಯನ್ನು ಇಡುವುದನ್ನು ಕೇಳಿ ಬಹಳ ಸಂತೋಷಪಟ್ಟರು. ನಂತರ ತಾಲ್ಲೂಕು ಕಚೇರಿಗೆ ದಯಮಾಡಿ ಅದನ್ನೆಲ್ಲಾ ಪರಾಂಬರಿಸಿ ...ಗಳ ಮತ್ತು ಪ್ರಜೆಗಳ ಅಹವಾಲನ್ನು ವಿಚಾರಿಸಿದರು. ದಿವಾನ್ ...ರವರು ಮಲೆನಾಡಿನ ಪ್ರಜೆಗಳ ಕ್ಷೀಣದೆಸೆಗೂ ವ್ಯವಸಾಯದ ಅಭಿವೃದ್ಧಿ ...ಯಾಗಿರುವುದಕ್ಕೂ ಕಾರಣವೇನೆಂದು ಕೇಳಿದರು. ಜನಗಳ ಕ್ಷೀಣದೆಸೆಗೆ ...ಲ್ಲಿ ಸೋಮಾರಿತನವೂ ಕುಡುಕತನವೂ ಹೆಚ್ಚಿದ್ದುದರಿಂದಲೂ ಜನನ ...ಕ್ಕೆ ಸರಿಯಾದ ತಿಳುವಳಿಕೆಯಿಲ್ಲದೆ ಇನ್ನೂ ಚಿಕ್ಕವಯಸ್ಸಿನಲ್ಲಿಯೇ ...ಜನರು ಸಾಯುವರು. ಮುಖ್ಯವಾಗಿ ಎಲ್ಲಾ ಜನಗಳೂ ಬಾಲ್ಯವಿವಾಹ ...ಆಚರಿಸುವುದೇ ದೊಡ್ಡ ಕಾರಣವಾಗಿದೆ ಎಂದು ತಿಳಿಸಿದರು. ನಂತರ ...ರವರ ಸವಾರಿಯು ಶ್ರೀರಂಗನಾಥಸ್ವಾಮಿ ದೇವಸ್ಥಾನವನ್ನು ಹೊಕ್ಕು ...ದೇವರಿಗೆ ಮಂಗಳಾರತಿ ಮಾಡಿಸಿಕೊಂಡು ಕಾಣಿಕೆ ಕೊಟ್ಟು ಸುತ್ತುಪ್ರಾ...ಶಿಥಿಲವಾಗಿರುವುದನ್ನು ನೋಡಿ ಪುನಃ ಮಾಡಿಸುವುದಕ್ಕೆ ಹಣವನ್ನು ...ರ್ಕಾರ ಮಾಡುತ್ತೇವೆಂದು ಹೇಳಿ ಅಲ್ಲಿಂದ ಹೊರಟು ರೇಂಜು ಫಾರೆಸ್ಟ್ ...ಮತ್ತು ಎಕ್ಸೈಸ್ ಆಫೀಸನ್ನು ಪರಾಂಬರಿಸಿಕೊಂಡು, ವೈ| ಮಿ|| ಗರಲ್ ...ಶಾಲೆಗೆ ಹೋಗಿ, ಅಲ್ಲಿ ಬಾಲಕಿಯರು ನಿಂತು ದಿವಾನ್ ಸಾಹೇಬರವರ ಪ್ರೀತ್ಯರ್ಥ ...ಸೆಯನ್ನು ಮಾಡುತ್ತಿರಲು ಮಿಠಾಯಿಯನ್ನು ಸಲ್ಲಿಸಿ ಇಳಿದು ಬಂದು ...ಶಾಲೆ ಹೆಡ್ ಮಾಸ್ಟರವರಿಂದ ಅಲ್ಲಿ ವಿಷಯವನ್ನೆಲ್ಲಾ ವಿಚಾರಿಸಿಕೊಂಡು ...ಯರಿಗೆ ತಿಂಡಿ ಹಂಚುವುದಕ್ಕೆ ದ್ರವ್ಯರೂಪವಾದ ಬಹುಮಾನವನ್ನು ...ಪಾಲಿಸಿ, ಅಲ್ಲಿಂದ ಎ. ವಿ. ಸ್ಕೂಲನ್ನು ಹೊಕ್ಕು ಅದನ್ನೆಲ್ಲಾ ನೋಡಿ ...ಡು ಅಲ್ಲಿ ಮಾಸ್ಟರುಗಳು ಎಲ್ಲಾ ನೌಕರರಂತೆ ತಮಗೂ ಮಲ್ನಾಡು ...ಅಲೋಯನ್ಸು ಕೊಡಬೇಕೆಂದು ಕೇಳಿಕೊಂಡುದಕ್ಕೆ ಕೊಡಿಸುವ ಆಲೋಚನೆ ...ವಾಗಿ ಹೇಳಿ ಆ ವಿಷಯವನ್ನು ಗುರುತು ಮಾಡಿಕೊಂಡು, ಅಲ್ಲಿಂದ ...ಬಿಡಿಗೆ ಮನೆಯಲ್ಲಿ ಸಾಗರದ ಮಾರ್ಗವಾಗಿ ಪ್ರಯಾಣ ಬೆಳಸಿದರು. ...ದಿವಾನ್ ಸಾಹೇಬರವರು ಎಲ್ಲಾ ವಿಷಯವನ್ನೂ ಸಾವಧಾನವಾಗಿ ಮುದ್ದಾಗಿ ...ಬರಿಸಿ ಪ್ರಜಾನುರಾಗಕ್ಕೆ ಪಾತ್ರರಾಗಿರುತ್ತಾರೆ.—ಇಲ್ಲಿ ಮುನಿಸಿಪಲ್ ...ಗಳು ಮಾತ್ರ ಸರಿಯಾಗಿ ಉರಿಯುವುದಿಲ್ಲ. ಸ್ವಲ್ಪಕಾಲ ಬಹು ಸಣ್ಣಗೆ ...ಉರಿಯುತ್ತಿದ್ದು ಆರಿಹೋಗುವುದರಿಂದ ಕತ್ತಲೆಯಲ್ಲಿ ತಿರುಗಾಡುವ ಜನಗಳಿಗೆ ...ಬಹಳ ತೊಂದರೆಯಾಗಿರುತ್ತೆ. ಈ ವಿಷಯವನ್ನು ನಮ್ಮ ಅಮಲ್ದಾರ್ರವರು ...ಗಮನಿಸುವರೆಂದು ನಿರೀಕ್ಷಿಸುತ್ತೇವೆ. ನಮ್ಮ ದಿವಾನ್ ಸಾಹೇಬರ ...ಹೊರಟು ಹೋಗುವಾಗ್ಗೆ ಅಮಲ್ದಾರ್ರವರು ಮಾಡಿದ ಏರ್ಪಾಡುಗಳೆಲ್ಲಾ ...ಕರವಾಗಿವೆ ಎಂದು ಹೇಳಿ ಸಂತೋಷದಿಂದ ತೆರಳಿದರು.—ಇಲ್ಲಿನ ಗರಲ್ಸ ...ಶಾಲೆ ಮಹಡಿ ಮೇಲೆ ಇರುವುದರಿಂದ ಯಾರಾದರೂ ದೊಡ್ಡ ಆಫೀಸರುಗಳು ...ಗೆ ಮಕ್ಕಳನ್ನು ಕೆಳಗೆ ನಿಲ್ಲಿಸಬೇಕಾಗುತ್ತೆ. ಅಲ್ಲಿ ಸರಿಯಾದ ಸ್ಥಳವಿಲ್ಲ. ...ಕೆಳಭಾಗದಲ್ಲಿ ಎರಡು ಮೂರು ಮೋಟು ಅಂಗಡಿಗಳಿರುವುದರಿಂದ ...ಸಮಯದಿಂದ ಮೇಲೆ ಕೆಲಸ ಮಾಡುವುದು ಅಸಾಧ್ಯವಾಗಿರುತ್ತೆ. ಈ ...ನ್ನು ಮೇಲ್ಪಟ್ಟ ಆಫೀಸರವರು ಯೋಗಿಸಿ ಅನುಕೂಲವಾದ ಸ್ಥಳ ...ಏರ್ಪಡಿಸುತ್ತಾರೆಂದು ನಂಬಿದ್ದೇವೆ.—ತಳೇ ಹೋಬಳಿಯಲ್ಲಿ ಮನೆ ಸುಟ್ಟು ...ಕ್ಕೈತರ ಉಪಯೋಗಕ್ಕಾಗಿ ಏರ್ಪಡಿಸಿದ ಫಂಡಿಗೆ ಪಬ್ಲಿಕ್ ವರ್ಕ್ಸ್ ಕಾಡ್ ...ಓದುತ್ತಿರುವ ಒಬ್ಬ ವೈಶ್ಯ ವಿದ್ಯಾರ್ಥಿಯು ೨ ರೂಪಾಯಿ ನಮ್ಮ ...ಆಫೀಸರವರ ಹೆಸರಿಗೆ ಕಳುಹಿಸಿಕೊಟ್ಟಿದ್ದಾರೆ.

ಮಲೆನಾಡುಜ್ವರ (ಚಳಿಜ್ವರ) ಮತ್ತು ಅದರ ನಿವಾರಣೋಪಾಯಗಳು.

ಜ್ವರಲಕ್ಷಣ.—ಸಾಧಾರಣವಾಗಿ ಕ್ಲಿಷ್ಟಕಾಲಗಳಲ್ಲಿ ಚಳಿಯು ಕಾಣಿಸಿಕೊಂಡು ... ಅಥವಾ ಒಂದು ಗಂಟೆಯ ಮೇಲೆ ಜ್ವರವು ಬಂದು ೩-೪ ಗಂಟೆಗಳ ... ಆ ಮೇಲೆ ಮೈ ಬೆವರಿ ಜ್ವರವು ಇಳಿಯುವುದು.

ಜ್ವರಕ್ಕೆ ಕಾರಣ.—ಇದು ಒಂದು ಬಗೆಯ ಎಂದು ಸೊಳ್ಳೆ ವಿಷಕ್ರಿಮಿಗಳಿಂದ ಉಂಟಾಗುವುದು. ಈ ವಿಷಕ್ರಿಮಿಗಳು ಚಳಿಜ್ವರವನ್ನುಂಟುಮಾಡುತ್ತಿರುವ ... ರಕ್ತದಲ್ಲಿರುವುವು. ರಕ್ತವೇ ಮನುಷ್ಯನ ದೇಹವಾರ್ಥ್ಯಕ್ಕೂ ದೇಹ ... ಮುಖ್ಯವಾದದ್ದು. ಇಂಥಾ ಪ್ರಾಣಾಧಾರವಾದ ರಕ್ತವನ್ನೇ ಈ ವಿಷ ...ಗಳು ತಮ್ಮ ಆಹಾರಕ್ಕಾಗಿ ಉಪಯೋಗಿಸುತ್ತಲೂ ರಕ್ತಪ್ರವಾಹದಲ್ಲಿ ...ಹೊಂದುತ್ತಲೂ ಇರುವವು. ಹೀಗೆ ಇವು ವೃದ್ಧಿಯಾದಾಗ ಚಳಿಜ್ವರ ...ವಾಗುತ್ತಲೂ, ಮತ್ತೆ ವೃದ್ಧಿಯಾಗುವವರೆಗೂ ಜ್ವರವಿಲ್ಲದೆಯೂ ಇರು... ಆದುದರಿಂದ ಚಳಿಜ್ವರ ಬಂದ ಕೂಡಲೆ ರೋಗಿಗೆ ತಕ್ಕ ಚಿಕಿತ್ಸೆಯನ್ನು ... ಇದ್ದರೆ ಅವನಿಗೆ ದಿನೇದಿನೇ ರಕ್ತನಷ್ಟವಾಗುವುದು ಸ್ಪಷ್ಟವಾಗುವುದು.

ಜ್ವರವು ಒಬ್ಬರಿಂದೊಬ್ಬರಿಗೆ ಹರಡುವ ವಿಧಾನ.—ಕೆಟ್ಟ ನೀರು, ಆಹಾರ, ...ಗಳ ಮುಖಾಂತರ ಈ ವ್ಯಾಧಿಯು ಹರಡುವುದಿಲ್ಲ. ನಮ್ಮ ಮನೆ... ಈ ಸೊಳ್ಳೆಗಳು ಇರುವುದೂ, ಇವು ತಮ್ಮ ಆಹಾರಕ್ಕಾಗಿ ನಮ್ಮಗಳನ್ನು ...ವುದೂ ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಈ ಸೊಳ್ಳೆಗಳು ಚಳಿಜ್ವರ ...ದಿಂದ ನರಳುತ್ತಿರುವ ರೋಗಿಯ ರಕ್ತವನ್ನು ಹೀರಿದರೆ ಅದರೊಡನೆ ಅವನ ರಕ್ತದಲ್ಲಿರುವ ವಿಷಕ್ರಿಮಿಗಳೂ ಸಹ ಸೊಳ್ಳೆಯ ಬಾಯಿಯೊಳಕ್ಕೆ ಬಂದು ಸೇರುವವು. ...ಸೊಳ್ಳೆಗಳು ಆರೋಗ್ಯವಲ್ಲಿರುವವರನು ಕಚ್ಚಿದರೆ ಇವುಗಳ ಬಾಯಿಯ... ವಿಷಕ್ರಿಮಿಗಳು ಅವರ ದೇಹವನ್ನು ಸೇರಿ ಅವರಿಗೆ ಜ್ವರವನ್ನುಂಟು... ಹೀಗೆ ಜ್ವರವು ಒಬ್ಬರಿಂದೊಬ್ಬರಿಗೆ ವಿಸ್ತರಿಸಬೇಕಾದರೆ ಚಳಿಜ್ವರದ ...ಯುಳ್ಳ ಒಬ್ಬ ರೋಗಿಯೂ, ಸೊಳ್ಳೆಗಳೂ ಆವಶ್ಯಕವು. ಇಂಥ ... ಮಾತ್ರ ಇದ್ದು ಸೊಳ್ಳೆಗಳೇ ಇಲ್ಲದಿದ್ದರೆ ಈ ಜ್ವರವು ಹರಡುತ್ತಿರಲಿಲ್ಲ. ... ಸೊಳ್ಳೆಗಳು ಇದ್ದರೂ ಈ ವ್ಯಾಧಿಯನ್ನನುಭವಿಸುವ ರೋಗಿಯು ...ದ್ದರೆ ಈ ವ್ಯಾಧಿಯು ಹರಡುತ್ತಲೇ ಇರಲಿಲ್ಲ. ಆದುದರಿಂದ ಜ್ವರದಿಂದ ...ವ ರೋಗಿಗೂ, ಸೊಳ್ಳೆಗಳಿಗೂ ವಿಶೇಷ ಗಮನವನ್ನು ಕೊಡಬೇಕೆಂ... ಸ್ಪಷ್ಟವಾಗುವುದು.

ಜ್ವರದ ಬಗೆಗಳು.—ಈ ವಿಷಕ್ರಿಮಿಗಳಲ್ಲಿ ಕೆಲವು ಬಗೆಗಳುಂಟು. ಒಂದು ... ದೇಹದಲ್ಲಿ ೨೪ ಗಂಟೆಗಳಿಗೆ ೧ ಆವೃತ್ತಿಯೂ, ಇನ್ನೊಂದು ಬಗೆಯು ...ಗಳಿಗೆ ೧ ಆವೃತ್ತಿಯೂ, ಮತ್ತೊಂದು ಬಗೆಯು ೭೨ ಗಂಟೆಗಳಿಗೆ ಒಂದಾವೃತ್ತಿಯೂ ವೃದ್ಧಿಹೊಂದುವುವು. ಆದುದರಿಂದಲೇ ಕೆಲವರಿಗೆ ಜ್ವರವು ಪ್ರತಿ ದಿನವೂ, ಇನ್ನು ಕೆಲವರಿಗೆ ದಿನಬಿಟ್ಟು ದಿನವೂ, ಮತ್ತೆ ಕೆಲವರಿಗೆ ೩ ದಿನಕ್ಕೆ ೧ ಆವೃತ್ತಿಯೂ ಬರುವುದು.

ಜ್ವರದಿಂದ ರೋಗಿಗೆ ಉಂಟಾಗುವ ಅನರ್ಥಗಳು.—ನಿಶ್ಶಕ್ತಿ, ಜ್ವರಗಡ್ಡೆ, ಅಜೀರ್ಣ, ಚರ್ಮರೋಗಗಳು, ಕಾಮಾಲೆ, ರಕ್ತಭೇದಿ, ರಕ್ತಪಾಂಡು, ಇವೇ ಮೊದಲಾದವು ಪ್ರಾಪ್ತವಾಗುವವು.

ಚಿಕಿತ್ಸೆ.—(I) ಜ್ವರಚಿಕಿತ್ಸೆ (II) ಜ್ವರವನ್ನು ನಿರ್ಮೂಲವಮಾಡುವುದು (III) ಜ್ವರವು ಬಾರದಂತೆ ತಡೆಯುವುದು ಎಂಬದಾಗಿ ಚಿಕಿತ್ಸೆಯು ಮೂರು ವಿಧಗಳಾಗಿರುವವು.

(I) ಜ್ವರಚಿಕಿತ್ಸೆ.—ಕ್ವಿನೀನ್ ಸಲ್ಫೇಟ್. ಇದನ್ನು ಜನರು 'ಕ್ವಿಯನ' ಎನ್ನುವರು. ಇದು ನಮ್ಮ ದೇಶದಲ್ಲಿ ಬೆಳೆಯುವ "ಸಿಂಕೋನ" ಎಂಬ ಮರದ ತೊಗಟೆಯಿಂದ ಸಿದ್ಧಪಡಿಸಿದುದು. ಇದು ರುಚಿಯಲ್ಲಿ ಕಹಿ, ಗುಣದಲ್ಲಿ ಮಾತ್ರ ಚಳಿಜ್ವರವ್ಯಾಧಿಗೆ ಅಮೃತ. ಮಲೆನಾಡು ಜ್ವರಕ್ಕೆ ಕ್ವಿಯನಿಗಿಂತ ಗುಣಕಾರಿಯಾದ ಔಷಧವು ಮತ್ತಾವುದೂ ಇಲ್ಲ. ವಯಸ್ಸು, ದೇಹದಾರ್ಢ್ಯ, ಇವುಗಳನ್ನನುಸರಿಸಿ ಕೆಳಗೆ ಹೇಳುವ ಪಟ್ಟಿಯಂತೆ ಇದರ ಪ್ರಮಾಣವನ್ನು ನಿಶ್ಚಯಮಾಡಿ ಕೊಡಬೇಕು. ಈ ಪ್ರಮಾಣಕ್ಕಿಂತ ಕಡಮೆಯಾಗಿ ತೆಗೆದುಕೊಂಡರೆ ಪ್ರಯೋಜನವಾಗಲಾರದು.

ಕ್ವಿಯನ ಪ್ರಮಾಣ.—೧ ವರ್ಷದ ಮಕ್ಕಳಿಗೆ ೧ ಅಥವ ೧½ ಗ್ರೇನ್. ೨ ವರ್ಷದವಕ್ಕೆ ೧½ ಅಥವ ೨ ಗ್ರೇನ್. ೩ ವರ್ಷದವರಿಗೆ ೨ ಅಥವ ೩ ಗ್ರೇನ್. ೪ ವರ್ಷದವರಿಗೆ ೩ ಅಥವ ೩½ ಗ್ರೇನ್. ೫ ವರ್ಷದವರಿಗೆ ೩ ಅಥವ ೪½ ಗ್ರೇನ್. ೬ ವರ್ಷದವರಿಗೆ ೪½ ಅಥವ ೫ ಗ್ರೇನ್. ೭ ರಿಂದ ೯ ವರ್ಷದವರಿಗೆ ೪ ಅಥವ ೬ ಗ್ರೇನ್. ೧೦ ರಿಂದ ೧೨ ವರ್ಷದವರಿಗೆ ೫ ಅಥವ ೭ ಗ್ರೇನ್. ೧೩ ರಿಂದ ೧೭ ವರ್ಷದವರಿಗೆ ೬ ಅಥವ ೮½ ಗ್ರೇನ್. ೧೮ ರಿಂದ ವಯಸ್ಕರಿಗೆ ೧೦ ಅಥವ ೧೫ ಗ್ರೇನ್. (ಪೋಸ್ಟಾಫೀಸಿನಲ್ಲಿ ಮಾರುವ ೧ ಕ್ವಿಯನ ಪೊಟ್ಟಣದಲ್ಲಿ ೧೦ ಗ್ರೇನ್ ಪುಡಿ ಇರುವುದು.)

ಕ್ವಿಯನವನ್ನು ತೆಗೆದುಕೊಳ್ಳುವ ವಿಧಾನ.—ರೋಗಿಯು ವಯಸ್ಕನಾಗಿದ್ದರೆ ೧೦ ಅಥವ ೧೫ ಗ್ರೇನ್ ಕ್ವಿಯನಾ ಪುಡಿಯನ್ನು (ಪೋಸ್ಟಾಫೀಸಿನಲ್ಲಿ ಮಾರುವ ೧ ಅಥವ ೧½ ಪೊಟ್ಟಣ) ಸ್ವಲ್ಪ ನಿಂಬೇಹಣ್ಣಿನ ರಸದಲ್ಲಿ ಕದರಿ ಒಂದು ಗುಟುಕಿನಷ್ಟು ನೀರು ಸೇರಿಸಿ ಕುಡಿಯಬೇಕು. ಇಷ್ಟೇ ರೋಗಿಗೆ ಮೊದಲನೆಯ ದಿನದ ಚಿಕಿತ್ಸೆಯು. ಮಕ್ಕಳಿಗೂ ಇದೇ ಮೇರೆ ಮೇಲೆ ಹೇಳಿರುವ ಪಟ್ಟಿಯಂತೆ ಪ್ರಮಾಣವನ್ನು ನಿಶ್ಚಯಮಾಡಿಕೊಡಬೇಕು. ಎರಡನೆಯ ದಿನದಿಂದ ೧ ವಾರದ ವರೆಗೂ ೫ ಗ್ರೇನ್ ಕ್ವಿಯನಾವನ್ನು (ಪೋಸ್ಟಾಫೀಸಿನಲ್ಲಿ ಮಾರುವ ಪೊಟ್ಟಣದಲ್ಲಿ ಅರ್ಧ) ಪ್ರಾತಃಕಾಲ, ೫ ಗ್ರೇನನ್ನು ಮಧ್ಯಾಹ್ನ, ೫ ಗ್ರೇನನ್ನು ಸಾಯಂಕಾಲ, ಹೀಗೆ ದಿನಕ್ಕೆ ೩ ಆವೃತ್ತಿ ತೆಗೆದುಕೊಳ್ಳಬೇಕು. ರೋಗಿಯು ದೃಢಕಾಯನಾಗಿದ್ದರೆ ಬೆಳಿಗ್ಗೆ ೧೦ ಗ್ರೇನನ್ನೂ ಸಾಯಂಕಾಲದಲ್ಲಿ ೧೦ ಗ್ರೇನನ್ನೂ ೫-೬ ದಿವಸ ತೆಗೆದುಕೊಳ್ಳಲೂ ಬಹುದು. ಒಬ್ಬ ಡಾಕ್ಟರ್ ಬಳಿಗೆ ಹೋಗಿ ಕ್ವಿಯನಾ ಔಷಧವನ್ನು ಸೂಜಿಯಿಂದ ಮೈಯಕ್ಕೆ ದಿನ ೧ ಕ್ಕೆ ೧ ಆವೃತ್ತಿ ಮೇರೆ ೩-೪ ದಿವಸಗಳು ಹಾಕಿಸಿಕೊಳ್ಳುವುದರಿಂದ ಜ್ವರವು ಬಹು ಶೀಘ್ರವಾಗಿಯೂ, ನಿಶ್ಶೇಷವಾಗಿಯೂ ಹೋಗುವುದು. ಗರ್ಭಿಣಿಸ್ತ್ರೀಯರಿಗೆ ೪ ಗ್ರೇನ್ ಕ್ವಿಯನಾ ಪುಡಿಯನ್ನು ದಿನಕ್ಕೆ ೩ ಆವೃತ್ತಿಯಂತೆ ೨-೩ ದಿವಸಗಳು ಮಾತ್ರ ಕೊಡಬೇಕು.

ನಿಶ್ಶಕ್ತಿ, ಜ್ವರಗಡ್ಡೆ, ಇವುಗಳ ಚಿಕಿತ್ಸೆ.—ಪೋಸ್ಟಾಫೀಸಿನಲ್ಲಿ ಮಾರುವ ಒಂದು ಪೊಟ್ಟಣ ಕ್ವಿಯನಾ ಪುಡಿಯನ್ನು ಸ್ವಲ್ಪ ನಿಂಬೇಹಣ್ಣಿನ ರಸದಲ್ಲಿ ಕದರಿ ಅದಕ್ಕೆ ೪ ಗ್ರೇನ್ ತೂಕ (ಸುಮಾರು ೨ ಗುಲಗಂಜಿ) ಅನ್ನಭೇದಿಯನ್ನೂ, ಆರು ಆಣೆಯ ತೂಕ (೧ ಡ್ರಾಂ) ಇಂದುಪ್ಪನ್ನು (ಭೇದಿಯ ಉಪ್ಪು) ಸೇರಿಸಿ ಎರಡು ಗುಟುಕಿನಷ್ಟು ನೀರಿನಲ್ಲಿ ಮಿಶ್ರಮಾಡಿ ಇದರಲ್ಲಿ ಅರ್ಧ ಭಾಗವನ್ನು ಬೆಳಿಗ್ಗೆ, ಉಳಿದ ಅರ್ಧ ರಾತ್ರಿ ಊಟವಾದ ಮೇಲೆ ತೆಗೆದುಕೊಳ್ಳಬೇಕು. ಹೀಗೆ ಜ್ವರದ ಗಡ್ಡೆ, ನಿಶ್ಶಕ್ತಿ, ಇವು ಅದೃಶ್ಯವಾಗುವವರೆಗೂ ತೆಗೆದುಕೊಳ್ಳುತ್ತಿರಬೇಕು.

ಸಶೇಷ

ಎಂ. ಗುರುರಾವ್,

ಸಬ್ ಅ| ಸರ್ಜನ್, ಬೇಲೂರು

ಏಲಕ್ಕಿ ವ್ಯವಸಾಯ

ಏಲಕ್ಕಿಯು ಅಮೌಲ್ಯವಾದ ಸುವಾಸನ ಜನಸಿಗೆ ಸೇರಿದ್ದು. ಇದನ್ನು ಸಕಲ ಜನಾಂಗದವರೂ ಆಹಾರ ಪದಾರ್ಥಗಳಲ್ಲಿ ಮಿಶ್ರಮಾಡಿಯೂ ಮತ್ತು ಪರಸ್ಪರ ವಿಶ್ವಾಸ ಮೀಳಿತಗಳಲ್ಲಿ ಗೌರವಾರ್ಥವಾಗಿಯೂ ಮಾಡಿ ಉಪಯೋಗಿಸುತ್ತಿರುವರು. ಇದು ಶರೀರಕ್ಕೆ ಆರೋಗ್ಯವನ್ನುಂಟು ಮಾಡತಕ್ಕ ಮತ್ತು ಜೀರ್ಣಕಾರಿಯಾದ ವಸ್ತು. ವ್ಯಾಧಿಗಳನ್ನು ನಾಶಮಾಡತಕ್ಕ ಶಕ್ತಿಯೂ ಇದಕ್ಕೆ ಇರುವುದರಿಂದ ಇದನ್ನು ಔಷಧವಾಗಿಯೂ, ಔಷಧಗಳಲ್ಲಿ ಮಿಶ್ರಮಾಡಿಯೂ, ಇತರ ವಿಧಗಳಲ್ಲಿಯೂ ಉಪಯೋಗಿಸುತ್ತಾರೆ.—ಏಲಕ್ಕಿಯು ದೇಶಾವಾರದಿಂದಲೂ, ತರುಪಾ ಕಾಳಿಂದಲೂ ಎರಡು ವಿಧ. ಏಲಕ್ಕಿ ಗಿಡಗಳು ಹಣ್ಣಾಗಿ ಹೊಂಬಣ್ಣದಲ್ಲಿರುವಾಗ ಹಣ್ಣುಗಳನ್ನು ಕಿತ್ತು ಬಿಸಲಿನಲ್ಲಿ ಒಣಗಿಸಿದರೆ ಅದು ಸಾವಧಾನ ತರವಾದ ಕಡುಗೆಂಪಾಗಿ ಇರುತ್ತವೆ. ಹಣ್ಣನ್ನು ಬಿಸಲಿನಲ್ಲಿ ಒಣಗಿಸದೆ ಒಂದು ತರಹಾ ನೀರಿನ ಹಬೆಯಿಂದ ಒಣಗಿಸಿ ರಾಜಿಯಿಂದ ನೀರು ಮತ್ತು ಗಂಧಕದ ಹಬೆಯಲ್ಲಿ ಹದಕೊಟ್ಟರೆ ಆ ಏಲಕ್ಕಿಯು ನೂತನ ತರಹೆಯಾಗಿರುವದು. ಈ ಏಲಕ್ಕಿಯು ಮೊದಲಿಂದ ಸಾಧಾರಣ ಏಲಕ್ಕಿಗಿಂತ ದಪ್ಪನಾಗಿಯೂ, ಅತಿ ಸುವಾಸನೆಯುಳ್ಳದ್ದಾಗಿಯೂ, ಅತಿ ಅಚ್ಚಬಿಳೀ ಬಣ್ಣದ್ದಾಗಿಯೂ, ವಿಕ್ರಯದಲ್ಲಿ ಸಾಧಾರಣ ತರಹೆ ತಯಾರಿಯ ಕಾಯಿಗಿಂತ ಇಮ್ಮಡಿಯಾಗಿಯೂ ಇರುವದು.—ಏಲಕ್ಕಿಯ ಗಿಡಗಳು ಅರಿಸಿನದ ಗಿಡಗಳಂತೆ ಇವೆ. ಈ ಗಿಡವು ಸಾಮಾನ್ಯವಾಗಿ ಬಾಳೆ ಗಿಡಗಳ ಜಾತಿಗೆ ಸೇರಿದ್ದೆಂದು ಹೇಳಬಹುದು. ಇವುಗಳನ್ನು ತೋಟಗಳಲ್ಲಿ ತೆಂಗು, ಬಾಳೆ, ಹಲಸು, ಮಾವು, ವಟವೃಕ್ಷ, ಬಸರಿ, ಎಳ್ಳೇಗಿಡ, ಅಡಕೆ, ಈ ಮೊದಲಾದ ಮರಗಳ ನೆರಳಿನ ಆಸರೆಯಿಂದ ಬೆಳಸಬೇಕು. ಬೀಜಗಳು ಬಿಟ್ಟುವಾಕೆ ನೆರಳಿನ ಆಸರೆ ಮಾಡಿ ಹೊಸದಾಗಿ ನಾಟಬೇಕು. ಎಳಸಾಗಿವೆ. ಪರ್ವತ ತಪ್ಪಲುಗಳಲ್ಲಿಯೂ, ರಸವತ್ತಾದ ಮತ್ತು ತೇವವಾದ ನಾಲೆಗಳಲ್ಲಿಯೂ, ನದಿಗಳ ಸಮೀಪಗಳಲ್ಲಿಯೂ, ದೊಡ್ಡ ಕೆರೆಗಳ ಒಳಭಾಗದ ಫಲವತ್ತಾದ ತೋಟಗಳ ನೆರಳಿನಲ್ಲಿಯೂ ಇದು ಚೆನ್ನಾಗಿ ಬೆಳೆಯುವದು. ಈ ಗಿಡಗಳು ಫಲಭರಿತವಾಗಿರುವಾಗ ಅವುಗಳ ಬುಡಗಳಲ್ಲಿ ನೀರಿನ ನಸ ತೆಯು ಅತಿ ಹೆಚ್ಚಾಗಿದ್ದರೆ ಬುಡಗಳಲ್ಲಿರುವ, ಹೂವು, ಕಾಯಿ, ... ಗಳು ಕೊಳೆತು ಹೋಗುವವು. ಗಿಡಗಳ ಮೇಲೆ ಮೂರು ಭಾಗ ನೆರಳು ಒಂದು ಭಾಗ ಬಿಸಿಲು ಇರಬೇಕು. ಈ ಗಿಡಗಳಲ್ಲಿ ಚೈತ್ರ ವೈಶಾಖ ಮಾಸಗಳ ಮುಂಗಾರು ಮಳೆಬಿದ್ದ ನಂತರ ಹೂವು ಬಿಡುವವು. ಒಂದು ಎಕರೆಗೆ ೬೦೦ ಗಿಡಗಳನ್ನು ನಾಟಬಹುದು. ಇವು ನಾಟಿದ ಮೂರನೆ ವರ್ಷಕ್ಕೆ ಫಸಲು ಕೊಡುತ್ತವೆ. ಹಾಗೆ ನಾಟಬೇಕಾದ ಸಸಿಗಳು ಬೀಜದ ಒಟ್ಟಿನಿಂದ ಒಂದಡಿ ಎತ್ತರದಲ್ಲಿರುವಾಗಲೇ ಪ್ರತ್ಯೇಕವಾದ ಸ್ಥಳದಲ್ಲಿ ಚುನಾಯಿಸಿದವುಗಳಾಗಿ ಆ ಜಾಗದಲ್ಲಿಯೂ ಒಂದು ಅಥವ ಎರಡು ಅಡಿಗಳ ಎತ್ತರವಿರುವ ಸಸಿಗಳಾಗಿರಬೇಕು. ಈ ಸಸಿಗಳನ್ನು ನಾಟಬೇಕಾದ ಭೂಮಿಯ ಗುಣವು ಮೇಲೆ ಕಂಡ ಸ್ಥಳಾನುವಶತಿಯಾಗಿದ್ದು, ಯಾವ ಮಾದರಿಯ ಭೂಮಿಯಲ್ಲಾದರೂ ನಾಟಿ ಬೆಳಸಬಹುದು. ಭೂಮಿಗೆ ಬರುವವರವಿಗೂ ವರ್ಷಕ್ಕೊಂದಾವರ್ತಿಯೂ, ಫಲಕ್ಕೆ ಬಂದ ನಂತರ ವರ್ಷಕ್ಕೆರಡಾವರ್ತಿಯೂ ಗೊಬ್ಬರವನ್ನು ಹಾಕಬೇಕು. ಯಾವ ವಿಧವಾದ ಗೊಬ್ಬರವಾದರೂ ಆಗಬಹುದು. ತರಿಸೊಪ್ಪುಗಳ, ಎಲೆ ಮತ್ತು ಕೊಟ್ಟಿಗೆ ಗೊಬ್ಬರವನ್ನೂ ಮುಖ್ಯವಾಗಿ ಹಾಕತಕ್ಕದ್ದು. ಮಳೆಬಾರದ ಕಾಲಗಳಲ್ಲಿ ತೇವವು ಆರಿ ಭೂಮಿ ಒಣಗದ ಹಾಗೆ ಆಗಾಗ್ಗೆ ನೀರು ಹಾಯಿಸಬೇಕು. ಮುಂಗಾರು ಮಳೆ ಬಂದಾಗ ಈ ಗಿಡಗಳನ್ನು ನಾಟುತ್ತಾರೆ. ಗಿಡವು ೧೦-೧೨ ಅಡಿ ಎತ್ತರವಾಗಿ ಬೆಳೆಯುವದು. ಬಾಳೆಗಿಡಗಳ ಹಾಗೆ ಒಂದು ಕಾಂಡದಲ್ಲಿ ಫಲಕೊಟ್ಟ ನಂತರ ಆ ಕಾಂಡವು ಒಣಗಿ ಅದಕ್ಕೆ ಪ್ರತಿಯಾಗಿ ಬದಿರು ಮತ್ತು ಬಾಳೆಯ ಕಂದುಗಳು ಹೊರಡುವಂತೆ ಈ ಏಲಕ್ಕಿ ಗಿಡಗಳ ಸುತ್ತಲೂ ಅನೇಕ ಕಂದುಗಳು ಹೊರಡುತ್ತಲೇ ಇರುವದರಿಂದ ಈ ಗಿಡಗಳ ಗೆಡ್ಡೆಗಳು ಅನೇಕ ವರ್ಷಗಳ ತನಕ ಫಲಿಸುವವು. ಈ ಗಿಡಗಳ ಫಲವು ಗಿಡದ ಬುಡಗಳಲ್ಲಿಯೇ ನಮಗೆ ಲಭಿಸುವದಾಗಿರುವದರಿಂದ ಗಿಡಗಳ ಪಾತಿಗಳಲ್ಲಿ ಕಳೆ ಬೀಳದಂತೆ ಎಚ್ಚರಿಕೆಯಿಂದ ನೋಡಬೇಕು. ಒಂದು ಗಿಡದಲ್ಲಿ ಸರಾಸರಿ ೭ ಪೌಂಡಿನಷ್ಟು ಏಲಕ್ಕಿಯು ಉತ್ಪತ್ತಿಯಾಗುತ್ತದೆ.—ಇಂಡಿಯಾ ಮತ್ತು ಮಲಬಾರು ಘಟ್ಟಗಳ ಪ್ರಾಂತವು ಕೊಡಗು ಮತ್ತು ಶಿರ್ಸಿ, ಸಿದ್ದಾಪುರ ತಾಲ್ಲೂಕುಗಳೂ, ಮಂಜರಾಬಾದ್ ತಾಲ್ಲೂಕಿನ ಮತ್ತು ಪಶ್ಚಿಮ ಘಟ್ಟಗಳಲ್ಲಿನ ಕೆಲವು ಪ್ರದೇಶಗಳೂ ಏಲಕ್ಕಿಯ ಜನ್ಮಭೂಮಿಯೆಂದು ಹೇಳಬಹುದು. ಕೊಡಗು ಮತ್ತು ಮಂಜರಾಬಾದಿನಲ್ಲಿ ಬೆಳೆಯುತಕ್ಕ ಏಲಕ್ಕಿಯು ಶ್ರೇಷ್ಠವಾದದ್ದೆಂದು ಹೆಸರುಗೊಂಡಿದೆ. ಕೊಚ್ಚಿ, ತಿರುವಾಂಕೂರು ಕಡೆಗಳಲ್ಲಿಯೂ ವಿಶೇಷವಾಗಿ ಬೆಳೆಯುತ್ತಿದೆ. ಮಲಬಾರ್ ರೇವು ಪಟ್ಟಣಗಳಿಂದ ಈ ಬೆಳಸು ವಿಶೇಷವಾಗಿ ಇಂಗ್ಲೆಂಡ್, ಜರ್ಮನಿ, ಇಟಲಿ, ಫ್ರಾನ್ಸ್, ಬೆಲ್ಜಿಯಂ, ಹಾಲೆಂಡ್, ಆಫ್ರಿಕ, ಅಮೆರಿಕ ಈ ಮೊದಲಾದ ದೇಶಗಳಿಗೆ ರಫ್ತಾಗುತ್ತದೆ. ಅಲ್ಲಿನವರು ವಿಶೇಷವಾಗಿ ಇದನ್ನು ಉಪಯೋಗಿಸುತ್ತಾರೆ. ೩೦-೩೫ ವರ್ಷಗಳಿಂದೀಚೆಗೆ ಇಂಗ್ಲೀಷಿನವರೇ ಈ ದೇಶದಲ್ಲಿ ಬೆಳೆಸಲುಪಕ್ರಮಿಸಿದರು. ಆದಾಗ್ಯೂ ಈ ಬೆಳಸು ಹಿಂದೂ ದೇಶಸ್ಥರ ಕೈಯಲ್ಲೇ ಇರುವದು. ಅನೇಕ ಕಡೆಗಳಲ್ಲಿ ಪರೀಕ್ಷಾರ್ಥವಾಗಿ ಸರ್ಕಾರದವರು ಏರ್ಪಡಿಸುವ ವ್ಯವಸಾಯ ಕಲಾಶಾಲೆಗಳಲ್ಲಿ ಈ ಬೆಳಸಿಂದನ್ನೂ ಏರ್ಪಡಿಸಿರುತ್ತಾರೆ.—ಅನಾದಿಯಿಂದಲೂ ಹಿಂದುಗಳು ಈ ಸುವಾಸನಾ ವಸ್ತುವನ್ನು ಭಕ್ತಿಪೂರ್ವಕವಾಗಿ ದೇವರುಗಳಿಗೆ ಅರ್ಪಿಸುವದುಂಟು. ಏಲಕ್ಕಿಯನ್ನು ನಾವು ಭಾವಿಸಿರುವಂತೆಯೇ ವಿದೇಶಿಯರುಗಳೂ ಅತ್ಯಂತ ಮಹಿಮೆಯುಳ್ಳ ಮತ್ತು ಪ್ರಯೋಜನಕಾರಿಯಾದ ಸುವಾಸನ ದ್ರವ್ಯಗಳಲ್ಲೊಂದಾದ ವಸ್ತುವೆಂದು ಕೊಂಡಾಟ ಉಪಯೋಗಿಸುತ್ತಿರುವರು. ಪಾಶ್ಚಾತ್ಯ ದೇಶಗಳಲ್ಲಿ ಹಿಂದಕ್ಕೆ ಏಲಕ್ಕಿ ಅಪರೂಪವಾಗಿದ್ದದ್ದರಿಂದ ಅದು ಬಹಳ ಬೆಲೆಯುಳ್ಳದ್ದಾಗಿತ್ತು. ಅಲ್ಲಿನವರು ಕೂಡ ಅಗ್ಗ ಕಾಲದಲ್ಲಿ ನಾಣ್ಯಕ್ಕೆ ಬದಲಾಗಿ ಕೆಲವು ವೇಳೆ ಇದನ್ನೇ ಉಪಯೋಗಿಸುತ್ತಿದ್ದರೆಂದು ತಿಳಿಯಬರುವದು.—ಒಂದು ಎಕರೆ ಭೂಮಿಗೆ ಏಲಕ್ಕಿ ಬೆಳೆ ಇಡಬೇಕಾದರೆ ವ್ಯವಸಾಯದ ಖರ್ಚ ೫೦ ರೂಪಾಯಿ ಬೀಳುವದು. ೧,೨೦೦ ಪೌಂಡು ಲಾಭವಾಯ್ತು ಉತ್ಪತ್ತಿಯು ಜಾಸ್ತಿ ಆಗುವದುಂಟು. ಇದರ ಬೆಲೆಯು ೧೦ ಅಥವ ೧೫ ವರ್ಷಗಳ ಹಿಂದೆ ಸಾಧಾರಣ ತಯಾರಿ ಮಣಕ್ಕೆ ೮೦ ರೂಪಾಯಿ ವರೆವಿಗೂ ನೂತನ ತರಹೆಯ ತಯಾರಿ ಮಣ ೧ ಕ್ಕೆ ೧೨೦ ರೂಪಾಯಿ ವರೆವಿಗೂ ವಿದೇಶಗಳಲ್ಲಿ ಬಿಕರಿಯಾಗುತ್ತಿತ್ತು. ಈಗಲೂ ಸ್ವಲ್ಪ ಹೆಚ್ಚು ಕಡಮೆ ಕೆಲವು ವೇಳೆ ಹಾಗೆಯೇ ಬಿಕರಿ ಆಗುತ್ತಿದೆ. ಇಷ್ಟು ಲಾಭಕರವಾದ ಲೋಕಪ್ರಸಿದ್ಧಿಯನ್ನು ಹೊಂದಿರುವ ಏಲಕ್ಕಿ ಬೆಳೆಯನ್ನು ಮಲೆನಾಡು ದೇಶಗಳಲ್ಲದ ಬೈಲುಪ್ರದೇಶಗಳಲ್ಲೂ ಕೂಡ ಉತ್ತಮ ಜಮೀನುದಾರರಾದ ಮಹನೀಯರು ಉದಾಸೀನ ಮಾಡದೆ ಹವಾಗುಣವನ್ನು ಪರೀಕ್ಷಿಸಿ ಬೆಳೆಯಬಹುದಾದ ಪ್ರದೇಶಗಳನ್ನು ನಿರ್ಧರಿಸಿ ಈ ವ್ಯವಸಾಯವನ್ನು ವಿದ್ಯಾವಂತರಾದ ಬೇಸಾಯಗಾರರು ಅಭಿವೃದ್ಧಿಗೆ ತರತಕ್ಕ ಏರ್ಪಾಡನ್ನು ಮಾಡಿದಲ್ಲಿ ದೇಶದ ಅಭ್ಯುದಯಕ್ಕೆ ತುಂಬಾ ಸಹಾಯ. ಮಾಡಿದಂತಾಗುವದೆಂತ ಕೋರುವ ಎಂ. ಬೋರ್ರೈಯಗೌಡ, ಗೊಂಡಹಳ್ಳಿ

ತಾಲ್ಲೋಕು ವರ್ತಮಾನಗಳು

ಶ್ರೀಂಗೇರಿ. ....—ಇಲ್ಲಿನ ಹವೆ ಇನ್ನೂ ಅಷ್ಟು ಆರೋಗ್ಯವಾಗಿಲ್ಲ ಸುತ್ತುಮುತ್ತಲಿನ ಗ್ರಾಮಾಂತರಗಳಲ್ಲಿ ಕಾಲರಾ ಉಪದ್ರವ ಸ್ವಲ್ಪ ಮಟ್ಟಿಗೆ ಶಮನವಾಗಿರುವಂತೆ ಕಂಡು ಪುನಃ ಕಲವೋರಿ ಅಲ್ಲಲ್ಲಿ ಮರಣಗಳು ಆಗುತ್ತಾ ಇವೆ. ಬೀಳಲಿನ ಧಗೆ ಬಹಳ ಹೆಚ್ಚಾಗಿದೆ. ಧಾರಣೆವಾಸಿಗಳು ದಿನದಿನಕ್ಕೆ ಹೆಚ್ಚಾಗುತ್ತಾ ಇವೆಯೇ ಹೊರ್ತು ಕಡಮೆಯಾಗಲಿಲ್ಲ. ಬಡವರು ಈ ಸುಗ್ಗಿ ಕಾಲದಲ್ಲಿಯೇ ಕಷ್ಟಕ್ಕೆ ಗುರಿಯಾಗಿರುತ್ತಾರೆ.—ಇಲ್ಲಿನ ಕೆರೆಯು ಮುಕ್ಕಾಲು ಭಾಗವೆಲ್ಲಾ ಒಣಗಿಹೋಗಿದೆ. ಸುತ್ತುಮುತ್ತಲಿನ ಗ್ರಾಮದ ಜನಗಳ ನೀರಿನ ತೊಂದರೆಯನ್ನು ಹೇಳಲು ಅಸಾಧ್ಯವಾಗಿರುತ್ತೆ. ಈ ವಿಷಯದಲ್ಲಿ ಸರ್ಕಾರದವರು ಕೃಪೆಯಿಟ್ಟು ನೀರಿನ ಕಷ್ಟವನ್ನು ಪರಿಹರಿಸುವುದಕ್ಕಾಗಿ ಅಲ್ಲಲ್ಲಿ ಭಾವಿಗಳನ್ನು ತೆಗಸಿಕೊಡುತ್ತಾರೆಂದು ನಂಬಿರುತ್ತೇವೆ.—ಸ್ಕೂಲುಗಳ ಡಿ|| ಇನ್ಸ್‌ಪೆಕ್ಟರವರು ಬಂದು ಎಲ್ಲಾ ಸ್ಕೂಲುಗಳನ್ನೂ ಪರೀಕ್ಷಿಸಿ ಮುಂದಕ್ಕೆ ಪ್ರಯಾಣಮಾಡಿದರು.—ಫೆಬ್ರವರಿ ತಾ|| ೨೦ ರಿಂದ ೫ ದಿವಸ ಇಲ್ಲಿನ ಬೆಟ್ಟದಲ್ಲಿ ಶ್ರೀಮಲ್ಲೇಶ್ವರ ಜಾತ್ರೆಯು ವಿಶೇಷ ವಿಜೃಂಭಣೆಯಾಗಿ ನಡೆಸಲ್ಪಟ್ಟಿತು. ದನಗಳ ಪ್ರದರ್ಶನದಲ್ಲಿ ಸುಮಾರು ಮೂರು ಸಾವಿರ ರೂಪಾಯಿನ ವ್ಯಾಪಾರ ನಡೆಯಿತೆಂದು ತಿಳಿದುಬರುತ್ತೆ. ಈ ಬೆಟ್ಟದಲ್ಲಿದ್ದ ಶ್ರೀ ಶಂಕರಾನಂದ ಭಾರತೀ ಸ್ವಾಮಿಯವರು ಬಾಲ್ಯವಯಸ್ಸಿನವರಾದರೂ ತುಂಬಾ ಗುಣಾಢ್ಯರು, ಸಾಧುಗಳು, ಜನಪ್ರಿಯರು, ಇವರ ಸತ್ಸಂಗದಿಂದ ಈ ಪ್ರಾಂತ್ಯದ ಅನೇಕರು ಲೌಕಿಕದಲ್ಲಿ ಬೇಸತ್ತು ಪಾರಮಾರ್ಥಿಕರಾಗಿರುತ್ತಾರೆ. ಈ ಬಾಲ್ಯವಯಸ್ಸಿನ ಸ್ವಾಮಿಗಳು ರಾಮೇಗೌಡರೆಂಬ ಶಿಷ್ಯರೊಡನೆ ರಾಮೇಶ್ವರ ಮೊದಲಾದ ಕ್ಷೇತ್ರಗಳಿಗೆ ಹೊರಡುವರು.—ಸುಮಾರು ಇಲ್ಲಿ ೧೪ ವರ್ಷಗಳಿಂದ ಡೆಪ್ಯುಟಿ ಅಮಲ್ದಾರರಾಗಿದ್ದ ಮ|| ರಾ|| ವೆ...

ಸಿಂಹಾಚಾರ್ಯರಿಗೆ ಇಲ್ಲಿಂದ ವರ್ಗವಾಯಿತೆಂದು ಕೇಳಿ ತುಂಬಾ ವಿಷಾದ ಪಡುತ್ತೇವೆ. ಇವರಿಂದ ಶ್ರೀರಂಗಪಟ್ಟಣದ ಅಮಲ್ದಾರರು ಬಹಳ ಬೇಗ ಸುಶಿಕ್ಷಿತರಾಗುತ್ತಾರೆ.

ಹೊಸದುರ್ಗದ ತಾ|| ಬಂಗೂರು —ಈ ಗ್ರಾಮದಲ್ಲಿ ಮೂಡಿಗರ ಮನೆಗಳು ಸುಟ್ಟ ವಿಷಯ ಹಿಂದಿನ ವಾರದ ಇದೇ ಪತ್ರಿಕೆಯಲ್ಲಿ ತಿಳಿಸಿಯಷ್ಟೆ. ಕಳೆದ ತಾ 7 ನೇ ಶುಕ್ರವಾರ ನಮ್ಮ ಅಮಲ್ದಾರರವರೂ, ಹೊಸ ರೇಂಜ್ದಾರರೂ, ಶ್ಯಾನಿಟರಿ ಇನ್ಸ್‌ಪೆಕ್ಟರೂ, ಪಟವಾರಿಯವರು ಬಂದು ಸುಟ್ಟ ಮನೆಗಳನ್ನೆಲ್ಲಾ ನೋಡಿ ಆಯಾ ಮನೆಯವರನ್ನು ಕರೆದು ಅವರಿಗೆ ಲುಕ್ಸಾನಿಯನ್ನು ಬರೆದುಕೊಂಡು, ಇವರಿಗೆ ಹೊಸ ಹಟ್ಟಿ ಕಟ್ಟುವದಕ್ಕೆ ಜಾಗಾ ತೋರಿಸಿ, ಅವರಿಗೆ ಬೇಕಾಗುವಷ್ಟು ಈಟಲ ಮರಗಳನ್ನು ಕಡಿದುಕೊಳ್ಳಲು ರಿಕಾರ್ಡುಮಾಡಿಕೊಂಡು ಉರಿಯುವ ಬೆಂಕಿಯಿಂದ 1–2 ಸಣ್ಣ ಮಕ್ಕಳನ್ನು ತೆಗೆದು ಪ್ರಾಣ ಉಳಿಸುವ ಕಡೆಲ್ಲಿ ಮೈಯೆಲ್ಲಾ ಸುಟ್ಟುಕೊಂಡು ಗಾಯದಿಂದ ನರಳುತ್ತಿರುವ ಕರಿಯನೆಂಬುವನಿಗೆ 40 ರೂಪಾಯಿ ಇನಾಮು ಕೊಡಿಸಬೇಕೆಂದು ತಿಳಿದು ಹೊರಟು ಹೋದರು. ಈ ಬಡ ಜನರು ಹಾಲಿ ಸುತ್ತುಮುತ್ತಲ ಹಳ್ಳಿಗಳಲ್ಲೂ, ಈ ಗ್ರಾಮದಲ್ಲೂ ತಿರುಪೆ ಎತ್ತಿ ಜೀವನ ಮಾಡುತ್ತಿದಾರೆ. ಈ ಗ್ರಾಮದಲ್ಲಿ ಎಲ್ಲಿ ನೋಡಿದರೂ ಕಚಡಾ ತುಂಬಿಕೊಂಡಿರುತ್ತದೆ. ಈಗ ಒಂದು ತಿಂಗಳಿಂದಲೂ ಗ್ರಾಮದ ಬೀದಿಯಲ್ಲೂ ಕಸಾ ಗುಡಿಸುತ್ತಿಲ್ಲ. ಆಫೀಸರು ಬಂದು ಇದನ್ನೆಲ್ಲಾ ನೋಡಿಕೊಂಡು ಹೋದರು. ಆದರೆ ತಕ್ಕ ಏರ್ಪಾಡು ಮಾಡದೆ ಇರುವದಕ್ಕೆ ವಿಷಾದಿಸಬೇಕಾಗಿದೆ. ಬಂದ ಆಫೀಸರೆಲ್ಲಾ ಸೇದುವ ಬಾವಿಗಳನ್ನು ಬಗ್ಗಿ ನೋಡಿ ನೀರು ಎಷ್ಟು ಇದೆ ಎಂಬುವದನ್ನು ಮಾತ್ರ ಬರೆದುಕೊಂಡು ಹೋಗುತ್ತಿದಾರೆ. ಹೊರತು ಹೊಸ ಬಾವಿ, ಹೊಂಡ ತೆಗಿಸುವ ಅನುಕೂಲವನ್ನು ಕಲ್ಪಿಸಿಕೊಡಲಿಲ್ಲ. ಸೇದುವ ಬಾವಿಗಳ ಸುತ್ತಲೂ ದನಕರುಗಳು ನಿಂತು ನೀರು ಸೇದುವ ಜನರನ್ನು ಹಾಯುತ್ತಲಿವೆ. ಇದು ಶಾಶ್ವತ ತೊಂದರೆಯಾಗಿದೆ. ... ಈ ಜನರು ಪರಗ್ರಾಮಗಳಿಗೆ ಹೋಗಿ ... ದನಕರುಗಳಿಗೆ ನೀರು ಹೋಯಿಸಿಕೊಂಡು ಬರುತ್ತಾರೆ ...

ಮಂಡ್ಯ — ಕಾಲರಾ ಗಡಿಬಿಡಿಯು ಸಮಾಪ್ತವಾಗಿದ್ದು ಊರಿನ ಜನಗಳು ತಿಂದಿ ತೀರ್ಥ ಕುಡಿಯುವ ನೀರಿನ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕೆಂದು ನಮ್ಮ ಅನುಭವವು ತಿಳಿಸುತ್ತಾರೆ. ಈ ಊರಿನಲ್ಲಿ ಪಬ್ಲಿಕ್ಕೆ ನಿಜಕ್ಕೂ ಪಾಠಶಾಲೆಯನ್ನು ಇಂಗ್ಲಿಷ್ ಸರ್ಕಾರಕ್ಕೆ ಅನುಕೂಲವಾಗುವ ಸಂಸ್ಥೆಯನ್ನು ಪ್ರಚಾರಪಡಿಸುವ ಪಾದ್ರಿಗಳ ಪಾಲಿಕ್ಕೆ ಕಟ್ಟಡವನ್ನು ... ಈ ತಿಂಗಳ ... ಪುರಾತನ ... ಶಿಲಾಶಾಸನಗಳು ... ಬ್ರಾಹ್ಮಣ ... ಮುಂತಾದ ... ಅನುಭವಿಸಿದರು ... ಈ ಕೆರೆಯ ನೀರನ್ನು ಹಳ್ಳಿಯವರು ... ಅವರಿಂದ ... ತೋಟಗಳಿಗೆ ...

ಚಿತ್ರದುರ್ಗ — ... ಈ ಊರಿನ ಜನಗಳು ... ಕಾಲರಾ ... ಪ್ರತಿ ದಿವಸವೂ ... ಉಂಟಾಗಿದ ಈ ವಿಷಯದಲ್ಲಿ ಮ್ಯುನಿಸಿಪಾಲಿಟಿಯವರು ... ತೆರವಿಸಬೇಕಾಗಿದೆ ... ಆರೋಗ್ಯ ... ಮಾಡುತ್ತಾರೆ ...

ಮುಸಲ್ಮಾನರ ಫೌಜೂ, ಅವರ ಮುಖ್ಯಾಧಿಕಾರರಾದ ... ಜನ ಯೂರೋಪಿಯನ್ನರುಗಳೂ ಕಳೆದ ಫೆಬ್ರವರಿ ... ನೇ ಶುಕ್ರವಾರ ಬೆಳಿಗ್ಗೆ ಇಲ್ಲಿಗೆ ಬಂದು ಆ ದಿವಸವೂ ಮಾರನೇ ದಿವಸವೂ ಇಲ್ಲಿಯೇ ಮೊಕ್ಕಾಂ ಮಾಡಿದ್ದು, ಈ ತಿಂಗಳು 2 ನೇ ತಾ ... ಹೊರಟು ಹೋದರು. ಅವರು ಮೊಕ್ಕಾಂ ಮಾಡಿದ್ದ ... ದಿವಸವೂ ಅವರಿಗೆ ಬೇಕಾದ ಆಹಾರ ಪದಾರ್ಥಗಳನ್ನು ಇಲ್ಲಿನ ವರ್ತಕರು ಸರಬರಾಯಿ ಮಾಡಿದರು. ದಂಡಿನ ಕಮ್ಯಾಂಡೆಂಟ್ ಆಫೀಸರು ಈ ತಿಂಗಳು 1 ನೇ ತಾ ತಮ್ಮ ... ಈ ಊರಿನವರಿಂದಲೂ ವ್ಯಾಯಾಮ ವಿನೋದಗಳನ್ನು ಮಾಡಿಸಿ ಅವರಿಗೆಲ್ಲಾ ಇನಾಂಗಳು ಕೊಟ್ಟದ್ದಲ್ಲದೆ ಆ ಕಾಲದಲ್ಲಿ ಇಲ್ಲಿನ ಅಧಿಕಾರಿಗಳನ್ನೂ ದೊಡ್ಡ ಮನುಷ್ಯರನ್ನೂ ಆ ಸ್ಥಳಕ್ಕೆ ಬರಮಾಡಿಕೊಂಡು ಅವರನ್ನು ಉಪಚರಿಸಿದರು. ಈ ಕಮ್ಯಾಂಡಿಂಗ್ ಆಫೀಸರವರ ವಿತರಣೆ, ಪ್ರಜೆಗಳಲ್ಲಿ ಅವರಿಗಿದ್ದ ವಿಶ್ವಾಸ, ಸೌಹಾರ್ದ್ರಗಳು ಹೊಡೆಯು ಬಂದು ಬಹಳ ಹೊಗಳುತ್ತಿದ್ದರು. ಇಲ್ಲಿನ ಪ್ರಜೆಗಳಿಗೆ ಅವರು ಬಂದು ಹೋದದ್ದು ತಮ್ಮ ನೆಂಟರು ಬಂದು ಹೋದಂತೆ ಸಂತೋಷವನ್ನುಂಟುಮಾಡಿತು. ಈ ಆಫೀಸರರ ನಡತೆ, ಇತರ ... ವರ್ತಕರ ವಿತರಣೆ, ಇವುಗಳಿಂದ ವ್ಯಾಪಾರಸ್ಥರಿಗೆಲ್ಲಾ ... ತಮ್ಮ ವ್ಯಾಪಾರವನ್ನು ನಡೆಸಿಕೊಂಡರು. ಸ್ವಲ್ಪವೂ ಗಲಾಟೆಗೆ ಅವಕಾಶವಾಗಲಿಲ್ಲ.

ಹಾಸನ —ಸುಗ್ಗೀಕಾಲವಾಗಿ ಕಾಳುಕಡ್ಡಿಗಳು ಒಕ್ಕಲಾಗಿದ್ದರೂ ಧಾರಣೆಯಾಸಿಗಳು ಇಳಿತರಕ್ಕೆ ಬರಲಿಲ್ಲ. ಸೊಳ್ಳೆ ಕಾಟ ಜಾಡ್ಯಗಳೇನೂ ಇರುವದಿಲ್ಲ — ಇಲ್ಲಿನ ಮ್ಯುನಿಸಿಪಾಲಿಟಿಯಲ್ಲಿ ಎಲ್ಲ ಮುಂತಾದ ಸರಕುಗಳ ಮೇಲೆ ಹಾಕಲಾಗುತ್ತಿರುವ ಸುಂಕದ ಬಾಬಿನಲ್ಲಿ ಕೆಲವು ಸೂಚನೆಗಳು ಕೆಂಡುಬರುವುದರಿಂದ ಸ್ಯಾನಿಟರಿ ಇನ್ಸ್‌ಪೆಕ್ಟರಿಗೆ ... ವರ್ತಕರು ... ಈ ವಿಷಯದಲ್ಲಿ ... ನಿರ್ಧಾರಪಡಿಸಬೇಕಾಗಿದೆ ... ಕರ್ನಾಟಕ ... ಪಾಠಶಾಲೆ ... ಪ್ರತಿ ದಿವಸವೂ ... ಮುನಿಸಿಪಾಲಿಟಿ ... ಹಾಸನ, ಅರಸೀಕೆರೆ, ಬೇಲೂರು, ... ಕರ್ನಾಟಕ ...

ಮುಳಬಾಗಿಲು — ... ಉತ್ಸವ ... ಇಲ್ಲಿಗೆ ... ಶ್ರೀ ... ಸ್ವಾಮಿಗಳವರ ... ಜನಗಳು ... ಶ್ರೀ ರಾಮಚಂದ್ರಾಚಾರ್ಯರವರ ... ಮಾಡಿದರು ... ಮುಖ್ಯ ... ಹರಿಕಥೆ ... ಅನ್ನಸಂತರ್ಪಣೆ ... ಅವರಿಗೆ ...

ಸೇರುತ್ತಿದ್ದರು. ಪ್ರತಿ ದಿವಸವೂ ಒದ್ದರ್ ರಾಮಚಂದ್ರಾಚಾರ್ಯರು ಕಥೆ ಮತ್ತು ಜ್ಞಾನ ವಿಷಯವಾಗಿ ಸರ್ವರಿಗೂ ಎರಡು ಕಡೆ ... ಉಪನ್ಯಾಸವನ್ನು ಸ್ಮೃತಿ, ಪುರಾಣ, ಇತಿಹಾಸಗಳಿಂದ ... ವಾಗುತ್ತಿದ್ದರು. ಕಡೆಯ ಶುಕ್ರವಾರ ವಿದ್ವಾನ್ ... ಚಾರ್ಯರವರು ... ಮುಖ್ಯವಾಗಿ ಬಹಳ ... ಉಪನ್ಯಾಸವನ್ನು ... ಅಪ್ರಸ್ತುತವಾದ ಬಳಿಕ ಯಜ್ಞದೀಕ್ಷಿತರು ತಾವು ಉಪನ್ಯಾಸ ಮಾಡುತ್ತಿದ್ದ ... ಗಳಿಂದ ಸಂತುಷ್ಟಪಡಿಸಿದರು. ಈ ಯಜ್ಞದಲ್ಲಿ ಜೀವಹಿಂಸೆ ... ಯಲ್ಲಿ ... ನೆರವೇರಿ ಅನೇಕ ಜನಗಳಿಗೆ ಅನ್ನದಾನಾದಿಗಳಿಂದ ತೃಪ್ತರನ್ನಾಗಿ ಮಾಡಿದರು. ಅಲ್ಲದೆ ಇವರು ಆಗಾಗ್ಗೆ ಒಳ್ಳೇ ಉಪನ್ಯಾಸಗಳಿಂದ ನಾಸ್ತಿಕರನ್ನು ಆಸ್ತಿಕರನ್ನಾಗಿ ಮಾಡುತ್ತಿರುವುದು ಸ್ತೋತ್ರಾರ್ಹವಾಗಿದೆ.

ಗುಣಕಂಡ ಮೂರು ಪ್ರಖ್ಯಾತ ಔಷಧಗಳು.

ಸ್ವ್ಯಾಕ್ಸರ ಮಲೆನಾಡು ಜ್ವರಮಾತ್ರೆಗಳು.—ಕಿತ್ತಸ್ಪಿರಿಗಳನ್ನು ಬಿಟ್ಟುಬಿಡುವ ಅಥವಾ ದೀರ್ಘವಾದ ಶೀತಪಿತ್ತ ಎಲ್ಲಾ ಜಾತಿಯ ಚಳಿ ಜ್ವರಗಳನ್ನೂ ಖಂಡಿತವಾಗಿಯೂ ಸಂಪೂರ್ಣವಾಗಿಯೂ ವಾಸಿಮಾಡುತ್ತೆಂದು ಪ್ರಖ್ಯಾತಿ ಹೊಂದಿರುವ ಮಾತ್ರೆಗಳು. ಇವು ಕ್ರಯ ಡಬ್ಬಿ 1ಕ್ಕೆ ರೂಪಾಯಿ 1 0 0

ಸ್ವ್ಯಾಕ್ಸರ ಉಬ್ಬಸದ ಔಷಧ.—ಉಬ್ಬಸ, ... ರೋಗಿಗಳನ್ನೂ, ಕೆಮ್ಮು ... ಬಹಳ ಉಪ್ಪು ... ರೋಗಿಗಳಿಗೆ ... ಕ್ರಯ ಬಾಟ್ಲು 1ಕ್ಕೆ ರೂಪಾಯಿ 1 0 0 [8-6]

ಸ್ವ್ಯಾಕ್ಸರ ನಾಯಿಕೆಮ್ಮಿನ ಸಿದ್ಧೌಷಧ.—ಇದು ಮಕ್ಕಳಿಗೆ ... ನಾಯಿಕೆಮ್ಮು ಮತ್ತು ... ಸಂಪೂರ್ಣವಾಗಿ ಗುಣಮಾಡುತ್ತದೆ. ಕ್ರಯ ಬಾಟ್ಲು 1ಕ್ಕೆ ರೂ 1 0 0

ಪ್ರಾಂಗ್ ಫೋಸ್ಟೇಜ್, ವಿ. ಪಿ. ಛಾರ್ಜು ಪ್ರತ್ಯೇಕ. ಈ ಔಷಧಗಳ ಗುಣಗಳನ್ನು ವಿವರಿಸುವ ಪತ್ರಗಳನ್ನು ಕೇಳಿದವರಿಗೆ ಬಿಟ್ಟಿ ಕಳುಹಿಸುತ್ತೇವೆ.

ವಿಳಾಸ — ಪಿ. ಎಸ್. ಸ್ವಯಾಸ್,

117 ಫೋರ್‌ಶಾರ್ ಬ್ಲಾಡವೇ, ಮದರಾಸು.

ಏಜಂಟರು ... — (1) ಎಡ್ವರ್ಡ್ ಕಂಪನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ, (2) ... ಕಂಪನಿ, ಬೆಂಗಳೂರು ದಂಡು (3) ... ಮಂಗಳೂರು, (4) ... ಸಾಗರ, (5) ... ಕಲ್ಲಿಕೋಟೆ.

ಬ್ರೇಸ್‌ಲೆಟ್ ವಾಚ್.



ಒಂದು ರೂಪಾಯಿ 1 15 0

ಒಂದು ರೂಪಾಯಿ 3 15 0



ಈ ಗಡಿಯಾರ ಬಹಳ ಸುಂದರವಾದದ್ದು. ... ಬಂಗಾರದ ಗಿಲ್ಟ್ ... ಇದನ್ನು ... ಕ್ರಯ ... ಪೋಸ್ಟ್ ಚಾರ್ಜು ... ರೂ 1 15 0 ... ಬಹು ...

[6-4] ... ಮತ್ತು ಕಂಪನಿ,

ನಂ 39 ಜನರಲ್ ಮುತ್ಯಾಲಪೇಟೆ ಬೀದಿ

ನಾಯುಕರ್ ಪೇಟೆ, ಮದ್ರಾಸ್

ಟಿಪ್ಪುರಾಂವೇ ರೆಗ್ಯೂಲೇಟರ್ ಲಿವರ್ ಗಡಿಯಾರ

ವ್ಯಾಪಕ ... ಶಕ್ತಿ ... ಸೂತ್ರ

ಇದು ಇತರರು ಮಾರುವ ಮಾದರಿಯಂಥಾದ್ದಲ್ಲ. ಬಲವಾದ ಸಾಮಾನುಗಳು ಉಳ್ಳದ್ದು. ... ಅಧಿಕಾರಿಗಳು ಉಪಯೋಗಿಸಲು ಲಾಯಕಾದದ್ದು.



3 ವರುಷ ಗ್ಯಾರಂಟಿ ಉಳ್ಳದ್ದು ... ವಾಗಿ ... ಇದು ಪ್ರಸಿದ್ಧಿಯಾಗುವದಕ್ಕಾಗಿ ಮೇಲಾದ ಮಾ ... ಒಂದನ್ನು ಇನಾಮಾಗಿ ಕೊಡುತ್ತೇವೆ. ಕ್ರಯ ರೂಪಾಯಿ 1 13 0

ಮೇಲೆ ತೋರಿಸಿದ ಟಿಪ್ಪುರಾಂವೇ ರೆಗ್ಯುಲೇಟರ್ ಲಿವರ್ ಗಡಿಯಾರವನ್ನು ... ಪಾಕೆಟ್ಟಿನ ... ರೂ 1 12 0ಕ್ಕೆ ಕೊಡುತ್ತೇವೆ. [63-1]

ವಿಳಾಸ—ಮಹಾರಾಜಾ ಅಂಡ್ ಕಂಪನಿ,

ಮೌಂಟ್ ರೋಡು, ಮದರಾಸು

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿಸಿದ ಪದಾರ್ಥಗಳು ಹಿಂದುಸ್ತಾನ, ಬರ್ಮಾ ಮತ್ತು ಸಿಲೋನುಗಳ ಎಲ್ಲಾ ವ್ಯಾಪಾರಸ್ಥರಲ್ಲೂ ವಿಕ್ರಯಿಸಲ್ಪಡುತ್ತವೆ.

"ಹಿಂದೂಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೇಳಿದ ವಿಳಾಸದಾರರಿಗೆ ಬರೆದುಕೊಳ್ಳುವವರೆಲ್ಲರಿಗೂ ಉಚಿತವಾಗಿ ... ಕಳುಹಿಸಲಾಗುವುದು.

Messrs OAKES & Company, Mount Road, Madras.

[4-10] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. H. GULLIFORD, Proprietor and Manager Wesleyan Mission Press Mysore 13/3/1913

REGISTERED M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೬. ಮೈಸೂರು—೧೯೧೧ ನೇ ಇಸವಿ ಮಾರ್ಚಿ ತಾರೀಖು ೩೦ ನೇ ಗುರುವಾರ. ಸಂಚಿಕೆ ೪೨

ಡೋಂಗರೆ ಇವರ ಬಾಲಾಮೃತ.

[115-36]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು ಅತಿ ಮಧುರ (ಸವಿ) ಇದ್ದದ್ದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡ ದಿರೋಣ, ಆಸ್ಥಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಅಮೃತಾಂಜನ. (Regd)

ಇಲ್ಲಿ ವಿಶೇಷ ಲಕ್ಷ್ಯ ಕೊಡಿರಿ ವಾತ, ಸಂಧಿವಾತ, ತಲೇಸೋವು, ಸೊಂಟಸೋವು, ಶೀತ, ಕಜ್ಜಿ, ಗಂಟುಸೋವು, ಪಾಲಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರುವದು ಎಲ್ಲಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ ಬಾಟ್ಲಿ 1ಕ್ಕೆ 0-8-0

ಅರ್ಧ ಕ್ರಯಕ್ಕಿಂತಲೂ ಕಡಮೆ

ಹತ್ತುಲಕ್ಷ ದೊಡ್ಡಸ್ಯಾಬು ಪೋಸ್ಟುಕಾರ್ಡುಗಳು ಇವುಗಳು ಎಲ್ಲಾಗಾಗಿಯೂ ಹೊಸವಾಗಿಯೂ ಇವೆ 1,000 ಕ್ಕೆ ಮುಂಚಿನ ಕ್ರಯ ರೂ 2-8-0 ಈಗ 1ಂ ಆಣೆ, ವಿ ಪಿ ಖರ್ಚು 12 ಆಣೆ 500 ಕ್ಕೆ 8 ಆಣೆ ವಿ ಪಿ ಖರ್ಚು 8 ಆಣೆ

1911 ನೆಯ ವರ್ಷದ ಕ್ಯಾಲೆಂಡರ್ 8 ಬಾಟ್ಲಿ ಅಮೃತಾಂಜನ ತರಿಸಿಕೊಂಡವರಿಗೆ ಪ್ರಗಟ್ಟಯಾಗಿ ರವಾನಿಸಲ್ಪಡುವದು ಇತರರಿಗೆ ಕ್ಯಾಲೆಂಡರ್ 1ಕ್ಕೆ 1 ಆಣೆ ವಿ ಪಿ ಸಹಿತ [42-1]

ಅಮೃತಾಂಜನ ಡಿಪೋ, ಫೋರ್ಟು, ಮುಂಬಯಿ.

ಲೇವಾದೇವಿಯ ಕಷ್ಟ ಪರಿಹಾರ.

ಹಣಕಾಸು ಒಗಿವನ್ನು ತಿಳಿದುಕೊಳ್ಳದೆ ಲೆಖಕರು ಪತ್ರಗಳನ್ನು ಬರೆಯಲು ಪತ್ರಗಳಿಂದ ಲೇವಾದೇವಿ ಮಾಡುವವರಿಗೆ ನಾನಾ ವಿಧವಾದ ವಂಚಗಳು ಬರುತ್ತಿದ್ದು ಮತ್ತು ಅಂಥ ಪತ್ರಗಳನ್ನು ರಿಜಿಸ್ಟ್ರೇಷನ್ ಆಫೀಸಿನವರು ಇಂಪೌಂಡ್ ಮಾಡಿ ಜುಲ್ಮಾನೆಗೆ ಗುರಿಮಾಡುತ್ತಾರೆ ಅದ್ದರಿಂದ ಸಾರ್ವಜನರು ಕೆಲ ಪಬ್ಲಿಕು ಹೆಡ್ ಕ್ವಾರ್ಟರುಗಳಲ್ಲಾದರೂ ಸಬ್ ರಿಜಿಸ್ಟ್ರೇಷನ್ ನೌಕರರನ್ನಾಗಲಿ ರಿಜಿಸ್ಟ್ರೇಷನ್ ಪ್ರಾಸುವಾಡಿ ಲೈಸನ್ಸ್ ಪಡೆದವರನ್ನಾಗಲಿ ನೇಮಿಸಲು ಸರ್ಕಾರ ಮಾಡಿಕೊಡಬೇಕೆಂದು ಒಂದು ಸಂದಿ ಪತ್ರಿಕೆಗಳಲ್ಲಿ ಪ್ರಲಾಪಿಸುತ್ತಿರುವರು ಇದು ಸಾಧ್ಯವಲ್ಲದ ಕೋರಿಕೆ ಇದ್ದಾದರೂ ಪರಿಗಣಿಸುವುದು ತಪ್ಪುವುದಿಲ್ಲ ಅದರಿಂದ ಸ್ಟಾಂಪು ಮತ್ತು ರಿಜಿಸ್ಟ್ರೇಷನ್ ಶಾಸನಗಳನ್ನು ಚೆನ್ನಾಗಿ ಪರಿಶೀಲಿಸಿ ಅನುಭವಶಾಲಿಗಳಾದ ರಿಜಿಸ್ಟ್ರೇಷನ್ ಅಧಿಕಾರಿಯವರು ಬರೆದು ಕಟ್ಟು, ಗವರ್ನಮೆಂಟಿನವರಿಂದ "ರಿಜಿಸ್ಟ್ರೇಷನ್ ಮ್ಯಾನುಯಲ್" ಎಂದು ಕರೆಯಲ್ಪಟ್ಟ "ಲೇಖನಪ್ರಕಾಶಿಕಾ" ಎಂಬ ಅತ್ಯುಪಯುಕ್ತ ಪುಸ್ತಕ ಒಂದನ್ನು ಪ್ರತಿ ಒಬ್ಬರೂ ಇಟ್ಟುಕೊಂಡರೆ ಅನೇಕ ವಂಚಗಳನ್ನು ಖಂಡಿತವಾಗಿಯೂ ತಪ್ಪಿಸಿಕೊಳ್ಳಬಹುದು ಪ್ರತಿ ಶ್ಯಾನುಭೋಗ್, ಪಟೇಲ್, ಮಾಸ್ಟರ್, ಲೇವಾದೇವಿ ಮಾಡುವವರು ಸಹಾ ಅವಶ್ಯಕವಾಗಿ ತರಿಸಿಕೊಳ್ಳಬೇಕು ಇದರಲ್ಲಿ ಪತ್ರ ಬರೆಯತಕ್ಕ ನಮೂನೆಗಳಲ್ಲದೆ ಸ್ಟಾಂಪು ಮತ್ತು ರಿಜಿಸ್ಟ್ರೇಷನ್ ವಿಷಯಗಳನ್ನು ಬಹಳ ಚೆನ್ನಾಗಿ ವಿವರಿಸಿದೆ ಮಾರ್ಚಿ ಆಖೇರು ವಳಗೆ ಪಡೆಯುವವರಿಗೆ ಕ್ರಯ ಅಂಚೆ ವೆಚ್ಚ ಸೇರಿ ರೂ 1 2 0 ನಂತರ ರೂ 2 3-0 ಪುರಸ್ಕಾರವಾದ ಸಾವಿರಾರುಗಳು ...ವರಿ 1 ಆಣೆ ಸನ್ಮಿತ್ರ 2 ಆಣೆ ರಾಜೇಂದ್ರ ಮತ್ತು ಸುಂದರಿ 1 ಆಣೆ ಪ್ರವಾಹ ವರ್ಣಾಶಿಫಿ 300 ವರ್ಷಗಳ ಕ್ಯಾಲೆಂಡರ್ ಸಹಿತ ಅಂಚೆ ವೆಚ್ಚ ಸೇರಿ ಬಹು ಸ್ವಾರಸ್ಯವಾದ ಪುಸ್ತಕಗಳು ಹವಮಾಡಿ ಕುಳಿತವರನ್ನು ಕೂಡ ನಗಿಸಿಬಿಡುವವು ಡೇ ಮ್ಯಾನುಯಲ್ ಸರ್ವಮಾಪಲು ಕಲಿಯುತಕ್ಕ ಪ್ರತಿ ಒಬ್ಬನಿಗೂ ಅತ್ಯವಶ್ಯಕವಾದದ್ದು ರೆವಿನ್ಯೂ ಕಮೀಷನರವರಿಂದ ಅಂಗೀಕರಿಸಲ್ಪಟ್ಟಿದೆ ಅಂಚೆ ವೆಚ್ಚ ಸೇರಿ 7 ಆಣೆ

[- 4]

ವಿಳಾಸ—ಕ ಮುಟ್ಟಮರಿ ಮತ್ತು ಕಂಪನಿ, ಶಿವಮೊಗ್ಗ

ಸಾಳ್ವದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ತಸ್ಮ ಚಿನ್ನದ ರೇಖು ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಬಾಳ್ವ ಪದಾರ್ಥಗಳ ಮಿಶ್ರದಿಂದ ತಯಾರಿಸಿದ ಸಂನಿಪಾತ ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊದೆತ (ಬಾವು), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ ಹಲ್ಲುನೋವು ಕೆಮ್ಮು ಉಬ್ಬಸ ಸೆಗಡಿ, ನಿಶ್ಶಕ್ತಿ ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ಕಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಜಠರ ವಾಯುವಿನ ದಾರಿಕೊಡದೆ, ಶರೀರಕ್ಕೆ ಬಹಳ ಬಲವನ್ನು ಕೊಟ್ಟು ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ... ಮಕ್ಕಳ ಎಳವು ಜ್ವರ, ಸನ್ನಿಜ್ವರ, ಕೈವಲ್ಯಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವದಿಲ್ಲ ಒಳ್ಳೆ ಶಕ್ತಿವರ್ಧಕವಾಗಿದೆ —30 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ 1 ಕುಪ್ಪಿಗಿಂತ ಹೆಚ್ಚು, 10 ರಿಂದ 12 ಕುಪ್ಪಿಯ ವರೆಗೆ ಪೋಸ್ಟೇಜು 1 ಆಣೆ [136 29]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅತಿಸಾರದ ಭಾಧೆಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈವಾರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ಬೇಗನೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ ಸಮುದ್ರದಲ್ಲಿ ಜೀವಾದಿಷ್ಟ ಒಂದೇ ಒಂದು ಬುದ್ಧಿಯು ಉಪಕಾರ ಸಹಾಯವನ್ನು ಅಪೇಕ್ಷಿಸದ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧೌಷಧ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ

ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪರೀಕ್ಷಿಸಿ ನೋಡದ ಅಗ್ಗದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ವಿಕರಿಯಾಗುತ್ತಿವೆ ನಿಮ್ಮ ಕೇಶಸೌಂದರ್ಯವನ್ನು ಅನರ್ಥಕ್ಕೆ ಗುರಿ ಮಾಡಿಕೊಳ್ಳಬೇಡಿ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತು ಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ" ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಳಚಳಿಸುವವು, ಸಿಟಿಲವಾದ ನೀಳ ... ದಿಂದ ತೂಗಿ, ಆಗಾಗ್ಗೆ ತುಂಡು ... ಹೋಗದೆ ... ಬೆಳೆಯುವಷ್ಟು ... ನೆತ್ತಿ ಬುರುಡೆಯನ್ನು ಶುದ್ಧವಾಡುತ್ತೆ ಸುಂದರ ಮೊಟ್ಟನ್ನು ಅಳಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳುವ ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತವೆ ಬೀಳುವ ಕೂದಲನ್ನು ತಡೆದು ಬಲಪಡಿಸಿ ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳೆಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ

ಇದರ ಬೆಲೆ 1 ಸೀಸೆಗೆ ರೂ 1-0 0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು

3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ

ಮೈಸೂರು ಎಗ್ಜಿಭಿಷನ್ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಜದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ ಮನ್ನಾರ್ಗುಡಿ ಮಿಷನ್ ಸೆಕ್ರೆಟರಿ ಮಿ॥ ಡಿ ... ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ" ವಿರುದುಪಟ್ಟಿ ಕೆ ವಿ ಎಸ್ ಹೈಸ್ಕೂಲ್ ಹೆಡ್ ಮಾಸ್ಟರ್ ಮಿ॥ ಎಂ ಸುಬ್ರಹ್ಮಣ್ಯಪಿಳ್ಳೆಯವರು ಬರೆಯುವದು—"ನಿಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ಪರೀಕ್ಷೆ ಮಾಡಿದೆನು ಅದು ಕೂದಲನ್ನು ಹುಟ್ಟಿಸಿ ಅಂದವಾಗಿಯೂ, ಕೋಮಲವಾಗಿಯೂ, ... ಬೆಳೆಸುವದೆಂದು ಖಂಡಿತವಾಗಿ ಹೇಳಬಲ್ಲೆನು ದಯವಿಟ್ಟು ಇನ್ನು ಮೂರು ಬಾಟ್ಲಿ ಎಣ್ಣೆ ಕಳಿಸಿಕೊಡಿ" ಎನಟೂರ ಡಿಸ್ಟ್ರಿಕ್ಟ್ ಕಂಟ್ರೋಲರ್ ಆಫೀಸ್ ಮಿ॥ ... ಯವರು ಬರೆಯುವದು— "ದಯವಿಟ್ಟು ನಿಮ್ಮ ಕಾಮಿನಿಯಾ ಎಣ್ಣೆ ಆರು ಬಾಟ್ಲಿ ಕಳಿಸಿಕೊಡಿ ಒಂದು ತಿಂಗಳ ಹಿಂದೆ ನೀವು ಕಳಿಸಿದ ಬಾಟ್ಲಿಗಳು ಮುಗಿದುಹೋಯಿತು ಇದೇ ಉತ್ತಮೋತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳಬಲ್ಲೆನು" ಆದಕಾರಣ ನೀವು ಒಂದು ಸಲ ತರಿಸಿ ಪರೀಕ್ಷೆಮಾಡಿ

ಎಚ್ಚರಿಕೆ—ಮೋಸದಿಂದ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನಿಮ್ಮ ಸಮೀಪ ಷಾಪುಕೀಪರಲ್ಲಿ ಅದು ಇಲ್ಲದಿದ್ದರೆ ಅವನ ಹೆಸರು ವಿಳಾಸದ ಸಮೇತ ನಮಗೆ ತಿಳಿಸಿ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ವಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ನೋಟ್—ನಮಗೆ ಎಲ್ಲಾ ಕಾಗದಗಳನ್ನೂ ಇಂಗ್ಲೀಷಿನಲ್ಲೇ ಬರೆಯಬೇಕು ನಮ್ಮ ವಿಳಾಸ :— [8 13]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸೀದ್, ಬೊಂಬಾಯಿ.

"ವೃತ್ತಾಂತ ಪತ್ರಿಕೆ" ಏಜಂಟರಿಗೆ ನೋಟೀಸ್

ವೃತ್ತಾಂತ ಪತ್ರಿಕೆಯ 1912-13 ನೇ ವರುಷದ ಮೂರನೇ ಕ್ವಾರ್ಟರು ಕಳೆದ ಫೆಬ್ರುವರಿ ತಿಂಗಳಿಗೆ ಪೂರೈಸಿದೆ. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಪೈರುಮಾಡಿ, "ಎ" ಫಾರಂಗಳಿಗೆ ಎತ್ತಿ ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃತಸಡಿಸಿದ

ಮ್ಯಾನೇಜರ್, "ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು

CHAMBERLAIN'F COUGH REMEDY.

ಚೇಂಬರ್ಲೇನರವರು ಕಂಡುಹಿಡಿದ ಕೆಮ್ಮಿನ ಔಷಧವು.

1-12

ಶೀತದ ಕೆಮ್ಮು, ಗಂಟ್ಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲಿನಲ್ಲಿ ಬರುವ ಹುಟ್ಟುವ ಸಮಸ್ತ ವ್ಯಾಧಿಗಳು —ಇವಕ್ಕೆಲ್ಲಾ ಈ ಔಷಧವು ಉಪಯುಕ್ತವಾದದ್ದು.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೊನಿಯ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಬ್ಬಸದಲ್ಲಿ ರಕ್ತಬೀಳುವುದು. ಹಾಗೆಯೇ ಕ್ಷಯರೋಗ ಪ್ರಾಪ್ತವಾಗುವುದು.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಜವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಲಕ್ಷಣವನ್ನು ಬಿಡಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಶ್ಲೇಷ್ಮವನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಶ್ವಾಸವನ್ನು ಶಮನಮಾಡಿ, ನಿದ್ರೆ ಸುಖವಾಗಿ ಬರುವಂತೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕರವಾಗುತ್ತದೆ.

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳಿಂದ ...

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ವಿಕರಿಯಾಗುವುದು | ಸಣ್ಣ ಶೀಸೆಗೆ ೧ ರೂಪಾಯಿ | ದೊಡ್ಡ ಶೀಸೆಗೆ ೨ ರೂಪಾಯಿ

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು. ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು. ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ. ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ. ಕ್ರಯ 3 ಆಣೆ. ಅಂಚೆಕೂಲಿ ಉಚಿತ.

[157 14] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಶ್ರೀಲಕ್ಷ್ಮೀನರಸಿಂಹ ಆಯುರ್ವೇದ ವೈದ್ಯಶಾಲಾ

ಜ್ವರಮುರಾರಿ ಸಕಲ ವಿಧವಾದ ಜ್ವರಗಳಿಗೆ ಅಂಕುಶವಾಗಿದೆ. ಇದನ್ನು ಉಪಯೋಗಿಸಿದೊಡನೆ ಸಕಲವಿಧವಾದ ಜ್ವರಗಳನ್ನೂ ಹತಮಾಡುವದು. ಇದು ಬಹಳ ಕಹಿಯಾಗಿರುವ ಪದಾರ್ಥಗಳು ಬೇರುಗಳು ಮೊದಲಾದ ಕಲ್ಕದಿಂದ ಮಾಡಲ್ಪಟ್ಟಿದ್ದು ರಸ, ಗಂಧಕ, ಪಾಷಾಣಾದಿಗಳಿಂದಲೂ ಈ ಔಷಧಕ್ಕೆ ಸೇರಿದ್ದಲ್ಲ. ಇದು ನಮ್ಮ ಪೂರ್ವಿಕರು (ಹಿರಿಯರು)ಗಳಿಂದ ಕಲಿತ ಸಿದ್ಧಪ್ರಯೋಗ. ಈ ಔಷಧಕ್ಕೆ ಪಥ್ಯ ಸ್ನಾನಾದಿಗಳೇನೂ ಇಲ್ಲ. ಈ ಔಷಧವನ್ನು ಒಂದು ಸಾರಿ ... ಸಿದ ಒಡನೆ ಅವರಾಗಿ ತಮ್ಮ ಸ್ನೇಹಿತರುಗಳಿಗೆ ಅತಿ ಸಂತೋಷಪಡುವರು. ಇದು ಮದರಾಸಿನಲ್ಲಿ ಅನೇಕ ಸಾವಿರ ಜನಗಳು ಉಪಯೋಗಿಸಿದ ಎಡ್ಡಿ ಕಂಡ ಪ್ರತಿ ದಿವಸ ಅನೇಕ ಜನಗಳು ಉಪಯೋಗಿಸುತ್ತಲೂ ಇದ್ದಾರೆ. ಈ ಔಷಧ ಸೇವನೆ ಕ್ರಮವು ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು. ಎಂಥಾ ಜ್ವರವನ್ನೂ 8 10 12 16 ಪೊಟ್ಟಣಗಳ ಔಷಧದಲ್ಲಿ ವಿಶೇಷವಾಗಿ ಜೀರ್ಣಿಸಿ ಅನ್ನದ್ವೇಷವನ್ನು ಹೋಗಲಾಡಿಸಿ ಹಸಿವನ್ನುಂಟುಮಾಡಿ, ಬಲಹೀನವನ್ನು ಹೋಗಲಾಡಿಸುವದು. ಇದರ ಬೆಲೆ 12 ಪೊಟ್ಟಣಗಳ ದರ್ಜ 1 ಕ್ಕೆ 12 ಆಣೆ. ಟಪ್ಪಾಲ್, ಪಾರ್ಸಲ್ ಛಾರ್ಜು ಪ್ರತ್ಯೇಕ. [10 5]

ದಂತಧಾವನ ರತ್ನಾಕರಂ —ಇದು ಹಲ್ಲುಗಳಿಗೆ ಬಾಧಾಕರವಾದ ಪದಾರ್ಥಗಳು ಯಾವವೂ ಸೇರಿಸದೆ ಅನೇಕ ಮೂಲಿಕೆಗಳಿಂದ ತಯಾರುಮಾಡಿದ ಹುಲ್ಲು ಹುಡಿ. ಸುವಾಸನೆಯಾಗಿರುವದು. ಇದರಿಂದ ಹಲ್ಲು ಉಜ್ಜಿಕೊಂಡರೆ ದಂತದಲ್ಲಿ ಹುಟ್ಟುವ ರೋಗಾದಿಗಳು ಹೋಗಲಾಡಿಸಿ ವಾತಪಿತ್ತ ಶ್ಲೇಷ್ಮಗಳನ್ನು ಶಮನಮಾಡಿ ಹಲ್ಲುನೋವು, ಒಸಡುನೋವು, ಹಲ್ಲುಬೇನೆ, ಹಲ್ಲಿನಲ್ಲಿ ರಕ್ತ ಹುಳಗಳು, ಹಲ್ಲಿನಲ್ಲಿ ರಕ್ತಬರುವದು, ಹುಳುಕುಹಲ್ಲು, ಇಗುರುಬಾವು ಮೊದಲಾದವನ್ನು ಪರಿಹರಿಸಿ ಹಲ್ಲು ಸಂದುಗಳನ್ನು ದಟ್ಟವಾಗಿ ಸೇರಿಸಿ ಕಳೆಕೊಟ್ಟು ದೇಹಕ್ಕೆ ಒಳ್ಳೆ ಗುಣವನ್ನುಂಟುಮಾಡುವದು. ಈ ಪುಡಿಯನ್ನು ಹೊಟ್ಟೆಗೂ ತೆಗೆದುಕೊಳ್ಳಬಹುದು. ಇದರ ಬೆಲೆ ದಬ್ಬಿ 1 ಕ್ಕೆ 4 ಆಣೆ. ಟಪ್ಪಾಲ್, ಪಾರ್ಸಲ್ ಛಾರ್ಜು ಪ್ರತ್ಯೇಕ. ವಿಳಾಸ —

ರಾಜವೈದ್ಯಂ ಮೈಸೂರು ಪಂಡಿತರು ಎಂ. ಕೆ. ಶೇಷಾಚಾರ್ರು,
ನಂ 93, ಚೈನಾಬಜಾರ್ ರೋಡ್, ಮದರಾಸ್

ವಿಕ್ಟೋರಿಯಾ ಲೈಫ್ ಅಷೂರೆನ್ಸ್ ಕಂಪನಿ ಲಿಮಿಟೆಡ್.

(1912 ನೇ ಇಸ್ವಿ ಡಿಸೆಂಬರ್ ಸೂಸೈಟಿ ಆಕ್ಟಿನಂತೆ ರೆಜಿಸ್ಟರಾದದ್ದು)

ಮೂಲಧನ—10,00,000 ರೂಪಾಯಿ (ಹತ್ತು ಲಕ್ಷ)

ಹೆಡ್ ಆಫೀಸ್—18, ಕ್ಲೈವ್ ಸ್ಟ್ರೀಟ್, ಕಲ್ಕತ್ತಾ

ದಕ್ಷಿಣ ದೇಶ ಮತ್ತು ಬರ್ಮಾಗೆ ಬ್ರಾಂಚ್ ಆಫೀಸು—ಚೂಳೈ, ಮದರಾಸ್

ಪೋಷಕರು—ಕೂಚ್ ಬೆಹಾರದ ರಾಜರಾಜೇಂದ್ರ ನಾರಾಯಣ ಭೂಪ ಬಹದೂರ್, ಗಿಧೋರ್ ಮಹಾರಾಜಾ ಸರ್ ರಾವಣೇಶ್ವರ ಪ್ರಸಾದಸಿಂಗ್ ಬಹದೂರ್, ಕೆ. ಸಿ. ಐ. ಇ. ನದಿಯಾ ಮಹಾರಾಜಾ ... ಚಂದ್ರರಾಯ ಬಹದೂರ್, ನಟ್ಟೋರ್ ಮಹಾರಾಜ ಜಗದೀಂದ್ರನಾಥರಾಯ ಬಹದೂರ್, ಬಂಗಾಳಾ ಉತ್ತರಪಾರಾ ರಾಜಾಪ್ಯಾರಿ ಮೋಹನ ಮುಖರ್ಜೀ ಬಹದೂರ್, ಎಂ. ಎ., ಬಿ. ಎಲ್., ಸಿ. ಎಸ್. ಐ. ಮತ್ತು ಕಲ್ಕತ್ತಾ ಶೋಭಾಬಜಾರ್ ರಾಜಬಹದ್ದೂರ್ ವಿನಯಕೃಷ್ಣ ಬಹದೂರ್

ಪ್ರಾಸ್ಪೆಕ್ಟಸ್, ಪ್ರಪೋಸಲ್ ಫಾರಂ, ಬೋನಸ್ ಪಟ್ಟಿಗಳನ್ನು ಅಪೇಕ್ಷಿಸತಕ್ಕವರು ಈ ವಿಳಾಸಕ್ಕೆ ಬರೆಯಬೇಕು— [15-7]

"ವಿಕ್ಟೋರಿಯಾ" ಕಂಪನಿ ಸೆಕ್ರೆಟರಿ, ಚೂಳೈ, ಮದರಾಸ್

ಚೀಫ್ ಮತ್ತು ಡಿಸ್ಟ್ರಿಕ್ಟ್ ಏಜಂಟರುಗಳು ಬೇಕು—ಧಾರಾಳವಾದ ಕಮಿಷನ್ ಮತ್ತು ಕೈ ತುಂಬಾ ಸಂಬಳ

ಬ್ರೇಸ್‌ಲೆಟ್ ವಾಚ್.



ಬೆಲೆ ರೂಪಾಯಿ 3 1 ...

Rs. 3-15-0

ಈ ಗಡಿಯಾರ ಬಹಳ ಸುಂದರವಾದದ್ದು. ಇದಕ್ಕೆ ಛಂಗೀಲದ ಗಿಲೀಟು ಮಾಡಿದೆ. ಇದು ವಿಲಾಯಿತಿಯಿಂದ ತರಿಸಲ್ಪಟ್ಟಿದೆ. ಇದನ್ನು ಹೆಂಗಸರೇ ಆಗಲಿ ಗಂಡಸರೇ ಆಗಲಿ ಆಭರಣದೋಪಾದಿಯಲ್ಲಿ ಧರಿಸಿಕೊಳ್ಳಬಹುದು. ಇದುವರೆಗೆ ಇಂಥಾ ಗಡಿಯಾರವನ್ನು ಇಷ್ಟು ಸುಲಭ ಕ್ರಯಕ್ಕೆ ಯಾರೂ ವಿಕರಿ ಮಾಡಿಲ್ಲ. ಪೂರ್ವದ ಬೆಲೆ ರೂ 9-8-0. ಈಗಿನ ಬೆಲೆ ರೂ 3-15-0. ನಮ್ಮ ಕಂಪನಿಯ ಪ್ರಖ್ಯಾತಿ ಆಗಲಿಕ್ಕೋಸ್ಕರವಾಗಿ ಇಷ್ಟು ಸುಲಭಕ್ರಯಕ್ಕೆ ಮಾರಲ್ಪಡುತ್ತದೆ.

[6-10] ವಿಳಾಸ ... ಮತ್ತು ಕಂಪನಿ,

ನಂ 39, ಜನರಲ್ ಮುತ್ಯಾಮೊದಲಿ ಬೀದಿ,
ಸಾಹುಕಾರ್ ಪೇಟೆ, ಮದ್ರಾಸ್

ಹತ್ತಿಯ ಹಿಂಡಿ! ಹತ್ತಿಯ ಹೊಟ್ಟು!

ಶಾಸ್ತ್ರಜ್ಞರ ಅಭಿಪ್ರಾಯ.

ಆ ಸಾರಾಂಶಗಳನ್ನು ಪರೀಕ್ಷಿಸಿದ್ದರಲ್ಲಿ ಇದು ದನಗಳಿಗೆ ಉತ್ಕೃಷ್ಟವಾದ ಆಹಾರವಾಗಿದೆ. ವಿಲಾಯಿತಿಯಲ್ಲಿ ತಯಾರಾಗುವಂತೆಯೇ ಶ್ರೇಷ್ಠವಾಗಿದೆ. ಹತ್ತಿಯ ಬೀಜಕ್ಕಿಂತ ಇದು ಬಹಳ ಪುಷ್ಟಿಕಾರಿ. ಇದಕ್ಕಿಂತ ಉತ್ತಮವಾಗಿ ತಯಾರುಮಾಡುವುದು ಅಸಾಧ್ಯ. —ಹಿಂದೂಸ್ತಾನದ ವ್ಯವಸಾಯದ ಇಲಾಖೆಯ ರಸಾಯನಶಾಸ್ತ್ರಜ್ಞರೂ, ಪೂಸಾ ವ್ಯವಸಾಯದ ಕಲಾಶಾಲೆಯ ಅಧ್ಯಕ್ಷರೂ ಆದ ಡಾಕ್ಟರ್ ವಾರ್ಕ್ ಎಂಬ ದೊಡ್ಡ ಪಂಡಿತರೇ ಬರೆದಿರುವರು. [50 3]

ಒಂದೇ ಭಾಗ ಹಿಂಡಿಗೆ ನಾಲ್ಕು ಭಾಗ ಹೊಟ್ಟು ಬೆರೆಯಿಸಿ ದನಗಳಿಗೂ ಕುದುರೆಗಳಿಗೂ ಕೊಡುತ್ತಾ ಬಂದರೆ ಬಲಹೆಚ್ಚಿ ದನಗಳು ಕೆಲಸಮಾಡುವುದು. ಕರೆಯುವ ಎಮ್ಮೆ ಹಸುಗಳಿಗಂತೂ ಈ ಹೊಟ್ಟು ಹಿಂಡಿಯೂ ಅತ್ಯವಶ್ಯಕ.

ಎಲ್ಲಾ ಬಗೆಯ ಪೈರುಗಳಿಗೂ, ಕಬ್ಬು, ತರಕಾರಿ, ಹೂವಿನ ಗಿಡಗಳಿಗೂ ಇದು ಕೇವಲ ಅಗ್ಗದವಾದ ಗೊಬ್ಬರ. ನಮ್ಮ ವಿಳಾಸ —

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, 1..., ಕಿಲಾರಿ ರೋಡ್, ಬೆಂಗಳೂರು ಸಿಟಿ.

ಗುಣಕಂಡ ಮೂರು ಪ್ರಖ್ಯಾತ ಔಷಧಗಳು

ನ್ಯಾಕ್ಸರ ಮಲೆನಾಡು ಜ್ವರಮಾತ್ರೆಗಳು ಶೈತ್ಯಪ್ರದೇಶದಲ್ಲಿ ಬಿಟ್ಟುಬಿಡದ ಅಥವಾ ದೀರ್ಘವಾದ ಶೀತಪಿತ್ತ ಎಲ್ಲಾ ಜಾತಿಯ ಜ್ವರಗಳನ್ನೂ ನಿಶ್ಚಿತವಾಗಿಯೂ ಸಂಪೂರ್ಣವಾಗಿಯೂ ಗುಣಮಾಡುತ್ತೆಂದು ಪ್ರಖ್ಯಾತಿ ಹೊಂದಿರುವ ಮಾತ್ರೆಗಳೇ ಇವು. ಕ್ರಯ ಡಬ್ಬಿ 1ಕ್ಕೆ ರೂಪಾಯಿ 1-0-0.

ನ್ಯಾಕ್ಸರ ಉಬ್ಬಸದ ಔಷಧ—ಉಬ್ಬಸ, ಕಠಿಣವಾದ ಕೆಮ್ಮು ಮೊದಲಾದ ಶ್ವಾಸಕೋಶದ ವ್ಯಾಧಿಗಳಿಗೂ ಶೀತದ ಕಷ್ಟಗಳಿಗೂ ಬಹಳ ಕ್ಷೇಮವಾದ ಮತ್ತು ಶೀಘ್ರವಾಗಿ ಗುಣಕೊಡುವ ಔಷಧ. ಕ್ರಯ ಬಾಟ್ಲಿ 1ಕ್ಕೆ ರೂಪಾಯಿ 1-0-0. [16-6]

ನ್ಯಾಕ್ಸರ ನಾಯಿಕೆಮ್ಮಿನ ಸಿದ್ಧೌಷಧ—ಇದು ಖಾತ್ರಿಯಾದ ನಂಬಿಕೆಯುಳ್ಳ ಮತ್ತು ಕ್ಷೇಮವಾದ ಔಷಧ. ಬೇಗನೆ ನಿಶ್ಚಿತವಾಗಿಯೂ ಸಂಪೂರ್ಣವಾದ ಗುಣಕೊಡುವಂಥಾದ್ದು. ಕ್ರಯ ಬಾಟ್ಲಿ 1ಕ್ಕೆ ರೂ 1-0-0. ಪ್ಯಾಕಿಂಗ್ ಪೋಸ್ಟೇಜ್, ವಿ. ಪಿ. ಛಾರ್ಜು ಪ್ರತ್ಯೇಕ. ಈ ಔಷಧ ಗುಣಾದಿಗಳನ್ನು ವಿವರಿಸುವ ಪತ್ರಗಳನ್ನು ಕೇಳಿದವರಿಗೆ ಬಿಟ್ಟಿ ಕಳುಹಿಸುವೆವು.

ವಿಳಾಸ —ಜೆ. ... ಬ್ರದರ್ಸ್,

117 ಪ್ರೋನಾಂಸ್ ... ಮದರಾಸ್

ಇವರಲ್ಲಿಯೂ ಸಿಕ್ಕುತ್ತವೆ—(1) ಎಡ್ವರ್ಡ್ ಕಂಪನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ (2) ... ಕಂಪನಿ, ... ಮಂಡು, (3) ... ಕಂಪನಿ, ಮಂಗಳೂರು, (4) ... ಕಂಪನಿ, ... (5) ... ಕಂಪನಿ, ಕಲ್ಲಿಕೋಟೆ

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

4-12

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ನಿಶ್ಚಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ಧಾರಣೆ ಅಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುತ್ತಾರೆ.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಧಾರಣೆಲ್ಲಾ ಪೇಟೆಗೆ ನಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಮುಖ್ಯವಾಗಿ ನಾವೇ ಸಿಂಪಿ ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೊಲೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಕಾಗದ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧—೮, ರೂ ೧—೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಹಾಪದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕಡಿಮೆಗಳ ಟೋಪಿ, ಪೂರ್ಣ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

84 41

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರತ ತರಸೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಉಳುಕು ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಬದಲಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯಿಂದ ನೋವು ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದ್ದಾರೆ. ನಿಮಗೂ ನಿಶ್ಚಿತವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ. ಅಂಚೆ ವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದವರ ಪ್ಯಾಕಿಂಗ್ ... ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಕ್ಕುತ್ತೆ. ಏಜಂಟರುಗಳು (1) ಎಸ್. ಪೀಟರ್ಸ್, 17 ವಡಮಲೈಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ ಮದರಾಸ್, (3) ಬಿ. ಎಸ್. ಕನ್ನಯ್ಯಶೆಟ್ಟಿ ರು, ಜನರಲ್ ಮರ್ಚೆಂಟ್, ತುಮಕೂರು

ನಾಲ್ಕು ವರ್ಷದ ವಾರಂಟಿ! | ಬಹು ಸುಲಭ ಕ್ರಯ

ರೈಲ್ವೇ ರಿಜಿಸ್ಟರ್ ವಾಚ್.

ಇದು ಬಹು ಬಲಿಷ್ಠವಾದ ಮತ್ತು ಮಜಬೂತಾದ ಬಹಳ ಕಾಲ ಬಾಳಿಕೆ ಬರುವಂಥಾ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ... ಉದ್ಯೋಗಸ್ಥರು, ಕೋರ್ಟಿನ ಕೆಲಸಕ್ಕೆ ಸಕಾಲಕ್ಕೆ ಹೋಗತಕ್ಕವರು, ವಕೀಲರು, ಉಪಾಧ್ಯಾಯರು, ವ್ಯಾಪಾರಸ್ಥರು, ಪರಸ್ಥಳ ಪ್ರಯಾಣಿಕರು ಆದಿಯಾಗಿ ಸರ್ವರೂ ಉಪಯೋಗಿಸುವದಕ್ಕೆ ಅನುಕೂಲವಾದದ್ದು.



ಮುಖ್ಯವಾಗಿ ಕಷ್ಟಪಟ್ಟು ಕೆಲಸಮಾಡುವ ಒರಟು ಜನಗಳಿಗೆ ಬಹು ಅನುಕೂಲವಾದದ್ದು. ತಲೆಯಲ್ಲಿ ಬಿಗಿದಿಟ್ಟು ಗಂಭೀರವಾದ ಘಂಟೆ ಮತ್ತು ಬಿಳಿ ಮುಳ್ಳುಗಳುಳ್ಳದ್ದು ಸುಂದರವಾದದ್ದು. ಬಹು ಸುಲಭ ಕ್ರಯ. [54 1]

ಇದರ ಕ್ರಯ ವಾಚ್ 1 ಕ್ಕೆ ರೂ 1-0-0

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ

... ವೆಂಕಟರಮಣ ಅಂಡ್ ಕಂಪನಿ,

ನಂ 7 ... ಅಚಾರ್ಯರ ... ಮದರಾಸು

ನೋಡಿ! ಕ್ಯಾಷ್ ಬಜಾರ್, ತಿಪಟೂರು ಸುಲಭ ಬೆಲೆ!
ವ್ಯಾಪಾರಿಗಳಿಗೆ ಸಂಬಂಧಪಟ್ಟ ಎಲ್ಲಾ ಸಾಮಾನುಗಳೂ ಉತ್ತಮವಾದ ತ್ತುಗಳ, ಗಾಜಿನ ಮತ್ತು ಎನಿಮಲ್, ಅಲ್ಯುಮಿನಿಯಂ ಪಾತ್ರೆಗಳೂ, ಸಾದಿ ಸಾಮಾನುಗಳು, ಬಿಸ್ಕತ್ ಯಾನೆ ತಿಂಡಿಸಾಮಾನು, ರವಿವರ್ಮ ಚಿತ್ರ ಬೆಳ್ಳಿಕಟ್ಟಿನ ಚಿತ್ರಗಳು, ಇನ್ನೂ ವಿವಿಧ ಸಾಮಾನುಗಳು ನಮ್ಮಲ್ಲಿ ಬಿಕರಿ
ವಿಳಾಸ —ಮೆಸರ್ಸ್ ಕೆ ತಮ್ಮಪ್ಪ ಅಂಡ್ ಕೋ, ತಿಪಟೂರು

"ವೃತ್ತಾಂತ ಪತ್ರಿಕೆ" ಚಂದಾ ನಿರ್ಣಯ.

ಊರಿನಲ್ಲೂ ಇತರ ಕಡೆಗಳಲ್ಲೂ ನಮ್ಮ ಏಜಂಟರ ಮೂಲಕ ಪಡೆಯುವವರಿಗೆ ೧ ಪ್ರತಿಗೆ ಒಂದು ವರುಷಕ್ಕೆ (ಅಡ್ವಾನ್ಸು) ರೂ ೧—೦—೦
ಯವರು ಆಫೀಸಿನಿಂದ ಅಂಚೆಯ ಮೂಲಕ ತರಿಸಿ
ಒಂದು ಪ್ರತಿಗೆ ೧೨ ತಿಂಗಳಿಗೆ ಪಾಸಲ್ ಸೇರಿ ರೂ ೧—೧೪—೦
" " ೬ " ೦—೧೫—೦
ಚಂದಾದಾರರಾಗತಕ್ಕವರು ತಮ್ಮ ಹೆಸರು ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು ಚಂದಾದಾರರು ತಮ್ಮ ವಿಳಾಸಗಳನ್ನು ಬದಲಾಯಿಸುವಾಗಲೂ, ಹಣ ಕಟ್ಟುವಾಗಲೂ ತಮಗೆ ಬರುತ್ತಾ ಇರುವ ಪತ್ರಿಕೆಯ ವಿಳಾಸದಲ್ಲಿ ಎದ ಬರೆಸಿರುವಂಥಾ ರಿಜಿಸ್ಟರ್ ನಂಬರನ್ನು ಮರೆಯದೇ ನಮೂದಿಸತಕ್ಕದ್ದು

ಪ್ರಕಟನ, ನೋಟೀಸುಗಳ ದರಗಳು

ವೃತ್ತಾಂತ ಪತ್ರಿಕೆಯಲ್ಲಿ ಏನು ಜಾಹೀರಾತುಗಳಿಗೆ ವಿವರವನ್ನು ಪ್ರಕಟಿಸ ಬೇಕಾದರೆ ಒಂದು ವಾರಕ್ಕೆ ಒಂದು ರೂಪಾಯಿ ಛಾರ್ಜು ಬೀಳುವುದು, ಪ್ರತಿ ಒಂದು ಅಂಗುಲದ ಪ್ರಮಾಣದ ಸ್ಥಳಕ್ಕೆ ಒಂದು ಗಲಕ್ಕೆ ರೂಪಾಯಿ ಕೊಡಬೇಕು ಹೆಚ್ಚು ಸ್ಥಳವನ್ನು ಅಪೇಕ್ಷಿಸುವವರು ದರಗಳನ್ನು ಮ್ಯಾನೇಜರಿಗೆ ಬರೆದು ತಿಳಿದುಕೊಳ್ಳಬಹುದು
ವಿಳಾಸ— ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು

ಕುಂತಲಾನಂದ ತೈಲವು

147 2o

ಹಿಂದುಸ್ಥಾನದ ಹೀರ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗ ಬಹು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತ

ಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮ ಗುಣಗ ಳನ್ನು ಶ್ಲಾಘಿಸಿರುವರು ಈ ತೈಲವು ಕೂದ ಲನ್ನು ಚೆನ್ನಾಗಿಯೂ ಕಪ್ಪಾಗಿಯೂ ಬೆ ಳೆಯ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗ ಲಾಡಿಸುತ್ತದೆ ಸುವಾಸನೆಯನ್ನು ಹರಡು ವುದು ಇದಕ್ಕೆ ಸಮಾನವಾದದ್ದು ಬೇರೊಂದಿ ಲ್ಲ ಸುವಾಸನೆಯೂ ಸುವಾಸನೆಯೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗ ಲಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ ೩ ಬಾಟಲುಗ ಳಿಗೆ ರೂಪಾಯಿ 10 ಆಣೆ ಅಂಚೆ ಪಾಸಲು ಬೇರೆ ನಮ್ಮ ದೊಡ್ಡ ಪಟ್ಟಿ ಉಚಿತ ಕೇಳಿ ನೋಡಿ

ವಿಳಾಸ —ಬಿ ಎಸ್ ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

ಶ್ರೀ ಕಥೆ! ಅಪೂರ್ವಗ್ರಂಥ!! ಎಲ್ಲ ಪ್ರತಿಗಳು!!!

ಪ್ರತಾಪಕಂಠೀರವಚರಿತ್ರೆ

ಇದರಲ್ಲಿ (1) ಮನುಷ್ಯನಿಗೆ ದೈವಸಹಾಯ ಉಂಟಾಗುವುದರಿಂದ ಅದೃಷ್ಟಗಳ ತೊಂದರೆ ಬಂದರೂ ತೊಲಗಿಹೋಗುತ್ತವೆ ಎಂಬ ನೀತಿ, ಸ್ತ್ರೀಧರ್ಮ, ಬುದ್ಧಿಶಕ್ತಿ, ಸ್ತ್ರೀಯುಕ್ತಿ-ಸಾಹಸ ಚಾತುರ್ಯ (4) ಚಿತ್ರವಾಗಿಯೂ ಚಮತ್ಕಾರದಿಂದಲೂ ಕೂಡಿದ ಕಥಾ ಸಂದರ್ಭಗಳು, ಹಾಸ್ಯ ರಸ, ಅಲಂಕಾರ ವರ್ಣನೆಗಳು, (5) ಮನುಷ್ಯಯತ್ನಕ್ಕೆ ವಿನಾದ ದೈವ ಸಹಾಯಕ್ಕೆ ತಕ್ಕ ನಿದರ್ಶನಗಳು (6) ಎಲ್ಲರೂ ಓದಿ ತಿಳಿದುಕೊಳ್ಳ ಸುಲಭವಾದ ಶೈಲಿ, (7) ಸರಸವಾಗಿ ಒಂದಕ್ಕೊಂದು ಕೂಡಿಸಿ ಮನಸ್ಸನ್ನು ಎಳೆಯುವ ಕಥಾ ಭಾಗಗಳು, ಇವು ಕೂಡಿವೆ.

ಹಿಡಿಯುವವರಿಂದ ಓದುವುದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡಲಿಕ್ಕೆ ಮನಸ್ಸಾಗುವುದಿಲ್ಲ ಸುಲಭವಾಗಿ ಹೇಳುವುದರಿಂದೇನು? ಓದಿ ನೋಡಿದರೆ ಇದರ ಆದರವು ತಾನಾಗಿ ಗೊತ್ತಾಗುವದು

ಕ್ರಯ —೧ನೇ ಭಾಗ ೬ ಆಣೆ, ೨ನೇ ಭಾಗ ೧೦ ಆಣೆ,ಒಟ್ಟು ೧೦ ರೂಪಾಯಿ ಟಪಾಲು ಖರ್ಚು ಬೇರೆ [10-1]

ವಿಳಾಸ -ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಮೈಸೂರು ಸೀಮೆಯಲ್ಲಿ ಪ್ಲೇಗ್ ಕಾಲರಾ ಸ್ಥಿತಿ

೨೫—೨—1913 ರಿಂದ ೭—೩—1913 ರ ವರೆಗೆ

ಸ್ಥಳ		ಪ್ಲೇಗ್		ಕಾಲರಾ	
		ಬಂದ ದು	ಸತ್ತ ದ್ದು	ಬಂದ ದ್ದು	ಸತ್ತ ದ್ದು
ಬೆಂಗಳೂರು	ಪಟ್ಟಣ	8	1	0	0
ಮೈಸೂರು	"	0	0	0	0
ಬೆಂಗಳೂರು ಡಿಸ್ಟ್ರಿಕ್ಟು		11	12	16	9
ಮೈಸೂರು	"	24	20	206	192
ಕೋಲಾರ	"	7	1	10	6
ಕೋಲಾರ್ ಚಿನ್ನದ ಗಣಿಗಳು		11	1	0	0
ತುಮಕೂರು ಡಿಸ್ಟ್ರಿಕ್ಟು		0	1	0	0
ಹಾಸನ	"	0	0	11	6
ಚಿತ್ರದುರ್ಗ	"	0	0	0	0
ಕಡೂರ್	"	17	15	0	0
ಶಿವಮೊಗ್ಗ	"	11	9	0	0
	ಜುಮ್ಲಾ	90	60	249	213

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೆ ಶಿಶಿರಋತೌ ಫಾಲ್ಗುಣ ಶುದ್ಧ ಚತುರ್ದಶಿ ಶುಕ್ರವಾರದಿಂದ ಫಾಲ್ಗುಣ ಬಹುಳ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ
1913 ನೇ ಮಾರ್ಚಿ.

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸ ವಾಸ ತೇದಿ
21	ಶುಕ್ರ	*	ಚತುರ್ದಶಿ	33 57	ಪುಬ್ಬ	37-1	9
22	ಶನಿ	"	ಪೌರ್ಣಮಿ	29-2	ಉತ್ತರ	13 2	10
23	ಭಾನು	§	ಪಾಡ್ಯಮಿ	22 16	ಹಸ್ತ	29-27	11
24	ಸೋಮ	†	ಬಿದಿಗೆ	17 10	ಚಿತ್ತ	26-25	12
25	ಮಂಗಳ		ತದಿಗೆ	1 11	ಸ್ವಾತಿ	24-14	13
26	ಬುಧ		ಚೌತಿ	10 23	ವಿಶಾಖ	23-55	14
27	ಗುರು	‡	ಪಂಚಮಿ	8-14	ಅನುರಾಧ	22-16	15

* ಮೇಲುಕೋಟೆಯಲ್ಲಿ ಚಲುವರಾಯಸ್ವಾಮಿ ರಥ, ನರಸೀಪುರದಲ್ಲಿ ಪ್ರಹ್ಲಾದೋತ್ಸವ ,, ಪೂರ್ಣಿಮಾತಿಥಿ, ಕಾಮದಹನ, ಹೋಳಿಹಬ್ಬ, ಪ್ರಸನ್ನನಂಜುಂಡೇಶ್ವರ ರಥ, ಕೃಷ್ಣಾಜಮ್ಮಣ್ಣಿಯವರ ಸೋಕುಮಾರತಿ ವರ್ಧಂತಿ, ಚಂದ್ರ ಗ್ರಹಣ § ತದಿಷ್ಟಯುಂ, ಚಲುವರಾಯಜಯಂತಿ, ನರಸೀಪುರದಲ್ಲಿ ಗುಂಜಾ ನರಸಿಂಹಸ್ವಾಮಿ ರಥ, ಮಳೆ ನಕ್ಷತ್ರ —ಉತ್ತರಾಭಾದ್ರ ೩ನೇ ಪಾದ † ತೃತೀಯಾ ತಿಥಿ, ಮೇಲುಕೋಟೆಯಲ್ಲಿ ಮಹಾಭಿಷೇಕ ‡ ಸಂಕಟಹರ ಚತುರ್ಥಿ, ಕಳಲೆ ಲಕ್ಷ್ಮೀಕಾಂತಸ್ವಾಮಿ ರಥ ‡ ಬಟವಾಡಿಯಲ್ಲಿ ಮಹಾಬಲೇಶ್ವರ ರಥ ಮಳೆ ನಕ್ಷತ್ರ—ಉತ್ತರಾಭಾದ್ರ ೪ನೇ ಪಾದ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ (ಹೊಸದು) ರೂ	೧೫ ೦ ೦	೧೭-೮-೦
ಕೆಂಬೂತ ಅಕ್ಕಿ ಅವಲ್ ,	೧೫ ೨ ೦	೧೨ ೮-೦
,, ಹಳೆಯ ,	೧೫-೦-೦	೧೭ ೦-೦
ಬೀಗ್ವಾಗಿ ಅಕ್ಕಿ	೧೬-೮ ೦	೧೭-೬-೦
ಸಣ್ಣ ಅವಲ್ .	೧೭-೮-೦	೧೨ ೮-
,, ಹಳೆಯ ,,	೧೭ ೦ ೦	೧೭ ೮ ೦
ಕೆಂಪು ಜೋಳ ಜವಾರ್ ಪಲ್ಲಾ ೧ಕ್ಕೆ .	೧ -೦-೦	೧೪ ೨
,, ದುರ್ಗು ,,	೧೩- ೦	೧೩-೨
ಮೈಲ್ ರಾಗಿ ಪಲ್ಲಾ ೧ಕ್ಕೆ	೭ ೦-೦	೫-೦ ೦
ಕಾಂಡ್ರಾಗಿ ,,	೬ ೦	೬-೦ ೩
ಜೋಳ ,,	೬ ೧೨ ೦	೭ ೬-೦
ಹುರುಳಿ ಪಲ್ಲಾ ೧ಕ್ಕೆ	೧೦ ೪-೦	೧೪ ೧೨-೦
ಬೇಳೆ ಅವರೆ ,,	೦ ೪-೦	೧೧ ೦-೦
ಹೆಸರು ,,	೧೭ ೦-೦	೧೪ ೦-೦
ಉದ್ದು	೧೬-೮-೦	೧೮ ೦-೦
ತೊಗರಿ ,,	೧೦-೦-೦	೧೨ ೦ ೦
ಎಳ್ಳು ಸೇರು ೧೨ಕ್ಕೆ	೩-೦ ೦	೩೪ ೦ ೦
ಹುರುಳಿ ಪಲ್ಲಾ ೧ಕ್ಕೆ	೬-೦ ೦	೬-೦ ೦
ಹವಳು ೧೨ ಸೇರಿಗೆ	೧೨-೮-೦	೧೬-೦-೦
ಸಿಗೇಕಾಯಿ ಮಣ ೧ಕ್ಕೆ	೨-೬ ೦	೩-೮-೦
ಶೀಗೆಸೊಪ್ಪು ,,	೬-೦-೦	೩ ೪-೦
,, ಹಳೆಯ	೩ ೦-೦	೧-೮-೦
ಬೆಲ್ಲ ಸಕ್ಕರೆ ಅಚ್ಚು ೧೦೦ಕ್ಕೆ	೪-೮-೦	ಮಣ ೫ ೮-೦
ಒಳ್ಳೆ ಮಣ ೧ಕ್ಕೆ	೬-೨-೦	೬-೬-೦
ಹರಳೆಣ್ಣೆ ,, ,,	೫ ೧೨-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫-೪ ೦	೫-೪-೦
ಉಪ್ಪು ,, ,,	೫-೮-೦	೬-೦-೦
ಮೆಣಸಿನ ಹಣ್ಣು ಮಣ ೧ಕ್ಕೆ	೧-೮ ೦	೧-೬-೦
,, ಹಳೆದು ,,	೧-೦-೦	೦ ೧೪-೦
ತುಪ್ಪ ಮಣ ೧ಕ್ಕೆ	೧೯ ೦ ೦	೧೯-೦-೦
ಸೀಮೆಸುಣ್ಣ ಪಟ್ಟಿ ೧ಕ್ಕೆ	೫-೧೧-೦	೫ ೦-೦
ತೆಂಗಿನಕಾಯಿ ೧೦೦ಕ್ಕೆ	೬ ೪-೦	೬ ೦-೦
ಅಲಸಂದೆ ಮಣ ೧ಕ್ಕೆ	೧-೭-೦	೧-೦-೦
ಅಡಕೆ ಮಣ ೧ಕ್ಕೆ	೦ ೧೨ ೦	೧-೮ ೦
ಚಿನ್ನ (ಪವನ್) ಬೆಂಡು	೧೫ ೬-೦	೧೫ ೮ ೦
,, ,, ಸಾವರಿನ್	೧೨ ೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೨ ೩-೦	೨೪-೦ ೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೭೧-೦ ೦	೮೧-೨-೦

ಮಲೇರಿಯಾಜ್ವರ (ಚಳಿಜ್ವರ) ಮತ್ತು ಅದರ ನಿವಾರಣೋಪಾಯಗಳು.

[ಕಳೆದ ವಾರದ ಶೇಷ]

II ಜ್ವರವನ್ನು ನಿರ್ಮೂಲವಾಡುವುದು ಈ ವ್ಯಾಧಿಯೇ ಇಲ್ಲದಂತೆ ಮಾಡಬೇಕಾದರೆ ನಮ್ಮ ಮನೆಗಳಲ್ಲಿ ಕಾದುಕುರುವ ಸೊಳ್ಳೆಗಳೇ ಇಲ್ಲದಂತೆ ಮಾಡಬೇಕು ಇದಕ್ಕಾಗಿ (1) ಸೊಳ್ಳೆಗಳು ವೃದ್ಧಿಹೊಂದುವ ವಿಧಾನ ಮತ್ತು ಇವುಗಳ ನಡೆವಳಿಕೆ ಮತ್ತು (2) ಇವುಗಳನ್ನು ನಾಶಮಾಡುವಕ್ರಮ, ಇವುಗಳನ್ನು ತಿಳಿಯಬೇಕು

(1) ಸೊಳ್ಳೆಗಳು ವೃದ್ಧಿಹೊಂದುವ ವಿಧಾನ ಮತ್ತು ಇವುಗಳ ನಡೆವಳಿಕೆ — ಸೊಳ್ಳೆಗಳಲ್ಲಿ ಅನೇಕ ಜಾತಿಗಳುಂಟು ನಮ್ಮ ದೇಶದಲ್ಲಿ ಎರಡು ಜಾತಿಗಳು



ಮಾತ್ರ ಕಂಡುಬರುವವು ಒಂದು ಬಗೆಗೆ "ಕ್ಯೂಲೆಕ್ಸ್" ಎಂತಲೂ, ಇನ್ನೊಂದು ಬಗೆಗೆ "ಅನಾಫಿಲಿ" ಎಂತಲೂ ಹೆಸರು ಈ ಎರಡು ಬಗೆಗಳಲ್ಲಿಯೂ ಹೆಣ್ಣು ಗಂಡು ಗಳಿರುವವು ಅನಾಫಿಲಿ ಬಗೆಯ ಹೆಣ್ಣು ಸೊಳ್ಳೆಗಳು ಮಾತ್ರ ಈ ಜ್ವರವನ್ನು ಹರಡತಕ್ಕ ಶಕ್ತಿಯನ್ನುಳ್ಳದ್ದಾಗಿರುವವು ಈ ಎರಡು ಬಗೆಯ ಸೊಳ್ಳೆಗಳನ್ನೂ ಗುರ್ತಿಸಬಹುದು ಇವು ಎಡಗಡೆ ಪರದಿಂದ ಗೊತ್ತಾಗುತ್ತವೆ ಮೇಲಿನ ಸೊಳ್ಳೆಯಾಗಿ "ಕ್ಯೂಲೆಕ್ಸ್" ಎಂದೂ, ಕೆಳಗಿನದಕ್ಕೆ "ಅನಾಫಿಲಿಸ್" ಎಂದೂ ಹೆಸರು

ಉಭಯ ಜಾತಿಯ ಹೆಣ್ಣು ಸೊಳ್ಳೆಗಳು ಸ್ವಲ್ಪ ದಿವಸಗಳಿಗೊಂದಾವರ್ತಿ ನೀರಿನಮೇಲೆ ನೂರಾರು ಬಹು ಸೂಕ್ಷ್ಮವಾದ ಮೊಟ್ಟೆಗಳನ್ನಿಡುವವು ಈ ಮೊಟ್ಟೆಗಳು ಸೊಳ್ಳೆಯ ಮೊದಲನೆಯ ಅವಸ್ಥೆ ೨-೩ ದಿನಗಳಲ್ಲಿ ಒಡೆದು ಸಣ್ಣ ಕ್ರಿಮಿಗಳಾಗುವವು ಇವುಗಳಿಗೆ "ಲಾರ್ವಿ" ಎಂದು ಹೆಸರು ಇವು ನೀರಿನಲ್ಲಿರುವ ಕಶ್ಮಲಗಳನ್ನು ತಿಂದು ಜೀವಿಸುವವು ಇವು ಬದುಕಿರಬೇಕಾದರೆ ಗಾಳಿಯು ಅವಶ್ಯಕವು ಆದುದರಿಂದ ಇವು ಬಹಳ ಕಾಲ ನೀರಿನಮೇಲೆ ತೇಲಾಡುತ್ತಲಾಗಲೀ ಅಥವ ಸಮೀಪದ ನೀರಿನ ಮೇಲಕ್ಕೆ ಬರುತ್ತಲಾಗಲೀ ಇರುವವು ಇವು ಸೊಳ್ಳೆಯ ೭ ನೆಯ ಅವಸ್ಥೆ ಇವು ೫ ರಿಂದ 20 ದಿವಸಗಳಲ್ಲಿ ಮತ್ತೊಂದು ಆಕಾರವನ್ನು ಧರಿಸುವವು ಈ ಕಾಲಗಳಲ್ಲಿ ಇವುಗಳ ಮೇಲೆ ಒಂದು ತೆಳುವಾದ ಪರೆಯು ಬೆಳೆಯುವುದು ಇವುಗಳಿಗೆ "ಪ್ಯೂಪ" ಎಂದು ಹೆಸರು ಒಂದೆರಡು ದಿವಸಗಳೊಳಗಾಗಿ ಇವುಗಳ ಮೇಲಿರುವ ಪರೆಯು ಒಡೆದು ಮರಿಸೊಳ್ಳೆಯು ಹೊರಗೆಬಂದು ಹಾರಿಹೋಗುವುದು ಈ ಮರಿಸೊಳ್ಳೆಯು ೮-10 ದಿವಸಗಳೊಳಗಾಗಿ ಮೊಟ್ಟೆಗಳನ್ನಿಡಬಲ್ಲದು ಈ ರೀತಿ ಒಂದು ಹೆಣ್ಣು ಸೊಳ್ಳೆಯು ಒಂದೇ ಬೇಸಗೆಯ ಕಾಲದಲ್ಲಿ ಅನೇಕ ಲಕ್ಷ ಸೊಳ್ಳೆಗಳನ್ನುಂಟುಮಾಡಬಲ್ಲದು ಬೇಸಗೆಕಾಲದಲ್ಲಿ ಸಂತತಿಯು ವೃದ್ಧಿಯಾಗುವುದು ಕಡಮೆ ಎಡಗಡೆ ಇರುವ ಚಿತ್ರ ಕಾಗ

ನಿರುವ ಎರಡು ಚಿತ್ರಗಳೂ ಎರಡು ಜಾತಿಯ ಸೊಳ್ಳೆಗಳು ಇರುವ ರೀತಿಗಳಾಗಿವೆ

ಸೊಳ್ಳೆಗಳು ಸಾಧಾರಣವಾಗಿ ಹಗಲಿನಲ್ಲಿ ಮರ, ಪೊದೆ, ಇವುಗಳಲ್ಲಿ ಕಾಲಕಳೆದು ರಾತ್ರಿಯಾಗುತ್ತಲೇ ಆಹಾರಕ್ಕಾಗಿ ಮನೆಗಳಿಗೆ ಪ್ರವೇಶಿಸುವುವು ಮತ್ತೆ ಕೆಲವು ಮನೆಗಳಲ್ಲಿ ಕತ್ತಲಾದ ಪ್ರದೇಶಗಳು, ಗೋಡೆಯ ಮೂಲೆಗಳು, ಬಟ್ಟೆಗಳಲ್ಲಾಗಲಿ ಇರುತ್ತವೆ ರಾತ್ರಿಯಾಗುತ್ತಲೇ ಮನುಷ್ಯರನ್ನು ಕಚ್ಚುವವು ಇವು ಯಾವಕಾರಣದಲ್ಲಿ ಜೀವಿಸುವುವೋ ಆ ಸ್ಥಳದ ಸುತ್ತಲೂ ಪ್ರದೇಶವೆಲ್ಲಾ ಬಲವಕ್ಕೆ ಅಪೇಕ್ಷಿಸುವವು ಮೈಲಿಗಿಂತ ಹೆಚ್ಚು ದೂರ ಹೋಗಲಾರವು ಇವು ಗಾಳಿಯಿಂದ ಸೊಳ್ಳೆ ಮರಿಗಳ ಆಕ ತಿಳಿಯಾಗುತ್ತವೆ

ಸೊಳ್ಳೆಗಳು ಮೊಟ್ಟೆಗಳನ್ನಿಡುವ ಸ್ಥಳ —ಸೊಳ್ಳೆಗಳು ನಮ್ಮ ಮನೆಗಳ ಸಮೀಪದಲ್ಲಿ ನಾವು ಉಪಯೋಗಿಸುವ ಬಾವಿಗಳ, ಹೊಂಡಗಳ ಅಥವ ಗುಂಡಿಗಳಲ್ಲಿಯೂ, ಕೆರೆಯ ಮತ್ತು ನದಿಯ ಅಂಚಿನಲ್ಲಿರುವ ಸಣ್ಣ ಗುಂಡಿಗಳಲ್ಲಿಯೂ, ನೀರುನಿಂತಿರುವ ಚರಂಡಿಗಳಲ್ಲಿಯೂ, ಮರದ ಪೊಟರೆಗಳಲ್ಲಿರುವ ನೀರಿನಲ್ಲಿಯೂ, ಬೇಗನೆ ಹರಿದುಹೋಗದೆ ನಿಂತಿರುವ ನೀರಿನಲ್ಲಿಯೂ, ಒಡೆದ ಮಡಕೆಗಳಲ್ಲಿಯೂ, ಬಿದಿರಿನ ಕೊಳವೆಗಳಲ್ಲಿ ಸಂಗ್ರಹವಾಗಿರುವ ನೀರಿನಲ್ಲಿಯೂ, ಹಳೇ ಡಬ್ಬಿಗಳಲ್ಲಿಯೂ ಉಪಯೋಗಿಸದೆ ಇರುವ ಸೇದುವ ಬಾವಿಗಳಲ್ಲಿಯೂ, ಒಡೆದುಹೋದ ದೊಡ್ಡ ಮಡಕೆ ನೀರಿನ ತೊಟ್ಟಿಗಳಲ್ಲಿ ಇರಬಹುದಾದ ನೀರಿನಲ್ಲಿಯೂ, ಇನ್ನೂ ಅನೇಕ ಸ್ಥಳಗಳಲ್ಲಿ ಮೊಟ್ಟೆಗಳನ್ನಿಡುವವು

(2) ಸೊಳ್ಳೆಗಳನ್ನು ನಾಶಮಾಡುವ ವಿಧಾನ —ಸೊಳ್ಳೆಗಳು ಮೊಟ್ಟೆಗಳನ್ನಿಡುವುದಕ್ಕೆ ಅನುಕೂಲವಾದ ಪ್ರದೇಶಗಳು ದೊರೆಯದಂತೆ ಹಳ್ಳ ಕೊಳ್ಳ ಗುಂಡಿಗಳನ್ನೆಲ್ಲ ಮುಚ್ಚಬೇಕು ಇದು ಸಾಧ್ಯವಲ್ಲದಿದ್ದರೆ ಬಾವಿಗಳನ್ನು ಹೊಡೆದು ನೀರನ್ನು ಹೊರಡಿಸಬೇಕು ಇದೂ ಸಾಧ್ಯವಿಲ್ಲದಿದ್ದರೆ ವಾರಕ್ಕೊಂದಾವರ್ತಿ ಕಿರಸಿಣದ ಎಣ್ಣೆಯನ್ನು ನೀರಿನಮೇಲೆ ಚೆಲ್ಲಬೇಕು ಇದನ್ನು ಸುಲಭವಾಗಿ ಮಾಡುವುದು ಹೇಗೆಂದರೆ—ಒಂದು ಕೋಲಿನ ಕೊನೆಗೆ ಬಟ್ಟೆಯನ್ನು ಕಟ್ಟಿ ಸೀಮೆ ಎಣ್ಣೆ ಕೆರೋಸಿನ್ ಎಣ್ಣೆ ಅಥವ ಸೀಮೆಎಣ್ಣೆಯಲ್ಲಿ ಅದ್ದಿ ನೀರಿನಮೇಲೆ ಪಸರಿಸಬೇಕು ಹೀಗೆ ಮಾಡುವುದರಿಂದ ಆ ನೀರಿನ ಮೇಲೆ ತೆಳುವಾದ ಎಣ್ಣೆಯ ಪದರು ಉಂಟಾಗಿ ಇದರಿಂದ ನೀರಿನಮೇಲೆ ತೇಲಾಡುವ ಲಾರ್ವಿಗಳಿಗೆ ಗಾಳಿಯು ದೊರೆಯದೆ ಅವು ಸಾಯುವುವು

III ಜ್ವರವು ಬಾರದಂತೆ ತಡೆಯುವುದು —ಮಲೇರಿಯಾ ಜ್ವರವು ಬಾರದಂತೆ ತಡೆಯುವುದಕ್ಕಾಗಿ ಸೊಳ್ಳೆಗಳು ನಮ್ಮನ್ನು ಕಚ್ಚದಂತೆ ಮಾಡಿಕೊಳ್ಳಬೇಕು ಸಾಧಾರಣವಾಗಿ ಈ ಸೊಳ್ಳೆಗಳ ಕಾಟವು ರಾತ್ರಿವೇಳೆಯೇ ಅದರಿಂದ ಸೊಳ್ಳೆಗಳು ನುಸಿಯದಕ್ಕೆ ಬಾರದಂತೆ ಒತ್ತಿದ ಬಲೆಯನ್ನು ಹಾಸಿಗೆಗಳಿಗೆ ಕಟ್ಟಬೇಕು ಇದಲ್ಲದೆ ಸಾಯಂಕಾಲದ ವೇಳೆ ಇವುಗಳನ್ನು ಮುಚ್ಚಬೇಕು ಮಲಗುವ ಕೋಣೆಯಲ್ಲಿ ಸೊಳ್ಳೆಯ ತೆರೆಯನ್ನು ಕಟ್ಟಿಕೊಂಡು ಮಲಗಬೇಕು ಬರಿ ಮೈಯಲ್ಲಿ ಮಲಗದೆ ಬಟ್ಟೆಗಳನ್ನು ಹಾಕಿಕೊಂಡು ಮಲಗಬೇಕು

ಅನಾರೋಗ್ಯ ಪ್ರದೇಶದಲ್ಲಿರುವವರು ನಮ ಕ್ವಯನಾ ದಿನವನ್ನು ಹೀಗೆ ಹೇಳುವ ಪ್ರಮಾಣದಲ್ಲಿ ಒಂದು ನಿಯಮದ ಪ್ರಕಾರ ಸೇವಿಸುವುದರಿಂದ ಜ್ವರವು ಬಾರದಂತೆ ತಡೆಯಬಹುದು (1) 5 ಗ್ರೇನ್ ಕ್ವಯನಾವನ್ನು ಪ್ರತಿದಿನವೂ ಪ್ರಾತಃಕಾಲ ಸೇವಿಸುವುದು (2) 10 ಗ್ರೇನ್ ಕ್ವಯನಾವನ್ನು ವಾರಕ್ಕೆ 1 ಆವರ್ತಿ ಅಥವ ವಾರಕ್ಕೆ 2 ಆವರ್ತಿ ತೆಗೆದುಕೊಳ್ಳುವುದು (3) 10-11 ದಿವಸಗಳಿಗೊಂದಾವರ್ತಿ ಒಂದೇ ಸಲಕ್ಕೆ 15 ಗ್ರೇನ್ ಕ್ವಯನಾವನ್ನು ತೆಗೆದುಕೊಳ್ಳುವುದು

ಆದುದರಿಂದ ಮಲೇರಿಯಾ ಪ್ರಾಂತ್ಯಗಳಲ್ಲಿರುವವರು ಆರೋಗ್ಯವಾಗಿರಬೇಕಾದರೆ—(1) ಮನೆಗೆ 200 ಗಜಗಳ ಸುತ್ತಲೂ ನೀರು ನಿಲ್ಲದಂತೆ ಮಾಡಬೇಕು, (2) ಸೊಳ್ಳೆಗಳ ವೃದ್ಧಿ ಹೊಂದದಂತೆ ಇರುವುದಕ್ಕೆ ಹಿಂದೆ ಹೇಳಿದ ಸಾಧನಗಳನ್ನು ಆಚರಣೆಯಲ್ಲಿ ತರಬೇಕು (3) ಸೊಳ್ಳೆಗಳು ಕಚ್ಚದಂತೆ ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಳ್ಳಬೇಕು, (4) ಕ್ವಯನಾ ವನ್ನು ಸಾಕಷ್ಟು ದಲ್ಲಿ ತೆಗೆದುಕೊಳ್ಳುವುದನ್ನು ಅಭ್ಯಾಸಮಾಡಿಕೊಳ್ಳಬೇಕು, (5) ವಾರದೊಳಗೆಯಲ್ಲಿ ಹಿಡಿದ ಜ್ವರವಿದ್ದರೂ, ಬಾಲಕರನ್ನೂ ಪರಿಶೀಲಿಸಿ ಸೊಳ್ಳೆಗಳ ಕಾಟ ಇದ್ದವನ್ನು ಇರುವ ಸಂಭವವನ್ನು ತಿಳಿಯುವಂತೆ ಸಕ್ಕ ಅನುಕೂಲಗಳನ್ನು ಕಲ್ಪಿಸಬೇಕು

ಎಂ ಗೋಪಾಲರಾವ್, ಸ್ಯಾನಿಟರಿ ಆಫೀಸರ್, ಮೈಸೂರು

ಈಗತಾನೇ ಕಂಡು ಹಿಡಿದಂಥಾ

ಬಯೊಸ್ಕೋಪು.

ಮನೆಗಳೊಳಗೂ, ಜನಾನಿಯೊಳಗೂ ಮಕ್ಕಳು ಕೂಡ ನಡಿಸಿ ತೋರಿಸಬಹುದಾದಷ್ಟು ಸುಲಭವಾಗಿ ರಚಿಸಲ್ಪಟ್ಟಿದೆ. ಅದರಲ್ಲೇ ವಿದ್ಯುಚ್ಛಕ್ತಿಯುಂಟು. ಬೊಂಬಾಯಿ ೮೪ ಹಾರ್ನಬಿ ರೋಡಿನಲ್ಲಿರುವ ಮಿ॥ ಎಸ್. ಇ. ಹೂಪ್ ರವರು ಇದಕ್ಕಾಗಿಯೇ ಮೈಸೂರಿಗೆ ಬಂದು, ತಾ. ೨೩ ಮತ್ತು ೨೪ ನೇ ಶನಿವಾರ, ಭಾನುವಾರ ಗಾರ್ಡನ್ ಹೊಟೇಲಿನಲ್ಲಿ ಇಳಿಯುತ್ತಾರೆ. ಬೇಕಾದವರು ಆ ಎರಡು ದಿನವೂ ಹೊಟೇಲಿನಲ್ಲಿ ಈ ನವೀನ ಬಯೊಸ್ಕೋಪನ್ನು ಕಣ್ಣಾರ ನೋಡಿ ಅದರ ರಚನೆಯನ್ನು ತಿಳಿಯಬಹುದು. ಅವರು ಬಂದವರಿಗೆಲ್ಲ ಅದನ್ನು ತೋರಿಸಿ ವಿವರಿಸುತ್ತಾರೆ. ಎಲ್ಲರೂ ತಪ್ಪದೆ ಹೊಟೇಲಿಗೆ ಬಂದು ನೋಡಬೇಕು. 58-1

ವೃತ್ತಾಂತ ಪತ್ರಿಕೆ.

— o —

ಸ್ಕ ೧೯೧೨ ನೇ ಇಸವಿ ಮಾರ್ಚಿ ತಾ ೨೦ ನೇ ಗುರುವಾರ

ಮೈಸೂರು ಸಂಪದಭಿವೃದ್ಧಿ ಸಂಘವು

ಮೈಸೂರು ಗವರ್ನಮೆಂಟಿನವರು ಸಂಪದಭಿವೃದ್ಧಿ ಸಮಾಜಕ್ಕೆ ಪ್ರತ್ಯೇಕವಾದ ಒಬ್ಬ ಸೆಕ್ರೆಟರಿಯನ್ನು ನೇಮಕ ಮಾಡಿರುವಂತೆ ಹುಕುಂ ಕೊಟ್ಟಿದ್ದಾರೆ. ಈ ಸಮಾಜದ ಕಾರ್ಯಗಳನ್ನೆಲ್ಲಾ ವಿಶೇಷವಾಗಿ ನಡಿಸಬೇಕೆಂಬುವುದೇ ಈ ಹುಕುಮಿನ ಉದ್ದೇಶವಾಗಿರೋಣದರಿಂದ ಈ ಏರ್ಪಾಡು ಚೆನ್ನಾಗಿದೆ ಎಂದು ಒಪ್ಪಿಕೊಳ್ಳುತ್ತೇವೆ. ಈ ಸೆಕ್ರೆಟರಿ ಕೆಲಸಕ್ಕೆ ಡೆಪ್ಯುಟಿ ಕಮಿಷನರ ದರ್ಜೆಯಲ್ಲಿರುವ ಅಧಿಕಾರಿಯು ಅವಶ್ಯವೆಂದು ಸರ್ಕಾರದವರು ತುಂಕೂರು ಡೆಪ್ಯುಟಿ ಕಮಿಷನರಾಗಿ ಕೆಲಸ ಮಾಡುತ್ತಿದ್ದ ಮಿ॥ ಸಿ. ಎಸ್. ಬಾಲಸುಂದರಂ ಅಯ್ಯರವರನ್ನು ಮೂರು ವರುಷದ ವರೆಗೆ ನೇಮಕ ಮಾಡಿರುತ್ತಾರೆ. ಮತ್ತು ಇದುವರೆಗೆ ಈ ಸಮಾಜದ ವ್ಯವಸಾಯ ಶಾಖೆಗೆ ಸೆಕ್ರೆಟರಿಯಾಗಿದ್ದ ಮಿ॥ ಕೆ ಸುಬ್ಬರಾಯರನ್ನು ಅಸಿಸ್ಟೆಂಟ್ ಸೆಕ್ರೆಟರಿಯಾಗಿ ನೌಕರರು ಮಾಡಿ ಇವರಿಗೆ ಅ॥ ಕಮಿಷನರ ಹುದ್ದೆಯ ಸಂಬಳವನ್ನೂ ೧೦೦ ರೂಪಾಯಿ ಅಲೋಯನ್ಸನ್ನೂ ಸ್ಯಾಂಕ್ಷನ್ ಮಾಡಿದಾರೆ.

ಸಂಪದಭಿವೃದ್ಧಿ ಸಮಾಜದ ಸೆಕ್ರೆಟರಿಯವರು ಗವರ್ನಮೆಂಟಿನ ಸೆಕ್ರೆಟರಿಯಾಗಿರುತ್ತಾರಾದ್ದರಿಂದ ವಿದ್ಯಾಭ್ಯಾಸ, ವ್ಯವಸಾಯ, ವ್ಯಾಪಾರ ಮತ್ತೂ ಕೈಗಾರಿಕೆ ಎಂಬೀ ಮೂರು ಶಾಖೆಗಳ ಸಲಹೆಗಳನ್ನೆಲ್ಲಾ ಅವರೇ ನೋಡಿ ವ್ಯವಹರಿಸತಕ್ಕವರಾಗಿದಾರೆ. ಇವರ ಆಫೀಸ್ ಸಿಬ್ಬಂದಿಗೆ ಬೇಕಾಗುವ ನೌಕರರುಗಳನ್ನು ಗವರ್ನಮೆಂಟ್ ಜನರಲ್ ಮತ್ತೂ ರೆವಿನ್ಯೂ ಸೆಕ್ರೆಟರಿಯವರು ಆರಿಸಿ ಕಳುಹಿಸಿಕೊಡಬೇಕಾಗಿದೆ.

ಪ್ರಜೆಗಳ ಸ್ಥಿತಿಗತಿಯನ್ನೂ ಸಂಸ್ಥಾನದ ಸಂಪತ್ತನ್ನೂ ಅಭಿವೃದ್ಧಿ ಮಾಡಬೇಕೆಂಬ ಅಭಿಲಾಷೆಯುಳ್ಳವರಾಗಿ ಮೈಸೂರು ಗವರ್ನಮೆಂಟಿನವರು ಸಾಹಸಪಡುತ್ತಿರುವುದನ್ನು ನೋಡಿ ನಾವು ಸಂತೋಷಪಡುತ್ತೇವೆ. ಆದರೆ ಈ ಕಾರ್ಯವನ್ನು ಸಾಧಿಸಬಹುದಾದ ಕ್ರಮವೂ ರೀತಿಯೂ ಅವರಿಗೆ ಪರಿಷ್ಕಾರವಾಗಿ ಮುಂದಿಟ್ಟಾಗಿರುವುದೇ ಎಂದು ಸಂಶಯಪಡುತ್ತೇವೆ. ವಿದ್ಯೆಯನ್ನು ಹರಡಬೇಕೆಂಬ ಒಣ ಮಾತು ಕೇಳುತ್ತಿರುವೆವು ಪ್ರಜೆಗಳಿಗೆ ತಿಳುವಳಿಕೆಯುಂಟಾಗುವ ಭಾಗದಲ್ಲಿ ವಿಶೇಷವಾದ ಏರ್ಪಾಡುಗಳೇನೂ ಕಾರ್ಯತಃ ನಡೆದದ್ದನ್ನು ನಾವು ನೋಡಲಿಲ್ಲ. ಯೋಗ್ಯತೆ ಸಾಮರ್ಥ್ಯಾದಿಗಳನ್ನು ಪಡೆದ ಉಪಾಧ್ಯಾಯರೇ ದೊರಕುವುದಿಲ್ಲವೆಂದು ಗೊತ್ತಾಗಿದೆ ಅಂಥವರನ್ನು ಒದಗಿಸುವುದಕ್ಕೆ ಸಹಕಾರಿಗಳಾದ ಏರ್ಪಾಡುಗಳೇನಾದರೂ ನಡೆದಿವೆಯೇ ಎಂದು ಕೇಳುವೆವು. ಮಕ್ಕಳನ್ನು ತರಪೇತು ಮಾಡಲು ಒಳ್ಳೆಯವರೂ ಸತ್ಯಶೀಲರೂ ಆಗಿರುವಂಥಾ ಉಪಾಧ್ಯಾಯರು ಹೇರಳವಾಗಿ ದೊರಕುತ್ತಾರೆಯೇ? ಈ ಭಾಗದಲ್ಲಿ ಬಹಳ ಜಾಗರೂಕತೆಯಿಂದ ಏರ್ಪಾಡು ಮಾಡದಿದ್ದರೆ ಸಂಸ್ಥಾನದ ಸ್ಥಿತಿಯು ಹಾಳಿಗೆ ಹೋಗುವುದಕ್ಕೆ ಪ್ರತಿಯಾಗಿ ಪರಿತಾಪಕರವಾದೀತು. ಉಪಾಧ್ಯಾಯ ಕೆಲಸಕ್ಕೆ ಆದರಲ್ಲಿ ಅಭಿರುಚಿಯುಳ್ಳವರೂ, ಸಾಹಸಪಟ್ಟು ಕೆಲಸ ಮಾಡತಕ್ಕವರೂ, ಸತ್ಯಶೀಲರೂ, ನಂಬಿಗಸ್ಥರೂ ಆದಂಥಾ ಸ್ತ್ರೀಪುರುಷರು ದೊರಕದೆ ಹೋದರೆ ಸಂಸ್ಥಾನವು ಏಳಿಗೆಯಾಗಲಾರದು ಗವರ್ನಮೆಂಟಿನ ಹುಕುಂ ಹೊರಟಮಾತ್ರಕ್ಕೇ ಅಂಥಾ ಸ್ತ್ರೀಪುರುಷರು ಒದಗಲಾರರು ಈ ಈ ಕೆಲಸ ಈ ಈ ಪ್ರಕಾರವೇ ಆಗಬೇಕೆಂದು ಹುಕುಂ ಮಾಡುವುದೇನೋ ಸುಲಭಸಾಧ್ಯವಾಗಿದೆ. ಆ ಹುಕುಮುಗಳನ್ನು ಸಾರ್ಥಕವಾಗಿ ನೆರವೇರಿಸುವುದಕ್ಕೆ ಸಮರ್ಥರೂ ಸತ್ಯಶಾಲಿಗಳೂ ಆದ ಸಂಬಳಗಾರರುಂಟೇ? ಅಂಥವರು ಇಲ್ಲವಾದ ಪಕ್ಷಕ್ಕೆ ಆ ಹುಕುಮುಗಳು ಹುರುಳಿಲ್ಲದ ಮಾತಲ್ಲದೆ ಮತ್ತೆ ಬೇರೆ ಅಲ್ಲ.

ಮೈಸೂರು ಸೀಮೆಯಲ್ಲಿ ದಿನಕ್ರಮೇಣ ಕೂಲಿಯ ದರಗಳು ಹೆಚ್ಚಾಗುತ್ತಾ ಬಂದಿವೆ; ಆದರೂ ಕೆಲಸ ನಡೆಯುವುದು ಮಾತ್ರ ಚೆನ್ನಾಗುತ್ತಾ ಇಲ್ಲ. ಯಥಾರ್ಥವಾಗಿ ಕೈಗಾರಿಕೆಗಳನ್ನು ಬಲ್ಲವರು ಇನ್ನೂ ಬಹಳ ಕೊಂಚಮಂದಿಯೇ ಇರುವರು. ಇವರಲ್ಲೂ ಅನೇಕರನ್ನು ನಂಬಿ ಕೆಲಸಮಾಡಿಸಿಕೊಳ್ಳುವುದು ಸಾಧ್ಯವಲ್ಲ. ಒಂದು ದಿನ ಕೆಲಸದ ಮೇಲೆ ಬಂದರೆ ಮರುದಿನ ತಪ್ಪಿಸಿಕೊಳ್ಳುತ್ತಾರೆ. ಅವರು ಹೇಳುವ ಮಾತಿನಲ್ಲಿ ನಂಬಿಕೆಯೇ ಕಾಣುವುದಿಲ್ಲ. ಅವರು ಕೆಲಸವನ್ನೇನೋ ಪ್ರಾರಂಭಮಾಡುತ್ತಾರೆ. ಆದರೆ ಅದು ಎಂದಿಗೆ ಮುಗಿಯುವುದೋ ಯಾರೂ ಹೇಳಲಾರರು ದೊಡ್ಡ ದೊಡ್ಡ ಕೆಲಸಗಳನ್ನು ಮಾಡುವುದಕ್ಕೆ ಕಾರಿಗಾರರು ಸೇರಿಕೊಂಡಿರುವಂಥಾ ಕಟ್ಟೇನೂ ಇರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಕಂಟ್ರಾಕ್ಟರೆಂದು ಹೇಳಿಕೊಳ್ಳುವವರಿಗೆ ಕೈಲಿ ಹಣವೇ ಇಲ್ಲ; ಇಂಥವರು ವಹಿಸಿಕೊಂಡು ಮಾಡುವ ಕೆಲಸ ಹ್ಯಾಗೆ ಪೂರೈಸಿ ತೀರೀತೋ ಹೇಳಲಾಗದು

ವಿದ್ಯೆಯೇನೋ ಅವಶ್ಯ ಬಹಳ ಅವಶ್ಯ. ಆದರೆ ಸತ್ಯಶೀಲರಾದ ಮತ್ತೂ ನಂಬಿಕೆಗೆ ಅರ್ಹರಾದ ಸ್ತ್ರೀಪುರುಷರನ್ನು ಒದಗಿಸಲಾರದೆ ಹೋದಪಕ್ಷದಲ್ಲಿ ಆ ವಿದ್ಯೆಯಿಂದ ಚುರುಕುಬುದ್ಧಿಯುಳ್ಳ ಮೋಸಗಾರರೂ ವಿಪ್ಲವಕಾರಕರೂ ಸಂಸ್ಥಾನದಲ್ಲೆಲ್ಲಾ ಹುಟ್ಟಿ ಹಬ್ಬುವುದಕ್ಕೆ ಸಹಾಯವಾಗುತ್ತದೆ ಪ್ರಜೆಗಳು ಸತ್ಯಶೀಲರಾಗಿರುವಂಥಾ ದೇಶವೇ ಅಭಿವೃದ್ಧಿಯಾದೀತು. ಪ್ರಜೆಗಳಲ್ಲಿ ಸತ್ಯಸ್ವಭಾವವೂ ಉದ್ಯೋಗ ಪ್ರೀತಿಯೂ ಇಲ್ಲವಾದರೆ ಅವರು ಯಥಾರ್ಥವಾದ ಅಭಿವೃದ್ಧಿಯನ್ನು ಹೊಂದಲಾರರು ಆ ದೇಶವು ಏಳಿಗೆಯಾಗುವುದಿಲ್ಲ

ಮೈಸೂರು ಗವರ್ನಮೆಂಟಿನವರು ಈ ಸಂಪದಭಿವೃದ್ಧಿ ಸಮಾಜದ ಕಾರ್ಯಗಳನ್ನೆಲ್ಲಾ ಏಕಮುಖವಾಗಿ ಮಾಡಿದ್ದು ಸಂತೋಷಕರವಾಗಿದೆ. ಆದರೆ ಸಂಸ್ಥಾನಾಮಳ ಪ್ರಜೆಗಳ ಮತ್ತೂ ದೇಶದ ಕುಂದುಕೊರತೆಗಳೇನೆಂಬುದನ್ನು ಇನ್ನೂ ಪರಿಷ್ಕಾರವಾಗಿ ತಿಳಿದುಕೊಳ್ಳಲು ಸಾಹಸಪಡುವುದನ್ನು ನೋಡಬೇಕೆಂದೂ, ಯಾವ ಏರ್ಪಾಡುಗಳನ್ನು ಮಾಡಿದರೆ ಸತ್ಯವಾದ ಕ್ರಿಯೆಯನ್ನು ನಡೆಗೊಳ್ಳುವುದೋ ಅದನ್ನು ಗ್ರಹಿಸಲು ವ್ಯವಸಾಯಮಾಡುವುದನ್ನು ನೋಡಬೇಕೆಂದೂ ಪ್ರಜೆಗಳ ಕೂಡ ನಾವೂ ಕುತೂಹಲಪಟ್ಟು ನಿರೀಕ್ಷಿಸುತ್ತಿರುವೆವು

ಟರ್ಕಿ ಬಾಲ್ಕನ್ ಯುದ್ಧವು.

ಮಾಂಟಿನೀಗ್ರೋದವರು ಸ್ಕುಟಾರಿ ಪಟ್ಟಣದ ಕೋಟೆಗೆ ಮತ್ತೆ ಮುತ್ತಿಗೆ ಹಾಕಿಕೊಂಡಿದಾರೆ ಸರ್ವಿಯಾ ಸೈನ್ಯಗಳು ಮಾಂಟಿನೀಗ್ರೋದವರಿಗೆ ಸಹಾಯ ಮಾಡುತ್ತಿರುವವು — ಬಲ್ಗೇರಿಯಾದವರು ಆಡ್ರಿಯಾನೋಪಲ್ ಕೋಟೆಗೆ ಮುತ್ತಿಗೆ ಹಾಕಿಕೊಂಡಿದಾರಷ್ಟೆ ಅಲ್ಲಿ ಕಠಿಣವಾದ ಯುದ್ಧ ನಡೆಯಿತು ಬಲ್ಗೇರಿಯಾದವರು ಸಮೀಪದಲ್ಲಿರುವ ಮೈರ್‌ಶಾಲಾರ್ ಎಂಬ ಒಂದು ಸಣ್ಣ ಕೋಟೆಯನ್ನು ಗೆದ್ದುಕೊಂಡದಲ್ಲದೆ 400 ಟರ್ಕಿ ಸೈನ್ಯಗಳನ್ನು ಅಲ್ಲಿ ಕೈಸೆರೆ ಹಿಡಿದಿರುತ್ತಾರೆ ಆಡ್ರಿಯಾನೋಪಲ್ ಕೋಟೆಯೂ ಇಷ್ಟರಲ್ಲೇ ಬಲ್ಗೇರಿಯಾದವರಿಗೆ ಸಿಕ್ಕಿಹೋಗುವ ಸ್ಥಿತಿಗೆ ಬಂದಿದೆ — ತಾ. 11 ರಲ್ಲಿ ಟರ್ಕಿ ಹಡಗಿನ ಸೈನ್ಯವು ಬುಲೇರ್ ಎಂಬಲ್ಲಿ ಶತ್ರುಗಳಮೇಲೆ ಕಠಿಣವಾಗಿ ಯುದ್ಧಮಾಡಿತು. ಹಾಮಿದಿಯಾ ಎಂಬ ಟರ್ಕಿ ಯುದ್ಧದ ಜಹಜು ದುರಾಜೊ ಪಟ್ಟಣದ ಮೇಲೂ, ಸರ್ವಿಯಾ ಸೈನಿಕರ ಬಿಡಾರಗಳ ಮೇಲೂ, ಸರ್ವಿಯಾ ಹಡಗುಗಳಮೇಲೂ ಪಿರಂಗಿಗಳನ್ನು ಹೊಡೆಯಿತು. ಸರ್ವಿಯದ ಎರಡು ಹಡಗುಗಳು ಹತ್ತಿಕೊಂಡು ಉರಿಯುತ್ತಿವೆ 50 ಜನರು ಕೊಲೆಯಾದರು, ಆಹಾರಪದಾರ್ಥಗಳೂ ಯುದ್ಧಸಾಮಗ್ರಿಗಳೂ ಸುಟ್ಟು ನಷ್ಟವಾದವು ಇನ್ನೊಂದು ಸರ್ವಿಯಾ ಹಡಗು ಮುಳುಗಿ ನಷ್ಟವಾಯಿತು ಕೆಲವರು ಸತ್ತುಹೋದರು — ಗ್ರೀಕರು ಸ್ಯಾಮಾಸ್ ಎಂಬ ದ್ವೀಪವನ್ನು ಸ್ವಾಧೀನಪಡಿಸಿಕೊಂಡರು ಜಾನೀನಾವನ್ನು ಗೆದ್ದುಕೊಂಡಮೇಲೆ ಗ್ರೀಕರು ಉತ್ತರ ಯೆಪಿರಸ್ಸಿನಲ್ಲಿ ಟರ್ಕಿ ಸೈನಗಳನ್ನು ಓಡಿಸಿಕೊಂಡುಹೋದಾಗ ಟರ್ಕಿ ಸೈನದಲ್ಲಿ 40 ಮಂದಿ ಮುಖ್ಯಾಧಿಕಾರಿಗಳನ್ನೂ 1,570 ಮಂದಿ ಸಿಪಾಯಿಗಳನ್ನೂ ಕೈಸೆರೆ ಹಿಡಿದಿರುತ್ತಾರೆ ನಾಲ್ಕು ತಿಂಗಳಿಂದ ಯೆಪಿರಸ್ಸಿನಲ್ಲಿ ಗ್ರೀಕರ ಕಡೆ 17,000 ಸೈನಿಕರು ನಷ್ಟಪಟ್ಟರೆಂದು ತಿಳಿಯುವುದು

ಸ್ಮಿಗ್ರಿಟೊ ಎಂಬ ಗ್ರಾಮದಲ್ಲಿ ಬಲ್ಗೇರಿಯಾದವರಿಗೂ ಗ್ರೀಕರಿಗೂ 14 ದಿನ ಕಠಿಣವಾದ ಯುದ್ಧ ನಡೆದದರಲ್ಲಿ ಗ್ರೀಕರಿಗೆ ಜಯವಾಗಿ, ಇವರು ಶತ್ರು ಸೇನಾಪತಿಗಳನ್ನು ಸುಟ್ಟುಹಾಕಿದರು ಈ ಯುದ್ಧದಲ್ಲಿ ಗ್ರೀಕರ ಕಡೆ 16 ಮಂದಿ ಮೃತಪಟ್ಟರು, 60 ಜನರಿಗೆ ಗಾಯವಾಯಿತು 100 ಮಂದಿಯನ್ನು ಗ್ರೀಕರು ಕೈಸೆರೆ ಹಿಡಿದಿದಾರೆ

ಟರ್ಕಿಯವರಿಗೂ ಶತ್ರುಸಮುದಾಯಕ್ಕೂ ಕರಾರು ನಡೆಯುವ ಭಾಗದಲ್ಲಿ ಇನ್ನೂ ಕಾಗದಪತ್ರಗಳೂ ಚರ್ಚೆಗಳೂ ನಡೆಯುತ್ತಿರುವವು ಶತ್ರುಸಮುದಾಯದವರು ಕರಾರು ಮಾಡಿಕೊಳ್ಳುವುದಕ್ಕೆ ಏನು ನಿರ್ಬಂಧ ಬಾಗಗಳನ್ನೆಲ್ಲಾ ಕೇಳಿ ಜವಾಬು ಕೊಟ್ಟರು ಮಧ್ಯಸ್ಥಿಕೆ ಮಾಡುವುದಕ್ಕೆ ನಿಂತಿರುವ ಪಂಚಗಳವರು ಆ ಜವಾಬನ್ನು ನೋಡಿ, ಟರ್ಕಿಯರವರನ್ನು ಅಷ್ಟೆಲ್ಲಾ ಕೇಳುವವರು ಕೊಡುತ್ತಾರೆಂದು ನಿರೀಕ್ಷಿಸುವುದೂ ಸಾಧ್ಯವಲ್ಲವೆಂದು ಶತ್ರುಸಮುದಾಯದವರಿಗೆ ತಿಳಿಸಿದಾರೆ ಇವರು ಕೇಳಿರುವುದನ್ನು ಟರ್ಕಿಯವರು ಒಪ್ಪದೆ ಯುದ್ಧವನ್ನೇ ಮುಂದರಿಸಿರುತ್ತೇವೆಂದು ಅಭಿಪ್ರಾಯಪಟ್ಟರು ... ರಿನ ಚರ್ಚೆಯು ಈಗ ಬೇರೆರೀತಿಯಾಗಿ ಪ್ರಾರಂಭವಾಗಿರುವುದು ... ಆಟೊಮಾನ್ ಕೌನ್ಸಿಲ್ಲಿನವರು ಟರ್ಕಿಯವರಿಗೆ ಕೂಡಲೇ ಎರಡು ... ಪೌಂಡನ್ನೂ ಜರ್ನ್ ತಿಂಗಳೊಳಗಾಗಿ ಇನ್ನೆರಡುಲಕ್ಷ ಪೌಂಡನ್ನೂ ಸಾಲ ... ಸುತ್ತೇವೆಂದು ಭರವಸೆ ಹೇಳಿದಾರೆ.

ತೊಗಲು ಹದಮಾಡುವ ಕಾರ್ಖಾನೆ.

ಬೊಂಬಾಯಿ ಪಟ್ಟಣವನ್ನು ಎಂದೂ ನೋಡದೆ ಇದ್ದ ಒಬ್ಬ ಹಳ್ಳಿಯ ಗೌ... ಆ ಮಹಾನಗರವನ್ನು ನೋಡಿಕೊಂಡು ಬಂದಿದ್ದ ತನ್ನ ಮಿತ್ರರಿಂದ ಅದರ ಸೌಂದರ್ಯವನ್ನೂ ವ್ಯಾಪಾರ, ಐಶ್ವರ್ಯ, ಕೈಗಾರಿಕೆಗಳನ್ನೂ ಕೇಳಿ ತಾನೂ ಅದನ್ನು ಹೋಗಿ ನೋಡಬೇಕೆಂದು ಪಟ್ಟದ ಸಮೀಪಕ್ಕೆ ಬಂದು ಸೇರುವದರೊಳಗಾಗಿ ಹೊತ್ತು ಮುಳುಗಿ ಕತ್ತಲಾದುದರಿಂದ ಆ ರಾತ್ರಿ ಪುರಪ್ರವೇಶಮಾಡುವದಕ್ಕಾಗದೆ ಇಲ್ಲನೆಂದು ಅಲ್ಲಿಯೇ ತನ್ನ ಪರಿವಾರದವರೊಡನೆ ಬಿಡಾರಮಾಡಿದನು ಅವನು ಇಳಿದಿದ್ದ ಸ್ಥಳಕ್ಕೆ ಸಮೀಪವಾಗಿ ತೊಗಲುಗಳನ್ನು ಹದಮಾಡುವ ಕಾರ್ಖಾನೆ ಇದ್ದಿತು ಇದು ಗೌಡನಿಗೆ ತಿಳಿಯಲಿಲ್ಲ ಆದರೆ ಆ ಕಾರ್ಖಾನೆಯಲ್ಲಿ ... ಇಟ್ಟಿದ್ದ ನಾನಾಬಗೆಯ ಮೃಗ ಚರ್ಮಗಳಿಂದ ದುರ್ಗಂಧವು ರಾತ್ರಿಯೆಲ್ಲಾ ಸಹಿಸಲಸಾಧ್ಯವಾಗಿತ್ತು. ಅವನು ಆ ನಾತವನ್ನು ತಡೆಯಲಾರದೆ ಆ ವೇಳೆಯಲ್ಲಿ ಸಮಯದಲ್ಲಿ ಪರಿಚಿತರ್‍ಯಾರೂ ಇಲ್ಲದೆ ಇದ್ದುದರಿಂದ ಆ ರಾತ್ರಿಯೆಲ್ಲಾ ಜಾಗರಣೆಮಾಡಿ ಬೆಳಗ್ಗೆ ಎದ್ದು ಕಾರಣವನ್ನು ತಿಳಿದು ಅಲ್ಲಿ ಒಂದು ನಿಮಿಷವಾದರೂ ನಿಲ್ಲಲಿಕ್ಕೆ ಮನಸಿಲ್ಲದೆ ಕೂಡಲೇ ಹೊರಟುಬಿಟ್ಟನು. ಆದರೆ ಪಟ್ಟಣವನ್ನು ಪ್ರವೇಶಮಾಡಿ ಅದರ ಬೀದಿಗಳಲ್ಲಿ ತಿರುಗುತ್ತಾ ದೊಡ್ಡ ದೊಡ್ಡ ಅಂಗಡಿಗಳನ್ನೂ ದೇವಾಲಯ, ಮಳಿಗೆ, ತೋಟ, ಶಿಖರಗಳನ್ನು ನೋಡಿ ಬಹಳ ಸಂತೋಷಪಡುತ್ತಿರುವಾಗ ಅಲ್ಲಿ ಹದಮಾಡಿದ ಚರ್ಮದಿಂದ ತಯಾರಿಸಿದ ಸಾಮಾನುಗಳನ್ನು ಇಟ್ಟಿದ್ದ ಒಂದು ಭಾರಿ ಷಾಪನ್ನು ಸಮೀಪದಲ್ಲಿ ಕಂಡು ಅದೇನೆಂದು ವಿಚಾರಿಸಿ ನೋಡುವದಕ್ಕೆ ಅಲ್ಲಿಗೆ ಹೋದನು. ಅತ್ಯಂತ ಮೃದುವಾದ ಚರ್ಮದಿಂದ ಬಹು ಸೊಗಸಾಗಿ ತಯಾರಿಸಿದ್ದ ಚಿಕ್ಕಚಿಕ್ಕ ಹಣದ ಚೀಲಗಳೂ, ದೊಡ್ಡ ಚೀಲಗಳೂ ಕೈಚೀಲಗಳೂ ಇನ್ನು ನಾನಾತರದ ಚರ್ಮದ ವಸ್ತುಗಳೂ ಅಲ್ಲಿ ಮಾರಾಟಕ್ಕೆ ಇಟ್ಟಿದ್ದವು ಮತ್ತು ಅನೇಕ ಶ್ರೀಮಂತರೂ, ದೊರೆಗಳೂ ಅಧಿಕಾರಿಗಳೂ ಬಂದು ಆ ಚರ್ಮದ ಚೀಲ ಮುಂತಾದ ವಸ್ತುಗಳಿಗೆ ಒಳ್ಳೇ ಬೆಲೆಯನ್ನುಕೊಟ್ಟು ಕೊಂಡುಕೊಳ್ಳುತ್ತಿರುವವನ್ನೂ ಕೆಲವು ದೊರೆಸಾನಿಗಳು ಆ ಚೀಲಗಳನ್ನು ತಮ್ಮ ಕೈಗಳಲ್ಲಿ ಧರಿಸಿಕೊಳ್ಳುತ್ತಿರುವುದನ್ನೂ ಬೇರೆ ಕೆಲವರು ಆ ಚೀಲಗಳಲ್ಲಿ ಬೆಳ್ಳಿ ಬಂಗಾರದ ನಾಣ್ಯಗಳನ್ನೂ, ಆಭರಣಗಳನ್ನೂ ಹಾಕಿ ತಮ್ಮ ಕೋಟಿನ ಗಡಿಯಾರದ ಜೋಬುಗಳಲ್ಲಿ ಇಟ್ಟುಕೊಳ್ಳುತ್ತಿರುವವನ್ನು ನೋಡಿ ಅವೆಲ್ಲಾ ಚರ್ಮದಿಂದ ತಯಾರಿಸಿದ ಸಾಮಾನುಗಳೆಂದೂ ತಿಳಿದು ಬಹಳ ಆಶ್ಚರ್ಯಪಟ್ಟನು. ಅವನು ಅಂದುಕೊಂಡದ್ದು — ನೆನ್ನೆ ರಾತ್ರಿ ನಾವಿಳಿದಿದ್ದ ಸ್ಥಳದಲ್ಲಿರುವ ಪದಾರ್ಥಗಳಿಗೂ ಈ ಷಾಪಿನಲ್ಲಿರುವ ಪದಾರ್ಥಗಳಿಗೂ ಚರ್ಮವೆಂಬ ಒಂದೇ ಹೆಸರು ... ಆದರೆ ಆ ಚರ್ಮದಲ್ಲಿ ಅಸಹ್ಯವಾದ ದುರ್ವಾಸನೆ ಆದರೆ ಈ ಚರ್ಮದ ವಸ್ತುಗಳಲ್ಲಿ ಸುವಾಸನೆ ಆ ಚರ್ಮಕ್ಕೆ ಎಂಟೆಂಟು ಅಡಿಗಳಿಗೆ ಎರಡು ಮೂರು ರೂಪಾಯಿ ಬೆಲೆ ಇಲ್ಲಿ ಎಂಟಂಗುಲದ್ದಕ್ಕೆ ಎರಡು ಮೂರು ರೂಪಾಯಿಗಳು ಆ ಚರ್ಮವನ್ನು ನಾವು ನಾವಾದರೆ ಯಾರೂ ಮುಟ್ಟ ಎಡಗೊಡಲೀಸರು. ... ಅನ್ನೂ ಪ್ರಮೋಷ ... ಕೊಳ್ಳುವದಕ್ಕೂ ಪೂಜ್ಯವಾದ ಪುಸ್ತಕಗಳನ್ನು ಕಟ್ಟುವದಕ್ಕೂ ಪ್ರಯೋಗಿಸುತ್ತಿರುವರು ವಸ್ತುವು ಒಂದೇಯಾದರೆ ಈ ವ್ಯತ್ಯಾಸಗಳು ಹ್ಯಾಗೆ ಸಂಭವಿಸಿದವು?

ಪ್ರತಿಯೊಬ್ಬ ಮನುಷ್ಯನಿಗೂ ಬುದ್ಧಿ ಮನಸ್ಸು ಯೋಚನೆ ಅಭಿಲಾಷೆಗಳು ಇರುತ್ತವೆ ಆದರೆ ಅವು ಹೇಗಿರುತ್ತವೆ? ಅವುಗಳಲ್ಲೇನು ತುಂಬಿರುತ್ತದೆ ಅವುಗಳಿಂದ ಹೊರ ಹೊರಡುವಂಥಾದೇನು? ಹೃದಯ ಒಂದು ಕೋಶ ಅಥವಾ ಚೀಲಕ್ಕೆ ಸಮಾನವಾಗಿರುತ್ತದೆ ಕೆಲವರ ಹೃದಯಗಳು ದುರ್ಗಂಧ ಪೂರಿತವಾಗಿರುತ್ತವೆ ಅಂಥಾ ಹೃದಯಗಳೊಳಗೆಲ್ಲಾ ದುರಾಲೋಚನೆ, ಬಾಧೆ, ಕ್ಷುದ್ರಹಗೆ, ವಿಷಯಾಸಕ್ತಿ, ಲೋಭ, ವಂಚನೆ, ಮುಂತಾದವುಗಳು ಹುಟ್ಟಿ ಅವೆ ದುರ್ಗುಣಗಳೂ ದುರ್ಗಂಧಗಳೂ ಹೊರ ಹೊರಟು ಅಂಥಾ ಹೃದಯವುಳ್ಳವ ಸಮೀಪದಲ್ಲಾದರೂ ನಿಲ್ಲುವದಕ್ಕೆ ಮನ ಒಪ್ಪದಂತೆ ಮಾಡುತ್ತವೆ ಮತ್ತು ಈ ಲೋಕದಲ್ಲಿ ನಡಿಯುತ್ತಿರುವ, ಸೂಳೆಗಾರಿಕೆ, ಕಳ್ಳತನ, ಕೊಲೆ, ಮೋಸ ದುರ್ಭಾಷೆ, ಜಗಳ, ದುಂದೌತನ, ಕುಟಿಲತನ ಮುಂತಾದ ಸಕಲ ಪಾಪಗಳಿಗೂ ಹೃದಯವು ಮಾತಸ್ಥಾನವಾಗಿದೆ ಕೆಟ್ಟವುಗಳಾದ ಇವೆಲ್ಲಾ ಹೃದಯದೊಳಗೆ ಹುಟ್ಟಿ ಅಲ್ಲಿಂದ ಹೊರಗೆ ಹರಿದುಬಂದು ಮನುಷ್ಯನನ್ನೂ ಲೋಕವನ್ನೂ ಹೊಲೆಮಾಡುತ್ತವೆ

ಇಂಥ ದುರ್ಗಂಧಕ್ಕೆ ಆಕರವಾಗಿ ಪಾಪವನ್ನೂ ದುಃಖವನ್ನೂ ನಾಶವನ್ನೂ ಲೋಕದ ಮೇಲೆ ಹರಡುತ್ತಿರುವ ಹೃದಯಗಳನ್ನು ಹಾಗೆಯೇ ಬಿಟ್ಟು ಆ ಸ್ಥಿತಿಗೊಪ್ಪಿಸಿಕೊಡುವದಕ್ಕೆ ಯಾರು ತಾನೆ ಒಪ್ಪುವರು? ದುರ್ನಾತ ಬಡಿಯುವ ಕೊಳದ ಹತ್ತಿರ ನಿಂತಿರುವದಕ್ಕೆ ಯಾರು ತಾನೆ ಅಪೇಕ್ಷೆಪಡುವರು? ದುಷ್ಟರ ಗುಂಪು ನನಗಿರಲಿ ಎಂದು ಯಾರು ಆರಿಸಿಕೊಂಡಾರು? ದುರ್ನಾತ ಬಡಿಯುತ್ತ ನೋವನ್ನು ಕೊಟ್ಟು ಕೀವನ್ನು ಸುರಿಸುವ ಹುಣ್ಣು ನನಗೆ ಬರಲಿ ಎಂದು ಯಾರು ಹಾರೈಸುವರು? ಯಾರೂ ಇಲ್ಲವಾದರೆ ದುಷ್ಟ ಹೃದಯ ದುರ್ವಾಸನೆ ನನಗಿರಲಿ ಎಂತ ಯಾರಾದರೂ ಒಪ್ಪಿರಬಹುದೆ? ದುಷ್ಟ ಹೃದಯ ದುರ್ವಾಸನೆ, ದುರ್ಗುಣ ನನಗಿರಲಿ ಎಂತ ಒಪ್ಪುವವನು ನರಕಕೂಪವನ್ನು ಆರಿಸಿಯುವವನಾಗಿಯೂ ಅವರಲ್ಲಿ ತನ್ನ ನಿತ್ಯವಾಸಕ್ಕೆ ಸ್ಥಳ ಸಿದ್ಧಮಾಡಿಕೊಳ್ಳುವನು

ಸತ್ಯವೇದದಲ್ಲಿ ದೇವರು ಹೇಳುವದೇನೆಂದರೆ ಎಲೋ! ಬನ್ನಿರಿ ತೊಳೆದುಕೊಳ್ಳಿರಿ, ನಿರ್ಮಲ ಮಾಡಿಕೊಳ್ಳಿರಿ, ನಿಮ್ಮ ಕ್ರಿಯೆಗಳ ಕೆಟ್ಟತನವನ್ನು ತೊಲಗಿಸಿರಿ ಕೆಟ್ಟದನ್ನು ಮಾಡಬೇಡಿರಿ, ಒಳ್ಳೇದು ಮಾಡುವದನ್ನು ಕಲಿತು ಕೊಳ್ಳಿರಿ ನ್ಯಾಯವನ್ನು ಹುಡುಕಿರಿ, ಕುಗ್ಗಿದವನನ್ನು ಆದರಿಸಿರಿ, ದಿಕ್ಕಿಲ್ಲದವರಿಗೆ ನ್ಯಾಯ ತೀರಿಸಿರಿ, ಎಂಬುವದೇ ಮತ್ತು ಯಾರು ತಮ್ಮ ಹೃದಯಗಳನ್ನು ಶುದ್ಧಿಮಾಡಿಕೊಳ್ಳುವದಕ್ಕೆ ಹಾರೈಸುತ್ತಾ ಶಕ್ತಿಹೀನರಾಗಿ ಆತನ ಸಹಾಯವನ್ನು ಬಯಸುತ್ತಾರೊ ಅವರಿಗೆ ಆತನು ಹೇಳುವದನ್ನು ಕೇಳಿರಿ — ನಿಮ್ಮ ಪಾಪಗಳು ಬಣ್ಣದ ಹಾಗಿದ್ದರೂ ಹಿಮದ ಹಾಗೆ ಬಿಳುಪಾಗುವವು ರಕ್ತವರ್ಣದ ಹಾಗೆ ಕೆಂಪಗಿದ್ದರೂ ಉಣ್ಣೆಯ ಹಾಗೆ ಆಗುವವು. ನಿಮಗೆ ಹೊಸ ಹೃದಯವನ್ನು ಕೊಟ್ಟು ಹೊಸ ಆತ್ಮವನ್ನು ನಿಮ್ಮೊಳಗೆ ಇಡುವೆನು

ಒಳದೇಶದ ವೃತ್ತಾಂತಗಳು.

ಬೆಂಗಳೂರು ಪಬ್ಲಿಕ ಆಫೀಸ್ ಕಟ್ಟಡದಲ್ಲಿ ಎಪ್ರಿಲ್ ತಾ 1 ನೇ ಸೋಮವಾರ ಮಧ್ಯಾಹ್ನ ಮೈಸೂರು ನ್ಯಾಯವಿಧಾಯಕ ಸಭೆಯು ನಡೆಯುವದಾಗಿದೆ

ಕಳೆದ ವಾರ ರಾಜಧಾನಿಯ ಈರನಗೆರೆಯಲ್ಲಿ ಸಣ್ಣ ವಯಸ್ಸಿನ ಒಡಹುಟ್ಟಿದ ಮಕ್ಕಳಿಬ್ಬರನ್ನು ಹುಚ್ಚುನಾಯಿ ಕಡಿದದ್ದರಿಂದ ಅವರನ್ನು ಸರ್ಕಾರದ ವೆಚ್ಚದಿಂದ ಚಿಕಿತ್ಸೆಗಾಗಿ ಕೂನೂರು ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು

ಗುಂಡ್ಲುಪೇಟೆ ತಾಲ್ಲೂಕು ಉಮ್ಮನವಮೊ ಬಾಲ ಬೆಟ್ಟದ ತಪ್ಪಲಲ್ಲಿ ಕೃಷ್ಣ ಕೋಟೆನಲ್ಲಿ ಏಪ್ರಿಲ್ ತಾ 1 ರಿಂದ ಮೂರು ದಿನಗಳವರೆಗೆ ಗೋಶಾಯಿಗಳ ಪ್ರದರ್ಶನ ನಡೆದು, ಒಳ್ಳೆ ಜಾತಿಯ ರಾಸುಗಳಿಗೆ ಬಹುಮಾನಗಳು ಕೊಡ ಲ್ಪಡುವವು

ಕಳೆದ ಶನಿವಾರ ಸಾಯಂಕಾಲ ದಿವಾನ್‌ರವರು ಸಕಲೇಶಪುರದಲ್ಲಿ ಸರ್ಕಾ ರದ ಕಟ್ಟ ತಲವಾರಾಗಿದ್ದ ಆಸ್ಪತ್ರೆ ಕಟ್ಟಡವನ್ನು ಪ್ರತಿಷ್ಠೆ ಮಾಡಿದರು ಯೂರೋಪಿಯನ್ ಮತ್ತು ದೇಶೀಯ ದೊಡ್ಡ ಮನುಷ್ಯರೂ ಅಧಿಕಾರಿ ಗಳು ಬಹುಮಂದಿ ಹಾಜರಾಗಿದ್ದರು

ತಾ 24 ನೇ ಸೋಮವಾರ ಆರ್ ಬಿ ಕೇಪನಯ ಪ್ರಮುಖರಾದ ಮ|| ಎ ವಿ ವರದಾಚಾರ್ಯರಿಗೆ ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಪುರ ಶರವಾಗಿ ಸರ್ದಾರ್ ಎಂ ಕಾಂತರಾಜೆ ಅರಸಿನವರು ಭಂಗಾರದ ಮೆಡ ಲ್ಲು ಬಹುಮಾನವಾಡುತ್ತಾರೆಂದು ತಿಳಿಸುತ್ತೇವೆ

ಆರಮನೆಯ ಮೋಟಾರ್ ಬಾಕ್ಸಿಯ ಸೂಪರಿಂಟೆಂಡೆಂಟಾಗಿದ್ದ ಮಿ|| ಬ್ಲೇಕ್ ವೈಟ್‌ಯವರು ಈ ತಿಂಗಳು 10 ನೇ ತಾ ಇಂದ ಕೆಲಸಬಿಟ್ಟು ಹೊರಟುಹೋದರು ಅವರಿಗೆ ಶ್ರೀಮನ್ ಮಹಾರಾಜರವರು 2,000 ರೂಪಾಯಿ ಬಹುಮಾನ ಸ್ಯಾಂಕ್ಷನ್ ಮಾಡಿ ಕೊಡಿಸಿದರೆಂದು ಕೇಳುತ್ತೇವೆ

ಸರ್ದಾರ್ ಎಂ ಕಾಂತರಾಜೆ ಅರಸಿನವರ ಮನೆವಾರ್ತೆಯು ತುಂಬಾ ಖಾಯಿಲೆಯಾಗಿದ್ದಾರೆಂದು ತಿಳಿಸಲು ವ್ಯಸನಪಡುತ್ತೇವೆ ಕಳೆದ ವಾರ ಡಾಕ್ಟರ್ ಮರ್ಗಂ ಬೊಮ್ಮೆಲಿಯಾರ್ರವರು ಬೆಂಗಳೂರಿಂದ ಒಂದು ದಿನದ ಮಟ್ಟಿಗೆ ಕರಸ ಲ್ಪಟ್ಟರು ಈ ಹೆಣ್ಣು ಮಗುವಿಗೆ ಸಾಂಗವಾಗಿ ಬೇಗನೆ ಸೌಖ್ಯವುಂಟಾಗಲೆಂದು ಹಾರೈಸುತ್ತೇವೆ

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಪಂಚಮರಿಗೋಸ್ಕರವಾದ ಪ್ರತಿಗ್ರಾಮ ಮಕ್ಕಳ ಸ್ಕೂಲು ಸುಮಾರು 10 ಪ್ರೈಮರಿ ಪಾಠಶಾಲೆಗಳು ಇಟ್ಟುಕೊಡಬೇಕೆಂದು ಡೆಪ್ಯುಟಿ ಇನ್ಸ್‌ಪೆಕ್ಟರವರು ಶಿಫಾರಸು ಮಾಡಿದ್ದರು ಸರ್ಕಾರದವರು ಸದ್ಯ 12 ಪಾಠಶಾ ಲೆಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ ಇವಕ್ಕೆಲ್ಲಾ ವರುಷಕ್ಕೆ ಸುಮಾರು 5,100 ರೂ ಖರ್ಚಾಗುವುದು ಈ ಸ್ಕೂಲುಗಳ ಪೈಕಿ 21 ಪಂಚಮರಿಗೂ, 10 ಕೊರಮರಿಗೂ, 8 ಗಂಡುಹುಡುಗರಿಗೂ ಏರ್ಪಾಡಾಗುವವು ಪಂಚಮರ ಸ್ಕೂಲುಗಳ ಉಪಾಧ್ಯಾಯರಿಗೆ 12 ರೂಪಾಯಿ, ಇತರ ಸ್ಕೂಲ್ ಉಪಾಧ್ಯಾಯ ರಿಗೆ 10 ರೂಪಾಯಿ ಸಂಬಳ ಗೊತ್ತುಮಾಡಿದೆ ಈ 12 ಪಾಠಶಾಲೆಗಳೂ ಈ ವರ್ಷದಲ್ಲಿ ಪ್ರಾರಂಭವಾಗುವ ಹಾಗೆ ಡೆಪ್ಯುಟಿ ಇನ್ಸ್‌ಪೆಕ್ಟರವರು ಪ್ರಯತ್ನಪಡುತ್ತಿದ್ದಾರೆ

ಕಳೆದ ಶನಿವಾರ ಸಾಯಂಕಾಲ ಶ್ರೀಮನ್ ಮಹಾರಾಜರವರು ರಾಜಧಾ ನಿಯ ಜನಕ್ಕೆ ಆ ಸ್ಥಾನದಲ್ಲಿ ಯೂರೋಪಿಯನ್ ಮತ್ತು ದೇಶೀಯ ಮನುಷ್ಯರಿಗೆ ಅಟ್ ಹೋಂ ಎಂಬ ಕೂಟವನ್ನು ನಡೆಸಿ ಸಂತೋಷಪಟ್ಟರು ಮೈಸೂರ ಕ್ಲಬ್ಬಿನವರೆಲ್ಲಾ ಸೇರಿ ಶ್ರೀಮನ್ ಮಹಾರಾಜರವರಿಗೂ, ಶ್ರೀಮನ್ ಯುವರಾಜರವರಿಗೂ ಸೋಮವಾರ ರಾತ್ರಿ ಕ್ಲಬ್ಬಿನ ಆವರಣದಲ್ಲಿ ದಿವ್ಯವಾದ ಔತಣವನ್ನು ಮಾಡಿಸಿ ಸಂತೋಷಪಡಿಸಿದರು ಶ್ರೀಮನ್ ಯುವರಾಜರವರು ಎಲ್ಲರಿಗೂ ಬಹು ಆನಂದಪಟ್ಟು ವಂದನೆ ಮಾಡಿದರು ಮೊನ್ನೆ ಮಂಗಳ ವಾರ ರಾತ್ರಿ ಶ್ರೀಮನ್ ಯುವರಾಜರವರು ಪರಿವಾರ ಸಮೇತ ಮರ್ಯಾದೆಗಳೊ ಡನೆ ಮಹಾರಾಜರವರಿಂದಲೂ ರಾಜವರ್ಗದವರಿಂದಲೂ ಬೀಳ್ಕೊಂಡು ಅರ ಮನೆಯ ರೈಲ್ವೆ ಸ್ಟೇಷನ್‌ಗೆ ದಯಮಾಡಿ, ಅಲ್ಲಿ ಕಾದಿದ್ದ ಅಧಿಕಾರಸ್ಥ ರನ್ನೂ ದೊಡ್ಡ ಮನುಷ್ಯರನ್ನೂ ವಂದಿಸಿ ರೈಲುಹತ್ತಿ ವಿಲಾಯಿತಿಗೆ ತೆರಳಿದರು ಇವರು ನಾಳೆ ಬೊಂಬಾಯಿನಲ್ಲಿ ಹಡಗು ಹತ್ತಿ ಪ್ರಯಾಣ ಮಾಡಿ ಯೂರೋಪಿ ನಲ್ಲಿ ಆರು ತಿಂಗಳ ತನಕ ಸಂಚಾರಮಾಡಿಕೊಂಡು ವಾಪಸು ಬರುತ್ತಾರೆ ಮೈಸೂರಿನ ಮೊನ್ನೆ ರಾತ್ರಿ ಗೌರವಾರ್ಥವಾದ 21 ತೋಪುಗಳು ಹಾರಿಸಲ್ಪಟ್ಟವು.

ಮೈಸೂರು ಗೆಜೆಟ್ ಸಂಗ್ರಹ

ಚನ್ನಗಿರಿ ತಾಲ್ಲೂಕು ಅಮಲ್ದಾರ್ ಮಿ ಎಸ್ ಎನ್ ನರಸಿಂಹಶಾಸ್ತ್ರಿ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳು ಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ ಆಫೀಸ್ ಹೆಡ್ ಮುನ್ಷಿ ಮಿ|| ಎಸ್ ನಾರಾಯಣರಾಯರು ಚನ್ನಗಿರಿ ತಾಲ್ಲೂಕು ಅಮಲ್ದಾರ್ ರಾಗಿ ಥರ್ಡ್ ಕ್ಲಾಸ್ ಮಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಬೆಂಗಳೂರು ಡೆಪ್ಯುಟಿ ಕಮಿಷನರ್ ಮಿ ಬಿ ಕೆ ಕುಮಾರಸ್ವಾಮಿನಾಯ ಡುರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಸಬ್ ಮಾಜಿಸ್ಟ್ರೇಟ್ ಮಿ ಬಿ ವೆಂಕೋಬರಾ ಯರು ಡೆಪ್ಯುಟಿ ಕಮಿಷನರ ಆಫೀಸ್ ಛಾರ್ಜನ್ನು ವಹಿಸತಕ್ಕದ್ದು

ಮಿ|| ಎ ವಿ ರಾಮರಾಯರಿಗೆ ಅವರು ಮಂಡ್ಯ ತಾಲ್ಲೂಕ್ ಛಾರ್ಜ ವಹಿಸುವ ಕಾಲದಲ್ಲಿ 1 ನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ

ಮೈಸೂರು ಅಸಿಸ್ಟೆಂಟ್ ಸರ್ಜನ್ ಮಿ|| ಬಿ ಸುಬ್ಬಣ್ಣನವರು ಸೆಷನ್ಸ್ ಕೇಸುಗಳಲ್ಲಿ ಸಾಕ್ಷಿಗಳ ಹೇಳಿಕೆಯನ್ನು ಇಂಗ್ಲೀಷಿನಲ್ಲಿ ಸ್ವಹಸ್ತ ಬರೆದು ಕೊಡತಕ್ಕದ್ದು

ಮಿ|| ಸಿ ವಿಜಯರಂಗಂ ನಾಯುಡುಯವರು ತುಮಕೂರು ಡಿವಿಷನ್ ಛಾರ್ಜ ವಹಿಸಿಕೊಳ್ಳುವ ತಾರೀಖಿನಿಂದ 1 ನೇ ಕ್ಲಾಸ್ ಎಗ್ಸಿಕ್ಯುಟಿವ್ ಇಂಜಿ ನಿಯರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ

ಅ|| ಇಂಜನಿಯರ್ ಮಿ|| ಎಂ ಎ ಆನಂದಾಳ್ವಾರ್ ಯವರನ್ನು ಹಂಗಾ ಮಿ ಮೈಸೂರಿನಿಂದ ಕಾವೇರಿ ತಲಾವ್ ಡಿವಿಜನ್‌ಗೆ ವರ್ಗಮಾಡಿದೆ

ಮೈಸೂರು ಕಾಸ್ಮಾಪಾಲಿಟನ್ ಕ್ಲಬ್

ಹದಿನೇಳನೆಯ ವಾರ್ಷಿಕೋತ್ಸವ

ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನ 17 ನೇ ವಾರ್ಷಿಕೋತ್ಸವವು ಈ ತಾ 10 ನೇ ಭಾನುವಾರ ಕ್ಲಬ್ಬಿನ ಆವರಣದಲ್ಲಿ ಜರುಗಿತು ದೊಡ್ಡ ಮನುಷ್ಯರೂ ಅಧಿಕಾರಿಗಳೂ ಬೆಳಿಗ್ಗೆ ಸೇರಿ ಟೆನ್ನಿಸ್, ಬಿಲ್ಲಿಯರ್ಡ್ಸ್, ಬ್ರಿಡ್ಜ್ ಮುಂತಾದ ವಿನೋದಕರವಾದ ಪಂದ್ಯಗಳಲ್ಲಿ ಆಡಿದರು ವಿಹರಿಸಿದರು ಮಧ್ಯಾಹ್ನ ಸುಮಾರು 12 ಗಂಟೆಗೆ ಮೆಂಬರುಗಳೆಲ್ಲಾ ಕಲೆತು ರುಚಿಕರವಾದ ನಾನಾ ವಿಧ ಭಕ್ಷ್ಯ ಭೋಜ್ಯಾದಿಗಳನ್ನು ಭುಂಜಿಸಿ ಹರ್ಷಪಟ್ಟರು ಸಾಯಂಕಾಲ ದವರೆಗೂ ಬೊಂಬೆ ನ್ಯಾಸದಿನಲ್ಲೂ ಸಂತೋಷಯುಕ್ತವಾದ ವಿನೋದ ದಲ್ಲಿ ಕಾಲಕ್ಷೇಪವನ್ನು ಮಾಡಿದರು

ಸಾಯಂಕಾಲ 7 ಗಂಟೆಗೆ ಮೆಂಬರುಗಳೆಲ್ಲಾ ಬಂಗಲೆಯೊಳಗೆ ಸಭೆ ಸೇರಿ ದ್ದಾಗ ಕಾದಿದ್ದ ಮೆಂಬರುಗಳ ಅಪೇಕ್ಷೆಯಂತೆ ರಾಯಬಹದೂರ್ ಮ|| ಶ್ರೀನಿವಾಸಯ್ಯಂಗಾರ್ರವರು ಸಭೆಯ ಅಗ್ರಾಸನವನ್ನು ವಹಿಸಿ, ಈ ಕ್ಲಬ್ಬಿನ ಮೂಲಕ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಆಗಾಗ್ಗೆ ಕಲೆತು ಪರಸ್ಪರ ಪ್ರೀತಿ ವಿಶ್ವಾಸಗಳನ್ನು ಅಭಿವೃದ್ಧಿ ಮಾಡಿಕೊಳ್ಳುವುದಕ್ಕೂ, ವ್ಯಾಯಾಮಗಳಲ್ಲಿ ಸ್ವಲ್ಪ ಹೊತ್ತು ಬೆರೆದು ಸಂತೋಷಪಡುವುದಕ್ಕೂ ಸಹಕಾರಿಯಾಗಿದೆ ಎಂದೂ, ಇಂಥಾ ಏರ್ಪಾಡು ಈಗಿನ ಕಾಲಕ್ಕೆ ಅವಶ್ಯವಾದದ್ದೆಂದೂ, ರಾಜಧಾನಿಯಲ್ಲಿ ರುವ ಇತರ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಇದಕ್ಕೆ ಸೇರಿ ಇಂಥಾ ಸಂಘ ವನ್ನು ಅಭಿವೃದ್ಧಿಗೆ ತರುವುದರ ಮೂಲಕ ಪ್ರಯೋಜನ ಹೊಂದಬಹುದಾಗಿದೆ ಎಂದೂ ಹೇಳಿ ಸಭೆಯ ಕಾರ್ಯಗಳನ್ನು ಪ್ರಾರಂಭಮಾಡಿದರು ಸೆಕ್ರೆಟರಿ ಮ|| ಡಿ ವೆಂಕಟರಾಮಯ್ಯನವರು ಆಡಿಟರುಗಳ ರಿಪೋರ್ಟನ್ನೂ, ಎಗ್ಸಿಕ್ಯೂ ಟಿವ್ ಕಮಿಟಿಯ ವಾರ್ಷಿಕ ರಿಪೋರ್ಟನ್ನೂ ಸಭೆಯಲ್ಲಿ ಓದಿದರು ಇದ ರಿಂದ ಪಟ್ಟಣವಾಸಿಗಳೂ ಪರಊರಿನವರೂ 60 ಮಂದಿ ಮೆಂಬರುಗಳಾಗಿ ಸೇರಿದ್ದಾ ರೆಂದೂ, ಮೆಂಬರುಗಳಿಂದ ಕಳೆದ ವರುಷ 1900 ಚಿಲ್ಲರೆ ರೂಪಾಯಿ ವಸೂ ಲಾಗಿ, ಖರ್ಚು ಜಾತಾ 170 ಚಿಲ್ಲರೆ ರೂಪಾಯಿ ಉಳಿದಿದೆ ಎಂದೂ, ವಸೂಲಾ ಗತಕ್ಕದ್ದು ಇನ್ನೂ 600 ಚಿಲ್ಲರೆ ರೂಪಾಯಿ ಬಾಕಿ ಇದೆ ಎಂದೂ, ಕ್ಲಬ್ಬಿನಲ್ಲಿ ಎಲ್ಲಾ ಬಾಬುಗಳ ಕಾರ್ಯಗಳೂ ತೃಪ್ತಿಕರವಾಗಿ ನೆರವೇರಿದವೆಂದೂ ತಿಳಿ ಯಿತು ಟೆನ್ನಿಸ್ ಆಟದ ಪಂದ್ಯದಲ್ಲಿ ಗೆದ್ದವರಿಗೆ ಕೊಡುವುದಕ್ಕಾಗಿ ಮ|| ಎಂ ನರಸಿಂಹಸ್ವಾಮಿಯವರು ಮಾಡಿಸಿ ಉಚಿತವಾಗಿ ಕ್ಲಬ್ಬಿಗೆ ವಹಿಸಿದ್ದ ಬಹುಮಾನದ ಬೆಳ್ಳಿ ಬಟ್ಟಲನ್ನು ಮೂರು ವರುಷವೂ ಪಂದ್ಯಗಳಲ್ಲಿ ಗೆದ್ದ ಮ|| ಯು ಡಿ ರಂಗರಾಯರಿಗೆ ಕೊಡಲಾಯಿತು ಈಚೆಗೆ ಮ|| ಎನ್ ಶ್ರೀಕಂಠ ಯ್ಯನವರು ಅಷ್ಟೇ ಬೆಲೆಯುಳ್ಳ ಬೆಳ್ಳಿ ಬಟ್ಟಲನ್ನು ಅದೇ ಉದ್ದೇಶದಿಂದ ಉಚಿತ ವಾಗಿ ಕ್ಲಬ್ಬಿಗೆ ತಂದುಕೊಡುವಂತೆ ವಾಗ್ದಾನಮಾಡಿರುವುದನ್ನು ಕೇಳಿ ಮೆಂಬರು ಗಳೆಲ್ಲಾ ಅವರನ್ನು ವಂದನೆಮಾಡಿದರು ಕ್ಲಬ್ಬಿಗಾಗಿ ಪ್ರತ್ಯೇಕವಾದ ಒಂದು ಕಟ್ಟಡವನ್ನು ಮಾಡಿಕೊಳ್ಳುವ ವಿಷಯದಲ್ಲಿ ಮೆಂಬರುಗಳು ನೋಡಿದ್ದ ಎರಡು ನಿವೇಶನಗಳೂ ದೊರಕಲಾರವೆಂದು ಗವರ್ನಮೆಂಟ್ ಹುಕುಂ ಬಂದ ಗೊತ್ತಾ ಯಿತು ಹೊಸ ನಿವೇಶನವನ್ನು ಆರಿಸುವ ಭಾರವನ್ನು ಮೆಂಬರುಗಳು ಕಮಿಟಿಯವರಿಗೆ ವಹಿಸಿರುತ್ತಾರೆ ಕ್ಲಬ್ಬಿಗೆ ಸರ್ದಾರ್ ಕಾಂತರಾಜೆ ಅರಸಿನವರು ಪ್ರೆಸಿಡೆಂಟರಾಗಿಯೂ, ರಾಯಬಹದೂರ್ ಮ|| ಎ ನರಸಿಂಹಯ್ಯಂಗಾರ್ರವರು ವೈಸ್ ಪ್ರೆಸಿಡೆಂಟರಾಗಿಯೂ ಇರುವಂತೆ ಮೆಂಬರುಗಳು ಒಪ್ಪಿ, ಸೆಕ್ರೆಟರಿ ಮತ್ತು ಕಮಿಟಿ ಮೆಂಬರುಗಳ ಚುನಾವಣೆಯು ಈ ತಿಂಗಳು ತಾ 10 ರಲ್ಲಿ ನಡೆ ಯತಕ್ಕದ್ದೆಂದು ನಿಷ್ಕರ್ಷೆಮಾಡಿ ಆ ದಿನದ ವಿನೋದಗಳನ್ನು ಉತ್ಸಾಹದೊಡನೆ ಮುಕ್ತಾಯಮಾಡಿದರು

ತಾಲ್ಲೂಕು ವರ್ತಮಾನಗಳು

ಚಿಕ್ಕನಾಯಕನಹಳ್ಳಿ —ಬಿಸಿಲಿನ ಧಗೆ ಹೆಚ್ಚುತ್ತಿದೆ ಧಾರಣೆವಾಸಿ ಇಳಿದಿಲ್ಲ ಕೆರೆಯ ನೀರು ದಿನೇದಿನೇ ಕಡಮೆಯಾಗುತ್ತಿದೆ ಕೆರೆಯ ನೀರು ಕೆಡಿಸುತ್ತಿರುವವರನ್ನು ಕೇಳತಕ್ಕವರೇ ಇಲ್ಲ ಚರಂಡಿಯಲ್ಲಿ ಕೊಳೆತು ನಾರು ತ್ತಿರುವ ಕೆಸರಾ ಚೆನ್ನಾಗಿ ಸಾಗುತ್ತಾ ಇಲ್ಲವಾಗಿ ಕೆಲವು ಕಡೆ ನಾತ ಉಂಟಾಗಿದೆ ಇನ್ನು ಮುಂದಾದರೂ ನಮ್ಮ ಸ್ಯಾನಿಟರಿ ಇನ್ಸ್‌ಪೆಕ್ಟರು ಗಮನಕೊಡುತ್ತಾರೆಂದು ನಂಬುತ್ತೇವೆ —ಕೆಲವರು ಊರೊಳಗೆ ಕುದುರೆ ಸವಾರಿ ಮಾಡುವುದರಿಂದ ಮಕ್ಕಳು ಮರಿಗಳಿಗೆ ತೊಂದರೆಯುಂಟಾದೀತು ಈ ವಿಚಾರದಲ್ಲಿ ನಮ್ಮ ಅಮಲ್ದಾರರವರು ತಕ್ಕ ಏರ್ಪಾಡು ಮಾಡಬೇಕಾಗಿದೆ —ಈ ವರ್ಷವೂ ಲೋವರ್ ಸೆಕೆಂಡರಿ ಪರೀ ಕ್ಷೆಗಾಗಿ ಇಲ್ಲಿಗೆ ಬರತಕ್ಕ ವಿದ್ಯಾರ್ಥಿಗಳಿಗೂ ಅವರ ಪೋಷಕರಿಗೂ ಊಟ ಉಪ ಚಾರಾದಿಗಳಿಗೆ ನಮ್ಮ ಮ|| ಮಿ ಲಾರ ಶೆಟ್ಟರು ತಕ್ಕ ಏರ್ಪಾಡು ಮಾಡುತ್ತಿದ್ದಾರೆ.

ಮಂಡ್ಯ —ಧಾರಣೆವಾಸಿಗಳು ತಗ್ಗಿಗಿವೆ ಹೊಸ ಅಳತೆತೂಕ ಮುಂತಾ ದವುಗಳು ಇಲ್ಲಿ ಇನ್ನೂ ಚಲಾವಣೆಗೆ ಬಂದಹಾಗೆ ಕಾಣಲಿಲ್ಲ ಪ್ರಜಾ ಆರೋಗ್ಯವು ಚೆನ್ನಾಗಿದೆ —ಸುತ್ತುಮುತ್ತಲ ಗ್ರಾಮಗಳಲ್ಲಿ ಕಾಲರಾ ಜಾಡ್ಯವಿರುವುದರಿಂದ ಅನೇಕರಲ್ಲಿ ಕಳವಳ ಉಂಟಾಗಿದೆ ಹೆ|| ಕ|| ಮಿ ಕೆ ಚಾಂಡಿಯವರು ಈ ರೋಗ ನಿವಾರಣೆ ಬಗ್ಗೆ ನೋಟೀಸುಗಳನ್ನು ಪ್ರಿಂಟುಮಾಡಿಸಿ ಎಲ್ಲಾ ಊರು ಗ್ರಾಮ ಗಳಿಗೂ ಹಂಚಿ ಎಲ್ಲರ ತಿಳುವಳಿಕೆಗೆ ತಂದು ವಿಷಯಗಳನ್ನು ಕೇಳಿರುವಾಗಿಟ್ಟು ಕೊಂಡಿರುವಂತೆ ತಾಲ್ಲೂಕು ದಾಕ್ತರುಗಳಿಗೆ ಹೇಳಿರುವದು ತುಂಬಾ ಸಂತೋಷ ಕರವಾಗಿದೆ —ತಾ 12 ರಲ್ಲಿ ಮೈಸೂರಿನ ವೆಸ್ಲಿಯನ್ ಹೈ ಸ್ಕೂಲ್ ಪ್ರಿನ್ಸಿಪಲ್ ರಾದ ರೆವ| ಆರ್ ಡಬ್ಲ್ಯು ಬೂಟೀರವರು ದಯಮಾಡಿ ಇಲ್ಲಿನ 4 ಮಿಷನ್ ಸ್ಕೂಲುಗಳನ್ನೂ ಇನ್ಸ್‌ಪೆಕ್ಷನ್ ಮಾಡಿ ಸಂಜೆ 6½ ಯಿಂದ 9 ಘಂಟೆ ತನಕ ಆರೋಗ್ಯ ವಸ್ತ್ರ, ಜಪಾನ್ ಸಾಮ್ರಾಜ್ಯ, ಗ್ರೀನ್‌ಲೆಂಡ್, ಇಂಗ್ಲೆಂಡ್, ಈ ಮುಂ ತಾದವುಗಳನ್ನು ಪ್ರೊಫೆಸರ್ ಎಂ ಡಿ ಕೃಷ್ಣಯ್ಯಂಗಾರ್ರ ಸಹಾಯದಿಂದ ಛಾಯಾ ಲ್ಯಾಂಟರ್ನಿನ ಮೂಲಕ ಪ್ರದರ್ಶನ ಸಭಿಕರಿಗೆ ಮಹದಾನಂದವನ್ನುಂಟುಮಾಡಿ ಮರುದಿನ ಹಿಂತಿರುಗಿದರು —ಮೈಸೂರ್ ಡೆ| ಕ ಮಿ|| ಚಾಂಡಿಯವರು ಮಳವಳ್ಳಿ ಮದ್ದೂರು ಕಡೆ ಸರ್ಕೀಟು ಹೋಗಿದ್ದು ತಾ 15 16 ರಲ್ಲಿ ಮಂಡ್ಯಕ್ಕೆ ದಯ ಮಾಡಿ ಊರಿನ ಅನೇಕ ಭಾಗಗಳನ್ನು ಪರಾಂಬರಿಸಿ, ಈ ವರೆಗೂ ಯಾವ ದೊಡ್ಡ ಅಧಿಕಾರಿಯಾದರೂ ಹೋಗದಿದ್ದ ಭಾಗಗಳನ್ನು ನೋಡಿಕೊಂಡು ಪಂಚಮರ ಸ್ಥಿತಿಗತಿ ವಿಧ್ಯಾಭ್ಯಾಸ ಭಿನ್ನಹಗಳನ್ನು ಕೇಳಿದ್ದು ಆ ಜನರ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು ಮರುದಿನವೂ ಇಂತೆಯೇ ಪಂಚಮರ ದೊಡ್ಡ ಗ್ರಾಮಕ್ಕೆ ದಯಮಾಡಿ ಅಲ್ಲಿರುವ ಪಂಚಮರ ಕೋಆಪರೇಟಿವ್ ಸೊಸೈಟಿ ವಿಷಯ ಕೇಳಿ ಸಂತೋಷಪಟ್ಟು ಸುಮಾರು 30 ವರ್ಷಗಳಿಂದ ಅಲ್ಲಿರುವ ಕೆರೆಯ ನೀರನ್ನು ಮುಟ್ಟಕೊಡದೆಂಬ ನ್ಯಾಯವಿದ್ದ ಹೊಲೆಯರಿಗೆ ನೀರಿನ ಕಷ್ಟವನು ಹೋಗಲಾ ಡಿಸಿ ಉಪಕಾರ ಮಾಡಿದ್ದು ಸ್ತೋತ್ರಾರ್ಹವಾಗಿದೆ ಇವರ ಗಮನವೆಲ್ಲಾ ಪ್ರಾಮುಖ್ಯವಾಗಿ ಕೆರೆ, ಕೊಳ, ಕಟ್ಟೆ ಬಾವಿ, ಈ ಮುಂತಾದವುಗಳನ್ನು ಪರೀ ಕ್ಷೆ ಮಾಡುವುದರಲ್ಲೂ, ಪ್ರಜಾ ಆರೋಗ್ಯಕ್ಕೆ ಶುದ್ಧವಾದ ನೀರು ಒದಗಿಸಬೇ ಕೆಂಬುದರಲ್ಲಿ ಕಾಲರಾ ಜಾಡ್ಯವನ್ನು ಅಡಗಿಸುವುದಕ್ಕೆ ಬೇಕಾಗುವ ಏರ್ಪಾ ಡುಗಳನ್ನು ಮಾಡುವುದರಲ್ಲೂ ವಿನಿಯೋಗವಾಗಿತ್ತು

ಮಧುಗಿರಿ — ಬಿಸಿಲಿನ ತಾಪವು ದಿನೇ ದಿನೇ ಹೆಚ್ಚುತ್ತಲಿದೆ ಸಂತೆ ಬಜಾರದಲ್ಲಿ ರೂಪಾಯಿಗೆ ಅಕ್ಕಿ 7½ ಸೇರು, ರಾಗಿ 16 ಸೇರು ಜೋಳ 11 ಸೇರು, ಈ ರೀತಿ ಮಾರಾಟವಾಗುತ್ತಿದೆ ಬಡಜನಗಳ ಜೀವನೋಪಾಯ ಬಹಳ ಕಷ್ಟವಾಗಿದೆ ವಿದ್ಯಾ ಇಲಾಖೆಯ ಡೆಪ್ಯುಟಿ ಇನ್ಸ್‌ಪೆಕ್ಟರವರು ಗವರ್ನಮೆಂಟ್ ಎ ವಿ ಸ್ಕೂಲ್ ಮತ್ತು ಆರ್ಯ ಬಾಲಿಕಾ ಪಾಠಶಾಲೆಗಳ ಪರೀಕ್ಷೆಮಾಡಿ ಕೊಂಡು ಈ ಮಾಹೆ 11 ನೇ ತಾ ಮಿಷನ್ ಗರಲ್ಸ್ ಸ್ಕೂಲಿಗೆ ದಯಮಾಡಿ ತರಗತಿಗಳನ್ನು ಪರೀಕ್ಷೆಮಾಡಿ ಹೊಸದಾಗಿ ಬಂದಿರತಕ್ಕ ಹೆಡ್ ಮಾಸ್ಟರವರಿಗೆ ಸ್ಕೂಲ್ ಕಾರ್ಯಗಳಿಯಾಗತಕ್ಕ ಕೆಲವು ವಿಷಯಗಳಲ್ಲೂ, ಹೊಲಿಗೆ, ಕಿಂಡರ್ ಗಾರ್ಟನ್ ವಗೈರೆ ಕೆಲಸಗಳ ವಿಷಯದಲ್ಲೂ ಕೆಲವು ಸಂಗತಿಗಳನ್ನು ಹೇಳಿ ಸ್ಕೂಲ್ ಮ್ಯಾನೇಜ್‌ಮೆಂಟ್ ವಿಷಯದಲ್ಲಿ ಬಹಳ ಸಂತೋಷಪಟ್ಟು ತೆರಳಿ ದರು —ಸಂತೆಬಜಾರದಲ್ಲಿ ಕತ್ತೆಗಳ ಕಾಟ ಬಹಳವಾಗಿದ್ದು ಮುನ್ಸಿಪಾಲಿಟಿ ಯವರು ಈ ವಿಷಯದಲ್ಲಿ ಗಮನಕೊಟ್ಟು ಅನುಕೂಲಪಡಿಸಿಯಾರೆಂದು ನಂಬಿ ರುತ್ತೇವೆ —ಸರ್ಕಾರಿ ಕೇದಾಯದ ಪಶುಲಾತಿಯ ವಿಷಯದಲ್ಲಿ ಈ ದುರ್ಭಿಕ್ಷ ಕಾಲದಲ್ಲಿ ವೈತಾಳಿ ಜನಗಳು ಧನವನ್ನು ಹೊಂದಿದ ಸರ್ಕಾರದವರು ರಿಯಾ ಯಿತಿ ತೋರಿಸಿಯಾರೆಂದು ಹಾರೈಸುತ್ತಿರುವರು ಈ ಮಾಹೆ ತಾ 18 ರ ಲಾಗಾಯ್ತು 10 ದಿವಸ ಪಾಂಡವಾತ್ರೆ ನಡೆಯುತ್ತೆ ಜಾತ್ರೆಯಲ್ಲಿ ದನಗಳ ಮತ್ತು ಇತರ ಪ್ರದರ್ಶನ ನಡೆಯಲು ಡೆ|| ಕಮಿಷನರವರೂ, ಅಮಲ್ದಾರರವರೂ ತಕ್ಕ ಏರ್ಪಾಡುಗಳನ್ನು ಮಾಡುತ್ತಾರೆ ಉತ್ತಮವಾದ ಪ್ರದರ್ಶನಗಳಿಗೆ ಬಹು ಮಾನಗಳು ದೊರೆಯುತ್ತವೆ ವರ್ತಕರು ಮತ್ತು ಠಿಕಾಣಿ ಜನಗಳು ಪರಸ್ಥಳ ದಿಂದ ಬರತಕ್ಕ ಜನಗಳಿಗೆ ಅನುಕೂಲವಾಗುವಂತೆ ಕುಡಿಯುವ ನೀರಿಗೂ, ದನ ಗಳ ಅನುಕೂಲಕ್ಕಾಗಿ ದೊಡ್ಡ ದೊಡ್ಡ ಹೊಂಡಗಳನ್ನು ಏರ್ಪಡಿಸಿರುತ್ತಾರೆ. ಪಟೇಲ್ ರಾಮಯ್ಯನವರು ಪರಸ್ಥಳದಿಂದ ಬರತಕ್ಕ ಜನಗಳಿಗೆ ಅನುಕೂಲವಾಗಿ ಧರ್ಮಾರ್ಥವಾದ ಅನ್ನಛತ್ರವನ್ನು ಇಡಿಸಿರುವದು ಶ್ಲಾಘನೀಯವಾಗಿದೆ — ಪ್ಲೀಡರ್ ಮ|| ಕನಕಸಭಾಪತಯ್ಯನವರೂ, ಪ್ಲೀಡರ್ ಮ|| ರಾಮಶಾಸ್ತ್ರಿಗಳ್ ವರೂ ಮುಂದೆ ಏಪ್ರಿಲ್ ತಾ 8 ರ ಲಾಗಾಯ್ತು ನಡೆಯತಕ್ಕ ಲೋವರ್ ಸೆಕೆಂ ಡರಿ ಪರೀಕ್ಷೆಗೆ ಬರುವ ಬಾಲಕ ಬಾಲಕಿಯರಿಗೆ ಅನುಕೂಲವಾಗಿ ಸಾ|| ಸಂಜುಂ ಡಶೆಟ್ಟರ ಛತ್ರದಲ್ಲಿ ಜಾತಿಭೇದವಿಲ್ಲದೆ ಪ್ರತಿ ಒಬ್ಬರಿಗೂ ಎಳಕಾಲದಲ್ಲಿ ಭೋಜ ನಮಾಡಿಸಲು ಏರ್ಪಾಡುಮಾಡಿರುವದು ಸ್ತೋತ್ರಾರ್ಹವಾಗಿದೆ ಈ ಮಹನೀ ಯರು ಇಂಥಾ ದುರ್ಭಿಕ್ಷ ಕಾಲದಲ್ಲಿ ಈ ರೀತಿ ಶ್ರಮಪಟ್ಟು ಪುಣ್ಯಕೆಲಸ ಮಾಡುತ್ತಿರುವುದು ಶ್ಲಾಘ್ಯವಾದದ್ದೆಂದು ಹೇಳಬೇಕಾಗಿಲ್ಲ

ಟಿ ನರಸೀಪುರ —ಬಿಸಿಲಿನ ಝಳ ಹೆಚ್ಚುತ್ತಾ ಇದೆ ಧಾರಣೆವಾಸಿಗಳು ಕಕ್ಕೆಮಟ್ಟಿಗೆ ಅನುಕೂಲವಾಗಿದ್ದದ್ದು ಈಗ ಸಂಸ್ಥಾನವೆಲ್ಲ ಒಂದೇ ಅದಂತೆ ಆಯಿ ತು ಬಡಜನರು ಜೀವನ ಮಾಡುವದು ತುಂಬಾ ಕಷ್ಟ —ಕನ್ನಹಳ್ಳಿ ಮೋಳೆ ಎಂಬ ಒಂದು ಗ್ರಾಮದಲ್ಲಿ ಸುಮಾರು 40 ಜನ ಉಪ್ಪಾರರು ಇದ್ದಾರೆ ಅವರ ಜೀವನೋಪಾಯಗಳನ್ನು ನೋಡಿ ಕೇಳಿದವರ್‍ಯಾರೂ ದುಃಖಪಡದೆ ಇರಲಾರರು ಮನೆಯಲ್ಲಿ 8-10 ಜನರಿದ್ದಾಗ್ಯೂ 2-3 ಸಲ್ಲಾ ಧಾನ್ಯ ಬೆಳೆದಿದ್ದರೆ ಅದೇ ಹೆಚ್ಚು ಯಾಕೆಂದರೆ ಅವರ ಜಮೀನುಗಳೆಲ್ಲಾ ಚೌಳು ಭೂಮಿಯಾಗಿವೆ ಆ ಜನರು ಪೂರ್ವದಿಂದಲೂ ಉಪ್ಪಿನ ನೋಳೆಯಿಂದ ಜೀವನ ಮಾಡಿಕೊಳ್ಳುತ್ತಿದ್ದರಂತೆ ಸರ್ಕಾರದವರು ಮೋಳೆಗಳನ್ನು ಇಡದಂತೆ ನಿರ್ಬಂಧ ಪಡಿಸಿರುವಹಾಗೂ, ಅನೇ ಸಾರಿ ಅಮಲ್ದಾರರಿಗೆ ಅರಿಕೆ ಮಾಡಿಕೊಂಡಾಗ್ಯೂ ಅವರ ಗಮನಕ್ಕೆ ಬರಲಿ ಲ್ಲವೆಂತಲೂ, ಪ್ರಜಾ ಪರಿಪಾಲನೆಯಲ್ಲಿ ಪ್ರೀತಿ ಸಾಗರರಾದ ಡೆಪ್ಯುಟಿ ಕಮಿಷನರ್ ಸಾಹೇಬರವರು ಈ ಪ್ರಾಂತ್ಯ ದಯಮಾಡಿಸಿದರೆ ತಮ್ಮ ಕಷ್ಟಗಳನ್ನೆಲ್ಲಾ ಅರಿಕೆ ಮಾಡಿಕೊಳ್ಳಬೇಕೆಂದೂ ಹಾರೈಸುವರು —ಕಾಲರಾದಿಂದ ಟಿ ನರಸೀಪುರದಲ್ಲಿ ಸುಮಾರು 14, ಮೂಗೂರಿನಲ್ಲಿ 11, ಬಾಗಳೆಯಲ್ಲಿ 5, ಈ ರೀತಿ ಮರಣಗಳಾ ದವು ಈಗ ದೇವರ ಕೃಪೆಯಿಂದ ಆರೋಗ್ಯವಾಗಿದೆ —ಬೆಂಗಳೂರು ಡಾಟಾ ರೇ ಷ್ಮೆ ಫಾರಮಿನಿಂದ ರೇಷ್ಮೆ ಬೆಳೆಮಾಡುವದನ್ನು ಕಲಿತು ತೇರ್ಗಡೆ ಹೊಂದಿದ ಮ|| ಮುತ್ತಪ್ಪನವರನ್ನು ಗೌರ್ನಮೆಂಟಿನವರು ರೇಷ್ಮೆ ವ್ಯವಸಾಯಾಭಿವೃದ್ಧಿ ಮಾಡಲು ಇನ್ಸ್‌ಪೆಕ್ಟರಾಗಿ ಈ ಪ್ರಾಂತ್ಯಕ್ಕೆ ಕಳುಹಿಸಿದ್ದಾರೆ ಇವರು ಮೂಗೂರಿ ನಲ್ಲಿ ವಾಸಮಾಡುವರು —ಈ ಪ್ರಾಂತ್ಯ ನೀರು ಸೇದುವ ಅನೇಕ ಬಾವಿಗಳಿಗೆ ಸುತ್ತಲೂ ಗೋಡೆ, ಗಾಲಿ ಇಲ್ಲದೆ ಬಹಳ ಅಪಾಯಕ್ಕೆ ಕಾರಣವಾಗಿದೆ ಈ ವಿಷಯವನ್ನು ಗ್ರಾಮದ ನೌಕರರುಗಳೂ, ಸ್ಯಾನಿಟರಿ ಇನ್ಸ್‌ಪೆಕ್ಟರೂ ಗಮನಿಸ ಬೇಕಾಗಿದೆ —ಪಟೇಲ್ ಶ್ಯಾನುಭೋಗರು ಕಂದಾಯ ವಸೂಲ್ಮಾಡುವಾಗ್ಗೆ ರೈತ ರಿಗೆ ಬರೆದು ಕೊಡುವ ರಶೀತಿಗಳನ್ನು ಇತರರ್‍ಯಾರೂ ತಿಳಿದು ಹೇಳುವದಕ್ಕೆ ಅವಕಾಶವಿಲ್ಲದ ಹಾಗೆ ಬರೆದು ಕೊಡುತ್ತಾರಂತೆ ರಶೀತಿಗೆ ಸಮಂಜಸವಾಗಿ ಕ್ರಮವಾಗಿರುವ ಬರವಣಿಗೆಯನ್ನು ಬರೆಯಲು ಸರ್ಕಾರದವರು ವಿಧಾ ಯಕ ಮಾಡುವಂತೆ ರೈತರು ಮೊರೆಯಿಡುತ್ತಾರೆ —ಮೂಗೂರಿನಲ್ಲಿ ಅನೇಕ ವರ್ಷಗಳಿಂದ ಸರ್ಕಾರದವರು ವಿದ್ಯಾಭಿವೃದ್ಧಿಗಾಗಿ ಪ್ರಯಾಸಪಡುತ್ತಾ ಇದ್ದಾ ಗ್ಯೂ ತಕ್ಕ ಕಟ್ಟಡವಿಲ್ಲದೆ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಬಹಳ ಕಷ್ಟವಿತ್ತು ಈಗ ಆರೋಗ್ಯವಾದ ಒಂದು ಸ್ಥಳವನ್ನು ಕೊಂಡುಕೊಂಡು ಕಟ್ಟಡ ಕಟ್ಟಲು ಸ್ಯಾಂಕ್ಷನ್ ಮಾಡಿದ್ದಾರೆ ರಸ್ತೆ ಮಟ್ಟಂಗೂ, ಕೇರಿನ ಕೆಲ ಸವೂ ನೋಡಿದವರು ಈ ಸ್ಕೂಲಿನ ಕಾಮಗಾರಿ ಅದರಂತೆಯೇ ಆದೀತೆಂದು ಹೇಳುವದಕ್ಕೆ ಕಾರಣವಾಗಿದೆ ಮೇಲಿನ ಅಧಿಕಾರಿಗಳು ಈ ವಿಷಯಕ್ಕೆ ಹೆಚ್ಚಾ ಗಿ ನಿಗಾ ಕೊಡುವರೆಂದು ನಿರೀಕ್ಷಿಸುತ್ತಾರೆ

ಶಿಕಾರಿಪುರ —ದಿವಾನ್ ಸಾಹೇಬರವರ ಸವಾರಿಯು ಈ ತಿಂಗಳು ತಾ 5 ನೇ ಬುಧವಾರ ಬೆಳಿಗ್ಗೆ ಶಿವಮೊಗ್ಗದಿಂದ ಇಲ್ಲಿಗೆ ಮೋಟಾರ್ ಮೇಲೆ ಬಂದು, ಮ್ಯಾಂಗನೀಸ್ ಪ್ಲಾಂಟಿಗೆ ಹೋಗಿ ಅಲ್ಲಿ ನಡೆಯತಕ್ಕ ಕೆಲಸಕಾರ್ಯಗಳನ್ನು ಪರಾಂಬರಿಸಿಕೊಂಡು ಪುನಹ ಶಿವಮೊಗ್ಗಕ್ಕೆ ದಯಮಾಡಿದರು —ಇಲ್ಲಿನ ಡೆಪ್ಯುಟಿ ಅಮಲ್ದಾರ್ ಮ|| ಎ ವಿ ರಾಮರಾಯರವರಿಗೆ ಫ್ರೆಂಚ್ ರಾಕ್ಸಿಗೆ ವರ್ಗವಾದ್ದರಿಂದ ಅವರು ಶಿವಮೊಗ್ಗಾ ತಾ ಅಮಲ್ದಾರ್ರಿಗೆ ತಾ 11 ರಲ್ಲಿ ಛಾರ್ಜ ವಹಿಸಿದರು ಆ ದಿವಸ ಮಧ್ಯಾಹ್ನ ಇಲ್ಲಿಯ ಸಮಸ್ತರೂ, ನೌಕರರೂ ಸೇರಿ ಉಚಿತ ಭೋಜನಾದಿಗಳನ್ನು ಮಾಡಿ ಸಾಯಂಕಾಲ ಎಲ್ಲರೂ ಇಲ್ಲಿಯ ಟ್ರಾವಲರ್ಸ್ ಬಂಗ್ಲೆಯಲ್ಲಿ ಸಭೆಸೇರಿ ಗಂಧಪುಷ್ಪ ತಾಂಬೂಲಾದಿಗಳು ಹಂಚಲ್ಪ ಟ್ಟವು ಆಗ ನಾಡಿಗರ ಮ ಗುರುರಾಯರು ಅವರ ಗುಣಕಥನ ಮಾಡಿದರು ಇವರು ಈ ಸಬ್ ತಾಲ್ಲೂಕಿಗೆ ಬಂದ ಲಾಗಾಯಿತು ನಿಷ್ಪಕ್ಷಪಾತವಾಗಿ ಕೆಲಸಮಾ ಡಿ ಎಲ್ಲರಲ್ಲಿಯೂ ಪ್ರೀತಿಯನ್ನು ಸಂಪಾದಿಸಿಕೊಂಡಿದ್ದರು ಇಂಥಾ ನ್ಯಾಯಾಧಿ ಕಾರಿಯನ್ನು ಕಳೆದುಕೊಂಡದ್ದು ಇಲ್ಲಿನ ಪ್ರಜೆಗಳ ದುರದೃಷ್ಟವಾಗಿದೆ ಇಲ್ಲಿಗೆ ವರ್ಗವಾದ ಮ|| ಹೈದರಲ್ಲಿ ಖಾನ್ ರವರು ತಾ 12ನೆ ಪ್ರಾತಃಕಾಲ ದಯಮಾಡಿ ಮರುದಿನ ಬೆಳಿಗ್ಗೆ ಛಾರ್ಜ ವಹಿಸಿದರು ಇವರು ಹಿಂದಿನವರಂತೆ ಕೆಲಸ ಮಾಡಿ ಪ್ರಜೆಗಳ ಪ್ರೀತಿಯನ್ನೂ, ಮೇಲ್ಪಟ್ಟವರಲ್ಲಿ ಗೌರವವನ್ನೂ ಸಂಪಾದಿಸಿಕೊಂಡಾ ರೆಂದು ಹಾರೈಸುತ್ತೇನೆ — ಈ ಟೌನಿಗೆ ಸೇರಿದ ಕುರುಬರ ಜಾತಿಯವರು ವಾಸ ವಾಗಿರು ರಾಗೀಬೀದಿಯಲ್ಲಿ ತಾ 12ನೇ ಸಾಯಂಕಾಲ 5 ಘಂಟೆ ಸಮಯದ ಲ್ಲಿ ಮಾರಿ ಎಂಬ 10 ವರ್ಷದ ಹುಡುಗಿಯು ನೀರುಕಾಯಿಸುತ್ತಿರುವಾಗ ಒಲೆಯ ಸಮೀಪ ಇದ್ದ ಸೊಪ್ಪಿನ ಸರಕಿಗೆ ಬೆಂಕಿ ತಗಲಿ ವಾಸದ ಮನೆ, 10 ದನದ ಹಟ್ಟಿಗಳು, 5 ಛತ್ತದ ಹುಲ್ಲು, ಎಲ್ಲಾ ಸುಟ್ಟುಹೋದವು ಅನೇಕ ಜನಗಳು ಸೇರಿ ಬೆಂಕಿಯನ್ನು ಆರಿಸುವುದಕ್ಕೆ ಬಹು ಪ್ರಯತ್ನಪಟ್ಟಾಗ್ಯೂ ಫಾಯಿದೆ ಹೆಚ್ಚಾಗಿದ್ದ ಪ್ರಯುಕ್ತ ಆಟೋಪಕ್ಕೆ ಬರಲಿಲ್ಲ ಮನೆ ಸುಟ್ಟುಕೊಂಡವರಲ್ಲಿ ಅನೇಕರು ಬಹಳ ಬಡವರಾಗಿದ್ದಾರೆ ಮನೆಯಲ್ಲಿದ್ದ ಬಟ್ಟೆ ವಗೈರೆ ಯಾವ ಸಾಮಾ ನು ತೆಗೆಯುವದಕ್ಕೂ ಅವಕಾಶವಾಗಲಿಲ್ಲ ಸುಗ್ಗಿ ಕಾಲವಾದ್ದರಿಂದ ಮನೆಯಲ್ಲಿ ಭತ್ತ, ರಾಗಿ, ಹುರಳಿ, ಬೆಲ್ಲ ತುಂಬಿಕೊಂಡಿದ್ದರು, ಹಿತ್ತಲಲ್ಲಿ ಭಾರಿ ಭಾರಿ ಹುಲ್ಲು ಬಣವೆಗಳು ಇದ್ದವು ಇದೆಲ್ಲಾ ಸುಮಾರು ನಾಲ್ಕು ಸಾವಿರ ರೂಪಾಯಿ ನ ಮಾಲುಗಳು ಬೆಂಕಿ ಪಾಲಾಯಿತು ಇವರ ಗೋಳಾಟ ನೋಡುವದು ಅಸಾ ಧ್ಯವಾಗಿದೆ ಇಲ್ಲಿ ಇರತಕ್ಕ ಅನುಕೂಲಸ್ಥರು ನಷ್ಟಪಟ್ಟವರಿಗೆ ಕೈಲಾದಷ್ಟು ಸಹಾಯ ಮಾಡ್ಯಾರೆಂತ ನಂಬಿದ್ದೇನೆ ಸರ್ಕಾರದವರು ಪುನಹ ಮನೆ ಕಟ್ಟಿಕೊ ಳ್ಳುವದಕ್ಕೆ ಇವರಿಗೆ ಮುಫತ್ತಾಗಿ ನಾಟಗಳನ್ನು ಕೊಡಬಹುದಾಗಿ ನಿರೀಕ್ಷಿಸಿದೆ ಇಲ್ಲಿಯ ಸಬ್ ತಾಲ್ಲೂಕು ಕಟ್ಟಡವು ಬಹು ಪುರಾತನವಾಗಿದ್ದು ಚಿಕ್ಕದಾಗಿದೆ ಇದರಲ್ಲಿಯೇ ಪೊಲೀಸ್ ಸ್ಟೇಷನ್ ಲಾಕಪ್ಪು ಸಹ ಇದೆ ಆರ್ ನೌಕರರು ವಾಸ ವಾಗಿರುತ್ತಾರೆ ಇದರಿಂದ ಸ್ಥಳ ಸಂಕೋಚವಾಗಿ, ಶಗಣಿ ಮತ್ತು ಸೆಕೆಯ ಕಾಟ ದಿಂದ ನೌಕರರು ಪೇಚಾಡುತ್ತಾರೆ ಕಣ್ಣು ಕಪಟಗಳ ಆವಾಂತ್ರ ಬೇರೆ ಬಾರ್ ನೌಕರರು ಮಾಂಸಾದಿಗಳನ್ನು ಬೇಯಿಸುವುದರಿಂದ ಇದರ ವಾಸನೆ ಒಂದು ಇವುಗಳನ್ನೆಲ್ಲಾ ಸಹಿಸಿಕೊಂಡು ನೌಕರರು ಕೆಲಸ ಮಾಡಬೇಕಾಗಿದೆ ಇದನ್ನು ವಿಚಾರಿಸುವವರೇ ಇಲ್ಲ ಸರ್ಕಾರದವರು ಹೊಸದಾಗಿ ಸಬ್ ತಾಲ್ಲೂಕು ಕಟ್ಟಡ ಕಟ್ಟುವದಕ್ಕೆ ಸ್ಯಾಂಕ್ಷನ್ ಮಾಡಿ ಎರಡು ವರುಷವಾಯಿತು ಇಂಜನಿಯರ್ ಇಲಾಖೆಯವರು ಸ್ಥಳ ಚುನಾವಣೆಮಾಡಿ ಒಂದು ವರುಷದ ಮೇಲಾಯಿತು ಕೆಲಸವೇನೋ ಪ್ರಾರಂಭಿಸಿರುವದಿಲ್ಲ ಇನ್ನಾದರೂ ಬೇಗ ಪ್ರಾರಂಭಿಸಲು ಸರ್ಕಾರದವರು ಅಪ್ಪಣೆ ದಯಪಾಲಿಸ್ಯಾರೆಂದು ಆಶಿಸುತ್ತೇವೆ — ಇಲ್ಲಿಯ ಟೌನ್ ಶಾಖೆಯ ಕೆಲಸಗಳು ಸ್ವಲ್ಪವೂ ತೃಪ್ತಿಕರವಾಗಿಲ್ಲ ಈಗ ಬಂದಿರುವ ಅಮಲ್ದಾರ್ರವರೂ ಗಮನಕೊಟ್ಟರೆ ಆರೋಗ್ಯಾಭಿವೃದ್ಧಿಯಾಗುತ್ತೆ —ಈಗ ಎಂಟ್ ರತಕ್ಕ ವಾಕ್ಟರವರು ರೋಗಿಗಳಿಗೆ ಒಳ್ಳೆ ಔಷಧ ಕೊಟ್ಟು ಗುಣಮಾಡುತ್ತಾರೆ.

ಆರೋಗ್ಯ ಸೂತ್ರಗಳು

ಏಲಾಮಯತಿಯ ಪ್ರಥಮ ಪಾಠಶಾಲೆಗಳಲ್ಲಿ ಈ ಕೆಳಗಿನ ಆರೋಗ್ಯ ಸೂತ್ರಗಳನ್ನು ಸ್ಪಷ್ಟಾಕ್ಷರಗಳಿಂದ ಬರೆದು ಗೋಡೆಗೆ ತೂಗಹಾಕುವುದಲ್ಲದೆ, ಇವುಗಳನ್ನು ಮಕ್ಕಳಿಗೆ ಬಾಯಿಪಾಠ ಮಾಡಿಸಿ, ಅವುಗಳು ಹೃದಯಂಗಮವಾಗುವಂತೆ ಬೋಧಿಸುವರು. ನಮ್ಮ ಸೀಮೆಯ ಪ್ರಥಮ ಪಾಠಶಾಲೆಯ ಉಪಾಧ್ಯಾಯರೂ ಇವನ್ನು ಲಕ್ಷ್ಯಕ್ಕೆ ತರುವರೆಂದು ನಂಬಿ ಇಲ್ಲಿ ಪ್ರಕಟಿಸಿರುವೆವು. ಈ ಕೆಲವು ಆರೋಗ್ಯ ಸೂತ್ರಗಳನ್ನು ಅನುಸರಿಸುವುದಾದರೆ ರೋಗಗಳಿಂದಲೂ ಹಿಂಸೆಗಳಿಂದಲೂ ಉದ್ಧರಿಸಲ್ಪಟ್ಟು ಸುಖಜೀವನವನ್ನು ಹೊಂದುವುದು ಅಲ್ಲದೆ ದೀರ್ಘ ಕಾಲ ಬದುಕಿ [illegible]ವನ್ನೂ ಸಂಪಾದಿಸಿಕೊಳ್ಳಬಹುದು.

ಗಾಳಿ ಬೆಳಕು — ನಿರ್ಮಲವಾದ ಗಾಳಿಯೇ ಜೀವನದ ಆಧಾರ. ಶುಭ್ರವಾದ ಸೂರ್ಯನ ಕಿರಣಗಳು ಆರೋಗ್ಯವನ್ನುಂಟುಮಾಡುವವು. ಆದುದರಿಂದ ಇವೆರಡನ್ನೂ ನೀವು ಮನೆಯೊಳಕ್ಕೆ ಬರಗೊಡಿರಿ. ಒಂದು ಸಲ ಉಸಿರು ಬಿಟ್ಟ ಗಾಳಿಯನ್ನು ಮತ್ತೊಂದು ಸಲ ಸೇವಿಸಿಕೊಳ್ಳುವುದಾದರೆ ಕಲುಷಿತ ಉಂಟಾಗುವುದು. ಅನುಕೂಲತೆ ಇದ್ದಲ್ಲಿ ಎಲ್ಲಾ ಬಾಗಿಲುಗಳನ್ನೂ ಕಿಟಕಿಗಳನ್ನೂ ತೆರೆದು [illegible]

[illegible]

ಕಾಲರ [illegible] ಉದರ ನಿವಾರಣೆ

[illegible]

ದಿವಾನರವರ ಸರ್ಕೀಟು

[illegible]

[illegible]

ಶೃಂಗೇರಿ

[illegible]

ಹೊಸ ಬಿದಾರಕ್ಕೆ ದಯಮಾಡಿಸಿದರು ನಂತರ ಪೋರ್ ಇನ್ಸ್ಪೆಕ್ಟರ್‌ಗಾಗಿ ದಾರಿಯಲ್ಲಿ ಹೊರಟು ಪರಿವಾರ ಬೀದಿಯಿಂದ ಅರೇಕಲಾ ಬೀದಿಗೆ ದಯಮಾಡಿ ಬ್ರ ರಾಮೇಶ್ವರ ಶಾಸ್ತ್ರಿಗಳವರ ಮನೆಯ ಬಾಗಿಲಿನಲ್ಲಿ ಪದ್ಧತಿ ಮರ್ಯಾದೆಯಂತೆ ಸ್ವೀಕರಿಸಿ ಅವರ ಕೂಡ ಕುಶಲಪ್ರಶ್ನೆಯ ಮಾಡಿ ಎ ವಿ ಸ್ಕೂಲಿಗೆ ದಯಮಾಡಿಸಿದರು ಅಲ್ಲಿ ಹೆಡ್ ಮಾಸ್ಟರು ಮುಂತಾಗಿ ಮುಖ್ಯವರ್ಗದಿಂದ ಶ್ರೀಯವರ ಸ್ವಾಗತವನ್ನು ಬಯಸಿದರು ಅಲ್ಲಿ ಡ್ರಿಲ್ಲನ್ನು ಪರಾಂಬರಿಸಿ ಪಡಗಳನ್ನು ನೋಡಿ ಇಲ್ಲಿ ಕೈಗಾರಿಕೆ ಒಂದನ್ನು ಏರ್ಪಡಿಸತಕ್ಕದ್ದು ಉಚಿತವೆಂದು ಅಪ್ಪಣೆ ಕೊಡಿಸಿ ವರ್ಗ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಟ್ಟು ಊರಿನವರನ್ನು ಮೆಟ್ರಿಕ್ಯುಲೇಷನ್ ಕಳುಹಿಸಲು ಪ್ರೋತ್ಸಾಹಿಸಬೇಕೆಂತಲೂ, ಸಾಮಾನ್ಯ ಸ್ಕೂಲ್‌ಗೆ ಕೆಲಸವನ್ನು ತಿಳಿಯಬೇಕೆಂತಲೂ ಪಿ. ಟಿ. ವಾಗಿ ಹೇಳಿದಾಗ ಆ ರೀತಿ ಒಪ್ಪಿಕೊಂಡರು ಸ್ಕೂಲಿನ ಹಿಂಬಾಗದ ಗದ್ದಿಗೆ ಹೋಗಿ ಮಾರ್ಕೆಟ್ಟು ಮತ್ತು ಗರ್ಲ್ಸ್ ಸ್ಕೂಲು ಚಂಡಿನಾಟಕ್ಕೆ ಟ್ರೈಲ್ ಮುಂತಾಗಿ ಏರ್ಪಡಿಸುವಂತೆ ತಿಳಿಸಿದರು ಮತ್ತು ವ್ಯವಸಾಯದ ವಿಷಯವಾಗಿ ಪ್ರಶ್ನೆ ಮಾಡಿದರು ನಂತರ ಸೋಪ್ ಫ್ಯಾಕ್ಟರಿಗೆ ಹೋಗಿ ಮ್ಯುನಿಸಿಪಲ್ ಕಚೇರಿಯಲ್ಲಿ ಕಡತಗಳಿಗೆ ದರ್ಶನವ ಕೊಟ್ಟು ಆಸ್ಪತ್ರೆ, ರೀಡಿಂಗ್ ರೂಮ್, ಪೋಲೀಸ್ ಸ್ಟೇಷನ್, ಇವುಗಳ ಪರಾಂಬರಿಕೆಯಿಂದ ಗರ್ಲ್ಸ್ ಸ್ಕೂಲಿಗೆ ದಯಮಾಡಿಸಿ ಅಲ್ಲಿ ಬಾಲಿಕೆಯರ ಗಾಯನ, ಪುನಃ ಬಿದಾರಕ್ಕೆ ದಯಮಾಡಿಸಿ ಅಲ್ಲಿಂದ 12 ಗಂಟೆಗೆ ಸ್ವಾಮಿಯವರಕ್ಕೆ ಶ್ರೀ ಜಗದ್ಗುರು ಚಂದ್ರಶೇಖರ ಭಾರತೀಮಹಾಸ್ವಾಮಿಯವರ ದರ್ಶನಕ್ಕೆ ದಯಮಾಡಿಸಿದರು ಅಲ್ಲಿ ಬ್ರ ಪಂಡಿತ ವಿರೂಪಾಕ್ಷ ಶಾಸ್ತ್ರಿಗಳವರ ಗ್ರಂಥಗಳನ್ನು ಓದಿದರು ಸಲ್ಪ ಹೊತ್ತು ಸ್ವಸ್ಥಾನದಲ್ಲಿ ಸಂಭಾಷಣೆ ಅನುಮತಿಯ ನಂತರ ಸವಾರಿಯು ದರ್ಶನ ಮಾಡಿಕೊಂಡು ತೋಳಿಯ ಪಕ್ಕಗಳ ನೋಡಿದವರು ನೋಡಿ ಶ್ರೀ ಶಾರದಾ ಎಂಬ ಶಂಕರ ನಾರಾಯಣ ದೇವ ಮಂದಿರ ಪಾರಾಯಣ, ಪಲ್ಲಕ್ಕಿ, ಮೊಕ್ಷಸದ ಲಭಗಳು ಇವುಗಳನ್ನು ನೋಡಿ 1 ಗಂಟೆ ಹೊತ್ತಿಗೆ ಊರಿನಿಂದ ದಯಮಾಡಿಸಿದರು ಇವರು ಮಹತ್ವ ಮುಳ್ಳದ್ದರೂ ನಗರದತೆಯಿಂದ ಸಕಲರ ಯೋಗಕ್ಷೇಮಾನುಕೂಲಗಳನ್ನು ವಿಚಾರಿಸಿ, 1 ಗಂಟೆಯ ಕಾಲದಲ್ಲಿಯೇ ಎಲ್ಲಾ ವಿದ್ಯಮಾನಗಳ ತಿಳಿದು ಸದಾ ಅಂತಃಕರಣ ಭಾವವುಳ್ಳ ಇಂಥಾ ಮಹಾರಾಜರು ನಮ್ಮ ಜನಗಳ ಅದೃಷ್ಟವಶಾತ್ ಉತ್ತಮರಾಗಿ ಎಲ್ಲಾ ಜಾಗದಲ್ಲಿಯೂ ತಮ್ಮ ಪ್ರಜೆಗಳು ಮಿಕ್ಕ ಎಲ್ಲಾ ವಿಷಯಗಳನ್ನು ಯೋಚಿಸುತ್ತಾರೆ.

ಕೊಪ್ಪ ತಾ|| ಹುಲಿವರಸ್ಸರ

ಶ್ರೀಮಾನ್ ಮೈಸೂರು ದೇವಾನ್ ವಿಶ್ವೇಶ್ವರಯ್ಯನವರು ಶಿ ಎ ಶಂಕರಯ್ಯರವರು ಕೊಪ್ಪಕ್ಕೆ ಶ್ರೀ ಶ್ರೀ ಕೆ ಸಾಹೇಬರ ಪ್ರಯಾಣದ ಅಯ್ಯನವರೊಡನೆ ಆಗುಂಬೆ ಮಾರ್ಗವಾಗಿ ದಯಮಾಡಿಸಿದ ಸಮಯದಲ್ಲಿ ಹಲಂಕರಿಸಿದ ಮಂಟಪದಲ್ಲಿ ಕಾದಿದ್ದ ಜನಗಳಿಗೆ ದರ್ಶನ ಕೊಟ್ಟು ರಾತ್ರಿ ಸ್ಯಾಂಕ್ಷನ್ ಸ್ವಾಗತಕ್ಕೆ ಶೃಂಗೇರಿಗೆ ಪ್ರಯಾಣ ಬೆಳೆಸಿದರು ತಾರೀಖು ಶೃಂಗೇರಿಗೆ ಪರಿವಾರದೊಡನೆ ದಯಮಾಡಿಸಿದ ದಿವಾನ್ ಸಾಹೇಬರವರು ಮಠದ ದಿವಾನರ ಮತ್ತು ಇತರ 11 ಘಂಟೆ ಸಮಯದಲ್ಲಿ ಸುಯೋಗವನ್ನು ಎದುರು ಮಠದ ಮರ್ಯಾದೆಗಳೊಡನೆ ವೈದಿಕರು ಲೌಕಿಕರು ಮೊದಲಾದ ದೊಡ್ಡ ಪೌರರು ಎದುರುಗೊಂಡು ತೆಂಗು ತೋರಣಾದಿಗಳಿಂದಲೂ, ಮೆರವಣಿಗೆಯಿಂದ ರಮಣೀಯವಾಗಿದ್ದ ಈ ಊರಿನ ಶ್ರೀ ಮಠಕ್ಕೆ ಬರಮಾಡಿಕೊಂಡರು ದಿವಾನ್ ವಿಶ್ವೇಶ್ವರ ಸಾಹೇಬರವರು ಮಠದ ಶ್ರೀಗಳವರಾದ ಸನ್ನಿಧಾನದ ಸರಸ್ವತಿ ಸ್ವಾಮಿಗಳವರ ದರ್ಶನವ ಮಾಡಿ, ಪರಸ್ಪರ ಕುಶಲಪ್ರಶ್ನೆಗಳು ಸಂಭಾಷಣೆ ಮಾಡಿದರು ನಂತರ ಶ್ರೀ ಶಾರದಾ ಮತ್ತು ಸರ್ವರ ದರ್ಶನ ಮಂಗಳಾರತಿ ಮುಗಿದ ನಂತರ ಉತ್ಸವಗಳು ನಡೆದವಾಗಿ ಎಲ್ಲಾ ಶ್ರೀಗಳವರು ಈ ಬಹಳ ಪುರಾತನವಾದ ಸರ್ಕಾರದ ಆಡಳಿತದ ಒಳಪಟ್ಟಿರುವ ಶ್ರೀ ಮಠದ ಕಟ್ಟಡವನ್ನು ಜೀರ್ಣೋದ್ಧಾರ ಮಾಡ ಕಲ್ಲಿನಿಂದ ಈ ಮಹತ್ಕಾರ್ಯದಲ್ಲಿ ಈಗ ಸರ್ಕಾರದ ಸಹಾಯದಿಂದ ಪ್ರಸ್ತುತದಲ್ಲಿ ಶ್ರೀ ಶಂಕರಾಚಾರ್ಯರಿಂದ ಪ್ರತಿಷ್ಠಿತವಾದ ಶ್ರೀ ಶಾರದಾ ಮಠದ ಹೊಸದಾದ ಕಲ್ಲಿನ ಕೆಲಸವು ಸಲ್ಪದಲ್ಲಿ ಪೂರೈಸುವುದಾಗಿ ಬರುವ ಚೈತ್ರ ಮಾಸದಲ್ಲಿ ಪ್ರತಿಷ್ಠೆ ಮಾಡಬೇಕಾಗಿರುವ ಸಂಗತಿಯನ್ನೂ ಉಳಿದ ಕೆಲಸಗಳು ಸರ್ಕಾರದವರ ಸಹಾಯದಿಂದ ಮುಗಿಯಬೇಕಾಗಿದೆ ಎಂಬುದಾಗಿಯೂ ಅಪ್ಪಣೆಕೊಡಿಸಿ ಫಲ ಮಂತ್ರಾಕ್ಷತೆಯನ್ನು ಕೊಡಿಸಿದರು ದಿವಾನ್ ಸಾಹೇಬರವರು ಸಂತೋಷದಿಂದ ಸ್ವೀಕರಿಸಿ ದೇವಿ ಸಾಹೇಬರೊಡನೆ ಅಲ್ಲಿಂದ ಹೊರಟು ಆಸ್ಪತ್ರೆಯನ್ನು ಇನ್ಸ್‌ಪೆಕ್ಟರ್ ಎ ವಿ ಸ್ಕೂಲು ಮಠದ ವಿರಕ್ತ ದಯಮಾಡಿ ಸ್ಕೂಲಿನ ನಿಪುಣರಾದ ಶಿಕ್ಷಕರು ಸ್ಕೂಲು ವಿದ್ಯಾರ್ಥಿಗಳಿಂದ ಓದಲ್ಪಟ್ಟ ವಿಜ್ಞಾಪನಾ ಪತ್ರಿಕೆ ಯನ್ನು ಆನಂದದಿಂದ ಸ್ವೀಕರಿಸಿ ಜಮೀನ್ದಾರ ಅಗ್ರಹಾರದ ಈ ಪ್ರದೇಶದ ಪಾಳ್ಯದ ಇವರು ಗುಡಿ ದೇವರ ದರ್ಶನಮಾಡಿ ಪ್ರಜೆಗಳ ಕಷ್ಟ ಸುಖಗಳನ್ನು ವಿಚಾರಿಸಿಕೊಂಡು ಕೊಪ್ಪಕ್ಕೆ ಚಿತ್ತೈಸಿದರು

ಮೂಡಿಗೆರೆ.

ಒಕ್ಕಲಿಗರ ವಿದ್ಯಾರ್ಥಿ ನಿಲಯದ ಆಧಾರ ಶಿಲಾ ಸ್ಥಾಪನೆ

ಈ ತಿಂಗಳು 11ನೇ ತಾರೀಖು ಶುಕ್ರವಾರ ಬೆಳಗ್ಗೆ 8 ಘಂಟೆಗೆ ಮೂಡಿಗೆರೆ ಟೌನಿನಲ್ಲಿ ಚುನಾಯಿಸಲ್ಪಟ್ಟಿರುವ ಸರ್ಕಾರದ ಜಮೀನಿನಲ್ಲಿ ಒಕ್ಕಲಿಗರ ವಿದ್ಯಾರ್ಥಿ ನಿಲಯದ ಆಧಾರ ಶಿಲೆಯನ್ನು ಮೈಸೂರು ಸರ್ಕಾರದ ಸಾಹೇಬರವರಾದ ಮಿ ಎಂ ವಿಶ್ವೇಶ್ವರಯ್ಯ, ಬಿ. ಎ. ಸಿ. ಐ. ಇ ಅವರು ಇಟ್ಟರು ಈ ಉತ್ಸವಕ್ಕಾಗಿ ಒಂದು ದೊಡ್ಡ ಚಪ್ಪರವು ಹಾಕಿ ತೋರಣ ವಾದ್ಯಗಳಿಂದಲೂ ಅಲಂಕರಿಸಲ್ಪಟ್ಟಿತ್ತು ಡಿಸ್ಟ್ರಿಕ್ಟ್ ಕಮಿಷನರವರಾದ ಮಿ ಎ ಸುಬ್ರಮ್ಮಣ್ಯರು, ಡೆಪ್ಯುಟಿ ಕಮಿಷನರ್ ಮಿ ಸುಬ್ರಹ್ಮಣ್ಯಯ್ಯನವರು ಮತ್ತು ಇತರ ಸ್ಥಳೀಯ ಅಧಿಕಾರಿಗಳು ಹಾಜರಿದ್ದರು ಅನೇಕ ಮಂದಿ ಮಹನೀಯರು ಸಹ ಬಂದಿದ್ದರು ಒಕ್ಕಲಿಗರ ನಿಲಯದ ಕಟ್ಟಡಕ್ಕಾಗಿ ಮೂರು ಸಾವಿರ ರೂಪಾಯಿ ಚಂದಾ ಹಣ ಈ ಪ್ರಾಂತದ ಒಕ್ಕಲಿಗರು ಕೊಡಿಸಿ ತಾಲ್ಲೂಕ್ ಖಜಾನೆಯಲ್ಲಿ ಇಟ್ಟರು ಮಠದವರು ಒಕ್ಕಲಿಗರ ಪರವಾಗಿ ಒಕ್ಕಲಿಗರ ಸಂಘದ ಜನರಲ್ ಸೆಕ್ರಟರಿ ಮಿ|| ಕೆ ಎಚ್ ರಾಮಯ್ಯನವರು ಮಾಡಿದ ಉಪನ್ಯಾಸವನ್ನೂ, ಅದಕ್ಕೆ ದಿವಾನ್ ಸಾಹೇಬರವರು ದಯಪಾಲಿಸಿದ ಪ್ರೋತ್ಸಾಹಕರವಾದ ಉತ್ತರವನ್ನು ಕೆಳಗೆ ಕಾಣಿಸುತ್ತೇವೆ

ಮಿ ರಾಮಯ್ಯನವರ ಉಪನ್ಯಾಸ

ಮಹಾಸ್ವಾಮಿ, 1906ನೆಯ ಇಸವಿಯಲ್ಲಿ ನಮ್ಮ ಒಕ್ಕಲಿಗರ ಸಂಘವು ಮೈಸೂರಿನಲ್ಲಿ ಮೊದಲು ಸ್ಥಾಪಿಸಲ್ಪಟ್ಟಿತು ಅದೇ ವರ್ಷ ಅಕ್ಟೋಬರ್ ತಿಂಗಳಲ್ಲಿ ಮೊದಲನೆಯ ಮಹಾ ಸಭೆಯು ಬಹಳ ವಿಜೃಂಭಣೆಯಿಂದ ನಡೆಯಿತು ಮೈಸೂರಿನಲ್ಲಿ ನಡೆದ ಎರಡನೆಯ ಮಹಾ ಸಭೆಯು ಶ್ರೀಮಾನ್ ಮಹಾರಾಜಾ ಅವರ ಬಹದೂರರವರಿಂದ ಉಪಕ್ರಮಿಸಲ್ಪಟ್ಟಿತು ಬೆಂಗಳೂರಿನಲ್ಲಿ ಮೂರನೆ ಮಹಾಸಭೆಯು ಹಾಸನದಲ್ಲಿ ನಮ್ಮ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರವರಾದ ಮಿ|| ಎಸ್ ಎಂ ಫ್ರೇಸರ್ ಸಿ ಎಸ್ ಐ ರವರು ನಮಗೆ ಬುದ್ಧಿವಾದ ದಯಪಾಲಿಸಿದರು ಹೋದವರ್ಷ ಹಾಸನದಲ್ಲಿ ನಡೆದ ಮಹಾಸಭೆಯು ದಿವಾನ್ ಸಾಹೇಬರಿಂದ ಉಪಕ್ರಮಿಸಲ್ಪಟ್ಟಿತು ಶ್ರೀ ರಾಮುಲಕ್ಕೆ ನಮ್ಮ ಶ್ರೀಮನ್ ಮಹಾರಾಜರವರೂ ಶ್ರೀಮಾನ್ ಯುವರಾಜರವರೂ ನಮ್ಮ ಪ್ರೋತ್ಸಾಹಕರಾಗಿ ದಯವಿಟ್ಟು, ರಾಜಭಕ್ತಿ ಎಂಬ ಗುಣಗಳಲ್ಲಿ ಶ್ರೇಷ್ಠರಾಗಿಯೂ ಮತ್ತು ಈ ಸಂಸ್ಥಾನದ ಮುಖ್ಯ ಪ್ರಜೆಗಳಾಗಿಯೂ ಇರುವ ಒಕ್ಕಲಿಗರ ಮಂಡಲಿಯವರಿಗೆ ಪ್ರೋತ್ಸಾಹಿಸಿದ ವಿಷಯವು ಒಕ್ಕಲಿಗರ ಸಂಘದ ಶ್ರೇಯೋಭಿವೃದ್ಧಿಗೆ ಮುಖ್ಯ ಕಾರಣವಾಗಿ ಪರಿಣಮಿಸಿತು ನಮ್ಮ ಸರ್ಕಾರದವರು ಉದಾರಮನಸ್ಸಿನಿಂದ ಸಂಘದವರಿಗೆ ಕೊಟ್ಟಿರುವ ಜಮೀನಿನ ಮೇಲೆ ಭಾರೀ ಕಟ್ಟಡವು ತಯಾರಾಗುತ್ತಿರುವುದೂ, ಒಕ್ಕಲಿಗರ ಮುದ್ರಾಶಾಲೆಯಲ್ಲಿ ಇಂಗ್ಲೀಷು ಮತ್ತು ಕನ್ನಡ ಅಚ್ಚು ಕೆಲಸ ತಯಾರಾಗುತ್ತಿರುವುದೂ, ಒಕ್ಕಲಿಗರ ಪತ್ರಿಕೆಗೆ ದಿನೇದಿನೇ ಚಂದಾದಾರರು ಹೆಚ್ಚುತ್ತಿರುವುದೂ, ಒಕ್ಕಲಿಗರ ವಿದ್ಯಾರ್ಥಿನಿಲಯಕ್ಕೆ ವಿದ್ಯಾರ್ಥಿಗಳು ತಾನಾಗಿಯೇ ಬಂದು ಸೇರುತ್ತಿರುವುದೂ, ಇವೆಲ್ಲಾ ಒಕ್ಕಲಿಗರ ಸಂಘದ ಅಭಿವೃದ್ಧಿಯನ್ನು ಸೂಚಿಸತಕ್ಕ ಚಿಹ್ನೆಗಳಾಗಿವೆ — ಹಾಸನದ ಮಹಾ ಸಭೆಯ ಪ್ರೆಸಿಡೆಂಟರಾಗಿದ್ದ ಮ ಗಳಾದ ನಂದೀಶ್ವರದ ಕಲ್ಲೇಗೌಡರು, ಮಾಕೋನಹಳ್ಳಿ ಪ ದ್ಯಾವೇಗೌಡರು, ಉರುವಿನ್ಸ್ಪೆಕ್ಟರ್ ಕೆರಸೆ ಗೌಡರು, ಮಂಜೆ ಪ|| ಸಿದ್ದೆಗೌಡರು, ಎಚಕಲ್ ಮಂಡೆ ಪ ಮಂಚೇಗೌಡರು, ಕಾಪಿ ಪ್ಲಾಂಟರ್ ಸಣ್ಣಮಂಚೇಗೌಡರು, ಬಾಳೂರು ಮಂಚೇಗೌಡರು ಮುಂತಾದ ದೊಡ್ಡ ಮನುಷ್ಯರು ಈ ಮಲೆನಾಡು ಪ್ರಾಂತ್ಯದಲ್ಲಿರುವ ತಮ್ಮ ಜನರ ಲೋಪಸ್ಥಿತಿಯನ್ನು ನೋಡಿ ಪಶ್ಚಾತ್ತಾಪಗೊಂಡು ಈಗಲಾದರೂ ಅವರನ್ನು ಅಭಿವೃದ್ಧಿಸ್ಥಿತಿಗೆ ತರಬೇಕೆಂಬ ಉದ್ದೇಶದಿಂದ ಈ ಮೂಡಗೆರೆಯಲ್ಲಿ ಒಂದು ಒಕ್ಕಲಿಗರ ಸಂಘದ ಶಾಖೆಯನ್ನು ಏರ್ಪಡಿಸಿ ಒಕ್ಕಲಿಗರ ಸಂಘದ ಉದ್ದೇಶಗಳನ್ನು ಇಲ್ಲಿ ಪ್ರಚಾರಕ್ಕೆ ತರಬೇಕೆಂದಿರುವುದಲ್ಲದೆ ಒಕ್ಕಲಿಗರ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಒಂದು ಒಕ್ಕಲಿಗರ ವಿದ್ಯಾರ್ಥಿನಿಲಯವನ್ನು ಏರ್ಪಡಿಸಿ ತನ್ಮೂಲಕ ಅವರ ವಿದ್ಯಾಭಿವೃದ್ಧಿಯನ್ನುಂಟು ಮಾಡಬೇಕೆಂದು ಸಂಕಲ್ಪಿಸಿರುತ್ತಾರೆ ಇದಕ್ಕಾಗಿ ಮೂರು ಸಾವಿರ ರೂಪಾಯಿ ಚಂದಾ ಕೊಡಿಸಿ ಈ ತಾಲ್ಲೂಕು ಟ್ರೆಜರಿಗೆ ಪಾವತಿ ಮಾಡಿರುತ್ತಾರೆ ಇನ್ನರಲ್ಲಿಯೇ ಇನ್ನೂ ಎರಡು ಸಾವಿರ ರೂಪಾಯಿ ಚಂದಾ ಕೊಡಿಸುವವರಾಗಿರುತ್ತಾರೆ — ನಮ್ಮ ಘನ ಪೋಷಕರಾಗಿರುವ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್ ಶ್ರೀ ಕೃಷ್ಣರಾಜ ಒಡೆಯರ್, ಜಿ. ಸಿ. ಎಸ್. ಐ ಯವರು ಚಿಕ್ಕಮಗಳೂರಿನಲ್ಲಿ ವೀರಶೈವಮತದ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದಾಗ— ಈಗ ನಾವು ಪ್ರತಿಷ್ಠಾಶಿಲೆಯನ್ನು ಸ್ಥಾಪನೆಮಾಡುವ ವಿದ್ಯಾರ್ಥಿನಿಲಯದಿಂದ ದಿನೇದಿನೇ ಅಭಿವೃದ್ಧಿ ನಮ್ಮ ಜನದ ಇತರ ಕಡೆಗಳಲ್ಲಿರುವ ಇತರ ಜನಾಂಗಗಳಿಗೂ ಉಪಕಾರಕವಾಗಿರಬೇಕೆಂದು ಕೋರುವೆವು ವಿದ್ಯಾರ್ಥಿ ಮಂದಿರಗಳು ಬಹು ಅವಶ್ಯವಾದ ಕಟ್ಟಡಗಳು ಮತ್ತು ಇವುಗಳು ಅಭಿವೃದ್ಧಿಗೆ ಬರುವದು ಸಕಲರಿಗೂ ಹಿತವಾದ ಅಂಶವಾ ಆಗಿರುತ್ತದೆ ಇಂತಹ ಸಾಹಸಗಳಿಗೆ ನಮ್ಮ ಸರ್ಕಾರದವರು ಯಾವಾಗಲೂ ಪ್ರೋತ್ಸಾಹಿಸುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ ಎಂದು ದಯಪಾಲಿಸಿದ ಉತ್ತರವು ನಮಗೆ ಉತ್ತೇಜನವನ್ನು ಕೊಟ್ಟಿದ್ದಲ್ಲದೆ ನಮ್ಮ ಸ್ವಕಾರ್ಯೋದ್ಯುಕ್ತರನ್ನಾಗಿ ಸಹ ಮಾಡಿತು — ತಮ್ಮ ಸವಾರಿಯು ಈ ಪ್ರಾಂತ ಚಿತ್ತೈಸುವುದೆಂಬ ವರ್ತಮಾನವನ್ನು ಕೇಳಿ ನಮಗೆ ಆನಂದ ಉಂಟಾದುದಲ್ಲದೆ ನಮ್ಮ ಕಾರ್ಯಾರಂಭಕ್ಕೆ ಉಚಿತವಾದ ಕಾಲವು ದೊರೆತದ್ದಕ್ಕಾಗಿ ನಮ್ಮೆಲ್ಲರಿಗೂ ಬಹಳ ಸಂತೋಷವಾಯಿತು ಈ ಸಮಯವನ್ನು ಪ ಡೆಪ್ಯುಟಿ ಕಮಿಷನರ್ ಸಾಹೇಬರವರಲ್ಲಾ, ಅಮಲ್ದಾರ್ರವರಲ್ಲಾ ಪ್ರಸ್ತಾಪಿಸಿದಾಗ, ಅವರು ನಮಗೆ ಪ್ರೋತ್ಸಾಹ ಕೊಟ್ಟದ್ದಲ್ಲದೆ ನಮ್ಮ ಉದ್ದೇಶವನ್ನು ಸಹ ಅನುಮೋದಿಸಿದಕ್ಕಾಗಿ ನಾವು ತುಂಬಾ ಕೃತಜ್ಞರಾಗಿದ್ದೇವೆ ಮಹಾಸ್ವಾಮಿ, ಈ ಪ್ರಾಂತ್ಯದ ನಮ್ಮ ಜನರ ಹೀನಸ್ಥಿತಿಯು ಹೇಳಲು ಶಕ್ಯವಾಗಿರುವುದು ವಿದ್ಯಾವಿಹೀನರಾಗಿ ಜನರು ನಾಗರಿಕತೆಯನ್ನರಿಯದೆ ಅನೇಕ ದುರಭ್ಯಾಸಗಳಿಗೆ ಗುರಿಯಾಗಿರುವುದೇ ಇದಕ್ಕೆ ಮುಖ್ಯ ಕಾರಣ ಆದುದರಿಂದ ಒಕ್ಕಲಿಗ ಬಾಲಕರ ವಿದ್ಯಾಭಿವೃದ್ಧಿಗಾಗಿ ಏರ್ಪಡಿಸುವ ವಿದ್ಯಾರ್ಥಿನಿಲಯಕ್ಕಾಗಿ ಚಂದಾ ಮೂಲಕ ವಸೂಲಾಗುವ ಐದು ಸಾವಿರ ರೂಪಾಯಿಯ ಜೊತೆಗೆ ಉದಾರವಾದ ಮೈಸೂರು ಸರ್ಕಾರದಿಂದ ಅದಕ್ಕೆ ತಕ್ಕಷ್ಟು ಸಹ ಮೊಬಲಗನೂ, ನಮ್ಮ ವಿದ್ಯಾರ್ಥಿಗಳು ಕುಲಕಸಬಿನಲ್ಲಿ ನೂತನ ಪದ್ಧತಿಗಳನ್ನು ಅನುಸರಿಸಿ ತರಬೇತಾಗುವುದಕ್ಕಾಗಿ ಮಾದರಿ ಹೊಲಕ್ಕೆ ಬೇಕಾದ ಜಮೀನನ್ನೂ ದಯಪಾಲಿಸಬೇಕೆಂದು ವಿನಯದಿಂದ ಬೇಡುತ್ತೇವೆ ಡೆಪ್ಯುಟಿ ಕಮಿಷನರ್ ಸಾಹೇಬರೂ, ಅಮಲ್ದಾರ್ ಸಾಹೇಬರೂ ನಮಗಾಗಿ ಚುನಾಯಿಸಿರುವ ಈ ಜಮೀನಿನಲ್ಲಿ ನಮ್ಮ ಒಕ್ಕಲಿಗರ ವಿದ್ಯಾರ್ಥಿನಿಲಯದ ಪ್ರತಿಷ್ಠಾಶಿಲೆಯನ್ನು ತಾವು ಸಹಸ್ತದಿಂದ ಸ್ಥಾಪಿಸಿ ಆಚಂದ್ರಾರ್ಕವಾಗಿ ನಮ್ಮ ಸದುದ್ದೇಶವು ನೆರವೇರುವಂತೆ ಮಾಡಬೇಕೆಂದು ಪ್ರಾರ್ಥಿಸುವುದಲ್ಲದೆ ಭಗವಂತನು ತಮಗೆ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ

ದಿವಾನ್‌ರವರ ಉತ್ತರ

ಮಹನೀಯರೇ, ನಾನು ಈ ಪ್ರದೇಶದಲ್ಲಿ ಸಂಚಾರ ಮಾಡಲು ಬಂದುದು ಪುದಕ್ಕೆ ಮುಂಚೆ ಇಂಥಾ ಸಂಘಗಳಿಗೆ ಪ್ರೋತ್ಸಾಹಕೊಡುವುದು ಜನಗಳನ್ನು ನೋಡಿ ಅವರುಗಳ ಸುಖ ದುಃಖಗಳನ್ನು ಮಾತ್ರ ತಿಳಿದುಕೊಳ್ಳುವುದೇ ನನ್ನ ಉದ್ದೇಶವೆಂದು ತಿಳಿದೆನು — ಈ ವಿದ್ಯಾರ್ಥಿನಿಲಯದ ಅಸ್ತಿಭಾರದ ಶಿಲೆಯನ್ನು ಸ್ಥಾಪಿಸುವ ಕೆಲಸವನ್ನು ನಾನು ಒಪ್ಪಿರಲಿಲ್ಲ ಆದರೆ ಈ ಕಟ್ಟಡವು ಒಕ್ಕಲಿಗರ ಹುಡುಗರ ವಿದ್ಯಾಭಿವೃದ್ಧಿಗೆ ಸಂಬಂಧಪಟ್ಟದ್ದು ಅದಕ್ಕೆ ಮುಖ್ಯವಾಗಿ ಸರ್ಕಾರದವರು ಪ್ರೋತ್ಸಾಹ ತೋರಿಸುವುದು ಕರ್ತವ್ಯವೆಂದು ಈ ಕಾರ್ಯವನ್ನು ವಹಿಸಿರುವೆನು ನೀವುಗಳು ಈ ಸದುದ್ದೇಶವಾದ ಪ್ರಯತ್ನವನ್ನು ಸಕ್ರಮಿಸಿರುವುದು ಸ್ತೋತ್ರಾರ್ಹವಾಗಿರುವುದಲ್ಲದೆ ವಿದ್ಯಾರ್ಜನೆಯಲ್ಲಿ ಹಿಂದಾಗಿರುವ ಜನಾಂಗಗಳಿಗೆಲ್ಲಾ ಮೇಲುಪಂಕ್ತಿಯಾಗಿರುತ್ತದೆ — ಕೆಲವು ದಿನಗಳ ಹಿಂದೆ ಚಿಕ್ಕಮಗಳೂರಿನಲ್ಲಿ ವೀರಶೈವ ವಿದ್ಯಾರ್ಥಿನಿಲಯದ ಉಪಕ್ರಮದ ಸಮಯದಲ್ಲಿ ಶ್ರೀಮನ್ ಮಹಾರಾಜರವರು ದಯಪಾಲಿಸಿದ ಉತ್ತರವು ನಿಮಗೆಲ್ಲಾ ಉತ್ತೇಜನವನ್ನು ಕೊಟ್ಟು ಕಾರ್ಯೋದ್ಯುಕ್ತರನ್ನಾಗಿ ಮಾಡಿತೆಂಬುವುದನ್ನು ಕೇಳಲು ತುಂಬಾ ಸಂತೋಷಪಡುತ್ತೇನೆ ಈ ವಿಷಯದಲ್ಲಿ ಮ ಕಲ್ಲೇಗೌಡವರಿಗೆ ತೋರಿಸಿರುವ ಔದಾರ್ಯವೂ, ಮ ಕೆ ಎಚ್ ರಾಮಯ್ಯನವರ ಉತ್ಸಾಹವೂ ಬಹಳ ಶ್ಲಾಘನೀಯವಾಗಿರುತ್ತೆ ಈ ವಿಧವಾದ ಕಾರ್ಯಗಳನ್ನು ಸರ್ಕಾರದವರು ಪ್ರೋತ್ಸಾಹ ಮಾಡುತ್ತೇವೆ ಎಂದು ಶ್ರೀಮನ್ ಮಹಾರಾಜರೇ ಅಪ್ಪಣೆಕೊಟ್ಟಿರುವಲ್ಲಿ ಅಂಥಾ ವಿಷಯದಲ್ಲಿ ಹೆಚ್ಚಾದ ಭರವಸೆಯು ನನ್ನಿಂದ ನಿಮಗೆ ಆವಶ್ಯವಿಲ್ಲ -- ಮುಂದಿನ ಸಭೆಯಲ್ಲಿ ನೀವು ಕೇಳಿಕೊಂಡಿರುವ ಸಹಾಯದ ವಿಜ್ಞಾಪನೆಯನ್ನು ಶ್ರೀಮನ್ ಮಹಾರಾಜರವರಲ್ಲಿ ಒಪ್ಪಿಸುತ್ತೇನೆ ನೆನ್ನೆ ದಿವಸ ಸಾಯಂಕಾಲ ಸಲ್ಪ ಕತ್ತಲು ಹೊತ್ತಿನಲ್ಲಿ ಚಿಕ್ಕಮಗಳೂರು ರಸ್ತೆಯಲ್ಲಿ ಒಬ್ಬರು ದೊಡ್ಡ ಮನುಷ್ಯರ ಜೊತೆಯಲ್ಲಿ ಸಂಚಾರಹೋಗಿದ್ದೆನು ಆ ಸಮಯದಲ್ಲಿ ಮೂವರು ಒಕ್ಕಲಿಗರು ಈ ಊರಿನ ತಮ್ಮ ಹಳ್ಳಿಗೆ ಹೋಗುತ್ತಿದ್ದರು ಅವರನ್ನು ವಿಚಾರಿಸುವಲ್ಲಿ ದೊಡ್ಡ ಗೌಡರು ಈ ಸಭೆ ಮುಕ್ತ ಈ ದಿನ ಬರುತ್ತೇನೆ ಎಂದು ತಿಳಿಸಿದೆನು ತನಗೆ ವಿದ್ಯೆ ಇಲ್ಲದಿದ್ದರೂ ಹುಡುಗರಿಗೆ ವಿದ್ಯೆ ಆವಶ್ಯವೆಂಬ ಭರವಸೆಯು ಉಂಟು ವಾತನಾಡಿದನು ತಂದೆ ಆಗ, ಅವನಿಗೆ ವಿದ್ಯೆ ಇರಲಿಲ್ಲ ಅವರ ದಾರಿ ಬಿಟ್ಟು ಬಿಡುವುದು ಉಚಿತವೇ ಎಂದು ಕೇಳಿದ್ದಕ್ಕೆ — ಹೌದು ಸ್ವಾಮಿ, ಕಾಲಕ್ರಮೇಣ ಬದಲಾಯಿಸಿತು ಹುಡುಗರು ಕಲಿಯದೆ ಇದ್ದರೆ ಮುಂದಕ್ಕೆ ಬರುವುದು ಹಾಗೆ, ಸ್ವಾಮಿ ಎಂದು ಉತ್ತರ ಕೊಟ್ಟನು ಇಂಥಾ ಮಾತು ಗೌಡನ ಬಾಯಿಯಿಂದ ಕೇಳಿದು ನನಗೆ ಬಹಳ ಆನಂದವನ್ನು ಉಂಟುಮಾಡಿತು ಈ ಪ್ರದೇಶದ ಗೌಡರು ಕೆಲವರು ಶ್ರೀಮಂತರಾಗಿಗಳು, ಹಣವಂತರು, ಸಂಬಳದವರು ಎಂದು ಕೇಳಿರುವೆನು ಈ ಗುಣಗಳಿಗೆ ಸರಿಯಾಗಿ ಅವರು ವಿದ್ಯೆಯನ್ನು ಕಲಿತರೆ ಈ ಪ್ರದೇಶದ ಏಳಿಗೆಗೆ ಏನೂ ಕುಂದಕವಿರುವುದಿಲ್ಲ ಇಂಥಾ ವಿದ್ಯಾಸಂಸ್ಥೆಗಳು ಈ ಊರಿನಲ್ಲಿ ಇನ್ನೂ ಹೆಚ್ಚಿ, ಈ ಮಲೆನಾಡಿನಲ್ಲಿ ಜನರಿಗೆ ವಿದ್ಯೆಯನ್ನೂ ಕುಶಲತೆಯನ್ನೂ ಪ್ರಚುರಪಡಿಸಿ ಧನವಂತರನ್ನಾಗಿ ಮಾಡಿ ದೇಶಾಭಿವೃದ್ಧಿಯನ್ನು ಉಂಟುಮಾಡಲಿ ಎಂದು ಕೋರುತ್ತೇನೆ

ಆ ನಂತರ ಶ್ರೀಮನ್ ಮಹಾರಾಜರವರಿಗೂ ದಿವಾನ್ ಸಾಹೇಬರವರಿಗೂ ಜಯಘೋಷಪ್ಪ ಸಹ ಸಲ್ಲಿಸಲ್ಪಟ್ಟು ಸಭೆಯು ಬರಖಾಸ್ತಾಯಿತು

ತಾಲ್ಲೂಕು ವರ್ತಮಾನಗಳು.

ತನ್ಮುಗೊಂಡ್ಲು. — ಇಲ್ಲಿ ಬಿಸಿಲಿನ ಝಳವು ಜಾಸ್ತಿಯಾಗಿದ್ದರೂ, ಸಾಯಂಕಾಲದ ಹೊತ್ತು ಮೋಡವಾಡುತ್ತಿರುವುದನ್ನು ನೋಡಿದರೆ ಶೀಘ್ರದಲ್ಲಿಯೇ ಮಳೆ ಬರುವ ಸೂಚನೆ ತೋರುತ್ತೆ — ಇಂಥ ಸುಗ್ಗಿಯ ಕಾಲದಲ್ಲಿಯೂ ಇಲ್ಲಿ ಧಾರಣೆವಾಸಿಗಳು ಮಾತ್ರ ಕ್ಷಾಮಕಾಲವನ್ನೇ ಸೂಚಿಸುತ್ತವೆ — ಕಳೆದ ತಿಂಗಳಲ್ಲಿಯೇ ಈ ಊರಿನ ಗವರ್ನಮೆಂಟ್ ಎ ವಿ ಸ್ಕೂಲಿಗೆ ಡೆಪ್ಯುಟಿ ಇನ್ಸ್ಪೆಕ್ಟರವರೂ, ಮಿಷನ್ ಗರ್ಲ್ಸ್ ಸ್ಕೂಲಿಗೆ ಅ|ಡೆಪ್ಯುಟಿ ಇನ್ಸ್ಪೆಕ್ಟರವರೂ, ಹಿಂದೂ ನಾರ್ಮಲ್ ಬಾಯ್ಸ್ ಸ್ಕೂಲಿಗೆ ಅಲ್ಲಿನ ಇನ್ಸ್ಪೆಕ್ಟರವರೂ ಬಂದು ಪರೀಕ್ಷೆಗಳನ್ನು ತೀರಿಸಿಕೊಂಡು ಹೋದರು — ಈ ಟವನ್ನಿನಲ್ಲಿ ಡಾಕ್ಟರಾಗಿದ್ದ ಮಿ|| ವೆಂಕಟಾಚಾರ್ಯರು ಚಿಕ್ಕಬಳ್ಳಾಪುರಕ್ಕೆ ವರ್ಗಾಯಿಸಲ್ಪಟ್ಟ ಕಾರಣ ಇಲ್ಲಿನ ಸಮಸ್ತ ಪ್ರಜೆಗಳೂ ಹುಂಬಾ ಚಿಂತೆಗೊಳಪಟ್ಟರು ದಯಾಳುಗಳಾದ ಇವರು ಪ್ರಜೆಗಳನ್ನು ತುಂಬಾ ಮರ್ಯಾದೆಯಿಂದಲೂ, ಪ್ರೀತಿಯಿಂದಲೂ ಕಾಣುತ್ತಿದ್ದುದಲ್ಲದೆ, ಎಂಥಾ ಕಠಿಣವಾದ ರೋಗಿಗಳನ್ನಾಗಲಿ ರೋಗದಿಂದ ನಿವಾರಣೆಮಾಡಬೇಕೆಂಬುದೇ ಇವರ ಮುಖ್ಯ ಗುಣವಾಗಿತ್ತು ಇವರು ಈ ತಿಂಗಳು 8ನೇ ತಾ ಈ ಊರನ್ನು ಬಿಟ್ಟು ವರ್ಗಾಯಿಸಲ್ಪಟ್ಟ ಸ್ಥಳಕ್ಕೆ ಹೋಗಬೇಕಾಗಿದ್ದುದರಿಂದ ತಾ 2 ರಲ್ಲಿಯೇ ಇಲ್ಲಿ ತಮ್ಮ ಕೆಲಸಗಳನ್ನು ಸರಿಯಾಗಿ ಮಾಡಿಕೊಂಡು, ಊರಿನ ಸಕಲ ಪ್ರಜೆಗಳಿಗೂ ಪ್ರೀತಿಪಾತ್ರರಾಗಿರುವ ಮ ಪೋಲೀಸ್ ಜಮಾದಾರ್ರವರೂ, ಪಟೇಲ್ ಅಪ್ಪಾಜಪ್ಪನವರೂ ಮತ್ತು ಕೋಆಪರೇಟಿವ್ ಸೊಸೈಟಿಯ ಮೆಂಬರುಗಳೂ, ಸಮಸ್ತ ಪ್ರಜೆಗಳೂ ಸೇರಿ, ಆಸ್ಪತ್ರೆಯ ಮುಂಭಾಗದಲ್ಲಿ ಫೋಟೋ ತೆಗೆಯಿಸಿಕೊಂಡ ನಂತರ ಅಲ್ಲಿಂದ ವೈಶ್ಯರ ಬೀದಿಯಲ್ಲಿರುವ ಶ್ರೀರಾಮಶೆಟ್ಟರ ಮನೆಯ ಮುಂಭಾಗದ ಹಾಲಿನಲ್ಲಿ ಒಂದು ಅಭಿನಂದನ ಪತ್ರಿಕೆಯನ್ನು ಒಪ್ಪಿಸಿದರು ನಂತರ ವೇ|| ಡಿ ಕೃಷ್ಣಮೂರ್ತ್ಯಾಚಾರ್ಯರವರು ಸಮಸ್ತರಿಗೂ ತಿಳಿಯುವ ಹಾಗೆ ಇವರ ಗುಣಕಥನಾದಿಗಳನ್ನು ವಿವರಿಸಿ ಉಪನ್ಯಾಸಮಾಡಿದ ನಂತರ ಡಾಕ್ಟರ್ ಸಾಹೇಬರವರಿಗೆ ನಜರುಮಾಡಲಾಯಿತು ಈ ಊರಿಗೆ ಡಾಕ್ಟರಾಗಿ ಬಂದು ಈ ರೀತಿಯಾಗಿ ಯಶಸ್ಸನ್ನು ಹೊಂದಿದವರಲ್ಲಿ ಇವರೇ ಮೊದಲನೆಯವರಾಗಿರುತ್ತಾರೆ ಇವರ ನಂತರ ಬರತಕ್ಕವರೂ ಕೂಡ ಇದೇ ರೀತಿಯಾಗಿ ಕೀರ್ತಿಯನ್ನು ಹೊಂದಲೆಂದು ಅಭಿಲಾಷಪಡುವೆವು

ತಿಪಟೂರು — ಬಿಸಿಲಿನ ತಾಪ ಹೇಳತೀರದು ಸಾಂಕ್ರಾಮಿಕ ರೋಗಗಳ ಆವಿರ್ಭಾವವು ಇಲ್ಲ ಈ ಊರಿನಲ್ಲಿ ಸಾಕಷ್ಟು ಕ್ರಮಪಡದೆ ಬೀದಿಗಳಲ್ಲಿ ದುರ್ವಾಸನೆಯು ಹೆಚ್ಚುತ್ತಲಿದೆ ಕೆರೆಯ ಅಜೂಬಾಜೂದಲ್ಲಿ ಜನರು ಹೊಲಸು ಮಾಡುವದು ತಪ್ಪಿಲ್ಲ ಟವನ್ ದಕ್ಷಿಣ ಭಾಗ ಕಟುಕರ ಅಂಗಡಿ ಬಳಿ ಉದ್ದಕ್ಕೂ ಒಂದು ಹಳ್ಳವಿರುವದು ಇದರಲ್ಲಿ ಹಗಲಿನಲ್ಲಿಯೇ ಜನರು ನಿರ್ಭಯದಿಂದ ಹೊಲಸು ಮಾಡುತ್ತಾ ಬರುವದರಿಂದ ಆ ಪ್ರಾಂತ್ಯ ತಿರುಗಾಡುವ ಜನರು ದುರ್ವಾಸನೆಯನ್ನು ಸಹಿಸಲಾರರು, ಟವನ್ ಒಳಭಾಗದಲ್ಲಿಯೇ ಈ ರೀತಿ ನಡೆಯುವದನ್ನು ನೋಡುವಲ್ಲಿ ಸ್ಥಳೀಯ ಅಧಿಕಾರಿಗಳು ಸ್ಯಾನಿಟರಿ ವಿಚಾರದಲ್ಲಿ ಬಹುಮಟ್ಟಿಗೆ ಜಾಗ್ರತೆ ವಹಿಸಬೇಕೆಂದು ವ್ಯಕ್ತವಾಗುವದು — ಮ್ಯುನಿಸಿಪಾಲಿಟಿಯಲ್ಲಿ 20,000 ರೂಪಾಯಿ ತನಕ ಡಿಪಾಜಿಟ್ ಇರುವದೆಂದೂ, ಊರಿನಲ್ಲಿ ನೀರಿನ ಕೊರತೆ ಆಗಾಗ್ಗೆ ಪ್ರಾಪ್ತವಾಗುವದರಿಂದ ಇಲ್ಲಿಗೆ ೨ ಮೈಲಿ ದೂರದಲ್ಲಿರುವ ಸಿಂಗ್ರಿ ಕೆರೆಯಿಂದ ಈ ಊರಿಗೆ ನಲ್ಲಿಗಳ ಮೂಲಕ ನೀರನ್ನು ಸರಬರಾಯಿ ಮಾಡಬೇಕೆಂದೂ ಇಲ್ಲಿನ ಮ್ಯುನಿಸಿಪಲ್ ಮೆಂಬರುಗಳೂ ವರ್ತಕ ಮಹನೀಯರೂ ಗವರ್ನಮೆಂಟನ್ನು ಕೇಳಿಕೊಂಡಪ್ರಕಾರ ಮೇಲೆ ಅಜಮಾಯಿಷಿಯಿಂದ ಈ ಕಾರ್ಯಕ್ಕೆ ಒಂದು ಲಕ್ಷಕ್ಕೆ ಕಡಮೆ ಇಲ್ಲದೆ ಹಣ ವ್ಯಯವಾಗತಕ್ಕದ್ದೆಂಬುವದನ್ನು ಗವರ್ನಮೆಂಟಿನವರು ತಿಳುಕೊಂಡಂತೆ ತೋರುವದು ಮ್ಯುನಿಸಿಪಾಲಿಟಿಯಲ್ಲಿ ಮಾಡಬೇಕಾದ ಆವಶ್ಯಕ ಕೆಲಸಗಳು ಇನ್ನೂ ಉಳಿದೇ ಇರುತ್ತವೆ ಮಳೆಗಾಲ, ಬಚ್ಚಲು ನೀರು ನಿಂತು ರೋಗಾಗಿ ದುರ್ವಾಸನೆ ಒಡೆಯುತ್ತಿರುವ ಚರಂಡಿಗಳನ್ನು ಕಿತ್ತು ಕಟ್ಟಬೇಕಾಗಿದೆ ಕೆಲವು ಕಡೆ ರಸ್ತೆ ಬದಿಯಲ್ಲಿ ದೀಪಗಳು ಇರಬೇಕು ಹೊಸಿಗೆಗೆ ತವರುಮನೆಯಾಗಿರುವ ಹಳ್ಳಗಳನ್ನು ಮುಚ್ಚಬೇಕು ಊರಿನ ನಾಲ್ಕೂ ಕಡೆಗಳಲ್ಲಿ ಪಬ್ಲಿಕ್ ಕಕ್ಕಸುಗಳನ್ನು ಕಟ್ಟಿಸಬೇಕು ಈ ಊರಿನಲ್ಲಿ ಕಕ್ಕಸು ಇರುವ ಮನೆಗಳೇ ಅಪರೂಪವಾಗಿವೆ ಗಂಡಸರು ಹೆಂಗಸರು ಎಲ್ಲರೂ ಬೆಳಗ್ಗೆ ಸಾಯಂಕಾಲ ಚೊಂಬುಗಳನ್ನು ಕೈಯಲ್ಲಿ ಹಿಡಿದುಕೊಂಡು ಜಲಮಲ ವಿಸರ್ಜನೆಗಾಗಿ ಮರೆಯಾದ ಸ್ಥಳಗಳನ್ನೇ ಹುಡುಕಿ ಸಿಕ್ಕಿದ ಸ್ಥಳದಲ್ಲೆಲ್ಲಾ ಹೊಲಸು ಮಾಡುವರೆಂಬುವದು ಇಲ್ಲಿನ ಅಧಿಕಾರಿಗಳಿಗೂ ಮ್ಯುನಿಸಿಪಲ್ ಮೆಂಬರುಗಳಿಗೂ ಪರಿಷ್ಕಾರವಾಗಿ ತಿಳಿದಿದ್ದಾಗ್ಯೂ ಇದಕ್ಕೆ ತಕ್ಕ ಏರ್ಪಾಟನ್ನು ಕಲ್ಪಿಸಿಕೊಟ್ಟು ಕಷ್ಟ ನಿವಾರಣೆ ಮಾಡಿ ಪ್ರಜಾನುರಾಗವನ್ನು ಸಂಪಾದಿಸಿಕೊಳ್ಳದೆ ಬೇರೆ ದೂರದ ಯೋಚನೆ ಮಾಡುವದರಿಂದ ನಲ್ಲಿನೀರು ಬರುವತನಕ ನೀರು ಕೇವಲ ಅಪರೂಪ ಆದರೆ ಈ ಊರಿನಲ್ಲಿ ವರ್ತಕ ಮಹನೀಯರು ತೆಗಿಸಿರುವ ಮೂರು ಭಾವಿಗಳಲ್ಲಿ ಯಾವಾಗಲೂ ನೀರು ಸಮೃದ್ಧಿಯಾಗಿಯೇ ಸಿಕ್ಕುತ್ತಿರುವದು ಹೀಗಿರುವಲ್ಲಿ ಒಳ್ಳೇ ಪ್ರದೇಶವನ್ನು ನೋಡಿ ಒಂದು ವಿಸ್ತಾರವಾದ ಭಾವಿಯನ್ನು ಮ್ಯುನಿಸಿಪಾಲಿಟಿಯ ಖರ್ಚಿನಿಂದಲೇ ಮಾಡಿಸುವದರಿಂದಲೂ, ಅಂಥಾ ಭಾವಿಯಿಂದ ನಲ್ಲಿಗಳ ಮೂಲಕ ಊರಿಗೆ ನೀರು ಒದಗಿಸುವದರಿಂದಲೂ ಖರ್ಚು ಕಡಮೆಯಾಗಿ ನೀರಿನ ಅನುಕೂಲ ಹೆಚ್ಚು ಪ್ರಜೆಗಳು ಹಾಹಾಕಾರವು ನಿಲ್ಲಬಹುದು ಟವನ್ನಿನ ಪ್ರಜಾಸಂಖ್ಯೆಯು ಸುಮಾರು ನಾಲ್ಕು ಸಾವಿರಕ್ಕೆ ಮಿಗದಿರುವದರಿಂದ ಮ್ಯುನಿಸಿಪಾಲಿಟಿಯವರು ದುಬಾರಿ ಸ್ಕೀಮಿಗೆ ಹೋಗದೆ ಸಮೀಪದಲ್ಲಿಯೇ ಜಲವಸತಿಯನ್ನು ಕಲ್ಪಿಸಿಕೊಡುವದು ಉಚಿತವಾಗಿದೆ ಇಲ್ಲವಾದರೆ ಬೇಸಿಗೆ ದಿವಸದಲ್ಲಿ ಬಡಜನರ ಕಷ್ಟವು ಹೇಳತೀರದು 20 ದಿನಗಳ ಕೆಳಗೆ ೩ ವರುಷದ ಒಬ್ಬ ನೂಲೆಯರ ಹುಡುಗಿಯಲ್ಲಿ ಲಾಲಜನೆಂಬವನು ಅಕ್ರಮ ಸಂಗ ನಡಿಸಿದನೆಂದು ಪೋಲೀಸಿನಲ್ಲಿ ತನಿಖೆ ನಡೆಯಿತು ಹುಡುಗಿಯ ಸ್ಥಿತಿಯು ಕೇವಲ ದೌರ್ಭಾಗ್ಯವಾಗಿ, ನಿಲ್ಲಲೂ ಕೂಡ್ರಲೂ ಶಕ್ತಿಯಿಲ್ಲದೆ ಹುಡುಗಿಯು ತತ್ತರಿಸುವದನ್ನು ನೋಡಿದ ಜನರೆಲ್ಲರೂ ಸಂತಾಪಪಡುತ್ತಾ ಕೃತ್ಯ ನಡಸಿದ ಧೂರ್ತನನ್ನು ನಿಂದಿಸುವವರಾದರು ಹುಡುಗಿಯು ಡಾಕ್ಟರವರ ಇಲಾಜಿನಿಂದ ಈಗ ಗುಣ ಹೊಂದುತ್ತಿರುವಳು ಪೋಲೀಸ್ ತನಿಖೆಯಿಂದಲೂ ಡಾಕ್ಟರವರ ಅಜಮಾಯಿಷಿಯಿಂದಲೂ ಕೇಸು ರುಜುವಾತಾಗಿ ಬಂತೋ ಇಲ್ಲವೋ ತಿಳಿಯದು — ಅಲ್ಲಲ್ಲಿ ಸಣ್ಣ ಸಣ್ಣ ಕಳವುಗಳೂ, ಜಗಳ ಹೋರಾಟಗಳೂ ಪೇಟೆಗಳಲ್ಲಿ ಕುಡುಕರ ಗಲಭೆಯೂ, ಅಂಗಡಿ ಮುಂಗಟ್ಟುಗಳ ಮುಂದೆ ಇಟ್ಟಿರುವ ವರ್ತಕರ ಸಾಮಾನುಗಳನ್ನು ತುಂಟರು ನಾಶಮಾಡುವದೂ ದಿನೇ ದಿನೇ ಹೆಚ್ಚುತ್ತಿರುವದು ಕಳೆದ ವಾರ ಮ|| ಕೆ ತಿಮ್ಮಪ್ಪನವರ ಎಲ್ಸ್ ಬಜಾರ್ ಮುಂದೆ ಬಿಟ್ಟಿದ್ದ ಒಂದು ಕೈಗಾಡಿಯನ್ನು ಯಾರೋ ತುಂಟರು ಒಡೆದುಹಾಕಿ ಹೋದರು ಇಬ್ಬರು ಕುಡಿದು ಜಗಳವಾಡಿ ಮಾರಾಮಾರಿ ಮಾಡಿಕೊಂಡರು ಪ್ರಜೆಗಳ ಸ್ವತ್ತನ್ನು ಭದ್ರಪಡಿಸಿ ಪ್ರಜಾ ನೆಮ್ಮದಿಯನ್ನು ಕಾಪಾಡಲು ಪೋಲೀಸ್ ಇಲಾಖೆಯಿಂದ ಇರುವರು ಪೋಲೀಸ್ ಸಿಬ್ಬಂದಿಯು ಕ್ರಮವರಿತು ತಮ್ಮ ಕೆಲಸಗಳನ್ನು ಶ್ರದ್ಧೆಯಿಂದ ಮಾಡುತ್ತಾ ಬಂದಲ್ಲಿ ಮೇಲ್ಕಂಡ ದೂರುಗಳು ಬಹುಮಟ್ಟಿಗೆ ಕಡಮೆಯಾಗಬಹುದು ಯಾವ ಕಾಲದಲ್ಲಿ ಇವರು ಬೀಟ್ ಕೊಡುವರೋ ತಿಳಿಯದು ಆಮಲ್ದಾರ್ರವರು ಯಾವ ಊರೊಳಗೆ ದಯಮಾಡಿಸುವರು ಗಸ್ತು ತಿರುಗುವ ಪೋಲೀಸಿನವರು ಬರುವ ದಾರಿಯಲ್ಲಿ ಯೂನಿಫಾರಂ ವೇಷದಲ್ಲಿ ಕೆಲಸ ಮಾಡುವದು ಗೊತ್ತಾಗುತ್ತದೆ ಬೇರೆ ಕಾಲದಲ್ಲಿ ಇವರು ಎಲ್ಲಿರುವರೋ ತಿಳಿಯದು ರಾತ್ರಿ ಹೊತ್ತು ಕನಸು ಕಂಡಂತಿರುವದು ಈ ಪ್ರದೇಶ ತಿರುಗುವ ಪೋಲೀಸಿನವರನ್ನು ಗುರುತು ಬಲ್ಲವರು ಮಾತ್ರ ತಿಳಿಯಬಹುದು ಈ ವಿಷಯಕ್ಕೆ ಸ್ಥಳೀಯ ಪೋಲೀಸ್ ಆಫೀಸರುಗಳು ಶ್ರದ್ಧೆಯಿಂದ ಗಮನ ಕೊಟ್ಟು ಪೋಲೀಸ್ ಸಿಬ್ಬಂದಿಯನ್ನು ಕ್ರಮವರಿತು ಕೆಲಸ ನಡಿಸುವಂತೆ ಪ್ರಜಾ ನೆಮ್ಮದಿ

ಯನ್ನು ಕಾಪಾಡತಕ್ಕದ್ದಾಗಿದೆ—ಸಾ॥ ಪುಟ್ಟಸಾಮಪ್ಪನವರ ಮೊಮ್ಮಗಳ ಮದುವೆ ಸಂಬಂಧದಲ್ಲಿ ಇವರ ಬೀಗರಾದ ಮ॥ ರಾಮಲಿಂಗಂ ಶೆಟ್ಟರವರು ಇಲ್ಲಿನ ಅಧಿಕಾರಿಗಳು ಸೆಟ್ಟಿ ವರ್ತಕರು ದೊಡ್ಡ ಮನುಷ್ಯರು ವಗೈರೆಯರನ್ನು ಪಲ್ಲಾಪಟ್ಟಿಯವರ ಮಹಡಿಗೆ ಕರಸಿಕೊಂಡು ಒಂದು ಕಾನ್ಸರ್ಟ್ ಸಭಾ ಮಾಡಿ ಸರ್ವರನ್ನೂ ಸತ್ಕರಿಸಿದ್ದು ಸ್ತೋತ್ರಾರ್ಹವಾಗಿದೆ—ಸಬ್ ರೆಜಿಸ್ಟ್ರಾರ್ ಮ॥ ನಾರಾಯಣಯ್ಯಂಗಾರ್ರನ್ನು ಇಲ್ಲಿಂದ ಮದ್ದೂರಿಗೆ ವರ್ಗಾಯಿಸಿದ್ದರ ನಿಮಿತ್ತ ಕಳೆದ ವಾರ ಇವರ ಮಿತ್ರಮಂಡಲಿಯವರು ಇವರನ್ನು ಮುಸಾಫರ್ ಖಾನೆಗೆ ಕರಸಿಕೊಂಡು ಒಂದು ಟೀ ಪಾರ್ಟಿ ಮಾಡಿದರು ಇವರು ನಾಲ್ಕು ವರುಷಗಳಿಂದ ಇಲ್ಲಿದ್ದರೆಂದೂ, ಇವರ ಮಿತ್ರಮಂಡಲಿಯಲ್ಲಿ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡಿದ್ದರೆಂದೂ ತೋರುತ್ತೆ.

ನೆಲಮಂಗಲ ತಾ॥ ದಾಬಸ್ಪೇಟೆ.—ಶ್ರೀ ಶಿವಗಂಗಾ ಸ್ವಾಮಿಗಳವರು ಕಳೆದ ತಾ. 8 ನೇ ಪ್ರಾತಃಕಾಲ ಇಲ್ಲಿಗೆ ಚಿಯಮಾಡಿದರು. ಪದ್ಧತಿಯ ಪ್ರಕಾರ ಆನುಲ್ವಾತ್ರವರು ಸಡಿಾಪದಲ್ಲಿದ್ದು ಸಕಲ ಮರ್ಯಾದೆಗಳೊಡನೆ ಗ್ರಾಮಪ್ರವೇಶ ಮಾಡಿಸಿದರು ಬ್ರಾಹ್ಮಣ ಸಜೆಯವರೂ, ಇತರ ದೊಡ್ಡ ಮನುಷ್ಯರೂ ಕೂಡಿದ್ದರು ಕಳಾರ್ ನರಸಪ್ಪನವರ ಸತ್ರದಲ್ಲಿ ಇಳಿದು ಆ ದಿನ ಸಾಯಂಕಾಲದವರಿಗೂ ಸ್ನಾನ, ಜಪಾದಿಗಳಲ್ಲಿ ಕಳೆದರು ಮರುದಿನ ಲಕ್ಕೂರು ಮುಂತಾದ ಗ್ರಾಮಗಳ ಸಭಿಕರು ಸೇವೆ ನಡಿಸಿದರು ಆ ದಿನ ಮಧ್ಯಾಹ್ನ ಮಠದಲ್ಲಿ ಸಭೆ ಸೇರಿತು ಅಲ್ಲಿ ವಿದ್ವಾನ್ ವೇ ಅಶ್ವತ್ಥಶಾಸ್ತ್ರಿಗಳು ಶ್ರೀಶಿವಗಂಗಾ ಮಠದ ಚರಿತ್ರೆಯನ್ನು ಆನುಪೂರ್ವಿಯಾಗಿ ಉಪನ್ಯಾಸಮಾಡಿ ಸಭಿಕರಿಗೂ, ಶ್ರೀಯವರಿಗೂ ಸಂತೋಷಪಡಿಸಿದರು ಸ್ವಾಮಿಗಳವರು ಮರುದಿನವೂ ಇಲ್ಲಿಯೇ ಇದ್ದು, ತಾ. 11 ನೇ ಪ್ರಾತಃಕಾಲ ಶಿವಗಂಗಾ ಪ್ರಾಂತ್ಯ ತೆರಳಿದರು. ಇಲ್ಲಿನ ಪ್ರಜೆಗಳೂ, ಆಮುಲ್ವಾತ್ರವರೂ ಮರ್ಯಾದೆಗಳೊಡನೆ ಎಲ್ಲಿಯ ವರೆಗೂ ಅವರನ್ನು ಸಾಗಕಳುಹಿಸಿ ಬಂದರು

ಶಿವಮೊಗ್ಗ.—ಧಾರಣೆವಾಸಿ ಬಹಳ ಜವಾಪಿನಲ್ಲಿರುತ್ತೆ. ಚಿನ್ನಿ ಸೇರಿಗೆ 7¼—7½ ಆಣೆ, ಪುಷ್ಟ ಪಟ್ಟಾಕ್ಕೆ 22 ರೂ., ಸೀಮೆಯೆಣ್ಣೆ ಸೇರಿಗೆ 7 ದುಡ್ಡು, ದಬ್ಬಾಕ್ಕೆ 2 12-0, 2-14 0 ರೂಪಾಯಿ ಇದೆ — ಕಸಬಾ ಮಾಗಣಿ ಮೇಲಿನ ಪನಸವಾಡಿ ಗ್ರಾಮದಲ್ಲಿ ಹಜಾಮರ ಬಸವನೆಂಬುವನು ತಾ 10 ನೇ ಸೋಮವಾರ ಬೆಳಗ್ಗೆ ಸುಮಾರು 12 ಘಂಟೆ ಸಮಯದಲ್ಲಿ "ಕಲ್ಲುಫಡಾತಿ" ಎಂಬ ಮದ್ದು ಮಾಡುವ ಉದ್ದಿಶ್ಯ ಬೀಸುವ ಕಲ್ಲನ್ನು ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಅದು ಚೆನ್ನಾಗಿ ಕಾದ ವೇಳೆಯಲ್ಲಿ ಮದ್ದಿನ ಸಾಮಾನುಗಳೆಲ್ಲವನ್ನೂ ಅದರಲ್ಲಿ ಹಾಕಿ ಚೆನ್ನಾಗಿ ಬೀಸಲು ಅದು ಹತ್ತಿಕೊಂಡು ಸಿಡಿಯುವುದಕ್ಕೆ ಪೂರಾ ಜಖಂ ಆಗಿರುವದಲ್ಲದೆ ಬೀಸುವ ಕಲ್ಲು ಚೂರುಚೂರಾಗಿ ಹತ್ತಿರದಲ್ಲಿದ್ದ 7-8 ಜನಗಳಿಗೂ ಸಹ ಪೆಟ್ಟು ಬಿದ್ದಿದೆ. ಅದರಲ್ಲಿ ಬಚ್ಚಿಸಿ ಉಳಿಯುವದು ಬಹಳ ಪ್ರಯಾಸವಾಗಿರುತ್ತೆ ಈ ಸುದ್ದಿಯನ್ನು ಕೇಳಿ ಊರಿನವರು ಬಂದು ನೋಡಲು ರುಂಡದಲ್ಲಿ ರಕ್ತ ಅಂಗಗಳು ಯಾವ ಯಾವ ಸ್ಥಳದಲ್ಲಿ ಇವೆ ಎಂಬುವದನ್ನೂ ಸಹ ಗುರ್ತಿಸಲಾರದಂತಿದ್ದ ಬಸವನನ್ನು ಕೂಡಲೆ ಆಸ್ಪತ್ರೆಗೆ ಬಂಡಿಯ ಮೇಲೆ ತೆಗೆದುಕೊಂಡು ಬರಲು ಡಾಕ್ಟರವರು ನೋಡಿ ಕೆಲವು ಚಿಕಿತ್ಸೆಯನ್ನು ಮಾಡಿ ಉಳಿಯುವದು ಕಷ್ಟವೆಂಬದಾಗಿ ಹೇಳಲು ಅವನನ್ನು ಬಂಡಿಯ ಮೇಲೆ ಹಾಕಿಕೊಂಡು ಊರಿಗೆ ಹೋಗುತ್ತಿರುವಾಗ ಅವನು ಸತ್ತುಹೋದನೆಂಬದಾಗಿ ವರ್ತಮಾನ ಕೇಳುತ್ತೇವೆ.

ಶ್ರೀರಂಗಪಟ್ಟಣದ ಕಾರೊನೇಷನ್ ಬಿಲ್ಡಿಂಗ್ ಫಂಡು.

ಚಂದಾ ಪಟ್ಟಿ

ಆಲದವನಹಳ್ಳಿ ಸಾಹುಕಾರ್ ಮಾದೇಗೌಡ, ಅರಕೆರೆ ವೆಂಕೋಜಿರಾವು, ಅರಕೆರೆ ಪುಟ್ಟೇಗೌಡ, ಅರಕೆರೆ ಹನುಮಂತಶೆಟ್ಟಿ, ಅರಕೆರೆ ಮಗ್ಗದ ಚನ್ನಯ್ಯ, ಅರಕೆರೆ ದ್ಯಾವೇಗೌಡ, ಗೊಬ್ಬರಾಗಾಲದ ಚೋರೇಗೌಡ, ಹುಂಗರಹಳ್ಳಿ ವ್ಯಾ. ದಾಸಪ್ಪ, ಅರಕೆರೆ ಚಿಕ್ಕಣ್ಣ ಚಲುವಶೆಟ್ಟಿ, ಚನ್ನನಕೆರೆ ಮರಿನಾಗೇಗೌಡ, ಗಂಜಾಂ ಈರಪ್ಪ, ಬನ್ನಹಳ್ಳಿ ಕಾಡೇಗೌಡ, ಜವನಹಳ್ಳಿ ಪ॥ ಸಿದ್ದೇಗೌಡ, ಅರಕೆರೆ ದಾಸೇಗೌಡನ ಮಗ ಸಿದ್ದ, ಮಳಿನಹಳ್ಳಿ ಪ॥ ರಾಮೇಗೌಡ, ದೊಡ್ಡ ಪಾಲಹಳ್ಳಿ ಹೊಂಬಾಳೇ ಗೌಡ, ನೇರಳಕೆರೆ ಹೊಂಬಾಳೇಗೌಡ, ಜಾಣೇಗೌಡ, ಮೋಟೇಗೌಡ, ಕರಿಗೌಡ, ಮೇಳಾಪುರಿಗೌಡ, ಅಕ್ಕಿ ಮಳಿಗೆ ಸಿದ್ದಮರಿಗೌಡ, ಹುಂಜನಕೆರೆ ಸಾ॥ ಪುಟ್ಟೇಗೌಡ, ಹುಲಿಕೆರೆಹಳ್ಳಿ ಪ॥ ಚಂದೇಗಿರಿಗೌಡ, ಚನ್ನನಕೆರೆ ಪ॥ ಹೊಂಬೇಗೌಡ. ಗಬ್ಬಿಯನ ಕ್ಯಾತೇಗೌಡ, ಮಾಯಿಗೌಡನ ಮಗ ಈರೇಗೌಡ, ಜವಳಿ ಅಂಗಡಿ ಚೌಡಪ್ಪ, ಪಿ ಅಣ್ಣಾಜಿರಾವ್, ಪ್ಲೀಡರ್ ನರಸಿಂಹೈಂಗಾರ್, ಚಿನಮನಹಳ್ಳಿ ಪಟೇಲ್ ರಾಮೇಗೌಡ, ಬಿದರಿ ಚನ್ನಶೆಟ್ಟಿ, ಕ್ಯಾತನಗೆರೆ ಪಟೇಲ್ ಶೆಟ್ಟಿ ವೆಂಕಟರಾಮಯ್ಯ ತಮ್ಮಯ್ಯ, ರುಕ್ಕ್ವಾರಪೇಟೆ ಬೋರೇಗೌಡ ಬೊಟ್ಟನಹಳ್ಳಿ ಪ ಕರೀಗೌಡ, ಗಾಮನಹಳ್ಳಿ ಪ ಮಲ್ಲಯ್ಯ, ಮಂಡ್ಯ ಕೃಷ್ಣಪ್ಪ, ಪಾರುಪತ್ಯ ತಲಾ ರೂ 5 ರೂ 200 0 0

ಶ್ರೀರಂಗಪಟ್ಟಣ, ಜ ದೇವರಾಜರಾವ್,
ತಾ. 11-3-1913 ಸೆಕ್ರೆಟರಿ

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ.

SCOTT'S EMULSION 2.12
(ಸ್ಕಾಟ್ಸ್ ಇಮಲ್ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು.

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ ಕೆಮ್ಮನ್ನು ನಿಲ್ಲಿಸುತ್ತದೆ.

ಕೈಯಿಂದ ಮುಟ್ಟದೆ ತಯಾರಿಸಿದ್ದು.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರೆಯುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ.
ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರಿಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಸ್ವಾಯುಕ್ಕೂ ಶರೀರಕ್ಕೂ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಥಳುಕು, ಎದ್ದುನಿಲ್ಲುವ ಕಷ್ಟವು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬರುವಾಗಿಯೂ ಇಳಿಯುವದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ಪದೆ ಪದೆ ತಲೆ ತಿರುಗುವಿಕೆ, ಮೈನೋವು, ಕೀಲುನೋವು, ಜ್ವರವು, ನಿದ್ರಾಭಂಗ ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ ವಾಯು, ಮಧುಮೇಹ, ಉರಿಮೂತ್ರ ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [112 2]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ ೨—೦—೦; ಅಥವಾ ೬ ಬುದ್ದಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವವು ಅಥವಾ ಡೋನ್ಸ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವವು.

A FRENCH LANGUAGE CLASS

Will be opened only if 10 Candidates can be secured. Fee Rs 2 per month Apply to the Headmaster, A V. School Ittigegud, Mysore City

ಮಧುರೆ ಅಚ್ಚು ಕರೀ ಬಣ್ಣದ ಮೂರು ಚಿಕ್ಕಂಚು ಸೀರೆಗಳು.

ಕ್ರಯ ರೂಪಾಯಿ 2 6 0.

ಇದು ಅನೇಕರು ಪ್ರಕಟಿಸುತ್ತಲಿರುವ ಸೀರೆಯಲ್ಲ ಮಧುರೆ ಸೀರೆಯೆಂದು ಹೆಸರುಪಡೆದ ಅಚ್ಚು ಕರೀಬಣ್ಣದ ಜುನ್ನಡಿ ಸೀರೆ ಇದು ಬಹಳ ನಾಜೋಕಾಗಿಯೂ ನೋಡುವದಕ್ಕೆ ಅಕ್ಷಣವಾಗಿಯೂ ರಂಗು ಅಚ್ಚು ಸೇರಳೇಯಲ್ಲಿನ ಮಾರ್ವಾಡಿಯಾಗಿಯೂ ಸೀರೆಯು ಧಡೂತಿಯಾಗಿಯೂ ಧಾರಾಳವಾಗಿ 18 ಮೊಳವುಳ್ಳದ್ದಾಗಿಯೂ ಇದೆ ಇದನ್ನು ಭಾಗ್ಯವಂತರು ಸಹ ಬಹು ಪ್ರೇಮದಿಂದ ಉಡುತ್ತಲಿದ್ದಾರೆ. ಮಾದರಿಗಳನ್ನು ಕರೆಸಿ ಪರೀಕ್ಷಿಸಿ ನೋಡಿರಿ. ಪ್ರತಿ 1 ಸೀರೆಯ ಸಂಗಡಲೂ ಇದೇ ತರದ 1 ರವಿಕೆಯನ್ನು ಇನಾಮಾಗಿ ಕಳುಹಿಸುತ್ತೇವೆ [66-1]

ವಿಳಾಸ ಮ್ಯಾನೇಜರ್ ಶೃಂಗಾರ ವಿಲಾಸ.
ಚಿಂತಾದ್ರಿಪೇಟೆ, ಮದರಾಸು

ಬಹಳ ಮೇಲಾದ ಅಚ್ಚು ಕರೀ ಬಣ್ಣದ ಮಧುರೆ ಜೊಂನಡಿ ಅಂಚಿನ ಸೀರೆಗಳು.

[14-3]

ಅಸಲ್ ರಬ್ ಕ್ರಯ ರೂ 2-6-0



ಇದರಿಂದ ವರ್ತಕರಿಗೂ, ಭಾಗ್ಯವಂತರಿಗೂ, ಬಡವರಿಗೂ ತಿಳಿಸುವುದೇನೆಂದರೆ—ನಮ್ಮಲ್ಲಿನ ಕರಿಯ ಬಣ್ಣದ ಮಧುರೆ ಜುನ್ನಡಿ ಸೀರೆಗಳು ಉಡುವುದಕ್ಕೆ ಧಡೂತಿಯಾಗಿಯೂ ನೋಡುವುದಕ್ಕೆ ನಯವಾಗಿಯೂ ಸರ್ವರಿಗೂ ಲಾಭದಾಯಕವಾಗಿಯೂ, ಕೊಳ್ಳಲು ಬೆಲೆ ಬಹಳ ಸುಲಭವಾಗಿಯೂ ತಯಾರಿಸಿದೆ ಎಷ್ಟು ಸಾರಿ ಒಗೆದು ಉಟ್ಟರೂ ಬಣ್ಣವು ಸ್ವಲ್ಪವೂ ಬದಲಾಯಿಸುವುದಿಲ್ಲ ಇವರ ಸೆರಗುಗಳು ಬಹು ಸೊಬಗಾಗಿವೆ ಸೀರೆಯು ಉದ್ದವು ಧಾರಾಳವಾಗಿ 18 ಮೊಳದ ಮೇಲಿದೆ ಒಂದು ಕಾರ್ಡ್ ಒಂದನ್ನು ಬರೆದಲ್ಲಿ ನಿಮ್ಮ ಸೆರಹೋರೆಯುವರು ಅನೇಕ ಸೀರೆಗಳೆ ಬರೆಯುವರು ವಿಳಾಸ —

ಪಿ. ಎ. ಸ್ವಾಮಿ ಕಂಪನಿ, ಸಂಗಂಪಾಕಂ, ಮದರಾಸು

ಸ್ಥಿರಾಸ್ತಿಯ ಹರಾಜು ಇಸ್ತಿಹಾರ್

ಮಧ್ಯರಾಹ ಹೆ ಹೊಸ ಮನೆ ಮಿಂಚಿಹೋದಮೇಲೆ ಟಿ ಸಿ ಟಿ.

ಹೆಚ್ಚಿನ ಅವಶ್ಯಕ ಮನೆಗಳ ಬೆಲೆ ಅಧಿಕವಾಗುವವರಲ್ಲಿ ಸ ಸಿಯಿಲ್ಲ ಬೆಂಗಳೂರು ಸಿಟಿ ಬಸವನಗುಡಿ 1 ನೇ ಕ್ರಾಸ್ ರೋಡಿನಲ್ಲಿರುವ ಮ್ಯುನಿಸಿಪಲ್ 101 101 ನೇ ನಂಬರು ಮನೆಗಳನ್ನು ಮಾಲೀಕರವರ ಅಪ್ಪಣೆಯ ಮೇರೆಗೆ ರುಕ್ಕಾರಿರುವ ವಕೀಲ್ ಆರ್. ಯಂ. ಮೆಸರ್ಸ್ ಬಿ. ಕಾರ್ಕ್ ಅಂಡ್ ಕಂಪನಿಯವರು 1913 ನೇ ಮಾರ್ಚಿ ತಾ 24 ನೇ ಬಾನುವಾರ ಬೆಳಗ್ಗೆ 8 ಘಂಟೆಗೆ ಡಿಪೋ ಕಟ್ಟಡದ ಬಳಿ ಬಹಿರಂಗವಾಗಿ ಹರಾಜು ಹಾಕುತ್ತಾರೆ ಬೇಕಾದವರು ಖುದ್ದಾಗಿ ನೋಡಬಹುದು ಈ ಮನೆ ಒಳ್ಳೇ ಮಧ್ಯರಸ್ತೆಯಲ್ಲಿ ಸುಟ್ಟ ಇಟ್ಟಿಗೆ ವಾಸದ ಮನೆ ಬಹಳ ಮಜಬೂತಾಗಿ 2 ಸಂಸಾರಕ್ಕೆ ಅನುಕೂಲವಾಗುವಂತೆ 2 ಬೇರೆ ಬೇರೆ ಕಟ್ಟಡಗಳನ್ನು ಕಟ್ಟಿ ನೆಲಕ್ಕೆ ಫ್ಲೋರಿಂಗ್ ಕಾಂಕ್ರೀಟ್ ಗೋಡೆ ಕಲ್ಲು ಕಟ್ಟಿದ ಬಾವಿ ಔಟ್ ಹೌಸ್ ಕಾಂಪೌಂಡ್ ಕಟ್ಟಡಕ್ಕೆ ಮಜಬೂತಾಗಿ ... ಈ ಮನೆ ಬಾಡಿಗೆ ನಾ 15 ರ ... ಬರುತ್ತದೆ ಈ ಮನೆಯು ಈಗಿನ ಸ್ಯಾನಿಟರಿ ರೀತಿಗೆ ತಕ್ಕಂತೆ ಗಾಳಿ, ಬೆಳಕು ವಗೈರೆಕ್ಕೆಲ್ಲಾ ಬಹಳ ಅನುಕೂಲವಾಗಿದೆ ಕಟ್ಟಿಸಿದ್ದು ಹೊಸದಾಗಿ ಮನೆ ಕಟ್ಟುವವಕ್ಕಿಂತಲೂ ತಯಾರಾದ ಹೊಸ ಮನೆಯೇ ಸಿದ್ಧವಾಗಿರುತ್ತೆ ಹರಾಜಿಗೆ ಮುಂಚೆ ಪ್ರೈವೇಟಾಗಿ ಬೇಕಾದರೆ ನಮ್ಮಲ್ಲಿ ಬಂದು ಕ್ರಯಮಾಡಿಕೊಳ್ಳಬಹುದು

[66-1]

ನಮ್ಮಲ್ಲಿ ರೈತರಿಗೆ ಬೇಕಾದ ಅನೇಕ ತರದ ವ್ಯವಸಾಯದ ಯಂತ್ರಗಳು ಇಂಜಿನ್ ಗಳು, ಬೀಸುವ ಯಂತ್ರಗಳು, ವೀಣೆ, ತಂಬೂರಿ, ಪೆಟ್ರೋಲ್ ಲ್ಯಾಂಪ್ ವಗೈರೆ ಅನೇಕ ಸಾಮಾನುಗಳಿವೆ. ಬೇಕಾದ ಸಾಮಾನುಗಳನ್ನು ಪಡಕಟ್ಟಿ ತರಿಸಿಕೊಳ್ಳಬಹುದು

ಬಿಕರಿಗ ಬಂದಿವೆ —ಕುದುರೆಗಳು, ಗಾಡಿಗಳು, ಹಾರ್ನೆಸ್ ವಗೈರೆಗಳು ಬೇಕಾದವರು ಬಂದು ನೋಡಬಹುದು

ಬಸವನಗುಡಿ, ಬೆಂಗಳೂರು, ಯಂ. ಕಾರ್ಕ್ ಅಂಡ್ ಕೋ.
ತಾ. 15-3-1913. ಆಕ್ಷನಿಯರ್ಸ್

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು. ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ಶಿಯಾ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳಲ್ಲೆಲ್ಲಾ ವ್ಯಾಪಾರಸ್ಥರಲ್ಲಿ ದೊರೆಯುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸುವ ಸಕಲ ವಿಚಾರದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಇವರು ಪುಕಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. **Messrs. OAKES & Company, Mount Road, Madras.**

[4-20] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸು.

Printed and Published by the Rev H. GULLIFORD, Proprietor and Manager, Wesleyan Mission Press Mysore. 20/3/1913.

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸನ್ ೧೯೧೩ ನೇ ಇಸವಿ ಮಾರ್ಚಿ ತಾರೀಖು ೨೭ ನೇ ಗುರುವಾರ. ಸಂಚಿಕೆ ೪೩

ಕ್ಷಾನಿ ನೋಡದ ಅಗ್ಗದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ಜಕಲಿಯಾಗು ತ್ತವೆ. ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ. ಕೂದಲು ಸತ್ತು ಹೋಗುತ್ತೆ. ಆದಕಾರಣ ಸ ರ್ವೋತ್ಕೃಷ್ಟವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣ ಕೊಡುತ್ತೆ. ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ. ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ತಳತಳಿಸುವವು, ನಿಬಿಡವಾದ ನೀಲಬಣ್ಣದಿಂದ ಕೂಡಿ, ಅಗಾಗ್ಗೆ ಹರಿದು ಬಿದ್ದು ಹೋಗದೆ ವಟ್ಟವಾಗಿ ಬೆಳೆಯುವ ಕೂದಲಿಗೆ ಪೋಷಿಸಿ ಕೊಡುತ್ತೆ. ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ. ಹುಂಡಿನ ಹೊಟ್ಟನ್ನು ಅಡಗಿಸುತ್ತೆ. ಉತ್ತಮೋತ್ತಮವಾದ ಸುಗಂಧವುಳ್ಳ ದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳುವ ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ. ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶವನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟಿರುವ ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಬಹುದು.

ಬೆಲೆ 1 ಸೀಸೆಗೆ ರೂ 1-0-0, ಅಂಚೆಯ ವೆಚ್ಚ 0-4-0 ಬೇರೆ ತರಬೇಕು.

3 ಸೀಸೆಗಳಿಗೆ ರೂ 2-10-0 ಅಂಚೆಯ ವೆಚ್ಚ 0-7-0

ಮಾಹಿತಿಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಅಲಹಾಬಾದ್ ಎಗ್ಜಿಬಿಷನ್ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಬಿಷನ್ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು.

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಜದೆ ನಮಗೆ ಈ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ. ಮನ್ನಾರ್‌ಗುಡಿ ಸೆಕ್ರಿಟರಿ ಮಿ|| ಡಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಇನ್ನೂ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ. ನನ್ನ ಮನೆಯವರು ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ. ನಮ್ಮ ಮನೆ ಹೆಂಗಸರು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ." ವಿರುದುಪಟ್ಟಿ ಎಸ್. ಹೈಸ್ಕೂಲ್ ಹೆಡ್ ಮಾಸ್ಟರ್ ಮಿ|| ಎಂ. ಸುಬ್ರಹ್ಮಣ್ಯಪಿಳ್ಳೆ ಬರೆಯುವದು—"ನಿಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ನೋಡಿದೇನೆ. ಅದು ಕೂದಲನ್ನು ಹುಟ್ಟಿಸಿ ಅಂದವಾಗಿಯೂ, ಕೋಮಲವಾಗಿಯೂ, ಸೊಂಪಾಗಿಯೂ ಬೆಳೆಸುವುದೆಂದು ಖಂಡಿತವಾಗಿ ಹೇಳಬಲ್ಲೆನು. ದಯವಿಟ್ಟು ಇನ್ನು ಮೂರು ಬಾಟ್ಲು ಎಣ್ಣೆ ಕಳಿಸಿಕೊಡಿ." ವಕೀಲ ಡಿಸ್ಟ್ರಿಕ್ಟ್ ಮುನ್ಸಿಫ್ ಆಫೀಸ್ ಬಿ. ಗೋಪಾಲರಾವ್ ಜೋಸಿಯವರು ಬರೆಯುವದು—"ದಯವಿಟ್ಟು ನಿಮ್ಮ ಕಾಮಿನಿಯಾ ಎಣ್ಣೆ ಆರು ಬಾಟ್ಲು ಕಳಿಸಿಕೊಡಿ. ಒಂದು ತಿಂಗಳಿನ ಹಿಂದೆ ನೀವು ಕಳಿಸಿದ ಬಾಟ್ಲುಗಳು ಮುಗಿದುಹೋಯಿತು. ಇದೇ ಉತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳುತ್ತೇನೆ." ಆದಕಾರಣ ನೀವು ಒಂದು ಸಲ ತರಿಸಿ ಪರೀಕ್ಷೆ ಮಾಡಿ.

ಎಚ್ಚರಿಕೆ.—ಬೇಸವಾಗಿ ಇಟ್ಟಿರುವ ಪಾಪುಗಳಲ್ಲೆಲ್ಲಾ ಕಾಮಿನಿಯಾ ತೈಲ ಸಿಕ್ಕುತ್ತೆ. ನಿಮ್ಮ ಸ್ಥಳದ ಷಾಪುಕೀಪರಲ್ಲಿ ಅದು ಇಲ್ಲದಿದ್ದರೆ ಅವನ ಹೆಸರು ವಿಳಾಸ ನಮಗೆ ತಿಳಿಸಿ. ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ. ಇದೂ, ಇದು ಒಳ್ಳೆಯದು ಎಂದು ಹೇಳಿ ಮೋಸಮಾಡುವರು. ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ. ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನು ನೋಡಿ ಕೊಂಡುಕೊಳ್ಳಿ.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ಏಜಂಟ್, ಡಿ. ಉಲಕ್ ಮಾರ್ಕೆಟ್, ಮಂಗಳೂರು

ವಿಳಾಸ:— [8-13]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆನೋವು, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತಾಂಶಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಎಡಗೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಪುಷ್ಟಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೈಶಕ್ತಿಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ, 6 ಕುಪ್ಪಿಗೆ ಒಂದು ಕುಪ್ಪಿ ವೆಚ್ಚ, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [136-30]

೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮಾರಿತೆಂದು ಹೋರಿಹಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಕೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ದಿಯು ನಿಮ್ಮಲ್ಲಿದ್ದರೆ ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

೧ ತಿಂಗಳು ಮಾತ್ರ. ಅಲ್ಪ ಬೆಲೆ! ಉತ್ತಮ ಬಹುಮಾನ!! ಟಪಾಲು ಖರ್ಚು ಇಲ್ಲ! ತ್ವರೆಮಾಡಿ.

೯ ಪುಸ್ತಕಕ್ಕೆ ೧ ರೇಷ್ಮೆ ಕೈವಸ್ತ್ರ; ೬ ಪುಸ್ತಕಕ್ಕೆ ೧ ಪುಸ್ತಕ; ೧೦ ಪುಸ್ತಕಕ್ಕೆ ೧ ಗಡಿಯಾರ ಬಹುಮಾನ.

ನಿಮಗೂ, ನಿಮ್ಮ ಬಾಲಕ ಬಾಲಕಿಯರು ಮತ್ತು ಸ್ನೇಹಿತರಿಗೂ ಅತ್ಯಂತ ಉಪಯೋಗವಾದ

ಗಮನಿಸಿ ಗಮನಿಸಿ.

ENGLISH SELF-INSTRUCTOR.

ಆಂಗ್ಲ ಭಾಷಾ ಪ್ರಕಾಶಕ.

ಮುಪ್ಪಾನು ಸಕಲ ವಿದ್ಯಾವಿಶಾರದ ಬಿರುದು ಹೊಂದಿದ ಪಂಡಿತರ ಅಭಿಪ್ರಾಯದ ಮೇರೆಗೆ. ಐದು ಭಾಗಗಳುಳ್ಳ ಇಂಥ ಒಳ್ಳೇ ದೊಡ್ಡ ಪುಸ್ತಕ ಈ ವರಿವಿಗೆ ಪ್ರಕಟವೇ ಇಲ್ಲ.

ಕ್ರಯ ರೂ ೧—೮—೦ ಅನ್ಯರ ಸಹಾಯವಿಲ್ಲದೆ ಸುಲಭವಾಗಿ ಇಂಗ್ಲೀಷ್ ಕಲಿಯುವ ಪುಸ್ತಕ. ಕ್ರಯ ರೂ. ೧—೮—೦.

ಈ ದೊಡ್ಡ ಪುಸ್ತಕದಲ್ಲಿ ೧ ನೇ ಭಾಗ, ೨ ನೇ ಭಾಗ, ೩ ನೇ ಭಾಗ, ೪ ನೇ ಭಾಗ, ೫ ನೇ ಭಾಗ—ಈ ೫ ಭಾಗಗಳೂ ಅಡಕವಾಗಿವೆ. ಬಾಲಕ ಬಾಲಕಿಯರು ಪಾಠಶಾಲೆಯಲ್ಲಿ ಓದುವ ವಿದ್ಯಾರ್ಥಿಗಳು ಮತ್ತು ವರ್ತಕರು ಮುಂತಾದವರು ಬೋಧಕರ ಸಹಾಯವಿಲ್ಲದೆ ಓದುವುದು, ಬರೆಯುವುದು, ಮಾತಾಡುವುದು ಸುಲಭವಾಗಿ ಕಲಿಯಬಹುದು. ಕನ್ನಡ ತಿಳಿದಷ್ಟೇ ಸಾಕು. ಇಂಗ್ಲೀಷ್ ಅಕ್ಷರಾಭ್ಯಾಸ, ಶಬ್ದಸಂಯೋಜನ, ಸ್ವರಾಕ್ಷರಗಳ ವಿವರ, ಶಬ್ದಾಭ್ಯಾಸ, ಪಾಠಶಾಲೆಯಲ್ಲಿ ೫ ವರ್ಷ ಕಲಿಯುವನ್ನು ವ್ಯಾಕರಣ ಕ್ರಮಗಳು ಮತ್ತು ಅಭ್ಯಾಸಗಳು; ಇಂಗ್ಲೀಷ್ ಭಾಷೆಯಲ್ಲಿ ಬಗೆಬಗೆಯಾದ ವಾಕ್ಯಗಳನ್ನು ಮಾಡುವ ಕ್ರಮ ಮತ್ತು ನೂರಾರು ಅಭ್ಯಾಸಗಳು, ಸರ್ವವಿಷಯಗಳನ್ನು ಕುರಿತು ಪ್ರಶ್ನೋತ್ತರ ಸಂಭಾಷಣೆಗಳು ೮೦೦, ಪ್ರಪಂಚದ ಸರ್ವವಿಷಯಗಳನ್ನು ಕುರಿತು ಸಂಭಾಷಣೆ ಮಾಡುವಾಗ ಬೇಕಾಗುವ ಅದಾ ವಿಷಯಕ್ಕೆ ತಕ್ಕ ಇಂಗ್ಲೀಷ್-ಕನ್ನಡ, ಕನ್ನಡ-ಇಂಗ್ಲೀಷ್ ಶಬ್ದಕೋಶ (ಡಿಕ್ಷನರಿ); ಭಾಷಾಜ್ಞಾನ ಮತ್ತು ಅರ್ಥಜ್ಞಾನಕ್ಕೆ ತಕ್ಕ ಅಭ್ಯಾಸಗಳು, ಕನ್ನಡ ಗಾದೆಗಳಿಗೆ ಸರಿಯಾದ ಇಂಗ್ಲೀಷ್ ಗಾದೆಗಳು, ವರ್ತಕವ್ಯವಹಾರದಲ್ಲಿ ಉಪಯೋಗಿಸುವ ಸಾಂಕೇತಿಕ ಶಬ್ದಗಳು. ಕ್ಷೇಮಸಮಾಚಾರ, ಶೋಕಾದಿ ಮುಂತಾದ ವಿಷಯಗಳನ್ನು ಕುರಿತು ತಂತಿವರ್ತಮಾನ ಮತ್ತು ಕಾಗದಪತ್ರಗಳನ್ನು ಬರೆಯುವ ಅನೇಕ ಕ್ರಮಗಳು ಮತ್ತು ನಮೂನೆಗಳು, ಇವುಗಳಿಗೆ ಸ್ಫುಟವಾದ ಕನ್ನಡ ಅಕ್ಷರದಲ್ಲಿ ಉಚ್ಚಾರಣೆ ಮತ್ತು ಅರ್ಥಸಹ ಉಳ್ಳದ್ದು. ಈ ಪುಸ್ತಕ ನಮ್ಮಲ್ಲಿ ಮಾತ್ರ ದೊರೆಯುತ್ತೆ. ಕೆಲವು ಪ್ರತಿಗಳು ಮಾತ್ರ ಉಳಿದಿವೆ. ತ್ವರೆಮಾಡಿರಿ. [15-6]

ವಿಳಾಸ:—ಎ. ವಿ. ರಾಂಮಲು. ಬಾಲಕೃಷ್ಣ ಬುಕ್ ಡಿಪೋ. ಜೋಡಿಹೋಟೆ, ಬೆಂಗಳೂರು ಸಿಟಿ.

ಬಿಟ್ಟಿ! ಪ್ರೆಗ್ಸೆಟ್ಟೆ! ಬಿಟ್ಟಿ!

ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿ ಹೊಂದಿರುವ ಒಂದು ದರ್ಬಾರ್ ಲೀವರ್ ವಾಚನ್ನು ರೂ. ೩-೪-೦ ಗೆ ಕೊಂಡುಕೊಳ್ಳುವವರಿಗೆಲ್ಲಾ ಕೆಳಗೆ ಹೇಳುವ ೧೨ ಬಹುಮಾನಗಳು ಸಿಕ್ಕುವವು. ಇದರಲ್ಲಿ ಮೋಸ ಸ್ವಲ್ಪವೂ ಇಲ್ಲ.

(೧) ಒಂದು ಸೊಗಸಾದ ಸರಪಣಿ.
(೨) ಒಂದು ಹಣದ ಚೀಲ.
(೩) ಒಂದು ಚಾಕು.
(೪) ಒಂದು ತಮಾಷಿ ಪೆಟ್ಟಿಗೆ
(೫) ಒಂದು ಮಡಿಚುವ ಕತ್ತರಿ
(೬) ಒಂದು ಫೌಂಟನ್ ಲೇಖಣಿ.
(೭) ಒಂದು ಕೈ ಚಾಕು.
(೮) ಒಂದು ಜೊತೆ ಕಾಲುಚೀಲ
(೯) ಒಂದು ಸುಂದರವಾದ ಉಂಗುರ.
(೧೦) ಒಂದು ಸೊಗಸಾದ ಬೀಸಣಿಗೆ.
(೧೧) ಒಂದು ಸೆಟ್ ಷರಟುಗುಂಡಿ.
(೧೨) ಒಂದು ಕತ್ತಿ ಪೆಟ್ಟಿ.

[23-3] ವಿಳಾಸ:—ಎ. ಎ. ರಜಾಕ್ ಅಂಡ್ ಕೋ., ರತನ್‌ಬಜಾರ್ ರೋಡ್, ಮದರಾಸ್.

ಸರ್ವೋಪಯೋಗಿ । ಹೊಸಪುಸ್ತಕ ಸರ್ವಾದರಣೀಯ ॥

Ayurvedic Physician's Companion.

ಅನುಪಾನ ಚಂದ್ರಿಕೆ.

ಶಾಸ್ತ್ರೀಕ ಔಷಧಗಳನ್ನು ತಯಾರುಮಾಡುವುದು ಸರ್ವ ವೈದ್ಯರಿಗೂ ತಿಳಿದಿರುತ್ತದೆ ಆದರೆ ರೋಗಿಗಳಿಗೂ ಇತರ ಸಂಬಂಧಿಕರಿಗೂ ಅನುಪಾನ ಪಥ್ಯಾದಿಗಳು ತಿಳಿಯಲು ಕೊರತೆಯುಂಟಾಗುತ್ತದೆ ಅಲ್ಲದೆ ಔಷಧವನ್ನು ಕೊಡುವ ಕಾಲದಲ್ಲಿ ವೈದ್ಯನು ಹೇಳಿದ ಅನುಪಾನಾದಿಗಳನ್ನು ಸಂದರ್ಭಾನುಸಾರ ಮರೆತು ಬಿಡುವುದರಿಂದ ಅನೇಕ ಅನರ್ಥಗಳಾಗುವವು ಈ ನ್ಯೂನತೆಯನ್ನು ಹೋಗಲಾಡಿಸುವುದಕ್ಕೂ, ವೈದ್ಯನು ಪ್ರತಿಯೊಬ್ಬ ರೋಗಿಗೂ ಪದೇಪದೇ ಹೇಳಬೇಕಾಗಿರುವುದರಿಂದಲೂ, ಶಾಸ್ತ್ರೀಕ ಔಷಧಗಳ ಅನುಪಾನ ಪಥ್ಯಾದಿಗಳನ್ನು ಕುರಿತು ಯಾವ ಪುಸ್ತಕವೂ ಯಾವ ವೈದ್ಯರಿಂದಲೂ ಹೊರಪಟ್ಟಿರುವುದಿಲ್ಲ ಈ ನ್ಯೂನತೆಯನ್ನು ಪರಿಹರಿಸಿ, ತನ್ಮೂಲಕ ವೈದ್ಯರಿಗೂ, ರೋಗಿಗಳಿಗೂ ಮೇಲ್ಕಂಡ ತೊಂದರೆಯನ್ನು ಪರಿಹಾರಮಾಡಬೇಕೆಂಬ ಪರೋಪಕಾರ ಜ್ಞಾನದಿಂದ ಮೇಲ್ಕಂಡ ಅನುಪಾನ ಚಂದ್ರಿಕೆ ಎಂಬ ಪುಸ್ತಕವನ್ನು ಪ್ರಚುರಪಡಿಸುತ್ತೇವೆ ಇದರಲ್ಲಿ ಶಾಸ್ತ್ರೀಕ ಔಷಧಗಳ ಪ್ರಮಾಣ, ಅನುಪಾನ ಪಥ್ಯ, ಯಾವ ರೋಗಕ್ಕೆ ಕೊಡತಕ್ಕದ್ದು, ಈ ವಿಷಯಗಳೆಲ್ಲಾ ಕ್ರಮವಾಗಿ ವರ್ಣಿಸಲ್ಪಟ್ಟಿರುವುದು ಈ ಪುಸ್ತಕದಿಂದ ವೈದ್ಯದಸಹಾಯವಿಲ್ಲದವರೂ ರೋಗಲಕ್ಷಣವನ್ನು ತಿಳಿದು ಶಾಸ್ತ್ರೀಕ ಔಷಧಗಳನ್ನು ತರಿಸಿಕೊಂಡು ಸ್ವತಃ ಚಿಕಿತ್ಸೆಮಾಡಿಕೊಳ್ಳಬಹುದು ಅಲ್ಲದೆ ಸಾಮಾನ್ಯವಾಗಿ ವಿಶೇಷ ಉಪಯೋಗವಲ್ಲಿರುವ ಔಷಧಿಗಳನ್ನೇ ಬರೆದಿರುತ್ತೆ ಸರ್ವರು ತರಿಸಿ ನೋಡಿ ಆನಂದಿಸಬೇಕಲ್ಲದೆ ಹೇಳಿದಲ್ಲಿ ಮುಗಿಯಲಾರದು ದಪ್ಪಕಾಗದ, ಭದ್ರವಾದ ಬೈಂಡು, ಕ್ಯಾಪ್ಟ್ ಟೈಪ್ ಮತ್ತು ಮೆಮೋರಿಯಲ್ ಪ್ರೆಸ್ಸಿನ ಮುದ್ರಣ ಇದರಲ್ಲಿ ವಿವರಿಸಲ್ಪಟ್ಟಿರುವ ಔಷಧಗಳನ್ನು ನೋಡಿರಿ —ಅಗಸ್ತ್ಯಸೂತರಾಜ, ಅಗ್ನಿಕುಮಾರ, ಅಗ್ನಿಸುತ, ಅನಂಗರಂಗ, ಅಪಾಮಾರ್ಗಕ್ಷಾರ, ಅಭ್ರಕಭಸ್ಮ, ಅಶ್ವಕಂಚುಕ ಅರ್ಶಕುಠಾರ ಅಷ್ಟಮೂರ್ತಿರಸ, ಆನಂದಭೈರವಿ, ಆನಂದರಸ, ಇಚ್ಛಾಭೇದಿ, ಉಪದಂಶಕುಠಾರ, ಕನಕಸುಂದರಪಾನಕ, ಕಲ್ಯಾಣಸುಂದರ, ಕಾಮದುಗ್ಧ, ಕಾಮಿನೀಮದವಿಧ್ವಂಸನ, ಕಾಲಕೂಟರಸ, ಕಾಸೀಸಾದಿಘೃತ, ಕುಟಜಪಾಕ, ಕೂಷ್ಮಾಂಡಪಾಕ, ಕುಮಾರ್ಯಾಸವ, ಕೈಶೋರಕಗುಗ್ಗುಳ, ಕೇಸರ[illegible], ಕ್ರಿಮಿಕಂಟಕ, ಕಾಸೀಸತೈಲ, ಕಾಸೀಸಭಸ್ಮ, ಗಂಧಕರಸಾಯನ, ಗ್ರಹಿಣೀಕಪಾಟ, ಗೋಕ್ಷುರಾದಿಗುಗ್ಗುಳ, ಚಂದನಬಲಾಲಾಕ್ಷಾದಿತೈಲ, ಚಂದನಾದಿಚೂರ್ಣ ಚಂದ್ರಕಲಾರಸ, ಚಂದ್ರಪ್ರಭಾವಟಿ, ಚಂದ್ರೋದಯವರ್ತಿ, ಚತುರ್ಮುಖ, ಜಡಿಬೂಟಿ[illegible], ಜೀರ್ಣಜ್ವರವಿಧ್ವಂಸ, ಜೀವನಾಮೃತ, ಜ್ವರಾಂಕುಶ, ತಾಲಿಸಾದಿಚೂರ್ಣ, ತಾಳಕಸಿಂದೂರ, ತ್ರಿಭುವನಕೀರ್ತಿರಸ, ತ್ರಿಮೂರ್ತಿರಸ, ತ್ರಿವಂಗಭಸ್ಮ, ದಶಮರಸಾಯನ, ದರದಸಿಂದೂರ, ದಶಮೂಲಾರಿಷ್ಟ, ದಾಳಿಂಬಾದಿಪುಟಪಾಕವಟಕ, ದ್ರಾಕ್ಷಾಸವ, ದ್ವಿತೀಯದರದರಸಾಯನ, ಧಾತ್ರಿಗುಳಿಗೆ, ನಯನಾಮೃತಾಂಜನ ನಾಗಭಸ್ಮ, ನಾರಾಯಣತೈಲ, ನಾರಿಕೇಳಾಂಜನ, ಪಂಚಾಮೃತಪರ್ಪಟಿ, ಪಿತ್ತಳಭಸ್ಮ ಪೀಯೂಷಾದಿವಟಿಕೆ, ಪೀತಹೇಮಭೂಪತಿ, ಪೂತಿಪ್ರಮೇಹ, ಪ್ರದರವಿಘ್ನ, ಪ್ರಮೇಹಾರಿ, ಪ್ರವಾಳಪಂಚಾಮೃತ, ಪ್ರವಾಳಭಸ್ಮ, ಬಾದಾಮಿಲೇಹ ಬಾಲಸಂಜೀವನಾಮೃತ, ಬೃಹತ್‌ಶಕ್ಷಾರ, ಬೃಹಚ್ಛಂಖವಟಿ, ಬೃಹಲ್ಲವಂಗಾದಿವಟಿ, ಭೌಮವಾತ್ಸಿಕ ಮಂಡೂರಭಸ್ಮ, ಮಂಡೂರವಟಿಕೆ ಮದನಸಂಜೀವನಮಾತ್ರೆ, ಮದನಾನ್ನಕಚೂರ್ಣ, ಮಧುಸೂದನ ಮಹಕ್ರವ್ಯಾದ, ಮಹಾಲವಂಗಾದಿಚೂರ್ಣ, ಮಹಾಬೋಲಬದ್ಧರಸ, ಮಹಾಮೇಹಕಾಂತರಸ ಮಹಾವಾತಗಜಾಂಕುಶ, ಮಾಣಿಕಭಸ್ಮ, ಮಾಣಿಕರಸ, ಮುಸಳಿಪಾಕ, ಮೂಲಂಗಿಕ್ಷಾರ, ಮೃಗಶೃಂಗಭಸ್ಮ, ಮೃತ್ಯುಂಜಯ, ಮೌಕ್ತಿಕಭಸ್ಮ ಯವಕ್ಷಾರ, ಯೋಗರಾಜಗುಗ್ಗುಳ, ರಕ್ತಶೋಧಕ, ರಕ್ತಹೇಮಭೂಪತಿ, ರಸರಾಜ, ರಾಜಮಂಗೇಶ್ವರ, ರಾಮಬಾಣರ, ರೌಪ್ಯಪರ್ಪಟಿ, ಲಘುಕ್ರವ್ಯಾದಿ ಲಘುಗಂಧಕರಸಾಯನ, ಲಘುಬೋಲಬದ್ಧರಸ, ಲಘುಮಾಲಿನೀವಸಂತ, ಲಘುಮೇಹಾಂತಕರಸ, ಲಘುಲವಂಗಾದಿಚೂರ್ಣ ಲಘುಲೋಕನಾಥ,ಲಘುವಾತವಿಧ್ವಂಸ ಲಘುಸೂತಶೇಖರ, ಲಘುಶಂಖವಟಿ, ಲವಂಗಾದಿತೈಲ ಲವಂಗಾದಿವಟಿ, ಲೋಕನಾಥ, ಲೋಹಭಸ್ಮ, ಲೋಹರಸಾಯನ, ಲೋಹಪರಬತ್ತು, ಲಕ್ಷ್ಮೀವಿಲಾಸ, ವಂಗಭಸ್ಮ, ವಜ್ರಕ್ಷಾರ, ವಸಂತಕುಸುಮಾಕರ, ವಾಂತಿಹರರಸ, ವಾಸಾಹರೀತಕೀ, ವಿಚಿತ್ರವಿದ್ಯಾಧರ, ವೈಷ್ಣವೀರಸ, ಶ್ವಾಸಕುಠಾರ, ಶಿಗ್ರುತೈಲ, ಶ್ವೇತಹೇಮಭೂಪತಿ ಷಡಶೀತಗುಗ್ಗುಳ, ಸಂಜೀವನೀಗುಟಿಕೆ, ಸನ್ನಿಪಾತಸನ್ನಿಗ, ಸಾಲಾಮಿಶ್ರಿಲೇಹ ಸಿಂದೂರಭೂಷಣ, ಸೀತೋಪಲಾದಿಚೂರ್ಣ, ಸುವರ್ಣಪರ್ಪಟಿ, ಸುವರ್ಣಮಾಲಿನೀವಸಂತ, ಸುವರ್ಣಮಾಕ್ಷಿಕ, ಸೂತಶೇಖರ, ಸೂತಿಕಾರಿ, ಸೋಮನಾಥತಾಮ್ರಭಸ್ಮ, ಸ್ವಯಮಗ್ನಿಲೋಹ, ಸ್ತ್ರೀಜೀವನಾಮೃತಗುಟಿಕಾ ಸ್ತ್ರೀಜೀವನಾಮೃತ ಪಾನಕ, ಹೇಮಗರ್ಭ (ಹೇಮಭೂಪತಿ)—ಈ ರೀತಿ ಯಾಗಿ 141 ಔಷಧಗಳ ಪ್ರಮಾಣ, ಅನುಪಾನ, ಪಥ್ಯಾದಿಗಳನ್ನು ಬರೆದು ಇರುತ್ತೆ ವೈದ್ಯಸಿಂಧು ಮಾಸಪತ್ರಿಕೆಗಳು ಸಮೇತವಾಗಿ

ಬೆಲೆ ಆರು ಆಣೆ ಮಾತ್ರ, ವಿ ಪಿ ಯಿಂದ ಎಂಟು ಆಣೆ ಆಗಲೇ ಕೆಲವು ಖರ್ಚಾಗಿ ಕೆಲವು ಪ್ರತಿಗಳು ಮಾತ್ರ, ಇವೆ ದಿನವೂ ಹೋಗುತ್ತಿರುವವು ಪ್ರತಿ ಒಬ್ಬರಿಗೂ ಇದು ಅತ್ಯುಪಯೋಗಿ ವೈದ್ಯರಿಗೂ, ಡಾಕ್ಟರ್, ಮಿಡ್‌ವೈಫ್, ದಾದಿ ಯಾ ನರ್ಸ್ ಮುಂತಾದವರಿಗೂ, ಕಾಂಪೌಂಡರಿಗು ರೋಗಿಗಳಿಗು ಇದು ಇಟ್ಟಿರಬೇಕಾದದ್ದು ಅವಶ್ಯಕ ಈ ಅಪೂರ್ವವಾದ ಸಮಯವನ್ನು ಕಳೆದುಕೊಂಡರೆ ಎರಡನೇ ಮುದ್ರಣದವರೆಗೂ ಕಾದಿರಬೇಕಾಗುತ್ತದೆ ಆದ್ದರಿಂದ ಈ ದಿನವೇ ತರಿಸಿಕೊಳ್ಳಿರಿ

ವಿಳಾಸ ಪತ್ರೆ —ವೈದ್ಯಪಂಚಾನನ ಎ ಟಿ ಪಂಡಿತರು,

ಎಡಿಟರ್, ವೈದ್ಯಸಿಂಧು, ಬೆಂಗಳೂರು ಸಿಟಿ

ಸಚಿತ್ರಶಾರೀರ ಪುಸ್ತಕ (ಪಟಚಕ್ರ)	ಕ್ರಯ ೦–೧೦–೦
ಘೋರಸಾದಿ ಬಾಲೋಪಚಾರಂ	,, ೦– ೪–೦
ವೈದ್ಯಹಿತೋಪದೇಶ	,, ೦– ೪ ೦

ಎರಡನೇ ಮುದ್ರಣವಲ್ಲಿ ಇವೆ ಶ್ರಮಮಾಡಿರಿ

" ಗಿರಾಕಿಗಳು ಮೋಸಹೋಗಬಾರದ್ದಕ್ಕೆ ಎ ಟಿ ಪಂಡಿತರ " ಕೇಸರಾಕ್ಷ ಮಧುರೀಸರ್ ಪಾಕಿನ ನೋಡಿ ವಿಳಾಸ ನೋಡಿ ತರಿಸಿಕೊಳ್ಳಿ ಸರ್ವರು " ಪಂಡಿತ " ರೆಂದು ಕೆ ಳ ಅವಲಂಬಿಸನೆ ಪಾತ್ರರಾಗುತ್ತಾರೆ [5-1]

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



11.

ಕೆಳ ಹೊಟ್ಟೆಯ ನೋವು, ಬಿರುಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ನಾಶಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಕೆಡಿಸುವನ್ನು ಮತ್ತು ನೋವನ್ನು ಬಾಧೆಯನ್ನೂ ನಿವಾರಣೆ ಮಾಡುವವು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ— ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ನಾಶಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಳಕೆಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಡೋಂಗರೆ ಇವರ ಬಾಲಾಮೃತ.

[115-37

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ಥಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತು ೧೨ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಅಮೃತಾಂಜನ. (Regd)

ಇಲ್ಲಿ ವಿಶೇಷ ಲಕ್ಷ್ಯ ಕೊಡಿರಿ! ವಾತ, ಸಂಧಿವಾತ, ತಲೇನೋವು, ಸೊಂಟನೋವು, ಶೀತ, ಕಜ್ಜಿ, ಗಂಟಲುನೋವು, ಗಾಯ, ಉಳುಕು ಮುಂತಾದವುಗಳು ಅಮೃತಾಂಜನದ ಲೇಪನದಿಂದ ಖಾತ್ರಿಯಾಗಿ ಗುಣಬರುವದು ಎಲ್ಲೆಲ್ಲೂ ಪ್ರಖ್ಯಾತ ಪಟ್ಟದ್ದು ನಮ್ಮ ಅಮೃತಾಂಜನವೇ ಬಾಟ್ಲಿ 1ಕ್ಕೆ ೦–೪–೦

ಅರ್ಧ ಕ್ರಯಕ್ಕಿಂತಲೂ ಕಡಮೆ

ಹತ್ತು ಲಕ್ಷ ದೊಡ್ಡಸೈಜು ಪೋಸ್ಟುಕಾರ್ಡುಗಳು ಇವುಗಳು ಬೆಳ್ಳಗಾಗಿಯೂ ನಯವಾಗಿಯೂ ಇವೆ 1,000 ಕ್ಕೆ ಮುಂಚಿನ ಕ್ರಯ ರೂ 2–8–0 ಈಗ 15 ಆಣೆ, ವಿ ಪಿ ಖರ್ಚು 12 ಆಣೆ 500 ಕ್ಕೆ 8 ಆಣೆ ವಿ ಪಿ ಖರ್ಚು 8 ಆಣೆ

1913 ನೆಯ ವರ್ಷದ ಕ್ಯಾಲೆಂಡರ್ 8 ಬಾಟ್ಲಿ ಅಮೃತಾಂಜನ ತರಿಸಿಕೊಂಡವರಿಗೆ ಪುಗಸಟ್ಟೆಯಾಗಿ ರವಾನಿಸಲ್ಪಡುವದು ಇತರರಿಗೆ ಕ್ಯಾಲೆಂಡರ್ 1ಕ್ಕೆ ೩ ಆಣೆ ವಿ ಪಿ ಸಹಿತ [12-7]

ಅಮೃತಾಂಜನ ಡಿಪೊ. ಫೋರ್ಟು, ಮುಂಬಯಿ.

ಪ್ರತಾಪಕಂಠೀರವ ಚರಿತ್ರೆ.

(1) " ಧರ್ಮಿಷ್ಟರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ " ಎಂಬ ನೀತಿ (2) ಸ್ತ್ರೀಧರ್ಮ ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ ಸಾಹಸ ಚಾತುರ್ಯ (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು, (4) ವನ, ಸರಸ್ಸು, ಆರಾಮ ವರ್ಣನೆಗಳು, (5) ಮನುಷ್ಯ ಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭ ಶೈಲಿ, (7) ಸರಳ ಯ ಕೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ ಕ್ರಯ —1 ರೂಪಾಯಿ. ಟಪಾಲ್ ಹಾಸಲು ಬೇರೆ

[16 5] ನಮ್ಮ ವಿಳಾಸ —ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ

ವಿಕ್ಟೋರಿಯಾ ಲೈಫ್ ಅಷೂರೆನ್ಸ್ ಕಂಪನಿ ಲಿಮಿಟೆಡ್.

(1912 ನೇ ಪ್ರಾವಿಡೆಂಟ್ ಸೊಸೈಟಿ ಆಕ್ಟಿನಂತೆ ರಜಿಸ್ಟರಾದದ್ದು)

ಮೂಲಧನ—10,00,000 ರೂಪಾಯಿ (ಹತ್ತು ಲಕ್ಷ)

ಹೆಡ್ ಆಫೀಸ್—98, ಕ್ಲೈವ್ ಸ್ಟ್ರೀಟ್, ಕಲ್ಕತ್ತಾ

ದಕ್ಷಿಣ ದೇಶ ಮತ್ತು ಸಿಲೋನ್‌ಗೆ ಬ್ರಾಂಚ್ ಆಫೀಸು—ಚೂಳೆ, ಮದರಾಸ್

ಪೋಷಕರು— ಕೂಚ್ ಬೀಹಾರದ ರಾಜರಾಜೇಂದ್ರ ನಾರಾಯಣ ಭೂಪ ಬಹದೂರ್ ಗಿಧೋರ್ ಮಹಾರಾಜಾ ಸರ್ ರಾವಣೇಶ್ವರ ಪ್ರಸಾದ್ ಸಿಂಗ್ ಬಹದೂರ್, ಕೆ ಸಿ ಐ ಇ ನದ್ದಿಯಾ ಮಹಾರಾಜ ಕ್ಷೌನಿಷ್ ಚಂದ್ರ ರಾಯ್ ಬಹದೂರ್, ನಟ್ಟೋರ್ ಮಹಾರಾಜ ಜಗದಿಂದ್ರನಾಥರಾಯ್ ಬಹದೂರ್ ಬಂಗಾಳಾ ಉತ್ತರಪಾರಾ ರಾಜಾ ಪ್ಯಾರಿಮೋಹನ ಮುಖರ್ಜಿ ಬಹದೂರ್, ಎಂ ಎ, ಬಿ ಎಲ್, ಸಿ ಎಸ್ ಐ, ಮತ್ತು ಕಲ್ಕತ್ತಾ ಶೋಭಾಬಜಾರ್ ರಾಜಬಟರಾಜಾ ವಿನಯಕೃಷ್ಣ ಬಹದೂರ್

ಪ್ರಾಸ್ಪೆಕ್ಟಸ್, ಪ್ರೊಪೋಜಲ್ ಫಾರಂ, ಬೋನಸ್ ಪಟ್ಟಿಗಳನ್ನು ಅಪೇಕ್ಷಿಸತಕ್ಕವರು ಈ ವಿಳಾಸಕ್ಕೆ ಬರೆಯಬೇಕು [3 8]

"ವಿಕ್ಟೋರಿಯಾ" ಕಂಪನಿ ಸೆಕ್ರೆಟರಿ, ಚೂಳೈ ಮದರಾಸ್

ಚೀಫ್ ಮತ್ತು ಡಿವಿಜನಲ್ ಏಜಂಟರುಗಳು ಬೇಕು— ಧಾರಾಳವಾದ ಕಮಿಷನ್ ಮತ್ತು ಕೈ ತುಂಬಾ ಸಂಬಳ

ಬ್ರೇಸ್‌ಲೆಟ್ ವಾಚ್.



ಒಂದು ರೂಪಾಯಿ 3-15-0

[illegible] ರೂಪಾಯಿ 3 15 0

Rs. 3-15-0

ಈ ಗಡಿಯಾರ ಬಹಳ ಸುಂದರವಾದದ್ದು ಇದಕ್ಕೆ ಬಂಗಾರದ ಗಿಲೀಟು ಮಾಡಿದೆ ಇದು ವಿಲಾಯಿತಿಯಿಂದ ತರಿಸಲ್ಪಟ್ಟಿದೆ ಇದನ್ನು ಹೆಂಗಸರೇ ಆಗಲಿ ಗಂಡಸರೇ ಆಗಲಿ ಆಭರಣರೂಪವಾಗಿಯಲ್ಲಿ ಧರಿಸಿಕೊಳ್ಳಬಹುದು ಇದುವರೆಗೆ ಇಂಥಾ ಗಡಿಯಾರವನ್ನು ಇಷ್ಟು ಸುಲಭ ಕ್ರಯಕ್ಕೆ ಯಾರೂ ವಿಕರಿ ಮಾಡಿದ್ದಿಲ್ಲ ಪೂರ್ವದ ಬೆಲೆ ರೂ 3 4 0, ಈಗಿನ ಬೆಲೆ ರೂ 3 15 0 ನಮ್ಮ ಹೊಸ ಪ್ರಮಾಣ ಗಿರಾಕಿಗಳ ಪ್ರೋತ್ಸಾಹವಾಗಿ ಇಷ್ಟು ಸುಲಭಕ್ರಯಕ್ಕೆ ಮಾರಲ್ಪಡುತ್ತೆ

[1-11] ವಿಳಾಸ—ಪತಿ ಮತ್ತು ಕಂಪನಿ,

ನಂ 39, ಜನರಲ್ ಮುತ್ಯಾಮೊದಲಿ ಬೀದಿ,

ನಾಯಕರ್ ಪೇಟೆ, ಮದ್ರಾಸ್

"ವೃತ್ತಾಂತ ಪತ್ರಿಕೆ" ಏಜಂಟರಿಗೆ ನೋಟೀಸ್

ವೃತ್ತಾಂತ ಪತ್ರಿಕೆಯ 1912-13 ನೇ ವರುಷದ ಮೂರನೇ ಕ್ವಾರ್ಟರು ಕಳೆದ ... ತಿಂಗಳಿಗೆ ಪೂರೈಸಿದ. ಏಜಂಟರು ಆ ಕ್ವಾರ್ಟರಿನ ಲೆಕ್ಕಗಳನ್ನು ಮುಗಿಸಿ, "ಜ" ಫಾರಂನಲ್ಲಿ ಎತ್ತಿ ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಪ್ರಾರ್ಥಿಸಿದ ಮ್ಯಾನೇಜರ್, "ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು

ಹತ್ತಿಯ ಹಿಂಡಿ! ಹತ್ತಿಯ ಹಿಟ್ಟು!

ಶಾಸ್ತ್ರಜ್ಞರ ಅಭಿಪ್ರಾಯ.

ಆ ಪದಾರ್ಥಗಳನ್ನು ಪರೀಕ್ಷಿಸಿದ್ದರಲ್ಲಿ ಇವು ದನಗಳಿಗೆ ಉತ್ಕೃಷ್ಟವಾದ ಆಹಾರವಾಗಿವೆ ... ತಯಾರಾಗುವಂತೆಯೇ ಶ್ರೇಷ್ಠವಾಗಿದೆ ... ಇವು ಬಹಳ ಪುಷ್ಟಿಕಾರಿ ಇವಕ್ಕಿಂತ ಉತ್ತಮವಾಗಿ ... ಬೊಂಬಾಯಿ ವ್ಯವಸಾಯದ ಇಲಾಖೆ ... ಶಾಸ್ತ್ರಜ್ಞರೂ, ಪೂನಾ ವ್ಯವಸಾಯದ ಕಲಾಶಾಲೆಯ ಅಧ್ಯಕ್ಷರೂ ಡಾಕ್ಟರ್ ಮ್ಯಾನ್ ಎಂಬ ದೊಡ್ಡ ಪಂಡಿತರೇ ಬರೆದಿರುವರು [60-4]

ಒಂದೇ ಭಾಗ ಹಿಂಡಿಗೆ ನಾಲ್ಕು ಭಾಗ ಹೊಟ್ಟು ಬೆರೆಯಿಸಿ ದನಗಳಿಗೂ ... ಕೊಡುತ್ತಾ ಬಂದರೆ ಬಲತೆಚ್ಚಿ ದನವು ಕಡಮೆಯಾಗುವುದು ... ಎಮ್ಮೆ ಹಸುಗಳಿಗಂತೂ ಈ ಹೊಟ್ಟೂ ಹಿಂಡಿಯೂ ಅತ್ಯವಶ್ಯಕ

ಎಲ್ಲಾ ಬಗೆಯ ಪೈರುಗಳಿಗೂ, ಹಣ್ಣು, ತರಕಾರಿ, ಹೂವಿನ ಗಿಡಗಳಿಗೂ ಕೇವಲ ಅಗ್ಗವಾದ ಗೊಬ್ಬರ ನಮ್ಮ ವಿಳಾಸ —

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, 1.., ಕಿಲಾರಿ ರೋಡ್, ಬೆಂಗಳೂರು ಸಿಟಿ

"ನಾಶಮಾಡಿಕೊಳ್ಳುತ್ತೇನೆಂದು ಹೇಳು."

84-41

ಎಂಥಾ ನೋವಿದ್ದರೂ ನಾಶಮಾಡಿಕೊಳ್ಳುವೆನೆಂದು ಹೇಳು ವಾಯು, ..., ಜರಡಿ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಗಳು, ಉಬ್ಬಸ, ಹಲ್ಲುನೋವು, ಗಂಟಲು ಕೆರೆಯುವುದು, ಕೆಮ್ಮುಗಳು, ..., ಶ್ವಾಸರೋಗ, ..., ಗುಳಕು ಛಳುಕು, ಚೇಳು ಕಡಿದ ಬಾಧೆ, ಮೊದಲಾದ ಎಲ್ಲಾ ತರದ ನೋವನ್ನೂ ನಾನು ನಾಶಮಾಡಿಕೊಂಡು ... ಹೇಳಿ ಮಾಡುತ್ತೇನೆಂದು ತಿಳಿದುಕೊ ಸಮೀಪದಲ್ಲಿ ... ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ... ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ... ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯನ್ನೂ ಮಾಡಿ ... ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವುಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ... ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

ಕ್ಲೆಮೆಂಟರ ಮ್ಯಾಜಿಕ್ ಬಾಂ ... ಹೆಸರನ್ನು ಮರೆಯಬೇಡಿ ... ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 1 ಆಣೆ 3 ಅಥವಾ ಹೆಚ್ಚು ... ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ... ವ್ಯಾಪಾರಸ್ಥರಿಗೆ ಧಾರಾಳ ಡಿಸ್ಕೌಂಟು ಸಿಗುತ್ತೆ ವಿಳಾಸಗಳು (1) ಎಸ್ ಪೀಟರ್ಸ್, 37 ... ಬೀದಿ, ಪೂರ್ಣಾಕಂ, ಪೋಸ್ಟು, ಮದರಾಸ್ (2) ಜಿ ಎಸ್ ... ಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಶ್ರೀ ಲಕ್ಷ್ಮೀನರಸಿಂಹ ಆಯುರ್ವೇದ ವೈದ್ಯಶಾಲಾ

ಜ್ವರಮುರಾರಿ ... ಸಕಲ ವಿಧವಾದ ಜ್ವರಗಳಿಗೆ ಅಂಕುಶವಾಗಿದೆ ಇದ ... ಉಪಯೋಗಿಸಿದೊಡನೆ ಸಕಲವಿಧವಾದ ಜ್ವರಗಳನ್ನೂ ಹತಮಾಡುವದು ಇದು ... ಕಟುವಾಗಿರುವ ಪದಾರ್ಥಗಳು ಬೇರುಗಳು ಮೊದಲಾದ ಕ್ಷಾರದಿಂದ ... ರಸ, ಗಂಧಕ, ಪಾಷಾಣಾದಿಗಳೊಂದೂ ಈ ಔಷಧಕ್ಕೆ ಸೇರಿದ್ದು ... ಇದು ನಮ್ಮ ಪೂರ್ವಿಕರು (ಸಿದ್ಧರು)ಗಳಿಂದ ಕಲಿತ ಸಿದ್ಧಪ್ರಯೋಗ. ಈ ... ಪಥ್ಯ ಸಾಧನಾದಿಗಳೇನೂ ಇಲ್ಲ ಈ ಔಷಧವನ್ನು ಒಂದು ಸಾರಿ ತರಿ ... ಸಿದ ಒಡನೆ ಅವರಾಗಿ ತಮ್ಮ ಸ್ನೇಹಿತರುಗಳಿಗೆ ತಿಳಿಸಿ ಸಂತೋಷಪಡು ... ಇದು ಮದರಾಸಿನಲ್ಲಿ ಅನೇಕ ಸಾವಿರ ಜನಗಳು ಉಪಯೋಗಿಸಿದ ಸಿದ್ಧ ... ಪ್ರತಿ ದಿವಸ ಅನೇಕ ಜನಗಳು ಉಪಯೋಗಿಸುತ್ತಲೂ ಇದ್ದಾರೆ ಈ ... ಸೇವನೆ ಕ್ರಮವು ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು ಎಂಥಾ ... ವನ್ನೂ 8-10-12-16 ಪೊಟ್ಟಣಗಳ ಔಷಧದಲ್ಲಿ ನಿಶ್ಶೇಷವಾಗಿ ... ದೋಷವನ್ನು ಹೋಗಲಾಡಿಸಿ ಹಸಿವನ್ನುಂಟುಮಾಡಿ, ಬಲಹೀನವನ್ನು ಹೋಗ ... ಇವರ ಬೆಲೆ 12 ಪೊಟ್ಟಣಗಳ ಡಜನ್ 1 ಕ್ಕೆ 12 ಆಣೆ ಟಪ್ಪಾಲ್ ಪಾರ್ಸಲ್ ಛಾರ್ಜು ಪ್ರತ್ಯೇಕ [10-6]

ದಂತಧಾವನ ರತ್ನಾಕರಂ —ಇದು ಹಲ್ಲುಗಳಿಗೆ ಬಾಧಾಕರವಾದ ... ಗಳು ಯಾವವೂ ಸೇರಿಸದೆ ಅನೇಕ ಮೂಲಿಕೆಗಳಿಂದ ತಯಾರುಮಾಡಿದ ... ಪುಡಿ ಸುವಾಸನೆಯಾಗಿರುವದು ಇದರಿಂದ ಹಲ್ಲು ಉಜ್ಜಿಕೊಂಡರೆ ಹಲ್ಲು ಹುಟ್ಟಿದ ರೋಗಾದಿಗಳು ಹೋಗಲಾಡಿ ವಾತಪಿತ್ತ ಶ್ಲೇಷ್ಮಗಳನ್ನು ... ಮಾಡಿ ಹಲ್ಲುನೋವು, ಬಾಯಿನಾತ, ಹಲ್ಲುಜೊಂಪು, ಹಲ್ಲಿನಲ್ಲಿ ರಕ್ತಕ್ಕೆ ... ಗಳು, ಹಲ್ಲಿನಲ್ಲಿ ರಕ್ತಬರುವದು, ಹುಳುಕುಹಲ್ಲು, ಇಗುರುಬಾವು ಮೊದ ... ನ್ನು ಪರಿಹರಿಸಿ ಹಲ್ಲು ಸಂದುಗಳನ್ನು ದಟ್ಟವಾಗಿ ಸೇರಿಸಿ ಕಳೆಕೊಟ್ಟು ... ಒಳ್ಳೆ ಗುಣವನ್ನುಂಟುಮಾಡುವದು ಈ ಪುಡಿಯನ್ನು ಹೊಟ್ಟೆಗೂ ... ಕೊಳ್ಳಬಹುದು ಇದರ ಬೆಲೆ ಡಬ್ಬಿ 1 ಕ್ಕೆ 1 ಆಣೆ ಟಪ್ಪಾಲ್, ಪಾರ್ಸಲ್ ಛಾರ್ಜು ಪ್ರತ್ಯೇಕ ವಿಳಾಸ —

ವೈದ್ಯಂ ಮೈಸೂರು ಪಂಡಿತರು ಎಂ. ಕೆ. ಶೇಷಾಚಾರ್ಯ,
ನಂ. 93, ಚೈನಾಬಜಾರ್ ರೋಡ್, ಮದರಾಸ್

ಇಲ್ಲಿ ನೋಡಿ! ರ್ಯಾಷ್ ಬಜಾರ್, ತಿಪಟೂರು ಸುಲಭ ಖರೀದಿ!

ಚೈನಾಬಜಾರಿಗೆ ಸಂಬಂಧಪಟ್ಟ ಎಲ್ಲಾ ಸಾಮಾನುಗಳೂ ಉತ್ತಮವಾದ ಟ್ರಂಕ್ ಪೆಟ್ಟಿಗೆ, ಗಾಜಿನ ಮತ್ತು ಎನೇಮಲ್, ಅಲ್ಯೂಮಿನಿಯಂ ಪಾತ್ರೆಗಳೂ, ಸಾದಿಲ್‌ವಾರ್ ಸಾಮಾನುಗಳು ಬಿಸ್ಕತ್ ಯಾನೆ ತಿಂಡಿಸಾಮಾನು, ರವಿವರ್ಮ ಚಿತ್ರಪಟಗಳು, ಬೆಳ್ಳಿಕಟ್ಟಿನ ಚಿತ್ರಗಳು, ಇನ್ನೂ ವಿವಿಧ ಸಾಮಾನುಗಳು ನಮ್ಮಲ್ಲಿ ಬಿಕರಿಯಾಗುತ್ತವೆ ವಿಳಾಸ —ಮೆಸರ್ಸ್ ಕೆ ತಿಮ್ಮಪ್ಪ ಅಂಡ್ ಕೋ, ತಿಪಟೂರು

ಗುಣಕಂಡ ಮೂರು ಪ್ರಖ್ಯಾತ ಔಷಧಗಳು.

ಸ್ಪ್ಯಾಕ್ಸರ ಮಲೆನಾಡು ಜ್ವರಮಾತ್ರೆಗಳು—ಶೀತಪ್ರದೇಶಗಳಲ್ಲಿ ಬಿಟ್ಟುಬರುವ ಅಥವಾ ದೀರ್ಘವಾದ ಶೀತಪಿತ್ತ ಎಲ್ಲಾ ಜಾತಿಯ ಚಳಿ ಜ್ವರಗಳನ್ನೂ ಖಂಡಿತವಾಗಿಯೂ ಸಂಪೂರ್ಣವಾಗಿಯೂ ವಾಸಿಮಾಡುತ್ತೆಂದು ಪ್ರಖ್ಯಾತಿ ಹೊಂದಿರುವ ಮಾತ್ರೆಗಳೇ ಇವು ಕ್ರಯ ಡಬ್ಬಿ 1ಕ್ಕೆ ರೂಪಾಯಿ 1-0-0

ಸ್ಪ್ಯಾಕ್ಸರ ಉಬ್ಬಸದ ಔಷಧ—ಉಬ್ಬಸ, ಕಠಿಣವಾದ ಕೆಮ್ಮು ಮೊದಲಾದ ಶ್ವಾಸಕೋಶದ ವ್ಯಾಧಿಗಳಿಗೂ, ಶೀತದ ಗಡ್ಡೆಗಳಿಗೂ ಬಹಳ ಉತ್ತಮವಾದ ಮತ್ತು ಶೀಘ್ರವಾಗಿ ಗುಣಕೊಡುವ ಔಷಧ ಕ್ರಯ ಬಾಟ್ಲು 1ಕ್ಕೆ ರೂಪಾಯಿ 1 0 0 [36-7]

ಸ್ಪ್ಯಾಕ್ಸರ ನಾಯಿಕೆಮ್ಮಿನ ಸಿದ್ಧೌಷಧ—ಇದು ಖಾತ್ರಿಯಾದ, ನಂಬಿಕೆಯುಳ್ಳ ಮತ್ತು ಅಮೋಘವಾದ ಔಷಧ. ಬೇಗನೆ ಖಂಡಿತವಾಗಿಯೂ ಸಂಪೂರ್ಣವಾದ ಗುಣಕೊಡುವಂಥಾದ್ದು ಕ್ರಯ ಬಾಟ್ಲು 1ಕ್ಕೆ ರೂ 1 0 0

ಪ್ಯಾಕಿಂಗ್, ಪೋಸ್ಟೇಜ್, ವಿ ಪಿ ಛಾರ್ಜು ಪ್ರತ್ಯೇಕ. ಈ ಔಷಧಗಳ ಗುಣಾದಿಗಳನ್ನು ವಿವರಿಸುವ ಹಸ್ತಪತ್ರಗಳನ್ನು ಕೇಳಿದವರಿಗೆ ಬಿಟ್ಟಿ ಕಳುಹಿಸುವೆವು

ವಿಳಾಸ —ಜೆ ಎಸ್ ಸ್ಪೈಯರ್ಸ್,
117 ಪ್ರೇಫಾಂಸ್ ಬ್ರಾಡ್‌ವೇ, ಮದರಾಸ್.

ಇವರಲ್ಲೂ ಸಿಕ್ಕುತ್ತವೆ—(1) ಎಡ್ವರ್ಡ್ ಕಂಪನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ; (2) ಸೈಯದ್ ಉಸ್ಮಾನ್ ಕಂಪನಿ, ಬೆಂಗಳೂರು ದಂಡು, (3) ಕೆ ವಿಟ್ಟಲ್‌ರಾವ್ ಕಂಪನಿ, ಮಂಗಳೂರು, (4) ಎನ್ ಪಿಳ್ಳೆ ಕಂಪನಿ, ಪಾಲಘಾಟ್, (5) ಬಾಬು ... ಕಂಪನಿ, ಕಲ್ಲಿಕೋಟೆ

ಸಾಣೆಯಾದ ವಾಚ್! ಬಹು ಸುಲಭ ಕ್ರಯ.

ರೈಲ್ವೆ ರಿಜಿಸ್ಟರ್ ವಾಚ್.

ಇದು ಬಹು ... ವಾದ ಮತ್ತು ಮಜಬೂತಾದ, ಬಹಳ ಕಾಲ ಬಾಳಿಕೆ ಬರುವಂಥಾ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ ಸರ್ಕಾರಿ ಉದ್ಯೋಗಸ್ಥರು, ಕೋರ್ಟು ಕಛೇರಿಗೆ ಸಕಾಲಕ್ಕೆ ಹಾಜರಾಗತಕ್ಕವರು, ವಕೀಲರು, ಉಪಾಧ್ಯಾಯರು, ವ್ಯಾಪಾರಸ್ಥರು, ಪಟ್ಟಣಿಗಳು ಪ್ರಯಾಣಿಕರು, ಆದಿಯಾಗಿ ಸರ್ವರೂ ಉಪಯೋಗಿಸುವದಕ್ಕೆ ಅನುಕೂಲವಾದದ್ದು



ಮುಖ್ಯವಾಗಿ ಕಷ್ಟಪಟ್ಟು ಕೆಲಸಮಾಡುವ ಒರಟು ಜನಗಳಿಗೆ ಬಹು ಅನುಕೂಲವಾದದ್ದು ಕತ್ತಲಲ್ಲಿ ಬೆಳಗುವುಳ್ಳದ್ದು ಗಂಭೀರವಾದ ಘಂಟೆ ಮತ್ತು ನಿಮಿಷಗಳ ಮುಳ್ಳುಗಳುಳ್ಳದ್ದು ಸುಂದರವಾದದ್ದು. ಬಹು ಸುಲಭ ಕ್ರಯ [54 2]

ಇದರ ಕ್ರಯ ವಾಚ್ 1 ಕ್ಕೆ ರೂ 3-0 0

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ —

ಬಿ ಆರ್ ವೆಂಕಟರಮಣ ಅಂಡ್ ಕಂಪನಿ,
ನಂ. 7 ಕೂಪಾ ವೆಂಕಟಾಚಲಯ್ಯರ್ ಬೀದಿ, ಮದರಾಸು.

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-13

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇರಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ — (೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಸೆಟ್ಟಿಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವು ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ನಾನಾ ಕೆಂಪು, ಕಪ್ಪು, ಜಿರಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ; ೧ ರೂ ೬ ಆ, ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧—೮, ರೂ ೧—೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ; ೧ ರೂ ೮ ಆ ೧ ರೂ ೬ ಆ.

ಮುಸುಕಿನ ಟೋಪಿಗಳು ೧ ರೂ. ೮ ಆ., ೧ ರೂ ೬ ಆ

ಕೂಸುಗಳ ಟೋಪಿ, ಪೂರ್ತಿ ಮೋಜೋಡು, ಅರ್ಧ ಮೋಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

7—3—1913 ರಿಂದ 14—3—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	2	3	1	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	15	13	11	12
ಮೈಸೂರು ,,	13	7	368	189
ಕೋಲಾರ್ ,,	1	1	0	0
ಕೋಲಾರ್ ಚಿನ್ನದ ಗಣಿಗಳು	1	1	0	0
ತುಮಕೂರು ಡಿಸ್ಟ್ರಿಕ್ಟು	2	2	0	0
ಹಾಸನ ,,	0	0	39	19
ಚಿತ್ರದುರ್ಗ ,,	0	0	0	0
ಕಡೂರ್ ,,	13	10	2	2
ಶಿವಮೊಗ್ಗ ,,	6	5	0	0
ಜುಮ್ಲಾ	59	47	421	222

ಶಾಲಿವಾಹನ ಶಕ ವರುಷಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೆ ಶಿಶಿರಋತೌ ಫಾಲ್ಗುಣ ಬಹುಳ ಷಷ್ಠಿ ಶುಕ್ರವಾರದಿಂದ ಫಾಲ್ಗುಣ ಬಹುಳ ದ್ವಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಮಾರ್ಚಿ ಮತ್ತು ಏಪ್ರಿಲ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಹಮ್ಮದೀಯ ಮಾಸ ತೇದಿ
28	ಶುಕ್ರ	ಷಷ್ಠಿ	7 16	ಜ್ಯೇಷ್ಠ	23 1	16
29	ಶನಿ	ಸಪ್ತಮಿ	7 11	ಮೂಲ	33 2	17
30	ಭಾನು §	ಅಷ್ಟಮಿ	9-5	ಪೂರ್ವಾಷಾಢ	29 23	18
31	ಸೋಮ	ನವಮಿ	11 56	ಉತ್ತರಾಷಾಢ	31-1	19
1	ಮಂಗಳ †	ದಶಮಿ	15 42	ಶ್ರವಣ	40 12	20
2	ಬುಧ *	ಏಕಾದಶಿ	20 29	ಧನಿಷ್ಠ	45 52	21
3	ಗುರು ‡	ದ್ವಾದಶಿ	25-19	ಶತಭಿಷ	52-30	22

. ಶಿವಸ್ತ್ರೀಸ್ತ ... ಶಾ

§ ಮಳೆ ನಕ್ಷತ್ರ—ರೇವತಿ 1ನೇ ಪಾದ

† ಏಕಾದಶೀ ವ್ರತ, ಮಿಥುನದೊಳ್ ... ರಾತ್ರಿ ... ದಶ

* ಶ್ರವಣ ವ್ರತ, ಸರ್ವತ್ರ ಏಕಾದಶಿ, ಮಳೆ ನಕ್ಷತ್ರ—ರೇವತಿ 2ನೇ ಪಾದ

‡ ದ್ವಾದಶೀ ವ್ರತ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ (ಹೊಸದು) ರೂ	೧೯ ೦ ೦	೧೭-೮-೦
ಕೆಂಬೂತಿ ಅಕ್ಕಿ ಅವಲ್ ,,	೧೫-೮-೦	೧೭ ೮ ೦
,, ಮಧ್ಯಮ ,,	೧೫-೦-೦	೧೭-೦-೦
ಜಾಪತ್ರೆಣಿ ಅಕ್ಕಿ ,,	೧೪-೮ ೦	೧೭-೪-೦
ಸಣ್ಣಕ್ಕಿ ಅವಲ್ ,,	೧೭-೮-೦	೧೬ ೮ ೦
,, ಮಧ್ಯಮ ,,	೧೬ ೦-೦	೧೭ ೮-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೧೪ ೦-೦	೧೩-೮-೦
,, ಮಧ್ಯಮ ,,	೧೩ ೦ ೦	೧೨ ೮-೦
ಹೈನ್ ರಾಗಿ ಪಲ್ಲಾ ೧ಕ್ಕೆ	೭-೦-೦	೫ ೦-೦
ಕಾರ್ರಾಗಿ ,,	೬-೩ ೦	೪-೧೨-೦
ಜೋಳ ,,	೬-೧೨-೦	೭ ೪ ೦
ಹಲಸಂದೆ ಪಲ್ಲಾ ೧ಕ್ಕೆ	೧೦ ೪-೦	೧೩-೧೨-೦
ಬೇಳೆ ಅವರೆ ,,	೯-೮-೦	೧೧ ೦-೦
ಹೆಸರು ,,	೧೨-೮ ೦	೧೪-೦-೦
ಉದ್ದು ,,	೧೪ ೮-೦	೧೬-೦ ೦
ಕಡಲೆ ,,	೧೦-೮-೦	೧೨ ೦-೦
ಎಳ್ಳು ಸೇರು ೧೨೭ಕ್ಕೆ	೨೪-೦ ೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೬ ೧೦-೦	೭-೦-೦
ಹರಳು ೧೨೭ ಸೇರಿಗೆ	೧೨-೦-೦	೧೪-೦-೦
ಶೀಗೇಕಾಯಿ ಮಣ ೧ಕ್ಕೆ	೨-೦ ೦	೨ ೮-೦
ಮೆಣಸಿನಕಾಯಿ ,,	೭-೦-೦	೩-೪-೦
,, ಮಧ್ಯಮ	೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೪-೮-೦ ; ಮಣ	೫-೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೪-೦	೬-೬-೦
ಹರಳೆಣ್ಣೆ ,, ,,	೫-೧೨-೦	೬ ೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫-೪ ೦	೫-೪-೦
ಉಪ್ಪು ,, ,,	೫ ೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧-೮-೦	೧-೪-೦
,, ಹಳೇದು ,,	೧-೦-೦	೦ ೧೪-೦
ತುಪ್ಪ ಮಣ ೧ಕ್ಕೆ	೧೯-೦-೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫ ೧೧-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೬-೦-೦	೬-೦-೦
ಅಳಲೇಕಾಯಿ ಮಣ ೧ಕ್ಕೆ	೧-೪-೦	೧-೦ ೦
ಅಂಟುವಾಳದಕಾಯಿ ಮಣ ೧ಕ್ಕೆ	೦-೧೨-೦	೧ ೮-೦
ಚಿನ್ನ (ಪೌನ್) ಕೆಂಪು	೧೫-೮-೦	೧೫ ೮-೦
,, ,, ಪಸಿಮೆ	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪ ೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦-೦	೮೧-೩-೦

1914 ನೆಯ ಕನ್ನಡ ಲೋ|| ಸೆ|| ಟೆಕ್ಸ್ಟು 5 ಆಣೆ

ಪತ್ರರತ್ನಾಕರ —ಎಲ್ಲಾ ಪತ್ರಗಳ ಮಾದರಿಗಳುಳ್ಳದ್ದು, ಕ್ರಯ 8 ಆಣೆ

ಲೇಖ್ಯತತ್ವಪ್ರಕಾಶಿಕೆ—ಎಲ್ಲಾ ಅರ್ಜಿಗಳ ನಮೂನೆಗಳುಳ್ಳದ್ದು, 1 ಆಣೆ

ಆರೋಗ್ಯಪ್ರಶ್ನೋತ್ತರ— 4 5 ನೇ ತರಗತಿಗಳಿಗೆ, ಕ್ರಯ 1 ಆಣೆ [61 1]

ವಿಳಾಸ —ಹೆಚ್ ವೆಂಕಟರಾಮಯ್ಯ, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

ವಿಕಟಪ್ರತಾಪ ಆಫೀಸು, ಕುಷ್ಪಂ ಪೋಸ್ಟು

ಮೇಲ್ಕಂಡವರಲ್ಲಿ ಕಮಾರಿಗಾಗಿ ಅತ್ಯುತ್ತಮವಾದ ನೀಲಿಕಪ್ಪು ಶಾಯಿ ಪುಡಿ ಪೊಟ್ಟಣ 1 ಕ್ಕೆ ಕ್ರಯ 3 ಪೈ 100 ಪೊಟ್ಟಣಗಳಿಗೆ 6 ಆಣೆ 1,600 ಪೊಟ್ಟಣಗಳಿಗೆ 3 ರೂಪಾಯಿ ನಾ ಕಿಂಗ್, ಪೋಸ್ಟೇಜ್ ಚೀಲ ಎರಡಾಣೆ ಸ್ಟಾಂಪ ಕಳುಹಿಸಿದವರಿಗೆ ಮಾದರಿಗೋಸ್ಕರ ಕೆಲವು ಪೊಟ್ಟಣಗಳು ಕಳುಹಿಸಲ್ಪಡುವವು

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ ! ಕನ್ನಡಕ್ಕೆ ಸುಲಭವಾದ ದಾರಿ !

ಮೈಸೂರು ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿವೆ ಕ್ರಯ 1 ಆಣೆ ತರಿಸಿ ನೋಡಿ

[18 1] ವಿ. ... ಚಂದ್ರಿಕಾ ಹೈ ಸ್ಕೂಲ್, ಮೈಸೂರು.

ಕಾಮಿನೀಮನೋಹರಾನಂದ ತೈಲವು

ಹಿಂದೂ ದೇಶದ ಪ್ರದರ್ಶನಗಳಲ್ಲಿ ಮೂರು ಬಹುಮಾನಗಳನ್ನೂ ... ಸರ್ಟಿಫಿಕೇಟುಗಳನ್ನೂ ಪಡೆದಿರ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ಪ್ರಖ್ಯಾತ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ಕಪ್ಪಾಗಿಯೂ ಬೆಳೆಯಿಸಿ ತಲೆ ನವೆ ವ್ಯಾಧಿಗಳನ್ನು ಹೋಗಲಾಡಿಸುತ್ತದೆ ಬುದ್ಧಿಭ್ರಮಣೆಯನ್ನು ಸಂಹರಿಸುವುದಲ್ಲ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿರು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿ ಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟಲ್ 1 ಕ್ಕೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಕಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕಾಟಲಾಗು ತರಿಸಿ ನೋಡಿ

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪನಿ.

ಪೇಟೆ, ಮದರಾಸ್.

ಬೋಧಕರ ಸಹಾಯವಿಲ್ಲದೆ ಹಾರ್ಮೋನಿಯಂ ಕಲಿಯುವ ಪುಸ್ತಕ.

ಕ್ರಯ 0 8 0

ಇದು ಪ್ರಖ್ಯಾತಿಯನ್ನು ಪಡೆದ ಪಂಡಿತ ಮಿತ್ರದಾಸ್‌ರವರಿಂದ ಪಂಡಿತರಿಗೂ ಮತ್ತು ನವಾಭ್ಯಾಸಿಗಳಿಗೂ ಉಪಯೋಗವಾಗುವ ಉದ್ದೇಶ್ಯ ಈ ನೂತನ ಗ್ರಂಥವನ್ನು ಪ್ರಚುರಪಡಿಸಲ್ಪಟ್ಟಿರುತ್ತೆ ಇದರಲ್ಲಿ 10 ಪಾಠಗಳುಂಟು, ರಾಗಗಳು ಮತ್ತು ಹಾರ್ಮೋನಿಯಂ ನುಡಿಸುವ ವಿಧಾನ, ಆರೋಹಣ ಅವರೋಹಣಗಳು, ಮತ್ತು ಸೌಖ್ಯ ಗುರ್ತುಗಳ ಮೊದಲಾದವುಗಳು ವಿವರವಾಗಿ ತಿಳುಹಿಸಲ್ಪಟ್ಟಿರುತ್ತೆ ಸ್ವಲ್ಪ ಇಂಗ್ಲೀಷು ಬಾಷಾ ಪರಿಜ್ಞಾನವಿರುವವರೆಲ್ಲರೂ ಈ ಗ್ರಂಥದ ಸಹಾಯದಿಂದ ಬೋಧಕರ ಸಹಾಯವಿಲ್ಲದೆ ಬಹು ಸುಲಭವಾಗಿ ಹಾರ್ಮೋನಿಯಂ ನುಡಿಸುವುದನ್ನು ಆನಂದೋಪಭೋಗಯುತವಾದ ಪಾಠಗಳ ಮೂಲಕ ಕನ್ನಡದಲ್ಲಿ, ಬಹು ಸುಲಭವಾಗಿ ಕಲಿತುಕೊಳ್ಳಬಹುದು ಈ ಪುಸ್ತಕ ಸ್ವಲ್ಪವೇ ಇರುವದರಿಂದ ಶೀಘ್ರತೆ ದಯವಿಟ್ಟು ತರಿಸಿ [62 1]

ವಿಳಾಸ—ಮ್ಯಾನೇಜರ್, ಮಹಾರಾಜಾ ಕಂಪನಿ,

ಮೌಂಟ್‌ರೋಡು, ಮದರಾಸು

ವಿದ್ಯುಚ್ಛಕ್ತಿಯ ಜೇಬು ದೀಪ.

ಹೊಸ ತರಹಾ—ಕ್ರಯ ರೂ 1-8-0

ಈ ದೀಪ ಜನರಿಗೆ ಬಹು ಉಪಯೋಗವಾದದ್ದು ದೀಪದ ಕಡ್ಡಿ ಅಗತ್ಯವಿಲ್ಲ ಜೇಬಿನಲ್ಲಿಟ್ಟದ್ದು ಬೇಕಾದಾಗ ಅದರ ಗುಂಡಿ ಒತ್ತಿದರೆ ಥಟ್ಟನೆ ಬಾಯಿ ತೆರೆದು ದೀಪ ಹತ್ತಿಕೊಂಡು ಪ್ರಕಾಶವಾಗಿ ಉರಿಯುತ್ತೆ ಬಾಯಿ ಮುಚ್ಚಿದರೆ ದೀಪ ಆರಿಹೋಗುತ್ತೆ ನೋಡುವುದಕ್ಕೆ ಇದು ಬಹು ಸೊಗಸಾಗಿಯೂ ಇದೆ ಇದು ಜರ್ಮನಿಯಿಂದ ತರಿಸಿದ್ದಾಗಿದೆ —ಮಹಾರಾಜಾ ಸೋಪ್ ಎಂಬ ರೂಪವಾಸನೆಯ 4 ಬಿಲ್ಲೆಗಳ ಪೆಟ್ಟಿಗೆ ರೂ 1 1 ಪೆಟ್ಟಿಗೆ 6 ಆಣೆ ಇದನ್ನು ಸ್ನಾನದ ಕಾಲದಲ್ಲಿ ಉಪಯೋಗಿಸುವುದರಿಂದ ಕೂದಲನ್ನು ಚೊಕ್ಕಟವಾಗಿ ತೆಗೆಯುತ್ತೆ ನಯವಾಗಿರು, ಕಲೆ ಸಿಬ್ಬಿ ಮುಂತಾದ ಚರ್ಮದ ರೋಗಗಳು ಬಣ್ಣವನ್ನು ಕಾಪಾಡಲು ಇದೇ ಉತ್ತಮವಾದ ಸಾಬೂನು — ಹಲ್ಲುಪುಡಿ ಡಬ್ಬಿಗೆ 4 ಆಣೆ ಇದರಿಂದ ಹಲ್ಲು ಬಿಗಿಯೂ ಗಟ್ಟಿಯೂ ಆಗಿ ಬಾಯಿಗೆ ಸುವಾಸನೆ ಕೊಡುತ್ತ ಹಲ್ಲನ್ನು ಭದ್ರಪಡಿಸುತ್ತೆ [63 1]



ವಿಳಾಸ—ಚಂದ್ರ ಕಂಪನಿ, 10 ವೆಂಕಟೇಶನಾಯಕ್ ಬೀದಿ,

ಟ್ರಿಪ್ಲಿಕೇನ್, ಮದರಾಸು

ವೃತ್ತಾಂತ ಪತ್ರಿಕೆ

———o———

ಸನ್ ೧೯೧೩ ನೇ ಇಸವಿ ಮಾರ್ಚಿ ತಾ ೨೭ ನೇ ಗುರುವಾರ

ಗ್ರೀಸ್ ದೊರೆಯವರ ಕೊಲೆಯು

ಕಳೆದ ವಾರ ನಡೆದ ಒಂದು ವಿಶೇಷ ಸಂಗತಿಯು ಪ್ರಪಂಚದಲ್ಲೆಲ್ಲಾ ಗಾಬರಿಯನ್ನೂ ಕೋಲಾಹಲವನ್ನೂ ಉಂಟುಮಾಡಿತು ಯೂರೋಪ್ ಖಂಡದ ದಕ್ಷಿಣ ಭಾಗದಲ್ಲಿರುವ ಗ್ರೀಸ್ ರಾಜ್ಯದ ದೊರೆಯವರನ್ನು ಒಬ್ಬ ಘಾತುಕನು ಬಹು ಕ್ರೂರವಾಗಿ ಕೊಂದುಹಾಕಿಬಿಟ್ಟನು ಗ್ರೀಕ್ ಸೈನಿಕರು ಈಚೆಗೆ ಟರ್ಕಿಯವರ ಮೇಲೆ ಯುದ್ಧ ಮಾಡಿ ಗದ್ದುಕೊಂಡಿರುವ ಸಾಲೋನಿಕಾ ಪಟ್ಟಣವನ್ನು ನೋಡುವ ಉದ್ದೇಶ್ಯ ಗ್ರೀಸ್ ದೊರೆಯವರು ಹೋಗಿ ಒಬ್ಬ ಸಹಾಯಕನ ಸಂಗಡ ಆ ಪಟ್ಟಣದಲ್ಲಿ ಸಂಚಾರ ಮಾಡುತ್ತಿದ್ದರು ಆ ಹೊತ್ತಿನಲ್ಲಿ ಅಡಗಿಕೊಂಡಿದ್ದ ಒಬ್ಬ ಘಾತುಕನು ಹಿಂದಿನಿಂದ ಹೋಗಿ ಪಿಸ್ತೂಲನ್ನು ಬಾರುಮಾಡಿ ದೊರೆಗೆ ಹೊಡೆದುಬಿಟ್ಟನು ದೊರೆಯವರು ಕೂಡಲೇ ಕೆಳಗೆ ಬಿದ್ದು ಕೆಲವು ನಿಮಿಷಗಳೊಳಗಾಗಿ ಕಾಲವಾದರು

ಈ ಕೃತ್ಯವನ್ನು ನಡಸಿದವನು ಗ್ರೀಕನಾಗಿ, ಜಾರ್ಜ್ ದೊರೆಯ ಪ್ರಜೆಯಾಗಿರ ಬಹುದು ಇವನು ಹುಚ್ಚುತನದಿಂದ ಈ ಕೃತ್ಯವನ್ನು ನಡಿಸಿದನೆಂದು ಹೇಳಬಹುದಲ್ಲದೆ ಅವನಿಗೆ ತನ್ನ ದೊರೆಯನ್ನು ಕೊಲ್ಲಬೇಕನ್ನುವದರಲ್ಲ ಯಾವ ಉದ್ದೇಶವೂ ಇದ್ದಂತೆ ಕಾಣುವುದಿಲ್ಲ ಪ್ರಪಂಚದಲ್ಲಿ ದೊರೆಗಳೇ ಇರಬೇಕಾದದ್ದಿಲ್ಲವೆಂದು ಸಂಕಲ್ಪಮಾಡಿಕೊಂಡಿರುವಂಥಾ ದುಷ್ಟರ ಗುಂಪಿಗೆ ಈ ಗ್ರೀಕ್ ಪ್ರಜೆಯು ಸೇರಿದವನೆಂದು ಹೇಳುತ್ತಾರೆ ಇವನಲ್ಲಿರುವಂಥಾ ದುರ್ಬುದ್ಧಿಯು ಯೂರೋಪ್ ಖಂಡದಲ್ಲಿ ಹರಡಿಕೊಂಡಿರುವುದಲ್ಲದೆ ಈಗೀಗ ಹಿಂದುಸ್ಥಾನದೊಳಗೂ ಕಾಣಿಸಿಕೊಳ್ಳುತ್ತಿರುವುದು ಇಂಥಾ ದುರ್ಬುದ್ಧಿಯುಳ್ಳ ಮನುಷ್ಯನೇ ಕಳೆದ ಡಿಸೆಂಬರ್ ತಿಂಗಳಲ್ಲಿ ವೈಸರಾಯಿ ಲಾರ್ಡ್ ಹಾರ್ಡಿಂಗ್ ಪ್ರಭುವಿನ ಮೇಲೆ ಡೆಲ್ಲಿನಗರದ ರಾಜಬೀದಿಯಲ್ಲಿ ಸಿಡಿಮದ್ದಿನ ಗುಂಡನ್ನು ಎಸೆದನು

ಗ್ರೀಸ್ ದೊರೆಗೆ ಅಕಾಲಮರಣವು ಪ್ರಾಪ್ತವಾಯಿತಲ್ಲಾ ಎಂದು ನಾವು ದುಃಖಪಡುತ್ತೇವೆ ಗ್ರೀಸ್ ರಾಜ್ಯದಲ್ಲಿ ಹಲವು ರಾಜಕೀಯ ಏರುಪಾರುಗಳು ನಡೆದು 1863 ನೇ ಇಸವಿಯಲ್ಲಿ ನೂತನ ರಾಜ್ಯಕ್ರಾಂತಿಯುಂಟಾದಾಗ ಅಲ್ಲಿನ ಮುಖಂಡರು ಡೇನ್ಮಾರ್ಕ್ ರಾಜ್ಯದ ದೊರೆಯ ಕಿರಿಯ ಕುಮಾರರನ್ನು ಕರೆದು ತಂದು ಅವರಿಗೆ ಪಟ್ಟವನ್ನು ಕಟ್ಟಿದರು ಈಗ ಅಕಾಲಮರಣಕ್ಕೆ ಗುರಿಯಾದ ದೊರೆಯು ಇವರು ಇವರ ಅಣ್ಣಂದಿರು ಈಗ ಡೇನ್ಮಾರ್ಕಿನ ಅರಸರಾಗಿ ಆಳುತ್ತಿದ್ದಾರೆ, ಮತ್ತು ಅವರು ಇಂಗ್ಲಾಂಡಿನ ಕೀರ್ತಿಶೇಷರಾದ ಏಳನೆಯ ಎಡ್ವರ್ಡ್ ಸಾರ್ವಭೌಮರವರ ರಾಜ್ಞೀರಾದ ಅಲೆಕ್ಸಾಂಡ್ರಾ ಮಹಾರಾಣಿಯವರ ಸಹೋದರರಾಗಿದ್ದರು ಗತಿಸಿದ ಗ್ರೀಸ್ ದೊರೆಯವರು ಬಹು ಪಂಡಿತ ಸ್ವಭಾವವುಳ್ಳ ಪ್ರಭುವಾಗಿದ್ದು, ಆ ರಾಜ್ಯವನ್ನು ಎಲ್ಲಾ ಭಾಗಗಳಲ್ಲೂ ಅಭಿವೃದ್ಧಿಗೆ ತಂದಿಟ್ಟರು ಅವರ ಆಳ್ವಿಕೆಯು ಬಹು ವಿಚಕ್ಷಣೆಯುಳ್ಳದ್ದಾಗಿದ್ದ ಕಾರಣ ಪ್ರಜೆಗಳು ಪೂರ್ತಿಯಾಗಿ ಪರಾಕ್ರಮಶಾಲಿಗಳಾಗಿಯೂ ಆದರು ಆ ದೊರೆಯವರು ತಮ್ಮ ರಾಜ್ಯವನ್ನೂ ತಮ್ಮ ಪ್ರಜೆಗಳ ಸ್ಥಿತಿಗತಿ ಗುಣಾಳ್ವಿಕೆಗಳನ್ನೂ ಚನ್ನಾಗಿ ಬಲ್ಲವರಾಗಿದ್ದರು ಇದರಿಂದ ಇಂಥಾ ದೊರೆಯ ಕ್ರೂರ ಮರಣವನ್ನು ನೋಡಿ ಅವರ ಪ್ರಜೆಗಳು ಅಪಾರವಾಗಿ ಮರುಗುವುದೇನೂ ಆಶ್ಚರ್ಯವಾದದ್ದಲ್ಲ ಈಗ ಅವರ ಹಿರಿಯ ಮಗನಾದ ಕಾನ್‌ಸ್ಟಂಟೈನ್ ಎಂಬಾತನಿಗೆ ರಾಜ್ಯಾಭಿಷೇಕವಾಯಿತು ಈತನು ಗ್ರೀಸ್ ಸೈನ್ಯದ ಪ್ರಧಾನಾಧಿಪತಿಯಾಗಿರುವನು ಈತನ ಆಳ್ವಿಕೆಯಲ್ಲಿ ಗ್ರೀಸ್ ರಾಜ್ಯವು ಅಭಿವೃದ್ಧಿಗೆ ಬರಲೆಂದು ಹಾರೈಸುತ್ತೇವೆ

ಈಗ ಗ್ರೀಸ್ ಪ್ರಭುವನ್ನು ಕೊಂದುಹಾಕಿದಂಥಾ ಮತ್ತೂ ಲಾರ್ಡ್ ಹಾರ್ಡಿಂಗ್‌ರವರ ಮೇಲೆ ಸಿಡಿಮದ್ದಿನ ಗುಂಡು ಎಸೆದಂಥಾ ಕಳ್ಳರಾತ್ಮಗಳ ಹುಟ್ಟನ್ನು ಯಾವ ರೀತಿ ಹೋಗಿಸಬಹುದೆಂದು ಸಂಶಯವುಂಟಾಗಿದೆ ಆ ಪ್ರಭುವನ್ನು ಕೊಂದುಹಾಕಿದ ಮನುಷ್ಯನೇನೋ ಸಿಕ್ಕಿ ಬಿದ್ದಿರುವನು, ಆದರೆ ಹಿಂದುಸ್ಥಾನದಲ್ಲಿ ವೈಸ್‌ರಾಯರ ಮೇಲೆ ಗುಂಡು ಎಸೆದ ಘಾತುಕನು ಹನ್ನೆರಡು ವಾರಗಳಾದರೂ ಇನ್ನೂ ಪತ್ತೆ ಆಗಲಿಲ್ಲ ಈ ದುಷ್ಟನ್ಯಾರೋ, ಅವನೆಲ್ಲಿದ್ದಾನೆಯೋ ಈ ರಾಷ್ಟ್ರದಲ್ಲಿ ಹಲವರಿಗೆ ತಿಳಿಯದೆ ಇರಲಾರದು ಈ ಭಾಗದಲ್ಲಿ ಯಾರಿಗಾದರೂ ಸ್ವಲ್ಪ ಮಟ್ಟಿಗೆ ತಿಳಿದದ್ದಾಗ್ಯೂ ಮುಂದೆ ಬಂದು ತನಗೆ ಗೊತ್ತಿರುವಷ್ಟನ್ನು ಸರ್ಕಾರದವರಿಗೆ ತಿಳಿಸುವುದು ಸಚ್ಚರಿತ್ರನ ಧರ್ಮವಾಗಿದೆ ಅಂಥಾ ದುರಾತ್ಮರನ್ನು ಬದುಕಿ ಅಭಿವೃದ್ಧಿ ಹೊಂದಲಿ ಎಂದು ಬಿಟ್ಟುಬಿಡುವುದು ಮಹಾ ಕಂಟಕವಾಗಿ ಪರಿಣಮಿಸುತ್ತದೆ ಅಂಥವನು ಪ್ರಜೆಗಳ ನಮನೆ ಇರೋಣದಿಂದ ದೇಶಕ್ಕೆ ಹಾನಿಯೂ, ಮುಖ್ಯರಾದ ಪ್ರಜಾಪಾಲಕರ ಪ್ರಾಣಕ್ಕೆ ಮೃತ್ಯುವೂ ಸಂಭವಿಸುವವು ಅಂಥಾ ದುರ್ಮಾರ್ಗಿಗಳನ್ನು ಹಿಡಿದು ಸರ್ಕಾರಕ್ಕೆ ಒಪ್ಪಿಸುವುದೇ ನಮ್ಮ ಕರ್ತವ್ಯ, ಇದರಿಂದ ನಮ್ಮ ದೇಶಕ್ಕೆ ಶ್ರೇಯಸ್ಸುಂಟಾದೀತು ಅವರಿಂದ ಹಿಂದೆ ಯಾವ ರೀತಿ ಘಾತುಕ ಕೃತ್ಯಗಳು ನಡದು ಸಕಲರಲ್ಲೂ ಭೀಕರವನ್ನೂ ಸಂಕಟವನ್ನೂ ಉಂಟುಮಾಡಿದವೋ ಅವರನ್ನು ಹಿಡಿದೊಪ್ಪಿಸಿದ್ದರೆ ಅಂಥಾ ಕಳ್ಳರ ಕೃತ್ಯಗಳು ಪತ್ತೆ ಮತ್ತೆ ನಡೆಯುತ್ತಾ ಬರಲು ಅಸ್ಪದವಾದೀತು ಈ ರೀತಿಯಾದ ದುರಾತ್ಮಗಳನ್ನು ಕಂಡುಹಿಡಿದು ಅವರ ಹುಟ್ಟನ್ನೇ ಅಡಗಿಸಿಬಿಡುವುದಕ್ಕೆ ಸ್ಪೆಷಲ್ ಇಲಾಖೆಯೊಂದನ್ನು ಜಾರಿಗೆ ತಂದಿಟ್ಟು ಕೂಡಲೆ ಜನರನ್ನು ಬಿಟ್ಟು ಅಂಥಾ ದುರಾತ್ಮರೆಲ್ಲರನ್ನೂ ಹಿಡಿ ಬಂಧನದಲ್ಲಿ ಇಡಿಸುವಂತಾಗಬೇಕು

ಟರ್ಕಿ ಬಾಲ್ಕನ್ ಯುದ್ಧವು

ಈ ವಾರ ಯುದ್ಧಭೂಮಿಯಿಂದ ಬಂದಿರುವ ಸಮಾಚಾರಗಳು ಅಷ್ಟೇನೂ ವಿಶೇಷವಾಗಿಲ್ಲ ಎರಡು ಮೂರು ಕಡೆಗಳಲ್ಲಿ ಯುದ್ಧಗಳು ನಡೆದದ್ದರಲ್ಲಿ ಶತ್ರುಸಮುದಾಯದವರಿಗೆ ಜಯವಾಯಿತೆಂದು ಒಂದು ಕಡೆಯಿಂದಲೂ, ಟರ್ಕಿಯವರಿಗೆ ಸೋಲೇನೂ ಆಗದೆ ಅವರ ಸೈನ್ಯಗಳ ಸ್ಥಿತಿಯು ಮುಂದಿನಂತೆ ಚನ್ನಾಗಿದೆ ಎಂದು ಇನ್ನೊಂದು ಕಡೆಯಿಂದಲೂ ವರ್ತಮಾನ ಬಂದಿದೆ ಹಿಂದಿನ ಬುಧವಾರ ಟ್ಚಟಾಲ್ಜಾ ಸಾಲುಕೋಟೆಗಳ ಬಳಿ ಬಾಲ್ಕನ್ ಸೈನಿಕರು ಒಂದು ಕೋಟೆಯನ್ನು ಗದ್ದುಕೊಂಡರೆಂದೂ, ಅದನ್ನು ಟರ್ಕಿಯವರು ಹಿಂತಿರುಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದೆ 300 ಸೈನಿಕರನ್ನು ಕಳೆದುಕೊಂಡು ಹಿಮ್ಮೆಟ್ಟಬೇಕಾಯಿತೆಂದೂ ತಿಳಿಯುತ್ತದೆ ಆಡ್ರಿಯಾನೋಪಲ್ ಕೋಟೆಯ ಮುತ್ತಿಗೆಯು ಇನ್ನೂ ಬಿಡುಗಡೆಯಾಗಲಿಲ್ಲ ಪ್ರತಿ ದಿನವೂ 50 60 ಮಂದಿ ಟರ್ಕಿ ಸೈನಿಕರು ಶತ್ರುಗಳ ಕೈವಶರಾಗುತ್ತಿದ್ದಾರ ಅತ್ತಲಾಗಿ ಗ್ರೀಕ್ ಸೈನ್ಯಗಳು ಅರ್ಗೈರೋಕಾಸ್ಟ್ರೋ, ಕ್ಲಿಸೂರಾ ಎಂಬೀ ಪಟ್ಟಣಗಳಲ್ಲಿ ಟರ್ಕಿಯವರ ಸ್ವಂತ ಯುದ್ಧಸಾಮಗ್ರಿ ಅಷ್ಟರಮಟ್ಟಿಗೆ ಸ್ವಾಧೀನಪಡಿಸಿಕೊಂಡರು ಈ ಯುದ್ಧಗಳಲ್ಲಿ ಟರ್ಕಿಯವರ ಕಡೆ ಬಹಳ ನಷ್ಟವಾಯಿತೆಂದೂ, ಗ್ರೀಕರಲ್ಲಿ 51 ಮಂದಿ ನಷ್ಟಪಟ್ಟರೆಂದೂ ತಿಳಿಯುತ್ತದೆ ಎಪಿರಸ್ ಎಂಬ ಭಾಗವೆಲ್ಲಾ ಈಗ ಗ್ರೀಕರ ವಶವಾಗಿದೆ ಇನ್ನೊಂದು ಕಡೆ ಮಾಂಟಿನೀಗ್ರೋದವರು ಸ್ಕುಟಾರಿ ಪಟ್ಟಣಕ್ಕೆ ಫೆಬ್ರವರಿ 1ನೇ ತಾರೀಖಿನಿಂದ ಮುತ್ತಿಗೆ ಹಾಕಿಕೊಂಡು ಕೋಟೆಗಳನ್ನು ಹೊಡೆಯುತ್ತಿದ್ದಾರೆ ಇವರ ಬೆಂಬಲಕ್ಕೆ ಹತ್ತು ಸಾವಿರ ಸರ್ವಿಯಾ ಸೈನ್ಯಗಳೂ ನಾಲ್ವತ್ತು ಫಿರಂಗಿಗಳೂ ಹೋಗಿರುವವು

ಈಚೆಗೆ ಟ್ಚಟಾಲ್ಜಾ ಸಾಲು ಕೋಟೆಗಳ ಬಳಿ ಬಹು ಕಠಿಣವಾದ ಒಂದು ಯುದ್ಧ ನಡೆದಂತೆ ವರ್ತಮಾನ ಬಂದಿದೆ ಎರಡು ಡಿವಿಜನ್ ಟರ್ಕಿ ಸೈನ್ಯಗಳು ಬಲ್ಗೇರಿಯಾದವರ ಮೇಲೆ ಯುದ್ಧಮಾಡಿ ಸೋತುಹೋಗಿ 600 ಮಂದಿಯನ್ನು ಕಳದುಕೊಂಡು ಹಿಮ್ಮೆಟ್ಟಿದರು ಅದೇ ದಿನ ಸಾಯಂಕಾಲ ಎರಡನೇ ಸಲ ಟರ್ಕಿಯವರು ಶತ್ರುಗಳ ಸೈನ್ಯವನ್ನು ನುಗ್ಗಿ ಯುದ್ಧಮಾಡುತ್ತ ಸೋತುಬಿಟ್ಟರು ಅತ್ತಲಾಗಿ ಬುರಾಜೋದಿಂದ 70 ಮೈಲಿ ದೂರದಲ್ಲಿ ಗ್ರೀಕರು ಜಯಿಸಿ ಎರಡು ಸ್ಥಳವನ್ನು ಸ್ವಾಧೀನಪಡಿಸಿಕೊಂಡಿದಾರೆ ಇನ್ನೊಂದು ಕಡೆ ಮಾಂಟಿನೀಗ್ರೋದವರೂ ಸರ್ವಿಯಾದವರೂ ಸೇರಿ ಅಲ್ಬೇನಿಯಾ ಪ್ರಜೆಗಳನ್ನು ಬಹು ಕ್ರೂರತರವಾಗಿ ಹಿಂಸೆಪಡಿಸಿ ಕೊಂದುಹಾಕುತ್ತಿದ್ದಾರೆಂದೂ, ಗಂಡಸರು ಹೆಂಗಸರು ಮಕ್ಕಳನ್ನು ಜೀವಸಹಿತ ಸುಡುತ್ತಿದ್ದಾರೆಂದೂ ದೂರುಗಳು ಹುಟ್ಟಿರುವುದು

ಈ ಮಧ್ಯೆ ಶತ್ರುಗಳಿಗೆ ಸಹಕಾರಮಾಡುವ ಸಲಹೆಗಳು ನಡೆಯುತ್ತಿರುವವು ಶತ್ರು ಸಮುದಾಯದವರಲ್ಲಿ ಪರಸ್ಪರ ದ್ವೇಷಾಸೂಯೆಗಳು ಹುಟ್ಟಿರುವಂತೆ ಕಾಣುತ್ತದೆ ಆದರೂ ಈ ಕಠಿಣಾಟಗಳನ್ನು ದೀರ್ಘಕಾಲ ಹೀಗೇ ಬಿಡುವುದು ಯೂರೋಪಿನ ನೆಮ್ಮದಿಗೆ ಹಿತಕರವಾದದ್ದಲ್ಲವೆಂದು ಸರದಾರರುಗಳು ರಾಯಭಾರಿಗಳು ಲಂಡನ್ ಪಟ್ಟಣದಲ್ಲಿ ಸಭೆ ಸೇರಿ ಮುಂದುವರಿಯುವ ಕರಾರಿನ ವಿಷಯಗಳನ್ನು ಕುರಿತು ಚರ್ಚೆಮಾಡುತ್ತಿರುವರು

ಮತ್ತೊಬ್ಬರನ್ನು ರಕ್ಷಿಸಿದವನು ತನ್ನನ್ನು ರಕ್ಷಿಸಿಕೊಳ್ಳಲಾರನೆ

ಗತಿಸಿದ ಮಾರ್ಚಿ ತಿಂಗಳ ಇಪ್ಪತ್ತೊಂದನೆ ತೇದಿ ಶುಕ್ರವಾರವನ್ನು ಲೋಕದಲ್ಲಿರುವ ಸಕಲ ಕ್ರೈಸ್ತರು ತಮ್ಮ ಸ್ವಾಮಿಯಾದ ಯೇಸು ಕ್ರಿಸ್ತನು ಶಿಲುಬೆಯನ್ನನುಭವಿಸಿ ಸತ್ತ ದಿನವೆಂದು ಸ್ಮರಿಸಿ ಆತನನ್ನು ಆರಾಧಿಸಿದರು ಆತನು ಅಪರಾಧಿಯೆಂದು ಆತನ ಶತ್ರುಗಳು ತೀರ್ಮಾನಿಸಿದರು ಆದರೆ ಆತನ ಮೇಲೆ ಯಾವ ಅಪರಾಧವನ್ನು ಹೊರಿಸಿ ನ್ಯಾಯ ತೀರಿಸುವದು ಆತನ ಶತ್ರುಗಳಿಗೆ ಅಸಾಧ್ಯವಾಯಿತು ಚರಿತ್ರಕಾರನು ಹೇಳುವದೇನಂದರೆ ಮಹಾಯಾಜಕರೂ ಹಿರಿಯರೂ ಸಭೆಯವರೆಲ್ಲರೂ ಯೇಸುವನ್ನು ಕೊಲ್ಲಿಸಬೇಕೆಂದು ಆತನ ಮೇಲೆ ಅಪಸಾಕ್ಷಿ ಸಿಕ್ಕೀತೋ ಏನೋ ಎಂದು ಹುಡುಕಿದರು ಅವರ ಎಷ್ಟು ಮಂದಿ ಸುಳ್ಳುಸಾಕ್ಷಿಗಳು ಬಂದು ನಿಂತರೂ ಏನೂ ಅಪರಾಧ ಆತನಲ್ಲಿ ಸಿಕ್ಕಲಿಲ್ಲ ಮತ್ತು ಆತನನ್ನು ದೇಶಾಧಿಪತಿಯಾದ ಪಿಲಾತನ ಮುಂದೆ ಕರೆದುಕೊಂಡು ಹೋಗಿ ಅಲ್ಲಿ ನಾನಾವಿಧವಾದ ಅಪರಾಧಗಳನ್ನು ಹೊರಿಸಿದರು ಆದರೆ ಆತನಿಗೆ ವಿರೋಧವಾಗಿ ಯಾವ ಅಪರಾಧವೂ ರುಜುವಾತಾಗಲಿಲ್ಲ ಆಗ ಯೇಸುವನ್ನು ಬಿಡಿಸಬೇಕೆಂದು ಅಧಿಪತಿಯು ಅಪೇಕ್ಷಿಸಿದನು ಯಾಕಂದರೆ ಹೊಟ್ಟೆಕಿಚ್ಚಿನಿಂದ ಆತನನ್ನು ಯಹೂದ್ಯರು ಹಿಡಿಸಿದ್ದರೆಂದು ಅವನಿಗೆ ತಿಳಿದಿತ್ತು ಆದರೆ ಅವನು ದಂಗೆ ಜೋರಾದ ಯಹೂದ್ಯರಿಗೂ ಅವರ ಪಕ್ಷವನ್ನು ಹಿಡಿದಿದ್ದ ಸಮೂಹದವರಿಗೂ ಭಯಪಟ್ಟು ಯೇಸುವನ್ನು ಶಿಲುಬೆಗೆ ಹಾಕಿಸಬೇಕೆಂದು ನಿರ್ಣಯಿಸಿದನು ಯಾಕಂದರೆ ತಾನು ಯೇಸುವನ್ನು ಬಿಡಿಸುವದಕ್ಕೆ ಎಷ್ಟು ಪ್ರಯತ್ನಮಾಡಿದರೂ ಗದ್ದಲ ಹೆಚ್ಚಾಗುವದೇ ಹೊರತು ಸುತ್ತೇನೂ ಪ್ರಯೋಜನವಾಗುವದಿಲ್ಲವೆಂದು ಚನ್ನಾಗಿ ತಿಳುಕೊಂಡನು ಆದುದರಿಂದ ಅವನು ನೀರು ತೆಗೆದುಕೊಂಡು ಜನರ ಮುಂದೆ ಕೈ ತೊಳಕೊಂಡು—ಈ ನೀತಿವಂತನನ್ನು ಕೊಂದ ಅಪರಾಧಕ್ಕೆ ನಾನು ನೀಂದವನಲ್ಲ ನೀವೇ ನೋಡಿಕೊಳ್ಳಿರೆಂದು ಹೇಳಿದನು

ಇತ್ತಲಾ ಯೇಸು ಕ್ರಿಸ್ತನಾದರೂ ತನ್ನನ್ನು ಬಿಡಿಸಿಕೊಳ್ಳುವದಕ್ಕೆ ಯಾವ ಪ್ರಯತ್ನವನ್ನು ಮಾಡಲಿಲ್ಲ ಆತನನ್ನು ಹಿಡಿಯುವದಕ್ಕೆ ರಾತ್ರಿವೇಳೆಯಲ್ಲಿ ಆತನಿದ್ದ ಸ್ಥಳಕ್ಕೆ ಯೆಹೂದ್ಯರು ಸಿಪಾಯಿಗಳನ್ನೂ ಜನಸಮೂಹದವರನ್ನೂ ಹೊರಡಿಸಿಕೊಂಡು ದೊಣ್ಣೆ ಕತ್ತಿ ಮುಂತಾದ ಆಯುಧಗಳನ್ನು ಹಿಡಿಸಿಕೊಂಡು ಬಂದದ್ದನ್ನು ನೋಡಿ ಕ್ರಿಸ್ತನ ಶಿಷ್ಯನಾದ ಪೇತ್ರನು ಕತ್ತಿಯನ್ನು ಹಿರಿದು ಅವರ ಪೈಕಿ ಒಬ್ಬನನ್ನು ಕತ್ತಿಯಿಂದ ಹೊಡೆದು ಗಾಯವಾಡಲು ಯೇಸು ಪೇತ್ರನಿಗೆ—ನಿನ್ನ ಕತ್ತಿಯನ್ನು ಒರೆಯಲ್ಲಿ ಹಾಕುಯೆಂದು ಗದರಿಸಿ ಗಾಯವಾಗಿದ್ದವನನ್ನು ಮುಟ್ಟಿ ಸ್ವಸ್ಥಮಾಡಿದನು ಮತ್ತು ಆತನು ಹೇಳಿದ್ದೇನಂದರೆ—ನಾನು ಈಗ ನನ್ನ ತಂದೆಯನ್ನು ಬೇಡಿಕೊಳ್ಳಲಾರೆನೋ ? ಮತ್ತು ನಾನು ಬೇಡಿಕೊಂ

...ನು ತನಗೆ ಈಗತೇ ಹನ್ನೆರಡು ಗಣಗಳಿಗಿಂತ ಹೆಚ್ಚು ಮುಂದಿ ದೇವದೂತರು ಹುಡುಕಿಕೊಡುವದಿಲ್ಲವೆಂದು ನೆನಸುತ್ತೀಯೋ ? ಎಂಬುವದೇ ಮತ್ತು ...ತ್ರುಗಳನ್ನು ಸೋಲಿಸಿ ಓಡಿಸುವದಕ್ಕೆ ಯತ್ನಿಸದೇ ಹೋದರೂ ತಾನಾ ...ಗಿ ಸಸಿಕೊಳ್ಳುವದು ಸುಲಭಸಾಧ್ಯವಾಗಿತ್ತು. ಯಾಕಂದರೆ ...ಆತನನ್ನು ಹಿಡಿಯುವದಕ್ಕೆ ಬಂದಾಗ ಆತನು ಯಾರನ್ನು ಹುಡುಕು ...ತೀರಿ? ಎಂದು ಕೇಳಿದನು. ಅವರು ಯೇಸುವನ್ನು ಹುಡುಕುತ್ತೇವೆಂದು ಹೇಳಿದ್ದಕ್ಕೆ ...ನೇ ಯೇಸುವೆಂದು ಅವರೆದುರಿಗೆ ಧೈರ್ಯವಾಗಿ ಬಂದು ನಿಂತು ... ಅವರು ಬಿಗಿಲಿನಿಂದ ಕಂಪಾಯಮಾನರಾಗಿ ಹಿಂದಕ್ಕೆ ಸರಿದು ಬಿ...ಹೀಗೆ ಮೂರು ಸಾರಿ ಆಯಿತು. ಭೀಕು ತಪ್ಪಿಸಿಕೊಂಡು ಹೋಗುವ ...ಕಾಲವಿತ್ತಲ್ಲವೇ ? ಆತನು ಯಾಕೆ ತಪ್ಪಿಸಿಕೊಳ್ಳಲಿಲ್ಲ ?

...ಕಂದರೆ ಆತನು ಮೊದಲಿನಿಂದ ಕಡೇವರಿಗೂ ಇತರರನ್ನು ರಕ್ಷಿಸುವದಕ್ಕೂ ದೇವರು ತನಗೆ ಕೊಟ್ಟ ಶಕ್ತಿಯನ್ನೂ ಪ್ರಯೋಗಿಸುವದರಲ್ಲಿ ...ದನು. ಆತನು ದೇವರಿಗೆ ಅಸದೃಶವಾದ ವಿಧೇಯತೆಯನ್ನು ಸಲ್ಲಿಸಿ ...ದ ಮಹತ್ತುಗಳನ್ನು ಮಾಡುವ ಶಕ್ತಿಯನ್ನು ಪಡೆದಿದ್ದನು. ಆತನು ...ಕಾಲನ್ನೂ ಕುರುಡರಿಗೆ ದೃಷ್ಟಿಯನ್ನೂ ರೋಗಿಗಳಿಗೆ ಆರೋಗ್ಯವನ್ನೂ ...ಸತ್ತವರಿಗೆ ಜೀವನವನ್ನೂ ಕೊಟ್ಟನು. ಆದರೆ ತನಗೆ ಈ ಮಹತ್ತುಗ...ಪ್ರಯೋಜನವಿಲ್ಲ ... ಬರಬೇಕೆಂದು ...ದ ಶಬ್ದದಿಂದ ಗುಣಹೊಂದಿದ ರೋಗಿಗಳಿಗೆ ತಾನು ವಾಸಿಮಾಡಿದೆನೆಂದು ...ಹೇಳಬಾರದೆಂದೂ ಅನೇಕಾವರ್ತಿ ಖಂಡಿತವಾಗಿ ಆಜ್ಞಾಪಿಸಿದನು. ...ಆತನಿಗಿಂತ ಚೆನ್ನಾಗಿ ತಿಳಿದವನು ಇನ್ನಾರೂ ಇರಲಿಲ್ಲ. ದೇವರನ್ನು ...ಯಾರೂ ಕಂಡಿಲ್ಲ. ತಂದೆಯ ಎದೆಯಲ್ಲಿರುವ ಒಬ್ಬನೇ ಮಗನು ...ತಾನೇ ಆತನನ್ನು ತಿಳಿಯಪಡಿಸಿದನು. ಆತನ ಉಪದೇಶವನ್ನು ಕೇಳಿದ ...ನ ಬೋಧನೆಗೆ ಆಶ್ಚರ್ಯಪಟ್ಟರು. ಯಾಕಂದರೆ ಆತನು ಅಧಿಕಾ...ಯುಕ್ತನಾಗಿ ಬೋಧನೆ ಹೇಳಿದನು. ಆತನ ಉಪದೇಶವು ಈಗಲೂ ಅತ್ಯಂತ ...ರು ಪಂಡಿತರಿಗೂ ಆಶ್ಚರ್ಯವನ್ನುಂಟುಮಾಡುವದಾಗಿದೆ. ಆದರೂ ...ಯವಾದ ಉಪದೇಶವನ್ನು ಕೇಳುವದಕ್ಕೆ ತಕ್ಕ ವಿದ್ವಾಂಸರು, ಕಪೀ...ಗಳು ಎಲ್ಲಿವೆ ? ನನ್ನ ಎದೆತ್ತಿ ... ಜ್ಞಾನಬೋಧನೆಯನ್ನೂ ತೂಗಿ ...ಮಟ್ಟಿಕೊಳ್ಳುವವರು ಯಾರು ? ಯಾವ ಆರಮನೆಗೆ ಆಸ್ಥಾನಗಳಿಗೆ ...ಕೀರ್ತಿಯೂ ಐಶ್ವರ್ಯವೂ ಜಯವೂ ಬಂದಾವೆಂತ ಯೋಚಿಸದೆ ...ತಕ್ಕಸಳ್ಳಿಯ ಪಾಮರರಿಗೂ ಸುಂಕ ಎತ್ತಿ ಜೀವನಮಾಡುವ ಪಾಪಿ...ಗೆ ಜೀವದ ಮಾತನ್ನು ಹೇಳಿದನು. ಕಂಗೆಟ್ಟವರೂ ಎಡವರೂ ...ಆತನ ಸಂಗಡಿಗರಾಗಿದ್ದರು. ಮತ್ತು ಇಂಥ ಗತಿಹೀನರನ್ನೂ ಮಹಾ ...ಪಾಪಿಗಳನ್ನೂ ಒಡಗೂಡಿ ಅವರ ಸಂಗಡ ಸೇರುವದಕ್ಕೆ ಸಮ್ಮತಿಸ...ಎಂತ ಆತನನ್ನು ಕೇಳಿದವರಿಗೆ ಆತನು—ವೈದ್ಯನಿಗೆ ಕ್ಷೇಮದಲ್ಲಿ ...ಗತ್ಯವೇನು. ನಾನು ನೀತಿವಂತರನ್ನಲ್ಲ, ಪಾಪಿಗಳನ್ನು ಹುಡುಕಿ ...ದಕ್ಕೆ ಬಂದವನೆಂದು ಹೇಳಿದನು.

...ಈ ಅಭಿಪ್ರಾಯವನ್ನು ಆತನು ತನ್ನ ಮರಣಕಾಲದಲ್ಲಿಯೂ ಬಿಡಲಿಲ್ಲ. ...ಅಪರಾಧಿಯೆಂದು ಹಾಸ್ಯಮಾಡಿ ಕೆನ್ನೆಗೆ ಹೊಡೆದು ಗುದ್ದಿ ವೈದು ...ಬಿದರು. ಆತನು ತನಗೆ ಪ್ರಾಪ್ತಿಸಿದ ಕಷ್ಟವನ್ನು ಯಾತನೆಯನ್ನು ...ತಸತಸೆ ತನ್ನನ್ನು ಹಿಂಸಿಸುತ್ತಿರುವವರು ದೇವರ ಮುಂದೆ ಅಪರಾಧಿ...ಗುತ್ತಿದ್ದಾರಲ್ಲಯೆಂದು ದೇವರಿಗೆ—ತಂದೆಯೇ ಈ ಅಪರಾಧವ ...ಮೇಲೆ ಹೊರಿಸಬೇಡ, ಅವರಿಗೆ ಮನ್ನಿಸುಯೆಂದು ಅವರ ಪರವಾಗಿ ... ಜನಸಮೂಹದವರು ಆತನನ್ನು ಹಾಸ್ಯಮಾಡಿ—ಮತ್ತೊಬ್ಬರನ್ನು ರಕ್ಷಿಸಿ ...ತನ್ನನ್ನು ರಕ್ಷಿಸಿಕೊಳ್ಳಲಾರನು, ರೋಗಿಗಳನ್ನು ವಾಸಿಮಾಡಿ ಸತ್ತವರನ್ನು ...ಸಿದನು ಈತನು ಹೇಳುತ್ತಾನಲ್ಲ, ತನ್ನನ್ನು ಯಾಕೆ ರಕ್ಷಿಸಿಕೊಳ್ಳ... ಈತನು ದೇವರಕುಮಾರನಾಗಿದ್ದರೆ ಶಿಲುಬೆಯಿಂದ ಇಳಿದುಬರಲಿ ಆದರೆ ಆತನು ಬದುಕುತ್ತಿದ್ದದ್ದು ಇತರರನ್ನು ರಕ್ಷಿಸುವದಕ್ಕಾಗಿ, ಇತರರನ್ನು—ತನ್ನನ್ನು ಕೊಂದ ಅಪರಾಧಿಗಳನ್ನು ರಕ್ಷಿಸುವದಕ್ಕಾ...ದು ಅವರು ತಿಳಿಯಲಿಲ್ಲ.

ಒಳದೇಶದ ವೃತ್ತಾಂತಗಳು.

...ತಾ 30 ನೇ ಭಾನುವಾರ ಬೆಳಿಗ್ಗೆ ಮೈಸೂರು ಕೋಆಪರೇಟಿವ್ ...ನೇ ಜನರಲ್ ಮೀಟಿಂಗು ಇಲ್ಲಿನ ಸದ್ವಿದ್ಯಾ ಪಾಠಶಾಲೆ ಕಟ್ಟ... ನಡೆಯುವಂತೆ ನಿಶ್ಚಯವಾಗಿದೆ.

...ಕೂರು ಡಿಸ್ಟ್ರಿಕ್ಟಿಗೆ ಸೇರಿದ ಗೂಳೂರು, ಹೊನ್ನುಡಿಕೆ, ಕೋಳಾಲ, ...ಗಳಲ್ಲಿ ಮುಂದಿನ ಜೂಲೈ ಲಾಗಾಯಿತು ಯೂನಿಯನ್ ಪಂಚಾಯತಿ ...ನಡೆಸಬೇಕೆಂದು ಸರ್ಕಾರದವರು ಸಾಂಕ್ಷನ್ ಮಾಡಿದಾರೆ.

...ತಗು ತಿರುಗಂಪೂರು ಮ|| ಹೊನ್ನಯ್ಯ ಮುತ್ತಣ್ಣನವರು ಕಳೆದ ...ನೇ ಮಂಗಳವಾರ ರಾತ್ರಿ ಒಂದು ಬಾರಿ ಹುಲಿಯನ್ನು ಕೊಂದುಹಾಕಿದ ...ದು ಅನೇಕ ಗೋವುಗಳನ್ನು ಹೊಡೆದಿತ್ತೆಂದೂ ತಿಳಿಯುತ್ತೇವೆ.

...ಳೂರು ಸೆಂಟ್ರಲ್ ನಾಜರು ಮ|| ನಾರಾಯಣ ಶಾಸ್ತ್ರಿಗಳ ಮೇಲೆ ...ರದ ಹಣವನ್ನು ದಸ್ತುಮಾಡಿದರೆಂಬ ಮೊಕದ್ದಮೆಯಲ್ಲಿ ಅಪರಾಧ ...ಗಿಲ್ಲವೆಂದು ಸಿಟಿ ಮ್ಯಾಜಿಸ್ಟ್ರೇಟರು ಅವರನ್ನು ಖುಲಾಸ್ ಮಾಡಿ...

...ರ್ ಎಂ ಕಾಂತರಾಜೆ ಅರಸಿನವರು ಕಳೆದ ವಾರ ರಾಜಧಾನಿಯಲ್ಲಿ ...ಶ್ರೀಯವರ ವರುಷಾಬ್ದಿಕವನ್ನು ವಿಶೇಷ ಭಕ್ತಿಯಿಂದಲೂ ಉದಾ...ದಿ ಜರುಗಿಸಿದರು. ಸಾವಿರಾರು ಬಡಬಗ್ಗರಿಗೆ ಅನ್ನದಾನಾದಿಗಳನ್ನು ...ದ್ದು.

...ಳೂರು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಾಮಗಾರಿಯನ್ನು ರೈಲ್ವೆ ...ಜಿನೀಯರ್ ಮಿ|| ಬೆಲ್‌ರವರು ಕಂಪನಿಯ ಪರವಾಗಿ ವಹಿಸಿ ...ತಿಂಗಳ ಮೊದಲನೇ ವಾರದಿಂದ ಪ್ರಾರಂಭಮಾಡಿ ಆದಷ್ಟು ಜಾಗ್ರತೆ ...ಧ ಖರ್ಚಿನಿಂದ ಮಾಡಿಕೊಡುತ್ತೇವೆಂದು ತಿಳಿಸಿದಾರೆ.

...ಶುಕ್ರವಾರ ರಾಜಧಾನಿಯ ಮರಿಮಲ್ಲಪ್ಪನವರ ಸ್ಕೂಲ್ ವಿದ್ಯಾರ್ಥಿ...ಗಳು ವಿದ್ಯಾಪ್ರೋತ್ಸಾಹಕ ಕೂಟವನ್ನು ಪ್ರಾರಂಭ ಮಾಡಿಕೊಂಡರು. ಆ ದಿನದ ಸಂತೋಷ ಸಭೆಯಲ್ಲಿ ಕಾಲೇಜ್ ಪ್ರಿನ್ಸಿಪಲ್ ಮಿ|| ಟ ಡೆನ್‌ಹಾಂರವರು ಅಗ್ರಾಸನವನ್ನು ವಹಿಸಿ ವಿದ್ಯಾರ್ಥಿಗಳ ಕೂಟಕ್ಕೆ ಶ್ರೇಯಸ್ಸನ್ನು ಬಯಸಿದರು.

ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಉಪಾಧ್ಯಾಯರಾಗಿದ್ದ ಮಿ|| ಆರ್ ಮೆಕಂಬ್‌ಯವರು ಕೆಲಸ ಬಿಟ್ಟು ಹೋಗುವುದರಿಂದ ಅವರಿಗಾಗಿ ವಿದ್ಯಾರ್ಥಿಗಳು ಕಳೆದ ವಾರ ಒಂದು ಸಂತೋಷ ಕೂಟವನ್ನು ನಡಿಸಿ ಅವರ ಗುಣಕಥನವನ್ನು ಮಾಡಿ ಅವರಲ್ಲಿ ತಮಗಿರುವ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಿದರು.

ಬೆಂಗಳೂರು ಗವರ್ನ್‌ಮೆಂಟ್ ಎ ವಿ ಸ್ಕೂಲಿನ ಹೆಡ್ ಮಾಸ್ಟರು ಮಿ|| ಪಿ ಚಿನ್ನಪ್ಪನವರು ಮೈಸೂರು ಸರ್ಕಾರದಿಂದ ದ್ರವ್ಯ ಸಹಾಯವನ್ನು ಪಡೆದು ಯೂರೋಪ್ಪಿಗೆ ಪ್ರಯಾಣಮಾಡಿ ಇಟಲಿ ರಾಜ್ಯದ ರಾಜಧಾನಿಯಾದ ರೋಮ್ ನಗರವನ್ನು ತಲುಪಿ, ಸಣ್ಣ ಮಕ್ಕಳಿಗೆ ಶ್ರಮವಿಲ್ಲದೆ ವಿದ್ಯಾದಿಗಳನ್ನು ಕಲಿಸುವಂಥಾ ನವೀನ ಕ್ರಮಗಳನ್ನು ಕಲಿಯುತ್ತಿರುವರು.

ಬೆಂಗಳೂರು ಕ್ಲೀವ್‌ಲಾಂಡ್ ಟವನ್ ಶ್ರೀ ಸ್ವಯಂಬ್ರಹ್ಮಾನಂದಸ್ವಾಮಿಯವರು ಕಳೆದ ಎರಡು ತಿಂಗಳಿಂದ ಶಿವಮೊಗ್ಗೆಯಲ್ಲಿದ್ದುಕೊಂಡು ಅಲ್ಲಿನ ಅನೇಕ ಪ್ರಜೆಗಳನ್ನು ಆಗಾಗ್ಗೆ ಸಭೆ ಸೇರಿಸಿ ಬ್ರಹ್ಮಧರ್ಮ, ಮಾನವಧರ್ಮ, ಪರಮಾರ್ಥ, ಶಾಂತಿ, ಈ ಮೊದಲಾದ ವಿಚಾರಗಳನ್ನು ಕುರಿತು ಸ್ವಾರಸ್ಯವಾದ ಉಪನ್ಯಾಸಗಳನ್ನು ಮಾಡಿ ಸಂತೋಷಪಡಿಸಿದರೆಂದು ತಿಳಿಯುತ್ತೇವೆ.

ಮದರಾಸ್ ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪನಿಯ ಗಾರ್ಡುಗಳೇ ಮೊದಲಾದ ಕೆಲವು ನೌಕರಮಾನೇರುಗಳು ಸುಮಾರು ಒಂದು ವಾರದ ಕೆಳಗೆ ಬಿಟ್ರಗುಂಟೆಯಲ್ಲಿ ಒಂದು ಮೀಟಿಂಗು ಮಾಡಿ, ತಮ್ಮ ಅಭಿಮತದಂತೆ ಬೇಗನೆ ನಡಿಸಿಕೊಡದಿದ್ದರೆ ತಾವೆಲ್ಲಾ ಕೆಲಸ ಬಿಡುವುದಾಗಿ ರುಜು ಮಾಡಿದ ಒಂದು ಅರ್ಜಿಯನ್ನು ಕಂಪನಿಯ ಅಧ್ಯಕ್ಷರಿಗೆ ಕಳುಹಿಸಿರುವಂತೆ ಪ್ರಕಟವಾಗಿದೆ.

ಆನೆಕಲ್ ತಾಲ್ಲೂಕು ಅತ್ತಿಬೆಲೆಯಲ್ಲಿ ಅಲ್ಲಿನ ಮ|| ಶಿದ್ದಬಸಪ್ಪನವರು ಸುಮಾರು ಮೂರು ಸಾವಿರ ರೂಪಾಯಿ ಉಚಿತವಾಗಿ ಕೊಟ್ಟು ಒಂದು ದೊಡ್ಡ ಸ್ಕೂಲನ್ನು ಕಟ್ಟಿಸಿಕೊಡುವುದಾಗಿ ವಾಗ್ದಾನ ಮಾಡಿ, ಆಗಲೇ ಕಾಮಗಾರಿಯನ್ನು ಪ್ರಾರಂಭಿಸಿರುತ್ತಾರೆಂದು ಕೇಳಿ ಸಂತೋಷಪಡುತ್ತೇವೆ. ಇದರಿಂದ ಅವರಿಗೆ ಮಕ್ಕಳ ಪುರೋವೃದ್ಧಿಯಲ್ಲಿ ಉಂಟಾಗಿರುವ ಪ್ರೀತಿ ವಿಶ್ವಾಸಗಳು ಶಾಶ್ವತವಾಗಿ ನಿಲ್ಲಲು ಅನುಮಾನವಿಲ್ಲ.

ಈ ಸಲ ಕಳೆದ ವಾರ ನಡೆದ ಕಾಮನಹಬ್ಬ ಕಾಲದಲ್ಲಿ ಕಾನಕಾನಹಳ್ಳಿ, ಮದ್ದೂರು ಮತ್ತು ಮಳವಳ್ಳಿ ಟವನ್‌ಗಳೊಳಗೆ ಹಿಂದೂ ಮಹಮದೀಯರಿಗೆ ದೊಂಬಿ ಕಲಹಗಳು ನಡೆದಿರುವಂತೆಯೂ, ಕಾನಕಾನಹಳ್ಳಿ ಮತ್ತು ಮದ್ದೂರಿನಲ್ಲಿ 10-15 ಜನರಿಗೆ ಗಾಯಗಳಾಗಿರುವಂತೆಯೂ ಕೇಳುತ್ತೇವೆ. ಸ್ಥಳಾಧಿಕಾರಿಗಳ ಮುಂಜಾಗ್ರತೆಯ ಏರ್ಪಾಡುಗಳೂ, ಅವರ ದರ್ಪವೂ ಸರಿಯಾಗಿದ್ದರೆ ಇಂಥಾ ಕೃತ್ಯಗಳಿಗೆ ಅವಕಾಶವಾಗುವುದಿಲ್ಲ.

ಮೈಸೂರು ಸಂಸ್ಥಾನದ ಗ್ರಾಮಾಂತರಗಳಲ್ಲಿ 105 ಪ್ರಥಮ ಪಾಠಶಾಲಾ ಕಟ್ಟಡಗಳನ್ನು ಚಾಲ್ತಿ ಸಾಲ್ ಪೂರೈಸುವುದರೊಳಗಾಗಿ ಕಟ್ಟಿ ಸಿದ್ಧಪಡಿಸಬೇಕೆಂದು ಸರ್ಕಾರದವರು ಹಣವನ್ನು ಸ್ಯಾಂಕ್ಷನ್ ಮಾಡಿರುತ್ತಾರೆ. ಈ ಸ್ಕೂಲ್ ಕಟ್ಟಡಗಳ ಹಂಚಿಕೆ ಹ್ಯಾಗಂದರೆ—ಬೆಂಗಳೂರು ಡಿಸ್ಟ್ರಿಕ್ಟು 15, ಕೋಲಾರ 9, ತುಮಕೂರು 15, ಚಿತ್ರದುರ್ಗ 10, ಮೈಸೂರು 22, ಶಿವಮೊಗ್ಗ 11, ಹಾಸನ 13, ಕಡೂರು 10. ಚಾಲ್ತಿ ಇರ್ವ್ ಆಖೈರಿನೊಳಗೆ ಈ ಪೈಕಿ ಎಷ್ಟು ಕಟ್ಟಡಗಳು ಸಿದ್ಧವಾಗುವವೋ ರಿಪೋರ್ಟು ಮಾಡಬೇಕೆಂದು ಸೂಚಿಸಲಾಗಿದೆ.

ಬೆಂಗಳೂರು ಸಿಟಿ ಹಳೆ ತರಗುಪೇಟೆ ಮಂಡಿ ವರ್ತಕ ಕನ್ನಂಬಾಡಿ ಕರೀಂಸಾಬ್ ಎಂಬಾತನು ಕೆಟ್ಟ ತುಪ್ಪವನ್ನಿಟ್ಟು ಬಿಕರಿ ಮಾಡುತ್ತಿದ್ದನೆಂದು ಮೊಕದ್ದಮೆ ಆಗಿ ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆ ನಡೆದು ಕಳೆದ ವಾರ ಆತನಿಗೆ 40 ರೂಪಾಯಿ ಜುಲ್ಮಾನೆ, ತಪ್ಪಿದರೆ ಎರಡು ತಿಂಗಳ ಸಾದಾ ಸಜ ವಿಧಿಸಲಾಯಿತು. ಈಚೆಗೆ ಅದೇ ಮಂಡಿವರ್ತಕ ಪಾಲಜಾ ಅಬ್ದುಲ್ ಅಜೀಜ್ ಎಂಬ ಇನ್ನೊಬ್ಬ ವರ್ತಕನ ಮೇಲೂ ಅದೇ ತರದ ಮೊಕದ್ದಮೆ ಬಂದು ವಿಚಾರಣೆಯಾಗಿ, 50 ರೂಪಾಯಿ ಜುಲ್ಮಾನೆ, ತಪ್ಪಿದರೆ ಒಂದು ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟಿತು.

ಬೆಂಗಳೂರಿನಲ್ಲಿ ಈಚೆಗೆ ಸ್ಥಾಪನೆಯಾಗಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಎಂಬ ಶಾಸ್ತ್ರಶೋಧನಾ ವಿದ್ಯಾಶಾಲೆಯ ಕಟ್ಟಡದ ವಿಚಾರದಲ್ಲೂ, ಅದರೊಳಗೆ ನಡೆಯುವ ಕಾರ್ಯಗಳ ವಿಚಾರದಲ್ಲೂ ಅಸಮಾಧಾನಕರವಾದ ಸಂಗತಿಗಳು ಪ್ರಕಟವಾಗಿ ಇಂಡಿಯಾ ಗವರ್ನ್‌ಮೆಂಟಿಗೆ ತಿಳಿದು ಬಂದದ್ದರಿಂದ ಅದನ್ನೆಲ್ಲಾ ಸರಿಯಾಗಿ ತನಿಖೆ ಮಾಡುವಂತೆ ನಾಲ್ವರು ಇಂಗ್ಲಿಷ್ ದೊಡ್ಡ ಮನುಷ್ಯರನ್ನು ಪಂಚಾಯಿತರಾಗಿ ನೇಮಿಸಿರುತ್ತಾರೆ. ಇವರು ಏಪ್ರೆಲ್ ತಾ 15 ಕ್ಕೆ ಬೆಂಗಳೂರಿಗೆ ಬಂದು ವಿಚಾರಣೆ ಮಾಡುವವರಾಗಿದಾರೆ.

ಲೇಟ್ ಸರ್ ಕೃಷ್ಣಮೂರ್ತಿಯವರಿಗೆ ಸಲ್ಲಬೇಕಾಗಿದ್ದ ಸುಮಾರು 33 ಸಾವಿರ ರೂಪಾಯನ್ನು ಮೈಸೂರು ಸರ್ಕಾರದವರು ಅವರ ಪತ್ನೀಯವರಿಗೆ ಪಾವತಿ ಮಾಡುವಂತೆ ಅಪ್ಪಣೆ ಕೊಟ್ಟರು. ಈಗಿನ ಜಹಗೀರುದಾರರು ಆ ಹಣವನ್ನು ಧರ್ಮಕ್ಕೆ ವಿನಿಯೋಗಿಸಬೇಕೆಂದೂ, ಆಕೆಗೆ ಕೊಡಕೂಡದೆಂದೂ ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ ಮೊಕದ್ದಮೆ ಹಾಕಿದ್ದರು. ಇದು ವಿಚಾರಣೆ ನಡೆದು ಜಹಗೀರುದಾರರು ತಂದಿದ್ದ ದಾವಾವನ್ನು ವಜಾಮಾಡಿದರು. ಅದರ ಮೇಲೆ ಅವರು ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡುವವರಾಗಿದಾರೆಂದು ತಿಳಿಯುತ್ತೇವೆ.

ಮೈಸೂರು ಅಡಿಷನಲ್ ಮುನ್‌ಸಿಫ್ ಮ|| ಎಸ್. ವೆಂಕಟಕೃಷ್ಣಯ್ಯನವರು ತಮ್ಮ ಕೋರ್ಟಿನ ನಾಜರಾಗಿದ್ದ ನಾಗೇಶರಾಯರು ಜಮಾಖರ್ಚು ಲೆಕ್ಕಗಳನ್ನು ಹೇರುಪೇರು ಮಾಡಿ ಸುಮಾರು ಎರಡು ಸಾವಿರ ರೂಪಾಯಿನ ತನಖೆ ದುರುಪಯೋಗಪಡಿಸಿರುವಂತೆ ತನಿಖೆಯಲ್ಲಿ ತೋರಿಬಂದದ್ದರಿಂದ ಕಳೆದ ಗುರುವಾರ ನಾಜರನ್ನು ಪೊಲೀಸಿಗೆ ಒಪ್ಪಿಸಿರುತ್ತಾರೆ. ನಾವು ಕೇಳಿದ್ದು ನಿಜವಾಗಿರುವ ಪಕ್ಷಗಲ್ಲಿ ಕಳೆದ ಮೂರು ನಾಲ್ಕು ವರುಷಗಳ ಲೆಕ್ಕಗಳೂ ಸಮುದಾಯಿಸಿಯಾಗದೆ ಇವೆ ಎಂದೂ, ಆಡಿಟರುಗಳು ಈ ಹಿಂದೆ ಮಾಡಿರುವ ಲೆಕ್ಕಗಳ ತನಿಖೆಯಲ್ಲಿ ಇದು ಯಾಕೆ ಹೊರಪಡದೆ ಹೋಯಿತೋ ತಿಳಿಯದೆಂದೂ ಸಂಶಯ ಉಂಟಾಗಿರುತ್ತದೆ.

ಮೈಸೂರು ಗೆಜೆಟ್ ಸಂಗ್ರಹ

ನಂದೀದುರ್ಗದ ಗಣಿ ಚೀಫ್ ಇಂಜನೀಯರ್ ಮಿ|| ಜೆ ಮ್ಯಾಥ್ಯೂಸ್‌ರವರನ್ನು ಕೋಲಾರ್ ಸ್ಯಾನಿಟರಿ ಬೋರ್ಡ್ ಮೆಂಬರಾಗಿ ನೇಮಿಸಿದೆ.

ಹಾಸನ್ ಡಿಸ್ಟ್ರಿಕ್ಟ್ ಖಜಾನೆ ಛಾರ್ಜನ್ನು ವಹಿಸಿರುವ ಅ|| ಕಮೀಷನರ್ ಮಿ|| ಎಂ ಶ್ರೀನಿವಾಸಮೂರ್ತಿಯವರಿಗೆ ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಎಕ್ಸ್‌ಟ್ರಾ ಆಫೀಸರ್ ಮಿ|| ಮಹಮದ್ ಜಹಿರುದ್ದೀನ್ ಮೊಕ್ಕಾಯಿಯವರು ಖಜಾನೆಯ ಛಾರ್ಜನ್ನು ವಹಿಸಿದ್ದರು.

ಗುಬ್ಬಿ ಸಬ್ ಡಿವಿಜನ್ ಆಫೀಸರ್ ಮಿ|| ಎ ಕೆ ಸಯ್ಯದ್ ತಾಜ್‌ಪೀರಾನ್‌ರವರಿಗೆ ಆರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಅ|| ಸರ್ವನ್ ಮಿ|| ಎಸ್ ಕೆ ಹನುಮಂತರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನಾರು ದಿನ ಜಾಸ್ತಿ ಮಾಡಿದೆ.

ಶ್ರೀಮನ್ ಯುವರಾಜ ಶ್ರೀಕಂಠೀರವ ನರಸಿಂಹರಾಜ ಒಡೆಯರವರು ಯೂರೋಪ್ ಖಂಡದಲ್ಲಿ ದೇಶಾಟನೆ ಮಾಡುವಾಗ್ಗೆ ಲೆಫ್ಟಿನೆಂಟ್ ಕರ್ನಲ್ ಎ ಎ ಜೋನ್ಸ್‌ರವರು ಶ್ರೀಮನ್ ಮಹಾರಾಜರವರ ಮಿಲಿಟರಿ ಸೆಕ್ರೆಟರಿಯಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಮುಂದೆ ಹೇಳುವ ಅ|| ಕಮೀಷನ್‌ರುಗಳ ವರ್ಗಾವರ್ಗಿ ಹುಕುಂ ಮಾಡಲಾಗಿದೆ—(1) ಮಿ|| ಟಿ ಆ ಜಯರಾಮ ಅಯ್ಯರವರು ಮಾಲೂರಿನಿಂದ ಕೋಲೀಸ್‌ಪೇಟೆ ಸಬ್ ಡಿವಿಜನ್‌ಗೆ, (2) ಮಿ|| ಸಿ ಎಸ್ ಕುಪ್ಪುಸ್ವಾಮಿ ಅಯ್ಯಂಗಾರ್ರು ಕೋಲೀಸ್ ಪೇಟೆಯಿಂದ ದೊಡ್ಡಬಳ್ಳಾಪುರದ ಸಬ್ ಡಿವಿಜನ್‌ಗೆ.

ಡೆಪ್ಟಿ ಕಮಿಷನರ್ ಮಿ|| ಸಿ ಎಸ್ ಬಾಲಸುಂದರಂ ಅಯ್ಯರವರು ಮಾರ್ಚಿ ತಾ 10 ರಲ್ಲಿ ತುಮಕೂರು ಡಿಸ್ಟ್ರಿಕ್ಟಿನ ಮತ್ತು ಖಜಾನೆಯ ಛಾರ್ಜನ್ನು ಅ|| ಕಮಿಷನರ್ ಮಿ|| ಎ ಕೆ ಸಯ್ಯದ್ ತಾಜ್ ಪೀರಾನ್‌ರವರಿಗೆ ವಹಿಸಿರುತ್ತಾರೆ.

ಚಿತ್ರದುರ್ಗ ಡಿವಿಜನ್ ಅ|| ಇಂಜನಿಯರ್ ಮಿ|| ಎಸ್ ಎ ರಾಮಸ್ವಾಮಿ ಅಯ್ಯರವರಿಗೆ ಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಒಂದು ಸಂತೋಷಕ ಕೂಟವು

ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ನಡೆದದ್ದು

ಮೈಸೂರು ಪಟ್ಟಣದ ಎಲ್ಲಾ ಕೋಮುಗಳ ಪ್ರಜೆಗಳ ಪ್ರತಿನಿಧಿಗಳೂ ಸೇರಿ ಆರ್ ಟಿ ಕಂಪನಿಯ ಅಧ್ಯಕ್ಷರಾದ ಮ|| ಎ ವಿ ವರದಾಚಾರ್ಯರಿಗೆ ಅವರ ಯೋಗ್ಯತಾ ಸಾಮರ್ಥ್ಯವನ್ನು ಮೆಚ್ಚಿಕೊಂಡು ಒಂದು ಮೆಡಲನ್ನು ಕೊಡಬೇಕೆಂದು ನಿಶ್ಚಯಿಸಿದವರಾಗಿ ಚಂದಾ ಮೂಲಕ ಹಣವನ್ನು ಕೂಡಿಸಿದರು. ಆದರಂತೆ ಕಳೆದ 24 ನೇ ತಾ ಸೋಮವಾರ ರಾತ್ರಿ ಮೈಸೂರು ಟೌನ್ ಹಾಲ್ ಬಂಗಲೆಯಲ್ಲಿ ಒಂದು ಸಂತೋಷಕೂಟವು ಜರುಗಿತು. ಸರ್ದಾರ್ ಎಂ ಕಾಂತರಾಜೆ ಅರಸಿನವರು, ಮ|| ಗಳಾದ ಎಂ ಪುಟ್ಟಯ್ಯಾಜಿ ಅರಸಿನವರು, ಬಿ ಚಾಮಪ್ಪಾಜಿ ಅರಸಿನವರು, ಎ ಸಿ ಲಿಂಗರಾಜೆ ಅರಸಿನವರು, ಎಂ ವೆಂಕಟಕೃಷ್ಣಯ್ಯನವರು, ಎಚ್ ಸೀತಾರಾಮಯ್ಯನವರು, ಎಂ ನರಸಿಂಹಸ್ವಾಮಿಯವರು, ಬಸವಯ್ಯನವರು, ಟಿ ಹನುಮಂತರಾಯರು, ಅಡ್ವೋಕೇಟರುಗಳು, ಆಸ್ಥಾನ ವಿದ್ವಾಂಸರು, ಶೆಟ್ಟಿ ವರ್ತಕ ದೊಡ್ಡ ಮನುಷ್ಯರೇ ಮೊದಲಾದವರೆಲ್ಲಾ ಹಾಜರಾಗಿದ್ದರು. ಮೇಲ್ಗಡೆ ಬಾಲಾಖಾನೆಯಲ್ಲಿ ಸ್ತ್ರೀ ಸಮೂಹವು ಸೇರಿತ್ತು. ಆರ್ ಟಿ ಕಂಪನಿಯವರು ಸಭಿಕರ ಸಂತೋಷಕ್ಕಾಗಿ ಪ್ರಹ್ಲಾದ ಚರಿತ್ರೆಯಲ್ಲೂ ಧ್ರುವ ವಿಜಯದಲ್ಲೂ ಮುಖ್ಯವಾದ ಎರಡು ಮೂರು ಭಾಗಗಳನ್ನು ಬಹು ಮನೋಜ್ಞವಾಗಿಯೂ ರಸಯುಕ್ತವಾಗಿಯೂ ಅಭಿನಯಿಸಿದರು. ಬಳಿಕ ಮ|| ವೆಂಕಟಕೃಷ್ಣಯ್ಯನವರು ಯೂರೋಪ್ ಮತ್ತು ಅಮೇರಿಕ ರಾಜ್ಯಗಳಲ್ಲಿ ನಾಟಕಗಳಿಂದ ಜನಸಾಮಾನ್ಯಕ್ಕೆ ಉಂಟಾಗುತ್ತಿರುವ ಹಿತವನ್ನು ವಿವರಿಸಿ, ಮೈಸೂರು ಪಟ್ಟಣದಲ್ಲಿ ನಾಟಕಗಳು ಹುಟ್ಟಿ ಹರಡಲು ಆಸ್ಥಾನಾದಿಗಳಲ್ಲಿ ಉಂಟಾದ ಪ್ರೋತ್ಸಾಹವನ್ನು ಸೂಚಿಸಿ, ಮ|| ಎ ವಿ ವರದಾಚಾರ್ಯರು ಸುಮಾರು ಇಪ್ಪತ್ತು ವರುಷಗಳಿಂದ ಕಂಪನಿಯನ್ನಿಟ್ಟು ಅದರ ಉತ್ಪತ್ತಿಯನ್ನು ನಾನಾ ಧರ್ಮ ಕಾರ್ಯಗಳಿಗೆ ಬಹು ಧಾರಾಳವಾಗಿ ವಿನಿಯೋಗಿಸುತ್ತಾ ಪರಹಿತಚಿಂತಕರಾಗಿರುವುದರಿಂದ ಇಂಥವರನ್ನು ಪುರವಾಸಿಗಳು ಪುರಸ್ಕರಿಸುವುದೂ, ಬಹುಮಾನದಿಂದ ಪ್ರೋತ್ಸಾಹಿಸುವುದೂ ನ್ಯಾಯ್ಯವಾಗಿದೆ ಎಂದು ಉಪನ್ಯಾಸ ಮಾಡಿದರು. ಬಳಿಕ ಅತ್ತಿಕುಪ್ಪೆಯ ಮ|| ಎಚ್ ಕೃಷ್ಣಶಾಸ್ತ್ರಿಗಳು ನಾಟಕಗಳ ಪ್ರಯೋಜನಾದಿಗಳನ್ನೂ ಮ|| ವರದಾಚಾರ್ಯರ ಪ್ರಾವೀಣ್ಯವನ್ನೂ ಕುರಿತು ಸಂಕ್ಷೇಪವಾಗಿ ಪ್ರಸ್ತಾಪಮಾಡಿದರು. ತರುವಾಯ ಸಭಾಧ್ಯಕ್ಷರಾದ ಸರ್ದಾರ್ ಎಂ ಕಾಂತರಾಜೆ ಅರಸಿನವರು ಮ|| ವರದಾಚಾರ್ಯರ ಪಾಂಡಿತ್ಯವು ಅಸಾಧಾರಣವಾದದ್ದೆಂದೂ, ಅಭಿನಯ, ಗಾನವಿದ್ಯೆ, ನಾಟಕವಿದ್ಯೆಗಳಲ್ಲಿ ಹೆಸರು ಪಡೆದಿರುವರಲ್ಲದೆ ಕೆಲವು ಸರಸವಾದ ನಾಟಕಗಳನ್ನು ಸ್ವತಃ ರಚಿಸಿರುತ್ತಾರೆಂದೂ, ಇಂಗ್ಲಿಷಿನಲ್ಲಿ ಚೆನ್ನಾಗಿ ಪರಿಶ್ರಮಹೊಂದಿ ಸರ್ಕಾರದ ನೌಕರಿಯಲ್ಲಿದ್ದು ಅದನ್ನು ತ್ಯಜಿಸಿ ಅವರು ಸ್ವತಂತ್ರವಾಗಿ ಈ ಉದ್ಯೋಗವನ್ನು ಅವಲಂಬಿಸಿರುವುದು ಸಂತೋಷಪ್ರದವಾಗಿದೆ ಎಂದೂ ಹೇಳಿ, ಪ್ರಜೆಗಳ ಪರವಾಗಿ ಮ|| ವರದಾಚಾರ್ಯರ ಕಲಗ್ಗೆಗೆ ನಪ್ರಮುಚಿತವಾದ ಭಂಗಾರದ ತೋಡಾವನ್ನು ಹಾಕಿ ಮರ್ಯಾದೆಮಾಡಿದ ಬಳಿಕ ಅದೇ ಕಂಪನಿಯ ಮ|| ಕೃಷ್ಣಮೂರ್ತಿಯವರಿಗೆ ಒಂದು ಭಂಗಾರದ ಮೆಡಲನ್ನು ಸಭಿಕರ ಪರವಾಗಿ ಕೊಟ್ಟು ಸಂತೋಷಪಡಿಸಿದರು. ತರುವಾಯ ಮ|| ಎ. ವಿ. ವರದಾಚಾರ್ಯರು ಸರ್ದಾರ್ ಕಾಂತರಾಜೆ ಅರಸಿನವರನ್ನೂ ಪುರಜನರನ್ನೂ ಅತ್ಯಂತ ವಿನಯದಿಂದಲೂ ಕೃತಜ್ಞತಾ ಪೂರ್ವಕವಾಗಿಯೂ ವಂದನೆಮಾಡಿದರು. ಸಭಿಕರು ಶ್ರೀಮನ್ ಮಹಾರಾಜರವರಿಗೆ ವಿಜಯವಾಗಲೆಂದು ಉದ್ಘೋಷಿಸಿ ಸಂತೋಷಕೂಟವನ್ನು ಮುಕ್ತಾಯಮಾಡಿದರು.

ಶ್ರೀರಂಗಪಟ್ಟಣದ ಕಾರ್ಪೋರೇಷನ್ ಬಿಲ್ಡಿಂಗ್ ಫಂಡು

ಚಂದಾ ಪಟ್ಟಿ

ಹೊಸಹಳ್ಳಿ ಪ ಸಿದ್ದೇಗೌಡ, ಚಿಕ್ಕಹಾರುಹಳ್ಳಿ ನಂಗೇಗೌಡ, ಚಿಕ್ಕ ಹಾರುಹಳ್ಳಿ ಪ ಬಾಚ್ಚಿಗೌಡ, ಪ ಚನ್ನೇಗೌಡ, ಪ ಬುಂಚೇಗೌಡ, ಅರಕೆರೆ ಪ ಬೋರೇಗೌಡ, ಗಕಳಹಳ್ಳಿ ಪ ಬೋರೇಗೌಡ, ಕಿರಂಗೂರು ಪ ಕುಳ್ಳಯ್ಯ, ಟಿ ರಂಗಾಚಾರ್, ಗಂಜಾಂ ಜವಳಿ ಅಂಗಡಿ ಹಾಜಿ ಸಿಕ್ಕೆ ಅಲ್ಲಿ ಸಾಬ್, ಗಂಜಾಂ ಜವಳಿ ಅಂಗಡಿ ಚೌಡಪ್ಪ, ಹೆಳವೇಗೌಡನ ಮಗ ಸಿದ್ದಲಿಂಗೇಗೌಡ, ಬಿದರಹಳ್ಳಿ ಪ ನಂಗೇಗೌಡ, ತಿಮ್ಮಶೆಟ್ಟಿ, ನಾರಾಯಣರಾವ್, ಸಿದ್ದೇಗೌಡನ ಚಿಕ್ಕೇಗೌಡ, ಪ ಮರಿಗೌಡ, ಪೊಳೆಗೌಡನ ಚಿಕ್ಕೇಗೌಡ, ವೆಂಕಟರಮಣಗೌಡ, ಡಾ ಗೋಪಾಲ ಕೃಷ್ಣಯ್ಯ, ಪ ನಾರನಪ್ಪನವರು, ಚನ್ನಮ್ಮನ ದಾಸೇಗೌಡ, ಮರಿದೇವರು ತಿಮ್ಮೇಗೌಡ, ಚ ಮರಾಮೇಗೌಡ, ಚನ್ನೇಗೌಡ, ಬಂಗಾಳಿ ಫಾತ ಮ್ರಿ ಸಾಹೇಬ್, ಸಿಂಗೇಗೌಡರ ಮಾದೇಗೌಡ, ಪ ಕುಳ್ಳದ್ಯಾವೇಗೌಡ, ಕವರೇಗೌಡ, ಬೋರೇಗೌಡ, ದಾಸೇಗೌಡ, ಗುಂಟೇಗೌಡ, ಸಿದ್ದೇಗೌಡ, ಅಣ್ಣಯ್ಯ, ಚಿನ್ನಹಳ್ಳಿ ಚನ್ನಯ್ಯ, ಮಾದೇಗೌಡ, ಪ ಚನ್ನೇಗೌಡ, ಚನ್ನಾಜ ಬೋರೇಗೌಡ, ಚಿಕ್ಕದ್ಯಾವೇಗೌಡ, ಕಾರೇಪುರದ ಸಿದ್ದೇಗೌಡ, ಸುಬ್ಬಣ್ಣನ ಸಿದ್ದಯ್ಯ, ಪ ಮಲ್ಲೇಗೌಡ, ಪ ನಂಜೇಗೌಡ, ನೇರಳಕೆರೆ ವೆಂಕಟರಮಣಶೆಟ್ಟಿ, ನಾಲಿನಕೊಪ್ಪಲ್ ಪ ಸಿದ್ದಯ್ಯ ಉರಫ್ ತಿಮ್ಮಯ್ಯ ತಲಾ ರೂ 5 ... ರೂ 125-0-0

ಶ್ರೀರಂಗಪಟ್ಟಣ, ತಾ. 31 3 1911 — ಎ. ದೇವಾಜಿರಾವ್, ಸೆಕ್ರೆಟರಿ

ದಿವಾನರವರ ಸರ್ಕೀಟು.

ಅರಸೀಕೆರೆ

ತಾ 14 ನೇ ಭಾನುವಾರ ಶ್ರೀಮಾನ್ ದಿವಾನ್ ವಿಶ್ವೇಶ್ವರಯ್ಯನವರ ಸವಾರಿಯು ಹಾಸನದ ಮಾರ್ಗವಾಗಿ ಬಿತ್ತರಿಸಾದವೊಡನೆ ಡೆಪ್ಯುಟಿ ಕಮಿಷನರ್ ಮಿ ವೆದರಾಲ್ ಸಾಹೇಬರೊಡನೆ ಅರಸೀಕೆರೆಗೆ ದಯಮಾಡಿಸಿತು. ಅಮಲ್ದಾರರವರು ಮ್ಯುನಿಸಿಪಲ ಕಮಿಷನರುಗಳು, ವರ್ತಕ ಮಹಾಜನರು ಸ್ಥಳೀಯ ದೊಡ್ಡ ಮನುಷ್ಯರು ಆಫೀಸರುಗಳು ಇವರುಗಳೊಡನೆ ಹಾಸನದ ರೋಡಿನಲ್ಲಿ ಕಟ್ಟಿಸಿದ್ದ ಚಪ್ಪರದಲ್ಲಿ ಕಾದಿದ್ದು ಶ್ರೀಮಂತರಿಗೆ ಸುಸ್ವಾಗತವನ್ನು ಬಯಸಿ ಮರ್ಯಾದೆಗಳನ್ನು ನಡೆಸಿದರು. ನಂತರ ದಿವಾನರವರು ಮ್ಯುನಿಸಿಪಲ್ ಬಂಗಲೆಗೆ ಚಿತ್ತೈಸಿ ಸ್ವಲ್ಪ ಹೊತ್ತಿನೊಳಗಾಗಿ ಸ್ಥಳೀಯ ಅಧಿಕಾರಿಗಳು ಮತ್ತು ದೊಡ್ಡ ಮನುಷ್ಯರುಗಳೊಂದಿಗೆ ಟವನ್ನಿಗೆ ದಯಮಾಡಿಸಿದರು. ಮ ಟಿ ವೆಂಕಟಪ್ಪನವರು ಕಟ್ಟಿಸುತ್ತಿರುವ ಕಾಟನ್ ಪ್ರೆಸ್ ಪಾರ್ಕ್ ಮತ್ತು ಅದರೊಳಗಿನ ಭಾವಿಯನ್ನು ಪರಾಂಬರಿಸಿ ನಾ ಚೌಡಪ್ಪನವರೊಡನೆ ಕೆಲವು ಹೊತ್ತು ಮಾತನಾಡಿ ಮುಂದೆ ಮುನ್ಸಿಪಾಲಿಟಿಗೆ ಸೇರಿದ ಅಲ್ಲಿ ಹಾಕಿದ್ದ ಚಪ್ಪರದೊಳಗೆ ಕುಳಿತು ಮಹಾಜನರು ಕೊಟ್ಟ ಮಾನಪತ್ರವನ್ನು ಸ್ವೀಕರಿಸಿ ಸನ್ಮಾನಿತರಾಗಿ ಸ್ವ ಸ್ಥಾನಕ್ಕೆ ಹೊರಟರು. ಮ್ಯುನಿಸಿಪಲ್ ಕಮಿಷನರುಗಳ ವಿನಂತಿ — ಈ ಊರಿಗೆ ನೀರಿನ ಸೌಕರ್ಯ ಇಲ್ಲ. ಬೇಸಿಗೆ ದಿನಗಳಲ್ಲಿ ಜನಗಳೂ ದನಕರುಗಳೂ ಬಹಳವಾಗಿ ತಲ್ಲಣಿಸುವರು. ಈ ಊರಿನ ಮ್ಯುನಿಸಿಪಾಲಿಟಿಯಲ್ಲಿ ಕೆಲವು ವರುಷಗಳ ಕೆಳಗೆ ಸುಮಾರು 11 ಸಾವಿರ ರೂಪಾಯಿ ರಿಜರ್ವ್ ಇತ್ತು. ಈ ಪೈಕಿ ಸುಮಾರು 7000 ರೂಪಾಯನ್ನು ಅರಸೀಕೆರೆ ದೇವಸ್ಥಾನದ ಬಳಿ ಇರುವ ಕೆರೆಯಿಂದ ಸಂತೆಮಾಳಕ್ಕೆ ನಲ್ಲಿಗಳ ಮೂಲಕ ನೀರು ತಂದು ಒದಗಿಸಲು ಖರ್ಚುಮಾಡಿತು. ಹಾಕಿದ ನಲ್ಲಿಗಳು ಹಾಳಾಗಿ ಹೋಗಿರುವುದರಿಂದ ಈಗ್ಗೆ ಪ್ರಜೆಗಳು ನೀರಿನ ಕೊರತೆಯನ್ನು ಅನುಭವಿಸುತ್ತಿದ್ದಾರೆ. ಇದನ್ನು ಕಮಿಷನರುಗಳು ಶೀಘ್ರವಾಗಿ ನೀರನ್ನು ಒದಗಿಸಿಕೊಡಲು ಸರ್ಕಾರದವರ ಸಹಾಯ ಆಗಬೇಕು ಎಂದು ಅರಿಕೆ ಮಾಡಿದ್ದಕ್ಕೆ ದಿವಾನರವರು ಆದರಪೂರ್ವಕವಾಗಿ ಅವರನ್ನೆಲ್ಲಾ ಕಾಣಿಸಿ ಇನ್ನು ಎರಡು ತಿಂಗಳೊಳಗೆ ಈ ಊರಿಗೆ ಸದರಿ ನಲ್ಲಿಗಳ ಮೂಲಕ ನೀರು ಸರಬರಾಯಿ ಆಗತಕ್ಕದ್ದೆಂಬದಕ್ಕೆ ಭರವಸೆಯನ್ನು ದಯಪಾಲಿಸಿ ಡೆಪ್ಯುಟಿ ಕಮಿಷನರವರಿಗೂ ಸದರಿ ವಿಷಯ ಅಪ್ಪಣೆಕೊಟ್ಟು ಅದೇ ದಿನ ರಾತ್ರಿ ಬೆಂಗಳೂರಿಗೆ ದಯಮಾಡಿಸಿದರು. ಶ್ರೀಮಾನ್ ದಿವಾನರವರ ಪರಹಿತಚಿಂತನೆಯನ್ನು ಕುರಿತು ಜನರೆಲ್ಲಾ ಸ್ತೋತ್ರಮಾಡುತ್ತಿದ್ದಾರೆ.

ಮಂಜರಾಬಾದು ತಾ॥ ದೋಣಿಗಾಲ್

ಮೈಸೂರು ಸಂಸ್ಥಾನದ ಮಹಾರ್ ದಿವಾನ್ ಸಾಹೇಬರವರಾದ ಶ್ರೀಮಾನ್ ಎಂ ವಿಶ್ವೇಶ್ವರಯ್ಯ, ಸಿ ಐ ಇ ಯವರ ಸವಾರಿಯು ತಾ॥ 14 ನೆ ಮಂಗಳವಾರ ಸಾಯಂಕಾಲ ಮೂಡಗೆರೆ ಮಾರ್ಗವಾಗಿ ಸಕಲೇಶಪುರಕ್ಕೆ ಚಿತ್ತೈಸಿದ ಒಡನೆಯೇ ಹಾಸನ್ ಡಿಸ್ಟ್ರಿಕ್ಟ್ ಕಮಿಷನರ್ ಮಿ ಸಿ ಆರ್ ಡಬ್ಲ್ಯು ವೆದರಾಲ್ ಸಾಹೇಬರವರೇ ಮುಂತಾದ ಎಲ್ಲಾ ಇಲಾಖಾ ಆಫೀಸರುಗಳು ಮತ್ತೂ ದೇಶೀಯ ಪ್ಲಾಂಟರುಗಳು ಮುಂತಾದವರು ಎದುರುಗೊಂಡು ಹಾರ ತುರಾಯಿಗಳನ್ನರ್ಪಿಸಿ ಕುಶಲ ಪ್ರಶ್ನೆಗಳು ಜರುಗಿದನಂತರ ಶ್ರೀಯುವರ ಸವಾರಿಯು ಟ್ರಾವಲರ್ಸ್ ಬಂಗ್ಲೆಗೆ ಚಿತ್ತೈಸಿತು. ತಾ॥ 15ನೆ ಬೆಳಗಿನ 8 ಘಂಟೆಗೆ ದಿವಾನ್ ಸಾಹೇಬರವರು ಮಿ॥ ವೆದರಾಲ್ ಸಾಹೇಬರವರೇ ಮುಂತಾದ ಆಫೀಸರುಗಳೊಡನೆ ಮಂಜರಾಬಾದು ಕೋಟೆಗೆ ದಯಮಾಡಿಸಿದರು. ಆಗ್ಗೆ ದೋಣಿಗಾಲ್ ಕಾಫಿ ಪ್ಲಾಂಟರು ಮ್ಯ ಬಿ ಶಾಂತ ಮಲ್ಲೇಗೌಡರು ಮತ್ತು ಇವರ ಸಹೋದರರಾದ ಮ ಬಿ ನಂಜೇಗೌಡರು ಕೋಟೆ ಬಳಿ ಬಹು ಸುಂದರವಾಗಿ ಅಲಂಕಾರ ಮಾಡಿಸಿದ್ದ ಮಂಟಪದ ಬಳಿ ಸಕಲೇಶಪುರದ ಸಬ್ ಡಿವಿಜನ್ ಆಫೀಸರ್ ಮಿ॥ ಬಿ ನಾಗಪ್ಪನವರು ದೋಣಿಗಾಲ್ ಸ್ಕೂಲ್ ಬಾಲಕಬಾಲಕಿಯರಿಂದ ಮಲ್ಲೇಗೌಡ ಸಹೋದರರುಗಳು ಪ್ರಮುಖರೊಡನೆ ಮಂಗಳವಾದ್ಯ ಮರ್ಯಾದೆಗಳೊಡನೆ ಕಾದಿದ್ದು ಸವಾರಿ ಚಿತ್ತೈಸಿದೊಡನೆ ಶ್ರೀಯುತರಿಗೆ ಬಾಲಕ ಬಾಲಕಿಯರಿಂದ ಪ ಶ್ರೀಯುತರ್ಗೆ ಮಂಗಳವಾದ್ಯರು ವಲ್ಲಿ ಹಾರ ತುರಾಯಿ ಒಪ್ಪಿಸಿದ್ದನ್ನು ಬಹು ವಿಶ್ವಾಸದಿಂದ ಸ್ವೀಕರಿಸಿ ಕುಶಲ ಪ್ರಶ್ನೆಯನ್ನು ಬೆಳಸುತ್ತಾ ಮಾರ್ಗದ ಬಳಿ ಒಡನೆ ಸ್ಕೂಲ್ ಬಾಲಕ ಬಾಲಕಿಯರನ್ನು ವಿಶ್ವಾಸದಿಂದ ಕಂಡು ಸಂತೋಷವನ್ನು ಹೇಳಿ ಕೋಟೆಗೆ ದಯಮಾಡಿದರು. ಅಲ್ಲಿ ನೋಡತಕ್ಕ ಸ್ಥಳಗಳನ್ನೆಲ್ಲಾ ಪರಾಂಬರಿಸಿ, ಆಫೀಸರುಗಳೊಡನೆ ಮತ್ತು ನಂಜೇಗೌಡರಿಂದಲೂ ಕೆಲವು ಪ್ರಶ್ನೆಗಳನ್ನು ಕೇಳಿ ಸ್ಥಳೀಯ ಪ್ರಜೆಗಳು ಕಷ್ಟವು ಆಗುವದಕ್ಕೂ, ಕಮ್ಮಿ ವಯಸ್ಸಿನಲ್ಲಿ ಮೃತಪಡುವದಕ್ಕೂ ಕಾರಣವೇನಿರಬಹುದೆಂದು ಮುಂತಾದ ಅನೇಕ ವಿಷಯಗಳನ್ನು ಪ್ರಶ್ನೆಗೈದರು. ಅದಕ್ಕೆಲ್ಲಾ ಪ್ಲಾಂಟರುಗಳು ಮುಂತಾಗಿ ತಕ್ಕ ಉತ್ತರವನ್ನು ಅರಿಕೆ ಮಾಡಿದ ನಂತರ ದಿವಾನರವರು ಪಾಪಕ್ಷೋಪವಾಗುತ್ತಿರುವಲ್ಲಿ ಕೆಳಕ್ಕೆ ಮಂಟಪದ ಬಳಿಗೆ ದಯಮಾಡಿ ಮುದ್ದಾಗಿ ಅನಾಥ ಬಾಲಕರನ್ನೂ ಬಡಜನರನ್ನೂ ಬಹು ಕನಿಕರದಿಂದ ಊಟ ಕಡಿ ಬಟ್ಟೆ ಮುಂತಾದ್ದು ಯಾವ ರೀತಿ ಉಪಯೋಗಿಸುತ್ತೀರೆಂದು ಕೇಳಿ ಬಡವರ ವಿಷಯದಲ್ಲಿ ಬಹಳ ಕನಿಕರಪಟ್ಟು ಅನಾಥ ಮಕ್ಕಳಿಗೆ ದ್ರವ್ಯರೂಪವಾದ ಬಹುಮಾನವನ್ನು ದಯಪಾಲಿಸಿ ಸಹೋದರುಗಳು ಮಾಡಿದ ಮರ್ಯಾದೆ ಉಪಚಾರ ಮುಂತಾದ್ದನ್ನು ಅಂಗೀಕರಿಸಿ ಗುಡ್ಡ ಬೆಟ್ಟಗಳನ್ನು ಪರಾಂಬರಿಸಿ ವಾಪಸು ದೋಣಿಗಾಲ್ ಗ್ರಾಮದ ಬಳಿ ಮ॥ ಬಿ ಶಾಂತಮಲ್ಲೇಗೌಡರು ಮ॥ ಬಿ ನಂಜೇಗೌಡರೊಡನೆ ಕುಶಲ ಪ್ರಶ್ನೆಯಂ ಬೆಳಸಿ ದಿವಾನರವರು ಆತ್ಮಾನಂದದೊಡನೆ ಸಕಲೇಶಪುರಕ್ಕೆ ಪ್ರಯಾಣಮಾಡಿದರು. ಸಬ್ ಡಿವಿಜನ್ ಆಫೀಸರ್ ಮಿ॥ ನಾಗಯ್ಯನವರೂ ಅಮಲ್ದಾರ್ ಮ॥ ಎಸ್ ಗೋಪಾಲಕೃಷ್ಣಯ್ಯಂಗಾರ್ಯರೂ ಸಮಸ್ತ ವಿಷಯದಲ್ಲಿಯೂ ಸರಿಯಾದ ಏರ್ಪಾಡು ಮಾಡಿದ್ದು ಬಹು ತೃಪ್ತಿಕರವಾಗಿತ್ತು.

ಮೈಸೂರು ಸರ್ಕಾರ ಹುಕುಮು

ಗವರ್ನಮೆಂಟ್ ಸಹಾಯದ ಬ್ಯಾಂಕಿನ ಏರ್ಪಾಡು

ಸಾಧ್ಯವಾದಮಟ್ಟಿಗೂ ಈ ಸಂಸ್ಥಾನದಲ್ಲಿ ಒದಗುವ ಬಂಡವಾಳವನ್ನೇ ಉಪಯೋಗಿಸಿ ಸಂಸ್ಥಾನದೊಳಗಣ ವ್ಯಾಪಾರವನ್ನೂ ಕೈಗಾರಿಕೆಗಳನ್ನೂ ಅಭಿವೃದ್ಧಿಪಡಿಸುವುದಕ್ಕಾಗಿ ಬ್ಯಾಂಕಿನ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂಬ ವಿಷಯವು ಕೆಲವು ಕಾಲದಿಂದಲೂ ಶ್ರೀಮನ್ಮಹಾರಾಜಾಸಾಹೇಬ್ ಬಹದ್ದೂರವರ ಸರ್ಕಾರದವರ ಪರ್ಯಾಲೋಚನೆಯಲ್ಲಿತ್ತು. ಮೈಸೂರು ಸೀಮೆಯಲ್ಲಿ ಸರ್ಕಾರದ ಸಹಾಯವನ್ನು ಪಡೆದ ಒಂದು ಬ್ಯಾಂಕನ್ನು ಸ್ಥಾಪಿಸುವ ವಿಷಯವನ್ನು ಕಾನ್ಫರೆನ್ಸಿನ ಕೈಗಾರಿಕೆ ಮತ್ತು ವ್ಯಾಪಾರ ಕಮಿಟಿಯವರು 1911 ನೆಯ ಇಸವಿಯ ದಸರಾ ಕಾಲದಲ್ಲಿ ಕಾನ್ಫರೆನ್ಸ್ ಸೇರಿದಾಗ ಎಕನಾಮಿಕ್ ಕಾನ್ಫರೆನ್ಸಿನವರ ಅವಧಾನಕ್ಕೆ ತರಲ್ಪಟಿತು. ಈ ವಿಷಯವು ಕಾನ್ಫರೆನ್ಸಿನಲ್ಲಿ ಚರ್ಚಿಸಲ್ಪಟ್ಟು, ತರುವಾಯ ಕೈಗಾರಿಕೆ ಮತ್ತು ವ್ಯಾಪಾರ ಕಮಿಟಿಯ ಮೆಂಬರುಗಳೂ ಸರ್ಕಾರದ ಕಂಟ್ರೋಲರೊಡಗೂಡಿದ ಮೂರು ಮಂದಿ ದೊಡ್ಡ ಮನುಷ್ಯರೂ ಉಳ್ಳ ಒಂದು ಸ್ಪೆಷಲ್ ಕಮಿಟಿಯವರ ಪರ್ಯಾಲೋಚನೆಗೆ ಕಳುಹಿಸಲ್ಪಟ್ಟಿತು. ಸದರಿ ಸ್ಪೆಷಲ್ ಕಮಿಟಿಯವರು ಅದನ್ನು ಅನುಕೂಲವಾಗಿ ಪರ್ಯಾಲೋಚಿಸಿ ತರುವಾಯ ಜಾರಿಗೆ ತರುವುದಕ್ಕೆ ಸಾಧ್ಯವಾದ ಒಂದು ಕ್ರಮವನ್ನು ಏರ್ಪಡಿಸಿ 1912 ನೆಯ ಜೂನ್ ನಲ್ಲಿ ಸೇರಿದ ಕಾಲದಲ್ಲಿ ಎಕನಾಮಿಕ್ ಕಾನ್ಫರೆನ್ಸಿನವರಿಗೆ ಕಳುಹಿಸಿಕೊಟ್ಟರು. (2) ಸರ್ಕಾರದ ಸಹಾಯವನ್ನು ಪಡೆದ ಒಂದು ಬ್ಯಾಂಕು ಅವಶ್ಯಕವೆಂಬುದನ್ನು ನಿರ್ಧರಿಸುವುದರಲ್ಲಿ ಕಾನ್ಫರೆನ್ಸಿನವರು ಸದರಿ ಬ್ಯಾಂಕಿಗೆ ಸರ್ಕಾರದವರು ಇಸದಿ ಕಂಡ ರಿಯಾಯಿತಿಗಳನ್ನು ತೋರಿಸಬೇಕೆಂದು ಶಿಫಾರಸು ಮಾಡುತ್ತಾರೆ —ಸಾಕಷ್ಟಾದ ಬಂಡವಾಳದ ಮೊಬಲಗಿನ ಪೈಕಿ ಕನಿಷ್ಟಪಕ್ಷ ಅರ್ಧಪಾಲಿನಷ್ಟು ಹೂಡಲಗನ್ನು ಬಡ್ಡಿ ಇಲ್ಲದೆಯೂ, ಬ್ಯಾಂಕಿನವರು ಅಪೇಕ್ಷಿಸಿದರೆ 5 ಲಕ್ಷ ರೂಪಾಯಿನ ಮತ್ತೂ ಮೊಬಲಗನ್ನು ನ್ಯಾಯವಾದ ದರದ ಬಡ್ಡಿಯುಮೇಲೆಯೂ ಸರ್ಕಾರದವರು ಬ್ಯಾಂಕಿನಲ್ಲಿ ಇಡಬೇಕು, ಈ ಮೊಬಲಗಿಗೆ ಬಾರಿಧ ಕೇವಲ ಹಣವು ಯಾವುದಂದರೂ ಇದರ ಅವರಮೇಲೆ ಕೊಡತಕ್ಕ ಬಡ್ಡಿಯ ದರವನ್ನೂ, ಸರ್ಕಾರದವರೂ ಬ್ಯಾಂಕಿನವರೂ ಕಿಂಚಾದೋವಿ ನಡಿಸುವುದಕ್ಕೆ ಅವಶ್ಯಕವಾದ ಇತರ ಷರತ್ತುಗಳನ್ನೂ ಮೂರು ವರ್ಷಗಳಿಗೆ ಒಂದುಸಾರಿ ಏರ್ಪಾಟು ಮಾಡಬಹುದು. ಬ್ಯಾಂಕಿನ ಆಡಳಿತವನ್ನು ನಡಿಸುವುದಕ್ಕೆ ತಗಲುವ ಖರ್ಚಿನಲ್ಲಿ ಅರ್ಧವನ್ನು ಸರ್ಕಾರದವರು ಮೊದಲು ಐದು ವರ್ಷಗಳ ವರೆಗೆ ಕೊಡತಕ್ಕದ್ದು, ಬ್ಯಾಂಕಿನ ಶಾಖೆಗಳು ಎಲ್ಲೆಲ್ಲಿ ಏರ್ಪಡಿಸಲ್ಪಡುತ್ತವೆಯೋ ಅಲ್ಲೆಲ್ಲಾ ಬ್ಯಾಂಕಿನವರು ಸಾಧ್ಯವಾದಮಟ್ಟಿಗೂ ಖಜಾನೆಯ ಕೆಲಸವನ್ನು ನಡೆಸಲು ಅವಕಾಶವನ್ನು ಕೊಡಬೇಕು. ಸರ್ಕಾರದವರು ತಮ್ಮ ನಾಡಿನಮೇಲೆ ಬಿಡ್ಡಯನ್ನು ಪಡೆಯಲ್ಪಡಬೇಕಾದಾಗ ಆ ಕೆಲಸವನ್ನು ಮಾಡುವುದಕ್ಕೆ ಇತರರಿಗಿಂತ ಮೊದಲು ಬ್ಯಾಂಕಿನವರಿಗೆ ಅವಕಾಶವನ್ನು ಕೊಡಬೇಕು. ಕಳವು, ಉಪೇಕ್ಷೆ ಮಾಡಲಾದವುಗಳಿಂದುಂಟಾಗುವ ನಷ್ಟಕ್ಕೆ ಗುರಿ ಮಾಡದೆಯೇ ಮೈಸೂರು ಸೀಮೆಯೊಳಗೆ ಖಜಾನೆ ಹಣದಯವರನ್ನು ಸರ್ಕಾರದವರು ಧಾರ್ಜಿಲ್ಲದೆಯೇ ಒದಗಿಸಿಕೊಡಬೇಕು, ರೈಲ್ವೆ ಇಲಾಖೆಯ ಸ್ಥಳಕ್ಕೆ ಖರ್ಚು ತೆಗೆದುಕೊಳ್ಳದೆ ಪಹರೆಯನ್ನು ಸರ್ಕಾರದವರು ಕೊಡಬೇಕು, ಮುನಿಸಿಪಲ್ ಮತ್ತು ಡಿಸ್ಟ್ರಿಕ್ಟ್ ಫಂಡುಗಳ ಶಿಲ್ಕುಗಳನ್ನು ಬ್ಯಾಂಕಿನಲ್ಲಿಡಬೇಕು. ಲೆಕ್ಕವನ್ನು ತನಿಖೆಮಾಡಿ ಸರ್ಕಾರಕ್ಕೆ ರಿಪೋರ್ಟುಮಾಡುವುದಕ್ಕಾಗಿ ಪ್ರತಿ ವರ್ಷವೂ ಖರ್ಚಿಲ್ಲದೆ ಒಬ್ಬ ಆಡಿಟರನ್ನು ಸರ್ಕಾರದವರು ನೇಮಕಮಾಡಬೇಕು. (3) ಈ ವಿಷಯವನ್ನು ಸಂಪೂರ್ಣವಾಗಿ ಪರ್ಯಾಲೋಚಿಸಿ ನೋಡಿದ ತರುವಾಯ ಶ್ರೀಮನ್ ಮಹಾರಾಜರವರ ಸರ್ಕಾರದವರು ಮೈಸೂರು ಬ್ಯಾಂಕ್ ಎಂದು ಕರೆಯಲ್ಪಡುವ ಸರ್ಕಾರದ ಸಹಾಯವನ್ನು ಪಡೆದ ಒಂದು ಬ್ಯಾಂಕನ್ನು ಮುಂದೆ ಸಲಹೆಮಾಡಲ್ಪಟ್ಟ ರೀತಿಯಲ್ಲಿ ಸ್ಥಾಪಿಸಿ, ಬೆಂಗಳೂರು ಸಿಟಿಯನ್ನು ಅದಕ್ಕೆ ಕಚೇರಿಯನ್ನಾಗಿ ಮಾಡುವುದು ಅಪೇಕ್ಷಣೀಯವೆಂದು ಅಭಿಪ್ರಾಯಪಡುತ್ತಾರೆ. (4) ಬ್ಯಾಂಕು ಪ್ರಾರಂಭವಾದಾಗ ಇದರಡಿ ಕಂಡ ರಿಯಾಯಿತಿಗಳನ್ನು ಕೊಡಲು ಸರ್ಕಾರದವರು ಹುಕುಂ ದಯಪಾಲಿಸಿರುತ್ತಾರೆ —ಸರ್ಕಾರದವರು ಪಾವತಿಯಾದ ಬಂಡವಾಳದ ಮೊಬಲಗಿನ ಪೈಕಿ ಕನಿಷ್ಟಪಕ್ಷ ಅರ್ಧಪಾಲಿನಷ್ಟು ಮೊಬಲಗನ್ನು 5 ಲಕ್ಷ ರೂಪಾಯಿಗಳಿಗೆ ಮೀರದಂತೆ 10 ವರ್ಷಗಳ ವರೆಗೆ ಬಡ್ಡಿ ಇಲ್ಲದೆ ಇಡತಕ್ಕದ್ದು, ಮತ್ತು ಬ್ಯಾಂಕಿನವರು ಅಪೇಕ್ಷಿಸಿದರೆ ಅದರಷ್ಟೇ ಮತ್ತೊಂದು ಮೊಬಲಗನ್ನು ನ್ಯಾಯವಾದ ಬಡ್ಡಿಯಮೇಲೆ ಎಂದರೆ ಸಾಲಿಯಾನಾ ಶೇಕಡಾ 1 ಕ್ಕೆ ಕಮ್ಮಿಯಿಲ್ಲದ ದರದ ಬಡ್ಡಿಯಮೇಲೆ ಠೇವಣಿ ಇಡತಕ್ಕದ್ದು. ಬ್ಯಾಂಕಿನ ಆಡಳಿತವನ್ನು ನಡಿಸುವುದಕ್ಕೆ ತಗಲುವ ಖರ್ಚನ್ನು ಮೊದಲಿನ ಐದು ವರ್ಷಗಳ ವರೆಗೆ ಸರ್ಕಾರದವರು ಕೊಡತಕ್ಕದ್ದು. ಹಾಗೆ ಕೊಡತಕ್ಕ ಕಂಟ್ರಿಬ್ಯೂಷನ್ ಮೊಬಲಗು ಸಾಲಿಯಾನಾ 10,000 ರೂಪಾಯಿಗೆ ಮೀರಕೂಡದು. ಒಂದುವೇಳೆ ಬ್ಯಾಂಕಿನ ಆಡಳಿತವನ್ನು ನಡಿಸುವುದಕ್ಕೆ ತಗಲುವ ಖರ್ಚನ್ನು ಸಾಲಿಯಾನಾ 20,000 ರು ಸಾಮಿಗೆ ಮೀರುವಂತೆ ಹೆಚ್ಚಿಸಬೇಕಾದರೆ ಸರ್ಕಾರದಿಂದ ಸ್ಪೆಷಲ್ ಮಂಜೂರಾತಿಯನ್ನು ಪಡೆಯತಕ್ಕದ್ದು. ಆಗಿಂದಾಗ ನಿರ್ಧರಿಸಲ್ಪಡುವಂತಹ ಖಜಾನೆಯ ಕೆಲಸವನ್ನು ಬ್ಯಾಂಕಿನವರು ಡಿಸ್ಟ್ರಿಕ್ಟ್ ಕಸಬೆಗಳಲ್ಲಿಯೂ, ಸರ್ಕಾರದವರು ಮಂಜೂರುಮಾಡಬಹುದಾದ ಇತರ ಸ್ಥಳಗಳಲ್ಲಿಯೂ ನಡೆಯಿಸಲು ಅವಕಾಶವನ್ನು ಕೊಡತಕ್ಕದ್ದು, ಸರ್ಕಾರದವರು ಇನ್ನು ಮುಂದೆ ಕೊಂಡುಕೊಳ್ಳಬಹುದಾದ ಸೆಕ್ಯೂರಿಟಿಗಳನ್ನು ಹೊರಡಿಸುವದರಲ್ಲಿ ಸಾಧ್ಯವಾದಮಟ್ಟಿಗೂ ಇತರರಿಗಿಂತಲೂ ಮೊದಲು ಬ್ಯಾಂಕಿನವರಿಗೆ ಅವಕಾಶವನ್ನು ಕೊಡತಕ್ಕದ್ದು, ಮೈಸೂರು ಸಂಸ್ಥಾನದೊಳಗಿರುವ ಸ್ಥಳಗಳ ಖಜಾನೆ ಪಹರೆಯವರನ್ನು ಸರ್ಕಾರದವರು ಒದಗಿಸಿಕೊಡತಕ್ಕದ್ದು, ಪೊಲೀಸ್ ಇಲ್ಲದ ಸ್ಥಳದಿಂದ ಸ್ಥಳಕ್ಕೆ ಹಣ ಸಾಗಿಸುವಾಗ ಪಹರೆಯನ್ನು ಸರ್ಕಾರದವರು 5 ವರ್ಷಗಳ ವರೆಗೆ ಖರ್ಚಿಲ್ಲದೆಯೂ, ಅನಂತರ ನ್ಯಾಯವಾದ ಖರ್ಚನ್ನು ತೆಗೆದುಕೊಂಡೂ ಕೊಡತಕ್ಕದ್ದು. ಆದರೆ ಕಳವು, ಉಪೇಕ್ಷೆ ಮುಂತಾದವುಗಳಿಂದಾಗುವ ನಷ್ಟಕ್ಕೆ ಸರ್ಕಾರದವರು ಗುರಿಯಾಗತಕ್ಕದ್ದಿಲ್ಲ.

(5) ಇದಕ್ಕೆ ಪ್ರತಿಯಾಗಿ ಬ್ಯಾಂಕಿನವರು ಇದರಡಿ ಕಂಡ ಷರತ್ತುಗಳಿಗೆ ಒಪ್ಪತಕ್ಕದ್ದು. ಮೇಲ್ಕಂಡ ಪ್ಯಾರಾಗಳಲ್ಲಿ ನಮೂದಿಸಲ್ಪಟ್ಟ ರಿಯಾಯಿತಿಗಳು ಈ ಷರತ್ತುಗಳು ನೆರವೇರಿಸಲ್ಪಡುವ ವರೆಗೆ ಮಾತ್ರವೇ ನಡೆಯತಕ್ಕವು. ಬ್ಯಾಂಕಿನ ಸಾಧೀನದಲ್ಲಿರುವ ಬಂಡವಾಳದ ಮೊಬಲಗು, ಠೇವಣಿ ಹಣ ಮತ್ತು ಇತರ ಮೊಬಲಗುಗಳು, ಇವುಗಳ ಕನಿಷ್ಟಪಕ್ಷ ಶೇಕಡಾ 50 ರಷ್ಟು ಮೊಬಲಗನ್ನು ಸಿವಿಲ್ ಮಿಲಿಟರಿ ಸ್ಟೇಷನ್ ಬೇರೆಯಾಗಿ ಮೈಸೂರು ಸೀಮೆಯೊಳಗೆ ಉಪಯೋಗಿಸುವುದು, ಇಡುವುದು ಅಥವಾ ಇತರ ವಿಧವಾಗಿ ವಿನಿಯೋಗಿಸುವುದು, ಬ್ಯಾಂಕಿನ ಆಡಳಿತಗಳನ್ನು ನಡೆಸಲು ಬ್ಯಾಂಕಿನ ಕೆಲಸದಲ್ಲಿ ಸರಿಯಾದ ಯೋಗ್ಯತೆಯನ್ನು ಪಡೆದು ಅನುಭವವಿರುವ ಮನುಷ್ಯನನ್ನು ಸರ್ಕಾರದ ಸಮ್ಮತಿಯೊಡನೆ ನೇಮಿಸುವುದು. ಬ್ಯಾಂಕಿನ ಲೆಕ್ಕಗಳನ್ನು ಸರ್ಕಾರದವರ ಮೂಲಕ ನೇಮಕವಾದಲ್ಪಟ್ಟ ಮನುಷ್ಯನಿಂದ ವರ್ಷಕ್ಕೊಂದು ಸಾರಿ ಅಥವಾ ಹೆಚ್ಚು ಸಾರಿ ಆಡಿಟ್ ಮಾಡುವುದು ಮತ್ತು ಎಲ್ಲಾ ಸಮಾಚಾರಗಳನ್ನೂ ವಿವರಗಳನ್ನೂ ಸಾಧ್ಯವಾದ ಮಟ್ಟಿಗೂ ಜಾಗ್ರತೆಯಾಗಿ ಸರ್ಕಾರದವರಿಗೆ ಒದಗಿಸಿಕೊಡುವುದು ಮತ್ತು ಎಲ್ಲಾ ಲೆಕ್ಕಗಳನ್ನೂ, ಕಾಗದಪತ್ರಗಳನ್ನೂ, ಸೆಕ್ಯೂರಿಟಿಗಳನ್ನೂ ಮತ್ತು ಸರ್ಕಾರದವರು ಕೇಳತಕ್ಕ ಬ್ಯಾಂಕಿನ ಇತರ ಸ್ವತ್ತನ್ನೂ ಅಂಥಾ ವಿಷಯ ಅವಲೋಕಿಸಿ ಮಾಡತಕ್ಕ ಬಗ್ಗೆ ಹಾಜರುಪಡಿಸುವುದು. ಪ್ರತಿ ವರ್ಷ ಆಧ್ಯಕ್ಷನ ವರದಿಯೊಡನೆ ಸರ್ಕಾರದವರ ಮಂಜೂರಾತಿಯನ್ನು ಪಡೆಯುವುದು. ಸರ್ಕಾರದವರು ಅಪೇಕ್ಷಿಸಬಹುದಾದ ಲೆಕ್ಕಗಳನ್ನು ಎಲ್ಲಾ ವಿಷಯಗಳ ಬಗ್ಗೆ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸುವುದು, ಹಾಗೂ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟ ಕಾಯಿದೆಗಳನ್ನು ಕೈಕೊಳ್ಳುವಂತೆ ಪ್ರವರ್ತಿಸಬೇಕು. ... ಖರ್ಚು ನಿರ್ವಹಿಸಿ ತ್ರಿಮಾಸಿಕದ ಆಡಳಿತದ ಪರಿಗಣಿಸುವ ಕಾಲವನ್ನು ಕೊಡದೆ ಇರುವುದು. ಬ್ಯಾಂಕಿನಲ್ಲಿ ಸರ್ಕಾರಕ್ಕೆ ಕೆಲಸಗಳ ಆಡಳಿತದ ವಿಚಾರವಾಗಿಯೂ, ಬ್ಯಾಂಕಿನ ಹಣವನ್ನು ಉಪಯೋಗಿಸುವ ಮತ್ತು ಬಡ್ಡಿಗೆ ಹಾಕುವ ವಿಚಾರವಾಗಿಯೂ ಸರ್ಕಾರದವರು ಕೊಡಬಹುದಾದ ಯಾವ ಬುದ್ಧಿವಾದಕ್ಕೂ ಆಗಿಂದಾಗ್ಗೆ ಗಮನ ಕೊಡುವುದು. (6) ಬ್ಯಾಂಕಿನವರು ಷೇರುಗಳನ್ನು ತೆಗೆದುಕೊಳ್ಳಬಹುದೆಂಬ ಬಗ್ಗೆ ಅವರು ... ನೋಟೀಸು ಮುಂತಾದವುಗಳನ್ನು ಹುಟ್ಟಿಸುವುದಕ್ಕೂ ... ವನ್ನು ಜವಾಬಾರಿ ಮಾಡುವುದಕ್ಕೂ ... ಅವಶ್ಯಕವಾದ ಸನ್ನಾಹಗಳನ್ನು ನಡೆಸುವುದಕ್ಕೂ ಸರ್ಕಾರವು ಬ್ಯಾಂಕು ಕಂಪೆನಿಗಳ ನೋಂದಣಿ ಮಾಡುವುದಕ್ಕೂ ಇದರಡಿ ಕಂಡ ದೊಡ್ಡ ಮನುಷ್ಯರುಗಳು ಪ್ರತಿ ಒಬ್ಬರೂ ಕನಿಷ್ಟಪಕ್ಷ 5,000 ರೂಪಾಯಿಗಳ ಬೆಲೆಯುಳ್ಳ ಷೇರುಗಳನ್ನು ತೆಗೆದುಕೊಳ್ಳುವುದಾಗಿ ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದರಿಂದ ಇವರುಗಳನ್ನು ಪ್ರೊವಿಷನಲ್ ಡೈರೆಕ್ಟರುಗಳನ್ನಾಗಿ ಮಾಡಲಾಗಿದೆ. ಉಪಸಲ್ಲಿ ಬೇಕಾಗುವ ಖರ್ಚನ್ನು ಪ್ರೊವಿಷನಲ್ ಡೈರೆಕ್ಟರುಗಳು ತಾವುಗಳೇ ಕೊಡಬೇಕಾಗಿರುತ್ತದೆ. ಬ್ಯಾಂಕು ಏರ್ಪಾಟಾದ ಮೇಲೆ ಅವರು ಆ ಮೊಬಲಗನ್ನು ಷೇರುಗಳ ಮೂಲಕವಾಗಿಯಾಗಲಿ ಅಥವಾ ನಗದಾಗಿಯಾಗಲಿ ವಸೂಲು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. ಇದಲ್ಲದೆ ಅವರುಗಳು ಸರ್ಕಾರದವರ ಮೆಂಬರುಗಳಿಗೆ ಕೊಡಬಹುದೆಂದು ಸಮ್ಮತಿಸಿಟ್ಟು ಸರ್ಕಾರದವರು ಅಂಗೀಕರಿಸಲ್ಪಟ್ಟಿಷ್ಟು ಪಾರಿತೋಷಕದ್ರವ್ಯ ಪಡೆಯಬಹುದು. ಸದರಿ ದೊಡ್ಡ ಮನುಷ್ಯರು ಯಾರೆಂದರೆ —ರಾಜಸಭಾ ಭೂಷಣ ದಿವಾನ್ ಬಹದ್ದೂರ್ ಮಿ ಕೆ ಪಿ ಪುಟ್ಟಣ್ಣಶೆಟ್ಟರು (ಚೇರ್ಮನ್), ಮಿ ಗಣಪತಿ ಆರ್ ಸುಬ್ಬರಾಯರವರು, ಮಂಡಿ ಹರಿಯಣ್ಣನವರು, ಎಲ್ ಶ್ರೀನಿವಾಸಅಯ್ಯಂಗಾರ್, ಎಂ ಚನ್ನಯ್ಯಶೆಟ್ಟರು, ಎನ್ ನಾರಾಯಣರಾಯರು, ಅಬ್ದುಲ್ ಕರೀಮರವರು, ಈ ಐದು ಮಂದಿ ದೊಡ್ಡ ಮನುಷ್ಯರುಗಳಿಂದ ಚುನಾಯಿಸಲ್ಪಡುವ ಇನ್ನೂ ಇಬ್ಬರು ಮೆಂಬರುಗಳನ್ನು ಸಹ ಇವರ ಜೊತೆಗೆ ಸೇರಿಸಿಕೊಳ್ಳತಕ್ಕದ್ದು. (7) ಬ್ಯಾಂಕಿನ ಬಂಡವಾಳವು 20 ಲಕ್ಷ ರೂಪಾಯಿಗೆ ಕಮ್ಮಿ ಇರಕೂಡದು. ಆದರೆ ಅದರ ಪೈಕಿ 5 ಲಕ್ಷದ ವರೆಗೆ ಷೇರು ಮಾರಾಟವಾದಾಗ ಬ್ಯಾಂಕಿನ ಕೆಲಸವನ್ನು ಉಪಕ್ರಮಿಸಬಹುದು. ಬ್ಯಾಂಕನ್ನು ಉಪಕ್ರಮಿಸದ ಹೊರತು ಇರುವ ಡೈರೆಕ್ಟರುಗಳನ್ನು ನಿಯಮ ಮಾಡುವ ಕೆಲಸವೂ, ಯಾ ಹೊಸ ಡೈರೆಕ್ಟರುಗಳನ್ನು ನೇಮಿಸುವ ಕೆಲಸವೂ, ಬ್ಯಾಂಕಿನ ಆಡಳಿತವನ್ನು ನಿರ್ವಹಿಸುವ ಕೆಲಸವೂ ಇಂಥಾ ಸಂದರ್ಭಗಳಲ್ಲಿ ವಾಡಿಕೆಯಿರುವಂತೆ ಷೇರು ಹೋಲ್ಡರುಗಳಿಗೆ ಸೇರಿದ್ದಾಗಿರುತ್ತದೆ. (8) ಈ ಹುಕುಮಿನಲ್ಲಿ ನಮೂದಿಸಿರುವ ಅಂಶಗಳು ಪ್ರಕಟನ ಪತ್ರಗಳ ಮೂಲಕವಾಗಿಯೂ ಮತ್ತು ಇತರ ವಿಧವಾಗಿಯೂ ಎಲ್ಲಾ ಕಡೆ ಸರ್ವತ್ರ ಪ್ರಸಿದ್ಧಿಪಡಿಸತಕ್ಕದ್ದಲ್ಲದೆ, ಸದರಿ ಬ್ಯಾಂಕು ಶ್ರೀಮನ್ ಮಹಾರಾಜರ ಸರ್ಕಾರದವರ ಪ್ರೋತ್ಸಾಹಕ್ಕೆ ಒಳಪಟ್ಟು ಸಹಾಯವನ್ನು ಪಡೆಯುತ್ತದೆ ಎಂಬ ಸಂಗತಿಯನ್ನು ಪ್ರಚುರಪಡಿಸುವುದಕ್ಕೂ ಸರ್ಕಾರದವರ ಆಕ್ಷೇಪಣೆಯೇನೂ ಇರುವುದಿಲ್ಲ. ಆದರೆ ಎಲ್ಲಾ ಜವಾಬ್ದಾರಿಯೂ ಸದರಿ ಬ್ಯಾಂಕಿನ ಎಲ್ಲಾ ಲಾಭ ನಷ್ಟಗಳೂ ಷೇರುದಾರರಿಗೆ ಮಾತ್ರವೇ ಸೇರಿರುತ್ತವೆ ಎಂಬುದನ್ನು ಸಂಬಂಧಪಟ್ಟವರಿಗೆ ಸ್ಪಷ್ಟವಾಗಿ ತಿಳಿಯಪಡಿಸಬೇಕು. ಈ ಅಂಶವನ್ನು ಕುರಿತು ಪ್ರಕಟನ ಪತ್ರಗಳಲ್ಲಿಯೂ, ಷೇರ್ ಅಪ್ಲಿಕೇಷನ್ ನಮೂನೆಗಳ ಹಿಂಭಾಗದಲ್ಲಿಯೂ ಇಂಗ್ಲೀಷು ಕನ್ನಡ ಭಾಷೆಗಳೆರಡರಲ್ಲಿಯೂ ಒಂದು ಷರಾವನ್ನು ಅಚ್ಚುಹಾಕಿಸಬೇಕು. ಅವಶ್ಯಕವಾದರೆ ಪ್ರಾರಂಭದಲ್ಲಿ ಕನಿಷ್ಟಪಕ್ಷ ಒಂದು ವರುಷದವರೆಗೂ ಬ್ಯಾಂಕಿನ ಕೆಲಸವು ಸರಿಯಾದ ಕಾರ್ಯ ರೀತಿಗಳನ್ನು ಅವಲಂಬಿಸಿ ಸರಿಯಾಗಿ ನಡೆದು ಅಭಿವೃದ್ಧಿಹೊಂದುವಂತೆ ಮಾಡಲು ಅವಶ್ಯಕವಾದ ಅಭಿಪ್ರಾಯ ತಿಳುವಳಿಕೆಗಳ ಸಹಾಯವನ್ನೂ ಸಹ ಬ್ಯಾಂಕಿನ ಕಾರ್ಯವನ್ನು ನಡೆಯಿಸುವುದಕ್ಕೆ ಒದಗುವಂತೆ ಸರ್ಕಾರದವರು ಲೆಕ್ಕ ಏರ್ಪಾಡುಮಾಡುವರು. (10) ಎಕನಾಮಿಕ್ ಕಾನ್ಫರೆನ್ಸಿನ ಸೆಕ್ರೆಟರಿಯವರು ಮುತುವರ್ಜಿ ವಹಿಸಿ, ಬ್ಯಾಂಕನ್ನು ಸ್ಥಾಪಿಸುವುದಕ್ಕೆ ಪ್ರೊವಿಜನಲ್ ಡೈರೆಕ್ಟರುಗಳಿಗೆ ಬೇಕಾದ ಸಹಾಯವನ್ನೆಲ್ಲ ಕೊಡತಕ್ಕದ್ದು. ಈ ಏರ್ಪಾಡಿನ ಆರಂಭದಲ್ಲಿ ತಿಳುವಳಿಕೆಗಳನ್ನು ಕೊಡುವುದಕ್ಕೆ ಒಬ್ಬ ಇಲಾಖೆಯ ಒಬ್ಬ ಆಫೀಸರ ಸಹಾಯವನ್ನೂ ಕೊಡಲಾಗುತ್ತದೆ.

ಬಾತ್ಮಿದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ವರ್ತಮಾನಗಳಿಗೆ ನಾವು ಜಾಗಾ ಕೊಡಲಾರೆವು. ನಮ್ಮ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಕಡೆ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು. ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರದಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ನಂಬಿಕೆಯಿಲ್ಲ. ಬಾತ್ಮಿಗಳು ಸಾಧ್ಯವಾದಷ್ಟು ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಬಾತ್ಮಿದಾರರು ಸಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲ ಎಂಬ ವಿಷಯವನ್ನು ಸಕಲರೂ ತಿಳಿಯತಕ್ಕದ್ದು.

ಚನ್ನಬಸವಯ್ಯ, ಎದಿರುಕೆರೆ— ನಿಮ್ಮ ಬಾತ್ಮಿಯನ್ನು ಪ್ರಕಟಿಸುವುದರಿಂದ ಪ್ರಯೋಜನವೇನೂ ಕಾಣುವುದಿಲ್ಲ.

—ಎಡಿ]

ಕರೆಸ್‌ಪಾಂಡೆನ್ಸ್

ಇದು ಸಹಜವೇ ?

ಹಿಂದಿನ ಕೆಲ ಕಾಲದಲ್ಲಿ ಜನರೆಲ್ಲರ ಸಹಕಾರವನ್ನು, ಅಧಿಕಾರಿಗಳ ಸಹಾಯವನ್ನು ಪಡೆದು ಎಷ್ಟೋ ಗೌರವವಾದ ರೀತಿಯಲ್ಲಿ ನಡೆಸುತ್ತ ಕರೆಸ್‌ಪಾಂಡೆನ್ಸ್ ಮಾಡುತ್ತಿರುವವರು ಹಾಗೆಯೇ ನಮ್ಮ ವಿದ್ಯಾಭ್ಯಾಸ ಇಲಾಖೆಯಲ್ಲೂ ಉಪಾಧ್ಯಾಯರ ವಿಷಯದಲ್ಲಿ ನೌಕರರಿಗೆ ಯಾವ ಕರೆಸ್‌ಪಾಂಡೆನ್ಸ್ ನಿಂದ ಗೌರವ ವನ್ನು ಸಂಪಾದಿಸುತ್ತ ನಡೆಯುತ್ತಿದ್ದ ಉಪಾಧ್ಯಾಯರುಗಳಾದ ನಮ್ಮ ಕೆಲವು ಮಾತ್ರ ತಲಬು ಪಾವತಿಗಾಗಿ ನಮ್ಮಲ್ಲಿ ಎರುವ ತಾಲ್ಲೂಕಿನ ಬರಾ ಗಳಲ್ಲಿ ವೆಂಕಟರಮಣಸ್ವಾಮಿ, ವೆಂಕಟೇಶ, ರಂಗಯ್ಯ, ಅ॥ ಮಾ॥ ಗಳ ಬರೆಯಲ್ಪಡುತ್ತಿರುವುದು ಸರ್ಕಾರದ ನಿಜವಾದ ನಿಬಂಧನೆಯಾಗಿದ್ದ ಲ್ಲಿ ಯಾರೂ ಆಕ್ಷೇಪಿಸಲು ಶಕ್ತರಲ್ಲ. ಹಾಗಿಲ್ಲದೆ ಅಲ್ಪ ನೌಕರರು ಭಾವದಿಂದ ಮಾತ್ರ ಅಚರಿಸಲ್ಪಡುವ ಕ್ರಮವು ಎಂದು ಯೋಚಿಸಲು ಪ್ರಭುಗಳಾದವರೂ ಇದ್ದಲ್ಲಿ ನಮಗೆ ಬುದ್ಧಿ ಕಲಿಸಲು ಬೇಡುವವ.

ಒಬ್ಬ ಉಪಾಧ್ಯಾಯ

ನಂಜನಗೂಡು ವಿಚಾರಗಳು

ಶ್ರೀನಗರದ ಅಮಲ್ದಾರ್ ಮ॥ ಶ್ರೀನಿವಾಸರಾಯರು ಕೊಪ್ಪಕ್ಕೆ ವರ್ಗವಾಗಿರು ವರ್ತಕರನೇಕರು ಅವರಿಗೆ ಔತಣವೇ ಮುಂತಾದ ನಾನಾ ವಿಧ ಮರ್ಯಾದೆಗಳನ್ನು ಮಾಡಿದರು —ಇಲ್ಲಿ ಪಡುವಳದ ಗಾಣಿಗರನೇಕರು ನೆಲ ಗಡಲೆ ಎಣ್ಣೆಯನ್ನು ಎಳ್ಳೆಣ್ಣೆ ಎಂದು ಹೇಳಿ ಮಾರುತ್ತಾರೆ. ಈ ಎಣ್ಣೆ ಯಿಂದಲೂ ಕಳಪೆ ತುಪ್ಪದಿಂದ ತಯಾರಾದ ಭಕ್ಷ್ಯಗಳು ಹೋಟಲುಗಳಲ್ಲಿ ಬಿಕರಿಯಾಗುವುದು ಜನಗಳ ಅನಾರೋಗ್ಯಕ್ಕೆ ಮುಖ್ಯ ಕಾರಣವಾಗಿದೆ. ಸ್ಯಾನಿಟರಿ ಅಧಿಕಾರಿಗಳವರು ಇದಕ್ಕೆ ತಕ್ಕ ಬಂದೋಬಸ್ತು ಮಾಡಬೇಕು. ಉತ್ತಮರೆನಿಸಿದ ಬ್ರಾಹ್ಮಣರ ಹೋಟಲುಗಳಲ್ಲಿ ಶೂದ್ರಾದಿಗಳಿಂದ ನೀರು ತರಿಸು ವುದೇ ಮುಂತಾದ ಕೆಲಸವನ್ನು ಮಾಡಿಸುತ್ತಾರೆ. ಇಂಥಾ ದುರ್ನಡತೆಗೆ ಅವ ಕಾಶವಿರದಂತೆ ಮುನಿಸಿಪಾಲಿಟಿಯವರು ಸರಿಯಾದ ಏರ್ಪಾಡನ್ನೇಕೆ ಮಾಡಬಾರದು? ... ಮ॥ ರಾ॥ ರಾಮರಾಯರು ಸರಸಾಂಬುನಿಧಿಕೆರೆ ಯ ಕೆಳಗಿನ ಕೆರೆ ನೀರನ್ನು ಸರ್ಕಾರಿ ನಾಲಾದಲ್ಲಿ ಬಿಟ್ಟು ಸುಮಾರು ನಾಲ್ಕು ಮೈಲು ದೂರದಲ್ಲಿರುವ ತಮ್ಮ ಜಮೀನಿಗೆ ತೆಗೆದುಕೊಂಡುಹೋಗಬೇಕೆಂದು ಪ್ರಯತ್ನಿಸುತ್ತಿದ್ದಾಗ್ಯೂ, ನಾಲಾ ಓವರ್ಸಿಯರೇ ಮುಂತಾದವರು ಅವಕಾಶ ಕೊಡದೆ ಅಡಚಣೆಪಡಿಸಿ ನಾಲಾದಲ್ಲಿ ಬರುತ್ತಿದ್ದ ನೀರನ್ನು ಪ್ರೀತಿಯ ಮೂಲಕ ಬಂದೋಬಸ್ತು ಮಾಡಿದ್ದಲ್ಲದೆ ರೂಲಿನಂತೆ ಕ್ರಮ ಜರುಗಿಸಬೇಕೆಂದಿರುವ ರೆಂದು ಕೇಳುತ್ತೇನೆ.

ಪ್ರತ್ಯಕ್ಷದರ್ಶಿ

ಅನುಭವವುಳ್ಳ ನಿಷ್ಪಕ್ಷಪಾತವಾದ ಅಭಿಪ್ರಾಯ

ಅಯ್ಯಾ,

ಮಾರ್ಚಿ ೫ನೇ ತಾರೀಖಿನ ವೃತ್ತಾಂತ ಪತ್ರಿಕೆಯ ಎಡಿಟರ್ ಕಾಲಮ್ಮಿನಲ್ಲಿ ಬರೆದಿರತಕ್ಕದ್ದನ್ನು ಓದಿ ಸಂತೋಷವಾಯಿತು. ಈ ಲೇಖಕರು ಜಾತಿ ಪಕ್ಷಪಾತವನ್ನು ಉಕ್ಕಿಸುತ್ತಾ ಇವೆ. ಇವರು ಹೇಳತಕ್ಕ ನಡವಳಿಕೆ ಮೇಲದವರಿಗೆ ವಿರೋಧಿಸಿದ್ದಾಷ್ಟರಿಂದ ಈ ವಿಷಯದಲ್ಲಿ ನನ್ನ ತಾತ್ಪರ್ಯವನ್ನು ಈ ಕೆಳಗೆ ತಿಳಿಸುತ್ತೇನೆ. ಎಕನಾಮಿಕ್ ಕಾನ್ಫರೆನ್ಸು ಹುಟ್ಟಿ ಬಹಳ ದಿವಸವಾಯಿತು. ಇದರಿಂದ ದೇಶವೇ ಉದ್ಧಾರವಾದೀತೆಂದು ನಂಬಿ ಸಂತೋಷವಾಗಿದ್ದ ನಮ್ಮ ಪ್ರಜೆಗಳು ಈಗ ಆ ತಾತ್ಪರ್ಯದಲ್ಲಿ ಸಂಶಯಗ್ರಸ್ತರಾಗಿದ್ದಾರೆ. ಕಾನ್ಫರೆನ್ಸಿನ ಉದ್ದೇಶ ಅವರ ವಿಷಯದಲ್ಲಿ ಗೌರ್ನಮೆಂಟಿನವರು ಜವಾ ಬ್ದಾರಿಕೆಗಳ ಅನುಭವವುಳ್ಳ ದೊಡ್ಡ ಮನುಷ್ಯರೂ ವರ್ಷೇ ವರ್ಷೇ ವರ್ತ ಮಾನಗಳಲ್ಲಿ, ಮಿಟಿಂಗ್ ರೆಕಾರ್ಡುಗಳಲ್ಲೂ ಪ್ರಜೆಗಳಿಗೆ ಹೇಳುತ್ತಿರತಕ್ಕ ಅಭಿಪ್ರಾಯಕ್ಕೆ ತಕ್ಕವಾದ ಬುದ್ಧಿವಾದಗಳೂ ಇವಲ್ಲಾ. ಯೂರೋಪ್ ದೇಶದವರ ನಡವಳಿಕೆಯಂತೆ ನಮ್ಮ ದೇಶದ ಕೀರ್ತಿಯನ್ನು ಜಗತ್ತಿನಲ್ಲಿ ಹಬ್ಬಿಸುತ್ತಾ ಇವೆ. ಆದರೂ ಈ ನಡವಳಿಕೆಗೆಲ್ಲಾ ಜಾತಿಭೇದಗಳಿಲ್ಲದೇ ಎಲ್ಲಾ ಜನರಾಗಿಯೂ, ಕೃಷಿಕಾರರಾಗಿಯೂ ಎಲ್ಲರೂ ಸೇರಿ ಒಂದೇ ಮನಸ್ಸಿನಿಂದ ಲೋಕೋಪಕಾರವಾದ ದೊಡ್ಡ ದೊಡ್ಡ ಕಾರ್ಯಗಳನ್ನು ಏರ್ಪಡಿಸಿ ಅ ದರಿಂದ ತಮ್ಮ ದೇಶದ ಪ್ರಜೆಗಳನ್ನು ಸೌಖ್ಯವಾಗಿ ಬಾಳುವಂತೆ ಮಾಡಿ ಕೊಳ್ಳತಕ್ಕವರಾಗಿಯೂ ಇರತಕ್ಕ ಪ್ರಜೆಗಳೂ, ಪ್ರಭುಗಳೂ ವಾಸಮಾಡುವ ದೇಶದಲ್ಲಿ ಚೆನ್ನಾಗಿ ತನ್ನ ಉದ್ದೇಶವನ್ನು ನೆರವೇರಿಸುತ್ತಾ ಹೊರತು ಜಾತಿಭೇದ ತುಂಬಿರತಕ್ಕ ದೇಶದ ಸಂಸ್ಥಾನಗಳಲ್ಲಾಗಲಿ, ಅದರ ಗಂಧ ತುಂಬಿದ ಸ್ಥಳಗಳಲ್ಲಾಗಲಿ ಚೆನ್ನಾಗಿ ಕೆಲಸ ಮಾಡಲಾರದೆಂದು ತೋರುತ್ತೆ. ಈ ಕಾನ್ಫರೆನ್ಸು ಹುಟ್ಟಿದಂದಿನಿಂದಲೇ ವಿಪ್ರರ ಗಂಧವೇ ಅರಿಯದ ಕೆಲವರು ತಮ್ಮ ಮಕ್ಕಳುಗಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ತಾತ್ಪರ್ಯವೇನೋ ಹುಟ್ಟಿಸಿತು. ಅವರ ಉದ್ದೇಶ ನೆರವೇರಬೇಕಾದರೆ ಅವರಿಗೆ ಹಿತರಾದ ಅವರ ಪೌರೋಹಿತ್ಯ ನಡವಳಿಕೆಗೆ ಅಸಹ್ಯಪಟ್ಟು ಅವರನ್ನು ಗದರಿಸದೆಯೂ, ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಅಭಿಮಾನವನ್ನೂ ಸಹನವನ್ನೂ ಸಹಜವಾಗಿ ಉಳ್ಳವರಾಗಿಯೂ ಇರತಕ್ಕವರನ್ನು ಉಪಾಧ್ಯಾಯರನ್ನಾಗಿಯೂ, ಮೇಲ್ವಿಚಾರಣಾಕರ್ತರನ್ನಾಗಿಯೂ ನೇಮಿಸುತ್ತಾ ಬಂದರೆ ನಮ್ಮ ಗೌರ್ನಮೆಂಟಿನ ಉದ್ದೇಶ ಚೆನ್ನಾಗಿ ನೆರವೇರುತ್ತೆ. ಕಾರಣವೇನೆಂದರೆ ಈಗ ಪ್ರತಿ ಮತಸ್ಥರೂ ಅ ವರವರೇ ಸೇರಿ ತಮ್ಮ ಅಭಿವೃದ್ಧಿಗಾಗಿ ಪ್ರತ್ಯೇಕ ಪ್ರತ್ಯೇಕ ಸಂಘಗಳನ್ನು ಮಾಡಿ ಕೊಂಡು ಕೈಂಕರ್ಯ ಮಾಡುತ್ತಿರತಕ್ಕದ್ದು ನಮ್ಮ ಗೌರ್ನಮೆಂಟಿಗೂ, ಜಗತ್ತಿಗೂ ತಿಳಿದಿರತಕ್ಕ ವಿಷಯವಾಗಿಯೇ ಇದೆ. ಈ ಸಂಘಗಳು ನಮ್ಮ ಗೌರ್ನಮೆಂಟಿನ ಈಗಿನ ಸದುದ್ದೇಶವನ್ನು ನೆರವೇರಿಸಲಿಕ್ಕೇನೇ ಪ್ರಜಾರಕ್ಷಕನಾದ ದೇವರು ತಾನಾಗಿಯೇ ಏರ್ಪಡಿಸಿ ಕೊಟ್ಟಿರುವಂತೆ ಭಾಸವಾಗುತ್ತೆ. ಆದ್ದರಿಂದ ವಿಧ್ನವಿಲ್ಲದೇ ಇರತಕ್ಕ ಬ್ರಾಹ್ಮಣೇತರರನ್ನು ವಿದ್ಯಾವಂತರನ್ನಾಗಿ ಮಾಡಬೇಕಾದರೆ ವೀರಶೈವರು, ಒಕ್ಕಲಿಗರು, ಆರ್ಯವೈಶ್ಯರು, ದೇವಾಂಗದವರು, ಮುಸಲ್ಮಾನರು, ಈ ಮುಂತಾದ ಸಂಘಗಳಿಂದ ವಿದ್ಯಾವಂತರನ್ನು ಚುನಾಯಿಸಿ ಮೇಲೆ ಹೇಳಿರತಕ್ಕ ಕೆಲಸಗಳಿಗೆ ನೇಮಿಸುತ್ತಾ ಬಂದರೆ ಅವರ ಪ್ರಯತ್ನಕ್ಕೆ ಗೌರ್ನಮೆಂಟಿನವರು ಸಹಾಯಕರಾದಂತೆ ಆಗಿ ಉಭಯತ್ರರ ಉದ್ದೇಶವೂ ಚೆನ್ನಾಗಿ ನೆರವೇರುತ್ತೆ.

ಶಮ್ಮ ಪತ್ರಿಕಾ ವಾಚಕ

ಕ್ಷಾಮ, ಅದರ ನಿವಾರಣೆ

ಅಯ್ಯಾ,

ಈಗ ನಡೆಯುತ್ತಿರುವ ಪರೀಧಾವಿಸಂವತ್ಸರ, ಅದರ ಹಿಂದಲ ವರುಷ, ಈ ಕಾಲಗಳಲ್ಲಿ ನಮ್ಮ ಮೈಸೂರು ದೇಶದಲ್ಲಿ ಬೇಕಾದಷ್ಟು ಮಳೆ ಸುರಿದು ಜಮೀನು ಗಳಲ್ಲಿ ಉತ್ಕೃಷ್ಟವಾದ ಬೆಳೆ ಬೆಳೆದಿದೆ. ಇದನ್ನು ಜಮೀನ್ ವ್ಯವಸಾಯಮಾಡ ತಕ್ಕ ರೈತರು ಒಪ್ಪಿಕೊಳ್ಳುತ್ತಾರೆ. ಆದರೂ ಈಗ್ಗೆ ಎರಡು ವರ್ಷಗಳಿಂದ ಮನು ಷ್ಯನ ಆಹಾರದ ದಿನಸಿಗಳು ಕ್ಷಾಮಕಾಲಕ್ಕಿಂತಲೂ ತುಟ್ಟಿಯಾಗಿಯೇ ಮಾರು ತ್ತಾ ಇವೆ. ಇದರಿಂದ ಕೊಂಡುತಿನ್ನತಕ್ಕ ಬಡವರೂ, ಕೂಲಿಮಾಡತಕ್ಕವರೂ ದಿನೇ ದಿನೇ ಚೈತನ್ಯ ತಪ್ಪಿ ನೆಲ ಹತ್ತುತ್ತಿದ್ದಾರೆ. ದವಸ ಬೆಳೆಯತಕ್ಕ ರೈತಾಪಿ ಜನಗಳಾದರೋ ದ್ರವ್ಯಾಪೇಕ್ಷೆಯಿಂದ ಅನ್ಯದೇಶದ ವರ್ತಕರಿಗೆ ತಾವು ಬೆಳೆದ ದಿನಸಿಗಳನ್ನು ತಮ್ಮ ತಮ್ಮ ಕಣಗಳಲ್ಲೇ ಮಾರಿಕೊಳ್ಳುತ್ತಿದ್ದಾರೆ. ಯಾವ ರೈಲ್ವೆ ಸ್ಟೇಷನ್ನಿನಲ್ಲಿ ನೋಡಿದರೂ ಜನಸಿ ತುಂಬಿಯಾದ ವಾಗನ್‌ಗಳೂ, ಭರ್ತಿಗೆ ಅವ ಕಾಶವಿಲ್ಲದೆ ಪ್ಲಾಟ್‌ಫಾರಂಗಳ ಮೇಲೆ ಬಿದ್ದಿರತಕ್ಕ ಸಹಸ್ರಾರು ಜನಸಿಯ ಮೂ ಟೆಗಳೂ ಕಾಣುತ್ತಾ ಇರುತ್ತವೆ.

ಈ ಕಷ್ಟಕಾಲವನ್ನು ಕ್ಷಾಮಕಾಲವೆಂತ ಹೇಳಬೇಕೋ, ಸುಭಿಕ್ಷಕಾಲ ವೆಂತ ಹೇಳಬೇಕೋ ಗೊತ್ತಾಗುವುದಿಲ್ಲ. ದಿನೇದಿನೇ ಹೆಚ್ಚುತ್ತಿರುವ ಆಹಾರ ಪದಾರ್ಥಗಳ ಧಾರಣೆ ಸ್ಥಿತಿ ಯೋಚಿಸಿದರೆ ಮುಂದೆ ಪ್ರಜೆಗಳಿಗೆ ಇನ್ನೂ ಹೆಚ್ಚು ಕಷ್ಟ ಸಂಭವಿಸೀತೆಂದು ತೋರುತ್ತೆ. ಈ ಕಾಲದಲ್ಲಿ ಗೌರ್ನಮೆಂಟಿನವರು ಈ ವಿಷಯ ನೋಟೀಸ್‌ಮಾಡಿ ದಿನಸಿ ಧಾರಣೆ ಎಲ್ಲರಿಗೂ, ಎಲ್ಲಾ ದಿಗಳ ಅನು ಕೂಲವಾಗುವಂತೆ ಮಾಡದೆ ಇದ್ದರೆ ಪ್ರಜೆಗಳ ಸ್ಥಿತಿ ಬಹಳ ಕಷ್ಟವಾಗುವುದಕ್ಕೆ ಕಾರಣ ವಾಗುತ್ತೆ. ಈಗ್ಗೆ ೨೩ ವರುಷಗಳಿಂದ ಈ ವಿಚಕ್ಷಣೆಯಿಲ್ಲದ ಸುಭಿಕ್ಷದಲ್ಲಿ ಸೇರಿದ ಕ್ಷಾಮದಿಂದ ಬಡವರು ಸೊಗ್ಗಿಹೋಗಿಬಿಟ್ಟರು.

ಇದಕ್ಕೆ ಹಿಂದೆ ಬಂದಿದ್ದ ಅನೇಕ ಕ್ಷಾಮಗಳನ್ನು ನಾನು ಅನುಭವಿಸಿದ ಸೋಡಿ ಇದ್ದೇನೆ. ಆಗ ದೇಶದಲ್ಲಿ ಮಳೆಬೆಳೆಗಳಿಲ್ಲದೆ ಪ್ರಜೆಗಳು ಕೇವಲ ಸಂಕಟ ಪಡುತ್ತಿದ್ದ ಕಾಲವನ್ನೇ ಕ್ಷಾಮಕಾಲವೆಂತಲೂ, ಮಳೆಬೆಳೆಗಳು ಸಮೃದ್ಧಿಯಾಗಿ ಆದಕಾಲವನ್ನು ಸುಭಿಕ್ಷಕಾಲವೆಂತಲೂ ಹೇಳುತ್ತಿದ್ದರು. ಆ ಕ್ಷಾಮಕಾಲವೆಂತ ಹೇಳಿಸಿಕೊಳ್ಳುತ್ತಿದ್ದ ಕಾಲಗಳಲ್ಲಿ ರೂಪಾಯಿಗೆ ೫೬ ಸೇರು ಅಕ್ಕಿ, ೧೧ ೧೫ ಸೇರು ರಾಗಿ ಮತ್ತು ಜೋಳ ೧೦ ೧೨ ರೂಪಾಯಿಗೆ ಒಂದು ಮಣ ತುಪ್ಪ, ಇದೇ ರೀತಿ ತುಟ್ಟಿಯಾಗಿ ಬಾಕೀ ದಿನಸುಗಳು ಮಾರುತ್ತಿತ್ತು. ಸುಭಿಕ್ಷಕಾಲ ದಲ್ಲಾದರೋ ರೂಪಾಯಿಗೆ ೧೨ ೧೬ ಸೇರು ಅಕ್ಕಿ, ೩೦ ೪೦ ಸೇರು ರಾಗಿ ಮತ್ತು ಜೋಳ ೫ ೬ ರೂಪಾಯಿಗೆ ಒಂದು ಮಣ ತುಪ್ಪ, ಈ ರೀತಿ ಮಾರುತ್ತಿತ್ತು. ಮೇಲೆ ಹೇಳಿರತಕ್ಕ ಕ್ಷಾಮಗಳಲ್ಲಿ ಗೌರ್ನಮೆಂಟಿನವರು ಪ್ರಜಾಪರಿಪಾಲನೆಗಾಗಿ ರಿಲೀಫ್ ವರ್ಕುಗಳನ್ನೂ ಅನ್ನಸತ್ರಗಳನ್ನೂ ಏರ್ಪಡಿಸಿ ಜನಗಳು ಹೊಟ್ಟೆ ಗಿಲ್ಲದೆ ಸಾಯದಂತೆ ನೋಡಿಕೊಳ್ಳುತ್ತಿದ್ದರು. ಅಲ್ಪಕಾಲ ಇರತಕ್ಕ ಕ್ಷಾಮ ಕಾಲವಾಗಿದ್ದರೆ ಆ ಕಷ್ಟಕಾಲವು ಬಡವರಿಗೆ ತೊಂದರೆಮಾಡದಂತೆ ತಕ್ಕ ಏರ್ಪಾ ಡುಮಾಡುವುದಕ್ಕೋಸ್ಕರ ದೊಡ್ಡ ದೊಡ್ಡ ವರ್ತಕರು, ರೈತರು, ಇವರನ್ನು ಸೇರಿಸಿ ಕೊಂಡು ಗೌರ್ನಮೆಂಟಿನವರು ಅವರ ಸಹಾಯದಿಂದ ಒಂದು ದ್ರವ್ಯದ ರಾಶಿ ಯನ್ನು ಕೂಡಿಸಿ ಅಗ್ಗವಾಗಿ ಮಾರತಕ್ಕ ಸ್ಥಳಗಳಿಂದ ಆಹಾರಪದಾರ್ಥಗಳನ್ನು ತರಿಸಿ ಕಾವ್ಯ ತಂದ ಖರೀದಿಗೇನೇ ಅದನ್ನು ಬಡವರಿಗೆ ಮಾರಿ ಅದರಿಂದ ಉಂಟಾಗತಕ್ಕ ಲುಕ್ಸಾನನ್ನು ಮೇಲೆ ಹೇಳಿರತಕ್ಕ ಫಂಡಿನಿಂದ ಭರ್ತಿಮಾಡಿ ಕೊಳ್ಳುತ್ತಿದ್ದರು. ಪ್ರಕೃತಕಾಲವೆಂದರೆ ಈಗ ೨೩ ವರುಷದಿಂದಲೂ ಮಳೆಗಳು ಬಂದು ದೇಶದಲ್ಲಿ ಸಮೃದ್ಧಿಯಾಗಿ ಬೆಳೆಗಳಾಗಿದ್ದಾಗ್ಯೂ ಧಾರಣೆಗಳು ಕ್ಷಾಮ ಕಾಲಕ್ಕಿಂತಲೂ ಹೀನಸ್ಥಿತಿಯಲ್ಲಿವೆ. ಅಂದರೆ ರೂಪಾಯಿಗೆ ೭ ೮ ಸೇರು ಅಕ್ಕಿ, ೧೩ ೧೪ ಸೇರು ರಾಗಿ ಮತ್ತು ಜೋಳ, ೧೬ ರೂಪಾಯಿಗೆ ಒಂದು ಮಣ ತುಪ್ಪ, ಇದರಂತೆಯೇ ಎಲ್ಲಾ ಪದಾರ್ಥಗಳೂ ತುಟ್ಟಿಯಾಗಿ ಮಾರುತ್ತಾ ಇವೆ. ಇದರಿಂದ ಕೊಂಡುತಿನ್ನತಕ್ಕವರು ನಾನಾ ವಿಧಗಳಲ್ಲೂ ಕೆಟ್ಟರು, ಮತ್ತು ಕೆಡು ತ್ತಲೂ ಇದ್ದಾರೆ. ಆದ್ದರಿಂದ ಈಗಲಾದರೂ ನಮ್ಮ ಗೌರ್ನಮೆಂಟಿನವರು ನಮ್ಮ ದೇಶದಲ್ಲಿ ಬೆಳೆದ ದಿನಸಿಗಳು ಅನ್ಯದೇಶಗಳಿಗೆ ರಫ್ತಾಗದಂತೆ ಯೂ, ಈ ದೇಶದಲ್ಲಿ ಸುಭಿಕ್ಷವಾಗುವ ಹಾಗೂ ಮಾಡಿ ಉದ್ಧಾರಮಾಡ್ಯಾರೆಂದು ಪ್ರಜೆಗಳೆಲ್ಲಾ ನಂಬಿ ಅದನ್ನೇ ನಿರೀಕ್ಷಿಸುತ್ತಿದ್ದಾರೆ.

ಎ ರಿಟೈರ್ಡ್ ಆಫೀಸರ್

ದೇವಿ ಸಿಡುಬಿನ ಹಾವಳಿ

ಅಯ್ಯಾ,

ಪ್ಲೇಗು, ಕಾಲರಾ, ಇವುಗಳಂತೆ ಸಿಡುಬೂ ಸಹ ಅಂಟುರೋಗವೇ. ಸರಿ ಮಾಡುವುದಷ್ಟು ಪ್ಲೇಗು, ಕಾಲರಾ ರೋಗಗಳಿಗೆ ತಪ್ಪಿಸಿಕೊಳ್ಳಬಲ್ಲೆವು, ಆದರೆ ಸಿಡುಬಿನಿಂದ ಮಾತ್ರ ತಪ್ಪಿಸಿಕೊಳ್ಳಲಾಗುವುದಿಲ್ಲ. ಹೆಂಗಸಾಗಲಿ, ಗಂಡ ಸರಾಗಲಿ ತಮ್ಮ ಪೂರ್ಣಾಯುಸ್ಸು ಕಳೆಯುವ ಮಧ್ಯ ಯಾವ ಕಾಲದಲ್ಲಾದರೂ ಒಂದು ಸಲ ಸಿಡುಬಿನಿಂದ ನರಳಬೇಕು. ಆದ್ದರಿಂದ ಇದು ಮಾನುಷಜನ್ಮಕ್ಕೆ ಒಂದು ಕಂಟಕವೆಂದು ಹೇಳಬಹುದು. ಬಹು ದಿನಗಳ ಹಿಂದೆ ಸಿಡುಬು ಎಂದ ಮಾತ್ರಕ್ಕೇ ಮಕ್ಕಳಿಗೆ ಅದು ಬರುವದೇ ಇಲ್ಲವೆಂದು ಯಾರೂ ಹೇಳಲಾಗದು. ಸಿಡುಬಿನಿಂದ ಸೌಂದರ್ಯಲೋಪವೂ, ಬಲಹೀನತೆಯೂ, ಅಂಗವಿಕಾರವೂ ಉಂಟಾಗುವದುಂಟು. ಸಿಡುಬಿನಿಂದ ಸಂಭವಿಸುವ ಕಷ್ಟನಷ್ಟಗಳು ಎಲ್ಲರಿಗೂ ತಿಳಿದೇ ಇದೆ. ಈ ದೊಡ್ಡ ಗಂಡಾಂತ್ರವನ್ನು ತಪ್ಪಿಸಿಕೊಳ್ಳುವದಕ್ಕಾಗಿ ನಮ್ಮ ಸರ್ಕಾರದವರು ಎಲ್ಲಾ ತಾಲ್ಲೂಕುಗಳಲ್ಲೂ ವ್ಯಾಕ್ಸಿನೇಟರೆಂಬ ದೇವಿ ಸಿಡುಬನ್ನು ಹಾಕತಕ್ಕವರನ್ನು ಸಂಬಳ ಕೊಟ್ಟು ಧರ್ಮಾರ್ಥವಾಗಿ ಇಟ್ಟಿದ್ದಾರೆ. ಸಿಡುಬು ಹಾಕಿಸುವವರಿಂದ ಇವರು ಯಾವ ವಿಧದ ರುಸುಮನ್ನೂ ವಸೂಲ್ಮಾಡು ತ್ತಿಲ್ಲ. ಪೂರ್ವದಲ್ಲಿ ಸಿಡುಬು ಹಾಕಿಸುವದಕ್ಕೆ ಜನರು ಭಯಪಡುತ್ತಿದ್ದರು. ಈಗಿನ ಕಾಲದಲ್ಲಿ ಅನೇಕರಿಗೆ ಅನುಭವ ಉಂಟಾಗಿ ವಿಶೇಷವಾಗಿ ಹಾಕಿಸು ತ್ತಿದ್ದಾರೆ. ಆದರೆ ಇದರ ಅನುಭವವು ಸರ್ವರಿಗೂ ತಿಳಿಯಿತೆಂದು ನಂಬಲಾ ಗದು. ಇದರ ಭಯವು ಇನ್ನೂ ಅನೇಕರಲ್ಲಿದೆ. ವ್ಯಾಕ್ಸಿನೇಟರುಗಳು ಗ್ರಾಮಾಂ ತರಗಳಲ್ಲಿ ಸಂಚರಿಸುವಾಗ್ಗೆ ಅಲ್ಲಲ್ಲಿ ಜನರನ್ನು ಸೇರಿಸಿ ವ್ಯಾಕ್ಸಿನೇಷನ್ನಿಂದ ಇರುವ ಅನುಕೂಲವನ್ನು ತಿಳಿಸಿ ಪ್ರೋತ್ಸಾಹಿಸುತ್ತಾ ಬರಬೇಕು. ಈ ರೀತಿ ಮಾಡುವದರಿಂದ ಇವರಿಗೆ ಧರ್ಮವೂ, ಸರ್ಕಾರದವರ ಉದ್ದೇಶವು ಫಲಕಾರಿ ಯೂ ಆಗುವದು.

ತರೀಕೆರೆಯು ಒಂದು ದೊಡ್ಡ ಟವನ್ ಆಗಿಯೂ, ತಾಲ್ಲೂಕ್ ಸ್ಥಳವಾ ಗಿಯೂ ಇರುತ್ತದೆ. ಹಾಲಿ ಈ ಸಿಡುಬಿನ ಹಾವಳಿಯು ಈ ಊರಿನಲ್ಲಿ ತುಂಬಾ ತೊಂದರೆಪಡಿಸುತ್ತಿದೆ. ಸಣ್ಣ ಸಣ್ಣ ಮಕ್ಕಳಿಗೆ ಮಾತ್ರವಲ್ಲದೆ ದೊಡ್ಡ ದೊಡ್ಡವ ರಿಗೂ ಕೂಡ ಎದ್ದಿದೆ. ಯಾವ ಮನೆಯಲ್ಲಿ ನೋಡಿದರೂ ಸಿಡುಬಿನಿಂದ ನರಳ ತಕ್ಕವರು ಇದ್ದೇ ಇರುವರು. ಒಂದೊಂದು ಮನೆಯಲ್ಲಿ ೩೪ ಹುಡುಗರು ನರಳುತ್ತಿರುವರು. ಈ ಊರಲ್ಲಿ ಈಗ ೨ ತಿಂಗಳಲ್ಲಿ ಸುಮಾರು ೪೦೦ ಜನಗಳಿಗೆ ಸಿಡುಬು ಎದ್ದಿತೆಂದೂ, ಇದರ ದೆಸೆಯಿಂದ ಸುಮಾರು ೨೫೦ ಮರಣಗಳಾದ ವಂದೂ ಕೇಳುತ್ತೇನೆ. ಇನ್ನೂ ಏಳುತ್ತಲೂ, ಅಲ್ಲಲ್ಲಿ ಮರಣಗಳಾಗುತ್ತಲೂ ಇದೆ. ವಿಚಾರಿಸುವಲ್ಲಿ ದೊಡ್ಡ ವಯಸ್ಸಿನ ಹಲವರಿಗೂ ಕೆಲವರು ಸಿಡುಬೇ ಹಾಕಿ ಸಿಕೊಂಡಿಲ್ಲವಾಗಿ ತಿಳಿಯುತ್ತದೆ. ಇಂಥಾ ನವನಾಗರಿಕ ಕಾಲದಲ್ಲೂ ಇಂಥಾ ದೊಡ್ಡ ಟವನ್‌ನಲ್ಲಿ ವ್ಯಾಕ್ಸಿನೇಷನ್ ಮಾಡಿಸಿಕೊಂಡಿಲ್ಲವೆಂಬುವದು ತುಂಬಾ ದುಃಖಕರವಾಗಿದೆ. ಚಿತ್ರದುರ್ಗ, ಕಡೂರು ಡಿಸ್ಟ್ರಿಕ್ಟುಗಳ ಕೆಲವು ಪ್ರದೇಶ ಗಳಲ್ಲಿ ಇದರ ಹಾವಳಿಯು ಹೆಚ್ಚುತ್ತಾ ಇದೆ. ನಮ್ಮ ಸರ್ಕಾರದವರು ಬಲಾ ತ್ಕಾರವಾಗಿ ದೇವೀ ಸಿಡುಬು ಹಾಕಿಸುವ ಕಾನೂನನ್ನು ಕೆಲವು ಕಡೆ ಜಾರಿಗೆ ತಂದಿರುತ್ತಾರೆಂದು ಕೇಳುತ್ತೇನೆ. ಈ ಕಾನೂನನ್ನು ಮೈಸೂರು ದೇಶಕ್ಕೆಲ್ಲಾ ಜಾರಿಗೆ ತರುವದರಿಂದ ಅವರಿಗೆ ಪಾಪವೆಂದಿಗೂ ಬರಲಾರದು. ವ್ಯಾಕ್ಸಿನೇಷನ್ ಮಾಡಿಸಿಕೊಂಡಿರುವ ಕೆಲವರಿಗೆ ಸಿಡುಬು ಎದ್ದಿದೆ ಎಂದು ಕೇಳುತ್ತೇನೆ. ಚಿಕ್ಕ ವಯಸ್ಸಿನಲ್ಲಿ ಒಂದು ಸಲ, ದೊಡ್ಡವರಾದ ಮೇಲೆ ಒಂದು ಸಲ ಸಿಡುಬು ಹಾಕಿ ಸಿಕೊಳ್ಳುವದರಿಂದ ಉಪದ್ರ ಎಂದಿಗೂ ಬರಲಾರದು. ವ್ಯಾಕ್ಸಿನೇಷನ್ ಮಾಡಿ ಸಿದ ಮಕ್ಕಳಿಗೆ ಚೆನ್ನಾಗಿ ಉಬಿ ಹಾಕುತ್ತೊಂಬಿ ಗುರುತಾಗಿದ್ದಲ್ಲಿ ಎಂದಿಗೂ ಸಿಡುಬೇಳಲಾರದು. ಒಂದು ವೇಳೆ ಎದ್ದರೂ ಸೂಕ್ಷ್ಮವಾಗಿ ಸಲ್ಪ ಮಾತ್ರ ಎದ್ದು ವಾಸಿಯಾಗುತ್ತೆ. ಮರಣ ಸಂಭವಿಸುವುದಿಲ್ಲ. ಪ್ರಜೆಗಳು ಈ ವಿಷಯ ವನ್ನು ಮನಸ್ಸಿಗೆ ತಂದುಕೊಂಡು ತಮ್ಮ ಮಕ್ಕಳಿಗೆ ವ್ಯಾಕ್ಸಿನೇಷನ್ ಮಾಡಿಸಿ, ಪ್ರೀತಿಯಿಂದ ಸಾಕಿದ ತಮ್ಮ ಮಕ್ಕಳನ್ನು ಈ ದೇವಿಗೆ ಬಲಿಕೊಡುವದಕ್ಕೆ ಬಿಡದೆ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಕೆ ವೆಂಕಟರಾಯಶೆಟ್ಟಿ, ವಲಗೂರು

ರಾಜಕೀಯ ವರ್ತಮಾನಗಳು

ತಿಪಟೂರು —ಕಲರಾ ಪ್ರಾರಂಭವಾಗಿ ನಾಲ್ಕಾರು ಜನಗಳು ಸತ್ತರು. ಕೆಲವರಿಗೆ ರೋಗ ತಗಲಿದೆ. ಡಾಕ್ಟರವರು ಇಲಾಜು ಮಾಡುತ್ತಾರೆ.—ಹಜರತ್ ಗೌಸ್‌ಲಾಜಂ ಮಹಬೂಬ್ ಸುಭಾನ್ ಎಂಬ ಮಹಾ ದಿನದ ಉತ್ಸವಾ ರ್ಥವಾಗಿ ಕಳೆದ ಗುರುವಾರ ಇಲ್ಲಿರುವ ಮಹಮ್ಮದೀಯರೆಲ್ಲರೂ ಸೇರಿಕೊಂಡು ಒಂದು ದೊಡ್ಡ ದಿವಾನನು ಮಾಡಿದರು. ಮಿ॥ ಗಳಾದ ಮುತ್ತುವಲ್ಲಿ ಅಬ್ದುಲ್ ಖಾದರ್, ಹೋನಾಸೇಟ್, ಪಾದಾಸೇಟ್, ದಸ್ತಗಿರಿಸಾಬ್ ವಗೈರೆಯವರು ಮಾಡಿದ ಏರ್ಪಾಡುಗಳೆಲ್ಲಾ ಶ್ಲಾಘನೀಯವಾಗಿದ್ದವು.— ಕಳೆದ ಗುರುವಾರ ಚಿಪ್ಪಿಗರ ಬೀದಿಯಲ್ಲಿ ಮನೆಯವರಿಲ್ಲದಾಗ ನಿದ್ದೆ ಮಾಡುತ್ತಿದ್ದ ಒಂದು ಮಗುವಿನ ಜಡೆಯಲ್ಲಿದ್ದ ಚೌಲಪಲಿಂಬು ಕಳುವಾಯಿತು. ತಂದೆ ತಾಯಿಗಳು ಗೋಕಾಡಿ ಪೋಲೀಸಿಗೆ ರಿಪೋರ್ಟು ಮಾಡಲು ಸ್ಟೇಷನ್‌ನಲ್ಲೂ ಇನ್ಸ್‌ಪೆಕ್ಟರ್ ಮನೆಯಲ್ಲೂ ಪೋಲೀಸ್ ಸಹಾಯ ಹುಡುಕಿದಾಗ ಪೋಲೀಸಿನವರ್ಯಾರೂ ದೊರೆಯಲಿಲ್ಲ. ಕಾರಣ ಅವರೆಲ್ಲಾ ಸಮೀಪದಲ್ಲಿ ನಡೆಯುವ ಕೆರಗೋಡು ಪಂಕ್ತಿಗೆ ಹೋಗಿ ದ್ದರು.— ನಾಲ್ಕು ಮೈಲಿ ದೂರದಲ್ಲಿ ಕೆರಗೋಡು ಶಂಕರಲಿಂಗದೇವರ ಜಾತ್ರೆ ನಡೆಯುತ್ತದೆ. ಕಳೆದ ಗುರುವಾರ ಈ ಜಾತ್ರೆಯಲ್ಲಿ ಕೆಲವು ಕಲರಾ ಕೇಸು ಆಯಿತು. ಇಲ್ಲಿ ಈ ವರೆಗೂ ಮೂವರು ಜಾಡ್ಯದಿಂದ ಸತ್ತರೆಂತಲೂ, ಒಬ್ಬನು ಕುಯಿಲಿ ಇದ್ದಾನೆಂತಲೂ ತಿಳಿದು ಬರುತ್ತೆ. ಪೋಲೀಸ್ ಇನ್ಸ್‌ಪೆಕ್ಟರ ವರೂ, ಜವಾನರೂ ಅಲ್ಲಿ ಹೋಗಿದ್ದಾರೆ. ರೋಗದಿಂದ ಜಾತ್ರೆಯ ಜನಸಂದಣಿಯು ೨೩ ದಿನಗಳಲ್ಲಿ ಚದುರಿ ಹೋಗಿ ಜಾತ್ರೆ ಅಭಾಸವಾಗಿ ಅನ್ನದಾನದ ವಿಷ ಯದಲ್ಲಿ ಮಠಕ್ಕೆ ತುಂಬಾ ನಷ್ಟವಾಗಿರುತ್ತದೆ.

ಚಿತ್ರದುರ್ಗ —ದಿನಸಿ ಧಾರಣೆ ದಿನೇ ದಿನೇ ಹೆಚ್ಚುತ್ತಲೇ ಇದೆ. ಬಿಸಿಲು ಬಹಳ ಜಾಸ್ತಿ. ಈಗಾಗಲೇ ಗುಡ್ಡಗಳಿಗೆ ಬೆಂಕಿ ಬೀಳಲಿಕ್ಕೆ ಆರಂಭವಾಯಿ ತು.—ನಂಮಕ್ ಸ್ ರೋಗಳ ಮನೆ ಕಾವಪ್ಪನವರು ಈ ವರುಷ ಹಾಕಿಸಿರತಕ್ಕ ಕಬ್ಬಿನ ಬೆಳೆಗಳನ್ನು ಗಾಣ ಮಾಡಲಿಕ್ಕೆ ಬೆಂಗಳೂರಿಂದ ವ್ಯವಸಾಯದ ಇಲಾಖೆಯ ನೌಕರರನ್ನು ಬರಮಾಡಿಕೊಂಡು ಅವರ ಸಹಾಯದಿಂದ ಒಲೆಗಳನ್ನು ಹಾಕಿಸಿ ಬೆಲ್ಲ ತಯಾರುಮಾಡಿಸುತ್ತಾ ಇದ್ದಾರೆ. ಈ ಏರ್ಪಾಡಿನಿಂದ ಸಕ್ಕರೆಯಂ ತಿರುವ ಶುದ್ಧ ವರ್ಣದ ಬೆಲ್ಲ ತಯಾರಾಗುವದಲ್ಲದೆ ಅದರ ಖರ್ಚುಗಳೂ ಪೂರ್ವಕ್ಕಿಂತಲೂ ಕಮ್ಮಿಯಾಗುತ್ತೆ. ಈ ಪದ್ಧತಿಯನ್ನೇ ಇತರ ರೈತರು ಅನುಸ ರಿಸಿದರೆ ಒಳ್ಳೇದಾದೀತು.—ಈಗ್ಗೆ ೩೪ ವರ್ಷಗಳಿಂದ ಈ ಸ್ಥಳದಲ್ಲಿ ಎಗ್ಜಿಕ್ಯೂ ಟಿವ್ ಇಂಜಿನಿಯರಾಗಿದ್ದು ಸತ್ಯವಾಗಿಯೂ, ಪ್ರಜಾಕ್ಷೇಮಕಾರಿಗಳಾಗಿ ಯೂ ಕೆಲಸ ಮಾಡುತ್ತಿದ್ದ ಮ್ಯ ಕೃಷ್ಣಯ್ಯಂಗಾರ್ಯರವರಿಗೆ ತುಮಕೂರಿಗೆ ವರ್ಗ ವಾಗಿ ಹೋದರು. ಇವರನ್ನು ಅಗಲಿದ್ದಕ್ಕಾಗಿ ಇಲ್ಲಿನ ಪ್ರಜೆಗಳು ಸಂಕಟಪಡು ತ್ತಿದ್ದಾರೆ. ಈ ಸಂದರ್ಭದಲ್ಲಿ ಈ ಸತ್ಪುರುಷರಿಗೆ ಈ ಸ್ಥಳದಲ್ಲಿ ಸಂಭವಿಸಿದ ಗದ್ದ ಅಪರ ಪರಿಪಾಕ ಸಹ ಹೇಳುತ್ತೇವೆ. ಇವರು ಪೂರ್ಣಾಹಾರ ವಿದಾಯವಾ ಗಿದ್ದು ಇವರಿಗೆ ಅಜೀರ್ಣ ರೋಗ ಪ್ರಾರಂಭವಾಗಿ ಕೇವಲ ಶಕ್ತಿ ಹಾನಿ ತು

ಅದರ ಪರಿಹಾರಕ್ಕಾಗಿ ಜಲಚಿಕಿತ್ಸೆಯನ್ನು ಮಾಡುತ್ತಾ ಬಂದರು ಇದ ರಿಂದ ಮೊದಲಿನ ರೋಗ ಹೆಚ್ಚು ವೇಗದಲ್ಲಿ ಬಾವು ಬಂತು ಅದರ ಪರಿಹಾರಕ್ಕಾಗಿ ದೇಶೀಯ ವೈದ್ಯರಿಂದ ಔಷಧಿ ತೆಗೆದುಕೊಳ್ಳುತ್ತಾ ಬಂದರು ಬಾವು ಜಾಸ್ತಿಯಾಗಿ ಆಹಾರ ನಿಂತುಹೋಯಿತು ಜ್ಞಾನ ತಪ್ಪಿತು ಮೂರ್ಛಾವಸ್ಥೆಯಿಂದ ಅವರ ಬಂಧುಗಳೆಲ್ಲಾ ಮುಖದರ್ಶನಕ್ಕೆ ಬಂದರು ಇಂಥಾ ಆಪತ್ಕಾಲದಲ್ಲಿ ಇಲ್ಲಿನ ಸಿವಿಲ್ ಸರ್ಜನ್ ಮಿ॥ ಹನುಮಾನ್‌ಸಿಂಗರವರು ಔಷಧಿ ಕೊಡಲಾರಂಭಿಸಿದ 6 7 ದಿವಸದಲ್ಲೇ ರೋಗಿಗೆ ಹಿಂದೆ ಇದ್ದ ಅಪಾಯಗಳೆಲ್ಲಾ ಕಡಮೆಯಾಗಿ ಜ್ಞಾನವು ಬಂದು ಆಹಾರದಲ್ಲಿ ಅಭಿರುಚಿ ಹುಟ್ಟಿ ಈಚೆಗೆ ಚೆನ್ನಾಗಿ ಗುಣವಾಯಿತು ಆದರೂ ಹವಾ ಬದಲಾಯಿಸಲಿಕ್ಕೆ ರಜಾ ಪಡೆದು ಮದರಾಸ್ ಪ್ರಾಂತ್ಯಕ್ಕೆ ಹೋಗಿದ್ದಾರೆ ಈ ದಫೆಕ್ಕೆ ಧನ್ವಂತ್ರಿಯಂಥಾ ಡಾಕ್ಟರು ಒದಗಿದ್ದರಿಂದ ಇವರು ಉಳುಕೊಂಡರು

ಮಳವಳ್ಳಿ —ಈ ಊರಿನಲ್ಲಿ ಕಾಲರಾ ಹೆಚ್ಚುತ್ತಲಿದೆ ದಿನಕ್ಕೆ 7 8 ಕೇಸುಗಳು ಆಗುತ್ತಲಿವೆ ಮತ್ತು ಊರಿನ ಎಲ್ಲಾ ಕಡೆಗಳಿಗೂ ಹರಡಿಕೊಂಡಿದೆ ತಮ್ಮ ಪತ್ರಿಕೆಯಲ್ಲಿ ಪ್ರಕಟಮಾಡಿರುವ ಕಾಲರಾ ವಿಚಾರದ ಸಲಹೆಗಳನ್ನು ಪ್ರಜೆಗಳು ಚೆನ್ನಾಗಿ ಓದಿ, ತಿಳುಕೊಂಡು ಅದರಂತೆ ನಡೆಯುವುದಾದರೆ ಬಹಳ ಮಟ್ಟಿಗೆ ಕಡಮೆಯಾದೀತು ಕಳೆದ 13 ನೇ ತಾ ಮೈಸೂರು ಡೆಪ್ಯುಟಿ ಕಮಿಷನರ್ ರವರು ಊರಿನೊಳಕ್ಕೆ ಹೋಗಿ ಇದುವರೆಗೂ ಜನಗಳು ಉಪಯೋಗಿಸುತ್ತಿದ್ದ ಕಟ್ಟೆಯ ನೀರನ್ನು ಯಾರೂ ಉಪಯೋಗಿಸಕೂಡದೆಂದೂ, ಸಾಧ್ಯವಾದಷ್ಟು ಬಾವಿ ನೀರನ್ನೇ ಉಪಯೋಗಮಾಡಬೇಕೆಂದೂ ತಿಳಿಸಿದರು ಮತ್ತು ರೋಗದಲ್ಲಿ ಬಿದ್ದು ನರಳುತ್ತಿದ್ದವರನ್ನು ಅವರು ನೋಡಿ ಬಹು ಪರಿತಾಪಪಟ್ಟರು ಇಂಥಾ ಸಮಯದಲ್ಲಿ ಊರಿನ ಸ್ಯಾನಿಟೇಷನ್ ವಿಚಾರ ಇನ್ನೂ ವಿಶದಪಡಿಸಲ್ಪಟ್ಟಲ್ಲಿ ಮತ್ತಷ್ಟು ಸಹಾಯವಾಗುವದು ಈ ಟವನ್ನಿನಲ್ಲಿ ಮುನಿಸಿಪಲ್ ದೀಪಗಳು ಕೆಲವು ದಿನಗಳಿಂದೀಚೆಗೆ ಅಧಿಕಾರಸ್ಥರ ದೃಷ್ಟಿ ಬೀಳುವ ಕಡೆ ಕ್ರಮವಾಗಿ ಉರಿಸಲ್ಪಡುತ್ತಿವೆ ಬಾಕಿ ಕಡೆ ಲಾಂದ್ರಗಳ ದೀಪಗಳು ಅಪರೂಪವಾಗಿ ಕೆಲವು ನಿಮಿಷ ಸುಟ್ಟುವವು ಈಗ ಬೇಳು ಹಾವುಗಳ ಕಾಟ ಜಾಸ್ತಿಯಾದ್ದರಿಂದ ಇನ್ನು ಮೇಲಾದರೂ ಎಲ್ಲಾ ಕಡೆಯೂ ಕ್ರಮವಾಗಿ ಲಾಂದ್ರಗಳು ಉರಿಸಲ್ಪಡುವವೆಂದು ನಂಬಿದೆ ದೊಡ್ಡ ಹೊಲಗೇರಿಯ ಪಕ್ಕ ಮನೆಯವರಿಂದಲೂ ಮ್ಯುನಿಸಿಪಲ್ ಕಂದಾಯ ವಸೂಲಾಗುತ್ತಿದ್ದಾಗ್ಯೂ ಅಲ್ಲಿ ಒಂದು ಲಾಂದ್ರವನ್ನೂ ಹಚ್ಚಿಲ್ಲ — 1 2 ತಿಂಗಳ ಹಿಂದೆ ಇಲ್ಲಿಗೆ ವರ್ಗವಾಗಿ ಬಂದಿದ್ದ ಪೋಸ್ಟ್ ಮಾಸ್ಟರು ಮೂರನೇ ದಿನ ಮಾಯಾವಿ ಜಡೆಯಿಂದ ಕಾಲವಾದರು —ಇಲ್ಲಿನ ಶಿರಸ್ತೇದಾರ್ ಮ॥ ರಾಮಚಂದ್ರಯ್ಯನವರಿಗೆ ಹೆಗ್ಗಡದೇವನಕೋಟೆಗೆ ವರ್ಗವಾಯಿತೆಂದು ಕೇಳಿ ಕುಂದಿ ವಿಷಾದಿಸುತ್ತೇವೆ ಇವರು ಇಲ್ಲಿನ ಪಂಚಾಂಗದವರಿಗೆ ನೂತನ ರೀತಿಯಲ್ಲಿ ಸೇಯುವ ಕೆಲಸವನ್ನು ಪ್ರಾರಂಭಿಸಿ, ಕೆಲವು ದಿನಗಳೇ ಆಗಿದ್ದವು ಇವರು ಇನ್ನೂ ಕೆಲವು ಕಾಲ ಇಲ್ಲಿಯೇ ಇರುವಹಾಗಿದ್ದರೆ ಅವರು ಪ್ರಾರಂಭಿಸಿದ ಕೆಲಸವು ತಕ್ಕಮಟ್ಟಿಗೂ ನೆರವೇರಲು ಸಹಾಯವಾದೀತು ಈ ವಿಚಾರವನ್ನು ನಮ್ಮ ಡೆಪ್ಯುಟಿ ಕಮಿಷನರಿಗೆ ಬರೆದುಕೊಂಡಿದ್ದಾರೆ ಅವರು ಇನ್ನೂ ಕೆಲವು ಕಾಲ ನಮ್ಮ ಶಿರಸ್ತೇದಾರ್ರು ಇಲ್ಲೇ ಇರುವಂತೆ ಹುಕುಂ ಕೊಡುವರೆಂದು ನಂಬುತ್ತೇವೆ

ನಂಜನಗೂಡು —ಬೇಲಿನ ಧಗೆ ಅಪಾರವಾಗಿದೆ ಧರ್ಮಶಾಲೆಗಳು ಕಡಮೆಯಾಗಿರುತ್ತೆ 10 15 ದಿವಸಗಳಿಂದ ರೋಗಾದಿ ಉಪದ್ರವಗಳು ಕಡಮೆಯಾಗಿರುತ್ತವೆ ಈ ಮಾಹೆ 20 ನೇ ತಾ ನಲ್ಲಿ ನಡೆದ ರಥೋತ್ಸವಕ್ಕೆ ಪರಸ್ಥಳಿಕರು ಧಾರಾಳ ಬಂದಿರಲಿಲ್ಲ ದಯಾಳುಗಳಾದ ನಮ್ಮ ಸಬ್ ಡಿವಿಜನ್ ಸಾಹೇಬರವರು ಈ ಊರಿಗೆ ಒದಗಿದ್ದ ಕಾಲರಾರೋಗದ ಹಾವಳಿಯನ್ನು ನೋಡಿ ಬಹಳ ಸಂಕಟಪಟ್ಟರು ಬೇಸಗೆ ಕಾಯು ಕಾಲ 2 ವೇಳೆಯಲ್ಲೂ ಟವನ್ನಿನಲ್ಲಿ ಪ್ರತಿ ಒಂದು ಗಲ್ಲಿಯನ್ನೂ ಖುದ್ದು ಪರಾಂಬರಿಸಿ ಗ್ರಾಮಪಾಕೀಜ ಮಾಡಿಸಿ ಟವನ್ನಿಗೆ ಕುಡಿಯುವದಕ್ಕೆ ಒಳ್ಳೇ ನೀರು ಒದಗಿಸಿದ್ದರಿಂದ ಇವರ ಉದ್ದೇಶದ ಪ್ರಕಾರ ದೇವರು ಗ್ರಾಮಕ್ಕೆ ಆರೋಗ ಭಾಗ್ಯವನ್ನು ಉಂಟುಮಾಡಿರುತ್ತಾನೆ —ಇಲ್ಲಿನ ರಥೋತ್ಸವಕ್ಕೆ ಪರಸ್ಥಳಿಕರು ಯಾರೂ ಬಾರದೆ ಇದ್ದಾಗ್ಯೂ ನಮ್ಮ ಸಬ್ ಡಿವಿಜನ್ ಸಾಹೇಬರವರು ಬಹಳ ಮೆಹನತ್ತಿನಿಂದ ರೋಗವಿಲ್ಲದ ಸುತ್ತುಮುತ್ತಿನ ಕೆಲವು ಗ್ರಾಮಸ್ಥರು ವಗೈರೆ ಜನಗಳನ್ನು ತರಿಸಿ ಬಹು ಮುತುವರ್ಜಿಯಿಂದ ಜನಗಳಿಗೂ ಮತ್ತು ತಮ್ಮ ತಾಬೇದಾರರುಗಳಿಗೂ ಸರಿಯಾದ ದಿಲಾಸ್ ಕೊಟ್ಟು, ವೇಳೆಗೆ ಸರಿಯಾಗಿ ರಥವನ್ನು ಹೊರಡಿಸಿ 7 ಘಂಟೆಗೆ ಸೆಡೆಗೆ ನಿಲ್ಲುವಂತೆ ಮಾಡಿದ್ದು ಬಹಳ ಸ್ತೋತ್ರಾರ್ಹವಾಗಿದೆ ಇಷ್ಟು ಜಾಗ್ರತೆ ತೇರು ಸೆಡೆಗೆ ನಿಂತದ್ದು ಬಹಳ ಆಶ್ಚರ್ಯಕರವಾಗಿದೆ —ಇಲ್ಲಿ ಅಮಲ್ದಾರರಾಗಿದ್ದ ಮಿ॥ ಎನ್ ಶ್ರೀನಿವಾಸರಾಯರು ಕೊಳ್ಳೇಗಾಲ ತಾಲ್ಲೂಕಿಗೆ ವರ್ಗವಾಗಿ ಹೊರಟುಹೋದರು ಹೊಸಬರು ಇನ್ನೂ ಬಂದಿಲ್ಲ —ಈ ಮಾಹೆ ತಾ 1 ರಲ್ಲಿ ಇಲ್ಲಿ ನಡೆದ ದನಗಳ ಪ್ರದರ್ಶನಕ್ಕೆ ರೋಗಾದಿ ಉಪದ್ರವಗಳ ನಿಮಿತ್ತ ಪರಸ್ಥಳದ ದನಗಳು ವಿಶೇಷವಾಗಿ ಸೇರಲಿಲ್ಲ ಸೇರಿದ್ದ ಅಲ್ಪಸ್ವಲ್ಪ ಗೋಶಾಲೆಗಳಿಗೆ ಅಂದರೆ ನೂರಾರು ದನಗಳಲ್ಲಿ

ಉತ್ತಮವಾದ ರಾಸುಗಳಿಗೆ ಸಬ್ ಡಿವಿಜನ್ ಸಾಹೇಬರವರು ಖುದ್ದು ಅಜಮಾಯಿಷಿಯಿಂದ ಅವುಗಳ ಯೋಗ್ಯತಾನುಸಾರ ಚಿನ್ನ ಬೆಳ್ಳಿ ಮೆಡಲ್ ಮತ್ತು ನಗದು ರೂಪಾಯಿ, ಯೋಗ್ಯತಾಪತ್ರಗಳನ್ನು ದಯಪಾಲಿಸಿದರು

ಹುಣಸೂರು —ಇಲ್ಲಿ ಬಿಸಿಲಿನ ತಾಪವು ಈಗಾಗಲೇ ಸಹಿಸಲು ಅಸಾಧ್ಯವಾಗಿದೆ ಸಂತೆಯಲ್ಲೂ ಪೇಟೆಯಲ್ಲೂ ದಿನಸಿ ಧಾರಣೆ ಇನ್ನೂ ಏರುತ್ತಲೇ ಇದೆ ಅಕ್ಕಿ 6 1/2 ಸೇರು, ರಾಗಿ 16-18 ಸೇರು ಬೇಳೆ 11 7 ಸೇರಿನಂತೆ ಮಾರಾಟವಾಗುತ್ತಿದೆ ಏಕರೀತಿಯಾದ ತೂಕದ ಬಟ್ಟುಗಳೂ ಸೇರುಗಳೂ ಮೈಸೂರು ಸರ್ಕಾರದ ಹುಕುಮಿನಿಂದ ಆದಷ್ಟು ತ್ವರೆಯಲ್ಲಿ ಜಾರಿಗೆ ಬರುವಂತೆ ಮಾಡುವದು ಮಾರುವ ಮತ್ತು ಕೊಳ್ಳುವ ಉಭಯತ್ರರಿಗೆ ಹಿತಪ್ರದ, ನಮ್ಮ ಮೈಸೂರು ಪ್ರಭುತ್ವಕ್ಕೆ ಗೌರವತೆಯೂ ಆಗಿರುವುದು —ಇಲ್ಲಿ ಕಾಲರಾ ಬಾಧೆಯು ಉಪಕ್ರಮಿಸಿರುವುದು ಈಗಾಗಲೇ ಸುಮಾರು 15 20 ಜನರವರೆಗೂ ಇದರಿಂದ ಮೃತರಾಗಿರುವರು ಸ್ಟೋರ್ ಬೀದಿಯಲ್ಲೇ ರೋಗ ಬಹು ಉಗ್ರವಾಗಿದ್ದು ಊರಿನ ನಾನಾ ಭಾಗದಲ್ಲಿ ಇದು ಇನ್ನೂ ಹರಡುವಂತಿರುವದು ಇದರ ನಿಮಿತ್ತವಾಗಿ ತಂದೆ ತಾಯಿಗಳು ಭೀತರಾಗಿ ತಮ್ಮ ಗಂಡು ಹೆಣ್ಣು ಮಕ್ಕಳನ್ನು ಸ್ಕೂಲಿಗೆ ಕಳುಹಿಸಲು ಹಿಂಜರೆಯುತ್ತಿರುವರು ಜನರು ಈ ತರುಣದಲ್ಲಿ ನೀರನ್ನು ಚೆನ್ನಾಗಿ ಮರಳಿಸಿ ಶುದ್ಧಿಮಾಡಿಕೊಂಡು ಪಾನಮಾಡುವ ವಿಷಯದಲ್ಲಿ ಜಾಗರೂಕರಾಗಿರುವುದೇ ವಿಶೇಷವಾದ ಉಪಾಯ ಯಾಕೆಂದರೆ ಇದು ಬಹುಮತಿಯರ ಅನುಭವಕ್ಕೆ ಬಂದಿರುವಂತೆ ವಿಷಕ್ರಿಮಿ ಮಿಶ್ರಿತವಾದ ಕೆಟ್ಟ ಜಲವನ್ನು ಪಾನಮಾಡುವುದರಿಂದಲೇ ಈ ವಾಂತಿಭೇದಿ ರೋಗವು ಉತ್ಪನ್ನವಾಗುವುದೆಂಬುವುದಕ್ಕೆ ಅನುಮಾನವೇನೂ ಇಲ್ಲ ಡಾಕ್ಟರವರೂ ಅಮಲ್ದಾರರೂ ಮುನಿಸಿಪಲ್ ಸಿಬ್ಬಂದಿಯೊಡನೆ ಊರಿನ ಬೇರೆ ಬೇರೆ ಕಡೆ ಚಟುವಟಿಕೆಯಿಂದ ಸಂಚರಿಸಿ, ಜನರು ನೀರನ್ನು ಚೆನ್ನಾಗಿ ಮರಳಿ ಪಾನಮಾಡತಕ್ಕದ್ದೆಂದು ತಮ್ಮಿಂದಾದ ಮಟ್ಟಿಗೂ ಬುದ್ಧಿವಾದಗಳನ್ನು ಹೇಳುತ್ತಿರುವರು —ಕಳೆದ ವಾರ ಟವನಿನ ಹಲವು ಭಾಗಗಳಲ್ಲಿ ಜನಗಳಿಗೆ ನೀರಿನ ಪ್ರಮವನ್ನು ತಪ್ಪಿಸಿ ಒಳ್ಳೇ ನೀರನ್ನು ಒದಗಿಸುವ ಉದ್ದೇಶದಿಂದ ಅಲ್ಲಲ್ಲಿ ನಲ್ಲಿಗಳನ್ನು ಇಡಿಸುವುದಕ್ಕಾಗಿ ಆಜ್ಞೆಮಾಡುತ್ತಾ ಇದ್ದದ್ದನ್ನು ಪ್ರಜೆಗಳು ನೋಡಿ ತುಂಬಾ ಸಂತೋಷದಿಂದಲೂ ನಿರೀಕ್ಷೆಯಿಂದಲೂ ಮಾತನಾಡಿಕೊಳ್ಳುತ್ತಿದ್ದರು ಆದುದರಿಂದ ಪ್ರಜಾಕ್ಷೇಮಲಾಭವೇ ತಮ್ಮ ಪ್ರಾಮುಖ್ಯವಾದ ಉದ್ಯೋಗವೆಂದರಿತಿರುವ ಮೈಸೂರು ಶ್ರೀಮನ್ಮಹಾರಾಜರ ಸರ್ಕಾರದವರು ಈ ಪುಣ್ಯಕರವಾದ ಕೆಲಸಕ್ಕೆ ಬೇಗ ಕೈಹಾಕಿ ಅದನ್ನು ಪೂರ್ಣಗೊಳಿಸಿ ಶಾಶ್ವತವಾದ ಕೀರ್ತಿಗೆ ಭಾಜನರಾಗಬೇಕೆಂದು ಪ್ರಾರ್ಥಿಸುವವರಾಗಿದೇವೆ

ಔಷಧಿ ಚಿಕಿತ್ಸೆಯಿಂದ ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 3-13

(ಸ್ಕಾಟ್ಸ್ ಇಮಲ್ಷನ್)

ಘಟ್ಟಿ ಶರೀರವುಳ್ಳವರ್ಯಾರೂ ಪ್ಲೇಗ್, ಮಹಾಮಾರಿರೋಗ, ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪಡಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್,

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ ಬೆನ್ನಿನಲ್ಲಿ ಛಳುಕು ನಿಶ್ಚಯವಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ... ಳಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ... ಗುವಿಕೆ, ಮೈನೋವು, ಕೀಲುನೋವು, ಮರವು, ನಿದ್ರಾಭಂಗ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂ ... ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [112-27

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿರುವು...



ರೂ ೩—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ ... ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

A FRENCH LANGUAGE CLASS

Will be opened only if 10 Candidates can be secured Fee Rs 2 per month Apply to the Headmaster A V School, Ittigegud, Mysore City

---

ಮಧುರೆ ಅಚ್ಚ ಕರೀ ಬಣ್ಣದ ಮೂರು ಚಿಕ್ಕೆಯ ಸೀರೆಗಳು

ಕ್ರಯ ರೂಪಾಯಿ 2—6—0

ಇದು ಅನೇಕರು ಪ್ರಕಟಿಸುತ್ತಲಿರುವ ಸೀರೆಯಲ್ಲ ಮಧುರೆ ಸೀರೆಯೊಳಗೆ ಹೆಸರುವಡೆದ ಅಚ್ಚ ಕರೀ ಬಣ್ಣದ ಚುನ್ನಡಿ ಸೀರೆ ಇದು. ಬಹಳ ನಾಜೂಕಾಗಿಯೂ ನೋಡುವದಕ್ಕೆ ಲಕ್ಷಣವಾಗಿಯೂ ರಂಗು ಅಚ್ಚ ನೇರಳೇಹಣ್ಣಿನ ವರ್ಣವುಳ್ಳದ್ದಾಗಿಯೂ ಸೀರೆಯು ಧಡೂತಿಯಾಗಿಯೂ ಧಾರಾಳವಾಗಿ 18 ಮೊಳವುಳ್ಳದ್ದಾಗಿಯೂ ಇದೆ ಇದನ್ನು ಭಾಗ್ಯವಂತರು ಸಹ ... ಪ್ರೇಮದಿಂದ ಉಡುತ್ತಲಿದ್ದಾರೆ ಮಾದರಿಗಳನ್ನು ತರಿಸಿ ಪರೀಕ್ಷಿಸಿ ನೋಡಿರಿ ... ಪ್ರತಿ 1 ಸೀರೆಯ ಸಂಗಡಲೂ ಇದೇ ... ಹದ 1 ರವಕೆಯನ್ನು ಇನಾಮಾಗಿ ... ಹಿಸುತ್ತೇವೆ [55-

ವಿಳಾಸ -ಮ್ಯಾನೇಜರ್ ಶೃಂಗಾರ ವಿಲಾಸ, ಚಿಂತಾದ್ರಿಪೇಟೆ, ಮದರಾಸು.

ಬಹಳ ಮೇಲಾದ ಅಚ್ಚ ಕರೀ ಬಣ್ಣದ ಮಧುರೆ ಚುಂನಡಿ ಅಂಚಿನ ಸೀರೆಗಳು.

[44-

ಅವಲ್ ರಹಂ ಕ್ರಯ ರೂ 3-4-0

ಇದರಿಂದ ವರ್ತಕರಿಗೂ, ಭಾಗ್ಯವಂತರಿಗೂ, ಬಡವರಿಗೂ ತಿಳಿಸುವುದೇನೆಂದರೆ—ನಮ್ಮಲ್ಲಿನ ಕರಿಯ ಬಣ್ಣದ ಮಧುರೆ ಚುಂನಡಿ ಸೀರೆಗಳು ಉಡುವುದಕ್ಕೆ ಧಡೂತಿಯಾಗಿಯೂ ನೋಡುವುದಕ್ಕೆ ನಯವಾಗಿಯೂ, ಸರ್ವರಿಗೂ ಲಾಯಖಾಗಿಯೂ, ಕೊಳ್ಳಲು ಬೆಲೆ ಬಹಳ ಸುಲಭವಾಗಿಯೂ ತಯಾರಿಸಿದೆ ಎಷ್ಟು ಸಾರಿ ಒಗೆದು ಉಟ್ಟರೂ ಬಣ್ಣವು ಸ್ವಲ್ಪವೂ ಬದಲಾಯಿಸುವುದಿಲ್ಲ ಇದರ ಸೆರಗುಗಳು ಬಹು ಪಸಂದಾಗಿವೆ ಸೀರೆಯು ಉದ್ದವು ಧಾರಾಳವಾಗಿ 18 ಮೊಳವಿದೆ ... ಕ್ವಾರ್ಟರ್ ಒಂದನ್ನು ತರಿಸಿದಲ್ಲಿ ಇದೇ ತರಹದ 1 ರವಕೆಯನ್ನು ಇನಾಮಾಗಿ ಕಳುಹಿಸುತ್ತೇವೆ ವಿಳಾಸ —

ಎ ಬಿ ವೆಂಕಟೇಶನ್, ನುಂಗಂಬಾಕಂ, ಮದರಾಸು.

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಸಿಕ್ಕುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ Messrs OAKES & Company, Mount Road, Madras.

[4-21] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H Gulliford Proprietor and Manager Wesleyan Mission Press Mysore 27/3/1913

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೨೬ | ಮೈಸೂರು—೧೯೧೩ ನೇ ಇಸವಿ ಏಪ್ರೆಲ್ ತಾರೀಖು ೩ ನೇ ಗುರುವಾರ. | ಸಂಚಿಕೆ ೪೪

ಪ್ರತಾಪಕಂಠೀರವ ಚರಿತ್ರೆ.

(1) "ದುರ್ಮಾರ್ಗರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೋರದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ, (2) ಸ್ತ್ರೀಧರ್ಮ, ಬುದ್ಧಿಕೌಶಲ, ಸ್ತ್ರೀಯುಕ್ತಿ ಸಾಹಸ-ಚಾತುರ್ಯ, (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು, (4) ವನ, ಸರಸ್ಸು, ಆರಾಮಾದಿ ವರ್ಣನೆಗಳು; (5) ಮನುಷ್ಯ ಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭ ಶೈಲಿ; (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ. ಕ್ರಯ.—1 ರೂಪಾಯಿ; ಟಪಾಲ್ ಹಾಸಲು ಬೇರೆ.

[16-6] ನಮ್ಮ ವಿಳಾಸ:—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ

ಮಸ್ತಿಷ್ಕವಾದ ನೋವೂ ಇಂತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಎದೆನೋವು, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ.

ಪ್ರತಿ ತಿಂಗಳೂ ಸಾವಿರಾರು ಕುಪ್ಪಿಗಳು ಎಂಟು ಜನಕ್ಕೆ ಒಂದರಂತೆ ವಿಕ್ರಯವಾಗುತ್ತಲಿವೆ. ಡಾಕ್ಟರುಗಳೂ ಸ್ವದೇಶಾಭಿಮಾನಿಗಳೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷದ ವ್ಯಾಪಾರದ ಅಂಗಡಿಗಳಲ್ಲಿ ವಿಕ್ರಯವಾಗುವದು.

ಸಣ್ಣ ಔಷಧ ಡಬ್ಬಿಗೆ ೬ ಆಣೆ, 12 ಕುಪ್ಪಿಗೆ ರೂ. ೩—೩ ೦. ಹಲ್ಲುಪುಡಿ ಡಬ್ಬಿಗೆ 2 ಆಣೆ; 12 ಕುಪ್ಪಿಗೆ ರೂ. 1—೨—೦. ವಿ. ಪಿ. ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ. [42-6]

ವಿಳಾಸ:—ಅಮೃತಾಂಜನ ಡಿಪೋ, ೧೯ ಫ್ರಿಯರ್ ರೋಡ್, ಫೋರ್ಟ್, ಬೊಂಬಾಯಿ.

ಶಾಸ್ತ್ರೀಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡಿತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಸನ್ನಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ಹವ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಗುಹ್ಯಶೂಲೆ, ಮಕ್ಕಳ ಎಳವು, ಜ್ವರ, ಸಚ್ಛಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 1 ಆಣೆ. [136-31]

೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕ್ಷಣಮಾತ್ರದಿಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ಗೃಹದಲ್ಲಿ ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸಮಯ ೧ ತಿಂಗಳು ಮಾತ್ರ. ಅಲ್ಪ ಬೆಲೆ! ಉತ್ತಮ ಬಹುಮಾನ!! ಟಪಾಲು ಖರ್ಚು ಇಲ್ಲ!! ತ್ವರೆಮಾಡಿ.

೨ ಪುಸ್ತಕಕ್ಕೆ ೧ ಉತ್ತಮ ಡೈರಿ, ೩ ಪುಸ್ತಕಕ್ಕೆ ೧ ಸೀಲ್ಕ್ ಪಕ್ಷ, ೫ ಪುಸ್ತಕಕ್ಕೆ ೧ ಪುಸ್ತಕ, ೧೦ ಪುಸ್ತಕಕ್ಕೆ ೧ ಜೇಬು ಗಡಿಯಾರ ಬಹುಮಾನ

ನಿಮಗೂ, ನಿಮ್ಮ ಬಾಲಕ ಬಾಲಕಿಯರಿಗೂ ಮತ್ತು ಸ್ನೇಹಿತರಿಗೂ ಅತ್ಯಂತ ಉಪಯೋಗವಾದ

ಬಹುಮಾನ
ಹೆಂಗಸರಿಗೆ ೮ ಆಣೆ
ಸುಲಭವಾದ ಬಹುಮಾನದ
ಡಾಲು ಖರ್ಚು ಇಲ್ಲ.

ENGLISH SELF=INSTRUCTOR.

ಆಂಗ್ಲಭಾಷಾ ಪ್ರಕಾಶಕ.

ಬಹುಮಾನ
ಅಲ್ಪ ಬೆಲೆಗೆ ಉತ್ತಮ ಪುಸ್ತಕ ಮತ್ತು ಬಹುಮಾನ. ೧ ತಿಂಗಳ ಮೇಲೆ ಬಹುಮಾನವಿಲ್ಲ.

ಬೆಲೆ ರೂ. ೧—೮—೦. ಅನ್ಯರ ಸಹಾಯವಿಲ್ಲದೆ ಸುಲಭವಾಗಿ ಇಂಗ್ಲೀಷ್ ಕಲಿಯುವ ಪುಸ್ತಕ. ಕ್ರಯ ರೂ. ೧—೮—೦.

ಈ ದೊಡ್ಡ ಪುಸ್ತಕದಲ್ಲಿ ೧ ನೇ ಭಾಗ, ೨ ನೇ ಭಾಗ, ೩ ನೇ ಭಾಗ, ೪ ನೇ ಭಾಗ, ೫ ನೇ ಭಾಗ—ಈ ೫ ಭಾಗಗಳೂ ಅಡಕವಾಗಿವೆ. ಬಾಲಕ ಬಾಲಕಿಯರು ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳು ಮತ್ತು ವರ್ತಕರು ಮುಂತಾದವರು ಉಪಾಧ್ಯಾಯರ ಸಹಾಯವಿಲ್ಲದೆ ಓದುವುದು. ಬರೆಯುವುದು, ಮಾತಾಡುವುದು ಸುಲಭವಾಗಿ ಕಲಿಯಬಹುದು. ಕನ್ನಡ ತಿಳಿದಿದ್ದರೆ ಸಾಕು. ಇಂಗ್ಲೀಷ್ ಅಕ್ಷರಾಭ್ಯಾಸ, ಶಬ್ದಸಂಯೋಜನ, ಸ್ವರಾಕ್ಷರಗಳ ವಿವಿಧ ಶಬ್ದಾಭ್ಯಾಸ, ಪಾಠಶಾಲೆಯಲ್ಲಿ ೫ ನೇ ತರಗತಿ ಕಲಿಯುವಷ್ಟು ವ್ಯಾಕರಣ ಕ್ರಮಗಳು ಮತ್ತು ಅಭ್ಯಾಸಗಳು; ಇಂಗ್ಲೀಷ್ ಭಾಷೆಯಲ್ಲಿ ಬಗೆಬಗೆಯಾದ ವಾಕ್ಯಗಳನ್ನು ಮಾಡುವ ಕ್ರಮ ಮತ್ತು ನೂರಾರು ಅಭ್ಯಾಸಗಳು, ಸರ್ವವಿಷಯಗಳನ್ನು ಕುರಿತು ಪ್ರಶ್ನೋತ್ತರ ಸಂಭಾಷಣೆಗಳು ೬೦೦, ಪ್ರಪಂಚದ ಸರ್ವವಿಷಯಗಳನ್ನು ಕುರಿತು ಸಂಭಾಷಣೆ ಮಾಡುವಾಗ ಬೇಕಾಗುವ ಆ ವಿಷಯಕ್ಕೆ ತಕ್ಕ ಇಂಗ್ಲೀಷ್-ಕನ್ನಡ, ಕನ್ನಡ-ಇಂಗ್ಲೀಷ್ ಶಬ್ದಕೋಶ (ಡಿಕ್ಷನರಿ); ಭಾಷಾಜ್ಞಾನ ಮತ್ತು ಅರ್ಥಜ್ಞಾನಕ್ಕೆ ತಕ್ಕ ಅಭ್ಯಾಸಗಳು, ಕನ್ನಡ ಗಾದೆಗಳಿಗೆ ಸರಿಯಾದ ಇಂಗ್ಲೀಷ್ ಗಾದೆಗಳು, ಪತ್ರವ್ಯವಹಾರದಲ್ಲಿ ಉಪಯೋಗಿಸುವ ಸಾಂಕೇತಿಕ ಶಬ್ದಗಳು, ಕ್ಷೇಮಸಮಾಚಾರ, ಲೇವಾದೇವಿ ಮುಂತಾದ ವಿಷಯಗಳನ್ನು ಕುರಿತು ತಂತಿವರ್ತಮಾನ ಮತ್ತು ಕಾಗದಪತ್ರಗಳನ್ನು ಬರೆಯುವ ಅನೇಕ ಕ್ರಮಗಳು ಮತ್ತು ನಮೂನೆಗಳು, ಇವುಗಳಿಗೆ ಸ್ಫುಟವಾದ ಕನ್ನಡ ಅಕ್ಷರದಲ್ಲಿ ಉಚ್ಚಾರಣೆ ಮತ್ತು ಅರ್ಥಸಹ ಉಳ್ಳವು. ಈ ಪುಸ್ತಕ ನಮ್ಮಲ್ಲಿ ಮಾತ್ರ ದೊರೆಯುತ್ತೆ. ಕೆಲವು ಪ್ರತಿಗಳು ಮಾತ್ರ ಉಳಿದಿವೆ. ತ್ವರೆಮಾಡಿರಿ. [17-6]

ವಿಳಾಸ:—ಎ. ವಿ. ರಾಯಲು, ಬಾಲಕೃಷ್ಣ ಬುಕ್ ಡಿಪೋ, ಜೋರಿಪೇಟೆ, ಬೆಂಗಳೂರು ಸಿಟಿ.

"ವೃತ್ತಾಂತ ಪತ್ರಿಕೆ" ಏಜಂಟರಿಗೆ ನೋಟೀಸ್.

ವೃತ್ತಾಂತ ಪತ್ರಿಕೆಯ 1912-13 ನೇ ವರುಷದ ಮೂರನೇ ಕ್ವಾರ್ಟರು ಕಳೆದ ಫೆಬ್ರವರಿ ತಿಂಗಳಿಗೆ ಪೂರೈಸಿದೆ. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಮೈದುಮಾಡಿ, "ಬಿ" ಫಾರಂಗಳಿಗೆ ಎತ್ತಿ ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃತಪಡಿಸಿದೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು.

ನಾಣ್ಯವಾದ ವಾಚ್! ಬಹು ಸುಲಭ ಕ್ರಯ.

ರೈಲ್ವೆ ರಿಜಿಸ್ಟರ್ ವಾಚ್.

ಇದು ಬಹು ಬಲಿಷ್ಟವಾದ ಮತ್ತು ಮಜಬೂತಾದ, ಬಹಳ ಕಾಲ ಬಾಳಿಕೆ ಬರುವಂಥಾ ಸಾಮಾನುಗಳಿಂದ ತಯಾರಾಗಿ ಬಂದಿರುತ್ತೆ. ಸರ್ಕಾರಿ ಉದ್ಯೋಗಸ್ಥರು, ಕೋರ್ಟು ಕಚೇರಿಗೆ ಸಕಾಲಕ್ಕೆ ಹಾಜರಾಗತಕ್ಕವರು, ವಕೀಲರು, ಉಪಾಧ್ಯಾಯರು, ವ್ಯಾಪಾರಸ್ಥರು, ಪರಸ್ಥಳ ಪ್ರಯಾಣಿಕರು, ಆದಿಯಾಗಿ ಸರ್ವರೂ ಉಪಯೋಗಿಸುವದಕ್ಕೆ ಅನುಕೂಲವಾದದ್ದು.



ಮುಖ್ಯವಾಗಿ ಕಷ್ಟಪಟ್ಟು ಕೆಲಸಮಾಡುವ ಒಟಟು ಜನರಿಗೆ ಬಹು ಅನುಕೂಲವಾದದ್ದು. ತಲೆಯಲ್ಲಿ ಬೆಂಗಳೂರಿದ್ದು ಗಂಭೀರವಾದ ಘಂಟೆ ಮತ್ತು ನಿಮಿಷಗಳ ಮುಳ್ಳುಗಳುಳ್ಳದ್ದು. ಸುಂದರವಾದದ್ದು. ಬಹು ಸುಲಭ ಕ್ರಯ [54-3]

ಇದರ ಕ್ರಯ ವಾಚ್ 1 ಕ್ಕೆ ರೂ 3-0-0

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

ಪಿ. ಆರ್. ವೆಂಕಟರಮಣ ಅಂಡ್ ಕಂಪನಿ,
ನಂ. 7 ಕೊಪ್ ವೆಂಕಟಾಚಲ್ಲಯರ್ ಬೀದಿ, ಮದರಾಸು.

THE PLACE FOR HASSAN CAPS IS
HASSAN

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

9-14

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಯವಾಗುತ್ತಿರುವ ಟೋಪಿಗಳ ದಾರಕ್ಕೆ ಬೇಕಾದದ್ದು. ಅದೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಮುಖ್ಯವಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದವೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಹಸಿರು, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.; ೧ ರೂ. ೪ ಆ.

ಚುಕ್ಕೆಯುಳ್ಳ ಟೋಪಿಗಳು ರೂ ೧—೮, ರೂ. ೧—೧೨.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨.

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ.

ಮುಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ:—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಕುಂತಳಾನಂದ ತೈಲವು

147-28

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನು ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇವರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ—ಬಿ ಎಮ್ ನಾಥ ಮತ್ತು ಕಂಪನಿ,
ವೇಪೇರಿ, ಮದರಾಸ್

ಗುಣಕಂಡ ಮೂರು ಸುಪ್ರಖ್ಯಾತ ಔಷಧಗಳು.

ಸ್ವಾಕ್ಸ್ಸರ ಮಲೆನಾಡು ಜ್ವರಮಾತ್ರೆಗಳು—ಶೈತ್ಯಪ್ರದೇಶಗಳಲ್ಲಿ ಬಿಟ್ಟುಬರುವ ಅಥವಾ ದೀರ್ಘವಾದ ಶೀತಪಿತ್ತ ಎಲ್ಲಾ ಜಾತಿಯ ಚಳಿ ಜ್ವರಗಳನ್ನೂ ಶೀಘ್ರವಾಗಿಯೂ ಸಂಪೂರ್ಣವಾಗಿಯೂ ವಾಸಿಮಾಡುತ್ತೆಂದು ಪ್ರಖ್ಯಾತಿ ಹೊಂದಿರುವ ಮಾತ್ರೆಗಳೇ ಇವು ಕ್ರಯ ಡಬ್ಬಿ 1ಕ್ಕೆ ರೂಪಾಯಿ 1 0 0

ಸ್ವಾಕ್ಸ್ಸರ ಉಬ್ಬಸದ ಔಷಧ—ಉಬ್ಬಸ ಕೂಡಿದ ಕೆಮ್ಮು ಮೊದಲಾದ ಶ್ವಾಸಕೋಶದ ವ್ಯಾಧಿಗಳಿಗೂ ಶೀತದ ಗಡ್ಡೆಗಳಿಗೂ ಬಹಳ ಉತ್ತಮವಾದ ಮತ್ತು ಶೀಘ್ರವಾಗಿ ಗುಣಕೊಡುವ ಔಷಧ ಕ್ರಯ ಬಾಟ್ಲಿ 1ಕ್ಕೆ ರೂಪಾಯಿ 1 0 0 [36 ೯]

ಸ್ವಾಕ್ಸ್ಸರ ನಾಯಿಕೆಮ್ಮಿನ ಸಿದ್ಧೌಷಧ—ಇದು ಖಾತ್ರಿಯಾದ, ನಂಬಿಕೆಯುಳ್ಳ ಮತ್ತು ಅಮೋಘವಾದ ಔಷಧ ಬೇಗನೆ ಖಂಡಿತವಾಗಿಯೂ ಸಂಪೂರ್ಣವಾದ ಗುಣಕೊಡುವಂಥಾದ್ದು ಕ್ರಯ ಬಾಟ್ಲಿ 1ಕ್ಕೆ ರೂ 1 0 0

ಪ್ಯಾಕಿಂಗ್ ಪೋಸ್ಟೇಜ್, ವಿ ಪಿ ಖರ್ಚು ಪ್ರತ್ಯೇಕ ಈ ಔಷಧಗಳ ಗುಣಾದಿಗಳನ್ನು ವಿವರಿಸುವ ಹಸ್ತಪತ್ರಗಳನ್ನು ಕೇಳಿದವರಿಗೆ ಬಿಟ್ಟಿ ಕಳುಹಿಸುವೆವು

ವಿಳಾಸ—ಜಿ ಎಸ್ ಸ್ಟಿಯರ್ಸ್,
117 ಪ್ರೋಸಾಂಸ್ ಒಸ್ತ್ರವೇ, ಮದರಾಸ್

ಇವರಲ್ಲೂ ಸಿಕ್ಕುತ್ತವೆ—(1) ಎಡ್ವರ್ಡ್ ಕಂಪನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ (2) ಸ್ಕೇಲು ಡ್ ಉಸ್ಮಾನ್ ಕಂಪನಿ, ಬೆಂಗಳೂರು ದಂಡು, (3) ಕೆ ವಿಟ್ಠಲ್‌ರಾವ್ ಕಂಪನಿ, ಮಂಗಳೂರು (4) ಎನ್ ಪಿಳ್ಳೆ ಕಂಪನಿ, ಪಾಲಘಾಟ್ (5) ಬಾಯಿಸ್ ಕಂಪನಿ, ಕಲ್ಲಿಕೋಟೆ

ಹತ್ತಿಯ ಹಿಂಡಿ! ಹತ್ತಿಯ ಹೊಟ್ಟು!

ಶಾಸ್ತ್ರಜ್ಞರ ಅಭಿಪ್ರಾಯ.

ಈ ಪದಾರ್ಥಗಳನ್ನು ಪರೀಕ್ಷಿಸಿದ್ದರಲ್ಲಿ ಇದು ದನಗಳಿಗೆ ಉತ್ಕೃಷ್ಟವಾದ ಆಹಾರವಾಗಿದೆ ವಿಲಾಯಿತಿಯಲ್ಲಿ ತಯಾರಾಗುವಂತೆಯೇ ಶ್ರೇಷ್ಠವಾಗಿದೆ ಹತ್ತಿಯ ಬೀಜಕ್ಕಿಂತ ಇದು ಬಹಳ ಪುಷ್ಟಿಕಾರಿ ಇದಕ್ಕಿಂತ ಉತ್ತಮವಾಗಿ ತಯಾರಿಸುವುದು ಅಸಾಧ್ಯ ಹೀಗೆಂದು ಬೊಂಬಾಯಿ ವ್ಯವಸಾಯದ ಇಲಾಖೆಯ ರಸಾಯನಶಾಸ್ತ್ರಜ್ಞರೂ, ಪೂನಾ ವ್ಯವಸಾಯದ ಕಲಾಶಾಲೆಯ ಅಧ್ಯಕ್ಷರೂ ಆದ ಡಾಕ್ಟರ್ ಮ್ಯಾನ್ ಎಂಬ ದೊಡ್ಡ ಪಂಡಿತರೇ ಬರೆದಿರುವರು [50 5]

ಒಂದೇ ಭಾಗ ಹಿಂಡಿಗೆ ನಾಲ್ಕು ಭಾಗ ಹೊಟ್ಟು ಬೆರೆಯಿಸಿ ದನಗಳಿಗೂ ಕುದುರೆಗಳಿಗೂ ಕೊಡುತ್ತಾಬಂದರೆ ಬಲಹೆಚ್ಚಿ ದನಿವು ಕಡಮೆಯಾಗುವುದು ಕರೆಯುವ ಎಮ್ಮೆ ಹಸುಗಳಿಗಂತೂ ಈ ಹೊಟ್ಟು ಹಿಂಡಿಯೂ ಅತ್ಯವಶ್ಯಕ

ಎಲ್ಲಾ ಬಗೆಯ ಪೈರುಗಳಿಗೂ, ತೆಂಗು, ತರಕಾರಿ, ಹೂವಿನ ಗಿಡಗಳಿಗೂ ಇವು ಕೇವಲ ಆವಶ್ಯಕವಾದ ಗೊಬ್ಬರ ನಮ್ಮ ವಿಳಾಸ —

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, ೧೧, ಕಿಲಾರಿ ರೋಡ್, ಬೆಂಗಳೂರು ಸಿಟಿ

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

84 45

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರಶಿ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ನೆರೆಹೊರೆಯಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಜಿ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



ಪಿಸ್ಸಿಲುವಿನ ನೋವು, ಪಕ್ಕೆಗಳಲ್ಲಿ ಆಗುವ ನೋವ, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ನೋವು ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸಳೆಯುವ ಬಾಧೆ, ಖಂಡಗಳು ಇಳಿಯುವುದು, ವಿಶ್ರಾಂತಿ ಕೊಡದೆ ಇರುವುದು, ಸದ್ದೆಹತ್ತದೆ ಇರುವುದು—ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುವೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಶಾಖವು ಮೈಗೆಲ್ಲಾ ವ್ಯಾಪಿಸುತ್ತ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಚ್ಚುತ್ತಾ ಬಂದರೆ ಈ ವಾಯುವಿನ ಮಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಡೋಂಗರೆ ಇವರ ಬಾಲಾಮೃತ.

[115 38

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ಥಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳು ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ವಿಕಟಪ್ರತಾಪ ಆಫೀಸು, ಕುಪ್ಪಂ ಪೋಸ್ಟು

ಮೋಲ್ಕಂಡವರಲ್ಲಿ ತಯಾರಾಗುವ ಅದ್ಭುತವಾದ ನೀಲಕಪ್ಪು ಶಾಯಿ ಪುಡಿ ಪೊಟ್ಲ 1 ಕ್ಕೆ ಕ್ರಯ 3 ಪೈ 100 ಪೊಟ್ಲಗಳಿಗೆ 6 ಆಣೆ 1,000 ಪೊಟ್ಲಗಳಿಗೆ 3 ರೂಪಾಯಿ ಪ್ಯಾಕಿಂಗ್, ಪೋಸ್ಟೇಜ್ ಬೇರೆ ಎರಡಾಣೆ ಸ್ಟಾಂಪು ಕಳುಹಿಸಿದವರಿಗೆ ಮಾದರಿಗೋಸ್ಕರ ಕೆಲವು ಪೊಟ್ಲಗಳು ಕಳುಹಿಸಲ್ಪಡುವವು

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ ! ಕನ್ನಡಕ್ಕೆ ಸುಲಭವಾದ ದಾರಿ !

ಮೈಸೂರು ಲೋವರ್ ಸೆಕಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ 3 ಆಣೆ ಆರಕ್ಕೊಂದು ಉಚಿತ

[187 16] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಶ್ರೀಲಕ್ಷ್ಮೀನರಸಿಂಹ ಆಯುರ್ವೇದ ವೈದ್ಯಶಾಲಾ

ಜ್ವರಮುರಾರಿ—ಸಕಲ ವಿಧವಾದ ಜ್ವರಗಳಿಗೆ ಅಂಕುಶವಾಗಿದೆ ಇದನ್ನು ಉಪಯೋಗಿಸಿದೊಡನೆ ಸಕಲವಿಧವಾದ ಜ್ವರಗಳನ್ನೂ ಹತಮಾಡುವದು ಇದು ಬಹಳ ಕಹಿಯಾಗಿರುವ ಹಸುರುಸೊಪ್ಪುಗಳು ಬೇರುಗಳು ಮೊದಲಾದ ಕ್ಷಾರದಿಂದ ಮಾಡಲ್ಪಟ್ಟದ್ದು ರಸ, ಗಂಧಕ, ಪಾಷಾಣಾದಿಗಳೊಂದೂ ಈ ಔಷಧಕ್ಕೆ ಸೇರಿದ್ದಿಲ್ಲ ಇದು ನಮ್ಮ ಪೂರ್ವಿಕರು (ವೃದ್ಧರು)ಗಳಿಂದ ಕಲಿತ ಸಿದ್ಧಪ್ರಯೋಗ ಈ ಔಷಧಕ್ಕೆ ಪಥ್ಯ ಪಾನಾದಿಗಳೇನೂ ಇಲ್ಲ ಈ ಔಷಧವನ್ನು ಒಂದು ಸಾರಿ ತರಿಸಿ ಪರೀಕ್ಷಿಸಿದ ಒಡನೆ ಅವರಾಗಿ ತಮ್ಮ ಸ್ನೇಹಿತರುಗಳಿಗೆ ತಿಳಿಸಿ ಸಂತೋಷಪಡುವರು ಇದು ಮದರಾಸಿನಲ್ಲಿ ಅನೇಕ ಸಾವಿರ ಜನಗಳು ಉಪಯೋಗಿಸಿದ ಸಿದ್ಧೌಷಧ ಪ್ರತಿ ದಿವಸ ಅನೇಕ ಜನಗಳು ಉಪಯೋಗಿಸುತ್ತಲೂ ಇದಾರೆ ಈ ಔಷಧ ಸೇವನೆ ಕ್ರಮವು ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು ಎಂಥಾ ಜ್ವರವನ್ನೂ 8-10 12-16 ಪೊಟ್ಟಣಗಳ ಔಷಧದಲ್ಲಿ ನಿಶ್ಶೇಷವಾಗಿ ಜೀರ್ಣಿಸಿ ಅನ್ನದ್ವೇಷವನ್ನು ಹೋಗಲಾಡಿಸಿ ಹಸಿವನ್ನುಂಟುಮಾಡಿ, ಬಲಹೀನವನ್ನು ಹೋಗಲಾಡಿಸುವದು ಇದರ ಬೆಲೆ 12 ಪೊಟ್ಲಗಳ ಡಜನ್ 1 ಕ್ಕೆ 13 ಆಣೆ ಟಪ್ಪಾಲ್, ಪಾರ್ಸಲ್ ಛಾರ್ಜು ಪ್ರತ್ಯೇಕ [40 7]

ದಂತಧಾವನ ರತ್ನಾಕರಂ—ಇದು ಹಲ್ಲುಗಳಿಗೆ ಬಾಧಾಕರವಾದ ಪದಾರ್ಥಗಳು ಯಾವದೂ ಸೇರಿಸದೆ ಅನೇಕ ಮೂಲಿಕೆಗಳಿಂದ ತಯಾರುಮಾಡಿದ ಹಲ್ಲು ಪುಡಿ ಸುವಾಸನೆಯಾಗಿರುವದು ಇದರಿಂದ ಹಲ್ಲು ಉಜ್ಜಿಕೊಂಡರೆ ದಂತಗಳಲ್ಲಿ ಹುಟ್ಟುವ ರೋಗಾದಿಗಳು ಹೋಗಲಾಡಿಸಿ ವಾತಪಿತ್ತ ಶ್ಲೇಷ್ಮಗಳನ್ನು ಶಮನಮಾಡಿ ಹಲ್ಲುನೋವು, ಬಾಯಿನಾತ, ಹಲ್ಲುಜೋವು, ಹಲ್ಲಿನಲ್ಲಿ ರಕ್ತಕ್ಕೆ ಹುಳಗಳು, ಹಲ್ಲಿನಲ್ಲಿ ರಕ್ತಬರುವದು, ಹುಳುಕುಹಲ್ಲು, ಇಗುಡುಬಾವು ಮೊದಲಾದ್ದನ್ನು ಪರಿಹರಿಸಿ ಹಲ್ಲು ಸಂದುಗಳನ್ನು ದಟ್ಟವಾಗಿ ಸೇರಿಸಿ ಕಳೆಕೊಟ್ಟು ದೇಹಕ್ಕೆ ಒಳ್ಳೆ ಗುಣವನ್ನುಂಟುಮಾಡುವದು ಈ ಪುಡಿಯನ್ನು ಹೊಟ್ಟೆಗೂ ತೆಗೆದುಕೊಳ್ಳಬಹುದು ಇದರ ಬೆಲೆ ಡಬ್ಬಿ 1 ಕ್ಕೆ 4 ಆಣೆ ಟಪ್ಪಾಲ್, ಪಾರ್ಸಲ್ ಛಾರ್ಜು ಪ್ರತ್ಯೇಕ ವಿಳಾಸ —

ರಾಜವೈದ್ಯಂ ಮೈಸೂರು ಪಂಡಿತರು ಎಂ ಕೆ ಶೇಷಾಚಾರ್ರು,
ನಂ 93, ಬೈನಾಬಜಾರ್ ರೋಡ್, ಮದರಾಸ್

1914 ನೆಯ ಕನ್ನಡ ಲೋ॥ ಸೆ॥ ಟೆಕ್ಸ್ಟು 5 ಆಣೆ

ಪತ್ರರತ್ನಾಕರ—ಎಲ್ಲಾ ಪತ್ರಗಳ ನಮೂನೆಗಳುಳ್ಳದ್ದು, ಕ್ರಯ 8 ಆಣೆ
ಲೇಖ್ಯತತ್ವಪ್ರಕಾಶಿಕೆ—ಎಲ್ಲಾ ಅರ್ಜಿಗಳ ನಮೂನೆಗಳುಳ್ಳದ್ದು, 4 ಆ
ಆರೋಗ್ಯಪ್ರಶ್ನೋತ್ತರ— 4 5 ನೇ ತರಗತಿಗಳಿಗೆ, ಕ್ರಯ 1 ಆಣೆ [61-
ವಿಳಾಸ—ಹೆಚ್ ವೆಂಕಟರಾಮಯ್ಯ, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

ಲೇಖನಪ್ರಕಾಶಿಕಾ.

ಸರಿಯಾಗಿ ಪತ್ರ ಬರೆಯತಕ್ಕವರಿಲ್ಲವೆಂದು ಪೇಚಾಡುವವರೂ, ಲೇವಾದೇವಿ ಮಾಡುವವರೂ ಸಹಾ ಅಗತ್ಯವಾಗಿ ತರಿಸಿಕೊಳ್ಳಿ ಬೆಲೆ ಅಂಚೆ ವೆಚ್ಚ ಸಹ ರೂ 1 2 0 ನಾವೆಲ್‌ಗಳು—ಸನ್ಮಿತ್ರ 2 ಆ, ಚಪಲೆ 1 ಆ ರಾಜೇಂದ್ರ ಮತ್ತು ಸುಂದರಿ 2 ಆ ಪ್ರಸಾದವರ್ಣನೆ 6 ಪೈ 300 ವರ್ಷಗಳ ಕ್ಯಾಲೆಂಡರ್ 6 ಪೈ ಟೆನಿಸ್ಟು ಮ್ಯಾನ್ಯುಯಲ್ 3 ಆ ಅಂಚೆ ವೆಚ್ಚ ಬೇರೆ 203 ನೇ ವೃತ್ತಾಂತ ಪತ್ರಿಕೆ ನೋಡಿ ವಿಳಾಸ —

[64 1] ಕೆ ಮಟ್ಟವರಿ ಮತ್ತು ಕಂಪೆನಿ, ಶಿವಮೊಗ್ಗ

ಸೊಗಸಾದ ಕನ್ನಡ ಪುಸ್ತಕಗಳು.

ಉನ್ಮತ್ತೆ—3 ಆಣೆ ಬಂಗಾಳಿ ನಾವಲ್ ನವಾಬ ಸಿರಾಜನು ಒಬ್ಬ ಹಿಂದೂಕೋಟೀಶ್ವರನ ಮಗಳನ್ನು ಕೇಳಿ ಅವಮಾನಪಟ್ಟು ಆಕೆಯ ಗಂಡನನ್ನು ಕೊಲ್ಲಿಸಲು ಆಕೆಯ ಬುದ್ಧಿಭ್ರಮೆ, ಸಿರಾಜನ ವನವಾಸ ಗಂಗೆಯ ಬಂಗಾಳ ಸ್ಟೀಮರಿನ ವರ್ಣನೆ, ಉನ್ಮತ್ತೆಯು ಸಿರಾಜನ ಮಗುವನ್ನು ಸಾಕುವುದು ಇತ್ಯಾದಿ ಉತ್ತಮ—4 ಆಣೆ ಸಂಸಾರದಲ್ಲಿ ದಂಪತಿಗಳಿಗುಂಟಾಗುವ ಮನಸ್ತಾಪಗಳು ಅವನ್ನು ಪರಿಹರಿಸಿಕೊಳ್ಳುವ ವಿಧ ಇವನ್ನೆಲ್ಲ ತಿಳಿಸುವ ಮನೋಹರವಾದ ಕಥೆ ಜಪಾನ್ ಸಾಮ್ರಾಜ್ಯ—6 ಆಣೆ ಅದ್ಭುತವಾಗಿ ಅಭಿವೃದ್ಧಿಯಾಗುತ್ತಿರುವ ಜಪಾನ್ ದೇಶದ ಸಾಂಸ್ಕೃತಿಕ ಹಾಗೂ ರಾಜ್ಯ ವಿಚಾರ ಸುಂದರ ಚಿತ್ರವುಂಟು [165 6]

ವಿಳಾಸ—ಟಿ ಕೃಷ್ಣಸ್ವಾಮಿ, ಆ ಮಾ ನಾರ್ಮಲ್ ಸ್ಕೂಲ್ ಮೈಸೂರು

ವಿಕ್ಟೋರಿಯಾ ಲೈಫ್ ಅಷೂರೆನ್ಸ್ ಕಂಪನಿ ಲಿಮಿಟೆಡ್.

(1913 ನೇ ಪ್ರಾವಿಡಂಟ್ ಸೂಸೈಟಿ ಆಕ್ಟಿನಂತೆ ರೆಜಿಸ್ಟರಾದದ್ದು)

ಮೂಲಧನ—10,00,000 ರೂಪಾಯಿ (ಹತ್ತು ಲಕ್ಷ)

ಹೆಡ್ ಆಫೀಸ್—98, ಕ್ಲೈವ್ ಸ್ಟ್ರೀಟ್, ಕಲ್ಕತ್ತಾ

ದಕ್ಷಿಣ ದೇಶ ಮತ್ತು ಸಿಲೋನ್‌ಗೆ ಬ್ರಾಂಚ್ ಆಫೀಸು—ಚೂಳೈ, ಮದರಾಸ್

ಪೋಷಕರು—ಕೂಚ್ ಬೆಹಾರದ ರಾಜರಾಜೇಂದ್ರ ನಾರಾಯಣ ಮಹಾರಾಜಾ ಬಹದೂರ್ ಗಿಧೋರ್ ಮಹಾರಾಜಾ ಸರ್ ರಾವಣೇಶ್ವರ ಪ್ರಸಾದ್‌ಸಿಂಗ್ ಬಹದೂರ್, ಕೆ ಸಿ ಐ ಇ ನದ್ದಿಯಾ ಮಹಾರಾಜ ಕ್ಷೌನಿಶ್ ಚಂದ್ರರಾಯಿ ಬಹದೂರ್, ನಟೋರ್ ಮಹಾರಾಜ ಜಗದಿಂದ್ರನಾಥರಾಯಿ ಬಹದೂರ್, ಬಂಗಾಳ ಉಟ್ರಪಾರಾ ರಾಜಾಪಿಯಾರಿ ಮೋಹನ್ ಮುಖರ್ಜಿ ಬಹದೂರ್, ಎಂ ಎ ಬಿ ಎಲ್, ಸಿ ಎಸ್ ಐ, ಮತ್ತು ಕಲ್ಕತ್ತಾ ಶೋಭಾಬಜಾರ್ ರಾಜಾ ರಾಜಾ ವಿನಯಕೃಷ್ಣ ಬಹದೂರ್

ಪ್ರಾಸ್ಪೆಕ್ಟಸ್ ಪ್ರಪೋಸಲ್ ಫಾರಂ, ಬೋನಸ್ ಪಟ್ಟಿಗಳನ್ನು ಅಪೇಕ್ಷಿಸತಕ್ಕವರು ಈ ವಿಳಾಸಕ್ಕೆ ಬರೆಯಬೇಕು— [35-9]

"ವಿಕ್ಟೋರಿಯಾ" ಕಂಪನಿ ಸೆಕ್ರೆಟರಿ, ಚೂಳೈ, ಮದರಾಸ್

ಜೀವ ಮತ್ತು ಡಿವಿಜನ್ ಏಜಂಟರುಗಳು ಬೇಕು— ಧಾರಾಳವಾದ ಕಮಿಷನ್ ಮತ್ತು ಕೈ ತುಂಬಾ ಸಂಬಳ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

14—3—1913 ರಿಂದ 21—3—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	2	2	1	1
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	10	8	5	3
ಮೈಸೂರು ,,	0	0	168	257
ಕೋಲಾರ್ ,,	4	1	4	2
ಕೋಲಾರ್ ಚಿನ್ನದ ಗಣಿಗಳು	1	2	0	0
ತುಮಕೂರು ಡಿಸ್ಟ್ರಿಕ್ಟು	0	0	14	6
ಹಾಸನ ,,	0	0	15	13
ಚಿತ್ರದುರ್ಗ ,,	0	0	0	0
ಕಡೂರ್ ,,	1	3	6	0
ಶಿವಮೊಗ್ಗ ,,	1	2	0	0
ಜುಮ್ಲಾ	30	18	507	282

ಶಾಲಿವಾಹನ ಶಕ ವರುಷಂಗಳು 1835 ನೇ ಪರೀಧಾವಿ ಸಂವತ್ಸರೇ ಉತ್ತರಾಯಣೆ ಶಿಶಿರಋತೌ ಫಾಲ್ಗುಣ ಬಹುಳ ತ್ರಯೋದಶಿ ಶುಕ್ರವಾರದಿಂದ ... ಸಂವತ್ಸರೇ ವಸಂತಋತೌ ಚೈತ್ರ ಶುದ್ಧ ಚೌತಿ ಗುರುವಾರದ ವರೆಗಿನ ... ವಾರದ ಪಂಚಾಂಗ.

1913 ನೇ ಏಪ್ರಿಲ್.

ದಿ.	ವಾರ		ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮಿಹಾನ ಮಾಸ ತೇದಿ
[illegible]	ಶುಕ್ರ	,	ತ್ರಯೋದಶಿ	30-56	ಪೂಭಾ	59-12	23
[illegible]	ಶನಿ		ಚತುರ್ದಶಿ	35-16	ಉ.ಭಾ	60-0	24
[illegible]	ಭಾನು	§	ಅಮಾವಾಸ್ಯೆ	10-3	ಉ.ಭಾ	1-58	25
[illegible]	ಸೋಮ	..	ಪಾಡ್ಯಮಿ	13 15	ರೇವತಿ	10-0	26
[illegible]	ಮಂಗಳ	†	ಬಿದಿಗೆ	15-11	ಅಶ್ವಿನಿ	14-1	27
[illegible]	ಬುಧ	*	ತದಿಗೆ	15 16	ಭರಣಿ	16-27	28
[illegible]	ಗುರು	‡	ಚೌತಿ	45-8	ಕೃತ್ತಿಕೆ	18-23	29

.. ಪ್ರದೋಷ, ಮಾಸಶಿವರಾತ್ರಿ § ಸರ್ವತ್ರ ಅಮಾವಾಸ್ಯೆ, ಮಿಹಾನೆ 1 ... ಚಂ, ಬು, ರಾ. ಮಳೆ ನಕ್ಷತ್ರ—ರೇವತಿ 3 ನೇ ಪಾದ . ಚಾಂದ್ರ ... ಆರಂಭ, ಆರೋಗ್ಯಪ್ರತಿಪತ್. † ಅಮೃತಸಿದ್ಧಿಯೋಗ, ಚಂದ್ರೋದಯ, ... ಚಂದ್ ೧. * ಸೌಭಾಗ್ಯಗೌರೀ ವ್ರತ, ಲಕ್ಷ್ಮೀನಿವಾಸದವರ ..., ವಜ್ರಯೋಗ, ಮಳೆ ನಕ್ಷತ್ರ-ರೇವತಿ 4ನೇ ಪಾದ. ‡ ವರಗಣಪತೀವ್ರತ.

ಪೇಟೆ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಅಕ್ಕಿ ಸಲ್ಲಾ ೧ಕ್ಕೆ (ಹೊಸದು) ರೂ.	೧೫-೨-೦	೧೭-೮-೦
...ಅಕ್ಕಿ ಅವಲ್ ,,	೧೫-೫-೦	೧೭-೮-೦
,, ದುಯಂ ,,	೧೫-೦-೦	೧೭-೦-೦
...ಡೆ ಅಕ್ಕಿ ,,	೧೪ ೮-೦	೧೬-೪-೦
... ಅವಲ್ ,,	೧೭-೮-೦	೧೮ ೮-೦
,, ದುಯಂ ,,	೧೬-೦-೦	೧೭-೮-೦
...ಬೀಳ ಅವಲ್ ಸಲ್ಲ ೧ಕ್ಕೆ	೧೪-೦-೦	೧೪-೮-೦
,, ದುಯಂ ,,	೧೩-೦-೦	೧೩-೮-೦
...ರಾಗಿ ಸಲ್ಲಾ ೧ಕ್ಕೆ	೭-೦-೦	೫-೦-೦
... ,,	೬-೪-೦	೪-೧೨-೦
... ,,	೬-೧೨-೦	೭ ೪-೦
...ಬೆ ಸಲ್ಲಾ ೧ಕ್ಕೆ	೧೦-೪-೦	೧೩-೧೨-೦
...ಅವರೆ ,,	೯-೮-೦	೧೧-೦-೦
... ,,	೧೨-೮-೦	೧೪-೦-೦
... ,,	೧೪-೮-೦	೧೬-೦-೦
... ,,	೧೦-೮-೦	೧೨-೦-೦
...ಸೇರು ೧೨೭ಕ್ಕೆ	೨೪-೦-೦	೨೪-೦-೦
... ಸಲ್ಲಾ ೧ಕ್ಕೆ	೬-೧೦-೦	೭-೦-೦
...೧೨೭ ಸೇರಿಗೆ	೧೩ ೮-೦	೧೪-೦-೦
...ಮಣ ೧ಕ್ಕೆ	೨-೪-೦	೩-೮-೦
... ,,	೪-೦-೦	೩-೪-೦
,, ದುಯಂ	೩-೦-೦	೧-೮-೦
...ದ್ದ ಅಚ್ಚು ೧೦೦ಕ್ಕೆ	೪-೮-೦	ಮಣ ೫-೮-೦
... ಮಣ ೧ಕ್ಕೆ	೬-೪-೦	೬-೬-೦
,, ,,	೫-೧೨-೦	೬-೦-೦
...ಬು ಸಲ್ಲಾ ೧ಕ್ಕೆ	೫-೪-೦	೫-೪-೦
,, ,,	೫-೮-೦	೬-೦-೦
...ಹಲ್ಲು ಮಣ ೧ಕ್ಕೆ	೧-೮-೦	೧-೪-೦
,, ಹೊಟ್ಟು ,,	೧-೦-೦	೦-೧೪-೦
... ಮಣ ೧ಕ್ಕೆ	೧೯-೦-೦	೧೯-೦-೦
...ಟ್ಟ ಪಟ್ಟ ೧ಕ್ಕೆ	೫-೧೧-೦	೫-೦-೦
...ಯಿ ೧೦೦ಕ್ಕೆ	೬-೦-೦	೬-೦-೦
...ಯಿ ಮಣ ೧ಕ್ಕೆ	೧-೪-೦	೧-೦-೦
...ಳೆಕಾಯಿ ಮಣ ೧ಕ್ಕೆ	೦-೧೨-೦	೧-೮-೦
(...) ಕೆಂಪು	೧೫-೮-೦	೫೧-೮-೦
,, ಪಸಿಮೆ	೧೫-೧೪-೬	೧೫-೧೪-೬
,, ಗಟ್ಟಿ ತೋಲ ೧ಕ್ಕೆ	೨೪-೩-೦	೨೪-೦-೦
...ತೋಲ ೧೦೦ಕ್ಕೆ	೮೧-೦-೦	೮೧-೩-೯

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಂದು ಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ.

COTT'S EMULSION 2-14
(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

Always get the Emulsion with this mark—the Fishman —the mark of the "Scott" process!

ಇದಕ್ಕೆ ಸಮಾನವಾದದ್ದು ಮತ್ತ್ಯಾವದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವವು.

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷದ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತಿದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಮೀನುಮನುಷ್ಯ ಇರುವ

ಈ ಔಷಧದ ಗುರುತು

ಕೈಗಾರಿಕೆಗಳ ಮತ್ತು ವ್ಯಾಪಾರದ ಇಲಾಖೆ

ಇದರಲ್ಲಿಯೂ ಇನ್ನು ಮುಂದಿನ ಲೇಖನಗಳಲ್ಲಿಯೂ ಮೈಸೂರು ಸರ್ಕಾರದವರು ಕೈಗಾರಿಕೆಗಳ ಮತ್ತು ವ್ಯಾಪಾರದ ಇಲಾಖೆಯನ್ನು ನೂತನವಾಗಿ ಏರ್ಪಡಿಸಿರುವುದರ ಉದ್ದೇಶಗಳನ್ನು ಸ್ವಲ್ಪಮಟ್ಟಿಗೆ ವಿಸ್ತಾರವಾಗಿ ವಿಶದಪಡಿಸಿ ಹೇಳಲಿಚ್ಛಿಸುತ್ತೇನೆ ಮತ್ತು ಈ ಇಲಾಖೆಯ ಮುಂದಿನ ಕಾರ್ಯಸಿದ್ಧಿ ಯೋಚನೆಗಳು ಬಹಳ ಮಟ್ಟಿಗೆ ಮೈಸೂರು ದೇಶೀಯರ ಸಹಾಯಾನುಸಾರವಾಗಿಯೇ ಇರುವುವೆಂಬ ಬಹಳ ಮುಖ್ಯವಾದ ಅಂಶವನ್ನು ಮೊಟ್ಟಮೊದಲೇ ಎಲ್ಲರ ಗಮನಕ್ಕೆ ತರುವುದು ಉಚಿತವೆಂದು ತೋರುತ್ತದೆ. ಪ್ರಜೆಗಳೆಲ್ಲರೂ ಶಾಂತಚಿತ್ತರಾಗಿಯೂ ನಿರ್ಭೀತರಾಗಿಯೂ ಇದ್ದುಕೊಂಡು ಅವರವರ ನಿತ್ಯಕೃತ್ಯಗಳನ್ನು ಈತಿಬಾಧೆಗಳಿಲ್ಲದಂತೆ ನಡಿಸಿಕೊಂಡಿರಬೇಕೆಂಬ ಜನಗಳ ಹಿತಕ್ಕಾಗಿಯೇ ಸರ್ಕಾರದ ಕೆಲಸವೆಲ್ಲವೂ ಜರುಗುತ್ತಿರುವುದು ಜನಗಳ ಒಟ್ಟುಗೂಡುವಿಕೆಯಿಂದ ಮಾತ್ರವೇ ಸಾಧ್ಯವಾಗುವ ದೊಡ್ಡ ಕೆಲಸಗಳೂ ಸಣ್ಣ ಕೆಲಸಗಳೂ ಅನೇಕವಿರುವವು ಮತ್ತು ಅಂತಹ ಉದ್ದೇಶಗಳು ಕೈಗೂಡುವುದಕ್ಕಾಗಿ ತಕ್ಕ ಏರ್ಪಾಡನ್ನು ಕಲ್ಪಿಸುವುದು ಸರ್ಕಾರದ ಮುಖ್ಯ ಕರ್ತವ್ಯಗಳಲ್ಲೊಂದಾಗಿರುತ್ತದೆ. ರೈಲು ಮತ್ತು ನಾಗುವಳಿಗೆ ನೀರೊದಗಿಸುವ ಕೆಲಸಗಳಿಗಾಗಿಯೂ, ರಸ್ತೆಗಳನ್ನು ಹಾಕುವುದಕ್ಕಾಗಿಯೂ, ಸರ್ಕಾರೀ ಕಟ್ಟಡಗಳನ್ನು ಕಟ್ಟುವುದಕ್ಕಾಗಿಯೂ ಮರಾಮತ್ ಇಲಾಖೆಯು ಇರುತ್ತದೆ; ಪ್ರಬುದ್ಧರಾಗತಕ್ಕವರ ವಿದ್ಯಾಭ್ಯಾಸಕ್ಕಾಗಿ ಪ್ರೌಢ ವಿದ್ಯಾಶಾಲೆಗಳನ್ನೂ, ಹೈಸ್ಕೂಲುಗಳನ್ನೂ, ಪ್ರಾಥಮಿಕ ಪಾಠಶಾಲೆಗಳನ್ನೂ ಸ್ಥಾಪಿಸಿ, ಅವುಗಳನ್ನು ನಡೆಸಿಕೊಂಡು ಬರುವುದಕ್ಕಾಗಿ ವಿದ್ಯಾಭ್ಯಾಸದ ಇಲಾಖೆಯು ಇರುತ್ತದೆ; ಈ ತೆರನಾಗಿಯೇ ಜನಗಳ ಮತ್ತು ಪಟ್ಟಣಗಳ ಆರೋಗ್ಯದ ವಿಷಯವಾಗಿ ಗಮನಕೊಡುವುದಕ್ಕಾಗಿ ವೈದ್ಯಕ ಇಲಾಖೆಯು ಏರ್ಪಟ್ಟಿರುತ್ತದೆ, ಗಲಭೆಗೆ ಅವಕಾಶಕೊಡದಿರುವುದಕ್ಕೂ, ಜನರ ಪ್ರಾಣಗಳನ್ನೂ ಆಸ್ತಿಯನ್ನೂ ಕಾಪಾಡುವುದಕ್ಕೂ ಪೋಲೀಸು ಇಲಾಖೆಯು ಇರುವುದು, ಮತ್ತೇರಿಸುವ ಮದ್ಯಗಳ ಸರಬರಾಯಿಯನ್ನೂ ಅದರ ವಿಕರಿಯನ್ನೂ ತಹಬಂದಿಯಲ್ಲಿಡುವುದಕ್ಕೆ ಆಬ್ಕಾರಿ ಇಲಾಖೆಯು ಏರ್ಪಟ್ಟಿರುವುದು, ಮತ್ತು ನಾಗರಿಕ ಜನಾಂಗದ ಕ್ಷೇಮಕ್ಕೆ ಅವಶ್ಯಕವಾದ ಒಂದೊಂದು ಕಾರ್ಯವನ್ನೂ ನೆರವೇರಿಸುವುದಕ್ಕಾಗಿ ಇನ್ನೂ ಅನೇಕ ಇಲಾಖೆಗಳು ಇರುತ್ತವೆ ಕೊನೆಗೆ ಇತರ ಎಲ್ಲಾ ಇಲಾಖೆಗಳಲ್ಲಿಯೂ ಆಗುವ ಖರ್ಚಿಗೆ ಬೇಕಾದ ಹಣವನ್ನು ವಸೂಲ್ಮಾಡಿಕೊಡುವುದಕ್ಕಾಗಿ ರೆವಿನ್ಯೂ ಇಲಾಖೆಯು ಏರ್ಪಟ್ಟಿರುವುದು ಈ ಇಲಾಖೆಗಳೆಲ್ಲವೂ ಅನೇಕ ವರ್ಷಗಳಿಂದಲೂ ಇವೆ, ಮತ್ತು ಇವುಗಳಲ್ಲಿ ಅನೇಕವು ಈಗಿನ ರಾಜ್ಯಭಾರವು ನೆಲಸಿದಮೇಲೆಯೇ ಏರ್ಪಾಡಾದುವು. ಆದುದರಿಂದ ನೂತನ ಇಲಾಖೆಯೊಂದರ ಸೃಷ್ಟಿಯು ಒಂದು ವಿಶೇಷವಾದ ಸಂಭವವಾಗಿರುವುದಲ್ಲದೆ, ಹಾಲಿ ಜಾರಿಯಲ್ಲಿರತಕ್ಕ ಕಾರುಬಾರಿನಲ್ಲಿ ಒಂದು ಮುಖ್ಯ ನ್ಯೂನತೆಯು ಸರ್ಕಾರದವರ ತಿಳುವಳಿಕೆಗೆ ಬಂದಿರುವುದನ್ನು ಸೂಚಿಸುತ್ತದೆ ಪ್ರಜೆಗಳು ತಮ್ಮ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಂಡು ಹೋಗುವುದಕ್ಕೆ ಬೇಕಾದ ಪ್ರೋತ್ಸಾಹಗಳನ್ನು ಕೊಡತಕ್ಕದ್ದೆಂಬುದು ಮತ್ತು ಅತ್ಯವಶ್ಯಕವಾದಾಗ ಮಾತ್ರ ಪ್ರಜೆಗಳ ಕಾರ್ಯಸ್ವಾತಂತ್ರ್ಯದಲ್ಲಿ ಸರ್ಕಾರದವರು ಪ್ರವೇಶಿಸತಕ್ಕದ್ದೆಂಬುದು ಒಂದು ಚೆನ್ನಾಗಿ ಗೊತ್ತಾದ ನಿಯಮವಾಗಿರುತ್ತದೆ ಆದರೂ ಕೂಡ ನಾಲ್ಕಾರು ಮಂದಿ ಒಟ್ಟು ಸೇರುವುದರಿಂದಲೇ ಆಗುವಂತಹ ಕೆಲಸವು ವಿಶೇಷವಾಗಿವೆ ಪರಸ್ಪರ ಸಹಾಯವಮಾಡಬೇಕೆಂಬ ಆಸಕ್ತಿಯು ಕಡಿಮೆಯಾಗಿರುವಾಗಲೂ ಅಥವಾ ಕಟ್ಟುನಿಟ್ಟುಗಳಿಗೊಳಪಟ್ಟು ಧಾರಾಳವಲ್ಲದ ಮಾರ್ಗಗಳಲ್ಲಿ ಮಾತ್ರ ಪ್ರಬಲವಾಗಿರುವಾಗಲೂ ಜನಸಮುದಾಯವು, ನೆರೆಹೊರೆಯವರೊಡನೆಯೂ ಪ್ರಪಂಚದ ಇತರ ಭಾಗಗಳಲ್ಲಿನವರೊಡನೆಯೂ ಹೋಲಿಸಿ ನೋಡುವಲ್ಲಿ ಅತಿ ಹಿಂದೆ ಬೀಳಬಹುದು ಅನೇಕ ವಿಷಯಗಳಲ್ಲಿ, ಮುಖ್ಯವಾಗಿ ದೇಶದ ಆರ್ಥಿಕ ಅಭಿವೃದ್ಧಿಗೆ ಸಂಬಂಧಪಟ್ಟ ಸಮಸ್ತ ವಿಷಯಗಳಲ್ಲಿಯೂ ಮೈಸೂರು ದೇಶವು ಈ ಸ್ಥಿತಿಯಲ್ಲಿರುತ್ತದೆ. ಬಹುಕಾಲದಿಂದ ಕಸಬುದಾರಿಕೆಗಳು ಮತ್ತು ವ್ಯಾಪಾರವಾಣಿಜ್ಯಗಳು ಸಾಧಾರಣ ಜನಗಳ ಸಾಹಸಕ್ಕೊಳಪಟ್ಟದ್ದರಿಂದ ಫಲಿತಾಂಶವು ತೃಪ್ತಿಕರವಾಗಿಲ್ಲದೆ ಹೋಗಿರುತ್ತದೆ. ಪ್ರಪಂಚವೇ ಮುಂದು ಮುಂದು ಹೋಗುತ್ತಿರಲು ಮೈಸೂರಿನವರು ಮಾತ್ರ ತಟಸ್ಥರಾಗಿದ್ದುಕೊಂಡು, ಪರದೇಶೀಯರು ತಮ್ಮ ರಾಜ್ಯಕ್ಕೆ ಬಂದುನಿಂತು ದೇಶದ ಉತ್ಪತ್ತಿಗೆ ಕಾರಣವಾದ ಸಾಧನಗಳನ್ನೆಲ್ಲಾ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವುದಕ್ಕೆ ಬಿಟ್ಟಿರುತ್ತಾರೆ. ಆವಿಯಲ್ಲಿ ಇದನ್ನು ತಪ್ಪಿಸುವುದಕ್ಕೆ ಸಾಧ್ಯವಾಗಿರಲಿಲ್ಲ; ಏಕೆಂದರೆ ಬಂಡವಾಳವೂ ಅನುಭವವೂ ಕುಶಲತೆಯೂ ಯಾವುದೂ ಇರಲಿಲ್ಲ; ಆದರೆ ಕ್ರಮೇಣ ಅವೆಲ್ಲವೂ ಪ್ರಾಪ್ತವಾಗುವುವೆಂತಲೂ ಮತ್ತು ಸ್ವಲ್ಪ ಸ್ವಲ್ಪವಾಗಿ ಬದಲಾವಣೆಗಳುಂಟಾಗಿ, ಹೊಸಹೊಸ ಅಭಿಪ್ರಾಯಗಳು ತಲೆದೋರಿ, ಸಾಹಸ ಕೆಲಸಗಳನ್ನು ಮಾಡಬೇಕೆಂಬೊಂದು ಹೊಸ ಆಸಕ್ತಿಯೂ ಸಹಜವಾದ ಪೋಟಾಪೋಟಿಯೂ ಉಂಟಾಗಿ, ಕೊನೆಗೆ ಪರಾಪೇಕ್ಷೆಯಿಲ್ಲದೆ ತಾವೇ ಸ್ವತಂತ್ರದಿಂದ ಪ್ರವರ್ತಿಸಿ, ತಮ್ಮ ಕಳೆದ ಮೂವತ್ತು ವರುಷಗಳ ಸ್ಥಿತಿಗಿಂತಲೂ ಬಹಳ ವ್ಯತ್ಯಸ್ಥವಲ್ಲದ ಸ್ಥಿತಿಯಲ್ಲಿ ಮೊದಲಿದ್ದ ಇತರ ದೇಶೀಯರು ಈಗ ಯಾವ ಬುದ್ಧಿಕುಶಲತೆಯನ್ನೂ ಯಾವ ಜ್ಞಾನಶಕ್ತಿಯನ್ನೂ ತೋರ್ಪಡಿಸುತ್ತಿರುವರೋ, ಅದೇ ಬುದ್ಧಿಕುಶಲತೆಯಿಂದಲೇ ಜ್ಞಾನಶಕ್ತಿಯಿಂದಲೇ ಮೈಸೂರು ದೇಶೀಯರು ತಮ್ಮ ತಮ್ಮ ಕೆಲಸಗಳನ್ನು ನಿರ್ವಹಿಸಿಕೊಳ್ಳಲು ಸಾಧ್ಯವಾಗುವುದೆಂದು ಭಾವಿಸಿದ್ದುದಾಯಿತು. ಸರ್ಕಾರದವರು ಇದನ್ನೆಲ್ಲಾ ಚೆನ್ನಾಗಿ ನೋಡಿ, ರಸಾಯನ ಶಾಸ್ತ್ರಜ್ಞರೂ, ಪ್ರಾಕೃತಿಕಶಾಸ್ತ್ರಜ್ಞರೂ, ಇಂಜನಿಯರುಗಳೂ ಮಾನುಷಕೋಟಿಯ ಭೋಗಕ್ಕೆ ಬೇಕಾದ ಸಲಕರಣೆಗಳನ್ನೆಲ್ಲಾ ಒದಗಿಸಿಕೊಡತಕ್ಕ ಕಾರ್ಯದಲ್ಲಿ ಪ್ರವರ್ತಿಸಿರುವ ಜನಗಳಿಗೆ ಕಲ್ಪಿಸಿಕೊಟ್ಟಿರುವ ಸಾಧನಗಳನ್ನು ಉಪಯೋಗಿಸುವುದರಲ್ಲಿ ಇದುವರೆಗೂ ನಡೆದಿರುವ ಪ್ರಯತ್ನಗಳಿಗಿಂತಲೂ ಬಲವಾದವುಗಳನ್ನು ನಡಿಸುವಂತೆ ಪ್ರೋತ್ಸಾಹಿಸುವುದಕ್ಕಾಗಿ ಒಂದು ಹೊಸ ಮಾರ್ಗವನ್ನನುಸರಿಸಿ, ಸ್ವಲ್ಪ ಸಹಾಯವನ್ನು ಮುದ್ದಾಂಗಿಯೇ ಕೊಡತಕ್ಕ ಕಾಲವು ಈಗ ಪ್ರಾಪ್ತವಾಗಿರುತ್ತೆಂದು ಭಾವಿಸಿರುತ್ತಾರೆ

ಮೈಸೂರು ದೇಶದಲ್ಲಿ ಈ ಭಾಗದಲ್ಲಿ ವಿಶೇಷ ಕೆಲಸವು ನಡೆದಿರುತ್ತದೆ; ಆದರೆ ದುರ್ದೆಸೆಯಿಂದ ವಿದೇಶೀಯರಿಂದಲೇ ಅಂತಹ ಕೆಲಸಗಳೆಲ್ಲಾ ಮಾಡಲ್ಪಟ್ಟು, ಅವುಗಳ ಲಾಭಗಳೆಲ್ಲಾ ಅವರ ಕೈಗೇ ಸೇರಿರುತ್ತದೆ, ದೇಶೀಯನಾದರೋ ಅವರ ಚಾಕರನಾಗಿದ್ದುಕೊಂಡು, ಅದಕ್ಕೆ ತಕ್ಕ ಫಲವನ್ನೇ ಹೊಂದಿರುವನು ಈ ಸ್ಥಿತಿಯ ನಿವಾರಣಾರ್ಥವಾಗಿ ಒಂದು ಕೈಗಾರಿಕೆಗಳ ಮತ್ತು ವ್ಯಾಪಾರದ ಇಲಾಖೆಯು ಏರ್ಪಟ್ಟಿರುತ್ತದೆ, ಮತ್ತು ಕಸಬು ಕೈಗಾರಿಕೆಗಳಿಗೆ ಈ ಕೆಳಗೆ ನಮೂದಿಸಿರುವ ರೀತಿಗಳಲ್ಲಿ ಪ್ರೋತ್ಸಾಹವನ್ನು ಕೊಡುವುದೇ ಈ ಇಲಾಖೆಯ ಉದ್ದೇಶವಾಗಿರುತ್ತದೆ :—

(1) ಸಾಧಾರಣವಾಗಿ ಎಲ್ಲರಿಗೂ ಉಪಯೋಗವಾಗಬಹುದಾದ ವಿಚಾರಗಳನ್ನು ಸಂಗ್ರಹಿಸುವುದು ಮತ್ತು ಪ್ರಕಟಪಡಿಸುವುದು, (2) ಒಂದು ಗೊತ್ತುಮಾಡಿದ ಕಸುಬುದಾರಿ ವಿದ್ಯೆಯನ್ನು ಕಲಿಸುವುದು, (3) ನೂತನ ವಿಧಾನಗಳಲ್ಲಿ ಕಾರ್ಯತಃ ಕೆಲಸಮಾಡಲಾಗುವುದೆಂಬುದನ್ನೂ, ಕೆಲಸಗಳಲ್ಲಿ ಯಂತ್ರಗಳನ್ನುಪಯೋಗಿಸುವುದು ಸಾಧ್ಯವೆಂಬುದನ್ನೂ ನಿದರ್ಶನಪೂರ್ವಕವಾಗಿ ತೋರಿಸುವುದಕ್ಕೆ ಮಾಡುವ ಪ್ರಥಮ ಪ್ರಯತ್ನಗಳು, (4) ಕೈ ಕೆಲಸವನ್ನು ನಿಲ್ಲಿಸಿಬಿಡುವುದಕ್ಕೆ ಸಾಧ್ಯಮಾಡುವಂತೆ ಯಂತ್ರಗಳನ್ನು ಸ್ಥಾಪಿಸಲು ಅಥವಾ ಕಾರ್ಖಾನೆಗಳನ್ನು ಕಟ್ಟಲು ತಕ್ಕ ಸಲಹೆಯನ್ನೂ ಮತ್ತು ವಿವರವಾದ ನಕ್ಷೆಗಳನ್ನೂ, ಅಂದಾಜುಗಳನ್ನೂ ಒದಗಿಸುವುದು, (5) ಯಂತ್ರಸ್ಥಾಪನವನ್ನೂ ಮತ್ತು ಅವುಗಳ ಬದಲಾವಣೆಯನ್ನೂ, ಸರಿಮಾಡುವಿಕೆಯನ್ನೂ ವಹಿಸುವಂತಹ ತರಬೇತಾದ ಯಂತ್ರಕಾರರನ್ನೂ, ಇಂಜನಿಯರುಗಳನ್ನೂ ಸಂಬಳಕೊಟ್ಟು ಇಟ್ಟುಕೊಂಡಿರುವುದು , (6) ಲಾಗೋಡನ್ನು ಕಡಮೆಮಾಡುವ ಅಥವಾ ಹೆಚ್ಚು ಉತ್ಪತ್ತಿಯನ್ನು ಕೊಡುವ ಮೇಲಾದ ಏರ್ಪಾಡುಗಳನ್ನು ಮಾಡುವುದಕ್ಕೆ ನಗದು ಬಂಡವಾಳವು ಒಬ್ಬೊಬ್ಬರಿಗೂ ದೊರೆಯುವಂತೆ ಸ್ಥಿರಸ್ವತ್ತಿನ ಆಧಾರದ ಮೇಲೆ ತಕಾವಿ ಸಾಲಗಳನ್ನು ಕೊಡುವುದು ; (7) ಕೈಗಾರಿಕೆಗಳ ಕೆಲಸವನ್ನು ನೆರವೇರಿಸುವುದಕ್ಕಾಗಿ ಪರಸ್ಪರ ಸಹಾಯಕಸಂಘಗಳನ್ನು ಏರ್ಪಡಿಸುವುದಕ್ಕೂ, ಅವುಗಳನ್ನು ಸರಿಯಾದ ಮಾರ್ಗದಲ್ಲಿ ನಡಿಸಿಕೊಂಡು ಬರುವುದಕ್ಕೂ ಸಹಾಯಮಾಡುವುದು

ಈ ಅಂಶಗಳಲ್ಲಿ ಪ್ರತಿಯೊಂದರ ವಿಷಯವಾಗಿಯೂ ಮುಂದಿನ ಲೇಖನಗಳಲ್ಲಿ ಇನ್ನೂ ಹೆಚ್ಚಾದ ವಿವರಗಳನ್ನೊದಗಿಸಬೇಕೆಂದು ಕೋರುತ್ತೇನೆ ಜನಗಳಿಗೆ ಅವರವರ ಕಸುಬುದಾರಿಕೆ ಕೆಲಸಗಳಲ್ಲಿ ಸಹಾಯವನ್ನು ಕೊಡುವುದಕ್ಕಾಗಿ ಸರ್ಕಾರದವರು ಒಂದು ಪ್ರತ್ಯೇಕವಾದ ಇಲಾಖೆಯನ್ನು ಸೃಷ್ಟಿಸಿರುತ್ತಾರೆಂಬ ವಿಷಯವನ್ನು ಎಲ್ಲರ ಗಮನಕ್ಕೆ ತರುವುದೇ ಈಗ ಸದ್ಯಕ್ಕೆ ನನ್ನ ಮುಖ್ಯ ಉದ್ದೇಶವಾಗಿರುತ್ತದೆ. ಅಂತಹ ಇಲಾಖೆಯೊಂದು ಉಪಕ್ರಮಿಸಲ್ಪಟ್ಟಿರುತ್ತೆಂತಲೂ, ಸದರಿ ಇಲಾಖೆಗೆ ಸಂಬಂಧಪಟ್ಟ ಪ್ರತಿಯೊಬ್ಬ ಉದ್ಯೋಗಸ್ಥನು ಸಹಾಯವನ್ನು ಅಪೇಕ್ಷಿಸುವ ಯಾರಿಗಾದರೂ ಸುಲಭಸಾಧ್ಯನಾಗಿರಬೇಕೆಂತಲೂ, ಸಾಹಸವಾದ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಏರ್ಪಟ್ಟಿರುವ ಸೌಕರ್ಯಗಳನ್ನು ಪಡೆಯಬೇಕೆಂಬ ಆಸೆಯುಳ್ಳವರಲ್ಲಿ ಸಾಧ್ಯವಾದ ಮಟ್ಟಿಗೂ ಅನೇಕರನ್ನು ನೋಡಬೇಕೆಂದು ಮನಸ್ಸೂ ಕುತೂಹಲವೂ ನನಗಿರುವುವೆಂತಲೂ ಎಲ್ಲರಿಗೂ ತಿಳಿಸಬೇಕೆಂದು ಇಚ್ಛಿಸುತ್ತೇನೆ. ಅಲ್ಲದೆ ನನ್ನಲ್ಲಿಗೆ ವಿಚಾರಕ್ಕೆ ಕಳುಹಿಸಲ್ಪಟ್ಟ ವಿಷಯವನ್ನು ಸಾಧ್ಯವಾದ ಮಟ್ಟಿಗೂ ಜಾಗ್ರತೆಯಾಗಿ ವ್ಯವಸ್ಥೆ ಮಾಡಬೇಕೆಂಬುದೇ ನನ್ನ ಉದ್ದೇಶವು ನಾವು ಈ ಮಾರ್ಗಗಳಲ್ಲಿ ಬಹಳ ಉಪಯೋಗಕರವಾದ ಕೆಲಸವನ್ನು ಮಾಡಬಲ್ಲೆವೆಂಬುದು ಕಳೆದ ಹತ್ತುವರ್ಷಗಳಿಂದಲೂ ಮದ್ರಾಸು ಆಧಿಪತ್ಯದಲ್ಲಿ ಕಾರ್ಯತಃ ನಿದರ್ಶನಪೂರ್ವಕವಾಗಿ ತೋರಿಸಲ್ಪಟ್ಟಿರುತ್ತವೆ ; ಆದರೆ ಸ್ವಪ್ರಯತ್ನದಿಂದ ಪ್ರಯೋಜನವನ್ನು ಹೊಂದಬೇಕೆಂಬ ಕುತೂಹಲವುಳ್ಳವರಿಗೆ ಮಾತ್ರ ನಾವು ಸಹಾಯಮಾಡಲಾಗುವುದು ಸ್ವತಂತ್ರಪ್ರಯತ್ನದಿಂದಲೇ ಕೆಲಸಮಾಡಬೇಕೆಂಬ ಆಸಕ್ತಿಯನ್ನು ಬಲಪಡಿಸಬೇಕೆಂಬ ಉದ್ದೇಶದಿಂದ ಈ ಇಲಾಖೆಯು ಬಹಳ ನಿಂತಿತವಾದ ಮಾರ್ಗಗಳಲ್ಲಿ ನಡಿಸಲ್ಪಡುವುದು ಈ ಇಲಾಖೆಯ ಸಹಾಯವನ್ನು ಬಯಸುವವರು ಆ ಸಹಾಯದಿಂದ ಉಪಯೋಗವನ್ನು ಹೊಂದುವ ಸ್ಥಿತಿಯಲ್ಲಿರುತ್ತಾರೆಂತಲೂ, ನವೀನರೀತಿಗಳಲ್ಲಿ ಕಸುಬುದಾರಿಕೆಯ ಸಾಹಸಗಳನ್ನು ಮಾಡುವುದರಲ್ಲಿ ತಪ್ಪದೆ ಸಂಭವಿಸಬಹುದಾದ ನಷ್ಟವನ್ನೂ ದೇಹಶ್ರಮವನ್ನೂ ಅನುಭವಿಸುವುದಕ್ಕೆ ತಮಗೆ ಅಭಿಪ್ರಾಯವಿರುತ್ತೆಂತಲೂ ತೋರಿಸಬೇಕಾಗಿರುವುದು. ಏನೋ ಒಂದು ಪ್ರಯತ್ನವನ್ನು ಮಾಡುತ್ತಿದ್ದು ಶಾಸ್ತ್ರಜ್ಞರಾದವರ ಸಹಾಯವನ್ನು ಪಡೆಯಲು ಶಕ್ಯವಲ್ಲವೆ ಇದ್ದುದರಿಂದ ಹಿಂದೆ ಅನೇಕರು ಮಾಡಿದ ಪ್ರಯತ್ನಗಳು ವಿಫಲವಾಗಿರುತ್ತವೆ ; ಈ ವಿಧವಾದ ಸಹಾಯವಿಲ್ಲದಕಷ್ಟದಲ್ಲಿ ಪ್ರಾಪ್ತವಾಗುವ ಶಕ್ತಿ ಮತ್ತು ದ್ರವ್ಯನಷ್ಟವನ್ನು ತಪ್ಪಿಸಲು ಬೇಕಾಗುವ ಸಹಾಯವನ್ನು ಕೊಡಿದಮಟ್ಟಿಗೂ ಕೊಡುವುದೇ ಈ ಇಲಾಖೆಯ ಉದ್ದೇಶವಾಗಿರುವುದು

ಆಲ್‌ಫ್ರೆಡ್ ಚಾಟರ್‌ಟನ್.

ವೃತ್ತಾಂತ ಪತ್ರಿಕೆ

—— o:——

ಸನ್ ೧೯೧೩ ನೇ ಇಸವಿ ಏಪ್ರಿಲ್ ತಾ. ೩ ನೇ ಗುರುವಾರ

ಮೈಸೂರು ಬ್ಯಾಂಕು.

ಮೈಸೂರು ಗವರ್ನಮೆಂಟಿನವರು ಬೆಂಗಳೂರಿನಲ್ಲಿ ಒಂದು ಮೈಸೂರು ಬ್ಯಾಂಕನ್ನು ಪ್ರಾರಂಭಮಾಡುವ ವಿಷಯದಲ್ಲಿ ಬಹು ಧಾರಾಳವಾದ ಕೆಲವು ರಿಯಾಯತಿಗಳನ್ನು ತೋರಿಸಿ, ದಯಪಾಲಿಸಿರುವ ಹುಕುಮನ್ನು ಕಳೆದ ವಾರ ಪತ್ರಿಕೆಯಲ್ಲಿ ಪ್ರಕಟಮಾಡಿರುತ್ತೇವೆ. ಅವರು ಈ ಬ್ಯಾಂಕಿನ ವಿಚಾರಣೆಗಾಗಿ ನೇಮಿಸಿರುವ ದೊಡ್ಡ ಮನುಷ್ಯರು ಕಳೆದ ವಾರ ಬೆಂಗಳೂರಿನಲ್ಲಿ ಸಭೆ ಸೇರಿ ಕೆಲವು ದೂರ ಆಲೋಚನೆಗಳನ್ನು ನಡೆಸಿರುವುದಾಗಿ ತಿಳಿದು ಬಂದಿದೆ. ಈ ಬ್ಯಾಂಕು ಏರ್ಪಾಡಾದರೆ ಮೈಸೂರು ಗವರ್ನಮೆಂಟಿನವರು ಅದರ ಮೂಲಧನದಲ್ಲಿ ಅರೆವಾಸಿಯನ್ನು ಅಂದರೆ 20 ಲಕ್ಷ ರೂಪಾಯಿಗೆ ವಿಚಾರದಂತೆ ಬಡ್ಡಿ ಇಲ್ಲದೆಯೂ, ಇನ್ನೂ 20 ಲಕ್ಷ ರೂಪಾಯಿ ವರೆಗೆ ಸೇಕಡಾ ವರುಷಕ್ಕೆ 3 ರೂಪಾಯಿನಂತೆ ಬಡ್ಡಿಗೂ ಸಾಲವನ್ನು ಒದಗಿಸಿ ಕೊಡುತ್ತಾರೆ. ಇಷ್ಟೇ ಅಲ್ಲ, ಬ್ಯಾಂಕು ಪ್ರಾರಂಭವಾದಾರಭ್ಯ ಐದು ವರುಷಗಳ ತನಕ ಅದರ ಸಿಬ್ಬಂದಿ ಸಂಬಳಾದಿ ಖರ್ಚಿನಲ್ಲಿ ಅರೆವಾಸಿಯನ್ನು ಸರ್ಕಾರದವರು ವಹಿಸಿಕೊಂಡು ಕೊಡಲು ಒಪ್ಪಿರುವರು. ಇದಲ್ಲದೆ ಈ ಬ್ಯಾಂಕಿಗೆ ಇತರ ಕಡೆಗಳಿಂದ ಬಂದು ಹೋಗುವ ಖಜಾನೆಯನ್ನು ಅಸ್ತುವಾರು ಸಾಗಿಸುವುದಕ್ಕೆ ಸರ್ಕಾರದಿಂದ ಮುಫತ್ತಾಗಿ ಸಹಾಯವನ್ನು ಒದಗಿಸುತ್ತಾರೆ.

ಬ್ಯಾಂಕಿನವರು ಅದರ ಮೂಲಧನದಲ್ಲಿ ಅರೆವಾಸಿಯನ್ನು ಮೈಸೂರು ಸಂಸ್ಥಾನದಲ್ಲೇ (ಇದರೊಳಗೆ ಬೆಂಗಳೂರು ದಂಡು ಸೇರಿಸಲ್ಪಟ್ಟಿದೆ) ವ್ಯಾಪಾರಕ್ಕೂ ಕೈಗಾರಿಕೆಗೂ ವಿನಿಯೋಗಿಸಬೇಕಂತಲೂ, ಆರು ತಿಂಗಳಿಗೆ ಮೀರಿದ ಸಾಲ ಮುಂತಾದದ್ದು ಕೊಡಬಾರದಂತಲೂ, ಸರಾಫಿ ವ್ಯಾಪಾರ ಸಂಬಂಧಪಟ್ಟ ಕಾರ್ಯಗಳನ್ನು ಕೈಕೊಳ್ಳಕೂಡದಂತಲೂ ಗವರ್ನಮೆಂಟಿನವರು ನಿರ್ಬಂಧಿಸುತ್ತಾರೆ. ಬ್ಯಾಂಕಿನ ಲೆಕ್ಕಪತ್ರಗಳನ್ನು ತನಿಖೆಮಾಡಿ ಎಸ್ಟಿಮೇಟ್ ಮಾಡಲು ಸರ್ಕಾರದವರು ಉಚಿತವಾಗಿ ತಮ್ಮ ಆಡಿಟರನ್ನು ಕಳುಹಿಸಿ ಕೊಡುವರು. ಡೈರೆಕ್ಟರುಗಳು ಬ್ಯಾಂಕಿನ ಶೇರುಗಳಲ್ಲಿ ಹೆಸರಾಗಿ ಸಂಬಂಧಪಟ್ಟಂಥಾ ಅಧಿಕಾರವನ್ನು ನಿರ್ಬಂಧಿಸಲಾಗಿದೆ. ಬ್ಯಾಂಕಿನ ಪ್ರಾರಂಭದಲ್ಲಿ ಮುಂದೆ ಹೇಳುವ ದೊಡ್ಡ ಮನುಷ್ಯರು ಅದರ ಡೈರೆಕ್ಟರುಗಳಾಗಿರತಕ್ಕದ್ದು — ಮ॥ ಗಳಾದ ಕೆ. ಪಿ. ಪುಟ್ಟಣ್ಣಶೆಟ್ಟರು (ಛೇರ್ಮನ್), ಮಂಚಿ ರಾಮಣ್ಣನವರು, ಎಲ್. ಶ್ರೀನಿವಾಸಯ್ಯಂಗಾರ್ಯರು, ಎಂ. ಜಂಗಮಶೆಟ್ಟರು, ಎಸ್. ನಾರಾಯಣರಾಯರು, ಅಬ್ದುಲ್ ಖುದ್ದೂಸ್‌ರವರು. ಇವರಲ್ಲಿ ಪ್ರತಿ ಒಬ್ಬರೂ 5,000 ರೂಪಾಯಿನಂತೆ ಶೇರ್ ಹಣಗಳನ್ನು ಬ್ಯಾಂಕಿಗೆ ಕೊಡುವುದಾಗಿ ಒಪ್ಪಿಕೊಂಡಿದ್ದಾರೆ.

ಬ್ಯಾಂಕಿನ ಆಡಳಿತಗಳಿಗೆ ಒಬ್ಬ ನಿಪುಣನಾದ ಅಧಿಕಾರಿಯು ದೊರಕಿದ ಪಕ್ಷದಲ್ಲಿ ಈಗ ಉದ್ದೇಶಪಟ್ಟಿರುವ ಮೈಸೂರು ಬ್ಯಾಂಕು ಚೆನ್ನಾಗಿ ಅಭಿವೃದ್ಧಿಯಾಗಲು ಅನುಮಾನವಿಲ್ಲ. ಗವರ್ನಮೆಂಟಿನವರು ಬಹಳ ಧಾರಾಳವಾದ ರಿಯಾಯತಿಗಳನ್ನು ತೋರಿಸಿರುತ್ತಾರೆಂದೂ, ವಿಶೇಷ ಶ್ರಮವಿಲ್ಲದೇನೇ ಡೈರೆಕ್ಟರುಗಳಿಗೆ ತುಂಬಾ ಲಾಭ ಬರುವುದೆಂಬುದಾಗಿ ಎಂದೂ ನಮಗೆ ಶಂಕೆಯುಂಟಾಗಿದೆ. ಬ್ಯಾಂಕಿನ ಆದಾಯದಿಂದ ಶೇರುದಾರರಿಗೆ ಸೇಕಡಾ ವರುಷಕ್ಕೆ ೪ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚು ಬಡ್ಡಿ ಉತ್ಪತ್ತಿಯಾದ ಪಕ್ಷದಲ್ಲಿ ಗವರ್ನಮೆಂಟಿನವರು ತಮ್ಮ ಹೇವಣಿ ಹಣವನ್ನು ವಾಪಸು ಪಡೆಯುವುದು ಬ್ಯಾಂಕಿಗೂ, ಸರ್ಕಾರಕ್ಕೂ ಒಳ್ಳೆಯದೆಂದು ನಮಗೆ ತೋರುತ್ತದೆ.

ಈ ಬ್ಯಾಂಕಿನ ವಿಚಾರದಲ್ಲಿ ಗವರ್ನಮೆಂಟಿನವರ ಮುಖ್ಯ ಉದ್ದೇಶಗಳೇನೋ ನಮಗೆ ತಿಳಿಯಲಿಲ್ಲ; ಆದರೆ ಅವರು ಬ್ಯಾಂಕನ್ನು ಪ್ರಾರಂಭಿಸುವಂತೆ ಪ್ರಜೆಗಳನ್ನು ಒತ್ತಾಯಮಾಡಿರುವುದಾಗಿ ತೋರುತ್ತಿದೆ. ಪ್ರಜೆಗಳಿಂದ ಕೂಡಿಸಿದ ರಾಜಾದಾಯದ್ರವ್ಯವನ್ನು ಇಷ್ಟು ಧಾರಾಳವಾಗಿ ಶೇರುದಾರರ ವಶಕ್ಕೆ ಒಪ್ಪಿಸುತ್ತೇವೆಂದು ಹೇಳಿದ್ದನ್ನೂ ಹಾಗೆ ಒಪ್ಪಿಸಿರುವುದನ್ನೂ ನಾವು ಇದುವರೆಗೆ ಎಲ್ಲೂ ಕಂಡು ಕೇಳಿದ್ದಿಲ್ಲ. ಮೈಸೂರಿನಲ್ಲಿ ಒಂದು ಭಾರೀ ಜಾಯಿಂಟ್ ಸ್ಟಾಕ್ ಬ್ಯಾಂಕೇನೋ ಆಗಬೇಕಾಗಿದೆ ಎಂದು ನಾವು ಒಪ್ಪಿಕೊಳ್ಳುವೆವು, ಹಾಗೆ ಅದು ಅವಶ್ಯವಾಗಿದ್ದ ಪಕ್ಷದಲ್ಲಿ ಪ್ರಜೆಗಳೇ ಒಂದು ಏಕೀಭವಿಸಿ ಬ್ಯಾಂಕನ್ನು ಸ್ಥಾಪಿಸಿ ತಮ್ಮ ಮತ್ತು ಪ್ರಜೆಗಳ ಹಿತಚಿಂತನೆಯಿಂದ ನಡಿಸಿಕೊಂಡು ಬರುವುದು ಸಹಜವಾಗಿದೆ. ಗವರ್ನಮೆಂಟಿನವರ ಈ ವರ್ತನವು ನಿಜವಾಗಿಯೂ ಪ್ರಜೆಗಳಿಗೆ ಉಪಕಾರವಾಗಿ ಪರಿಣಮಿಸುತ್ತದೆಂದು ಹೇಳಲು ನಮಗೆ ಧೈರ್ಯ ಸಾಲದು. ಪ್ರಜೆಗಳು ಸಹಾಯ ಪ್ರೋತ್ಸಾಹಾದಿಗಳನ್ನು ಪಡೆಯಬೇಕೆಂಬುದೇನೋ ಅವಶ್ಯ. ಸಹಜವೂ ಹೌದು. ಆದರೆ ಈಗಿನ ಏರ್ಪಾಡು ನೋಡಿದರೆ ಗವರ್ನಮೆಂಟಿನ ಹುಕುಂ ಅನುಸರಿಸಿ ಒಂದು ಬ್ಯಾಂಕು ಏರ್ಪಾಡು ಆಗುವ ಹಾಗೆ ಕಾಣುತ್ತದೆ. ಯಾವುದೊಂದು ಬ್ಯಾಂಕಾಗಲಿ ಅದರ ನಿಬಂಧನೆಗಳಂತೆ ಲಾಭವನ್ನು ಉತ್ಪತ್ತಿ ಮಾಡಿಕೊಳ್ಳಲಾರದ ಪಕ್ಷಕ್ಕೆ ಮೈಸೂರಿನಲ್ಲಿ ಬ್ಯಾಂಕನ್ನು ಮಾಡುವುದು ಅಸಾಧ್ಯ. ಆದಾಗ್ಯೂ ಈ ಮೈಸೂರು ಬ್ಯಾಂಕು ಎಲ್ಲಾ ಭಾಗಗಳಲ್ಲೂ ತೃಪ್ತಿಕರವಾಗಿ ಲೇವಾದೇವಿ ನಡಸಿ ಅಭಿವೃದ್ಧಿಹೊಂದಲೆಂದು ಕೋರುತ್ತೇವೆ.

ಯುದ್ಧ ಸಮಾಚಾರಗಳು.

ಕಳೆದ ತಾ 24, 25, 26, ಈ ಮೂರು ದಿನಗಳಲ್ಲೂ ಬಲ್ಗೇರಿಯದವರೂ ಸರ್ವಿಯದವರೂ ಏಕೀಭವಿಸಿ ಆದ್ರಿಯಾನೋಪಲ್ ಪಟ್ಟಣದ ಮುತ್ತಿಗೆಯನ್ನು ಬಲಪಡಿಸಿ ಬಹು ಕಠಿಣವಾಗಿ ಯುದ್ಧಮಾಡಿದರು. ಇವರಿಗೆ ಜಯಪ್ರದವಾಯಿತು. ಆದ್ರಿಯಾನೋಪಲ್ ಪಟ್ಟಣವನ್ನು ಹಲ್ಲಾಹತ್ತಿ ಒಳಗೆ ನುಗ್ಗಿ ಸ್ವಾಧೀನ ಮಾಡಿಕೊಂಡರು. ಒಳಗಿದ್ದ ಟರ್ಕಿ ಸೈನಿಕರು ಸೋತುಹೋಗಿ ತಮ್ಮ ಆಯುಧ ಮದ್ದು ಗುಂಡುಗಳ ಮನೆಗಳನ್ನೆಲ್ಲಾ ಸುಟ್ಟುಹಾಕಿ ಶತ್ರುಗಳಿಗೆ ಕೋಟೆಯನ್ನು ಒಪ್ಪಿಸಿ ಶರಣಾಗತರಾದರು. ಈ ಮೂರು ದಿನಗಳಲ್ಲೂ ನಡೆದ ಭಯಂಕರವಾದ ಯುದ್ಧಗಳಲ್ಲಿ ಬಲ್ಗೇರಿಯದವರ ಕಡೆ 11,000 ಸೈನಿಕರೂ, ಸರ್ವಿಯಾ ಸೈನಿಕರಲ್ಲಿ 1,200 ಮಂದಿಯೂ ನಷ್ಟಪಟ್ಟರು. ಆ ಪಟ್ಟಣವನ್ನು ಇದುವರೆಗೆ ಬಹು ಪರಾಕ್ರಮದಿಂದ ಕಾಪಾಡಿಕೊಂಡು ಬಂದಿದ್ದ ಶುಕ್ರಿಪಾಷಾ ಎಂಬ ಸೈನ್ಯಾಧಿಪತಿಯು ತನ್ನ ಕೈಕೆಳಗಿನ 60,000 ಸೈನಿಕರೊಡನೆ (ಇವರಲ್ಲಿ 600 ಮಂದಿ ಹುದ್ದೇದಾರರು) ಶತ್ರುಗಳ ವಶವರ್ತಿಯಾದನು. ಕೋಟೆಯಲ್ಲಿ ಬಲ್ಗೇರಿಯ ಮತ್ತು ಸರ್ವಿಯ ಸೈನಿಕರಿಗೆ ಟರ್ಕಿಯವರ 700 ಫಿರಂಗಿಗಳೂ ಅನೇಕ ಯುದ್ಧಸಾಮಗ್ರಿಗಳೂ ಸಿಕ್ಕಿದವು. ಟರ್ಕಿಯವರು ಸುಟ್ಟು ಕೆಡವಿಹಾಕಿದ್ದ ಕೈಸ್ತ ದೇವಾಲಯಗಳನ್ನು ಬಲ್ಗೇರಿಯದವರು ಸರಿಮಾಡಿಕೊಳ್ಳುತ್ತಿದ್ದಾರೆ. ಬಲ್ಗೇರಿಯಾ ದೊರೆಯವರು ಮಕ್ಕಳ ಸಮೇತ ಆದ್ರಿಯಾನೋಪಲನ್ನು ಪ್ರವೇಶಿಸಿ ವಿಜಯೋತ್ಸವಗಳನ್ನು ನಡಿಸಿದರು.

ಆಲ್ಬೇನಿಯಾದಲ್ಲಿ ಸ್ಕುಂಬಿ ನದಿಯ ಬಳಿ ಸರ್ವಿಯಾ ಸೈನ್ಯಗಳು ಟರ್ಕಿಯವರ ಮೇಲೆ ಯುದ್ಧಮಾಡಿ ಜಯಪ್ರದವಾದವು. ಅಲ್ಲಿ ಜಾವಿದ್ ಪಾಷಾ ಎಂಬ ಸೈನ್ಯಾಧಿಪತಿಯು 15,000 ಟರ್ಕಿ ಸೈನಿಕರ ಸಮೇತ ಸರ್ವಿಯನವರಿಗೆ ಕೈಸೆರೆ ಸಿಕ್ಕಿದನು.

ಟ್ಚಟಾಲ್ಜಾ ಬಳಿ ನಾಲ್ಕು ಕೋಟೆಗಳ ಹತ್ತಿರ ಬಲ್ಗೇರಿಯದವರು ಎರಡು ದಿನ ಯುದ್ಧಮಾಡಿ ಆ ಸ್ಥಳವನ್ನು ಗೆದ್ದು ಸ್ವಾಧೀನಪಡಿಸಿಕೊಂಡು ನಾಲ್ಕುಕೋಟೆಯ ಬಳಿಯಲ್ಲೇ ಇನ್ನೂ ಡೇರಾ ಹಾಕಿಕೊಂಡು ಯುದ್ಧಕಾರ್ಯಗಳನ್ನು ನಡಿಸುತ್ತಿರುವರು. ಆದ್ರಿಯಾನೋಪಲ್‌ನಲ್ಲಿ ಗೆದ್ದ ಬಲ್ಗೇರಿಯಾ ಸೈನ್ಯಗಳು ಅಲ್ಲಿಂದ ಈ ನಾಲ್ಕುಕೋಟೆಗಳ ಬಳಿಗೆ ಬರುತ್ತವೆ. ಈ ನಾಲ್ಕುಕೋಟೆಯ ದಕ್ಷಿಣಕ್ಕೆ ಇರುವ ಬುಯುಕ್‌ಚೆಕ್‌ಮೆಡ್ಜೆ ಎಂಬಲ್ಲಿ ಬಲ್ಗೇರಿಯಾದವರು ಟರ್ಕಿಯವರ ಮೇಲೆ ಯುದ್ಧಮಾಡಿ ಆ ಸ್ಥಳವನ್ನು ಆಕ್ರಮಿಸಿಕೊಂಡರು. ಕೂಡಲೇ ಟರ್ಕಿಯವರು ಅವರ ಮೇಲೆ ಎರಡನೇ ಯುದ್ಧ ನಡಿಸಿ ಆ ಸ್ಥಳವನ್ನು ಶತ್ರುಗಳಿಂದ ಬಿಡಿಸಿಕೊಂಡಿದ್ದಾರೆ. ಈ ಯುದ್ಧದಲ್ಲಿ ಬಲ್ಗೇರಿಯಾದವರ ಕಡೆ 1,000 ಸೈನಿಕರು ನಷ್ಟಹೊಂದಿದರೆಂದೂ, ಯುದ್ಧಸಾಮಗ್ರಿಗಳು ಟರ್ಕಿಯವರ ಪಾಲಾಯಿತೆಂದೂ ತಿಳಿಯುತ್ತದೆ.

ಮಾಂಟಿನಿಗ್ರೋದವರು ಸ್ಕುಟಾರಿ ಪಟ್ಟಣಕ್ಕೆ ಮುತ್ತಿಗೆ ಹಾಕಿಕೊಂಡು ಫಿರಂಗಿಗಳನ್ನು ಹೊಡೆಯುತ್ತಿರುವರು.

ಬದುಕಿರುವವನನ್ನು ಸತ್ತವರಲ್ಲಿ ಹುಡುಕುವದೇನು?

ಕ್ರೈಸ್ತಮತಕ್ಕೆ ಆಧಾರವೂ ಅದನ್ನು ಸ್ಥಾಪಿಸಿದ ಕರ್ತನೂ ಯೇಸುಕ್ರಿಸ್ತನೆ. ಕ್ರೈಸ್ತಮತವಲ್ಲದೆ ಲೋಕದಲ್ಲಿ ಇತರ ಮತಗಳೂ ಇವೆಯಷ್ಟೆ. ಕ್ರಿಸ್ತನಿಗೂ ಇತರ ಮತಸ್ಥಾಪಕರಿಗೂ ಕೆಲವು ವಿಷಯಗಳಲ್ಲಿ ಸಂಬಂಧವೂ ಹೋಲಿಕೆಯೂ ಉಂಟು. ಕ್ರಿಸ್ತನು ಈಗ ಸುಮಾರು ಎರಡು ಸಾವಿರ ವರುಷಗಳ ಪೂರ್ವದಲ್ಲಿ ಪಾಲೆಸ್ತೀನ್ ದೇಶದಲ್ಲಿ ಹುಟ್ಟಿ ಆ ದೇಶದ ಬೇರೆ ಬೇರೆ ಕಡೆಗಳಲ್ಲಿ ತಿರುಗಾಡಿ ತಾನು ಹೋದ ಕಡೆಗಳಲ್ಲಿ ಜನರಿಗೆ ಉಪದೇಶಹೇಳುತ್ತ ಮಹತ್ತುಗಳನ್ನು ಮಾಡಿ ಅವರಿಗೆ ಸಹಾಯಕನಾಗಿ ಬದುಕಿದ್ದನು. ಹಾಗೆಯೇ ಬುದ್ಧ, ಕನ್‌ಫ್ಯೂಸಿಯಸನು, ಮಹಮ್ಮದನು ಮುಂತಾದವರು ಈ ಪ್ರಪಂಚದಲ್ಲಿ ಯಾವದೋ ಒಂದು ಕಾಲದಲ್ಲಿ ಬದುಕಿದ್ದು ತಮಗೆ ತಿಳಿದಷ್ಟು ನೀತಿಬೋಧೆಯನ್ನು ಹೇಳಿದರೆಂದು ನಂಬುವದಕ್ಕೆ ಯಾವ ಅನುಮಾನವೂ ಇಲ್ಲ. ಕ್ರಿಸ್ತನು ಸತ್ತನು ಮತ್ತು ಬೇರೆ ಮತಸ್ಥಾಪಕರೂ ಸತ್ತರು. ಆದರೆ ಎರಡು ವಿಷಯಗಳಲ್ಲಿ ಕ್ರಿಸ್ತನಿಗೂ ಲೋಕದಲ್ಲಿದ್ದ ಇತರ ಎಲ್ಲಾ ಮತಸ್ಥಾಪಕರಿಗೂ ಬಹು ಭಾರೀ ವ್ಯತ್ಯಾಸ ಉಂಟು. ಇವೆರಡರಲ್ಲಿ ಮೊದಲನೇದು ಯಾವದಂದರೆ— ಕ್ರಿಸ್ತನು ಮನೋವಾಕ್ಕಾಯಗಳಲ್ಲಿ ಅಂದರೆ ಯೋಚನೆ, ಮಾತು, ನಡತೆಗಳಲ್ಲಿ ಪೂರ್ಣ ನಿಷ್ಕಳಂಕನಾಗಿಯೂ ಕೇವಲ ಪಾಪರಹಿತನಾಗಿಯೂ ಇದ್ದನು. ಆತನ ಚರಿತ್ರೆಯನ್ನು ಆತನ ನಾಲ್ಕು ಮಂದಿ ಶಿಷ್ಯರು ಬರೆದಿದ್ದಾರೆ. ಅವುಗಳ ಪ್ರತಿಗಳನ್ನು ಎಲ್ಲಾ ದೊಡ್ಡ ಪಟ್ಟಣಗಳಲ್ಲಿಯೂ ಅನೇಕ ತಾಲ್ಲೂಕುಗಳಲ್ಲಿಯೂ ಬಹಳ ಸ್ವಲ್ಪ ಕ್ರಯಕ್ಕೆ ಮಾರಾಟಮಾಡುತ್ತಿದ್ದಾರೆ. ಕನ್ನಡದಲ್ಲಿಯಾಗಲಿ ಬೇರೆ ಇನ್ಯಾವ ಭಾಷೆಯಲ್ಲಾಗಲಿ ವಾಚಕರಿಗೆ ಇವು ದೊರಕುವವು. ವಾಚಕರು ಈ ಚರಿತ್ರೆಗಳನ್ನು ಓದಿ ತಾವೇ ಮುದ್ದು ಪರೀಕ್ಷಿಸಬೇಕೆಂದು ನಾವು ಹಾರೈಸುತ್ತೇವೆ. ಅವರು ಹಾಗೆ ಮಾಡುವದಾದರೆ ನಾವು ಹೇಳುವ ಮಾತು ನಿಜವೋ ಅಲ್ಲವೋ ಅವರ ಅನುಭವಕ್ಕೆ ಗೋಚರವಾಗುವದು. ಕ್ರಿಸ್ತನ ನಡತೆಗಳನ್ನೂ ಮಾತುಗಳನ್ನೂ ಪರೀಕ್ಷಿಸುವದಕ್ಕೆ ತಕ್ಕ ಅವಕಾಶವೂ ಸಂದರ್ಭವೂ ಪದೇ ಪದೇ ವಾಚಕರಿಗೆ ಆ ಚರಿತ್ರೆಗಳಲ್ಲಿ ಸಿಕ್ಕುವದು. ಒಬ್ಬನು ಮೌನಿಯಾಗಿ ಬಹಿರಂಗವಾಗಿ ಸಂಚರಿಸದೆ ಕೂತ ಕಡೆಯಲ್ಲಿ ಇದ್ದರೆ ಆತನ ನಡತೆ ಎಂಥಾದ್ದೆಂದು ಪರೀಕ್ಷಿಸುವದಕ್ಕಾಗುವದಿಲ್ಲ. ಆದರೆ ಕ್ರಿಸ್ತನು ಏಚ್ಚರಿಕೆಯಿಲ್ಲದೆ ಬಹಿರಂಗವಾದ ಜನಗೋಷ್ಠಿಯಲ್ಲಿ ಕೂತು ಏಳುತ್ತ ಸಂಚಾರಮಾಡುತ್ತ ಹಲವು ಬಗೆಯ ಜನಗಳ ಸಂಗಡ ನಾನಾ ವಿಷಯಗಳಲ್ಲಿ ಮಾತನಾಡುತ್ತಲಿದ್ದನು. ಶತ್ರುಗಳೂ ಮಿತ್ರರೂ ಆತನನ್ನು ಯಾವಾಗಲೂ ಮುಸುಕಿದ್ದರು ಮತ್ತು ಆತನೇ ತನ್ನ ಸ್ನೇಹಿತರ ಶುಭಾಶುಭಗಳಲ್ಲಿ ಅವರನ್ನು ಕಲಿತು ಆಯಾ ಸಂದರ್ಭಗಳಲ್ಲಿ ಅವರ ನಾಯಕನಂತೆ ಬುದ್ಧಿವಾದಗಳನ್ನು ಹೇಳುತ್ತ ಕಾರ್ಯಸಾಧಕನಾಗಿದ್ದನು. ಅವರ ಲಗ್ನಗಳಲ್ಲಿಯೂ ಮರಣಗಳಲ್ಲಿಯೂ ಹಬ್ಬಗಳಲ್ಲಿಯೂ ಆಚಾರಗಳಲ್ಲಿಯೂ ಭಾಗಿಯಾಗಿದ್ದನು. ಹೆಂಗಸರನ್ನೂ ಮಕ್ಕಳನ್ನೂ ಸಂಧಿಸಿ ಪ್ರಸ್ತಾಪಮಾಡಿದನು. ಕೇವಲ ಕಡುಪಾಪಿಗಳ ಸಂಸರ್ಗದಲ್ಲಿದ್ದು ಸಂಚರಿಸಿದನು. ಹಸಿವೆ, ನಿದ್ರೆ, ದಾಹಗಳು ಆತನಿಗೂ ಕಾಲಕಾಲಕ್ಕೆ ಸಂಭವಿಸಿದವು. ಜಯಾಪಜಯಗಳೂ ದಾರಿದ್ರ್ಯವೂ ಆತನಿಗೆ ಪ್ರಾಪ್ತಿಸಿದವು. ಶತ್ರುಗಳಂತೂ ಆತನು ಹೋದ ಕಡೆಗಳಲ್ಲೆಲ್ಲಾ ಗುಪ್ತವಾಗಿ ತಾವೂ ಹೋಗುತ್ತ ಮಾತಿನಲ್ಲಾದರೂ ನಡತೆಯಲ್ಲಾದರೂ ಆತನಲ್ಲಿ ದೋಷವನ್ನು ಕಂಡುಹಿಡಿಯಬೇಕೆಂದು ಬೇರೆ ಬೇರೆ ಕುಯುಕ್ತಿಗಳ ನೊಡ್ಡಿ ಹೊಂಚುಹಾಕುತ್ತಿದ್ದರು. ಸಬ್ಬತ್ತು, ಧರ್ಮಶಾಸ್ತ್ರ, ರಾಜಧರ್ಮ, ಕಂದಾಯ, ೮ ಗನೆ, ಸತ್ತುಹೋಗಿರುವವರ ಸ್ಥಿತಿಗತಿ, ಸತ್ತ ಮೇಲೆ ಗಂಡಹೆಂಡರ ಸಂಬಂಧ ಇವೇ ಮುಂತಾದ ವಿಷಯಗಳಲ್ಲಿ ಚರ್ಚಿಸಿ ಆತನನ್ನು ಹೇಗಾದರೂ ಸಿಕ್ಕಿಸಿಕೊಳ್ಳಬೇಕೆಂದು ತಮ್ಮ ಬುದ್ಧಿ ಕುಶಲತೆಗಳನ್ನೆಲ್ಲಾ ಖರ್ಚುಮಾಡಿ ಆತನಿಗೆ ಬಲೆ ಒಡ್ಡಿದರು. ಈ ಸಂದರ್ಭಗಳಲ್ಲಿ ಉಭಯ ಪಕ್ಷದಲ್ಲಿಯೂ ಆಟಂಕವಿತ್ತು. ಯಾವ ಪಕ್ಷದಲ್ಲಿ ನ್ಯಾಯಹೇಳುವದೂ ಕಷ್ಟಕರವಾಗಿದ್ದಿತು. ಮತ್ತು ನಿರಪರಾಧಿಯಾದ ಆತನನ್ನು ಹಿಡಿದರು, ಹೊಡೆದರು, ಹಾಸ್ಯಮಾಡಿ, ಉಗುಳಿ, ಕೈ ಕಾಲುಗಳಿಗೆ ಮೊಳೆಗಳನ್ನು ಜಡಿದು ಕಂಬದ ಮೇಲೆ ಶಿಲುಬೆಹಾಕಿದರು. ಈ ಸಕಲ ಸಂದರ್ಭಗಳಲ್ಲಿ ಆತನ ಬಾಯಿಯಿಂದ ಒಂದು ಕೆಟ್ಟ ಮಾತಾದರೂ ಹೊರಡಲಿಲ್ಲ. ನಡತೆಯಲ್ಲಿ ಒಬ್ಬರಿಗೂ ಆತನು ಕೇಡು ಮಾಡಲಿಲ್ಲ. ಮತ್ತು ಸಕಲ ಸಂದರ್ಭಗಳಲ್ಲಿಯೂ ಪರರಿಗೂ ಶತ್ರುಗಳಿಗೂ ಉಪಕಾರಮಾಡುವದೇ ಆತನ ಮುಖ್ಯೋದ್ದೇಶವಾಗಿತ್ತೇ ಹೊರತು ತನ್ನ ಸ್ವಂತ ಲಾಭವನ್ನು ಕುರಿತು ಎಳ್ಳಷ್ಟಾದರೂ ಎಂದೂ ಚಿಂತಿಸಲಿಲ್ಲ.

ಎರಡನೇದು ಏನಂದರೆ—ಕ್ರಿಸ್ತನು ಸತ್ತುಹೋದರೂ ಪುನಃ ಜೀವಿತನಾಗಿ ಎದ್ದು ಬಂದನು. ಈ ವಿಷಯದಲ್ಲಿ ಏನು ಯೋಚಿಸಬೇಕು? ಬೇರೆ ಮತಸ್ಥಾಪಕರ ವಿಷಯದಲ್ಲಿ ಅವರ ಪೈಕಿ ಯಾರಾದರು ಸತ್ತುಹೋಗಿ ಮೂರು ದಿನಗಳ ನಂತರ ಎದ್ದು ಬಂದರೆಂತ ಹೇಳಿದ್ದು ಕೇಳಿದ್ದು ಉಂಟೇ? ಸತ್ತುಹೋದರೆಂತ ಅವರೆಲ್ಲರ ವಿಷಯದಲ್ಲಿಯೂ ಹೇಳುತ್ತಾರೆ. ಆದರೆ ಅವರು ಸತ್ತಮೇಲೆ ಪುನಃ ಜೀವಿಸಿ ಎದ್ದು ಬಂದರೆಂತ ಅವರ ಅನುಯಾಯಿಗಳು ಅವರ ಶಿಷ್ಯರೂ ಹೇಳಲಿಲ್ಲ. ಹಾಗೆ ಎದ್ದು ಬರುವ ಅಭಿಪ್ರಾಯವಾದರೂ ಅವರ ಮನಸ್ಸಿನಲ್ಲಿ ಎಂದೂ ಹುಟ್ಟಲಿಲ್ಲ. ಆದ್ದರಿಂದ ಆ ವಿಷಯವಾದ ಪ್ರಸ್ತಾಪವನ್ನು ಮಾಡಬೇಕಾದ ಆಗತ್ಯವೇ ಅವರಿಗಾದರೂ ಅವರ ಶಿಷ್ಯರಿಗಾದರೂ ಎಂದೂ ಕಾಣಬರಲಿಲ್ಲ. ಕ್ರಿಸ್ತನಾದರೋ ಸಾಯುವದಕ್ಕೆ ತುಂಬ ಮುಂಚೆ ತನ್ನ ಶಿಷ್ಯರಿಗೆ ಈ ವಿಷಯವನ್ನು ಪದೇ ಪದೇ ಹೇಳುತ್ತಾ ಬಂದಿರುವದಕ್ಕೆ ಚರಿತ್ರೆಯಲ್ಲಿ ದಾಖಲೆ ಇದೆ. ಎದ್ದು ಬಂದನೆಂಬುದಕ್ಕೆ ರುಜುವಾತಾಗಿಯಂತೂ ಆತನು ತನ್ನ ಶಿಷ್ಯರಿಗೆ ಬೇರೆ ಬೇರೆ ಕಡೆಗಳಲ್ಲಿ ದರ್ಶನ ಕೊಟ್ಟನು.

ಆದರೆ ಸತ್ತುಹೋದ ಮೇಲೆ ಹೀಗೆ ಎದ್ದು ಬಂದದಕ್ಕೆ ಕಾರಣವೇನು? ಅದರಿಂದ ಲಭ್ಯವಾಗುವ ಪ್ರಯೋಜನಗಳೇನು? ಈ ಪ್ರಶ್ನೆಗಳಿಗೆ ಪ್ರತ್ಯುತ್ತರವನ್ನು ಸಾಂಗವಾಗಿ ಬರೆಯುವದಕ್ಕೆ ಅವಕಾಶವಿಲ್ಲ. ಆದರೆ ಒಂದನ್ನು ಮಾತ್ರ ಹೇಳುತ್ತೇವೆ. ಏನಂದರೆ, ಸಂಪೂರ್ಣನಾಗಿ ನಿಷ್ಕಳಂಕನೂ ಪಾಪರಹಿತನೂ ಆದವನು ಮರಣಪಾಶಕ್ಕೆ ಸಿಕ್ಕಿ ನಾಶವಾಗಲಾರನು. ಕ್ರಿಸ್ತನು ಪಾಪರಹಿತನೂ ಪೂರ್ಣ ಪರಿಶುದ್ಧನೂ ಆಗಿದ್ದದ್ದು ನಿಜವಾದರೆ ಆತನು ಮರಣಕ್ಕೆ ವಶವರ್ತಿಯಾಗಿ ಸತ್ತುಹೋಗಲಾರನು. ಒಂದು ವೇಳೆ ಕಾರಣಾಂತರದಿಂದ ಸತ್ತರೂ ಆತನು ಎದ್ದು ಬರಬೇಕು. ಪಾಪದ ಸೋಂಕು ಆತನ ಹತ್ತಿರ ಬಂತು. ಆದರೆ ಅದು ಆತನಿಗೆ ತಗಲಲಿಲ್ಲ. ಪಾಪವನ್ನು ಮೆಚ್ಚಿ ಅದನ್ನು ಒಪ್ಪಿಕೊಂಡು ಸ್ವೀಕರಿಸುವ ಸ್ವಭಾವವು ಆತನಲ್ಲಿ ಅಣುಮಾತ್ರವಾದರೂ ಇರಲಿಲ್ಲ. ಈ ವಿಷಯದಲ್ಲಿ ಆತನು ಮಾನವ ವಂಶದಲ್ಲಿ ಅದ್ವಿತೀಯನು, ಅಸಮಾನನು. ಮರಣಪಾಶವನ್ನು ಗೆದ್ದು ಎದ್ದು ಬಂದ ಅದ್ವಿತೀಯವಾದ ಮಹಿಮೆಯು ಆತನಿಗೆ ಸಲ್ಲತಕ್ಕದ್ದು.

ಮತ್ತು ಸ್ನೇಹ, ಸತ್ಯ, ಪವಿತ್ರತೆ, ಪರೋಪಕಾರ ಇವುಗಳಿಗೆ ಚ್ಯುತಿಯುಂಟೇ ಇಲ್ಲವಷ್ಟೆ. ಯಾವ ಮನುಷ್ಯನಾದರೂ, ಪಾಪಕ್ಕೂ ದುರ್ಗತಿಗೂ ಎಂದೂ ಆಸ್ಪದ ಕೊಡದೆ ತನ್ನ ಮನಸ್ಸು ದೇಹ ಅವಯವಗಳನ್ನು ನಿತ್ಯವೂ ಸತ್ಯ, ಪವಿತ್ರತೆ ಪರೋಪಕಾರಕ್ಕೆ ಸಾಧನಗಳಾಗಿ ಪ್ರಯೋಗಿಸಿದರೆ ಅವನು ಈ ದೇವಗುಣಗಳನ್ನು ಸಂಪೂರ್ಣವಾಗಿ ಧರಿಸಿಕೊಂಡು ಬಂದು ಮಾನವ ರೂಪದಲ್ಲಿ ಕಾಣಿಸಿಕೊಂಡ ದೇವರು ಅಂತ ಹೇಳುವದಕ್ಕೆ ಸಂದೇಹವಿಲ್ಲ. ಎಂತಹ ಪುಣ್ಯಪುರುಷನಾದರೂ ಪಾಪಮಿಶ್ರನಾದ ನಡೆಯುಳ್ಳವನಾಗಿ ಇದ್ದಾನೆ. ಆದ್ದರಿಂದ ಆತನು ಸಾಯಲೇಬೇಕು. ಕ್ರಿಸ್ತನೊಬ್ಬನೇ ಒಂದು ಸರ್ತಿಯಾದರೂ ಪಾಪಕ್ಕೆ ಕೈಯಲ್ಲಿ ಸಿಕ್ಕಿಬೀಳದೆ ಅದನ್ನು ಕಡೇ ವರೆಗೂ ಎದುರಾಯಿಸಿ ಜಯಿಸಿದವನು, ಪವಿತ್ರನು. ಆದ್ದರಿಂದ ಆತನು ಮಾನವರೂಪದಲ್ಲಿ ಕಾಣಿಸಿಕೊಂಡ ದೇವರು. ಪರೋಪಕಾರಕ್ಕಾಗಿ ಆತನ ದೇಹವು ಪ್ರತಿಗಕ್ತ ಕಷ್ಟವನ್ನು ಅನುಭವಿಸಿತು. ಇಂಥವನನ್ನು ದುರ್ಜನರು ಅಪರಾಧಿಯು ಪಾಪಿಯೆಂದು ನಿರ್ಣಯಿಸಿ ಕೊಂದರು. ದೇವರು ಈ ನಿರ್ಣಯಕ್ಕೆ ಒಪ್ಪದೆ ಅದಕ್ಕೆ ವಿರೋಧವಾಗಿ ತನ್ನ ನಿರ್ಣಯವನ್ನು ಕ್ರಿಸ್ತನನ್ನು ಜೀವದಿಂದ ಎಬ್ಬಿಸುವದರಲ್ಲಿ ಪ್ರಕಟಿಸಿದನು. ಕ್ರಿಸ್ತನು ಇಲ್ಲದ ಪಾಪ ಮಾಡಿದನೆಂತ ಆತನ ವಿರೋಧಿಗಳು ಆತನನ್ನು ಕೊಂದರು. ದೇವರು ಆತನನ್ನು ಶಾಶ್ವತವಾಗಿ ಪಾಪರಹಿತನಾದ ಲೋಕಕ್ಕೆ ಕೊಟ್ಟು ಆತನ ಪುಣ್ಯದ ಮೂಲಕ ಲೋಕವನ್ನು ಉದ್ಧಾರಮಾಡಿದನು.

ಅಮೇರಿಕದಲ್ಲಿ ಸುಂಟರಗಾಳಿಯೂ ಮಳೆಯೂ

ಅಪಾರವಾದ ಕಷ್ಟನಷ್ಟಗಳು

ಅಮೇರಿಕ ಖಂಡದಲ್ಲಿ ಮಿಸಿಸಿಪಿ ಎಂಬ ಮಹಾ ನದಿಯ ಪ್ರದೇಶದೊಳಗೆ ಅಪರಿಮಿತವಾದ ಸುಂಟರಗಾಳಿಯೂ ಮಳೆಗಳೂ ಪ್ರಾಪ್ತವಾದವಂತೆ ಮಾರ್ಚಿ ತಾ. 23 ರಲ್ಲಿ ತಂತೀವರ್ತಮಾನ ಬಂದಿತು. ಅನೇಕ ಪಟ್ಟಣಗಳು ನಾಶಹೊಂದಿದವೆಂದೂ ಅಲಬಾಮಾ, ಇಂಡಿಯಾನಾ, ಓಹಿಯೋ ಡಿಸ್ಟ್ರಿಕ್ಟುಗಳಲ್ಲಿ ಲಕ್ಷಾಂತರ ದ್ರವ್ಯದ ಕಟ್ಟಡಗಳೇ ಮೊದಲಾದ ಆಸ್ತಿಪಾಸ್ತಿಗಳೂ ಪೈರುಗಳೂ ಪ್ರವಾಹದಲ್ಲಿ ಸಿಕ್ಕಿ ಕೊಚ್ಚಿಹೋದವೆಂದೂ, 60 ಜನರು ಮೃತಪಟ್ಟಿದ್ದಲ್ಲದೆ 200 ಜನರಿಗೆ ಗಾಯಗಳಾದವೆಂದೂ ತಿಳಿಯಿತು. ತಾ 24 ರಲ್ಲಿ ಬಂದ ವರ್ತಮಾನವೇನೆಂದರೆ— ಅಮೇರಿಕದ ಮಧ್ಯ ಸಂಸ್ಥಾನಗಳಲ್ಲಿ [illegible] ಭಯಂಕರವಾದ ಸುಂಟರಗಾಳಿಯೊಡನೆ ಕೂಡಿದ ಅಪಾರವಾದ ಮಳೆ ಪ್ರಾಪ್ತವಾಗಿ ತಂತಿಕಂಭಗಳೆಲ್ಲಾ ಕೊಚ್ಚಿಹೋಗಿ, ನಷ್ಟವಾಗಿರುವುದೆಷ್ಟೋ ತಿಳಿಯಲು ಅವಕಾಶವಿಲ್ಲ. ಓಮಾಹಾ, ನೆಬ್ರಾಸ್ಕಾ ಪಟ್ಟಣಗಳು ಪಾಳುಬಿದ್ದವು. 1,000 ಜನರ ವರೆಗೂ ನಷ್ಟವಾಗಿರಬಹುದು. ಓಮಾಹಾದಲ್ಲಿ 100 ಜನರು ಮೃತಪಟ್ಟರು, ನೂರಾರು ಮಂದಿಗೆ ಗಾಯಗಳಾಗಿವೆ. ಟೆರಹಾಟೆಯಲ್ಲಿ 50 ಮಂದಿ ಸತ್ತುಹೋದರು, 300 ಜನರು ಗಾಯಪಟ್ಟಿದ್ದಾರೆ.

ತಾ 25 ರಲ್ಲಿ ಬಂದ ವರ್ತಮಾನ—ಓಮಾಹಾದಲ್ಲಿ 162 ಮಂದಿ ಸತ್ತರು, 450 ಮನೆ ಮಠಗಳು ಹಾಳಾದವು, 1,250 ಮನೆಗಳು ಕೆಟ್ಟು ಅಪಾಯಸ್ಥಿತಿಯಲ್ಲಿವೆ. ಸಿನಮೊಟೊಗ್ರಾಫ್ ನಾಟಕ ಶಾಲೆಯಲ್ಲಿ ಕುಳಿತು ನೋಟ ನೋಡುತ್ತಿದ್ದ 30 ಮಂದಿ ಭೂಗತರಾದರು. ಸಮೀಪದ ನಾಲ್ಕು ಗ್ರಾಮಗಳು ಕೊಚ್ಚಿಹೋಗಿವೆ. ಯೂತಾನ್ ನಲ್ಲಿ 16 ಜನರು, ಬರ್ಲಿನ್ 7, ಟೆರಾಹಾಟೆ 18, ಬ್ಲಫ್ 12, ಚಿಕಾಗೊ 5. ಇತರ ಸ್ಥಳಗಳಲ್ಲೂ ಈ ರೀತಿ ಮರಣಗಳಾದವು

...ದಾವಲ್ಲಿ ಪ್ರವಾಹಗಳು ಹುಟ್ಟಿ ಹಲವು ಪಟ್ಟಣಗಳು ನಾಶವಾಗಿವೆ ...ಧಾನ್ಯಾದಿಗಳೂ ಪೈರುಗಳೂ ಕೊಚ್ಚಿಹೋಗಿ ಪ್ರಜೆಗಳು ಬೆಟ್ಟಗುಡ್ಡಗಳಿಗೆ ...ಹೋಗಿದ್ದಾರೆ ಡೇಟನ್‌ನಲ್ಲೂ ಇತರ ಕಡೆಗಳಲ್ಲೂ ಸಾವಿರಾರು ಜನರು ...ಸತ್ತವರು

...೨೬ರಲ್ಲಿ ಬಂದ ವರ್ತಮಾನ ಸುಂಟರಗಾಳಿಯ ಜೊತೆಗೆ ಪ್ರವಾಹ ...ಬಂದು ಇಂಡಿಯಾನಾ ಮತ್ತು ಓಹಿಯೋ ಡಿಸ್ಟ್ರಿಕ್ಟುಗಳಲ್ಲಿ ದಜನ್ ...ಪಟ್ಟಣಗಳಲ್ಲಿ ನೀರು ನಿಂತು ಅನೇಕ ರೈಲ್ವೆ ಸೇತುವೆಗಳೂ, ನೂರಾರು ...ಮೈಲ್ ರಸ್ತೆಗಳೂ ನಾಶಹೊಂದಿ ಮೂರು ಕೋಟಿ ದ್ರವ್ಯ ನಷ್ಟವಾಗಿದೆ ... ಸಾಲದ್ದಕ್ಕೆ ಓಹಿಯೋದಲ್ಲಿ ಮುಂಚಿನ ಮಳೆ ಪ್ರಾರಂಭವಾಗಿದೆ ...ಎಂಬಲ್ಲಿ ಒಂದು ಅಣೆಯು ಒಡೆದುಹೋಗಿ, ಅನೇಕ ಕಡೆಗಳಲ್ಲಿ ...ನೀರು ನಿಂತು ೨೦೦ ಜನರು ಮೃತಪಟ್ಟರು ಡೇಟನ್‌ನಲ್ಲಿ ೬,೦೦೦ ...ನಾಶವಾದರೆ ಹಾಗೂ ೩೦,೦೦೦ ಪ್ರಜೆಗಳು ಮನೆ ಮಠಾದಿಗಳನ್ನೆಲ್ಲಾ ಕಳೆ... ಸಂಕಟಪಡುತ್ತಿದ್ದಾರೆಂದೂ ವರ್ತಮಾನವಿದೆ ಹಾಮಿಲ್ಟನ್ ಪಟ್ಟಣ... ಬಾಂಧು ತಲಾವು ಒಡೆದುಹೋಗಿ ೧,೦೦೦ ಜನರು ಮೃತಪಟ್ಟರಂತೆ ...ಮೂಲಕ ಬಂದಿರುವ ಈ ವರ್ತಮಾನಗಳು ಈ ಪ್ರವಾಹದ ಪರಿಣಾ... ತಿಳಿಸುತ್ತವೆ ಇಂಡಿಯಾನಾ ಡಿಸ್ಟ್ರಿಕ್ಟಿನಲ್ಲಿ ಎರಡು ಲಕ್ಷ ಪ್ರಜೆಗಳು ...ಗಾಗಿರುವರಂತೆ ಡೇಟನ್‌ನಲ್ಲಿ ನದಿಯು ತುಂಬಿ ಒಂದೂವರೆ ಮೈಲಿ ... ಒಂದು ಸ್ಕೂಲು ಅದರಲ್ಲಿದ್ದ ೧೫೦ ಮಕ್ಕಳ ಸಹಿತ ...ಹೋಯಿತು ಈಚೆಗೆ ಅಲ್ಲಲ್ಲಿ ಬೆಂಕಿಗಳು ಹುಟ್ಟಿ ಕಷ್ಟ ನಷ್ಟಗಳನ್ನು ...ಬೆಂಕಿಯನ್ನು ಆರಿಸುವುದು ಅಸಾಧ್ಯವಾಗಿ ಮನೆ ಮಠಗಳಲ್ಲಿ ...ಜನರು ಬೆಂಕಿಗೂ ನೀರಿಗೂ ಪ್ರಾಣಕೊಡುತ್ತಿದ್ದಾರೆ ನೂರಾರು ಮನೆ ...ಸಹಿತ ಕೊಚ್ಚಿಹೋದವು ಸೆಂಟ್ ಎಲಿಜಬೆತ್ ಎಂಬ ದೊಡ್ಡ ...ಯು ೧೫೦ ರೋಗಿಗಳ ಸಹಿತ ನಾಶವಾಯಿತಂತೆ ಪ್ರಜೆಗಳು ದಿಕ್ಕು... ಕುಡಿಯುವ ನೀರಾಗಲಿ ಇಲ್ಲದ ಕ್ಲುಪ್ತಪೀಡಿತರ ಸ್ಥಿತಿಗೆ ...ಮು ಸಹಾಯಮಾಡಲು ಹೋಗಿರತಕ್ಕವರು ಅಲ್ಲಿ ೫,೦೦೦ ಜನರು ...ಪ್ರವಾಹದ ಉತ್ಪ್ರೇಕ್ಷೆಯಲ್ಲವೆನ್ನುತ್ತಾರೆ ಬಹಳ ಬಲವಾದ ... ಕಾಣ ಕಳಚಿಬೀಳುತ್ತವೆ ನೆನ್ನೆ ಸಮುದ್ರಾತ್ರಿಯಿಂದ ಪ್ರವಾಹಗಳು ...ವರ್ಷ ಗಾಳಿ ಬೀಸಿದು ಚಳಿಯನ್ನು ಹರಡುತ್ತಿದೆ

...೨೭ರಲ್ಲಿ ಬಂದ ವರ್ತಮಾನ— ಪೆರುವಿಗೆ ಆಪತ್ತು ಸಂಭವಿಸಿತು ...ಒಡೆದುಹೋಗಿ, ನೂರಾರು ಜನರು ಮೃತಪಟ್ಟರು ... ...ಮರಗಳ... ...ಟೇರ್‌ಹಾಟ್, ಲಫಾಯೆಟ್, ...ಲೋಗನ್ಸ್‌ಪೋರ್ಟ್ ಎಂಬ ಪಟ್ಟಣಗಳಲ್ಲಿ ಪ್ರವಾಹಗಳು ಪ್ರಾಪ್ತ... ...ಮರಗಳು... ...ಕೊಲಂಬಸ್... ...ಪ್ರಸಂಗಗಳಲ್ಲಿ ಈಗ ಪ್ರತ್ಯಕ್ಷವಾಗಿರುವ ಅನಾಹುತವು ಬಹು ಭಯಂಕರ... ...ಡೇಟನ್ ಪಟ್ಟಣದಲ್ಲಿ ವ್ಯಾಪಾರ ನಡೆಯುವ ಚೌಕಗಳೂ ಬೀದಿ... ...ಹಾಗೂ ೧೪,೦೦೦ ಪ್ರಜೆಗಳು ತಮ್ಮ ಮನೆಗಳಲ್ಲಿ ಸೇರಿಕೊಂಡು ...ತ್ತಿದ್ದಾರೆ ... ಸಹಾಯಕ್ಕೆ ಹೋಗಲು ಅವಕಾಶವಿಲ್ಲ. ...ಟವಾಡುತ್ತಿರುವರು ಈಗ ಮಳೆ ಸುರಿಯುತ್ತಿದೆ ಮನೆ ಮಠ... ...ಬಂಗಲೆಗಳೂ ಉರಿಯುತ್ತಿರುವವು ಜ್ವಾಲೆಗಳು ಆಕಾಶದಲ್ಲಿ ...ವರೆಗೆ ವ್ಯಾಪಿಸುತ್ತವೆ

...೨೮ರಲ್ಲಿ ಬಂದ ವರ್ತಮಾನ— ... ...ನಗಳಲ್ಲಿ ಪ್ರವಾಹಗಳ ಬೀಳುತ್ತಿದೆ ಪಿಟ್ಸ್‌ಬರ್ಗ್, ...ಗಳಲ್ಲಿ ಕೆಲವು ಭಾಗಗಳು ಮುಳುಗಿವೆ ಮಿಸ್ಸಿ..., ಅರ್ಕಾನ್ಸಾ... ಪ್ರವಾಹಗಳು ೧೭ ಅಡಿ ಏರಿರುವವು ಕೊಲಂಬಸ್ ಡಿಸ್ಟ್ರಿಕ್ಟಿಗೆ ...ದಲ್ಲಿ ೬೦೦ ಜನರು ಹಾಮಿಲ್ಟನ್‌ನಲ್ಲಿ ೫೦, ಟ್ರಾಯಿ ೫೦, ... ೫೦ ... ೧೦, ಈ ರೀತಿ ಮರಣಗಳಾಗಿವೆ ೧,೦೦೦ ...ಕರಾಗಿದ್ದಾರೆ ಓಹಿಯೋ ಮತ್ತು ಇಂಡಿಯಾನಾದಲ್ಲಿ ಇಲ್ಲಿವರೆ... ..., ರೈಲು ರಸ್ತೆಗಳಿಗೆ ಇಲ್ಲಿವರೆ ಕೋಟಿ ರೂಪಾಯಿನಷ್ಟೂ ...ವುತ್ತವೆ

...ರಿಕದ ಸಂಯುಕ್ತ ಸಂಸ್ಥಾನಗಳ ಪ್ರೆಸಿಡೆಂಟರಾದ ವಿಲ್ಸನ್‌ರವರು ...ಪೀಡಿತರಾಗಿರುವ ಪ್ರಜೆಗಳಿಗೆ ಸಹಾಯ ಮಾಡುವುದಕ್ಕೋಸ್ಕರ ಒಂದು ...ಘೋಷಣ ಪ್ರಚಾರ ಮಾಡಿದರು ಯುದ್ಧದ ಇಲಾಖೆಯ ಸೆಕ್ರೆಟರಿಯು ...ಪ್ರವಾಹದಿಂದ ಪ್ರಾಂತ್ಯಗಳಿಗೆ ಹೋಗಿ ಪ್ರಜೆಗಳಿಗೆ ಸಹಾಯಾದಿಗಳನ್ನು ...ತ್ತಿದ್ದಾರೆ

ಒಳದೇಶದ ವೃತ್ತಾಂತಗಳು

...ನಗರದವರು ದಿವಾನ್ ಬಹದೂರ್ ಮಿ॥ ಕೆ ಪಿ ಪುಟ್ಟಣ್ಣಶೆಟ್ಟರನ್ನು ...ಪ್ರಾಯಕ ಸಭೆಯ ಮುಂಬರಾಗಿ ನೇಮಕಮಾಡುತ್ತಾರೆ.

...ಮಹಾರಾಜರವರು ಯುಗಾದಿ ಹಬ್ಬವನ್ನು ತೀರಿಸಿಕೊಂಡು ಬೇಸಗೆ ...ವಾಸಕ್ಕಾಗಿ ರಾಜಧಾನಿಯಿಂದ ನೀಲಗಿರಿಗೆ ದಯಮಾಡುವವರಾಗಿದ್ದಾರೆ

...ಸಲ ಶ್ರೀಮನ್ ಮಹಾರಾಜರವರ ವರ್ಧಂತಿ ಉತ್ಸವ ಕಾಲದಲ್ಲಿ ಅಂ... ತಾ ೨೫ ೨೬, ೨೮ರಲ್ಲಿ ರಾಜಧಾನಿಯಲ್ಲಿ ಕುದುರೆಗಳ ಜೂಜು ...ನಡೆಸಗೊತ್ತುಮಾಡಿದ್ದಾರೆ

...ಪಿ ಎಸ್ ಕೃಷ್ಣರಾಯರು ಇನ್ನೊಂದು ವರುಷ ಅಂದರೆ ೧೯೧೪ನೇ ...ಪ್ರೈಲು ವರೆಗೆ ಚೀಫ್ ಕೋರ್ಟಿನ ಚೀಫ್ ಜಡ್ಜಿ ರಾಗಿರಬೇಕೆಂದು ...ವನ್ನು ಸ್ಯಾಂಕ್ಷನ್ ಮಾಡಿದ್ದಾರೆ

...ನಾಡಕ್ಕೆ ದಯಮಾಡಿದ್ದ ನಮ್ಮ ಮಹಾರಾಣಿಯವರೂ, ಶ್ರೀಮನ್ ...ರವರನ್ನು ಸಾಗಕಳುಹಿಸುವುದಕ್ಕೆ ಬೊಂಬಾಯಿ ತನಕ ಹೋಗಿದ್ದ ...ಶುಕ್ರವಾರ ವಾಪಸು ರಾಜಧಾನಿಗೆ ಬಂದಿರುತ್ತಾರೆ

...ಳೂರು ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರಿಗೆ ಒಂದು ಮೋಟಾರ್ ...ನ್ನು ಕೊಂಡುಕೊಳ್ಳುವುದಕ್ಕೆ ಮ್ಯುನಿಸಿಪಲ್ ಫಂಡಿನಿಂದ ೧೭... ...ಕೊಡಬಹುದೆಂದು ಮೆಂಬರುಗಳು ಒಪ್ಪಿಕೊಂಡಿದ್ದಾರೆ

ಚಿತ್ರ ಸರ್ಕಸ್ ಕಂಪನಿಯವರು ತಮ್ಮ ಬಾಲಕರು ಒಂದು ಸಿಂಹವನ್ನು ಕೊಟ್ಟುಬಿಡುವುದಾಗಿಯೂ, ಇದನ್ನು ಲಾಲ್‌ಬಾಗ್ ಮೃಗಾಲಯದಲ್ಲಿ ಇಟ್ಟು ಕೊಳ್ಳುತ್ತೀರಾ ಎಂದೂ ಸೂಪರಿಂಟೆಂಡೆಂಟರವರನ್ನು ಕೇಳಿರುತ್ತಾರೆ

ಬೆಂಗಳೂರು ಲಂಡನ್ ಮಿಷನ್ ವಿದ್ಯಾರ್ಥಿನಿಯರ ಹೈಸ್ಕೂಲಿನಲ್ಲಿ ಕಳೆದ ಶನಿವಾರ ದಿವಾನ್ ಬಹದೂರ್ ಮಿ॥ ಕೆ ಪಿ ಪುಟ್ಟಣ್ಣಶೆಟ್ಟರವರು ಸಭೆಯ ಅಗ್ರಾಸನವನ್ನು ವಹಿಸಿ ಬಾಲಕಿಯರಿಗೆ ಬಹುಮಾನಗಳನ್ನು ಹಂಚಿಕೊಟ್ಟರು

ನಾಳೆ ೫ನೇ ತಾ ಶನಿವಾರದಿಂದ ರಾಜಧಾನಿಯ ಚಾಮರಾಜ ಪೇಟೆ ಕೋಟೆಗಳ ಸಮೀಪದಲ್ಲಿ ಆ ಪ್ರಾಂತ್ಯದ ಪ್ರಜೆಗಳಿಗೆ ಅನುಕೂಲಿಸುವಂತೆ ರೈಲ್ವೆ ಕಂಪನಿಯವರು ಒಂದು ಸ್ಟೇಷನನ್ನು ಪ್ರಾರಂಭಮಾಡುತ್ತಾರೆಂದು ಒಬ್ಬ ಬಾತ್ಮಿದಾರರು ತಿಳಿಸಿದ್ದಾರೆ

ಧಾರವಾಡದಲ್ಲಿ ಬಹುಕಾಲ ಇಂಜನಿಯರಾಗಿದ್ದು ಈಚೆಗೆ ಬೊಂಬಾಯಿನಲ್ಲಿ ಸ್ಯಾನಿಟರಿ ಇಂಜನಿಯರಾಗಿದ್ದ ಮಿ॥ ಬೆಳವಾಡಿ ನಂಜುಂಡಯ್ಯನವರು ಹಿಂದಿನ ವಾರ ಅಕಸ್ಮಾತ್ತಾಗಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಮೈಸೂರು ದೇಶದವರು ಸತ್ಯವಂತರೆಂದೂ, ಪರೋಪಕಾರಿಗಳೆಂದೂ ಹೆಸರು ಪಡೆದಿದ್ದರು

ನಮ್ಮ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯಾಗಿ ಕಳೆದ ೧೯೦೯ನೇ ಏಪ್ರೆಲ್‌ನಿಂದ ಇರುವ ಮಿ॥ ಆರ್ ಎಚ್ ಕ್ಯಾಂಬೆಲ್‌ಯವರು ಮದರಾಸ್ ಗವರ್ನ್‌ಮೆಂಟಿನ ಸರ್ವೀಸಿನಿಂದ ಕಳೆದ ತಿಂಗಳ ಆಖೈರಿನಲ್ಲಿ ನಿವೃತ್ತಿ ಹೊಂದಿದರು ಇವರು ಇನ್ನೂ ಐದು ವರುಷ ಪ್ರೈವೆಟ್ ಸೆಕ್ರೆಟರಿಯಾಗಿ ಇರುತ್ತಾರೆಂದು ತಿಳಿಯಬರುತ್ತದೆ

ರಾಜಧಾನಿಯಲ್ಲಿರುವ ಕೆಲವು ಯೂರೋಪ್ಯಿಯನ್ ಮತ್ತು ದೇಶೀಯ ದೊಡ್ಡಮನುಷ್ಯರು ಮಹಾರಾಜಾ ಕಾಲೇಜಿನ ಸಹಾಯೋಪಾಧ್ಯಾಯರಾಗಿದ್ದು ಆ ಕೆಲಸವನ್ನು ಬಿಟ್ಟುಹೋಗುವವರಾಗಿರುವ ಮಿ॥ ಆರ್ ಮೆಕೊಂಬ್‌ಯವರಿಗೆ ನೆನ್ನೆ ಸಾಯಂಕಾಲ ಇಲ್ಲಿನ ಕಿಪ್ಪಡ ಸೂಗರ ಪಾರ್ಕಿನ ಎದುರಿನ ಮಿಷನ್ ಬಂಗಲೆಯಲ್ಲಿ ಒಂದು ಸಂತೋಷ ಕೂಟವನ್ನು ನಡಿಸುವವರಾಗಿದ್ದರು

ಗುಬ್ಬಿಯಲ್ಲಿ ಬಹಳ ಅಭಿವೃದ್ಧಿಸ್ಥಿತಿಗೆ ತರಲ್ಪಟ್ಟಿರುವ ರೀಡಿಂಗ್ ರೂಮಿಗೆ ಮ॥ ಶಿವರಾತ್ರಪ್ಪನವರೂ, ಮ॥ ರೇಭುಲಿಂಗಶೆಟ್ಟರೂ ತಲಾ ೫೦ ರೂಪಾಯಿನಂತೆ ದ್ರವ್ಯ ಸಹಾಯಮಾಡಿದರು ಮೆಂಬರುಗಳು ಅವರನ್ನು ಕೃತಜ್ಞತಾಪೂರ್ವಕವಾಗಿ ವಂದಿಸಿ, ಪುಸ್ತಕ ಭಂಡಾರಕ್ಕೆ ಆ ಹಣದಿಂದ ಕನ್ನಡ ಪುಸ್ತಕಗಳೇ ತರಿಸಿ ಎಲ್ಲರಿಗೂ ಓದುವಂತೆ ಅನುಕೂಲಮಾಡಿಕೊಡಬೇಕೆಂದು ತೀರ್ಮಾನ ಮಾಡಿದರು

ರಾಜಧಾನಿಯಲ್ಲಿರುವ ಮೈಸೂರು ಇನ್‌ಫೆಂಟ್ರಿ ಸೈನ್ಯದ ೧ ನೇ ಬಟಾಲಿಯನ್‌ನಲ್ಲಿ ಹಿಂದೂ ಹುದ್ದೆದಾರರಾದ ಕಮಾಂಡಾಂಟ್ ಮಿ॥ ಪಿ ಎಸ್ ಕೃಷ್ಣ ಅರಸಿನವರೂ ಸುಬೇದಾರ್ ಕೃಷ್ಣರಾಯರೂ ಮತ್ತು ಗುಲಾಬ್ ಸಿಂಗರೂ, ಜಮಾದಾರ್ ಶ್ರೀನಿವಾಸಮೂರ್ತಿಯವರೂ ಸೇರಿ ಹೋಳಿಹಬ್ಬದ ನಿಮಿತ್ತ ಕಳೆದ ಗುರುವಾರ ರಾತ್ರಿ ಕೆಲವು ದೊಡ್ಡ ಮನುಷ್ಯರನ್ನೂ ಹುದ್ದೆದಾರರನ್ನೂ ಕರಸಿಕೊಂಡು ಒಂದು ಸಂತೋಷಕೂಟವನ್ನು ನಡಿಸಿದರೆಂದು ಕೇಳುತ್ತೇವೆ

ಬೀದಿಗಳಲ್ಲಿ ಕತ್ತೆಗಳ ಕಾಟವನ್ನು ತಪ್ಪಿಸುವುದಕ್ಕೆ ಬೆಂಗಳೂರು ದಂಡಿನ ಮ್ಯುನಿಸಿಪಾಲಿಟಿಯವರು ಕೆಲವು ರೂಲಸು ಮಾಡಬೇಕೆಂದು ಯೋಚಿಸಿದ್ದರು ಅದನ್ನು ನೋಡಿ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರೂ ಅದೇ ತೆರದ ರೂಲಸು ಮಾಡಿಕೊಳ್ಳಬೇಕೆಂದು ಉದ್ದೇಶಪಟ್ಟರು ಈಚೆಗೆ ದಂಡಿನವರು ಅಂಥಾ ಕಾನೂನು ಅವಶ್ಯವಿಲ್ಲವೆಂದು ತೀರ್ಮಾನ ಮಾಡಿದ್ದನ್ನು ಸಿಟಿಯವರು ತಿಳಿದು ಅದು ತಮ್ಮ ಮ್ಯುನಿಸಿಪಾಲಿಟಿಗೂ ಅಗತ್ಯವಿಲ್ಲವೆಂದು ಸುಮ್ಮನಾದಂತೆ ಕೇಳುತ್ತೇವೆ

ಅನೇಕರು ಬಾಲ್ಯವಿವಾಹವನ್ನು ತಪ್ಪಿಸಬೇಕೆಂದು ಸಾಹಸಪಡುತ್ತಿದ್ದಾರೆ. ರಾಜಧಾನಿಯಲ್ಲಿ ಇದಕ್ಕಾಗಿ ಒಂದು ಸಂಘವೂ ಏರ್ಪಾಡಾಗಿದೆ ಮ॥ ಮಹದೇವ ಶಾಸ್ತ್ರಿಗಳು ಕಳೆದ ಸೋಮವಾರ ಸಾಯಂಕಾಲ ಇಲ್ಲಿನ ಸದ್ವಿದ್ಯಾ ಪಾಠಶಾಲೆಯಲ್ಲಿ ಬಹು ಸಾರಸ್ಯವಾದ ಉಪನ್ಯಾಸ ಮಾಡಿದರು ಮರುದಿನ ನಡೆದ ಸಭೆಯಲ್ಲಿ ವೈದಿಕರು ಚರ್ಚೆಮಾಡುತ್ತಾ ಆಕ್ರೋಶಯುಕ್ತವಾದ ವಾಗ್ವಾದ ಮಾಡಿದರೆಂದೂ, ಕಡೆಗೆ ಮ॥ ವೆಂಕಟಕೃಷ್ಣಯ್ಯನವರು ಸಭಿಕರಿಗೆಲ್ಲಾ ಸಮಾಧಾನವಾಗುವಂತೆ ಉಪನ್ಯಾಸಮಾಡಿದರೆಂದೂ ತಿಳಿದುಬಂದಿದೆ

ಮೈಸೂರು ಅಡಿಷನಲ್ ಮುನ್‌ಸಿಫ್ ಕೋರ್ಟಿನ ನಾಜರ್ ನಾಗೇಶರಾಯರು ಸರ್ಕಾರದ ಲೆಕ್ಕಗಳನು ಬದಲಾವಣೆಮಾಡಿ ಹಣವನ್ನು ದುರುಪಯೋಗಪಡಿಸಿಕೊಂಡಿರುವಂತೆ ಕಂಡುಬಂದದ್ದರಿಂದ ಪೋಲೀಸಿನವರು ಅವರ ಮೇಲೆ ಮೂರು ಮೊಕದ್ದಮೆಗಳನು ತಂದು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದುಮಾಡಿದ್ದಾರೆ ಈ ಮೊಕದ್ದಮೆ ಈ ತಿಂಗಳ ಎರಡನೇ ವಾರದಲ್ಲಿ ನಡೆಯುವುದಾಗಿದೆ ಅ॥ ಕಂಟ್ರೋಲರು ಮಿ॥ ಬಿ ಶ್ರೀನಿವಾಸಯ್ಯಂಗಾರ್ಯರು ಒಬ್ಬರಿಂದಿಯೊಡನೆ ಬಂದು ಒಂದು ವಾರದ ತನಕ ಆ ಕೋರ್ಟಿನ ಜಮಾ ಖರ್ಚು ಲೆಕ್ಕಗಳನ್ನು ತನಿಖೆಮಾಡಿಕೊಂಡು ಹೋದರು ಇದುವರೆಗೆ ನೋಡಿದ್ದರಲ್ಲಿ ನಾಗೇಶರಾಯರು ೩,೦೦೦ ರೂಪಾಯಿ ತನಕ ದುರ್ವಿನಿಯೋಗ ನಡಿಸಿರುವಂತೆ ತೋರಪಟ್ಟಿರುವುದಾಗಿ ಕೇಳುತ್ತೇವೆ

ಮೈಸೂರು ಗಜೆಟಿನ ಸಂಗ್ರಹ

ಹಾಲೇನಹಳ್ಳಿ ಪಟೇಲ್ ಮಿ॥ ಒಡೆಯ ಗೌಡರನ್ನು ಸೀರಾ ತಾಲ್ಲೂಕ್ ಬೋರ್ಡ್ ಮೆಂಬರಾಗಿ ನೇಮಿಸಿದೆ

ಹಾಸನ್ ಡಿಸ್ಟ್ರಿಕ್ಟ್ ಖುಷ್ಕಿ ಭಾರ್ವಸನ್ನು ವಹಿಸಿರುವ ಅ॥ ಕಮಿಷನರ್ ಮಿ॥ ಎಂ ಶ್ರೀನಿವಾಸಮೂರ್ತಿಯವರಿಗೆ ಏಪ್ರೆಲ್ ತಾ ೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ನಾಲ್ಕು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮಿ॥ ಎಸ್ ಎನ್ ಅಪ್ಪಣ್ಣ ಅಯ್ಯಂಗಾರ್ಯರು ಟ್ರೆಜರಿ ಛಾರ್ಜನ್ನು ವಹಿಸತಕ್ಕದ್ದು

ಅ॥ ಸರ್ಜನ್ ಮಿ॥ ಬಿ ಕೃಷ್ಣಮೂರ್ತಿರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನು ಮೂರು ದಿನ ಜಾಸ್ತಿಮಾಡಿದೆ

ಗವರ್ನ್‌ಮೆಂಟ್ ಅಂಡರ್ ಸೆಕ್ರೆಟರಿ ಮಿ॥ ಬಿ ರಾಮಸ್ವಾಮಯ್ಯನವರಿಗೆ ಏಪ್ರೆಲ್ ತಾ ೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮಿ॥ ಮಿರ್ಜಾ ಮಹಮದ್ ಇಸ್ಮಾಯಿಲ್‌ಯವರನ್ನು ಶ್ರೀಮನ್ ಮಹಾರಾಜರವರ ಹುಜೂರು ಸೆಕ್ರೆಟರಿಯಾಗಿ ಬದಲಿ ನೇಮಿಸಿದೆ

ಮಿಸ್ ಎ ಜಿ ಆರ್ಲ್‌ಯವರನ್ನು ಹಂಗಾಮಿಯಾಗಿ ಚಿಕ್ಕಬಳ್ಳಾಪುರದ ಹೆಂಗಸರ ಆಸ್ಪತ್ರೆ ಛಾರ್ಜಿಗೆ ವರ್ಗಮಾಡಿದೆ

ಚನ್ನಗಿರಿ ತಾಲ್ಲೂಕು ಅಮಲ್ದಾರ್ ಮಿ॥ ಎಸ್ ಎನ್ ಶ್ರೀನರಸಿಂಹಶಾಸ್ತ್ರಿಯವರು ರಜದಿಂದ ಬಂದು ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರ ಬಳಿ ಸ್ಪೆಷಲ್ ಡ್ಯೂಟಿಯನ್ನು ವಹಿಸತಕ್ಕದ್ದು

ಸ್ಪೆಷಲ್ ಡ್ಯೂಟಿಯ ಮೇಲಿರುವ ಮಿ॥ ವಿ ಎಸ್ ಸಾಂಬಶಿವ ಅಯ್ಯರವರಿಗೆ ಮಾರ್ಚಿ ತಾ ೧೧ ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಸಾಗರ ತಾಲ್ಲೂಕಿನ ಅಮಲ್ದಾರ್ ಮಿ॥ ಬಿ ಕೃಷ್ಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಶಿರಸ್ತೆದಾರರು ತಾಲ್ಲೂಕಿನ ಛಾರ್ಜನ್ನು ವಹಿಸತಕ್ಕದ್ದು .

ಮುಂದೆ ಹೇಳುವ ಡೆಪ್ಟಿ ಕಮಿಷನರುಗಳ ವರ್ಗಾವರ್ಗಿ ಹುಕುಂ ಆಗಿದೆ—ಮಿ ಕೆ ಚಾಂಡಿಯವರು ಮೈಸೂರಿನಿಂದ ಬೆಂಗಳೂರಿಗೆ, ಮಿ॥ ಬಿ ಟಿ ಕುಮಾರಸ್ವಾಮಿನಾಯಕರವರು ಬೆಂಗಳೂರಿನಿಂದ ಚಿತ್ರದುರ್ಗಕ್ಕೆ, ಮಿ॥ ಎ. ಸುಬ್ರಹ್ಮಣ್ಯ ಅಯ್ಯರವರು ಕಡೂರಿನಿಂದ ಮೈಸೂರಿಗೆ, ಮಿ॥ ಕೆ. ಕೃಷ್ಣಅಯ್ಯರವರು ಚಿತ್ರದುರ್ಗದಿಂದ ಕಡೂರಿಗೆ

ಡೆಪ್ಟಿ ಕಮಿಷನರ್ ಮಿ ಕೆ ಚಾಂಡಿಯವರಿಗೆ ಎರಡು ತಿಂಗಳ ರಜಾ ಕೊಟ್ಟಿರೋಣದರಿಂದ ಆ ಕಾಲದಲ್ಲಿ ಮಿ॥ ಕೆ ಮತ್ತನ್‌ರವರು ಚಿತ್ರದುರ್ಗದ ಡೆಪ್ಟಿ ಕಮಿಷನರಾಗಿಯೂ ಮಿ॥ ಟಿ ಚೊಕ್ಕಣ್ಣನವರು ಕೋಲಾರದ ಚಿನ್ನದ ಗಣಿಗಳ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿಯೂ, ಕೋಲಾರ್ ತಾಲ್ಲೂಕು ಅಮಲ್ದಾರ್ ಮಿ॥ ಬಿ ಸಿ ಕೃಷ್ಣಶಾಸ್ತ್ರಿಯವರು ಮಾಲೂರು ಸಬ್ ಡಿವಿಜನ್ ಆಫೀಸರಾಗಿಯೂ ಬದಲಿ ನೇಮಿಸಲ್ಪಟ್ಟಿದ್ದಾರೆ

ಕೋಲಾರ್ ಚಿನ್ನದ ಗಣಿಗಳ ಪೋಲೀಸ್ ಸೂಪರಿಂಟೆಂಡೆಂಟ್ ಮಿ॥ ಎಸ್ ಎಂ ಪ್ರಿಚರ್ಡ್‌ಯವರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿ ಮಾಡಿದೆ

ಸರ್ಜನ್ ಮಿ॥ ಬಿ ಡಿ ರಾಘವೇಂದ್ರರಾಯರನ್ನು ತುಮಕೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರಾಗಿಯೂ, ಮಿ॥ ಸಿ ಅಪ್ಪಾದೊರೆ ಮೊದಲಿಯಾರ್ರನ್ನು ತುಮಕೂರಿನಿಂದ ಮೈಸೂರು ಜನರಲ್ ಆಸ್ಪತ್ರೆಗೂ, ಮಿ॥ ಸಿ ರಾಮರಾವ್‌ರಾಯರನ್ನು ಮೈಸೂರು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿಯೂ, ಮಿ॥ ಎಸ್ ಸುಬ್ಬರಾಯರನ್ನು ಮೈಸೂರು ರೆಸಿಡೆಂಟ್ ಮೆಡಿಕಲ್ ಆಫೀಸರಾಗಿಯೂ, ಮಿ॥ ಎಸ್ ಕೆ ಹನುಮಂತರಾಯರನ್ನು ಶಿವಮೊಗ್ಗೆಯಿಂದ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೂ ವರ್ಗಮಾಡಿ ನೇಮಿಸಿದೆ

ಮಿ॥ ಕೆ ವಿ ಅನಂತರಾಮನ್‌ಯವರಿಗೆ ಎರಡೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿರೋಣದರಿಂದ ಮಿ॥ ಎನ್ ಮಾಧವರಾಯರನ್ನು ಹಂಗಾಮಿಯಾಗಿ ರೆವಿನ್ಯೂ ಕಮಿಷನರ್‌ರವರ ಆಫೀಸಿಗೆ ವರ್ಗಮಾಡಿದೆ

ಹಗ್ಗದದೇವನಕೋಟೆ ಆಕ್ಟಿಂಗ್ ಅಮಲ್ದಾರ್ ಮಿ॥ ಎಂ ಎನ್ ಶ್ರೀನಿವಾಸ ಅಯ್ಯಂಗಾರ್ರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿಮಾಡಿದೆ

ಚನ್ನರಾಯಪಟ್ಟಣದ ತಾಲ್ಲೂಕ್ ಅಮಲ್ದಾರ್ ಮಿ॥ ಸಿ ನಾರಾಯಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಆಲೂರಿನ ಆಕ್ಟಿಂಗ್ ಡೆಪ್ಟಿ ಅಮಲ್ದಾರ್ ಮಿ॥ ಎಸ್ ಸುಂದರರಾಜ ಅಯ್ಯಂಗಾರ್ರು ಚನ್ನರಾಯಪಟ್ಟಣದ ಅಮಲ್ದಾರ್ ಮತ್ತು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ, ಹಾಸನದ ಸಬ್ ರೆಜಿಸ್ಟ್ರಾರ್ ಮಿ॥ ಎ ಚಕ್ರಪಾಣಿರಾಯರು ಆಲೂರಿನ ಡೆಪ್ಟಿ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಬದಲಿ ನೇಮಿಸಲ್ಪಟ್ಟಿದ್ದಾರೆ

ಮಿ॥ ಎಂ ರಾಮರಾಯರು ಇತರ ಕೆಲಸದ ಮೇಲಿರುವಾಗ್ಗೆ ತುರುವೇಕೆರೆ ಸಬ್ ತಾಲ್ಲೂಕಿನ ಡೆಪ್ಟಿ ಅಮಲ್ದಾರ್ ಮಿ॥ ಟಿ ಸ್ವಾಮಿನಾಥಶಾಸ್ತ್ರಿಯವರು ಗುಬ್ಬಿ ತಾಲ್ಲೂಕು ಅಮಲ್ದಾರ್ ಮತ್ತು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ, ಸೆನ್ಸಸ್ ಸೂಪರಿಂಟೆಂಡೆಂಟರವರ ಆಫೀಸ್ ಹೆಡ್ ಕ್ಲಾರ್ಕ್ ಮಿ॥ ಎಸ್ ಸೀತಾರಾಮಯ್ಯನವರು ತುರುವೇಕೆರೆ ಸಬ್ ತಾಲ್ಲೂಕಿನ ಡೆಪ್ಟಿ ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಬದಲಿ ನೇಮಿಸಲ್ಪಟ್ಟಿದ್ದಾರೆ

ಬಾತ್ಮಿದಾರರಿಗೆ ನೋಟೀಸ್.

ಪ್ರಜಾ ಹಿತವಾದಿ, ಪಾವಗಡ —ನಿಮ್ಮ ಆಕ್ಷೇಪವನ್ನು ಆ ಕಛೇರಿಗೆ ಬರೆದು ವ್ಯವಹರಿಸಿಕೊಳ್ಳಬೇಕು

ಪ್ರ ಜಾಭಿಮಾನಿ, ಹೊಸದ್ಯಾವನಹಳ್ಳಿ —ನೀವು ಹೇಳುವ ದಾಂಧಲೆ ವಿಷಯವನ್ನು ನಿಮ್ಮ ತಾಲ್ಲೂಕಿನ ಅಮಲ್ದಾರರಿಗೂ, ಡೆಪ್ಟಿ ಕಮಿಷನರಿಗೂ ಮೊದಲು ಬರೆದು ತಿಳಿಸಿ ಅವರು ತಾವೇ ಯಾವ ದರ್ಯಾಫ್ತು ಕ್ರಮಪಡಿಸದಿದ್ದರೆ ಅನಂತರ ನಾವು ಪ್ರಕಟಮಾಡಬಹುದು ಪ್ರಜೆಗಳು ತಮ್ಮ ಕಷ್ಟ ದುಃಖ ನಷ್ಟಗಳನ್ನು ಧೈರ್ಯವಾಗಿ ಮೊದಲು ಅಧಿಕಾರಿಗಳಿಗೆ ತಿಳಿಸಿ ಸರಿಪಡಿಸಿಕೊಳ್ಳುವುದಕ್ಕೆ ಪ್ರಯತ್ನಪಡಬೇಕು

ಒಬ್ಬ ಚಂದಾದಾರ, ಗುಬ್ಬಿ, ಎ ರಿಟೈರ್ಡ್ ಆಫೀಸರ್, ಚಿಕ್ಕಬಾಣಾವಾರದ ಬಾತ್ಮಿ ಹುಣಸೂರಿನ ಎರಡು ಬಾತ್ಮಿಗಳು ಪ್ರಜೆಗಳ ಹಿತೋಪಕಾರಿ, ಹೆಗ್ಗದದೇವನಕೋಟೆ ಪರಿಶುದ್ಧತೆ ಮುರಿಕಮ್ಮನಹಳ್ಳಿ ಮಳೆ ಬೆನ್ನೂರು ಬಾತ್ಮಿ — ಇವುಗಳಲ್ಲಿ ಪ್ರಕಟಿಸಲು ಅರ್ಹವಾದ ವರ್ತಮಾನಗಳೇನೂ ಕಾಣುವುದಿಲ್ಲ

ಎ ಪಿ ರಾವ್, ಶಿವಮೊಗ್ಗಾ ಪ್ರಜೆಗಳ ಮುಖಂಡರು ಸೇರಿ ಡೆಪ್ಟಿ ಕಮಿಷನರಿಗೆ, ಮುಜರಾಯಿ ಸೂಪರಿಂಟೆಂಡೆಂಟರಿಗೂ ಬರೆದುಕೊಳ್ಳ ತಕ್ಕದ್ದು

—ಎಡಿ]

ಮೈಸೂರು ನಾರ್ಮಲ್ ಟ್ರೈನಿಂಗ್ ಪರೀಕ್ಷೆಗಳು

1913 ನೇ ಇಸವಿ ಪರೀಕ್ಷೆಯ ಫಲಿತಾಂಶ, ಮೈಸೂರು ಸೆಂಟರ್

ಲೋಯರ್ ಇಂಗ್ಲಿಷ್ ನಾರ್ಮಲ್ ಸರ್ಟಿಫಿಕೇಟ್ ಪರೀಕ್ಷೆ —ಈ ಪರೀಕ್ಷೆಯ ಬೋರ್ಡಿನವರು ತೀರ್ಮಾನ ಮಾಡಿರುವಂತೆ ಮುಂದೆ ಹೇಳುವ ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ—1 ನೇ ಕ್ಲಾಸ್ ಎಸ್ ಭೀಮರಾವ್, ಮತ್ತು ಕೆ ಸೀತಾರಾಮಶಾಸ್ತ್ರಿ, ಡಿ ಚಂದ್ರಶೇಖರಯ್ಯ, ದತ್ತಾತ್ರೇಯದೀಕ್ಷಿತ್, ಎನ್ ವಿ ಸುಬ್ಬರಾವ್, ಟಿ ಎನ್ ಸುಬ್ಬರಾವ್, ಎ ನಾರಾಯಣಶಾಸ್ತ್ರಿ, ಎಚ್. ವೆಂಕಟರಮಣಯ್ಯ, ಎಲ್ ಸುಬ್ಬರಾವ್, ಡಿ ಸುಬ್ಬರಾವ್, ಕೆ ಸೀನಪ್ಪ, ಕೆ ವಿ ಸುಬ್ಬರಾವ್, ಎಂ ಅಲಯ್ಯ

ಅಪ್ಪರ್ ಸೆಕೆಂಡರಿ ಟೀಚರ್ಸ್ ಸರ್ಟಿಫಿಕೇಟ್ ಪರೀಕ್ಷೆ —ಈ ಪರೀಕ್ಷೆಯ ಬೋರ್ಡಿನವರು ತೀರ್ಮಾನ ಮಾಡಿರುವಂತೆ ಮುಂದೆ ಹೇಳುವ ವಿದ್ಯಾರ್ಥಿಗಳು ತೇರ್ಗಡೆಯಾಗಿರುತ್ತಾರೆ—ಮಹಮದ್ ದಸ್ತಗೀರ್, ಎಂ ಸಂಪತ್ಕುಮಾರಾಚಾರ್ (ಸಂಗೀತ ಸಹ), ಎಚ್ ಪಿ ಕೇಶವಾಚಾರ್, ಕೆ ಶ್ರೀಕಂಠಶಾಸ್ತ್ರಿ (ಸಂಗೀತ ಸಹ), ಟಿ ನಂಜುಂಡಯ್ಯ, ವಿ ಎಸ್ ರಾಮಾನುಜಯ್ಯಂಗಾರ್, ಸಿ ರಂಗಾಚಾರ್, ಎಚ್ ಸುಬ್ಬರಾವ್, ಎಂ ರಾಮಣ್ಣ, ಎಸ್. ಮೃತ್ಯುಂಜಯ ಶಾಸ್ತ್ರಿ, ಎ ಎನ್ ಸುಬ್ಬರಾವ್, ಎ ಎಸ್ ಶ್ರೀಕಂಠಯ್ಯ, ಎ ಸೀತಾರಾಮಯ್ಯ, ಮಹಮದ್ ದಾವೂದ್, ಅಬ್ದುಲ್ ಗಫೂರ್, ಅಬ್ದುಲ್ ಗಫೂರ್ ಖಾನ್ ಗುಲಾಮ್ ಅಹಮದ್, ಎಂ ಲಕ್ಷ್ಮೀದೇವಮ್ಮ, ಎಸ್ ಕಾವೇರಮ್ಮ

ಬೆಂಗಳೂರು ಚಿಕ್ಕಬಳ್ಳಾಪುರ ಲೈಟ್ ರೈಲ್ವೆ

ಕಂಪನಿ ಚೇರ್‌ಮನ್ನರವರಾದ ರಾಜಸಭಾಭೂಷಣ ದಿವಾನ್ ಬಹದ್ದೂರ್ ಮ| ಕೆ ಪಿ ಪುಟ್ಟಣ್ಣಶೆಟ್ಟರವರು ತಿಳಿಸುವದೇನೆಂದರೆ—ಈ ರೈಲ್ವೆಯ ಕಾಮಗಾರಿಯನ್ನು ಶುರು ಮಾಡಲು ಇಷ್ಟು ತಾವಕಾಶಕ್ಕೆ ಕಾರಣವಾಗಿದ್ದ ಅಡಚಣೆಗಳು ಎಲ್ಲವೂ ಈಗತಾನೇ ನಿವಾರಣೆಯಾಗಿ ಸದರಿ ಕಾಮಗಾರಿಯನ್ನು ಶ್ರೀಮನ್ ಮಹಾರಾಜಾ ಸಾಹೇಬರವರ ಸರ್ಕಾರದಿಂದ ಸಾದರಾದ ಪ್ರೊಸೀಡಿಂಗ್ಸ್ ಅನುಸರಿಸಿ ಸ್ಟೇಟ್ ರೈಲ್ವೇ ಕನ್‌ಸ್ಟ್ರಕ್ಷನ್ ಡಿಪಾರ್ಟ್‌ಮೆಂಟ್ ಚೀಫ್ ಇಂಜನಿಯರ್ ಮಿ ಬೆಲ್‌ಸಾಹೇಬರವರು ವಹಿಸಿಕೊಂಡು ಇದೇ ತಿಂಗಳು 3 ನೇ ತಾರೀಖಿನಲ್ಲಿ ಕೆಲಸಕ್ಕೆ ಶುರುಮಾಡಿರುವುದಾಗಿಯೂ, ಮತ್ತು ಕಾಮಗಾರಿ ನಡೆಯುತ್ತಲಿರುವದಾಗಿಯೂ ವಿಶೇಷ ಖರ್ಚು ಇಲ್ಲದೆ ಸಾಧ್ಯವಾದಷ್ಟು ಸುಲಭದಲ್ಲಿಯೇ ತಮ್ಮ ಬಹು ಉಸ್ತುವಾರಿಯಿಂದ ಕೆಲಸವನ್ನು ಪೂರೈಸಿಕೊಡುವಂತೆಯೂ ತಿಳಿಸುತ್ತಾರೆ —ಸದರಿ ಕಾಮಗಾರಿಗೆ ಆಗಿಂದಾಗ್ಗೆ ಬೇಕಾಗುವ ದ್ರವ್ಯವನ್ನು ಒದಗಿಸಿಕೊಡುತ್ತಿದ್ದೇನೆ ಸಮ್ಮಂಧಾಗಪೇಕ್ಷಿತವಾದ ಮುಖ್ಯ ಕೆಲಸವಾಗಿರುತ್ತೆ ನನ್ನ ವೇಶ್ಯೆಯ ಪ್ರಯತ್ನವನ್ನು ನೆರವೇರಿಸುವದಕ್ಕಾಗಿ ಇದುವರೆಗೂ ಬೇಕಾದ ಸಹಾಯವನ್ನೇ ಮಾಡಿರುವ ಶಾಂತಮನಸ್ಕರಾದ ನಮ್ಮ ಷೇರುದಾರರುಗಳೆಲ್ಲರೂ ಒಂದೇ ಮನಸ್ಸಿನಿಂದ ಅವರವರಿಂದ ಬಾಕಿಯಾಗುವ ಕಾಲ್ಸು ಮೊಬಲಗನ್ನು ದಯವಿಟ್ಟು ಪಾವತಿಮಾಡುವದಾದರೆ ಕೆಲಸಕ್ಕೆ ಬೇಕಾಗುವ ದ್ರವ್ಯವನ್ನು ಒದಗಿಸಿಕೊಡಲು ಯಾವ ವಿಧವಾದ ತೊಂದರೆಯೂ ಇರುವದಿಲ್ಲ ಮತ್ತು ಕಾಲ್ಸು ಬಾಕಿಗಾಗಿ ಷೇರುಗಳನ್ನು ವಜಾಮಾಡುವದೆಂಬ ಅತೃಪ್ತಿಕರವಾದ ಸಂದರ್ಭವೂ ಉಂಟಾಗಲಾರದು ತಹಲ್‌ವರಿವಿಗೂ ಬಿಕರಿಯಾಗಿರುವ ಹತ್ತು ಲಕ್ಷ ರೂಪಾಯಿಗಳಿಗೆ ಕಾಲ್ಸು ಮೊಬಲಗು ವಸೂಲಾದರೆ ಇನ್ನೂ ಹೆಚ್ಚಾಗಿ ಬೇಕಾಗುವ ದ್ರವ್ಯವನ್ನು ಇನ್ನೂ ಬಾಕಿ ಇರುವ ಷೇರುಗಳ ವಿಕ್ರಯದಿಂದ ಒದಗಿಸಿಕೊಳ್ಳಬಹುದೆಂದು ವ್ಯಕ್ತವಾಗಿ ಹೇಳಬಹುದಾಗಿದೆ ಮೈಸೂರು ಸರ್ಕಾರದವರು ದಯಪಾಲಿಸಿರುವ ಶೇಕಡಾ ನಾಲ್ಕು ರೂಪಾಯಿನ ಬಡ್ಡಿ ಗ್ಯಾರಂಟಿಯು ಷೇರುದಾರರಿಗೆ ಮತ್ತಷ್ಟು ಭರವಸೆ ಉಂಟುಮಾಡತಕ್ಕದ್ದಾಗಿದೆ

ತುಮಕೂರು ಗವರ್ನ್‌ಮೆಂಟ್ ಎ ವಿ ಸ್ಕೂಲು

ದಿ ಪೇರೆಂಟ್ಸ್ ಡೆ

ಬಾಲಕರ ತಂದೆ ತಾಯಿಗಳಿಗೂ ಪೋಷಕರಿಗೂ ಸ್ಕೂಲಿನಲ್ಲಿ ಈ ಸಂವತ್ಸರದ ಆದಿ ಭಾಗದಿಂದ ನಡೆದಿರುವ ವಿದ್ಯಾಭಿವೃದ್ಧಿ, ನೂತನ ಬೋಧನಾಕ್ರಮ ಮೊದಲಾದ ವಿಷಯಗಳಲ್ಲಿ ಪರಿಚಯ ಕೊಡಲೂ, ಪರಸ್ಪರರಿಗೂ ವಿದ್ಯಾಧಿಕಾರಿಗಳಿಗೂ ಪರಸ್ಪರ ಮೈತ್ರಿ ಬೆಳೆಯಲು ಅವಕಾಶ ಕೊಡಲೂ ತುಮಕೂರು ಎ ವಿ ಸ್ಕೂಲಿನಲ್ಲಿ ಮಾರ್ಚಿ ತಾ 29 ನೇ ಶನಿವಾರ ದಿ ಪೇರೆಂಟ್ಸ್ ಡೆ ಎಂಬ ಉತ್ಸವವು ಅತ್ಯಂತ ಸಂಭ್ರಮದಿಂದ ಜರುಗಿತು ಸ್ಕೂಲ್ ಮಂದಿರದಲ್ಲಿ ಕಿಂಡರ್‌ಗಾರ್ಟನ್, ನೇಚರ್ ಸ್ಟಡಿ, ನೇಚರ್ ಟ್ಯಾಬಲ್ಸ್, ಮ್ಯಾಪ್ ಡ್ರಾಯಿಂಗ್, ಫ್ರೀ ಹ್ಯಾಂಡ್ ಡ್ರಾಯಿಂಗ್, ಪೇಪರ್ ಸ್ಲಾಯಿಡ್, ಚರಿತ್ರೆ, ಭೂಗೋಳ, ಗಣಿತ, ಭಾಷೆ, ಇವೇ ಮೊದಲಾದವುಗಳಿಗೆ ಸಂಬಂಧಿಸಿದ ಪ್ರಾಯಶಃವಾಗಿ ಇತರ ಸ್ಕೂಲುಗಳಲ್ಲಿ ಇಲ್ಲದ ಅನೇಕ ನೂತನ ಉಪಕರಣಗಳೂ, ಬಾಲಕರೂ ಉಪಾಧ್ಯಾಯರೂ ಮಾಡಿದ ಅನೇಕ ಮಾದರಿಗಳೂ ಕ್ರಮಪಡಿಸಿ, ನೇತ್ರಾನಂದಕರವಾಗಿ ಪ್ರದರ್ಶಿಸಲ್ಪಟ್ಟಿದ್ದವು ಅನೇಕ ಉದ್ಯೋಗಸ್ಥರೂ, ಲಾಯರುಗಳೂ, ಶೆಟ್ಟಿ ವರ್ತಕರೂ ಸುಮಾರು 350 ಜನರವರೆಗೂ ಬಂದು ನೋಡಿದರು ಮಿ|| ಟಿ ವಿಶ್ವೇಶರಯ್ಯನವರು ಹೆಡ್ ಮಾಸ್ಟರಾಗಿ ಬಂದನಂತರ ಅನೇಕ ನೂತನ ಏರ್ಪಾಡುಗಳು ಈ ಸ್ಕೂಲಿನಲ್ಲಿ ನಡೆದಿರುವವು ಇವುಗಳಲ್ಲಿ ಕಿಂಡರ್‌ಗಾರ್ಟನ್ ಪದ್ಧತಿಯನ್ನು ಕ್ರಮಪಡಿಸಿದ್ದು ಮೊದಲನೇದು ಇಂದ್ರಿಯಗಳ ಶಿಕ್ಷಣವು ಬಹು ಮುಖ್ಯವಾದುದೆಂದರಿತು ಆರು ವರುಷಗಳಿಗಿಂತಲೂ ಚಿಕ್ಕವಯಸ್ಸಿನ ಮಕ್ಕಳಿಗೆ ಮೊದಲನೇ ಮೂರು ತಿಂಗಳು ಇಂದ್ರಿಯಗಳ ಸೂಕ್ಷ್ಮತೆಯನ್ನು ವೃದ್ಧಿಗೊಳಿಸಲು ಏರ್ಪಾಡಿಟ್ಟಿರುವುದು ನಮ್ಮ ಮೈಸೂರು ದೇಶದಲ್ಲಿ ಇನ್ನೆಲ್ಲಿಯೂ ಇಲ್ಲವೆಂದು ಹೇಳಬಹುದು ಈ ಸ್ಕೂಲಿನಲ್ಲಿ ಪರಿವರ್ತನಾವಿಧಾನವನ್ನು ಬಿಟ್ಟು ಸಾಕ್ಷಾತ್ ವಸ್ತುಜ್ಞಾನವಿಧಾನದಿಂದ ಇಂಗ್ಲೀಷನ್ನು ಬೋಧಿಸುವ ಕ್ರಮವನ್ನು ಅನುಸರಿಸಿರುತ್ತಾರೆ ಬಂದಿದ್ದ ದೊಡ್ಡ ಮನುಷ್ಯರು ಕೇವಲ ಸಣ್ಣ ವಯಸ್ಸಿನ ಬಾಲಕರು ಇಂಗ್ಲೀಷಿನಲ್ಲಿ ಸರಾಗವಾಗಿ ಸಂಭಾಷಿಸುವದನ್ನು ನೋಡಿ ಬಹಳ ಆಶ್ಚರ್ಯಪಟ್ಟರು ನವೀನಕ್ರಮಗಳನ್ನು ಅನುಸರಿಸಿರುವ ಈ ಪಾಠಶಾಲೆಯು ಅಗ್ರಸ್ಥಾನವನ್ನು ವಹಿಸಿರುವ ಪಾಠಶಾಲೆಗಳಲ್ಲಿ ಒಂದೆನ್ನುವುದರಲ್ಲಿ ಸಂಶಯವಿಲ್ಲ ಪ್ರತಿ ಡಿಸ್ಟ್ರಿಕ್ಟಿನಲ್ಲೂ ಇಂಥಾ ಸ್ಕೂಲು ಒಂದಾದರೂ ಇರುವಂತೆ ಸರಿಯಾದ ಸಲಕರಣೆಗಳನ್ನು ಒದಗಿಸಿಕೊಟ್ಟಲ್ಲಿ ಇತರ ಸ್ಕೂಲುಗಳಿಗೆ ಅದು ಮಾದರಿಯಾಗುತ್ತದೆ

ಪುರವಾಸಿ

ಮೈಸೂರು ಕೋಆಪರೇಟಿವ್ ಸೊಸೈಟಿ

ಐದನೇ ಜನರಲ್ ಮೀಟಿಂಗು

ರಾಜಧಾನಿಯಲ್ಲಿರುವ ಕೋಆಪರೇಟಿವ್ ಸೊಸೈಟಿಯ ಐದನೇ ಜನರಲ್ ಮೀಟಿಂಗು ಕಳೆದ ಭಾನುವಾರ ಬೆಳಗ್ಗೆ ಇಲ್ಲಿನ ಸದ್ವಿದ್ಯಾ ಪಾಠಶಾಲೆಯಲ್ಲಿ ನಡೆಯಿತು ಸುಮಾರು ಐವತ್ತು ಮೆಂಬರುಗಳು ಹಾಜರಾಗಿದ್ದರು ಪ್ರೆಸಿಡೆಂಟ್ ಮಿ|| ಎಚ್ ನಂಜುಂಡರಾಜೆಅರಸಿನವರು ಸಭೆಯ ಅಗ್ರಾಸನವನ್ನು ವಹಿಸಿದ್ದರು ಸೆಕ್ರೆಟರಿ ಮಿ|| ಬಿ ಸುಬ್ಬರಾಯರು 1911 ನೇ ಮೇ ತಿಂಗಳಿಂದ 1913 ನೇ ಡಿಸೆಂಬರ್ ಆಖೈರ್ ವರೆಗಿನ ಸೊಸೈಟಿ ಜಮಾಖರ್ಚನ್ನೂ ಆಡಳಿತವನ್ನೂ ಕುರಿತು ರಿಪೋರ್ಟನ್ನು ಓದಿದರು ಷೇರ್ ಮೊಬಲಗು ರೂ 28,106-12 0 ವಸೂಲಾಗಿದೆ ಸೊಸೈಟಿ ಆಡಳಿತದಿಂದ ರೂ 6,630 15 3 ಪೈ ಲಾಭ ಉತ್ಪತ್ತಿ ಆಗಿರುವುದರಲ್ಲಿ ರಿಜರ್ವಿಂಗ್ ಫಂಡಿಗೂ, ಸಿಬ್ಬಂದಿ ಖರ್ಚಿಗೂ ಪಾವತಿ ಆದಮೇಲೆ ಬಾಕಿ ಉಳಿದ ಮೊಬಲಗಿನಲ್ಲಿ ಷೇರುದಾರರಿಗೆ ಶೇಕಡಾ 5 ರಂತೆ ನಫೆಯನ್ನೂ ಅವರು ಸೊಸೈಟಿಯಲ್ಲಿ ಕೊಂಡುಕೊಂಡಿರುವ ಸಾಮಾನುಗಳಿಗಾಗಿ ರೂಪಾಯಿಗೆ 3 ಪೈ ನಂತೆ ಪ್ರತಿಫಲವನ್ನೂ ಹಂಚತಕ್ಕದ್ದೆಂದು ತೀರ್ಮಾನವಾಗಿದೆ ಆಡಿಟರುಗಳು ಸೊಸೈಟಿಯ ಲೆಕ್ಕಗಳಲ್ಲಿ ಕಂಡುಬಂದ ಹೇರುಪೇರುಗಳನ್ನು ಆಗಾಗ್ಗೆ ತೋರಿಸಿಕೊಟ್ಟು ಸರಿಪಡಿಸುತ್ತಾ ಬಂದಿದಾರೆ. ಹಾಜರಿದ್ದ ಮೆಂಬರುಗಳು ಅವರದು ರಿಪೋರ್ಟುಗಳನ್ನೂ ಒಪ್ಪಿ ಪ್ಯಾಸ್ ಮಾಡಿದರು ಚಾಮರಾಜಮೊಹಲ್ಲಾ ನಿವಾಸಿಗಳಿಗೂ ಮೆಂಬರುಗಳಿಗೂ ಅನುಕೂಲಿಸುವಂತೆ ಒಂದು ದಿನಸಿ ಅಂಗಡಿಯನ್ನು ಸೊಸೈಟಿಯಿಂದ 2,000 ರೂಪಾಯಿಗೆ ಮೀರದಂತೆ ಕೊಟ್ಟು ಇಡಿಸಬೇಕೆಂದು ತೀರ್ಮಾನವಾಯಿತು ಸೊಸೈಟಿಯ ಅಧಿಕಾರಿಗಳ ಚುನಾವಣೆ ನಡೆದು ಮ ನಂಜುಂಡರಾಜೆ ಅರಸಿನವರು ಪ್ರೆಸಿಡೆಂಟರಾಗಿಯೂ, ಮ ಎಂ ಸಿ ರಂಗಯ್ಯಂಗಾರ್ರು ವೈಸ್‌ಪ್ರೆಸಿಡೆಂಟರಾಗಿಯೂ, ಮ|| ಎಸ್ ರಾಮರಾಯರೂ ಮ| ಎಚ್ ಕೃಷ್ಣಾಚಾರ್ಯರೂ ಸೆಕ್ರೆಟರಿಗಳಾಗಿಯೂ ಮ ಎಚ್ ಆರ್ ಕೃಷ್ಣಮೂರ್ತಿಯವರು ಟ್ರೆಜರರಾಗಿಯೂ ನೇಮಕವಾದರು ಕಮಿಟಿಗೆ ಕೆಲವು ಹೊಸ ಮೆಂಬರುಗಳನ್ನು ಚುನಾಯಿಸಿದರು ಮ|| ಬಿ ಸುಬ್ಬರಾಯರು ಈ ಸೊಸೈಟಿ ಪ್ರಾರಂಭವಾದಾರಭ್ಯ ಆರುವರೆ ವರುಷಗಳಿಂದ ಏಕರೀತಿಯಾಗಿ ತಮ್ಮ ವಿರಾಮವನ್ನು ಸೊಸೈಟಿಯ ಪುರೋಭಿವೃದ್ಧಿಗೆ ವಿನಿಯೋಗಿಸುತ್ತಾ ಸೊಸೈಟಿಯನ್ನು ಉಚ್ಛ್ರಾಯ ಸ್ಥಿತಿಗೆ ತಂದಿಟ್ಟು ಈಗ ಸೆಕ್ರೆಟರಿ ಕೆಲಸದಿಂದ ನಿವೃತ್ತಿಹೊಂದಲಪೇಕ್ಷಿಸಿದ್ದರಿಂದ ಮೆಂಬರುಗಳೆಲ್ಲಾ ತುಂಬಾ ವಿಷಾದಪಟ್ಟು ಅವರನ್ನು ಬಿಡುಗಡೆಮಾಡಿ ಇದುವರೆಗೆ ಅವರು ಪಟ್ಟ ಸಾಹಸವನ್ನೂ, ವಹಿಸಿದ ಶ್ರದ್ಧೆಯನ್ನೂ ಪರಿಶೀಲಿಸಿ ಕೃತಜ್ಞತೆ. ಪ್ರಕಾಶಪಡಿಸುವುದಕ್ಕೋಸ್ಕರ ಅವರಿಗೆ ಸೊಸೈಟಿಯಿಂದಲೂ ಷೇರುದಾರರ ಚಂದಾದಿಂದಲೂ 100 ರೂಪಾಯಿಗೆ ಮೀರದಂಥಾ ಯಾವುದಾದರೊಂದು ವಸ್ತುವನ್ನು ಸೊಸೈಟಿಯ ಜ್ಞಾಪಕಾರ್ಥವಾಗಿ ಒಪ್ಪಿಸಬೇಕೆಂದು ಸೂಚಿಸಲ್ಪಟ್ಟದ್ದನ್ನು ಎಲ್ಲರೂ ಬಹು ಸಂತೋಷದಿಂದ ಒಪ್ಪಿಕೊಂಡರು

ತುಮಕೂರು ಡಿಸ್ಟ್ರಿಕ್ಟ್ ಉಪಾಧ್ಯಾಯರ ಸಂಘವು

ಮಾರ್ಚಿ ತಿಂಗಳ ಮೀಟಿಂಗು

1913 ನೇ ಇಸ್ವಿ ಮಾರ್ಚಿ ತಾ 23 ನೇ ಭಾನುವಾರ ತುಮಕೂರು ಗವರ್ನ್‌ಮೆಂಟ್ ಎ ವಿ ಸ್ಕೂಲ್ ಕಟ್ಟಡದಲ್ಲಿ ಈ ಸಂಘದ ಎರಡನೆ ಸಭೆಯು ಸೇರಿತು ಇಲ್ಲಿಗೆ 15 ಮೈಲಿ ದೂರದಲ್ಲಿರುವ ಗ್ರಾಮ ಪಾಠಶಾಲೆಗಳ ಉಪಾಧ್ಯಾಯರು ಅನೇಕರು ಬಂದಿದ್ದರು ಸಭಿಕರ ಕೋರಿಕೆಯಂತೆ ಮ|| ಕೃಷ್ಣಮೂರ್ತಿಯವರು ಅಗ್ರಾಸನವನ್ನು ವಹಿಸಿದರು —ಸ್ಕೂಲುಗಳಲ್ಲಿ ಈಗ ಕಾರ್ಡುಬೋರ್ಡು ಮಾಡಿ ಕಟ್ಟಿನ ಕೆಲಸಕ್ಕೆ ಮಿಸ್ ರಿಚ್‌ಯವರ ಪುಸ್ತಕದಲ್ಲಿನ ಮಾದರಿಗಳನ್ನು ಅನುಸರಿಸುತ್ತಿರುವದು ಸರಿಯಷ್ಟೆ ನೂತನವಾಗಿ ಚಾರ್ಲಸ್ ಹಾಮರ್ಟನ್ ಸಾಹೇಬರಿಂದ ಪ್ರಕಟಿಸಲ್ಪಟ್ಟಿರುವ ಪುಸ್ತಕದಲ್ಲಿರುವ ಮಾದರಿಗಳನ್ನು ಮ ಲಕ್ಷ್ಮೀಪತಯ್ಯನವರಿಂದ ಮಾಡಲ್ಪಟ್ಟ ರಟ್ಟಿನ ಮಾದರಿಗಳು ಸಭಿಕರ ಅವಗಾಹನೆಗೆ ಸ್ಕೂಲ್ ಹಾಲ್‌ನಲ್ಲಿ ಪ್ರದರ್ಶಿಸಲ್ಪಟ್ಟವು ನೂತನವಾಗಿ ರಚಿಸಿ, ವಿಮರ್ಶೆಗಾಗಿ ಕಳುಹಿಸಲ್ಪಟ್ಟಿದ್ದ ಗ್ರಂಥಗಳಲ್ಲಿ ಅಕ್ಷರಾಭ್ಯಾಸ ಕ್ರಮ, ಭೂಗೋಳ ಮುಂತಾದ ಕೆಲವು ಪುಸ್ತಕಗಳೂ ಪ್ರದರ್ಶಿಸಲ್ಪಟ್ಟವು ಮತ್ತು ಈ ಸ್ಕೂಲಿನಲ್ಲಿ ಆಚರಣೆಯಲ್ಲಿರುವ ಮೈಸೂರು ದೇಶದ ಗಡೀ ನಕಾಷೆಯ ಪ್ರತಿಗಳು ಇಷ್ಟಪಟ್ಟ ಉಪಾಧ್ಯಾಯರುಗಳಿಗೆ ಹಂಚಲ್ಪಟ್ಟವು ಇವೆಲ್ಲವೂ ಸಭಿಕರಿಂದ ಬಹುಳವಾಗಿ ಶ್ಲಾಘಿಸಲ್ಪಟ್ಟವು —ಭೂವಿವರಣೆ ಪಾಠದ ಬೋಧನಾ ಕ್ರಮವನ್ನು ಕುರಿತು ಮ|| ನಾಡವರಾಯರು ತಿಳಿಸಿದರು ಇದನ್ನೇ ವಿಸ್ತಾರವಾಗಿ ಸಂಘದ ಸೆಕ್ರೆಟರಿ ಮ| ವಿಶ್ವೇಶ್ವರಯ್ಯನವರು ವಿವರಿಸಿದ್ದಲ್ಲದೆ ಭೂಗೋಳವನ್ನು ಬೋಧಿಸಬೇಕಾದರೆ ಕಟ್ಟದಕವ ವಿಧಾನವನ್ನು ಅನುಸರಿಸಬೇಕೆಂದುನ್ನೂ, ಈ ನೂತನ ವಿಧಾನದಲ್ಲಿ ಹೇಗೆ ಬೋಧಿಸಬೇಕೆಂದುನ್ನೂ, ಇಂಡಿಯಾ ಮತ್ತು ಮೈಸೂರು ದೇಶಗಳ ಕೆಲವು ವಿಷಯಗಳನ್ನು ಲಕ್ಷ್ಯ ಲಕ್ಷಣಯುಕ್ತವಾಗಿ ತಿಳಿಯಪಡಿಸಿದರು ನೂತನ ವಿಧದಲ್ಲಿ ಮೈಸೂರು ದೇಶದ ಭೂಗೋಳವು ಸಂಘದ ಸೆಕ್ರೆಟರಿಯವರಿಂದ ಬರೆಯಲ್ಪಡಬೇಕೆಂದು ಸಂಘದ ಸಭಿಕರಲ್ಲನೇಕರು ಅಭಿಪ್ರಾಯಪಟ್ಟರು —ಮ|| ವಿಶ್ವೇಶ್ವರಯ್ಯನವರು ಡಾ|| ಮಾಂಟಿಸೋರಿಯವರ ಶಿಕ್ಷಣಾ ಕ್ರಮವನ್ನು ಕುರಿತು ಬಹು ಸರಳವಾಗಿ ಉಪನ್ಯಾಸಮಾಡಿದರು ಇದು ನಮ್ಮ ದೇಶೀಯರಿಗೆ ಕೇವಲ ನೂತನವಾಗಿರುವುದರಿಂದಲೂ, ಈ ಬೋಧನಾ ಕ್ರಮವನ್ನು ಕಲಿತುಕೊಂಡು ಬರಲು ನಮ್ಮ ಸರ್ಕಾರದವರು ಮಿ|| ಪಾಲ್ ಚಿನ್ನಪ್ಪನವರನ್ನು ರೋಮಿಗೆ ಕಳುಹಿಸಿರುವುದರಿಂದಲೂ ಈ ವಿಷಯವು ಇಲ್ಲಿ ಸಂಕ್ಷೇಪವಾಗಿ ವಿವರಿಸಲ್ಪಟ್ಟಿರುವುದು ಮಾಂಟಿಸೋರಿಯವರ ಶಿಕ್ಷಾಕ್ರಮವು ಕೇವಲ ಇಂದ್ರಿಯ ಶಿಕ್ಷಣವು ಇದನ್ನು ಮಕ್ಕಳು 4 ನೇ ವಯಸ್ಸಿನಲ್ಲಿ ಆರಂಭಿಸಿ 6 ನೇ ವಯಸ್ಸು ಪೂರ್ತಿಯಾಗಿ ನಡೆಯತಕ್ಕದು ಈ ಕ್ರಮಕ್ಕೆ ವಿಖ್ಯಾತರಾದ ರೂಸೋ ಎಂಬುವರು ಹೇಳಿರುವ ಸ್ವೇಚ್ಛಾ ವಿಹಾರ ಎನ್ನುವುದೇ ಆಧಾರಭೂತವಾದುದು ಇಂದ್ರಿಯಗಳ ಕ್ರಮವಾದ ಶಿಕ್ಷಣದಿಂದ ಮುಂದಿನ ವಿದ್ಯಾಭ್ಯಾಸಕ್ಕೆ ಬಹು ಅನುಕೂಲವಾಗುವುದು ಈ ಕ್ರಮವನ್ನು ಅನುಸರಿಸಬೇಕಾದರೆ ಉಪಕರಣಗಳು ಅಷ್ಟು ಹೆಚ್ಚಾಗಿ ಬೇಕಾಗುವುದಿಲ್ಲ 10 ಬಾಲಕರಿಗೆ ಬೇಕಾದ ಉಪಕರಣಗಳು 50 ರೂಪಾಯಿನಲ್ಲೇ ಒದಗಿಸಬಹುದು ಆದರೆ ಈ ಕ್ರಮವನ್ನು ಅನುಸರಿಸುವ ಉಪಾಧ್ಯಾಯರು ಕೇವಲ ಪಂಡಿತರಾಗಿಯೂ, ಸಹನೆಯುಳ್ಳವರಾಗಿಯೂ ತಮ್ಮ ಕಾಲವನ್ನೆಲ್ಲಾ ಬಾಲಕರ ಪುರೋಭಿವೃದ್ಧಿಗಾಗಿ ವಿನಿಯೋಗಿಸುವವರಾಗಿಯೂ ಇರಬೇಕು —ಕಿಂಡರ್‌ಗಾರ್ಟನ್ ಮತ್ತು ಮಾಂಟಿಸೋರಿ ಕ್ರಮಗಳಲ್ಲಿ ಸಾಮಾನ್ಯ ಧರ್ಮಗಳು ಒಂದೇ ಆಗಿದ್ದರೂ ಬೋಧನಾ ಕ್ರಮಗಳಲ್ಲಿ ಬಹಳ ವ್ಯತ್ಯಾಸಗಳಿರುವವು ಇವರಡಕ್ಕೂ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಬಹಳ ವಿಶದವಾಗಿ ವಿಶ್ವೇಶ್ವರಯ್ಯನವರು ತಿಳಿಯಪಡಿಸಿದರು ಈ ನೂತನ ವಿಧಾನವನ್ನು ಎ ವಿ ಸ್ಕೂಲಿನಲ್ಲಿ ಏರ್ಪಡಿಸಬೇಕೆಂದು ಯೋಚಿಸಲ್ಪಟ್ಟದೆ —ಕಾಲಾಭಾವದಿಂದ ಗಣಿತೋಪನ್ಯಾಸವು ಮುಂದಿನ ಸಭೆಯ ದಿನಕ್ಕೆ ಇರಿಸಲ್ಪಟ್ಟಿತು ಸಂಘದ ಅ|| ಸೆಕ್ರೆಟರಿ ಮ|| ವೆಂಕಟಯ್ಯನವರು ಮೈಸೂರಿಗೆ ವರ್ಗವಾದ್ದರಿಂದ ಅವರ ಸ್ಥಾನಕ್ಕೆ ಮ ಎಲ್ ಕೃಷ್ಣಮಾಚಾರ್ಯರು ನೇಮಕವಾದರು

ಎ ಎಲ್ ಕೃಷ್ಣಮಾಚಾರ್, ಅ|| ಸೆಕ್ರೆಟರಿ

ಮೈಸೂರು ಸಿಟಿ ಟ್ರಸ್ಟ್ ಬೋರ್ಡು

ತಿಂಗಳುಕಟ್ಟೆಯ ಮೀಟಿಂಗು

ರಾಜಧಾನಿಯ ಪುರಾಭಿವೃದ್ಧಿ ಸಂಘದ ಮೆಂಬರುಗಳು ಕಳೆದ ತಾ 2 ಬುಧವಾರ ಬೆಳಗ್ಗೆ ಟೌನ್ ಹಾಲ್ ಒಂಗಡಿಯಲ್ಲಿ ಸಭೆ ಸೇರಿ ತಿಂಗಳುಕಟ್ಟೆ ಮೀಟಿಂಗನ್ನು ನಡಿಸಿದರು ಡೆಪ್ಟಿ ಸ್ಯಾನಿಟರಿ ಕಮೀಷನರ್ ಡಾ|| ಎಂ ಶ್ರೀಪತರಾಯರು ವಿನಾ ಉಳಿದ ಮೆಂಬರುಗಳೆಲ್ಲಾ ಹಾಜರಾಗಿದ್ದರು ಮೀಟಿಂಗಿನಲ್ಲಿ ತೀರ್ಮಾನ ಮಾಡಲ್ಪಟ್ಟ ವಿಷಯಗಳಾವವೆಂದರೆ,—

(1) ಪ್ರಜೆಗಳ ಪ್ರಾರ್ಥನೆಯನ್ನು ಲಾಲಿಸಿ ಮಿ|| ಟಿ ಜಿ ಲಕ್ಷ್ಮಣರವರನ್ನು ಟ್ರಸ್ಟ್ ಬೋರ್ಡಿಗೆ ಹೋಲ್ ಟೈಂ ಛೇರ್ಮನ್ ಆಗಿ ನೇಮಕ ಮಾಡಿದ್ದಕ್ಕಾಗಿ ಮೆಂಬರುಗಳ ಕೃತಜ್ಞತೆಯನ್ನು ರಿಕಾರ್ಡು ಮಾಡಬೇಕೆಂದೂ ಗವರ್ನ್‌ಮೆಂಟಿಗೆ ಅರಿಕೆಮಾಡಬೇಕೆಂದೂ ಮಿ ಎಲ್ ವೆಂಕಟಕೃಷ್ಣಯ್ಯನವರು ಸೂಚಿಸಿದ್ದನ್ನು ಮಿ| ಎಂ ಸಿ ರಂಗಯ್ಯಂಗಾರ್ರು ಪುಷ್ಟೀಕರಿಸಿದರು ಎಲ್ಲರೂ ಆದರಂತೆ ಒಪ್ಪಿಕೊಂಡರು (2) ಮ ಎ ಸೀತಾರಾಮ ಮುದಲಿಯಾರ್ ಪುರಾಭಿವೃದ್ಧಿಯಲ್ಲಿ ಹರಾಜಿನಿಂದ ಕ್ರಯಕ್ಕೆ ಪಡೆದುಕೊಂಡಿರುವ ಅರ್ಧ ನಿವೇಶನದಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಅವರಿಗೆ ಲೈಸೆನ್ಸು ಕೊಡಕೂಡದೆಂದು ಹಿಂದೆ ತೀರ್ಮಾನವಾಗಿದೆ ಅದರ ಮೇಲೆ ಅವರು ಗವರ್ನ್‌ಮೆಂಟಿಗೆ ಅರ್ಜಿ ಬರೆದುಕೊಂಡಿದ್ದರು ಸರ್ಕಾರದವರು ಈ ಅರ್ಜಿಯನ್ನು ಬೋರ್ಡಿಗೆ ಕಳುಹಿಸಿ ಅದರ ವಿಷಯದಲ್ಲಿ ಬೋರ್ಡಿನವರು ಪುನರಾಲೋಚನೆ ಮಾಡಬೇಕೆಂದು ಬರೆದಿದ್ದರು ಮೆಂಬರುಗಳು ಈ ವಿಚಾರವನ್ನು ಚರ್ಚೆಮಾಡಿ, ಆ ನಿವೇಶನದ ವಿಷಯದಲ್ಲಿ ಹಿಂದೆ ನಡೆದಿರುವ ಸಂಗತಿಗಳನ್ನು ವಿಸ್ತಾರವಾಗಿ ಗವರ್ನ್‌ಮೆಂಟಿಗೆ ತಿಳಿಸಬೇಕೆಂದೂ, ಮೊದಲೇ ತೀರ್ಮಾನವಾಗಿರುವಂತೆ ಅವರಿಗೆ ಲೈಸೆನ್ಸು ಕೊಡತಕ್ಕದ್ದಾಗುವುದಿಲ್ಲವೆಂದೂ ತೀರ್ಮಾನ ಮಾಡಿದರು (3) ಕೋಟೆಯ ದಕ್ಷಿಣಕ್ಕೆ ಪೋಲೀಸ ಸ್ಟೇಷನ್ ಬಳಿ ಇರುವ ಕರ್ನಲ್ ಪರ್ಬರ್ಸ್ ಚರಂಡಿಯನ್ನು ಟ್ರಸ್ಟ್ ಬೋರ್ಡ್ ಇಂಜನಿಯರ್ ಮಿ| ಟಿಕ್ಕಿನ್ಸ್‌ಯವರು ಸಿಮೆಂಟ್ ಕಾನ್‌ಕ್ರೀಟ್ ಎಂಬ ನವೀನ ಪರಿಕರಣದಿಂದ ಸುಮಾರು 7,000 ರೂಪಾಯಿ ಖರ್ಚುಮಾಡಿ ಕಟ್ಟಿಸಿದ್ದು ಕೆಲವು ಕಾಲದೋಷಗಳಿಂದ ಕುಸಿದು ಬಿದ್ದು ಹೋಯಿತು ಛೀಫ್ ಇಂಜನಿಯರುಗಳು ಅದನ್ನು ಪರೀಕ್ಷೆ ಮಾಡಿ, ಕಟ್ಟಡದ ಕಸೂರಿ ಎಂದು ಅಭಿಪ್ರಾಯಪಟ್ಟದ್ದರ ಮೇಲೆ ಗವರ್ನ್‌ಮೆಂಟಿನವರು ಅವರ ಒಪಾಬ್ದಾರಿಯನ್ನು ಟಿಕ್ಕಿನ್ಸ್‌ಯವರದೆಂದು ತೀರ್ಮಾನ ಮಾಡಿ ಹುಕುಂ ಕೊಟ್ಟರು ಮೆಂಬರುಗಳು ಇದನ್ನು ಓದಿಸಿ ಕೇಳಿ ರೆಕಾರ್ಡು ಮಾಡಿಕೊಂಡರು (4) ಮನೆಗಳ ಕಟ್ಟಿ ಪೂರೈಸುವುದಕ್ಕೆ ಮುಂದೆ ಹೇಳುವವರಿಗೆ ಟ್ರಸ್ಟ್ ಬೋರ್ಡಿನವರ ಸಾಲ ಕೊಡಬಹುದೆ ಮೆಂಬರುಗಳು ಒಪ್ಪಿಕೊಂಡಿದಾರೆ—ಹೈಕೋರ್ಟು ವಕೀಲರು ಶ್ಯಾಮಣ್ಣನವರಿಗೆ 700 ರೂಪಾಯಿ ಜನರಲ್ ಆಸ್ಪತ್ರೆಯ ಎದುರಿಗಿರುವ ಹಕೀಂ ಅಬ್ದುಲ್ ಗಫೂರ್ ಸಾಬರಿಗೆ 400 ರೂಪಾಯಿ, ಕೃಷ್ಣರಾಜ ಮೊಹಲ್ಲಾ ಭಜ್ಜಾಸಿಂಗ್ ನರಸಿಂಹಯ್ಯನವರು ಮತ್ತು ಅವರ ಹೆಂಡತಿ ಸುಬ್ಬಮ್ಮನವರಿಗೆ 100 ರೂಪಾಯಿ ಕೃಷ್ಣರಾಜ ಮೊಹಲ್ಲಾ ಸುಬ್ಬಶೆಟ್ಟರಿಗೆ 100 ರೂಪಾಯಿ (5) ನಲ್ಲಿಗಳನ್ನು ಹಾಕಿ ಕಟ್ಟುವ (ಪ್ಲಂಬಿಂಗ್) ವಿದ್ಯೆಯನ್ನು ಕಲ್ಕತ್ತೆ ನಾರ್ಟನ್ ಕಂಪನಿಯಲ್ಲಿ ಉಮೇದುವಾರನಾಗಿದ್ದು ಕಲಿತುಕೊಂಡು ಬರುವುದಕ್ಕಾಗಿ ಟ್ರಸ್ಟ್ ಬೋರ್ಡಿನವರು ಪುಟ್ಟಸಂಜಪ್ಪನೆಂಬಾತನಿಗೆ 500 ರೂಪಾಯಿ ಖರ್ಚುಕೊಡಬೇಕೆಂದು ಒಪ್ಪಿದ್ದದ್ದನ್ನು ಗವರ್ನ್‌ಮೆಂಟಿನವರು ಸಾಂಕ್ಷನ್ ಮಾಡಿದಾರೆ (6) ಟ್ರಸ್ಟ್ ಬೋರ್ಡಿನವರು ಇದುವರೆಗೆ ಕಾಮಗಾರಿ ನಡೆಸಿ ಮ್ಯುನಿಸಿಪಾಲಿಟಿಗೆ ವಹಿಸಿರುವ ಭಾಗಗಳ ಸಿಬ್ಬಂದಿ ಖರ್ಚು ಯಾರು ವಹಿಸಬೇಕೆಂದು ಮುಂಚಾಗಿ ಟ್ರಸ್ಟ್ ಬೋರ್ಡ್ ಇಂಜನಿಯರವರು ಬರೆದು ಕೇಳಿದ್ದರು ಮೆಂಬರುಗಳು ಈ ವಿಷಯವನ್ನು ಪರ್ಯಾಲೋಚಿಸಿ ಯಾವ ಯಾವ ಭಾಗಗಳನ್ನು ಮ್ಯುನಿಸಿಪಾಲಿಟಿಗೆ ವಹಿಸಲು ಸಿದ್ಧವಾಗಿರುವವೋ ಅದನ್ನೆಲ್ಲಾ ಒಂದು ಪಟ್ಟಿ ಬರೆದು ಬೋರ್ಡಿಗೆ ಹಾಜರು ಮಾಡಬೇಕೆಂದೂ, ಅದುವರೆಗೆ ಟ್ರಸ್ಟ್ ಬೋರ್ಡಿನಿಂದಲೇ ಸಿಬ್ಬಂದಿ ಖರ್ಚಿಗೆ ಹಣ ಕೊಡಬೇಕೆಂದೂ ಗೊತ್ತುಮಾಡಿದರು

ಮಧುಗಿರಿಯಲ್ಲಿ ನಡೆದ ಪಶುವಸ್ತು ಪ್ರದರ್ಶನವು

ಮಾರೀಜಾತ್ರೆ ನಡೆಯತಕ್ಕ ವಿಷಯ ಹಿಂದಿನ ವಾರದಲ್ಲೇ ಪ್ರಕಟಿಸಿದ್ದೆವಷ್ಟೆ ಈ ಜಾತ್ರೆಯು ಕಳೆದ ಮಾರ್ಚಿ 28 ಕ್ಕೆ ಮುಕ್ತಾಯವಾಯಿತು ಜನಗಳ ಪ್ರೋತ್ಸಾಹಕ್ಕಾಗಿ ಏರ್ಪಡಿಸಿದ್ದ ಪ್ರದರ್ಶನಶಾಲೆಗೆ ಸರ್ಕಾರದವರು ನವೀನವಾದ ಕೆಲವು ವ್ಯವಸಾಯದ ಉಪಕರಣಗಳನ್ನು ಕಳುಹಿಸಿದ್ದರು ಈ ನಾಡು ಸೀಮೆಯಲ್ಲಿ ಕೃಷಿಯಿಂದಲೂ, ಕೈಗಾರಿಕೆಯಿಂದಲೂ ತಯಾರಾದ ಶ್ರೇಷ್ಠತರದ ಪದಾರ್ಥಗಳು ಪ್ರದರ್ಶನಶಾಲೆಗೆ ಹಾಜರಾಗಿದ್ದವು ಸುಮಾರು ನಾಲ್ಕು ಸಾವಿರ ಜಾನ್ವಾರುಗಳು ಬಂದಿದ್ದವು ಎತ್ತುಗಳ ಮಾರಾಟವು ಬಹಳವಾಗಿ ನಡೆಯಿತು.—ಡೆಪ್ಟಿ ಕಮಿಷನರ್ ಸಾಹೆಬರವರು ತಾ 23 ನೇ ಬೆಳಗ್ಗೆ ಇಲ್ಲಿಗೆ ಬಿಜಯಂಗೈದು ಸಾಯಂಕಾಲ 5 ಘಂಟೆಗೆ ಮಾರೀಜಾತ್ರೆಗೆ ದಯಮಾಡಿ ಅಲ್ಲಿ ಪ್ರಚುರಪಡಿಸಿದ್ದ ಎಗ್ಜಿಭಿಷನ್ ದಿನಸುಗಳನ್ನೂ, ಕೂಡಿಸಿದ್ದ ಜಾನ್ವಾರುಗಳ ಪ್ರದರ್ಶನವನ್ನೂ ಪರಾಂಬರಿಸಿ ಬಹಳ ಆನಂದಪಟ್ಟು ರೈತರ ಅಹವಾಲಿನಂತೆ ಸಾಗೆ ಅನುಕೂಲಪಡಿಸಬೇಕೆಂಬುವ ಸ್ಥಳವನ್ನು ನೋಡಿಕೊಂಡುಬಂದು ವಸ್ತುಪ್ರದರ್ಶನಶಾಲೆಯ ಬಳಿ ಸೇರಿದ್ದ ಮಹನೀಯರ ಮಧ್ಯೆ ಅಗ್ರಾಸನಾಧಿಪತ್ಯವನ್ನು ವಹಿಸಿದರು ಫಾರೆಸ್ಟ್ ಅಸಿಸ್ಟೆಂಟರವರು ಬೆಳೆಮಾಡುವ ವಿಧಾನವನ್ನೂ, ಬೆಳೆಯಿಲ್ಲದೆ ಕೆಡುವಿಕೆಗೆ ಕಾರಣಗಳನ್ನೂ, ಬೆಳೆಯಾದರೂ ತಿಂದಿಗಿಲ್ಲದ ಕಷ್ಟವನ್ನೂ ಕುರಿತು ಉಪನ್ಯಾಸಮಾಡಿದರು ವ್ಯವಸಾಯ ಇನ್‌ಸ್ಪೆಕ್ಟರವರು ಪೈರುಗಳಿಗೆ ಬರತಕ್ಕ ರೋಗಾದ್ಯುಪದ್ರಗಳನ್ನು ಕುರಿತು ಮಾಡತಕ್ಕ ಚಿಕಿತ್ಸೆಗಳನ್ನು ತಿಳಿಯಪಡಿಸಿದರು ವೆಟರ್ನರಿ ಸರ್ಜನ್‌ರವರು ಜಾನ್ವಾರುಗಳಿಗೆ ಬರತಕ್ಕ ಕಾಲುಜ್ವರ, ಬಾಯಿಜ್ವರ ಚಪ್ಪೆರೋಗ ವಗೈರೆಗಳು ಒಂದಕಾಲದಲ್ಲಿ ಮಾಡತಕ್ಕ ಚಿಕಿತ್ಸೆಗಳ ವಿಧಾನವನ್ನು

...ಗೆ ಇವರಾದತಕ್ಕ ಸಾಧಕಬಾಧಕಗಳನ್ನೂ ಕುರಿತು ವಿಶದಪಡಿಸಿದರು. ...ಕೃತಾಸಿಜನಗಳ ತಿಳುವಳಿಕೆಗೋಸ್ಕರ ಬಹಳ ವಿವರವಾಗಿ ಮುನ್ಸಿಫ್ ...ನರಸಿಂಹಯ್ಯಂಗಾರ್ಯರವರು ಪುನಹ ತಿಳಿಸಿದರು. ಅನಂತರ ಸಭೆಯು ಬಳ ...ಲ್ಲರೂ ಮಾರಮ್ಮನ ದೇವಸ್ಥಾನದ ಬಳಿಗೆ ಹೋಗಿ ಮಂಗಳಾರತಿ ...ದೇವಸ್ಥಾನದ ಹಿಂದೆ ಜನರ ಅನುಕೂಲಕ್ಕಾಗಿ ಹಾಕಿದ್ದ ವಾಟರ್ ಪೈಪ್ ...ನ ಯಂತ್ರವನ್ನು ಪರಾಂಬರಿಸಿದರು

...೨೪ ರಲ್ಲಿ ಡಾಕ್ಟರ್ ಕೋಲ್ಮನ್ ಸಾಹೇಬರವರು ಬೆಂಗಳೂರಿನಿಂದ ...ದರು ಹಾಲಿ ಈ ಜಾತ್ರೆಯಲ್ಲಿ ಜಾನ್ವಾರುಗಳ ಮತ್ತು ವಸ್ತು ಪ್ರದ ...ಶನಲು ಏರ್ಪಡಿಸಿದ್ದ ಜನರಲ್ ಸೆಕ್ರೆಟರಿಗಳಾಗಿರುವ ಮ॥ ಬಾಲಸುಂ ...ಯ್ಯರವರೂ, ಇಂಡಸ್ಟ್ರಿಯಲ್ ಇಲಾಖಾ ಡೈರೆಕ್ಟರಾದ ಮ॥ ಚಾಟರ್ ...ಸಾಹೇಬರವರೂ, ಇತರರೂ ದಯಮಾಡಿ, ನಡೆಯುತ್ತಿದ್ದ ವ್ಯಾಪಾರಾದಿ ...ಜನರ ಅನುಕೂಲಕ್ಕೆ ಏರ್ಪಡಿಸಿದ್ದ ಸೀವಿನ ಯಂತ್ರವನ್ನೂ ಪರಾಂಬ ...ಸಿ ಸಂಜೆ ಬೆಂಗಳೂರಿಗೆ ತೆರಳಿದರು. ಆ ದಿನ ಸಾಯಂಕಾಲ ಡಾಕ್ಟರ್ ...ನ್ ಸಾಹೇಬರವರೂ ಡೆಪ್ಯುಟಿ ಕಮಿಷನರ್ ಸಾಹೇಬರವರೂ ವಸ್ತುಪ್ರದರ್ಶನ ...ಬಳಿ ನೆರೆದಿದ್ದ ಮಹಾಜನಗಳ ಸಭೆಯಲ್ಲಿ ಅಗ್ರಾಸನಾಧಿಪತ್ಯವನ್ನು ...ಮ॥ ಪಿ ಎಸ್ ಗೋವಿಂದರಾಯರು ಗೊಬ್ಬರಮಾಡತಕ್ಕ ವಿಧಾನ, ...ಗುವ ಆದಾಯ, ಗೊಬ್ಬರ ವಿಚಾರದಲ್ಲಿ ನಮ್ಮವರು ಮಾಡುವ ಅನಾ ...ದರಿಂದ ಹೊಂದುವ ನಷ್ಟ ಮತ್ತು ಜರ್ಮನ್ ದೇಶೀಯರು ಹೆಚ್ಚು ...ವಿಲ್ಲದೆ ಗೊಬ್ಬರವನ್ನು ಉತ್ತಮತರದಲ್ಲಿ ತಯಾರುಮಾಡುವ ರೀತಿ, ...ನ್ನು ಇದರಿಂದಾಗಬಹುದಾದ ಆದಾಯವನ್ನೂ ಎಲ್ಲಾ ಜನರಿಗೂ ತಿಳಿ ...ತೆ ಉಪನ್ಯಾಸ ಮಾಡಿದರು. ಅನಂತರ ಅಗ್ರಿಕಲ್ಚರಲ್ ಇನ್ಸ್‌ಪೆಕ್ಟರ ...ಮತ್ತು ಡಾಕ್ಟರ್ ಕೋಲ್ಮನ್ ಸಾಹೇಬರವರು ಒಂದು ಹಳ್ಳಿ ಬಳಿಗೆ ...ಶೀತವಾಗ ಜೋಳದ ಪೈರಿಗೆ ತಗಲಿದ್ದ ಸಂಗಸ್ ಎಂಬ ರೋಗವನ್ನು ...ದು, ಅದು ಬರತಕ್ಕ ವಿಚಾರ, ಅದರಿಂದಾಗತಕ್ಕ ನಷ್ಟ, ಬಾರದೆ ...ಕ್ಕೆ ವಿಧಾನ, ಇವುಗಳೆಲ್ಲಾ ತಿಳಿಯಪಡಿಸಿದರು ಡಾ॥ ಕೋಲ್ಮನ್ ...ರವರು ಜನರ ಅನುರಾಗವನ್ನು ತಿಳಿಸಲು ಇಂಗ್ಲೀಷಿನಲ್ಲಿ ಉಪನ್ಯಾಸ ...ವನ್ನು ಮುನ್ಸಿಫ್ ಮ॥ ನರಸಿಂಹಯ್ಯಂಗಾರ್ಯರವರು ಕನ್ನಡದಲ್ಲಿ ಮಹಾ ...ಗೆಲ್ಲಾ ತಿಳಿಯುವಹಾಗೆ ಹೇಳಿದರು ಡಾ ಕೋಲ್ಮನ್ ಸಾಹೇಬರು ...ಸರ್ಕಾರದ ಮಹಾರಾಜಾಸಾಹೇಬರವರು ಪ್ರಜೆಗಳ ಕ್ಷೇಮಲಾಭ ...ರ ತಮ್ಮನ್ನು ನೇಮಿಸಿರುವರೆಂದೂ, ತಾವು ಸರ್ಕಾರಿ ಕೆಲಸದ ಉದ್ದೇಶ್ಯ ...ಕ್ಷವನ್ನು ಜನರು ಅನುಸರಿಸಿ ಜಾರಿಗೆತಂದು ತಮ್ಮ ಶ್ರಮೆಯನ್ನು ...ಗೊಳಿಸಬೇಕೆಂದೂ ಹೇಳಿ, ಜನರ ಮತ್ತು ರೈತರ ಕ್ಷೇಮಕ್ಕಾಗಿ ಅನೇಕ ...ಗಳನ್ನು ಕಲ್ಪಿಸುವದಾಗಿ ತಿಳಿಸಿದ್ದನ್ನು ವಿವರಿಸಿದರು ಮರುದಿನ ಬೆಳಿಗ್ಗೆ ...ಷನರ್ ಸಾಹೇಬರವರು ತುಮಕೂರಿಗೂ, ಡಾ॥ ಕೋಲ್ಮನ್ ಸಾಹೇಬ ...ಬೆಂಗಳೂರಿಗೂ ಚಿತ್ತೈಸಿದರು

...೨೫ ರಲ್ಲಿ ಪ್ರದರ್ಶನಶಾಲಾ ಮುಂದುಗಡೆ ಎಲ್ಲಾ ಮಹಾಜನಂಗಳಿದು ...ರಿ ಸರ್ಜನ್‌ರವರು ಮತ್ತು ಸಬ್ ಅ॥ ಸರ್ಜನ್ ರಾಜಾರತ್ನಂ ಪಿಳ್ಳೆ ...ಸುಲಭರೀತಿಯಲ್ಲಿ ರೋಗಿಗಳಿಗೆ ಇಡಮಾಡಿ, ಎಲ್ಲರಿಗೂ ತೋರ್ಪಡಿ ...ಮಾದನಂತರ ಮಹಾಜನಗಳ ಸಭೆಯಲ್ಲಿ ಮುನ್ಸಿಫ್ ಮ॥ ನರಸಿಂಹ ...ರವರು ಅಗ್ರಾಸನಾಧಿಪತ್ಯವನ್ನು ವಹಿಸಿದರು ವ್ಯವಸಾಯದ ವಿಚಾರ ...ರೋಗಿಗಳಿಗೆ ಇಡಮಾಡತಕ್ಕ ವಿಚಾರದಲ್ಲೂ ಉಪನ್ಯಾಸಗಳು ಜರುಗಿ ...ಬಹಪಾಸ್ಸಾಯಿತು. ಮಾರನೇದಿನ ಮಹಾಜನಗಳು ಪ್ರದರ್ಶನಶಾಲೆಯ ...ಧೆಯಾಗ ಸಬ್ ಡಿವಿಜನ್ ಆಫೀಸರವರು ಅಗ್ರಾಸನವನ್ನು ವಹಿಸಿ ...ದ ಜಾನ್ವಾರುಗಳ ಮಾಲೀಕರಿಗೂ, ವಸ್ತುಗಳನ್ನು ಬೆಳೆದ ರೈತರಿಗೂ ...ರ್ಹವಾಗಿ ಬಹುಮಾನಗಳನ್ನು ದಯಪಾಲಿಸಿದರು.—ಸಬ್ ಅ॥ ...ರಾಜರತ್ನಂ ಪಿಳ್ಳೆಯವರು ಸಾಯಂಕಾಲ ಜನಗಳಿಗೆಲ್ಲಾ ತಿಳಿಯುವಂತೆ ...ಬಳಿ ರೋಗಿಗಳಿಗೆ ಇಡಮಾಡಿದರು. ಮಾರನೇದಿನ ದನಗಳು ಹುಲ್ಲು ...ತ್ತವೆ, ಅವುಗಳಿಗೆ ತೊಂದರೆಯೇನೂ ಆಗುವದಿಲ್ಲ. ಇಂಥಾ ಸುಲಭೋ ...ದ ಅನುಕೂಲಗಳು ಆಸ್ಪತ್ರೆಯಲ್ಲಿ ನಡೆಯುತ್ತಾಇದ್ದರಿಂದ ಜನಗಳು ...ಮುಂದೆ ರೋಗಿಗಳಿಗೆ ಇಡಮಾಡಿಸುತ್ತಾರೆಂದು ನಂಬುತ್ತೇವೆ

...ಈ ಕಷ್ಟ ...ವಾರಸಾರ್ಥವಾಗಿ ಪ್ರೋಜನಕ್ಕೆ ಅನುಕೂಲಪಡಿಸಿದ್ದ ಪಾ॥ ...ರವರೂ, ಪಟ್ಟೆ ಬಸಪ್ಪನವರೂ ಪಟ್ಟ ಶ್ರಮವು ಬಹಳ ಸ್ತೋತ್ರಾರ್ಹವಾ ...ಪೋಲಿಸು ಇನ್ಸ್‌ಪೆಕ್ಟರವರ ಏರ್ಪಾಟಿಯು ಬಹಳ ಚುರುಕಾಗಿತ್ತು ಇಷ್ಟು ...ಶಲಾಗುವಂತೆಯೂ, ಜನರಿಗೆ ಸುಖಕರವಾಗುವಂತೆಯೂ, ಜನರ ...ಸಂತೋಷಗೊಳ್ಳುವಂತೆಯೂ ಏರ್ಪಾಟುಮಾಡಿಸಿದ್ದ ಅ॥ ಕಮಿಷ ...ಮ॥ ಕೃಷ್ಣಸ್ವಾಮಯ್ಯಂಗಾರ್ಯರನ್ನೂ, ಅಮಲ್ದಾರ್ ಮ॥ ಗಂಗಾಧ ...ರನ್ನೂ, ಮುನ್ಸಿಫ್ ಮ॥ ನರಸಿಂಹಯ್ಯಂಗಾರ್ಯರನ್ನೂ, ಇತರರನ್ನೂ ...ಲ್ಲಾ ಕೊಂಡಾಡುತ್ತಿದಾರೆ.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ತಿಂಗಳು ಕಟ್ಟೆಯ ಮೀಟಿಂಗು.

...ನ್ನೆ ತಾ ೩೧ ನೇ ಸೋಮವಾರ ಬೆಳಿಗ್ಗೆ ರಾಜಧಾನಿಯ ಮ್ಯುನಿಸಿಪಲ್ ...ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟೆಯ ...ಪಲ್ ಮೀಟಿಂಗನ್ನು ನಡಿಸಿದರು. ಹೋಲ್ ಟೈಂ ಪ್ರೆಸಿಡೆಂಟ್ ಮಿ॥ ...ಲಕ್ಷ್ಮಣರಾಯರು ಅಗ್ರಾಸನವನ್ನು ವಹಿಸಿದ್ದರು.

...ಟಿಂಗಿನ ಕಾರ್ಯಗಳು ಪ್ರಾರಂಭವಾಗುವುದಕ್ಕಿಂತ ಮುಂಚೆ ಮಿ॥ ...ರಂಗಯ್ಯಂಗಾರ್ಯರವರು ಮ್ಯುನಿಸಿಪಲ್ ಕೌನ್ಸಿಲ್ ಪರವಾಗಿ ಹೇಳಿದ ...ನೆಂದರೆ—ಮ್ಯುನಿಸಿಪಾಲಿಟಿಯು ಪ್ರಾರಂಭವಾದಾರಭ್ಯ ಡೆಪ್ಯುಟಿ ಕಮಿ ...ಪ್ರೆಸಿಡೆಂಟರಾಗಿದ್ದುಕೊಂಡು ವೈಸ್ ಪ್ರೆಸಿಡೆಂಟರ ಸಹಾಯವನ್ನು ...ಮ್ಯುನಿಸಿಪಲ್ ಕೆಲಸಗಳನ್ನೆಲ್ಲಾ ಇದುವರೆಗೆ ನಡಿಸಿಕೊಂಡು ಬರುತ್ತಿ ...ಈಚೆಗೆ ಪ್ರಜೆಗಳ ಪ್ರಾರ್ಥನೆಯನ್ನು ಸರ್ಕಾರದವರು ಲಾಲಿಸಿ ಹೋಲ್ ...ಪ್ರೆಸಿಡೆಂಟರನ್ನು ನೇಮಕರು ಮಾಡಿದ್ದು ಪರಮ ಸಂತೋಷಕರವಾಗಿದೆ. ...ಶ್ರೀಮನ್ ಮಹಾರಾಜರವರಿಗೂ, ಅವರ ಗವರ್ನ್‌ಮೆಂಟಿಗೂ ವಿನಯ ...ವಾಗಿ ವಂದನೆಗಳನ್ನು ಸಮರ್ಪಿಸುವೆವು. ಈಗ ಪ್ರೆಸಿಡೆಂಟ್ ಪದವಿಗೆ ...ವಾಗಿ ದಯಮಾಡಿರುವ ಮಿ॥ ಟಿ. ಜ ಲಕ್ಷ್ಮಣರಾಯರು ಮೈಸೂರಿ ...ಇಲ್ಲಿನ ಪ್ರಜೆಗಳಿಗಾಗಲಿ ಹೊಸಬರಲ್ಲ, ಅವರ ಸಾಮರ್ಥ್ಯವೂ, ...ಸದ್ಗುಣಗಳೂ, ಅವರ ಪರಹಿತಚಿಂತನೆಯೂ ಬಹು ಪ್ರಶಸ್ತವಾದವುಗ ಳೆಂದು ಸರ್ವರಿಗೂ ತಿಳಿದಿರುತ್ತದೆ. ಇಂಥಾ ಪ್ರಜಾವತ್ಸಲರನ್ನು ನೇಮಕಮಾಡಿ ದ್ದಕ್ಕಾಗಿ ಸರ್ಕಾರದವರನ್ನು ವಂದಿಸುವೆವು. ಈ ಭಾಗಗಳನ್ನು ರೆಕಾರ್ಡು ಮಾಡಬೇಕೆಂದು ಸೂಚಿಸಿದ್ದನ್ನು ಮೆಂಬರುಗಳೆಲ್ಲಾ ಏಕವಾಕ್ಯತೆಯಿಂದ ಅನು ಮೋದಿಸಿದರು ಬಳಿಕ ಮಿ॥ ಟಿ ಜ. ಲಕ್ಷ್ಮಣರಾಯರು ರೆಕಾರ್ಡು ಮಾಡಿ ಕೊಂಡು ಮೆಂಬರುಗಳನ್ನು ಕುರಿತು ಹೇಳಿದ ಮುಖ್ಯಾಭಿಪ್ರಾಯಗಳೇನೆಂದರೆ— ಮಹಾಸ್ವಾಮಿಯವರಾದ ಶ್ರೀಮನ್ ಮಹಾರಾಜರವರೂ ಘನವೆತ್ತಿದ ದಿವಾನ್‌ರವರೂ ಪ್ರಜೆಗಳ ಪ್ರಾರ್ಥನೆಯನ್ನು ಲಾಲಿಸಿ ಟ್ರಸ್ಟ್ ಬೋರ್ಡಿಗೂ ಮ್ಯುನಿಸಿಪಾಲಿಟಿಗೂ ಒಬ್ಬರನ್ನೇ ಹೋಲ್ ಟೈಂ ಪ್ರೆಸಿಡೆಂಟಾಗಿ ನೇಮಕ ಮಾಡಿದ್ದಕ್ಕಾಗಿ ನಿಮ್ಮ ಕೂಡ ನಾನೂ ಕೃತಜ್ಞತಾಪೂರ್ವಕವಾಗಿ ವಂದನೆ ಗಳನ್ನು ಸಮರ್ಪಿಸುವೆನು. ಈ ಕೆಲಸವು ಅಪ್ರಾರ್ಥಿತವಾಗಿ ನನಗೆ ಬಂದ ದ್ದಾಗಿದೆ. ಇದಕ್ಕೆ ನನಗೆ ಯಾವ ಅರ್ಹತೆಯೂ ಇರುವುದಿಲ್ಲ. ಇದೂ ಅಲ್ಲದೆ ನಾನು ಇಂಜನಿಯರಾಗಿರುತ್ತೇನೆ ನನಗೆ ಮ್ಯುನಿಸಿಪಲ್ ವಿಚಾರದ ಅನುಭವ ವೇನೂ ಇರುವುದಿಲ್ಲ ಆದಾಗ್ಯೂ ಅನುಭವಸ್ಥರಾದ ನಿಮ್ಮಂಥಾ ಮೆಂಬರುಗಳ ಬೆಂಬಲವೂ ಶ್ರೀಮನ್ ಮಹಾರಾಜರವರ ಮತ್ತು ದಿವಾನ್‌ರವರ ಕೃಪಾಪೋಷಣೆ ಯೂ ಇರುವವೆಂದು ನಂಬಿ ಈ ನೌಕರಿಯನ್ನು ಒಪ್ಪಿಕೊಂಡಿದೇನೆ ತಾವುಗಳು ನಿರ್ವಂಚನೆಯಾಗಿ ನನಗೆ ಸಹಾಯ ಮಾಡಬೇಕಾಗಿದೆ. ಶ್ರೀಮನ್ ಮಹಾರಾಜ ರವರು ಈ ಏರ್ಪಾಡನ್ನು ಒಂದು ವರುಷದವರೆಗೆ ಅಜಮಾಯಿಷಿ ತರೀಖು ಮಾಡಿರುತ್ತಾರಾಗಿ ನಾವುಗಳು ಏಕೀಭವಿಸಿ ನಮ್ಮ ಕಾರ್ಯಗಳಿಂದ ಈ ಏರ್ಪಾ ಡು ಸಾರ್ಥಕವಾಗಿ ನಡೆದುಬರುವಂತೆ ಮಾಡಿಕೊಳ್ಳಬೇಕೆಂದು ಅರಿಕೆ ಮಾ ಡುತ್ತೇನೆ ನಾನೇನೋ ಮನಃಪೂರ್ವಕವಾಗಿಯೂ ಶಕ್ತ್ಯನುಸಾರವಾಗಿಯೂ ಕೆಲಸ ಮಾಡಲು ಸಿದ್ಧನಾಗಿರುವೆನು. ಈ ಕೆಲಸಕ್ಕೆ ನಾನು ಅರ್ಹನೆನಿಸಿಕೊಳ್ಳುವುದು ಹ್ಯಾಗೋ ನನಗೆ ತಿಳಿಯದು ಎಂಬದಾಗಿ ಹೇಳಿದರು. ರೆವ್. ಎಚ್. ಗಲ್ಲಿಫರ್ಡ್ ಸಾಹೇಬರು ಮೆಂಬರುಗಳ ಪರವಾಗಿ—ನಾವೆಲ್ಲಾ ಮನಃಪೂರ್ವಕವಾಗಿ ಕೈಲಾ ಗುವ ಮಟ್ಟಿಗೂ ನಿಮಗೆ ಸಹಾಯ ಮಾಡುತ್ತೇವೆ ಎಂದು ಪ್ರೆಸಿಡೆಂಟರಿಗೆ ತಿಳಿಸಿದರು.

ಬಳಿಕ ಮುನಿಸಿಪಲ್ ಜಮಾಖರ್ಚು ಮುಂತಾದ ಲೆಕ್ಕಗಳನ್ನು ಓದಿ ಒಪ್ಪ ಲಾಯಿತು ಕಳೆದ ಫೆಬ್ರವರಿ ತಿಂಗಳಲ್ಲಿ ಎಲ್ಲಾ ಬಾಬುಗಳಿಂದಲೂ ಮ್ಯುನಿಸಿಪಾಲಿ ಟಿಗೆ 18,583 3.0 ಜಮಾ ಆಯಿತೆಂದೂ, ರೂ. 10,184-6-10ಕ್ಕೆ ಖರ್ಚಾ ಯಿತೆಂದೂ ತಿಳಿಯಿತು ಆ ತಿಂಗಳಲ್ಲಿ ಜನನ 157, ಮರಣ—ವಾಂತಿಭೇದಿ ಯಿಂದ 16, ಸಿಡುಬು 9, ಜ್ವರ 14, ಇತರ ಕಾರಣಗಳು 120, ಜುಮ್ಲಾ 169 ಆಡಿಟರುಗಳು ಮ್ಯುನಿಸಿಪಲ್ ಲೆಕ್ಕಗಳೆಲ್ಲಾ ಸರಿಯಾಗಿವೆ ಎಂದೂ, ಮನೆತೆರಿಗೆ ಮತ್ತು ಆಕ್ಟ್ರಾಯಿ ಸುಂಕಗಳ ಹುಟ್ಟುವಳಿ ಹೋದ ವರುಷದ ಉತ್ಪತ್ತಿಗಿಂತ ಹೆಚ್ಚಾಗಿ, ತೃಪ್ತಿಕರವಾಗಿದೆ ಎಂದೂ ರಿಪೋರ್ಟುಮಾಡಿದರು.

ಮನೆಯು ಖಾಲಿ ಇದೆ ಎಂದು ಮೊದಲೇ ಮಾಲೀಕರು ಮ್ಯುನಿಸಿಪಾಲಿಟಿಗೆ ತಿಳಿಸಿದರೆ ನೀರಿನ ತೆರಿಗೆಯಲ್ಲಿ ಅರೆವಾಸಿಯನ್ನು ಮಾಫ್ ಮಾಡಿಕೊಡಬೇಕೆಂದು ಮಿ॥ ಎಂ. ಸಿ ರಂಗಯ್ಯಂಗಾರ್ಯರೂ ಮಿ॥ ಎಂ. ನರಸಿಂಹಸ್ವಾಮಿಯವರೂ ಸೂಚಿಸಿದರು ಈ ವಿಚಾರವು ಸ್ವಲ್ಪಮಟ್ಟಿಗೆ ಚರ್ಚೆಯಾಗಿ ಹಾಗೆ ನೋಟೀಸ್ ಕೊಡಲ್ಪಟ್ಟ ಮನೆಯ ನೀರಿನ ತೆರಿಗೆಯನ್ನು ಪೂರ್ತಾ ವಜಾಮಾಡಿಕೊಡಬೇ ಕೆಂದು ಕೇಳಿಕೊಳ್ಳುವಂತೆ ಮೆಂಬರುಗಳೆಲ್ಲಾ ಒಪ್ಪಿ ತೀರ್ಮಾನಮಾಡಿದರು.— ಬಾಲಬೋಧಿನಿ ಸ್ಕೂಲಿಗೆ 15 ರೂಪಾಯಿ ಗ್ರಾಂಟು ಕೊಡಬಹುದೆಂದೂ, ಅದ ಕ್ಕಾಗಿ ಈಗಿರುವ ಸ್ಕೂಲ್ ಮನೆಯನ್ನು 3,000 ರೂಪಾಯಿಗೆ ಮ್ಯುನಿಸಿಪಾಲಿಟಿಯ ವರು ಕೊಂಡುಕೊಳ್ಳುವ ವಿಚಾರದಲ್ಲಿ ಪ್ರೆಸಿಡೆಂಟರು ಖುದ್ದು ಅಜಮಾಯಿಷಿ ಮಾಡಬೇಕಾಗಿದೆ ಎಂದೂ ಗೊತ್ತಾಯಿತು —ಸಿವಿಲ್ ಕೋರ್ಟುಗಳ ಬಳಿ ಹೊಸ ಪೈಪ್ಸ್ ಸ್ಟೇಷನ್‌ಗಾಗಿ ಬಿಟ್ಟುಕೊಟ್ಟಿರುವ ನಿವೇಶನವು ಗವರ್ನಮೆಂಟಿಗೆ ಸೇರಿದ್ದೋ ಮ್ಯುನಿಸಿಪಾಲಿಟಿಗೆ ಸೇರಿದ್ದೋ, ಅದಕ್ಕೆ ರೈಲ್ವೆ ಕಂಪನಿಯವರಿಂದ ಪ್ರತಿಫಲ ವನ್ನು ಕೇಳಬೇಕೋ ಬೇಡವೋ, ಈ ವಿಚಾರಗಳನ್ನು ಕುರಿತು ವೈಸ್ ಪ್ರೆಸಿಡೆಂ ಟರೂ ಮಿ॥ ಎಂ ಸಿ ರಂಗಯ್ಯಂಗಾರ್ಯರೂ ರೆಕಾರ್ಡು ನೋಡಿ ತೀರ್ಮಾನಮಾಡಿ ತಿಳಿಸಬೇಕೆಂದು ಇತ್ಯರ್ಥಮಾಡಲಾಯಿತು —ಚಾಮರಾಜಪೇಟೆಯಲ್ಲಿ ಅಂಡಾ ಪುರಂ ರಂಗಾಚಾರ್ಯರ ಮನೆ ಬಳಿ ಇರುವ ಖಾಲಿ ನಿವೇಶನವನ್ನು ಮ್ಯುನಿಸಿ ಪಲ್ ಸ್ಕೂಲ್ ಕಟ್ಟಡಕ್ಕಾಗಿ ತೆಗೆದಿಟ್ಟಿರೋಣವದರಿಂದ ಸಂಗೀತದ ಮಂದಿರ ಕಟ್ಟು ವುದಕ್ಕೆ ಕೊಡಲಾಗದೆಂದು ತೀರ್ಮಾನಮಾಡಿದರು —ಸರ್ಕಾರಕ್ಕೆ ಸಲ್ಲಬೇಕಾ ಗಿರುವ ಸುಮಾರು 22,000 ರೂಪಾಯನ್ನು ಐದು ಕಿಸ್ತುಗಳಲ್ಲಿ ಶೇಕಡಾ 4 ರಂತೆ ಬಡ್ಡಿ ಸೇರಿಸಿ ಸಾವತಿಮಾಡಬೇಕೆಂದು ಗವರ್ನಮೆಂಟಿನವರು ಬರೆದು ಕೇಳಿದ್ದರು ಮೆಂಬರುಗಳು ಅದನ್ನು ಓದಿಸಿ ರೆಕಾರ್ಡುಮಾಡಿಕೊಂಡು, ಈ ವಿಚಾರದಲ್ಲಿ ವಾಯಿದೆ ಮತ್ತು ಬಡ್ಡಿಯ ದರಗಳನ್ನು ಕುರಿತು ಗವರ್ನಮೆಂಟಿಗೆ ಪ್ರತ್ಯೇಕವಾಗಿ ಅರಿಕೆಮಾಡಿಕೊಳ್ಳುವುದಾಗಿ ಅಭಿಪ್ರಾಯಪಟ್ಟರು —ಸೋಡಾ ವಾಟರು ಮುಂತಾದ ನೀರುಗಳನ್ನೂ, ಹೋಟೆಲುಗಳನ್ನೂ, ತಿಂಡಿ ಪದಾರ್ಥಗ ಳನ್ನು ವಿಕರಿಮಾಡುವ ಅಂಗಡಿಗಳನ್ನೂ ಆರೋಗ್ಯ ಸೂತ್ರಗಳಿಗೆ ಅನುಸಾರವಾದ ಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕೆಂದು ಹೆಲ್ತ್ ಆಫೀಸರವರು ಎರಡು ಮೂರು ವೇಳೆ ನೋಟೀಸ್ ಕೊಟ್ಟು ಅವರನ್ನೆಲ್ಲಾ ಎಚ್ಚರಿಸಿದ್ದಾಗ್ಯೂ ಅವರು ಆ ರೀತಿ ನಡೆಯಲಿಲ್ಲವೆಂದೂ, ಅಂಥವರನ್ನು ಪ್ರಾಸಿಕ್ಯೂಷನ್ ಮಾಡಬೇಕೆಂದೂ ಚರ್ಚೆ ನಡೆದು, ಕಡೆಗೆ ಪ್ರಾಸಿಕ್ಯೂಷನ್ ಮಾಡುವ ಸಂಗತಿಯನ್ನು ಮೊದಲು ಆಯಾ ವಾರ್ಡಿನ ಮ್ಯುನಿಸಿಪಲ್ ಮೆಂಬರುಗಳಿಗೆ ತಿಳಿಸಿ ಅವರ ಅಭಿಮತವನ್ನು ತಿಳಿದು ಪ್ರೆಸಿಡೆಂಟರು ಸೂಕ್ತ ತೋರಿದಂತೆ ಇತ್ಯರ್ಥಪಡಿಸಬೇಕೆಂದು ಮೆಂಬರುಗಳೆಲ್ಲಾ ಅಭಿಪ್ರಾಯಪಟ್ಟರು —ಬೀದಿಗಳಲ್ಲಿ ಕತ್ತೆಗಳ ಕಾಟವನ್ನು ತಪ್ಪಿಸುವುದಕ್ಕೆ ಹೆಲ್ತ್ ಆಫೀಸರವರು ರಚಿಸಿದ್ದ ಬೈಲಾವನ್ನು ಮೆಂಬರುಗಳು ಓದಿಸಿ, ಪ್ರಜೆಗಳ ಅಭಿಪ್ರಾಯಕ್ಕಾಗಿ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಬಹುದೆಂದು ಒಪ್ಪಿ ಕೊಂಡರು —ದಿವಾನ್‌ರವರ ರೋಡಿನಲ್ಲಿರುವ ಮಿ॥ ಎ ಸಿ. ದೇವರಾಜೇ ಅರ ಸಿನವರ ಬಂಗಲೆ ಆವರಣದೊಳಗೆ ಇತರ ಮನೆಗಳ ಬಚ್ಚಲ ನೀರನ್ನು ನಲ್ಲಿಗಳ ಮೂಲಕ ತಂದು ಮುಂದಕ್ಕೆ ಸಾಗಿಸುವುದು ಸಹಜವಲ್ಲವೆಂದು ಅರ್ಜಿ ಬಂದಿ ದ್ದುದನ್ನು ಪ್ರೆಸಿಡೆಂಟರು ವ್ಯವಸ್ಥೆ ಮಾಡುವುದಕ್ಕೆ ಇಟ್ಟುಕೊಂಡರು —ಲಕ್ಷ್ಮೀ ಪುರಂ ಬಡಾವಣೆಯ ಪ್ರಜೆಗಳಿಗೆ ಆ ಸಮೀಪದಲ್ಲಿರುವ ಭತ್ತಕುಟ್ಟುವ ಕಾರ್ಖಾ ನೆಯ ಹೊಗೆಯಿಂದ ಉಂಟಾಗಿರುವ ಅನಾನುಕೂಲಗಳನ್ನು ತಪ್ಪಿಸಬೇಕೆಂದು ಹೆಲ್ತ್ ಆಫೀಸರವರು ಸೂಚಿಸಿದ್ದರು. ಈ ವಿಚಾರವನ್ನು ಪ್ರೆಸಿಡೆಂಟರೂ, ಹೆಲ್ತ್ ಆಫೀಸರೂ ಕಾರ್ಖಾನೆಯ ಮಾಲೀಕರನ್ನು ಕರೆಸಿಕೊಂಡು ಇತ್ಯರ್ಥಮಾಡುವಂತೆ ತೀರ್ಮಾನವಾಯಿತು.—ಶೇಷಣ್ಣನವರೇ ಮುಂತಾದವರು ಛತ್ರವನ್ನು ಕಟ್ಟಿ ಧರ್ಮಕ್ಕೆ ಬಿಡುವುದಾಗಿ ಬರೆದುಕೊಂಡಿದ್ದ ವಿಚಾರವನ್ನು ಮಿ॥ ಎಂ ಸಿ. ರಂಗ ಯ್ಯಂಗಾರ್ಯರಿಗೆ ತಿಳಿಸಿ ಅವರ ಅಭಿಪ್ರಾಯವನ್ನು ತಿಳಿಯಬೇಕೆಂದು ಇತ್ಯರ್ಥವಾ ಯಿತು.—ಇನ್ನು ಮುಂದೆ ಮೋಟಾರುಗಳಿಗೆ ಸಂಸ್ಥಾನಾವಳಿ ಟೋಲ್ ಗೇಟು ಗಳಲ್ಲಿ ವಸೂಲ್ಮಾಡುವ ಸುಂಕವು ಒಂದು ರೂಪಾಯಿಗೆ ಮೀರಕೂಡದೆಂದು ಸರ್ಕಾರದವರು ಕಳುಹಿಸಿದ್ದ ಹುಕುಮನ್ನು ಮೆಂಬರುಗಳು ಓದಿಸಿ ರೆಕಾರ್ಡು ಮಾಡಿಕೊಂಡರು

ಬೆಂಕಿಯನ್ನು ಆರಿಸುವುದಕ್ಕೆ ಮದರಾಸಿನ ಪ್ಯಾರಿ ಕಂಪನಿಯವರು ವಿಕರಿ ಮಾಡುವ ಒಂದು ಕೈಯಂತ್ರವನ್ನು ಆ ಕಂಪನಿಯ ಏಜಂಟರು ತಂದು ಮ್ಯುನಿಸಿ ಪಲ್ ಮೆಂಬರುಗಳ ಸಮಕ್ಷಮ ಬೆಂಕಿಯನ್ನು ಹೊತ್ತಿಸಿ ಆ ಯಂತ್ರದ ಮೂಲಕ ಆರಿಸಿ ತೋರಿಸಿದರು. ಅದನ್ನು ಕೊಂಡುಕೊಳ್ಳುವ ವಿಷಯದಲ್ಲಿ ಮೆಂಬರುಗಳು ಇನ್ನೊಂದು ಮೀಟಿಂಗಿನಲ್ಲಿ ಚರ್ಚಿಸೋಣವೆಂದು ಹೇಳಿದರು

ತಾಲ್ಲೂಕು ವರ್ತಮಾನಗಳು.

ಚನ್ನಪಟ್ಟಣ.—ಕಳೆದ ೨೭ನೇ ತಾ. ನಮ್ಮ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀ ಸರ್ ಮಿ॥ ಮುತ್ತುಸ್ವಾಮಿದಾಸ್‌ರವರು ಚನ್ನಪಟ್ಟಣಕ್ಕೆ ಬಂದು ಇಲ್ಲಿನ ಎ ವಿ. ಸ್ಕೂಲಿನಲ್ಲಿ ಸಾಂಕ್ರಾಮಿಕ ಜಾಡ್ಯಗಳ ಕಾರಣಗಳನ್ನೂ, ಅವುಗಳ ಚಿಕಿತ್ಸಾ ವಿವರ ವನ್ನೂ ತಾವುತಾವೇ ಚಿಕಿತ್ಸೆ ಮಾಡಬಹುದಾದ ರೀತಿಗಳನ್ನೂ ಕುರಿತು ಕನ್ನಡದಲ್ಲಿ ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ನಮ್ಮ ಅಮಲ್ದಾರ್ ಮಿ॥ ಕೃಷ್ಣ ಸಿಂಗ್‌ರವರು ಅಗ್ರಾಸನವನ್ನು ವಹಿಸಿದರು. ಮಿ॥ ಮುತ್ತುಸ್ವಾಮಿದಾಸ್‌ರವರು ಮಾಡಿದ ಉಪನ್ಯಾಸವನ್ನು ಅಚ್ಚುಹಾಕಿಸಿ ಜನರಿಗೆ ಕೊಡುವಹಾಗೆ ಸಭಿಕರು ಕೇಳಿಕೊಂಡರು —ಈ ಊರಿನ ಕೆಲವು ಜನರು ತಿರುಪತಿ ಯಾತ್ರೆಗೆ ಹೋಗಿ ಕಾಲರಾ ಸೋಂಕನ್ನು ಇಲ್ಲಿಗೆ ತಂದುಹಾಕಿದರು ಈ ಊರಿನಲ್ಲಿ ಕೆಲವರಿಗೆ ಕಾಯಿಲೆ ಸಂಭವಿಸಿತು. ಆದರೆ ನಮ್ಮ ಅಮಲ್ದಾರ್ರವರು ಅದರ ಸೋಂಕು ಹರ ಡದಂತೆ ತಕ್ಕ ಏರ್ಪಾಡು ಮಾಡಿದಾರೆ. ಆದರೆ ಕೆಲವು ಅಕ್ಕಪಕ್ಕ ಗ್ರಾಮದಲ್ಲಿ ಸಿಡುಬಿನ ಉಪದ್ರ ಇದೆ ಎಂಬ ವರ್ತಮಾನ ಕೇಳುತ್ತೇನೆ —ತಾ. ೨೨ರಲ್ಲಿ ಬೆಂಗ ಳೂರಿನಿಂದ ಮಿಷನ್ ಇಲಾಖಾ ಸೂಪರಿಂಟೆಂಡೆಂಟ್ ರೆವ್. ಬ್ಲ್ಯಾಕ್‌ಬ್ಯಾಂಕ್‌ರವ ರು ಈ ಊರಿಗೆ ಬಂದು ೨-೩ ದಿವಸಗಳವರಿವಿಗೂ ಇದ್ದು ಇಲ್ಲಿನ ಮಿಷನ್ ಕೆಲಸಗ ಳನ್ನೆಲ್ಲಾ ತನಿಖೆಮಾಡಿದ್ದಲ್ಲದೆ, ಕೆಲವು ಗ್ರಾಮಾಂತರಗಳಲ್ಲಿ ಧರ್ಮ ಬೋಧನೆ ಮಾಡಿ, ಮಂಗಳವಾರಪೇಟೆಯಲ್ಲಿ ಪಂಚಮರ ಮಕ್ಕಳಿಗೆ ಒಂದು ಸ್ಕೂಲನ್ನು ಹೊಸದಾಗಿ ಏರ್ಪಡಿಸಿದರು. ಇದಕ್ಕೆ ನಮ್ಮ ಅಮಲ್ದಾರ್ರವರು ತಕ್ಕ ಪ್ರೋತ್ಸಾಹ ವನ್ನು ಕೊಟ್ಟಿರುವದು ಶ್ಲಾಘನೀಯವಾಗಿದೆ.

ದೊಡ್ಡಬಳ್ಳಾಪುರ —ಮಾಕಳಿದುರ್ಗದ ರೈಲ್ವೆ ಸ್ಟೇಷನ್ ಬಳಿ ಇರುವ ಸುಬ್ಬ ರಾಯನ ಕಟ್ಟೆಯಲ್ಲಿ ಕಳೆದ ತಾ ೨೫ ರಿಂದ ೨೮ರ ವರೆಗೆ ಆರ್ಯ ಈಡಿಗ ಗೌಡ ಮಹಾ ಸಭೆಯು ನಡೆಯಿತು ರಾವ್ ಬಹದ್ದೂರ್ ಹನುಮಂತಗೌಡರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಅನೇಕ ದಿಗ್ದೇಶಗಳಿಂದ ಈಡಿಗ ಗೌಡರು ದಯಮಾಡಿಸಿದರು ದೊಡ್ಡಬಳ್ಳಾಪುರದ ಈಡಿಗಾ ಗೌಡ ಚಿಕ್ಕ ಹನುಮಂತಪ್ಪ ನವರು ಸುಮಾರು ೫೦೦ ರೂಪಾಯಿಮಟ್ಟಿಗೂ ವ್ಯಯಮಾಡಿ ಈ ಮಹಾ ಸಭೆಗೆ ದಯಮಾಡಿಸಿದವರಿಗೆ ಆವಶ್ಯಕವಾದ ಸಕಲ ಏರ್ಪಾಡುಗಳನ್ನೂ ಕೊಂಚವೂ ನ್ಯೂನತೆ ಇಲ್ಲದಂತೆ ಏರ್ಪಡಿಸಿದ್ದರು. ಇವರು ಇದಕ್ಕೋಸ್ಕರ ತೋರಿಸಿದ ಆಸಕ್ತಿ ಯೂ, ಪ್ರೀತಿಯೂ, ಪಟ್ಟಶ್ರಮವೂ ಅಸಾಧಾರಣವಾಗಿದ್ದು ಸಭಿಕರೆಲ್ಲಾ ಆನಂದ ಪಟ್ಟು ಇವರನ್ನು ಬಹಳವಾಗಿ ವಂದಿಸಿದರು ಮಹಾ ಸಭೆಯ ಮೆಂಬರುಗಳು ರಾಜಭಕ್ತಿ, ವಿದ್ಯಾಭ್ಯಾಸದ ಆವಶ್ಯಕತೆ, ಪ್ರೋತ್ಸಾಹ, ಬಾಲ ಬಾಲಿಕೆಯರ ವಿವಾಹನಿಷೇಧ, ಸಂಘದ ಐಕ್ಯತೆ, ಕಟ್ಟುಪಾಡು, ಈ ಮುಂತಾದ ಸಂಗತಿಗಳನ್ನು ಬಹು ಗಂಭೀರವಾಗಿಯೂ, ರಸವತ್ತಾಗಿಯೂ, ಫಲಕಾರಿಯಾಗಿಯೂ, ಉಪ ನ್ಯಾಸಗಳ ಮೂಲಕವೂ, ಚರ್ಚಾಸಮಾಡಿಯೂ ನಿರ್ಧರಿಸಿಕೊಂಡರು. ಮುಖಂಡರು ಈ ಸಭೆಗೆ ಮಿ॥ ಭಕ್ತಿಶಿರೋಮಣಿಯವರನ್ನೂ ಇತರ ಕೆಲ ಸ್ನೇಹಿತರನ್ನೂ ಕರಸಿ ಕೊಂಡು ಇವರ ಮೂಲಕವೂ ಮೇಲ್ಕಂಡ ವಿದ್ಯಾಭ್ಯಾಸ ಮತ್ತು ಬಾಲ ಬಾಲಿಕಾ ವಿವಾಹನಿಷೇಧಗಳ ವಿಷಯವಾಗಿ ಪ್ರೋತ್ಸಾಹ ಪಡೆದು ಅವರನ್ನು ಬಹಳವಾಗಿ ಸತ್ಕ ರಿಸಿದರು —ಮುಖ್ಯವಾಗಿ ಈ ಸಭೆಗೆ ಬಹಳವಾಗಿ ಪ್ರೋತ್ಸಾಹ ಕೊಟ್ಟವರು ಯಾರೆಂದರೆ, ಮ॥ ಗಳಾದ ರಾವ್ ಬಹದ್ದೂರ್ ಸಿ. ಹನುಮಂತಗೌಡರು, ಹೊಸಪೇ ಟೆ ಬಳ್ಳಾರಿ ಇವರು, ಬಳ್ಳಾರಿ ಕಾಲೇಜ್ ಪಂಡಿತರಾದ ಸುಬ್ರಹ್ಮಣ್ಯ ಶಾಸ್ತ್ರಿಗಳು, ಬಳ್ಳಾರಿ ಕೆ ಹನುಮಂತಪ್ಪನವರು, ಕೆ. ನೆಟಿಕಲ್ಲಪ್ಪನವರು, ಟಿ. ನಾಗಪ್ಪನವರು, ಚಿಕ್ಕ ಹನುಮಂತಪ್ಪನವರು ಇವರೆಲ್ಲಾ ಆರ್ಯ ಈಡಿಗ ಗೌಡರು. ಈ ಮುಂತಾ ದ ಅನೇಕ ಮಹನೀಯರು ಸಭಾ ಸ್ಥಾಪಕರೂ ಪಾಲಕರೂ ಆಗಿರುತ್ತಾರೆ. ಪ್ರತಿದಿನ ಬೆಳಿಗ್ಗೆ ೮ ರಿಂದ ೧೧ರ ವರಿಗೂ ಸಾಯಂಕಾಲ ೩ ರಿಂದ ೬ ಘಂಟೆ ವರಿ ಗೂ ಮೇಲ್ಕಂಡ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪ್ಲಾಟ್‌ಫಾರಂಗೆ ಸಭಿಕರು ಇಂಗ್ಲಿ ಷ್ ಬ್ಯಾಂಡು ಸಮೇತ ಪ್ರೆಸಿಡೆಂಟರನ್ನೂ ಅವರ ಸಹಾಧ್ಯಾಯಿಗಳನ್ನೂ ಸಭೆಗೆ ಕರೆದುಕೊಂಡುಹೋಗುತ್ತಲೂ ಸಭೆ ಮುಗಿದನಂತರ ಅದೇರೀತಿ ಬಹು ಮರ್ಯಾ ದೆಯಿಂದ ಮನೆಗೆ ಕರೆದುಕೊಂಡು ಬಂದು ಬಿಡುತ್ತಲೂ ಇದ್ದರು. ಈ ಸಭೆಯ ನ್ನು ಪರಾಂಬರಿಸುವದಕ್ಕಾಗಿ ದಯಮಾಡಿಸಿದ್ದ ಅಮಲ್ದಾರ್ ಮಿ॥ ಕೃಷ್ಣೆಅರಸಿ ನವರನ್ನು ಸಭಿಕರೂ ಪ್ರೆಸಿಡೆಂಟರವರೂ ಬಹು ಮರ್ಯಾದೆಯಿಂದ ಕಂಡು ಅವರಿಗೆ ಹಾರಾತುರಾಯಿಗಳನ್ನು ಕೊಟ್ಟು ವಂದಿಸಿದರು ಕಡೆಯಲ್ಲಿ ಕೆಲವು ಬಾಲಕರು ತಮಗೆ ವಿದ್ಯೆಯು ಆವಶ್ಯಕವೆಂತಲೂ, ಪ್ರಕೃತದಲ್ಲಿ ತಮ್ಮ ಸ್ಥಿತಿ ಎಷ್ಟು ದೌರ್ಭಾಗ್ಯವಾಗಿದೆ ಎಂತಲೂ ಬಹು ನ್ಯಮ ವಾಕ್ಯಗಳಿಂದ ಸಭಿಕರನ್ನು ವಂದಿಸಿ, ವಿದ್ಯಾದಾನವನ್ನು ಪ್ರಾರ್ಥಿಸಿದರು. ಪ್ರಕೃತದಲ್ಲಿ ಸಭಾಕಾರ್ಯಗಳೆಲ್ಲಾ ಬಹು ಅನುಕೂಲವಾಗಿಯೇ ಈಡೇರಿದವಲ್ಲದೆ ಈ ಆರ್ಯ ಈಡಿಗ ಗೌಡರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಾಕಾದಷ್ಟು ವಾಗ್ದತ್ತಗಳು ಕೊಡಲ್ಪಟ್ಟವು. ೩ನೇ ದಿನ ಬೆಳಿಗ್ಗೆ ಮತ್ತು ಸಾಯಂಕಾಲ ಸಭಿಕರೆಲ್ಲರ ಫೋಟೋ ಅಗ್ರಾಸನಾಧಿಪತಿಗಳ ಸಂಗಡಲೂ ಅಮಲ್ದಾರ್ರವರ ಸಂಗಡಲೂ ತೆಗೆಯಲ್ಪಟ್ಟು ಭಗವತ್ಪ್ರಾರ್ಥನೆಯಿಂದ ಸಭೆ ಮುಗಿಯಿತು ಪ್ರೆಸಿಡೆಂಟರನ್ನೂ ಶಾಸ್ತ್ರಿಗಳನ್ನೂ ವಾದ್ಯ ವಿಶೇಷಗಳಿಂದ ರೈಲ್ವೆ ಸ್ಟೇಷನ್ ವರಿಗೂ ಕರೆದುಕೊಂಡು ಹೋದರು.—ಏಪ್ರಿಲ್ ೮ನೇ ತಾ ಈ ಊರಲ್ಲಿ ಪ್ರಾರಂಭವಾಗುವ ಲೋ. ಸೆಕೆಂಡರಿ ಪರೀಕ್ಷೆಗೆ ಬರತಕ್ಕ ಸಮಸ್ತ ವಿದ್ಯಾರ್ಥಿಗಳಿಗೆ ಸಾಹುಕಾರ್ ತೂಬಗೆರೆ ಚಂದ್ರಶೇಖರಯ್ಯನವರು ಊಟ ಉಪ ಚಾರಮುಂತಾದ ಅನುಕೂಲಗಳನ್ನು ಬಹು ಪ್ರೀತಿಯಿಂದಲೂ ಉತ್ಸಾಹ ಪೂರ್ವ ಕವಾಗಿಯೂ ನಡಿಸುತ್ತಾರೆಂದು ಕೇಳಿ ತುಂಬಾ ಸಂತೋಷಪಡಬೇಕಾಗಿದೆ.— ನಮ್ಮ ಡಾಕ್ಟರು ರಾಮಸ್ವಾಮಿಪಿಳ್ಳೆಯವರು ಬಹಳ ಆಸಕ್ತಿಯನ್ನೂ ಪ್ರೀತಿಯನ್ನೂ ತೋರಿಸುತ್ತಿದಾರೆ. ಅವರು ಕಠಿಣವಾದ ಅನೇಕ ರೋಗಿಗಳನ್ನು ವಾಸಿ ಮಾಡು ತ್ತಿರುವದರಿಂದ ಈಗ ಆಸ್ಪತ್ರೆಗೆ ಅನೇಕರು ಬರುತ್ತಿರುವರು —ಇಲ್ಲಿನ ಎ ವಿ ಸ್ಕೂಲ್ ಅ॥ ಮಾಸ್ಟರು ಪಂಡಿತ್ ಟಿ. ವೆಂಕಟಾಚಾರ್ಯರಿಗೆ ಥಿಯೋಸಾಫಿಕಲ

ಸೊಸೈಟಿಯವರು ಒಂದು ಮೆಡಲ್ ಕೊಡಲು ಸಹಿ ಕೊಡಿಸ್ಯು ಬಹು ವಿಜೃಂಭಣೆಯಾಗಿತ್ತು ಈ ಸಭೆಗೆ ಮ|| ಅಮಲ್ದಾರ್ ಎಂ ಕೃಷ್ಣ ಅರಸಿನವರು ಅಗ್ರಾಸನವನ್ನು ವಹಿಸಿದ್ದರು ಸ್ಕೂಲ್ ಹುಡುಗರ ಮಂಗಳ ಕೀರ್ತನೆಗಳೂ, ಅಗ್ರಾಸನಾಧಿಪರ ಉಪನ್ಯಾಸವೂ, ಸೊಸೈಟಿ ಪ್ರೆಸಿಡೆಂಟರಾದ ಮ|| ಸಾಹುಕಾರ್ ಆಲಂಪಲ್ಲಿ ವೆಂಕಟನಾರಾಯಣಶ್ರೇಷ್ಠಿಯವರ ಅದ್ರೆಸ್ಸೂ ನಡೆದವು ಮ|| ಕೃಷ್ಣೆ ಅರಸಿನವರು ಮೆಡಲನ್ನು ವೆಂಕಟಾಚಾರ್ಯರಿಗೆ ಧರಿಸಿದರು ಕಡೆಯಲ್ಲಿ ವೆಂಕಟಾಚಾರ್ಯರು ಪ್ರಕೃತೋಚಿತ ವಾಕ್ಯಗಳಿಂದ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರು ಇವರು ಇಲ್ಲಿದ್ದ ೫ ತಿಂಗಳಲ್ಲೇ ಇಷ್ಟು ಒಳ್ಳೆ ಯೋಗ್ಯತೆಯನ್ನು ಪ್ರಕಾಶಪಡಿಸಿ ಸರ್ವರ ಪ್ರೀತಿಗೆ ಪಾತ್ರರಾದರೂ ಇಷ್ಟು ಗೌರವವನ್ನು ಹೊಂದಿದ್ದೂ ಬಹು ಸಂತೋಷಕರವಾಗಿದೆ ಈಗ ಇವರಿಗೆ ರಾಬರ್ಟ್ಸನ್ ಪೇಟೆಗೆ ವರ್ಗವಾಗಿರುವದರಿಂದ ಇವರ ವಿಯೋಗ ದುಃಖವು ಅಧಿಕವಾಗಿದೆ ಕಡೆಯಲ್ಲಿ ಬಾಲಕರ ಗೀತ ಮಂಗಳದೊಡನೆ ಸಭೆಯು ಬರಖಾಸ್ತು ಆಗಿ ಸರ್ವರೂ ವಿದ್ವಾನ್ ವೆಂಕಟಾಚಾರ್ಯರವರ ಮನೆವರೆಗೂ ವಾದ್ಯವಿಶೇಷಗಳೊಡನೆ ದಯಮಾಡಿಸಿ ಅವರನ್ನು ಬಿಟ್ಟು ಬಂದರು

ಟಿ ನರಸೀಪುರ —ಈ ಊರಿನಲ್ಲಿ ಕಾಲರಾ ಉಪದ್ರವು ನಿಂತುಹೋಗಿದೆ ಇವರ ಸಮೀಪದ ಹಾಲಗೂಡು ಎಂಬ ಗ್ರಾಮದಲ್ಲಿ ಇಬ್ಬರು ಸತ್ತಹಾಗೆ ವರ್ತಮಾನವಿದೆ ಮೂಗೂರಿನಲ್ಲಿ ಕಾಲರಾದಿಂದ ೩ ಜನರು ಸತ್ತರು ಅವರು ಬೇರೆ ಬೇರೆ ಜಾತ್ರೆಗಳಿಗೆ ಹೋಗಿ ಅಲ್ಲಿಂದ ರೋಗವು ತರುವರೆಂದು ಹೇಳುತ್ತಾರೆ ತಾ ೨೬ ನೇ ರಾತ್ರಿ ಸುಮಾರು ೭ ಘಂಟೆಯಲ್ಲಿ ಕಲ್ಲೇಗಾಲದ ದಂಗೆ ವೇಳದ ಮೆಯ ಸಾಕ್ಷಿ ಸಿದ್ದನಂಜಯ್ಯನ ಹುಲ್ಲಿನ ಮನೆಗೆ ಯಾರೋ ಶತ್ರುಗಳು ಬೆಂಕಿ ಹಾಕಿದರು ಪೋಲೀಸ್ ಜಮೇದಾರ್ರು ಕಾನ್‌ಸ್ಟೇಬಲುಗಳೂ ಸೇರಿ ಬಹು ಮುತುವರ್ಜಿಯಿಂದ ಮಗ್ಗುಲಿನ ಮನೆಗಳು ಹತ್ತಿಕೊಳ್ಳದಂತೆ ಕಾಪಾಡಿದ್ದು ತುಂಬಾ ಸಂತೋಷವಾಗಿದೆ ಸಿಡುಬಿನ ಉಪದ್ರ ಪ್ರಬಲವಾಗಿ ಅನೇಕ ಮಕ್ಕಳು ಮರಣಕ್ಕೆ ಈಡಾಗುತ್ತಾ ಇದಾರೆ ಸಿಡುಬು ಹಾಕುವವರು ಬಂದು ಎಷ್ಟೋ ಮನುಷ್ಯರಂತೆ ಹೇಳಿಕೊಳ್ಳುತ್ತಾರೆ —ತಾ ೨೯ರಲ್ಲಿ ಡೆಪ್ಯುಟಿ ಕಮೀಷನರ್ ಸಾಹೇಬರು ಮೂಗೂರಿಗೆ ದಯಮಾಡಿ ಗ್ರಾಮವನ್ನು ಪರಾಂಬರಿಸಿ ಜನರು ಕುಡಿಯುವ ಕೆರೆಯ ನೀರನ್ನು ಪರೀಕ್ಷಿಸಿ ಕೆರೆಯಲ್ಲಿ ನೀರು ಕೊಂಚವಾಗಿಯೂ ಕದಡಾಗಿಯೂ ಇದ್ದ ಕಾರಣ ಈ ರೋಗಕಾಲದಲ್ಲಿ ಇಂಥಾ ನೀರನ್ನು ಉಪಯೋಗಿಸಕೂಡದೆಂತಲೂ, ಬಾವಿಗಳ ನೀರನ್ನೇ ಉಪಯೋಗಿಸಬೇಕೆಂತಲೂ ಅಪ್ಪಣೆಮಾಡಿದರು —ಕನ್ನಹಳ್ಳಿ ಮೋಳೆಯ ಜನರು ೩ ವ ಸರ್ಕಾರಕ್ಕೆ ೬೦೦ ರೂಪಾಯಿಗೆ ಮೇಲ್ಪಟ್ಟು ಕಂದಾಯ ಕೊಡುವವರಾಗಿಯೂ ಗ್ರಾಮದಲ್ಲಿ ಹಾ ೩೦೦ ಜನರಿರುವದಾಗಿಯೂ, ತಮ್ಮ ಜಮೀನುಗಳು ಸಾಲಾಸ ಳಾಧಕಾರ್ ಈಗ ೩ ೬ ವರುಷಗಳಿಂದಲೂ ಸರಿಯಾದ ಫಸಲಾಗದೆ ತುಂಬ ಹೀನಸ್ಥಿತಿಗೆ ಬಂದು ದೇಶಾಂತರ ಹೋಗಬೇಕಾಗಿದೆ ಎ ದೂ ಅರಿಕೆಮಾಡಿಕೊಂಡದ್ದರ ಮೇಲೆ ಡೆಪ್ಯುಟಿ ಕಮೀಷನರವರು ಅವರ ಕಷ್ಟಗಳನ್ನೆಲ್ಲಾ ಕುರಿತು ಅರ್ಜಿ ಬರೆದುಕೊಳ್ಳುವಂತೆ ಪ್ರೀತಿಯಿಂದ ಅವರಿಗೆ ಅಪ್ಪಣೆಕೊಡಿಸಿ ತೆರಳಿದರು

ಅರಕಲಗೂಡು — ಈ ಕಡೆ ಧಾರಣೆವಾಸಿಗಳು ಇ ತರವಾಗಿಲ್ಲ ರೂಪಾಯಿಗೆ ೧೦ ಸೇರು ರಾಗಿ, ೪ ಸೇರು ಅಕ್ಕಿ ಸಿಗಿವೆ ಇದರಲ್ಲೂ ಪಿಟ್ಟೆ ಸೇರುಗಳ ಗಲಾಟೆಯನ್ನು ಕೇಳುವವರೇ ಇಲ್ಲ ಸರ್ಕಾರದ ಮುದ್ರೆ ಇರುವ ಸ ಡಳಗಳು ಕಳೆದ ಅಕ್ಟೋಬರ್ ತಿಂಗಳಿಂದಲೂ ಬರುವುದಿಲ್ಲವೋ ಇವೆ ಅಥವಾ ಬಂದಿದ್ದರೂ ಈ ಪ್ರಾಂತ್ಯ ಬಾರದೇ ಇರುವುದು ತುಂಬಾ ಶೋಚನೀಯವಾಗಿದೆ ಒಂದುವೇಳೆ ಬೇಗ ದರೆ ಬಡವರ ಕಷ್ಟವು ಕೊಡಿದಮಟ್ಟಿಗೂ ಕಮ್ಮಿಯಾಗಿ ವಾ ಪಾರಿಗಳ ಗಂಟು ಅಲ್ಪಸ್ವಲ್ಪ ಸಡಿಯುತ್ತ ಬರಲು ಅವಕಾಶವಾಗುತ್ತದೆ — ಪೇಟೆಯಲ್ಲಿ ರತಕ್ಕೆ ಸಾಹುಕಾರ ಮ ವಾಸದಟ್ಟಿರ ಮಕ್ಕಳು ಕಟ್ಟಿಸಿದ ಕಾರೋನೇಷನ್ ರೀಡಿಂಗ್ ರೂಂ ಮುಕ್ತಾಯವಾಗಿದೆ ಇದೂ ಅಲ್ಲದೆ ಇವರು ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ಸಾ ಸಸುತ್ತಾ ಬರುವ ಸಂಸ್ಕೃತ ಪಾಠಶಾಲೆಯೂ ಕೊಡಿದಮಟ್ಟಿಗೂ ಉತ್ತಮಸ್ಥಿತಿಯಲ್ಲಿರುವುದನ್ನು ನೋಡಿ ಸಂತೋಷಿಸಬೇಕಾಗಿದೆ ಮಿಷನರಿಯವರಾಗಲೀ ಅಥವಾ ಗವರ್ನಮೆಂಟಿನವರಾಗಲೀ ಬಡ ಮಕ್ಕಳಿಗೋಸ್ಕರ ಒಂದು ಕೆಗ ರಿಕೆ ಸ್ಕೂಲನ್ನು ಸ್ಥಾಪಿಸಿದರೆ ತಾವೂ ಸಹ ಇಂಥಾ ಪ್ರಯತ್ನದಲ್ಲಿ ಭಾಗಸ್ಥರಾಗುತ್ತೇವೆ ದು ಹೇಳುವುದನ್ನು ಕೇಳಿ ನಾವೆಲ್ಲರೂ ಸಂತೋಷಿಸಬೇಕಾಗಿದೆ — ಕೋಟೆಯಲ್ಲಿ ರತಕ್ಕ ಓವರ್ ವಡರಾಲ್ ಡಿಸ್ಪೆನ್ಸರಿಯು ಕೊಡಿದಮಟ್ಟಿಗೂ ನಡೆಯುತ್ತಿದ್ದರೂ ಇದಕ್ಕೆ ಪ್ರೋತ್ಸಾಹವು ಕಡಮೆಯಾಗಿ ತೋರುತ್ತೆ —ಇದೇ ಸ್ಥಳದಲ್ಲಿ ಸುಮಾರು ೬ ವರ್ಷದ ಒಬ್ಬ ವೈಶ್ಯಬಾಲಕನು ನಿಧಾನವಿದ ವೇಳೆ ಕೆರೆಯಲ್ಲಿ ಬಿದ್ದು ಸತ್ತದ್ದು ತುಂಬಾ ದುಃಖಕರವಾಗಿದೆ ಆಗ ಕೆರೆಯ ಕಾವಲಿನವನು ಇಲ್ಲದಹೋದನು — ಡೆಪ್ಯುಟಿ ಕಮೀಷನರ್ ಸಾಹೇಬರ ಸವಾರಿಯು ಈ ಪ್ರಾಂತ ಮಹಾಜನರಿಗೋಸ್ಕರ ಚಿತ್ತೈಸಿ ಸರ್ಕಾರದ ಕಾನೂನಿಗೆ ಅನುಸಾರವಾಗಿ ಕೆಲವರಿಗೆ ರಿಲೀಫನ್ನೂ, ಕೆಲವರಿಗೆ ರಕ್ಷೆಯನ್ನೂ ದಯಪಾಲಿಸಿದರು —ಇದೇ ಸಮಯದಲ್ಲಿ ಈ ತಾಲ್ಲೂಕಿನ ಹೊಳೆಯಲ್ಲಿ ಕೋಆಪರೇಟಿವ್ ಸಂಘವನ್ನು ಏರ್ಪಡಿಸಲು ಪ್ರಯತ್ನ

೧೯೧೨ ನೇ ಇಸವಿಯ ಲೋ, ಸೆ| ಕನ್ನಡ ಟೆಕ್ಸ್ಟು ನೋಟ್ಸು

ಪ್ರಿಂಟಾಗುತ್ತಾ ಇದೆ ಈ ಏಪ್ರಿಲ್ ೨೦ ರೊಳಗೆ ಆರ್ಡರ್ ಕಳುಹಿಸುವವರಿಗೆ ಕೇಕಡಾ ೨೦ ರ ತೆಯೂ ಬಳಿಕ ೧೦ ರಂತೆಯೂ ಡಿಸ್ಕೌಂಟು ದೊರೆಯುವುದು ಕ್ರಯ ೯ ಆಣೆ ಉತ್ತಮ ಕಾಗದ, ದೊಡ್ಡ ಅಕ್ಷರ, ವಿಳಾಸ—[೧೫ ೨]

ಕೆ ಆರ್ ನರಸಿಂಹಯ್ಯ, ಕನ್ನಡ ಪಂಡಿತ್, ಹೈಸ್ಕೂಲ್, ಚಿಕ್ಕಬಳ್ಳಾಪುರ

ನಡೆದಿದೆ —ಕಳೆದ ವಾರ ಇಲ್ಲಿನ ಕೋಟೆಯಲ್ಲಿ ವಿಶೇಷಜನಪರಿಚಯರಾಗಿದ್ದ ಮ|| ಸುಬ್ಬರಾಯರೆಂಬವರು ಸರಸ್ಪುರದ ಕೋಟೆಗ ಹೋದಂತೆಯೂ, ಸುಮಾರು ೧೨ ದಿವಗಳಾದರೂ ಅವರ ಸುಳಿವು ಎಲ್ಲಿಯೂ ಕಾಣಲಿಲ್ಲವೆ ದೂ ಈ ಮಧ್ಯೆ ಒಂದು ಕಟೆಯಲ್ಲಿ ಅವರ ಹೆಣವು ಸಿಕ್ಕಿದೆ ಎಂಬವಾಗಿಯೂ ಜನರು ಮಾತನಾಡಿಕೊಳ್ಳುತ್ತಲಿದಾರೆ ಇನ್ನೂ ಇವರ ನಿಜಾಂಶವು ಹೊರಪಟ್ಟಿಲ್ಲ ಈ ಪ್ರಾಂತ್ಯದ ಅನೇಕ ಹಳ್ಳಿಗಳಲ್ಲಿ ದೇವೀಘಾಚಸುವುದು ಅಪರೂಪ ಈಗ ಸೀಸಗೆ ಕಾಲವಾದ್ದರಿಂದ ಸಿಡುಬಿನ ರೋಗ ಬರುವದಕ್ಕೆ ಮುಂಚೆಯೇ ಮಕ್ಕಳಿಗೆ ಸಿಡುಬು ಹಾಕಿಸಲಿಕ್ಕೆ ತಕ್ಕ ಅನುಕೂಲಮಾಡಿದರೆ ಉತ್ತಮ ಇಲ್ಲವಿದ್ದರೆ ಅನೇಕ ಮಕ್ಕಳು ಈ ರೋಗದಲ್ಲಿ ಸಾಯುವರೆಂಬುವುದರಲ್ಲಿ ಸಂಶಯವಿಲ್ಲ

ಹಾಸನ —ದಿವಾನ್ ಮ|| ವಿಶ್ವೇಶ್ವರಯ್ಯ, ಸಿ ಐ ಇ ಯವರು ತಾ ೧೬ ನೇ ಭಾನುವಾರ ಬೆಳಗ್ಗೆ ೧೧ ಘಂಟೆಗೆ ಸಕಲೇಶಪುರ ಮಾರ್ಗವಾಗಿ ಇಲ್ಲಿಗೆ ದಯಮಾಡಿದರು ಸಿವಿಲ್ ಆಸ್ಪತ್ರೆ ಬಳಿ ಕಟ್ಟಿ ಅಲಂಕರಿಸಿದ್ದ ಮಂಟಪದಲ್ಲಿ ಈ ನಗರನಿವಾಸಿಗಳು ಕಾದಿದ್ದು, ಸತ್ಕಾರದೊಡನೆ ಅವರನ್ನು ಅಭಿವಂದಿಸಿ ಕರೆತಂದರು ದಿವಾನರವರು ಹೆಂಗಸರ ಆಸ್ಪತ್ರೆ, ಸಿವಿಲ್ ಆಸ್ಪತ್ರೆ, ಮ್ಯುನಿಸಿಪಲ್ ಆಫೀಸು ಹೈಸ್ಕೂಲು, ಚೀಫ್ ಕೋರ್ಟ್ ಜಡ್ಜ್ ಅಸಿಸ್ಟೆಂಟರ ಕೋರ್ಟ್, ಡಿಸ್ಟ್ರಿಕ್ಟ್ ಆಫೀಸು, ಇತ್ಯಾದಿ ಸ್ಥಳಗಳಿಗೆ ದಯಮಾಡಿ ಅವಶ್ಯವಾದ ಸಂಗತಿಗಳನ್ನು ವಿಚಾರದಿಂದ ತಿಳಿದು ಅಲ್ಲಲ್ಲಿ ತಕ್ಕ ಏರ್ಪಾಡುಗಳನ್ನೂ, ತಿದ್ದುಪಾಟುಗಳನ್ನೂ ಸೂಚಿಸಿ ಅನಂತರ ಸೆಂಟ್ರಲ್ ಕೋರ್ಟ, ಮಿಷನ್ ಆಸ್ಪತ್ರೆಗಳನ್ನೂ, ವಾಣೀ ವಿಲಾಸ ಬಾಲಿಕಾ ಪಾಠಶಾಲೆಯನ್ನೂ ನೋಡಿಕೊಂಡು ಟೌನ ಹಾಲ್ ಬಳಿಗೆ ದಯಮಾಡಿದರು ವಾಣೀವಿಲಾಸಶಾಲೆಯಲ್ಲಿ ಬಾಲಕಿಯರ ಶ್ರೀಯಃಪ್ರಾರ್ಥನೆಯ ಗಾನವನ್ನು ಕೇಳಿ ಸಂತೋಷಪಟ್ಟು ಬಾಲಕಿಯರಿಗೆ ಸ್ವಲ್ಪ ಬಹುಮಾನವನ್ನು ಕೊಟ್ಟು ಆಶೀರ್ವದಿಸಿದರು ಒಂಗ್ಲೆಯಿಂದ ಹೊರಟು ಪುರನಿವಾಸಿಗಳ ಕೋರಿಕೆಯಂತೆ ವಾಣೀವಿಲಾಸಶಾಲೆಗೆ ಚಿತ್ತೈಸಿ, ಅಲ್ಲಿ ಒಪ್ಪಿಸಲ್ಪಟ್ಟ ವಿಜ್ಞಾಪನಾಪತ್ರಿಕೆಯನ್ನು ಸ್ವೀಕರಿಸಿ, ಸದುತ್ತರವನ್ನಿತ್ತು ಮುಂದುಗಡೆ ಕಟ್ಟ ಪ್ರಾರಂಭಿಸಿರುವ ಕಾರೋನೇಷನ್ ಭವನದ ನೆಲಗಟ್ಟು ಸ್ಟೂಡೆಂಟ್ಸ್ ಹೋಂ, ಇವುಗಳನ್ನು ನೋಡಿಕೊಂಡು ಕ್ಲಬಿಗೆ ಬಂದು ಅಲ್ಲಿ ಪುರಪ್ರಮುಖರೊಡನೆ ಫಲಾಹಾರಾದಿಗಳನ್ನು ಅಂಗೀಕರಿಸಿದರು ಅಲ್ಲಿ ವಿದ್ವಾನ್ ವೆಂಕಟಗಿರಿಯಪ್ಪನವರ ವೀಣಾಗಾನ ಬೆಳೆಯಿತು ಸಾಯಂಕಾಲ ೬ ಘಂಟೆಗೆ ಅವರು ಅರಸೀಕೆರೆ ಮಾರ್ಗವಾಗಿ ಪ್ರಯಾಣಬೆಳೆಸಿದರು ಊರಿನಲ್ಲಿ ದಿವಾನರ ಪ್ರಾಪ್ತಿಯ ಕೊಡಿದೆ ಈ ವಾರದಲ್ಲಿ ಆಕಸ್ಮಾತ್ತಾದ ಜ್ವರದಿಂದ ಎರಡು ಮರಣಗಳಾದವು ತಟ್ಟನಕೆರೆ ಬಳಿ ಮೊನ್ನೆ ಒಬ ಆಸಾಮಿಯು ಆಕಸ್ಮಾತ್ತಾಗಿ ಸತ್ತುಹೋಗಿದ್ದಳು ಊರೊಳಗೆ ಕಾಲುವೆಗಳ ದೊಬ್ಬೂ, ಮಲಮೂತ್ರಾದಿಗಳೂ ಹೇರಳವಾಗಿರುವ ಬೀದಿಗಳನ್ನು ಅಧಿಕಾರಿಗಳು ಮುಖ್ಯವಾಗಿ ಗಮನಿಸಬೇಕು —ಸೆಷನ್ ಕೋರ್ಟ ಇಲ್ಲಿ ಒಂದು ವಿಚಾರಣೆ ನಡೆಯುತ್ತಲಿದೆ ಚೆನ್ನರಾಯಪಟ್ಟಣದ ತಾಲ್ಲೂಕು ದಬೆಳಗುಳದ ಮೂರ್ತಿ ಬವನ್ನು ಮೂಸಿ ದ ೩, ರಾಮರಾವ್ ಎಂಬುವವನನ್ನು ಬಹಳವಾಗಿ ಹೊಡೆದು ಅವರಿಗೆ ಸವರಿ ಆಪಾದ ರುಜುವಾತಾಯಿತೆಂದು ಶಿಕ್ಷೆಯಾಗಿದೆ ದೊಡ್ಡ ಎಂಬವನಿಗೆ ತಲಾ ೪ ವರ್ಷಗಳೂ ಭಂಗೀಸಂಘದ ಸಿದ್ದೇಶ ಎಂಬವನಿಗೆ ತಲಾ ೩ ವರ್ಷಗಳೂ ಚಿನ್ನ ಎಂಬವನಿಗೆ ೭ ವರ್ಷಗಳೂ ಕಠಿಣಸಜಾ ವಿಧಿಸಲ್ಪಟ್ಟಿತು ಈ ಊರಿನ ಕೋರ್ಟ ಅಂದರೆ ಚೆನ್ನಲಿಂಗಯ್ಯ ನನ್ನು ಕೊಲೆಮಾಡಿದ ಮೊಕದ್ದಮೆಯು ವಿಚಾರಣೆಯಾಗುತ್ತಿದೆ ಅರಕಲಗೂಡಿನಲ್ಲಿ ಒಬ್ಬ ಕ್ರಿಶ್ಚನ್ ನನ್ನು ಹೊಡೆದು ಮಾರ್ಗದಲ್ಲಿ ಕೊಂದಿದ ರತೆ ಓಗೆದು ಸರಕಾರದಲ್ಲೂ, ಪೋಲೀಸಲ್ಲೂ ಏ ದೊಂದು ದಿಗ್ನಿ ನಡೆದಿರುವಂತೆ ವರ್ತಮಾನವಿದೆ ಇನ್ನೂ ಸ್ಪಷ್ಟವಾಗಿ ತೋರ್ಪಟ್ಟಿರುವುದಿಲ್ಲ

ಜವಳಿ ವ್ಯಾಪಾರಿಗಳು ಅಗತ್ಯ ನೋಡಬೇಕು.

[೧೬ ೧]

ನಮ್ಮಲ್ಲಿ ನೂಲಿಂಚಿನ ನೇಯಿಗೆಪ್ರದ ಸೀರೆಗಳು ಕುಪ್ಪಸಗಳು ಕಣಗಳು ರುಮಾಲ್ ದೊರಕುತ್ತೆ ಒಟ್ಟು ಮಾತಿರಿ, ಮಾಲು ಗಸನು ಬೆಲೆ ಅತ್ಯಂತ ಸುಲಭ ವ್ಯಾಪಾರಿಗಳಿಗೂ ಚಿಲ್ಲರೆ ಗಿರಾಕಿಗಳಿಗೂ ಅನುಕೂಲವಾದ ಸಮಯ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು; ಅಥವಾ ಬಂದು ನೋಡಬಹುದು ನಮ್ಮ ವಿಳಾಸ

ಜಿ. ಎಸ್. ಶ್ರೀಕಂಠಯ್ಯ, ಏಜೆಂಟರ್,

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, ದೊಡ್ಡಪೇಟೆ ಗಡಿಯಾರದ ಚೌಕ, ಮೈಸೂರು

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ ಎಂದರೆ ನಿನಗೆ ಯಾವ ನೋವುಂಟಾಗಿರಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗು



(೧೨ ಆಣೆ ಬುಡ್ಡಿ ಪರಿಮಾಣ)

ದಿಯೋ ಎಂದು ನನ್ನ ನೀನೇ ಕೇಳಿಕೊ ಹಾಗೆ ಆಗದಿದ್ದರೆ ಡೋನರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ನುಂಗುವುದು ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಸ್ವಸ್ಥವಾಗುವುದು ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಗಳಿಗೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುವದನ್ನು ಇದರಿಂದ ತಿಳಿಯಬಹುದು ಆ ರೋಗಗಳು ಯಾವುವೆಂದರೆ ಪಿತ್ತಕೋಶದ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಬರಿ, ಎದೆಯು ತಲ್ಲಣಿಸುವುದು, ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು ಇವೇ ಮೊದಲಾದವು. ರೋಗವು ಬಿಟ್ಟು ಬಿಟ್ಟರೆ ರಕ್ತವು ಕೆಟ್ಟು ಆರೋಗ್ಯನಾಶವಾಗಿ ಹೋಗುವುದು

ಡೋನರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದ ತಯಾರಾದವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಷವಾದ ವಾಯುವನ್ನೂ ಮಲಾಶಯದಿಂದ ಹೊರತಳ್ಳಿ ಪಿತ್ತಕೋಶವನ್ನು ಒಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇನೆಯನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [೧೨ ೧೦]

ಬೆಲೆ ೬ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ಮಾತ್ರೆಗಳು ಎಂಟರ ೪ ಆಣೆ ಬುಡ್ಡಿಗಳಲ್ಲಿರುವುದಕ್ಕಿಂತ ೫ರಷ್ಟು ಇದ್ದು ಗಳಾಗುವುವು ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವವು ಅಥವಾ ಡೋನ್, ಪಿ ಓ ಬಾಕ್ಸ್ ೫೦ ಬೊಂಬಾಯಿ ಇವರಲ್ಲಿ ಮಾರಲ್ಪಡುವವು

SARASAPARELA SYRUP

The only Syrup that makes Your Body Coo PLEASANT and HAPPY is

SARASAPARELA SYRUP (Blood Purifier)

(ಸೊಗದೇಬೇರಿನ ಸರಬತ್ತು)

ಅತಿ ಶ್ರಮವಾದ ಪರೀಕ್ಷೆಯ ಸೊಗದೇಬೇರಿನ ಗಳ ದಲ್ಲಿ ಉತ್ತಮರೀತಿಯಲ್ಲಿ ತಯಾರಿಸಿದ ರಕ್ತವನ್ನು ಶುದ್ಧಿಮಾಡಿ ದೇಹವನ್ನು ಆರೋಗ್ಯದಲ್ಲಿ ಇಟ್ಟುಕೊಂಡಿರುವುದಕ್ಕೆ ಇದಕ್ಕೆ ಸಮಾನವಾದ ಸರಬತ್ತೇ ಇಲ್ಲ ರಕ್ತ ಕೆಟ್ಟುದರಿಂದ ಉಂಟಾಗುವ ಕಜ್ಜಿ, ತುರಿ, ಹುಣ್ಣು, ಹುರುಕು ಮುಂತಾದ ಇವೇ ಮೊದಲಾದ ಚರ್ಮರೋಗಗಳೂ ಉಷ್ಣಕ್ಕೆ ಆಗಿ ದೇಹ ಉರಿಯುವುದು, ಮೂತ್ರದಲ್ಲಿ ಉರಿ ಜರೆತ ಸೋಬು, ಪ್ರಮೇಹದಿಂದಾಗಿ, ಬಾಯಿಯಲ್ಲಿ ದ ಉಂಟಾಗುವ ಅರಸಿನ, ಬಾಯಿ ಹುಣ್ಣು, ಬಾಯಿ ವಾಸನೆ, ಕೈಕಾಲು ಉರಿ ನಕೆ ಗುರ್ನಟಿ, ರಕ್ತ ಸೋರಾಗಿರುವಿಕೆ ಮುಂತಾದ ಚರ್ಮರೋಗಗಳು ಇಲ್ಲದಿರುವಿಕೆಯೂ ಇದರ ಸೇವನೆಯಿಂದ ಬೇಗನೆ ವಾಸಿಯಾಗುತ್ತದೆ ಇದು ಕುಡಿಯುವುದಕ್ಕೆ ಸುವಾಸನೆಯುಳ್ಳದ್ದಾಗಿಯೂ ರುಚಿಯಾಗಿಯೂ ದಾಹ ಶಮನವಾಗಿಯೂ ಮಕ್ಕಳ ದೇಹಗಳಿಗೆ ಗುಣಕಾರಿಯಾಗಿ ಇರುತ್ತದೆ ಸೇವನಾಕ್ರಮ ಕಸಿ ಟೀ ಹಾಲು, ಅಥವಾ ನೀರಿನಲ್ಲಿ ಬೆರಸಿ ಸೇವಿಸುವದು ದೊಡ್ಡವರಿಗೆ ೧ ಡ್ರಮ್ಸ್, ಚಿಕ್ಕವರಿಗೆ ½ ಡ್ರಮ್ಸ್

ಹಿಂ ಪಾಟರ್

ಮನುಷ್ಯನಿಗೆ ಸಾಧಾರಣವಾಗಿ ಆರೋಗ್ಯ ಉಂಟಾಗುವುದಕ್ಕೆ ಅಜೀರ್ಣ, ಸೀತ ಇವೆರಡೇ ಕಾರಣವಾಗಿರುತ್ತೆ ಅಂಥ ಅಜೀರ್ಣವನ್ನೂ ಸೀತದೋಷವನ್ನೂ ಹೋಗಲಾಡಿಸುವುದಕ್ಕೆ ನಮ್ಮ ಹಿಂ ಪಾಟರ್ ಸರ್ವೋತ್ತಮವು ಅಜೀರ್ಣವನ್ನು ಹೋಗಲಾಡಿಸುವುದಕ್ಕೂ ಅಜೀರ್ಣದಿಂದುಂಟಾದ ಎಲ್ಲಾ ವಿಧವಾದ ಕೆಡಕುಗಳಿಗೂ ಶಾಂತ ಸೇರು ಕೆಲವು, ಹಿಂಗ ಹೊಟ್ಟೆ ಅಜೀರ್ಣದಿಂದ ಅಜೀರ್ಣದಿಂದ ಮೈ ಕಾಯುವಿಕೆ, ಸ್ತನಗಳು, ಉದರ ಯು, ಮೇಲಕ್ಕೆ ಉಸಿರು ಎಳೆಯುತ್ತಿರುವಿಕೆ ಹೊಟ್ಟೆಯಲ್ಲಿ ಶ್ಲೇಷ್ಮವು ಸೇರಿಕೊಂಡು ಹಿಂದಕ್ಕೂ ಮುಂದಕ್ಕೂ ಹೋಗಲಾರದೆ ಒಂದೇ ಸ್ಥಳದಲ್ಲಿ ನಿಂತುಕೊಂಡು ಯಾತನೆ ಪಡಿಸುತ್ತಿರುವುದು, ಯಾವ ಕಾರಣದಿಂದಲಾಗಲೀ ಮಲವಿಸರ್ಜನೆಯಾಗದೇ ಹೊಟ್ಟೆಯಲ್ಲಿಯೇ ನಿಂತು ಯಾತನೆ ಪಡಿಸುವುದು ಹೊಟ್ಟೆಯಲ್ಲಿ ಬಾಧಿಸುತ್ತಿರುವುದು, ಇವೇ ಮೊದಲಾದ ಎಲ್ಲಾ ವ್ಯಾಧಿಗಳನ್ನೂ ಹಿಂ ಪಾಟರನ್ನು ಕೊಟ್ಟು ... ಆದ ಅನಾಯಾಸವಾಗಿ ಇಲ್ಲದೆ ಸುಲಭ ... ಸಿ ಹೊಡೆಯಬಹುದು ಅಥವಾ ಕುಡಿದ ಮೇಲೆ ಬಿಸಿ ನೀರನ್ನು ಕುಡಿದು ಮರಳಿ ಯಾವ ರೀತಿಯ ದೋಷವಾಗದೆ ಇದರ ಸೇವನೆಯಿಂದ ನಿಂತುಹೋಗುವುದು

ಬೆಲೆ—ಸಾರಸಪರೇಲಾ (ಸೊಗದೇಬೇರಿನ ಸರಬತ್ತು) 8 ರ ...

ಬಾಟಲ್ 1 ಕ್ಕೆ	ಕ್ರಯ	೧–
ಹಿಂ ಪಾಟರ್ ೬ ಡ್ರಾಮಿನ ಬಾಟಲ್ 1 ಕ್ಕೆ	,,	೧–

ಪ್ಯಾಕಿಂಗ ಮತ್ತು ಪೋಸ್ಟೇಜು ಅಲಾಯಿದ

ಇವುಗಳಲ್ಲದೆ ನಮ್ಮಲ್ಲಿ ಎಲ್ಲಾ ವಿಧವಾದ ಪನೀರುಗಳ, ಹಣ್ಣು ಮತ್ತು ಹೂವುಗಳ ಸರಬತ್ತುಗಳೂ ಮತ್ತು ಅನೇಕ ತರಹಾ ಮುರಬ್ಬಾಗಳು ಜೀರಿಗೆ ರಸಾಯನ, ವಸ್ತ್ರ ಕಸ್ತೂರಿ ಮಾತ್ರೆ, ಹೇರ್ ಆಯಿಲ್ ಮತ್ತು ಇತರ ವಿಧವಾದ ಎಲ್ಲಾ ಸುವಾಸನಾ ದ್ರವಗಳೂ ದೊರೆಯುತ್ತವೆ.

ವಿಳಾಸ — ಯಸ್ ಟಿ ಪಪಾ ಅಂಡ್ ಕೊ.,
ದೊಡ್ಡಪೇಟೆ ಚೌಕ, ಮೈಸೂರು

Mellin's Food

ಮೆಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ವಿಕ್ರಯವಾಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದವರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಗಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ **Messrs. OAKES & Company, Mount Road, Madras.**

[೧–೨೨] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. H Gulli[illegible] Proprietor and Manager Wesleyan Mission Pr[illegible] Mysore. 3/4/1913

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಯು ೧ ದುಡ್ಡು. ಕ್ರಯ ೧ ದುಡ್ಡು.

ಪಟ ೨೬ ಮೈಸೂರು—೧೯೧೨ ನೇ ಇಸವಿ ಏಪ್ರೀಲ್ ತಾರೀಖು ೧೧ ನೇ ಗುರುವಾರ. ಸಂಚಿಕೆ ೪೫

"ವೃತ್ತಾಂತ ಪತ್ರಿಕೆ" ಏಜಂಟರಿಗೆ ನೋಟಿಸ್.

ವೃತ್ತಾಂತ ಪತ್ರಿಕೆಯು 1912 ಟ ನೇ ವರುಷದ ಮೂರನೇ ... ಕಳೆದ ... ತಿಂಗಳಿಗೆ ಪೂರೈಸಿದ. ಏಜಂಟರು ... ಲೆಕ್ಕಗಳನ್ನು ಪೈಸಲುಮಾಡಿ, ... ಫಾರಂ ... ಎತ್ತಿ ಬರೆದು, ತಮ್ಮ ತಮ್ಮ ಸೂಪರ್ ಟೆಂಡೆಂಟರಿಗೆ ... ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರ ... ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಪ್ರಾರ್ಥಿಸಿದೆ ... ನೇಜರ್, "ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು

ಜಂಟಲ್ಮೆನ್ಸ್ ಲೀವರ್ ವಾಚ್

... ಮೇಲಾದ ಮತ್ತು ಬಹು ನಾಜೂಕಾದ ಮತ್ತು ... ಯಂತ್ರ ಸಾಮಾನುಗಳಿಂದ ತಯಾರಾಗಿ ಈಗ ತಾನೇ ಬಂದಿರುತ್ತೆ. ನಾವು ಸ್ವಂತವಾಗಿ ತರಿಸಿರುತ್ತೇವೆ ಸರಿಯಾದ ಕಾಲವ ನ್ನು ತೋರಿಸತಕ್ಕದ್ದು ಬಾಳಿಕೆ ಬರುವದ್ದು, ಸುಂದರವಾದದ್ದು ... ಯಾದ ಮತ್ತು ಜೇಬಿಯಲ್ಲಿ ಇಡತಕ್ಕ ಯಾದ ವಾಚ್



ಕ್ರಯ —ವಾಚ್ 1 ಕ್ಕೆ ರೂ. ... ಮಾತ್ರ [51 1]

ವಿಳಾಸಕ್ಕೆ ಬರದು ತರಿಸಿಕೊಳ್ಳಿ:—

ಜಿ. ಆರ್ ವೆಂಕಟರಮಣ ಅಂಡ್ ಕಂಪನಿ

... ಕೂಟ್ ವೆಂಕಟಾಚಲ್ಯಯರ್ ಬೀದಿ, ಮದರಾಸು.

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರದು ತರಿಸಿಕೊಳ್ಳಿ

3-15

ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

... ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ... ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ...

... ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವ ... ವದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ತಿಳಿದುಕೊಂ ... ಡಬೇಕಾಗುವದು

... (೧) ನಮ್ಮಲ್ಲಿ ತಯಾರಾಗುವ ಟೋಪಿಗಳ ... ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ... ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ... ನಮೂನೆಗಳನ್ನೇ ಆರಿಸಿ ಕಳುಹಿಸುತ್ತೇವೆ

... ಯಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ... ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲ ... ನವರೆ ನಮ್ಮಲ್ಲಿ ದೊರೆಯುವದಿಲ್ಲ.

... ಕೆಂಪು, ಕಪ್ಪು, ಬಿಳಿ, ... ಬಣ್ಣಗಳ ಟೋಪಿಗಳು ೧ ರೂ ೮ ಆ, ... ಆ.; ೧ ರೂ. ೪ ಆ

... ಯುಳ್ಳ ಟೋಪಿಗಳು ರೂ ೧ ೮, ರೂ ೧—೧೨

... ಚುಕ್ಕೆಯುಳ್ಳ ಟೋಪಿಗಳು ರೂ ೨.

... ಟೋಪಿಗಳು ೧ ರೂ ೧೨ ಆ., ೧ ರೂ ೮ ಆ ; ೧ ರೂ. ೬ ಆ.

... ಟೋಪಿಗಳು ೧ ರೂ. ೮ ಆ., ೧ ರೂ ೬ ಆ

... ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ... ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ...

ನಮ್ಮ ವಿಳಾಸ —

... , ಹಾಸನದ ಟೋಪಿ ಕಾರ್ಖಾನೆ, ಹಾಸನ.

ಪ್ರತಾಪಕಂಠೀರವ ಚರಿತ್ರೆ.

(1) "ದುರ್ಮಾರ್ಗರಿಗೆ ವ್ಯಸನವುಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ, (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ-ಚಾತುರ್ಯ, (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು, (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ಮನುಷ್ಯ ಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭ ಸ್ಟೈಲಿ ; (7) ಸರಪಣಿ ಯ ಕೆ ಒ ಪಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ. ಕ್ರಯ —1 ರೂಪಾಯಿ, ಟಪಾಲ್ ಹಾಸಲು ಬೇರೆ.

[16 7] ನಮ್ಮ ವಿಳಾಸ:—ವಿಜಯ ಕೇಸರಿ ಕಂಪನಿ, ಬೆಂಗಳೂರು ಸಿಟಿ.

ಸಮಸ್ತ ವಿಧವಾದ ನೋವೂ ಇರಿತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಬೆನ್ನಿನ ಸೆಳೆತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ.

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ಬಿಕರಿಯಾಗುತ್ತಲಿವೆ. ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ಬಿಕರಿಯಾಗುವದು.

ಮುಳಕಟ್ಟು ಔಷಧ ಡಬ್ಬಿಗೆ ೬ ಆಣೆ; 12 ಕುಪ್ಪಿಗೆ ರೂ ೪—೮ ೦. ಹಲ್ಲುಪುಡಿ ಡಬ್ಬಿಗೆ 2 ಆಣೆ; 12 ಕುಪ್ಪಿಗೆ ರೂ. 1—2—0 ವಿ. ಪಿ. ಮತ್ತು ಪ್ಯಾಕಿಂಗ್ ಛಾರ್ಜ್ ಪ್ರತ್ಯೇಕ. [42-7]

ವಿಳಾಸ —ಅಮೃತಾಂಜನ ಡಿಪೋ, ೧೦೯ ಫ್ರಿಯರ್ ರೋಡ್, ಫ್ರೋರ್ಟ್, ಬೊಂಬಾಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊದೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುವದು, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ಸದಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕ್ಷಯರೋಗಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿವೆ - 20 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ; 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ [136-32]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಮೋಸಹೋಗಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿದ್ದರೆ ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆ. ರೂ 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಒಳ್ಳೆ ಸಮಯ—೧ ತಿಂಗಳು ಮಾತ್ರ. ಅಲ್ಪ ಬೆಲೆ! ಉತ್ತಮ ಬಹುಮಾನ "ಟಪಾಲು ಖರ್ಚು ಇಲ್ಲ!" ತ್ವರೆಮಾಡಿ.

೨ ಪುಸ್ತಕಕ್ಕೆ ೧ ರೂಲರ್ ಪೆನ್ಸಿಲು, ೩ ಪುಸ್ತಕಕ್ಕೆ ೧ ಲೇಸ್ಮೆ ವಸ್ತ್ರ, ೫ ಪುಸ್ತಕಕ್ಕೆ ೧ ... , ೧೦ ಪುಸ್ತಕಕ್ಕೆ ೧ ಜೇಬು ಗಡಿಯಾರ ಬಹುಮಾನ.

ನಿಮಗೂ, ನಿಮ್ಮ ಬಾಲಕ ಬಾಲಕಿಯರು ಮತ್ತು ಸ್ನೇಹಿತರಿಗೂ ಅತ್ಯಂತ ಉಪಯೋಗವಾದ

ಬಹುಮಾನ. ಮುಂಗಡವಾಗಿ ೮ ಆಣೆ ಕಳುಹಿಸುವವರಿಗೆ ಬಹುಮಾನದ ಟಪಾಲು ಖರ್ಚು ಇಲ್ಲ

ENGLISH SELF-INSTRUCTOR.
ಆಂಗ್ಲ ಭಾಷಾ ಪ್ರಕಾಶಕ.

ಬಹುಮಾನ. ಅಲ್ಪ ಬೆಲೆಗೆ ಉತ್ತಮ ಪುಸ್ತಕ ಮತ್ತು ಬಹುಮಾನ. ೧ ತಿಂಗಳ ಮೇಲೆ ಬಹುಮಾನವಿಲ್ಲ.

ಕ್ರಯ ರೂ ೧—೮—೦ ಅನ್ಯರ ಸಹಾಯವಿಲ್ಲದೆ ಸುಲಭವಾಗಿ ಇಂಗ್ಲೀಷ್ ಕಲಿಯುವ ಪುಸ್ತಕ. ಕ್ರಯ ರೂ. ೧—೮—೦.

ಈ ದೊಡ್ಡ ಪುಸ್ತಕದಲ್ಲಿ ೧ ನೇ ಭಾಗ, ೨ ನೇ ಭಾಗ, ೩ ನೇ ಭಾಗ, ೪ ನೇ ಭಾಗ, ೫ ನೇ ಭಾಗ—ಈ ೫ ಭಾಗಗಳೂ ಅಡಕವಾಗಿವೆ. ಬಾಲಕ ಬಾಲಕಿಯರು ಪಾಠಶಾಲೆಯಲ್ಲಿ ಓದುವ ವಿದ್ಯಾರ್ಥಿಗಳು ಮತ್ತು ವರ್ತಕರು ಮುಂತಾದವರು ಬೋಧಕರ ಸಹಾಯವಿಲ್ಲದೆ ಓದುವುದು, ಬರೆಯುವುದು, ಮಾತಾಡುವುದು ಸುಲಭವಾಗಿ ಕಲಿಯಬಹುದು, ಕನ್ನಡ ತಿಳಿದಿದ್ದರೆ ಸಾಕು. ಇಂಗ್ಲೀಷ್ ಅಕ್ಷರಾಭ್ಯಾಸ, ಶಬ್ದಸಂಯೋಜನ, ಸ್ವರಾಕ್ಷರಗಳ ವಿಧವಿಧ ಶಬ್ದಾಭ್ಯಾಸ, ಪಾಠಶಾಲೆಯಲ್ಲಿ ... ವರ್ಷ ಕಲಿಯುವಷ್ಟು ವ್ಯಾಕರಣ ಕ್ರಮಗಳು ಮತ್ತು ಅಭ್ಯಾಸಗಳು, ಇಂಗ್ಲೀಷ್ ಭಾಷೆಯಲ್ಲಿ ಬಗೆಬಗೆಯಾದ ವಾಕ್ಯಗಳನ್ನು ಮಾಡುವ ಕ್ರಮ ಮತ್ತು ನೂರಾರು ಅಭ್ಯಾಸಗಳು. ಸರ್ವವಿಷಯಗಳನ್ನು ಕುರಿತು ಪ್ರಶ್ನೋತ್ತರ ಸಂಭಾಷಣೆಗಳು ೮೦೦; ಪ್ರಪಂಚದ ಸರ್ವವಿಷಯಗಳನ್ನು ಕುರಿತು ಸಂಭಾಷಣೆ ಮಾಡುವಾಗ ಬೇಕಾಗುವ ಆಯಾ ವಿಷಯಕ್ಕೆ ತಕ್ಕ ಇಂಗ್ಲೀಷ್-ಕನ್ನಡ, ಕನ್ನಡ-ಇಂಗ್ಲೀಷ್ ಶಬ್ದಕೋಶ (ಡಿಕ್ಷನರಿ), ಭಾಷಾಂತರ ಮತ್ತು ಅರ್ಥವ್ಯಾಖ್ಯಾನಕ್ಕೆ ತಕ್ಕ ಅಭ್ಯಾಸಗಳು, ಕನ್ನಡ ಗಾದೆಗಳಿಗೆ ಸರಿಯಾದ ಇಂಗ್ಲೀಷ್ ಗಾದೆಗಳು, ಪತ್ರವ್ಯವಹಾರದಲ್ಲಿ ಉಪಯೋಗಿಸುವ ಸಾಂಕೇತಿಕ ಶಬ್ದಗಳು. ಶ್ರೀಮನಮಹಾರಾಜರ, ಬೇರಾದ ವಿ ... ವಿಷಯಗಳನ್ನು ಕುರಿತು ತಂತಿವರ್ತಮಾನ ಮತ್ತು ಕಾಗದಪತ್ರಗಳನ್ನು ಬರೆಯುವ ಅನೇಕ ಕ್ರಮಗಳು ಮತ್ತು ನಮೂನೆಗಳು, ಇವುಗಳಿಗೆ ಸ್ಪಷ್ಟವಾದ ಕನ್ನಡ ಅಕ್ಷರದಲ್ಲಿ ಉಚ್ಚಾರಣೆ ಮತ್ತು ಅರ್ಥಸಹ ಉಳ್ಳದ್ದು. ಈ ಪುಸ್ತಕ ನಮ್ಮಲ್ಲಿ ಮಾತ್ರ ದೊರೆಯುತ್ತೆ. ಕೆಲವು ಪ್ರತಿಗಳು ಮಾತ್ರ ಉಳಿದಿವೆ. ತ್ವರೆಮಾಡಿರಿ [17-7]

ವಿಳಾಸ:— ಎ. ವಿ. ರಾಯಲು. ಬಾಲಕೃಷ್ಣ ಬುಕ್ ಡಿಪೋ, ಜೋಳಿಪೇಟೆ, ಬೆಂಗಳೂರು ಸಿಟಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

31—3—1913 ರಿಂದ 6—4—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	2	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	16	12	0	0
ಮೈಸೂರು ,,	0	0	409	216
ಕೋಲಾರ್ ,,	2	0	0	0
ಕೋಲಾರ್ ಚಿನ್ನದ ಗಣಿಗಳು	6	5	0	0
ತುಮಕೂರು ಡಿಸ್ಟ್ರಿಕ್ಟು	8	7	77	41
ಹಾಸನ ,,	9	4	21	15
ಚಿತ್ರದುರ್ಗ ,,	0	0	0	0
ಕಡೂರ್ ,,	1	0	47	30
ಶಿವಮೊಗ್ಗಾ ,,	14	10	3	2
ಜುಮ್ಲಾ	57	41	556	337

ಶಾಲಿವಾಹನ ಶಕ ವರುಷಂಗಳು 1835 ನೇ ಪ್ರಮಾದಿ ಸಂವತ್ಸರೇ ಉತ್ತರಾಯಣೆ ವಸಂತಋತೌ ಚೈತ್ರ ಶುದ್ಧ ಪಂಚಮಿ ಶುಕ್ರವಾರದಿಂದ ಚೈತ್ರ ಶುದ್ಧ ಏಕಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಏಪ್ರಿಲ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಏಪ್ರಿಲ್ ಸೋಮ ತೇದಿ
11	ಶುಕ್ರ	ಪಂಚಮಿ	13 9	ರೋಹಿಣಿ	18-40	30
12	ಶನಿ ,,	ಷಷ್ಠಿ	10 1	ಮೃಗಶಿರ	17 52	31
13	ಭಾನು §	ಸಪ್ತಮಿ	16 1	ಆರಿದ್ರಾ	16 1	1
14	ಸೋಮ	ಅಷ್ಟಮಿ	11 11	ಪುನರ್ವಸು	11 19	2
15	ಮಂಗಳ †	ನವಮಿ	20-10	ಪುಷ್ಯ	9-38	3
16	ಬುಧ *	ದಶಮಿ	19 45	ಆಶ್ಲೇಷ	6 8	4
17	ಗುರು ‡	ಏಕಾದಶಿ	13 14	ಮಘಾ	2 ,	5

,, ಲಕ್ಷ್ಮೀ ಪಂಚಮಿ ,, ವಾತ್ಸಕಾಷ್ಟ್ರೀ ವ್ರತ, ಮಳೆ ನಕ್ಷತ್ರ—ಅಶ್ವಿನಿ 1 ನೇ ಪಾದ § ಸಂತಾನಸಪ್ತಮಿ ಚಿತ್ರವಿಷುಪುಣ್ಯಕಾಲ, ಸೌರಸಂವತ್ಸರಾರಂಭ ಅಶೋಕಾಷ್ಟಮಿ † ನವಮೀತಿಥಿ, ಸರ್ವತ್ರ ಶ್ರೀರಾಮನವಮಿ * ತಿಥಿದ್ವಯಂ, ಮಳೆ ನಕ್ಷತ್ರ—ಅಶ್ವಿನಿ 2 ನೇ ಪಾದ ‡ ದ್ವಾದಶೀ ತಿಥಿ, ಸರ್ವತ್ರ ಏಕಾದಶಿ, ಮಂಡ್ಯದ ಜನಾರ್ದನಸ್ವಾಮಿ ರಥ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಸಿದ್ಧ ಅಕ್ಕಿ ಪಲ್ಲಾ ೧ಕ್ಕೆ ರೂ	೧೫ ೦ ೦	೧೭ ೮-೦
ಕೆಂಬೂತಿ ಅಕ್ಕಿ ಅವಲ್	೧೫-೪ ೦	೧೭ ೮ ೦
,, ಮಧ್ಯಮ	೧೫ ೦ ೦	೧೭-೦-೦
ಜಾಪ್ರಾಣಿ ಅಕ್ಕಿ	೧೪-೮-೦	೧೭ ೪ ೦
ಸಣ್ಣಕ್ಕಿ ಅವಲ್	೧೭-೮ ೦	೧೮ ೮ ೦
,, ಮಧ್ಯಮ	೧೬ ೦ ೦	೧೭ ೮-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೧೪ ೦-೦	೧೯ ೮-೦
,, ಮಧ್ಯಮ ,,	೧೯ ೦-೦	೧೩ ೮-೦
ಶ್ಯಾಮ ರಾಗಿ ಪಲ್ಲಾ ೧ಕ್ಕೆ	೨ ೦ ೦	೫ ೦ ೦
ಕಾರ್ರಾಗಿ ,,	೬ ೪ ೦	೪-೧೩ ೦
ಜೋಳ ,,	೬ ೧೩-೦	೭ ೪-೦
ಹಲಸಂದೆ ಪಲ್ಲಾ ೧ಕ್ಕೆ	೧೦ ೪-೦	೧೯ ೧೩-೦
ಬೇಳೇ ಅವರೆ ,,	೧೦ ೮ ೦	೧೧ ೦-೦
ಹೆಸರು ,,	೧೩ ೮-೦	೧೪ ೦ ೦
ಉದ್ದು ,,	೧೪ ೮ ೦	೧೬ ೦-೦
ಕಡಲೆ ,,	೧೦-೮-೦	೧೩ ೦-೦
ಎಳ್ಳು ಸೇರು ೧೩೭ಕ್ಕೆ	೩೫ ೦ ೦	೩೪ ೦ ೦
ಹುರುಳಿ ಪಲ್ಲಾ ೧ಕ್ಕೆ	೬-೧೦ ೦	೭ ೦ ೦
ಹರಳು ೧೩೭ ಸೇರಿಗೆ	೧೩-೮-೦	೧೪-೦ ೦
ಸೀಗೇಕಾಯಿ ಮಣ ೧ಕ್ಕೆ	೩ ೪ ೦	೯ ೮-೦
ಮೆಣಸಿನಕಾಯಿ ,,	೪ ೦-೦	೯-೪ ೦
,, ಮಧ್ಯಮ	೯ ೦-೦	೧ ೯-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೪ ೮ ೦	ಮಣ ೯ ೮-೦
ಒಳ್ಳೆಣ್ಣೆ ಮಣ ೧ಕ್ಕೆ	೬ ೪ ೦	೬ ೬-೦
ಹರಳೆಣ್ಣೆ ,, ,,	೫ ೮ ೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫ ೪ ೦	೫ ೯-೦
ಉಪ್ಪು ,, ,,	೫ ೮ ೦	೬ ೨-೦
ಹುಣಸೇ ಹಣ್ಣು ಮಣ ೧ಕ್ಕೆ	೧ ೬ ೦	೧ ೪-೦
,, ಹಳೇದು ,,	೧ ೦-೦	೦ ೧೪ ೦
ತುಪ್ಪ ಮಣ ೧ಕ್ಕೆ	೧೯ ೮-೦	೧೯ ೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫ ೧೧ ೦	೫ ೦-೦
ತೆಂಗಿನಕಾಯಿ ೧೦೦ಕ್ಕೆ	೬ ೦ ೦	೬ ೦-೦
ಅಳಲೇಕಾಯಿ ಮಣ ೧ಕ್ಕೆ	೧ ೬ ೦	೧ ೦ ೦
ಅಂಟ್ವಾಳದಕಾಯಿ ಮಣ ೧ಕ್ಕೆ	೦ ೧೩ ೦	೧ ೮-೦
ಚಿನ್ನ (ಪವನ್) ಕೆಂಪು	೧೫ ೬ ೦	೫೧ ೫ ೦
,, ,, ಪಸಿಮೆ	೧೫ ೧೬ ೬	೧೫ ೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೯ ೦	೨೪ ೦ ೦
ಬೆಳ್ಳಿ ಗಟ್ಟಿ ತೋಲ ೧೦೦ಕ್ಕೆ	೮೧-೦-೦	೮೧ ೯-೦

CHAMBERLAIN'F COUGH REMEDY.

ಚೇಂಬರ್ಲೇನ್ಯವರು ಕಂಡುಹಿಡಿದ ಕೆಮ್ಮಿನ ಔಷಧವು.

1 15

ಶೀತದ ಕೆಮ್ಮು, ಗಂಟು ಗಾರೆನುವುದು ಹುಟಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಿನಲ್ಲೂ ಎದೆಯಲ್ಲ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಆ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ಪದುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಶೀಘ್ರವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳಿಂದ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು — ಸಣ್ಣ ಶೀಸೆಗೆ ೧ ರೂಪಾಯಿ — ದೊಡ್ಡ ಶೀಸೆಗೆ ೨ ರೂಪಾಯಿ

ಡೋಂಗರೆ ಇವರ ಬಾಲಾಮೃತ.

[115 39

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ಥಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೨ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

1914 ನೆಯ ಕನ್ನಡ ಲೋ|| ಸೆ|| ಟೆಕ್ಸ್ಟು 5 ಆಣೆ

ಪತ್ರರತ್ನಾಕರ—ಎಲ್ಲಾ ಪತ್ರಗಳ ನಮೂನೆಗಳುಳ್ಳದ್ದು, ಕ್ರಯ 8 ಆಣೆ
ಶ್ರೀಸ್ತ್ರೀತತ್ವಪ್ರಕಾಶಿಕ—ಎಲ್ಲಾ ಅರ್ಜಿಗಳ ನಮೂನೆಗಳುಳ್ಳದ್ದು, 4 ಆಣೆ
ಆರೋಗ್ಯಪ್ರಶ್ನೋತ್ತರ —4 ನೇ ತರಗತಿಗಳಿಗೆ, ಕ್ರಯ 1 ಆಣೆ [61 1]
ವಿಳಾಸ —ಹೆಚ್ ವೆಂಕಟರಾಮಯ್ಯ, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

ಕುಂತಲಾನಂದ ತೈಲವು

147 20

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಹುದಿನ ಬೆಳ್ಳಿಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ

ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ ಎಸ್ ನಾಥ ಮತ್ತು ಕಂಪನಿ,
ವೇಪೇರಿ, ಮದರಾಸ್

ಗುಣಕಂಡ ಮೂರು ಪ್ರಖ್ಯಾತ ಔಷಧಗಳು.

ಸ್ವಾಕ್ಸರ ಮಲೆನಾಡು ಜ್ವರಮಾತ್ರೆಗಳು—ಶೈತ್ಯಪ್ರದೇಶಗಳಲ್ಲಿ ಬಿಟ್ಟುಬರುವ ಅಥವಾ ದೀರ್ಘವಾದ ಶೀತಪಿತ್ತ ಎಲ್ಲಾ ಜಾತಿಯ ಚಳಿ ಜ್ವರಗಳನ್ನೂ ಖಂಡಿತವಾಗಿಯೂ ಸಂಪೂರ್ಣವಾಗಿಯೂ ವಾಸಿಮಾಡುತ್ತೆಂದು ಪ್ರಖ್ಯಾತಿ ಹೊಂದಿರುವ ಮಾತ್ರೆಗಳೇ ಇವು ಕ್ರಯ ಡಬ್ಬಿ 1ಕ್ಕೆ ರೂಪಾಯಿ 1 0 0

ಸ್ವಾಕ್ಸರ ಉಬ್ಬಸದ ಔಷಧ—ಉಬ್ಬಸ, ಕಠಿಣವಾದ ಕೆಮ್ಮು ಮೊದಲಾದ ಶ್ವಾಸಕೋಶದ ವ್ಯಾಧಿಗಳಿಗೂ, ಶೀತದ ಗಡ್ಡೆಗಳಿಗೂ ಬಹಳ ಉತ್ತಮವಾದ ಮತ್ತು ಶೀಘ್ರವಾಗಿ ಗುಣಕೊಡುವ ಔಷಧ ಕ್ರಯ ಬಾಟ್ಲಿ 1ಕ್ಕೆ ರೂಪಾಯಿ 1 0 0 [36 3]

ಸ್ವಾಕ್ಸರ ನಾಯಿಕೆಮ್ಮಿನ ಸಿದ್ಧೌಷಧ— ಇದು ಖಾತ್ರಿಯಾದ, ನಂಬಿಕೆಯುಳ್ಳ ಮತ್ತು ಅಮೋಘವಾದ ಔಷಧ ಬೇಗನೆ ಖಂಡಿತವಾಗಿಯೂ ಸಂಪೂರ್ಣವಾದ ಗುಣಕೊಡುವಂಥಾದ್ದು ಕ್ರಯ ಬಾಟ್ಲಿ 1ಕ್ಕೆ ರೂ 1 0 0

ಪ್ಯಾಕಿಂಗ್, ಪೋಸ್ಟೇಜ್, ವಿ ಪಿ ಖರ್ಚು ಪ್ರತ್ಯೇಕ ಈ ಔಷಧಗಳ ಗುಣಾದಿಗಳನ್ನು ವಿವರಿಸುವ ಹಸ್ತಪತ್ರಗಳನ್ನು ಕೇಳಿದವರಿಗೆ ಬಿಟ್ಟಿ ಕಳುಹಿಸುವೆವು

ವಿಳಾಸ —ಜೆ ಎಸ್ ಸ್ವಾಕ್ಸರ್,
117 ಪ್ರೋಮಿನೇಡ್ ಬ್ರಾಡ್‌ವೇ, ಮದರಾಸ್

ಇವಲ್ಲೂ ಸಿಕ್ಕುತ್ತವೆ—(1) ಎಡ್ವರ್ಡ್ ಕಂಪನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ (2) ಸ್ಪೆಯಿಡ್ ಉಸ್ಮಾನ್ ಕಂಪನಿ, ಬೆಂಗಳೂರು ದಂಡು, (3) ಕೆ ವಿಟ್ಟಲ್‌ರಾವ್ ಕಂಪನಿ, ಮಂಗಳೂರು, (4) ಎನ್ ಸಿಕ್ಕಿ ಕಂಪನಿ, ಪಾಲಘಾಟ್ (5) ಬಾಯಿಸ್ ಕಂಪನಿ, ಕಲ್ಲಿಕೋಟೆ

ವಿಕಟಪ್ರತಾಪ ಆಫೀಸು, ಕುಪ್ಪಂ ಪೋಸ್ಟು

ಮೊಲ್ಕಂದವರಲ್ಲಿ ತಯಾರಾಗುವ ಅತ್ಯುತ್ತಮವಾದ ನೀಲಿಕಪ್ಪು ಶಾಯಿ ಪುಡಿ ಪೊಟ್ಟ 1 ಕ್ಕೆ ಕ್ರಯ 3 ಪೈ 100 ಪೊಟ್ಟಗಳಿಗೆ 6 ಆಣೆ 1,000 ಪೊಟ್ಟಗಳಿಗೆ 3 ರೂಪಾಯಿ ಪ್ಯಾಕಿಂಗ್, ಪೋಸ್ಟೇಜ್ ಬೇರೆ ಎರಡಾಣೆ ಸ್ಟಾಂಪು ಒಸಿದವರಿಗೆ ಮಾದರಿಗೋಸ್ಕರ ಕೆಲವು ಪೊಟ್ಟಗಳು ಕಳುಹಿಸಲ್ಪಡುವವು [6

ಹತ್ತಿಯ ಹಿಂಡಿ! ಹತ್ತಿಯ ಹೊಟ್ಟು!

ಶಾಸ್ತ್ರಜ್ಞರ ಅಭಿಪ್ರಾಯ

“ಆ ಸಾರಾಂಶಗಳನ್ನು ಪರೀಕ್ಷಿಸಿದ್ದರಲ್ಲಿ ಇದು ದನಗಳಿಗೆ ಉತ್ಕೃಷ್ಟ ಆಹಾರವಾಗಿದೆ ವಿಲಾಯತಿಯಲ್ಲಿ ತಯಾರಾಗುವಂತೆಯೇ ಶ್ರೇಷ್ಠವಾದ ಹತ್ತಿಯ ಬೀಜಕ್ಕಿಂತ ಇದು ಬಹಳ ಪುಷ್ಟಿಕಾರಿ ಇದಕಿಂತ ಉತ್ತಮ ತಯಾರಿಸ್ಮಾಡುವುದು ಅಸಾಧ್ಯ” ಹೀಗೆಂದು ಬೊಂಬಾಯಿ ವ್ಯವಸಾಯದ ಇಲಾಖೆಯ ರಸಾಯನಶಾಸ್ತ್ರಜ್ಞರೂ, ಪೂನಾ ವ್ಯವಸಾಯದ ಕಲಾಶಾಲೆಯ ಅಧ್ಯಕ್ಷರೂ ಆದ ಡಾಕ್ಟರ್ ಮ್ಯಾನ್ ಎಂಬ ದೊಡ್ಡ ಪಂಡಿತರೇ ಬರೆದಿರುವರು [61

ಒಂದೇ ಭಾಗ ಹಿಂಡಿಗೆ ನಾಲ್ಕು ಭಾಗ ಹೊಟ್ಟು ಬೆರೆಯಿಸಿ ದನಗಳಿಗೂ ಕುದುರೆಗಳಿಗೂ ಕೊಡುತ್ತಾಬಂದರೆ ಬಲಹೆಚ್ಚಿ ದಣಿವು ಕಡಮೆಯಾಗುವುದು ಕರೆಯುವ ಎಮ್ಮೆ ಹಸುಗಳಿಗಂತೂ ಈ ಹೊಟ್ಟೂ ಹಿಂಡಿಯೂ ಅತ್ಯವಶ್ಯಕ

ಎಲ್ಲಾ ಬಗೆಯ ಪೈರುಗಳಿಗೂ ಹಣ್ಣು, ತರಕಾರಿ, ಹೂವಿನ ಗಿಡಗಳಿಗೂ ಇದು ಕೇವಲ ಅಗ್ಗದವಾದ ಗೊಬ್ಬರ ನಮ್ಮ ವಿಳಾಸ —

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, 1 9, ಕಿಲಾರಿ ರೋಡ್, ಬೆಂಗಳೂರು ಸಿಟಿ

“ವಾಸಿಮಾಡಿಕೊಳ್ಳುತ್ತೇನೆಂದು ಹೇಳು”

84 4

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾತ ಕೀಲು, ಜರತಿ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ನೋವೇ ಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ನೋವು ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅ ಗಡಿಗೆ ಹೋಗು ಕ್ಲಿಮಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯೊಂದಿಗೆ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನ ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

“ಕ್ಲಿಮಂಟರ ಮ್ಯಾಜಿಕ್ ಬಾಂ” ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಬಿ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಶಬ್ದಮಣಿದರ್ಪಣದ ಸಾರೋದ್ಧಾರ

ವಿದ್ಯಾರ್ಥಿಗಳು ಗಮನಿಸಲಿ ! ಕನ್ನಡಕ್ಕೆ ಸುಲಭವಾದ ದಾರಿ !

ಮೈಸೂರು ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ... ಶಬ್ದಮಣಿದರ್ಪಣದಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ... ವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪ ... ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಿಂದ ಕನ್ನಡ ... ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ ... ಆಣೆ ಒಂದು ಉಚಿತ

[107 17] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

...ವಳಿ ವ್ಯಾಪಾರಿಗಳು ಅಗ ತ್ಯ ನೋಡಬೇಕು.

— — [... 2]

ನಮ್ಮಲ್ಲಿ ನೂಲಂಜನ ಸೋಲಾಪುರದ ಸೀರೆಗಳು ಕುಪ್ಪಸ ಕಣಗಳು ರವಿವಾರ್ ದೊರಕುತ್ತವೆ ಬಣ್ಣ ಖಾತರಿ ... ಹಸನು, ಬೆಲೆ ಅತ್ಯಂತ ಸುಲಭ. ವ್ಯಾಪಾರಿಗಳಿಗೂ ... ಗಿರಾಕಿಗಳಿಗೂ ಅನುಕೂಲವಾದ ಸಮಯ ಬೇಕಾದ ... ಕೆಳಗಿನ ವಿಳಾಸಕ್ಕೆ ಬರೆಯಬಹುದು, ಅಥವಾ ಬಂದು ... ಬಹುದು.

ನಮ್ಮ ವಿಳಾಸ

ಎಸ್. ಶ್ರೀಕಂಠಯ್ಯ, ಏಜಂಟ್,

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ...ಟೆಡ್, ದೊಡ್ಡ ಪೇಟೆ ಗಡಿಯಾರದ ಚೌಕ, ಮೈಸೂರು

...ದ ವಾಚ್ ! ನಾಜೂಕಾದ ವಾಚ್ !

ರೈಲ್ವೆ ಗಾರ್ಡ್ ಲೀವರ್ ಪಾಕೆಟ್ ವಾಚ್

...ಕ್ರಯ—ನಾಜೂಕಾದ ವಾಚ್ ಸರಪಣಿ ಸಮೇತ ರೂ ೨ ೫ 0 ಮಾತ್ರ ೬ ವರುಷಗಳ ಗ್ಯಾರಂಟಿ

...ಮಕ್ಕಳ ಆಟದ ಬೊಂಬೆಗಳಂತೆ ಕೆಲವು ದಿವಸಗಳು ಆಟವಾಡಿ ಕೆಟ್ಟು ...ಕ್ಕಂಥಾ ಅಲ್ಪ ಗಡಿಯಾರವಲ್ಲ ಸಾಧಾರಣವಾದ ವಾಚ್‌ಗಳಿಗಿಂತ

ಬಹು ಶ್ರೇಷ್ಠವಾದದ್ದು ರೈಲ್ವೆ ಗಾರ್ಡ್, ಡ್ರೈವರ್ ಮುಂತಾದ ಅನೇಕ ರೈಲ್ವೆ ಉದ್ಯೋಗಸ್ಥರು ಇದನ್ನು ಇಟ್ಟುಕೊಂಡು ಉಪಯೋಗಿಸುತ್ತಾರೆ ಆದಕಾರಣವೇ ಇದಕ್ಕೆ ರೈಲ್ವೆ ಗಾರ್ಡ್ ವಾಚ್ ಎಂಬ ಹೆಸರು ಬಂದಿರುತ್ತೆ ಇದನ್ನು ಇಟ್ಟುಕೊಂಡು ರೈಲ್ವೆ ಗಾರ್ಡ್‌ರವರು ರೈಲ್ ನಡಿಸುತ್ತಾರೆ ಈ ವಾಚ್ ವಿಚಾರವಾಗಿ ಹೆಚ್ಚಾಗಿ ಬರೆಯಲು ನಮ್ಮಿಂದ ಸಾಧ್ಯವಿಲ್ಲ ಸಾವಿರಗಟ್ಟಲೆ ಮಾರಾಗಿ ಇಷ್ಟವಿಲ್ಲದ ಯೋಗ್ಯತಾ ಪತ್ರಗಳನ್ನು ಹೊಂದಿರು ... ಕೆಲವು ವಾಚ್‌ಗಳು ಮಾತ್ರ ಉಳಿದಿರುತ್ತೆ ಬೇಕಾದವರು ಶೀಘ್ರವಾಗಿ ...ಸಿಕೊಳ್ಳಿ ತರಿಸಿಕೊಂಡು ನಮಗೆ ತೃಪ್ತಿಯಿಲ್ಲದ ಪಕ್ಷದಲ್ಲಿ ಖಂಡಿತ ಹಣ ...ವಾಪಸು ಮಾಡಲು ಸಿದ್ಧ ನಮ್ಮ ವಿಳಾಸ — [... 1]

ಸುಪೀರಿಯರ್ ವಾಚ್ ಕಂಪನಿ, ಪೋಸ್ಟು ಬಾಕ್ಸ್ 117, ಮದರಾಸು

...ಲಕ್ಷ್ಮೀನರಸಿಂಹ ಆಯುರ್ವೇದ ವೈದ್ಯಶಾಲಾ

ಜ್ವರಮುರಾರಿ —ಸಕಲ ವಿಧವಾದ ಜ್ವರಗಳಿಗೆ ಅಂಕುಶವಾಗಿದೆ ಇದ... ...ಪಯೋಗಿಸಿದೊಡನೆ ಸಕಲವಿಧವಾದ ಜ್ವರಗಳನ್ನೂ ಹತಮಾಡುವದು ಇದು ...ಯಾಗಿರುವ ಹಸುರುಸೊಪ್ಪುಗಳು ಬೇರುಗಳು ಮೊದಲಾದ ಕ್ಷಾರದಿಂದ ...ಸಿದ್ದು ರಸ, ಗಂಧಕ, ಪಾಷಾಣಾದಿಗಳೊಂದೂ ಈ ಔಷಧಕ್ಕೆ ಸೇರಿದ್ದು ... ನಮ್ಮ ಪೂರ್ವಿಕರು (ಸಿದ್ಧರು)ಗಳಿಂದ ಕಲಿತ ಸಿದ್ಧಪ್ರಯೋಗ ಈ ...ಷಧ ಸಾನಾದಿಗಳೇನೂ ಇಲ್ಲ ಈ ಔಷಧವನ್ನು ಒಂದು ಸಾರಿ ಉಪಯೋಗಿಸಿ ...ದ ಒಡನೆ ಅವರಾಗಿ ತಮ್ಮ ಸ್ನೇಹಿತರುಗಳಿಗೆ ತಿಳಿಸಿ ಸಂತೋಷಪಡು... ...ಮ ಮದರಾಸಿನಲ್ಲಿ ಅನೇಕ ಸಾವಿರ ಜನಗಳು ಉಪಯೋಗಿಸಿದ ಸಿದ್ಧ... ...ದಿವಸ ಅನೇಕ ಜನಗಳು ಉಪಯೋಗಿಸುತ್ತಲೂ ಇದ್ದಾರೆ ಈ ...ನೆ ಕ್ರಮವು ವಿಷದದ ಚೀಟಿಯಲ್ಲಿ ಕಳುಹಿಸಲ್ಪಡುವದು ಎಂಥಾ ... 6.10 12 16 ಪೊಟ್ಟಣಗಳ ವಿಷದದಲ್ಲಿ ವಿಶೇಷವಾಗಿ ಜೀರ್ಣಿಸ... ...ವನ್ನು ರೋಗಿಗಳಿಗೆ ಹಸಿವನ್ನುಂಟುಮಾಡಿ, ಬಲಹೀನವನ್ನು ಹೋಗ... ...ಸು. ಇದರ ಬೆಲೆ 12 ಪೊಟ್ಟಣಗಳ ದರ್ಜ 1 ಕ್ಕೆ 12 ಆಣೆ ಟಪ್ಪಾ... ...ಸಲ್ ಛಾರ್ಜ್ ಪ್ರತ್ಯೇಕ [81 ...]

...ಷಧಾವನ ರತ್ನಾಕರಂ ಇದು ಹಲ್ಲುಗಳಿಗೆ ಬಾಧಾಕರವಾದ ...ಗಳು ಯಾವದೂ ಸೇರಿಸದೆ ಅನೇಕ ಮೂಲಿಕೆಗಳಿಂದ ತಯಾರುಮಾಡಿದ ...ದ ಸುವಾಸನೆಯಾಗಿರುವದು ಇದರಿಂದ ಹಲ್ಲು ಉಜ್ಜಿಕೊಂಡರೆ ...ಟ್ಟುವ ರೋಗಾದಿಗಳು ಹೋಗಲಾಡಿಸಿ ವಾತಪಿತ್ತ ಶ್ಲೇಷ್ಮಗಳನ್ನು ... ಹಲ್ಲುನೋವು, ಬಾಯಿನಾತ, ಹಲ್ಲುಜೋವು, ಹಲ್ಲಿನಲ್ಲಿ ರಕ್ತ... ...ಹಲ್ಲಿನಲ್ಲಿ ರಕ್ತಬರುವದು, ಹುಳುಕುಹಲ್ಲು, ಇಗುರುಬಾವು ಮೊದ... ...ವಾರಿಸಿ ಹಲ್ಲು ಸಂದುಗಳನ್ನು ದಟ್ಟವಾಗಿ ಸೇರಿಸಿ ಕಳೆಕೊಟ್ಟು ...ಕ್ಕೆ ಗುಣವನ್ನುಂಟುಮಾಡುವದು ಈ ಪುಡಿಯನ್ನು ಹೊಟ್ಟೆಗೂ ...ಯಬಹುದು ಇದರ ಬೆಲೆ ದಬ್ಬಿ 1 ಕ್ಕೆ 4 ಆಣೆ ಟಪ್ಪಾಲ್, ಪಾರ್ಸ... ...ಪ್ರತ್ಯೇಕ ವಿಳಾಸ —

...ದ್ಯಂ ಮೈಸೂರು ಪಂಡಿತರು ಎಂ ಕೆ ಶೇಷಾಚಾರ್ಯ

ನಂ 93, ಚೈನಾಬಜಾರ್ ರೋಡ್, ಮದರಾಸ್

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು ನಿದ್ದೆಯಿಲ್ಲದೆ ಇರುವದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ ಕಣ್ಣುಮೊಬ್ಬು, ತಲೆ ತಿರುಗುವಿಕೆ ಮೈನೋವು ಕೀಲುನೋವು, ಮರವು, ನಿಶ್ಶಾಣ, ಇವೇ ಮೊದಲಾದುವು ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ ಮೂತ್ರಕೋಶವು ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [142 31]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳಿದಂತೆ ಕೇಳದ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION 2-15

(ಸ್ಕಾಟ್ಸ್ ಇಮಲ್‌ಷನ್)

ಎಂಬ ಸೇವನಾ ಔಷಧವನ್ನು ಕೊಡಬೇಕು

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವುದು

ಅದು ಸಂತೋಷವೂ ಆನಂದವೂ ಸಹಜವಾಗಿ ಆಹಾರದ ರುಚಿ ಹೊಂದಿಸುವ ಚಿಹ್ನೆ ತೋರಿಸುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧಮಾರುವವರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್,

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಮೈಸೂರು ಸಾಮಾನ್ಯ ಟ್ರೈನಿಂಗ್ ಪರೀಕ್ಷೆ ಫಲಿತಾಂಶ

1911 ನೇ ವರುಷದ ಲೋವರ್ ಸೆಕಂಡರಿ ಟೀಚರ್ ಸರ್ಟಿಫಿಕೇಟ್ ಪರೀಕ್ಷೆ ತೇರ್ಗಡೆಯಾದವರ ಹೆಸರುಗಳು

ಬೆಂಗಳೂರು ಸೆಂಟರ್ — ಕೊರ್ನೆಲಿಯಾ ಜಯಮ್ಮ, ಡಿ ಎಮಿಲಮ್ಮ, ಎಂ ಬಾಲಸುಂದರಮ್ಮ, ಗುರುಸಿದ್ದಮ್ಮ, ಜಿ ಲಿಲ್ಲಮ್ಮ, ಎಸ್ ಶಾಂತಮ್ಮ, ಸಿ ಫ್ಲಾರೆನ್ಸಮ್ಮ, ಪಿ ವೆಂಕಿಕ್ಕಮ್ಮ, ವೈ ಸುಂದರಮ್ಮ, ಸಿ ಮೇರಿ, ಜಿ ಕಮಲಮ್ಮ, ಜಿ ಚೋತಮ್ಮ

ಕೋಲಾರ್ ಸೆಂಟರ್ —ಕೆ ನರಸಿಂಹಾಚಾರ್ (1ನೇ ಕ್ಲಾಸ್), ಸಿ ಕ್ಷೇತ್ರಪಾಲಯ್ಯ, ಎನ್ ಸೀತಾರಾಮಯ್ಯ, ವಿ ಕೃಷ್ಣಯ್ಯಂಗಾರ್, ಸಿ ರಾಮಚಂದ್ರಯ್ಯ, ಕೆ ನಾರಾಪ್ಪ, ಪಿ ರುದ್ರಯ್ಯ, ಕೆ ವೇದಾಂತಾಚಾರ್, ವೈ ನಾರಾಯಣರಾವ್, ಎಸ್ ನಾರಾಯಣರಾವ್, ಕೆ ಶ್ರೀನಿವಾಸರಾವ್, ಕೆ ದಾಸಪ್ಪ (ಸಂಗೀತ ಸಹ), ಬಿ ಲಕ್ಷ್ಮೀಕಾಂತಾಚಾರ್, ಟಿ ಎಸ್ ಅಬ್ದುಲ್ ಲತೀಫ್, ಸಯ್ಯದ್ ಮಸ್ತಾನ್ ಅಲಿ, ಸಯ್ಯದ್ ಅಲೀಷ ಬಾದ್‌ಷಾ

ಮೈಸೂರು ಸೆಂಟರ್ ಸುಬ್ಬರಾಮಯ್ಯ, ಎಂ ಎಸ್ ರಾಮಣ್ಣ, ಎಲ್ ಸುಬ್ರಹ್ಮಣ್ಯ, ಎಸ್ ನ ರಾಯಣರಾವ್ (ಸಂಗೀತ ಸಹ), ಲಕ್ಷ್ಮೀನರಸಪ್ಪ, ವೈ ತಿಮ್ಮಪ್ಪಯ್ಯ (ಸಂಗೀತ ಸಹ), ಕೆ ರಂಗಸ್ವಾಮಿ, ಬಿ ರಾಮಯ್ಯ, ವೆಂಕಟಸುಬ್ಬಾಭಟ್ಟ, ಎಚ್ ಆರ್ ನರಸಿಂಹಯ್ಯ, ಎಚ್ ಲಕ್ಷ್ಮೀನರಸಯ್ಯ, ... ರಾಮಯ್ಯ, ಎನ್ ವೆಂಕಟರಾಮಯ್ಯಂಗಾರ್, ಎಚ್ ಲಕ್ಷ್ಮೀವೆಂಕಟೇಶಯ್ಯ, ಎಂ ಸುಬ್ಬರಾವ್, ಎಸ್ ಕೆ ಅನಂತಯ್ಯಂಗಾರ್, ಸಾಬಯ್ಯ, ... ಸುಬ್ಬರಾವ್ ವಿ ನರಸಿಂಹಯ್ಯ, ಗುಂಡಪ್ಪ, ಪಿ ಕಾಳೇಗೌಡ, ... ನಂಜುಂಡಯ್ಯ (ಸಂಗೀತ ಸಹ), ಎ ಸಂಜೀವಯ್ಯ ಕೆ ಕಮಲಮ್ಮ, ಕೊಡಮ್ಮ, ಬಿ ಸಾಕಮ್ಮ, ಸಿ ಗಮ್ಮ, ...ರಮ್ಮ, ಎಚ್ ವೆಂಕಟಲಕ್ಷ್ಮಮ್ಮ, ಯಗ್ಗಮ್ಮ, ಆರ್ ಪುಟ್ಟತಾಯಮ್ಮ, ಎಚ್ ಜಿ ಸಾವಿತ್ರಮ್ಮ, ಡಿ ಪುಟ್ಟತಾಯಮ್ಮ

ಶಿವಮೊಗ್ಗ ಸೆಂಟರ್ —ಬಿ. ಕೇಶವಯ್ಯ, ವಿ ತಿಮ್ಮಪ್ಪಯ್ಯ, ಎಂ. ನರಸಿಂಗರಾವ್, ಟಿ ನರಸಣ್ಣ, ಎಸ್ ರಾಮರಾವ್ (ಸಂಗೀತ ಸಹ), ಡಿ ರಾಮಯ್ಯ ಬಿ ರಾಮರಾವ್, ಎಚ್ ರಾಮಮೋಯಿನ್ (ಸಂಗೀತ ಸಹ), ಎಂ ಶ್ರೀನಿವಾಸರಾವ್, ಟಿ ವಿ ಸಿಂಬಯ್ಯ, ಎನ್ ಹುಚ್ಚರಾವ್, ಅಬ್ದುಲ್ ಕರೀಂ, ಗುಲಾಂ ಮೊಹಿದೀನ್, ಮಹಮದ್ ಚಮಾಲ್, ಮಹಮದ್ ಹೈದರ್

ಮದರಾಸ್ ಶಾಸನಸಭೆಯ ವ್ಯವಹಾರಗಳು

ಹಿತಕರವಾದ ಹೊಸ ಏರ್ಪಾಡುಗಳು

ಮದರಾಸ್ ಅಧಿಸತ್ವದ ಮಂತ್ರಾಲೋಚನಾ ಸಭೆಯಲ್ಲಿ ಕಳೆದ ವಾರ ದೇಶೋನ್ನತಿಗೆ ಹಿತಕರವಾದ ಅನೇಕ ವಿಚಾರಗಳನ್ನು ಕುರಿತು ಮೆಂಬರುಗಳು ಗವರ್ನ್‌ಮೆಂಟಿನವರಿಗೆ ಅರಿಕೆಮಾಡಿ ಚರ್ಚೆಗಳನ್ನು ನಡಿಸಿದರು ಬಂದೀಖಾನೆಗಳಲ್ಲಿ ಖೈದಿಗಳಿಗೆ ಕೆಲವು ರಿಯಾಯಿತಿಗಳನ್ನು ತೋರಿಸಿ ಕಾಪಾಡಬೇಕೆಂದು ಮಿ|| ಕೇಶವಪಿಳ್ಳೆಯವರೂ ಇನ್ನೂ ಕೆಲವು ಪ್ರಜಾ ಪಕ್ಷದ ಮೆಂಬರುಗಳೂ ಗವರ್ನ್‌ಮೆಂಟಿಗೆ ತಿಳಿಸಿದರು ಆಗ ಸರ್ ಹಾರಲ್ಡ್ ಸ್ಟುವರ್ಟ್‌ಯವರು ಈಚೆಗೆ ಗವರ್ನ್‌ಮೆಂಟಿನಿಂದ ನಡಿಸಲ್ಪಟ್ಟಿರುವ ಬದಲಾವಣೆಗಳನ್ನು ಮೆಂಬರುಗಳಿಗೆ ತಿಳಿಸಿದರು ಆ ಪೈಕಿ ಮುಖ್ಯವಾದ ಭಾಗಗಳನ್ನು ಇಲ್ಲಿ ಪ್ರಕಟಿಸುತ್ತೇವೆ

ಬಂದೀವಾನರು ಜೈಲ್‌ಖಾನೆ ಯೊಳಗೆ ಅವಿಧೇಯತೆಯನ್ನು ತೋರಿಸಿದಲ್ಲಿ ಅಂಥವರಿಗೆ ಛಡಿಶಿಕ್ಷೆಯನ್ನು ವಿಧಿಸುವುದು ಕಡಮೆಯಾಗಿದೆ ಈ ತರದ ಶಿಕ್ಷೆಯನ್ನು ದಿನಕ್ರಮೇಣ ಸರ್ಕಾರದವರು ಕಡಮೆಮಾಡುವ ಅಭಿಲಾಷೆಯುಳ್ಳವರಾಗಿದ್ದಾರೆ —ಬಂದೀವಾನರಲ್ಲಿ 10 ವಯಸ್ಸಿನೊಳಗಿರುವಂಥವರಿಗೆಲ್ಲಾ ವಿದ್ಯೆ ಕಲಿಸಬೇಕೆಂದೂ, ವ್ಯವಸಾಯದಲ್ಲಾಗಲಿ ಯಾವುದಾದರೊಂದು ಕಸಬಿನಲ್ಲಾಗಲಿ ತರಪೇತು ಮಾಡಬೇಕೆಂದೂ ಹುಕುಂಮಾಡಲಾಗಿದೆ ಅವರಲ್ಲಿ ಸದ್ಗುಣ ಸಚ್ಚರಿತ್ರಗಳನ್ನು ಹುಟ್ಟಿಸುವುದಕ್ಕೆ ಆಕ್ಷರಸ್ಥರಿಗೆ ಒಳ್ಳೇ ಪುಸ್ತಕಗಳನ್ನು ಕೊಡಿಸಬೇಕೆಂದು ಸರ್ಕಾರದವರು ಹುಕುಂಕೊಟ್ಟಿರುವುದಲ್ಲದೆ ಸದ್ಭಕ್ತಿ ಸಚ್ಚರಿತ್ರಗಳನ್ನು ಕುರಿತು ಬಂದೀವಾನರಿಗೆ ಉಪನ್ಯಾಸ ಮಾಡಲಪೇಕ್ಷಿಸುವವರಿಗೆ ಅವಕಾಶವನ್ನೂ ಸಹಾಯವನ್ನೂ ಕಲ್ಪಿಸಿಕೊಡುವುದರಲ್ಲಿ ಸರ್ಕಾರದವರು ಸಿದ್ಧರಾಗಿದ್ದಾರೆ —ಜೈಲನ್ನು ಬಿಟ್ಟು ಹೋಗುವಾಗ್ಗೆ ಖೈದಿಗಳಿಗೆ ಅವರ ಊರು ಕೇರಿಗಳನ್ನು ತಲಪಲು ಸಹಾಯವಾಗುವಂತೆ ಇದುವರೆಗೆ ಕೊಡುತ್ತಿದ್ದ ದ್ರವ್ಯವನ್ನೂ ಸರ್ಕಾರದವರು ತಕ್ಕಮಟ್ಟಿಗೆ ಹೆಚ್ಚಿಸುತ್ತಾರೆ ಇದರಿಂದ ಜೈಲ್ ಸೂಪರಿಂಟೆಂಡೆಂಟರುಗಳು ಬಂದೀವಾನರಿಗೆ ಉಡುಪುಗಳಿಗೂ ಪ್ರಯಾಣದ ಖರ್ಚಿಗೂ ಹೆಚ್ಚು ಹಣವನ್ನು ಕೊಡಬಹುದಾಗಿದೆ ಬಂದೀವಾನರು ತಮಗೆ ವಿಧಾಯಕವಾದ ಕೆಲಸಕ್ಕಿಂತಲೂ ಹೆಚ್ಚು ಕೆಲಸವನ್ನು ಮಾಡಿದ ಪಕ್ಷದಲ್ಲಿ ಅವರಿಗೆ ಅದಕ್ಕೆ ತಕ್ಕಂತೆ ಹೆಚ್ಚು ದ್ರವ್ಯವನ್ನು ಪ್ರತಿಫಲವಾಗಿ ಕೊಡುವಂತೆ ಏರ್ಪಾಡುಮಾಡಲಾಗಿದೆ

ಬಂದೀವಾನರ ಸಹಾಯಾರ್ಥವಾಗಿ ಜನರು ಸರಿಯಾದ ಏರ್ಪಾಡುಮಾಡಿಕೊಂಡು ಕೇಳಿದಪಕ್ಷದಲ್ಲಿ ಶಿಕ್ಷಾ ಅವಧಿಯು ಮುಗಿಯುವಿದ್ದರೂ ಸರ್ಕಾರದವರು ಬಂದೀವಾನರನ್ನು ಅಂಥಾ ಸಂಘದವರ ವಶಕ್ಕೆ ಒಪ್ಪಿಸಲು ಒಪ್ಪುತ್ತಾರೆ ಅಂಥಾ ಸಂಘದವರು ಅವರನ್ನು ತಮ್ಮ ಪೋಷಣೆಯಲ್ಲಿಟ್ಟುಕೊಂಡು, ಅವರಿಗೆ ಕಸಬನ್ನೂ ಸದ್ಗುಣ ಸಚ್ಚರಿತ್ರಗಳನ್ನೂ ಕಲಿಸಿ ಸತ್ಪ್ರಜೆಗಳಾಗಿ ಬಾಳುವಂತೆ ಅವರವರ ಸ್ಥಳಗಳಿಗೆ ವಾಪಸು ಕಳುಹಿಸಬಹುದಾಗಿದೆ ಜನರು ಬಂದೀಖಾನೆಗಳಿಗೆ ಬಾರದಂತೆ ನೋಡಿಕೊಳ್ಳುವುದು ಸರ್ಕಾರದವರ ಕರ್ತವ್ಯವಾದಕಾರಣ ದುಷ್ಕಾರ್ಯ ಪ್ರವರ್ತಕರೆಂದು ಕಂಡುಬರುವ ಗುಂಪಿನ ಜನರನ್ನು ಪ್ರತ್ಯೇಕವಾದ ಜಮೀನುಗಳಲ್ಲಿ ಇಟ್ಟು ಅವರು ವ್ಯವಸಾಯವೇ ಮೊದಲಾದ ಕಸುಬುಗಳಲ್ಲಿ ಜೀವನವನ್ನು ನಡೆಸಿಕೊಂಡು ಬರುವಂತೆ ಅವಕಾಶವನ್ನು ಕಲ್ಪಿಸಬೇಕೆಂದು ಗವರ್ನ್‌ಮೆಂಟಿನವರು ಬೇರೆಬೇರೆತರದ ಏರ್ಪಾಡುಗಳನ್ನು ಯೋಚಿಸುತ್ತಿದ್ದಾರೆ ಮತ್ತು ಆ ಉದ್ದೇಶದಿಂದ ಆಗಲೇ ಕೆಲವು ಗುಂಪುಗಳ ಜನರನ್ನು ಅಲ್ಲಲ್ಲಿ ಇಟ್ಟು ಪರಿಪಾಲಿಸಮಾಡುತ್ತಿರುವರು ಇಷ್ಟೇ ಅಲ್ಲ ಮೊದಲನೇ ಸಲ ಅಪರಾಧಮಾಡಿ ಬಂದವರನ್ನು ಮ್ಯಾಜಿಸ್ಟ್ರೇಟರುಗಳು ಸರಿಯಾದ ಜಾಮೀನ್ ತೆಗೆದುಕೊಂಡು ಬಿಟ್ಟುಬಿಡುವುದಕ್ಕೆ ಕಾನೂನಲ್ಲಿ ಅವಕಾಶವಿದ್ದರೂ ಇಂಥಾ ಅಧಿಕಾರವನ್ನು ಮ್ಯಾಜಿಸ್ಟ್ರೇಟರು ಈಗ ಚಲಾಯಿಸುತ್ತಾ ಇಲ್ಲ ಈ ಅಧಿಕಾರವು ಬಹು ಹಿತಕರವಾಗಿರೋಣವದ್ದರಿಂದ ಇನ್ನುಮುಂದೆ ಅಂಥವರನ್ನು ಆ ರೀತಿ ಬಿಟ್ಟುಬಿಡುತ್ತಾ ಬರುವಂತೆ ಮ್ಯಾಜಿಸ್ಟ್ರೇಟರಿಗೆ ತಿಳಿಸಲಾದೀತು ಮತ್ತು ಈಗ ಸಣ್ಣವಯಸ್ಸಿನ ಗಂಡು ಹೆಣ್ಣುಮಕ್ಕಳನ್ನು ಜೈಲಿಗೆ ಕಳುಹಿಸುವುದು ರೂಢಿಗೆ ಬಂದಿದೆ ಇದು ಯೋಗ್ಯವಲ್ಲವೆಂಬೂ, ಈ ಭಾಗದಲ್ಲಿ ಮ್ಯಾಜಿಸ್ಟ್ರೇಟರುಗಳು ಗಮನ ಕೊಟ್ಟು ಮಕ್ಕಳಿಗೆ ಬಂದೀಖಾನೆ ಶಿಕ್ಷೆ ವಿಧಿಸುವುದನ್ನು ಕೂಡಿದಮಟ್ಟಿಗೂ ಕಡಮೆಮಾಡುತ್ತಾ ಬರಬೇಕೆಂದೂ ಗವರ್ನ್‌ಮೆಂಟಿನವರು ಹುಕುಂ ಕೊಟ್ಟಿದ್ದಾರೆ

ಜೈಲುಗಳಲ್ಲಿ ಬಂದೀವಾನರಿಗೆ ಬಟ್ಟೆಗಳನ್ನು ಕೊಡುವ ಭಾಗದಲ್ಲಿ ಮೆಂಬರುಗಳು ಆಕ್ಷೇಪಣೆ ಮಾಡಿದ್ದಕ್ಕೆ ಗವರ್ನ್‌ಮೆಂಟಿನವರು ಕೆಲವು ಬದಲಾವಣೆ ಮಾಡಿ ಜಾರಿಗೆ ತಂದಿದ್ದಾರೆ ಹೆಣ್ಣು ಖೈದಿಗಳಿಗೆ ಇನ್ನೂ ದೊಡ್ಡ ಅಂದರೆ 14 16 ಮೊಳಗಳ ಬಟ್ಟೆಗಳನ್ನು ಕೊಡುವಂತೆಯೂ, ಬೇರೆ ಬೇರೆ ಜಾತಿಯ ಖೈದಿಗಳಿಗೆ ಪ್ರತ್ಯೇಕ ಪ್ರತ್ಯೇಕವಾದ ಬಟ್ಟೆಗಳನ್ನು ಕೊಟ್ಟು, ... ಜಾತಿಯ ... ಉಪಯೋಗಿಸಿದ ಉಡುಪುಗಳನ್ನು ಇನ್ನೊಂದು ಜಾತಿಯವರಿಗೆ ಕೊಡಿಸದಂತೆಯೂ, ಸರ್ಕಾರದವರ ಸಮ್ಮತಿಯನ್ನು ಪಡೆದು ನೇಮಕವಾದ ... ಬಂದೀಖಾನೆಗಳಿಗೆ ಹೋಗುವ ಸಂದರ್ಭಗಳಲ್ಲಿ ಬಂದೀವಾನರು ಅವರ ಕೂಡ ತಮ್ಮ ಕಷ್ಟ ಕೊರತೆ ಮುಂತಾದವನ್ನು ಹೇಳಿಕೊಳ್ಳಲು ಹೆಚ್ಚು ಅವಕಾಶ ಕೊಡಬೇಕೆಂತಲೂ ಗವರ್ನ್‌ಮೆಂಟಿನವರು ಅಪ್ಪಣೆ ಕೊಟ್ಟಿದ್ದಾರೆ

ಅನ್ನವನ್ನೇ ತಿನ್ನುತ್ತಿದ್ದು ಶಿಕ್ಷೆ ಹೊಂದಿ ಬಂದೀಖಾನೆಗೆ ದಾಖಲಾಗುವಂಥಾ ಜನಗಳಿಗೂ ಕೂಡ ಇದುವರೆಗೆ ರಾಗಿ ಹಿಟ್ಟನ್ನು ಹಾಕುತ್ತಿದ್ದರು ಇನ್ನು ಮುಂದೆ ಈ ಪದ್ಧತಿಯನ್ನು ತಪ್ಪಿಸಬೇಕೆಂತಲೂ, ಬಂದೀಖಾನೆಗೆ ಬರುವುದಕ್ಕೆ ಮುಂಚೆ ಯಾವ ಯಾವ ಜನರು ಯಾವ ಯಾವ ... ಧಾನ್ಯವನ್ನು ಭೋಜನ ಮಾಡುತ್ತಿದ್ದರೋ ಅಂಥವರಿಗೆ ಆಯಾ ಧಾನ್ಯವನ್ನೇ ಅಂದರೆ ಅನ್ನ ತಿನ್ನುತ್ತಿದ್ದವರಿಗೆ ಅನ್ನ, ಹಿಟ್ಟು ತಿನ್ನುತ್ತಿದ್ದವರಿಗೆ ಹಿಟ್ಟು, ಈ ಪ್ರಕಾರ ... ಕೊಡಬೇಕೆಂತಲೂ ಹುಕುಂ ... ದ್ದಾರೆ

ಈ ಮೊದಲಾದ ಏರ್ಪಾಡುಗಳನ್ನು ... ಮಾಡಿರುವುದಾಗಿ ಸರ್ಕಾರದವರು ... ಬಹುಮಂದಿ ... ಬಹು ಸಂತೋಷಪಟ್ಟು ಕೃತಜ್ಞತಾಪೂರ್ವಕ ... ವಂದಿಸಿದರು

೧೯೧೩ ನೇ ವರ್ಷದ ಲೋವರ್ ಸೆಕೆಂಡರಿ ಕನ್ನಡ

ಟೆಕ್ಸ್ಟ್ ನೋಟ್ಸು

ಸ್ವಲ್ಪ ದಿನಗಳಲ್ಲಿಯೇ ಸಿದ್ಧವಾಗುವುದು—ಕ್ರಯ ೬ ಆಣೆ

ಡಿಸ್ಕೌಂಟು 10 ಕ್ಕೆ 1, 50 ಕ್ಕೆ 7 100 ಕ್ಕೆ 20.

ನಮ್ಮ ನೋಟ್ಸಿಗೆ ಈಗಲೇ ಬರೆಯಿರಿ. ಆ ಮೇಲೆ ಮೋಸಹೋಗಬೇಡಿ ನಮ್ಮ ನೋಟ್ಸು ಬೇಕಾಗಿದ್ದರೆ ನಮಗೇ ಬರೆಯುವುದು ಉತ್ತಮ, ಅಥವಾ ಇತರರಿಗೆ ಬರೆಯಬೇಕಾದರೆ ನಮ್ಮ ಹೆಸರನ್ನು ಕಾಣಿಸಿ ಬರೆಯಿರಿ [67-1]

ಎಚ್ ಆರ್. ವೆಂಕಟಸುಬ್ಬಾಚಾರ್ಯರ್,
ಸುಬೋಧ ಗ್ರಂಥಾಲಯ ಮೈಸೂರು

ಜವಾಹಿರಿಗಳ ಹರಾಜು.

ಜವಾಹಿರಿ, ಜವಗಿರ್‌ದಾರುಗಳಿಗೆ ಸುಂದರವಾದ ರತ್ನದ ಒಡವೆಗಳನ್ನು ಸಂಪಾದಿಸುವದಕ್ಕೆ ಒಳ್ಳೇ ಸಮಯ.

ಏಪ್ರೆಲ್ ತಾ 15 ನೆ ಮಂಗಳವಾರ 8 ಘಂಟೆಗೆ ಶುರುವು.

ಬಹು ಸುಂದರವಾಗಿಯೂ ನಮೂನೆಯಾಗಿಯೂ ಕಟ್ಟಲ್ಪಟ್ಟ ಬಾರಿ ಪಚ್ಚೆ, ವಜ್ರ ಮುತ್ತು ಕೆಂಪುಗಳ ಕಂಠಾಗಳು, ತಾಟುಗಳು, ವಾಗಡ, ಉಂಗುರಗಳು ಮುಂತಾದ ಒಡವೆಗಳು ಮೇಲ್ಕಂಡ ತಾರೀಖಿನ ದಿವಸ ಬೆಂಗಳೂರು ಬಸವನಗುಡಿ ಕೋಟೆ ರಸ್ತೆ 20 ನೇ ನಂಬರು (ಕುಮಾರ ಆಸ್ಪತ್ರೆ ಬಳಿ) ಮ॥ ಎಚ್ ಕೃಷ್ಣಸ್ವಾಮಿರಾಯರ ಮನೆಯಲ್ಲಿ ಮಾಲೀಕರವರ ತರಫ್ ಮಾರಲ್ಪಡುವದು ಹರಾಜಿನ ಕಂಡಿಷನ್ ಮತ್ತು ನಗಗಳ ವಿವರ ಮೇಲ್ಕಂಡವರಿಂದ ಪಡೆಯಬಹುದು

[69 1] ಬಿ. ವೆಂಕಟರಮಣಶೆಟ್ಟಿ,
ಕಮಿಷನ್ ಏಜಂಟ್ ಬೆಂಗಳೂರು

Cool and Health-Creating Drinks

ಅತ್ಯುತ್ತಮವಾದ ಷರಬತ್ತುಗಳು

(ಮೆಡಲ್, ಮಾಸ್ಟರ್ಸ್ ಮತ್ತು ಸರ್ಟಿಫಿಕೇಟುಗಳನ್ನು ಹೊಂದಿರುತ್ತವೆ)

ಸಾಗದೇಬೇರಿನ ಷರಬತ್ತು

(Sarasa parela or the best Blood-purifier)

ಅತ್ಯುತ್ತಮವಾದ ದೇಶೀಯ ಸೊಗದೇ ಬೇರುಗಳಿಂದಲೇ ಅತಿ ಉತ್ತಮ ರೀತಿಯಲ್ಲಿ ತಯಾರಿಸಲ್ಪಟ್ಟಿರುತ್ತದೆ ರಕ್ತವನ್ನು ಶುದ್ಧಿಮಾಡಿ ದೇಹವನ್ನು ಉತ್ತಮ ರೀತಿಯಲ್ಲಿಡುವುದರಲ್ಲಿ ಸರ್ವಶ್ರೇಷ್ಠವಾದುದು ರಕ್ತ ಕೆಡುವುದರಿಂದುಂಟಾಗುವ ಕಜ್ಜಿ, ತುರಿ ಮೈತಿನಸು, ಹುರುಪು, ಹುಳುಕಡ್ಡಿ, ಇವೇ ಮೊದಲಾದ ಚರ್ಮರೋಗಗಳನ್ನೂ, ಉಷ್ಣಾಧಿಕ್ಯದಿಂದುಂಟಾಗುವ ಮೂತ್ರದಲ್ಲಿ ಉರಿ, ಅರೆತಲೆನೋವು, ನಿದ್ರೆ ಬಾರದಿರುವಿಕೆ, ವಾಯುವಿನಿಂದುಂಟಾಗುವ ಅರನಿದ್ರೆ, ಬಾಯಿ ಹುಣ್ಣಾಗುವಿಕೆ, ಕೈಕಾಲು ಉರಿ, ಗರ್ಭಪಾತ, ರಕ್ತ ಸೋರಾಗುವಿಕೆ, ಇವೇ ಮೊದಲಾದ ಚರ್ಮ ರೋಗಗಳನ್ನೂ ದೇಹ ಪುಷ್ಟಿ ಇಲ್ಲದಿರುವಿಕೆಯನ್ನೂ ಬಹಳ ಖಾತರಿಯಿಂದ ಗುಣಪಡಿಸುವುದು ಕ್ರಯ 8 ಔನ್ಸ್ ಬಾಟ್ಲು 1 ಕ್ಕೆ 0-8-0 [70-2]

ಶ್ರೀ ಗಂಧದ ಷರಬತ್ತು

(Sandal Syrup)

ಶರೀರದಲ್ಲಿ ಉಂಟಾಗುವ ಉರಿ, ತಾಪ, ಬಾಯಾರಿಕೆ, ಉಷ್ಣಾಧಿಕ್ಯ, ಧಾತುನಷ್ಟದಿಂದ ಉಂಟಾಗುವ ಬಲಹೀನತೆ, ಇವೇ ಮುಂತಾದ ಸಮಸ್ತ ರೋಗಗಳೂ ಇದರ ಸೇವನೆಯಿಂದ ಖಾತ್ರಿಯಾಗಿ ಗುಣವಾಗುವವು

ಕ್ರಯ 8 ಔನ್ಸ್ ಬಾಟ್ಲು 1 ಕ್ಕೆ 0 8-0

ಬಾದಾಮ್ ಷರಬತ್ತು

(Almond Syrup)

ಅತ್ಯುತ್ತಮವಾದ ಬಾದಾಮಿಯ ಹಾಲಿನಿಂದಲೇ ಉತ್ತಮ ರೀತಿಯಲ್ಲಿ ತಯಾರಿಸಿದೆ ಹೊಟ್ಟೆಯೊಳಗೆ ಹುಣ್ಣಾಗಿರುವುದು, ಮೂಗು ಕಟ್ಟಿಕೊಳ್ಳುವುದು, ಆಸ್ತಮಾ, ನಿದ್ರಾಭಂಗ, ಅತಿದಾಹ ಮೊದಲಾದವುಗಳು ಇದರ ಸೇವನೆಯಿಂದ ಸಂದೇಹವಿಲ್ಲದೆ ಗುಣವಾಗುತ್ತವೆ ಕ್ರಯ 8 ಔನ್ಸ್ ಬಾಟ್ಲು 1 ಕ್ಕೆ 0 8 0.

ಅಮೃತ ಷರಬತ್ತು.

(Nectar Juice)

ಪರಿಶುದ್ಧವಾದ ದೇಶೀಯ ಅಮೃತವಳ್ಳಿಯಿಂದಲೇ ತಯಾರಿಸಿದೆ ಎಲ್ಲಾ ವಿಧವಾದ ಹಳೇ ಜ್ವರಗಳೂ, ಅರಕ್ತತೆ, ಅಗ್ನಿಮಾಂದ್ಯ, ಆಗಾಗ್ಗೆ ತಲೆ ನೋಯುತ್ತಿರುವುದು, ಪಿತ್ತಸಂಕಟ, ರಕ್ತ ಕೆಡುವಿಕೆ, ಧಾತುನಷ್ಟ, ಇಂದ್ರಿಯಗಳ ಬಲಹೀನತೆ, ಇವೇ ಮೊದಲಾದುವುಗಳು ಇದರ ಸೇವನೆಯಿಂದ ಖಾತ್ರಿಯಾಗಿ ಗುಣವಾಗುತ್ತವೆ ನರಗಳ ಬಲಹೀನತೆಯನ್ನು ಹೋಗಲಾಡಿಸಿ, ಜ್ಞಾಪಕ ಶಕ್ತಿಯನ್ನು ಹೆಚ್ಚಿಸಿ, ಇಂದ್ರಿಯಗಳ ಬಲ ಹೆಚ್ಚಿಸಿ ಆರೋಗ್ಯ ಉಂಟುಮಾಡುವದರಲ್ಲಿ ಸರ್ವಶ್ರೇಷ್ಠವಾದುದು ಕ್ರಯ ಸೀಸೆ 1 ಕ್ಕೆ 0 8 0

ಈ ಮೇಲ್ಕಂಡ ಷರಬತ್ತುಗಳು ಕುಡಿಯುವದಕ್ಕೆ ಹಿತಕರಗಳಾಗಿಯೂ, ಸುವಾಸನೆಯುಳ್ಳವಾಗಿಯೂ, ರೋಗಗಳಿಗೆ ಗುಣಕಾರಿಗಳಾಗಿಯೂ ಇರುತ್ತವೆ ಸೇವನಾ ಕ್ರಮ ಬಾಟ್ಲುಗಳ ಮೇಲೆಯೇ ಇರುತ್ತವೆ

ಓಮಮ್ ವಾಟರ್.

(Omum Water)

ಅಜೀರ್ಣದ ಹೊಟ್ಟೆ ನೋವು, ವಾಂತಿ, ಹೊಟ್ಟೆ ತೊಳಸುವದು, ಕಾಲರ, ತೇಗು, ಶೀತಬೇದಿ, ಅಜೀರ್ಣದಿಂದ ಮೈ ಕಾಯುವಿಕೆ, ಶೀತವಾಯು, ಊರ್ಧ್ವವಾಯು, ಗಂಟಲಿನಲ್ಲಿ ಶ್ಲೇಷ್ಮ ಕಟ್ಟಿರುವದು, ಮಲಹೊಟ್ಟೆಯಲ್ಲಿಯೇ ನಿಂತು ಯಾತನೆ ಪಡಿಸುವುದು, ಇವೇ ಮೊದಲಾದುವುಗಳು ಇದರ ಸೇವನೆಯಿಂದ ಖಾತರಿಯಾಗಿ ಗುಣವಾಗುತ್ತವೆ ಕ್ರಯ 8 ಔನ್ಸ್ ಬಾಟ್ಲು 1 ಕ್ಕೆ 0-4-0

ನಮ್ಮ ವಿಳಾಸ —ಯಸ್ ಡಿ ಷಾ ಅಂಡ್ ಕೋ,
ದೊಡ್ಡಪೇಟೆ ಚೌಕ, ಮೈಸೂರು

ವೃತ್ತಾಂತ ಪತ್ರಿಕೆ.

—o—

ಸನ್ ೧೯೧೩ ನೇ ಇಸವಿ ಏಪ್ರೆಲ್ ತಾ ೧೦ ನೇ ಗುರುವಾರ

ಟರ್ಕಿ ಬಾಲ್ಕನ್ ಯುದ್ಧವು.

ಈ ವಾರ ಬಂದಿರುವ ವರ್ತಮಾನಗಳಲ್ಲಿ ಬಲ್ಗೇರಿಯದವರು ಆಡ್ರಿಯನೋಪಲ್ ಪಟ್ಟಣವನ್ನು ಈಗ ಟರ್ಕಿಯವರಿಂದ ಸ್ವಾಧೀನಪಡಿಸಿಕೊಂಡರೋ ಅದರ ವಿವರಗಳೇ ವಿಶೇಷವಾಗಿರುತ್ತವೆ ಪಟ್ಟಣವನ್ನು ಕಾಪಾಡಿಕೊಳ್ಳುವುದರಲ್ಲೂ, ಶತ್ರುಗಳು ಬಿಕಟಕಾಲದಲ್ಲಿ ನುಗ್ಗಿ ಬಂದಾಗ ಅವರನ್ನು ಹಿಮ್ಮೆಟ್ಟಿಸುವುದರಲ್ಲೂ ಟರ್ಕಿ ಸೈನಿಕರು ತೋರಿಸಿದ ಪರಾಕ್ರಮವು ಅಪ್ರತಿಮವಾಗಿತ್ತು ಆ ಸಮಯದಲ್ಲಿ ಎರಡು ಕಡೆಗಳಲ್ಲೂ ಯುದ್ಧ ಭಟರು ಹತರಾದದ್ದೂ, ರಕ್ತ ಪ್ರವಾಹಗಳು ಹರಿದದ್ದೂ ಅಪೂರ್ವವೂ ಮಹಾ ಘೋರವೂ ಆಗಿತ್ತೆಂದು ಹೇಳಬಹುದು ಕಡೆಗೆ ಪಟ್ಟಣವನ್ನು ಟರ್ಕಿಯವರು ಬಲ್ಗೇರಿಯದವರಿಗೆ ಶರಣಾಗತರಾಗಿ ಒಪ್ಪಿಸಿಬಿಟ್ಟರು. ಈ ಘೋರ ಯುದ್ಧದಲ್ಲಿ ಟರ್ಕಿ ಸೈನಿಕರಲ್ಲಿ 10,000 ಜನರೂ, ಬಲ್ಗೇರಿಯ ಮತ್ತು ಸರ್ವಿಯ ಸೈನಿಕರಲ್ಲಿ 10,000-12,000 ಜನರೂ ನಷ್ಟವಾಗಿರುತ್ತಾರೆ ಬಲ್ಗೇರಿಯದವರು ಟರ್ಕಿ ಸೈನಿಕರಲ್ಲಿ 2,000 ಮುಖ್ಯೋದ್ಯೋಗಸ್ಥರನ್ನೂ, 60,000 ಸಿಪಾಯಿಗಳನ್ನೂ ಅಲ್ಲಿ ಕೈಸೆರೆ ಹಿಡಿದುಕೊಂಡಿದ್ದಾರೆ ಈಗ ಪಟ್ಟಣವು ಬಲ್ಗೇರಿಯದವರ ಸ್ವಾಧೀನದಲ್ಲಿರುತ್ತದೆ

ಛಟಾಲ್ಜಾ ಸಾಲು ಕೋಟೆಗಳ ಬಳಿ ಟರ್ಕಿ ಸೈನಿಕರಿಗೂ ಬಲ್ಗೇರಿಯದವರಿಗೂ ಭಯಂಕರವಾದ ಯುದ್ಧವಾಯಿತೆಂದು ಕಳೆದ ವಾರ ತಿಳಿಸಿದ್ದೆವಷ್ಟೆ ಬಿಯುಕ್ ಚೆಕ್‌ಮೆಡ್ಜೆ ಎಂಬ ರಣ್ಯದಲ್ಲಿ ಟರ್ಕಿಯ 6,000 ಸೈನ್ಯಗಳು ಬಿಕಟಕಾಲದಲ್ಲಿ ಬಲ್ಗೇರಿಯದವರ ಮೇಲೆ ನುಗ್ಗಿ 1,000 ಜನರನ್ನು ಹತಮಾಡಿ ಓಡಿಸಿದವು ಈ ಬಳಿಯಲ್ಲಿ ಬಲ್ಗೇರಿಯದವರು ಮತ್ತೆ ಯುದ್ಧಕ್ಕೆ ಬಂದು ನಿಲ್ಲದಂತೆ ತಡೆಯಲ್ಪಟ್ಟಿದ್ದಾರೆ

ಮಾಂಟಿನೀಗ್ರೋದವರು ಸ್ಕುಟೇರಿ ಪಟ್ಟಣವನ್ನು ಮುತ್ತಿಗೆ ಹಾಕಿಕೊಂಡು ಬಹು ಕಠಿಣವಾಗಿ ಯುದ್ಧಮಾಡುತ್ತಿರುವರು ಕಳೆದ ವಾರ ಪಟ್ಟಣದೊಳಗಿಂದ ಟರ್ಕಿಯ ಕೆಲವು ಸೈನ್ಯಗಳು ಬಂದು ಮುತ್ತಿಗೆಯನ್ನು ಬಿಡಿಸಿಕೊಳ್ಳಬೇಕೆಂದು ಯುದ್ಧಮಾಡಿದರು ಆದರೆ ಅವರ ಪ್ರಯತ್ನ ಸಫಲವಾಗದೆ ಸೋತುಹೋದರು ಈ ಪಟ್ಟಣವು ಇಷ್ಟರಲ್ಲೇ ಮಾಂಟಿನೀಗ್ರೋದವರ ವಶವಾಗುತ್ತದೆಂದು ಕಾಣುತ್ತದೆ

ಸಂಧಾನದ ಏರ್ಪಾಡು ಈಚೆಗೆ ಸಾರ್ಥಕವಾಗುವಂತೆ ನಡೆಯುತ್ತಲಿದೆಯೆಂದು ತಿಳಿಸಲು ಸಂತೋಷಪಡುತ್ತೇವೆ ಪರರಾಷ್ಟ್ರಗಳವರು ಮಧ್ಯಸ್ಥಿಕೆಮಾಡುವುದಾಗಿ ಬರೆದಿದ್ದ ಕಾಗದಗಳಿಗೆ ಟರ್ಕಿಯವರೂ ಇವರ ಶತ್ರುಸಮುದಾಯದವರೂ ಒಪ್ಪಿಕೊಂಡಂತೆ ಜವಾಬುಗಳನ್ನು ಕಳುಹಿಸಿದ್ದಾರೆ ಪರರಾಷ್ಟ್ರಗಳವರ ಸಾಹಸವು ಬೇಗನೆ ಕೈಗೂಡಿ, ಈ ಭಯಂಕರವಾದ ಮತ್ತೂ ದುಃಖಮಯವಾದ ಯುದ್ಧವು ಮುಕ್ತಾಯವಾಗಲೆಂದು ಹಾರೈಸುವೆವು.

ಮನುಷ್ಯನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು

ಇದು ಒಳ್ಳೇ ಸಂತೋಷವನ್ನು ಹುಟ್ಟಿಸುವ ಮಾತು ಯಾರಿಗೆ ? ಪ್ರಯೋಜನವನ್ನೂ ಲಾಭವನ್ನೂ ತರುವ ಬೀಜವನ್ನು ಬಿತ್ತಿದವರಿಗೆ ಇದು ದುಃಖವನ್ನೂ ಭೀತಿಯನ್ನೂ ಹುಟ್ಟಿಸುವ ಮಾತು ಯಾರಿಗೆ ? ಅಪ್ರಯೋಜಕವಾದ ಮತ್ತು ಹಿಂಸೆಯನ್ನುಂಟುಮಾಡುವ ಬೀಜವನ್ನು ಬಿತ್ತುವವರಿಗೆ ಬೀಜವು ನೋಡುವುದಕ್ಕೆ ಕಲ್ಲಿನ ಹಾಗೆ ಕಾಣುತ್ತದೆ ಆದರೆ ಕಲ್ಲು ಜೀವವಿಲ್ಲದ ವಸ್ತು ಅದು ಹಾಕಿದ ಕಡೆ ಸುಮ್ಮನೆ ಬಿದ್ದಿರುತ್ತದೆ ಆದರೆ ಬೀಜದಲ್ಲಿ ಜೀವವಿರುತ್ತದೆ. ಅದು ಭೂಮಿಗೆ ಬಿದ್ದ ಮೇಲೆ ಹುಟ್ಟಿ ಫಲವನ್ನು ಕೊಡುತ್ತದೆ ಮತ್ತು ಒಬ್ಬನು ಯಾವ ಬೀಜವನ್ನು ಬಿತ್ತುವನೋ ಆ ಬೀಜದ ಫಲವನ್ನೇ ಅವನು ಕೊಯ್ಯಬೇಕು ಗಸಗಸೆಯ ಗಿಡದಲ್ಲಿ ದ್ರಾಕ್ಷೀ ಹಣ್ಣುಗಳನ್ನೂ ಮದ್ದುಗುಣಿಕೆ ಗಿಡದಲ್ಲಿ ಅಂಜೂರಗಳನ್ನೂ ಕೊಯ್ಯುವದುಂಟೆ ?

ಬೀಜವನ್ನು ಬಿತ್ತಿ ಅದರಿಂದ ಹುಟ್ಟುವ ಗಿಡಗಳನ್ನು ಸಾಕುವದರಿಂದ ಮನಸ್ಸಿಗೆ ಬಹು ಸಂತೋಷವೂ ಉಲ್ಲಾಸವೂ ಉಂಟಾಗಿರುವವು ಬಡಗಿಕೆಲಸ, ಕಬ್ಬಿಣಕೆಲಸ ಮುಂತಾದ ಕಸಬುಗಳು ಪ್ರಯೋಜನಕರವಾದವುಗಳು ಲಾಭಕರವಾದವುಗಳು ಬಹುಶಃ ಕೆಲವು ವೇಳೆ ಕಸಬುಗಳು ವ್ಯವಸಾಯಕ್ಕಿಂತ ಹೆಚ್ಚು ಲಾಭಕಾರಿಗಳಾಗಿರುವದೂ ಉಂಟು ಆದರೆ ವ್ಯಾಪಾರ ಮತ್ತು ಕಸಬುಗಳಲ್ಲಿ ದೊರಕುವ ಸಂತೋಷವು ವ್ಯವಸಾಯದಲ್ಲಿ ಲಭಿಸುವ ಸಂತೋಷಕ್ಕೆ ಸಮನಾದುದಲ್ಲ ವ್ಯಾಪಾರವೆಂದರೆ ಅಗ್ಗವಾಗಿ ಸರಕುಗಳನ್ನು ಮಾರುವ ಕಡೆಯಿಂದ ಪ್ರಿಯವಾಗಿರುವ ಸ್ಥಳಕ್ಕೆ ತಂದು ಮಾರುವದು ಬಡಗಿ, ಕೊಲುಮೆಕೆಲಸ, ದರ್ಜಿಕೆಲಸ, ಇವುಗಳಲ್ಲಿ ನಾನೆ ಕೂಲಿಸಾಧಿನ ಜೀವನವೇ ಹೊರತು ಇನ್ಯಾವ ಸಂತೋಷವಿದೆ ? ಮರದ ಒಂದು ತುಂಡನ್ನು ಬಡಗಿಯು ಇನ್ನೊಂದು ತುಂಡಿಗೆ ಸೇರಿಸುತ್ತಾನೆ ಹಾಗೆಯೇ ಕಮ್ಮಾರ, ದರ್ಜಿ, ಮೋಚಿ ಮುಂತಾದವರೂ ತಮ್ಮ ತಮ್ಮ ಸರಕುಗಳಿಂದ ಬೇರೆ ಬೇರೆ ಉಪಯುಕ್ತವಾದ ಸಾಮಾನುಗಳನ್ನು ತಯಾರಿಸುತ್ತಾರೆ ಕಸಬುಗಳು ಪ್ರಯೋಜನವಿಲ್ಲವೆಂದು ನಾವು ಅವುಗಳನ್ನು ಜರಿಯುವದಿಲ್ಲ ಕಸಬುದಾರರೂ ವ್ಯಾಪಾರಿಗಳೂ ನಮಗೆ ಬೇಕೇಬೇಕು ಮತ್ತು ಕಸಬುದಾರರಲ್ಲಿ ಎಷ್ಟೋ ಸೂಕ್ಷ್ಮಬುದ್ಧಿಯೂ ಜಾಣ್ಮೆಯೂ ಚಮತ್ಕಾರವೂ ಪ್ರಕಾಶಕ್ಕೆ ಬರುತ್ತವೆ ಆದರೆ ವ್ಯವಸಾಯವು ಸಕಲ ಕಸಬುಗಳಲ್ಲಿ ಮೊದಲಿನಿಂದ ಕಡೆ ವರೆಗೂ ಅದ್ವಿತೀಯವಾದ ಸಂತೋಷವನ್ನು ಕೊಡುತ್ತದೆ ಇತರ ಕಸಬುಗಳು ಜೀವವಿಲ್ಲದ ವಸ್ತುಗಳನ್ನು ಒಂದಕ್ಕೊಂದು ಜೋಡಿಸುವವು ಆದರೆ ಬೀಜ ಬಿತ್ತುವವನಿಗೆ (ಮುಖ್ಯವಾಗಿ ಕಿಂಡರ್‌ಗಾರ್ಟನ್ ಅಭ್ಯಾಸಮಾಡುವ ಬಾಲ ಬಾಲೆಯರಿಗೆ) ಬೀಜವು ಏನು ಹೇಳುತ್ತದೆ ? ಕೇಳಿರಿ ಅದು ಅದ್ಭುತಾಕಾರವಾಗಿ ಮೊಳೆತು, ತನ್ನನ್ನು ನೋಡಲಿಕ್ಕೆ ಬರುವ ಸಕಲರಿಗೂ—ನನ್ನನ್ನು ಸತ್ತ ಪ್ರಾಣಿಯಂತೆ ಮಣ್ಣಿನಲ್ಲಿ ಹೂಣಿಡಬೇಡಿರಿ ನನ್ನನ್ನು ಹಾಗೆ ಹೂಣಿಟ್ಟು ಕಣ್ಣಿಗೆ ಮರೆಮಾಡಿದರೂ ಮಣ್ಣನ್ನು ಭೇದಿಸಿಕೊಂಡು ಕೋಮಲವಾದ ನನ್ನ ನವೀನ ಮುಖವನ್ನು ಎತ್ತಿಕೊಂಡು ಬಂದು ನಸುನಗೆಯಿಂದ ಬೆಳಗಿನ ಎಳಬಿಸಿಲಿನ ಪ್ರಕಾಶದಲ್ಲಿ ನಿಮ್ಮನ್ನು ವಂದಿಸುತ್ತೇನೆಂದು ಮೊಳಕೆಯು ಹೇಳುವ ಹಾಗೆ ಕಾಣುತ್ತದಲ್ಲವೇ - ಮತ್ತು ಮೊದಲು ಗರಿ, ಆ ಮೇಲೆ ಹೊಡೆ, ಆ ಮೇಲೆ ತೆನೆಯಲ್ಲಿ ತುಂಬಾ ಕಾಳು ಆದರೆ ಫಲ ಮಾಗಿದ ಕೂಡಲೆ ಕೊಯ್ಯುವ ಕಾಲ ಬಂತೆಂದು ಕೊಯ್ಯುತ್ತಾರೆ ಬೀಜ ಹಾಕಿದ್ದು ಮೊದಲುಗೊಂಡು ಕಡೆ ವರೆಗೂ ತೋಟಗಾರನಿಗೂ ರೈತನಿಗೂ ಇಂಪು, ಸೊಂಪು, ಸೊಂಪು, ಆನಂದಾಧಿಕ್ಯಗಳು ಸಹಾ ಇಷ್ಟೇ ಇರುತ್ತವೆ

ಇದರಲ್ಲಿ ಒಂದು ಮಾತನ್ನು ಮರೆಯಬಾರದು ಅದೇನೆಂದರೆ—ದೇವರು ಬೀಜ ಬಿತ್ತುವ ರೈತನ ಕಷ್ಟವನ್ನು ನೋಡಿ ಅದಕ್ಕೆ ಪ್ರತಿಫಲವಾಗಿ ಒಂದು ಬೀಜ ಬಿತ್ತಿದ ಕಡೆ ಅನೇಕ ತನ್ನನ್ನು ಹೋಲುವ ನೂರರಷ್ಟು ಬೀಜಗಳ ಬಾಹುಳ್ಯವನ್ನು ಫಲಿಸಲೆಂದು ಮಾತುಕೊಟ್ಟು ಆಶೀರ್ವದಿಸಿದ್ದಾನೆ. ಇದೀಗ ಬಿತ್ತನೆ ಕೆಲಸದಲ್ಲಿರುವ ರಹಸ್ಯ ಕಸಬುದಾರರು ತಮ್ಮಲ್ಲಿರುವ ಮರ, ಕಬ್ಬಿಣ, ಕಲ್ಲುಗಳನ್ನೇ ರೂಪ ಬದಲಾಯಿಸಿ ತಮಗೆ ಇಷ್ಟ ಬಂದ ಇನ್ನೊಂದು ರೂಪದಲ್ಲಿ ಅವುಗಳನ್ನೇ ಜೋಡಿಸುತ್ತಾರೆ ರೈತನು ಹೊಸ ಹೊಸ ವಸ್ತುಗಳನ್ನು ಅಂದರೆ ಬಿತ್ತುವದಕ್ಕೆ ಮುಂಚೆ ಇಲ್ಲದಿದ್ದ ಕಾಳುಗಳನ್ನು ದೇವರ ಸಹಾಯದಿಂದ ನಿರ್ಮಾಣಮಾಡುತ್ತಾನೆ, ಅಂದರೆ ನಿರ್ಮಾಣಮಾಡುವ ದೇವರ ಸಂಗಡ ಆ ಕೆಲಸದಲ್ಲಿ ಭಾಜನನೂ ಸಹಾಯಕನೂ ಆಗಿ ನಿಲ್ಲುತ್ತಾನೆ ಆದರೆ ಕೆಲಸವು ಎಷ್ಟು ಗೌರವವಾದುದೋ ಅದನ್ನು ಮಾಡುವದರಿಂದ ಬರುವ ಮಾನಸನ್ಮಾನಗಳೂ ಅಂಥವುಗಳೇ ಮೇಲಕ್ಕೆ ಹತ್ತಿ ಸಿಂಹಾಸನದಲ್ಲಿ ಕೂತುಕೊಳ್ಳುವದು ಒಳ್ಳೇದೇ ಸರಿ ಆದರೆ ಅಗ್ರಾಸನವನ್ನು ಅಲಂಕರಿಸಿದವನು ಅಲ್ಲಿಂದ ಬೀಳದ ಹಾಗೆ ಎಚ್ಚರಿಕೆಯಾಗಿರುವದು ಬಹಳ ಅಗತ್ಯ ಯಾಕೆಂದರೆ ಎತ್ತರದಿಂದ ಬೀಳುವವನಿಗೆ ಪ್ರಾಪ್ತಿಸುವ ಪೆಟ್ಟು ಅಘೋರವಾಗಿರುವದು ಹಾಗೆಯೇ ಬಿತ್ತುವ ಕೆಲಸವು ಸಂತೋಷಪ್ರದವಾಗಿಯೂ ನಿರ್ಮಾಣಕನಾದ ಜಗತ್ಕರ್ತನ ಸಹಕಾರಿಯಾಗಿಯೂ ಇದೆ ಆದರೆ ಬಿತ್ತುವವನು ಬುದ್ಧಿಯಿಂದಲೂ ಜಾಗ್ರತೆಯಿಂದಲೂ ಒಳ್ಳೇ ಫಲಕೊಡುವ ಬೀಜಗಳನ್ನು ಆರಿಸಿಕೊಳ್ಳದೆ ಕೆಟ್ಟ ಮುಳ್ಳು ಬಿಡುವ ಅಥವಾ ವಿಷಕರವಾದ ಬೀಜಗಳನ್ನು ಬಿತ್ತಿದರೆ ಅದೇ ತರದ ಮುಳ್ಳು ವಿಷಕರವಾದ ಬೀಜಗಳ ರಾಶಿಯೇ ಅವನ ಪಾಲಿಗೆ ಬೆಳೆಯುತ್ತವೆ ಆ ಫಲವನ್ನು ತಿಂದು ಮುಗಿಸುವವನಾರು ?

ಇದಂತಿರಲಿ ನಾವು ಆಡುವ ಎಲ್ಲಾ ಮಾತುಗಳೂ ಮಾಡುವ ಎಲ್ಲಾ ಕೆಲಸಗಳೂ ಬಿತ್ತನೆ ಬೀಜದಂತಿರುತ್ತವೆ ಮನಸ್ಸಿನಲ್ಲಿ ಕೋಪ, ಕ್ರೋಧ, ವಂಚನೆ, ಮೋಹಗಳು ಹುಟ್ಟುತ್ತವೆ ಇವು ಕಳೆ, ಮುಳ್ಳು, ವಿಷಕರವಾದ ಬೀಜಗಳು ಇವುಗಳನ್ನು ಆಸ್ಪದ ಕೊಡದೆ ಹುಟ್ಟಿದೆಡೆಯಲ್ಲೇ ಕಿತ್ತು ಹಾಕಬೇಕು ಹೀಗೆ ಮಾಡದೆ ಅವುಗಳು ಬೆಳೆದುಬೆಳೆದು ಒಂದಕ್ಕೆ ನೂರಾಗಿಯೂ ನೂರು ಸಾವಿರವಾಗಿಯೂ ಹೆಚ್ಚುವದಕ್ಕೆ ಎಷ್ಟೋ ಜನಗಳು ಅವಕಾಶ ಕೊಡುತ್ತಾರೆ ಅವುಗಳಿಗೆ ಗೊಬ್ಬರ ನೀರನ್ನೆರೆದು ಸಾಕುತ್ತಾರೆ ಬೇಕೆಂದು ಮದ್ದು ತುಂಬ ತುಂಬಿಕೊಂಡರೆ ಸುಡದೆ ಬಿಡುವದೇ ? ವಿಷ ಸರ್ಪಗಳನ್ನು ಮನೆಯಲ್ಲಿ ಸಾಕಿದರೆ ಕಚ್ಚದಿರುವದೇ ? ಬೀಜ ಬಿತ್ತುವವನು ಮುಳ್ಳು, ಕಳೆ, ವಿಷಬೀಜಗಳನ್ನು ಬಿತ್ತಿದರೆ ಅವುಗಳನ್ನು ಕಿತ್ತುಹಾಕುವದಕ್ಕೆ ಅವನಿಗೆ ಒಂದೊಂದು ವೇಳೆ ಅವಕಾಶ ಸಿಕ್ಕಬಹುದು ಆದರೆ ದುರ್ಭಾಷೆ, ಸುಳ್ಳು, ಚಾಡಿ, ಬೈಗುಳ, ನಿಂದೆಗಳನ್ನು ನುಡಿಯುವದಕ್ಕೆ ಬಾಯಿ ತೆರೆದು ಪ್ರಯೋಗಿಸಿದವನಿಗೆ ಅವುಗಳನ್ನು ರದ್ದುಮಾಡುವದಕ್ಕೆ ಅಥವಾ ಅವು ದುಷ್ಫಲಗಳನ್ನು ರಾಶಿರಾಶಿಯಾಗಿ ತಂದೊಡ್ಡದಂತೆ ಮಾಡುವದಕ್ಕೆ ಅವನಿಗೆ ಅವಕಾಶ ಸಿಕ್ಕುವದೇ ಇಲ್ಲ ಒಂದಾವರ್ತಿ ಬಾಯಿಯಿಂದ ಹೊರಟು ಹೋದ ಮಾತನ್ನು ಹಿಡಿದು ನಿಲ್ಲಿಸುವವನಾರು ? ಮಾತು ದುಷ್ಫಲಗಳ ರಾಶಿಯನ್ನು ತಂದೊಡ್ಡಿದರೆ ಕೆಟ್ಟ ಕ್ರಿಯೆಗಳ ವಿಷಯ ಏನು ಹೇಳೋಣ ? ಕಳವು, ನರಹತ್ಯ, ವ್ಯಭಿಚಾರ, ಕುಡಿಕತನ, ಜಗಳ, ಸುಳ್ಳು ಸಾಕ್ಷಿ, ಕಕ್ಷಿಭೇದ—ಇವುಗಳಿಂದ ಈ ಲೋಕ ಮಯವಾಗಿದೆಯೆಂತ ಸಕಲ ಸಜ್ಜನರು ಬಿಸುಸುಯ್ಯುತ್ತಿರುವರು ಅಕಟಾ ಇವೆಲ್ಲವೂ ಮನುಷ್ಯನು ಒಂದೊಂದಾಗಿ ಬಿತ್ತಿದ ಬೀಜಗಳ ಫಲ ಸ್ವಾಮಿಯೆ ಇವು ಇನ್ನೂ ದೊಡ್ಡ ದೊಡ್ಡ ರಾಶಿಯಾಗದಂತೆ ತಡೆದುನಿಲ್ಲಿಸುವ ಬಗೆ ಹೇಗೆ ?

ಒಳದೇಶದ ವೃತ್ತಾಂತಗಳು.

ಡೆಪ್ಯುಟಿ ಕಮಿಷನರ್ ಮಿ ಎ ಸುಬ್ರಹ್ಮಣ್ಯ ಅಯ್ಯರವರು ನಾಳೆ ಮೈಸೂರು ಡಿಸ್ಟ್ರಿಕ್ಟಿನ ಚಾರ್ಜನ್ನು ವಹಿಸಿಕೊಳ್ಳುವವರಾಗಿದ್ದಾರೆ

*

ರಾಜಧಾನಿಯ ಅ॥ ಮುನ್ಸಿಫ್ ಕೋರ್ಟಿನ ನಾಜರು ನಾಗೇಶರಾಯರ ಮೇಲೆ ಬಂದಿರುವ ಕ್ರಿಮಿನಲ್ ಮೊಕದ್ದಮೆ ಈ ದಿನ ಟೌನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಪ್ರಾರಂಭವಾಗುವುದಾಗಿದೆ

*

ಬೆಂಗಳೂರಿಂದ ರೆವ್ ಮತ್ತು ಮಿಸೆಸ್ ತಾರ್ಪ್‌ಯವರೂ, ರಾಜಧಾನಿಯಿಂದ ರೆವ್ ಮತ್ತು ಮಿಸೆಸ್ ಎಡ್ವರ್ಡ್ಸ್‌ಯವರೂ ಈ ವಾರ ಮುಂದಿನ ವಾರಗಳಲ್ಲಿ ದೇಹಾರೋಗ್ಯಕ್ಕಾಗಿ ಕೆಲವು ಕಾಲ ಸೀಮೆಗೆ ಹೋಗಿ ಬರುವವರಾಗಿದ್ದಾರೆ

*

ನಮ್ಮ ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯಾದ ಮಿ॥ ಆರ್ ಎಚ್ ಕ್ಯಾಂಬೆಲ್‌ರವರು ಮುಂದಿನ ತಿಂಗಳಲ್ಲಿ ರಜಾ ಪಡೆದು ಕೆಲವು ಕಾಲದ ಮಟಿಗೆ ಸೀಮೆಗೆ ಹೋಗಿಬರುವವರಾಗಿದ್ದಾರೆಂದು ಕೇಳುತ್ತೇವೆ

*

ಸ್ಪೆಷಲ್ ಸೆಷನ್ಸ್ ಜಡ್ ಮಿ॥ ನೂರ್ ಹಂಜ ಹುಸೇನ್‌ರವರು ರಜಾ ಪಡೆದು ಹೋಗಿದ್ದ ಕಾರಣ ನಾಲ್ಕು ದಿನಗಳಿಂದ ಕನ್ನಾಗಿಲದ ದಂಗೆ ಮೊಕದ್ದಮೆಯ ವಿಚಾರಣೆ ನಿಂತಿದ್ದು ಪುನಹ ನಾಳೆಯಿಂದ ನಡೆಯುವುದು

*

ರಾಜಧಾನಿಯಲ್ಲಿ ಕಳೆದ 2ನೇ ತಾ ಬುಧವಾರ ಸಾಯಂಕಾಲವೂ, ತಾ 7 ನೇ ಸೋಮವಾರ ರಾತ್ರಿಯೂ ಒಳ್ಳೇ ಮಳೆಗಳಾಗಿ ಭೂಮಿಯು ಸ್ವಲ್ಪಮಟ್ಟಿಗೆ ತಂಪಾಗಿದ್ದರೂ ಮಧ್ಯಾಹ್ನದ ಹೊತ್ತು ಬಿಸಿಲಿನ ಧಗೆ ಇನ್ನೂ ಹೆಚ್ಚಾಗಿದೆ ಧಾರಣೆಮಾಸಿಗಳು ಕ್ಷಾಮಕಾಲದಲ್ಲಿರುವಂತೆ ಇರುತ್ತವೆ

*

ಸರ್ವೆ ಸೂಪರಿಂಟೆಂಡೆಂಟ್ ಮಿ॥ ಡಿ ರಾಮರಾಯರು ಜೂನ್ 1 ನೇ ತಾರೀಖಿನವರೆಗೂ, ಸೀನಿಯರ್ ಸರ್ಜನ್ ಮಿ॥ ಪಿ ಎಸ್ ಅಚ್ಯುತರಾಯರು ಸಪ್ಟೆಂಬರ್ ಆಖೈರ್‌ವರೆಗೂ ಸರ್ವೀಸಿನಲ್ಲಿರಬಹುದೆಂದು ಗವರ್ನ್‌ಮೆಂಟಿನವರು ಆರಾರು ತಿಂಗಳ ಅವಧಿಯನ್ನು ಸ್ಯಾಂಕ್ಷನ್ ಮಾಡಿರುವಂತೆ ಪ್ರಕಟವಾಗಿದೆ

*

ಕಳೆದ ಶುಕ್ರವಾರ ರಾತ್ರಿ ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ ಆ ವರಣದೊಳಗೆ ಮುನಿಸ್ವಾಮಿ ಎಂಬವನು ತನ್ನ ಹೆಂಡತಿಯಾದ ಅರ್ಪುದಂ ಎಂಬವಳನ್ನು ಹೊಡೆದು ಕೊಂದುಬಿಟ್ಟನು ಇವರ ಹೆಣ್ಣುಮಗಳು ಎದುರಿಗಿದ್ದು ಈ ಕ್ರೂರಕೃತ್ಯವನ್ನು ನೋಡಿದಳಂತೆ ಪೊಲೀಸಿನವರು ಅವನನ್ನು ಹಿಡಿದು ಮೊಕದ್ದಮೆ ಮಾಡಿದ್ದಾರೆ

*

ಕಳೆದ ಭಾನುವಾರ ರಾತ್ರಿ ಮದ್ದೂರಿನಲ್ಲಿ ಮಹಮದೀಯರಿಗೂ ಹಿಂದೂಗಳಿಗೂ ಎರಡನೇ ದೊಂಬಿ ಕಲಹವಾಗಿ ಕೆಲವರಿಗೆ ಗಾಯಗಳಾದವು. ಮಹಮದೀಯರು ಬೆಳೆದಿದ್ದ ಕಲ್ಲಂಗಡಿ ಕರಬೂಜಗಳನ್ನು ಹಿಂದೂಗಳು ಕದಿಯುವುದಕ್ಕೆ ಹೋದ ಹಾಗೂ, ಆವರುಗಳಿಗೆ ಜಗಳವಾಯಿತೆಂದೂ, ಇದಕ್ಕೆ ಸೇರಿದ್ದವರು ಯಾರೆಂಬುವುದು ಪತ್ತೆಯಾಗಲಿಲ್ಲವೆಂದೂ ಕೇಳುತ್ತೇವೆ

ಮಾಗಡಿ ತಾಲ್ಲೂಕು ತಿರುಮಲೆ ರಂಗನಾಥಸ್ವಾಮಿ ರಥೋತ್ಸವ ಕಾಲದಲ್ಲಿ ಈ ತಿಂಗಳು ತಾ 18ನೇ ಶುಕ್ರವಾರದಿಂದ ಒಂದು ವಾರದ ತನಕ ದನ ಜಾತ್ರೆಯನ್ನೂ, ವ್ಯವಸಾಯ ಮತ್ತು ಕೈಗಾರಿಕೆಗಳ ಪ್ರದರ್ಶನವನ್ನೂ ಉತ್ತಮವಾದ ರಾಸುಗಳಿಗೂ ವಸ್ತುಗಳಿಗೂ ಚಿನ್ನ ಬೆಳ್ಳಿ ಮೆಡಲುಗಳನ್ನೂ ತಕ್ಕವಾದ ಬಹುಮಾನಗಳನ್ನೂ ಕೊಡುವುದಾಗಿ ತಿಳಿದುಬಂದಿದೆ

* * *

ಹಾಸನದ ತಾಲ್ಲೂಕ್ ಅಮಲ್ದಾರ್ ಮಿ|| ಶ್ರೀನಿವಾಸಯ್ಯಂಗಾರ್ಯರು ... ಟ್ರ್ಯಾಂಗಾಗಾಡಿಯು ರಾಜಧಾನಿಗೆ ಬರುತ್ತಿದ್ದಾಗ ಕೋರ್ಟ್‌ವಾನವನ್ನು ... ಬಿಟ್ಟರೆಂದು ಮೆಯಿಲ್ ಕಂಟ್ರ್ಯಾಕ್ಟರ್ ಮಿ|| ಪಿ ಪಾಲಂಜಿಯವರು ... ವರ್ತಮಾನ ಕೊಟ್ಟದ್ದರ ಮೇಲೆ ಮದರಾಸಿನಿಂದ ಡೆಪ್ಯುಟಿ ಪೋಸ್ಟ್ ಮಾಸ್ಟರ್ ಜನರಲ್‌ರವರು ರಾಜಧಾನಿಗೆ ಬಂದು ಕಳೆದ ವಾರ ತನಿಖೆಮಾಡಿಕೊಂಡು ಹೋದರೆಂದು ಕೇಳುತ್ತೇವೆ

* * *

ಅಮೇರಿಕದಿಂದ ಬಂದು ರಾಜಧಾನಿಯ ವೆಸ್ಲಿಯರ್ನ್ ಮಿಷನ್ ಹೋಲ್ಡ್ಸ್‌ವರ್ತ್ ಮೆಮೋರಿಯಲ್ ಆಸ್ಪತ್ರೆಯಲ್ಲಿ ಸುಮಾರು ಒಂದು ವರುಷದಿಂದ ... ದಾಗಿದ್ದು, ಪರೋಪಕಾರಿ ಕರುಣಾಳು ಎಂಬ ಹೆಸರನ್ನು ಪಡೆದಿದ್ದ ಮಿಸ್ ... ಆಲೀಸ್ ಬಿದರ್ ಎಂಬಾಕೆಯು ಸುಮಾರು ಒಂದು ವಾರದಿಂದ ಕಾಯಿಲೆಯಾಗಿ ಮೊನ್ನೆ ಮಂಗಳವಾರ ರಾತ್ರಿ ಆ ಆಸ್ಪತ್ರೆಯ ಬಳಿ ತಮ್ಮ ಬಂಗಲೆಯಲ್ಲಿ ... ದರೆಂದು ವಿಷಾದಿಸುತ್ತೇವೆ

* * *

ನಮ್ಮ ಮಹಾರಾಜರವರ ಹುಜೂರ್ ಸೆಕ್ರೆಟರಿ ಮಿ|| ಮಿರ್ಜಾ ಇಸ್ಮೈಲ್ ... ಕಳೆದ ವಾರ ಇಲ್ಲಿನ ನೂರಡಿ ರಸ್ತೆಯಲ್ಲಿ ಸಂಸ್ಕೃತ ಪಾಠಶಾಲೆಯ ಬಳಿ ... ಬಾಲಿಕೋಪಯೋಗಿನಿ ಸ್ಕೂಲಿಗೆ ಹೋಗಿ ಅಲ್ಲಿನ ವಿದ್ಯಮಾನಗಳನ್ನು ಅನುಭವಿಸಿ ... ಕೊಂಡು ಸಂತೋಷಪಟು ಮಕ್ಕಳಿಗೆ ಹಣ್ಣು ಸಕ್ಕರೆ ಹಂಚಿಸಿದರು ... ಶ್ರೀಮನ್ ಮಹಾರಾಜರವರು ಈ ಸ್ಕೂಲಿಗೆ ಒಂದು ಹೊಲಿಗೆ ಯಂತ್ರ ... ಒಂದು ಹಾರ್ಮೋನಿಯಮನ್ನೂ ಉಚಿತವಾಗಿ ದಯಪಾಲಿಸುವವರಾಗಿದಾ ... ಕೇಳುತ್ತೇವೆ

* * *

... ಸಂಸ್ಥಾನದ ಅರಮನೆಯಲ್ಲಿ ನಡೆಯುವ ವಿವಾಹ ಮಹೋತ್ಸವಕ್ಕೆ ಮಹಾರಾಜರವರಿಗೆ ಲಗ್ನಪತ್ರಿಕೆಯನ್ನು ತಂದೊಪ್ಪಿಸಲು ಆ ಸಂಸ್ಥಾನದ ಮೂರುಮಂದಿ ಅಧಿಕಾರಿಗಳು, ಹನ್ನೆರಡು ಜನ ಸೇವಕಾಳಿಗಳೊಡನೆ ಕಳೆದ ವಾರ ರಾಜಧಾನಿಗೆ ಬಂದು ತಾಕ್ಲಡ್ ಬಂಗಲೆಯಲ್ಲಿ ಇಳಿದುಕೊಂಡು ... ಯ ಆತಿಥ್ಯವನ್ನು ಸ್ವೀಕರಿಸುತ್ತಾರೆ ಈ ಅಧಿಕಾರಿಗಳಿಗೆ ಮಂಗಳವಾರ ... ಅರಮನೆಯಲ್ಲಿ ನಮ್ಮ ಮಹಾರಾಜರವರು ಸೀಟಿದಯಪಾಲಿಸಿ ಸನ್ಮಾನಿಸಿದರು ಅವರೆಲ್ಲಾ ಇದಿನ ರೈಲು ಹತ್ತಿ ವಾಪಸು ಹೋಗುವವರಾಗಿದಾರೆ

* * *

... ವಾದ ಶಿಕ್ಷಣವನ್ನು ಹೊಂದಿದ ಉಪಾಧ್ಯಾಯರು ಸಂಸ್ಥಾನದ ಪ್ರೈಮರಿ ಮತ್ತು ಮಿಡ್ಲ್ ಸ್ಕೂಲುಗಳಿಗೆ ಹೆಚ್ಚಾಗಿ ಬೇಕಾಗಿರುವುದರಿಂದ ಸರ್ಕಾರದವರು ಮುಂದಿನ ತಿಂಗಳಲ್ಲಿ ದಾವಣಗೆರೆಯಲ್ಲೂ ನಂಜನಗೂಡಿನಲ್ಲೂ ಕನ್ನಡ ... ಸೆಕೆಂಡರಿ ಕ್ಲಾಸುಗಳನ್ನು ಪ್ರಾರಂಭಮಾಡುವವರಾಗಿದಾರೆ ಈ ಸ್ಕೂಲುಗಳಿಗೆ ಸೇರಲು ಇಷ್ಟವುಳ್ಳ ಕನ್ನಡ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ... ಹೊಂದಿರುವ ವಿದ್ಯಾರ್ಥಿಗಳು ಆ ಎರಡು ಸ್ಥಳಗಳ ಗವರ್ನ್‌ಮೆಂಟ್ ... ಹೆಡ್ ಮಾಸ್ಟರುಗಳಿಗೂ ಬೇಗನೆ ಅರ್ಜಿ ಬರೆದುಕೊಳ್ಳಬೇಕೆಂದು ಪ್ರಕಟಿಸಿದಾರೆ

* * *

ಕಳೆದ ಭಾನುವಾರ ಸಾಯಂಕಾಲ ಬೆಂಗಳೂರು ಸಿಟಿ ದೇಶೀಯ ವರ್ತಕರಲ್ಲಿ ... ಮುಖ್ಯರು ಸುಮಾರು 50 ಮಂದಿ ಸಭೆಸೇರಿ, ವರ್ತಕರಿಗೆ ರೈಲ್ವೆ ಗುಡ್ಸ್ ... ಆಗುತ್ತಿರುವ ನಷ್ಟ ಕಷ್ಟಗಳನ್ನು ಕುರಿತು ಚರ್ಚೆಮಾಡಿ, ಅದಕ್ಕೆ ತಕ್ಕ ... ವನ್ನು ಮಾಡಬೇಕೆಂದು ಒಂದು ಕಮಿಟಿಯನ್ನು ನೇಮಕಮಾಡಿದರು ವರ್ತಕರು ಮಿ|| ಎಂ ಪಂಡಿತ... ನವರು ಆ ಸಭೆಯ ಅಗ್ರಾಸನವನ್ನು ... ಈ ಕಷ್ಟ ನಷ್ಟಗಳಿಗೆ ರೈಲ್ವೆ ಪೋಲೀಸಿನವರೂ ಸಿಟಿ ಪೋಲೀಸಿನವರೂ ... ಕೆಲಸಮಾಡದಿರುವುದೇ ಕಾರಣವೆಂದು ಕೇಳಿದೆವೆ ಸರ್ಕಾರದವರು ... ವನ್ನು ಬೇಗನೆ ತನಿಖೆಯಿಂದ ಕ್ರಮಪಡಿಸಬೇಕಾಗಿದೆ

* * *

ರಾಜಧಾನಿಯ ಲಷ್ಕರ್ ಪೋಲೀಸ್ ಸ್ಟೇಷನ್ ಎದುರಿಗೆ ಶಿವಸಮುದ್ರದ ... ಗುಮಾಸ್ತರ ಮನೆಯಲ್ಲಿ ಏಜೆಂಟಾಗಿದ್ದ ಮಧ್ಯವಯಸಿನ ರಾಮಮೊದಲಿ ... ಎಂಬಾತನನ್ನು ಕಳೆದ ಯುಗಾದಿ ಹಬ್ಬದಿನ ಸಮರಾತ್ರಿಯಲ್ಲಿ ಆತನ ... ಗುಬ್ಬನು ರಜ ಕೊಡಲಿಲ್ಲವೆಂಬ ಕಾರಣಕ್ಕಾಗಿ ಅದೇ ಮನೆಯ ... ಒಂದು ಕತ್ತಿಯನ್ನು ಹಿಡಿದು ಹೊತೆದು ಕೊಂದುಹಾಕಿ ಪರಾರಿಯಾಗಿ ... ಈ ಘೋರಕೃತ್ಯವನ್ನು ಎದುರಿಗಿದ್ದು ಅಸಹಾಯರಾಗಿ ನೋಡುತ್ತಿದ್ದ ... ಹೆಂಡತಿಯು ಮತ್ತು ಸಣ್ಣ ಹೆಣ್ಣು ಮಗುವಿನ ದುಃಖವು ವಿವರಿಸಲಶಕ್ಯ ... ಶವವನ್ನು ಆಸ್ಪತ್ರೆಗೆ ಸಾಗಿಸಿ ಲಾಷ್ ಮಹಜರು ಆದ ಬಳಿಕ ಮರುದಿನ ... ದಹನ ವರ್ಗಕ್ಕೆ ಕೊಡಲಾಯಿತು

* * *

ಬೆಂಗಳೂರು ಸಿಟಿ ಏರಿಸ್ ಮುದ್ರಾಶಾಲೆಯಲ್ಲಿ ಈ ತಿಂಗಳ 2ನೇ ತಾ ... ದಿಂದ "ದಿ ಕರ್ನಾಟಕ" ಎಂಬ ಇಂಗ್ಲಿಷ್ ವರ್ತಮಾನ ಪತ್ರಿಕೆಯು ಪ್ರಾರಂಭವಾಗಿದೆ ಇದು ವಾರಕ್ಕೆರಡಾವರ್ತಿ ಪ್ರಚಾರವಾಗುವುದು ಇದರ ... ಸೇವೆಯು ತೃಪ್ತಿಕರವಾಗಿ ನಡೆದು ಚಿರಕಾಲ ಅಭಿವೃದ್ಧಿಹೊಂದಲೆಂದು ಹಾರೈಸುತ್ತೇವೆ ಇದೇ ಸಂದರ್ಭದಲ್ಲಿ ರಾಜಧಾನಿಯಲ್ಲಿ ಪ್ರಕಟವಾಗುತ್ತಿರುವ ... "ಎಂಬ ವಾರಪತ್ರಿಕೆಯು ಇಂಗ್ಲಿಷ್ ಭಾಗವನ್ನು "ಮೈಸೂರು ... " ಎಂಬ ಹೆಸರಿನಿಂದ ಪ್ರತ್ಯೇಕವಾಗಿ ಪ್ರತಿ ಮಂಗಳವಾರವೂ ಹೊರ ... ಮೈಸೂರು ಗವರ್ನ್‌ಮೆಂಟಿನವರು ಸಂಪಾದಕರಿಗೆ ಅಪ್ಪಣೆ ದಯಪಾಲಿಸಿರುವುದಾಗಿ ಕೇಳುತ್ತೇವೆ

* * *

... ರಾಜಧಾನಿಯಲ್ಲಿ ಅರಸುಗಳ ಹೆಣ್ಣುಮಕ್ಕಳ ಪಾಠಶಾಲೆಯು ... ಇಲವಾಲ್ ರಸ್ತೆಯ ಒಂದು ಬಂಗಲೆಯಲ್ಲಿ ಪ್ರಾರಂಭವಾಗುವುದಾಗಿದೆ ... ಅಭಿವೃದ್ಧಿಗೆ ರಾಜಪಿಂಡೆಯವರು ಬಹು ಧಾರಾಳವಾಗಿ ಚಂದಾಹಣ ... ವೆಂದೂ, ಸಿಬ್ಬಂದಿ ಮೊದಲಾದ ಖರ್ಚುಗಳನ್ನೆಲ್ಲಾ ಅರಮನೆಯಿಂದ ... ಕೊಡುವುದೆಂದೂ ತಿಳಿದುಬಂದಿದೆ ಮಿಸ್ ಅಲ್ವಾರಸ್ ಎಂಬಾಕೆಯು ... ಶಾಲೆಯ ಸೂಪರಿಂಟೇಂಡೆಂಟಾಗಿ ನೇಮಕವಾಗುತ್ತಾರೆ ಈಕೆ ಇಂಗ್ಲೆಂಡಿನಲ್ಲಿ ... ವಾದ ಶಿಕ್ಷಣದಿಂದ ಉತ್ತರ ದೇಶಕ್ಕೆ ಬಂದು ಕಾಶೀ ಪಟ್ಟಣದಲ್ಲಿರುವ ಸೆಂಟ್ರಲ್ ಹಿಂದೂ ಕಾಲೇಜ್ ಎಂಬ ವಿದ್ಯಾಶಾಲೆಯಲ್ಲಿ ಸುಮಾರು ಎರಡುವರೆ ವರುಷಗಳಿಂದ ಕೆಲಸಮಾಡಿ, ಈಗ ಮೈಸೂರಿಗೆ ಬಂದು ಈ ಕೆಲಸವನ್ನು ಒಪ್ಪಿಕೊಂಡಿರುತ್ತಾರೆ

* * *

ಬೆಂಗಳೂರು ವೆಸ್ಲಿಯರ್ನ್ ಮಿಷನ್ ಹೈ ಸ್ಕೂಲ್ ಹಾಲ್‌ನಲ್ಲಿ ಕಳೆದ ಶನಿವಾರ ಸಾಯಂಕಾಲ ಒಂದು ಸಂತೋಷ ಕೂಟವು ಜರುಗಿತು ಸುಮಾರು ನಾನೂರು ವಿದ್ಯಾರ್ಥಿಗಳೂ, ಅನೇಕ ದೊಡ್ಡ ಮನುಷ್ಯರೂ ಸೇರಿದ್ದರು ಹೈ ಸ್ಕೂಲ್ ವಿದ್ಯಾರ್ಥಿಗಳು ಸೇರಿ ತಮ್ಮ ಸ್ಕೂಲನ್ನು ಬಿಡುವ ಭೌತಿಕ ಶಾಸ್ತ್ರ ಬೋಧಕರಾದ ಮ|| ಬಿ ಶ್ರೀನಿವಾಸಯ್ಯಂಗಾರ್, ಬಿ ಎ , ಬಿ ಎಲ್ , ರವರಿಗೆ ತಮ್ಮ ಕೃತಜ್ಞತಾಪ್ರದರ್ಶಕವಾದ ಅಡ್ರೆಸನ್ನೂ ಬಹುಮಾನವನ್ನೂ ಒಪ್ಪಿಸಿದರು ಗವರ್ನಮೆಂಟ್ ಪ್ರೆಸ್ ಸೂಪರಿಂಟೆಂಡೆಂಟರಾದ ಮಿ|| ಸಿ ಎಚ್ ವಿಷ್ಣರವರು ಅಗ್ರಾಸನವನ್ನು ಅಲಂಕರಿಸಿದ್ದರು ಸ್ಕೂಲ್ ಪ್ರಿನ್ಸಿಪಲ್‌ರವರಾದ ರೆವ್ ಡಬ್ಲಿಯು ಪರ್ಸ್ಟನ್ ರವರು ಮ|| ಶ್ರೀನಿವಾಸಯ್ಯಂಗಾರ್ರವರ ಶ್ಲಾಘನೀಯವಾದ ಗುಣಗಳ ವಿಷಯವಾಗಿಯೂ, ಅವರು ಕೆಲಸಮಾಡಿದ ರೀತಿಯನ್ನೂ, ಪಾಠ ಹೇಳುವುದರಲ್ಲಿ ಸದಾ ತೋರ್ಪಡಿಸಿದ ಆಸಕ್ತಿಯನ್ನೂ ವಿವರಿಸಿದರು ಹಾರಾ ತುರಾಯಿ ಕೊಟ್ಟ ಬಳಿಕ ಸಭೆಯು ಬರಖಾಸ್ತಾಯಿತು

ಮೈಸೂರು ಗಜೆಟ್ ಸಂಗ್ರಹ

ಸಂಸ್ಥಾನಮುಳೆ ತಾಲೋಕುಗಳಲ್ಲಿ ಮುಂದಿನವರುಷದ ಎಕ್ಸೈಸ್ ಮತ್ತು ಓಪಿಯಂ ಕಂಟ್ರ್ಯಾಕ್ಟುಗಳನ್ನು ಸರ್ಕಾರದವರು ಈ ಏಪ್ರೆಲ್ ಮತ್ತು ಮೇ ತಿಂಗಳುಗಳಲ್ಲಿ ಹರಾಜು ಹಾಕುವುದಾಗಿ ಇಸ್ತಿಹಾರ್‌ನಾಮೆಯನ್ನು ಪ್ರಕಟಿಸಿದಾರೆ

ಮುಂದೆ ಹೇಳುವ ಸ್ಥಳಗಳಲ್ಲಿ ಪ್ಲೇಗ್ ಉಪದ್ರವಿದೆ ಎಂದು ತಿಳಿಯತಕ್ಕದ್ದು —ಚಿಕ್ಕನಾಯಕನ ಹಳ್ಳಿ ತಾ|| ಮಲ್ಲಿಗೆರೆ ಕುಣಿಗಲ್ ತಾ|| ಹಂದಲಗೆರೆ, ಕೋಲಾರ್ ತಾ|| ಮ್ಯಲಾಂಡಹಳ್ಳಿ, ಕಾಮದೇನಹಳ್ಳಿ, ಯಲಚೀಪುರ, ಕುಹಂಡಹಳ್ಳಿ , ಮಾಲೂರು ತಾ|| ಯಶವಂತಪುರ ಗೋರಿಬಿದನೂರು ತಾ| ಕದರೆನಹಳ್ಳಿ

ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮಿ|| ವೈ ಸೀತಾರಾಮಯ್ಯನವರಿಗೆ ಕೊಟ್ಟಿದ್ದ ಹತ್ತು ದಿನಗಳ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾಗಿ ರದ್ದುಮಾಡಿದೆ

ಡೆಪ್ಯುಟಿ ಕಮಿಷನರ್ ಮಿ|| ಕೆ ಚಾಂಡಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ದಾವಣಗೆರೆ ಸಬ್ ಡಿವಿಜನ್ ಆಫೀಸರ್ ಮಿ|| ಆರ್ ನಾರಾಸಾಮಿರಾಯರಿಗೆ ಮಾರ್ಚಿ ತಾ 28 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ರೆವಿನ್ಯೂ ಕಮಿಷನರ್‌ರವರ 1ನೇ ಅಸಿಸ್ಟೆಂಟರಾದ ಮಿ|| ಆನಂದರಾವ್ ಎನ್ ಸಿರ್ಸಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹತ್ತೊಂಬತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅ|| ಕಂಟ್ರೋಲರ್ ಮಿ|| ಟಿ ಸತ್ಯರಾಜ ಚೆಟ್ಟಿಯವರಿಗೆ ಈಸ್ಟರ್ ರಜಾ ಜೊತೆಗೆ ಮಾರ್ಚಿ ತಾ 26 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಹಾಸನ ರೇಂಜ್ ಫಾರೆಸ್ಟ್ ಸಬ್ ಅ|| ಕನ್ಸರ್ವೇಟರ್ ಮಿ|| ಎಂ ವೆಂಕಟನರಸಪ್ಪನವರನ್ನು ಫಾರೆಸ್ಟ್ ಕನ್ಸರ್ವೇಟರವರ ಪರ್ಸನಲ್ ಅಸಿಸ್ಟೆಂಟಾಗಿ ನೇಮಕಮಾಡಿದೆ

ಸೀನಿಯರ್ ಅ|| ಕಮಿಷನರ್ ಮಿ|| ಎ ಆರ್ ತ್ಯಾಗರಾಜ ಅಯ್ಯರವರು ಅ|| ಕಮಿಷನರ್ ಮಿ|| ಎ ಕೆ ಸಯ್ಯದ್ ಷಾಜ್ ಪೀರಾನ್ ರವರಿಂದ ತುಂಕೂರು ಡಿಸ್ಟ್ರಿಕ್ಟ್ ಮತ್ತು ಖಜಾನೆಯ ಚಾರ್ಜನ್ನು ಮಾರ್ಚಿ ತಾ 15 ರಲ್ಲಿ ವಹಿಸಿಕೊಂಡಿದಾರೆ

ಚಿಕ್ಕನಾಯಕನ ಹಳ್ಳಿ ತಾಲ್ಲೂಕು ಅಮಲ್ದಾರ್ ಮಿ|| ಆರ್ ಸುಂದರರಾಯರಿಗೆ ಮಾರ್ಚಿ ತಾ 10 ರಿಂದ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು ಆ ಕಾಲದಲ್ಲಿ ಶಿರಸ್ತೇದಾರರು ತಾಲ್ಲೂಕು ಛಾರ್ಜನ್ನು ವಹಿಸಿದ್ದರು

ಚಳ್ಳಕೆರೆ ತಾಲ್ಲೂಕು ಅಮಲ್ದಾರ್ ಮಿ|| ಕೆ ಹನುಮಂತರಾಯರಿಗೆ ಏಪ್ರೆಲ್ ತಾ 15 ರಿಂದ ಅಥವ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಆ ಕಾಲದಲ್ಲಿ ಜಗಲೂರ್ ತಾಲೂಕ್ ಶಿರಸ್ತೇದಾರ್ ಮಿ|| ಟಿ ನರಸಿಂಗರಾಯರು ಚಳ್ಳಕೆರೆ ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು

ಮಿ|| ಎ ಸುಬ್ರಹ್ಮಣ್ಯ ಅಯ್ಯರವರು

ಚಿಕ್ಕಮಗಳೂರಿನಲ್ಲಿ ನಡೆದ ಹಿತಸೋತ್ಸವವು

ಕಳೆದ ತಾ|| 1 ನೇ ಮಂಗಳವಾರ ಸಾಯಂಕಾಲ ಚಿಕ್ಕಮಗಳೂರಿನ ಅಧಿಕಾರಿಗಳೂ, ದೊಡ್ಡ ಮನುಷ್ಯರೂ, ವರ್ತಕರೂ ಇಲ್ಲಿನ ಟೌನ್ ಹಾಲಿನಲ್ಲಿ ಸಭೆ ಸೇರಿ ಇಲ್ಲಿಂದ ಮೈಸೂರಿಗೆ ವರ್ಗವಾದ ಡೆಪ್ಯುಟಿ ಕಮಿಷನರ್ ಮಿ|| ಎ ಸುಬ್ರಹ್ಮಣ್ಯ ಅಯ್ಯರವರನ್ನು ಅಲ್ಲಿಗೆ ಬರಮಾಡಿಕೊಂಡು ಅವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಿದರು ಆ ಕಾಲದಲ್ಲಿ ಒಂದು ಟೀಪಾರ್ಟಿಯನ್ನು ನಡಿಸಿ, ಅತಿಥಿಗಳಿಗೆ ಫಲಾಹಾರಗಳನ್ನು ಕೊಟ್ಟು ಸಂತೋಷ ಪಡಿಸಿದರು ಇದರಲ್ಲಿ ಹೆಚ್ಚು ಮುತುವರ್ಜಿಯನ್ನು ವಹಿಸಿ ಅತಿಥಿಸತ್ಕಾರ ಮಾಡಿದ ಮಹತ್ತು ಇಲ್ಲಿನ ಮ್ಯುನಿಸಿಪಲ್ ಮೆಂಬರಾದ ಮ|| ನರಸಿಂಹಶೆಟ್ಟರವರಿಗೆ ಸಲ್ಲತಕ್ಕದ್ದಾಗಿದೆ ವರ್ಗವಾದ ನಮ್ಮ ಡೆಪ್ಯುಟಿ ಕಮಿಷನರ್‌ರವರ ಗುಣಕಥನವನ್ನು ಮಾಡಲು ಸ್ಥಳ ಸಂಕೋಚವಾಗಿದೆ ಅವರು ಪ್ರಜಾನುರಾಗಿಗಳಾಗಿದ್ದುದಕ್ಕೆ ಆ ದಿನ ಸೇರಿದ್ದ ಸಭೆಯೇ ಸಾಕ್ಷಿಯಾಗಿತ್ತು ಮಿ|| ಸುಬ್ರಹ್ಮಣ್ಯ ಅಯ್ಯರವರು ಸಭೆಯವರು ತಮಗಾಗಿ ಏರ್ಪಡಿಸಿದ್ದ ಪ್ರಧಾನಾಸನವನ್ನು ಅಲಂಕರಿಸಿದ ಒಡನೆಯೇ ಇಲ್ಲಿನ ಸಂಸ್ಕೃತ ಪಂಡಿತರು ಅವರ ವಿಷಯವಾದ ಸ್ತೋತ್ರ ವಚನಗಳನ್ನು ಹೇಳಿದರು ಹೈಸ್ಕೂಲ್ ಪಂಡಿತರು ಮ|| ಅಪ್ರಮೇಯ ಅಯ್ಯಂಗಾರ್ರು ಸಂಸ್ಕೃತ ಶ್ಲೋಕವನ್ನು ರಚಿಸಿ ಹೇಳಿ ಅದರ ಅರ್ಥವನ್ನು ಬಹು ಸ್ವಾರಸ್ಯವಾಗಿಯೂ ಹೃದಯಂಗಮವಾಗುವಂತೆಯೂ ವಿವರಿಸಿದರು ಅವರು ಮಾಡಿದ ಭಾಷಣದ ಆಶಯವೇನೆಂದರೆ—"ಮಹತ್ವಸ್ಯ ಸೌಲಭ್ಯಮಾಶಲ್ಯ ನಾಹುಃ" ಎಂಬಂತೆ ಮನುಷ್ಯನಿಗೆ ಮಹತ್ವದವಿಯು ಹೆಚ್ಚಿದ ಹಾಗೆಲ್ಲಾ ಸೌಲಭ್ಯಗುಣವು ಹೆಚ್ಚುತ್ತ ಬರುವುದು ಮಹತ್ವದವಿಗೆ ಭೂಷಣವೆನಿಸಿಕೊಳ್ಳುತ್ತದೆ ಪ್ರಕೃತ ನಮ್ಮ ಡೆಪ್ಯುಟಿ ಕಮಿಷನರವರು ತಮ್ಮ ಮಹತ್ವದವಿಯನ್ನು ವಿಶೇಷವಾದ ಸೌಲಭ್ಯದಿಂದ ಅಲಂಕರಿಸುತ್ತಲಿರುವರು ಇವರು ಸರ್ವ ಸುಲಭರಾಗಿ ಮಹತ್ವದವಿಯಲ್ಲೇನೋ ಇರುತ್ತಾರೆ ವೃದ್ಧಾಚಾರವನ್ನೇನಾದರೂ ಉಲ್ಲಂಘಿಸಿರುವರೋ ಎಂದರೆ ಅದೂ ಇಲ್ಲ ಶ್ಲಾಘ್ಯಗಳಾದ ತಮ್ಮ ವೃದ್ಧಾಚರಣೆಗಳಿಂದ ವಿಶೇಷವಾದ ತಮ್ಮ ಶಾಸ್ತ್ರಜ್ಞತ್ವವನ್ನು ತೋರ್ಪಡಿಸುತ್ತಲಿರುತ್ತಾರೆ ಇವರು ಸರ್ವ ಸುಲಭರಾಗಿ ಆಚಾರವಂತರಾಗಿರೋಣದರಿಂದ ಅಧಿಕಾರವರ್ಣವಿಲ್ಲದೆ ಅಶಕ್ತರಾಗಿರಬಹುದೋ ಎಂದರೆ ಅದೂ ಇಲ್ಲ ಸಮುದ್ರಮೋಹಾದಿಯಲ್ಲಿ ಇವರು ತಮ್ಮ ಆಳವನ್ನು ಇತರರಿಗೆ ತೋರ್ಪಡಿಸದೆ ಬಹು ಗಾಂಭೀರ್ಯದಿಂದ ತಮ್ಮ ಅಧಿಕಾರದ ಗುಣವನ್ನು ಸಾರ್ಥಕಪಡಿಸುತ್ತಲಿರುವರು ಹೀಗಿರೋಣದರಿಂದ ಪರಿಶುದ್ಧವಾದ "ಸುಬ್ರಹ್ಮಣ್ಯ" ಎಂಬ ಹೆಸರಿನಿಂದ ವಾಚ್ಯರಾಗಿ, ಕಲ್ಯಾಣ ಗುಣಗಳಿಂದ ಪೂರ್ಣರಾಗಿ, ಅತಯೇವ ಸತ್ಪುರುಷರಿಗೆ ಆಶ್ರಯಸ್ಥಾನರಾಗಿರುವ ಈ ಮಹನೀಯರಲ್ಲಿ ಸದ್ಗುಣೈಶ್ವರ್ಯ ಪರಿಪೂರ್ಣನಾದ ಪರಮೇಶ್ವರನು ಒಂದರಮೇಲೊಂದರಂತೆ ಶ್ರೇಯಸ್ಸುಗಳ ಸಂತತಿಗಳನ್ನು ವಿಶೇಷವಾಗಿ ಯಾವಾಗಲೂ ಉಂಟುಮಾಡುತ್ತಲಿರಲಿ

ಅನಂತರ ಇಲ್ಲಿನ ಗಾಯನ ಸಮಾಜದವರು ವೀಣಾಗಾನವನ್ನು ಮಾಡಿ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರ ಮತ್ತು ಸಭಿಕರ ಮನಸ್ಸನ್ನು ಸಂತೋಷಪಡಿಸಿದರು ಕಾಫಿ ಪ್ಲಾಂಟರ್ ಮ|| ಶ್ರೀನಿವಾಸರಾಯರು ಇಂಗ್ಲೀಷಿನಲ್ಲಿ ಭಾಷಣ ಮಾಡಿ ಡೆಪ್ಯುಟಿ ಕಮಿಷನ್‌ರವರ ಗುಣಕಥನ ಮಾಡಿದರು ಇದಾದ ಮೇಲೆ ಮಿ|| ಸುಬ್ರಹ್ಮಣ್ಯ ಅಯ್ಯರವರು ಪುರಜನಗಳು ಮಾಡಿದ ಈ ಉಪಚಾರಗಳನ್ನೆಲ್ಲಾ ಪ್ರೀತಿಯಿಂದ ಸ್ವೀಕರಿಸಿ ಅವರಿಗೆ ಪ್ರತಿವಂದನೆಗಳನ್ನು ಸಲ್ಲಿಸಿದರು ಸಭೆಯು ಬರಖಾಸ್ತಾಗಿ ಸಭಿಕರು ಹೊರಗೆ ಬರಲು ಬಾಣ ಬಿರುಸುಗಳ ಪ್ರದರ್ಶನವು ನಡೆದು, ಎಲ್ಲರೂ ತಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರ ಶೀಲಸ್ವಭಾವಗಳನ್ನು ಸ್ಮರಿಸುತ್ತಾ ತೆರಳಿದರು

ತಾಲ್ಲೋಕು ವರ್ತಮಾನ

ಹಾಸನ —ಬಿಸಿಲಿನ ತಾಪವು ಸಹಿಸಲಸಾಧ್ಯವಾಗಿದೆ ಕಾಲರಾ, ಪ್ಲೇಗ್, ಸೀತಾಳಸಿಡುಬು, ದಡಾರಗಳು ಸುತ್ತಮುತ್ತಣ ಹಳ್ಳಿಗಳಲ್ಲಿ ವ್ಯಾಪಿಸಿವೆ ಅರಸಿಕೆರೆಯಲ್ಲಿ ಕಾಲರಾ ಬಹಳ ಜೋರಾಗಿರುವದೆಂದು ವರ್ತಮಾನವುಂಟು ಅಲ್ಲಿಂದ ಇಲ್ಲಿಗೆ ಸಮೀಪವಾಗಿರುವ ಸಂಕಲಾಪುರವೆಂಬ ಹಳ್ಳಿಗೆ ಬಂದವನೊಬ್ಬನು ಅದೇ ಜಾಡ್ಯದಿಂದ ಮೃತಪಟ್ಟನು ಹೊಸಕೊಪ್ಪಲಿನಲ್ಲಿ ಇಲಿಗಳು ಸಾಯುತ್ತಿವೆ ಮತ್ತು ಒಬ್ಬರಿಬ್ಬರು ಆಗಲೇ ಪ್ಲೇಗ್ ರೋಗದಲ್ಲಿ ಕಾಲವಾದರೆಂದು ತಿಳಿಯಬಂದಿದೆ ಅಲ್ಲಿನವರು ಊರ ಹೊರಗೆ ಷೆಡ್ಡುಗಳನ್ನು ಕಟ್ಟಿ ಗ್ರಾಮವನ್ನು ಬಿಡುವ ಏರ್ಪಾಡುಮಾಡುತ್ತಿರುವರು ರೋಗ ವ್ಯಾಪಿಸುವದಕ್ಕೆ ಮುಂಚೆ ಬಿಟ್ಟರೆ ಬಹಳ ಉತ್ತಮ ಸೋಂಕು ಹರಡಿಕೊಂಡ ನಂತರ ಊರು ಬಿಟ್ಟರೂ ಪ್ರಯೋಜನವಿಲ್ಲ —ದಿನೇ ದಿನೇ ಚಡಾವು ಆಗುತ್ತಿರುವ ದಿನಸಿ ಧಾರಣೆಗಳು ಭಯವನ್ನು ಹುಟ್ಟಿಸುವವು ಇದಕ್ಕೆ ಪರಿಹಾರವೇನೋ ತಿಳಿಯದು —ಇಲ್ಲಿ ನಾಲ್ಕು ವರುಷಗಳಿಂದ ವೆಸ್ಲಿಯನ್ ಮಿಷನ್ ಕಾರ್ಯಗಳನ್ನು ನಿರ್ವಹಿಸುತ್ತಿದ್ದ ರೆವ್ ಹೆಚ್ ಸ್ಪೆನ್ಸರ್ ದೊರೆಯವರು ವರ್ಗವಾಗಿ ಮೈಸೂರು ಹಾರ್ಡ್ವಿಕ್ ಕಾಲೇಜಿನ ಅಧ್ಯಕ್ಷರಾಗಿ ಹೋದರು ಕಳೆದ ಬುಧವಾರ 2 ನೇ ತಾ ಸಾಯಂಕಾಲ 4 ಗಂಟೆಗೆ ಇವರನ್ನೂ, ಇವರ ದೊರೆಸಾನಿಯವರನ್ನೂ ಇಲ್ಲಿನ ಕ್ರೈಸ್ತ ಮಂಡಲಿಯವರೂ ಸ್ಕೂಲ್ ಉಪಾಧ್ಯಾಯರೂ ಬ್ಯಾಂಡ್ ವಾದ್ಯ ಸಮೇತ ತಮ್ಮ ದೇವಾಲಯಕ್ಕೆ ಕರೆದುಕೊಂಡು ಹೋಗಿ ಅವರಿಗೆ ತಮ್ಮ ಕೃತಜ್ಞತೆ, ವಿಶ್ವಾಸ, ಪ್ರೀತಿಗಳನ್ನು ತೋರಿಸಿ ಒಂದು ವಂದನಾ ಪತ್ರಿಕೆಯನ್ನರ್ಪಿಸಿದರು ಘನ ಸ್ಪೆನ್ಸರ್ ಬೋಧಕರು ಪ್ರೀತಿ ಸಹಿತವಾದ ಆ ವಂದನಾ ಪತ್ರಿಕೆಯನ್ನು ಸ್ವೀಕರಿಸಿ, ಸಮಯೋಚಿತವಾದ ಮಧುರಭಾಷಣವನ್ನು ಮಾಡಿ ಬುದ್ಧಿವಾದಗಳನ್ನು ಹೇಳಿದರು ಮತ್ತು ಆ ಸಂದರ್ಭದಲ್ಲೇ ಈ ಮಹನೀಯರ ಸ್ಥಾನಕ್ಕೆ ಇಲ್ಲಿಗೆ ಬಂದಿರುವ ಘನ ಪಿಟ್ರೀಕ್‌ಬ್ಯಾಂಕ್ ಬೋಧಕರನ್ನೂ, ಅವರ ಪತ್ನೀರವರನ್ನೂ ಕರೆದುತಂದು ಅವರಿಗೆ ಸುಸ್ವಾಗತವನ್ನು ಬಯಸಿದರು

ವಿದೇಶ ವೃತ್ತಾಂತಗಳು.

ಜರ್ಮನಿ ಗವರ್ನ್‌ಮೆಂಟಿನವರು ಯುದ್ಧದ ಫಂಡನ್ನು ವ್ಯಾಪಾರಕ್ಕಾಗಲಿ ಬ್ಯಾಂಕುಗಳಿಗಾಗಲಿ ಹಾಕದೆ ಭಂಗಾರದ ಗಟ್ಟಿಗಳನ್ನು ಮಾಡಿ ಖಜಾನೆಯಲ್ಲೇ ಇಟ್ಟುಕೊಂಡಿರಬೇಕೆಂದು ತೀರ್ಮಾನಮಾಡಿದಾರೆ ಈ ಫಂಡಿನಲ್ಲಿ ಈಗ 36 ಕೋಟಿ ದ್ರವ್ಯವಿರುತ್ತದೆ

* * *

ಜಪಾನ್ ರಾಜವರ್ಗದವರ ಉದ್ಯಾನವನವಾಗಿದ್ದ ಸುಮಾಜೂ ಎಂಬುವುದು ಬೆಂಕಿ ಬಿದ್ದು ಸುಟ್ಟುಹೋಯಿತು ಒಂದು ಅರಮನೆ ಮಾತ್ರ ಉಳುಕೊಂಡಿದೆ ಅನೇಕ ಭಾರೀ ಕಟ್ಟಡಗಳು ಸುಟ್ಟು ಬೂದಿಯಾದವು ಇದರಿಂದ 105 ಲಕ್ಷ ರೂಪಾಯಿ ನಷ್ಟವಾಗಿರುವಂತೆ ತಿಳಿದುಬಂದಿದೆ

* * *

ಕಳೆದ ವರುಷ ಆಫ್ರಿಕದ ಉತ್ತರ ಭಾಗದಲ್ಲಿರುವ ಟ್ರಿಪೋಲಿಯಲ್ಲಿ ಟರ್ಕಿಯವರಿಗೂ ಇಟಲಿಯವರಿಗೂ ಯುದ್ಧವಾಗಿ ಟ್ರಿಪೋಲಿಯು ಇಟಲಿಯವರಿಗೆ ಸೇರಿತಷ್ಟೆ ಆ ಯುದ್ಧಗಳಲ್ಲಿ ಇಟಲಿಯವರ ಸೈನ್ಯದಲ್ಲಿ 92 ಮಂದಿ ಹುದ್ದೇದಾರರೂ 1,391 ಮಂದಿ ಸಿಪಾಯಿಗಳೂ ಮೃತಪಟ್ಟರೆಂದು ಸರ್ಕಾರದವರು ಪ್ರಕಟಮಾಡಿದಾರೆ

* * *

ಜಾವಾ ದ್ವೀಪದಲ್ಲಿ ಗೋಕಾಯಿಗಳನ್ನೂ ವ್ಯವಸಾಯವನ್ನೂ ಅಭಿವೃದ್ಧಿಗೆ ತರುವುದಕ್ಕೋಸ್ಕರ ಡಚ್ ಸರ್ಕಾರದವರು ಎರಡು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿ ಮಿ| ಫಿಲಿಪ್ ಎಂಬಾತನನ್ನು ಹಿಂದುಸ್ಥಾನಕ್ಕೆ ಕಳುಹಿಸಿರುವರು ಈತನು ಈ ರಾಷ್ಟ್ರದಲ್ಲಿ ಸಂಚಾರ ಮಾಡಿ ಒಳ್ಳೊಳ್ಳೆ ಗೋಕಾಯಿಗಳನ್ನು ಕೊಂಡು ಜಾವಾಕ್ಕೆ ಸಾಗಿಸುತ್ತಿದಾನೆ

* * *

ದಕ್ಷಿಣಕ್ಕೆ ಸೇರಿದ ಇಂಡೀಸ್ ದ್ವೀಪಗಳ ಪೈಕಿ ಎಯಾಮ್, ಸಾಂಗೀರ್, ತಾಲೌಟ್ ಎಂಬೀ ದ್ವೀಪಗಳಲ್ಲಿ ಕಳೆದ ಮಾರ್ಚಿ ತಾ 11 ರಲ್ಲಿ ಬಹು ಭಯಂಕರವಾದ ಭೂಕಂಪವು ಸಂಭವಿಸಿತು ಒಂದು ಗ್ರಾಮವು ಸಂಪೂರ್ಣವಾಗಿ ನಾಶಹೊಂದಿ, 150 ಜನರು ಜೀವರಹಿತ ಭೂಮಿಯೊಳಗೆ ಸಿಕ್ಕಿ ಮೃತಪಟ್ಟರು ಆಸ್ತಿಪಾಸ್ತಿಗಳು ವಿಶೇಷ ನಷ್ಟವಾಗಿರುತ್ತವೆ

* * *

ಅಮೇರಿಕಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳ ರಾಜಧಾನಿಯಾದ ನ್ಯೂಯಾರ್ಕ್ ಪಟ್ಟಣದಲ್ಲಿ 30 ರಿಂದ 40 ವರುಷವೊಳಗಿರುವಂಥಾ ಇಪ್ಪತ್ತು ಮಂದಿ ಸ್ತ್ರೀಯರನ್ನು ಪೋಲೀಸ್ ಕೆಲಸಗಳಿಗೆ ನೇಮಕ ಮಾಡಿಕೊಳ್ಳಬೇಕೆಂದು ಏರ್ಪಾಡಾಗಿದೆ ಇವರು ಗಂಡಸರಂತೆಯೇ ಪೋಲೀಸ್ ಉಡುಪನ್ನು ಹಾಕಿಕೊಳ್ಳಬೇಕು ಸಂಬಳದಲ್ಲಿ ವ್ಯತ್ಯಾಸವಿಲ್ಲ ಸ್ತ್ರೀಯರು ಹೆಚ್ಚಾಗಿ ಸೇರಿ ವಿಹರಿಸುವ ಸ್ಥಳಗಳಲ್ಲೂ, ಉದ್ಯಾನವನಗಳಲ್ಲೂ, ಚಿತ್ರಶಾಲೆಗಳಲ್ಲೂ, ರಾಜಬೀದಿಗಳಲ್ಲೂ ಹೆಂಗಸರನ್ನೂ ಮಕ್ಕಳನ್ನೂ ನೋಡಿಕೊಳ್ಳುವುದಕ್ಕೋಸ್ಕರ ಈ ಪೋಲೀಸ್ ಸಿಬ್ಬಂದಿಯನ್ನು ನೇಮಕಮಾಡುತ್ತಾರೆ

* * *

ಇಂಗ್ಲಾಂಡಿನಲ್ಲಿ ಕೆಲವು ಸ್ತ್ರೀಯರು ತಮಗೆ ಚುನಾವಣೆಯ ಅಧಿಕಾರವನ್ನು ಕೊಡಬೇಕೆಂದು ಹೋರಾಡುತ್ತಿದಾರಷ್ಟೆ ಒಬ್ಬ ಮಂತ್ರಿಯ ಮನೆಗೆ ಬೆಂಕಿ ಹಚ್ಚಿ ಸುಟ್ಟು ಹಾಕಿದೆನೆಂದು ಒಪ್ಪಿಕೊಂಡ ಒಬ್ಬ ಹೆಂಗಸಿಗೆ ನ್ಯಾಯಾಧಿಪತಿಯು ಮೂರು ವರುಷ ಕೈದ್ ಸಜವನ್ನು ವಿಧಿಸಿದರು ಇಂಥಾ ಹೆಂಗಸರ ಕಾಟವು ಇನ್ನೂ ಶಮನವಾಗಲಿಲ್ಲ ಕಳೆದ ವಾರ ಕೆಲವು ಹೆಂಗಸರು ಒಂದೆರಡು ಮನೆಗಳಿಗೆ ಬೆಂಕಿ ಹಾಕಿದರು ಒಂದು ಖಾಲಿ ರೈಲ್ ಗಾಡಿಯನ್ನು ಸುಟ್ಟು ಇರುತ್ತಾರೆ ಅಂಗಡಿ ಮುಂಗಟ್ಟುಗಳ ಬಾಗಿಲು, ಕಿಟಕಿ, ಕನ್ನಡಿ ಮುಂತಾದವುಗಳನ್ನು ಒಡೆಯುತ್ತಲೂ, ಟೆಲಿಗ್ರಾಫ್ ಟೆಲಿಫೋನ್ ತಂತಿಗಳನ್ನು ಕತ್ತರಿ ಹಾಕುತ್ತಲೂ ಇರುವರು ಈ ಪೈಕಿ ಕೆಲವು ಸ್ತ್ರೀಯರನ್ನು ಪೋಲೀಸಿನವರು ಹಿಡಿದು ಮೊಕದ್ದಮೆ ಮಾಡಿದಾರೆ

ಸಿಡುಬು ಏಳುವ ಕಾಲದಲ್ಲಿ ದೇವಿಯನ್ನೆಬ್ಬಿಸಬಹುದೋ?

ಅಂಟುವ್ಯಾಧಿಗಳನ್ನು ತಡೆಯುವ ಶಕ್ತಿಯು ಸ್ವಾಭಾವಿಕವಾಗಿ ಕೆಲವರಲ್ಲಿ ಇರುವುದು, ಮತ್ತೆ ಕೆಲವರಲ್ಲಿ ಇದು ಇರುವುದಿಲ್ಲ. ಆದರೆ ಸಿಡುಬುವ್ಯಾಧಿಯನ್ನು ತಡೆಯುವ ಸ್ವಾಭಾವಿಕ ಶಕ್ತಿಯು ಸಾಧಾರಣವಾಗಿ ಯಾರಲ್ಲಿಯೂ ಇರುವುದೇ ಇಲ್ಲ. ಈ ಕಾರಣದಿಂದ ಪ್ರತಿ ಒಬ್ಬರೂ ಈ ವ್ಯಾಧಿಯನ್ನು ಅನುಭವಿಸಲೇಬೇಕು, ಇಲ್ಲವೇ ವ್ಯಾಧಿಯನ್ನು ತಡೆಯುವ ಸಂರಕ್ಷಣಾ ಶಕ್ತಿಯನ್ನು ಪಡೆಯಬೇಕು, ಅಂದರೆ ದೇವಿಯನ್ನು ಹಾಕಿಸಿಕೊಳ್ಳಬೇಕು. ಇದಕ್ಕೆ ಮುಂದೆ ಹೇಳುವ ಉದಾಹರಣೆಯೇ ಪ್ರತ್ಯಕ್ಷ ಸಾಕ್ಷಿಯಾಗಿದೆ.

ಬೀರೂರು ಗ್ರಾಮದಲ್ಲಿ ೪೦ ಒಡ್ಡರ ಸಂಸಾರದವರು ಊರ ಹೊರಗೆ ಗುಡಿಸಲುಗಳಲ್ಲಿ ವಾಸಮಾಡಿಕೊಂಡಿದ್ದಾರೆ. ಇವರ ಗುಡಿಸಲುಗಳು ಒಂದಕ್ಕೊಂದು ಬಹಳ ಸಮೀಪದಲ್ಲಿ ಇರುವವು. ಅಲ್ಲಿ ಸಿಡುಬುವ್ಯಾಧಿಯು ಕಳೆದ ಮಾರ್ಚಿ ತಾ 1 ರಲ್ಲಿ ಒಂದು ಮಗುವಿಗೆ ಕಾಣಿಸಿಕೊಂಡು ಅಂದಿನಿಂದ ದಿನಕ್ಕೆ ಒಬ್ಬರಿಬ್ಬರಿಗೆ ಏಳುವುದಕ್ಕೆ ಆರಂಭಿಸಿದ್ದು, ನನಗೆ ತಾ 8 ಕ್ಕೆ ತಿಳಿದು ಆ ಕೂಡಲೆ ಅಲ್ಲಿನ ಮಕ್ಕಳಿಗೆಲ್ಲಾ ದೇವಿಯನ್ನೆಬ್ಬಿಸಿ, ಕೊನೆಗೆ ಲೆಕ್ಕಗಳನ್ನು ಕೂಡಿಸಿ ನೋಡಿದಾಗ 14 ವರುಷದ ಕೆಳಗಿನ ವಯಸ್ಸಿನ [illegible] ಇದ್ದರು. ಇವರಲ್ಲಿ 47 ಮಂದಿಗೆ ಕೆಲವು ಕಾಲದ ಹಿಂದೆ ಸಿಡುಬು ಎದ್ದಿತ್ತು. ಕಳೆದ ಮಾರ್ಚಿ ತಾ 1 ರಿಂದ ಈಚೆಗೆ ಅಲ್ಲಿ 33 ಮಕ್ಕಳಿಗೆ ಸಿಡುಬು ಎದ್ದು 1 ಮಗುವು ಸತ್ತಿತ್ತು. ಇವರಲ್ಲಿ ಅನೇಕರಿಗೆ ಮಚ್ಚೆಗಳಿಂದ ಮುಖ ವಿಕಾರವಾಗಿರುತ್ತದೆ. 14 ಮಕ್ಕಳಿಗೆ ದೇವಿಯು ಕೆಲವು ಕಾಲಕ್ಕೆ ಹಿಂದೆ ಹಾಕಲ್ಪಟ್ಟಿತ್ತು. ಇವರ ತೋಳುಗಳ ಮೇಲೆ ದೇವಿಯನ್ನೆಬ್ಬಿಸಿದ್ದ ಮಚ್ಚೆಗಳ ಒಟ್ಟು ಸಂಖ್ಯೆಗಳು ಈ ರೀತಿಗೆ ಇದ್ದವು —ಎರಡು ಮಕ್ಕಳಿಗೆ 1 ಮಚ್ಚೆ, ಮೂವರಿಗೆ 2 ಮಚ್ಚೆಗಳು, ಒಂದು ಮಗುವಿಗೆ 3 ಮಚ್ಚೆಗಳು, 5 ಕ್ಕೆ 4 ಮಚ್ಚೆಗಳು, 1 ಕ್ಕೆ 5 ಮಚ್ಚೆಗಳು 2 ಕ್ಕೆ 6 ಮಚ್ಚೆಗಳು. ಈ ಪೈಕಿ ಒಂದು ಮಚ್ಚೆ ಗುರುತು ಇದ್ದ ಮಗುವಿಗೆ ಮಾತ್ರ ಈಗ ಸಿಡುಬು ಎದ್ದಿತ್ತು.

ನಾನು ದೇವಿಯನ್ನೆಬ್ಬಿಸಿದ 47 ಮಕ್ಕಳಲ್ಲಿ ಇಬ್ಬರಿಗೆ ಸಫಲವಾಗಲಿಲ್ಲ. ಈ 47 ಮಕ್ಕಳಲ್ಲಿ 10 ಜನರಿಗೆ ಸಿಡುಬು ಎದ್ದಿತು. ಇವರಲ್ಲಿ ಎಬ್ಬಿಸಿದ ದೇವಿಯು ಸಫಲವಾಗದ ಎರಡು ಮಕ್ಕಳೂ ಸೇರಿವೆ. ಇವರಲ್ಲಿ ಎರಡು ಮಕ್ಕಳಿಗೆ 5 6 ಗುಳ್ಳೆಗಳೂ, 4 ಮಕ್ಕಳಿಗೆ 20 30 ಗುಳ್ಳೆಗಳೂ, ಉಳಿದ 4 ಮಕ್ಕಳಿಗೆ ಸಿಡುಬು ಎಲ್ಲರಿಗೂ ಏಳುವಂತೆಯೂ ಎದ್ದಿತು. ಕೆಲವು ಮನೆಗಳಲ್ಲಿ 9 10 ದಿವಸಗಳ ಹಿಂದೆ ಸಿಡುಬು ಎದ್ದಿದ್ದರೂ ಆ ಮನೆಯಲ್ಲಿನ ಇತರ ಮಕ್ಕಳಿಗೆ ದೇವಿಯನ್ನೆಬ್ಬಿಸಿರುವೆನು. ಅಂಥಾ ಮಕ್ಕಳಿಗೆ ಸಿಡುಬು ಏಳದೆ ಅವು ಆರೋಗ್ಯವಾಗಿರುತ್ತವೆ.

ದೇವಿಯನ್ನು ಹಾಕಿಸದೆ ಉದಾಸೀನಮಾಡಿದವರ ಮಕ್ಕಳಿಗೆಲ್ಲಾ ಸಿಡುಬು ಎದ್ದಿತು. ಒಂದು ಮಗುವಾದರೂ ಈ ವ್ಯಾಧಿಯಿಂದ ತಪ್ಪಿಸಿಕೊಳ್ಳಲಿಲ್ಲ. ಇದರಿಂದ—(1) ಪ್ರತಿ ಒಂದು ಮಗುವೂ ಈ ದಿನವಲ್ಲದಿದ್ದರೆ ನಾಳೆಯಾದರೂ ಸಿಡುಬುವ್ಯಾಧಿಯನ್ನು ಅನುಭವಿಸಲೇಬೇಕೆಂಬುದೂ, ಈ ಕಾರಣದಿಂದ ಕೂಡಿದ ಮಟ್ಟಿಗೂ ಜಾಗ್ರತೆಯಾಗಿ ಮಗುವಿಗೆ ದೇವಿಯನ್ನೆಬ್ಬಿಸಬೇಕೆಂಬುದೂ, (2) ಸಿಡುಬು ಏಳುವ ಕಾಲದಲ್ಲಿಯೂ ಸಹ ಮಕ್ಕಳಿಗೆ ದೇವಿಯನ್ನೆಬ್ಬಿಸುವುದರಿಂದ ಅಪಾಯವಿಲ್ಲವೆಂಬುದೂ, (3) ದೇವಿಯನ್ನೆಬ್ಬಿಸಿ 1 2 ಮಚ್ಚೆಗಳು ನಿಂತಿರುವ ಮಕ್ಕಳಿಗಿಂತ 4 6 ಮಚ್ಚೆಗಳು ನಿಂತಿರುವ ಮಕ್ಕಳಿಗೆ ಸಿಡುಬುವ್ಯಾಧಿಯಿಂದ ಸಂರಕ್ಷಣಾಶಕ್ತಿಯು ಹೆಚ್ಚಾಗಿರುವುದೆಂಬುದೂ ಸ್ಪಷ್ಟಪಡುತ್ತದೆ.

ಮೇಲಂಡ ಮೂರನೆಯ ವಿಚಾರ ನಿಂಡಿತಪಡಿಸುವುದಕ್ಕೆ ಬೇಕಾದಷ್ಟು ಇವರಲ್ಲಿ ಆಧಾರವಿಲ್ಲದಿರುವುದರಿಂದ ಲಂಡನ್ ಪಟ್ಟಣದಲ್ಲಿ ಒಬ್ಬ ಡಾಕ್ಟರವರು ದೇವಿಯನ್ನೆಬ್ಬಿಸಿದ 5,000 ಮಕ್ಕಳನ್ನು 20 ವರುಷ ಕಾಲ ಪರೀಕ್ಷಿಸಿ ಬರೆದಿರುವ ಕೆಳಗಿನ ಪಟ್ಟಿಯಿಂದ ಇದು ಗೊತ್ತಾಗುತ್ತದೆ —I ದೇವಿಯನ್ನೆಬ್ಬಿಸದೆ ಇದ್ದವರಲ್ಲಿ ಸಿಡುಬು ಎದ್ದವರಲ್ಲಿ 100 ಕ್ಕೆ 35 ಜನರು ಸತ್ತಿರುವರು. II ದೇವಿಯನ್ನೆಬ್ಬಿಸಿದ್ದರೂ ಎದ್ದ ಗುರುತು ಇಲ್ಲದವರಲ್ಲಿ 100 ಕ್ಕೆ 23 ಮಂದಿ ಸತ್ತರು. III ದೇವಿ ಎಬ್ಬಿಸಿ ಅದರ ಮಚ್ಚೆ ಇರುವವರಲ್ಲಿ (1) ಒಂದು ಮಚ್ಚೆ ಗುರುತು ಇರುವವರಲ್ಲಿ ದೇವಿ ಎದ್ದ 100 ಜನರಿಗೆ 7 ಜನರೂ, (2) ಎರಡು ಮಚ್ಚೆ ಗುರುತು ಇರುವವರಲ್ಲಿ ದೇವಿ ಎದ್ದ 100 ಜನರಿಗೆ 4 ಜನರೂ, (3) ಮೂರು ಮಚ್ಚೆ ಗುರುತು ಇರುವವರಲ್ಲಿ ದೇವಿ ಎದ್ದ 100 ಜನರಿಗೆ ಒಬ್ಬನೂ, (4) ನಾಲ್ಕು ಮತ್ತು ಅದಕ್ಕೆ ಹೆಚ್ಚಾದ ಗುರುತು ಇರುವವರಲ್ಲಿ ದೇವಿ ಎದ್ದ 200 ಜನರಿಗೆ ಒಬ್ಬನೂ ಕಾಲವಾದರು.

ಎಂ ಗುರುರಾವ್,
ಸಬ್ ಅಸಿಸ್ಟೆಂಟ್ ಸರ್ಜನ್, ಬೀರೂರು

ಪರಸ್ಪರ ಸಹಾಯವು

ಚನ್ನಗಿರಿ ತಾ ಅಮಲ್ದಾರರವರ ಅನುಭವದ ಹೇಳಿಕೆಯು

ಪರಸ್ಪರ ಸಹಾಯವನ್ನು ಹೊಂದಬೇಕಾದರೆ ಪ್ರಜೆಗಳು ಸಂಘಗಳಾಗಿ ಸೇರಿ ಕೆಲಸಮಾಡತಕ್ಕದ್ದು ಬಹಳ ಅವಶ್ಯ. ಅನೇಕ ಜನರು ಒಂದು ಸಂಘವಾಗಿ ಸೇರಿ ಕೆಲಸಮಾಡಬೇಕಾದರೆ ಅವರ ಆಚರಣೆಯ ಬಗ್ಗೆ ಒಂದು ಕಾನೂನು ಇರತಕ್ಕದ್ದು ಅವಶ್ಯ. ಕಾನೂನು ಇಲ್ಲದೆ ಮಾಡತಕ್ಕ ಕೆಲಸವು ರೈಲ್ವೆ ಗೈಡ್ ಇಲ್ಲದೆ ರೈಲಿನಲ್ಲಿ ಮಾಡುವ ಪ್ರಯಾಣದಂತೆಯೂ, ಕಟ್ಟೆಯಿಲ್ಲದ ಕೆರೆಗೆ ಬರುವ ನೀರಿನಂತೆಯೂ ಪರಿಣಮಿಸುವುದು. ಆದ್ದರಿಂದ ಅನ್ಯೋನ್ಯಸಹಾಯ ಸಂಘಗಳ ಕಾನೂನು ಎಂಬ ಲಾವನ್ನು 1904 ನೇ ಇಸವಿಯಲ್ಲಿ ಇಂಡಿಯಾ ಗವರ್ನಮೆಂಟಿನವರು ಹಿಂದುಸ್ಥಾನದಲ್ಲಿ ಜಾರಿಗೆ ತಂದರು. ಅದರ ಪ್ರಯೋಜನವನ್ನು ಈ ಸೀಮೆಯ ಪ್ರಜೆಗಳು ಹೊಂದುವುದರಲ್ಲಿ ಎಷ್ಟು ಮಾತ್ರವೂ ಸಾವಕಾಶವಾಗಬಾರದೆಂಬ ತಾತ್ಪರ್ಯದಿಂದ ನಮ್ಮ ಶ್ರೀಮನ್ ಮಹಾರಾಜಾಸಾಹೇಬ್ ಬಹದ್ದೂರ್ರವರ ಸರ್ಕಾರದವರೂ 1905 ನೇ ಇಸವಿಯಲ್ಲಿ ಅಂಥಾ ಒಂದು ಕಾನೂನನ್ನು ಏರ್ಪಡಿಸಿ ನಮ್ಮ ಸೀಮೆಯಲ್ಲಿ ಜಾರಿಗೆ ತಂದರು. ಇದರ ಉದ್ದೇಶವು ಜನಗಳಲ್ಲಿ ಐಕಮತ್ಯದಿಂದ ಪರಸ್ಪರ ಸಹಾಯತನ್ನೂ, ಮಿತವ್ಯಯಬುದ್ಧಿಯನ್ನೂ, ತನ್ಮೂಲಕ ಸ್ವಾವಲಂಬನೆಯನ್ನೂ ಉಂಟುಮಾಡಿ, ಸದರಿ ಕೆಲಸ ಕಾರ್ಯಗಳನ್ನು ನಡಸುವಂತೆ ಮಾಡೋಣದರಿಂದ ಉನ್ನತಸ್ಥಿತಿಗೆ ಬರಬೇಕೆಂಬುವದೇ ಅನ್ಯೋನ್ಯ ಸಹಾಯ ಸಂಘಗಳ ಅಭಿಪ್ರಾಯವಾಗಿದೆ. ಕೆಲವರು ತಪ್ಪು ಅಭಿಪ್ರಾಯಪಡುವಂತೆ ಪ್ರಜೆಗಳು ತಮ್ಮ ಹಣವನ್ನು ವಿನಿಯೋಗಮಾಡುವುದರಲ್ಲಿ ಅವರ ಮೇಲೆ ಯಾವ ವಿಧವಾದ ನಿರ್ಬಂಧವನ್ನೂ ಉಂಟುಮಾಡಬೇಕೆಂಬುವುದು ಈ ಕಾನೂನಿನ ಉದ್ದೇಶವಲ್ಲ. ಅನೇಕ ಪ್ರಜೆಗಳು ಒಂದಾಗಿ ಕಲೆತು ಬಂಡವಾಳವನ್ನು ಒದಗಿಸಿಕೊಂಡು ಕೆಲಸ ಮಾಡುವುದರಲ್ಲಿ ಅವರಿಗೆ ತಕ್ಕ ಬುದ್ಧಿವಾದಗಳನ್ನು ಕೊಡುವುದಕ್ಕೂ, ಅವರ ಹಣವು ಅಪವ್ಯಯವಾಗದಂತೆ ಮಾಡಲಿಕ್ಕೂ, ಅಂಥಾ ಹಣವು ಮುಳುಗಿಹೋಗುವ ಸಂದರ್ಭಗಳಲ್ಲಿ ಅದನ್ನು ಸಂಘಕ್ಕೆ ಬರಮಾಡಿಕೊಡುವುದಕ್ಕೂ ಸರ್ಕಾರದವರು ನಿಲ್ಲುವರೇ ಹೊರ್ತು ಅಂಥಾ ಬಂಡವಾಳದ ಮೇಲೆ ಅವರು ಯಾವ ವಿಧವಾದ ಅಧಿಕಾರವನ್ನೂ ಚಲಾಯಿಸಲಿಕ್ಕೆ ಕಾನೂನಿನಿಂದ ಅವರಿಗೆ ಅವಕಾಶವಿಲ್ಲ. ಈ ಕಾನೂನು ಬೆಂಗಳೂರು, ತುಮಕೂರು, ಕೋಲಾರ, ಮೈಸೂರು, ಹಾಸನ ಡಿಸ್ಟ್ರಿಕ್ಟುಗಳಲ್ಲಿ ಕ್ರಮೇಣ ಜಾರಿಗೆ ಬಂದು ಅದರ ಪ್ರಯೋಜನಗಳನ್ನು ಪ್ರಜೆಗಳು ಹೊಂದಲಿಕ್ಕೆ ಆರಂಭಿಸಿದಾರೆ.

ಮನುಷ್ಯನ ತಾಪತ್ರಯ ನಿವಾರಣೆಗೆ ಮುಖ್ಯವಾಗಿ ದ್ರವ್ಯಸಹಾಯ ಬೇಕಾಗಿದೆ. ಅವನು ಅಪೇಕ್ಷಿಸಿದಾಗ ಅವನಿಗೆ ಸಾಕಾದಷ್ಟು ಹಣ ದೊರೆತರೆ ಅವನು ತಾಪತ್ರಯವನ್ನು ನೀಗಿ, ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಂಡು ಬಹು ಮಟ್ಟಿಗೆ ಸುಖಪಡಬಲ್ಲನು. ಅವಶ್ಯವಾದ ಕಾಲದಲ್ಲಿ ಹಣ ದೊರೆಯದೆ, ದೊರೆತಾಗ್ಯೂ ದುಬಾರಿ ಬಡ್ಡಿ ತೆರಬೇಕಾಗಿದ್ದದ್ದನ್ನು ಆಲೋಚಿಸಿ ರೈತನು ತಾನು ಬೆಳೆದ ದವಸದಿಂದ ಕೆಲವು ಕಾಲದ ಮೇಲೆ ಬರುವ ನಫೆಯನ್ನು ಹೊಂದಬಹುದಾ[illegible]ಕಾಗಿ ಇದ್ದ ದವಸವನ್ನು ಅಲ್ಪ ಬೆಲೆಗೆ ಮಾರಿ ಲುಕ್ಸಾನು ಹೊಂದುತ್ತಿರುವನು.

ಪರಸ್ಪರ ಸಹಾಯ ಸಂಘಗಳ ಮೂಲಕವಾಗಿ ಪ್ರಜೆಗಳು ಅನೇಕ ವಿಧವಾದ ಅನುಕೂಲತೆಗಳನ್ನು ಕಲ್ಪಿಸಿಕೊಳ್ಳಲಿಕ್ಕೆ ಅವಕಾಶ ಉಂಟೆಂಬುವುದನ್ನು ಸ್ವಲ್ಪ ಮಟ್ಟಿಗೆ ತೋರಿಸಬೇಕಾಗಿದೆ. ಕಳೆದ ೧೯೧೦ ನೇ ಸೆಪ್ಟಂಬರ್ ತಿಂಗಳಲ್ಲಿ ಮಳೆ ಕಡಿಮೆಯಾದ ಕಾರಣ ಈ ತಾಲ್ಲೂಕಿನ ಫಸಲುಗಳು ಕೆಟ್ಟುಹೋದೀತೆಂಬ ಭೀತಿ ಪ್ರಾಪ್ತವಾದಾಗ ಫಸಲ್ ಆನವಾರಿ ಬಗ್ಗೆ ನಾನು ಗ್ರಾಮಾಂತರ ಸಂಚರಿಸುತ್ತಿರುವಲ್ಲಿ ಕೆಲವು ರೈತರು ಆ ವರ್ಷದ ಫಸಲು ಕೆಟ್ಟುಹೋದಲ್ಲಿ ತಮಗೆ ಪ್ರಾಪ್ತವಾಗಬಹುದಾದ ದುರವಸ್ಥೆಯನ್ನು ಕುರಿತು ಹೇಳಿಕೊಂಡರು. ಅಂಥಾ ಕ್ಷಾಮಪ್ರಾಪ್ತವಾದಾಗ್ಗೆ ರೈತರು ಹೆದರದೆ ಪರಾಪೇಕ್ಷೆಯಿಲ್ಲದೆ ಕ್ಷಾಮವನ್ನು ದೂರಮಾಡಲು ಪರಸ್ಪರಸಹಾಯದ ಮೂಲಕ ಒಂದು ಉಪಾಯವನ್ನು ಕಲ್ಪಿಸಿಕೊಳ್ಳತಕ್ಕದ್ದು ಅವಶ್ಯವೆಂದು ನನಗೆ ತೋರಿತು. ಆದ್ದರಿಂದ ಪ್ರತಿ ಗ್ರಾಮದಲ್ಲೂ ರೈತರು ಕಾಲಾನುಗುಣವಾಗಿ ಧಾರಣೆ ಹೆಚ್ಚಿದಾಗ ವಿಕರಿ ಮಾಡಲಿಕ್ಕೆ ಅವಕಾಶವಾಗದಂತೆ ಕೆಲವು ದವಸವನ್ನು ಶೇಖರಮಾಡಿ ಇಡತಕ್ಕದ್ದೂ, ಹಾಗೆ ಶೇಖರ ಮಾಡುವುದರಲ್ಲಿ ರೈತರಿಗೆ ಎಷ್ಟು ಮಾತ್ರವೂ ತೊಂದರೆಯಾಗದಂತೆ ಮಾಡತಕ್ಕದ್ದೂ, ಹಾಗೆ ಜಮಾಯಿಸಲ್ಪಡುವ ದವಸದಲ್ಲಿ ರೈತನಿಗೆ ಬೇಕಾದಾಗ ದವಸವನ್ನು ಸುಲಭ ಬಡ್ಡಿಗೆ ಸಾಲಾಕೊಟ್ಟು, ಅವನಿಗೆ ದವಸ ಒದಗಿದಾಗ ಅವನಿಂದ ಅದನ್ನು ಬರಮಾಡಿಕೊಂಡು ಲೇವಾದೇವಿ ನಡಿಸುತ್ತಾ, ಒಂದು ಗ್ರಾಮದಲ್ಲಿ ವಾಸಮಾಡುವ ಜನಗಳಿಗೆ ಒಂದು ವರ್ಷಕ್ಕೆ ಬೇಕಾಗುವಷ್ಟು ದವಸಕ್ಕಿಂತಲೂ ಜಾಸ್ತಿ ದವಸ ಶಿಲ್ಕು ನಿಂತಲ್ಲಿ ಆ ಜಾಸ್ತಿ ದವಸವನ್ನು ವಿಕರಿ ಮಾಡಿ ಅದರ ಹುಟ್ಟುವಳಿಯನ್ನು ಗ್ರಾಮಾಭಿವೃದ್ಧಿಯ ಕೆಲಸಗಳಿಗಾಗಲಿ, ಗ್ರಾಮಸ್ಥರಿಗೆ ಸಾಲಾ ಕೊಡುವುದಕ್ಕಾಗಲಿ ಉಪಯೋಗಿಸಿಕೊಳ್ಳುವಂತೆ ಮಾಡತಕ್ಕದ್ದೂ ಉತ್ತಮವೆಂದು ಕಂಡುಬಂತು.

ಅದರ ಮೇಲೆ ಈ ತಾಲ್ಲೂಕಿನ ರೈತರೆಲ್ಲರೂ ಬೇಸಾಯ ಒಂದಕ್ಕೆ ಒಂದು ಕೊಳಗದಂತೆ ತಮ್ಮ ತಮ್ಮ ಗ್ರಾಮದಲ್ಲಿ ಸ್ಥಾಪಿಸಲ್ಪಡುವ ದವಸದ ಬ್ಯಾಂಕಿಗೆ ಬಂಡವಾಳವನ್ನು ಒದಗಿಸಲಿಕ್ಕೂ, ಅದನ್ನು ಅಂಥಾ ಬ್ಯಾಂಕಿಗೆ ಮೆಂಬರಾಗತಕ್ಕವರಿಗೆ ಬೇಕಾದಾಗ 18 ಸೇರಿನ ಕೊಳಗ 1 ಕ್ಕೆ 6 ಸೇರು ಬಡ್ಡಿಯಂತೆ ಸಾಲ ಕೊಡುವುದಕ್ಕೂ, ಈ ಅಸಲು ಬಡ್ಡಿಯನ್ನು ಅವರಿಂದ ಮುಂದಲ ಸುಗಿ ಕಾಲದಲ್ಲಿ ಬರಮಾಡಿಕೊಳ್ಳಲಿಕ್ಕೂ, ಅವನು ಕೇವಲ ಬಡವನಾಗಿದ್ದಲ್ಲಿ ಅದನ್ನು ಮುಪತ್ತಾಗಿ ಬಿಟ್ಟುಕೊಡುವುದಕ್ಕೂ ಒಪ್ಪಿಕೊಂಡರು. ಹೀಗೆ ಪರಸ್ಪರ ಸಹಾಯದ ನಿಬಂಧನೆಗಳನ್ನನುಸರಿಸಿ ಸ್ಥಾಪಿಸಲ್ಪಟ್ಟ ದವಸದ ಬ್ಯಾಂಕುಗಳ ಆಡಳಿತದ ಬಗ್ಗೆ ಗ್ರಾಮಸ್ಥರ ಪೈಕಿ ಮುಖಂಡರಾದ 3 ಜನ ಪಂಚಾಯಿತರು ನೇಮಕವಾದರು. ಈ ರೀತಿ ಒದಗುವ ದವಸವನ್ನು ಶೇಖರಮಾಡಲು ಗ್ರಾಮಗಳಲ್ಲಿರಬೇಕಾದ ಚಾವಡಿಗಳು ಯೋಗ್ಯವಾದವುಗಳೆಂದು ತೀರ್ಮಾನಿಸಲ್ಪಟ್ಟಿತು. ದವಸವನ್ನು ಶೇಖರಿಸಲು ಚಾವಡಿಗಳಲ್ಲಿ ಒಂದು ಹಗೇವನ್ನು ಕಟ್ಟಿಸಬೇಕಾಗಿ ನಿರ್ಧರವಾಯಿತು. ಪ್ರತಿ ಒಂದು ಗ್ರಾಮದಲ್ಲಿಯೂ ಚಾವಡಿಯನ್ನು ಕಟ್ಟಿಸತಕ್ಕ ಬಗ್ಗೆ ಮುಪತ್ತಾಗಿ ಮರಮುಟ್ಟನ್ನು ಕೊಡಿಸಲು ನಮ್ಮ ಪ್ರೆಸಿಡೆಂಟರವರು ದೆಪ್ಯುಟಿ ಕಮೀಷನರಾಗಿ ಮುಜೂರು ಮಾಡಿರುತ್ತಾರೆ. ಈ ಏರ್ಪಾಡು ಅನುಸರಿಸಿ ಇದುವರೆವಿಗೂ ಈ ತಾಲ್ಲೂಕಿನಲ್ಲಿ 8,25 ಮೆಂಬರುಗಳಿಂದ ಒದಗಿಸಲ್ಪಟ್ಟ 304 ಖಂಡುಗ 12 ಕೊಳಗ ದವಸವುಳ್ಳ 164 ಬ್ಯಾಂಕುಗಳು ಚಾಲ್ತಿ ಸಾಲಿನಲ್ಲಿ ಸ್ಥಾಪಿಸಲ್ಪಟ್ಟವು. ಪ್ರಜೆಗಳು ಅನ್ಯೋನ್ಯಸಹಾಯವುಳ್ಳವರಾಗಿ ಕೆಲಸಮಾಡುತ್ತಾ ಬಂದರೆ ಯಾವುದು ತಾನೇ ಸಾಧ್ಯವಾಗಲಾರದು? ಮೇಲ್ಕಂಡಂತೆ ಒದಗಿರುವ ದವಸದ ಬೆಲೆಯು ಈಗಿನ ಧಾರಣೆ ಅನುಸರಿಸಿ 25,000 ರೂಪಾಯಿ ಆಗಿಯೂ 7 ಪರಸ್ಪರ ಸಹಾಯ ಸಂಘಗಳಿಂದಲೂ ಸೇರಿ ಈ ತಾರೀಖಿನವರಿಗೆ 18 ಮೆಂಬರುಗಳಿಂದ 15,712 ರೂಪಾಯಿ ಬಂಡವಾಳವು ಒದಗಿರುತ್ತದೆ.

ತಾಲ್ಲೂಕು ವರ್ತಮಾನಗಳು

ಕಡೂರು ತಾ|| ಯಗಟಕೆರೆ — ಬಿಸಿಲಿನ ತಾಪ ಹೆಚ್ಚುತ್ತಾ ಇದೆ. ಊರು ಮುಂದಿನ ಬಾವಿಯಲ್ಲಿ ನೀರು ಇಲ್ಲದೆ ಬಹಳ ಅನಾನುಕೂಲವಾಗಿದೆ. ಇಲ್ಲಿಗೆ ಸುಮಾರು 1½ ಮೈಲಿ ದೂರದಲ್ಲಿರುವ ವೇದಾವತಿ ನದಿಯಲ್ಲಿ ಪ್ರತಿ ದಿವಸವೂ ಪ್ರಜೆಗಳು ಹೆಗಲ ಮೇಲೂ, ತಲೆಯ ಮೇಲೂ ನೀರನ್ನು ಹೊತ್ತು ಬಹಳ ನೊಂದುಕೊಳ್ಳುತ್ತಾ ಇದಾರೆ. ಹೀಗೆ ಜೀವಿಸುವದು ಬಹಳ ಕಷ್ಟವಾಗಿದೆ. ಊರು ಮುಂದಿನ ಬಾವಿಯಲ್ಲಿ 15 ದಿನಕ್ಕೆ ಒಂದಾವರ್ತಿ ವ್ಯವಸಾಯಕ್ಕೆ 3 ಕೊಪದಂತೆ ನೀರನ್ನು ತಂಬಿಕೊಡುತ್ತಾರೆ. ನೀರಿನ ಕ್ಷಾಮವನ್ನು ಹೇಳುವದು ಬಹಳ ಅಸಾಧ್ಯವಾಗಿದೆ. ಇದಕ್ಕಾಗಿ ಗ್ರಾಮದ ಪಟೇಲ್ ಮುಖಂಡರು ಭಾವಿ ತೆಗಿಸುವುದಕ್ಕೆ ಏರ್ಪಾಡುಮಾಡಿದರೆ ಇವರ ಉದ್ದೇಶವು ಬೇಗನೆ ನೆರವೇರೀತೆಂದು ಕೋರುತ್ತೇನೆ.

ತಿಪಟೂರು —ಇಲ್ಲಿ ಕಾಲರಾ ಗಲಾಟೆಯಿಂದ 10-20 ಜನರವರಿಗೂ ಕೇಸುಗಳು ನಡೆದಿವೆ. ಜನರು ಭಜನೆ ಮೊದಲಾದವುಗಳನ್ನು ಮಾಡುತ್ತಾರೆ. ಇನ್ನೂ ಕೇಸುಗಳು ನಡೆಯುತ್ತಲೇ ಇವೆ - ಅಸಾಲ್ಟ್ ಮೊಕದ್ದಮೆಯಲ್ಲಿ ಆದವಯ್ಯನೆಂಬ ಲಿಂಗಾಯಿತನಿಗೆ ನಮ್ಮ ತಾಲ್ಲೂಕು ಮ್ಯಾಜಿಸ್ಟ್ರೇಟರು ಒಂದು ತಿಂಗಳು ಕಠಿಣ ಸಜಾ 50 ರೂಪಾಯಿ ಜುಲ್ಮಾನೆ ವಿಧಿಸಿರುತ್ತಾರೆ. ಈಗ ತಿಪಟೂರಿನಲ್ಲಿ ಪುಂಡಾಟಕ್ಕಾಗಿ ಪ್ರಜೆಗಳು ದ್ವೇಷದಿಂದ ಕ್ರಿಮಿನಲ್ ಅರ್ಜಿಗಳನ್ನು ಕೊಡುತ್ತಲೇ ಇರುತ್ತಾರೆ. ಮ್ಯಾಜಿಸ್ಟ್ರೇಟರು ಇನ್ನು ಮುಂದೆ ತುಂಟರಿಗೆ ಕಠಿಣವಾದ ಶಿಕ್ಷೆಯನ್ನು ಕೊಡುತ್ತಾ ಬಂದರೆ ಪುಂಡು ಜನರ ಹಾವಳಿ ಕಡಿಮೆಯಾಗುತ್ತದೆ. ಕ್ರಿಮಿನಲ್ ಮೊಕದ್ದಮೆಗಳು ಬರುವದೂ ಕಡಿಮೆಯಾಗಬಹುದು. ಇಲ್ಲವಾದರೆ ಸಭ್ಯರು ಯೋಗ್ಯರೂ ಸಹ ಕೆಡುತ್ತಾರೆ. ಪ್ರತಿ ದಿವಸವೂ ಕಚೇರಿ ಮುಂದೆ ಸೋಲೀ ಜನರ ಗುಂಪು ಬಹಳವಾಗಿ ಸೇರುತ್ತದೆ. ಕಚೇರಿ ಎಂಬುವದೂ, ಕೇಸು ಎಂಬುವದು ಸಭೆಯಾಗಿದೆ. ಈ ವಿಚಾರವನ್ನು ನಮ್ಮ ಘನ ಅಮಲ್ದಾರರವರು ಚಿತ್ತಕ್ಕೆ ತಂದುಕೊಂಡು ತುಂಟರ ಹಾವಳಿಯನ್ನು ಅಡಗಿಸುವರೆಂದು ನಂಬಿದ್ದೇವೆ.

ಶಿವಮೊಗ್ಗಾ —ಈ ಟವನ್ನಿಗೆ ನಲ್ಲಿಯ ಮೂಲಕ ಶುದ್ಧವಾದ ನೀರನ್ನು ಈಗ 3 4 ವರ್ಷದಿಂದ ಗೌರ್ನಮೆಂಟಿನವರು ಒದಗಿಸಿ ಕೊಡುತ್ತಿದ್ದರು. ಪ್ಲೇಗು ಗಲಾಟೆ ಇರಲಿಲ್ಲ. ಈಗ ಯಾವ ನಲ್ಲಿಯಲ್ಲಿ ನೋಡಿದಾಗ್ಯೂ ನೀರು ಸಕಾಲಕ್ಕೆ ಸಿಕ್ಕದಿರುವದರಿಂದಲೂ, ಒಂದೆರಡು ನಲ್ಲಿಗಳಲ್ಲಿ ಬರತಕ್ಕ ನೀರಿಗೆ ಜನರಲ್ಲಿ ಗುದ್ದಾಟವಾಗುವದರಿಂದಲೂ ಅನೇಕರು ಅಶುದ್ಧವಾಗಿರತಕ್ಕ ಹೊಳೆಯ ನೀರನ್ನೆ ಯಾವಾಪ್ರಕಾರ ಉಪಯೋಗಿಸುತ್ತಿರುವುದರಿಂದ ಪ್ಲೇಗು ಮೊದಲಾದ ಅಂಟುವ್ಯಾಧಿಗಳಿಗೆ ಗುರಿಯಾಗಿರುತ್ತಾರೆ. ಈಗಾಗಲೇ 7 9 ಕೇಸು ಆಗಿರುತ್ತವೆ. ಇನ್ನೂ 1 2 ಜನರು ಬಾಮಿರಿ ಸ್ಥಿತಿಯಲ್ಲಿರುತ್ತಾರೆ. ಇವೆಲ್ಲಕ್ಕೂ ಕೆಟ್ಟುಹೋಗಿರತಕ್ಕ ಹೊಳೆಯ ನೀರನ್ನು ಉಪಯೋಗಿಸುವದೇ ಕಾರಣವಾಗಿದೆ. ಸರ್ಕಾರದವರು ನಲ್ಲಿಯ ಮೂಲಕ ಒದಗಿಸಿಕೊಡುವ ನೀರನ್ನು ಯಾಕೆ ಕಡಿಮೆಮಾಡಿರುತ್ತಾರೋ ತಿಳಿಯದು. ಹೀಗೇನೇ ನಡೆಯುತ್ತಾ ಬಂದಲ್ಲಿ ಪ್ಲೇಗ್ ರೋಗವು ಉಲ್ಬಣವಾಗುವದರಲ್ಲಿ ಏನೂ ಅಭ್ಯಂತರವಿಲ್ಲ. ಮತ್ತು ಪುಂಕದ ಕಟ್ಟೆ ಪೋಲೀಸ್ ಹೆಡ್ ಸ್ಟೇಷನ್ ಎದುರಿನಲ್ಲಿರತಕ್ಕ ನಲ್ಲಿಯ ಹತ್ತಿರ ಗಲೀಜು ಹೆಚ್ಚಾಗಿ ಆಗಾಗ್ಗೆ ದುರ್ವಾಸನೆ ಹೊರಡುವದು. ಪೋಲೀಸಿನವರ ದೃಷ್ಟಿ ಸ್ವಲ್ಪ ಬೀಳುತ್ತಿದ್ದರೆ ಹೀಗೆ ಆಗಲಾರದೆಂದು ತೋರುತ್ತೆ.

ಪ್ರೇಂಚ್‌ರಾಕ್ಸ್ —ಸುಮಾರು 1 ತಿಂಗಳಿನ ವರೆಗೂ ಇಲ್ಲಿ ಕಾಲರಾ ಪ್ರಾರಂಭವಾಗಿ 20 ಜನಗಳವರೆವಿಗೆ ಮರಣ ಹೊಂದಿದರೆಂದು ಹೇಳಬಹುದು. ಸದ್ಯಕ್ಕೆ 4-7 ದಿನಗಳಿಂದಲೂ ಸ್ವಲ್ಪ ಮಟ್ಟಿಗೆ ಶಮನವಾಗಿರುವ ಹಾಗೆ ಕಾಣುತ್ತೆ. ಈ ಗಲಾಟೆಯ ಕಾಲದಲ್ಲಿ ಸಬ್ ಡಿವಿಜನ್ ಸಾಹೇಬರವರೂ, ನಮ್ಮ ಹೊಸ ಡೆಪ್ಯುಟಿ ಅಮಲ್ದಾರರೂ, ಡಾಕ್ಟರವರೂ ಊರಿನ ಎಲ್ಲಾ ಕಡೆಗಳಲ್ಲೂ ಸಂಚಾರಮಾಡಿ, ಅಲ್ಲಲ್ಲಿರತಕ್ಕ ಭಾವಿಗಳನ್ನೆಲ್ಲಾ ಶುದ್ಧಿಮಾಡಿಸಿದ್ದು ಪ್ರಜೆಗಳಿಗೆಲ್ಲಾ ಅನುಕೂಲವಾಯಿತು. ಮುಖ್ಯವಾಗಿ ಡಾಕ್ಟರವರೂ, ಖಾಜೀಸಾಹೇಬರವರೂ ರೋಗಿಗಳ ಮನೆಗಳಿಗೆ ಹೋಗಿ ಅವರಿಗೆ ತಕ್ಕ ಔಷದಿಗಳನ್ನು ಕೊಟ್ಟು ಬರುತ್ತಿದ್ದಾರೆ. ಇವರುಗಳಿಂದ ಅನೇಕರು ಗುಣಹೊಂದಿದರು. —ಮೇಸ್ತ್ರೀ ಇಟ್ಟಿಯಲ್ಲಿ ಕೆಲವು ತುಂಟ ಜನಗಳು ಅಂತರಂಗವಾಗಿ ಜೂಜಾಡುತ್ತಿದ್ದದ್ದನ್ನು ನಮ್ಮ ಸಬ್ ಇನ್ಸ್‌ಪೆಕ್ಟರವರು ಕಂಡುಹಿಡಿದು ಅವರನ್ನೆಲ್ಲಾ ಶಿಕ್ಷೆಗೆ ಗುರಿಪಡಿಸಿದರೆಂದು ತಿಳಿದು ಬರುತ್ತೆ. ಪೋಲೀಸಿನವರ ಆ ತುಂಟ ಜನಗಳಿಗೆ ಬುದ್ಧಿ ನಿಜವಾಯಿತೆಂದು ಕೇಳುತ್ತೇವೆ. —ಈ ಊರಿನ ಜನಗಳಿಗೆಲ್ಲಾ ಆಧಾರವಾಗಿದ್ದ ಕೆರೆಯು ಸಂಪೂರ್ಣವಾಗಿ ಒಣಗಿಹೋದಂತೆಯೇ ಆಯಿತು. ಜನಗಳಿಗೂ, ದನಕರುಗಳಿಗೂ ಇನ್ನು ಮೇಲೆ ನೀರಿನ ತೊಂದರೆಯು ಅಧಿಕವಾಗುವದರಲ್ಲಿ ಸಂಶಯವಿಲ್ಲ. ಇ[illegible] ಕೆಳದ ಜನಗಳು ಕೆರೆಯಲ್ಲಿ ಏನನ್ನು [illegible] ಇದಕ್ಕೆ [illegible] ನಮ್ಮ ಅಮಲ್ದಾರರು ಇದಕ್ಕೆ ತಕ್ಕ ಬಂದೋಬಸ್ತು ಮಾಡುವರೆಂದು ನಂಬಿದ್ದೇವೆ.

ದೇವನೂರು —ಬೇಸಿಗೆಯ ಗುಳವು ಹೆಚ್ಚಾಗಿದ. ಕುಡಿಯುವ ನೀರಿನ ಮಿತಿ ಚೆನ್ನಾಗಿದ್ದಾಗ್ಯೂ ಒಳ್ಳೇ ನೀರಿನ ಕೆರೆಯಲ್ಲಿ ನೀರು ಬೆಸೆಯು ನೀರು ಬಹಳ ಪಾಚಿ ಕಟ್ಟಿಹೋಗಿದೆ. ಮ್ಯುನಿಸಿಪಾಲಿಟಿಯವರು ಕೆರೆಯ ನೀರನ್ನು ಸರಿಪಡಿಸುವುದರಲ್ಲಿ ಜಾಗ್ರತೆ ನಿಗಾಕೊಡದೆ ಹೋದಲ್ಲಿ ಈ ನೀರನ್ನು ಉಪಯೋಗಿಸುವುದರಿಂದ ಕಾಲರಾ ಪ್ರಾರಂಭವಾದೀತು. ಇದಲ್ಲದೆ ಕೆರೆಯಲ್ಲಿ ದನಕರು ಕುದುರೆಗಳನ್ನು ಮೇಯುವುದಕ್ಕೆ ಯಾವಾಗಲೂ ಬಿಟ್ಟಿರುತ್ತಾರೆ. ಇದು ದಲೂ ನೀರು ಬಹಳವಾಗಿ ಕೆಡಲು ಕಾರಣವಾಗಿದೆ. ಕೆರೆ ಕಾವಲಿಗೆ ಒಬ್ಬ ನೌಕರನು ಇದ್ದಾಗ್ಯೂ ಪ್ರಯೋಜನವಿಲ್ಲದೆ ಹೋಗಿದೆ. —ಈ ಸಾರ್ತಿ ಬೆಳೆಗಳು ಬಹಳ ಚೆನ್ನಾಗಿ ಆಗಿ ರೈತರೆಲ್ಲರೂ ಧಾನ್ಯದ ಒಕ್ಕಣೆ ಸಂಭ್ರಮದಲ್ಲಿರುತ್ತಾರೆ. ಧಾರಣೆಗಳು ಮಾತ್ರ ಕ್ಷಾಮಕಾಲದ ಚಿಹ್ನೆಗಳನ್ನೇ ಸೂಚಿಸುತ್ತಲಿವೆ. ರಾಗಿ ರೂಪಾಯಿಗೆ 15 16 ಸೇರೂ, ಅಕ್ಕಿ 5½ 6 ಸೇರೂ ವಿಕರಿಯಾಗುತ್ತದೆ. ಸರ್ಕಾರದವರು ಕಷ್ಟಪಡುವ ಚಿಲ್ಲರೆ ನೌಕರರಿಗೆ ಕ್ಷಾಮದ ಅಲೋಯನ್ಸ್ ಕೊಡುವ ವಿಷಯದಲ್ಲಿ ಜಾಗ್ರತೆ ಆಲೋಚನೆಮಾಡುವರೆಂದು ನಂಬುತ್ತೇವೆ —ಹೊಸದಾಗಿ ಮಾಡಿಸಿರುವ ಹುಕಿನ ಬಟ್ಟು ಅಂತೆ ಸೇರುಗಳು ಈ ಪ್ರಾಂತ್ಯ ಇನ್ನೂ ಏತಕ್ಕೆ ಯಾಕೆ ಬಂದಿಲ್ಲವೋ ತಿಳಿಯದು —ಇತರ ಸ್ಕೂಲುಗಳಿಂದ ಹೋದ ಹುಡುಗರನ್ನು ಗವರ್ನಮೆಂಟ್ ಎ ವಿ ಸ್ಕೂಲಿನಲ್ಲಿ 6 ತಿಂಗಳಿಂದ ಇಟ್ಟುಕೊಂಡಿದ್ದು ಆ ತರುವಾಯ ಲೀವಿಂಗ್ ಸರ್ಟಿಫಿಕೇಟು ತರಬೇಕೆಂದು ಕಳುಹಿಸಿರುತ್ತಾರೆ. ಇದರಿಂದ ಸ್ಕೂಲಿನ ಕ್ರಮಗಳು ಎಷ್ಟರಮಟ್ಟಿಗೆ ಚೆನ್ನಾಗಿವೆಯೋ ಊಹಿಸಬಹುದು. —ಊರಿನ ಸಾನಿಟೇಷನ್ ಏರ್ಪಾಡುಗಳು ಕೊಂಚಮಟ್ಟಿಗೆ ಚೆನ್ನಾಗಿದ್ದಾಗ್ಯೂ ಪ್ರಜೆಗಳ ಆರೋಗ್ಯಕ್ಕೆ ಕುಂದಕವಾದ ಕುಂಬಾರರ ಆವಿಗೆಗಳು ಊರಿನಲ್ಲೇ ಇರಲು ಕಾರಣವೇನೋ ತಿಳಿಯದು.

ಹೆಗ್ಗದೇವನಕೋಟೆ ತಾ| ಮಗ್ಗೆ —ಈ ವರುಷ ಮಗ್ಗೆ ಮಾರಮ್ಮನ ಬೂದಿ ಮತ್ತು ಬಲ್ಲಹಬ್ಬ ಅತಿ ವಿಜೃಂಭಣೆಯಿಂದ ನಡೆಯಿತು. ಹಾಗೆಂದರೆ ಮಾರ್ಚಿ ತಾ 28 ನೇ ಗುರುವಾರದ ರಾತ್ರಿ ಪೋಂಬಳಲ್ಲಿ ಕುಟಿ ಎಂಬದಾಗಿ ಕಟ್ಟಿ ಅದರ ಮೇಲೆ ಕರಿ ಬಟ್ಟೆಯಿಂದ ಸುತ್ತಿ ಎರಡು ಕಿಂಗಳಿಗೆ ಹಳೇ ಮೊರ ಕಟ್ಟಿ ಬಾಲಕ್ಕೆ ಕಸಪೊರಕೆಯಿಂದಲಂಕರಿಸಿ ಮಗ್ಗೆಗೆ ಸೇರಿದ ಎಲ್ಲಾ ಹೊಳಗೆಲ್ಲ ಹೊತ್ತುಕೊಂಡು ತಾಳ ಮೇಳ ವಾದ್ಯಘೋಷಗಳೊಡನೆ ಉತ್ಸವಮಾಡಿಕೊಂಡು ಎಂದು ಅಶ್ವತ್ಥ ವೃಕ್ಷದ ಕೆಳಗೆ ಸವರಿ ಕಾಯವನ್ನು ಸುಟ್ಟು ಆ ಬೂದಿಯನ್ನು ಶೂದ್ರರು ಮತ್ತು ಪಂಚಮರು ತುಂಬಿಕೊಂಡುಹೋದರು. ಮರುದಿನ ಬೂದಿಯನ್ನು ಹೊರಗಿನಿಂದ ಬಂದ ಜನಗಳಿಗೂ ಪಂಚಮರಿಗೂ ಹೊಯ್ದು ಕಸಪೊರಕೆಗಳಿಂದ ಹೊಡೆದಾಡಿದರು. ಮತ್ತು ಇತರ ಗ್ರಾಮದವರೂ ಸಹ ಪ್ರಾರ್ಥನೆಗಾಗಿ ಅನೇಕರು ಬೂದಿಹೊಯಿಸಿಕೊಳ್ಳುವದಕ್ಕೆ ಬಂದರು. ಆ ದಿವಸ ಸಾಯಂಕಾಲ 4 ಘಂಟೆಗೆ ಕುರುಬರ ಪಾಲಕಿಯೂ, ಪಂಚಮರ ಪಾಲಕಿಯೂ ಬಂತು. ಈ ಪಾಲಕಿಗಳೊಡನೆ ಸಾವಿರ ಜನಗಳು ಬೂದಿಯನ್ನು [illegible]ದಲ್ಲಿ ತುಂಬಿಕೊಂಡು ಬಂದು ಕೋಬು ಪಿಲಗ ಮುಂತಾದವುಗಳೊಡನೆ ಮಾರಮ್ಮನಿಗೆ ಬೂದಿ ಎರಚಿದರು. ನದಿ ಬೂದಿಯು ಮಾರಮ್ಮನ ಗುಡಿ ಲಾಗಾಯಿತು ಮಳಲ ಸ್ವಾಮಿಯ

...ಮನವರಿಗೆ ಎರಡು ಅಚ್ಚುಬಿಳುಪು ಸಹ ಜನಗಳಿಗೆ ಪ್ರತಿ ಒಬ್ಬರ ಮನೆ ...ಯಲ್ಲಿ ಒಂದು ಕೊಳಗಕ್ಕೆ ಕಿಮ್ಮ ಎಲ್ಲದೆ ರಾಗಿ ಸಿಕ್ಕಿತು ಹೀಗೆ ಸುಮಾರು ...ವರ್ಷ ರಾಗಿ ದೊರೆಯಿತು ಈ ಉತ್ಸವಕ್ಕೆ ಬೂದಿ ಹಬ್ಬವೆಂದು ಹೆಸರು ...ಸೀ ತಾ ಭಾನುವಾರ ಸರ್ವರೂ ಶುಚಿರ್ಭೂತರಾಗಿ ಬಟ್ಟೆಬರೆಗಳಿಂದ ಅಲಂ...ಕರಿಸಿಕೊಂಡು ಪ್ರತಿ ಒಬ್ಬರೂ ಒಂದೊಂದು ಬಿಲ್ಲುಹಿಡಿದು ಸಾಯಂಕಾಲ ...ಮ್ಮನ ದೇವಸ್ಥಾನದ ಹತ್ತಿರ ಬಂದು ಸೇರಿದರು ಜನಗಳು ಎರಡು ...ಪಾಗಿ ನಿಂತು ಒಬ್ಬರಿಗೊಬ್ಬರು ಬಿಲ್ಲಿನಲ್ಲಿ ಹೊಡೆದಾಡಿದರು ಈ ತಮಾಷೆ ...ನೋಡಲು ನಾನಾ ಕಡೆಗಳಿಂದ ಜನರು ತಂಡೋಪತಂಡವಾಗಿ ಬಂದು ಸೇರಿದ್ದರು ...ಸಮಯದಲ್ಲಿ ಅನೇಕ ತರಹಾ ವಾದ್ಯಗಳು ಘೋಷ್ಗರೆಯುತ್ತಿದ್ದವು ಅಂಗ...ಗಳು ಎಲ್ಲ ತೋರಿಸಿದ್ದವು ಆದರೆ ನಾರಲ್ ಪಾರ್ ಸುಪಾರಿ ಇವು ಬಹಳ ...ಯವಾಗಿ ಮಾರಿದವು ಈ ತಾಲ್ಲೂಕಿನಲ್ಲಿ ಇದೊಂದು ವಿಚಿತ್ರವಾದ ಹಬ್ಬ ...ಕ್ಕೆ ಬಿಲ್ಲಹಬ್ಬವೆಂದು ಹೆಸರು —ಈ ಪ್ರಾಂತ್ಯ ಕಾಡಾನೆಗಳ ಕಾಟ ಬಹಳ ...ಯಿತು ಈ ವರುಷದಲ್ಲಾದರೂ ನಮ್ಮ ದಯಾಳುಗಳಾದ ಸರ್ಕಾರದವರು ...ಬಂದೋಬಸ್ತು ಏರ್ಪಾಟುಮಾಡಿ ಆನೆಗಳನ್ನು ಓಡಿಸಿದರೆ ಪ್ರಜೆಗಳಿಗೆ ಎಷ್ಟೋ ...ಕಾರವಾದೀತು —ಈ ತಾಲ್ಲೂಕಿನಲ್ಲಿ ಕಾಲರಾ ಉಪದ್ರವು ಸರಗೂರು, ...ಳ್ಳಿ, ಹಾಗುಡ್ಲು, ಸಿಲವಾಗಲು, ಅಂತರಸಂತೆ, ಹಿರಹಳ್ಳಿ ಮುಂತಾದ ಅನೇಕ ...ಗ್ರಾಮಗಳಲ್ಲಿ ವ್ಯಾಪಿಸಿರುತ್ತೆ

ದೊಡ್ಡಬಳ್ಳಾಪುರ —ಆರ್ಯ ಈಡಿಗ ಗಣಸಭೆಯಲ್ಲಿ ನಡೆದ ಕೆಲವು ...ಷ ಸಂಗತಿಗಳೇನೆಂದರೆ—ಸಭೆಯ ಮೂರನೇ ದಿನ ಬೆಳಗ್ಗೆ ಸುಬ್ರಹ್ಮಣ್ಯ ...ಸ್ವಾಮಿ ದೇವಸ್ಥಾನದಲ್ಲಿ ನಡೆದ ಸಭೆಯಲ್ಲಿ ನಮ್ಮ ಅಮಲ್ದಾರ್ ಮಿ|| ಕೃಷ್ಣ...ಯ್ಯನವರು ತಿಳಿಸಿದ ಅಂಶಗಳೇನಂದರೆ, “ ನಾನು ಈ ಸಭೆಯನ್ನು ನೋಡಲಿಕ್ಕೆ ...ಜನರ ಪಕ್ಷವಾಗಿ ಬಂದಿದ್ದಾಗ್ಯೂ ತಾವುಗಳೆಲ್ಲರೂ ಅತ್ಯಂತ ಆದರಪೂರ್ವ...ಕವಾಗಿ ನನ್ನನ್ನು ನಿಮ್ಮ ಸಭಿಕರಲ್ಲಿ ಒಬ್ಬನಂತೆಯೂ ಅಧಿಕಾರಿಯಂತೆಯೂ ...ಪ್ರಸಿದ್ಧಕ್ಕಾಗಿ ನಿಮ್ಮೆಲ್ಲರನ್ನೂ ಪ್ರೆಸಿಡೆಂಟರವರನ್ನೂ ಬಹಳವಾಗಿ ವಂದಿಸು...ತ್ತೇನೆ ನಿಮ್ಮ ರಾಜಭಕ್ತಿಯ ಕಾರ್ಯಗಳನ್ನು ಬಹಳವಾಗಿ ಮೆಚ್ಚುತ್ತೇನೆ ...ನಿಮ್ಮ ಸಭಾಕಾರ್ಯಗಳು ಅತ್ಯಂತ ಅವಶ್ಯವಾದವುಗಳೂ, ಪ್ರಪಂಚದವರೆಲ್ಲಾ ...ಅನುಕರಣೀಯಗಳೂ, ನಿಮ್ಮ ಜನರ ಅಭಿವೃದ್ಧಿಯನ್ನು ಮುಂದಕ್ಕೆ ತರತಕ್ಕವು ...ಆಗಿರುವದರಿಂದ ನಾನು ಅತ್ಯಾನಂದದೊಡನೆ ನಿಮ್ಮ ಅಭಿವೃದ್ಧಿಯನ್ನು ...ನನ್ನಿಂದಾಗುವ ಮಟ್ಟಿಗೂ ಸಹಾಯ ಮಾಡುವೆನಲ್ಲದೆ ನಿಮ್ಮ ಸಭೆಗೂ ...ಈ ಕಾರ್ಯಗಳಿಗೂ ಸಕಲ ಶ್ರೇಯಸ್ಸನ್ನೂ ಪ್ರಾರ್ಥಿಸುತ್ತೇನೆ ” ತರುವಾಯ ...ಪ್ರೆಸಿಡೆಂಟರವರು ಸಭಾಪಕ್ಷವಾಗಿ ಅಮಲ್ದಾರ್ರವರನ್ನು ಬಹಳವಾಗಿ ವಂದಿಸಿದರು ...ಆರ್ಯ ಈಡಿಗ ಗೌಡರು ಯಾರು ? ಯಾರ ವಂಶಜರು ? ಇವರ ಮತದ ...ಉತ್ಪತ್ತಿ ಹ್ಯಾಗೆ ? ಈ ಜನರ ವೃತ್ತಿ ಹ್ಯಾಗೆ ಬಂತು ? ಎಂಬೀ ವಿಷಯ...ವನ್ನು ಬಳ್ಳಾರಿ ಕಾಲೇಜ್ ಪಂಡಿತರಾದ ಸುಬ್ರಹ್ಮಣ್ಯಶಾಸ್ತ್ರಿಗಳು ತೆಲಗು ಭಾಷೆ...ಯಲ್ಲಿ ರಚಿಸಿರುವ ಗೌಡಗ್ರಂಥದ ಆಧಾರದ ಮೇಲೆ ಬಹು ಶ್ರೇಷ್ಠವಾದ ಉಪ...ನ್ಯಾಸವನ್ನು ತೆಲಗು ಭಾಷೆಯಲ್ಲಿ ಹೇಳಿ ಸರ್ವರಿಗೂ ಆನಂದವನ್ನುಂಟುಮಾಡಿ... ಮತ್ತು ಇವರು ಬಾಲವಾಲಿಕಾ ವಿವಾಹವು ಅಷ್ಟು ಅನುಕೂಲವಲ್ಲವೆಂ... ಪೂರ್ವಕಾಲದಲ್ಲಿ ಋತುಮತೀ ವಿವಾಹವೇ ಕ್ರಮತಪ್ಪದಲ್ಲಿ ಆಚರಣೆ...ಯಲ್ಲಿತ್ತೆಂಬುದನ್ನೂ ತಿಳಿಸಿ, ವಿದ್ಯದಿಂದ ಬರುವ ಲೌಕಿಕ ಪಾರಮಾರ್ಥಿಕ ಪ್ರಯೋ...ಜನವನ್ನು ಬಹು ಸ್ಪಷ್ಟವಾಗಿ ತಿಳಿಸಿ ಸರ್ವರಲ್ಲೂ ವಿದ್ಯಾಪೇಕ್ಷೆಯನ್ನುಂಟು ...ಮಾಡಿದರು ಮತದ ಕಟ್ಟುಪಾಡು, ಐಕಮತ್ಯತೆ ವಿಷಯದಲ್ಲಿ ಕೆಲವು ಗೌಡರೂ, ...ಷವಾಗಿ ಮ ಕೆ ಹನುಮಂತಪ್ಪನವರೂ ದೃಷ್ಟಾಂತಗಳೊಡನೆ ವಿವರಿಸಿ ...ದ ಪ್ರಯೋಜನವನ್ನು ಸಭಿಕರ ಮನಸ್ಸಿನಲ್ಲಿ ಚೆನ್ನಾಗಿ ತುಂಬಿದರು — ...ನಡೆಯುವ ಲೋ ಸೆ ಪರೀಕ್ಷಾ ವಿದ್ಯಾರ್ಥಿಗಳಿಗೆ ಮ|| ತೂಬಗೆರೆ ಚಂದ್ರ...ಶೇಖರಯ್ಯನವರೂ, ಮ|| ಹಣಬೆ ಗುರುಸಂಗಲಿಂಗಪ್ಪನವರೂ ಸೇರಿ ಚಂದ್ರಶೇ...ಖರಯ್ಯನವರ ಹೊಸ ಬಂಗ್ಲೆಯಲ್ಲಿ ಭೋಜನಾದಿಗಳನ್ನು ನಡೆಸುವರೆಂತ ತಿಳಿ...ದಿದೆ ಈ ಸಾರಿ ಇಲ್ಲಿಗೆ ಸುಮಾರು ೩೦೦ ಮಂದಿ ವಿದ್ಯಾರ್ಥಿಗಳೂ ಕೆಲವು ...ಉಪಾಧ್ಯಾಯರೂ ಈ ಸೆಂಟರಿಗೆ ದೊಡ್ಡಬಳ್ಳಾಪುರ, ಯಲಹಂಕ, ತ್ಯಾಮ...ಗೊಂಡ್ಲು, ಗೌರಿಬಿದನೂರು, ದೇವನಹಳ್ಳಿ, ಹೊಸಕೋಟೆಗೆ ಸೇರಿದ ಎಲ್ಲಾ ...ಗ್ರಾಮಸಾಠಶಾಲೆಗಳ ಉಮೇದುವಾರರೂ ಬರುತ್ತಾರೆ

ಮುಳಬಾಗಲು —ಈ ತಾಲ್ಲೂಕಿನಲ್ಲಿ ರೈತರು ಆತುರರಾಗಿ ಫಸಲ್ ...ಬಿತ್ತಿದ್ದ ಪೈರಾದ ಭತ್ತದ ಗದ್ದೆಗಳೆಲ್ಲಾ ಜಲಾಭಾವದಿಂದ ಒಣಗಿ ಹೋಯಿ...ತು ಕೆರೆಗಳಲ್ಲಿದ್ದ ಅಲ್ಪಸ್ವಲ್ಪ ನೀರು ಸಹಾ ಖರ್ಚಾಗಿ, ಜಾನುವಾರುಗಳಿಗೆ ...ಕುಡಿಯಲಿಕ್ಕೆ ನೀರು ದೊರೆಯುವುದು ಕಷ್ಟವಾಗುವಂತಿದೆ ಸರ್ಕಾರದವರು ...ದಯಮಾಡಿ ಕಡಮೆ ನೀರಿರುವ ಜಲಾಶಯಗಳಲ್ಲಿನ ನೀರನ್ನು ಖರ್ಚುಮಾಡಿಸ...ದೆಯೂ, ವಿನಾಸು ಪಗ್ಗೆರೆ ಹಿಡಿಸದೇಲೂ ಬಂದೋಬಸ್ತು ಮಾಡಿಸಿದರೆ ಉತ್ತಮ ...ವಾಗುವುದು —ಟವರ್‌ನಲ್ಲಿ ಸಲ್ಲಿಗಳಲ್ಲಿ ಗಲೀಜು ಸಲೀಸಾಗಿ ಹೋಗದೇಲೂ, ...ರಂಗಳದಲ್ಲಿ ಸಾಯಬಾನೇ ಮಾಡುವುದನ್ನು ತಪ್ಪಿಸದೇಲೂ ಇರುವುದು ...ಅನ್ಯಾಯವಾಗಿದೆ ನೀರಿನಿಂದ ಬರುವ ಸಾಂಕ್ರಾಮಿಕ ರೋಗಗಳನ್ನು ...ಅನುಭವಿಸಿ ಸ್ವಲ್ಪ ಮಟ್ಟಿಗೆ ಆರೋಗ್ಯಭಾಗ್ಯವನ್ನು ಹೊಂದಿರುವ ಜನಗಳು ಇದು ...ನೀರನ್ನು ಕೆಡಿಸಿಕೊಂಡು ತಾವೂ ಕೆಡುವುದಲ್ಲದೆ ಇತರರನ್ನೂ ಕೆಡಿಸುವುದು ...ಶೋಚನೀಯವಾಗಿದೆ ಸ್ಯಾನಿಟರಿ ಇನ್ಸ್‌ಪೆಕ್ಟರು ಈ ಭಾಗದಲ್ಲಿ ತುಂಬಾ ನಿಗಾ ತೆಗೆ...ದುಕೊಂಡರೆ ಕ್ಷೇಮವಾದೀತು —ಈಚೆಗೆ ರಾತ್ರಿ ಹೊತ್ತು ಕಳ್ಳತನಗಳು ಅಲ್ಲ...ಲ್ಲಿ ಶುರುವಾಗಿರುತ್ತೆ ನಮ್ಮ ಪೊಲೀಸ್ ಇನ್ಸ್‌ಪೆಕ್ಟರು ಮ|| ವೆಂಕಟ ವರದಾ...ಚಾರ್ಯರು ಈ ಭಾಗದಲ್ಲಿ ಬಹಳ ನಿಗಾ ಕೊಟ್ಟು ಒಳ್ಳೇ ದರ್ಪದಿಂದ ಕೆಲಸ ...ನಡೆಸುತ್ತಿದ್ದಾರೆ ಇವರಿಗೆ ವರ್ಗವಾಯಿತು ಆಬಾಲವೃದ್ಧರಿಗೂ ಹಿತಚಿಂತಕ...ರಾಗಿದ್ದ ಇವರ ವಿಯೋಗದಿಂದ ಕೇವಲ ಕೊರತೆಯಾಗಿದೆ —ಮ್ಯುನಿಸಿಪಲ್ ...ದೀಪಗಳು ರಾತ್ರಿ ಕೊಂಚ ಹೊತ್ತು ನಕ್ಷತ್ರದಂತೆ ಮಿಣುಗುಟ್ಟುತ್ತವೆ ...ಬೀದಿ ಕತ್ತಲೆಗೆ ಅನುಕೂಲಿಸುವಂತೆ ಸಹಾಯಕರವಾಗಿರುತ್ತೆ ಈ ಭಾಗದಲ್ಲಿ ...ಮ್ಯುನಿಸಿಪಲ್ ಮೆಂಬರುಗಳು ಗಮನಕ್ಕೆ ತರುವುದು ಉತ್ತಮ —ಎ ವಿ ...ಸ್ಕೂಲ್ ಆದಿಯಾಗಿ ಎಲ್ಲಾ ಸ್ಕೂಲುಗಳ ವಾರ್ಷಿಕ ಪರೀಕ್ಷೆಯೂ ಪೂರೈಸಿ ...ಎಲ್ಲಾ ವಿಶ್ರಾಂತಿಯನ್ನು ಹೊಂದಿರುತ್ತವೆ —ಇಲ್ಲಿನ ಧಾರಣೆವಾಸಿಯು ...ದಿನೇ ದಿನೇ ಭಯಾನಕವಾಗುತ್ತಾ, ಬಡನೌಕರರ ಜೀವನವು ವಿವರಿಸಲಶಕ್ಯವಾಗಿದೆ ...ನಮ್ಮ ಸರ್ಕಾರದವರ ಉದಾರ ದೃಷ್ಟಿಯು ಬಡನೌಕರರ ಮೇಲೆ ಯಾಕೆ ಬೀಳ...ದೋ ತಿಳಿಯಲಿಲ್ಲ ತಾಲ್ಲೂಕ್ ಆಫೀಸಿನಲ್ಲಿ ಮೊದಲು ಕೊಂಚ ತಿದ್ದು...ಪಾಟುಗಳಾದರೆ ಪ್ರಜಾಸೌಖ್ಯವಾದೀತೆಂದು ಅನೇಕರು ಗುಜುಗುಟ್ಟುತ್ತಾರೆ ...ಅಧಿಕಾರಿಗಳು ಇದಕ್ಕೆ ದೃಷ್ಟಿ ಕೊಟ್ಟರೆ ಕ್ಷೇಮವಾದೀತು —ಇಲ್ಲಿನ ಶ್ರೀ ಶ್ರೀ ...ವ್ಯಾಸರಾಜರವರ ಮಠದ ಶ್ರೀ ವಿದ್ಯಾನಿಧಿ ಸ್ವಾಮಿಗಳವರು ತಮ್ಮ ಗುರುಗಳ ಆರಾಧನೆಯನ್ನು ಬಹಳ ಧಾರಾಳವಾಗಿಯೂ, ಸಂತೋಷದಿಂದಲೂ ನೆರವೇರಿಸಿ, ಅನೇಕ ಬಡಬಗ್ಗರಿಗೂ ಬ್ರಾಹ್ಮಣರಿಗೂ ಮೃಷ್ಟಾನ್ನಭೋಜನಮಾಡಿಸಿದರು, ಅಲ್ಲದೆ ಇವರು ಬಹಳ ಉದಾರಿಗಳು ಸ್ವಾರ್ಥತ್ಯಾಗಿಗಳಾಗಿ ಈ ಕ್ಷಾಮಕಾಲದಲ್ಲಿ ಅನೇಕ ವಿದ್ಯಾರ್ಥಿಗಳಿಗೂ ಪರಸ್ಥಳದವರಿಗೂ ಆತಿಥ್ಯವನ್ನು ಕಲ್ಪಿಸಿರುವದೂ, ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಕೊಡುತ್ತಿರುವದೂ ಸ್ತೋತ್ರಾರ್ಹವಾಗಿದೆ

ಹೊಳೆನರಸಿಪುರ —ಮಾರ್ಚಿ ತಾ ೨೧ ಶುಕ್ರವಾರ ಇಲ್ಲಿನ ನರಸಿಂಹಸ್ವಾಮಿಯ ರಥೋತ್ಸವ ಕಾರ್ಯಗಳು ನಮ್ಮ ಅಮಲ್ದಾರ್ ಮಿ|| ತಿರುನಾರಾಯ್ಯಂಗಾರ್‍ರಿಂದ ಸಾಂಗವಾಗಿ ನಡೆಸಲಾಯಿತು ದೇವಸ್ಥಾನದಲ್ಲಿ ನಡೆಯುತ್ತಿದ್ದ ಕೆಲವು ಅಕ್ರಮಗಳನ್ನು ಅಮಲ್ದಾರರು ತಿದ್ದಿ ಕೆಲವು ಹೊಸ ಏರ್ಪಾಡುಗಳನ್ನು ಕಲ್ಪಿಸಿರುತ್ತಾರೆ ಉತ್ಸವಕಾಲದಲ್ಲಿ ಇತರ ಮತಸ್ಥರಿಗೂ ಭೋಜನಕ್ಕೆ ಏರ್ಪಾಡು ಮಾಡಿದರೆ ಇವರ ಯಶಸ್ಸು ಇನ್ನೂ ಹೆಚ್ಚುವದರಲ್ಲಿ ಸಂದೇಹವಿಲ್ಲ — ಬಹುಕಾಲದಿಂದಲೂ ಕಾರಣಾಂತರಗಳಿಂದ ಹೊಲೆಯರಿಗೂ ಮುಸಲ್ಮಾನರಿಗೂ ಇದ್ದ ದ್ವೇಷವು ತಾ ೨೨ ನೇ ಶನಿವಾರ ಸಾಯಂಕಾಲ ದೇವಸ್ಥಾನದ ಮುಂದೆ ಹೊರಪಟ್ಟು ಹೊಡದಾಟವಾಗಿ ಪರಿಣಮಿಸಿತು ಅಮಲ್ದಾರ್ರು ಬಹಳ ಸಾಹಸದಿಂದ ಕಲಹವನ್ನು ನಿಲ್ಲಿಸಿದರು ಇದರಲ್ಲಿ ಅಧಿಕಾರಿಗಳಿಗೂ ಸಹ ಏಟುಗಳು ಬಿದ್ದವೆಂದು ಜನರು ಹೇಳುತ್ತಾರೆ ಈ ದ್ವೇಷವು ಉಭಯತ್ರರಲ್ಲಿಯೂ ಸೇರಿಕೊಂಡು ತಾ ೨೪ ಸೋಮವಾರ ಸಾಯಂಕಾಲ ಸಂತೆಯಲ್ಲಿ ಒಬ್ಬ ಹೊಲೆಯನನ್ನು ಹೊಡೆದು ಅನೇಕ ಮುಸಲ್ಮಾನರು ಕೈಗಳಲ್ಲಿ ದೊಣ್ಣೆಗಳನ್ನು ತೆಗೆದುಕೊಂಡು ಹೊಲಗೇರಿಗೆ ನುಗ್ಗಿ ಹೊಲೆಯರನ್ನು ಹೊಡೆಯುವದಕ್ಕೆ ಶುರುಮಾಡಿದರು ಎರಡು ಕಡೆಯವರಿಗೂ ಬಹಳ ಹೊಡೆದಾಟವಾಗುವಾಗ ನಮ್ಮ ಅಮಲ್ದಾರ್ರು ಬಹಳ ಸಾಹಸದಿಂದ ಪೋಲೀಸ್ ಸಿಬ್ಬಂದಿಯನ್ನು ತೆಗೆದುಕೊಂಡು ಹೋಗಿ ಬಹು ಬೇಗನೆ ಪೊಂಬಿಯನ್ನು ಚದರಿಸಿದರು ಈ ಕಲಹದಲ್ಲಿ ಇಬ್ಬರಿಗೆ ಪೂರಾ ಘಾಯಗಳಾಗಿ, ಇವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಲಿದ್ದಾರೆ ಆಸ್ಪತ್ರೆ ಡಾಕ್ಟರವರು ರಾತ್ರಿ 10 ಘಂಟೆಯಲ್ಲಿ ಹೊಲಗೇರಿಗೆ ಹೋಗಿ ಘಾಯಪಟ್ಟವರಿಗೆ ಚಿಕಿತ್ಸೆ ಮಾಡಿ ಬೇಗ್ ಆಸ್ಪತ್ರೆಗೆ ತರಬೇಕೆಂದು ಹೇಳಬಂದರು ಅವರು ಗುಣವಾಗುತ್ತಾ ಇದಾರೆ ಇನ್ನೂ ಹೊಲೆಯರಿಗೂ ಮುಸಲ್ಮಾನರಿಗೂ ಸಮಾಧಾನ ಉಂಟಾಗದೆ ಇರುವದರಿಂದ ಯಾವ ಸಮಯದಲ್ಲಿ ಪುನಃ ಕಲಹಕ್ಕೆ ಪ್ರಾರಂಭವಾಗುತ್ತದೋ ಎಂಬುವ ಅನುಮಾನ ಉಂಟು ತರಿ ಇಂಥಾ ಕಲಹವು ಪ್ರಾಪ್ತವಾಗುವದಾದರೆ ಅನೇಕ ಪ್ರಾಣಗಳು ನಷ್ಟವಾಗಬಹುದೆಂದು ಉಭಯತ್ರರ ಹಟದಿಂದ ಗೊತ್ತಾಗುತ್ತದೆ ಆದಕಾರಣ ಇವರ ಅಸಮಾಧಾನ ಯೋಗಲಾಡಿಸಿ ಸಮಾಧಾನವನ್ನುಂಟುಮಾಡಲಿಕ್ಕೆ ಇನ್ಯಾರಿಗೂ ಸಾಧ್ಯವಿಲ್ಲ ಸರಕಾರದವರೇ ಬೇಗ ಇದನ್ನು ಕ್ರಮಪಡಿಸಿದರೆ ಕ್ಷೇಮ ಇದರಿಂದ ಈ ಊರಿಗೇ ಕೆಟ್ಟ ಹೆಸರು ಬಂದಿದೆ ಆದಕಾರಣ ಊರಿನಲ್ಲಿರುವ ಮುಖಂಡರು ಸೇರಿಕೊಂಡು ಅಕೃತ್ಯಗಳನ್ನು ಮಾಡತಕ್ಕ ನೀಚರನ್ನು ಸರಕಾರದವರಿಗೆ ಒಪ್ಪಿಸಿ ಕೊಟ್ಟರೆ ಊರಿಗೆ ಒಳ್ಳೇ ಹೆಸರೂ, ಸರಕಾರದವರಿಗೆ ಸಹಾಯವೂ ಉಂಟಾದೀತೆನ್ನುವದಕ್ಕೆ ಸಂದೇಹವಿಲ್ಲ —ಬಿಸಿಲಿನ ಧಗೆ ಹೆಚ್ಚುತ್ತಲಿದೆ ಧಾರಣೆವಾಸಿಗಳು ದಿನೇದಿನೇ ಏರುತ್ತಲಿವೆ ಅಕ್ಕಿ ರೂಪಾಯಿ 1 7—7! ಸೇರು, ರಾಗಿ 16 ಸೇರು ಮಾರುವದು ಸಂತೆಯಲ್ಲಿ ಪೋಲೀಸಿನವರ ಉಸ್ತುವಾರಿ ಯಾವಾಗಲೂ ಇದ್ದರೆ ಚೆನ್ನಾಗಿರಬಹುದು ವರ್ತಕರು ಕಮ್ಮಿ ಸೇರು, ಕಮ್ಮಿ ತೂಕದ ಬೊಟ್ಟುಗಳನ್ನು ಬಿಟ್ಟಿಲ್ಲ ಈ ವಿಷಯಕ್ಕೆ ಪೋಲೀಸ್ ಅಧಿಕಾರಿಗಳು ಗಮನಕೊಟ್ಟರೆ ಪ್ರಯೋಜನವಾದೀತು ಹೊಲಗೇರಿಯು ಮ್ಯುನಿಸಿಪಾಲಿಟಿಗೆ ಸೇರಿರುವದರಿಂದ ಕಂದಾಯವು ವಸೂಲ್ ಆಗುತ್ತಲಿದೆ ಆದಕಾರಣ ಅಲ್ಲಿ ಮುಖ್ಯವಾದ ಸ್ಥಳಗಳಲ್ಲಿ ಮೂರು ಲಾಂದ್ರ ಕಂಭಗಳನು ಇಟ್ಟರೆ ಬಹಳ ಪ್ರಯೋಜನವಾಗುತ್ತದೆ ಕಳ್ಳಕಾಕರಿಗೆ ಭೀತಿಯೂ, ಪೋಲೀಸ್ ಬೀಟಿಗೆ ಅನುಕೂಲವೂ ಆದೀತು ದಯಾಳುಗಳಾದ ಅಮಲ್ದಾರರು ಇದಕ್ಕೆ ಗಮನಕೊಡಬೇಕಾಗಿದೆ

ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು , ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರವಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ನಾರಾಯಣಾಚಾರ್, ದೊಡ್ಡಪೇಟೆ —ನಿಮ್ಮ ಬಾತ್ಮಿಯನ್ನು ಪ್ರಕಟಿಸಲಾರೆವೆಂದು ವಿಷಾದಪಡುತ್ತೇವೆ

—ಎಡಿ]

ಕರೆಸ್ಪಾಂಡೆನ್ಸ್

ಕಾಲರಾ ನಿವಾರಣೆಯ ಸಾಧನಗಳು

ಅಯ್ಯಾ,

ಕಾಲರಾ ವ್ಯಾಪಿಸದೆಯಾಗದೆ ನಿಂತುಹೋಗಬೇಕಾದರೆ ಪ್ರಭುಗಳಾದ ಸರ್ಕಾರದವರು ನಡೆಸಿಕೊಡಬೇಕಾದ ಏರ್ಪಾಡುಗಳು ಏನೆಂದರೆ —(1) ಕುಡಿಯುವದಕ್ಕೆ ಉಪಯೋಗಿಸುವ ನೀರನ್ನು ಯಾರೂ ಹೇಸಿಕೆ ಮಾಡದಂತೆ ಸರ್ವದಾ ನೋಡಿಕೊಳ್ಳಲು ಕಾವಲಿಡಿಸಬೇಕು (2) ಖಾಯಿಲೆ ಜನಗಳು ಉಪಯೋಗಿಸಿದಂಥಾ ಬಟ್ಟೆ ಹಾಸಿಗೆಗಳನ್ನು ನದಿಯಲ್ಲಿ ತೊಳೆಯಲು ಅವಕಾಶಕೊಡಬಾರದು ಇವುಗಳನ್ನು ಕುಡಿಯುವ ನೀರಿನಲ್ಲಿ ಹತ್ತು ನಿಮಿಷದ ವರೆಗೂ ಕುದಿಸಿದ ನಂತರ ಬೇರೆ ಕಡೆ ತೊಳೆಯಲು ಆಸ್ಪದ ಕೊಡಬೇಕು (3) ಊರನ್ನು ಶುಚಿತ್ವವಾಗಿ ಇಡಿಸಲು ಹೆಚ್ಚು ನಿಗಾವನ್ನು ಕೊಡಬೇಕು ರಸ್ತೆಗಳಲ್ಲಿ ಧೂಳನು ಅಡಗಿಸಲು ಬೆಳಗ್ಗೆ ಸಾಯಂಕಾಲ ನೀರು ಹಾಕಿಸಬೇಕು ತಿಪ್ಪೆ ರಾಶಿಗಳನ್ನು ನಾಯಿ ಮುಂತಾದವುಗಳು ಕೆದಕದಂತೆ ಅವುಗಳ ಮೇಲೆ ಹೊಸ ಮಣ್ಣು ಹಾಕಿಸಬೇಕು (4) ಕೊಳತು ನಾರುವಂಥಾ ಚರಂಡಿಗಳಿಗೆ ತುಂಬಾ ಸುಣ್ಣದ ನೀರನ್ನು ಹಾಕಿಸಬೇಕು (5) ಕೊಳೆತ ತರಕಾರಿಗಳನ್ನೂ, ಹಣ್ಣುಗಳನ್ನೂ ಜನಗಳಿಗೆ ಮಾರಲು ಆಸ್ಪದಕೊಡಕೂಡದು (6) ಕಾಲರಾ ಜಾಡ್ಯದಿಂದ ಸತ್ತುಹೋದವರ ಶವಗಳನ್ನು ಊರಿನ ಸಮೀಪದಲ್ಲಾಗಲಿ, ಹೊಳೆ ಮತ್ತು ಇತರವಾದ ಪಾನಮಾಡುವ ನೀರಿನ ಸಮೀಪದಲ್ಲಾಗಲಿ ಹೂಳುವದಕ್ಕೆ ಬಿಡಕೂಡದು ಈ ವಿಷಯಗಳನ್ನು ಪ್ರತಿ ಗ್ರಾಮಸ್ಥರೂ ಜ್ಞಾಪಕದಲ್ಲಿಟ್ಟುಕೊಂಡು ನಡಿಸಬೇಕಾಗಿ ಪ್ರಾರ್ಥಿಸುತ್ತೇನೆ

ವಿ ತಿರುಮಲಾಚಾರ್, ಕೃಷ್ಣಾಪುರದ ವೈದ್ಯಶಾಲೆಯ ಪಂಡಿತ್.

ನಂಜನಗೂಡು ವಿಚಾರಗಳು

ಅಯ್ಯಾ,

ಬಿಸಲಿನ ಧಗೆ ವಿಶೇಷವಾಗಿದೆ ಸುತ್ತುಮುತ್ತು ಇರತಕ್ಕ ಗ್ರಾಮಾಂತರಗಳಲ್ಲಿ ಕಾಲರಾ ಖಾಯಿಲೆ ಇರುತ್ತದೆ ಇಲ್ಲಿ ಮೂರು ಮಂದಿ ಬ್ರಾಹ್ಮಣ ಪೌಳರು ರಾತ್ರಿವೇಳೆ ವಿಪರೀತವಾಗಿ ಸೇಂದಿ ಕುಡಿದು ಚರಂಡಿಗಳಲ್ಲಿ ಬಿದ್ದು ಅಲ್ಲಿಂದ ಕುರುಬಗೇರಿಗೆ ಹೋಗಿ ಆ ಬೀದಿಯಲ್ಲಿ ರಾಂಗುಮಾಡುತ್ತಿದ್ದದ್ದನ್ನು ತಿಳಿದು ಸಬ್ ಡಿವಿಜನ್ ಸಾಹೇಬರವರು ಅವರನ್ನು ಕೆಲಸದಿಂದ ನಿವೃತ್ತಿ ಮಾಡಿರುತ್ತಾರೆ ಕೆಲವು ದಿವಸಗಳ ಕೆಳಗೆ ಈ ಊರಿನ ಪಂಚಮರು ಸಹ ತಾವು ಕುಡಿಯುವುದಿಲ್ಲವೆಂದು ಕಟ್ಟುಮಾಡಿಕೊಂಡಿದ್ದರು, ಉತ್ತಮ ಜಾತಿಯವರನೇಕರು ಈ ರೀತಿ ಕೆಟ್ಟ ಕೃತ್ಯಗಳನ್ನು ಮಾಡುತ್ತಿರುವದನ್ನು ತಿಳಿದ ಜನಗಳು ಹೊರಪಡಿಸಿ ಆಯಾ ಮಠಾಧಿಕಾರಿಗಳಿಗೆ ತಿಳಿಸಿದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಕಡಮೆಯಾಗಲು ಸಹಾಯವಾಗುತ್ತೆ ಕೆಲವು ದಿವಸಗಳ ಕೆಳಗೆ ಇಲ್ಲಿದ್ದ ಚಿಕ್ಕ ವಯಸ್ಸಿನ ಒಬ್ಬ ಹುಡುಗಿಯು ಮನೆಯಲ್ಲಿದ್ದ ನಗಗಳನ್ನು ಅಪಹರಿಸಿಕೊಂಡು ಪರಾರಿಯಾದಳು ಇದೇ ರೀತಿ ಕೆಟ್ಟ ನಡವಳಿಕೆಗಳನ್ನು ಬೋಧನೆ ಮಾಡತಕ್ಕ 2-3 ಸ್ತ್ರೀಯರ ಗುಂಪುಗಳು ಇಲ್ಲಿರುವಂತೆ ಕಾಣುತ್ತದೆ ಜನಗಳು ಮಾನವಾಗಿ ಬಾಳಬೇಕಾದರೆ ಈ ವಿಚಾರವನ್ನು ಮುಂದಾಗಿ ನಿಂತು ನಾಶಮಾಡಿದ ಹೊರತು ಶಿಶುಹತ್ಯ, ಗರ್ಭಚ್ಛೇದನ ಮೊದಲಾದ ಕೃತ್ಯಗಳು ಕಡಮೆಯಾಗಲಾರದು ಇಲ್ಲಿನ ಹೊಳೇಕರೆಯಲ್ಲಿ ಪೂರ್ವೀಕರು ಕಟ್ಟಿಸಿರುವ ಜನೋಪಕಾರವಾದ ಹಂತಗಳನ್ನು ಜಲಗಾರ ವಗೈರೆ ಜನಗಳು ಹಾರೆಗೋಲಿನಿಂದ ಮಿಾಟಿ ತೆಗೆದು ಹಾಕುತ್ತಾರಾಗಿ ಜನಗಳಿಗೆ ಉತ್ತರೋತ್ತರ ಅಪಾಯ ಸಂಭವಿಸಲು ಆಸ್ಪದವಾಗಿದೆ ದಯಾಳುಗಳಾದ ನಮ್ಮ ಸರ್ಕಾರದವರು ಈ ವಿಚಾರದಲ್ಲಿ ತಕ್ಕ ಬಂದೋಬಸ್ತುಮಾಡಿಸಿ ಶಿಥಿಲವಾಗುತ್ತಿರುವ ಪೂರ್ವೀಕರ ಧರ್ಮವನ್ನು ಆಗಾಗ್ಗೆ ರಿಪೇರಿಮಾಡಿಸುತ್ತಾ ಬಂದಾರೆಂದೂ, ಜನಾನುರಾಗವುಳ್ಳ ನಮ್ಮ ಸಬ್ ಡಿವಿಜನ್ ಸಾಹೇಬರವರು ನಿಗಾ ಕೊಟ್ಟು ಈ ಲೋಪವನ್ನು ಸರಿಪಡಿಸುತ್ತಾರೆಂದೂ ಹಾರೈಸುತ್ತೇವೆ

ಪ್ರಜೋಪಕಾರಿ

ಬ್ರಾಹ್ಮಣರಲ್ಲಿ ಒಳಪಂಗಡಗಳು ಏಕವಾಗುವುದು

ಅಯ್ಯಾ,

ತಮ್ಮ ಪತ್ರಿಕೆಯಲ್ಲಿ “ ಕನ್ಯೆ ” ಎಂಬ ಅಭಿಧಾನದಿಂದ ಒಬ್ಬ ಲೇಖಕರು ಪ್ರಕಟಿಸಿದ್ದ ಲೇಖನವನ್ನು ಓದಿದೆನು ಬ್ರಾಹ್ಮಣರಲ್ಲಿ “ ಕರ್ನಾಟಕ ”, “ ಕಮ್ಮೆ ” ಎಂಬ ಪಂಗಡದವರಲ್ಲಿ ಸಂಪ್ರದಾಯಗಳು ಏಕರೀತಿಯಾಗಿವೆಯಾದುದರಿಂದ ಅವರಲ್ಲಿ ವಿವಾಹ ಸಂಬಂಧಗಳು ಬೆಳೆಯುತ್ತ ಬಂದರೆ ಉಭಯ ಪಂಗಡಗಳಲ್ಲೂ ಮಾತಾಪಿತೃಗಳಿಗೆ ವಧೂವರರನ್ನು ಹುಡುಕುವ ತೊಂದರೆಯು ಬಹುಮಟ್ಟಿಗೆ ತಪ್ಪೀತೆಂಬುವದು ಮೇಲ್ಕಂಡ ಲೇಖಕರ ಅಭಿಪ್ರಾಯವಾಗಿದೆ ಇದು ಯುಕ್ತಿಯುಕ್ತವಾದ ಅಭಿಪ್ರಾಯವೇ ಸರಿ ಈ ವಿಚಾರದಲ್ಲಿ ನಾನು ತಮ್ಮ ಪತ್ರಿಕಾಮುಖೇನ ಇನ್ನೂ ಒಂದೆರಡು ಕೆಲವು ಅಂಶಗಳನ್ನು ವಿಜ್ಞಾಪಿಸಿಕೊಳ್ಳಬೇಕಾಗಿರುವುದರಿಂದ ದಯವಿಟ್ಟು ಅವಕಾಶ ಕೊಡಬೇಕೆಂದು ಬೇಡುವೆನು

ಈಗ ಸ್ಮಾರ್ತಬ್ರಾಹ್ಮಣರಲ್ಲಿ ಆಚರಣೆಯಲ್ಲಿರುವ ವಿವಾಹ ಪದ್ಧತಿಗಳಿಗನುಸಾರವಾಗಿ “ ಕರ್ನಾಟಕ ”, “ ಕಮ್ಮೆ ” ಎಂಬ ಎರಡು ಪಂಗಡದವರೂ ಏಕೀಭವಿಸುವಂತೆ ಇನ್ನೂ ಅನೇಕ ಪಂಗಡದವರೂ ಸಹ ಬಹು ಸುಲಭವಾಗಿ ಏಕೀಭವಿಸಬಹುದಾಗಿದೆ ಲೇಖನ ವಿಸ್ತಾರ ಭಯದಿಂದ ಅವುಗಳಲ್ಲಿ ಮಾದರಿಗಾಗಿ ಮುಖ್ಯವಾದ ಕೆಲವನ್ನು ಉದಾಹರಿಸುವೆನು ಅವುಗಳು ಯಾವವೆಂದರೆ—(1) ಆಂಧ್ರ ಬ್ರಾಹ್ಮಣರಲ್ಲಿ ಮುರುಕಿನಾಡು, ವೆಲನಾಡು ಈ ಎರಡು ಪಂಗಡದವರು ಈ ಎರಡು ಪಂಗಡದವರಲ್ಲೂ ನಡೆ ನುಡಿಗಳೂ, ಉಡಿಗೆ ತೊಡಿಗೆಗಳೂ, ಆಚಾರವ್ಯವಹಾರಗಳೂ, ಮನೆಯಲ್ಲಿ ಮಾತನಾಡುವ ಭಾಷೆಯೂ ಸಹ ಒಂದೇ ವಿಧವಾದುದರಿಂದ ಇವೆರಡು ಪಂಗಡದವರೂ ಸಹ ವಿವಾಹ ಸಂಬಂಧದಿಂದ ಏಕೀಭವಿಸುವುದು ದುಸ್ತರವಲ್ಲ ಇದರಿಂದ ಯಾವ ಅನಾನುಕೂಲಗಳೂ ಇಲ್ಲ ಅನುಕೂಲಗಳಾದರೋ ಹೇರಳವಾಗಿವೆ ಯೋಗ್ಯರಾದ ವಧೂವರರನ್ನು ಚುನಾಯಿಸಿಕೊಳ್ಳಲು ಸಂಘವು ಹೆಚ್ಚುವುದು ಮುಖ್ಯವಾದ ಪ್ರಯೋಜನವೆನ್ನುವುದರಲ್ಲಿ ಏನೇನೂ ಸಂಶಯವಿಲ್ಲ (2) ಅದರಂತೆಯೇ ಸಂಕೇತಿಗಳಲ್ಲಿ “ ಬೆಟ್ಟದಪುರದ ಸಂಕೇತಿ ” ಮತ್ತು “ ಕೌಶಿಕ ಸಂಕೇತಿ ” ಎಂಬ ಉಭಯ ಪಂಗಡದವರೂ ಸಹ ವಿವಾಹ ಸಂಬಂಧಗಳನ್ನು ಯಾವ ಅಡಚಣೆಯೂ ಇಲ್ಲದೆ ಬೆಳಸಬಹುದೆಂದು ತೋರುತ್ತದೆ (3) ದ್ರಾವಿಡರಲ್ಲಿ ಬೃಹಚ್ಚರಣವೆಂಬ ಪಂಗಡದವರಲ್ಲಿ ಮಳನಾಡು ಬೃಹಚ್ಚರಣ, ನಂಜಪುತ್ತೂರು ಬೃಹಚ್ಚರಣ, ಸತ್ಯಮಂಗಲ ಬೃಹಚ್ಚರಣ, ತಿರುಣಾಮಲೆ ಬೃಹಚ್ಚರಣ, ಕೆಂದ್ರನೂರಿಕ್ಕೆ ಬೃಹಚ್ಚರಣ, ಮೈಸೂರು ಬೃಹಚ್ಚರಣವೆಂಬ ಒಳಭೇದಗಳಿರುತ್ತವೆ ಇವರುಗಳೆಲ್ಲರೂ ವಿವಾಹ ಸಂಬಂಧದಿಂದ ಏಕೀಭವಿಸುವುದರಲ್ಲಿ ಯಾವ ಬಾಧಕವೂ ಇರುವುದಿಲ್ಲ ಇವರುಗಳೊಂದಿಗೆ ವಡಮ ಎಂಬ ಪಂಗಡದವರೂ ಸಹ ಮಿಳಿತವಾಗಬಹುದು

ಹೀಗೆಯೇ ಇನ್ನೂ ಅನೇಕ ಸಣ್ಣ ಸಣ್ಣ ಅನವಶ್ಯಕವಾದ, ನಿರರ್ಥಕವಾದ ಒಳಭೇದಗಳನ್ನು ಕಲ್ಪಿಸಿಕೊಂಡು ನಾವುಗಳು ನಮ್ಮ ಸ್ವಯಂಕೃತಾಪರಾಧದಿಂದ ಸಂಕಟಪಡುತ್ತಲಿದ್ದೇವೆ ಮೇಲ್ಕಂಡ ಉಪಭೇದಗಳನ್ನೆಲ್ಲಾ ತೊರೆದು ನಮ್ಮ ಸಂಘವು ಏಕಮತ್ಯವನ್ನು ಪಡೆಯಲು ವಿವಾಹ ಸಂಬಂಧಗಳೂ ಸಹ ಒಂದು ಪ್ರಮುಖವಾದ ಕಾರಣವಾಗಿದೆ ಈ ವಿಷಯದಲ್ಲಿ ನಮ್ಮ ವೈದಿಕ ವಿದ್ವಾಂಸರುಗಳೂ ಸಹ ನಿಷ್ಪಕ್ಷಪಾತತೆಯಿಂದ ಯೋಚಿಸಿ ಸಂಘಪರಿಷ್ಕರಣಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ವಿನಯಪೂರ್ವಕವಾಗಿ ನಿವೇದಿಸುವೆನು

ರಾಮೋಪ್ಪನಯ್ಯ, ಮೈಸೂರು

ಇಂಡಿಯಾ ದೇಶದ ವೃತ್ತಾಂತಗಳು

ಕಾಶೀ ಪಟ್ಟಣದಲ್ಲಿ ಪ್ಲೇಗ್ ಉಪದ್ರವು ಬಹಳ ಜೋರಾಗಿದೆ ಎಂದೂ, ಅನೇಕರು ದಿವಸವು ಸಾಯುತ್ತಿದ್ದಾರೆಂದೂ, ಇದರಿಂದ ಪಟ್ಟಣದಲ್ಲೆಲ್ಲಾ ಬಹಳ ಕಳವಳವುಂಟಾಗಿದೆ ಎಂದೂ ತಂತೀವರ್ತಮಾನ ಬಂದಿದೆ

ಬೊಂಬಾಯಿ ಪಟ್ಟಣದ ಆಕ್ಟರ್ ಕಸಬುದಾರ ಕಂಪನಿಯ ಉಗ್ರಾಣದ ಮನೆಗಳಿಗೆ ಕಳೆದ ವಾರ ಬೆಂಕಿ ಬಿದ್ದು ಸುಮಾರು 5 ಲಕ್ಷ ರೂಪಾಯಿನ ಹತ್ತಿಯೂ ನಾರೂ ಸುಟ್ಟುಹೋದ್ದಲ್ಲದೆ ಒಬ್ಬ ಹುಡುಗಿ ಬೆಂಕಿಯಲ್ಲಿ ಸಿಕ್ಕಿ ಮೃತಪಟ್ಟಳು

* * *

ಪಂಜಾಬ್ ಅಧಿಪತ್ಯದಲ್ಲಿ ಹತ್ತಿ ಬೆಳೆ ಮಾಡುವುದಕ್ಕೆ ಒಂದು ಫಾರಮನ್ನು ಸ್ಥಾಪಿಸುವುದಕ್ಕೂ, ಸಕ್ಕರೆ ಕಾರ್ಖಾನೆಗಳಿಗೆ ಸಹಾಯ ಮಾಡುವುದಕ್ಕೂ, ಕೊಳವೆಗಳಿಂದ ಭಾವಿಗಳನ್ನು ತೋಡಿಸುವುದಕ್ಕೂ ಇಂಡಿಯಾ ಗವರ್ನ್‌ಮೆಂಟಿನವರು 1,20,000 ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ.

* * *

ಸಿಲೋನ್ ದ್ವೀಪಕ್ಕೆ ಸೇರಿದ ಕ್ಯಾಂಡಿ ಪಟ್ಟಣದಲ್ಲಿ ಮಾಲ್ವತ್ತ ವಿಹಾರದಲ್ಲಿದ್ದ ಪ್ರಧಾನ ಬೌದ್ಧಗುರುಗಳಾದ ಶ್ರೀ ಸಿದ್ಧಾರ್ಥ ಸುಮಂಗಳ ಬೌದ್ಧ ಸ್ವಾಮಿಗಳು ಕಳೆದ ಮಾರ್ಚಿ ತಾ 26 ರಲ್ಲಿ ತಮ್ಮ 97 ನೇ ವಯಸ್ಸಿನಲ್ಲಿ ನಿರ್ವಾಣವನ್ನು ಹೊಂದಿದರೆಂದು ತಿಳಿದು ಬಂದಿದೆ. ಬೌದ್ಧಮತಸ್ಥರಿಗೆಲ್ಲಾ ಈ ಸ್ವಾಮಿಗಳು ಮಹಾ ಗುರುವಾಗಿದ್ದರು

* * *

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಸೀತಾಪುರದ ಪೋಲೀಸ್ ಸೂಪರಿಂಟೆಂಡೆಂಟ್ ಮಿ|| ಮೋಸ್ಲೆಯವರು ಕಳೆದ ವಾರ ತಮ್ಮ ಸ್ನೇಹಿತನೊಡನೆ ಶಿಕಾರಿಗೋಸ್ಕರ ಕಾಡಿಗೆ ಹೋಗಿದ್ದಾಗ ಆ ಸ್ನೇಹಿತನು ಒಂದು ಕರಡಿಗೆ ಗುರಿಯಿಟ್ಟು ಹೊಡೆದ ಗುಂಡು ಕರಡಿಗೆ ತಗಲದೆ ಅಕಸ್ಮಾತ್ತಾಗಿ ಮಿ|| ಮೋಸ್ಲೆಯವರಿಗೆ ಬಡಿದದ್ದರಿಂದ ಇವರು ತಕ್ಷಣ ಅಲ್ಲೇ ಬಿದ್ದು ಅಕಾಲಮರಣಹೊಂದಿದರು.

* * *

ಪೂನಾ ಪಟ್ಟಣದ ಹತ್ತಿರ ಒಂದು ಗ್ರಾಮದಲ್ಲಿ ಹರಿಯುವ ಭೀಮಾನದಿಯೊಳಗೆ ಒಬ್ಬ ರೈತನು ಇಳಿದು ಬಟ್ಟೆ ಒಗೆಯುತ್ತಿದ್ದಾಗ ಒಂದು ಕರಡಿ ಬಂದು ಅವನ ಮೇಲೆ ನುಗ್ಗಿತು. ಅವನು ತನ್ನ ಬಳಿ ಇದ್ದ ಚಾಕುವನ್ನು ಹಿರಿದು ಕರಡಿಯ ಕೂಡ ಬಹಳ ಹೊತ್ತು ಕಾದಾಡಿ ಗಾಯಪಟ್ಟರೂ ಬಿಡದೆ ಅದನ್ನು ಕೊಂದುಹಾಕಿದನು. ಈಗ ಅವನನ್ನು ಪೂನಾ ಆಸ್ಪತ್ರೆಯಲ್ಲಿ ಹಾಕಿಕೊಂಡು ಚಿಕಿತ್ಸೆಮಾಡುತ್ತಿದಾರೆ.

* * *

ಹಿಂದೂಸ್ಥಾನದ ರಾಜಧಾನಿಯಾಗಿ ನಿರ್ಮಾಣವಾಗುವ ದೆಹಲಿ ಪಟ್ಟಣದ ಮೈದಾನುಗಳಲ್ಲಿ ಈ ರಾಷ್ಟ್ರದ ದೇಶೀಯ ಸಾಮಂತ ಅರಸುಗಳು ತಮ್ಮ ಸ್ವಂತಕ್ಕೆ ಅರಮನೆಗಳನ್ನು ಕಟ್ಟಿಸಿಕೊಳ್ಳಬೇಕೆಂದು ಅಪೇಕ್ಷಿಸಿ ಅದಕ್ಕಾಗಿ ಅಲ್ಲಿ ತಮಗೆ ನಿವೇಶನವನ್ನು ಕೊಡಿಸಬೇಕೆಂದು ಇಂಡಿಯಾ ಗವರ್ನ್‌ಮೆಂಟಿಗೆ ಅರ್ಜಿ ಬರೆದುಕೊಳ್ಳುತ್ತಿರುವುದಾಗಿಯೂ. ಇದುವರೆಗೆ ಆಗಲೇ ಅಂಥಾ 25-30 ಅರ್ಜಿಗಳು ತಲಪಿರುವವೆಂದೂ ಪ್ರಕಟವಾಗಿದೆ.

* * *

ಕಳೆದ ಮಾರ್ಚಿ ತಾ. 29 ಕ್ಕೆ ಆಖೈರಾದ ಒಂದು ವಾರದಲ್ಲಿ ಹಿಂದೂಸ್ಥಾನದೊಳಗೆ 14,391 ಜನರಿಗೆ ಪ್ಲೇಗ್ ಉಪದ್ರ ತಗಲಿತು, 12,371 ಜನರು ಈ ರೋಗದಲ್ಲಿ ಕಾಲವಾದರು. ಈ ಮರಣ ಸಂಖ್ಯೆಯ ಹಂಚಿಕೆ ಹಾಗಂದರೆ, ದೆಹಲಿ 12 ಮರಣಗಳು, ಬೊಂಬಾಯಿ 135, ಮದರಾಸ್ 70, ಬಂಗಾಳಾ 57, ಬೀಹಾರ್ 1,701, ಸಂಯುಕ್ತ ಆಧಿಪತ್ಯಗಳು 32, ಮೈಸೂರು 62, ಹೈದರಾಬಾದ್ 54, ಮಧ್ಯ ಇಂಡಿಯಾ 5, ರಾಜಪುಟಾನಾ 133

* * *

ಬೊಂಬಾಯಿ ಹೈಕೋರ್ಟಿನ ಜಡ್ಜರಾದ ಸರ್ ನಾರಾಯಣ ಚಂದಾವರ್ಕರವರಿಗೆ ಇಂದೋರ್ ಸಂಸ್ಥಾನದ ದಿವಾನ್‌ಗಿರಿಯು ಸೇಮಕವಾಗಿ ಅವರು ಕಳೆದ ವಾರ ಪತ್ನಿಸಮೇತರಾಗಿ ಬೊಂಬಾಯಿನಿಂದ ತೆರಳಿದರು ಬೊಂಬಾಯಿನ ಪ್ರಜಾಮುಖಂಡರು ಆ ದಂಪತಿಗಳಿಗೆ ಬಹು ಪ್ರೀತಿಯುಕ್ತವಾದ ಮತ್ತೂ ಭವ್ಯವಾದ ಔತಣವನ್ನು ಮಾಡಿ ಸತ್ಕರಿಸಿ, ಅವರು ಹಿಂದೂ ಸಮಯಾಚಾರಗಳನ್ನು ಈಗಿನ ಕಾಲಕ್ಕೆ ಅನುಗುಣವಾಗಿ ಬದಲಾಯಿಸಿಕೊಳ್ಳುವ ಭಾಗಗಳಲ್ಲಿ ನಡೆಸುತ್ತಿರುವ ಸಾಹಸವನ್ನು ಕೊಂಡಾಡಿದರು

* * *

ಬಂಗಾಳಾ ಆಧಿಪತ್ಯದಲ್ಲಿ ಪ್ರಕಟವಾಗುವ "ನಿಯರ್ ಈಸ್ಟ್" ಎಂಬ ಮಹಮದೀಯ ವರ್ತಮಾನ ಪತ್ರಿಕೆಯೊಳಗೆ ಟರ್ಕಿ ಬಾಲ್ಕನ್ ಯುದ್ಧದ ಸಮಾಚಾರಗಳನ್ನು ತೃಪ್ತಿಕರವಾದ ರೀತಿಯಲ್ಲೂ ಯಥಾರ್ಥವಾಗಿಯೂ ಹಾಕಿ ಜನರಿಗೆ ತಿಳುಹಿಕೊಡುತ್ತಾರೆಂದು ತಿಳಿದು ಬಂಗಾಳಾ ಸರ್ಕಾರದವರು ಆ ಪತ್ರಿಕೆಯ ಸಂಪಾದಕರಿಗೆ ವರುಷಕ್ಕೆ 2,275 ರೂಪಾಯಿ ಪಾವತಿಮಾಡಿ ಕೆಲವು ಪ್ರತಿಗಳನ್ನು ಕೊಂಡುಕೊಂಡು ಆ ಪ್ರಾಂತ್ಯದಲ್ಲಿ ಮಹಮದೀಯ ಪ್ರಜೆಗಳು ಮಾಡಿಕೊಂಡಿರುವ ರೀಡಿಂಗ್ ರೂಮುಗಳಿಗೆ ಉಚಿತವಾಗಿ ಕಳುಹಿಸಿಕೊಡುತ್ತಿದಾರೆ.

* * *

ಮಧ್ಯ ಹಿಂದೂಸ್ಥಾನದಲ್ಲಿರುವ ಛತ್ತರಪುರವೆಂಬ ದೇಶೀಯ ಸಂಸ್ಥಾನದಲ್ಲಿ ಮಹಾರಾಜರವರು ತಮ್ಮ ಪ್ರಜೆಗಳನ್ನು ಮೊದಲು ವಿದ್ಯಾವಂತರನ್ನಾಗಿ ಮಾಡಬೇಕೆಂದು ಸಂಸ್ಥಾನದ ಸ್ಕೂಲುಗಳಲ್ಲಿ ವಿದ್ಯೆಯನ್ನು ಉಚಿತವಾಗಿ ಫೀಜಿಲ್ಲದೆಯೂ ಬಲಾತ್ಕರಿಸಿಯೂ ಮಾಡಿಸಲಾರಂಭಿಸಿರುತ್ತಾರೆ. ಮತ್ತು ರೈತರ ಕ್ಷೇಮವನ್ನು ಬಯಸಿ ದೆಹಲಿ ದರ್ಬಾರಿನ ಜ್ಞಾಪಕಾರ್ಥವಾಗಿ ಅವರಿಂದ ವಸೂಲಾಗದೆ ನಿಂತಿದ್ದ 1,25,400 ರೂಪಾಯಿ ಕಂದಾಯಗಳನ್ನು ಬಹು ಧಾರಾಳವಾಗಿ ರಿಮಿಷನ್ ಮಾಡಿಬಿಟ್ಟರು. ಇದರಿಂದ ವ್ಯವಸಾಯವೃದ್ಧಿಗೆ ತುಂಬಾ ಸಹಾಯವಾಗಿರುತ್ತದೆ

* * *

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಲಕ್ನೋ ಪಟ್ಟಣದಲ್ಲಿ ಲೆಫ್ಟಿನೆಂಟ್ ಗವರ್ನರರವರ ಪತ್ನಿಯಾದ ಲೇಡಿ ಮೆಸ್ಟನ್‌ರವರು ಮುಸಲ್ಮಾನ್ ಸ್ತ್ರೀಯರಿಗಾಗಿ ಒಂದು ಬಾಲಿಕಾ ಪಾಠಶಾಲೆಯನ್ನು ಕಳೆದವಾರ ಪ್ರಾರಂಭಮಾಡಿದರು ಈ ಸ್ಕೂಲಿಗೆ ಮಹಮುದಾಬಾದಿನ ರಾಜರವರೂ, ಸಯ್ಯದ್ ಕರಾಮತ್ ಹುಸೇನ್‌ರವರೂ ವಿಶೇಷ ದ್ರವ್ಯವನ್ನೂ ಇತರ ಸಹಾಯಗಳನ್ನೂ ಒದಗಿಸುವಂತೆ ತಿಳಿಸಿರುತ್ತಾರೆ ಕ್ಯಾನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದಿಂದ ಬಂದು ಕೆಲವು ದಿನಗಳಿಂದ ಅಲ್ಲಿನ ಮಹಮದೀಯ ಸ್ತ್ರೀ ವಿದ್ಯಾಭ್ಯಾಸದ ವಿಷಯದಲ್ಲಿ ತುಂಬಾ ಉತ್ಸಾಹಶಾಲಿಯಾಗಿರುವ ಮಿಸ್ ಫೋಸ್ ಎಂಬಾಕೆಗೆ ಆ ಸ್ಕೂಲಿನ ಮೇಲ್ವಿಚಾರಣೆಯನ್ನು ವಹಿಸಿರುತ್ತಾರೆ

* * *

ಬರೋಡ ಸಂಸ್ಥಾನದ ಮಹಾರಾಜಾ ಸರ್ ಸಾಯಾಜಿ ಸಯ್ಯಾಜಿರಾವ್ ಗಾಯಕವಾಡ್‌ಯವರು ಪಟ್ಟಕ್ಕೆ ಬಂದು ಇಪ್ಪತ್ತೈದು ಸಂವತ್ಸರಗಳಾದದ್ದರಿಂದ ಮಹಾರಾಜರವರು ಬರೋಡೆಯಲ್ಲಿ ಕಳೆದ ವಾರ ಜೂಬಿಲಿ ಉತ್ಸವಗಳನ್ನು ಆಚರಿಸಿದರು ಲಕ್ಷ್ಮೀ ವಿಲಾಸ್ ಅರಮನೆಯಲ್ಲಿ ವಿಶೇಷವಾದ ದರ್ಬಾರು ನಡೆದಾಗ ಮಹಾರಾಜರವರು ತಮ್ಮ ಪ್ರಜೆಗಳಲ್ಲಿ ಪರೋಪಕಾರಿಗಳಾಗಿ ಹೆಸರು ಪಡೆದಿದ್ದ ಕೆಲವು ಸ್ತ್ರೀ ಪುರುಷರಿಗೆ ಘನತರವಾದ ಬಿರುದುಗಳನ್ನು ದಯಪಾಲಿಸಿದರು. ಸಂಸ್ಥಾನಕ್ಕೆ ಸೇರಿದ ಹಲವು ಸಂಘಗಳ ಪ್ರತಿನಿಧಿಗಳು ಮಹಾರಾಜರವರಿಗೆ ಅಡ್ರೆಸ್ಸುಗಳನ್ನೊಂದಿ ದಿವ್ಯ ನವರತ್ನ ಖಚಿತವಾದ ಕ್ಯಾಸ್ಕೆಟ್ಟುಗಳಲ್ಲಿಟ್ಟು ಒಪ್ಪಿಸಿದರು. ಕಡೆಯಲ್ಲಿ ಮೆರವಣಿಗೆ ಮುಂತಾದವುಗಳು ಬಹು ಉಟ್ಟಹಾಸದಿಂದ ನಡೆದು, ಪ್ರಜೆಗಳಿಗೆ ಮಹಾ ಸಂದವನ್ನುಂಟುಮಾಡಿದರು.

* * *

ಕಳೆದ ವರುಷ ಹಿಂದೂಸ್ಥಾನದಿಂದ ಮಕ್ಕಾ ಮದೀನಾ ಎಂಬ ಯಾತ್ರಾಸ್ಥಳಗಳಿಗೆ ಮಹಮದೀಯರು ಪ್ರಯಾಣ ಮಾಡಿದರಷ್ಟೆ. ಈ ಪೈಕಿ ಒಂದು ಗುಂಪಿನ ಯಾತ್ರಾರ್ಥಿಗಳು ಜಿಡ್ಡಾದಿಂದ ಮಕ್ಕಾಕ್ಕೆ ಒಂಟೆ ಟಪ್ಪಾಲಿನ ಮೇಲೆ ಹೋಗುತ್ತಿದ್ದಾಗ ದಾರಿಯಲ್ಲಿ ಅಕಸ್ಮಾತ್ತಾಗಿ ವಿಪರೀತ ಮಳೆ ಸುರಿಯಿತು. ಒಂಟೆ ಟಪ್ಪಾಲಿನವರು ಯಾತ್ರಾರ್ಥಿಗಳನ್ನೆಲ್ಲಾ ಒಂದು ದಿಣ್ಣೆಯಲ್ಲಿ ಇಳಿಸಿ ತಂಗಿಕೊಂಡಿದ್ದರು ಮಳೆಯದೆಸೆಯಿಂದ ಪ್ರವಾಹಗಳು ಅಪಾರವಾಗಿ ಬಂದು ಯಾತ್ರಾರ್ಥಿಗಳಲ್ಲಿ 500 ಮಂದಿಯು ತನಕ ಕೊಚ್ಚಿಕೊಂಡು ಹೋದರು ಬೆಡೂಯಿನ್ ರೆಂಬ ಕಳ್ಳರು ಬಿದ್ದು ಅವರ ಗಂಟು ಮೂಟೆಗಳನ್ನೂ ಹಣಕಾಸನ್ನೂ ಅಪಹರಿಸಿ, ಶವಗಳನ್ನೆಲ್ಲಾ ಬಹುವೇಗನೆ ಭೂಸ್ಥಾಪನೆ ಮಾಡಿಬಿಟ್ಟರು. ಈ ಅನಾಹುತದಿಂದ ಆಸ್ತಿಪಾಸ್ತಿಗಳು ಅಪಾರವಾಗಿ ನಷ್ಟಹೊಂದಿರುತ್ತವೆ.

* * *

ದೆಹಲಿ ಘೋರಕೃತ್ಯದಿಂದ ಬಿಡುಗಡೆ ಹೊಂದಿ ಸೌಖ್ಯವಾಗುತ್ತಿರುವ ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್ ಪ್ರಭುಗಳು ಹಿಂದೂಸ್ಥಾನದ ಪ್ರಜೆಗಳೂ ಪ್ರಜಾಮುಖಂಡರೂ ಹಾಲಕರೂ ದರ್ಬಾರ್ ನಿಧಿಗಾಗಿ ಕಳುಹಿಸಿಕೊಟ್ಟ ದ್ರವ್ಯವನ್ನು ಸದ್ವಿನಿಯೋಗವನ್ನಾದಬೇಕೆಂದು ನಿಶ್ಚಯವಾಗಿ ಹುಕುಂ ಕೊಟ್ಟಿರುತ್ತಾರೆ ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲೂ ಕಾಯಿಲೆ ಅನುಭವಿಸುತ್ತಾ ಆಸ್ಪತ್ರೆಗಳಲ್ಲಿ ಬಿದ್ದುಕೊಂಡಿರುವ ಗಂಡು ಹೆಣ್ಣು ಮಕ್ಕಳಿಗೆ ವೈಸ್‌ರಾಯಿಯವರ ಜನ್ಮದಿನವಾದ ಜೂನ್ ತಾ 20 ರಲ್ಲಿ ಸುಭೋಜನವನ್ನು ಮಾಡಿಸಿ ಸಂತೋಷಪಡಿಸಬೇಕೆಂದೂ, ಈ ಖರ್ಚನ್ನು ಮೇಲ್ಕಂಡ ಧರ್ಮನಿಧಿಯಿಂದ ಮಾಡಬೇಕೆಂದೂ ವೈಸ್‌ರಾಯಿಯವರು ಇಂಡಿಯಾ ಗವರ್ನ್‌ಮೆಂಟಿನ ಸರ್ಜನ್ ಜನರಲ್ ಸರ್ ಪಿ ಲೂಕಿಸ್‌ರವರಿಗೆ ತಿಳಿಸಿರುತ್ತಾರೆ

* * *

ಬೊಂಬಾಯಿ ಗವರ್ನ್‌ಮೆಂಟಿನವರು ಅಲ್ಲಿನ ವಿದ್ಯಾಭ್ಯಾಸದ ಇಲಾಖೆಯ ಪಂಚವಾರ್ಷಿಕ ರಿಪೋರ್ಟನ್ನು ಈಗತಾನೇ ಪ್ರಕಟಮಾಡಿರುತ್ತಾರೆ ಇದನ್ನು ನೋಡಲಾಗಿ ಕಳೆದ ಐದು ವರ್ಷಗಳಲ್ಲಿ ವಿದ್ಯೆಯು ಬೊಂಬಾಯಿ ಅಧಿಪತ್ಯದಲ್ಲಿ ಬಹುಮಟ್ಟಿಗೆ ಅಭಿವೃದ್ಧಿಹೊಂದಿ ಪ್ರಚಾರಕ್ಕೆ ಬಂದಿದೆ ಎಂದು ಗೊತ್ತಾಗುತ್ತದೆ ಎಲ್ಲಾ ತರದ ವಿದ್ಯಾಶಾಲೆಗಳೂ 14,967 ರಿಂದ 16,160ಕ್ಕೆ ಹೆಚ್ಚಿದವು ವಿದ್ಯಾರ್ಥಿಗಳ ಸಂಖ್ಯೆ 7,20,647 ರಿಂದ 9,22,888 ಕ್ಕೆ ಹೆಚ್ಚಿರುವುದು. ಪ್ರೈಮರಿ ಪಾಠಶಾಲೆಗಳು 10,482 ರಿಂದ 12,764 ಕ್ಕೂ, ವಿದ್ಯಾರ್ಥಿಗಳ ಸಂಖ್ಯೆಯು 5,89,629 ರಿಂದ 7,57,30 ಕ್ಕೂ ಹೆಚ್ಚಿವೆ ವಿದ್ಯಾ ಇಲಾಖೆಯ ಒಟ್ಟು ಖರ್ಚು ಐದು ವರ್ಷಗಳ ಕೆಳಗೆ 1,06,41000 ರೂಪಾಯಿ ಇದ್ದದ್ದು ಕಳೆದ ಸಾಲಿನಲ್ಲಿ 1,36,17,000 ರೂಪಾಯಿ ಆಗಿದೆ ಪ್ರೈಮರಿ ವಿದ್ಯಾಪ್ರಚಾರಕ್ಕೆ 58 ಲಕ್ಷ ರೂಪಾಯಿ ಖರ್ಚಾಯಿತು.

* * *

ಬೊಂಬಾಯಿ ಪಟ್ಟಣದ ಅಪೋಲೋ ಬಂದರಿನಲ್ಲಿ ಚಕ್ರವರ್ತಿದಂಪತಿಗಳು ಜಹಜಿನಿಂದಿಳಿದು ಪಟ್ಟಣ ಪ್ರವೇಶ ಮಾಡಿದ ಸ್ಥಳದಲ್ಲಿ ಅವರು ದಯಮಾಡಿದ ಜ್ಞಾಪಕಾರ್ಥವಾಗಿ ಒಂದು ದಿವ್ಯವಾದ ಕಮಾನನ್ನೂ ಅದರ ಬಳಿ ಒಂದು ಭಾರಿ ಮಂದಿರವನ್ನೂ ಕ್ವೇತಶಿಲೆಯಲ್ಲಿ ಕಟ್ಟಿಸಬೇಕೆಂದು ತೀರ್ಮಾನವಾಗಿರುವಂತೆ ಬೊಂಬಾಯಿ ಗವರ್ನರ್ ಲಾರ್ಡ್ ಸೈಡನ್‌ಹ್ಯಾಂರವರು ಕಳೆದ ಮಾರ್ಚಿ ತಾ|| 31 ನೇ ಸೋಮವಾರ ಸಾಯಂಕಾಲ ದಿವ್ಯವಾದ ಮಂಡಲಿಯ ಮಧ್ಯದಲ್ಲಿ ಆ ಕಟ್ಟಡಕ್ಕೆ ಅಸ್ತಿಭಾರ ಶಿಲೆಯನ್ನು ಹಾಕಿ ಕಾಮಗಾರಿಯನ್ನು ಪ್ರಾರಂಭಿಸುವಂತೆ ಅಪ್ಪಣೆಕೊಟ್ಟರು. ಈ ಕಟ್ಟಡ ಮುಗಿಯುವದಕ್ಕೆಲ್ಲಾ ಸುಮಾರು ಹತ್ತು ಲಕ್ಷ ರೂಪಾಯಿ ಖರ್ಚಾಗಬಹುದೆಂದು ಅಂದಾಜಾಗಿದೆ. ಇದಕ್ಕೆ ಇಂಡಿಯಾ ಗವರ್ನ್‌ಮೆಂಟಿನವರು 2 ಲಕ್ಷ, ಬೊಂಬಾಯಿ ಗವರ್ನ್‌ಮೆಂಟಿನವರು 1 ಲಕ್ಷ, ಸರ್ ಜೇಕಬ್ ಸಸೂನ್ ಎಂಬ ಸಾಹುಕಾರರು 3 ಲಕ್ಷ, ಬೊಂಬಾಯಿ ಮ್ಯುನಿಸಿಪಾಲಿಟಿಯವರು ಒಂದು ಲಕ್ಷ ರೂಪಾಯಿ ಒದಗಿಸುವುದಾಗಿ ವಾಗ್ದಾನವಾಗಿರುತ್ತದೆ.

* * *

ಕರಾಚಿ ಡಿಸ್ಟ್ರಿಕ್ಟಿನ ಕಲೆಕ್ಟರಾದ ಮಿ|| ಎ. ಎಚ್ ಎಸ್ ಆಯಿನ್ಸ್‌ರವರು ತಾತಾರವರ ಸ್ಕೂಲಿನಲ್ಲಿ ಬಾಲಕರಿಗೆ ಬಹುಮಾನಗಳನ್ನು ಹಂಚಿಕೊಟ್ಟು ಆ ಸಭೆಯಲ್ಲಿ ಸೇರಿದ್ದ ಚಿಕ್ಕವರಿಗೂ ದೊಡ್ಡವರಿಗೂ ಎಂಥ ಭಾಷೆಯಲ್ಲಿ ಉಪನ್ಯಾಸಮಾಡುತ್ತಾ ಹೇಳಿದ್ದೇನೆಂದರೆ—ಪೂರ್ವಿಕರ ಆಚಾರ ವ್ಯವಹಾರಗಳನ್ನು ಬಿಡದೆ ಅನುವರ್ತಿಸುವವರೇ ಪರಮ ಸುಖಿಗಳು ಎಂಬುವುದನ್ನು ನೀವು ದೊಡ್ಡವರಾದ ಮೇಲೆ ನಿಮಗೆ ಗೊತ್ತಾಗುವುದು ಈಗಿನ ಚಿಕ್ಕ ವಯಸ್ಸಿನವರು ತಮ್ಮ ಶಾಸ್ತ್ರಗಳಲ್ಲಿರುವಂಥಾ ಶ್ರೇಷ್ಠವಾದ ವಿಚಾರಗಳನ್ನು ಅಲ್ಲಗಳೆಯುವುದನ್ನೂ ತುಚ್ಛೀಕರಿಸುವುದನ್ನೂ ನೋಡಿ ನನಗೆ ಬಹಳ ವ್ಯಥೆಯಾಗುತ್ತದೆ ಮತ್ತೆ ಕೆಲವು ಸಣ್ಣ ವಯಸ್ಸಿನವರು ಸರ್ವದಾ ಕಳವಳಪಡುತ್ತಲೂ, ನೆಮ್ಮದಿಯಾಗಲಿ ಸ್ಥಿರಚಿತ್ತವಾಗಲಿ ಸಂತೋಷವಾಗಲಿ ಇಲ್ಲದೆಯೂ ಇರುವುದನ್ನು ನೋಡುತ್ತಿರುವರು ಇವನ್ನು ನೋಡಲಾಗಿ ಅವರಲ್ಲಿ ಭಕ್ತಿಬೋಧನೆಯ ತಳಹದಿಯೂ ಬಂದೋಬಸ್ತೂ ಇಲ್ಲವೇ ಇಲ್ಲವೆಂದೂ, ಇದರಿಂದಲೇ ಅವರ ಮನಸ್ಸು ಸ್ವಾಧೀನವಿಲ್ಲದೆ ತಳಮಳಗೊಳ್ಳುತ್ತಿದೆ ಎಂದೂ ನನಗೆ ತೋರುತ್ತದೆ

* * *

ಕರಾಚಿ ಪಟ್ಟಣದಲ್ಲಿ ಗಾಯಕಸಾಬರು ಆಹಾರಕ್ಕಾಗಿ ಪ್ರಾಣಿಗಳನ್ನು ಬಹು ಕೊಳಕಾದ ಸ್ಥಳಗಳಲ್ಲಿ ಕೊಲ್ಲುತ್ತಲೂ, ಮಾಂಸವನ್ನು ತಮ್ಮ ಸ್ವಂತ ಕೊಳಕಾದ ಗಾಡಿಗಳಲ್ಲಿ ಅಂಗಡಿಗಳಿಗೆ ಸಾಗಿಸುತ್ತಲೂ ಇದ್ದರು. ಇವರ ಕಸಬು ಆರೋಗ್ಯ ಸೂತ್ರಗಳಿಗನುಸಾರವಾಗಿ ನಡೆಯುವಂತೆ ಮಾಡಬೇಕೆಂದು ಮ್ಯುನಿಸಿಪಾಲಿಟಿಯವರು ಗೊತ್ತುಮಾಡಿ, ಎರಡು ಹೊಸ ಕಸಾಬ್‌ಖಾನೆಗಳನ್ನು ಸಮರ್ಪಕವಾದ ರೀತಿಯಲ್ಲಿ ಕಟ್ಟಿಸಿ, ಮಾಂಸವನ್ನು ಸಾಗಿಸುವುದಕ್ಕೆ ಅನುಕೂಲವಾದ ಗಾಡಿಗಳನ್ನು ಸಿದ್ಧಪಡಿಸಿಕೊಟ್ಟರು. ಕಸಾಬರು ಆ ಹೊಸ ಸ್ಥಳದಲ್ಲಿ ಕಡಿಯುವುದಿಲ್ಲವೆಂದೂ, ಮಾಂಸವನ್ನು ಮ್ಯುನಿಸಿಪಲ್ ಗಾಡಿಗಳಲ್ಲಿ ಸಾಗಿಸುವುದೂ ಇಲ್ಲವೆಂದೂ ಹಟಹಿಡಿದು, ಮಾಂಸದ ಅಂಗಡಿಗಳನ್ನೆಲ್ಲಾ ಮುಚ್ಚಿಬಿಟ್ಟರು ಪಟ್ಟಣದಲ್ಲಿ ಪ್ರಜೆಗಳಿಗೆ ಮಾಂಸ ಸಿಕ್ಕದೆ ಕಳವಳವುಂಟಾಯಿತು. ಮ್ಯುನಿಸಿಪಾಲಿಟಿಯವರು ಸಗ್ಗದೆ ಮ್ಯುನಿಸಿಪಲ್ ಹಣ ಖರ್ಚುಮಾಡಿ ಪ್ರಾಣಿಗಳನ್ನು ಕೊಂಡುತಂದು ಕಡಿದು ಮಾಂಸವನ್ನು ಮಾರ್ಕೆಟ್ಟುಗಳಲ್ಲಿಡಿಸಿ ವಿಕರಿಮಾಡಿಸುತ್ತಾ ಬಂದರು ಅದಲ್ಲದೆ ಇತರ ಸ್ಥಳಗಳಿಂದ ಕಸಾಬರನ್ನು ಅಲ್ಲಿಗೆ ಕರೆಸುವುದಕ್ಕೂ ಏರ್ಪಾಡು ನಡೆಯಿತು ಕರಾಚಿಯ ಗಾಯಕಸಾಬರು ಮೂರು ದಿನಗಳ ತನಕ ಸುಮ್ಮನಿದ್ದು ಕಡೆಗೆ ತಾವೇ ಬಂದು ಮ್ಯುನಿಸಿಪಾಲಿಟಿಯವರು ಹೇಳುವಂತೆ ಕೇಳುವುದಾಗಿ ಒಪ್ಪಿ, ಅವರ ಅಪ್ಪಣೆಯಂತೆ ಪ್ರಾಣಿಗಳನ್ನು ಕಡಿದು ಮಾಂಸವನ್ನು ಸಾಗಿಸಿ ವಿಕರಿ ಮಾಡುತ್ತಾ ಬಂದಿದಾರೆ

* * *

ಕಳೆದ ಐದು ವರುಷಗಳಿಂದ ಬೊಂಬಾಯಿ ಆಧಿಪತ್ಯದ ಗವರ್ನರಾಗಿದ್ದ ಲಾರ್ಡ್ ಸೈಡನ್‌ಹ್ಯಾಂ (ಸರ್ ಜಾರ್ಜ್ ಕ್ಲಾರ್ಕ್) ಯವರು ಕಳೆದ 4 ನೇ ತಾ ಶುಕ್ರವಾರ ಗವರ್ನರಾ ಪದವಿಯನ್ನು ಹೊಸದಾಗಿ ಸೀಮೆಯಿಂದ ದಯಮಾಡಿದ ಲಾರ್ಡ್ ವಿಲ್ಲಿಂಗ್‌ಡನ್ ರವರಿಗೆ ವಹಿಸಿ ಮರುದಿನ ಪತ್ನಿ ಸಮೇತ ಒಹಜು ಹತ್ತಿ ಸೀಮೆಗೆ ಪ್ರಯಾಣ ಮಾಡಿದರು ಇವರ ಅಧಿಕಾರಕಾಲದಲ್ಲಿ ಬೊಂಬಾಯಿ ಆಧಿಪತ್ಯದಲ್ಲಿ ವಿದೆ, ವ್ಯವಸಾಯ, ಕೈಗಾರಿಕೆಗಳು ಎಷ್ಟು ಮಟ್ಟಿಗೆ ವೃದ್ಧಿಹೊಂದಿವೆ ಇವರು ಕುದುರೆ ಜೂಜಿನ ಕಾಲಗಳಲ್ಲಿ ಅನೇಕಾನೇಕರು "ಈ ಕುದುರೆ ಗೆಲ್ಲುತ್ತೆ ಆ ಕುದುರೆ ಗೆಲ್ಲುತ್ತೆ" ಎಂದು ಜೂಜಾಡಿ ಬಹಳ ಅನರ್ಥಕ್ಕೆ ಗುರಿಯಾಗುತ್ತಿದ್ದನ್ನು ನೋಡಿ, ಒಂದು ಕಾನೂನ್ ಜಾರಿಗೆ ತಂದು ಆ ಜೂಜಾಟವನ್ನು ದರ್ಪದಿಂದ ನಿಲ್ಲಿಸಿ ಬಿಟ್ಟರು. ಇದಕ್ಕಾಗಿ ಬೊಂಬಾಯಿನ ಸಭ್ಯಸ್ತ್ರೀಗಳು ವಿಶೇಷವಾಗಿಯೂ, ಹಿಂದೂಸ್ಥಾನದ ಪ್ರಜೆಗಳೂ ಈ ಗವರ್ನರರವರನ್ನು ಕೃತಜ್ಞತಾಪೂರ್ವಕವಾಗಿ ವಂದಿಸುತ್ತಿದಾರೆ. ಬೊಂಬಾಯಿ ಆಧಿಪತ್ಯದಲ್ಲಿರುವ ಸಮಸ್ತ ಪಂಗಡಗಳ ಪ್ರಜಾಮುಖಂಡರೂ ಬೇರೆಬೇರೆ ಸ್ಥಳಗಳಲ್ಲಿ ಬಹು ಆದರಪೂರ್ವಕವೂ ಆಟ್ಟಹಾಸಯುಕ್ತವೂ ಆದ ಆತಿಥ್ಯಗಳನ್ನು ಕಲ್ಪಿಸಿ ಈ ಗವರ್ನರ್ ದಂಪತಿಗಳಿಗೆ ಔತನವನ್ನು ಮಾಡಿ ಸಾಗ ಕಳುಹಿಸಿದರು ಈಗ ಗವರ್ನರ್ ಪದವಿಯನ್ನು ವಹಿಸಿಕೊಂಡಿರುವ ಲಾರ್ಡ್ ವಿಲ್ಲಿಂಗ್‌ಡನ್ ರವರಿಗೆ ಬೊಂಬಾಯಿ ಪಟ್ಟಣದ ಪ್ರಮುಖರು ಆ ದಿನ ದಿವ್ಯವಾದ ಸುಸ್ವಾಗತವನ್ನು ಬಯಸಿ ಅವರ ಆಳ್ವಿಕೆಯಲ್ಲಿ ಬೊಂಬಾಯಿ ಪಟ್ಟಣವೂ ಆ ಅಧಿಪತ್ಯವೂ ಇನ್ನೂ ವಿಶೇಷವಾಗಿ ಉಚ್ಛ್ರಾಯಸ್ಥಿತಿಗೆ ಬರುವಂತಾಗಲೆಂದು ಪ್ರಾರ್ಥಿಸಿಕೊಂಡರು.

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಇದು ಪುಗಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs. OAKES & Company, Mount Road, Madras.

[4-23]

ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. H. GULLIFORD, Proprietor and Manager, Wesleyan Mission Press, Mysore. 10/4/1913

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—೧೯೧೩ ನೇ ಇಸವಿ ಏಪ್ರಿಲ್ ತಾರೀಖು ೧೭ ನೇ ಗುರುವಾರ. ಸಂಚಿಕೆ ೪೬

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

84-17

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ...ಉ, ಆರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆ ...ಗಳಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ...ನೆಗಡಿ, ಶ್ವಾಸರೋಗ, ಜಡ್ಡು, ಉಳಕು, ಛಳುಕು, ಚೇಳು ಕಡಿದ ಬಾಧೆ, ...ವೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋ...ದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿ ...ವ ವೈದ್ಯನ ಅಂಗಡಿಗೆ ಹೋಗು. ಕ್ಲೇಮೆಂಟರ ಮ್ಯಾಜಿಕ್ ಬಾಂ ಒಂದು ...ಲ್ಲ ಕೊಡಿ ಎಂದು ಕೇಳು. ಅವಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ...ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯಕ್ಷಣೀಯೋಪಾದಿ ...ಮಾನುವ ಔಷದವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ...ನೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರ ...ಹೊಂದಿದ್ದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ.

"ಕ್ಲೇಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡ. ...ದ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 1 ಆಣೆ. 3 ಅಥವಾ ಹೆಚ್ಚು ...ಟ್ಲ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳ ...ವ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು—(1) ಎಸ್. ಪೀಟರ್ಸ್, 37 ಮುತಿಯಲ್ಲ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಟಿ ಎಸ್ ...ಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಜವಳಿ ವ್ಯಾಪಾರಿಗಳು ಅಗತ್ಯ ನೋಡಬೇಕು.

[66-3]

ನಮ್ಮಲ್ಲಿ ನೂಲಂಚಿನ ಸೋಲಾಪುರದ ಸೀರೆಗಳು ಕಿರಿಗೆಗಳು ಕಣಗಳು ರುಮಾಲ್ ದೊರಕುತ್ತೆ. ಬಣ್ಣ, ಚಾತರಿ, ನೂಲು ಹಸನು, ಬೆಲೆ ಅತ್ಯಂತ ಸುಲಭ. ವ್ಯಾಪಾರಿಗಳಿಗೂ ಚಿಲ್ಲರೆ ಗಿರಾಕಿಗಳಿಗೂ ಅನುಕೂಲವಾದ ಸಮಯ. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು, ಅಥವಾ ಬಂದು ನೋಡಬಹುದು. ನಮ್ಮ ವಿಳಾಸ—

ಜಿ. ಎಸ್. ಶ್ರೀಕಂಠಯ್ಯ, ಏಜೆಂಟ್,

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, ದೊಡ್ಡಪೇಟೆ ಗಡಿಯಾರದ ಚೌಕ, ಮೈಸೂರು.

ಪರೀಕ್ಷಿಸಿ ನೋಡದ ಅಗ್ಗದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ಬಿಕರಿಯಾಗುತ್ತಿವೆ. ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ.

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ. ಕೂದಲು ಸತ್ತುಹೋಗುತ್ತೆ. ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ. ಸತ್ತ ಮತ್ತು ಸಾಯುವ ಕೂದಲನ್ನು ...ನುತ್ತೆ ಹುಟ್ಟಿಸಿ ಬೆಳಸುತ್ತೆ. ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ತಳತಳಿಸುವವು, ನಿಬಿಡವಾದ ನೀಲಬ...ದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು. ಕೂದಲಿಗೆ ಹೊಳಪುಕೊಡುತ್ತೆ. ...ತ್ತಿ ಬುರುಡೆಯನ್ನು ಶುದ್ಧಮಾಡುತ್ತೆ. ಸುಂಡಿನ ಹೊಟ್ಟನ್ನು ಅಡಗಿಸುತ್ತೆ. ಉತ್ತಮೋತ್ತಮವಾದ ಸುಗಂಧವುಳ್ಳ...ದ ಕಾರಣ ಕೂದಲಿಗೆ ಹಚ್ಚಿಕೊಳ್ಳ...ಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ. ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಬಣ್ಣಕ್ಕೆ ತಿರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು. ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೇಶತೈಲ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ.

ಇದರ ಬೆಲೆ 1 ಸೀಸೆಗೆ ರೂ 1-0-0. ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು.
3 ಸೀಸೆಗಳಿಗೆ ರೂ. 2-10-0. ಅಂಚೆಯ ವೆಚ್ಚ 0-7-0.

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ. ಮೈಸೂರು ಎಗ್ಸಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಸಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು.

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಜದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ. ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ|| ಟಿ. ಸಾಲೊಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ. ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ. ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ." ವಿರುದುಪಟ್ಟಿ ಕೆ ವಿ ಎಸ್ ಹೈಸ್ಕೂಲ್ ಹೆಡ್ ಮಾಸ್ಟರ್ ಮಿ|| ಎಂ ಸುಬ್ರಹ್ಮಣ್ಯಪಿಳ್ಳೆಯವರು ಬರೆಯುವದು—"ನಿಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ಪರೀಕ್ಷೆಮಾಡಿದೇನೆ. ಅದು ಕೂದಲನ್ನು ಹುಟ್ಟಿಸಿ ಅಂದವಾಗಿಯೂ, ಕೋಮಲವಾಗಿಯೂ, ... ಬೆಳೆಸುವುದೆಂದು ಖಂಡಿತವಾಗಿ ಹೇಳಬಲ್ಲೆನು. ದಯಮಾಡಿ ... ಬಾಟ್ಲ ಎಣ್ಣೆ ಕಳುಹಿಸಿಕೊಡಿ." ... ಕಂಟ್ರೋಲರ್ ಆಫೀಸ್ ಮಿ|| ಗೋಪಾಲರಾವ್ ಜೋಷಿಯವರು ಬರೆಯುವದು—"ದಯವಿಟ್ಟು ನಿಮ್ಮ ಕಾಮಿನಿಯಾ ಎಣ್ಣೆ ಆರು ಬಾಟ್ಲ ಕಳಿಸಿಕೊಡಿ. ಒಂದು ತಿಂಗಳ ಹಿಂದೆ ನೀವು ಕಳಿಸಿದ ಬಾಟ್ಲಗಳು ಮುಗಿದುಹೋಯಿತು. ಇದೇ ಉತ್ತಮೋತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳಬಲ್ಲೆನು." ಆದಕಾರಣ ನೀವು ಒಂದು ಸಲ ತರಿಸಿ ಪರೀಕ್ಷೆ ಮಾಡಿ.

ಎಚ್ಚರಿಕೆ—ಹೊಸವಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ. ನಿಮ್ಮ ಸ್ಥಳದ ಷಾಪುಕೀಪರಲ್ಲಿ ಅದು ಇಲ್ಲದಿದ್ದರೆ ಅವನ ಹೆಸರು ವಿಳಾಸದ ಸಮೇತ ನಮಗೆ ತಿಳಿಸಿ. ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ. "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು. ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ. ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ಸೋಧಿಸಿ ಕೊಂಡುಕೊಳ್ಳಿ.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ಏಜೆಂಟ್, ದಿ. ಉಲನ್ ಮಾರ್ಟ್, ಮಂಗಳೂರು.

ನಮ್ಮ ವಿಳಾಸ:—

[8-14]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಡೋಂಗರೆ ಇವರ ಬಾಲಾಮೃತ.

[115-40]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಪಸಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಿರೋಣ, ಅಸ್ಥಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತು ೧೨ ಆಣೆ; ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಸಮಸ್ತ ವಿಧವಾದ ನೋವೂ ಇರಿತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಬೆನ್ನಿನ ಸೆಳೆತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ.

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ಬಿಕರಿಯಾಗುತ್ತಲಿವೆ. ಡಾಕ್ತರುಗಳೂ ವೈದ್ಯಮಾಹತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ. ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ಬಿಕರಿಯಾಗುವದು.

ಮುಳಕಡ್ಡಿ ಔಷದ ಡಪ್ಪಿಗೆ ೬ ಆಣೆ; 12 ಕುಪ್ಪಿಗೆ ರೂ. 3-8-0. ಹಲ್ಲುಪುಡಿ ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ. 1-2-0. ವಿ. ಪಿ. ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ. [42-8]

ವಿಳಾಸ—ಅಮೃತಾಂಜನ ಡಿಪ್ಪೋ, ೧೯ ಫ್ರೈಯರ್ ರೋಡ್, ಫೋರ್ಟ್, ಬೊಂಬಾಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ'—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ವೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿತೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುರೋಗ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕ್ಷಯತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವನು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 1 ಆಣೆ. [136-34]

೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ. ಒಂದೇ ಒಂದು ಬುಡ್ಡಿಯು ...: ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

28—3—1913 ರಿಂದ 4—4—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	0	0	1	1
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	15	14	0	0
ಮೈಸೂರು ,,	0	0	570	342
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	115	81
ಹಾಸನ ,,	0	2	31	15
ಚಿತ್ರದುರ್ಗ ,,	0	0	0	0
ಕಡೂರ್ ,,	0	0	93	52
ಶಿವಮೊಗ್ಗ ,,	17	8	1	1
ಜುಮ್ಲಾ	32	24	810	492

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದಿ ಸಂವತ್ಸರೇ ಉತ್ತರಾಯಣೆ ವಸಂತಋತೌ ಚೈತ್ರ ಶುದ್ಧ ದ್ವಾದಶಿ ಶುಕ್ರವಾರದಿಂದ ಚೈತ್ರ ಬಹುಳ ಚೌತಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1913 ನೇ ಏಪ್ರಿಲ್.

ತಾ	ವಾರ.	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	ಮೇಷ ಮಾಸ ತೇದಿ
18	ಶುಕ್ರ ,,	ದ್ವಾದಶಿ	7-12	ಉತ್ತರಾ	53-47	6
19	ಶನಿ †	ತ್ರಯೋದಶಿ	1-45	ಹಸ್ತ	54-11	7
20	ಭಾನು §	ಪೌರ್ಣಮಿ	50-57	ಚಿತ್ತ	46-38	8
21	ಸೋಮ	ಪಾಡ್ಯಮಿ	46-41	ಸ್ವಾತಿ	44-21	9
22	ಮಂಗಳ	ಬಿದಿಗೆ	45-25	ವಿಶಾಖ	42-51	10
23	ಬುಧ *	ತದಿಗೆ	41-12	ಅನೂ	42-21	11
24	ಗುರು	ಚೌತಿ	40-9	ಜ್ಯೇಷ್ಠ	43-0	12

,, ಪ್ರದೋಷ, ಅನಂಗತ್ರಯೋದಶಿ, ಮಾಗಡಿ ರಂಗಸ್ವಾಮಿ ರಥ, ತೊಂಡನೂರು ಲಕ್ಷ್ಮೀನಾರಾಯಣಸ್ವಾಮಿ ರಥ † ಮಳೂರು ಅಪ್ರಮೇಯಸ್ವಾಮಿ ರಥ, ಮಳೆ ನಕ್ಷತ್ರ—ಅಶ್ವಿನಿ 3 ನೇ ಪಾದ § ಚಿತ್ರಾಪೂರ್ಣಿಮಾ, ಬಿಳಿಗಿರಿ ರಂಗಸ್ವಾಮಿ ರಥ. * ಅಮೃತಸಿದ್ಧಿಯೋಗ, ಮಳೆ ನಕ್ಷತ್ರ—ಅಶ್ವಿನಿ 4 ನೇ ಪಾದ.

ಪೇಟೇ ಧಾರಣೆ.

ದಿನಸಿ	ಮೈಸೂರು.	ಬೆಂಗಳೂರು
ಕಿತ್ತಿ ಅಕ್ಕಿ ಪಲ್ಲಾ ೧ಕ್ಕೆ ರೂ.	೧೫-೦-೦	೧೬-೮-೦
ಕೆಂಬೂತಿ ಅಕ್ಕಿ ಅವಲ್	೧೫-೨-೦	೧೬-೮-೦
,, ದುಯಂ	೧೫-೦-೦	೧೬-೦-೦
ಜಾಸ್ವಾಣಿ ಅಕ್ಕಿ	೧೪-೮-೦	೧೬-೪-೦
ಸಣ್ಣಕ್ಕಿ ಅವಲ್	೧೬-೮-೦	೧೮-೮-೦
,, ದುಯಂ	೧೬-೦-೦	೧೬-೮-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೧೪-೦-೦	೧೩-೮-೦
,, ದುಯಂ ,,	೧೩-೦-೦	೧೨-೮-೦
ಹೈಕ್ ರಾಗಿ ಪಲ್ಲಾ ೧ಕ್ಕೆ	೭-೦-೦	೫-೦-೦
ಕಾರ್ರಾಗಿ ,,	೬-೪-೦	೪-೧೨-೦
ಜೋಳ ,,	೬-೧೨-೦	೭-೪-೦
ಹುಲಸಂದೆ ಪಲ್ಲಾ ೧ಕ್ಕೆ	೧೦-೪-೦	೧೩-೧೨-೦
ಬಿಳೀ ಅವರೆ ,,	೧೧-೦-೦	೧೧-೦-೦
ಹೆಸರು ,,	೧೩-೦-೦	೧೪-೦-೦
ಉದ್ದು ,,	೧೪-೮-೦	೧೬-೦-೦
ಕಡಲೆ ,,	೧೦-೮-೦	೧೨-೦-೦
ಎಳ್ಳು ಸೇರು ೧೨೭ಕ್ಕೆ	೨೭-೨-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೬-೯-೦	೭-೦-೦
ಹರಳು ೧೨೭ ಸೇರಿಗೆ	೧೨-೮-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೩-೮-೦
ಮೆಣಸಿನಕಾಯಿ ,,	೪-೦-೦	೩-೪-೦
,, ದುಯಂ	೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೪-೮-೦	ಮಣ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೨-೦	೬-೬-೦
ಹರಳೆಣ್ಣೆ ,, ,,	೫-೮-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫-೨-೦	೫-೪-೦
ಉಪ್ಪು ,, ,,	೫-೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧-೮-೦	೧-೪-೦
,, ಹಳೇದು ,,	೧-೦-೦	೦-೧೪-೦
ತುಪ್ಪ ಮಣ ೧ಕ್ಕೆ	೨೦-೦-೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೧೧-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೬-೦-೦	೬-೦-೦
ಅರಲೀಕಾಯಿ ಮಣ ೧ಕ್ಕೆ	೧-೪-೦	೧-೦-೦
ಅಂಬ್ಯಾಳಕಾಯಿ ಮಣ ೧ಕ್ಕೆ	೦-೧೨-೦	೧-೮-೦
ಚಿನ್ನ (ಸೌರ್) ಕೆಂಪು	೧೫-೮-೦	೫೧-೮-೦
,, ,, ಪಸಿಮೆ	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ ...	೮೧-೦-೦	೮೧-೩-೦

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



1-15

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ— ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಿಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ.

ಪ್ರತಾಪಕಂಠೀರವ ಚರಿತ್ರೆ.

(1) "ಧರ್ಮಿಷ್ಠರಿಗೆ ವ್ಯವಸಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ, (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ-ಚಾತುರ್ಯ, (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು, (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ವಿರಾಡದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭ ಶೈಲಿ, (7) ಸರಸಯುಕ್ತಿ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ ಕ್ರಯ —1 ರೂಪಾಯಿ, ಟಪಾಲ್ ಹಾಸಲು ಬೇರೆ.

[16 4] ನಮ್ಮ ವಿಳಾಸ:—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಗುಣಕಂಡ ಮೂರು ಪ್ರಖ್ಯಾತ ಔಷಧಗಳು.

ಸ್ವಾಕ್ಸರ ಮಲೆನಾಡು ಜ್ವರಮಾತ್ರೆಗಳು—ಶೈತ್ಯಪ್ರದೇಶಗಳಲ್ಲಿ ಬಿಟ್ಟುಬರುವ ಅಥವಾ ದೀರ್ಘವಾದ ಶೀತಪಿತ್ತ ಎಲ್ಲಾ ಜಾತಿಯ ಚಳಿ ಜ್ವರಗಳನ್ನೂ ಖಂಡಿತವಾಗಿಯೂ ಸಂಪೂರ್ಣವಾಗಿಯೂ ವಾಸಿಮಾಡುತ್ತೆಂದು ಪ್ರಖ್ಯಾತಿ ಹೊಂದಿರುವ ಮಾತ್ರೆಗಳೇ ಇವು ಕ್ರಯ ಡಬ್ಬಿ 1ಕ್ಕೆ ರೂಪಾಯಿ 1-0-0

ಸ್ವಾಕ್ಸರ ಉಬ್ಬಸದ ಔಷಧ—ಉಬ್ಬಸ, ಕಠಿಣವಾದ ಕೆಮ್ಮು ಮೊದಲಾದ ಶ್ವಾಸಕೋಶದ ವ್ಯಾಧಿಗಳಿಗೂ, ಶೀತದ ಗಡ್ಡೆಗಳಿಗೂ ಬಹಳ ಉತ್ತಮವಾದ ಮತ್ತು ಶೀಘ್ರವಾಗಿ ಗುಣಕೊಡುವ ಔಷಧ ಕ್ರಯ ಬಾಟ್ಲ 1ಕ್ಕೆ ರೂಪಾಯಿ 1-0-0. [30-10]

ಸ್ವಾಕ್ಸರ ನಾಯಿಕೆಮ್ಮಿನ ಸಿದ್ಧೌಷಧ—ಇದು ಖಾತ್ರಿಯಾದ, ನಂಬಿಕೆಯುಳ್ಳ ಮತ್ತು ಅಮೋಘವಾದ ಔಷಧ ಬೇಗನೆ ಖಂಡಿತವಾಗಿಯೂ ಸಂಪೂರ್ಣವಾದ ಗುಣಕೊಡುವಂಥಾದ್ದು ಕ್ರಯ ಬಾಟ್ಲ 1ಕ್ಕೆ ರೂ 1-0-0

ಪ್ಯಾಕಿಂಗ್, ಪೋಸ್ಟೇಜ್, ವಿ ಪಿ ಛಾರ್ಜು ಪ್ರತ್ಯೇಕ. ಈ ಔಷಧಗಳ ಗುಣಾದಿಗಳನ್ನು ವಿವರಿಸುವ ಹಸ್ತಪತ್ರಗಳನ್ನು ಕೇಳಿದವರಿಗೆ ಬಿಟ್ಟಿ ಕಳುಹಿಸುವೆವು.

ವಿಳಾಸ —ಜೆ. ಎಸ್. ಸ್ವಯರ್ಸ್,

117 ಪ್ರೋಫಾಂಸ್ ಬ್ರಾಡ್‌ವೇ, ಮದರಾಸ್.

ಇವರಲ್ಲೂ ಸಿಕ್ಕುತ್ತವೆ—(1) ಎಡ್ವರ್ಡ್ ಕಂಪನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ; (2) ಸ್ಟಿಯುವರ್ಡ್ ಉಸ್ಮಾನ್ ಕಂಪನಿ, ಬೆಂಗಳೂರು ದಂಡು, (3) ಕೆ. ವಿಟ್ಠಲ್‌ರಾವ್ ಕಂಪನಿ, ಮಂಗಳೂರು, (4) ಎಚ್. ಪಿಳ್ಳೆ ಕಂಪನಿ, ಪಾಲಘಾಟ್, (5) ಬಾಯಿಸ್ ಕಂಪನಿ, ಕಲ್ಲೀಕೋಟೆ.

ಶ್ರೀಲಕ್ಷ್ಮೀನರಸಿಂಹ ಆಯುರ್ವೇದ ವೈದ್ಯಶಾಲಾ

ಜ್ವರಮುರಾರಿ.—ಸಕಲ ವಿಧವಾದ ಜ್ವರಗಳಿಗೆ ಅಂಕುಶವಾಗಿದೆ. ಇದನ್ನು ಉಪಯೋಗಿಸಿದೊಡನೆ ಸಕಲವಿಧವಾದ ಜ್ವರಗಳನ್ನೂ ಹತಮಾಡುವದು. ಇದು ಬಹಳ ಕಹಿಯಾಗಿರುವ ಹಸುರುಸೊಪ್ಪುಗಳು ಬೇರುಗಳು ಮೊದಲಾದ ಕ್ಷಾರದಿಂದ ಮಾಡಲ್ಪಟ್ಟದ್ದು. ರಸ, ಗಂಧಕ, ಪಾಷಾಣಾದಿಗಳೊಂದೂ ಈ ಔಷಧಕ್ಕೆ ಸೇರಿದ್ದಿಲ್ಲ. ಇದು ನಮ್ಮ ಪೂರ್ವಿಕರು (ಸಿದ್ಧರು)ಗಳಿಂದ ಕಲಿತ ಸಿದ್ಧಪ್ರಯೋಗ. ಈ ಔಷಧಕ್ಕೆ ಪಥ್ಯ ಪಾನಾದಿಗಳೇನೂ ಇಲ್ಲ. ಈ ಔಷಧವನ್ನು ಒಂದು ಸಾರಿ ತರಿಸಿ ಪರೀಕ್ಷಿಸಿದ ಒಡನೆ ಆದರಾಗಿ ತಮ್ಮ ಸ್ನೇಹಿತರುಗಳಿಗೆ ತಿಳಿಸಿ ಸಂತೋಷಪಡುವರು ಇದು ಮದರಾಸಿನಲ್ಲಿ ಅನೇಕ ಸಾವಿರ ಜನಗಳು ಉಪಯೋಗಿಸಿದ ಸಿದ್ಧೌಷಧ. ಪ್ರತಿ ದಿವಸ ಅನೇಕ ಜನಗಳು ಉಪಯೋಗಿಸುತ್ತಲೂ ಇದ್ದಾರೆ. ಈ ಔಷಧ ಸೇವನೆ ಕ್ರಮವು ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು ಎಂಥಾ ಜ್ವರವನ್ನೂ 8-10-12-16 ಪೊಟ್ಟಣಗಳ ಔಷಧದಲ್ಲಿ ನಿಶ್ಶೇಷವಾಗಿ ಜೀರ್ಣಿಸಿ ಅನ್ನದ್ವೇಷವನ್ನು ಹೋಗಲಾಡಿಸಿ ಹಸಿವನ್ನುಂಟುಮಾಡಿ, ಬಲಹೀನವನ್ನು ಹೋಗಲಾಡಿಸುವದು. ಇದರ ಬೆಲೆ 12 ಪೊಟ್ಟಣಗಳ ಡಜನ್ 1 ಕ್ಕೆ 12 ಆಣೆ. ಟಪ್ಪಾಲ್, ಪಾರ್ಸಲ್ ಛಾರ್ಜು ಪ್ರತ್ಯೇಕ. [10 9]

ದಂತಧಾವನ ರತ್ನಾಕರಂ.—ಇದು ಹಲ್ಲುಗಳಿಗೆ ಬಾಧಾಕರವಾದ ಪದಾರ್ಥಗಳು ಯಾವದೂ ಸೇರಿಸದೆ ಅನೇಕ ಮೂಲಿಕೆಗಳಿಂದ ತಯಾರುಮಾಡಿದ ಹಲ್ಲು ಪುಡಿ ಸುವಾಸನೆಯಾಗಿರುವದು. ಇದರಿಂದ ಹಲ್ಲು ಉಜ್ಜಿಕೊಂಡರೆ ದಂತದಲ್ಲಿ ಹುಟ್ಟಿದ ರೋಗಾದಿಗಳು ಹೋಗಲಾಡಿಸಿ ವಾತಪಿತ್ತ ಶ್ಲೇಷ್ಮಗಳನ್ನು ಶಮನಮಾಡಿ ಹಲ್ಲುನೋವು, ಬಾಯಿನಾತ, ಹಲ್ಲುಜೋವು, ಹಲ್ಲಿನಲ್ಲಿ ರಕ್ತ ಹುಳಗಳು, ಹಲ್ಲಿನಲ್ಲಿ ರಕ್ತಬರುವದು, ಹುಳುಕುಹಲ್ಲು, ಇಗುದುಬಾವು ಮೊದಲಾದವನ್ನು ಪರಿಹರಿಸಿ ಹಲ್ಲು ಸಂದುಗಳನ್ನು ದಟ್ಟವಾಗಿ ಸೇರಿಸಿ ಕಳೆಕೊಟ್ಟು ದೇಹಕ್ಕೆ ಒಳ್ಳೆ ಗುಣವನ್ನುಂಟುಮಾಡುವದು ಈ ಪುಡಿಯನ್ನು ಹೊಟ್ಟೆಗೂ ತೆಗೆದುಕೊಳ್ಳಬಹುದು ಇದರ ಬೆಲೆ ಡಬ್ಬಿ 1 ಕ್ಕೆ 4 ಆಣೆ ಟಪ್ಪಾಲ್, ಪಾರ್ಸಲ್ ಛಾರ್ಜು ಪ್ರತ್ಯೇಕ ವಿಳಾಸ.—

ರಾಜವೈದ್ಯಂ ಮೈಸೂರು ಪಂಡಿತರು ಎಂ. ಕೆ. ಶೇಷಾಚಾರ್ರು,

ನಂ. 93, ಚೈನಾಬಜಾರ್ ರೋಡ್, ಮದರಾಸ್.

1914ನೇ ಕ್ಯಾ ಲೆಂಡರು 5 ಆಣೆ, ನೋಟ್ಸು 6 ಆಣೆ (ಅಚ್ಚಿನಲ್ಲಿದೆ). ಪತ್ರರತ್ನಾಕರ 8 ಆಣೆ, ಲೀಮ್ಯಿತತ್ವಪ್ರಕಾಶಿಕೆ 4 ಆಣೆ ಇಂದುಕಲಾ—ಒಂದು ಹೊಸ ಪುಸ್ತಕ, ಸಜ್ಜನಸ್ವಭಾವ ಭ್ರಾತೃವಾತ್ಸಲ್ಯ ಮುಂತಾದ್ದನ್ನು ತಿಳಿಸುತ್ತದೆ. ಬೆಲೆ 6 ಆಣೆ. ಆರೋಗ್ಯ ಪ್ರಶ್ನೋತ್ತರ 1 ಆಣೆ. 10 ಪ್ರತಿಗೆ ಒಂದು ಉಚಿತ. ವಿಳಾಸ —ಹೆಚ್ ವೆಂಕಟರಾಮಯ್ಯ, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು.

"ವೃತ್ತಾಂತ ಪತ್ರಿಕೆ" ಏಜಂಟರಿಗೆ ನೋಟೀಸ್.

ವೃತ್ತಾಂತ ಪತ್ರಿಕೆಯ 1912-13 ನೇ ವರುಷದ ಮೂರನೇ ಕ್ವಾರ್ಟರು ಕಳೆದ ಫೆಬ್ರವರಿ ತಿಂಗಳಿಗೆ ಪೂರೈಸಿದೆ. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಸೈದುಮಾಡಿ, "ಬಿ" ಫಾರಂಗಳಿಗೆ ಎತ್ತಿ ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃತಪಡಿಸಿದೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-16

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವು ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಶುದ್ಧವಾಗಿ ಸಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿರಳೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ.; ೧ ರೂ. ೬ ಆ.; ೧ ರೂ. ೪ ಆ.

ಚುಕ್ಕಿಯುಳ್ಳ ಟೋಪಿಗಳು ರೂ ೧—೮; ರೂ ೧—೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ. ೧೨ ಆ, ೧ ರೂ ೮ ಆ.; ೧ ರೂ ೬ ಆ.

ಮುಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ ೬ ಆ.

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ:—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಗೃಹಕೃತ್ಯದ ನೋಟೀಸು

ಮೈಸೂರು ಹೊಸ ಅಗ್ರಹಾರದಲ್ಲಿರುವ ಚಿನ್ನದ ತಿಮ್ಮಪ್ಪನವರ ಮೊಮ್ಮಗ ... ಯ್ಯಪ್ಪ ಉರುಫ್ ತಿಮ್ಮಪ್ಪ ತಿಳಿಯಪಡಿಸುವದೇನೆಂದರೆ—ನನ್ನ ತಾತನ ಬಾಬ ... ಮೈಸೂರು ಹೊಸ ಅಗ್ರಹಾರದಲ್ಲಿರುವ ಡೋರ್ 1 ... ನೇ ನಂಬರುಳ್ಳ ಒಂದು ... ಆ ಮನೆಯನ್ನು ಆತನ ಚಿಕ್ಕಪ್ಪಂದಿರ ಪೈಕಿ ... ಮೋಸ ... ಕ್ರಯಕ್ಕೆ ವಾರುವದಾಗಿ ವರ್ತಮಾನ ತಿಳಿದಿರುವದರಿಂದ ಟಿಟೋ ಮನೆಗೆ ... ಹಕ್ಕುದಾರನಾದ್ದರಿಂದ ನಾನು ಮೆಜಾರಿಟಿಗೆ ಬಂದಿರುವದರಿಂದಲೂ ನನ್ನ ... ಟಿಟೋ ಮನೆಯನ್ನು ಯಾರಾದರು ಕ್ರಯ ಭೋಗ್ಯಕ್ಕೆ ತೆಗೆದುಕೊಂ ... ನಷ್ಟಗಳಿಗೆಲ್ಲಾ ಗುರಿಯಾಗಬೇಕೆಂದು ಈ ಮೂಲಕ ಎಚ್ಚರಿಸಿದೇನೆ

11-4-1913 [71 1] ಮುನಿಯಪ್ಪನ ರುಜು

ನಾದ ವಾಚ್ ! ನಾಣ್ಯವಾದ ವಾಚ್ !

ರೈಲ್ವೆ ಗಾರ್ಡ್ ಲೀವರ್ ಪಾಕೆಟ್ ವಾಚ್

ಕ್ರಯ— ನಾಣ್ಯವಾದ ವಾಚ್ ಸರಪಣಿ ಸಮೇತ ರೂ 2 4 0 ಮಾತ್ರ

3 ವರುಷಗಳ ಗ್ಯಾರಂಟಿ

... ಪುಕ್ಕಳ ಆಟದ ಬೊಂಬೆಗಳಂತೆ ಕೆಲವು ದಿವಸಗಳು ಆಟವಾಡಿ ಕೆಟ್ಟು ... ಗತಕ್ಕಂಥಾ ಅಲ್ಲ ಗಡಿಯಾರವಲ್ಲ ಸಾಧಾರಣವಾದ ವಾಚ್‌ಗಳಿಗಿಂತ ಬಹು ಶ್ರೇಷ್ಠವಾದದ್ದು ರೈಲ್ವೆ ಗಾರ್ಡ್, ರೈಲ್ವೆ ಇಂಜಿನ್ ಡ್ರೈವರ್ ಮುಂತಾದ ಅನೇಕ ರೈಲ್ವೆ ಉದ್ಯೋಗಸ್ಥರು ಇದ ನ್ನು ಇಟ್ಟುಕೊಂಡು ಉಪಯೋಗಿಸುತ್ತಿದ್ದಾರೆ ಆದಕಾರಣವೇ ಇದಕ್ಕೆ ರೈಲ್ವೆ ಗಾರ್ಡ್ ವಾಚ್ ಎಂಬ ಬಿರುದು ಬಂದಿರುತ್ತೆ



ಇದನ್ನು ಇಟ್ಟುಕೊಂಡು ರೈಲ್ವೆ ಗಾರ್ಡ್‌ರವರು ರೈಲ್ ನಡಿಸು ತ್ತಾರೆ ಈ ವಾಚ್ ವಿಚಾರವಾಗಿ ವಿಸ್ತಾರವಾಗಿ ಬರೆಯಲು ನಮ್ಮಿಂದ ಸಾಧ್ಯವಿಲ್ಲ ... ಬೇಗ ಲೆಕ್ಕವಿಲ್ಲದ ಯೋಗ್ಯತಾ ಪತ್ರಗಳನ್ನು ಹೊಂದಿರು ... ಕೆಲವು ವಾಚ್‌ಗಳು ಮಾತ್ರ ಉಳಿದಿರುತ್ತೆ ಬೇಕಾದವರು ಜಾಗ್ರತೆಯಾಗಿ ... ತರಿಸಿಕೊಳ್ಳಿ ತರಿಸಿಕೊಂಡು ಸಮ್ಮತವಿಲ್ಲದ ಪಕ್ಷದಲ್ಲಿ ಖಂಡಿತ ಹಣ ... ವಾಪಸು ಮಾಡಲ್ಪಡುತ್ತೆ ನಮ್ಮ ವಿಳಾಸ — [68 2]

ಸುಪೀರಿಯರ್ ವಾಚ್ ಕಂಪನಿ, ಪೋಸ್ಟು ಬಾಕ್ಸ್ 167, ಮದರಾಸು

Cool and Health-Creating Drinks

ಅತ್ಯುತ್ತಮವಾದ ಷರಬತ್ತುಗಳು

... ಡಲ್, ಮೆಡಲ್ಸ್, ಮುನಿಸ್ಪ್ರೈಸ್ ಮತ್ತು ಸರ್ಟಿಫಿಕೇಟುಗಳನ್ನು ಹೊಂದಿರುತ್ತವೆ)

ಸೊಗದೇಬೇರಿನ ಷರಬತ್ತು

(Sarasa parela or the best Blood-purifier)

ಅತ್ಯುತ್ತಮವಾದ ದೇಶೀಯ ಸೊಗದೇ ಬೇರುಗಳಿಂದಲೇ ಅತಿ ಉತ್ತಮ ... ಯಲ್ಲಿ ತಯಾರಿಸಲ್ಪಟ್ಟಿರುತ್ತದೆ ರಕ್ತವನ್ನು ಶುದ್ಧಿಮಾಡಿ ದೇಹವನ್ನು ... ರೀತಿಯ ... ಇವರಲ್ಲಿ ಸರ್ವಶ್ರೇಷ್ಠವಾದುದು ರಕ್ತ ಕೆಡುವುದರಿಂ ... ಗುವ ... ಮೈತಿನಸು, ತುರುಪು, ಗುಳಕಟ್ಟು, ಇವೇ ಮೊದ ... ಚರ್ಮರೋಗಗಳನ್ನೂ ಉಷ್ಣಾಧಿಕ್ಯದಿಂದುಂಟಾಗುವ ಮೂತ್ರದಲ್ಲಿ ... ಅರೆಶರೆಸೋವು ನಿದ್ರೆ ಹಾರದಿರುವಿಕೆ ವಾಯುವಿನಿಂದುಂಟಾಗುವ ಅರ ... ಬಾಯಿ ಮರಾಗಸ, ಕೈಕಾಲು ಉರಿ, ಗರ್ಭವೆಟ್ಟು, ರಕ್ತ ಸೋರಾಗು ... ಇವೇ ಮೊದಲಾದ ಚರ್ಮ ರೋಗಗಳನ್ನೂ ದೇಹ ಪುಷ್ಟಿ ಇಲ್ಲದಿರುವಿಕೆಯ ... ಬಹಳ ಜಾಗ್ರತೆಯಿಂದ ಗುಣಪಡಿಸುವುದು ಕ್ರಯ 4 ಡ್ರೆಸ್ ಬಾಟ್ಲು ... 0-8-0 [70 4]

ಶ್ರೀ ಗಂಧದ ಷರಬತ್ತು

(Sandal Syrup)

ಶರೀರದಲ್ಲಿ ಉಂಟಾಗುವ ಉರಿ, ತಾಪ, ಬಾಯಾರಿಕೆ, ಉಷ್ಣಾಧಿಕ್ಯ, ... ಷ್ಟದಿಂದ ಉಂಟಾಗುವ ಬಲಹೀನತೆ, ಇವೇ ಮುಂತಾದ ಸಮಸ್ತ ರೋಗ ... ಇದರ ಸೇವನೆಯಿಂದ ಖಾತ್ರಿಯಾಗಿ ಗುಣವಾಗುವವು

ಕ್ರಯ 4 ಡ್ರೆಸ್ ಬಾಟ್ಲು 1 ಕ್ಕೆ 0-8-0

ಬಾದಾಮು ಷರಬತ್ತು

(Almond Syrup)

ಅತ್ಯುತ್ತಮವಾದ ಬಾದಾಮಿಯ ಹಾಲಿನಿಂದಲೇ ಉತ್ತಮ ರೀತಿಯಲ್ಲಿ ... ರಿಸಿದೆ ಹೊಟ್ಟೆಯೊಳಗೆ ಹುಣ್ಣಾಗಿರುವುದು, ಮೂಗು ಕಟ್ಟಿಕೊಳ್ಳುವುದು, ... ಕ್ಷಯ, ಸ್ವರಭಂಗ, ಅತಿದಾಹ ಮೊದಲಾದವುಗಳು ಇದರ ಸೇವನೆಯಿಂದ ... ತಡವಿಲ್ಲದೆ ಗುಣವಾಗುತ್ತವೆ ಕ್ರಯ 4 ಡ್ರೆಸ್ ಬಾಟ್ಲು 1 ಕ್ಕೆ 0 8 0

ಅಮೃತ ಷರಬತ್ತು

(Nectar Juice)

ಪರಿಶುದ್ಧವಾದ ... ತನಗೆ ... ಗಳಿಂದ ತಯಾರಿಸಿದೆ ಎಲ್ಲಾ ... ವಾದ ... ಅಜೀರ್ಣ, ಅಗ್ನಿಮಾಂದ್ಯ ... ತಲೆ ನೋಯು ... ವುದು ಪಿತ್ತ ಸಂಕಟ, ರಕ್ತ ಕೆಡುವಿಕೆ, ಧಾತುನಷ್ಟ, ಇಂದ್ರಿಯಗಳ ಬಲ ... ಇವೇ ಮೊದಲಾದುವುಗಳು ಇದರ ಸೇವನೆಯಿಂದ ಖಾತ್ರಿಯಾಗಿ ಗುಣ ... ವುತ್ತವೆ ನರಗಳ ಬಲಹೀನತೆಯನ್ನು ಹೋಗಲಾಡಿಸಿ, ಜ್ಞಾಪಕ ಶಕ್ತಿಯನ್ನು ... ಇಂದ್ರಿಯಗಳ ಬಲ ಹೆಚ್ಚಿಸಿ ಆರೋಗ್ಯ ಉಂಟುಮಾಡುವದರಲ್ಲಿ ಸರ್ವ ... ಶ್ರೇಷ್ಠವಾದುದು ಕ್ರಯ ... 1 ಕ್ಕೆ 0 8 0

ಈ ಮೇಲ್ಕಂಡ ಷರಬತ್ತುಗಳು ಕುಡಿಯುವದಕ್ಕೆ ಹಿತಕರಗಳಾಗಿಯೂ, ... ವಾಸನೆಯುಳ್ಳವಾಗಿಯೂ, ರೋಗಗಳಿಗೆ ಗುಣಕಾರಿಗಳಾಗಿಯೂ ಇರುತ್ತವೆ ... ಕ್ರಮ ಬಾಟ್ಲುಗಳ ಮೇಲೆ ಇರುತ್ತವೆ

ಓಮಮ್ ವಾಟರ್

(Omum Water)

ಅಜೀರ್ಣದ ಹೊಟ್ಟೆ ನೋವು ವಾಂತಿ, ಹೊಟ್ಟೆ ತೊಳಸುವದು, ಕಾಲರ, ... ಶೀತಭೇದಿ, ಅಜೀರ್ಣದಿಂದ ಮೈ ಕಾಯುವಿಕೆ, ಶೀತವಾಯು, ಉದ್ದರ ... ಗಂಟಲಿನಲ್ಲಿ ಶ್ಲೇಷ್ಮ ಕಟ್ಟಿರುವದು ಮಲಹೊಟ್ಟೆಯಲ್ಲಿಯೇ ನಿಂತು ... ಪಡಿಸುವುದು, ಇವೇ ಮೊದಲಾದುವುಗಳು ಇದರ ಸೇವನೆಯಿಂದ ಖಾತರಿ ... ಗುಣವಾಗುತ್ತವೆ ಕ್ರಯ 4 ಡ್ರೆಸ್ ಬಾಟ್ಲು 1 ಕ್ಕೆ 0 4 0

ನಮ್ಮ ವಿಳಾಸ — ... ಯರ್ ಡಿ. ಸನ್ ಅಂಡ್ ಕೋ ,

ದೊಡ್ಡಪೇಟೆ ಚೌಕ, ಮೈಸೂರು

1911 ನೇ ವರ್ಷದ ಲೋವರ್ ಸೆಕೆಂಡರಿ ಕನ್ನಡ

ಟೆಕ್ಸ್ಟು ನೋಟ್ಸು

ಸ್ವಲ್ಪ ದಿನಗಳಲ್ಲಿಯೇ ಸಿದ್ಧವಾಗುವುದು—ಕ್ರಯ 6 ಆಣೆ

ಡಿಸ್ಕೌಂಟು 10 ಕ್ಕೆ 1 , 50 ಕ್ಕೆ 7 , 100 ಕ್ಕೆ 20

ನಮ್ಮ ನೋಟ್ಸಿಗೆ ಈಗಲೇ ಬರೆಯಿರಿ ಆ ಮೇಲೆ ಮೋಸಹೋಗಬೇಡಿ ನಮ್ಮ ನೋಟ್ಸು ಬೇಕಾಗಿದ್ದರೆ ನಮಗೇ ಬರೆಯುವುದು ಉತ್ತಮ , ಅಥವಾ ಇತರರಿಗೆ ಬರೆಯಬೇಕಾದರೆ ನಮ್ಮ ಹೆಸರನ್ನು ಕಾಣಿಸಿ ಬರೆಯಿರಿ [67 2]

ಎನ್ ಆರ್ ವೆಂಕಟಸುಬ್ಬಾಚಾರ್ಯರ್,

ಸುಬೋಧ ಗ್ರಂಥಾಲಯ, ಮೈಸೂರು

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ ! ಕನ್ನಡಕ್ಕೆ ಸುಲಭವಾದ ದಾರಿ !

ಮೈಸೂರು ಲೋವರ್ ಸೆಕೆಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ 3 ಆಣೆ ಅರೆಕ್ಕೊಂದು ಉಚಿತ

[187 18] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಕುಂತಳಾನಂದ ತೈಲವು

147 30

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ದಟ್ಟವಾಗಿಯೂ ಕಪ್ಪಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ

ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಚಿಕ್ಕ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪನಿ,

ವೇಪೇರಿ, ಮದರಾಸ್.

ನಿಕ್ಕಲ್ ಲೇಡಿ ವಾಚು ಕ್ರಯ ರೂ. ೨-೧೫-೦.

ಮೂರು ವರುಷ ಗ್ಯಾರಂಟೀ



ಎಲ್ಲಾ ಹೊಸ ಸಾಮಾನುಗಳೇ ಇರುತ್ತವೆ ಸಾಮಾನು ಪಸಂದು ಬಾರದೇ ಹೋದಲ್ಲಿ 15 ದಿವಸದೊಳಗ ಬದಲಾಯಿಸಿ ಕೊಳ್ಳಬಹುದು [71 1]

ರಾಸ್ಕೋಪ್ ವಾಚು ಕ್ರಯ 1 ರೂ 12 ಆಣೆ

ರೈಲ್ವೆ ರೆಗ್ಯುಲೇಟರ್ ಕ್ರಯ 2 ರೂ 14 ಆಣೆ

ಟೈಂಪೀಸು ಸಾದಾ 1 ರೂ 12 ಆಣೆ ಅಲಾರಂ ಟೈಂಪೀಸು ಕ್ರಯ ರೂ 1 13-0

ನಮ್ಮ ಅಡ್ರಸ್ —ಮೆಡಿನಾ ವಾಚ್ ಕಂಪನಿ,

ಜನೆರಾರ ಕೋರ್ಟ್ ಬೀದಿ, ಜಿ ಟಿ , ಮದರಾಸು

ಪ್ರಖ್ಯಾತವಾದ ಪಾರ್ಸಿ ಫ್ಲೂಟ್ ಹಾರ್ಮೋನಿಯಂ



ಉತ್ಕೃಷ್ಟ ಪದಾರ್ಥ, ಯಾವ ಹವೆಯಲ್ಲೂ ಹೇರುಪೇರಾಗದ ಬಹು ಬಲಿಷ್ಠವಾದ ಮರ, ರೀಡುಗಳು ಅತ್ಯಂತ ಶ್ರೇಷ್ಠವಾದವು, ನಾದವು ಮಹಾ ಸುಖಕರವಾಗಿದೆ, ಇದರಷ್ಟು ಬಾಳಿಕೆ ಬರುವನು ಬೇರೊಂದಿಲ್ಲ, ಮೂರೂಕಾಲು ಆಕ್ಟೇವುಗಳು, ಒಂದು ಸೆಟ್ ರೀಡುಗಳು, ಬ್ಯಾಕ್ ಪಿಂಗಳು ಪಾರ್ಸಿ ಮತ್ತು ಹಿಂದೂ ಸಂಗೀತಕ್ಕೆ ಬಹಳ ಹಿತಕರವಾಗಿದೆ ಎಲ್ಲಲ್ಲೂ ಪ್ರಚಾರಕ್ಕೆ ತರಬೇಕೆಂದು ಇದರ ಕ್ರಯವನ್ನು ಬಹಳ ಕಡಮೆಮಾಡಿದೆ ಬೇಗ ನೋಡಿ ಇಂದಾ ಒಳ್ಳೆ ಸಮಯವನ್ನು ಕಳಕೊಳ್ಳದೆ ಕೊಂಡಿಟ್ಟುಕೊಳ್ಳಿ ಕ್ರಯ ರೂ 25 ರೈಲ್ ಛಾರ್ಜು ಪ್ರತ್ಯೇಕ ಅಡ್ವಾನ್ಸು 5 ರೂ ಬಂದಲ್ಲದೆ ನಾವು ಕಳುಹಿಸಲಾರೆವು ನಮ್ಮ ವಿಳಾಸ — [72 1]

ಮ್ಯಾನೇಜರ್ ಬಾಂಬೇ ಪಾಪ್ಯುಲರ್ ಏಜನ್ಸಿ,

ಧಾರಾವಿ, ಬೊಂಬಾಯಿ

ವಿಶೇಷ ಸೂಚನೆ !

ಹತ್ತಿಯ ತುಪ್ಪ, ಹಿಂಡಿ ಮತ್ತು ಹೊಟ್ಟು

ಈ ತಿಂಗಳ ಕಡೆಯವರೆಗೆ ಮಾತ್ರ ಕಡಮೆ ಖರೀದಿ !

ತುಪ್ಪ ಡಬ್ಬಿ 1 ಕ್ಕೆ ರೂ 11½ , ಹಿಂಡಿ ಮೂಟೆಗೆ ರೂ 8 ;

ಹೊಟ್ಟು ಮೂಟೆಗೆ ರೂ 1½ ಬೇಕಾದವರು ತ್ವರಮಾಡಿ.

ಅನುಭವಸ್ಥರ ಅಭಿಪ್ರಾಯ —(1) ಎಮ್ ಕೃಷ್ಣಮೂರ್ತಿ, ಫಾರೆಸ್ಟ್ ರೇಂಜರ್, ಶಾಲಕೊಂಡ, ವಿಶಾಖಪಟ್ಟಣ ಡಿ|| "ತಾವು ಕಳುಹಿಸಿದ ಹತ್ತಿಯ ಹೊಟ್ಟಿನಿಂದ ನನ್ನ ಕುದುರೆಗೆ ಬಹಳ ಪ್ರಯೋಜನವಾಯ್ತು ಹುರುಳಿಯ ಜಾಗೆಯಲ್ಲೂ ಹಿಂಡಿಯ ಜಾಗೆಯಲ್ಲೂ ಅದನ್ನು ಮಿಶ್ರಮಾಡಿ ಕೊಟ್ಟದ್ದರಿಂದ ಅಜೀರ್ಣವಾಗುತ್ತಿದ್ದದ್ದು ನಿಂತು ಹೋಯ್ತು." (2) ಎಮ್ ವಿ ನರಸಿಂಹೈಯ, ಬಿ ಎ , ಫಾರೆಸ್ಟ್ ರೇಂಜರು, ಹೆಬ್ಬೆ, ಕಡೂರು ಡಿ|| "ಮೊದಲು ಮೊದಲು ಎತ್ತುಗಳು ಸರಾಗವಾಗಿ ತಿನ್ನದಿದ್ದರೂ ಈಗ ಹೊಟ್ಟು ಹಿಂಡಿಗಳನ್ನು ಬಹು ಪ್ರೀತಿಯಿಂದ ಸೇವಿಸುತ್ತಿವೆ ಮೈಯಿನ ಕೊಬ್ಬು ಕಡಮೆಯಾಗಿ ಲಘುವಾಗಿಯೂ ಮೊದಲಿಗಿಂತ ಬಲವಾಗಿಯೂ ಆದುವು ದಣಿಯದೆ ಹೆಚ್ಚು ಕೆಲಸ ಮಾಡುತ್ತವೆ ಜರರ ರೋಗಗಳಿಲ್ಲ ಮತ್ತೊಂದು ಮೂಟೆ ಹಿಂಡಿಯನ್ನೂ ತಕ್ಕಷ್ಟು ಹೊಟ್ಟನ್ನೂ ಕಳುಹಿಸಬೇಕು" (3) "ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್‌ನಿಂದ ನಾನು ಹತ್ತಿಯ ತುಪ್ಪವನ್ನು ಬಹಳ ಮಟ್ಟಿಗೆ ಕೊಂಡುಕೊಂಡಿದ್ದೇನೆ ಎಲ್ಲಾ ಬಗೆಯ ಅಡಿಗೆಗೂ ಅದು ಅತ್ಯುತ್ಕೃಷ್ಟವಾದದ್ದೆಂದು ತೋರುತ್ತೆ" ಮೆ|| ಬ್ರಾಡ್ರಿಕ್, ಏಳನೆಯ ಹುಸಾರ್ಸ್, ಬೆಂಗಳೂರು ನಮ್ಮ ವಿಳಾಸ —

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

[50-7] 109, ಕಿಲಾರಿ ರೋಡ್, ಬೆಂಗಳೂರು ಸಿಟಿ.

ಇಂಡಿಯಾ ದೇಶದ ವೃತ್ತಾಂತಗಳು.

ಸಿಲೋನ್ ದ್ವೀಪದಲ್ಲಿ ಗಾಂಪೋಲಾ ಎಂಬ ಸ್ಥಳದಿಂದ ಏಳು ಮೈಲಿ ದೂರದಲ್ಲಿರುವ ಸೊಗಾಮಾ ಎಂಬ ಕಾರ್ಖಾನೆಯು ಕಳೆದ ಶನಿವಾರ ಬೆಂಕಿಯ ಮೂಲಕ ಸಂಪೂರ್ಣವಾಗಿ ನಾಶಹೊಂದಿತು ಮಾಲೀಕರಿಗೆ ಒಂದು ಲಕ್ಷ ರೂಪಾಯಿ ತನಕ ನಷ್ಟವಾಗಿರುವಂತೆ ತಿಳಿಯುವುದು

* * *

ಬಂಗಾಳಾ ಆಧಿಪತ್ಯದಲ್ಲಿ ದೇಶೋನ್ನತಿಯ ಹಿತಚಿಂತಕರ ಮಹಾ ಸಭೆಯು ಕಲ್ಕತ್ತಾ ಪಟ್ಟಣದ ಟೌನ್ ಹಾಲ್ ಬಂಗಲೆಯಲ್ಲಿ ನಡಿಯಿತು ಬರ್ದವಾನ್ ಮಹಾರಾಜರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು ಉಪನ್ಯಾಸಕರು ಈಚೆಗೆ ಹಿಂದುಸ್ಥಾನದಲ್ಲಿ ಸ್ವದೇಶೀ ಪ್ರೋತ್ಸಾಹವು ಕ್ಷೀಣವಾಯಿತೆಂದೂ, ಕಸಬುಗಳನ್ನು ಅನ್ಯದೇಶಗಳಿಗೆ ಹೋಗಿ ಕಲಿತುಬಂದಿರುವಂಥಾ ದೇಶೀಯ ಜನಗಳಿಗೆ ಆಯಾ ಕಸಬಿನ ಪುರೋಭಿವೃದ್ಧಿಗಾಗಿ ದ್ರವ್ಯವನ್ನು ಒದಗಿಸಿಕೊಟ್ಟು, ಅವರಿಂದ ಕಸಬುಗಳನ್ನು ವೃದ್ಧಿಪಡಿಸಬೇಕೆಂದೂ, ಸಕಲ ಪ್ರಜೆಗಳೂ ಅಂಥಾ ದೇಶೀಯ ವಸ್ತುಗಳನ್ನೇ ವಿಶೇಷವಾಗಿ ಕೊಂಡು ಉಪಯೋಗಿಸುವುದರ ಮೂಲಕ ಸಹಾಯ ಮಾಡಬೇಕೆಂದೂ, ಈ ಉದ್ದೇಶಕ್ಕಾಗಿ ಒಂದು ಫಂಡನ್ನು ಕೂಡಿಸಬೇಕೆಂದೂ ನಿಷ್ಕರ್ಷೆಮಾಡಿದರು ಕಸಬುಗಳನ್ನು ಕಲಿತು ಬರುವುದಕ್ಕೆ ಈ ಸಂಘದವರು ಈ ವರುಷ 31 ಮಂದಿ ಯೌವನಸ್ಥರನ್ನು ಇಂಗ್ಲಾಂಡ್, ಅಮೇರಿಕ, ಜಪಾನ್ ರಾಜ್ಯಗಳಿಗೆ ಕಳುಹಿಸುವವರಾಗಿದಾರೆ

* * *

ಮದರಾಸ್ ಪಟ್ಟಣದಲ್ಲಿ ಮ್ಯುನಿಸಿಪಾಲಿಟಿಯವರು 10 ಮಾಡಲ್ (ಮಾದ್ರಿ) ಪಾಠಶಾಲೆಗಳನ್ನು ಕಟ್ಟಿಸಬೇಕೆಂದು 1 ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ ಆ ಪೈಕಿ ಮೊದಲನೇ ಸ್ಕೂಲು ಕಳೆದ ವಾರ ಸಿದ್ಧವಾಗಿ ಗವರ್ನರವರು ಅದನ್ನು ಪ್ರಾರಂಭಮಾಡಿದರು ಇದಕ್ಕೆ 15,000 ರೂಪಾಯಿತನಕ ಖರ್ಚಾಗಿರುತ್ತದೆ ಆ ಸಮಯದಲ್ಲಿ ಸ್ಕೂಲ್ ಇನ್ಸ್‌ಪೆಕ್ಟರವರು ಸಭೆಯಲ್ಲಿ ಓದಿ ಹೇಳಿದ ರಿಪೋರ್ಟಿನಿಂದ ತಿಳಿದುಬರುವ ಸಂಗತಿಗಳೇನೆಂದರೆ— ಮದರಾಸ್ ಪಟ್ಟಣದಲ್ಲಿ ಒಟ್ಟು 298 ಪ್ರಥಮ ಪಾಠಶಾಲೆಗಳಿರುತ್ತವೆ ಈ ಪೈಕಿ 229 ಪಾಠಶಾಲೆಗಳು ಸಾಹುಕಾರಿಯಾಗಿರುವವು ಗವರ್ನರವರ ಭಾಷಣದಲ್ಲಿ ಗೊತ್ತಾದ ಸಂಗತಿಗಳೇನೆಂದರೆ—ಮದರಾಸ್ ಪಟ್ಟಣದಲ್ಲಿರುವ ಎಲ್ಲಾ ಪ್ರಥಮ ಪಾಠಶಾಲೆಗಳಲ್ಲೂ 15,206 ಗಂಡುಮಕ್ಕಳೂ, 10 000 ಹೆಣ್ಣುಮಕ್ಕಳೂ ಶಿಕ್ಷಣ ಹೊಂದುತ್ತಿದಾರೆ ಆದರೆ 18,000 ಗಂಡುಮಕ್ಕಳಿರುವ ಆ ಮಹಾ ಪಟ್ಟಣದಲ್ಲಿ ಎಲ್ಲರೂ ಸ್ಕೂಲುಗಳಿಗೆ ಹೋಗುವಂತೆ ಮಾಡಲು ಇನ್ನೂ ಅನೇಕ ಹೊಸ ಪಾಠಶಾಲೆಗಳು ಆಗಬೇಕೆಂದು ಎಲ್ಲರಿಗೂ ಗೊತ್ತಾಗುವುದು ಪ್ರಜೆಗಳಲ್ಲಿ ಮುಖಂಡರಾಗಿಯೂ ಪುಣ್ಯವಂತರಾಗಿಯೂ ಇರುವಂಥಾ ಮಹನೀಯರು ದ್ರವ್ಯಸಹಾಯಮಾಡಿ ಪ್ರಥಮ ವಿದ್ಯಾಭಿವೃದ್ಧಿಯನ್ನು ಪ್ರೋತ್ಸಾಹಪಡಿಸಬೇಕಾಗಿದೆ ಎಂಬ ರೀತಿ ಹೇಳಿ, ಸಭಿಕರಲ್ಲಿ ಪ್ರೀತಿಯನ್ನೂ ಉತ್ಸಾಹವನ್ನೂ ಉಂಟುಮಾಡಿದರು

* * *

ಹಿಂದುಸ್ಥಾನದ ಸಮಸ್ತಭಾಗಗಳ ಸ್ತ್ರೀಮಂಡಲಿಯವರೂ ದೆಹಲಿಯಲ್ಲಿ ವೈಸ್‌ರಾಯಿ ದಂಪತಿಗಳಿಗೆ ಪ್ರಾಪ್ತವಾದ ಘೋರಪ್ರತ್ಯಕ್ಷದ ಗಂಡಾಂತರವನ್ನು ಕೇಳಿ ಮರುಗಿ ಸಂತಾಪಪಟ್ಟು, ಆ ವಿಪತ್ಕಾಲದಲ್ಲೂ ವೈಸ್‌ರಾಯಿಯವರ ಪತ್ನೀಯವರು ಧೈರ್ಯಗೆಡದೆ ಪರಾಕ್ರಮವನ್ನು ತೋರಿಸಿದ್ದಕ್ಕಾಗಿ ಆನಂದಪಟ್ಟು ಆಕೆಯವರಿಗೆ ಎಲ್ಲರೂ ಸೇರಿ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬಹುನೇತ್ರಾನಂದಕರವಾಗಿ ತಯಾರುಮಾಡಿಸಿ ಕಳುಹಿಸಿಕೊಟ್ಟರು ಇದನ್ನು ವೈಸ್‌ರಾಯಿಯವರ ಪತ್ನಿಯವರು ಬಹು ಸಂತೋಷದಿಂದಲೂ ಕೃತಜ್ಞತಾಪೂರ್ವಕವಾಗಿಯೂ ಸ್ವೀಕರಿಸಿ, ಅವರನ್ನೆಲ್ಲಾ ಮನಃಪೂರ್ವಕವಾಗಿ ವಂದಿಸಿರುತ್ತಾರೆ "ಇಂಥಾ ಮನೋಹರ ಮತ್ತು ಮನೋಜ್ಞವಾದ ವಸ್ತುವನ್ನು ಇಟ್ಟುಕೊಂಡು ನಿರಂತರವೂ ನಾವು ಸ್ಮರಿಸಿಕೊಳ್ಳುತ್ತಾ ಬರುವೆವು" ಎಂದು ಪ್ರತ್ಯುತ್ತರವನ್ನು ದಯಪಾಲಿಸಿರುವರು ಈ ಅಡ್ರೆಸ್ಸಿನ ಕೂಡ ಒಂದು ಪುಸ್ತಕವನ್ನೂ ರಚಿಸಿ ಆಕೆಯವರಿಗೆ ಒಪ್ಪಿಸಿದರು ಇದರಲ್ಲಿ ಹಿಂದುಸ್ಥಾನದ ಯಾವ ಯಾವ ಸ್ಥಳಗಳಲ್ಲಿ ಎಷ್ಟೆಷ್ಟು ಮಂದಿ ಸ್ತ್ರೀಯರು ಸೇರಿ ಸಭೆಗಳನ್ನು ನಡಿಸಿದರೋ, ಪ್ರತಿ ಸ್ಥಳದ ಸಭೆಗೂ ಯಾರು ಯಾರು ಪ್ರೆಸಿಡೆಂಟರೂ ಮೆಂಬರುಗಳೂ ಆಗಿದ್ದು ಕಾರ್ಯಗಳನ್ನು ನಡಿಸಿದರೋ, ಯಾವ ಯಾವ ಸ್ತ್ರೀಯರು ಈ ಫಂಡಿಗೆ ಎಷ್ಟೆಷ್ಟು ಚಂದಾ ಹಾಕಿದರೋ, ಇದೆಲ್ಲಾ ಸವಿಸ್ತರವಾಗಿ ಬರೆಯಲ್ಪಟ್ಟಿರುವುದು ಬೊಂಬಾಯಿ ಆಧಿಪತ್ಯದಲ್ಲಿ 1,81,(?)1 ಮಂದಿ ಸ್ತ್ರೀಯರು ಈ ಕಾರ್ಯದಲ್ಲಿ ಸೇರಿ ರೂ 1 619-8 9 ಪೈ ಚಂದಾ ಕೊಟ್ಟಿದಾರೆ ಹಿಂದುಸ್ಥಾನದಲ್ಲೂ ಬರ್ಮಾದಲ್ಲೂ ಸೇರಿ 10,81,604 ಮಂದಿ ಸ್ತ್ರೀಯರು ಕೂಡಿ ಸಭೆಗಳನ್ನು ನಡಿಸಿ, ಈ ಅಡ್ರೆಸ್ಸಿನಂಡಿಗೆ ಒಟ್ಟು ರೂ 11,?10 12 ಆಣೆ ಚಂದಾ ಹಾಕಿರುವಂತೆ ಪ್ರಕಟವಾಗಿದೆ

ದಿ ಪೀಪಲ್ಸ್ ಬ್ಯಾಂಕ್, ಲಿಮಿಟೆಡ್, ತೀರ್ಥಹಳ್ಳಿ.

ಮೈಸೂರು ಕಂಪನಿಗಳ 1895 ನೇ ಇಸವಿ III ನೆಯ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟರ್ ಮಾಡಿಸಲ್ಪಟ್ಟಿದೆ

ಉದ್ದಿಷ್ಟ ಮೂಲಧನ ರೂ. 1,50,000.

ಐದು ಹಿಸ್ಸ (ಷೇರ್) ಒಂದಕ್ಕೆ ರೂ 10 ರಂತೆ 15,000 ಹಿಸ್ಸೆಗಳಾಗಿ ವಿಭಾಗಿಸಲ್ಪಟ್ಟಿದೆ ಪ್ರತಿ ಹಿಸ್ಸ ಒಂದಕ್ಕೆ 8 ಆಣೆಯಂತೆ ಪ್ರವೇಶದನವನ್ನೂ, ಹಿಸ್ಸೆಯ ಮೊಬಲಗಿನ ಪೈಕಿ ಕಾಲು ಭಾಗದ ಮೊಬಲಗು ರೂ 2-8-0 ನ್ನೂ ದರಖಾಸ್ತಿನೊಂದಿಗೆ ಕೊಡಬೇಕು ಉಳಿದ ರೂ 7-8-0 ಯು, ಒಂದು ಸಾರಿಗೆ ರೂ 2-8-0 ಗೆ ಮೀರದಂತೆ ಮೂರು ತಿಂಗಳಿಗೆ ಕಡಮೆಯಿಲ್ಲದ ವಾಯಿದೆಯಿಂದ ಕೇಳಲ್ಪಡುವದು ಬ್ಯಾಂಕಿನಲ್ಲಿ ದೊರೆಯುವ ನಮೂನೆ (ಫಾರಂ) ಯಲ್ಲಿಯೇ ದರಖಾಸ್ತು ಬರೆಯಲ್ಪಡಬೇಕು

ಡಿರೆಕ್ಟರ್ಸ್ ಯಾನೆ ಕಾರ್ಯದರ್ಶಿಗಳು

ಮ|| ರಾ|| ಶ್ರೀ ಸಾಹುಕಾರ್ ಕಾಸರವಳ್ಳಿ ಶೇಷಪ್ಪನವರು,
,, ಕಿತ್ತಂದೂರು ತಿಮ್ಮಣ್ಣಭಟ್ಟರು,
,, ಜೆವಳಿ ಶೀನಪ್ಪನವರು,
,, ನಗರದ ನರಸಿಂಹಯ್ಯನವರು, [ಶಿವಮೊಗ್ಗ,
,, ಕೆ ಶಂಕರನಾರಾಯಣರಾವ್, ಎಂ ಎ , ಬಿ ಎಲ್ ,
,, ಜೆವಳಿ ವಾಸುದೇವರಾಯರು,
,, ಭೂಪಾಲಂ ರುಕ್ಮಯ್ಯನವರು,
,, ಎಡೇಹಳ್ಳಿ ಲಿಂಗಪ್ಪನವರು (ಮೆ|| ವೈ ಶೇಷಪ್ಪ ಬ್ರದರ್ಸ್),
,, ಎಲವಟ್ಟಿ ರಾಮರಾಯರು,
,, ಎಡೂರು ಶಿಪ್ಪಾಜೋಯಿಸರು,
,, ದೇವಂಗಿ ರಾಮಣ್ಣಗೌಡರು,
,, ಆಗುಂಬೆ ರಾಮರಾಯರು,
,, ಭಾವಿಕಟ್ಟೆ ನಾಗಾಭಟ್ಟರು,
,, ಕಟ್ಟೆ ದಾಸಪ್ಪನವರು,
,, ಬೇಗಮುವ್ರ ವೆಂಕಟಸುಬ್ಬಣಾಚಾರ್ಯರು,
,, ಮೇಗರವಳ್ಳಿ ಅಪ್ಪೂಭಟ್ಟರು,
,, ಉಡುಪಿ ಶ್ರೀನಿವಾಸಾಚಾರ್ಯರು,
,, ಮೇಳಿಗೆ ಸಣ್ಣಬಸಪ್ಪನವರು

ಪ್ರೆಸಿಡೆಂಟ್—ಮ|| ರಾ|| ಶ್ರೀ ಸಾಹುಕಾರ್ ಕಿತ್ತಂದೂರು ತಿಮ್ಮಣ್ಣಭಟ್ಟರು
ಟ್ರೆಷರರ್—ಮ|| ರಾ|| ಶ್ರೀ ಎಡೇಹಳ್ಳಿ ಲಿಂಗಪ್ಪನವರು (ಮೆ|| ವೈ ಶೇಷಪ್ಪ ಬ್ರದರ್ಸ್)
ಮ್ಯಾನೇಜಿಂಗ್ ಡಿರೆಕ್ಟರ್—ಮ|| ರಾ|| ಶ್ರೀ ಮೇಳಿಗೆ ಸಣ್ಣಬಸಪ್ಪನವರು
ಲೀಗಲ್ ಅಡ್ವೈಸರ್—ಮ|| ರಾ|| ಶ್ರೀ ಕೆ ಶಂಕರನಾರಾಯಣರಾವ್, ಎಂ ಎ ಬಿ ಎಲ್ , ಅಡ್ವೊಕೇಟ್, ಶಿವಮೊಗ್ಗ

75 1

ಮಲೆನಾಡಿನಲ್ಲಿ ರೈತರಿಗೂ ವರ್ತಕರಿಗೂ ಹಣ ಸರಬರಾಯಿ ಕಡಮೆಯಾಗಿ ಬಡ್ಡಿಯ ದರವು ಜಾಸ್ತಿಯಾಗಿರುವ ತೊಂದರೆಯನ್ನು ನಿವಾರಣ ಮಾಡುವುದಕ್ಕೂ ಮತ್ತು ಸ್ಥಿರವಾಗಿರುವ ಹಣದ ಚಲಾವಣೆಗೆ ನಿರ್ಭಯವಾದ ಮಾರ್ಗವನ್ನು ಕಲ್ಪಿಸುವುದಕ್ಕೂ ಈ ಮೇಲೆ ಕಂಡ ಮಹನೀಯರು ಮತ್ತು ಈ ತಾಲ್ಲೂಕಿನ ದೊಡ್ಡಮನುಷ್ಯರಾದ ಮ|| ರಾ|| ಶ್ರೀಗಳಾದ ಸಿರವಂತೆ ದಾಸಪ್ಪಯ್ಯನವರು, ಎಡೇಹಳ್ಳಿ ಶೇಷಪ್ಪನವರು, ಸಿರವಂತೆ ತಿಮ್ಮಪ್ಪಯ್ಯನವರು ಸಿರವಂತೆ ನಾರಾಯಣರಾಯರು, ಆಗುಂಬೆ ನಾಗೇಶರಾಯರು, ಹೂದಲದ ಹಾಲಪ್ಪಗೌಡರು ಮತ್ತು ಮಾವಿನಕಾಡಿ ಗಂಗಾಧರಾಂಸೂರಾಜಿಯವರು ಇವರುಗಳೂ ಸೇರಿ ತಾ 27—3—1913 ರಲ್ಲು ಈ ಸಂಘವನ್ನು ಸ್ಥಾಪಿಸಿದ್ದಾರೆ ಈ ಮಲೆನಾಡಿಗೆ ನೂತನವಾಗಿರುವ ಈ ಸಂಘದ ಉದ್ದೇಶ್ಯಗಳು ನೆರವೇರುವಂತೆ ಈ ಸಂಘದ ಮೂಲಧನದಲ್ಲಿ ಈ ತಾಲ್ಲೂಕಿನ ಪ್ರಜೆಗಳೆಲ್ಲರೂ ಔದಾರ್ಯದಿಂದ ಹಿಸ್ಸೆಗಳನ್ನು ತೆಗೆದುಕೊಳ್ಳುವ ಮೂಲಕ ಪ್ರೋತ್ಸಾಹವನ್ನು ಕೊಡಬೇಕಾಗಿ ಪ್ರಾರ್ಥನೆ

ಈ ಸಂಘದ ನಿಬಂಧನೆಗಳನ್ನೂ (Articles of Association), ದರಖಾಸ್ತಿನ ನಮೂನೆ (ಫಾರಂ) ಗಳನ್ನೂ ಬ್ಯಾಂಕಿನ ಆಫೀಸಿನಲ್ಲಿ ಪಡೆಯಬಹುದು

ತೀರ್ಥಹಳ್ಳಿ, ಎಂ. ಎಸ್. ಬಸಪ್ಪ,
ತಾ 8-4 1913 ಮ್ಯಾನೇಜಿಂಗ್ ಡಿರೆಕ್ಟರ್

ವೃತ್ತಾಂತ ಪತ್ರಿಕೆ

ಸನ್ ೧೯೧೩ ನೇ ಇಸವಿ ಏಪ್ರೆಲ್ ತಾ ೧೭ ನೇ ಗುರುವಾರ

ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯವಿಮರ್ಶೆ

ಮೈಸೂರು ಸಂಸ್ಥಾನದ ಕ್ರಿಮಿನಲ್ ಸಿವಿಲ್ ನ್ಯಾಯವಿಮರ್ಶೆಯ ಮತ್ತೂ ಪೋಲೀಸ ಕಾರುಬಾರುಗಳ ವಾರ್ಷಿಕ ರಿಪೋರ್ಟುಗಳು ನಮ್ಮಲ್ಲಿಗೆ ತಲಪಿ ಕೆಲವು ದಿನಗಳಾದವು ಕ್ರಿಮಿನಲ್ ಬಾಬಿನ ರಿಪೋರ್ಟಿನಿಂದ ಕಳೆದ ಸಾಲಿನಲ್ಲಿ ಹಿಂದಿನ ಸಾಲಿಗಿಂತ ತಕ್ಸೀರುಗಳು ಸ್ವಲ್ಪ ಹೆಚ್ಚಿದವೆಂದೂ ಹೀಗೆ ಹೆಚ್ಚಲು ಕಾಲಸ್ಥಿತಿಯು ಅನುಕೂಲವಾಗಿಲ್ಲದೆಹೋದದ್ದು ಕಾರಣವೆಂದೂ ತಿಳಿಯುತ್ತದೆ ಪೋಲೀಸಿನವರು 16,020 ಮೊಕದ್ದಮೆಗಳಲ್ಲಿ 21,72 ಜನರ ಮೇಲೆ ಫಿರ್ಯಾದು ಮಾಡಿದ್ದರಲ್ಲಿ 15,115 ಜನರು ಬಿಡುಗಡೆಮಾಡಲ್ಪಟ್ಟು, 6,314 ಜನರು ಮಾತ್ರ ಶಿಕ್ಷಿಸಲ್ಪಟ್ಟರು ಎಲ್ಲಕ್ಕೂ ಮೇಲ್ಪಂಕ್ತಿ ಹಾಕಿಕೊಡತಕ್ಕದ್ದೆಂದು ಹೆಸರು ಪಡೆದ ಸಂಸ್ಥಾನದಲ್ಲಿ ಈ ವಿಚಾರವು ಸಂತೋಷಪ್ರದವಾದದ್ದಾಗಿಲ್ಲ ಯಾವ ಭಾಗದಲ್ಲೂ ಏನೋ ಒಂದು ದೊಡ್ಡ ದೋಷವುಂಟೆಂದು ಕಾಣುತ್ತದೆ ತಕ್ಸೀರುಗಳು ಮಾತ್ರ ಹೆಚ್ಚುವುದಕ್ಕೂ, ಅಪರಾಧಿಗಳಿಗೆ ಶಿಕ್ಷೆಯಾಗದೆ ಇರುವುದಕ್ಕೂ ಕಾರಣವೇನಿರಬಹುದೋ ತಿಳಿಯುವುದಿಲ್ಲ ಈ ಭಾಗವನ್ನು ಕೂಲಂಕಷವಾಗಿ ತನಿಖೆಮಾಡಿ ತಕ್ಸೀರು ಮಾಡಿದವರು ಶಿಕ್ಷೆಯನ್ನು ತಪ್ಪಿಸಿಕೊಳ್ಳದಂತೆ ದರ್ಪವುಳ್ಳ ವಿಧಾನವನ್ನು ರೂಡಿಸಬೇಕಾದದ್ದು ಪರಮಾವಶ್ಯಕ ಕಳೆದ ಸಾಲಿನಲ್ಲಿ ನಿಜವಾಗಿ 110 ಕೊಲೆಗಳು ನಡೆದವೆಂದು ಗೊತ್ತಾಗುತ್ತದೆ ಮಾನುಷ ಜನ್ಮವು ಉತ್ಕೃಷ್ಟವಾದದ್ದೆಂಬ ಭಾವನೆಯು ಅಷ್ಟು ವಿಶೇಷವಾಗಿರುವ ಈ ದೇಶದಲ್ಲಿ ಇಷ್ಟೊಂದು ಕೊಲೆಗಳು ನಡೆದಿರುವುದು ಅವಮಾನಕರವಾಗಿರುತ್ತದೆ 12 ಜನರು ಮಾತ್ರವೇ ಕೊಲೆ ನಡೆಸಿದವರೆಂದು ಶಿಕ್ಷಿಸಲ್ಪಟ್ಟರು, ಇವರಲ್ಲೂ ಒಬ್ಬನೇ ಒಬ್ಬನನ್ನು ಗಲ್ಲಿಗೆ ಹಾಕಿದಂತೆ ಕಾಣುವುದು ಸಂಸ್ಥಾನದಲ್ಲಿ ನ್ಯಾಯವಿಮರ್ಶೆಯು ಇಷ್ಟು ಶಿಕ್ಷಣೆಯಾಗಿದ್ದರೆ ಕೊಲೆ ಮಾಡಿದವನಿಗೆ ಗಲ್ಲಿನ ಭೀತಿಯೇ ದೂರವಾದೀತು

ಪೋಲೀಸ ಕಾರುಬಾರುಗಳ ರಿಪೋರ್ಟನ್ನು ಕ್ರಿಮಿನಲ್ ನ್ಯಾಯವಿಮರ್ಶೆಯ ರಿಪೋರ್ಟಿನ ಕೂಡ ಹೋಲಿಸಿ ನೋಡುತ್ತಾ ಬಂದರೆ ಸಂಖ್ಯೆಗಳು ಒಂದಕ್ಕೊಂದು ತಾಳೆ ಬೀಳುವುದೇ ಬಹಳ ಕಷ್ಟ ರಿಪೋರ್ಟಾದ ತಕ್ಸೀರುಗಳ ಸಂಖ್ಯೆ 6,110, ಕೊಲೆಯ ಮೊಕದ್ದಮೆಗಳು 89 ಮಾತ್ರ ಈ ಪೈಕಿ 10 ಮೊಕದ್ದಮೆಗಳಲ್ಲಿ ಶಿಕ್ಷೆಯಾಗಿದೆ ಇದು ಎಷ್ಟುಮಾತ್ರಕ್ಕೂ ತೃಪ್ತಿಕರವಾಗಿರುವಂತೆ ಕಾಣುವುದಿಲ್ಲ ಪೋಲೀಸಿನವರ ಕಾರ್ಯಕ್ರಮಗಳು ಬಹಳ ಮಟ್ಟಿಗೆ ಜಾಸ್ತಿಯಾಗಬೇಕೆಂದು ಸ್ಪಷ್ಟವಾಗಿ ಕಾಣುತ್ತಿದೆ ಈ ಇಲಾಖೆಗೆ ಸಂಬಂಧಪಟ್ಟ 176 ಉದ್ಯೋಗದಾರರುಗೂ, 2,011 ಪ್ಯಾದೆಗಳಿಗೂ ಇಲಾಖೆಯ ಮೂಲಕ ಶಿಕ್ಷೆಯಾಯಿತೆಂದೂ, 21 ಮಂದಿ ಪೋಲೀಸಿನವರು ನಾನಾ ತಕ್ಸೀರುಗಳನ್ನು ನಡಿಸಿದರೆಂದು ಮ್ಯಾಜಿಸ್ಟ್ರೇಟ್ ಕೋರ್ಟುಗಳಲ್ಲಿ ಶಿಕ್ಷಿಸಲ್ಪಟ್ಟರೆಂದೂ ಈ ರಿಪೋರ್ಟಿನಿಂದ ಗೊತ್ತಾಗುತ್ತದೆ ಇತರ ಇಲಾಖೆಗಳಿಗೆ ಹ್ಯಾಗೋ ಹಾಗೆ ಪೋಲೀಸ್ ಇಲಾಖೆಗೂ ಸತ್ಯವಂತರನ್ನು ತಂದಿಡುವುದು ಪ್ರಯಾಸವಾಗಿದೆ ಯೋಗ್ಯರೂ ಸತ್ಯವಂತರೂ ನೌಕರಿಗಳಿಗೆ ದೊರಕುವ ತನಕ ಅಭಿವೃದ್ಧಿಯನ್ನು ಎದುರುನೋಡುವುದು ಅಸಾಧ್ಯ

ಮೈಸೂರು ಗವರ್ನಮೆಂಟಿನವರು ಈ ಸೀಮೆಯ ಪ್ರಜೆಗಳ ಧನ ಮಾನ ಪ್ರಾಣಗಳನ್ನು ಸುರಕ್ಷಿತವಾಗಿ ಕಾಪಾಡಬೇಕಾದದ್ದು ಅವರ ಕರ್ತವ್ಯವಾಗಿದೆ, ಆದರೆ ಅವರು ಪ್ರಕಟಮಾಡುವ ರಿಪೋರ್ಟುಗಳಿಂದ ಆ ತಮ್ಮ ಕರ್ತವ್ಯವನ್ನು ಮಾಡದೆ ತಪ್ಪಿರುತ್ತಾರೆಂದು ಸ್ಪಷ್ಟವಾಗಿ ತಿಳಿಯುತ್ತದೆ ಮೈಸೂರು ಸಂಸ್ಥಾನದಲ್ಲಿ ಪಟಾಟೋಪದ ಕಾರ್ಯಾಪೇಕ್ಷೆಯು ಕಡಮೆಯಾಗುವದನ್ನೂ, ರಾಜ್ಯಭಾರ ಕ್ರಮಗಳಲ್ಲಿ ಸತ್ಯತೆಯೂ ಚಟುವಟಿಕೆಯೂ ದರ್ಪವೂ ಚೆನ್ನಾಗಿ ನೆಲೆಗೊಳ್ಳಬೇಕೆಂಬ ಕುತೂಹಲವೂ ಸಾಹಸವೂ ಇನ್ನೂ ವಿಶೇಷವಾಗಿ ಹುಟ್ಟುವುದನ್ನೂ ನೋಡಬೇಕೆಂದು ಆಶಪಡುತ್ತೇವೆ

ಕಡೆಗಾಗಿ ಸಿವಿಲ್ ನ್ಯಾಯವಿಮರ್ಶೆಯ ರಿಪೋರ್ಟನ್ನು ನೋಡುವಲ್ಲಿ ಮೈಸೂರು ಸೀಮೆಯ ಪ್ರಜೆಗಳು ಕೋರ್ಟಿಗೆ ಅಲೆಯುವುದರಲ್ಲಿ ಹೆಚ್ಚು ಹೆಚ್ಚಾದ ಕುತೂಹಲವನ್ನು ಪ್ರಕಾಶಪಡಿಸುತ್ತಿದ್ದಾರೆಂದು ಗೊತ್ತಾಗುತ್ತದೆ ಕಳೆದ ಸಾಲಿನಲ್ಲಿ ಒಟ್ಟು 31,021 ಸಿವಿಲ್ ಮೊಕದ್ದಮೆಗಳು ಕೋರ್ಟುಗಳಿಗೆ ದಾಖಲಾದವು, ಇಷ್ಟು ಮೊಕದ್ದಮೆಗಳು ಹಿಂದೆ ಯಾವ ಸಾಲಿನಲ್ಲೂ ದಾಖಲಾಗಲಿಲ್ಲ ಹೀಗೆ ದಾವಾ ತರಲ್ಪಟ್ಟ ಮೊಕದ್ದಮೆಗಳು 42,43,737 ರೂಪಾಯಿ ಆಸ್ತಿಗೆ ಸಂಬಂಧಪಟ್ಟಿದ್ದವು ಈ ಮೊಕದ್ದಮೆಗಳಿಂದ ವಕೀಲರಿಗೆ ಕೆಲಸ ಸಿಕ್ಕುತ್ತದೆ ಆದರೆ ಮೊಕದ್ದಮೆಗಳ ಸಂಖ್ಯೆ ಹೆಚ್ಚುತ್ತಿರುವುದನ್ನು ನೋಡಿದರೆ ಪ್ರಮಾಣಿಕತೆಯು ಪ್ರಜೆಗಳಲ್ಲಿ ಹೆಚ್ಚುತ್ತಾ ಇಲ್ಲವೆಂದು ಗೊತ್ತಾಗುವುದು, ಮತ್ತು ಸಾಲ ಪಡೆದುಕೊಂಡವನಲ್ಲಿ ಅದನ್ನು ಹಿಂತಿರುಗಿಸಬೇಕೆಂಬ ಕುತೂಹಲವು ಕಡಮೆಯಾಗುತ್ತಿರುವಂತೆ ಕಾಣುವುದು

ಈ ರಿಪೋರ್ಟುಗಳೆಲ್ಲಾ ಮೈಸೂರು ಸಂಸ್ಥಾನದಲ್ಲಿ ಮನುಷ್ಯನ ದುಷ್ಟ ಸ್ವಭಾವವನ್ನು ಕುರಿತು ಪ್ರಶಂಸೆಮಾಡುತ್ತವೆ ಆದರೆ ಈ ದುಷ್ಟತನವು ಅನುಕ್ರಮೇಣ ಕಡಮೆಯಾಗುತ್ತಿರುವಂತೆ ಈ ರಿಪೋರ್ಟುಗಳಲ್ಲಿ ಕಂಡುಬರುವುದಿಲ್ಲ ವಿದ್ಯೆ, ಪರಿಷ್ಕಾರಣೆ, ನಾಗರಿಕಗಳು ಹೆಚ್ಚಿದ ಹಾಗೆಲ್ಲಾ ದುರ್ಮಾರ್ಗಗಳೂ ಕ್ರೂರ ಕೃತ್ಯಗಳೂ ಹೆಚ್ಚುತ್ತಿರುವವು ಇದಕ್ಕಿರುವುದು ಒಂದೇ ಪರಿಹಾರಮಾರ್ಗ ಪ್ರಜೆಗಳಲ್ಲಿ ದೇವರ ಮೇಲಣ ಭಯ ಭಕ್ತಿಗಳು ಉಂಟಾಗಬೇಕು ದೇವರ ಮೇಲಣ ಭಯವಿಲ್ಲದಿದ್ದರೆ ಮನುಷ್ಯನ ಮೇಲಣ ಭಯವೆಲ್ಲಿಂದ ಹುಟ್ಟೀತು? ಚಿತ್ರವಿಚಿತ್ರವಾದ ಅಪರಾಧಗಳೂ ಕ್ರೂರಕೃತ್ಯಗಳೂ ಹೆಚ್ಚಿ ಹರಡಿಕೊಳ್ಳುತ್ತಾ ಬಂದಾವು ಪ್ರಜೆಗಳಲ್ಲಿ ಸತ್ಯವಾಕ್ಕು ಸತ್ಯಸಂಕಲ್ಪ ಸತ್ಕಾರ್ಯಗಳು ನೆಲೆಗೊಳ್ಳುವಂತ ಸಾಹಸಪಡಬೇಕಾಗಿದೆ ಅಪಾರವಾದ ಹಣವನ್ನು ಕೂಡಿಸಿಟ್ಟುಕೊಂಡಿರುವುದರಿಂದಾಗಲಿ, ಭಾರಿ ಏರ್ಪಾಡುಗಳನ್ನು ಪ್ರಾರಂಭಿಸುವುದರಿಂದಾಗಲಿ ದೇಶವೂ ಪ್ರಜೆಗಳೂ ಉಚ್ಛ್ರಾಯಸ್ಥಿತಿಗೆ ಬರುವುದು ಸಾಧ್ಯವಲ್ಲವೆಂಬುವುದನ್ನು ನಿಜವಾಗಿ ತಿಳಿದುಕೊಳ್ಳುವಂತಾಗಬೇಕು. ಸಂಸ್ಥಾನದ ಶ್ರೇಯಸ್ಸಿಗೆ ಎಲ್ಲಕ್ಕಿಂತಲೂ ಪ್ರಾಮಾಣಿಕತೆಯೂ, ನಿರ್ದುಷ್ಟವಾದ ವರ್ತನವೂ, ಒಳ್ಳೇತನವೂ ಬಲವಾದ ಅಸ್ತಿಭಾರಗಳಾಗಿರುತ್ತವೆ ಸರ್ಕಾರದವರು ಮುಂದಿನ ವರುಷ ಪ್ರಕಟಮಾಡುವ ರಿಪೋರ್ಟುಗಳು ಇವುಗಳಿಗಿಂತ ಎಲ್ಲಾ ಭಾಗಗಳಲ್ಲೂ ಸಂತೋಷಪ್ರದವಾಗಿರುವವೆಂದು ನಂಬಿ ನಿರೀಕ್ಷಿಸುತ್ತೇವೆ

ನೋಟ

ನೋಟವನ್ನು ನೋಡುವದೆಂದರೆ ಎಲ್ಲರಿಗೂ ಬಹಳ ಪ್ರೀತಿ ಒಳ್ಳೇ ವಿನೋದವಾದ ರಮಣೀಯವಾದ ನೋಟಗಳನ್ನು ನೋಡುವದಕ್ಕೆ ಬಲ್ಲನೆಂದು ಯಾವನು ಹೇಳುವನು? ನಮ್ಮ ಸೀಮೆಯ ರಾಜಧಾನಿಯ ಮೈಸೂರು ಪಟ್ಟಣದಲ್ಲಿ ವರುಷಂಪ್ರತಿ ದಸರಾ ಹಬ್ಬವು ಬಹು ವಿಜೃಂಭಣೆಯಾಗಿ ನಡೆಯುತ್ತದಷ್ಟೆ ಅಲ್ಲಿ ಶ್ರೀಮನ್ಮಹಾರಾಜರವರು ಒಡ್ಡೋಲಗವನ್ನು ಕೊಡುವದಕ್ಕೆ ಅರಮನೆಯ ಮುಂಭಾಗದಲ್ಲಿ ರತ್ನಖಚಿತವಾದ ಸಿಂಹಾಸನವನ್ನು ಮಂಡಿಸುವರು ಮತ್ತು ಅವರನ್ನು ಓಲೈಸುವದಕ್ಕೆ ಸೀಮೆಯ ಸಕಲ ಡಿಸ್ಟ್ರಿಕ್ಟು ತಾಲೂಕುಗಳಿಂದ ಅಧಿಕಾರಿಗಳೂ ದೊಡ್ಡ ಮನುಷ್ಯರೂ ಬಂದು ನೆರೆದಿರುವರು ಆನೆ ಕುದುರೆಗಳ ಫೌಜೂ, ಬೆಳ್ಳಿ ಕಟ್ಟಿಗೆಯವರು ಸಾಲುಸಾಲಾಗಿ ನಿಂತುಕೊಂಡಿರುವರು ಬ್ಯಾಂಡ್ ವಾದ್ಯಗಳು ಭೋರ್ಗರೆಯುತ್ತಿರುವವು ಕುಸ್ತಿ ಆಟಗಳು, ಬೇರೆ ಬೇರೆ ಕಾಳಗಗಳು, ಬಾಣ ಬಿರುಸು ಮುಂತಾದ ಮದ್ದಿನ ತಮಾಷೆ ಯಾವದನ್ನು ಹೇಳಿ ಯಾವದನ್ನು ಬಿಡುವದು ಇಂತಹ ತಮಾಷೆಯನ್ನು ನೋಡುವದಕ್ಕೆ ಜನಗಳು ಗಂಡಸರು, ಹೆಂಗಸರು ಮಕ್ಕಳು ತಂಡೋಪತಂಡವಾಗಿ ಆ ಕಾಲಕ್ಕೆ ರಾಜಧಾನಿಗೆ ನೆರೆಬರುವ ಸೋಜಿಗವು ?

ಬೇರೆ ತರವಾದ ನೋಟಗಳುಂಟು ಶಿವನಸಮುದ್ರದ ಹತ್ತಿರ ಕಾವೇರಿ ನದಿಯು ಸುಮಾರು ಇನ್ನೂರು ಅಡಿಗಳ ಮೇಲಾದ ಎತ್ತರದಿಂದ ಕೆಳಕ್ಕೆ ಧುಮುಕುತ್ತದೆ ನೀರು ಅಷ್ಟು ಎತ್ತರದಿಂದ ಕೆಳಗೆ ಬೀಳುವದನ್ನು ನೋಡುವದು ಬಹಳ ಆಶ್ಚರ್ಯವನ್ನೂ ಸಂತೋಷವನ್ನೂ, ಹುಟ್ಟಿಸುತ್ತದೆ ಹಾಗೆಯೇ ಅಲ್ಲಿ ನಡಿಸಲ್ಪಡುತ್ತಿರುವ ವಿದ್ಯುಚ್ಛಕ್ತಿಯ ಯಂತ್ರಗಳು ಅವುಗಳಿಂದ ಸಾವಿರಗಟ್ಟಲೆ ಕುದುರೆಗಳ ಶಕ್ತಿಯನ್ನು ಮೀರುವ ಶಕ್ತಿಯು ಅವುಗಳಿಂದ ಕೋಲಾರದ ಚಿನ್ನದ ಗಣಿಗಳಲ್ಲಿ ನಡಿಸಲ್ಪಡುವ ಯಂತ್ರಗಳು ಇವೇ ಮತ್ತು ಇದೇ ತರವಾದ ನೋಟಗಳುಂಟು ಅವುಗಳನ್ನು ನೋಡುವದಕ್ಕೆ ಹೋಗುವ ಅನೇಕ ನೋಟಕರೂ ಉಂಟು

ಆದರೆ ಈ ಭೂಮಂಡಲದಲ್ಲಿ ಅತ್ಯಂತ ಉತ್ಕೃಷ್ಟವಾದ ನೋಟವಾವುದು ಬೇರೆ ಬೇರೆ ಕಡೆಗಳಲ್ಲಿರುವ ನೋಟಗಳು ಬಹು ದೂರವಾದ ಸ್ಥಳಗಳಲ್ಲಿರುವವು ಅಲ್ಲಿಗೆ ಹೋಗುವದಕ್ಕೆ ಬಹಳ ಹಣವೂ ಸಮಯವೂ ಶ್ರಮವೂ ವೆಚ್ಚವಾಗಬೇಕು ಮತ್ತು ಪರಸ್ಥಳಗಳಿಂದ ಅಲ್ಲಿಗೆ ಹೋಗುವವರು ಬಹಳ ಕಾಲ ಅಲ್ಲಿರುವದಕ್ಕಾಗುವದಿಲ್ಲ ಸಕಲ ನೋಟಗಳನ್ನೊಳಗೊಂಡಿರುವ ಮತ್ತು ಎಲ್ಲಾ ನೋಟಗಳ ಸೌಂದರ್ಯವನ್ನೂ ಮೀರತಕ್ಕ ಎಲ್ಲಾ ನೋಟಗಳಿಗೂ ಆಧಾರಭೂತವಾದ ಒಂದು ನೋಟವಿಲ್ಲವೆ ? ಅದನ್ನು ನೋಡಿ ನಾವು ತೃಪ್ತಿಪಡುವದಕ್ಕಾಗದೇ?

ದೇವರಿಗಿಂತ ಸೌಂದರ್ಯವಾದ ನೋಟವು ಯಾವದೂ ಇಲ್ಲ ಆತನು ಅಪರಿಮಿತವಾದ ತೇಜಃಪುಂಜನು ಈ ಲೋಕದ ಸಕಲ ನೋಟಗಳೂ ಆತನ ಮೂಲಕ ಆತನಿಂದ ಉತ್ಪನ್ನವಾಗಿ ಆತನ ಅಂಗೈ ಆಧಾರದ ಮೇಲೆ ನಿಂತಿವೆ ಯಾವ ನೋಟವನ್ನು ನೋಡದಿದ್ದರೂ ದೇವರನ್ನು ನೋಡಿದರೆ ಸಾಕು ಯಾಕೆಂದರೆ ಸಕಲ ಚರಾಚರವಸ್ತುಗಳು ಆತನಲ್ಲಿ ಒಳಗೊಂಡಿರುತ್ತವೆ ಆತನ ಸೌಂದರ್ಯವು ಎಷ್ಟು ಮನೋತೃಪ್ತಿಯನ್ನೂ ಸೋಜಿಗವನ್ನೂ ಆನಂದವನ್ನೂ ನೋಟಕರಿಗೆ ನೀಡಬಲ್ಲದು ಈ ಲೋಕದ ಬೇರೆ ಬೇರೆ ಕಡೆಗಳಲ್ಲಿರುವ ನೋಟಗಳು ರಾತ್ರಿಯಲ್ಲಿ ನಮ್ಮ ಮನೆಗಳಲ್ಲಿ ಹಚ್ಚುವ ದೀಪಗಳಂತೆ ಇವೆ ಅಥವಾ ಚಂದ್ರನ ಬೆಳಕಿಲ್ಲದ ಆಕಾಶದಲ್ಲಿ ಮಿಣುಗುಟ್ಟುತ್ತಿರುವ ತಾರೆಗಳಂತಿರುವವು ಎಲ್ಲಾ ನಕ್ಷತ್ರಗಳೆಷ್ಟು ಪ್ರಕಾಶಿಸಿದರೂ ಗಗನಮಂಡಲಕ್ಕೆ ಚಂದ್ರನಿಂದ ಅಥವಾ ಮಧ್ಯಾಹ್ನದ ಸೂರ್ಯಪ್ರಕಾಶದಿಂದ ಲಭ್ಯವಾದಷ್ಟು ಬೆಳಕು ಬರುವದೇ ? ಒಂದು ವಾರ ಅಥವಾ ಒಂದು ತಿಂಗಳು ಸೂರ್ಯನ ಬೆಳಕಿಲ್ಲದೆ ನಾವು ಹಚ್ಚಿಕೊಳ್ಳುವ ದೀಪದ ಬೆಳಕಿನಿಂದ ಅಥವಾ ತಾರಾಗಣಗಳ ಸಮೂಹ ಬೆಳಕಿನಿಂದ ಮಾತ್ರ ಜೀವಿಸಬೇಕಾಗಿಬಂದರೆ ನಮ್ಮ ಗತಿ ಹೇಗಿರುವದೋ ಊಹಿಸಿಕೊಳ್ಳಿರಿ ಅಂತಹ ಸ್ಥಿತಿಯಲ್ಲಿದ್ದವರಿಗೆ ಅಕಸ್ಮಾತ್ತಾಗಿ ಸೂರ್ಯನು ದಿಗಂತದಲ್ಲಿ ಮಹಿಮಾ ರೂಪದಿಂದ ಮೂಡಿಬಂದನೆಂದು ಊಹಿಸಿರಿ ಅವರ ಸಂಭ್ರಮವು ಎಷ್ಟು ? ಯಾರು ವರ್ಣಿಸುವರು ? ಹಾಗೆಯೇ ಬೇರೆ ಬೇರೆ ನೋಟಗಳನ್ನು ನೋಡುವದಕ್ಕೆ ಕಾಲ, ಹಣ ಶ್ರಮಗಳನ್ನು ವ್ಯಯಮಾಡುತ್ತಲಿದ್ದವರು ದೇವರನ್ನು ನೋಡಿದರೆ ಅವರ ಸಂತೋಷವು ಅದಕ್ಕಿಂತ ಲಕ್ಷಪಾಲು ಹೆಚ್ಚಾಗಿರುವದೆಂದು ಹೇಳಬೇಕು

ಆದರೆ ದೇವರನ್ನು ನೋಡುವದು ಹೇಗೆ ? ಅದು ಸಾಧ್ಯವೆ ? ಸ್ನಾನ, ಮಡಿ, ತೀರ್ಥ, ಜಪ, ತಪ ಧ್ಯಾನಗಳನ್ನು ಮಾಡಿ ದೇವರನ್ನು ಕಾಣಲಿಲ್ಲ ಸ್ನಾನ, ಮಡಿ, ಜಪತಪಗಳನ್ನು ಯಾರೂ ತಿರಸ್ಕರಿಸುವದಿಲ್ಲ ಆದರೆ ಇವೆಲ್ಲವೂ ನಭೋಮಂಡಲಕ್ಕೆ ದೀಪಗಳನ್ನು ಕಟ್ಟಿ ಬೆಳಕುಮಾಡುವ ಪ್ರಯತ್ನಕ್ಕೆ ಸಾಮ್ಯವಾಗಿರುವವು ಕಾಸಿ, ರಾಮೇಶ್ವರ ಗಳುಗಳಿಗೆ ಹೋದವರಿಗೆ ದೇವದರ್ಶನವಾಗಲಿಲ್ಲ ದೇವದರ್ಶನಕ್ಕೆ ಇನ್ನಾವದಾದರೂ ಮಾರ್ಗವಿದೆಯೋ ?

ಯೇಸು ಕ್ರಿಸ್ತನು ತನ್ನ ಶಿಷ್ಯರು ದೇವರನ್ನು ನೋಡಬೇಕೆಂದು ಅಪೇಕ್ಷಿಸಿದನು ಅವರ ಅಪೇಕ್ಷೆಯು ಅವರಿಗೆ ಲಭ್ಯವಾಗುವ ಹಾಗೆ ಅವರಿಗೆ ಒಂದು ಮಾರ್ಗವನ್ನು ತೋರಿಸಿದನು ಆತನು ಹೇಳಿದ್ದೇನಂದರೆ—ನಿರ್ಮಲಚಿತ್ತರು ಧನ್ಯರು, ಅವರು ದೇವರನ್ನು ನೋಡುವರು ಎಂಬುವದೇ ನಿರ್ಮಲಚಿತ್ತವು ನಮ್ಮ ಮನಸ್ಸೆಂಬ ನೇತ್ರದ ಪಾಟವನ್ನು ಶುದ್ಧಿಗೊಳಿಸಿ ದೇವರನ್ನು ನೋಡುವ ದೃಷ್ಟಿಯನ್ನು ಪ್ರಕಾಶಗೊಳಿಸುತ್ತದೆ ಬಹು ಸೂಕ್ಷ್ಮವಾದ ಮತ್ತು ಬರೀ ಕಣ್ಣಿಗೆ ಗೋಚರವಾಗದ ಅನೇಕ ವಸ್ತುಗಳೂ ಪ್ರಾಣಿಗಳೂ ಈ ಲೋಕದಲ್ಲಿವೆ ಅವು ಕಣ್ಣಿಗೆ ಗೋಚರವಾಗುವದಕ್ಕೆ ಶಾಸ್ತ್ರಜ್ಞರು ಭೂತಕನ್ನಡಿಯನ್ನು ಪ್ರಯೋಗಿಸುತ್ತಾರೆ ಬಹು ದೂರದಲ್ಲಿರುವ ಕೆಲವು ನಕ್ಷತ್ರಗಳನ್ನು ಪರೀಕ್ಷಿಸುವದಕ್ಕೆ ಅವರು ದುರ್ಬೀನು ಎಂಬ ಇನ್ನೊಂದು ಕನ್ನಡಿಯನ್ನು ಪ್ರಯೋಗಿಸುತ್ತಾರೆ ಕಣ್ಣಿಗೆ ಅಗೋಚರವಾದ ನಕ್ಷತ್ರಗಳು ಆ ದುರ್ಬೀನಿನಲ್ಲಿ ಪರಿಷ್ಕಾರವಾಗಿ ಕಾಣಬರುತ್ತವೆ ಮನಸ್ಸನ್ನು ಶುಚಿಮಾಡಿ ದೇವರನ್ನು ಕಾಣುವ ಹಾಗೆ ಮಾಡಿರುವನು ಏನು ಇಹಲೋಕದ ಸಂಪತ್ತು, ಭೋಗ ಭಾಗ್ಯಗಳನ್ನು ಬಯಸುವದು ಅವುಗಳನ್ನು ಹುಡುಕಿ, ಸಂಪಾದಿಸಿ ಅನುಭೋಗಿಸುವದು ಇದರಲ್ಲಿ ಮಗ್ನರಾದವರಿಗೆ ಪರಲೋಕದ ಆಶೆಯು ಮಾಂದ್ಯವಾಗಿ ದೇವರು ಮನೋದೃಷ್ಟಿಗೆ ಮರೆಯಾಗುತ್ತಾನೆ ಲೋಭ, ಮಾದರ, ಹಗೆ, ಕೆಡುಕತನ, ಅಹಂಕಾರ, ಮುಂತಾದ ಪಾಪಗಳಂತೂ ಮನೋದೃಷ್ಟಿಯೆಂಬ ಕಣ್ಣನ್ನು ಮುಚ್ಚಿಬಿಡುವ ಪರೆಗಳಾಗಿವೆ ಕಣ್ಣಿಗೆ ಹೂ ಬಿದ್ದು ಅಥವಾ ಪರೆ ಬೆಳೆದರೆ ಅಂಥವನ ಕಣ್ಣು ಕಾಣುವದಿಲ್ಲವಲ್ಲವೇ

ಆದರೆ ಕಣ್ಣು ಚೆನ್ನಾಗಿದ್ದರೂ ಬೆಳಕಿಲ್ಲದ ಅಮಾವಾಸ್ಯೆ ಕತ್ತಲಿನಲ್ಲಿ ಏನೂ ಕಾಣುವದಿಲ್ಲ ಮನಸ್ಸಿಗೆ ನಿರ್ಮಲತ್ವವು ಇರಬೇಕಾದದ್ದು ಅಗತ್ಯ

ವು ಬೆಳಕು ಬೇಕು ಕ್ರಿಸ್ತನೇ ಆ ಬೆಳಕು ಆತನು —ನಾನೇ ಲೋಕಕ್ಕೆ ಬೆಳಕಾಗಿದ್ದೇನೆ ನನ್ನನ್ನು ಹಿಂಬಾಲಿಸಿ ನಡೆಯುವವನು ಎಂದಿಗೂ ಕತ್ತಲಲ್ಲಿ ನಡೆಯದೆ ನಿತ್ಯ ಜೀವದ ಬೆಳಕನ್ನು ಹೊಂದಿರುವನೆಂದು ನುಡಿದನು

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ರಾಜಧಾನಿಯಿಂದ ನಾಳೆ ನೀಲಗಿರಿಗೆ ದಯಮಾಡುವರೆಂದು ಕೇಳುತ್ತೇವೆ

* * *

ಯುವರಾಜರವರು ಕಳೆದ ಶನಿವಾರ ರಾಜಧಾನಿಗೆ ದಯಮಾಡಿದ್ದು ಭಾನುವಾರ ಬೆಂಗಳೂರಿಗೆ ಪ್ರಯಾಣಮಾಡಿದರು

* * *

ಬೆಂಗಳೂರು ತಾಲ್ಲೂಕು ಚಿಕ್ಕಮ್ಮನಹಳ್ಳಿಯಲ್ಲಿ ಸುಮಾರು 50 ವರುಷದ ಕೃಷ್ಣಸಂಬವನಿಗೆ ಕಳೆದ ವಾರ ಸಿಡಿಲು ಬಡಿದು ಮೃತಪಟ್ಟನು

* * *

ಹಬ್ಬಗಳ ಉದ್ದಿಶ್ಯ ಮೈಸೂರು ಸಂಸ್ಥಾನದಲ್ಲಿ ಎಲ್ಲಾ ಕೋರ್ಟುಗಳಿಗೂ ಏಪ್ರಿಲ್ ತಾ 14 ರಿಂದ ಮೇ ತಿಂಗಳು ತಾ 26 ರ ವರೆಗೆ ರಜಾ ಆಗಿದೆ

* * *

ರಾಜಧಾನಿಯ ಮಹಾರಾಣಿ ಕಾಲೇಜಿನ ಸೂಪರಿಂಟೆಂಡೆಂಟರಾದ ಮಿಸ್ ಪಾರ್ಕ್‌ಯವರು ಇಷ್ಟರಲ್ಲೇ 8 ತಿಂಗಳ ರಜಾಪಡೆದು ಸೀಮೆಗೆ ಹೋಗಿಬರುತ್ತಾರೆ

* * *

ರಾಜಧಾನಿಯ ಕ್ರಿಕೆಟ್ ಎಂಬ ಚೆಂಡಾಟದ ಕ್ಲಬ್ಬಿನವರು ನೀಲಗಿರಿಯವರ ಕೂಡ ಪಂದ್ಯವನ್ನು ಆಡುವುದಕ್ಕಾಗಿ ಅಲ್ಲಿಗೆ ಹೋಗಿದಾರೆ ಇವರಲ್ಲಿರುವಾಗ್ಗೆ ಅರಮನೆಯಿಂದ ಆತಿಥ್ಯಗಳು ನಡೆಯುವವು

* * *

ಕನಕಾನಹಳ್ಳಿ ತಾಲ್ಲೂಕಿನಲ್ಲಿ ಎರಡು ಕೊಲೆಗಳು ನಡೆದ ಮೊಕದ್ದಮೆಯಲ್ಲಿ ಬೆಂಗಳೂರು ಸೆಷನ್ಸ್ ಜಡ್ಜರವರು ಬಸವಯ್ಯ, ಬಸಪ್ಪ, ಮುನಿವೀರ ಎಂಬ ಮೂರು ಮಂದಿ ಅಪರಾಧಿಗಳಿಗೂ ಜೀವಾವಧಿ ಸಜಾ ಶಿಕ್ಷೆಯನ್ನು ವಿಧಿಸಿದ್ದಾರೆ

* * *

ಮಂಜರಾಬಾದ ಪ್ರಾಂತ್ಯದ ಕೆಲವು ತೋಟಗಳಲ್ಲಿ ಕಾಫಿ ಗಿಡಗಳಿಗೆ ಈಗ ಒಂದು ಹುಳು ಹಿಡಿಯಲಾರಂಬವಾಗಿವೆ ಎಂದು ಕೇಳುತ್ತೇವೆ ಇದರಿಂದ ಫಸಲಿಗೆ ಕೇಡಾಗದಂತೆಯೂ, ಇತರ ಪ್ರದೇಶಗಳಿಗೂ ಹರಡದಂತೆಯೂ ಅವನ್ನು ನಾಶಪಡಿಸುವ ಏರ್ಪಾಡು ಮಾಡಬೇಕಾಗಿದೆ

* * *

ಹಿರಿಯ ಕೌನ್ಸೆಲರ್ ಮಿ॥ ಎಚ್ ವಿ ನಂಜುಂಡಯ್ಯನವರ ಸುಮಾರು ವರುಷ ವಯಸ್ಸಿನ ರಾಮಚಂದ್ರನೆಂಬ ಕುಮಾರನು ಬೆಂಗಳೂರು ಮಲ್ಲೇಶ್ವರದಲ್ಲಿ ಇತರ ಹುಡುಗರ ಸಂಗಡ ಹೋಗಿ ಒಂದು ಕೊಳದಲ್ಲಿ ಸ್ನಾನಮಾಡುತ್ತಿದ್ದಾಗ ಅಕಸ್ಮಾತ್ತಾಗಿ ಬಿದ್ದು ಕಾಲವಾದನೆಂದು ತಿಳಿದು ವಿಷಾದಿಸುತ್ತೇವೆ

* * *

ಶ್ರೀ ಶಿವಗಂಗಾ ಸ್ವಾಮಿಗಳವರು ಉತ್ತರದೇಶದಲ್ಲಿ ಸಂಚಾರಮಾಡಿಕೊಂಡಿದ್ದು ಬೆಂಗಳೂರು ಸಂಸ್ಕೃತ ಕಾಲೇಜಿನ ಮೂಲಧನಕ್ಕೆ 5,000 ರೂಪಾಯಿ ದಾನಮಾಡಿದ್ದಲ್ಲದೆ, ಆ ಕಾಲೇಜಿನ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡುವುದಕ್ಕಾಗಿ ಪ್ರತಿ ತಿಂಗಳಲ್ಲೂ 70 ರೂಪಾಯಿನಂತೆ ಕೊಡುತ್ತೇವೆಂದು ಅಭಯವನ್ನು ದಯಪಾಲಿಸಿದರು

* * *

ಕಳೆದ ಭಾನುವಾರ ಮಧ್ಯಾಹ್ನ ರಾಜಧಾನಿಯ ಲಾಯರ್ ಸಂಘದವರು ಒಂದು ಕೂಟವನ್ನು ನಡೆಸಿದರು ರಿಪೋರ್ಟುಗಳೂ, ಉಪನ್ಯಾಸಗಳೂ ಓದಲ್ಪಟ್ಟವು ಫಲಹಾರ, ಸಂಗೀತ, ತರಿಕಥೆಗಳು ನಡೆದವು ಮ॥ ಎಚ್ ನರಸಿಂಹಯ್ಯನವರು ಸಂಘದ ಪ್ರೆಸಿಡೆಂಟರಾಗಿಯೂ, ಮ॥ ಎ ಕೃಷ್ಣರಾಯರೂ, ಮ॥ ತಿರುಮಲಾಚಾರ್ಯರೂ ಸೆಕ್ರೆಟರಿಗಳಾಗಿಯೂ ಚುನಾಯಿಸಲ್ಪಟ್ಟಿದ್ದಾರೆ

* * *

ಮ॥ ಕೆ ವೆಂಕಟಲಿಂಗಂ ಯವರು ತಮ್ಮ ಗತಿಸಿದ ತಂದೆಯ ಹೆಸರಿನಲ್ಲಿ 20,000 ರೂಪಾಯಿ ಫಂಡು ಹಾಕಿ, ಅದನ್ನು ಮದರಾಸ್ ಗವರ್ನ್‌ಮೆಂಟಿನವರ ವಶಕ್ಕೆ ಒಪ್ಪಿಸಿ, ಅದರ ಉತ್ಪತ್ತಿಯಿಂದ ಮದರಾಸ್ ಮತ್ತು ಮೈಸೂರು ಕಾಲೇಜುಗಳಲ್ಲಿ ವಿದ್ಯೆ ಕಲಿಯುವ ವೈಶ್ಯ ಬಾಲಕರಲ್ಲಿ ಯೋಗ್ಯರಾದ ನಾಲ್ಕು ಮಂದಿಗೆ ವೇತನಗಳನ್ನು ಕೊಡುತ್ತಾ ಬರುವಂತೆ ಏರ್ಪಾಡು ಮಾಡಿದ್ದಾರೆ

* * *

ಹೆಂಗಸರಿಗೆ ವಿದ್ಯೆ, ಬುದ್ಧಿ, ವಿವೇಕಾಗಳನ್ನು ಕಲಿಸುವುದಕ್ಕೆ ಒಂದು ಸಂಘ ಏರ್ಪಾಡಾಗಬೇಕೆಂದು ಕಳೆದ ಶುಕ್ರವಾರ ಸಾಯಂಕಾಲ ರಾಜಧಾನಿಯ ಟೌನ್ ಹಾಲಿನಲ್ಲಿ ಒಂದು ಮಹಾ ಸಭೆ ನಡಿಯಿತು ಮ॥ ಗಳಾದ ಎ ಸುಬ್ಬಣ್ಣನವರು, ಎಂ ವೆಂಕಟಕೃಷ್ಣಯ್ಯನವರು, ಎ ಗೋವಿಂದಾಚಾರ್ಯರು, ಶ್ರೀನಿವಾಸರಾಯರು, ಮ॥ ಎ ಅಣ್ಣಯ್ಯ ಪಂಡಿತರೇ ಮೊದಲಾದವರು ಉಪನ್ಯಾಸಗಳನ್ನು ಮಾಡಿದರು

* * *

ರಾಜಧಾನಿಯ ಶ್ರೀರಾಮಪೇಟೆಯಲ್ಲಿ ವೈಶ್ಯರ ಪುರೋಹಿತ ರಾಮಸ್ವಾಮಿ ಶಾಸ್ತ್ರಿಯನ್ನು ಕೊಲೆಮಾಡಿದ ಮೊಕದ್ದಮೆಯಲ್ಲಿ ಅಪರಾಧಿ ಶ್ರೀನಿವಾಸಮೂರ್ತಿಯನ್ನು ಮ್ಯಾಜಿಸ್ಟ್ರೇಟರು ಸೆಷನ್ಸ್ ವಿಚಾರಣೆಗೆ ಗುರಿಮಾಡಲಿಲ್ಲವೆಂದು ಸೆಷನ್ಸ್ ಜಡ್ಜರು ಆ ಮೊಕದ್ದಮೆಯನ್ನು ತಮ್ಮ ಕೋರ್ಟಿಗೆ ಬರಮಾಡಿಕೊಂಡು 13 ದಿನ ಸಾಕ್ಷಿಗಳ ಶ್ರಮಿಯತ್ತು ತೆಗೆದುಕೊಂಡು, ಅಪರಾಧವು ರುಜುವಾತಾಗಲಿಲ್ಲವೆಂದು ಹೇಳಿ ಶ್ರೀನಿವಾಸಮೂರ್ತಿಯನ್ನು ಖುಲಾಸ್‌ಮಾಡಿಸಿ, ಪೋಲೀಸಿನವರು ಪತ್ತೇತರವೊದು ಮಾಡುವ ಕ್ರಮವನ್ನು ಚೆನ್ನಾಗಿ ಕಲಿಯಬೇಕಾದ್ದು ಅವಶ್ಯವೆಂದು ತಿಳಿಸಿದಾರೆ

ಮೈಸೂರು ಗಜೆಟ್ ಸಂಗ್ರಹ

ಬೆಂಗಳೂರಿಗೆ ವರ್ಗಾಪಟ್ಟ ಹೆಡ್ ಮಾಸ್ಟರ್ ಮಿ॥ ಎನ್ ಕೇಶವಯ್ಯಂಗಾರ್ಯರ ಸ್ಥಾನಕ್ಕೆ ಹೆಡ್ ಮಾಸ್ಟರ್ ಮಿ॥ ಆರ್ ವಿ ಕೃಷ್ಣಸ್ವಾಮಿ ಅಯ್ಯರವರನ್ನು ಪಟ್ಟಣದ ಮ್ಯುನಿಸಿಪಲ್ ಕೌನ್ಸೆಲರಾಗಿ ನೇಮಿಸಿದೆ

ಕಡೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮಿ। ಮಹಮದ್ ಓವೀದುಲ್ಲಾಯವರಿಗೆ ಏಪ್ರಿಲ್ ತಾ 1 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೂಡಿಗೆರೆ ತಾಲ್ಲೂಕು ಅಮಲ್ದಾರ್ ಮಿ॥ ಎಸ್ ರೂಬನ್‌ರವರು ಕಡೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಶಿವಮೊಗ್ಗಾ ಖಜಾನೆಯ ಅ॥ ಕಮೀಷನರ್ ಮಿ॥ ಜ ಹನುಮಂತರಾಯರನ್ನು ಜನವರಿ ತಾ 1 ರಿಂದ 3 ನೇ ಕ್ಲಾಸಿಗೆ ಬಡ್ತಿಮಾಡಿದೆ

ಮುಂದೆ ಹೇಳುವ ಅಮಲ್ದಾರರುಗಳ ವರ್ಗಾವರ್ಗಿಯನ್ನು ಹುಕುಂ ಮಾಡಲಾಗಿದೆ—(1) ಮಿ॥ ಗಳಾದ ಕೆ ನಾರಾಯಣ ಅಯ್ಯಂಗರನ್ನು ದೇವನಹಳ್ಳಿಯಿಂದ ಚನ್ನಗಿರಿಗೆ ಎಸ್ ಎನ್ ಶ್ರೀ ನರಸಿಂಹಶಾಸ್ತ್ರಿಯವರನ್ನು ಚನ್ನಗಿರಿಯಿಂದ ಚಿಕ್ಕಬಳ್ಳಾಪುರಕ್ಕೆ, ಮಹಮದ್ ಸಯ್ಯದ್ ಷರೀಫ್ ಯವರನ್ನು ಚಿಕ್ಕಬಳ್ಳಾಪುರದಿಂದ ದೊಡ್ಡಬಳ್ಳಾಪುರಕ್ಕೆ ಎ. ಕೃಷ್ಣ ಅರಸಿನವರನ್ನು ದೊಡ್ಡಬಳ್ಳಾಪುರದಿಂದ ಮಂಡ್ಯಕ್ಕೆ ಎಸ್ ಶ್ರೀನಿವಾಸಯ್ಯಂಗಾರ್ರನ್ನು ಮಂಡ್ಯದಿಂದ ದೇವನಹಳ್ಳಿಗೆ

ಕೊಪ್ಪ ತಾಲ್ಲೂಕ್ ಅಮಲ್ದಾರ್ ಮ॥ ಎನ್ ಶ್ರೀನಿವಾಸರಾಯರಿಗೆ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿನ ಮೊಕದ್ದಮೆಗಳನ್ನು ಹಿಡಿದು ವಿಚಾರಣೆ ಮಾಡುವ ಅಧಿಕಾರವನ್ನು ವಹಿಸಿದೆ

ಶ್ರೀಮನ್ ಮಹಾರಾಜರವರು ಮೈಸೂರು ಇನ್‌ಫೆಂಟ್ರಿ 2ನೇ ಬಟಾಲಿಯನ್ 1ನೇ ಗ್ರೇಡ್ ಜಮಾದಾರ್ ತಿಮ್ಮಪ್ಪರಾಜೆ ಅರಸಿನವರನ್ನು ಲೋಕಲ್ ಸರ್ವೀಸ್ ರೆಜಿಮೆಂಟಿನ 4ನೇ ಗ್ರೇಡ್ ಜಮಾದಾರ್ ಟ್ರೂಪ್ ಕಮ್ಯಾಂಡರಾಗಿ ನೇಮಕ ಮಾಡಿರುತ್ತಾರೆ

ಶ್ರೀಮನ್ ಮಹಾರಾಜರವರು ಮೈಸೂರು ಲೋಕಲ್ ಸರ್ವೀಸ್ ರೆಜಿಮೆಂಟ್ ಎ ಸ್ಕ್ವಾಡ್ರನ್ ದಫೇದಾರ್ ಇಸೂಫ್ ಖಾನ್‌ರವರನ್ನು ಅದೇ ರೆಜಿಮೆಂಟಿನಲ್ಲಿ 1ನೇ ಗ್ರೇಡ್ ಜಮಾದಾರ್ ಟ್ರೂಪ್ ಕಮ್ಯಾಂಡರ್ ಕೆಲಸಕ್ಕೆ ಬಡ್ತಿಮಾಡಿರುತ್ತಾರೆ

ಎಗ್ಸಿಕ್ಯುಟಿವ್ ಇಂಜನಿಯರ್ ಮಿ॥ ಸಿ ಕೃಷ್ಣಯ್ಯಂಗಾರ್ರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೆರಡು ತಿಂಗಳು ಜಾಸ್ತಿಮಾಡಿದೆ

ಎಗ್ಸಿಕ್ಯುಟಿವ್ ಇಂಜನಿಯರ್ ಮಿ॥ ಎಫ್ ಎ ಸ್ಟೀಲ್‌ಯವರಿಗೆ ಹಿಂದೆ ಕೊಟ್ಟಿರುವ ರಜವನ್ನು ರದ್ದುಮಾಡಿ, ಕಳೆದ ಸೆಪ್ಟಂಬರ್ ತಾ 4ರ ಲಾಗಾಯಿತು ಎರಡು ತಿಂಗಳೂ ಇಪ್ಪತ್ತೇಳು ದಿನಗಳ ಪ್ರಿವಿಲೆಜ್ ರಜವನ್ನೂ, ಅದರ ಜೊತೆಗೆ ಒಂಭತ್ತು ತಿಂಗಳೂ ಮೂರು ದಿನಗಳ ಫರ್ಲೋ ರಜವನ್ನೂ ಕೊಟ್ಟಿದೆ

ಮಿ। ಬಿ ಕೃಷ್ಣರಾಯರನ್ನು 2ನೇ ಕ್ಲಾಸ್ ಹಂಗಾಮಿ ಸಬ್ ಅ॥ ಇಂಜನಿಯರಾಗಿ ನೇಮಕಮಾಡಿ ಬೆಂಗಳೂರು ಡಿವಿಜನ್‌ಗೆ ವರ್ಗಮಾಡಿದೆ

ಮುಂದೆ ಹೇಳುವ ಹಂಗಾಮಿ ಓವರ್ಸಿಯರುಗಳನ್ನು 2ನೇ ಕ್ಲಾಸ್ ಹಂಗಾಮಿ ಸಬ್ ಅ॥ ಇಂಜನಿಯರುಗಳಾಗಿ ನೇಮಕಮಾಡಲಾಗಿದೆ —ಮಿ॥ ಗಳಾದ ಸಿ ಟಿ ನರಸಿಂಹಯ್ಯಂಗಾರ್ರು ಚಿತ್ರದುರ್ಗದ ಡಿವಿಜನ್‌ಗೆ ಗುರುರಾವ್ ಎಸ್ ಶಿರ್ಸಿಯವರು ಶಿವಮೊಗ್ಗಾ ಡಿವಿಜನ್‌ಗೆ, ಸಿ ವಿ ಕಾಶಿಪತಿ ಶಾಸ್ತ್ರಿಗಳು ಬೆಂಗಳೂರು ಡಿವಿಜನ್‌ಗೆ, ಜಿ ಶೇಷಗಿರಿರಾಯರು ಕಾವೇರಿ ತಲಾವ್ ಡಿವಿಜನ್‌ಗೆ

ಮುಂದೆ ಹೇಳುವವರನ್ನು ಒಂದು ವರುಷ 2ನೇ ಕ್ಲಾಸ್ ಹಂಗಾಮಿ ಓವರ್ಸಿಯರುಗಳಾಗಿ ನೇಮಕಮಾಡಿದೆ—ಮಿ॥ ಗಳಾದ ಡಿ ಕೃಷ್ಣರಾಯರು, ಪಿ ರಾಜಗೋಪಾಲನ್, ಪಿ ಸುಬ್ಬರಾಯರು

ಅ॥ ಇಂಜನಿಯರ್ ಮಿ॥ ಟಿ ಕೆ ಅರುಣಾಚಲ ಅಯ್ಯರವರನ್ನು ಕಾವೇರಿ ತಲಾವ್ ಡಿವಿಜನ್‌ನಿಂದ ಬೆಂಗಳೂರು ಡಿವಿಜನ್‌ಗೆ ವರ್ಗಮಾಡಿದೆ

ಇಂಡಿಯಾ ದೇಶದ ವೃತ್ತಾಂತಗಳು.

ಈಜಿಪ್ಟ್ ಎಂಬ ಹಡಗು 15,17,000 ರೂಪಾಯಿನ ಚಿನ್ನವನ್ನು ಹಿಂದುಸ್ಥಾನಕ್ಕೆ ತರುತ್ತಿದೆ

* * *

ಸ್ವದೇಶೀ ಏರ್ಪಾಡನ್ನು ಕುರಿತು ಜನರಿಗೆ ಬೋಧನೆ ಮಾಡಿ ಅವರನ್ನು ಪ್ರೋತ್ಸಾಹಪಡಿಸುವುದಕ್ಕೆ ಬಂಗಾಳಾ ದೇಶೀಯ ಪತ್ರಿಕೆಗಳೆಲ್ಲಾ ಒಂದಾಗಿ ಒಪ್ಪಿಕೊಂಡಿರುತ್ತವೆ

* * *

ಇಂಡೋರ್ ಸಂಸ್ಥಾನದ ಹೋಲ್ಕರ್ ಮಹಾರಾಜರವರು ಕಳೆದ ಶನಿವಾರ ಪರಿವಾರ ಸಮೇತ ಬೊಂಬಾಯಿನಲ್ಲಿ ಮೋಲ್ಟೇವಿಯಾ ಎಂಬ ಹಡಗು ಹತ್ತಿ ವಿಲಾಯತಿಗೆ ಪ್ರಯಾಣಮಾಡಿದರು

* * *

ಹಿಂದು ಸ್ಥಾನದಲ್ಲಿ ಕ್ಷಾಮನಿವಾರಣೆಯ ಫಂಡು ಏರ್ಪಾಡಾಗಿ ಒಂಭತ್ತು ವರುಷಗಳಾದವು ಈಗ ಈ ಫಂಡಿನಲ್ಲಿ 28,10,000 ರೂಪಾಯಿ ಮೂಲಧನ ಶೇಖರವಾಗಿರುವಂತೆ ಕಳೆದ ವರುಷದ ರಿಪೋರ್ಟಿನಿಂದ ತಿಳಿಯುತ್ತದೆ

* * *

ಭೋಪಾಲ ಸಂಸ್ಥಾನದ ಬೇಗಂ ಮಹಾರಾಣಿ ಸಾಹಿಬಾಯವರು ಲಾಹೋರ್ ಪಟ್ಟಣದ ಅಂಜುಮಾನ್ ಹಮಾಯತ್ ಇಸ್ಲಾಂ ಎಂಬ ವಿದ್ಯಾಶಾಲೆಗೆ ಪ್ರತಿ ತಿಂಗಳೂ 150 ರೂಪಾಯಿ ಚಂದಾ ಕಳುಹಿಸುತ್ತಾ ಬರುವುದಾಗಿ ತಿಳಿಸಿದಾರೆ

* * *

ನೀಲಗಿರಿ ಬೆಟ್ಟದ ಮೇಲೆ ಬಜಾರಿನಲ್ಲಿ ಪೋಲೀಸಿನವರಿಗೂ ಸಿಪಾಯಿಗಳಿಗೂ ಕಲಹವಾಗಿ ಮೊಕದ್ದಮೆ ನಡೆದದ್ದರಲ್ಲಿ ಮ್ಯಾಜಿಸ್ಟ್ರೇಟರು ಸಿಪಾಯಿಗಳಲ್ಲಿ ಇಬ್ಬರನ್ನು ಖುಲಾಸ್ ಮಾಡಿ, ಹನ್ನೊಂದು ಜನರಿಗೆ ತಲಾ 6-8 ತಿಂಗಳಂತೆ ಕಠಿಣ ಸಜಾ ವಿಧಿಸಿದಾರೆ

* * *

ಕಾಶಿ ಪಟ್ಟಣದ ಕ್ವೀನ್ ವಿದ್ಯಾಶಾಲೆಯಲ್ಲಿ ಎಂಟು ವರುಷಗಳಿಂದ ಉಪಾಧ್ಯಾಯನಾಗಿ ಕೆಲಸಮಾಡುತ್ತಾ ಹೆಸರು ಪಡೆದಿದ್ದ ಮಿ। ಎಚ್ ಸಿ ನಾರ್ಮನ್ ಎಂಬಾತನು ಕಳೆದ ವಾರ ಗುಂಡು ಹೊಡೆದು ಆತ್ಮಹತ್ಯಮಾಡಿಕೊಂಡನು. ಇದಕ್ಕೆ ಕಾರಣವೇನೋ ತಿಳಿಯಲಿಲ್ಲ

* * *

ಪೂರ್ವಬಂಗಾಳಕ್ಕೆ ಸೇರಿದ ನೋಕಹಾಲೀ ಪಟ್ಟಣದಲ್ಲಿ ಒಂದು ಮಹಮದೀಯ ಪತ್ರಿಕೆಯ ಸಂಪಾದಕರು ಅಲ್ಲಿನ ಒಬ್ಬ ಹಿಂದೂ ಜಮೀನ್‌ದಾರನಿಗೆ ಅಪಮಾನಕರವಾದ ಸಂಗತಿಗಳನ್ನು ಪ್ರಕಟಮಾಡಿದರೆಂದು ರುಜುವಾತು ಬಂದದ್ದರಿಂದ ಡೆಪ್ಯುಟಿ ಮ್ಯಾಜಿಸ್ಟ್ರೇಟರು ಅವರಿಗೆ ತಲಾ 10 ರೂಪಾಯಿನಂತೆ ಜುಲ್ಮಾನೆ ವಿಧಿಸಿದರು

ಪಂಜಾಬ್ ಆಧಿಪತ್ಯದಲ್ಲಿ ಅಲೀಘರಿಗೂ ದೇಹಲಿ ನಗರಕ್ಕೂ ನಡುವೆ ಹಾಕಿರುವ ರೈಲ್ ಪಟ್ಟಿಯ ಕಂಬಿಗಳನ್ನು ಕೆಡುಕರ್‍ಯಾರೋ ಕಿತ್ತುಹಾಕಿ ಕೆಡಿಸಿಬಿಟ್ಟದ್ದರಿಂದ ಕಳೆದ ವಾರ ಸಾಮಾನ್ ಭರ್ತಿಯಾಗಿದ್ದ ಒಂದು ರೈಲ್ ಗಾಡಿಯು ಬಿದ್ದು ಹದಿನೇಳು ವಾಗನ್ ಬಂಡಿಗಳು ಹಾಳಾದವು ಅವುಗಳಲ್ಲಿ ಭರ್ತಿಯಾಗಿದ್ದ ವ್ಯಾಪಾರ ಸರಕುಗಳು ಚೆಲ್ಲಿ ಹಾಳಾಗಿರುತ್ತವೆ

* * *

ರಾವಲ್‌ಪಿಂಡಿ ಪಟ್ಟಣದ ಬಳಿ ಇರುವ ಸಿರಾಯಿ ಕಾಳಾ ಎಂಬ ಸ್ಥಳಕ್ಕೆ ಒಂದು ಮೈಲಿ ದೂರದಲ್ಲಿ ಭೂಮಿಯನ್ನು ಶೋಧನೆಮಾಡಿ ಪ್ರಾಚೀನ ಕಾಲದ ಚರಿತ್ರೆಯ ವಿಚಾರಗಳನ್ನು ಕಂಡುಹಿಡಿಯುತ್ತಿದಾರೆ ಅಲ್ಲಿ ಇದುವರೆಗೆ ಶೋಧನೆ ಮಾಡಿದ್ದರಲ್ಲಿ ಟ್ಯಾಕ್ಸಿಲಾ ಎಂಬ ಪ್ರಾಚೀನ ಕಾಲದ ಪುಣ್ಯನಗರದ ಕುರುಹುಗಳು ಸಿಕ್ಕಿರುವವು ಈ ವಿಷಯದಲ್ಲಿ ಹೆಚ್ಚು ಸಂಗತಿಗಳು ಇನ್ನುಮುಂದೆ ಗೊತ್ತಾಗಬೇಕಾಗಿದೆ

* * *

ಇಂಡಿಯಾ ಗವರ್ನ್‌ಮೆಂಟಿನ ವಿದ್ಯಾ ಇಲಾಖೆಯ ಮಂತ್ರಿಯವರಾದ ಸರ್ ಹಾರ್‌ಕೋರ್ಟ್ ಬಟ್ಲರ್‌ಯವರು ಪೆಷಾವರ್ ಪಟ್ಟಣದಲ್ಲಿ ದಿವ್ಯವಾದ ಸಭಾಮಧ್ಯದಲ್ಲಿ ಹಿಂದು ಇಸ್ಲಾಮಿಯಾ ಎಂಬ ಮಹಮದೀಯರ ವಿದ್ಯಾಶಾಲೆಯನ್ನು ಪ್ರಾರಂಭ ಮಾಡಿದರು ಅದರ ಆವರಣದೊಳಗೆ ಒಂದು ವಿದ್ಯಾರ್ಥಿನಿಲಯವೂ, ಮಹಮದೀಯರ ಮಸೀತಿಯೂ ಬಹು ನೇತ್ರಾನಂದಕರವಾಗಿಯೂ ಅನುಕೂಲವಾಗಿ ಏರ್ಪಾಡಾಗಿರುತ್ತವೆ

* * *

ಕಳೆದ ಮಂಗಳವಾರ ಸಾಯಂಕಾಲ ಬಂಗಾಳಾ ಆಧಿಪತ್ಯದ ಗವರ್ನರವರು ಕಲ್ಕತ್ತೆಯ ಮೈದಾನದಲ್ಲಿ ಮಹಾ ಸಭೆಯಲ್ಲಿ ಸಿಂಹು ಲೇಟ್ ವೈಸ್‌ರಾಯಿ ಲಾರ್ಡ್ ಕರ್ಜನ್ ಪ್ರಭುವಿನ ಲೋಹಪ್ರತಿಮೆಯನ್ನು ಪ್ರತಿಷ್ಠೆಮಾಡಿ, ಅವರ ಆಳ್ವಿಕೆಯಲ್ಲಿ ಹಿಂದುಸ್ಥಾನದೊಳಗೆ ಜರುಗಿದ ಕಾರ್ಯಗಳನ್ನು ಕುರಿತು ಉಪನ್ಯಾಸಮಾಡಿದರು ಗೌರವಾರ್ಥವಾದ 31 ತೋಪುಗಳು ಹಾರಿಸಲ್ಪಟ್ಟವು ಮುರ್ಷದಾಬಾದಿನ ನವಾಬರವರು ಸಭಿಕರ ಪರವಾಗಿ ಗವರ್ನರವರನ್ನು ವಂದನೆಮಾಡಿದರು

* * *

ಬರ್ಮಾ ಆಧಿಪತ್ಯಕ್ಕೆ ಸೇರಿದ ಚಾಲೂನ್ ಪ್ರಾಂತ್ಯದಲ್ಲಿ ಕೆಲವು ಮುಖಂಡರು ಇಂಗ್ಲೀಷ್ ಗವರ್ನ್‌ಮೆಂಟಿನ ಮೇಲೆ ದಂಗೆಯೇಳಬೇಕೆಂದು ಪ್ರಜೆಗಳನ್ನು ಎತ್ತಿಕಟ್ಟಿದರು ಸರ್ಕಾರದವರು ಅವರನ್ನು ದಸ್ತಗಿರಿ ಮಾಡಿ ಅವರ ಮೇಲೆ ಮೊಖದ್ದಮೆ ಮಾಡಿದ್ದರಲ್ಲಿ ಬೆಸ್ಸೀನ್ ಪಟ್ಟಣದ ಸೆಷನ್ಸ್ ಜಡ್ಜರು ದಯಾರ್ಕ್ರಿಯಿಂದ ಹನ್ನೆರಡು ಮಂದಿ ಮುಖಂಡರಿಗೆ ಮರಣದಂಡನೆಯನ್ನು ಕಳೆದ ವಾರ ವಿಧಿಸಿದರು ಈಗ ಇವರೆಲ್ಲಾ ಬರ್ಮಾ ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದಾರೆ

* * *

ಕೊಯಮುತ್ತೂರಿನಲ್ಲಿ ಮದರಾಸ್ ಗವರ್ನರವರು ಕಳೆದ ಶುಕ್ರವಾರ ಕಾರೋನೇಷನ್ ಪಾರ್ಕ್ ಎಂಬ 48 ಎಕರೆ ವಿಸ್ತಾರವುಳ್ಳ ಉದ್ಯಾನವನವನ್ನು ಪ್ರತಿಷ್ಠೆ ಮಾಡಿದರು ಆ ಡಿಸ್ಟ್ರಿಕ್ಟಿನ ಮಿರಾಸಿದಾರರೂ ಪ್ರಜೆಗಳೂ ಅದಕ್ಕಾಗಿ 60,000 ರೂಪಾಯಿ ಹಣಕ ಚಂದಾಕೊಟ್ಟು, ಬಹು ನೇತ್ರಾನಂದಕರವಾದ ವಿಹಾರ ಸ್ಥಳವನ್ನು ಕಲ್ಪಿಸಿಕೊಂಡಿದಾರೆ ಈ ಹಣದಲ್ಲಿ ಇನ್ನೂ 19,000 ರೂಪಾಯಿ ಉಳಿದಿರುವುದರಿಂದ ಆ ಹಣವನ್ನು ಉದ್ಯಾನವನದ ಅಭಿವೃದ್ಧಿಕಾರ್ಯಗಳಿಗೋಸ್ಕರ ಫಂಡು ಹಾಕಿದರು

* * *

ಕಳೆದ 15 ನೇ ತಾ ಗೆ ಅಖೈರಾದ ವಾರದಲ್ಲಿ ಹಿಂದು ಸ್ಥಾನದೊಳಗೆ ಪ್ಲೇಗ್ ಉಪದ್ರವು 13,814 ಜನರಿಗೆ ತಗಲಿತು , 11,818 ಜನರು ಆ ರೋಗದಲ್ಲಿ ಕಾಲವಾದರು ಈ ಮರಣ ಸಂಖ್ಯೆಯ ಹಂಚಿಕೆ ಹ್ಯಾಗಂದರೆ—ದೆಹಲಿ 24 ಮರಣಗಳು, ಬೊಂಬಾಯಿ ಆಧಿಪತ್ಯ 371, ಮದರಾಸ್ 41, ಬಂಗಾಳ 110, ಬೀಹಾರ್ 2,018, ಸಂಯುಕ್ತ ಆಧಿಪತ್ಯಗಳು 7,768, ಪಂಜಾಬ್ 1,037, ಬರ್ಮಾ 155, ಮಧ್ಯಪ್ರಾಂತ್ಯಗಳು 76, ಮೈಸೂರು 35, ಹೈದರಬಾದ್ 5, ಮಧ್ಯ ಇಂಡಿಯಾ 8, ರಾಜಪುಟಾನಾ 132, ಕಾಶ್ಮೀರ 17

* * *

ಕಳೆದ ಗುರುವಾರ ಬೆಳಗಿನ ಝಾಮದ 3 ಘಂಟೆ ಸಮಯದಲ್ಲಿ ರಂಗೂನ್ ಪಟ್ಟಣದ ಪಶ್ಚಿಮ ಭಾಗದಲ್ಲಿ ಬೆಂಕಿ ಬಿದ್ದು ಮೂರು ಬೀದಿಗಳು ಸುಟ್ಟುಹೋದವು ಸಾಮಾನ್ಯ ಮನೆಗಳು 100, ಮೂರು ಭಾರಿಕಟ್ಟಡಗಳೂ ಸಂಪೂರ್ಣವಾಗಿ ಬೆಂದು ಹೋದವು ಸುಮಾರು ಎರಡೂವರೆ ಲಕ್ಷ ರೂಪಾಯಿ ನಷ್ಟವಾಗಿರುತ್ತದೆ ಒಬ್ಬ ಹೆಂಗಸೂ ಒಂದು ಮಗುವೂ ಬೆಂಕಿಗೆ ಸಿಕ್ಕಿ ಮೃತರಾದರೆಂದೂ, ನೂರಾರು ಪ್ರಜೆಗಳು ಸರ್ವಸ್ವವನ್ನೂ ಕಳೆದುಕೊಂಡು ನಿಲ್ಲುವುದಕ್ಕೆ ನೆರಳಾಗಲಿ, ತಿನ್ನುವುದಕ್ಕೆ ಅನ್ನವಾಗಲಿ ಇಲ್ಲದೆ ಸಂಕಟಪಡುತ್ತಿದಾರೆಂದೂ ತಿಳಿಯುತ್ತದೆ

* * *

ಕಲ್ಕತ್ತಾ ಪಟ್ಟಣದಲ್ಲಿ ಕಟ್ಟಲ್ಪಡುವ ವಿಕ್ಟೋರಿಯಾ ಮೆಮೋರಿಯಲ್ಲಿಗೆ 1912 ನೇ ಡಿಸೆಂಬರ್ ತಾ 31 ರ ವರೆಗೆ ಎಷ್ಟು ಹಣ ಚಂದಾ ವಸೂಲಾಗಿದೆಯೋ ಎಷ್ಟು ಖರ್ಚಾಗಿದೆಯೋ ಅದರ ಲೆಕ್ಕಗಳನ್ನು ಪ್ರಕಟಮಾಡಿದಾರೆ ಫಂಡಿಗೆ 73½ ಲಕ್ಷ ರೂಪಾಯಿ ವಸೂಲಾಗಿದೆ ಇನ್ನೂ ವಾಗ್ದಾನವಾಗಿರುವ ಹಣದ ಪೈಕಿ ಬಂಗಾಳಾದಲ್ಲಿ 73,000 ರೂಪಾಯಿ, ರಾಜಪುಟಾನಾದಲ್ಲಿ 57,000 ರೂಪಾಯಿ, ಮಧ್ಯಹಿಂದುಸ್ಥಾನದಲ್ಲಿ 50,000 ರೂಪಾಯಿ ವಸೂಲಾಗಿಲ್ಲ ಈಗ ಬಂಗಾಳಾ ಬ್ಯಾಂಕಿನಲ್ಲಿ ಈ ಫಂಡಿನ ಬಾಬತು 52,50,000 ರೂಪಾಯಿ ಡಿಪಾಜಟ್ಟು ಇರುವುದು ಆ ಮೆಮೋರಿಯಲ್ ಕಟ್ಟಡವನ್ನೆಲ್ಲಾ ಬಿಳಿಯ ಕಲ್ಲಿನಿಂದಲೇ ಶಾಶ್ವತವಾಗಿರುವಂತೆ ಕಟ್ಟಿಸಬೇಕೆಂದು ನಿಷ್ಕರ್ಷೆಯಾಗಿರುತ್ತದೆ

* * *

ಬೊಂಬಾಯಿ ಆಧಿಪತ್ಯದ ಹೈಕೋರ್ಟಿನಲ್ಲಿ ಜಡ್ಜರಾಗಿದ್ದು ದೇಶವತ್ಸಲರೆಂಬ ಕೀರ್ತಿಪಡೆದು ಕಾಲವಾದ ಮಿ॥ ರಾನಡೆಯವರ ಹೆಸರನ್ನು ಶಾಶ್ವತಪಡಿಸಬೇಕೆಂದು ಕೆಲವು ಮಹನೀಯರು ಸೇರಿ ಒಂದು ಫಂಡನ್ನು ಪ್ರಾರಂಭಿಸಿ ಚಂದಾ ಕೂಡಿಸಿದರು ಅದಕ್ಕೆ 27,000 ರೂಪಾಯಿ ವಸೂಲಾಯಿತು ಅದರಲ್ಲಿ 17,000 ರೂಪಾಯಿ ಖರ್ಚುಮಾಡಿ ಮಿ॥ ರಾನಡೆಯವರ ಭಾವಪ್ರತಿಮೆಯನ್ನು ಮಿ॥ ಜಿ ಕೆ ಮಹಾತ್ರೆ ಎಂಬ ಮಹಾರಾಷ್ಟ್ರ ಶಿಲ್ಪಿಗಾರನಿಂದ ತಯಾರುಮಾಡಿಸಿದರು ಈ ಪ್ರತಿಮೆಯನ್ನು ಮಿ। ಹಿಲ್ ಎಂಬ ಸರದಾರರಿಂದ ಕಳೆದ ಬುಧವಾರ ಸಾಯಂಕಾಲ ಪ್ರತಿಷ್ಠೆಮಾಡಿಸಿದರು ಉಳಿದಿರುವ ಹಣದಲ್ಲಿ ಅವರ ಚರಿತ್ರೆಯನ್ನು ಬರಸಿ ಛಾಪುಮಾಡಿಸಿ ಪ್ರಸಿದ್ಧ ಸ್ಥಳದಲ್ಲಿ ಇಡಬೇಕೆಂದು ಗೊತ್ತುಮಾಡಿರುತ್ತಾರೆ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲ ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆ.

ಅಯ್ಯಾ,

ಈ ಸಾರಿ ಲೋವರ್ ಸೆಕೆಂಡರಿ ಪರೀಕ್ಷೆಗೆ ಕೊಟ್ಟಿದ್ದ ಪ್ರಶ್ನೆಗಳು ಬಹಳ ಸಮರ್ಪಕವಾಗಿದ್ದವು. ಆದರೆ ಕೆಲವು ಸಬ್ಜೆಕ್ಟುಗಳ ಮೇಲೆ ಕೇಳಿದ್ದ ಪ್ರಶ್ನೆಗಳಲ್ಲಿ ಕೆಲವು ಮಾತ್ರ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯನ್ನುಂಟುಮಾಡಿರುತ್ತವೆ. ಇವರಲ್ಲಿ ಲೆಕ್ಕವು ಮೊದಲನೆಯದು. ಇದರಲ್ಲಿ ಕೊಟ್ಟಿರುವ ಮೂರನೆಯ ಲೆಕ್ಕವು ವಿದ್ಯಾರ್ಥಿಗಳ ಯೋಗ್ಯತೆಗೆ ಮೀರಿದ್ದಾಗಿರುವಂತೆ ತೋರುತ್ತದೆ. ನಾಲ್ಕನೇ ಲೆಕ್ಕವಂತೂ ಅವರ ಯೋಗ್ಯತೆಗೆ ಮಿತಿಮೀರಿದ್ದೆಂದು ಹೇಳಲು ಸಂದೇಹವಿಲ್ಲ. ಈ ಲೆಕ್ಕವನ್ನು ಎಷ್ಟು ಜನ ವಿದ್ಯಾರ್ಥಿಗಳು ಮಾಡಿರುವರೆಂದು ಪರೀಕ್ಷಿಸಿದರೆ ಇದು ವ್ಯಕ್ತವಾಗುವುದು. ಈ ಲೆಕ್ಕಗಳನ್ನು ಬಿಟ್ಟು ಬೇರೆ ಲೆಕ್ಕಗಳನ್ನು ಮಾಡಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದಕ್ಕೆ ಯಾವ ಅಭ್ಯಂತರವೂ ಇಲ್ಲದಿದ್ದಾಗ್ಯೂ, ಪ್ರಾರಂಭದಲ್ಲಿ ಈ ಲೆಕ್ಕಗಳನ್ನು ಮಾಡಲು ಪ್ರಯತ್ನಿಸಿದ ಅನೇಕ ವಿದ್ಯಾರ್ಥಿಗಳು ಉತ್ತರಗಳನ್ನು ಮಾಡಲಾರದೆ ಭಗ್ನಮನೋರಥರಾಗಿ ಇತರ ಲೆಕ್ಕಗಳನ್ನು ಮಾಡಲು ಸಾಕಾದಷ್ಟು ಕಾಲ ದೊರೆಯದೆ ಹೋದದ್ದರಲ್ಲಿ ಯಾವ ಸಂಶಯವೂ ಇಲ್ಲ. ಆದಕಾರಣ ಇವೆರಡು ಲೆಕ್ಕಗಳಿಗಿಟ್ಟಿರುವ ನಂಬರುಗಳನ್ನು ಮ್ಯಾಗ್ಜಿಮಮ್‌ನಲ್ಲಿ ಕಡಿಮೆಮಾಡಿಯಾಗಲಿ, ಅಥವಾ ಶೇಕಡ 25 ರಂತೆ ನಂಬರನ್ನು ಪಡೆದವರನ್ನೆಲ್ಲಾ ಪ್ಯಾಸ್ ಮಾಡಿಸುವಂತಾಗಲಿ ಮಾಡಿ ಅನಾಥರಾದ ಬಾಲಕರನ್ನು ಪ್ರೋತ್ಸಾಹಿಸುವುದು ಅವಶ್ಯಕವಾಗಿರುತ್ತದೆ ಮತ್ತು ಕ್ಷೇತ್ರಗಣಿತದ ಪ್ರಶ್ನಪತ್ರಿಕೆಯಲ್ಲಿದ್ದ ಕೋಣ, ಅಡಿ, ಅಂಗುಲಗಳನ್ನು ಸೂಚಿಸುವ ಚಿಹ್ನೆಗಳನ್ನು ತಿಳಿಯಲಾರದೆ ಅನೇಕ ವಿದ್ಯಾರ್ಥಿಗಳು ಅಂಥಾ ಲೆಕ್ಕಗಳನ್ನು ಮಾಡಲಾರದೆ ಹೋಗಿರುತ್ತಾರೆ. ಇದೂ ಅಲ್ಲದೆ ಈ ಪ್ರಶ್ನಪತ್ರಿಕೆಯಲ್ಲಿ ಕೊಟ್ಟಿರುವ ಕೊನೇ ಲೆಕ್ಕವು ವಿದ್ಯಾರ್ಥಿಗಳ ಯೋಗ್ಯತೆಗೆ ಮೀರಿದ್ದಾಗಿರುತ್ತದೆ. ಆದ್ದರಿಂದ ಈ ವಿಷಯಗಳನ್ನು ಪರೀಕ್ಷಕರೂ ಪರೀಕ್ಷೆಯ ಬೋರ್ಡಿನವರೂ ವಿವೇಚನೆಗೆ ತಂದುಕೊಂಡು ವಿದ್ಯಾರ್ಥಿಗಳನ್ನು ಕನಿಕರವಿಟ್ಟು ಪ್ರೋತ್ಸಾಹಿಸಬೇಕಾಗಿ ಕೇಳುತ್ತೇನೆ

ಒಬ್ಬ ಹೆಡ್ ಮಾಸ್ಟರ್, ಮೈಸೂರು

ಭತ್ತದ ಪೈರನ್ನು ಸುಲಭವಾಗಿ ಬೆಳೆಯುವ ಕ್ರಮ

ಭತ್ತದ ಒಂದೊಂದೇ ನೇಜಿಯ ಗಿಡವನ್ನು ನಡುವ ಕ್ರಮವನ್ನು ಕುರಿತು ರೈತರ ಅಭಿಪ್ರಾಯಗಳು

[1911 ನೇ ಇಸವಿ ಮಾರ್ಚಿ ತಿಂಗಳಲ್ಲಿ ದಕ್ಷಿಣ ಭಾಗದ ವ್ಯಾವಸಾಯಿಕ ಖಾತೆಯ ಡೆಪ್ಯುಟೀ ಡೈರೆಕ್ಟರು ವ್ಯಾವಸಾಯಿಕ ಖಾತೆಯವರಿಂದ ಶಿಫಾರಸು ಮಾಡಿದ ಸುಧಾರಣೆಗಳನ್ನು ಅನುಸರಿಸುತ್ತಿರುವ ಕೆಲವು ಜನ ರೈತರಿಗೆ, ಇನ್ನೂ ಆ ಇಲಾಖೆಯವರಿಂದ ಸೂಚಿಸಲ್ಪಟ್ಟ ಸುಧಾರಣೆಗಳ ಪ್ರಯೋಜನದ ವಿಷಯದಲ್ಲಿ ಸಂದೇಹವುಳ್ಳ ಇತರ ರೈತರ ಪ್ರಯೋಜನಕ್ಕಾಗಿ ಪ್ರಕಟಿಸುವ ಬಗ್ಗೆ, ಅವರಿಗೆ ಲಾಭಕರವಾದ ಅನುಭವಗಳನ್ನು ತಿಳಿಸಬೇಕಾಗಿ ಒಂದು ಪತ್ರದ ಮೂಲಕ ಕೇಳಿಕೊಂಡಿದ್ದರು. ಭತ್ತದ ಒಂದೊಂದೇ ನೇಜಿಯ ಗಿಡವನ್ನು ನಡುವ ಕ್ರಮದ ವಿಷಯದಲ್ಲಿ ಇದೇ ಅವರ ಅನುಭವವಾಗಿರುತ್ತದೆ. ಅವರು ತಮ್ಮ ಹೆಸರುಗಳನ್ನೂ ಪತ್ರಗಳನ್ನೂ ಪ್ರಕಟಿಸಲಿಕ್ಕೆ ಅನುಮತಿ ಕೊಟ್ಟಿದ್ದಾರೆ]

(1) ಕಡಲೂರು ಸರ್ಕಲ್ ಪೇಟೆಯ ಮ ಬಂಗಾರುರೆಡ್ಡಿಯವರು ಬರೆಯುವದು—1909 ನೇ ಇಸವಿಯಲ್ಲಿ ಪಾಲೂರು ಕೃಷಿ ಕ್ಷೇತ್ರದ ಮಾಲಿಕರು ನನಗೆ ಒಂದು ಎಕ್ರೆ ಸ್ಥಳಕ್ಕೆ ಬೇಕಾದ ಎಂದರೆ 7 ಮದ್ರಾಸು ಪಡಿ ಭತ್ತದ ಬೀಜವನ್ನು ಕೊಟ್ಟರು. ಇದರಿಂದ ಹುಟ್ಟಿಸಿದ ನೇಜಿಯನ್ನು ಒಂದೊಂದೇ ಗಿಡವಾಗಿ ಒಂಭತ್ತೊಂಬತ್ತು ಅಂಗುಲ ದೂರಕ್ಕೆ ಒಂದು ಗಿಡದಂತೆ 1-13 ಎಕ್ರೆ ಸ್ಥಳದಲ್ಲಿ ನೆಡಿಸಿದೆನು. ಒಂದೊಂದು ಗಿಡವೂ 20 ರಿಂದ 35 ರ ವರೆಗೆ ಅಡ್ಡ ಚಿಗುರುಗಳನ್ನು ಬಿಟ್ಟಿತು. ಪೈರು ಪುಷ್ಟಿಯಾಗಿ ನೋಟಕ್ಕೂ ಅಂದವಾಗಿತ್ತು. ಮುಂಚಿನ ವರುಷಗಳಲ್ಲಿ 910 ಪಡಿ ಭತ್ತ ಉತ್ಪತ್ತಿಯಾಗುತ್ತಿದ್ದಲ್ಲಿ ಈ ವರುಷ 1,080 ಪಡಿ ಭತ್ತ ಹುಟ್ಟುವಳಿಯಾಯಿತು. ಮುಂಚಿನ ವರುಷಗಳಲ್ಲಿ ಹಾಕಿದ ಗೊಬ್ಬರವೇ ಈ ವರುಷವೂ ಹಾಕಲ್ಪಟ್ಟಿತ್ತು. ಈ ವರುಷ ಈ ಗ್ರಾಮದಲ್ಲಿ ಪ್ರಾಯಶಃ ಎಲ್ಲಾ ರೈತರೂ ಈ ವಿಧವನ್ನೇ ಪ್ರಯೋಗಿಸುವರು.

(2) ಕಳ್ಳಕುರ್ಚಿ ತಾಲ್ಲೂಕು ವಡಕ್ಕೂರಸಲೂರಿನ ಮ|| ರಂಗಸ್ವಾಮಿನಾಯುಡುಗಾರು ಬರೆಯುವದು—ನಾನು ನನ್ನ ಟೈಲು ಗದ್ದೆಗಳಲ್ಲಿ ಹಸಿ ಸೊಪ್ಪು ಗೊಬ್ಬರಕ್ಕಾಗಿ ಸಣಬು ಗಿಡವನ್ನು ಬೆಳಸಿದೆನು. ತಹಸೀಲುದಾರರೂ, ಕೃಷಿಕ್ಷೇತ್ರದ ಮಾಲಿಕರೂ ಎರಡು ಮೂರಾವರ್ತಿ ಇದನ್ನು ನೋಡಿ ಬೆಳೆಯ ವೃದ್ಧಿಯನ್ನು ಕಂಡು ಬಹಳ ಸಂತೋಷಪಟ್ಟರು. ನೇಜಿಗಿಡವನ್ನು ಒಂದೊಂದೇ ಆಗಿ ನೆಟ್ಟಾಗ ಜನರು ನನ್ನನ್ನು ಹಾಸ್ಯ ಮಾಡುತ್ತಿದ್ದರು, ಮತ್ತು ಬಳ್ಳಿಗಳಂತೆ ಭತ್ತವು ಹುಟ್ಟುತ್ತದೆಂದು ತಿಳಿದಿರುವೆಯಾ ಎಂದು ಕೇಳಿದರು. ಆದರೆ ನಾನು ತಿರುಕೋಯಿಲೂರಿಗೆ ಹೋಗಿದ್ದ ವ್ಯಾವಸಾಯಿಕ ಸಂಘಾಂಗವನ್ನು ಕಂಡು ಕೊಂಡಿದ್ದೆನು, ಮತ್ತು ಭತ್ತದ ನೇಜಿಗಿಡವನ್ನು ಒಂದೊಂದಾಗಿಯೇ ನೆಡುವ ಕ್ರಮವನ್ನೂ ಸಹಾ ನೋಡಿದ್ದೆನು. ಈ ಕ್ರಮದಿಂದ ನನಗೆ ಮುಂಚಿನ ವರುಷಗಳಿಗಿಂತ ಮೂರರಲ್ಲಿ ಒಂದು ಪಾಲು ಉತ್ಪತ್ತಿ ಹೆಚ್ಚು ಸಿಕ್ಕಿತು. ಈ ವರುಷವೂ ನಾನು ಈ ಕ್ರಮವನ್ನೇ ಪರೀಕ್ಷಿಸಿ ನೋಡಿದೆನು. ಇದರಿಂದ ಎಕ್ರೆಗೆ ಸುಮಾರು 1,500 ಪಡಿ (ಅಂದರೆ 2,250 ಊರಿನ ಸೇರು) ಭತ್ತ ಉತ್ಪತ್ತಿಯಾಯಿತು. “ಸೂಪ್ಪಿ” ಎಂಬ ಒಂದು ತರದ ರೋಗದಿಂದ ಬೆಳೆಗೆ ಹಾನಿಯಾಗದಿದ್ದರೆ 2,000 ಪಡಿ ಭತ್ತ ಹುಟ್ಟುತ್ತಿತ್ತು. ನನ್ನ ಬೆಳೆಯ ಅಭಿವೃದ್ಧಿಯು ಎಷ್ಟು ಪ್ರತ್ಯಕ್ಷವಾಗಿತ್ತೆಂದರೆ ನಾನು ನೆಡುವಾಗ ಹಾಸ್ಯ ಮಾಡಿದ ರೈತರೇ ನವಂಬರ್ ತಿಂಗಳಲ್ಲಿ ಇನ್ನೂ 40 ಎಕ್ರೆ ಗದ್ದೆಗಳನ್ನು ಒಂದೊಂದೇ ನೇಜಿಗಿಡವನ್ನು ನೆಡುವ ಕ್ರಮದಿಂದ ನೆಟ್ಟರು. ಎಲ್ಲಾ ಪೈರುಗಳೂ ನಿಸ್ಸಂದೇಹವಾಗಿ ಚೆನ್ನಾಗಿದ್ದವು; ಮತ್ತು ಯಾವೂ ನಷ್ಟಪಡಲಿಲ್ಲ. ನನ್ನ ಮಾತು ನೀವು ನಂಬಲಾರಿರಾದರೆ ನೀವೇ ಬಂದು ಪೈರನ್ನು ಪರೀಕ್ಷಿಸಿ ನೋಡಬಹುದು. ಈ ಕ್ರಮದಿಂದ ಹೆಚ್ಚಿನ ಉತ್ಪತ್ತಿಯಾಗುತ್ತದೆಂದು ಮಾತ್ರ ನಿಮಗೆ ತಿಳಿಸಿದರೆ ಸಾಲದು. ಇದಕ್ಕೆ ಕಷ್ಟವೂ, ಖರ್ಚೂ ಕಡಮೆಯಾಗಿದೆ. ಕಾಳೂ ದಪ್ಪನಾಗಿದೆ ಮತ್ತು ಈ ಅಕ್ಕಿಯಿಂದ ಮಾಡಿದ ಅನ್ನವು ಮೃದುವಾಗಿಯೂ, ಚೆನ್ನಾಗಿಯೂ, ಸವಿಯಾಗಿಯೂ ಇರುವುದರಿಂದ ಜನರು ಇತರ ಜಾತಿ ಅಕ್ಕಿಗಿಂತಲೂ ಇದನ್ನು ಹೆಚ್ಚಾಗಿ ಆದರಿಸುತ್ತಾರೆ. ನಿಮ್ಮ ಇಲಾಖೆಯು ಜನರ ಪ್ರಯೋಜನಕ್ಕಾಗಿಯೇ ಸ್ಥಾಪಿಸಲ್ಪಟ್ಟಿದ್ದೆಂದು ನನಗೆ ಖಚಿತವಾದುದರಿಂದಲೇ ನಾನು ಅದರ ಪ್ರಯೋಜನದ ಜ್ಞಾನವನ್ನು ಪ್ರಚುರಗೊಳಿಸುತ್ತೇನೆ.

(3) ಕಳ್ಳಕುರ್ಚಿ ತಾಲ್ಲೂಕು ಮುಡಿಯನೂರಿನ ಮ ಕೊಳಂದವೇಲು ವೃಡೆಯರವರು ಬರೆಯುವದು—ಎರಡನೇ ವರುಷ (ಅಂದರೆ 1910 ನೇ ಇಸವಿಯಲ್ಲಿ) 10 ಸೆಂಟು ವಿಸ್ತೀರ್ಣದ ಒಂದು ಭತ್ತದ ಮಡಿಯಲ್ಲಿ ಪೆರುಮ್ (ದೊಡ್ಡ) ಸಂಬಾ ಎಂಬ ಜಾತಿಯ 10 ಪಡಿ ಯಾನೆ 15 ಸೇರು ಬೀಜವನ್ನು ಜೂಲೈ ತಿಂಗಳಲ್ಲಿ ಬಿತ್ತಿದೆನು. ನೇಜಿಯು ಇಪ್ಪತ್ತೆರಡು ದಿವಸಗಳಲ್ಲಿ ಕಿತ್ತು ನಡಲಿಕ್ಕೆ ಯೋಗ್ಯವಾದವು. ಈ ಗಿಡಗಳು ತಗ್ಗಾದ ಉಪ್ಪು ಒಗರುಳ್ಳ 1 ಕಾಣಿ (1.32 ಎಕ್ರೆ) ಬೌಳು ನೆಲದಲ್ಲಿಯೂ ಮತ್ತು 1 ಎಕ್ರೆ ವಿಸ್ತೀರ್ಣದ ಇನ್ನೊಂದು ಗದ್ದೆಯಲ್ಲೂ ನಡಲಾಯಿತು. ನನ್ನ ಗ್ರಾಮದ ರೈತರು ಒಂದೊಂದೇ ನೇಜಿಗಿಡವನ್ನು ನಡುವ ಕ್ರಮದಿಂದ ಉಂಟಾಗುವ ಫಲದ ವಿಷಯದಲ್ಲಿ ಸಂಶಯಭರಿತರಾಗಿದ್ದ ಕಾರಣ ಬೆಳೆಯನ್ನು ಲಕ್ಷ್ಯಕೊಟ್ಟು ಕಾದಿದ್ದರು. ಕಿತ್ತು ನಟ್ಟ ಮೂರುನಾಲ್ಕು ದಿವಸಗಳ ನಂತರ ಬಲವಾದ ಮಳೆ ಸುರಿಯಿತು. ಆದರೆ ಬೇಗನೆ ನೀರು ಇಳಿದು ಹೋಯಿತು. ಈ ಅವಸ್ಥೆಯಲ್ಲಿ ವಾಡಿಕೆಯಾಗಿ ಗೊಂಚಲಾಗಿ ನಟ್ಟ ನೇಜಿಯಾದರೆ ಅಡ್ಡಬಿದ್ದು ಹಾಳಾಗುತ್ತಿತ್ತು. ಆದರೆ ಈ ಗಿಡಗಳ ದಂಟುಗಳು ದಪ್ಪನಾದುದರಿಂದ ನೆಟ್ಟಗಾಗಿ ನಿಂತುವಲ್ಲದೆ, ಇನ್ನೂ ಚೆನ್ನಾಗಿ ಬೇರು ಬಿಟ್ಟುವು. ಇವುಗಳು ಮಳೆಯಿಂದ ಪ್ರಯೋಜನಹೊಂದಿ ಅಡ್ಡ ಚಿಗುರುಗಳನ್ನು ಬಿಟ್ಟು, ಬೆಳೆದು ಹಸಿ ಹಸಿರಾಗಿ ಬಂದವು. ಭಾದ್ರಪದ ಮಾಸದಿಂದ ಕಾರ್ತೀಕ ಮಾಸದವರೆಗೆ ಈ ಪೈರು ಹುಲುಸಾಗಿ ಬೆಳೆದುದರಿಂದ ತೆನೆ ಬಿಡುವುದಕ್ಕಿಂತ ಮೊದಲೇ ಅಡ್ಡ ಬಿದ್ದೀತೆಂದು ಹೆದರಿ ಎರಡಾವರ್ತಿ ಒಂದುವರೆ ಅಡಿ ಕತ್ತರಿಸಿ, ದನಗಳಿಗೆ ಹಾಕಿದೆನು. ಈ ಕಾಣಿಯ ಸ್ಥಳದಲ್ಲಿ (1.33 ಎಕ್ರೆ) 30 ಪಡಿ ಅಳತೆಯ 61 ಕಲಮ್ ಭತ್ತ ಹುಟ್ಟುವಳಿಯಾಯಿತು. ಮುಂಚಿನ ವರುಷಗಳಲ್ಲಿ ಎಂದೂ ಈ ಗದ್ದೆಯಲ್ಲಿ 40 ಕಲಮ್ ಭತ್ತಕ್ಕಿಂತ ಹೆಚ್ಚು ಉತ್ಪತ್ತಿಯಾಗಲಿಲ್ಲ. ನನ್ನ ಎಲ್ಲಾ ಟೈಲುಗದ್ದೆಗಳೂ ಈ ವಿಧದಲ್ಲಿ ನಡಲ್ಪಟ್ಟದ್ದುವು. ಇದರಿಂದ ಮುಂಚಿನ ವರುಷಗಳಿಂದ ಸರಾಸರಿ ಶೇಕಡಾ 25 ರ ಪ್ರಕಾರ ಹೆಚ್ಚು ಉತ್ಪತ್ತಿ ಸಿಕ್ಕಿತು. ಬೀಜದ ಕ್ರಯದಲ್ಲೂ ಕೂಲಿ ಖರ್ಚಿನಲ್ಲಿಯೂ ಎಕ್ರೆಗೆ ಸುಮಾರು 7 ರೂಪಾಯಿ ಪ್ರಕಾರ ಉಳಿಯಿತು. ಈ ಪ್ರಕಾರವಾಗಿ ರೈತರ ಸಂದೇಹನಿವಾರಣೆಯಾಗಿ ಅವರು ಸುಮಾರು 300 ಎಕ್ರೆ ಸ್ಥಳವನ್ನು ಈ ವಿಧದಲ್ಲಿ ನಟ್ಟಿದ್ದಾರೆ, ಮತ್ತು ಉಳಿದ ಬೀಜವನ್ನು ನೆರೆಹೊರೆಯಲ್ಲಿರುವ ಸಂಬಂಧಿಕರಿಗೂ ಸ್ನೇಹಿತರಿಗೂ ಕೊಟ್ಟಿದ್ದಾರೆ. ಕೆಲವರಿಗೆ ಮಾರಿಯೂ ಇದ್ದಾರೆ. ಈ ಪ್ರಕಾರವಾಗಿ ಈ ಅಭ್ಯಾಸವು ಇಲ್ಲಿನ ನೆರೆಹೊರೆಯಲ್ಲಿ ಹಬ್ಬುತ್ತಿದೆ.

(4) ತಂಜಾವೂರು ಜಿಲ್ಲೆ ಶಿಯ್ಯಾಳಿ ತಾಲ್ಲೂಕು ಚಿತಂಬರನಾಥಪುರದ ಗ್ರಾಮವಾಸಿಯಾದ ಮ ನಟರಾಜ ಅಯ್ಯರವರು ಹೀಗೆ ಬರೆದಿರುತ್ತಾರೆ—ಒಂದೊಂದೇ ನೇಜಿಗಿಡವನ್ನು ನೆಡುವ ಕ್ರಮವನ್ನು ಪರೀಕ್ಷಿಸುವಾಗ ನಾನು ಎರಡು ವಿಧಗಳನ್ನು ಪ್ರಯೋಗಿಸಿದೆನು. ಒಂದನೇ ವಿಧ—17 ಸೆಂಟು ಸ್ಥಳದಲ್ಲಿ ಒಂದೊಂದೇ ನೇಜಿಗಿಡವನ್ನು ಮೂರು ಮೂರು ಅಡಿ ದೂರ ನೆಟ್ಟೆನು. ಪೈರಿಗೆ ತೆನೆ ಬರುವಾಗ ಬಲವಾದ ಗಾಳಿ ಇದ್ದ ಕಾರಣ ಬೊಟ್ಟು ಹೆಚ್ಚಾಯಿತು. ಇದನ್ನು ಅಳೆದಾಗ 80 ಪಡಿಯಾಗಿತ್ತು. ಎರಡನೇ ವಿಧ—ಒಂದೊಂದೇ ಗಿಡವು 1-4 ಅಡಿ ದೂರವಾಗಿ ನೆಡಲಾಯಿತು. ಇದರಿಂದ 404 ಪಡಿ ಭತ್ತ ಉತ್ಪತ್ತಿಯಾಯಿತು. ವಾಡಿಕೆಯಲ್ಲಿರುವ ಕ್ರಮಕ್ಕಿಂತ ಒಂದೊಂದೇ ನೇಜಿಗಿಡವನ್ನು ನೆಡುವ ಕ್ರಮವು ಲಾಭಕರವೆಂದು ನನ್ನ ಅಭಿಪ್ರಾಯವು. ವಾಡಿಕೆಯಾಗಿ ಎಕ್ರೆಗೆ 36 ಪಡಿ ಬೀಜ ಬೇಕಾಗುವಲ್ಲಿ ಈ ವಿಧಕ್ಕೆ ಎಕ್ರೆಗೆ 6 ಪಡಿ ಬೀಜವು ಮಾತ್ರ ಸಾಕಾಗುವುದು. ಬೀಜದಲ್ಲಿ ಮಾತ್ರ 30 ಪಡಿ ಆದಾಯವುಂಟು. ರೂಢಿಯಲ್ಲಿರುವ ಕ್ರಮದಿಂದ ನೆಟ್ಟ ಬೆಳೆಗಿಂತ ಒಂದೊಂದೇ ನೇಜಿಗಿಡವನ್ನು ನಡುವ ಕ್ರಮದಲ್ಲಿ ನಟ್ಟ ಬೆಳೆಯು ಚೆನ್ನಾಗಿ ಬೆಳೆಯುವುದೆಂದು ನನ್ನ ಅಭಿಪ್ರಾಯವು. ನನ್ನ ಟೈಲು ಗದ್ದೆಗಳ ಪೈರನ್ನು ನೋಡಿದ ಮಿರಾಸುದಾರರು ಒಂದೊಂದೇ ನೇಜಿಗಿಡವನ್ನು ನಡುವ ಕ್ರಮವೇ ವಾಡಿಕೆಯಲ್ಲಿರುವ ಕ್ರಮಕ್ಕಿಂತ ಚೆನ್ನಾಗಿರಬೇಕೆಂದು ಖಚಿತಗೊಂಡು ಮೊದಲು ಪರೀಕ್ಷಿಸಿ ನೋಡಲಿಕ್ಕೆ ನಿರಾಕರಿಸಿದರೂ ಈಗ ಈ ವಿಧವನ್ನೇ ಪ್ರಯೋಗಿಸಬೇಕೆಂದು ಅಭಿಪ್ರಾಯಪಡುತ್ತಾರೆ. ಆದುದರಿಂದ ಈ ವರುಷದಲ್ಲಿ ಇನ್ನೂ ಅನೇಕ ಮಿರಾಸುದಾರರು ಈ ವಿಧವನ್ನು ಅವಲಂಬಿಸುವರೆಂದು ನೆನಸುತ್ತೇನೆ. ಒಂದೊಂದೇ ನೇಜಿಗಿಡವನ್ನು ನಡುವ ಕ್ರಮದಿಂದ ಹುಟ್ಟಿದ ಭತ್ತದ ಕಾಳು ಸಾಧಾರಣ ಕಾಳಿಗಿಂತ ದಪ್ಪವಾಗಿದೆ. ಆದರೆ ಎರಡಕ್ಕೂ ಒಂದೇ ಕ್ರಯ ಬರುತ್ತದೆ. ಒಂದೊಂದೇ ನೇಜಿಯ ಗಿಡವನ್ನು ನಡುವ ಕ್ರಮವು ಲಾಭಕರವೆಂಬುದಕ್ಕೆ ಏನೂ ಸಂದೇಹವಿಲ್ಲ

(5) ಶಿಯಾಳಿ ತಾಲ್ಲೂಕು ವಳ್ಳಿಯೂರಲೂರಿನ ಮ|| ಸಾಮಿನಾಥ ಅಯ್ಯರವರು ಹೀಗೆ ಬರೆಯುತ್ತಾರೆ.—ಒಂದೊಂದೇ ನೇಜಿಗಿಡವನ್ನು ನಡುವ ಕ್ರಮವು ಲಾಭವುಳ್ಳದ್ದು. ಮುಂಚೆ 6 ವೇಲಿ ಗದ್ದೆಗಳಿಗೆ 60 ಕಲಮ್ ಬೀಜ ಬೇಕಾಗುತ್ತಿತ್ತು (1 ಕಲಂಗೆ 24 ಪಡಿ, 1 ವೇಲಿಗೆ 6⅔ ಎಕ್ರೆ) ಎಂದರೆ ಎಕ್ರೆ ಒಂದಕ್ಕೆ 36 ಪಡಿ ಬೀಜ ಬೇಕಾಗುತ್ತಿತ್ತು. ಆದರೆ ಈ ವರುಷ ನಾನು 15 ಕಲಂ ಬೀಜವನ್ನು ಮಾತ್ರ ಉಪಯೋಗಿಸಿದೆನು (ಎಕ್ರೆಗೆ 9 ಪಡಿ). ಈ ರೀತಿಯಲ್ಲಿ ಬೀಜದಲ್ಲಿ ಮಾತ್ರವೇ 45 ಪಡಿ ಆದಾಯವುಂಟು. ಉತ್ಪತ್ತಿ ಮೇರೆಗೆ ನನ್ನ ನೆರೆಯ ರೈತರಿಗಿಂತ 120 ಕಲಂ ಭತ್ತ ಹೆಚ್ಚು ಸಿಕ್ಕಿತು. ಹೀಗೆ ನನಗೆ 165 ಕಲಂ ಎಂದರೆ ಬೀಜದಲ್ಲಿ 45 ಕಲಂ ಮತ್ತು ಮಿಗಿಲಾದ ಉತ್ಪತ್ತಿಯಿಂದ 120 ಕಲಂ ಭತ್ತ ಆದಾಯವಾಗಿದೆ (ಎಂದರೆ, ಎಕ್ರೆಗೆ ಸುಮಾರು 99 ಪಡಿ ಮೇರೆಗೆ). ಈ ವರುಷ ನವಂಬರ್ 1 ನೇ ತಾರೀಖಿನಿಂದ ಮಳೆ ಬಿದ್ದಿರಲಿಲ್ಲ, ನದಿಯಲ್ಲಿ ಹೊಸ ನೀರೂ ಬರಲಿಲ್ಲ, ಅಲ್ಲವಿದ್ದರೆ ನನಗೆ ಇನ್ನೂ ಹೆಚ್ಚು ಆದಾಯ ಸಿಕ್ಕುತ್ತಿತ್ತು

(6) ತಂಜಾವೂರು ಜಿಲ್ಲೆ ಮನ್ನಾರಗುಡಿ ಡಾಕ್ಟರ್ ಟಿ. ಎಲ್ ದೇವಸಿಂಗರವರು ಬರೆಯುವದೇನಂದರೆ.—ಜಿಲ್ಲೆ ಭೂಮಿಗಳಲ್ಲಾಗಲಿ, ಟೈಲುಗದ್ದೆಗಳಲ್ಲಾಗಲಿ, ಉಸುಬುಮಣ್ಣಿನಲ್ಲಾಗಲಿ, ಎರೆಮಣ್ಣಿನಲ್ಲಾಗಲಿ, ಗೊಬ್ಬರಹಾಕಿದ ಗದ್ದೆಗಳಲ್ಲಾಗಲಿ, ಗೊಬ್ಬರಹಾಕದಿದ್ದ ಗದ್ದೆಗಳಲ್ಲಾಗಲಿ—ಎಲ್ಲಾ ತರದ ಮಣ್ಣಿನಲ್ಲಿಯೂ ಒಂದೊಂದೇ ನೇಜಿಗಿಡವನ್ನು ನಡುವ ಕ್ರಮದಿಂದ ನಟ್ಟ ಪೈರು ಚೆನ್ನಾಗಿ ಫಲಿಸುತ್ತದೆ. ಪ್ರತಿ ಒಂದು ಗಿಡವೂ 100 ರಿಂದ 150 ರ ವರೆಗೆ ಅಡ್ಡ ಚಿಗುರುಗಳನ್ನು ಬಿಟ್ಟಿರುವವು. ಉತ್ಪತ್ತಿಯು ಮಟ್ಟಿಗೆ ಮೊದಲನೇ ವರುಷಕ್ಕಿಂತ ಎರಡನೇ ವರುಷವೂ, ಎರಡನೇ ವರುಷಕ್ಕಿಂತ ಮೂರನೇ ವರುಷವೂ ಕ್ರಮವಾಗಿ ಹೆಚ್ಚುತ್ತಾ ಬಂದಿದೆ.

ಶ್ರೀ ವಾಣೀವಿಲಾಸ ಅರಸೂ ಬಾಲಿಕಾ ಪಾಠಶಾಲೆ.

ಶ್ರೀಮನ್ಮಹಾರಾಜರವರು ಪ್ರಾರಂಭಮಾಡಿದ್ದು

ಕಳೆದ ಶುಕ್ರವಾರ ಮಧ್ಯಾಹ್ನ ಇಲವಾಲದ ರಸ್ತೆಯಲ್ಲಿರುವ ಮೋಮಹಾರಾಜ ಕುಮಾರಿಯವರ ಬಂಗಲೆಯಲ್ಲಿ ಶ್ರೀ ವಾಣೀವಿಲಾಸ ಅರಸೂ ಬಾಲಿಕೆಯರ ಪಾಠಶಾಲೆಯ ಪ್ರಾರಂಭೋತ್ಸವವು ಜರುಗಿಸಲ್ಪಟ್ಟಿತು. ನಮ್ಮ ಮಹಾತ್ಮಶ್ರೀಯವರೂ ಶ್ರೀಮನ್ಮಹಾರಾಜರವರೂ ದಯಮಾಡಿಸಿದ್ದರು. ಸರದಾರ್ ಲಕ್ಷ್ಮೀಕಾಂತರಾಜೇ ಅರಸಿನವರೂ, ಸರದಾರ್ ಗೋಪಾಲರಾಜೇ ಅರಸಿನವರೂ, ಮ|| ನಂಜುಂಡರಾಜೇ ಅರಸಿನವರೂ, ಮ|| ಚಿಕ್ಕಲಿಂಗರಾಜೇ ಅರಸಿನವರೂ, ಮ|| ಬಿ ರಾಮಕೃಷ್ಣರಾಯರೂ ಇನ್ನೂ ಅನೇಕ ಜನ ದೊಡ್ಡಮನುಷ್ಯರುಗಳೂ ಆ ಕಾಲದಲ್ಲಿ ಹಾಜರಿದ್ದು ಶ್ರೀಮನ್ಮಹಾರಾಜರವರ ಸವಾರಿ ದಯಮಾಡಿಸಿದ ಕೂಡಲೆ ಸ್ವಾಗತವನ್ನು ಬಯಸಿದರು. ಶ್ರೀಮನ್ಮಹಾರಾಜರವರು ಅಗ್ರಾಸನವನ್ನು ವಹಿಸಿದ ಕೂಡಲೆ ಮ|| ನಂಜುಂಡರಾಜೇ ಅರಸಿನವರು ಈ ಕೆಳಗೆ ಹೇಳುವಂತೆ ವಿಜ್ಞಾಪನ ಪತ್ರಿಕೆಯನ್ನು ಒಪ್ಪಿಸಿದರು

ಶ್ರೀಮನ್ ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನ, ಸಿ. ಐ., ಯವರ ಸ್ವಾಮಿಯವರ ಘನವಾದ ಮಹಾಸಾನ್ನಿಧ್ಯದಲ್ಲಿ ವಂಶಪಾರಂಪರ್ಯದಿಂದಲೂ ಪಾದಪದ್ಮಚ್ಛಾಯಾಶ್ರಿತರಾಗಿ ಬಂದ, ಅರಸುಗಳ ಮಂಡಲಿಗೆ ಸೇರಿದ ನಾವುಗಳು ಕೆಲವು ವಿಷಯಗಳನ್ನು ವಿಜ್ಞಾಪಿಸಿಕೊಳ್ಳುವುದಕ್ಕೆ ಅವಕಾಶವನ್ನು ಅಪ್ಪಣೆ ಕೊಡಿಸಿದ್ದಕ್ಕಾಗಿ, ಮಹಾಸ್ವಾಮಿಯವರಿಗೆ ಅತ್ಯಂತ ಕೃತಜ್ಞರಾಗಿರುತ್ತೇವೆ ಮಹಾಸ್ವಾಮಿ.

ಘನವನ್ನು ಹೊಂದಿದ ನಮ್ಮ ಮಹಾಸ್ವಾಮಿಯವರಾದ, ಲೇಟ್ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ ಸಿ ಎಸ್. ಐ ರವರು ಪ್ರಜೆಗಳಿಗೆ ಸಂತೋಷ ಉಂಟಾಗುವಂತೆ ಬಹು ನಾಗರೀಕತೆಯಿಂದ, ರಾಜ್ಯಾಭಿವೃದ್ಧಿ ಸಾಧಕವಾದ ಅನೇಕ ಏರ್ಪಾಡುಗಳನ್ನು ಮಾಡಿ, ಅದರ ಜತೆಯಲ್ಲೇ, ತಮ್ಮ ಬಂಧುವರ್ಗಕ್ಕೆ ಸೇರಿದ ನಮ್ಮಗಳ ವಿದ್ಯಾಲೋಪವನ್ನು ಪರ್ಯಾಲೋಚಿಸಿ ಇತರರಂತೆ ನಮ್ಮಗಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಕುತೂಹಲದಿಂದ, ನಮ್ಮ ಬಾಲಕರ ವಿದ್ಯಾಭ್ಯಾಸಕ್ಕಾಗಿ, “ಶ್ರೀ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಸ್ಕೂಲ್” ಎಂಬ ನಾಮವನ್ನಿಟ್ಟು, ಒಂದು ವಿದ್ಯಾನಿಲಯವನ್ನೇರ್ಪಡಿಸಿ ಗ್ರಾಮಾಂತರಗಳಲ್ಲಿರುವ ಅರಸುಗಳ ಬಾಲಕರನ್ನು ಕರೆತರಿಸಿ, ಅವರಿಗೆ ಅನ್ನವಸ್ತ್ರಾದಿ ಸೌಕರ್ಯಗಳನ್ನೆಲ್ಲಾ ಕಲ್ಪಿಸಿ, ವಿದ್ಯಾಭ್ಯಾಸವನ್ನು ಮಾಡಿ, ಪ್ರೋತ್ಸಾಹಪಡಿಸುತ್ತಿದ್ದ ಸಂಗತಿಯು ಮಹಾ ಸನ್ನಿಧಾನಕ್ಕೆ ವೇದ್ಯವೇ ಆಗಿರುವುದು ಮಹಾಸ್ವಾಮಿ

ಅವರ ಪಟ್ಟಮಹಿಷಿಯರಾದ ತಾವು ಅದೇ ವಾತ್ಸಲ್ಯವನ್ನಿಟ್ಟು, ಆ ಮಹಾಸ್ವಾಮಿಯವರ ಧರ್ಮವನ್ನು ಸಫಲಗೊಳಿಸಬೇಕೆಂಬ ಅಭಿಪ್ರಾಯದಿಂದ ಆ ಸ್ಕೂಲಿನ ಅಭಿವೃದ್ಧಿಗೆ ಬೇಕಾದ ಅನೇಕ ಉಪಕರಣಗಳನ್ನು ಹೆಚ್ಚಿಸಿ ಅದನ್ನು ಉದ್ಧಾರಮಾಡಿದ ವಿಷಯವನ್ನು ನಾವುಗಳು ಎಷ್ಟು ಸ್ತೋತ್ರಮಾಡಿದರೂ ಸಾಲದಾಗಿರುತ್ತೆ ಮಹಾಸ್ವಾಮಿ

ಈಚೆಗೆ ಈ ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ ಯವರು ರಾಜ್ಯಭಾರವನ್ನು ವಹಿಸಿದ ಮೇಲೆ ತಮ್ಮಗಳ ಧರ್ಮವನ್ನೇ ಅನುಸರಿಸಿ ಪೂರ್ಣ ವಾತ್ಸಲ್ಯದಿಂದ ಈ ಸ್ಕೂಲನ್ನು ಬಹು ಶೀಘ್ರದಲ್ಲೇ ಪ್ರಬಲವಾದ ಅಭಿವೃದ್ಧಿಗೆ ಬರುವಂತೆ ಮಾಡಬೇಕೆಂದು ಬೇಕಾದ ಸಹಾಯ ಸಂಪತ್ತಿಯನ್ನು ಒದಗಿಸಿಕೊಟ್ಟು, ಕಾಪಾಡಿಕೊಂಡು ಬರುತ್ತಿರುವವರ ಜತೆಯಲ್ಲಿ ನಮ್ಮ ಶ್ರೀಮದ್ ಯುವರಾಜ ಕಂಠೀರವ ನರಸರಾಜ ಒಡೆಯರ್ ಬಹದ್ದೂರ್, ಕೆ ಸಿ ಐ ಇ ಯವರು ಸಹ ತಾವು ಮನಸ್ಸಿಟ್ಟು, ಈ ಬೋರ್ಡಿಂಗ್ ಸ್ಕೂಲ್ ಕಾರ್ಯನಿರ್ವಾಹಕ ಸಂಘಕ್ಕೆ ತಾವೇ ಪ್ರೆಸಿಡೆಂಟರಾಗಿ, ಇದರ ಉತ್ತರೋತ್ತರಾಭಿವೃದ್ಧಿಗೆ ಕೊರತೆಯುಂಟಾಗದಂತೆ ಮಾಡಬೇಕಾದ ಕಾರ್ಯಗಳನ್ನು ನಡಿಸುವುದರಲ್ಲಿ ಬದ್ಧಕಂಕಣರಾಗಿರುವುದು ನಮ್ಮ ಪೂರ್ವ ಜನ್ಮದ ಪುಣ್ಯೋದಯವೆಂದು ಭಾವಿಸುತ್ತೇವೆ ಮಹಾಸ್ವಾಮಿ. ಈ ಸಹಾಯ ಸಂಪತ್ತುಗಳಿಂದ ನಮ್ಮ ಬಾಲಕರೆಲ್ಲರೂ ವಿದ್ಯಾಭ್ಯಾಸಂಗದಲ್ಲಿ ನಿರತರಾಗಿ ಅವರಲ್ಲಿ ಕೆಲವರು ಬಿ. ಎ, ಬಿ ಎಲ್ ಪರೀಕ್ಷೆಯಲ್ಲೂ ಸಹ ತೇರ್ಗಡೆಯಾಗಿ, ಮಹಾಪದಗಳಿಗೆ ಯಶಸ್ಸನ್ನು ಪಡೆದಿರುತ್ತಾರೆ ಮಹಾಸ್ವಾಮಿ

ಪ್ರಕೃತದಲ್ಲಿ ಅರಸುಗಳ ಬಾಲಕರು ಮಾತ್ರ ವಿದ್ಯಾವಂತರಾಗಿ, ಬಾಲಿಕೆಯರು ಮಾತ್ರ ಅವಿದ್ಯಾವತಿಯರಾಗಿದ್ದರೆ ಮುಂದೆ ಪ್ರತಿಕೂಲ ಒದಗುವುದೆಂಬ ಭಾಗವನ್ನು ನಮ್ಮ ಶ್ರೀಮದ್ ಮಹಾಸ್ವಾಮಿಗಳವರು ತಮ್ಮ ಉದಾರ ಚಿತ್ತದಲ್ಲಿ ತಂದು, ಬಾಲಿಕೆಯರಿಗೂ ಒಂದು ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ನಿರ್ಣಯಿಸಿ, ಈ ದಿವಸ ಇದರ ಸ್ಥಾಪನ ಮಹೋತ್ಸವವನ್ನು ನಡಿಸಬೇಕೆಂದು ಅಪ್ಪಣೆಕೊಡಿಸಿ ಇಲ್ಲಿಗೆ ತಮ್ಮ ಸವಾರಿಯನ್ನು ಸಹ ಬೆಳೆಯಿಸಿಕೊಂಡು ಚಿತ್ತೈಸಿರುವ ಸಂಗತಿಯು ಪಾದಸೇವಕರಾದ ನಮ್ಮೆಲ್ಲರಿಗೂ ಪರಮಾನಂದ ಪ್ರದಾಯಕವಾಗಿರುವುದು, ಮಹಾಸ್ವಾಮಿ

ಈ ಪಾಠಶಾಲೆಗೆ ತಮ್ಮ ನಾಮಧೇಯವನ್ನಿಟ್ಟು “ವಾಣೀವಿಲಾಸ ಅರಸ್ ಗರ್ಲ್ಸ್ ಸ್ಕೂಲ್” ಎಂದು ಕರೆಯುವುದಕ್ಕೆ ಅಪ್ಪಣೆಯನ್ನು ದಯಪಾಲಿಸಿ, ಆ ಪಾಠಶಾಲೆಯ ಪ್ರಾರಂಭಮಹೋತ್ಸವವನ್ನು ತಮ್ಮ ಸನ್ನಿಧಾನದಿಂದಲೇ ನೆರವೇರಿಸಬೇಕೆಂತಲೂ, ನಮ್ಮ ಬಾಲಕರ ಸ್ಕೂಲನ್ನು ವೃದ್ಧಿಗೊಳಿಸಿದಂತೆ ಈ ಸ್ಕೂಲನ್ನೂ ಸಹ ಶೀಘ್ರದಲ್ಲೇ ಅಭಿವೃದ್ಧಿಗೆ ತಂದು, ನಮ್ಮಗಳನ್ನು ಉದ್ಧಾರಮಾಡಬೇಕೆಂತಲೂ ಭಯಭರಿತ ಭಕ್ತಿಯಿಂದ ಅಂಜಲಿಬದ್ಧರಾಗಿ ಬೇಡಿಕೊಳ್ಳುತ್ತೇವೆ ಮಹಾಸ್ವಾಮಿ. ಈ ವರಿಗೂ ನಮ್ಮ ವಿಜ್ಞಾಪನೆಗೆ ಅವಕಾಶಕೊಟ್ಟು ಲಾಲಿಸಿದ್ದಕ್ಕಾಗಿ ಪಾದಸೇವಕರು ಬಹು ಕೃತಜ್ಞರಾಗಿದ್ದೇವೆ ಮಹಾಸ್ವಾಮಿ

ಮಹಾಮಾತೃಶ್ರೀಯವರಾದ ತಮಗೂ, ನಮ್ಮನ್ನಾಳುವ ಮಹಾಸ್ವಾಮಿಯವರಿಗೂ, ಶ್ರೀಮದ್ಯುವರಾಜ ಕಂಠೀರವರಿಗೂ ಮತ್ತು ಸಕಲ ರಾಜಕುಟುಂಬಕ್ಕೂ ನಿರಂತರ ಕ್ಷೇಮಾರೋಗ್ಯ ಚಿರಾಯುಗಳನ್ನು ತಮ್ಮ ಕುಲದೇವತೆಯಾದ ಶ್ರೀ ಚಾಮುಂಡಾಂಬಿಕೆಯು ಕೃಪೆಯಿಂದನುಗ್ರಹಿಸಬೇಕೆಂದು ತ್ರಿಸಂಧ್ಯಾ ಕಾಲದಲ್ಲಿ ಹಾರೈಸುವ ಮಹಾ ಪಾದಸೇವಕರ ಅನಂತಾನಂತ ಭಿನ್ನಹಗಳು ಮಹಾಸ್ವಾಮಿ.

ಇದು ಪೂರೈಸಿದ ಬಳಿಕ ಶ್ರೀಮದ್ ಮಹಾರಾಜರವರು ಅಪ್ಪಣೆ ಕೊಡಿಸಿದ್ದೇನಂದರೆ:—

ಅರಸು ಮಂಡಲದ ಮಹಾಜನರೇ, ನಮ್ಮ ಮಹಾಮಾತೃಶ್ರೀಯವರು ನಾವೂ ಸಹ ಈ ದಿವಸ ನಡೆಯುವ ಅರಸುಗಳ ಬಾಲಿಕಾ ಪಾಠಶಾಲೆಯ ಆರಂಭ

...ಶ್ವವನ್ನು ಭಾಗಿಗಳಾಗಿರುವದಕ್ಕಾಗಿ ತುಂಬಾ ಸಂತೋಷಿಸುತ್ತೇವೆ ...ವರ್ಧನವು ಅರಸುಗಳ ಚರಿತ್ರೆಯಲ್ಲಿ ಶಾಶ್ವತವಾಗಿ ನಿಲ್ಲುವಂತಹ ಒಂದು ...ಯವಾದ ಅಂಶವಾಗಿದೆ ನಮ್ಮ ಬಾಲಕಿಯರು ಈ ದಿನ ಮೊದಲುಗೊಂಡು ...ವ್ಯಾಸಂಗದಲ್ಲಿ ನಿರತರಾಗಿ ಮುಂದೆ ಶ್ರೇಯೋಭಿವೃದ್ಧಿಯನ್ನು ಹೊಂದಲೆಂ... ನಮ್ಮ ಮತ್ತು ಮಹಾಮಾತೃಶ್ರೀಯವರ ನಿರಂತರನಾದ ಕೋರಿಕೆ ...ಶ್ರೀ ಚಾಮುಂಡೇಶ್ವರಿಯು ಕರುಣಿಸಲೆಂದು ಪ್ರಾರ್ಥಿಸುತ್ತೇವೆ ಲೋಕ ...ರುವ ಜನರ ಸಮುದಾಯವೇ ಆಗಲಿ ಪೂರ್ತಿಯಾಗಿ ಅರ್ಧಪಾಲು ...ರು ವಿದ್ಯಾವಿಹೀನರಾಗಿ ಜ್ಞಾನಶೂನ್ಯರಾಗಿದ್ದರೆ ಆ ಸಮುದಾಯವು ...ದು ಏಳಿಗೆಯಾಗಲಾರದೆಂಬುವದು ವಾಡಿಕೆಯ ನುಡಿಯಾಗಿಯೇ ಇದೆ ...ಗದಲ್ಲಿ ನಮ್ಮ ಜನದ ಸ್ಥಿತಿಯನ್ನು ನೋಡಿದರೆ ಸರ್ವಸಾಧಾರಣವಾಗಿಯೂ ...ಷ್ಟದವಾಗಿರುತ್ತೆ ಮುಂದೆ ನಮ್ಮ ಮಕ್ಕಳುಗಳಿಗೆ ತಾಯಿಯರಾಗಿ ...ರುವ ಬಾಲಕಿಯರ ವಿಷಯದಲ್ಲಿ ವಿದ್ಯಾಭ್ಯಾಸವನ್ನು ನಿರಾಕರಿಸಿದರೆ ...ಅಪಾಯವು ಸಂಭವಿಸುವುದೆಂಬ ಭೀತಿಯು ಈಗಲಾದರೂ ನಮಗೆ ತೋರಿ... ಈ ಪಾಠಶಾಲೆಯನ್ನು ಸ್ಥಾಪಿಸಿದ್ದಕ್ಕೆ ನಾವು ತುಂಬಾ ಸಂತೋಷಿಸುವು... ನಮ್ಮಲ್ಲಿರತಕ್ಕ ಪ್ರತಿಯೊಬ್ಬರೂ ಇದನ್ನು ನಡಸುವದಲ್ಲಿ ಆಸಕ್ತಿಯು... ...ಗಿ ಇದರಿಂದಾಗಬಹುದಾದ ಸಕಲ ಪ್ರಯೋಜನವನ್ನೂ ಹೊಂದುವವರಾಗ... ಯಾಕೆಂದರೆ ಈ ಪಾಠಶಾಲೆಯ ಅಭಿವೃದ್ಧಿಯು ಹ್ಯಾಗೆ ಪರಿಣಮಿಸು... ಅದನಂತರವೇ ಮುಂದಿನ ನಮ್ಮ ಏಳಿಗೆಯೂ ಸಹ ಅದನ್ನೇ ಅನುಸರಿಸು... ಈ ಪಾಠಶಾಲೆಗೆ ನಮ್ಮ ಮಹಾಮಾತೃಶ್ರೀಯವರ ಅಭಿಧಾನವನ್ನಿಡಬೇ... ನಮ್ಮ ಪ್ರಾರ್ಥನೆಯು ಅವರಿಗೆ ಸಮರ್ಪಕವಾಗಿ ಅದನ್ನು ಸಂತೋಷ... ...ಗೀಕರಿಸಿದಾರೆ ಈ ಸಮಯದಲ್ಲಿ ಮ|| ನಂಜುಂಡರಾಜೆ ಅರಸಿನವರು ...ಪಕಾರವು ಸ್ಥಾಪನೆಗಾಗಿ ವಿಸಳವಾಗಿ ಕಷ್ಟಪಟ್ಟಿರುತ್ತಾರೆಂಬ ಸಂಗತಿ ... ನಿಮಗೆ ನಾವು ತಿಳಿಸಲು ತುಂಬಾ ಸಂತೋಷಪಡುತ್ತೇವೆ ನೀವುಗಳೆ... ...ಶಕ್ಕಾಗಿ ಇವರಿಗೆ ಕೃತಜ್ಞರಾಗಿರುವಿರೆಂದು ನಂಬುತ್ತೇವೆ ಈ ದಿವಸ ...ರು ಬಹಳ ವಿಶ್ವಾಸದಿಂದ ಒಪ್ಪಿಸಿದ ವಿಜ್ಞಾಪನಾಪತ್ರಿಕೆಯನ್ನು ನಮ್ಮ ಮನ... ...ರ್ವಕವಾಗಿ ಅಂಗೀಕರಿಸಿ ನಾವೂ ಮತ್ತು ನಮ್ಮ ಮಹಾಮಾತೃಶ್ರೀಯ... ...ರ ಈ ವಾಣೀವಿಲಾಸ ಅರಸು ಗರ್ಲ್ಸ್ ಸ್ಕೂಲಿನ ಅಭ್ಯುದಯದಲ್ಲಿ ...ಕರಾಗಿರುತ್ತೇವೆಂಬ ಅಂಶವನ್ನು ನಿಮಗೆ ತಿಳಿಸಲು ಸಂತೋಷಿಸುತ್ತೇವೆ ...ಳಿಕ ನಾನಾ ತುರಾಯಿಗಳು ಅರ್ಪಿಸಲ್ಪಟ್ಟು ಜಯಘೋಷದಿಂದ ...ಬ ಮುಕ್ತಾಯವಾಯಿತು ಮಹಾ ಮಾತೃಶ್ರೀಯವರು ಸ್ಕೂಲನ್ನೆಲ್ಲಾ ...ವಾಗಿ ಪರಾಂಬರಿಸಿ ಬಹಳ ಸಂತೋಷಪಟ್ಟರು ಈ ಸ್ಕೂಲಿನಲ್ಲಿ ...[illegible] ಜನ ಬಾಲೆಯರು ವಿದ್ಯಾಭ್ಯಾಸಮಾಡುತ್ತಿರುವರು ಮಿಸ್ ಆಲ್ಬರಸ್ ...ಬು ಇದರ ಸೂಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುವರು ಇವರು ...ದೇಶದ ಟೋರಾಂಟೋ ವಿಶ್ವವಿದ್ಯಾಲಯದಲ್ಲಿ ಬಿ ಎ ಪರೀಕ್ಷೆಯನ್ನು ...ದವರು ಈ ಸ್ಕೂಲನ್ನು ಉಪಕ್ರಮಿಸುವುದರಲ್ಲಿ ಮ|| ಎಚ್ ನಂಜುಂಡ ...ಸುನವರು ವಿಶೇಷ ಶ್ರಮವನ್ನು ವಹಿಸಿದ್ದಕ್ಕಾಗಿ ಅರಸು ಮಹಾಜನಗಳೆ ... ಬಹಳ ಕೃತಜ್ಞರಾಗಿರಬೇಕು ಈ ಸ್ಕೂಲನ್ನು ಸ್ಥಾಪಿಸುವುದರಲ್ಲಿ ... ಮಹಾರಾಜರವರು ಮಾಡಿದ ಉದಾರವಾದ ಸಹಾಯಕ್ಕಾಗಿ ನಾವು ...ಸಂತೋಷಪಡುತ್ತೇವೆ ಅರಸು ಮಹಾಜನಗಳು ಈ ಸ್ಕೂಲಿನಿಂದಾಗಬಹು... ...ಪೂರ್ಣ ಪ್ರಯೋಜನವನ್ನು ಪಡೆಯುವರೆಂದು ಕೋರುತ್ತೇವೆ

ಎಸ್

ವಿದೇಶ ವೃತ್ತಾಂತಗಳು

...ಚೈನಾ ಗವರ್ನ್‌ಮೆಂಟಿಗೆ ರಾಜ್ಯಭಾರ ಕಾರ್ಯಗಳನ್ನು ನಡಿಸುವುದ... ...ಷ್ಯಾ ಸರ್ಕಾರದವರು ಸಾಲಕೊಡುವುದಾಗಿ ಒಪ್ಪಿಕೊಂಡಿದ್ದ ಮೊಬಲಗಿ... ...30 ಲಕ್ಷ ರೂಪಾಯನ್ನು ಪಾವತಿಮಾಡಿದರು ಇಂಗ್ಲಿಷ ಗವರ್ನ್... ...ವರು ಒಪ್ಪಿಕೊಂಡಿದ್ದ ಮೊಬಲಗಿನಲ್ಲಿ 30 ಲಕ್ಷ ರೂಪಾಯನ್ನು ಪರ್ಷ... ...ರಿಗೆ ಈ ವಾರ ಸಾಲ ಕೊಡುವುದರಲ್ಲಿದಾರೆ

* * *

...ಗ್ಲಾಡಿನಲ್ಲಿ ಹೆಂಗಸರಿಗೆ ಓಟ್ ಮಾಡುವ ಅಧಿಕಾರವನ್ನು ಕೊಡಬೇ... ...ಹೋರಾಡುವುದಕ್ಕಾಗಿ ಸ್ತ್ರೀಯರ ಸಂಘಗಳು ಏರ್ಪಾಡಾಗಿರುತ್ತವೆ ...ಒಂದು ಸಂಘದಲ್ಲಿ [illegible],7[illegible] ಪೌಂಡು ಕಳೆದ ವರುಷ ಸಿಚ್ಚಾಗಿದೆ ...ಅವರ ಉದ್ದೇಶವು ಸಾರ್ಥಕಪಡುವತನಕ ಅವರು ತಮ್ಮ ಹೋರಾಟ ...ಡುವುದಿಲ್ಲವೆಂದೂ ಸ್ತ್ರೀಯರು ಪ್ರಕಟಿಸಿರುವ ರಿಪೋರ್ಟಿನಿಂದ ಗೊತ್ತಾ...

* * *

...ಟಲಿ ರಾಜ್ಯದವರು ಟ್ರಿಪೊಲಿಯಲ್ಲಿ ಟರ್ಕಿಯವರ ಮೇಲೆ ಯುದ್ಧ ಮಾ... ಇಟಲಿಯ ಪ್ರಜೆಗಳು ಸೈನಿಕರಿಗೋಸ್ಕರ ಕೆಲವು ವಿಮಾನ ಯಂತ್ರಗ... ...ಮೂರ್ನಾಡಿಸಿ ಒಪ್ಪಿಸುವುದಾಗಿ ಗೊತ್ತುಮಾಡಿಕೊಂಡು 10 ಲಕ್ಷ ದ್ರ... ...ಚಂದಾ ಮೂಲಕ ಕೂಡಿಸಿದರು ಈ ಹಣದಿಂದ ಈಗ 30 ವಿಮಾನ ...ಗಳನ್ನು ಮಾಡಿಸುತ್ತಿದಾರೆಂದೂ, ಈ ಪೈಕಿ ಏಳು ವಿಮಾನಗಳು ಸಿದ್ಧವಾ... ...ವೆಂದೂ ತಿಳಿದು ಬರುತ್ತದೆ

* * *

...ಮೇರಿಕದ ರಾಜಧಾನಿಯಾದ ನ್ಯೂಯಾರ್ಕ್ ಪಟ್ಟಣದಲ್ಲಿ ಆಮದು ...ಹಳ ವಿಶೇಷವಾಗಿ ಹೆಚ್ಚುತ್ತಾ ಬಂದು ಈಗಿನ ರಸ್ತೆಗಳೂ ವಾಹನ ...ಗೆ ಸಾಲದೆ ಹೋಗಿರೋಣದರಿಂದ ಮ್ಯುನಿಸಿಪಾಲಿಟಿಯವರು ನಾನಾ ...ರಂಗ ಮಾರ್ಗಗಳನ್ನು ಕಲ್ಪಿಸಿ ಅವುಗಳಲ್ಲಿ ರೈಲ್ ಗಾಡಿಗಳನ್ನು ಓಡಿ... ...ಮೂ, ಭೂಮಿ ಮಾರ್ಗಗಳಲ್ಲಿ ತಳಿಯ ಮೇಲ್ಗಡೆ ಅಂತರಿಕ್ಷದಲ್ಲಿ ...ಡಿಗಳ ಸಂಚಾರಕ್ಕೆ ಅನುಕೂಲಮಾಡಿಕೊಡಬೇಕೆಂದೂ ತೀರ್ಮಾನ... ...ಈ ಕಾಮಗಾರಿಗಳಿಗೆ [illegible] ಕೋಟಿ [illegible]0 ಲಕ್ಷ ರೂಪಾಯಿ ಖರ್ಚುಮಾಡು... ...ವಾರೆ

* * *

...ಮನಿ ರಾಜ್ಯದ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ವೈದ್ಯ... ...ಶಾಸ್ತ್ರ ಶೋಧಕನು ಅನೇಕ ಪರೀಕ್ಷೆಗಳನ್ನು ಮಾಡಿ ನೋಡಿದ್ದರಲ್ಲಿ ...ಪ್ಪನ್ನು ಉಪಯೋಗಿಸತಕ್ಕವರಿಗೆ ವಾಂತಿಭೇದಿ ಉಪದ್ರ ತಗಲುವುದಿ... ...ಗೊತ್ತಾಗಿದೆ ಎಂದು ತಿಳಿಸುತ್ತಾನೆ ಆ ರೋಗದ ಕ್ರಿಮಿಗಳು ಹೊಗೆ... ...ದರಲ್ಲಿ ಸ್ವಲ್ಪ ಹೊತ್ತಿನೊಳಗಾಗಿ ಸತ್ತುಹೋಗುವವಂತೆ ಹಾಂಬರ್ಗ... ...ಚುಟ್ಟಾಗಳು ತಯಾರಾಗುವ ಕಾರ್ಖಾನೆಯೊಳಗೆ ಯಾವನೊಬ್ಬ ಕೆಲಸಗಾರನಿಗೂ ಆ ರೋಗ ತಗಲಲಿಲ್ಲವೆಂದು ಆತನು ದೃಷ್ಟಾಂತವಾಗಿ ಹೇಳುತ್ತಾನೆ ಇದನ್ನು ನಂಬುವುದು ಅಸಾಧ್ಯ

* * *

ಮಿ|| ಜಾರ್ಜ್ ಸಾಲೊಮನ್ ಎಂಬೊಬ್ಬ ಇಂಗ್ಲಿಷ್ ಶಾಸ್ತ್ರ ಶೋಧಕನು ಮುತ್ತುಗಳನ್ನು ಶಾಸ್ತ್ರವತ್ತಾಗಿ ತಯಾರ್ಮಾಡುವ ವಿದ್ಯೆಯನ್ನು ಕಲಿತು ಇರುತ್ತಾನೆ ಈತನು ಮಗುರ್ವಿ ದ್ವೀಪಸಮುದಾಯಗಳಲ್ಲಿ ಎರಡು ವರುಷಕಾಲ ಇದ್ದು ಮುತ್ತುಗಳನ್ನ ಬೆಳೆಯುತ್ತಿದ್ದು ಈಗ ಸಿಲೋನ್ ದ್ವೀಪಕ್ಕೆ ಬಂದಿರುವನು ಈತನಿಂದ ಬೆಳೆಮಾಡಲ್ಪಟ್ಟ ಮುತ್ತುಗಳನ್ನು ಪ್ಯಾರಿಸ್ ಪಟ್ಟಣಕ್ಕೆ ಕಳುಹಿಸಿದರು ಸ್ವಭಾವಸಿದ್ಧವಾಗಿ ಆಗುವ ಮುತ್ತುಗಳಿಗಿಂತ ಈತನ ಮುತ್ತುಗಳು ವಿಶೇಷ ಹೊಳಪುಳ್ಳವೆದು ಹೆಚ್ಚು ಬೆಲೆಗೆ ಬಿಕರಿ ಆದವೆಂದೂ, ಇವನ್ನೇ ಈಗ ಜನರು ಹೆಚ್ಚಾಗಿ ಅಪೇಕ್ಷಿಸುತ್ತಿದಾರೆಂದೂ ಹೇಳಿದಾನೆ

* * *

ಅಮೇರಿಕಕ್ಕೆ ಸೇರಿದ ಕ್ಯಾಲಿಫೋರ್ನಿಯಾ ಸಂಸ್ಥಾನದ ಸರ್ಕಾರದವರು ಪರದೇಶೀಯರ್ಯಾರೂ ಅಲ್ಲಿ ಭೂಸ್ಥಿತಿಯನ್ನು ಪಡೆಯಕೂಡದೆಂದು ಒಂದು ಕಾನೂನನ್ನು ಮಾಡುವವರಾಗಿದಾರೆ ಜಪಾನ್ ಗವರ್ನ್‌ಮೆಂಟನವರು ಅಲ್ಲಿಗೆ ಹೋಗತಕ್ಕ ತಮ್ಮ ಪ್ರಜೆಗಳ ಅಭಿವೃದ್ಧಿಗೆ ಈ ಕಾನೂನು ಅಡ್ಡಿಯಾಗುವುದೆಂದೂ, ಅಂಥಾ ನಿರ್ಬಂಧವನ್ನು ಕಲ್ಪಿಸದಂತೆ ನೋಡಿಕೊಳ್ಳಬೇಕೆಂದೂ ಆ ಸಂಸ್ಥಾನದವರಿಗೆ ತಿಳಿಸಿದರೂ, ಸಂಯುಕ್ತ ಸಂಸ್ಥಾನಗಳ ಪ್ರೆಸಿಡೆಂಟರವರು ಈ ಕಾನೂನು ಸ್ಥಳೀಯ ಗವರ್ನ್‌ಮೆಂಟನವರಿಗೆ ಸಂಬಂಧಪಡುವುದಾದ್ದರಿಂದ ಆ ವಿಷಯದಲ್ಲಿ ತಾವು ಪ್ರವರ್ತಿಸುವುದಿಲ್ಲವೆಂದು ಜಪಾನ್ ನವರಿಗೆ ಜವಾಬುಕೊಟ್ಟರು

* * *

ಅಮೇರಿಕದ ಮುಖ್ಯ ನಗರವಾದ ನ್ಯೂಯಾರ್ಕ್ ಪಟ್ಟಣದಲ್ಲಿ ಲಡ್ಲೋ ಸ್ಟ್ರೀಟ್ ಜೈಲ್ ಎಂಬ ಒಂದು ಸಮೀಪವಾದ ಬಂದೀಖಾನೆಯುಂಟು ವಿವಾಹ ಸಂಬಂಧವನ್ನು ತ್ಯಜಿಸಿದ ಮೇಲೆ ಗಂಡನು ಹೆಂಡತಿಗೆ ಜೀವನಾಂಶಕೊಡಬೇಕೆಂದು ತೀರ್ಮಾನವಾಗುವ ಮೊಕದ್ದಮೆಗಳಲ್ಲಿ ಅಂಥಾ ಜೀವನಾಂಶವನ್ನು ಪಾವತಿಮಾಡದೆ ತಪ್ಪುವವರನ್ನು ಈ ಬಂದೀಖಾನೆಗೆ ಕಳುಹಿಸುತ್ತಾರೆ ಈ ಜೈಲಿನಲ್ಲಿ ಬಂದೀವಾನರಿಗಿರುವಷ್ಟು ಸೌಕರ್ಯಗಳು ಪ್ರಪಂಚದ ಇನ್ನಾವ ಬಂದೀಖಾನೆಯಲ್ಲೂ ದೊರೆಯುವುದಿಲ್ಲ ಉತ್ತಮೋತ್ತಮವಾದ ಹೋಟೇಲುಗಳಲ್ಲಿ ಆಗಂತುಕರಿಗೆ ಸತ್ಕಾರೋಪಚಾರಗಳು ನಡೆಯುವುದಕ್ಕಿಂತಲೂ ವಿಶೇಷವಾಗಿ ಈ ಜೈಲಿನ ಬಂದೀವಾನರಿಗೆ ನಡೆಯುತ್ತವೆ

* * *

ರಾಬರ್ಟ್ ವೀನರ್ ಎಂಬ 18 ವಯಸ್ಸಿನ ಹುಡುಗನು ಪ್ರಪಂಚದಲ್ಲೆಲ್ಲಾ ಬಹಳ ಪ್ರಚಂಡನಾದವನೆಂದು ತಿಳಿದು ಬಂದಿದೆ ಇವನು ಅಮೇರಿಕದಲ್ಲಿದಾನೆ ಇವನಿಗೆ 18 ತಿಂಗಳು ತುಂಬುವಷ್ಟರಲ್ಲಿ ವರ್ಣಮಾಲೆಯೆಲ್ಲಾ ತಿಳಿದಿತ್ತು ಮೂರು ವರುಷಕ್ಕೆ ಓದುಬರಹನ್ನು ಕಲಿತನು ಆರು ವರುಷಗಳೊಳಗಾಗಿ ಗಣಿತ, ಬೀಜಗಣಿತ, ರೇಖಾಗಣಿತಗಳಲ್ಲಿ ಗಟ್ಟಿಗನಾದನು ಇನ್ನೆರಡು ವರುಷಗಳಲ್ಲಿ ಅವನು ಲತೀನ್, ಜರ್ಮನ್, ಫ್ರೆಂಚ್, ರಷ್ಯನ್ ಭಾಷೆಗಳನ್ನು ಓದುವುದಕ್ಕೆ ಕಲಿತುಕೊಂಡನು ಹನ್ನೆರಡು ವರುಷಗಳಾಗುವಾಗ್ಗೆ ರಸಾಯನ ಶಾಸ್ತ್ರದಲ್ಲಿ ಪಂಡಿತನಾದನು ಈಗ 18 ನೇ ವಯಸ್ಸಿನಲ್ಲಿ ಈ ಹುಡುಗನು ತತ್ವಶಾಸ್ತ್ರ ಪಂಡಿತನೆಂಬ ಅತಿ ತೀಯವಾದ ಪ್ರಾಪಸ್ಸ್ವವನ್ನು ಸಂಪಾದಿಸಿಕೊಂಡಿರುತ್ತಾನೆ

* * *

ಚೀನಾ ಚಕ್ರಾಧಿಪತ್ಯವು ಈಗ ಪ್ರಜಾ ಪ್ರಭುತ್ವವಾಗಿರುವುದು ಯುವಾನ್ ಷಿಕಾಯಿ ಎಂಬ ಮಹನೀಯನು ಈ ಪ್ರಭುತ್ವದ ಪ್ರೆಸಿಡೆಂಟಾಗಿರುತ್ತಾನೆ ಕಳೆದ ವಾರ ಎಲ್ಲಾ ಆದಿಪತ್ಯಗಳಿಂದಲೂ ಪ್ರಜಾ ಪ್ರತಿನಿಧಿಗಳು ರಾಜಧಾನಿಯಾದ ಪೀಕಿಂಗ್ ನಗರಕ್ಕೆ ಹೋಗಿ ಪ್ರಭುತ್ವದ ಮಹಾ ಸಭೆಯನ್ನು ಪ್ರಾರಂಭಮಾಡಿದರು ಯೂರೋಪಿಯನ್ ರಾಜ್ಯಗಳವರು ಈ ಪ್ರಭುತ್ವವು ಇನ್ನೂ ಸರಿಯಾಗಿ ನೆಲೆಗೆ ನಿಂತಿಲ್ಲವೆಂದು ಅಭಿಪ್ರಾಯಪಟ್ಟು, ಅದನ್ನು ಇನ್ನು ಕೆಲವು ಕಾಲ ಕಳೆದ ಬಳಿಕ ಪ್ರಭುತ್ವವೆಂದು ಅಂಗೀಕರಿಸುವವರಾಗಿದಾರೆ ಈಗ ಚೀನಾ ಪ್ರಭುತ್ವದವರು ಪರರಾಷ್ಟ್ರಗಳವರಿಗೆ ಕೊಡಬೇಕಾಗಿರುವ ಸಾಲಗಳ ಪೈಕಿ ಕೆಲವು ಕಿಸ್ತುಗಳು ಇನ್ನೂ ಪಾವತಿ ಆಗದೆ ಬಾಕಿಯಾಗಿದೆ ಬಾಕ್ಸರ್ ದಂಗೆಯ ನಷ್ಟದ್ರವ್ಯಕ್ಕೆ ಸಲ್ಲಬೇಕಾಗಿರುವ ಹಣ 27,[illegible],[illegible]00 ಪೌಂಡು, ಯೂರೋಪ್ಪಿನ ಸಮುದಾಯ ಬ್ಯಾಂಕಿನ ಕಿಸ್ತು [illegible],93 000 ಪೌಂಡು, ಬೆಲ್ಜಿಯಂ ಸಾಲದ ಬಡ್ಡಿ 25,000 ಪೌಂಡು, ಸಮುದಾಯ ಬ್ಯಾಂಕಿನ ಕಿಸ್ತು 1,70,000 ಪೌಂಡು, ಬೆಲ್ಜಿಯಂ ಸಾಲ 10 ಲಕ್ಷ ಪೌಂಡು, ಈ ಹಣವನ್ನೆಲ್ಲಾ ಪ್ರಭುತ್ವದವರು ಕೂಡಲೇ ಅವರವರಿಗೆ ಪಾವತಿ ಮಾಡಬೇಕಾಗಿದೆ

ತಾಲ್ಲೋಕು ವರ್ತಮಾನಗಳು

<u>ನಾಗಮಂಗಲದ ತಾ ಬೆಳ್ಳೂರು</u> — ಈ ಗ್ರಾಮವು ಈ ತಾಲ್ಲೂಕಿನಲ್ಲಿ ದೊಡ್ಡದು ಜನರ ಏಳಿಗೆಗೆ ಸಾಧಕವಾದ ಒಂದು ವಾಚಕಾಲಯವು (ರೀಡಿಂಗ್ ರೂಂ) ಇಲ್ಲದುದರಿಂದ ಉಂಟಾಗಿದ್ದ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ ಮೆಂಬರಾದ ಸಾ|| ಗಂಗಪ್ಪನವರ ಅಧ್ಯಕ್ಷತೆಯಲ್ಲಿ ಪಟೇಲ್ ಕೃಷ್ಣಪ್ಪನವರು, ಕೆ ಬ್ರಹ್ಮಯ್ಯನವರು, ಮಹಮ್ಮದ್ ಇಸೂಫ್ ಸಾಹೇಬರು ಶಾನುಭೋಗ್ ಕೃಷ್ಣಯ್ಯನವರು, ಈ ಮುಂತಾದ ಅನೇಕ ದೊಡ್ಡಮನುಷ್ಯರು ಸೇರಿ ಕಳೆದ ಫೆಬ್ರವರಿಯಿಂದ ನಮ್ಮನ್ನಾಳುವ ಮಹಾ ಪ್ರಭುಗಳ ಅಂಕಿತದ ಮೇಲೆ ಒಂದು ವಾಚಕಾಲಯವನ್ನು ಬಹು ವಿಜೃಂಭಣೆಯಿಂದ ಸ್ಥಾಪಿಸಿದರು ಇದರ ಪ್ರಾರಂಭೋತ್ಸವ ಕಾಲದಲ್ಲಿ ಇಲ್ಲಿನ ಸ್ಕೂಲ್ ಹೆಡ್‌ಮಾಸ್ಟರ್ ಎಸ್ ರಾಮಣ್ಣನವರು ವಾಚಕಾಲಯದಿಂದಾಗತಕ್ಕ ಪ್ರಯೋಜನಗಳನ್ನೂ, ಪೋಸ್ಟ್ ಮಾಸ್ಟರ್ ಶ್ರೀನಿವಾಸಯ್ಯಂಗಾರ್ರು ಘನವನ್ನು ಹೊಂದಿದ ವೈಸ್ರಾಯಿ ಮಹಾ ಪ್ರಭುಗಳು ಆರೋಗ್ಯಭಾಗ್ಯವನ್ನು ಹೊಂದಿ ಕೌನ್ಸಿಲ್ ಮೀಟಿಂಗಿಗೆ ದಯಮಾಡಿಸಿದ ಶುಭವಾರ್ತೆಯನ್ನು ಕುರಿತ ಉಪನ್ಯಾಸಗಳನ್ನು ಮಾಡಿದರು

<u>ದೊಡ್ಡಬಳ್ಳಾಪುರ</u> — ದೊಡ್ಡಬಳ್ಳಾಪುರದ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ ಹೆಡ್ ಮಾಸ್ಟರು, ಇಂಡಸ್ಟ್ರಿಯಲ್ ಸ್ಕೂಲ್ ಸೂಪರಿಂಟೆಂಡೆಂಟರೂ ಆದ ಮಿ|| ಡಿ ಕೊಂಗಾಡಿಯಪ್ಪನವರ ಮತ್ತು ದಿವಾನ್‌ಸಾಹೇಬರವರ ಆಫೀಸಿಗೆ ಸೇರಿದ ಮಿ|| ಡಿ ಸಿ ಸುಬ್ಬರಾಯಪ್ಪ, ಬಿ ಎ , ಬಿ ಎಲ್ ರವರ ತಮ್ಮಂದಿರಾದ ಮಿ|| ಡಿ ಎಲ್ ಪುಟ್ಟಣ್ಣ, ಎ ಎ ಯವರು ಉಷ್ಣಪ್ರದೇಶಗಳಲ್ಲಿ ವಿಶೇಷವಾಗಿ ಪ್ರಾಪ್ತವಾಗುವ ವ್ಯಾಧಿಗಳ ಚಿಕಿತ್ಸೆಗೆ ಸಂಬಂಧಪಟ್ಟ ಡಿ ಟಿ ಎಂ ಎಂಬ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವುದಾಗಿ ಲಿವರ್‌ಪೂಲ್ ಪಟ್ಟಣದಿಂದ 10ನೇ ತಾರೀಖು ಗುರುವಾರದ ದಿವಸ ತಂತಿಯ ಮೂಲಕ ವರ್ತಮಾನವು ಬಂದಿರುತ್ತದೆ ಇವರು ಬೆಂಗಳೂರಿನ ಸಾಹುಕಾರ್ ಡಿ ಆದೆಪ್ಪನವರೇ ಮುಂತಾದ ಕೆಲವು ದೊಡ್ಡಮನುಷ್ಯರ ಸಹಾಯವನ್ನು ಪಡೆದು, ಕಳೆದ ಆಗಸ್ಟ್ ತಿಂಗಳಲ್ಲಿ ವಿಲಾಯತಿಗೆ ಹೊರಟು ಸ್ವಲ್ಪಕಾಲದಲ್ಲಿಯೇ ಎಡಿಂಬರೋ ಪಟ್ಟಣದಲ್ಲಿ ವೈದ್ಯ ಸಂಬಂಧವಾದ ಮೂರು ಪರೀಕ್ಷೆಗಳನ್ನೂ, ಡಬ್ಲಿನ್ ಪಟ್ಟಣದಲ್ಲಿ ಹೆರಿಗೆಗೆ ಸಂಬಂಧಪಟ್ಟ ಮತ್ತೊಂದು ಪರೀಕ್ಷೆಯನ್ನೂ ಕೊಟ್ಟರು ಪ್ರೌಢ ವಿದ್ಯೆಯಲ್ಲಿ ವಿಶೇಷವಾಗಿ ಹಿಂದುಳಿದಿರುವ ದೇವಾಂಗದ ಜನರಲ್ಲಿ ಈ ರೀತಿ ಸಾಹಸಪರರಾಗಿ ವ್ಯಾಸಂಗವನ್ನು ನಡಿಸುವವರು ಅತಿ ವಿರಳವೆಂಬುವುದನ್ನು ತಮ್ಮ ಕೃಪಾಪೂರಿತವಾದ ಪರ್ಯಾಲೋಚನೆಗೆ ತೆಗೆದುಕೊಂಡು ಶ್ರೀಮನ್ಮಹಾರಾಜಾ ಸಾಹೇಬ್ ಬಹಾದೂರವರ ಸರ್ಕಾರದವರು ಇವರ ವ್ಯಾಸಂಗಕ್ಕಾಗಿ 150 ಪೌನುಗಳ ವಿದ್ಯಾರ್ಥಿವೇತನವನ್ನು ಮಂಜೂರ್ ಮಾಡಿರುತ್ತಾರೆ ಇವರು ಕನಿಷ್ಠಪಕ್ಷ ಇನ್ನೂ ಆರು ತಿಂಗಳ ಕಾಲ ವಿಲಾಯತಿಯಲ್ಲಿಯೇ ಇದ್ದು ಜನನಾವಯವಗಳಿಗೆ ಸಂಬಂಧಪಟ್ಟ ವ್ಯಾಧಿಗಳ ಚಿಕಿತ್ಸೆಯಲ್ಲಿ ಪರಿಶ್ರಮವನ್ನು ಹೊಂದಿ ಎಫ್ ಆರ್. ಸಿ ಎಸ್ ಎಂಬ ಘನತರವಾದ ವೈದ್ಯ ಪರೀಕ್ಷೆಯನ್ನು ಮಾಡಿಕೊಂಡು ಈ ದೇಶಕ್ಕೆ ಹಿಂದಿರುವವರಾಗಿರುತ್ತಾರೆ ವಿದ್ಯೆಯಲ್ಲಿ ಹಿಂದುಳಿದಿರುವ ದೇವಾಂಗದ ಜನರಲ್ಲಿ ಇತರರು ಇವರ ಮೇಲುಪಙ್ತಿಯನ್ನನುಸರಿಸಿ ಸಾಹಸಪರರಾಗಿ ಸಾಮಾನ್ಯ ವಿದ್ಯಾಭ್ಯಾಸವನ್ನೂ ಕಸಬ್ದಾರಿ ವಿದ್ಯಾಭ್ಯಾಸವನ್ನೂ ಹೆಚ್ಚು ಹೆಚ್ಚಾಗಿ ಆರ್ಜಿಸುವವರಾಗುತ್ತಾ ಬರಬೇಕೆಂಬುವುದೇ ನಮ್ಮ ಆಶಯವು

<u>ಶಿವಮೊಗ್ಗೆ</u> — ಮೈಸೂರ್ ದೇಶೀಯ ಪರೀಕ್ಷೆಯು ಇದೇ ತಿಂಗಳು 4ನೇ ತಾ ಪ್ರಾರಂಭವಾಯಿತು ಈ ಶಿವಮೊಗ್ಗೆ ಸೆಂಟರಿಗೆ ಅನೇಕ ಸ್ಥಳಗಳಿಂದ ವಿದ್ಯಾರ್ಥಿಗಳು ಪರೀಕ್ಷೆಗೋಸ್ಕರ ಬಂದು ಸರಿಯಾದ ವಾಸಸ್ಥಳವೂ ಸಕಾಲಕ್ಕೆ ಆಹಾರಾದಿಗಳೂ ಸಿಕ್ಕದೆ ದ್ರವ್ಯನಷ್ಟಮಾಡಿಕೊಂಡು ಅನೇಕರು ರೋಗಸ್ಥರಾಗಿ ಹೋಗುತ್ತಿದ್ದರು ಈ ಸಂಗತಿಯನ್ನು ತಿಳಿದು ಈ ಊರಿನಲ್ಲಿರುವ ಮ|| ಸಾಹುಕಾರ್ ಟಿ ವೆಂಕಟಸುಬ್ಬಯ್ಯನವರು ತಾವು ನಡೆಸತಕ್ಕ ಅನೇಕ ಸತ್ಕಾರ್ಯಗಳಲ್ಲಿ ಇದೂ ಒಂದು ಕೀರ್ತಿಪ್ರದವಾದ ಮಹೋಪಕಾರವೆಂದು ಭಾವಿಸಿ ಸ್ಟೂಡೆಂಟ್ಸ್ ಹೋಮಿನ ಕಮಿಟಿ ಮೆಂಬರುಗಳ ಅಪ್ಪಣೆಪಡೆದು ಪರೀಕ್ಷಾ ಪ್ರಾರಂಭದಲಾಗಾಯ್ತು 4 ದಿನಗಳವರಿವಿಗೂ ವಿದ್ಯಾರ್ಥಿಗಳಿಗೂ, ಅವರ ಪೋಷಕರಿಗೂ, ಸ್ಕೂಲ್ ಮಾಸ್ಟರುಗಳಿಗೂ ಸಕಾಲಕ್ಕೆ ಸರಿಯಾಗಿ ಮೂರು ಹೊತ್ತು ಭೋಜನ ಉಪಹಾರಾದಿಗಳನ್ನು ನಡಿಸಲು ಸ್ಟೂಡೆಂಟ್ಸ್ ಹೋಮಿನಲ್ಲಿ ಅನೇಕ ಸಿಬ್ಬಂದಿಗಳನ್ನಿಟ್ಟು ನಡಿಸಿದರು ಈ ಕೃತಜ್ಞತೆಗೋಸ್ಕರವಾಗಿ ಬಂದಿದ್ದ ಹೊಬಳಿ ಸ್ಕೂಲ್ ಮಾಸ್ಟರುಗಳು ತಾ 11ನೇ ಶುಕ್ರವಾರ ಸಾಯಂಕಾಲ ಅನೇಕ ದೊಡ್ಡಮನುಷ್ಯರಿಂದೊಡಗೂಡಿದ ಒಂದು ಸಭೆಯನ್ನು ಸ್ಟೂಡೆಂಟ್ಸ್ ಹೋಮಿನಲ್ಲಿ ಏರ್ಪಡಿಸಿ ಮ|| ಸಾಹುಕಾರ್ ಟಿ ವೆಂಕಟಸುಬ್ಬಯ್ಯನವರನ್ನು ಬರಮಾಡಿಕೊಂಡು ಕೃತಜ್ಞತಾಪೂರ್ವಕವಾದ ವಿಜ್ಞಾಪನ ಪತ್ರಿಕೆಯನ್ನು ಓದಿದರು ವೇ|| ಸೀತಾರಾಮಶಾಸ್ತ್ರಿಗಳು ಸಾಹುಕಾರರ ಮಹೋಪಕಾರದ ವಿಷಯವನ್ನೂ ಮ|| ಪಿ ವೆಂಕಪ್ಪಯ್ಯನವರು ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ಆರೋಗ್ಯವನ್ನು ಕಾಪಾಡಿದ ಸಿವಿಲ್ ಸರ್ಜನ್‌ರವರಾದ ಡಾ|| ಜಗನ್ನಾಥಂ ಪಿಳ್ಳೆಯವರ ಉಪಕಾರವನ್ನೂ ಕುರಿತು ಉಪನ್ಯಾಸಮಾಡಿದರು ಮ|| ಬಿ ಎಂ ಹಿರಣ್ಣಯ್ಯನವರು ಮಹಾರಾಜರವರ ಶ್ರೇಯಃ ಪ್ರಾರ್ಥನೆಯೇ ಮೊದಲಾದ ಸಂಗೀತವನ್ನು ಹಾಡಿದರು ಅಡ್ವೊಕೇಟ್ ಮ|| ಸೀತಾರಾಮಯ್ಯನವರು ಸಾಹುಕಾರರ ಔದಾರ್ಯವನ್ನೂ ಸ್ಕೂಲ್ ಮಾಸ್ಟರುಗಳ ಕೃತಜ್ಞತೆಯನ್ನೂ ಕುರಿತು ಮಾತನಾಡಿದರು ಮ|| ಹೈಸ್ಕೂಲ್ ಪಂಡಿತರಾದ ಮ|| ಕೆ ಸುಬ್ರಹ್ಮಣ್ಯಶಾಸ್ತ್ರಿಗಳವರು ಸಾಹುಕಾರ ತಾತ ಮುತ್ತಾತಂದಿರು ನಡಿಸಿರತಕ್ಕ ಮಹೋಪಕಾರದ ವಿಷಯವನ್ನು ಕುರಿತು ಉಪನ್ಯಾಸ ಮಾಡಿದನಂತರ ಸಭೆಯು ಮುಕ್ತಾಯವಾಯಿತು ಈ ವಿಷಯದಲ್ಲಿ ಮುತವರ್ಜಿ ವಹಿಸಿದ ಚನ್ನಿಕಟ್ಟೆ ಸ್ಕೂಲ್ ಮಾ ಎಚ್ ನರಸಿಂಹಯ್ಯನವರ ಮೆಹನತ್ತು ವಿಶೇಷವಾಗಿತ್ತು

<u>ಹಾಸನದ ತಾ ಗೊರೂರು</u> — ಮಳೆ ಪ್ರಾರಂಭವಾಗಿದೆ ರಾಗಿ ರೂಪಾಯಿಗೆ 16 ಸೇರು, ಅಕ್ಕಿ 8 ಸೇರು ಮಾರಾಟವಿರುತ್ತದೆ ಇದು ಸುಗ್ಗಿಕಾಲವಾಗಿದ್ದರೂ ಅಗ್ಗಮಾತ್ರ ಇಲ್ಲ ಬಡವರು ಜೀವಿಸುವದು ಕಷ್ಟ — ಸುತ್ತುಮುತ್ತಿನ ಗ್ರಾಮಗಳಲ್ಲಿ ಹೆಚ್ಚಿಗೆ ಬೆಳೆಯಾಗುವ ರಾಸುಗಳನ್ನು ಅಲ್ಲಲ್ಲೇ ಕಳವುಮಾಡುವುದು ತಿಳಿಯಬರುತ್ತದೆ ಕೆಲವು ದಿನಗಳ ಕೆಳಗೆ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರವರು ಈ ಊರಿಗೆ ದಯಮಾಡಿದ್ದ ವೇಳೆ ಇಲ್ಲಿನ ಪಂಚಮರನೇಕರು ತಮ್ಮ ಅಹವಾಲ್ಯಾವತ್ತು ವಿಶದವಾಗಿ ತಿಳಿಸಿ ಬೇಡಿಕೊಂಡಿದ್ದರಮೇಲೆ • ಅರ್ಜಿಯು ಕೃತವಾಯಿತು, ಶಿಫಾರಸು ಮಾಡುತ್ತೇವೆ • ಎಂದು ಅಪ್ಪಣೆ ಕೊಡಿಸಿದ್ದಂತೆ ಸರ್ಕಾರದವರಿಂದ ಮುಂಜೂರಾಗಿಬಂದ ಸ್ಕೂಲಿಗೆ ಮನೆ ಬಾಡಿಗೆ, ಒಬ್ಬ ಮಾಸ್ಟರಿನ ಸಂಬಳ ಅಲೋಯನ್ಸು ಸೇರಿ ತಿಂಗಳಿಗೆ 16 ರೂಪಾಯಿ ಸ್ಯಾಂಕ್ಷನ್ ಆಗಿ ಇಲ್ಲಿನ ಉತ್ತಮರ ಸ್ಕೂಲ್ ಅ|| ಮಾಸ್ಟರ್ ರಾಮಸ್ವಾಮಯ್ಯಂಗಾರ್ರ ಸಹಾಯದಿಂದ ಹೊಲಗೇರಿ ಸಮೀಪದಲ್ಲೇ ಒಂದು ಮನೆಯಲ್ಲಿ ಏಪ್ರೆಲ್ ತಾ 1 ರಿಂದ ಪ್ರಥಮ ಸ್ಕೂಲ್ ಸ್ಥಾಪನೆ ಮಾಡಲ್ಪಟ್ಟಿತು ಆದಿನವೇ ಲಾಯಖಾದ ಬಾಲಕರು ಸುಮಾರು 80 ಮಂದಿ ಹಾಜರಾದರು ಈ ಕೀಳು ಜಾತಿಯವರನ್ನು ಮುಂದಕ್ಕೆ ತರಬೇಕೆಂದು ಪೂರ್ಣ ಗಮನವಿಟ್ಟ ಡೆಪ್ಯುಟಿ ಇನ್ಸ್‌ಪೆಕ್ಟರ್ ಮಿ|| ಕೆ ಎನ್ ವೀರಭದ್ರಯ್ಯನವರ ಗುಣಾತಿಶಯವು ಸ್ತುತ್ಯರ್ಹವಾಗಿದೆ ಸ್ಕೂಲ್‌ಮಾಸ್ಟರು ಮುತುವರ್ಜಿಯಿಂದ ಅಭಿವೃದ್ಧಿಗೆ ತರುತ್ತಾರೆಂದು ನಂಬಿದೇವೆ — ಈ ಊರಲ್ಲಿ ಸನ್ನಿಪಾತಜ್ವರ, ಸಿಡುಬು ಇದ್ದೇ ಇವೆ ವ್ಯಾಕ್ಸಿನೇಟರು ಬಂದು ಸಿಡುಬನ್ನು ಹಾಕುತ್ತಾ ಇದಾರೆ — ಈಕಡೆ ಖೂನಿಗಳನ್ನು ನಡಿಸಿದವರಿಗೆ ಡಿಸ್ಟ್ರಿಕ್ಟ್ ಜಡ್ಜ್ ರವರ ಕೋರ್ಟಿನಲ್ಲಿ ಮರಣದಂಡನೆಯೂ, ವಿಚಾರಣೆಯೂ ನಡೆಯುತ್ತಿರುವಾಗಲೇ ಅಲ್ಲಲ್ಲಿ ಖೂನಿಗಳು ಆಗುತ್ತಿರುವವು — ರಾತ್ರಿ ವೇಳೆ ಹೊಳೆನರಸೀಪುರದ ಮಾರ್ಗವಾಗಿ ಗಾಡಿಯಲ್ಲಿ ಹೋಗುತ್ತಿದ್ದ ಸುಬ್ರಾಯಸೆಟ್ಟಿಯವರನ್ನು ಯಾರೋ ದುಷ್ಟರು ಹೊಡೆದು ಕೊಂದು ಕೆರೆಯಲ್ಲಿ ಹಾಕಿದ್ದಲ್ಲದೆ, ಕೆಲವು ದಿವಸದಮೇಲೆ ಪೋಲೀಸಿನವರು ಪತ್ತೆತರಹೂದು ನಡಿಸಲು ಚಿಕ್ಕ ಅರಕಲಗೂಡಿನಲ್ಲಿ ಕೆಲವರನ್ನು ಹಿಡಿದು ವಿಚಾರಿಸಲಾಗಿ ಲಾಸ್ ಪತ್ತೆ ಆದಹಾಗೂ ಶವವನ್ನು ನೀರಿನಿಂದ ತೆಗೆದು ಅರಕಲಗೂಡಿನಲ್ಲಿ ಅಜಮಾಯಿಸಿ ಮಾಡಿ ಆಸಾಮಿಗಳನ್ನು ಹಾಸನಕ್ಕೆ ಕಳುಹಿಸಿದರೆಂದೂ ತಿಳಿಯುತ್ತೇನೆ — ಮಸ್ಲೀನಹಳ್ಳಿಯಲ್ಲಿ ಈರೀತಿ ನಡೆದಿರುತ್ತದೆಂದು ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರವರೂ ಇನ್ಸ್‌ಪೆಕ್ಟರೂ, ಡಾಕ್ಟರೂ ಆ ಊರಿನಲ್ಲಿ ಮೊಕ್ಕಾಂಮಾಡಿ, ಶವವನ್ನು ತೆಗೆಸಿ ಅಜಮಾಯಿಷಿ ಮಾಡಿ ವಿಚಾರಣೆ ಕ್ರಮ ನಡೆಸಿಕೊಂಡು ಹೋಗುತ್ತಾರೆ ಯಾರನ್ನೂ ದಸ್ತಗಿರಿ ಮಾಡಿಲ್ಲ ಭಯಂಕರವಾದ ಇಂಥಾ ದುಷ್ಕೃತ್ಯಗಳು ಆಗಾಗ್ಗೆ ನಡೆಯುತ್ತಿರುವದರಿಂದ ಅನೇಕರಿಗೆ ಹೆಚ್ಚಾದ ಭೀತಿಯನ್ನುಂಟುಮಾಡುತ್ತದೆ

ಬಾತ್ಮಿದಾರರಿಗೆ ನೋಟೀಸ್

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೋಕೆಗಾರರಾಗುವದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಕರೆಸ್ಪಾಂಡೆನ್ಸ್

ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆ

ಅಯ್ಯಾ,

ಈ ಸಾರಿ ಲೋವರ್ ಸೆಕೆಂಡರಿ ಪರೀಕ್ಷೆಗೆ ಕೊಟ್ಟಿದ್ದ ಪ್ರಶ್ನೆಗಳು ಬಹಳ ಸಮರ್ಪಕವಾಗಿದ್ದವು ಆದರೆ ಕೆಲವು ಸಬ್ಜೆಕ್ಟುಗಳ ಮೇಲೆ ಕೇಳಿದ್ದ ಪ್ರಶ್ನೆಗಳಲ್ಲಿ ಕೆಲವು ಮಾತ್ರ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯನ್ನುಂಟುಮಾಡಿರುತ್ತವೆ ಇವರಲ್ಲಿ ಲೆಕ್ಕವು ಮೊದಲನೆಯದು ಇದರಲ್ಲಿ ಕೊಟ್ಟಿರುವ ಮೂರನೆಯ ಲೆಕ್ಕವು ವಿದ್ಯಾರ್ಥಿಗಳ ಯೋಗ್ಯತೆಗೆ ವಿರೋಧವಾಗಿರುವಂತೆ ತೋರುತ್ತದೆ ನಾಲ್ಕನೇ ಲೆಕ್ಕವಂತೂ ಅವರ ಯೋಗ್ಯತೆಗೆ ಮಿತಿಮೀರಿದ್ದೆಂದು ಹೇಳಲು ಸಂಶಯವಿಲ್ಲ ಈ ಲೆಕ್ಕವನ್ನು ಎಷ್ಟು ಜನ ವಿದ್ಯಾರ್ಥಿಗಳು ಮಾಡಿರುವರೆಂದು ಪರೀಕ್ಷಿಸಿದರೆ ಇದು ವ್ಯಕ್ತವಾಗುವುದು ಈ ಲೆಕ್ಕಗಳನ್ನು ಬಿಟ್ಟು ಬೇರೆ ಲೆಕ್ಕಗಳನ್ನು ಮಾಡಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದಕ್ಕೆ ಯಾವ ಅಭ್ಯಂತರವೂ ಇಲ್ಲದಿದ್ದಾಗ್ಯೂ ಪ್ರಾರಂಭದಲ್ಲಿ ಈ ಲೆಕ್ಕಗಳನ್ನು ಮಾಡಲು ಪ್ರಯತ್ನಿಸಿದ ಅನೇಕ ವಿದ್ಯಾರ್ಥಿಗಳು ಇವುಗಳನ್ನು ಮಾಡಲಾರದೆ ಭಗ್ನಮನೋರಥರಾಗಿ ಇತರ ಲೆಕ್ಕಗಳನ್ನು ಮಾಡಲು ಸಾಕಾದಷ್ಟು ಕಾಲ ದೊರೆಯದೆ ಹೋದದ್ದರಲ್ಲಿ ಯಾವ ಸಂಶಯವೂ ಇಲ್ಲ ಆದಕಾರಣ ಇವೆರಡು ಲೆಕ್ಕಗಳಿಗಿಟ್ಟಿರುವ ನಂಬರುಗಳನ್ನು ಮ್ಯಾಗ್ಜಿಮಮ್‌ನಲ್ಲಿ ಕಡಮೆಮಾಡಿಯಾಗಲಿ, ಅಥವಾ ಕೇಳಿದ 25 ರಂತೆ ನಂಬರನ್ನು ಪಡೆದವರನ್ನೆಲ್ಲಾ ಪ್ಯಾಸ್ ಮಾಡಿಸುವಂತಾಗಲಿ ಮಾಡಿ ಅನಾಥರಾದ ಬಾಲಕರನ್ನು ಪ್ರೋತ್ಸಾಹಿಸುವುದು ಅವಶ್ಯಕವಾಗಿರುತ್ತದೆ ಮತ್ತು ಕ್ಷೇತ್ರಗಣಿತದ ಪ್ರಶ್ನಪತ್ರಿಕೆಯಲ್ಲಿದ್ದ ಕೋಣ, ಅಡಿ, ಅಂಗುಲಗಳನ್ನು ಸೂಚಿಸುವ ಚಿಹ್ನೆಗಳನ್ನು ತಿಳಿಯಲಾರದೆ ಅನೇಕ ವಿದ್ಯಾರ್ಥಿಗಳು ಅಂಥಾ ಲೆಕ್ಕಗಳನ್ನು ಮಾಡಲಾರದೆ ಹೋಗಿರುತ್ತಾರೆ ಇದೂ ಅಲ್ಲದೆ ಈ ಪ್ರಶ್ನಪತ್ರಿಕೆಯಲ್ಲಿ ಕೊಟ್ಟಿರುವ ಕೊನೇ ಲೆಕ್ಕವು ವಿದ್ಯಾರ್ಥಿಗಳ ಯೋಗ್ಯತೆಗೆ ವಿರೋಧವಾಗಿರುತ್ತದೆ ಆದ್ದರಿಂದ ಈ ವಿಷಯಗಳನ್ನು ಪರೀಕ್ಷಕರೂ ಪರೀಕ್ಷೆಯ ಬೋರ್ಡಿನವರೂ ದಿವ್ಯಚಿತ್ತಕ್ಕೆ ತಂದುಕೊಂಡು ವಿದ್ಯಾರ್ಥಿಗಳನ್ನು ಕನಿಕರವಿಟ್ಟು ಪ್ರೋತ್ಸಾಹಿಸಬೇಕಾಗಿ ಕೋರುತ್ತೇನೆ

ಒಬ್ಬ ಹೆಡ್ ಮಾಸ್ಟರ್, ಮೈಸೂರು

ಭತ್ತದ ಪೈರನ್ನು ಸುಲಭವಾಗಿ ಬೆಳೆಯುವ ಕ್ರಮ

ಭತ್ತದ ಒಂದೊಂದೇ ನೇಜಿಯಗಿಡವನ್ನು ನಡುವ ಕ್ರಮವನ್ನು ಕುರಿತು ರೈತರ ಅಭಿಪ್ರಾಯಗಳು

[1911 ನೇ ಇಸವಿ ಮಾರ್ಚಿ ತಿಂಗಳಲ್ಲಿ ದಕ್ಷಿಣ ಭಾಗದ ವ್ಯಾವಸಾಯಿಕ ಖಾತೆಯ ಡೆಪ್ಯುಟೀ ಡೈರೆಕ್ಟರು ವ್ಯಾವಸಾಯಿಕ ಖಾತೆಯವರಿಂದ ಶಿಫಾರಸು ಮಾಡಿದ ಸುಧಾರಣೆಗಳನ್ನು ಅನುಸರಿಸುತ್ತಿರುವ ಕೆಲವು ಜನ ರೈತರಿಗೆ, ಇನ್ನೂ ಆ ಇಲಾಖೆಯವರಿಂದ ಸೂಚಿಸಲ್ಪಟ್ಟ ಸುಧಾರಣೆಗಳ ಪ್ರಯೋಜನದ ವಿಷಯದಲ್ಲಿ ಸಂದೇಹವುಳ್ಳ ಇತರ ರೈತರ ಪ್ರಯೋಜನಕ್ಕಾಗಿ ಪ್ರಕಟಿಸುವ ಬಗ್ಗೆ, ಅವರಿಗೆ ತೋರಿಬಂದ ಅನುಭವಗಳನ್ನು ತಿಳಿಸಬೇಕಾಗಿ ಒಂದು ಪತ್ರದ ಮೂಲಕ ಕೇಳಿಕೊಂಡಿದ್ದರು ಭತ್ತದ ಒಂದೊಂದೇ ನೇಜಿಯಗಿಡವನ್ನು ನಡುವ ಕ್ರಮದ ವಿಷಯದಲ್ಲಿ ಇವೇ ಅವರ ಅನುಭವವಾಗಿರುತ್ತದೆ ಅವರು ತಮ್ಮ ಹೆಸರುಗಳನ್ನೂ ಪತ್ರಗಳನ್ನೂ ಪ್ರಕಟಿಸಲಿಕ್ಕೆ ಅನುಮತಿ ಕೊಟ್ಟಿದ್ದಾರೆ]

(1) ಕಡಲೂರು ಪಳಿಕಲ್ ಪೇಟೆಯ ಮ|| ಬಂಗಾರುರೆಡ್ಡಿಯವರು ಬರೆಯುವದು—1909 ನೇ ಇಸವಿಯಲ್ಲಿ ಪಾಲೂರು ಕೃಷಿ ಕ್ಷೇತ್ರದ ಮಾಲಿಕರು ನನಗೆ ಒಂದು ಎಕ್ರೆ ಸ್ಥಳಕ್ಕೆ ಬೇಕಾದ ಎಂದರೆ 7 ಮದ್ರಾಸು ಪಡಿ ಭತ್ತದ ಬೀಜವನ್ನು ಕೊಟ್ಟರು ಇದರಿಂದ ಹುಟ್ಟಿಸಿದ ನೇಜಿಯನ್ನು ಒಂದೊಂದೇ ಗಿಡವಾಗಿ ಒಂಭತ್ತೊಂಬತ್ತು ಅಂಗುಲ ದೂರಕ್ಕೆ ಒಂದು ಗಿಡದಂತೆ 1 13 ಎಕ್ರೆ ಸ್ಥಳದಲ್ಲಿ ನೆಡಿಸಿದೆನು ಒಂದೊಂದು ಗಿಡವೂ 20 ರಿಂದ 35 ರ ವರೆಗೆ ಅದ್ದ ಚಿಗುರುಗಳನ್ನು ಬಿಟ್ಟಿತು ಪೈರು ಪುಷ್ಟಿಯಾಗಿ ನೋಟಕ್ಕೆ ಅಂದವಾಗಿತ್ತು ಮುಂಚಿನ ವರುಷಗಳಲ್ಲಿ 910 ಪಡಿ ಭತ್ತ ಉತ್ಪತ್ತಿಯಾಗುತ್ತಿದ್ದಲ್ಲಿ ಈ ವರುಷ 1,080 ಪಡಿ ಭತ್ತ ಹುಟ್ಟುವಳಿಯಾಯಿತು ಮುಂಚಿನ ವರುಷಗಳಲ್ಲಿ ಹಾಕಿದ ಗೊಬ್ಬರವೇ ಈ ವರುಷವೂ ಹಾಕಲ್ಪಟ್ಟಿತ್ತು ಈ ವರುಷ ಈ ಗ್ರಾಮದಲ್ಲಿ ಪ್ರಾಯಶಃ ಎಲ್ಲಾ ರೈತರೂ ಈ ವಿಧವನ್ನೇ ಪ್ರಯೋಗಿಸುವರು

(2) ಕಳ್ಳಕುರಿಚಿ ತಾಲ್ಲೂಕು ವಡತೊರಸಲೂರಿನ ಮ|| ರಂಗಸ್ವಾಮಿನಾಯುಡುಗಾರು ಬರೆಯುವದು—ನಾನು ನನ್ನ ಬೈಲು ಗದ್ದೆಗಳಲ್ಲಿ ಹಸಿ ಸೊಪ್ಪು ಗೊಬ್ಬರಕ್ಕಾಗಿ ಸಣಬು ಗಿಡವನ್ನು ಬೆಳಸಿದೇನೆ ತಹಸೀಲುದಾರರೂ, ಕೃಷಿ ಕ್ಷೇತ್ರದ ಮಾಲಿಕರೂ ಎರಡು ಮೂರಾವರ್ತಿ ಇದನ್ನು ನೋಡಿ ಬೆಳೆಯ ವೃದ್ಧಿಯನ್ನು ಕಂಡು ಬಹಳ ಸಂತೋಷಪಟ್ಟರು ನೇಜಿಗಿಡವನ್ನು ಒಂದೊಂದೇ ಆಗಿ ನೆಟ್ಟಾಗ ಜನರು ನನ್ನನ್ನು ಹಾಸ್ಯ ಮಾಡುತ್ತಿದ್ದರು, ಮತ್ತು ಬಳ್ಳಿಗಳಂತೆ ಭತ್ತವು ಹಬ್ಬುತ್ತದೆಂದು ತಿಳಿದಿರುವೆಯಾ ಎಂದು ಕೇಳಿದರು ಆದರೆ ನಾನು ತಿರುಕ್ಕೋಯಿಲೂರಿಗೆ ಹೋದಾಗ್ಗೆ ವ್ಯಾವಸಾಯಿಕ ಪಂಚಾಂಗವನ್ನು ಕೊಂಡುಕೊಂಡಿದ್ದೆನು, ಮತ್ತು ಭತ್ತದ ನೇಜಿಗಿಡವನ್ನು ಒಂದೊಂದಾಗಿಯೇ ನೆಡುವ ಕ್ರಮವನ್ನೂ ಸಹಾ ನೋಡಿದ್ದೆನು ಈ ಕ್ರಮದಿಂದ ನನಗೆ ಮುಂಚಿನ ವರುಷಗಳಿಗಿಂತ ಮೂರರಲ್ಲಿ ಒಂದು ಪಾಲು ಉತ್ಪತ್ತಿ ಹೆಚ್ಚು ಸಿಕ್ಕಿತು ಈ ವರುಷವೂ ನಾನು ಈ ಕ್ರಮವನ್ನೇ ಪರೀಕ್ಷಿಸಿ ನೋಡಿದೆನು ಇದರಿಂದ ಎಕ್ರೆಗೆ ಸುಮಾರು 1,300 ಪಡಿ (ಅಂದರೆ 2 300 ಊರಿನ ಸೇರು) ಭತ್ತ ಉತ್ಪತ್ತಿಯಾಯಿತು "ಸೂರೈ" ಎಂಬ ಒಂದು ತರದ ರೋಗದಿಂದ ಬೆಳೆಗೆ ಹಾನಿಯಾಗದಿದ್ದರೆ 3,000 ಪಡಿ ಭತ್ತ ಹುಟ್ಟುತ್ತಿತ್ತು ನನ್ನ ಬೆಳೆಯ ಅಭಿವೃದ್ಧಿಯು ಎಷ್ಟು ಪ್ರತ್ಯಕ್ಷವಾಗಿತ್ತೆಂದರೆ ನಾನು ನೆಡುವಾಗ ಹಾಸ್ಯ ಮಾಡಿದ ರೈತರೇ ನವೆಂಬರ್ ತಿಂಗಳಲ್ಲಿ ಇನ್ನೂ 10 ಎಕ್ರೆ ಗದ್ದೆಗಳನ್ನು ಒಂದೊಂದೇ ನೇಜಿಗಿಡವನ್ನು ನೆಡುವ ಕ್ರಮದಿಂದ ನೆಟ್ಟರು ಎಲ್ಲಾ ಪೈರುಗಳೂ ನಿಸ್ಸಂದೇಹವಾಗಿ ಚೆನ್ನಾಗಿದ್ದವು, ಮತ್ತು ಯಾರೂ ನಷ್ಟಪಡಲಿಲ್ಲ ನನ್ನ ಮಾತು ನಿಮಗೆ ನಂಬಲಾರದಾದರೆ ನೀವೇ ಬಂದು ಪೈರನ್ನು ಪರೀಕ್ಷಿಸಿ ನೋಡಬಹುದು ಈ ಕ್ರಮದಿಂದ ಹೆಚ್ಚಿನ ಉತ್ಪತ್ತಿಯಾಗುತ್ತದೆಂದು ಮಾತ್ರ ನಿಮಗೆ ತಿಳಿಸಿದರೆ ಸಾಲದು ಇದಕ್ಕೆ ಕಷ್ಟವೂ, ಖರ್ಚೂ ಕಡಮೆಯಾಗಿವೆ ಕಾಳೂ ದಪ್ಪನಾಗಿದೆ ಮತ್ತು ಈ ಅಕ್ಕಿಯಿಂದ ಮಾಡಿದ ಅನ್ನವು ಮೃದುವಾಗಿಯೂ, ಚೆನ್ನಾಗಿಯೂ, ಸವಿಯಾಗಿಯೂ ಇರುವುದರಿಂದ ಜನರು ಇತರ ಜಾತಿ ಅಕ್ಕಿಗಿಂತಲೂ ಇದನ್ನು ಹೆಚ್ಚಾಗಿ ಆದರಿಸುತ್ತಾರೆ ನಿಮ್ಮ ಇಲಾಖೆಯು ಜನರ ಪ್ರಯೋಜನಕ್ಕಾಗಿಯೇ ಸ್ಥಾಪಿಸಲ್ಪಟ್ಟಿದ್ದೆಂದು ನನಗೆ ಖಚಿತವಾದುದರಿಂದಲೇ ನಾನು ಅದರ ಪ್ರಯೋಜನದ ಜ್ಞಾಪನವನ್ನು ಪ್ರಕಟಗೊಳಿಸುತ್ತೇನೆ

(3) ಕಲ್ಲಕುರಿಚಿ ತಾಲ್ಲೂಕು ಮುಡಿಯಾನೂರಿನ ಮ ಕೊಳಂದವೇಲು ಪೈಯಾಚಿಯವರು ಬರೆಯುವದು—ಎರಡನೇ ವರುಷ (ಅಂದರೆ 1910 ನೇ ಇಸವಿಯಲ್ಲಿ) 10 ಸೆಂಟು ವಿಸ್ತೀರ್ಣದ ಒಂದು ಭತ್ತದ ಮಡಿಯಲ್ಲಿ ಪೆರುಮ್ (ದೊಡ್ಡ) ಸಂಬಾ ಎಂಬ ಜಾತಿಯ 10 ಪಡಿ ಯಾನೆ 15 ಸೇರು ಬೀಜವನ್ನು ಜೂಲೈ ತಿಂಗಳಲ್ಲಿ ಬಿತ್ತಿದೆನು ನೇಜಿಯು ಇಪ್ಪತ್ತೆರಡು ದಿವಸಗಳಲ್ಲಿ ಕಿತ್ತು ನಡಲಿಕ್ಕೆ ಯೋಗ್ಯವಾದವು ಈ ಗಿಡಗಳು ತಗ್ಗಾದ ಉಪ್ಪು ಒಗರುವುಳ್ಳ 1 ಕಾಣಿ (1 32 ಎಕ್ರೆ) ಚೌಳು ನೆಲದಲ್ಲಿಯೂ ಮತ್ತು 1 ಎಕ್ರೆ ವಿಸ್ತೀರ್ಣದ ಇನ್ನೊಂದು ಗದ್ದೆಯಲ್ಲೂ ನಡಲಾಯಿತು ನನ್ನ ಗ್ರಾಮದ ರೈತರು ಒಂದೊಂದೇ ನೇಜಿಗಿಡವನ್ನು ನಡುವ ಕ್ರಮದಿಂದ ಉಂಟಾಗುವ ಫಲದ ವಿಷಯದಲ್ಲಿ ಸಂಶಯಭರಿತರಾಗಿದ್ದ ಕಾರಣ ಬೆಳೆಯನ್ನು ಲಕ್ಷ್ಯಕೊಟ್ಟು ಕಾದಿದ್ದರು ಕಿತ್ತುನಟ್ಟ ಮೂರುನಾಲ್ಕು ದಿವಸಗಳ ನಂತರ ಬಲವಾದ ಮಳೆ ಸುರಿಯಿತು ಆದರೆ ಬೇಗನೆ ನೀರು ಇಳಿದುಹೋಯಿತು ಈ ಅವಸ್ಥೆಯಲ್ಲಿ ವಾಡಿಕೆಯಾಗಿ ಗೊಂಚಲಾಗಿ ನಟ್ಟ ನೇಜಿಯಾದರೆ ಅದ್ದಬಿದ್ದು ಹಾಳಾಗುತ್ತಿತ್ತು ಆದರೆ ಈ ಗಿಡಗಳ ದಂಟುಗಳು ದಪ್ಪನಾದುದರಿಂದ ನೆಟ್ಟಗಾಗಿ ನಿಂತುವಲ್ಲದೆ, ಇನ್ನೂ ಚೆನ್ನಾಗಿ ಬೇರು ಬಿಟ್ಟುವು ಇವುಗಳು ಮಳೆಯಿಂದ ಪ್ರಯೋಜನಹೊಂದಿ ಅದ್ದ ಚಿಗುರುಗಳನ್ನು ಬಿಟ್ಟು, ಬೆಳೆದು ದಿನೇ ದಿನೇ ಹಸುರಾಗಿ ಬಂದವು ಭಾದ್ರಪದ ಮಾಸದಿಂದ ಕಾರ್ತೀಕ ಮಾಸದ ವರೆಗೆ ಈ ಪೈರು ಹುಲುಸಾಗಿ ಬೆಳೆದುದರಿಂದ ತೆನೆ ಬಿಡುವುದಕ್ಕಿಂತ ಮೊದಲೇ ಅದ್ದ ಬಿದ್ದೀತೆಂದು ಹೆದರಿ ಎರಡಾವರ್ತಿ ಒಂದುವರೆ ಅಡಿ ಕತ್ತರಿಸಿ, ದನಗಳಿಗೆ ಹಾಕಿದೆನು ಈ ಕಾಣಿಯ ಸ್ಥಳದಲ್ಲಿ (1 33 ಎಕ್ರೆ) 30 ಪಡಿ ಅಂತೆಯ 61 ಕಲಮ್ ಭತ್ತ ಹುಟ್ಟುವಳಿಯಾಯಿತು ಮುಂಚಿನ ವರುಷಗಳಲ್ಲಿ ಎಂದೂ ಈ ಗದ್ದೆಯಲ್ಲಿ 40 ಕಲಮ್ ಭತ್ತಕ್ಕಿಂತ ಹೆಚ್ಚು ಉತ್ಪತ್ತಿಯಾಗಿರಲಿಲ್ಲ ನನ್ನ ಎಲ್ಲಾ ಬೈಲುಗದ್ದೆಗಳೂ ಈ ವಿಧದಲ್ಲಿ ನಡಲ್ಪಟ್ಟದ್ದುವು ಇದರಿಂದ ಮುಂಚಿನ ವರುಷಗಳಿಂದ ಸರಾಸರಿ ಶೇಕಡಾ 25 ರ ಪ್ರಕಾರ ಹೆಚ್ಚು ಉತ್ಪತ್ತಿ ಸಿಕ್ಕಿತು ಬೀಜದ ಕ್ರಯದಲ್ಲೂ ಕೂಲಿ ವಿಚಾರದಲ್ಲಿಯೂ ಎಕ್ರೆಗೆ ಸುಮಾರು 7 ರೂಪಾಯಿ ಪ್ರಕಾರ ಉಳಿಯಿತು ಈ ಪ್ರಕಾರವಾಗಿ ರೈತರ ಸಂದೇಹನಿವಾರಣೆಯಾಗಿ ಅವರು ಸುಮಾರು 300 ಎಕ್ರೆ ಸ್ಥಳವನ್ನು ಈ ವಿಧದಲ್ಲಿ ನಟ್ಟಿದ್ದಾರೆ, ಮತ್ತು ಉಳಿದ ಬೀಜವನ್ನು ನೆರೆಹೊರೆಯಲ್ಲಿರುವ ಸಂಬಂಧಿಕರಿಗೂ ಸ್ನೇಹಿತರಿಗೂ ಕೊಟ್ಟಿದ್ದಾರೆ ಕೆಲವರಿಗೆ ಮಾರಿಯೂ ಇದ್ದಾರೆ ಈ ಪ್ರಕಾರವಾಗಿ ಈ ಅಭ್ಯಾಸವು ಇಲ್ಲಿನ ನೆರೆಹೊರೆಯಲ್ಲಿ ಹಬ್ಬುತ್ತಿದೆ

(4) ತಂಜಾವೂರು ಜಿಲ್ಲೆ ಶಿಯ್ಯಾಲಿ ತಾಲ್ಲೂಕು ಚಿತಂಬರನಾಥಪುರದ ಗ್ರಾಮಮುನಸೀಫರಾದ ಮ| ನಟರಾಜ ಅಯ್ಯರವರು ಹೀಗೆ ಬರೆದಿರುತ್ತಾರೆ —ಒಂದೊಂದೇ ನೇಜಗಿಡವನ್ನು ನೆಡುವ ಕ್ರಮವನ್ನು ಪರೀಕ್ಷಿಸುವಾಗ ನಾನು ಎರಡು ವಿಧಗಳನ್ನು ಪ್ರಯೋಗಿಸಿದೆನು ಒಂದನೇ ವಿಧ —17 ಸೆಂಟು ಸ್ಥಳದಲ್ಲಿ ಒಂದೊಂದೇ ನೇಜಗಿಡವನ್ನು ಮೂರು ಮೂರು ಅಡಿ ದೂರ ನೆಟ್ಟೆನು ಪೈರಿಗೆ ತೆನೆ ಬರುವಾಗ ಬಲವಾದ ಗಾಳಿ ಇದ್ದ ಕಾರಣ ಹೊಟ್ಟು ಹೆಚ್ಚಾಯಿತು ಇದನ್ನು ಅಳೆದಾಗ 80 ಪಡಿಯಾಗಿತ್ತು ಎರಡನೇ ವಿಧ —ಒಂದೊಂದೇ ಗಿಡವು 1 1 ಅಡಿ ದೂರವಾಗಿ ನೆಡಲಾಯಿತು ಇದರಿಂದ 964 ಪಡಿ ಭತ್ತ ಉತ್ಪತ್ತಿಯಾಯಿತು ವಾಡಿಕೆಯಲ್ಲಿರುವ ಕ್ರಮಕ್ಕಿಂತ ಒಂದೊಂದೇ ನೇಜಿಗಿಡವನ್ನು ನೆಡುವ ಕ್ರಮವು ಲಾಭಕರವೆಂದು ನನ್ನ ಅಭಿಪ್ರಾಯವು ವಾಡಿಕೆಯಾಗಿ ಎಕ್ರೆಗೆ 36 ಪಡಿ ಬೀಜ ಬೇಕಾಗುವಲ್ಲಿ ಈ ವಿಧಕ್ಕೆ ಎಕ್ರೆಗೆ 6 ಪಡಿ ಬೀಜಮಾತ್ರ ಸಾಕಾಗುವುದು ಬೀಜದಲ್ಲಿ ಮಾತ್ರ 30 ಪಡಿ ಆದಾಯವುಂಟು ರೂಢಿಯಲ್ಲಿರುವ ಕ್ರಮದಿಂದ ನೆಟ್ಟ ಬೆಳೆಗಿಂತ ಒಂದೊಂದೇ ನೇಜಗಿಡವನ್ನು ನಡುವ ಕ್ರಮದಲ್ಲಿ ನಟ್ಟ ಬೆಳೆಯು ಚೆನ್ನಾಗಿ ಬೆಳೆಯುವುವೆಂದು ನನ್ನ ಅಭಿಪ್ರಾಯವು ನನ್ನ ಬೈಲು ಗದ್ದೆಗಳ ಪೈರನ್ನು ನೋಡಿದ ಮಿರಾಸಿದಾರರು ಒಂದೊಂದೇ ನೇಜಗಿಡವನ್ನು ನಡುವ ಕ್ರಮವೇ ವಾಡಿಕೆಯಲ್ಲಿರುವ ಕ್ರಮಕ್ಕಿಂತ ಚೆನ್ನಾಗಿರಬೇಕೆಂದು ಖಚಿತಗೊಂಡು ಮೊದಲು ಪರೀಕ್ಷಿಸಿ ನೋಡಲಿಕ್ಕೆ ನಿರಾಕರಿಸಿದರೂ ಈಗ ಈ ವಿಧವನ್ನೆ ಪ್ರಯೋಗಿಸಬೇಕೆಂದು ಅಭಿಪ್ರಾಯ ಪಡುತ್ತಾರೆ ಆದುದರಿಂದ ಈ ವರುಷದಲ್ಲಿ ಇನ್ನೂ ಅನೇಕಮಂದಿ ಜಮೀನ್ದಾರರು ಈ ವಿಧವನ್ನು ಅವಲಂಬಿಸುವರೆಂದು ನೆನಸುತ್ತೇನೆ ಒಂದೊಂದೇ ನೇಜಗಿಡವನ್ನು ನಡುವ ಕ್ರಮದಿಂದ ಹುಟ್ಟಿದ ಭತ್ತದಕಾಳು ಸಾಧಾರಣ ಕಾಳಿಗಿಂತ ದಪ್ಪವಾಗಿದೆ ಆದರೆ ಎರಡಕ್ಕೂ ಒಂದೇ ಕ್ರಯ ಬರುತ್ತದೆ ಒಂದೊಂದೇ ನೇಜಿಯ ಗಿಡವನ್ನು ನಡುವ ಕ್ರಮವು ಲಾಭಕರವೆಂಬುದಕ್ಕೆ ಏನೂ ಸಂದೇಹವಿಲ್ಲ

(5) ಶಿಯಾಳಿ ತಾಲ್ಲೂಕು ಮಣ್ಣಿಯೂರಲೂರಿನ ಮ|| ಸಾಮಿನಾಥ ಅಯ್ಯರವರು ಹೀಗೆ ಬರೆಯುತ್ತಾರೆ — ಒಂದೊಂದೇ ನೇಜಗಿಡವನ್ನು ನಡುವ ಕ್ರಮವು ಲಾಭವುಳ್ಳದ್ದು. ಮುಂಚೆ 8 ವೇಲಿ ಗದ್ದೆಗಳಿಗೆ 60 ಕಲಮ್ ಬೀಜ ಬೇಕಾಗುತ್ತಿತ್ತು (1 ಕಲಂಗೆ 24 ಪಡಿ 1 ವೇಲಿಗೆ 6⅔ ಎಕ್ರೆ) ಎಂದರೆ ಎಕ್ರೆ ಒಂದಕ್ಕೆ 36 ಪಡಿ ಬೀಜ ಬೇಕಾಗುತ್ತಿತ್ತು ಆದರೆ ಈ ವರುಷ ನಾನು 15 ಕಲಂ ಬೀಜವನ್ನು ಮಾತ್ರ ಉಪಯೋಗಿಸಿದೆನು (ಎಕ್ರೆಗೆ 9 ಪಡಿ) ಈ ರೀತಿಯಲ್ಲಿ ಬೀಜದಲ್ಲಿ ಮಾತ್ರವೇ 45 ಪಡಿ ಆದಾಯವುಂಟು ಉತ್ಪತ್ತಿ ಮೇರೆಗೆ ನನ್ನ ನೆರೆಯ ರೈತರಿಗಿಂತ 120 ಕಲಂ ಭತ್ತ ಹೆಚ್ಚು ಸಿಕ್ಕಿತು ಹೀಗೆ ನನಗೆ 165 ಕಲಂ ಎಂದರೆ ಬೀಜದಲ್ಲಿ 45 ಕಲಂ ಮತ್ತು ಮಿಗಿಲಾದ ಉತ್ಪತ್ತಿಯಿಂದ 120 ಕಲಂ ಭತ್ತ ಆದಾಯವಾಗಿದೆ (ಎಂದರೆ, ಎಕ್ರೆಗೆ ಒಟ್ಟು 59 ಪಡಿ ಮೇರೆಗೆ) ಈ ವರುಷ ನವೆಂಬರ್ 1 ನೇ ತಾರೀಖಿನಿಂದ ಮಳೆ ಬರಲಿಲ್ಲ, ನದಿಯಲ್ಲಿ ಹೊಸ ನೀರೂ ಬರಲಿಲ್ಲ ಅಲ್ಲದಿದ್ದರೆ ನನಗೆ ಇನ್ನೂ ಹೆಚ್ಚು ಆದಾಯ ಸಿಕ್ಕುತ್ತಿತ್ತು

(6) ತಂಜಾವೂರು ಜಿಲ್ಲೆ ಮನ್ನಾರಗುಡಿ ಡಾಕ್ಟರ್ ಟಿ ಎಲ್ ದೇವಸಿಂಗರವರು ಬರೆಯುವದೇನಂದರೆ —ಬೆಟ್ಟ ಭೂಮಿಗಳಲ್ಲಾಗಲಿ, ಬೈಲುಗದ್ದೆಗಳಲ್ಲಾಗಲಿ, ಉಸುಬುಮಣ್ಣಿನಲ್ಲಾಗಲಿ, ಎರೆಮಣ್ಣಿನಲ್ಲಾಗಲಿ, ಗೊಬ್ಬರಹಾಕಿದ ಗದ್ದೆಗಳಲ್ಲಾಗಲಿ, ಗೊಬ್ಬರಹಾಕದಿದ್ದ ಗದ್ದೆಗಳಲ್ಲಾಗಲಿ—ಎಲ್ಲಾ ತರದ ಮಣ್ಣಿನಲ್ಲಿಯೂ ಒಂದೊಂದೇ ನೇಜಿಯವನ್ನು ನಡುವ ಕ್ರಮದಿಂದ ನಟ್ಟ ಪೈರು ಚೆನ್ನಾಗಿ ಫಲಿಸುತ್ತದೆ ಪ್ರತಿ ಒಂದು ಗಿಡವೂ 15 ರಿಂದ 100 ರ ವರೆಗೆ ಅದ್ದ ಚಿಗುರುಗಳನ್ನು ಬಿಟ್ಟಿರುವವು ಉತ್ಪತ್ತಿಯು ಮಟ್ಟಿಗೆ ಮೊದಲನೇ ವರುಷಕ್ಕಿಂತ ಎರಡನೇ ವರುಷವೂ, ಎರಡನೇ ವರುಷಕ್ಕಿಂತ ಮೂರನೇ ವರುಷವೂ ಕ್ರಮವಾಗಿ ಹೆಚ್ಚುತ್ತಾ ಬಂದಿದೆ

ಶ್ರೀ ವಾಣೀವಿಲಾಸ ಅರಸೂ ಬಾಲಿಕಾ ಪಾಠಶಾಲ

ಶ್ರೀಮನ್ ಮಹಾರಾಜರವರು ಪ್ರಾರಂಭಮಾಡಿದ್ದು

ಕಳೆದ ಶುಕ್ರವಾರ ಮಧ್ಯಾಹ್ನ ಇಲವಾಲದ ರಸ್ತೆಯಲ್ಲಿರುವ ಮೂ: ಮಹಾರಾಜ ಕುಮಾರಿಯವರ ಬಂಗಲೆಯಲ್ಲಿ ಶ್ರೀ ವಾಣೀವಿಲಾಸ ಅರಸೂ ಬಾಲಿಕೆಯರ ಪಾಠಶಾಲೆಯ ಪ್ರಾರಂಭೋತ್ಸವವು ಜರುಗಿಸಲ್ಪಟ್ಟಿತು ನಮ್ಮ ಮಹಾಮಾತೃಶ್ರೀಯವರೂ ಶ್ರೀಮನ್ ಮಹಾರಾಜರವರೂ ದಯಮಾಡಿಸಿದ್ದರು ಸರ್ದಾರ್ ಲಕ್ಷ್ಮೀಕಾಂತರಾಜೇ ಅರಸಿನವರೂ, ಸರ್ದಾರ್ ಗೋಪಾಲರಾಜೇ ಅರಸಿನವರೂ, ಮ|| ನಂಜುಂಡರಾಜೇ ಅರಸಿನವರೂ, ಮ|| ಚಿಕ್ಕಲಿಂಗರಾಜೇ ಅರಸಿನವರೂ, ಮ|| ಬಿ ರಾಮಕೃಷ್ಣರಾಯರೂ ಇನ್ನೂ ಅನೇಕ ಜನ ದೊಡ್ಡಮನುಷ್ಯರುಗಳೂ ಆ ಕಾಲದಲ್ಲಿ ಹಾಜರಿದ್ದು ಶ್ರೀಮನ್ ಮಹಾರಾಜರವರ ಸವಾರಿಯ ದಯಮಾಡಿಸಿದ ಕೂಡಲೆ ಸ್ವಾಗತವನ್ನು ಬಯಸಿದರು ಶ್ರೀಮನ್ ಮಹಾರಾಜರವರು ಆಗ್ರಾಸನವನ್ನು ವಹಿಸಿದ ಕೂಡಲೆ ಮ|| ನಂಜುಂಡರಾಜೇ ಅರಸಿನವರು ಈ ಕೆಳಗೆ ಹೇಳುವಂತೆ ವಿಜ್ಞಾಪನ ಪತ್ರಿಕೆಯನ್ನು ಒಪ್ಪಿಸಿದರು

ಶ್ರೀಮನ್ ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನ ಸಿ ಐ, ಮಹಾಸ್ವಾಮಿಯವರ ಘನವಾದ ಮಹಾಸಾನ್ನಿಧ್ಯದಲ್ಲಿ ವಂಶಪಾರಂಪರ್ಯದಿಂದಲೂ ಪಾದಪದ್ಮಾಶ್ರಯಾಶ್ರಿತರಾಗಿ ಎಂದ, ಅರಸುಗಳ ಮಂಡಲಿಗೆ ಸೇರಿದ ನಾವುಗಳು ಕೆಲವು ವಿಷಯಗಳನ್ನು ಎಜ್ಞಾಪಿಸಿಕೊಳ್ಳುವುದಕ್ಕೆ ಅವಕಾಶವನ್ನು ಅಪ್ಪಣೆ ಕೊಡಿಸಿದ್ದಕ್ಕಾಗಿ ಮಹಾಸ್ವಾಮಿಯವರಿಗೆ ಅತ್ಯಂತ ಕೃತಜ್ಞರಾಗಿರುತ್ತೇವೆ ಮಹಾಸ್ವಾಮಿ

ಘನವನ್ನು ಹೊಂದಿದ ನಮ್ಮ ಮಹಾಸ್ವಾಮಿಯವರಾದ, ಲೇಟ್ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ ಸಿ ಎಸ್ ಐ ರವರು ಪ್ರಜೆಗಳಿಗೆ ಸಂತೋಷ ಉಂಟಾಗುವಂತೆ ಬಹು ನಾಗರೀಕತೆಯಿಂದ, ರಾಜ್ಯಾಭಿವೃದ್ಧಿಗೆ ಸಾಧನವಾದ ಅನೇಕ ಏರ್ಪಾಡುಗಳನ್ನು ಮಾಡಿ, ಅದರ ಜತೆಯಲ್ಲೇ, ತಮ್ಮದೆಂದು ವರ್ಗಕ್ಕೆ ಸೇರಿದ ನಮ್ಮಗಳ ವಿದ್ಯಾಲೋಪವಂ ಪರ್ಯಾಲೋಚಿಸಿ ಇತರರಂತೆ ನಮ್ಮಗಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಕುತೂಹಲದಿಂದ, ನಮ್ಮ ಬಾಲಕರ ವಿದ್ಯಾಭ್ಯಾಸಕ್ಕಾಗಿ, "ಶ್ರೀ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಸ್ಕೂಲ್" ಎಂಬ ನಾಮವನ್ನಿಟ್ಟು, ಒಂದು ವಿದ್ಯಾನಿಲಯವನ್ನೇರ್ಪಡಿಸಿ ಗ್ರಾಮಾಂತರಗಳಲ್ಲಿರುವ ಅರಸುಗಳ ಬಾಲಕರನ್ನು ಕರೆತರಿಸಿ, ಅವರಿಗೆ ಅನ್ನವಸ್ತ್ರಾದಿ ಸೌಕರ್ಯಗಳನ್ನೆಲ್ಲಾ ಕಲ್ಪಿಸಿ ವಿದ್ಯಾಭ್ಯಾಸವನ್ನು ಮಾಡಿಸಿ, ಪ್ರೋತ್ಸಾಹಪಡಿಸುತ್ತಿದ್ದ ಸಂಗತಿಯು ಮಹಾ ಸನ್ನಿಧಾನಕ್ಕೆ ಸ್ಪಷ್ಟವೇ ಆಗಿರುತ್ತೆ ಮಹಾಸ್ವಾಮಿ

ಅವರ ಸತ್ಯಮಹಿಷಿಯರಾದ ತಾವು ಅದೇ ವಾತ್ಸಲ್ಯವನ್ನಿಟ್ಟು, ಆ ಮಹಾಸ್ವಾಮಿಯವರ ಧರ್ಮವನ್ನು ಸಫಲಗೊಳಿಸಬೇಕೆಂಬ ಅಭಿಪ್ರಾಯದಿಂದ ಆ ಸ್ಕೂಲಿನ ಅಭಿವೃದ್ಧಿಗೆ ಬೇಕಾದ ಅನೇಕ ಉಪಕರಣಗಳನ್ನು ಹೆಚ್ಚಿಸಿ ಅದನ್ನು ಉದ್ಧಾರಮಾಡಿದ ವಿಷಯವನ್ನು ನಾವುಗಳು ಎಷ್ಟು ಸ್ತೋತ್ರಮಾಡಿದರೂ ಸಾಲದ್ದಾಗಿರುತ್ತೆ ಮಹಾಸ್ವಾಮಿ

ಈಚೆಗೆ ಈ ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ ಸಿ ಎಸ್ ಐ ಯವರು ರಾಜ್ಯಭಾರವನ್ನು ವಹಿಸಿದ ಮೇಲೆ ತಮ್ಮಗಳ ಧರ್ಮವನ್ನೇ ಅನುಸರಿಸಿ ಪೂರ್ಣ ವಾತ್ಸಲ್ಯದಿಂದ ಈ ಸ್ಕೂಲನ್ನು ಬಹು ಶೀಘ್ರದಲ್ಲೇ ಪ್ರಬಲವಾದ ಅಭಿವೃದ್ಧಿಗೆ ಬರುವಂತೆ ಮಾಡಬೇಕೆಂದು ಬೇಕಾದ ಸಹಾಯ ಸಂಪತ್ತಿಯನ್ನು ಒದಗಿಸಿಕೊಟ್ಟು, ಕಾಪಾಡಿಕೊಂಡು ಬರುತ್ತಿರುವವರ ಜತೆಯಲ್ಲಿ ನಮ್ಮ ಶ್ರೀಮನ್ ಯುವರಾಜ ಕಂಠೀರವ ನರಸರಾಜವಡೆಯರ್ ಬಹದ್ದೂರ್, ಕೆ ಸಿ ಐ ಇ ಯವರು ಸಹ ತುಂಬಾ ಮಮತೆ ಇಟ್ಟು, ಈ ಬೋರ್ಡಿಂಗ್ ಸ್ಕೂಲ್ ಕಾರ್ಯನಿರ್ವಾಹಕ ಸಂಘಕ್ಕೆ ತಾವೇ ಪ್ರೆಸಿಡೆಂಟರಾಗಿ, ಇದರ ಉತ್ತರೋತ್ತರಾಭಿವೃದ್ಧಿಗೆ ಕಾರಣವಾಯುಂಟಾಗುವಂತೆ ಮಾಡಬೇಕಾದ ಕಾರ್ಯಗಳನ್ನು ನಡಿಸುವುದರಲ್ಲಿ ಬದ್ಧಕಂಕಣರಾಗಿರುವುದು ನಮ್ಮ ಪೂರ್ವ ಜನ್ಮದ ಪುಣ್ಯೋದಯವೆಂದು ಭಾವಿಸುತ್ತೇವೆ ಮಹಾಸ್ವಾಮಿ ಈ ಸಹಾಯ ಸಂಪತ್ತುಗಳಿಂದ ನಮ್ಮ ಬಾಲಕರೆಲ್ಲರೂ ವಿದ್ಯಾಭ್ಯಾಸಂಗದಲ್ಲಿ ನಿರತರಾಗಿ ಅವರಲ್ಲಿ ಕೆಲವರು ಬಿ ಎ, ಬಿ ಎಲ್ ಪರೀಕ್ಷೆಯಲ್ಲೂ ಸಹ ತೇರ್ಗಡೆಯಾಗಿ, ಮಹಾಪದವಿಗಳಿಗೆ ಯಶಸ್ಸನ್ನು ತಂದಿರುತ್ತಾರೆ ಮಹಾಸ್ವಾಮಿ

ಪ್ರಕೃತದಲ್ಲಿ ಅರಸುಗಳ ಬಾಲಕರು ಮಾತ್ರ ವಿದ್ಯಾವಂತರಾಗಿ, ಬಾಲಿಕೆಯರು ಮಾತ್ರ ಅವಿದ್ಯಾವತಿಯರಾಗಿದ್ದರೆ ಮುಂದೆ ಪ್ರತಿಕೂಲತೆ ಒದಗುವುದೆಂಬ ಭಾಗವನ್ನು ನಮ್ಮ ಶ್ರೀಮನ್ ಮಹಾಸ್ವಾಮಿಗಳವರು ತಮ್ಮ ಉದಾರ ಚಿತ್ತದಲ್ಲಿ ತಂದು, ಬಾಲಿಕೆಯರಿಗೂ ಒಂದು ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ನಿರ್ಣಯಿಸಿ, ಈ ದಿವಸ ಇದರ ಸ್ಥಾಪನ ಮಹೋತ್ಸವವನ್ನು ನಡಿಸಬೇಕೆಂದು ಅಪ್ಪಣೆಕೊಡಿಸಿ ಇಲ್ಲಿಗೆ ತಮ್ಮ ಸವಾರಿಯನ್ನು ಸಹ ಬೆಳೆಯಿಸಿಕೊಂಡು ಒತ್ತೈಸಿರುವ ಸಂಗತಿಯು ಪಾದಸೇವಕರಾದ ನಮ್ಮೆಲ್ಲರಿಗೂ ಪರಮಾನಂದ ಪ್ರದಾಯಕವಾಗಿರುವುದು, ಮಹಾಸ್ವಾಮಿ

ಈ ಪಾಠಶಾಲೆಗೆ ತಮ್ಮ ನಾಮಧೇಯವನ್ನಿಟ್ಟು "ವಾಣೀವಿಲಾಸ ಅರಸ್ ಗರ್ಲ್ಸ್ ಸ್ಕೂಲ್" ಎಂದು ಕರೆಯುವುದಕ್ಕೆ ಆಜ್ಞೆಯನ್ನು ದಯಪಾಲಿಸಿ, ಆ ಪಾಠಶಾಲೆಯ ಪ್ರಾರಂಭಮಹೋತ್ಸವವನ್ನು ತಮ್ಮ ಸನ್ನಿಧಾನದಿಂದಲೇ ನೆರವೇರಿಸಬೇಕೆಂತಲೂ, ನಮ್ಮ ಬಾಲಕರ ಸ್ಕೂಲನ್ನು ವೃದ್ಧಿಗೊಳಿಸಿದಂತೆ ಈ ಸ್ಕೂಲನ್ನೂ ಸಹ ಶೀಘ್ರದಲ್ಲೇ ಅಭಿವೃದ್ಧಿಗೆ ತಂದು ನಮ್ಮಗಳನ್ನು ಉದ್ಧಾರಮಾಡಬೇಕೆಂತಲೂ ಭಯಭರಿತ ಭಕ್ತಿಯಿಂದ ಅಂಜಲಿಬದ್ಧರಾಗಿ ಬೇಡಿಕೊಳ್ಳುತ್ತೇವೆ ಮಹಾಸ್ವಾಮಿ ಈ ವರಿಗೂ ನಮ್ಮ ವಿಜ್ಞಾಪನೆಗೆ ಅವಕಾಶಕೊಟ್ಟು ಲಾಲಿಸಿದುದಕ್ಕಾಗಿ ಪಾದಸೇವಕರು ಬಹು ಕೃತಜ್ಞರಾಗಿದ್ದೇವೆ ಮಹಾಸ್ವಾಮಿ

ಮಹಾಮಾತೃಶ್ರೀಯವರಾದ ತಮಗೂ, ನಮನ್ನಾಳುವ ಮಹಾಸ್ವಾಮಿಯವರಿಗೂ, ಶ್ರೀಮದ್ಯುವರಾಜ ಕಂಠೀರವರಿಗೂ ಮತ್ತು ಸಕಲ ರಾಜಕುಟುಂಬಕ್ಕೂ ನಿರಂತರ ಕ್ಷೇಮಾರೋಗ್ಯಚಿರಾಯುಗಳನ್ನು ತಮ್ಮ ಕುಲದೇವತೆಯಾದ ಶ್ರೀ ಚಾಮುಂಡಾಂಬಿಕೆಯು ಕೃಪೆಯಿಂದನುಗ್ರಹಿಸಬೇಕೆಂದ ತ್ರಿಸಂಧ್ಯಾ ಕಾಲದಲ್ಲೂ ಹಾರೈಸುವ ಮಹಾ ಪಾದಸೇವಕರ ಅನಂತಾನಂತ ಭಿನ್ನಪಗಳು ಮಹಾಸ್ವಾಮಿ

ಇದು ಪೂರೈಸಿದ ಎಳಿಕ ಶ್ರೀಮನ್ ಮಹಾರಾಜರವರು ಅಪ್ಪಣೆ ಕೊಡಿಸಿದ್ದೇನೆಂದರೆ —

ಅರಸು ಮಂಡಲದ ಮಹಾಜನರೇ, ನಮ್ಮ ಮಹಾಮಾತೃಶ್ರೀಯವರು ನಾವೂ ಸಹ ಈ ದಿವಸ ನಡೆಯುವ ಅರಸುಗಳ ಬಾಲಿಕಾ ಪಾಠಶಾಲೆಯ ಆರಂಭ

...ತ್ರವನ್ನು ...ಗಿಗಳಾಗಿರುವುದಕ್ಕಾಗಿ ತುಂಬಾ ಸಂತೋಷಿಸುತ್ತೇವೆ ...ವರ್ಧನವು ಅರಸುಗಳ ಚರಿತ್ರೆಯಲ್ಲಿ ಶಾಶ್ವತವಾಗಿ ನಿಲ್ಲುವಂತಹ ಒಂದು ...ವಾದ ಅಂಶವಾಗಿದೆ ನಮ್ಮ ಬಾಲಕಿಯರು ಈ ದಿನ ಮೊದಲುಗೊಂಡು ...ವ್ಯಾಸಂಗದಲ್ಲಿ ನಿರತರಾಗಿ ಮುಂದೆ ಶ್ರೇಯೋಭಿವೃದ್ಧಿಯನ್ನು ಹೊಂದಲೆಂ... ನಮ್ಮ ಮತ್ತು ಮಹಾಮಾತೃಶ್ರೀಯವರ ನಿರಂತರವಾದ ಕೋರಿಕೆ ...ಶ್ರೀ ಚಾಮುಂಡೇಶ್ವರಿಯು ಕರುಣಿಸಲೆಂದು ಪ್ರಾರ್ಥಿಸುತ್ತೇವೆ ಲೋಕ ...ರುವ ಜನರ ಸಮುದಾಯವೇ ಆಗಲಿ ಪೂರ್ತಿಯಾಗಿ ಅರ್ಥವಾಗಲು ...ಗೂ ವಿದ್ಯಾವಿಹೀನರಾಗಿ ಜ್ಞಾನಶೂನ್ಯರಾಗಿದ್ದರೆ ಆ ಸಮುದಾಯವು ...ಯು ಏಳಿಗೆಯಾಗಲಾರದೆಂಬುವದು ವಾಡಿಕೆಯ ನುಡಿಯಾಗಿಯೇ ಇದೆ ...ದಲ್ಲಿ ನಮ್ಮ ಜನದ ಸ್ಥಿತಿಯನ್ನು ನೋಡಿದರೆ ಸರ್ವಸಾಧಾರಣವಾಗಿಯೂ ...ಕರವಾಗಿರುತ್ತೆ ಮುಂದೆ ನಮ್ಮ ಮಕ್ಕಳುಗಳಿಗೆ ತಾಯಿಯರಾಗಿ ...ರುವ ಬಾಲಕಿಯರ ವಿಷಯದಲ್ಲಿ ವಿದ್ಯಾಭ್ಯಾಸಂಗವನ್ನು ನಿರಾಕರಿಸಿದರೆ ...ಅಪಾಯವು ಸಂಭವಿಸುವುದೆಂಬ ಭೀತಿಯು ಈಗಲಾದರೂ ನಮಗೆ ತೋರಿ... ಈ ಪಾಠಶಾಲೆಯನ್ನು ಸ್ಥಾಪಿಸಿದ್ದಕ್ಕೆ ನಾವು ತುಂಬಾ ಸಂತೋಷಿಸು... ನಮ್ಮಲ್ಲಿರತಕ್ಕ ಪ್ರತಿಯೊಬ್ಬರೂ ಇದನ್ನು ನಡಿಸುವದಲ್ಲಿ ಆಸಕ್ತಿಯು... ಇದರಿಂದಾಗಬಹುದಾದ ಸಕಲ ಪ್ರಯೋಜನವನ್ನೂ ಹೊಂದುವವರಾಗ... ಯಾಕೆಂದರೆ ಈ ಪಾಠಶಾಲೆಯ ಅಭಿವೃದ್ಧಿಯು ಹ್ಯಾಗೆ ಪರಿಣಮಿಸು... ಅದರಂತೆಯೆ ಮುಂದಿನ ನಮ್ಮ ಏಳಿಗೆಯೂ ಸಹ ಅದಕ್ಕೇ ಅನುಸರಿಸು... ಈ ಶಾಲೆಗೆ ನಮ್ಮ ಮಹಾಮಾತೃಶ್ರೀಯವರ ಅಭಿಧಾನವನ್ನಿಡಬೇ... ನಮ್ಮ ಪ್ರಾರ್ಥನೆಯು ಅವರಿಗೆ ಸಮರ್ಪಕವಾಗಿ ಅದನ್ನು ಸಂತೋಷ... ಅಂಗೀಕರಿಸಿದಾರೆ ಈ ಸಮಯದಲ್ಲಿ ಮ|| ನಂಜುಂಡರಾಜೆ ಅರಸಿನವರು ...ಶಾಲೆಯ ಸ್ಥಾಪನೆಗಾಗಿ ಬಹಳವಾಗಿ ಶ್ರಮಪಟ್ಟಿರುತ್ತಾರೆಂಬ ಸಂಗತಿ... ನಿಮಗೆ ನಾವು ತಿಳಿಸಲು ತುಂಬಾ ಸಂತೋಷಪಡುತ್ತೇವೆ ಸೇವೆಗಳ... ...ಕ್ಕಾಗಿ ಇವರಿಗೆ ಕೃತಜ್ಞರಾಗಿರುವೆವೆಂದು ನಂಬುತ್ತೇವೆ ಈ ದಿವಸ ...ಳು ಬಹಳ ವಿಶ್ವಾಸದಿಂದ ಒಪ್ಪಿಸಿದ ವಿಜ್ಞಾಪನಪತ್ರವನ್ನು ನಮ್ಮ ವ... ...ವಾಗಿ ಅಂಗೀಕರಿಸಿ ನಾವೂ ಮತ್ತು ನಮ್ಮ ಮಹಾಮಾತೃಶ್ರೀಯ... ...ತ ಈ ವಾಣೀವಿಲಾಸ ಅರಸೂ ಗರ್ಲ್ಸ್ ಸ್ಕೂಲಿನ ಅಭ್ಯುದಯದಲ್ಲಿ ...ರವಾಗಿರುತ್ತೇವೆಂಬ ಅಂಶವನ್ನು ನಿಮಗೆ ತಿಳಿಸಲು ಸಂತೋಷಿಸುತ್ತೇವೆ ...ಳ ಬಾರಿ ಕುರಾಯಿಗಳು ಅರ್ಪಿಸಲ್ಪಟ್ಟು ಜಯಘೋಷದಿಂದ ...ಮುಕ್ತಾಯವಾಯಿತು ಮಹಾ ಮಾತೃಶ್ರೀಯವರು ಸ್ಕೂಲನ್ನೆಲ್ಲಾ ...ವಾಗಿ ಪರಾಂಬರಿಸಿ ಬಹಳ ಸಂತೋಷಪಟ್ಟರು ಈ ಸ್ಕೂಲಿನಲ್ಲಿ ...೬ ಜನ ಬಾಲೆಯರು ವಿದ್ಯಾಭ್ಯಾಸಮಾಡುತ್ತಿರುವರು ಮಿಸ್ ಅಲ್ಬರಸ್ ...ವು ಇವರ ಸೂಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುವರು ಇವರು ...ದೇಶದ ಟೋರಂಟೋ ವಿಶ್ವವಿದ್ಯಾನಿಲಯದಲ್ಲಿ ಬಿ ಎ ಪರೀಕ್ಷೆಯನ್ನು ...ವರು ಈ ಸ್ಕೂಲನ್ನು ಉಪಕ್ರಮಿಸುವುದರಲ್ಲಿ ಮ| ಎಚ್ ನಂಜುಂಡ... ...ನವರು ವಿಶೇಷ ಶ್ರಮವನ್ನು ವಹಿಸಿದ್ದಕ್ಕಾಗಿ ಅರಸು ಮಹಾಜನಗಳ ಬಹಳ ಕೃತಜ್ಞರಾಗಿರಬೇಕು ಈ ಸ್ಕೂಲನ್ನು ಸ್ಥಾಪಿಸುವುದರಲ್ಲಿ ...ಮಹಾರಾಜರವರು ಮಾಡಿದ ಉದಾರವಾದ ಸಹಾಯಕ್ಕಾಗಿ ನಾವು ...ಸಂತೋಷಪಡುತ್ತೇವೆ ಅರಸೂ ಮಹಾಜನಗಳು ಈ ಸ್ಕೂಲಿನಿಂದಾಗಬಹು... ...ಪೂರ್ಣ ಪ್ರಯೋಜನವನ್ನು ಪಡೆಯುವರೆಂದು ಕೋರುತ್ತೇವೆ

ಎಸ್

ವಿದೇಶ ವೃತ್ತಾಂತಗಳು

...ಷಿಯಾ ಗವರ್ನ್‌ಮೆಂಟಿಗೆ ರಾಜ್ಯಭಾರ ಕಾರ್ಯಗಳನ್ನು ನಡಿಸುವುದ... ...ಷ್ಯಾ ಸರ್ಕಾರದವರು ಸಾಲಕೊಡುವುದಾಗಿ ಒಪ್ಪಿಕೊಂಡಿದ್ದ ಮೊಬಲಗಿ... ೩೦ ಲಕ್ಷ ರೂಪಾಯನ್ನು ಪಾವತಿಮಾಡಿದರು ಇಂಗ್ಲಿಷ ಗವರ್ನ್... ...ವರು ಒಪ್ಪಿಕೊಂಡಿದ್ದ ಮೊಬಲಗಿನಲ್ಲಿ ೧೦ ಲಕ್ಷ ರೂಪಾಯನ್ನು ಪರ್ಷಿ... ...ರಿಗೆ ಈ ವಾರ ಸಾಲ ಕೊಡುವುದರಲ್ಲಿದಾರೆ

...ಗ್ಲಾಂಡಿನಲ್ಲಿ ಹೆಂಗಸರಿಗೆ ಓಟ್ ಮಾಡುವ ಅಧಿಕಾರವನ್ನು ಕೊಡಬೇ... ...ಹೋರಾಡುವುದಕ್ಕಾಗಿ ಸ್ತ್ರೀಯರ ಸಂಘಗಳು ಏರ್ಪಾಡಾಗಿರುತ್ತವೆ ...ಒಂದು ಸಂಘದಲ್ಲಿ ೩೬,೭೩೦ ಪೌಂಡು ಕಳೆದ ವರುಷ ಖರ್ಚಾಗಿದೆ ...ಅವರ ಉದ್ದೇಶವು ಸಾರ್ಥಕಪಡುವತನಕ ಅವರು ತಮ್ಮ ಹೋರಾಟ... ...ಡುವುದಿಲ್ಲವೆಂದೂ ಸ್ತ್ರೀಯರು ಪ್ರಕಟಿಸಿರುವ ರಿಪೋರ್ಟಿನಿಂದ ಗೊತ್ತಾ...

...ಲಿ ರಾಜ್ಯದವರು ಟ್ರಿಪೋಲಿಯಲ್ಲಿ ಟರ್ಕಿಯವರ ಮೇಲೆ ಯುದ್ಧ ಮಾ... ...ಇಟಲಿಯ ಪ್ರಜೆಗಳು ಸೈನಿಕರಿಗೋಸ್ಕರ ಕೆಲವು ವಿಮಾನ ಯಂತ್ರಗ... ...ಮಾರ್ಣಿಸಿ ಒಪ್ಪಿಸುವುದಾಗಿ ಗೊತ್ತುಮಾಡಿಕೊಂಡು ೩೧ ಲಕ್ಷ ದ್ರ... ...ಚಂದಾ ಮೂಲಕ ಕೂಡಿಸಿದರು ಈ ಹಣದಿಂದ ಈಗ ೩೦ ವಿಮಾನ... ...ಗಳನ್ನು ಮಾಡಿಸುತ್ತಿದಾರೆಂದೂ, ಈ ಪೈಕಿ ಏಳು ವಿಮಾನಗಳು ಸಿದ್ಧವಾ... ...ವೂ ತಿಳಿದು ಬರುತ್ತದೆ

...ಮೇರಿಕದ ರಾಜಧಾನಿಯಾದ ನ್ಯೂಯಾರ್ಕ ಪಟ್ಟಣದಲ್ಲಿ ಅಮದು... ...ಹಳ ವಿಶೇಷವಾಗಿ ಹೆಚ್ಚುತ್ತಾ ಬಂದು ಈಗಿನ ರಸ್ತೆಗಳೂ ವಾಹನ... ...ಲದೆ ಹೋಗಿರೋಣದರಿಂದ ಮ್ಯುನಿಸಿಪಾಲಿಟಿಯವರು ನಾನಾ ...ರಂಗ ಮಾರ್ಗಗಳನ್ನು ಕಲ್ಪಿಸಿ ಅವುಗಳಲ್ಲಿ ರೈಲ್ ಗಾಡಿಗಳನ್ನು ಓಡಿ... ...ಯೂ, ಭೂಮಿ ಮಾರ್ಗಗಳಲ್ಲಿ ತಂತಿಯ ಮೇಲ್ಗಡೆ ಅಂತರಿಕ್ಷದಲ್ಲಿ ...ಡಿಗಳ ಸಂಚಾರಕ್ಕೆ ಅನುಕೂಲಮಾಡಿಕೊಡಬೇಕೆಂದೂ ತೀರ್ಮಾನ... ...ಕಾಮಗಾರಿಗಳಿಗೆ ೧೬ ಕೋಟಿ ೫೦ ಲಕ್ಷ ರೂಪಾಯಿ ಖರ್ಚುಮಾಡು... ...ವಾರೆ

...ಸ್ ರಾಜ್ಯದ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ವೈದ್ಯ... ...ಶಾಸ್ತ್ರ ಶೋಧಕನು ಅನೇಕ ಪರೀಕ್ಷೆಗಳನ್ನು ಮಾಡಿ ನೋಡಿದ್ದರಲ್ಲಿ ...ವನ್ನು ಉಪಯೋಗಿಸತಕ್ಕವರಿಗೆ ಹಾಂತರಂದಿ ಉಪದ್ರ ತಗಲುವುದಿ... ...ಗೊತ್ತಾಗಿದೆ ಎಂದು ತಿಳಿಸುತ್ತಾನೆ ಆ ರೋಗದ ಕ್ರಿಮಿಗಳು ಹೊಗೆ... ...ದಲ್ಲಿ ಸ್ವಲ್ಪಹೊತ್ತಿನೊಳಗಾಗಿ ಸತ್ತುಹೋಗುವವಂತೆ ಹಾಂಬಗ... ...ಚುಟ್ಟಾಗಳು ತಯಾರಾಗುವ ಕಾರ್ಖಾನೆಯೊಳಗೆ ಯಾವನೊಬ್ಬ ಕೆಲಸಗಾರನಿಗೂ ಆ ರೋಗ ತಗಲಲಿಲ್ಲವೆಂದು ಆತನು ದೃಷ್ಟಾಂತವಾಗಿ ಹೇಳುತ್ತಾನೆ ಇದನ್ನು ನಂಬುವುದು ಅಸಾಧ್ಯ

ಮಿ|| ಚಾರ್ಲ್ ಸಾಲೊಮನ್ ಎಂಬೊಬ್ಬ ಇಂಗ್ಲಿಷ್ ಶಾಸ್ತ್ರ ಶೋಧಕನು ಮುತ್ತುಗಳನ್ನು ಶಾಸ್ತ್ರವತ್ತಾಗಿ ತಯಾರಿಸುವ ವಿದ್ಯೆಯನ್ನು ಕಲಿತು ಇರುತ್ತಾನೆ ಈತನು ಮಗ್ರಾವಿ ದ್ವೀಪಸಮುದಾಯಗಳಲ್ಲಿ ಎರಡು ವರುಷಕಾಲ ಇದ್ದು ಮುತ್ತುಗಳನ್ನ ಬೆಳೆಯುತ್ತಿದ್ದ ಈಗ ಸಿಲೋನ್ ದ ಪಕ್ಕ ಬಂದಿರುವನು ಈತನಿಂದ ಬೆಳೆಮಾಡಲ್ಪಟ್ಟ ಮುತ್ತುಗಳನ್ನು ಪ್ಯಾರಿಸ್ ಪಟ್ಟಣಕ್ಕೆ ಕಳುಹಿಸದರು ಸ್ವಭಾವಸಿದ್ಧವಾಗಿ ಆಗುವ ಮುತ್ತುಗಳಿಗಿಂತ ಈತನ ಮುತ್ತುಗಳು ವಿಶೇಷ ಹೊಳಪುಪಡೆದು ಹೆಚ್ಚು ಬೆಲೆಗೆ ಬಿಕರಿ ಆದವೆಂದೂ, ಇವಕ್ಕೇ ಈಗ ಜನರು ಹೆಚ್ಚಾಗಿ ಅಪೇಕ್ಷಿಸುತ್ತಿದಾರೆಂದೂ ಹೇಳಿದಾನೆ

ಅಮೇರಿಕಕ್ಕೆ ಸೇರಿದ ಕ್ಯಾಲಿಫೋರ್ನಿಯಾ ಸಂಸ್ಥಾನದ ಸರ್ಕಾರದವರು ಪರದೇಶೀಯರ್‍ಯಾರೂ ಅಲ್ಲಿ ಭೂಸ್ಥಿತಿಯನ್ನು ಪಡೆಯಕೂಡದೆಂದು ಒಂದು ಕಾನೂನನ್ನು ಮಾಡುವವರಾಗಿದಾರೆ ಜಪಾನ್ ಗವರ್ನ್‌ಮೆಂಟಿನವರು ಅಲ್ಲಿಗೆ ಹೋಗತಕ್ಕ ತಮ್ಮ ಪ್ರಜೆಗಳ ಅಭಿವೃದ್ಧಿಗೆ ಈ ಕಾನೂನು ಅಡ್ಡಿಯಾಗುವುದೆಂದೂ, ಅಂಥಾ ನಿರ್ಬಂಧವನ್ನು ಕಲ್ಪಿಸದಂತೆ ನೋಡಿಕೊಳ್ಳಬೇಕೆಂದೂ ಆ ಸಂಸ್ಥಾನದವರಿಗೆ ತಿಳಿಸಿದರೂ, ಸಂಯುಕ್ತ ಸಂಸ್ಥಾನಗಳ ಪ್ರೆಸಿಡೆಂಟರವರು ಈ ಕಾನೂನು ಸ್ಥಳೀಯ ಗವರ್ನ್‌ಮೆಂಟಿನವರಿಗೆ ಸಂಬಂಧಪಡುವುದಾದ್ದರಿಂದ ಆ ವಿಷಯದಲ್ಲಿ ತಾವು ಪ್ರವರ್ತಿಸುವುದಿಲ್ಲವೆಂದು ಜಪಾನ್‌ನವರಿಗೆ ಜವಾಬುಕೊಟ್ಟರು

ಅಮೇರಿಕದ ಮುಖ್ಯ ನಗರವಾದ ನ್ಯೂಯಾರ್ಕ ಪಟ್ಟಣದಲ್ಲಿ ಲಡ್ಲೋ ಸ್ಟ್ರೀಟ್ ಜೈಲ್ ಎಂಬ ಒಂದು ನವೀನವಾದ ಬಂದೀಖಾನೆಯುಂಟು ವಿವಾಹ ಸಂಬಂಧವನ್ನು ತ್ಯಜಿಸಿದ ಮೇಲೆ ಗಂಡನು ಹೆಂಡತಿಗೆ ಜೀವನಾಂಶಕೊಡಬೇಕೆಂದು ತೀರ್ಮಾನವಾಗುವ ಮೊಕದ್ದಮೆಗಳಲ್ಲಿ ಆ ಥಾ ಜೀವನಾಂಶವನ್ನು ಪಾವತಿಮಾಡದೆ ತಪ್ಪುವವರನ್ನು ಈ ಬಂದೀಖಾನೆಗೆ ಕಳುಹಿಸುತ್ತಾರೆ ಈ ಜೈಲಿನಲ್ಲಿ ಬಂದೀವಾನರಿಗಿರುವಷ್ಟು ಸೌಕರ್ಯಗಳು ಪ್ರಪಂಚದ ಇನ್ಯಾವ ಬಂದೀಖಾನೆಯಲ್ಲೂ ದೊರೆಯುವುದಿಲ್ಲ ಉತ್ತಮೋತ್ತಮವಾದ ಹೋಟೇಲುಗಳಲ್ಲಿ ಆಗಂತುಕರಿಗೆ ಶೈತ್ಯೋಪಚಾರಗಳು ನಡೆಯುವುದಕ್ಕಿಂತಲೂ ವಿಶೇಷವಾಗಿ ಈ ಜೈಲಿನ ಬಂದೀವಾನರಿಗೆ ನಡೆಯುತ್ತವೆ

ರಾಬರ್ಟ್ ವೀನರ್ ಎಂಬ ೧೮ ವಯಸ್ಸಿನ ಹುಡುಗನು ಪ್ರಪಂಚದಲ್ಲೆಲ್ಲಾ ಬಹಳ ಪ್ರಚಂಡನಾದವನೆಂದು ತಿಳಿದು ಬಂದಿದೆ ಇವನು ಅಮೇರಿಕದಲ್ಲಿದಾನೆ ಇವನಿಗೆ ೧೮ ತಿಂಗಳು ತುಂಬುವಷ್ಟರಲ್ಲಿ ವರ್ಣಮಾಲೆಯೆಲ್ಲಾ ತಿಳಿದಿತ್ತು ಮೂರು ವರುಷಕ್ಕೆ ಓದುಬರಹನ್ನು ಕಲಿತನು ಆರು ವರುಷಗಳೊಳಗಾಗಿ ಗಣಿತ, ಬೀಜಗಣಿತ, ರೇಖಾಗಣಿತಗಳಲ್ಲಿ ಗಟ್ಟಿಗನಾದನು ಇನ್ನೆರಡು ವರುಷಗಳಲ್ಲಿ ಅವನು ಲತೀನ್, ಜರ್ಮನ್, ಫ್ರೆಂಚ್, ರಷ್ಯನ್ ಭಾಷೆಗಳನ್ನು ಓದುವುದಕ್ಕೆ ಕಲಿತುಕೊಂಡನು ಹನ್ನೆರಡು ವರುಷಗಳಾಗುವಾಗ್ಗೆ ರಸಾಯನ ಶಾಸ್ತ್ರದಲ್ಲಿ ಪಂಡಿತನಾದನು ಈಗ ೧೮ ನೇ ವಯಸ್ಸಿನಲ್ಲಿ ಈ ಹುಡುಗನು ತತ್ವಶಾಸ್ತ್ರ ಪಂಡಿತನೆಂಬ ಅದಿ ತೀಯವಾದ ಪ್ರಾಶಸ್ತ್ಯವನ್ನು ಸಂಪಾದಿಸಿಕೊಂಡಿರುತ್ತಾನೆ

ಚೀನಾ ಚಕ್ರಾಧಿಪತ್ಯವು ಈಗ ಪ್ರಜಾಪ್ರಭುತ್ವವಾಗಿರುವುದು ಯುವಾನ್ ಷಿಕಾಯಿ ಎಂಬ ಮಹನೀಯನು ಈ ಪ್ರಭುತ್ವದ ಪ್ರೆಸಿಡೆಂಟಾಗಿರುತ್ತಾನೆ ಕಳೆದ ವಾರ ಎಲ್ಲಾ ಅಧಿಪತ್ಯಗಳಿಂದಲೂ ಪ್ರಜಾ ಪ್ರತಿನಿಧಿಗಳು ರಾಜಧಾನಿಯಾದ ಪೀಕಿಂಗ್ ನಗರಕ್ಕೆ ಹೋಗಿ ಪ್ರಭುತ್ವದ ಮಹಾ ಸಭೆಯನ್ನು ಪ್ರಾರಂಭಮಾಡಿದರು ಯೂರೋಪಿಯನ್ ರಾಜ್ಯಗಳವರು ಈ ಪ್ರಭುತ್ವವು ಇನ್ನೂ ಸರಿಯಾಗಿ ನೆಲೆಗೆ ನಿಂತಿಲ್ಲವೆಂದು ಅಭಿಪ್ರಾಯಪಟ್ಟು, ಅದನ್ನು ಇನ್ನು ಕೆಲವು ಕಾಲ ಕಳೆದ ಬಳಿಕ ಪ್ರಭುತ್ವವೆಂದು ಅಂಗೀಕರಿಸುವವರಾಗಿದಾರೆ ಈಗ ಚೀನಾ ಪ್ರಭುತ್ವದವರು ಪರರಾಜ್ಯಗಳವರಿಗೆ ಕೊಡಬೇಕಾಗಿರುವ ಸಾಲಗಳ ಪೈಕಿ ಕೆಲವು ಕಿಸ್ತುಗಳು ಇನ್ನೂ ಪಾವತಿ ಆಗದೆ ಬಾಕಿಯಾಗಿವೆ ಬಾಕ್ಸರ್ ದಂಗೆಯ ನಷ್ಟದ್ರವ್ಯಕ್ಕೆ ಸಲ್ಲಬೇಕಾಗಿರುವ ಹಣ ೨೭ ೩೦,೦೦೦ ಪೌಂಡು, ಯೂರೋಪಿನ ಸಮುದಾಯ ಬ್ಯಾಂಕಿನ ಕಿಸ್ತು ೨,೯೩,೦೦೦ ಪೌಂಡು, ಬೆಲ್ಜಿಯಂ ಸಾಲದ ಬಡ್ಡಿ ೨೫,೦೦೦ ಪೌಂಡು, ಸಮುದಾಯ ಬ್ಯಾಂಕಿನ ಕಿಸ್ತು ೧,೦೮,೦೦೦ ಪೌಂಡು ಬೆಲ್ಜಿಯಂ ಸಾಲ ೧೦ ಲಕ್ಷ ಪೌಂಡು, ಈ ಹಣವನ್ನೆಲ್ಲಾ ಪ್ರಭುತ್ವದವರು ಕೂಡಲೇ ಅವರವರಿಗೆ ಪಾವತಿ ಮಾಡಬೇಕಾಗಿದೆ

ತಾಲ್ಲೂಕು ವರ್ತಮಾನಗಳು

ನಾಗಮಂಗಲದ ತಾ ಬೆಳ್ಳೂರು —ಈ ಗ್ರಾಮವು ಈ ತಾಲ್ಲೂಕಿನಲ್ಲಿ ದೊಡ್ಡದು ಜನರ ಏಳಿಗೆಗೆ ಸಾಧಕವಾದ ಒಂದು ವಾಚನಾಲಯವು (ರೀಡಿಂಗ್ ರೂಂ) ಇಲ್ಲದುದರಿಂದ ಉಂಟಾಗಿದ್ದ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ ಮೆಂಬರಾದ ಶ್ರೀ|| ಸಂಗಪ್ಪನವರ ಅಧ್ಯಕ್ಷತೆಯಲ್ಲಿ ಪಟೇಲ್ ಕೃಷ್ಣಪ್ಪನವರು, ಕೆ ಬ್ರಹ್ಮಯ್ಯನವರು, ಮಹಮ್ಮದ್ ಇಸೂಫ್ ಸಾಹೇಬರು ವಂದರಿ ಕೃಷ್ಣಯ್ಯನವರು, ಈ ಮುಂತಾದ ಅನೇಕ ದೊಡ್ಡಮನುಷ್ಯರು ಸೇರಿ ಕಳೆದ ಫೆಬ್ರವರಿಯಿಂದ ನಮ್ಮನ್ನಾಳುವ ಮಹಾ ಪ್ರಭುಗಳ ಅಂಕಿತದ ಮೇಲೆ ಒಂದು ವಾಚನಾಲಯವನ್ನು ಬಹು ವಿಜೃಂಭಣೆಯಿಂದ ಸ್ಥಾಪಿಸಿದರು ಇದರ ಪ್ರಾರಂಭೋತ್ಸವ ಕಾಲದಲ್ಲಿ ಇಲ್ಲಿನ ಸ್ಕೂಲ್ ಹೆಡ್‌ಮಾಸ್ಟರ್ ಎಸ್ ತಿಮ್ಮಣ್ಣನವರು ವಾಚನಾಲಯದಿಂದಾಗತಕ್ಕ ಪ್ರಯೋಜನಗಳನ್ನೂ, ಪೋಸ್ಟ್ ಮಾಸ್ಟರ್ ಶ್ರೀನಿವಾಸಯ್ಯಂಗಾರ್‍ರು ಘನವನ್ನು ಹೊಂದಿದ ಮೈಸೂರು ಮಹಾ ಪ್ರಭುಗಳು ಆರೋಗ್ಯಭಾಗ್ಯವನ್ನು ಹೊಂದಿ ಕೌನ್ಸಿಲ್ ಬಿಸಿನೆಸ್ಸಿಗೆ ದಯಮಾಡಿಸಿದ ಶುಭವಾರ್ತೆಯನ್ನು ಕುರಿತ ಉಪನ್ಯಾಸಗಳನ್ನು ಮಾಡಿದರು

ದೊಡ್ಡಬಳ್ಳಾಪುರ —ದೊಡ್ಡಬಳ್ಳಾಪುರದ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ ಹೆಡ್ ಮಾಸ್ಟರು, ಇಂಡಸ್ಟ್ರಿಯಲ್ ಸ್ಕೂಲ್ ಸೂಪರಿಂಟೆಂಡೆಂಟರೂ ಆದ ಮಿ|| ಡಿ ಕೆಂಗುಡಿಯಪ್ಪನವರ ಮತ್ತು ದಿವಾನ್ ಸಾಹೇಬರವರ ಆಫೀಸಿಗೆ ಸೇರಿದ ಮಿ| ಡಿ ಎ ಸುಬ್ಬರಾಯಪ್ಪ, ಬಿ ಎ, ಬಿ ಎಲ್ ರವರ ತಮ್ಮಂದಿರಾದ ಮಿ| ಡಿ ಎ ಪುಟ್ಟಣ್ಣ, ಬಿ ಎ ಯವರು ಉಷ್ಣಪ್ರದೇಶಗಳಲ್ಲಿ ವಿಶೇಷವಾಗಿ ಪ್ರಾಪ್ತವಾಗುವ ವ್ಯಾಧಿಗಳ ಚಿಕಿತ್ಸೆಗೆ ಸಂಬಂಧಪಟ್ಟ ಡಿ ಟಿ ಎಂ ಎಂಬ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವುದಾಗಿ ಲಿವರ್‌ಪೂಲ್ ಪಟ್ಟಣದಿಂದ ೧೦ನೇ ತಾರೀಖು ಗುರುವಾರದ ದಿವಸ ತಂತಿಯ ಮೂಲಕ ವರ್ತಮಾನವು ಬಂದಿರುತ್ತದೆ ಇವರು ಬೆಂಗಳೂರಿನ ಸಾಹುಕಾರ್ ಡಿ ಆರೆಪ್ಪನವರೇ ಮುಂತಾದ ಕೆಲವು ದೊಡ್ಡಮನುಷ್ಯರ ಸಹಾಯವನ್ನು ಪಡೆದು, ಕಳೆದ ಆಗಸ್ಟ್ ತಿಂಗಳಲ್ಲಿ ವಿಲಾಯತಿಗೆ ಹೊರಟು ಸ್ವಲ್ಪಕಾಲದಲ್ಲಿಯೇ ಎಡಿಂಬರೋ ಪಟ್ಟಣದಲ್ಲಿ ವೈದ್ಯ ಸಂಬಂಧವಾದ ಮೂರು ಪರೀಕ್ಷೆಗಳನ್ನೂ, ಡಬ್ಲಿನ್ ಪಟ್ಟಣದಲ್ಲಿ ಹೆರಿಗೆಗೆ ಸಂಬಂಧಪಟ್ಟ ಮತ್ತೊಂದು ಪರೀಕ್ಷೆಯನ್ನೂ ಕೊಟ್ಟರು ಪ್ರೌಢ ವಿದ್ಯೆಯಲ್ಲಿ ವಿಶೇಷವಾಗಿ ಹಿಂದುಳಿದಿರುವ ದೇವಾಂಗದ ಜನರಲ್ಲಿ ಈ ರೀತಿ ಸಾಹಸವರರಾಗಿ ವ್ಯಾಸಂಗವನ್ನು ನಡಿಸುವವರು ಅತಿ ವಿರಳವೆಂಬುವುದನ್ನು ತಮ್ಮ ಕೃಪಾಪೂರಿತವಾದ ಪರ್ಯಾಲೋಚನೆಗೆ ತೆಗೆದುಕೊಂಡು ಶ್ರೀಮನ್ಮಹಾರಾಜಾ ಸಾಹೇಬ್ ಬಹಾದೂರವರ ಸರ್ಕಾರದವರು, ಇವರ ವ್ಯಾಸಂಗಕ್ಕಾಗಿ ೧೬೦ ಪೌನುಗಳ ವಿದ್ಯಾರ್ಥಿವೇತನವನ್ನು ಮಂಜೂರ್ ಮಾಡಿರುತ್ತಾರೆ ಇವರು ಕನಿಷ್ಠಪಕ್ಷ ಇನ್ನೂ ಆರು ತಿಂಗಳ ಕಾಲ ವಿಲಾಯತಿಯಲ್ಲಿಯೇ ಇದ್ದು ಜನನಾವಯವಗಳಿಗೆ ಸಂಬಂಧಪಟ್ಟ ವ್ಯಾಧಿಗಳ ಚಿಕಿತ್ಸೆಯಲ್ಲಿ ಪರಿಶ್ರಮವನ್ನು ಹೊಂದಿ ಎಫ್ ಆರ್ ಸಿ ಎಸ್ ಎಂಬ ಘನತರವಾದ ವೈದ್ಯ ಪರೀಕ್ಷೆಯನ್ನು ಮಾಡಿಕೊಂಡು ಈ ದೇಶಕ್ಕೆ ಹಿಂದಿರುಗುವವರಾಗಿರುತ್ತಾರೆ ವಿದ್ಯೆಯಲ್ಲಿ ಹಿಂದುಳಿದಿರುವ ದೇವಾಂಗದ ಜನರಲ್ಲಿ ಇತರರು ಇವರ ಮೇಲುಪಙ್ಕ್ತಿಯನ್ನನುಸರಿಸಿ ಸಾಹಸಪರರಾಗಿ ಸ್ವಾಮಾನ್ಯ ವಿದ್ಯಾಭ್ಯಾಸವನ್ನೂ ಕಸಬ್ದಾರಿ ವಿದ್ಯಾಭ್ಯಾಸವನ್ನೂ ಹೆಚ್ಚು ಹೆಚ್ಚಾಗಿ ಆರ್ಜಿಸುವವರಾಗುತ್ತಾ ಬರಬೇಕೆಂಬುವುದೇ ನಮ್ಮ ಆಶಯವು

ಶಿವಮೊಗ್ಗ —ಮೈಸೂರ್ ದೇಶೀಯ ಪರೀಕ್ಷೆಯು ಇದೇ ತಿಂಗಳು ೪ನೇ ತಾ ಪ್ರಾರಂಭವಾಯಿತು ಈ ಶಿವಮೊಗ್ಗ ಸೆಂಟರಿಗೆ ಅನೇಕ ಸ್ಥಳಗಳಿಂದ ವಿದ್ಯಾರ್ಥಿಗಳು ಪರೀಕ್ಷೆಗೋಸ್ಕರ ಬಂದು ಸರಿಯಾದ ವಾಸಸ್ಥಳವೂ ಸಕಾಲಕ್ಕೆ ಆಹಾರಾದಿಗಳೂ ಸಿಕ್ಕದೆ ದ್ರವ್ಯನಷ್ಟಮಾಡಿಕೊಂಡು ಅನೇಕರು ರೋಗಕ್ಕೆಡೆಯಾಗಿ ಹೋಗುತ್ತಿದ್ದರು ಈ ಸಂಗತಿಯನ್ನು ತಿಳಿದು ಈ ಊರಿನಲ್ಲಿರುವ ಮ|| ಸಾಹುಕಾರ್ ಟಿ ವೆಂಕಟಸುಬ್ಬಯ್ಯನವರು ತಾವು ನಡೆಸತಕ್ಕ ಅನೇಕ ಸತ್ಕಾರ್ಯಗಳಲ್ಲಿ ಇದೂ ಒಂದು ಕೀರ್ತಿಪ್ರದವಾದ ಮಹೋಪಕಾರವೆಂದು ಭಾವಿಸಿ ಸ್ಟುಡೆಂಟ್ಸ್ ಹೋಮಿನ ಕಮಿಟಿ ಮೆಂಬರುಗಳ ಅಪ್ಪಣೆಪಡೆದು ಪರೀಕ್ಷಾ ಪ್ರಾರಂಭದಲಾಗಾಯ್ತು ೪ ದಿನಗಳವರಿವಿಗೂ ವಿದ್ಯಾರ್ಥಿಗಳಿಗೂ, ಅವರ ಪೋಷಕರಿಗೂ, ಸ್ಕೂಲ್ ಮಾಸ್ಟರುಗಳಿಗೂ ಸಕಾಲಕ್ಕೆ ಸರಿಯಾಗಿ ಮೂರು ಹೊತ್ತು ಭೋಜನ ಉಪಹಾರಾದಿಗಳನ್ನು ನಡಿಸಲು ಸ್ಟುಡೆಂಟ್ಸ್ ಹೋಮಿನಲ್ಲಿ ಅನೇಕ ಸಿಬ್ಬಂದಿಗಳನ್ನಿಟ್ಟು ನಡಿಸಿದರು ಈ ಕೃತಜ್ಞತೆಗೋಸ್ಕರವಾಗಿ ಬಂದಿದ್ದ ಹೋಬಳಿ ಸ್ಕೂಲ್ ಮಾಸ್ಟರುಗಳು ತಾ ೧೧ನೇ ಶುಕ್ರವಾರ ಸಾಯಂಕಾಲ ಅನೇಕ ದೊಡ್ಡಮನುಷ್ಯರಿಂದೊಡಗೂಡಿದ ಒಂದು ಸಭೆಯನ್ನು ಸ್ಟುಡೆಂಟ್ಸ್ ಹೋಮಿನಲ್ಲಿ ಏರ್ಪಡಿಸಿ ಮ|| ಸಾಹುಕಾರ್ ಟಿ ವೆಂಕಟಸುಬ್ಬಯ್ಯನವರನ್ನು ಬರಮಾಡಿಕೊಂಡು ಕೃತಜ್ಞತಾಪೂರ್ವಕವಾದ ವಿಜ್ಞಾಪನ ಪತ್ರಿಕೆಯನ್ನು ಓದಿದರು ವೇ|| ಸೀತಾರಾಮಶಾಸ್ತ್ರಿಗಳು ಸಾಹುಕಾರರ ಮಹೋಪಕಾರದ ವಿಷಯವನ್ನೂ ಮ|| ಪಿ ವೆಂಕಪ್ಪಯ್ಯನವರು ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ಆರೋಗ್ಯವನ್ನು ಕಾಪಾಡಿದ ಸಿವಿಲ್ ಸರ್ಜನ್‌ರವರಾದ ಡಾ|| ಜಗನ್ನಾಥಂ ಪಿಳ್ಳೆಯವರ ಉಪಕಾರವನ್ನೂ ಕುರಿತು ಉಪನ್ಯಾಸಮಾಡಿದರು ಮ|| ಬಿ ಎಂ ಹಿರಣ್ಣಯ್ಯನವರು ಮಹಾರಾಜರವರ ಶ್ರೇಯಃ ಪ್ರಾರ್ಥನೆಯೇ ಮೊದಲಾದ ಸಂಗೀತವನ್ನು ಹಾಡಿದರು ಅಡ್ವೊಕೇಟ್ ಮ|| ಸೀತಾರಾಮಯ್ಯನವರು ಸಾಹುಕಾರರ ಔದಾರ್ಯವನ್ನೂ, ಸ್ಕೂಲ್ ಮಾಸ್ಟರುಗಳ ಕೃತಜ್ಞತೆಯನ್ನೂ ಕುರಿತು ಮಾತನಾಡಿದರು ವೇ|| ಹೈಸ್ಕೂಲ್ ಪಂಡಿತರಾದ ಮ|| ಕೆ ಸುಬ್ರಹ್ಮಣ್ಯಶಾಸ್ತ್ರಿಗಳವರು ಸಾಹುಕಾರರ ತಾತ ಮುತ್ತಾತಂದಿರು ನಡಿಸಿರತಕ್ಕ ಮಹೋಪಕಾರದ ವಿಷಯವನ್ನು ಕುರಿತು ಉಪನ್ಯಾಸ ಮಾಡಿದನಂತರ ಸಭೆಯು ಮುಕ್ತಾಯವಾಯಿತು ಈ ವಿಷಯದಲ್ಲಿ ಮುತವರ್ಜಿ ವಹಿಸಿದ ಚಿನ್ನಿಕಟ್ಟೆ ಸ್ಕೂಲ್ ಮಾ ಎಚ್ ನರಸಿಂಹಯ್ಯನವರ ಮೆಹನತ್ತು ವಿಶೇಷವಾಗಿತ್ತು

ಹಾಸನದ ತಾ ಗೊರೂರು —ಮಳೆ ಪ್ರಾರಂಭವಾಗಿದ ರಾಗಿ ರೂಪಾಯಿಗೆ ೧೬ ಸೇರು, ಅಕ್ಕಿ ೮ ಸೇರು ಮಾರಾಟವಾಗುತ್ತದೆ ಇದು ಸುಗ್ಗಿಕಾಲವಾಗಿದ್ದರೂ ಅಗ್ಗವಾತ್ರ ಇಲ್ಲ ಬಡವರು ಜೀವಿಸುವದು ಕಷ್ಟ —ಸುತ್ತುಮುತ್ತಿನ ಗ್ರಾಮಗಳಲ್ಲಿ ಹೆಚ್ಚಿಗೆ ಬೆಲೆಯಾಗುವ ದಾಸುಗಳನ್ನು ಅಲ್ಲಲ್ಲೇ ಕಳವುಮಾಡುವುದು ತಿಳಿಯಬರುತ್ತದೆ ಕೆಲವು ದಿನಗಳ ಕೆಳಗೆ ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರವರು ಈ ಊರಿಗೆ ದಯಮಾಡಿದ್ದ ವೇಳೆ ಇಲ್ಲಿನ ಪಂಚಮರನೇಕರು ತಮ್ಮ ಅವಶ್ಯಕತೆಯನ್ನು ವಿಶದವಾಗಿ ತಿಳಿಸಿ ಬೇಡಿಕೊಂಡದ್ದರ ಮೇಲೆ "ಅರ್ಜಿಯು ಸ್ವೀಕೃತವಾಯಿತು, ಸಿಫಾರಸು ಮಾಡುತ್ತೇವೆ" ಎಂದು ಅಪ್ಪಣೆ ಕೊಡಿಸಿದ್ದಂತೆ ಸರ್ಕಾರದವರಿಂದ ಮುಂಜೂರಾಗಿಬಂದ ಸ್ಕೂಲಿಗೆ ಮನೆ ಬಾಡಿಗೆ, ಒಬ್ಬ ಮಾಸ್ಟರಿನ ಸಂಬಳ ಆಟೋರ್ಯನ್ಸು ಸೇರಿ ತಿಂಗಳಿಗೆ ೧೬ ರೂಪಾಯಿ ಸ್ಯಾಂಕ್ಷನ್ ಆಗಿ ಇಲ್ಲಿನ ಉತ್ತಮರ ಸ್ಕೂಲ್ ಅ|| ಮಾಸ್ಟರ್ ರಾಮಸ್ವಾಮಯ್ಯಂಗಾರ್‍ರ ಸಹಾಯದಿಂದ ಹೊಲಗೇರಿ ಸಮೀಪದಲ್ಲೇ ಒಂದು ಮನೆಯಲ್ಲಿ ಏಪ್ರೆಲ್ ತಾ ೧ ರಿಂದ ಪ್ರಥಮ ಸ್ಕೂಲ್ ಸ್ಥಾಪನೆ ಮಾಡಲ್ಪಟ್ಟಿತು ಆದಿನವೇ ಆಯಾಯಾದ ಬಾಲಕರು ಸುಮಾರು ೮೦ ಮಂದಿ ಹಾಜರಾದರು ಈ ಕೀಳು ಜಾತಿಯವರನ್ನು ಮುಂದಕ್ಕೆ ತರಬೇಕೆಂದು ಪೂರ್ಣ ಗಮನವಿಟ್ಟ ಡೆಪ್ಯುಟಿ ಇನ್‌ಸ್ಪೆಕ್ಟರ್ ಮಿ| ಕೆ ಎನ್ ವೀರಭದ್ರಯ್ಯನವರ ಗುಣಾತಿಶಯವು ಸ್ತುತ್ಯರ್ಹವಾಗಿದೆ ಸ್ಕೂಲ್‌ಮಾಸ್ಟರು ಮುತುವರ್ಜಿಯಿಂದ ಅಭಿವೃದ್ಧಿಗೆ ತರುತ್ತಾರೆಂದು ನಂಬಿದ್ದೇನೆ —ಈ ಊರಲ್ಲಿ ಸನ್ನಿಪಾತಜ್ವರ, ಸಿಡುಬು ಇದ್ದೇ ಇವೆ ವ್ಯಾಕ್ಸಿನೇಟರು ಬಂದು ಸಿಡುಬನ್ನು ಹಾಕುತ್ತಾ ಇದಾರೆ —ಈಕಡೆ ಖೂನಿಗಳನ್ನು ನಡಿಸಿದವರಿಗೆ ಡಿಸ್ಟ್ರಿಕ್ಟ್ ಜಡ್ಜ್ ರವರ ಕೋರ್ಟಿನಲ್ಲಿ ಮರಣದಂಡನೆಯೂ, ವಿಚಾರಣೆಯೂ ನಡೆಯುತ್ತಿರುವಾಗಲೇ ಅಲ್ಲಲ್ಲಿ ಖೂನಿಗಳು ಆಗುತ್ತಿರುವವು —ರಾತ್ರಿ ವೇಳೆ ಹೊಳೆನರಸೀಪುರದ ಮಾರ್ಗವಾಗಿ ಗಾಡಿಯಲ್ಲಿ ಹೋಗುತ್ತಿದ್ದ ಸುಬ್ರಾಯಶೆಟ್ಟಿಯವರನ್ನು ಯಾರೋ ದುರಾತ್ಮರು ಹೊಡೆದು ಕೊಂದು ಕೆರೆಯಲ್ಲಿ ಹಾಕಿದ್ದಾಗೂ ಕೆಲವು ದಿನಸಮೇಲೆ ಪೋಲೀಸಿನವರು ಪತ್ತೆತರದೂಮು ನಡಿಸಲು ಚಿಕ್ಕ ಅರಕಲಗೂಡಿನಲ್ಲಿ ಕೆಲವರನ್ನು ಹಿಡಿದು ವಿಚಾರಿಸಲಾಗಿ ಲಾಶ್ ಪತ್ತೆ ಆದಹಾಗೂ ಶವವನ್ನು ನೀರಿಂದ ತೆಗೆದು ಅರಕಲಗೂಡಿನಲ್ಲಿ ಅಜಮಾಯಿಷಿ ಮಾಡಿ ಆಸಾಮಿಗಳನ್ನು ಹಾಸನಕ್ಕೆ ಕಳುಹಿಸಿರುತ್ತಾರೆಂದೂ ತಿಳಿಯುತ್ತೇನೆ —ಮಸ್ಲೀನಹಳ್ಳಿಯಲ್ಲಿ ಈರೀತಿ ನಡೆದಿರುತ್ತದೆಂದು ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರವರೂ, ಇನ್‌ಸ್ಪೆಕ್ಟರೂ ಡಾಕ್ಟರೂ ಆ ಊರಿನಲ್ಲಿ ಮೊಕ್ಕಾಂಮಾಡಿ, ಶವವನ್ನು ತೆಗೆದು ಅಜಮಾಯಿಷಿ ಮಾಡಿ ವಿಚಾರಣೆ ಕ್ರಮ ನಡಿಸಿಕೊಂಡು ಹೋಗಿರುತ್ತಾರೆ ಯಾರನ್ನೂ ದಸ್ತಗಿರಿ ಮಾಡಿಲ್ಲ ಭಯಂಕರವಾದ ಇಂಥಾ ದುಷ್ಕೃತ್ಯಗಳು ಆಗಾಗ್ಗೆ ನಡೆಯುತ್ತಿರುವದರಿಂದ ಅನೇಕರಿಗೆ ಹೆಚ್ಚಾದ ಭೀತಿಯನ್ನುಂಟುಮಾಡುತ್ತದೆ

ಚಿತ್ರದುರ್ಗ.—ಬಿಸಿಲು ಬಹಳ ಜಾಸ್ತಿಯಾಗಿದೆ. ಎಲ್ಲೆಲ್ಲಿ ನೋಡಿದರೂ ಟಾಯಿಫ್ ಜ್ವರ, ವಿಷದ ಶೀತಜ್ವರ, ಸಿಡುಬು ಇವುಗಳಿಂದ ದೊಡ್ಡವರು ಮಕ್ಕಳು ಸಹ ತೊಂದರೆಪಡುತ್ತಲಿದ್ದಾರೆ. ದಿನೇ ದಿನೇ ಜನಸಿ ದಾರಣೆಗಳು, ಹುಲ್ಲು, ಕಟ್ಟಿಗೆ ಸಹ ತುಟ್ಟಿಯಾಗುತ್ತಲೇ ಇವೆ. ಈ ರೀತಿ ತುಟ್ಟಿಯಾಗಿ ಮಾರಲು ಕಾರಣವೇ ಗೊತ್ತಾಗುವದಿಲ್ಲ. ಭೂಮಿಯಲ್ಲಿ ಫಸಲೇನೋ ಚೆನ್ನಾಗಿ ಬೆಳೆದಿದೆ ಮಿ॥ ಕೆ. ಮ್ಯಾಥ್ಯೂ ಸಾಹೇಬರವರು ಈ ತಿಂಗಳು ೮ ನೇ ತಾ. ನ ದಿನ ಡಿಸ್ಟ್ರಿಕ್ಟ್ ಛಾರ್ಜು ವಹಿಸಿದರು. ಮಿ॥ ಕೆ. ಕೃಷ್ಣಯ್ಯರವರು ಛಾರ್ಜು ಕೊಟ್ಟು ಅದೇ ದಿನ ಇಲ್ಲಿಂದ ಹೊರಟುಹೋದರು. ಮಿ॥ ಮ್ಯಾಥ್ಯೂರವರ ಕೆಲಸ ಕಾರ್ಯಗಳ ವಿಚಕ್ಷಣೆ ಬಹಳ ಚೆನ್ನಾಗಿದೆ. ಇವರು ಡೆಪ್ಯುಟಿ ಕಮಿಷನರಾಗಿ ಈ ಡಿಸ್ಟ್ರಿಕ್ಟಿಗೆ ದಯಮಾಡಿಸಿದ್ದಕ್ಕೆ ಈಗಾಗಲೇ ಪ್ರಜೆಗಳೆಲ್ಲರೂ ಸಂತೋಷಪಡುತ್ತಲಿದ್ದಾರೆ. ಆಫೀಸ್ ಕೆಲಸ ಕ್ರಮವಾಗಿ ನಡೆಯುತ್ತೆ. ಅನ್ಯಾಯ ಹೊಂದಿದ ಬಲಿಷ್ಟರು ಬಡವರು ಸಹ ನಿರ್ಭಯವಾಗಿ ಅವರಲ್ಲಿ ಹೋಗಿ ತಮ್ಮ ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳುತ್ತಿದ್ದಾರೆ. ಅವರು ಪ್ರತಿ ಒಂದೂ ಖುದ್ದು ಅಜಮಾಯಿಷಿಮಾಡಿ ನ್ಯಾಯಮಾಡುತ್ತಿದ್ದಾರೆ.—ಈ ವಾರ ಶಿವಮೊಗ್ಗೆಯಿಂದ ಅ॥ ಸೆಷನ್ಸ್ ಜಡ್ಜ್ ರವರು ಬಂದಿದ್ದು ೩ ದಿವಸ ಇದ್ದು ಕೋರ್ಟು ನಡಿಸಿ ವಾಪಸು ಹೊರಟುಹೋದರು.—ಮಿ॥ ರಾಂತವೀರಪ್ಪನವರು ಹಿರಿಯೂರು ತಾಲ್ಲೋಕು ಅಮಲ್ದಾರರಾಗಿ ಬಂದನಂತರ ಆ ತಾಲ್ಲೋಕಿನ ಕೆಲಸಗಳು ಬಹಳ ವಿಚಕ್ಷಣೆಯಾಗಿ ನಡೆಯುತ್ತವೆಂತ ತಾಲ್ಲೋಕಿನ ರೈತರು ಸಂತೋಷವುಳ್ಳವರಾಗಿದ್ದಾರೆ. ರೈತರಿಗಿದ್ದ ಅನಾನುಕೂಲಗಳನ್ನೆಲ್ಲಾ ಖುದ್ದು ನೋಡಿ ಅವರಿಗೆಲ್ಲಾ ಅನುಕೂಲ ಮಾಡಿ ಕೊಟ್ಟರು.—ಲೋವರ್ ಸೆಕೆಂಡರಿ ಪರೀಕ್ಷೆಯು ಈ ಸ್ಥಳದಲ್ಲಿ ಈ ತಿಂಗಳು ೧೧ ರ ವರೆಗೆ ನಡೆಯಿತು. ಈ ದಫ ಇಲ್ಲಿಗೆ 180 ಜನ ಹುಡುಗರು ಬಂದಿದ್ದರು. ಅವರಲ್ಲಿ 80 ಜನ ಬ್ರಾಹ್ಮಣೇತರರು, ಅಂದರೆ 1 ಹೊಲೆಯರ ಹುಡುಗ, 3 ಜನ ಆಗಸರ ಹುಡುಗರು, ಈ ಸಂಖ್ಯೆಯೂ ಸೇರಿ ಬಂದಿದ್ದ ಈ 80 ಜನಕ್ಕೂ ಸಾಹುಕಾರ್ ಮ॥ ಕಾಡಪ್ಪನವರು ತಮ್ಮ ಮನೆಯಲ್ಲಿ ಪರೀಕ್ಷೆ ತೀರುವ ವರಿವಿಗೂ ಎರಡು ಹೊತ್ತು ಸುಖ ಭೋಜನ, ಮಧ್ಯಾಹ್ನ ಪರೀಕ್ಷೆ ಆಗತಕ್ಕ ಸ್ಥಳಕ್ಕೆ ಸಮೀಪವಾಗಿರುವ ತಮ್ಮ ಕಾಂಪೌಂಡಿನಲ್ಲಿ ಅವರಿಗೆಲ್ಲಾ ಫಲಾಹಾರ ಸಹ ಕೊಟ್ಟು ಅವರನ್ನು ಮ॥ ಕಾಡಪ್ಪನವರು ಅವರ ಕುಟುಂಬ ಸಹ ಮಕ್ಕಳಂತೆ ಪೋಷಿಸಿದರು. ವರುಷ ವರುಷವೂ ಇದೇ ರೀತಿ ನಡೆಯುತ್ತಲಿದೆ. ಈ ದೊಡ್ಡ ಮನುಷ್ಯರ ಔದಾರ್ಯ, ಬಡವರಲ್ಲಿರತಕ್ಕ ಪ್ರೀತಿ, ಇವು ಶ್ಲಾಘನೀಯವಾಗಿವೆ.

ಹಾಸನ.—ಯುಗಾದಿ ಹಬ್ಬವಾದ ಕಳೆದ ಸೋಮವಾರ, ಮಂಗಳಬುಧವಾರಗಳಲ್ಲಿ ಈ ಪ್ರಾಂತ್ಯದಲ್ಲಿ ಒಳ್ಳೇ ಮಳೆಯಾಯಿತು. ಬಿಸಿಲಿನ ತಾಪವು ಸಹಿಸಕೂಡದ್ದಾಗಿದೆ. ಅಲ್ಲಲ್ಲಿ ಬೇಂಕೀಹಾವಳಿ ಉಂಟೆಂದು ತಿಳಿದುಬಂದಿದೆ ಸುತ್ತಮುತ್ತಲೂ ಕೆಲವು ಗ್ರಾಮಗಳಲ್ಲಿ ಕಾಲರಾ, ಪ್ಲೇಗ್, ಇವೆರಡೂ ಸ್ವಲ್ಪಸ್ವಲ್ಪ ಇರುವಂತೆ ವರ್ತಮಾನ. ಮೊನ್ನೆಯಿನ ಹರಿಹರದಿಂದ ಕೋರ್ಟಿನ ಸಾಕ್ಷಿಗಾಗಿ ಬಂದಿದ್ದ ಉಬ್ಬಂಗಿ ಪುಟ್ಟಸಾಮಯ್ಯನವರ ಕವೆಯುವನೊಬ್ಬನು ರಾತ್ರಿ ಹೋಟೆಲ್‌ನಲ್ಲಿ ಊಟಮಾಡಿದಕೂಡಲೇ ವಾಂತಿ ಭೇದಿಗಳೆರಡೂ ಪ್ರಾರಂಭಿಸಿ ಸುಸ್ತಾಗಿ ಅದೇ ರಾತ್ರಿ ಆಸ್ಪತ್ರೆಗೆ ಸಾಗಿಸಲ್ಪಟ್ಟು ಅಲ್ಲಿ ಮೃತನಾದನು. ಇಲ್ಲಿ ಕುಡಿಯುವ ನೀರಿಗೆ ದೇವೀಕೆರೆಯೇ ಆಧಾರ. ಅದರ ನೀರು ಕಳೆದ ವರ್ಷದಂತೆಯೇ ಎಲ್ಲಿ ಕೆಟ್ಟುಹೋಗುವುದೋ ಎಂಬ ಭಯವಿದೆ. ಮ್ಯುನಿಸಿಪಾಲಿಟಿಯವರ ಚಟುವಟಿಕೆಯೇ ಬಹು ಮುಖ್ಯವಾದುದು. ಸಂಪುಗೊಂಡುಗಳ ರೊಬ್ಬನ್ನು ಪ್ರತಿದಿನ ಬಳಸುತ್ತಿದ್ದರೆ ಜನರಿಗೆ ತುಂಬಾ ಉಪಕಾರವಾಗುವುದು.—ಇಲ್ಲಿನ ಚೆನ್ನಲಿಂಗಯ್ಯನನ್ನು ಕೊಂದವರೆಂಬ ಖಲಂದರ್, ದಸ್ತಗಿರಿ, ಹಾವಳಿಗೌಡ, ಮೊಹಿಯದೀನ್, ಈ ನಾಲ್ಕು ಮಂದಿಗೆ ಸೆಷನ್ಸ್ ಜಡ್ಜಿಯವರು ಫಾಸಿ ಸಜವನ್ನು ವಿಧಿಸಿದರು. ಮತ್ತು ಈ ಕ್ರೂರಕೃತ್ಯಕ್ಕೆ ಮುಖ್ಯ ಸಹಕಾರಿಣಿಯಾದ ವಸ್ತಗಿರಿ ಎಂಬ ಸ್ತ್ರೀಯ ತಾಯಿಗೆ ಜನ್ಮಾವಧಿ ಕರಿನಸಜಾ ವಿಧಿಸಲ್ಪಟ್ಟು, ಅಫ್ಜುಲ್ ಲಿಂಗನಿಗೆ ಬಿಡುಗಡೆಯಾಯಿತು.—ಹಿಂದಿನ ಸೆಷನ್ಸ್‌ನಲ್ಲಿ ಫಾಸಿ ಶಿಕ್ಷೆಯು ವಿಧಿಸಲ್ಪಟ್ಟಿದ್ದ ಕೊಣ್ಣೂರು ಕೊಲೆ ಖೈದಿಗಳು ನಾಲ್ವರಿಗೂ ಚೀಫ್ ಕೋರ್ಟ್ ಅಪೀಲಿನಲ್ಲಿ ಬಿಡುಗಡೆಯಾಯಿತೆಂದು ತಿಳಿದುಬಂದಿದೆ.—ಈ ಡಿಸ್ಟ್ರಿಕ್ಟಿನಲ್ಲಿ ಕೊಲೆಗಳು ಬಹು ಜಾಸ್ತಿಯಾಗಿವೆ. ಈಚೆಗೆ ಬೇಲೂರು ತಾಲ್ಲೂಕಿನಲ್ಲಿ ಹಳೇಬೀಡು ಹೋಬಳಿ ಕಲ್ಲಹಳ್ಳಿ ಗ್ರಾಮದ ಕೆಂಪಮ್ಮನೆಂಬ ಯುವತಿಯನ್ನು ಬಹು ಕ್ರೂರವಾಗಿ ಕೊಂದಿರುವುದಾಗಿಯೂ, ಹಾಗೆಯೇ ಬಿಕ್ಕೋಡು ಹೋಬಳಿಯಲ್ಲಿ ಒಬ್ಬ ಯುವಕನನ್ನು ಕೊಂದಿರುವುದಾಗಿಯೂ ವರ್ತಮಾನಬಂದಿದೆ. ಅಪರಾಧಿಗಳು ಇನ್ನೂ ಸಿಕ್ಕಿಲ್ಲವಂತೆ. ಹೀಗೆ ಕೊಲೆಯು ಎಡೆಬಿಡದೆ ನಡೆಯುತ್ತಿರುವ ಈ ಡಿಸ್ಟ್ರಿಕ್ಟಿನಲ್ಲಿ ಕೊಲೆಮಾಡಿದವರಿಗೆ ಬಿಡುಗಡೆಯೂ ಸುಲಭವಾಗಿ ದೊರೆಯುತ್ತಾ ಬಂದರೆ ಪ್ರೋತ್ಸಾಹನವಾಗುವುದಲ್ಲವೇ? ಕಳೆದ ವಾರ ಲೋವರ್ ಸೆಕೆಂಡರೀ ಪರೀಕ್ಷೆಯು ನಡೆಯಿತು. ಶುಕ್ರವಾರ ಚರಿತ್ರೆ ಭೂಗೋಳ ಪ್ರಶ್ನೆಪತ್ರಿಕೆಗಳು ಪೂರ್ವಭಾವಿಯಾಗಿಯೇ ವಿದ್ಯಾರ್ಥಿಗಳಿಗೆ ಪ್ರಕಟವಾಗಿತ್ತೆಂದೂ, ಈ ವಿಚಾರವನ್ನು ಹೈ ಸ್ಕೂಲ್ ಹೆಡ್ ಮಾಸ್ಟರವರು ಮೇಲಕ್ಕೆ ರಿಪೋರ್ಟುಮಾಡಿರುವುದಾಗಿಯೂ ವರ್ತಮಾನವಿದೆ. ಮತ್ತೆ ಪರೀಕ್ಷೆ ಆಗುವುದೆಂದು ಹೇಳಿಕೊಳ್ಳುತ್ತಾರೆ. ಕೆಲವರ ತಪ್ಪಿತದ ಫಲವನ್ನು ಅನೇಕರು ಅನುಭವಿಸಬೇಕಾಗುವುದೊಂದೇ ದೊಡ್ಡ ಕೊರತೆಯಾಗಿದೆ.

ಮಂಡ್ಯ.—ಧಾರಣೆವಾಸಿಗಳು ಇಳಿಯಲಿಲ್ಲ. ಅಳತೆ ತೂಕಗಳ ಹೊಸ ಕ್ರಮವು ಇನ್ನೂ ಇಲ್ಲಿ ಯಾತಕ್ಕೆ ಜಾರಿಗೆ ಬರಲಿಲ್ಲವೋ ಗೊತ್ತಾಗದು. ಬಡಬಗ್ಗರು ಜೀವಿಸುವದು ದುರ್ಲಭವೆಂದು ಹೇಳಬಹುದು. ನಮ್ಮ ಅಮಲ್ದಾರ್ ಮಿ॥ ಶ್ರೀನಿವಾಸಯ್ಯಂಗಾರ್ರು ಇಲ್ಲಿಂದ ದೇವನಹಳ್ಳಿಗೂ, ಮಿ॥ ಕೃಷ್ಣೆ ಅರಸಿನವರು ದೊಡ್ಡಬಳ್ಳಾಪುರದಿಂದ ಮಂಡ್ಯಕ್ಕೂ ವರ್ಗವಾಗಿದ್ದಾರೆ. ಈ ವರಿವಿಗೂ ಇದ್ದ ನಮ್ಮ ಅಮಲ್ದಾರರು ಸರ್ಕಾರದ ಕೆಲಸದಲ್ಲಿ ಹೆಚ್ಚು ಮುತುವರ್ಜಿ ವಹಿಸಿ ಇವರಿಗೆ ಮುಂಚೆ ಬಾಕಿ ನಿಂತಿದ್ದ ಸಹಸ್ರಾರು ರೂಪಾಯಿಗಳನ್ನು ವಸೂಲುಮಾಡಿ ಮೇಲ್ಪಟ್ಟ ಅಧಿಕಾರಿಗಳಿಂದ ಪ್ರಶಸ್ತ್ಯವನ್ನು ಪಡೆದಿರುವದು ತುಂಬಾ ಸಂತೋಷ. ಈ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಕಾಲರಾಬಾಧ್ಯ ಬಹಳ ಪ್ರಬಲವಾಗಿದೆ. ನಮ್ಮ ಅಮಲ್ದಾರರು ಕೊತ್ತನಹಳ್ಳಿ, ಚಾಮಲಾಪುರ, ಮಾದಿಹಳ್ಳಿ, ಈ ಕಡೆ ಸಕೀಟು ಹೋಗಿರುವಲ್ಲಿ ಕಾಲರಾಬಾಧ್ಯದಿಂದ ಸತ್ತ ಒಬ್ಬ ಹೆಂಗಸನ್ನು ಭೂಸ್ಥಾಪನೆ ಮಾಡದೆ ಹಾಗೆಯೇ ಬಿಸುಟುಹೋಗಿದ್ದರು. ನಂತರ ಈ ಸುದ್ದಿಯನ್ನು ಇವರು ಸೇಕ ತೋಟಿ ತಳವಾರರ ಮೂಲಕ ಹೂಣಿಸಿ ಆಯಾ ಗ್ರಾಮಗಳಿಗೆ ಹೋಗಿ ಪೂರ್ವದಲ್ಲಿ ತೆಗೆಯುತ್ತಿದ್ದ ನೀರಿನ ಭಾವಿಗಳನ್ನು ಸದ್ಯಕ್ಕೆ ಮುಚ್ಚಿಸಿ ಊರಿನವರ ಸಹಾಯದಿಂದ ಹೊಸ ಹೊಸ ಭಾವಿಗಳನ್ನು ತೋಡಿಸಿ ೩-೪ ಮಂದಿ ಕಾಲರಾ ರೋಗಿಗಳಿಗೆ ಔಷಧವನ್ನು ಕೊಟ್ಟು ಬಂದರು. ಸ್ಯಾನಿಟರಿ ಆಫೀಸರು ಮೈಸೂರಿಂದ ಬಂದು ಮಂಡ್ಯ ಮದ್ದೂರುಗಳ ಎಲ್ಲಾ ಭಾವಿಗಳನ್ನೂ ಪರೀಕ್ಷಿಸಿ ಔಷಧಗಳನ್ನು ಹಾಕಿದ್ದಲ್ಲದೆ ಇಲ್ಲಿನ ಸ್ಯಾನಿಟರಿ ಇನ್ಸ್‌ಪೆಕ್ಟರ್ ಮತ್ತು ಡಾಕ್ಟರವರು ಹೆಚ್ಚು ಮುತುವರ್ಜಿ ವಹಿಸಿರುವದೇ ಈ ವರಿವಿಗೂ ಅಂಥಾ ಅಸಂಭವಗಳು ನಡೆಯದಿರುವದಕ್ಕೆ ಕಾರಣವಾಯ್ತು. ಮತ್ತು ಈ ತಾಲ್ಲೂಕಿನ ಒಳಭಾಗದ ಸಂದುಗಳಲ್ಲಿ ಅನೇಕ ಹೇಸಿಕೆಗಳು ನಡೆಯುವದಲ್ಲದೆ ಹೇಳಕೂಡದಷ್ಟು ಕೊಚ್ಚೆ ಬಂದು ನಿಲ್ಲುವದಕ್ಕೆ ಅವಕಾಶವಿರುವದನ್ನು ಧಾರಾಳವಾಗಿ ದೊಡ್ಡ ಹಳ್ಳಕ್ಕೆ ಹರಿದು ಹೋಗುವಂತೆ ಮ್ಯುನಿಸಿಪಾಲಿಟಿಯವರು ಯೋಚಿಸತಕ್ಕದ್ದಾಗಿರುತ್ತದೆ.—ಒಂದೆ ನಡೆದ ಕಾಮನ ಹಬ್ಬದಲ್ಲಿ ಹಿಂದು ಮತ್ತು ಮುಸಲ್ಮಾನರುಗಳಿಗೆ ಭಯಂಕರವಾದ ದೊಡ್ಡ ಜಗಳ ಉಂಟಾಗುವದಕ್ಕಿತ್ತು. ಪೊಲೀಸ್ ಆಫೀಸರು ಮೊದಲೇ ತಕ್ಕ ಬಂದೋಬಸ್ತು ಮಾಡಿದ್ದರೆ ಚೆನ್ನಾಗಿತ್ತು. ಆದರೂ ಜಮೇದಾರ್ ಶಿವರತ್ನಯವರು ತುಂಬಾ ಪ್ರಯಾಸದಿಂದ ಮಧ್ಯಸ್ಥಿಕೆಯನ್ನು ಮಾಡಿ ಪರಸ್ಪರ ಸಮಾಧಾನಗೊಳಿಸಿ ಉತ್ಸವವು ಧಾರಾಳವಾಗಿ ನಡೆಯುವಂತೆ ಅವಕಾಶಕೊಟ್ಟದ್ದು ಸಂತೋಷ. ಹಾಗಲ್ಲದಿದ್ದರೆ ಮದ್ದೂರು ಪೊಂಬಿಗಿಂತಲೂ ಅಧಿಕವಾಗಿಯೇ ಆಗುತ್ತಿತ್ತೆಂದು ಜನರು ಹೇಳಿಕೊಳ್ಳುತ್ತಾರೆ. ಅಮಲ್ದಾರ್ ಶ್ರೀನಿವಾಸರಾಯರ ಛತ್ರ ದೇವಸ್ಥಾನಗಳು ಉತ್ತಮಸ್ಥಿತಿಯಲ್ಲಿವೆ. ಇನಾಂದಾರ್ ಮ॥ ಟಿ. ವಾಧವಸ್ವಾಮಿರಾಯರವರಿಂದ ಸ್ಯಾಂಕ್ಷನ್ ಆದ ಪ್ರಕಾರ ಸದರಿ ಕಟ್ಟಡದ ಕಾಮಗಾರಿಗಳನ್ನು ಹಾಲಿ ಇರುವ ಏಜೆಂಟ್ ಮ॥ ರಾಘವೇಂದ್ರದಾಸರು ಮುತುವರ್ಜಿಯಿಂದ ನಡಿಸುತ್ತಿರುವರು. ಕಳೆದ 7 ನೇ ತಾ. ಯುಗಾದಿ ಹಬ್ಬದ ವಿಶೇಷವಾಗಿ ಅಭಿಷೇಕ ಮುಂತಾದದು ನಡಿಸಿ, ರಾತ್ರಿ ಹೊಳೆನರಸಿಪುರದಿಂದ ಬಂದಿದ್ದ ಭೀಮಾಚಾರ್ಯರಿಂದ ಹಂಚಾಂಗ ಶ್ರವಣ ಮಾಡಿಸಲಾಯಿತು. ಆ ದಿನ ಅನೇಕರು ಅಲ್ಲಿಗೆ ದಯಮಾಡಿಸಿ ಎಲ್ಲಾ ಕಾರ್ಯಗಳನ್ನೂ ಸಮರ್ಪಕವಾಗಿ ನೆರವೇರಿಸಿದರು.

ಸೊರಬ.—ಈ ಊರಿನಲ್ಲಿ ಪ್ಲೇಗು ಶುರುವಾಗಿ ಸುಮಾರು ಒಂದು ತಿಂಗಳಾಯಿತು. ಸುಮಾರು 10-11 ಕೇಸುಗಳಾದವು. ಪ್ಲೇಗು ಆದವರ ಪೈಕಿ ೨ ೩ ಜನರಿಗೆ ವಾಸಿಯಾಗಿರುತ್ತೆ. ಜನಗಳು ಊರು ಬಿಡುವದರಲ್ಲಿ 7-8 ಕೇಸುಗಳಾದವು. ಪಟ್ಟಿಗೆ ಹೋದ ಮೇಲೂ 1-5 ಕೇಸುಗಳಾದವು. ಇಲಿಬಿದ್ದ ಮನೆಗಳನ್ನು ಕೂಡ್ಲೆ ಬಿಡದೆ ಪುರೆಮಾಡಿದ್ದರಿಂದ ಇಂದಾ ಅಪಾಯಕ್ಕೆ ಗುರಿಯಾಗಬೇಕಾಯ್ತು. ಈಗ ಊರಿನವರೆಲ್ಲಾ ಪಟ್ಟಿನಲ್ಲಿ ವಾಸಮಾಡುತ್ತಾರೆ. ಇನ್ನೂ ೩-೪ ಮನೆಯವರು ತಮ್ಮ ಮನೆಯಲ್ಲಿ ಇಲ್ಲಿಗಳು ಬಿದ್ದಾಗ್ಯೂ ಬಿಡದೆ ಇರುತ್ತಾರೆ. ನಮ್ಮ ಮೆಡಿಕಲ್ ಆಫೀಸರವರು ಪ್ಲೇಗು ಶುರುವಾದ ಕೂಡ್ಲೆ ಜನಗಳೆಲ್ಲಾ ಊರು ಬಿಡಬೇಕೆಂತಲೂ, ಇನಾಕ್ಯುಲೇಷನ್ ಮಾಡಿಸಿಕೊಳ್ಳಬೇಕೆಂತಲೂ ತಿಳಿಸಿದ್ದಲ್ಲದೆ ಪ್ಲೇಗು ತಗಲಿದವರನ್ನು ಖುದ್ದಾಗಿ ವಿಚಾರಿಸಿ ಅವರಿಗೆ ಸರಿಯಾದ ಔಷಧೋಪಚಾರಗಳನ್ನು ನಡೆಯಿಸಿ ಧೈರ್ಯ ಹೇಳುತ್ತಾ ಬಹಳ ಸಹಾಯ ಮಾಡಿದರು. ಈಗಲೂ ಕ್ಯಾಂಪುಗಳಿಗೆ ಆಗಾಗ್ಗೆ ದಯಮಾಡಿ ವಿಚಾರಿಸಿಕೊಳ್ಳುತ್ತಿದ್ದಾರೆ. ಇನಾಕ್ಯುಲೇಷನ್ ಇನ್‌ಸ್ಪೆಕ್ಟರವರು ದಯಮಾಡಿ ಜನಗಳಿಗೆ ಸರಿಯಾದ ತಿಳುವಳಿಕೆ ಕೊಟ್ಟು ನೂರಾರು ಜನಗಳಿಗೆ ಇನಾಕ್ಯುಲೇಷನ್ ಮಾಡಿದರು. ಈಗ ಜನಗಳು ತಾವಾಗಿಯೇ ಆಸ್ಪತ್ರೆಗೆ ಹೋಗಿ ಇನಾಕ್ಯುಲೇಷನ್ ಮಾಡಿಸಿಕೊಳ್ಳುತ್ತಿದ್ದಾರೆ. ಈಗ 15 ದಿನಗಳಿಂದ ಏನೂ ಕೇಸುಗಳು ನಡೆಯದಿದ್ದರೂ ಅಲ್ಲಲ್ಲಿ ಇಲಿಗಳು ಬೀಳುತ್ತವೆ. ಊರಿನಲ್ಲಿ ವಾಸನೆ ಇನ್ನೂ ಹೋಗಿಲ್ಲ. ಈಗಾಗಲೆ ಕೆಲವರು ಊರೊಳಗೆ ಹೋಗಬೇಕೆಂದು ಅನ್ನುತ್ತಿದ್ದಾರೆ. ಇಷ್ಟರೊಳಗೆ ಊರೊಳಹೊಕ್ಕರೆ ಪುನಃ ಮಳೆಗಾಲದಲ್ಲಿ ಊರು ಬಿಡಬೇಕಾಗಿ ಬರುವುದು. ನಮ್ಮ ಮೆಡಿಕಲ್ ಆಫೀಸರವರು ಇನ್ನೂ ಒಂದು ತಿಂಗಳು ಊರೊಳಗೆ ಹೋಗಬಾರದಾಗಿ ತಿಳಿಸಿರುತ್ತಾರೆ. ಅದರಂತೆ ನಡೆದುಕೊಂಡು ಒಂದು ತಿಂಗಳಾದ ನಂತರ ಡಿಸ್‌ಇನ್‌ಫೆಕ್ಷನ್ ಮಾಡಿಸಿ ಊರಿಗೆ ಹೋದಲ್ಲಿ ತುಂಬಾ ಕ್ಷೇಮವಾದೀತು.—ಕೆಲವು ಬಡನೌಕರರು ಕ್ಯಾಂಪು ಹಾಕಿಕೊಳ್ಳುವುದಕ್ಕೆ ಗಳ ಬೊಂಬು ವಗೈರೆ ಸಾಮಾನುಗಳಿಲ್ಲದೆ ಚಪ್ಪರದಲ್ಲೇ ವಾಸಮಾಡುತ್ತಾರೆ. ನಮ್ಮ ಅಮಲ್ದಾರ್ರವರು ಕಾಡಿನ ಸಾಮಾನು ಸಪ್ಲೈ ಆಗುವ ಬಗ್ಗೆ ಛಾರೆಸ್ಟ್ ಇಲಾಖೆಗೆ ಬರೆದು ಒಂದು ತಿಂಗಳಾದಾಗ್ಯೂ ಇದುವರೆಗೂ ಬಾರದಿರುವುದ ನೋಡಿದರೆ ತುಂಬಾ ವಿಷಾದಿಸಬೇಕಾಗಿದೆ. ಊರೊಳಗೆ ಬರುವ ಹೊತ್ತಿಗಾದರೂ ಬರುತ್ತದೋ ಇಲ್ಲವೋ ನೋಡಬೇಕು.—ಈ ತಾಲ್ಲೂಕು ಬೇಗಲಿ ಗ್ರಾಮದ ಪಟೇಲನ ಮಗನಾದ ಮಹದೇವ ಎಂಬುವನು ಬೇಗಲಿಕೊಪ್ಪ ಗ್ರಾಮದ ಬಾಬ್ತು ಸುಮಾರು 170 ರೂಪಾಯಿ ಸರಕಾರಿ ಹಣವನ್ನು ಜನವರಿ ಫೆಬ್ರವರಿ ತಿಂಗಳು ಜಮಾ ಮಾಡಿಸದೆ ಹಣ ಜಮಾ ಆದಂತೆ ಟ್ರೆಜರಿ ಸರ್ಟಿಫಿಕೇಟು ತಾನೇ ಬರೆದು ಟ್ರೆಜರಿ ಆಫೀಸರ್ ಮತ್ತು ನೌಕರರ ಸಹಿಗಳನ್ನು ಅದಂತೆ ತಾನೇ ಮಾಡಿ ಮಾರ್ಚ್ ತಿಂಗಳಿನಿಂದ ಮಾರ್ಚಿ ಮಾಹೆ ಹಣ ಜಮಾ ಮಾಡಿಸುವುದಕ್ಕೆ ಹೋದಾಗ್ಗೆ ಗುಮಾಸ್ತರು ಮೊಹಾಬತಿ ಮಾಡುವಲ್ಲಿ ಕಂಡುಹಿಡಿದು ದಾಖಲೆ ನೋಡಿದ್ದರಲ್ಲಿ ಹಣ ಜಮಾ ಆದಂತೆ ಕಾಣದೆಯೂ ಮತ್ತು ಟ್ರೆಜರಿ ನೌಕರರ ಸಹಿ ಅನುಮಾನವಾಗಿ ಕಂಡದ್ದರಿಂದಲೂ ಗುಮಾಸ್ತರು ಕೂಡ್ಲೆ ರಿಪೋರ್ಟು ಮಾಡಿದ್ದರ ಮೇಲೆ ಅಮಲ್ದಾರವರು ತನಿಖೆಮಾಡಿ ಸದರಿಯವನು ಒಪ್ಪಿಕೊಂಡದ್ದರಿಂದ ಕೇಸ್ ಫೈಲಿನ ಮೇಲೆ ತೆಗೆದುಕೊಂಡು ಅವನನ್ನು ದಸ್ತಗಿರಿ ಮಾಡಿ ರಾಕಪ್ಪಿನಲ್ಲಿಟ್ಟಿರುತ್ತಾರೆ. ಮತ್ತು ಆ ಮೊಬಲಗನ್ನು ಅವನಿಂದ ಭರ್ತಿಮಾಡಿಸಿರುತ್ತಾರೆ. ಈ ತಾಲ್ಲೂಕಿನಲ್ಲಿ ಈ ವರಿಗೆ ಇಂಥಾ ಕೇಸುಗಳು ನಡೆದದ್ದಿಲ್ಲ.—ದಿನವೂ ಮೋಡವಾಗುತ್ತದೆ. ಮತ್ತು ಬಿಸಿಲು ಜೋರಾಗಿದೆ. ಸಧ್ಯದಲ್ಲೇ ಮಳೆ ಬರಬಹುದು.

ಮಕ್ಕಳ ಹಿತಕಾರಿ

ಎಂದು

SCOTT'S EMULSION 2-16

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷದಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ. ಯಾಕಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸುತ್ತದೆ.

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ.

ಇದು ರೋಗಿಯಾದ ಮಕ್ಕಳನ್ನು ಆರೋಗ್ಯಮಾಡುವದು, ಆರೋಗ್ಯವಾದ ಮಕ್ಕಳನ್ನು ಬಲಿಷ್ಟರನ್ನಾಗಿ ಮಾಡುವದು.



ಕೈಸೋಕದೆ ತಯಾರಾದದ್ದು

ಎಲ್ಲಾ ಔಷದ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಈ ವಿಜಾನುಮನುಷ್ಯ ಇರುವ ಔಷದವನ್ನೇ ಕೊಂಡುಕೊಳ್ಳಿ

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರಿಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ: ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ... ಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ... ಗುವಿಕೆ, ಮೈನೋವು, ಕೀಲುನೋವು, ಮರವು, ನಿತ್ರಾಣ, ಇವೇ ಮೊದಲಾದ ... ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ನ್ಯುಬಾವು, ಉರುಮೂತ್ರ ... ಮೂತ್ರಕೋಶವೇ ಕ್ಷಯಿಸಿಹೋಗುವುದು. ... ಯಲ್ಲಿ ... ಬಂಧ ... ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವು ...

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತ... ವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [143 3...

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿರು...



ರೂ ೨-೦-೦, ಅಥವಾ ೬ ಬುಡ್ಡಿಗಳಿಗೆ ರೂ ೧೦-೮-೦ ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ದೋನ್ ... ಪಿ. ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಎಂ. ಎನ್. ಬಿ. ಯವರ ಕ್ರಿಮಿಸಂಹಾರಿ

ಈ ಚೂರ್ಣವನ್ನು ಚೆಂಕಿಯ ಮೇಲೆ ಹಾಕುವುದರಿಂದ ಉಂಟಾ... ಹೊಗೆಯಿಂದ ತಿಗುಣೆಗಳು ಮತ್ತು ಎಲ್ಲಾ ವಿಧವಾದ ವಿಷಕ್ರಿಮಿಗಳು ಸಂಹಾರವಾಗಿ ನಾಶಹೊಂದುವುವು. ಕ್ರಯ ದಪ್ಪ 1 ಕ್ಕೆ 12 ಆಣೆ. ಟಪ್ಪಾಲ್ ಖರ್ಚು ಬೇ...

[71-1] ವಿಳಾಸ—ಸರ್ವಜನ ಹಿತೋಪಕಾರಿಣಿ ಔಷಧಾಲಯ, ಮೈಸೂರು

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರು ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ... ಪುಗಸಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ.

Messrs. OAKES & Company, Mount Road, Madras.

[1-24] ಮೆಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. H. Gulliford, Proprietor and Manager, Wesleyan Mission Press, Mysore. 17/4/1913.

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸನ್ ೧೯೧೪ ನೇ ಇಸವಿ ಏಪ್ರಿಲ್ ತಾರೀಖು ೨೩ ನೇ ಗುರುವಾರ. ಸಂಚಿಕೆ ೪೭

1914 ನೇ ಕ್ಕೆ ಟಕಸ್ತು 7 ಆಣೆ, ಸೋಟ್ಸು 6 ಆಣೆ (ಅಚ್ಚಿನಲ್ಲಿದೆ) ಪ್ರಶ್ನೋತ್ತರ 8 ಆಣೆ ಶೀಘ್ರ ತತ್ವಪ್ರಕಾಶಿಕೆ 1 ಆಣೆ ಇವುಗಳಲ್ಲಿ ಒಂದು ಪುಸ್ತಕ, ಎಸ್ಸೆ ಎಸ್ ಎಲ್ ಸಿ ಪರೀಕ್ಷೆಗೆ ಬೇಕಾದ್ದನ್ನು ತಿಳಿಸುತ್ತದೆ ... 6 ಆಣೆ ಆರೋಗ್ಯ ಪ್ರಶ್ನೋತ್ತರ 1 ಆಣೆ, 10 ಪ್ರತಿಗೆ ಒಂದು ಉಚಿತ ... —ಬೆಟ್ ವೆಂಕಟರಾಮಯ್ಯ, ವಿದ್ಯಾರ್ಥಿ ಬುಕ್ ಡಿಪೋ, ಮೈಸೂರು

ಎಂ. ಎನ್. ಬಿ. ಯವರ ಕ್ರಿಮಿಸಂಹಾರಿ

ಈ ಔಷಧವನ್ನು ಹೊಟ್ಟೆಯ ಮೂಲಕ ಹಾಕುವುದರಿಂದ ಉಂಟಾಗುವ ರೋಗಗಳಿಂದ ತಪ್ಪಿಸಿಕೊಳ್ಳುವ ಮತ್ತು ಎಲ್ಲಾ ವಿಧವಾದ ಕ್ರಿಮಿಗಳು ಸಂಪೂರ್ಣವಾಗಿ ನಾಶವಾಗುತ್ತವೆ. ಕ್ರಯ ಡಬ್ಬಿ 1 ಕ್ಕೆ 12 ಆಣೆ ಟಪಾಲು ಖರ್ಚು ಬೇರೆ

[71-3] ವಿಳಾಸ—ಸರ್ವಜನ ಉಪಯೋಗಕಾರಿ ಔಷಧಾಲಯ, ಮೈಸೂರು

1911 ನೇ ವರ್ಷದ ಲೋವರ್ ಸೆಕೆಂಡರಿ ಕನ್ನಡ ಟೆಕ್ಸ್ಟ್ ನೋಟ್ಸು

ಸ್ವಲ್ಪ ದಿನಗಳಲ್ಲಿಯೇ ಸಿದ್ಧವಾಗುವುದು—ಕ್ರಯ 6 ಆಣೆ.

ಏಜೆಂಟರಿಗೆ 10 ಕ್ಕೆ 1, 50 ಕ್ಕೆ 7, 100 ಕ್ಕೆ 20.

ನಮ್ಮ ನೋಟ್ಸಿಗೆ ಈಗಲೇ ಬರೆಯಿರಿ ಆ ಮೇಲೆ ಮೋಸಹೋಗಬೇಡಿ ... ಬೇಕಾಗಿದ್ದರೆ ನಮಗೇ ಬರೆಯುವುದು ಉತ್ತಮ ಅಥವಾ ... ಬರೆಯುವಾಗ ನಮ್ಮ ಹೆಸರನ್ನು ಕಾಣಿಸಿ ಬರೆಯಿರಿ [67-1]

ಎನ್. ಎಸ್. ವೆಂಕಟಸುಬ್ರಹ್ಮಣ್ಯಾಚಾರ್ಯ,

ಸುಬೋಧ ಗ್ರಂಥಾಲಯ, ಮೈಸೂರು

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ೩೦ ವರ್ಷ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ 1 ಆಣೆ ಆಪಕ್ಕೊಂದು ಉಚಿತ

[187 (?)] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಪ್ರಕಟನೆ ನೋಟೀಸು

ಚಿತ್ರದುರ್ಗದ ತಾಲ್ಲೂಕು ಕಸಬಾ ಹೋಬಳಿ ಪಲ್ಲವಗಿರಿ ಗ್ರಾಮದಲ್ಲಿರುವ ಸೂಗೂರ ತಿಮ್ಮಯ್ಯನ ಮಗ ತಿಪ್ಪಯ್ಯನು ತಿಳಿಸುವದೇನೆಂದರೆ —ನನ್ನ ತಂದೆ ಸತ್ತು ಮೂರು ವರುಷವಾಯಿತು ನನ್ನ ತಂದೆ ಖಾತೆಗೆ ಚಳ್ಳಕೆರೆ ತಾಲ್ಲೂಕು ಬೆಳಕೆರೆ ಹೋಬಳಿ ಗೋವಿನಹಾಳು ಗ್ರಾಮದಲ್ಲಿ ಮೂರು ಖುಷ್ಕಿ ಜಮೀನುಗಳು ಇರುತ್ತವೆ ಇದು ನನ್ನ ತಂದೆ ಹಿರಿ ಹೆಂಡತಿ ಮಗ ಈರಪ್ಪನ ವಶದಲ್ಲಿವೆ ಈ ಮೂರು ಜಮೀನುಗಳು ನಮ್ಮ ಇಬ್ಬರ ಅನುಭವದಲ್ಲಿ ಇರುತ್ತವೆ ಈ ಜಮೀನುಗಳ ಪೈಕಿ ಯಾವ ಜಮೀನಾದರೂ ನನ್ನ ಅನುಮತಿ ಶಿವಾಯಿ ಯಾರಾದರೂ ಕ್ರಯ, ಭೋಗ್ಯ ವಗೈರೆ ಮಾಡಿಕೊಂಡರೆ ಅದು ಊರ್ಜಿತವಾಗತಕ್ಕದ್ದಲ್ಲ, ತಿಳಿಯುವದು. [79-1]

ತಾ 17-4-1914 ತಿಪ್ಪಯ್ಯ

"ವೃತ್ತಾಂತ ಪತ್ರಿಕೆ" ಏಜಂಟರಿಗೆ ನೋಟಿಸ್.

ವೃತ್ತಾಂತ ಪತ್ರಿಕೆಯ 1913-14 ನೇ ವರುಷದ **ಮೂರನೇ** ಕ್ವಾರ್ಟರು ಕಳೆದ ಫೆಬ್ರವರಿ ತಿಂಗಳಿಗೆ ಪೂರೈಸಿದೆ. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಸಿದ್ಧಮಾಡಿ, "ಬಿ" ಫಾರಂಗಳಿಗೆ ಎತ್ತಿ ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ **ಈ ವಾರ**ದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ತೃತಪಡಿಸಿದೆ.

ಮ್ಯಾನೇಜರ್, "ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು

ಗೃಹಕೃತ್ಯದ ನೋಟೀಸು

ಚಿತ್ರದುರ್ಗದ ತಾಲ್ಲೂಕು ಕಸಬಾ ಸಮ್ಮತು ಧ್ಯಾಮವ್ವನಹಳ್ಳಿ ಮಜರೆ ಲಿಂಗಾ ಹೊರಕೆರೆ ಹಟ್ಟಿಯಲ್ಲಿರುವ ಲಿಂಗಾ ಹನುಮಂತಪ್ಪನು ತಿಳಿಸುವದೇನೆಂದರೆ —ನನ್ನ ಮಕ್ಕಳಾದ ತಿಪ್ಪಣ್ಣ, ಅಪ್ಪಯ್ಯ ಎಂಬವರು ನನ್ನ ಮಾತು ಉಲ್ಲಂಘಿಸಿ ಬೇರೆ ವಾಸವಾಗಿರುತ್ತಾರೆ ಇವರಿಗೆ ತಿನ್ನುವದಕ್ಕೂ ಉಡುವದಕ್ಕೂ ಯಾವದೊಂದು ತೊಂದರೆ ಇಲ್ಲ ಇವರೇನಾದರೂ ನನ್ನ ಅನುಮತಿ ಶಿವಾಯಿ ಸಾಲ ವಗೈರೆ ಮಾಡಿದ್ದರೆ ಇವರಿಗೆ ಯಾರೂ ಸಾಲ ವಗೈರೆ ಕೊಡಕೂಡದು ಇದೇ ಗ್ರಾಮದಲ್ಲಿ ನನ್ನ ಖಾತೆಗೆ ತರೀ ನಂಬರು ಎರಡೂ, ಖುಷ್ಕಿ ನಂಬರು ಎರಡೂ ಇವೆ ಈ ಜಮೀನುಗಳನ್ನು ನನ್ನ ಅನುಮತಿ ಶಿವಾಯಿ ಅವರಿಂದ ಕ್ರಯ, ಭೋಗ್ಯ ವಗೈರೆ ಮಾಡಿಕೊಂಡ ಪಕ್ಷದಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲ ಖಂಡಿತ ತಿಳಿಯುವದು [79-1]

ತಾ 16-4-1914 ಲಿಂಗಾ ಹನುಮಂತಪ್ಪ

ಟೆಲಿಗ್ರಾಂ ಅಡ್ರೆಸ್ "ತಿರುಪತಿ," ಹರಿಹರ ಜಾಗ್ರತೆ ತೆಕ್ಕೊಳ್ಳಿ ತ್ವರೆಮಾಡಿರಿ.

ಜೋಸಿಗೇ ಕಾಲ ಸಮೀಪಿಸಿ ಬಂದಿರುತ್ತೆ

ಚೀಟಿನ ಹಾವಳಿ ಪ್ರಾರಂಭವಾಯಿತು.

ಅದ್ಭುತವಾದ ಇನಾಮು.

ಒಂದು ಲಕ್ಷ ರೂಪಾಯಿಗಳು ಹಂಚಲ್ಪಡುತ್ತವೆ

ಡಾಕ್ಟರ್ ಟೀ. ಪಿ. ಇನಾ ದಾರ್‌ರವರು ತಯಾರು ಮಾಡಿದ "ಸ್ಕಾರ್ಪಿಯಾನಿಯೋ" ಎಂಬ ಚೇಳಿನ ಔಷಧವನ್ನು ಸಮಸ್ತ ದೇಶಗಳಲ್ಲಿಯೂ ಹರಡುವದಕ್ಕೂ, ಅದರ ಗುಣವನ್ನು ಅನುಭವಕ್ಕೆ ತರುವದಕ್ಕೂ ಈ ಇನಾಮಿನ ಮೂಲಕವಾಗಿ ಪ್ರಸಿದ್ಧಿ ಮಾಡಲ್ಪಟ್ಟಿದೆ ಈ ಚೇಳಿನ ಔಷಧವು ಅತಿ ಶೀಘ್ರವಾಗಿ ಗುಣವನ್ನು ತೋರಿ, ರೋಗಿಯನ್ನು ನಗುವಂತೆ ಮಾಡಲ್ಪಟ್ಟಿದೆ. ಪ್ರಪಂಚದಲ್ಲಿ ಎಷ್ಟು ಚೇಳಿನ ಔಷಧಗಳಿದ್ದರೂ ಅದಕ್ಕೆಲ್ಲಾ ಪ್ರಖ್ಯಾತಿಯನ್ನು ಪಡೆದುಕೊಂಡು ಹೊಗಳಲ್ಪಟ್ಟಿರುವದರಿಂದ ಈ ಔಷಧಿಯನ್ನು ಪ್ರತಿಯೊಬ್ಬರ ಮನೆಯಲ್ಲಿ ಇಡುವ ಸಮಸ್ತರ ಅಭಿಪ್ರಾಯದಂತೆ ಇದನ್ನು ಪ್ರಚುರಪಡಿಸಬೇಕೆಂದು ಅಭಿಪ್ರಾಯಪಟ್ಟ ಮೇರೆಗೆ ಈ ಮೂಲಕವಾಗಿ ಸಮಸ್ತರ ಉಪಯೋಗಕ್ಕೆ ಪ್ರಕಟಿಸಲ್ಪಟ್ಟಿದೆ ಖಂಡಿತ ಇದಕ್ಕೆ ಸಮಾನವಾದ ಚೇಳಿನ ಮದ್ದು ಇಲ್ಲವೆಂದು ಖಂಡಿತವಾಗಿ ಹೇಳಬಹುದು.

ಎಚ್. ಎಕ್ಸಲೆನ್ಸಿ ಲಾರ್ಡ್ ಕಿಚನರ್, ಚೀಫ್ ಕಮಾಂಡರು ಇನ್ ಚೀಫ್, ಇಂಡಿಯ, ಮತ್ತು ಕರ್ನಲ್ ಪಿಸ್ಟರ್ ಬ್ರೂಕ್, ಲೇಟ್ ಮಿಲಿಟರಿ ಸೆಕ್ರೆಟರಿ ಟು ದಿ ವೈಸರಾಯಿ, ಇವರುಗಳು ಡಾಕ್ಟರು ಟೀ. ಪಿ. ಇನಾಂದಾರ್ ಚಿಕಿತ್ಸೆಯನ್ನು ಮೆಚ್ಚಿ ಹೊಗಳಿದಾರೆ

ಇನಾಮುಗಳ ವಿವರ —ಇದೇ 1913 ನೇ ಫೆಬ್ರವರಿಯಿಂದ ಜೂಲೈ ತಾರೀಖು 31 ರ ವರಿವಿಗೂ ಹನ್ನೆರಡು ಲಕ್ಷ "ಸ್ಕಾರ್ಪಿಯಾನಿಯೋ" ಎಂಬ ಚೇಳಿನ ಔಷಧವನ್ನು ಇನಾಮಿನ ಮೂಲಕವಾಗಿ ಬಿಕ್ರಿ ಮಾಡಲು ನಿರ್ಧರಿಸಿದೆ ಬಾಟ್ಲಿ ಒಂದಕ್ಕೆ ಕ್ರಯ ಆರು ಆಣೆ ಮಾತ್ರವೇ (ಟಪಾಲು ಹಾಸಲು, ಪ್ಯಾಕಿಂಗ್ ಚಾರ್ಜು, ವಿ. ಪಿ. ಖರ್ಚು ಬೇರೆ)

					ರೂಪಾಯಿ						ರೂಪಾಯಿ
ನೇ ಇನಾ	2 ಗ್ರೋಸ್ ಬಾಟ್ಲಿ	ತೆಗೆದುಕೊಳ್ಳುವವರಿಗೆ 1913 ನೇ ಏಪ್ರಿಲ್	ಆಖೈರೊಳಗಾಗಿ		10,000	1 ನೇ ಇನಾಂ	2 ಗ್ರೋಸ್ ಬಾಟ್ಲಿ	ತೆಗೆದುಕೊಳ್ಳುವವರಿಗೆ 1914 ನೇ ಜೂಲೈ	ಆಖೈರೊಳಗಾಗಿ		7,000
ನೇ ,,	1 ಗ್ರೋಸ್	,,	,,	,,	9,000	2 ನೇ ,,	1 ಗ್ರೋಸ್	,,	,,	,,	6,000
ನೇ ,,	6 ಡಜನ್	,,	,,	,,	7,500	3 ನೇ ,,	6 ಡಜನ್	,,	,,	,,	5,500
ನೇ ,,	4 ಡಜನ್	,,	,,	,,	7,000	4 ನೇ ,,	4 ಡಜನ್	,,	,,	,,	5,000
ನೇ ,,	2 ಡಜನ್	,,	,,	,,	6,500	5 ನೇ ,,	2 ಡಜನ್	,,	,,	,,	4,500
ನೇ ,,	1 ಡಜನ್	,,	,,	,,	6,000	6 ನೇ ,,	1 ಡಜನ್	,,	,,	,,	4,000
ನೇ ,,	6 ಬಾಟ್ಲಿಗಳು	,,	,,	,,	5,500	7 ನೇ ,,	6 ಬಾಟ್ಲಿಗಳು	,,	,,	,,	3,500
ನೇ ,,	4 ಬಾಟ್ಲಿಗಳು	,,	,,	,,	5,000	8 ನೇ ,,	3 ಬಾಟ್ಲಿಗಳು	,,	,,	,,	3,000
ನೇ ,,	2 ಬಾಟ್ಲಿಗಳು	,,	,,	,,	4,500	9 ನೇ ,,	2 ಬಾಟ್ಲಿಗಳು	,,	,,	,,	2,500
					61,000						41,000

ಒಟ್ಟು ರೂ. 1,00,000 ಲಕ್ಷ ಮಾತ್ರವೇ.

ಯಾವದಾದರೂ ಒಂದು ಇನಾಂ ಕಲಂಗಳ ಪೈಕಿ ಒಬ್ಬರಿಗಿಂತ ಜಾಸ್ತಿಯಾಗಿದ್ದರೆ ಆ ಇನಾಮಿನ ಕಲಮನ್ನು ಎಲ್ಲರಿಗೂ ಒಂದೇ ಸಮನಾಗಿ ಹಂಚಿಕೊಡಲ್ಪಡುತ್ತದೆ ಮತ್ತು ಒಂದೇ ವೇಳೆ ಒಬ್ಬರೇ ಇದ್ದರೆ ಆ ಪೂರ್ತಿ ಇನಾಮಿನ ಕಲಮಿಗೆ ಗೊತ್ತುಪಡಿಸಿರುವ ಮೊಬಲಗನ್ನು ಅವರೊಬ್ಬರಿಗೇ ಕೊಡಲ್ಪಡುತ್ತದೆ ಎರಡು ಬಾಟ್ಲಿಗಳು ಜಾಸ್ತಿಯಾಗಿ ಕೊಂಡುಕೊಳ್ಳುವ ಪ್ರತಿ ಒಬ್ಬರಿಗೂ ಇನಾಮಿನ ಸರ್ಟಿಫಿಕೇಟನ್ನು ಆಯಾಯ ಇನಾಂ ಕಲಂವಾರು ಪ್ರಕಾರ ತೆಗೆದುಕೊಂಡ ಬಾಟ್ಲಿಗಳ ಸಂಖ್ಯೆ ಕಾಣಿಸಿ ಅವರಿಗೆ ಖಂಡಿತವಾಗಿಯೂ ಇನಾಮನ್ನು ಕೊಡುತ್ತೇವೆಂದು ಭರವಸೆ ಕೊಟ್ಟು ಬರೆದುಕೊಡಲ್ಪಡುತ್ತೆ ನಮ್ಮ ಇನಾಮು ಕಲಮಿನ ಲಿಸ್ಟಿನಲ್ಲಿ ಕಾಣಿಸಿರುವ ಮೇರೆಗೆ ಬಾಟ್ಲಿಗಳನ್ನು ಕೊಂಡುಕೊಳ್ಳುವರಿಗೆ ವಿನಹ ಬಾಕಿ ಯಾರಿಗೂ ಕೊಡುವದಿಲ್ಲ ಈ ಹನ್ನೆರಡು ಲಕ್ಷ ಬಾಟ್ಲಿಗಳು ಖರ್ಚಾದ ಕೂಡಲೆ ಲೆಕ್ಕವನ್ನು ಸಿದ್ಧಮಾಡಿ, ಇನಾಂಗಳು ಹಂಚಲ್ಪಡುತ್ತೆ ಒಂದು ವೇಳೆ ಪೂರಾ ಹನ್ನೆರಡು ಲಕ್ಷ ಬಾಟ್ಲಿಗಳು ಖರ್ಚಾಗದೆ ಹೋದರೆ ಮುಂದೆ ವಾಯಿದೆಯನ್ನು ಹೆಚ್ಚಿಸದೆ ಬಾಟ್ಲಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾ ಪ್ರಕಾರ ಆಗತಕ್ಕಷ್ಟು ಮಾತ್ರ ಇನಾಂಗಳು ಹಂಚಲ್ಪಡುತ್ತದೆ ಇನಾಂಗಳು ಹಂಚುವ ತಾರೀಖು ಇದೇ 1914 ನೇ ಇಸ್ವಿ ಆಗಸ್ಟು ತಿಂಗಳು 15 ಕ್ಕೆ ಇದೇ ಹರಿಹರದಲ್ಲಿ ಬಹಿರಂಗ ಹಂಚಲಪಡುತ್ತೆ

ಪ್ರತಿ ಒಬ್ಬ ಮನುಷ್ಯನಿಗೂ ತಾನು ಕೊಡುವ ಕಿಮ್ಮತ್ತಿಗೆ ಸರಿಯಾಗಿ ಔಷಧ ಬಾಟ್ಲಿಯನ್ನು ಪಡೆಯುವದಲ್ಲದೆ ಇನಾಂಗೂ ಅರ್ಹನಾಗಿರುತ್ತಾನೆ ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಈವಾಗಲೇ ವಿಶೇಷ ಆರ್ಡರುಗಳು ಬರುವ ಸೂಚನೆ ತೋರಿದೆ ಆದ್ದರಿಂದ ಪೂರ್ತಿಯಾಗಿ ಎಲ್ಲಾ ಬಾಟ್ಲಿಗಳು ಖರ್ಚಾಗುವದರಲ್ಲಿ ಸಂದೇಹ ತೋರುವದಿಲ್ಲ.

ಏಜಂಟರುಗಳು ಬೇಕಾಗಿದೆ ಸಂಬಳ ನೂರು ರೂಪಾಯಿ ಮತ್ತು ಅಲೋಯನ್ಸು ಇಪ್ಪತ್ತು ರೂಪಾಯಿ. ನಿವರ್ಸಿ ಅಪ್ಲಿಕೇಷನ್ ಹಾಕುವವರು ಮತ್ತು ಎನ್‌ಕ್ವೈರಿ ಕೇಳುವವರು ½ ಆಣೆ ಸ್ಟಾಂಪು ಕಳುಹಿಸಬೇಕು ವಿಳಾಸಕ್ಕೆ ಟಪಾಲುದ್ವಾರ ಕಾಗದಗಳನ್ನು ಬರೆದು ಆರ್ಡರು ಕಳಿಸಿ ಬಾಟ್ಲಿಗಳನ್ನು ತರಿಸಿಕೊಳ್ಳಬಹುದು — [33-6]

ಮೆಸ್ಸರ್ಸ್ ತಿರುಪತಿ ಗುಜರ್ ಅಂಡ್ ಕೋ., ಸೋಲ್ ಏಜಂಟ್ಸ್, ಸ್ಕಾರ್ಪಿಯಾನಿಯೋ ಡೆಪೋ, ಹರಿಹರ, ಮೈಸೂರು ಪ್ರಾವಿನ್ಸು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ?
ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-17

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ'—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿರಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ; ೧ ರೂ ೬ ಆ., ೧ ರೂ. ೪ ಆ.

ಚುಕ್ಕಿಯುಳ್ಳ ಟೋಪಿಗಳು ರೂ ೧–೮; ರೂ ೧–೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ. ೧೨ ಆ , ೧ ರೂ ೮ ಆ.; ೧ ರೂ ೬ ಆ.

ಮುಸುಕಿನ ಟೋಪಿಗಳು ೧ ರೂ ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



1-

ಬೆನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ರಳೆಯುವ ಬಾಧೆ, ಖಂಡಗ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವು ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಪ್ರತಾಪಕಂಠೀರವ ಚರಿತ್ರೆ.

(1) "ಧರ್ಮಿಷ್ಠರಿಗೆ ವ್ಯಸನದಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ, (2) ಸ್ತ್ರೀಧರ್ಮ ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ-ಚಾತುರ್ಯ, (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು, (4) ವನ, ಸರಸ್ಸು, ಆರಾಮ ವರ್ಣನೆಗಳು, (5) ಮನುಷ್ಯಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು ; (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭ ಶೈಲಿ ; (7) ಸರಳ ಯುಕ್ತಿ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ ಕ್ರಯ.—1 ರೂಪಾಯಿ, ಟಪಾಲ್ ಹಾಸಲು ಬೇರೆ

[16 9] ನಮ್ಮ ವಿಳಾಸ —ಎಜಿಯುಕೇಷನ್ ಕಂಪನಿ, ಬೆಂಗಳೂರು ಸಿಟಿ,

ಡೋಂಗರೆ ಇವರ ಬಾಲಾಮೃತ.

[115-41]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೨ ಆಣೆ ; ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಸಮಸ್ತ ವಿಧವಾದ ನೋವೂ ಇರಿತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಜೆನ್ನಿನ ಸೆಳೆತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ.

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ಬಿಕರಿಯಾಗುತ್ತಲಿವೆ. ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ಬಿಕರಿಯಾಗುವದು.

ಮುಲಕಡ್ಡಿ ಔಷಧ ಡಬ್ಬಿಗೆ 6 ಆಣೆ; 12 ಕುಪ್ಪಿಗೆ ರೂ. ೩–೪–೦. ಹಲ್ಲುಪುಡಿ ಡಬ್ಬಿಗೆ 2 ಆಣೆ; 12 ಕುಪ್ಪಿಗೆ ರೂ. 1–2–0. ವಿ. ಪಿ. ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ. [42-ರ]

ವಿಳಾಸ —ಅಮೃತಾಂಜನ ಡಿಪೋ, ೧೧ ಫ್ರೈಯರ್ ರೋಡ್, ಫ್ರೋರ್ಟ್, ಬೊಂಬಾಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಜೋವೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ಸೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನಾಡಿಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತವೆ ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೈಸೆಳವುಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿನೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ. [136-31]



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕ್ಷಣಮಾತ್ರದಲ್ಲಿ ಕೋರಿದವರಿಗೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ ! ಒಂದೇ ಒಂದು ಬುದ್ಧಿಯು ನಿಮ್ಮಲ್ಲಿರಲಿ ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲ ರೂ. 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ :—**ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.**

Cool and Health-Creating Drinks

ಅತ್ಯುತ್ತಮವಾದ ಷರಬತ್ತುಗಳು.

(ಮೆಡಲ್, ಮನಿಪ್ರೈಸ್ ಮತ್ತು ಸರ್ಟಿಫಿಕೇಟುಗಳನ್ನು ಹೊಂದಿರುತ್ತವೆ.)

ನೂಗದೇಬೇರಿನ ಷರಬತ್ತು.

(Sarasa parela or the best Blood-purifier.)

ಅತ್ಯುತ್ತಮವಾದ ದೇಶೀಯ ನೊಗದೇ ಬೇರುಗಳಿಂದಲೇ ಅತಿ ಉತ್ತಮ ರೀತಿಯಲ್ಲಿ ತಯಾರಿಸಲ್ಪಟ್ಟಿರುತ್ತದೆ. ರಕ್ತವನ್ನು ಶುದ್ಧಿಮಾಡಿ ದೇಹವನ್ನು ಉತ್ತಮ ರೀತಿಯಲ್ಲಿ ಕಾಪಾಡುವದರಲ್ಲಿ ಸರ್ವಶ್ರೇಷ್ಠವಾದುದು. ರಕ್ತ ಕೆಡುವುದರಿಂದುಂಟಾಗುವ ಕಜ್ಜಿ, ತುರಿ, ಮೈಕಿಸಸು, ಹುರುಪು, ಹುಳುಕಡ್ಡಿ, ಇವೇ ಮೊದಲಾದ ಚರ್ಮರೋಗಗಳನ್ನೂ, ಉಷ್ಣಾಧಿಕ್ಯದಿಂದುಂಟಾಗುವ ಮೂತ್ರದಲ್ಲಿ ಉರಿ, ಅರೆತಲೆನೋವು, ನಿದ್ರೆ ಬಾರದಿರುವಿಕೆ, ವಾಯುವಿನಿಂದುಂಟಾಗುವ ಅರನಿದ್ರೆ, ಬಾಯಿ ದುರ್ವಾಸನೆ, ಕೈಕಾಲು ಉರಿ, ಗರ್ಭವೇದ್ಯ, ರಕ್ತ ನೀರಾಗುವಿಕೆ, ಇವೇ ಮೊದಲಾದ ಚರ್ಮ ರೋಗಗಳನ್ನೂ ದೇಹ ಪುಷ್ಟಿ ಇಲ್ಲದಿರುವಿಕೆಯನ್ನೂ ಬಹಳ ಜಾತರಿಯಿಂದ ಗುಣಪಡಿಸುವುದು ಕ್ರಯ 8 ಔನ್ಸ್ ಬಾಟ್ಲು 1 ಕ್ಕೆ 0-8-0 [70-4]

ಶ್ರೀ ಗಂಧದ ಷರಬತ್ತು.

(Sandal Syrup)

ಶರೀರದಲ್ಲಿ ಉಂಟಾಗುವ ಉರಿ, ತಾಪ, ಬಾಯಾರಿಕೆ, ಉಷ್ಣಾಧಿಕ್ಯ, ಧಾತುನಷ್ಟದಿಂದ ಉಂಟಾಗುವ ಬಲಹೀನತೆ, ಇವೇ ಮುಂತಾದ ಸಮಸ್ತ ರೋಗಗಳೂ ಇದರ ಸೇವನೆಯಿಂದ ಖಾತ್ರಿಯಾಗಿ ಗುಣವಾಗುವವು.

ಕ್ರಯ 8 ಔನ್ಸ್ ಬಾಟ್ಲು 1 ಕ್ಕೆ 0–8–0.

ಬಾದಾಮ್ ಷರಬತ್ತು.

(Almond Syrup)

ಅತ್ಯುತ್ತಮವಾದ ಬಾದಾಮಿಯ ಹಾಲಿನಿಂದಲೇ ಉತ್ತಮ ರೀತಿಯಲ್ಲಿ ತಯಾರಿಸಿದೆ ಹೊಟ್ಟೆಯೊಳಗೆ ಹುಣ್ಣಾಗಿರುವುದು, ಮೂಗು ಕಟ್ಟಿಕೊಳ್ಳುವುದು, ಆಷ್ಟಾಳೆ, ನಿದ್ರಾಭಂಗ, ಅತಿದಾಹ ಮೊದಲಾದವುಗಳು ಇದರ ಸೇವನೆಯಿಂದ ಸಂದೇಹವಿಲ್ಲದೆ ಗುಣವಾಗುತ್ತವೆ. ಕ್ರಯ 8 ಔನ್ಸ್ ಬಾಟ್ಲು 1 ಕ್ಕೆ 0 8-0.

ಅಮೃತ ಷರಬತ್ತು.

(Nectar Juice)

ಪರಿಶುದ್ಧವಾದ ದೇಶೀಯ ಅಮೃತವಳ್ಳಿಯಿಂದಲೇ ತಯಾರಿಸಿದ ಎಲ್ಲಾ ವಿಧವಾದ ಹಳೇ ಜ್ವರಗಳೂ, ಅರಕ್ತತೆ, ಅಗ್ನಿಮಾಂದ್ಯ, ಆಗಾಗ್ಗೆ ತಲೆ ನೋಯುತ್ತಿರುವುದು, ಪಿತ್ತಸಂಕಟ, ರಕ್ತ ಕೆಡುವಿಕೆ, ಧಾತುನಷ್ಟ, ಇಂದ್ರಿಯಗಳ ಬಲಹೀನತೆ, ಇವೇ ಮೊದಲಾದುವುಗಳು ಇದರ ಸೇವನೆಯಿಂದ ಖಾತ್ರಿಯಾಗಿ ಗುಣವಾಗುತ್ತವೆ ನರಗಳ ಬಲಹೀನತೆಯನ್ನು ಹೋಗಲಾಡಿಸಿ, ಜ್ಞಾಪಕ ಶಕ್ತಿಯನ್ನು ಹೆಚ್ಚಿಸಿ, ಇಂದ್ರಿಯಗಳ ಬಲ ಹೆಚ್ಚಿಸಿ ಆರೋಗ್ಯ ಉಂಟುಮಾಡುವದರಲ್ಲಿ ಸರ್ವಶ್ರೇಷ್ಠವಾದುದು. ಕ್ರಯ ಸೀಸೆ 1 ಕ್ಕೆ 0-8-0

ಈ ಮೇಲ್ಕಂಡ ಷರಬತ್ತುಗಳು ಕುಡಿಯುವದಕ್ಕೆ ಹಿತಕರಗಳಾಗಿಯೂ, ಸುವಾಸನೆಯುಳ್ಳವಾಗಿಯೂ, ರೋಗಗಳಿಗೆ ಗುಣಕಾರಿಗಳಾಗಿಯೂ ಇರುತ್ತವೆ. ಸೇವನಾ ಕ್ರಮ ಬಾಟ್ಲುಗಳ ಮೇಲೆಯೇ ಇರುತ್ತದೆ

ಓಮಮ್ ವಾಟರ್.

(Omum Water)

ಅಜೀರ್ಣದ ಹೊಟ್ಟೆ ನೋವು, ವಾಂತಿ, ಹೊಟ್ಟೆ ತೊಳಸುವದು, ಕಾಲರ, ಶೀತ, ಶೀತಭೇದಿ, ಅಜೀರ್ಣದಿಂದ ಮೈ ಕಾವುಬಿಳಿಕೆ, ಶೀತವಾಯು, ಊರ್ಧ್ವವಾಯು, ಗಂಟಲಿನಲ್ಲಿ ಶ್ಲೇಷ್ಮ ಕಟ್ಟಿರುವದು, ಮಲಹೊಟ್ಟೆಯಲ್ಲಿಯೇ ನಿಂತು ಯಾತನೆ ಪಡಿಸುವುದು, ಇವೇ ಮೊದಲಾದುವುಗಳು ಇದರ ಸೇವನೆಯಿಂದ ಖಾತರಿಯಾಗಿ ಗುಣವಾಗುತ್ತವೆ. ಕ್ರಯ 8 ಔನ್ಸ್ ಬಾಟ್ಲು 1 ಕ್ಕೆ 0-4-0

ನಮ್ಮ ವಿಳಾಸ.—ಯಮ್. ಟಿ. ಹೆಚ್. ಅಂಡ್ ಕೋ ,
ದೊಡ್ಡಪೇಟೆ ಚೌಕ, ಮೈಸೂರು.

ಕುಂತಳಾನಂದ ತೈಲವು.

147 31

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳು ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ಕರಿಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ವಿದ್ಯಾರ್ಥಿಗಳವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ ರೂಪಾಯಿ 10 ಆಣೆ ಅಂಚೆ ಖರ್ಚು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗನ್ನು ತರಿಸಿ ನೋಡಿರಿ

ನಮ್ಮ ವಿಳಾಸ —ಪಿ ಎಮ್ ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್

ಪರೀಕ್ಷೆ ನೋಡದ ಅಗ್ಗದ ತೈಲ ಎಣ್ಣೆಗಳು ಈಗ ಎಲ್ಲೆಲ್ಲೂ ಹೇರಿಯಾಗುತ್ತಿವೆ ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಳು ಕಳೆದುಕೊಳ್ಳಬೇಡಿ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ತೈಲ ಎಣ್ಣೆಯನ್ನು ತಲೆಗೆ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತುಹೋಗುತ್ತೆ ಆದಕಾರಣ ಸರ್ವ ಶ್ರೇಷ್ಠವಾಗಿಯೂ ಪ್ರಖ್ಯಾತವಾಗಿಯೂ ಇರುವ ಕಾಮಿನಿಯಾ ತೈಲವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳೆಸುತ್ತೆ ಕೂದಲು ಇವರಿಂದ ವಿಪುಲವಾಗಿ, ನಯವಾಗಿ, ಚಕಚಕಿಸುವಹಾಗೆ ವಿದವಾದ ನೀಲವರ್ಣದಿಂದ ಕೂಡಿ, ಆಗಾಗ ಹಿಂದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ ಹೊಟ್ಟನ್ನು ಅಡಗಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳ ದ್ರಾವದ ಕಿಂಡಿ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಎಲಪತಿನ, ನರೆಕೂದಲನ್ನು ಕಪ್ಪುಮಾಡುವುದಕ್ಕೆ ಅರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟಿರಿಸುವದು ಕಾಮಿನಿಯಾ ತೈಲದಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ

ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0 4 0 ಬೇರೆ ತೆರಬೇಕು
3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

ಮೂಸೆಯು ಬೇಕೆಂದರೆ ಒಂದು ಅರ್ಥಾಣೆಯ ಚೀಟನ್ನು ಕಳುಹಿಸಿರಿ

ಮೈಸೂರು ಎಗ್ಜಿಬಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಬಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ ಮನ್ನಾರ್‌ಗುಡಿ ಸಬ್ ಜಡ್ಜ್ ಸಿಕ್ರೆಟರಿ ಮ|| ಡಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಮೂರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ" ತಿರುಮುಡಿಪಟ್ಟಿ ಬಿ ಎಸ್ ಹೈಸ್ಕೂಲ್ ಹೆಡ್ ಮಾಸ್ಟರ್ ಮ|| ಎ ಸುಬ್ರಹ್ಮಣ್ಯಪಿಳ್ಳೆಯವರು ಬರೆಯುವದು—"ನಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ನೋಡಿದೆನು ಅದು ಕೂದಲನ್ನು ಹುಟ್ಟಿಸಿ ಅಂದವಾಗಿಯೂ, ಕೋಮಲವಾಗಿಯೂ, ಸೊಂಪಾಗಿಯೂ ಬೆಳೆಸುವುದೆಂದು ಖಂಡಿತವಾಗಿ ಹೇಳಬಲ್ಲೆನು ದಯವಿಟ್ಟು ಇನ್ನು ಮೂರು ಬಾಟ್ಲಿ ಎಣ್ಣೆ ಕಳಿಸಿಕೊಡಿ" ಪನೆಯೂ ಡಿಪ್ಟಿ ಕಲೆಕ್ಟರ್ ಆಫೀಸ್ ಮ|| ನೀಲಕಂಠಯ್ಯರ್ ಎಂಬುವವರು ಬರೆಯುವದು—"ದಯವಿಟ್ಟು ನಮ್ಮ ಕಾಮಿನಿಯಾ ಎಣ್ಣೆ ಆರು ಬಾಟ್ಲಿ ಕಳಿಸಿಕೊಡಿ ಒಂದು ವಾರ ಹಿಂದೆ ನೀವು ಕಳಿಸಿದ ಬಾಟ್ಲಿಗಳು ಮುಗಿದುಹೋಯಿತು ಇದೇ ಉತ್ತಮೋತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳಬಲ್ಲೆನು" ಆದಕಾರಣ ನೀವು ಒಂದು ಸಲ ತರಿಸಿ ಪರೀಕ್ಷೆ ಮಾಡಿ

ಎಚ್ಚರಿಕೆ.—ಹೊಸದಾಗಿ ಇಟ್ಟಿರುವ ನಾವುಗಳಲ್ಲೆಲ್ಲಾ ಕಾಮಿನಿಯಾ ಸಿಕ್ಕುತ್ತೆ ನಿಮ್ಮ ಸ್ಥಳದ ವ್ಯಾಪಾರಿಗಳಲ್ಲಿ ಅದು ಇಲ್ಲದಿದ್ದರೆ ಅವನ ಹೆಸರು ಮತ್ತು ವಿಳಾಸ ಸಮೇತ ನಮಗೆ ತಿಳಿಸಿ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು ಇಂಥಾವರಿಗೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ಎಣ್ಣೆ ನೋಡಿ ಕೊಂಡುಕೊಳ್ಳಿ

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ಏಜೆಂಟ್, ದಿ ಉಲನ್ ಮಾರ್ಟ್ ಮಂಗಳೂರು

ವಿಳಾಸ.— [8 15]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

84 48

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಆರತಿ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತಸೀನು, ಶ್ವಾಸರೋಗ, ಜಜ್ಜು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ಔಷಧದ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಟಿನ್ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯೊಂದಿಗೆ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದ್ದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಆಗಲೇ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ನಡಮುತಿಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಜಿ ಎಸ್ ಶಿನ್ನಯ್ಯಸೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಜವಳಿ ವ್ಯಾಪಾರಿಗಳು ಅಗತ್ಯ ನೋಡಬೇಕು.

[10 4]

ನಮ್ಮಲ್ಲಿ ನೂಲಂಚಿನ ಸೋಲಾಪುರದ ಸೀರೆಗಳು ಕಿರಿಗೆಗಳು ಕಣಗಳು ರವಿಕೆವಾರ್ ದೊರಕುತ್ತೆ ಒಣ್ಣಾ ಛಾತಿರಿ, ಮಾಲು ಹಸನು, ಬೆಲೆ ಅತ್ಯಂತ ಸುಲಭ ವ್ಯಾಪಾರಿಗಳಿಗೂ ಚಿಲ್ಲರೆ ಗಿರಾಕಿಗಳಿಗೂ ಅನುಕೂಲವಾದ ಸಮಯ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಬಹುದು, ಅಥವಾ ಬಂದು ನೋಡಬಹುದು ನಮ್ಮ ವಿಳಾಸ -

ಜಿ. ಎಸ್. ಶ್ರೀಕಂಠಯ್ಯ, ಏಜಂಟ್,

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ,
ಲಿಮಿಟೆಡ್, ದೊಡ್ಡಪೇಟೆ ಗಡಿಯಾರದ ಚೌಕ, ಮೈಸೂರು

ಪ್ರಖ್ಯಾತವಾದ ಪಾರ್ಸಿ ಫ್ಲೂಟ್ ಹಾರ್ಮೋನಿಯಂ



ಉತ್ಕೃಷ್ಟ ಪದಾರ್ಥ, ಯಾವ ಹವೆಯಲ್ಲೂ ಬೇರುಪಡಾಗದ ಬಹು ಬಲಿಷ್ಟವಾದ ಮರ ರೀಡುಗಳು ಅತ್ಯಂತ ಶ್ರೇಷ್ಟವಾದವು, ನಾದವು ಮಹಾ ಸುಖಕರವಾಗಿದೆ ಇದರಷ್ಟು ಬಾಳಿಕೆ ಬರುವದು ಬೇರೊಂದಿಲ್ಲ, ಮೂರೂಕಾಲು ಆಕ್ಟೇವುಗಳು ಒಂದು ಸೆಟ್ ರೀಡುಗಳು, ಬ್ಯಾಕ್ ತಿತ್ತಿಗಳು ಪಾರ್ಸಿ ಮತ್ತು ಹಿಂದೂ ಸಂಗೀತಕ್ಕೆ ಬಹಳ ಹಿತಕರವಾಗಿದೆ ಎಲ್ಲೆಲ್ಲೂ ಪ್ರಚಾರಕ್ಕೆ ತರಬೇಕೆಂದು ಇದರ ಕ್ರಯವನ್ನು ಬಹಳ ಕಡಮೆಮಾಡಿದೆ ಬೇಗ ನೋಡಿ ಇಂಥಾ ಒಳ್ಳೇ ಸಮಯವನ್ನು ಕಳಕೊಳ್ಳದೆ ಕೊಂಡಿಟ್ಟುಕೊಳ್ಳಿ ಕ್ರಯ ರೂ 25 ರೈಲ್ ಚಾರ್ಜು ಪ್ರತ್ಯೇಕ ಅಡ್ವಾನ್ಸು 5 ರೂ ಬಂದಲ್ಲದೆ ನಾವು ಕಳುಹಿಸಲಾರೆವು ನಮ್ಮ ವಿಳಾಸ — [72-2]

ಮ್ಯಾನೇಜರ್, ಬಾಂಬೆ ಪಾಪ್ಯುಲರ್ ಏಜನ್ಸಿ,
ಥಾರಾವಿ, ಬೊಂಬಾಯಿ

ಜಂಟಲ್ಮೆನ್ ಲೀವರ್ ವಾಚ್

ಇದು ಬಹು ಮೇಲಾದ ಮತ್ತು ಬಹು ನಾಜೂಕಾದ ಮತ್ತು ಬಲಿಷ್ಟವಾದ ಯಂತ್ರ ಸಾಮಾನುಗಳಿಂದ ತಯಾರಾಗಿ ಈಗತಾನೆ ಬಂದಿರುತ್ತೆ ನಾವು ಸ್ವಂತವಾಗಿ ತರಿಸುತ್ತೇವೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಮನೋಹರವಾದದ್ದು ಸುಂದರವಾದದ್ದು ಖಾತ್ರಿಯಾದ ಮತ್ತು ಬೆಲೆಯುಳ್ಳ



ವಸತಿಯಾದ ವಾಚ್ [54 5]

ಕ್ರಯ—ವಾಚ್ 1 ಕ್ಕೆ ರೂ 1 8 0 ಮಾತ್ರ

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ಬಿ. ಆರ್ ವೆಂಕಟರಮಣ ಅಂಡ್ ಕಂಪನಿ,
ನಂ 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

28—3—1913 ರಿಂದ 4—4—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	1	1
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	15	14	0	0
ಮೈಸೂರು ,,	0	0	570	342
ಕಡೋರಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	115	81
ಹಾಸನ ,,	0	2	31	15
ಚಿತ್ರದುರ್ಗ ,,	0	0	0	0
ಕಡೂರ್ ,,	0	0	92	52
ಶಿವಮೊಗ್ಗಾ ,,	17	8	1	1
ಜುಮ್ಲಾ	32	24	810	492

ಶಾಲಿವಾಹನ ಶಕ ವರುಷಗಳು 1836 ನೇ ಪ್ರಮಾದಿ ಸಂವತ್ಸರೇ ಉತ್ತರಾಯಣೆ ವಸಂತಋತೌ ಚೈತ್ರ ಬಹುಳ ಪಂಚಮಿ ಶುಕ್ರವಾರದಿಂದ ಚೈತ್ರ ಬಹುಳ ಏಕಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಏಪ್ರಿಲ್ ಮತ್ತು ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮೇಷ ಮಾಸ ತೇದಿ
25	ಶುಕ್ರ	ಪಂಚಮಿ	31 31	ಮೂಲ	44-45	13
26	ಶನಿ ‡	ಷಷ್ಠಿ	41 19	ಪೂರ್ವಾ	48 6	14
27	ಭಾನು	ಸಪ್ತಮಿ	44 30	ಉತ್ತರಾ	52 24	15
28	ಸೋಮ §	ಅಷ್ಟಮಿ	48 23	ಶ್ರವಣ	57 54	16
29	ಮಂಗಳ	ನವಮಿ	51 16	ಧನಿಷ್ಠ	60 0	17
30	ಬುಧ •	ದಶಮಿ	56-11	ಧನಿಷ್ಠ	4 29	18
1	ಗುರು	ಏಕಾದಶಿ	60 0	ಶತಭಿಷ	11 1	19

ಮತ್ಸ್ಯಜಯಂತಿ
‡ ಶ್ರೀರಂಗದಲ್ಲಿ ಚೈತ್ರೋತ್ಸವಾರಂಭ, ಮಳೆ ನಕ್ಷತ್ರ—ಭರಣಿ 1ನೇ ಪಾದ
§ ಅಮೃತಸಿದ್ಧಿಯೋಗ
• ಮಳೆ ನಕ್ಷತ್ರ—ಭರಣಿ 2ನೇ ಪಾದ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಸಣ್ಣ ಅಕ್ಕಿ ಪಲ್ಲಾ ೧ಕ್ಕೆ	ರೂ	೧೫ ೦ ೦	೧೭ ೮-೦
ಕೆಂಬೂತಿ ಅಕ್ಕಿ ಅವಲ್		೧೫ ೨ ೦	೧೭ ೮-೦
,, ದುಯಂ		೧೫-೦-೦	೧೬-೦-೦
ಜೀರಸಾಂಬಾ ಅಕ್ಕಿ		೧೪ ೫ ೦	೧೭-೪ ೨
ಸಣ್ಣಕ್ಕಿ ಅವಲ್		೧೭ ೮-೦	೧೮ ೮ ೦
,, ದುಯಂ		೧೬ ೦ ೦	೧೭-೮-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ		೧೪-೦-೦	೧೩ ೮-೦
,, ದುಯಂ ,,		೧೩-೬-೦	೧೨ ೮-೦
ಹೈನ್ ರಾಗಿ ಪಲ್ಲಾ ೧ಕ್ಕೆ		೭ ೨ ೦	೫ ೦ ೦
ಕಾರ್‍ರಾಗಿ ,,		೬ ೮ ೦	೬ ೧೨ ೦
ಜೋಳ ,,		೭ ೦ ೦	೭ ೪-೦
ಹಲಸಂದೆ ಪಲ್ಲಾ ೧ಕ್ಕೆ		೧೦ ೪-೦	೧೩ ೧೨ ೦
ಬಿಳೀ ಅವರೆ ,,		೧೧-೦ ೦	೧೧ ೦-೦
ಹೆಸರು ,,		೧೩ ೦ ೦	೧೪-೦-೦
ಉದ್ದು ,,		೧೪-೮-೦	೧೬ ೦-೦
ಕಡಲೆ ,,		೧೦-೮ ೦	೧೨-೦-೦
ಎಳ್ಳು ಸೇರು ೧೨೭ಕ್ಕೆ		೨೭ ೦ ೦	೨೪-೦-೦
ಹುರುಳೀ ಪಲ್ಲಾ ೧ಕ್ಕೆ		೬ ೯ ೦	೭ ೦-೦
ಹರಳು ೧೨೭ ಸೇರಿಗೆ		೧೨ ೮ ೦	೧೪ ೨ ೦
ಸೀಗೇಕಾಯಿ ಮಣ ೧ಕ್ಕೆ		೨ ೪-೦	೩-೮-೦
ಮೆಣಸಿನಕಾಯಿ ,,		೪ ೦ ೦	೩ ೪-೦
,, ದುಯಂ		೩-೦-೦	೧-೮ ೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೪-೮ ೦	ಮಣ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ		೬ ೨ ೦	೬ ೬-೦
ಹರಳೆಣ್ಣೆ ,, ,,		೫ ೮-೦	೬ ೦ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೫-೨ ೦	೫ ೪-೦
ಉಪ್ಪು ,, ,,		೫ ೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ		೧-೧೦-೦	೧-೪-೦
,, ಹಳೇದು ,,		೧ ೪ ೦	೦ ೧೪-೦
ತುಪ್ಪ ಮಣ ೧ಕ್ಕೆ		೨೦-೧-೦	೧೯-೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೧೧ ೦	೫-೦ ೦
ತೆಂಗಿನಕಾಯಿ ೧೦೦ಕ್ಕೆ		೭ ೦-೦	೬-೦ ೦
ಅಳಲೇಕಾಯಿ ಮಣ ೧ಕ್ಕೆ		೧-೪ ೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ		೦ ೧೨-೦	೧-೮-೦
ಚಿನ್ನ (ಪೌನ್) ಕೆಂಪು		೧೫ ೮ ೦	೫೧-೮-೦
,, ,, ಪಸಿಮೆ		೧೫ ೧೪-೬	೧೫ ೧೪-೬
,, ,, ಗಟ್ಟಿ ತೊಲ ೧ಕ್ಕೆ		೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧-೨ ೦	೮೧-೩ ೦

ಗುಣಕಂಡ ಮೂರು ಪ್ರಖ್ಯಾತ ಔಷಧಗಳು.

ಸ್ವಾಕ್ಸರ ಮಲೆನಾಡು ಜ್ವರಮಾತ್ರೆಗಳು—ಶೀತಪ್ರದೇಶಗಳಲ್ಲಿ ಹುಟ್ಟುಬರುವ ಅಥವಾ ದೀರ್ಘವಾದ ಶೀತಪಿತ್ತ ಎಲ್ಲಾ ಜಾತಿಯ ಚಳಿ ಜ್ವರಗಳನ್ನು ಖಂಡಿತವಾಗಿಯೂ ಸಂಪೂರ್ಣವಾಗಿಯೂ ವಾಸಿಮಾಡುತ್ತೆಂದು ಪ್ರಖ್ಯಾತಿ ಹೊಂದಿರುವ ಮಾತ್ರೆಗಳೇ ಇವು ಕ್ರಯ ಡಬ್ಬಿ 1ಕ್ಕೆ ರೂಪಾಯಿ 1-0-0

ಸ್ವಾಕ್ಸರ ಉಬ್ಬಸದ ಔಷಧ—ಉಬ್ಬಸ, ಕಠಿಣವಾದ ಕೆಮ್ಮು ಮೊದಲಾದ ಶ್ವಾಸಕೋಶದ ವ್ಯಾಧಿಗಳಿಗೂ, ಶೀತದ ಗಡ್ಡೆಗಳಿಗೂ ಬಹಳ ಉತ್ತಮವಾದ ಮತ್ತು ಶೀಘ್ರವಾಗಿ ಗುಣಕೊಡುವ ಔಷಧ ಕ್ರಯ ಬಾಟ್ಲಿ 1ಕ್ಕೆ ರೂಪಾಯಿ 1-0-0 [೨೦ 11]

ಸ್ವಾಕ್ಸರ ನಾಯಿಕೆಮ್ಮಿನ ಸಿದ್ಧೌಷಧ—ಇದು ಖಾತ್ರಿಯಾದ, ನಂಬಿಕೆಯುಳ್ಳ ಮತ್ತು ಅಮೋಘವಾದ ಔಷಧ ಬೇಗನೆ ಖಂಡಿತವಾಗಿಯೂ ಸಂಪೂರ್ಣವಾದ ಗುಣಕೊಡುವಂಥಾದ್ದು ಕ್ರಯ ಬಾಟ್ಲಿ 1ಕ್ಕೆ ರೂ 1-0-0

ಪ್ಯಾಕಿಂಗ್, ಪೋಸ್ಟೇಜ್, ವಿ ಪಿ ಛಾರ್ಜು ಪ್ರತ್ಯೇಕ ಈ ಔಷಧಗಳ ಗುಣಾದಿಗಳನ್ನು ವಿವರಿಸುವ ಹಸ್ತಪತ್ರಗಳನ್ನು ಕೇಳಿದವರಿಗೆ ಬಿಟ್ಟಿ ಕಳುಹಿಸುವೆವು

ವಿಳಾಸ —ಟಿ ಎಸ್ ಸ್ವಿಯರ್ಸ್,

147 ಪೋಪಾಂಸ್ ಬ್ರಾಡ್‌ವೇ, ಮದರಾಸ್

ಇವರಲ್ಲೂ ಸಿಕ್ಕುತ್ತವೆ—(1) ಎಡ್ವರ್ಡ್ ಕಂಪನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ, (2) ಸ್ಪೆಯಡ್ ಉಸ್ಮಾನ್ ಕಂಪನಿ, ಬೆಂಗಳೂರು ದಂಡು (3) ಕೆ ಪಟ್ಟಾಭಿರಾವ್ ಕಂಪನಿ, ಮಂಗಳೂರು, (4) ಎಚ್ ಪಿಳ್ಳೆ ಕಂಪನಿ, ಪಾಲಘಾಟ್, (5) ಜಾಯಿಸ್ ಕಂಪನಿ, ಕಲ್ಲಿಕೋಟೆ

ದಿ ಪೀಪಲ್ಸ್ ಬ್ಯಾಂಕ್, ಲಿಮಿಟೆಡ್, ತೀರ್ಥಹಳ್ಳಿ.

ಮೈಸೂರು ಕಂಪನಿಗಳ 1895 ನೇ ಇಸವಿ III ನೆಯ ರೆಗ್ಯುಲೇಷನ್ ಅನುಸರಿಸಿ ರಿಜಸ್ಟರ್ ಮಾಡಿಸಲ್ಪಟ್ಟಿದೆ

ಉದ್ದಿಷ್ಟ ಮೂಲಧನ ರೂ. 1,50,000.

ಇದು ಹಿಸ್ಸೆ (ಷೇರ್) ಒಂದಕ್ಕೆ ರೂ 10 ರಂತೆ 15,000 ಹಿಸ್ಸೆಗಳಾಗಿ ವಿಭಾಗಿಸಲ್ಪಟ್ಟಿದೆ ಪ್ರತಿ ಹಿಸ್ಸೆ ಒಂದಕ್ಕೆ ೪ ಆಣೆಯಂತೆ ಪ್ರವೇಶಧನವನ್ನೂ, ಹಿಸ್ಸೆಯ ಮೊಬಲಗಿನ ನಾಲ್ಕನೇ ಒಂದು ಭಾಗದ ಮೊಬಲಗು ರೂ 2-8-0 ನ್ನೂ ದರಖಾಸ್ತಿನೊಂದಿಗೆ ಕೊಡಬೇಕು ಉಳಿದ ರೂ 7-8-0 ಯು, ಒಂದು ಸಾರಿಗೆ ರೂ 2-8-0 ಗೆ ಮೀರದಂತೆ ಮೂರು ತಿಂಗಳಿಗೆ ಕಡಮೆಯಿಲ್ಲದ ವಾಯಿದೆಯಿಂದ ಕೇಳಲ್ಪಡುವುದು ಬ್ಯಾಂಕಿನಲ್ಲಿ ದೊರೆಯುವ ನಮೂನೆ (ಫಾರಂ) ಯಲ್ಲಿಯೇ ದರಖಾಸ್ತು ಬರೆಯಲ್ಪಡಬೇಕು

ಡಿರೆಕ್ಟರ್ಸ್ ಯಾನೆ ಕಾರ್ಯದರ್ಶಿಗಳು

ಮ|| ರಾ|| ಶ್ರಿ ಸಾಹುಕಾರ ಕಾಸರವಳ್ಳಿ ಶೇಷಪ್ಪನವರು,
,, ಕಿತ್ತಂದೂರು ತಿಮ್ಮಣ್ಣಭಟ್ಟರು,
,, ಶಿವಳಿ ಶೇಷಪ್ಪನವರು,
,, ನಗರದ ನರಸಿಂಹಯ್ಯನವರು, [ಶಿವಮೊಗ್ಗ,
,, ಕೆ ಶಂಕರನಾರಾಯಣರಾವ್, ಎಂ ಎ , ಬಿ ಎಲ್ ,
,, ಶಿರಳಿ ವಾಸುದೇವರಾಯರು,
,, ಭೂಪಾಲಂ ರುಕ್ಮಯ್ಯನವರು,
,, ಎಡೇಹಳ್ಳಿ ಲಿಂಗಪ್ಪನವರು (ಮ|| ವೆ ಶೇಷಪ್ಪ ಬ್ರದರ್ಸ್),
,, ಎಲವಟ್ಟಿ ರಾಮರಾಯರು,
,, ಎಡೂರು ತಿಪ್ಪಾಜೋಯಿಸರು,
,, ದೇವಂಗಿ ರಾಮಣ್ಣಗೌಡರು,
,, ಆಗುಂಬೆ ರಾಮರಾಯರು,
,, ಭಾವಿಕಟ್ಟೆ ನಾಗಾಭಟ್ಟರು,
,, ಕಟ್ಟೆ ವಾಳಕಪ್ಪನವರು,
,, ವೇಗಮುದ್ರೆ ವೆಂಕಟಸುಬ್ಬಣಾಚಾರ್ಯರು,
,, ಮೇಗರವಳ್ಳಿ ಅಪ್ಪೂಭಟ್ಟರು,
,, ಉಡುಪಿ ಶ್ರೀನಿವಾಸಾಚಾರ್ಯರು,
,, ಮೇಳಿಗೆ ಸಣ್ಣಬಸಪ್ಪನವರು

ಪ್ರಸಿಡೆಂಟ್—ಮ|| ರಾ|| ಶ್ರಿ ಸಾಹುಕಾರ್ ಕಿತ್ತಂದೂರು ತಿಮ್ಮಣ್ಣಭಟ್ಟರು.
ಟ್ರಷರರ್—ಮ|| ರಾ|| ಶ್ರಿ ಎಡೇಹಳ್ಳಿ ಲಿಂಗಪ್ಪನವರು (ಮೆ|| ವೆ| ಶೇಷಪ್ಪ ಬ್ರದರ್ಸ್)
ಮ್ಯಾನೇಜಿಂಗ್ ಡಿರೆಕ್ಟರ್—ಮ|| ರಾ|| ಶ್ರಿ ಮೇಳಿಗೆ ಸಣ್ಣಬಸಪ್ಪನವರು
ಲೀಗಲ್ ಅಡ್ವೈಸರ್—ಮ|| ರಾ|| ಶ್ರಿ ಕೆ ಶಂಕರನಾರಾಯಣರಾವ್, ಎಂ ಎ , ಬಿ ಎಲ್ , ಅಡ್ವೊಕೇಟ್, ಶಿವಮೊಗ್ಗ

75 2

ಮಲೆನಾಡಿನಲ್ಲಿ ರೈತರಿಗೂ ವರ್ತಕರಿಗೂ ಹಣ ಸರಬರಾಯಿ ಕಡಮೆಯಾಗಿ ಬಡ್ಡಿಯ ದರವು ಜಾಸ್ತಿಯಾಗಿರುವ ತೊಂದರೆಯನ್ನು ನಿವಾರಣ ಮಾಡುವುದಕ್ಕೂ ಮತ್ತು ಶೀಘ್ರವಾಗಿರುವ ಹಣದ ಚಲಾವಣೆಗೆ ನಿರ್ಭಯವಾದ ಮಾರ್ಗವನ್ನು ಕಲ್ಪಿಸುವುದಕ್ಕೂ ಈ ಮೇಲೆ ಕಂಡ ಮಹನೀಯರು ಮತ್ತು ಈ ತಾಲ್ಲೂಕಿನ ದೊಡ್ಡಮನುಷ್ಯರಾದ ಮ|| ರಾ|| ಶ್ರಿಗಳಾದ ಸಿರವಂತೆ ದಾಸಪ್ಪಯ್ಯನವರು, ಎಡೇಹಳ್ಳಿ ಶೇಷಪ್ಪನವರು, ಸಿರವಂತೆ ತಿಮ್ಮಪ್ಪಯ್ಯನವರು ಸಿರವಂತೆ ನಾರಾಯಣರಾಯರು, ಆಗುಂಬೆ ನಾಗೇಶರಾಯರು, ಹೊದಲದ ಹಾಲಪ್ಪಗೌಡರು ಮತ್ತು ಮಾರ್ವಾಡಿ ಗಂಗಾರಾಂಸೂರಾಜಿಯವರು ಇವರುಗಳೂ ಸೇರಿ ತಾ 27—1—1913 ರಲ್ಲು ಈ ಸಂಘವನ್ನು ಸ್ಥಾಪಿಸಿದ್ದಾರೆ ಈ ಮಲೆನಾಡಿಗೆ ನೂತನವಾಗಿರುವ ಈ ಸಂಘದ ಉದ್ದೇಶ್ಯಗಳು ನೆರವೇರುವಂತೆ ಈ ಸಂಘದ ಮೂಲಧನದಲ್ಲಿ ಈ ತಾಲ್ಲೂಕಿನ ಪ್ರಜೆಗಳೆಲ್ಲರೂ ಔದಾರ್ಯದಿಂದ ಹಿಸ್ಸೆಗಳನ್ನು ತೆಗೆದುಕೊಳ್ಳುವ ಮೂಲಕ ಪ್ರೋತ್ಸಾಹವನ್ನು ಕೊಡಬೇಕಾಗಿ ಪ್ರಾರ್ಥನೆ

ಈ ಸಂಘದ ನಿಬಂಧನೆಗಳನ್ನೂ (Articles of Association) ದರಖಾಸ್ತಿನ ನಮೂನೆ (ಫಾರಂ) ಗಳನ್ನೂ ಬ್ಯಾಂಕಿನ ಆಫೀಸಿನಲ್ಲಿ ಪಡೆಯಬಹುದು

ತೀರ್ಥಹಳ್ಳಿ, ಎಂ. ಎಸ್. ಬಸಪ್ಪ,
ತಾ 8-4-1913 ಮ್ಯಾನೇಜಿಂಗ್ ಡಿರೆಕ್ಟರ್.

ವೃತ್ತಾಂತ ಪತ್ರಿಕೆ

— ೧ —

ಸನ್ ೧೯೧೩ ನೇ ಇಸವಿ ಏಪ್ರಿಲ್ ತಾ ೨೪ ನೇ ಗುರುವಾರ

ಮೈಸೂರು ಸಂಸ್ಥಾನದ ನ್ಯಾಯವಿಧಾಯಕ ಸಭೆ

ಈ ತಿಂಗಳ 1 ನೇ ತಾ ಶನಿವಾರ ನ್ಯಾಯವಿಧಾಯಕ ಸಭೆಯಲ್ಲಿ ನಡೆದ ಚರ್ಚೆಗಳನ್ನು ಸರ್ಕಾರದವರು ತಾ 17 ನೇ ಗುರುವಾರದ ಗೆಜೆಟ್ಟಿನ ಸಂಗಡ ಪ್ರಕಟಮಾಡಿರುತ್ತಾರೆ ಸಂಸ್ಥಾನದ ಕಟ್ಟಳೆ ಕಾನೂನುಗಳನ್ನು ಸಮಸ್ತ ಪ್ರಜೆಗಳಿಗೂ ಸುಲಭವಾಗಿ ತಿಳಿಯುವ ರೀತಿಯಲ್ಲಿ ರಚಿಸುವುದು ನ್ಯಾಯವಾಗಿದೆ ಎಂದು ನಮಗೆ ತೋರುತ್ತದೆ ಆದರೆ ಈಗ ಸಾಮಾನ್ಯವಾಗಿ ರಚಿಸಲ್ಪಡುವ ಕಾನೂನುಗಳನ್ನೂ ನಿಬಂಧನೆಗಳನ್ನೂ ಬಹು ತೊಡಕಾಗಿ ಮಾಡುತ್ತಿರೋಣವರಿಂದ ಅದರ ಅರ್ಥವನ್ನೂ ವ್ಯಾಪನೆಯನ್ನೂ ಸರಿಯಾಗಿ ತಿಳಿದುಕೊಳ್ಳುವುದಕ್ಕೆ ವಕೀಲರೋ, ಬಹು ಬುದ್ಧಿಯುಳ್ಳವರೋ ಬೇಕಾಗುವುದು ಇವರು ಮೊಕದ್ದಮೆಗಳನ್ನು ವಿಚಾರಣೆ ಮಾಡಿ ವ್ಯವಸ್ಥೆ ಮಾಡುವ ಸಂದರ್ಭದಲ್ಲಿ ಕಾನೂನಿನ ಉದ್ದೇಶ ವ್ಯವಹಾರಗಳನ್ನು ವಿವರಿಸಬೇಕಾಗುತ್ತದೆ ಮೈಸೂರು ಗವರ್ನಮೆಂಟಿನವರು ಕಾನೂನುಗಳನ್ನು ಅನ್ಯಭಾಷೆಯಾದ ಇಂಗ್ಲೀಷಿನಲ್ಲಿ ರಚಿಸುವುದ್ಯಾಕೋ ಎಂದು ನಾವು ಯೋಚಿಸಬೇಕಾಗುತ್ತೇವೆ ಈ ಸಂಸ್ಥಾನದ ಪ್ರಜೆಗಳಲ್ಲಿ ಮುಕ್ಕಾಲು ಮೂರುಪಾಲು ಜನರ ಭಾಷೆಯು ಕನ್ನಡವೆಂದು ಹೇಳಬೇಕಾದ್ದಿಲ್ಲ ಕನ್ನಡದಲ್ಲಿ ಕಾನೂನುಗಳನ್ನು ಗವರ್ನಮೆಂಟಿನವರು ಯಾಕೆ ರಚಿಸಿ ಇಟ್ಟುಕೊಳ್ಳಬಾರದೋ ನಮಗೆ ತಿಳಿಯದು ಇಂಗ್ಲೀಷು ಕಾನೂನುಗಳ ವಿಷಯದಲ್ಲಿ ಈಗ ಒದಗಿರುವ ತಿಳುವಳಿಕೆಗಿಂತ ಕನ್ನಡ ಭಾಷೆಯಲ್ಲಿ ರಚಿಸಲ್ಪಟ್ಟ ಕಾನೂನುಗಳು ಬಹಳ ಸುಲಭವಾಗಿಯೂ ಜನಸಾಮಾನ್ಯರಿಗೆ ಗ್ರಾಹ್ಯವಾಗುವವು

ಈ ಸಭೆಯ ಪ್ರೊಸೀಡಿಂಗ್ಸನ್ನು ಓದಿ ನೋಡುವಲ್ಲಿ ಈ ಸಭೆಯು ಪ್ರಾರಂಭವಾದಾರಭ್ಯ ಹಲವು ಹೊಸ ಕಾನೂನುಗಳು ರಚಿಸಲ್ಪಟ್ಟವೆಂದು ದಿವಾನರವರೂ ಬಹು ಮಂದಿಯೂ ಪರಸ್ಪರ ಸಂತೋಷಪಟ್ಟು ಅಭಿಪ್ರಾಯಗಳನ್ನು ಸೂಚಿಸಿರುವಂತೆ ಗೊತ್ತಾಗುತ್ತದೆ ಮೈಸೂರು ಸಂಸ್ಥಾನದಲ್ಲಿ ಕಾನೂನುಗಳೂ ಪೈಶಾಚಿಕಗಳೂ ಅತಿಯಾದವೆಂದೂ ಅವುಗಳನ್ನು ಜಾರಿಗೆ ತರುವುದು ಸರ್ಕಾರದವರ ಅಭಿಮತವಲ್ಲವೆಂದೂ ನಮಗೆ ಕಾಣುತ್ತದೆ ಇವುಗಳಿಂದ ಪ್ರಜೆಗಳಿಗೆ ಬಹಳ ತೊಂದರೆಗಳು ಹುಟ್ಟುವವೆಂದು ಹೇಳಬಹುದು ಆದರೆ ಕಾನೂನನ್ನು ಉಲ್ಲಂಘಿಸುವ ಮನುಷ್ಯನಲ್ಲಿ ಸರ್ಕಾರದವರು ತಮ್ಮ ಕೋಪ ಅದನ್ನು ಜಾರಿಗೆ ತರುವುದಿಲ್ಲವೆಂಬ ನಂಬಿಕೆ ಇರುವ ಪಕ್ಷಕ್ಕೆ ಒಂದಾನು ಕಾನೂನಿನಿಂದಾಗಲಿ ಅದನ್ನು ಪಾಲಾಯಿಸುವ ಅಧಿಕಾರಿಗಳಿಂದಾಗಲಿ ಗೌರವವನ್ನು ತೋರಿಸಲಾರನು ಕಳೆದ ವಾರ ನಾವು ಸೂಚಿಸಿದಂತೆ, ಮತ್ತೂ ಈ ವಾರ ಬಹು ಪತ್ರಿಕೆದಾರರು ಅಭಿಪ್ರಾಯ ಪಡುವ ಪ್ರಕಾರ ಸಂಸ್ಥಾನದಲ್ಲಿ ಅಕೃತ್ಯಗಳು ಹೆಚ್ಚುತ್ತಲೇ ಬಂದಿವೆ ಎಂದೂ, ಶಿಕ್ಷೆಗೆ ಗುರಿಮಾಡಲ್ಪಡುವವರ ಸಂಖ್ಯೆ ಕಡಮೆಯಾಗುತ್ತಿದೆ ಎಂದೂ ಸರ್ಕಾರದ ರಿಪೋರ್ಟುಗಳಿಂದಲೇ ಓದಿ ತಿಳಿದುಕೊಳ್ಳುವುದು ಈ ಸೀಮೆಯ ಪ್ರಜೆಗಳ ನಾಚಿಕೆಯಿಂದ ತಲೆ ಬಗ್ಗಿಸುವಂತೆ ಮಾಡುತ್ತದೆ ಯಾವ ಸಂಸ್ಥಾನದಲ್ಲಾಗಲಿ ಗವರ್ನಮೆಂಟಿನವರು ಮಾಡಿಕೊಂಡಿರುವ ಕಾನೂನುಗಳನ್ನು ದರ್ಪದಿಂದಲೂ ನಿಷ್ಪಕ್ಷಪಾತದಿಂದಲೂ ಜಾರಿಗೆ ತರದೆ ಇರುತ್ತಾರೆಯೋ ಅಂಥಾ ಗವರ್ನಮೆಂಟಿನವರು ತಮ್ಮ ಪ್ರಜೆಗಳ ಭಕ್ತಿ ಪ್ರೀತಿ ಗೌರವಗಳನ್ನು ಬಹುಕಾಲ ಕಾಪಾಡಿಕೊಂಡು ಬರುವುದು ಸಾಧ್ಯವಲ್ಲ

ಈಗ ನ್ಯಾಯವಿಧಾಯಕ ಸಭೆಯಲ್ಲಿ ಮಾಡಿರುವ ಕೆಲವು ಕಾನೂನುಗಳೇನೋ ಸಂದರ್ಭಾನುಸಾರ ಸಹಜವಾದವುಗಳೇ ಸರಿ, ಆದರೆ ಇನ್ನು ಕೆಲವು ಭಾಗಗಳನ್ನು ನೋಡಿದರೆ ಸಭಿಕರು ವಿಷಯಗಳ ಒಟ್ಟಭಿಪ್ರಾಯವನ್ನು ಪರಿಗಣಿಸುವುದಕ್ಕೆ ಪ್ರತಿಯಾಗಿ ಹರಕುಮುರುಕುಗಳನ್ನು ಹಿಡಿದು ಬಹಳ ದೀರ್ಘವಾಗಿ ಹೋರಾಡುವರೆಂದು ಕಾಣುತ್ತದೆ ಮ್ಯುನಿಸಿಪಲ್ ಕಾನೂನಿನ ಕೆಲವು ಬದಲಾವಣೆಗಳೇನೋ ಅವಶ್ಯಕವೆಂದು ಹೇಳಬಹುದು, ಆದರೆ ಅದರಲ್ಲಿ ತುಂಬಾ ಅವಶ್ಯಕವಾಗಿರುವ ಬದಲಾವಣೆಗಳು ಇನ್ನೂ ಕೆಲವಿರುತ್ತವೆ ಆ ಕಾನೂನನ್ನೆಲ್ಲಾ ಒಟ್ಟಾಗಿಟ್ಟುಕೊಂಡು ಅವಶ್ಯಕವಾದ ಬದಲಾವಣೆಗಳನ್ನೆಲ್ಲಾ ಒಂದೇ ಸಲ ಮಾಡಿಬಿಡಬಾರದೇ? ಎಕ್ಸೈಸ್ ಕಾನೂನಿನ ವಿಷಯದಲ್ಲೂ ಇದೇ ರೀತಿ ಮಾಡಬಹುದಲ್ಲಾ? ಮುಜರಾಯಿ ಕಾನೂನು ಸ್ವಲ್ಪ ಕಷ್ಟವಾದದ್ದು ಆ ಖಾತೆಯಲ್ಲಿರುವ ಕಷ್ಟಗಳೆಲ್ಲಾ ಈ ಕಾನೂನಿನಿಂದ ನಿವಾರಣೆಯಾಗುವುದಾದರೆ ಸೀನಿಯರ್ ಕೌನ್ಸಿಲರವರ ಸಾಹಸ ಪ್ರಯತ್ನವು ಸಾರ್ಥಕವಾದೀತು ಈ ಮುಸೂದೆ ಕಾನೂನನ್ನು ಸಿಲೆಕ್ಟ್ ಕಮಿಟಿ ಮೆಂಬರುಗಳು ಯಾವರೀತಿ ಬದಲಾವಣೆ ಮಾಡಿ ಕೌನ್ಸಿಲ್ಲಿಗೆ ಕಳುಹಿಸುವರೋ ನೋಡತಕ್ಕದ್ದಾಗಿದೆ

ಈ ಸಂಸ್ಥಾನದಲ್ಲಿ ಬಾಲ್ಯವಿದ್ಯಾಭ್ಯಾಸಕ್ಕೆ ಕಾನೂನು ಆಗಬೇಕಾದದ್ದು ಸದ್ಯದಲ್ಲಿ ಅವಶ್ಯಕವೆಂದು ನಮಗೆ ತೋರುವುದಿಲ್ಲ ಈಗಲೇ ಸಂಸ್ಥಾನಾಮಳೆ ಓದುಬರಹ ಕಲಿಯಲು ಸಿದ್ಧರಾಗಿರುವಂಥಾ ಮಕ್ಕಳಿಗೆಲ್ಲಾ ಸರ್ಕಾರದವರು ಸ್ಕೂಲುಗಳನ್ನಿಟ್ಟು ಉಪಾಧ್ಯಾಯರುಗಳನ್ನು ಒದಗಿಸಲಾರದೆ ಇರುತ್ತಾರೆ ಇಂದಾದ್ದರಲ್ಲಿ ಗವರ್ನಮೆಂಟಿನವರು ಬಲಾತ್ಕಾರದ ಕಾನೂನು ಆಗಬೇಕೆಂದು ಕುತೂಹಲಪಡುವುದ್ಯಾಕೋ ತಿಳಿಯದು ಒಂದು ಸಾವಿರ ಸ್ಕೂಲುಗಳನ್ನು ಸಂಸ್ಥಾನಾಮಳೆ ಪ್ರಾರಂಭಿಸುವುದಕ್ಕೆ ತಕ್ಕ ಹಣ ಸರ್ಕಾರದವರು ಹಣವನ್ನು ಒದಗಿಸಿದಾಗ್ಯೂ ಶಿಕ್ಷಣವನ್ನು ಹೊಂದಿದ ಉಪಾಧ್ಯಾಯರುಗಳು ಸಿಕ್ಕುವುದಿಲ್ಲವೇ ಹೊರತು ಅಷ್ಟು ಸ್ಕೂಲುಗಳಿಗೂ ಸಾಕಾಗುವಷ್ಟು ಪುಸ್ತಕಗಳೇನೋ ಸಿದ್ಧವಾಗಿ ಬರುವರು ಮೈಸೂರು ಗವರ್ನಮೆಂಟಿನವರು ಇತರ ವಿಚಾರಗಳಲ್ಲಿ ಹ್ಯಾಗೋ ಹಾಗೆ ಈ ಬಾಬಿನಲ್ಲೂ ಮೇಲಿನಿಂದ ಕಟ್ಟಡಕ್ಕೆ ಪ್ರಾರಂಭಿಸುತ್ತಿದಾರಲ್ಲದೆ ತಳಪಾಯಿಂದ ಮೇಲಕ್ಕೆ ಕಟ್ಟಿಕೊಂಡು ಹೋಗುವವರಾಗಿಲ್ಲ ಬೆಂಗಳೂರಿನಲ್ಲಿ ಸುಖವಾದ ಒಂದು ಕೊಠಡಿಯೊಳಗೆ ಕೆಲವು ದೊಡ್ಡಮನುಷ್ಯರು ಕುಳಿತುಕೊಂಡು 7 ರಿಂದ 11 ವಯಸ್ಸಿನೊಳಗಿರುವವರೆಲ್ಲಾ ಪಾಠಶಾಲೆಗೆ ಹೋಗಲೇಬೇಕೆಂದು ಕಾನೂನು ಮಾಡಿಸುವುದು ಅವರಿಗೇನೋ ಬಹಳ ಸುಲಭವಾಗಿದೆ ಆದರೆ ಇಂಥಾ ಕಾನೂನಿನ ಪರಿಣಾಮವೇನು? ಅದಕ್ಕೆ ಎಷ್ಟು ಹಣ ಖರ್ಚಾಗಬೇಕು ಎಂಬೀ ವಿಚಾರಗಳು ಆ ಮಹನೀಯರಿಗೇನಾದರೂ ತಿಳಿದಿದೆಯೇ? ಅಷ್ಟೊಂದು ಸ್ಕೂಲುಗಳಿಗೆ ಉಪಾಧ್ಯಾಯರುಗಳನ್ನು ಹ್ಯಾಗೆ ಒದಗಿಸುವುದು ಸಾಧ್ಯವಾಗುವುದೇನಾದರೂ ಅವರ ಮನಸ್ಸಿಗೆ ಹೊಳೆದಿದೆಯೋ? ಮನಸ್ಸಿಗೆ ತೋರಿದ ರೀತಿ ಉಪಾಧ್ಯಾಯರನ್ನು ನಾಮಿನೇಷನ್ ಹಾದಿಯಲ್ಲಿ ನಾಗಿಸದೆ ಅವರನ್ನು ವಿದ್ಯಾವಂತರೆಂದು ಸಗೌರವವಾಗಿ ಕಾಣುವ ವಿಭಾಗದಲ್ಲಿ ಆ ಮಹನೀಯರು ಒಪ್ಪತಕ್ಕವರಾಗಿದ್ದಾರೆಯೇ? ಉಪಾಧ್ಯಾಯರುಗಳನ್ನು ತರಪೇತು ಮಾಡುವುದಕ್ಕೆ ಈಗ ಸರ್ಕಾರದವರು ಮಾಡಿರುವ ಏರ್ಪಾಡು ಈಗಿರುವ ಸ್ಕೂಲುಗಳಿಗೇನೇ ಸಾಕಾಗದೆ ಇರುತ್ತದೆ ಹೀಗಿರುವಲ್ಲಿ ಹೊಸ ಸ್ಕೂಲುಗಳಿಗೆ ಉಪಾಧ್ಯಾಯರುಗಳನ್ನು ಒದಗಿಸುವ ಮಾರ್ಗವ್ಯಾವುದು? ನಮ್ಮ ಸಂಸ್ಥಾನದ ನ್ಯಾಯ ನಿರ್ಮಾಣ ಕರ್ತರು ಈ ಸೀಮೆಯ ಮತ್ತೂ ಇಲ್ಲಿನ ಪ್ರಜೆಗಳ ಸ್ಥಿತಿಗತಿಯನ್ನೂ ಕುಂದು ಕೊರತೆಗಳನ್ನೂ ಪರಸ್ಪರವಾಗಿಯೂ ಸಾಕ್ಷಾತ್ತಾಗಿಯೂ ನೋಡಿ ತಿಳಿದುಕೊಂಡವರಾಗಿದ್ದ ಪಕ್ಷದಲ್ಲಿ ಅವರು ಬೇಕಾದದ್ದನ್ನೆಲ್ಲಾ ಸಿದ್ಧಮಾಡಿಟ್ಟುಕೊಳ್ಳುವುದಕ್ಕಿಂತ ಮುಂಚೆಯೇ ಈ ರೀತಿ ಆತುರಪಟ್ಟು ಕಾನೂನ್ ಮಾಡಲು ಎಂದಿಗೂ ಹೋರಡುತ್ತಿರಲಿಲ್ಲ

ಮಿಸೆಸ್ ಬೆಸೆಂಟ್‌ಯವರ ಮೇಲೆ ತಂದಿರುವ ವ್ಯಾಜ್ಯ

ಬಹು ಕಾಲದಿಂದಲೂ ಥಿಯೊಸೊಫಿಕಲ್ ಸೊಸೈಟಿಗೆ ಸಂಬಂಧಪಟ್ಟ ಜನಜನಿತವಾದ ವಿವಿಧ ವರ್ತಮಾನಗಳು ಎಲ್ಲಾ ಕಡೆಗಳಿಗೂ ಹಬ್ಬುತ್ತಾ ಇದ್ದುವು ಅವುಗಳಲ್ಲಿ ಕೆಲವು ನಿರಾಧಾರವಾದ ಹುಚ್ಚು ಮಾತುಗಳು ಇನ್ನು ಕೆಲವು ಯಥಾರ್ಥವಾದವುಗಳೆಂಬುದಕ್ಕೆ ಆಧಾರವಿತ್ತು ಈಚೆಗೆ ಮದ್ರಾಸಿನ ಕೋರ್ಟುಗಳಲ್ಲಿ ಮಿಸೆಸ್ ಬೆಸೆಂಟ್‌ಯವರ ಮೇಲೆ ತಂದಿರುವ ವ್ಯಾಜ್ಯವೂ ಅದಕ್ಕೆ ಪ್ರತಿಯಾಗಿ ಮಿಸೆಸ್ ಬೆಸೆಂಟ್‌ಯವರೂ ಆಕೆಯವರ ಸ್ನೇಹಿತರೂ ಪತ್ರಿಕಾಕರ್ತರ ಮತ್ತೂ ಇತರರ ಮೇಲೆ ತಂದಿರುವ ವ್ಯಾಜ್ಯವೂ ನಡೆಯುತ್ತಾ ಇರುತ್ತವೆ ಇವುಗಳಲ್ಲಿ ಕೆಲವು ವ್ಯಾಜ್ಯಗಳು ಇನ್ನೂ ಕೊನೆಗಂಡಿರುವುದಿಲ್ಲವಾದುದರಿಂದ ಅವುಗಳ ವಿಷಯ ನಾವು ಪ್ರಸ್ತಾಪಿಸುವುದಿಲ್ಲ ಮ|| ನಾರಾಯಣರವರು ತಮ್ಮ ಇಬ್ಬರು ಕುಮಾರರನ್ನು ಮಿಸೆಸ್ ಬೆಸೆಂಟ್‌ಯವರ ವಶದಿಂದ ಬಿಡಿಸಿಕೊಳ್ಳುವುದಕ್ಕಾಗಿ ಆಕೆಯವರ ಮೇಲೆ ತಂದಿದ್ದ ವ್ಯಾಜ್ಯವು ವ್ಯವಸ್ಥೆಯಾಗಿರುವುದರಿಂದ ಅದರ ವಿಷಯ ಕೆಲವು ಸಂಗತಿಗಳನ್ನು ತಿಳಿಸಬೇಕೆಂದಿರುತ್ತೇವೆ

ಕೆಲವು ವಿಷಯಗಳಲ್ಲಿ ಈ ವ್ಯಾಜ್ಯವು ಬಹು ಸಾಧಾರಣವಾದುದು ಮ|| ನಾರಾಯಣರವರು ಮಿಸೆಸ್ ಬೆಸೆಂಟ್‌ಯವರಲ್ಲಿ ತುಂಬಾ ಅಭಿಮಾನಪೂರ್ವಕರಾಗಿಯೂ ಥಿಯೊಸೊಫಿಕಲ್ ಸೊಸೈಟಿಯ ಒಳಪಂಗಡಕ್ಕೆ ಸೇರಿದ್ದವರಾಗಿಯೂ ಇದ್ದರು ಮಿಸೆಸ್ ಬೆಸೆಂಟ್‌ಯವರೂ ಮ|| ಲೆಡ್‌ಬೀಟರ್‌ರವರೂ ಈ ಇಬ್ಬರು ಹುಡುಗರಲ್ಲಿ, ಮುಖ್ಯವಾಗಿ ಹಿರಿಯವನಲ್ಲಿ, ಅಸಾಧಾರಣವಾದ ಗುಣಲಕ್ಷಣಗಳು ಇವೆಯೆಂದೂ ಇದರಿಂದ ಇವನು ಉತ್ತರೋತ್ತರ ಥಿಯೊಸೊಫಿಯನ್ನು ಪ್ರಚಾರಪಡಿಸುವುದಕ್ಕೆ ತುಂಬಾ ಸಮರ್ಥನಾಗುವನೆಂದೂ ಭಾವಿಸಿದ್ದರು ಮೈತ್ರೇಯ ಅಥವಾ ಕ್ರಿಸ್ತನು ಈ ಲೋಕಕ್ಕೆ ತಿರಿಗಿ ಬರುವುದಕ್ಕೆ ಇವನ ದೇಹವೇ ದ್ವಾರವಾಗಿರುವುದೆಂದು ಯೋಚಿಸಿದ್ದರು ಅದಕಾರಣ ಈ ಹುಡುಗನನ್ನು ತಮ್ಮ ಸ್ವಾಧೀನಮಾಡಿಕೊಳ್ಳುವುದಕ್ಕೆ ಕುತೂಹಲವುಳ್ಳವರಾಗಿ ಇಬ್ಬರು ಮಕ್ಕಳನ್ನೂ ಮಿಸೆಸ್ ಬೆಸೆಂಟ್‌ಯವರ ಪೋಷಣೆಗೆ ಒಪ್ಪಿಸಿಕೊಡುವಂತೆ ತಂದೆಯನ್ನು ಪ್ರೇರಿಸಿ ಬೇಗೆದುಕೊಂಡು, ಇವರನ್ನು ಇಂಗ್ಲಾಂಡಿಗೆ ಕಳುಹಿಸಿ ಉತ್ತಮವಾದ ವಿದ್ಯಾಭ್ಯಾಸಮಾಡಿಸುವ ಏರ್ಪಾಟನ್ನು ಮಿಸೆಸ್ ಬೆಸೆಂಟ್‌ಯವರು ವಹಿಸಿಕೊಂಡರು

ತರುವಾಯ ತಂದೆಯು ಮ|| ಲೆಡ್‌ಬೀಟರ್‌ರವರ ಸಹವಾಸದಿಂದ ತನ್ನ ಮಕ್ಕಳಿಗೆ ಕೆಡಕಾದೀತೆಂಬ ಅನುಮಾನದ ಮೇಲೆ ಅವರ ಸ್ವಾಧೀನದಿಂದ ತನ್ನ ಮಕ್ಕಳನ್ನು ಪ್ರತ್ಯೇಕಿಸುವುದಕ್ಕೆ ಅಪೇಕ್ಷೆಪಟ್ಟರು ಮಿಸೆಸ್ ಬೆಸೆಂಟ್ ಯವರು ಹಾಗೆ ಮಾಡುವುದಾಗಿ ತಂದೆಗೆ ಅಭಯವನ್ನು ಕೊಟ್ಟಾಗ್ಯೂ ಹಾಗೆ ಮಾಡಲೇ ಇಲ್ಲ ಆದಕಾರಣ ತಂದೆಯು ತನ್ನ ಮಕ್ಕಳನ್ನು ಹಿಂತಿರಿಗಿ ಕೊಡಬೇಕೆಂದು ಕೇಳಿದರು ಮಿಸೆಸ್ ಬೆಸೆಂಟ್‌ಯವರು ಕೊಡುವುದಿಲ್ಲವೆಂದು ಹೇಳಿದ್ದರಿಂದ ದಾವಾ ಮಾಡಬೇಕಾಯಿತು ಈ ಮೊಕದ್ದಮೆಯ ವಿಚಾರಣೆಯಲ್ಲಿ ಕೆಲವು ಸಂಗತಿಗಳು ಹೊರಪಟ್ಟಿರುತ್ತವೆ

ಮ|| ಲೆಡ್‌ಬೀಟರ್‌ರವರು ಬಾಲಕರಿಗೆ ದುರ್ವಿದ್ಯೆಯನ್ನು ಕಲಿಸಿಕೊಡುತ್ತಾ ಇದ್ದುದಾಗಿ ತಿಳಿದುಬಂದಿರುತ್ತದೆ ಮ|| ಲೆಡ್‌ಬೀಟರ್‌ರವರು ತಾವೇ ಹಲವು ದುರಭಿಪ್ರಾಯಗಳನ್ನು ಇಟ್ಟುಕೊಂಡಿದ್ದುದು ಮಾತ್ರವಲ್ಲದೆ ಕೆಲವು ಬಾಲಕರಿಗೆ ಬೋಧನೆ ಮಾಡುವವರಾಗಿದ್ದುದರಿಂದ ಇಂಥವರ ಸಹವಾಸವು ಬಾಲಕರಿಗೆ ಕ್ಷೇಮಕರವಲ್ಲವೆಂದು ಜಡ್ಜಿಯವರು ಅಭಿಪ್ರಾಯಪಟ್ಟರು ಮ|| ಲೆಡ್‌ಬೀಟರ್‌ರವರ ಮೇಲೆ ಹೊರಿಸಿದ ದುಷ್ಕಾರ್ಯಗಳ ಅಪರಾಧವು ರುಜುವಾತಾಗಲಿಲ್ಲವೆಂದು ಜಡ್ಜಿಯವರು ತೀರ್ಮಾನಿಸಿರುತ್ತಾರೆ ಮತ್ತು ಮಕ್ಕಳನ್ನು ಪುನಃ ತಂದೆಗೆ ಕೊಡಬೇಕೆಂದೂ ಮತ್ತು ಅವರು ಹೈಕೋರ್ಟಿನ ಸ್ವಾಧೀನದಲ್ಲಿರಬೇಕೆಂದೂ ಅಪ್ಪಣೆಮಾಡಿರುತ್ತಾರೆ

ವಿಚಾರಣೆಯಲ್ಲಿ ಮಿಸೆಸ್ ಬೆಸೆಂಟ್‌ಯವರೂ ಮ|| ಲೆಡ್‌ಬೀಟರ್‌ರವರೂ ಕೊಟ್ಟಿರುವ ಹೇಳಿಕೆಗಳು ಇವರು ಎಷ್ಟು ಮರುಳಾಗಿದ್ದಾರೆಂಬುದನ್ನು ಪ್ರಕಾಶಪಡಿಸುತ್ತವೆ ಮ|| ಲೆಡ್‌ಬೀಟರ್‌ರವರು ಮಂಗಳಗ್ರಹದಲ್ಲಿ ಏನೇನು ನಡೆಯುತ್ತಿದೆ ಎಂಬುದು ತಮಗೆ ತಿಳಿದಿದೆ ಎಂದೂ ತಾವು ಜಗತ್‌ಕರ್ತನನ್ನು ಮುಖಾಮುಖಿಯಾಗಿ ಕಂಡವರಾದಾಗ್ಯೂ ದುರಭಿಪ್ರಾಯಗಳನ್ನಿಟ್ಟುಕೊಂಡು ಹುಡುಗರಿಗೆ ಬೋಧನೆಯನ್ನು ಮಾಡಬಲ್ಲೆವೆಂದೂ ಹೇಳಿದರು ಜಗತ್‌ಕರ್ತನು ಪವಿತ್ರನಾಗಿರುತ್ತಾನೆ ಮ|| ಲೆಡ್‌ಬೀಟರ್‌ರವರು ಆತನ ಮುಖವನ್ನು ಕಂಡು ಜಾ

...ಮುಂಬೇ ಮಿಸೆಸ್ ಬಿಸೆಂಟ್‌ಯವರು ಮ್ಯಾಡಾಮ್ ಬ್ಲವಾಟ್‌ಸ್ಕಿಯವರು ಕಂಡುದಾಗಿಯೂ ಟಿಬೆಟ್ಟಿನಲ್ಲಿ ಸಂಚರಿಸಿದುದಾಗಿಯೂ ಹೇಳಿದರು ಆವರ ವಿವೇಕವು ಜನರು ಮಾಡುವ ವಿತಿಮೀರಿದ ಮುಖಸ್ತುತಿಗೋಸ್ಕರ ...ಯಿತೆಂದು ತೋರುತ್ತದೆ

ತಿಯೊಸೊಫಿ ಬೋಧನೆಯನ್ನು ನಂಬಿರುವವರೆಲ್ಲರು ಮಿಸೆಸ್ ಬಿಸೆಂಟ್ ...ನು ಈ ಹುಡುಗರ ವಿಷಯದಲ್ಲಿ ಮಾಡಿದ ಕಾರ್ಯವನ್ನೂ ಅವರಿಗೂ ಲೆಡ್‌ಬೀಟರ್‌ರವರಿಗೂ ಇದ್ದ ಸ್ನೇಹವನ್ನೂ ಒಪ್ಪುವುದಿಲ್ಲವೆಂದು ನಾವು ...ತ ತಿಯೊಸೋಫಿಕಲ್ ಸೊಸೈಟಿಯು ಇಂಥಾ ದುರುದ್ದೇಶಗಳನ್ನು ಇಟ್ಟು ...ಡುವ ಒಬ್ಬ ಮನುಷ್ಯನಿಂದ ನಡಿಸಲ್ಪಡುವುದಾಗಿದ್ದರೆ ಒಬ್ಬ ಮಾನಿಷ್ಟನು ...ಲ್ಲಿ ಹೇಗೆ ಸೇರುತ್ತಾನೋ ನಮಗೆ ಗೊತ್ತಾಗುವುದಿಲ್ಲ ಮ॥ ಲೆಡ್‌ಬೀಟರ್ ...ರು ಎರಡನೇ ಸಾರಿ ತಿಯೊಸೋಫಿಕಲ್ ಸೊಸೈಟಿಯನ್ನು ಬಿಟ್ಟು ಹೋಗು ...ಬಲಾತ್ಕರಿಸದೆ ಹೋದರೆ, ಅದಕ್ಕೆ ಸೇರಿರುವವರು ದುರ್ಬೋಧನೆಗೆ ಅವಕಾಶ ...ವವರಾಗಿದ್ದಾರೆ ಎಂಬುದು ಸ್ಪಷ್ಟವಾಗಿ ಗೊತ್ತಾಗುವುದು ಮ॥ ಲೆಡ್ ...ಟರವರು ತಮ್ಮ ಬೋಧನೆಗನುಸಾರವಾಗಿ ನಡೆಯುವವರಾಗಿಬಹುದು, ...ಲ್ಲದೆ ಇರಬಹುದು ಆದರೆ ಅವರು ಕೆಟ್ಟತನವನ್ನು ಅಭ್ಯಾಸಿಸು ...ದು ಎಂಬ ದುರಭಿಪ್ರಾಯವನ್ನು ಎಷ್ಟರ ವರೆಗೆ ಇಟ್ಟುಕೊಂಡಿರುತ್ತಾರೋ ...ವರಿಗೂ ಅವರು ಯಾವ ಸಮಾಜದ ನಾಯಕರಾಗಿರುವುದಕ್ಕಾದರೂ ...ರ್ಹರಾಗಿರುವುದಿಲ್ಲ

ತಿಯೊಸೋಫಿಕಲ್ ಸೊಸೈಟಿಯ ವಿಷಯ ನಾವು ಆಕ್ಷೇಪಿಸತಕ್ಕದು ಅದ ...ಮುಂದಾಳುಗಳು ನಡಿಸುವ ಅಂತರಂಗ ಕೂಟಗಳಿಗೆ ಸಂಬಂಧಪಟ್ಟವುಗಳಾಗಿ ...ವೆ. ಮನುಷ್ಯನು ದೇವರನ್ನು ತಿಳಿಯತಕ್ಕ ಅಂತರಂಗವಾದ ಮತ್ತು ಸಮಾ ...ದ ಯಾವುದೋ ಒಂದು ದಾರಿಯು ಇದೆ ಎಂಬ ಅಭಿಪ್ರಾಯವು ಇರುವಂತೆ ...ತ್ತದೆ ಮತದ ಚರಿತ್ರೆಯನ್ನು ಓದಿನೋಡಿದರೆ, ಇಂತಹ ಮಾರ್ಗವನ್ನು ...ದವರೆಲ್ಲರೂ ಚಪಲಚಿತ್ತರಾಗಿಯೂ ವಿಷಯಾಸಕ್ತರಾಗಿಯೂ ತಮ್ಮ ಗುಣವ ...ಗಳಲ್ಲಿ ಕ್ರಮೇಣ ಹೀನಸ್ಥಿತಿಗೆ ಬರುವವರಾಗಿಯೂ ಇದ್ದಾರೆಂಬುದು ತಿಳಿದು ...ತ್ತದೆ ಯಾವುದೋ ಒಂದು ರಹಸ್ಯವಿದ್ಯೆಯನ್ನು ಪಡೆದ ಸಮಾಜವು ...ರಂಗವಾಗಿ ಕೆಲಸ ನಡಿಸುತ್ತಾ ಬರುವುದು ನಮ್ಮ ಹಿಂದು ದೇಶಕ್ಕೆ ಬೇಕಾಗಿ ...ದಿಲ್ಲ ಈ ದೇಶದ ಜನರಿಗೆ ಬೇಕಾಗಿರುವುದು ಯೇಸು ಕ್ರಿಸ್ತನ ಜೀವನದ ... ದೇವರ ಪವಿತ್ರತೆಯನ್ನೂ ಒಳ್ಳೇತನವನ್ನೂ ಪ್ರಕಟಮಾಡಿರುವಾತನು ...ಬ್ಬನೇ ಒಂದು ವೇಳೆಯರು ದೇವರನ್ನು ಕಂಡುಕೊಳ್ಳಬೇಕೆಂದು ತವ ...ಕ್ಕಾರೆ ಅವರಿಗೆ ವಿಶ್ರಾಂತಿ ಇಲ್ಲ ಯೇಸು ಕ್ರಿಸ್ತನ ಮೂಲಕವಾಗಿ ಹೋ ...ಲೇ ಆ ಮಾರ್ಗವಾಗಿರುತ್ತದೆ ಆತನು ಸರ್ವರಿಗೂ ಹೇಳುವುದೇನಂದರೆ— ...ವ ನನ್ನ ಬಳಿಗೆ ಬನ್ನಿರಿ, ನಾನು ನಿಮಗೆ ವಿಶ್ರಾಂತಿಯನ್ನು ಕೊಡುತ್ತೇನೆ" ...ಯವೇ

ಒಳದೇಶದ ವೃತ್ತಾಂತಗಳು.

ಕಳೆದ ವಾರ ರಾಜಧಾನಿಯ ಸಿವಿಲ್ ಕೋರ್ಟು ಕಟ್ಟಡಕ್ಕೆ ಸಿಡಿಲು ಬಿದ್ದು ...ಭಾಗಗಳು ಶಿಥಿಲವಾಗಿರುತ್ತವೆ

ಶ್ರೀಮನ್ ಮಹಾರಾಜರವರು ಮಹಾಮಾತೃಶ್ರೀಯವರ ಸಮೀಪ ನೆನ್ನೆ ... ಆರೋಗಣೆಯನ್ನು ತೀರಿಸಿಕೊಂಡು ಮೋಟಾರಿನಲ್ಲಿ ರಾಜಧಾನಿಯಿಂದ ...ರಿಗೆ ಚಿತ್ತೈಸುವವರಾಗಿದ್ದರು

ಮಂಡ್ಯದ ತಾಲ್ಲೂಕು ಮದ್ದೂರಿನಲ್ಲಿ ಶ್ರೀನರಸಿಂಹಸ್ವಾಮಿ ರಥೋತ್ಸವದ ...ಲ್ಲಿ ಅಂದರೆ ಈ ದಿನವೂ, ನಾಳೆಯೂ, ನಾಡಿದ್ದೂ ದನಗಳ ಪ್ರದರ್ಶನವು ...ಟ್ಟು, ಉತ್ತಮವಾದ ರಾಸುಗಳಿಗೆ ಬಹುಮಾನಗಳು ಕೊಡಲ್ಪಡುವವು

ರಾಜಧಾನಿಯ ಶ್ರೀರಾಮಪೇಟೆಯಲ್ಲಿ ಸಿಂಗಯ್ಯನೆಂಬೊಬ್ಬ ಚಿನ್ನಗೆಲಸದ ...ಭಾವಿಯಲ್ಲಿ ಬಿದ್ದುಬಿಟ್ಟನು ಅವನ ಹೆಂಡತಿಯೂ ಕೂಡಲೇ ಅದೇ ಭಾ ...ಬಿದ್ದಳು ಅಷ್ಟರಲ್ಲೇ ಜನರು ಸೇರಿ ಇಬ್ಬರನ್ನೂ ಎತ್ತಿ ಹಾಕಿದರು ಗಂಡ ...ಮೃತಪಟ್ಟನು, ಹೆಂಡತಿಯು ಬದುಕಿಕೊಂಡಳು

ಬೆಂಗಳೂರಿನಲ್ಲಿ ಪೊಲೀಸ್ ಸಾಧನೆಯ ಶಿಕ್ಷಕರಾಗಿದ್ದ ಸುಮಾರು 37 ...ಷ್ಟನ ಪೊಲೀಸ್ ಇನ್ಸ್‌ಪೆಕ್ಟರ್ ಮ॥ ಟಿ ಶ್ರೀನಿವಾಸರಾಯರು ಕಳೆದ ...ಸೋಮಾಂಬುಧಿ ಕೆರೆಯಲ್ಲಿ ಈಜುವುದಕ್ಕೆ ಹೋಗಿ ನೀರಿನಲ್ಲಿ ಮುಳುಗಿ ...ಮರಣ ಹೊಂದಿದರೆಂದು ತಿಳಿದು ವಿಷಾದಿಸುತ್ತೇವೆ

ಪ್ಲೇಗಿನ ಭೀತಿಗೋಸ್ಕರ ಗ್ರಾಮಾಂತರಗಳಲ್ಲಿ ಜನರು ಊರುಬಿಟ್ಟು ...ಗೆ ಹೋಗುವ ಸಂದರ್ಭಗಳಲ್ಲಿ ಅಂಥವರು ರೈಲ್ವೆ ಸ್ಟೇಷನ್‌ಗಳಿಂದ ಕಡೇ ಪಕ್ಷ ಎರಡು ಫರ್ಲಾಂಗು ಅಂದರೆ 440 ಗಜಗಳ ದೂರದಲ್ಲಿ ಜೋಪಡಿಗಳನ್ನು ...ಕೊಳ್ಳುವಂತೆ ನೋಡಿಕೊಳ್ಳಬೇಕೆಂದು ಸರ್ಕಾರದವರು ಡೆಪ್ಯುಟಿ ಕಮಿಷನರ್ ...ರಿಗೆ ತಿಳಿಸಿರುತ್ತಾರೆ

ರಾಜಧಾನಿಯ ದೇವರಾಜ ಮಾರ್ಕೆಟ್ಟಿನ ಎದುರಿಗೆ ಒಬ್ಬ ಹುಡುಗನು ...ನು ಕಳೆದ ವಾರ ಸಿಡಿಮದ್ದಿನಲ್ಲಿ ಪಟಾಸನ್ನು ಮಾಡುತ್ತಿದ್ದಾಗ ಅದು ...ಕಸ್ಮಾತ್ತಾಗಿ ಒಡೆದದ್ದರಿಂದ ಅವನ ಅಂಗಗಳೆಲ್ಲಾ ಭಯಂಕರವಾಗಿ ಗಾಯಗ ...ಳು ಕೂಡಲೇ ಅವನನ್ನು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಮಾಡಿಸಿದರೂ ಪ್ರಯೋ ...ನವಿಲ್ಲದೆ ಅವನು ಅಕಾಲಮರಣವನ್ನು ಹೊಂದಿದನು

ಕಳೆದ ಶುಕ್ರವಾರ ಮಧ್ಯಾಹ್ನ ರಾಜಧಾನಿಯ ಜೀವನ್ನರಾಯನ ಕಟ್ಟೆ ...ಯ ಸಂತೆಯಾಗುತ್ತಿದ್ದಾಗ ಕುಂಬಾರಕೊಪ್ಪಲು ಬೋರೇಗೌಡನ ಜೇಬಿ ...ಗೆ 73 ರೂಪಾಯನ್ನು ಮಲ್ಲ ಉರುಫ್ ಬಿಲ್ಲಿ ಎಂಬ ಗುಮಾನಿ ಆಸಾ ...ಮಿ ಕಳುವುಮಾಡಿಕೊಂಡು ಹೋಗುತ್ತಿದ್ದದ್ದನ್ನು ಪತ್ತೆಯ ಪೊಲೀಸ್ ...ಟೆ ವಾಳಪ್ಪನು ಹಿಡಿದು ಪೊಲೀಸಿಗೆ ಒಪ್ಪಿಸಿರುತ್ತಾನೆಂದು ತಿಳಿದುಬಂದಿದೆ

ಮೈಸೂರು ವೀರಶೈವ ವಿದ್ಯಾಭಿವೃದ್ಧಿಯ ಧರ್ಮಫಂಡಿಗೆ ಕಳೆದ ಮಾರ್ಚಿ ...ಲ್ಲಿ ದಾವಣಗೆರೆಯಲ್ಲಿರುವ ಉರುಮಕೊಂಡ ಚನ್ನಬಸಪ್ಪನವರು 30 ...ಯು, ತ್ಯಾಮಗೊಂಡ್ಲು ಮುಪ್ಪಪ್ಪನವರು 1 ರೂಪಾಯಿ, ಸೀಬರ್ದ ...ಟೂರು ಮಠದ ಪಿಚ್ಚಾಧ್ಯಕ್ಷರ ಮೂಲಕ 1 ರೂಪಾಯಿ, ಮಂಡ್ಯದ ...ರುಕೋಟೆ ಮಠದ ಚನ್ನವೀರಾರ್ಯರವರ ಮೂಲಕ 1½ ರೂಪಾಯಿ ...ಬಂದಿವೆ ಎಂದು ಸೆಕ್ರೆಟರಿಯವರು ತಿಳಿಸುತ್ತಾರೆ

ರಾಜಧಾನಿಯ ಚಾಮರಾಜಪೇಟೆಗೆ ರೈಲಿನ ಮೇಲೆ ಬರತಕ್ಕ ಪ್ರಯಾಣಿಕರು ಕೋರ್ಟುಗಳ ಬಳಿ ಹೊಸದಾಗಿ ಮಾಡಿರುವ ಚಾಮರಾಜಪುರಂ ಸ್ಟೇಷನ್ನಲ್ಲಿ ಇಳಿಯಬಹುದು ಇತರ ಕಡೆಗಳಲ್ಲಿ ರೈಲು ಹತ್ತಿ ಬರತಕ್ಕವರು ಈ ಹೊಸ ಸ್ಟೇಷನ್‌ಗೇನೇ ಟಿಕೀಟುಗಳನ್ನು ಕೊಂಡುಕೊಳ್ಳುವಂತೆ ರೈಲ್ವೆ ಕಂಪನಿಯವರು ಏರ್ಪಾಡುಮಾಡಿರುತ್ತಾರೆ ಐದಾರು ವರ್ಷಗಳಿಂದ ಈ ಸ್ಟೇಷನ್ ಮಾಡಿಸಿಕೊಡ ಬೇಕೆಂದು ಬೇಡುತ್ತಿದ್ದ ಪ್ರಜೆಗಳ ಪ್ರಾರ್ಥನೆಯು ಈಗ ನೆರವೇರಿತೆಂದು ಸಂತೋಷಪಡುತ್ತೇವೆ

ಒಬ್ಬ ಬಾತ್ಮೀದಾರರಿಂದ—ಸೀರ್ಯದ ತಾಲ್ಲೂಕು ಮದಲೂರು ಗ್ರಾಮದ ಸ್ಕೂಲ್ ಮಾಸ್ಟರು ಮ॥ ಕೆ ವೆಂಕಟರಾಮಯ್ಯನವರು ಅನ್ಯೋನ್ಯಸಹಾಯಕ ಸಂಘಗಳ ಪ್ರಯೋಜನವನ್ನು ಜನಗಳಿಗೆ ತಿಳುವಳಿಕೆ ಕೊಟ್ಟು, ಈ ಗ್ರಾಮದಲ್ಲಿ ಒಂದು ಸೊಸೈಟಿಯನ್ನು ಏರ್ಪಾಟುಮಾಡಿರುತ್ತಾರೆ ಇದುವರೆಗೆ 32 ಜನ ಮೆಂಬರುಗಳಾಗಿ 575 ರೂಪಾಯಿ ಷೇರುಧನ ಕೊಟ್ಟಿರುವರು ಇನ್ನೂ 2,000 ರೂಪಾಯಿವರೆಗೆ ವಸೂಲು ಆಗಬಹುದು ಸರ್ಕಾರದವರು ಈ ಸಂಘವನ್ನು ಪ್ರೋತ್ಸಾಹಗೊಳಿಸಿ ಅಭಿವೃದ್ಧಿಸ್ಥಿತಿಗೆ ತರುತ್ತಾರೆಂದು ನಂಬಿರುತ್ತೇವೆ

ಬೋರಯ್ಯನೆಂಬಾತನು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಒಕ್ಕಲಿಗರ ಪತ್ರಿಕೆಯ ಮೇಲೆ ಫಿರ್ಯಾದು ಮಾಡಿರುವ ಮಾನನಷ್ಟದ ಮೊಕದ್ದಮೆಯು ಕಳೆದ ವಾರ ಎರಡುದಿನ ಸಲ್ಪದೂರ ವಿಚಾರಣೆ ನಡೆದು ಮೇ ತಾ 5ಕ್ಕೆ ಹೀರಿಂಗು ಆಗಿದೆ ಅತ್ತಲಾಗಿ ತುಮಕೂರಿನಲ್ಲಿ ಯಜಮಾನ್ ಹುಚ್ಚವೀರಪ್ಪನೆಂಬಾತನು ಒಕ್ಕಲಿಗರ ಪತ್ರಿಕೆಯ ಮೇಲೂ ಬೇರೆ 25 ಜನಗಳ ಮೇಲೂ ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾನನಷ್ಟದ ಫಿರ್ಯಾದು ದಾಖಲ್ ಮಾಡಿರುವ ಹಾಗೂ, ಡೆಪ್ಯುಟಿ ಕಮಿಷನರವರು ಈ ಫಿರ್ಯಾದನ್ನು ವಿಚಾರಣೆಬಗ್ಗೆ ತುಮಕೂರು ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಕಳುಹಿಸಿರುವ ಹಾಗೂ ಪ್ರಕಟವಾಗಿದೆ

ಒಬ್ಬ ಬಾತ್ಮೀದಾರರಿಂದ—ಕಳೆದ 15 ನೇ ತಾ ಮದ್ರಾಸ್ ಆನಂದ ಮುದ್ರಾಶಾಲಾಧಿಕಾರಿಗಳಾದ ಆರ್ ವೆಂಕಟೇಶ್ವರ ಕಂಪನಿಯವರು ತಿರುವಲ್ಲಿಕ್ಕೇಣಿಯಲ್ಲಿ ಒಂದು ದೊಡ್ಡ ಸಭೆಯನ್ನು ನಡಿಸಿ, ಅದರಲ್ಲಿ ತಾವು ಪ್ರಚುರಪಡಿಸುತ್ತಿರುವ ಕನ್ನಡ ರಾಮಾಯಣಕ್ಕೆಂಟಾಗಿರುವ ವ್ಯಾಖ್ಯಾನ ಸೂಚಕವಾಗಿ ಆ ಗ್ರಂಥಕರ್ತರಾದ ಮದ್ರಾಸ್ ಕ್ರಿಶ್ಚಿಯನ್ ಕಾಲೇಜ್ ಪಂಡಿತರು ಮ॥ ಎಂ ಡಿ ಅಳಿಂಗ್ರಾಚಾರ್ಯರಿಗೆ ಒಂದು ಭಂಗಾರದ ಮೆಡಲನ್ನು, ವಿಶೇಷವಾದ ಇತರ ಬಹುಮಾನಗಳನ್ನೂ ಕೊಟ್ಟರು ಆ ಕಾಲದಲ್ಲಿ ದಿವಾನ್ ಬಹದ್ದೂರ್ ಎಂ ಓ ಪಾರ್ಥಸಾರಥಿ ಅಯ್ಯಂಗಾರ್, ಎಂ ಎ , ಎಂ ಎಲ್ ರವರೂ, ಮದ್ರಾಸ್ ಗೌರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರ್ ಮ॥ ಬಿ ರಾಮರಾವ್, ಎಂ ಎ , ಎಲ್ ಎಲ್ ಬಿ ರವರೂ ಮೊಲ್ಕಂಡ ಪಂಡಿತೋತ್ತಮರಿಗಿರುವ ಸಂಸ್ಕೃತ ಕರ್ನಾಟಕ ಭಾಷಾ ಪಾಂಡಿತ್ಯವನ್ನೂ, ಅವರ ಲೋಕಾಭಿನಂದನವಾದ ಕವಿತಾಚಾತುರ್ಯವನ್ನೂ, ಕನ್ನಡ ರಾಮಾಯಣಕ್ಕೆ ಕನ್ನಡ ದೇಶದಲ್ಲಿ ಉಂಟಾಗಿರುವ ವಿಶೇಷ ಪ್ರೋತ್ಸಾಹವನ್ನೂ ಸಭಿಕರಿಗೆ ವಿವರಿಸಿ ತಿಳಿಸಿದರು ಈ ಸಂದರ್ಭದಲ್ಲಿ ಸಭಾರಂಜನೆಗಾಗಿ ಪ್ರಸಿದ್ಧರಾದ ಬ್ರ॥ ಪಂಚಾಪಗೇಶಶಾಸ್ತ್ರಿಯವರ ಕಥಾ ಕಾಲಕ್ಷೇಪ ನಡಿಸಲ್ಪಟ್ಟಿತು

ಮೈಸೂರು ಗಜೆಟ್ ಸಂಗ್ರಹ

ಚಿಕ್ಕನಾಯಕನಹಳ್ಳಿ ತಾಲ್ಲೂಕು ಮೈಸೂರಯ್ಯನ ಪಾಳ್ಯ, ಮದ್ದಗಿರಿ ತಾ॥ ಕೆಂಪಾಪುರ ತುರುವೆಕೆರೆ ಸಬ್ ತಾ॥ ಬೊಮ್ಮನಹಳ್ಳಿ ಮತ್ತು ಬೊಕ್ಕನಹಳ್ಳಿ—ಈ ಸ್ಥಳಗಳಲ್ಲಿ ಎರಡು ತಿಂಗಳಿಂದ ಕ್ಷೇಮವಾಗಿರುವುದರಿಂದ ಅಲ್ಲಿ ಪ್ಲೇಗ್ ಉಪದ್ರವಿಲ್ಲವೆಂದು ತಿಳಿಯತಕ್ಕದ್ದು

ಮುಂದೆ ಹೇಳುವ ಸ್ಥಳಗಳಲ್ಲಿ ಪ್ಲೇಗ್ ಉಪದ್ರ ಕಾಣಿಸಿಕೊಂಡಿದೆ—ಚಿಕ್ಕಮಗಳೂರು ತಾ॥ ಬಾಗೇವಾಳ, ಕಾರ್ತಿಕೆರೆ, ಕುಪ್ಪೆನಹಳ್ಳಿ ಕಡೂರು ತಾ॥ ಬಂಡಿಕೊಪ್ಪಲು

ನಂಜನಗೂಡು ತಾ॥ ಹೆಮ್ಮರಗಾಲದಲ್ಲಿ 1913 ನೇ ಜೂಲೈ ತಾ 1 ರಿಂದ ಯೂನಿಯನ್ ಪಂಚಾಯತಿ ಏರ್ಪಾಡು ಮಾಡಲಾಗುವುದು

ರೆವಿನ್ಯು ಕಮಿಷನರ್ ಮಿ॥ ಕೆ ಎಸ್ ದೊರಸಾಮಿ ಅಯ್ಯರವರಿಗೆ ಏಪ್ರೆಲ್ ತಾ 8 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅವರ ಗೈರ್‌ಹಾಜರಿಯಲ್ಲಿ ಮಿ॥ ಆನಂದರಾವ್ ಎಸ್ ಸಿನೀರಯವರು ಆಫೀಸ್ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು

ಅ॥ ಕಮಿಷನರ್ ಮಿ॥ ಎಂ ಹಸನ್ ಅಲಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಅ॥ ಕಮಿಷನರುಗಳ ದರ್ಜೆಯಲ್ಲಿ ಮಿ॥ ಸಿ ಎಸ್ ಕುಪ್ಪುಸ್ವಾಮಿ ಅಯ್ಯಂಗಾರ್ರನ್ನು 5 ರಿಂದ 4 ನೇ ಕ್ಲಾಸಿಗೂ, ಮಿ॥ ಟಿ ಆ ಜಯರಾಮಯ್ಯರವರನ್ನು 2 ರಿಂದ 1 ನೇ ಕ್ಲಾಸಿಗೂ, ಮಿ॥ ಬಿ ಶ್ರೀನಿವಾಸಯ್ಯಂಗಾರ್ರನ್ನು 4 ರಿಂದ 3 ನೇ ಕ್ಲಾಸಿಗೂ ಏರ್ತಿಮಾಡಿದೆ

ಕಸಬುಗಳ ಸರ್ವೆ ಸ್ಪೆಷಲ್ ಡ್ಯೂಟಿ ಆಫೀಸರ್ ಮಿ॥ ವಿ ಎಸ್ ಗೋಂಬಲರಿಗೆ ಆಯ ರವರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿ ಮಾಡಿದೆ

ಇನ್ಜಿನಿಯರ್ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗೀ ಹುಕುಂ ಮಾಡಿದೆ—(1) ಮಿ॥ ಎಚ್ ಆರ್ ವೆಂಕಟಸುಬ್ಬರಾಯರನ್ನು ನೀರಿನ ಇಲಾಖೆ ಡಿವಿಜನ್‌ನಿಂದ ಕಡೂರಿಗೆ, (2) ಮಿ॥ ಸಿ ವಿ ಕಾಶೀಪತಿಶಾಸ್ತ್ರಿಯವರನ್ನು ಬೆಂಗಳೂರು ಡಿವಿಜನ್‌ನಿಂದ ನೀರಿನ ಇಲಾಖೆಗೆ

ವಿದ್ಯುಚ್ಛಕ್ತಿಯ ಚೀಫ್ ಇಂಜನಿಯರ್ ಮಿ॥ ಸಿ ಎಫ್ ಬೀಂಸ್‌ರವರಿಗೆ ಏಪ್ರೆಲ್ ತಾ 7 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮಿ॥ ಎಸ್ ಡಿ ಶೇಷಾದ್ರಿ ಅಯ್ಯಂಗಾರ್ರವರು ಆಫೀಸಿನ ಚಾಲ್ತಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು

ಮಿ॥ ಎಸ್ ರೂಬನ್‌ರವರು ಪೊಲೀಸ್ ಸೂಪರಿಂಟೆಂಡೆಂಟರಾಗಿರುವಾಗ್ಗೆ ಕಡೂರು ಡಿಸ್ಟ್ರಿಕ್ಟ್ ಶಿರಸ್ತೆದಾರ್ ಮಿ॥ ಬಿ ಮಲ್ಲಿಕಾರ್ಜುನಪ್ಪನವರು ಮೂಡಿಗೆರೆ ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು

ಅಮಲ್ದಾರ್ ಮಿ॥ ಬಿ ಕೃಷ್ಣರಾಯರು ರಜದ ಮೇಲಿರುವಾಗ್ಗೆ ಸಾಗರದ ಸಬ್ ಡಿವಿಜನ್ ಆಫೀಸಿನ ಹೆಡ್ ಕ್ಲಾರ್ಕರು ಸಾಗರದ ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು

ಚಿಂತಾಮಣಿ ತಾಲ್ಲೂಕು ಅಮಲ್ದಾರ್ ಮಿ॥ ಸಿ ಗೋಪಾಲಾಚಾರ್ರಿಗೆ ಹದಿನೆಂಟು ದಿನಗಳ ಪ್ರಿವಿಲೆಜ್ ರಜಾ ಮತ್ತು ಆರು ದಿನಗಳ ವರಿಷ್ಠೆಯ ರಜಾ ಕೊಟ್ಟಿದೆ ಶಿರಸ್ತೆದಾರ್ ಮಿ॥ ಎಂ ಎಸ್ ನಾರಾಯಣರಾಯರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು

ಇಂಡಿಯಾ ದೇಶದ ವೃತ್ತಾಂತಗಳು.

ಬಂಗಾಳಾ ಆಧಿಪತ್ಯದಲ್ಲಿ ದೊಡ್ಡ ಬಂದರ್ ಪಟ್ಟಣವಾದ ಚಿತ್ತಗೊಂಗ್‌ದಲ್ಲಿ ಜಹಜುಗಳೂ ಆಮದು ರಫ್ತಿಗೆ ಸಹಾಯವಾಗುವಂತೆ ಕೆಲವು ಭಾರೀ ಕಾಮಗಾರಿಗಳು ನಡೆಯಬೇಕಾಗಿವೆ ಇಂಡಿಯಾ ಗವರ್ನ್‌ಮೆಂಟಿನವರು ಅದಕ್ಕಾಗಿ ಪ್ರತಿ ವರುಷವೂ 1½ ಲಕ್ಷ ರೂಪಾಯಿನಂತೆ ಐದು ವರುಷಗಳ ತನಕ ಪಾವತಿ ಮಾಡುತ್ತಾ ಬರುವಂತೆ ಹುಕುಂ ಕೊಟ್ಟಿದಾರೆ

ಕಲ್ಕತ್ತಾ ಪಟ್ಟಣದ ಯೂನಿವರ್ಸಲ್ ಲೈಫ್ ಅಷೂರೆನ್ಸ್ ಎಂಬ ಜೀವವಿಮೆ ಕಂಪನಿಯ ಸೆಕ್ರೆಟರಿ ಮತ್ತು ಡೈರೆಕ್ಟರಾದ ಬಾಬು ಯೋಗೀಶಚಂದ್ರ ಸರ್ಕಾರ್ ಎಂಬಾತನು ಯಾವಕಾರಣಕ್ಕಾಗಿಯೋ ದೊಣ್ಣೆಗಳ ಸಹಿತರಾದ ಒಂದು ಗುಂಪಿನ ಜವಾನರನ್ನು ಕರೆದುಕೊಂಡು ಕಂಪನಿಗೆ ನುಗ್ಗಿ ಅಲ್ಲಿ ಕುಳಿತಿದ್ದ ಇತರ ಡೈರೆಕ್ಟರುಗಳನ್ನು ಹೆದರಿಸಿ ಓಡಿಸಿಬಿಟ್ಟನೆಂದೂ, ಆತನನ್ನು ಸೆಕ್ರೆಟರಿ ಮತ್ತು ಡೈರೆಕ್ಟರ್ ಕೆಲಸದಿಂದ ವಜಾಮಾಡಬೇಕೆಂದೂ ಕಲ್ಕತ್ತಾ ಪಟ್ಟಣದ ಹೈಕೋರ್ಟಿನಲ್ಲಿ ದಾವಾ ತಂದಿದಾರೆ

ಹಿಮಾಚಲದ ತಪ್ಪಲಲ್ಲಿರುವ ಟಿಬೆಟ್ ರಾಜ್ಯದ ಸೀಮೆಯ ದೊಡ್ಡ ಮನುಷ್ಯರ ನಾಲ್ಕಾರು ಯೌವನಸ್ಥರನ್ನು ಇಂಡಿಯಾ ಗವರ್ನ್‌ಮೆಂಟಿನವರು ಹಿಂದುಸ್ಥಾನಕ್ಕೆ ಕರೆಸಿಕೊಂಡು, ಇಲ್ಲಿಂದ ಇಂಗ್ಲಾಂಡಿಗೆ ಕಳುಹಿಸುವಂತೆ ಏರ್ಪಾಡಾಗಿದೆ ಅವರು ಅಲ್ಲಿ ಹತ್ತಾರು ವರುಷಗಳ ತನಕ ಇದ್ದು ವಿದ್ಯಾದಿ ಸಾಮರ್ಥ್ಯಗಳನ್ನು ಸಂಪಾದಿಸಿಕೊಂಡು ವಾಪಸುಬಂದು ಟಿಬೆಟ್ಟಿನಲ್ಲಿ ರಾಜ್ಯಭಾರ ಕ್ರಮಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ರೂಪಿಸಿಕೊಳ್ಳುವುದಕ್ಕೆ ಈ ಏರ್ಪಾಡು ತುಂಬಾ ಸಹಾಯವಾಯಿತು ಅವರ ಖರ್ಚುಗಳನ್ನೆಲ್ಲಾ ಇಂಗ್ಲಿಷ್ ಗವರ್ನ್‌ಮೆಂಟಿನವರೇ ವಹಿಸಿಕೊಳ್ಳುವವರಾಗಿದಾರೆ

ಪೂರ್ವ ಬಂಗಾಳಕ್ಕೆ ಸೇರಿದ ಮೌಲ್ವಿಬಜಾರಿನಲ್ಲಿ ಒಬ್ಬ ಹುಡುಗನು ಸಿಡಿಮದ್ದಿನ ಗುಂಡನ್ನು ಗುಟ್ಟಾಗಿ ತೆಗೆದುಕೊಂಡು ಹೋಗುತ್ತಿರುವಲ್ಲಿ ಅದು ಅಕಸ್ಮಾತ್ತಾಗಿ ಒಡೆದು ಹಾರಿ ಅವನನ್ನು ಕೊಂದು ಬಿಟ್ಟಿತು ಅದಕ್ಕೆ ಕಾರಣಭೂತರು ಯಾರೆಂಬುವುದಾಗಲಿ, ಅದರಿಂದ ಯಾವ ಕುತ್ಸಿತಕೃತ್ಯವನ್ನು ನಡಿಸಬೇಕೆಂದಿದ್ದರೆಂಬುವುದಾಗಲಿ ಇದುವರೆಗೆ ಹೊರಪಟ್ಟಿಲ್ಲ ಪೊಲೀಸಿನವರು ಅನುಮಾನದ ಮೇಲೆ ಒಬ್ಬಿಬ್ಬರನ್ನು ದಸ್ತಗಿರಿ ಮಾಡಿದ್ದು ಬಿಟ್ಟು ಬಿಟ್ಟರು ಈಗ ಅದರ ಪೂರ್ವೋತ್ತರವನ್ನು ತಿಳಿಸುವವರಿಗೆ 5,000 ರೂಪಾಯಿ ಬಹುಮಾನ ಕೊಡುತ್ತೇವೆಂದು ಸರ್ಕಾರದವರು ಪ್ರಕಟಮಾಡಿದಾರೆ

ಕಲ್ಕತ್ತಾ ಪಟ್ಟಣದ ಟೌನ್ ಹಾಲ್ ಬಂಗಲೆಯಲ್ಲಿ ಕಳೆದ ಶುಕ್ರವಾರ ಒಂದು ಮಹಾ ಸಭೆಯು ಜರುಗಿತು ಡಾಕ್ಟರ್ ರಾಸ್ ಬಿಹಾರಿ ಘೋಸ್‌ರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು ಇಂಡಿಯಾ ಗವರ್ನ್‌ಮೆಂಟಿನವರು ಈ ರಾಷ್ಟ್ರದಲ್ಲಿ ರೆವಿನ್ಯೂ ಅಧಿಕಾರಿಗಳಿಗೆ ಕ್ರಿಮಿನಲ್ ಅಧಿಕಾರಗಳನ್ನೂ ಕೊಟ್ಟಿರುವುದರಿಂದ ಅಪರಾಧಿಗಳಿಗೆ ಅವರಲ್ಲಿ ಸಹಜವಾದ ನ್ಯಾಯ ದೊರಕುವುದು ಕಷ್ಟವಾಗಿದೆ ಎಂದೂ, ಆದಕಾರಣ ಅವರಿಗೆ ಆ ಅಧಿಕಾರವನ್ನು ತಪ್ಪಿಸಿ, ಪ್ರತ್ಯೇಕವಾದ ಮ್ಯಾಜಿಸ್ಟ್ರೇಟರುಗಳನ್ನು ನೇಮಿಸಿ ಇವರನ್ನೆಲ್ಲಾ ಹೈಕೋರ್ಟುಗಳ ಸಂಪೂರ್ಣ ತಾಬೆಗೆ ಕೊಟ್ಟುಬಿಡಬೇಕೆಂದೂ ಆ ಸಭಿಕರು ಉಪನ್ಯಾಸಗಳನ್ನು ಮಾಡಿ, ಈ ಅರ್ಥವನ್ನು ಗವರ್ನ್‌ಮೆಂಟಿಗೆ ಅರಿಕೆಮಾಡಿಕೊಳ್ಳಬೇಕೆಂದು ತೀರ್ಮಾನಮಾಡಿಕೊಂಡರು

ಸಿಂಧು ನದಿಯ ದಡದ ಮೇಲಿರುವ ಡಿರಾ ಘಾಜಿ ಖಾನ್ ಪಟ್ಟಣವು ಕಳೆದ 1910ನೇ ಇಸವಿಯಲ್ಲಿ ಬಂದ ಪ್ರವಾಹಕ್ಕೆ ಸಿಕ್ಕಿ ಬಹುಭಾಗ ಮುಳುಗಿಹೋಗಿ ಸರ್ಕಾರದವರು ಆ ಪಟ್ಟಣವನ್ನು ಬೇರೆಕಡೆ ಕಟ್ಟುವಂತೆ ಏರ್ಪಾಡುಮಾಡಿದರು ಅಲ್ಲಿ ಕಷ್ಟ ನಷ್ಟಗಳಿಗೆ ಗುರಿಯಾದ ಪ್ರಜೆಗಳ ಸಹಾಯಾರ್ಥವಾಗಿ ಒಂದು ಧರ್ಮಫಂಡು ಪ್ರಾರಂಭವಾಯಿತು ಈ ಫಂಡಿಗೆ ಕೂಡಿದ 65,000 ರೂಪಾಯಿನಲ್ಲಿ 50,000 ರೂಪಾಯಿಗಿಂತ ಹೆಚ್ಚಾಗಿ ಪ್ರಜೆಗಳಿಗೆ ವಿನಿಯೋಗವಾಡಲ್ಪಟ್ಟು, ಉಳಿದಿರುವ 14,000 ರೂಪಾಯನ್ನು ಈಗ ಒಂದು ಆಸ್ಪತ್ರೆ ಕಟ್ಟುವುದಕ್ಕೋಸ್ಕರ ಕೊಡಬೇಕೆಂದು ತೀರ್ಮಾನಮಾಡಲಾಗಿದೆ ಈ ಫಂಡಿನ ಹಣದಿಂದ ಬಡವರಿಗೆ ದ್ರವ್ಯ ಸಹಾಯಮಾಡಿ ಜೀವನ ನಡಿಸಿದರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಹಣಗಳು ಕೊಡಲಾಯಿತು ವಿಧವೆಗಳಿಗೂ, ಅನಾಥರಿಗೂ 72 ಮನೆಗಳನ್ನು ಕಟ್ಟಿಸಿಕೊಟ್ಟರು ಹೊಟ್ಟೆಗಿಲ್ಲದವರಿಗೆ ಧಾನ್ಯಾದಿಗಳನ್ನು ಕೊಂಡು ಕೊಟ್ಟು ಕಾಪಾಡಿದರು

ಬೊಂಬಾಯಿ ಪಟ್ಟಣದಲ್ಲಿ ಸಮುದ್ರದ ದಡಕ್ಕೂ ನೂಲಿನ ಕಾರ್ಖಾನೆಗಳಿಗೂ ಆಮದು ರಫ್ತಾಗುವ ಸರಕುಗಳನ್ನು ಈಗ ಸಾಧಾರಣ ಗಾಡಿಗಳು ಸಾಗಿಸುತ್ತಿವೆ ಇದು ಹೋಗಿಬರುವುದು ನಿಧಾನ, ಹೆಚ್ಚು ಸರಕು ಸಾಗುವುದು ಕಷ್ಟ ಛಾಟಾಮಾರ್ಗಗಳಲ್ಲಿ ಈ ಭರ್ತಿ ಗಾಡಿಗಳ ಸಂಚಾರದಿಂದ ಇತರ ವಿಧವಾದ ಗಾಡಿಗಳ ಸಂಚಾರಕ್ಕೂ ಜನಗಳ ತಿರುಗಾಟಕ್ಕೂ ತೊಂದರೆಯಾಗಿದೆ ಈ ಅನಾನುಕೂಲಗಳನ್ನೆಲ್ಲಾ ತಪ್ಪಿಸುವುದಕ್ಕೆ 26 ಭಾರೀ ಮೋಟಾರು ಗಾಡಿಗಳನ್ನು ಸರಕುಗಳ ಆಮದು ರಫ್ತಿಗಾಗಿಯೇ ಇಡಬೇಕೆಂದು ಆಲೋಚನೆ ನಡೆದು ಅದಕ್ಕಾಗಿ ಒಂದು ಕಂಪನಿ ಏರ್ಪಾಡಾಗುತ್ತಿದೆ ಈ ಮೋಟಾರ್ ಗಾಡಿಗಳಿಗೋಸ್ಕರ ಮಜಗಾನ್ ಮೌಂಟ್ ರೋಡಿನಲ್ಲಿ ಒಂದು ನಿವೇಶನವೂ ಕೊಂಡದ್ದಾಯಿತು ಜಹಜುಗಳಲ್ಲಿ ಬೊಂಬಾಯಿಗೆ ಬರುವ ಮತ್ತು ಕಾರ್ಖಾನೆಗಳಿಂದ ಜಹಜುಗಳಿಗೆ ಹೋಗುವ ವ್ಯಾಪಾರದ ಸರಕುಗಳನ್ನೆಲ್ಲಾ ಸುಲಭವಾಗಿ ಬೇಗನೆ ಸಾಗಿಸುವುದಕ್ಕೆ ಇದು ಬಹು ಅನುಕೂಲವಾದ ಏರ್ಪಾಡು ಕಾರ್ಖಾನೆಗಳವರು ಅದಕ್ಕೆ ಸಮ್ಮತಿಪಟ್ಟಿರುತ್ತಾರೆ

ಕಳೆದ ಡಿಸೆಂಬರಿನಲ್ಲಿ ವೈಸ್‌ರಾಯರವರ ಮೇಲೆ ಡೆಹಲಿ ಪಟ್ಟಣದಲ್ಲಿ ಸಿಡಿಮದ್ದಿನ ಗುಂಡು ಎಸೆದವನು ಯಾರೆಂಬುವುದು ಇನ್ನೂ ಹೊರಪಡದೆ ಇರುವುದು ಪರಿತಾಪಕರವಾಗಿದೆ ಇದುವರೆಗೆ ಪೊಲೀಸಿನವರು ಅನೇಕ ಜನರನ್ನು ಅನುಮಾನದ ಮೇಲೆ ಹಿಡಿದು ವಿಚಾರಣೆ ನಡಿಸಿ ಅವರಲ್ಲವೆಂದು ಬಿಟ್ಟು ಬಿಟ್ಟರು ಅದರ ಪತ್ತೆ ತರದೊಡು ಎಂದಿಗಿಂತಲೂ ಹೆಚ್ಚಾಗಿಯೇ ನಡೆಯುತ್ತಿದೆ ಕಳೆದ ವಾರ ನಂದೇರವಾರದೊಬಲ್ಲಿ ಪೊಲೀಸಿನವರು 22 ವಯಸ್ಸಿನ ರಾಮಚಂದ್ರರಘುನಾಥನೆಂಬೊಬ್ಬ ದಕ್ಷಿಣ ಬ್ರಾಹ್ಮಣನನ್ನು ದಸ್ತಗಿರಿಮಾಡಿದರು ಮೊದಲು ಅವನು ತನ್ನ ಹೆಸರನ್ನು ಹೇಳದೆಹೋದನು ಪೊಲೀಸಿನವರು ಪ್ರತ್ಯೇಕವಾಗಿ ಅವನ ಹೆಸರು ಪತ್ತೆಮಾಡಿ ತಿಳಿದುಕೊಂಡು, ಅವನನ್ನು ಒತ್ತಿಕೇಳುತ್ತಾ ಬಂದಾಗ ಅವನು ಆ ದಿನ ಡೆಹಲಿಯಲ್ಲಿ ಇದ್ದದ್ದು ಉಂಟೆಂದು ಒಪ್ಪಿಕೊಂಡು ತನ್ನ ಗುರುತು ಕಂಡವರು ಅನೇಕರಿದ್ದಾರೆಂದು ಹೇಳಿ ಅವರ ಹೆಸರುಗಳನ್ನು ಬರೆಸಿದನು ಪೊಲೀಸಿನವರ ಬೆಂಗಾವಲಿನಲ್ಲಿ ಅವನನ್ನು ಬೇರೆ ಬೇರೆ ಪಟ್ಟಣಗಳಲ್ಲಿರುವ ಆ ಜನರ ಬಳಿಗೆ ಕಳುಹಿಸಿದಾಗ ಅವರೆಲ್ಲಾ ಅವನನ್ನು ಕಾಣೆವೆಂದು ಹೇಳಿಬಿಟ್ಟರು ಒಬ್ಬ ಹೊಟೇಲಿನವನು ಮಾತ್ರ ತನ್ನ ಹೊಟೇಲಿಗೆ ಅವನು ಆಗಾಗ್ಗೆ ಬರುತ್ತಿದ್ದನೆಂದೂ, ಒಬ್ಬ ಬೀಡಿ ಮಾರುವವನು ತಾನು ಇವನನ್ನು ಕೆಲವು ಕಾಲ ತನ್ನ ಕೆಳಗೆ ನೇಮಿಸಿಕೊಂಡಿದ್ದೆನೆಂದೂ ಹೇಳಿದರು ಇನ್ನೂ ಪತ್ತೆ ತರದೂದು ನಡೆಯುತ್ತಿದೆ

ಪರಸ್ಪರ ಸಹಾಯ ಸಂಘಗಳು ಆಗಬೇಕು

ಚನ್ನಗಿರಿ ಅಮಲ್ದಾರ್ರವರ ಉಪನ್ಯಾಸದ ಮುಖ್ಯಾಂಶಗಳು

ಈ ತಾಲ್ಲೂಕಿನ ಮುಖ್ಯ ಕಸಬು ವ್ಯವಸಾಯವೇ ಆಗಿರುವುದರಿಂದ ವ್ಯವಸಾಯದಿಂದ ಜಾಸ್ತಿ ಫಾಯಿದೆ ಹೊಂದಬಹುದಾದ ಅನೇಕ ಉಪಾಯಗಳು ನಮ್ಮ ಸರ್ಕಾರದವರು ಕಲ್ಪಿಸಿಕೊಟ್ಟಾಗ್ಯೂ ಅವುಗಳ ತಿಳುವಳಿಕೆಯು ಸುತರಾಂ ಇಲ್ಲದ್ದರಿಂದ ನಮ್ಮ ತಾಲ್ಲೂಕಿನ ರೈತರ ಪೈಕಿ ಬಹು ಭಾಗದವರು ಆಸ್ತಿವಂತರಾಗಿರಲಿಲ್ಲ. ಆದ್ದರಿಂದ ಇತರಕ್ಕೆ ಒಬ್ಬೊಬ್ಬರು ಆಸ್ತಿವಂತರ ಕೈಗೆ ರೈತರು ಸಿಕ್ಕಿ ನರಳುವುದೂ, ರೈತರ ಕೈಗೆ ಆಸ್ತಿವಂತರು ಸಿಕ್ಕಿ ನರಳುವುದೂ ಅತಿಶಯವಾಗಿತ್ತು. ಇದರಿಂದ ಈ ಇಬ್ಬರ ಏಳಿಗೆಗೆ ಉಪಹತ್ತಿಯುಂಟಾಗಿತ್ತು. ಈ ಕಾರಣಗಳಿಂದ ಒಬ್ಬರ ಶ್ರೇಯಸ್ಸನ್ನು ಮತ್ತೊಬ್ಬರು ಸಹಿಸದೆ ರೈತರಲ್ಲಿ ಸೌಹೃದಯವಿಲ್ಲದೆ ಇಂಥಾ ಸಮಯವನ್ನೇ ನಿರೀಕ್ಷಿಸುತ್ತಿರುವವರ ಬಲೆಗೆ ಸಿಕ್ಕಿ ಕೋರ್ಟು ಕಚೇರಿಗಳನ್ನು ಹತ್ತಿ ನಾನಾ ವಿಧವಾದ ಲುಕ್ಸಾನುಗಳಿಗೆ ಗುರಿಯಾಗಿ ನರಳುತ್ತಿದ್ದರು. ರೈತರು ಬೆಳೆವ ಅಲ್ಪಸ್ವಲ್ಪ ದವಸವನ್ನು ಮುಜವಿ ಬಿರೀದಿಗೆ ಕೊಟ್ಟು ಜೀವನೋಪಾಯಕ್ಕೆ ಮಾರ್ಗವಿಲ್ಲದೆ ಜಾಸ್ತಿ ಬಡ್ಡಿ ಕೊಟ್ಟು ದವಸವನ್ನು ಸಾಲತಂದು ಅದರಿಂದ ಜೀವನಮಾಡುತ್ತಾ ಇದ್ದರು. ಪರಸ್ಪರಸಹಾಯ ಸಂಘಗಳು ಉಂಟಾದ ಬಳಿಕ ಬೇಕಾದಾಗ ಸುಲಭ ಬಡ್ಡಿಗೆ ಹಣವು ದೊರೆಯಲಿಕ್ಕೆ ಅವಕಾಶವಾಯಿತು. ಹಾಗೆ ದೊರೆತ ಸಾಲವನ್ನು ಜಾಗ್ರತೆ ತೀರಿಸಲಿಕ್ಕೆ ಏನುಮಾಡಬೇಕೆಂಬ ಯೋಚನೆಯೂ ರೈತನಲ್ಲಿ ಉಂಟಾಯಿತು. ಅಂಥಾ ಉಪಾಯಗಳನ್ನು ಕಂಡುಹಿಡಿಯಬೇಕಾದ ಆವಶ್ಯಕತೆಯು ಪ್ರತಿಬಟ ಮೆಂಬರಿಗೂ ಉಂಟಾಯಿತು. ಒಬ್ಬನು ತನ್ನೊಬ್ಬನ ಫಾಯಿದೆಗಾಗಿ ಮಾಡುವ ಕೃಷಿಯು ಸಫಲವಾಗುವುದು ದುರ್ಲಭ. ಅನೇಕರ ಫಾಯಿದೆಗಾಗಿ ಮಾಡುವ ಕೃಷಿಯು ಎಂದೆಂದಿಗೂ ನಿಷ್ಫಲವಾಗದೆ ಇರಲಾರದು. ಉಪಾಯಗಳು ಜಾಗ್ರತೆ ಕಂಡುಹಿಡಿಯಲ್ಪಟ್ಟವು. ಪದಾರ್ಥಗಳನ್ನು ಬೆಳೆಯುವುದರಲ್ಲಿ ಹೆಚ್ಚು ಫಾಯಿದೆ ಉಂಟಾಗುವ ಪಸಲು ಯಾವುದೆಂಬ ವಿಚಾರವು ಶುರುವಾಯಿತು. ರೈತರು ಅನ್ಯೋನ್ಯ ಸಹಾಯದಿಂದ ವ್ಯವಸಾಯ ಮತ್ತು ಕೈಗಾರಿಕೆ ವಸ್ತುಗಳ ಪ್ರದರ್ಶನವನ್ನು ಚನ್ನಗಿರಿಯಲ್ಲಿ ನಡೆಯಲಿಕ್ಕೆ ಆರಂಭಿಸಿದರು. ಅನಂತರ ಈ ತಾಲ್ಲೂಕಿನ ಭೂಮಿಯಲ್ಲಿ ಬೆಳೆಯಬಹುದಾದ ಹೆಚ್ಚು ಬೆಲೆ ಬರುವ ಪಸಲುಗಳು ಯಾವುವೆಂಬುದನ್ನು ಕಂಡುಹಿಡಿಯಬೇಕೆಂಬ ಕುತೂಹಲವು ತಲೆದೋರಿತು. ಇದಕ್ಕೆ ಸಹಕಾರಿಯಾಗಿ ವ್ಯವಸಾಯಶಾಸ್ತ್ರಜ್ಞರ ಸಹಾಯವು ದೊರಕಿತು. ಅವರ ಸಹಾಯದಿಂದ ಬೆಳೆಯುತ್ತಿದ್ದ ಪಸಲುಗಳಿಗೆ ಕ್ರಿಮಿಗಳ ಬಾಧೆಯಿಂದ ಉಂಟಾಗುವ ನಾಶವು ಹೋಗಲಾಡಿಸಲ್ಪಟ್ಟಿತು. ಕೆಲವು ಉಪಯುಕ್ತವಾದ ಹತ್ತಿ, ಕೇಪ್ಪೆ ವಗೈರೆ ಪದಾರ್ಥಗಳನ್ನು ಬೆಳೆಯುವುದಕ್ಕೆ ಈ ಭೂಮಿ ತಕ್ಕದ್ದೆಂದೂ ನಿಶ್ಚಯಿಸಲ್ಪಟ್ಟಿತು. ಹತ್ತಿ ಬೆಳೆಯು ಈಗಾಗಲೇ ಬಹಳ ಪ್ರಾಬಲ್ಯಕ್ಕೆ ಬಂದಿದೆ. ಈ ವರ್ಷ ಬೆಳೆದಿರುವ ಪಸಲಿನ ಬೆಲೆಯನ್ನು ಅಂದಾಜುಮಾಡುವಲ್ಲಿ ಕನಿಷ್ಠಪಕ್ಷ ೩,೧೯,೭೯೩ ರೂಪಾಯಿನ ಹತ್ತಿ ಹುಟ್ಟುವಳಿಯಾದೀತೆಂದು ನಿಶ್ಚಯಿಸಲ್ಪಟ್ಟಿದೆ. ಇದಕ್ಕೆ ಈ ವರ್ಷ ಈ ತಾಲ್ಲೂಕಿನಿಂದ ದಾವಣಗೆರೆ ಪ್ರಾಂತ್ಯಕ್ಕೆ ಹೇರಳವಾಗಿ ಹತ್ತಿ ರಫ್ತಾಗಿರುವುದೇ ದೃಷ್ಟಾಂತವು. ಈ ವರ್ಷದ ಹತ್ತಿ ಬೆಳೆಯ ಸ್ಥಿತಿಯನ್ನು ನೋಡಿ ಹತ್ತಿಯಿಂದ ಬೀಜತೆಗೆಯುವ ಯಂತ್ರವನ್ನು ಇಡಬೇಕೆಂದು ಕೃಷಿಕಲಾಭ್ಯುದಯ ಪರಸ್ಪರಸಹಾಯ ಸಂಘದವರು ಆಲೋಚಿಸುತ್ತಲಿದ್ದಾರೆ. ರೆ ತರು ರೇಷ್ಮೆ ತಯಾರಿ ವಿಧಾನವನ್ನು ತಿಳಿಯಲು ಅಪೇಕ್ಷಿಸಿದ್ದರಿಂದ ಸಂಪದಭ್ಯುದಯ ಸಂಘದವರು ಈ ತಾಲ್ಲೂಕಿನ ಇಬ್ಬರು ರೈತರ ಮಕ್ಕಳನ್ನು ಕಾಶಾಯವರ ರೇಷ್ಮೆ ಕಾರ್ಖಾನೆಗೆ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿರುತ್ತಾರೆ. ಕೈಗಾರಿಕೆ ಕೆಲಸಗಳನ್ನು ಅಭಿವೃದ್ಧಿಪಡಿಸಬೇಕೆಂಬ ಉದ್ದೇಶದಿಂದ ಈ ತಾಲೂಕಿನಲ್ಲಿರುವ ಕಸಬುದಾರರಿಗೆ ತಮ್ಮ ತಮ್ಮ ಕೆಲಸಗಳನ್ನು ಉತ್ಕೃಷ್ಟವಾಗಿ ಮಾಡಿಕೊಳ್ಳುವ ವಿಧಾನವನ್ನು ಕಲಿಯಲು ಅವಕಾಶವಾಗುವಂತೆ ಈ ತಾಲ್ಲೂಕಿನಲ್ಲಿರುವ ಅನೇಕ ಕೈಗಾರಿಕೆ ಕೆಲಸದವರನ್ನು ಬಾಜೂ ತಾಲ್ಲೂಕು ಮತ್ತು ಬೆಂಗಳೂರು, ದೊಡ್ಡಬಳ್ಳಾಪುರ ವಗೈರೆ ಸ್ಥಳಗಳಿಂದ ಪ್ರಸಿದ್ಧರಾದ ಕೈಗಾರಿಕೆ ಕೆಲಸದವರನ್ನು ಬರಮಾಡಿಕೆಂದು ಅವರಿಂದ ಕೆಲಸಗಳನ್ನು ಮಾಡಿಸಿ, ಈ ತಾಲ್ಲೂಕಿನ ಕೆಲಸಗಾರರಿಗೆ ತೋರಿಸಿ ಉತ್ತಮವಾದ ಕೆಲಸಮಾಡತಕ್ಕವರಿಗೆ ಬಹುಮಾನಗಳು ಕೊಡಲು ತಕ್ಕ ಏರ್ಪಾಡುಗಳನ್ನು ಮಾಡಿಕೊಂಡಿರುತ್ತಾರೆ. ಇಂಥಾ ಸಂಪದಭ್ಯುದಯಪ್ರದವಾದ ಕಾರ್ಯಗಳನ್ನು ನಡೆಸಬೇಕೆಂಬ ಬುದ್ಧಿಯು ಈ ತಾಲ್ಲೂಕಿನ ಜನಗಳಿಗೆ ಉಂಟಾಗಲಿಕ್ಕೆ ಕಾರಣವೇನೆಂಬುವುದನ್ನು ಆಲೋಚಿಸಿದರೆ ಪರಸ್ಪರಸಹಾಯ ಸಂಘಗಳ ಮಹಿಮೆಯೇ ಹೊರ್ತು ಮತ್ತೆ ಬೇರೆ ಅಲ್ಲವೆಂಬದಾಗಿ ವ್ಯಕ್ತವಾಗುವುದು.

ಭತ್ತದ ಪೈರನ್ನು ಸುಲಭವಾಗಿ ಬೆಳೆಯುವ ಕ್ರಮ

ಭತ್ತದ ಒಂದೊಂದೇ ಸಸಿಯಗಿಡವನ್ನು ನಡುವ ಕ್ರಮವನ್ನು ಕುರಿತು ರೈತರ ಅಭಿಪ್ರಾಯಗಳು

ಟಿ ಅಲಿ ಮಹಮದ್ ಗೌಸ್, ಮರಕರಾಯರ್ ಸಿಂದನಗುಡಿ, ಇವರು ಬರೆಯುವದೇನಂದರೆ—ತಂಜಾವೂರು ಜಿಲ್ಲೆಯ ಸ್ಪೆಷಲ್ ಡ್ಯೂಟಿ ಫಾರಂ ಮೇನೇಜರ ಬೋಧನೆಯ ಮೇರೆಗೆ 1910 ನೇ ಇಸವಿಯಲ್ಲಿ ಒಂದೊಂದೇ ಸಸಿಗಿಡವನ್ನು ನಡುವ ಕ್ರಮವನ್ನು ಪ್ರಯೋಗಿಸಿದೆನು. ಇದರಿಂದ ನನಗೆ ಬಹಳ ಆದಾಯ ಸಿಕ್ಕಿತು. ಈ ವಿಧವು ವಾಡಿಕೆಯಲ್ಲಿರುವ ಕ್ರಮಕ್ಕಿಂತ ಕೆಳಗೆ ತೋರಿಸಿದ ವಿಷಯದಲ್ಲಿ ಮೇಲಾಗಿದೆ—(1) ಬಿತ್ತಲಿಕ್ಕೆ ಬೇಕಾಗುವ ಬೀಜದಿಂದ ಆದಾಯವುಂಟು, (2) ಉತ್ಪತ್ತಿಯೂ ಹೆಚ್ಚು, (3) ಖರ್ಚಿನಲ್ಲಿ ಕಡಿಮೆಯಾಗುತ್ತದೆ. ಗುಂಪಾಗಿ ನಡುವ ಕ್ರಮಕ್ಕಿಂತ ಈ ಕ್ರಮದಲ್ಲಿ ನಡಲಿಕ್ಕೆ ಹೆಚ್ಚು ಕಷ್ಟವಾಗುತ್ತದೆಂಬ ಭಾವನೆಯಿಂದ ಕೆಲವು ಜನರು ಇನ್ನೂ ಈ ಕ್ರಮವನ್ನು ಪ್ರಯೋಗಿಸಲಿಕ್ಕೆ ಸಂದೇಹಪಡುತ್ತಾರೆ. ಒಂದೊಂದಾಗಿ ನಟ್ಟ ಪೈರುಗಳು ಗೊಂಚಲಾಗಿ ನಟ್ಟ ಪೈರಿಗಿಂತ ಹೆಚ್ಚಾಗಿ ಪ್ರವಾಹಗಳ ಹಾನಿಗೆ ಗುರಿಯಾಗಬಹುದೆಂದೂ ಅಂಜುತ್ತಾರೆ. ಕಳೆದ ವರುಷ ನಾನು ಒಂದು ಕೊಟ್ಟೆ ಕೆಂಪುಸಂಬಾ ಬೀಜವನ್ನೂ, ಒಂದು ಕೊಟ್ಟೆ ಬಿಳಿಸಂಬಾ ಬೀಜವನ್ನೂ ಬಿತ್ತಿ ಸಸಿಯನ್ನು ಒಂದೊಂದರಂತೆಯೇ ನಟ್ಟೆನು. ಗುಂಪಾಗಿ ನಟ್ಟ ಪೈರಿನಿಂದ ಸಿಕ್ಕುವ ಉತ್ಪತ್ತಿಗಿಂತ ಇದರಿಂದ ಸುಮಾರು ಇಮ್ಮಡಿ ಉತ್ಪತ್ತಿ ಆಯಿತು. ಆದುದರಿಂದ ನಾನು ಅಧಿಕವಾದ ಸ್ಥಳವನ್ನು ಈ ಕ್ರಮದಲ್ಲಿ ನಡಬೇಕೆಂದು ಆಲೋಚಿಸಿದ್ದೇನೆ.

ನನ್ನಿಲಂ ತಾಲ್ಲೂಕು ಪೆರಾಲಂ ಪೋಸ್ಟು ಕೆದ್ದನಗುಡಿ ಗ್ರಾಮದ ಮಿರಾಸುದಾರರಾದ ಮ|| ಮ. ಸ್ವಾಮಿನಾಥ ಪಿಳ್ಳೆಯವರು ಬರೆಯುವುದೇನಂದರೆ—ಕೃಷಿಕ್ಷೇತ್ರ ಮೇನೇಜರಾದ ನಾರಾಯಣ ಐಯರವರ ಬೋಧನೆಯ ಮೇರೆಗೆ ಹಸಿ ಸೊಪ್ಪು ಗೊಬ್ಬರಕ್ಕಾಗಿ ನೀಲಿಗಿಡಗಳನ್ನು ಬೆಳಸಿದೆನು ಮತ್ತು ನಡುವಾಗ ಒಂದೊಂದೇ ಸಸಿಗಿಡವನ್ನು ನಡುವ ಕ್ರಮವನ್ನು ಎರಡು ವಿಧವಾಗಿ ಪ್ರಯೋಗಿಸಿದೆನು. ನನ್ನ ಅನುಭವವನ್ನು ನೀವು ಪ್ರಕಟಿಸುವ ವಿಷಯದಲ್ಲಿ ನಾನು ಬಹಳ ಸಂತೋಷಿಸುತ್ತೇನೆ. ಕಳೆದ ವರುಷ 17 ಎಕ್ರೆ ಗದ್ದೆಗಳು ಒಂದೊಂದೇ ಸಸಿಗಿಡವನ್ನು ನಡುವ ಕ್ರಮದಿಂದ ನಾಟಿಯಾದವು. ಮುಂಚಿನ ವರುಷಗಳಿಗಿಂತ ಎಕ್ರೆಗೆ 10 ಕಲಂ ಪ್ರಕಾರ ಉತ್ಪತ್ತಿಯು ಹೆಚ್ಚಿತು. ಕಲಂ ಒಂದಕ್ಕೆ ರೂ 1-15-0 ಮೇರೆಗೆ ಭತ್ತಕ್ಕೆ ಕ್ರಯಬಂತು. ಈ ವರುಷ 10 ಎಕ್ರೆ ಗದ್ದೆಗಳು ಇದೇ ಕ್ರಮದಿಂದ ನಡಲ್ಪಟ್ಟವು. ಆದರೆ ಮುಂಚಿನ ವರುಷಗಳಿಗಿಂತ ಈ ವರುಷ ೩ ಕಲಂ ಭತ್ತ ಮಾತ್ರ ಹೆಚ್ಚು ಉತ್ಪತ್ತಿ ಆಯಿತು ಮತ್ತು ಕಲಂ ಒಂದಕ್ಕೆ 1-8-0 ಪ್ರಕಾರ ಕ್ರಯ ಬಂತು. ಇದು ಕಡಿಮೆ ಮಳೆಯಿಂದಲೂ, ನದಿಯಲ್ಲಿ ನೀರಿನ ಕ್ಷೀಣತೆಯಿಂದಲೂ ಆಯಿತು.

ಸಲಿಯಮಂಗಲಂ ಮ|| ಎ ಮಾರಿಯಾಮುತ್ತುಪಿಳ್ಳೆಯವರು ಬರೆಯುವುದೇನಂದರೆ—33 ಸೆಂಟು ಅಗೆಕಳವನ್ನು ತಯಾರಿಸಿ 21 ಪಡಿ ಸೋನೆರುವಾಳೆ ಬೀಜವು ಬಿತ್ತಲಾಯಿತು. 3½ ಎಕ್ರೆ ಗದ್ದೆಗಳು ಈ ಸಸಿಯಿಂದ ಒಂದೊಂದೇ ಸಸಿಯನ್ನು ನಡುವ ಕ್ರಮದಲ್ಲಿ ನಡಲಾದವು. ಉಳಿದ ಸಸಿಯು 2 3 ಒಟ್ಟಾಗಿ 1½ ಎಕ್ರೆಗೆ ಜಾಸ್ತಿ ಗದ್ದೆಗಳಲ್ಲಿ ನಡಲಾಯಿತು. ಇದರಿಂದ ಹುಟ್ಟಿದ ಉತ್ಪತ್ತಿಯು ವಾಡಿಕೆಯಾಗಿ ಗೊಂಚಲಾಗಿ ನಟ್ಟ ಪೈರಿನಿಂದ ಉಂಟಾಗುವಷ್ಟೇ ಆಗಿತ್ತು. ಒಂದೊಂದಾಗಿ ನಟ್ಟ ಗದ್ದೆಗಳಲ್ಲಿ ಎಕ್ರೆಗೆ 3 ಕಲಂ ಭತ್ತದ ಪ್ರಕಾರ ಉತ್ಪತ್ತಿ ಹೆಚ್ಚಿತು. 3-4 ವರುಷಗಳಿಂದ 1 ಎಕ್ರೆ 40 ಸೆಂಟು ವಿಸ್ತೀರ್ಣದ ಗದ್ದೆಗಳಿಗೆ ವೇಹಂಪಾಡಿ ತೋಗತ್ರ ತಗಲಿತ್ತು. ಕೆಲವು ನಿವಾರಣೋಪಾಯಗಳನ್ನು ಪ್ರಯತ್ನಿಸಿನೋಡಿದರೆ ಎಕ್ರೆಗೆ ೬೫ ಕಲಂ ಪ್ರಕಾರ ಮಾತ್ರ ಉತ್ಪತ್ತಿ ಸಿಕ್ಕುತ್ತಿತ್ತು. 1910 ನೇ ಇಸವಿಯಲ್ಲಿ ಈ ಸ್ಥಳವನ್ನು ಒಣಗಿದ್ದಾಗಲೇ ಉತ್ತಿ ಮುಂಗಾರು ಮಳೆ ನೀರಿನಿಂದ ನೀರು ಕಟ್ಟಿದ ನಂತರ ನಡಲಾಯಿತು. ಇದರಿಂದ ಎಕ್ರೆಗೆ 23 ಕಲಂ ಭತ್ತ ಉತ್ಪತ್ತಿಯಾಯಿತು. ನುಚ್ಚು ಕೆಂಪು ಆಗಿರುತ್ತದೆ.

ಪಿ ಎಸ್ ನಾಳ್‌ಕೋಟೈ, ಗಂಗೈಕೊಂಡಮ್ ಪೋಸು ಮ ನಾರಾಯಣ ಅಯ್ಯಂಗಾರ್ ಬರೆದುದೇನಂದರೆ ಕೊಯಮ್ಲಪಟ್ಟು ಕೃಷಿಕ್ಷೇತ್ರ ಮೇನೇಜರರ ಬೋಧನೆ ಮೇರೆಗೆ 10 ಸೆಂಟು ಗದ್ದೆಗಳಲ್ಲಿ ಒಂದೊಂದೇ ಸಸಿಗಿಡವನ್ನು ನಡುವ ಕ್ರಮವನ್ನ ಪರೀಕ್ಷೆ ಮಾಡಿದೆನು. ಆ ವರುಷ ಬೀಜಬಿತ್ತಿದಂದಿನಿಂದ ಕಟಾವಿನ ವರೆಗೆ ಮಳೆಗಳಿಂದ ಏನೂ ಪ್ರಯೋಜನ ಸಿಕ್ಕದಿದ್ದರೂ ಬೆಳೆಯು ಮುಂಚಿನ ವರುಷಗಳಿಂತ ಚೆನ್ನಾಗಿ ಬೆಳದು 15 ದಿವಸ ಮುಂಚಿತವಾಗಿಯೇ ಕಟಾವಿಗೆ ಸಿದ್ಧವಾಗಿತ್ತು. ಗದ್ದೆಗಳಿಗೆ ವಿಶೇಷ ತರದ ಗೊಬ್ಬರ ಹಾಕಲಿಲ್ಲ. ಆ 10 ಸೆಂಟು ಸ್ಥಳದಿಂದ ಆದ ಆದಾಯವು 1 ರೂಪಾಯಿ ಎಂದು ನನ್ನ ಅಂದಾಜಾಗಿದೆ. ನಾನು ಈ ಕ್ರಮದ ಪ್ರಯೋಜನಗಳನ್ನು ಇತರ ರೈತರಿಗೆ ವಿವರಿಸಿ ಅವರಿಗೆ ನನ್ನ ಪೈರನ್ನೂ ತೋರಿಸಿದೇನೆ.

ಅಂಬಾಸಮುದ್ರಂ ತಾಲ್ಲೂಕು ಪಾಪನಾಸಮುದ್ರದ ಡಿಸ್ಟ್ರಿಕ್ಟ್ ಬೋರ್ಡು ಮೆಂಬರಾದ ಮ|| ಶಿವರಾಮ ಐಯರ್, ಬಿ ಎ, ಬಿ ಎಲ್, ಇವರು ಬರೆಯುವುದೇನಂದರೆ—ನನ್ನ ಮನೆತನದ ಭೂಮಿಯ ಪೈಕಿ 15 ಎಕ್ರೆ ಗದ್ದೆಗಳಲ್ಲಿ ಭತ್ತ ಬೆಳೆಸುತ್ತೇನೆ. ನುಚ್ಚು ಅಷ್ಟು ಸಲುವಕ್ಕಾಗಿರುವುದಿಲ್ಲ. ಕಳೆದ ಮೂರು ವರುಷಗಳಿಂದ ನಾನು ಒಂದೊಂದೇ ಭತ್ತದ ಸಸಿಯಗಿಡವನ್ನು ನಡುವ ಕ್ರಮವನ್ನು ಅನುಸರಿಸಿದೇನೆ. ಆದರೆ ಕ್ರಮಕ್ಕೆ ಅನುಭವವಿಲ್ಲ. ಕೂಲಿ ಜನರನ್ನು ಇಟ್ಟು ತಮ್ಮ ಗದ್ದೆಗಳನ್ನು ಸಾಗುವಳಿಮಾಡುವ ಜಮೀನುದಾರರಿಗೆ ನನ್ನ ಅನುಭವವು ಪ್ರಯೋಜನಕ್ಕೆ ಬಿದ್ದೀತು. ಕೆಳಗೆ ಕೊಟ್ಟ ಸಂಖ್ಯೆಗಳು ಸರಾಸರಿ ಮಾತ್ರ ಆಗಿರುತ್ತವೆ—ನನ್ನ ಮನೆತನದ ಎಲ್ಲಾ ಗದ್ದೆಗಳೂ ಈ ಹೊಸ ಕ್ರಮದಿಂದ ನಟ್ಟುದರಿಂದ ಇದರಿಂದ ಹುಟ್ಟುವ ಉತ್ಪತ್ತಿಯನ್ನೂ, ಗೇಣಿಗೆ ಕೊಟ್ಟ ಭೂಮಿಯಿಂದ ಬರುವ ಹುಟ್ಟುವಳಿಯನ್ನೂ ಹೋಲಿಸಿನೋಡಬೇಕಾಯಿತು. ನನ್ನ ಒಕ್ಕಲುಗಳಿಗೆ ಅವರವರ ಗದ್ದೆಗಳಲ್ಲಿ ಒಂದೊಂದನ್ನು ಈ ಹೊಸ ಕ್ರಮದಿಂದ ನಟ್ಟು ಇದರಿಂದ ಉಂಟಾಗುವ ಗುಣವನ್ನು ಸ್ವತಃ ಪರೀಕ್ಷಿಸಿನೋಡುವಂತೆ ಬೋಧಿಸಿದೆನು. ಒಳ್ಳೇ ತರದ ಭೂಮಿಗಳಲ್ಲಿ ಈ ಹೊಸ ಕ್ರಮದಿಂದ ಸೇಕಡಾ 7 ರಂತೆ ಉತ್ಪತ್ತಿ ಜಾಗಿಲಾಯಿತು. ಒಂದೊಂದು ಭೂಮಿಯಲ್ಲೂ ಉತ್ಪತ್ತಿ ಹೆಚ್ಚಿತು. ಆದರೆ ಸರಾಸರಿ ಮೇಲೆ ಸೇಕಡಾ 5 ರಂತೆ ಹೆಚ್ಚು ಸಿಕ್ಕಿತು. ಸರಾಸರಿ ಮೇಲೆ ಎಕ್ರೆಗೆ 813 ಪಡಿ ಭತ್ತ ಹುಟ್ಟುವಳಿಯಾಗುತ್ತದೆಂದು ಅಂದಾಜು ಮಾಡಿದರೆ ಈ ಹೊಸ ಕ್ರಮದಿಂದ 11½ ಪಡಿ ಭತ್ತ ಹೆಚ್ಚು ಉತ್ಪತ್ತಿಯಾಯಿತು.

ತಿನ್ನವೇಲಿ ಜಿಲ್ಲೆ ತ್ರಿಚೆಂದೂರು ತಾಲ್ಲೂಕು ಆಮುಗನೇರಿಯಲ್ಲಿರುವ ಡಿಸ್ಟ್ರಿಕ್ಟ್ ಬೋರ್ಡು ಮೆಂಬರಾದ ಮ ಎಸ್ ಪೊನ್ನಯ್ಯ ನಾದರವರು 1911 ನೇ ಫೆಬ್ರವರಿ ತಾ. 2 ರಲ್ಲಿ ಬರೆಯುವುದೇನಂದರೆ—ನಲ್ಲೂರಿನಲ್ಲಿರುವ ನನ್ನ ಭತ್ತದ ಗದ್ದೆಗಳಲ್ಲಿ ಬೆಳಸಿದ ಕೆಲವು ಸಸ್ಯದ ಗಿಡಗಳನ್ನು ಪರೀಕ್ಷೆಗೋಸ್ಕರ ಕಳುಹಿಸಿದೇನೆ. ಈ ಗಿಡಗಳು ಸಿರುಮಣಿ ಎಂಬ ಜಾತಿಯ ಭತ್ತದ್ದಾಗಿವೆ. ಅವು ಆರು ತಿಂಗಳಲ್ಲಿ ಹಣ್ಣಾಗುತ್ತವೆ. ನಾಟಿ ಹಾಕಿತ್ತು. ಅಗೆಯು ಹುಟ್ಟುವಾಗ ನಷ್ಟವುಂಟಾಗುವ ಕಾರಣದಿಂದ ನಾನು ಎಕ್ರೆಗೆ ಸುಮಾರು 2 ಪಡಿ ಬೀಜದ ಪ್ರಕಾರ ಬಿತ್ತುತ್ತೇನೆ. ರೂಢಿಯಲ್ಲಿರುವ ಕ್ರಮಕ್ಕೆ ಎಕ್ರೆಗೆ 30 ಪಡಿ ಬೀಜ ತಾಗುವುದು. ಹೀಗಾಗಿ ಪ್ರತಿ ಎಕ್ರೆಗೆ 18 ಪಡಿ ಭತ್ತದ ಪ್ರಕಾರ ಆದಾಯವುಂಟು.

ನಾನು ಈಗ ಒಂದೊಂದೇ ಸಸಿಗಿಡವನ್ನು ನಡುವ ಕ್ರಮದಿಂದ ಸಿರುಮಣಿ ಜಾತಿಯ ನೆಲ್ಲನ್ನು ನೆಟ್ಟ ಗದ್ದೆಗಳು ನಲ್ಲೂರಿನಲ್ಲಿವೆ. ಅಲ್ಲಿ ಪ್ರತಿ ಒಂದು ಗಿಡವೂ 40 ರಿಂದ 70 ರ ವರೆಗೆ ಅಡ್ಡ ಚಿಗುರುಗಳನ್ನು ಬಿಟ್ಟಿರುತ್ತದೆ. ತೆನೆಗಳು ಸಹ ದೊಡ್ಡದಾಗಿವೆ. ಈ ವರುಷ ಬೆಳೆಯು ಅನೇಕ ತರದ ಹುಳಗಳ ಬಾಧೆಯಿಂದ ಮುಂಚಿನ ವರುಷಗಳ ಪೈರಿನಷ್ಟು ಚೆನ್ನಾಗಿರುವುದಿಲ್ಲ. ಆದರೂ ಎಕ್ರೆಗೆ 1,500 ಪಡಿ ಭತ್ತಕ್ಕೆ ಕಡಿಮೆಯಿಲ್ಲದೆ ಉತ್ಪತ್ತಿಸಿಕ್ಕುವುದೆಂದು ದೃಢವಾಗಿದೇನೆ. ಕಳೆದ ವರುಷ ಆತೂರಿನಲ್ಲಿ ಒಂದು ಚುನಾಯಿಸಿದ ಸ್ಥಳದಲ್ಲಿ ಒಂದೊಂದೇ ಸಸಿಗಿಡವನ್ನು ಹನ್ನೆರಡು ಅಂಗುಲ ದೂರವಾಗಿ ನೆಟ್ಟ ಪೈರಿನಿಂದ 2,000 ಪಡಿಗಿಂತ ಹೆಚ್ಚು ಭತ್ತ ಉತ್ಪತ್ತಿಯಾಯಿತು. ಒಂದೊಂದೇ ಸಸಿಗಿಡವನ್ನು ನಡುವ ಕ್ರಮಕ್ಕೆ ಗೊಂಚಲಾಗಿ ನಡುವ ಕ್ರಮಕ್ಕಿಂತ ಹೆಚ್ಚು ಖರ್ಚು ತಾಗುವುದಿಲ್ಲ. ಸಾಧಾರಣವಾಗಿ ನನ್ನ ಗದ್ದೆಗಳನ್ನು ಚೆನ್ನಾಗಿ ಹೂಡಿಸುತ್ತೇನೆ. ನಾನು ನೆರೆಯ ರೈತರು ಹಾಕುವ ಗೊಬ್ಬರಕ್ಕಿಂತ ಹೆಚ್ಚಾಗಿ ಗೊಬ್ಬರ ಹಾಕುವುದಿಲ್ಲ. ಆದರೆ ಚೆನ್ನಾಗಿ ಉಳುವುದರಿಂದಲೂ, ಸಸಿಗಿಡಗಳನ್ನು ಒಂದೊಂದೇ ಆಗಿ ನಡುವುದರಿಂದಲೂ ಕಳೆದ ಮೂರು ವರುಷಗಳಲ್ಲಿ ನನಗೆ ಒಳ್ಳೆ ಪೈರಾಗಿವೆ. ಆದುದರಿಂದ ರೈತರಿಗೆ ಒಂದೊಂದೇ ಸಸಿಗಿಡವನ್ನು ನಡುವ ಕ್ರಮದಿಂದ ಹೆಚ್ಚು ಆದಾಯವುಂಟೆಂದು ಧೈರ್ಯದಿಂದ ಹೇಳುವುದಕ್ಕೆ ಶಕ್ಯನಾಗಿದೇನೆ.

ಮಲಬಾರು ಚಪ್ಪನಾಥಮನ ಮ|| ಟಿ ಸಿ ಉಣ್ಣಿಕುರುಪರವರು ಬರೆಯುವುದೇನಂದರೆ—ನಾನು ಕಳಿಪರಂಬಾ ಕೃಷಿಕ್ಷೇತ್ರದಿಂದ 4 ಪಡಿ ಕಯ್ಯಮ ಭತ್ತದ ಬೀಜವನ್ನೂ, ಎರಡು ಪಡಿ ಪವಳಕಣ್ಣನ್ ಭತ್ತದ ಬೀಜವನ್ನೂ ತರಿಸಿ ಬೇರೆಬೇರೆ ಅಗೆಕಳಗಳಲ್ಲಿ ಬಿತ್ತಿ ಸಸಿಯನ್ನು ಪ್ರತ್ಯೇಕ ಪ್ರತ್ಯೇಕ ಗದ್ದೆಗಳಲ್ಲಿ ಒಂದೊಂದೇ ಆಗಿ ನಟ್ಟೆನು. ಕಯ್ಯಮ ಗದ್ದೆಯಲ್ಲಿ 110 ಪಡಿ ಭತ್ತವೂ, ಪವಳಕಣ್ಣನ್ ಗದ್ದೆಯಲ್ಲಿ 100 ಪಡಿ ಭತ್ತವೂ ಉತ್ಪತ್ತಿ ಆಯಿತು. ಮೊದಲು ಈ ಗದ್ದೆಗಳಲ್ಲಿ ಒಂದೊಂದಕ್ಕೆ 7 ಪಡಿ ಬೀಜದ ಪ್ರಕಾರ ಬಿತ್ತಿದ್ದರಲ್ಲಿ 70 ಪಡಿಗಳಿಗಿಂತ ಯಾವಾಗಲೂ ಹೆಚ್ಚು ಕಾಳುಗಳು ಸಿಕ್ಕಲಿಲ್ಲ. ಆದುದರಿಂದ ಈಗ ಒಂದೊಂದು ಗದ್ದೆಯಿಂದಲೂ 30 ಪಡಿ ಭತ್ತ ಆದಾಯವಾಗಿದೆ. ನಾನು ವಿಶೇಷತರದ ಗೊಬ್ಬರವನ್ನೇನೂ ಉಪಯೋಗಿಸಲಿಲ್ಲ. ನನ್ನ ಅನುಭವದ ಫಲವನ್ನು ಇತರ ರೈತರ ಹಿತಕ್ಕಾಗಿ ಪ್ರಕಟಿಸಲಿಕ್ಕೆ ಬಹಳ ಸಂತೋಷಪಡುತ್ತೇನೆ.

ಬಾತ್ಮೀದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ವಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು, ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಬಹಳ ಹೇಳುತ್ತೇವೆ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಒಬ್ಬ ರಿಟೈರ್ಡ್ ಆಫೀಸರ್—ನೀವು ಹೇಳುವ ವಿಷಯವು ಮೊದಲು ಯಾವ ಪತ್ರಿಕೆಯಲ್ಲಿ ಪ್ರಕಟವಾಯಿತೋ ನಿಮ್ಮ ಆಕ್ಷೇಪಣೆಯನ್ನೂ ಆ ಪತ್ರಿಕೆಗೇ ಬರೆಯುವುದು ಸಹಜವಾಗಿದೆ.

—ಎಡಿ]

ಕರೆಸ್ಪಾಂಡೆನ್ಸ್

ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯವಿಮರ್ಶೆ

ಅಯ್ಯಾ,

ಮೇಲ್ಕಂಡ ವಿಷಯದಲ್ಲಿ ತಮ್ಮ ಕಳೆದ ವಾರದ ಪತ್ರಿಕೆಯಲ್ಲಿ ಪ್ರಕಟಿಸಿರುವ ತಮ್ಮ ಲೇಖನವನ್ನು ಓದಿದೆನು. ನಮ್ಮ ಸಂಸ್ಥಾನದಲ್ಲಿ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಶಿಕ್ಷೆ ಮಾಡಲ್ಪಟ್ಟ ಜನಗಳ ಪೈಕಿ ಬಹು ಸ್ವಲ್ಪ ಜನಗಳೇ ಶಿಕ್ಷೆಗೆ ಗುರಿಮಾಡಲ್ಪಟ್ಟಿರೋದು ಸಂತೋಷಪ್ರದವಾದದ್ದಾಗಿಲ್ಲವೆಂದು ತಾವು ಬರೆದಿರುವುದು ಸಾಧುವಾದ ಅಭಿಪ್ರಾಯವಾಗಿದೆ. ಸಂಸ್ಥಾನದಲ್ಲಿ ನ್ಯಾಯವಿಮರ್ಶೆಯು ವಿಚಕ್ಷಣೆಯಾಗಿಲ್ಲದಿರೋದು ಅತ್ಯಂತ ಶೋಚನೀಯವಾಗಿದೆ. 50 ಕ್ರಿಮಿನಲ್ ಮೊಕದ್ದಮೆಗಳ ಪೈಕಿ 30 ಮೊಕದ್ದಮೆಗಳಲ್ಲಿ ಶಿಕ್ಷೆಯಾಗಿ ಉಳಿದ 30 ಮೊಕದ್ದಮೆಗಳಲ್ಲಿ ಶಿಕ್ಷೆಯಾಗದಿರೋದನ್ನು ನೋಡಿದರೆ ಪೋಲೀಸಿನವರ ಕಾರ್ಯಕ್ರಮಗಳು ಬಹಳ ಮಟ್ಟಿಗೆ ಚೆನ್ನಾಗಬೇಕೆಂದು ತಾವು ಸೂಚಿಸಿರುವುದು ನ್ಯಾಯವಾದುದಾಗಿದೆ. ನಮ್ಮ ದೇಶದಲ್ಲಿ ಪಟಾಟೋಪದ ಕಾರ್ಯಾಪೇಕ್ಷೆಯು ಕಡಮೆಯಾಗುವುದನ್ನೂ, ರಾಜ್ಯಭಾರ ಕ್ರಮಗಳಲ್ಲಿ ಚಟುವಟಿಕೆ ಸಾಮರ್ಥ್ಯಾದಿ ಗುಣಗಳು ಹೆಚ್ಚುವುದನ್ನೂ ನೋಡಬೇಕೆಂದು ತವಕ್ಕದನೆ ಸರ್ವರೂ ಆಶಿಸುವವರಾಗಬೇಕು.

ನಮ್ಮ ದೇಶದ ಏಳಿಗೆಯಲ್ಲಿ ಬದ್ಧಕಂಕಣರಾಗಿರುವ ನಮ್ಮ ಶ್ರೀಮನ್ಮಹಾರಾಜರವರೂ ಮತ್ತು ಈಗಿನ ದಿವಾನರವರಾದ ಮ|| ವಿಶ್ವೇಶ್ವರಯ್ಯನವರು ಸಹ ತಮ್ಮ ಲೇಖನದಲ್ಲಿರುವ ವಿಷಯಗಳನ್ನು ಪರಾಂಬರಿಸಿದರೆ ಇಷ್ಟು ಮಟ್ಟಿಗೆ ನಮ್ಮ ದೇಶವು ಅಸಮರ್ಪಕವಾದ ಸ್ಥಿತಿಯಲ್ಲಿದೆಯಲ್ಲಾ ಎಂದು ಪರಿತಾಪಪಡದೆ ಇರಲಾರರು. ಸರ್ಕಾರಿ ನೌಕರರ ವರ್ತನೆಗಳು ನ್ಯಾಯವಾದವುಗಳೋ, ಅನ್ಯಾಯವಾದವುಗಳೋ ಎಂಬುವುದನ್ನು ವಿಮರ್ಶಿಸದೆ, ಸರ್ಕಾರದ ನೌಕರರು ಮಾಡುವುದೆಲ್ಲಾ ಸರ್ವಸಮರ್ಪಕವೇ ಎಂದು ಕೇವಲ ಹೊಗಳುಭಟರಂತೆ ತಾವು ಲೇಖನವನ್ನು ಬರೆಯದೆ ನಿಷ್ಪಕ್ಷಪಾತದಿಂದ ಬರೆದಿರುವುದು ತಮ್ಮ ಲೇಖನ ಬೆಲೆಯನ್ನು ಹೆಚ್ಚಿಸಿದೆ ಎಂದು ಪ್ರಾಜ್ಞರೆಲ್ಲರೂ ತಿಳಿದು ಇದಕ್ಕಾಗಿ ತಮ್ಮನ್ನು ವಂದಿಸಬೇಕಾಗಿದೆ.

ಪ್ರಕೃತದಲ್ಲಿ ಇಂತಹ ಅನರ್ಥಗಳು ನೀಗಬೇಕಾದರೆ ಉಪಾಯವೇನೆಂಬುದನ್ನು ತಾವು ತಮ್ಮ ಲೇಖನದಲ್ಲಿ ಸಂಕ್ಷೇಪವಾಗಿ ಸೂಚಿಸಿರುವಿರಿ. ಪ್ರಜೆಗಳಲ್ಲಿ ಸತ್ಯವಾಕ್ಯ, ಸತ್ಯಸಂಕಲ್ಪ, ಸತ್ಕಾರ್ಯಗಳು ನೆಲೆಗೊಳ್ಳಬೇಕಾದರೆ ಪ್ರಜೆಗಳು ಕೇವಲ ವಿದ್ಯಾವಂತರಾದ ಮಾತ್ರಕ್ಕೇನೇ ಸಾಲದು. ಸದ್ಗುಣಗಳನ್ನು ಬಾಲ್ಯದಿಂದ ವೃದ್ಧಿಗೊಳಿಸತಕ್ಕ ಶಿಕ್ಷಣೆಯನ್ನು ಸರ್ಕಾರದವರು ಏರ್ಪಡಿಸುವುದು ಅತ್ಯಾವಶ್ಯಕವೆಂದು ಸರ್ವರೂ ಒಪ್ಪುವರು. ನೌಕರರಲ್ಲಿ ತಪ್ಪಿತಸ್ಥರಾದವರನ್ನು ಮೇಲ್ಪಟ್ಟ ಅಧಿಕಾರಿಗಳು ಒಳಹಾಕಿಕೊಳ್ಳದೆ ತಕ್ಕ ಶಿಕ್ಷೆಗೆ ಗುರಿಪಡಿಸುವುದು ಅತ್ಯಂತ ಅವಶ್ಯಕವಾದುದೆಂದು ತೋರುತ್ತದೆ.

ಕೆಲವು ಜನರಲ್ಲಿ ಒಂದು ದುರಭಿಪ್ರಾಯವು ನೆಲೆಗೊಂಡಿರುತ್ತದೆ. ಅದೇನೆಂದರೆ, “ಕಾರ್ಯದಕ್ಷತೆ ಇದ್ದರೆ ಸರ್ಕಾರಿ ನೌಕರನಿಗೆ ಯೋಗ್ಯತೆಯು ಸಾಕಾಗಿರುತ್ತದೆ. ಆತನ ಇತರ ದುರ್ಗುಣಗಳು ಅಂದರೆ ವ್ಯಭಿಚಾರವೇ ಮೊದಲಾದ ದೋಷಗಳು ಸರ್ಕಾರದ ಕೆಲಸಕ್ಕೆ ಅವನನ್ನು ನಾಲಾಯಕಾಗಿ ಮಾಡಲಾರವು” ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಇನ್ನು ಕೆಲವರು “ನೌಕರನ ವ್ಯಾಪಾರಗಳು ರುಜುವಾತಿಗೆ ಬಂದ ಹೊರ್ತು ಅವನನ್ನು ಮೇಲ್ಪಟ್ಟ ಸರ್ಕಾರದ ಅಧಿಕಾರಿಗಳು ಯಾವ ವಿಧವಾದ ನಿಂದೆಗೂ ಗುರಿಪಡಿಸುವುದು ನ್ಯಾಯವಲ್ಲ” ಎಂದು ಅಭಿಪ್ರಾಯಪಡುತ್ತಾರೆ. ಈ ಎರಡು ವಿಧವಾದ ಅಭಿಪ್ರಾಯವೂ ಅಸಿದ್ಧವಾದದ್ದೆಂದು ಹೇಳಬೇಕಾಗಿತ್ತು. ಮನುಷ್ಯನಲ್ಲಿ ಯಾವ ವಿಧವಾದ ದುರ್ಗುಣವಿದ್ದರೂ ಅದರ ಒತ್ತಾಸೆಗೆ ಇತರ ದುರ್ಗುಣಗಳು ಸಂಜನಿಸದೆ ಇರಲಾರವೆಂಬುವುದು ಅನುಭವಸಿದ್ಧವಾಗಿದೆ. ಮನುಷ್ಯನ ಪಾಪಕೃತ್ಯಗಳು ಅನೇಕ ಸಂದರ್ಭಗಳಲ್ಲಿ ಕೋರ್ಟುಗಳಲ್ಲಿ ರುಜುವಾತಾಗದಿದ್ದರೂ ತಕ್ಷೀರುದಾರನಿಂದ ಅವುಗಳು

ಯೂ ಆಚರಿಸಲ್ಪಟ್ಟಿರುತ್ತವೆಂದು ಮನಸ್ಸಾಕ್ಷಿಗಾದರೂ ವಿದಿತವಾಗದಿರಲಾರದು ಸಹ ಅನುಭವಸಿದ್ಧವಾಗಿದೆ. ಈ ಎರಡು ವಿಷಯಗಳನ್ನೂ ದೀರ್ಘವಾಗಿ ಪರ್ಯಾಲೋಚಿಸಿದರೆ ಸರ್ಕಾರದ ನೌಕರರಲ್ಲಿ ದುಷ್ಟ ಸ್ವಭಾವಗಳೇನಾದರೂ ಕಂಡುಬಂದಲ್ಲಿ ಮೇಲ್ಪಟ್ಟ ದೊಡ್ಡ ಅಧಿಕಾರಿಗಳು ಅವರನ್ನು ನಿಂದಿಸಿಯೂ ವಿಧವಾದ ಡಿಪಾರ್ಟ್‌ಮೆಂಟಿನ ಶಿಕ್ಷೆಗೂ ಗುರಿಪಡಿಸುತ್ತಾ ಬಂದರೆ ಅವರಲ್ಲಿ ಭೀತಿಯು ಹೆಚ್ಚುವುದಕ್ಕೆ ಸಂಶಯವಿಲ್ಲ. ಪಾಶ್ಚಾತ್ಯ ದೇಶಗಳಲ್ಲಿ ಯಾವ ಒಬ್ಬ ಅಧಿಕಾರಿಯ ಸದ್ವರ್ತನದ ಮೇಲೆ ವರ್ತಮಾನ ಪತ್ರಿಕೆಗಳಲ್ಲಿ ಆಕ್ಷೇಪಣೆ ಬಂದರೆ ತಕ್ಷಣವೇ ಅವನು ಸರ್ಕಾರಕ್ಕೆ ತಕ್ಕ ಸಮಜಾಯಿಸಿಯನ್ನು ಯನಾಗಿ ಕೊಡಬೇಕಾಗುವುದೆಂದು ಕೇಳಿರುತ್ತೇನೆ. ಇಂತಹ ಏರ್ಪಾಡು ನಮ್ಮ ದೇಶದಲ್ಲಿಯೂ ನೆಲೆಗೊಂಡರೆ ಸರ್ಕಾರದ ನೌಕರರಲ್ಲಿ ಅಹಂಕಾರ ದೋಷಗಳು ಪ್ರಜೆಗಳ ಹಣದಿಂದ ಸಂಬಳವನ್ನು ತಿನ್ನುವುದರಿಂದ ಪ್ರಜೆಗಳ ಸೇವಕರೆಂದು ತಿಳಿದು ಪ್ರಜೆಗಳ ಅಪವಾದಕ್ಕೆ ಭೀತಿಪಟ್ಟು ರಾಜ್ಯದ ಏಳಿಗೆಗೆ ಕಾರಣರಾಗುತ್ತಾರೆಂದು ನಿಸ್ಸಂದೇಹವಾಗಿಯೂ ಹೇಳಬಹುದು. ಎಲ್ಲಕ್ಕೂ ಮೊದಲು ಜಾರಿಕೊಡತಕ್ಕದ್ದೆಂದು ಹೆಸರುಪಡೆದ ನಮ್ಮ ಸಂಸ್ಥಾನದಲ್ಲಿ ಇಂಥ ಬಗೆಯ ದೋಷಗಳನ್ನು ನಾನು ಓದಿದಾಗ ಸವಿಯಾದ ಸಕ್ಕರೆ ಪಾನಕವನ್ನು ಕುಡಿಯುತ್ತಿದ್ದ ಬಾಯಿಯಲ್ಲಿ ಬೇವಿನ ಎಣ್ಣೆ ಬಿದ್ದಂತಾಯಿತು. ತಮ್ಮ ಲೇಖನದಿಂದ ಪುನಃ ಇಂತಹ ಅನುಭವಾಂಶಗಳು ಪ್ರಕಟವಾಗದಂತೆ ಸರ್ಕಾರದವರು ಏರ್ಪಾಡುಗಳನ್ನು ಶೀಘ್ರವಾಗಿ ಮಾಡುವರೆಂದು ತಮ್ಮೊಡನೆ ನಾನೂ ನಂಬಿಕೊಂಡಿರುತ್ತೇನೆ.

ರಾಮೇಶ್ವರಯ್ಯ, ಮೈಸೂರು.

ತಾಲ್ಲೋಕು ವರ್ತಮಾನಗಳು.

ಚಿಕ್ಕನಾಯಕನಹಳ್ಳಿ.—ಬಿಸಿಲಿನ ತಾಪ ಸಹಿಸಕೂಡದಷ್ಟಾಗಿದೆ. ಧಾರಣೆವಾಸಿಗಳು ಕ್ಷಾಮವನ್ನು ಜ್ಞಾಪಕಕ್ಕೆ ತರುವಂತಿವೆ.—ಈ ಊರಿನಲ್ಲಿ ಕಾಲರಾ ಪ್ರಾಸ್ತವಾಗಿ ಸುಮಾರು 20-25 ಜನಗಳವರೆಗೆ ಕಾಲವಾದರು. ಈಗ 5-6 ದಿವಸದಿಂದ ಗಲಾಟೆ ಏನೂ ಇಲ್ಲ. ಜನಗಳು ಭಜನೆ ವಗೈರೆ ಮಾಡುತ್ತಿದ್ದಾರೆ. 12ನೇ ಶನಿವಾರ ಮ. ನರಹರಿಶಾಸ್ತ್ರಿಗಳವರು ಇಲ್ಲಿಗೆ ದಯಮಾಡಿಸಿದರು. ರಿಜಿಸ್ಟ್ರಾರ್ ಮ. ಕೆ. ವೆಂಕಟಾಚಾರ್ಯರವರು ಬಹಳ ಮುತುವರ್ಜಿ ವಹಿಸಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಒಂದು ಸಭೆ ಮಾಡಿದ್ದರು. ಮ॥ ಶಾಸ್ತ್ರಿಗಳವರು ಥಿಯಸಾಫಿಕಲ್ ಸೊಸೈಟಿಯ ವಿಚಾರದಲ್ಲಿ ಒಂದು ಉಪನ್ಯಾಸ ಮಾಡಿದರು. ಅದು ಬಹಳ ಶ್ಲಾಘನೀಯವಾಗಿತ್ತು. ಮಾರನೇ ದಿನ ಸಾಯಂಕಾಲ ಸಾವಿತ್ರಿ ಕಥೆಯನ್ನು ಹರಿಕಥಾ ರೂಪವಾಗಿ ಹೇಳಿದರು. ಆ ದಿವಸವೂ ಮುಂದಿ ಸ್ತ್ರೀಯರು ಕೂಡ ಸದರಿ ದೇವಸ್ಥಾನದಲ್ಲಿ ಸೇರಿ ಉಪನ್ಯಾಸವನ್ನು ಕೇಳಿ ಆಶ್ಚರ್ಯಪಟ್ಟರು. ಅವರು 14ನೇ ತಾ. ಉಪನ್ಯಾಸ ಮಾಡಿ ತಿಪಟೂರಿಗೆ ಹೋಗುತ್ತಾರೆ.

ಚಿಂತಾಮಣಿ.—ಈಚೆಗೆ ಥಿಯಸಾಫಿಕಲ್ ಸೊಸೈಟಿಯ ಮೆಂಬರುಗಳು ಶಿವನ ಮಂದಿರದಲ್ಲಿ ಕಟ್ಟಳೆಯಂತೆ ಸೇರಿ ಮೀಟಿಂಗು ಮಾಡುತ್ತಾ ಬಂದಿದ್ದರೂ ಆದರೆ ಮೆಂಬರುಗಳ ಸಂಖ್ಯೆ ಮಾತ್ರ ಕಮ್ಮಿಯಾಗಿದೆ.—ಈ ನಗರದಲ್ಲಿ ಆಯುರ್ವೈದ್ಯರಾದ ಮ॥ ಕೋಮಲ ವೆಂಕಟಕೃಷ್ಣಯ್ಯಶೆಟ್ಟರವರು ಧರ್ಮಶಾಲೆಯೊಂದನ್ನು ಸ್ಥಾಪಿಸಬೇಕೆಂಬುದಾಗಿ ಆಲೋಚಿಸಿದ್ದಂತೆ ಈ ತಿಂಗಳು 1ನೇ ತಾ. ಸೋಮವಾರ ಈ ಟವರ್‌ಗೆ ಸುಮಾರು ಎರಡು ಮೈಲಿ ದೂರದಲ್ಲಿ ಶ್ರೀ ಆಂಜನೇಯ ದೇವಸ್ಥಾನದ ಮುಂಭಾಗದಲ್ಲಿನ ಎತ್ತರ ಪ್ರದೇಶದಲ್ಲಿ ಅದನ್ನು ಕಟ್ಟಿಸುವುದಕ್ಕೆ ಪಾಯಾ ಕಲ್ಲನ್ನು ಈ ತಾಲ್ಲೂಕು ಧರ್ಮಪ್ರಭು ಆಮಲ್ದಾರ್ ಮ॥ ನ. ಗೋಪಾಲಾಚಾರ್ಯರವರ ಸ್ವಹಸ್ತ ಹಾಕಿಸಿ ಪ್ರತಿಷ್ಠೆ ಮಾಡಿದರು. ಆ ಕಾಲದಲ್ಲಿ ಸದರಿ ಊರಿನ ಆಯುರ್ವೈದ್ಯರೆಲ್ಲರೂ ಹಾಜರಾಗಿದ್ದರು ಮತ್ತು ಈ ಕಟ್ಟಡದ ನಿಮಿತ್ತವಾಗಿ ಅವರು ಪಟ್ಟ ದೇಹಶ್ರಮೆಗಾಗಿ ಕೋಮಲ ವೆಂಕಟಕೃಷ್ಣಯ್ಯಶೆಟ್ಟರ ಮಕ್ಕಳು ಮುನಿಸುಬ್ಬಯ್ಯಶೆಟ್ಟರು ವಂದನೆಗಳನ್ನು ಸಮರ್ಪಿಸಿದರು. ಅನಂತರ ಅಮಲ್ದಾರರು ಈ ರೀತಿ ಪರೋಪಕಾರ ಧರ್ಮಕಾರ್ಯ ಮಾಡುವುದೂ ಅಲ್ಲದೆ ದೈವಭಕ್ತಿಯುಳ್ಳ ಲೋಕಕ್ಕೆ ಸಮಯೋಚಿತವಾಗಿ ಬುದ್ಧಿವಾದಗಳನ್ನು ಹೇಳಿದರು.

ಬೇಗಳೂರು ತಾ. ಯಲಹಂಕ.—ಇಲ್ಲಿ ಮಳೆ ಬಹಳ ಚೆನ್ನಾಗಿದೆ. ಬಿಸಿಲು ದಿನೇ ದಿನೇ ವೃದ್ಧಿಯಾಗುತ್ತಿದೆ.—ಇಲ್ಲಿ ಗರ್ಲ್ ಸ್ಕೂಲಿಗೆ ಹೊಸದಾಗಿ ಕಟ್ಟಡವನ್ನು ಕಟ್ಟುತ್ತಿದ್ದಾರೆ.—ಈ ಊರಿನ ಪೊಲೀಸ್ ಅಧಿಕಾರಿಗಳು ಬಹಳ ಮುತುವರ್ಜಿಯಿಂದ ಹೊಸದಾಗಿ ಜಾರಿಗೆ ಬಂದಿರುವ ಸೇರು ತೂಕದ ಬೊಟ್ಟುಗಳನ್ನು ಪ್ರತಿ ಒಂದು ಅಂಗಡಿಯಲ್ಲಿಯೂ ಉಪಯೋಗಿಸುವಂತೆ ಮಾಡಿರುತ್ತಾರೆ. ಪಿಟ್ಟೆ ಸೇರುಗಳ ಉಪಯೋಗವನ್ನು ನಿಲ್ಲಿಸಿದ್ದು ಜನರಿಗೆ ಬಹಳ ಸುಖವಾಗಿದೆ. ಇದರಂತೆಯೇ ಇನ್ನೂ ಶ್ರಮವನ್ನು ವಹಿಸಿ ವೇಣುಗೋಪಾಲಸ್ವಾಮಿ ದೇವಸ್ಥಾನದಲ್ಲಿ ನಡೆಯುವ ಮೂರೆಲೆ ಇಸ್ಪೀಟಾಟವನ್ನು ನಿಲ್ಲಿಸಿಯಾರೆಂದು ಪ್ರಾರ್ಥಿಸುತ್ತೇನೆ. ಇದರಿಂದ ಪ್ರತಿ ನಿತ್ಯವೂ ಬಹಳ ಜಗಳಗಳು ನಡೆಯುತ್ತವೆ. ಹೀಗೇ ಉಪೇಕ್ಷೆ ಮಾಡಿದರೆ ಬಡ ಸಂಸಾರಗಳು ಕೆಡುವುದರಲ್ಲಿಯೂ, ಮಾರಾಮಾರಿಗಳು ನಡೆಯುವುದರಲ್ಲಿಯೂ ಸಂದೇಹವೇ ಇರುವುದಿಲ್ಲ.—ಚಿಕ್ಕಬಳ್ಳಾಪುರದ ರೈಲ್ವೇ ಕಂಪನಿಯವರು ಜಾಗ್ರತೆಯಾಗಿ ರೈಲ್ ಹಾಕುವುದಕ್ಕಾಗಿ ಬಹಳ ಶ್ರದ್ಧೆಯಿಂದ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ.—ಈ ಊರಿನಲ್ಲಿ ಸ್ಥಾಪಿತವಾಗಿರುವ ಶ್ರೀರಾಮ ಮಂದಿರದಲ್ಲಿ ಕಳೆದ ಮಂಗಳವಾರ ಸಪ್ತಾಹಭಜನೋತ್ಸವವನ್ನು ಬಹಳ ವಿಜೃಂಭಣೆಯಿಂದ ಮಾಡಿದರು. ಘಂಟೆಗೆ ಪರಿಕ್ಷೆಯು ಬಹಳ ಚೆನ್ನಾಗಿ ನಡೆಯಿತು. ಈ ಸ್ಥಳದ ಸುತ್ತಲಿನ ಜನರೆಲ್ಲರೂ ಸೇರಿ ಉತ್ಸವಾದಿಗಳನ್ನು ನೋಡಿ ಬಹಳ ಸಂತೋಷಪಟ್ಟರು.

ಅರಸೀಕೆರೆ ತಾ. ಕಲ್ಲುಗುಂಡಿ.—ಇದೇ ತಾಲ್ಲೂಕು ಕಬ್ಬಲಿಗರ ಹಳ್ಳಿ ಕೋಆಪರೇಟಿವ್ ಸೊಸೈಟಿಯ ಮೀಸಿನಿಂಗ್ ಜನರಲ್ ಮೀಟಿಂಗು ಏಪ್ರಿಲ್ ತಾ. ಶನಿವಾರ ಕಲ್ಲುಗುಂಡಿ ಎ. ವಿ. ಸ್ಕೂಲ್ ಕಟ್ಟಡದಲ್ಲಿ ನಡಿಸಲ್ಪಟ್ಟಿತು. ಇದಕ್ಕೆ ಅರಸೀಕೆರೆ ತಾಲ್ಲೂಕು ದೊಡ್ಡ ಮೇಟಿಕುರಿಕೆ ಬಸವೇಶ್ವರ ಸಂಘದ ಡೈರೆಕ್ಟರುಗಳೂ, ದಸರಾ ಮೆಂಬರೂ ಆದ ಮ॥ ಎಂ. ಎಚ್. ಹರಿಯಣ್ಣನವರು ಸೊಸೈಟಿಯ ಸೆಕ್ರೆಟರಿ ಮ. ಲಕ್ಷ್ಮೀನಾರಾಯಣರ ಕೋರಿಕೆಯಂತೆ ದಯಮಾಡಿಸಿದ್ದರು. ಸ್ಕೂಲು ಕಟ್ಟಡವು ಬಹು ರಮ್ಯವಾಗಿ ಅಲಂಕರಿಸಲ್ಪಟ್ಟಿತ್ತು. ಸಭಿಕರು ಕಿಕ್ಕಿರಿಯುವಂತೆ ಸೇರಿದ್ದರು. ಸೊಸೈಟಿ ವಿಷಯವು ಜನಗಳಿಗೆ ತಿಳಿಯದೆ ಇದ್ದುದರಿಂದ ಈ ಸೊಸೈಟಿಯು ಅಷ್ಟು ಅಭಿವೃದ್ಧಿಯನ್ನು ಪಡೆದಿರಲಿಲ್ಲ. ಮ॥ ಎಂ. ಎಚ್. ಹರಿಯಣ್ಣನವರು ಸೊಸೈಟಿ ವಿಷಯವಾದ ಉಪನ್ಯಾಸವನ್ನು ಪಾಮರರಿಗೂ ತಿಳಿಯುವಂತೆ ಬಹು ಸರಳವಾಗಿ ಉಪನ್ಯಾಸ ಮೂಲಕ ತಿಳಿಯಪಡಿಸಿದ್ದರಿಂದ ಮೀಟಿಂಗೂ ನಡೆಯುತ್ತಿದ್ದಾಗಲೇ 100 ಷೇರುಗಳ ವರೆಗೆ ಜಮೆ ಆಯಿತು. ನಂತರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೂ, ಸೊಸೈಟಿಗಳ ರೆಜಿಸ್ಟ್ರಾರ್ ಮ॥ ಎಂ. ಎ. ನಾರಾಯಣಯ್ಯಂಗಾರ್‍ರಿಗೆ ಕೃತಜ್ಞತಾಪೂರ್ವಕವಾದ ವಂದನೆಯೂ ಸಮರ್ಪಿಸಲ್ಪಟ್ಟವು. ಸಭಿಕರಿಗೆ ಹೂವು ಪಾರ್ಸುಪಾರಿ ಹಂಚಲ್ಪಟ್ಟು ಸಭೆಯು ಬರಖಾಸ್ತಾಯಿತು.—ಮಾರನೇ ದಿನ ಪ್ರಾತಃಕಾಲ ಮ॥ ಎಂ. ಎಚ್. ಹರಿಯಣ್ಣನವರು ಕಲ್ಲುಗುಂಡಿ ಸ್ಕೂಲನ್ನು ಪರೀಕ್ಷಿಸಿ ಬಾಲಕರಿಗೆ ಮಿಠಾಯಿ ವಗೈರೆ ತಿಂಡಿ ಹಂಚಿ ಸಂತೋಷಪಡಿಸಿದರು. ಇವರು ದಯಮಾಡಿದ ಕಡೆಗಳಲ್ಲೆಲ್ಲಾ ಸೊಸೈಟಿಗಳ ಅಭಿವೃದ್ಧಿಗೂ, ವಿದ್ಯಾಭಿವೃದ್ಧಿಗೂ ಪ್ರೋತ್ಸಾಹ ಮಾಡುತ್ತಾ ತಮ್ಮ ತನು ಮನ ಧನಗಳನ್ನು ಬಡವರ ಸಹಾಯಕ್ಕಾಗಿ ಉಪಯೋಗಿಸುತ್ತಿರುವುದು ತುಂಬಾ ಶ್ಲಾಘನೀಯವಾಗಿದೆ.

ದೊಡ್ಡಬಾಣಾವಾರ.—ಈ ಊರಿನಲ್ಲಿ ಬಿಸಿಲು ಸಹಿಸಲಶಕ್ಯವಾಗಿದೆ. ಧಾರಣೆವಾಸಿಗಳು ಇನ್ನೂ ತುಟ್ಟಿಯಾಗಿಯೇ ಇರುವುದಲ್ಲದೆ ಸಂತೆಗಳಲ್ಲಿ ಹಿಟ್ಟಿನ ಸೇರು, ತೂಕಗಳ ತೊಂದರೆಗಳು ಹೆಚ್ಚಾಗಿರುವುದರಿಂದ ದಯವುಳ್ಳ ನಮ್ಮ ಸರ್ಕಾರದವರು ಹೊಸದಾಗಿ ಜಾರಿಗೆ ತರಬೇಕೆಂದಿರುವ ಅಳತೆ ಸೇರು, ತೂಕದ ಬಟ್ಟುಗಳನ್ನು ಜಾಗ್ರತೆ ಪ್ರಚಾರಕ್ಕೆ ತಂದು, ಬಡಬಗ್ಗರನ್ನು ಉದ್ಧಾರಮಾಡುವರೆಂದು ಎದುರುನೋಡುತ್ತೇನೆ.—ಮನಕತ್ತೂರು, ಚಿರಿದಕೆರೆ, ಅರಕೆರೆ, ದೇಶಾನಿ, ಈ ಸುತ್ತಮುತ್ತಲಿನ ಗ್ರಾಮಾಂತರಗಳಲ್ಲೆಲ್ಲಾ ಈ ಸಾರಿ 100-200 ಮಕ್ಕಳು ಸಿಡುಬಿನಿಂದ ನರಳುತ್ತಿದ್ದರೂ ತಂದೆತಾಯಿಗಳು ಸಿಡುಬು ಎಬ್ಬಿಸಲು ಭಯಪಟ್ಟು ನಿಷ್ಕಾರಣವಾಗಿ ಮಕ್ಕಳನ್ನು ಮರಣದ ಬಾಯಿಗೆ ಒಪ್ಪಿಸುವುದನ್ನು ನೋಡಿದರೆ ಎಷ್ಟೋ ವ್ಯಸನವಾಗುವುದು. ಇಲ್ಲಿನ ವ್ಯಾಕ್ಸಿನೇಟರು ಹುಚ್ಚೆಗೌಡರು ತುಂಬಾ ಶಾಂತಮನಸ್ಕರಾಗಿ ಹಳ್ಳಿಯ ಜನರಿಗೆಲ್ಲಾ ತಕ್ಕ ತಿಳುವಳಿಕೆಯನ್ನು ಕೊಟ್ಟು ಮಕ್ಕಳಿಗೆ ಎಷ್ಟೋ ಮೆಹನತ್ತಿನಿಂದ ಸಿಡುಬುಹಾಕುತ್ತಾ ನೂರಾರು ಮಕ್ಕಳನ್ನು ಕಾಪಾಡಿದರು. ಗೌರ್ನಮೆಂಟಿನವರು ಮಕ್ಕಳಿಗೆ ಬಲಾತ್ಕಾರದ ಸಿಡುಬಿನ ಕಾನೂನು ಬೇಗನೆ ಈ ಪ್ರಾಂತ್ಯಕ್ಕೆ ತಂದರೆ ತುಂಬಾ ಉಪಕಾರವಾದೀತು.—ಅಲ್ಲದೆ ಗ್ರಾಮಾಂತರಗಳಲ್ಲಿ ಮನೆ ಸನಿಹದಲ್ಲೇ ತಿಪ್ಪೆ ಕಸ ಹಾಕುವುದರಿಂದಲೂ, ಮನೆಯೊಳಗೆ ದನ ಕರುಗಳನ್ನು ಕಟ್ಟಿ ಅವುಗಳ ಸಂಗಡ ತಾವೂ ಮಲಗುವುದರಿಂದಲೂ, ಕುಡಿಯುವ ನೀರಿನಲ್ಲಿ ಮೆಡಿಕಲ್ ಆಫೀಸರು ಔಷಧ ಹಾಕಿದರೂ ಕೂಡ ಮೈ ಕೈ ಕಾಲು ಪಾತ್ರೆ ಪದಾರ್ಥಗಳನ್ನು ತೊಳೆದು ಅದನ್ನೇ ಕುಡಿಯುವುದರಿಂದಲೂ ಕಾಲರಾ ಉಪದ್ರವು ಹೆಚ್ಚಾಗಿ ಹರಡುವುದಕ್ಕೆ ಕಾರಣವಾಗಿದೆ. ಸರಕಾರದವರು ಸ್ಯಾನಿಟೇಷನ್ ವಿಚಾರಕ್ಕೆ ತುಂಬಾ ಗಮನ ಕೊಟ್ಟು ತಕ್ಕ ಏರ್ಪಾಡಿಯನ್ನು ಮಾಡಬೇಕಾಗಿದೆ.—ಅಲ್ಲದೆ ಈ ಊರಿನ ಮ್ಯುನಿಸಿಪಾಲಿಟಿಗೆ ತುಂಬಾ ಗಮನಕೊಡುವುದು ಉತ್ತಮ. ಯಾಕೆಂದರೆ ಈ ಬಾಣಾವಾರವು 700-800 ಮನೆಗಳಿರುವ ಮತ್ತೂ ತುಂಬಾ ವ್ಯಾಪಾರ ನಡೆಯುವ ದೊಡ್ಡ ಗ್ರಾಮವಾದರೂ ಇಲ್ಲಿನ ಬೀದಿಗಳಲ್ಲಿ ರಾತ್ರಿ ಹೊತ್ತು ಒಂದು ಲಾಂಪಿನ ಬೆಳಕಾದರೂ ಇಲ್ಲ. ಜನಗಳು ಪಡುವ ಕಷ್ಟವನ್ನು ಎಷ್ಟೋ ಸಲ ಗೌರ್ನಮೆಂಟಿನವರ ಗಮನಕ್ಕೆ ತಂದರೂ ಇದುವರೆಗೂ ಯಾವ ಪ್ರಯತ್ನವೂ ನಡೆದಿರುವಂತೆ ತೋರಲಿಲ್ಲ. ಈ ಮ್ಯುನಿಸಿಪಾಲಿಟಿ ದೀಪಗಳ ಕೆಲಸವು ಕ್ರಮವಾಗಿ ನಡೆಯಬೇಕಾದರೆ ಇಲ್ಲಿಗೆ ಹತ್ತು ಮೈಲಿ ದೂರದಲ್ಲಿರುವ ಜಾವಗಲ್ಲಿನ ದೊಡ್ಡ ಸಂತೆ ನಡೆಯುವುದಾಗಿಯೂ, ಅಕ್ಕಿ ತೆಂಗಿನಕಾಯಿ ಬೆಲ್ಲ ಮುಂತಾದ ವ್ಯಾಪಾರಕ್ಕೆ ಮುಖ್ಯಸ್ಥಾನವಾಗಿಯೂ ಇರುವುದರಿಂದ ಈ ಮಾರ್ಗದಲ್ಲಿ ಒಂದು ಟೋಲ್ ಗೇಟನ್ನು ಇಟ್ಟು ಉತ್ಪತ್ತಿಮಾಡಿಕೊಳ್ಳಬಹುದು.—ಇಲ್ಲಿನ ಗ. ಕನ್ನಡ ಸ್ಕೂಲಿನಲ್ಲಿರುವ 150 ಹುಡುಗರ ಪೈಕಿ 9 ಹುಡುಗರು ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿದ್ದರು. ಸ್ಕೂಲಿನಲ್ಲಿ ಆಡಳಿತವೂ ದರ್ಜವೂ ತೃಪ್ತಿಕರವಾಗಿಲ್ಲವೆಂದು ಜನಗಳು ಅಭಿಪ್ರಾಯಪಡುವರು.

ವಿದೇಶ ವೃತ್ತಾಂತಗಳು.

ಟೈಟಾನಿಕ್ ಹಡಗಿನಲ್ಲಿ ಕಳೆದ ವರುಷ ಸಾಗರದೊಳಗೆ ಸಿಕ್ಕಿ ಮೃತಪಟ್ಟ ಕರ್ನಲ್ ಆಸ್ಟರ್ ಎಂಬ ಅಮೇರಿಕದ ಕೋಟ್ಯಾಧೀಶ್ವರನ ಆಸ್ತಿಯು 27 ಕೋಟಿ 10½ ಲಕ್ಷ ರೂಪಾಯಿ ಎಂದು ತಿಳಿದು ಬರುತ್ತದೆ.

ಸುಮಾರು 2,000 ಮಂಗೋಲ್ ಸೈನಿಕರು ಚೀನಕ್ಕೂ ಮಂಗೋಲಿಯಾ ವಿಗೂ ಮಧ್ಯೆ ಎಲ್ಲೆಕಟ್ಟಿನ ಬಳಿ ಉಗ್ರಾಪಟ್ಟಣದ ಹೊರಗಡೆ ದಾಳ್ಯಹಾಕಿಕೊಂಡಿದ್ದ 700 ಚೀಣಾ ಸೈನಿಕರ ಮೇಲೆ ಬಿದ್ದು ಬಹು ಕಠಿಣವಾಗಿ ಕಾದಾಡಿ ಚೀಣಿಯರನ್ನು ಸಂಪೂರ್ಣವಾಗಿ ನಾಶಮಾಡಿದರೆಂದು ತಂತಿವರ್ತಮಾನ ಬಂದಿದೆ.

ಲಂಡನ್ ಪಟ್ಟಣದಲ್ಲಿರುವ ಲೋಕಪ್ರಸಿದ್ಧವಾದ ಇಂಗ್ಲೆಂಡ್ ಬ್ಯಾಂಕಿನೊಳಗೆ ಒಂದು ಕ... ದ ಬಳಿಯಲ್ಲಿ ಒಂದು ಸಿಡಿಮದ್ದಿನ ಗುಂಡು ಕಳೆದ ವಾರ ಅಕಸ್ಮಾತ್ತಾಗಿ ಸಿಕ್ಕಿ ತುಂಬಾ ಗಾಬರಿಯನ್ನುಂಟುಮಾಡಿತು. ಅದನ್ನು ಪೊಲೀಸಿನವನು ಬಹು ಜಾಗರೂಕತೆಯಿಂದ ಎತ್ತಿಕೊಂಡುಹೋಗಿ ನೀರಿನಲ್ಲಿ ಹಾಕಿಬಿಟ್ಟನು. ಅದರಲ್ಲಿ ಒಂದು ಗಡಿಯಾರ, ಮದ್ದು, ವಿದ್ಯುಚ್ಛಕ್ತಿಯ ಯಂತ್ರ, ಇವೆಲ್ಲಾ ಇದ್ದವು.

ಅಮೇರಿಕದ ನೈಋತ್ಯ ಭಾಗಗಳಲ್ಲಿರುವ ಕ್ರೈಸ್ತ ಭಕ್ತರಿಗೋಸ್ಕರ ಒಂದು ನವೀನವಾದ ದೇವಾಲಯವನ್ನು ಕಟ್ಟಲಾರಂಭಿಸಿದ್ದಾರೆ. ಈ ದೇವಾಲಯವನ್ನು ಒಂದು ಮೋಟಾರ್‌ಗಾಡಿಯು ಸ್ಥಳದಿಂದ ಸ್ಥಳಕ್ಕೆ ಸಾಗಿಸಿಕೊಂಡುಹೋಗುತ್ತದೆ. ಇದಕ್ಕೆಲ್ಲಾ ಸುಮಾರು 27,000 ರೂಪಾಯಿ ಖರ್ಚಾಗುವುದು. ಬೋಧಕರು ಅದರಲ್ಲಿ ಕುಳಿತು ಬೇಕಾದ ಗ್ರಾಮಗಳಿಗೆ ಹೋಗಿ ಅಲ್ಲಿ ದೇವಾಲಯವನ್ನು ನಿಲ್ಲಿಸಿಕೊಂಡು ಅದರೊಳಕ್ಕೆ ಕ್ರೈಸ್ತಭಕ್ತರನ್ನು ಬರಮಾಡಿಕೊಂಡು, ಮತತತ್ವಗಳನ್ನು ಪ್ರಚಾರ ಮಾಡಿ ಬೋಧಿಸುತ್ತಾರೆ.

ಮೆಕ್ಸಿಕೋ ರಾಜ್ಯದಲ್ಲಿ ದಂಗೆಕೋರರು ಕಾರ್ಬಾಸ್ ಎಂಬ ಸ್ಥಳಕ್ಕೆ ನುಗ್ಗಿ ಅಲ್ಲಿ ನದಿಗೆ ಅಡ್ಡಗಟ್ಟೆ ಹಾಕದಂತೆ ತಡೆದು 25,000 ದ್ರವ್ಯವನ್ನು ಪ್ರತಿಫಲ ಕೊಡಬೇಕೆಂದೂ, ಕೊಡದಿದ್ದರೆ ಅಲ್ಲಿ ಕೆಲಸಮಾಡಿಸುತ್ತಿರುವ ಇಂಗ್ಲಿಷ್ ಇಂಜನಿಯರುಗಳನ್ನು ಕೊಂದುಬಿಡುತ್ತೇವೆಂದು ಗಾಬರಿಪಡಿಸಿದ್ದಲ್ಲದೆ ಒಬ್ಬ ಇಂಗ್ಲಿಷ್ ಮ್ಯಾನೇಜರನ್ನು ಒಂದು ಕತ್ತಿಗೆ ಕಟ್ಟಿ, ಬೆಟ್ಟದಿಂದ ಕೆಳಗೆ ದೊಬ್ಬಿಬಿಡುತ್ತೇವೆಂದೂ ಹೆದರಿಸಿದರು. ಕಡೆಗೆ ಆ ಕಾಮಗಾರಿ ಕಂಪನಿಯವರು ಆ ದುಷ್ಟಜನರಿಗೆ 10,000 ದ್ರವ್ಯವನ್ನು ಪಾವತಿಮಾಡಿದರು. ಅವರು ಇದನ್ನು ತೆಗೆದುಕೊಂಡು, ಪರದೇಶೀಯರ ಮನೆಗಳನ್ನು ಕೊಳ್ಳೆಹೊಡೆದು ಹೊರಟುಹೋದರು.

ಅಮೇರಿಕಕ್ಕೆ ಸೇರಿದ ಕ್ಯಾಲಿಫೋರ್ನಿಯಾ ಸಂಸ್ಥಾನದವರು ಆ ಸಂಸ್ಥಾನದಲ್ಲಿ ಜಪಾನ್‌ನವರು ಭೂಸ್ಥಿತಿಯನ್ನು ಸಂಪಾದಿಸಿಕೊಳ್ಳಕೂಡದೆಂಬ ಅರ್ಥಕ್ಕೆ ಒಂದು ಕಾನೂನು ಮಾಡಿಕೊಂಡರೆಂದು ತಿಳಿಸಿದೆವಷ್ಟೆ. ಈ ಕಾನೂನು ಪಕ್ಷಪಾತವುಳ್ಳದ್ದಾಗಿರೋಣದರಿಂದ ಅದನ್ನು ರದ್ದು ಮಾಡಿಸಬೇಕೆಂದೂ, ಇಲ್ಲವಾದರೆ ಅದು ಇತರ ಅನ್ಯದೇಶಗಳ ಪ್ರಜೆಗಳಿಗೂ ಅನ್ವಯಿಸುವಂತೆ ಬದಲಾವಣೆಯಾಗಬೇಕೆಂದೂ ಜಪಾನ್ ಗವರ್ನ್‌ಮೆಂಟಿನವರು ಕುತೂಹಲಪಟ್ಟು ಸಾಹಸಪಡಲಾರಂಭಿಸಿದ್ದಾರೆ. ಜಪಾನ್ ರಾಜಧಾನಿಯಾದ ಟೋಕಿಯೋ ನಗರದ ಪ್ರತಿನಿಧಿ ಸಭೆಯಲ್ಲಿ ಕಳೆದ ಶುಕ್ರವಾರ ರಾತ್ರಿ ಈ ವಿಚಾರವು ಬಹಳ ಕಠಿಣವಾಗಿ ಚರ್ಚೆಯಾಯಿತು. ಇದರ ಪರ್ಯವಸಾನವೇನೋ ಮುಂದೆ ತಿಳಿಯತಕ್ಕದ್ದಾಗಿದೆ.

ಅಮೇರಿಕದಲ್ಲಿ ಸಂಯುಕ್ತಸಂಸ್ಥಾನಗಳ ರಾಜಧಾನಿಯಾದ ನ್ಯೂಯಾರ್ಕ್ ಪಟ್ಟಣದಲ್ಲಿ ಇನ್ನುಮೇಲೆ ಆಕಾಶವನ್ನು ಕೊರೆದುಕೊಂಡುಹೋಗುವಂತೆ ಅನೇಕ ಅಂತಸ್ತುಗಳುಳ್ಳಂಥಾ ಕಟ್ಟಡಗಳನ್ನು ಯಾರೂ ಕಟ್ಟದಂತೆ ಮಾಡಬೇಕೆಂದು ಒಂದು ಕಮಿಟಿಯವರು ತನಿಖೆಗಳನ್ನು ನಡಿಸುತ್ತಿದ್ದಾರೆ. ಆ ಪಟ್ಟಣದಲ್ಲಿ ಮನ್‌ಹಾಟನ್ ಎಂಬ ಮೊಹಲ್ಲೆಯೊಳಗೆ 30ಕ್ಕಿಂತಲೂ ಹೆಚ್ಚು ಉಪ್ಪರಿಗೆಗಳುಳ್ಳ ಒಂಭತ್ತು ಕಟ್ಟಡಗಳೂ, 20ಕ್ಕಿಂತ ಹೆಚ್ಚು ಉಪ್ಪರಿಗೆಗಳುಳ್ಳ ಅರವತ್ತು ಕಟ್ಟಡಗಳೂ, 13ಕ್ಕಿಂತ ಹೆಚ್ಚು ಉಪ್ಪರಿಗೆಗಳುಳ್ಳ 1,160 ಕಟ್ಟಡಗಳೂ ಇರುತ್ತವೆ. ಇಂಥಾ ಕಟ್ಟಡಗಳನ್ನು ಕಾನೂನ್ ಮಾಡಿ ತಡೆಯದಿದ್ದರೆ ಇನ್ನು ಹತ್ತು ವರುಷದೊಳಗಾಗಿ 30 ರಿಂದ 40 ಅಂತಸ್ತುಗಳುಳ್ಳ ಕಟ್ಟಡಗಳೇ ವಿಶೇಷವಾಗಿ ನಿರ್ಮಾಣವಾಗುವವೆನ್ನುವುದಕ್ಕೆ ಸಂಶಯಕಾಣುವುದಿಲ್ಲ.

ಇಂಗ್ಲಾಂಡಿನಲ್ಲಿ ಸ್ತ್ರೀಯರಿಗೆ ಓಟ್ ಕೊಡುವ ಅಧಿಕಾರವನ್ನು ವಹಿಸುವ ವಿಷಯದಲ್ಲಿ ಒಂದು ಮಸೂದೆ ಕಾನೂನು ತಯಾರಾಗಿ ಜೂನ್ ತಿಂಗಳಲ್ಲಿ ಪಾರ್ಲಿಮೆಂಟ್ ಸಭೆಯೊಳಗೆ ಚರ್ಚೆಗೆ ತರಲ್ಪಡುವುದೆಂದು ಮಂತ್ರಿಶ್ರೇಷ್ಠರಾದ ಅಸ್ಕ್ವಿತ್‌ರವರು ತಿಳಿಸಿದರು. ಅಂಥಾ ಹಕ್ಕು ಕೊಟ್ಟೇ ತೀರಬೇಕೆಂದೂ, ಅದನ್ನು ಕೊಡುವತನಕ ಸುಮ್ಮನಾಗುವುದಿಲ್ಲವೆಂದೂ ಸ್ತ್ರೀ ಸಮಾಜದವರು ಉಪನ್ಯಾಸಮಾಡುತ್ತಾ, ದುರಾಗತ ಕೃತ್ಯಗಳನ್ನು ನಡಿಸುತ್ತಾ ಬಂದಿರುತ್ತಾರೆ. ಕಳೆದ ವಾರ ಅಂಥಾ ಗುಂಪಿಗೆ ಸೇರಿದವರ್‍ಯಾರೋ ಒಬ್ಬ ಪಾರ್ಲಿಮೆಂಟ್ ಮೆಂಬರ ಮನೆಗೆ ಬೆಂಕಿಹಾಕಿ ಸುಮಾರು 6,000 ಪೌಂಡಿನ ಆಸ್ತಿಯನ್ನು ನಷ್ಟಪಡಿಸಿದರು. ಈ ಸಮಾಜದವರು ಯಾವ ಸ್ಥಳದಲ್ಲೂ ಸೇರಿ ಉಪನ್ಯಾಸಗಳನ್ನು ಮಾಡದಂತೆ ಪೋಲೀಸಿನವರು ಬುಸ್ತುವಾರಿ ಇಟ್ಟಿದ್ದಾರೆ.

ಬೆಲ್ಜಿಯಂ ರಾಜ್ಯದಲ್ಲಿ ಕೂಲಿಕಾರರು ದಾಂಧಲೆ ನಡಿಸಿ ಕೆಲಸಗಳಿಗೆ ಹೋಗದೆ ನಿಂತುಬಿಟ್ಟಿದ್ದಾರೆ. ಅವರೆಲ್ಲಾ ತಮ್ಮ ಕೂಲೀ ದರಗಳನ್ನು ಹೆಚ್ಚಿಸಿಕೊಡಬೇಕೆಂದೂ, ಪಾರ್ಲಿಮೆಂಟಿಗೆ ಮೆಂಬರುಗಳನ್ನು ಚುನಾಯಿಸುವಂಥಾ ಅಧಿಕಾರವನ್ನು ಪ್ರತಿ ಒಬ್ಬ ಗಂಡಸಿಗೂ ಕೊಡಬೇಕೆಂದೂ ಕೇಳಲಾರಂಭಿಸಿರುವರು. ಬೇರೆ ಬೇರೆ ಪಟ್ಟಣಗಳಲ್ಲಿ ಕೆಲಸಗಳಿಗೆ ಹೋಗದೆ ನಿಂತುಬಿಟ್ಟಿರುವವರ ಸಂಖ್ಯೆ ಎಷ್ಟೆಂದರೆ—ಬ್ರಸಲ್ಸ್ ಪಟ್ಟಣದಲ್ಲಿ 21,000 ಜನರು, ಘೆಂಟನಲ್ಲಿ 19,000, ಲೀಜ್ 65,000, ಚಾರ್ಲೆರಾಯಿ 75,000, ಮಾನ್ಸ್ 52,000 ಬೆಲ್ಜಿಯಂ ಮಧ್ಯ ಪ್ರಾಂತ್ಯಗಳು 45,000 ; ಒಟ್ಟು 3,72,000 ಜನರು ತಮ್ಮ ತಮ್ಮ ಕೆಲಸಗಳ ಮೇಲೆ ಹಾಜರಾಗದೆ ನಿಂತುಬಿಟ್ಟಿರೋಣದರಿಂದ ಆ ರಾಜ್ಯದಲ್ಲಿ ಆಮದುರಫ್ತು, ವ್ಯಾಪಾರ, ಕಾರ್ಖಾನೆಗಳು, ಇವೆಲ್ಲಾ ಬಹಳ ಕಷ್ಟಕ್ಕೆ ಗುರಿಯಾಗಿರುತ್ತವೆ.

ಫ್ರಾನ್ಸ್ ಸಂಸ್ಥಾನದ ರಾಜಧಾನಿಯಾದ ಪ್ಯಾರಿಸ್ ನಗರದಲ್ಲಿ ಒಬ್ಬ ಕ್ರೂರನಾದ ಹುಚ್ಚನು ಒಂದು ಬಂಗಲೆಯ ಕೊಠಡಿಯೊಳಗೆ ಸೇರಿಕೊಂಡು ಬಹಳ ಕಷ್ಟಪಡಿಸಿದನು. ಅವನನ್ನು ಹಿಡಿಯಬೇಕೆಂದು ಪೊಲೀಸಿನವರು ತುಂಬಾ ಸಾಹಸಪಟ್ಟರು. ಕಡೆಗೆ ಇಬ್ಬರು ಪೊಲೀಸ್ ಇನ್ಸ್‌ಪೆಕ್ಟರುಗಳು ನವೀನವಾದ ಪಿಸ್ತೂಲುಗಳನ್ನು ಚಾವಣಿ ಒಂದು ರಂಧ್ರದ ಮೂಲಕ ಆ ಹುಚ್ಚನಿಗೆ ಗುರಿಕಟ್ಟಿ ಹೊಡೆದಾಗ ಆ ಪಿಸ್ತೂಲಿನಲ್ಲಿ ಗೋಲಿಗೆ ಬದಲಾಗಿ ಇದ್ದ ಉಸಿರುಕಟ್ಟುವ ಹೊಗೆಯು ಅವನಿಗೆ ಬಡಿದು ಬಹಳವಾಗಿ ಸೀನುಹುಟ್ಟಿತು. ಸ್ವಲ್ಪ ಹೊತ್ತಿನಲ್ಲೇ ಅವನು ಅಳುತ್ತಾ, ಅರ್ಧಶ್ವಾಸಬಿಡಲಾರಂಭಿಸಿದನು. ಕೂಡಲೇ ಪೊಲೀಸಿನವರು ಒಳಕ್ಕೆ ನುಗ್ಗಿ ನಿಶ್ಶಕ್ತನಾಗಿದ್ದ ಆ ಹುಚ್ಚನನ್ನು ಹಿಡಿದು ಕೈಕೋಳಹಾಕಿ ಕರೆದುಕೊಂಡುಹೋದರು. ದುಷ್ಟರನ್ನು ಹಿಡಿಯುವುದಕ್ಕೆ ಇದೊಂದು ಹೊಸ ಉಪಾಯದ ಪಿಸ್ತೂಲು ನಿರ್ಮಾಣವಾಗಿರುತ್ತದೆ.

ಟೈಟಾನಿಕ್ ಎಂಬ ಭಾರೀ ಹಡಗು ಇಂಗ್ಲಾಂಡಿನಿಂದ ಅಮೇರಿಕಕ್ಕೆ ಹೋಗುತ್ತಾ ಮಹಾಸಾಗರದಲ್ಲಿ ಮುಳುಗಿಹೋಗಿ ಪ್ರಪಂಚದಲ್ಲೆಲ್ಲಾ ಮಹತ್ತಾದ ದುಃಖವನ್ನುಂಟುಮಾಡಿ ಒಂದು ವರುಷವಾಯಿತಷ್ಟೆ. ಆ ಹಡಗಿನ ಕಂಪನಿಯವರ ಮೇಲೆ ಇದುವರೆಗೆ 1,30,07,491 ಡಾಲರ್ (ಡಾಲರ್ ಒಂದಕ್ಕೆ ಸುಮಾರು 3½ ರೂಪಾಯಿ) ಪಾವತಿಮಾಡಿಕೊಡಬೇಕೆಂದು 810 ಜನರು ದಾವಾ ಮಾಡಿರುತ್ತಾರೆ. ಈ ಅನಾಹುತದ ಪ್ರಶ್ನೋತ್ತರವನ್ನು ತನಿಖೆಮಾಡಿಸಿದ್ದಕ್ಕೆ ಇಂಗ್ಲಿಷ್ ಗವರ್ನ್‌ಮೆಂಟಿಗೆ 3,08,235 ರೂಪಾಯಿ ಖರ್ಚು ತಗಲಿತು. ಈ ಅನಾಹುತದಲ್ಲಿ ಸಿಕ್ಕಿ ಮೃತಪಟ್ಟವರ ರಕ್ತಸಂಬಂಧಿಗಳಿಗೆ ಧರ್ಮಫಂಡಿನಿಂದ ಇದುವರೆಗೆ 1,39,405 ರೂಪಾಯಿ ಹಂಚಿಕೊಟ್ಟರು. ಈಗ ಈ ಫಂಡಿನಲ್ಲಿ ಉಳಿದಿರುವ 37,56,310 ರೂಪಾಯಿನಲ್ಲಿ ನಿರಾಶ್ರಿತರಾದವರಿಗೆ 3,30,000 ರೂಪಾಯಿ ವರುಷಾಶನಗಳು ಸಲ್ಲಬೇಕಾಗಿರುತ್ತವೆ.

ಕೆಲವು ದಿವಸಗಳ ಕೆಳಗೆ ಜರ್ಮನಿಯ ಕೆಲವು ಗಂಡಸರೂ ಹೆಂಗಸರೂ ಒಂದು ವಿಮಾನಯಂತ್ರದಲ್ಲಿ ಕುಳಿತು ಅಂತರಿಕ್ಷದಲ್ಲಿ ಸಂಚಾರಮಾಡುತ್ತಿದ್ದಾಗ ಏನೋ ಒಂದು ಅಪಾಯ ಸಂಭವಿಸಿ, ಯಂತ್ರವು ಭೂಮಿಗೆ ಇಳಿದುಬಿಟ್ಟಿತು. ಆ ಸ್ಥಳವು ನಾನ್ಸಿ ಎಂಬುದು. ಇದು ಫ್ರೆಂಚರಿಗೆ ಸೇರಿದ್ದು. ಜರ್ಮನಿಯ ಈ ಏಳು ಮಂದಿ ಗಂಡಸರನ್ನೂ ಅವರ ಕೂಡ ಇದ್ದ ಕೆಲ...

ಫ್ರೆಂಚರು ಹಿಡಿದು ಫ್ರೆಂಚ್ ಸೈನ್ಯಾಧಿಪತಿಗಳ ಎದುರಿನಲ್ಲಿ ನಾನಾಬಗೆಯಿಂದ ಅವಮಾನಪಡಿಸಿ ಅವರ ಟೋಪಿಗಳನ್ನು ಕಿತ್ತಸೆದು, ಫ್ರೆಂಚ್ ಸೈನಿಕರಿಗೆ ಅವರಿಂದ ಸಲಾಂ ಮಾಡಿಸಿ, ಬಳಿಕ ಅವರನ್ನೆಲ್ಲಾ ಬಲಾತ್ಕಾರದಿಂದ ಒಂದು ರೈಲ್ ಗಾಡಿಯೊಳಕ್ಕೆ ದೊಬ್ಬಿ, ಬಸ್ಸು, ಅವರ ಮೇಲೆ ಉಗುಳಿದರೆಂದೂ ಕಡೆಗೆ ಸ್ಟೇಷನ್ ಮಾಸ್ಟರವರು "ನಿಮಗಾದ ತಮಾಷ ಇಲ್ಲಿಗೆ ಸಾಕು" ಎಂದು ಹೇಳಿ ರೈಲ್‌ಗಾಡಿಯನ್ನು ಸ್ಟೇಷನ್ನಿಂದ ಮುಂದಕ್ಕೆ ಬಿಡಿಸಿದರೆಂದೂ ಆ ಜರ್ಮನರ ಪೈಕಿ ಇಬ್ಬರು ತಮ್ಮ ಅಧಿಪತಿಗಳಿಗೆ ಹೇಳಿಕೊಂಡಿದಾರೆ ಈ ವಿಚಾರವಾಗಿ ಫ್ರೆಂಚ್ ಮತ್ತು ಜರ್ಮನಿ ಸರ್ಕಾರಗಳಿಗೆ ಕಾಗದ ಪತ್ರಗಳು ನಡೆಯುತ್ತಿರುವವು ಜರ್ಮನಿಯ ಕೆಲವರೂ ವರ್ತಮಾನ ಪತ್ರಿಕೆಗಳೂ ಫ್ರೆಂಚರಮೇಲೆ ಇದಕ್ಕಾಗಿ ಜರ್ಮನಿಯವರು ಯುದ್ಧಕ್ಕೆ ಹೊರಡಬೇಕೆಂದು ಎತ್ತಿಕಟ್ಟಲಾರಂಭವಾಗಿದೆ

ಸ್ಪೆಯಿನ್ ರಾಜ್ಯದ ಅಲ್ಫಾನ್ಸೋ ದೊರೆಯವರು ಕಳೆದ ತಾ. 13 ನೇ ಭಾನುವಾರ ರಾಜಧಾನಿಯಾದ ಮ್ಯಾಡ್ರಿಡ್ ಪಟ್ಟಣದ ಯೊರಪಾರ್ಶ್ವಕ್ಕೆ ದಯಮಾಡಿ ಮೈದಾನದಲ್ಲಿ ತಮ್ಮ ಸೈನಿಕರು ಮಾಡಿದ ಕಸರತ್ತು ಕವಾತು ಮುಂತಾದ ಸಾಧನಗಳನ್ನು ಪರಾಂಬರಿಸಿ ಕುದುರೆ ಸವಾರಿ ಮಾಡಿಕೊಂಡು ಅರಮನೆಗೆ ವಾಪಸು ಬರುತ್ತಿದ್ದಾಗ ಸಾವಿರಾರು ಪ್ರಜೆಗಳು ರಸ್ತೆಯ ಉದ್ದಕ್ಕೂ ನಿಂತು ನೋಡುತ್ತಿದ್ದರು ದೊರೆಯವರು ಬ್ಯಾಂಕ್ ಬಂಗಲೆಯ ಸಮೀಪಕ್ಕೆ ಬರುವಷ್ಟರಲ್ಲಿ ನೋಟ ನೋಡುತ್ತಿದ್ದ ಪ್ರಜೆಗಳ ಗುಂಪಿನಿಂದ ಸಾಂಚೇಸ್ ಎಂಬೊಬ್ಬ ಮನುಷ್ಯನು ಆತುರದಿಂದ ನುಗ್ಗಿಹೋಗಿ ದೊರೆಯವರು ಕುಳಿತಿದ್ದ ಕುದುರೆಯ ಲಗಾಮನ್ನು ಎಡಗೈಯಿಂದ ಹಿಡಿದು ನಿಲ್ಲಿಸಿ, ಬಲಗೈಯಿಂದ ಪಿಸ್ತೂಲನ್ನು ಬಾರಿಮಾಡಿ ಮೂರು ಗುಂಡುಗಳನ್ನು ಅವರಿಗೆ ಗುರಿಕಟ್ಟಿ ಹೊಡೆದನು ಕುದುರೆಯನ್ನು ನಿಲ್ಲಿಸಿದ ಕೂಡಲೇ ದೊರೆಯವರಿಗೆ ಅವನ ಉದ್ದೇಶವು ಗೊತ್ತಾದದ್ದರಿಂದ ಅವರು ಕುದುರೆಯನ್ನು ಹಿಂದಕ್ಕೆಳೆದುಕೊಂಡರು ಅವನು ಹೊಡೆದ ಮೂರು ಗುಂಡುಗಳ ಪೈಕಿ ಒಂದಾದರೂ ಅವರಿಗೆ ತಗುಲದೆ ಹೋಯಿತು ಕುದುರೆಯು ಮಾತ್ರ ಏಟುತಿಂದು ಬಿದ್ದುಕೊಂಡಿತು ನೋಟಕರ ಮೇಲೆ ಕಾವಲು ನಿಂತಿದ್ದ ಒಬ್ಬ ಪೋಲೀಸಿನವನು ತಕ್ಷಣವೇ ನುಗ್ಗಿ ಹೋಗಿ ಆ ಕ್ರೂರಾತ್ಮನನ್ನು ಹೊಡೆದು ನೆಲದ ಮೇಲೆ ಒತ್ತಿಹಿಡಿದುಕೊಂಡನು. ಅವನು ಇನ್ನೆರಡು ಗುಂಡುಗಳನ್ನು ಹೊಡೆದನು. ಪೋಲೀಸಿನವನು ಅವನ ಪಿಸ್ತೂಲನ್ನು ಕಿರಿದುಮಾಡಿಬಿಟ್ಟದ್ದರಿಂದ ಯಾರಿಗೂ ಅಪಾಯವೇನೂ ಸಂಭವಿಸಲಿಲ್ಲ ದೊರೆಯವರು ಸ್ವಲ್ಪವಾದರೂ ಗಾಬರಿಯನ್ನಾಗಲಿ ಕಳವಳವನ್ನಾಗಲಿ ಪಡದೆ ಶಾಂತಚಿತ್ತರಾಗಿ ಅಲ್ಲಿಂದ ಅರಮನೆಗೆ ತೆರಳಿದರು ಈ ಎರಡನೇ ಗಂಡಾಂತರದಿಂದ ಪಾರಾದ ಈ ದೊರೆಯವರನ್ನು ಅವರ ಪ್ರಜೆಗಳೂ, ಪರರಾಷ್ಟ್ರಗಳವರೂ ಕೊಂಡಾಡುತ್ತಿದಾರೆ

ಸನ್ ೧೮೭೩ ರಿಂದ ೧೯೧೩ ವರೆಗೆ

ಕಾಲದ ಪರೀಕ್ಷೆ !

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 3-17

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಅಕ್ರಮಗಳು ; ನಾನಾ ತರದ ಕೆಮ್ಮಲು ,

ಸಕಲವಿಧ ಕ್ಷಯಗಳು , ಮಾಂಸಪಿಂಡಗಳ ಕ್ಷೀಣತೆ ,

Always get the Emulsion with this mark—the Fishman—the mark of the "Scott" process!

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಆಹಾರದಲ್ಲಿ ಅರುಚಿ ಇವೆಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವು ಇದೇ

ಕೈನೋಕದೆ ತಯಾರಾದದ್ದು.

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ನಿನಗೆ ಮೈ ಸ್ವಸ್ಥವಿಲ್ಲವೋ ?

ನನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನನಗೆ ಯಾವ ನೋವೇ ಉಂಟಾಗಿರಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೊ,

(೧೨ ಆಣೆ ಬುಡ್ಡಿ ಪರಿಮಾಣ)

ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ನುಂಗಿಬಿಡು ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲ ಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು ಮಲಬಂಧವೆಂಬುವದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುತ್ತವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶದ ರೋಗ, ಪಿತ್ಥ, ಪಿತ್ತಜ್ವರ; ಅಜೀರ್ಣ, ಅಗ್ನಿಮಾಂದ್ಯ, ಗಾಬರಿ, ಅಶಕ್ತಿ, ಎದೆಯು ತಲ್ಲಣಿಸುವುದು, ತಲೆತಿರುಗುವುದು, ತಲೆನೋವು; ಹೊಟ್ಟೆಯುಬ್ಬರ, ಮೂತ್ರಕೋಶದ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಷವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [12 11]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವವು, ಅಥವಾ ಡೋನ್, ಪಿ ಒ ಪೆಟ್ಟಿ ೨೦, ಬೊಂಬಾಯಿ—ಇವರಲ್ಲಿ ದೊರೆಯುತ್ತವೆ.

ಪೂರ್ತಿಯಾಗಿ ಓದಿ ನೋಡಿರಿ !

ಅತಿಶಯವಾದ್ದು ಅಪೂರ್ವವಾದ್ದು ! ಆಶ್ಚರ್ಯವಾದ್ದು !!

ಬೆಳ್ಳಿಯ ಗಿಲ್ಟ್ ದ್ರಾವಕ.

ಬೆಳ್ಳಿಯ ಗಿಲ್ಟ್ ಮಾಡತಕ್ಕ ದ್ರಾವಕ ಸೀಸೆ 1 ಕ್ಕೆ ಬೆಲೆ ೦ ೮ ೦ 1 ಸೀಸೆಗೆ 1 4 0 ನಾವು ಸಾಧಾರಣವಾಗಿ ಈ ದ್ರಾವಕವನ್ನು ಎಲ್ಲಾ ವಿಧವಾದ ಸಾಮಾನುಗಳಿಗೂ ಬಹಳ ಸುಲಭವಾಗಿ ಬೆಳ್ಳಿಯ ಮುಲಾಮನ್ನು ಹಚ್ಚಬಹುದು ಹ್ಯಾಗೆಂದರೆ ಯಾವ ಸಾಮಾನಿಗೆ ಮುಲಾಮನ್ನು ಹಚ್ಚಬೇಕೋ ಅದನ್ನು ಶುದ್ಧಿಮಾಡಿ ಒಂದು ಬೊಟ್ಟು ದ್ರಾವಕವನ್ನು ಹಾಕಿ ಉಜ್ಜಿದರೆ ಕೂಡಲೆ ಬೆಳ್ಳಿಯಂತೆ ಆಗುವುದು ಇನ್ನು ಈ ದ್ರಾವಕವು ಚೇಳು, ಹಾವು, ಚೇಳ್ಳು, ಇಲಿ, ಝರಿ, ಜಂತು, ಮುಂತಾದವು ಕಚ್ಚಿದರೆ ಪ್ರಯೋಗಿಸಬಹುದು ಮೇಲ್ಕಂಡವುಗಳು ಕಚ್ಚಿದ ಸ್ಥಳಕ್ಕೆ ಒಂದು ಬೊಟ್ಟು ದ್ರಾವಕವನ್ನು ಬಿಟ್ಟು ಉಜ್ಜಿದರೆ ವಿಷವು ಹೊರಗಾಗುವುದು ನವೆ, ದಮ್ಮು, ಗಜಕರ್ಣ, ತಾಮರೆ, ಈ ಮುಂತಾದವುಗಳು ಇದ್ದ ಸ್ಥಳಕ್ಕೆ 1 ಬೊಟ್ಟು ತೆಂಗಿನೆಣ್ಣೆಯಲ್ಲಿ 2 ಬೊಟ್ಟು ದ್ರಾವಕವನ್ನು ಬಿಟ್ಟು ಕಲಸಿ ಹಚ್ಚಿದರೆ ಸಂಪೂರ್ಣವಾಗಿ ಹೊರಟುಹೋಗುವುದು ಇದು ಪ್ರತಿಯೊಬ್ಬರ ಮನೆಯಲ್ಲಿಯೂ ಮಿಡಿತವಾಗಿರಬೇಕು

ಸಕ್ಕರೆ ಬಿಲ್ಲೆಗಳು.

ನೂತನವಾಗಿ ಇಸತಾರೇ ಇಂಗ್ಲೆಂಡಿನಿಂದ ಬಂದಿರತಕ್ಕ ಸಕ್ಕರೆ ಬಿಲ್ಲೆಗಳು ಬಾಟ್ಲಿ 1 ಕ್ಕೆ ಬೆಲೆ ರೂಪಾಯಿ 1 ಸಕ್ಕರೆಗಿಂತ 300 ಪಾಲು ಸಿಹಿಯಾಗಿರತಕ್ಕದ್ದು ಒಂದು ಬಟ್ಟಲು ಅಳತೆ ಕಾಫಿಗೆ 1 ಬಿಲ್ಲೆ ಹಾಕಿದರೆ ಸಾಕು ಸಾಧಾರಣವಾದ ಸಕ್ಕರೆಯನ್ನು ಉಪಯೋಗಿಸುವುದರಲ್ಲಿ ಮಧುಮೂತ್ರರೋಗ ಮತ್ತು ಇನ್ನು ಅನೇಕ ವಿಧವಾದ ರೋಗಗಳು ಉಂಟಾಗುವುದು ಅನೇಕ ಜನಗಳು ಮೇಲ್ಕಂಡ ರೋಗಗಳಿಗೆ ಹೆದರಿ ಸಕ್ಕರೆ ಇಲ್ಲದೇನೇ ಕಾಫಿ, ಟೀ ಎಂಬ ಮುಂತಾದವುಗಳ ದ್ರಾವಕವನ್ನು ಕುಡಿಯುತ್ತಾರೆ ಜನಗಳ ದೇಹ ಆರೋಗ್ಯಕ್ಕೋಸ್ಕರ ಸಕ್ಕರೆ ಬಿಲ್ಲೆಗಳನ್ನು ತರಿಸಿದ್ದೇವೆ ಇದನ್ನು ಉಪಯೋಗಿಸುವುದರಿಂದ ಮಲಬಂಧನವನ್ನು ಹೋಗಲಾಡಿಸಿ ಜೀರ್ಣಶಕ್ತಿಯನ್ನುಂಟುಮಾಡಿ ದೇಹದಲ್ಲಿರತಕ್ಕ ರೋಗಗಳನ್ನು ಹೋಗಲಾಡಿಸಿ ರಕ್ತವೃದ್ಧಿಯನ್ನುಂಟುಮಾಡಿ ದೇಹಕ್ಕೆ ಬಲವನ್ನೂ ಕಾಂತಿಯನ್ನುಂಟುಮಾಡುತ್ತದೆ ನಾವುಗಳು ಈಗ ಮೊದಲನೇ ದಫೆ ಕೊಂಚವಾಗಿ ತರಿಸಿದ್ದೇವೆ ಬಹಳ ಶೀಘ್ರದಲ್ಲಿ ಬರೆದು ತರಿಸಿಕೊಳ್ಳಿ [31-1]

ನಮ್ಮ ವಿಳಾಸ— ಚಂದ್ರ ಮತ್ತು ಕಂಪನಿ,
12, ಏಕಾಂಬರ ಅಗ್ರಹಾರಂ, ಪಾರ್ಕ್ ಟೌನ್, ಮದರಾಸ್

ವಿಶೇಷ ಸೂಚನೆ !

ಹತ್ತಿಯ ತುಪ್ಪ, ಹಿಂಡಿ ಮತ್ತು ಹೊಟ್ಟು.

ಈ ತಿಂಗಳ ಕಡೆಯವರೆಗೆ ಮಾತ್ರ ಕಡಮೆ ಬರೀದಿ !

ತುಪ್ಪ ಡಬ್ಬಿ 1 ಕ್ಕೆ ರೂ 11, ಹಿಂಡಿ ಮೂಟೆಗೆ ರೂ. ೪ ಹೊಟ್ಟು ಮೂಟೆಗೆ ರೂ. 1½. ಬೇಕಾದವರು ಬೃರಸಿಮಾಡಿ

ಅನುಭವಸ್ಥರ ಅಭಿಪ್ರಾಯ —(1) ಎಮ್ ಕೃಷ್ಣಮೂರ್ತಿ, ಘಾರೆಸ್ಟ್ ರೇಂಜರ್, ಪಾಲಕೊಂಡ, ವಿಶಾಖಪಟ್ಟಣ ಡಿ|| "ತಾವು ಕಳುಹಿಸಿದ ಹತ್ತಿಹೊಟ್ಟಿನಿಂದ ನನ್ನ ಕುದುರೆಗೆ ಬಹಳ ಪ್ರಯೋಜನವಾಯಿತು ಹುರುಳಿಯಲ್ಲೂ ಹಿಂಡಿಯ ಬೊಕೆಯಲ್ಲೂ ಅದನ್ನು ಮಿಶ್ರಮಾಡಿ ಕೊಟ್ಟದ್ದರಿಂದ ಅಜೀರ್ಣವಾಗುತ್ತಿದ್ದದ್ದು ನಿಂತು ಹೋಯಿತು." (2) ಎಮ್. ವಿ ನರಸಿಂಹೈಂಗಾರ್ ಬಿ ಎ., ಫಾರೆಸ್ಟ್ ರೇಂಜರು, ಚಿಕ್ಕ, ಕಡೂರು ಡಿ|| "ಮೊದಲು ಕೆಲವು ಎತ್ತುಗಳು ಸರಾಗವಾಗಿ ತಿನ್ನದಿದ್ದರೂ ಈಗ ಹೊಟ್ಟು ಹಿಂಡಿಗಳನ್ನು ಬಹು ರುಚಿಯಿಂದ ಸೇವಿಸುತ್ತವೆ ಮೈಯಿನ ಕೊಬ್ಬು ಕಡಮೆಯಾಗಿ ಲಘುವಾಗಿಯೂ ಮೊದಲಿಗಿಂತ ಬಲವಾಗಿಯೂ ಆದುವು. ದಣಿಯದೆ ಹೆಚ್ಚು ಕೆಲಸ ಮಾಡುತ್ತವೆ, ಜರುರ ರೋಗಗಳಿಲ್ಲ. ಮತ್ತೊಂದು ಮೂಟೆ ಹಿಂಡಿಯನ್ನೂ ಒಕ್ಕಷ್ಟು ಹೊಟ್ಟನ್ನೂ ಕಳುಹಿಸಬೇಕು" (3) "ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್‌ನಿಂದ ನಾನು ಹತ್ತಿಯ ತುಪ್ಪವನ್ನು ಬಹಳ ಪಟ್ಟಿಗೆ ಕೊಂಡುಕೊಂಡಿದ್ದೇನೆ ಎಲ್ಲಾ ಬಗೆಯ ಅಡಿಗೆಗೂ ಅದು ಅತ್ಯುತ್ಕೃಷ್ಟವಾದದ್ದೆಂದು ತೋರುತ್ತದೆ" ಷಿ. ಬ್ರಾಡ್ರಿಕ್, ಎಳನೆಯ ಮಸ್ಥಾಸ್ಟರ್, ಬೆಂಗಳೂರು ನಮ್ಮ ವಿಳಾಸ — ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್

[10-8] 159, ಕಿಲಾರಿ ರೋಡ್, ಬೆಂಗಳೂರು ಸಿಟಿ

ನಾಜೂಕಾದ ವಾಚ್ ! ನಾಜೂಕಾದ ವಾಚ್

ರೈಲ್ವೆ ಗಾರ್ಡ್ ಲೀವರ್ ಪಾಕೆಟ್ ವಾಚ್

ಇದರ ಕ್ರಯ—ನಾಜೂಕಾದ ವಾಚ್ ಸರಪಣಿ ಸಮೇತ ರೂ 2 8 0 ಮಾತ್ರ

6 ವರುಷಗಳ ಗ್ಯಾರಂಟಿ

ಇದು ಮಕ್ಕಳ ಆಟದ ಬೊಂಬೆಗಳಂತೆ ಕೆಲವು ದಿನಗಳು ಆಟವಾಡಿ ಕೆಟ್ಟು ಹೋಗತಕ್ಕಂಥಾ ಅಲ್ಪ ಗಡಿಯಾರವಲ್ಲ ಸಾಧಾರಣವಾದ ವಾಚ್‌ಗಳಿಗಿಂತ



ಬಹು ಶ್ರೇಷ್ಠವಾದದ್ದು ರೈಲ್ವೆ ಗಾರ್ಡ್ ರೈಲ್ವೆ ಡ್ರೈವರ್ ಮುಂತಾದ ಅನೇಕ ರೈಲ್ವೆ ಉದ್ಯೋಗಸ್ಥರು ಇದನ್ನು ಇಟ್ಟುಕೊಂಡು ಉಪಯೋಗಿಸುತ್ತಿದಾರೆ ಆದಕಾರಣ ಇದಕ್ಕೆ ರೈಲ್ವೆ ಗಾರ್ಡ್ ವಾಚ್ ಎಂಬ ಬಿರುದು ಬಂದಿದೆ ಇದನ್ನು ಇಟ್ಟುಕೊಂಡು ರೈಲ್ವೆ ಗಾರ್ಡ್‌ರವರು ರೈಲ್ ನಡೆಸುತ್ತಾರೆ ಈ ವಾಚ್ ವಿಚಾರವಾಗಿ ಹೆಚ್ಚಾಗಿ ಬರೆಯಲು ಸ್ಥಳವಿಲ್ಲ ... ಬಾಗಿ ಲೆಕ್ಕವಿಲ್ಲದ ... ಗಳ ಪತ್ರಗಳನ್ನು ... ತ್ತೇವೆ. ಕೆಲವು ವಾಚ್‌ಗಳು ಮಾತ್ರ ಉಳಿದಿರುತ್ತವೆ ಬೇಕಾದವರು ಶೀಘ್ರದಲ್ಲಿ ಬರೆದು ತರಿಸಿಕೊಳ್ಳಿ ತರಿಸಿಕೊಂಡು ಪಸಂದಿಲ್ಲದೆ ಪಕ್ಷದಲ್ಲಿ ಹಿಂದಿರುಗಿ ವಾಪಸು ಮಾಡಲ್ಪಡುತ್ತದೆ ನಮ್ಮ ವಿಳಾಸ — [6-7]

ಸುಪೀರಿಯರ್ ವಾಚ್ ಕಂಪನಿ, ಪೋಸ್ಟು ಬಾಕ್ಸ್ 167, ಮದರಾಸ್

ಶ್ರೀಲಕ್ಷ್ಮೀನರಸಿಂಹ ಆಯುರ್ವೇದ ವೈದ್ಯಶಾಲೆ

ಜ್ವರಮುರಾರಿ ...ಸಕಲ ವಿಧವಾದ ಜ್ವರಗಳಿಗೆ ಅಂಕುಶವಾಗಿದೆ ಇದನ್ನು ಉಪಯೋಗಿಸಿದೊಡನೆ ಸಕಲವಿಧವಾದ ಜ್ವರಗಳನ್ನೂ ಹತಮಾಡುವದು. ಇದು ಬಹಳ ಕಠಿಣವಾಗಿರುವ ಹಸುರುಸೊಪ್ಪುಗಳು ಬೇರುಗಳು ಮೊದಲಾದ ಕ್ಷಾರದಿಂದ ಮಾಡಲ್ಪಟ್ಟಿದ್ದು ರಸ, ಗಂಧಕ, ಪಾಷಾಣಾದಿಗಳೊಂದೂ ಈ ಔಷಧಕ್ಕೆ ಸೇರಿಲ್ಲ ಇದು ನಮ್ಮ ಪೂರ್ವಿಕರು (ಸಿದ್ಧರು)ಗಳಿಂದ ಕಲಿತ ಸಿದ್ಧಪ್ರಯೋಗ ಔಷಧಕ್ಕೆ ಪಥ್ಯ ಪಾನಾದಿಗಳೇನೂ ಇಲ್ಲ. ಈ ಔಷಧವನ್ನು ಒಂದು ಸಾರಿ ತರಿಸಿ ಪರೀಕ್ಷಿಸಿದ ಒಡನೆ ಅವರಾಗಿ ತಮ್ಮ ಸ್ನೇಹಿತರುಗಳಿಗೆ ತಿಳಿಸಿ ಸಂತೋಷಪಡುವರು ಇದು ಮದರಾಸಿನಲ್ಲಿ ಅನೇಕ ಸಾವಿರ ಜನಗಳು ಉಪಯೋಗಿಸಿದ ಸಿದ್ಧೌಷಧ. ಪ್ರತಿ ದಿವಸ ಅನೇಕ ಜನಗಳು ಉಪಯೋಗಿಸುತ್ತಲೂ ಇದಾರೆ ಔಷಧ ಸೇವನೆ ಕ್ರಮವು ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು ಎಂಥ ಜ್ವರವನ್ನೂ 8 10-12-16 ಪೊಟ್ಟಣಗಳ ಔಷಧದಲ್ಲಿ ನಿಶ್ಶೇಷವಾಗಿ ಜೀರ್ಣಿಸಿ ಅನ್ನದ್ವೇಷವನ್ನು ಹೋಗಲಾಡಿಸಿ ಹಸಿವನ್ನುಂಟುಮಾಡಿ, ಬಲಹೀನವನ್ನು ಹೋಗಲಾಡಿಸುವದು ಇದರ ಬೆಲೆ 12 ಪೊಟ್ಟಣಗಳ ಡಜನ್ 1 ಕ್ಕೆ 12 ಆಣೆ ಟಪ್ಪಾಲ್, ಪಾರ್ಸಲ್ ಛಾರ್ಜಿ ಪ್ರತ್ಯೇಕ. [10-10]

ದಂತಧಾವನ ರತ್ನಾಕರಂ —ಇದು ಹಲ್ಲುಗಳಿಗೆ ಬಾಧಾಕರವಾದ ಪದಾರ್ಥಗಳು ಯಾವುದೂ ಸೇರಿಸದೆ ಅನೇಕ ಮೂಲಿಕೆಗಳಿಂದ ತಯಾರುಮಾಡಿದ ಹಲ್ಲು ಪುಡಿ ಸುವಾಸನೆಯಾಗಿರುವದು ಇದರಿಂದ ಹಲ್ಲು ಉಜ್ಜಿಕೊಂಡರೆ ದಂತದಲ್ಲಿ ಹುಟ್ಟಿದ ರೋಗಾದಿಗಳು ಹೋಗಲಾಡಿಸಿ ವಾತಪಿತ್ತ ಶ್ಲೇಷ್ಮಗಳ ಶಮನಮಾಡಿ ಹಲ್ಲುನೋವು, ಬಾಯಿನಾತ, ಹಲ್ಲುಜೋವು, ಹಲ್ಲಿನಲ್ಲಿರುವ ಹುಳಗಳು, ಹಲ್ಲಿನಲ್ಲಿ ರಕ್ತಬರುವದು, ಹುಳುಕುಹಲ್ಲು, ಇಗುರುಬಾವು ಮೊದಲಾದ್ದನ್ನು ಪರಿಹರಿಸಿ ಹಲ್ಲು ಸಂದುಗಳನ್ನು ದಟ್ಟವಾಗಿ ಸೇರಿಸಿ ಕಳೆಕೊಟ್ಟು ದೇಹಕ್ಕೆ ಒಳ್ಳೆ ಗುಣವನ್ನುಂಟುಮಾಡುವದು ಈ ಪುಡಿಯನ್ನು ಹೊಟ್ಟೆಗೆ ತೆಗೆದುಕೊಳ್ಳಬಹುದು. ಇದರ ಬೆಲೆ ಡಬ್ಬಿ 1 ಕ್ಕೆ 4 ಆಣೆ. ಟಪ್ಪಾಲ್, ಪಾರ್ಸಲ್ ಛಾರ್ಜಿ ಪ್ರತ್ಯೇಕ. ವಿಳಾಸ :—

ರಾಜವೈದ್ಯಂ ಮೈಸೂರು ಪಂಡಿತರು ಎಂ. ಕೆ. ಶೇಷಾಚಾರ್

ನಂ. 93, ಚೈನಾಬಜಾರ್ ರೋಡ್, ಮದರಾಸ್

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕರವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಗಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs. OAKES & Company, Mount Road, Madras.

[4-25] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H. Gulliford, Proprietor and Manager, Wesleyan Mission Press, Mysore. 24/4/1913.

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭. ಮೈಸೂರು—ಸನ್ ೧೯೧೩ ನೇ ಇಸವಿ ಮೇ ತಾರೀಖು ೧ ನೇ ಗುರುವಾರ. ಸಂಚಿಕೆ ೪೮

ಎಂ. ಎ. ಟಿ. ಯವರ ಜೀರ್ಣ ಕಷಾಯ

ಇದು ಸೇವನೆಯಿಂದ ವಾಂತಿ, ಮೂರ್ಛೆ, ಎದೆ ಕೆ, ಮಂದಶೋಷ, ಶೂಲೆ, ಕೈಕಾಲುಮಂಜು ವಾತ, ನಾನಾ ಗುಣವು ಮುಂತಾದ ಪಿತ್ತರೋಗಗಳು ಪರಿಹಾರವಾಗುತ್ತೆ. ಕ್ರಯ ದಪ್ಪಿಗೆ ರೂ. 1. ಟಪ್ಪಾಲ ಖರ್ಚು ಬೇರೆ [74-1] ವಿಳಾಸ—ಸರ್ವಜನ ಹಿತೋಪಕಾರೀ ಔಷಧಾಲಯ, ಮೈಸೂರು

ಕಾಪಿ ನೆಯ ಬುಕ್ಸ್, ಕನ್ನಡ ಟೆಕ್ಸ್ಟ್ ಬುಕ್ ನೋಟ್ಸು ೦ ೬ ೦

ಬಳಸಿಗೆ ಸಿದ್ಧವಾಗಿವೆ. ಸುಂದರ ಅಕ್ಷರ, ಹೊಸ ಸಮಾಚಾರ, ತಿದ್ದಿಸಲ್ಪಟ್ಟಿದೆ, ಪ್ರತಿ ಡಜನ್ ವಾಪಸುವಾದಿ ಡಿಸ್ಕೌಂಟು (ಒಂದೇ ಆರ್ಡರು) ನಗದು ಬೆಲೆ ಪ್ರತಿಗೆ—10 ಕ್ಕೆ 1, 25 ಕ್ಕೆ 3, 50 ಕ್ಕೆ 5, 100 ಕ್ಕೆ 20 [67-1] ಆರ್. ನರಸಿಂಹಯ್ಯ, ಕನ್ನಡ ಪಂಡಿತ, ಹೈ ಸ್ಕೂಲ್, ಚಿಕ್ಕಬಳ್ಳಾಪುರ

1913 ನೇ ವರ್ಷದ ಲೋಯರ್ ಸೆಕೆಂಡರಿ ಕನ್ನಡ ಟೆಕ್ಸ್ಟ್ ನೋಟ್ಸು—ಕ್ರಯ 6 ಆಣೆ

ಡಿಸ್ಕೌಂಟು 10 ಕ್ಕೆ 1, 50 ಕ್ಕೆ 7, 100 ಕ್ಕೆ 20. ಈ ನೋಟ್ಸು ಬೇಕಾಗಿದ್ದರೆ ನೋಟ್ಸಿನ ಮೇಲಿನ ನಮ್ಮ ಹೆಸರನ್ನು ನೋಡಿ ಕೊಳ್ಳಿರಿ [93-1]

ಎ. ಆರ್. ವೆಂಕಟಸುಬ್ಬಾಚಾರ್ಯ, ಸಂತೋಷ ಗ್ರಂಥಾಲಯ, ಮೈಸೂರು

ಗೃಹಕೃತ್ಯದ ನೋಟೀಸ್

ಚಿತ್ರದುರ್ಗ ಡಿಸ್ಟ್ರಿಕ್ಟು ಹೊಸದುರ್ಗ ತಾಲ್ಲೋಕು ಬಾಗೂರು ಹೋಬಳಿ [illegible] ಕಟ್ಟೆಮನೆ [illegible] ದೇವಲಿಂಗರ ಮಗ ದಾಸಿಂಗ್‌ನು ಸರ್ವರಿಗೂ ತಿಳಿಯಪಡಿಸುವದೇನೆಂದರೆ—ನನ್ನ ತಂದೆತಾಯಿಗಳ ಸ್ವಾಧೀನಾನುಭವದಲ್ಲಿರುವ [illegible] ಅಸ್ತಿ ಸರ್ವೆ ನಂ. 7 ನೇ ಬಾಗಾಯ್ತು, ಮುಷ್ಕಿ ಜಮೀನುಗಳ ಚಕ್ಕುಬಂದಿ ಪೂರ್ವಕ್ಕೆ ಕೆರೆ ಅಂಗಳ, ಪಶ್ಚಿಮಕ್ಕೆ ವಾದಿಗರ ಸಂಗನ ಜಮೀನು ಮತ್ತು [illegible] ದೇವೀಕೆರೆಯ [illegible] ದಕ್ಷಿಣಕ್ಕೆ ಸರ್ಕಾರಿ ಓಣಿ ಮತ್ತು ಮಾಕನ ಸಿಂಗನ ತೋಟ, ಈ ಮಧ್ಯ ಇರುವ ತೋಟ ಹೊಲ ಸಹಾ ಮತ್ತು ಖಾನೇಷುಮಾರಿ ನಂ. 30 ನೇ ವಾಸವಾಗಿರುವ ಮನೆಯು [illegible] ಪೂರ್ವಕ್ಕೆ ಸ್ವಂತ ಗಾಲಿ ಭಾವಿ ಮತ್ತು ದಾರಿ, ಪಶ್ಚಿಮಕ್ಕೆ ಸರ್ಕಾರಿ ದಾರಿ, ಉತ್ತರಕ್ಕೆ ಸ್ವಂತದಾರಿ ಮತ್ತು ಸರ್ಕಾರಿ ದಾರಿ [illegible] ಸರ್ಕಾರಿ ದಾರಿ, ಈ ಮಧ್ಯೆ ಇರುವ ಮನೆ ಇವುಗಳು ನರಸಿಂಗ್ ಬಾಕ್ ಘಾತಿ ಪಟ್ಟಾ ಮಗ ಕೃಷ್ಣಸಿಂಗ್‌ನ ಹೆಸರಿನಲ್ಲಿರುವುದರಿಂದಲೂ, ನನ್ನ ತಂದೆತಾಯಿಗಳ ಜೀವನಾಂಶದ ಹಕ್ಕಾಗಿರುವುದರಿಂದಲೂ ಇವರುಗಳು ನನ್ನ ಸಾ ದೀನಾನುಭವದಲ್ಲಿರುವ ಸಮಸ್ತ ಆಸ್ತಿ ತೋಟ, ಹೊಲ, ಮನೆ ಇವುಗಳ ಹಕ್ಕು ಬಾಧ್ಯತೆಗಳನ್ನು ತಪ್ಪಿಸಿ ಪರಭಾರೆ ಮಾಡಬೇಕೆಂಬದಾಗಿ ವರ್ತಮಾನ ಹುಟ್ಟಿರುವುದರಿಂದ ಯಾರಾದರೂ ನನ್ನ ಅನುಮತಿ ಪಡೆಯದೆ ಕ್ರಯ, ದಾನ, ಅಧಾರ, ಬೋಗ್ಯ, ಗಾಲಸಂಬಂಧ ವಗೈರೆಯಿಂದ ಸ್ವತ್ತುಗಳನ್ನು ಹೊಂದಿದರೆ ದಕ್ಕದೆ ಕಷ್ಟನಷ್ಟಗಳಿಗೆ ಒಳಗಾಗಬೇಕೆಂದು ತಿಳಿಯಪಡಿಸುತ್ತೇನೆ. [81-1]

ತಾ. 7-4-13 ದೇವಲಿಂಗರ ಮಗ ದಾಸಿಂಗ್

ವಿಶೇಷ ಸೂಚನೆ!

ಹತ್ತಿಯ ತುಪ್ಪ ಹಿಂಡಿ ಮತ್ತು ಹೊಟ್ಟು

ಈ ತಿಂಗಳ ಕಡೆಯವರೆಗೆ ಮಾತ್ರ ಕಡಮೆ ಖರೀದಿ!

ತುಪ್ಪ ಹಣ್ಣು 1 ಕ್ಕೆ ರೂ 11, ಹಿಂಡಿ ಮೂಟೆಗೆ ರೂ. 8, ಹೊಟ್ಟು ಮೂಟೆಗೆ ರೂ 1½ ಬೇಕಾದವರು ತ್ವರೆಮಾಡಿ

ಅನುಭವಸ್ಥರ ಅಭಿಪ್ರಾಯ—(1) ಎಮ್ ಕೃಷ್ಣಮೂರ್ತಿ, ಫಾರೆಸ್ಟ್ ರೇಂಜರ್, ಪಾಲಕೊಂಡ, ವಿಶಾಖಪಟ್ಟಣ ಡಿಸ್ಟ್ರಿಕ್ಟ್ ತಾವು ಕಳುಹಿಸಿದ ಹತ್ತಿಯ ಹೊಟ್ಟಿನಿಂದ ನನ್ನ ಕುದುರೆಗೆ ಬಹಳ ಪ್ರಯೋಜನವಾಯ್ತು. ಕುದುರೆಯ ಜಕೆಯಲ್ಲೂ ಹಿಂಡಿಯ ತೊಕ್ಕಿನಲ್ಲೂ ಅದನ್ನು ಮಿಶ್ರಮಾಡಿ ಕೊಟ್ಟದ್ದರಿಂದ ಅದು ಬಲವಾಗುತ್ತದೆ [illegible] (2) ಎಸ್ ವಿ. ನರಸಿಂಹಯ್ಯ, ಬಿ. ಎ., ಫಾರೆಸ್ಟ್ ರೇಂಜರು, ಹೆಬ್ಬೆ, ಕಡೂರು ತಾ. ಮೊದಲು ಮೊದಲು ಎತ್ತುಗಳು ಸರಿಯಾಗಿ ತಿನ್ನದಿದ್ದರೂ ಈಗ ಹೊಟ್ಟು ಹಿಂಡಿಗಳನ್ನು ಬಹು ಪ್ರೀತಿಯಿಂದ ತಿನ್ನುತ್ತಿವೆ. ಮೈಯಿನ ಕೊಬ್ಬು ಕಡಮೆಯಾಗಿ ಅನುಭವಾಗಿಯೂ ಮಾಡಲಿಕ್ಕಿಂತ ಬಲವಾಗಿಯೂ ಇದ್ದವೆ. ದನಗಳಿಗೆ ಹೆಚ್ಚು ಕೆಲಸ ಮಾಡುತ್ತವೆ ಜರಡಿ ರೋಗಗಳಲ್ಲಿ ಮುಕ್ತಿಯಿಂದ ಮೂರಿ ಹಿಂಡಿಗಳನ್ನು ತಪ್ಪದೆ ಹೊಟ್ಟ ನ್ನು ಕಳುಹಿಸಬೇಕು (3) ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್‌ನಿಂದ ನಾನು ಹತ್ತಿಯ ತುಪ್ಪವನ್ನು ಬಹಳ ಮಟ್ಟಿಗೆ ಕೊಂಡುಕೊಂಡಿದ್ದೇನೆ ಎಲ್ಲಾ ಬಗೆಯ ಅಡಿಗೆಗೂ ಅದು ಅತ್ಯುತ್ತಮವಾದದ್ದೆಂದು ತೋರುತ್ತೆ. ಮಾ ಪ್ರಾಡ್ರಿಕ್, ಏರಿಯ ಹುಸ್ಸಾರ್ಸ್, ಬೆಂಗಳೂರು. ನಮ್ಮ ವಿಳಾಸ—

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್, [70-9] 159 ಕಿಲಾರಿ ರೋಡ್, ಬೆಂಗಳೂರು ಸಿಟಿ

ಗ್ರಾಂ ಅಡ್ರೆಸ್—"ತಿರುಪತಿ" ಹರಿಹರ ಜಾಗ್ರತೆ ತೆಕ್ಕೊಳ್ಳಿ ತ್ವರೆಮಾಡಿರಿ

ಬೇಸಿಗೆ ಕಾಲ ಸಮೀಪಿಸಿ ಬಂದಿರುತ್ತೆ

ಚೇಳಿನ ಹಾವಳಿ ಪ್ರಾರಂಭವಾಯಿತು.

ಅದ್ಭುತವಾದ ಇನಾಮು.

ಒಂದು ಲಕ್ಷ ರೂಪಾಯಿಗಳು ಹಂಚಲ್ಪಡುತ್ತವೆ

ಡಾಕ್ಟರ್ ಯಂ. ವಿ. ಇನಾಂದಾರ್‌ರವರು ತಯಾರು ಮಾಡಿದ "ಸ್ಕಾರ್ಪಿಯಾನಿಯೋ" ಎಂಬ ಚೇಳಿನ ಔಷದವನ್ನು ಸಮಸ್ತ ದೇಶಗಳಲ್ಲಿಯೂ ಹರಡುವದಕ್ಕೂ, ಅದರ ಗುಣವನ್ನು ಅನುಭವಕ್ಕೆ ತರುವದಕ್ಕೂ ಈ ಇನಾಮಿನ ಏಕವಾಗಿ ಪ್ರಸಿದ್ಧಪಡಿಸಲ್ಪಟ್ಟಿದೆ. ಈ ಚೇಳಿನ ಔಷದವು ಅತಿ ಶೀಘ್ರವಾಗಿ ಗುಣವನ್ನು ಕೊಟ್ಟು, ರೋಗಿಯನ್ನು ನಗುವಂತೆ ಮಾಡಲ್ಪಟ್ಟಿದೆ. ಪ್ರಪಂಚದಲ್ಲಿ ಎಷ್ಟು ಚೇಳಿನ ಔಷದಗಳಿವೆಯೋ ಅದಕ್ಕೆಲ್ಲಾ ಶ್ರೇಷ್ಠವೆಂದು ಎನಿಸಿಕೊಂಡು ಬಂದಿರುವದರಿಂದ ಈ ಔಷಧಿಯನ್ನು ವೈದಿಕ ವೈರಿ ಎಂದು ಸಮಸ್ತರೂ ಪ್ರಾಮುಖ್ಯತೆಯಿಂದೆಣಿಸಿ ಇದನ್ನು ಪ್ರಚುರಪಡಿಸಬೇಕೆಂದು ಅಭಿಪ್ರಾಯಪಟ್ಟ ಮೇರೆಗೆ ಈ ಮೂಲಕವಾಗಿ ಸಮಸ್ತರ ಉಪಯೋಗಕ್ಕೂ ಪ್ರಕಟಿಸಲ್ಪಟ್ಟಿದೆ. ಖಂಡಿತವಾಗಿಯೂ ಇದಕ್ಕೆ ಸಮಾನವಾದ ಚೇಳಿನ ಮದ್ದು ಇಲ್ಲವೆಂದು ಖಂಡಿತವಾಗಿ ಹೇಳಿದ್ದಾನೆ.

ಹಿಸ್ ಎಕ್ಸಲೆನ್ಸಿ ಲಾರ್ಡ್ ಕಿಚ್ನರ್, ಚೀಫ್ ಕಮಾಂಡರು ಇನ್ ಚೀಫ್, ಇಂಡಿಯ, ಮತ್ತು ಕರ್ನಲ್ ವಿಕ್ಟರ್ ಬ್ರೂಕ್, ಚೀಫ್ ಮಿಲಟರಿ, ಸೆಕ್ರೆಟರಿ ಟು ದಿ ವೈಸರಾಯಿ, ಇವರುಗಳು ಡಾಕ್ಟರು ಯಂ. ವಿ. ಇನಾಂದಾರ್ ಚಿಕಿತ್ಸೆಯನ್ನು ಬಹಳವಾಗಿ ಹೊಗಳಿದ್ದಾರೆ.

ಇನಾಂಗಳ ವಿವರ—ಇದೇ 1913 ನೇ ಫೆಬ್ರವರಿಯಿಂದ ಜುಲೈ ತಾರೀಖು 31 ರ ವರಿವಿಗೂ ಹನ್ನೆರಡು ಲಕ್ಷ "ಸ್ಕಾರ್ಪಿಯಾನಿಯೋ" ಎಂಬ ಚೇಳಿನ ಔಷದವನ್ನು ಇನಾಂ ಮೂಲಕವಾಗಿ ಬಿಕ್ರಿ ಮಾಡಲು ಏರ್ಪಡಿಸಿದೆ. ಬಾಟ್ಲಿಯ ಬೆಲೆ ಎಂಟಾಣೆ ಮಾತ್ರವೇ. ಟಪಾಲು ಹಾಸಲು, ಪ್ಯಾಕಿಂಗ್ ಚಾರ್ಜು, ವಿ. ಪಿ. ಚಾರ್ಜು ಬೇರೆ

						ರೂಪಾಯಿ								ರೂಪಾಯಿ
1 ನೇ ಇನಾ	2 ಗ್ರೋಸ್ ಬಾಟ್ಲಿ	ತೆಗೆದುಕೊಳ್ಳುವವರಿಗೆ	1913 ನೇ ಏಪ್ರಲ್	ಆಖೆರೊಳಗಾಗಿ		9,000	1 ನೇ ಇನಾಂ	2 ಗ್ರೋಸ್ ಬಾಟ್ಲಿ	ತೆಗೆದುಕೊಳ್ಳುವವರಿಗೆ	1913 ನೇ ಜುಲೈ	ಆಖೆರೊಳಗಾಗಿ			7,000
2 ನೇ ,,	1 ಗ್ರೋಸ್	,,	,,	,,		8,000	2 ನೇ ,,	1 ಗ್ರೋಸ್	,,	,,	,,			6,000
3 ನೇ ,,	6 ಡಜನ್	,,	,,	,,		7,500	3 ನೇ ,,	6 ಡಜನ್	,,	,,	,,			5,500
4 ನೇ ,,	3 ಡಜನ್	,,	,,	,,		7,000	4 ನೇ ,,	3 ಡಜನ್	,,	,,	,,			5,000
5 ನೇ ,,	2 ಡಜನ್	,,	,,	,,		6,500	5 ನೇ ,,	2 ಡಜನ್	,,	,,	,,			4,500
6 ನೇ ,,	1 ಡಜನ್	,,	,,	,,		6,000	6 ನೇ ,,	1 ಡಜನ್	,,	,,	,,			4,000
7 ನೇ ,,	6 ಬಾಟ್ಲಿಗಳು	,,	,,	,,		5,500	7 ನೇ ,,	6 ಬಾಟ್ಲಿಗಳು	,,	,,	,,			3,500
8 ನೇ ,,	3 ಬಾಟ್ಲಿಗಳು	,,	,,	,,		5,000	8 ನೇ ,,	3 ಬಾಟ್ಲಿಗಳು	,,	,,	,,			3,000
9 ನೇ ,,	2 ಬಾಟ್ಲಿಗಳು	,,	,,	,,		4,500	9 ನೇ ,,	2 ಬಾಟ್ಲಿಗಳು	,,	,,	,,			2,500
						59,000								41,000

ಒಟ್ಟು ರೂ 1,00,000 ಲಕ್ಷ ಮಾತ್ರವೇ.

ಯಾವದಾದರೂ ಒಂದು ಇನಾಂ ಕಲಂಗಳ ಪೈಕಿ ಒಬ್ಬರಿಗಿಂತ ಜಾಸ್ತಿಯಾಗಿದ್ದರೆ ಆ ಇನಾಂನ ಕಲಮನ್ನು ಎಲ್ಲರಿಗೂ ಒಂದೇ ಸಮನಾಗಿ ಹಂಚಿಕೊಡಲ್ಪಡುತ್ತದೆ ಮತ್ತು ಒಂದೆ ವೇಳೆ ಒಬ್ಬರೇ ಇದ್ದರೆ ಆ ಪೂರ್ತಿ ಇನಾಂನ ಕಲಮು ಇರುವ ಮೊಬಲಗನ್ನು ಅವರೊಬ್ಬರಿಗೇ ಕೊಡಲ್ಪಡುತ್ತದೆ. ಎರಡು ಬಾಟ್ಲಿಗಳು ಜಾಸ್ತಿಯಾಗಿ ಕೊಂಡುಕೊಳ್ಳುವ ಪ್ರತಿ ಒಬ್ಬರಿಗೂ ಇನಾಂನ ಸರ್ಟಿಫಿಕೇಟನ್ನು ಆಯಾಯ ಇನಾಂ ಕಲಂವಾರು ಪ್ರಕಾರ ತೆಗೆದುಕೊಂಡ ಬಾಟ್ಲಿಗಳ ಸಂಖ್ಯೆ ಗಣಿಸಿ ಅವರಿಗೆ ಖಂಡಿತವಾಗಿಯೂ ಇನಾಮನ್ನು ಕೊಡುತ್ತೇವೆಂದು ಭರವಸೆ ಕೊಟ್ಟು ಬರೆದುಕೊಡಲ್ಪಡುತ್ತೆ. ನಮ್ಮ ಇನಾಮು ಕಲಮಿನ ಲಿಸ್ಟಿನಲ್ಲಿ ಕಾಣಿಸಿರುವ ಮೇರೆಗೆ ಬಾಟ್ಲಿಗಳನ್ನು ಕೊಂಡುಕೊಳ್ಳುವರಿಗೆ ಏನೂ ಬಾಕಿ ಯಾರಿಗೂ ಸಿಕ್ಕುವದಿಲ್ಲ. ಈ ಹನ್ನೆರಡು ಲಕ್ಷ ಬಾಟ್ಲಿಗಳು ಖರ್ಚಾದ ಕೂಡಲೆ ಲೆಖ್ಖವನ್ನು ಫೈಸಲುಮಾಡಿ, ಇನಾಂಗಳು ಹಂಚಲ್ಪಡುತ್ತೆ. ಒಂದು ವೇಳೆ ಪೂರಾ ಹನ್ನೆರಡು ಲಕ್ಷ ಬಾಟ್ಲಿಗಳು ಖರ್ಚಾಗದೆ ಹೋದರೆ ಮುಂದೆ ಹಾಯಿದೆಂಬನ್ನು ಹೆಚ್ಚಿಸದೆ ಬಾಟ್ಲಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾ ಪ್ರಕಾರ ಆಗತಕ್ಕಷ್ಟು ಮಾತ್ರ ಇನಾಂಗಳು ಹಂಚಲ್ಪಡುತ್ತವೆ. ಇನಾಂಗಳು ಹಂಚುವ ತಾರೀಖು ಇದೇ 1913 ನೇ ಇಸ್ವಿ ಆಗಸ್ಟು ತಿಂಗಳು 15 ಕ್ಕೆ ಇದೇ ಹರಿಹರದಲ್ಲಿ ಬಹಿರಂಗವಾಗಿ ಮಾಡಲ್ಪಡುತ್ತೆ.

ಪ್ರತಿ ಒಬ್ಬ ಮನುಷ್ಯನಿಗೂ ತಾನು ಕೊಡುವ ಕಿಮ್ಮತ್ತಿಗೆ ಸರಿಯಾಗಿ ಔಷದ ಬಾಟ್ಲಿಯನ್ನು ಪಡೆಯುವದಲ್ಲದೆ ಇನಾಂಗೂ ಅರ್ಹನಾಗಿರುತ್ತಾನೆ. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಈವಾಗಲೇ ವಿಶೇಷ ಆರ್ಡರುಗಳು ಬರುವ ಸೂಚನೆ ತೋರಿದೆ. ಅದ್ದರಿಂದ ಪೂರ್ತಿಯಾಗಿ ಎಲ್ಲಾ ಬಾಟ್ಲಿಗಳು ಖರ್ಚಾಗುವದರಲ್ಲಿ ಸಂದೇಹ ತೋರುವದಿಲ್ಲ.

ಏಜೆಂಟರುಗಳು ಬೇಕಾಗಿದೆ. ಸಂಬಳ ನೂರು ರೂಪಾಯಿ ಮತ್ತು ಅಲೋಯೆನ್ಸು ಇಪ್ಪತ್ತು ರೂಪಾಯಿ. ಏಜನ್ಸಿ ಅಪ್ಲಿಕೇಷನ್ ಹಾಕುವವರು ಮತ್ತು ಎಕ್ಸ್‌ಟ್ರಿ ಕೇಳುವವರು ½ ಆಣೆ ಸ್ಟಾಂಪು ಕಳುಹಿಸಬೇಕು. ವಿಳಾಸಕ್ಕೆ ಟಪಾಲುದ್ವಾರ ಕಾಗದಗಳನ್ನು ಬರೆದು ಆರ್ಡರು ಕಳಿಸಿ ಬಾಟ್ಲಿಗಳನ್ನು ತರಿಸಿಕೊಳ್ಳಬಹುದು — [33-6]

ಮೆಸ್ಸರ್ಸ್ ತಿರುಪತಿ ಗುಜರ್ ಅಂಡ್ ಕೋ., ಸೋಲ್ ಏಜಂಟ್ಸು, ಸ್ಕಾರ್ಪಿಯಾನಿಯೋ ಡೆಪೋ, ಹರಿಹರ, ಮೈಸೂರು ಪ್ರಾವಿನ್ಸು.

ನಿಕ್ಕಲ್ ಲೇಡಿ ವಾಚು ಕ್ರಯ ರೂ. ೨ ೧೫-೦.

ಮೂರು ವರುಷ ಗಾರಂಟೀ



ಎಲ್ಲಾ ಹೊಸ ಸಾಮಾನುಗಳೇ ಇರುತ್ತವೆ ಸಾಮಾನು ಪಸಂದು ಆಗದೇ ಹೋದಲ್ಲಿ ... ದಿನದೊಳಗೆ ಬದಲಾಯಿಸಿ ಕೊಳ್ಳಬಹುದು [71 2]

ರಾಸ್ಕೋಪ ವಾಚು ಕ್ರಯ 1 ರೂ 12 ಆಣೆ

ಕೈಕಪ್ಪು ರಂಗು ಲೇಟೆಸ್ಟ್ ಕ್ರಯ ... ರೂ 11 ಆಣೆ

ಟೈಂಪೀಸು ಸಾದಾ ೧ ರೂ ... ಆಣೆ ಅಲಾರಂ ಟೈಂಪೀಸು ಕ್ರಯ ರೂ 1 13 ...

ನಮ್ಮ ಅಡ್ರಸ್ ... ಮೆಟ್ರೋಪಾಲಿಟನ್ ವಾಚ್ ಕಂಪನಿ

ಅನಕಾಪಲ್ಲಿ ... ಜಿ ಟಿ ಮದರಾಸು

CHAMBERLAIN'F COUGH REMEDY.

ಚೇಂಬರ್ಲೇನ್ನವರು ಕಂಡುಹಿಡಿದ ಕೆಮ್ಮಿನ ಔಷಧವು



1 18

... ಕೆಮ್ಮು ... ಗಂಟಲು ... ಗಾರೆನ್ನುವುದು ... ಎಲ್ಲ ತರದ ... ಇವಕ್ಕೆಲ್ಲಾ ಈ ಔಷಧವು ...

... ಅದು ... ಉಬ್ಬಸ ... ರಕ್ತಬರುವುದು ... ಆಗುವುವು

... ರವರು ... ಕೆಮ್ಮಿನ ಔಷಧವು ... ಕಟ್ಟುವುದನ್ನೂ ... ಪರಿಹರಿಸುತ್ತದೆ ... ಕೆಮ್ಮನ್ನು ಕಮನವಾಗಿ ... ಸುಖವಾಗಿ ... ಮನುಷ್ಯನಿಗೆ ಉಲ್ಲಾಸಕೊಡುತ್ತದೆ

... ರವರು ಕಂಡುಹಿಡಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫಿ ಮುಸ್ಸು ಸೇರಿಸಲ್ಪಟ್ಟಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ವಿಕರಿಯಾಗುವುದು | ಸಣ್ಣ ಶೀಸೆಗೆ ೧ ರೂಪಾಯಿ | ದೊಡ್ಡ ಶೀಸೆಗೆ ೨ ರೂಪಾಯಿ

ಪ್ರಖ್ಯಾತವಾದ ಪಾರ್ಸಿ ಫ್ಲೂಟ್ ಹಾರ್ಮೋನಿಯಂ

ಉತ್ಕೃಷ್ಟ ಪದಾರ್ಥ ಯಾವ ಹವೆಯಲ್ಲೂ ಹಾಳಾಗದ ಬಹು ಬಲಿಷ್ಠವಾದ ಮರ ... ಅತ್ಯಂತ ಶ್ರೇಷ್ಠವಾದವು, ನಾದವು ಮಹಾ ಸುಖಕರವಾಗಿದೆ, ಇದರಷ್ಟು ... ಮೂರೂಕಾಲು ಆಕ್ಟೇವ್ಗಳು ... ಮತ್ತು ... ಸಂಗೀತಕ್ಕೆ ಬಹಳ ... ಪ್ರಚಾರಕ್ಕೆ ತರಬೇಕೆಂದು ಇದರ ಕ್ರಯವನ್ನು ... ಕಡಮೆ ಮಾಡಿದ ... ಸಮಯವನ್ನು ... ಕ್ರಯ ರೂ ... ಉಚಿತವಾಗಿ ಕಳುಹಿಸಲಾಗುವುದು ನಮ್ಮ ವಿಳಾಸ — [72 3]

ಮ್ಯಾನೇಜರ್ ... ಹಾರ್ಮೋನಿಯಂ ...

ದಾದಾರ್ ಬೊಂಬಾಯಿ

ಜಂಟಲ್ಮನ್ ಲೀವರ್ ವಾಚ್

ಇದು ಬಹು ... ಮತ್ತು ಬಹು ... ಮತ್ತು



ಬಲಿಷ್ಠವಾದ ಯಂತ್ರ ಸಾಮಾನುಗಳಿಂದ ತಯಾರಾಗಿ ಈಗತಾನೆ ಬಂದಿರುತ್ತೆ ನಾವು ಸ್ವಂತವಾಗಿ ತರಿಸುತ್ತೇವೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಮನೋಹರವಾದದ್ದು ಸುಂದರವಾದದ್ದು ... ಪ್ರಿಯವಾದ ಮತ್ತು ಬೆಲೆಯುಳ್ಳ ವಸತಿಯಾದ ವಾಚು [11-6]

ಕ್ರಯ—ವಾಚು 1 ಕ್ಕೆ ರೂ 1 4 0 ಮಾತ್ರ

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ಬಿ ಆರ್ ವೆಂಕಟರಮಣ ಅಂಡ್ ಕಂಪನಿ,

ನಂ 7 ಕೂನಾ ವೆಂಕಟಾಚಲಯ್ಯರ್ ವೀದಿ, ಮದರಾಸು

ನಮೂನೆ ಮುಫತ್ತು
ಕೇಶಕುಸುಮಾಕರ ತೈಲವು.

ಸಾಟಿಯಿಲ್ಲದ ಈ ತೈಲವು ಬಹಳ ಶಕ್ತಿಯನ್ನು ವೃದ್ಧಿ ಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸ ಮಾಡುವದರಲ್ಲಿಯೂ, ಒಟ್ಟು ತಲೆಯ ... ಕೇಶವನ್ನು ಬೆಳೆಸುವದರಲ್ಲಿಯೂ, ಮೆದುಳನ್ನು ಬಲಪಡಿಸುವದರಲ್ಲಿಯೂ ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ, ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುಡ್ಡಿ ತೈಲ ಕ್ರಯ 10 ಆಣೆ ಮೂರು ಬುಡ್ಡಿಗಳ ತೈಲ ಕ್ರಯ ರೂ 1 13 ಆ ಆರು ಬುಡ್ಡಿಗಳ ತೈಲ ಕ್ರಯ ರೂ 1 1 ಆ ಡಜನ್ ಬುಡ್ಡಿಗಳ ಕ್ರಯ ರೂ ...

ವಿ. ಪಿ ಅಂಚೇ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ

[84 1] ಔಷಧಾಲಯ 177 ಚೀನಾ ಬಜಾರ್ ರೋಡ್, ಮದ್ರಾಸು

ಕುಂತಲಾನಂದ ತೈಲವು

11

ಈ ದೇಶದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಪದಕಗಳನ್ನೂ ... ಸರ್ಟಿಫಿಕೇಟುಗಳನ್ನೂ ಪಡೆದಿದೆ ... ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ...

... ಇದರ ಉತ್ತಮೋತ್ತಮ ಗುಣಗಳನ್ನು ಶ್ಲಾಘಿಸುವರು ಈ ತೈಲವು ಕೂದಲನ್ನು ಚನ್ನಾಗಿಯೂ ಶೀಘ್ರವಾಗಿಯೂ ಬೆಳೆಯಿಸುವುದಲ್ಲದೆ ... ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ... ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ... ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ... ಬಾಟ್ಲಿಗೆ 1 ರೂಪಾಯಿ ... ಬಾಟಲಿಗೆ 3 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ ಬಿ ಎಮ್ ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್

ಗುಣಕಂಡ ಮೂರು ಪ್ರಖ್ಯಾತ ಔಷದಗಳು.

ಸ್ವಾಸ್ಥ್ಯಸರ ಮಲೆನಾಡು ಜ್ವರಮಾತ್ರೆಗಳು ... ಬಿಟ್ಟುಬರುವ ಅಥವಾ ದೀರ್ಘವಾದ ಶೀತಪಿತ್ತ ಎಲ್ಲಾ ... ಜ್ವರಗಳನ್ನೂ ಖಂಡಿತವಾಗಿಯೂ ಸಂಪೂರ್ಣವಾಗಿಯೂ ವಾಸಿ ಮಾಡುತ್ತವೆಂದು ಪ್ರಖ್ಯಾತಿ ಹೊಂದಿರುವ ಮಾತ್ರೆಗಳು ಇವು ಕ್ರಯ ಡಬ್ಬಿ 1ಕ್ಕೆ ರೂಪಾಯಿ 1 0 0

ಸ್ವಾಸ್ಥ್ಯಸರ ಉಬ್ಬಸದ ಔಷಧ— ಉಬ್ಬಸ, ಕಠಿಣವಾದ ಕೆಮ್ಮು ಮೊದಲಾದ ಶ್ವಾಸಕೋಶದ ವ್ಯಾಧಿಗಳಿಗೂ, ಶೀತದ ಗಡ್ಡೆಗಳಿಗೂ ಬಹಳ ಉತ್ತಮವಾದ ಮತ್ತು ಶೀಘ್ರವಾಗಿ ಗುಣಕೊಡುವ ಔಷದ ಕ್ರಯ ಬಾಟ್ಲು 1ಕ್ಕೆ ರೂಪಾಯಿ 1 0 0 [8 12]

ಸ್ವಾಸ್ಥ್ಯಸರ ನಾಯಿಕೆಮ್ಮಿನ ಸಿದ್ಧೌಷದ ಇದು ಖಾತ್ರಿಯಾದ, ನಂಬಿಕೆಯುಳ್ಳ ಮತ್ತು ಅಮೋಘವಾದ ಔಷಧ ಬೇಗನೆ ಖಂಡಿತವಾಗಿಯೂ ಸಂಪೂರ್ಣವಾದ ಗುಣಕೊಡುವಂತಾದ್ದು ಕ್ರಯ ಬಾಟ್ಲು 1ಕ್ಕೆ ರೂ 1 0 0

ಪ್ಯಾಕಿಂಗ್, ಪೋಸ್ಟೇಜ್ ವಿ ಪಿ ಛಾರ್ಜು ಪ್ರತ್ಯೇಕ ಈ ಔಷಧಗಳ ಗುಣಾದಿಗಳನ್ನು ವಿವರಿಸುವ ಹಸ್ತಪತ್ರಗಳನ್ನು ಕೇಳಿದವರಿಗೆ ಬಿಟ್ಟಿ ಕಳುಹಿಸುವೆವು

ವಿಳಾಸ —ಬಿ ... ಸ್ವಾಮಿ ...

117 ಪೋಪಾಂಸ್ ಬ್ರಾಡ್ವೇ, ಮದರಾಸ್

ಇವರಲ್ಲೂ ಸಿಕ್ಕುತ್ತವೆ—(1) ಎಡ್ವರ್ಡ್ ಕಂಪನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ, (2) ಸೈಯದ್ ಉಸ್ಮಾನ್ ಕಂಪನಿ, ಬೆಂಗಳೂರು ದಂಡು (3) ಕೆ ಎಟ್ಟು ಲ್ ರಾವ್ ಕಂಪನಿ, ಮಂಗಳೂರು (4) ಎಲ್ ... ಕಂಪನಿ, ಪಾಲಘಾಟ್ (5) ಬಾಯಿಸ್ ಕಂಪನಿ, ಕಲ್ಲಿಕೋಟೆ

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

84 10

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ಶೀಲು, ಅರತಲೆ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟನ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯಿಂದೊಡನೆ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 4 ಆಣೆ 4 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ಏಜಂಟುಗಳು—(1) ಎಸ್ ಪಿಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸೈವಾಕಂ, ವೇಪೇರಿ, ಮದರಾಸ್, (2) ಜಿ ಎಸ್ ಚೆನ್ನಯ್ಯ ಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

1911ನೇ ಕ್ಕೆ ಡೈರಿ ... ಆಣೆ ನೋಟ್ಸು 8 ಆಣೆ (ಅ ...) ಪತ್ರರತ್ನಾಕರ 8 ಆಣೆ ... ಪ್ರಕಾಶಿಕೆ 4 ಆಣೆ ಇಂಡುಕೇಟರ್—ಒಂದು ಹೊಸ ಪುಸ್ತಕ ... ಆರೋಗ್ಯ ಪ್ರಶ್ನೋತ್ತರ 1 ಆಣೆ 10 ಪ್ರತಿಗೆ ಒಂದು ಉಚಿತ ವಿಳಾಸ —ಪಿ ಬಿ ವೆಂಕಟರಾಮಯ್ಯ, ಎಡ್ವರ್ಡ್ ... ಮೈಸೂರು

ನಾಣ್ಯವಾದ ವಾಚ್ | ನಾಣ್ಯವಾದ ವಾಚ್

ರೈಲ್ವೆ ಗಾರ್ಡ್ ಲೀವರ್ ಪಾಕೆಟ್ ವಾಚ್

ಇದರ ಕ್ರಯ—ನಾಣ್ಯವಾದ ವಾಚ್ ... ರೂ 2 8 0 ಮಾತ್ರ

... ವರುಷಗಳ ಗ್ಯಾರಂಟಿ

ಇದು ಮಕ್ಕಳ ಆಟದ ಬೊಂಬೆಗಳಂತೆ ಕೆಲವು ದಿವಸಗಳು ಆಟವಾಡಿ ಕೆಟ್ಟುಹೋಗತಕ್ಕಂಥಾ ಅಲ್ಪ ಗಡಿಯಾರವಲ್ಲ ಸಾಧಾರಣವಾದ ... ಗಳಿಗಿಂತ



ಬಹು ಶ್ರೇಷ್ಠವಾದದ್ದು ರೈಲ್ವೆ ಗಾರ್ಡ್ ... ಮುಂತಾದ ಅನೇಕ ರೈಲ್ವೆ ಉದ್ಯೋಗಸ್ಥರು ಇದನ್ನು ಇಟ್ಟುಕೊಂಡು ಉಪಯೋಗಿಸುತ್ತಿದ್ದಾರೆ ಆದಕಾರಣ ಇದಕ್ಕೆ ರೈಲ್ವೆ ಗಾರ್ಡ್ ವಾಚ್ ಎಂಬ ಹೆಸರು ಬಂದಿರುತ್ತೆ ಇದನ್ನು ಇಟ್ಟುಕೊಂಡು ರೈಲ್ವೆ ಗಾರ್ಡ್ಗಳವರು ರೈಲ್ ನಡೆಸುತ್ತಾರೆ ಈ ವಾಚ್ ವಿಚಾರವಾಗಿ ಹೆಚ್ಚಾಗಿ ಬರೆಯಲು ನಮಗೆ ... ದ ... ವಿಲ್ಲ ... ಶಿಫಾರಸು ... ಪತ್ರಗಳನ್ನು ಹೊಂದಿರುತ್ತೇವೆ ಕೆಲವು ವಾಚ್ಗಳು ಮಾತ್ರ ಉಳಿದಿರುತ್ತೆ ಬೇಕಾದವರು ಶೀಘ್ರವಾಗಿ ಬರೆದು ತರಿಸಿಕೊಳ್ಳಿ ತರಿಸಿಕೊಂಡು ಪಸಂದಿಲ್ಲದ ಪಕ್ಷದಲ್ಲಿ ಖಂಡಿತ ಹಣ ವಾಪಸು ಮಾಡಲ್ಪಡುತ್ತೆ ನಮ್ಮ ವಿಳಾಸ — [15 4]

ಸುಪೀರಿಯರ್ ವಾಚ್ ಕಂಪನಿ, ಪೋಸ್ಟು ಬಾಕ್ಸ್ 117 ಮದರಾಸು

ಶ್ರೀಲಕ್ಷ್ಮೀನರಸಿಂಹ ಆಯುರ್ವೇದ ವೈದ್ಯಶಾಲಾ

ಜ್ವರಮುರಾರಿ —ಸಕಲ ವಿಧವಾದ ಜ್ವರಗಳಿಗೆ ಅಂಕುಶವಾಗಿದೆ ಇದನ್ನು ಉಪಯೋಗಿಸಿದೊಡನೆ ಸಕಲವಿಧವಾದ ಜ್ವರಗಳನ್ನೂ ಹತಮಾಡುವದು ಇದು ಬಹಳ ಶೀತಯಾಗಿರುವ ಹಸುರುಸೊಪ್ಪುಗಳು ಬೇರುಗಳು ಮೊದಲಾದ ಕಾಷ್ಠದಿಂದ ವ ... ಪಾಷಾಣಾದಿಗಳೊಂದೂ ಈ ಔಷಧಕ್ಕೆ ಸೇರಿಸಲ್ಲ ಇದು ನಮ್ಮ ಪೂರ್ವಿಕರು ... ಗಳಿಂದ ಕಲಿತ ಸಿದ್ಧಪ್ರಯೋಗ ಈ ಔಷಧಕ್ಕೆ ಪಥ್ಯ ಸ್ನಾನಾದಿಗಳೇನೂ ಇಲ್ಲ ಈ ಔಷದವನ್ನು ಒಂದು ಸಾರಿ ಪರೀಕ್ಷಿಸಿದ ಒಡನೆ ... ತಮ್ಮ ಸ್ನೇಹಿತರುಗಳಿಗೆ ತಿಳಿಸಿ ಸಂತೋಷಪಡುವರು ಇದು ಮದರಾಸಿನಲ್ಲಿ ಅನೇಕ ಸಾವಿರ ಜನಗಳು ಉಪಯೋಗಿಸಿದ ಔಷಧ ... ಅನೇಕ ಜನಗಳು ಉಪಯೋಗಿಸುತ್ತಲೂ ಇದ್ದಾರೆ ಈ ಔಷಧ ಸೇವಿಸುವ ಕ್ರಮವು ... ಚೀಟಿಯಲ್ಲಿ ಕಳುಹಿಸಲ್ಪಡುವದು ... ಜ್ವರವನ್ನು 8 10 12 16 ಪೊಟ್ಟಣ ಔಷಧದಲ್ಲಿ ... ಜೀರ್ಣ ಅನ್ನದ್ವೇಷವನ್ನು ಹೋಗಲಾಡಿಸಿ ... ಬಲಹೀನತನವನ್ನು ಹೋಗಲಾಡಿಸುವದು ಇದರ ಬೆಲೆ 12 ಪೊಟ್ಟಣಗಳ ದಜನ್ 1 ಕ್ಕೆ 12 ಆಣೆ ಟಪ್ಪಾಲ್, ಪಾರ್ಸಲ್ ಛಾರ್ಜು ಪ್ರತ್ಯೇಕ [19 11]

ದಂತಧಾವನ ರತ್ನಾಕರಂ—ಇದು ಹಲ್ಲುಗಳಿಗೆ ಬಾಧಾಕರವಾದ ಪದಾರ್ಥಗಳು ಯಾವವೂ ಸೇರಿಸದೆ ಅನೇಕ ಮೂಲಿಕೆಗಳಿಂದ ತಯಾರುಮಾಡಿದ್ದು ಹುಲ್ಲು ರುಚಿ ಸುವಾಸನೆಯಾಗಿರುವದು ಇದರಿಂದ ಹಲ್ಲು ಉಜ್ಜಿಕೊಂಡರೆ ದಂತದಲ್ಲಿ ಹುಟ್ಟಿದ ರೋಗಾದಿಗಳು ಹೋಗಲಾಡಿಸಿ ... ಶಮನಮಾಡಿ ಹಲ್ಲುನೋವು, ಬಾಯಿನಾತ, ಹಲ್ಲುಜೋವು, ಹಲ್ಲಿನಲ್ಲಿ ರಕ್ತ ... ಹುಳುಗಳು, ಹಲ್ಲಿನಲ್ಲಿ ರಕ್ತಬರುವದು, ಹುಳುಕುಹಲ್ಲು ... ಮೊದಲಾದ್ದನ್ನು ಪರಿಹರಿಸಿ ಹಲ್ಲು ಸಂದುಗಳನ್ನು ದಟ್ಟವಾಗಿ ಸೇರಿಸಿ ... ದೇಹಕ್ಕೆ ಒಳ್ಳೆ ಗುಣವನ್ನುಂಟುಮಾಡುವದು ಈ ಪುಡಿಯನ್ನು ... ತೆಗೆದುಕೊಳ್ಳಬಹುದು ಇದರ ಬೆಲೆ ದಬ್ಬಿ 1 ಕ್ಕೆ 4 ಆಣೆ ಟಪ್ಪಾಲ್, ಪಾರ್ಸಲ್ ಛಾರ್ಜು ಪ್ರತ್ಯೇಕ

ವಿಳಾಸ —

ರಾಜವೈದ್ಯಂ ಮೈಸೂರು ಪಂಡಿತರು ಎಂ ಕೆ ಶೇಷಾಚಾರ್ಯರು

ನಂ 93, ಚೈನಾಬಜಾರ್ ರೋಡ್, ಮದರಾಸ್

ಪ್ರತಾಪಕಂಠೀರವ ಚರಿತ್ರೆ.

(1) ... ವರ್ಷಕ್ಕೆ ರಂಗಿ ಜೀವನಾಯ ಉಂಟು ... ಅವರ ಯತ್ನಗಳಿಗೆ ಕೊಂದರೆ ಬಂದರೂ ತೊಲಗಿಸೋ ... ಎಂಬ ನೀತಿ, (2) ... ಬುದ್ಧಿಶಾಲಿ, ... ಚತುರ (... ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು, (4) ... ಆದಾಗ್ಯೂ ... ವಿಜಾನಗಳು (5) ಮನುಷ್ಯ ಯತ್ನಕ್ಕೆ ಪಾರವೆ ಇಲ್ಲ ಎಂಬ ... ವಿಷಯಗಳು (6) ಎಲ್ಲರೂ ಓದಿ ತಿಳಿದುಕೊಳ್ಳುವಂತಾ ಸುಲಭ ಶೈಲಿ, (7) ಸರಿಗೆ ... ಒಂದಕ್ಕೊಂದು ... ಮನಸ್ಸನ್ನು ಎಳೆಯುವಂತಾ ಕಥಾಭಾಗಗಳು ಕೂಡಿವೆ ಕ್ರಯ —1 ರೂಪಾಯಿ ಟಪಾಲ್ ಹಾಸಲು ಬೇರೆ

[1 10] ನಮ್ಮ ವಿಳಾಸ — ವಿಜಯ ಕಂಪೆನಿ, ಬೆಂಗಳೂರು ಸಿಟಿ

ಡೋಂಗರೆ ಇವರ ಬಾಲಾಮೃತ.

[115 42]

... ಮಕ್ಕಳಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಇದು ಮಧುರ (ಸವಿ) ಇದ್ದುದರಿಂದ ಮಕ್ಕಳು ಬಹಳ ಸಂತೋಷದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಎಲುಬುಗಳು ಕಟ್ಟುಮಂತ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ ಖರ್ಚು ೭ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಸಮಸ್ತ ವಿಧವಾದ ನೋವೂ ಇಂತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವ ತಲನೋವು, ವಾಯುನೋವು, ಮೈನ ಸಳಿತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಲಕ್ಷಗ ಒಂದರಂತೆ ವಿಕ್ರಯವಾಗುತ್ತಿವೆ ... ಸ್ಪಷ್ಟಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ದೊರೆಯುವುದು

ಒಂದು ಕುಪ್ಪಿ ಔಷಧ ಕ್ರಯ 1 ಆಣೆ, 12 ಕುಪ್ಪಿಗ ರೂ 1 8 0 ... ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ 1 2-0 ... ಮತ್ತು ಸಾಕಿಂಗ್ ಖರ್ಚು ಪ್ರತ್ಯೇಕ [12-10]

ವಿಳಾಸ — ಅಮೃತಾಂಜನ ಡಿಪೋ ... ಪ್ರಿಯರ್ ರೋಡ್, ಫೋರ್ಟ್, ಬೊಂಬಾಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕನಾಮಯಹರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಪದಾರ್ಥಗಳಿಂದ ... ಛಳಿಜ್ವರ, ಜರ ... ಹೊಟ್ಟೆ ನೋವು, ಸಂಧುಗಳ ... ಕಾಲು ಹೊಡತ (ಭಾರ), ... ಸಡುಕ, ಶೀತವಾತ ... ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲು ನೋವು, ಕೆಮ್ಮಲು, ನೆಗಡಿ, ... ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತ ... ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತದೆ, ಎಂತಹ ... ಯಾವ ... ನರಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ... ವೃದ್ಧಿಪಡಿಸುತ್ತದೆ ... ಮಕ್ಕಳ ಎಳವು, ಜ್ವರ, ನಡುಜ್ವರ, ಕ್ಷಯರೋಗಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —೨೦ ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 1 ಆಣೆ [116 16]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕ್ಷಣಮಾತ್ರದಲ್ಲಿ ರೋಗಿಯ ... ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರವು ... ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಸಿಗಬೇಕಾದ ... ವೈದ್ಯೋಪಚಾರದ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ... ರೂ 1 ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ   ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಇದೇ ಸಮಯ ' ಪ್ರೋತ್ಸಾಹ ವ್ಯಾಪಾರ ' ... ವಾರ ಮಾತ್ರವೇ ' ಟಪಾಲು ಖರ್ಚು ಇಲ್ಲ " ತ್ವರೆಮಾಡಿ

... ಪುಸ್ತಕ ... ಪುಸ್ತಕಕ್ಕೆ ೧ ... ಪುಸ್ತಕಕ್ಕೆ ೧ ಪುಸ್ತಕ ೧೦ ಪುಸ್ತಕಕ್ಕೆ ... ಬಹುಮಾನ

ನಿಮಗೂ, ನಿಮ್ಮ ಬಾಲಕ ಬಾಲಕಿಯರು ಮತ್ತು ಸ್ನೇಹಿತರಿಗೂ ಅತ್ಯಂತ ಉಪಯೋಗವಾದ

ಬಹುಮಾನ ... ಬಹುಮಾನದ ... ಇಲ್ಲ

ENGLISH SELF-INSTRUCTOR.

ಆಂಗ್ಲ ಭಾಷಾ ಪ್ರಕಾಶಕ.

ಕಣ್ಣಿಂದ ನೋಡಿ ಅಲ್ಪ ಬೆಲೆಗೆ ಉತ್ತಮ ಪುಸ್ತಕ ಮತ್ತು ಬಹುಮಾನ ಈ ಸಮಯ ಬಿಟ್ಟರೆ ಇಲ್ಲ

... ರೂ ೧—೮—೦ ಅನ್ಯರ ಸಹಾಯವಿಲ್ಲದೆ ಸುಲಭವಾಗಿ ಇಂಗ್ಲೀಷ್ ಕಲಿಯುವ ಪುಸ್ತಕ ಕ್ರಯ ರೂ. ೧—೮—೦

ಈ ದೊಡ್ಡ ಪುಸ್ತಕದಲ್ಲಿ ೧ ನೇ ಭಾಗ, ೨ ನೇ ಭಾಗ, ೩ ನೇ ಭಾಗ, ೪ ನೇ ಭಾಗ, ೫ ನೇ ಭಾಗ—ಈ ೫ ಭಾಗಗಳೂ ಅಡಕವಾಗಿವೆ ಬಾಲಕ ಬಾಲಕಿಯರು ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳು ಮತ್ತು ವರ್ತಕರು ಮುಂತಾದವರು ಬೋಧಕರ ಸಹಾಯವಿಲ್ಲದೆ ಓದುವುದು, ಬರೆಯುವುದು, ಮಾತಾಡುವುದು ಸುಲಭವಾಗಿ ಕಲಿಯಬಹುದು ಕನ್ನಡ ತಿಳಿದಿದ್ದರೆ ಸಾಕು ಇಂಗ್ಲೀಷ್ ಅಕ್ಷರಾಭ್ಯಾಸ, ಪದ ಸಂಯೋಜನ, ಸ್ವರಾಕ್ಷರಗಳ ವಿಧವಿಧ ಶಬ್ದಾಭ್ಯಾಸ, ಪಾಠಶಾಲೆಯಲ್ಲಿ ಕಲಿಯುವಷ್ಟು ವ್ಯಾಕರಣ ಕ್ರಮಗಳು ಮತ್ತು ಅಭ್ಯಾಸಗಳು ಇಂಗ್ಲೀಷ್ ಭಾಷೆಯಲ್ಲಿ ... ವಾಕ್ಯಗಳನ್ನು ಮಾಡುವ ಕ್ರಮ ಮತ್ತು ನೂರಾರು ಸರ್ವವಿಷಯಗಳನ್ನು ಕುರಿತು ಪ್ರಶ್ನೋತ್ತರ ಸಂಭಾಷಣೆಗಳು ೮೦೦, ಪ್ರಪಂಚದ ಸರ್ವವಿಷಯಗಳನ್ನು ಕುರಿತು ಸಂಭಾಷಣೆ ಮಾಡುವಾಗ ಬೇಕಾಗುವ ವಿಷಯಕ್ಕೆ ತಕ್ಕ ಇಂಗ್ಲೀಷ್-ಕನ್ನಡ, ಕನ್ನಡ ಇಂಗ್ಲೀಷ್ ಶಬ್ದಕೋಶ (ಡಿಕ್ಷನರಿ) ಭಾಷಾಂತರ ಮತ್ತು ಅರ್ಥವ್ಯಾಸಕ್ಕೆ ತಕ್ಕ ಅಭ್ಯಾಸಗಳು ಕನ್ನಡ ... ಸರಿಯಾದ ಇಂಗ್ಲೀಷ್ ಗಾದೆಗಳು, ಪತ್ರವ್ಯವಹಾರದಲ್ಲಿ ಉಪಯೋಗಿಸುವ ಸಾಂಕೇತಿಕ ಶಬ್ದಗಳು ಕ್ಷೇಮಸಮಾಚಾರ, ... ಮುಂತಾದ ವಿಷಯ ಕುರಿತು ತಂತಿವರ್ತಮಾನ ಮತ್ತು ಕಾಗದಪತ್ರಗಳನ್ನು ಬರೆಯುವ ಅನೇಕ ಕ್ರಮಗಳು ಮತ್ತು ಮಾದರಿಗಳು, ಇವುಗಳಿಗೆ ಸ್ಫುಟವಾದ ಕನ್ನಡ ಅಕ್ಷರದಲ್ಲಿ ... ಮತ್ತು ಅರ್ಥಸಹ ಉಳ್ಳದ್ದು ಈ ಪುಸ್ತಕ ನಮ್ಮಲ್ಲಿ ಮಾತ್ರ ದೊರೆಯುತ್ತೆ ... ಪ್ರತಿಗಳು ಮಾತ್ರ ಉಳಿದಿವೆ ತ್ವರೆಮಾಡಿರಿ [17 8]

ವಿಳಾಸ:—ಎ. ವಿ. ರಾಘವುಲು. ಬಾಲಕೃಷ್ಣ ಬುಕ್ ಡಿಪೋ. ಜೋರಿಪೇಟೆ, ಬೆಂಗಳೂರು ಸಿಟಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

11—4—1913 ರಿಂದ 18—4—1913 ರ ವರೆಗೆ

	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು ಸಿಟಿ	1	0	0	0
ಮೈಸೂರು "	0	0	0	0
ಬೆಂಗಳೂರು ಡಿಸ್ಟ್ರಿಕ್ಟು	2	1	13	6
ಮೈಸೂರು	1	1	320	216
ಕೋಲಾರ "	0	0	4	1
ಕೋಲಾರ್ ಚಿನ್ನದ ಗಣಿಗಳು	1	0	0	0
ತುಮಕೂರು ಡಿಸ್ಟ್ರಿಕ್ಟು	0	0	141	85
ಹಾಸನ "	9	0	115	94
ಚಿತ್ರದುರ್ಗ "	0	0	4	3
ಕಡೂರ್	8	1	17	14
ಶಿವಮೊಗ್ಗ "	0	0	0	0
ಜುಮ್ಲಾ	13	4	654	4?4

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದಿ ಸಂವತ್ಸರೇ ಉತ್ತರಾಯಣೆ ವಸಂತಋತೌ ಚೈತ್ರ ಬಹುಳ ಪಂಚಮಿ ಶುಕ್ರವಾರದಿಂದ ವೈಶಾಖ ಶುದ್ಧ ಬಿದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಮೇ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮೇಷ ಮಾಸ ತೇದಿ
2	ಶುಕ್ರ ,,	ಪಂಚಮಿ	1 21	ಪೂರ್ವಾ	17 33	20
3	ಶನಿ ‡	ದಾದಶಿ	8 14	ಉತ್ತರಾ	21 11	21
4	ಭಾನು †	ತ್ರಯೋದಶಿ	12-16	ರೇವತಿ	25 19	22
5	ಸೋಮ §	ಚತುರ್ದಶಿ	14 11	ಅಶ್ವಿನಿ	31 19	23
6	ಮಂಗಳ	ಅಮಾವಾಸ್ಯೆ	17 6	ಭರಣಿ	16 27	24
7	ಬುಧ *	ಪಾಡ್ಯ	17 18	ಕೃತ್ತಿಕೆ	38 1	25
8	ಗುರು ,,	ಬಿದಿಗೆ	16 51	ರೋಹಿಣಿ	38 48	26

,, ಸರ್ವತ್ರ ಏಕಾದಶಿ, ಶ್ರೀ ... ‡ ಶನಿಪ್ರದೋಷ, ಮಳೆ ನಕ್ಷತ್ರ—ಭರಣಿ 1ನೇ ಪಾದ † ವರಾಹಜಯಂತಿ ಶ್ರೀರಂಗದಲ್ಲಿ ರಂಗನಾಥ ರಥ § ಸರ್ವತ್ರ ಕರಿಗದ ಅಮಾವಾಸ್ಯೆ ... ಪ್ರಥಮಾ ತಿಥಿ, ಪಕ್ಷ, ಎಸೆ 1 ಗ್ರಹ ... ಮಳೆ ನಕ್ಷತ್ರ ಭರಣಿ 1 ನೇ ಪಾದ * ದ್ವಿತೀಯಾ ತಿಥಿ, ಚಂದ್ರೋದಯ, ... ,, ಕಟಕೇ ... ಪನಯನಂ (ಸಂಕರಾಂತಿ)

ಪೇಟೆ ಧಾರಣೆ

ದಿನಸು		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೫ ೦ ೦	೧೭ ೮ ೦
ಕೆಂಬೂತ ಅಕ್ಕಿ ಅವಲ್		೧೫ ೪ ೪	೧೭ ೮ ೦
" ಮಧ್ಯಮ		೧೫ ೦ ೦	೧೭ ೦ ೦
ಡಾಂಪ್ರಿಣಿ ಅಕ್ಕಿ		೧೬ ೮ ೦	೧೭ ೪ ೦
ಸಣ್ಣಕ್ಕಿ ಅವಲ್		೧೭ ೮ ೦	೧೮ ೮ ೦
" ಮಧ್ಯಮ		೧೬-೦ ೦	೧೭ ೮-೦
ಕೊಗರಿ ಬೇಳೆ ಅವಲ್ ಪಲ್ಲ ೧ಕ್ಕೆ		೧೪-೮ ೦	೧೩ ೮-೦
" ಮಧ್ಯಮ "		೧೨ ೦ ೦	೧೩ ೮-೦
ಹೈಕ ರಾಗಿ ಪಲ್ಲ ೧ಕ್ಕೆ		೭ ೩ ೦	೫ ೦ ೦
ಕಾರ್ರಾಗಿ "		೬ ೪ ೦	೪ ೧೨ ೦
ಜೋಳ "		೭ ೦ ೦	೭-೪ ೦
ಹಲಸಂದೆ ಪಲ್ಲ ೧ಕ್ಕೆ		೧೦ ೪ ೦	೧೩ ೧೨ ೦
ಬೇಳೆ ಅವರೆ "		೧೧ ೪ ೦	೧೧ ೦-೦
ಹೆಸರು "		೧೩ ೪ ೦	೧೪ ೦-೦
ಉದ್ದು "		೧೪-೪ ೦	೧೬-೦ ೦
ಕಡಲೆ "		೧೦-೮ ೦	೧೨ ೦-೦
ಎಳ್ಳು ಸೇರು ೧೨೦ಕ್ಕೆ		೨೬ ೦ ೦	೨೪ ೦-೦
ಹುರುಳಿ ಪಲ್ಲ ೧ಕ್ಕೆ		೬ ೯ ೦	೭ ೦-೦
ಹರಳು ೧೨೭ ಸೇರಿಗೆ		೧೨ ೮ ೦	೧೪ ೮ ೦
ಸೀಗೇಕಾಯಿ ಮಣ ೧ಕ್ಕೆ		೨ ೪ ೮	೩ ೮-೦
ಮೆಣಸಿನಕಾಯಿ ,,		೪ ೦ ೦	೩ ೪ ೦
" ಮಧ್ಯಮ		೩-೪ ೦	೧ ೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೪ ೫-೦	ಮಣ ೫ ೮ ೦
ಒಳ್ಳೆಣ್ಣೆ ಮಣ ೧ಕ್ಕೆ		೬ ೨ ೦	೬ ೬-೦
ಹರಳೆಣ್ಣೆ " "		೫ ೬ ೦	೬ ೦ ೦
ಕೊತ್ತುಂಬರಿ ಪಲ್ಲ ೧ಕ್ಕೆ		೫ ೨ ೦	೫ ೪ ೦
ಉಪ್ಪು " "		೨ ೮-೦	೬-೦-೦
ಹುಣಿಸೇ ಹಣ್ಣು ಮಣ ೧ಕ್ಕೆ		೧ ೧೨ ೦	೧ ೪-೦
" ಹಳೇದು "		೧ ೯ ೦	೦ ೧೪-೦
ಕುಪ್ಪ ಮಣ ೧ಕ್ಕೆ		೧೯ ೧೨ ೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫ ೧೧ ೦	೫ ೦-೦
ತೆಂಗಿನಕಾಯಿ ೧೦೦ಕ್ಕೆ		೭ ೦-೪	೬ ೦ ೦
ಅಡಕೇಕಾಯಿ ಮಣ ೧ಕ್ಕೆ		೧-೬ ೦	೧-೦-೦
ಅಂಟುವಾಳದಕಾಯಿ ಮಣ ೧ಕ್ಕೆ		೦ ೧೨-೦	೧ ೮-೦
ಚಿನ್ನ (ಸವರನ್) ಕೆಂಪು		೧೫ ೮ ೦	೫೧ ೮ ೦
" " ಮಧ್ಯಮ		೧೫ ೧೪ ೬	೧೫ ೧೪-೬
" " ಗಟ್ಟಿ ತೊಲ ೧ಕ್ಕೆ		೨೪ ೩ ೦	೨೪ ೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧ ೦-೦	೮೧ ೩ ೦

ಪ್ರಸಿದ್ಧವಾದ ಭಕ್ತವಿಜಯ ದ್ವಿತೀಯ ಮುದ್ರಣ

ತಿಂಗಳಿಗೆ ರಾಯಲ್ ೪೮ ಪುಟಗಳು ಮೊದಲಿಗಿಂತ ಉತ್ತಮವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಡುವುದು ಈ ಚೈತ್ರಮಾಸದಿಂದ ಆರಂಭ ಪ್ರತಿಮಾಸದ ಕಡೆಯಲ್ಲಿ ಸಂಚಿಕೆ ಕಳುಹಲ್ಪಡುವುದು ಪೂರ್ಣವಾದ ಪುಸ್ತಕಕ್ಕೆ ವಾರ್ಷಿಕ ಚಂದಾ ಪೋಸ್ಟೇಜ್ ಸೇರಿ ೩-೧೨-೧ ಭಕ್ತವಿಜಯ ಆಫೀಸ್, ಮೈಸೂರು

ಪ್ರಕಟನೆ ನೋಟೀಸು.

ಚಿತ್ರದುರ್ಗದ ತಾಲ್ಲೂಕು ಕಸಬಾ ಹೋಬಳಿ ಪಲ್ಲವಗಿರಿ ಗ್ರಾಮದಲ್ಲಿರುವ ಸೂಗೂರ ತಿಮ್ಮಯ್ಯನ ಮಗ ತಿಪ್ಪಯ್ಯನು ತಿಳಿಸುವದೇನಂದರೆ —ನನ್ನ ತಂದೆ ಸತ್ತು ಮೂರು ವರುಷವಾಯಿತು ನನ್ನ ತಂದೆ ಖಾತೆಗೆ ಚಳ್ಳಕೆರೆ ತಾಲ್ಲೂಕು ಚಳಕೆರೆ ಹೋಬಳಿ ಗೋವಿನಹಾಳು ಗ್ರಾಮದಲ್ಲಿ ಮೂರು ಖುಷ್ಕಿ ಜಮೀನುಗಳು ಇರುತ್ತವೆ ಇವು ನಮ್ಮ ತಂದೆ ಹಿರಿ ಹೆಂಡತಿ ಮಗ ಈರಪ್ಪನ ಖಾತೆದಲ್ಲಿವೆ ಈ ಮೂರು ಜಮೀನುಗಳು ನಮ್ಮ ಇಬ್ಬರ ಅನುಭವದಲ್ಲಿ ಇರುತ್ತವೆ ಈ ಜಮೀನುಗಳ ಪೈಕಿ ಯಾವ ಜಮೀನಾದರೂ ನನ್ನ ಅನುಮತಿ ಶಿವಾಯಿ ಯಾರಾದರೂ ಕ್ರಯ, ಭೋಗ್ಯ ವಗೈರೆ ಮಾಡಿಕೊಂಡರೆ ಅದು ಊರ್ಜಿತವಾಗತಕ್ಕದ್ದಲ್ಲ, ತಿಳಿಯುವದು [79-2]

ತಾ 16-4-1913 ತಿಪ್ಪಯ್ಯ

ದಿ ಪೀಪಲ್ಸ್ ಬ್ಯಾಂಕ್, ಲಿಮಿಟೆಡ್,
ತೀರ್ಥಹಳ್ಳಿ.

ಮೈಸೂರು ಕಂಪನಿಗಳ 1895 ನೇ ಇಸವಿ III ನೆಯ ರೆಗ್ಯುಲೇಷನ್ ಅನುಸರಿಸಿ ರಿಜಸ್ಟರ್ ಮಾಡಸಲ್ಪಟ್ಟಿದೆ.

ಉದ್ದಿಷ್ಟ ಮೂಲಧನ ರೂ. 1,50,000.

ಇದು ಷಿಸ್ಸ (ಷೇರ್) ಒಂದಕ್ಕೆ ರೂ 10 ರಂತೆ 15,000 ಷಿಸ್ಸಗಳಾಗಿ ವಿಭಾಗಿಸಲ್ಪಟ್ಟಿದೆ ಪ್ರತಿ ಷಿಸ್ಸ ಒಂದಕ್ಕೆ ೪ ಆಣೆಯಂತೆ ಪ್ರವೇಶಧನವನ್ನೂ, ಷಿಸ್ಸೆಯ ಮೊಬಲಗಿನ ಪೈಕಿ ಕಾಲು ಭಾಗದ ಮೊಬಲಗು ರೂ ೨ ೮ ೦ ನ್ನೂ ದರಖಾಸ್ತಿನೊಂದಿಗೆ ಕೊಡಬೇಕು ಉಳಿದ ರೂ 7 ೮ ೦ ಯು ಒಂದು ಸಾರಿಗೆ ರೂ ೨ ೮ ೦ ಗೆ ಮೀರದಂತೆ ಮೂರು ತಿಂಗಳಿಗೆ ಕಡಮೆಯಿಲ್ಲದ ವಾಯಿದೆಯಿಂದ ಕೇಳ್ಪಡುವುದು ಬ್ಯಾಂಕಿನಲ್ಲಿ ದೊರೆಯುವ ನಮೂನೆ (ಫಾರಂ) ಯಲ್ಲಿಯೇ ದರಖಾಸ್ತು ಬರೆಯಲ್ಪಡಬೇಕು

ಡಿರೆಕ್ಟರ್ಸು ಯಾನೆ ಕಾರ್ಯದರ್ಶಿಗಳು

ಮ|| ರಾ|| ಶ್ರಿ ಸಾಹುಕಾರ್ ಕಾಸರವಳ್ಳಿ ಶೇಷಪ್ಪನವರು,
,, ಕಿತ್ತಂದೂರು ತಿಮ್ಮಣ್ಣಭಟ್ಟರು,
,, ಚಿವಳಿ ರಂಗಪ್ಪನವರು,
,, ನಗರದ ನರಸಿಂಹಯ್ಯನವರು,
,, ಕೆ ಶಂಕರನಾರಾಯಣರಾವ್ ಎಂ ಎ , ಬಿ ಎಲ್ , [ಶಿವಮೊಗ್ಗ,
,, ಚಿವಳಿ ವಾಸುದೇವರಾಯರು,
,, ಭೂಪಾಲಂ ರುಕ್ಕಯ್ಯನವರು,
,, ಎಡೇಹಳ್ಳಿ ಲಿಂಗಪ್ಪನವರು,
,, ಎಲವಟ್ಟಿ ರಾಮರಾಯರು,
,, ಎಡೂರು ತಿಪ್ಪಾಜೋಯಿಸರು,
,, ದೇವಂಗಿ ರಾಮಣ್ಣಗೌಡರು,
,, ಆಗುಂಬೆ ರಾಮರಾಯರು,
,, ಭಾಪಿಕಟ್ಟೆ ನಾಗಾಭಟ್ಟರು,
,, ಕಟ್ಟೆ ಡಾಕಪ್ಪನವರು,
,, ಬೇಗುವಳ್ಳಿ, ವೆಂಕಟಸುಬ್ಬಣಾಚಾರ್ಯರು,
,, ಮೇಗರವಳ್ಳಿ ಅಪ್ಪುಭಟ್ಟರು,
,, ಉಡುಪಿ ಶ್ರೀನಿವಾಸಾಚಾರ್ಯರು,
,, ಮೇಳಿಗೆ ಸಣ್ಣಬಸಪ್ಪನವರು

ಪ್ರೆಸಿಡೆಂಟ್—ಮ|| ರಾ|| ಶ್ರಿ ಸಾಹುಕಾರ್ ಕಿತ್ತಂದೂರು ತಿಮ್ಮಣ್ಣಭಟ್ಟರು
ಟ್ರೆಷರರ್—ಮ|| ರಾ|| ಶ್ರಿ ಎಡೇಹಳ್ಳಿ ಲಿಂಗಪ್ಪನವರು
ಮ್ಯಾನೇಜಿಂಗ್ ಡಿರೆಕ್ಟರ್ —ಮ|| ರಾ|| ಶ್ರಿ ಮೇಳಿಗೆ ಸಣ್ಣಬಸಪ್ಪನವರು
ಲೀಗಲ್ ಅಡ್ವೈಸರ್ —ಮ|| ರಾ|| ಶ್ರಿ ಕೆ ಶಂಕರನಾರಾಯಣರಾವ್, ಎಂ ಎ . ಬಿ ಎಲ್ , ಅಡ್ವೊಕೇಟ್, ಶಿವಮೊಗ್ಗ

75-3

ಮಲನಾಡಿನಲ್ಲಿ ರೈತರಿಗೂ ವರ್ತಕರಿಗೂ ಋಣ ಸರಬರಾಯಿ ಕಡಮೆಯಾಗಿ ಬಡ್ಡಿಯ ದರವು ಜಾಸ್ತಿಯಾಗಿರುವ ತೊಂದರೆಯನ್ನು ನಿವಾರಣ ಮಾಡುವುದಕ್ಕೂ ಮತ್ತು ಶೀಘ್ರವಾಗಿರುವ ಹಣದ ಚಲಾವಣೆಗೆ ಸಿದ್ಧವಾದ ಮಾರ್ಗವನ್ನು ಕಲ್ಪಿಸುವುದಕ್ಕೂ ಈ ಮೇಲೆ ಕಂಡ ಮಹನೀಯರು ಮತ್ತು ಈ ತಾಲ್ಲೂಕಿನ ದೊಡ್ಡ ಮನುಷ್ಯರಾದ ಮ|| ರಾ|| ಶ್ರೀಗಳಾದ ಸಿರವಂತೆ ವಾಸಪ್ಪಯ್ಯನವರು, ಎಡೇಹಳ್ಳಿ ಶೇಷಪ್ಪನವರು, ಸಿರವಂತೆ ತಿಮ್ಮಪ್ಪಯ್ಯನವರು, ಸಿರವಂತೆ ನಾರಾಯಣರಾಯರು, ಆಗುಂಬೆ ನಾಗೇಶರಾಯರು, ಹೂವಿನ ಹಾಲಪ್ಪಗೌಡರು ಮತ್ತು ಹಾವಾರ್ಡಿ ಗಂಗಾಧರಾಂಸೂರಾಜಯವರು ಇವರುಗಳೂ ಸೇರಿ ತಾ 27—1—1913 ರಲ್ಲಿ ಈ ಸಂಘವನ್ನು ಸ್ಥಾಪಿಸಿದ್ದಾರೆ ಈ ಮಲೆನಾಡಿಗೆ ನೂತನವಾಗಿರುವ ಈ ಸಂಘದ ಉದ್ದೇಶಗಳು ನೆರವೇರುವಂತೆ ಈ ಸಂಘದ ಮೂಲಧನದಲ್ಲಿ ಈ ತಾಲ್ಲೂಕಿನ ಪ್ರಜೆಗಳೆಲ್ಲರೂ ಔದಾರ್ಯದಿಂದ ಷಿಸ್ಸೆಗಳನ್ನು ತೆಗೆದುಕೊಳ್ಳುವ ಮೂಲಕ ಪ್ರೋತ್ಸಾಹವನ್ನು ಕೊಡಬೇಕಾಗಿ ಪ್ರಾರ್ಥನೆ

ಈ ಸಂಘದ ನಿಬಂಧನೆಗಳನ್ನೂ (Articles of Association), ದರಖಾಸ್ತಿನ ನಮೂನೆ (ಫಾರಂ) ಗಳನ್ನೂ ಬ್ಯಾಂಕಿನ ಆಫೀಸಿನಲ್ಲಿ ಪಡೆಯಬಹುದು.

ತೀರ್ಥಹಳ್ಳಿ, ಎಂ. ಎಸ್. ಬಸಪ್ಪ,

ತಾ 8-4-1913 ಮ್ಯಾನೇಜಿಂಗ್ ಡಿರೆಕ್ಟರ್.

ನೋಟುಗಳು ಬಿದ್ದುಹೋಗಿವೆ

ಟ ಬಿ 65 69431 ನಂ 5 ರೂ. ನದು, ಬಿ ೯ 33-19175 ಮತ್ತು ಟ ಎ 50 17018 ನಂಬರುಗಳು ತಲಾ 100 ರೂ ನದು ಈ ಮೂರು ನೋಟುಗಳು ಶನ್ನ ಬಾಡಿಯಿಂದ ಪ್ಯಾಮನಾಹಿಸೆ ವೆ ಗಾವ ೩೧೩ 1 1 1 ರಲ್ಲಿ ಬಿದ್ದು ಹೋಗಿರುವವು ಇದನ್ನು ಪತ್ತೆ ಮಾಡಿ ಕೆಳಗಿನ ವಿಳಾಸಕ್ಕೆ ಒಪ್ಪಿಸಿದವರಿಗೆ 15 ರೂಪಾಯಿಗಳ ಬಹುಮಾನ ಕೊಡಲ್ಪಡುವುದು

ಟಿ ಕೆ ದೊರೆಸಾಮಯ್ಯ, ಸಿ ಆರ್ ಪೋಸ್ಟ್ ಕಂಟ್ರಾಕ್ಟರ್

[90-1] ತಿರಂಗೂರು, ತ್ರಿಂಗಟ್ಟಿ ತಾಲ್ಲೂಕು

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ ! ಕನ್ನಡಕ್ಕೆ ಸುಲಭವಾದ ದಾರಿ !

ಮೈಸೂರು ಲೋವರ್ ಸೆಕೆಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಶಾಲಿಗಳಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭವಾದ ರೀತಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ 1 ಆಣೆ ಅರೆಕ್ಕೊಂದು ಉಚಿತ

[187 20] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಬಹಳ ಮೇಲಾದ

ಇಮಿಟೇಷನ್ ವಜ್ರದ ಒಡವೆಗಳು.

ಹೊಸದಾಗಿ ಸೀಮೆಯಿಂದ ತರಿಸಿರುತ್ತೇವೆ

ಇಮಿಟೇಷನ್ ವಜ್ರದ ಒಡವೆಗಳನ್ನು ಈಗತಾನೇ ವಿಲಾಯಿತಿಯಿಂದ ತರಿಸಿರುತ್ತೇವೆ ಇದು ಉತ್ತಮವಾದ ವಜ್ರದ ಹಿಲೆಯಲ್ಲಿರುವ ಸೀರೊಂಟದೊಡನೆ ಕೂಡಿ ಬಹಳ ದಿನಗಳು ಕೆಡದೆ ಅತ್ಯಂತ ಪ್ರಕಾಶವಾಗಿರುತ್ತೆ ಇದನ್ನು ಧನವಂತರೂ ಕೂಡ ವಜ್ರದ ಹಿಲೆಗೆ ಬದಲಾಗಿ ಉಪಯೋಗಿಸುತ್ತಾರೆ ಇದಕ್ಕೆ ಅನೇಕವಾಗಿ ಗಿರಾಕಿಗಳು ಬರುತ್ತಿರುವುದರಿಂದ ಬೇಕಾದವರು ಜಾಗ್ರತೆ ತರಿಸಿಕೊಳ್ಳಬೇಕು ಜೊತೆ 1 ಕ್ಕೆ ಬೆಲೆ ರೂ 1 12 0 ಇದೇ ಕಲ್ಲಿನ ವಜ್ರ ಪತ್ತಕಡುಕು, ಬೇಸರಿ, ಕುರುಟುಬಾವಲಿ ಮೊದಲಾದವು ಸಿದ್ಧವಾಗಿವೆ

ಪತ್ತಕಡುಕು ಜೊತೆಗೆ ರೂ 1 8 0 ಬೇಸರಿಗೆ 12 ಆಣೆ ಕುರುಟುಬಾವಲಿ ಜೊತೆಗೆ ರೂ 2 ಮಾಗುವಾಟ್ಟಿಗೆ 1 ಆಣೆ [57 1]

ವಿಳಾಸ ವಿ ಶೇಷಾ ಅಂಡ್ ಬ್ರದರ್ಸ್
ನಂದಂಬಾಕಂ ಗ್ರಾಮ, ಸೈದಾಪೇಟೆ ತಾಲ್ಲೂಕು,
ಪರಂಗಿಮಲೈ ಪೋಸ್ಟು, ಮದ್ರಾಸು

ವೃತ್ತಾಂತ ಪತ್ರಿಕೆ

೦

ಸರ್ ೧೯೧೩ ನೇ ಇಸವಿ ಮೇ ತಾ ೧ ನೇ ಗುರುವಾರ

ಬಾಲ್ಕನ್ ಸೀಮೆಯ ವಿದ್ಯಮಾನಗಳು

ಮಾಂಟಿನೀಗ್ರೋದವರು ಹೊರತು ಬಾಲ್ಕನ್ ಸೀಮೆಯ ಅಧಿಪತಿಗಳ ಸಮುದಾಯದವರೆಲ್ಲಾ ಟರ್ಕಿಯವರ ಕೂಡ ಕರಾರು ಮಾಡಿಕೊಳ್ಳುವುದರಲ್ಲಿ ಕುತೂಹಲವುಳ್ಳವರಾಗಿದ್ದಾರೆ ಸ್ಕೂಟಾರಿಯಲ್ಲಿ ಮಾತ್ರ ಯುದ್ಧ ಕಾರ್ಯಗಳು ನಡೆಯುವವಲ್ಲದೆ ಇತರ ಎಲ್ಲಾ ಪ್ರದೇಶಗಳಲ್ಲೂ ಕೆಲವು ಕಾಲದಿಂದ ಕದನಗಳು ನಿಂತು ಹೋಗಿರುವವು ಯೂರೋಪಿಯನ್ ರಾಜ್ಯಗಳವರ ಅಭಿಮತವನ್ನು ಲಕ್ಷ್ಯ ಮಾಡದೆ ಮಾಂಟಿನೀಗ್ರೋದವರು ಟರ್ಕಿಯವರ ಮೇಲೆ ಸ್ಕೂಟಾರಿಯಲ್ಲಿ ಯುದ್ಧಕಾರ್ಯಗಳನ್ನು ನಡಿಸುತ್ತಾ ಬಂದರು ಕಡೆಗೆ ಸ್ಕೂಟಾರಿ ಪಟ್ಟಣವು ಮಾಂಟಿನೀಗ್ರೋದವರ ವಶವಾಯಿತು ಈಗ ಅವರು ಆ ಪಟ್ಟಣವನ್ನು ಆಕ್ರಮಿಸಿಕೊಂಡಿದ್ದಾರೆ ಬಹು ಕಾಲದಿಂದ ಅವರು ಆ ಪಟ್ಟಣಕ್ಕೆ ಮುತ್ತಿಗೆ ಹಾಕಿಕೊಂಡು ಅನೇಕ ಸಲ ಟರ್ಕಿಯ ಸೈನಿಕರ ಮೇಲೆ ಘೋರವಾದ ಯುದ್ಧಗಳನ್ನು ನಡಿಸಿದರು ಟರ್ಕಿಯವರಾದರೋ ಪಟ್ಟಣವನ್ನು ಶತ್ರುಗಳಿಗೆ ಬಿಟ್ಟುಕೊಡದೆ ಬಹು ಪರಾಕ್ರಮದಿಂದ ಕಾಪಾಡಿಕೊಳ್ಳುತ್ತಾ ಬಂದರೂ ಕಡೆಗೆ ಆಹಾರ ಸಾಮಗ್ರಿಗಳ ಅಭಾವದಿಂದಲೋ ಏನೋ ಅವರು ಪಟ್ಟಣವನ್ನು ಒಪ್ಪಿಸಿಬಿಡಬೇಕಾಯಿತು. ಈ ಯುದ್ಧವು ಆರಂಭವಾದಾರಭ್ಯ ಬಾಲ್ಕನ್ ಸೀಮೆಯ ಎಲ್ಲಾ ಭಾಗಗಳಲ್ಲೂ ಟರ್ಕಿಯವರು ಸೋತುಹೋಗಿರುತ್ತಾರೆಂದು ಹೇಳಬೇಕಾಗಿಲ್ಲ. ಆದರೆ ಕಾನ್‌ಸ್ಟಾಂಟಿನೋಪಲ್ ಪಟ್ಟಣದ ಸಮೀಪದಲ್ಲಿ ಮಾತ್ರ ಅವರಿಗೆ ಅಪಜಯವಾಗಲಿಲ್ಲ

ಕರಾರು ನಡೆಯುವ ಪ್ರಸ್ತಾಪವು ಬಹು ಕಾಲದಿಂದ ನಡೆಯುತ್ತಾ ಬಂದಿದ್ದಾಗ್ಯೂ ಅದು ಇನ್ನೂ ಕೊನೆ ಮುಟ್ಟದೆ ಇದೆ, ಮತ್ತು ಇದಕ್ಕೆ ಕಾರಣವಾಗಲು ಮಧ್ಯಸ್ಥಗಾರರಿಗೆ ನಾನಾ ಕಷ್ಟಗಳು ಕಂಡು ಬರುತ್ತವೆ ಗ್ರೇಟ್ ಬ್ರಿಟನ್, ಫ್ರಾನ್ಸ್, ಜರ್ಮನಿ, ರಷ್ಯಾ, ಆಸ್ಟ್ರಿಯಾ, ಇಟಲಿ, ಈ ರಾಜ್ಯಗಳ ಪ್ರತಿನಿಧಿಗಳು ಟರ್ಕಿ ಬಾಲ್ಕನ್ ಪ್ರಭುತ್ವಗಳಿಗೆ ಕರಾರು ಮಾಡಬೇಕೆಂದು ವಿಶೇಷವಾಗಿ ಸಾಧನೆ ಮಾಡುತ್ತಿದ್ದಾರೆ ಸ್ವಲ್ಪ ಕಾಲಕಾಲವಾದಾಗ್ಯೂ ಎಲ್ಲರಿಗೂ ಒಪ್ಪಾಗಿರೋಣವೆಂದು ಕರಾರು ನಡೆಯುವುದೇನೋ ಖಂಡಿತವೆಂದು ತಿಳಿಯಬೇಕು ಸ್ಕೂಟಾರಿ ಪಟ್ಟಣವು ಸ್ವಾಧೀನವಾಯಿತಾದದ್ದರಿಂದ ಈಗ ಮಾಂಟಿನೀಗ್ರೋದವರು ಕೂಡ ಕರಾರನ್ನು ಅಪೇಕ್ಷಿಸಬಹುದು ಅವರು ಯುದ್ಧ ಕಾರ್ಯಗಳನ್ನು ಮುಂದುವರಿಸಿ ನಡಿಸದಂತೆ ತಡೆಯಬೇಕೆಂಬ ಉದ್ದೇಶದಿಂದ ಪರರಾಜ್ಯಗಳವರು ತಮ್ಮ ಯುದ್ಧದ ಹಡಗುಗಳನ್ನು ಮಾಂಟಿನೀಗ್ರೋ ಸಮುದ್ರತೀರದ ಬಳಿಗೆ ಕಳುಹಿಸಿಕೊಟ್ಟಿರುತ್ತಾರಾದರೂ ಇದರಿಂದ ಇದುವರೆಗೆ ಅವರ ಉದ್ದೇಶವೇನೂ ನೆರವೇರಿದಂತಾಗಲಿಲ್ಲ

ಸ್ಕೂಟಾರಿ ಪಟ್ಟಣವನ್ನು ಮಾಂಟಿನೀಗ್ರೋದವರು ... ಸರ್ವಿಯ, ಗ್ರೀಸ್, ಮಾಂಟಿನೀಗ್ರೋ ... ಬಾಲ್ಕನ್ ಸೀಮೆಯ ಸಮುದಾಯ ರಾಜ್ಯಗಳವರು ಕರಾರಿನ ಸಮಯದಲ್ಲಿ ತಮ್ಮ ತಮ್ಮ ... ಲಾಭ ಬಗೆಬೇಕೆಂಬುದನ್ನು ... ನಿಷ್ಕರ್ಷಮಾಡಿಕೊಂಡಿಲ್ಲ ಅವರವರ ಮಧ್ಯೆ ಉಂಟಾಗಿರುವ ವಿರೋಧಾಭಿಪ್ರಾಯಗಳನ್ನು ವರ್ತಮಾನ ಪತ್ರಿಕೆಗಳು ಉತ್ಪ್ರೇಕ್ಷೆ ಮಾಡಿರಬಹುದೆಂದು ತೋರುತ್ತದೆ ಆದಾಗ್ಯೂ ಈಗ ಟರ್ಕಿಯವರಿಂದ ಗೆದ್ದುಕೊಂಡಿರುವ ಸೀಮೆಯ ಹಂಚಿಕೆಯ ವಿಚಾರವು ಸುಲಭಸಾಧ್ಯವೆಂದು ಹೇಳುವಂತಿಲ್ಲ ಇವರ ಮಧ್ಯಸ್ಥಿಕೆ ಮಾಡಲು ನಿಂತಿರುವ ಪರರಾಜ್ಯಗಳವರು ತಾವುಗಳಿಂದ ಪ್ರಾಂತಚಿತ್ತರಾಗಿಯೂ ಕಾರ್ಯಗಳನ್ನು ನಡೆಸಿ ಆ ಸೀಮೆಯನ್ನು ಅವರುಗಳಿಗೆ ನ್ಯಾಯವಾಗಿ ಸಮಾಧಾನವುಂಟಾಗುವಂತೆ ಹಂಚಿಕೊಟ್ಟು, ಅವರವರು ಐಕ್ಯಮತ್ಯವುಳ್ಳವರಾಗಿ ಬಾಳುವ ವ್ಯವಸ್ಥೆಗಳನ್ನು ಮಾಡುವವರಾಗಬೇಕೆಂದು ಹಾರೈಸುತ್ತೇವೆ

ಮಾಂಟಿನೀಗ್ರೋಗೂ ಗ್ರೀಸಿಗೂ ಮಧ್ಯೆ ಇರುವ ಪ್ರದೇಶವನ್ನು ಸ್ವತಂತ್ರ ರಾಜ್ಯವಾಗಿ ಮಾಡಿಟ್ಟು ಅದಕ್ಕೆ ಆಲ್ಬೇನಿಯ, ಎಂದು ಹೆಸರಿಡಬೇಕೆಂದು ಪರರಾಜ್ಯಗಳವರು ಯೋಚಿಸುತ್ತಿದ್ದಾರೆ ಈ ಹೊಸ ಸಂಸ್ಥಾನದ ಎಲ್ಲೆಯನ್ನು ಗೊತ್ತುಮಾಡುವುದರಲ್ಲಿ ಮಾಂಟಿನೀಗ್ರೋದವರಿಗೆ ಅಸಮಾಧಾನ ಉಂಟಾಗದಂತೆ ಮಾಡಬೇಕೆಂದಿರುವರು ಹಾಗಾದರೆ ಸ್ಕೂಟಾರಿ ಪಟ್ಟಣವು ಈ ಹೊಸ ಸಂಸ್ಥಾನಕ್ಕೆ ಸೇರುವುದು ಇದಕ್ಕೆ ಮಾಂಟಿನೀಗ್ರೋದವರು ಸಮ್ಮತಿಸುತ್ತಾರೆಯೇ ಎಂಬ ಸಂಶಯವಿದೆ ಮುಂದೆ ನೋಡಬೇಕು

ಕರಾರು ಮಾಡಿಸುವದೇನೂ ಸುಲಭಸಾಧ್ಯವಾದದ್ದಲ್ಲ ಇದಕ್ಕೆ ಅನೇಕ ತಕ್ಕಗಳೂ ಅಡಚಣೆಗಳೂ ಉಂಟು ಎಲ್ಲಾ ನಿರ್ಧಾರವಾಗಲು ಕೆಲವು ಕಾಲ ಹಿಡಿಯಬಹುದು ಅದರ ಒಳಗಾಗಿ ಪರರಾಜ್ಯಗಳವರು ಒಕ್ಕಟ್ಟಿನಿಂದ ಈ ಕಾರ್ಯಗಳನ್ನು ನಡಿಸುತ್ತಾ ಬರಬೇಕೆಂಬುದನ್ನು ನಮ್ಮ ಆಶಯವಾಗಿದೆ ಅಲ್ಲದೆ ಕರಾರು ಖಂಡಿತವಾಗಿ ಏರ್ಪಡುವುದರಲ್ಲಿ ಸಂಶಯವಿಲ್ಲ ಈ ಮೂಲಕ ಯೂರೋಪಿನ ಶಾಂತಿಯ ಸಮಾಧಾನದಿಂದಲೂ ನಮ್ಮ ಭಯವಾಗಿಯೂ ಕಾಣುವುದು.

ಇತ್ತೀಚಿನ ಪಂಚದಲ್ಲಿ ಟರ್ಕಿಯ ಹೆಸರು ನಿಲ್ಲದೇಕಾಗಿದ್ದ ಪಕ್ಷದಲ್ಲಿ ಅದು ತನ್ನ ರಾಜ್ಯಭಾರ ಕ್ರಮಗಳನ್ನು ಈಗಿನ ಕಾಲಕ್ಕೆ ತಕ್ಕ ಹಾಗೆ ಬದಲಾವಣೆಮಾಡಿಕೊಳ್ಳಬೇಕಾಗಿದೆ ಈಗ ತಾನೇ ಅದು ತನ್ನ ರಾಜ್ಯದಲ್ಲಿ ಬಹು ಭಾಗವನ್ನು ಕಳೆದುಕೊಂಡಿತು ಆಫ್ರಿಕದಲ್ಲಿದ್ದ ಟರ್ಕಿ ಭಾಗವು ಹೊಸ್ತ ತಾನೇ ಇಟಲಿಯವರ ಪಾಲಾಯಿತು ಯೂರೋಪಿನಲ್ಲಿ ಟರ್ಕಿಗೆ ಇದ್ದ ಸೀಮೆಗಳನ್ನು ಈಗ ಬಾಲ್ಕನ್ ಸಮುದಾಯ ರಾಜ್ಯಗಳವರು ಹಂಚಿಕೊಳ್ಳುತ್ತಿದ್ದಾರೆ ಆದಕಾರಣ ಏಷ್ಯಾ ಮೈನರಿನಲ್ಲಿರುವ ಸೀಮೆಯೊಂದು ಮಾತ್ರ ಈಗ ಟರ್ಕಿಯವರಿಗೆ ಉಳುಕೊಂಡಿದೆ ಈ ಸೀಮೆಯಾದರೋ ಬಹಳ ವಿಶಾಲವಾದದ್ದು ವಿವೇಕಪೂರ್ವಕವಾಗಿ ಆಳುತ್ತಾ ಬಂದ ಪಕ್ಷದಲ್ಲಿ ಅದು ಉತ್ಕೃಷ್ಟ ಸ್ಥಿತಿಗೆ ಬರುತ್ತದೆಂಬುದಕ್ಕೆ ಸಂಶಯವಿಲ್ಲ ಈಗ ಪ್ರಾಪ್ತವಾಗಿರುವ ಸ್ಥಿತಿಯನ್ನು ಟರ್ಕಿಯವರು ಉಪಯೋಗಿಸಿಕೊಂಡು ಏಷ್ಯಾ ಮೈನರನ್ನು ಬಲವತ್ತಾದ ಮತ್ತೂ ಪ್ರಬಲಪ್ರಭುತ್ವವಾದ ರಾಜ್ಯವಾಗಿ ಮಾಡಿಕೊಳ್ಳಲು ಇದು ಕಾರಣವಾಗುವುದನ್ನು ನೋಡಬೇಕೆಂದು ಆಶಿಸುತ್ತೇವೆ

ಚೀನಾ ದೇಶವೂ, ಕ್ರೈಸ್ತ ಮತವೂ.

ಎರಡು ವರುಷಗಳ ಕೆಳಗೆ ಚೀನಾ ಗವರ್ನಮೆಂಟಿನಲ್ಲಿ ದೊಡ್ಡ ಬದಲಾವಣೆಯಾದುದು ನಮ್ಮ ವಾಚಕ ಮಹನೀಯರುಗಳಿಗೆಲ್ಲಾ ಪ್ರಾಯಶಃ ತಿಳಿದಿದೆ ಮಾಂಚು ವಂಶೀಯರನ್ನು ಸಿಂಹಾಸನದಿಂದ ತಳ್ಳಿಬಿಟ್ಟು, ಪ್ರಜಾಪ್ರಭುತ್ವವಾಗಿರಬೇಕೆಂದು ಪ್ರಕಟಿಸಲ್ಪಟ್ಟಿತು ಇಂತಹ ಬದಲಾವಣೆಯಾಗುವಲ್ಲಿ ವಿಶೇಷ ಯುದ್ಧವು ನಡೆಯದೆ ಇದ್ದಾಗ್ಯೂ ಕೆಲವು ಪ್ರಾಣಗಳು ಹತವಾದುವು ಮಾಂಚು ವಂಶೀಯರ ಘನತೆಯ ಕಾಲದಲ್ಲಿ ಕ್ರೈಸ್ತ ಮಿಷನರಿಗಳು ಚೀನಾ ದೇಶದೊಳಗೆ ಹೋಗುವುದು ಅತಿ ದುರ್ಘಟವಾಗಿದ್ದಿತು ಕೆಲವು ಪ್ರದೇಶಗಳಲ್ಲಿ ಮಾತ್ರ ಆಂಗ್ಲೇಯರು ಸುರಕ್ಷಿತರಾಗಿದ್ದರು ಕ್ರೈಸ್ತರಿಗೆ ಪದೇ ಪದೇ ಹಿಂಸೆಯುಂಟಾಗುತ್ತಲೇ ಇದ್ದಿತು ಅವರ ಮತದ ವಿಶೇಷತೆಯು ಜನರಿಗೆ ತಿಳಿದಿರಲಿಲ್ಲ ಸರಕಾರದ ಉದ್ಯೋಗಸ್ಥರುಗಳು ಕೂಡ ಅವರಿಗೆ ಸಹಾಯವಾದ ಮನಸ್ಸುಳ್ಳವರಾಗಿರಲಿಲ್ಲ ಆಗಾಗ್ಗೆ ದಂಗೆ ಎದ್ದು ಅನೇಕ ಕ್ರೈಸ್ತರನ್ನು ಕೊಂದುಹಾಕುತ್ತಾ ಇದ್ದರು

ಕೆಲವು ವರುಷಗಳ ಹಿಂದೆ ಬಾಕ್ಸರುಗಳ ದಂಗೆಯು ನಡೆಯಿತೆಂಬುದನ್ನು ನಮ್ಮ ವಾಚಕ ಮಹನೀಯರುಗಳಿಗೆ ಜ್ಞಾಪಕವಿರಬಹುದು ಆ ದಂಗೆಕೋರರ ಉದ್ದೇಶವು ಚೀನಾ ದೇಶದೊಳಗಿದ್ದ ಆಂಗ್ಲೇಯರುಗಳನ್ನೂ ಮುಖ್ಯವಾಗಿ ಮಿಷನರಿಗಳನ್ನೂ ಕ್ರೈಸ್ತ ಮತಾವಲಂಬಿಗಳಾಗಿದ್ದ ಚೀನಾ ದೇಶೀಯರನ್ನೂ ಕೊಂದುಹಾಕಬೇಕೆಂಬುವುದೇ ಆಗಿದ್ದಿತು ಆ ಕಾಲದಲ್ಲಿ ಸಾವಿರಾರು ಮಂದಿ ಗಂಡಸರೂ ಹೆಂಗಸರೂ ಮಕ್ಕಳೂ ಕ್ರೂರವಾಗಿ ಕೊಲ್ಲಲ್ಪಟ್ಟರು ಇದನ್ನು ನೋಡಿ ಅನೇಕರು ಚೀನಾ ದೇಶದಲ್ಲಿ ಕ್ರೈಸ್ತ ಮತವೇ ನಿರ್ನಾಮವಾಗುವುದೆಂದು ಭಾವಿಸಿದರು - ಸತ್ಯಕ್ಕಾಗಿ ಪ್ರಾಣಕೊಟ್ಟವರ ರಕ್ತವು ಸಭೆಯ ಬೀಜವಾಗಿರುತ್ತದೆ ಎಂಬ ನಾಣ್ಣುಡಿಯು ಕ್ರೈಸ್ತರಲ್ಲಿ ರೂಢಿಯಾಗಿರುತ್ತದೆ ಇದರ ಅಭಿಪ್ರಾಯವೇನೆಂದರೆ— ಯೇಸು ಕ್ರಿಸ್ತನ ಮೇಲೆ ಇಟ್ಟಿರುವ ಭಕ್ತಿಯ ದೆಸೆಯಿಂದ ಕೊಲ್ಲಲ್ಪಡುವ ಪ್ರತಿಯೊಬ್ಬನಿಗೆ ಬದಲಾಗಿ ನೂರಾರು ಮಂದಿ ಕ್ರೈಸ್ತ ಸಭೆಗೆ ಬಂದು ಸೇರುವರು ಎಂಬುವುದೇ ಚೀನಾ ದೇಶದಲ್ಲಿಯೂ ಹೀಗೆಯೇ ನಡೆದಿರುತ್ತದೆ ಕ್ರೈಸ್ತರು ಯೇಸು ಕ್ರಿಸ್ತನನ್ನು ತಮ್ಮ ರಕ್ಷಕನಲ್ಲವೆಂದು ನಿರಾಕರಿಸುವುದಕ್ಕೆ ಬದಲಾಗಿ ಎಷ್ಟೋ ಧೈರ್ಯದಿಂದ ಆತನಿಗಾಗಿ ಚಿತ್ರಹಿಂಸೆಯನ್ನೂ ಮರಣವನ್ನೂ ಅನುಭವಿಸಿದುದನ್ನು ಜನರು ನೋಡಿದಾಗ, ಇಷ್ಟು ಶಾಂತಚಿತ್ತರಾಗಿ ಮರಣವನ್ನು ಸಂಧಿಸಿದ ಇವರು ನಿಜವಾದ ದೇವರನ್ನು ನಂಬಿದವರಾಗಿರಬೇಕೆಂದು

...ವು ಪಟ್ಟನ್ನು ನಡಿಸಿಕೊಂಡು, ಅನೇಕರು ಕ್ರೈಸ್ತ ಮತವನ್ನು ಅವಲಂಬಿಸಿ ಇದ್ದರು ಚೀನಾ ದೇಶದಲ್ಲಿ ಕ್ರೈಸ್ತ ಮತವು ವಿರೋಧಕ್ಕೂ ಹಿಂಸೆಗೂ ಮರಣಕ್ಕೂ ಗುರಿಯಾಗಿದ್ದಿತೆಂದು ಚರಿತ್ರೆಯಿಂದ ತಿಳಿದು ಬರುತ್ತದೆ

ಈಚೆಗೆ ಚೀನಾ ದೇಶದಲ್ಲಿ ನೂತನ ಸುಧಾರಣೆಯು ಉಂಟಾಗಿರುತ್ತದೆ ಹೊಸ ಪ್ರಜಾಪ್ರಭುತ್ವದ ಪಾರ್ಲಿಮೆಂಟ್ ಎಂಬ ಮಹಾ ಸಭೆಯು ಸೇರುವುದರಿಂದ ಕಳೆದ ವಾರ ಬಂದ ತಂತಿ ವರ್ತಮಾನದಿಂದ ತಿಳಿದುಬಂದಿದೆ ಹೊಸ ಗವರ್ನ್‌ಮೆಂಟಿನವರು ಯಥಾರ್ಥವಾಗಿಯೂ ನೀತಿಯಾಗಿಯೂ ತಮ್ಮ ಕಾರ್ಯಗಳನ್ನು ನಡಿಸುತ್ತಾ ಬರಬೇಕಾದರೆ, ದೇವರ ಆಶೀರ್ವಾದವು ತಮ್ಮ ಮೇಲೆ ನೆಲೆಗೊಂಡಿರಬೇಕಾದುದು ಪರಮಾವಶ್ಯಕವಾಗಿದೆ ಎಂಬುದನ್ನು ಮುಂದಿಟ್ಟು ಮಾಡಿಕೊಂಡಿರುತ್ತಾರೆ ಆದಕಾರಣ ಅವರುಗಳು ಹೊಸ ಗವರ್ನ್‌ಮೆಂಟಿನ ಅಭಿವೃದ್ಧಿಗಾಗಿ ನೀವು ಒಕ್ಕಟ್ಟಾಗಿ ಸೇರಿ ಪ್ರಾರ್ಥನೆಮಾಡಬೇಕೆಂದು ಕ್ರೈಸ್ತರನ್ನು ವಿಜ್ಞಾಪಿಸಿಕೊಂಡರು ಹಿಂದೆ ಯಾವ ಮತಸ್ಥರು ತಿರಸ್ಕರಿಸಲ್ಪಟ್ಟವರಾಗಿಯೂ ಹಿಂಸೆಗೂ ಮರಣಕ್ಕೂ ಗುರಿಯಾದವರಾಗಿಯೂ ಇದ್ದರೋ ಅಂಥವರನ್ನೇ ಈಗ ಸರಕಾರದವರು ಸನ್ಮಾನಿಸಿ ತಮಗೋಸ್ಕರವಾಗಿ ಪ್ರಾರ್ಥಿಸಬೇಕೆಂದು ಅವರನ್ನು ಕೇಳಿಕೊಂಡಿರುತ್ತಾರೆ

ಇಷ್ಟೇ ಅಲ್ಲ ಲೋಕದ ಬಹುದಿಕ್ಕುಗಳಲ್ಲಿರುವ ಎಲ್ಲಾ ಕ್ರೈಸ್ತ ಮಂಡಲಿಯವರನ್ನೂ ಚೀನ ಗವರ್ನ್‌ಮೆಂಟಿನವರು ತಮಗೋಸ್ಕರವಾಗಿ ಪ್ರಾರ್ಥನೆಮಾಡಬೇಕೆಂದು ಕೇಳಿಕೊಂಡರು ಆದಕಾರಣ ಕಳೆದ ಭಾನುವಾರ ಇಂಗ್ಲೆಂಡಿನಲ್ಲಿಯೂ, ಅಮೇರಿಕಾದಲ್ಲಿಯೂ ಈ ನಮ್ಮ ಇಂಡಿಯಾ ದೇಶದಲ್ಲಿಯೂ ಬೇರೆ ದೇಶಗಳಲ್ಲಿಯೂ ಚೀನಾ ದೇಶೀಯರಿಗಾಗಿ ಶ್ರೇಯಃಪ್ರಾರ್ಥನೆಗಳು ನಡೆದುವು

ಚೀನಾ ಗವರ್ನ್‌ಮೆಂಟಿನವರು ತಮ್ಮ ಹೊಸ ಪಾರ್ಲಿಮೆಂಟ್ ಸಭೆಯ ಮೇಲೆ ದೇವಾಶೀರ್ವಾದವು ಬರುವಂತೆ ಪ್ರಾರ್ಥಿಸುವುದಕ್ಕಾಗಿ ಕ್ರೈಸ್ತರನ್ನು ಕೇಳಿರುವುದರಿಂದ ಚೀನಾದವರೆಲ್ಲರೂ ಕ್ರೈಸ್ತರೆಂದು ಭಾವಿಸಿಕೊಳ್ಳಲಾಗದು ಆದರೆ ಇಂತಹ ವಿಶೇಷವಾದ ವಿಜ್ಞಾಪನೆಯನ್ನು ಮಾಡಿಕೊಂಡುದು ಚೀನಾದವರು ಈ ಗವರ್ನ್‌ಮೆಂಟ್ ದೇವರಿಲ್ಲದ ಗವರ್ನ್‌ಮೆಂಟಾಗಿರಬಾರದೆಂಬ ಅಭಿಪ್ರಾಯವುಳ್ಳವರಾಗಿರುತ್ತಾರೆ ಎಂಬುದನ್ನು ಪ್ರಕಾಶಪಡಿಸುತ್ತದೆ ದೇವರನ್ನು ತಿಳಿದು ಆತನನ್ನು ಸನ್ಮಾನಿಸದ ಹೊರತು ದೇಶದಲ್ಲಿ ಯಥಾರ್ಥವಾದ ನೀತಿಯೂ ಸಮಾಧಾನವೂ ಇರುವುದಿಲ್ಲ ಇದು ಮಾತ್ರವಲ್ಲದೆ ಈ ವಿಜ್ಞಾಪನೆಯಿಂದ ಚೀನಾದವರು ತಮ್ಮ ಈಗಿನ ಸ್ಥಿತಿಗತಿಗೆ ಮಾನಸಗಳಿಗೆ ಕ್ರೈಸ್ತ ಮತವೇ ಬೇರೆ ಎಲ್ಲಾ ಮತಗಳಿಗಿಂತ ಅನುಕೂಲವಾಗಿವೆ ಎಂದು ಭಾವಿಸಿಕೊಂಡಿರುವಂತೆ ತೋರುತ್ತದೆ ಬೌದ್ಧ ಮತವೂ ಕನ್‌ಫೂಸಿಯಸ್ ಮತವೂ ಚೀನಾದಲ್ಲಿ ಪ್ರಾಮುಖ್ಯವಾದ ಮತಗಳು ಇವುಗಳು ಚೀನಾದವರನ್ನು ಉತ್ತಮ ಸ್ಥಿತಿಗೆ ತಂದಿರುವುದಿಲ್ಲ ಬದಲಾವಣೆಯಾಗುವ ಕಾಲದಲ್ಲಿ ಜನಗಳನ್ನು ನಡಿಸುವಷ್ಟು ಶಕ್ತಿಯು ಈ ಮತಗಳಿಗೆ ಇರುವುದಿಲ್ಲವೆಂದು ತೋರುತ್ತದೆ ಕ್ರೈಸ್ತ ಮತದಲ್ಲಿ ಜೀವವು ಇರೋಣದರಿಂದ ಅದು ಎಲ್ಲಾ ಕಾಲಗಳಿಗನುಸಾರವಾಗಿ ಅನ್ವಯಿಸಿಕೊಳ್ಳಬಲ್ಲದು ಅದು ಬರೀ ಆಚಾರಗಳಿಂದ ಕೂಡಿರುವುದಿಲ್ಲ ಪರಮ ತಂದೆಯಾದ ದೇವರಲ್ಲಿ ಸ್ಥಿರವಾದ ನಂಬಿಕೆಯನ್ನಿಡುವುದೇ ಆ ಮತವಾಗಿರುತ್ತದೆ ಯೇಸು ಕ್ರಿಸ್ತನು ಪ್ರಿಕಶುದ್ಧನಾಗಿಯೂ ಪರೋಪಕಾರಿಯಾಗಿಯೂ ಜೀವಿಸಿ ಇದನ್ನು ನಮಗೆ ಪ್ರಕಟಿಸುತ್ತಾನೆ ಯೇಸು ಕ್ರಿಸ್ತನು ಲೋಕದ ಬೇರೆ ಜನಾಂಗದವರನ್ನು ಹೇಗೆ ನಡಿಸುತ್ತಾನೋ ಹಾಗೆಯೇ ಈಗ ಚೀನಾದವರನ್ನೂ ಮಾರ್ಗದರ್ಶಿಸುತ್ತಾನೆ ಆತನ ಬೋಧನೆಯಲ್ಲಿರುವ ಶಕ್ತಿಯನ್ನೂ ಸತ್ಯಾಂಶವನ್ನೂ ಚೀನಾದವರು ಈಗ ಮುಂದಟ್ಟು ಮಾಡಿಕೊಳ್ಳುತ್ತಾ ಬರುವುದನ್ನು ನೋಡಿ ನಾವು ಸಂತೋಷಿಸುತ್ತೇವೆ ಚೀನಾದವರು ತಮಗೋಸ್ಕರವಾಗಿ ಪ್ರಾರ್ಥನೆ ಮಾಡಬೇಕೆಂದು ಕ್ರೈಸ್ತರನ್ನು ವಿಜ್ಞಾಪಿಸಿಕೊಂಡುದು ವಿಶೇಷ ಸಂಗತಿಯಾಗಿದೆ ಬುದ್ಧಿವಂತರಾದ ಹಿಂದುಗಳು ಈ ವಿಷಯ ದೀರ್ಘಾಲೋಚನೆ ಮಾಡಬೇಕಾಗಿರುತ್ತದೆ

ಒಳದೇಶದ ವೃತ್ತಾಂತಗಳು.

ಕಳೆದ ಬುಧವಾರ ಬೆಳಗ್ಗೆ ಶ್ರೀಮನ್ ಮಹಾರಾಜರವರು ಮಹಾಮಾತೃಶ್ರೀಯವರ ಸಮೇತ ರಾಜಧಾನಿಯಿಂದ ನೀಲಗಿರಿಗೆ ದಯಮಾಡಿದರು ಅವರು ಸುಮಾರು ಆರು ವಾರಗಳ ತನಕ ಇರುವಂತೆ ಏರ್ಪಾಡಾಗಿದೆ

ಬೆಂಗಳೂರು ಶಂಕರಪುರದಲ್ಲಿರುವ ಶ್ರೀ ಶಂಕರಮಠದಲ್ಲಿ ಈ ತಿಂಗಳು 7 ರಿಂದ 11 ರ ವರೆಗೆ ಶಂಕರಜಯಂತ್ಯುತ್ಸವಗಳೂ ಸಂಸ್ಕೃತ ಉಪನ್ಯಾಸಗಳೂ ನಡೆಯುವುವೆಂದು ಸೆಕ್ರೆಟರಿ ಮಿ॥ ಸುಬ್ರಹ್ಮಣ್ಯ ಅಯ್ಯರವರು ತಿಳಿಸುತ್ತಾರೆ

ಮೈಸೂರು ಸಂಸ್ಥಾನದಲ್ಲಿ ಕಳೆದ 1903 ರಿಂದ 1905 ನೇ ಇಸವಿಯ ತನಕ ರೆಸಿಡೆಂಟರಾಗಿದ್ದು, ಸೀಮೆಗೆ ಹೋಗಿ ಅಲ್ಲಿ ವಿಶ್ರಾಂತಿಸುಖವನ್ನು ಪಡೆಯುತ್ತಿದ್ದ ಸರ್ ಜೇಂಸ್ ಆಸ್ಟಿನ್ ಬೂರ್ಡಿಲ್ಲಾನ್, ಕೆ. ಸಿ. ಎಸ್. ಐ. ರವರು ಕಾಲವಾದರೆಂದು ಕಳೆದ ಶುಕ್ರವಾರ ವರ್ತಮಾನಬಂದಿದೆ

ಬೆಂಗಳೂರು ಕೋಟೆಯೊಳಗೆ ವಿದ್ಯಾಭ್ಯಾಸದ ಇಲಾಖೆಯಲ್ಲಿ ಜವಾನನಾದ ಮುನಿಸ್ವಾಮಿ ಎಂಬವನು ಕಳೆದ ಬುಧವಾರ ಸಾಯಂಕಾಲ 7 ಗಂಟೆ ಹೊತ್ತಿನಲ್ಲಿ ಒಬ್ಬ ಬ್ರಾಹ್ಮಣ ಸ್ತ್ರೀಯು ಬರುತ್ತಿದ್ದಾಗ ಆಕೆಯ ಕೈಹಿಡಿದು ಎಳೆದನೆಂದು ರುಜುವಾತಾಗಿ, ಸಿಟಿ ಮ್ಯಾಜಿಸ್ಟ್ರೇಟರು ಆ ದೋಷಿಗೆ ಆರು ತಿಂಗಳ ಕಠಿಣ ಶಿಕ್ಷೆ ವಿಧಿಸಿದರು

ರಾಜಧಾನಿಯ ಸಿಟಿ ಮ್ಯಾಜಿಸ್ಟ್ರೇಟರು ಆ ಮುನ್ಸಿಪಲ್ ಕೌನ್ಸಿಲ್ ನಾಗೇಶರಾಯನು ಸರ್ಕಾರದ ಹಣ ದುರುಪಯೋಗಮಾಡಿದನೆಂದು ಹೇಳಿದ ಮೇಲೆ ಅಪರಾಧಿಯನ್ನು ಸೆಷನ್ಸ್ ವಿಚಾರಣೆಗೆ ಗುರಿಮಾಡಿರುತ್ತಾರೆ ಅಪರಾಧಿಯು ತನ್ನ ಕೈಫಿಯತ್ತಿನಲ್ಲಿ ತಾನು ಹಣವನ್ನು ದುರುಪಯೋಗಮಾಡಿದ್ದುಂಟೆಂದು ಹೇಳಿರುತ್ತಾನೆ

ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಜೋಡಿಜುಗಾರರಾದ ದೊಡ್ಡಮನುಷ್ಯರು ಗೌರವವಾದ ಮ್ಯಾಜಿಸ್ಟ್ರೇಟ್ ಕೆಲಸವನ್ನು ಒಪ್ಪಿಕೊಂಡು ನಡಿಸುತ್ತಾ ಸರಕಾರದವರಿಗೆ ಸಹಾಯಕರಾಗಿರೋಣದರಿಂದ ಅವರಿಗೆ ಸರ್ಕಾರದವರು ಇಟ್ಟಿರುವ ಟ್ರಾನ್ಸ್‌ಪೋರ್ಟ್ ಕಾಯಮ ಗಾಡಿಗಳನ್ನು ಬಾಡಿಗೆಗೆ ಕೊಡಬೇಕೆಂದು ಸರ್ಕಾರದವರು ನಿಯಮಿಸಿ ತೋರಿಸಿರುತ್ತಾರೆ

ಅರಸೀಕೆರೆಯಲ್ಲಿ ಹಿಂದಿನ ವಾರ ಒಬ್ಬ ಫಾರೆಸ್ಟ್ ಗಾರ್ಡನು ತನ್ನ ಕೆಳಗಿನ ಒಬ್ಬ ಜವಾನನನ್ನು ಗುಂಡಿನಿಂದ ಹೊಡೆದು ಕೊಂದುಹಾಕಿ, ಅಲ್ಲಿಗೆ ಕೆಲವು ಮೈಲಿ ದೂರದಲ್ಲಿರುವ ಬೊಮ್ಮನಹಳ್ಳಿಗೆ ಬರೀಚಿಕ್ಕಲಿ ಹೋಗಿ ಅಲ್ಲಿ ಅತನನ್ನು ಕರೆದು ಆತನಿಂದ ಬಟ್ಟೆ ಮುಂತಾದದ್ದನ್ನು ತೆಗೆದುಕೊಂಡು ಪರಾರಿಯಾಗಿರುತ್ತಾನೆಂದು ಕೇಳುತ್ತೇವೆ

ಕಾಶ್ಮೀರ ಸಂಸ್ಥಾನದ ಮಹಾರಾಜರವರ ಅರಮನೆಯಲ್ಲಿ ಮುಂದಿನ ವಾರ ಉತ್ಸವ ನಡೆಯುವುದಕ್ಕಾಗಿ ನಮ್ಮ ಮಹಾರಾಜರವರು ತಮ್ಮ ಪರವಾಗಿ ಸರ್ದಾರ್ ಎಂ. ಗೋಪಾಲರಾಜೇ ಅರಸಿನವರನ್ನು ಖಿಲ್ಲತ್ತುಗಳ ಸಮೇತ ಕಳುಹಿಸುವಂತೆ ಅಪ್ಪಣೆ ಮಾಡಿದ್ದಾರೆ ಸರ್ದಾರರು ಪರಿವಾರ ಸಮೇತ ನಾಳೆ ಇಲ್ಲಿಂದ ಕಾಶ್ಮೀರಕ್ಕೆ ಪ್ರಯಾಣಮಾಡುವರೆಂದು ಕೇಳುತ್ತೇವೆ

ಮೈಸೂರು ಮಹಾರಾಜಾ ಕಾಲೇಜಿನ ಕ್ರಿಕೆಟ್ ಕ್ಲಬ್ಬಿನವರು ಈಗ ನೀಲಗಿರಿಗೆ ಹೋಗಿ ನಮ್ಮ ಮಹಾರಾಜರವರ ಆತಿಥ್ಯದಲ್ಲಿರುತ್ತಾರಷ್ಟೆ ಇವರು ಕಳೆದ ವಾರ ನೀಲಗಿರಿ ಜಿಂಖಾನಾ ಕ್ಲಬ್ಬಿನವರ ಕೂಡ ಮೊದಲನೇ ಪಂದ್ಯವನ್ನು ಆಡಿದರು ಜಿಂಖಾನಾದವರು ಒಂದು ಸಲ ಆಡಿ 295 ರನ್ ಮಾಡಿದರು ಮಹಾರಾಜಾ ಕಾಲೇಜಿನವರು ಎರಡು ಸಲ ಆಡಿಯೂ 186 ರನ್ ಮಾತ್ರ ಮಾಡಿದ್ದರಿಂದ ಸೋತುಹೋದರು

ಅರಮನೆಯ ಮೃಗಾಲಯದಲ್ಲಿರುವ ಸುಮಾರು ಮೂರು ವರ್ಷದ ಆನೆ ಮರಿಯನ್ನು ಶ್ರೀಮನ್ ಮಹಾರಾಜರವರು ಐರ್ಲಾಂಡಿನ ರಾಜಧಾನಿಯಾದ ಡಬ್ಲಿನ್ ನಗರದ ಮೃಗಾಲಯಕ್ಕೆ ಬಹುಮಾನವಾಗಿ ಕಳುಹಿಸಿಕೊಡುವಂತೆ ಅಪ್ಪಣೆ ಕೊಟ್ಟಿದ್ದಾರೆ ಈ ಆನೆಯ ಕೂಡ ಒಬ್ಬ ಮಾವಟಿಗನು ಹಡಗಿನಲ್ಲಿ ಬೊಂಬಾಯಿನಿಂದ ಸೀಮೆಗೆ ಹೋಗಿ ಬರುವನು ಅದು ಈ ವಾರ ರಾಜಧಾನಿಯಿಂದ ಬೊಂಬಾಯಿಗೆ ರವಾನೆಯಾಗುವುದೆಂದು ಕೇಳುತ್ತೇವೆ

ಹೈದರಾಬಾದ್ ಸಂಸ್ಥಾನಕ್ಕೆ ಸೇರಿದ ವನಪರ್ತಿಯ ಒಡೆಯರ್‌ದಾರರು ಸಂಸಾರ ಸಮೇತ ಪರಿವಾರದೊಡನೆ ರಾಜಧಾನಿಗೆ ಬಂದು ವಾಟ್ ಸರ್ ಶೇಷಾದ್ರಿ ಅಯ್ಯರವರ ಬಂಗಲೆಯಲ್ಲಿ ಇಳುಕೊಂಡು ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಿರುವರು ಇವರು ತಮ್ಮ ಮಕ್ಕಳು ಮುಂತಾದವರಿಗೆಲ್ಲಾ ಅರಮನೆಯ ಗುರುಗಳಾದ ಶ್ರೀ ಪರಕಾಲಸ್ವಾಮಿಗಳವರಿಂದ ಮಠದಲ್ಲಿ ಮುದ್ರಾಧಾರಣೆಯನ್ನು ಮಾಡಿಸಿ, ಪಾದಪೂಜಾದಿಗಳನ್ನು ನಡಿಸಿದರೆಂದು ಕೇಳುತ್ತೇವೆ

ಮೊನ್ನೆ ಮಂಗಳವಾರ ರಾತ್ರಿ ರಾಜಧಾನಿಯ ಸಂಕಪೇಟೆ ರಾಮಮಂದಿರದಲ್ಲಿ ಅರಮನೆ ವಿದ್ವಾನ್ ಮ॥ ಬಿ. ಕೃಷ್ಣಪ್ಪನವರ ಹಾಡುಗಾರಿಕೆ ನಡೆಯಿತು. ಸರ್ದಾರ್ ಗೋಪಾಲರಾಜೇ ಅರಸಿನವರೇ ಮೊದಲಾದ ರಾಜಬಂಧುಗಳೂ, ಡೆಪ್ಯುಟಿ ಕಮಿಷನರ್‌ರೇ ಮೊದಲಾದ ಕೆಲವು ಸರ್ಕಾರಿ ಅಧಿಕಾರಿಗಳೂ, ಮ॥ ಬಸಮಯ ನವರೇ ಮುಂತಾದ ಪ್ರಮುಖ ವರ್ತಕರೂ ಹಾಜರಾಗಿದ್ದು ಸಂಗೀತವನ್ನು ಕೇಳಿ ಆನಂದಪಟ್ಟು, ಮ॥ ಕೃಷ್ಣಪ್ಪನವರ ಪಾಂಡಿತ್ಯವನ್ನು ಕೊಂಡಾಡಿದರು

ಕಳೆದ ವಾರ ನಮ್ಮಲ್ಲಿಗೆ ತಲಪಿದ ಧಾರವಾಡದ ಕರ್ನಾಟಕ ವೃತ್ತ ಮತ್ತೂ ಧನಂಜಯ ಪತ್ರಿಕೆಯಲ್ಲಿ ಕೆಳಗೆ ಕಂಡ ವರ್ತಮಾನವನ್ನು ಓದಿದೆವು — "ಮೈಸೂರಿನ ಮಹಾರಾಜರವರು ವಿದ್ಯುಚ್ಛಕ್ತಿಯಿಂದ ತುಂಬಿದ ಒಂದು ಕುದುರೆಯನ್ನು ತರಿಸಿರುವರು ಇದರ ಮೇಲೆ ಕೂತು ನಡಿಸಿದವರಿಗೆ ಬಹುಮಾನಕೊಡುವೆವೆಂದೂ ಹೇಳುವರು ಈ ಕುದುರೆಯನ್ನು ಯಾರಾದರೂ ನಡಿಸಲಿಚ್ಛಿಸಿದರೆ ಸ್ವಿಚನು ಯಂತ್ರವನ್ನು ತಿರುಗಿಸುವುದರಿಂದ ರಾಹುತನು ಬೀಳುವನು, ಇಲ್ಲವೇ ಕುದುರೆಯು ನಡೆಯುವುದೇ ಇಲ್ಲ ಈ ಸೋಜಿಗವನ್ನು ಅನೇಕರು ನೋಡಿ ಬೆರಗಾಗುತ್ತಿರುವರು" ಇಂಥಾ ಕುದುರೆಯನ್ನು ನಮ್ಮ ಮಹಾರಾಜರವರು ತರಿಸಿರುವುದನ್ನು ಮೈಸೂರಿನಲ್ಲಿ ಯಾರೂ ನೋಡಿರುವುದಿಲ್ಲ.

ತಕಾವಿ ಸಾಲಗಳನ್ನು ರೈತರು ವಾಪಸುಕೊಡುವ ವಿಷಯದಲ್ಲಿ ಈಗಿರುವ ವಾಯಿದೆಗಳು ಸಾಕಾಗುವುದಿಲ್ಲವೆಂದೂ, ಇನ್ನೂ ಹೆಚ್ಚಿಸಿಕೊಡಬೇಕೆಂದೂ ಡೆಪ್ಯುಟಿ ಕಮಿಷನರುಗಳು ವರದಿಯಿಂದ ಗವರ್ನ್‌ಮೆಂಟಿನವರು ಅವರ ಶಿಫಾರಸನ್ನು ಅನುಮೋದಿಸಿ ಅಂಥಾ ಸಾಲಗಳ ವಾಯಿದೆಯನ್ನು ಮುಂದೆ ಹೇಳುವಂತೆ ಹೆಚ್ಚಿಸುತ್ತಾರೆ — (1) ಸಾಮಾನ್ಯವಾದ ಬಿತ್ತನೆ ಬೀಜ ಕೊಂಡುಕೊಳ್ಳುವುದಕ್ಕೆ ತೆಗೆದುಕೊಂಡ ಸಾಲಕ್ಕೆ ವಾಯಿದೆ ಒಂದು ವರುಷ, (2) ಒಂದೇ ವರುಷದಲ್ಲಿ ಫಲ ಕೈಗೆ ಬಾರದಂಥಾ ಕಬ್ಬು ಮುಂತಾದ ಬಿತ್ತನೆ ಬೀಜ ಕೊಂಡುಕೊಳ್ಳುವುದಕ್ಕೆ ತೆಗೆದುಕೊಂಡ ಸಾಲದ ವಾಯಿದೆ ಎರಡು ವರುಷ, (3) ಜೀವನದ ಕಷ್ಟ ಪರಿಹಾರಕ್ಕೆ ತೆಗೆದುಕೊಂಡ ಸಾಲಕ್ಕೆ ಮೂರು ವರುಷ ವಾಯಿದೆ, (4) ವ್ಯವಸಾಯಸಾಧನ ಅಥವಾ ಯಂತ್ರಗಳನ್ನು ಕೊಂಡುಕೊಳ್ಳುವುದಕ್ಕೆ ತೆಗೆದುಕೊಂಡ ಸಾಲದ ವಾಯಿದೆ ಐದು ವರುಷ (5) ಇತರ ಕಾರ್ಯಗಳಿಗಾಗಿ ಕೊಡಲ್ಪಟ್ಟ ಸಾಲಗಳಿಗೆ ವಾಯಿದೆ ಹತ್ತು ವರುಷ

ಮೈಸೂರು ಗಜೆಟ್ ಸಂಗ್ರಹ.

ಮುಂದೆ ಹೇಳುವ ಸ್ಥಳಗಳಲ್ಲಿ ಪ್ಲೇಗ್ ಉಪದ್ರ ಕಾಣಿಸಿಕೊಂಡಿದೆ—ನೆಲಮಂಗಲ ತಾ॥ ಬೈಲ್‌ಕೋನೇನಹಳ್ಳಿ ಮತ್ತು ಕಡಬಗೆರೆ, ಕಾಡ್‌ಕಾನಹಳ್ಳಿ ತಾ॥ ತರಳು, ಮಾಗಡಿ ತಾ॥ ಚನ್ನೇನಹಳ್ಳಿ, ಆನೇಕಲ್ ತಾ॥ ಚಿಕ್ಕಮನಹಳ್ಳಿ, ದೇವನಹಳ್ಳಿ ತಾ॥ ಕಗ್ಗಲಿಹಳ್ಳಿ ಮತ್ತು ರಡ್ಡಿಹಳ್ಳಿ

ಮೈಸೂರಿನಲ್ಲಿರುವ ನಂಜರಾಜಬಹದ್ದೂರವರ ಛತ್ರದ ಕಮಿಟಿಮೆಂಬರುಗಳು—ಡೆಪ್ಯುಟಿ ಕಮಿಷನರು, ಮುನಿಸಿಪಲ್ ವೈಸ್‌ಪ್ರೆಸಿಡೆಂಟರು, ಎಗ್ಸಿಕ್ಯುಟಿವ್ ಇಂಜನಿಯರು, ಮಿ॥ ಪುಟ್ಟಯ್ಯಾಜಿ ಅರಸಿನವರು ಮತ್ತೂ ಮಿ॥ ಗುರಿಕಾರ್ ಬಸವಲಿಂಗಯ್ಯನವರು

ಫಾರೆಸ್ಟ್ ರೇಂಜರ್ ಮಿ॥ ಎಚ್. ಎಸ್. ಕೃಷ್ಣಪ್ಪನವರನ್ನು ಸಿರಾ ತಾಲ್ಲೂಕು ಬುಕ್ಕಾಪಟ್ಟಣದ ಯೂನಿಯನ್ ಪಂಚಾಯತ ಮೆಂಬರಾಗಿಯೂ, ಮಿ॥ ಬಯ್ಯರೆಡ್ಡಿಯವರನ್ನು ಶ್ರೀನಿವಾಸಪುರದ ತಾಲ್ಲೂಕ್ ಬೋರ್ಡ್ ಮೆಂಬರಾಗಿಯೂ, ಮಿ॥ ಟಿ. ಕೆ. ಮಹಮದ್ ಯೂಸೂಫ್ ಸಾಬರನ್ನು ಗುಂಡ್ಲುಪೇಟೆ ತಾಲ್ಲೂಕ್ ಬೋರ್ಡ್ ಮೆಂಬರಾಗಿಯೂ, ಮ॥ ಮುನಿಸ್ವಾಮಪ್ಪನವರನ್ನು ಚಿಕ್ಕಬಳ್ಳಾಪುರದ ತಾಲ್ಲೂಕು ಮಂಚನಬೆಲೆ ಯೂನಿಯನ್ ಮೆಂಬರಾಗಿಯೂ ನೇಮಿಸಿದೆ

ಮೈಸೂರು ಡಿಸ್ಟ್ರಿಕ್ಟ್ ಅ॥ ಕಮಿಷನರ್ ಮಿ॥ ವಿ. ಭೀಮರಾಯರಿಗೆ ಮೇ ತಾ 1 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಶಿವಮೊಗ್ಗಾ ಸಬ್ ಡಿವಿಜನ್ ಅ. ಕಮಿಷನರ್ ಮಿ॥ ಎ. ವಿ. ರಾಮನಾಥನವರಿಗೆ ಮೇ ತಾ 1 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಅ॥ ಕಮಿಷನರ್ ಮಿ॥ ಜಿ. ಹನುಮಂತರಾಯರು ಶಿವಮೊಗ್ಗಾ ಸಬ್ ಡಿವಿಜನ್ ಛಾರ್ಜನ್ನೂ ವಹಿಸಿರತಕ್ಕದ್ದು

ಸಾಗರದ ಸಬ್ ಡಿವಿಜನ್ ಅ॥ ಕಮಿಷನರ್ ಮಿ॥ ಎಸ್. ನಾರಾಯಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಆರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಆ ಕಾಲದಲ್ಲಿ ಡೆಪ್ಯುಟಿ ಕಮಿಷನರವರು ಸಾಗರದ ಸಬ್ ಡಿವಿಜನ್ ಛಾರ್ಜನ್ನೂ ವಹಿಸಿರತಕ್ಕದ್ದು

ಕುಣಿಗಲ್ ತಾಲ್ಲೂಕು ಅಮಲ್ದಾರ್ ಮಿ॥ ಕೆ. ಕೆ. ವೆಂಕಟಸ್ವಾಮಿ ಅಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮತ್ತೊಂದು ಹುಕುಂ ಕೊಡಲ್ಪಡುವ ತನಕ ತುಮಕೂರು ಸಬ ರಿಜಿಸ್ಟ್ರಾರ್ ಮಿ॥ ಇ. ಎಸ್. ವೆಂಕಟರಮಣ ಅಯ್ಯರವರು ಕುಣಿಗಲ್ ತಾಲ್ಲೂಕ್ ಅಮಲ್ದಾರ್ ಮತ್ತು 1ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು

ಶ್ರೀಮನ್ ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಮಿ॥ ಆರ್. ಎಚ್. ಕ್ಯಾಂಬೆಲ್‌ರವರಿಗೆ ಮೇ ತಾ 7 ರಿಂದ ಎರಡು ತಿಂಗಳೂ ಇಪ್ಪತ್ತನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮುಂದೆ ಹೆಸರಿಸುವವರನ್ನು 1ನೇ ಕ್ಲಾಸ್ ಸಬ್ ಪ್ರೊಬೇಷನ್ ಅಮಲ್ದಾರರಾಗಿ ನೇಮಕಮಾಡಿದೆ ಮಿ॥ ಗಳಾದ ಎ. ರಾಜರಾಯರು, ಬಿ. ಭೀಮರಾಯರು, ಆರ್. ಎ. ನರಸಿಂಹಯ್ಯಂಗಾರ್ಯರು, ಇ. ಎಚ್. ಫಾಂಸೆಕಾರವರು, ಸಿ. ಲಕ್ಷ್ಮೀನಾರಾಯಣರು, ಕೆ. ವೇದಾಂತಯ್ಯಂಗಾರ್ಯರು, ಸಜ್ಜನಪುರ ಮೊಹಿಯುದ್ದೀನ್ ಷರೀಫ್‌ರವರು, ಬಿ. ಲಿಂಗಯ್ಯನವರು

ಮುಂದೆ ಹೇಳುವ ಅಮಲ್ದಾರ್ಯಗಳ ಖಾಯಂ ಬಡ್ತಿ ಹುಕುಂ ಮಾಡಿದೆ — ಮಿ॥ ಎಂ. ಕೃಷ್ಣಸ್ವಾಮಯ್ಯಂಗಾರ್ಯರು, 1ನೇ ಕ್ಲಾಸಿಗೆ, ಮಿ॥ ಎನ್. ರಾಮರಾಯರು 2ನೇ ಕ್ಲಾಸಿಗೆ, ಮಿ॥ ಸಿ. ನಾರಾಯಣರಾಯರು 3ನೇ ಕ್ಲಾಸಿಗೆ, ಮಿ॥ ಜಿ. ಎಸ್. ರಾಮಸ್ವಾಮಯ್ಯಂಗಾರ್ಯರು 4ನೇ ಕ್ಲಾಸಿಗೆ

ಸರ್ಜನ್ ಮಿ॥ ಬಿ. ಟಿ. ರಾಘವೇಂದ್ರರಾಯರನ್ನು ತುಮಕೂರಿಗೆ ವರ್ಗ ಮಾಡಿದ್ದರಿಂದ ಅ॥ ಸರ್ಜನ್ ಮಿ॥ ಬಿ. ನಂಜಪ್ಪನವರು ದಿವಾನ್‌ರವರ ಬಳಿ ಮೆಡಿಕಲ್ ಆಫೀಸರಾಗಿ ನೇಮಿಸಲ್ಪಟ್ಟಿದ್ದಾರೆ

ಅಮಲ್ದಾರ್ ಮಿ॥ ವಿ. ಎಸ್. ವಾಸುದೇವರಾಯರನ್ನು ಮುಳಬಾಗಲಿನಿಂದ ಬಾಗೇಪಲ್ಲಿಗೂ, ಅಮಲ್ದಾರ್ ಮಿ॥ ಎಂ. ರಾಮಚಂದ್ರರಾಯರನ್ನು ಬಾಗೇಪಲ್ಲಿಯಿಂದ ಮುಳಬಾಗಲಿಗೂ, ಡೆಪ್ಯುಟಿ ಅಮಲ್ದಾರ್ ಮಿ॥ ಎಸ್. ಸುಬ್ಬರಾಯರನ್ನು ಯಡೇಹಳ್ಳಿಯಿಂದ ಕೊರಟಗೆರೆಗೂ, ಡೆಪ್ಯುಟಿ ಅಮಲ್ದಾರ್ ಮಿ॥ ಎಸ್. ಅಹೋಬಲಶಾಸ್ತ್ರಿಯವರನ್ನು ಕೊರಟಗೆರೆಯಿಂದ ಯಡೆಹಳ್ಳಿಗೂ ವರ್ಗಮಾಡಿದೆ

ಅ॥ ಅ॥ ಸರ್ಜನ್ ಮಿ॥ ಪಿ. ಎಸ್. ರಾಮಚಂದ್ರ ಅಯ್ಯರವರನ್ನು ಕಾಲರಾ ಡ್ಯೂಟಿಗಾಗಿ ಮೈಸೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ

ಶಿವಸಮುದ್ರದಲ್ಲಿ ಮಿ॥ ಎಸ್. ಜಿ. ಫಾರ್ಬೆಸ್‌ಯವರನ್ನು ಅ॥ ಚೀಫ್ ಆಪರೇಟರಾಗಿ ಮಾರ್ಚಿ ತಾ 31 ರಿಂದ ನೇಮಿಸಿದೆ

ಟಿ. ನರಸೀಪುರದ ತಾಲ್ಲೂಕು ಅಮಲ್ದಾರ್ ಮಿ॥ ಎಸ್. ವೆಂಕಟ್ರಮಣ ಶ್ರೌತಿಯವರಿಗೆ ಏಪ್ರೈಲ್ ತಾ 19 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಆ ಕಾಲದಲ್ಲಿ ಶಿರಸ್ತೆದಾರ್ ಮಿ॥ ಸಿ. ಎಸ್. ತಾತಯ್ಯಂಗಾರ್ಯರು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ಇಂಡಿಯಾ ದೇಶದ ವೃತ್ತಾಂತಗಳು.

ಪರ್ಷಿಯಾ ಎಂಬ ಜಹಜು 37,91,250 ರೂಪಾಯಿನ ಚಿನ್ನವನ್ನು ಹಿಂದುಸ್ಥಾನಕ್ಕೆ ತರುತ್ತಿದೆ

ಲಾಹೋರ್ ಪಟ್ಟಣದ ರೈಲ್ವೆ ಸ್ಟೇಷನನ್ನು ಹೊಸದಾಗಿ ವಿಸ್ತಾರವಾಗಿಯೂ, ನೇತ್ರಾನಂದಕರವಾಗಿಯೂ, ಕಟ್ಟಿಸಲಾರಂಭಿಸಿದ್ದಾರೆ ಈ ಕಾಮಗಾರಿಯು 1916ನೇ ಇಸವಿಗೆ ಪೂರೈಸುವುದೆಂದೂ, ಅದಕ್ಕೆ 25 ಲಕ್ಷ ರೂಪಾಯಿ ಖರ್ಚಾಗುವುದೆಂದೂ ಅಂದಾಜು ಮಾಡಲಾಗಿದೆ

ಕಲ್ಕತ್ತಾ ಪಟ್ಟಣದ ಬಳಿ ಬಾರಕ್‌ಪುರದಲ್ಲಿ ಕೃಷ್ಣದೋಷಘೋಷ್ ಎಂಬ ರೈತನು ತನ್ನ ಜಮೀನಿಗೆ ಗೊಬ್ಬರ ಹಾಕುತ್ತಿದ್ದಾಗ ಅವನ ಕಾಲಿಗೂ ಮೈಗೂ ಎರಡು ಗುಂಡುಗಳು ತಗಲಿ ಮೃತಪಟ್ಟನು ತನಿಖೆಮಾಡಿದಾಗ ಸಮೀಪದಲ್ಲಿ ಸೈನಿಕರು ಅಭ್ಯಾಸಮಾಡುತ್ತಿದ್ದರು ಅವರ ಬಂದೂಕಿನ ಗೋಲಿಗಳು ಅವನಿಗೆ ಬಡಿದು ಮರಣವನ್ನುಂಟುಮಾಡಿದವೆಂದು ಗೊತ್ತಾಯಿತು

ಸಿಲೋನ್ ದ್ವೀಪದ ರಾಜಧಾನಿಯಾದ ಕೊಲಂಬೋ ಪಟ್ಟಣದಲ್ಲಿ ಭೂಕಂಪವನ್ನು ಸೂಚನೆಮಾಡುವ ಯಂತ್ರಸಾಧನವನ್ನು ಇಟ್ಟಿದ್ದಾರೆ ಕಳೆದ 19ನೇ ತಾ ಬೆಳಗಿನ ಝಾಮದ 1 ಗಂಟೆಹೊತ್ತಿನಲ್ಲಿ ಭೂಕಂಪವಾದಂತೆಯೂ, ಈ ಭೂಕಂಪವು ಅಲ್ಲಿಂದ 3,600 ಮೈಲಿ ಫಾಸಲೆಯಲ್ಲಿ ಪ್ರಾಪ್ತವಾದಂತೆಯೂ, ಸುಮಾರು 10 ನಿಮಿಷಗಳತನಕ ನೆಲವು ಅಲುಗುತ್ತಿದ್ದಂತೆಯೂ ಆ ಯಂತ್ರವು ಸೂಚಿಸಿರುತ್ತದೆ

ಪೂರ್ವ ಬಂಗಾಳ ಪ್ರಾಂತ್ಯದಲ್ಲಿ ಈಚೆಗೆ ಡಕಾಯಿತಿಗಳು ನಡೆಯುವುದು ಹೆಚ್ಚುತ್ತಾಬಂದಿವೆ ಜೋಗನ್‌ದಾಸ್ ಚಕ್ರವರ್ತಿ ಎಂಬುವನ ಮನೆಗೆ ಕಳ್ಳರು ಬಿದ್ದು ಎಲ್ಲಾ ಲೂಟಿಮಾಡಿಕೊಂಡು ಹೋದರು ಬಾಬು ಆದಾಮಂಡನ ಮನೆಗೆ ನುಗ್ಗಿ ಕೊಳ್ಳೆಹೊಡೆದರು ಆದಾಯಿಸ್ವಾ ಎಂಬವನ ಮನೆಯನ್ನು ಪ್ರವೇಶಮಾಡಿ ನಗನಾಣ್ಯಗಳನ್ನು ಅಪಹರಿಸಿದರು ಈ ಕಳ್ಳರು ಮುಸಲ್ಮಾನರೆಂದೂ, ಅವರು ವೇಷಮರಸಿಕೊಂಡು ಬಂದಿದ್ದರೆಂದೂ ತಿಳಿದುಬರುತ್ತದೆ

ಪೂರ್ವ ಬಂಗಾಳಕ್ಕೆ ಸೇರಿದ ಮರ್ಗಾಫ್ ಡಿಸ್ಟ್ರಿಕ್ಟಿನಲ್ಲಿ ಡುಂರಿಯಾ ಎಂಬ ಕಲ್ಲಿದ್ದಲುಗಣಿ ಕಾರ್ಖಾನೆಯಲ್ಲಿ ಕೆಲವು ದಿನಗಳ ಕೆಳಗೆ ಸಿಡಿಮದ್ದು ಮುಂತಾದ ಸಾಮಗ್ರಿಗಳು ಕಳುವಾಗಿದ್ದವು ಈಗ ಮತ್ತೆ 237 ಪೌಂಡು ಡೈನಮೈಟ್ ಎಂಬ ಮದ್ದೂ, 100 ವಿದ್ಯುಚ್ಛಕ್ತಿಯ ದ್ರವ್ಯವೂ ಕಳುವಾಗಿದೆ ಗೋಷ್ಠ ಪೋಲೀಸಿನವರು ಇದರ ಪೂರ್ವೋತ್ತರವನ್ನು ಪತ್ತೆಮಾಡುತ್ತಿದ್ದಾರೆ ಈ ರೀತಿ ಮದ್ದುಗುಂಡು ಕಳುವಾಗುತ್ತಿರುವುದನ್ನು ತಡೆಯದಿದ್ದರೆ ದುರಾತ್ಮರಿಗೆ ಇದರಿಂದ ನಾನಾ ಕೆಟ್ಟ ಕೃತ್ಯಗಳನ್ನು ನಡಿಸಲು ಸಹಾಯವಾಗುವುದು

ಈ ವರುಷ ಹಿಂದುಸ್ಥಾನದಲ್ಲಿ ಪ್ರಥಮ (ಪ್ರೈಮರಿ) ವಿದ್ಯಾಭ್ಯಾಸವನ್ನು ವಿಶೇಷವಾಗಿ ಹರಡುವುದಕ್ಕೆ ಇಂಡಿಯಾ ಗವರ್ನ್‌ಮೆಂಟಿನವರು ಚಾಲ್ತಿಸಾಲಿನ ರಾಜಾದಾಯದಿಂದ 5,77,000 ರೂಪಾಯಿ ಖರ್ಚುಮಾಡುವುದಾಗಿ ತಿಳಿಸಿದ್ದಾರೆ ಇದಲ್ಲದೆ ಕಲ್ಕತ್ತೆಯಲ್ಲಿ ಯೂರೋಪಿಯನ್ ಪ್ರಜೆಗಳ ಮಕ್ಕಳ ವಿದ್ಯಾಭಿವೃದ್ಧಿಗೆ 10,000 ರೂಪಾಯಿ, ಬೇರೆಬೇರೆ ಕಾರ್ಖಾನೆಗಳಲ್ಲಿ ಕೂಲಿಮಾಡುವ ಜನರ ಮಕ್ಕಳ ವಿದ್ಯಾಭ್ಯಾಸಕ್ಕೆ 20,000 ರೂಪಾಯಿ ಪೂರ್ವ ಬಂಗಾಳದಲ್ಲಿರುವ ಬೋರ್ಡ್ ಸ್ಕೂಲುಗಳಿಗೆ 3,00,000 ರೂಪಾಯಿ, ಸುಲಭವಾದ ಸ್ಕೂಲ್ ಕಟ್ಟಡಗಳಿಗಾಗಿ 75,200 ರೂಪಾಯಿ, ಪ್ರೈಮರಿ ಸ್ಕೂಲುಗಳಿಗೆ ಸಾಮಾನುಗಳನ್ನು ಒದಗಿಸುವುದಕ್ಕೆ 1,23,000 ರೂಪಾಯಿ, ಈ ರೀತಿ ಖರ್ಚುಮಾಡುವರು

ಹಿಂದುಸ್ಥಾನದಲ್ಲಿ ಪೋಲೀಸಿನವರು ದಸ್ತಗಿರಿ ಮಾಡಿದ ಖೈದಿಗಳನ್ನು ಕ್ರೂರತರವಾದ ಹಿಂಸೆಗಳಿಗೆ ಗುರಿಪಡಿಸುತ್ತಾರೆಂಬುವುದು ಸುಪ್ರಸಿದ್ಧವಾಗಿದೆ ಆದರೆ ಕಾಲಕ್ರಮೇಣ ಈ ಕೃತ್ಯಗಳು ಕಡಮೆಯಾಗುತ್ತಾ ಬಂದಿರುವವು ಆದಾಗ್ಯೂ ಇಂಥಾ ಕೃತ್ಯಗಳಿಗೆ ಮೂಲಕಾರಣವಾಗಿರುವ ಭಾಗವನ್ನು ತೆಗೆದು ಹಾಕಿ ಕಾನೂನಿನಲ್ಲಿ ಬದಲಾವಣೆ ಮಾಡಿಬಿಟ್ಟರೆ ಕ್ಷೇಮವೆಂದು ಹಿಂದುಸ್ಥಾನದಲ್ಲೆಲ್ಲಾ ಸಂಚಾರಮಾಡಿಕೊಂಡು ಸೀಮೆಗೆ ದಯಮಾಡಿರುವ ಮಿ॥ ಮಾಂಟೆಗೂಂವರು ಪಾರ್ಲಿಮೆಂಟ್ ಸಭೆಯಲ್ಲಿ ಕಳೆದವಾರ ಅಪ್ಪಣೆ ಕೊಡಿಸಿರುತ್ತಾರೆ ಪೋಲೀಸಿನವರ ವಶದಲ್ಲಿರುವ ಖೈದಿಗಳು ಮ್ಯಾಜಿಸ್ಟ್ರೇಟರಲ್ಲಿ ಬರೆಸುವ ಕೈಫಿಯತ್ತು ನಿಸ್ಸಾರವೂ ನಿಷ್ಪ್ರಯೋಜನವೂ ಆಗಲೆಂದು ಕಾನೂನ್ ಬದಲಾವಣೆ ಮಾಡಿಬಿಟ್ಟರೆ ಅನುಕೂಲವೆಂದು ಕೆಲವರು ಸೂಚಿಸುತ್ತಾ ಬಂದಿರುವರು ಕ್ರಿಮಿನಲ್ ಪ್ರೊಸೀಜರ್ ಕೋಡಿನಲ್ಲಿ ಈ ಭಂಗವನ್ನು ತಿದ್ದುವ ವಿಷಯವನ್ನು ವೈಸ್‌ರಾಯರವರ ಮಂತ್ರಾಲೋಚನಾ ಸಭಿಕರು ಹಿಡಿದು ಚರ್ಚೆಮಾಡುವವರಾಗಿರೋಣದರಿಂದ ಪೋಲೀಸಿನವರ ಹಿಂಸೆಯನ್ನು ತಪ್ಪಿಸುವಭಾಗದಲ್ಲಿ ಯಾವ ಯಾವ ಬದಲಾವಣೆಗಳು ಮಾಡಲ್ಪಡಬೇಕೋ ದೇಶಭಕ್ತರು ಯೋಚಿಸಿ ತಿಳಿಸಿದ್ದಾರೆ. ಇಂಡಿಯಾ ಗವರ್ನ್‌ಮೆಂಟಿನವರು ಅವನ್ನು ಸಂತೋಷದಿಂದ ಅಂಗೀಕರಿಸುತ್ತಾರೆಂದು ಮಿ॥ ಮಾಂಟೆಗೂರವರು ಹೇಳಿದರು

ನಮ್ಮ ಪುಸ್ತಕ ಭಂಡಾರವು.

ಬೊಂಬಾಯಿ ಆಂಧ್ರ ಪತ್ರಿಕೆ.—ಬೊಂಬಾಯಿ ಪಟ್ಟಣದಲ್ಲಿ ಪ್ರಕಟವಾಗುವ ಆಂಧ್ರ ವಾರಪತ್ರಿಕೆಯ ಸಂಪಾದಕರು ಅಲ್ಲಿನ ತತ್ವವಿವೇಚಕ ಮುದ್ರಾಕ್ಷರಶಾಲೆಯಲ್ಲಿ ಈ ಪ್ರಮಾದೀಚ ಸಂವತ್ಸರದ ಪ್ರಥಮ ಸಂಚಿಕೆಯನ್ನು ಬಹು ನೇತ್ರಾನಂದಕರವಾಗಿ ಅಚ್ಚು ಹಾಕಿ ಒಂದು ಪ್ರತಿಯನ್ನು ನಮ್ಮಲ್ಲಿಗೆ ಕಳುಹಿಸಿರುತ್ತಾರೆ. 200 ಪುಟಗಳ ಮೇಲಿರುವ ಈ ಸಂಚಿಕೆಯು ಪುಸ್ತಕರೂಪದಲ್ಲಿದ್ದು, ಆಂಧ್ರ ಸೀಮೆಯ ಭೂಪಟ, ಪ್ರಮಾದೀಚ ಸಂವತ್ಸರದ ಪಂಚಾಂಗ, ದೇಶೋನ್ನತಿಗೆ ಸಹಾಯ ಭೂತವಾದ ಅನೇಕ ಉಪಯುಕ್ತ ವಿಷಯಗಳನ್ನು ಕುರಿತ ಉಪನ್ಯಾಸಗಳು, ಕವನಗಳು, ಹಿಂದುಸ್ಥಾನದಲ್ಲಿರುವ ಇಂಗ್ಲೀಷ್ ಮತ್ತು ದೇಶೀಯ ಪ್ರಧಾನ ಸ್ತ್ರೀಪುರುಷರ ಚಿತ್ರಪಟಗಳು, ದಿವ್ಯವಾದ ಪ್ರಸಿದ್ಧ ಕಟ್ಟಡಗಳ ಮತ್ತು ದೇವಸ್ಥಾನಾದಿಗಳ ಚಿತ್ರಗಳು, ಅನ್ಯದೇಶಗಳ ಕೆಲವು ಮಹನೀಯರ ತಸ್ವೀರುಗಳು ಮೊದಲಾದವುಗಳನ್ನು ಒಳಗೊಂಡಿರುತ್ತದೆ. ಇದರಲ್ಲಿರುವ ವಿಷಯಗಳನ್ನು ಕುರಿತ ಉಪನ್ಯಾಸಗಳನ್ನು ಆಂಧ್ರ ಸೀಮೆಯಲ್ಲೆಲ್ಲಾ ಗಣ್ಯರಾದ ದೇಶವತ್ಸಲರು ಬಹು ಸ್ವಾರಸ್ಯವಾಗಿಯೂ, ಸಕಲರೂ ಪ್ರಯೋಜನ ಹೊಂದುವ ರೀತಿಯಲ್ಲಿ ಬರೆದಿರುತ್ತಾರೆ.

ಸ್ವರಾಜ್ಯವರ್ಧನಿಯು.—ಬೊಂಬಾಯಿನಲ್ಲಿ ಪ್ರೊಫೆಸರ್ ಲಟ್ಟೆಯವರು ಈ ಆಂಕಿತದಿಂದ ಇಂಗ್ಲೀಷಿನಲ್ಲಿ ಒಂದು ಪ್ರಬಂಧವನ್ನು ಬರೆದು ಶ್ರೀಮನ್ ಮಹಾರಾಜ ಛತ್ರಪತಿ ಸರಕಾರ ಕರವೀರ ಇವರ ಮಹದಾಶ್ರಯದಿಂದ ಪ್ರಸಿದ್ಧಮಾಡಿದರು. ಇದರ ಕನ್ನಡ ಭಾಷಾಂತರವನ್ನು ಕೊಲ್ಹಾಪುರದ ರಾವ್ ಬಹದೂರ್ ಪ್ರೊಫೆಸರ್ ಮ. ಗ. ಡೋಂಗರೇಯವರು ಪ್ರಕಾಶಪಡಿಸಿದಾರೆ. ಇದರ ಪ್ರಸ್ತಾವನೆಯಲ್ಲಿ ಕಂಡ ಅಭಿಪ್ರಾಯವನ್ನು ಓದಿಕೊಂಡರೆ ಈ ಗ್ರಂಥದ ಆಶಯವು ಸ್ಪಷ್ಟವಾಗುತ್ತದೆ. ಅದೇನೆಂದರೆ—"ಇಂಗ್ಲೀಷರು ತಮ್ಮ ಸಿಪಾಯಿಯನ್ನು ಹಿಂದುಸ್ಥಾನದಲ್ಲಿ ಆರಂಭಿಸಿ ಇಲ್ಲಿಗೆ ನಾಲ್ಕು ತಲೆಗಳು ಸಂದು ಅದನ್ನು ಕಲಿತರು. ಆದರೂ ಇಂಗ್ಲೀಷರಲ್ಲಿರುವ ಸಾರ್ವಜನಿಕ ಗುಣಗಳು ನಮ್ಮವರಲ್ಲಿ ಉದಯವಾಗಲಿಲ್ಲ. ಮತ್ತು ಸಾರ್ವಜನಿಕ ಸಂಸ್ಥೆಯನ್ನು ಸಾಗಿಸುವ ಯೋಗ್ಯತೆಯು ಹತ್ತನೇ ಒಂದು ಪಾಲಷ್ಟು ಸಹ ನಮ್ಮ ದೇಶದ ಸುಶಿಕ್ಷಿತರಲ್ಲಿ ಕಂಡುಬರುವುದಿಲ್ಲ. ಅದ್ದರಿಂದಲೇ ತಕ್ಕಷ್ಟಕ್ಕಿಂತ ಹೆಚ್ಚಿನ ರಾಜಕೀಯ ಅಧಿಕಾರವನ್ನು ಹಿಂದುಜನರಿಗೆ ಒಮ್ಮೆಲೇ ಕೊಡಲಾರರು."

ಬೇಲೂರು ಉಪಾಸನ ಸಮಾಜ.—ಮಾಗಡಿಯ ಮ. ಎಂ. ಟಿ. ನಲ್ಲಭಯ್ಯಂಗಾರ್ಯರು ಬೇಲೂರು ಉಪಾಸನಾಸಮಾಜದ ಮತ್ತು ಶ್ರೀ ಮಂಜುನಾಥ ಅನಾಥಾಲಯದ ಸಂಕ್ಷೇಪ ಚರಿತ್ರೆಯನ್ನೂ ಕನ್ನಡದಲ್ಲಿ ರಚಿಸಿ ಒಂದು ಪ್ರತಿಯನ್ನು ನಮ್ಮಲ್ಲಿಗೆ ಕಳುಹಿಸಿದ್ದಾರೆ. ಬೇಲೂರಿನಲ್ಲಿ ಅಗ್ರಗಣ್ಯರೆನಿಸಿದ್ದ ಸಾಹುಕಾರ್ ಗೋವಿಂದಪ್ಪನವರು ಬ್ರಾಹ್ಮಣ ಮತ್ತು ಅನಾಥ ಬಾಲಕರ ಸಂರಕ್ಷಣೆಗಾಗಿ ಆಲಯವನ್ನು ಕಲ್ಪಿಸಿ, ಅದು ಶಾಶ್ವತವಾಗಿ ನಡೆದು ಬರುವಂತೆ ರೂ 21,000 ಮೂಲಧನವನ್ನು ದಾನ ಪಟ್ಟಾಗಿ ಮಾಡಿರುತ್ತಾರೆಂದು ತಿಳಿದು ಸಂತೋಷಪಡುವೆವು. ಸರ್ಕಾರದವರು ಈ ಮೂಲಧನಕ್ಕೆ ವಾರ್ಷಿಕವಾಗಿ 70 ರೂಪಾಯಿ ಬಡ್ಡಿ ಕೊಡುತ್ತಾರೆ.

ಯಂತ್ರಶಕ್ತಿ.—ಮೈಸೂರು ಸಂಪದಭಿವೃದ್ಧಿ ಸಮಾಜದವರು ಯಂತ್ರಶಕ್ತಿ ವಿಚಾರವಾದ 6 ನೇ ನಂಬರು ವೃತ್ತಪತ್ರವನ್ನು ಪ್ರಕಟಿಸಿ ಒಂದು ಪ್ರತಿಯನ್ನು ನಮ್ಮಲ್ಲಿಗೆ ಕಳುಹಿಸಿರುತ್ತಾರೆ. ಇದನ್ನು ಮಿ ಎ. ಫಾಟಿರ್‌ಟರ್ ರವರು ಬರೆದಿರುವರು. ಈ ದೇಶದಲ್ಲಿ ಯಂತ್ರಶಕ್ತಿಯನ್ನು ಪ್ರಯೋಗಿಸಿ ವ್ಯವಸಾಯವನ್ನು ಕೈಗಾರಿಕೆಗಳನ್ನೂ ನಡಿಸಿದರೆ ವಿಶೇಷ ಪ್ರಯೋಜನವಾಗುತ್ತದೆಂಬುದೇ ಈ ಪುಸ್ತಕದ ಆಶಯವಾಗಿದೆ. ಇದನ್ನು ತಿಳಿಗನ್ನಡದಲ್ಲೇ ಬರೆದಿರುತ್ತಾರಾದರೂ ಸಾಮಾನ್ಯ ಜನರಿಗೆ ಅಷ್ಟು ಬೇಗನೇ ಅರ್ಥವಾಗುವಂತಿಲ್ಲ. ಜನರು ಸಾಧಾರಣವಾಗಿ ವಿದ್ಯೆಯನ್ನು ಕಲಿತವರಾಗಿಲ್ಲದಿರುವಾಗ ಇಂಥಾ ಕಷ್ಟ ವಿಷಯಗಳನ್ನು ಬರವಣಿಗೆಯ ಮೂಲಕ ಅವರಿಗೆ ತಿಳಿಸಬೇಕೆಂದು ಪ್ರಯತ್ನಿಸುವುದು ಅಷ್ಟೇನೂ ಫಲಕಾರಿಯಾಗಲಾರದು. ಇದರಲ್ಲಿರುವ ವಾಕ್ಯಗಳಾದರೋ ಬಹು ದೀರ್ಘವಾಗಿರುತ್ತವೆ. ಆಲೋಚನೆ ಮಾಡುವಂತೆ ಮಾತುಗಳು ಸುಲಭವಾಗಿಯೂ ಇದ್ದರೆ ಅನುಕೂಲ. ಮತ್ತು ಇಂಥಾ ವಿಚಾರಗಳನ್ನು ಸಾಮಾನ್ಯ ಪ್ರಜೆಗಳಿಗೆ ವ್ಯಾಖ್ಯಾನ ಮಾಡಿ ತೋರಿಸಿದರೆ ಅದರ ಮನಸ್ಸಿಗೆ ಬಹಳ ಬೇಗ ಹಿಡಿಯುತ್ತದೆ. ಈ ಕಾರಣದಿಂದ ನಾವು ಈ ಹಸ್ತ ಪತ್ರವನ್ನು ಸಂಪೂರ್ಣವಾಗಿ ಪ್ರಕಟಿಸದೆ ಮೌನಸಿಕವಾಗಿರುತ್ತೇವೆ.

ಸನಾತನ ಧರ್ಮಕಥಾವಳಿ.—ಇದನ್ನು ಮೈಸೂರಿನಲ್ಲಿರುವ ಮ. ಅನಂತರಾಮರಾಯರು ರಚಿಸಿ ಭುವನೇಶ್ವರಿ ಮುದ್ರಾಲಯದಲ್ಲಿ ಚೆನ್ನಾಗಿ ಅಚ್ಚು ಹಾಕಿಸಿರುತ್ತಾರೆ. ಇದರಲ್ಲಿ ಪುರಾಣ ಇತಿಹಾಸಗಳಿಂದ ಕಥೆಗಳನ್ನು ಎತ್ತಿ ಬರೆದು ಅದರ ಮೂಲಕ ಸನಾತನ ಧರ್ಮಮಾರ್ಗಗಳನ್ನು ಬಾಲಕರಿಗೆ ತಿಳಿಸಲು ಪ್ರಯತ್ನಪಟ್ಟಿರುವರು. ಸತ್ಯವನ್ನು ಯಾವಾಗಲೂ ಹೇಳುತ್ತಿರಬೇಕೆನ್ನುವುದನ್ನು ಉದಾಹರಿಸುವುದಕ್ಕೆ "ಅಶ್ವತ್ಥಾಮೋ ಹತಃ ಕುಂಜರಃ" ಎಂಬ ಕಥೆಯನ್ನು ಹೇಳಿದಾರೆ. ಈ ಕಥೆಯು ಮಕ್ಕಳಿಗೆ ಅಂಥಾ ಬುದ್ಧಿಮತಿಯನ್ನು ಕಲಿಸುವುದಕ್ಕೆ ಪ್ರತಿಯಾಗಿ ದೇವರ ಅವತಾರವೆಂದು ಹೇಳುವ ಕೃಷ್ಣನು ಧರ್ಮರಾಯನಿಗೆ ಸುಳ್ಳಾಡುವಂತೆ ಯುಕ್ತಿಯನ್ನು ಹೇಳಿಕೊಟ್ಟದ್ದರಿಂದ ಸುಳ್ಳಾಡುವುದು ದೇವರಿಗೆ ಸಮ್ಮತವಾಗಿದೆ ಎಂಬುದನ್ನು ಮಕ್ಕಳಿಗೆ ತೋರಿಸಿಕೊಟ್ಟಂತಾಗುತ್ತದೆ. ಪ್ರತಿ ಒಂದು ವಿಷಯದ ಪ್ರಾರಂಭದಲ್ಲೂ ಒಂದು ಕಂದಪದ್ಯ, ಬಳಿಕ ಕಥೆ, ತರುವಾಯ ಕಥಾ ವಿಷಯದ ಪ್ರಶ್ನೆಗಳು, ಕಡೆಯಲ್ಲಿ ಒಂದು ಹಾಡು, ಈ ಪ್ರಕಾರ ಈ ಪುಸ್ತಕದಲ್ಲಿ ರಚಿಸಲ್ಪಟ್ಟಿದೆ.

ಮಗುವನ್ನು ಪೋಷಿಸುವ ಕ್ರಮ.—ಬೇಲೂರು ಅ॥ ನರ್ಸ್ ರಂಗ ಗುರುರಾಯರು ಈ ಸಣ್ಣ ಪುಸ್ತಕವನ್ನು ರಚಿಸಿರುತ್ತಾರೆ. ಮಕ್ಕಳನ್ನು ಸರಿಯಾಗಿ ಪೋಷಣೆಮಾಡುವ ಕ್ರಮಗಳು ತಂದೆ ತಾಯಿಗಳಿಗೆ ತಿಳಿಯದೆ ಇರೋಣದರಿಂದ ಅನೇಕ ಮಕ್ಕಳು ಅನ್ಯಾಯವಾಗಿ ಸಣ್ಣ ವಯಸ್ಸಿನಲ್ಲೇ ಸತ್ತುಹೋಗುವವು, ಒಂದು ವೇಳೆ ಬದುಕಿದ್ದರೂ ಆರೋಗ್ಯದೃಢಕಾಯರಾಗಿ ಬೆಳೆಯುವದಿಲ್ಲ. ಮಕ್ಕಳನ್ನು ಯಾವ ಯಾವ ವಯಸ್ಸಿನಲ್ಲಿ ಹ್ಯಾಗೆ ಹ್ಯಾಗೆ ಸಾಕಿ ಬೆಳಸಬೇಕೆಂಬ ಕ್ರಮಗಳನ್ನೆಲ್ಲಾ ಮ॥ ಗುರುರಾಯರು ಬಹಳ ಸುಲಭವಾಗಿ ತಿಳಿಯುವಂತೆ ಕನ್ನಡದಲ್ಲಿ ಬರೆದಿರುತ್ತಾರೆ. ತಂದೆ ತಾಯಿಗಳು ಇದನ್ನು ಓದಿ ಅದರಲ್ಲಿ ಹೇಳಿರುವಂತೆ ಸಾಕುತ್ತಾ ಬಂದರೆ ಮಕ್ಕಳು ಬೆಳೆಯಲು ತಕ್ಕ ಮಟ್ಟಿಗೆ ಸಹಾಯವಾಗುವದು.

ಚಂಡೀಮದ ಮರ್ದನ ನಾಟಕ.—ಈ ನಾಟಕವು ಷೇಕ್ಸ್‌ಪಿಯರ್ ಎಂಬ ಪ್ರಸಿದ್ಧ ಆಂಗ್ಲಕವಿ ರಚಿತವಾದ ಒಂದು ನಾಟಕದ ಪರಿವರ್ತನವಾಗಿದೆ. ಇದನ್ನು ಮ॥ ಕೆ. ಲಕ್ಷ್ಮಣರಾವ್ ಬಿ. ಎ. ಯವರು ಚೆನ್ನಾಗಿ ರಚಿಸಿ, ಸರ್ಕಾರದವರ ಪೋಷಣೆಗೆ ಒಳಪಟ್ಟು ಪ್ರಕಟವಾಗುತ್ತಿರುವ "ಕರ್ಣಾಟಕ ಗ್ರಂಥಮಾಲಾ" ಎಂಬ ಮಾಸಿಕ ಪುಸ್ತಕ ಸಂಚಿಕೆಗಳಲ್ಲಿ ಪ್ರಕಟಮಾಡಿದರು. ಈ ನಾಟಕವು ಸರಸವಾಗಿಯೂ, ಸದ್ವಿಷಯ ಬೋಧಕವಾಗಿಯೂ ಇರುತ್ತದೆ.

ಬಾಲಕರ ಅಂಗಸಾಧನೆ.—ಮದರಾಸ್ ಪಟ್ಟಣದ ಪಚ್ಚೆಯಪ್ಪನವರ ಕಾಲೇಜು ಬಾಲಕರ ಅಂಗಸಾಧನಾ ಶಿಕ್ಷಕರಾದ ಮ॥ ಬಿ. ರಾಘವುಲುನಾಯುಡುರವರು ಈ ಪುಸ್ತಕವನ್ನು ರಚಿಸಿರುತ್ತಾರೆ. ಇದರಲ್ಲಿ ಶಿಕ್ಷಣ ಕ್ರಮವು ಚೆನ್ನಾಗಿ ನಕ್ಷೆಗಳ ಮೂಲಕ ವಿವರಿಸಲ್ಪಟ್ಟಿವೆ. ಪ್ರತಿ ಒಂದು ಅಭ್ಯಾಸವನ್ನೂ ಇಂಗ್ಲೀಷ್, ತಮಿಳು, ತೆಲುಗು, ಕನ್ನಡ, ಈ ನಾಲ್ಕು ಭಾಷೆಗಳಲ್ಲೂ ಅರ್ಥವಾಗುವಂತೆ ಬರೆದು, ಪುಟದ ಎದುರುಪಾರ್ಶ್ವದಲ್ಲಿ ನಕ್ಷೆಯನ್ನು ತೋರಿಸಲಾಗಿದೆ.

ಸ್ವಾ[redacted]ಶ.—ಮೈಸೂರು ಇಟ್ಟಿಗೇಗೂಡು ಎ. ವಿ. ಸ್ಕೂಲ್ ಹೆಡ್ ಮಾಸ್ಟರು ಮ॥ ಎಂ. ಪಿ. ಲಿಂಗಪ್ಪಯ್ಯನವರಿಂದ ಈ ಪಾಠಶಾಲಾ ಪುಸ್ತಕವು ರಚಿಸಲ್ಪಟ್ಟು ಚಿತ್ರಸಹಿತ ಕೃಷ್ಣ ಪ್ರೆಸ್ಸಿನಲ್ಲಿ ಬಹು ಅಂದವಾಗಿ ಅಚ್ಚಾಗಿರುತ್ತದೆ. ಭೂಗೋಳವನ್ನು ಶಾಸ್ತ್ರವತ್ತಾಗಿಯೂ ಕಾರಣ ಸಹಿತವಾಗಿಯೂ ಬಾಲಕರಿಗೆ ಹೇಳಿಕೊಡಲೂ, ಪರೀಕ್ಷಾ ಬಾಲಕರು ಕಲಿಯಲೂ ಈ ಪುಸ್ತಕವು ಸಹಾಯಕವಾಗಿರುವುದು. ಇದರಲ್ಲಿರುವ ನಕ್ಷೆಗಳು ವಿಷಯಗಳನ್ನು ಬಹಳ ಪರಿಸ್ಫುಟವಾಗಿಯೂ ಸುಲಭವಾಗಿಯೂ ತಿಳಿಸತಕ್ಕವುಗಳಾಗಿವೆ. ಅವಶ್ಯವಾದ ಸಂಗತಿಗಳನ್ನೆಲ್ಲಾ ಮ॥ ಲಿಂಗಪ್ಪಯ್ಯನವರು ಪ್ರಶ್ನೋತ್ತರಗಳ ರೂಪದಲ್ಲಿ ವಿವರಿಸಿರುತ್ತಾರೆ.

ಇವಲ್ಲದೆ ಸುಳಿಯೂರು ಎ. ವಿ. ಸ್ಕೂಲ್ ಅ. ಮಾಸ್ಟರು ಮ॥ ಎ. ಹಿರಿಯಣ್ಣಪ್ಪನವರು ರಚಿಸಿರುವ "ಕ್ಷೇತ್ರಗಣಿತ ಸೂತ್ರಗಳು." ಹಂಗರದ ಮ. ಅಪ್ಪಾರಾವ್ ಜಗ್ ಜೀವನರಾವ್ ದೇಸಾಯಿಯವರು ರಚಿಸಿರುವ ಶ್ರೀಮದಾಲಸಾ ಸ್ವಯಂವರ ಪ್ರಥಮೋಧ್ಯಾಯವೆಂಬ ಯಕ್ಷಗಾನ ಗ್ರಂಥವೂ ನಮಗೆ ತಲಪಿರುತ್ತವೆ.

ಮುನಿಸಿಪಲ್ ಕೌನ್ಸಿಲ್‌ಗಳ ಮೀಟಿಂಗು.

ಬೆಂಗಳೂರು ಸಿಟಿ.

ಕಳೆದ ಶನಿವಾರ ಬೆಳಿಗ್ಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳು ಆಫೀಸ್ ಕಟ್ಟಡದಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮುನಿಸಿಪಲ್ ಮೀಟಿಂಗನ್ನು ನಡಿಸಿದರು. ದಿವಾನ್ ಬಹದೂರ್ ಕೆ. ಪಿ. ಪುಟ್ಟಣ್ಣಚೆಟ್ಟರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಮೀಟಿಂಗಿನಲ್ಲಿ ಚರ್ಚೆಗೆ ಬಂದು ಇತ್ಯರ್ಥವಾದ ವಿಚಾರಗಳಾವುವೆಂದರೆ—

ಮುನಿಸಿಪಲ್ ಮ್ಯಾನೇಜಿಂಗ್ ಕಮಿಟಿಯ ಮೆಂಬರುಗಳು ಕ್ರಮವಾಗಿ ಮೀಟಿಂಗಿಗೆ ಹಾಜರಾಗದೆಹೋಗೋಣವನ್ನು ತಪ್ಪಿಸಿ ಕ್ರಮಪಡಿಸಬೇಕೆಂದು ಮ॥ ಬಿ. ಪಿ. ರಾಮಸ್ವಾಮಿಚೆಟ್ಟರು ಸೂಚಿಸಿದರು. ಇನ್ನು ಮುಂದೆ ಪ್ರತಿ ಶನಿವಾರ ಸಾಯಂಕಾಲವೂ ತಪ್ಪದೆ ಮ್ಯಾನೇಜಿಂಗ್ ಕಮಿಟಿ ಮೀಟಿಂಗು ನಡೆಯಬೇಕೆಂದು ಗೊತ್ತುಮಾಡಲಾಯಿತು.—ವಿದ್ಯುಚ್ಛಕ್ತಿಯ ಟ್ರಾಂವೇ ಹಾಕುವುದಕ್ಕೆ ಒಟ್ಟು 6,73,530 ರೂಪಾಯಿ ಖರ್ಚಾಗುವುದೆಂದು ಸರ್ಕಾರದವರು ರಾಮಗಾರಿ ಅಂದಾಜು ಪಟ್ಟಿಯನ್ನು ತರಾಯಿಸಿ ಕಳುಹಿಸಿದ್ದನ್ನು ಮೆಂಬರುಗಳು ಓದಿಸಿ ರೆಕಾರ್ಡು ಮಾಡಿಕೊಂಡರು.—ಬೆಂಗಳೂರು ಕೆಂಪಿಳಿ ಸೂಲು ಮತ್ತು ರೇಷ್ಮೆ ಫ್ಯಾಕ್ಟರಿಯ ಕೆಲಸವನ್ನು ಬದಾವಣೆಮಾಡಿಕೊಳ್ಳುವುದಕ್ಕೆ ಅದರ ಸಮೀಪದಲ್ಲಿರುವ ಖಾಲಿ ನಿವೇಶನವನ್ನು ಕಂಪನಿಗೆ ಗಜಕ್ಕೆ 8 ಆಣೆಯಂತೆ ಬಿಕರಿ ಮಾಡುವುದು ಒಳ್ಳೆದೆಂದು ಪ್ರೆಸಿಡೆಂಟರು ಸೂಚಿಸಿದ್ದನ್ನು ಮೆಂಬರುಗಳೆಲ್ಲಾ ಒಪ್ಪಿಕೊಂಡರು.—ಮಿ. ಹಾಜಿ ಅಬ್ದುಲ್ ಕರೀಂ ಸೇಟರು ಹಳೇ ಟಾಂಗಿನ ಪಾರ್ಕಿನಲ್ಲಿ ಮರ ಕೊಯ್ಯುವ ಯಂತ್ರವನ್ನು ಇಡಲು ತಾತ್ಕಾಲಿಕವಾಗಿ ಒಂದು ಜಾಗವನ್ನು ಹಾಕಿಕೊಂಡರು. ಮೆಂಬರುಗಳು ಈ ವಿಚಾರವನ್ನು ಚರ್ಚಿಸಿ, ಪ್ರೆಸಿಡೆಂಟರು ಅವರಿಗೆ ಅವಕಾಶಕೊಟ್ಟದ್ದು ಸರಿಯಾಗಿದೆ ಎಂದು ಒಪ್ಪಿರುತ್ತಾರೆ.—ಬೆಂಗಳೂರು ಸಿಟಿಯೊಳಗೆ ಗೋಕಾಯಿಗಳಿಗಾಗಿ ಹಾಕಿದ ತೊಟ್ಟಿಗಳನ್ನು ಯಾವ ಆಕೃತಿಯಲ್ಲಿ ಯಾವ ಯಾವ ಕಡೆ ಎಷ್ಟೆಷ್ಟು ಕಟ್ಟಿಸಬೇಕಾಗಿದೆಯೋ ಕೊಡಬೇಕೆಂದು ತಿಳಿಸಬೇಕೆಂದು ಸರ್ಕಾರದವರು ಕೇಳಿದ್ದರು. ಇದು ಚರ್ಚೆಯಾಗುವಾಗ್ಯೆ ಈಗ ಇರುವ 36 ತೊಟ್ಟಿಗಳು ಸಾಲದಾಗುವುದಿಲ್ಲವೆಂದೂ, ಪ್ರಜೆಗಳ ಮುಖಂಡರನೇಕರು ಸ್ವಂತ ಖರ್ಚು ಮಾಡಿಸಿ ಧರ್ಮಾರ್ಥವಾಗಿ ಕಟ್ಟಿಸಿಕೊಡಲು ಸಿದ್ಧರಾಗಿದಾರೆಂದೂ ತಿಳಿಯಿತು. ಎಷ್ಟು ಬೇಕಾದೀತೆಂಬುವುದನ್ನು ಕೆ ಸಮಯಂದ ಗೊತ್ತುಮಾಡಿ ತಿಳಿಸಲು ಒಂದು ಕಮಿಟಿ ಏರ್ಪಾಟಾಗಿದೆ. ಮ್ಯುನಿಸಿಪಲ್ ಕಂಟ್ರಾಕ್ಟಿಗಾಗಿ ಟೈಪರ ಮೇಲೆ ಹಣ ತರುವ ಅಧಿಕಾರವನ್ನು ಕಲೆಕ್ಟರಿಗೆ ಕೊಡಬೇಕೆಂದು ಮೆಂಬರುಗಳು ಒಪ್ಪಿದರು.

ಮೈಸೂರು ಸಿಟಿ.

ಕಳೆದ ಸೋಮವಾರ ಬೆಳಿಗ್ಗೆ ರಾಜಧಾನಿಯ ಮುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಹಿಂಗಡೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮೀಟಿಂಗನ್ನು ನಡಿಸಿದರು. ಪ್ರೆಸಿಡೆಂಟ್ ಮಿ. ಟಿ. ಜಿ. ಲಕ್ಷ್ಮಣರಾಯರು ಅಗ್ರಾಸನವನ್ನು ವಹಿಸಿದರು. ಜಮಾ ಖರ್ಚು ಮುಂತಾದ ಲೆಕ್ಕಗಳು ಓದಿದ್ದಲ್ಲದೆ ತಿಳಿದು ಬಂದ ಸಂಗತಿಗಳೇನೆಂದರೆ—ಕಳೆದ ಮಾರ್ಚಿ ತಿಂಗಳಲ್ಲಿ ಎಲ್ಲಾ ಬಾಬುಗಳಿಂದಲೂ ಮ್ಯುನಿಸಿಪಾಲಿಟಿಗೆ ರೂ 10,116-10-8 ಪೈ ಜಮಾ ಆಯಿತು, ರೂ 10,167-0-3 ಪೈ ಖರ್ಚಾಯಿತು. ಆ ತಿಂಗಳಲ್ಲಿ ಜನನ 116, ಮರಣ-ಕಾಲರಾ 28, ಸಿಡುಬು 8, ಜ್ವರ 10, ಇತರಕಾರಣಗಳು 182, ಜುಮ್ಲಾ 212. ಕಳೆದ ತಿಂಗಳಲ್ಲಿ ಸಣ್ಣ ಮಕ್ಕಳು 70 ಮಂದಿ ತೀರಿಹೋಗಿದಾರೆ. ಮುನಿಸಿಪಲ್ ಜಮಾ ಖರ್ಚನ್ನು ತನಿಖೆ ಮಾಡಿದ ಮೆಂಬರುಗಳು ಲೆಕ್ಕಗಳೆಲ್ಲಾ ಸರಿಯಾಗಿವೆ ಎಂದೂ, ಆಕ್ಟ್ರಾಯಿ ಮತ್ತೂ ಮೊಹತರ್ಫಾ ಕಂದಾಯದ ವಸೂಲಾತಿಯು ಮೊದಲಿನವುಗಳಿಗಿಂತ ಚೆನ್ನಾಗಿದೆ ಎಂದೂ ತಿಳಿಸಿದಾರೆ. ಬಳಿಕ ಮೆಂಬರುಗಳು ಚರ್ಚಿಸಿ ನಿರ್ಧಾರ ಮಾಡಿದ ವಿಷಯಗಳಾವುವೆಂದರೆ—

ಕಟ್ಟಡದ ವಿಷಯದಲ್ಲಾಗಲಿ ಬೇರೆ ವಿಷಯದಲ್ಲಾಗಲಿ ಖಾಲಿ ಇದೆ ಎಂದು ಮಾಲೀಕರು ಮೊದಲೇ ಮ್ಯುನಿಸಿಪಾಲಿಟಿಗೆ ಬರಹ ಮೂಲಕ ತಿಳಿಸದಪಕ್ಷದಲ್ಲಿ ಆ ಮನೆಗಳ ಅಥವಾ ಖಾಲಿ ನಿವೇಶನಗಳ ಕಂದಾಯದಲ್ಲೂ, ನೀರಿನ ತೆರಿಗೆಯಲ್ಲೂ ಅರೆವಾಸಿಯನ್ನು ರೂಲಿನ ಪ್ರಕಾರ ವಜಾಮಾಡಬೇಕೆಂದು ಗೊತ್ತಾಯಿತು.—ಹೆಲ್ತ್ ಆಫೀಸರ ಓವರ್ಸೀಯರಿಗೂ ಮಾಸಕ್ಕೆ 200 ರೂಪಾಯಿ ಖರ್ಚುಮಾಡಿ ದಿನಸುಗಳನ್ನು ಮಾಡಿಸಿ ಕೊಡುವ ಭಾಗದಲ್ಲಿ ಪ್ರೆಸಿಡೆಂಟರೇ ವಿಚಾರಮಾಡಿಕೊಳ್ಳಬಹುದೆಂದು ಮೆಂಬರುಗಳು ಹೇಳಿದರು.—ಮೈಸೂರು ಮಹಾರಾಣಿ ಆಸ್ಪತ್ರೆಯಲ್ಲಿ ನಡೆಯುವ ನಾಲಿಯಾನಾ ಖರ್ಚಿನಲ್ಲಿ 2,100 ರೂಪಾಯನ್ನು ಮ್ಯುನಿಸಿಪಾಲಿಟಿಯವರು ವಹಿಸಿಕೊಳ್ಳಬೇಕೆಂದು ಗವರ್ನ್‌ಮೆಂಟಿನವರು ಬರೆದಿದ್ದರು. ಈ ಖರ್ಚು ಸರ್ಕಾರದವರು ವಹಿಸಿಕೊಳ್ಳಬೇಕೆಂದು ಹಿಂದೆ ಮ್ಯುನಿಸಿಪಾಲಿಟಿಯವರು ತೀರ್ಮಾನ ಮಾಡಿ ತಿಳಿಸಿರುತ್ತಾರೆ. ಈ ಮ್ಯುನಿಸಿಪಾಲಿಟಿಯ ಸ್ಥಿತಿಯು ತೃಪ್ತಿಕರವಾಗಿಲ್ಲದಿರೋಣದರಿಂದ ಈ ಹಣವನ್ನು ಕೊಡಲು ಚೈತನ್ಯ ಸಾಲದೆಂದು ತಿಳಿಸುವಂತೆ ಮೆಂಬರುಗಳು ಅಭಿಪ್ರಾಯಪಟ್ಟರು.—ಕಾರಂಜಿ ಕೆರೆಗೆ ಬರುವ ಜಲಧಾರೆಗಳು ಹೀನಸ್ಥಿತಿಯಲ್ಲಿರುವ ಕಾರಣ ಕೆರೆಯಲ್ಲಿ ನೀರು ಒಂದು ನಿಲ್ಲಲು ಅಡ್ಡಿಯಾಗಿದೆ ಎಂದೂ, ಆ ನಾಲೆಗಳನ್ನು ದುರಸ್ತು ಮಾಡಿಸಬೇಕೆಂದೂ, ಈ ಖರ್ಚಿನಲ್ಲಿ ಅರೆವಾಸಿಯನ್ನು ಮ್ಯುನಿಸಿಪಾಲಿಟಿಯವರು ಕೊಡಬೇಕೆಂದೂ ಸರ್ಕಾರದವರು ಕೇಳಿದ್ದರು. ಈ ಕೆರೆಯ ನೀರನ್ನು ಕುಡಿಯುವುದಕ್ಕೆ ಮತ್ತು ಚಿಕ್ಕ ಒದ್ದರಪಾಳ್ಯದ ಜನರು ಉಪಯೋಗಿಸುತ್ತಾರೆ. ಪಟ್ಟಣದ ನೀರಿನ ಸರಬರಾಯಿನ್ನೆಲ್ಲಾ ಸರ್ಕಾರದವರೇ ವಹಿಸಿಕೊಂಡಿರೋಣದರಿಂದ ಅವರೇ ಭಾಗಗಳಿಗೂ ನೀರಿನ ತೆರಿಗೆಯನ್ನು ಹಾಕಿ ವಸೂಲ್ಮಾಡುವಂತೆ ಹುಕುಂ ಆದಪಕ್ಷದಲ್ಲಿ ಪರಿಹಾರವಾಗಬಹುದೆಂದೂ ಈ ಕರೆಯ ಕಾಮಗಾರಿಗೆ ಹಣ ಕೊಡಲು ಮ್ಯುನಿಸಿಪಾಲಿಟಿಗೆ ಚೈತನ್ಯವಿಲ್ಲವೆಂದೂ ಸರ್ಕಾರಕ್ಕೆ ತಿಳಿಸುವಂತೆ ತೀರ್ಮಾನವಾಯಿತು.—ಹುಸೂರ್ ಕಚೇರಿಯ ಎದುರಿಗೆ ಸೂರಡಿ ರಸ್ತೆಯಲ್ಲಿರುವ ನಾರಾಯಣಮೂರ್ತಿಯವರ ಬಾಬತ್ತು ಮನೆಯನ್ನು ಬಾಲಬೋಧಿನಿ ಸ್ಕೂಲಿಗೋಸ್ಕರ 4,000 ರೂಪಾಯಿ ಕೊಟ್ಟು ಮ್ಯುನಿಸಿಪಾಲಿಟಿಯವರು ಕೊಂಡುಕೊಳ್ಳುವಂತೆ ಒಪ್ಪಲಾಯಿತು. ಅಂಗಡಿಗಳಿಗೂ ನೀರಿನ ತೆರಿಗೆ ಹಾಕುವ ವಿಷಯದಲ್ಲಿ ಸರ್ಕಾರದವರು ಇನ್ನೂ ಇತ್ಯರ್ಥ ಮಾಡಿಲ್ಲ. ಈ ತೆರಿಗೆ ಹಾಕಕೂಡದೆಂಬ ಅರ್ಥಕ್ಕೆ ಅನೇಕ ವರ್ತಕರು ಅರ್ಜಿ ಬರೆದುಕೊಂಡಿದಾರೆ. ಸರ್ಕಾರದ ಹುಕುಂ ನಿರೀಕ್ಷಿಸಬೇಕೆಂದು ತೀರ್ಮಾನಮಾಡಿದರು.

ಮ್ಯುನಿಸಿಪಲ್ ಕಾನೂನ್ ಉಲ್ಲಂಘಿಸಿದಂಥಾ ದೈತರಮೇಲೆ ಕ್ರಿಮಿನಲ್ ಫಿರ್ಯಾದುಮಾಡಬೇಕಾದರೆ ಅಂಥಾ ಫಿರ್ಯಾದನ್ನು ಮೊದಲು ಪ್ರೆಸಿಡೆಂಟರು ಸ್ಯಾಂಕ್ಷನ್ ಮಾಡಬೇಕೆಂದು ಇತ್ಯರ್ಥವಾಯಿತು.—ಪಟ್ಟಣದಲ್ಲಿ ಬಲಾತ್ಕಾರದ ವಿದ್ಯಾಭ್ಯಾಸಕವುದನ್ನು 1916 ನೇ ಜೂನ್ ಆಖೈರುವರೆಗೆ ಜಾರಿಯಲ್ಲಿಟ್ಟು ಕೊಡಬೇಕೆಂದು ಸರ್ಕಾರದವರಿಗೆ ಬರೆಯುವಂತೆ ಮೆಂಬರುಗಳು ಗೊತ್ತುಮಾಡಿದರು.—ಬೀದಿಗುಡಿಸುವವರ ವಾಸಕ್ಕಾಗಿ ನಾಲು ಮನೆಗಳನ್ನು 4,000 ರೂಪಾಯಿ ಮುಟ್ಟಿಸಿ ಕಟ್ಟಿಸಬೇಕೆಂದು ಮೆಂಬರುಗಳು ಒಪ್ಪಿಕೊಂಡು, ಕಟ್ಟುವ ಸ್ಥಳವನ್ನು ಅಧಿವಾಯಿಸಿ ಗೊತ್ತುಮಾಡಲ್ಪಡುವಂತೆ ತಿಳಿಸಿದರು. ಕೃಷ್ಣರಾಜ ಹಲ್ಲ್ ಕವಾಡಿಗರ ಕೇರಿಯಲ್ಲಿ ಕರೆಯುವ 30 ಮನೆಗಳನ್ನು ಕಟ್ಟಿಸುವುದಕ್ಕೆ ಅನುಕೂಲಿಸುವಂಥಾ ಸಾವಿರ ತೋಟಗೆಯನ್ನು ಮುನಿಸಿಪಲ್ ಹಣದಿಂದ ಕಟ್ಟಿಸಿಕೊಡಬೇಕೆಂದು ಹಿಂದೆ ತೀರ್ಮಾನವಾಗಿತ್ತು. ಅಲ್ಲಿ ಜನಗಳ ಮನೆಗಳು ಆ ಕೇರಿಯಲ್ಲಿ 180 ಇದ್ದವುಗಳಾಗಿಯೂ 187 ರಾಸುಗಳನ್ನು ಆ ಜನರು ಕಟ್ಟಿ ಸಾಕುತ್ತಿದ್ದಾರೆಂದೂ ಹೆಲ್ತ್ ಆಫೀಸರವರು ತಿಳಿಸಿದರು. ಆ ಜನರನ್ನು ವಿಚಾರಿಸಿದ್ದರಲ್ಲಿ ಇಂಥಾ ಸಾವಿರ ಕೊಟ್ಟರೆ ತಮ್ಮ ಹಸು ಎಮ್ಮೆಗಳನ್ನು ತಂದು ಕಟ್ಟಿ ಅಲ್ಲಿ ಸಾಕಲು ಇಷ್ಟಪಡುವುದಿಲ್ಲವೆಂದು ಮುಂತಾಗಿ ಮ್ಯುನಿಸಿಪಲ್ ನ ಕೆಲವು ಮೆಂಬರುಗಳು ತಿಳಿಸಿದರು. ಕಡೆಗೆ ಮನೆಗಳನ್ನು ಕಟ್ಟುವಂತೆ ತಡೆಯುವ ಕಾನೂನು ಸರ್ಕಾರದಿಂದ ಸ್ಯಾಂಕ್ಷನ್ ಆಗಿ ಬರುವ ತನಕ ಈ ವಿಷಯವನ್ನು ಹಾಗೇ ಇಟ್ಟಿರಬೇಕೆಂದು ತೀರ್ಮಾನವಾದರು.—ಮುನಿಸಿಪಾಲಿಟಿ ಕಾಡೆಯಲ್ಲಿರುವ ಮೂವರು ಮಂದಿ ಸಬ್ ಓವರ್ಸೀಯರಿಗೂ ಸಲ್ಲುವ ಪರ್ಸನಲ್ ಅಲೋಯನ್ಸನ್ನು 5 ರಿಂದ 7-8 ರೂಪಾಯಿವರೆಗೆ ಹೆಚ್ಚು ಮಾಡಬೇಕೆಂದು ಇತ್ಯರ್ಥವಾಯಿತು.—... ಮ್ಯುನಿಸಿಪಲ್ ... ಮತ್ತೆ ಗವರ್ನ್‌ಮೆಂಟಿನವರು ... ಅವರು ಬಹಳ ತೃಪ್ತಿಕರ... ತೌಲನ ... ಸಂಖ್ಯಾನಗಳು ... ಹಿಂದಿನವರೇ ಮುಂತಾಗಿ ... ಅವರಿಗೆ ... ವೈದ್ಯಶಾಲೆಯ ... ಪ್ರಸಾಕ್ಷಿಯಿಂದ ... ಕೊಂಡರು.—ಕಾರಂಜಿ ಪಟ್ಟಣ ... ಸುಬ್ಬರಾಯಶೆಟ್ಟರು ... ಧರ್ಮಕ್ಕೆ ... ಕಟ್ಟಿಸಿಕೊಡುವ ಭಾಗದಲ್ಲಿ ಅವರು ... ಕ್ರಮವಾದ ಮುಚ್ಚಳಿಕೆಗಳನ್ನು ಬರೆದು ... ಕೊಟ್ಟು ... ಒಪ್ಪಲಾಯಿತು ... ಸಾಹುಕಾರ ... ಪಡೆಯುವ ಮನೆಗಳನ್ನು ಬದಾವಣೆಮಾಡಿ ಕಟ್ಟಿಕೊಂಡಿರೋಣದರಿಂದ ಆ ... ಬದಾವಣೆಗಳನ್ನು ಮುನಿಸಿಪಲ್ ಕಾನೂನ್ ಅನುಸರಿಸಿ ... ಮಾಡಬೇಕೆಂದು ಮೆಂಬರುಗಳೆಲ್ಲಾ ಸಮ್ಮತಿಪಟ್ಟರು. ... ಗಳಿಂದ ... ಮಾಡುವ ರಸ್ತೆಯನ್ನು ... ದೀಪಗಳನ್ನು ಹಚ್ಚುವುದಕ್ಕೂ ... ಪ್ರತಿ ವರುಷವೂ 100 ರೂಪಾಯನ್ನು ಕೊಡುವುದಾಗಿ ಒಂದಿದ್ದ ... ಮೆಂಬರುಗಳು ... ಮಾಡಬಹುದೆಂದು ಒಪ್ಪಿಕೊಂಡರು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಕಣ್ಣಾಗಾಲದ ದಂಗೆ ಮೊಕದ್ದಮೆಯೂ ಆಸಾಮಿಗಳೂ

ಅಯ್ಯಾ,

ಕಳೆದ ಮಾರ್ಚ 10 ನೇ ತಾರೀಖಿನಿಂದ ಕಣ್ಣಾಗಾಲದ ದಂಗೆ ಮೊಕದ್ದಮೆಯ ಸೆಷನ್ಸ್ ವಿಚಾರಣೆಯು ರಾಜಧಾನಿಯಲ್ಲಿ ಪ್ರಾರಂಭವಾಗಿ ನಡೆಯುತ್ತ ಬಂದಿದೆ. ಇದಕ್ಕಾಗಿ ಸರ್ಕಾರದವರು ಪ್ರತ್ಯೇಕವಾದ ಜಡ್ಜರನ್ನು ನೇಮಿಸಿ ಸಿಬ್ಬಂದಿಯನ್ನು ಇಟ್ಟಿದಾರೆ. ಈ ಜಡ್ಜಿಯವರಿಗೂ ಸಿಬ್ಬಂದಿಯವರಿಗೂ ಪೂರ್ವದ ನೌಕರಿಗಿಂತಲೂ ಸರ್ಕಾರದವರು ಸ್ಪೆಷಲ್ ಅಲೋಯನ್ಸುಗಳನ್ನು ಕಲ್ಪಿಸುತ್ತಿದಾರೆ. ಅಲ್ಲದೆ ಸರ್ಕಾರಿ ತರಫ ಈ ಮೊಕದ್ದಮೆಯನ್ನು ನಡಿಸುವ ... ಭಾರಿ ಸಂಬಳವನ್ನು ಕೊಟ್ಟು ಒಬ್ಬ ವಕೀಲರನ್ನೂ ಇಟ್ಟು ಇರುತ್ತಾರೆ. ಅಲ್ಲದೆ ಈ ಮೊಕದ್ದಮೆಯಲ್ಲಿ ಸರ್ಕಾರಿ ತರಫಿನ ಸಾಕ್ಷಿಗಳಿಗೆ ಸ್ವಲ್ಪವೂ ನಷ್ಟಗಳುಂಟಾಗದಂತೆ ಅವರಿಗೂ ಕೂಲಿ (ಇವರು ಸುಮಾರು 200 ಮಂದಿ ಆಗಬಹುದು) ಭತ್ಯವನ್ನೂ ಪ್ರಯಾಣದ ಖರ್ಚನ್ನೂ ಬಹು ಧಾರಾಳವಾಗಿ ಸರ್ಕಾರದಿಂದ ಪಾವತಿಮಾಡುತ್ತಿದಾರೆ. ಈ ಮೊಕದ್ದಮೆಯು ಇನ್ನೂ ಎರಡು ತಿಂಗಳವರೆಗೂ ಮುಗಿಯುವಂತೆ ತೋರುವುದಿಲ್ಲ. ಈಗ ಐದು ವಾರಗಳಲ್ಲಿ ಸುಮಾ

...ಕೃಷಿಯುತ್ತು ನಡೆಯುತ್ತಿರುವುದಾಗಿ ಕಂಡುಬರುತ್ತದೆ. ಇಷ್ಟು ಸರ್ಕಾರಿ ತರಹ ಗಾತ್ರ 100 ಮಂದಿಗಿಂತಲೂ ಹೆಚ್ಚಾಗಿರುವರು. ಅನಂತರ ಅಪರಾಧಿಗಳ ಕಡೆ ನೂರು ಮೂರು ಸಾಕ್ಷಿಗಳನ್ನು ವಿಚಾರಿಸುತ್ತು ನಡೆಯಬೇಕಾಗುವುದು.

ಈ ಮೊಕದ್ದಮೆಗೆ ಹಲವು ಮಂದಿ ಗೌರವಾದ ವರ್ತಕರನ್ನು ಆಸೆಸರುಗಳ ತಕ್ಕೆ ನೇಮಿಸಿಕೊಂಡಿದ್ದಾರೆ. ಇವರು ದಿನವೂ 11 ಗಂಟೆಯಿಂದ ಸಾಯಂಕಾಲದ ತನಕ ಕೋರ್ಟಿನಲ್ಲಿ ಇರಬೇಕಾದ್ದರಿಂದ ತಮ್ಮ ಕಸಬನ್ನೂ ಗೃಹಕೃತ್ಯವನ್ನೂ ಬಿಟ್ಟು ಈಗ ಒಂದೂವರೆ ತಿಂಗಳಿಂದ ತುಂಬಾ ಕಷ್ಟ ನಷ್ಟ ಮನೋವ್ಯಥೆಗಳಿಗೆ ಗುರಿಯಾಗಿರುವರು. ಇವರು ಈ ಮೊಕದ್ದಮೆ ಪೂರೈಸುವ ತನಕ ಅಂದರೆ ಇನ್ನು ಸುಮಾರು ಎರಡು ತಿಂಗಳವರೆಗೂ ಈ ಕೋರ್ಟಿಗೆ ತಪ್ಪದೆ ಹೊತ್ತು ಹೊತ್ತಿಗೆ ಹಾಜರಾಗುತ್ತಿರಬೇಕೆಂಬುದನ್ನು ಯೋಚಿಸುವಲ್ಲಿ ಅವರ ಮನೋವ್ಯಥೆ ಇನ್ನೂ ಹೆಚ್ಚುತ್ತಿರುವುದಕ್ಕೆ ಸಂಶಯವಿಲ್ಲ. ಅವರು ಮಾಡಬೇಕಾದ ಪಬ್ಲಿಕ್ ಕೆಲಸವೇ ಹೊರತು ಸರ್ಕಾರ್ ಮೊಕದ್ದಮೆಯು ಸಾಮಾನ್ಯವಾದ ಒಂದು ತಾರತಮ್ಯತೆ ಹೆಚ್ಚಾಗುವುದಿಲ್ಲ. ಅಂಥಾ ಸಂದರ್ಭದಲ್ಲಿ ಪ್ರಜೆಗಳು ಗೌರವಾದವರು ಸರ್ಕಾರಕ್ಕೆ ಸಹಾಯವಾಗಬೇಕಾದದ್ದು ಅವರ ಧರ್ಮ. ಇದುವರೆಗೆ ಯಾರೂ ಹಿಂತೆಗೆಯಲಿಲ್ಲ. ಈಗ ಈ ದಂಗೆ ಮೊಕದ್ದಮೆಯು 3-4 ತಿಂಗಳ ಕಾಲ ದೀರ್ಘವಾಗಿ ನಡೆಯುವುದರಿಂದ ಆಸೆಸರುಗಳಾಗಿರುವವರ ಕಷ್ಟ ನಷ್ಟಗಳು ಅಪಾರವಾಗುತ್ತವೆ. ಈ ಆಸೆಸರುಗಳು ಸೇರಿ ತಮ್ಮ ಅನಾನುಕೂಲಗಳನ್ನು ಕುರಿತು ಜಡ್ಜಿ ಯವರಿಗೆ ಹೇಳಿಕೊಂಡಾಗ ಅವರು ಚೀಫ್ ಕೋರ್ಟಿಗೆ ತಿಳಿಸಿದರು. ಚೀಫ್ ಕೋರ್ಟಿನ ಜಡ್ಜಿಗಳು ಪರ್ಯಾಲೋಚಿಸಿ, ಆಸೆಸರುಗಳಿಗೆ ಪ್ರತಿಫಲವೇನೂ ಕೊಡಲು ಅವಕಾಶವಿಲ್ಲವೆಂದೂ, ಇವರನ್ನು ಮೊಕದ್ದಮೆ ಪೂರೈಸಿದ ನಂತರ ಯಾವತ್ತೂ ಇನ್ನಾವ ಸೆಷನ್ಸ್ ಮೊಕದ್ದಮೆಗೂ ಆಸೆಸರುಗಳಾಗಿ ಕರೆಯುವಂತೆ ಮಾಡಬಾರದೆಂದೂ ಅಭಿಪ್ರಾಯಪಟ್ಟಿರುವುದಾಗಿ ತಿಳಿದುಬರುತ್ತದೆ. ಅವರು ಬೆಂಗಳೂರಿನಲ್ಲಿ ಕೋರ್ಟಿಗೆ ಹಾಜರಾಗಲು ಗಾಡಿ ಬಾಡಿಗೆ ಇತ್ಯಾದಿ ಕೆಲವು ನಷ್ಟಪಡುತ್ತಿರುವರು. ಇದಕ್ಕೆ ಅವರಿಗೆ ನೂರಾರು ರೂಪಾಯಿ ಖರ್ಚಾಗುತ್ತದೆ. ಈ ಖರ್ಚನ್ನಾದರೂ ಸರ್ಕಾರದವರು ಅವರಿಗೆ ಭರ್ತಿಮಾಡಿಕೊಡುವುದು ನ್ಯಾಯವಾಗಿದ್ದೀತು. ಗವರ್ನ್ಮೆಂಟಿನವರು ಈ ಭಾಗವನ್ನು ಪರ್ಯಾಲೋಚಿಸಿ ಅವರ ಕಷ್ಟ ನಷ್ಟ ಮನೋವ್ಯಥೆಗಳನ್ನು ಸ್ವಲ್ಪಮಟ್ಟಿಗಾದರೂ ನಿವಾರಣೆಮಾಡುವರೆಂದು ನಿರೀಕ್ಷಿಸಲ್ಪಟ್ಟಿದೆ.

ಆಸೆಸರುಗಳ ಹಿತಚಿಂತಕ

ತಾಲ್ಲೂಕು ವರ್ತಮಾನಗಳು

ದುಡಕೆರೆ ತಾ ಹುಲಿಕೆರೆ.—ಬಿಸಲಿನ ತಾಪ ಹೆಚ್ಚು. ಈ ವರ್ಷದ ವ್ಯವಸ್ಥೆಗೆ ತಕ್ಕಂತೆ ಮಳೆ ಆಗಿಲ್ಲ. ಧಾರಣೆ ಹೆಚ್ಚಾದ ಸ್ಥಿತಿಯಲ್ಲಿಯೇ ಇದೆ. ಗ್ರಾಮಕ್ಕೆ ಸೇರಿದ ತಲಾವಿನಲ್ಲಿ ಸುತರಾಂ ನೀರು ಕೆಟ್ಟು ಕುಡಿಯುವುದಕ್ಕೆ ಅನುಕೂಲವಿಲ್ಲದೆ ಇದೆ. ಈ ತಲಾವ್ ವಿನಹಾ ಮತ್ತೆಲ್ಲೂ ನೀರು ಸಿಕ್ಕುವುದೇ ಇಲ್ಲ. ಪ್ರತಿ ವರ್ಷದಲ್ಲೂ ನಮ್ಮ ತಲಾವ್‌ಗೆ ಚಾಮರಾಜ ಅಣೆಕಟ್ಟಿನಿಂದ ಬೇಸಗೆಯಲ್ಲಿ 1-2 ಸಲ ನೀರು ಸಪ್ಲೈ ಆಗುತ್ತಾ ಇತ್ತು. ಈ ಸಾರಿ ಈ ರೀತಿಯಾಗದೆ ಜನರು ತುಂಬಾ ಶೋಚನೀಯವಾಗಿದೆ. ಸರ್ಕಾರದವರು ಒಂದಾವರ್ತಿಯಾದರೂ ನೀರು ಸಪ್ಲೈಮಾಡಿಕೊಟ್ಟು ಕಾಪಾಡಬೇಕಾಗಿ ಬೇಡುತ್ತೇವೆ. ಈ ಗ್ರಾಮದಲ್ಲಿ ಈ ವರ್ಷ ಶ್ರೀರಾಮನವಮಿಯು ವೈಭವವಾದ ಭಜನೆ ಮುಂತಾದವುಗಳು ಆಚರಿಸಲ್ಪಟ್ಟಿತು.

ಹಿತಾಮಣಿ.—ಇಲ್ಲಿಗೆ ಬೆಂಗಳೂರಿನಿಂದ ಪಾತರ್ಣಭಿವರ್ಧನ ಆಗ್ರಿಕಲ್ಚರಲ್ ಅಂಡ್ ಇಂಡಸ್ಟ್ರಿಯಲ್ ಅಸೋಸಿಯೇಷನ್ ಸೆಕ್ರೆಟರಿಯವರು ಎಂಬುವ ಮಿಸ್ಟರ್ ... ಸಮೇತ ಒಬ್ಬ ಇನ್ಸ್ಪೆಕ್ಟರನ್ನು ಕರೆದುಕೊಂಡು ಬಂದಿದ್ದರು. ಈ ಸಂಘದ ವತಿಯಿಂದ ಅಭಿವೃದ್ಧಿಯಾಗಬೇಕೆಂಬುದೇ ಈ ಸಂಘದ ಉದ್ದೇಶವಾಗಿದೆ. ಈ ಮೀಟಿಂಗಿನಿಂದ ಊರಿನ ಜನಗಳೂ, ಕಾಲುವೆಯ ಜನರೂ ಸಂತೋಷವಾಗುವವು. ಈ ಸಂಘಕ್ಕಾಗಿ ಈ ಗ್ರಾಮದಲ್ಲಿ ಸುಮಾರು ... ಮೆಂಬರುಗಳು ಸೇರಲ್ಪಟ್ಟಿರುವರು. ನಮ್ಮ ಇಲ್ಲಿ ಬ್ರಾಂಚು ಆಫೀಸು ಮಾತ್ರ ... ಆಗುತ್ತದೆ. ಕ್ರಮೇಣ ಅಭಿವೃದ್ಧಿ ವಿಚಾರದಲ್ಲಿ ಏನೂ ಸಂದೇಹವಿಲ್ಲ.—ಈ ಊರಿನ ಚೌಕದಲ್ಲಿರುವ ಶ್ರೀಹರಿಹರ ದೇವಸ್ಥಾನದ ಆವರಣದಲ್ಲಿ ಮ|| ಕಾರುಪಾತುಲ ಸುಬ್ಬಯ್ಯನವರ ಮಕ್ಕಳು ಮ|| ತಿಮ್ಮರಾಯಪ್ಪನವರು ಈ ಗ್ರಾಮದ ವೈಶ್ಯಜನರ ಸಹಾಯದಿಂದ ಭಜನೆ ಮಂದಿರದ ಶ್ರೀರಾಮದೇವರ ಉತ್ಸವವನ್ನು ಅತಿ ವಿಜೃಂಭಣೆಯಿಂದ ನಡೆಸಿದರು. ... ಪಟ್ಟಾಭಿಷೇಕ ಮಹೋತ್ಸವ ಜರುಗಿತು. ಗ್ರಾಮದಲ್ಲಿ ನಮ್ಮವರೆಲ್ಲಾ ಸೇರಿದ್ದುದೂ ಅಲ್ಲದೆ ಸಂತರ್ಪಣೆಯೂ ಆಯಿತು.

ಹಾವಿಪುರ.—ಈಗ ಟವುನ್ನಿನಲ್ಲಿ ಇಲಿಗಳು ಬಿದ್ದದ್ದರಿಂದಲೂ, 3-4 ಪ್ಲೇಗು ಆದದ್ದರಿಂದಲೂ, ಪೇಟೆ ಮತ್ತು ಅಜೂಬಾಜು ಕೇರಿ ಜನಗಳೆಲ್ಲಾ ಹೊರಗೆ ಶೆಡ್ಡು ಮಾಡಿಕೊಂಡು ಇರುತ್ತಾರೆ.—ಹಳೆಯೂರವರು ಮಾತ್ರ ಅಲ್ಲಲ್ಲೀ ಇಲಿಗಳು ಬಿದ್ದು ಇದ್ದಾಗ್ಯೂ ಊರು ಬಿಡುವದಕ್ಕೆ ಹಿಂದೆ ಮಾಡುತ್ತಲಿದ್ದಾರೆ. ಇದು ಕ್ಷೇಮಕರವಾಗಿಲ್ಲ. ಈ ತಾಲ್ಲೂಕು ಜಮಾಬಂದಿಯು ಪೂರೈಸಿತು. ಶಿವಮೊಗ್ಗಾ ಸಬ್‌ಡಿವಿಜನ್ ಆಫೀಸರ ವರು ಜಮಾಬಂದಿ ಕೆಲಸ ಬಹಳ ಚಟುವಟಿಕೆಯಿಂದ ಪೂರೈಸಿದರು. ಇವರು ರೈತರ ಕಷ್ಟಸುಖಗಳನ್ನು ಸಾವಧಾನವಾಗಿ ಕೇಳುತ್ತಾರೆ. ಒಳ್ಳೇ ವಿಚಾರಪರರು. ಈಗಿನ ಅಮಲ್ದಾರರು ಬಹಳ ನಿಷ್ಪಕ್ಷಪಾತ ನಿರ್ದಾಕ್ಷಿಣ್ಯದಿಂದ ಕೆಲಸ ಮಾಡುವರು. ಈ ತಾಲ್ಲೂಕಿಗೆ ಬಂದ ಅಮಲ್ದಾರರುಗಳ ಪೈಕಿ ಎಷ್ಟು ಜನ ... ಮಾಡಿದವರಲ್ಲಿ ಇವರು ಎರಡನೆಯವರಾಗಿರುತ್ತಾರೆ. ಸುಳ್ಳೆಂಬ ಶಬ್ದವು ಇವರ ಬಾಯಿಂದ ಹೊರಡುವದಿಲ್ಲ. ಸರ್ಕಾರಿ ಕೆಲಸ ಪ್ರಜಾಸಂಬಂಧ ಹಿತಕಾರ್ಯದಲ್ಲಿಯೂ ದಕ್ಷತೆಯಿಂದ ಕೆಲಸ ಮಾಡುತ್ತಾರೆ. ಇಲ್ಲಿ ವ್ಯವಸಾಯ ಸಂಘ ಒಂದು ಸ್ಥಾಪಿತವಾಗಿದೆ. ಇದಕ್ಕೆ ಮ|| ... ರೆಡ್ಡಿಯವರೆಂಬುವರು ಸೆಕ್ರೆಟರಿಗಳಾಗಿರುತ್ತಾರೆ. ಇವರಿಗೆ ವ್ಯವಸಾಯ ಶ್ರಮ ತುಂಬಾ ಇದೆ. ಈ ಸಂಘವು ಜಾಗ್ರತೆ ಅಭಿವೃದ್ಧಿಸ್ಥಿತಿಗೆ ಬರುವುದರಲ್ಲಿ ಸಂದೇಹವಿಲ್ಲ. ಇಂಥಾ ಕಾರ್ಯಗಳಲ್ಲಿ ನಮ್ಮ ಅಮಲ್ದಾರ್ ಮ|| ... ನವರು ತುಂಬಾ ಶ್ರದ್ಧೆವಹಿಸತಕ್ಕವರಾಗಿರುತ್ತಾರೆ.

...—ಬಿಸಿಲು ಜಾಸ್ತಿಯಾಗಿದೆ. ಒಂದು ಹದ ಮಳೆಯಾದ್ದರಿಂದ ... ಕಮ್ಮಿಯಾಗಿದೆ.—ನಮ್ಮ ಅಮಲ್ದಾರರು ಕೆಲವು ದಿನಗಳಿಂದ ... ಗಸ್ತು ಬರುತ್ತಾ ಇರುವದರಿಂದ ಟವುನ್ ಪ್ಲಾಕೀಜು ಸ್ವಲ್ಪಮಟ್ಟಿಗೆ ... ಎಂದು ಹೇಳಬಹುದು. ಕೆರೆ ಅಂಗಳದಲ್ಲಿ ಕೆಡಿಸುತ್ತಿದ್ದ ಒಬ್ಬರಿಗೆ ... ದಂಡನೆಯಾದ್ದರಿಂದ ಸಸ್ಯಕ್ಕೆ ಬಹು ನಿಂದಿರುವಂತೆ ಆಯಿತು.—ಇಲ್ಲಿ ಆಗತೇ ಕೆರೆಯಲ್ಲಿ ನೀರು ಬತ್ತಿಹೋಗುತ್ತಾ ಇರುವದರಿಂದ ಭಾವಿಗಳಲ್ಲಿ ನೀರಿಲ್ಲದೆ ತೊಂದರೆಯಾಗಿದೆ. ಈ ವಿಷಯ ಅನೇಕ ಸಾರಿ ಪ್ರಾರ್ಥಿಸಿಕೊಂಡದ್ದರಿಂದ ಸರ್ಕಾರದವರು ಬಂದು ಬೋರಿಂಗ್‌ಮಿಷನ್ ತಂದು ಕಟ್ಟೇರಿಯ ಎದುರಿನ ಜಮೀನಿನಲ್ಲಿ ಹಾಕಿ ಪರೀಕ್ಷಿಸುತ್ತಾ ಇರುತ್ತಾರೆ. ಇದರಿಂದ ಎಷ್ಟರಮಟ್ಟಿನ ಪ್ರಯೋಜನವಾಗುತ್ತೋ ಮುಂದೆ ನೋಡಬೇಕಾಗಿದೆ. ಇಲ್ಲಿನ ಮಹಮದೀಯರಲ್ಲಿ ದೊಡ್ಡ ವ್ಯಾಪಾರಿಗಳೂ ಧರ್ಮಿಷ್ಠರೂ ಆದ ಗೌಸುಮಿಯಾ ಎಂಬವರು ಅಕಾಲಮರಣವನ್ನೈದಿದ್ದರಿಂದಲೂ, ಇವರಿಗೆ ೮ ವರ್ಷದ ಒಬ್ಬ ಗಂಡು ಮಗು ಇರುವದರಿಂದಲೂ ಇವರ ಕಾರುಬಾರುಗಳನ್ನು ಇವರ ಅಣ್ಣ ದಸ್ತಗೀರ್ ಸಾಹೇಬರೂ ಮತ್ತು ಸಾಲುದಾರ್ರು ಗುರುನಂಜಪ್ಪನವರೂ ನೋಡಿಕೊಳ್ಳುತ್ತಾ ಇದ್ದಾರೆ.—ಮೇಂಬರಾಗಿದ್ದ ಮ|| ಶಿವನಂಜಪ್ಪ ಮತ್ತು ಇನ್ನೂ ಇಬ್ಬರಿಗೆ ತಾಲ್ಲೂಕಿನಲ್ಲಿ ವಿದಿಂದ 5 ರೂಪಾಯಿ ಜುಲ್ಮಾನೆಯು ಚೆಸ್ಸಿ ಕವಿನಾರ್ಜಾರಿಂದ ಮ|| ಶಿವನಂಜಪ್ಪನವರಿಗೆ ಮಾತ್ರ ಆಗಿರುತ್ತೆ.—ಇಲ್ಲಿನ ಡಾಕ್ಟರ್ ಸದಾಶಿವ ಮೊದಲಿಯಾರ್ರು ಕಾಲರಾ ರೋಗಿಗಳನ್ನು ಬಹಳ ಮುತುವರ್ಜಿಯಿಂದ ನೋಡಿ ತಕ್ಕ ಇಲಾಜು ಮಾಡಿದ್ದರಿಂದ ಬಹಳ ಜನಗಳಿಗೆ ಗುಣವಾಗಿರುತ್ತೆ. ಮತ್ತು ಇವರು ಕೈಗೊಂಡಿರುವ ಪಂಚಮಾಸ್ಕೂಲನ್ನು ಜಾಗ್ರತೆಯಾಗಿ ಕಟ್ಟಿ ಪೂರೈಸಿ ಅದರಿಂದ ಉಂಟಾಗುವ ಕೀರ್ತಿಗೆ ಭಾಜನರಾಗಬೇಕಾಗಿ ಕೋರುತ್ತೇವೆ.—ಕಲರಾ ಗಲಾಟೆಗೋಸ್ಕರ ಇಲ್ಲಿನ ವೀರಶೈವರೂ, ವೈಶ್ಯರೂ, ಮಹಮದೀಯರೂ ಮಾಡಿದ ಭಜನೆಯು ಸಮಾರಾಧನೆಗಳು ಬಹಳ ಚೆನ್ನಾಗಿ ಜರುಗಿದವು. 4-5 ದಿನಗಳಿಂದಲೂ ಯಾವ ಗಲಾಟೆಯೂ ಇಲ್ಲದ್ದರಿಂದ ಹಳ್ಳಿಯವರೆಲ್ಲಾ ಪೇಟೆಗೆ ವ್ಯಾಪಾರಕ್ಕೆ ಬರುವದು ಶುರುವಾಗಿರುತ್ತೆ.

ಚನ್ನಗಿರಿ.—ಇಲ್ಲಿ ಸೆಕೆಯು ಬಹು ಹೆಚ್ಚಾಗಿದೆ. ಮೂರು ದಿನಗಳ ಹಿಂದೆ ಸಾಧಾರಣ ಮಳೆಯಾಯಿತು. ಜನಸಿಧಾರಣೆಗಳು ಬಹು ಪ್ರಿಯವಾಗಿವೆ. ಈ ಸ್ಥಳವು ಈ ಮೊದಲು ಬಡ ಜನಗಳಿಗೆ ಸುಖವಾಗಿ ಜೀವನೋಪಾಯಕ್ಕೆ ಅನುಕೂಲವಾಗಿತ್ತು. ದಿನೇ ದಿನೇ ಬಹಳ ಕಷ್ಟದಿಂದ ಜೀವನ ನಡೆಯಬೇಕಾಗಿದೆ. ಇಲ್ಲಿ ಶ್ರೀರಾಮನವಮಿ ಮಹೋತ್ಸವವು ಬಹಳ ವಿಜೃಂಭಣೆಯಿಂದ ಭಜನೆ, ಸಂಕೀರ್ತನೆಯನ್ನು ಮಾಡಿದರು.—ಕಳೆದ ತಿಂಗಳು 3 ನೇ ತಾ ಸರ್ಕಾರಿ ಆಫೀಸರುಗಳು ಮತ್ತು ನೌಕರುಗಳು ಸೇರಿ ಒಂದು ರೀಡಿಂಗ್ ರೂಮನ್ನು ಸ್ಥಾಪನೆ ಮಾಡಿದರು. ಇಂಗ್ಲೀಷು ಕನ್ನಡ ಪತ್ರಿಕೆಗಳು ಬರುತ್ತಲಿವೆ. ಸ್ಥಳಿಕರೂ ಸೇರಿ ಒಳ್ಳೇ ಅಭಿವೃದ್ಧಿ ಸ್ಥಿತಿಗೆ ತರಲು ಉದ್ಯುಕ್ತಪಡುವರೆಂದು ನಂಬಿದೆ. ಈ ಸ್ಥಳಕ್ಕೆ ವರ್ಗವಾಗಿರುವ ದೇವನಹಳ್ಳಿ ತಾಲ್ಲೂಕು ಅಮಲ್ದಾರ್ ಮ|| ನಾರಾಯಣಯ್ಯಂಗಾರ್ರವರು ಬರುವ ವರ್ತಮಾನ ಇನ್ನೂ ಏನೂ ಇಲ್ಲ. ಮ|| ಶ್ರೀನರಸಿಂಹಶಾಸ್ತ್ರಿಗಳವರು ಸ್ಪೆಷಲ್ ಡ್ಯೂಟಿ ಮೇಲೆ ಏಳ್ಳಾರಿ ಪ್ರಾಂತ್ಯ ಹೋಗಿರುತ್ತಾರೆ. ಇಲ್ಲಿನ ಪ್ರಜೆಗಳು ಇನ್ನೂ ಕೆಲವು ಕಾಲ ಮ|| ಶ್ರೀ ಶಾಸ್ತ್ರಿಗಳವರನ್ನೇ ಕೋಆಪರೇಟಿವ್ ಮತ್ತು ಕೃಷಿಕಾಭ್ಯುದಯ ಸಂಘಗಳ ಅಭಿವೃದ್ಧಿಗೋಸ್ಕರ ಇಟ್ಟು ಕೊಡಬೇಕಾಗಿ ಗವರ್ನ್ಮೆಂಟಿಗೆ ಅರ್ಜಿ ಮೂಲಕ ವಿಜ್ಞಾಪಿಸಿಕೊಂಡಿರುತ್ತಾರೆ.—ಪೋಲೀಸಿನಲ್ಲಿ ಸುಮಾರು ಹತ್ತು ಹದಿನೆಂಟು ಜನ ಕಾನ್ಸ್ಟೇಬಲುಗಳ ಸ್ಥಳವು ಖಾಲೀ ಇರುವುದೂ, ಬಹಳ ದಿವಸಗಳಿಂದ ಆ ಕೆಲಸಕ್ಕೆ ಜನಗಳು ಸಿಕ್ಕದೆ ಇರುವುದೂ ಆಶ್ಚರ್ಯವಾಗಿದೆ. ಕಾನ್ಸ್ಟೇಬಲುಗಳು ಕಡಮೆ ಇದ್ದಲ್ಲಿ ಸರ್ಕಾರಿ ಕೆಲಸವು ಎಷ್ಟರಮಟ್ಟಿನ ಸ್ಥಿತಿಯಿಂದ ನಡೆಯ ಬಹುದೆಂಬುದು ವಾಚಕರೇ ಊಹಿಸಬಹುದು.—ಮೇ ತಾ 1 ರಲ್ಲಿ ಈ ತಾಲ್ಲೂಕಿನ ಯಕ್ಸೈಸ್ ಹರಾಜು ಇರುವುದರಿಂದ ಈ ಇಲಾಖೆಯು ತಾಲ್ಲೂಕು ಶಿರಸ್ತೆದಾರರು ನೂರಾರು ರೆವಿನ್ಯೂ ಹೆಚ್ಚು ತೋರಿಸುವುದಕ್ಕಾಗಿ ಕಂಟ್ರಾಕ್ಟ್‌ದಾರರುಗಳಿಗೆ ಪ್ರೋತ್ಸಾಹದ ಪ್ರಯತ್ನದಲ್ಲಿ ಜಾಗರೂಕರಾಗಿರುವರು. ಕಂಟ್ರಾಕ್ಟ್‌ದಾರರುಗಳು ಕುಡಿಯುವವರನ್ನು ಪ್ರೋತ್ಸಾಹಿಸುವರಲ್ಲವೋ.—ಈ ತಾಲ್ಲೂಕಿಗೆ ಸೇರಿದ ಜೋಳಧಾಳು ಗ್ರಾಮದಲ್ಲಿ ಬಹು ದಿವಸಗಳಿಂದ ಇದ್ದ ಮ್ಯಾಂಗನೀಸ್ ಕಂಪನಿಯು ಈ ತಿಂಗಳಲ್ಲಿ ... ಮ್ಯಾಂಗನೀಸು ಹೆಚ್ಚಾಗಿ ಸಿಕ್ಕುತ್ತಿದ್ದರೂ ಅದಕ್ಕೆ ದುಬಾರಿಯಾಗಿ ಖರ್ಚಾಗಲುತ್ತಾ ಇದ್ದದ್ದರಿಂದ ನಿಲ್ಲಿಸಲು ಕಾರಣವಾಯಿತು. ಈ ಕಂಪನಿಯಿಂದ ಹೋಗಿಸಲ್ಪಡುತ್ತಿದ್ದ ಪೋಸ್ಟ್ ಆಫೀಸ್ ಸಹಾ ಮುಚ್ಚಲ್ಪಟ್ಟಿತು.—ಗಾಡಿಗಳು ಹರಿದಾಡುವ ಕಾಲುದಾರಿಗಳು ಇನ್ನೂ ಹೆಚ್ಚುತ್ತಲಿವೆ. ನಾಟಕಗಳು ಊರಿನಲ್ಲಿ ಎಲ್ಲಿ ನೋಡಿದರೂ ಇವೆ. ಈಗ ನಡೆಯುವ ರೀತಿಯಲ್ಲೇ ಮರಗೆಲಸವು ನಡೆಯುತ್ತಾ ಬಂದರೆ ಜಂಗಲಿ ಎಲ್ಲಾ ಮೈದಾನವಾಗುವುದು.

ದೊಡ್ಡಬಳ್ಳಾಪುರ.—ಇಲ್ಲಿನ ಗವರ್ನ್ಮೆಂಟ್ ಗರ್ಲ್ಸ್ ಸ್ಕೂಲ್ ಬಹುಮಾನವು ಈವಾರ ಸ್ಥಳಿಕ ದೊಡ್ಡ ಮನುಷ್ಯರಿಂದ ನಡೆಸಲ್ಪಟ್ಟಿತು. ಅಗ್ರಾಸನವನ್ನು ಮ|| ಅಮಲ್ದಾರ್ ಎ. ಕೃಷ್ಣಯ್ಯಂಗಾರ್ರವರು ಅಲಂಕರಿಸಿ ಬಾಲಕಿಯರಿಗೆಲ್ಲಾ ಬಹುಮಾನವನ್ನು ಕೊಟ್ಟರು. ಹೆಡ್ ಮಿಸ್ಟ್ರೆಸ್ ಅಮ್ಮಣ್ಣಮ್ಮನವರು ಸ್ತ್ರೀ ವಿದ್ಯಾಭ್ಯಾಸ ವಿಷಯದಲ್ಲಿ ಅತ್ಯಂತ ಮನೋಹರವಾದ ಉಪನ್ಯಾಸವನ್ನು ಹೇಳಿ ಸಭಿಕರಿಗೆಲ್ಲಾ ಸ್ತ್ರೀ ವಿದ್ಯಾಭಿಲಾಷೆಯನ್ನು ಉಂಟುಮಾಡಿದರು. ಗ್ರಾಮಸ್ಥರು ಧಾರಾಳವಾಗಿ ಕೊಟ್ಟ ಚಂದಾಹಣದಿಂದ ಬಾಲಿಕೆಯರಿಗೆಲ್ಲಾ ನಾನಾವಿಧ ಪಟ್ಟಿಗೆಗಳು, ಪುಸ್ತಕಗಳು, ಬೊಂಬೆಗಳು, ಮುಂತಾದ ಬಹುಮಾನವಸ್ತುಗಳನ್ನು ಹಂಚಿಕೊಡಲಾಯಿತು. ಪಾಠಶಾಲೆಯನ್ನು ಬಹು ಚೆನ್ನಾಗಿ ಶೃಂಗರಿಸಿದ್ದರು. ಈ ಬಾಲಕಿಯರ ಶಾಲೆಯಲ್ಲಿ 100 ಮಂದಿವರೆಗೂ ವಿದ್ಯಾಭ್ಯಾಸ ಮಾಡುತ್ತಿರುವರೆಂದೂ, ಹೆಡ್ ಮಿಸ್ಟ್ರೆಸ್ ಅಮ್ಮಣ್ಣಮ್ಮನವರೂ ಬಹುಲಬ್ಧಪ್ರಸಾದ ರೀತಿಯಲ್ಲಿ ಸಹಾಯ ಉಪಾಧ್ಯಾಯರೊಡನೆ ಕೆಲಸ ಮಾಡುತ್ತಿರುವರೆಂತಲೂ ಕಂಡುಬಂದಿದೆ. ಈ ಸಾರಿ ಹುಡುಗಿಯರು ಕನ್ನಡಾ ಲೋವರ್‌ಸೆಕೆಂಡರಿ ಪರೀಕ್ಷೆಗೆ ಕಳುಹಿಸಿದರು. ಇಲ್ಲಿ ಈ ಸ್ಕೂಲು ಪ್ರಾರಂಭವಾದಂದಿನಿಂದ ಯಾರೂ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಿಲ್ಲ. ಈ ವರ್ಷ ಮಾತ್ರ ಕೆಲವರು ತೇರ್ಗಡೆಹೊಂದಬಹುದೆಂಬ ನಂಬಿಕೆಯುಂಟಾಗಿದೆ. ಈ ಬಹುಮಾನ ಸಭೆಯಲ್ಲಿ ಕೆಲವುಮಂದಿ ಸ್ತ್ರೀಯರೂ ಹಾಜರಾಗಿದ್ದರು.—ಏದುರಾಷ್ಟಕ್ಕ ಜಾತ್ರೆಯು ಈ ಊರಿಗೆ 30 ಮೈಲಿ ದೂರದಲ್ಲಿ ದೊಡ್ಡ ಕುರುಗೋಡು ಸ್ಟೇಷನ್ ಬಳಿ ಜರಗಿತು. ಸುಮಾರು ಹತ್ತು ಸಾವಿರ ಜನರು ಜಮಾಯಿಸಿದ್ದರು. ಇವರಲ್ಲಿ ಬಹುಮಂದಿ ವರ್ತಕ ವ್ಯಾಪಾರಿಗಳು ಬಿಕ್ಕವರಲ್ಲಿ ಅನೇಕರು ಭಿಕ್ಷುಕರೂ, ಆಟಪಾಟ ನೋಟಗಳನ್ನು ನೋಡಲಿಕ್ಕೆ ಬಂದವರೂ ಆಗಿದ್ದರು. ಇಲ್ಲಿ ಹರಿಯುವ ಪಿನಾಕಿನಿ ನದಿಯು ಸಂಪೂರ್ಣವಾಗಿ ಒತ್ತಿ ಅಲ್ಲಲ್ಲಿ ಜನರು ನೀರುಬಗೆದು ಗುಂಡಿಯಹಾಗೆ ಮಾಡಿ ನಿಲ್ಲಿಸಿ ಅವರಲ್ಲೇ ಈ ನಾಲ್ಕೈರು ಸಾವಿರ ಜನರು ದಿನಾಲೂ ಮುಳುಗುವದೂ ಸ್ನಾನ ಮಾಡುವದೂ, ಬಟ್ಟೆ ಒಗೆಯುವದೂ, ಈ ಕೆಲಸಗಳನ್ನು ನಡೆಸುತ್ತಿದ್ದ ಕಾರಣ ಬಹಳ ಮಟ್ಟಿಗೆ ಅನಾರೋಗ್ಯವಾಯಿತು. ಇದರ ಮೇಲೆ ದನಗಳ ಸಗಣಿ ಚೀಲೆ, ಇವು ಜನಗಳ ಹಸುಗೂಸು ಅಲ್ಲಿ ಗಾಳಿಯನ್ನು ಇಲ್ಲವೆಂತ ಧಾರಾಳವಾಗಿ ಹೇಳಬಹುದು. ನದೀ ಪಾತ್ರದಲ್ಲೂ ಎರಡು ದಡಗಳಲ್ಲೂ ಜನರು ಮಲವಿಸರ್ಜನೆ ಮಾಡುತ್ತಿದ್ದದ್ದರಿಂದ ಈ ಸ್ಥಳವು ಬಹಳ ಅನಾರೋಗ್ಯವಾಯಿತು. ಈ ಆರೇ ಮಠವನ್ನು ವಿದುರನು ನೆಟ್ಟನೆಂದೂ, ಈಗ ಅದಕ್ಕೆ ಸುಮಾರು 5,000 ವರ್ಷಗಳಮೇಲೆ ಆಗಿದೆ ಎಂದೂ ಹೇಳುತ್ತಾರೆ. ಅಲ್ಲದೆ ವಿಶೇಷವಾಗಿ ಸ್ತ್ರೀಯರೇ ಇಲ್ಲಿ ಸೇರುವಂತೆ ಕಂಡುಬಂದಿದೆ. ವೈಶ್ಯ ಸ್ತ್ರೀಯರೂ ಹಳ್ಳಿ ಜನರೂ, ಬಹಳವಾಗಿ ಸೇರುತ್ತಾರೆ. ವೈಶ್ಯರಿಗೆಲ್ಲಾ ಒಂದು ದೊಡ್ಡ ಛತ್ರದಲ್ಲಿ ಮೂರುದಿನ ಭೋಜನಾದಿಗಳ ಅನುಕೂಲವುಂಟು. ಆದರೆ ಗ್ರಾಮಸ್ಥರೆಲ್ಲಾ ತೋಳೆಯಲ್ಲಿ ಮಲಗುತ್ತಾರೆ. ಈ ಸ್ಥಳಕ್ಕೆ ಹಿಂದೂಪುರ, ದೊಡ್ಡಬಳ್ಳಾಪುರ, ಗೌರಿಬಿದನೂರು ಕಡೆಯಿಂದಾ ಕೆಲವು ಕ್ರೈಸ್ತಪ್ರಸಂಗಿಗಳು ಒಂದೇ ದೇವರವಾಕ್ಯವನ್ನೂ ಸದ್ವೃತ್ತಿಯನ್ನೂ ಕುರಿತು ಪ್ರಸಂಗಿಸಿದರು. ಪ್ರತ್ಯಕ್ಷದಲ್ಲಿ ಈ ಜಾತ್ರೆಗಳಿಂದ ಪೂಜಾರಿಗಳಿಗೂ ಹೋಟೆಲಗಾರರಿಗೂ ವ್ಯಾಪಾರಿಗಳಿಗೂ ಒಳ್ಳೇ ಲಾಭವುಂಟೆಂಬುವದರಲ್ಲಿ ಸಂದೇಹವಿಲ್ಲ. ಅಲ್ಲಿ ನಡೆಯುವ ದುಷ್ಕಾರ್ಯಗಳಲ್ಲಿ ಮದ್ಯಪಾನವೂ, ಜೂಜಾಟವೂ, ಜಾರತ್ವವೂ ಸೇರಿವೆ. ವರ್ತಕರಲ್ಲಿ ಸಿಕ್ಕುವ ಪದಾರ್ಥಗಳು ಆರೋಗ್ಯಕರವೆಂತ ಹೇಳಲಾಗದು. ನೀರೂ ಅನಾರೋಗ್ಯಕರವಾಗಿದೆ.—ಧಾರಣೆವಾರಿ ಯುಗಾದಿಪ್ರಕಾರ ಅಕ್ಕಿ 5-6 ಸೇರೂ ರಾಗಿ 18 ಸೇರೂ ಮಾರುತ್ತೆ. ಅಲ್ಲಲ್ಲಿ ಕೆಲವರು ಹೊಸ ಮನೆಗಳನ್ನು ಕಟ್ಟುತ್ತಿದ್ದಾರೆ.—ಹಾಳಾಗಿರತಕ್ಕ ಭಾಗವೂ ಅಶುಚಿಯಾಗಿರತಕ್ಕ ಪ್ರದೇಶಗಳೂ ಅಧಿಕವಾಗಿವೆ.

ವಿದೇಶ ವೃತ್ತಾಂತಗಳು.

ಚೀನಾ ದಕ್ಷಿಣ ಪ್ರಾಂತ್ಯದಲ್ಲಿರುವ ಹಾಂಕಾಂಗ್ ಪಟ್ಟಣದ ಸಮುದ್ರತೀರದಲ್ಲಿ ತಾಯಿ ಎಂಬ ಹಡಗು ನಿಂತಿದ್ದಾಗ ಎಂಭತ್ತು ಮಂದಿ ಸಮುದ್ರಕಳ್ಳರು ಅದರೊಳಕ್ಕೆ ನುಗ್ಗಿ ಅದರೊಳಗಿದ್ದ ಯೂರೋಪಿಯನ್ ಪ್ರಯಾಣಿಕರನ್ನು ಗಾಬರಿಪಡಿಸಿ ಮಾತನಾಡದಂತೆಯೂ ಚಲಿಸದಂತೆಯೂ ತಡೆದು ಉಗ್ರಾಣದ ಕೊಠಡಿಗಳಿಗೆ ನುಗ್ಗಿ ಮದ್ದು ಗುಂಡು ತೋಟಾ ಮುಂತಾದ ಯುದ್ಧ ಸಾಮಾನುಗಳನ್ನು ತೆಗೆದುಕೊಂಡದ್ದಲ್ಲದೆ ಮೂರು ಗಂಟೆ ಹೊತ್ತು ಹಡಗಿನ ಎಲ್ಲಾ ಭಾಗಗಳಲ್ಲೂ ಇದ್ದ ಬೆಲೆಯುಳ್ಳ ಸಾಮಾನುಗಳನ್ನು ಅಪಹರಿಸಿ ಅಲ್ಲಲ್ಲಿ ತಂಟೆ ಮಾಡಿದ ಮೂರು ಜನರನ್ನು ಕೊಂದುಹಾಕಿ ದೋಣಿಗಳಲ್ಲಿ ಕುಳಿತು ಹೊರಟು ಹೋದರು. ಸುಮಾರು 75,000 ರೂಪಾಯಿನ ಮಾಲುಗಳು ಈ ರೀತಿ ಕಳುವಾಗಿರುತ್ತವೆ. ಅಂಥಾದ್ದರಲ್ಲೂ ಹಡಗಿನ ಸೇವಕಾಳಿಗಳ ಪೈಕಿ ಕೆಲವರು ಕಳ್ಳರ ಕೂಡ ಹೋರಾಡಿ ಒಬ್ಬನನ್ನು ಕೊಂದು ಆರುಮಂದಿಯನ್ನು ದಸ್ತಗಿರಿ ಮಾಡಿದ್ದಾರೆ. ಈಗ ತಪ್ಪಿಸಿಕೊಂಡು ಹೋಗಿರುವವರನ್ನು ಪತ್ತೆಮಾಡಿಕೊಡುವವರಿಗೆ 6,000 ರೂಪಾಯಿ ಇನಾಮು ಸಿಕ್ಕುವುದೆಂದು ಹಾಂಕಾಂಗ್ ಗವರ್ನ್ಮೆಂಟಿನವರು ಇಸ್ತಿಹಾರು ಹಾಕಿಸಿರುತ್ತಾರೆ.

* * *

ಜರ್ಮನಿಯ ಕೆಲವು ಸ್ತ್ರೀಪುರುಷರು ವಿಮಾನ ಯಂತ್ರದಲ್ಲಿ ಕುಳಿತು ಸಂಚರಿಸುವಾಗ್ಗೆ ಅಕಸ್ಮಾತ್ತಾಗಿ ಆ ವಿಮಾನ ಯಂತ್ರವು ಅಂತರಿಕ್ಷದಿಂದ ಫ್ರೆಂಚರ ಸೀಮೆಯಾದ ನ್ಯಾನ್ಸಿ ಪಟ್ಟಣದಲ್ಲಿ ಇಳಿಯಿತೆಂದೂ, ಅಲ್ಲಿದ್ದ ಫ್ರೆಂಚ್ ಅಧಿಕಾರಿಗಳೂ ಇತರರೂ ಆ ಜರ್ಮನಿ ಪ್ರಜೆಗಳನ್ನು ಅವಮಾನ ಪಡಿಸಿದರೆಂದೂ, ಇದರ ದೆಸೆಯಿಂದ ಫ್ರಾನ್ಸ್ ಮತ್ತು ಜರ್ಮನಿ ಸರ್ಕಾರದವರಿಗೆ ಮನಸ್ತಾಪಗಳುಂಟಾಗಿ ಪರಸ್ಪರ ಕಾಗದ ಪತ್ರಗಳು ನಡೆಯುತ್ತಿವೆ ಎಂದೂ ಕಳೆದವಾರ ತಿಳಿಸಿದೆವಷ್ಟೆ. ಈಚೆಗೆ ತಿಳಿದು ಬಂದಿರುವ ಸಮಾಚಾರಗಳೇನೆಂದರೆ—ಫ್ರಾನ್ಸ್ ಸರ್ಕಾರದ ಮಂತ್ರಿಯವರು ಆ ಪಟ್ಟಣಕ್ಕೆ ಹೋಗಿ ನಿಂತು ನಡೆದ ವಿದ್ಯಮಾನಗಳನ್ನೆಲ್ಲಾ ಸವಿಸ್ತಾರವಾಗಿ ತಿಳಿದು, ಇಬ್ಬರು ಪೋಲೀಸಿನವರನ್ನು ಕೆಲಸದಿಂದ ವಜಾ ಮಾಡಿ, ಇಬ್ಬರು ಪೋಲೀಸ್ ಕಮೀಷನರುಗಳನ್ನೂ ಇನ್ನೊಬ್ಬ ಅಧಿಕಾರಿಯನ್ನೂ ಅಲ್ಲಿಂದ ಬೇರೆಕಡೆಗಳಿಗೆ ವರ್ಗಾಯಿಸಿ, ಈ ಸಂಗತಿಯನ್ನು ಜರ್ಮನಿಯ ರಾಯಭಾರಿಗೆ ತಿಳಿಸಿದರು. ಅವರಿಗೂ ಜರ್ಮನಿಯವರಿಗೂ ರಾಜಕೀಯ ವಿಚಾರವಾಗಿ ಉಂಟಾಗಿದ್ದ ಅಸಮಾಧಾನವು ಇದರಿಂದ ನಿವಾರಣೆಯಾಯಿತು. ಅವಮಾನಕ್ಕೆ ಸಿಕ್ಕಿದ ಜರ್ಮನಿಯ ಪ್ರಜೆಗಳು ನಷ್ಟ ಪರಿಹಾರದ ಮೊಕದ್ದಮೆಯನ್ನು ತರುವವರಾಗಿದ್ದಾರೆ. ಈಚೆಗ ತಾ 22 ರಲ್ಲಿ ಇನ್ನೊಂದು ಸಂಗತಿ ನಡೆದಿರುವಂತೆ ತಂತೀವರ್ತಮಾನ ಬಂದಿದೆ. ಜರ್ಮನಿಯ ಸೈನ್ಯಗಳ ಹುದ್ದೇದಾರರಿಬ್ಬರು ಜರ್ಮನಿಯೊಳಗೆ ತಾಮರ್‌ಸ್ಟಾಡ್ ನಗರದಲ್ಲಿ ವಿಮಾನ ಯಂತ್ರದಲ್ಲಿ ಕುಳಿತು ಮೆಟ್ಜ್ ನಗರಕ್ಕೆ ಹೋಗಬೇಕೆಂದು ಅಂತರಿಕ್ಷದಲ್ಲಿ ಸಂಚರಿಸುತ್ತಿದ್ದಾಗ ಅಕಸ್ಮಾತ್ತಾಗಿ ಆ ಯಂತ್ರಕ್ಕೆ ಎಣ್ಣೆಸಾಲದೆ ಇಳಿದುಬಿಟ್ಟಿತು. ಅವರಿಬ್ಬರೂ ವಿಮಾನ ಯಂತ್ರಸಮೇತ ಭೂಮಿಗೆ ಬಿದ್ದು ಆ ಪ್ರದೇಶವು ಜರ್ಮನಿ ಸೀಮೆಯೆಂದು ನಂಬಿಕೊಂಡರು. ಆದರೆ ಆ ಸೀಮೆಯು ಫ್ರೆಂಚರಿಗೆ ಸೇರಿದ್ದು ಲುನೆವಿಲ್ಲೆ ಎಂಬ ಸ್ಥಳದ ಬಳಿ ಇಳಿದಿದ್ದರು. ಇನ್ನು ಮುಂದೆ ಹೀಗೆ ತಮ್ಮ ಸೀಮೆಯೊಳಕ್ಕೆ ಜರ್ಮನಿಯವರು ಬಂದಿಳಿಯದಂತೆ ಕಟ್ಟುಮಾಡಬೇಕೆಂದು ಫ್ರೆಂಚರು ತೀವ್ರದಿಂದ ಜರ್ಮನಿಯವರು ಅದಕ್ಕೆ ತಕ್ಕ ಏರ್ಪಾಡು ಮಾಡಲಾರಂಭಿಸಿದಾರೆ.

* * *

ಮಿ|| ಪಿಯರ್‌ಪಾಂಟ್ ಮಾರ್ಗನ್ ಎಂಬ ಅಮೇರಿಕದ ಕೋಟ್ಯಾಧೀಶ್ವರನು ಕಾಲವಾಗಿ ಒಂದು ತಿಂಗಳಾಯಿತು. ಈತನ ಆಸ್ತಿ ಇಷ್ಟೆಂದು ಗೊತ್ತುಮಾಡುವುದಕ್ಕೆ ಒಂದು ವರ್ಷಕಾಲ ಹಿಡಿಯುವುದೆಂದು ತಿಳಿಯುತ್ತದೆ. ಈತನು ಬದುಕಿದ್ದಾಗ ಆತನನ್ನು ಕಂಡು ಆತನಕೂಡ ಮಾತನಾಡಿಕೊಂಡು ಬರಬೇಕೆಂದು ಒಬ್ಬ ಪತ್ರಿಕೋದ್ಯೋಗಿಯು ಆತನ ಬಂಗಲೆಗೆ ಹೋಗಿ ತನ್ನ ಹೆಸರಿನ ಕಾರ್ಡನ್ನು ಜವಾನನ ಮೂಲಕ ಕೊಟ್ಟು ಕಳುಹಿಸಿದನು. ಕೋಟ್ಯಾಧೀಶ್ವರನು ಅದನ್ನು ಅವನಿಗೆ ಹಿಂದಕ್ಕೆ ಕಳುಹಿಸಿ—ನಾನು ನಿನ್ನ ಕೂಡ ಕುಳಿತುಕೊಂಡು ಮಾತನಾಡುವುದಕ್ಕೆ ನನಗೆ ಸಮಯವಿಲ್ಲ. ನನಗೆ ಸಮಯವೆಂಬುವುದು ಬಹಳ ಬೆಲೆಯುಳ್ಳದ್ದಾಗಿದೆ. ಆದರೂ ನೀನು 10 ಪೌಂಡು (ಸುಮಾರು 150 ರೂಪಾಯಿ) ನನಗೆ ಕೊಡುವುದಾದರೆ ನಾನು ನಿನ್ನಕೂಡ ಮೂರು ನಿಮಿಷ ಕುಳಿತು ಮಾತನಾಡುತ್ತೇನೆ ಎಂದು ಹೇಳಿ ಕಳುಹಿಸಿದನು. ಅದಕ್ಕೆ ಪತ್ರಿಕೋದ್ಯೋಗಿಯು ಆತನ ಮಾತಿನಂತೆ ಒಪ್ಪಿಕೊಂಡು 10 ಪೌಂಡು ಕೊಟ್ಟು, ಆತನ ಕೂಡ ಕುಳಿತು ಕಾಲಸ್ಥಿತಿ ಬೆಳೆ, ವಿಚಾರ ಈ ಮುಂತಾದ ಬಹು ಸಾಮಾನ್ಯ ವಿಷಯಗಳನ್ನು ಕುರಿತು ಕೋಟ್ಯಾಧೀಶ್ವರನೊಡನೆ ಸಂಭಾಷಣೆ ಬೆಳೆಸುತ್ತಾ ಬಂದನು. ಮೂರು ನಿಮಿಷ ಆಗಿಹೋಯಿತು. ಆಗ ಕೋಟ್ಯಾಧೀಶ್ವರನು—ನೀನು ನನಗೆ 10 ಪೌಂಡು ಕೊಟ್ಟು, ಯಾವ ವಿಶೇಷ ಸಂಗತಿಯನ್ನೂ ಕುರಿತು ನನ್ನನ್ನು ಪ್ರಶ್ನೆಮಾಡಿ ತಿಳಿಯದೆ ವ್ಯರ್ಥವಾಗಿ 10 ಪೌಂಡು ಕಳೆದು ಕೊಂಡುಬಿಟ್ಟೆಯಲ್ಲಾ ಎಂದು ಹೇಳಿದನು. ಅದಕ್ಕೆ ಆ ಪತ್ರಿಕೋದ್ಯೋಗಿಯು ಪ್ರತ್ಯುತ್ತರವಾಗಿ—ಅಯ್ಯೋ ನಾನೇನೂ ವ್ಯರ್ಥವಾಗಿ 10 ಪೌಂಡು ಕಳೆದುಕೊಳ್ಳಲಿಲ್ಲ. ಇದರಿಂದ ನನಗೆ 90 ಪೌಂಡು (ಸುಮಾರು 1,350 ರೂಪಾಯಿ) ಲಾಭ ಉತ್ಪತ್ತಿ ಆಯಿತೆಂದು ತಿಳಿ. ಹೇಗೆಂದರೆ ನೀನು ನಿನ್ನ ಕೂಡ ಮಾತನಾಡಿ ಬರುತ್ತೇನೆಂದು ಒಬ್ಬ ಮನುಷ್ಯನಲ್ಲಿ ಪಂದ್ಯ ... ಅವನು ನನ್ನ ಸಾಹಸ ನೆರವೇರಿದರೆ ನನಗೆ 100 ಪೌಂಡು ಕೊಡುವುದಾಗಿ ಪಂಥ ಕಟ್ಟಿ ಕೊಂ...

ಷನು ಅದರಂತೆ ನಾನು ನನ್ನ ಹಟವನ್ನು ಬಿಟ್ಟೆ ನಾದ್ದರಿಂದ ಅವನು ಕೊಡುವ 100 ಪೌಂಡಿನಲ್ಲಿ ನನಗೆ 10 ಪೌಂಡು ಕೊಟ್ಟು ಬಾಕಿ 90 ಪೌಂಡು ನನಗೆ ಲಾಭವಾಗಿರುತ್ತದೆ ಎಂದು ಕೋಬ್ಲ್ಯಾಫೀಲ್ಡರಿಗೆ ಸಮಾಧಾನ ಹೇಳಿ ಹೊರಟುಹೋದನು

ಅಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವಾಗಿರುವುದು ಇದರಿಂದ ತೋರಿಬರುತ್ತದೆ ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ

SCOTT'S EMULSION 2-18
(ಸ್ಕಾಟ್ಸ್ ಇಮಲ್ ಷನ್)

ಎಂಬೀ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ವ್ಯಾಪಾರಗಾರರಲ್ಲೂ ದೊರಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲಂಡ್.

ಈ ನಿಶಾನೆಯುಳ್ಳ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು ನಿದ್ರೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು ಬಡದೆ ಬಾಯಾರಿಕೆ ಬಳಲಿಕೆ, ಎದೆ ಕಲ್ಲಣಿಸುವುದು ತಲೆನೋವು ಗಾಬರಿ ಕಣ್ಣುಮೊಬ್ಬು ತಲೆ ತಿರುಗುವಿಕೆ ಮೈನೋವು, ಕೀಲುನೋವು, ಮರವು ನಿತ್ರಾಣ ಇವೇ ಮೊದಲಾದವು ಅಲಕ್ಷ್ಯ ಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [112 31]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦ ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಸೊಗಸಾದ ಉತ್ತಮತರದ ಹೊಸ ಬಟ್ಟೆಗಳು ಬಂದಿವೆ ಬೇಗನೆ ಈಗಲೇ ಬಂದು ನೋಡಿ ಆರಿಸಿಕೊಳ್ಳದಿದ್ದರೆ ಈ ಒಳ್ಳೇ ಸಮಯ ಹೋದೀತು ನಮ್ಮ ಷಾಪಿನಲ್ಲಿ ಖರ್ಚುಮಾಡುವ ಪ್ರತಿ ಒಂದು ಆಣೆಗೂ ನಮಗೆ ಸಂಪೂರ್ಣವಾದ ಪ್ರತಿಫಲ ದೊರೆಯುವುದು ನಾನಾ ಬಗೆಯ ಉತ್ಕೃಷ್ಟವಾದ ಜವಳಿಯನ್ನೇ ಇಟ್ಟಿರುವೆವು ಸಕಲರಿಗೂ ಸಂತೋಷವನ್ನೂ ಸಂಪೂರ್ಣ ತೃಪ್ತಿಯನ್ನೂ ಖಂಡಿತವಾಗಿ ಉಂಟುಮಾಡುತ್ತವೆ ಯಾವ ವಸ್ತುವನ್ನು ನಮ್ಮಲ್ಲಿ ಕೊಂಡುಕೊಂಡರೂ ಅದನ್ನು ನೀವು ಬಹುಮಾನ ಪಡೆದಂತೆ ಎಣಿಸುವಿರೆಂದು ಹೇಳಬಲ್ಲೆವು ನಮಲ್ಲಿ ಎಲ್ಲಾ ತರದ ಉಡುಪುಗಳೂ ಬಹಳ ಸೊಗಸಾಗಿ ತಯಾರ್ಮಾಡಲ್ಪಡುವವು

ಅಬ್ಬಾ ಅಬ್ದುಲ್ ಷುಕೂರ್ ಸೇಟ್ ಕಂಪನಿ,

ಕರ್ಸನ್ ಪಾರ್ಕ್, ಮೈಸೂರು.

[81 1]

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 18

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಹೆಚ್ಚಿ ವಿಕರಿಯಾಗುತ್ತಿರುವ ಟೋಪಿಗಳ ದಾಗವೆಲ್ಲಾ ಬೀಳಾವದು ಅವು ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಜರಿವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಪಿರಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ; ೧ ರೂ ೬ ಆ, ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧ ೮ ರೂ ೧—೧೨
ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨
ಜಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ, ೧ ರೂ ೬ ಆ
ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೂಸುಗಳ ಟೋಪಿ, ಪುಣೀ ಮೋಜೋಡು, ಅರ್ಧ ಮೋಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಗೃಹಕೃತ್ಯದ ನೋಟೀಸು

ಚಿತ್ರದುರ್ಗದ ತಾಲ್ಲೂಕು ಕಸಬಾ ಸಮ್ಮತು ವಾ ಮನ್ನಸಳ್ಳಿ ಮುಲಂಗಾ ಹೊರಕೆರೆ ಹಟ್ಟಿಯಲ್ಲಿರುವ ಲಿಂಗಾ ಹನುಮಂತಪ್ಪನು ತಿಳಿಸುವ ಸಂಪರೆ —ನನ್ನ ಮಕ್ಕಳಾದ ಗಿಡ್ಡಪ್ಪ, ಅಪ್ಪಯ್ಯ ಎಂಬವರು ನನ್ನ ಮಾತು ಉಲ್ಲಂಘಿಸಿ ಬೇರೆ ವಾಸವಾಗಿರುತ್ತಾರೆ ಇವರಿಗೆ ನನ್ನವರಿಗೂ ಉಭಯವರ ಯಾವದೊಂದು ತೊಂದರೆ ಇಲ್ಲ ಇವರೇನಾದರೂ ನನ್ನ ಅನುಮತಿ ಶಿವಾಯಿ ಸಾಲ ವಗೈರೆ ಮಾಡ್ಯಾರು ಇವರಿಗೆ ಯಾರೂ ಸಾಲ ವಗೈರೆ ಕೊಡಕೂಡದು ಇದೇ ಗ್ರಾಮದಲ್ಲಿ ನನ್ನ ಖಾತೆಗೆ ತರೀ ನಂಬರು ಎರಡೂ, ಖುಷ್ಕಿ ನಂಬರು ಎರಡೂ ಇವೆ ಈ ಜಮೀನುಗಳನ್ನು ನನ್ನ ಅನುಮತಿ ಶಿವಾಯಿ ಅವರು ಕ್ರಯ, ಭೋಗ್ಯ ವಗೈರೆ ಮಾಡಿಕೊಂಡ ಪಕ್ಷದಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲ ಖಂಡಿತ ತಿಳಿಯುವದು [78 2]

ತಾ 15 4 1914 ಲಿಂಗಾ ಹನುಮಂತಪ್ಪ

ಪರೀಕ್ಷಿಸಿ ನೋಡದ ಅಗ್ಗದ ತೈಲ ಎಣ್ಣೆಗಳು ಈಗ ಎಲ್ಲೆಲ್ಲೂ ವಿಕರಿಯಾಗುತ್ತಿವೆ ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಅಗ್ಗವಾಗಿ ಸಿಕ್ಕುವ ತೈಲ ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೂ ತಲೆನೋವು ಹುಟ್ಟುತ್ತದೆ ಕೂದಲು ಸತ್ತುಹೋಗುತ್ತೆ ಆದಕಾರಣ ಶ್ರೇಷ್ಠತಮವಾಗಿಯೂ ಪ್ರಖ್ಯಾತವಾಗಿಯೂ ಇರುವ - ಕಾಮಿನಿಯಾ ತೈಲವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣ ಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳೆಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ ಬೆಳೆಯುವವು ... ಎದು ಹೋಗದೆ ಬಟ್ಟವಾಗಿ ಬೆಳೆಯುವವು ... ಕೂದಲಿಗೆ ... ಸುಂದರ ... ಉತ್ತಮೋತ್ತಮವಾದ ಸುಗಂಧವುಳ್ಳ ... ಕೂದಲಿಗೆ ... ಮನಸ್ಸಿಗೆ ಆನಂದವನ್ನೂ ... ವನ್ನೂ ಕೊಡುತ್ತದೆ ... ಲನ್ನು ತಿದ್ದು ... ಲನ್ನು ಕಪ್ಪು ... ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳೆಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲಿನೆಣ್ಣೆ ಇಲ್ಲ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ

ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-4 0 ಮೂರು ಸೀಸೆಗಳಿಗೆ
3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0-5 0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟಿನ್ನು ಕಳುಹಿಸಿ

ಮೈಸೂರು ಎಗ್ಜಿಬಿಷನ್ನಲ್ಲಿ ಈ ಎಣ್ಣೆಗೆ ಚಿನ್ನದ ಪದಕವೂ, ಅಲಹಾಬಾದ್ ಎಗ್ಜಿಬಿಷನ್ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರೆತಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸಲ್ಲವೂ ಮರೆಯಾಗದೆ ನಮಗೆ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ... ಮಿಸೆಸ್ ಸೆಕ್ರೆಟರಿ ಮಿ॥ ಡಿ ಸಾಲೊಮನ್ ರವರು ಬರೆಯುವದು— ... ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ" ... ಕೆ ಏ ಎಸ್ ಹೈಸ್ಕೂಲ್ ಹೆಡ್ ಮಾಸ್ಟರ್ ಮಿ॥ ಎಂ ಸುಬ್ರಹ್ಮಣ್ಯ ... ಯವರು ಬರೆಯುವದು— ನಿಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ಪರೀಕ್ಷೆಮಾಡಿದೆನು ಅದು ಕೂದಲನ್ನು ಹುಟ್ಟಿಸಿ ಅಂದವಾಗಿಯೂ ಕೋಮಲವಾಗಿಯೂ, ಸೊಂಪಾಗಿಯೂ ಬೆಳೆಸುವುದೆಂದು ಖಂಡಿತವಾಗಿ ಹೇಳಬಲ್ಲೆನು ದಯವಿಟ್ಟು ಇನ್ನು ಮೂರು ಬಾಟ್ಲಿ ಎಣ್ಣೆ ಕಳಿಸಿಕೊಡಿ" ... ಕಂಟ್ರೋಲರ್ ಆಫೀಸ್ ಮಿ॥ ಗೋಪಾಲರಾವ್ ಜೋಷಿಯವರು ಬರೆಯುವದು— "ದಯವಿಟ್ಟು ನಿಮ್ಮ ಕಾಮಿನಿಯಾ ಎಣ್ಣೆ ಆರು ಬಾಟಲ್ ಕಳಿಸಿಕೊಡಿ ಒಂದು ತಿಂಗಳ ಹಿಂದೆ ನೀವು ಕಳಿಸಿದ ಬಾಟ್ಲಿಗಳು ಮುಗಿದುಹೋಯಿತು ಇದೇ ಉತ್ತಮೋತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳಬಲ್ಲೆನು ಆದಕಾರಣ ನೀವು ಒಂದು ಸಲ ತರಿಸಿ ಪರೀಕ್ಷೆ ಮಾಡಿ

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನಿಮ್ಮ ಸ್ಥಳದ ಷಾಪುಕೀಪರಲ್ಲಿ ಅದು ಇಲ್ಲದಿದ್ದರೆ ಅವನ ಹೆಸರು ವಿಳಾಸದ ಸಮೇತ ನಮಗೆ ತಿಳಿಸಿ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ವಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು ಇ... ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ಏಜೆಂಟ್, ದಿ ಉಲನ್ ಮಾರ್ಟ್, ಮಂಗಳೂರು

ನಮ್ಮ ವಿಳಾಸ — [3-16]

ಆಂಗ್ಲೊ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಗಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ

Messrs OAKES & Company, Mount Road, Madras.

[4-20] **ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.**

Printed and Published by the Rev H G..., Proprietor and Manager, Wesleyan Mission Press, Mysore. 1/5/1914

REGISTERED
M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. | ಕ್ರಯ ೧ ದುಡ್ಡು.

ಸಂಪುಟ ೨೬ | ಮೈಸೂರು—ಸನ್ ೧೯೧೩ ನೇ ಇಸವಿ ಮೇ ತಾರೀಖು ೮ ನೇ ಗುರುವಾರ. | ಸಂಚಿಕೆ ೪೯

ಪ್ರತಾಪಕಂಠೀರವ ಚರಿತ್ರೆ.

(1) "ಧರ್ಮಶಾಸ್ತ್ರಂಗಳ ಪರಿಪಾಲನೆ ಉ ಓ ಗುಪ್ತದಲಿ ದ ಅವರ ಯತ್ನಗಳಿಗೆ ಮೊಂದ ಎಂಪರ ತೋರಿಸುತ್ತವೆ" ಎಂಬ ನೀತಿ, (2) ಸ್ತ್ರೀಧರ್ಮ, ಬುದ್ಧಿಕೌಶಲ್ಯ ... ಮುಂತಾದ ಸಾಹಸಚಾತುರ್ಯ (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು (4) ವನ, ಸರಸ್ಸು, ಆರಾಮಾದಿ ... (5) ಮನುಷ್ಯ ಯತ್ನಕ್ಕೆ ವಿಶಾರದ ಈಗಿನ ಅನುಭವಕ್ಕೆ ತಕ್ಕ ವಿಷಯಗಳು (6) ಎಲ್ಲರೂ ಓದಿ ತಿಳಿಯತಕ್ಕಂಥಾ ಸುಲಭ ಶೈಲಿ, (7) ಸರಸತೆ ... ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವ ಕಥಾಭಾಗಗಳು ಕೂಡಿವೆ ಕ್ರಯ —1 ರೂಪಾಯಿ, ಟಪಾಲ್ ಹಾಸಲು ಬೇರೆ

[1-11] ನಮ್ಮ ವಿಳಾಸ —ಪಿ. ಎಸ್ ಕೃಷ್ಣ ಕಂಪನಿ, ಬೆಂಗಳೂರು ಸಿಟಿ

ಡೋಂಗರೆ ಇವರ ಬಾಲಾಮೃತ.

[115-43]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದದ್ದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡ ಇರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಪಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲ ದಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಮಸ್ತು ವಿಧವಾದ ನೋವೂ ಇರಿತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು ... ನೆಗಡಿ, ಸಳತ ... ನೋವು, ಕೃತ್ಯ, ಈ ಮೊದ ಲಾದ ಅನೇಕ ತರದ ವ್ಯಾಧಿಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ... ಎಂದರಂತೆ ವಿಕ್ರಯಿಯಾಗುತ್ತಲಿವೆ ಡಾಕ್ಟರುಗಳೂ ... ಮಾನತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ವಿಕ್ರಯಿಯಾಗುವದು

ಹುಟಕಟ್ಟು ಔಷಧ ... ಆಣೆ 12 ಕುಪ್ಪಿಗೆ ರೂ ... ಪಲ್ಲುಪುಡಿ ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ 1-2-0 ... ಮತ್ತು ಸಾಗಿಂಗ್ ಛಾರ್ಜು ಪ್ರತ್ಯೇಕ [12-11]

ವಿಳಾಸ —ಅಮೃತಾಂಜನ ಡಿಪೋ, ೧೮೫ ಫ್ರಾಯರ್ ರೋಡ್, ಫೋರ್ಟ್, ಬೊಂಬಾಯಿ

ಇದೇ ಸಮಯ ' ಪ್ರೋಟಾಪ್ರೋಟಿ ವ್ಯಾಪಾರ ' ... ಮಾರ ಮಾತ್ರವೇ ' ಟಪಾಲು ಖರ್ಚು ಇಲ್ಲ '' ತ್ವರೆಮಾಡಿ

೨ ಪುಸ್ತಕಕ್ಕೆ ೧ ರುಪ್ಪರ್ ಮಾಹರು, ೩ ಪುಸ್ತಕಕ್ಕೆ ೧ ರೇಷ್ಮೆ ವಸ್ತ್ರ ೪ ಪುಸ್ತಕಕ್ಕೆ ೧ ಪುಸ್ತಕ ೧೦ ಪುಸ್ತಕಕ್ಕೆ ೧ ಜೇಬು ಗಡಿಯಾರ ಬಹುಮಾನ

ನಿಮಗೂ, ನಿಮ್ಮ ಬಾಲಕ ಬಾಲಕಿಯರು ಮತ್ತು ಸ್ನೇಹಿತರಿಗೂ ಅತ್ಯಂತ ಉಪಯೋಗವಾದ

ಬಹುಮಾನ ... ಉಚಿತವಾಗಿ ೮ ಆಣೆ ... ವರೆ ಬಹುಮಾನದ ... ಲು ಖರ್ಚು ಇಲ್ಲ

ENGLISH SELF-INSTRUCTOR.

ಆಂಗ್ಲಭಾಷಾ ಪ್ರಕಾಶಕ.

ಕಣ್ಣಿಂದ ನೋಡಿ ಅಲ್ಪ ಬೆಲೆಗೆ ಉತ್ತಮ ಪುಸ್ತಕ ಮತ್ತು ಬಹುಮಾನ ಈ ಸಮಯ ಬಿಟ್ಟರೆ ಇಲ್ಲ

... ರೂ ೧ ೮—೦ ಅನ್ಯರ ಸಹಾಯವಿಲ್ಲದೆ ಸುಲಭವಾಗಿ ಇಂಗ್ಲೀಷ್ ಕಲಿಯುವ ಪುಸ್ತಕ ಕ್ರಯ ರೂ ೧—೮—೦,

ಈ ದೊಡ್ಡ ಪುಸ್ತಕದಲ್ಲಿ ೧ ನೇ ಭಾಗ, ೨ ನೇ ಭಾಗ, ೩ ನೇ ಭಾಗ, ೪ ನೇ ಭಾಗ, ೫ ನೇ ಭಾಗ — ಈ ೫ ಭಾಗಗಳೂ ಅಡಕವಾಗಿವೆ ಬಾಲಕ ಬಾಲಕಿಯರು ... ಯಲ್ಲಿ ಓದುವ ವಿದ್ಯಾರ್ಥಿಗಳು ಮತ್ತು ವರ್ತಕರು ಮುಂತಾದವರು ಬೋಧಕರ ಸಹಾಯವಿಲ್ಲದೆ ಓದುವುದು, ಬರೆಯುವುದು, ಮಾತಾಡುವುದು ಸುಲಭ ... ಕಲಿಯಬಹುದು ಕನ್ನಡ ತಿಳಿದಿದ್ದರೆ ಸಾಕು ಇಂಗ್ಲೀಷ್ ಅಕ್ಷರಾಭ್ಯಾಸ, ... ಸ್ವರಾಕ್ಷರಗಳ ವಿಧವಿಧ ಶಬ್ದಾಭ್ಯಾಸ, ಶಾಲೆಗಳಲ್ಲಿ ... ಕಲಿಯುವಷ್ಟು ವ್ಯಾಕರಣ ಕ್ರಮಗಳು ಮತ್ತು ಅಭ್ಯಾಸಗಳು ಇಂಗ್ಲೀಷ್ ಭಾಷೆಯಲ್ಲಿ ಬಗೆಬಗೆಯಾದ ವಾಕ್ಯಗಳನ್ನು ಮಾಡುವ ಕ್ರಮ ... ನೂರಾರು ... ಸರ್ವವಿಷಯಗಳನ್ನು ಕುರಿತು ಪ್ರಶ್ನೋತ್ತರ ಸಂಭಾಷಣೆಗಳು ೮೦೦, ... ಸರ್ವವಿಷಯಗಳನ್ನು ಕುರಿತು ಸಂಭಾಷಣೆ ಮಾಡುವಾಗ ಬೇಕಾಗುವ ... ವಿಷಯಕ್ಕೆ ತಕ್ಕ ಇಂಗ್ಲೀಷ್ ಕನ್ನಡ, ಕನ್ನಡ ಇಂಗ್ಲೀಷ್ ಶಬ್ದಕೋಶ (ಡಿಕ್ಷನರಿ) ಭಾಷಾಜ್ಞಾನ ಮತ್ತು ಅರ್ಥಜ್ಞಾನಕ್ಕೆ ತಕ್ಕ ಅಭ್ಯಾಸಗಳು ಕನ್ನಡ ... ಸರಿಯಾದ ಇಂಗ್ಲೀಷ್ ಗಾದೆಗಳು, ಪತ್ರವ್ಯವಹಾರದಲ್ಲಿ ಉಪಯೋಗಿಸುವ ಸಾಂಕೇತಿಕ ಶಬ್ದಗಳು ಕ್ಷೇಮಸಮಾಚಾರ, ... ಮುಂತಾದ ವಿಷಯ ... ಕುರಿತು ವರ್ತಮಾನ ಮತ್ತು ಕಾಗದಪತ್ರಗಳನ್ನು ಬರೆಯುವ ಅನೇಕ ಕ್ರಮಗಳು ಮತ್ತು ನಮೂನೆಗಳು, ಇವುಗಳಿಗೆ ಸ್ಪಷ್ಟವಾದ ಕನ್ನಡ ಅಕ್ಷರದಲ್ಲಿ ... ಮತ್ತು ಅರ್ಥಸಹ ಉಳ್ಳದ್ದು ಈ ಪುಸ್ತಕ ನಮ್ಮಲ್ಲಿ ಮಾತ್ರ ದೊರೆಯುತ್ತೆ ... ತ್ವರೆಮಾಡಿ [17 9]

ವಿಳಾಸ:—ಎ. ವಿ. ರಾಯಲು. ಬಾಲಕೃಷ್ಣ ಬುಕ್ ಡಿಪೋ, ಜೋರಿಪೇಟೆ, ಬೆಂಗಳೂರು ಸಿಟಿ.

ದಿ ಪೀಪಲ್ಸ್ ಬ್ಯಾಂಕ್, ಲಿಮಿಟೆಡ್, ತೀರ್ಥಹಳ್ಳಿ.

ಮೈಸೂರು ಕಂಪನಿಗಳ 1895 ನೇ ಇಸವಿ III ನೆಯ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟರ್ ಮಾಡಿಸಲ್ಪಟ್ಟಿದೆ

ಉದ್ದಿಷ್ಟ ಮೂಲಧನ ರೂ. 1,50,000.

ಇದು ಹಿಸ್ಸೆ (ಷೇರ್) ಒಂದಕ್ಕೆ ರೂ 10 ರಂತೆ 15,000 ಹಿಸ್ಸೆಗಳಾಗಿ ವಿಭಾಗಿಸಲ್ಪಟ್ಟಿದೆ ಪ್ರತಿ ಹಿಸ್ಸೆ ಒಂದಕ್ಕೆ ೧ ಆಣೆ ಯಂತೆ ಪ್ರವೇಶಧನವನ್ನೂ, ಹಿಸ್ಸೆಯ ಮೊಬಲಗಿನ ನಾಲ್ಕನೆ ಒಂದು ಭಾಗದ ಮೊಬಲಗು ರೂ 2 8—0 ನ್ನೂ ದರಖಾಸ್ತಿನೊಂದಿಗೆ ಕೊಡಬೇಕು ಉಳಿದ ರೂ 7 8—0 ಯು, ಒಂದು ಸಾರಿಗೆ ರೂ 2 8 0 ರ ವಿಚಾರದಂತೆ ಮೂರು ತಿಂಗಳಿಗೆ ಕಡಮೆಯಿಲ್ಲದ ವಾಯಿದೆಯಿಂದ ಕೇಳಲ್ಪಡುವದು ಬ್ಯಾಂಕಿನಲ್ಲಿ ದೊರೆಯುವ ನಮೂನೆ (ಫಾರಂ) ಯಲ್ಲಿಯೇ ದರಖಾಸ್ತು ಬರೆಯಲ್ಪಡಬೇಕು

ಡಿರೆಕ್ಟರ್ಸು ಯಾನೆ ಕಾರ್ಯದರ್ಶಿಗಳು

ಮ|| ರಾ ಶ್ರೀ ಸಾಹುಕಾರ್ ಕಾಸರವಳ್ಳಿ ಶೇಷಪ್ಪನವರು,
,, ಕಿತ್ತಂದೂರು ತಿಮ್ಮಣ್ಣಭಟ್ಟರು,
,, ಶಿವಳ್ಳಿ ತಿಂಗಪ್ಪನವರು,
, ನಗರದ ನರಸಿಂಹಯ್ಯನವರು, [ಶಿವಮೊಗ್ಗ,
,, ಕೆ ಶಂಕರನಾರಾಯಣರಾವ್, ಎಂ ಎ, ಬಿ ಎಲ್,
,, ಶಿವಳ್ಳಿ ವಾಸುದೇವರಾಯರು,
,, ಭೂಪಾಲಂ ರುಕ್ಮಯ್ಯನವರು,
, ಎಡೇಹಳ್ಳಿ ಲಿಂಗಪ್ಪನವರು,
,, ಎಲವಟ್ಟಿ ರಾಮರಾಯರು
,, ಎಡೂರು ತಿಪ್ಪಾಜೋಯಿಸರು,
, ದೇವಂಗಿ ರಾಮಣ್ಣಗೌಡರು,
, ಆಗುಂಬೆ ರಾಮರಾಯರು,
,, ಬಾವಿಕಟ್ಟೆ ನಾಗಾಭಟ್ಟರು,
,, ಕಟ್ಟೆ ಡಾಕಪ್ಪನವರು,
,, ವಾಗಮುದ್ರೆ ವೆಂಕಟಸುಬ್ಬಣಾಚಾರ್ಯರು
,, ಮೋಗರವಳ್ಳಿ ಅಪ್ಪಾಭಟ್ಟರು,
,, ಉಡುಪಿ ಶ್ರೀನಿವಾಸಾಚಾರ್ಯರು,
,, ಮೇಳಿಗೆ ಸಣ್ಣಬಸಪ್ಪನವರು

ಪ್ರೆಸಿಡೆಂಟ್—ಮ|| ರಾ|| ಶ್ರೀ ಸಾಹುಕಾರ್ ಕಿತ್ತಂದೂರು ತಿಮ್ಮಣ್ಣಭಟ್ಟರು
ಟ್ರೆಷರರ್—ಮ|| ರಾ|| ಶ್ರೀ ಎಡೇಹಳ್ಳಿ ಲಿಂಗಪ್ಪನವರು
ಮ್ಯಾನೇಜಿಂಗ್ ಡಿರೆಕ್ಟರ್—ಮ|| ರಾ|| ಶ್ರೀ ಮೇಳಿಗೆ ಸಣ್ಣಬಸಪ್ಪನವರು
ಲೀಗಲ್ ಅಡ್ವೈಸರ್—ಮ|| ರಾ|| ಶ್ರೀ ಕೆ ಶಂಕರನಾರಾಯಣರಾವ್, ಎಂ ಎ, ಬಿ ಎಲ್, ಅಡ್ವೊಕೇಟ್, ಶಿವಮೊಗ್ಗ.

75 4

ಮಲನಾಡಿನಲ್ಲಿ ರೈತರಿಗೂ ವರ್ತಕರಿಗೂ ಹಣ ಸರಬರಾಜು ಕಡಮೆಯಾಗಿ ಬಡ್ಡಿಯ ದರವು ಜಾಸ್ತಿಯಾಗಿರುವ ತೊಂದರೆಯನ್ನು ನಿವಾರಣ ಮಾಡುವುದಕ್ಕೂ ಮತ್ತು ಕೇವಲವಾಗಿರುವ ಹಣದ ಚಲಾವಣೆಗೆ ಸ್ಥಿರವಾದ ಮಾರ್ಗವನ್ನು ಕಲ್ಪಿಸುವುದಕ್ಕೂ ಈ ಕೆಳಗಿನ ಮಹನೀಯರು ಮತ್ತು ಈ ತಾಲ್ಲೂಕಿನ ಮುಖ್ಯಮನುಷ್ಯರಾದ ಮ|| ರಾ|| ಶ್ರೀಗಳಾದ ಸಿರವಂತೆ ದಾಸಪ್ಪಯ್ಯನವರು, ಎಡೇಹಳ್ಳಿ ಶೇಷಪ್ಪನವರು ಸಿರವಂತೆ ತಿಮ್ಮಪ್ಪಯ್ಯನವರು, ಸಿರವಂತೆ ನಾರಾಯಣರಾಯರು, ಆಗುಂಬೆ ನಾಗೇಶರಾಯರು, ಹೊದಲದ ಹಾಲಪ್ಪಗೌಡರು ಮತ್ತು ಮಾವಿನಕಟ್ಟೆ ಗಂಗಾರಾಮಸೋಮಾಜೆಯವರು ಇವರುಗಳೂ ಸೇರಿ ತಾ 27—1—1913 ರಲ್ಲು ಈ ಸಂಘವನ್ನು ಸ್ಥಾಪಿಸಿದ್ದಾರೆ. ಈ ಮಲೆನಾಡಿಗೆ ನೂತನವಾಗಿರುವ ಈ ಸಂಘದ ಉದ್ದೇಶಗಳು ನೆರವೇರುವಂತೆ ಈ ಸಂಘದ ಮೂಲಧನದಲ್ಲಿ ಈ ತಾಲ್ಲೂಕಿನ ಪ್ರಜೆಗಳೆಲ್ಲರೂ ಔದಾರ್ಯದಿಂದ ಹಿಸ್ಸೆಗಳನ್ನು ತೆಗೆದುಕೊಳ್ಳುವ ಮೂಲಕ ಪ್ರೋತ್ಸಾಹವನ್ನು ಕೊಡಬೇಕಾಗಿ ಪ್ರಾರ್ಥನೆ

ಈ ಸಂಘದ ನಿಬಂಧನೆಗಳನ್ನೂ (Articles of Association), ದರಖಾಸ್ತಿನ ನಮೂನೆ (ಫಾರಂ) ಗಳನ್ನೂ ಬ್ಯಾಂಕಿನ ಆಫೀಸಿನಲ್ಲಿ ಪಡೆಯಬಹುದು

ತೀರ್ಥಹಳ್ಳಿ,
ತಾ 8—4—1913

ಎಂ. ಎಸ್. ಬಸಪ್ಪ,
ಮ್ಯಾನೇಜಿಂಗ್ ಡಿರೆಕ್ಟರ್.

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕೆಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು. ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿವೆ. ಕ್ರಯ 3 ಆಣೆ. ಅಂಚೆ ಖರ್ಚು ಉಚಿತ

[187-21] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:—ಬೆನ್ನಿನಲ್ಲಿ ಛಳುಕು; ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಡಬಡಿ ಬಾಯಾರಿಕೆ, ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು, ಗಾಬರಿ, ಕಣ್ಣುಮೊಬ್ಬು; ತಲೆ ತಿರುಗುವಿಕೆ; ಮೈನೋವು; ಕೀಲುನೋವು; ಮರವು, ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [112-45]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಫೋಸ್ಟರ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



1-19

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆ ನಾನಾ ತರದ ಶೂಲೆಗಳು ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬೇಗಿರುವನ್ನು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ ಜ್ಞಾಪಕದಲ್ಲಿಟ್ಟುಕೊಳ್ಳಿ. ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ಶೂಲೆ ನೋವನ್ನೂ ನಿಲ್ಲಿಸಿಬಿಡುತ್ತದೆ ನಿಂಚಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ವೈದ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ನೊವತ (ಭಾರ), ಮೈ ನಡುಕ, ಶೀತವಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಎಡಿಕೊಡದೆ, ನರಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಸೂತಿಕಾಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕ್ಷಯರೋಗಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—320 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಸಹ್ಯ, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 1 ಆಣೆ [136-36]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಬಿಡಬೇಕೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸಿ ಮೂತ್ರವು ಕಟ್ಟಿದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಉಪಯೋಗಿಸುವುದಕ್ಕೋಸ್ಕರ ಒಂದು ಬುಡ್ಡಿ ನಿಮ್ಮಲ್ಲಿರಲಿ ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಟೆಲಿಗ್ರಾಂ ಅಡ್ರೆಸ್—"ತಿರುಪತಿ," ಹರಿಹರ. **ಜಾಗ್ರತೆ ತೆಕ್ಕೊಳ್ಳಿ.** **ತ್ವರೆಮಾಡಿ**

ಬೇಸಿಗೆ ಕಾಲ ಸಮೀಪಿಸಿ ಬಂದಿರುತ್ತೆ.

ಬೇಳಿನ ಹಾವಳಿ ಪ್ರಾರಂಭವಾಯಿತು.
ಅದ್ಭುತವಾದ ಇನಾಮು.
ಒಂದು ಲಕ್ಷ ರೂಪಾಯಿಗಳು ಹಂಚಲ್ಪಡುತ್ತವೆ

ಡಾಕ್ಟರ್ ಯಂ ವಿ ಇನಾಂದಾರ್‌ರವರು ತಯಾರು ಮಾಡಿದ "ಸ್ಕಾರ್ಪಿಯಾನಿಯೊ" ಎಂಬ ಚೇಳಿನ ಔಷಧವನ್ನು ಸಮಸ್ತ ದೇಶಗಳಲ್ಲಿಯೂ ಹರಡುವದಕ್ಕೂ, ಅದರ ಗುಣವನ್ನು ಅನುಭವಕ್ಕೆ ತರುವದಕ್ಕೂ ಈ ಇನಾಮಿನ ಮೂಲಕವಾಗಿ ಪ್ರಸಿದ್ಧ ಮಾಡಲ್ಪಟ್ಟಿವೆ. ಈ ಚೇಳಿನ ಔಷಧವು ಅತಿ ಶೀಘ್ರವಾಗಿ ಗುಣವನ್ನು ಕೊಟ್ಟು, ರೋಗಿಯನ್ನು ನಗುವಂತೆ ಮಾಡಲ್ಪಟ್ಟಿದೆ. ಪ್ರಪಂಚದಲ್ಲಿ ಎಷ್ಟು ಚೇಳಿನ ಔಷಧಗಳಿವೆಯೋ ಅವಕ್ಕೆಲ್ಲಾ ಶ್ರೇಷ್ಠವೆಂದು ಎನಿಸಿಕೊಂಡು ಹೊಗಳಲ್ಪಟ್ಟಿರುವದರಿಂದ ಈ ಔಷಧಿಯನ್ನು ವ್ಯಕ್ತಿಕ ನ್ಯರ ಎಂದು ಸಮಸ್ತರೂ ಪ್ರಾಮುಖ್ಯತೆಯಿಂದೆಣಿಸಿ ಇದನ್ನು ಪ್ರಚುರಪಡಿಸಬೇಕೆಂದು ಅಭಿಪ್ರಾಯಪಟ್ಟ ಮೇರಿಗೆ ಈ ಮೂಲಕವಾಗಿ ಸಮಸ್ತರ ಉಪಯೋಗಕ್ಕೂ ಪ್ರಕಟಿಸಲ್ಪಟ್ಟಿದೆ ಖಂಡಿತವಾದಿಯುಸ್ಸಿವಕ್ಕೆ ಸಮಾನವಾದ ಚೇಳಿನ ಮದ್ದು ಇಲ್ಲವೆಂದು ಖಂಡಿತವಾಗಿ ಹೇಳಿದ್ದಾನೆ.

ಹಿಸ್ ಎಕ್ಸಲೆನ್ಸಿ ಲಾರ್ಡ್ ಕಿಚ್ನರ್, ಚೀಫ್ ಕಮ್ಯಾಂಡರು ಇನ್ ಚೀಫ್, ಇಂಡಿಯ, ಮತ್ತು ಜನರಲ್ ಸೆಕ್ರೆಟರಿ ಏಕ್ಸ್, ಮಿಲಟರಿ ಸೆಕ್ರೆಟರಿ ಟು ದಿ ಮೈಸೂರು, ಇವರುಗಳು ಡಾಕ್ಟರು ಯಂ ವಿ. ಇನಾಂದಾರವರ ಚಿಕಿತ್ಸೆಯನ್ನು ಬಹಳವಾಗಿ ಹೊಗಳಿದಾರೆ

ಇನಾಂಗಳ ವಿವರ.—ಇದೇ 1913 ನೇ ಫೆಬ್ರವರಿಯಿಂದ ಜೂಲೈ ತಾರೀಖು 31 ರ ವರಿವಿಗೂ ಹನ್ನೆರಡು ಲಕ್ಷ "ಸ್ಕಾರ್ಪಿಯಾನಿಯೊ" ಎಂಬ ಚೇಳಿನ ಔಷಧವನ್ನು ಇನಾಂ ಮೂಲಕವಾಗಿ ಬಿಕ್ರಿ ಮಾಡಲು ಏರ್ಪಡಿಸಿದೆ ಬಾಟ್ಲಿಯೊಂದರ ಬರೀದಿ ಎಂಟಾಣೆ ಮಾತ್ರವೇ. ಟಪಾಲು ಹಾಸಲು, ಪ್ಯಾಕಿಂಗ್ ಚಾರ್ಜು, ವಿ. ಪಿ. ಚಾರ್ಜು ಬೇರೆ

				ರೂಪಾಯು					ರೂಪಾಯಿ.
1 ನೇ ಇನಾಂ	2 ಗ್ರೋಸ್ ಬಾಟ್ಲು	ತೆಗೆದುಕೊಳ್ಳುವವರಿಗೆ 1913 ನೇ ಏಪ್ರೀಲ್	ಆಖೈರೊಳಗಾಗಿ	9,000	1 ನೇ ಇನಾಂ	2 ಗ್ರೋಸ್ ಬಾಟ್ಲಿ	ತೆಗೆದುಕೊಳ್ಳುವವರಿಗೆ 1913 ನೇ ಜೂಲೈ	ಆಖೈರೊಳಗಾಗಿ	7,000
2 ನೇ ,,	1 ಗ್ರೋಸ್	,, ,,	,,	8,000	2 ನೇ ,,	1 ಗ್ರೋಸ್ ,,	,, ,,	,,	6,000
3 ನೇ ,,	6 ಡಜನ್ ,,	,, ,,	,,	7,500	3 ನೇ ,,	6 ಡಜನ್ ,,	,, ,,	,,	5,500
4 ನೇ ,,	4 ಡಜನ್ ,,	,, ,,	,,	7,000	4 ನೇ ,,	4 ಡಜನ್ ,,	,, ,,	,,	5,000
5 ನೇ ,,	2 ಡಜನ್ ,,	,, ,,	,,	6,500	5 ನೇ ,,	2 ಡಜನ್ ,,	,, ,,	,,	4,500
6 ನೇ ,,	1 ಡಜನ್ ,,	,, ,,	,,	6,000	6 ನೇ ,,	1 ಡಜನ್ ,,	,, ,,	,,	4,000
7 ನೇ ,,	6 ಬಾಟ್ಲಿಗಳು	,, ,,	,,	5,500	7 ನೇ ,,	6 ಬಾಟ್ಲಿಗಳು	,, ,,	,,	3,500
8 ನೇ ,,	4 ಬಾಟ್ಲಿಗಳು	,, ,,	,,	5,000	8 ನೇ ,,	3 ಬಾಟ್ಲಿಗಳು	,, ,,	,,	3,000
9 ನೇ ,,	2 ಬಾಟ್ಲಿಗಳು	,, ,,	,,	4,500	9 ನೇ ,,	2 ಬಾಟ್ಲಿಗಳು	,, ,,	,,	2,500
				59,000					41,000

ಒಟ್ಟು ರೂ. 1,00,000 ಲಕ್ಷ ಮಾತ್ರವೇ

ಯಾವದಾದರೂ ಒಂದು ಇನಾಂ ಕಲಂಗಳ ಪೈಕಿ ಒಬ್ಬರಿಗಿಂತ ಜಾಸ್ತಿಯಾಗಿದ್ದರೆ ಆ ಇನಾಂನ ಕೆಲವನ್ನು ಎಲ್ಲರಿಗೂ ಒಂದೇ ಸಮನಾಗಿ ಹಂಚಿಕೊಡಲ್ಪಡುತ್ತದೆ. ಮತ್ತು ಒಂದೆ ವೇಳೆ ಒಬ್ಬರೇ ಇದ್ದರೆ ಆ ಪೂರ್ತಿ ಇನಾಂನ ಕಲಮಿನಲ್ಲಿ ತೋರಿಸಿರುವ ಮೊಬಲಗನ್ನು ಅವರೊಬ್ಬರಿಗೇ ಕೊಡಲ್ಪಡುತ್ತದೆ ಎರಡು ಬಾಟ್ಲಿಗಳು ಜಾಸ್ತಿಯಾಗಿ ತೆಗೆದುಕೊಳ್ಳುವ ಪ್ರತಿ ಒಬ್ಬರಿಗೂ ಇನಾಂನ ಸರ್ಟಿಫಿಕೇಟನ್ನು ಆಯಾಯ ಇನಾಂ ಕಲಂವಾರು ಪ್ರಕಾರ ತೆಗೆದುಕೊಂಡ ಬಾಟ್ಲಿಗಳ ಸಂಖ್ಯೆಯನ್ನು ಕಾಣಿಸಿ ಅವರಿಗೆ ಖಂಡಿತವಾಗಿಯೂ ಇನಾಮನ್ನು ಕೊಡುತ್ತೇವೆಂದು ಭರವಸೆ ಕೊಟ್ಟು ಬರೆದುಕೊಡಲ್ಪಡುತ್ತೆ ನಮ್ಮ ಇನಾಮು ಕಲಮಿನ ಲಿಸ್ಟಿನಲ್ಲಿ ಕಾಣಿಸಿರುವ ಮೇರಿಗೆ ಬಾಟ್ಲಿಗಳನ್ನು ಕೊಂಡುಕೊಳ್ಳುವರಿಗೆ ವಿನಹ ಬಾಕಿ ಯಾರಿಗೂ ಕೊಡಲ್ಪಡುವದಿಲ್ಲ. ಈ ಹನ್ನೆರಡು ಲಕ್ಷ ಬಾಟ್ಲಿಗಳು ಖರ್ಚಾದ ಕೂಡ್ಲೆ ಲಿಸ್ಟನ್ನು ಪೈಸಲುಮಾಡಿ, ಇನಾಂಗಳು ಹಂಚಲ್ಪಡುತ್ತೆ. ಒಂದು ವೇಳೆ ಪೂರಾ ಹನ್ನೆರಡು ಲಕ್ಷ ಬಾಟ್ಲಿಗಳು ಖರ್ಚಾಗದೆ ಹೋದರೆ ಮುಂದೆ ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಬಾಟ್ಲಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾ ಪ್ರಕಾರ ಆಗತಕ್ಕಷ್ಟು ಮಾತ್ರ ಇನಾಂಗಳು ಹಂಚಲ್ಪಡುತ್ತದೆ ಇನಾಂಗಳು ಹಂಚುವ ತಾರೀಖು ಇದೇ 1913 ನೇ ಇಸ್ವಿ ಆಗಸ್ಟು ತಿಂಗಳು 15 ಕ್ಕೆ ಇದೇ ಹರಿಹರದಲ್ಲಿ ಬಹಿರಂಗವಾಗಿ ಹಂಚಲ್ಪಡುತ್ತೆ.

ಪ್ರತಿ ಒಬ್ಬ ಮನುಷ್ಯನಿಗೂ ತಾನು ಕೊಡುವ ಕಿಮ್ಮತ್ತಿಗೆ ಸರಿಯಾಗಿ ಔಷಧ ಬಾಟ್ಲಿಯನ್ನು ಪಡೆಯುವದಲ್ಲದೆ ಇನಾಂಗೆ ಅರ್ಹನಾಗಿರುತ್ತಾನೆ ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಈವಾಗಲೇ ವಿಶೇಷ ಆರ್ಡರುಗಳು ಬರುವ ಸೂಚನೆ ತುಂಬಾ ತೋರಿದೆ. ಆದ್ದರಿಂದ ಪೂರ್ತಿಯಾಗಿ ಎಲ್ಲಾ ಬಾಟ್ಲಿಗಳು ಖರ್ಚಾಗುವದರಲ್ಲಿ ಸಂದೇಹ ತೋರುವದಿಲ್ಲ

ಏಜಂಟರುಗಳು ಬೇಕಾಗಿದೆ ಸಂಬಳ ನೂರು ರೂಪಾಯಿ ಮತ್ತು ಅತಿರಿಯಕ್ತಾಗಿ ಇಪ್ಪತ್ತು ರೂಪಾಯಿ ಜಾಮೀನು ಒಪ್ಪಿಕೊಳ್ಳ ಬೇಕು. ಮತ್ತು ಏಕ್ಸ್ಟ್ರ ಕೇಳುವವರು ! ಅರೆ ಸ್ಟಾಂಪು ಕಳುಹಿಸಬೇಕು.

ಕೆಳಗಿನ ವಿಳಾಸಕ್ಕೆ ಟಪಾಲುದ್ವಾರ ಕಾಗದಗಳನ್ನು ಬರೆದು ಆರ್ಡರು ಕಳಿಸಿ ಬಾಟ್ಲಿಗಳನ್ನು ತರಿಸಿಕೊಳ್ಳಬಹುದು:— [33 7]

ಮೆಸ್ಸರ್ಸ್ ತಿರುಪತಿ ಗುಜರ್ ಅಂಡ್ ಕೋ., ಸೋಲ್ ಏಜಂಟ್ಸ್, ಸ್ಕಾರ್ಪಿಯಾನಿಯೋ ಡೆಪೋ, ಹರಿಹರ, ಮೈಸೂರು ಪ್ರಾವಿನ್ಸು

ವಿಶೇಷ ಸೂಚನೆ!

ಹತ್ತಿಯ ತುಪ್ಪ ಹಿಂಡಿ ಮತ್ತು ಹೊಟ್ಟು.

ಈ ತಿಂಗಳ ಕಡೆಯವರಿಗೆ ಮಾತ್ರ ಕಡಮೆ ಖರೀದಿ!

ತುಪ್ಪ ಡಬ್ಬಿ 1 ಕ್ಕೆ ರೂ 11½, ಹಿಂಡಿ ಮೂಟೆಗೆ ರೂ. 8, ಹೊಟ್ಟು ಮೂಟೆಗೆ ರೂ. 1½. ಬೇಕಾದವರು ತ್ವರೆಮಾಡಿ.

ಅನುಭವಸ್ಥರ ಅಭಿಪ್ರಾಯ:—(1) ಎಮ್. ಕೃಷ್ಣಮೂರ್ತಿ, ಫಾರೆಸ್ಟ್ ರೇಂಜರ್, ಪಾಲಕೋಟೆ, ಶಿವಾಪಟ್ಟಣ ಡಿ|| "ತಾವು ಕಳುಹಿಸಿದ ಹತ್ತಿಯ ಹಿಂಡಿಯಿಂದ ನನ್ನ ಕುದುರೆಗೆ ಬಹಳ ಪ್ರಯೋಜನವಾಯ್ತು ಹುರುಳಿಯ ಜತೆಯಲ್ಲಿ ಹಿಂಡಿಯ ಮೊತೆಯಲ್ಲೂ ಅವನ್ನು ಮಿಶ್ರವಾಡಿ ಕೊಟ್ಟದ್ದರಿಂದ ಅಜೀರ್ಣವಾಗುತ್ತಿದ್ದದ್ದು ನಿಂತು ಹೋಯ್ತು" (2) ಎಸ್. ವಿ. ನರಸಿಂಹಯ್ಯ, ... ಫಾರೆಸ್ಟ್ ... ಹೆಬ್ಬೆ, ಕಡೂರು ... ಮೊದಲು ಹಸುಗಳು ಸಣ್ಣವಾಗಿ ತನ್ನುತ್ತಿದ್ದವು ಈಗ ಹೊಟ್ಟು ಹಿಂಡಿಗಳನ್ನು ಬಹು ಪ್ರೀತಿಯಿಂದ ಸೇವಿಸುತ್ತವೆ ಮೈಯನ್ನು ಕೊಬ್ಬು ಕಡಮೆಯಾಗಿ ... ಹಿಂದಿಗಿಂತ ಬಲವಾಗಿಯೂ ಅವುಗಳು ದಣಿಯದೆ ಹೆಚ್ಚು ಕೆಲಸ ಮಾಡುತ್ತವೆ ... ವೃತ್ತಾಂತ ... ಹಿಂಡಿಯನ್ನು ತಕ್ಕಷ್ಟು ಹೊಟ್ಟು ಕಳುಹಿಸಬೇಕು (3) ... ಕೋಆಪರೇಟಿವ್ ಸ್ಟೋರ್ಸ್ ... ನಾನು ಹತ್ತಿಯ ತುಪ್ಪವನ್ನು ಬಹಳ ಮಟ್ಟಿಗೆ ಕೊಂಡುಕೊಂಡಿದ್ದೇನೆ ... ಬೆಲೆಯ ... ಅದು ಅತ್ಯುತ್ಕೃಷ್ಟವಾದದ್ದು ... ಉತ್ತಮ ... ಮೈಸೂರು ... ಪ್ರೆಸಿಡೆಂಟ್, ... ಬೆಂಗಳೂರು ನಮ್ಮ ವಿಳಾಸ —

... ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

[...-10] 150, ಕಿಲಾರಿ ರೋಡ್, ಬೆಂಗಳೂರು ಸಿಟಿ

ಹೊಗಾದ ಉತ್ತಮತರದ ಹೊಸ ಬಟ್ಟೆಗಳು ಬಂದಿವೆ ಬೇಗನೆ ಈಗಲೇ ... ಬೇಕಾದರೆ ಈ ಒಳ್ಳೇ ಸಮಯ ಹೋದೀತು ನಮ್ಮಲ್ಲಿ ... ಒಂದು ಜತೆಗೂ ನಿಮಗೆ ಸಂಪೂರ್ಣವಾದ ... ದೊರೆಯುವುದು ನಾನಾ ಬಗೆಯ ಉತ್ಕೃಷ್ಟವಾದ ಜವಳಿಯನ್ನೇ ... ಸಕಲರಿಗೂ ಸಂತೋಷವನ್ನೂ ಸಂಪೂರ್ಣ ತೃಪ್ತಿಯನ್ನೂ ಖಂಡಿತ ... ಯಾವ ವಸ್ತುವನ್ನು ನಮ್ಮಲ್ಲಿ ಕೊಂಡುಕೊಂಡರೂ ... ನೀವು ಬಯಸಿದ ಪಡಿಪಂತೆ ... ಹೇಳಬಲ್ಲೆವು ನಮ್ಮಲ್ಲಿ ... ತರದ ಉಡುಪುಗಳು ಬಹಳ ಹೊಗಾಗಿ ತಯಾರಾಗಲ್ಪಡುವವು

... ಅಬ್ದುಲ್ ಮುಕರೂಂ ಸೇಟ್ ಅಂಡ್ ಸನ್ಸ್

ಟೈಲರ್ಸ್ ಮತ್ತು ಔಟ್‌ಫಿಟ್ಟರ್ಸ್

ಕರ್ನಲ್ ರೋಡ್, ಮೈಸೂರು.

THE PLACE FOR HASSAN CAPS IS
HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

4-19

... ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ... ಎಲ್ಲಿ ತಯಾರಾದವು? ಎಲ್ಲಿಂದ ... ಪರೀಕ್ಷೆ ... ಖಂಡಿತವಾಗಿಯೂ ಹಾಸನದಿಂದಲೇ ಎಂದು ...

... ಇತರ ಕಡೆಗಳಲ್ಲಿ ಮಾರಾಟ ಬಿಕರಿಯಾಗುತ್ತಿರುವ ಟೋಪಿಗಳ ದಾರವ ... ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಅವರ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ... ನೆಟ್ಟಗೆ ... ಬರುವವು (೨) ಟೋಪಿಗಳನ್ನು ... ನಾವೇ ... ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ... ಗಳನ್ನೇ ... ಕಳುಹಿಸುತ್ತೇವೆ

... ದಾದ, ... ಹೊಳೆವ, ಬಹಳ ಬಾಳಿಕೆಬರುವ ಟೋಪಿಗಳು ... ನಮಗೆ ... ಬರೆದು ತರಿಸಿಕೊಳ್ಳಿ ಅಗ್ಗವಾದವನ್ನು ... ನಮ್ಮಲ್ಲಿ ... ಯುವದಿಲ್ಲ

... ಕೆಂಪು, ... , ಬಿಳಿ, ಕಪ್ಪು ಬಣ್ಣಗಳ ಟೋಪಿಗಳು ೧ ರೂ ೮ ಆ ; ... ೬ ಆ, ೧ ರೂ ೪ ಆ

... ಯುಳ್ಳ ಟೋಪಿಗಳು ರೂ ೧-೮, ರೂ ೧-೧೨

... ಟೋಪಿಗಳು ರೂ ೨

... ಟೋಪಿಗಳು ೧ ರೂ ೧೨ ಆ, ೧ ರೂ ೪ ಆ, ೧ ರೂ ೬ ಆ.

ಮುಸುಕಿನ ಟೋಪಿಗಳು ೧ ರೂ. ೮ ಆ., ೧ ರೂ. ೬ ಆ

... ಟೋಪಿ, ... , ಅರ್ಜ ಮೋಜೋಡು, ಕತ್ತಿನ ... ಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ... ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಎಂ. ಎ. ಬಿ. ಯವರ ಜ್ವರಿಗೆ ಔಷಧವು.

ಇದರ ಸೇವನೆಯಿಂದ ಚಳಿ, ಮೂರ್ಛೆ, ಬಳಲಿಕೆ, ಮೈಮರೆವು ಅರೋಚಕ, ... , ದಾಹ, ನಾಲಗೆ ... ಮುಂತಾದ ಪಿತ್ತರೋಗಗಳೂ ಪರಿಹಾರವಾಗುತ್ತೆ. ಕ್ರಯ ಡಬ್ಬಿಗೆ ರೂ 1. ಟಪ್ಪಾಲ್ ... ಬೇರೆ

[71-4] ... ಔಷಧಾಲಯ, ಮೈಸೂರು

1913 ನೆಯ ಲೋವರ್ ಸೆ|| ಕನ್ನಡ ಟೆಕ್ಸ್ಟ್ ನೋಟ್ಸು

ಸಿದ್ಧವಾಗಿದೆ. ಸುಲಭ ಕ್ರಯ 4 ಆಣೆ.

ಡಿಸ್ಕೌಂಟು 10 ಕ್ಕೆ 1, 25 ಕ್ಕೆ 4, 50 ಕ್ಕೆ 9; 100 ಕ್ಕೆ 22

ಸ್ವಲ್ಪ ಪ್ರತಿಗಳೇ ಅಚ್ಚಾಗಿರುವದರಿಂದ ಬೇಗನೆ ಬರೆಯಿರಿ ತಂಪಿ ನೋಡಿ. ಇತರ ಪುಸ್ತಕಗಳೂ ನಮ್ಮಲ್ಲಿ ದೊರೆಯುವುವು [...]

ವಿಳಾಸ.—ವಿ ಗುರುರಾವ್,

ಕರಪಟ್ಟಿ ಬೀದಿ ಹಳೆ ಅಗ್ರಹಾರ, ಮೈಸೂರು

ಪರೀಕ್ಷಿಸ ... ಅಗ್ಗದ ಕೇಶ ಎಣ್ಣೆಗಳು ಈಗ ಎಲ್ಲೆಲ್ಲೂ ... ಯಾಗು ... ನಿಮ್ಮ ಕೇಶಸೌಂದರ್ಯವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ.

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಅಗ್ಗವಾಗಿ ಸಿಕ್ಕುವ ಕೇಶ ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ. ಕೂದಲು ಸತ್ತು ಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣ ಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳೆಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಕಚಕಿಸುವವು, ಸಹಜವಾದ ನೀಲಬಣ್ಣದಿಂದ ಕೂಡಿ, ಅಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು. ಕೂದಲಿಗೆ ಹೊಳಪುಕೊಡುತ್ತೆ. ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ. ಸುಂದರ ಹೊಟ್ಟನ್ನು ಅಗಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳದ್ದು ದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶರಾಶಿಯನ್ನು ನವಿರವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳೆಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಎಲ್ಲಾ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ

ಇದರ ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು

3 ಸೀಸೆಗಳಿಗೆ ರೂ 2-10-0 ಅಂಚೆಯ ವೆಚ್ಚ 0-7-0

ನಮೂನೆಯು ಬೇಕಾದರೆ ಒಂದು ಅರ್ಧಾಣೆಯ ಚೀಟಿನ್ನು ಕಳುಹಿಸಿರಿ

ಮೈಸೂರು ಎಗ್ಜಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಜದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ|| ಟಿ ನಾಕೋರ್ಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ." ಎರುಮುಪಟ್ಟಿ ಕೆ ವಿ ಎಸ್. ಹೈಸ್ಕೂಲ್ ಹೆಡ್ ಮಾಸ್ಟರ್ ಮಿ|| ಎಂ ಸುಬ್ರಹ್ಮಣ್ಯಪಿಳ್ಳೆಯವರು ಬರೆಯುವದು—"ನಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ಪರೀಕ್ಷೆಮಾಡಿದೇನೆ. ಅದು ಕೂದಲನ್ನು ಹುಟ್ಟಿಸಿ ಅಂದವಾಗಿಯೂ, ಕೋಮಲವಾಗಿಯೂ, ಸೊಂಪಾಗಿಯೂ ಬೆಳೆಸುವುದೆಂದು ಖಂಡಿತವಾಗಿ ಹೇಳಬಲ್ಲೆನು. ದಯವಿಟ್ಟು ಇನ್ನು ಮೂರು ಬಾಟ್ಲಿ ಎಣ್ಣೆ ಕಳುಹಿಸಿಕೊಡಿ." ವಿನೆಟಾ ಡಿಸ್ಟ್ರಿಕ್ಟ್ ಕಂಟ್ರೋಲರ್ ಆಫೀಸ್ ಮಿ|| ಗೋಪಾಲರಾವ್ ಜೋಷಿಯವರು ಬರೆಯುವದು—"ದಯವಿಟ್ಟು ನಮ್ಮ ಕಾಮಿನಿಯಾ ಎಣ್ಣೆ ಆರು ಬಾಟ್ಲಿ ಕಳುಹಿಸಿಕೊಡಿ ಒಂದು ತಿಂಗಳ ಹಿಂದೆ ನೀವು ಕಳುಹಿಸಿದ ಬಾಟ್ಲಿಗಳು ಮುಗಿದುಹೋಯಿತು ಇದೇ ಉತ್ತಮೋತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳಬಲ್ಲೆನು" ಆದಕಾರಣ ನೀವು ಒಂದು ಸಲ ತರಿಸಿ ಪರೀಕ್ಷೆ ಮಾಡಿ.

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನಿಮ್ಮ ಸ್ಥಳದ ಷಾಪುಕೀಪರಲ್ಲಿ ಅದು ಇಲ್ಲದಿದ್ದರೆ ಅವನ ಹೆಸರು ವಿಳಾಸದ ಸಮೇತ ನಮಗೆ ತಿಳಿಸಿ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು. ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

ಎಲ್ಲಾ ಸ್ಥಳಗಳಲ್ಲಿಯೂ ಏಜೆಂಟರು ಬೇಕು.

ಏಜೆಂಟ್, ವಿ ಎಲ್ ... ಮಾರ್ಕೆಟ್, ಮಂಗಳೂರು

ನಮ್ಮ ವಿಳಾಸ.— [8 17]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

18—4—1913 ರಿಂದ 25—4—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	1	1	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	2	1	1	1
ಮೈಸೂರು ,,	0	0	270	171
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	3	1	0	0
ತುಮಕೂರು ಡಿಸ್ಟ್ರಿಕ್ಟು	0	0	106	98
ಹಾಸನ ,,	0	0	115	81
ಚಿತ್ರದುರ್ಗ ,,	0	0	0	0
ಕಡೂರ್ ,,	4	5	38	14
ಶಿವಮೊಗ್ಗ ,,	2	1	0	0
ಜುಮ್ಲಾ	11	9	509	365

ಶಾಲಿವಾಹನ ಶಕ ವರುಷಂಗಳು 1835 ನೇ ಪ್ರಮಾದಿ ಸಂವತ್ಸರೇ ಉತ್ತರಾಯಣೇ ವಸಂತಋತೌ ವೈಶಾಖ ಶುದ್ಧ ತದಿಗೆ ಶುಕ್ರವಾರದಿಂದ ವೈಶಾಖ ಶುದ್ಧ ದಶಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1913 ನೇ ಮೇ

ತಾ	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮೇಷ ವೃಷಭ ಕೇದಿ
9	ಶುಕ್ರ ,,	ತದಿಗೆ	11-56	ಮೃಗಶಿರ	37-15	27
10	ಶನಿ ‡	ಚೌತಿ	11 19	ಆರಿದ್ರಾ	36-34	28
11	ಭಾನು ,	ಪಂಚಮಿ	7-47	ಪುನರ್ವಸು	34 1	29
12	ಸೋಮ §	ಷಷ್ಠಿ ಉಪರಿ	3 56 / 51 57	ಪುಷ್ಯ	30 47	30
13	ಮಂಗಳ	ಅಷ್ಟಮಿ	51-65	ಆಶ್ಲೇಷ	26-48	31
14	ಬುಧ •	ನವಮಿ	45-43	ಮಘಾ	22-52	1
15	ಗುರು	ದಶಮಿ	39-21	ಹುಬ್ಬ	18-40	2

‚ ಅಕ್ಷತೃತೀಯಾ, ಸಾತೀನ ಗೌರೀವ್ರತ ಬಸವಜಯಂತಿ, ಶ್ರೀ ... ‡ ಶ್ರೀ ಭಾಷ್ಯಕಾರರ ತಿರುನಕ್ಷತ್ರ, ಸಾಲಿಗ್ರಾಮದಲ್ಲಿ ಯೋಗಾನೃಸಿಂಹಸ್ವಾಮಿ ರಥ ... ಲಾವಣ್ಯಗೌರೀ ವ್ರತ § ಗಂಗಾಸಪ್ತಮಿ, ಶ್ರೀರಂಗಪಟ್ಟಣದಲ್ಲಿ ಶ್ರೀರಂಗನಾಥಸ್ವಾಮಿ ಜಯಂತಿ, ಶ್ರೀರಂಗದಲ್ಲಿ ವಸಂತೋತ್ಸವ • ವಿಷ್ಣುಪದಪುಣ್ಯಕಾಲ

ಪೇಟೆ ಧಾರಣೆ.

ದಿನಸಿ.		ಮೈಸೂರು	ಬೆಂಗಳೂರು
ಬತ್ತ ಅಕ್ಕಿ ಪಲ್ಲಾ ೧ಕ್ಕೆ	ರೂ	೧೫-೦-೦	೧೭-೮-೦
ಕೆಂಬತ್ತ ಅಕ್ಕಿ ಅವಲ್		೧೫-೨-೦	೧೭-೮-೦
,, ಮಧ್ಯಂ		೧೫-೨-೦	೧೭-೦-೦
ಚಿಪ್ಪಾಣಿ ಅಕ್ಕಿ		೧೪-೮-೦	೧೭-೪-೦
ಸಣ್ಣಕ್ಕಿ ಅವಲ್		೧೭-೮-೦	೧೮-೮-೦
,, ದುಯಂ		೧೬-೨-೦	೧೭-೮-೦
ಹೊಗರೀ ಬೀಳಿ ಅವಲ್ ಪಲ್ಲಾ ೧ಕ್ಕೆ		೧೫-೭-೦	೧೩-೮-೦
,, ಮಧ್ಯಂ ,,		೧೪-೮-೦	೧೨-೮-೦
ಸ್ಪೆಷಲ್ ರಾಗಿ ಪಲ್ಲಾ ೧ಕ್ಕೆ		೭-೪-೦	೫-೦-೦
ಕಾರ್ರಾಗಿ ,,		೬-೭-೦	೪-೧೨-೦
ಜೋಳ ,,		೭-೦-೦	೭ ೪ ೦
ಹಲಸಂದೆ ಪಲ್ಲಾ ೧ಕ್ಕೆ		೧೦-೪-೦	೧೩ ೧೨ ೦
ಖೇಲೀ ಅವರೆ ,,		೧೧-೮-೦	೧೧-೦-೦
ಹೆಸರು ,,		೧೩-೭-೦	೧೪-೦-೦
ಉದ್ದು ,,		೧೪-೮-೦	೧೬ ೦-೦
ಕಡಲೆ ,,		೧೦-೮-೦	೧೨-೦-೦
ಎಳ್ಳು ಸೇರು ೧೨೭ಕ್ಕೆ		೨೭-೦-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ		೬-೯-೦	೭ ೦-೦
ಹರಳು ೧೨೭ ಸೇರಿಗೆ		೧೨-೮-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ		೨ ೪-೦	೩ ೮-೦
ಮೆಣಸಿನಕಾಯಿ ,,		೪-೨-೦	೩-೪-೦
,, ಮಧ್ಯಂ		೩-೦-೦	೧ ೮ ೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೩-೮-೦	ಮೂಟ ೫-೮-೦
ಒಳ್ಳೆನ್ನೆ ಮಣ ೧ಕ್ಕೆ		೬-೨-೦	೬-೬-೦
ಹರಳೆಣ್ಣೆ ,, ,,		೫ ೪-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೫-೨-೦	೫ ೪-೦
ಉಪ್ಪು ,, ,,		೫-೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ		೦-೧೨-೦	೧-೪-೦
,, ಹಳೇದು ,,		೧-೯-೦	೦-೧೪ ೦
ತುಪ್ಪ ಮಣ ೧ಕ್ಕೆ		೧೯-೧೨-೦	೧೯-೦-೦
ನೀಮುಂಬೆಣ್ಣೆ ಪೆಟ್ಟ ೧ಕ್ಕೆ		೫-೧೧-೦	೫-೦-೦
ತೆಂಗಿನಕಾಯಿ ೧೦೦ಕ್ಕೆ		೭-೦-೦	೬ ೦-೦
ಆಲೂಗಡ್ಡೆಕಾಯಿ ಮಣ ೧ಕ್ಕೆ		೧-೬-೦	೧ ೦-೦
ಈರುಳ್ಳಿ ... ಮಣ ೧ಕ್ಕೆ		೦-೧೫-೦	೧-೫-೦
ಚಿನಿ (ಸಕ್ಕರೆ) ಕೆಂಪು		೧೨-೬-೦	೧೫ ೮-೦
,, ,, ರವೆ		೧೫ ೧೪-೬	೧೫-೧೪-೬
,, ,, ಗಟ್ಟಿ ... ೧ಕ್ಕೆ		೨೪-೩-೦	೨೪-೦ ೦
ಬಿಳಿ ಗಟ್ಟಿ ... ೧೦೦ಕ್ಕೆ		೮೧-... ೦	೮೧-೩-೦

ಪ್ರಸಿದ್ಧವಾದ ಭಕ್ತವಿಜಯ ದ್ವಿತೀಯ ಮುದ್ರಣ

ತಿಂಗಳಿಗೆ ರಾಯಲ್ ೪೮ ಪುಟಗಳು ಮೊದಲಿಗಿಂತ ಉತ್ತಮವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಡುವುದು ಈ ಚೈತ್ರಮಾಸದಿಂದ ಆರಂಭ ಪ್ರತಿಮಾಸದ ಕಡೆಯಲ್ಲಿ ಸಂಚಿಕೆ ಕಳುಹಲ್ಪಡುವುದು ಪೂರ್ಣವಾದ ಪುಸ್ತಕಕ್ಕೆ ವಾರ್ಷಿಕ ಚಂದಾ ಪೋಸ್ಟೇಜ್ ಸೇರಿ ೨-೧೨-೦ ಭಕ್ತಿವಿಜಯ ಆಫೀಸ್, ಮೈಸೂರು

೧೯೧೪ ನೆಯ ಶೋ॥ ಸ॥ ಕನ್ನಡ ಟೆಕ್ಸ್ಟ್ ನೋಟ್ಸ್ ೦-೬-೦

ಬಳಕೆಗೆ ಸಿದ್ಧವಾಗಿದೆ ದೊಡ್ಡ ಅಕ್ಷರ, ಹೊಸ ನಮೂನೆ, ತರಿಸಿನೋಡಿ, ಒಪ್ಪದಿದ್ದರೆ ವಾಪಸುಮಾಡಿ ಡಿಸ್ಕೌಂಟು (ಒಂದೇ ಆರ್ಡರು) ನಗದು ಅಥವಾ ವಿ ಪಿ ಗೆ—10 ಕ್ಕೆ 1, 25 ಕ್ಕೆ 3, 50 ಕ್ಕೆ 8, 100 ಕ್ಕೆ 20 [65 2]

ಕೆ ಆರ್ ನರಸಿಂಹಯ್ಯ, ಕನ್ನಡ ಪಂಡಿತ, ಹೈ ಸ್ಕೂಲ್, ಚಿಕ್ಕಬಳ್ಳಾಪುರ

ಬೋಧಕರ ಸಹಾಯವಿಲ್ಲದೆ ಹಾರಮೋನಿಯಂ ಕಲಿಯುವ ಪುಸ್ತಕ.

ಕ್ರಯ 0 8-0

ಇದು ಪ್ರಖ್ಯಾತಿಯನ್ನು ಪಡೆದ ಪಂಡಿತ ಮಿತ್ರದಾಸ್ ರವರಿಂದ ಪಂಡಿತರಿಗೂ ಮತ್ತು ಪಾಮರರಿಗೂ ಉಪಯೋಗವಾಗುವ ಉದ್ದೇಶ ಈ ನೂತನ ಗ್ರಂಥವನ್ನು ಪ್ರಚುರಿಸಲ್ಪಟ್ಟಿರುತ್ತೆ ಇದರಲ್ಲಿ 40

ಪಾರಸೀ ಹಾಡುಗಳು ಮತ್ತು ಹಾರಮೋನಿಯಂ ನುಡಿಸುವ ವಿಧಾನ, ಆರೋಹಣ ಅವರೋಹಣಗಳು, ಮತ್ತು ಸೌಖ್ಯ ಗುರ್ತು ಮೊದಲಾದವುಗಳು ವಿರಳವಾಗಿ ತಿಳುಹಿಸಲ್ಪಟ್ಟಿರುತ್ತೆ ಸ್ವಲ್ಪ ಆಂಗ್ಲೇಯ ಭಾಷಾ ಪರಿಶ್ರಮವಿರುವವರೆಲ್ಲರೂ ಈ ಗ್ರಂಥದ ಸಹಾಯದಿಂದ ಬೋಧಕರ ಸಹಾಯವಿಲ್ಲದೆ ಬಹು ಸುಲಭವಾಗಿ ಹಾರಮೋನಿಯಂ ನುಡಿಸುವವನ್ನೂ, ಅನ್ಯದೇಶಾಭಾಷೆಯಾದ ಪಾರಸೀ ಹಾಡುಗಳನ್ನೂ ಬಹು ಸುಲಭವಾಗಿ ಕಲಿತುಕೊಳ್ಳಬಹುದು ಈ ಪುಸ್ತಕ ಸ್ವಲ್ಪವೇ ಇರುವದರಿಂದ ಜಾಗ್ರತೆ ವರಮಾಸ್ತ್ರ ಕಳುಹಿಸಿ [90 1]

ವಿಳಾಸ—ಮ್ಯಾನೇಜರ್, ಮಹಾರಾಜಾ ಕಂಪನಿ, ಮೌಂಟ್ ರೋಡು, ಮದರಾಸು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

84 60

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಆರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ 4 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು—(1) ಎಸ್ ಹೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಿಸವಾಕಂ, ವೇಪೇರಿ, ಮದರಾಸ್, (2) ಜಿ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಶ್ರೀಲಕ್ಷ್ಮೀನರಸಿಂಹ ಆಯುರ್ವೇದ ವೈದ್ಯಶಾಲಾ

ಜ್ವರಮುರಾರಿ —ಸಕಲ ವಿಧವಾದ ಜ್ವರಗಳಿಗೆ ಅಂಕುಶವಾಗಿದೆ ಇದನ್ನು ಉಪಯೋಗಿಸಿದೊಡನೆ ಸಕಲವಿಧವಾದ ಜ್ವರಗಳನ್ನೂ ಹತಮಾಡುವದು ಇದು ಬಹಳ ಕಹಿಯಾಗಿರುವ ಹಸುರುಸೊಪ್ಪುಗಳು ಬೇರುಗಳು ಮೊದಲಾದ ಕ್ಷಾರದಿಂದ ಮಾಡಲ್ಪಟ್ಟಿದ್ದು ರಸ, ಗಂಧಕ, ಪಾಷಾಣಾದಿಗಳೊಂದೂ ಈ ಔಷಧಕ್ಕೆ ಸೇರಿದ್ದಲ್ಲ ಇದು ನಮ್ಮ ಪೂರ್ವಿಕರು (ಋಷ್ಯರು)ಗಳಿಂದ ಕಲಿತ ಸಿದ್ಧಪ್ರಯೋಗ ಈ ಔಷಧಕ್ಕೆ ಪಥ್ಯ ಪಾನಾದಿಗಳೇನೂ ಇಲ್ಲ ಈ ಔಷಧವನ್ನು ಒಂದು ಸಾರಿ ತರಿಸಿ ಪರೀಕ್ಷಿಸಿದ ಒಡನೆ ಅವರಾಗಿ ತಮ್ಮ ಸ್ನೇಹಿತರುಗಳಿಗೆ ತಿಳಿಸಿ ಸಂತೋಷಪಡುವರು ಇದು ಮದರಾಸಿನಲ್ಲಿ ಅನೇಕ ಸಾವಿರ ಜನಗಳು ಉಪಯೋಗಿಸಿದ ಸಿದ್ಧೌಷಧ ಪ್ರತಿ ದಿನಸ ಅನೇಕ ಜನಗಳು ಉಪಯೋಗಿಸುತ್ತಲೂ ಇದಾರೆ ಈ ಔಷಧ ಸೇವನೆ ಕ್ರಮವು ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು ಎಂಥಾ ಜ್ವರವನ್ನೂ 8 10-12 16 ಪೊಟ್ಟಣಗಳ ಔಷಧದಲ್ಲಿ ನಿಶ್ಶೇಷವಾಗಿ ಜೀರ್ಣಿಸಿ ಅನ್ನದ್ವೇಷವನ್ನು ಹೋಗಲಾಡಿಸಿ ಹಸಿವನ್ನುಂಟುಮಾಡಿ, ಬಲಹೀನವನ್ನು ಹೋಗಲಾಡಿಸುವದು ಇದರ ಬೆಲೆ 12 ಪೊಟ್ಟಣಗಳ ಡಜನ್ 1 ಕ್ಕೆ 12 ಆಣೆ ಟಪ್ಪಾಲ್, ಪಾರ್ಸಲ್ ಖರ್ಚು ಪ್ರತ್ಯೇಕ [10 12]

ದಂತಧಾವನ ಚತ್ಮಾತ್ಕರಂ —ಇದು ಹಲ್ಲುಗಳಿಗೆ ವಿಧಾಕರವಾದ ಪದಾರ್ಥಗಳು ಯಾವದೂ ಸೇರಿಸದೆ ಅನೇಕ ಮೂಲಿಕೆಗಳಿಂದ ತಯಾರುಮಾಡಿದ ಹುಲ್ಲು ಪುಡಿ ಸುವಾಸನೆಯಾಗಿರುವದು ಇದರಿಂದ ಹಲ್ಲು ಉಜ್ಜಿಕೊಂಡರೆ ದಂತದಲ್ಲಿ ಹುಟ್ಟಿದ ರೋಗಾದಿಗಳು ಹೋಗಲಾಡಿಸಿ ವಾತಪಿತ್ತ ಶ್ಲೇಷ್ಮಗಳನ್ನು ಶಮನಮಾಡಿ ಹಲ್ಲುನೋವು, ಬಾಯಿನಾತ, ಹಲ್ಲುಜೋವು, ಹಲ್ಲಿನಲ್ಲಿರತಕ್ಕ ಹುಳಗಳು, ಹಲ್ಲಿನಲ್ಲಿ ರಕ್ತಬರುವದು, ಹುಳುಕುಹಲ್ಲು, ಇಗುರುಬಾವು ಮೊದಲಾದ್ದನ್ನು ಪರಿಹರಿಸಿ ಹಲ್ಲು ಸಂದುಗಳನ್ನು ಗಟ್ಟಿಯಾಗಿ ಸೇರಿಸಿ ಕಳೆಕೊಟ್ಟು ದೇಹಕ್ಕೆ ಒಳ್ಳೆ ಗುಣವನ್ನುಂಟುಮಾಡುವದು ಈ ಪುಡಿಯನ್ನು ಹೂಟ್ಟಿಗೂ ತೆಗೆದುಕೊಳ್ಳಬಹುದು ಇದರ ಬೆಲೆ ಡಬ್ಬಿ 1 ಕ್ಕೆ 4 ಆಣೆ ಟಪ್ಪಾಲ್, ಪಾರ್ಸಲ್ ಖರ್ಚು ಪ್ರತ್ಯೇಕ ವಿಳಾಸ —

ರಾಜವೈದ್ಯಂ ಮೈಸೂರು ಪಂಡಿತರು ಎಂ ಕೆ ಶೇಷಾಚಾರ್ಲು, ನಂ 93, ಚೈನಾಬಜಾರ್ ರೋಡ್, ಮದರಾಸ್

ಮಧುರೆ ಅಚ್ಚ ಕರೀ ಬಣ್ಣದ ಮೂರು ಚಿಕ್ಕೆಯ ಸೀರೆಗಳು.

ಕ್ರಯ ರೂಪಾಯಿ 2-0-0

ಇದು ಅನೇಕರು ಪ್ರಕಟಿಸುತ್ತಲಿರುವ ಸೀರೆಯಲ್ಲ ಮಧುರೆ ಸೀರೆಯೆಂದು ಹೆಸರುಪಡೆದ ಅಚ್ಚ ಕರೀಬಣ್ಣದ ಚುಕ್ಕಡಿ ಸೀರೆ ಇದು ಬಹಳ ಸಾಜೋಕಾಗಿಯೂ ನೋಡುವವರಿಕ್ಕೆ ಲಕ್ಷಣವಾಗಿಯೂ

ರಂಗು ಅಚ್ಚ ನೀಲಿಕಪ್ಪಿನ ವರ್ಣವುಳ್ಳದ್ದಾಗಿಯೂ ಸೀರೆಯು ಮಡಿತಿಯಾಗಿಯೂ ಧಾರಾಳವಾಗಿ 18 ಮೊಳವುಳ್ಳದ್ದಾಗಿಯೂ ಇವೆ ಇದನ್ನು ಭಾಗ್ಯವಂತರು ಸಹ ಎಷು ಪ್ರೇಮದಿಂದ ಉಡುತ್ತಲಿದಾರೆ ಮಾದರಿಗಳನ್ನು ತರಿಸಿ ಪರೀಕ್ಷಿಸಿ ನೋಡಿರಿ ಈ ಪ್ರತಿ 1 ಸೀರೆಯ ಸಂಗಡಲೂ ಇದೇ ತರದ 1 ರವಿಕೆಯನ್ನು ಇನಾಮಾಗಿ ಕಳುಹಿಸುತ್ತೇವೆ [40 1]

ವಿಳಾಸ—ಮ್ಯಾನೇಜರ್, ಶೃಂಗಾರ ವಿಳಾಸ, ಚಿಂತಾದ್ರಿಪೇಟೆ, ಮದರಾಸು

ವೃತ್ತಾಂತ ಪತ್ರಿಕೆ

೮

ಶಕೆ ೧೯೧೩ ನೇ ಇಸವಿ ಮೇ ತಾ ೮ ನೇ ಗುರುವಾರ

ಮೈಸೂರು ಸೀಮೆಯ ಎಕ್ಸೈಸ್ ಇಲಾಖೆ

ಮೈಸೂರು ಸಂಸ್ಥಾನದ ಎಕ್ಸೈಸ್ ಇಲಾಖೆಯ 1911 12 ನೇ ಸಾಲಿನ ವಾರ್ಷಿಕ ರಿಪೋರ್ಟು ಈಗ ಪ್ರಕಟವಾಗಿದೆ ಈ ರಿಪೋರ್ಟಿನಲ್ಲಿ ಹೇಳಿರುವ ಪ್ರಕಾರ ಈ ಇಲಾಖೆಯ ರಾಜಾದಾಯವು ಹಿಂದಿನ ವರುಷದ ಹುಟ್ಟುವಳಿಗಿಂತ 1,00,017 ರೂಪಾಯಿ ಹೆಚ್ಚಾಯಿತು ಈ ಹೆಚ್ಚು ಉತ್ಪತ್ತಿಯು ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ಹಂಚಿಕೊಂಡಿರುವುದು ಈ ಇಲಾಖೆಯ ಒಟ್ಟು ಉತ್ಪತ್ತಿ 15,15,007 ರೂಪಾಯಿ ಇಷ್ಟೊಂದು ದ್ರವ್ಯವು ಸುಮಾರಾಗಿ ವ್ಯರ್ಥವಾದ ಒಂದು ಸೇಸುತ್ತೇವೆ ಸರಾಯಿನ ಖರ್ಚನ್ನು ಈ ಸಾಲಿನಲ್ಲಿ ಕಡಮೆ ಮಾಡಿರುತ್ತಾರಾದಾಗ್ಯೂ ಅದರ ಬಿಕರಿಯಿಂದಾದ ಹುಟ್ಟುವಳಿಯು ಇನ್ನೂ ಹೆಚ್ಚಿರುತ್ತದೆ

ಸರಾಯಿ ದುಕಾನುಗಳ ಸಂಖ್ಯೆಯನ್ನು ಕ್ರಮೇಣ ಕಡಮೆ ಮಾಡಬೇಕೆಂಬುವುದು ಗವರ್ನಮೆಂಟಿನವರ ಉದ್ದೇಶವೆಂದು ತಿಳಿಸಲಾಗಿದೆ, ಆದರೂ 1,170 ದುಕಾನುಗಳು ಇನ್ನೂ ಇರುತ್ತವೆ, ಮತ್ತೂ ಕಳೆದ ಸಾಲಿನಲ್ಲಿ 30 ದುಕಾನುಗಳು ಮಾತ್ರ ಕಡಮೆಯಾದವು ಈ ದುಕಾನುಗಳು ಪ್ರಜೆಗಳ ನಮ್ಮದಿಗೆ ಭಂಗವನ್ನುಂಟುಮಾಡುತವೆಂದೂ, ನಷ್ಟಕಾರಿಗಳೆಂದೂ ನಾವು ಹೇಳಬೇಕಾದದ್ದಿಲ್ಲ ಸರ್ಕಾರದವರು ಇಷ್ಟನ್ನಾದರೂ ಮುಚ್ಚಿಸಿಬಿಟ್ಟರಲ್ಲಾ ಎಂದು ಸಂತೋಷಪಡುತ್ತೇವೆ ಆದರೂ ಇನ್ನೂ ಅನೇಕ ದುಕಾನುಗಳು ಹೀಗೆಯೇ ಮುಚ್ಚಲ್ಪಡಬೇಕೆಂದು ಕೋರುತ್ತೇವೆ

ಈ ಎಕ್ಸೈಸ್ ಇಲಾಖೆಯ ವಾರ್ಷಿಕ ರಿಪೋರ್ಟಿನಲ್ಲಿ ಸಂಸ್ಥಾನದೊಳಗೆ ಸರಾಯಿ ಮತ್ತು ಸೇಂದಿ ಕುಡಿಯುವದರಿಂದ ಎಂಥೆಂಥಾ ಕ್ರೂರಕೃತ್ಯಗಳು ನಡೆದವೆಂಬುವುದನ್ನೂ, ಈ ದುರಭ್ಯಾಸದ ದೆಸೆಯಿಂದ ಎಷ್ಟು ಸಂಸಾರಗಳು ನಾಶಹೊಂದಿದವೆಂಬುವುದನ್ನೂ, ಎಷ್ಟು ಸ್ಥಿರಚರ ಆಸ್ತಿಗಳು ವ್ಯರ್ಥವಾಗಿ ಹಾಳುಮಾಡಲ್ಪಟ್ಟವೆಂಬುವುದನ್ನೂ ಸರ್ಕಾರದವರು ಗೊತ್ತುಮಾಡಿ ಪ್ರಕಟಿಸಿದರೆ ಅದರ ಹಾವಳಿಯನ್ನು ತಿಳಿಯಬಹುದಾಗಿದೆ ಪ್ರಜೆಗಳು ಅಂಥಾ ವಿಷಯಗಳನ್ನು ಓದಿನೋಡಿ ಗಾಬರಿಯಿಂದ ಈ ದುರಭ್ಯಾಸಕ್ಕೆ ಕೈಹಾಕದೆ ಇದ್ದಾರು

ಶೇಂದಿ ಸರಾಯಿ ಮುಂತಾದ ಮದ್ಯಗಳನ್ನು ಕುಡಿಯುವುದು ಪಾಪಕೃತ್ಯವೆಂದು ನಾವು ಹೇಳುವುದಿಲ್ಲ, ಆದರೆ ಅದಕ್ಕೆ ವಿನಿಯೋಗಿಸುವ ಹಣ ವ್ಯರ್ಥವಾದದ್ದೆಂದೂ ಅನೇಕ ಸಂದರ್ಭಗಳಲ್ಲಿ ಕುಡುಕುತನದಿಂದ ಕ್ರೂರಕೃತ್ಯಗಳು ನಡೆಯುವುದಕ್ಕೂ, ದಾರಿದ್ರ್ಯವು ಪ್ರಾಪ್ತವಾಗುವುದಕ್ಕೂ ಸಂಶಯವಿಲ್ಲವೆಂದು ಒತ್ತಿ ಹೇಳುತ್ತೇವೆ ಪ್ರಜೆಗಳು ವಿದ್ಯೆ ಕಲಿಯಬೇಕೆಂದು ಕೇಳುತ್ತಿದಾರೆ, ಇದಕ್ಕೆ ಬಹಳ ಹಣ ಬೇಕಾಗುವುದು ಈ ಹಣವೆಲ್ಲಾ ಈ ಬಾಬಿಗೆ ಕೊಟ್ಟುಬಿಡುವದಾದರೆ ಸಂಸ್ಥಾನದೊಳಗೆ ಅನೇಕಾನೇಕ ಪ್ರಥಮ ಪಾಠಶಾಲೆಗಳನ್ನಿಟ್ಟು ಗಂಡು ಹೆಣ್ಣು ಮಕ್ಕಳಿಗೆ ಅಲ್ಪಸ್ವಲ್ಪವಾದರೂ ವಿದ್ಯೆ ಕಲಿಸುವುದಕ್ಕೆ ಸಹಾಯವಾಗುತ್ತದೆ

ಗಾಂಜಾ ಬೆಳೆಯು ತೃಪ್ತಿಕರವಾಗಿ ಒದಗಿಬಂದಿದೆ ಹೊಂದುತ್ತಿದೆ ಎಂದು ಹೇಳಿ ಗವರ್ನಮೆಂಟಿನವರು ಆನಂದಪಡುತ್ತಿರುವದನ್ನು ನೋಡಿದರೆ ನಮಗೆ ವ್ಯಸನವಾಗುವುದು ಗಾಂಜಾ ಸೇವನೆಯಿಂದ ಯಾರಿಗೂ ಯಾವ ಪ್ರಯೋಜನವೂ ಆಗುವುದಿಲ್ಲ, ಮೈಸೂರು ಸರ್ಕಾರದವರು ಅದರ ಬೆಳೆಯನ್ನು ವೃದ್ಧಿಮಾಡುತ್ತಿರುವುದು ವಿಷಾದಕರವಾಗಿದೆ ಅಫೀಮು, ಗಾಂಜಾ, ಮಾಜುಂ ಎಂಬೀ ಮದ್ಯಗಳ ಮೇಲೆ ಸರ್ಕಾರದವರು ಸುಂಕವನ್ನು ಹೆಚ್ಚುಮಾಡಿದ್ದರಿಂದ ಈ ಪದಾರ್ಥಗಳ ಬಿಕರಿಯು ಕಡಮೆಯಾಗಿದೆ ಇದನ್ನು ನೋಡಿ ನಾವು ಸಂತೋಷಪಡುತ್ತೇವೆ ಈ ಪದಾರ್ಥಗಳನ್ನು ಔಷಧಗಳಿಗೆ ವಿನಹಾ ಇನ್ನಾವ ಕಾರ್ಯಕ್ಕೂ ಉಪಯೋಗಿಸಬಾರದು, ಮತ್ತು ಅವನ್ನು ಕಾಳೆದವರಿಗೆಲ್ಲಾ ಶಿಕ್ಷೆಯಾದಂತೆ ಏರ್ಪಾಡುಮಾಡಬೇಕು

ಈ ಮದ್ಯಪದಾರ್ಥಗಳೆಲ್ಲಾ ಪ್ರಜೆಗಳಿಗೆ ಎಲ್ಲಾ ಭಾಗಗಳಲ್ಲೂ ಕೇಡುಕಾರಿಗಳಾಗಿಯೇ ಪರಿಣಮಿಸುತ್ತವೆಯಾದಕಾರಣ ಅವುಗಳ ಸೇವನೆಯೂ ಮಾರಾಟವೂ ದಿನಕ್ರಮೇಣ ಕಡಮೆ ಮಾಡುತ್ತಾ ಬರುತ್ತೇವೆಂದು ಮೈಸೂರು ಸರ್ಕಾರದವರು ಸಂಕಲ್ಪ ಮಾಡಿಕೊಂಡು ಆ ರೀತಿ ನಡಿಸುತ್ತಾ ಬಂದರೆ ಈ ಸಂಸ್ಥಾನ ಶ್ರೇಯಸ್ಸಿಗೆ ಚ್ಯುತಿಯುಂಟಾಗುವುದಿಲ್ಲ ಮೈಸೂರು ಗವರ್ನಮೆಂಟಿನವರು ಅವುಗಳ ಮೇಲಿನ ರಾಜಾದಾಯದ ದರಗಳನ್ನು ಅಗಿಂದಾಗ್ಗೆ ಹೆಚ್ಚು ಮಾಡುತ್ತಾ, ಅವು ಬಿಕರಿಯಾಗುವ ದುಕಾನುಗಳ ಸಂಖ್ಯೆಯನ್ನು ದಿನಕ್ರಮೇಣ ಕಡಮೆಮಾಡುತ್ತಾ, ಅವುಗಳ ಸೇವನೆಯಿಂದ ಮತ್ತೇರಿದ ಪ್ರಜೆಗಳನ್ನು ಹಿಡಿದು ಕಠಿಣವಾಗಿ ಶಿಕ್ಷಿಸುತ್ತಾ ಬಂದರೆ ಅವರು ಯಥಾರ್ಥವಾಗಿಯೂ ಪ್ರಜಾಹಿತಕರ್ತರೆನಿಸಿಕೊಂಡಾರು. ಇದರಿಂದ ವರುಷೇ ವರುಷ ಎಕ್ಸೈಸ್ ಖಾತೆಯ ಹುಟ್ಟುವಳಿ ಕಡಮೆಯಾಗಬಹುದು, ಆದರೆ ಪ್ರಜೆಗಳು ಕುಡಿಯುವುದನ್ನೂ ಮದ್ಯಪದಾರ್ಥಗಳ ಸೇವನೆಯನ್ನೂ ಬಿಟ್ಟು ದೃಢಕಾಯರಾಗಿಯೂ, ಐಶ್ವರ್ಯವಂತರಾಗಿಯೂ ಆಗುತ್ತಾರೆನ್ನುವುದಕ್ಕೆ ಸಂಶಯವಿಲ್ಲ

ಸೌಂದರ್ಯವಂತರಾಗುವದು ಹೇಗೆ?

ಸೌಂದರ್ಯವು ಸ್ವಾಭಾವಿಕವಾಗಿ ನಮ್ಮ ಮನಸ್ಸುಗಳನ್ನು ಆಕರ್ಷಿಸುತ್ತದೆ ಸೌಂದರ್ಯವಾದ ರೂಪವುಳ್ಳ ಸ್ತ್ರೀಯರು, ಪುರುಷರು, ಪುಷ್ಪಗಳು ರಮಣೀಯವಾದ ತೋಟ, ಸರೋವರ ಇವುಗಳನ್ನು ನೋಡಿ ಯಾರು ತಾನೆ ಸಂತೋಷಪಡುವದಿಲ್ಲ ಸೌಂದರ್ಯವಾದ ವಸ್ತುಗಳನ್ನು ನೋಡುವದಕ್ಕೆ ನಾವು ಸಂತೋಷಪಡುವದಲ್ಲದೆ ನಾವೇ ಸೌಂದರ್ಯವಂತರಾಗಿರಬೇಕೆಂತ ಎಲ್ಲರೂ ಅಪೇಕ್ಷಿಸುವದು ಸರ್ವಸಾಧಾರಣವಾಗಿದೆ ನಮ್ಮ ಮಿತ್ರರು ನಮ್ಮ ಸೌಂದರ್ಯವನ್ನು ನೋಡಿ ಮೆಚ್ಚಬೇಕೆಂದು ನಾವು ನಮ್ಮನ್ನು ಶೃಂಗರಿಸಿಕೊಳ್ಳುತ್ತೇವೆ ಒಳ್ಳೆ ವಸ್ತ್ರಾಭರಣಗಳನ್ನು ಧರಿಸಿಕೊಳ್ಳುತ್ತೇವೆ ಕೆಲವು ವರುಷಗಳ ಕೆಳಗೆ ಇಂಗ್ಲೆಂಡ ದೇಶದಲ್ಲಿ ಒಬ್ಬಾನೊಬ್ಬ ಸ್ತ್ರೀಯು—ಸೌಂದರ್ಯವಂತರಾಗಬೇಕೆಂದು ಅಪೇಕ್ಷಿಸುವ ಪುರುಷರೂ ಸ್ತ್ರೀಯರೂ ನಾನು ತಯಾರಿಸಿರುವ ತೈಲವನ್ನು ಕೊಂಡುಕೊಂಡು ಮುಖಕ್ಕೂ ದೇಹಕ್ಕೂ ಹಚ್ಚಿ ಕೊಂಡರೆ ಮುಖದ ಮೇಲಿನ ಎಲ್ಲಾ ಮಚ್ಚೆ ಕಲೆಗಳೂ ಸುಕ್ಕೂ ಇಲ್ಲದೆ ಹೋಗಿಬಿಡುವವು ಅವರು ಸೌಂದರ್ಯವಂತರಾಗುವರು ಎಂದು ಪ್ರಕಟಿಸಿದ್ದಕ್ಕೆ ಅನೇಕ ಹೆಂಗಸರು ಅವಳ ಮಾತನ್ನು ನಂಬಿ ಅವಳ ಬೊಕ್ಕಸಕ್ಕೆ ತಮ್ಮ ದುಡ್ಡುಗಳನ್ನು ಸುರಿದರಂತೆ ಸೌಂದರ್ಯವಂತರಾಗಬೇಕೆಂಬ ವ್ಯಾಮೋಹವು ಜನಗಳನ್ನು ಅನ್ಯಾಯಾಗಿ ಮರುಳುಮಾಡುವದು

ಆದರೆ ನಿಜವಾದ ಸೌಂದರ್ಯವು ಇಲ್ಲವೋ? ಇಂಥಾದ್ದಿದ್ದರೆ ಅದನ್ನು ಪಡೆಯುವದು ಹೇಗೆ? ಸೌಂದರ್ಯವಂತರೆಂದು ಹೊಗಳಿಸಿಕೊಳ್ಳುವವರು ವಯಸ್ಸು ಹೋಗುತ್ತ ತಮ್ಮ ಆ ಚಲುವಿಕೆಗಳನ್ನೂ, ಸೊಬಗನ್ನೂ ಹೋಗಲಾಡಿಸಿಕೊಳ್ಳುವರು ಅದು ಇರುವ ತನಕ ಹೆಮ್ಮೆಗೂ ಅಟ್ಟಹಾಸಕ್ಕೂ ಕಾರಣವಾಗುವದು ಆದರೆ ಹೂವು ಬಾಡಿ ಉದುರುವದು ಅದರ ಅಲಂಕಾರವು ಅಳಿದು ಹೋಗುವದು ಸಿಡುಬು ಮುಂತಾದ ರೋಗೋಪದ್ರವಗಳು ಅದನ್ನು ಬೇಗಾ ವಿಕಾರಪಡಿಸುವವು ನಿತ್ಯವಾಗಿ ನಮ್ಮನ್ನು ಅಲಂಕರಿಸಿ ದಿನ ಕ್ರಮೇಣ ನಮ್ಮ ಅಲಂಕಾರವನ್ನು ಹೆಚ್ಚಿಸುವ ಸೌಂದರ್ಯವಿಲ್ಲವೋ?

ಶಿಲೆಗಳಿಂದ ವಿವಿಧವಾದ ಪ್ರತಿಮೆಗಳನ್ನು ಕೆತ್ತುವ ಶಿಲ್ಪಿಯನ್ನು ಯಾರು ನೋಡಿರುವರು ಅವನು ತನ್ನ ಬಳಿಯಲ್ಲಿ ಕೆಲವು ಆಯುಧಗಳನ್ನು ಇಟ್ಟುಕೊಂಡು ಪ್ರಯೋಗಿಸುತ್ತಾನೆ ಕೆಲವು ದೊಡ್ಡ ಸುತ್ತಿಗೆಗಳು ಅನೇಕ ಕೆಲವು ಸಣ್ಣವುಗಳು, ಬೇರೆ ಬೇರೆ ರೂಪವನ್ನು ಬರಮಾಡುವದಕ್ಕೆ ತಕ್ಕ ಚಿಕ್ಕ ಮತ್ತು ದೊಡ್ಡ ಉಳಿಗಳು ಇವುಗಳಲ್ಲಿ ತನಗೆ ಬೇಕಾದ ಆಯುಧಗಳನ್ನು ಸಂದರ್ಭಕ್ಕೆ ತಕ್ಕ ಹಾಗೆ ಆಯ್ದುಕೊಂಡು ಬಹು ಜಾಣತನದಿಂದ ಅವುಗಳನ್ನು ಪ್ರಯೋಗಿಸಿ ಪ್ರತಿಮೆಗಳನ್ನು ಕಡೆಯುತ್ತಾನೆ ಆದರೆ ಶಿಲ್ಪಿಯು ಪ್ರಯೋಗಿಸುವ ಆಯುಧಗಳಿಗಿಂತ ಮುಖ್ಯವಾದದ್ದೊಂದು ಅವನಲ್ಲಿರುವದು ಅದೇನಂದರೆ ಅವನ ಮನಸ್ಸು ಮತ್ತು ಹೃದಯ ಇವುಗಳೇ ಯಾಕೆಂದರೆ ಅವನು ಸುತ್ತಿಗೆ ಉಳಿಗಳನ್ನು ಪ್ರಯೋಗಿಸುವದಕ್ಕಿಂತ ಮುಂಚೆ ಅವನು ಮಾಡಬೇಕೆಂದಿರುವ ಪ್ರತಿಮೆಯ ಆಕಾರವನ್ನು ತನ್ನ ಮನಸ್ಸಿನಲ್ಲಿ ರೂಪಿಸಿಕೊಳ್ಳಬೇಕಾಗಿಯಲ್ಲವೆ? ಅವನ ಮನಸ್ಸಿನಲ್ಲಿ ಎಂತಹ ಆಕಾರವನ್ನು ರೂಪಿಸಿಕೊಂಡಿದ್ದಾನೋ ಅಂತಹ ಆಕಾರವನ್ನೇ ತನ್ನ ಮುಂದ ಇದ್ದಿರುವ ಕಲ್ಲಿಗೆ ಕೊಡುತ್ತಾನೆಯಲ್ಲದೆ ಮತ್ತು ಅವನ ಮನಸ್ಸಿನಲ್ಲಿ ಅಂಕುರವಾಗಿರುವ ರೂಪವು ಅವನ ಸ್ವಭಾವ ಗುಣಲಕ್ಷಣಗಳನ್ನು ಅನುಸರಿಸಿದ್ದಾಗಿರುತ್ತದೆ ಅನೇಕ ಗುಡಿಗಳಲ್ಲಿಯೂ ಸ್ಥಾನಗಳಲ್ಲಿಯೂ ಈಗ ನಿಲ್ಲಿಸಿರುವ ಪ್ರತಿಮೆಗಳು ಬಹು ಚಮತ್ಕಾರವಾದ ಶಿಲ್ಪವಿದ್ಯವನ್ನೂ ಜಾಣತನವನ್ನೂ ಪ್ರಕಟಿಸುತ್ತವೆ ಅವುಗಳನ್ನು ಕೆತ್ತಿದವರು ಜಾಣರು ಸಂದೇಹವಿಲ್ಲ ಆದರೆ ಅವರ ಮನಸ್ಸು ಹೇಯವಾದ ಮತ್ತು ಹೊಲಸಾದ ಅಸಹ್ಯವಾದ ವಿಷಯಲಂಪಟವನ್ನು ಸೂಚಿಸುವ ಆಕಾರಗಳಿಂದಲೂ ಮನೋಭಾವಗಳಿಂದಲೂ ಮಲಿನವಾಗಿದ್ದವು ಆದರಿಂದಲೇ ಅವರು ಅಂಥಾ ಕಾಮಾಸಕ್ತಿಯನ್ನು ಹುಟ್ಟಿಸುವ ಪ್ರತಿಮೆಗಳನ್ನು ಕೆತ್ತಿದರು ಇದರಿಂದ ಮನುಷ್ಯನೇ ನಿಜವಾದ ಶಿಲ್ಪಿಯೆಂದು ತಿಳಿಯುತ್ತದಲ್ಲವೆ? ಒಬ್ಬನ ಮನಸ್ಸು ಸ್ವಭಾವ ಗುಣಲಕ್ಷಣಗಳು ಎಂಥವುಗಳೋ ಅವನು ಚಿತ್ರಿಸುವ ಪ್ರತಿಮೆಗಳೂ ಆಡುವ ಮಾತುಗಳೂ ಮಾಡುವ ಕೆಲಸಗಳೂ ಅಂಥವುಗಳಾಗಿಯೇ ಇರುತ್ತವೆ ಒಳ್ಳೆಯವನು ತನ್ನ ಹೃದಯವೆಂಬ ಒಳ್ಳೇ ಬೊಕ್ಕಸದಿಂದ ಒಳ್ಳೇದನ್ನು ಹೊರಗೆ ತರುತ್ತಾನೆ ಕೆಟ್ಟವನು ತನ್ನ ಹೃದಯವೆಂಬ ಕೆಟ್ಟ ಬೊಕ್ಕಸದಿಂದ ಕೆಟ್ಟದ್ದನ್ನು ಹೊರಗೆ ತರುತ್ತಾನೆ ಹೃದಯದಲ್ಲಿ ತುಂಬಿರುವದನ್ನೇ ಬಾಯಿ ಆಡಿ ತೋರಿಸುತ್ತವೆ, ಕೈ ಮಾಡಿ ತೋರಿಸುತ್ತದೆ

ನನ್ನ ಮನಸ್ಸು ಶಿಲ್ಪಿಯಾದರೆ ಅದು ಕೆತ್ತಿ ರೂಪಿಸುವ ಪ್ರತಿಮೆಯು ಯಾವದು? ನನ್ನ ಮನಸ್ಸು ಶರೀರಕ್ಕೂ ಅದರ ಅವಯವಗಳಿಗೂ ಯಜಮಾನನಾಗಿ ತನಗೆ ಬೇಕಾದ ಕಲ್ಲಿನಿಂದ ತನ್ನ ಇಷ್ಟದ ಪ್ರಕಾರ ಬೇರೆ ಬೇರೆ ಕಲ್ಪಿತ ರೂಪಗಳನ್ನು ಕೆತ್ತಿಸಬಹುದು ಆದರೆ ನನ್ನ ಮನಸ್ಸು ತನ್ನ ಸೇವಕನಂತಿರುವ ನನ್ನ ದೇಹವನ್ನೇ ತನ್ನಿಷ್ಟಕ್ಕನುಸಾರವಾಗಿ ದಿನಕ್ರಮೇಣ ಮಾರ್ಪಡಿಸುತ್ತಿದೆ ನನ್ನ ಮನಸ್ಸು ಎಂಥಾದ್ದೋ ಅದರ ಸೇವಕನಾದ ನನ್ನ ದೇಹದ ರೂಪು ರೇಖೆಗಳೂ ಸ್ವಭಾವ ಲಕ್ಷಣಗಳೂ ಅಂಥಾದೇ ಆಗುತ್ತವೆ ಇದರೊಳಗೇನೂ ಆಶ್ಚರ್ಯವಿಲ್ಲ ರಾಜನಂತೆ ಪ್ರಜೆ, ಯಜಮಾನನಂತೆ ಸೇವಕ ಎಂಬ ಗಾದೆಗಳನ್ನು ನಾವು ಬಲ್ಲೆವಷ್ಟೆ ಯಜಮಾನನಾದ ನನ್ನ ಮನಸ್ಸು ಮೈಗಳ್ಳನಾಗಿದ್ದರೆ ಅದರ ಸೇವ

...ನನ್ನ ದೇಹವು, ಕೈ ಕಾಲು ಮುಂತಾದ ಅವಯವಗಳು ಮೃಗಗಳನ್ನಾದ ಯಜಮಾನನ ಚಾಲನ್ನು ಕಲಿಯುವದು ಸ್ವಭಾವಿಕವಾಗಿದೆ. ಹುರುಕಾಗಿ ಎತ್ತನ್ನಾಗಲಿ ಕುದುರೆಯನ್ನಾಗಲಿ ಮೃಗಗಳನ್ನಾದ ಸೇವಕನ ವಶಕ್ಕೆ ... ಆ ಪ್ರಾಣಿಗಳು ಕ್ರಮೇಣ ಮೃಗಗಳ ಗುಣವನ್ನು ಕಲಿತುಕೊಳ್ಳುವವು. ಉಪಾಧ್ಯಾಯನ ಕೈಕೆಳಗೆ ಓದುವ ಬಾಲಕರು ದರ್ಶನವಾಗುವರು. ಮನಸ್ಸಿಗೆ ಅಡಿಯಾಳಾಗಿರುವ ದೇಹವು ಮನಸ್ಸಿನ ಭಾವವುಳ್ಳ ತನ್ನ ಯಜಮಾನನಿಗೆ ತಕ್ಕ ಸೇವಕನೇ ಆಗುವದು. ನನ್ನ ದೇಹವು ನನ್ನ ಮನಸ್ಸು ... ವ ಕೆಲಸಗಳನ್ನು ಮಾಡುವ ಉಪಕರಣವಾಗಿರುವದು. ಕಳವು, ಕಾಮ, ವಂಚನೆ, ಮತ್ಸರ, ಲೋಭ ಮುಂತಾದ ದುರ್ವ್ಯಾಪಾರಗಳಲ್ಲಿ ಆಸಕ್ತಿ ... ಮನಸ್ಸಿಗೆ ಪರಿಶುದ್ಧತೆ, ಪರೋಪಕಾರ, ಸತ್ಯ, ಔದಾರ್ಯಗಳೆಂಬ ... ದಿಂದ ಅಲಂಕೃತವಾದ ದೇಹವಿರಲಾರದು. ಮತ್ತು ಇಂತಹ ... ವ್ಯಸನಗಳಿಗೆ ಸಿಕ್ಕಿದ ಮನಸ್ಸು ತನ್ನ ಸ್ವಭಾವಾನುಸಾರವಾದ ಗುಣ ಲಕ್ಷಣ ... ಅದಕ್ಕೆ ಸೇವಕನಾಗಿ ಸಿಕ್ಕಿದ ದೇಹದ ಮೇಲೂ ಮುದ್ರಿಸುವದು.

ಮನಸ್ಸು ಶಿಲ್ಪಿಯಾಗಿ ದೇಹದ ರೂಪವನ್ನು ಮಾರ್ಪಡಿಸುತ್ತಲಿದೆಯಷ್ಟೆ ... ಮನಸ್ಸೆಂಬ ಈ ಶಿಲ್ಪಿಯು ಪ್ರಯೋಗಿಸುವ ಆಯುಧಗಳು ಯಾವವು? ...ನಲ್ಲಿ ಹುಟ್ಟುವ ಯೋಚನೆಗಳು, ಅಭಿಪ್ರಾಯಗಳು, ಬಯಕೆಗಳು ಮತ್ತು ... ಮಾಡಬೇಕೆಂದು ತೀರ್ಮಾನಿಸಿಕೊಳ್ಳುವ ಉದ್ದೇಶಗಳು ಇವೇ ಮನ... ಶಿಲ್ಪಿಗೆ ಆಯುಧಗಳು. ಸತ್ಯವೇದವು ಇವರ ವಿಷಯ ಹೇಳುವದೇನಂ... ಒಬ್ಬ ಮನುಷ್ಯನು ತನ್ನ ಮನಸ್ಸಿನಲ್ಲಿ ಏನೇನು ಆಲೋಚಿಸುತ್ತಾನೋ ... ಮಾಡುತ್ತಾನೆ. ನಮ್ಮ ಆಲೋಚನೆ, ಮನೋಭಾವನೆ, ಉದ್ದೇಶಗಳು ...ಯವುಗಳಾಗಿದ್ದರೆ ದೇಹವನ್ನೂ ಅದರ ಅವಯವಗಳನ್ನೂ ಒಳ್ಳೇ ಕೆಲಸಕ್ಕೆ ...ಯೋಜಿಸುತ್ತವೆ. ಮನೋಭಾವನೆ, ಆಲೋಚನೆ, ಉದ್ದೇಶಗಳು ಮನಸ್ಸೆಂಬ ...ಯ ಕೈಯಲ್ಲಿ ದೇಹವೆಂಬ ಪ್ರತಿಮೆಯನ್ನು ಕೆತ್ತುವ ಉಳಿ ಮುಂತಾದ ಆಯುಧಗಳಾಗಿವೆ. ಆಲೋಚನೆ, ಆಸೆ, ಉದ್ದೇಶಗಳು ಹಾಗೆ ಹುಟ್ಟು... ಯಾರ ಸ್ನೇಹವನ್ನು ನಾವು ಬಯಸುತ್ತೇವೋ ಎಂಥಾ ಪುಸ್ತಕಗಳನ್ನು ...ತ್ತೇವೋ ಯಾರ ನಡತೆಗಳನ್ನು ಅನುಸರಿಸುತ್ತೇವೋ ಅಂಥವರ ಆಲೋಚನೆ, ... ಉದ್ದೇಶಗಳು ನಮಗೂ ಬರುವವು. ನಾವು ಒಬ್ಬ ನಿಷ್ಕಳಂಕನಾದ, ...ಪರಿಶುದ್ಧ ಮನಸ್ಸಾದಾತನ ಸ್ನೇಹವನ್ನು ನಮಗೆ ಮಾಡಿಸಬಲ್ಲೆವು. ಆತನ್ಯಾರೆಂ... ಯೇಸು ಸ್ವಾಮಿಯು. ನಾವು ಒಂದು ದಿವ್ಯ ಗ್ರಂಥವನ್ನು ನಮ್ಮ ಅವಗಾ... ಅನುಸರಣಮಾಡಬೇಕು. ಅದ್ಯಾವದೆಂದರೆ ಯೇಸು ಸ್ವಾಮಿಯ ಚರಿತ್ರೆ ... ಇದರಿಂದ ಪರಿಶುದ್ಧತ್ವವೆಂಬ ಅಲಂಕಾರವನ್ನು ಪಡೆಯಿರಿ.

ಭಯಂಕರವಾದ ರೈಲ್ವೆ ಅನಾಹುತವು

—

ಅಪಾರವಾದ ಪ್ರಾಣನಷ್ಟ ' ಎದೆ ಒಡೆಯುವ ಸಂಕಟ '

ಮಧ್ಯ ಹಿಂದುಸ್ಥಾನದಲ್ಲಿ ನಾಗಪುರದಿಂದ ಬೊಂಬಾಯಿನ ಕಡೆ ಭೂಸಾವಳ್ ...ಂಗಿಬರುವ ಜಿ ಐ ಪಿ ರೈಲ್ ರಸ್ತೆಯಲ್ಲಿ ಕಳೆದ ಏಪ್ರಿಲ್ ತಾ 30 ನೇ ...ವಾರ ಬೆಳಗಿನ ಝಾಮದೊಳಗೆ ಒಂದು ರೈಲ್ ಗಾಡಿಯು ಇನ್ನೊಂದಕ್ಕೆ ...ಬಡಿದು ಬಹು ದುಃಖಕರವಾದ ಅನಾಹುತವಾಯಿತು. ಈ ಅನಾಹುತ ... ರೈಲ್ ಗಾಡಿಗಳೂ ಎಂಜನ್‌ಗಳೂ ಹಾಳಾದವಲ್ಲದೆ ಸುಮಾರು 10 ಜನ ...ಪ್ರಯಾಣಿಕರು ಪ್ರಾಣ ಕಳೆದುಕೊಂಡರು, ಸುಮಾರು 30 ಮಂದಿಗೆ ಭಯಂಕರ ...ಗಾಯಗಳಾದವು. ಈ ಅನಾಹುತ ನಡೆಯಲು ಕಾರಣವೇನಾಯಿತೆಂದರೆ—

ಕಳೆದ 28 ನೇ ತಾ ಸೋಮವಾರ ರಾತ್ರಿ 12 ... ಗಂಟೆಯ ... ...ಯಾಗಿದ್ದ ಗಾಡಿಯು ನಾಗಪುರ ಸ್ಟೇಷನ್‌ನಿಂದ ಭೂಸಾವಳ್ ಸ್ಟೇಷನ್ ...ಕ್ಕೆ ಹೊರಟಿತು. ಅದರಲ್ಲಿ ಹತ್ತಿಯ ಗಟ್ಟಿಗಳು ಭರ್ತಿಯಾಗಿದ್ದ 30 ... ಭೋಗಿಗಳೂ ಒಂದು ರಿಜರ್ವ್ 2 ನೇ ಕ್ಲಾಸ್ ಗಾಡಿಯೂ, ಒಂದು ...ರ್ಡ್ ಗಾಡಿಯೂ ಎಂಜನ್ ಗಾಡಿಯು ಸಮೇತ ಇದ್ದವು. ಈ ಎರಡನೇ ...ಸ್ ಗಾಡಿಯಲ್ಲಿ ರೈಲ್ವೆ ಅಧಿಕಾರಿಯಾದ ಮಿ|| ಪ್ಯಾರಿಸನ್ ಎಂಬ ಯೂರೋ... ಪತ್ನಿ ಸಮೇತ ಇಬ್ಬರು ಸೇವಕರೊಡನೆ ಪ್ರಯಾಣಮಾಡುತ್ತಿದ್ದನು. ಅದು ...ರ್ ಗಾಡಿಯಾದ್ದರಿಂದ ಅಲ್ಲಲ್ಲಿ ನಿಂತು ನಿಧಾನವಾಗಿ ಹೋಗುತ್ತಾ ಕಾಟ... ಎಂಬ ಸ್ಟೇಷನ್ ತಲಪಿ ಆ ಸ್ಟೇಷನ್ ಮಾಸ್ಟರಿಂದ ಲೈನ್ ಕ್ಲಿಯರ್ (... ಸುರಕ್ಷಿತವಾಗಿದೆ) ಎಂಬ ಅಪ್ಪಣೆ ಚೀಟಿಯನ್ನು ಪಡೆದು ಸುಮಾರು ...ಮೈಲಿ ದೂರದಲ್ಲಿರುವ ಬೋರಗಾಂವ್ ಸ್ಟೇಷನ್ ಕುರಿತು ಪ್ರಯಾಣಮಾಡಿ ...ತ್ತಿರುವಲ್ಲಿ ಬೋರಗಾಂವ್ ಸ್ಟೇಷನ್ ಸಿಗ್ನಲ್ ಅನುಮಾನಾಸ್ಪದ ...ವಾಗಿ ಕಂಡುಬಂದದ್ದರಿಂದ ಮುಂದಕ್ಕೆ ಹೋಗದೆ ಸ್ವಲ್ಪ ದೂರದಲ್ಲೇ ನಡು ...ಯಲ್ಲಿ ನಿಂತು ಸಿಗ್ನಲ್ ಗುರುತು ಸರಿಯಾಗುವದನ್ನು ಎದುರುನೋಡುತ್ತಾ ...ತು.

ಅತ್ತಲಾಗಿ ತಾ 29 ನೇ ಮಂಗಳವಾರ ರಾತ್ರಿ 9 10 ಗಂಟೆಗೆ ನಾಗಪುರ... ಒಂದು ಪ್ಯಾಸೆಂಜರ್ ಗಾಡಿಯು ಅಂಚೆ ಸಮೇತ ಭೂಸಾವಳಿನ ಕಡೆ ಬೊಂ... ...ಗೆ ಹೊರಟಿತು. ಈ ಟ್ರೈನ್‌ನಲ್ಲಿ ಎಂಜನ್ ಅಲ್ಲದೆ ಹದಿನಾರು ...ಗಳು ಇದ್ದವು. ಅವುಗಳಲ್ಲೆಲ್ಲಾ ಪ್ರಯಾಣಿಕರು ಭರ್ತಿಯಾಗಿದ್ದರು. ಈ ... ಗಂಟೆಗೆ 25 30 ಮೈಲಿ ಪ್ರಯಾಣ ಮಾಡಿಕೊಂಡು ಬೆಳಗಿನ ಝಾಮದ ...ಗೆ ಮೊದಲೇ ಕಾಟೋಲ ಸ್ಟೇಷನ್ ತಲಪಿ ಲೈನ್ ಕ್ಲಿಯರ್ (ರಸ್ತೆ ...ಕ್ಷಿತವಾಗಿದೆ) ಎಂಬ ಎರಡನೇ ಚೀಟಿಯನ್ನು ಸ್ಟೇಷನ್ ಮಾಸ್ಟರಿಂದ ...ಪಡೆದು ಬೋರಗಾಂವ್ ಸ್ಟೇಷನ್ ಕುರಿತು ಓಡಲಾರಂಭಿಸಿತು. ಆಗ ...ನ ಝಾಮದ 3 ಗಂಟೆಯಾಗಿ, ಕತ್ತಲಾಗಿಯೂ ಮಂಜು ಬೀಳುತ್ತಲೂ ...ತು. ಈ ಪ್ಯಾಸೆಂಜರ್ ಗಾಡಿಯನ್ನು ನಡಿಸುವವನು ರಸ್ತೆ ಸುರಕ್ಷಿತವಾ... ಎಂಬ ಚೀಟಿಯ ಭರವಸೆಯ ಮೇಲೆ ಮುಂದುಮುಂದಕ್ಕೆ ಗಾಡಿಯನ್ನು ...ಕೊಂಡು ಹೋಗುತ್ತಿರುವಲ್ಲಿ ಒಂದಾವರ್ತಿ ತಲೆಯೆತ್ತಿ ಮುಂದೆ ನೋಡಿ... ದೂರದಲ್ಲಿ ಏನೋ ಒಂದು ವಸ್ತುವು ಕಣ್ಣಿಗೆ ಕಂಡಿತು. ಆ ಕ್ಷಣವೇ ತನ್ನ ...ಜನ್‌ಗೆ ಬ್ರೇಕ್ ಎಂಬ ಚಕ್ರಗಳ ತಡೆಯನ್ನು ಹಾಕಲು ಸಾಹಸಪಟ್ಟನು. ...ಷ್ಟರೊಳಗೇ ಈ ಪ್ಯಾಸೆಂಜರ್ ಗಾಡಿಯು ಅಲ್ಲಿ ನಿಂತಿದ್ದ ಸಾಮಾನ್ ಗಾಡಿಯ ...ಗವನ್ನು ಸಮೀಪಿಸಿ ಒದೆದು ಬಿರುಸಾಗಿ ಡಿಕ್ಕಾ ಹೊಡೆಯಿತು.

ಆ ಸಮಯದಲ್ಲಿ ಉಂಟಾದ ಅನಾಹುತವನ್ನು ಅದ್ಯಷ್ಟೆಂದು ವಿವರಿಸಲಾ... ಸಾಮಾನ್ ಗಾಡಿಯ ಹಿಂಭಾಗದಲ್ಲಿ ಜಂಟಿಸಿದ್ದ ಕೆಲವು ಭರ್ತಿ ವ್ಯಾಗನ್... ಆ ಯೂರೋಪಿಯನ್ ದಂಪತಿಗಳು ಕುಳಿತಿದ್ದ 2 ನೇ ಕ್ಲಾಸ್ ಗಾಡಿಯೂ, ...ಜರ್ ರೈಲಿನ ಮುಂಭಾಗದಲ್ಲಿ ಜಂಟಿಸಿದ್ದ ಆರು ಕೋಚ್ ಗಾಡಿಗಳೂ, ...ನ್ ಮತ್ತು ಗಾರ್ಡ್ ಗಾಡಿಗಳೂ ಬಡಿದಾಡಿ ಒಡೆದು ಬೆಂಕಿಪೆಟ್ಟಿಗೆಗಳಂತೆ ...ನುಚ್ಚಾದವು. ಆ ಯೂರೋಪಿಯನ್ ದಂಪತಿಗಳಿಗೆ ಬಹಳ ಗಾಯಗ... ...ಅವರ ಇಬ್ಬರು ಸೇವಕರೂ ಗಾಡಿಗಳ ಮಧ್ಯೆ ಸಿಕ್ಕಿ ತಕ್ಷಣ ಹತರಾ... ಪ್ಯಾಸೆಂಜರ್ ಗಾಡಿಗಳಲ್ಲಿದ್ದ ಮೂರನೇ ತರಗತಿಯ ಪ್ರಯಾಣಿಕರಲ್ಲಿ ...ಸು 10 ಜನಗಳ ವರೆಗೆ ಮೃತಪಟ್ಟರು, 20 25 ಜನರಿಗೆ ಹೆಚ್ಚು ಕಡಿಮೆ ...ಗಿವೆ. ಸುಮಾರಾಗಿ ಪ್ರಯಾಣಿಕರೆಲ್ಲರಿಗೂ ಅಲ್ಪ ಸ್ವಲ್ಪವಾದರೂ ...ಗಾಯವಾಗಿದೆಯೆಂದು ತಿಳಿಯುತ್ತವೆ. ನಾಗಪುರದ ಕಾಲೇಜಿನ ಅಧ್ಯಕ್ಷ (ಪ್ರಿನ್ಸಿಪಲ್) ರಾದ ದೇಶೀಯ ವಿದ್ವಾಂಸನು ಪತ್ನಿ, ಇಬ್ಬರು ಮಕ್ಕಳ ಸಹಿತ 3 ನೇ ತರಗತಿಯ ಗಾಡಿಯಲ್ಲಿ ಪ್ರಯಾಣಮಾಡುತ್ತಿದ್ದು ಹಾಗೆಯೇ ಎಲ್ಲರೂ ಮೃತಪಟ್ಟರೆಂದು ವರ್ತಮಾನವಿದೆ. ಎಲ್ಲಾ ಗಾಡಿಗಳಲ್ಲೂ ಕುಳಿತಿದ್ದ ಪ್ರಯಾಣಿಕರ ಪೈಕಿ ಅನೇಕ ಮಂದಿ ನಿದ್ರೆಮಾಡುತ್ತಿದ್ದು ಈ ಅನಾಹುತದಲ್ಲಿ ತೀರಿಹೋಗಿರುತ್ತಾರೆ. ಗಾಯಪಟ್ಟವರನ್ನೆಲ್ಲಾ ರೈಲ್ವೆ ಅಧಿಕಾರಿಗಳೂ ವೈದ್ಯರೂ ಹೋಗಿ ಉಪಚರಿಸಿ ಅಲ್ಲಿಗೆ ಅರ್ಧಗಂಟೆ ಪ್ರಯಾಣದಷ್ಟು ದೂರದಲ್ಲಿರುವ ಅಕೋಲಾ ನಗರದ ಆಸ್ಪತ್ರೆಗೆ ಸಾಗಿಸಿಕೊಂಡು ಹೋದರು. ಕೆಲವರನ್ನು ಬೊಂಬಾಯಿಗೆ ಕಳುಹಿಸಿ ಇಲಾಜು ಮಾಡುತ್ತಿದ್ದಾರೆ. ಗಾಡಿ ನಡಿಸುವವರೂ ಗಾರ್ಡುಗಳೂ ಯಾರೂ ಗಾಯಗೊಳ್ಳದೆ ತಪ್ಪಿಸಿಕೊಳ್ಳಲಿಲ್ಲ.

ಬಹು ಕಾಲದಿಂದೀಚೆಗೆ ಇಂಥಾ ದುಃಖಕರವಾದ ರೈಲ್ವೆ ಅನಾಹುತವು ಹಿಂದುಸ್ಥಾನದಲ್ಲಿ ನಡೆದಿರುವುದಿಲ್ಲ. ರೈಲ್ವೆ ಅಧಿಕಾರಿಗಳೂ ಸರ್ಕಾರಿ ಇನ್ಸ್‌ಪೆಕ್ಟರೂ ಸಿಬ್ಬಂದಿ ಸಮೇತ ಅಲ್ಲಿಗೆ ಹೋಗಿ ರಸ್ತೆಯನ್ನು ಸರಿಮಾಡಿಸಿದ್ದಲ್ಲದೆ ಈ ಅನಾಹುತ ನಡೆದದ್ದರ ಪೂರ್ವೋತ್ತರವನ್ನು ತನಿಖೆ ಮಾಡುತ್ತಿದ್ದಾರೆ.

ಒಳದೇಶದ ವೃತ್ತಾಂತಗಳು.

ಮಹಾಮಾತೃಶ್ರೀಯವರು ಕಳೆದ ಶನಿವಾರ ಸಾಯಂಕಾಲ ನೀಲಗಿರಿಯಿಂದ ಮೋಟಾರಿನಲ್ಲಿ ರಾಜಧಾನಿಗೆ ಚಿತ್ತೈಸಿದರು.

ಅರಕಲಗೂಡು ಪೊಲೀಸ್ ಇನ್ಸ್‌ಪೆಕ್ಟರ್ ಮ|| ಅನಂತರಾಮಯ್ಯಂಗಾರ್ರ ಮನೆಯಲ್ಲಿದ್ದ 12 ವಯಸ್ಸಿನ ಹೆಣ್ಣುಮಗಳು ವಿದ್ಯೆಯಲ್ಲೂ ಸಂಗೀತದಲ್ಲೂ ಬಹಳ ಬುದ್ಧಿವಂತಳಾಗಿದ್ದು ಕಳೆದ ವಾರ ಕಾಲವಾದಳೆಂದು ಒಬ್ಬ ಬಾತ್ಮಿದಾರರು ತಿಳಿಸುತ್ತಾರೆ.

ಬೆಂಗಳೂರು ಸಿಟಿ ಅಕ್ಕಿಪೇಟೆಯಲ್ಲಿರುವ ಪೂನಂಚಂದ್ ಎಂಬ ಮಾರ್ವಾಡಿ ವರ್ತಕನು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಸುಳ್ಳು ಕೈಫಿಯತ್ತು ಬರೆಸಿದನೆಂದು ಮೊಕದ್ದಮೆ ಬಂದು ದರ್ಖಾಸ್ತಿ ಆಗಿ ಅವನಿಗೆ ಹಿಂದಿನ ಮಂಗಳವಾರ ಎರಡು ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟಿತು.

ಕಳೆದ ಬುಧವಾರ ಮಧ್ಯಾಹ್ನ ರಾಜಧಾನಿಯ ದೊಡ್ಡಕೆರೆ ಏರಿಯ ಮೇಲೆ ಪಟ್ಟದಾನೆಯೂ ಇನ್ನೊಂದಾನೆಯೂ ಎದುರುಎದುರಾಗಿ ಸಂಧಿಸಿ ಸ್ವಲ್ಪ ಹೊತ್ತು ಜಗಳವಾಡಿದವು. ಆ ಪೈಕಿ ಹಳ್ಳದಲ್ಲಿ ಬಿದ್ದುಕೊಂಡ ಒಂದು ಆನೆಯನ್ನು ಇಲಾಖೆಯವರು ಕೂಡಲೇ ಸಾಹಸಪಟ್ಟು ಮೇಲಕ್ಕೆ ಎತ್ತಿದರು.

ಕಳೆದ ವಾರ ರಾಜಧಾನಿಯಲ್ಲಿ ಎರಡು ಹದ ಒಳ್ಳೇ ಮಳೆಯಾಗಿ ಹವಾ ತಕ್ಕಮಟ್ಟಿಗೆ ತಂಪಾಗಿದೆ. ಕೆಲವರಿಗೆ ವಾಂತಿಭೇದಿ ಕಾಣಿಸಿಕೊಂಡು ವಾಸಿಯಾಗುತ್ತಲೂ, ಕೆಲವರು ಕಾಲವಾಗುತ್ತಲೂ ಇದ್ದಾರೆ. ಇದು ಕಾಲರಾ ಉಪದ್ರವವಲ್ಲವೆಂದೂ, ಕುಡಿಯುವ ನೀರು ಕೆಟ್ಟಿಲ್ಲವೆಂದೂ ಹೆಲ್ತ್ ಆಫೀಸರವರು ಹೇಳುವರು.

ಪಿ. ಮಹಾಲಿಂಗಂ ಎಂಬ ಸುಮಾರು 12 ವಯಸ್ಸಿನ ಬಾಲಕನು ಕಳೆದ ಭಾನುವಾರ ಸಾಯಂಕಾಲ ರಾಜಧಾನಿಯ ಟೌನ್ ಹಾಲ್ ಮಂದಿರದಲ್ಲಿ ತಮಿಳು ಭಾಷೆಯಲ್ಲಿ ಹರಿಕಥೆಯನ್ನು ಮಾಡಿ ಸಭಿಕರನ್ನು ಸಂತೋಷಪಡಿಸಿದನು. ಮೈಸೂರು ಸಂಗೀತ ಸಮಾಜದವರು ಈ ಹುಡುಗನ ಸಾಮರ್ಥ್ಯವನ್ನು ಮೆಚ್ಚಿ ಆ ದಿನ ಸಭೆಯಲ್ಲಿ ಆತನಿಗೆ ಒಂದು ಬಂಗಾರದ ಮೆಡಲನ್ನು ಬಹುಮಾನ ಮಾಡಿದರು.

ಮೈಸೂರು ಭೂಗರ್ಭಶೋಧನೆ ಇಲಾಖೆಯ ಅಧಿಕಾರಿಯಾಗಿದ್ದ ಮಿ|| ಎಚ್ ಕೆ. ಸ್ಲೇಟರವರು ಕಳೆದ ಶನಿವಾರ ತೀರ್ಥಹಳ್ಳಿ ಪ್ರಾಂತ್ಯದಲ್ಲಿ ಸರ್ಕಾರಿ ಕೆಲಸದ ಮೇಲೆ ಹೋಗಿದ್ದಾಗ ಅವರನ್ನು ಒಂದು ನಾಗರಹಾವು ಕಡಿದು, ಕೂಡಲೇ ಚಿಕಿತ್ಸೆ ಮಾಡಿದರೂ ಪ್ರಯೋಜನವಾಗದೆ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶವವನ್ನು ಮರುದಿನ ಶಿವಮೊಗ್ಗೆಯಲ್ಲಿ ದಫನ್ ಮಾಡಿದರು. ಇವರ ಪತ್ನಿಯೂ ಇಬ್ಬರು ಮಕ್ಕಳೂ ಆಗ್ಗೆ ನಂದೀದುರ್ಗದಲ್ಲಿದ್ದರು.

ಶ್ರೀಮನ್ ಮಹಾರಾಜರವರು ಅರಮನೆ ಖಾಸಾ ತಬೇಲೆಯ ಸೂಪರಿಂಟೆಂಡೆಂಟರಾದ ಮ. ರಾಮರಾಯರಿಗೆ 100 ರೂಪಾಯಿ ಪೆನ್ಷನನ್ನೂ, 150 ರೂಪಾಯಿ ತಲಬಿನ ಮುಸಾಹೇಬ್‌ಗಿರಿಯನ್ನೂ ದಯಪಾಲಿಸುತ್ತಾರೆ. ಇವರು ನಿಸ್ಪೃಹರಾಗಿಯೂ, ಕಟ್ಟುನಿಟ್ಟಾಗಿಯೂ ಶ್ರದ್ಧೆಯಿಂದಲೂ ಕಾರ್ಯಗಳನ್ನು ಮಾಡುತ್ತಾ ಬಂದದ್ದರಿಂದ ಖಾಸಾ ತಬೇಲೆಯು ಬಹು ಉತ್ಕೃಷ್ಟವಾದ ಸ್ಥಿತಿಗೆ ಬಂದು, ವೈಸ್‌ರಾಯರುಗಳೇ ಮೊದಲಾದ ಮಹನೀಯರಿಂದ ಒಳ್ಳೆಯ ಹೆಸರನ್ನು ಸಂಪಾದಿಸಿಕೊಂಡಿರುತ್ತದೆ. ಮ. ರಾಮರಾಯರು ಈಗ ಲಭ್ಯವಾದ ವಿಶ್ರಾಂತಿಯನ್ನು ದೀರ್ಘಕಾಲ ಸುಖದಿಂದ ಅನುಭವಿಸುತ್ತಾ ಬರಲೆಂದು ಹಾರೈಸುತ್ತೇವೆ.

ಚನ್ನರಾಯಪಟ್ಟಣದ ತಾಲ್ಲೂಕು ಕೊತ್ತನಘಟ್ಟದ ಮ|| ಲಕ್ಕಶೆಟ್ಟಿ ಗೌಡರು ಆ ಗ್ರಾಮದಲ್ಲಿ ಒಂದು ದೇವಸ್ಥಾನವನ್ನೂ ಒಂದು ಧರ್ಮಸತ್ರವನ್ನೂ ಕಟ್ಟಿ ಅವುಗಳಿಗೆ 30 ಮುಕ್ಕ ಬಾಗಾಯಿತು ಜಮೀನುಗಳನ್ನು ಬಿಟ್ಟುಕೊಟ್ಟದ್ದಲ್ಲದೆ ಗವರ್ನ್‌ಮೆಂಟಿನವರ ವಶಕ್ಕೆ 1,600 ರೂಪಾಯಿ ಬಂದು ಕೊಟ್ಟಿರುವರು. ಆ ಸತ್ರದಲ್ಲಿ ದಿನಾ ಹತ್ತು ಮಂದಿ ಆಗಂತುಕರಿಗೆ ಭೋಜನ ಮಾಡಿಸುತ್ತಾರಂ. ಗವರ್ನ್‌ಮೆಂಟಿನವರು ಆ ದ್ರವ್ಯವನ್ನು ಅಂಗೀಕರಿಸಿ ಅದಕ್ಕೆ ಶೇಕಡಾ 4 ರೂಪಾಯಿನಂತೆ ಬಡ್ಡಿಯನ್ನು ಆರು ತಿಂಗಳಿಗೊಂದಾವರ್ತಿ ಪಾವತಿ ಮಾಡುವದಾಗಿ ಹುಕುಂ ಕೊಟ್ಟಿದ್ದಾರೆ. ಸದ್ಯಕ್ಕೆ ಮ|| ಲಕ್ಕಶೆಟ್ಟಿ ಗೌಡರೇ ಅವುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವರು.

ಮೈಸೂರು ಗೆಜೆಟ್ ಸಂಗ್ರಹ

ಮುಂದೆ ಹೇಳುವ ಸ್ಥಳಗಳಲ್ಲಿ ಪ್ಲೇಗ್ ಕಾಯಿಲೆ ಉಂಟೆಂದು ತಿಳಿಯತಕ್ಕದ್ದು —ಹುಂಕೆರೆ ತಾ|| ಚಿಟ್ಟನಾವರಕೆರೆ, ಚಿಕ್ಕಮಗಳೂರು ತಾ|| ಭಕ್ತರಹಳ್ಳಿ, ಮುಳ್ಳಯ್ಯನ ಪುರ, ರಾಮನಹಳ್ಳಿ, ಗಡಗದು, ಇಂದ್ರವರ, ಉಂತಾಡಿಹಳ್ಳಿ, ಚನ್ನರಾಯಪಟ್ಟಣ ತಾ|| ಛತ್ರರವಳ್ಳಿ.

ಚಳ್ಳಕೆರೆ ಸಬ್ ಡಿವಿಜನ್ ಆಫೀಸರ್ ಮಿ|| ಎಂ ಎಸ್ ರಾಮಚಂದ್ರ ರಾಯರಿಗೂ, ದಾವಣಗೆರೆ ಸಬ್ ಡಿವಿಜನ್ ಆಫೀಸರ್ ಮಿ|| ಆರ್ ನಾರಾಯಣರಾಯರಿಗೂ ಸಾಕ್ಷಿಗಳ ಕೈಫಿಯತ್ತನ್ನು ಸ್ವಹಸ್ತ ಇಂಗ್ಲಿಷಿನಲ್ಲಿ ಬರೆದುಕೊಳ್ಳುವ ಅಧಿಕಾರವನ್ನು ವಹಿಸಿದೆ.

ರೆವಿನ್ಯೂ ಕಮಿಷನರ್ ಮಿ|| ಕೆ ಎಸ್ ದೊರೆಸಾಮಿ ಅಯ್ಯರವರಿಗೆ ಕೊಟ್ಟಿರುವ ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಒಂದು ತಿಂಗಳು ಹದಿನಾರು ದಿನ ಜಾಸ್ತಿಮಾಡಿದೆ. ಮಿ|| ಆನಂದರಾವ್ ಸೀನಿಯರವರು ಆಫೀಸ್ ಚಾರ್ಜಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ಚಿತ್ರದುರ್ಗದ ಫಾರೆಸ್ಟ್ ಅ|| ಕನ್ಸರ್ವೇಟರ್ ಮಿ|| ಎಂ ನಾಚಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಖಜಾನೆ ಅ|| ಕಮಿಷನರವರು ಫಾರೆಸ್ಟ್ ಆಫೀಸಿನ ಚಾರ್ಜಿ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು.

ಮಧ್ಗಿರಿ ಸಬ್ ಡಿವಿಜನ್ ಆಫೀಸರ್ ಮಿ|| ಎ ಕೃಷ್ಣಸಾಮಿ ಅಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಗುಬ್ಬಿ ಸಬ್ ಡಿವಿಜನ್ ಆಫೀಸರವರು ಮಧ್ಗಿರಿ ಸಬ್ ಡಿವಿಜನ್ ಆಫೀಸ್ ಛಾರ್ಜನ್ನೂ ವಹಿಸಿರತಕ್ಕದ್ದು.

ಹಾಸನದ ಎಕ್ಸೈಸ್ ಆಫೀಸರ್ ಮಿ|| ಮಹಮದ್ ಜಹಿರುದ್ದೀನ್ ಮಕ್ಕಾಯಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಖಜಾನೆ ಅ|| ಕಮಿಷನರ್ ಮಿ|| ಎಂ. ಶ್ರೀನಿವಾಸಮೂರ್ತಿಯವರು ಎಕ್ಸೈಸ್ ಆಫೀಸ್ ಛಾರ್ಜನ್ನೂ ವಹಿಸಿರತಕ್ಕದ್ದು.

ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟ್ ಮಿ|| ಪಿ ಪಳ್ಳಿಯವರಿಗೆ ಹದಿನೈದು ದಿನಗಳ ಸಂಬಳವಿಲ್ಲದ ರಜಾ ಕೊಟ್ಟಿದೆ. ಮಿ|| ಡಿ ಶ್ರೀನಿವಾಸಯ್ಯಂಗಾರ್ರು ಜೈಲ್ ಛಾರ್ಜನ್ನೂ, ಮಿ|| ಎಫ್ ನೊರೋನ್ಹಾರವರು ಆಸ್ಪತ್ರೆಯ ಛಾರ್ಜನ್ನೂ ವಹಿಸಿರತಕ್ಕದ್ದು.

ಅ|| ಸರ್ಜನ್ ಮಿ|| ಎಸ್ ಕೆ ಹನುಮಂತರಾಯರಿಗೆ ಏಪ್ರಿಲ್ ತಾ 8 ರಿಂದ ಒಂದು ತಿಂಗಳ ಸಂಬಳವಿಲ್ಲದ ರಜಾ ಕೊಟ್ಟಿದೆ.

ವಿಕ್ಟೋರಿಯಾ ಆಸ್ಪತ್ರೆಯ ಮಿ|| ಸಿ ಎ ನಂಜಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಡಾ|| ಎಚ್ ಬಿ ಮೈಲ್ವಗಾನಂರವರು ಆಸ್ಪತ್ರೆಯ ಛಾರ್ಜನ್ನು ವಹಿಸಿರತಕ್ಕದ್ದು.

ಅ|| ಸರ್ಜನ್ ಮಿ|| ಸಿ ರಾಜಗೋಪಾಲಮೊದಲಿಯಾರ್ರವರಿಗೆ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮಿ|| ಎನ್ ಎನ್ ನಂಜುಂಡಯ್ಯನವರು ದಾವಣಗೆರೆ ಆಸ್ಪತ್ರೆಯ ಛಾರ್ಜನ್ನು ವಹಿಸಿರತಕ್ಕದ್ದು.

ಶಿರಸ್ತೆದಾರ್ ಮಿ|| ಸಿ ಎಸ್ ತಾತಯ್ಯಂಗಾರ್ರು ಟಿ ನರಸೀಪುರದ ತಾಲ್ಲೂಕ್ ಛಾರ್ಜಿನಲ್ಲಿರುವಾಗ್ಗೆ ಅವರಿಗೆ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಟ್ಟಿದೆ.

ಮಿ|| ಎಂ ಅಬ್ದುಲ್ ಹಕ್‌ಯವರನ್ನು ಕೋಲಾರದ ತಾಲ್ಲೂಕ್ ಅಮಲ್ದಾರ್ ಮತ್ತು 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ.

ಅ|| ಕಮಿಷನರುಗಳ ದರ್ಜೆಯಲ್ಲಿ ಮಿ|| ಎ ಕೃಷ್ಣಸ್ವಾಮಯ್ಯಂಗಾರ್ರನ್ನು 5 ರಿಂದ 4 ನೇ ಕ್ಲಾಸಿಗೂ, ಅರಮನೆ ಕಂಟ್ರೋಲರ್ ಮಿ|| ಬಿ ರಾಮಕೃಷ್ಣರಾಯರನ್ನೂ, ಅ|| ಸೆಕ್ರಟರಿ ಮಿ|| ಎಂ ಎನ್ ಕೃಷ್ಣರಾಯರನ್ನೂ 3 ರಿಂದ 1 ನೇ ಕ್ಲಾಸಿಗೂ, ಮಿ|| ಎಂ ಲಕ್ಷ್ಮಣಶಾಸ್ತ್ರಿಯವರನ್ನು 3 ರಿಂದ 1 ನೇ ಕ್ಲಾಸಿಗೂ ಬಡ್ತಿಮಾಡಿದೆ.

ಮಿ|| ಎನ್ ಲಕ್ಷ್ಮೀನರಸಿಂಹಯ್ಯನವರನ್ನು ಹಂಗಾಮಿಯಾಗಿ ಒಂದು ವರುಷ 3 ನೇ ಕ್ಲಾಸ್ ಸಬ್ ಅ|| ಇಂಜನಿಯರಾಗಿ ನೇಮಿಸಿಕೊಂಡು, ನೀರಿನ ಇಲಾಖೆಗೆ ವರ್ಗಮಾಡಿದೆ.

ಅ|| ಇಂಜನಿಯರ್ ಮಿ|| ಎಂ ಎ ಆನಂದಾಳ್ವಾರ್‌ಯವರನ್ನು ಕಾವೇರಿ ತಲಾಪ್ ಡಿವಿಜನ್‌ನಿಂದ ದಕ್ಷಿಣ ಸರ್ಕಲಿಗೆ ವರ್ಗಮಾಡಿದೆ.

ರೈಲ್ವೆ ಚೀಫ್ ಇಂಜನಿಯರ್ ಮಿ|| ಇ ಎ ಎಸ್ ಬೆಲ್‌ಯವರಿಗೆ ಮೂರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮಿ|| ಡಿ ಜಿ ದಾಣೆಯವರು ರೈಲ್ವೆ ಆಫೀಸ್ ಛಾರ್ಜನ್ನೂ ವಹಿಸಿರತಕ್ಕದ್ದು.

ಗೌರಿಬಿದನೂರು ತಾಲ್ಲೂಕ್ ಅಮಲ್ದಾರ್ ಮಿ|| ವಿ ಗೋಪಾಲರಾಯರಿಗೆ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೆದಾರ್ ಮಿ|| ಕೆ ಶ್ರೀನಿವಾಸಮೂರ್ತಿಯವರು ತಾಲ್ಲೂಕ್ ಛಾರ್ಜಿನಲ್ಲಿರತಕ್ಕದ್ದು.

ಅರಕಲಗೂಡು ತಾಲ್ಲೂಕ್ ಅಮಲ್ದಾರ್ ಮಿ|| ಜಿ ಎಸ್ ರಾಮಸ್ವಾಮಯ್ಯಂಗಾರ್ರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೆದಾರ್ ಮಿ|| ಎನ್ ಚೌಡಯ್ಯನವರು ತಾಲ್ಲೂಕ್ ಛಾರ್ಜಿನಲ್ಲಿರತಕ್ಕದ್ದು.

ಬೌರಿಂಗ್‌ಪೇಟೆ ತಾಲ್ಲೂಕು ಅಮಲ್ದಾರ್ ಮಿ|| ಎಫ್ ಎಸ್ ರಾಘವಾಚಾರ್ರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹತ್ತು ದಿನ ಜಾಸ್ತಿಮಾಡಿದೆ.

ಅ|| ಸರ್ಜನ್ ಮಿ|| ಎಫ್ ಫರ್ನಾಂಡಿಸ್‌ಯವರಿಗೆ ಕೊಟ್ಟಿರುವ ಎರಡೂವರೆ ತಿಂಗಳ ಪ್ರಿವಿಲೇಜ್ ರಜವನ್ನು ಇನ್ನೂ ಏಳು ದಿನ ಜಾಸ್ತಿಮಾಡಿದೆ. ಅ|| ಸರ್ಜನ್ ಮಿ|| ಎನ್ ಎಸ್ ನಂಜುಂಡಯ್ಯನವರು ಸಕಲೇಶಪುರದ ಆಸ್ಪತ್ರೆಯ ಛಾರ್ಜಿನಲ್ಲಿರತಕ್ಕದ್ದು.

ಶಿರಸ್ತೆದಾರ್ ಮಿ|| ಟಿ ನರಸಿಂಗರಾಯರು ಚಗಲೂರು ತಾಲ್ಲೂಕಿನ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ಕಡೂರು ಡಿಸ್ಟ್ರಿಕ್ಟ್ ಶಿರಸ್ತೆದಾರ್ ಮಿ|| ಬಿ ಮಲ್ಲಿಕಾರ್ಜುನಯ್ಯನವರನ್ನು ಮೂಡಿಗೆರೆ ತಾಲ್ಲೂಕು ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ.

ಮಾಲೂರು ಸಬ್ ಡಿವಿಜನ್ ಅ|| ಕಮಿಷನರ್ ಮಿ|| ಜಿ ಸಿ ಕೃಷ್ಣಶಾಸ್ತ್ರಿಯವರಿಗೆ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನೂ, ಗುಬ್ಬಿ ತಾಲ್ಲೂಕು ಅಮಲ್ದಾರ್ ಮಿ|| ಟಿ ಸ್ವಾಮಿನಾಥಶಾಸ್ತ್ರಿಯವರಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವನ್ನೂ ಕೊಟ್ಟಿದೆ.

ತಾಲ್ಲೂಕು ವರ್ತಮಾನ

ದಾವಣಗೆರೆ —ಇಲ್ಲಿ ಬಿಸಿಲಿನ ತಾಪವು ಪ್ರತಿ ವರ್ಷದಲ್ಲಿರುವದಕ್ಕಿಂತ ಹೆಚ್ಚಾಗಿದೆ. ಧಾರಣೆವಾಸಿಗಳು ರೂಪಾಯಿಗೆ 5 6 ಸೇರು ಅಕ್ಕಿ, 12-13 ಸೇರು ಜೋಳ ಮಾರುವುದರಿಂದ ಬಡವರಿಗೂ ಅಲ್ಪ ಸಂಬಳದ ನೌಕರರಿಗೂ ಜೀವನಕ್ಕೆ ತುಂಬಾ ಕಷ್ಟವಾಗಿದೆ —ತಾ 1 ನೇ ಗುರುವಾರ ಹಗಲು 11 ಗಂಟೆ ಸಮಯದಲ್ಲಿ ಮ|| ಕೋಗುಂಡಿ ನಂಜುಂಡಯ್ಯನವರ ಮಗ ಸುಮಾರು 12-13 ವರ್ಷ ವಯಸ್ಸಿನ ಗುರುನಂಜಯ್ಯನೆಂಬ ಹುಡುಗನನ್ನು ಇದೇ ಗ್ರಾಮದ ಅರಳೆ ಮೊಹದೀನ್ ಪಿಂಜಾರನ ಮಗ ಸುಮಾರು 15 ವರ್ಷ ವಯಸ್ಸಿನ ...ಸಾಬಿ ಎಂಬುವನು ಆಟಕ್ಕೆಂದು ಊರಿಗೆ ಅರ್ಧ ಮೈಲು ದೂರದಲ್ಲಿರುವ ತೆಕ್ಕಿನ ತೋಪಿನೊಳಗೆ ಕರೆದುಕೊಂಡು ಹೋಗಿ ನೆಲದ ಮೇಲೆ ಕುಳಿತುಕೊಂಡು ಸ್ವಲ್ಪ ಹೊತ್ತಿನ ಮೇಲೆ ... ಮರಳು ಎಂದು ಸನಿ ಗುರುನಂಜಯ್ಯನನ್ನು ಕೆಳಕ್ಕೆ ತಳ್ಳಲು ಅವನು ಬಿದ್ದ ಕೂಡಲೆ ಒದೆದು ಕಾಲಿನ ಮೂಳೆಗಳೆಲ್ಲಾ ಮುರಿದು ಪ್ರಜ್ಞೆ ತಪ್ಪಲು ತುರುಕ ಹುಡುಗನು ಕೆಳಕ್ಕೆ ಇಳಿದು ಬಲಗೈಯಲ್ಲಿ ಇದ್ದ 12 ರೂಪಾಯಿ ತೂಕದ ಬಂಗಾರದ ಬಿಡೆಯನ್ನು ತೆಗೆದುಕೊಳ್ಳುವದಕ್ಕೋಸ್ಕರ ಹಸ್ತವನ್ನು ಕತ್ತರಿಸಿ ಬಿಡೆಯ್ಯು ತೆಗೆದುಕೊಂಡು ಪರಾರಿಯಾದನು. ಈ ಸಂಗತಿಯು ಪೊಲೀಸಿನವರಿಗೆ ತಿಳಿಯಲು ತಕ್ಷಣವೇ ಇಲ್ಲಿಯ ಇನ್ಸ್‌ಪೆಕ್ಟರಾದ ಮ|| ನಾಗೇಶರಾಯರು ಬಹಳ ಚಟುವಟಿಕೆಯಿಂದ ಅಪರಾಧಿಯನ್ನು ಮಾಲು ಸಹಿತ 2 ಗಂಟೆ ಒಳಗಾಗಿ ಹಿಡಿದು ದಸ್ತಗಿರಿ ಮಾಡಿರುತ್ತಾರೆ. ಸದರಿ ಗುರುನಂಜಯ್ಯನು ಡಾಕ್ಟರವರು ಶ್ರಮಪಟ್ಟು ಮಾಡಿರುವ ಇಲಾಜಿನಿಂದ ಆರೋಗ್ಯವಾಗಿರುತ್ತಾನೆ. ಈ ಕೇಸು ರೈಲ್ವೆ ಸರಹದ್ದಿನಲ್ಲಿ ನಡೆದು ಇಲ್ಲಿಯ ಪೊಲೀಸಿನವರಿಗೆ ಸಂಬಂಧವಿಲ್ಲದಿದ್ದರೂ ಇನ್ಸ್‌ಪೆಕ್ಟರು ತುಂಬಾ ಶ್ರದ್ಧೆಯನ್ನು ವಹಿಸಿ ಕೇಸು ರುಜುವಾತು ಮಾಡಿರುತ್ತಾರೆ. ಇವರ ಹಾಗೆ ಮುತುವರ್ಜಿ ವಹಿಸಿ ಕೆಲಸ ಮಾಡತಕ್ಕ ಇನ್ಸ್‌ಪೆಕ್ಟರುಗಳು ಈ ತಾಲ್ಲೂಕಿಗೆ ಇದುವರೆಗೆ ಯಾರು ಬಂದಿರಲಿಲ್ಲ.

ಸಿಗರೇಟು ಸೇದುವುದರಿಂದ ಹುಡುಗರಲ್ಲಿ ಹುಟ್ಟುವ ಫಲಗಳು.

ಮೊದಲನೇದಾಗಿ ಸಿಗರೇಟು ಬಾಯಿಯು, ಗಂಟಲಿನ, ಶ್ವಾಸಕೋಶದ ಅತಿ ಸೂಕ್ಷ್ಮವಾದ ನರಗಳನ್ನು ಕೆಡಿಸಿ, ಅವು ಸರಿಯಾದ ಕೆಲಸವನ್ನು ಮಾಡದ ಹಾಗೆ ಮಾಡುತ್ತದೆ. ಇದರಿಂದ ಸಿಗರೇಟು ಸೇದುವ ಹುಡುಗರ ನರಗಳಿಗೆ ಪಕ್ಷವಾತ ಹಿಡಿದಂತಾಗಿ ಶ್ವಾಸಕೋಶದೊಳಗೆ ವಾಯುವು ಹೋಗದೆ ಅದು ಬದಲಾಗುವುದು. ಎರಡನೇದಾಗಿ ಸಿಗರೇಟು ಗುಂಡಿಗೆಯ ನರಗಳ ಬಲಗುಂದಿಸಿ ಅದು ಬೇಗನೇ ಯಾ ಮೆಲ್ಲನೇ ಬಡಿಯುವ ಹಾಗೆ ಮಾಡುವುದು. ಹೀಗೆ ಗುಂಡಿಗೆಯು ಕ್ರಮತಪ್ಪಿ ಕೆಲಸಮಾಡುವುದರಿಂದ ಹುಡುಗರ ಕೆಂಪು ರಕ್ತವು ಕರ್ಗೆಂಪಾಗಿ ಮಾರ್ಪಡುವುದು. ರಕ್ತವು ಕರ್ಗೆಂಪಾಗಲು ದೇಹದೊಳಗೆ ಪ್ರಾಣವಾಯುವು ಸರಿಯಾಗಿ ಹೋಗದಿರುವುದೇ ಕಾರಣ. ಮೂರನೇದಾಗಿ ಸಿಗರೇಟು ಹೊಟ್ಟೆಯೊಳಗೆ ಆಹಾರವು ಜೀರ್ಣವಾಗತಕ್ಕ ರಸವನ್ನು ಬಹಳವಾಗಿ ಹೆಚ್ಚಿಸುತ್ತದೆ. ಇದರಿಂದ ಅನ್ನಕೋಶವು ಕ್ರಮತಪ್ಪಿ ಕೆಲಸಮಾಡುತ್ತದೆ. ಈ ಸೇವನೆಯಿಂದ ಅನ್ನಕೋಶಕ್ಕೆ ಜೀರ್ಣರಸವು ಅವಶ್ಯವಿಲ್ಲದ ಕಾಲದಲ್ಲಿಯೂ ಅದು ಒಳಗೆ ತುಂಬಿಕೊಳ್ಳುವುದರಿಂದ ಅನ್ನಕೋಶದ ಬಲವು ಕುಂದಿ ಜೀರ್ಣಶಕ್ತಿಯು ಕೆಟ್ಟುಹೋಗುವುದು. ನಾಲ್ಕನೇದಾಗಿ ಸಿಗರೇಟ್ ಸೇದುವ ಹುಡುಗರಿಗೆ ಸರಿಯಾದ ನಿದ್ದೆಯು ಬಾರದು. ಐದನೇದಾಗಿ ಅಂತಹ ಹುಡುಗರು ಚಟುವಟಿಕೆಯನ್ನು ಕಳೆಕೊಂಡು ಸರಿಯಾದ ವ್ಯಾಯಾಮವನ್ನು ಮಾಡರು. ಈ ಅಂತಸ್ಥಿನಲ್ಲಿ ಹೊಗೆ ಸೊಪ್ಪು ಸೇದುವವರು ಸ್ವಲ್ಪ ವಾಯುವನ್ನೇ ಶ್ವಾಸಿಸಲು ಮಾತ್ರ ಶಕ್ತರಾಗಿರುವುದರಿಂದ ಅಂಥವರಿಗೆ ದುರ್ಬಲವಾದ ಗುಂಡಿಗೆಯು ಇರುವುದು. ಸರಿಯಾದ ನಿದ್ದೆ ಹತ್ತದು. ದೇಹವು ಬೆಳೆಯದು.

ಆರೋಗ್ಯವು ಕೆಟ್ಟು ಹೋಗಿ ಜೀವನದ ಮೇಲೆ ಅಸಂತೃಪ್ತಿಯು ಹುಟ್ಟಲಿಕ್ಕೆ ಇಷ್ಟೇ ಸಾಕು. ಆದರೆ ಈ ಸೇವನೆಯು ಹುಡುಗರಲ್ಲಿ ಇವಕ್ಕಿಂತಲೂ ಮಹಾ ಕೇಡನ್ನುಂಟುಮಾಡುತ್ತವೆ. ಅಂದರೆ ಅವರ ಮಾನಸಿಕಶಕ್ತಿಯೂ ಕುಂದಲು ಪ್ರಾರಂಭವಾಗುತ್ತವೆ. ಅಜಾಗ್ರತೆ, ಮೈಗಳ್ಳತನ, ನಿರುತ್ತರವಾದಿತ್ವಗಳು ಅಂಕುರಿಸಿ ಆಟಪಾಟಗಳ ಕಡೆಗೆ ಇರುವ ಆಸಕ್ತಿಯು ಕುಂದಿ ದಿನೇ ದಿನೇ ಸಿಗರೇಟಿನ ಮೇಲಿನ ಆಸಕ್ತಿಯೇ ಹೆಚ್ಚುತ್ತಾ ಬರುವುದು. ಕ್ಲಾಸಿನಲ್ಲಿ ಉಪಾಧ್ಯಾಯರು ಪಾಠಮಾಡುತ್ತಿರುವಾಗಲೂ ಸಿಗರೇಟಿನ ಚಿಂತೆ, ಓದುವಾಗಲೂ ಸಿಗರೇಟಿನ ಚಿಂತೆ. ಯಾವಾಗ ಗಂಟೆಯಾದೀತು? ಯಾವಾಗ ಸಿಗರೇಟ್ ಎಳೆಯಲು ಸಮಯ ಬಂದೀತು? ಎಂಬುವುದೇ ವ್ಯಸನ. ಕಡೆಗೆ ಸಿಗರೇಟನ್ನು ಕೊಂಡುಕೊಳ್ಳಲು ದುಡ್ಡು ಸಿಕ್ಕದಿದ್ದರೆ ಹುಡುಗರು ಕದಿಯಲು ಪ್ರಾರಂಭಿಸುವರು. ಇದೇ ಸಿಗರೇಟ್ ಸೇದುವುದರಿಂದ ಹುಡುಗರಲ್ಲಿ ಹುಟ್ಟುವ ಫಲಗಳು. ಶಿಕ್ಷಿಸಲ್ಪಡುವ ಹುಡುಗರ ಸಂಖ್ಯೆಯಲ್ಲಿ 15 ರಲ್ಲಿ 10 ಮಂದಿ ಸಿಗರೇಟ್ ಸೇದಲು ದುಡ್ಡು ಕಳವುಮಾಡುವರೆಂದು ಸರಕಾರಿ ವಾರ್ಷಿಕಗಳಿಂದ ತಿಳಿದುಬರುತ್ತದೆ.—ಸ

ರಾಜಧಾನಿಯ ಟ್ರಸ್ಟ್ ಬೋರ್ಡ್ ಮೀಟಿಂಗು

ಕಳೆದ ಬುಧವಾರ ದಿವಸ ಮೈಸೂರು ನಗರಾಭಿವೃದ್ಧಿಯ ಬೋರ್ಡ್ ಮೆಂಬರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳುಕಟ್ಟಲೆಯ ಮೀಟಿಂಗನ್ನು ನಡಿಸಿ, ಇತ್ಯರ್ಥಮಾಡಿದ ಮುಖ್ಯ ವಿಚಾರಗಳೇನೆಂದರೆ—

ಪಟ್ಟಣದ ಬೇರೆ ಬೇರೆ ಮೊಹಲ್ಲಗಳಲ್ಲಿ ಒಡೆದುಹಾಕಬೇಕೆಂದು ಮೊದಲೇ ಗುರುತು ಮಾಡಲ್ಪಟ್ಟಿರುವ ಮನೆಗಳನ್ನೆಲ್ಲಾ ಸಂಪೂರ್ಣವಾಗಿ ಒಡೆಯಬೇಕಾದದ್ದಿಲ್ಲವೆಂದೂ, ಅತ್ಯಂತ ಕೊಳಕಾಗಿಯೂ, ರೋಗಜನ್ಯವಾಗಿಯೂ, ಸರಿಪಡಿಸಲು ಸಾಧ್ಯವಿಲ್ಲದಾಗಿಯೂ, ಸಲ್ಲಿ ಬೀದಿಗಳ ಕಾಮಗಾರಿಗೆ ಅವಶ್ಯವಾಗಿಯೂ ಇರುವಂಥಾ ಮನೆಗಳನ್ನು ಮಾತ್ರ ಟ್ರಸ್ಟ್ ಬೋರ್ಡಿನವರು ಕೊಂಡು ಒಡದುಹಾಕಬೇಕೆಂದೂ, ಗವರ್ನಮೆಂಟಿನವರು ಸೂಚಿಸಿದ್ದನ್ನು ಮೆಂಬರುಗಳು ಒಡಿಸಿ ತೀರ್ಮಾನ ಮಾಡಿಕೊಂಡರು.—ಮನೆಗಳ ನೀರೆಲ್ಲಾ ಸಲ್ಲಿಗಳ ಮೂಲಕ ಊರಹೊರಗೆ ಸಾಗಿಸುವ ಕಾಮಗಾರಿಗೆ ಪ್ರತಿ ಮನೆಯವರೂ ಒಂದು ಮುಚ್ಚಳ ಹಾಕಬೇಕಾಗಿದೆ ಎಂದು ಟ್ರಸ್ಟ್ ಬೋರ್ಡಿನಿಂದ ನೋಟೀಸುಗಳು ಕೊಡಲ್ಪಟ್ಟವಕ್ಕೆ 11 ಜನಗಳ ವಿನಹ ಯಾರೂ ಜವಾಬು ಕೊಡಲಿಲ್ಲವೆಂದು ತಿಳಿಯಿತು. ಪ್ರತಿ ಮನೆಯವರಲ್ಲಿ ಕಾಮಗಾರಿಯನ್ನೂ ಟ್ರಸ್ಟ್ ಬೋರ್ಡಿನಿಂದ ಮಾಡಿ, ಆ ಹಣವನ್ನು ಮನೆಯ ಯಜಮಾನರಿಂದ ಆರು ತಿಂಗಳಿಗೊಂದರಂತೆ ಇಪ್ಪತ್ತು ಕಿಸ್ತುಗಳಲ್ಲಿ ಮನೆತೆರಿಗೆಯ ಸಂಗಡ ಸ್ವಲ್ಪ ಸ್ವಲ್ಪವಾಗಿ ವಸೂಲ್ಮಾಡಿಕೊಳ್ಳಬೇಕೆಂದು ಮೆಂಬರುಗಳು ಒಪ್ಪಿಕೊಂಡರು.—ಮಿ ಎಚ್ ಎಫ್ ಮಾರ್ಕರನವರು ಮೂರು ವರುಷದಿಂದ ಬಹಳ ಶ್ಲಾಘ್ಯ ಕೆಲಸ ಮಾಡುತ್ತಿದ್ದರೆಂದು ತಿಳಿಸಿದರು. ಅವರಿಗೆ 50 ರೂಪಾಯಿ ಇನಾಮು ಮಾಡಿ ಅವರಿಗೆ ಟ್ರಸ್ಟ್ ಬೋರ್ಡ್ ಸರ್ಟಿಫಿಕೆಟನ್ನು ಸಹ ಕೊಡಬೇಕೆಂದು ಮೆಂಬರುಗಳು ತೀರ್ಮಾನ ಮಾಡಿದರು. ಮಿ ಪಿ ರಾಘವೇಂದ್ರರಾಯರ ಮನೆಗೆ ಪೂರ್ವಕ್ಕೆ ಚಾಮೂಡಲ್ಲಿರುವ ಖಾಲಿ ಸ್ಥಳವನ್ನು ಅವರಿಗೆ ಬಳಕೆ ಮಾಡುವ ವಿಷಯದಲ್ಲಿ ಹೊಟ್ಟೆ ರಂಗಯ್ಯನವರು ಬರೆದಿದ್ದ ಅರ್ಜಿಯನ್ನು ಓದಿ, ಅದನ್ನು ಮುಂದೆ ವಿಚಾರಮಾಡಿ ಇತ್ಯರ್ಥ ಮಾಡತಕ್ಕದೆಂದು ನಿಗದಿಪಟ್ಟಿರು.—ಬಸ್ತಿ ಗುಡಿಯ ಬಳಿ ಇ ಭಾಗದಲ್ಲಿರುವ ಎರಡು ಮನೆಗಳನ್ನು ಕೆಡವಿ ಗುಡಿಗೆ ಕೊಡುವುದಕ್ಕೆ ಗುಡಿಯವರು ಅದರ ಕ್ರಯವನ್ನು ಪಾವತಿ ಮಾಡಲು ಒಪ್ಪಿಕೊಳ್ಳುತ್ತಾರೆಯೇ ಎಂದು ವಿಚಾರಿಸಬೇಕೆಂದು ತೀರ್ಮಾನಿಸಿದರು.—ಕೆಸರೆ ನಾಕೆರೆಯ ಪೂರ್ವದಿಕ್ಕಿನಲ್ಲಿ ದೊಡ್ಡ ಕೆರೆ ನಾಲೆಯನ್ನು ತಿರುಗಿಸಿ ಸೇತುವೆಗಳನ್ನು ಕಟ್ಟಿ ಅವಶ್ಯವಾದ ಕಾಮಗಾರಿಗಳನ್ನು ಮಾಡಲು ತಯಾರಾಗಿದ್ದ 21,108 ರೂಪಾಯಿನ ಅಂದಾಜು ಪಟ್ಟಿಯನ್ನು ಮೆಂಬರುಗಳು ಒಪ್ಪಿಕೊಂಡರು.—ದೊಡ್ಡಕೆರೆ ಏರಿಯ ಹಿಂದೆ ಪೋಲೀಸ್ ಸ್ಟೇಷನ್ ಪಕ್ಕದಲ್ಲಿ ಸಿಮೆಂಟಿನಲ್ಲೇ ಕಟ್ಟಿದ್ದು ಈಚೆಗೆ ಕುಸಿದು ಬಿದ್ದುಹೋಗಿರುವ ಚರಂಡಿ ಕಟ್ಟಡವನ್ನು ಮತ್ತೆ ಕಟ್ಟುವುದಕ್ಕೆ ತಯಾರಾಗಿದ್ದ 13,781 ರೂಪಾಯಿನ ಅಂದಾಜು ಪಟ್ಟಿಯನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿರುತ್ತಾರೆ.—ಚಾಮರಾಜಮೊಹಲ್ಲಾ ಅಂಗಡಿಬೀದಿಯಲ್ಲಿ ಸಲ್ಲಿಗಳನ್ನು ಹಾಕಿ ಬಚ್ಚಲ ನೀರನ್ನು ಸಾಗಿಸುವುದಕ್ಕೆ 1,806 ರೂಪಾಯಿನ ಖರ್ಚಿನ ಪಟ್ಟಿಯನ್ನು ಮೆಂಬರುಗಳು ಒಪ್ಪಿಕೊಂಡು, ಈ ಕಾಮಗಾರಿಯನ್ನು ಬೇಗನೆ ಮಾಡಿಸಬೇಕೆಂದು ತಿಳಿಸಿದರು.

ಬಿಸುಗಾಳಿಯ ಹಾವಳಿಯು

ಚಿತ್ರದುರ್ಗದ ಡಿ ಹೊಸದುರ್ಗದ ತಾ ಬೆಲಗೂರು ಗ್ರಾಮದಲ್ಲಿ ಕಳೆದ ತಾ 2ನೇ ಶುಕ್ರವಾರ ಮಧ್ಯಾಹ್ನ 4 ಘಂಟೆಯಲ್ಲಿ ಗುಡುಗು, ಮಿಂಚು, ಸಿಡಿಲು ಪ್ರಾರಂಭವಾಗಿ ಸೋನೆ ಮಳೆಯು ಬರಲಾರಂಭಿಸಿದ ಒಡನೆಯೇ ಒಂದು ದೊಡ್ಡ ಗಾಳಿಯು ಮೂಡಲು ದಿಕ್ಕಿನಿಂದ ಬೀಸಲಾರಂಭಿಸಿತು. ಗಾಳಿಯು ಒಂದು ಮೈಲಿ ದೂರದಲ್ಲಿದ್ದಾಗಲೇ ಹಸಿರು ಆಕಾಶದಿಂದ ನೋಡುತ್ತಿದ್ದರು. ಹತ್ತಿರಕ್ಕೆ ಬರುವಷ್ಟರಲ್ಲಿ ಧೂಳು ಕಸ ಕಡ್ಡಿ ತುಂಬಿಕೊಂಡು ಊರೆಲ್ಲಾ ಮನೆಗಳು ಕಾಣದ ರೀತಿ ಮುಚ್ಚಿಕೊಂಡು ಕಾಲುಘಂಟೆಯ ವರೆಗೂ ಭಯಂಕರ ಶಬ್ದದೊಡನೆ ಭಯಂಕರವಾಗಿ ಬೀಸಿತು. ಜನರೆಲ್ಲಾ ತಮ್ಮ ಮನೆಗಳಿಗೆ ಆತುರದಿಂದ ಹೋಗಿ ಸೇರಿಕೊಂಡು ಬಾಗಿಲು ಕಿಟಕಿಗಳನ್ನು ಮುಚ್ಚಿಕೊಂಡು ಬಹಳ ಭಯದಿಂದ ಇದ್ದರು. ಮೊದಲು ಒಂದು ನಿಮಿಷದಲ್ಲಿ ಸುಮಾರು 200 ಮನೆಗಳ ಮೇಲಿದ್ದ ಹೆಂಚುಗಳು ಆರ್ಭಟಕ್ಕೆ ಅವುಗಳಿಲ್ಲವಷ್ಟು ಕೆಳಕ್ಕೆ ಬಿದ್ದು ಚೆಲ್ಲಾಪಿಲ್ಲಿಯಾಗಿ ಚೂರುಚೂರಾಗಿ ಹರಡಿದವು. ಹುಲ್ಲುಮನೆಗಳ ಮೇಲಿದ್ದ ಹುಲ್ಲು ಸಮೇತ ಹಾರಿಹೋಗಿ ದೂರವಾಗಿ ಬಿದ್ದಿದ್ದವು. ಸೋಗೆಗಳು ಅಂತರಿಕ್ಷದಲ್ಲಿ ಹಾರಾಡುತ್ತಿದ್ದವು. ಕೆಲವು ಗುಡಿಸಲುಗಳು ನಾಶ ಹೊಂದಿದವು. ನೀರು ತರುವವರೂ, ಬಟ್ಟೆ ಒಗೆಯುವವರೂ ಹೋಗಿದ್ದ ಹೆಂಗಸರು ಮನೆಗಳಿಗೆ ಬರುವಷ್ಟರಲ್ಲಿ ಗಾಳಿಗೆ ಸಿಕ್ಕಿ ಹೊತ್ತಿದ್ದ ನೀರಿನ ಕೊಡಗಳನ್ನೂ, ಸೀರೆ ಪಂಚೆಗಳನ್ನೂ ಕಳೆದುಕೊಂಡು ಒಬ್ಬರಮೇಲೊಬ್ಬರು ಬಿದ್ದು ಗಾಯಗಳನ್ನು ಮಾಡಿಕೊಂಡರು. ಊರಿನ ಮುಂಭಾಗದ ತೋಪಿನಲ್ಲಿದ್ದ ಕೆಲವು ಮರಗಳು ಬೇರುಸಮೇತ ಕಿತ್ತು ಬಿದ್ದಿದ್ದವು. ನೀರುಬಾಗಿಲ ಬಳಿ ಇದ್ದ ಸುಮಾರು 200 ವರ್ಷ ವಯಸ್ಸಿನ 100 ಗಾಡಿಗಳ ಬೊಂಬು ಆಗಬಹುದಾದ ಒಂದು ದೊಡ್ಡ ಅರಳೀಮರವು ಬುಡದಲ್ಲಿನ ಬೇರುಗಳ ಸಮೇತ ಮಗುಚಿಕೊಂಡು ಬಿದ್ದಿತ್ತು. ಇಷ್ಟು ದೊಡ್ಡ ಮರವು ಬಿದ್ದದ್ದು ಬಹಳ ಆಶ್ಚರ್ಯವೇ ಸರಿ. ಈ ರೀತಿ ಊರಿನಲ್ಲಿ ನಾನಾ ವಿಧ ಉಕ್ಸಾನು ಆಗಿರುವದಲ್ಲದೆ ಈ ಗ್ರಾಮದ ಮತ್ತೂ ಅಕ್ಕಪಕ್ಕ ಗ್ರಾಮಗಳ ತೆಂಗಿನ ತೋಟಗಳಲ್ಲಿ ತೋಟ ಒಂದಕ್ಕೆ 20 ಮರಗಳ ವರಿವಿಗೆ ಬೇರು ಸಮೇತ ಸುಮಾರು 300 ತೆಂಗಿನ ಮರಗಳು ಬಿದ್ದುಹೋಗಿವೆ. ಬಾಕಿ ಮರಗಳಲ್ಲಿದ್ದ ತೆಂಗಿನಕಾಯಿಗಳು, ಗೊನೆಗಳು ಸಂಪೂರ್ಣ ಬಿದ್ದಿರುತ್ತವೆ. ಅನೇಕ ರೈತಜನರ ದನ ಕರು ಕುರಿ ಮೇಕೆಗಳು ಗಲ್ಲೇಯಾಗಿ ಮನೆಗೆ ಬಂದಿರುವದಿಲ್ಲ. ಈ ರೀತಿ ಒಂದು ಕಾಲು ಘಂಟೆಯಲ್ಲಿ ಸುಮಾರು ಐದು ಸಾವಿರ ರೂಪಾಯಿಗಳವರೆಗಿನ ಉಕ್ಸಾನು ಆಗಿರುತ್ತದೆ. ಗಾಳಿಯು ಬೀಸುವದು ಕಮ್ಮಿ ಆದ ಒಡನೆಯೇ ದೊಡ್ಡ ಮಳೆ ಬಂದು ಅನೇಕ ಕಲ್ಲುಗಳನ್ನು ರಾಶಿರಾಶಿಯಾಗಿ ಸುರಿಸಿತು. ಕೆಲವು ರಾಶಿಗಳು ಮಳೆ ಬಿಟ್ಟು 2 ಘಂಟೆಯ ವರಿವಿಗೂ ಕರಗುತ್ತಿದ್ದವು. ಈ ರೀತಿಯಾದ ಗಾಳಿಯೂ, ಮಳೆಯೂ ಯಾವಾಗಲೂ ಬಂದದ್ದು ನೋಡಿರಲಿಲ್ಲವೆಂದು ಇಲ್ಲಿನ ಜನರು ಹೇಳುತ್ತಿರುವರು. ಬೆಲಗೂರು ಪೇಟೆಯಲ್ಲಿ ನಿಂತಿದ್ದ ಗಾಡಿಗಳು ಗಾಳಿಗೆ ಉರುಳಿಕೊಂಡು ಬಿದ್ದವು. ಕಣಕಟ್ಟೆ ದಾರಿಯಲ್ಲಿ ಹೋಗುತ್ತಿದ್ದ ಜನರು ಕುಳಿತಿದ್ದ ಒಂದು ಬಂಡಿಯು ಗಾಳಿ ಹೊಡೆತಕ್ಕೆ ಉರುಳಿ ಬಿದ್ದಿತೆಂದು ತಿಳಿದು ಬಂದಿರುತ್ತದೆ. ಈ ರೀತಿ ಈ ಬಿಸುಗಾಳಿಯ ಹಾವಳಿಯು ಅನೇಕರಿಗೆ ಉಕ್ಸಾನು ಉಂಟುಮಾಡಿತು.

ಕೆ. ಓ. ಭಿ.

ಜನಗಳಿಗೆ ಒಳ್ಳೇ ಹಾಲನ್ನು ಒದಗಿಸುವ್ಯವಸ್ಥೆ

ಬೊಂಬಾಯಿ ಪಟ್ಟಣದಲ್ಲಿ ಮಾಡಿರುವ ಏರ್ಪಾಡು

ಬೊಂಬಾಯಿ ಪಟ್ಟಣದಲ್ಲಿ ಕೆಲವು ದೇಶಿಯ ದೊಡ್ಡಮನುಷ್ಯರು ಸೇರಿ ನಿರ್ಮಲವಾದ ಹಾಲನ್ನು ಒದಗಿಸುವುದಕ್ಕೆ ಸರಿಯಾದ ಏರ್ಪಾಡು ಮಾಡಬೇಕೆಂದು ಆಲೋಚನೆ ಮಾಡಿದಾರೆ. ಆ ಪಟ್ಟಣದಲ್ಲಿ ಅನೇಕ ಜನಗಳು ಹಸು ಎಮ್ಮೆಗಳನ್ನು ಕಟ್ಟಿಕೊಂಡು ಹಾಲನ್ನು ಮಾರಿ ಜೀವಿಸತಕ್ಕವರಾಗಿದ್ದರೂ ಅವರು ಕೊಡುವ ಹಾಲು ನೀರುಮಿಶ್ರವಾಗಿಯೂ ಕೊಳಕಾಗಿಯೂ ಇರುತ್ತದೆ. ಅದನ್ನು ಹತೋಟಿಗೆ ತಂದುಕೊಂಡು ಆರೋಗ್ಯಕರವಾದ ಕೊಟ್ಟಿಗೆಗಳಲ್ಲಿ ಹಸು ಎಮ್ಮೆಗಳನ್ನು ಕಟ್ಟಿ ಚೊಕ್ಕಟವಾದ ರೀತಿಯಲ್ಲಿ ಹಾಲುಕರೆದು ವಿಕ್ರಯ ಮಾಡುವಂತೆ ಏರ್ಪಾಡು ಮಾಡಬೇಕೆಂದು ಬೊಂಬಾಯಿ ಪಟ್ಟಣದ ಮ್ಯುನಿಸಿಪಲ್ ಅಧಿಕಾರಿಗಳು ಕೆಲವು ವರುಷಗಳಿಂದಲೂ ಎಷ್ಟೋ ಪ್ರಯತ್ನಪಡುತ್ತಿದ್ದಾಗ್ಯೂ ಗೌಳಿಗರು ಕಟ್ಟುಪಟ್ಟಿಗೆ ಸಿಕ್ಕಿಕೊಳ್ಳಲು ಒಪ್ಪದೆ ಪೂರ್ವಪದ್ಧತಿಗಳನ್ನು ಬಿಡದೆ ಇರುತ್ತಾರೆ. ಇದನ್ನೆಲ್ಲಾ ನೋಡಿ ಆ ಪಟ್ಟಣದಲ್ಲಿ ಹಾಲನ್ನು ಶುದ್ಧಿ ಮಾಡುವುದಕ್ಕಾಗಿ ಪ್ರತ್ಯೇಕವಾದ ಒಂದು ಕಂಪೆನಿಯನ್ನು ಇಡಬೇಕೆಂದು ಕೆಲವರು ಸೇರಿ ಗೊತ್ತುಮಾಡಿದಾರೆ. ಈ ಏರ್ಪಾಟಿಗೆ ಡಾಕ್ಟರ್ ಕೆ ಎಂ ಮುನ್ಷಿ ಎಂಬವರೇ ಮೂಲಪುರುಷರು. ಈ ಪಾರ್ಸಿ ದೊಡ್ಡಮನುಷ್ಯರು ಆ ಪಟ್ಟಣದಲ್ಲಿ ವೈದ್ಯ ಮಾಡುತ್ತಿದ್ದಾರೆ. ಇವರು ಸೂಚಿಸಿದ ಏರ್ಪಾಡನ್ನು ಬೊಂಬಾಯಿನ ಶಾನಿಟರಿ ಸಂಘದವರೂ ಹೆಲ್ತ್ ಆಫೀಸರೂ ಒಪ್ಪಿಕೊಂಡು, ಇರುವುದು ಮಾತ್ರವೇ ಅಲ್ಲ. ಆ ಪಟ್ಟಣದ ಬಹುಮಂದಿ ಪ್ರಮುಖರೂ ಅವರಿಗೆ ದ್ರವ್ಯಸಹಾಯವನ್ನೂ ಮಾಡುವುದಾಗಿ ಹೇಳಿದ ರೀತಿ ಈ ಏರ್ಪಾಡು ಸಫಲವನ್ನು ಹೊಂದಲು ಅವಕಾಶವಾಯಿತು.

ಇದಕ್ಕಾಗಿ ಒಂದು ಕಂಪನಿ ಏರ್ಪಾಟಾಗಿರುವುದು. ಇದು ವಿಶೇಷವಾಗಿ ಸಾಹುಕಾರಿಯಾದ ಕಂಪನಿಯಾಗಿದೆ. ಇದರ ಮೂಲಧನ 70,000 ರೂಪಾಯಿ, ಭಾರಿಭಾರಿ ವರ್ತಕರೂ ದೊಡ್ಡ ಮನುಷ್ಯರೂ ಆಗಲೇ 50,000 ರೂಪಾಯಿ ಬಾಬತ್ತಿನ ಷೇರುಗಳನ್ನು ಕೊಂಡುಕೊಂಡುಬಿಟ್ಟಿರುವರು. ಇದರಲ್ಲಿ ಈ ಕಂಪನಿಗೆ ವಿಶೇಷ ಲಾಭ ಉತ್ಪತ್ತಿಯಾಗುವುದಿಲ್ಲವಂತೆ. ಆದರೆ ಈ ಕಂಪನಿಗೆ ಹಣ ಹಾಕಿರುವ ಮನುಷ್ಯರ ಉದ್ದೇಶವು ಲಾಭಸಂಪಾದನೆ ಮಾಡಬೇಕೆಂಬುದಲ್ಲ. ಈ ಕಂಪನಿಯಿಂದ ಏರ್ಪಾಟಾಗುವ ವ್ಯವಸ್ಥೆಯ ದೆಸೆಯಿಂದ ಪಟ್ಟಣದಲ್ಲಿ ಮಕ್ಕಳಿಗೆ ಆರೋಗ್ಯಕರವಾದ ಒಳ್ಳೆಯ ಹಾಲು ಸರಬರಾಯಿ ಆಗಿ ಮಕ್ಕಳ ಸಾವು ಕಡಮೆಯಾಗಬೇಕೆಂಬುವುದೇ ಈ ಕಂಪನಿಯ ಮುಖ್ಯ ಉದ್ದೇಶವಾಗಿದೆ. ಇವರು ಒಂದು ಹಾಲಿನ ಪಂಡು ಪ್ರಾರಂಭಿಸಿ ಅದಕ್ಕೆ ಐಶ್ವರ್ಯವಂತರಿಂದ ಚಂದಾ ಕೂಡಿಸುತ್ತಾರೆ. ಈ ಫಂಡಿನಿಂದ ಒಳ್ಳೆಯ ಹಾಲನ್ನು ಕೊಂಡು, ಮಕ್ಕಳಿರುವ ಬಡವರಾದ ಸಂಸಾರಿಗಳಿಗೆ ಅಗ್ಗವಾಗಿಯೂ, ನಿರ್ಗತಿಕರಾದವರಿಗೆ ಮುಫತ್ತಾಗಿಯೂ ಕೊಡಿಸುತ್ತಾರೆ. ಈ ಫಂಡಿಗೆ ಆಗಲೇ ಅನೇಕ ಮಹನೀಯರು ಬಹು ಧಾರಾಳವಾಗಿ ಚಂದಾ ಕೊಟ್ಟಿರುವರು. ಈ ಫಂಡಿನ ಮುಖ್ಯಸ್ಥರು ಸ್ಯಾನಿಟರಿ ಸಂಘದವರ ಸಹಾಯವನ್ನು ಪಡೆಯುವರು. ಮೊಲ್ಕಂಡ ಹಾಲಿನ ಕಾರ್ಖಾನೆಯವರು ಹಸು ಎಮ್ಮೆಗಳ ಮಾದರಿ ಕೊಟ್ಟಿಗೆಯನ್ನು ಪ್ರಾರಂಭಿಸಿ, ಇತರರಿಗೆ ಅಂಥಾ ಕೊಟ್ಟಿಗೆಗಳನ್ನು ಕಟ್ಟಿಕೊಳ್ಳಲು ಮೇಲ್ಪಂಕ್ತಿ ಹಾಕಿಕೊಡುವವರಾಗಿದಾರೆ. ಮಿ. ರತನ್ ತಾತಾ ಎಂಬ ಮಹನೀಯ ಪಾರ್ಸಿ ದೊಡ್ಡಮನುಷ್ಯರು 20,000 ರೂಪಾಯಿನ ಷೇರುಗಳನ್ನು ಕೊಂಡುಕೊಂಡು, ಆ ಕಾರ್ಖಾನೆಯ ಮೇಲಿಚಾರಣಾ ಕಮಿಟಿಯ ಅಧ್ಯಕ್ಷರಾಗಿರಲು ಸಮ್ಮತಿಪಟ್ಟಿರುತ್ತಾರೆ. ಈ ಕಮಿಟಿಯಲ್ಲಿ ಸರ್ ರಾಮಚಂದ್ರ ಕೃಷ್ಣದವರೂ, ಮಿ. ಎ ಜಿ ಬಿಲ್ಲಿಮೋರಿಯಾಯವರೂ, ಮಿ. ಜಮಾಲ್‌ಭಾಯಿ ಕರೀಂಬಾಯಿಯವರೂ ಮೆಂಬರುಗಳಾಗಿಯೂ, ಡಾಕ್ಟರ್ ಮುನ್ಷಿಯವರು ಮ್ಯಾನೇಜಿಂಗ್ ಡೈರೆಕ್ಟರಾಗಿಯೂ ಇರುವರು. ಈ ಮಾದರಿ ಕೊಟ್ಟಿಗೆಯನ್ನು ಬೊಂಬಾಯಿ ಪಟ್ಟಣದ ಹೊರಪಾರ್ಶ್ವದಲ್ಲಿ ಏರ್ಪಾಡುಮಾಡಿ, ಕರೆದ ಹಾಲನ್ನು ಮೋಟಾರ್ ಗಾಡಿಗಳ ಮೇಲೆ ಪಟ್ಟಣಕ್ಕೆ ಸಾಗಿಸಿಕೊಂಡು ಬೇಗನೆ ಮೊಲ್ಕಂದಂತೆ ವಿಕ್ರಯ ಮಾಡಬೇಕೆನ್ನುವದೇ ಅವರ ಉದ್ದೇಶವಾಗಿದೆ.

ಮೈಸೂರು ಸಿಟಿ ಮುನಿಸಿಪಾಲಿಟಿ

ಸ್ಪೆಷಲ್ ಮೀಟಿಂಗು

ಕಳೆದ ಸೋಮವಾರ ದಿವಸ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ಒಂದು ಸ್ಪೆಷಲ್ ಮೀಟಿಂಗನ್ನು ನಡಿಸಿ ತೀರ್ಮಾನಮಾಡಿದ ಮುಖ್ಯ ವಿಷಯಗಳೇನೆಂದರೆ:

ಮ್ಯುನಿಸಿಪಲ್ ಸ್ಟಾಂಡಿಂಗ್ ಕಮಿಟಿಯವರು ಪಿಡುಗಿನ ಕ್ಷಯ ಇಲಾಖಾ ಇನ್ಸ್‌ಪೆಕ್ಟರುಗಳಿಗೂ, ಮೇಸ್ತ್ರಿ ಇಲಾಖೆಯ ನೌಕರರಿಗೂ ಸ್ಪೆಷಲ್ ತೆರಿಗೆಯನ್ನು ಮಾಫಿ ಬಿಡಬಹುದೆಂದು ಶಿಫಾರಸುಮಾಡಿದ್ದರು. ಮೆಂಬರುಗಳು ಈ ರಿಯಾಯತಿಯನ್ನು ಅವರಿಗೆ ತೋರಿಸಬೇಕಾದದ್ದಿಲ್ಲವೆಂದು ತೀರ್ಮಾನ ಮಾಡಿದರು.—ಕಾಟನ್‌ಪೇಟೆಯಲ್ಲಿ ಶ್ರೀ ಸುಬ್ಬಕೃಷ್ಣಯ್ಯನವರ ಓಣಿಯಲ್ಲಿ ತೋಡಿಸಿದ್ದ ಧರ್ಮದ ಬಾವಿಯನ್ನು ಮ್ಯುನಿಸಿಪಾಲಿಟಿಯವರು ವಹಿಸಿ ಅದರ ಪರಿಹಾರದ್ರವ್ಯವನ್ನು ವಿನಿಯೋಗಿಸುವ ವಿಷಯದಲ್ಲಿ ಇತ್ಯರ್ಥವಾಗದಿರಲಿಲ್ಲ. ಅವರ ಪತ್ನಿಯವರು ಆ 500 ರೂಪಾಯಿನಲ್ಲಿ ವೆಂಕಟರಮಣಸ್ವಾಮಿ ದೇವಸ್ಥಾನದೊಳಗೆ ಕಾಮಗಾರಿ ಮಾಡಿಸಿ ಧ್ವಜಸ್ತಂಭವನ್ನು ಕಟ್ಟಿಸಬೇಕೆಂದು ಬರೆದಿದ್ದರು. ಮೆಂಬರುಗಳು ಈ ವಿಷಯವನ್ನು ಚರ್ಚಿಸಿ ಆ ಹಣದಲ್ಲಿ ಒಂದು ಸಲ್ಲಿಯನ್ನು ಇಡಿಸಿ, ಉಳಿದ ಹಣದಿಂದ ಮೇಲ್ಕಂಡ ಕಾಮಗಾರಿಗಳನ್ನು ಮಾಡಿಸಬಹುದೆಂದು ಇತ್ಯರ್ಥಮಾಡಿದರು.—ಶ್ರೀರಾಮಪೇಟೆಯಲ್ಲಿ ಅನಾರೋಗ್ಯಕರವೂ ಅಪಾಯಕರವೂ ಆಗಿದ್ದ ಮುರ್ಗಯ್ಯನ ಕೊಳವನ್ನು ಮ್ಯುನಿಸಿಪಾಲಿಟಿಯವರು ಮುಚ್ಚಿಬಿಟ್ಟರು. ಆ ಸ್ಥಳದಲ್ಲಿ ತಮ್ಮ ಹೆಸರಿನ ಮೇಲೆ ಒಂದು ಕಲ್ಯಾಣಿಯನ್ನು ಕಟ್ಟಬೇಕೆಂದು ದಳ್ಳಾಳಿ ವೆಂಕಟರಾಮಯ್ಯನವರು ಅರ್ಜಿ ಬರೆದುಕೊಂಡಿದ್ದರು. ಮೆಂಬರುಗಳು ಆತನ ಹೆಸರಿನ ಮೇಲೆ ಅಲ್ಲಿ 500 ರೂಪಾಯಿಗೆ ಮೀರದಂತೆ ಏರ್ಪಾಡು ಮಾಡಿ ಒಂದು ಸ್ನಾನದ ಕೊಠಡಿಯನ್ನು ಕಟ್ಟಿಸಬೇಕೆಂದು ಒಪ್ಪಿಕೊಂಡರು.—ಪಟ್ಟಣದಲ್ಲಿ ಬಹಿರಂಗವಾದ ಸ್ಥಳಗಳಲ್ಲಿ ಯಾರೂ ಬೆರಣಿ ತಟ್ಟದಂತೆ ಆಜ್ಞೆ ಮಾಡಬೇಕೆಂದು ಕೆಲವು ರೂಲ್ಸು ಮಾಡಿದಾರೆ. ಇದರ ವಿಷಯದಲ್ಲಿ ಪ್ರಜೆಗಳ ಅಭಿಪ್ರಾಯವನ್ನು ತಿಳಿಯುವುದಕ್ಕಾಗಿ ಆ ರೂಲ್ಸನ್ನು ಸರ್ಕಾರದ ಗೆಜೆಟ್ಟಿನಲ್ಲಿ ಪ್ರಕಟ ಮಾಡಬೇಕೆಂದು ಮೆಂಬರುಗಳು ಅಭಿಪ್ರಾಯಪಟ್ಟರು.—ಸರ್ಕಾರದವರು ಮುನಿಸಿಪಾಲಿಟಿಗೆ ಶೇಕಡಾ 4 ರಂತೆ ಬಡ್ಡಿಗೆ ಕೊಟ್ಟಿರುವ 31,000 ರೂಪಾಯಿ ಸಾಲವನ್ನು ಮ್ಯುನಿಸಿಪಲ್ ಉತ್ಪತ್ತಿಯಿಂದ ಪಾವತಿ ಮಾಡುತ್ತಾ ಬರಬೇಕೆಂದು ಅಪ್ಪಣೆ ಆಗಿತ್ತು. ಇದನ್ನು ಕೊಡಲು ಚೈತನ್ಯ ಸಾಲದೆಂದು ತಿಳಿಸುವಂತೆ ಮೆಂಬರುಗಳು ಒಪ್ಪಿಕೊಂಡಿದಾರೆ.—ನೀರಿನ ಸಲ್ಲಿಗಳನ್ನು ಹಾಕಿ ಉಪಯೋಗ ಮಾಡುವ ಖಾಸಗಿ ಕಸುಬುದಾರರ ವಿಷಯದಲ್ಲಿ ಚೀಫ್ ಇಂಜಿನಿಯರ್ ಇಲಾಖೆಯಿಂದ ಕಳುಹಿಸಲ್ಪಟ್ಟಿದ್ದ ರೂಲ್ಸನ್ನು ಮೆಂಬರುಗಳು ಓದಿಸಿ ಒಪ್ಪಿ ತೀರ್ಮಾನಮಾಡಿಕೊಂಡರು.—ಟೌನ್‌ನಲ್ಲಿ ಹೋಟಲುಗಳನ್ನು ಇಟ್ಟಿರುವವರಿಗೆ ಎಷ್ಟು ಸಲ ಎಚ್ಚರಿಕೆ ಕೊಟ್ಟಾಗ್ಯೂ ಅವರು ಆರೋಗ್ಯಸೂತ್ರಗಳಿಗನುಸಾರವಾದ ಕ್ರಮಗಳನ್ನು ಮಾಡಿಕೊಂಡಿಲ್ಲವೆಂದೂ, ಅಂಥವರನ್ನು ಪ್ರಾಸಿಕ್ಯೂಟ್ ಮಾಡುವುದಕ್ಕೆ ಅಧಿಕಾರ ನೀಡಬೇಕೆಂದೂ ಹೆಲ್ತ್ ಆಫೀಸರವರು ಸೂಚಿಸಿದರು. ಅಂಥವರಿಗೆಲ್ಲಾ ಸರಿಯಾದ ಕ್ರಮ ಅನುಸರಿಸಿ ಎಚ್ಚರಿಕೆ ನೋಟೀಸುಗಳನ್ನು ಮತ್ತೊಂದು ಸಲ ಜಾರಿಮಾಡಿ, ಆ ಮೇಲೆ ಬಹಳ ಕೆಟ್ಟದಾದ ಹೋಟಲಿನವರ ಮೇಲೆ ಫಿರ್ಯಾದು ಮಾಡಬಹುದೆಂದು ಮೆಂಬರುಗಳು ತಿಳಿಸಿದರು.—ದೇವರಾಜ ಮಾರ್ಕೆಟ್ಟಿನ ಡೇಲಿ ಶೀಜು ಕಂಟ್ರಾಕ್ಟರ್ ವೆಂಕಟಪ್ಪನವರಿಗೆ ಪ್ರಯಸಾವೇನೂ ಕೊಡತಕ್ಕದ್ದಿಲ್ಲವೆಂದು ತೀರ್ಮಾನವಾಯಿತು.—ಚಾಮರಾಜಪೇಟೆಯಲ್ಲಿ ಕೋಟಿಗಳ ಬಳಿ ಹೊಸ ರೈಲ್ವೆ ಸ್ಟೇಷನ್ ಏರ್ಪಾಡುಮಾಡುವುದಕ್ಕೆ ರೈಲ್ವೆ ಕಂಪನಿಯವರಿಗೆ ಬಿಟ್ಟುಕೊಟ್ಟಿರುವ ಖಾಲಿ ಜಾಗಕ್ಕೆ ಅವರ ದರ ನಿರ್ಣಯದ ಪ್ರಕಾರ ಹಣವನ್ನು ತೆಗೆದುಕೊಳ್ಳಬೇಕೆಂದು ಮೆಂಬರುಗಳು ತೀರ್ಮಾನಮಾಡಿರುತ್ತಾರೆ.—ರಾಜಧಾನಿಯ ಮ್ಯುನಿಸಿಪಾಲಿಟಿಗೆ ಚುನಾಯಿತ ಪ್ರೆಸಿಡೆಂಟರನ್ನು ನೇಮಕ ಮಾಡಿದ್ದು ಅವರು ಮೈಸೂರು ಕಮಿಷನರ್‌ರ ಮೂಲಕ ಗವರ್ನಮೆಂಟಿಗೆ ಕಾಗದಪತ್ರಗಳನ್ನು ಕಳುಹಿಸಬೇಕೆಂದು ಹುಕುಮ್ ಆಗಿದೆ. ಈ ಹುಕುಮನ್ನು ಮೆಂಬರುಗಳು ಓದಿ, ಇದು ಸರಿಯಲ್ಲವೆಂದೂ, ಪ್ರೆಸಿಡೆಂಟರು ನೇರಾ ಗವರ್ನಮೆಂಟಿಗೆ ಕಾಗದ ಪತ್ರಗಳನ್ನು ಕಳುಹಿಸುವಂತೆ ಏರ್ಪಾಡುಮಾಡಬೇಕೆಂದೂ ಕೇಳಿಕೊಳ್ಳುವಂತೆ ತೀರ್ಮಾನ ಮಾಡಿದರು. ಪಟ್ಟಣದಲ್ಲಿ ನೀರಿನ ಸರಬರಾಯಿ ವಿಚಾರವನ್ನು ನೋಡುವುದಕ್ಕೆ ಒಬ್ಬ ಎಗ್ಸಿಕ್ಯುಟಿವ್ ಇಂಜಿನಿಯರವರ ಮೇಲೆ ಜಾರಣೆ ನೋಡಿಕೊಳ್ಳುವ ತಗಡಿಬೇಕೆಂದು ಗವರ್ನಮೆಂಟಿನವರನ್ನು ಕೇಳಿಕೊಳ್ಳುವಂತೆ ಮೆಂಬರುಗಳು ತೀರ್ಮಾನಮಾಡಿರುತ್ತಾರೆ.

ಹಿಂದೂ ವಿಧವಾ ಪುನರುದ್ಧರಣಾ ಸಂಘವು

ಮಿಸ್ ಸಿ ಎ ಟಿನ್ನಿಂಟಮ್ಮನ ಸಾಹಸ ಪ್ರಯತ್ನಗಳು

ಮಿಸ್ ಕಾ ಸಿ ಎ ಟಿನ್ನಿಂಟಮ್ಮನು ಕೆಲವು ದಿನಗಳ ಹಿಂದೆಯೇ ಮೈಸೂರಿಗೆ ಬಂದು ಶ್ರೀಮನ್ಮಹಾರಾಜರವರ ಆಶ್ರಯದಲ್ಲಿ ಟೌನ್ ಹಾಲ್ ಬಂಗಲೆಯಲ್ಲಿ ಸ್ತ್ರೀಜನರ ಮಹಾ ಸಭೆಯನ್ನು ನಡಿಸಿದ್ದೂ, ಶ್ರೀಮನ್ಮಹಾರಾಜರವರು ಸಭೆಯ ಅಗ್ರಾಸನವನ್ನು ವಹಿಸಿ ಹಿಂದೂ ವಿಧವಾ ಪುನರುದ್ಧರಣ ಸಂಘವನ್ನು ರಾಜಧಾನಿಯಲ್ಲಿ ಸ್ಥಾಪನೆ ಮಾಡಿರುವುದೂ, ಗಂಡಸರೂ ಹೆಂಗಸರೂ ಪ್ರತ್ಯೇಕ ಪ್ರತ್ಯೇಕವಾಗಿ ಸಂಘಗಳನ್ನು ಮಾಡಿಕೊಂಡು ಬಾಲಕರಿಗೆ ವಯಸ್ಸಾಗುವ ವರೆಗೆ ವಿವಾಹ ಮಾಡದಂತೆಯೂ, ಹೆಣ್ಣುಮಕ್ಕಳಿಗೆ ಚಿಕ್ಕಂದಿನಲ್ಲಿ ಮದುವೆಮಾಡದೆ ವಿದ್ಯೆಯನ್ನು ಕಲಿಸಿ ದೊಡ್ಡವರಾದ ಮೇಲೆ ವಿವಾಹ ಮಾಡುವ ಕ್ರಮವು ಸಾಹಸಪಡುತ್ತಿರುವುದೂ ವಾಚಕರಿಗೆ ತಿಳಿದಿರುತ್ತದಷ್ಟೆ. ಈಗ ಈ ಟಿನ್ನಿಂಟಮ್ಮನು ಉತ್ತರ ದೇಶದಲ್ಲಿ ಸಂಚಾರಮಾಡುತ್ತಾ, ಅಂಥಾ ಸಂಘಗಳನ್ನು ಅಲ್ಲಲ್ಲಿ ದೊಡ್ಡ ಮನುಷ್ಯರುಗಳನ್ನು ಸೇರಿಸಿ ಸ್ಥಾಪಿಸುತ್ತಾ, ಈ ದೇಶದ ಹೆಣ್ಣುಮಕ್ಕಳ ಸ್ಥಿತಿಯನ್ನು ಸುಧಾರಿಸುವುದರಲ್ಲಿ ಉದ್ಯುಕ್ತಳಾಗಿದ್ದಾಳೆ.

ಹಿಂದಿನ ವಾರ ಆಕೆಯ ಸಾಹಸಪ್ರಯತ್ನದಿಂದ ಅಲಹಾಬಾದ್ (ಪ್ರಯಾಗ್) ಪಟ್ಟಣದಲ್ಲಿ ಅಂಥಾ ಎರಡು ಸಂಘಗಳು ಪ್ರಾರಂಭವಾದವು. ಪುರುಷರ ಸಂಘಕ್ಕೆ ರಾ ಸುಂದರಲಾಲ್ ರಾಯಿ ಬಹದೂರ್, ಸಿ. ಐ. ಇ. ಯವರು ಪ್ರೆಸಿಡೆಂಟರಾದರು. ಸರ್ಜನ್ ಜನರಲ್ ರಾಯಿ ಬಹದೂರ್ ಪ್ರಜಾದಾಸರವರ ಪತ್ನಿಯವರು ಸ್ತ್ರೀಸಭೆಗೆ ಅಧ್ಯಕ್ಷರಾಗಿದಾರೆ. ಇದಾದ ತರುವಾಯ ಶ್ರೀಮಹಾರಾಜರವರ ಅಪೇಕ್ಷೆಯನ್ನು ನೆರವೇರಿಸುವುದಕ್ಕಾಗಿ ಮಿಸ್ ಟಿನ್ನಿಂಟಮ್ಮನು ಪ್ರಯಾಗದಿಂದ ಅಲ್ಲಿಗೆ ಹೋಗಿ ಎರಡು ದಿನ ಪ್ರಜೆಗಳನ್ನು ಕೂಡಿಸಿ ಮಹಾ ಸಭೆಗಳನ್ನು ನಡಿಸಿದರು. ಏಪ್ರಿಲ್ ತಾ 28 ರಲ್ಲಿ ಲಕ್ನೋ ಪಟ್ಟಣದ ಕೇಸರಿಬಾಗ್ ಬರಾದರಿಯಲ್ಲಿ ನಡೆದ ಮಹಾ ಸಭೆಯಲ್ಲಿ ವೈಸ್‌ರಾಯರವರ ಮಂತ್ರಾಲೋಚನಾ ಸಭೆಯ ಮೆಂಬರಾದ ರಾಯಿ ಶ್ರೀರಾಮ ಬಹದೂರ್, ಸಿ. ಐ. ಇ. ಯವರು ಅಗ್ರಾಸನವನ್ನು ವಹಿಸಿ, ಆ ಪರದೇಶದ ಸ್ತ್ರೀಯು ಹಿಂದೂಸ್ಥಾನದ ಪ್ರಜೆಗಳ ಕ್ಷೇಮಾಭ್ಯುದಯವನ್ನು ಬಯಸಿ ಹಿಂದೂಸ್ಥಾನದಲ್ಲಿ ಊರಿಂದೂರಿಗೆ ಅಲೆಯುತ್ತಾ ಗಂಡಸರಿಗೂ ಹೆಂಗಸರಿಗೂ ಹಿತೋಕ್ತಿಗಳನ್ನು ಹೇಳುತ್ತಾ ಬಂದಿರುತ್ತಾರೆಂದೂ, ಈ ಒಳ್ಳೇ ಸಮಯದಲ್ಲಿ ಹುಡುಗರೆಲ್ಲಾ ಆಕೆಗೆ ಸಹಾಯಮಾಡುವ ಪರಮೂಲಕ ವಿವಾಹ ಪದ್ಧತಿಯನ್ನು ಬದಲಾವಣೆ ಮಾಡಿಕೊಂಡ ಪಕ್ಷದಲ್ಲಿ ಒಂದು ಹೊಸ ಸ್ಥಿತಿಯನ್ನು ಹೊಂದುವುದೆಂದೂ ಆಕೆಯ ಸಾಹಸ ಕಾರ್ಯಗಳನ್ನು ಮದ್ರಾಸು, ಬೊಂಬಾಯಿ, ಮೈಸೂರು, ... ಈ ಮೊದಲಾದ ಸಂಸ್ಥಾನಗಳ ಮಹಾರಾಜರುಗಳೂ, ಘನಸರ್ಕಾರದವರೂ ಮೆಚ್ಚಿ ಸಂತೋಷಪಟ್ಟು ಆಕೆಯ ಕಾರ್ಯಗಳಿಗೆ ದ್ರವ್ಯಸಹಾಯಗಳನ್ನು ಒದಗಿಸುತ್ತಿದ್ದಾರೆಂದೂ ಸಭಿಕರಿಗೆ ತಿಳಿಸಿದರು. ಬಳಿಕ ಟಿನ್ನಿಂಟಮ್ಮನು ಇದುವರೆಗೆ ತನ್ನ ಉದ್ದೇಶ ಕಾರ್ಯವು ಎಷ್ಟು ಮಟ್ಟಿಗೆ ಈ ದೇಶದಲ್ಲಿ ಕೈಗೂಡಿದೆ ಎಂಬುದನ್ನೂ ಪ್ರಜೆಗಳ ಸಹಕಾರ ಪ್ರೋತ್ಸಾಹಕವೂ ಎಷ್ಟು ಮಟ್ಟಿಗೆ ಈ ಶ್ರೇಯಸ್ಕರವಾದ ಕಾರ್ಯಕ್ಕೆ ಸಹಾಯವಾಗುತ್ತವೆ ಎಂಬುದನ್ನೂ ... ಸಂಸ್ಕೃತ ವಾಕ್ಯಗಳಲ್ಲಿ ಉಪನ್ಯಾಸ ... ಮೆಂಬರುಗಳ ... ಹೇಳುತ್ತಿರುವನು ...

...ವಾಗಿದೆ ಎಂಬುವುದನ್ನು ವಿವರಿಸಿ ಉಪನ್ಯಾಸವನ್ನು ಮಾಡಿ ಸಭಿಕರಲ್ಲಿ ಸಂತೋಷವನ್ನೂ ಉತ್ಸಾಹವನ್ನೂ ಉಂಟುಮಾಡಿದರು.

ಅದೇ ಸಭೆಯಲ್ಲಿ ಭಾಷಣಮಾಡಿದ ಪಂಡಿತ್ ಗೋಕುಲನಾಥ ಮಿಸ್ರರು ಚಿಕ್ಕ ವಯಸ್ಸಿನಲ್ಲಿ ಮಕ್ಕಳಿಗೆ ಮದುವೆ ಮಾಡೋಣದರಿಂದ ಉಂಟಾಗುವ ದುಃಖ ಸಂಕಟಗಳನ್ನು ದೃಷ್ಟಾಂತಪೂರ್ವಕವಾಗಿ ವಿವರಿಸಿ, 8-10 ವರುಷದ ಹೆಣ್ಣುಮಕ್ಕಳು ಗಂಡಂದಿರನ್ನು ಕಳೆದುಕೊಂಡು ನಾನಾ ಕಷ್ಟಗಳಿಗೆ ಗುರಿಯಾಗಿರುವುದನ್ನು ತೋರಿಸಿ, ಊರಿಂದೂರಿಗೆ ಸಂಚಾರಮಾಡಿ ಬಾಲ್ಯ ವಿವಾಹವನ್ನು ಮಾಡದಂತೆ ಪ್ರಜೆಗಳಿಗೆ ಸಾರಿಹೇಳುವುದಕ್ಕೋಸ್ಕರ ಸಂಬಳಗಾರರನ್ನು ಇಡುವದರ ಕ್ಷೇಮಕರವಾದೀತೆಂದೂ, ಅಂಥವರ ಮೂಲಕ ಸ್ತ್ರೀವಿದ್ಯಾಭ್ಯಾಸವನ್ನೂ ಪ್ರಸರಿಸಬೇಕೆಂದೂ ತಿಳಿಸಿದರು. ಬಳಿಕ ಬಾಬು ಚೈತನ್ಯ ದಾಸರವರು ಹುಡುಗರನ್ನು ಕುರಿತು ಸಣ್ಣ ವಯಸ್ಸಿನಲ್ಲಿ ಮದುವೆ ಮಾಡಿಕೊಳ್ಳುವುದರಿಂದ ದೇಹಕ್ಕೂ ಉಂಟಾಗುವ ಕಷ್ಟ ನಷ್ಟಗಳನ್ನು ವಿವರಿಸಿ ಹೇಳಿ, ವಯಸ್ಸು ಬರುವ ತನಕ ಮದುವೆ ಮಾಡಿಕೊಳ್ಳಬಾರದೆಂದು ವಿವೇಕ ಹೇಳಿದರು. ಬಾಬು ... ಸಹಾಯರವರು ಹಿಂದುಗಳು ಸ್ತ್ರೀಯರನ್ನು ಮನೆಯಲ್ಲಿಟ್ಟುಕೊಂಡಿರುವುದರಿಂದ ಅವರಲ್ಲಿ ವಿದ್ಯಾವಂತರಾದ ಗಂಡಸರಿಗೆ ತಮ್ಮ ಮನೆಗಳಲ್ಲಿ ಸಂತೋಷವಿಲ್ಲದೆ ಹೊರಗೆಹೋಗಿ ಆಟಪಾಟುನೋಟಾದಿಗಳಲ್ಲಿ ವಿಹರಿಸುತ್ತಾರೆಂದೂ, ಇದು ತುಂಬಾ ಶೋಚನೀಯವಾದ ಅಂಶವೆಂದೂ ಹೇಳಿದರು. ತರುವಾಯ ... ಬಹದೂರ್ ಗಂಗಾಪ್ರಸಾದ ವರ್ಮರವರು ಸಭಿಕರನ್ನು ಕುರಿತು ಮಿಸ್ ... ಅವರ ಸಾಹಸಕಾರ್ಯಗಳನ್ನು ವಿವರಿಸಿ ಆಕೆಯ ಪರೋಪಕಾರ ... ವನ್ನು ಕೊಂಡಾಡಿ, ಹಿಂದುಗಳಲ್ಲಿ ಉತ್ತಮ ತರಗತಿಗಳಲ್ಲಿರತಕ್ಕ ... ಸ್ತ್ರೀ ಕ್ಷೇಮಕರವಾದ ಪದ್ಧತಿ ಆಚಾರಗಳನ್ನು ಇಟ್ಟುಕೊಂಡು ನಡೆಯುತ್ತಾ ಬಂದರೆ ಕೀಳುದರ್ಜೆಯಲ್ಲಿರುವ ಪ್ರಚಾರಕೋಟಿಗಳು ಉತ್ತಮ ... ವನ್ನು ಹಿಡಿದು ಅಭಿವೃದ್ಧಿಗೆ ಬರಲು ಸಹಾಯವಾದೀತೆಂದು ಹೇಳಿ ಸಭೆಯನ್ನು ಮುಕ್ತಾಯಕ್ಕೆ ತಂದರು.

ಮರುದಿನ ಅದೇ ಪಟ್ಟಣದಲ್ಲಿ ಪ್ರಮುಖ ಸ್ತ್ರೀಯರ ಸಭೆ ನಡೆಯಿತು. ಸುಮಾರು ಇನ್ನೂರು ಮಂದಿ ಸುಮಂಗಲೆಯರು ಹಾಜರಾಗಿದ್ದರು. ಗೋಕುಲನಾಥ ಮಿಶ್ರರವರ ಪತ್ನೀರವರು ಅಗ್ರಾಸನವನ್ನು ವಹಿಸಿದರು. ಟೆನ್ನೆಂಟಮ್ಮನವರು ಸಭಿಕರನ್ನು ಕುರಿತು ತಾನು ಹಿಂದುಸ್ಥಾನದಲ್ಲಿ ಸಂಚರಿಸಿ ನಡಿಸಿರುವ ... ಗಳನ್ನು ವಿವರಿಸಿ ಸಂತೋಷಪಡಿಸಿದರು. ಸ್ವಲ್ಪ ಹೊತ್ತು ಸ್ತ್ರೀಯರು ... ಸಂಗೀತಾದಿಗಳನ್ನು ಕೇಳಿ ಆನಂದಪಟ್ಟು ಮಿಸ್ ಟೆನ್ನೆಂಟಮ್ಮನನ್ನು ... ಮಾಡುತ್ತಾ ತೆರಳಿದರು.

ಬಾತ್ಮೀದಾರರಿಗೆ ನೋಟೀಸ್.

... ವಾರ ಪತ್ರಿಕೆಯ ತಪ್ಪುಗಳು ಬಾತ್ಮಿಯಲ್ಲಿ ... ಮೇಲಬರಾಗಿದ್ದ ಮ... ಪ್ಪ ಮತ್ತು ಇನ್ನೂ ಇಬ್ಬರಿಗೆ ತಾಲ್ಲೂಕಿನಲ್ಲಿ ವಿಧಿಸಿದ್ದ 7 ರೂಪಾಯಿ ... ಯು ಡೆಪ್ಯುಟಿ ಕಮಿಷನರ್‌ರಿಂದ ಮ|| ಶಿವನಂಜಪ್ಪನವರಿಗೆ ಮಾತ್ರ ಆಗಿ... ಎಂಬುವುದಕ್ಕೆ ಬದಲಾಗಿ — ಮ|| ಶಿವನಂಜಪ್ಪನವರಿಗೆ ಮಾತ್ರ ವಜಾ ... — ಎಂದು ವಾಚಕರು ತಿದ್ದಿ ಓದಿಕೊಳ್ಳಬೇಕೆಂದು ಕೋರುತ್ತೇವೆ.

... ಕನಾಡು, ಮುಳಬಾಗಲು; ಪ್ರತ್ಯಕ್ಷದರ್ಶಿ, ಶೀರ್ಷಿಕೆ — ಈ ಬಾತ್ಮಿಗ ... ವರ್ತಮಾನಗಳೇನೂ ಇಲ್ಲವಾಗಿ ಪ್ರಕಟಿಸಲಾಗಲಿಲ್ಲವೆಂದು ವಿಷಾದಿಸುತ್ತೇವೆ. ... ಮಾಗಡಿಯ ವಿದ್ಯಮಾನಗಳು — ಈ ಸ್ಥಳದಲ್ಲಿ ಈ ಸಲ ದನಗಳ ವ್ಯವಸಾಯ ಮತ್ತೂ ಕೈಗಾರಿಕೆಗಳ ಪ್ರದರ್ಶನವು ನಡೆದ ವಿಷಯದಲ್ಲಿ ಚಂದಾ ಹಾಕಿ ... ಪ್ರಜೆಗಳಿಗೂ ಅತೃಪ್ತಿಯೂ ಅಸಮಾಧಾನವೂ ಉಂಟಾಗಿದೆ ಎಂದೂ, ... ಗಳು ಪ್ರದರ್ಶನವಸ್ತುಗಳನ್ನು ನೋಡಲು ಪ್ರಜೆಗಳಿಗೆ ಅವಕಾಶವನ್ನೇ ಕೊಡಲಿಲ್ಲವೆಂದೂ, ಈ ವಿಚಾರಗಳೆಲ್ಲಾ ಬೇರೆ ಪತ್ರಿಕೆಗಳಲ್ಲೂ ಪ್ರಕಟವಾ... ಎಂದೂ ಒಬ್ಬ ... ದಾರರು ಬರೆದಿರುತ್ತಾರೆ. ಈ ಬಾತ್ಮಿಯನ್ನು ಓದಿ ... ವುದೇ ಕಷ್ಟ ... ತೊಡಕಾಗಿಯೂ, ಗೊಜಲುಗೊಜಲಾಗಿಯೂ ಬರೆದು ... ನಮಗೆ ನಾವು ಗಮನ ಕೊಡಲಾರೆವೆಂದು ಈ ಮೂಲಕ ವ್ಯಕ್ತಪಡಿಸು...

ಎಡಿ.]

ಕರೆಸ್ಪಾಂಡೆನ್ಸ್.

ಮೈಸೂರು ಲೋವರ್ ಸೆಕೆಂಡರಿ ಪರೀಕ್ಷೆ.

ಸ್ವಾ,

ಪರೀಕ್ಷಾಕಾಲದಲ್ಲಿ ವಿದ್ಯಾರ್ಥಿಗಳಿಗೆ ಉಂಟಾದ ಮನೋವ್ಯಥೆಯನ್ನು ಪ್ರತ್ಯಕ್ಷ ನಾನು ನೋಡಿದವನಾದ್ದರಿಂದ ನನ್ನ ಈ ಅಭಿಪ್ರಾಯಗಳನ್ನು ಪ್ರಚುರಪಡಿಸಬೇಕಾಗಿ ಕೋರುತ್ತೇನೆ. ಈ ಸಲ ಪರೀಕ್ಷೆಯಲ್ಲಿ ಲೆಕ್ಕ ವಿನಾ ಉಳಿದ ... ಗಳು ಸಾಧ್ಯವಾದ ಮಟ್ಟಿಗೂ ಆ ಸ್ಟ್ಯಾಂಡರ್ಡಿಗೆ ಸರಿಯಾಗಿದ್ದವೆಂದು ಹೇಳ... ಲೆಕ್ಕದಲ್ಲಿ 3 ನೇ, 4 ನೇ ಲೆಕ್ಕಗಳು ಮಾತ್ರ ಅವರ ಯೋಗ್ಯತೆಗೆ ... ಮೊದಲು ಈ ಲೆಕ್ಕಗಳನ್ನೇ ಮಾಡಲು ಉಪಕ್ರಮಿಸಿದ ಅನೇಕ... ಹೆಚ್ಚು ಕಾಲವನ್ನು ಅದಕ್ಕೆ ವಿನಿಯೋಗಿಸಿ ಫಲಕಾರಿಯಾಗದೇನೂ ... ಲೆಕ್ಕಗಳನ್ನು ಮಾಡಲು ಸಾಕಾದಷ್ಟು ಸಮಯ ದೊರೆಯದೇನೂ ... ದ್ದರಿಂದ ಪ್ಯಾಸಾಗದಂತೆ ಇರುತ್ತಾರೆ. ಲೆಕ್ಕದ ಉತ್ತರಗಳನ್ನು ನೋಡುವ ... ಪರೀಕ್ಷಕರಿಗೆ ಈ ವಿಷಯ ಚೆನ್ನಾಗಿ ಗೊತ್ತಾಗುವದರಲ್ಲಿ ಸಂದೇಹವಿಲ್ಲ. ... ಇವರೂ ಬೋರ್ಡು ಮೆಂಬರುಗಳೂ ಈ ಭಾಗದಲ್ಲಿ ಹೆಚ್ಚು ಗಮನ ಕೊಟ್ಟು ಲೆಕ್ಕದಲ್ಲಿ ನಂಬರು ಸೇರಿಸಿಕೊಟ್ಟು ಸಹಾಯ ಮಾಡಬೇಕಾಗಿದೆ.

ಒಬ್ಬ ಸ್ಕೂಲ್ ಕಮಿಟಿ ಮೆಂಬರು.

ನಂಜನಗೂಡು ವಿಚಾರಗಳು

ಸ್ವಾ,

ಈ ಊರು ಮಂಗೆಸಾಪ್ಪನವರ ಅಂಗಡಿಯಲ್ಲಿ ಅಡಿಕೆಮೂಟೆ ಕಳುವಾ... ಆ ಮಾಲು ಒಬ್ಬ ನಂಜುಂಡಯ್ಯ ಎಂಬುವನ ಬಳಿ ಇತ್ತೆಂತಲೂ, ... ವಿಚಾರಿಸುವಲ್ಲಿ ಕರ್ ಎಂಬುವನು ತನಗೆ ಕೊಟ್ಟನೆಂತ ಹೇಳಿದ್ದರ... ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರವರು ಕಳ್ಳನಿಗೆ 9 ತಿಂಗಳು ಸಜಾ ವಿಧಿಸಿ... ದ್ದಾರೆ. ಇದು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ ಅಪೀಲ್ ... ಗಿ ಒಂದು ತಿಂಗಳು ಆಗುತ್ತಾ ಬಂದಿದೆ. ಅಪರಾಧಿಯನ್ನು ಜಾಮೀನ... ಬಿಡಲೇಯಿಲ್ಲ. ಪತ್ತರ ಹಿಯರಿಂಗ್ ಆಗಿ ... ಗಾಗಲು ತೆಗೆದ ಮೇಲೆ ಹಿಯರಿಂಗ್ ಇಟ್ಟಿರುವ ... ಉತ್ತೇನೆ. ಹೀಗೆ ಕೈದಿಗಳ ವಿಷಯದಲ್ಲಿ ದೀರ್ಘಕಾಲ ಹಿಯರಿಂಗ್ ಇಡುವದು ನ್ಯಾಯವೇ, ಧರ್ಮವೇ ?

ಈ ಊರು ಶ್ರೀ ಶ್ರೀಕಂಠೇಶ್ವರಸ್ವಾಮಿಗೆ ಮಾನ್ಯರು ಕಾವೇರಿಯಿಂದ ತಂದ ಗಂಗೆಯನ್ನು ಅಭಿಷೇಕ ಮಾಡಕೂಡದೆಂದು ದೇವಸ್ಥಾನದ ಆಗಮಿಕರೇ ಮೊದಲಾದವರು ಅಡ್ಡಿಪಡಿಸಿದ್ದರ ಮೇಲೆ 2 ವರುಷಗಳಿಂದಲೂ ಗವರ್ನಮೆಂಟಿನಲ್ಲಿ ವಿಚಾರಣೆ ನಡೆದು ನಮ್ಮ ದಿವಾನ್ ಸಾಹೇಬರವರು ಮಾನ್ಯರು ಗಂಗಾಭಿಷೇಕ ಮಾಡಿಸಬಹುದೆಂದು ಹುಕುಂ ದಯಪಾಲಿಸಿದ್ದರ ಮೇಲೆ ದೇವಸ್ಥಾನದಲ್ಲಿ ಗಂಗಾಭಿಷೇಕವನ್ನೂ, ಉತ್ಸವಾದಿಗಳನ್ನೂ ಮಾಧ್ವರೆಲ್ಲರೂ ಸೇರಿ ಮಾಡಿಸಿ ಸಂತೋಷಪಟ್ಟರು. ಶ್ರೀ ಸೀತಾರಾಮ ಮಂದಿರದಲ್ಲಿ ರಾಮೋತ್ಸವವು ಬಹು ವಿಜೃಂಭಣೆಯಿಂದ ನಡೆಯಿತು. ಮಂದಿರದ ಮುಖ್ಯಸ್ಥರಾದ ಮ|| ಚಂದ್ರಶೇಖರಯ್ಯನವರ ಔದಾರ್ಯವು ಶ್ಲಾಘ್ಯವಾಗಿದೆ.

ಇಲ್ಲಿನ ಸಬ್ ರೆಜಿಸ್ಟ್ರಾರ್‌ರವರು 8 ಘಂಟೆಯಾದರೂ ಆಫೀಸಿಗೆ ಬರುವದೇ ಇಲ್ಲವೆಂತಲೂ, ಆ ಆಫೀಸ್ ಹೆಡ್ ಗುಮಾಸ್ತೇ ಪತ್ರಗಳನ್ನೂ, ಫೀಜು ವಗೈರೆಯನ್ನೂ ತೆಗೆದುಕೊಳ್ಳುತ್ತಾರೆಂತಲೂ, ಇವರ ಇಷ್ಟಕ್ಕೆ ವಿರೋಧವಾಗಿ ಹೋದವನ ದಸ್ತಾವೇಜನ್ನು ನಾಳೆ ತರಬೇಕು, ಈ ದಿವಸ ಟೈಂ ಇಲ್ಲವೆಂದು ವಾಪಸು ಮಾಡಿಬಿಡುತ್ತಾರೆಂತಲೂ, ಈ ವಿಷಯ ಸಬ್ ರೆಜಿಸ್ಟ್ರಾರ್‌ರವರಲ್ಲಿ ಹೇಳಿಕೊಂಡರೆ ಅವರ ಮಾತಿಗೆ ಗಮನಕೊಡುವದೇ ಹೊರ್ತು ಅಂಥಾ ದಸ್ತಾವೇಜುಗಳನ್ನು ತೆಗೆದುಕೊಂಡು ರಜಿಸ್ಟರ್ ಮಾಡುವದಿಲ್ಲವೆಂತಲೂ, ಬಹುದೂರ ಫಾಸಲೆಯಿಂದ ಬಂದು 1-3 ದಿವಸ ನಂಜನಗೂಡಿನಲ್ಲಿ ನಿಲ್ಲಬೇಕಾಗುತ್ತೆಂತಲೂ ಅನೇಕರು ನೊಂದುಕೊಳ್ಳುತ್ತಾ ಇದ್ದಾರೆ. ಡೆಪ್ಯುಟಿ ಕಮಿಷನರ್ ಸಾಹೇಬರವರು ತನಿಖೆಯಿಂದ ಸರಿಯಾದ ಏರ್ಪಾಡು ಮಾಡಿಸುತ್ತಾರೆಂದು ನಂಬಿರುತ್ತೇನೆ.

ಈ ಊರಿನಲ್ಲಿ 4 ಜನ ಸ್ಟ್ಯಾಂಪ್ ವೆಂಡರುಗಳು ಇದ್ದರೂ ಇವರ ಬಳಿ ಕೇಳಿದ ದರಗಳ ಜನರಲ್ ಸ್ಟ್ಯಾಂಪೇ ಇಲ್ಲವೆಂದು ಈಗ್ಗೆ 10-13 ದಿವಸಗಳಿಂದ ಜನಗಳನ್ನು ವಾಪಸು ಕಳುಹಿಸುತ್ತಾರೆ. ತಾಲ್ಲೂಕು ಟ್ರೆಷರಿಯಲ್ಲಿ ಅವನ್ನು ತರಿಸದೆ ಇರುವದೇ ಮುಖ್ಯ ಕಾರಣವಾಗಿ ಜನಗಳಿಗೆ ತುಂಬಾ ತೊಂದರೆಗೆ ಅವಕಾಶವಾಗಿರುತ್ತೆ. ನಮ್ಮ ಶಿರಸ್ತೇದಾರ್‌ರವರು ಸ್ಟ್ಯಾಂಪುಗಳನ್ನು ತರಿಸಿ ವೆಂಡರುಗಳಿಗೆ ಸಪ್ಲೈ ಮಾಡುವಂತಾದರೆ ದೂರದಿಂದ ಬರುತಕ್ಕವರಿಗೆ ತುಂಬಾ ಉಪಕಾರವಾದೀತು.

ಹಿತಚಿಂತಕ.

ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯವಿಮರ್ಶೆ

ಅಯ್ಯಾ,

ತಾ. 17 ನೇ ಪತ್ರಿಕೆಯ 4 ನೇ ಪುಟದಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯವಿಮರ್ಶೆ ಎಂಬ ಆರ್ಟಿಕಲ್ ನೋಡಿದೆನು. ಸಂಸ್ಥಾನಕ್ಕೆ ಬರುವ ಕುಂದುಕಷ್ಟಗಳು ಕಂಡು ವ್ಯಸನವಾಗುತ್ತದೆ. ಇದು ಶೋಧಿಸದೆ - ವಿಚಾರವಿದ್ದರೆ ವಿಮರ್ಶೆಯಾಗುತ್ತೆ, ಅವಿಚಾರವಾದರೆ ಅನ್ಯಾಯವಾಗುತ್ತೆ. ಎಂಬ ಗಾದೆಯು ಜ್ಞಾಪಕವಾಯಿತು. ದೊಡ್ಡವರನ್ನು ನಂಬಿಕೊಳ್ಳಬೇಕೆಂಬವರ ದರೋಬಸ್ತು ಹೆಚ್ಚಿ, ದಡ್ಡರಿಗೆ ದಾರಿದ್ರ್ಯ ಸ್ವಾಪ್ತವಾಯಿತು. ನಾಗರೀಕ ಹೆಚ್ಚಿ ನ್ಯಾಯ ಮುಳುಗಿತು. ನ್ಯಾಯ ಮುಳುಗಿದ್ದರಿಂದ ಅನ್ಯಾಯವು ಅನಂತವಾಯಿತು. ಇದು ಮಲೆನಾಡಿನಲ್ಲಿ ಅಂತೂ ಮಸ್ತಾನೆ ಆಗಿದೆ. ಇದನ್ನು ಕಂಡುಹಿಡಿಯುವದು ಕಠಿಣವೆಂಬದರಿಂದ ಪ್ರವೃದ ಪಕ್ಷದರ್ಶನವೂ, ಸಿಸ್ಟ್ರೋಜನ ಪಕ್ಷ ನಿರ್ಣಯವೂ ಸ್ವಾಪ್ತವಾಯಿತು. ಹೀಗಾದ ಬಳಿಕ 110 ಕೇಸುಗಳ ಜವಾಬ್ದಾರಿಯು ನ್ಯಾಯವಾಗಿ ಹೊರಪಡದೆ, ನಿರಪರಾಧಿಗಳು ಅಪರಾಧಿಯಾಗುವದೂ, ಅಪರಾಧಿಯು ಆಬಾಧಿತನಾಗುವದೂ ಸಹಜವಾಯಿತು. ಹೀಗಾದ ಮೇಲೆ 110 ಕೇಸುಗಳ ಅಪರಾಧಿಗಳೆಂಬವರಿಗೆಲ್ಲಾ ನ್ಯಾಯಸ್ಥಾನದಲ್ಲಿ ಶಿಕ್ಷೆಯಾಗುವದು ಹ್ಯಾಗೆ? ನಿರಪರಾಧಿಗಳು ಅಪರಾಧಿಗಳಾದ ಕಾರಣವೇನು - ಅಪರಾಧಿಗಳು ಆಬಾಧಿತರಾದ ಕಾರಣವೇನು? ಎಂಬದು ಕೇಸು ವಿಚಾರಣೆಮಾಡಿದ ಪೋಲೀಸ್ ಆಫೀಸರಿಗೆ ಡಿಪಾರ್ಟ್‌ಮೆಂಟಲಾಗಿ ಮೇಲಾಧಿಕಾರಿಗಳು ತನಿಖೆಮಾಡಿದ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ಮಾಡದಿರುವದೇ ಇಷ್ಟು ಗಲಿಬಿಲಿಗೆ ಕಾರಣವು. ಪೋಲೀಸ್ ಖಾತೆಯ ವಾರ್ಷಿಕ ರಿಪೋರ್ಟಿನಲ್ಲಿ ಲಂಚಕೊಡತಕ್ಕವರು ಕೊಡದೇ ಹೋಗುವ ಭಾಗದಲ್ಲಿ ಪೋಲೀಸಿನವರ ಲಂಚಕೋರತನ ತಾನಾಗಿ ನಿಲ್ಲುತ್ತೆಂತಲೂ ವಗೈರೆ ಅಭಿಪ್ರಾಯಪಟ್ಟ ಮೇಲೆ ಲಂಚದ ವೃದ್ಧಿಗೆ ಪ್ರಯಾಸ ಬೇಡವಾಯಿತು, ಅನೇಕ ದುಷ್ಟರಿಗೆ ಧೈರ್ಯವಾಯಿತು. ಅಧಿಕಾರಿಗಳ ಬುದ್ಧಿಕೌಶಲ್ಯವು ಹೀಗೆ ಪರಿಣಮಿಸಿದ್ದು ದೌರ್ಭಾಗ್ಯವಾಗಿದೆ. ಕೆಲವು ಸಿವಿಲ್ ಕೋರ್ಟುಗಳು ಕೆಲವು ಶ್ರೀಮಂತರಿಗೂ, ಕೆಲವು ಕ್ರಿಮಿನಲ್ ಕೋರ್ಟುಗಳು ಕೆಲವು ಕ್ರಿಯಾಭ್ರಷ್ಟರಿಗೂ ಅನುಕೂಲವಾಗಿವೆ. ಈಚೀಚೆಗೆ ನ್ಯಾಯಕ್ಕೆ ನಾಯಿನರಿಗಳು ಕೂಡ ವಿರೋಧಿಗಳಾಗಿವೆ. ಹೀಗಾದ ಮೇಲೆ ಪೋಲೀಸು ಕಾರುಬಾರ್ಗಳ ರಿಪೋರ್ಟು ಕ್ರಿಮಿನಲ್ ನ್ಯಾಯವಿಮರ್ಶೆಯ ರಿಪೋರ್ಟಿಗೆ ಹೋಲುವದು ಸಾಧ್ಯವೇ? ಈಗ ಈ ಸಂಸ್ಥಾನಕ್ಕೆ ಮಂತ್ರಿಶ್ರೇಷ್ಠರಾದ ಮ|| ವಿಶ್ವೇಶ್ವರಯ್ಯ ಬಹದ್ದೂರರವರು ನಿಷ್ಪಕ್ಷಪಾತಿಗಳಾಗಿಯೂ, ನ್ಯಾಯಪಾಲಿಗಳಾಗಿಯೂ ದರ್ಶನದಿಂದ ಕಾರುಬಾರುಗಳು ನಡಿಸತಕ್ಕವರೆಂದು ಬೇರೆ ಕೋಸ್ತುಗಳಲ್ಲಿ ಇವರನ್ನು ಜನಗಳು ಹೊಗಳುತ್ತಿರುವಂತೆ ಈ ಸಂಸ್ಥಾನದಲ್ಲಿಯೂ ಹೊಗಳುವಂತೆ ಇಲ್ಲಿಯ ಅವಿವೇಕಗಳೆಲ್ಲವನ್ನೂ ನಿಷ್ಪಕ್ಷಪಾತದಿಂದ ಕಂಡುಹಿಡಿದು ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಮಾಡಿ, ಮುಳುಗಿಹೋದ ನ್ಯಾಯವನ್ನು ಸರ್ವಪ್ರಯತ್ನದಿಂದ ಮೇಲಕ್ಕೆ ಎತ್ತಿ ನ್ಯಾಯದ ನಡೆಯುವ ದರ್ಶನವನ್ನು ಸ್ಥಾಪಿಸಿ ನ್ಯಾಯಾಧಿಕರಣದ ಮೇಲು ಪಂಕ್ತಿತೊಟ್ಟು ಬಡಜನಗಳನ್ನು ಕಾಪಾಡಿ ಭಗವಂತನ ಕೃಪೆಗೆ ಪಾತ್ರರಾಗಿ ಕೀರ್ತಿಶಾಲಿ ತವನ್ನು ಹೊಂದಿ ಈ ಪದವಿಯ ಸಾರ್ಥಕತದಿಂದ ಪ್ರಜಾಪರಿಪಾಲನೆ ಮಾಡಲು ಅನುಗ್ರಹಿಸಬೇಕೆಂದು ಬಹು ಜನರು ಮ|| ವಿಶ್ವೇಶ್ವರಯ್ಯನವರನ್ನು ಕುರಿತು ಶ್ರೀಭಗವಂತನಲ್ಲಿ ಬೇಡಿಕೊಳ್ಳುತ್ತಿದ್ದಾರೆ. ನ್ಯಾಯಸ್ಥಾನದ ವಿಷಯದಲ್ಲಿ ಘನವನ್ನು ಹೊಂದಿದ ಮಂತ್ರಿಸಮಾಜದ ಕೌನ್ಸಲರುಗಳೂ, ನ್ಯಾಯಕ್ಕೆ ತಜ್ಞರಾದ ಚೀಫ್ ಜಡ್ಜಿಗಳೂ ಮುತುವರ್ಜಿಯನ್ನು ವಹಿಸಿ ಪ್ರಜಾಕೋಟಿಯನ್ನು ಕಾಪಾಡಬೇಕೆಂದು ಬೇಡುತ್ತೇನೆ.

ಸಕಲಜನ ಕ್ಷೇಮಾಭಿಲಾಷಿ, ಶಿವಮೊಗ್ಗಾ.

ತಾಲ್ಲೋಕು ವರ್ತಮಾನಗಳು.

ಶಿವಮೊಗ್ಗಾ ತಾ|| ಹಾರನಹಳ್ಳಿ — ಈ ತಿಂಗಳು ತಾ 1 ರಿಂದ 14 ರ ತನಕ ಈ ಹಾರನಹಳ್ಳಿಯಲ್ಲಿ ಶ್ರೀ ... ರ ರಥೋತ್ಸವವು ಬಹು ವಿಜೃಂಭಣೆಯಿಂದ ನಡೆಯಿಸಲ್ಪಡುತ್ತೆ. ಇದರ ಸಂಗಡ ಮೂರು ದಿವಸ ಬೆಳಿ... ದ ತಾಲ್ಲೂಕಿನ ಪಟ್ಟಣಗಳ ಕುಸ್ತಿಗಳು ಸಹ ನಡೆಯುವವು. ಈ ಉತ್ಸವವು 1-5 ವರ್ಷದ ... ಪ್ಲೇಗ್ ... ಗಳ ... ಆಗಿತ್ತು.

ಅರಸೀಕೆರೆ. — ಇಲ್ಲಿ ಬಿಸಿಲಿನ ತಾಪ ಸಹಿಸಲಸಾಧ್ಯವಾಗಿದೆ. ಇದೂ ಅಲ್ಲದೆ ಈ ವರುಷ ಪ್ಲೇಗ್ ಉಪದ್ರವಕ್ಕೆ ಬದಲಾಗಿ ಕಾಲರಾ ಬಂದು ಅನೇಕರು ತೀರಿಹೋಗಿ ಅನೇಕ ಸಂಸಾರಗಳನ್ನು ಮಹಾ ದುಃಖಕ್ಕೆ ಒಳಪಡಿಸಿರುತ್ತದೆ. ಆದ್ದರಿಂದ ಅನೇಕರು ಬಹು ಭಯಭಕ್ತಿಯುಳ್ಳವರಾಗಿ ಸಾಯಂಕಾಲದ ವೇಳೆಯಲ್ಲಿ ಮೊದಲಿಯಾರ್‌ರು ಒಂದು ಕಡೆ, ಮಹಮದೀಯರು ಒಂದು ಕಡೆ, ಮರಾಟಿಯವರು ಒಂದು ಕಡೆ, ವೈಶ್ಯರು ಮತ್ತೊಂದು ಕಡೆ ಗೀತಗಳಿಂದ ಭಗವಂತನನ್ನು ಪೂರ್ಣ ನಂಬಿಕೆಯಿಂದ ಸ್ತುತಿಸುತ್ತಾ ಎಲ್ಲೆಲ್ಲಿಯೂ ಭಜನೆ ಹೊರಡುವರಾಗಿದ್ದಾರೆ. ಮತ್ತು ಇಲ್ಲಿ ಡಾಕ್ಟರುಗಳ ಮುಖ್ಯ ಪ್ರಯತ್ನದಿಂದ ರೋಗವು ಸ್ವಲ್ಪ ಕಡಮೆಯಾದಂತೆ ತೋರುತ್ತೆ. — ಇದೇ ಊರಿಗೆ ಸೇರಿದ ಬೊಮ್ಮೇನಹಳ್ಳಿಯ ಉಪದೇಶಿಗಳಾದ ಮ|| ಅಂಡ್ರ್ಯು ಮಾರ್ಟಿನ್‌ರವರ ಕುಮಾರನು ಎ. ಮಾರ್ಟಿನ್ ಎಂಬುವವನು ಕಳೆದ ತಾ 24 ರಲ್ಲಿ ಜ್ವರದಿಂದ ಕಾಲವಾದನು.

ನಂಜನಗೂಡು. — ಚಾಮಲಾಪುರ ಹುಂಡಿಯಲ್ಲಿ ಅಳಗಂಚಿ ರಾಚಶೆಟ್ಟಿ ಎಂಬಾತನು 2 ತಿಂಗಳ ಕೆಳಗೆ ಹುಚ್ಚುನಾಯಿಂದ ಕಚ್ಚಲ್ಪಟ್ಟು ಡಾಕ್ಟರ್ ಬೆಂಗಲ್‌ರಾಯಮೊದಲಿಯಾರ್‌ರಿಂದ ಚಿಕಿತ್ಸೆಮಾಡಿಸಿಕೊಂಡು ಗುಣವಾಯಿತೆಂದು ನಂಬಿಕೊಂಡಿದ್ದನು. ಆದರೆ ಈ ಸಾರಿ ಗುಡುಗಿದ ಕೂಡಲೇ ಆತನು ಹುಚ್ಚು ಹಿಡಿದು ವಿಪರೀತವಾಗಿ ಗಲಾಟೆ ಮಾಡಿ ಬಂಧುಗಳಿಗೆ ತೊಂದರೆಕೊಟ್ಟು ಬೊಗಳಿ ಕಳೆದ ವಾರ ತೀರಿಹೋದನು. ಈತನು ತನ್ನ ಆಪ್ತರು ಮೊದಲಾದವರಿಗೆ ದ್ರವ್ಯ ಮೊದಲಾದ ಸಹಾಯಗಳನ್ನು ಮಾಡುತ್ತಾ ಉಪಕಾರಿಯಾಗಿಯೂ ಸದ್ಗುಣಶಾಲಿಯಾಗಿಯೂ ಇದ್ದದ್ದರಿಂದ ಈತನ ಮರಣವು ಅನೇಕರಿಗೆ ಬಹಳ ದುಃಖವನ್ನುಂಟುಮಾಡುತ್ತದೆ. ಹುಚ್ಚುನಾಯಿಂದ ಕಚ್ಚಲ್ಪಟ್ಟವರು ಬೇರೆ ವಿಧ ಚಿಕಿತ್ಸೆಗಳಲ್ಲಿ ಭರವಸೆ ಇಡದೆ ಮತ್ತು ಕಾಲವಿಳಂಬ ಮಾಡದೆ ಹುಚ್ಚುನಾಯಿಕಡಿಸಿಕೊಂಡವರಿಗಾಗಿ ನೀಲಗಿರಿಯಲ್ಲಿ ಕಟ್ಟಲ್ಪಟ್ಟಿರುವ ಆಸ್ಪತ್ರೆಗೆ ಸರ್ಕಾರದವರ ಸಹಾಯದಿಂದ ಅಥವಾ ತಮ್ಮ ಸ್ವಂತ ಖರ್ಚಿನಿಂದಲಾದರು ಹೋಗಿ ಕೆಲವು ಕಾಲ ಚಿಕಿತ್ಸೆ ಹೊಂದಿ ಬಂದರೆ ಸಂಪೂರ್ಣ ಗುಣಹೊಂದಿ ಪ್ರಾಣಸಂರಕ್ಷಣೆ ಹೊಂದಿಕೊಳ್ಳಬಹುದು.

ಚಿಕ್ಕಬಳ್ಳಾಪುರ ತಾ|| ನಂದಿ — ಕಳೆದ ತಿಂಗಳ 10 ನೇ ತಾ ನಂದಿಬೆಟ್ಟವನ್ನು ನೋಡುವುದಕ್ಕೆ ದಯಮಾಡಿಸಿದ್ದ ಮೈಸೂರು ಸಂಸ್ಥಾನದ ದಿವಾನ್ ಸಾಹೇಬ್ ಬಹದ್ದೂರ್‌ರವರೂ, ಮೊದಲನೇ ಕೌನ್ಸಿಲರ್ ಮ|| ನಂಜುಂಡಯ್ಯನವರೂ, ಎರಡನೇ ಕೌನ್ಸಿಲರ್ ಮ|| ಕಾಂತರಾಜೆ ಅರಸಿನವರೂ ಚಿಕ್ಕಬಳ್ಳಾಪುರಕ್ಕೆ ಹೋಗುವ ನಿಮಿತ್ತ ಈ ಗ್ರಾಮದ ಮೇಲೆ ಸವಾರಿ ದಯಮಾಡಿದರು. ಗ್ರಾಮದ ಮಹಾಜನಗಳು ಅವರನ್ನು ಮರ್ಯಾದೆಯಿಂದ ಎದುರುಗೊಂಡು ಹಾರಾ ತುರಾಯಿಗಳನ್ನೊಪ್ಪಿಸಿ ಅವರವರ ಅಹವಾಲುಗಳನ್ನು ಹೇಳಿಕೊಂಡರು. ನಂತರ ಅವರು ಶ್ರೀಭೋಗನಂದೀಶ್ವರಸ್ವಾಮಿ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನವನ್ನು ಮಾಡಿಕೊಂಡು ಹಿಂತಿರುಗಿ ಸ್ಕೂಲಿಗೆ ಚಿತ್ತೈಸಿದರು. ಹೆಡ್ ಮಾಸ್ಟರವರು ಹಾರಾ ತುರಾಯಿಗಳನ್ನು ಒಪ್ಪಿಸಿ ಸ್ಕೂಲು ಪುರೋಭಿವೃದ್ಧಿಯ ವಿಚಾರಗಳನ್ನೂ, ಹೊಸ ಸ್ಕೂಲುಕಟ್ಟಡ ಆಗುವುದಕ್ಕಾಗಿ ಡೆಪ್ಯುಟಿ ಕಮಿಷನರ್‌ರವರು ಮಾಡಿದ ಮಹೋಪಕಾರವನ್ನೂ ವಿಜ್ಞಾಪಿಸಿಕೊಂಡರು. ದಿವಾನ್ ಸಾಹೇಬರು ಸ್ಕೂಲನ್ನು ಪರಾಂಬರಿಸಿ ತುಂಬಾ ಸಂತೋಷಪಟ್ಟು ಬಾಲಕ ಬಾಲಕಿಯರಿಗೆ ತಿಂಡಿ ಹಂಚುವುದಕ್ಕಾಗಿ ಬಹುಮಾನವನ್ನು ದಯಪಾಲಿಸಿ ಬೆಟ್ಟಕ್ಕೆ ದಯಮಾಡಿದರು. — ಈ ಬಹುಮಾನವನ್ನು ವಿನಿಯೋಗಿಸುವ ನಿಮಿತ್ತ ಒಂದು ಸಭೆ ಸೇರಿತ್ತು. ಸ್ಕೂಲು ಕಟ್ಟಡವನ್ನು ಅಲಂಕರಿಸಿತ್ತು. ಗ್ರಾಮದ ಮುಖಂಡರೆಲ್ಲರೂ ಹಾಜರಾಗಿದ್ದರು. ಬಾಲಕರಿಂದ ಮೊದಲು ಡ್ರಿಲ್ ವಗೈರೆ ಮಾಡಿಸಲ್ಪಟ್ಟಿತು. ನಂತರ ಹೆಡ್ ಮಾಸ್ಟರು ದಿವಾನ್ ಸಾಹೇಬರೂ ಕೌನ್ಸಿಲರುಗಳೂ ಸ್ಕೂಲಿಗೆ ದಯಮಾಡಿದ ವಿಷಯವಾಗಿಯೂ, ವಿದ್ಯಾಭ್ಯಾಸದ ವಿಷಯವಾಗಿಯೂ ಬಹು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಬಳಿಕ ಹುಡುಗರಿಂದ ಮಹಾಚಕ್ರವರ್ತಿಯವರ ಮತ್ತೂ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆ ಹೇಳಿಸಲ್ಪಟ್ಟು ಬಾಲಕರಿಗೆ ತಿಂಡಿ ಹಂಚಲ್ಪಟ್ಟು ಜಯಧ್ವನಿಗಳಿಂದ ಸಭೆಯು ಬರಖಾಸ್ತಾಯಿತು. — ಈ ಸ್ಕೂಲು ದೊಡ್ಡದು, ನಾಲ್ಕು ಜನ ಮಾಸ್ಟರುಗಳೂ, 100 ಜನ ಬಾಲಕರೂ ಉಳ್ಳದ್ದಾಗಿದೆ. ಸರ್ಕಾರದವರಿಂದ ಹೊಸ ಕಟ್ಟಡ ಸ್ಯಾಂಕ್ಷನ್ ಆಗಿ ಶುರುವಾಗಿರುತ್ತದೆ. ಉಪಾಧ್ಯಾಯರುಗಳೆಲ್ಲರೂ ಸ್ಕೂಲು ಕೆಲಸವನ್ನು ತುಂಬಾ ಶ್ರದ್ಧೆಯಿಂದ ಮಾಡುತ್ತಿದ್ದಾರೆ. ಈ ಸಲ ಪರೀಕ್ಷೆಗೆ 6 ಜನ ವಿದ್ಯಾರ್ಥಿಗಳು ಹೋಗಿದ್ದಾರೆ.

ಹುಣಸೂರು. — ಕಳೆದ ತಿಂಗಳೆಲ್ಲಾ ಕಾಲರಾ ಗಲಾಟೆಯಿಂದ ಸುಮಾರು 30 40 ಜನರು ಕಾಲವಾದರು. ನಮ್ಮ ಅಮಲ್ದಾರ್‌ರು, ಡಾಕ್ಟರು ಮುಂತಾದ ಗೌರ್ನಮೆಂಟ್ ಉದ್ಯೋಗಸ್ಥರ ಪ್ರಜಾಹಿತಚಿಂತನೆಯಿಂದಲೂ, 3-4 ಹದ ಒಳ್ಳೇ ಮಳೆಯಾದ್ದರಿಂದಲೂ ಕಾಲರಾ ವಗೈರೆ ಗಲಾಟೆಗಳೇನೂ ಇರುವದಿಲ್ಲ. ಉಪದ್ರದ ಗಲಾಟೆ ಶಾಂತಿಯಾಗಲು ಟೌನ್ ಮುಖಂಡರೂ ದೊಡ್ಡ ಮನುಷ್ಯರುಗಳೂ ಆದ ಮ|| ಗಳಾದ ಅರುಣಾಚಲಂ ಪಿಳ್ಳೆಯವರೂ, ಮ್ಯುನಿಸಿಪಲ್ ಮೆಂಬರು ತಿರುವೆಂಗಡಂ ಮೊದಲಿಯಾರ್‌ರು, ಮತ್ತು ಸಾಹುಕಾರ್ ರಾಜಗೋಪಾಲಯ್ಯನವರು ಮುಂತಾದವರು ಈ ಊರಿನ ಮನೆಗಳವರಿಂದೆಲ್ಲಾ ಚಂದಾ ಎತ್ತಿ ಗ್ರಾಮಶಾಂತಿಗಾಗಿ ಅನ್ನಶಾಂತಿ, ಆಹುತಿ, ಆರತಿ ಮುಂತಾದವುಗಳನ್ನು 8 10 ದಿನಗಳ ವರೆಗೂ ಮಾಡಿ ಭಜನೆ ಬ್ಯಾಂಡ್ ಸಮೇತ ನಡಿಸಿದರು. — ಕಳೆದ ಶುಕ್ರವಾರ ಸುಮಾರು 8 9 ಗಂಟೆಗೆ ಇಲ್ಲಿ ಕಂಪನಿಗಳಲ್ಲಿ ಕೆಲಸಮಾಡುತ್ತಾ ಇದ್ದ ವೆಳ್ಳಾರ ಜಾತಿ ಸುಮಾರು 35 ವರುಷ ವಯಸ್ಸುಳ್ಳ ಸುಬ್ರಾಯಪಿಳ್ಳೆ ಎಂಬ ಮನುಷ್ಯನು ಮನೆ ಬೀದಿ ಬಳಿಯ ಭಾವಿಯಲ್ಲಿ ಆಕಸ್ಮಾತ್ತಾಗಿ ಬಿದ್ದು ಮೃತಪಟ್ಟನು. ಶವವನ್ನು ಖಾಸಮಾದ ಪೋಲೀಸಿನವರು ಬಂದು ಮಹಜರು ಮಾಡಿ ... ಈ ಊರಲ್ಲಿ ಯಾರೂ ವಾರಸ್ದಾರರು ಇಲ್ಲದೆ ಸರ್ಕಾರದವರೇ ದಫನ್ ಮಾಡಿಸಿದರು. ಸೆಕೆ ತಡೆಯಲು ಆಗುವದಿಲ್ಲ. ಮಳೆಯೂ ಆಗುತ್ತಾ ಇದೆ. (ಇನ್ನೊಬ್ಬ ಬಾತ್ಮೀದಾರರಿಂದ) ಈಗ್ಗೆ 2 3 ದಿವಸದಲ್ಲಿ ಸಂತುವೆ ಬಳಿ ವಿರಾಮ ಅಂಗಡಿಗೆ ಕಳ್ಳರು ನುಗ್ಗಿ ಕೆಲವು ಸಾಮಾನು ಒಡವೆ ಮುಂತಾದವುಗಳನ್ನು ಸಾಗಿಸಿಕೊಂಡುಹೋದರೆಂದು ಕೇಳುತ್ತೇವೆ. ಇಲ್ಲಿನ ಕೆಲವು ದೊಡ್ಡ ಮನುಷ್ಯರು ಮ|| ನರಸಿಂಹಯ್ಯಂಗಾರ್‌ರಿಗೆ ಅನುಲಾಭ ಆಯಿತೆಂದು ಕೇಳಿ ಸಂತೋಷಪಡುತ್ತಾ ಇದ್ದಾರೆ. ಈ ತಾಲ್ಲೂಕಿಗೆ ಸೇರಿದ ಕೊಪ್ಪ ಎಂಬ ಊರಿಗೂ ಹುಣಸೂರಿಗೂ 25 ಮೈಲಿ ಫಾಸಲೆ ಇರುತ್ತೆ. ಅಲ್ಲಿನ ಮೊಕದ್ದಮೆಗಳು ಇದೇ ಕೋರ್ಟಿಗೆ ಬರಬೇಕಾಗಿರುವುದರಿಂದ ಅಮಲ್ದಾರ್‌ರಿಗೆ 2 ನೇ ಕ್ಲಾಸು ಪವರು ಇಲ್ಲದ್ದರಿಂದ 2 ನೇ ಕ್ಲಾಸ್ ಮೊಕದ್ದಮೆಗಳು ಇಲ್ಲಿಂದ ಮೈಸೂರಿಗೆ ಹೋಗಬೇಕಾಗಿದೆ. ಈ ತಾಲ್ಲೂಕಿನಿಂದ ಮೈಸೂರಿಗೆ 30 ಮೈಲಿ ಇರುತ್ತೆ. ಇದರಿಂದ ಬಡಬಗ್ಗರಿಗೆ ಕಷ್ಟವೆಂದು ಹೇಳಿಕೊಳ್ಳುತ್ತಾರೆ. ಹಿಂದೆ ಇದ್ದ ಅಮಲ್ದಾರ್‌ರಿಗೆ 2 ನೇ ಕ್ಲಾಸ್ ಪವರು ಇತ್ತು. ಇಲ್ಲಿ ಮತ್ತು ಅಕ್ಕಪಕ್ಕದ ಗ್ರಾಮದ ರೈತರು ಸೇರಿ ಮೇಲ್ಪಟ್ಟ ಅಧಿಕಾರಿಗೆ ಒಂದು ಅರ್ಜಿ ಬರೆದು ಈ ಅಮಲ್ದಾರ್‌ರಿಗೆ ಅಧಿಕಾರವನ್ನು ಕೊಡಿಸಿ ಬಡವರಿಗೆ ಅನುಕೂಲಪಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳಬೇಕೆಂದು ಮಾತಾಡಿಕೊಳ್ಳುತ್ತಾರೆ.

1914 ನೇ ವರ್ಷದ ಲೋವರ್ ಸೆಕಂಡರಿ ಕನ್ನಡ

ಟೆಕ್ಸ್ಟ್ ನೋಟ್ಸು ಬೇಗನೆ ಸಿದ್ಧವಾಗಿದೆ—ಕ್ರಯ 6 ಆಣೆ

ಡಿಸ್ಕೌಂಟು 10 ಕ್ಕೆ 1, 50 ಕ್ಕೆ 7, 100 ಕ್ಕೆ 20

ನಮ್ಮ ನೋಟು ಬೇಕಾಗಿದ್ದರೆ ನೋಟ್ಸಿನ ಮೇಲೆ ನಮ್ಮ ಹೆಸರನ್ನು ನೋಡಿ ತೆಗೆದುಕೊಳ್ಳಿ [81 2]

ಎಂ. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ ಮೈಸೂರು

ಖ್ಯಾತವಾದ ವಾಚ್ — ಖ್ಯಾತವಾದ ವಾಚ್

ರೈಲ್ವೆ ಗಾರ್ಡ್ ಲೀವರ್ ಪಾಕೆಟ್ ವಾಚ್

ಇದರ ಕ್ರಯ—ಸಾಧಾರಣ ವಾಚ್ ಸರಪಣಿ ಸಮೇತ ರೂ 2-8-0 ಮಾತ್ರ

೩ ವರುಷಗಳ ಗ್ಯಾರಂಟಿ

ಇದು ಮಕ್ಕಳ ಆಟದ ಬೊಂಬೆಗಳಂತೆ ಕೆಲವು ದಿವಸಗಳು ಆಟವಾಡಿ ಕೆಟ್ಟು ಹೋಗತಕ್ಕಂಥಾ ಅಲ್ಲ ನಡಿಯುವಲ್ಲಿ ಸಾಧಾರಣವಾದ ವಾಚ್‌ಗಳಿಗಿಂತ



ಬಹು ಶ್ರೇಷ್ಠವಾದದ್ದು ರೈಲ್ವೆ ಗಾರ್ಡ್ ರೈಲ್ವೆ ಇಂಜಿನ್ ಡ್ರೈವರ್ ಮುಂತಾದ ಅನೇಕ ರೈಲ್ವೆ ಉದ್ಯೋಗಸ್ಥರು ಇದನ್ನು ಇಟ್ಟುಕೊಂಡು ಉಪಯೋಗಿಸುತ್ತಾರೆ ಆದಕಾರಣ ಇದಕ್ಕೆ ರೈಲ್ವೆ ಗಾರ್ಡ್ ವಾಚ್ ಎಂಬ ಹೆಸರು ಬಂದಿರುತ್ತೆ ಇದನ್ನು ಇಟ್ಟುಕೊಂಡು ರೈಲ್ವೆ ಗಾರ್ಡುಗಳು ರೈಲ್ ನಡಸುತ್ತಾರೆ ಈ ವಾಚ್ ವಿಚಾರವಾಗಿ ಹೆಚ್ಚಾಗಿ ಎಷ್ಟು ಹೇಳಿದರೂ ನಮ್ಮಂತಹ ಸಾಧಾರಣ ವರ್ತಕರಿಗೆ ಮಾತ್ರ ಪಕ್ಷವಿಲ್ಲದ ಹೊಗಳಿಕೆ ಪತ್ರಗಳನ್ನು ಹೊಂದಿರುತ್ತೇವೆ ಕೆಲವು ವಾಚ್‌ಗಳು ಮಾತ್ರ ಉಳಿದಿರುತ್ತೆ ಬೇಕಾದವರು ಜಾಗ್ರತೆಯಾಗಿ ಬರೆದು ತರಿಸಿಕೊಳ್ಳಿ ತರಿಸಿಕೊಂಡ ಮೇಲೆ ನಮ್ಮ ಹೇಳಿಕೆ ಪ್ರಕಾರ ಇಲ್ಲದ ಪಕ್ಷದಲ್ಲಿ ಹಿಂತಿರುಗಿ ವಾಪಸು ತಗೆದುಕೊಳ್ಳುತ್ತೇವೆ. ನಮ್ಮ ವಿಳಾಸ — [68]

ಸುಪೀರಿಯರ್ ವಾಚ್ ಕಂಪನಿ ಪೋಸ್ಟು ಬಾಕ್ಸ್ 110 ಮದರಾಸು

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION.

(ಸ್ಕಾಟ್ಸ್ ಇಮಲ್‌ಷನ್)

ಪಟ್ಟಿ ರೋಗವುಳ್ಳವರಾದರೂ ಪ್ಲೇಗ್ ಮಹಾವ್ಯಾಧಿಯ ನಂತರ ಅಥವಾ ಬಾಲ್ಯಕಾಲದ ರೋಗಗಳ ಭಯಕ್ಕೆ ಒಳಗಾದವರು ಅಗತ್ಯವಿಲ್ಲ ರೋಗದ ಎಲುಬುಗಳನ್ನೂ ಮಾಂಸಖಂಡಗಳನ್ನೂ ಬಲಪಡಿಸುತ್ತದೆ. ರಕ್ತವನ್ನು ಶುದ್ಧಿ ಮಾಡುತ್ತದೆ, ಶರೀರದಲ್ಲಿರುವ ಎಲ್ಲಾ ಭಾಗಗಳನ್ನು ಬಲಪಡಿಸಿ ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್,

Always get the Emulsion with this mark—the Fishman—the mark of the "Scott" process!

ಈ ಮೀನು ಮನುಷ್ಯ ಇರುವ ಔಷಧ ವನ್ನೇ ಕೊಂಡುಕೊಳ್ಳಿ

ಕುಂತಳಾನಂದ ತೈಲವು

147 3

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ಶೀಘ್ರವಾಗಿಯೂ ಬೆಳೆಯಿಸಿ ತಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ಐರೋಪ್ಯದೇಶಗಳನ್ನು ಪರಿಶೋಧಿಸಿದಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ

ಬಹಳ ಶೀತಳವೂ ಸುವಾಸನೆಯೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿ

ನಮ್ಮ ವಿಳಾಸ—ಬಿ ಎಮ್ ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್

ಗುಣಕೆಂಡ ಮೂರು ಪ್ರಖ್ಯಾತಿ ಔಷಧಗಳು.

ನ್ಯಾಕ್ಸರ ಮಲೆನಾಡು ಜ್ವರಮಾತ್ರೆಗಳು ಶೀತಪ್ರದೇಶಗಳಲ್ಲಿ ಬರುವ ಅಥವಾ ದೀರ್ಘವಾದ ಶೀತಪಿತ್ತ ಎಲ್ಲಾ ಜಾತಿಯ ಚಳಿ ಜ್ವರಗಳನ್ನೂ ಶೀಘ್ರವಾಗಿಯೂ ಸಂಪೂರ್ಣವಾಗಿಯೂ ವಾಸಿಮಾಡುತ್ತಿರುವ ಪ್ರಖ್ಯಾತಿ ಹೊಂದಿರುವ ಮಾತ್ರೆಗಳಿವು ಕ್ರಯ ಡಬ್ಬಿ 1ಕ್ಕೆ ರೂಪಾಯಿ 1 0 0

ನ್ಯಾಕ್ಸರ ಉಬ್ಬಸದ ಔಷಧ—ಉಬ್ಬಸ, ಕಠಿಣವಾದ ಕೆಮ್ಮು ಮೊದಲಾದ ಶ್ವಾಸಕೋಶದ ವ್ಯಾಧಿಗಳಿಗೂ ಶೀತದ ಗಡ್ಡೆಗಳಿಗೂ ಬಹಳ ಉತ್ತಮವಾದ ಮತ್ತು ಶೀಘ್ರವಾಗಿ ಗುಣಕೊಡುವ ಔಷಧ ಕ್ರಯ ಬಾಟ್ಲ 1ಕ್ಕೆ ರೂಪಾಯಿ 1-0 0 [36 1]

ನ್ಯಾಕ್ಸರ ನಾಯಿಕೆಮ್ಮಿನ ಸಿದ್ಧೌಷಧ—ಇದು ಖ್ಯಾತಿಯಾದ, ಸೋಂಕೆಯುಳ್ಳ ಮತ್ತು ಅಪಾಯಕರವಾದ ಔಷಧ ಎಂದರೆ ಹಿಂತಿರುಗಿಯೂ ಸಂಪೂರ್ಣವಾದ ಗುಣಕೊಡುವ ಪಾಡು ಕ್ರಯ ಬಾಟ್ಲ 1ಕ್ಕೆ ರೂ 1-0 0

ಪಾರ್ಸಲ್ ಪೋಸ್ಟೇಜ್ ವಿ ಪಿ ಛಾರ್ಜು ಪ್ರತ್ಯೇಕ ಈ ಔಷಧಗಳ ಗುಣಗಳನ್ನು ವಿವರಿಸುವ ಪತ್ರಗಳನ್ನು ಕೇಳಿದವರಿಗೆ ಉಚಿತವಾಗಿ ಕಳುಹಿಸುವೆವು

ವಿಳಾಸ—ಜೆ ಎಚ್ ಸ್ಟಿಯರ್ಸ್

14, ಪ್ರೆಸಿಡೆನ್ಸ್ ಬ್ರಾಡ್ವೇ, ಮದರಾಸ್

ಇವರಲ್ಲೂ ದೊರೆಯುತ್ತವೆ—(1) ಎಸ್ಪರ್ ಕಂಪೆನಿ ಒಕ್ಕಲಪೇಟೆ, ಬೆಂಗಳೂರು ಸಿಟಿ (2) ... (3) ಕೆ ಪಿಟ್ ... ಕಂಪೆನಿ, ಮಂಗಳೂರು (4) ಎಫ್ ಸಿಲ್ವಿ ಕಂಪೆನಿ, ಪಾಲಘಾಟ್ (5) ಬಾಯಿಸ್ ಕಂಪೆನಿ, ಕಲ್ಲಿಕೋಟೆ

ಲೇಡೀಸ್ ವಾಚ್.

ಇದರ ಅನುಕೂಲ ಮತ್ತು ಯಾವದಕ್ಕೂ ಇಲ್ಲ ನಿಮ್ಮ ಇಚ್ಛೆ ಬಂದಂತೆ ಕೈಯಲ್ಲಿ ಯೂ ಕಟ್ಟಿ ಕೊಳ್ಳಬಹುದು ಜೇಬಿನಲ್ಲಿಯೂ ಹಾಕಿಕೊಳ್ಳಬಹುದು ಸರಿಯಾದ ಕಾಲವನ್ನು ತೋರಿ ತಕ್ಕದ್ದು ತಲೆಯಲ್ಲಿ ಬೀಗವುಳ್ಳದ್ದು ಶುದ್ಧವಾದ ನಿಕಲ್ ಮುಚ್ಚಳವುಳ್ಳದ್ದು ಸುಂದರವಾದದ್ದು ರಾತ್ರಿಯಾದರೂ ಅದರ ಕ್ರಯ ಸುಂದರವಾದ ವಾಚ್ ಸರಪಣಿ ಮತ್ತು ಕೈಯಲ್ಲಿ ಕಟ್ಟಿ ಕೊಳ್ಳುವ ಚರ್ಮದ ಪಟ್ಟಿ ಸಮೇತ ರೂ 1-8-0 ಮಾತ್ರ. [17 1]



ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—

ಬಿ ಆರ್ ವೆಂಕಟರಮಣ ಅಂಡ್ ಕಂಪೆನಿ

ನಂ 7 ಕೂಪರ್ ವೆಂಕಟಾಚಲಯ್ಯರ್ ಬೀದಿ, ಮದರಾಸು

1914ನೇ ಕ|| ಟೆಕಸ್ಟು 5 ಆಣೆ ನೋಟ್ಸು 6 ಆಣೆ (ಅಚ್ಚಿನಲ್ಲಿದೆ) ಪತ್ರರತ್ನಾಕರ 8 ಆಣೆ, ಲೇಖ್ಯಾತಿತ ಪ್ರಕಾಶಿಕೆ 4 ಆಣೆ ಇಂದುಕಲಾ—ಒಂದು ಹೊಸ ಪುಸ್ತಕ, ಸದಸ್ಸಹ ಭಾವ ಭ್ರಾತೃವಾತ್ಸಲ್ಯ ಮುಂತಾದವನ್ನು ತಿಳಿಸುತ್ತದೆ ಬೆಲೆ 6 ಆಣೆ ಆರೋಗ್ಯ ಪ್ರಶ್ನೋತ್ತರ 1 ಆಣೆ 10 ಪ್ರತಿಗೆ ಒಂದು ಉಚಿತ ವಿಳಾಸ—ಹೆಚ್ ವೆಂಕಟರಾಮಯ್ಯ ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

ಬೇಕಾಗಿದೆ

ಏಜಂಟರುಗಳು ನಮ್ಮ ಔಷಧಗಳನ್ನು ವಿಕರಿಮಾಡಲು ಪ್ರತಿ ತಿಂಗಳಿಗೂ ಸಂಬಳವು 30 ರೂಪಾಯಿಗಳಿಂದ 100 ರ ವರೆಗೆ ಕೊಡಲ್ಪಡುತ್ತೆ ಅಪೇಕ್ಷಿಸುವವರು 2 ಅರ್ಧಾಣೆ ಸ್ಟಾಂಪಿನೊಡನೆ ಕೆಳಗಿನ ವಿಳಾಸಕ್ಕೆ ಬರೆಯಿರಿ [88 1]

ವಿಸ್ಪಿ ಮೆಡಿಕಲ್ ಕೌನ್ಸಲ್, 17 ಕೂಪಿ ಬಜಾರ್ ರೋಡು, ಮದ್ರಾಸು

ನಿಕ್ಕಲ್ ಲೇಡಿ ವಾಚು ಕ್ರಯ ರೂ. ೨ ೧೫-೦.

ಮೂರು ವರುಷ ಗಾರಂಟೀ



ಎಲ್ಲಾ ಹೊಸ ಸಾಮಾನುಗಳೂ ಇರುತ್ತವೆ ಸಾಮಾನು ಪಸಂದು ಬಾರದೇ ಹೋದಲ್ಲಿ 1 ವಾರದಲ್ಲಿ ಬದಲಾಯಿಸಿ ಕೊಡುವೆವು [71]

ಟೈಮ್‌ಪೀಸ್ ವಾಚು ಕ್ರಯ 1 ರೂ 14 ಆಣೆ

ರೈಲ್ವೆ ಗಾರ್ಡ್ ಲೀವರ್ ಕ್ರಯ 3 ರೂ 14 ಆಣೆ

ಟೈಂಪೀಸು ಸಾದಾ ರೂ 1 12 ಆಣೆ ಅಲಾರಂ ಟೈಂಪೀಸ ಕ್ರಯ ರೂ 1 13 0

ನಮ್ಮ ಅಡ್ರಸ್—ಸುಪೀರಿಯರ್ ವಾಚ್ ಕಂಪೆನಿ

ಉಪಕಾರಕೋರ್ ... , ಬಿ ಬಿ ಮದರಾಸು

ಪ್ರಖ್ಯಾತವಾದ ಪಾರ್ಸಿ ಫ್ಲ್ಯೂಟ್ ಹಾರ್ಮೋನಿಯಂ



ಉತ್ತಮ ಪದಾರ್ಥ, ಬೇರೆ ಹಾರ್ಮೋನಿಯಂಗಳಿಗೆ ಹೋಲಿಸಿದಾಗ ಬಹಳ ಬಲಿಷ್ಠವಾದ ಸುಸ್ವರಗಳು ಅತ್ಯಂತ ಶ್ರೇಷ್ಠವಾದವು ನಾವು ಮಹಾ ಸುಖಕರವಾಗಿದೆ ಇದರ ಬಾಳಿಕೆ ಬರುವದು ಮಿಕ್ಕವುಗಳಿಗಿಂತ ಬೇರೊಂದಿಲ್ಲ ಮೂರು ಆಕ್ಟೇವ್‌ಗಳು ಒಂದು ಸೆಟ್ ರೀಡುಗಳು ಬ್ಲ್ಯಾಕ್ ವುಡ್ ಪೆಟ್ಟಿಗೆ ಮತ್ತು ಹಿಂದೂ ಸಂಗೀತಕ್ಕೆ ಬಹು ಉಪಯುಕ್ತವಾಗಿದೆ ಎಲ್ಲಿಯೂ ಪ್ರಚಾರಕ್ಕೆ ತರಬೇಕೆಂದು ಇದರ ಕ್ರಯವನ್ನು ಬಹಳ ಕಡಿಮೆಮಾಡಿದ ಬೆಲೆ ನೋಡಿ ಇಂಥಾ ಒಳ್ಳೆ ಸಮಯವನ್ನು ತಪ್ಪಿಸಿಕೊಳ್ಳದೆ ಕೊಂಡುಕೊಳ್ಳಿ ಕ್ರಯ ರೂ ... ರೈಲ್ ಛಾರ್ಜು ಪ್ರತ್ಯೇಕ ಅಡ್ವಾನ್ಸು ... ರೂ ಇಲ್ಲದೆ ಸಾಮಾನು ಕಳುಹಿಸಲಾರೆವು ನಮ್ಮ ವಿಳಾಸ [7- 1]

ಮ್ಯಾನೇಜರ್ ಬಾಂಬೇ ಪಾಪ್ಯುಲರ್ ಏಜನ್ಸಿ

ಧಾರಾವಿ ಬೊಂಬಾಯಿ

ಕೈಸೋಕದೆ ತಯಾರಾದದ್ದು.

ಮೆಲ್ಲಿನ್ಸ್ ಆಹಾರವು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಒಕಲುಗುತ್ತವೆ

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕರವಾದ ಪುಸ್ತಕವನ್ನು ಅ ... ಕೆಳಗಿನ ವಿಳಾಸದವರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ

Messrs OAKES & Company, Mount Road, Madras

[4-27] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಸನ್ಮಾನ ಮುಖತ್ತು

ಕೇಶಕುಸುಮಾಕರ ತೈಲವು.

ನಾಟಿಯಲ್ಲದ ಈ ತೈಲವು ಬ್ರಾಹ್ಮೀ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ, ಮಿದುಳನ್ನು ವಿಕಾಸಮಾಡುವದರಲ್ಲಿಯೂ, ಚಿತ್ತ ಶುದ್ಧಿಕೆ ತನಗೆ ಬೇಕಾದರಲ್ಲಿಯೂ ಮತ್ತೂ ತಲೆಯನ್ನು ಬಲಪಡಿಸುವದರಲ್ಲಿಯೂ ಉಪಯುಕ್ತವಾಗಿ ಶಿರೋವ್ಯಥೆ ಮಾಡುವದರಲ್ಲಿಯೂ ಮಿದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ ಅದ್ವಿತೀಯ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ. ಒಂದು ಬುಡ್ಡಿಯ ಕ್ರಯ 1 ರೂ 4 ಆಣೆ ಮೂರು ಬುಡ್ಡಿಗಳ ಕ್ರಯ ರೂ 3 ... ಆರು ಬುಡ್ಡಿಗಳ ಕ್ರಯ ರೂ 5 ... ಡಜನ್ ಬುಡ್ಡಿಗಳ ಕ್ರಯ ರೂ 11 ...

ವಿ ಪಿ ಅಂಚೆ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣ್ ಕೇಶವಜೀ, ಆಯುರ್ವೇದೀಯ

[94 2] ಔಷಧಾಲಯ 177 ... ಬಜಾರ್ ರೋಡ್, ಮದ್ರಾಸು

Printed and Published by the Rev H G ... Proprietor and Manager Wesleyan Mission Press Mysore 8/5/1913

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸನ್ ೧೯೧೩ ನೇ ಇಸವಿ ಮೇ ತಾರೀಖು ೧೫ ನೇ ಗುರುವಾರ. ಸಂಚಿಕೆ ೨೦

ಪ್ರತಿಸ್ಪರ್ಧಿಗಳ ಅಗ್ಗವಾದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ಬಳಕೆಯಾಗು ತ್ತವೆ ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ.

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆ ಯನ್ನು ತಲೆಗೆ ಹಚ್ಚುವುದರಿಂದ ತಲೆನೋವು ಹುಟ್ಟುತ್ತದೆ ಕೂದಲು ಸತ್ತುಹೋಗುತ್ತೆ. ಆದಕಾರಣ ಸರ್ವೋತ್ಕೃಷ್ಟವಾಗಿಯೂ ಪ್ರಖ್ಯಾತವಾಗಿಯೂ ಇರುವ ಕಾಮಿನಿಯಾ ತೈಲವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಸ್ನಾನ ಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಕಚಕಿಸುವ, ನವಿರಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ಸೀಳದೆ ಬಿಟ್ಟುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ. ನೆತ್ತಿ ಬಿಸುಪನ್ನು ಶುದ್ಧಮಾಡುತ್ತೆ ಹೊಟ್ಟನ್ನು ಆರಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಇಂಥಾ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನು ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಬಣ್ಣಕ್ಕೆ ತಿರುಗಿಸಿ ಕೇಶವನ್ನು ನವಿರಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟಿರುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಯೋಗ್ಯವಾಗಿರುತ್ತೆ.

ಬೆಲೆ 1 ಸೀಸೆಗೆ ರೂ. 1-0-0. ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2-10-0 ಅಂಚೆಯ ವೆಚ್ಚ 0-7-0

ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿ ನಾಗಪುರ ಎಗ್ಜಿಭಿಷನ್ ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು.

ದೊಡ್ಡ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ತೈಲದ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ ಮನ್ನಾರ್‌ಗುಡಿ [illegible] ಕೃಷ್ಣಸ್ವಾಮಿ ಬಿ. ಎ. ಸ್ಯಾಕ್ರೊಮೆಂಟ್ ರವರು ಬರೆಯುವದು—"ದಯಮಾಡಿ [illegible] ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರು ಅದನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ ನನ್ನ ಮನೆ ಹೆಂಗಸರು [illegible] ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ" ವಿರುದುನಗರ [illegible] ಎಸ್. ಹೈಸ್ಕೂಲ್ ಹೆಡ್ ಮಾಸ್ಟರ್ ಮಿ|| ಎಂ. ಸುಬ್ರಹ್ಮಣ್ಯಪಿಳ್ಳೆ ಬರೆಯುವದು—"ನಿಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ನೋಡಿದೇನೆ ಅದು ಕೂದಲನ್ನು ಹುಟ್ಟಿಸಿ ಅಂದವಾಗಿಯೂ, ಕೋಮಲವಾಗಿಯೂ, ನೀಳವಾಗಿಯೂ ಬೆಳೆಸುವುದೆಂದು ಖಂಡಿತವಾಗಿ ಹೇಳಬಲ್ಲೆನು. ದಯವಿಟ್ಟು ಇನ್ನು ಮೂರು ಬಾಟ್ಲಿ ಎಣ್ಣೆ ಕಳುಹಿಸಿಕೊಡಿ" ಪನೇಟಾ ಡಿಸ್ಟ್ರಿಕ್ಟ್ ಟ್ರಾವೆಲರ್ ಆಫೀಸ್ ಮಿ|| ಗೋಪಾಲರಾವ್ ಜೋಷಿಯವರು ಬರೆಯುವದು—"ದಯವಿಟ್ಟು ನಿಮ್ಮ ಕಾಮಿನಿಯಾ ಎಣ್ಣೆ ಆರು ಬಾಟ್ಲಿ ಕಳುಹಿಸಿಕೊಡಿ ಒಂದು ತಿಂಗಳ ಹಿಂದೆ ನೀವು ಕಳುಹಿಸಿದ ಬಾಟ್ಲಿಗಳು ಮುಗಿದುಹೋಯಿತು ಇದೇ ಉತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳಬಲ್ಲೆ" ಆದಕಾರಣ ನೀವು ಒಂದು ಸಲ ತರಿಸಿ ಪರಿಕ್ಷೆ ಮಾಡಿ.

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಸಾಪುಗಳಲ್ಲೆಲ್ಲಾ ಕಾಮಿನಿಯಾ ತೈಲ ಸಿಕ್ಕುತ್ತೆ. ನಿಮ್ಮ ಸ್ಥಳದ ಸಾಪುಕೀಪರಲ್ಲಿ ಅದು ಇಲ್ಲದಿದ್ದರೆ ಅವನ ಹೆಸರು ವಿಳಾಸ ಸಮೇತ ನನಗೆ ತಿಳಿಸಿ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ ಆದ್ದರಿಂದ "ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು. ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ಕೇಳಿ ಕೊಂಡುಕೊಳ್ಳಿ.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ಏಜೆಂಟ್, ದಿ ಉರ್ಲ್ ಮಾರ್ಟ್, ಮಂಗಳೂರು

ವಿಳಾಸ:— [8-18]

ಏಂಗ್ಲೊ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



1-20

ಬೆನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಕಲೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡುವಂಥಾ ಔಷಧ.

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿಶ್ಶಕ್ತದೆ ಇರುವುದು—ಇವೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆವರೆಗೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದಕ್ಕೇ ಆಗಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಇಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ಪ್ರತಾಪಕಂಠೀರವ ಚರಿತ್ರೆ.

(1) [illegible] ಧರ್ಮಾಸ್ತ್ರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ [illegible], (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ-ಚಾತುರ್ಯ ; (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು , (4) ವನ [illegible], ಆರಾಮಾದಿ ವರ್ಣನೆಗಳು , (5) ಮನುಷ್ಯಯತ್ನಕ್ಕೆ ಮೀರಿದ ಈಗಿನ ಅನುಭವಕ್ಕೆ ಬರದ ವಿಷಯಗಳು ; (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ [illegible], (7) ಸರಸತೆಯುಳ್ಳ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ. ಕ್ರಯ —1 ರೂಪಾಯಿ; ಟಪಾಲು [illegible]

[16-12] ನಮ್ಮ ವಿಳಾಸ:—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಡೋಂಗರೆ ಇವರ ಬಾಲಾಮೃತ.

[115-44]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ಥಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತು ೧೨ ಆಣೆ ; ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಶ್ರೇಷ್ಠ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಧಾತುಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಕೈ ಕಾಲು ಸೆಳೆತ (ಬಾತ), ಮೈ ನವೆತ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ಸೆಗಡಿ, ನಿಸ್ಸತ್ವ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ಹಸಾ ಎದಲುವಿಕೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುರೋಗ, ಮಕ್ಕಳ ಎಳವು, ಜ್ವರ, ಸಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ —320 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ, 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ [136-37]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ. ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ವಿಕರಿಗೆ ಸಿದ್ಧವಾಗಿದೆ! ಐದನೆಯ ಛಾಪೆ!! ವಿಕರಿಗೆ ಸಿದ್ಧವಾಗಿದೆ!!

ಒಕ್ಕಲಿಗರ ಸಂಘದ ಮುದ್ರಾಕ್ಷರ ಮುದ್ರಣವು.

ಪ್ರಶ್ನೋತ್ತರ ಲೇಖ್ಯಬೋಧಿನಿ

ಥಳಥಳಿಸುವ ದಪ್ಪ ಕಾಗದ, ಬಹು ಭದ್ರವಾದ ಅಟ್ಟೆ

ಮೊದಲಿನ ಕ್ರಯ ಒಂದು ರೂಪಾಯಿ ಆರಾಣೆ.

ಒಂದು, ಎರಡು, ಮೂರು, ನಾಲ್ಕನೆಯ ಮುದ್ರಣಗಳ ಪುಸ್ತಕಗಳಿಗಿಂತಲೂ ಐದನೆಯ ಮುದ್ರಣದ ಈ ಪುಸ್ತಕವು ಎಲ್ಲಾ ಬಗೆಗಳಲ್ಲಿಯೂ ತಿದ್ದುಪಾಟಿನಿಂದ ಅನೇಕ ಹಚ್ಚು ಸಂ ತಿಗಳು ಸೇರಿ ಬಲು ಅಂದವಾಗಿರುವುದು

ಇರುಳೂ ಹಗಲೂ ಕೋರ್ಟು ವ್ಯವಹಾರಗಳಲ್ಲಿ ಓಡಾಡುತ್ತಿರುವ ಸಿವಿಲ್, ಕ್ರಿಮಿನಲ್, ರೆವಿನ್ಯೂ ಇಲಾಖೆಗಳ ತತ್ತ್ವವನ್ನು ತಿಳಿದುಕೊಳ್ಳಬೇಕೆನ್ನುವವರಿಗೆ ಪರಮೋಪಕಾರಿ ಪು ಹೊಗಳಬೇಕಾದುದಿಲ್ಲ ಇದುವರೆಗೆ ಓದಿರುವ ಅನೇಕರಿಗೆ ಅನುಭವವೇದ್ಯವು. ಮುಂದೆ ಓದುವವರಿಗೆ ಅನುಮಾನ ಅಗತ್ಯವಿಲ್ಲ

ಮೊತ್ತಮೊದಲು 22-3-01 ರಲ್ಲಿ ಈ ಪುಸ್ತಕವು ಅಚ್ಚಾಯಿತು ಎರಡನೆಯ ಸಲ 2-5-06 ರಲ್ಲಿ ಮುದ್ರಿಸಲ್ಪಟ್ಟಿತು ಮೂರನೆಯ ಸಲ 22-1-07 ರಲ್ಲಿ ಅಚ್ಚು ಮುಗಿಯಿತು ನಾ ನೆಯ ಸಲ 2(-1 1910 ರಲ್ಲಿ ಅಚ್ಚಾದ ಪುಸ್ತಕಗಳು ಮಾರಾಟವಾಗಿ ಮುಗಿಯುವ ತರುಣದಲ್ಲಿಯೇ ಐದನೆಯ ಸಲದ ಅಚ್ಚಿಗೆ ಮೊದಲುಮಾಡಿದೆವಾದರೂ ಕಾರಣಾಂತರಗಳಿಂದ ಪುಸ್ತಕವು ಮಾರ ಟಣೆಯಾಗುವುದಕ್ಕೆ ಸ್ವಲ್ಪ ಸಾವಕಾಶವಾಯಿತು ಇದುವರೆಗೆ ಪುಸ್ತಕಗಳನ್ನು ಅಪೇಕ್ಷಿಸಿರುವವರಿಗೆ ವಿ. ಪಿ. ಪಾರ್ಸಲುಗಳನ್ನು ಕಳುಹಿಸಲು ಆತುರದಿಂದ ಕೆಲಸಮಾಡುತ್ತಿರುವೆವು ಒಟ್ಟಿನಲ್ಲಿ ಐದು ಸಾ ಪುಸ್ತಕಗಳು ಮಾರಾಟವಾದವು ಈಗಲೂ ಕೆಲವು ಪ್ರತಿಗಳೇ ಕೈಯಲ್ಲಿವೆ ಅಪೇಕ್ಷಿತರು ಆತುರಪಡುವುದುತ್ತಮ !!! ಪ್ರತಿ ಮುದ್ರಣದ ಪುಸ್ತಕವೂ ಮಾರಾಟವಾಗಿ ಗ್ರಾಹಕರಿಗೆ ಸಮಯಕ್ಕೆ ಪುಸ್ತ ದೊರೆಯದ ಪುನಃ ಮುದ್ರಣವಾಗುವವರೆಗೆ ಕಾದಿರಬೇಕಾಗುತ್ತಿದೆ

ಬೇಗ ಬರೆಯಿರಿ! ಬೇಗ ಬರೆಯಿರಿ!! ಬೇಗ ಬರೆಯಿರಿ!!

ಬರೆಯುವಂಥವರು ತಾವಿರುವ ಊರು, ಆ ಊರಿನ ಬಳಿ ಇರುವ ಪೋಸ್ಟಾಫೀಸು, ಅದು ಸೇರಿರುವ ಹೋಬಳಿ, ತಾಲ್ಲೂಕು, ಇವುಗಳೊಂದಿಗೆ ತಂತಮ್ಮ ಹೆಸರುಗಳನ್ನು ವಿಶದವಾಗಿ ಅಕ್ಷರಗಳಲ್ಲಿ ಬರೆಯಲು ಪ್ರಾರ್ಥಿತರು

ಕೆಲವು ದಿನಗಳ ಮಟ್ಟಿಗೆ —ಕ್ರಯ ಅಂಚೆವೆಚ್ಚ ಸೇರಿ ಒಂದು ರೂಪಾಯಿ ಮೂರಾಣೆ ಮಾತ್ರ ಮುಂದೆ ಕ್ರಯ ಹೆಚ್ಚುವುದು

ನಮ್ಮ ವಿಳಾಸ ಬದಲಾಗಿದೆ! ವಿಳಾಸ ಬದಲಾಗಿದೆ!! ನಮ್ಮ ಈಗಿನ ವಿಳಾಸ ಬೇರೆ!

ಭಾರತಿ ಸಂಪಂಗಿರಾಮು, ಅಥವ ಎಸ್. ಆರ್. ಭಾರತಿ,

ಸಂಪಾದಕ "ಸವಿನುಡಿಯ ಗ್ರಂಥಮಾಲೆ," ಮತ್ತು "ಭಾಷಾನಿಧಿ" ಕಾರ್ಯಾಲಯ,

ದೊಡ್ಡಪೇಟೆ, ಬೆಂಗಳೂರು ಸಿ

[91-1]

ಟೆಲಿಗ್ರಾಂ ಅಡ್ರೆಸ್— "ತಿರುಪತಿ," ಹರಿಹರ. ಜಾಗ್ರತೆ ತೆಕ್ಕೊಳ್ಳಿ ತ್ವರೆಮಾಡಿ

ಬೇಸಿಗೆ ಕಾಲ ಸಮೀಪಿಸಿ ಬಂದಿರುತ್ತೆ

ಚೇಳಿನ ಹಾವಳಿ ಪ್ರಾರಂಭವಾಯಿತು.

ಅದ್ಭುತವಾದ ಇನಾಮು.

ಒಂದು ಲಕ್ಷ ರೂಪಾಯಿಗಳು ಹಂಚಲ್ಪಡುತ್ತವೆ

ಡಾಕ್ಟರ್ ಯಂ ವಿ ಇನಾಂದಾರ್‌ರವರು ತಯಾರು ಮಾಡಿದ "ಸ್ಕಾರ್ಪಿಯಾನಿಯೋ" ಎಂಬ ಚೇಳಿನ ಔಷಧವನ್ನು ಸಮಸ್ತ ದೇಶಗಳಲ್ಲಿಯೂ ಹರಡುವದಕ್ಕೂ, ಅದರ ಗುಣವನ್ನು ಅನುಭವಕ್ಕೆ ತರುವದಕ್ಕೂ ಈ ಇ ಮೂಲಕವಾಗಿ ಪ್ರಸಿದ್ಧ ಮಾಡಲ್ಪಟ್ಟಿದೆ ಈ ಚೇಳಿನ ಔಷಧವು ಅತಿ ಶೀಘ್ರವಾಗಿ ಗುಣವನ್ನು ಕೊಟ್ಟು, ರೋಗಿಯನ್ನು ನಗುವಂತೆ ಮಾಡಲ್ಪಟ್ಟಿದೆ ಪ್ರಪಂಚದಲ್ಲಿ ಎಷ್ಟು ಚೇಳಿನ ಔಷಧಗಳಿವೆಯೋ ಅದಕ್ಕೆಲ್ಲಾ ಶ್ರೇಷ್ಠವೆಂದು ಎಣಿಸಿ ಹೊಗಳಲ್ಪಟ್ಟಿರುವದರಿಂದ ಈ ಔಷಧಿಯನ್ನು ವೃಶ್ಚಿಕ ವೈರಿ ಎಂದು ಸಮಸ್ತರೂ ಪ್ರಾಮುಖ್ಯತೆಯೆಂದೆಣಿಸಿ ಇದನ್ನು ಪ್ರಚುರಪಡಿಸಬೇಕೆಂದು ಅಭಿಪ್ರಾಯಪಟ್ಟ ಮೇರೆಗೆ ಈ ಮೂಲಕವಾಗಿ ಸಮಸ್ತರ ಉಪಯೋಗಕ್ಕೂ ಪ್ರಕಟಿಸಲ್ಪಟ್ಟಿದೆ ವಾದಿಯು ಇದಕ್ಕೆ ಸಮಾನವಾದ ಚೇಳಿನ ಮದ್ದು ಇಲ್ಲವೆಂದು ಖಂಡಿತವಾಗಿ ಹೇಳಿದ್ದಾನೆ

ಹಿಸ್ ಎಕ್ಸಲೆನ್ಸಿ ಲಾರ್ಡ್ ಕಿಚನರ್, ಲೇಟ್ ಕಮ್ಯಾಂಡರು ಇನ್ ಚೀಫ್, ಇಂಡಿಯ, ಮತ್ತು ಕರ್ನಲ್ ವಿಕ್ಟರ್ ಬ್ರೂಕ್, ಲೇಟ್ ಮಿಲಟರಿ ಸೆಕ್ರೆಟರಿ ಟು ದಿ ವೈಸರಾಯಿ, ಇವರುಗಳು ಡಾಕ್ಟರು ಯಂ ವಿ ಇನಾ ಇವರ ಚಿಕಿತ್ಸೆಯನ್ನು ಬಹಳವಾಗಿ ಹೊಗಳಿದಾರೆ

ಇನಾಂಗಳ ವಿವರ —ಇದೇ 1913 ನೇ ಫೆಬ್ರವರಿಯಿಂದ ಜೂಲೈ ತಾರೀಖು 31 ರ ವರಿವಿಗೂ ಹನ್ನೆರಡು ಲಕ್ಷ "ಸ್ಕಾರ್ಪಿಯಾನಿಯೋ" ಎಂಬ ಚೇಳಿನ ಔಷಧವನ್ನು ಇನಾಂ ಮೂಲಕವಾಗಿ ಬಿಕ್ರಿ ಮಾಡಲು ಏರ್ಪಡಿಸಿದೆ ಒಂದರ ಖರೀದಿ ಎಂಟಾಣೆ ಮಾತ್ರವೇ ಟಪಾಲು ಹಾಸಲು, ಪ್ಯಾಕಿಂಗ್ ಚಾರ್ಜು, ವಿ ಪಿ ಚಾರ್ಜು ಬೇರೆ

		ರೂಪಾಯಿ			ರೂಪಾ
1 ನೇ ಇನಾಂ	2 ಗ್ರೋಸ್ ಬಾಟ್ಲಿ ತೆಗೆದುಕೊಳ್ಳುವವರಿಗೆ 1913 ನೇ ಏಪ್ರಿಲ್ ಆಖೈರೊಳಗಾಗಿ	[illegible],000	1 ನೇ ಇನಾಂ	2 ಗ್ರೋಸ್ ಬಾಟ್ಲಿ ತೆಗೆದುಕೊಳ್ಳುವವರಿಗೆ 1913 ನೇ ಜೂಲೈ ಆಖೈರೊಳಗಾಗಿ	7,
2 ನೇ ,,	1 ಗ್ರೋಸ್ ,, ,, ,, ,,	8,000	2 ನೇ ,,	1 ಗ್ರೋಸ್ ,, ,, ,, ,,	6,
3 ನೇ ,,	9 ಡಜನ್ ,, ,, ,, ,,	7,500	3 ನೇ ,,	6 ಡಜನ್ ,, ,, ,, ,,	5,
4 ನೇ ,,	3 ಡಜನ್ ,, ,, ,, ,,	7,000	4 ನೇ ,,	3 ಡಜನ್ ,, ,, ,, ,,	5,
5 ನೇ ,,	2 ಡಜನ್ ,, ,, ,, ,,	6,500	5 ನೇ ,,	2 ಡಜನ್ ,, ,, ,, ,,	4,
6 ನೇ ,,	1 ಡಜನ್ ,, ,, ,, ,,	6,000	6 ನೇ ,,	1 ಡಜನ್ ,, ,, ,, ,,	4,
7 ನೇ ,,	6 ಬಾಟ್ಲಿಗಳು ,, ,, ,,	5,500	7 ನೇ ,,	6 ಬಾಟ್ಲಿಗಳು ,, ,, ,,	3,
8 ನೇ ,,	3 ಬಾಟ್ಲಿಗಳು ,, ,, ,,	5,000	8 ನೇ ,,	3 ಬಾಟ್ಲಿಗಳು ,, ,, ,,	3,
9 ನೇ ,,	2 ಬಾಟ್ಲಿಗಳು ,, ,, ,,	4,500	9 ನೇ ,,	2 ಬಾಟ್ಲಿಗಳು ,, ,, ,,	2,
		59,000			41,

ಒಟ್ಟು ರೂ 1,00,000 ಲಕ್ಷ ಮಾತ್ರವೇ

ಯಾವದಾದರೂ ಒಂದು ಇನಾಂ ಕಲಂಗಳ ವ್ಯಕ್ತಿ ಒಬ್ಬರಿಗಿಂತ ಜಾಸ್ತಿಯಾಗಿದ್ದರೆ ಆ ಇನಾಂನ ಹಣವನ್ನು ಎಲ್ಲರಿಗೂ ಒಂದೇ ಸಮನಾಗಿ ಹಂಚಿಕೊಡಲ್ಪಡುತ್ತದೆ ಮತ್ತು ಒಂದೆ ವೇಳೆ ಒಬ್ಬರೇ ಇದ್ದರೆ ಆ ಪೂರ್ತಿ ಇನಾಂ ನಲ್ಲಿ ಕಾಣಿಸಿರುವ ಮೊಬಲಗನ್ನು ಅವರೊಬ್ಬರಿಗೇ ಕೊಡಲ್ಪಡುತ್ತದೆ ಎರಡು ಬಾಟ್ಲಿಗಳು ಜಾಸ್ತಿಯಾಗಿ ಕೊಂಡುಕೊಳ್ಳುವ ಪ್ರತಿ ಒಬ್ಬರಿಗೂ ಇನಾಂನ ಸರ್ಟಿಫಿಕೇಟನ್ನು ಆಯಾಯ ಇನಾಂ ಕಲಂವಾರು ಪ್ರಕಾರ ತೆಗೆದುಕೊಂಡ ಬಾಟ್ಲಿಗ ಯನ್ನು ಕಾಣಿಸಿ ಅವರಿಗೆ ಖಂಡಿತವಾಗಿಯೂ ಇನಾಮನ್ನು ಕೊಡುತ್ತೇನೆಂದು ಭರವಸೆ ಕೊಟ್ಟು ಬರೆದುಕೊಡಲ್ಪಡುತ್ತೆ ನಮ್ಮ ಇನಾಮು ಕಲಮಿನ ಲಿಸ್ಟಿನಲ್ಲಿ ಕಾಣಿಸಿರುವ ಮೇರೆಗೆ ಬಾಟ್ಲಿಗಳನ್ನು ಕೊಂಡುಕೊಳ್ಳುವರಿಗೆ ವಿನಹ ಬಾಕಿ ಕೊಡಲ್ಪಡುವದಿಲ್ಲ ಈ ಹನ್ನೆರಡು ಲಕ್ಷ ಬಾಟ್ಲಿಗಳು ಖರ್ಚಾದ ಕೂಡಲೆ ಲಿಸ್ಟನ್ನು ಖೈದುಮಾಡಿ, ಇನಾಂಗಳು ಹಂಚಲ್ಪಡುತ್ತೆ ಒಂದು ವೇಳೆ ಪೂರಾ ಹನ್ನೆರಡು ಲಕ್ಷ ಬಾಟ್ಲಿಗಳು ಖರ್ಚಾಗದೆ ಹೋದರೆ ಮುಂದೆ ವಾಯಿದೆಯನ್ನು ಎಷ್ಟು ಬಾಟ್ಲಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾ ಪ್ರಕಾರ ಆಗತಕ್ಕಷ್ಟು ಮಾತ್ರ ಇನಾಂಗಳು ಹಂಚಲ್ಪಡುತ್ತದೆ ಇನಾಂಗಳು ಹಂಚುವ ತಾರೀಖು ಇದೇ 1913 ನೇ ಇಸ್ವಿ ಆಗಸ್ಟು ತಿಂಗಳು 15 ಕ್ಕೆ ಇದೆ ಹರಿಹರದಲ್ಲಿ ವಾಗಿ ಹಂಚಲ್ಪಡುತ್ತೆ

ಪ್ರತಿ ಒಬ್ಬ ಮನುಷ್ಯನಿಗೂ ತಾನು ಕೊಡುವ ಕಿಮ್ಮತ್ತಿಗೆ ಸರಿಯಾಗಿ ಔಷಧ ಬಾಟ್ಲಿಯನ್ನು ಪಡೆಯುವದಲ್ಲದೆ ಇನಾಂಗೂ ಅರ್ಹನಾಗಿರುತ್ತಾನೆ ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ ಈವಾಗಲೇ ವಿಶೇಷ ಆರ್ಡರುಗಳು ಬರು ತುಂಬಾ ತೋರಿದೆ ಅದ್ದರಿಂದ ಪೂರ್ತಿಯಾಗಿ ಎಲ್ಲಾ ಬಾಟ್ಲಿಗಳು ಖರ್ಚಾಗುವದರಲ್ಲಿ ಸಂದೇಹ ತೋರುವದಿಲ್ಲ

ಏಜಂಟರುಗಳು ಬೇಕಾಗಿದೆ ಸಂಬಳ ನೂರು ರೂಪಾಯಿ ಮತ್ತು ಅಲೋಯನ್ಸು ಇಪ್ಪತ್ತು ರೂಪಾಯಿ ಏಜನ್ಸಿ ಅಪ್ಲಿಕೇಷನ್ ಹಾಕುವವರು ಮತ್ತು ಏಜನ್ಸಿ ಕೇಳುವವರು! ಅಣೆ ಸ್ಟಾಂಪು ಕಳುಹಿಸಬೇಕು ಕೆಳಗಿನ ವಿಳಾಸಕ್ಕೆ ಟಪಾಲುದ್ವಾರ ಕಾಗದಗಳನ್ನು ಬರೆದು ಆರ್ಡರು ಕಳುಹಿ ಬಾಟ್ಲಿಗಳನ್ನು ತರಿಸಿಕೊಳ್ಳಬಹುದು — [33 ·

ಮೆಸ್ಸರ್ಸ್ ತಿರುಪತಿ ಗುಜರ್ ಅಂಡ್ ಕೋ., ಸೋಲ್ ಏಜಂಟ್ಸ್, ಸ್ಕಾರ್ಪಿಯಾನಿಯೋ ಡೆಪೋ, ಹರಿಹರ, ಮೈಸೂರು ಪ್ರಾಂ

ಸಮಸ್ತ ವಿಧವಾದ ನೋವೂ ಶಾಂತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಬೆನ್ನಿನ ಸೆಳೆತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ.

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ಬಿಕರಿಯಾಗುತ್ತಲಿವೆ. ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ. ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ಬಿಕರಿಯಾಗುವದು.

ಮುಳಕಡ್ಡಿ ಔಷಧ ಡಬ್ಬಿಗೆ 6 ಆಣೆ; 12 ಕುಪ್ಪಿಗೆ ರೂ. 3-8-0. ಹಲ್ಲುಪುಡಿ ಡಬ್ಬಿಗೆ 2 ಆಣೆ; 12 ಕುಪ್ಪಿಗೆ ರೂ. 1-2-0. ವಿ. ಪಿ. ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ. [42-12]

ವಿಳಾಸ :—ಅಮೃತಾಂಜನ ಡಿಪೋ, ೧೯ ಫ್ರೈಯರ್ ರೋಡ್, ಫೋರ್ಟ್, ಬೊಂಬಾಯಿ.

ಬೇಕಾಗಿದೆ.

ಏಜಂಟರುಗಳು ನಮ್ಮ ಔಷಧಿಗಳನ್ನು ಬಿಕರಿಮಾಡಲು ಪ್ರತಿ ತಿಂಗಳಿಗೂ ಸಂಬಳ 20 ರೂಪಾಯಿಗಳಿಂದ 100 ರ ವರೆಗೆ ಕೊಡಲ್ಪಡುತ್ತೆ. ಅಪೇಕ್ಷಿಸುವವರು ಅರ್ಧಾಣೆ ಸ್ಟಾಂಪಿನೊಡನೆ ಕೆಳಗಿನ ವಿಳಾಸಕ್ಕೆ ಬರೆಯಿರಿ [88-2]

ಇಂಡಿಯನ್ ಮೆಡಿಕಲ್ ಕೌನ್ಸಲ್, 97 ಪೂಲಿ ಬಜಾರ್ ರೋಡು, ಮದ್ರಾಸು

ಕುಂತಳಾನಂದ ತೈಲವು.

147-34

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಬೆಳ್ಳಿಯ ಪದಕಗಳು ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ. 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗನ್ನು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎನ್. ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್

ಸ್ವಿಲ್ ಲೇತಿ ವಾಚು ಕ್ರಯ ರೂ. ೨ ೧೫-೦.

ಮೂರು ವರುಷ ಗಾರಂಟೀ.



ಎಲ್ಲಾ ಹೊಸ ಸಾಮಾನುಗಳೇ ಇರುತ್ತವೆ ಸಾಮಾನು ಪಸಂದು ಬಾರದೇ ಹೋದಲ್ಲಿ 15 ದಿವಸದೊಳಗೆ ಬದಲಾಯಿಸಿ ಕೊಳ್ಳಬಹುದು. [73-1]

ರಾಸ್ಕೋಪ್ ವಾಚು ಕ್ರಯ 1 ರೂ. 12 ಆಣೆ.

ರೈಲ್ವೆ ರೆಗ್ಯುಲೇಟರ್ ಕ್ರಯ 2 ರೂ 14 ಆಣೆ.

ಬ್ರೈಂಸೇಸು ಸಾದಾ ೧ ರೂ ೫ ಆಣೆ. ಅಲಾರಂ ಬ್ರೈಂಸೇಸು ಕ್ರಯ ರೂ 1 13-0

ನಮ್ಮ ಅಡ್ರಸ್—ಮೆಡೀನಾ ವಾಚ್ ಕಂಪನಿ

ಅನಕಾರಕೋಣ ಬೀದಿ, ಜಿ. ಟಿ., ಮದರಾಸು.

ಲೇಡೀಸ್ ವಾಚ್.

ಇದರ ಅನುಕೂಲ ಮತ್ತೆ ಯಾವದಕ್ಕೂ ಇಲ್ಲ. ನಿಮ್ಮ ಇಚ್ಛೆ ಬಂದಂತೆ ಕೈಯಲ್ಲಿಯೂ ಕಟ್ಟಿಕೊಳ್ಳಬಹುದು. ಜೇಬಿನಲ್ಲಿಯೂ ಹಾಕಿಕೊಳ್ಳಬಹುದು. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ತಲೆಯಲ್ಲಿ ಬೀಗವುಳ್ಳದ್ದು. ಶುದ್ಧವಾದ ನಿಕಲ್ ಮುಚ್ಚಳವುಳ್ಳದ್ದು. ಸುಂದರವಾದದ್ದು. ಖಾತ್ರಿಯಾದ ಮಾಲು. ಇವರ ಕ್ರಯ ಸುಂದರವಾದ ವಾಚ್ ಸರಪಣಿ ಮತ್ತು ಕೈಯಲ್ಲಿ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಮೇತ ರೂ. 3-8-0 ಮಾತ್ರ. [77-1]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ಬಿ. ಆರ್. ವೆಂಕಟರಮಣ ಅಂಡ್ ಕಂಪನಿ,

ನಂ. 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

1914 ನೆಯ ಲೋವರ್ ಸೆ॥ ಕನ್ನಡ ಟೆಕ್ಸ್ಟ್ ನೋಟ್ಸು ಸಿದ್ಧವಾಗಿದೆ. ಸುಲಭ ಕ್ರಯ 4 ಆಣೆ.

ಡಿಸ್ಕೌಂಟು 10 ಕ್ಕೆ 1; 25 ಕ್ಕೆ 4; 50 ಕ್ಕೆ 9, 100 ಕ್ಕೆ 22.

ಸ್ವಲ್ಪ ಪ್ರತಿಗಳೇ ಅಚ್ಚಾಗಿರುವದರಿಂದ ಬೇಗನೆ ಬರೆಯಿರಿ. ತರಿಸಿ ನೋಡಿ. ಇತರ ಪುಸ್ತಕಗಳೂ ನಮ್ಮಲ್ಲಿ ದೊರೆಯುವವು. [89-2]

ವಿಳಾಸ :—ವಿ. ಗುರುರಾವ್,

ಕರವಟ್ಟಿ ಬೀದಿ, ಹಳೆ ಅಗ್ರಹಾರ, ಮೈಸೂರು.

ಸೊಗಸಾದ ಉತ್ತಮತರದ ಹೊಸ ಬಟ್ಟೆಗಳು ಬಂದಿವೆ. ಬೇಗನೆ ಈಗಲೇ ಬಂದು ನೋಡಿ ಆರಿಸಿಕೊಳ್ಳದಿದ್ದರೆ ಈ ಒಳ್ಳೇ ಸಮಯ ಹೋದೀತು. ನಮ್ಮ ಷಾಪಿನಲ್ಲಿ ಖರ್ಚುಮಾಡುವ ಪ್ರತಿ ಒಂದು ಆಣೆಗೂ ನಿಮಗೆ ಸಂಪೂರ್ಣವಾದ ಪ್ರತಿಫಲ ದೊರೆಯುವುದು. ನಾನಾ ಬಗೆಯ ಉತ್ಕೃಷ್ಟವಾದ ಜವಳಿಯನ್ನೇ ಇಟ್ಟಿರುವೆವು ಸಕಲರಿಗೂ ಸಂತೋಷವನ್ನೂ ಸಂಪೂರ್ಣ ತೃಪ್ತಿಯನ್ನೂ ಖಂಡಿತವಾಗಿ ಉಂಟುಮಾಡುತ್ತವೆ. ಯಾವ ವಸ್ತುವನ್ನು ನಮ್ಮಲ್ಲಿ ಕೊಂಡುಕೊಂಡರೂ ಅದನ್ನು ನೀವು ಬಹುಮಾನ ಪಡೆದಂತೆ ಎಣಿಸುವಿರೆಂದು ಹೇಳಬಲ್ಲೆವು. ನಮ್ಮಲ್ಲಿ ಎಲ್ಲಾ ತರದ ಉಡುಪುಗಳೂ ಬಹಳ ಸೊಗಸಾಗಿ ತಯಾರು ಮಾಡಲ್ಪಡುವವು.

ಅಬ್ಬಾ ಅಬ್ದುಲ್ ಷುಕೂರ್ ಸೇಟ್ ಅಂಡ್ ಸನ್ಸ್,

[84-3] ಟೈಲರ್ಸ್ ಮತ್ತು ಔಟ್‌ಫಿಟ್ಟರ್ಸ್,

ಕರ್ಜನ್ ಪಾರ್ಕ್, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-20

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದವೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ. ೧ ರೂ ೬ ಆ; ೧ ರೂ. ೪ ಆ.

ಚುಕ್ಕಿಯುಳ್ಳ ಟೋಪಿಗಳು ರೂ. ೧-೮; ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨.

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ.; ೧ ರೂ. ೬ ಆ

ಮುಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಪೂತೀ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ :—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

25—4—1913 ರಿಂದ 2—5—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	2	2
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	7	6
ಮೈಸೂರು ,,	2	1	368	203
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	2	1	0	0
ತುಂಕೂರು ಡಿಸ್ಟ್ರಿಕ್ಟು	0	0	134	105
ಹಾಸನ ,,	0	0	176	89
ಚಿತ್ರದುರ್ಗ ,,	0	0	3	0
ಕಡೂರ್ ,,	0	0	75	46
ಶಿವಮೊಗ್ಗ ,,	4	2	0	0
ಜುಮ್ಲಾ ...	8	4	764	450

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದಿ ಸಂವತ್ಸರೇ ಉತ್ತರಾಯಣೆ ವಸಂತಋತೌ ವೈಶಾಖ ಶುದ್ಧ ಏಕಾದಶಿ ಶುಕ್ರವಾರದಿಂದ ವೈಶಾಖ ಬಹುಳ ಬಿದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1913 ನೇ ಮೇ.

ತಾ.	ವಾರ.	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ವೈಶಾಖ ಮಾಸ ತೇದಿ
16	ಶುಕ್ರ ;;	ಏಕಾದಶಿ	33-21	ಉತ್ತರ	14-34	3
17	ಶನಿ ‡	ದ್ವಾದಶಿ	27 18	ಹಸ್ತ	10-50	4
18	ಭಾನು †	ತ್ರಯೋದಶಿ	22-47	ಚಿತ್ತ	7-31	5
19	ಸೋಮ §	ಚತುರ್ದಶಿ	18-30	ಸ್ವಾತಿ	4-58	6
20	ಮಂಗಳ ::	ಪೌರ್ಣಮಿ	15-8	ವಿಶಾಖ	3-16	7
21	ಬುಧ *	ಪಾಡ್ಯಮಿ	12-49	ಅನೂರಾಧ	2-31	8
22	ಗುರು ,,	ಬಿದಿಗೆ	11-41	ಜ್ಯೇಷ್ಠ	3-3	9

;; ಸರ್ವತ್ರ ಏಕಾದಶಿ. ‡ ದ್ವಾದಶೀ ತಿಥಿ, ಶನಿಪ್ರದೋಷ, ಮೃತ್ಯುಯೋಗ, ಮಳೆ ನಕ್ಷತ್ರ—ಕೃತ್ತಿಕೆ 3 ನೇ ಪಾದ † ತಿಥಿದ್ವಯಂ, ಸ್ಮಾರ್ತ ಶ್ರೀನೃಸಿಂಹ ಜಯಂತಿ, ಕೂರ್ಮಜಯಂತಿ § ಪೂರ್ಣಿಮಾ ತಿಥಿ. ವೈಷ್ಣವ ನೃಸಿಂಹಜಯಂತಿ. :: ವ್ಯಾಸಪೂರ್ಣಿಮಾ, ಕಾಂಚ್ಯಾಂ ಗರುಡೋತ್ಸವ, ಅರ್ಧನಾರೀಶ್ವರವ್ರತ, ಮಳೆ ನಕ್ಷತ್ರ—ಕೃತ್ತಿಕೆ 4 ನೇ ಪಾದ. * ಶ್ರೀಲಕ್ಷ್ಮೀರಮಣಸ್ವಾಮಿ ರಥ, ಅಮೃತ ಸಿದ್ಧಿಯೋಗ ,, ಕಟಕ ವಿವಾಹ.

ಪೇಟೇ ಧಾರಣೆ

ದಿನಸಿ.		ಮೈಸೂರು.	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ.	೧೫-೪-೦	೧೭-೮-೦
ಕೆಂಬೂತಿ ಅಕ್ಕಿ ಅವಲ್		೧೬-೩-೦	೧೭-೮-೦
,, ದುಯಂ		೧೫-೦-೦	೧೭-೦-೦
ಜಾಪ್ರಾಣಿ ಅಕ್ಕಿ		೧೫-೮-೦	೧೭-೪-೦
ಸಣ್ಣಕ್ಕಿ ಅವಲ್		೧೭-೮-೦	೧೮-೩-೦
,, ದುಯಂ		೧೬-೦-೦	೧೭-೮-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ		೨೫-೦-೦	೧೯-೮-೦
,, ದುಯಂ ,,		೧೪-೮-೦	೧೩-೮-೦
ಸೈರ್ ರಾಗಿ ಪಲ್ಲಾ ೧ಕ್ಕೆ		೭-೪-೦	೫-೦-೦
ಕಾರ್ರಾಗಿ ,,		೬-೮-೦	೪-೧೩-೦
ಜೋಳ ,,		೭-೦-೦	೭-೪-೦
ಹುಲಸಂದೆ ಪಲ್ಲಾ ೧ಕ್ಕೆ		೧೦-೪-೦	೧೯-೧೩-೦
ಟೀ ಅವರೆ ,,		೧೧-೮-೦	೧೧-೦-೦
ಹೆಸರು ,,		೧೯-೦-೦	೧೪-೦-೦
ಉದ್ದು ,,		೧೪-೮-೦	೧೬-೦-೦
ಕಡಲೆ ,,		೧೦-೮-೦	೧೩-೦-೦
ಎಳ್ಳು ಸೇರು ೧೩೭ಕ್ಕೆ		೩೭-೦-೦	೩೪-೦-೦
ಹುರುಳೀ ಪಲ್ಲಾ ೧ಕ್ಕೆ		೬-೯-೦	೭-೦-೦
ಹರಳು ೧೩೭ ಸೇರಿಗೆ		೧೯-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ		೩-೪-೦	೯-೮-೦
ಮೆಣಸಿನಕಾಯಿ ,,		೪-೦-೦	೯-೪-೦
,, ದುಯಂ		೯-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೪-೮-೦	ಮಣ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ		೬-೮-೦	೬-೬-೦
ಹರಳೆಣ್ಣೆ ,, ,,		೫-೪-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೫-೩-೦	೫-೪-೦
ಉಪ್ಪು ,, ,,		೫-೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ		೧-೧೩-೦	೧-೪-೦
,, ಹಳೇದು ,,		೧-೯-೦	೦-೧೪-೦
ತುಪ್ಪ ಮಣ ೧ಕ್ಕೆ		೧೯-೧೨-೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೧೧-೦	೫-೦-೦
ತೆಂಗಿನಕಾಯಿ ೧೦೦ಕ್ಕೆ		೭-೦-೦	೬-೦-೦
ಅಳಲೇಕಾಯಿ ಮಣ ೧ಕ್ಕೆ		೧-೬-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ		೦-೧೩-೦	೧-೮-೦
ಚಿನ್ನ (ಪೌನ್) ಕೆಂಪು		೧೫-೮-೦	೧೫-೮-೦
,, ,, ಪಸಿಮೆ		೧೫-೧೪-೬	೧೫-೧೪-೬
,, ,, ಗಟ್ಟಿ ತೋಲ ೧ಕ್ಕೆ		೩೪-೯-೦	೩೪-೦-೦
ಬೆಳ್ಳಿ ಗಟ್ಟಿ ತೋಲ ೧೦೦ಕ್ಕೆ ...		೮೧-೦-೦	೮೧-೩-೦

೧೯೧೫ನೆಯ ಲೋ|| ಸೆ|| ಕನ್ನಡ ಟೆಕ್ಸ್ಟ್ ನೋಟ್ಸು ೦-೭-೦
ಟಳಗಿಗೆ ಸಿದ್ಧವಾಗಿದೆ ದೊಡ್ಡ ಅಕ್ಷರ, ಹೊಸ ನಮೂನೆ, ಶರೀನೋಡಿ, ಇಷ್ಟವಿದ್ದರೆ ವಾಪಸುಮಾಡಿ ಡಿಸ್ಕೌಂಟು (ಒಂದೇ ಆರ್ಡರು) ನಗದು ಅಥವಾ ವಿ ಪಿ ಗೆ—10 ಕ್ಕೆ 1, 25 ಕ್ಕೆ 3, 50 ಕ್ಕೆ 8 100 ಕ್ಕೆ 20 [6-1]
ಕೆ ಆರ್ ನರಸಿಂಹಯ್ಯ, ಕನ್ನಡ ಪಂಡಿತ, ಹೈ ಸ್ಕೂಲ್, ಚಿಕ್ಕಬಳ್ಳಾಪುರ

ಗೃಹಕೃತ್ಯದ ನೋಟೀಸು

ಬಾರಿ ಕುಟುಂಬದಾರಳಾದ ಈ ಕೆಳಗೆ ರುಜು ಮಾಡಿರುವ ಬೆಂಗಳೂರು ಸಿಟಿ ಅರಳೇಪೇಟೆ ತಲಕಾದು ಸುಬ್ರಾಯರ ಗಲ್ಲಿ ವಾಸಸ್ಥಳವಾದ ಎದ್ದಲು ಬುಚ್ಚಣ್ಣನವರ ಸೊಸೆ ವಾಸವ್ವನಾದ ನಾನು ತಿಳಿಯಪಡಿಸುವದೇನಂದರೆ—ನಾನೂ ನನ್ನ ಗಂಡ ದೊಡ್ಡಮುನಿಯಪ್ಪನೆಂಬುವರೂ, ಮತ್ತು ನನ್ನ ಮೂರು ಜನ ಗಂಡು ಮಕ್ಕಳೂ ಮೇಲ್ಕಂಡ ಮನೆಯಲ್ಲಿ ಒಂದೇ ಸ್ಥಳದಲ್ಲಿ ವಾಸವಾಗಿಕೊಂಡಿರುತ್ತೇವೆ ಅವರೆ ಈಗ ಕೆಲವು ದಿವಸಗಳಿಂದ ಮೇಲ್ಕಂಡ ನನ್ನ ಗಂಡನು ಯಾರೋ ಕೆಲವರು ದುರ್ಮಾರ್ಗರ ಪ್ರೇರಣೆ ಮೇಲೆ ನಮಗೆ ಪಿತ್ರಾರ್ಜಿತವಾದ ಬೆಂಗಳೂರು ಸಿಟಿ ಅರಳೇಪೇಟೆಯಲ್ಲಿ ಇರುವ ಕೆಲವು ಮನೆ ಅಂಗಡಿ ವಗೈರೆಯನ್ನೂ ಮತ್ತು ದೊಡ್ಡಪೇಟೆ ಪತ್ರ ಕೋನಕೆರೆ ಬಗ್ಗೆ ಇರುವ ತೋಟ ಗದ್ದೆ ಜಮೀನೆ ಅನ್ಯರಿಗೆ ಪರಾಧೀನ ಮಾಡುವದಾಗಿ ವರ್ತಮಾನ ಕೇಳುತ್ತೇನೆ ಆದ್ದರಿಂದ ಇಂಥಾ ಕೃತ್ಯಕ್ಕೆ ಮೇಲ್ಕಂಡವರ ಜೊತೆ ಸೇರಿದವರ ಮೇಲೆ ವ್ಯಾಜ್ಯ ಹುಟ್ಟಿಸಿ, ಹೊಂಬಡಿಕೆ ಸವುಸ್ಥರು ಮುಂದೆ ಯಾವ ಪಲಭ್ಯ ಹೊಂದಬಾರದೆಂಬ ಎಚ್ಚರಿಕೆಯನ್ನು ಕೊಟ್ಟಿದೇನೆ [11-1]
ಈ ಎಲ ವಾಸವ್ವನ ರುಜು ಇದೆ

ಶ್ರೀಲಕ್ಷ್ಮೀನರಸಿಂಹ ಆಯುರ್ವೇದ ವೈದ್ಯಶಾಲಾ

ಜ್ವರಮುರಾರಿ — ನಮ್ಮ ಶಾಲೆಯಲ್ಲಿ ತಯಾರಿಸಲಾಗಿರುವ ಇದು ಸಕಲ ಜ್ವರಗಳನ್ನೂ ಶಮನಮಾಡುವದು ಇದು ಬಹಳ ಕಹಿಯಾಗಿರುವ ಪಸುರುಸೊಪ್ಪುಗಳು ಬೇರುಗಳು ಮೊದಲಾದ ಕಲ್ಕದಿಂದ ಮಾಡಲ್ಪಟ್ಟದ್ದು ರಸ, ಗಂಧಕ ಪಾಷಾಣಾದಿಗಳೊಂದೂ ಈ ಔಷಧಕ್ಕೆ ಸೇರಿದ್ದಲ್ಲ ಇದು ನಮ್ಮ ಪೂರ್ವಿಕರು (ಸಿದ್ಧರು)ಗಳಿಂದ ಕಲಿತ ಸಿದ್ಧಪ್ರಯೋಗ ಈ ಔಷಧಕ್ಕೆ ಪಥ್ಯ ಪಾನಾದಿಗಳೂ ಇಲ್ಲ ಈ ಔಷಧವನ್ನು ಒಂದು ಸಾರಿ ತರಿಸಿ ಪರೀಕ್ಷಿಸಿದ ಬಳಿಕ ಅವರಾಗಿ ನಮ್ಮ ಸ್ನೇಹಿತರುಗಳಿಗೆ ತಿಳಿಸಿ ಸಂತೋಷಪಡುವರು ಇದು ಮದರಾಸಿನಲ್ಲಿ ಅನೇಕ ಸಾವಿರ ಜನಗಳು ಉಪಯೋಗಿಸಿ ಸಿದ್ಧೌಷಧ ಪ್ರತಿದಿನ ಅನೇಕ ಜನಗಳು ಉಪಯೋಗಿಸುತ್ತಲೂ ಇದಾರೆ ಈ ಔಷಧ ಸೇವನೆ ಕ್ರಮವು ಔಷದ ಜೊತೆಯಲ್ಲಿ ಕಳುಹಿಸಲಾಗುವದು ಎಂಥಾ ಜ್ವರವನ್ನು 4 | 8 | 12 16 ಘಂಟೆಗಳ ವಿಧದಲ್ಲಿ ನಿರ್ಮೂಲವಾಗಿ ಜಾಡ್ಯವನ್ನು ನಾಶಪಡಿಸಿ ಹೊಟ್ಟೆಯ ಬಾಧೆಯನ್ನು ಶಮನಗೊಳಿಸುತ್ತದೆ, ಬಲಹೀನವನ್ನು ಹೋಗಲಾಡಿಸುವದು ಇದರ ಬೆಲೆ 12 ಘಂಟೆಗಳ ದರ್ 1 ಕ್ಕೆ 12 ಆಣೆ ಟಪ್ಪಾಲ್, ಪಾರ್ಸಲ್ ಛಾರ್ಜು ಪ್ರತ್ಯೇಕ [10-13]

ದಂತದಾವನ ರತ್ನಾಕರಂ —ಇದು ಹಲ್ಲುಗಳಿಗೆ ಬಾಧಾಕರವಾದ ಪದಾರ್ಥಗಳು ಯಾವದೂ ಸೇರದೆ ಅನೇಕ ಮೂಲಿಕೆಗಳಿಂದ ತಯಾರಾದ್ದರಿಂದ ಹುಲ್ಲು ಹುಡಿ ಸುವಾಸನೆಯಾಗಿರುವದು ಇದರಿಂದ ಹಲ್ಲು ಉಜ್ಜಿಕೊಂಡರೆ ದಂತದಲ್ಲಿ ಹುಟ್ಟುವ ರೋಗಗಳನ್ನು ಹೋಗಲಾಡಿಸಿ ವಾತಪಿತ್ತ ಶ್ಲೇಷ್ಮಗಳನ್ನು ಶಮನವಾಡಿ ಹಲ್ಲುನೋವು, ಬಾಯಿನಾತ, ಹಲ್ಲುಜೊಲ್ಲು, ಹಲ್ಲಿನಲ್ಲಿ ರಕ್ತ ಹುಳಗಳು, ಹಲ್ಲಿನಲ್ಲಿ ರಕ್ತಬರುವದು ಹುಳುಕುಹಲ್ಲು, ಇಗರುವುದು ಹೊರತು ಬಾಕ್ಕನ್ನು ಸರಿಪಡಿಸಿ ಹಲ್ಲು ಸಂದುಗಳನ್ನು ಗಟ್ಟಿಯಾಗಿ ಸೇರಿಸಿ ಆಳಕೆ ಟ್ಟು ದೇಹಕ್ಕೆ ಒಳ್ಳೆ ಗುಣವನ್ನುಂಟುಮಾಡುವದು ಈ ವಿಧಿಯನ್ನು ಸಹಿತ ಗ್ರಾ ಕರಿಸಿಕೊಳ್ಳಬೇಕು ಇದರ ಬೆಲೆ ಡಬ್ಬಿ 1 ಕ್ಕೆ 4 ಆಣೆ ಟಪ್ಪಾಲ್, ಪಾರ್ಸಲ್ ಛಾರ್ಜು ಪ್ರತ್ಯೇಕ ವಿಳಾಸ —

ರಾಜವೈದ್ಯಂ ಮೈಸೂರು ಪಂಡಿತರು ಎಂ ಕೆ ಶೇಷಾಚಾರ್ಯ, ನಂ 93, ಬೈನಾಬಜಾರ್ ರೋಡ್, ಮದರಾಸ್

ಕೇಶದ ಮುಖ್ಯ ಸಾರಿಕೆ

ಪ್ರತಿ ಒಂದೊಂದು ಎರಡು ಬಾಟಲುಗಳು ಮಾತ್ರ

ಕೇಶವರ್ಧಿನಿ ಎಣ್ಣೆ — ಮೊದಲಿನ ಕ್ರಯ ರೂ 1 ಈಗಿನ ಕ್ರಯ 8 ಆಣೆ ಈ ಕೇಶವರ್ಧಿನಿ ಎಣ್ಣೆ ತಲೆಗೆ ಬಹಳ ತಂಪಾಗಿದ್ದು, ತಲೆಗಳನ್ನು ಬಲಪಡಿಸಿ, ಕೂದಲನ್ನು ಬೆಳೆಸುತ್ತದೆ ಮತ್ತು ತಲೆಯ ಮೇಲುಗಡೆ ಹುರುಕುಳಿಗಳು, ಹೊಟ್ಟು, ತಲೆನೋವು, ಸುಡು ಪ್ರದ್ಯುಮ್ನ ಹೆಚ್ಚುವಾದತ್ತೆ, ಮೊದಲಾದ ಉಷ್ಣ ರೋಗಗಳನ್ನು ಸರ್ವನಾಶನವನ್ನು ಉಂಟುಮಾಡುವದು ಈ ಉತ್ತಮೋತ್ತಮವಾದ ಸುವಾಸನಾ ಎಣ್ಣೆಗೆ ಸಮಾನವಾದದ್ದು ಇನ್ನೊಂದಿಲ್ಲ ಮುಖ್ಯವಾಗಿ ಸ್ತ್ರೀ ಪುರುಷರು ಇದನ್ನು ಬಹಳ ಪ್ರೇಮದಿಂದ ಇಟ್ಟು ಉಪಯೋಗಿಸುತ್ತಾರೆ

ತಾನಾಗಿ ಶಾಯಿ ತುಂಬಿಕೊಳ್ಳುವ

ಫೌಂಟೆನ್ ಲೇಖಣಿ —ಮೊದಲಿನ ಕ್ರಯ ರೂ 1-8 0 ಈಗಿನ ಕ್ರಯ 12 ಆಣೆ ಇದು ಉತ್ತಮೋತ್ತಮವಾದ ಮತ್ತು ಅತ್ಯಂತ ಸುಲಭ ಕ್ರಯದ ಲೇಖನಿ ಇದು ಎಂದಿಗೂ ಕೆಡದೆ ಬರೆಯುವಂಥದ್ದು ಬೇಕಾದರೆ ಅದನ್ನು ತೆಗೆದು ಇನ್ನೊಂದು ಶಾಯಿನ್ನ ನಿಬ್ಬನ್ನು ಹಾಕಿಕೊಳ್ಳಬಹುದು

ಗಂಟೆ ಹೊಡೆಯುವ ಟೈಂಪೀಸುಗಳು.—ಮೊದಲಿನ ಕ್ರಯ ರೂ 6, ಈಗಿನ ಕ್ರಯ ರೂ 1-8-0 ಇದು ಅಗ್ಗವಾದ್ದು, ಬಹು ಉಪಯೋಗ ಕಾಮ್ಸು, ನಿಕ್ಕಲ್ ಕೇಸು, 30 ಗಂಟೆ ನಡೆಯುವದು, ಮನೆ, ಮಾಟಿಂಗು, ಮನೆ ಎಲ್ಲಾ ಕಡೆಗಳೂ ಬಹಳ ಅವಶ್ಯವಾಗಿ ಬೇಕಾದದ್ದು

ಕೃತಕ ರತ್ನಾಭರಣಗಳು.—ಉಂಗುರ ಜೊತೆಗೆ ರೂ 1-10 ಹತ್ತಕಡಕು ಜೊತೆಗೆ ರೂ 1, ಮೂಗುತ್ತಿ 1 ಆಣೆ

ತಾ ಕ.—10 ರೂಪಾಯಿಗೆ ಕಡಿಮ್ಮೆ ಇಲ್ಲದೆ ನಮ್ಮಿಂದ ಒಂದೇ ಸಲ ಸಾಮಾನು ತರಿಸಿಕೊಳ್ಳುವವರಿಗೆ ಒಂದು ಟೈಂಪೀಸನ್ನು ಇನಾಮಾಗಿ ಕೊಡುತ್ತೇವೆ ವಿಳಾಸ ಬೇಕಾಗಿದೆ

ನಮ್ಮ ವಿಳಾಸ—ಚಂದ್ರು ಮತ್ತು ಕಂಪನಿ,
[94-1] 12, ಏಕಾಂಬರ ಅಗ್ರಹಾರಂ,
ಪಾರ್ಕ್ ಟೌನ್, ಮದರಾಸು

ಪ್ರಸಿದ್ಧವಾದ ಭಕ್ತವಿಜಯ ದ್ವಿತೀಯ ಮುದ್ರಣ

ತಿಂಗಳಿಗೆ ರಾಯಲ್ ೪೮ ಪುಟಗಳು ಮೊದಲಿಗಿಂತ ಉತ್ತಮವಾದ ಕಾಗದದಲ್ಲಿ ಅಂದವಾಗಿ ಮುದ್ರಿಸಲ್ಪಡುವುದು ಈ ಚೈತ್ರಮಾಸದಿಂದ ಆರಂಭ ಪ್ರತಿಮಾಸದ ಕಡೆಯಲ್ಲಿ ಸಂಚಿಕೆ ಕಳುಹಲ್ಪಡುವುದು ಪೂರ್ಣವಾದ ಪುಸ್ತಕಕ್ಕೆ ವಾರ್ಷಿಕ ಚಂದಾ ಪೋಸ್ಟೇಜ್ ಸೇರಿ ೨-೧೨-೦ ಭಕ್ತವಿಜಯ ಆಫೀಸ್, ಮೈಸೂರು

1914ನೇ ಲೋ|| ಸೆ|| ಕ|| ಟೆಕಸ್ಟು 6 ಆಣೆ, ನೋಟ್ಸು ಯಸ್ ಆರ್ ವೆಂಕಟಸುಬ್ಬಾಚಾರ್ಯರದು 6 ಆಣೆ ಮೈಸೂರು ಚರಿತ್ರೆ ಸುಲಭ ಪಾಠಗಳು 3ನೇ ಭಾಗ ಗೀತಾಪ್ರಸ್ತಾರದ 1 2ನೇ ಪುಸ್ತಕ 3 ಆಣೆ ಆರೋಗ್ಯ ಪ್ರಶ್ನೋತ್ತರ 1 ಆಣೆ, ಪತ್ರರತ್ನಾಕರ 8 ಆಣೆ, ಲೆಖ್ಖತತ್ವಪ್ರಕಾಶಿಕೆ 1 ಆಣೆ [61 4]
ವಿಳಾಸ —ಟಿಚ್ ವೆಂಕಟರಾಮಯ್ಯ ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

ವೃತ್ತಾಂತ ಪತ್ರಿಕೆ

— ೦

ಶಕ ೧೯೧೩ನೇ ಶಾಲಿ ಸಂ ವೈ ೧೫ ನೇ ಗುರುವಾರ

ಮೈಸೂರಿನಲ್ಲಿ ಕಸಬುಗಳ ವಿದ್ಯಾಭ್ಯಾಸವು

ಮೈಸೂರು ಗವರ್ನ್ಮೆಂಟಿನವರು ಈ ಸಂಸ್ಥಾನದಲ್ಲಿ ಕಸಬುಗಳನ್ನು ಅಭಿವೃದ್ಧಿಗೆ ತರುವ ವಿಷಯದಲ್ಲಿ ಈಗ ನಡೆದ ಒಂದು ಹುಕುಮನ್ನು ಪ್ರಕಟಮಾಡಿದಾರ ರಾಜಧಾನಿಯ ನವಾ ಬ ರಾದ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಹೊಸ ಮನೆ ಕಟ್ಟಡದಲ್ಲಿ ಕಸಬುಗಳನ್ನು ಕಲಿಸುವ ಸ್ಕೂಲು ಕೆ ಆರ್ ಚಾಮರಾಜೇಂದ್ರ ಟೆಕ್ನಿಕಲ್ ಸ್ಕೂಲ್ ಎಂಬ ಹೆಸರಾಗುವುದು ಅದರಲ್ಲಿ ... ಕಲಿತ ಕೌಶಲಗಳು ವ್ಯಾಪಾರ, ಈ ಕಸಬುಗಳನ್ನು ಕಲಿಸುವರು ಮತ್ತು ಅದರಲ್ಲಿ ಒಂದು ಕಾರ್ಖಾನೆಯೂ ಇದೆ ... ದಕ್ಕಾಗಿ ಸಾಲಿಯಾನಾ 12,000 ರೂಪಾಯಿ ... ಇದಲ್ಲದೆ ಸರ್ಕಾರದವರು ಬಂಗಾರದ ... ವರುಷಕ್ಕೆ 11,000 ರೂಪಾಯಿಸಂತೆ ... ಖರ್ಚು ಮಾಡುವದಾಗಿ ಹೇಳಿರುವರು, ವರುಷಕ್ಕೆ 15,000 ರೂಪಾಯಿ ... ಯಂತ್ರವಿಚಾರಗಳನ್ನು ಕಲಿಸುವ ಪಾಠಶಾಲೆಯೊಂದನ್ನು ಪ್ರಾರಂಭ ಮಾಡುವವರಾಗಿದಾರೆ ಈ ಕಸಬುಗಳನ್ನು ಕಲಿಸುವುದಕ್ಕೆ ಸರ್ಕಾರದವರು ಸಮರ್ಪಕವಾದ ಏರ್ಪಾಡು ಮಾಡುವದನ್ನು ನೋಡಿ ನಾವು ಸಂತೋಷಪಡುವೆವು ... ಅದರ ಈ ಸೀಮೆಯ ವ್ಯಾಪಾರಾಭಿವೃದ್ಧಿಗೆ ಸರ್ಕಾರದವರು ಮಾಡುತ್ತಿರುವ ಕಾರ್ಯಗಳನ್ನು ಪರ್ಯಾಲೋಚಿಸಿದರೆ ನಮಗೆ ಸಂತೋಷ ಉಂಟಾಗುತ್ತದೆ

ನಮ್ಮ ಸಂಸ್ಥಾನದಲ್ಲಿ ಕಸಬುದಾರರು ಶಿಕ್ಷಣ ಹೊಂದಿರದಕ್ಕೆ ನಮ್ಮ ಸ್ಕೂಲುಗಳಿಗೆ ಬೇಕಾದಷ್ಟು ಶಿಕ್ಷಣವನ್ನು ಹೊಂದಿರುವ ಜನಗಳು ಪ್ರಜೆಗಳು ಅವರ್ಲ್ಲಿ ಸತ್ಕರಿಸಲಾಗಿ ದುಡಿದ ವೇತನಗಳನ್ನು ಕೊಡುವುದಾಗಿ ತಿಳಿಸಿದ ಪಕ್ಷದಲ್ಲಿ ಯಾವ ಕಸಬನ್ನು ಕಲಿಯಬೇಕೆಂದರೂ ಹುಡುಗರು ಹೇರಳವಾಗಿ ದೊರೆಕುವರು ಈ ರೀತಿಯಾದ ಶಿಕ್ಷಾ ಪಡಿದ ಹುಡುಗರು ಯಾವ ಕಸಬನ್ನು ಕಲಿಯುತ್ತಾರೆಯೋ ಅದನ್ನೇ ಅವರು ತಮ್ಮ ಜೀವನಮಾನದಲ್ಲಿ ನಡೆಸುವಷ್ಟು ಸಾಮರ್ಥ್ಯವನ್ನು ಸಂಪಾದಿಸಿಕೊಳ್ಳುವರೇ? ಯಾಕೆಂದರೆ ಕಸಬುಗಳನ್ನು ಕಲಿತವರಲ್ಲಿ ಅನೇಕರು ಆಯಾ ಕಸಬನ್ನೇ ಅವಲಂಬಿಸಿ ನಡೆಸುವಷ್ಟು ನಂದು ನಮಗೆ ತೋರುತ್ತದೆ ಅವುಗಳ ಹಾಗಾದರೂ ಹಣ ದೊರೆತರ ಸರಿ, ಅದಕ್ಕಾಗಿ ಕಷ್ಟಪಡಲು ಅವರು ಅಷ್ಟಾಗಿ ಕುತೂಹಲಪಡುವುದಿಲ್ಲ

ಕಸಬುಗಳನ್ನು ಕಲಿಸುವ ಕಡೆಗಳಲ್ಲಿ ಹುಡುಗರನ್ನು ಕನಿಷ್ಠ ಎಂಟು ಗಂಟೆಯ ಹೊತ್ತಾದರೂ ಒಟ್ಟಿಕೊಂಡು ಕ್ರಮವಾಗಿ ಕೆಲಸ ಮಾಡಿಸುತ್ತಾ ಇರಬೇಕು ಸಾಮಾನ್ಯವಾಗಿ ಹುಡುಗರು ಹೀಗೆ ಕೆಲಸ ಮಾಡುವುದು ಬಹಳ ಕಷ್ಟವೆಂದು ಎಣಿಸುತ್ತಾರೆ ಅವರು ಒಂದೆರಡು ಗಂಟೆ ಹೊತ್ತು ಕೆಲಸಮಾಡಿ, ಅತ್ತಿತ್ತ ನೋಡುವುದರಲ್ಲೂ, ಅವರಿವರ ಕೂಡ ಮಾತನಾಡುವುದರಲ್ಲೂ ಕಾಲ ಕಳೆಯುವರು ಕಸಬುದಾರ ವಿದ್ಯಾರ್ಥಿಗಳನ್ನು ಬಹಿಷ್ಕರಿಸಿ ತರುವುದಕ್ಕಿಂತ ಮುಂಚೆ ಕೆಲಸಗಾರರ ನಡವಳಿಕೆಯನ್ನು ವಿಶೇಷವಾಗಿ ಪ್ರಯತ್ನಪಡಬೇಕು ಈಗ ಸಾಮಾನ್ಯವಾಗಿ ನೋಡುವಾಗ ಒರುವುದರಲ್ಲಿ ಕೆಲಸ ಮಾಡತಕ್ಕ ಮನೋಬಲ ಸ್ಥಿರತೆಯೂ ಸಂತೃಪ್ತಿಯೂ ಬಹಳ ಕಡಿಮೆಯಾಗಿಹೋದದರಿಂದ ಮನಃಪೂರ್ವಕವಾದ ಮತ್ತು ತೃಪ್ತಿಕರವಾದ ಕೆಲಸ ನಡೆಯುವುದು ಸಾಧ್ಯವಾಗಿಲ್ಲ ಪ್ರತಿ ಒಂದು ಅಂಶವನ್ನೂ ಬಹಳ ಜಾಗರೂಕತೆಯಿಂದ ಮೇಲ್ವಿಚಾರಣೆ ನೋಡಿಕೊಳ್ಳದೆ ಹೋದದಕ್ಕದಲ್ಲಿ ಮಧ್ಯ ಮಧ್ಯ ಕೆಲಸವನ್ನು ಕೆಡಿಸಿಬಿಡುತ್ತಾರೆ ಬಾಲಕರಿಗೆ ಕಸಬುಗಳನ್ನು ಕಲಿಸುವುದರ ಜೊತೆಗೆ ಅವರ ಗುಣ ನಡತೆಗಳೂ ಕ್ರಮಪಡುವಂತೆ ಮಾಡಬೇಕು ವಿದ್ಯಾರ್ಥಿವೇತನ ದೊರಕಿತೆಂಬ ಕಾರಣದಿಂದಲೇ ಒಬ್ಬ ಹುಡುಗನು ಕಸಬುದಾರಿ ವಿದ್ಯಾಶಾಲೆಗೆ ಹೋಗುವನಾದರೆ ಅಲ್ಲಿ ದೊರಕುವ ಶಿಕ್ಷಣದಿಂದ ಅವನಿಗೆ ಯಾವ ಪ್ರಯೋಜನವೂ ಆಗ ಬಾರದು, ಅಂಥವನು ಎಂದಿಗೂ ಒಳ್ಳೇ ಕಸಬುದಾರನಾಗುವುದಿಲ್ಲ ಮೈಸೂರು ಗವರ್ನ್ಮೆಂಟಿನವರು ವರುಷೇವರುಷ ಆದ್ಯಾಂತಿಕವಾಗಿ ಶಿಕ್ಷಣಹೊಂದಿರಿಂಥಾ ಬಾಲಕರನ್ನು ತರಪೇತು ಮಾಡಿದಂತಾಗುತ್ತದೆ. ಹಸ್ತಕೌಶಲ್ಯವನ್ನೂ, ನೇತ್ರಜ್ಞಾನವನ್ನೂ, ಬುದ್ಧಿಕುಶಲತೆಯನ್ನೂ ಶಿಕ್ಷಣದಿಂದ ತರಪೇತು ಮಾಡುವುದರ ಜೊತೆಗೆ ಮನಸ್ಸಾಕ್ಷಿಯನ್ನೂ ತರಪೇತು ಮಾಡಿದ ಪಕ್ಷದಲ್ಲಿ ಅಂದಾ ಕಾರ್ಯಗಾರರು ಸತ್ಯತೆಯಿಂದ ಕೆಲಸ ಮಾಡತಕ್ಕವನಾಗುತ್ತಾನೆ

ಈಗಿರುವ ಸರ್ಕಾರಿ ಇಲಾಖೆಗಳಲ್ಲೂ ರೈಲ್ವೆಯಲ್ಲೂ ಬಿಟ್ಟರೆ ಇನ್ನಾರಾದರೂ ತರಪೇತಾದ ಕಸಬುದಾರರು ಬೇಕೆಂದು ಅಪೇಕ್ಷಿಸತಕ್ಕವರುಂಟೇ ಎಂದು ಕೇಳುವವು ಮೈಸೂರು ಗವರ್ನ್ಮೆಂಟಿನವರು ಕೈಗಾರಿಕೆಗಳಿಂದಲೂ ವ್ಯಾಪಾರದಿಂದಲೂ ಈ ಸೀಮೆಯನ್ನು ಉಚ್ಚಸ್ಥಿತಿಗೆ ತರಬೇಕೆಂದು ಕುತೂಹಲಪಡುತ್ತಾರೆ ಸಿಕ್ಕಿದಂತೆ ಹುಡುಗರನ್ನು ತರಪೇತು ಮಾಡುವುದರಿಂದ ಅವರ ಉದ್ದೇಶವು ಸಾರ್ಥಕವಾದೀತೆಂದು ನಮಗೆ ತೋರುವುದಿಲ್ಲ ಇನ್ನು ಒಳ್ಳೆಯ ಕಾರ್ಯಗಾರನಾಗಿರಬಹುದು, ಆದರೆ ಕಟ್ಟಕಡೆಗೆ ವ್ಯಾಪಾರ ನಡಿಸುವ ಮಾರ್ಗ ತಿಳಿಯುವುದಿಲ್ಲ ತನಗೆ ತಾನು ಪ್ರಾರಂಭ ಮಾಡುವುದಕ್ಕೆ ಅವನಿಗೆ ದ್ರವ್ಯ ಬೇಕಾಗುತ್ತದೆ ಹೀಗೆ ಒದಗುವ ಮಾರ್ಗವಾಗಲಿ, ವ್ಯಾಪಾರದ ಬುದ್ಧಿ ಕುಶಲತೆಯಾಗಲಿ ಸಾಮಾನ್ಯವಾಗಿ ಪಾಠಶಾಲೆಗಳಲ್ಲಿ ಹೇಳಿಕೊಡತಕ್ಕದ್ದಲ್ಲ ವಯಸ್ಸು ಕಳೆದ ಹಾಗೆ ಅವರವರೂ ಜಟಿಲವಾಗ ಹೊಂದುವನು ಪಾಠಶಾಲೆಗಳಲ್ಲಿ ಕಸಬುಗಳನ್ನು ಶಾಸ್ತ್ರವಾಗಿ ಕಲಿತ ವಿಶೇಷ ಹುಡುಗರಿಗೆ ಆಯಾ ಕಸಬನ್ನು ಬಿಡುವುದಕ್ಕೆ ಅನುಕೂಲವಾದ ಕಾರ್ಖಾನೆಗಳು ಇಲ್ಲ ವ್ಯಾಪಾರ ವಿಷಯದಲ್ಲಿ ಬುದ್ಧಿ ಚುರುಕುಳ್ಳವರು ಸಾಧಿಸ ಬಹುದು ಎಂಬುವದು ಗುಪ್ತವರ್ತನವನ್ನು ವ್ಯಾಪಾರಸ್ಥರ ನಮಗೆ ತೋರುತ್ತದೆ ಜನರಿಗೆ ಶಿಕ್ಷಣವನ್ನು ಹೊಂದಿದಂಥಾ ಕಾರ್ಯಗಾರರು ಬೇಕೆಂಬುವುದು ನಿರ್ಧಾರವಾದಾಗ ಕಸಬು ಕಲಿಯಲು ಆಯಾ ಕಾರ್ಖಾನೆಗಳೇ ಸರ್ವೋತ್ತಮವು ಸರ್ವಶ್ರೇಷ್ಠವೂ ಆದ ಪಾಠಶಾಲೆಗಳಾಗಿ ಪರಿಣಮಿಸುವವು

ಮೈಸೂರು ಗವರ್ನ್ಮೆಂಟಿನವರು ಈಗ ಪ್ರಾರಂಭಿಸಬೇಕೆಂದಿರುವ ಈ ಶಿಕ್ಷಾ ಶಾಲೆಗಳು ಅಭಿವೃದ್ಧಿಗೆ ಬರಬೇಕೆಂದು ಹಾರೈಸುತ್ತೇವೆ ಇದರ ಫಲಗಳಿಂದ ಸಂಸ್ಥಾನಕ್ಕೆ ಬಗೆಗೆ ಪ್ರಯೋಜನವಾಗುವುದೆಂದು ನಾವು ನಿರೀಕ್ಷಿಸುವುದಿಲ್ಲ ಈ ಸೀಮೆಯಲ್ಲಿ ಸುಲಭವಾದ ಕಸಬುದಾರ ಕಾರ್ಖಾನೆಗಳು ಸಿದ್ಧವಾಗುವುದಕ್ಕೆ ಬಹಳ ಕಾಲ ಹಿಡಿಯುತ್ತದೆ ಆದರೆ ಒಂದು ಆಗಬೇಕೆಂದು ಆಗತಕ್ಕ ಸದಕ್ಕೆ ಕಾಣುವುದು ಮತ್ತು ಅವರಿಗೆ ಹಾಕುವುದಕ್ಕೆ ಬೇಕಾಗುವ ದ್ರವ್ಯ ಒದಗಿಸಲು ಮೈಸೂರಿನ ಪ್ರಜೆಯು ಸಮರ್ಥನಾಗಿಲ್ಲ

ರಾ ರಾ ಕೃಷ್ಣಸ್ವಾಮಿರಾಯರವರು

ಈಚೆಗೆ ಮೈಸೂರಿನ ಕಾರ್ಯದರ್ಶಿ ... ಪ್ರಸಿದ್ಧರಾಗಿದ್ದ ಡಿವಾನ್ ವಿ ಪಿ ಕೃಷ್ಣಸ್ವಾಮಿರಾಯರವರು ... ಮದರಾಸು ... ಇವರು ... ಮೊದಲು ... ಬಳಿಕ ... ಜವಾಬ್ದಾರ ಕೆಲಸ ... ಕಾರ್ಯದರ್ಶಿಯಾಗಿ ... ಅವರ ಸ್ನೇಹಿತರೂ ಬಂಧುಗಳೂ ತಿಳಿಸಿದ್ದಾರೆ ... ಈ ಸಮಯದಲ್ಲಿ ಅವರ ಕುಟುಂಬದವರಿಗೆ ಸಮಾಧಾನ ಕೊಡಲೆಂದು ನಮ್ಮ ಪ್ರಾರ್ಥನೆಗಳನ್ನು ಸಲ್ಲಿಸುತ್ತೇವೆ

ಇವರು ಟ್ರಾವಂಕೂರಿನ ಅಧಿಕಾರಿಯಾಗಿದ್ದರಿಂದ ಪೂರಾಜವಾಬ್ದಾರಿ ಅವರ ಪಾದ ಮನೆಯವರನ್ನು ಕೊಂಡುಕೊಂಡು ಬಂದರು ಹಾಕಿಸಿದ್ದಾರೆ ಕೋರ್ಟುಗಳ ಮೇಲೆ ಕ್ರಿಯೆಯನ್ನು ಗೊತ್ತುಮಾಡುವುದರಲ್ಲಿ ಪ್ರಾಲೋಚನೆ ... ಸರ್ಕಾರದ ಹಣ ದುಬಾರಿ ... ಇವರು ಬಹು ಶ್ರಮಪಟ್ಟು, ನ್ಯಾಯ ಕಾರ್ಯಗಳು ಸ್ವತಂತ್ರವಾಗಿ ನಡೆಯುವಂತೆ ... ಮೈಸೂರಿನ ... ರಾಜಭಕ್ತಿ ... ಮಹಾರಾಜರ ಕಾರ್ಯದರ್ಶಿ ... ಪ್ರಜಾಪ್ರಭುತ್ವ ... ಇವರು ... ಅನೇಕ ... ಇವರ ಹಕ್ಕುಗಳು ... ಇವರು ತಮ್ಮ ... ಕೊಡಿಸಿದರು

ಸಾಮಾನ್ಯವಾಗಿ ಇವರ ಕಾಲದಲ್ಲಿ ರಾಜಧಾನಿಯಲ್ಲಿ ಅರಮನೆಯಲ್ಲಿ ಅನೇಕ ... ಇವರು ... ಬಹು ... ಆಯಾ ಕಾಲಗಳಲ್ಲಿ ಇವರು ... ಪ್ರಜೆಗಳ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿಕೊಂಡಿದಾರೆ

ದೇವರ ರಾಜ್ಯ

ಪಶ್ಚಿಮ ಟರ್ಕಿಯಲ್ಲಿ ಪಾಲೆಸ್ಟೈನ್ ಎಂಬ ಒಂದು ಚಿಕ್ಕ ಸೀಮೆ ಇದೆ ಈ ಸೀಮೆಯು ನಮ್ಮ ಮೈಸೂರು ಸೀಮೆಯ ಸುಮಾರು ಅರ್ಧ ಪಾಲಿನಷ್ಟು ವಿಸ್ತಾರವಾಗಿರುವದು ಈ ಸೀಮೆಯಲ್ಲಿ ಆದಿಕಾಲದಿಂದಲೂ ಇಸ್ರಯೇಲ್ ಜನರು ಎಂಬ ಜನಾಂಗದವರು ವಾಸಮಾಡುತ್ತಿದ್ದರು ಈ ಸ್ಥಳ ಸೀಮೆಯಲ್ಲಿ ವಾಸಮಾಡುತ್ತಿದ್ದ ಆ ಚಿಕ್ಕ ಜನಾಂಗದವರಲ್ಲಿ ಸಕಲ ಜನಾಂಗದವರಿಗೂ ಆದರ್ಶವಾಗುವಂತಹ ಒಂದು ವಿಶೇಷತೆ ಇದ್ದಿತು ಅದೇನೆಂದರೆ ಅವರು ಅವರ ಪೂರ್ವಿಕರೂ ಬಹು ಪ್ರಾಚೀನ ಕಾಲದಿಂದ ಕಡೆಯವರೆಗೂ ದೇವರೇ ತಮ್ಮ ಅರಸನೆಂದು ನಂಬಿದ್ದರು ಆ ಜನಾಂಗದವರ ಚರಿತ್ರೆಯನ್ನು ಓದುವವರೆಲ್ಲರಿಗೆ ಬಹು ಸ್ಪಷ್ಟವಾಗಿ ಇದು ಗೋಚರವಾಗುವದು ದೇವರು ಅವರನ್ನು ಆ ಸೀಮೆಗೆ ಕರೆದುಕೊಂಡು ಬಂದು ಆಳಿದ ಅವರಿಗೆ ಆ ಸೀಮೆಯನ್ನು ಹಂಚಿಕೊಟ್ಟದ್ದಲ್ಲದೆ ದೇವರೇ ಅವರ ಜೊತೆ, ಅವರು ಆತನಿಂದ ಆತನ ಪ್ರಜೆಗಳಾಗಿ ರುವದಕ್ಕೆ ನೇಮಕವಾದವರು ದೇವರೇ ಅವರಿಗೆ ಕಟ್ಟಳೆಗಳನ್ನೂ ನಿಯಮಗಳನ್ನು ವಿಧಿಸಿದನು ಆ ಪ್ರಜೆಗಳ ಮುಖಂಡರು ನ್ಯಾಯವಿಧಾಯಕ ಸಭೆಯನ್ನು ಮಾಡುವ ದಕ್ಕೆ ಸೇರಿ ಬಂದಾಗ ಅವರ ಅರಸನಾದ ದೇವರು ಆ ಸಭೆಯಲ್ಲಿ ಅಗ್ರಾಸನದ ಮೇಲೆ ಕಾರ್ಯನಿರ್ವಾಹಕನಾಗಿದ್ದನೆಂತ ಭಾವಿಸಿದರು ಪರರಾಜ್ಯದವರ ಮೇಲೆ ಯುದ್ಧಮಾಡುವ ಪ್ರಸಂಗ ಪ್ರಾಪ್ತಿಸಿದಾಗ ದೇವರು ಅವರ ಸೇನಾಪತಿಯಾಗಿ ಅವರ ಮುಂದೆ ರಥಾರೂಢನಾಗಿ ಹೊರಡುವನು ರಾಜ್ಯಭಾರನಡಿಸುವದಕ್ಕೆ ಅಗತ್ಯವಾದ ಉದ್ಯೋಗಸ್ಥರನ್ನು ದೇವರೇ ನೇಮಿಸಿದನು ಹೀಗಿರಲಾಗಿ ಬಹು

...ವರೆಗೂ ಅನೇಕ ಶತಮಾನಗಳ ಪರ್ಯಂತರ ತಮ್ಮ ಮೇಲೆ ಆಳುವದಕ್ಕೆ ... ಅರಸನನ್ನು ಆ ಜನಾಂಗದವರು ಇಟ್ಟುಕೊಳ್ಳದೇನೇ ರಾಜ್ಯಭಾರ ...ವರು. ಅವರ ಸುತ್ತಮುತ್ತ ವಾಸಮಾಡುತ್ತಿದ್ದ ಬೇರೆ ಬೇರೆ ಜನಾಂಗದವರು ...ನ್ನು ಕುರಿತು—ಇಸ್ರಯೇಲ್ಯರು ಅರಸನಿಲ್ಲದ ಅನಾಯಕ ಪ್ರಜೆಯೆಂತ ...ರೂ, ಇಸ್ರಯೇಲ್ಯರು ಮಾತ್ರ ಸಕಲ ಜನಾಂಗಗಳಿಗೂ ಅರಸನಾಗಿರುವ ...ೇ ನಮ್ಮ ಅರಸನು ನಮಗೆ ಬೇರೆ ಅರಸನು ಬೇಕಿಲ್ಲವೆಂದು ಹೇಳುವಷ್ಟು ...ಲ್ಲಿ ದೃಢಮನಸ್ಸುಳ್ಳವರಾಗಿದ್ದರು. ತಮ್ಮ ಮೇಲೆ ದೇವರು ಪ್ರಭುತ್ವ ...ತ್ತಿದ್ದಾನೆಂಬ ಅರಿವು ಅವರಲ್ಲಿ ಅಷ್ಟು ಮಟ್ಟಿಗೆ ಪ್ರತ್ಯಕ್ಷ ಪ್ರಮಾಣವಾಗಿ ... ಬೇರೆ ಬೇರೆ ಜನಾಂಗಗಳ ಅರಸುಗಳು ಅಗತ್ಯವಿದ್ದಾಗ ಅರಮನೆಯಿಂದ ...ಗೆ ಬಂದು ಕಾರ್ಯನಿರ್ವಾಹವನ್ನು ನೆರವೇರಿಸಿ ಪುನಃ ಅರಮನೆಯನ್ನು ...ಸೇರುವ ಮೇರೆಗೆ ಯಹೋವನೆಂಬ ತಮ್ಮ ದೇವರು ಸಹ ತಮ್ಮ ಜನಾಂ... ಅರಸನಾಗಿದ್ದುಕೊಂಡು ರಾಜ್ಯಭಾರದ ಕಾರ್ಯಗಳನ್ನು ಸ್ವಹಸ್ತದಿಂದ ...ಟುತ್ತಿದ್ದನೆಂದು ಅವರ ಲವಲೇಶವೂ ಅನುಮಾನಪಡದೆ ನಂಬಿದರು. ...ತು ನಂಬಿಕೆಯು ಅದಕ್ಕೆ ತಕ್ಕ ಜಾಗರೂಕತೆಯೂ ಚಟುವಟಿಕೆಯೂ ...ರ್ಷಕತೆಯೂ ಅವರ ಕಣ್ಣಿದುರಿಗೆ ಗೋಚರವಾಗುತ್ತಿದ್ದಿತು.

...ಗೆ ಅಮಾನುಷವಾದ ಅರಸನ ಪ್ರಭುತ್ವದಲ್ಲಿ ಶತಮಾನಗಳು ಗತಿಸಿ... ನಂತರ ಅವರು ಒಬ್ಬ ಮಾನುಷ ಅರಸನನ್ನು ನೇಮಿಸಿಕೊಂಡರು. ...ಆ ಮಾನುಷ ಅರಸನು ಯಾವಾಗಲೂ ಅಮಾನುಷ ಅರಸನಾದ ದೇವರ ...ಯ ಪ್ರತಿನಿಧಿಯು ಲಘುವಾದ ಆತನ ಪ್ರತಿನಿಧಿಯಾಗಿ ಭಾವಿಸಲ್ಪಟ್ಟನು. ಮಾನುಷ ...ನು ತಾನು ದೇವರಿಂದ ಆತನ ಪ್ರಜೆಗಳ ಮೇಲೆ ನೇಮಕನಾದ ರಾಯಭಾರಿ, ...ನಾ ಯೆಹೋವ ದೇವರ ಪ್ರಧಾನಸೇವಕನೆಂತ ತಾನೇ ತಿಳಿದುಕೊಂಡಿದ್ದನು. ...ಸಾರ್ವಭೌಮನ ಪ್ರತಿನಿಧಿಯಾದ ವೈಸ್ರಾಯಿ ಸಾಹೇಬರು ಈಗ ದೇಶದಲ್ಲಿ ...ಲ್ಲಿ ಚಕ್ರವರ್ತಿಯವರ ಅನುಮತಿಯನ್ನು ಪಡೆದು ಅವರ ಕಟ್ಟಳೆ ಕಾನೂನು...ನ್ನು ಶಿರಸಾವಹಿಸಿ ಅವುಗಳಂತೆ ಪ್ರಜೆಗಳನ್ನು ಪಾಲಿಸುತ್ತಾರೆಯೋ ಹಾಗೆಯೇ ...ಯೆಹೋವ ದೇವರಿಂದ ನೇಮಿಸಲ್ಪಟ್ಟ ಮಾನುಷ ರಾಜನು ಅವನ ಸೇವಕನಾಗಿ ...ಕೊಂಡು ತನಗೆ ಬುದ್ಧಿ ಹೇಳುತ್ತಾ ತನ್ನನ್ನು ನಡಿಸುತ್ತಲಿದ್ದ ಅರಸನ ...ಕ್ಕೆ ಅಧೀನನಾಗಿತ್ತು. ಮಾನುಷ ಅರಸನು ಎಲ್ಲಿ ಬಿಡಬಂತೆ ಕಣ್ಣಿಗೆ ಕಾಣ... ರೂಪನಾಗಿಯೂ ಅಗೋಚರನಾದ ದೇವರೇ ಆತನ ಚೈತನ್ಯವೂ ಜೀವವೂ ...ವಾಗಿದ್ದನೆಂದು ಅಗತ್ಯವಾಗಿ ಹೇಳಬಹುದು.

ಈ ರಾಜ್ಯಪರಿಕ್ರಮವು ಅತ್ಯಂತ ಉತ್ಕೃಷ್ಟವಾದುದು, ಪರಿಶುದ್ಧವಾದುದು, ಶಾಶ್ವತ ಸ್ವಭಾವವನ್ನು ಹೊಂದಿದ ಮನುಷ್ಯರು ಅಂಗೀಕರಿಸತಕ್ಕದ್ದು. ಅರಸನೂ ಪ್ರಜೆಗಳೂ—ಉಭಯ ಪಕ್ಷದವರೂ ಸಂಪೂರ್ಣ... ಗ್ರಹಿಸಿ ಕಾರ್ಯಗತ ಮಾಡಿಕೊಳ್ಳುವ ಪ್ರಯತ್ನದಲ್ಲಿರುವ ವೇಳೆಯಲ್ಲಿ ಅರಸನು ಅನೇಕ ಸಂದ...ಗಳಲ್ಲಿ ದುರ್ಬಲನಾಗಿಯೂ ಅವಿಧೇಯನಾಗಿಯೂ ದೇವರ ...ತ್ರವನ್ನು ...ವವನಲ್ಲದೆ ಎಷ್ಟೋ ಸಾರಿ ತನ್ನ ಸ್ವಂತ ಇಚ್ಛೆಯ ಪ್ರಕಾರ ನಡೆಯುತ್ತಲೂ ...ನ ದುರ್ಮಾರ್ಗ ಪ್ರವರ್ತನೆಗೆ ಬಿಸ್ಸುವವನಾಗಿಯೂ ಇದ್ದನು. ... ...ಳಾದವರೋ ವೇದವಾಕ್ಯಗಳನ್ನೂ ದೈವಾಧಿಕಾರಿಯಾದ ತಮ್ಮ ಅರಸ...ನ್ನು ಉಲ್ಲಂಘಿಸುವವರೂ ಆದರೂ ಕರ್ತವ್ಯಪರಾಯಣರಾಗಿರಲಿಲ್ಲ. ...ಸುವವರಾಗಿದ್ದರು. ಇದರಿಂದ ಅವರು ಅನೇಕ ದುಃಖ ಸಂಕಟಗಳಿಗೆ ಗುರಿ...ರು. ಸ್ವದೇಶವನ್ನು ಶತ್ರುಗಳಿಗೆ ಸೂರೆಕೊಟ್ಟು ಪರರಾಜರ ಗುಲಾಮರಾಗಿ ಗಡೀಪಾರಾದ... ಬಾಬಿಲೋನಿನಲ್ಲಿ ಅಸೂರಿಯರೂ ಪಾರಸೀಕರಗಳೂ ಯವನರೂ ಅವರ... ಅವರಲ್ಲಿ ಅನೇಕರನ್ನು ಸಂಹರಿಸಿದರು, ಸೆರೆಗೆಳೆದರು. ಆದರೂ ಅವ... ಕೆಲವರು ದೇವರ ರಾಜ್ಯವನ್ನೂ ಆತನ ಪ್ರಭುತ್ವವನ್ನೂ ಮರೆಯಲಿಲ್ಲ.

...ದೇವರು ಅವರನ್ನು ಆಶಾಭಂಗಪಡಿಸದೆ ಅವರನ್ನು ತನ್ನ ಇಷ್ಟದ ... ಳೆಲ್ಲ ಒಬ್ಬ ಅರಸನನ್ನು ಕಡೆಗೆ ತಾನೇ ಕಳುಹಿಸಿದನು. ಯೇಸು ... ಆ ಅರಸನು. ಆತನು ದೇವರ ಮಗನಾದ ಉಪದೇಶವನ್ನು ... ... ಅರಸನು. ಆತನು ಇಸ್ರಯೇಲ್ಯರಿಗೆ ಮಾತ್ರವಲ್ಲ, ಸಕಲರಿಗೂ ಅರ...ನಾಗಿದ್ದಾನೆ. ಮತ್ತು ಆ ದೇವರ ಜನರನ್ನು ತನ್ನ ಪ್ರಜೆಗಳಂತೆ ಭಾವಿಸಿ ...ವರನ್ನು ಪಾಪದಿಂದಲೂ ಅಜ್ಞಾನದ ಬಂಧದಿಂದಲೂ ಬಿಡಿಸಿ ರಕ್ಷಿಸುವವ... ನೇಮಿಸಲ್ಪಟ್ಟಿದ್ದಾನೆ.

ಒಳದೇಶದ ವೃತ್ತಾಂತಗಳು.

ಮೈಸೂರು ಪ್ರಭುಗಳು ಜಾಲ್ತಿ ವರುಷದ ಅಂತ್ಯಭಾಗದಲ್ಲಿ ಮೈಸೂರು ...ನ್ಯಕ್ಕೆ ದಯಮಾಡುವರೆಂದು ವರ್ತಮಾನವಿದೆ.

* * *

ಎರಡನೇ ಕೌನ್ಸಿಲರ್ ಸರ್ದಾರ್ ಎಂ. ಕಾಂತರಾಜ ಅರಸಿನವರು ಕಳೆದ ...೪ ದಿವಸಗಳಿಂದ ರಾಜಧಾನಿಯಲ್ಲಿದ್ದು, ಈ ದಿವಸವೋ ನಾಳೆಯೋ ಇಲ್ಲಿಂದ ...ಹೊರಟು ನಂದಿಗಿರಿ ಬೆಟ್ಟಕ್ಕೆ ದಯಮಾಡುವವರಾಗಿದ್ದಾರೆ.

* * *

ಶ್ರೀಯುವರಾಜರವರು ನೀಲಗಿರಿಯಿಂದ ಕಳೆದ ಶುಕ್ರವಾರ ಬೆಳಿಗ್ಗೆ ...ಗೆ ದಯಮಾಡಿ ಮೂರುದಿವಸ ಇದ್ದು, ಪುನಃ ಸೋಮವಾರ ಬೆಳಿಗ್ಗೆ ...ಮೂರ್ತಿಯವರ ಸಮೇತ ವಾಪಸು ಇಲ್ಲಿಂದ ಚಿತ್ತೈಸಿದರು.

* * *

ರಾಜಧಾನಿಯ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾಗಿ ನೇಮಕವಾಗಿರುವ ...ಟಿ ಹನುಮಂತರಾಯರಿಗೆ 150 ರೂಪಾಯಿ ಸಂಬಳ, 100 ರೂಪಾಯಿ ...ಲಯನ್ಸ್ ಸಲ್ಲತಕ್ಕದ್ದೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.

* * *

ಅಮೇರಿಕದ ಅವಧೂತಿಯಾ ಎಂಬೊಬ್ಬ ವೃದ್ಧ ಸ್ತ್ರೀಯು ಕಳೆದ ವಾರ ...ನಗರಕ್ಕೆ ಬಂದು ಟೌನ್ ಹಾಲ್ ಬಂಗಲೆಯಲ್ಲಿ ಸ್ವಾಮಿ ವಿವೇಕಾನಂದರವರ ...ಚರಿತ್ರೆಯನ್ನೂ, ವೇದಾಂತ ವಿಚಾರವನ್ನೂ ಕುರಿತು ಎರಡು ದಿನ ಉಪ...ನ್ಯಾಸ ಮಾಡಿ, ಒಂದು ವೇದಾಂತ ಸಂಘವನ್ನು ಪ್ರಾರಂಭಮಾಡಿರುತ್ತಾರೆ.

* * *

ರಾಜಧಾನಿಯ ಕೃಷ್ಣರಾಜಮೊಹಲ್ಲಾ ಸೀತಾರಾಮಶೆಟ್ಟಿ ಬೀದಿ ಕಳೆದ ವಾರ ...ಮುನ್ನು ಸೆಂಬವರ ಮನೆಗೆ ದೊಡ್ಡಗಳ್ಳರು ನುಗ್ಗಿ ಸುಮಾರು 12 ಮಂದಿ ... ನುಗ್ಗಿ ಸುಮಾರು 200 ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿದರೆಂ... ಪೋಲೀಸಿನವರು ಪತ್ತೆ ತರದೂದು ನಡಿಸುತ್ತಿದ್ದಾರೆಂದೂ ತಿಳಿಯುತ್ತದೆ.

* * *

ಶ್ರೀರಂಗಪಟ್ಟಣದಲ್ಲಿ ಕಟ್ಟುತ್ತಿರುವ ಜಿತರೂಪಿನ ಸತ್ರದ ಕಟ್ಟಡದ ...ಗೆ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಫಂಡಿನಿಂದ ಮೂರು... ರೂಪಾಯಿ ಗ್ರಾಂಟು ಕೊಡಬೇಕೆಂದು ಒಪ್ಪಿ ಶಿಫಾರಸು ಮಾಡಿದ್ದರು. ...ಮೆಂಟಿನವರು ಅದಕ್ಕೆ 2,000 ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ.

* * *

ಬೊಂಬಾಯಿ ಓರಿಯಂಟಲ್ ಜೀವವಿಮೆ ಕಂಪನಿಯ ಬೆಂಗಳೂರು ಏಜೆ...ನ್ಸಿನಲ್ಲಿ ಕ್ಯಾಷಿಯರಾಗಿದ್ದ ರಂಗಸ್ವಾಮಿ ಅಯ್ಯಂಗಾರ್ ಎಂಬಾತನು ...ಯ ಹಣದಲ್ಲಿ ಸುಮಾರು 5,000 ರೂಪಾಯಿಯನ್ನು ದುರುಪಯೋಗ ಪಡಿಸಿರುತ್ತಾನೆಂದು ಪೋಲೀಸಿನವರು ಆತನನ್ನು ಕಳೆದ ಸೋಮವಾರ ಮಧ್ಯಾಹ್ನ ವಸ್ತಗಿರಿಮಾಡಿ ತನಿಖೆಮಾಡುತ್ತಿದ್ದಾರೆ.

* * *

ಮೈಸೂರು ಬ್ಯಾಂಕಿನ ಡೈರೆಕ್ಟರುಗಳು ಸರ್ಕಾರದಲ್ಲಿ ಆ ಬ್ಯಾಂಕನ್ನು ರೆಜಿಸ್ಟರ್ ಮಾಡಿಸಿ ಕಳೆದ ಸೋಮವಾರದಿಂದ ಲೇವಾದೇವಿಯನ್ನು ಪ್ರಾರಂಭ ಮಾಡಿರುತ್ತಾರೆ. ಈ ಬ್ಯಾಂಕು ಬೆಂಗಳೂರು ಸಿಟಿ ಶ್ರೀ ಶಂಕರಮಠದ ಎದುರಿನ ಎಡಿಂಬರೋ ಹೌಸ್ ಎಂಬ ಕಟ್ಟಡದಲ್ಲಿ ಸ್ಥಾಪನೆಯಾಗಿದೆ. ಮಿ|| ವೈ. ನರಸಿಂಗ ರಾಯರು ಅದಕ್ಕೆ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟಿದ್ದಾರೆ.

* * *

ಸರ್ಕಾರದವರು ಚಿಕ್ಕಬಳ್ಳಾಪುರದ ಅಡಿಷನಲ್ ಮುನ್ಸಿಫ್ ಕೋರ್ಟನ್ನು ವಜಾಮಾಡಿ ದೊಡ್ಡಬಳ್ಳಾಪುರದಲ್ಲಿ ಜೂಲೈ ತಿಂಗಳ ಪ್ರಾರಂಭದಿಂದ ಮುನ್ಸಿಫ್ ಕೋರ್ಟನ್ನು ಪ್ರಾರಂಭಮಾಡಿ, ಈ ಕೋರ್ಟಿಗೆ ದೊಡ್ಡಬಳ್ಳಾಪುರ, ನೆಲಮಂಗಲ, ಗೌರಿಬಿದನೂರು ಮೊಕದ್ದಮೆಗಳು ದಾಖಲಾಗುವಂತೆ ಹುಕುಂ ಕೊಟ್ಟಿದ್ದಾರೆ. ಇದಲ್ಲದೆ ಬೆಂಗಳೂರು 1 ನೇ ಮುನ್ಸಿಫ್ ಕೋರ್ಟಿಗೆ ಬೆಂಗಳೂರು ಸಿಟಿ, ಬೆಂಗಳೂರು ತಾಲ್ಲೂಕೂ, ಚಿಕ್ಕಬಳ್ಳಾಪುರದ ಮುನ್ಸಿಫ್ ಕೋರ್ಟಿಗೆ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಬಾಗೇಪಲ್ಲಿ, ಗುಡಿಬಂಡೆ ಸಬ್ ತಾಲ್ಲೂಕು, ದೇವನಹಳ್ಳಿಯೂ ಸೇರತಕ್ಕದ್ದೆಂದು ವಿಧಾಯಕವಾಗಿದೆ.

* * *

ಪುಟ್ಟೇಗೌಡನೆಂಬವನು ತನ್ನ ಮಗನಾದ ಕೆಂಪನನ್ನೂ, ತೂರನೆಂಬ ಆಳನ್ನೂ ಕೊಂದುಹಾಕಿ, ಈ ಕೃತ್ಯವು ತನ್ನ ದಪ್ಪುಗಳಿಂದ ನಡೆದದ್ದೆಂದು ಸಾಧಿಸಿದನು. ಬೆಂಗಳೂರು ಸರ್ಕಿಟ್ ಜಡ್ಜರವರು ಈ ಮೊಕದ್ದಮೆಯನ್ನು ವಿಚಾರಣೆಮಾಡಿದರು. ಅಸೆಸರುಗಳು ಅಪರಾಧವು ರುಜುವಾತಾಗಲಿಲ್ಲವೆಂದು ಅಭಿಪ್ರಾಯಪಟ್ಟರು. ಜಡ್ಜಿಯವರು ಆ ಅಭಿಪ್ರಾಯವನ್ನು ಅನುಮೋದಿಸದೆ ಅಪರಾಧಿ ಪುಟ್ಟೇಗೌಡನಿಗೆ ಮರಣದಂಡನೆಯನ್ನು ವಿಧಿಸಿ, ಅವನ ಸ್ಥಿರಚರ ಆಸ್ತಿಗಳನ್ನೆಲ್ಲಾ ಸರ್ಕಾರಕ್ಕೆ ಮುಟ್ಟುಗೋಲು ತೆಗೆದುಕೊಳ್ಳುವಂತೆ ಅಪ್ಪಣೆ ಕೊಟ್ಟರು. ಈ ಎರಡನೇ ದರದ ಶಿಕ್ಷೆಯು ಬಹುಶಃ ಅಪೂರ್ವವಾದದ್ದೆಂದು ತೋರುತ್ತದೆ.

* * *

ಹಾಸನ ಡಿಸ್ಟ್ರಿಕ್ಟಿಗೆ ಸೇರಿದ ಜಾವಗಲ್ ಮುಜರಾಯಿ ಜಾತ್ರೆಯಲ್ಲಿ, ಯಾವ ಸಂತೆಯು ಆವರಣದಲ್ಲೂ ಯಾರೂ ಲೈಸೆನ್ಸು ಪಡೆಯದೆ ಮಾಂಸ ಮಾರುವುದಕ್ಕೆ ಯಾವ ಪ್ರಾಣಿಯನ್ನೂ ಕೊಲ್ಲಕೂಡದೆಂದೂ, ಯಾರೂ ಚಕ್ಕಳವನ್ನಾಗಲಿ ಕೊಂಬುಗಳನ್ನಾಗಲಿ ಲೈಸೆನ್ಸು ಇಲ್ಲದ ಕೂಡಿಟ್ಟು ಹದಮಾಡಕೂಡದೆಂದೂ, ಅಂಗಡಿ ಪ್ರತಿ ಒಬ್ಬರೂ ಲೈಸೆನ್ಸ್ ಫೀಜು 3 ರೂಪಾಯಿ ಕೊಟ್ಟು ಡೆಪ್ಯುಟಿ ಕಮಿಷನರ್ ರವರ ಮೊದಲು ಅಪ್ಪಣೆ ಚೀಟಿಯನ್ನು ಪಡೆಯಬೇಕೆಂದೂ ಡಿಸ್ಟ್ರಿಕ್ಟ್ ಬೋರ್ಡಿನವರು ರೂಲಸು ಮಾಡಿ ಪ್ರಜೆಗಳ ಅಭಿಪ್ರಾಯವನ್ನು ತಿಳಿಯುವುದಕ್ಕೋಸ್ಕರ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಮಾಡಿದ್ದಾರೆ. ಈ ರೂಲಸನ್ನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ದಯಾದಿಂದಲೂ, ಗಾರ್ದಶಕವಾಗಿಯೂ ಪ್ರಜೆಗಳನ್ನು ಕಷ್ಟನಷ್ಟಗಳಿಗೆ ಗುರಿಮಾಡದೇಕೆಯೂ ಜಾರಿಸುವುದು ಸಾಧ್ಯವೇ?

* * *

ಕೋಲಾರ್ ಚಿನ್ನದ ಗಣಿಗಳ ಸ್ಯಾನಿಟರಿ ಬೋರ್ಡಿನ ಆವರಣಕ್ಕೆ ಸೇರಿದ ಪ್ರದೇಶದಲ್ಲಿ ರಾತ್ರಿ ಹೊತ್ತು ಹಚ್ಚುವ ವಿದ್ಯುಚ್ಛಕ್ತಿಯ ದೀಪಕ್ಕೆ ಬೋರ್ಡಿನವರು ಈಗ ಯುನಿಟ್ ಒಂದಕ್ಕೆ 6 ಪೈಸಂತೆ ಸರ್ಕಾರಕ್ಕೆ ಪಾವತಿ ಮಾಡುತ್ತಿದ್ದಾರೆ. ಗವರ್ನ್ಮೆಂಟಿನವರು ಈ ದರವನ್ನು ಒಂದಾಣೆಗೆ ಹೆಚ್ಚಿಸಬೇಕೆಂದು ಕೇಳಿದ್ದಕ್ಕೆ ಆ ಬೋರ್ಡಿನವರು ಹಾಗೆ ಹೆಚ್ಚಿಸಕೂಡದೆಂದು ತಿಳಿಸಿರುತ್ತಾರೆ. ಮೈಸೂರು ಮತ್ತೂ ಬೆಂಗಳೂರು ಪಟ್ಟಣಗಳಲ್ಲೂ ರಾತ್ರಿ ಹೊತ್ತು ಹಚ್ಚುವ ವಿದ್ಯುಚ್ಛಕ್ತಿಯ ಮ್ಯುನಿಸಿಪಲ್ ದೀಪಗಳಿಗೆ ಸರ್ಕಾರದವರು ಯೂನಿಟ್ ಒಂದಕ್ಕೆ ಒಂದಾಣೆಗಿಂತಲೂ ಜಾಸ್ತಿಯಾಗಿ ತೆಗೆದುಕೊಳ್ಳುವುದು ಯಾಕೋ ತಿಳಿಯಲಿಲ್ಲ. ರಾಜಧಾನಿಯಲ್ಲಿ ಅನೇಕ ಕಡೆ ದೀಪಗಳಿಲ್ಲದೆ ಜನರು ಕಷ್ಟಪಡುತ್ತಿದ್ದಾರೆ. ಸರ್ಕಾರದವರ ಕಾರ್ಯಗಳು ಸರ್ವಸಮ್ಮತವುಳ್ಳದ್ದಾಗಿದ್ದರೆ ಒಳ್ಳೇದು.

* * *

ಒಬ್ಬ ಬಾತ್ಮೀದಾರರಿಂದ—ಶ್ರೀಯುವರಾಜ ಮಹಾರಾಜ ನರಂಜನ ಸದ್ಗುರು ಅನ್ನದಾನಮಹಾಸ್ವಾಮಿ ಗ್ರಂಥಾಲಯವು ಮುಂಡರಗಿಯಲ್ಲಿ ಸ್ಥಾಪನವಾಗಿ ಏಳು ತಿಂಗಳಾಯಿತು. ಇಷ್ಟರಲ್ಲಿಯೇ ಈ ಗ್ರಂಥಾಲಯಕ್ಕೆ ಮಾಸಪತ್ರಿಕೆ ಮತ್ತು ವಾರಪತ್ರಿಕೆಗಳು ಒಟ್ಟು 25 ಬರಲನುಕೂಲವಾಗಿದ ಮತ್ತು 150 ಪುಸ್ತಕಗಳ ಸಂಗ್ರಹವಾಗಿದೆ. ಈ ಗ್ರಂಥಾಲಯದಲ್ಲಿ ಸರ್ಕಾರದಿಂದ ಬಂದುವರಾಡಲ್ಪಟ್ಟ ಪುಸ್ತಕಗಳ ಹೊರತಾಗಿ ಯಾವತ್ತು ಗ್ರಂಥಗಳನ್ನು ಸಂಗ್ರಹಿಸುವದರಲ್ಲಿ ಬರುವದು. ಈಗ ಅನೇಕ ಸದ್ಗೃಹಸ್ಥರು ತಮ್ಮಲ್ಲಿರುವ ಗ್ರಂಥಗಳನ್ನು ಇಲ್ಲಿಗೆ ಕಳುಹಿಸಿ ಕೀರ್ತಿಭಾಗಿಗಳಾಗಿರುವರು. ಮತ್ತು ಅನೇಕ ವರ್ತಮಾನಪತ್ರಿಕೆಗಳು ತಮ್ಮ ಮನೆಯ ಬುಧ ಲೋಕದ ಕಾರ್ಯಗಳಲ್ಲಿ ರಕ್ತ್ಯಾನುಸಾರ ರೊಕ್ಕವನ್ನು ಕಳುಹಿಸುತ್ತಿರುವರು. ಸಮಾಜ ಹಿತೈಷಿಗಳು ಈ ಪ್ರಕಾರದ ಕಾರ್ಯಗಳಿಗೆ ಸಹಾಯಮಾಡಿ ಕೀರ್ತಿಯುತರಾಗಬೇಕು.

ಮೈಸೂರು ಗೆಜೆಟ್ ಸಂಗ್ರಹ.

ಸಾಗರದ ಸಬ್ ಡಿವಿಜನ್ ಫಾರೆಸ್ಟ್ ಸಬ್ ಆ| ಕನ್ಸರ್ವೇಟರ್ ಮಿ| ಎಚ್ ಸಿ ಮಾಸ್ಟರ್ ಹೌಸ್ ಯವರಿಗೆ ಮೇ ತಾ 10 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರೇ ಅವರ ಕೆಲಸದ ಛಾರ್ಜನ್ನೂ ವಹಿಸತಕ್ಕದ್ದು.

ಶಿವಮೊಗ್ಗಾ ಖಜಾನೆ ಅ|| ಕಮಿಷನರ್ ಮಿ|| ಜಿ ಹನುಮಂತರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಚಾಮರಾಜನಗರದ ತಾಲ್ಲೂಕ್ ಅಮಲ್ದಾರ್ ಮಿ|| ಜಿ ನಾರಾಯಣ ರಾಯರನ್ನು 3 ನೇ ಕ್ಲಾಸ್ ಅ|| ಕಮಿಷನರಾಗಿ ಬದಲಿ ನೇಮಿಸಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜಿಗೆ ವರ್ಗಮಾಡಿದೆ.

ಚೀಫ್ ಕೋರ್ಟ್ ಜಡ್ಜರಾದ ಮಿ|| ಇ ಎಚ್ ವಾಲೆಸ್ ಯವರಿಗೆ ಬೇಸಗೆಯ ರಜಾ ಜೊತೆಗೆ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ.

ಮೈಸೂರು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮಿ ಎಂ ಜಿ ಕೃಷ್ಣಸ್ವಾಮಿ ರಾಯರನ್ನು ಜನವರಿ ತಾ 1 ರಿಂದ 3 ನೇ ಕ್ಲಾಸ್ ಅ, ಕಮಿಷನರಾಗಿ ಬಡ್ತಿಮಾಡಿದೆ.

ಮಿ|| ಎಂ ಮುಕುಂದನಯವರು ಎರಡು ತಿಂಗಳ ರಜಾ ಪಡೆದಿರುವಾಗ್ಗೆ ಮಿ|| ಡಿ ಶ್ರೀನಿವಾಸಯ್ಯಂಗಾರ್ರವರು ಬೆಂಗಳೂರಿನ ಸಿವಿಲ್ ಆಫೀಸರಾಗಿರತಕ್ಕದ್ದು.

ಮೈಸೂರು ಮಹಾರಾಣಿ ಕಾಲೇಜಿನ ಲೇಡಿ ಸೂಪರಿಂಟೆಂಡೆಂಟ್ ಮಿಸ್ ಎ ಪಾರ್ಕರ್ ಯವರಿಗೆ ಆರು ತಿಂಗಳ ರಜಾ ಕೊಟ್ಟಿದೆ. ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶ್ರೀ ಕೆ ಡಿ ರುಕ್ಮಿಣಮ್ಮನವರು ಲೇಡಿ ಸೂಪರಿಂಟೆಂಡೆಂಟರಾಗಿ ಬದಲಿ ನೋಡತಕ್ಕದ್ದು.

ಪಾವಗಡ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮಿ| ಬಿ ಮೊಹಿದೀನ್ ಷರೀಫ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಶಿರಸ್ತೇದಾರ್ ಮಿ|| ಬಿ. ನರಸಿಂಹಯ್ಯನವರು ತಾಲ್ಲೂಕಿನ ಚಾಲ್ತಿಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು.

ಮಾಲೂರ್ ತಾಲ್ಲೂಕು ಅಮಲ್ದಾರ್ ಮಿ|| ಕೇಸರ್ ಸಿಂಗರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ. ಶಿರಸ್ತೇದಾರ್ ಮಿ|| ಎಂ. ಲಕ್ಷ್ಮೀನಾರಣಪ್ಪನವರು ತಾಲ್ಲೂಕಿನ ಚಾಲ್ತಿಕೆಲಸಗಳ ಛಾರ್ಜನ್ನು ವಹಿಸತಕ್ಕದ್ದು.

ಆಶ್ಚರ್ಯಕರವಾದ ಅಂಗಚ್ಛೇದನವು.

ಒಬ್ಬ ಸಾಧುವು ತಾನಾಗಿಯೇ ತನ್ನ ಕೈಕತ್ತರಿಸಿಕೊಂಡನು.

ಮಧ್ಯಪ್ರಾಂತ್ಯಗಳಿಗೆ ಸೇರಿದ ನಿಮಾರ್ ಡಿಸ್ಟ್ರಿಕ್ಟಿನಲ್ಲಿ ಒಂದು ಅಪೂರ್ವವೂ ಆಶ್ಚರ್ಯವೂ ಆದ ಸ್ವಘಾತಕೃತ್ಯವು ನಡೆದಿದೆ. ಲಕ್ಷ್ಮಣನೆಂಬೊಬ್ಬ ಅನಕ್ಷರಸ್ಥನಾದ ರೈತನು ಸಾಧುವಾಗಿ ಅಲೆಯುತ್ತಿದ್ದನು. ಒಂದು ದಿನ ಬೆಳಿಗ್ಗೆ ಅವನು ರಾಮದೇವರ ದೇವಸ್ಥಾನಕ್ಕೆ ಹೋಗಿ ಅಪ್ಪಾಜಿ ಎಂಬ ಪೂಜಾರಿಯ ಎದುರಿಗೆ ನಿಂತು ಅವನಿಗೆ ತನ್ನ ಕೈಯನ್ನು ತೋರಿಸುತ್ತಾ ನನ್ನ ಎಡಗೈಯನ್ನು ಕತ್ತರಿಸಿ ದೇವರಿಗೆ ಒಪ್ಪಿಸಿಬಿಟ್ಟಿದೇನೆ ಎಂದು ಹೇಳಿದನು. ಅವನ ಎಡಗೈ ಮುಂಡದಿಂದ ರಕ್ತ ಹರಿಯುತ್ತಿದ್ದದ್ದರಿಂದ ಅವನು ಯಥಾರ್ಥವಾಗಿಯೂ ಮುಂಗೈಯನ್ನು ಕಡಿದುಹಾಕಿದನೆಂದು ಗೊತ್ತಾಯಿತು. ಕತ್ತರಿಸಿದ ಕೈಯಿನ ತುಂಡು ರಾಮದೇವರ ವಿಗ್ರಹದ ಮುಂದೆ ಬಿದ್ದಿದ್ದದ್ದನ್ನು ಪೂಜಾರಿ ಅಪ್ಪಾಜಿಯು ಕಂಡನು. ಲಕ್ಷ್ಮಣನು ತನಗೆ ಸ್ವಲ್ಪವೂ ನೋವಾಗುವುದಿಲ್ಲವೆಂದೂ, ರಾಮನೇ ತನ್ನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನಾದ್ದರಿಂದ ತನಗೆ ಯಾವ ಅಪಾಯವೂ ಭೀತಿಯೂ ಇಲ್ಲವೆಂದೂ ಹೇಳಿದನು. ಆಗ ಕಡಿದ ಭಾಗಕ್ಕೆ ರಕ್ತ ಸುರಿಯದಂತೆ ಬಟ್ಟೆಯನ್ನು ಕಟ್ಟಲಾಯಿತು. ಈ ಸಂಗತಿಯು ಪೋಲೀಸಿನವರಿಗೆ ತಿಳಿದಾಗ ಅವರು ಲಕ್ಷ್ಮಣನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಆ ದಿನ ಸಾಯಂಕಾಲ ಸಿವಿಲ್ ಸರ್ಜನ್ ರವರು ಆಸ್ಪತ್ರೆಗೆ ಬಂದು, ಅವನ ಗಾಯಕ್ಕೆ ತಕ್ಕ ಚಿಕಿತ್ಸೆಯನ್ನು ಮಾಡಿದರು. ಅವರ ಪರೀಕ್ಷೆಯಲ್ಲಿ ಅವನ ಕೈಗೆ ಮೂರಂಗುಲ ಮೊಂಡು ಆಯುಧದಿಂದ ಪೆಟ್ಟುಬಿದ್ದಿದೆ ಎಂದು ತಿಳಿಯಿತು. ಕೈ ಮೂಳೆಗಳು ಚರ್ಮಕ್ಕಿಂತ ಮುಂದಕ್ಕೆ ಹೊರಟುಕೊಂಡಿದ್ದವು. ಶಸ್ತ್ರಚಿಕಿತ್ಸೆ ಮಾಡುವುದಕ್ಕೆ ಡಾಕ್ಟರು ಅವನಿಗೆ ಪ್ರಜ್ಞೆ ತಪ್ಪುವ ಔಷಧ ಹಾಕಬೇಕೆಂದು ಪ್ರಯತ್ನಪಟ್ಟಾಗ ಲಕ್ಷ್ಮಣನು ಔಷಧಿ ಬೇಡವೆಂದೂ, ತನಗೆ ಸ್ವಲ್ಪವೂ ನೋವಿಲ್ಲವೆಂದೂ, ತಾನು ಕೈ ಕಡಿದುಹಾಕಿಕೊಂಡಾಗಲೂ ನೋವಿರಲಿಲ್ಲವೆಂದೂ ಹೇಳಿದನು. ವೈದ್ಯರು ಶಸ್ತ್ರಚಿಕಿತ್ಸೆ ಮಾಡುತ್ತಿದ್ದಾಗ ಅವನು ಸ್ವಸ್ಥಚಿತ್ತನಾಗಿ ಅವರು ಮಾಡುವ ಚಿಕಿತ್ಸೆಯನ್ನು ನೋಡುತ್ತಿದ್ದನು. ರಕ್ತ ಹರಿಯುವುದನ್ನು ನಿಲ್ಲಿಸುವುದಕ್ಕೆ ಡಾಕ್ಟರು ಎರಡು ಸಲ ಶಸ್ತ್ರಪ್ರಯೋಗ ಮಾಡಬೇಕಾಯಿತು. ಮರುದಿನ ಬೆಳಿಗ್ಗೆ ಲಕ್ಷ್ಮಣನು ಸಂತೋಷಚಿತ್ತನಾಗಿದ್ದು, ಕೈ ವಾಸಿಯಾಗುವ ತನಕ ಗಾಯಕ್ಕೆ ದಿನಾ ಔಷಧ ಹಾಕಿಸಿಕೊಳ್ಳಲು ಒಪ್ಪದೆ, ರಾಮನ ಕೃಪೆ ಇರೋಣದರಿಂದ ತನಗೆ ಯಾವ ವೇದನೆಯೂ ಇಲ್ಲವೆಂದು ಹೇಳಿ ಅಲ್ಲಿಂದ ಹೊರಟುಹೋದನು. ಈಚೆಗೆ ಅವನು ಏನಾದನೋ ಎಲ್ಲಿಗೆ ಹೋದನೋ ತಿಳಿಯದು. ಒಳ್ಳೇ ಔಷಧ ಹಾಕಿರುತ್ತಾರಾದ್ದರಿಂದ ಅವನಿಗೆ ವಾಸಿಯಾಗಿರಬೇಕೆಂದು ಊಹಿಸಲ್ಪಟ್ಟಿದೆ.

ವಿವಿಧ ವೃತ್ತಾಂತಗಳು.

ಅಮರಾವತಿ ಪಟ್ಟಣದಲ್ಲಿ ಮೂರು ಮೈದಾನುಗಳಲ್ಲಿ ಶೇರಿಸಿಟ್ಟಿದ್ದ ಹತ್ತಿಯ ಸಾವಿರಾರು ಗಟ್ಟಾಗಳಿಗೆ ಕಳೆದ ಗುರುವಾರ ಬೆಂಕಿಬಿದ್ದು ಸುಟ್ಟುಹೋದದ್ದು ಮಾಲೀಕರಿಗೆ ಸುಮಾರು ಎರಡು ಲಕ್ಷ ರೂಪಾಯಿ ನಷ್ಟವಾಯಿತು.

* * *

ಬೊಂಬಾಯಿ ಪಟ್ಟಣದಲ್ಲಿ ಆಸ್ತಿವಂತನಾಗಿಯೂ ವರ್ತಕನಾಗಿಯೂ ಗಣ್ಯತೆಯನ್ನು ಪಡೆದು ಮ್ಯುನಿಸಿಪಲ್ ಕಾರ್ಪೊರೇಷನ್ ಮೆಂಬರಾಗಿಯೂ ಇದ್ದ ಮಿ, ಪತುಭೂರ್ಜಿ ಸೋದಾರ್ಜಿ ಮಿಸ್ತ್ರಿ ಎಂಬಾತನಿಗೆ ಪ್ಲೇಗ್ ತಗಲಿ ಕಾಲವಾದನು.

* * *

ಬಂಗಾಳಾ ಅಧಿಪತ್ಯಕ್ಕೆ ಸೇರಿದ ಸಿಕಿಂನಲ್ಲಿ ಗ್ಯಾಂಗ್ ಟಾಕ್ ನಗರದೊಳಗೆ ಕಳೆದ 1 ನೇ ತಾ ಭಾನುವಾರ ಅಪೂರ್ವವಾದ ಮಳೆ ಸುರಿಯಿತು. ಒಂಬತ್ತು ಜನರು ರಾಮಚಂದ್ರನೆಂಬ ಐಶ್ವರ್ಯವಂತನ ಮನೆ ಜಗುಲಿಯ ಮೇಲೆ ಕುಳಿತಿದ್ದಾಗ ಸಿಡಿಲುಬಿದ್ದು ಒಂಭತ್ತು ಜನರೂ ತಕ್ಷಣವೇ ಮೃತಪಟ್ಟರು.

* * *

ಕಲ್ಕತಾ ಪಟ್ಟಣದಲ್ಲಿ ಕಳೆದ ತಾ 8 ನೇ ಗುರುವಾರ ಮಳೆ ಪ್ರಾರಂಭವಾಗಿ ಮೂರು ದಿನ ನಿಲ್ಲದೆ ಧಾರೋಧ್ಧಾರವಾಗಿ ಸುರಿಯುತ್ತಿತ್ತು. ಇದರ ದೆಸೆಯಿಂದ ಪಟ್ಟಣದಲ್ಲೆಲ್ಲಾ ನೀರು ನಿಂತಿತು. ದೊಡ್ಡ ಬೀದಿಗಳಲ್ಲಿ ನೀರು ಕಟ್ಟಿ ಹರಿಯುತ್ತಿದ್ದದ್ದರಿಂದ ಬಸ, ಗಾಡಿ, ರೈಲುಗಳ ಸಂಚಾರವು ಕೆಲವು ಕಾಲ ನಿಂತು ಹೋಗಿತ್ತು.

* * *

ಕಾಶೀ ಪಟ್ಟಣದ ಸೆಂಟ್ರಲ್ ಹಿಂದೂ ಕಾಲೇಜಿನ ಪ್ರಿನ್ಸಿಪಾಲರಾದ ಮಿ| ಜಿ ಎಸ್ ಅರುಂಡೇಲ್ ರವರೂ, ಹೆಡ್ ಮಾಸ್ಟರಾದ ಮಿ| ಪಿ ಕೆ ಗುರ್ಟು ರವರೂ ಆ ವಿದ್ಯಾಶಾಲೆಯ ಕೆಲಸವನ್ನು ಬಿಟ್ಟಿದ್ದರಿಂದ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಅವರಿಗೆ ಮಿಸೆಸ್ ಬೆಸೆಂಟರವರ ಅಧ್ಯಕ್ಷತೆಯಲ್ಲಿ ಒಂದು ವಿಜ್ಞಾಪನಾ ಪತ್ರಿಕೆಯನ್ನು ಕಳೆದ ಶುಕ್ರವಾರ ಓದಿ ಒಪ್ಪಿಸಿದರು. ಇದಕ್ಕೆ ಮಿ|| ಪಿ ಬಿ ಅಧಿಕಾರಿಯವರನ್ನು ಕಾಲೇಜಿನ ಪ್ರಿನ್ಸಿಪಾಲ್ ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ.

* * *

ಬಂಗಾಳಾ ಆಧಿಪತ್ಯಕ್ಕೆ ಸೇರಿದ ನಾಯಿಹಾಟಿ ಎಂಬಲ್ಲಿರುವ ಗೌರಿಪುರವೆಂಬ ಸೆಣಬಿನ ಕಾರ್ಖಾನೆಯಲ್ಲಿ ಯಜಮಾನನು ಮುಖಂಡನಾಗಿದ್ದ ಒಬ್ಬ ಸರ್ದಾರನನ್ನು ಕೆಲಸದಿಂದ ವಜಾಮಾಡಿದನು. ಅಲ್ಲಿ ಕೆಲಸ ಮಾಡುತ್ತಿದ್ದವರೆಲ್ಲಾ ಆ ಮನುಷ್ಯನಿಗೆ ಪುನಃ ಕೆಲಸ ಕೊಡಬೇಕೆಂದು ಕೇಳಿಕೊಂಡಾಗ ಮ್ಯಾನೇಜರು ಅವರ ಮಾತನ್ನು ತಿರಸ್ಕರಿಸಿದನು. ಇದಕ್ಕೆ ಕೂಲಿಯವರಿಗೆ ಸಿಟ್ಟು ಬಂದು ಸುಮಾರು 8,000 ಜನರು ಕೆಲಸಕ್ಕೆ ಹೋಗದೆ ನಿಂತು ಬಿಟ್ಟರು. ಮುಚ್ಚಿರುವ ಕಾರ್ಖಾನೆಯನ್ನು ಈಗ ಪೋಲೀಸಿನವರು ಬಂದೋಬಸ್ತು ಮಾಡುತ್ತಿದ್ದಾರೆ.

* * *

ಜೈನರಿಗೆ ಪ್ರಸಿದ್ಧ ಯಾತ್ರಾಸ್ಥಾನವಾದ ಪಾರ್ಶ್ವನಾಥ ಬೆಟ್ಟದ ತಪ್ಪಲಲ್ಲಿ ಒಂದು ಕುಂಡವಿದೆ. ಇದರ ಹಕ್ಕುದಾರಿ ವಿಷಯದಲ್ಲಿ ದಿಗಂಬರ ಜೈನರಿಗೂ ಶ್ವೇತಾಂಬರ ಜೈನರಿಗೂ ವ್ಯಾಜ್ಯವಾಗಿ ಮೊಕದ್ದಮೆ ಹುಟ್ಟಿತು. ಒಬ್ಬ ದಿಗಂಬರ ಜೈನನು ಆ ಕುಂಡದ ಬಳಿ ಕಾಮಗಾರಿ ಮಾಡಿಸುತ್ತಿದ್ದಾಗ ಶ್ವೇತಾಂಬರ ಜೈನರು ಅದು ತಮಗೆ ಸೇರಿದ್ದೆಂದು ದೊಂಬಿಮಾಡಿ ಆತನನ್ನು ಗಾಯಪಡಿಸಿದರು. ಆತನು ಕೆಲವು ಶ್ವೇತಾಂಬರ ಜೈನರ ಮೇಲೆ ಕ್ರಿಮಿನಲ್ ಮೊಕದ್ದಮೆ ಮಾಡಿದಾಗ ಗಿರಿಧಿ ಸಬ್ ಡಿವಿಜನ್ ಆಫೀಸರು ಅದನ್ನು ವಿಚಾರಣೆಮಾಡಿ ಕಳಿತ ಕ್ರಿಮಿನಲ್ ಮೊಕದ್ದಮೆ ರುಜುವಾತಾಗಲಿಲ್ಲವೆಂದು ಹೇಳಿ, ಅಪರಾಧಿಗಳನ್ನು ಖುಲಾಸ್ ಮಾಡಿದರು.

ಕೆಲವು ಮೈಸೂರು ಸರ್ಕಾರಿ ರಿಪೋರ್ಟುಗಳು.

ಬಿಸಿಲು ಮೋಡ ಮಳೆ ಗಾಳಿ ತಿಳಿಸುವ ರಿಪೋರ್ಟು — ಈ ರಿಪೋರ್ಟಿನಲ್ಲಿ ಸ್ವಾರಸ್ಯವನ್ನುಂಟುಮಾಡುವ ವಿಚಾರಗಳೇನೂ ಕಾಣುವುದಿಲ್ಲ ಸಂಸ್ಥಾನದಲ್ಲಿ ಆಯಾ ಸಾಲಿನ ಹವಾ ಸ್ಥಿತಿಯು ಯಾವ ರೀತಿ ಇತ್ತು ? ಅದರಿಂದ ಪ್ರಜಾ ಆರೋಗ್ಯವು ಯಾವ ರೀತಿ ಪರಿಣಮಿಸಿತ್ತು ? ಎಂಬೀ ವಿಚಾರಗಳನ್ನು ಮುಂದಾದರೂ ಈ ರಿಪೋರ್ಟಿನಲ್ಲಿ ಪ್ರಕಟಿಸುತ್ತಾರೆಂದು ನಿರೀಕ್ಷಿಸುವೆವು ಈಗ ಈ ರೀತಿಯಾದ ಸಂಗತಿಯನ್ನು ತಿಳಿಸುವ ಪ್ರಯತ್ನವೇ ನಡೆದಿಲ್ಲವೆಂದು ಹೇಳಬಹುದು ಇದರಲ್ಲಿ ಕಾಣಿಸಿರುವ ಬರೀ ಸಂಖ್ಯೆಗಳಿಂದ ಏನೂ ತಿಳಿಯುವುದಿಲ್ಲ ಈ ಇಲಾಖೆಗೆ ಕಳೆದ ಸಾಲಿನಲ್ಲಿ ರೂ 12,037-4 9 ಪೈ ಖರ್ಚಾಗಿರುತ್ತದೆ.

ಸರ್ಕಾರಿ ತೋಟಗಳೂ ಉದ್ಯಾನವನಗಳೂ — ಮಿ। ಕ್ರೊಂಬೀಗಲ್ ರವರು ತಮ್ಮ ಕೈಕೆಳಗಿರುವ ಉದ್ಯಾನವನಗಳ ಮತ್ತು ಪಾರ್ಕುಗಳ ವಿಷಯದಲ್ಲಿ ಸ್ವಾರಸ್ಯವಾದ ರಿಪೋರ್ಟನ್ನು ಬರೆದಿರುತ್ತಾರೆ ಅವುಗಳಿಗೆ ಒಟ್ಟು 52,455 ರೂಪಾಯಿ ಖರ್ಚಾಯಿತೆಂದೂ, 8,353 ರೂಪಾಯಿ ಅವುಗಳಲ್ಲಿ ಹುಟ್ಟುವಳಿ ಆಯಿತೆಂದೂ ತಿಳಿದುಬರುತ್ತದೆ ಉದ್ಯಾನವನಗಳಲ್ಲೂ ಪಾರ್ಕುಗಳಲ್ಲೂ ಹುಟ್ಟುವಳಿ ಆಗುವ ಹಣದಿಂದಲೇ ಅವನ್ನು ಸರಿಯಾಗಿಟ್ಟು ನಡಿಸುವುದು ಸಾಧ್ಯವಲ್ಲ ಬೆಂಗಳೂರಿನಲ್ಲಿರುವ ಲಾಲ್‌ಬಾಗ್ ಮತ್ತು ಕಬ್ಬನ್‌ಪಾರ್ಕು, ಮೈಸೂರಿನಲ್ಲಿರುವ ಗಾರ್ಡನ್ ಪಾರ್ಕು ಮತ್ತು ಕರ್ಜನ್ ಪಾರ್ಕು ಪುರನಿವಾಸಿಗಳಿಗೂ ಆಗಂತುಕರಿಗೂ ಆಹ್ಲಾದವನ್ನುಂಟುಮಾಡುವ ವಿಹಾರ ಸ್ಥಳಗಳಾಗಿರುತ್ತವೆ

ಬೆಂಗಳೂರು ಸರ್ವವಸ್ತು ತಮಾಷಿ ಬಂಗಲೆ — ಸೃಷ್ಟಿ ವಸ್ತುಪ್ರದರ್ಶನ ಶಾಲೆಯಾದ ಈ ತಮಾಷಿ ಬಂಗಲೆಯು ನೋಟಕರಿಗೆ ಉತ್ಸಾಹವನ್ನುಂಟುಮಾಡುವುದಾಗಿದೆ ಅದರಲ್ಲಿಟ್ಟಿರುವ ವಸ್ತುಗಳನ್ನು ಕಳೆದ ವರುಷ 3,44,146 ಜನರು ಹೋಗಿ ನೋಡಿ ಬಂದಿರುತ್ತಾರೆಂದೂ, ಅವರಲ್ಲಿ ಅರೆವಾಸಿ ಹೆಂಗಸರೂ ಹೆಣ್ಣುಮಕ್ಕಳೂ ಆಗಿದ್ದರೆಂದೂ ಗೊತ್ತಾಗುವುದು ಕಳೆದ ವರುಷ ಈ ತಮಾಷಿ ಬಂಗಲೆಗಾಗಿ 3,075 ರೂಪಾಯಿ ಖರ್ಚಾಯಿತು

ಸ್ಟಾಂಪುಗಳ ಇಲಾಖೆ — ಸ್ಟಾಂಪುಗಳ ವಿಕರಿಯು ವರುಷೇವರುಷ ಹೆಚ್ಚುತ್ತಿರುವುದು ಕಳೆದ ಸಾಲಿನಲ್ಲಿ 9,15,627 ರೂಪಾಯಿನ ಸ್ಟಾಂಪುಗಳು ಖರ್ಚಾದವು ಹಿಂದೆ ಯಾವ ಸಾಲಿನಲ್ಲೂ ಇಷ್ಟು ಹೆಚ್ಚು ವಿಕರಿ ಆಗಿರುವುದಿಲ್ಲ ಅವರ ಹಂಚಿಕೆಯನ್ನು ನೋಡಲಾಗಿ ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ವಿಕರಿ ಜಾಸ್ತಿಯಾಗಿರುತ್ತದೆ ಇದಕ್ಕೆ ನಾನಾ ಕಾರಣಗಳನ್ನು ಸೂಚಿಸಿರುತ್ತಾರೆ ಕಳೆದ ಸಾಲಿನಲ್ಲಿ ಈ ಇಲಾಖೆಗೆ 63,824 ರೂಪಾಯಿ ಖರ್ಚಾಗಿರುವುದು

ರೆಜಿಸ್ಟ್ರೇಷನ್ ಇಲಾಖೆ — ಈ ಇಲಾಖೆಯ ಕೆಲಸವು ಹೆಚ್ಚುತ್ತಾ ಬಂದಿದೆ ಕಳೆದ ಸಾಲಿನಲ್ಲಿ ಸಂಸ್ಥಾನದಲ್ಲಿ 91 193 ಪತ್ರಗಳೂ ಕರಾರುಗಳೂ ರೆಜಿಸ್ಟರಾಗಿರುತ್ತವೆ ಈ ಪೈಕಿ 91,701 ಕರಾರುಗಳು ಸ್ಥಿರಸೊತ್ತಿಗೆ ಸಂಬಂಧಪಟ್ಟಿರುವವು ಅನೇಕ ಡಿಸ್ಟ್ರಿಕ್ಟುಗಳಲ್ಲಿ ಕೆಲಸ ಹೆಚ್ಚಿದೆ ಇದಕ್ಕೆ ಹಲವು ಕಾರಣಗಳು ಸೂಚಿಸಲಾಗಿವೆ ಈ ಇಲಾಖೆಯ ಖರ್ಚು 81 229 ರೂಪಾಯಿ — ಈಗ ಸರ್ಕಾರದವರು ಸಬ್ ರೆಜಿಸ್ಟ್ರಾರ್ ಆಫೀಸುಗಳನ್ನು ಐದು ತರಗತಿಗಳಾಗಿ ವಿಂಗಡಿಸಿ ಗುಮಾಸ್ತರುಗಳ ಸಂಖ್ಯೆಯನ್ನೂ ಅವರ ಸಂಬಳಗಳನ್ನೂ ಹೆಚ್ಚು ಮಾಡಿ, ಈ ಹೊಸ ಏರ್ಪಾಡು ಮುಂದಿನ ಜೂಲೈ, ಲಾಗಾಯಿತು ಜಾರಿಗೆ ಬರತಕ್ಕದ್ದೆಂದು ಹುಕುಂ ಕೊಟ್ಟಿದಾರೆ ಈ ಹೊಸ ಏರ್ಪಾಡಿನಿಂದ ಸಾಲ್ ಒಂದಕ್ಕೆ ಸುಮಾರು 5,000 ರೂಪಾಯಿ ಜಾಸ್ತಿ ಖರ್ಚಾಗುವುದು

ಅನೇಕ ಸಬ್ ರೆಜಿಸ್ಟ್ರಾರ್ ಆಫೀಸುಗಳಲ್ಲಿ ರೈತರು ಪತ್ರಗಳನ್ನು ಹಾಜರು ಮಾಡುವುದರಲ್ಲೂ, ರೆಜಿಸ್ಟರು ಮಾಡಿಸುವುದರಲ್ಲೂ, ರೆಜಿಸ್ಟರಾದ ಪತ್ರಗಳನ್ನು ವಾಪಸು ಪಡೆಯುವುದರಲ್ಲೂ ಅವರಿಗೆ ನಾನಾ ಕಷ್ಟನಷ್ಟಗಳಿರುವವೆಂದು ಆಗಿಂದಾಗ್ಗೆ ನಮ್ಮಲ್ಲಿಗೆ ಬಾತ್ಮಿಗಳು ಬರುತ್ತಿರುವವು ಹಲವು ಆಫೀಸುಗಳಲ್ಲಿ ಸತ್ಯಸಂಧತೆಯೂ ಚಟುವಟಿಕೆಯೂ ಇಲ್ಲದೆ ಪ್ರಜೆಗಳು ಗುಮಾಸ್ತರುಗಳು [illegible] ಬಲ್ಲೆವು ಅಧಿಕಾರಿಗಳು ಇಂಥಾ ಆಫೀಸುಗಳಲ್ಲಿ ಕೆಲಸಗಳು ತಾಮಸಕ್ಕೆ ಬೀಳದಂತೆಯೂ, ನೌಕರಮಾನೇರುಗಳು ವಿಧಾಯಕವಾದ ಫೀಜನ್ನಲ್ಲದ ಅವಸ್ಯಂ ತಲೂ ಹೆಚ್ಚು ಹಣವನ್ನು ಅರಿಯದ ಬಡ ರೈತರಿಂದ ಕಸುಕೊಳ್ಳದಂತೆಯೂ ದರ್ಪವಿಟ್ಟು ಮೇಲ್ವಿಚಾರಣೆ ಮಾಡುತ್ತಾ ಬರಬೇಕಾಗಿದೆ

ಗಣಿಗಳ ಕಾನೂನು — ಈ ಕಾನೂನು ವಿಶೇಷವಾಗಿ ಕೋಲಾರದಲ್ಲಿರುವ ಚಿನ್ನದ ಗಣಿಗಳಿಗೆ ಅನ್ವಯವಾಗಿರುತ್ತದೆ 97 ಮೊಕದ್ದಮೆಗಳಲ್ಲಿ 109 ಜನರು ದಸ್ತಗಿರಿಮಾಡಲ್ಪಟ್ಟು ವಿಚಾರಣೆ ಮಾಡಿದ್ದರಲ್ಲಿ 80 ಮೊಕದ್ದಮೆಗಳು ರುಜುವಾತಾದವು, 97 ಮಂದಿಗೆ ಶಿಕ್ಷೆಯಾಗಿದೆ ಸಂಸ್ಥಾನದ ಇತರ ಕಡೆಗಳಲ್ಲಿರುವ ಪೋಲೀಸಿನವರೂ ಈ ರೀತಿ ಮುತುವರ್ಜಿವಹಿಸಿ ಕೆಲಸ ಮಾಡಿದ ಪಕ್ಷದಲ್ಲಿ ಪ್ರಜೆಗಳು ಎಷ್ಟೋ ನೆಮ್ಮದಿಯಾಗಿದ್ದಾರು

ಪರಸ್ಪರಸಹಾಯ ಸಂಘಗಳ ಸಮ್ಮೇಳನವು

ತುಮಕೂರಿನಲ್ಲಿ ನಡೆಯುವ ಏರ್ಪಾಡು

ಇದೇ ತಾ 28, 29 ಮತ್ತು 30ರಲ್ಲಿ ತುಮಕೂರು ಟವನ್ನಲ್ಲಿ ತುಮಕೂರು ಡಿಸ್ಟ್ರಿಕ್ಟ್ ಪರಸ್ಪರ ಸಹಾಯ ಸಂಘಗಳ ಮೊದಲನೇ ಸಮ್ಮೇಳನವು ಹೈ ಸ್ಕೂಲ್ ಹಾಲಿನಲ್ಲಿ 28ನೇ ತಾರೀಖು ಪ್ರಾತಃಕಾಲ 8½ ಘಂಟೆಗೆ ಪ್ರಾರಂಭಿಸಲ್ಪಡುತ್ತದೆ ದಿವ್ಯಟಿ ಕಮಿಷನರಾದ ಮಿ॥ ಎ ಆರ್ ತ್ಯಾಗರಾಜ ಅಯ್ಯರವರು ಸಭೆಯ ಅಗ್ರಾಸನಾಧಿಪತ್ಯವನ್ನು ವಹಿಸಲು ಒಪ್ಪಿರುತ್ತಾರೆ ಚರ್ಚಿಸಲ್ಪಡಬೇಕಾದ ವಿಷಯಗಳ ಪಟ್ಟಿಯನ್ನು ಇದರ ಕೊನೆಯಲ್ಲಿ ನಮೂದಿಸಿರುತ್ತೆ ಸಾಧ್ಯವಾದ ಮಟ್ಟಿಗೂ ಕನ್ನಡದಲ್ಲಿ ನಡವಳಿಕೆಗಳು ನಡಿಸಲ್ಪಡುತ್ತದೆ ಸಭೆಗೆ ಸಂಘಗಳಿಂದ ಬರುವ ಪ್ರತಿನಿಧಿಗಳು ಮತ್ತು ಸಭೆಗೆ ದಯಮಾಡಿಸುವ ಇತರ ದೊಡ್ಡ ಮನುಷ್ಯರುಗಳೂ ಈ ವಿಷಯಗಳ ಪೈಕಿ ಯಾವದನ್ನಾದರೂ ಕುರಿತು ಮಾತನಾಡಬಹುದು ಮತ್ತು ಚರ್ಚೆಮಾಡಿ ತೀರ್ಮಾನಗಳನ್ನು ಮಾಡಬಹುದು ಸಭೆಗೆ ಬರಲು ಅವಕಾಶವಿಲ್ಲದ ದೊಡ್ಡ ಮನುಷ್ಯರುಗಳು ಸೆಕ್ರೆಟರಿಗಳಿಂದ ಓದಲ್ಪಡುವ ಉಪನ್ಯಾಸಗಳನ್ನು ಕಳುಹಿಸಿಕೊಡಬಹುದು ಓದಬೇಕೆಂದಿರುವ ಉಪನ್ಯಾಸಗಳ ನಕಲುಗಳು ಸಭೆಯ ಸೆಕ್ರೆಟರಿಯವರಿಂದ ಮೇ ಮಾಹೇ 27ನೇ ತಾ 9 ವರೆಗೂ ತೆಗೆದುಕೊಳ್ಳಲ್ಪಡುತ್ತವೆ 20ನೇ ತಾ ನೊಳಗೆ ತಲುಪಿಸಿದ ಉಪನ್ಯಾಸಗಳು ಸಭೆ ಸೇರುವುದಕ್ಕೆ ಮೊದಲೇ ಪ್ರಿಂಟು ಮಾಡಲ್ಪಡುವವು ಸಂಘಗಳ ಪ್ರತಿನಿಧಿಗಳು ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಬೇಕೆಂದಿರುವ ವಿಷಯಗಳನ್ನು ವಿನಾಟಂಗಿನ ಕಾಲಕ್ಕೆ 1 ಘಂಟೆಯ ಮುಂಚೆ ಕಾನ್ಫರೆನ್ಸಿನ ಸೆಕ್ರೆಟರಿಯವರಿಗೆ ತಿಳಿಸತಕ್ಕದ್ದು ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಪ್ರತಿಯೊಂದು ಸೊಸೈಟಿಯು ಎರಡರಿಂದ ಐದು ಪ್ರತಿನಿಧಿಗಳನ್ನು ಕಳುಹಿಸಿಕೊಡಬೇಕೆಂದು ಕೋರಿದೆ ಇನ್ನೂ ಹೆಚ್ಚು ಮೆಂಬರುಗಳು ವಿಜಿಟರುಗಳಾಗಿ ಬರಬಹುದು ಕಾನ್ಫರೆನ್ಸಿಗೆ ದಯಮಾಡಿಸತಕ್ಕ ದೊಡ್ಡ ಮನುಷ್ಯರುಗಳ ಅನುಕೂಲಕ್ಕೋಸ್ಕರ ತುಮಕೂರಿನಲ್ಲಿ ಒಂದು ರಿಸೆಪ್ಷನ್ ಕಮಿಟಿಯು ಏರ್ಪಾಟು ಮಾಡಲ್ಪಟ್ಟಿರುತ್ತೆ ಹೈ ಸ್ಕೂಲ್ ಹಾಸ್ಟಲ್‌ನಲ್ಲಿ ಇಳಿದುಕೊಳ್ಳುವುದಕ್ಕೆ ಜಾಗ ಗೊತ್ತು ಮಾಡಿರುತ್ತೆ ಊಟ ಮತ್ತು ಇತರ ವಿಧವಾದ ಅನುಕೂಲಗಳನ್ನು ಕುರಿತು ಸದರಿ ಕಮಿಟಿಯ ಸೆಕ್ರೆಟರಿಗಳಿಗೆ ಬರೆದುಕೊಳ್ಳಬಹುದು

ಚರ್ಚಿಸಲ್ಪಡಬಹುದಾದ ವಿಷಯಗಳು

(1) ಕಾನ್ಫರೆನ್ಸಿಗೆ ಪ್ರತಿನಿಧಿಗಳು ಬರೆದಿರತಕ್ಕ ಸೊಸೈಟಿಗಳ ರಿಪೋರ್ಟು — ಈ ರಿಪೋರ್ಟುಗಳಲ್ಲಿ ಸೊಸೈಟಿಯನ್ನು ಪ್ರಾರಂಭಿಸಿದ ಲಾಗಾಯಿತು ಇದುವರೆಗಿನ ಸಂಕ್ಷೇಪವಾದ ಚರಿತ್ರೆ, ಮೆಂಬರುಗಳ ಸಂಖ್ಯೆ, ಸೊಸೈಟಿಯಲ್ಲಿ ಜಮಾಯಿಸಿರುವ ಷೇರುಹಣ, ಮತ್ತು ಡಿಪಾಜಿಟ್ಟು ಮೊಬಲಗು ಮತ್ತು ಮೆಂಬರುಗಳಿಗೆ ಕೊಟ್ಟಿರತಕ್ಕ ಸಾಲದ ಮೊಬಲಗು, ಮೆಂಬರುಗಳಿಂದ ವಸೂಲಾಗಿರುವ ಸಾಲದ ಮೊಬಲಗು ಮತ್ತು ಸೊಸೈಟಿಗೆ ಸೇರಿರತಕ್ಕ ಗ್ರಾಮದಲ್ಲಿರುವ ಬಡ್ಡಿದರ, ಸೊಸೈಟಿಯಿಂದ ಕೊಡಲ್ಪಡುವ ಸಾಲದ ಮೇಲಿನ ಬಡ್ಡಿ ದರಗಳು ಮತ್ತು ಸೊಸೈಟಿಯಿಂದ ಮೆಂಬರುಗಳು ಹೊಂದಿರುವ ಪ್ರಯೋಜನಗಳು — ಇವುಗಳನ್ನೆಲ್ಲಾ ನಮೂದಿಸಬೇಕು ಮೇ 20ನೇ ತಾ ನೊಳಗಾಗಿ ರಿಸೆಪ್ಷನ್ ಕಮಿಟಿ ಸೆಕ್ರೆಟರಿಯವರಿಗೆ ಈ ರಿಪೋರ್ಟುಗಳನ್ನು ಕಳುಹಿಸಿಕೊಟ್ಟರೆ ಅವುಗಳನ್ನು ಸಾಧ್ಯವಾದಲ್ಲಿ ಪ್ರಿಂಟು ಮಾಡಿಸಲಾಗುತ್ತೆ (2) ತುಮಕೂರು ಡಿಸ್ಟ್ರಿಕ್ಟಿನಲ್ಲಿ ಲೇವಾದೇವಿ ಇರುವ ಅನುಕೂಲತೆಗಳು ಮತ್ತು ತಾಲ್ಲೂಕುಗಳಲ್ಲಿ ಹಾಲಿ ಜಾರಿಯಲ್ಲಿರುವ ಬಡ್ಡಿ ದರಗಳು (3) ಕೋಆಪರೇಟಿವ್ ಸೊಸೈಟಿಯ ಉದ್ದೇಶಗಳು, ಕೆಲಸಗಳು ಮತ್ತು ಪ್ರಯೋಜನಗಳು (4) ಕೋಆಪರೇಟಿವ್ ರೆಗ್ಯುಲೇಷನ್, ರೂಲ್ಸ್ ಮತ್ತು ಬೈಲಾಗಳು (5) ಜಾರಿಯಲ್ಲಿರುವ ರೆಜಿಸ್ಟರುಗಳು, ಲೆಕ್ಕಗಳು ಮತ್ತು ತಃಖ್ತೆಗಳು (6) ಸರ್ಕಾರದವರು ಸೊಸೈಟಿಗಳ ವಿಷಯದಲ್ಲಿ ತೋರಿಸಿರುವ ರಿಯಾಯಿತಿಗಳು (7) ಅನ್ ಲಿಮಿಟೆಡ್ (ಮಿತವಿಲ್ಲದ) ಜವಾಬ್ದಾರಿ ಅಂದರೇನು — ಅದರ ಸ್ವಭಾವ ಮತ್ತು ಪ್ರಯೋಜನಗಳು (8) ಸಂಘಗಳ ಪಂಚಾಯಿತರು ಮತ್ತು ಅಧಿಕಾರಿಗಳು ಮಾಡತಕ್ಕ ಕೆಲಸಗಳು, ಮತ್ತು ಅವರುಗಳನ್ನು ಕೆಲಸಕ್ಕೆ ತರಬೇತುಮಾಡಬೇಕಾದ ಆವಶ್ಯಕತೆ (9) ರೈತಾಪಿ ಮೆಂಬರುಗಳಿಗೆ ಎಂಪಸಾಲವನ್ನು ಒದಗಿಸುವ ವಿಷಯದ ಮುಖ್ಯ ಸಂಗತಿಗಳು (10) ಕೋಆಪರೇಟಿವ್ ಸೊಸೈಟಿಗಳು ಸೇವಿಂಗ್ಸ್ ಬ್ಯಾಂಕುಗಳ ಆಗಿ ನಡಿಸುವದು (11) ಡಿಪಾಜಿಟ್ಟು ರೂಲ್ಸ್ (12) ಕೋಆಪರೇಟಿವ್ ಫೆಡರಲ್ ಬ್ಯಾಂಕಿಂಗ್ ಯೂನಿಯನ್‌ಗಳು ಮತ್ತು ತಕ್ಕ ಸ್ಥಳಗಳಲ್ಲಿ ಅವುಗಳ ಏರ್ಪಾಡು (13) ಪರಸ್ಪರ ಸಹಾಯ ಸಂಘಗಳನ್ನು ಅಭಿವೃದ್ಧಿಗೊಳಿಸುವದಕ್ಕೆ ತಾಲ್ಲೂಕು ಅಸೋಸಿಯೇಷನ್‌ಗಳನ್ನು ಏರ್ಪಾಡುಮಾಡುವದು (14) ಬೆಲ್ಲ ತಯಾರುಮಾಡುವ ಸಂಘಗಳು (15) ಹಾಲು ಬೆಣ್ಣೆ ತಯಾರುಮಾಡುವ ಸಂಘಗಳು (16) ಗ್ರಾಮದ ಬೆಳೆಗಳನ್ನು ಒಗ್ಗಟ್ಟಾಗಿ ಮಾರುವದು, ಮತ್ತು ಗ್ರಾಮದವರು ತಮಗೆ ಆವಶ್ಯಕವಾದ ಪದಾರ್ಥಗಳನ್ನು ಒಟ್ಟಾಗಿ ತರಿಸಿಕೊಳ್ಳುವದು (17) ಅನ್ಯೋನ್ಯ ಸಹಾಯ ಸಂಘಗಳ ಮಾಸಪತ್ರಿಕೆ (18) ಪರಸ್ಪರ ಸಹಾಯ ಸಂಘಗಳನ್ನು ಸ್ಥಾಪಿಸಬೇಕಾದ ಗ್ರಾಮಗಳ ಚುನಾವಣೆ (19) ತಾಲ್ಲೂಕುಗಳಲ್ಲಿ ಆನರರಿ ಸೂಪರ್‌ವೈಜರುಗಳಾಗಿಯೂ, ಸಂಘಗಳಲ್ಲಿ ಅಧಿಕಾರಿಗಳಾಗಿಯೂ ಇರುವದಕ್ಕೆ ಒಪ್ಪುವವರ ಹೆಸರುಗಳನ್ನು ರೆಜಿಸ್ಟರುಮಾಡುವದು (20) ಪರಸ್ಪರ ಸಹಾಯ ಸಂಘಗಳ ವಿಷಯದಲ್ಲಿ ತಿಳುವಳಿಕೆಯನ್ನು ಕೊಡಲು ಅನುಕೂಲವಾಗಿರುವ ಸ್ಥಳಗಳನ್ನು ರೆಜಿಸ್ಟರುಮಾಡುವದು (21) ಚರ್ಚಿಸಬಹುದಾದ ಇತರ ವಿಷಯಗಳು

ಬಾತ್ಮೀದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್‌ಪಾಂಡೆನ್ಸ್

ಶೃಂಗೇರಿಯ ವಿಚಾರಗಳು

ಅಯ್ಯಾ,

ಕೊಪ್ಪ ತಾಲ್ಲೋಕ್ ಶೃಂಗೇರಿ ಕಸಬಾ ಕೆಳಗಿನ ಪೇಟೆಯಲ್ಲಿ ಇದೇ ತಿಂಗಳು ತಾ 4 ರಲ್ಲು ಒಂದು ವಿಚಿತ್ರವಾದ ಕಳ್ಳತನವು ನಡೆದಿರುತ್ತೆ ಆ ದಿನ ರಾತ್ರಿ ಬಳೆ ವ್ಯಾಪಾರ ಮಾಡುವ ಸುಬ್ಬೋಜಿ ಎಂಬುವನು ಕುಟುಂಬ ಪರಿವಾರ ಸಮೇತ ಟವನ್ನಿಗೆ ಒಂದೂವರೆ ಮೈಲಿ ಫಾಸಲೆಯಲ್ಲಿ ಹೊಸಕೂಟವೆಂಬ ಸ್ಥಳದಲ್ಲಿ ದಶಾವತಾರದ ಆಟವನ್ನು ನೋಡಲು ಹೋಗಿದ್ದನು ಆ ಸಮಯದಲ್ಲಿ ಕೆಲವು ಜನಗಳು ಮನೆಗೆ ನುಗ್ಗಿ ಬೀಗ ಒಡೆದು ಒಳಗಿರುವ ಪೆಟ್ಟಿಗೆ ವಗ್ಗೈರೆಗಳನ್ನು ತೆಗೆದುಕೊಂಡುಹೋಗಿ ಹೊಳೆ ಪದದಲ್ಲಿಟ್ಟು ಅದರಲ್ಲಿದ್ದ ನಗದು ರೂಪಾಯಿಗಳನ್ನೂ ಬಟ್ಟೆಬರೆಗಳನ್ನೂ ಅಪಹರಿಸಿದರು ಮತ್ತು ಅದೇ ರಾತ್ರಿ ಟವನ್ನಿಗೆ ಸುಮಾರು 2 ಮೈಲಿ ಫಾಸಲೆಯಲ್ಲಿ ಬಗ್ಗ ಎಂಬ ಒಬ್ಬ ಬಡಪಾಯಿ ಮನೆ ನುಗ್ಗಿ ಉಪ್ಪು ಹುಳಿ ಆದಿಯಾಗಿ ಚಿಪ್ಪೆ ದೋಚಿಕೊಂಡು ಹೋಗಿರುತ್ತಾರೆ ಈ ಊರಿನಲ್ಲಿ 6 ವರುಷದ ಹುಡುಗನಿಂದ ಜುಗಾರಿ ಆಟಗಳು ಆಡುವದೇ ಹೊರತು ಮತ್ತೆಬೇರೆ ಕೆಲಸವಿಲ್ಲ ಮತ್ತು ಅನೇಕ ಜನಗಳು ಕಾಲಹರಣಮಾಡುತ್ತಾರೆ ಆದುದರಿಂದ ಇಂಥಾ ಪಬ್ಲಿಕ್ ರೋಡಿನಲ್ಲಿ ಇರತಕ್ಕ ಮನೆಯಲ್ಲಿ ಇಷ್ಟು ಮಟ್ಟಿಗೆ ಕಳುವು ನಡೆದ ಮೇಲೆ ಗರೀಬರ ಗತಿ ಏನಾಗುತ್ತೋ ತಿಳಿಯಲಿಲ್ಲ ಆದುದರಿಂದ ಸರ್ಕಾರದ ಪುಣ್ಯ ಪ್ರಭುಗಳು ಬಂದೋಬಸ್ತು ಮಾಡಿ ಗರೀಬರನ್ನು ಕಾಪಾಡುತ್ತಾರೆಂತ ನಂಬಿರುತ್ತೇನೆ

ಪುರವಾಸಿ

ತಾಲ್ಲೋಕು ವರ್ತಮಾನಗಳು

ಚಿತ್ರದುರ್ಗ — ಈಗ ನಾಲ್ಕೈದು ದಿವಸದಿಂದ ಒಂದೇ ಸಮನಾಗಿ ಗಾಳಿ ಬೀಸುತ್ತಾ ಬೆಳಗಿನ ಹೊತ್ತು ಚಳಿಯಾಗುತ್ತಾ ಇದೆ ಬಿಸಿಲಿನ ತಾಪ ಸೈರಿಸಲು ಅಸಾಧ್ಯವಾಗಿದೆ ಊರಲ್ಲಿ ಜ್ವರ, ಸಿಡುಬು ಜಾಸ್ತಿಯಾಗಿ ನೂರಾರು ಜನರು ಸತ್ತರು ಜನರು ಇನ್ನೂ ಕಾಯಿಲೆ ಅನುಭವಿಸುತ್ತಲೇ ಇದಾರೆ ಈ ಡಿಸ್ಟ್ರಿಕ್ಟಿನ ತಾಲ್ಲೋಕುಗಳಲ್ಲೂ ಈ ಚಿತ್ರದುರ್ಗದ ತಾಲ್ಲೋಕಿನ ಸೇರಿದ ಹಳ್ಳಿಗಳಲ್ಲೂ ಮಳೆಗಳಾಗುತ್ತಿದ್ದಾಗ್ಯೂ ಈ ಚಿತ್ರದುರ್ಗದ ಟವನ್ ಗೆ ಮಾತ್ರ ಅದರ ಪ್ರವೇಶವೇ ಇಲ್ಲ — ಈ ಊರಲ್ಲಿ ಹಾವುಗಳು ಜಾಸ್ತಿ ಅವು ಸೆಕೆ ತಡೆಯಲಾರದೆ ರಾತ್ರಿ ಕಾಲಗಳಲ್ಲಿ ಜನಗಳು ಓಡಾಡತಕ್ಕ ರಸ್ತೆಗಳಲ್ಲೇ ಮಲಗಿರುತ್ತವೆ ಈಗ್ಗೆ 4 ದಿವಸಗಳ ಕೆಳಗೆ ಒಂದು ದಿನ ರಾತ್ರಿ ಒಬ್ಬ ಬ್ರಾಹ್ಮಣ ಹುಡುಗನನ್ನು ರಸ್ತೇಲಿ ಹೋಗುತ್ತಿದ್ದಾಗ ನಾಗರಹಾವು ಕಚ್ಚಿತು ತಕ್ಷಣ ಡಾಕ್ಟರ ಸಹಾಯ ಸಿಕ್ಕಿ ಅವರು ಮಾಡಿದ ಚಿಕಿತ್ಸೆಯಿಂದ ಆ ಹುಡುಗ ಬದುಕಿಕೊಂಡನು — ಮನುಷ್ಯನ ಆಹಾರದ ದಿನಸಿಗಳೂ, ಕಟ್ಟಿಗೆ, ಹುಲ್ಲೂ ದಿನೇದಿನೇ ತುಟ್ಟಿಯಾಗುತ್ತಲೇ ಇದೆ ದೊಡ್ಡವರ ಸಹಾಯದಿಂದ ಈ ಸ್ಥಳದಲ್ಲಿ ತಲೆ ಎತ್ತುತ್ತಿದ್ದ ಮೇರಿ ಮಹಾದಾಕ್ಷೀ ಪಂಚಮಾ ಸ್ಕೂಲು, ರೆಡ್ಡಿ ಭಟ್ಟರಾಜು ಸ್ಟೂಡೆಂಟ್ಸ್ ಹೋಮ್ ಗಳಿಗೆ ಈಗೀಗ ಹೀನಸ್ಥಿತಿ ಬಂದು ಮಿ॥ ಕೆ ಮಾಧವನ್ ಸಾಹೇಬರಾದರೂ ಇದ್ದೀ ಬಾಯಿಂ ಆಗಿ ನಂತರೆ ಇಂಥಾ ಲೋಪಗಳೆಲ್ಲಾ ಸರಿಪಟ್ಟು ಈ ವಿದ್ಯಾಲಯಗಳಿಗೆ ಆಶ್ರಯ ಸಿಕ್ಕಿ, ಪ್ರಜೆಗಳಿಗೂ ಅನುಕೂಲವಾದೀತು

ದೊಡ್ಡಬಳ್ಳಾಪುರ — ಈ ವಾರ ಮಳೆಯಿಂದ ಶಿವಪುರದ ಒಳ ಒಂದು ಆಲದ ಮರದ ಕೆಳಗೆ ನಿಂತ ಕೊಣಗಟ್ಟದ ಒಬ್ಬ ಓಜಯು ಸುಮಾರು 60 ವರ್ಷ ಪ್ರಾಯದವನು ತಕ್ಷಣ ಮೃತಪಟ್ಟನಂತೆ ಬಿಸಿಲಿನ ಝಳ ಅಧಿಕವಾಗಿದೆ — ಬುಧವಾರ ರಾತ್ರಿ ಮೇರಿಪುಯಿಯವರು ತಮ್ಮ ಮುಕ್ತಿ ಸೋಮನ ಹೆಂಗಸರ ಮೂಲಕ ಗ॥ ಹಿಂದುಸ್ಥಾನಿ ಹಾಲ್‌ನಲ್ಲಿ ಒಂದು ಸ್ತ್ರೀ ಮತ್ತು ಪಬ್ಲಿಕ್ ಎಂಟರ್‌ಟೇನ್‌ಮೆಂಟ್ ಕೊಟ್ಟರು ಅಮಲ್ದಾರರವರು ಹಾಜರಾಗಿದ್ದರು ಆಟಪಾಟ ವಿನೋದಗಳೆಲ್ಲಾ ನಡೆದ ಮೇಲೆ ಮೇರಿಬಾಯಿಯವರು ಈ ದೇಶದ ವಿಧವೆಗಳ ವಿಷಯದಲ್ಲಿ ಒಂದು ಸಂಕ್ಷಿಪ್ತ ಉಪನ್ಯಾಸ ಮಾಡಿದರು ಮತ್ತು ಮುಕ್ತಿ ಸೋಮನ ಹೆಂಗಸರು ಸ್ವತಹ ತಯಾರುಮಾಡಿದ ಕಸೂತಿ ಮುಂತಾದ ಕೆಲಸಗಳನ್ನು ಜನರಿಗೆ ತೋರಿಸಿ ಮಾರಿದರು — ಈ ಊರಿಗೆ ಹೊಸದಾಗಿ ಮುನ್ಸಿಫ್ ಕೋರ್ಟು ಪಡೆದು ಲಾಗಾಯಿತು ಬರುವಂತೆಯೂ, ಆಗಲೇ ಕೆಲವು ಮಂದಿ ಲಾಯರುಗಳು ಬಂದು ಮನೆಗಳನ್ನು ವಾಸಕ್ಕೆ ವಿಚಾರಿಸಿದಂತೆಯೂ ಕೇಳಲಾಗಿದೆ — ಕೂಡಲಿ ಮಠದ ಗುರುಗಳು ಈ ವಾರ ಇಲ್ಲಿಗೆ ದಯಮಾಡಿಸಿರುತ್ತಾರೆ ಇವರು ಮೊದಲು ಇಲ್ಲಿಗೆ ಬಂದು ಎರಡು ವರ್ಷಗಳಾಗಿರಬಹುದು — ಇಲ್ಲಿಂದ ವರ್ಗವಾಗಿರುವ ಚಿಕ್ಕಬಳ್ಳಾಪುರ ಅಮಲ್ದಾರರು ಇಲ್ಲಿಗೆ ಬರುವ ವಿಷಯವು ಇನ್ನೂ ಕೊಂಚ ನಿಧಾನವೆಂತ ಕೇಳಲಾಗಿದೆ ಅಲ್ಲದೆ ಅಮಲ್ದಾರ್ ಮಿ। ಎ ಕೃಷ್ಣ ಅಯ್ಯಂಗಾರವರೇ ಇನ್ನು ಕೊಂಚಕಾಲ ಇಲ್ಲಿರಬೇಕೆಂತ ಈ ಊರಿನ ಕೆಲವು ಮುಖಂಡರು ದಿವಾನ್ ಸಾಹೇಬರಲ್ಲಿ ವಿಜ್ಞಾಪನೆ ಮಾಡಿಕೊಂಡರಂತೆ — ಧಾರಣೆ ನಾಗರಿಗಳು ಏರಿವೆ [illegible] ರೋಗಾದ್ಯುಪದ್ರವಗಳೂ ಅಲ್ಲಲ್ಲಿ ಸಿಡುಬೂ ಪ್ರಬಲವಾಗಿವೆ

ದೇವನಹಳ್ಳಿ — ಬಿಸಿಲಿನ ಝಳವು ಸಹಿಸಲಶಕ್ಯವಾಗಿದೆ ಮೋಡಗಳು ವಿಶೇಷವಾಗಿದ್ದಾಗ್ಯೂ ಮಳೆ ಮಾತ್ರ ಬರಲಿಲ್ಲ ಧಾರಣೆಗಳು ದಿನೇ ದಿನೇ ಹೆಚ್ಚುತ್ತಿರುವುದರಿಂದ ಬಡ ಪ್ರಜೆಗಳಿಗೂ ಅಲ್ಪ ಸಂಬಳಗಾರರಿಗೂ ಜೀವನ ನಡೆಯುವುದು ತುಂಬಾ ಕಷ್ಟವಾಗಿದೆ — ಈ ಊರಿಗೆ ರೈಲು ಹಾಕುವುದಕ್ಕೆ ಗವರ್ನಮೆಂಟಿನ ಕಡೆಯಿಂದ ರಸ್ತೆ ಕಾಮಗಾರಿ ನಡೆಯುತ್ತಿರುವುದನ್ನು ಇಲ್ಲಿನ ಪ್ರಜೆಗಳು ಕೇಳಿ ತುಂಬಾ ಸಂತೋಷಪಡುತ್ತಿರುವರು — ಅಮಲ್ದಾರ್ ಮಿ॥ ಕೆ ನಾರಣಪ್ಪನವರು ಇಲ್ಲಿಗೆ ಬಂದು ಸುಮಾರು ಒಂದೆರಡು ವರುಷಗಳಾಗಿರುತ್ತವೆ ಇವರಿಗೆ ಚನ್ನಗಿರಿಗೆ ವರ್ಗವಾಗಿ, ಮುಂಚಿನಿಂದ ಬೇರೆ ಅಮಲ್ದಾರರವರು ಬರುವರಾಗಿದಾರೆ ಇವರು ಇಲ್ಲಿಗೆ ಬಂದಲಾಗಾಯ್ತು ಪ್ರಜೆಗಳ ಅಹವಾಲುಗಳನ್ನು ಸಮಾಧಾನದಿಂದ ಕೇಳಿ ಪರಾಂಬರಿಕೆಯಿಂದ ಅವರಲ್ಲಿ ತುಂಬಾ ಅನುರಾಗವುಳ್ಳವರಾಗಿ, ಅವರ ಕಷ್ಟನಷ್ಟಗಳನ್ನು ಬೇಗನೇ ನಿವಾರಣೆ ಮಾಡಿಕೊಡುತ್ತಿದ್ದರು ತುಂಟರ ಹಾವಳಿಯನ್ನು ಬಹಳ ಮಟ್ಟಿಗೆ ಕಡಮೆ ಮಾಡಿದರು ಸರ್ಕಾರಕ್ಕೆ ಬಹು ಕಾಲದಿಂದ ಬಾಕಿ ಇದ್ದ ಸಹಸ್ರಾರು ರೂಪಾಯಿ ಕಂದಾಯಗಳನ್ನು ಬಹಳ ಮುತುವರ್ಜಿಯಿಂದ ವಸೂಲು ಮಾಡಿದರು ಮ್ಯುನಿಸಿಪಾಲಿಟಿ ವಿಚಾರ ತುಂಬಾ ಅಭಿವೃದ್ಧಿಗೆ ಬರುತ್ತಲಿದೆ ಊರಿನ ಪಾಕೀಜಾ ಬಹಳ ಚೆನ್ನಾಗಿ ನಡೆಯುತ್ತಿತ್ತು ಟೌನ್‌ನಲ್ಲಿ ಬೆಳೆದಿದ್ದ ಲಾಂಟಾನಾ ಗಿಡಗಳನ್ನು ಕಡಿಸಿಹಾಕಿ ತುಂಬಾ ಅನುಕೂಲಪಡಿಸಿರುವರು ಲಾಂದ್ರಗಳನ್ನು ಹೆಚ್ಚು ಮಾಡಿದ್ದಲ್ಲದೆ ಮೊದಲಿಗಿಂತ ಹೆಚ್ಚು ದಿನಗಳು ಉರಿಯುವಂತೆ ಏರ್ಪಡಿಸಿದರು ಮ್ಯುನಿಸಿಪಲ್ ಸುಂಕವು ಮೊದಲಿಗಿಂತ ತುಂಬಾ ಜಾಗರೂಕತೆಯಿಂದ ವಸೂಲಾಗುತ್ತಿದೆ ತಾಲ್ಲೂಕ್ ಕಚೇರಿಯ ಹತ್ತಿರ ಬಹಳ ದಿನಗಳಿಂದ ನೀರಿಗೆ ತುಂಬಾ ಕಷ್ಟವಾಗಿತ್ತು ಇವರ ಕಾಲದಲ್ಲಿ ತೆಗಿಸಿರುವ ಬೇರೆ ಹೊಸ ಬಾವಿಯಲ್ಲಿ ಯಥೇಚ್ಛವಾಗಿ ನೀರು ಬಂದಿರುವದು ತುಂಬಾ ಅನುಕೂಲವಾಗಿದೆ ಈ ರೀತಿಯಾಗಿ ಸದಾಕಾಲದಲ್ಲಿಯೂ ಪ್ರಜಾಹಿತಚಿಂತಕರಾಗಿದ್ದ ಈ ಅಮಲ್ದಾರರನ್ನು ಅಗಲಿರಲು ಇಲ್ಲಿನ ಪ್ರಜೆಗಳು ತುಂಬಾ ವ್ಯಸನಪಡುತ್ತಿದಾರೆ ಮುಂದೆ ಬರತಕ್ಕವರು ಸಹ ಇದೇ ರೀತಿ ಪ್ರಜಾಹಿತೈಷಿಗಳಾಗಿದ್ದಾರೆಂದು ನಂಬಿ ನಿರೀಕ್ಷಿಸುತ್ತೇವೆ

ಇಂಡಿಯಾ ದೇಶದ ವೃತ್ತಾಂತಗಳು

ಮಾಂಟುವಾ ಎಂಬ ಜಹಜು 25,000 ಪವನುಗಳ ಚಿನ್ನವನ್ನು ಹಿಂದುಸ್ಥಾನಕ್ಕೆ ತರುತ್ತಲಿದೆ

* * *

ಕಳೆದ 5 ನೇ ತಾ ನಡುರಾತ್ರಿಯಲ್ಲಿ ಸಿಂಟಾ ಪಟ್ಟಣದ ಅಂಗಡಿ ಬೀದಿಯಲ್ಲಿ ಬೆಂಕಿಬಿದ್ದು ಹತ್ತಾರು ಅಂಗಡಿಗಳು ಸುಟ್ಟು ವರ್ತಕರಿಗೆ ಸುಮಾರು 50,000 ರೂಪಾಯಿ ನಷ್ಟವಾಗಿದೆ

* * *

ಕುಲಿತಲಾಯಿ ತಾಲ್ಲೂಕಿಗೆ ಸೇರಿದ ಲಾಲಾಪೇಟೆಯಲ್ಲಿ ಕಳೆದ ವಾರ ಬೆಂಕಿಬಿದ್ದು 200 ಮನೆಗಳಿಗೆ ಕಡಮೆ ಇಲ್ಲದೆ ಸುಟ್ಟುಹೋದವು ಬಡಬಗ್ಗರು

...ವನ್ನೂ ಆಪುಗಳಲ್ಲಿದ್ದ ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ಕಷ್ಟಪಡುತ್ತಾರೆ

∴

ಇದುವರೆಗೆ ಪ್ರತ್ಯೇಕವಾಗಿದ್ದ ಬೀರಾರ್ ಸೀಮೆಯನ್ನು ಮಧ್ಯಪ್ರಾಂತ್ಯಕ್ಕೆ ಸೇರಿಸಿ ಒಂದೇ ಆಧಿಪತ್ಯವಾಗಿ ರೂಪಿಸಿ ಆಳಲ್ಪಡಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಒಪ್ಪಿ ಸ್ಯಾಂಕ್ಷನ್ ಮಾಡಿದಾರೆ

∴

ರಂಗೂನ್ ಪಟ್ಟಣದ ಪಶ್ಚಿಮ ಪಾರ್ಶ್ವದೊಳಗೆ ಬೆಂಕಿಬಿದ್ದು ಒಂದು ನೂರು ಮನೆಗಳು ಸುಟ್ಟುಹೋದವು ಒಂದು ಸಾವಿರ ಪ್ರಜೆಗಳ ತನಕ ನಿಲ್ಲುವುದಕ್ಕೆ ಸ್ಥಳವಾಗಲಿ ತಿನ್ನುವುದಕ್ಕೆ ಅನ್ನವಾಗಲಿ ಇಲ್ಲದೆ ಕಷ್ಟಪಡುತ್ತಿದಾರೆ ಈಚೆಗೆ ಒಂದು ರಿಲೀಫ್ ಫಂಡು ಏರ್ಪಾಡಾಗಿ ಚಂದಾ ಕೂಡಿಸಿ ಅವರಿಗೆ ಅನ್ನೋದಕವನ್ನು ನಡಿಸುತ್ತಿರುವರು

∴

ಹೈದರಾಬಾದ್ ಸಂಸ್ಥಾನದ ನೈಜಾಮರವರು ಸುಮಾರು ಮೂರು ವಾರಗಳ ವರೆಗೆ ಬೊಂಬಾಯಿನಲ್ಲಿದ್ದು ಬರಬೇಕೆಂದು ಕಳೆದ ಸೋಮವಾರ ಪ್ರಯಾಣ ಮಾಡಿದರು ಮತ್ತು ಹಿಂದುಸ್ಥಾನದ ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್ ಪ್ರಭುಗಳು ಈ ವರುಷ ಆಕ್ಟೋಬರ್ ತಾ 25 ಕ್ಕೆ ಹೈದರಾಬಾದಿಗೆ ದಯಮಾಡುತ್ತಾರೆ ದು ವರ್ತಮಾನ ಹುಟ್ಟಿದೆ

∴

ಮುಂಬಯಿ ಪ್ರಾಂತ್ಯಕ್ಕೆ ಸೇರಿದ ಅಮರಕೋಟೆಯಲ್ಲಿ ದೇಶಭಾಷಾ ಉಪಾಧ್ಯಾಯನಾದ ನ ರ್ ಮುಹಮದ್ ಎಂಬುವನು ಈ ಸಲ ಪರೀಕ್ಷಾ ಪ್ರಶ್ನ ಪತ್ರಿಕೆಗಳನ್ನು ಕಳುವು ಮಾಡಿ ಕೆಂದು ಪ್ರಯತ್ನಪಟ್ಟದ್ದು ಬಯಲಾಗಿ ಅವನನ್ನು ಹಿಡಿದು ಸೆಷನ್ಸ್ ಕೋರ್ಟಿನಲ್ಲಿ ದರಿಯಾಪ್ತಿ ಮಾಡಿದ್ದರಲ್ಲಿ ಕಳೆದ ವಾರ ಅವನಿಗೆ ಮೂರು ವರುಷ ಕಠಿಣ ಸಜಾ 200 ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿತು

∴

ಮದರಾಸ್ ಆಧಿಪತ್ಯದಲ್ಲಿ ಮುಂದಿನ ವರುಷ ಪ್ರೈಮರಿ ಮತ್ತು ಸೆಕೆಂಡರಿ ಸ್ಕೂಲುಗಳಿಗೆ ಅವಶ್ಯಕವಾದ ಸಾಮಾನು ಮುಂತಾದವುಗಳನ್ನು ಒದಗಿಸುವುದಕ್ಕೆ 30,000 ರೂಪಾಯಿ ಸರ್ಕಾರದಿಂದ ಕೊಡಲಾಗುವುದು ಬಾಲ್ತಿ ಸಾಲಿನಲ್ಲಿ ಈ ಕಾರ್ಯಕ್ಕೆ ನಾಲ್ಕು ಲಕ್ಷ ರೂಪಾಯಿ ಖರ್ಚುಮಾಡುತ್ತಾರೆ ಈ ಹಣವನ್ನು ಹಂಚಿಕೊಡಲು ಸರ್ಕಾರದವರು ಸ್ಕೂಲ್ ಇನ್‌ಸ್ಪೆಕ್ಟರುಗಳ ರಿಪೋರ್ಟುಗಳನ್ನು ಎದುರು ನೋಡುತ್ತಿದಾರೆ

∴

ಭಾಗಲ್‌ಪುರದ ಮಿ॥ ಖಿಲಾಫತ್ ಹುಸೇನ್ ಎಂಬ ಬ್ಯಾರಿಸ್ಟರು ತನ್ನ ಕಕ್ಷಿಗಾರನಾದ ಒಬ್ಬ ಜಮೀನ್ದಾರನ ಬಾಬತು, 500 ರೂಪಾಯನ್ನು ಅಪಹರಿಸಿ ಮೋಸಮಾಡಿದನೆಂದು ಬ್ಯಾರಿಸ್ಟರ ಮೇಲೆ ಮೊಕದ್ದಮೆ ಆಗಿ ಆತನನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿದಾರೆ ಆತನು ತನ್ನಕಡೆ 110 ಜನ ಸಾಕ್ಷಿಗಳಿದಾರೆಂದು ಹೇಳಿಕೊಂಡಾಗ ಜಡ್ಜರು ಆ ಪೈಕಿ ಅನೇಕ ಸಾಕ್ಷಿಗಾರರಿಗೆ ಸಮನ್ಸ್ ಕಳುಹಿಸಲಾಗದೆಂದು ತಿರಸ್ಕರಿಸಿದರು

∴

ಕಳೆದ 1 ನೇ ತಾ ಗೆ ಆಖೈರಾದ ವಾರದಲ್ಲಿ ಹಿಂದುಸ್ಥಾನದೊಳಗೆ ಪ್ಲೇಗ್ ಉಪದ್ರವು 8,311 ಜನಗಳಿಗೆ ತಗಲಿತು 7,616 ಜನರು ಆ ರೋಗದಲ್ಲಿ ಕಾಲವಾದರು ಈ ಮರಣ ಸಂಖ್ಯೆಯ ವಿವರವೇನಂದರೆ—ಡೆಹಲಿ 16, ಬೊಂಬಾಯಿ ಆಧಿಪತ್ಯ 351 ಮದರಾಸ್ 31, ಬಂಗಾಳಾ 45, ಬೀಹಾರ 916, ಸಂಯುಕ್ತ ಆಧಿಪತ್ಯಗಳು 1,614, ಪಂಜಾಬ್ 1,840, ಬರ್ಮಾ 55, ಮಧ್ಯಪ್ರಾಂತ್ಯಗಳು 1, ಮೈಸೂರು ಸಂಸ್ಥಾನ 7, ರಾಜಪುಟಾನಾ 89

∴

ಧರಂಪುರದ ಲೇಟ್ ರಾಣಿ ಪ್ರಿಂಬಾಜಿದೇವಜಿಯವರ ಕುಮಾರಿಕೆಯನ್ನು ಕಾಶ್ಮೀರ ಸಂಸ್ಥಾನದ ಮಹಾರಾಜರವರ ಜ್ಯೇಷ್ಠ ಪುತ್ರರೂ ಯುವರಾಜರೂ ಆದ ರಾಜಕುಮಾರ ಹರಿಸಿಂಗ್‌ಜಿಯವರಿಗೆ ಕೊಟ್ಟು ನೆನ್ನೆ ದಿನ ರಾಜಕೋಟೆಯಲ್ಲಿ ವಿವಾಹ ಮಹೋತ್ಸವ ಜರುಗುವುದಾಗಿತ್ತು ಈ ಉತ್ಸವಕ್ಕೆ ಅನೇಕ ರಾಜರೂ ದೊಡ್ಡಮನುಷ್ಯರೂ ಸರದಾರರೂ ಹೋಗಿರುತ್ತಾರೆ ಅನೇಕರು ನೂತನ ದಂಪತಿಗಳಿಗೆ ಬಹಳ ಅಮೂಲ್ಯವಾದ ರತ್ನಾಭರಣಾದಿಗಳನ್ನೂ ಉಡುಗೊರೆಗಳನ್ನೂ ಒಪ್ಪಿಸಲು ಕಳುಹಿಸಿರುವರು

∴

ಹಿಂದುಸ್ಥಾನದಲ್ಲಿ ವಿಮಾನಸಂಚಾರವನ್ನು ಕಲಿಸಿಕೊಡುವುದಕ್ಕೆ ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಸೀತಾಪುರದಲ್ಲಿ ಒಂದು ಪಾಠಶಾಲೆಯನ್ನು ಸ್ಥಾಪನೆಮಾಡಬೇಕೆಂದು ಇಂಡಿಯಾ ಗವರ್ನಮೆಂಟಿನವರು ಅಂದಾಜಾ ಪಟ್ಟಿಗಳನ್ನು ತಯಾರುಮಾಡಿ ಸ್ಟೇಟ್ ಸೆಕ್ರೆಟರಿಯವರ ಸ್ಯಾಂಕ್ಷನ್ ಬಗ್ಗೆ ಕಳುಹಿಸುವವರಾಗಿದಾರೆ ಈ ಸ್ಯಾಂಕ್ಷನ್ ಆಗಿ ಬಂದ ಕೂಡಲೆ ಕೆಲವು ಸೈನ್ಯಗಳ ಹುದ್ದೇದಾರರನ್ನು ಲಂಡನ್ ಪಟ್ಟಣಕ್ಕೆ ಕಳುಹಿಸಿ, ಅಲ್ಲಿರುವ ಶಿಕ್ಷಣಶಾಲೆಯಲ್ಲಿ ಆ ವಿದ್ಯೆಯನ್ನು ಕಲಿತುಬರುವಂತೆ ಮಾಡುತ್ತಾರೆ

∴

ದರ್ಭಾಂಗ ಜಿಲ್ಲಾ ಖಜೌರಿಘಾಟ ಪ್ರದೇಶದಲ್ಲಿ ಮರಣಕರವಾದ ಒಂದು ಹೊಸ ರೋಗವು ಕಾಣಿಸಿಕೊಂಡು ಪ್ರಜೆಗಳನ್ನು ಬಹಳವಾಗಿ ಸಂಕಟಪಡಿಸುತ್ತಿದೆ ಈ ರೋಗದ ಲಕ್ಷಣಗಳೇನೆಂದರೆ, ಜನರಿಗೆ ಇದ್ದಕ್ಕಿದ್ದ ಹಾಗೇ ಸೊಂಟ ಹಿಡಿದು ಪಾದದ ವರೆಗೆ ಮೈ ಮೇಲೆ ಅಲ್ಲಲ್ಲಿ ಕಪ್ಪು ಮಚ್ಚೆಗಳುಂಟಾಗುವವು ಇದು ಕಾಣಿಸಿಕೊಂಡ ಒಂದೆರಡು ದಿನಗಳಲ್ಲೇ ರೋಗಿಯು ತೀರಿಹೋಗುತ್ತಾನೆ ಇದು ವರೆಗೆ ಈ ರೋಗವು 100 ಜನಗಳಿಗಿಂತಲೂ ಹೆಚ್ಚಾಗಿಯೇ ತಗಲಿತೆಂದೂ, ಅವರೆಲ್ಲಾ ಮೃತಪಟ್ಟರೆಂದೂ ತಿಳಿದುಬಂದಿದೆ ದರ್ಭಾಂಗದ ಸಿವಿಲ್ ಸರ್ಜನ್‌ರವರು ಅಜಮಾಯಿಷಿಗಾಗಿ ಆ ಸ್ಥಳಕ್ಕೆ ಹೋಗಿದಾರೆ

∴

ಪೂರ್ವ ಬಂಗಾಳಾದಲ್ಲಿರುವ ಖುಲ್ನಾನಗರದಲ್ಲಿ ಚಾರುಚಂದ್ರಘೋಷ್ ಎಂಬ ಜವಾನನು ತನ್ನ ಯಜಮಾನನ ಬಂದೂಕನ್ನು ತೆಗೆದುಕೊಂಡು ಹೋಗಿ ಮ್ಯಾಜಿಸ್ಟ್ರೇಟರಿಗೆ ತೋರಿಸಿ ಅವರಿಂದ ತನ್ನ ಧಣಿಯ ಹೆಸರಿನಲ್ಲಿ ಲೈಸೆನ್ಸು ತೆಗೆಸಬೇಕೆಂದು ಹೋಗುತ್ತಿದ್ದಾಗ ಪೊಲೀಸಿನವರು ಅವನನ್ನು ದಸ್ತಗಿರಿ ಮಾಡಿ, ಲೈಸೆನ್ಸಿಲ್ಲದೆ ಬಂದೂಕು ಹಿಡಿದಿದ್ದನೆಂದು ಅವನ ಮೇಲೆ ಫಿರ್ಯಾದು ತಂದರು ಮ್ಯಾಜಿಸ್ಟ್ರೇಟರು ಆ ಆಳಿಗೆ 20 ರೂಪಾಯಿ ಜುಲ್ಮಾನೆ ವಿಧಿಸಿದರು ಅವನು ಅಪೀಲ್ ಮಾಡಿಕೊಂಡಾಗ ಕಲ್ಕತ್ತೆಯ ಹೈ ಕೋರ್ಟ್ ಜಡ್ಜಿಗಳು ಮೊಕದ್ದಮೆಯ ಕಟ್ಟನ್ನು ಪರಾಂಬರಿಸಿ, ಜುಲ್ಮಾನೆಯನ್ನು ವಜಾಮಾಡಿರುತ್ತಾರೆ

∴

ತಿನ್ನವೆಲ್ಲಿ ಜಿಲ್ಲೆಗೆ ಸೇರಿದ ಕೆಲವು ಗ್ರಾಮಗಳಲ್ಲಿ ದರೋಡೆಕೋರರ ಹಾವಳಿ ಹೆಚ್ಚಾಗಿರುವಂತೆ ಕಾಣುತ್ತದೆ ಸಮುದ್ರದೇವಿಗ್ರಾಮದಲ್ಲಿ ಕಳ್ಳರು ಒಬ್ಬ ಬ್ರಾಹ್ಮಣ ಸ್ತ್ರೀಯ ಕಿವಿಯನ್ನೂ, ಇನ್ನೊಬ್ಬಳ ಮೂಗನ್ನೂ ಹರಿದು ಆಭರಣಗಳನ್ನು ಕಿತ್ತುಕೊಂಡು ಹೋದರು ಕೆಲವು ಹೆಂಗಸರನ್ನು ಹೆದರಿಸಿ ಅವರ ಮೈಮೇಲಿದ್ದ ಒಡವೆಗಳನ್ನೆಲ್ಲಾ ಅಪಹರಿಸಿದರು ಒಡವೆಯನ್ನು ಒಪ್ಪಿಸದೆ ತಂಟೆಮಾಡಿದ ಕೆಲವು ಸ್ತ್ರೀಯರಿಗೆ ಘೋರಾ ಏಟುಗಳು ಬಿದ್ದಿವೆ ಇವರನ್ನು ಆಸ್ಪತ್ರೆಗಳಲ್ಲಿಟ್ಟು ಇಲಾಜುಮಾಡುತ್ತಿದಾರೆ ಇಂಥಾ ದುಷ್ಟ ಕೃತ್ಯಗಳು ವರ್ತವನಲ್ಲೂರು, ಅಂಬಾಸಮುದ್ರ ಎಂಬೀ ಸ್ಥಳಗಳಲ್ಲಿ 48 ಗಂಟೆ ಕಾಲದೊಳಗಾಗಿ ಏಕಕಾಲದಲ್ಲಿ ನಡೆದಿರುತ್ತವೆ

∴

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಬುಡಾವನ್ ಡಿಸ್ಟ್ರಿಕ್ಟಿನಲ್ಲಿ ಸಹಸ್ವಾನ್ ಎಂಬ ಸ್ಪೆಷಲ್ ಪೊಲೀಸ್ ಆಫೀಸರು ಒಬ್ಬಂದಿ ಸಮೇತ ಅಪರಾಧಿಗಳಿಬ್ಬರನ್ನು ಹಿಡಿದುತರುವುದಕ್ಕೆಂದು ಅಹೀರ್ ಜನರಿದ್ದ ಗ್ರಾಮಕ್ಕೆ ಹೋಗಿ ಒಬ್ಬ ಅಪರಾಧಿಯನ್ನು ದಸ್ತಗಿರಿಮಾಡಿದರು ಒಬ್ಬ ಅಹೀರ್ ಹೆಂಗಸು ಹಿಂದಿನಿಂದ ಹೋಗಿ ಆಫೀಸರನ್ನು ದೊಣ್ಣೆಯಿಂದ ಬಲವಾಗಿ ಹೊಡೆದಳು ಅಷ್ಟರಲ್ಲಿ 15 16 ಜನ ಅಹೀರರು ಜಮಾಯಿಸಿಕೊಂಡು ಪೊಲೀಸ್ ಆಫೀಸರನ್ನು ಹೊಡೆದು ಕೊಂದು ಹಾಕಿ ಹಿಡಿದಿದ್ದವನನ್ನು ಬಿಡಿಸಿಕೊಂಡರು ಒಬ್ಬ ಪೊಲೀಸಿನವನು ಅಲ್ಲಿಂದ ತಪ್ಪಿಸಿಕೊಂಡುಹೋಗಲು ಓಡುತ್ತಿದ್ದಾಗ ಅವರು ಅವನನ್ನೂ ಹಿಡಿದು ಹೊಡೆದು ಕೊಂದುಬಿಟ್ಟರು ಮೂರು ಮಂದಿಗೆ ಗಾಯಗಾಣಿಸಿದರು ಇನ್ನು ಮೂರು ಮಂದಿಗೆ ಘೋರಾ ಜಖಂ ಆಗಿವೆ ಈ ಕಲಹದಲ್ಲಿ ಮೂರು ಮಂದಿ ಪ್ರಾಣ ಕೊಟ್ಟರು ಸರ್ಕಾರದವರು ತನಿಖೆಮಾಡುತ್ತಿದಾರೆ

∴

ದುಂರಾವನ್ ಎಂಬುದು ಬಂಗಾಳಾ ಆಧಿಪತ್ಯದಲ್ಲೊಂದು ದೇಶೀಯ ಸಂಸ್ಥಾನ ಅದರ ರಾಜರಿಗೆ ಕೆಲವು ದಿನಗಳ ಕೆಳಗೆ ಸಂಸ್ಥಾನವನ್ನಾಳುವ ಅಧಿಕಾರ ವಹಿಸಲ್ಪಟ್ಟಿತು ಅವರಿಗೆ ಈ ಹಕ್ಕು ಸ್ಥಿರಪಟ್ಟು ಸಂಸ್ಥಾನವನ್ನಾಳುವ ಸ್ವಾತಂತ್ರ್ಯವು ಲಭ್ಯವಾದರೆ ಅವರು ಮಿ॥ ಫ್ರಾನ್ಸಿಸ್ ರಾಬಿನ್‌ಸನ್ ಎಂಬ ಸರದಾರನಿಗೆ ಆತನ ಸಾಹಸಪ್ರಯತ್ನಕ್ಕಾಗಿ ಮೂರು ಲಕ್ಷ ರೂಪಾಯಿ ಬಹುಮಾನವನ್ನೂ, ಯಾವಜ್ಜೀವವೂ ಆತನಿಗೆ 100 ರೂಪಾಯಿ ಮಾಸಾಶನವನ್ನೂ ಪಾವತಿಮಾಡುವುದಾಗಿ ಕರಾರುಮಾಡಿಕೊಂಡಿದ್ದಂತೆಯೂ, ರಾಜರು ಆ ಕರಾರಿನಂತೆ ನಡೆಯದೆ ತಪ್ಪಿರುತ್ತಾರೆಂತಲೂ ಆತನು ಕಲ್ಕತ್ತಾ ಹೈ ಕೋರ್ಟಿನಲ್ಲಿ ಆ ರಾಜರ ಮೇಲೆ ಆರು ಲಕ್ಷ ರೂಪಾಯಿಗೆ ದಾವಾ ತಂದಿರುತ್ತಾನೆ ಜಡ್ಜಿಯವರು ಆತನ ದಾವಾ ಅರ್ಜಿಯನ್ನು ಅಂಗೀಕರಿಸಿ, ಪ್ರತಿವಾದಿ ರಾಜರವರ ವಾಙ್ಮೂಲವನ್ನು ಕೇಳಬೇಕೆಂದು ಹುಕುಂ ಕೊಟ್ಟಿದಾರೆ

∴

ಕಾಶೀ ಪಟ್ಟಣದಲ್ಲಿ ಮಿಸೆಸ್ ಬೆಸೆಂಟ್ ಎಂಬ ಸ್ತ್ರೀಯು ಕೆಲವು ವರುಷಗಳಿಂದ ಪ್ರಾರಂಭಿಸಿ ನಡಿಸುತ್ತಾ ತುಂಬಾ ಹೆಸರುವಾಸಿಗೆ ಬಂದಿರುವ ಸೆಂಟ್ರಲ್ ಹಿಂದೂ ಕಾಲೇಜ್ ಎಂಬ ವಿದ್ಯಾಶಾಲೆಯಲ್ಲಿನ 24 ಮಂದಿ ಉಪಾಧ್ಯಾಯರುಗಳು ಮೇಲ್ವಿಚಾರಣಾ ಕಮಿಟಿಯವರ ಮೇಲೆ ಉಂಟಾದ ಅಸಮಾಧಾನದ ನಿಮಿತ್ತವಾಗಿ ಏಕಕಾಲದಲ್ಲಿ ತಮ್ಮ ಕೆಲಸಗಳಿಗೆ ರಾಜೀನಾಮೆಕೊಟ್ಟುಬಿಟ್ಟರು ಮಿಸೆಸ್ ಬೆಸೆಂಟಮ್ಮನೂ ಕಮಿಟಿಯ ಪ್ರೆಸಿಡೆಂಟಾಗಿರುವುದಿಲ್ಲವೆಂದು ತಿಳಿಸಿದಳು ಕಮಿಟಿ ಮೆಂಬರುಗಳು ವಿಷಾದದಿಂದ ಅವರ ರಾಜೀನಾಮೆಗಳನ್ನೆಲ್ಲಾ ಅಂಗೀಕರಿಸಿಕೊಂಡು, ಈ ವಿದ್ಯಾಶಾಲೆಯ ಸ್ಥಾಪನೆಗೆ ತುಂಬಾ ಸಾಹಸಪಟ್ಟು ಅದನ್ನು ನಡಿಸುತ್ತಾ ಬಂದಿರುವ ಮಿಸೆಸ್ ಬೆಸೆಂಟಮ್ಮನು ಇನ್ನು ಕೆಲವು ಕಾಲ ಒಬ್ಬ ಮೆಂಬರಾಗಿರಬೇಕೆಂದು ಕೇಳಿದರು ಈ ಕಾಲೇಜನ್ನು ಇಷ್ಟರಲ್ಲೇ ಹಿಂದೂ ವಿದ್ಯಾನಿಲಯವಾಗಿ ಮಾಡಿಕೊಳ್ಳಬೇಕೆಂದು ಪ್ರಯತ್ನ ನಡೆದು, ಅದಕ್ಕಾಗಿ ಇದುವರೆಗೆ 24 ಲಕ್ಷ ರೂಪಾಯಿ ತನಕ ಚಂದಾ ಕೂಡಿರುತ್ತದೆ

∴

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಮಂಡಿ ಎಂಬ ದೇಶೀಯ ಸ್ಥಾನದ ರಾಜರಾದ ಭವಾನಿ ಸೇನರವರು ಕಳೆದ 1912 ನೇ ಫೆಬ್ರವರಿ ತಾ 9 ರಲ್ಲಿ ಕಾಲವಾದರು ಈಚೆಗೆ ಅವರ ದತ್ತಪುತ್ರರಾದ ರಾಜಾ ವಿಜಯಸೇನರವರು ಒಂದು ವರುಷದೊಳಗಾಗಿ ತೀರಿಹೋದರು ಇವರು ಅವಸಾನಕಾಲದಲ್ಲಿ ದತ್ತುಮಾಡಿಕೊಳ್ಳಲೂ ಇಲ್ಲ ಬ್ರಿಟಿಷ್ ಗವರ್ನಮೆಂಟಿನವರು ಆ ಸಂಸ್ಥಾನದ ರಾಜವಂಶದಲ್ಲಿ ಇರುವ ಗಂಡು ಹುಡುಗರ ಸಂಬಂಧಗಳನ್ನೆಲ್ಲಾ ಅಜಮಾಯಿಸಿಮಾಡಿ ತನಿಖೆಯಿಂದ ಜೋಗೀಂದ್ರ ಸಿಂಗ್ ಎಂಬ ಹುಡುಗನನ್ನು ಚುನಾಯಿಸಿ ಆತನಿಗೆ ಸಂಸ್ಥಾನದ ಪಟ್ಟವನ್ನು ಕಟ್ಟಬೇಕೆಂದೂ, ಆತನಿಗೆ ಸರಿಯಾದ ಶಿಕ್ಷಣವನ್ನು ಕಲ್ಪಿಸಿ ತರಬೇತುಮಾಡಬೇಕೆಂದೂ ಹುಕುಂ ಕೊಟ್ಟರು ಅದರಂತೆ ಪಂಜಾಬ್ ಲೆಫ್ಟಿನೆಂಟ್ ಗವರ್ನರಾದ ಸರ್ ಲೂಯಿ ಡೇನ್‌ರವರು ಕಳೆದ ತಿಂಗಳ 28 ನೇ ತಾ ಅಲ್ಲಿಗೆ ಹೋಗಿ ಆ ರಾಜಕುಮಾರನಿಗೆ ದರ್ಬಾರಿನಲ್ಲಿ ಪಟ್ಟಕಟ್ಟಿ, ಪ್ರಜೆಗಳಿಗೆ ಸಮಯೋಚಿತವಾದ ವಿವೇಕವನ್ನು ಹೇಳಿಬಂದರು

∴

ಬೊಂಬಾಯಿನಲ್ಲಿ ಸಾಗುವಾನಿ ಮರದ ಕ್ರಯವು ಈಗ ಬಹಳ ಹೆಚ್ಚಾಗಿದೆ ಬರ್ಮಾ, ಮೌಲ್ಮೀನ್, ಬ್ಯಾಂಕಾಕ್, ಸಯಾಂ, ಮಲಬಾರ್ ಪ್ರಾಂತ್ಯಗಳಿಂದ ಬೊಂಬಾಯಿಗೆ ಹೋಗುವ ಸಾಗುವಾನಿಯ ಧಾರಣೆ ಶೇಕಡಾ 75 ರಂತೆ ಜಾಸ್ತಿಯಾಗಿರುವುದೇ ಅದಕ್ಕೆ ಕಾರಣ ಎಷ್ಟು ಮರ ಬೊಂಬಾಯಿಗೆ ಹೋದರೂ ಅಲ್ಲಿಯೇ ಬಿಕರಿಯಾಗುತ್ತಿದೆ ಅಲ್ಲಿಂದ ಸೀಮೆಗೆ ರವಾನೆಯಾಗುವುದು ಕಡಮೆಯಾಯಿತು ಜಿ ಐ ಪಿ ರೈಲ್ವೆ ಕಂಪನಿಯವರಿಗೆ ಹಿಂದಿನ ವಾರ ಸಾಗುವಾನಿ ಸಿಕ್ಕದೆ ಬಹಳ ಅನಾನುಕೂಲವಾಯಿತು ಮಿಯಾನ್ ಮುಹಮದ್ ಹಾಜಿ ಜಾನ್ ಮೊಹಮದ್ ಎಂಬ ಸಾಗುವಾನಿ ಸಾಹುಕಾರನೊಬ್ಬನಲ್ಲಿ ಮಾತ್ರ ಮರವಿದ್ದದ್ದರಿಂದ ಕಂಪನಿಯವರು ಆತ ಹೇಳಿದ ಕ್ರಯವನ್ನು ಕೊಟ್ಟು ಕೊಂಡುಕೊಂಡರು ಆತನಿಗೆ ಒಂದೆರಡು ತಿಂಗಳಲ್ಲೇ ಹತ್ತು ಲಕ್ಷ ರೂಪಾಯಿ ಲಾಭ ಸಂಪಾದನೆಯಾಗಿದೆ ಮರದ ಕ್ರಯ ಹೆಚ್ಚಿದ್ದರಿಂದ ಬೊಂಬಾಯಿನಲ್ಲಿ ಮರದ ಸಾಮಾನುಗಳ ಬೆಲೆಯೂ, ಮರಗೆಲಸದವರ ಕೂಲಿದರಗಳೂ ಬಹಳ ಜಾಸ್ತಿಯಾಗಿರುವವು

∴

ಕೃಷ್ಣಾಡಿಸ್ಟ್ರಿಕ್ಟಿಗೆ ಸೇರಿದ ಬಾಂಡೇರ್ ಎಂಬ ಸ್ಥಳದಲ್ಲಿ ಒಂದು ಸಂಸಾರದೊಳಗೆ 6 7 ಮಂದಿ ಅಣ್ಣತಮ್ಮಂದಿರಿದಾರೆ ಆ ಪೈಕಿ ಯಜ್ಞನಾರಾಯಣನೆಂಬುವನು ಚಿಕ್ಕಂದಿನಲ್ಲೇ ಮನೆಬಿಟ್ಟು ಎಲ್ಲೋ ಹೋಗಿಬಿಟ್ಟನು ಏಳು ವರುಷಗಳ ಮೇಲೆ 1910 ನೇ ಇಸವಿಯಲ್ಲಿ ಮನೆಯವರು ಅವನನ್ನು ಹುಡುಕಿ ಕರೆದುತಂದು ಮನೆಯಲ್ಲಿಟ್ಟುಕೊಂಡು ಅವನಿಗೆ ಮದುವೆ ಮಾಡಿದರು ಎರಡು ವರುಷಗಳಾದ ಮೇಲೆ ಅವನು ಮತ್ತೆ ಮನೆ ಬಿಟ್ಟುಹೋದನು 1909 ನೇ ಇಸವಿಯಲ್ಲಿ ಕೆಲವು ಬೈರಾಗಿಗಳು ಆ ಊರಿಗೆ ಹೋದರು ಅವನ ಮಾವನ ಮನೆಯವರು ಆ ಬೈರಾಗಿಗಳಲ್ಲಿ ಒಬ್ಬನನ್ನು ಗುರುತು ಹಿಡಿದು ಅವನೇ ತಪ್ಪಿಸಿಕೊಂಡು ಹೋಗಿದ್ದವನೆಂದು ನಂಬಿ ಮನೆಗೆ ಕರೆದುತಂದು ಪ್ರಾಯಶ್ಚಿತ್ತಾದಿಗಳನ್ನು ಮಾಡಿ, ಮನೆಯಲ್ಲಿ ಪ್ರಸ್ತಮಾಡಿಕೊಟ್ಟು ಅವನಿಗೆ ಸ್ವಭಾಷೆಯನ್ನು ಕಲಿಸಿ ಇಟ್ಟುಕೊಂಡರು ಇವನಿಗೆ ಮಕ್ಕಳೂ ಆಗಿವೆ ಅವನ ಸಹೋದರರು ಅನುಮಾನಪಟ್ಟು ಅವನು ತಮ್ಮ ಸಹೋದರನಲ್ಲವೆಂದು ದಾವಾ ಮಾಡಿದರು ಜಡ್ಜರು ದರ್ಯಾಪ್ತಿಮಾಡಿ ಅವನು ಅವರ ಸಹೋದರನಲ್ಲವೆಂದೂ, ಅವನು ಮೋಸಮಾಡಿದ್ದಕ್ಕಾಗಿ ಅವನನ್ನು ಪ್ರಾಸಿಕ್ಯೂಷನ್ ಮಾಡಬೇಕೆಂದೂ ತೀರ್ಮಾನಮಾಡಿದರು ಈಗ ಈ ಮೊಕದ್ದಮೆ ಮದರಾಸ್ ಹೈ ಕೋರ್ಟಿನಲ್ಲಿ ಅಪೀಲಾಗಿದೆ

∴

ಕಳೆದ 1 ನೇ ತಾ ಗೆ ಆಖೈರಾದ ವಾರದಲ್ಲಿ ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಮಿರ್ಜಾಪುರದಲ್ಲಿ ಕ್ಷಾಮಪೀಡಿತರ ಸಂಖ್ಯೆಯು 398 ಕ್ಕೆ ಇಳಿಯಿತೆಂದೂ, ನಾಲಾ ಪ್ರದೇಶದಲ್ಲಿ 7,905 ಕ್ಕೆ ಹೆಚ್ಚಿತೆಂದೂ, ಬಂಗಾಳಾ ಆಧಿಪತ್ಯದಲ್ಲಿ 3,341 ಮಂದಿ ರಿಲೀಫ್ ಕಾಮಗಾರಿಯಲ್ಲಿದ್ದರೆಂದೂ, 314 ಜನರು ಸರ್ಕಾರದವರ ಪೋಷಣೆಯಲ್ಲಿದ್ದರೆಂದೂ ತಿಳಿಯುತ್ತದೆ ಇತ್ತಲಾಗಿ ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಅಹಮದ್‌ನಗರ ಜಿಲ್ಲೆಯೊಳಗೆ ಕ್ಷಾಮಬಾಧೆ ಹರಡುತ್ತಿರುವುದು ಅದರಲ್ಲೂ ಆ ಡಿಸ್ಟ್ರಿಕ್ಟಿನ ಆರು ತಾಲ್ಲೂಕುಗಳಲ್ಲಿ ಕ್ಷಾಮವು ಬಹು ಕಠಿಣವಾಗಿದೆ ಆರು ಸತ್ರಗಳನ್ನೂ ಹದಿನೈದು ಜೋಪಡಿಗಳನ್ನೂ ಕಲ್ಪಿಸಿ ಸರ್ಕಾರದವರು ಕ್ಷಾಮಪೀಡಿತರನ್ನು ಸಾಕುತ್ತಿದಾರೆ ಕಂದಾಯಗಳ ವಸೂಲಿಯನ್ನು ಮನ್ನಾಮಾಡಿ, ದನಗಳ ಮೇವಿಗೂ ಬಾವಿ ತೋಡುವುದಕ್ಕೂ ತಕಾವಿ ಸಾಲಗಳನ್ನು ಕೊಡುತ್ತಿದಾರೆ ಎಲ್ಲೆಲ್ಲೂ ನೀರಿನ ಕಷ್ಟ ಹೆಚ್ಚುತ್ತಾ ಇದೆ ಸರ್ಕಾರದವರ ಸಾಹಸಕಾರ್ಯಗಳು ಸಾಕಾಗಿಲ್ಲ ದರ್ಮದ ಫಂಡುಗಳಿಂದ ಸೊಸೈಟಿಯವರ ಕಷ್ಟವನ್ನು ಪರಿಹರಿಸುತ್ತಲೂ, ಗೋಶಾಲೆಗಳ ಎಂಟು ಕೊಟ್ಟಿಗೆಗಳನ್ನು ನಡಿಸುತ್ತಲೂ ಇದಾರೆ ಅಹಮದ್‌ನಗರದಲ್ಲಿ 15,121 ಜನರೂ, ಪೂನಾ ಮತ್ತು ಷೋಲಾಪುರದಲ್ಲಿ 828 ಜನರೂ, ಒಟ್ಟು 2?,951 ಜನರು ಸರ್ಕಾರದವರ ಪೋಷಣೆಯಲ್ಲಿರುತ್ತಾರೆ

∴

ಕೊಯಮುತ್ತೂರಿನ ಒಬ್ಬಾನೊಬ್ಬ ಮಾಧ್ವಬ್ರಾಹ್ಮಣನು ಎರಡು ವಾರಗಳ ಕೆಳಗೆ ತಿರುಪತಿಗೆ ಹೋಗಿ ಅಲ್ಲಿನ ಪೊಲೀಸ್ ಇನ್‌ಸ್ಪೆಕ್ಟರನ್ನು ಕಂಡು ತಾನು ಗುಪ್ತಪೊಲೀಸ್ ಇಲಾಖೆಗೆ ಸೇರಿದ ನೌಕರನೆಂದು ನಂಬಿಕೆ ಹುಟ್ಟಿಸಿ ಇಬ್ಬರು ಪೊಲೀಸ್ ಕಾನ್‌ಸ್ಟೆಬಲ್‌ರ ಸಹಾಯವನ್ನು ಪಡೆದು, ಅಲ್ಲಿರುವ ಮಿ॥ ಮಂಗೇಶರಾಯರೆಂಬೊಬ್ಬ ದೊಡ್ಡ ಮನುಷ್ಯರಿಂದ ಬೆಟ್ಟದ ಮೇಲಿರುವ ಖಜಾನೆ ಪಾರುಪತ್ತೇಗಾರನಿಗೆ ಶಿಫಾರಸು ಕಾಗದವನ್ನು ತೆಗೆದುಕೊಂಡು ಬೆಟ್ಟದ ಮೇಲಕ್ಕೆ ಹೋಗಿ ಅಲ್ಲಿ ಇಬ್ಬರನ್ನು ದಸ್ತಗಿರಿಮಾಡಿದನು ಅಲ್ಲಿಂದ ಮುಂದಕ್ಕೆ ಹೋಗಿ ಮಹಂತರನ್ನು ಕಂಡು ದೆಹಲಿಯಲ್ಲಿ ವೈಸ್‌ರಾಯಿ ದಂಪತಿಗಳ ಮೇಲೆ ಸಿಡಿಮದ್ದಿನ ಗುಂಡು ಹಾಕಿದ ಮುಸಲ್ತಿನ ಗುಂಪಿಗೆ ಸೇರಿದವರು ದೇವಸ್ಥಾನದಲ್ಲಿರುವರೆಂತೆ ಹೇಳಿ, ಅವರನ್ನು ದಸ್ತಗಿರಿ ಮಾಡುವುದಾಗಿಯೂ, ಲಂಚಕೊಟ್ಟರೆ ಬಿಟ್ಟು ಹೋಗುವುದಾಗಿಯೂ ತಿಳಿಸಿದ್ದಲ್ಲದೆ ಅಲ್ಲಿಂದ ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ಕೆಲವು ಪೊಲೀಸ್‌ನವರನ್ನು ಕಳುಹಿಸಬೇಕೆಂದು ತಂತೀವರ್ತಮಾನ ಕೊಟ್ಟು ಅವರು ಬರುವಷ್ಟರಲ್ಲೇ ಹಣವನ್ನು ಕಸುಕೊಂಡು ಓಡಿಹೋಗಬೇಕೆಂದು ಸಾಹಸಪಟ್ಟನು ಇನ್‌ಸ್ಪೆಕ್ಟರ್ ಜನರಲ್‌ರವರು ಆ ಟೆಲಿಗ್ರಾಮನ್ನು ಚಿತ್ತೂರಿನ ಸೂಪರಿಂಟೆಂಡೆಂಟರಿಗೆ ಕಳುಹಿಸಿದರು ಇವರು ಕೆಲವು ರಿಜರ್ವ್ ಪೊಲೀಸ್ ಸಿಬ್ಬಂದಿಯ ಸಮೇತ ಹೋಗಿ ತನಿಖೆಮಾಡುವಲ್ಲಿ ಅವನು ಮೋಸಗಾರನೆಂಬುವುದು ಗೊತ್ತಾಯಿತು ಕೂಡಲೇ ಅವನನ್ನು ದಸ್ತಗಿರಿಮಾಡಿ, ಅವನು ಮೊದಲೇ ಹಿಡಿದಿದ್ದ ಇಬ್ಬರನ್ನು ಖುಲಾಸ್ ಮಾಡಿಸಿದರು ಈಗ ಆ ಮಾಧ್ವಬ್ರಾಹ್ಮಣನ ಮೇಲೆ ಮೊಕದ್ದಮೆ ತಂದಿದಾರೆ

∴

ಗ್ವಾಲಿಯರ್ ಸಂಸ್ಥಾನದ ಸಿಂಧಿಯಾ ಮಹಾರಾಜರವರು ಸಪತ್ನೀಕರಾಗಿದ್ದರೂ ಪುತ್ರಸಂತಾನವಿಲ್ಲದೆ ಎರಡನೆ ಹೆಣ್ಣನ್ನು ಮದುವೆಮಾಡಿಕೊಳ್ಳಬೇಕೆಂದು ಇಷ್ಟಪಟ್ಟಾಗ ಬರೋಡಾ ಸಂಸ್ಥಾನದ ಮಹಾರಾಜರವರು ತಮ್ಮ ಕುಮಾರ್ತೆಯಾದ ಪ್ರಿನ್‌ಸೆಸ್ ಇಂದಿರಾ ಯವರನ್ನು ಅವರಿಗೆ ಕೊಟ್ಟು ವಿವಾಹಮಾಡುವುದಾಗಿ ಒಪ್ಪಿದರು ಕೆಲವು ದಿನಗಳ ತರುವಾಯ ಲಂಡನ್ ಪಟ್ಟಣದಲ್ಲಿ ಒಂದು ಸಂತೋಷಕೂಟ ನಡೆದು, ಅದರಲ್ಲಿ ಸಿಂಧಿಯಾ ಮಹಾರಾಜರಿಗೂ ಆ ರಾಜಕುಮಾರ್ತೆಗೂ ವಿವಾಹವು ನಿಶ್ಚಯವಾಯಿತು ಈಚೆಗೆ ಈ ವಿವಾಹವನ್ನು ಬರೋಡಾ ಮಹಾರಾಜರವರು ಮಾಡಿಕೊಡುವುದು ಸಂಘಪರಿಷ್ಕರಣ ಕಾರ್ಯಕ್ಕೆ ಕುಂದಕವಾಗಿ, ಅವರ ಶ್ರೇಷ್ಠವಾದ ಸಂಕಲ್ಪಕ್ಕೆ ಲೋಪವಾದೀತೆಂದು ಹಿಂದುಸ್ಥಾನದಲ್ಲೂ ಇಂಗ್ಲಾಂಡಿನಲ್ಲೂ ಪತ್ರಿಕೆಗಳು ಬರೆಯಲಾರಂಭಿಸಿದವು ಬಳಿಕ ಯಾವ ಕಾರಣದಿಂದಲೋ ಈ ವಿವಾಹವು ನಿಂತುಹೋಯಿತು ಕಳೆದ ವರುಷದ ಅಂತ್ಯಭಾಗದಲ್ಲಿ ಕೂಚ್‌ಬೀಹಾರ್ ಮಹಾರಾಜರವರ ಸಹೋದರರಿಗೆ ಬರೋಡೆಯ ರಾಜಕುಮಾರ್ತೆಯನ್ನು ಕೊಟ್ಟು ವಿವಾಹ ಬೆಳೆಯುವುದೆಂದು ವರ್ತಮಾನ ಹುಟ್ಟಿತು ಕಳೆದ ವಾರ ಗಾಯಕವಾಡ ಮಹಾರಾಜರವರು ಪತ್ನಿ ಪುತ್ರಿಯರ ಸಮೇತ ಬೊಂಬಾಯಿಗೆ ದಯಮಾಡಿ ಜಹಜು ಹತ್ತಿ ಸೀಮೆಗೆ ಪ್ರಯಾಣಬೆಳೆಸಿದರು ಆ ಸಮಯದಲ್ಲಿ ಕೂಚ್‌ಬಿಹಾರದ ಮಹಾರಾಜರವರ ಸಹೋದರರು ಕಲ್ಕತ್ತೆಯಿಂದ ಬೊಂಬಾಯಿಗೆ ಬಂದು ಗಾಯಕವಾಡ ಮಹಾರಾಜರವರನ್ನು ಕಂಡುಕೊಂಡು ಪ್ರಶ್ನೆಮಾಡಿದಾಗ ಅವರು ತಮ್ಮ ಕುಮಾರಿಯನ್ನು ಅವರಿಗೆ ಖಂಡಿತವಾಗಿಯೂ ವಿವಾಹಮಾಡಿಕೊಡುವುದಿಲ್ಲವೆಂದು ಹೇಳಿ ಪ್ರಯಾಣಮಾಡಿದರು ಆದಾಗ್ಯೂ ಇನ್ನು ಕೆಲವು ಕಾಲದೊಳಗಾಗಿ ಈ ವಿವಾಹವು ತಪ್ಪದೆ ಲಂಡನ್ ಪಟ್ಟಣದಲ್ಲಿ ಜರುಗುವುದೆಂದು ಕೆಲವರ ಅಭಿಪ್ರಾಯಪಡುತ್ತಿದಾರೆ

1914 ನೇ ವರ್ಷದ ಲೋವರ್ ಸೆಕಂಡರಿ ಕನ್ನಡ

ಟೆಕ್ಸ್ಟ್ ನೋಟ್ಸು ಬಿಕರಿಗೆ ಸಿದ್ಧವಾಗಿದೆ—ಕ್ರಯ 6 ಆಣೆ

ಡಿಸ್ಕಾಂಟು 10 ಕ್ಕೆ 1, 50 ಕ್ಕೆ 7, 100 ಕ್ಕೆ 20

ನಮ್ಮ ನೋಟ್ಸು ಬೇಕಾಗಿದ್ದರೆ ನೋಟ್ಸಿನ ಮೇಲೆ ನಮ್ಮ ಹೆಸರನ್ನು ನೋಡಿ ತೆಗೆದುಕೊಳ್ಳಿ [81 3]

ಎನ್ ಆರ್ ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು

ಇಮಿಟೇಷನ್ ವಜ್ರದ ಒಡವೆಗಳು

ಹೊಸದಾಗಿ ಸೀಮೆಯಿಂದ ತರಿಸಿರುತ್ತೆ

ಇಮಿಟೇಷನ್ ವಜ್ರದ ಬೆಂಡೋಲೆಯನ್ನು ಈಗತಾನೇ ವಿಲಾಯಿತಿಯಿಂದ ತರಿಸಿರುತ್ತೇವೆ ಇದು ಉತ್ತಮವಾದ ವಜ್ರದ ಓಲೆಯಲ್ಲಿರುವ ನೀರೋಟದೊಡನೆ ಕೂಡಿ ಬಹಳ ದಿನಗಳು ಕೆಡದೆ ಅತ್ಯಂತ ಪ್ರಕಾಶವಾಗಿರುತ್ತೆ ಇದನ್ನು ಧನವಂತರೂ ಕೂಡ ವಜ್ರದ ಓಲೆಗೆ ಬದಲಾಗಿ ಉಪಯೋಗಿಸುತ್ತಾರೆ ಇದಕ್ಕೆ ಅನೇಕವಾಗಿ ಗಿರಾಕಿಗಳು ಬರುತ್ತಿರುವುದರಿಂದ ಬೇಕಾದವರು ಜಾಗ್ರತೆ ತರಿಸಿಕೊಳ್ಳಬೇಕು ಜೊತೆ 1 ಕ್ಕೆ ಬೆಲೆ ರೂ 1 12 0 ಇದೇ ಕಲ್ಲಿನಿಂದಲೇ ಹತ್ತಕಡುಕು, ಬೇಸರಿ, ಕುರುಟುಬಾವಲಿ ಮೊದಲಾದವು ಸಿದ್ಧವಾಗಿವೆ

ಹತ್ತಕಡುಕು ಜೊತೆಗೆ ರೂ 1 8 0 ಬೇಸರಿಗೆ 12 ಆಣೆ ಕುರುಟುಬಾವಲಿ ಜೊತೆಗೆ ರೂ 3 ಮೂಗುಬೊಟ್ಟಿಗೆ ೪ ಆಣೆ [87 2]

ವಿಳಾಸ —ಬಿ ಶೇಷಾ ಅಂಡ್ ಬ್ರದರ್ಸ್,
ನಂದಂಬಾಕಂ ಗ್ರಾಮ, ಸೈದಾಪೇಟೆ ತಾಲ್ಲೂಕು
ಪರಂಗಿಮಲೈ ಪೋಸ್ಟು, ಮದ್ರಾಸು

ಅಗ್ಗ ! ಅತಿ ಅಗ್ಗ !! ಅತ್ಯಂತ ಅಗ್ಗ !!!

ಗೋಲ್ಡ್ ಗಿಲ್ಟ್ ಗೆಜ್ಜೆ ಒಡ್ಯಾಣ ಅಥವಾ ದಾಬು

ಕ್ರಯ ರೂ 4-0 0

ಇದು ಚಿನ್ನ ನಮೂನೆಯಲ್ಲಿ ತಂದಿರುವುದರಿಂದ ಸಣ್ಣದು ದೊಡ್ಡದು ಸಹ ಮಾಡಿಕೊಳ್ಳಬಹುದು ನಾವು ಸೀಮೆಯಿಂದ ಎಷ್ಟು ರೆ ಮುಗನ್ನು ಇದಕ್ಕೋಸ್ಕರ ಸ್ಪೆಷಲ್ಲಾಗಿ ತರಿಸಿ ಗೆಜ್ಜೆ ಕಟ್ಟಿ ಮಧ್ಯದಲ್ಲಿ ಗಜಲಕ್ಷ್ಮಿ ವಿಗ್ರಹದಿಂದ ಬಿಗಿದು ಎರಡು ಪಾರ್ಶ್ವದಲ್ಲೂ ಹಂಸಪಕ್ಷಿಯಿಂದ ಕಟ್ಟಲ್ಪಟ್ಟಿರುತ್ತದೆ ಇದು 100 ರೂಪಾಯಿನ ಆಭರಣಕ್ಕೆ ಸಮಾನವಾಗಿರುತ್ತದೆ ಇದರ ಉಪಯೋಗವನ್ನು ನಾವು ಹೇಳಿಕೊಳ್ಳುವುದರಿಂದ ಪ್ರಯೋಜನವಿಲ್ಲ ನೂರು ವರ್ಷಗಳಾದರೂ ರಂಗು ಚೆನ್ನಾಗಿಯೇ ಇರುತ್ತದೆ ಇದು ಕೆಟ್ಟರೆ ವಾಪಸು ತಗೆದುಕೊಳ್ಳುತ್ತೇವೆ ಮುತ್ತಿ ಒಡವೆ ಬಿಲ್ಲೆಯಿಂದ ಮಾಡಿದ ದಾಬಿಗೆ ಬೆಲೆ ರೂ 4-8 0

ಜೇಬಿನ ವಿದ್ಯುಚ್ಛಕ್ತಿ ದೀಪ ಕ್ರಯ ರೂ 1 8 0 ಈ ಬೀಕನ್ನು ಜರ್ಮನಿಯವರು ಹೊಸದಾಗಿ ಕಂಡುಹಿಡಿದು ಹಿಂದೂಸ್ಥಾನಕ್ಕೆ ಕಳುಹಿಸಿದೆ ಜೇಬಿನಲ್ಲಿಟ್ಟುಕೊಂಡಿದ್ದು ಬೇಕಾದ ಕಡೆ ದೀಪದಕಡ್ಡಿ ಇಲ್ಲದೆ ದೀಪ ಹಚ್ಚಿಕೊಳ್ಳಬಹುದು ಎಲ್ಲಾ ಕೆಲಸಗಳಿಗೂ ಎಲ್ಲರಿಗೂ ಬಹಳ ಅವಶ್ಯಕವಾದ ದೀಪ ಇದೇ ಇದನ್ನು ತರಿಸಿ ನೋಡಿದರೆ ಗುಣ ಗೊತ್ತಾಗುವದು

ರೋಮನಾಶಿನಿ ಮಹಾರಾಜಾ ಸೋಪ್ —ಮಹಾರಾಜಾ ಸೋಪ್ ಎಂಬ ರೋಮನಾಶಿನಿ 3 ಬಿಲ್ಲೆಗಳ ಪೆಟ್ಟಿಗೆ ರೂ 1 1 ಬಿಲ್ಲೆಗೆ 6 ಆಣೆ ಇದನ್ನು ಸವರಿದರೆ ಕೂದಲನ್ನು ಚೊಕ್ಕಟವಾಗಿ ತೆಗೆಯುತ್ತೆ ನೋವಾಗದು, ಕೆಡ ಇಲ್ಲದು ಚರ್ಮದ ಕೋಮಲ ಬಣ್ಣವನ್ನು ಕಾಪಾಡಲು ಇದೇ ಉತ್ತಮವಾದ ಸಾಬೂನು [94-1]

ನಾಗರ ಕ್ರಯ ರೂ 1, ಬಂಗಾರದ ಗಿಲಿಟ ಕಲ್ಲೋಲೆ ಜೊತೆಗೆ ನಂ 1 ಕ್ರಯ ರೂ 1 4 0, ನಂ 2 ಕ್ರಯ ರೂ 1, ನಂ 3 ಕ್ರಯ 12 ಆಣೆ

ನಮ್ಮ ವಿಳಾಸ— ರಾಮಸ್ವಾಮಿಭಕ್ತುಡು,
31 ಗರಡಿಬೀದಿ, ಟ್ರಿಪ್ಲಿಕೇನ್, ಮದರಾಸು

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣನ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION [3 20]

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

Always get the Emulsion with this mark—the Fishman—the mark of the "Scott" process'

ಮೀನುಮನುಷ್ಯ ಇರುವ
ಈ ಔಷಧದ ಗುರುತು

ಇದಕ್ಕೆ ಸಮಾನವಾದದ್ದು ಮತ್ತ್ಯಾವದೂ ಇಲ್ಲ.

ಈ ಔಷಧವನ್ನು ಸೇವಿಸಿ ನೋಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲಂಡ್

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲದ ಹಾಗೆ ತೋರಿದಾಗ—ಅಂದರೆ ನಿನಗೆ ಯಾವ ನೋವೂ ಉಂಟಾಗಿರದೆ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತ



(೧೨ ಆಣೆ ಬುಡ್ಡಿ ಪರಿಯಾ)

ದೆಯೇ? ಎಂದು ನಿನ್ನನ್ನು ನೀನೇ ಕೇಳಿಕೊ ಹಾಗೆ ಆಗದಿದ್ದರೆ ಡೋಡ್ಸರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈಸ್ವಸ್ಥವಾಗುವುದು ಮಲಬದ್ಧವಾಗುವುದರ ಅಥವಾ ಶರೀರದ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳ್ಯಾವುವೆಂದರೆ —ಪಿತ್ತಕೋಶ ರೋಗ ಪಿತ್ತ ಎತ್ತುವ ರ ಲಿವರ್ ಉಗಿ ನಾಲಿಗೆ ಮೇಲೆ ಲೇಪ, ಎದೆಯು ತಲ್ಲಣಿಸುವುದು ತಲೆತಿರುಗುವುದು ತಲೆನೋವು ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆನೋವು ಅಂಗದ ವಾಯುಗಳು ಇವೇ ಮೊದಲಾದವು ಊಟಕ್ಕೆ ಬಹಳ ಮೊದಲು ಶರೀರ ಆರೋಗ್ಯದ ಕಾರಣಗಳಾಗುವುವು

ಡೋಡ್ಸರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡಸರಿಗೂ ಹೆಂಗಸರಿಗೂ ಮಕ್ಕಳಿಗೂ ಶರೀರದಲ್ಲಿರುವ ಮಲವನ್ನೂ ಕೆಟ್ಟದಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಕ್ವಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ರೋಗಗಳನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [12 16]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು ಅಥವಾ ಡೋಡ್ಸ್, ಪಿ ಓ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ ! ಕನ್ನಡಕ್ಕೆ ಸುಲಭವಾದ ದಾ

ಮೈಸೂರು ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ಆಗಿರುವ ಉಪಯುಕ್ತವಾದ ಕನ್ನಡ ವ್ಯಾಕರಣ ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಿದೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿವೆ ಕ್ರಯ ೩ ಆಣೆ ಅರಕಲ್ಗೂಡು ಉಚಿತ

[187 12] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್ ಮೈಸೂರು

" ವಾಸಿಮಾಡಿಕೊಳ್ಳುತ್ತೇನೆಂದು ಹೇಳು "

81 51

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ಶೂಲು, ಆರತತ್ತಿ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಹುಬಾಗಳು ಉಬ್ಬಸ, ಹಲ್ಲುನೋವು, ಗಂಟಲು ಗಾಲೆನ್ನುವುದು, ಕೆಮ್ಮು ಶೀತನೆಗಡಿ, ವ್ಯಾಸರೋಗ, ಜಜ್ಜು, ಉಳುಕು, ಥಳುಕು, ಚೇಳು ಕಡಿದ ಬಾಧೆ ಈ ಮೊದಲಾದ ಎಲ್ಲಾ ತರದ ರೋಗವನ್ನೂ ನಾನು ವಾಸಿಮಾಡಿಕೊಂಡು ಆನುಗ್ರಹದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೊ ಸಮೀಪದ ಗುರ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯೊಡನೆ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನ ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

" ಕ್ಲೆಮೆಂಟರ ಮ್ಯಾಜಿಕ್ ಬಾಂ " ಎಂಬ ಹೆಸರನ್ನು ಮರೆಯಬೇಡ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 3 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಘಾಡಾವಾದ ಡಿಸ್ಕೌಂಟು ಇರುತ್ತೆ ವಿಳಾಸಗಳು (1) ಎಸ್ ಪೀಟರ್ಸ್, 8 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ ಮದರಾಸ್ (2) ಜಿ ಎಸ್ ಕನ್ನಯ್ಯಶೆಟ್ಟರು ಜನರಲ್ ಮರ್ಚಂಟ್, ತುಮಕೂರು

ಸಮೂನ ಮುಖತ್ತು

ಕೇಶಕುಸುಮಾಕರ ತೈಲವು.

ತಾಳಿಯುತ್ತದ ತೈಲವು ವಿಷಕ ಶಕ್ತಿಯನ್ನು ವೃದ್ಧಿಮಾಡುವದಲ್ಲಿಯೂ ಬುದ್ಧಿಯನ್ನು ವಿಕಾಸಮಾಡುವದರಲ್ಲಿಯೂ, ಒಟ್ಟಿನಲ್ಲಿ ಕೇಶವನ್ನು ಬೆಳಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ ಉಷ್ಣವಾಗಿ ಪಿತ್ತ ಶಾಂತಿ ಮಾಡುವದರಲ್ಲಿಯೂ ಮೆದುಳಿಗೆ ತಂಪನ್ನುಂಟುಮಾಡುವದಲ್ಲಿಯೂ, ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುಡ್ಡಿ ತೈಲ ಕ್ರಯ 10 ಆಣೆ ಮೂರು ಬುಡ್ಡಿಗಳ ತೈಲ ಕ್ರಯ ರೂ 1 12 ಆ ಆರು ಬುಡ್ಡಿಗಳ ತೈಲ ಕ್ರಯ ರೂ 1-4 ಆ ಡಜನ್ ಬುಡ್ಡಿಗಳ ಕ್ರಯ ರೂ ...

ವಿ. ಪಿ ಅಂಚೆ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ

[82 1] ಔಷಧಾಲಯ, 177 ಚೈನಾ ಬಜಾರ್ ರೋಡ್, ಮದ್ರಾಸು

ವಿಶೇಷ ಸೂಚನೆ!

ಹತ್ತಿಯ ತುಪ್ಪ, ಹಿಂಡಿ ಮತ್ತು ಹೊಟ್ಟು

ಈ ತಿಂಗಳ ಕಡೆಯವರಿಗೆ ಮಾತ್ರ ಕಡಮೆ ಖರೀದಿ !

ತುಪ್ಪ ಡಬ್ಬ 1 ಕ್ಕೆ ರೂ 11½, ಹಿಂಡಿ ಮೂಟೆಗೆ ರೂ 8, ಹೊಟ್ಟು ಮೂಟೆಗೆ ರೂ 1¾ ಬೇಕಾದವರು ತ್ವರೆಮಾ

ಅನುಭವಸ್ಥರ ಅಭಿಪ್ರಾಯ —(1) ಎಮ್ ಕೃಷ್ಣಮೂರ್ತಿ, ಫಾರೆಸ್ಟ್ ರೇಂಜರ್, ಪಾಲಕೊಂಡ, ವಿಶಾಖಪಟ್ಟಣ ಡಿ " ತಾವು ಕಳುಹಿಸಿದ ಹತ್ತಿಯ ಹೊಟ್ಟಿನಿಂದ ನನ್ನ ಕುದುರೆಗೆ ಬಹಳ ಪ್ರಯೋಜನವಾಯಿತು ಹುರುಳಿಯ ಜಾಗದಲ್ಲಿಯೂ ಹಿಂಡಿಯ ಜೊತೆಯಲ್ಲೂ ಅದನ್ನು ಮಿಶ್ರಮಾಡಿ ಕೊಟ್ಟಿದ್ದರಿಂದ ಅಜೀರ್ಣವಾಗುತ್ತಿದ್ದದ್ದು ನಿಂತು ಹೋಯಿತು " (2) ಎಮ್ ವಿ ನರಸಿಂಹಯ್ಯ ಬಿ ಎ, ಫಾರೆಸ್ಟ್ ರೇಂಜರು, ಹೆಗ್ಗಡದೇವನಕೋಟೆ, ಕಡೂರು ಡಿ " ಮೊದಲು ಮೊದಲು ಎತ್ತುಗಳು ಸರಾಗವಾಗಿ ತಿನ್ನದಿದ್ದರೂ ಈಗ ಹೊಟ್ಟು ಹಿಂಡಿಗಳನ್ನು ಬಹು ಪ್ರೀತಿಯಿಂದ ತಿನ್ನುತ್ತವೆ ಮೈಯಿನ ಕೊಬ್ಬು ಇದರಿಂದಾಗಿ ಅಧಿಕವಾಗಿಯೂ ಮೊದಲಿಗಿಂತ ಬಲವಾಗಿಯೂ ಅದುವು ದಣಿಯದೆ ಹೆಚ್ಚು ಕೆಲಸ ಮಾಡುತ್ತವೆ ಇತರ ರೋಗಗಳಿಲ್ಲ ಮತ್ತೊಂದು ಮೂಟೆ ಹಿಂಡಿಯನ್ನೂ ತಕ್ಕಷ್ಟು ಹೊಟ್ಟನ್ನೂ ಕಳುಹಿಸಬೇಕು " (3) " ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್‌ನಿಂದ ನಾನು ಹತ್ತಿಯ ತುಪ್ಪವನ್ನು ಬಹಳ ಮಟ್ಟಿಗೆ ಕೊಂಡುಕೊಂಡಿದೇನೆ ಎಲ್ಲಾ ಬಗೆಯ ಅಡಿಗೆಗೂ ಅದು ಅತ್ಯುತ್ಕೃಷ್ಟವಾದದ್ದೆಂದು ತೋರುತ್ತೆ " ಮೆ ಪ್ರಾಕ್ಟರ್, ಏಳನೆಯ ಹುಸ್ಸಾರ್ಸ್, ಬೆಂಗಳೂರು ನಮ್ಮ ವಿಳಾಸ —

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್

[50-11] 169, ಕಿಲಾರಿ ರೋಡ್, ಬೆಂಗಳೂರು ಸಿಟಿ

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

" ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ " ಎಂಬ ಅತ್ಯಂತ ಸಹಾಯಕರವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅದನ್ನು ಪುಕ್ಕಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. **Messrs. OAKES & Company, Mount Road, Madras.**

[4-28] **ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.**

Printed and Published by the Rev H Gulliford Proprietor and Manager, Wesleyan Mission Press Mysore 15/5/1913

REGISTERED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೬ ಮೈಸೂರು—ಸನ್ ೧೯೧೩ ನೇ ಇಸವಿ ಮೇ ತಾರೀಖು ೨೨ ನೇ ಗುರುವಾರ. ಸಂಚಿಕೆ ೫೧

ವಿಶೇಷ ಸೂಚನೆ!

ಪತ್ತಿಯ ತುಪ್ಪ ಹಿಂಡಿ ಮತ್ತು ಹೊಟ್ಟು

ಈ ತಿಂಗಳ ಕಡೆಯವರಿಗೆ ಮಾತ್ರ ಕಡಮೆ ಬರೀದಿ!

ತುಪ್ಪ ಸೇ 1 ಕ್ಕೆ ರೂ 1½, ಹಿಂಡಿ ಮೂಟೆಗೆ ರೂ ೩, ಹೊಟ್ಟು ಮೂಟೆಗೆ ರೂ 1½ ಬೇಕಾದವರು ತ್ವರೆಪಡಿ.

ಅನುಭವಸ್ಥರ ಅಭಿಪ್ರಾಯ —(1) ಎಸ್ ಕೃಷ್ಣಮೂರ್ತಿ ಶಾಸ್ತ್ರಿ, ...ಂಡೆಲ್, ಪಾಲಕೊಂಡ, ವಿಶಾಖಪಟ್ಟಣ ಡಿ ತಾವು ಕಳುಹಿಸಿದ ಪತ್ತಿಯ ...ಸಿದ ನನ್ನ ಕುದುರೆಗೆ ಬಹಳ ಪ್ರಯೋಜನವಾಯಿತು ಹುರುಳಿಯ ಜತೆ ... ಹಿಂಡಿಯ ಜೊತೆಯಲ್ಲೂ ಅದನ್ನು ಮಿಶ್ರಮಾಡಿ ಕೊಟ್ಟದ್ದರಿಂದ ಅಜೀ...ವಾಗುತ್ತಿದ್ದದ್ದು ನಿಂತು ಹೋಯಿತು " (2) ಎಸ್ ವಿ ನರಸಿಂಹಯ್ಯ, ..., ಫಾರೆಸ್ಟ್ ರೇಂಜರು, ಹೆಬ್ಬೆ, ಕಡೂರು ಡಿ " ಮೊದಲು ಮೊದಲು ...ಗಳು ಬೇರೆಯಾಗಿ ತಿನ್ನದಿದ್ದರೂ ಈಗ ಹೊಟ್ಟು ಹಿಂಡಿಗಳನ್ನು ಬಹು ಪ್ರೀ...ಮಿನ ಸೇವಿಸುತ್ತವೆ ಮತ್ತು ಮೈಯಿನ ಕೊಬ್ಬು ಕಡಮೆಯಾಗಿ ಲಘುವಾಗಿಯೂ ...ದೇಗ ತ ಬಲವಾಗಿಯೂ ಆದುವು ದಣಿಯದೆ ಹೆಚ್ಚು ಕೆಲಸ ಮಾಡುತ್ತವೆ ...ರೋಗಗಳಲ್ಲಿ ಮತ್ತೊಂದು ಮೂಟೆ ಹಿಂಡಿಯನ್ನು ತಕ್ಷಣ ಹೊಟ್ಟ... ಕಳುಹಿಸಬೇಕು " (3) " ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ...ದ ನಾನು ಪತ್ತಿಯ ತುಪ್ಪವನ್ನು ಬಹಳ ಮಟ್ಟಿಗೆ ಕೊಂಡುಕೊಂಡಿದೇನೆ ... ಬಗೆಯ ಅಡಿಗೆಗೂ ಅದು ಅತ್ಯುತ್ತಮವಾದದ್ದೆಂದು ತೋರುತ್ತೆ " ಮ್ಯ... ...ಕ್, ಬಿಳಿಸಿಯ ಹುಸ್ಪಾರ್ಸ್, ಬೆಂಗಳೂರು ನಮ್ಮ ವಿಳಾಸ — ...ಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

[...12] 1.., ಕಿಲಾರಿ ರೋಡ್, ಬೆಂಗಳೂರು ಸಿಟಿ

ನಮೂನೆ ಮುಫತ್ತು.

ಕೇಶಕುಸುಮಾಕರ ತೈಲವು.

ನಾಟಯಿಲ್ಲದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸಮಾಡುವದರಲ್ಲಿಯೂ, ಒಟ್ಟತಲೆಯಲ್ಲಿ ಕೇಶವನ್ನು ಬೆಳಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ, ಮಿದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ, ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುಡ್ಡಿ ತೈಲ ಕ್ರಯ 10 ಆಣೆ ಮೂರು ಬುಡ್ಡಿಗಳ ತೈಲ ಕ್ರಯ ರೂ 1 12 ಆ ಆರು ಬುಡ್ಡಿಗಳ ತೈಲ ಕ್ರಯ ರೂ 3 4 ಆ ಡಜನ್ ಬುಡ್ಡಿಗಳ ಕ್ರಯ ರೂ 6

ವಿ. ಪಿ ಅಂಚೇ ಹಾಸಲು ಪ್ರತ್ಯೇಕ.

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ

[82-4] ಔಷಧಾಲಯ, 177 ಜೇನಾ ಬಜಾರ್ ರೋಡ್, ಮದ್ರಾಸು

" ವಾಸಿಮಾಡಿಕೊಳ್ಳುತ್ತೇನೆಂದು ಹೇಳು. "

84 52

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

" ಕ್ಲೆಮೆಂಟರ ಮ್ಯಾಜಿಕ್ ಬಾಂ " ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ವಡಮಲಿಪಿಳ್ಳೆ ಬೀದಿ, ಪುರಸವಾಕಂ, ಪೇಟೆ, ಮದರಾಸ್, (2) ಟಿ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

A MANUAL OF CRIMINAL LAW.

ಕ್ರಿಮಿನಲ್ ಲಾ ಸಂಗ್ರಹ.

ಈ ಕಾನೂನು ಎಲ್ಲಾ ಕಾನೂನುಗಳಿಗಿಂತಲೂ ಬಹಳ ಮುಖ್ಯವಾದದ್ದಾಗಿರುತ್ತದೆ ಇದರ ಬಲದಿಂದಲೇ ನಿಮ್ಮ ಪ್ರಜೆಗಳೂ ಸೌಖ್ಯವಾಗಿರುವದು ಮಾನಸ್ಥರು ಸಿವಿಲ್ ವ್ಯವಹರಣೆಯಲ್ಲಿ ತಮ್ಮ ಸರ್ವಸ್ವವನ್ನೂ ಕಳೆದುಕೊಂಡಾಗ್ಯೂ ಕ್ರಿಮಿನಲ್ ಕೋರ್ಟಿನಲ್ಲಿ ಅಪರಾಧಿಯಾಗಿ ನಾಲ್ಕು ಆಣೆ ಜುಲ್ಮಾನೆಕೊಡುವದಕ್ಕೆ ಒಂಟಿಗೆಯುವದು ತಿಳಿದ ವಿಷಯವಾಗಿಯೇ ಇರುತ್ತದೆ ಇಂತಹ ಕಾನೂನಿನ ಪ್ರತಿಯೊಂದು ವಿಷಯವೂ ಬೇರೆಬೇರೆ ಇರುವದರಿಂದಲೂ, ಅನೇಕ ಸಂಗತಿಗಳು ಕನ್ನಡದಲ್ಲಿ ದೊರೆಯುವದೇ ಕಷ್ಟವಾಗಿರುವದರಿಂದಲೂ ಮತ್ತು ಕನ್ನಡ ಭಾಷೆಯಲ್ಲಿ ಇಂಥಾದ್ದೊಂದು ಪುಸ್ತಕವಿಲ್ಲದ್ದರಿಂದಲೂ ಕನ್ನಡವನ್ನು ತಿಳಿದ ಜನರಿಗಿರುವ ಅನಾನುಕೂಲತೆಗಳನ್ನು ಅನೇಕ ವರ್ಷಗಳ ಲಾಗಾಯಿತು ಅನುಭವಕ್ಕೆ ಬಂದಿರುವದರಿಂದ ...ಕರ ಪ್ರತಿಯೊಬ್ಬರಿಗೂ ಅನುಕೂಲವಾಗಬೇಕೆಂದು ಅನೇಕ ಕ್ರಿಮಿನಲ್ ವಿಷಯಗಳನ್ನು ಸಂಗ್ರಹಿಸಿ ಈ ಪುಸ್ತಕವು ತಯಾರಿಸಲಾಗಿದೆ ಸಮಯದಲ್ಲಿ ಯಾವದಾದರೂ ಒಂದು ವಿಷಯ ತಿಳಿಯಬೇಕಾದರೆ, ತಮ್ಮ ಕೆಲಸಗಳನ್ನೆಲ್ಲಾ ಬಿಟ್ಟು ಎರಡನೇ...ಯವರಲ್ಲಿ ಅವರ ಸಮಯವನ್ನು ಕಾದು ಅವರಿಗೆ ಹಣಕೊಟ್ಟು ತಿಳಿದುಕೊಂಡರೂ ಹಾಗೆ ಹೇಳಿದ್ದರಿಂದ ಅವರ ಪಾಕ್ಷಿಣ್ಯವೆಷ್ಟು " ಇದಲ್ಲದೆ ಹಾಗೆ ತಿಳಿದವರೆಂಬುವರಲ್ಲಿ ಅನೇಕರು ತಮಗೆ ಸಂಗತಿಗಳನ್ನು ತಿಳಿಯದಿದ್ದರೂ ತಿಳಿದವರಂತೆ ನಟಿಸಿ ...ಳ್ಳುಹೇಳುವದರಿಂದ ಇಷ್ಟ ಮೂ... ಅಬಾಗವಾಗಿ ಕೆಲಸವೂ ಕೆಟ್ಟು, ದುಡ್ಡು ಖರ್ಚುಮಾಡಿ, ಪ್ರಯಾಸವೂ ಪಟ್ಟು ಕಡೆಗೆ ಕಾರ್ಯಭಂಗವೂ ಆಗುವದು ಇದಕ್ಕೆ ಪ್ರತಿಯಾಗಿ ಈ ಪುಸ್ತಕವು ನಿಮ್ಮ ಬಳಿ ಇದ್ದರೆ ಯಾವದೊಂದು ತೊಂದರೆಯೂ ಇಲ್ಲದೆ ...ನೇ ತಿಳಿದುಕೊಳ್ಳಬಹುದು ನಿಮ್ಮ ಇಷ್ಟಮಿತ್ರರಿಗೆಲ್ಲಾ ಹೇಳಬಹುದು ಇದರಿಂದ ಎಷ್ಟೋ ಗೌರವವೂ ಕ್ಷೇಮವೂ ಉಂಟು ಅನೇಕ ವಿಷಯಗಳನ್ನು ಚೆನ್ನಾಗಿ ತಿಳಿದ ಒಬ್ಬರು ಯಾವಾಗಲೂ ನಿಮ್ಮ ಬಳಿಯಲ್ಲಿಯೇ ಇದ್ದಂತೆ ಇರುತ್ತದೆ ಈ ಪುಸ್ತಕ...ಲ್ಲಿ —1 ಪಿನಲ್ ಕೋಡು, 2 ಮೊಡ್ಡಿಸ್ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ದತ್ತುವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಬೀಡಿ ಸೇದಕೂಡ...ದ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಚಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ ಕ್ರಯ ರೂಪಾಯಿ 2-0 0 ಟಪಾಲ್ ಹಾಸಲು ಬೇರೆ

ವಿಳಾಸ —ಎಲ್ ವೇಮಾರೆಡ್ಡಿ, ಕಂಟ್ರಾಕ್ಟರ್ ಮತ್ತು ಕ್ರಿ॥ ಪ್ಲೀಡರ್, ಮಾಲೂರು, ಕೋಲಾರ್ ಡಿಸ್ಟ್ರಿಕ್ಟ್

ಅಭಿಪ್ರಾಯಗಳು.

(1) ಮ ಎ ಸೂರ್ಯನಾರಾಯಣರಾವ್, ಬಿ ಎ , ಎಂ ಆರ್ ಎ ಎಸ್ ಯವರು ಬರೆಯುವದೇನೆಂದರೆ —ನಾನು ಮಿಸ್ಟರ್ ಎಲ್ ವೇಮಾರೆಡ್ಡಿಯವರನ್ನು ಅನೇಕ ವರ್ಷಗಳ ಲಾಗಾಯಿತು ಬಲ್ಲೆ ಇವರು ಕನ್ನಡ ಭಾಷೆ...ಕೆ ತುಂಬಾ ಪರಿಶ್ರಮ ಉಳ್ಳವರಾಗಿರುತ್ತಾರೆ ಅಲ್ಲದೆ ಇವರಿಗೆ ತಕ್ಕಮಟ್ಟಿಗೆ ಸಂಸ್ಕೃತ ಮತ್ತು ಇಂಗ್ಲೀಷು ಭಾಷಾಜ್ಞಾನವಿರುವದರಿಂದ ಕನ್ನಡ ಭಾಷೆ ತಿಳಿದವರಿಗೆ ಉಪಯುಕ್ತವಾದ ಪುಸ್ತಕಗಳನ್ನು ರಚಿಸಲು ತುಂಬಾ ಅರ್ಹರಾಗಿರುತ್ತಾರೆ ...ನಲ್ ಕೋಡು ಗಾನಮಾಲಿಕೆ " ಎಂಬ ಇವರು ರಚಿಸಿರುವ ಇಂಡಿಯನ್ ಪೀನಲ್ ಕೋಡಿನ ಪ್ರಕರಣಗಳ ಕನ್ನಡ ಗಾನರೂಪವಾದ ಭಾಷಾಂತರವು ಬಹಳ ಉಪಯುಕ್ತವಾದ ಒಂದು ಚಿಕ್ಕ ಪುಸ್ತಕವಾಗಿದೆ ಇದರಿಂದ ಸಾಧಾರಣವಾದ ಜನ...ರಿ ಸಹಾ ಇಂಡಿಯಾ ದೇಶದ ಕ್ರಿಮಿನಲ್ ಲಾ ವಿಷಯದಲ್ಲಿ ಸರಿಯಾದ ತಾತ್ಪರ್ಯವನ್ನು ತಿಳಿಯಲು ಅನುಕೂಲವಾಗಿರುತ್ತದೆ 1908 ನೆ ಇಸವಿಯಲ್ಲಿ ಇವರು ಕನ್ನಡದಲ್ಲಿ ಪ್ರಕಟಿಸಿರುವ " ಪಟೇಲರ ಕರ್ತವ್ಯ " ಎಂಬ ಪುಸ್ತಕವು ಬಹಳ ಉಪ...ಕ್ತವಾಗಿದೆ ಮತ್ತು ಇದು ಯಾರ ಪ್ರಯೋಜನಕ್ಕಾಗಿ ಬರೆಯಲ್ಪಟ್ಟಿತೋ ಅಂತಹವರಿಂದ ಉಪಯೋಗಿಸಲ್ಪಟ್ಟಿರುತ್ತದೆ ಮ॥ ವೇಮಾರೆಡ್ಡಿಯವರು ಇದಕ್ಕಿಂತಲೂ ಅತಿಶಯವಾದ " ಕ್ರಿಮಿನಲ್ ಲಾ ಸಂಗ್ರಹ " ಎಂಬ ಮತ್ತೊಂದು ಪುಸ್ತಕವನ್ನು ರಚಿಸಿ...ರೆ ಈ ಪುಸ್ತಕವು ಬಹಳ ದೊಡ್ಡದಾಗಿದ್ದಾಗ್ಯೂ, ಈ ಸಂಬಂಧವಾದ ಪುಸ್ತಕಗಳಲ್ಲಿ ಇದು ಅತ್ಯುತ್ತಮವಾದದ್ದಾಗಿದೆ ವಿಷಯಗಳನ್ನು ಬಹಳ ಚೆನ್ನಾಗಿ ವಿಂಗಡಿಸಿರುವುದಲ್ಲದೆ ಅನೇಕ ಉದಾಹರಣೆಗಳನ್ನೂ ಪ್ರಕರಣಾನುಸಾರವಾದ ಹೈ ಕೋರ್ಟ್...ರ್ಮಾನಗಳನ್ನೂ ಕೊಟ್ಟಿರುತ್ತಾರೆ ಭಾಷಾಶೈಲಿಯು ಅತಿ ಸರಳವಾಗಿಯೂ ಮನೋರಂಜಕವಾಗಿಯೂ ಇರುತ್ತದೆ ತಮಗೆ ಅವಶ್ಯಕವಾದ ಈ ವಿಧವಾದ ಕಾನೂನುಗಳನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯುಳ್ಳ ಪ್ರತಿಯೊಬ್ಬರಿಗೂ ಈ ಪುಸ್ತಕವು ...ಅವಶ್ಯಕವಾಗಿರುತ್ತದೆ

(2) ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ಮ॥ ಬಿ ಟಿ ಕುಮಾರಸ್ವಾಮಿನಾಯಕರು, ಬಿ ಎ ಯವರು ಬರೆಯುವದೇನೆಂದರೆ —ಮ॥ ವೇಮಾರೆಡ್ಡಿಯವರಿಗೆ ಕನ್ನಡ ಭಾಷಾಜ್ಞಾನವು ಬಹಳ ಚೆನ್ನಾಗಿದೆ ...ಡಿಯನ್ ಪೀನಲ್ ಕೋಡು ಮತ್ತು " ಪಟೇಲರ ಡ್ಯೂಟಿ " ಎಂಬ ಪುಸ್ತಕಗಳನ್ನು ಕನ್ನಡದಲ್ಲಿ ಬರೆದಿರುವ ಇವರ ಪ್ರಯತ್ನವು ಕನ್ನಡ ಭಾಷೆಯನ್ನು ತಿಳಿದವರಿಂದ ಪ್ರೋತ್ಸಾಹಿಸಲ್ಪಡಲು ಅರ್ಹತೆಯುಳ್ಳದ್ದಾಗಿದೆ ಕನ್ನಡ ಭಾಷೆಯಲ್ಲಿ ಇವರು ...ವಾಗಿ ಮಾಡಿರುವ ಇಂಡಿಯನ್ ಪೀನಲ್ ಕೋಡಿನ ಭಾಷಾಂತರವು ಬಹಳ ಚೆನ್ನಾಗಿದೆ ಅಲ್ಲದೆ ಕ್ರಿಮಿನಲ್ ಲಾ ವಿಷಯವನ್ನು ತಿಳಿದುಕೊಳ್ಳಬೇಕೆಂದು ಅಪೇಕ್ಷೆಯುಳ್ಳವರಿಗೆ ಉಪಯುಕ್ತವಾದ ಕೆಲವು ವಿಷಯಗಳನ್ನೊಳಗೊಂಡಿದೆ ...ನಲ್ ಲಾ ಸಂಗ್ರಹವೆಂಬ ಪುಸ್ತಕದ ಇವರ ಪ್ರಕಟನೆಯೂ ಬಹಳ ದೊಡ್ಡ ಪ್ರಯತ್ನವಾದುದರಲ್ಲಿ ಸಂದೇಹವಿಲ್ಲ ಇವರು ಈ ವಿಷಯದಲ್ಲಿ ವಸ್ತುತಃ ಬಹಳ ಶ್ರಮವಹಿಸಿಕೊಂಡಿರುತ್ತಾರೆ ಇದು ಸುಲಭವಾದ ಕನ್ನಡ ಭಾಷೆಯಲ್ಲಿ ...ಲ್ಪಟ್ಟಿರುತ್ತದೆ ಪ್ರತಿಯೊಬ್ಬರೂ ಸುಲಭವಾಗಿ ತಿಳಿದುಕೊಳ್ಳಬಹುದು ಕನ್ನಡದಲ್ಲಿ ಲಾ ಸಂಬಂಧವಾದ ಪುಸ್ತಕಗಳನ್ನು ಬರೆದಿರುವವರು ಅತಿ ವಿರಳ ಮ॥ ವೇಮಾರೆಡ್ಡಿಯವರ ಪ್ರಯತ್ನವು ಸಫಲವಾಗಲೆಂದು ಕೋರುತ್ತೇನೆ

(3) ಅಡ್ವೋಕೇಟರಾದ ಮ ಸುಬ್ರಾಯಮೊದಲಿಯಾರ್ರವರು ಬರೆಯುವದೇನೆಂದರೆ – ತಮ್ಮ ಕ್ರಿಮಿನಲ್ ಲಾ ಸಂಗ್ರಹವೆಂಬ ಪುಸ್ತಕವನ್ನು ಓದಿನೋಡಿದೆನು ನೀವು ಇದನ್ನು ಜಾಗರೂಕತೆಯಿಂದ ರಚಿಸಿರುವಿರೆಂದು ಇದನ್ನು ...ದರಿಂದ ನನಗೆ ತಿಳಿಯಬಂದಿತು ಇಂಥಾದ್ದೊಂದು ಪುಸ್ತಕವು ಅವಶ್ಯಕವಾಗಿತ್ತು ಈ ನ್ಯೂನತೆಯನ್ನು ಹೋಗಲಾಡಿಸುವದಕ್ಕಾಗಿ ತಾವು ಮಾಡಿದ ಪ್ರಯತ್ನಕ್ಕೆ ನಾನು ಸಂತೋಷಿಸುತ್ತೇನೆ ಅನೇಕ ಪ್ರಕರಣಗಳ ಕೆಳಗೆ ಹೈ ಕೋರ್ಟ್ ...ರ್ಮಾನಗಳನ್ನು ಕೊಟ್ಟಿರುವ ನೋಟುಗಳು ಬಹಳ ಉಪಯುಕ್ತವಾಗಿವೆ ಈ ಪುಸ್ತಕವು ಮುಖ್ಯವಾಗಿ ಗ್ರಾಮಾಂತರಗಳಲ್ಲಿರುವ ಇಂಗ್ಲೀಷ್ ತಿಳಿಯದ ಲಾಯರುಗಳಿಗೂ ಮತ್ತು ಇತರರಿಗೂ ಬಹಳ ಉಪಯುಕ್ತವಾಗಿದೆ

(4) ಅಮಲ್ದಾರರೂ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರೂ ಆದ ಮ ಬಿ ಕೇಶವೈಂಗಾರವರು ಬರೆಯುವದೇನೆಂದರೆ —ತಮ್ಮ " ಕ್ರಿಮಿನಲ್ ಲಾ ಸಂಗ್ರಹ " ಪುಸ್ತಕವನ್ನು ಓದಿನೋಡಿದೆನು ಆಂಗ್ಲೇಯ ಭಾಷೆಯ ಪರಿಚಯ...ವರಿಗೆ ಕನ್ನಡ ತರ್ಜುಮೆಯಲ್ಲಿ ಕ್ರಿಮಿನಲ್ ಬಾಬಿನ ಕಾನೂನುಗಳನ್ನು ಒಳಗೊಂಡಿರುವ ಪುಸ್ತಕವು ಅತ್ಯವಶ್ಯಕವಾಗಿತ್ತು ಈಗ ನೀವು ರಚಿಸಿರುವ " ಕ್ರಿಮಿನಲ್ ಲಾ ಸಂಗ್ರಹ " ಎಂಬ ಪುಸ್ತಕದಿಂದ ಈ ಅನಾನುಕೂಲವು ನಿವಾರಣೆಯಾಗಿರು...ತಿಳಿದುಕೊಳ್ಳಲು ಕಷ್ಟಸಾಧ್ಯವಾದ ಸೆಕ್ಷನ್‌ಗಳ ಕೆಳಭಾಗದಲ್ಲಿ ಹೈ ಕೋರ್ಟ್ ರೂಲಿಂಗ್ಸ್‌ಗಳನ್ನು ನಮೂದಿಸಿರುವುದರಿಂದಲೂ, ಆಂಗ್ಲೇಯ ಶಬ್ದಗಳ ಅರ್ಥಕ್ಕೆ ನ್ಯೂನತೆಯುಂಟಾಗದಂತೆ ಸರಳಭಾಷೆಯಲ್ಲಿ ತಾವು ಈ ಪುಸ್ತಕವನ್ನು ...ಸುವುದರಿಂದಲೂ ಮತ್ತು ಶಿಕ್ಷೆಯನ್ನು ಉದಾಹರಿಸಿರುವ ಪ್ರತಿ ಸೆಕ್ಷನಿನ ಕೆಳಗೆ ಆಚರಣೆಯನ್ನು ತೋರಿಸುವುದರಿಂದಲೂ ಈ ಪುಸ್ತಕವನ್ನು ಓದುವವರಿಗೆ ಬಹಳ ಸಹಾಯವನ್ನು ಉಂಟುಮಾಡಿದ್ದೀರಿ ತಮ್ಮ ಉದ್ದೇಶವು ಅನೇಕ ದೊಡ್ಡಮನುಷ್ಯರು...ಪೋಷಿಸಲ್ಪಡುತ್ತೆಂದು ನಂಬಿರುವ

(5) ಪೋಲೀಸ್ ಇನ್ಸ್‌ಪೆಕ್ಟರಾದ ಮ॥ ಎ ಚನ್ನಂರಾಜಯನವರು ಬರೆಯುವದೇನೆಂದರೆ – ತಮ್ಮ " ಕ್ರಿಮಿನಲ್ ಲಾ ಸಂಗ್ರಹ " ವೆಂಬ ಪುಸ್ತಕವನ್ನು ನೋಡಿದೆನು ಇದಕ್ಕೋಸ್ಕರ ತಾವು ತೆಗೆದುಕೊಂಡಿರುವ ಶ್ರಮವು ...ಶ್ಲಾಘನೀಯವಾಗಿರುತ್ತದೆ ಈ ಪುಸ್ತಕದಲ್ಲಿ ಅನೇಕ ಕ್ರಿಮಿನಲ್ ಲಾ ವಿಷಯಗಳು ಇಂದಿರುವದರಿಂದ ಕನ್ನಡವನ್ನು ಸಾಧಾರಣವಾಗಿ ತಿಳಿದವರೆಲ್ಲರಿಗೂ ಈ ಪುಸ್ತಕದಿಂದ ಬಹಳ ಅನುಕೂಲ ಕಲ್ಪಿಸಿದಂತೆ ಆಯಿತು ಇದರಲ್ಲಿ ನೋಟುಗಳೆಂದು ಅಲ್ಲಲ್ಲಿ ...ಸಿರುವ ಹೈ ಕೋರ್ಟ್ ತೀರ್ಮಾನಗಳೂ ಮತ್ತು ಪ್ರತಿಯೊಂದು ವಿಧವಾದ ತಪ್ಪಿತಗಳನ್ನೂ ಬೇರೆಬೇರೆ ತಂಡವಾಗಿ ವಿಂಗಡಿಸಿ ಸೂಚಿಸಿರುವದು ಸಹಾ ಪ್ರಜೆಗಳಿಗೂ, ಪೋಲೀಸಿನವರಿಗೂ ಮತ್ತು ಕ್ರಿಮಿನಲ್ ಪರೀಕ್ಷೆಗೆ ಓದುವವರಿಗೂ ಸಹಾ ಬಹಳ ...ಯುಕ್ತವಾಗಿರುತ್ತವೆ ಇಂಥಾ ಪುಸ್ತಕವನ್ನು ನಾನು ಇದುವರೆಗೂ ನೋಡಿರಲಿಲ್ಲ

ಇದಲ್ಲದೆ ಇನ್ನೂ ಅನೇಕ ದೊಡ್ಡಮನುಷ್ಯರ ಒಳ್ಳೇ ಅಭಿಪ್ರಾಯಗಳಿವೆ ಪಟೇಲರ ಕರ್ತವ್ಯ (ಅಚ್ಚಾಗುತ್ತಿದೆ) ಪಟೇಲರು ಮಾಡಬೇಕಾದ ಸರ್ಕಾರಿ ಕೆಲಸಗಳನ್ನು ಚೆನ್ನಾಗಿ ವಿವರಿಸಿದೆ ಬೆಲೆ 8 ಆಣೆ ಹಾಸಲು 2 ಆಣೆ ...ಕೋಡು ಗಾನಮಾಲಿಕೆ, ಇಂಪಾದ ಹಾಡುಗಳು, ಬೆಲೆ 2 ಆಣೆ

[92 1]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

2—5—1913 ರಿಂದ 9—5—1913 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು	ಪಟ್ಟಣ	0	0	0	0
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು		0	0	0	0
ಮೈಸೂರು	,,	5	4	180	118
ಕೋಲಾರ್	,,	0	0	0	0
ಕೋಲಾರ್ ಚಿನ್ನದ ಗಣಿಗಳು		1	2	0	0
ತುಮಕೂರು ಡಿಸ್ಟ್ರಿಕ್ಟು		0	0	10	26
ಹಾಸನ	,,	0	0	90	61
ಚಿತ್ರದುರ್ಗ	,,	0	0	4	3
ಕಡೂರ್	,,	0	0	75	17
ಶಿವಮೊಗ್ಗ	,,	5	1	1	1
	ಜುಮ್ಲಾ ..	11	7	408	259

ಶಾಲಿವಾಹನಶಕ 1835 ನೇ ಪ್ರಮಾದಿ ಸಂವತ್ಸರೇ ಉತ್ತರಾಯಣೆ ವಸಂತಋತೌ ವೈಶಾಖ ಬಹುಳ ದವಿಗೆ ಶುಕ್ರವಾರದಿಂದ ವೈಶಾಖ ಬಹುಳ ನವಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಮೇ

ತಾ	ವಾರ.	ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	ವೈಶಾಖ ಮಾಸ ತೇದಿ
23	ಶುಕ್ರ	ತದಿಗೆ	11-14	ಮೂಲ	1-12	10
24	ಶನಿ	ಚೌತಿ	13 7	ಪೂರ್ವಾಷಾಢ	7-30	11
25	ಭಾನು	ಪಂಚಮಿ	15-19	ಉತ್ತರಾ	11-14	12
26	ಸೋಮ	ಷಷ್ಠಿ	19 23	ಶ್ರವಣ	16 53	13
27	ಮಂಗಳ	ಸಪ್ತಮಿ	23-16	ಧನಿಷ್ಠ	22 51	14
28	ಬುಧ	ಅಷ್ಟಮಿ	25-53	ಶತಭಿಷ	26-19	15
29	ಗುರು	ನವಮಿ	31-0	ಪೂರ್ವಾಭಾ	30-0	16

,, ಮಿಥುನಾಯನ, ಸಂಕಟಹರಚತುರ್ಥಿ ಸಾಯಂ ಸಿಂಹಾಸನಾರಥ, ಕೆಂಚ ವರದರಾಜಸ್ವಾಮಿ ರಥ, ಮಳೆ ನಕ್ಷತ್ರ—ರೋಹಿಣಿ 1 ನೇ ಪಾದ ಕ ಸಪ್ತಮೀತಿಥಿ, ಮೇಲುಕೋಟೆಯಲ್ಲಿ ಬ್ರಹ್ಮೋತ್ಸವಾರಂಭ, ಅಮೃತಸಿದ್ಧಿಯೋಗ ಪೂರ್ಣತಿಥಿ, ಮಳೆ ನಕ್ಷತ್ರ—ರೋಹಿಣಿ 2 ನೇ ಪಾದ ಅಷ್ಟಮೀತಿಥಿ.

ಪೇಟೆ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೫-೪-೦	೧೬-೮-೦
ಕೆಂಬೂತಿ ಅಕ್ಕಿ ಅವಲ್	೧೬-೦-೦	೧೭-೮-೦
,, ದುಯಂ	೧೫-೦-೦	೧೭-೦-೦
ಜವಾರಿಣಿ ಅಕ್ಕಿ	೧೫-೦-೦	೧೭-೪-೦
ಸಣ್ಣಕ್ಕಿ ಅವಲ್	೧೭-೮-೦	೧೮-೪-೦
,, ದುಯಂ	೧೬-೦-೦	೧೭-೮-೦
ಕೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ	೧೫-೦-೦	೧೩-೮-೦
,, ದುಯಂ ,,	೧೪-೮-೦	೧೩-೮-೦
ಹುರುಳಿ ಕಾಳಿ ಪಲ್ಲಾ ೧ಕ್ಕೆ	೭-೪-೦	೫-೦-೦
ರಾಗಿ ,,	೬-೮-೦	೪-೧೨-೦
ಜೋಳ ,,	೭-೦-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ	೧೦-೪-೦	೧೨-೧೨-೦
ಬಿಳೀ ಅವರೆ ,,	೧೧-೮-೦	೧೧-೦-೦
ಹೆಸರು ,,	೧೩-೦-೦	೧೪-೦-೦
ಉದ್ದು ,,	೧೪-೮-೦	೧೬-೦-೦
ಕಡಲೆ ,,	೧೦-೮-೦	೧೨-೦-೦
ಎಳ್ಳು ಸೇರು ೧೨೭ಕ್ಕೆ	೨೭-೦-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೬-೧೨-೦	೭-೦-೦
ಹರಳು ೧೨೭ ಸೇರಿಗೆ	೧೩-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೩-೮-೦
ಮೆಣಸಿನಕಾಯಿ ,,	೪-೦-೦	೩-೪-೦
,, ದುಯಂ	೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೪-೮-೦	ಮಣ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೮-೦	೬-೬-೦
ಹರಳೆಣ್ಣೆ ,, ,,	೫-೪-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫-೨-೦	೫-೪-೦
ಉಪ್ಪು ,, ,,	೫-೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧-೧೨-೦	೧-೪-೦
,, ಹಳೇದು ,,	೧-೯-೦	೦-೧೪-೦
ತುಪ್ಪ ಮಣ ೧ಕ್ಕೆ	೨೧-೮-೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೧೧-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೭-೦-೦	೬-೦-೦
ಅಡಿಕೇಕಾಯಿ ಮಣ ೧ಕ್ಕೆ	೧-೬-೦	೧-೦-೦
ಆಲೂಗಡ್ಡೆಕಾಯಿ ಮಣ ೧ಕ್ಕೆ	೦-೧೨-೦	೧-೮-೦
ಚಿನ್ನ (ಪಾರ್) ತೊಲ	೧೫-೮-೦	೧೫-೮-೦
,, ,, ಪವನು	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦-೦	೮೧-೩-೦

CHAMBERLAIN'F COUGH REMEDY.

ಚೇಂಬರ್ಲೈನ್ರವರು ಕಂಡುಹಿಡಿದ ಕೆಮ್ಮಿನ ಔಷಧವು.

1-21

ಶೀತದ ಕೆಮ್ಮು, ಗಂಟಲು, ಗಾರೆನ್ನುವುದು, ಗುಬ್ಬಿಗೆಮ್ಮು, ನಾಯಿಗೆಮ್ಮು, ಎಳೆ, ಶರದ ಶೀತ, ಗಂಟಲಿನಲ್ಲಿ ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು —ಇವಕ್ಕೆಲ್ಲಾ ಈ ಔಷಧವು ಬಹು ಶ್ರೇಯವಾದ್ದು.

ಆ ಕೆಮ್ಮನ್ನು ಅಲಕ್ಷ್ಯ ಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಸುರಿನಲ್ಲಿ ಅಶಕ್ತಿಯುಂಟಾಗುವುದು. ಹಾಗೆಯೇ ಕ್ಷಯವು ಅಸ್ಪದವಾಗುವುದು

ಚೇಂಬರ್ಲೈನ್ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಶೀಘ್ರವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಪೂರ್ಣವಾಗಿ ನಾಶಮಾಡಬಲ್ಲದು. ಶಮನವಾಗಿ, ನೀವು ಸುಖವಾಗಿ ನಿದ್ದೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೈನ್ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲಿಯೂ ವಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ.

ಪ್ರತಾಪಕಂಠೀರವ ಚರಿತ್ರೆ.

(1) ... (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ ಸಾಹಸ-ಚಾತುರ್ಯ, (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು, (4) ವನ, ಪರ್ವತ, ಆರಾಮ ವರ್ಣನೆಗಳು, (5) ಮನುಷ್ಯಯತ್ನಕ್ಕೆ ವಿಹಾರದ ... ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ... (7) ... ಮನಸ್ಸನ್ನು ... ಭಾಗಗಳು ಕೂಡಿವೆ. ಕ್ರಯ 1 ರೂಪಾಯಿ; ಟಪಾಲ್ ಖರ್ಚು ಬೇರೆ.

[10-13] ನಮ್ಮ ವಿಳಾಸ:—... ಕಂಪನಿ, ಬೆಂಗಳೂರು ಸಿಟಿ.

ಡೋಂಗರೆ ಇವರ ಬಾಲಾಮೃತ.

[115-45

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದದ್ದರಿಂದ ಹುಡುಗರು ಬಹಳ ಆನಂದದಿಂದ ತೆಗೆದುಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಸ್ವಚ್ಛ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಎಲುಬುಗಳು ಗಟ್ಟಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳು ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ; ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ

ಸಮಸ್ತ ವಿಧವಾದ ನೋವೂ ಇಂತವೂ ನಿಮಗೆ ವಾಸಿಯಾಗಬೇಕೋ

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಮೈಕೈ ನೋವು, ಕೀಲುನೋವು, ಕೈಕಾಲು ... ಮುಂತಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ.

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ... ವಿಕರಿಯಾಗುತ್ತಲಿವೆ. ... ರುಗಳೂ ವೈದ್ಯ ಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಅಮೃತಾಂಜನ ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ವಿಕರಿಯಾಗುವದು.

ಸಣ್ಣ ಔಷಧ ಡಪ್ಪಿಗೆ 6 ಆಣೆ, 12 ಕುಪ್ಪಿಗೆ ರೂ. ... ದೊಡ್ಡ ಡಪ್ಪಿಗೆ ... ಆಣೆ 12 ಕುಪ್ಪಿಗೆ ರೂ 1-2-0 ... ಮತ್ತು ... ಪ್ರತ್ಯೇಕ. [42-13]

ವಿಳಾಸ :—ಅಮೃತಾಂಜನ ಡಿಪೋ, ೧೯ ಫ್ರಿಯರ್ ರೋಡ್, ಫೋರ್ಟ್, ಬೊಂಬಾಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕರಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ವಿಷಮಜ್ವರ, ಜ್ವರ, ಹೊಟ್ಟೆ ನೋವು, ಸಂದುಗಳ ನೋವು, ಮೈ ಕಾಲು ಜೋಮು (ಭಾರ), ಮೈ ನಡುಕ, ಶೀತದ ... ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ಪಕ್ಷವಾತ, ಅರೋಚಕ, ... ಅನೇಕ ರೋಗಗಳಿಗೆ ಕೊಟ್ಟರೆ ... ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ... ಆಹಾರವನ್ನಾದರೂ ಜೀರ್ಣಗೊಳಿಸಿ, ... ರಕ್ತದಲ್ಲಿಯ ದೋಷವನ್ನು ಬೇಗನೆ ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ, ಸೆಟ್ಟುಜ್ವರ, ಕ್ಷಯ ... ಗುಣಪಡಿಸುತ್ತದೆ. ... ಸೇವಿಸುತ್ತಿರುವವರು ... ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಬಲ್ಲೀ ಶಕ್ತಿವರ್ಧಕವಾಗಿದೆ ...ಮಾತ್ರೆಗಳ ಕುಪ್ಪಿಗೆ 1 ಆಣೆ; 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 1 ಆಣೆ. [130-13]

೨. ವೈತ್ಸ್ಯಾನಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈತ್ಸ್ಯಾನಾಸವವು ಸಂಜೀವಿನಿಯಾಗಿದೆ. ... ರೋಗದ ಮೇಲೆ ಕೆಲಸ ಮಾಡುತ್ತದೆ. ... ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಕೆ ... ಕೊಟ್ಟು ನೋಡಬೇಕು ... ಒಂದೇ ಒಂದು ಬುದ್ದಿಯ ... ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಜೊತೆಯೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಪ್ರಸಿದ್ಧವಾದ ಭಕ್ತವಿಜಯವು ದ್ವಿತೀಯ ಮುದ್ರಣ

ಭಾಗಗಳಿಗೆ ರಾಯಲ್ ೪೮ ಪುಟಗಳು ಮೊದಲಿಗಿಂತ ಉತ್ತಮವಾದ ಕಾಗದದ ಮೇಲೆ ಅಂದವಾಗಿ ಮುದ್ರಿಸಲ್ಪಡುವುದು ಈ ಚೈತ್ರಮಾಸದಿಂದ ಆರಂಭ ಪ್ರತಿಮಾಸದ ಕಡೆಯಲ್ಲಿ ಸಂಚಿಕೆ ತಲುಪುತ್ತಿರುವುದು ಪೂರ್ವವಾದ ಪುಸ್ತಕಕ್ಕೆ ವಾರ್ಷಿಕ ಪೋಸ್ಟೇಜ್ ಸೇರಿ ೨ ೧೨ ೦ ಭಕ್ತವಿಜಯ ಆಫೀಸ್, ಮೈಸೂರು

ಶಬ್ದಾದರ್ಶನದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕೆಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಪುಸ್ತಕಪೂಂಪರಿಂದಲೀ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿವೆ ಕ್ರಯ ೮ ಆಣೆ ಆರಕ್ಕೊಂದು ಉಚಿತ

[187 3] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್ ಮೈಸೂರು

ಪರೀಕ್ಷಿಸಿ ನೋಡದ ಅಗ್ಗದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ಬಿಕರಿಯಾಗುತ್ತಿವೆ ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಅಗವಾಗಿ ... ಕೇಶದ ... ಎಣ್ಣೆಯನ್ನು ತಲೆಗೆ ... ಹಾಕಿದರೆ ತಲೆಯು ... ಸತ್ತುಹೋಗುತ್ತ ... ಶೋಣಿತ್ತವಾಗಿಯೂ ... ಇದನ್ನು ... ಹೇಳುತ್ತೇವೆ ... ಬಣ್ಣ ... ಹಾಕಿದರೆ ತಲೆಕೂದಲು ... ಉತ್ತಮವಾದ ... ಕೂದಲಿಗೆ ... ಶ್ರಮವನ್ನು ಹೋಗಲಾಡಿಸುತ್ತದೆ ... ಕೂದಲನ್ನು ಕಪ್ಪಾಗಿ ... ವಿದವಾಗಿಯೂ ... ಕೋಮಲವಾಗಿಯೂ ಇಟ್ಟು ... ಉತ್ತಮವಾದ ... ಇದನ್ನು ... ಪುರುಷರೂ ... ವಯಸ್ಸಿನವರೂ ಉಪಯೋಗಿಸಲು ... ಯೋಗ್ಯವಾಗಿರುವುದು

ಒಂದು ಶೀಸೆಗೆ ರೂ ೧ ೦ ೦ ಅಂಚೆಯ ವೆಚ್ಚ ೦ ೬ ೦ ... ಮೂರು ಶೀಸೆಗಳಿಗೆ ರೂ ೨ ೧೦ ೦ ... ವೆಚ್ಚ ೦ ೭ ೦

ಮೂಲೆಯು ... ಒಂದು ಅಭಿಪ್ರಾಯದ ಚೀಟಿಯನ್ನು ಕಳುಹಿಸಿ ... ನಮ್ಮ ಎಣ್ಣೆಗೆ ಚಿನ್ನದ ಮೆಡಲೂ ... ದೊರಕಿರುತ್ತದೆ ಇದರಿಂದ ... ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

... ದೊಡ್ಡ ... ಎಣ್ಣೆಯನ್ನು ... ಉಪಯೋಗಿಸಿ ... ಎಣ್ಣೆಯನ್ನು ... ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ... ಮೂರು ಬಾಟ್ಲಿ ಎಣ್ಣೆ ಕಳುಹಿಸಿಕೊಡಿ ... ನಮಗೆ ಕಾಮಿನಿಯಾ ಎಣ್ಣೆ ಆರು ಬಾಟ್ಲಿ ಕಳುಹಿಸಿಕೊಡಿ ಒಂದು ... ಇದೇ ಉತ್ತಮವಾದ ಎಣ್ಣೆ ... ಸಂತೋಷದಿಂದಲೂ ... ಒಂದು ಸಲ ತರಿಸಿ ಪರೀಕ್ಷೆ ಮಾಡಿ

ಎಚ್ಚರಿಕೆ ... ಕಾಮಿನಿಯಾ ... ಅದು ಇಲ್ಲದಿದ್ದರೆ ... ಮೋಸಕರವಾದ ... ಇದೇ ಹೆಸರಿಟ್ಟು ವಿಕರಿಮಾಡುತ್ತಾರೆ ... ಯಥಾರ್ಥವಾದ ಕಾಮಿನಿಯಾ ... ನೋಡಿ ಕೊಂಡುಕೊಳ್ಳಿ

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು

ಏಜೆಂಟ್, ದಿ ಉಲ್ಲನ್ ಮಾರ್ಟ್, ಮಂಗಳೂರು

ವಿಳಾಸ — [8 11]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸೀದ್, ಬೊಂಬಾಯಿ.

ಬೇಕಾಗಿದೆ

ಏಜಂಟರುಗಳು ನಮ್ಮ ವಿಧಗಳನ್ನು ವಿಕರಿಮಾಡಲು ಪ್ರತಿ ತಿಂಗಳಿಗೂ ಸಂಬಳ ೩೦ ರೂಪಾಯಿಗಳಿಂದ ೧೦೦ ರ ವರೆಗೆ ಕೊಡಲ್ಪಡುತ್ತೆ ಅಪೇಕ್ಷಿಸುವವರು ... ಗೆ ಸ್ಟಾಂಪಿನೊಡನೆ ಕೆಳಗಿನ ವಿಳಾಸಕ್ಕೆ ಬರೆಯಿರಿ [88 4]

ದಿ ಸ್ರಿ ಮೆಡಿಕಲ್ ಕೌನ್ಸಲ್, 97 ಮೂರಿ ಬಜಾರ್ ರೋಡು, ಮದ್ರಾಸು

1914ನೇ ವರ್ಷದ ಲೋವರ್ ಸೆಕೆಂಡರಿ ಕನ್ನಡ ಟೆಕ್ಸ್ಟ್ ನೋಟ್ಸು ವಿಕರಿಗೆ ಸಿದ್ಧವಾಗಿದೆ—ಕ್ರಯ 6 ಆಣೆ

ಡಿಸ್ಕೌಂಟು 10 ಕ್ಕೆ 1, 50 ಕ್ಕೆ 7, 100 ಕ್ಕೆ 20

ನಮ್ಮ ನೋಟ್ಸು ಬೇಕಾಗಿದ್ದರೆ ನೋಟ್ಸಿನ ಮೇಲೆ ನಮ್ಮ ಹೆಸರನ್ನು ನೋಡಿ ತೆಗೆದುಕೊಳ್ಳಿ [85-4]

ಎಸ್ ಆರ್ ವೆಂಕಟಸುಬ್ಬಾಚಾರ್ಯರ್,

ಸುಬೋಧ ಗ್ರಂಥಾಲಯ, ಮೈಸೂರು

1914ನೆಯ ಲೋವರ್ ಸೆ॥ ಕನ್ನಡ ಟೆಕ್ಸ್ಟ್ ನೋಟ್ಸು ಸಿದ್ಧವಾಗಿದೆ ಸುಲಭ ಕ್ರಯ 4 ಆಣೆ.

ಡಿಸ್ಕೌಂಟು 10 ಕ್ಕೆ 1, 20 ಕ್ಕೆ 1, 50 ಕ್ಕೆ 1 100 ಕ್ಕೆ 22

... ಬೇಗನೆ ಬರೆಯಿರಿ ... ನೋಡಿ ಇತರ ಪುಸ್ತಕಗಳೂ ನಮ್ಮಲ್ಲಿ ದೊರೆಯುವವು [84 3]

ವಿಳಾಸ ವಿ ಗುರುರಾವ್,

ಕರವಸ್ತ್ರ ಬೀದಿ, ಹಳೆ ಅಗ್ರಹಾರ, ಮೈಸೂರು

ನಾಜೂಕಾದ ... ನ್ಯಾಯವಾದ ವಾಚ್

ವೃಷ್ಟ ... ವಾಚು

... ಕ್ರಯ—... ರೂ 3-8 0 ಮಾತ್ರ ... ಬರುವುದಿಲ್ಲ

ಇದು ... ದಿವಸಗಳು ಆಟವಾಡಿ ಕೆಟ್ಟು ಹೋಗತಕ್ಕಂಥ ... ಸಾಧಾರಣವಾದ ವಾಚ್‌ಗಳಿಗಿಂತಾ



ಬಹು ಶ್ರೇಷ್ಠವಾದದ್ದು ... ಗಾಡುಗ, ... ಮುಂತಾದ ಅನೇಕ ... ಉದ್ಯೋಗಸ್ಥರು ಇದನ್ನು ಇಟ್ಟುಕೊಂಡು ಉಪಯೋಗಿಸುತ್ತಾರೆ ಆದಕಾರಣವೇ ಇದಕ್ಕೆ ... ವಾಚ್ ಎಂಬ ಬಿರುದು ಬಂದಿರುತ್ತದೆ ಇದನ್ನು ಇಟ್ಟುಕೊಂಡು ರೈಲ್ ... ನಡೆಸ ... ಈ ವಾಚ್ ... ಬರೆಯಲು ... ಸಾವರಗಟ್ಟಿ ... ಪತ್ರಗಳನ್ನು ಹೊಂದಿರು ... ಶೀಘ್ರವಾಗಿ ಬಂದು ತರಿಸಿಕೊಳ್ಳಿ ... ಮೆಚ್ಚದಿಲ್ಲದ ಪಕ್ಷದಲ್ಲಿ ಹಿಂದಿರ ಹಣ ವಾಪಸು ಮಾಡಲ್ಪಡುತ್ತೆ ನಮ್ಮ ವಿಳಾಸ [68 6]

ಸುಪೀರಿಯರ್ ವಾಚ್ ಕಂಪನಿ, ಪೋಸ್ಟು ಬಾಕ್ಸ್ 167, ಮದರಾಸು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 21

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯು ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರಣೆ ... ಹಾಸನದ ಟೋಪಿಗಳನ್ನು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ... ವಿಲಾಯಿತಿಯಿಂದಲೇ ಬರುವುದು (೨) ಟೋಪಿಗಳನ್ನು ... ಚನ್ನಾಗಿ ಮಾಡುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಯಿರುವ ಟೋಪಿಗಳ ... ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವುದಿಲ್ಲ

... ಕೆಂಪು, ಕಪ್ಪು, ಪಿರಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೮ ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ವಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೂಸುಗಳ ಟೋಪಿ, ... ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

೧೯೧೪ನೆಯ ಲೋ॥ ಸೆ॥ ಕನ್ನಡ ಟೆಕ್ಸ್ಟ್ ನೋಟ್ಸು ೦-೬-೦

ವಿಕರಿಗೆ ಸಿದ್ಧವಾಗಿದೆ ದೊಡ್ಡ ಅಕ್ಷರ, ಹೊಸ ನಮೂನೆ, ತರಿಸಿನೋಡಿ, ಒಪ್ಪದಿದ್ದರೆ ವಾಪಸುಮಾಡಿ ಡಿಸ್ಕೌಂಟು (ಒಂದೇ ಆರ್ಡರು) ನಗದು ಅಥವಾ ವಿ ಪಿ ಗೆ—10 ಕ್ಕೆ 1, 20 ಕ್ಕೆ 3, 50 ಕ್ಕೆ 8, 100 ಕ್ಕೆ 20 [65-4]

ಕೆ ಆರ್ ನರಸಿಂಹಯ್ಯ, ಕನ್ನಡ ಪಂಡಿತ, ಹೈ ಸ್ಕೂಲ್, ಚಿಕ್ಕಬಳ್ಳಾಪುರ

ಅತ್ಯುತ್ತಮವಾದ ಸೀಲಿಕಪ್ಪು ಶಾಯಿಪುಡಿ.

ವಿ ಪಿ ಮೂಲಕ 400 ಪೊಟ್ಲಗಳ ಬೆಲೆ ರೂ 1 6-0 1,000ಕ್ಕೆ ರೂ 3 ಒಂದು ಪೊಟ್ಲದಲ್ಲಿ 2 ಔನ್ಸು ಶಾಯಿ ಆಗುತ್ತದೆ ಅಂಗಡಿಯವರು ತರಿಸಿ ಮಾರಿದರ ಒಳ್ಳೇ ಲಾಭವುಂಟು [97 1]

ವಿಳಾಸ— "ವೆಂಕಟಪ್ರಕಾಶ" ಆಫೀಸ್, ಕುಪ್ಪಂ ಪೋಸ್ಟ್

ಕುಂತಳಾನಂದ ತೈಲವು.

147 ೨೫

ಹಿಂದೂಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ

ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ವಿದಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸನೆಯೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಕೂಲಿ ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ ಎಸ್ ಸಾಧ ಮತ್ತು ಕಂಪನಿ,

ಪೇಪರ್, ಮದರಾಸ್

ಸೊಗಸಾದ ಉತ್ತಮತರದ ಹೊಸ ಬಟ್ಟೆಗಳು ಬಂದಿವೆ. ಬೇಗನೆ ಈಗಲೇ ಬಂದು ನೋಡಿ ಆರಿಸಿಕೊಳ್ಳದಿದ್ದರೆ ಈ ಒಳ್ಳೇ ಸಮಯ ಹೋದೀತು ನಮ್ಮ ಶಾಪಿನಲ್ಲಿ ವಿಚಾರಮಾಡುವ ಪ್ರತಿ ಒಂದು ಆಣೆಗೂ ನಿಮಗೆ ಸಂಪೂರ್ಣವಾದ ಪ್ರತಿಫಲ ದೊರೆಯುವುದು ನಾನಾ ಬಗೆಯ ಉತ್ಕೃಷ್ಟವಾದ ಜನಕಂಯನ್ನೇ ಇಟ್ಟಿರುವೆವು ಸಕಲರಿಗೂ ಸಂತೋಷವನ್ನೂ ಸಂಪೂರ್ಣ ತೃಪ್ತಿಯನ್ನೂ ಖಂಡಿತವಾಗಿ ಉಂಟುಮಾಡುತ್ತವೆ ಯಾವ ವಸ್ತುವನ್ನು ನಮ್ಮಲ್ಲಿ ಕೊಂಡುಕೊಂಡರೂ ಅದನ್ನು ಸಿಂಪ ಬಹುಮಾನ ಪಡೆದಂತೆ ಎಣಿಸುವಿರೆಂದು ಹೇಳಬಲ್ಲೆವು ನಮ್ಮಲ್ಲಿ ಎಲ್ಲಾ ತರದ ಉಡುಪುಗಳೂ ಬಹಳ ಸೊಗಸಾಗಿ ತಯಾರಿಸಲ್ಪಡುವವು

ಒಬ್ರಾ ಒಬ್ದುಲ್ ಸುಕೂರ್ ಸೇಟ್ ಅಂಡ್ ಸನ್ಸ್,

[84 1] ಟೈಯಿಲರ್ಸ್ ಮತ್ತು ಔಟ್‌ಫಿಟ್ಟರ್ಸ್

ಕರ್ಸನ್ ಪೇಟೆ, ಮೈಸೂರು.

THE MYSORE DASARA INDUSTRIAL AND AGRICULTURAL EXHIBITION

The next Exhibition will be opened at Mysore on the 3rd of October, 1913. Classified list under "Industries" "Embroidery" etc, has been greatly enlarged. Prospectus setting forth all details will be issued shortly.

Sale Rooms will be made available for the sale of Exhibits at a reasonable rent.

Competitions in Weaving "Metal and Wood Carving" "Pottery and Ploughing" and in "Lace and Gold and Silver Embroidery Works" have been arranged.

A chance for inserting Advertisements in the Official Hand Book of Exhibits has also been allowed at reasonable rates.

Concessions have, as usual, been granted by the several Railway Administrations in India.

The issue of the usual Combined Railway and Exhibition Season Tickets for the First and Second Class travellers at *reduced rates* has been arranged for with effect from the 1st of September 1913, between Bangalore and Mysore.

Mysore G SUBBUSWAMI IYER,

12th May 1913 [95 1] *Secretary.*

1914ನೇ ಲೋ॥ ಸೆ॥ ಕ ಟೆಕಸ್ಟು 5 ಆಣೆ, ನೋಟ್ಸು ಯರ್ ಆರ್ ವೆಂಕಟಸುಬ್ಬಾಚಾರ್ಯರದು 6 ಆಣೆ ಮೈಸೂರು ಚರಿತ್ರೆ ಸುಲಭ ಪಾಠಗಳು 3ಆ ಭೂಗೋಳಶಾಸ್ತ್ರದ 1 ನೇ ಪುಸ್ತಕ 3 ಆಣೆ ಆರೋಗ್ಯ ಪ್ರಶ್ನೋತ್ತರ 1 ಆಣೆ, ಪತ್ರರತ್ನಾಕರ 8 ಆಣೆ, ಲೇಖ್ಯತತ್ವಪ್ರಕಾಶಿಕೆ 4 ಆಣೆ [61 9]
ವಿಳಾಸ —ಹೆಚ್ ವೆಂಕಟರಾಮಯ್ಯ, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

ಹಾಸಿಗೆಯ ತಿಗಣೆಯನ್ನು ನಾಶಮಾಡುತ್ತೆ

ಇದು ಬಹಳ ಅಗತ್ಯವಾದ್ದು ಸುಲಭವಾದ ಪ್ರಯೋಗ 48 ಗಂಟೆಯೊಳಗೆ ತಿಗಣೆಯ ಕಾಟ ತೊಲೆದುಹೋಗುತ್ತೆ ಉಪಯೋಗಿಸುವ ವಿಧಾನ ಸಹಿತ ಬಾಟ್ಲಿಗೆ ಕ್ರಯ ಒಂದೇ ರೂಪಾಯಿ ಅಂಚೆ ವೆಚ್ಚ ಬೇರೆ ವಿಳಾಸ—ಎಸ್ ಹಮೀದ್ ಕಂಪನಿ, 71 ಪೈಕ್ರಾಫ್ಟ್ಸ್ ರೋಡ್, ಮದರಾಸ್ [96 1]

1914 ನೇ ಎಗ್ಸಾಮಿನರ್ ಮಾಸಪುಸ್ತಕ ಚಂದಾ ರೂ 1 1 0
ಪರೀಕ್ಷಾ ಹುಡುಗರಿಗೆ ಅತ್ಯವಶ್ಯಕವಾದ ಈ ಮಾಸಪುಸ್ತಕಕ್ಕೆ ಜೂನ್ ಆಖೈರಿನೊಳಗೆ ಚಂದಾದಾರರಾಗತಕ್ಕವರಿಗೆ ಟೆಕ್ಸ್ಟ್ ನೋಟ್ಸ್ ಬಹುಮಾನ ಟಿ॥ ನೊ 1 ಆಣೆ 4ನೇ ಪುಸ್ತಕದ ನೋಟ್ಸ್ 2 ಆ , 3ನೇದು 1½ ಆ , 1ನೇದು 1½ ಆಣೆ
ಸಿ ಪುಟ್ಟಯ್ಯ, ಮ್ಯಾನೇಜರ್, ಎಗ್ಸಾಮಿನರ್ ಆಫೀಸ್, ಚಿಕ್ಕಬಳ್ಳಾಪುರ

ವೃತ್ತಾಂತ ಪತ್ರಿಕೆ

— o —

ಸರ್ ೧೯೧೩ ನೇ ಇಸವಿ ಮೇ ತಾ ೨೨ ನೇ ಗುರುವಾರ

ಮೈಸೂರು ಪ್ರಜಾಪ್ರತಿನಿಧಿ ಸಭೆಯು

ಕಳೆದ ಅಕ್ಟೋಬರ್ ತಿಂಗಳಲ್ಲಿ ರಾಜಧಾನಿಯಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯ ಪ್ರೊಸೀಡಿಂಗ್ಸನ್ನು ಸರ್ಕಾರದವರು ಅಚ್ಚು ಹಾಕಿ ಒಂದು ಪ್ರತಿಯನ್ನು ನಮಗೆ ಕಳುಹಿಸಿರುತ್ತಾರೆ ಸಭೆಯಲ್ಲಿ ನಡೆದ ವಿಚಾರಗಳೂ, ಸರ್ಕಾರದ ಪ್ರತ್ಯುತ್ತರಗಳೂ, ಅವುಗಳಿಗೆ ಸಂಬಂಧಪಟ್ಟ ಇತರ ವಿಚಾರಗಳೂ, ಎಲ್ಲಾ ವಿವರವಾಗಿಯೂ ಅಚ್ಚುಕಟ್ಟಾಗಿಯೂ ಸೊಗಸಾಗಿಯೂ ಮುದ್ರಿಸಲ್ಪಟ್ಟಿರುವವು ಇದನ್ನು ಓದಿನೋಡುತ್ತಾ ಬರುವಲ್ಲಿ ನಮಗೆ ತೋರಿದ ಕೆಲವು ಅಭಿಪ್ರಾಯಗಳನ್ನು ನಮ್ಮ ವಾಚಕರ ತಿಳುವಳಿಕೆಗಾಗಿ ಇಲ್ಲಿ ಸೂಚಿಸಲು ಸಕ್ಷಿಸುವೆವು

ಈ ಪುಸ್ತಕವನ್ನು ಬಿಚ್ಚಿ ನೋಡಿದ ಒಡನೆಯೇ ಸಭೆಯಲ್ಲಿ ಚರ್ಚೆಗೆ ತರಲ್ಪಟ್ಟ ವಿಷಯಗಳು ಹೇರಳವಾಗಿದ್ದುವೆಂದು ಮೊದಲು ಗೊತ್ತಾಗುತ್ತದೆ ಇಷ್ಟೊಂದು ವಿಷಯಗಳನ್ನು ಅದರಲ್ಲೂ ಬಹು ವಿಶೇಷವೂ ತುಂಬಾ ಕಷ್ಟಸಾಧ್ಯವೂ ಆದ ಅನೇಕ ವಿಚಾರಗಳನ್ನು ಯಾವ ಸಭೆಯಾಗಲಿ ತೃಪ್ತಿಕರವಾಗಿಯೂ ಸಾರ್ಥಕವಾಗಿಯೂ ಪರ್ಯಾಲೋಚಿಸಿ ಇತ್ಯರ್ಥಮಾಡುವುದು ಎಷ್ಟು ಮಾತ್ರವೂ ಸಾಧ್ಯವಲ್ಲ ಅವುಗಳನ್ನು ಸರಿಯಾಗಿ ಆಲೋಚಿಸಬೇಕಾದರೆ ಈ ಸಭೆಗಾಗಿಯೇ ಇನ್ನೂ ದೀರ್ಘಕಾಲವನ್ನು ವಿನಿಯೋಗಿಸಬೇಕಾಗುವುದು ಪ್ರತಿನಿಧಿಸಭೆಯು ಒಂಭತ್ತು ದಿನಗಳ ವರೆಗೆ ನಡೆಯಿತು, ಚರ್ಚೆಯಾದ ಕೆಲವು ವಿಷಯಗಳನ್ನು ನೋಡಿದರೆ ಒಂದೊಂದಕ್ಕೇ ಕಡೇ ಪಕ್ಷ ಒಂದೊಂದು ದಿನವಾದರೂ ಇಟ್ಟಿದ್ದ ಪಕ್ಷದಲ್ಲಿ ಚೆನ್ನಾಗಿ ಚರ್ಚಿಸಲು ಅವಕಾಶವಾಗುತ್ತಿತ್ತು ಈ ಸಲ ಸಭೆಯಲ್ಲಿ ಚರ್ಚಿಸುವುದಕ್ಕೋಸ್ಕರ ಮೆಂಬರುಗಳು ೨೧೯ ವಿಚಾರಗಳನ್ನು ಸೂಚಿಸಿದ್ದರು ಇವುಗಳಲ್ಲಿ ಕೆಲವನ್ನು ಮೆಂಬರುಗಳೇ ಚರ್ಚಿಸಬೇಕಾದದ್ದಿಲ್ಲವೆಂದು ಬಿಟ್ಟುಬಿಟ್ಟರು ಆದಾಗ್ಯೂ ಸಭೆಯವರ ಪರ್ಯಾಲೋಚನೆಗೆ ತರಲ್ಪಟ್ಟ ವಿಷಯಗಳು ಬಹಳ ಹೆಚ್ಚಾಗಿದ್ದುವೆಂದು ಹೇಳಲು ಅನುಮಾನವಿಲ್ಲ ಈಗಿನ ವಿಧ್ಯಮಾನಗಳನ್ನು ನೋಡುತ್ತಾ ಬಂದರೆ ಈ ವಿಷಯಗಳ ಸಂಖ್ಯೆಯನ್ನು ಯಾವ ರೀತಿ ಕಡಮೆ ಮಾಡಬಹುದೋ ತೋರುವುದಿಲ್ಲ ವಿಷಯಗಳನ್ನು ಕಡಮೆ ಮಾಡಲು ಈಗ ಮಾಡಿಕೊಂಡಿರುವ ಡಿಸ್ಟ್ರಿಕ್ಟ್ ಕಮಿಟಿಗಳಲ್ಲದೆ ಪ್ರತಿನಿಧಿಸಭೆಯ ಮೆಂಬರುಗಳಲ್ಲಿ ಕಲವರನ್ನು ಸೇರಿಸಿ ಒಂದು ಕಮಿಟಿ ಮಾಡಿಟ್ಟು, ಈ ಕಮಿಟಿಯವರೇ ಮೊದಲು ಯೋಚಿಸಿ ಯಾವ ಯಾವ ವಿಷಯಗಳನ್ನು ಮಹಾಸಭೆಗೆ ಇಡಬೇಕೆಂದು ಗೊತ್ತುಮಾಡುವಂತಾದರೆ ಅನುಕೂಲವಾಗಬಹುದು ಈ ಭಾಗವನ್ನು ಪ್ರತಿನಿಧಿಗಳು ಸಮ್ಮತಿಸರಾರೆಂದು ಶಂಕೆಪಡುತ್ತೇವೆ ಅದರೂ ಈ ವಿಚಾರದಲ್ಲಿ ಬೇಗನೆ ಯಾವುದಾದರೂಂದು ತೃಪ್ತಿಕರವಾದ ಏರ್ಪಾಡು ಮಾಡದಿದ್ದರೆ ಈ ಸಭೆಯು ಸಂಸ್ಥಾನದಲ್ಲಿ ವಿಶೇಷವಾದ ಗಣ್ಯತೆಯನ್ನು ಪಡೆಯಲಾರದು ಈಗಿನಂತೆ ಅರ್ಜಿದಾರರ ಕೂಟವಾಗಿಯೇ ಇದ್ದೀತೆಂದು ನಮಗೆ ತೋರುತ್ತದೆ

ಎರಡನೆಯದಾಗಿ, ಈ ಸಭೆಯ ಮೆಂಬರುಗಳಲ್ಲಿ ಅನೇಕಾನೇಕರಿಗೆ ಈ ಸಂಸ್ಥಾನದಲ್ಲಿ ಜಾರಿಯಲ್ಲಿರುವಂಥಾ ಕಾನೂನುಗಳಾಗಲಿ ರೂಲುಗಳಾಗಲಿ ಸರಿಯಾಗಿ ತಿಳಿದಿಲ್ಲವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ ಅನೇಕ ಸಂದರ್ಭಗಳಲ್ಲಿ ಮೆಂಬರುಗಳು ಚರ್ಚೆಗೆ ತರತಕ್ಕ ವಿಷಯಗಳನ್ನು ನೋಡಿ ಗವರ್ನಮೆಂಟಿನವರು ಇ ರೀತಿಯಾದ ರೂಲು ಜಾರಿಯಲ್ಲಿದೆ ಎಂದು ಹೇಳಬೇಕಾಗುವುದು ಇಂಥಾ ಮೆಂಬರುಗಳನ್ನು ಯಥಾರ್ಥವಾಗಿಯೂ ಪ್ರಜೆಗಳ ಪ್ರತಿನಿಧಿಗಳೆಂದು ಹೇಳಲು ಸಮರ್ಥರಾಗಿಲ್ಲ ಮೆಂಬರುಗಳು ತಾವು ಸೂಚಿಸುವ ವಿಷಯವು ಜಾರಿಯಲ್ಲಿರುವ ಕಾನೂನಿಗೆ ಅನುಸಾರವಾಗಿಯೇ ಇಲ್ಲವೋ ಎಂಬುದನ್ನು ಮೊದಲೇ ಗೊತ್ತುಮಾಡಿಕೊಳ್ಳಬೇಕು

ಮೂರನೆಯದಾಗಿ, ಕೆಲವು ಮೆಂಬರುಗಳು ಚರ್ಚೆಗೆ ತರುವ ವಿಚಾರಗಳು ಬಹಳ ಒಳ್ಳೆಯವುಗಳೇ ಆಗಿದ್ದಾಗ್ಯೂ ಅವುಗಳನ್ನು ರೂಢಿಸುವುದು ಸಾಧ್ಯವಾಗಿರುವುದಿಲ್ಲ ಸರ್ಕಾರದವರು ಮನಸ್ಸು ಮಾಡಿದರೆ ಯಾವುದೂ ಸಾಧ್ಯವೆಂದು ಕಲವು ಮೆಂಬರುಗಳು ತಿಳಿದಿರುವಂತೆ ಕಾಣುತ್ತದೆ ಕಾನೂನುಗಳನ್ನೂ ರೂಲುಗಳನ್ನೂ ಸತ್ಯವಾಗಿಯೂ ನಂಬಿಕೆಯಿಂದಲೂ ಜಾರಿ ಮಾಡುವಂಥಾ ನೌಕರಮಾನೇರುಗಳು ಗವರ್ನಮೆಂಟಿನವರಿಗೆ ದೊರಕುವುದು ಪ್ರಯಾಸವಾಗಿದೆ ಎಂಬುದನ್ನು ಮೆಂಬರುಗಳು ಮರೆತುಹೋಗುವರು ಪ್ರತಿ ಒಂದು ರೂಲೂ ಕಾನೂನೂ ಪ್ರಜೆಗಳಿಗೆ ಉಪಕಾರವಾಗುವುದಕ್ಕೆ ಪ್ರತಿಯಾಗಿ ಹಿಂಸೆಕರವಾಗಿಯೂ ಕಷ್ಟಪ್ರದವಾಗಿಯೂ ಪರಿಣಮಿಸಬಹುದು ಕಾನೂನು ಒಳ್ಳೆಯದಾಗಿದ್ದು ಚೆನ್ನಾಗಿ ರೂಢಿಸಲ್ಪಡುವುದಾದರೆ ಪ್ರಜೆಗಳು ಆನಂದಪಟ್ಟು ಶ್ರೇಯೋವಂತರಾಗುತ್ತಾರೆ ಕಾನೂನು ಒಳ್ಳೆಯದಾಗಿದ್ದೂ ಅಧರ್ಮವಾಗಿ ರೂಢಿಸಲ್ಪಟ್ಟ ಪಕ್ಷದಲ್ಲಿ ಪ್ರಜೆಗಳಿಗೆ ಅದೊಂದು ತಾಪಸಂತ ಪರಿಣಮಿಸುವುದು ಪ್ರಜಾಪ್ರತಿನಿಧಿಗಳು ಸರ್ಕಾರದವರನ್ನು ಇಂತಿಂಥಾ ವಿಷಯಗಳು ಆಗಬೇಕೆಂದು ಕೇಳಿಕೊಂಡ ಮಾತ್ರಕ್ಕೇ ಪ್ರಯೋಜನವಾಗಲಾರದು ಇಂಥಾ ವಿಷಯಗಳನ್ನು ಯಾವ ರೀತಿ ಆಚರಣೆಗೆ ತರಬೇಕೋ ಅದನ್ನು ಕೂಡ ತಿಳಿಸಿಕಾಳಿಕೊಳ್ಳಬೇಕೆಂದು ಸೂಚಿಸುತ್ತೇವೆ

ಈ ಸಭೆಯಲ್ಲಿ ಚರ್ಚೆಗೆ ಬರುವ ಅನೇಕ ವಿಷಯಗಳು ಸಭೆಯಲ್ಲಿ ಹೇಳಿ ಸಭೆಯ ಸಮಯವನ್ನು ವ್ಯರ್ಥಮಾಡುವುದಕ್ಕಿಂತ ಆಯಾ ಸ್ಥಳದ ಅಥವಾ ಆಯಾ ಡಿಸ್ಟ್ರಿಕ್ಟಿನ ಅಧಿಕಾರಿಗಳಲ್ಲಿ ಹೇಳಿಕೊಂಡು ಇತ್ಯರ್ಥ ಪಡಿಸಿಕೊಳ್ಳತಕ್ಕವುಗಳಾಗಿರುತ್ತವೆ ಡಿಸ್ಟ್ರಿಕ್ಟ್ ಗ್ರಾಮಗಳಿಗೆ ಸಂಬಂಧಪಡುವ ವಿಚಾರಗಳನ್ನೆಲ್ಲಾ ಸಭೆಯಲ್ಲಿ ಚರ್ಚೆಗೆ ಬಾರದಂತೆ ವಜಾ ಮಾಡಿಬಿಟ್ಟರೆ ಎಷ್ಟೋ ಅನುಕೂಲವಾದೀತು ದಿವಾನರವರೂ ಕೌನ್ಸಿಲ್ ಮೆಂಬರುಗಳೂ ನೆರುಸಕ್ಕೋ ಅಥವಾ ಎರಡು ವರುಷಗಳಿಗೂ ಒಂದಾವರ್ತಿ ಪ್ರತಿ ಡಿಸ್ಟ್ರಿಕ್ಟಿಗೂ ಹೋಗಿ ಆಯಾ ಡಿಸ್ಟ್ರಿಕ್ಟಿನ ಮುಖಂಡ ಪ್ರಜೆಗಳನ್ನು ಕರಸಿಕೊಂಡು ಒಂದೆರಡು ದಿನ ಅವರೊಡನೆ ಕಲೆತು ಅವರ ಕಷ್ಟ ಅನನುಕೂಲಗಳನ್ನು ವಿಚಾರಿಸುತ್ತಾ ಬರುವುದರಲ್ಲಿ ತುಂಬಾ ಅನುಕೂಲವುಂಟು ಇಗ್ಗೆ ಮಹಾಸಭೆಯಲ್ಲಿ ಆಗುವುದಕ್ಕಿಂತಲೂ ವಿಷಯಗಳು ಬಹಳ ಚೆನ್ನಾಗಿಯೂ ತೃಪ್ತಿಕರವಾಗಿಯೂ ಒಂದಿಗೆ ಬಂದು ಇತ್ಯರ್ಥ ಹೊಂದುವವು

ಈ ವಿಚಾರವಾಗಿ ಹೇಳಬಹುದಾದ ವಿಷಯಗಳು ಇನ್ನೂ ಅನೇಕವಾಗಿರುತ್ತವೆ, ಆದರೆ ಸದ್ಯ ಅವಶ್ಯವಾಗಿರುವ ಕೆಲವನ್ನು ಸೂಚಿಸಿರುವೆವು ಈ ಸಭೆಯ ಕಾರ್ಯಗಳು ಇನು ಮುಂದೆ ಚೆನ್ನಾಗಿ ನಡೆಯುವವು, ಅದರೂ ಅದರಿಂದ ಇನ್ನೂ ಹೆಚ್ಚಾದ ಪ್ರಯೋಜನವಾಗುವಂತೆ ಮಾಡಿಕೊಳ್ಳಬಹುದಾಗಿದೆ ಪ್ರಜಾಪ್ರತಿನಿಧಿಗಳು ತಮ್ಮ ಕರ್ತವ್ಯಗಳನ್ನು ತಿಳಿದುಕೊಂಡು, ಚರ್ಚೆಗೆ ಬರತಕ್ಕ ವಿಷಯಗಳ ಪೂರ್ವಾಪರಗಳನ್ನು ಚೆನ್ನಾಗಿ ಗ್ರಹಿಸಿದವರಾಗಿ, ಸಂಸ್ಥಾನದ ಪ್ರಜೆಗಳಿಗೆ ಕ್ಷೇಮಾಭ್ಯುದಯಗಳು ಲಭ್ಯವಾಗುವಂತೆ ಸಾಹಸಪಡುವವರಾಗಬೇಕೆಂದು ಪ್ರಾರ್ಥಿಸುತ್ತೇವೆ

ಪವಿತ್ರಾತ್ಮನು

ಪೂರ್ವಕಾಲದಲ್ಲಿ ಬೇರೆ ಬೇರೆ ರಾಜ್ಯಗಳನ್ನು ಆಳುತ್ತಿದ್ದ ಅರಸುಗಳಿಗೂ ಈ ಕಾಲದಲ್ಲಿ ರಾಜ್ಯಾಧಿಕಾರವನ್ನು ನಡಿಸುವ ಅರಸುಗಳಿಗೂ ಒಂದು ವಿಷಯದಲ್ಲಿ ಬಹಳ ವ್ಯತ್ಯಾಸವುಂಟು ಏನೆಂದರೆ ಪೂರ್ವಕಾಲದ ಅರಸುಗಳು ಪ್ರಜೆಗಳ ಕ್ಷೇಮಾಭಿವೃದ್ಧಿಯನ್ನು ನೋಡದೆ ತಾವೂ ತಮ್ಮ ಕುಟುಂಬದವರೂ ತಮಗೆ ಇಷ್ಟವಾದ ವಸ್ತುಗಳನ್ನು ಪಡೆದು ಅವುಗಳನ್ನು ಅನುಭೋಗಿಸಿ ಸುಖಪಡುವದೊಂದೇ ತಮ್ಮ ಮುಖ್ಯ ಕರ್ತವ್ಯವೆಂದು ಭಾವಿಸಿದರು ಪ್ರಜೆಗಳ ಮೇಲೆ ಕಂದಾಯ ಶುಲ್ಕಗಳನ್ನು ಜೋಡಿಸಿ ತಮ್ಮ ಭಂಡಾರವನ್ನು ತುಂಬಿಕೊಳ್ಳುವದು ಸಾಧ್ಯವಾದರೆ ಪರಪೀಡನದಿಂದಲಾದರೂ ಕೊಳ್ಳೆ ಸುಲಿಗೆಗಳಿಂದಾದರೂ ತಮ್ಮ ಸುಖಕ್ಕೆ ಬೇಕಾದ ದ್ರವ್ಯವನ್ನು ಸಂಪಾದಿಸುವದು ಅಪರೂಪವಾಗಿರಲಿಲ್ಲ ಹೀಗೆ ಸಂಗ್ರಹವಾದ ಹಣವನ್ನು ದೇಶಾಭಿವೃದ್ಧಿಗೂ ಪ್ರಜಾ ಕ್ಷೇಮಕ್ಕೂ ತಕ್ಕ ಸೌಕರ್ಯಗಳನ್ನು ನಿರ್ಮಿಸುವದರಲ್ಲಿ ವ್ಯಯಮಾಡದೆ ತಮಗೂ ತಮ್ಮ ರಾಣಿವಾಸಕ್ಕೂ ಬೇಕಾದ ಭೋಗಭಾಗ್ಯಗಳನ್ನು ಒದಗಿಸುವದರಲ್ಲಿಯೂ ತಮ್ಮ ಠೀವಿಗೂ ದರ್ಪಕ್ಕೂ ಬೇಕಾದ ಆನೆ ಕುದುರೆ ರಥಗಳನ್ನು ಒದಗಿಸುವದಕ್ಕೂ ವಿನಿಯೋಗಿಸುತ್ತಿದ್ದರು ಒಂದೇ ಮಾತಿನಲ್ಲಿ ಸ್ವಸುಖವನ್ನು ಕೊಂಡುಕೊಳ್ಳುವದಕ್ಕಾಗಿ ತಮ್ಮ ಪ್ರಜೆಗಳನ್ನೂ ತಮ್ಮ ಕಾಲವನ್ನೂ ರಕ್ತಿಯುಕ್ತಿಗಳನ್ನೂ ವೆಚ್ಚಮಾಡುವ ಸ್ವಾರ್ಥಪರಾಯಣರಾಗಿದ್ದರು ಈ ಕಾಲದಲ್ಲಿ ಯಾವದೋ ರಾಜತ್ವದ ಅಭಿಪ್ರಾಯವೇ ಬೇರೆಯಾಯಿತು ಹೇಗೆ ಎಂದರೆ ಈಗಿನ ಚಕ್ರವರ್ತಿಗಳು ಅರಸರು ಅಧಿಕಾರಿಗಳು ಪ್ರಜೆಗಳ ಹಿತಚಿಂತನೆ, ಕ್ಷೇಮ, ಅವರ ಪ್ರಾಣಮಾನಗಳನ್ನು ಕಾಪಾಡುವದಕ್ಕೆ ತಾವು ನೇಮಿಸಲ್ಪಟ್ಟ ಸೇವಕರೆಂದು ಭಾವಿಸುತ್ತಾರೆ ಪ್ರಜೆಗಳ ಕ್ಷೇಮವೇ ತಮ್ಮ ಕ್ಷೇಮ, ಪ್ರಜೆಗಳ ನೆಮ್ಮದಿಯನ್ನು ಕಾಯುವದೂ ಅವರನ್ನು ವೃದ್ಧಿಗೆ ತರುವದೂ ತಮ್ಮ ಉದ್ದೇಶವೆಂದು ನಿಶ್ಚಯಿಸಿಕೊಂಡಿದ್ದಾರೆ ವ್ಯಾಪಾರ, ವ್ಯವಸಾಯ, ಕಸಬುದಾರಿ, ವಿದ್ಯೆ ಮುಂತಾದವುಗಳಿಂದ ಪ್ರಜಾಸುಖವನ್ನು ಹೆಚ್ಚಿಸುವದಕ್ಕೆ ತಮ್ಮ ಪ್ರೋತ್ಸಾಹಗಳನ್ನು ಕೊಡುತ್ತಾರೆ ಅವರ ಕಷ್ಟಸುಖಗಳನ್ನು ವಿಚಾರಿಸಿ ಅಂಟುರೋಗ ಕ್ಷಾಮ ವ್ಯಾಧಿ ವಿಪತ್ತುಗಳು ಸಂಭವಿಸಿದಾಗ ಅವುಗಳನ್ನು ನಿವರ್ತಿಸಿ ಪ್ರಜಾರೋಗ್ಯವನ್ನು ಹರಡುವದಕ್ಕೆ ತಕ್ಕ ಯತ್ನಗಳನ್ನು ನಡಿಸುತ್ತಾರೆ ಮರಾಟೆ, ಮೊಗಲಾಯಿ, ಮುಸಲ್ಮಾನರೇ ಮುಂತಾದ ಪುರಾತನ ರಾಜರುಗಳು ಸ್ವಸುಖವನ್ನು ಹೇಗೆ ಅನುಭವಿಸೋಣ ಎಷ್ಟು ಅನುಭವಿಸೋಣ ಎಂಬ ಉದ್ದೇಶವನ್ನು ಪೂರೈಸಿಕೊಳ್ಳುವದರಲ್ಲಿ ಒಬ್ಬರನ್ನೊಬ್ಬರು ಮೀರಬೇಕೆಂತ ಹೋರಾಡುತ್ತಿದ್ದರು ಈಗಿನ ಕಾಲದ ಅರಸುಗಳಲ್ಲಿ ಇರುವ ಪರಸ್ಪರ ಸ್ಪರ್ಧೆ ಏನೆಂದರೆ,—ನಾನು ನನ್ನ ಪ್ರಜಾ ಸೌಕರ್ಯ, ಐಶ್ವರ್ಯ, ವಿದ್ಯೆ, ನಾಗರಿಕತೆಗಳನ್ನು ಹೇಗೆ ಹೆಚ್ಚಿಸಲಿ ಎಂಬುವದೇ

ಈ ಸದುದ್ದೇಶವು ಸಾಂಗವಾಗಿ ನೆರವೇರಬೇಕಾದರೆ ಅರಸುಗಳೂ ಚಕ್ರವರ್ತಿಗಳೂ ತಮ್ಮ ತಮ್ಮ ಪ್ರಜೆಗಳ ಸ್ಥಿತಿಗತಿಗಳನ್ನೂ ಅವರ ಕೊರತೆಗಳನ್ನೂ ಆ ಕೊರತೆಗಳನ್ನು ನಿವಾರಣೆಮಾಡುವ ಯತ್ನಗಳನ್ನೂ ಚೆನ್ನಾಗಿ ತಿಳಿಯಬೇಕು ಇದಕ್ಕಾಗಿ ಅರಸುಗಳೂ ಚಕ್ರವರ್ತಿಗಳೂ ದೇಶಸಂಚಾರಮಾಡುವದುಂಟು, ಅಥವಾ ಕಾರ್ಯಗೌರವದಿಂದ ತಾವು ರಾಜಧಾನಿಯನ್ನು ಬಿಡಲಾರದ ಪಕ್ಷದಲ್ಲಿ ತಮ್ಮ ಯುವರಾಜನನ್ನಾಗಲೀ ತಮ್ಮ ಪ್ರತಿನಿಧಿಯನ್ನಾಗಲೀ ತಮ್ಮ ಪಕ್ಷವಾಗಿ ಕಳುಹಿಸುವರು ವಿಲಾಯತಿಯಲ್ಲಿ ನಮ್ಮ ಚಕ್ರವರ್ತಿನಿಯಾಗಿದ್ದ ವಿಕ್ಟೋರಿಯಾ ಮಹಾರಾಜ್ಞಿಯವರೂ ಅವರ ಪುತ್ರರೂ ಹೀಗೆ ಮಾಡಿದ್ದುಂಟು ಅವರ ಕೈಕೆಳಲಾರ್ಡ್ ಡಫರಿನ್ ಪ್ರಭುಗಳೂ ಲಾರ್ಡ್ ಕರ್ಜನ್ ಮುಂತಾದ ಪ್ರಭುಗಳ ಹಿಂದೂ ದೇಶದಲ್ಲಿಯೂ ಮೈಸೂರು ಸೀಮೆಯಲ್ಲಿಯೂ ಸಂಚರಿಸಿ ಪ್ರಜೆಗಳ ಕಷ್ಟ ಸುಖಗಳನ್ನೂ ಕೊರತೆಗಳನ್ನೂ ವಿಚಾರಿಸಿ ಅವುಗಳ ಪರಿಹಾರಕ್ಕಾಗಿ ಬೇರೆ ಬೇರೆ ಯತ್ನಗಳನ್ನು ಮಾಡಿದರು ಡಫರಿನ್ ಪ್ರಭುಗಳೂ ಅವರ ದೊರೆಸಾನಿಯವರೂ ನಮ್ಮ ಸೀಮೆಯ ಸ್ತ್ರೀ ಜನಕ್ಕೆ ಪ್ರಸವಕಾಲದಲ್ಲಿ ತಕ್ಕ ಸಹಾಯವಿಲ್ಲವೆಂದು ತಿಳಿದು ಅವರಿಗೆ ಶಾಸ್ತ್ರೋಕ್ತವಾಗಿ ಸುಖಪ್ರಸವಕ್ಕೆ ತಕ್ಕ ಸಹಾಯವನ್ನು ಮಾಡಬಲ್ಲ ಸೂಲಗಿತ್ತಿಯರನ್ನು ಒದಗಿಸಿದರು ಇನ್ನು ಕೆಲವೆಡೆಗಳಲ್ಲಿ ಬೇರೆ ವೈದ್ಯಶಾಲೆಗಳು ನಾಲೆಗಳನ್ನೂ ಪಟ್ಟಣಕ್ಕೆ ನೀರಿನ ಸರಬರಾಯಿನ್ನೂ ಮಾಡಿದ್ದುಂಟು

ದೇವರು ಈ ಲೋಕದಲ್ಲಿರುವ ನಮ್ಮ ಸ್ಥಿತಿ, ಗತಿ, ವಿದ್ಯಮಾನ, ಕೊರತೆಗಳನ್ನು ತಿಳುಕೊಳ್ಳುವದಕ್ಕೂ ಕೊರತೆಗಳಿಗೆ ತಕ್ಕ ಸಂಹಾರವನ್ನು ಕಲ್ಪಿಸುವದಕ್ಕೂ ಕುತೂಹಲವುಳ್ಳವನಾಗಿದ್ದಾನೆ ಅರಸುಗಳೂ ಚಕ್ರವರ್ತಿಗಳೂ ಆತನು ನಮ್ಮ ಮೇಲೆ ನಮ್ಮನ್ನು ಕಾಪಾಡುವದಕ್ಕೆ ನೇಮಿಸಿದ ಆಳುಗಳು ಆದರೆ ದೇವರು ಭೂಮಂಡಲಕ್ಕೆಲ್ಲಾ ಒಡೆಯನಾದ ಅರಸನು ಆತನೇ ಎಲ್ಲವನ್ನೂ ಸೃಷ್ಟಿಸಿ ಕಾಪಾಡುತ್ತಾ ಬರುವ ನಮ್ಮ ಒಡೆಯನು ಒಂದು ದಿನವಾದರೂ ಆತನು ನಮ್ಮನ್ನು ಮರೆಯದೆ ಕಾಲಕ್ಕೆ ಸರಿಯಾಗಿ ಮಳೆ ಬೆಳೆ, ಬೆಳಕುಗಳನ್ನು ಕಳುಹಿಸುತ್ತಾನೆ ಲೋಕದಲ್ಲಿ ತನ್ನ ಪ್ರಜೆಗಳಾದ ನಮ್ಮನ್ನು ಬಾಧಿಸುತ್ತಿರುವ ಕೊರತೆಗಳನ್ನು ತಿಳಿಯುವದಕ್ಕೂ ಪರಿಹರಿಸುವದಕ್ಕೂ ತನ್ನ ಪ್ರಿಯ ಕುಮಾರನಾದ ಯೇಸು ಸ್ವಾಮಿಯನ್ನು ಈ ಲೋಕಕ್ಕೆ ಕಳುಹಿಸಿದನು ಆತನು ಪರಲೋಕವನ್ನು ತ್ಯಜಿಸಿ ಈ ಲೋಕದಲ್ಲಿ ಹುಟ್ಟಿ ನರಮನುಷ್ಯನಾಗಿ ಸಂಚರಿಸಿದನು ಮನುಷ್ಯರು ದೇವರನ್ನೂ ಆತನ ಪ್ರೀತಿಯನ್ನೂ ತಿಳಿಯದೆ ಪಾಪಕ್ಕೂ ಅಜ್ಞಾನಕ್ಕೂ ಸಿಕ್ಕಿ ನರಳುತ್ತಿರುವವನ್ನೂ ನೋಡಿದನು ಪ್ರಜೆಗಳಲ್ಲಿ ಪರಸ್ಪರ ಸ್ನೇಹವೂ ಅನ್ಯೋನ್ಯವೂ ಇಲ್ಲದೆ ಒಬ್ಬರನ್ನೊಬ್ಬರು ಹಗೆಮಾಡಿ ಜಗಳವಾಡಿ ಕೆಟ್ಟುಹೋಗುತ್ತಿರುವವನ್ನೂ ಕಾಮ, ಕ್ರೋಧ ಲೋಭವೇ ಮುಂತಾದ ಅರಿಷಡ್ವರ್ಗಗಳಲ್ಲಿ ಬೆರತಿರುವದನ್ನೂ ನೋಡಿ ಅತ್ಯಂತ ವ್ಯಸನಾಕ್ರಾಂತನಾದನು ಮತ್ತು ಇದಕ್ಕೆಲ್ಲಾ ಪರಿಹಾರವನ್ನು ತಾನು ಲೋಕದಲ್ಲಿರುವ ಪರ್ಯಂತ್ರ ನಡಿಸುತ್ತಿದ್ದು ಅನಂತರ ಆತನು ತನ್ನ ಸಹಾಯವು ಒಂದು ಸೀಮೆಯ ಕೆಲವು ಜನಗಳಿಗೆ ಮಾತ್ರ ಸಿಕ್ಕುವದು ಸಾಲದು, ಲೋಕದ ಸಕಲ ಜನಗಳಿಗೂ ತನ್ನ ಸಹಾಯವೂ ಸಹವಾಸವೂ ಸಿಕ್ಕಬೇಕೆಂತ ನಿರ್ಣಯಿಸಿದನು ಆತನು ಇದಕ್ಕಾಗಿ ಯುಕ್ತಿಸಿದ್ದೇನೆಂದರೆ,—ನಾನು ಈ ಲೋಕದ ಎಲ್ಲಾ ಜನಗಳ ಸಂಗಡಲೂ—ಪ್ರತಿಯೊಬ್ಬ ವ್ಯಕ್ತಿಯ ಸಂಗಡಲೂ ಯಾವಾಗಲೂ ಅವರನ್ನು ಬಿಡದೆ ಇರುವದು ಸಾಧ್ಯವಾದರೆ ಲೋಕಕ್ಕೆ ರಕ್ಷಣೆಯಾಗುವದೆಂತ ನಿಶ್ಚಯಿಸಿದನು ಇದಕ್ಕಾಗಿ ಆತನು ತನ್ನ ಆತ್ಮನನ್ನು, ತನ್ನ ಸ್ವಾತ್ಮನನ್ನು, ಪರಿಶುದ್ಧಾತ್ಮನನ್ನು ಕಳುಹಿಸಿಕೊಟ್ಟು ನಮ್ಮಲ್ಲಿ ಆತನು ಸದಾ ಇರುತ್ತಾನೆಂದು ವಾಗ್ದತ್ತಮಾಡಿದನು ಆತನು ತನ್ನ ಶಿಷ್ಯರಿಗೆ ಹೇಳಿದ್ದನ್ನು ಕೇಳಿರಿ ಏನಂದರೆ—ನಾನು ಸತ್ಯವನ್ನು ಹೇಳುತ್ತೇನೆ ಕೇಳಿರಿ ನಾನು ಹೋಗುವದು ನಿಮಗೆ ಹಿತಕರವಾಗಿದೆ ಹ್ಯಾಗಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವದಿಲ್ಲ ನಾನು ಹೋದರೆ ಆತನನ್ನು ನಿಮ್ಮ ಬಳಿಗೆ ಕಳುಹಿಸುತ್ತೇನೆ ಆತನು ಬಂದು ಪಾಪ, ನೀತಿ, ನ್ಯಾಯತೀರ್ಪು ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು ತಂದೆಯ ಬಳಿಯಿಂದ ನಾನು ನಿಮಗೆ ಕಳುಹಿಸಿಕೊಡುವ ಸಹಾಯಕನು ಅಂದರೆ ತಂದೆಯ ಬಳಿಯಿಂದ ಹೊರಡುವ ಸತ್ಯದ ಆತ್ಮನು ಆತನೇ

ಲೋಕದಲ್ಲಿ ಕೆಲವು ಕಡೆ ಮಹಾ ಬೆಂಗಾಡುಗಳು ಇರುತ್ತವೆ ಅಲ್ಲಿ ನೀರೂ ನೆರಳೂ ಇಲ್ಲ ಗಿಡ ಹುಲ್ಲು ಬೆಳೆಯುವದಿಲ್ಲ ಅಂಥಾ ಕಡೆಗೆ ಒಂದು ನಾಲೆಯನ್ನು ಹರುಗಿಸುವದರಿಂದ ಆ ಪ್ರದೇಶವೆಲ್ಲಾ ಫಲವತ್ತಾಗಿ ಹುಲ್ಲು ಬೆಳೆದು ಹಸುರಾಗಿ ಪುಷ್ಪಫಲಗಳಿಂದ ಕಂಗೊಳಿಸುವದಲ್ಲವೇ ಈ ಲೋಕವು ಒಂದು ಮಹಾ ಬೆಂಗಾಡಾಗಿದೆ ಅದರಲ್ಲಿ ದೇವರು ಮೆಚ್ಚತಕ್ಕ ಫಲಗಳ್ಯಾವೂ ಇಲ್ಲ ದೇವರ ಪ್ರತಿನಿಧಿಯಾಗಿ, ವ್ಯವಸ್ಥೆಯಾಗಿ ಆತನ ಕಡೆಯಿಂದ ಬಂದ ಕ್ರಿಸ್ತನು—ಲೋಕದಲ್ಲಿರುವ ಎಲ್ಲಾ ಕೊರತೆಗಳನ್ನು ಒಂದು ದೊಡ್ಡ ವರದಿಂದ ಪರಿಹರಿಸುವದು ಸುಲಭವಾದ್ದೆಂತ ತಿಳಿದನು ಅದೇನಂದರೆ ತನ್ನ ಪವಿತ್ರಾತ್ಮನೆಂಬ ಜೀವಜಲವೇ ತನ್ನನ್ನು ಬೇಡುವವರೆಲ್ಲರಿಗೆ ಈ ಪವಿತ್ರಾತ್ಮನನ್ನು ಕೊಡುತ್ತೇನೆಂದು ಸಕಲರನ್ನು ತನ್ನ ಬಳಿಗೆ ಕರೆಯುತ್ತಾನೆ

ಸ್ವದೇಶದ ವೃತ್ತಾಂತಗಳು

ಕಡ್ಯಾಗಾಲದ ಹಂಗೆ ಮೊಕದ್ದಮೆಯಲ್ಲಿ 1ಟ ನೇ ಆಸಾಮಿಗೆ ತುಂಬಾ ಕಾಯಿಲೆಯಾಗಿದ್ದದ್ದರಿಂದ ಸೆಷನ್ಸ್ ಜಡ್ಜರು ಮೂರು ದಿನಗಳಿಂದ ಕೋರ್ಟು ಮಾಡಲಿಲ್ಲ

*

ಕೋಲಾರ ಬೌರಿಂಗ್‌ಪೇಟೆ ರೈಲ್ ರಸ್ತೆಯ ಕಾಮಗಾರಿ ಪ್ರಾರಂಭವಾಗಿರುವಂತೆಯೂ, ಮಣ್ಣಿ ಕಾಮಗಾರಿಯೂ, ಸ್ಟೇಷನ್ ಕಟ್ಟಡಗಳೂ ನಡೆಯುತ್ತಿರುವುದಾಗಿಯೂ ತಿಳಿದುಬರುತ್ತದೆ

*

ರಾಜಧಾನಿಯಲ್ಲಿ ಎರಡು ವಾರಗಳಿಂದ ಮಳೆ ಇಲ್ಲದೆ ಬಿಸಿಲಿನ ತಾಪ ಸಹಿಸಕೂಡದಂತಾಗಿದೆ ಧಾರಣೆವಾಸಿಗಳು ಕ್ಷೇಮಕಾಲಕ್ಷೇಪದಿಯಲ್ಲಿರುವರು ಆದರೆ ರೋಗಾದಿಗಳ ಕಳವಳವೇನೂ ಇರುವುದಿಲ್ಲ

*

ರಾಜಧಾನಿಯಲ್ಲಿ ಈಗ ಇಂಡಸ್ಟ್ರಿಯಲ್ ಸ್ಕೂಲು ಇಟ್ಟಿರುವ ಕಟ್ಟಡದಲ್ಲಿ ಅದು ಖಾಲಿಯಾದ ಬಳಿಕ ಅಂದರೆ ಜೂನ್ಯ ತಾ 7 ರಿಂದ ಒಂದು ಪಂಚಮರ ಬೋರ್ಡಿಂಗ್ ಸ್ಕೂಲನ್ನು ಸರ್ಕಾರದವರು ಪ್ರಾರಂಭಮಾಡಿ ನಡಿಸುವವರಾಗಿದಾರೆಂದು ತಿಳಿದುಬಂದಿದೆ

*

ಈ ತಿಂಗಳ 10 ನೇ ತಾ ಬಿಡದಿಯ ಬಳಿ ಜಂಗಲುಗಳಲ್ಲಿ ಅಡಗಿಕೊಂಡಿದ್ದ 11 ಜನ ಕಳ್ಳ ಕಂಭಾರಿಗಳ ಗುಂಪನ್ನು ಬಿಡದಿಯ ನೂರಾರು ಮಂದಿ ಪ್ರಜೆಗಳೂ ಪೋಲೀಸಿನವರೂ ಸೇರಿ ಹೋಗಿ ಹಿಡಿದುತಂದಿದಾರೆ ಈ ಕಳ್ಳರ ಬಳಿ ಮರೆಮುರಿಯುವ ಆಯುಧಗಳೂ ಕತ್ತಿಗಳೂ ಸಿಕ್ಕಿರುತ್ತವೆ

*

ಮೊನ್ನೆ ಮಂಗಳವಾರ ಬೆಳಗ್ಗೆ ರಾಜಧಾನಿಯ ಹಳೇ ಅಗ್ರಹಾರದ ಸುಬ್ಬನ ಕೇರಿಯಲ್ಲಿ ಒಂದು ಪಬ್ಲಿಕ್ ಕಕ್ಕಸಿನ ಹತ್ತಿರ ಯಾರೋ ಆಗತಾನೇ ಹೆತ್ತ ಹೆಣ್ಣು ಮಗುವನ್ನು ಗೋಣಿಯಲ್ಲಿ ಸುತ್ತಿಹಾಕಿದ್ದರು ಇದುವು ಅತ್ತದ್ದನ್ನು

ಈ ಜನರು ಸೇರಿದಾಗ ಪೋಲೀಸಿನವರು ಅದನ್ನು ಆಸ್ಪತ್ರೆಗೆ ಸಾಗಿಸಿ, ಸತ್ತವರು ಯಾರೆಂಬುವುದನ್ನು ತಲಾಷ್ ಮಾಡುತ್ತಿದ್ದಾರೆ

ಬೆಂಗಳೂರು ದಂಡಿನಲ್ಲಿ ಅಬ್ದುಲ್ ಮಜೀದ್ ಎಂಬ 14 ವರುಷದ ಮುಸಲ್ಮಾನ್ ಹುಡುಗನು ತನ್ನ ಯಜಮಾನನಾದ ಒಬ್ಬ ಚಿನ್ನಕೆಲಸದವನು ಬೈದನೆಂಬ ರೋಷಕ್ಕೆ ಆತ್ಮಹತ್ಯಮಾಡಿಕೊಳ್ಳಬೇಕೆಂದು ಹೋಗಿ ರೂಪಾಯಿ ತೂಕದ ಗಂಧಕದ್ರಾವಕವನ್ನು ಕುಡಿದುಬಿಟ್ಟನು ಆಸ್ಪತ್ರೆಯಲ್ಲಿ ಅವನಿಗೆ ಔಷಧಕೊಟ್ಟು ವಾಸಿಮಾಡಿದರು ಮ್ಯಾಜಿಸ್ಟ್ರೇಟರು ಆ ಹುಡುಗನಿಗೆ ಒಂದು ತಿಂಗಳ ಸಾದಾ ಸಜಾ ವಿಧಿಸಿರುತ್ತಾರೆ

ಈ ಸಲ ಲೋವರ್ ಸೆಕೆಂಡರಿ ಪರೀಕ್ಷೆಯ ಕಾಲದಲ್ಲಿ ಹಾಸನದ ಸೆಂಟರಿಗೆ ಪ್ರಶ್ನಪತ್ರಿಕೆಗಳು ಮುಂಚೆಯೇ ಹೊರಬಿದ್ದವೆಂದೂ, ಕೆಲವು ಪರೀಕ್ಷೆಗಳು ಪುನಃ ನಡೆಯಬಹುದೆಂದೂ ಹಿಂದೆ ಈ ಪತ್ರಿಕೆಯಲ್ಲಿ ಹಾಸನದ ಬಾತ್ಮೀದಾರರು ಬರೆದಿದ್ದರಷ್ಟೆ ಈಚೆಗೆ ವಿಚಾರಮಾಡುವಲ್ಲಿ ಪರೀಕ್ಷೆಗಳೆಲ್ಲಾ ಕ್ರಮವಾಗಿಯೂ, ತೃಪ್ತಿಕರವಾಗಿಯೂ ನಡೆದಿವೆ ಎಂದೂ, ಈ ಪತ್ರಿಕೆಯಲ್ಲಿ ಪ್ರಕಟವಾದ ಸಂಗತಿ ನಿಜವಲ್ಲವೆಂದೂ ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳು ಅನ್ನುತ್ತಾರೆ

ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರು ಬೆಂಗಳೂರಿನಿಂದ ಕುಣಿಗಲಿಗೆ ಮೈಲಿ ದೂರ ಟ್ರಾಂಗಾಡಿಗಳು ಹೋಗಿಬರುವ ರಸ್ತೆಯನ್ನು ಮಾಡಿಸಿ ಜನರ ಮತ್ತು ಸಾಮಾನುಗಳ ಆಮದುರಪ್ತಿಗೆ ಅನುಕೂಲಪಡಿಸಬೇಕೆಂದೂ, ಈ ಕಾರ್ಯ ಡಿಸ್ಟ್ರಿಕ್ಟ್ ಫಂಡಿನ ಡಿಸ್ಟ್ರಿಕ್ಟ್ ಬೋರ್ಡಿನವರ ಆದಾಯದ ಮೇಲೆ ರೂಪಾಯಿಗೆ ಮೂರು ಕಾಸಿನಂತೆ ವರಿಯನ್ನು ಎತ್ತಿ ಒದಗಿಸಬೇಕೆಂದೂ ತೀರ್ಮಾನ ಮಾಡಿದ್ದಾರೆ ಈ ಕೆಲಸಕ್ಕೆ ಐದು ಲಕ್ಷ ರೂಪಾಯಿ ಬೇಕಾಗುವುದೆಂದು ಅಂದಾಜು ಆಗಿದೆ

ಒಬ್ಬ ಹುಣಸೂರು ಪತ್ತೆದಾರನಿಂದ—ಕಳೆದ ಎರಡು ವರ್ಷಗಳ ಲಾಗಾಯಿತು ಇದೇ ಊರಲ್ಲಿರುವ ಮುಸಲ್ಮಾನರ ಅಬ್ದುಲ್ ಗಫೂರ್ ಸಾಹೇಬರೆಂಬುವರು ಇದೇ ಟೌನ್ ಹಿಂದೂಸ್ಥಾನಿ ಸ್ಕೂಲ್ ಹೆಡ್ ಮಾಸ್ಟರಾದ ಜಾಫರ್ ಹುಸೇನ್ ಎಂಬುವರ ಮೇಲೆ ಕೇಸುಗಳನ್ನು ಮಾಡಿ ಪೋಲೀಸ್ ವಿಚಾರಣೆ ನಡೆಸುತ್ತಾ ಇದ್ದು, ಕಳೆದ ಮೂರು ತಿಂಗಳಿಂದಲೂ ಕ್ರಿಮಿನಲ್ ಕೇಸು ಮೈಸೂರು ಫಸ್ಟ್ ಕ್ಲಾಸಿನಲ್ಲಿ ನಡೆಯುತ್ತಾ ಇದ್ದು, ಕಳೆದ ತಾ 16ನೇ ಶುಕ್ರವಾರ ಕೇಸು ಸುಳ್ಳು ಎಂದು ತೀರ್ಮಾನಿಸಿ ಜಡ್ಜಿಗಳು ಡಿಸ್ಚಾರ್ಜ್ ಮಾಡಿದ್ದಾರೆ

ಬೊಂಬಾಯಿ ಎಂಪೈರ್ ಜೀವವಿಮೆ ಕಂಪನಿಯ ಬೆಂಗಳೂರು ಏಜೆನ್ಸಿಯ ಕ್ಯಾಷಿಯರ್ ರಂಗಸ್ವಾಮಿ ಮುದಲಿಯಾರನು ಕಂಪನಿಯ ಹಣದಲ್ಲಿ 700 ರೂಪಾಯಿ ದುರುಪಯೋಗಪಡಿಸಿ, ಆತ್ಮಹತ್ಯಮಾಡಿಕೊಳ್ಳಲು ಪ್ರಯತ್ನಿಸಿದಾಗ ಅವನನ್ನು ಹಿಡಿದು ಬಂಧನದಲ್ಲಿ ಹಾಕಿದರು ಈಚೆಗೆ ಕಂಪನಿಯವರು ಅವನ ಜಾಮೀನು ಹಣ 1,000 ರೂಪಾಯನ್ನೂ, ಅವನು ಪಾವತಿ ಮಾಡಿದ್ದ 1,500 ರೂಪಾಯನ್ನೂ ಸರಿಕಟ್ಟಿಕೊಂಡು ಬಾಕಿ ಆಗುವ 700 ರೂಪಾಯಿಗೆ ಮೊಕದ್ದಮೆ ತಂದಿದ್ದಾರೆ ಮುಂದಿನ ಸೋಮವಾರ ಅದು ವಿಚಾರಣೆಗೆ ಇಡಲಾಗಿದೆ

ಕೋಲಾರ್ ಚಿನ್ನದ ಗಣಿಗಳಿಗೆ ಸೇರಿದ ಚಾಂಪಿಯನ್ ರೀಫ್ ಎಂಬ ಗಣಿಯಲ್ಲಿ ಬಂಗಾರದ ಪುಡಿಯನ್ನು ತುಂಬಿಟ್ಟಿರುವ ಮನೆಗೆ ನುಗ್ಗಿ ಕಳುವು ಮಾಡಬೇಕೆಂದು ಒಂದು ಗುಂಪಿನ ಕಳ್ಳರು ಕಳೆದ ಭಾನುವಾರ ಬೆಳಗಿನ ಝಾಮದಲ್ಲಿ ಬಂದರು ಕಾವಲುಗಾರನು ಅವರನ್ನು ಅಡ್ಡಿಮಾಡಿದಾಗ ಅವರು ಅವನನ್ನು ಹಿಡಿದುಕೊಂಡು ಹೋಗಿ ಮರಳಿನಲ್ಲಿ ಹೂತುಹಾಕಿ, ಆ ಮನೆಗೆ ಹೋಗಿ ಬಾಗಿಲನ್ನು ಒಡೆದು ನೋಡುವಾಗ್ಗೆ ಒಳಗಡೆಯಿಂದ ಬಾಗಿಲನ್ನು ಭದ್ರಮಾಡಿದ್ದರಿಂದ ನುಗ್ಗಲು ಸಾಧ್ಯವಾಗದೆ ಹೊರಟುಹೋಗಿ ರಾಬರ್ಟ್‌ಸನ್ ಪೇಟೆಯ ಕೆಲವು ಮನೆಗಳಲ್ಲಿ ಕಳುವುಮಾಡಿಕೊಂಡು ಪರಾರಿಯಾಗಿರುತ್ತಾರೆ

ರಾಜಧಾನಿಯ ಮ್ಯುನಿಸಿಪಲ್ ಮತ್ತು ಟ್ರಸ್ಟ್ ಬೋರ್ಡ್ ಆಫೀಸುಗಳ ನೌಕರರುಗಳು, ರಜಾ ಪಡೆದು ಕೆಲಸ ಬಿಟ್ಟ ವೈಸ್ ಪ್ರೆಸಿಡೆಂಟ್ ಮಿ॥ ವಿ ಕೃಷ್ಣಸ್ವಾಮಿ ರಾಯರವರಲ್ಲಿ ತಮಗಿದ್ದ ಭಕ್ತಿ ಪ್ರೀತಿಯನ್ನು ಪ್ರಕಾಶಪಡಿಸಲು ರಥದ ಬೀದಿಯಲ್ಲಿರುವ ಮ ಎಂ ಕೃಷ್ಣಶೆಟ್ಟರವರ ಹೊಸ ಕಟ್ಟಡದಲ್ಲಿ ಅವರಿಗೆ ವಿಸ್ತಾರವಾದ ಔತಣವನ್ನು ಮಾಡಿದರು ಆಗ ಮನೆ ವಿದ್ವಾಂಸರಾದ ಸುಬ್ಬಣ್ಣನವರ ಮತ್ತು ಸುಬ್ರಹ್ಮಣ್ಯನವರ ವೀಣಾಗಾನವೂ, ಬಿ ಕೃಷ್ಣಪ್ಪನವರ ಗಾಯನವೂ ನಡೆದವು ಪ್ರಜಾ ಪಕ್ಷದ ಮ್ಯುನಿಸಿಪಲ್ ಕೌನ್ಸಿಲರುಗಳು ಹಾಜರಿದ್ದರು ಕಡೆಯಲ್ಲಿ ಮಿ॥ ಕೃಷ್ಣಸ್ವಾಮಿರಾಯರು ಎಲ್ಲರನ್ನೂ ವಂದಿಸಿ ಕಳುಹಿಸಿದರು ಜೂನ್ ತಿಂಗಳ ಮೊದಲನೇ ವಾರ ಪುರವಾಸಿಗಳು ಸೇರಿ ಮಿ॥ ಕೃಷ್ಣಸ್ವಾಮಿರಾಯರನ್ನು ಸತ್ಕರಿಸಿ ಅವರಲ್ಲಿ ತಮಗಿರುವ ಪ್ರೀತಿಯನ್ನು ಪ್ರಕಾಶಪಡಿಸಬೇಕೆಂದು ಏರ್ಪಾಡು ಮಾಡುತ್ತಿದ್ದಾರೆ

ರಾಜಧಾನಿಯ ಸಯ್ಯಾಜಿರಾವ್ ರಸ್ತೆಯಲ್ಲಿ ಕಟ್ಟಿ ತಯಾರಾಗುತ್ತಿರುವ ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಎಂಬ ಕೈಗಾರಿಕೆಗಳ ಪಾಠಶಾಲೆಯನ್ನು ಜುಲೈ ತಿಂಗಳ 7ನೇ ತಾ ಸೋಮವಾರ ಪ್ರಾರಂಭ ಮಾಡುತ್ತಾರೆಂದು ತಿಳಿದುಬಂದಿದೆ ಇದಕ್ಕಾಗಿ ಮಿ॥ ಎಂ ರಾಮರಾಯರವರು ಮೊನ್ನೆ ಬೊಂಬಾಯಿ ಕಡೆಯಿಂದ ರಾಜಧಾನಿಗೆ ಬಂದು ದೊಡ್ಡಮನುಷ್ಯರ ಮತ್ತು ಅಧಿಕಾರಿಗಳ ಕೂಡ ಆಲೋಚನೆ ಮಾಡಿಕೊಂಡು ನೆನ್ನೆ ವಾಪಸು ತೆರಳಿದರು ಈ ಪಾಠಶಾಲೆಯಲ್ಲಿ ಈಗಿರುವ ಕೈಗಾರಿಕೆಗಳಲ್ಲದೆ ಶಾಸ್ತ್ರೀಯ ವಿದ್ಯೆಯನ್ನೂ ಕಲಿಸುವುದಕ್ಕೆ ಏರ್ಪಾಡು ಮಾಡುತ್ತಾರೆ ಇದಲ್ಲದೆ ರಾಜಧಾನಿಯಲ್ಲಿರುವ ಸರ್ಕಾರಿ ವರ್ಕ್‌ಷಾಪ್ ಕಾರ್ಖಾನೆಯನ್ನೂ ಈ ಕಟ್ಟಡದಲ್ಲೇ ಇಟ್ಟು ಈ ವಿದ್ಯೆಯನ್ನು ಕಲಿಸುವುದಕ್ಕೆ ಏರ್ಪಾಡಾಗುತ್ತದೆ ಯಂತ್ರಗಳ ರಚನೆ, ಅವುಗಳನ್ನು ನಡಿಸುವ ಮುಂತಾದವುಗಳನ್ನು ಕಲಿಸುವುದಕ್ಕೆ ಮೆಕ್ಯಾನಿಕಲ್ ಇಂಜನಿಯರಿಂಗ್ ಪಾಠಶಾಲೆಯನ್ನು ಸರ್ಕಾರದವರು ಬೆಂಗಳೂರಿನಲ್ಲಿ ಜೂಲೈ ತಾ 7ರಿಂದ ತೆರೆಯುವರು

ಸೆಕ್ರೆಟರಿ ಮಿ॥ ಎಚ್ ಕೆ. ವೀರಬಸವಯ್ಯನವರು ಬರೆದಿರುವ ವಿದ್ಯಾರ್ಥಿ ನಿಲಯದ ಪ್ರವೇಶ ಸಂಬಂಧ—ಬೆಂಗಳೂರು ಸಿಟಿಯಲ್ಲಿ ಖಾನ್ ಬಹದ್ದೂರ್ ಪ್ರವರ್ತಕ ಗುಬ್ಬಿ ತೋಟದಪ್ಪನವರ ಧರ್ಮಛತ್ರದಲ್ಲಿ ವಿದ್ಯಾರ್ಥಿಗಳಿಗೆ ಉಚಿತಭೋಜನಕ್ಕೆ ಏರ್ಪಾಡಾಗಿದೆ. ವಿದ್ಯಾರ್ಥಿಗಳು ಮೈಸೂರು ದೇಶೀಯರಾಗಿಯೂ, ವೀರಶೈವರಾಗಿಯೂ, ಇಂಗ್ಲೀಷ್ ಲೋವರ್ ಸೆಕೆಂಡರಿಗೆ ಕಡಮೆ ಇಲ್ಲದ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರಾಗಿಯೂ ಇರಬೇಕು ಮತ್ತು ಪ್ರೌಢವಿದ್ಯಾಭ್ಯಾಸಮಾಡಲು ಚೈತನ್ಯವಿಲ್ಲದವರಿಗೆ ಮಾತ್ರ ಅವಕಾಶ ದೊರೆಯುವುದು ಚೈತನ್ಯವಿಲ್ಲವೆಂಬುವುದಕ್ಕೆ ಸ್ಥಳೀಯ ಪ್ರಮುಖರಿಂದ ಸರ್ಟಿಫಿಕೇಟ್ ತರಬೇಕಲ್ಲದೆ ತಾವು ಹಿಂದೆ ಓದಿದ ಸ್ಕೂಲ್ ಯಾ ಕಾಲೇಜ್ ಮುಖ್ಯೋಪಾಧ್ಯಾಯರಿಂದಲೂ ತಮ್ಮ ಯೋಗ್ಯತೆಯ ವಿಚಾರವಾಗಿ ಸರ್ಟಿಫಿಕೇಟು ತರತಕ್ಕದ್ದು ಗತವರ್ಷದಲ್ಲಿದ್ದ ವಿದ್ಯಾರ್ಥಿಗಳ ಪೈಕಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಿಗೆ ಮಾತ್ರ ಮೊದಲು ಅವಕಾಶಕೊಟ್ಟು ಅಂತರ ಇತರರಿಗೆ ಅವರ ಯೋಗ್ಯತೆಯ ಪ್ರಕಾರ ಸಾಧ್ಯವಾದಷ್ಟು ಕ್ಲುಪ್ತವಾಗಿ ಸ್ಥಳ ದೊರೆಯುತ್ತೆ ಇಚ್ಛೆಯುಳ್ಳವರು ಸೆಕ್ರೆಟರಿಯವರಿಗೆ ಜೂನ್ ತಾ 5ನೇ ಗುರುವಾರದೊಳಗಾಗಿ ಅರ್ಜಿ ಬರೆದುಕೊಳ್ಳತಕ್ಕದ್ದು

ಇಂಡಿಯಾ ದೇಶದ ವೃತ್ತಾಂತಗಳು.

ದರ್ಭಾಂಗ ಮಹಾರಾಜರವರು ಮುಜಫರ್‌ಪುರದ ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿಗೋಸ್ಕರ 70,000 ರೂಪಾಯಿ ಧರ್ಮಾರ್ಥವಾಗಿ ಕೊಟ್ಟಿದ್ದಾರೆ

ಪೂರ್ವಬಂಗಾಳಕ್ಕೆ ಸೇರಿದ ಖುಲ್ನಾ ಡಿಸ್ಟ್ರಿಕ್ಟಿನ ಫಿರೋಜಪುರದ ಠಾಣಾದಲ್ಲಿ ಒಬ್ಬ ಪೋಲೀಸ್ ಇನ್‌ಸ್ಪೆಕ್ಟರೂ ಇಬ್ಬರು ಪ್ಯಾದೆಗಳೂ ಖೈದಿಯನ್ನು ಹಿಂಸೆಪಡಿಸಿದರೆಂದು ಮೊಕದ್ದಮೆ ಬಂದು ಅವರನ್ನು ವಾರಂಟಿನ ಮೇಲೆ ಹಿಡಿದಿರುತ್ತಾರೆ.

ನೆಲ್ಲೂರು ಜಿಲ್ಲೆಗೆ ಸೇರಿದ ಕೊಡೂರಿನಲ್ಲಿ ಸುಮಾರು ಎರಡು ವಾರಗಳ ಹಿಂದೆ ಒಬ್ಬ ರೈತನು ಮನೆ ಕಟ್ಟುತ್ತಿರುವಾಗ ಅವನ ಹೆಂಡತಿಗೆ ಭೂಸ್ಥಾಪಿತವಾಗಿದ್ದ ನಿಧಿ ಸಿಕ್ಕಿತು ಅದನ್ನು ಸರ್ಕಾರದವರು ಸ್ವಾಧೀನಪಡಿಸಿಕೊಂಡಿದ್ದಾರೆ ಆ ನಿಧಿಯು ಸುಮಾರು ಒಂದೂವರೆ ಲಕ್ಷ ರೂಪಾಯಿ ಆಗುತ್ತೆಂದು ತಿಳಿದುಬಂದಿದೆ.

ಪೂರ್ವಬಂಗಾಳಕ್ಕೆ ಸೇರಿದ ಕೊಮಿಲಾ ಸಿವಿಲ್ ಕೋರ್ಟುಗಳಲ್ಲಿ ಅನೇಕ ಮೊಕದ್ದಮೆಗಳ ಕಟ್ಟುಗಳೇ ಅದೃಶ್ಯವಾಗಿದ್ದು ಕಳೆದ ಗುರುವಾರ ಮಧ್ಯಾಹ್ನ ಒಂದು ಬಾರೀ ಭಾಂಗಿಯ ಮೂಲಕ ಅವೆಲ್ಲಾ ಅಲ್ಲಿಯ ಮೇಲೆ ಜಡ್ಜಿಯವರಿಗೆ ತಲಪಿರುತ್ತವೆ ಜಡ್ಜಿಯವರು ಅದರ ಪೂರ್ವೋತ್ತರವನ್ನು ತನಿಖೆಮಾಡುತ್ತಿದ್ದಾರೆ

ಅಲಿಪುರದಲ್ಲಿ ಎಡಿಮದ್ದಿನ ಗುಂಡಿನ ಮೊಕದ್ದಮೆಯಲ್ಲಿ ಜನ್ಮಾಂತರ ಶಿಕ್ಷೆ ವಿಧಿಸಲ್ಪಟ್ಟು ಇದುವರೆಗೆ ಅಂಡಮಾನ್ ದ್ವೀಪದಲ್ಲಿದ್ದ ಉಲ್ಲಾಸ್ಕರ್ ದತ್ತನಿಗೆ ಈಚೆಗೆ ಬುದ್ಧಿಭ್ರಮಣೆಯುಂಟಾಗಿರುವಕಾರಣ ಗವರ್ನ್‌ಮೆಂಟಿನವರು ಅವನನ್ನು ಅಂಡಮಾನ್ ದ್ವೀಪದಿಂದ ಮದರಾಸಿನಲ್ಲಿರುವ ಸರ್ಕಾರಿ ಹುಚ್ಚರ ಆಸ್ಪತ್ರೆಗೆ ಕರೆದುತಂದು ಇಲಾಜು ಮಾಡಿಸುತ್ತಿದ್ದಾರೆ

ಹಿಮಾಚಲ ಪರ್ವತದ ತಪ್ಪಲಲ್ಲಿರುವ ಬಾಜಿ ಎಂಬ ದೇಶೀಯ ಸಂಸ್ಥಾನದ ರಾಜರವರು ಕೆಲವು ವಾರಗಳಿಂದ ಕಾಯಿಲೆ ಇದ್ದು ಕಳೆದ ತಾ 9ರಲ್ಲಿ ಕಾಲವಾದರು ಅವರಿಗೆ 60 ವರುಷದ ಮೇಲಾಗಿತ್ತು ಅವರ ಕುಮಾರರು ಸಂಸ್ಥಾನವನ್ನಾಳುವರು ಅವರಿಗೆ ಇನ್ನೂ ೧ ವರುಷ ವಯಸ್ಸಾದ್ದರಿಂದ ಗವರ್ನ್‌ಮೆಂಟಿನವರು ರೀಜನ್ಸಿ ಕೌನ್ಸಿಲನ್ನು ಏರ್ಪಡಿಸುವರು

ಬೊಂಬಾಯಿ ಪಟ್ಟಣದಲ್ಲಿ ಗವರ್ನ್‌ಮೆಂಟಿನವರು ವ್ಯಾಪಾರ ವಿಷಯವನ್ನು ಕಲಿಸುವುದಕ್ಕೆ ಒಂದು ವಿದ್ಯಾಶಾಲೆಯನ್ನು ಪ್ರಾರಂಭ ಮಾಡುವುದಾಗಿ ಹುಕುಂ ಕೊಟ್ಟಿದ್ದಾರೆ ಅದರ ಮುಖ್ಯೋಪಾಧ್ಯಾಯನಿಗೆ 1,125 ರೂಪಾಯಿ, ಇಬ್ಬರು ಉಪಾಧ್ಯಾಯರುಗಳಿಗೆ ತಲಾ 975 ರೂಪಾಯಿ, ಇನ್ನಿಬ್ಬರಿಗೆ 300ರಿಂದ 400 ರೂಪಾಯಿ ವರೆಗೆ ತಲಬು ಕೊಡತಕ್ಕದ್ದೆಂದು ವಿಧಾಯಕವಾಗಿರುತ್ತದೆ

ಬರ್ಮಾ ಲೆಫ್ಟಿನೆಂಟ್ ಗವರ್ನರಾದ ಸರ್ ಹಾರ್ವೆ ಆಡಮ್ಸನ್‌ರವರು ಆರು ತಿಂಗಳ ರಜಾ ಪಡೆದುಕೊಂಡಿರೋಣವರಿಂದ ಅಪ್ಪರ್ ಬರ್ಮಾ ಜುಡಿಷಲ್ ಕಮಿಷನರ್ ಸರ್ ಜಾರ್ಜ್ ಷಾಟ್ಲೆನ್ ಸಾರವರನ್ನು ವೈಸರಾಯರವರು ಬರ್ಮಾ ಅಧಿಪತ್ಯದ ಲೆಫ್ಟಿನೆಂಟ್ ಗವರ್ನರ್ ಕೆಲಸಕ್ಕೆ ಬದಲಿಯಾಗಿ ನೇಮಕಮಾಡಿದ ಪ್ರಕಾರ ಅವರು ಆ ಅಧಿಕಾರವನ್ನು ಕಳೆದ ತಾ 14ನೇ ಬುಧವಾರ ವಹಿಸಿಕೊಂಡಿರುತ್ತಾರೆ

ಮಧ್ಯಪ್ರಾಂತ್ಯಗಳಲ್ಲಿ ನ್ಯಾಯವಿಧಾಯಕ ಸಭೆಯು ಏರ್ಪಾಡಾಗುವುದನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದಾರೆ ಚೀಫ್ ಕಮಿಷನರ್‌ರವರೂ ಸೇರಿ ಆ ಸಭೆಯಲ್ಲಿ 25 ಮಂದಿ ಮೆಂಬರುಗಳಾಗುವರು ಈ ಪೈಕಿ ಪ್ರಜೆಗಳು 10 ಮಂದಿಯನ್ನು ಚುನಾಯಿಸುವರು 5 ಮಂದಿ ಸರ್ಕಾರಿ ಅಧಿಕಾರಿಗಳನ್ನೂ, 10 ಮಂದಿ ಪ್ರಜೆಗಳಲ್ಲಿ ಗಣ್ಯರಾದವರನ್ನೂ ಸರ್ಕಾರದವರು ನೇಮಕಮಾಡುತ್ತಾರೆ

ದಕ್ಷಿಣ ಅಮೇರಿಕದ ದಕ್ಷಿಣಭಾಗದಲ್ಲಿರುವ ಆರ್ಜಂಟೈನ್ ಎಂಬ ಸ್ವತಂತ್ರ ಪ್ರಜಾ ಪ್ರಭುತ್ವದಿಂದ ಇಂಡಿಯಾ ಗವರ್ನ್‌ಮೆಂಟಿನವರು 1,200 ಹೇಸರಕತ್ತೆಗಳನ್ನು ಕಲ್ಕತ್ತೆಗೆ ಜಹಜಿನ ಮೇಲೆ ಕೊಂಡು ತರಿಸಿದರು ಈ ಪೈಕಿ ಪ್ರಯಾಣದಲ್ಲಿ ಒಂದೂ, ಬಂಗಾಳ ಕೊಲ್ಲಿಯ ಬಳಿ ಹತ್ತೂ, ಕಲ್ಕತ್ತೆಯಲ್ಲಿ ನೂರ ಇಪ್ಪತ್ತೂ ಸತ್ತುಹೋದವು ಆರ್ಜಂಟೈನಾದಿಂದ ಹೇಸರಕತ್ತೆಗಳು ಹಿಂದೂಸ್ಥಾನಕ್ಕೆ ರವಾನೆಯಾಗಿ ಬಂದದ್ದು ಇದೇ ಮೊದಲಾಗಿರುತ್ತದೆ

ಕಳೆದ ತಾ 10ಕ್ಕೆ ಆಖೈರಾದ ವಾರದಲ್ಲಿ ಹಿಂದೂಸ್ಥಾನದೊಳಗೆ 4,090 ಜನರಿಗೆ ಪ್ಲೇಗ್ ಉಪದ್ರ ತಗಲಿ 4,152 ಜನರು ಆ ರೋಗದಲ್ಲಿ ಕಾಲವಾದರು ಈ ಮರಣಗಳ ವಂಚಿಕೆ ಹ್ಯಾಗೆಂದರೆ—ದೆಹಲಿ ನಗರ 6, ಬೊಂಬಾಯಿ ಅಧಿಪತ್ಯ 284, ಮದರಾಸ್ 13, ಬಂಗಾಳಾ 36, ಬೇಹಾರ್ 105 ಸಂಯುಕ್ತ ಅಧಿಪತ್ಯಗಳು 2,019, ಪಂಜಾಬ್ 1,611, ಬರ್ಮಾ 41, ಮಧ್ಯಪ್ರಾಂತ್ಯಗಳು 1, ಮೈಸೂರು ಸಂಸ್ಥಾನ 14, ರಜಪುತಾನ 69, ವಾಯವ್ಯ ಸರಹದ್ದು ಪ್ರಾಂತ್ಯ 1, ಕಾಶ್ಮೀರ 21

ಸೂರತ್ ನಗರದಲ್ಲಿ ಪ್ರಸಿದ್ಧ ವರ್ತಕರಾದ ಮಿ ಕಲ್ಯಾಣಭಾಯಿ ಲಾಲೂಭಾಯಿಯವರು ಕಾಲವಾದರೆಂದು ತಿಳಿಸಲು ವಿಷಾದವಾಗ ಪಡು ಇವರು ಸ್ತ್ರೀವಿದ್ಯಾಭ್ಯಾಸಕ್ಕೆ ತುಂಬಾ ಪ್ರೋತ್ಸಾಹಪಡಿಸುತ್ತಿದ್ದರು ಹಿಂದೂ ಸಮಯಾಚಾರಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಬೇಕೆಂದು ಅವರು ಬಹಳ ಸಾಹಸಪಡುತ್ತಿದ್ದರು ಸೂರತ್ತಿನಲ್ಲೂ, ಕೆಲವು ಕಾಲ ಬೊಂಬಾಯಿನಲ್ಲೂ ಮ್ಯುನಿಸಿಪಲ್ ಕೌನ್ಸಿಲರಾಗಿದ್ದು ಪ್ರಜಾಹಿತಕಾರ್ಯಗಳಲ್ಲಿ ವಿಶೇಷವಾದ ಆಸಕ್ತಿಯನ್ನು ತೋರಿಸುತ್ತಿದ್ದರು

ಕಲ್ಕತ್ತಾ ಪಟ್ಟಣದ ರಿಪನ್ ವಿದ್ಯಾಶಾಲೆಯ ಸೂಪರಿಂಟೆಂಡೆಂಟರಾದ ಬಾಬು ಅನ್ನುಕಚಂದ್ರ ಘೋಷ್‌ರವರು ಆ ಪಟ್ಟಣದ ಟ್ರಾಂಗಾಡಿಯಿಂದ ಇಳಿಯುವಾಗ್ಗೆ ಟ್ರಾಂವೇ ಕಂಪನಿಯವರ ಅಜಾಗರೂಕತೆಯಿಂದ ನೆಲದ ಮೇಲೆ ಬಿದ್ದು ಕೈಮುರಿದುಹೋಯಿತೆಂದೂ, ಇದಕ್ಕಾಗಿ 5,200 ರೂಪಾಯಿ ಡಾಮಿಜು ಕೊಡಬೇಕೆಂದೂ ಕಂಪನಿಯವರ ಮೇಲೆ ದಾವಾ ಮಾಡಿದ್ದರು ಅಲಿಪುರದ ಸಬ್ ಜಡ್ಜರವರು ಈ ಮೊಕದ್ದಮೆಯನ್ನು ದರಿಯಾಪ್ತಿಮಾಡಿ ಕಂಪನಿಯವರು ಮಿ॥ ಘೋಷ್‌ರವರಿಗೆ 2,000 ರೂಪಾಯಿ ಡಾಮಿಜು ಕೊಡುವಂತೆ ಡಿಕ್ರಿ ಕೊಟ್ಟಿರುತ್ತಾರೆ.

ಬಂಗಾಳಾದಲ್ಲಿ ನಿರ್ಮಲಸಿಂಗ್, ವಸಂತಸಿಂಗ್ ಎಂಬಿಬ್ಬರು ಪತ್ರಿಕೆಗಳಲ್ಲಿ ನೋಟೀಸುಗಳನ್ನು ಪ್ರಕಟಿಸಿ ಬ್ಯಾಂಕುರಾ ರಾಜ ಎಂಬ ತೋಟದಲ್ಲಿ ಕೆಲವು ನೌಕರಿಗಳು ಖಾಲಿ ಇರುವುದಾಗಿಯೂ, ಅಪೇಕ್ಷೆಯುಳ್ಳವರು ಜಾಮೀನಾಗಾಗಿ ರೇವಣಿ ಹಣವನ್ನು ಕಟ್ಟಿ ಅರ್ಜಿ ಬರೆದುಕೊಳ್ಳಬಹುದೆಂದೂ ತಿಳಿಸಿದ್ದರ ಮೇಲೆ ಕೆಲವರು 6,000 ರೂಪಾಯಿ ತನಕ ಅವರಿಗೆ ಹಣ ಕಳುಹಿಸಿ ಅರ್ಜಿ ಬರೆದುಕೊಂಡು ಮೋಸಹೋಗಿ ಪೋಲೀಸಿಗೆ ತಿಳಿಸಿದರು ಪೋಲೀಸಿನವರು ತಲಾಷ್‌ಮಾಡಿ ಅವರಿಬ್ಬರನ್ನೂ, ಅವರ ಕಡೆ ಬ್ಯಾರಿಸ್ಟರೆಂದು ಹೇಳುವ ಎನ್ ಎಲ್ ಬ್ಯಾನರ್ಜಿ ಎಂಬವನನ್ನೂ ದಸ್ತಗಿರಿ ಮಾಡಿರುತ್ತಾರೆ

ಈಚೆಗೆ ಲಕ್ನೋ ಪಟ್ಟಣದಲ್ಲಿ ಹಿಂದುಸ್ಥಾನದ ಮುಸಲ್ಮಾನ್ ಸಂಘದವರು ಸಭೆಸೇರಿ, ಇನ್ನುಮುಂದೆ ಹಿಂದೂ ಮುಸಲ್ಮಾನ್ ಜನಗಳು ಪರಸ್ಪರ ಪ್ರೀತಿ ನಂಬಿಕೆಗಳನ್ನು ಹೊಂದಿ ಸಹೋದರರಂತೆ ಬಾಳುವುದು ಉಚಿತವಾಗಿದೆ ಎಂದು ತೀರ್ಮಾನಮಾಡಿಕೊಂಡರು ಈಗ ಈ ತೀರ್ಮಾನವನ್ನು ಹಿಂದುಸ್ಥಾನದವರೆಲ್ಲಾ ತಿಳಿದು ಅದರಂತೆ ಆಚರಣೆಗೆ ತರಬೇಕೆಂಬ ಅಭಿಪ್ರಾಯದಿಂದ ಲಕ್ನೋ ನಗರದಲ್ಲಿ ಮುಂದಿನ ಸೆಪ್ಟೆಂಬರ್ ತಿಂಗಳಲ್ಲಿ ಒಂದು ಪ್ರತಿನಿಧಿಸಮಾಜವನ್ನು ನಡಿಸಬೇಕೆಂದೂ, ಈ ಸಮಾಜಕ್ಕೆ ಪ್ರತಿಯೊಂದು ಅಧಿಪತ್ಯದಿಂದಲೂ ಹಿಂದೂ ಮುಸಲ್ಮಾನ್ ದೊಡ್ಡಮನುಷ್ಯರ ಪೈಕಿ ಮುಖಂಡರಾದ ನಾಲ್ಕುನಾಲ್ಕು ಮಂದಿ ಪ್ರತಿನಿಧಿಗಳಾಗಿ ಬರಬೇಕೆಂದೂ ಗೊತ್ತುಮಾಡಿರುತ್ತಾರೆ

ಕೆಲವು ಕಾಲದಿಂದ ಪೂರ್ವಬಂಗಾಳದ ಅನೇಕ ಗ್ರಾಮ ಊರುಗಳಿಗೆ ಅನೇಕ ಗುಂಪುಗಳ ಪ್ರಾಯಸ್ಥರು ವೇಷಮರೆಸಿಕೊಂಡು ಆಯುಧಪಾಣಿಗಳಾಗಿ ಪ್ರಸಿದ್ಧ ಧರ್ಮವಂತರ ಮನೆಗಳಿಗೆ ನುಗ್ಗಿ ಲೂಟಿಮಾಡುತ್ತಾ ಸಗನಾಟ್ಯಗಳನ್ನು ಕೊಳ್ಳೆ ಹೊಡೆಯುತ್ತಾ ಬಂದಿದ್ದಾರೆ ಈ ಕೃತ್ಯಗಳನ್ನು ನಡಿಸತಕ್ಕವರು ಕಳ್ಳರಲ್ಲವೆಂದೂ, ಪ್ರಜಾಸಮೃದ್ಧಿಗೆ ಭಂಗವನ್ನುಂಟುಮಾಡಬೇಕೆಂಬ ಉದ್ದೇಶವುಳ್ಳ ಫಿತೂರಿಕೋರರೆಂದೂ ಸರ್ಕಾರದವರಿಗೆ ಅನುಮಾನವುಂಟಾಗಿ ಈಚೆಗೆ ಅಂಥಾ ಫಿತೂರಿಗಳನ್ನು ದರ್ಪವಿಟ್ಟು ಅಡಗಿಸಬೇಕೆಂದು ಒಂದು ಕಾನೂನನ್ನು ಮಾಡಿ ಜಾರಿಗೆ ತಂದಿದ್ದಾರೆ ಈಗ ಕಲ್ಕತ್ತೆ, ಢಕ್ಕಾ, ನಾರಾಯಣಗಂಜ್ ಎಂಬೀ ಸ್ಥಳಗಳಲ್ಲಿ ದರೋಡೆಗಳನ್ನು ನಡಿಸಿದರೆಂದು ಒಂಭತ್ತು ಜನಗಳನ್ನು ದಸ್ತಗಿರಿಮಾಡಿ, ದರ್ಯಾಪ್ತಿ ಬಗ್ಗೆ ಟ್ರಿಬ್ಯೂನಲಿಗೆ ಕಳುಹಿಸಿರುವರು ಈ ಅಪರಾಧಿಗಳೆಲ್ಲಾ ಸಾಮಾನ್ಯವಾಗಿ ದೊಡ್ಡಮನುಷ್ಯರೆನಿಸಿಕೊಂಡವರ ಸಂಬಂಧಿಗಳಾಗಿರುತ್ತಾರೆಂದು ಹೇಳುವರು

ಪಂಜಾಬ್ ಅಧಿಪತ್ಯಕ್ಕೆ ಸೇರಿದ ಝಂಗ್ ಡಿಸ್ಟ್ರಿಕ್ಟಿನಲ್ಲಿ ರಾಮದತ್ತಮಲ್ಲನೆಂಬುವನು ತನ್ನ ಹೆಂಡತಿಯನ್ನು ಫೌಲಾ ಎಂಬುವನು ಚಿತಾವಣೆಮಾಡಿ ಕರೆದುಕೊಂಡು ಹೋದನೆಂದು ಮೊಕದ್ದಮೆ ತಂದನು ದರ್ಯಾಪ್ತಿಯಲ್ಲಿ ಅವನ ಹೆಂಡತಿಯು ಫೌಲಾ ಎಂಬುವನು ತನ್ನನ್ನು ಕರೆದುಕೊಂಡುಹೋದದ್ದು ನಿಜವಲ್ಲವೆಂದೂ, ತನ್ನ ಗಂಡನು ತನ್ನನ್ನು ಕೊಲ್ಲಬೇಕೆಂದಿದ್ದಾನೆಂದೂ ಹೇಳಿದಳು ಮ್ಯಾಜಿಸ್ಟ್ರೇಟರು ಫಿರ್ಯಾದಿಯಾದ ರಾಮದತ್ತನನ್ನು 500 ರೂಪಾಯಿಗೆ ನೇಕ್ ಚಾಲಿನ ಜಾಮೀನ್ ತೆಗೆದುಕೊಂಡು ಬಿಟ್ಟುಬಿಟ್ಟರು ಆ ರಾತ್ರಿಯೇ ರಾಮದತ್ತನು ತನ್ನ ಮಾವನ ಮನೆಗೆ ಹೋಗಿ ತನ್ನ ಹೆಂಡತಿಯನ್ನೂ ಅತ್ತೆಯನ್ನೂ ಕೊಂದುಹಾಕಿ, ಅಲ್ಲಿಂದ ಫೌಲಾವಿನ ಮನೆಗೆ ನುಗ್ಗಿ ಅವನ ತಂದೆ, ಚಿಕ್ಕಪ್ಪ, ಸಹೋದರ ಈ ಮೂರು ಮಂದಿಯನ್ನೂ ಕಡಿದುಬಿಟ್ಟನು ಫೌಲನು ಮಾತ್ರ ಹ್ಯಾಗೋ ತಲೆತಪ್ಪಿಸಿಕೊಂಡುಹೋದನು ಈಚೆಗೆ ಪೋಲೀಸಿನವರು ಆ ಕೊಲೆಗೇಡಿಯನ್ನು ದಸ್ತಗಿರಿಮಾಡಿದ್ದಾರೆ

ಹಿಂದುಸ್ಥಾನದಲ್ಲಿ ಹಣದ ಸಾಹುಕಾರರು ಲೇವಾದೇವಿ ನಡಸುವ ಮಹಾದುಃಖಕರವಾದ ರೀತಿಯನ್ನೂ, ಅದರಿಂದ ಪ್ರಜೆಗಳು ಅನುಭವಿಸುವ ಕಷ್ಟನಷ್ಟಗಳನ್ನೂ ಕುರಿತು ಸಂಯುಕ್ತ ಅಧಿಪತ್ಯಗಳ ನ್ಯಾಯವಿಧಾಯಕ ಕೌನ್ಸಿಲ್ ಮೆಂಬರಾದ ಷಿರಾವತ್ ನಗರದ ಮಿ॥ ಮಹಾರಾಜಾ ಗುಲಾಮ್ ಉಸಾಕ್ ಖಾನ್‌ರವರು ಸರ್ಕಾರದವರಿಗೆ ಅರಿಕೆಮಾಡಿ, ಬಡ್ಡಿಯ ದರಗಳನ್ನು ಕಾನೂನ್ ಮೂಲಕ ಕಡಮೆ ಮಾಡಿಕೊಟ್ಟು ಪ್ರಜೆಗಳನ್ನು ಕಾಪಾಡಬೇಕೆಂದು ಕೇಳಿಕೊಳ್ಳುವವರಾಗಿದ್ದಾರೆ ಹಿಂದುಸ್ಥಾನದಲ್ಲಿ ಸಾಹುಕಾರರು ಯಾವ ರೀತಿ ಬಡ್ಡಿ ವಸೂಲ್ಮಾಡುತ್ತಾರೆಂಬುದಕ್ಕೆ ಮಿ॥ ಮಹಾರಾಜಾಯವರು ಹೇಳಿರುವ ಒಂದೆರಡು ವೃತ್ತಾಂತಗಳನ್ನು ಎತ್ತಿ ವಾಚಕರ ತಿಳುವಳಿಕೆಗೋಸ್ಕರ ಇಲ್ಲಿ ಪ್ರಕಟಿಸುವೆವು ಕಳೆದ 1882ನೇ ಜನವರಿಯಲ್ಲಿ ಒಬ್ಬನು 300 ರೂಪಾಯಿ ಸಾಲತೆಗೆದುಕೊಂಡದ್ದಕ್ಕೆ ಬಡ್ಡಿಸಹಿತ ಅವನ ಮೇಲೆ 8,000 ರೂಪಾಯಿಗೆ ಡಿಕ್ರಿ ಆಗಿದೆ ಈ ದಾವಾಮಾಡಿದ ಸಾಹುಕಾರನು 906ನೇ ಇಸವಿಯಲ್ಲಿ ಸಾಲಗಾರನಿಂದ ತನಗೆ ಬಡ್ಡಿ ಸಮೇತ 2,06,305 ರೂಪಾಯಿ ಬರಬೇಕಾಗಿದೆ ಎಂದು ದಾವಾ ಅರ್ಜಿಯಲ್ಲಿ ಬರೆದಿದ್ದನು ಇನ್ನೊಂದು ಮೊಕದ್ದಮೆಯಲ್ಲಿ ಒಬ್ಬ ಸಾಹುಕಾರನು 76 ರೂಪಾಯಿ ಸಾಲಕೊಟ್ಟು ಸಾಲಗಾರನ ಮೇಲೆ 1,000 ರೂಪಾಯಿಗೆ ಡಿಕ್ರಿ ಪಡೆದುಕೊಂಡನು ಮತ್ತೊಂದು ಮೊಕದ್ದಮೆಯಲ್ಲಿ ಸಾಲಗಾರನು 1,000 ರೂಪಾಯಿ ಸಾಲ ತೆಗೆದುಕೊಂಡದ್ದಕ್ಕೆ 17,000 ರೂಪಾಯಿ ಪಾವತಿಮಾಡಿ ಋಣಮುಕ್ತನಾಗಬೇಕಾಯಿತು ಇನ್ನೊಬ್ಬ ವರ್ತಕನು 300 ರೂಪಾಯಿ ಸಾಲಕೊಟ್ಟು, ಬಡ್ಡಿ ಸಮೇತ 10,154 ರೂಪಾಯಿಗೆ ದಾವಾಮಾಡಿ ಕೋರ್ಟಿನ ಖರ್ಚು ಸಮೇತ 10,453 ರೂಪಾಯಿಗೆ ಡಿಕ್ರಿ ಪಡೆದಿರುತ್ತಾನೆ 200 ರೂಪಾಯಿ ಸಾಲ ತೆಗೆದುಕೊಂಡ ಮತ್ತೊಬ್ಬ ಮನುಷ್ಯನು ಅದು ತೀರುವುದಕ್ಕೆ 3,000 ಚಿಲ್ಲರೆ ರೂಪಾಯಿ ಸಾಹುಕಾರನಿಗೆ ಕೊಟ್ಟು ಸಮಾಧಾನ ಪಡಿಸಬೇಕಾಯಿತು ಇನ್ನೊಂದು ಕಡೆ ಒಬ್ಬ ಸ್ಟೇಷನ್ ಮಾಸ್ಟರು 100 ರೂಪಾಯಿ ಸಾಲಪಡೆದು ಅದಕ್ಕೆ ೩ ಗಳಿಗೆ 25 ರೂಪಾಯಿಯಂತೆ ಬಡ್ಡಿಯನ್ನು ಕೆಲವು ವರುಷಗಳ ಕಾಲ ಪಾವತಿಮಾಡಿದನು ಕಡೆಗೂ ಅಸಲು 100 ರೂಪಾಯಿನ ಸಾಲ ಉಳಿದೇ ಇತ್ತು

ಶ್ರೀಕೃಷ್ಣರಾಜ ಕೃಷಿವಿದ್ಯಾಭಿವರ್ಧಕ ಸಮಾಜ, ಮೈಸೂರು

ಮರಗೆಣಸು—ಅದರ ಪೂರ್ವೋತ್ತರ

“ಆಪತ್ಕಾಲಕ್ಕಾದವನೇ ನಂಟ” ಎಂಬ ನಾಣ್ಣುಡಿಯು ಲೋಕಪ್ರಸಿದ್ಧವು. ಸೌಖ್ಯವಾಗಿರುವಾಗ ನಂಟರಿಷ್ಟರು ಗುಂಪುಗುಂಪಾಗಿ ಮನೆಗೆ ಬರುವರು, ಬಂಧುಮಿತ್ರರು ಆದರಿಸುವರು, ಇತರರು ಗೌರವಿಸುವರು. ಕಷ್ಟ ಸಂಭವಿಸಿದಾಗ ಎಲ್ಲರೂ ಕೈಬಿಡುವರು. ಹತ್ತಿರದ ನಂಟರು ಕೂಡ ಅನಾದರಣೆಯಿಂದ ಕಾಣುವರು. ಇಂಥಾ ಕಾಲದಲ್ಲಿ ಸಹಾಯ ಮಾಡುವವನು ಯಾವನೋ ಅವನನ್ನು ನಿಜವಾದ ಬಂಧುವೆಂದು ಭಾವಿಸಬೇಕು. ಅವನೇ ವಂದನಾರ್ಹನು. ಹೀಗೆಯೇ ಐಶ್ವರ್ಯವಿದ್ದರೆ ಮತ್ತು ರಾಷ್ಟ್ರದಲ್ಲಿ ಸುಭಿಕ್ಷವು ನೆಲಗೊಂಡಿದ್ದರೆ ಅಕ್ಕಿ, ರಾಗಿ, ಜೋಳ, ಗೋಧಿ ಮೊದಲಾದವುಗಳು ಮನೆಯಲ್ಲಿ ಬೇಕಾದಷ್ಟು ತುಂಬಿರುವವು. ಪಟ್ಟಣದಲ್ಲಿ ಮತ್ತು ಕ್ಷಾಮಕಾಲದಲ್ಲಿ ಇವು ನಂಟರಿಷ್ಟರಂತೆ ಎಲ್ಲಿಯೋ ಅಡಗಿಕೊಳ್ಳುವವು. ಕೆಲವು ಕಾಲಗಳಲ್ಲಿ ಎಷ್ಟು ಪ್ರಯತ್ನಪಟ್ಟಾಗ್ಯೂ ಇವುಗಳ ದರ್ಶನ ಕೂಡ ಲಭಿಸುವುದು ಕಷ್ಟವಾಗುತ್ತದೆ. ಇಂಥಾ ಕಷ್ಟಕಾಲದಲ್ಲಿ ನಿಜವಾದ ನಂಟನಂತೆ ಬಡಬಗ್ಗರಿಗೆ ಕೂಡ ಸಹಾಯಕಾರಿಯಾದ ಪದಾರ್ಥಗಳಲ್ಲಿ “ಮರಗೆಣಸು” ಒಂದಾಗಿದೆ. ಆದಕಾರಣ ಈ ಉತ್ತಮವಾದ ಆಹಾರ ಪದಾರ್ಥದ ವಿಚಾರವನ್ನು ಕುರಿತು ಕೊಂಚ ಯೋಚಿಸಿ ನೋಡೋಣ.

ಮರಗೆಣಸು ಬಡವರಿಗೆ ಅತ್ಯಂತ ಸಹಾಯಕಾರಿಯಾದ ಪದಾರ್ಥವಾಗಿದೆ. ತಿರುವಾಂಕೂರು ಸಂಸ್ಥಾನದಲ್ಲಿ ಇದರ ವ್ಯವಸಾಯಕ್ಕೆ ಅಸೆಕರು ಗಮನ ಕೊಟ್ಟಿರುವ ಕಾರಣ ಅಲ್ಲಿನ ದಾರಿದ್ರ್ಯವು ಇಲ್ಲಿನಂತೆಯೇ ಇದ್ದಾಗ್ಯೂ ಬಡವರು ನೆಮ್ಮದಿಯಾಗಿದ್ದಾರೆಂತ ತಿಳಿದುಬರುತ್ತದೆ. ಕ್ಷಾಮಕಾಲದಲ್ಲಿ ಇದರ ಉಪಯೋಗವು ಅತ್ಯಮೂಲ್ಯವೆಂದು ಹೇಳಬಹುದು. ಇದನ್ನು ಸುಲಭವಾಗಿ ಬೆಳೆಯಬಹುದು ಮತ್ತು ಇದರ ಗೆಡ್ಡೆಗಳು ಪುಷ್ಟಿಕರವಾದ ಆಹಾರವಾಗುತ್ತವೆ— ಹಿಂದುಸ್ಥಾನದ ಎಲ್ಲಾ ಪ್ರದೇಶಗಳಲ್ಲಿಯೂ, ಎಲ್ಲಾ ಕಾಲಗಳಲ್ಲಿಯೂ ಮರಗೆಣಸನ್ನು ಸುಲಭವಾಗಿ ಬೆಳೆಯಬಹುದು. ಆದರೆ ಮರಳು ಮಿಶ್ರವಾದ ಜಿಗುಟು ಭೂಮಿಯಲ್ಲಿ ಇದು ಒಳ್ಳೇ ಫಲವಾಗುತ್ತದೆ. ನೀರು ಕೇವಲ ಕಡಮೆಯಾದರೂ ಕೂಡ ಗೆಡ್ಡೆಯು ಚೆನ್ನಾಗಿ ಬೆಳೆದು ಸಮೃದ್ಧಿಯಾಗಿ ಎಳ್ಳುವುವು. ಆದರೆ ಶೀತಪ್ರದೇಶದಲ್ಲಿ ಗೆಡ್ಡೆಗಳು ಕೊಳೆತು ಹೋಗುವವು. ಜಮೀನನ್ನು ಸುಮಾರು ಒಂದು ಅಡಿ ಆಳ ಉತ್ತು, ಹದಗೊಳಿಸಬೇಕು. ಚೆನ್ನಾಗಿ ಬಲಿತ ಮರಗೆಣಸಿನ ದಂಟನ್ನು ಸುಮಾರು ಅರ್ಧ ಅಡಿ ಉದ್ದಕ್ಕೆ ತುಂಡುಮಾಡಿ ಕಟ್ಟೆ ಸಾಲುಸಾಲಾಗಿ ನೆಟ್ಟು ಮೇಲೆ ಮಣ್ಣು ಮುಚ್ಚಬೇಕು. ಪ್ರತಿಯೊಂದು ತುಂಡಿಗೂ, ಪ್ರತಿಯೊಂದು ಸಾಲಿಗೂ ಸುಮಾರು ನಾಲ್ಕು ಅಡಿಗಳ ಅಂತರವಿರಬೇಕು. ಸಸಿಗಳು ಬಲಿತು ರೆಂಬೆಗಳನ್ನು ಚೆನ್ನಾಗಿ ಬಿಡುವ ತನಕ ಕಳೆಯನ್ನು ತೆಗೆಯುತ್ತಿರಬೇಕು. ಗಿಡವು ಸುಮಾರು ೭ ಅಡಿಯ ಅಗಾಯ್ತು ೯ ಅಡಿ ಎತ್ತರ ಬೆಳೆಯುತ್ತದೆ. ಇದರ ದಂಟುಗಳಲ್ಲಿ ಗಂಟುಗಳಿರುತ್ತವೆ. ಗೆಡ್ಡೆಗಳು ಸುಮಾರು ಒಂದರಿಂದ ಮೂರು ಅಂಗುಲ ದಪ್ಪವಾಗಿಯೂ ಸಾಮಾನ್ಯವಾಗಿ ಒಂದು ಅಡಿ ಉದ್ದವಾಗಿಯೂ ಇರುವವು. ಬೇರುಗಳು ಅಗತೆಗೆ ಬರಬೇಕಾದರೆ ಸುಮಾರು ೯ ತಿಂಗಳ ಲಾಗಾಯ್ತು ೧೨ ತಿಂಗಳ ಕಾಲ ಹಿಡಿಯುವುದು. ಗೆಡ್ಡೆಗಳು ಕೊಂಚ ಹಳದಿ ಬಣ್ಣವುಳ್ಳವಾಗಿ ದಪ್ಪನಾಗಿರುತ್ತವೆ. ಇದರಲ್ಲಿ ಅನೇಕ ರೀತಿಗಳಾಗುತ್ತವೆ ಮತ್ತು ಇವು ದನಗಳಿಗೆ ಒಳ್ಳೇ ಮೇವಾಗುವುದು.—ಗೆಡ್ಡೆಗಳನ್ನು ಹಾಗೆಯೇ ಬೇಯಿಸಿ ಕೂಡಿದಬಹುದು. ಹಿಂಸಿ ಹಿಟ್ಟುಮಾಡಿ ಇತರ ಹಿಟ್ಟುಗಳೊಡನೆ ಬೆರಸಿ ತಿನ್ನಬಹುದು. ಈ ಹಿಟ್ಟು ರುಚಿಯಾಗಿಯೂ ಆರೋಗ್ಯಕರವಾಗಿಯೂ ಇರುತ್ತದೆ. ಗೆಡ್ಡೆಗಳು ಬಲಿತ ನಂತರ ಭೂಮಿಯಲ್ಲೇ ಬಿಟ್ಟರು ಮನಸ್ಸು ಬಂದಾಗ ಬೇಕಾದಷ್ಟು ತೆಗೆದುಕೊಂಡು ಉಪಯೋಗಿಸಬಹುದು. ಗೆಡ್ಡೆಗಳಿಗೆ ಗೆದ್ದಲು ಹಿಡಿಯುವುದಿಲ್ಲ. ಒಣಗಿದ ಗೆಡ್ಡೆಗಳನ್ನು ಒಂದು ವರ್ಷಕಾಲ ಇಟ್ಟಿರಬಹುದು.—ಅಗೆದ ನಂತರ ಗೆಡ್ಡೆಗಳನ್ನು ಚೆನ್ನಾಗಿ ತೊಳೆದು ಒಂದು ರಾತ್ರಿ ತಣ್ಣೀರಿನಲ್ಲಿ ನೆನೆಹಾಕಬೇಕು. ತರುವಾಯ ಅದರ ಮೇಲಿನ ಕಪ್ಪುಬಣ್ಣದ ಸಿಪ್ಪೆಯನ್ನು ಸುಲಿದು ಒಳಗಿನ ಗೆಡ್ಡೆಯನ್ನು ಕತ್ತರಿಸಿ ತೊಳೆದು ಬಿಸಿಲಿಗೆ ಹಾಕಬೇಕು. ಆ ಹಿಟ್ಟನ್ನು ಬಟ್ಟೆಯಲ್ಲಿ ಹಿಂಡಿ ಕೆಟ್ಟ ನೀರನ್ನು ತೆಗೆಯಬೇಕು. ನಂತರ ತೊಳೆದು ಕಾಯಿಸಿ ಹಿಟ್ಟನ್ನು ಉಪಯೋಗಿಸಬೇಕು. ಇದು ಸುಲಭವಾದ ಮತ್ತು ಒಳ್ಳೇ ಆಹಾರವಾದದ್ದರಿಂದ ನಮ್ಮ ದೇಶದಲ್ಲಿ ಇದನ್ನು ಬೆಳೆದರೆ ಬಡವರಿಗೆ ತುಂಬಾ ಅನುಕೂಲವಾಗುವುದು.

ಎಸ್. ವಿ. ನಾರಾಯಣರಾವ್, ಸಾತನೂರು

ಬಾತ್ಮಿದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ಪತ್ರಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು. ಅಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಪಿ. ಕೆ., ದೊಡ್ಡಬಳ್ಳಾಪುರ—ನೀವು ಆಸ್ಪತ್ರೆ ಡಾಕ್ಟರ ವಿಷಯದಲ್ಲಿ ಮಾಡಿರುವ ಆಕ್ಷೇಪಣೆಗಳನ್ನು ಮೊದಲು ಸೀನಿಯರ್ ಸರ್ಜನ್‌ರವರಿಗೆ ಅರ್ಜಿಯ ಮೂಲಕ ತಿಳಿಸಿದರೆ ಅವರು ತನಿಖೆಯಿಂದ ಸರಿಪಡಿಸುತ್ತಾರೆ.

ಎಸ್. ಚನ್ನೇಗೌಡ, ಬೈರನಾಯಕನಹಳ್ಳಿ—ಈ ಬಾತ್ಮಿಯಲ್ಲಿ ವರ್ತಮಾನ ಗಳೇನೂ ಕಂಡುಬರುವುದಿಲ್ಲ.

—ಎಡಿ.]

ಕರೆಸ್ಪಾಂಡೆನ್ಸ್.

ಉಪಾಧ್ಯಾಯರಿಗೆ ಪ್ರೋತ್ಸಾಹವು

ಅಯ್ಯಾ,

ಚಳ್ಳಕೆರೆ ತಾಲ್ಲೂಕು ತಳುಕು ಎಂಬ ಗ್ರಾಮದ ಎಲಿಮೆಂಟರಿ ವರ್ನಾಕ್ಯುಲರ್ ಸ್ಕೂಲಿನಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರವರ ಹುಕುಂ ಪ್ರಕಾರ ಪ್ರತಿ ತಿಂಗಳ ೨ನೆಯ ಭಾನುವಾರ ಮೀಟಿಂಗ್ ನಡಿಸಲ್ಪಡುತ್ತದೆ. ಈ ಕಮಿಟಿಗೆ ಪೂರ್ಣ ಪ್ರೋತ್ಸಾಹಕರಾಗಿ ಈ ಸಮ್ಮತು ರೇಂಜ್ ಮ॥ ಕೆ. ಕೃಷ್ಣರಾಯರು ಸಮ್ಮತಿಸಿ, ಬಂದ ಮಾಸ್ಟರುಗಳಿಗೆಲ್ಲಾ ಆ ದಿನವೇ ತಲಬುಗಳನ್ನು ಬಟವಾಡೆ ಮಾಡುತ್ತಾ ಇದ್ದಾರೆ. ಇನ್ನೊಂದು ಈ ಮಳೆಗಾಲದಲ್ಲಿ ಮಾಸ್ಟರುಗಳಿಗೆಲ್ಲಾ ತುಂಬ ಸಹಾಯವಾಗಿರುತ್ತದೆ. ಅಲ್ಲದೆ ಪರಸ್ಥಳದಿಂದ ಬರುವ ಬ್ರಾಹ್ಮಣ ಮಾಸ್ಟರುಗಳ ಭೋಜನಾದ್ಯುಪಚಾರಗಳಿಗೆ ಅನುವೂ ಮಾಡುತ್ತಾರೆ. ಈ ಉಪಚಾರವು ಚಿರಸ್ಮರಣೀಯವಾಗಿದೆ. ಮತ್ತು ಬ್ರಾಹ್ಮಣೇತರರಿಗೆ ಈ ಗ್ರಾಮದ ಸಾಹುಕಾರ್ ಪುಟ್ಟಪ್ಪನವರು ಆತಿಥ್ಯವನ್ನು ನಡಿಸುತ್ತಾರೆ. ಇವರ ಉದಾರಗುಣವು ಸ್ತೋತ್ರಾರ್ಹವಾಗಿದೆ. ಇದಲ್ಲದೆ ಬಂದಂಥಾ ಒಬ್ಬೊಬ್ಬ ಮಾಸ್ಟರಿಂದ ಒಂದೊಂದು ತಿಂಗಳಲ್ಲಿ ಒಂದೊಂದು ಪಾಠದ ವಿಷಯವು ಉಪನ್ಯಾಸಮಾಡಿಸಲ್ಪಡುತ್ತದೆ. ಇದರಿಂದ ಎಲ್ಲಾ ಮಾಸ್ಟರುಗಳೂ ತಮ್ಮ ತಮ್ಮ ಬೋಧನಾ ಶಕ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಅನುಕೂಲವಾಗಿದೆ. ಈ ವಿಷಯಗಳನ್ನು ನೋಡುವಲ್ಲಿ ವಿದ್ಯಾಭ್ಯಾಸದ ಇಲಾಖೆಯಲ್ಲಿ ಈ ಡಿಸ್ಟ್ರಿಕ್ಟಿಗೆ ದಯಮಾಡಿಸಿರುವ ಮಹನೀಯರಾದ ಡೆಪ್ಯುಟಿ ಇನ್‌ಸ್ಪೆಕ್ಟರ್ ಎಂ. ಎ. ಕೆ. ತಿರುಮಲಾಚಾರ್ಯರ ಪ್ರೋತ್ಸಾಹವು ಮಾಸ್ಟರುಗಳ ಪುರೋಭಿವೃದ್ಧಿಗೆ ಮೂಲಕಾರಣವಾಗಿದೆ.

ಜಿ. ಸ. ರ.

ಕ್ರೂರ ಕೊಲೆಗಳು

ಅಯ್ಯಾ,

ನಂಜನಗೂಡಿಗೆ ಆರು ಮೈಲಿ ದೂರದಲ್ಲಿರುವ ಮೈಸೂರಿಗೆ ಸೇರಿದ ಗ್ರಾಮವಾದ ಆಯರಹಳ್ಳಿ ಎಂಬ ಗ್ರಾಮದಲ್ಲಿ ಎತ್ತಿನ ವ್ಯಾಪಾರಿಗಳಾದ ಇಬ್ಬರು ಸಾಹುಕಾರರನ್ನು ದಳ್ಳಾಳಿಗಳೋ, ಅಥವಾ ಆಯರಹಳ್ಳಿಗೆ ಸಮೀಪದ ಗ್ರಾಮಗಳಾದ ಹೊಸಕೋಟೆ, ಆಲತ್ತೂರು ಮುಂತಾದ ಗ್ರಾಮಗಳಲ್ಲಿ ಸೇರುತ್ತಿರುವ ಜೂಜುಗಾರರೋ ಇಲ್ಲವೇ ಇನಾವ ಮಹಾಪಾತಕಿಗಳೋ ಬಹು ಕ್ರೂರವಾಗಿ ಕೊಂದುಹಾಕಿ ಅವರಲ್ಲಿದ್ದ ಬಹುಮೂಲ್ಯವಾದ ಎರಡು ಮೂರು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಪುನಾತ್ತರೆಸಿಕೊಂಡಿರಬಹುದು. ಈ ಕೊಲೆಗಳು ನಡೆದ ೬ (?) ದಿನಗಳ ನಂತರ ಹೆಣಗಳನ್ನು ಹದ್ದು ಕಾಗೆಗಳು ತಿನ್ನುತ್ತಿದ್ದಾಗ ಸರ್ಕಾರಕ್ಕೆ ತಿಳಿಯಬಂದಿತಂತೆ. ಆ ಹೆಣಗಳ ಸ್ಥಿತಿಯನ್ನೂ ಅವರ ಕೋಟು, ಟವಾಲು ಮೊದಲಾದ ಅವರ ವಸ್ತುಗಳನ್ನೂ ನೋಡಿದವರು ಮರುಗುತ್ತಾರೆ. ಇಂಥಾ ಕಗ್ಗೊಲೆಗಳನ್ನು ದೇವರು ಯಾವ ರೀತಿಯಲ್ಲಿ ಎಳೆದು ದಂಡಿಸುತ್ತಾನೋ ಆತನಿಗೆ ಗೊತ್ತು. ಇಂಥ ಕ್ರೂರ ಕೊಲೆಗಳು ನಂಜನಗೂಡಿನಲ್ಲಿ ಪದೇ ಪದೇ ನಡೆಯುತ್ತಿವೆ. ಇವೆ ಈಗ ಹಾದಿಯ ಲಂಚಗಳನ್ನು ಇವರ ಸಾಧನೆಗಳೆಂದು ನೆನಸುತ್ತಾರೆ. ಇತ್ತ ರೋಗಿ, ಕುಷ್ಠರೋಗಿಗಳನ್ನೂ ತೊಪ್ಪುಹಿಡಿದವರನ್ನೂ ಹೊಡೆಯುವ ಪಲೇಗು ಬಾರದೆ ನಿಂತರೆ ಎಂದು ಹೇಳಿಕೊಂಡು ಜನಗಳು ೫-೬ ತಿಂಗಳುಗಳಿಂದ ಕೆಲವು ಗ್ರಾಮಗಳಲ್ಲಿ ಹುಟ್ಟಿದ್ದ ಕೆಲವು ರೋಗಗಳನ್ನು ಶಸ್ತ್ರ ಹೊಳೆಯಲ್ಲಿ ಸಾಗಬಿಟ್ಟರಂತೆ. ಇನ್ನು ಕೆಲವನು ಕೇಳಸುವ ಪ್ರಯತ್ನದಲ್ಲಿದ್ದಾರಂತೆ. ಇಂಥಾ ಅಜ್ಞಾನ, ಮೌಢ್ಯಗಳಲ್ಲಿ ತುಂಬಿರುವ ಜನಗಳಿಗಾಗಿ ದೇವರು ದಾರಿದ ಮೇಲೆ ಮಳೆ ಸುರಿಸಿದಾಗ್ಯೂ ಇನ್ನಾವ ವಿಧದ ಪಾಪಗಳನ್ನು ಕಳುಹಿದಾಗ ಬೇಡವೆಂದು ಹೇಳಬಹುದೇ.

ಆಗ್ರಹಪೂರಿತ

ಇದು ಯಾವ ನ್ಯಾಯ?

ಅಯ್ಯಾ,

ಸರ್ಕಾರದವರು ಅಲ್ಲಲ್ಲಿ ಮುಸಾಫರ ಛತ್ರಗಳನ್ನು ಕಟ್ಟಿ, ನೀರಿಗೋಸ್ಕರ ಭಾವಿಗಳನ್ನು ತೆಗಿಸಿ ನೀರು ಸೇದಲು ಹಗ ಕೊಡ ತಂದಿಗೆ ಅಡಿಗೆಮಾಡಿಕೊಳ್ಳಲು ತಪ್ಪಲೆ ಮುಂತಾದುವುಗಳನ್ನು ಇಡಿಸಿ ದೂರದಿಂದ ಬಂದ ಪ್ರಯಾಣಿಕರಿಗೋಸ್ಕರ ಸರಬರಾಯಿಮಾಡುವುದಕ್ಕಾಗಿ ಒಬ್ಬೊಬ್ಬ ಕೊತವಾಲ (ವಾಚ್‌ಮನ್) ನನ್ನು ಸಂಬಳ ಗೊತ್ತುಮಾಡಿ ಇಟ್ಟು ಅವರಿಗೆ ಬಿಡಾರವನ್ನು ಪ್ರತ್ಯೇಕ ಏರ್ಪಡಿಸಿ ಕೊಟ್ಟಿರುತ್ತಾರೆ. ಇಂಥಾ ಏರ್ಪಾಡು ಇಟ್ಟಿರುವ ದಯಾಳು ಸರ್ಕಾರದವರನ್ನು ಎಷ್ಟು ಕೊಂಡಾಡಿದರೂ ಸಾಲದು.

ನಾನು ಚಿತ್ರದುರ್ಗದ ಪ್ರಾಂತ್ಯ ರೋಡಿನಿಂದ ಹೊಳಲ್ಕೆರೆ ರೈಲ್ವೆ ಸ್ಟೇಷನ್‌ಗೆ ಬೆಂಗಳೂರು ಕಡೆ ರೈಲಿಗೆ ಪ್ರಯಾಣಮಾಡಲು ದಾರಿ ನಡೆದು ಬಹಳ ದಣಿದು ನೀರಡಿಕೆ ಮತ್ತು ಕ್ಷುದ್ಬಾಧೆಯಿಂದ ಕಂಗೆಟ್ಟು ಬಂದು ಹೊಳಲ್ಕೆರೆ ರೈಲು ಬಳಿ ಇರುವ ಸರ್ಕಾರಿ ಛತ್ರದ ಕಾವಲಗಾರನಿಂದ ನೀರಸ ನೀರನ್ನು ಸೇದುವ ಕೊಡವು ದಯಮಾಡಿಸಿಕೊಳ್ಳಲು ಕೊಡವನ್ನು ಕೇಳಿದ್ದಕ್ಕೆ ಕೊಡದೆಹೋದರು. ನಾನು ಅವರಿಗೆ ಕೂಡ ಅಥವಾ ಒಂದು ತಂಬಿಗೆಗೋಸ್ಕರ ಕೇಳಿದರೂ ಬಹಳವಾಗಿ ದೀನದಿಂದ ಬೇಡಿಕೊಂಡೆನು. ನನ್ನ ಬೇಡುವಿಕೆಯೂ ನಿಷ್ಪ್ರಯೋಜನವಾಯ್ತು.

ಗೌರ್ನಮೆಂಟ್ ಅಧಿಕಾರಸ್ಥರು ಪ್ರಯಾಣ ಮಾಡುವಾಗ ಕೊಡುವ ಅರು ಬಡವಾಗಿ ಕಾಣುವದು. ಬಡ ಪ್ರಯಾಣಿಕರು ಬಡವರು ಬಂದಿಗೆ ಕೊಡ ಮುಂತಾದ್ದು ನನಗೋಸ್ಕರ ಸರ್ಕಾರದವರು ಕೊಟ್ಟಿಲ್ಲ. ಇಲಾಖೆಯವರಿಗಾಗಿ ಕೊಟ್ಟಿರುತ್ತಾರೆ ಎಂದು ನಿರಾಕರಿಸಿ ಅವರನ್ನು ಛತ್ರದಲ್ಲಿ ಕೂರುವುದಕ್ಕೂ ಸಹ ಅವಕಾಶ ಕೊಡುವುದಿಲ್ಲ. ತಮಗಾಗಿ ಬೇರೆ ಬಿಡಾರ ನಿಯಮಿಸಿದ್ದರೂ ಛತ್ರವೇ ಸ್ವಂತವೆಂದು ಭಾವಿಸಿಕೊಂಡು ಅದರಲ್ಲಿಯೇ ಇರುವರು. ಈ ರೀತಿ ಅನ್ಯಾಯ ನಡೆಯುವುದನ್ನು ವಿಚಾರಿಸಿ ಅಧಿಕಾರಸ್ಥರು ಬಡಪ್ರಯಾಣಿಕರಿಗೆ ಸಂಭವಿಸುವ ತೊಂದರೆಗಳನ್ನು ನಿವಾರಿಸಿ ಕೀರ್ತಿ ಪಡೆಯಬೇಕೆಂದು ಪ್ರಾರ್ಥಿಸುವ

ಪ್ರಜಾಹಿತಚಿಂತಕ

ಶ್ರೀರಂಗಪಟ್ಟಣದ ವರ್ತಮಾನಗಳು

ಅಯ್ಯಾ,

ಕಾರ್ಪೊರೇಷನ್ ಬಿಲ್ಡಿಂಗಿಗಾಗಿ ಪ್ರಜೆಗಳಿಂದ ಸುಮಾರು ೩,೦೦೦ ರೂಪಾಯಿ ವಸೂಲಾಗಿರುತ್ತದೆ. ಸರ್ಕಾರದಿಂದ ೩,೦೦೦ (?) ರೂಪಾಯಿ ಮಂಜೂರಾಗಿರುತ್ತದೆ. ಪ್ರಜೆಗಳಿಂದ ಚುನಾಯಿಸಲ್ಪಟ್ಟ ಕಮಿಟಿಯ ಮೆಂಬರುಗಳ ಅನುಮತಿಯಿಂದ ಕೆಲಸ ನಡೆಸುತ್ತಿದ್ದರೆ ಅಮಲ್ದಾರ್ರ ಮೇಲೆ ಆಕ್ಷೇಪಣೆಗೆ ಅವಕಾಶವಾಗುತ್ತಿರಲಿಲ್ಲ. ಅಮಲ್ದಾರ್ರು ಮತ್ತು ಅವರ ತಾಬೇದಾರರೂ ಸೇರಿ ಸ್ವತಂತ್ರಿಸಿ ಕೆಲಸಕ್ಕೆ ಉಪಕ್ರಮ ಮಾಡಿದ್ದರಿಂದ ಚಂದಾದಾರರುಗಳಿಗೆ ಅನುಮಾನವೂ, ಕಮಿಟಿಯ ಮೆಂಬರುಗಳಿಗೆ ಅಸಮಾಧಾನವೂ ಉಂಟಾಗಲು ಕಾರಣವಾಯ್ತು. ಈಚೆಗೆ ಈ ಕೆಲಸವನ್ನು ಕಂಟ್ರಾಕ್ಟರುಗಳಿಗೆ ವಹಿಸಿದರೆಂದು ಕೇಳುತ್ತೇವೆ. ಆದರೆ ಇದರ ಮ್ಯಾನೇಜ್‌ಮೆಂಟನ್ನು ಇಂಜನಿಯರ್ ಇಲಾಖೆಗೆ ವಹಿಸಿಬಿಟ್ಟರೆ ಯಾವ ಗಲಾಟೆಗೂ ಅವಕಾಶವಾಗದೆ ಕಟ್ಟಡವು ಜಾಗ್ರತೆಯಲ್ಲಿ ಪೂರ್ತಿಯಾಗುವುದೆಂಬ ನಂಬಿಕೆ ಇರುತ್ತದೆ.

ಕೊಡಿಯಾಲದಲ್ಲಿ ಕೆಲವರಿಗೆ ಮನೆ ಜಾಗಗಳನ್ನು ಕೊಟ್ಟು ಅದನ್ನು ಪುನಃ ಹಿಂದಕ್ಕೆ ತೆಗೆದುಕೊಂಡರೆಂದು ತಿಳಿಯಬರುತ್ತದೆ. ಇದನ್ನು ಡೆಪ್ಯುಟಿ ಕಮಿಷನರವರು ಖುದ್ದು ತನಿಖೆಮಾಡುವರೆಂದು ನಂಬಿದ್ದೇವೆ. ಅಮಲ್ದಾರ್ರು ಕಕ್ಷಿಗಾರರನ್ನು ತಮ್ಮ ಮನೆ ಒಳ ಆವರಣದಂತೆ ನೋಡಿಕೊಳ್ಳುವುದು ಉತ್ತಮ. ಈ ವಿಚಾರಣೆಯ ಈಗಿನ ಸ್ಥಿತಿಯನ್ನು ನೋಡಿದರೆ ಅಮಲ್ದಾರ್ರು ನ್ಯಾಯವಾದ ಗಮನ ಕೊಡುವರೆಂದು ತೋರುವುದಿಲ್ಲ. ಕ್ರಿಮಿನಲ್ ಕೇಸುಗಳು ೧೦ ತಿಂಗಳು ೬ ತಿಂಗಳಾದರೂ ತೀರ್ಮಾನವಾಗುತ್ತಿಲ್ಲ. ಚೀಫ್ ಕೋರ್ಟಿನವರು ಮಾಡಿರುವ ಕೇಸುಗಳನ್ನು ಅತಿ ಧರ್ಮಾಗದ ರೀತಿ ಪಾರ್ಟಿಗಳಿಗೆ ಕಷ್ಟಗಳಾಗುವಂತೆ ಮಾಡಿಕೊಂಡರೆಂದು ಕೇಳುತ್ತೇವೆ. ಈ ಕೇಸಿನಲ್ಲಿ ನಡೆದಿರುವ ಅಂಶಗಳನ್ನು ಮುಂದಿನ ಸಂಚಿಕೆಯಲ್ಲಿ ತಿಳಿಸುತ್ತೇವೆ. ಅಲ್ಲಾ ಪಟ್ಟದ ಕೇಸು ೩ ತಿಂಗಳಾದರೂ ತೀರ್ಮಾನವಾಗಿಲ್ಲ. ರಾತ್ರಿ ೯ ಗಂಟೆಯವರೆಗೆ ಕಚೇರಿಯನ್ನು ಮಾಡುತ್ತಿರುತ್ತಾರೆ. ಬದನೇಕರರು ಪ್ರಾತಃಕಾಲ ೭ ಘಂಟೆಯಿಂದ ೧೦ ಗಂಟೆಯವರೆಗೂ, ೧೧ ಗಂಟೆಯಿಂದ ರಾತ್ರಿ ೯ ಗಂಟೆಯವರೆಗೂ ಕಚೇರಿ ಕೆಲಸವನ್ನು ಮಾಡುತ್ತಿದ್ದರೆ ಇವರ ಹೊಂದಿರುವುದಕ್ಕೆ ಸ್ಥಾನವಿಲ್ಲ. ಕಕ್ಷಿಗಾರರು ವಕೀಲರುಗಳನ್ನು ಇತರ ಕೋರ್ಟಿನಲ್ಲಿ ವರ್ತಮಾನ ಕೊಂಡೂ, ಮಾಡಿಕೊಳ್ಳುತ್ತಲೂ ಇದ್ದಾರೆ. ತಾಲ್ಲೂಕು ಸಾಹಿಟರಿ ಇನ್‌ಸ್ಪೆಕ್ಟರನ್ನು ಹಳ್ಳಿಗಾಡಿಗೆ ಹೋಗದೆ ಪಟ್ಟಣದಲ್ಲಿಯೇ ಕಳುಹಿಸಬೇಕೆಂದು ಡೆಪ್ಯುಟಿ ಕಮಿಷನರವರಿಂದ ಆರ್ಡರು ಬಂದು ಇದುವರೆವಿಗೂ ಇಂಗಳಾದರೂ ಯಾವ ಕಾರಣದಿಂದಲೋ ಗೌರ್ನಮೆಂಟ್ ಆರ್ಡರನ್ನು ಅವರಿಗೆ ಜಾರಿಗೆ ತಾತ್ಸಾರಮಾಡುತ್ತಾರೆ.

ಪ್ರವಾಸಿ

ತಾಲ್ಲೋಕು ವರ್ತಮಾನಗಳು

ಕೃಷ್ಣರಾಜಪೇಟೆ:—ಈ ತಾಲ್ಲೂಕಿಗೆ ಸೇರಿದ ಕೆಲಂಚದ ಹೊನ್ನೇಗೌಡಯ್ಯನು ಬಹಳ ವಿಜೃಂಭಣೆಯಾಗಿ ತನ್ನ ಮಗ ಪುಟ್ಟಯ್ಯನಿಗೆ ಮದುವೆ ಮಾಡಿದನು. ಸುಮಾರಾಗಿ ೬ ಸಾವಿರ ಜನರು ಊಟಮಾಡಿದರು. ಬಡವರಿಗೆ ಬಟ್ಟೆಗಳನ್ನು ಹಂಚಿಕೊಟ್ಟನು. ಮುಖ್ಯವಾಗಿ ಈತನು ಬಡವರ ಆಧಾರಯ್ಯ. ಒಕ್ಕಲಿಗರ ಜಾತಿಯಲ್ಲಿ ಈ ಸುತ್ತುಮುತ್ತ ಹಳ್ಳಿಗಳಿಗಿಂತ ಸೊಗಸು ಮಾಡಿದನು.—ಈ ಊರಿನಲ್ಲಿ ಕುಡಿಯುವುದಕ್ಕೆ ನೀರಿಲ್ಲದೆ ಸ್ವಲ್ಪ ತೊಂದರೆಯಾಗಿದೆ. ಊರಿಗೆ ಒಂದು ಫರ್ಲಾಂಗ್ ದೂರದಲ್ಲಿರುವ ಬಾವಿಯಿಂದ ನೀರು ಸೇದಿಕೊಂಡು ತರಬೇಕು. ಆದರಿಂದ ಸರ್ಕಾರದವರು ಈ ಊರಿಗೆ ಒಂದು ಕೊಳವೆ ಬಾವಿ ಕಟ್ಟಿಸಿಕೊಟ್ಟರೆ ತುಂಬಾ ಕ್ಷೇಮವಾದೀತು.

ಮಾಲೂರು ತಾಲ್ಲೂಕು:—ಈಗ ಇಲ್ಲಿ ಬಿಸಿಲಿನ ತಾಪವು ಹೆಚ್ಚಾಗಿ ಆದರೆ ಒಂದೆರಡು ದಿನಗಳಿಂದ ಮೋಡವಾಗುತ್ತಾ ಆಗಾಗ್ಗೆ ಅಲ್ಪಸ್ವಲ್ಪ ಮಳೆ ಬೀಳುತ್ತಿದೆ. ಜನರು ಆಗಲೇ ಹೊಲಗಳನ್ನು ಉಳುವ ಕೆಲಸದಲ್ಲಿದ್ದಾರೆ. ಈ ಊರಿಗೆ ಕಳೆದ ತಾ. ೧೭ನೇ ಗುರುವಾರ ಮಹಾಶೋಭೆಯ ಗಂಗಾಸ್ನಾನ ಪಟ್ಟ ಸ್ವಾಮಿಗಳವರು ದಯಮಾಡಿ ಅನೇಕ ಕಡೆಯ ಜನರಿಗೆ ಉಪದೇಶ ನೀಡಿ, ಶೀಕಬಾಳ್ರ ಪಟೇಲ್ ಶ್ಯಾಮಣ್ಣನವರು ವರ್ತಕ ಜನರು ಸೇರಿ ಬಹಳ ಭಕ್ತಿಯುಳ್ಳವರೊಡನೆ ಸ್ವಾಮಿಗಳವರ ಸಂದರ್ಶನವನ್ನು ಮಾಡಿಕೊಂಡು ಗ್ರಾಮದ ಉತ್ಸವವನ್ನು ಮಾಡಿಕೊಂಡು ವೈಶ್ಯಸಹೋದರರ ಮನೆಗೆ ಕರೆದುಕೊಂಡು ಬಂದು ಪಾದಪೂಜೆ ಬಿಕ್ಷೆಯನ್ನು ಪಡೆದರು. ಸುರಭಿವಾಸ ಬೇರೆ ಸ್ವಾಮಿಗಳವರು ಮಾರ್ಗ ಪ್ರಯಾಣವನ್ನು ಬೆಳಸಿದರು. ಈ ಊರು ಬಹು ಬಾರಿ ಗ್ರಾಮವಾಗಿಯೂ ಹೆಸರುವಾಸಿಯುಳ್ಳದ್ದಾಗಿಯೂ ಇದ್ದು ಒಂದು ಆಸ್ಪತ್ರೆ ಇಲ್ಲದೆ ಕಷ್ಟವಾಗಿದೆ. ಅದನ್ನು ಸರ್ಕಾರದವರು ಒದಗಿಸಿಕೊಟ್ಟರೆ ಇಲ್ಲಿ ಜನಗಳಿಗೆ ಬಹಳ ಉಪಕಾರವಾಗಿರುತ್ತದೆ.

ಕಡೂರು:—ಈ ಊರಿನಲ್ಲಿ ಕಾಲರಾ ಪ್ರಾರಂಭವಾಗಿ ೧೦-೧೨ ದಿವಸವಾಯ್ತು. ಆ ಲಾಗಾಯ್ತು ಸುಮಾರು ೩೦-೪೦ ಜನಗಳು ತೀರಿಹೋದರು. ನಮ್ಮ ಅಮಲ್ದಾರ್ರವರ ಕುಟುಂಬಕ್ಕೆ ಇದೇ ಬಾಯಿತು. ಆಗತ್ತು ಪ್ರೈವೇಟ್ ಆಫೀಸರವರೂ ಅಗ್ನಿ. ಈ ಆಸ್ಪತ್ರೆ ಭಾರ್ಜನಲ್ಲಿದ್ದ ಡಾಕ್ಟರು ಗುರುವಾಯರ ಚಿಕಿತ್ಸೆ ಮಾಡಿದ್ದರಿಂದ ಗುಣಮುಖನಾಗಿ ಆರೋಗ್ಯವಾಗಿರುವುದು ಸಂತೋಷಪ್ರದವಾಗಿದೆ. ಆದರೆ ಬಡವರಿಗೆ ಈ ವಿಧವಾದ ನಗಾವಣೆ ಬೀಳದೆ ತಕ್ಕ ಇಲಾಜು ಇಲ್ಲದೆ ಅಕಾಲಮರಣವನ್ನು ಹೊಂದುತ್ತಿದ್ದಾರೆ. ಅಧಿಕಾರಿಗಳು ಬಡವರ ಯೋಗಕ್ಷೇಮವನ್ನೂ ವಿಚಾರಣೆಮಾಡಿದರೆ ಅದೇ ಸಹಾಯ. ಈ ಊರಿನಲ್ಲಿ ಈಗ ೧೧ ತಿಂಗಳಿಂದ ಪೋಲೀಸ್ ಸ್ಟೇಷನುಗಳಿಗೆ ಇರುವ ನೀರಿನ ಅನಾನುಕೂಲ ಹೇಳತೀರದು. ಬಾವಿಗಳೆಲ್ಲಾ ಕೆಟ್ಟುಹೋಗಿವೆ. ಹೊಂದಿಸ್ತಾ ನಾವುದಾಗಿದೆ. ರಾತ್ರಿ ಹಗಲೂ ಹೆಂಗಸರು ಮಕ್ಕಳು ನೀರಿಗಾಗಿ ಪಡುತ್ತಿರುವ ಶ್ರಮವನ್ನು ಅಧಿಕಾರಿಗಳು ನೋಡಿ ಸುಮ್ಮನಿರುವುದು ಯಾಕೋ ತಿಳಿಯದು. ಈ ಬಾಗದಲ್ಲಿ ಅಧಿಕಾರಿಗಳು ಮುತುವರ್ಜಿವಹಿಸಿ ಅನುಕೂಲಪಡಿಸುತ್ತಾರಾಗಿ ನಂಬಿದೆ.— ಈ ಊರಿನ ಕೋಆಪರೇಟಿವ್ ಸೊಸೈಟಿ ರಿಜಿಸ್ಟ್ರಾರವರು ದಯಮಾಡಿ ಒಂದು ಮೀಟಿಂಗನ್ನು ಏರ್ಪಡಿಸಿ ಇದಕ್ಕೆ ತಾಲ್ಲೂಕು ಶಿರಸ್ತೇದಾರ್ರವರು ಸೆಕ್ರೆಟರಿ ಆಗಿರತಕ್ಕದ್ದೆಂದು ವಿಧಾಯಕವಾಯ್ತು. ಈಚೆಗೆ ಒಂದೆರಡು ಕಂತು ಷೇರು ಹಣ ವಸೂಲಾಯ್ತು. ಈಗ ೧೬ ತಿಂಗಳಿಂದಲೂ ವರ್ತಮಾನವಾಗಿರುವ ತಾರೀಖು ತಿಳಿಯಲಿಲ್ಲ. ಇದಕ್ಕೆ ಈಗಲಾದರೂ ನಮ್ಮ ಶಿರಸ್ತೇದಾರ್ರು ಮುತುವರ್ಜಿ ವಹಿಸುವರೆಂಬುದಾಗಿ ನಂಬಿದೆ.

ದೊಡ್ಡಬಳ್ಳಾಪುರ:—ಇಲ್ಲಿ ಮಳೆ ಇಲ್ಲದೆ ಬಿಸಿಲಿನ ತಾಪವು ಜಾಸ್ತಿಯಾಗಿ ಇತ್ತು. ನೆನ್ನೆ ಬುಧವಾರ ಮತ್ತು ಆ ಹಿಂದೆ ಸ್ವಲ್ಪ ಮಳೆಯಾಯ್ತು. ಈ ಸ್ವಲ್ಪ ಮಳೆಯು ಬಸೆಯಿಂದ ತಾಪ ಜಾಸ್ತಿಯಾಗಿ ಬೇಳು, ಹಾವಿನ ಆವಾಂತರ ಹೆಚ್ಚಿರುತ್ತದೆ. ತಾ. ೧೧ನೇ ಭಾನುವಾರ ಇದೇ ಊರು ಆಗಸಾತಿ ಮಲ್ಲಾಚಾರಿ ಸೊಸೆ ದಾಕ್ಷಾಯಣಮ್ಮನೆಂಬುವಳು ಮಲಗಿದ್ದ ಜಾಗದಲ್ಲಿ ಬೆಳಗ್ಗೆ ಸುಮಾರು ೫ ಘಂಟೆ ಸಮಯದಲ್ಲಿ ಹಾವು ಕಡಿಯಿತು. ತತ್ತಲೆಯಾದ್ದರಿಂದ ದೀಪ ಹಚ್ಚಿ ನೋಡುವಲ್ಲಿ ಅದು ಒಂದು ಬಿಲಕ್ಕೆ ಅರ್ಧಭಾಗ ಹೋಗಿತ್ತಾಗಿ ಅದು ಇಂಥಾ ಹಾವೆನ್ನುವದು ಗೊತ್ತಾಗಲಿಲ್ಲ. ಏನೋ ವಿಷದಿಯನ್ನು ಕೊಡಿಸಿದರು. ಆ ಮೇಲೆ ಡಾಕ್ಟರವರನ್ನು ಕರೆದುಕೊಂಡು ಬಂದು ತೋರಿಸುವಲ್ಲಿ ಅವರು ಧೈರ್ಯ ಹೇಳಿ ಏನೋ ಮಗುವಿಗೆ ಹಾಕಿ ಅಲ್ಲಿ ಯಾವುದೋ ಒಂದು ಮಣೆಯನ್ನು ಅಂಟಿಸಿ ಕೊಟ್ಟು ಇನ್ನು ಸುಖವಾಗುತ್ತೆ ಎಂದು ಹೇಳಿ ಹೊರಟುಹೋದರು

ಅವನು ಹೊರಟುಹೋದ 1 ಘಂಟೆ ಒಳಗಾಗಿ ಅವಳು ಮೃತಳಾದಳು. ನಡುಕ ಳನು ಮೃತಪಟ್ಟಳು. —ಆ ಗಲಾಟೆಯಲ್ಲಿ ಅಗಸಾಲೆಯವರೆಲ್ಲಾ ಓಡಾಡುತ್ತಿ ದ್ದಾಗ ಇನ್ನೂರು ಬೇಸನದಲ್ಲಿ ಆಕ್ಕನ ಮಗುಗಸು ಅಗಸಾಲೆ ಕರಿವೀರಾ ಚಾರಿ ಎಂಬುವನ ಮನೆಗ ಬಂದು ಅಸ್ಕೋಗನ ಅಂಗಡಿಯಲ್ಲಿ ಇಟ್ಟಿದ್ದ ಬೆಲೆಯ 40-41 ರೂಪಾಯಿ ತೂಕದ ಬೆಳ್ಳಿ ಗಟ್ಟಿಯನ್ನು ಕದ್ದು ಕೊಂಡು ಹೋಗುತ್ತಿದ್ದ. ಇನ್ಸ್ಪೆಕ್ಟರ್ ಮಗುಗನ ಕೈಲಿ ಬಳೆ ನೋಡಬೇಕೆಂದು ತೆಗೆದುಕೊಟ್ಟನಂತೆ. ಅವನು ಇನ್ಸ್ಪೆಕ್ಟರಿಗೆ ತೋರಿಸಿದನಂತೆ. ಹೀಗೆ ಗತ್ತಾಗತ್ತಾ ಯಾರೋ ಒಬ್ಬ ಮನುಷ್ಯನ ಕೈಗೆ ಸಿಕ್ಕಿ ಅವನು ಅವರನ್ನು ಹಿಡಿದು ಅವನಿಂದ 10 ರೂಪಾಯಿ ತೆಗೆದುಕೊಂಡು ಬೆಳ್ಳಿ ಗಟ್ಟಿಯನ್ನು ನಾಳೀಕ ಶಿಯರ್ಪಡುವವಡುತ್ತೇನೆಂದು ಹೇಳಿ ಉಳಿದ ಮೇಲೆ ಬೆಳ್ಳಿ ಗಟ್ಟಿಯನ್ನು ಕಿತ್ತು ತೆಗೆದುಕೊಂಡವನು ಕೊಟ್ಟನಂತೆ.

ತುಮಕೂರು.—ಬಿಸಿಲಿನ ತಾಪವು ಸಹಿಸಲಶಕ್ಯವಾಗಿದೆ. ಕಲರಾ ಜಾಡ್ಯವು ಪ್ರಾರಂಭಿಸಿತ್ತಾದರೂ ದೇವರ ಅನುಗ್ರಹದಿಂದ ನಿಂತುಹೋಯಿತು. ಹೊರಪೇಟೆ ಯವರಿಗೆ ಅನುಕೂಲವಾದ ಒಂದು ನೀರಿನ ಭಾವಿ ಇಲ್ಲದೆ ಜನರು ದಕ್ಷಿಣ ಬಡಾವಣೆಯ ಮನೆಮನೆಗಳಿಗೆ ಅಲೆಯುತ್ತಾರೆ.—ಹೋದ ಒಂದು ತಿಂಗಳ ಒಳಗೆ ಯೂ, ಹಳೆಯ ಬಡಾವಣೆಯೂ, ದಕ್ಷಿಣ ಬಡಾವಣೆಯಲ್ಲಿಟ್ಟಿರುವ ವೆಂಕಟಸುಬ್ಬ ರಾವ್ ಅಂಡ್ ಕಂಪನಿಯಲ್ಲೂ, ಮಂಡಿಪೇಟೆಯಲ್ಲಿ ಒಂದು ಮಂಡಿಯಲ್ಲೂ ಬೀಗಗಳನು ತೆಗೆದು ಕಳ್ಳತನ ಮಾಡಿದರು. ಈ ಎರಡು ಸ್ಥಳಗಳು ಈ ಟವನಿನ ಮುಖ್ಯ ಪ್ರದೇಶಗಳು. ಈ ಸ್ಥಳಗಳಲ್ಲಿ ಕಳ್ಳತನ ನಡೆದಾಗ ಕೇಳುವವರೇ ಇಲ್ಲ. ಪತ್ತೇದಾರರೂ ಕಾಣುವುದೇ ಇಲ್ಲ. ಪಬ್ಲಿಕ್ ರಸ್ತೆಗಳಲ್ಲಿ ಕಲವರು ಗಾಡಿಗಳ, ರಾತ್ರಿ ಕಾಲಗಳಲ್ಲಿ ಲಾಂದ್ರಗಳಿಲ್ಲದೆ ಗಾಡಿಗಳನ್ನು ಹೊಡೆದುಕೊಂ ಡು ಹೋದಾಗ್ಯೂ ಕೇಳುವವರೇ ಇಲ್ಲ. ಈ ವಿಷಯಗಳಿಗೆ ನಮ್ಮ ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರವರು ಗಮನಕೊಡುವರೆಂದು ನಿರೀಕ್ಷಿಸಿದೆ.—ನಮ್ಮ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ ಡಿಪುಟಿ ಕಮೀಷನರೂ ಬಹಳ ದಯಾಳುಗಳಾಗಿದ್ದಾರೆ. ನೀರಿನ ವಿಷಯದಲ್ಲಿ ಈ ಊರು ಬಹಳ ಕಷ್ಟಪಡುತ್ತಿದೆ. ನಮ್ಮ ಡಿಪಾರ್ಟ್ಮೆಂಟಿನ ವರು 12 ಸಾವಿರ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿ, ಮುಂದಿನ ಕೆರೆಗೆ ಕಾಲ್ವೆ ತೆಗೆಸಿದಂತೆ ಏರ್ಪಾಡಾಗಿರುವುದೆಂದೂ, ಊರಿಗೆಲ್ಲಾ ನಲ್ಲಿಗಳನ್ನಿಡಿಸಿ ಕೀರ್ತಿಪ ಡೆಯುವರೆಂದೂ ಜನಗಳು ಮಾತನಾಡಿಕೊಳ್ಳುತ್ತಾರೆ. ಇಲ್ಲಿನ ಮುನ್ಸಿಫ್ ಕೋರ್ಟಿನಲ್ಲಿ ನೂರಕ್ಕೂ ಮೇಲೆ ಮೊಕದ್ದಮೆಗಳು ಸಕಾಲಕ್ಕೆ ತೀರ್ಮಾನವಾಗದೆ ಅನೇಕ ವರ್ಷಗಳ ವರೆಗೆ ತುಂಬಾ ತೊಂದರೆಯುಂಟಾಗಿದೆ. ಚೀಫ್ ಕೋರ್ಟಿನವರು ಕೆಲವು ಕಾಲ ತಾತ್ಕಾಲಿಕವಾಗಿಯಾದರೂ ಮತ್ತೊಂದು ಕೋರ್ಟನ್ನು ಇಲ್ಲಿ ಸ್ಥಾಪಿಸಿ, ಅನಂತರ ಹಳೆಯ ಫೈಲುಗಳೆಲ್ಲಾ ಕಡಿಮೆ ಮಾಡಬೇಕೆಂದು ಬಹುಮಂದಿ ಅಪೇಕ್ಷಿಸು ತ್ತಾರೆ. ಈ ವಿಷಯಕ್ಕೆ ಮೊಕದ್ದಮೆಗಳನ್ನು ತೀರ್ಮಾನಿಸಲು ಒಬ್ಬ ಮುನ್ಸಿಫರಿಗೆ ಸಾಧ್ಯವಿಲ್ಲ. ಈ ಟವನ್ನಿನಲ್ಲಿ ಹೊಸದಾಗಿ ಮನೆಗಳನ್ನು ಕಟ್ಟಲು ಅನುಕೂಲ ವಾದ ಪ್ರದೇಶಗಳಿರುವುದಿಲ್ಲ. ದಕ್ಷಿಣ ಬಡಾವಣೆಯ ಕಡೆ ಅನೇಕರು ಸ್ಥಳಗಳನ್ನು ತೆಗೆದುಕೊಂಡಿದ್ದಾರಾದರೂ ಸ್ಥಳವಿಲ್ಲ. ಕೆಲವರು ಸ್ಥಳಗಳನ್ನು ಕೊಂಡು ಮನೆಗಳನ್ನು ಕಟ್ಟದೆಯೂ, ಕಟ್ಟುವವರಿಗೆ ಕೊಡದೆಯೂ ಇರುತ್ತಾರೆ. ಇದ ರಿಂದ ಪ್ರಜೆಗಳಿಗೆ ಅನಾನುಕೂಲವೂ, ಸರ್ಕಾರಕ್ಕೆ ನಷ್ಟವೂ ಉಂಟಾಗುತ್ತಿದೆ. ಈ ವಿಷಯದಲ್ಲಿ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರು ನೋಟೀಸ್ ಮೂಲಕ ಸ್ಥಳದ ಮನೆಗಳನ್ನು ಗೊತ್ತಾದ ಒಂದು ಮಾಮೂಲೆಯಲ್ಲಿ ಕಟ್ಟುವಂತೆಯೂ, ಸ್ಥಳದ ಕಟ್ಟುವವರಿಗೆ ಬಾಗಗಳನ್ನು ವಿಕ್ರಯಿಸುವಂತೆಯೂ ಮಾಡಿದರೆ ಬಹು ಅನುಕೂಲವಾದೀತು.—ಇಲ್ಲಿನ ಯೂನಾನಿ ವೈದ್ಯಶಾಲೆಯು ದಿನೇದಿನೇ ಕೆಟ್ಟು ಹೋಗ ಬರುತ್ತಾ ಇದೆ. ಛೀಫ್ ಮೆಡಿಕಲ್ ಸಾಹೇಬರು ಬಹು ಶೀಘ್ರವಂತ ರಾಗಿದ್ದರು. ಈಗಿನವರು ಆ ರೀತಿ ಮಾಡದೆಹೋದರೆ ಕ್ಷ ಪ್ರಸ್ತೀ ಮುಚ್ಚಲ್ಪಡು ವುದೆಂದು ನಂಬುತ್ತೇನೆ.

ಹಾಸನ.—ಈಗ ಕೆಲವು ದಿವಸಗಳಿಂದ ಬಿಸಿಲಿನ ಝಳವನ್ನು ತಡೆಯುವುದು ಬಹಳ ಕಷ್ಟವಾಗಿದೆ. ಮತ್ತು ಮಳೆ ಸಕಾಲದಲ್ಲಿ ಬಾರದ ನಿಧಾನವಾದ್ದರಿಂದ ರೈತರು ಹೊಲಗಳನ್ನು ಉಳ್ಳಹೊಡೆದುಕೊಂಡು ಬಿತ್ತನೆಕಾಲಕ್ಕೆ ಸರಿಯಾಗಿ ಮಳೆ ಬರಲಿಲ್ಲವಲ್ಲಾ ಎಂದ ಚಿಂತಿಸುತ್ತಿದ್ದಾರೆ. ಆದರೆ ಮೊನ್ನೆ ರವಿವಾರ ಆಕಸ್ಮಿಕ ವಾಗಿ ಮಳೆಯ ಮೋಡಗಳು ಹುಟ್ಟಿ ಸ್ವಲ್ಪ ಮಳೆ ಬಿತ್ತು. ಅರಸೀಕೆರೆಯ ದಾರಿ ಯಲ್ಲಿ ಉದ್ದಕ್ಕೂ ಹಳ್ಳಿಗಳ ಮೇಲೆ ಅನೇಕ ದಿನ ಬಹಳ ಒಳ್ಳೆ ಮಳೆಯಾಗಿ ದುದ್ದರಿಂದ ಅಲ್ಲಿನ ರೈತರು ಆಗಲೇ ಬಿತ್ತುವದಕ್ಕೆ ಆರಂಭಿಸಿದ್ದಾರೆಂದು ತಿಳಿದುಬಂದಿದೆ. ಕೋಆಪರೇಟಿವ್ ಸೊಸೈಟಿಗಳ ಅಫಿಸಿಯೇಟಿಂಗ್ ರೆಜಿಸ್ಟ್ರಾರರಾದ ಮ॥ ನಾರ್ ಸಿಂಗ್ ರಾವ್ ಅವರು ಇಲ್ಲಿಗೆ ಬಂದು ಇಲ್ಲಿನ ಸೊಸೈಟಿಗಳ ಲೆಕ್ಕಮುಂತಾದ್ದನ್ನು ಪರೀಕ್ಷಿಸಿ ಆ ಸೊಸೈಟಿಗಳು ಅಷ್ಟು ತೃಪ್ತಿಕರವಾಗಿ ನಡೆಯುತ್ತಲಿಲ್ಲ ವೆಂದು ವ್ಯಸನಪಟ್ಟರು. ಮತ್ತು ಗ್ರಾಮದ ಸೊಸೈಟಿಯೂ ತೃಪ್ತಿಕರವಾಗಿಲ್ಲ ವೆಂದು ತಿಳಿದು ವ್ಯಸನಪಡಬೇಕಾಗಿದೆ. ಮ॥ ನಾರ್ ಸಿಂಗರಾಯರು ಇಲ್ಲಿಂದ ಹಳ್ಳಿಗಳಿಗೂ ಚಿಕ್ಕಮಗಳೂರು ಎಡೆಹಳ್ಳಿ ಮುಂತಾದ ಕಡೆಗಳಿಗೂ ಹೋಗಿ ಅಲ್ಲಿನ ಸೊಸೈಟಿಗಳನ್ನು ಪರೀಕ್ಷೆಮಾಡುವವರಾಗಿದ್ದಾರೆಂದು ತಿಳಿದುಬಂದಿದೆ.—ಇಲ್ಲಿಂದ ಮುದಗೆರೆ ಕೋಣನೂರುಗಳ ಮಾರ್ಗವಾಗಿ ರೈಲನ್ನು ಹಾಕುವ ಕೆಲಸಕ್ಕೆ ಬೇಕಾದ ಸರ್ವೆ ಸ್ಯಾಂಕ್ಷನ್ ಆಗಿದೆ. ಸರ್ವೆ ಮುಗಿದು ಕಾಮಗಾರಿ ಪ್ರಾರಂಭವಾಗುವವರಲ್ಲದೆ ಇರುವುದು ಕೇಳಿ ಈ ಪುರವಾಸಿಗಳು ಅತ್ಯಂತ ಸಂತೋಷ ಭರಿತರಾಗಿದ್ದಾರೆ. ಇಲ್ ಜ. ಯರ್ ಮಿ. ಎಚ್. ಡಿ. ವೈಸ್ ಸಾಹೇಬರವರು ಇಲ್ಲಿಗೆ ದಯಮಾಡಿ ಈ ಪ್ರಾಂತ್ಯದಲ್ಲಿ ತಮ್ಮ ಎಕ್ಸಿಕ್ಯೂಟಿವ್ ಎಂಜಿನಿಯರೊಂದಿಗೆ ಇದ್ದು ನಡೆಯುತ್ತಿರುವ ಕಾರ್ಯಗಳನ್ನು ಪರೀಕ್ಷಿಸುವರೆಂದು ತಿಳಿದುಬಂದಿದೆ.—ಇಲ್ಲಿಗೆ ಮೂರು ಮೈಲಿ ದೂರದಲ್ಲಿರುವ ಹೊಸಿಹಳ್ಳಿ ಕೊಪ್ಪಲು ಎಂಬ ಹಳ್ಳಿಯಲ್ಲಿ ಈ ಕೆಲವು ದಿವಸಗಳಿಂದ ಇಲಿಗಳು ಬಿದ್ದು ಸಾಯುತ್ತಿದ್ದುದರಿಂದ ಆ ಗ್ರಾಮದ ರೈತರು ಊರಹೊರಗಡೆ ಗುಡಿಸಲುಗಳನ್ನು ಕಟ್ಟಿಕೊಂಡು ಊರನ್ನು ಬಿಡು ವುದಕ್ಕೆ ಇನ್ನೂ ಬಿಡುವ ಪ್ರಯತ್ನದಲ್ಲಿಯೂ ಇರುವರು. ಊರುಬಿಟ್ಟಿದ್ದವರ ಲ್ಲಿ ಒಬ್ಬ ಮುದುಕಿಗೆ ಜ್ವರಬಂದು ಗಂಟುಕಾಣಿಸಿಕೊಂಡು ಎರಡು ಮೂರು ದಿನಗಳಲ್ಲಿ ತೀರಿಹೋದಳು. ಇದಾಗಿ ಈಗ ಎಂಟುಹತ್ತು ದಿನಗಳಾದವು. ಅಲ್ಲಿ ಯಾರಿಗೂ ಏನೂ ಉಪದ್ರವಿಲ್ಲವೆಂದು ತಿಳಿದು ಸಂತೋಷಪಡಬೇಕಾಗಿದೆ. ಹಾಸನ ಇನ್ನೂ ಕೆಲವೆಡೆಗಳಲ್ಲಿ ಇಲಿಗಳು ಇನ್ನೂ ಸಾಯುತ್ತಲೇ ಇವೆಯೆಂದು ಕೇಳಬರುವುದು. ಆ ಗ್ರಾಮಸ್ಥರೂ ಊರನ್ನು ಆ ರೋಗ ವ್ಯಾಪಿಸುವದಕ್ಕಿಂತ ಮುಂಚೆ ಸಂಪೂರ್ಣವಾಗಿ ಬಿಟ್ಟು ಅದರ ಸೋಂಕನ್ನು ಸಂಪೂರ್ಣವಾಗಿ ತಪ್ಪಿಸಿಕೊಳ್ಳುವತನಕ ಗುಡಿಸಲುಗಳಲ್ಲಿದ್ದು ಅನಂತರ ಊರು ಸೇರುವ ಹಾಗೆ ಮೇಲ್ವಿಚಾರಣೆಯಿಂದ ನಿರೀಕ್ಷಿಸಲ್ಪಟ್ಟಿದೆ. ಮತ್ತು ಊರು ಬಿಟ್ಟ ಮೇಲೆ ಬೇಕಾದ ಸಾಮಾನುಗಳನ್ನು ಮನೆಯಿಂದ ಸಾಗಿಸಿಕೊಂಡು ಬರುವದಕ್ಕೆ ಮನೆ ಗೆ ಹೋಗುವ ಪದ್ಧತಿಯುಂಟು. ಇದು ರೋಗದ ಸೋಂಕನ್ನು ಹರಡುವದಕ್ಕೆ ಕಾರಣವಾದ್ದರಿಂದ ಅಂಥಾ ಪದ್ಧತಿಯನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕು.

ವಿದೇಶ ವೃತ್ತಾಂತಗಳು.

ಮಾಂಟಿನೀಗ್ರೋದವರಿಗೆ ರಷ್ಯಾ ಗವರ್ನ್ಮೆಂಟಿನಿಂದ 13,15,000 ರೂಪಾಯಿ ಸಹಾಯಮಾಡಬೇಕೆಂದು ಡೂಮಾ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗುತ್ತಿದೆ.

ರಷ್ಯಾ ಮತ್ತು ಚೀನಾ ರಾಜ್ಯಗಳ ರಾಯಭಾರಿಗಳು ಕಲೆತು ಮಾಂಗೋ ಲಿಯಾ ಸೀಮೆಯು ತಮ್ಮಿಬ್ಬರಿಗೂ ಸೇರದೆ ಸ್ವತಂತ್ರವಾಗಿರತಕ್ಕದೆಂದು ಒಪ್ಪಿ ಕರಾರುಮಾಡಿಕೊಂಡಿರುತ್ತಾರೆ.

ಅಮೇರಿಕಕ್ಕೆ ಸೇರಿದ ಬಫೆಲೋ ಪಟ್ಟಣದಲ್ಲಿ ಕಳೆದ ಗುರುವಾರ ಬೆಂಕಿ ಬಿದ್ದು ಏಳು ಲಕ್ಷ ಬುಷಲುಗಳ ದವಸವು ಸುಟ್ಟುಹೋಗಿ ಸುಮಾರು ಒಂದೂ ವರೆ ಕೋಟಿ ರೂಪಾಯಿ ನಷ್ಟವಾಯಿತು.

ಟರ್ಕಿ ಬಾಲ್ಕನ್ ಯುದ್ಧದಲ್ಲಿ ಇದುವರೆಗೆ ಬಲ್ಗೇರಿಯದವರ ಕಡೆ 30,011 ಸೈನಿಕರೂ ಉದ್ಯೋಗದಾರರೂ ಹತರಾದರೆಂದೂ, 53,500 ಮಂದಿಗೆ ಗಾಯಗಳಾಗಿವೆಯೆಂದೂ, 3,193 ಮಂದಿ ಏನಾದರೋ ತಿಳಿಯಲಿಲ್ಲವೆಂದೂ ಬಲ್ಗೇರಿಯಾ ಸರ್ಕಾರದವರು ಪ್ರಕಟಿಸಿರುತ್ತಾರೆ.

ಜರ್ಮನಿ ಚಕ್ರವರ್ತಿಯವರ ಕುಮಾರಿಯ ವಿವಾಹೋತ್ಸವಕ್ಕೆ ರಷ್ಯಾ ಚಕ್ರಾಧಿಪತ್ಯದ ಜಾರ್ ಪ್ರಭುವು ಪತ್ನಿ ಪುತ್ರ ಪರಿವಾರ ಸಮೇತ ಬರ್ಲಿನ್ ಪಟ್ಟಣಕ್ಕೆ ದಯಮಾಡುವರೆಂದು ವರ್ತಮಾನವಿದೆ. ಇಂಗ್ಲಾಂಡಿನ ದೊರೆಯವರೂ ಪತ್ನಿ ಪರಿವಾರ ಸಮೇತ ಅಲ್ಲಿಗೆ ಹೋಗಬಹುದವರಾಗಿದ್ದಾರೆ.

ಕಳೆದ ಏಪ್ರಲ್ ತಾ 17ರಲ್ಲಿ ಫ್ರೆಂಚರ ಸೈನ್ಯದ ಆಕಾಶಬುಟ್ಟಿಯು ಅಂತರಿಕ್ಷದಲ್ಲಿ ಸಂಚರಿಸುತ್ತಾ ಸುಂಟರಗಾಳಿಗೆ ಸಿಕ್ಕಿ ಮಹಾಶಬ್ದದೊಡನೆ ಒಡೆದು ಬಿದ್ದುಬಿಟ್ಟಿತು. ಅದರಲ್ಲಿ ಕುಳಿತು ಸಂಚಾರ ಮಾಡುತ್ತಿದ್ದ ನಾಲ್ಕು ಜನರು ಮೃತಪಟ್ಟರು, ಇನ್ನೊಬ್ಬನಿಗೆ ಘೋರ ಗಾಯಗಳಾಗಿವೆ.

ಟರ್ಕಿಯವರಿಗೂ ಇಟಲಿಯವರಿಗೂ ಕಳೆದ ವರುಷದ ಆದಿಭಾಗದಲ್ಲಿ ನಡೆ ದ ಯುದ್ಧದಲ್ಲಿ ಇಟಲಿಯವರು ಫ್ರೆಂಚರ ಎರಡು ಹಡಗುಗಳನ್ನು ಹಿಡಿದು ಸ್ವಾಧೀನಪಡಿಸಿಕೊಂಡದ್ದು ನ್ಯಾಯವಲ್ಲವೆಂದೂ, ಅದಕ್ಕಾಗಿ ಅವರು ಫ್ರೆಂಚರಿಗೆ 8,20,000 ರೂಪಾಯಿಯನ್ನು ಪರಿಹಾರ ಕೊಡಬೇಕೆಂದೂ ಪಂಚಾಯಿತಿ ಕೋರ್ಟಿ ನವರು ತೀರ್ಮಾನ ಮಾಡಿದ್ದಾರೆ.

ಇಂಗ್ಲಿಷ್ ಗವರ್ನ್ಮೆಂಟಿನ ಮಂತ್ರಿಸಭೆಯ ಪ್ರೆಸಿಡೆಂಟರಾದ ಲಾರ್ಡ್ ಮಾರ್ಲೆಯವರು ಜರ್ಮನಿಯ ರಾಜಧಾನಿಗೆ ಹೋಗಿರುವರು. ಹೀಗೆ ಹೋಗಲು ವಿಶೇಷವಾದ ರಾಜಕೀಯ ಕಾರಣವೇನೂ ಇಲ್ಲವೆಂದು ಇಂಗ್ಲಿಷ್ ಗವರ್ನ್ಮೆಂ ಟಿನವರು ಸ್ಪಷ್ಟವಾಗಿ ಹೇಳಿರುತ್ತಾರಾದರೂ ಅಂಥಾ ನಿಮಿತ್ತವೇನೋ ಇರಬೇ ಕೆಂದೂ, ಅದು ಅವರು ವಾಪಸುಬಂದ ಮೇಲೆ ಹೊರಪಡದೆ ಇರಲಾರದೆಂದೂ ಅನೇಕರು ಊಹಿಸುತ್ತಿದ್ದಾರೆ.

ಇಂಗ್ಲಾಂಡ್ ಮತ್ತು ವೇಲ್ಸ್ ನೊಳಗೆ 1912ನೇ ಇಸವಿಯಲ್ಲಿ ಶಾಶ್ವತ ವಾದ ಧರ್ಮಕಾರ್ಯಗಳನ್ನು ನಡಸುವುದಕ್ಕಾಗಿ ಭಕ್ತರು 17,14,192 ಪೌಂಡುಗಳು ಫಂಡು ಹಾಕಿದರು. 1912ನೇ ಫೆಬ್ರವರಿಯಲ್ಲಿ ಕಾಲವಾದ ಲಾರ್ಡ್ ಸ್ಟ್ರಾತ್ಕೋನ ವರ್ತಕರವರು ಅನಾಥ ಬಾಲಬಾಲಿಕಾಶ್ರಮಗಳ ಸ್ಥಾಪನೆಗಾಗಿ 10 ಲಕ್ಷ ಪೌಂಡುಗಳನ್ನೂ, ಬೇರೆ ಬೇರೆ ಧರ್ಮಕಾರ್ಯಗಳಿಗೆ 20,10,179 ಪೌಂಡುಗ ಳನ್ನು ಧರ್ಮ ಮಾಡಿದರು.

ಫ್ರಾನ್ಸಿಗೆ ಸೇರಿದ ಷರ್ಬರ್ಗ್ ಪಟ್ಟಣದಲ್ಲಿ ಸುಮಾರು 22 ವಯಸ್ಸಿನ ಲಿಯನ್ ಷರ್ ಎಂಬೊಬ್ಬ ಚಂಬಾರ ಹುಡುಗನು ಫೆಬ್ರವರಿ 17 ರಿಂದ ನಿದ್ರೆ ಮಾಡುತ್ತಿದ್ದಾನೆ. ಇವನಿಗೆ ಪ್ರಜ್ಞೆಯನ್ನುಂಟುಮಾಡಬೇಕೆಂದು ಡಾಕ್ಟರುಗಳು ಪಡುವ ಪ್ರಯತ್ನವೆಲ್ಲಾ ನಿಷ್ಪ್ರಯೋಜನವಾಗಿದೆ. ರೋಗಗಳು ಕಾರಣವೇನೆಂದು ವೈದ್ಯರು ಹೇಳಲಾರದೆ ಇದ್ದಾರೆ. ಅವನು ಊಟಮಾಡುತ್ತಾನೆ. ಆದರೆ ಕಣ್ಣು ಬಿಡಲಾರನು, ಮಾತನಾಡಲೂ ಅರಿಯ.

ಗ್ರೀಸ್ ರಾಜ್ಯದ ದೊರೆಯವರನ್ನು ಕೊಂದುಹಾಕಿದ ಷಿನಾಸ್ ಎಂಬ ಕ್ರೂರಾತ್ಮನನ್ನು ಕಳೆದ ವಾರ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನಿಲ್ಲಿಸಿಕೊಂಡು ದರ್ಯಾಫ್ತು ಮಾಡುತ್ತಿದ್ದರು. ಮ್ಯಾಜಿಸ್ಟ್ರೇಟರ ದೃಷ್ಟಿಯು ಅತ್ತಿತ್ತ ಚಲಿಸುವು ದನ್ನು ಕಾದಿದ್ದು ಅಪರಾಧಿಯು ಕಿಟಕಿಯಿಂದ ಹಾರಿ ಮೂವತ್ತು ಅಡಿ ದೂರ ನೆಲದ ಮೇಲೆ ಬಿದ್ದು ಮೃತಪಟ್ಟಿರುತ್ತಾನೆ. ಸರ್ಕಾರದವರು ವಿಧಿಸಬಹುದಾಗಿ ದ್ದ ಶಿಕ್ಷೆಯನ್ನು ಅವನು ತಾನಾಗಿಯೇ ಮಾಡಿಕೊಂಡಂತಾಯಿತು.

ಮಾಂಟಿನೀಗ್ರೋ ಸೈನ್ಯದವರು ಕಳೆದ ತಿಂಗಳಲ್ಲಿ ಟರ್ಕಿಯವರಿಂದ ಗೆದ್ದು ಸ್ವಾಧೀನಪಡಿಸಿಕೊಂಡ ಸ್ಕೂಟರಿ ಪಟ್ಟಣದಲ್ಲಿ ಕಳೆದ 10 ನೇ ತಾ. ಬೆಂಕಿಬಿದ್ದು ಟರ್ಕಿ ವರ್ತಕರ ಇಪ್ಪತ್ತು ಭಾರೀ ಅಂಗಡಿಗಳು ವ್ಯಾಪಾರಸರಕುಗಳ ಸಮೇತ ಸುಟ್ಟುಹೋದವು. ಮಾಂಟಿನೀಗ್ರೋ ಸೈನಿಕರು ಬಹಳ ಸಾಹಸಪಟ್ಟು ಬೆಂಕಿ ಯನ್ನು ಆರಿಸಿದರು. ಈಚೆಗೆ ಲಂಡನಿನಲ್ಲಿ ನಡೆಯುವ ಸಿರೀಕ್ಷೆಯಿಂದ ಮಾಂಟಿ ನೀಗ್ರೋದವರು ಈ ಪಟ್ಟಣವನ್ನು ಪರರಾಜ್ಯಗಳವರ ವಶಕ್ಕೆ ಒಪ್ಪಿಸಿರುತ್ತಾರೆ.

ಅಮೇರಿಕದ ಉತ್ತರ ಭಾಗದಲ್ಲಿರುವ ಕ್ಯಾನಡಾ ಎಂಬ ಇಂಗ್ಲಿಷ್ ವಸಾಹತ್ತಿನ ಸರ್ಕಾರದವರು ಏಷ್ಯಾಖಂಡದ ಯಾವ ಜನಾಂಗದವರೂ ಕ್ಯಾನಡಾ ಸೀಮೆಯಲ್ಲಿ ನಿಂತು ಭೂಸ್ಥಿತಿಯನ್ನು ಪಡೆಯಕೂಡದೆಂದು ಕಾನೂನು ಮಾಡು ವವರಾಗಿದ್ದಾರೆ. ಆದರೆ ಈ ಕಾನೂನಿನ ಪ್ರಕಾರ ಹಿಂದೂಸ್ಥಾನದವರಿಗೆ ಅಲ್ಲಿಗೆ ಹೋಗದಂತೆ ತಡೆಯಲಾಗುವುದಿಲ್ಲ. ಜಪಾನ್ ನವರಾಗಲಿ ಚೀನಿಯವರಾಗಲಿ ಅಲ್ಲಿಗೆ ಹೋಗದ ಹಾಗೆ ಅಡ್ಡಿಯಾಗುವುದಿಲ್ಲ. ಇದು ಪಕ್ಷಪಾತವುಳ್ಳ ಕಾನೂನಾದ್ದರಿಂದ ಇದನ್ನು ವಜಾಮಾಡಿಸಬೇಕೆಂದು ಕೆಲವು ಹಿಂದೂಸ್ಥಾನದ ದೊಡ್ಡಮನುಷ್ಯರು ಸಾಹಸಪಡುತ್ತಿದ್ದಾರೆ. ಈಗ ಕ್ಯಾನಡಾ ಸೀಮೆಯಲ್ಲಿ ಸುಮಾರು ಆರು ಸಾವಿರ ಹಿಂದೂಸ್ಥಾನದ ಪ್ರಜೆಗಳು ಇರುತ್ತಾರಾದರೂ ಇವರ ಹೆಂಡಿರು ಮಕ್ಕಳಾಗಲಿ ರಕ್ತ ಸಂಬಂಧಿಗಳಾಗಲಿ ಅವರ ಬಳಿಗೆ ಹೋಗದಂತೆ ಈ ಕಾನೂನಿನಿಂದ ತಡೆ ಯುಂಟಾಗಿದೆ.

ಇಂಗ್ಲಾಂಡಿನಲ್ಲಿ ಸ್ತ್ರೀಯರಿಗೆ ಪಾರ್ಲಿಮೆಂಟ್ ಮೆಂಬರುಗಳ ಚುನಾವಣೆ ಹಕ್ಕನ್ನು ಕೊಡಬೇಕೆಂದು ಒಂದು ಹೊಸದಾದ ಕಾನೂನು ತಯಾರಾಗಿ ಪಾರ್ಲಿ ಮೆಂಟಿನಲ್ಲಿ ಚರ್ಚೆಯಾಗಿ ಕಳೆದ ವಾರ ವಜಾ ಆಯಿತು. ಸ್ತ್ರೀಯರು ತಮ್ಮ ಉದ್ದೇಶ ನೆರವೇರುವ ತನಕ ಸುಮ್ಮನಿರಕೂಡದೆಂದು ನಾನಾ ಅಕೃತ್ಯಗಳನ್ನು ಮಾಡುತ್ತಾ ಬಂದಿದ್ದಾರೆ. ಅಲ್ಲಲ್ಲಿ ಮದ್ದಿನ ಗುಂಡುಗಳನ್ನು ಹಾಕಿ ಆಸ್ತಿಯ ನ್ನು ಹಾಳುಮಾಡುವರು. ಒಂದು ದೇವಸ್ಥಾನವು ಸುಟ್ಟು ಒಂದೂವರೆ ಲಕ್ಷ ರೂಪಾಯಿ ನಷ್ಟವಾಯಿತು.

ಫ್ರೆಂಚರ ಸ್ವಾಧೀನವಾದ ಕೊಚಿನ್ ಚೈನಾದಲ್ಲಿ ಹಾನಾಯಿ ಎಂಬ ಪಟ್ಟಣ ದೊಳಗೆ ಕ್ರೂರಾತ್ಮರುಗಳು ಸಿಡಿಮದ್ದಿನ ಗುಂಡುಗಳನ್ನು ಎಸೆದು ಫ್ರೆಂಚರ ಸೈನಿಕ ರಲ್ಲಿ ಉದ್ಯೋಗದಾರರಿಬ್ಬರನ್ನು ಕೊಂದು, ಆರು ಮಂದಿ ಸೈನಿಕರಿಗೂ ಐದು ಜನ ದೇಶೀಯ ಪ್ರಜೆಗಳಿಗೂ ಗಾಯಮಾಡಿದರು. ಅವರನ್ನು ದಸ್ತಗಿರಿಮಾಡಿ ಕೇಳಿ ದಾಗ ತಾವು ಸಿಡಿಮದ್ದಿನ ಗುಂಡು ಎಸೆದದ್ದು ನಿಜವೆಂದೂ, ಅನಾಂ ಸಂಸ್ಥಾನದ ಸಿಂಹಾಸನವನ್ನು ಸಂಪಾದಿಸಿಕೊಳ್ಳಬೇಕೆಂದು ಪ್ರಯತ್ನಪಡುತ್ತಿರುವ ಪುರುಷನ ಚಿತಾವಣೆಯಿಂದ ತಾವು ಆ ಕೃತ್ಯವನ್ನು ಮಾಡಿದೆವೆಂದೂ, ಇದಕ್ಕಾಗಿ ತಮಗೆ ಆತನು ದ್ರವ್ಯವನ್ನು ಕೊಟ್ಟಿರುತ್ತಾನೆಂದೂ ಹೇಳಿ ಒಪ್ಪಿಕೊಂಡಿದ್ದಾರೆ.

ಅಮೇರಿಕದಲ್ಲಿ ಸಂಯುಕ್ತ ಸಂಸ್ಥಾನಗಳ ರಾಜಧಾನಿಯಾದ ನ್ಯೂಯಾರ್ಕ್ ನಗರದಲ್ಲಿ ಪೋಲೀಸಿನವರು ಲಂಚಕೋರರಾಗಿರುವುದನ್ನು ಅಡಗಿಸುವುದಕ್ಕೆ ಸರ್ಕಾರದವರು ಬಹಳ ಕಠಿಣವಾದ ಶಿಕ್ಷೆಗಳನ್ನು ವಿಧಿಸುತ್ತಲಿದ್ದಾರೆ. ಕಳೆದ ವಾರ ತುಂಬಾ ಗಣ್ಯತೆಯನ್ನು ಪಡೆದಿದ್ದ ನಾಲ್ವರು ಇನ್ಸ್ಪೆಕ್ಟರುಗಳಿಗೆ ಬರಸಿಡಿಲಾಯಿ ತು. ಇವರು ಒಂದು ಮೊಕದ್ದಮೆಯಲ್ಲಿ ಲಂಚತಿಂದು, ರುಜುವಾತು ಕೊಡು ವುದಕ್ಕೆ ಬಂದ ಕೆಲವು ಸಾಕ್ಷಿಗಾರರನ್ನು ಕೋರ್ಟಿಗೆ ಹಾಜರಾಗದಂತೆ ನಿರ್ಬಂಧ ಮಾಡಿದ್ದರು. ಇಂಥಾ ದುಷ್ಟ ಪೋಲೀಸ್ ಅಧಿಕಾರಿಗಳಲ್ಲಿ ಪ್ರತಿ ಒಬ್ಬನಿಗೂ ಒಂದು ವರುಷ ಸಜಾವೂ, 1,500 ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿದೆ.

ಬವೇರಿಯಾ ರಾಜ್ಯದ ಮುಖ್ಯಪಟ್ಟಣವಾದ ಮ್ಯೂನಿಚ್ ನಗರದಲ್ಲಿ ಒಂದು ಆಶ್ಚರ್ಯಕರವಾದ ವಿದ್ಯಾಶಾಲೆಯುಂಟು. ಅದರಲ್ಲಿ 500 ಮಂದಿ ಗಂಡು ಹೆಣ್ಣು ವಿದ್ಯಾರ್ಥಿಗಳು ಸೇರಿಕೊಂಡು ವ್ಯಾಸಂಗ ಮಾಡುತ್ತಾರೆ. ಇವರು ಗಂಡ ಹೆಂಡಿರಲ್ಲಿ ಇರಬೇಕಾದ ಪ್ರೇಮ ಭಕ್ತಿ ಅನ್ಯೋನ್ಯಭಾವಗಳನ್ನು ಮಾತ್ರ ಕಲಿ ತು, ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೇಲೆ ಜರ್ಮನಿ ರಾಜ್ಯದ ಎಲ್ಲಾ ಭಾಗಗಳಲ್ಲೂ ಸಂಚಾರಮಾಡುತ್ತಾ ಪ್ರಜೆಗಳಿಗೆ ತಾವು ಕಲಿತಿರುವ ವಿಚಾರಗಳನ್ನು ಕುರಿತು ಬೋಧನೆ ಮಾಡುವರು. ಪ್ರಜೆಗಳು ವಿವಾಹ ಮಾಡಿಕೊಂಡು ಸಂಸಾರ ಸುಖವನ್ನನುಭವಿಸುವುದರ ಮೂಲಕ ದೃಢಕಾಯರಾದ ಮಕ್ಕಳನ್ನು ಪಡೆದು ಪ್ರಜಾವೃದ್ಧಿಮಾಡಬೇಕೆಂಬುವುದೇ ಈ ಏರ್ಪಾಡಿನ ಉದ್ದೇಶವಾಗಿರುತ್ತದೆ.

ಹಿಂದೂಸ್ಥಾನದಲ್ಲಿ ಪಶುಪ್ರಾಣಿಗಳ ಹಿಂಸೆಯನ್ನು ಅಡಗಿಸುವುದಕ್ಕಾಗಿ ಏರ್ಪಾಡಾಗಿರುವ ಕಮಿಟಿ ಮೆಂಬರುಗಳ ಪ್ರತಿನಿಧಿಗಳು ಕಳೆದ ವಾರ ಲಂಡನ್ ಪಟ್ಟಣದಲ್ಲಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಬಳಿಗೆ ಹೋಗಿ ಪಶುಪ್ರಾಣಿಗಳ ಹಿಂಸೆಯನ್ನು ಅಡಗಿಸುವ ಕಾನೂನನ್ನು ಬಹು ಕಠಿಣವಾಗಿ ಜಾರಿಗೆ ತರಬೇಕೆಂದು ಕೇಳಿಕೊಂಡರು. ಬಂಗಾಳಾ ಪ್ರಾಂತ್ಯದಲ್ಲಿ ಆಡುಗಳ ಚರ್ಮವನ್ನು ಸಜೀವ ವಾಗಿದ್ದಾಗಲೇ ಸುಲಿದು ಮಾರಿದರೆ ಹೆಚ್ಚು ಕ್ರಯ ಬರುತ್ತೆಂಬ ಕಾರಣಕ್ಕಾಗಿ ಅನೇಕರು ಆ ಕ್ರೂರತರವಾದ ದುರಭ್ಯಾಸವನ್ನು ಇಟ್ಟುಕೊಂಡಿದ್ದಾರೆಂಬ ಸಂಗತಿ ಯನ್ನು ಸೆಕ್ರೆಟರಿಯವರಿಗೆ ಅರಿಕೆಮಾಡಿದರು. ಸೆಕ್ರೆಟರಿಯವರು ಅವರ ಹೇಳಿಕೆ ಯನ್ನು ಆದರದಿಂದ ಲಾಲಿಸಿ ಈ ವಿಚಾರವನ್ನು ಇಂಡಿಯಾ ಗವರ್ನ್ಮೆಂಟಿಗೆ ಬರೆದು ಸರಿಮಾಡಿಸುತ್ತೇವೆಂದು ಜವಾಬು ದಯಪಾಲಿಸಿರುತ್ತಾರೆ.

ಜರ್ಮನಿ ರಾಜ್ಯಕ್ಕೆ ಸೇರಿದ ಫ್ರಾಂಕ್ಫರ್ಟ್ ಪಟ್ಟಣದಲ್ಲಿ ಹಿಂದೆ ವ್ಯಾಪಾರಿ ಯಾದ 50 ವರುಷದ ಕಾರಲ್ ಹಾಫ್ ಎಂಬವನು ತನ್ನ ಇಬ್ಬರು ಹೆಂಡಿರನ್ನು ಕೊಂದುಹಾಕಿ ಮೂರನೇ ಹೆಂಡತಿಯನ್ನು ಕೊಲ್ಲುವ ಪ್ರಯತ್ನ ಮಾಡಿದನೆಂದು ಮೊಕದ್ದಮೆ ಆಗಿದೆ. ಅವನು ಮೊದಲನೇ ಹೆಂಡತಿಯ ಹೆಸರಿನಲ್ಲಿ ಜೀವವಿಮೆ ಕಂಪನಿಗೆ ಹಣಹಾಕಿ ಬೇಗ ಹಣವನ್ನು ಪಡೆಯುವುದಕ್ಕಾಗಿ ಅವಳನ್ನು ಕೊಂದು ಬಿಟ್ಟನು. ಎರಡನೇ ಹೆಂಡತಿಯನ್ನು ಮಾಡಿಕೊಂಡು ಅವಳ ಹೆಸರಿನಲ್ಲೂ ಜೀವ ವಿಮೆ ಕಂಪನಿಯಲ್ಲಿ ಚಂದಾ ಹಾಕಿ ಸ್ವಲ್ಪ ಕಾಲದೊಳಗಾಗಿ ಅವಳನ್ನೂ ಕೊಂದುಬಿಟ್ಟು, ಕಂಪನಿಯಿಂದ ಪೂರ್ತಿ ಹಣವನ್ನು ಪಡೆದುಕೊಂಡನು. ಸರ್ಕಾ ರದವರು ಅನುಮಾನಪಟ್ಟು ಎರಡು ಹೆಣಗಳನ್ನೂ ಸಮಾಧಿಯಿಂದ ತೆಗಿಸಿ ಡಾಕ್ಟರಿಂದ ಪರೀಕ್ಷೆ ಮಾಡಿಸಿದಾಗ ವಿಷಪ್ರಯೋಗ ಮಾಡಿದ್ದ ಗುರುತುಗ ಳೇನೂ ಕಂಡುಬರಲಿಲ್ಲ. ಈಗ ಮೂರನೇ ಹೆಂಡತಿಯನ್ನೂ ಈತನು ಅದೇ ರೀತಿ ಕೊಲ್ಲಬೇಕೆಂದು ಅವಳಿಗೆ ವಿಷ ಹಾಕಿದನು. ಇದು ಬಯಲಾಯಿತು. ಅವಳು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದ್ದಾಳೆ. ಸರ್ಕಾರದವರು ಅವನನ್ನು ಹಿಡಿದು ಮೊಕದ್ದಮೆ ಮಾಡಿದ್ದಾರೆ.

ಬಂಗಾಳಕ್ಕೆ ಸೇರಿದ ಮಿದ್ನಾಪುರದ ಕ್ರಿಮಿನಲ್ ಕೇಸಿನ ಮೊಕದ್ದಮೆಯಲ್ಲಿ ಸರ್ಕಾರದವರು ಅನೇಕ ಜನರನ್ನು ಹಿಡಿದು ದರ್ಯಾಫ್ತುಮಾಡುವಾಗ್ಗೆ ಅವರ ನ್ನೆಲ್ಲಾ ಬಂದೀಖಾನೆಯಲ್ಲಿಟ್ಟಿದ್ದರಷ್ಟೆ. ಆ ಬಂದೀಖಾನೆಯ ಮುಖ್ಯ ವೃದ್ಧ ಅಧಿಕಾರಿಯಾಗಿದ್ದ ಮೇಜರ್ ವೀಲ್ ಮೋರ್ ಎಂಬ ಸರದಾರನು ಆ ಗುಂಪಿಗೆ ಸೇರಿದವರು ತನ್ನನ್ನೂ ಕೊಂದುಬಿಡುತ್ತಾರೆಂಬ ಭೀತಿಯುಳ್ಳವನಾಗಿದ್ದು ಈಚೆಗೆ ರಜಾ ಪಡೆದು ಸೀಮೆಗೆ ಹೋಗಿ ಲಂಡನ್ ಪಟ್ಟಣದೊಳಗೆ ಒಂದು ಹೋಟೆಲಿನಲ್ಲಿ ವಿಶ್ರಾಂತಿಯನ್ನು ಹೊಂದುತ್ತಿದ್ದನು. ಆದರೂ ಆತನ ಚಿತ್ತವೃತ್ತಿಯು ಕೆಟ್ಟು, ಸರ್ವದಾ ಪ್ರಾಣಭಯದಿಂದ ಕೂಡಿದವನಾದನು. ಕಳೆದ ವಾರ ತಾ 1ರಲ್ಲಿ ಈತನು ಹಾಸಗೆಯಲ್ಲಿ ಗಾಯಪಟ್ಟು ಬಿದ್ದಿದ್ದನು. ಆತನನ್ನು ಅಲ್ಲಿಂದ ಗ್ರಾಮಾಂತರ ಕಳುಹಿಸಿ ವಾಸಿಯಾಗುತ್ತಾ ಬಂದನೆಂದು ಕೇಳುವಷ್ಟರೊಳಗೇ ಕಳೆದ ತಿಂಗಳ ಎರಡನೇ ಭಾನುವಾರ ಆತನು ಮೂರನೇ ಉಪ್ಪರಿಗೆಯ ಕೊಠಡಿ ಯಿಂದ ಕೆಳಗೆ ಬಿದ್ದು ಮೃತಪಟ್ಟನು. ಹಿಂದೂಸ್ಥಾನವನ್ನು ಬಿಟ್ಟುಹೋದ ಲಾಗಾಯಿತು ಆತನ ಮನಸ್ಸು ಕೆಟ್ಟುಹೋಗಿ ಪ್ರಾಣಭಯದಲ್ಲಿ ತನ್ನನ್ನು

ಯಾರೋ ಕೊಲ್ಲಲು ಬರುತ್ತಾರೆಂಬ ಗಾಬರಿಯೂ ಭ್ರಾಂತಿಯೂ ಆತನಲ್ಲಿ ಉಂಟಾಗಿ ಕಡೆಗೂ ಆ ಭ್ರಾಂತಿಯು ದೆಸೆಯಿಂದಲೇ ಅಕಾಲಮರಣವನ್ನು ಹೊಂದಿದನು.

ಇಂದೋರ್ ಸಂಸ್ಥಾನದ ಮಹಾರಾಣಿಯವರಿಗೆ ಕಳೆದ ಭಾನುವಾರ ಲಂಡನ್ ಪಟ್ಟಣದ ಆಸ್ಪತ್ರೆಯಲ್ಲಿ ವೈದ್ಯರು ಶಸ್ತ್ರಚಿಕಿತ್ಸೆಯನ್ನು ಮಾಡಿ ಔಷದಹಾಕುತ್ತಿದಾರೆ. ಅವರು ಆರೋಗ್ಯಹೊಂದುತ್ತಿದಾರೆಂದು ತಿಳಿಯುತ್ತದೆ.

ಫಿಲಿಪ್ಪೈನ್ ದ್ವೀಪಗಳ ರಾಜಧಾನಿಯಾದ ಮ್ಯಾನಿಲಾ ಪಟ್ಟಣದಲ್ಲಿ ಸುಂಟರಗಾಳಿಯೊಡಗೂಡಿದ ಅಪಾರವಾದ ಮಳೆ ಪ್ರಾಪ್ತವಾಗಿ ಆಸ್ತಿಪಾಸ್ತಿಗಳು ವಿಶೇಷ ನಷ್ಟವಾದವು. ಸುಮಾರು ಅರವತ್ತು ಪ್ರಜೆಗಳು ಅಕಾಲಮರಣಹೊಂದಿರುತ್ತಾರೆ

ಬವೇರಿಯ ರಾಜ್ಯದ ರಾಜಧಾನಿಯಾದ ಮ್ಯೂನಿಚ್ ಪಟ್ಟಣದಲ್ಲಿ ಕಳೆದ ಸೋಮವಾರ ಒಬ್ಬ ಹುಚ್ಚನು ಪಿಸ್ತೂಲನ್ನು ಬಾರ್ ಮಾಡಿ ಒಬ್ಬ ಪೋಲೀಸ್ ಸಾರ್ಜಂಟನನ್ನೂ, ಪ್ರಜಾ ರಾಜ್ಯಭಾರಿಯ ಮಿಲಿಟರಿ ಸೆಕ್ರೆಟರಿಯನ್ನೂ ಗುಂಡಿನಿಂದ ಹೊಡೆದು ಇಬ್ಬರನ್ನೂ ಕೊಂದುಬಿಟ್ಟನು.

ಚೀನಾ ಪ್ರಜಾಪ್ರಭುತ್ವದ ರಾಜಕೀಯ ಕಾರ್ಯಗಳಿಗೋಸ್ಕರ ಆ ಸರ್ಕಾರದವರು ಯೂರೋಪಿಗೆ ಸೇರಿದ ಐದು ರಾಜ್ಯಗಳಲ್ಲಿ 250 ಲಕ್ಷ ಪೌಂಡು (ಅಂದರೆ 37½ ಕೋಟಿ ರೂಪಾಯಿ) ಸಾಲ ತೆಗೆಯುಕೊಳ್ಳಬೇಕೆಂದು ಗೊತ್ತುಮಾಡಿದಾರೆ. ಈ ದ್ರವ್ಯವನ್ನು ಇಂಗ್ಲಾಂಡು, ಫ್ರಾನ್ಸು, ಜರ್ಮನಿ, ರಷ್ಯಾ, ಬೆಲ್ಜಿಯಂ ಎಂಬೀ ಐದು ರಾಜ್ಯಗಳ ವರ್ತಕರು ಸಾಲ ಕೊಡುವರು. 90 ಪೌಂಡಿಗೆ 100 ಪೌಂಡಿನ ಪತ್ರವನ್ನು ಚೀನೆಯವರು ಬಿಕರಿಮಾಡಿ, ಈ ಸಾಲಕ್ಕೆ ಶೇಕಡಾ 5 ರಂತೆ ಬಡ್ಡಿ ಪಾವತಿಮಾಡಲು ಒಪ್ಪಿರುವರು

ಮಧ್ಯ ಅಮೇರಿಕಕ್ಕೆ ಸೇರಿದ ಮಕ್ಸಿಕೋ ಎಂಬ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಸರ್ಕಾರದವರ ಮೇಲೆ ದಂಗೆಯೆದ್ದು ಗ್ವೇಮಾಸ್ ಎಂಬ ಪಟ್ಟಣದೊಳಗೆ ಸರ್ಕಾರ ಸೈನ್ಯವನ್ನು ಸಂಧಿಸಿ ಮೂರು ದಿನ ಯುದ್ಧಮಾಡಿದರು. ಯುದ್ಧಭೂಮಿಯೊಳಗೆ ಸತ್ತು ಬಿದ್ದವರ ಹೆಣಗಳನ್ನು ಸುಟ್ಟು ಹಾಕಲು ರೈಲ್ ಗಾಡಿಗಳ ಮೇಲೆ ಎಣ್ಣೆಯನ್ನೂ ಸೌದೆಯನ್ನೂ ರವಾನೆಮಾಡಿದರು. ಸರ್ಕಾರದ ಸೈನ್ಯದಲ್ಲಿ 500 ಜನರು ಹತರಾದರೆಂದೂ, ಉಭಯ ಪಕ್ಷಗಳಲ್ಲೂ ದಳಪತಿಗಳಾಗಿದ್ದವರನ್ನು ಕೈಸೆರೆ ಹಿಡಿದು ಕಡಿದುಹಾಕಿದರೆಂದೂ ಸರ್ಕಾರದವರು ತಿಳಿಸಿದಾರೆ.

ಮೈಸೂರು ಗೆಜೆಟ್ ಸಂಗ್ರಹ.

ಹರಿಹರದ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಮಿ ಎಸ್ ಅನಂತರಾಮಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಆರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ದಾವಣಗೆರೆ ಸಬ್ ರಿಜಿಸ್ಟ್ರಾರ್ ಮಿ|| ಬಿ. ಎಂ ರಂಗಯ್ಯನಾಯುಡುರವರು ಹರಿಹರದ ಡೆಪ್ಯುಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಕೋಲಾರ್ ಡಿಸ್ಟ್ರಿಕ್ಟಿನ ಫಾರೆಸ್ಟ್ ಆ ಕನ್ಸರ್ವೇಟರ್ ಮಿ ಎಚ್. ರಾಮಯ್ಯನವರಿಗೆ ಕೊಟ್ಟಿರುವ ಫರ್ಲೋ ರಜವನ್ನು ಇನ್ನೂ ನಾಲ್ಕು ತಿಂಗಳು ಜಾಸ್ತಿಮಾಡಿದೆ ಈಗ ಮಾಡಿರುವ ಬದಲಿ ಏರ್ಪಾಡೇ ಜಾರಿಯಲ್ಲಿರತಕ್ಕದ್ದು.

ತುಂಕೂರು ಡಿಸ್ಟ್ರಿಕ್ಟಿನ ಫಾರೆಸ್ಟ್ ಆಫೀಸರ್ ಮಿ ಪಿ. ಎಸ್ ಗೋವಿಂದರಾಯರಿಗೆ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಆ ಕಮಿಷನರ್ ಮಿ ಎಂ ಜಿ. ಕೃಷ್ಣಸ್ವಾಮಿರಾಯರಿಗೆ ಮೇ ತಾ 12 ರಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಸರ್ಜನ್ ಮಿ ಟಿ. ಎಸ್. ಚಂಜಪ್ಪನವರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಎರಡು ತಿಂಗಳು ಜಾಸ್ತಿಮಾಡಿದೆ

ಡೆಪ್ಯುಟಿ ಸ್ಯಾನಿಟರಿ ಕಮಿಷನರ್ ಡಾಕ್ಟರ್ ಎಂ ಶ್ರೀನಿವಾಸರಾಯರಿಗೆ ಮೇ ತಾ 15 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮಿ ಕೆ. ಆರ್. ಕೃಷ್ಣಸ್ವಾಮಯ್ಯಂಗಾರ್ರವರು ಅವರ ಕೆಲಸದ ಚಾರ್ಜನ್ನು ವಹಿಸಿರತಕ್ಕದ್ದು.

ಚಿತ್ರದುರ್ಗದ ಡಿಸ್ಟ್ರಿಕ್ಟಿನ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮಿ ಎಂ ಕೆ ತಿರುಮಲಾಚಾರ್ಯರಿಗೆ ಹತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಆ ಡೆಪ್ಯುಟಿ ಇನ್ಸ್‌ಪೆಕ್ಟರವರು ಅವರ ಕೆಲಸದ ಚಾರ್ಜನ್ನು ವಹಿಸಿರತಕ್ಕದ್ದು

ಸ್ಪೆಷಲ್ ಡ್ಯೂಟಿ ಅಮಲ್ದಾರ್ ಮಿ ಹನುಮಂತರಾಯರು ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಮೆಂಬರಾಗಿಯೂ, ಕೌನ್ಸಿಲ್ ವೈಸ್ ಪ್ರೆಸಿಡೆಂಟರಾಗಿಯೂ ನೇಮಿಸಲ್ಪಟ್ಟಿದಾರೆ

ಮಿ| ಬಿ. ಸಿ ದೇವರಾಜ ಅರಸಿನವರನ್ನು ಮೈಸೂರು ಇಂಪೀರಿಯಲ್ ಸರ್ವಿಸ್ ರೆಜಿಮೆಂಟಿನಲ್ಲಿ 3 ನೇ ಗ್ರೇಡ್ ಜಮಾದಾರ್ ಟ್ರೂಪ್ ಕಮ್ಯಾಂಡರಾಗಿ ನೇಮಕಮಾಡಿದೆ.

ಮೈಸೂರು ಇನ್‌ಫೆಂಟ್ರಿ 1 ನೇ ಬಟಾಲಿಯನ್ 1 ನೇ ಗ್ರೇಡ್ ಸುಬೇದಾರ್ ಸಯ್ಯದ್ ಮಹಮದ್‌ಯವರನ್ನು ಕಳೆದ ಡಿಸೆಂಬರ್ ತಾ 10 ರಿಂದ ಸುಬೇದಾರ್ ಮೇಜರ್ ಕೆಲಸಕ್ಕೆ ಬಡ್ತಿಮಾಡಲಾಗಿದೆ

ಸಿವಿಲ್ ಕೋರ್ಟುಗಳ ಬೇಸಿಗೆ ರಜಾ ಮುಗಿದ ಒಡನೆ ಮುಂದೆ ಹೇಳುವ ಮುನ್ಸಿಫರುಗಳ ವರ್ಗಾವರ್ಗಿ ಜಾರಿಯಲ್ಲಿ ಬರತಕ್ಕದ್ದು.—ಮಿ ಗಳಾದ ಪಿ ಮಹದೇವಯ್ಯನವರು ದೊಡ್ಡಬಳ್ಳಾಪುರದ ಅಡಿಷನಲ್ ಮುನ್ಸಿಫ್ ಕೋರ್ಟಿಗೆ, ಎ. ಕೆ ಶ್ರೀನಿವಾಸ ರಾಘವಾಚಾರ್ಯರು ಹಾಸನದಿಂದ ಶ್ರೀರಂಗಪಟ್ಟಣಕ್ಕೆ, ಟಿ. ಕೃಷ್ಣಯ್ಯಂಗಾರ್ರು ನಂಜನಗೂಡಿನಿಂದ ಹಾಸನಕ್ಕೆ, ಎಂ ನರಸಪ್ಪಯ್ಯನವರು ಕೋಲಾರದಿಂದ ನಂಜನಗೂಡಿಗೆ, ಎನ್. ನರಸಿಂಹಯ್ಯಂಗಾರ್ಯರು ಮಧುಗಿರಿಯಿಂದ ಕೋಲಾರಕ್ಕೆ, ಎಚ್ ಎಂ. ಕೃಷ್ಣಸ್ವಾಮಿಯವರು ಚಿಕ್ಕಬಳ್ಳಾಪುರದಿಂದ ಮಧುಗಿರಿಗೆ. ಮಿ ಎನ್ ಟಿ. ಗೋಪಾಲಯ್ಯಂಗಾರ್ರು ಬಂದು ಛಾರ್ಜು ಪಡೆಯುವ ತನಕ ಮಿ ಡಿ ಅಳಸಿಂಗ್ರಾಚಾರ್ಯರು ಚಿಕ್ಕಬಳ್ಳಾಪುರದ ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನ ಛಾರ್ಜನ್ನು ವಹಿಸಿರತಕ್ಕದ್ದು.

ಮಿ|| ಬಿ ಮಲ್ಲಿಕಾರ್ಜುನಯ್ಯನವರು ಮೂಡಿಗೆರೆ ತಾಲ್ಲೂಕಿನ ಛಾರ್ಜನ್ನು ವಹಿಸಿರುವ ಕಾಲದಲ್ಲಿ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿಗ ಸಂಬಂಧಪಡುವ ಮೊಕದ್ದಮೆಗಳನ್ನು ಹಿಡಿದು ದರ್ಯಾಫ್ತುಮಾಡಲು ಅಧಿಕಾರ ವಹಿಸಲ್ಪಟ್ಟಿದಾರೆ

ಮಿ ಎ ಪಿ ಶೇಷಾದ್ರಿ ಅಯ್ಯಂಗಾರ್ರವರು ಸಾಗರ ತಾಲ್ಲೂಕ್ ಛಾರ್ಜನ್ನು ವಹಿಸಿರುವ ತನಕ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಲ್ಪಟ್ಟಿದಾರೆ.

ಆಕ್ಟಿಂಗ್ ಆ ಕಮಿಷನರ್ ಮಿ|| ಎ. ನಾರಾಯಣರಾಯರಿಗೆ ಹಂಗಾಮಿಯಾಗಿ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ

ಮಿ ಡಿ ರಾಮರಾಯರು ರಜದಿಂದ ವಾಪಸು ಬಂದು ಮೇ ತಾ. 5 ರಲ್ಲಿ ಮಿ|| ಡಿ. ಕೆ ಡಾರಾಷಾಯವರಿಂದ ಮೈಸೂರು ರೆವಿನ್ಯೂ ಸರ್ವೆ ಸೆಟ್ಲಮೆಂಟ್ ಸೂಪರಿಂಟೆಂಡೆಂಟರವರ ಕೆಲಸದ ಛಾರ್ಜನ್ನು ವಹಿಸಿಕೊಂಡಿರುತ್ತಾರೆ

ಶ್ರೀಮನ್ ಯುವರಾಜರವರ ಪರ್ಸನಲ್ ಅಸಿಸ್ಟೆಂಟರಾದ ಮಿ ಎಂ ಎ ಸಿಂಗ್ರಾಚಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಇಪ್ಪತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮಿ ಎಂ. ಸಾಲ್ಡಾನಾರವರನ್ನು 100 ರೂಪಾಯಿ ಸಂಬಳದ ಮೇಲೆ ಹಂಗಾಮಿ ಒವರ್ಸಿಯರಾಗಿ ನೇಮಿಸಿಕೊಂಡು, ಕೃಷಿ ಇಲಾಖೆಯ ಇಲಾಖೆಗೆ ವರ್ಗಮಾಡಿದೆ

ಮಾಲೂರು ತಾಲ್ಲೂಕು ಅಮಲ್ದಾರ್ ಮಿ|| ಆರ್ ಎ. ನರಸಿಂಹಯ್ಯಂಗಾರ್ರಿಗೆ ಮೇ ತಾ 8 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಶಿರಸ್ತೆದಾರ್ ಮಿ ಕೆ ನಾಗೇಶಶಾಸ್ತ್ರಿಯವರು ತಾಲ್ಲೂಕಿನ ಛಾರ್ಜನ್ನು ವಹಿಸಿರತಕ್ಕದ್ದು.

ಹೊಸದುರ್ಗ ತಾಲ್ಲೂಕು ಅಮಲ್ದಾರ್ ಮಿ ಜಿ ನಾರಾಯಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಶಿರಸ್ತೆದಾರ್ ಮಿ ಎಂ ರಾಘವೇಂದ್ರರಾಯರು ತಾಲ್ಲೂಕಿನ ಛಾರ್ಜನ್ನು ವಹಿಸಿರತಕ್ಕದ್ದು

ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್ದಾರ್ ಮಿ| ಆರ್ ಸುಂದರರಾಯರಿಗೆ ಕೊಟ್ಟಿರುವ ಹತ್ತು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಹತ್ತು ದಿನ ಜಾಸ್ತಿಮಾಡಿದೆ ಶಿರಸ್ತೆದಾರರೇ ತಾಲ್ಲೂಕಿನ ಛಾರ್ಜನ್ನು ವಹಿಸಿರತಕ್ಕದ್ದು.

ನಮ್ಮ ಏಜಂಟರುಗಳಿಗೆ ನೋಟೀಸ್.

ಬರೋ ಮೇ ತಿಂಗಳ ಕಡೆಯಿಗೆ "ವೃತ್ತಾಂತ ಪತ್ರಿಕೆ"ಯ ಸಂವತ್ಸರವು ಪೂರೈಸುತ್ತದೆ ನಮ್ಮ ಏಜಂಟರುಗಳು ವರುಷದ ಲೆಕ್ಕಗಳನ್ನೆಲ್ಲಾ ತೈದುಮಾಡಿ, ಉಳಿದ ಪತ್ರಿಕೆಗಳನ್ನು ಕಳುಹಿಸಬೇಕು ಇದಲ್ಲದೆ ಜೂನ್ ಪ್ರಾರಂಭದಿಂದ ಅಡ್ವಾನ್ಸು ಚಂದಾ ಪಾವತಿ ಇದ ಹೊರತು ಏಜಂಟರು ಯಾರಿಗೂ ಪತ್ರಿಕೆಗಳನ್ನು ಕೊಡಲಾಗದು ಹೊಸದಾಗಿ ಚಂದಾ ಕೊಡತಕ್ಕವರು ಒಂದು ವರುಷದ ಚಂದಾ ೧ ರೂಪಾಯನ್ನು ಅಡ್ವಾನ್ಸಾಗಿಯೇ ನಮ್ಮ ಏಜಂಟರಿಗೆ ಪಾವತಿಮಾಡಬೇಕೆಂದೂ, ಅವರಿಂದ ಈ ಬಗ್ಗೆ ಕ್ರಮವಾದ ರಶೀತಿಯನ್ನು ಪಡೆದುಕೊಳ್ಳಬೇಕೆಂದೂ ಈ ಮೂಲಕ ಪ್ರಕಟಿಸುತ್ತೇನೆ

ಮ್ಯಾನೇಜರ್. "ವೃತ್ತಾಂತ ಪತ್ರಿಕೆ," ಮೈಸೂರು

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ.

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದ ಆಹಾರರುಚಿ ಕಡಮೆಯುಳ್ಳವರಾಗಿದಾರೆಂದು ಕಂಡ ಕೂಡಲೇ

SCOTT'S EMULSION 2-21

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷದವನ್ನು ಕೊಡಬೇಕು.

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟರೆ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು.

ಅದು ಸಂತೋಷವು ಅನುಭವಿಸುವ ಸಮವಾಗಿ ಆಹಾರದ ರುಚಿ ಹೊಂದುವ ಬೆಳ್ಳೆ ತೋರಿಸುವದು.

ಕೈಯಿಂದ ಮುಟ್ಟ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರುವವರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್ ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ಈ ಮಾನುಮನುಷ್ಯ ಇರುವ ಔಷದವನ್ನೇ ಕೊಂಡುಕೊಳ್ಳಿ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ:— ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು, ಗಾಬರಿ, ಕಣ್ಣುಮೊಬ್ಬು; ತಲೆ ತಿರುಗುವಿಕೆ, ಮೈನೋವು, ಕೀಲುನೋವು, ಮರವು, ಸಿಡುಕು; ಇವು ಹೊರಲಾಮುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ. ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಪಡಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [142-17]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಲೇಡೀಸ್-ವಾಚ್.

ಇದರ ಅನುಕೂಲ ಮತ್ತೆ ಯಾವದಕ್ಕೂ ಇಲ್ಲ ನಿಮ್ಮ ಇಚ್ಛೆ ಬಂದಂತೆ ಕೈಯಲ್ಲಿಯೂ ಕಟ್ಟಿಕೊಳ್ಳಬಹುದು, ಜೇಬಿನಲ್ಲಿಯೂ ಹಾಕಿಕೊಳ್ಳಬಹುದು. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ತಲೆಯಲ್ಲಿ ಬೀಗವುಳ್ಳದ್ದು ಶುದ್ಧವಾದ ನಿಕಲ್ ಮುಚ್ಚಳವುಳ್ಳದ್ದು. ಸುಂದರವಾದದ್ದು ಖಾತ್ರಿಯಾದವೂಲು. ಇದರ ಕ್ರಯ ಸುಂದರವಾದ ವಾಚ್ ಸರಪಣಿ ಮತ್ತು ಕೈಯಲ್ಲಿ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಮೇತ



ರೂ. 3—8—0 ಮಾತ್ರ. [77 1]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ಜಿ. ಆರ್. ವೆಂಕಟರಮಣ ಅಂಡ್ ಕಂಪನಿ,

ನಂ. 7 ಕೋಮಟಿ ವೆಂಕಟಾಚಲಯ್ಯರ್ ಬೀದಿ, ಮದರಾಸು.

Mellin's Food

ಮೆಲ್ಲಿನ್ಸ್ ಆಹಾರವು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಕೈಸೋಕದೆ ತಯಾರಾದದ್ದು.

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಧರ್ಮಾರ್ಥವಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs. OAKES & Company. Mount Road, Madras.

[4-2"] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. H. GULLIFORD, Proprietor and Manager, Wesleyan Mission Press, Mysore. 22/5/1918.

REGISTERED
M 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು

ಸಂಪುಟ ೨೬ ಮೈಸೂರು—ಸನ್ ೧೯೧೩ ನೇ ಇಸವಿ ಮೇ ತಾರೀಖು ೧೯ ನೇ ಗುರುವಾರ. ಸಂಚಿಕೆ ೫೨

ಕಣ್ಣಿಗೆ ನೋಡಲು ಅಗ್ಗದ ತೈಲ ಎಣ್ಣೆಗಳು ಈಗ ಎಲ್ಲೆಲ್ಲೂ ಬಳಕೆಯಾಗು
ತ್ತಿವೆ ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಅಗಲವಾಗಿ ಉಕ್ಕುವ ತಾಳು ಮತ್ತು ತಲೆ ಬಿಸಾಗಿ ... ತಲೆನೋವು ... ಕೆಡುವ ... ಸಮ್ಮತೋಗುತ್ತೆ ಆದಕಾರಣ ... ಶೀತತ್ವವಾಗಿಯೂ ಸ್ವಚ್ಛವಾಗಿಯೂ ಇರುವ ಕಾಮಿನಿಯಾ ತೈಲವನ್ನು ... ಇದು ಕೂದಲು ... ಕೆಡುತ್ತೆ ... ಶಿಲ್ಪ ಮತ್ತು ... ಕೂದಲನ್ನು ... ಕೂದಲು ಇದರಿಂದ ವಿಪುಲವಾಗಿ ನಯವಾಗಿ ಚಕಚಕಿಸುವದು ... ಕಪ್ಪು, ಆಗಾಗ್ಗೆ ... ಬಿಮ್ಮಯೋಗದೆ ... ವತ್ತ ಕೂದಲಿಗೆ ತೊಳಪುಕೊಡುತ್ತೆ ... ಬುರು ಮಾಡುತ್ತೆ ... ಸೂಡಿನ ಹೊಟ್ಟನ್ನು ... ಉತ್ತಮೋತ್ತಮವಾದ ಸುಗಂಧವುಳ್ಳ ... ಕಾರಣ ಕೂದಲಿಗೆ ... ಮನಸ್ಸಿಗೆ ಆನಂದವನ್ನೂ ಹರ್ಷವನ್ನು ಕೊಡುತ್ತದೆ ಬೀಳುವ ಕೂದಲನ್ನು ... ಬಿಳುಪು, ನರೆಕೂದಲನ್ನು ಕಪ್ಪುಛಾಯೆಗೆ ... ತಂಪಾಗಿಯೂ ... ಕೋಮಲವಾಗಿಯೂ ಇಟ್ಟುಕೊಳ್ಳುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೂ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ

ಕ್ರಯ ಪ್ರತಿ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0 4 0 ಬೇರೆ ತರಬೇಕು
3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

... ಮೀರಿದರೆ ... ಅಧಾರ್ಲಿಯ ಚೀಟಿನ್ನು ಕಳುಹಿಸಿ
ಮೈಸೂರು ... ನಲ್ಲಿ ... ಮೊದಲೂ ...
... ಪತ್ರಿಕೆಯೂ ದೊರೆಯುತ್ತವೆ ಇದರಿಂ
ದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೇಶದ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ ಮನ್ನಾರ್‌ಗುಡಿ ... ಸೆಕ್ರೆಟರಿ ಮಿ॥ ಟಿ ಸಾಮಿಯಾರ್‌ರವರು ಬರೆಯುವದು—"ದಯಮಾಡಿ ... ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ ನನ್ನ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ" ವಿದುಮುವಟ್ಟ... ಎಲ್ ಸ್ಕೂಲ್ ಹೆಡ್ ಮಾಸ್ಟರ್ ಮಿ॥ ಎಂ ಸುಬ್ರಹ್ಮಣ್ಯಪಿಳ್ಳೆಯವರು ಬರೆಯುವದು—"ನಾನು ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ... ಅದು ಕೂದಲನ್ನು ... ಅಂದವಾಗಿಯೂ, ಕೋಮಲವಾಗಿಯೂ, ಸೊಂಪಾಗಿಯೂ ... ಹೇಳಬಲ್ಲೆನು ... ಇನ್ನು ಮೂರು ಬಾಟ್ಲಿ ಎಣ್ಣೆ ಕಳುಹಿಸಿಕೊಡಿ" ... ಆಫೀಸ್ ನ ... ಬರೆಯುವದು—"... ನನ್ನ ಕಾಮಿನಿಯಾ ಎಣ್ಣೆ ... ಬಾಟ್ಲಿ ಕಳುಹಿಸಿಕೊಡಿ ಒಂದು ... ಎಣ್ಣೆಗಳು ಮುಗಿದುಹೋಯಿತು ಇದೇ ಉತ್ತಮೋತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳುತ್ತೇನೆ" ಆದಕಾರಣ ನೀವು ಒಂದು ಸಲ ತರಿಸಿ ಪರೀಕ್ಷೆ ಮಾಡಿ

ಎಚ್ಚರಿಕೆ— ಹೊಸದಾಗಿ ಇಟ್ಟಿರುವ ... ಕಾಮಿನಿಯಾ ಎಣ್ಣೆ ... ಅದು ಇಲ್ಲದಿದ್ದರೆ ಅವನ ಹೆಸರು ... ಮೋಸಕರವಾದ ಅನೇಕ ... ಗಳನ್ನು ಇದೇ ಹೆಸರಿಟ್ಟು ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ ... ಅಗ್ಗ, ಇದು ಒಳ್ಳೇದು ಎಂದು ಹೇಳಿ ಮೋಸಮಾಡುವರು ಇಂಥಾ ... ಎಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ... ಕೊಂಡುಕೊಳ್ಳಿ

ಎಲ್ಲಾ ಸ್ಥಳಗಳಲ್ಲಿಯೂ ಏಜೆಂಟರು ಬೇಕು
ಏಜೆಂಟ್, ದಿ ಉಲ್ಕ ... ಮಂಗಳೂರು

ವಿಳಾಸ — [8-20]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸೀದ್, ಬೊಂಬಾಯಿ.

ಪ್ರತಾಪಕಂಠೀರವ ಚರಿತ್ರೆ.

(1) "ದುರ್ಜನರಿಗೆ ... ಉಂಟಾಗುವದರಿಂದ ಅವರ ಯತ್ನಗಳಿಗೆ ಕೊಂಚ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ, (2) ಸ್ತ್ರೀಧರ್ಮ ... (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು, (4) ವನ, ಸರಸ್ಸು, ಆರಾಮ ... (5) ... ವಿಷಯಗಳು (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭ ಶೈಲಿ (7) ಸರಸ ... ಕಥಾಭಾಗಗಳು ಕೂಡಿವೆ ಕ್ರಯ —1 ರೂಪಾಯಿ ಟಪಾಲ್ ಹಾಸಲು ಬೇರೆ

[16 11] ನಮ್ಮ ವಿಳಾಸ —ವಿಜಯ ... ಕಂಪನಿ, ಬೆಂಗಳೂರು ಸಿಟಿ

ಡೋಂಗರೆ ಇವರ ಬಾಲಾಮೃತ.

[115-46]

ಸಣ್ಣ ಮಕ್ಕಳಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದುದರಿಂದ ಮಕ್ಕಳು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ... ಪುಷ್ಟಿಯು ದೊಡ್ಡದಾಗಿರೋಣ ... ಬಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯು ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ

ಸಮಸ್ತ ವಿಧವಾದ ನೋವೂ ಶ್ರಮವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಬೆನ್ನಿನ ಸೆಳತ, ಕೀಲುನೋವು, ಶೈತ, ಈ ನೋವುಳ್ಳ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ... ಬಿಕರಿಯಾಗುತ್ತಲಿವೆ ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ಬಿಕರಿಯಾಗುವದು

ಮುಲಾಮು ಔಷಧದ ಡಬ್ಬಿಗೆ 6 ಆಣೆ, 12 ಕುಪ್ಪಿಗೆ ರೂ 3-4-0 ಹಲ್ಲುಪುಡಿ ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ 1-2-0 ವಿ ಪಿ ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ [42-11]

ವಿಳಾಸ —ಅಮೃತಾಂಜನ ಡಿಪೋ, ೧೯ ಫ್ರೈಯರ್ ರೋಡ್, ಫೋರ್ಟ್, ಬೊಂಬಾಯಿ.

ಮೈಸೂರು ಬ್ಯಾಂಕ್, ಲಿಮಿಟೆಡ್.

ಮೈಸೂರು ... ಮಹಾರಾಜಾ ಸಾಹೇಬರವರ ಸರ್ಕಾರದವರ ಪ್ರೋತ್ಸಾಹ ... ಸಹಾಯವನ್ನು ...

ಕ್ರಮವಾಗಿ ರಿಜಿಸ್ಟರ್ ಮಾಡಲ್ಪಟ್ಟಿದೆ

ಮೂಲಧನ 20,00,000 ರೂಪಾಯಿಗಳು.

ಷೇರೊಂದಕ್ಕೆ 100 ರೂಪಾಯಿಗಳಂತೆ 20,000 ಷೇರುಗಳಾಗಿ ವಿಭಾಗಿಸಲ್ಪಟ್ಟಿವೆ.

ಷೇರುಗಳನ್ನು ... ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ ... ಮೈಸೂರು ಸಂಸ್ಥಾನದ ಪ್ರಜೆಗಳಿಗೆ ... ಇದರಡಿ ವಿವರಿಸಿರುವಂತೆ ಹಣಗಳನ್ನು ಕೊಡತಕ್ಕದ್ದು

ದರಖಾಸ್ತಿನೊಡನೆ ಷೇರೊಂದಕ್ಕೆ 10 ರೂಪಾಯಿಗಳು ಹಂಚಿಹಾಕಿದ ಅನಂತರದಲ್ಲಿ ಷೇರೊಂದಕ್ಕೆ 15 ರೂಪಾಯಿಗಳು

ಮೂರು ತಿಂಗಳು ನಂತರ ಷೇರೊಂದಕ್ಕೆ 5 ರೂಪಾಯಿಗಳು

ಎರಡು ತಿಂಗಳಿಗೆ 10 ರೂಪಾಯಿಗಳಂತೆ ಷೇರೊಂದಕ್ಕೆ ಇನ್ನು 20 ರೂಪಾಯಿಗಳನ್ನು ... ಷೇರೊಂದಕ್ಕೆ ಉಳಿದ 40 ರೂಪಾಯಿಯನ್ನು ಡೈರೆಕ್ಟರುಗಳಿಗೆ ಅವಶ್ಯ ... 10 ರೂಪಾಯಿಗೆ ಮೀರದ ಕಂತುಗಳಲ್ಲಿ ... ಪ್ರತಿ ಕಂತಿಗೂ ಎರಡು ತಿಂಗಳು ವಾಯಿದೆ ಕೊಟ್ಟು ತರಿಸಿಕೊಳ್ಳಬಹುದು

ಷೇರುದಾರರಾಗಲು ಇಷ್ಟವುಳ್ಳವರು ಜಾಗ್ರತೆಯಾಗಿ ದರಖಾಸ್ತುಮಾಡುವದು ಉತ್ತಮ ಷೇರುಗಳಿಗಾಗಿ ದರಖಾಸ್ತುಗಳು ವಿಶೇಷವಾಗಿ ಬರುತ್ತಿವೆ —ನಾಲ್ಕು ಲಕ್ಷ ರೂಪಾಯಿಗಳ ಷೇರುಗಳಿಗೆ ಇದಕ್ಕೆ ಮುಂಚೆಯೇ ... ಮಾಡಿದಲ್ಲಿ ದೊರಕಲಾರದು —ಪ್ರಸಿದ್ಧಪತ್ರಿಕೆ, ದರಖಾಸ್ತು ಫಾರಂ ವಗೈರೆ ಬ್ಯಾಂಕು ಸಕ್ರೆಟರಿಯವರಿಗೆ ಬರೆದು ತರಿಸಿಕೊಳ್ಳಬಹುದು.

Mysore Bank Office,
Edinburgh House, Shankarpur,
BANGALORE CITY

199]

(Sd) K. P PUTTANNA CHETTY,
Chairman.

ಕುಂತಳಾನಂದ ತೈಲವು.

147 30

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ

ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸನೆಯೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಟಿ ಎಮ್ ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್

THE MYSORE DASARA INDUSTRIAL AND AGRICULTURAL EXHIBITION

The next **Exhibition** will be opened at Mysore on the 3rd of October, 1913 Classified list under 'Industries' Embroidery, etc, has been greatly enlarged Prospectus setting forth all details will be issued shortly

Sale Rooms will be made available for the sale of Exhibits at a reasonable rent

Competitions in "Weaving, Metal and Wood Carving," Pottery and Ploughing' and in "Lace and Gold and Silver Embroidery Works' have been arranged

A chance for inserting Advertisements in the Official Hand Book of Exhibits has also been allowed at reasonable rates

Concessions have, as usual, been granted by the several Railway Administrations in India

The issue of the usual Combined Railway and Exhibition Season Tickets for the First and Second Class travellers at *reduced rates* has been arranged for with effect from the 1st of September, 1913, between Bangalore and Mysore

Mysore, G SUBBUSWAMI IYER,

12th May, 1913 [95 2] *Secretary*

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-22

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಸೆಟ್ಟಿಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವೂ ಚನ್ನಾಗಿಲ್ಲದವೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧—೮, ರೂ ೧—೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೂಸುಗಳ ಟೋಪಿ, ಪೂತೀ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

1 22



ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತವೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬ... ಕೀರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿ... ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಲ್ಪಡಲಿಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುತ್ತದೆ ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಕಾಮಯಹರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿ ... ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಜೋವೆತ (ಭಾರ), ... ಶೀತದ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತಗೆದು ಬುದ್ಧಿವಾದಿ ವೃದ್ಧಿಪಡಿಸುತ್ತವೆ ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ, ಸಚ್ಛುಜ್ವರ, ಕ್ಷಯತ್ವಗಳನ್ನು ಗುಣಪಡಿಸುತ್ತವೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ — 320 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಮೆಚ್ಚು, 1 ರಿಂದ 13 ಕುಪ್ಪೀ ವರೆಗೆ ಪೋಸ್ಟೇಜು 1 ಆಣೆ [136 31]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ... ಗಳೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆ ರೂ 1 ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಗರ್ಭಿಣೀಶಿಶುಸಂರಕ್ಷಣ.

MIDWIFERY ಕನ್ನಡ ಮಿಡ್‌ವೈಫರಿ ಟ್ರೇಯಿನಿಗೂ, ಮಿಡ್‌ವೈಫ್ ಪರೀಕ್ಷೆಗೆ ಓದುವವರಿಗೂ ಪ್ರಯೋಜನವಾದದು ಕ್ರಯ ೧೨ ಆಣೆ [19 18]

ವಿಳಾಸ — ದಿ ಜನರಲ್ ಏಜನ್ಸಿ ಮೈಸೂರು

ನಮ್ಮ ಏಜಂಟರಿಗೆ ನೋಟೀಸ್

ಇದೇ ಮೇ ತಿಂಗಳ ಆಖೈರಿಗೆ "ವೃತ್ತಾಂತ ಪತ್ರಿಕೆ" ಯ ಸಂವತ್ಸರವು ಪೂರೈಸುತ್ತದ ನಮ್ಮ ಏಜಂಟರುಗಳು ವರುಷದ ಲೆಕ್ಕಗಳನ್ನೆಲ್ಲಾ ಖೈದುಮಾಡಿ, ಬಾಕೀ ಪಟ್ಟಿಗಳನ್ನು ಕಳುಹಿಸಬೇಕು ಇದಲ್ಲದೆ ಜೂನ್ ಪ್ರಾರಂಭದಿಂದ ಅಡ್ವಾನ್ಸು ಚಂದಾ ಪಾವತಿ ಇದ ಹೊರತು ಏಜಂಟರು ಯಾರಿಗೂ ಪತ್ರಿಕೆಗಳನ್ನು ಕೊಡಕೂಡದು ಹೊಸದಾಗಿ ಚಂದಾ ಕೊಡತಕ್ಕವರು ಒಂದು ವರುಷದ ಚಂದಾ ೧ ರೂಪಾಯನ್ನು ಅಡ್ವಾನ್ಸಾಗಿಯೇ ನಮ್ಮ ಏಜಂಟರಿಗೆ ಪಾವತಿಮಾಡಬೇಕೆಂದೂ, ಅವರಿಂದ ಲೆಕ್ಕ ಕ್ರಮವಾದ ರಸೀತಿಯನ್ನು ಪಡೆದುಕೊಳ್ಳಬೇಕೆಂದೂ ಈ ಮೂಲಕ ಪ್ರಕಟಪಡಿಸುತ್ತೇವೆ

ಮ್ಯಾನೇಜರ್, "ವೃತ್ತಾಂತ ಪತ್ರಿಕೆ, ಮೈಸೂರು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

104 1

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ಕೀಲು, ಅರಶಲೆ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಬಾವನ್ನುವುದು, ಕೆಮ್ಮುಗಳು ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡಿರೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಜಿ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

1914 ನೆಯ ಲೋವರ್ ಸೆ|| ಕನ್ನಡ ಟೆಕ್ಸ್ಟ್ ನೋಟ್ಸು

ಸಿದ್ಧವಾಗಿದೆ ಸುಲಭ ಕ್ರಯ 4 ಆಣೆ

ಡಿಸ್ಕೌಂಟು 10 ಕ್ಕೆ 1, 25 ಕ್ಕೆ 4, 50 ಕ್ಕೆ 9, 100 ಕ್ಕೆ 22

ಸ್ವಲ್ಪ ಪ್ರತಿಗಳೇ ಅಚ್ಚಾಗಿರುವದರಿಂದ ಬೇಗನೆ ಬರೆಯಿರಿ ತರಿಸಿ ನೋಡಿ ಇತರ ಪುಸ್ತಕಗಳೂ ನಮ್ಮಲ್ಲಿ ದೊರೆಯುವವು [89-4]

ವಿಳಾಸ —ವಿ ಗುರುರಾವ್,

ಕರವಟ್ಟಿ ಬೀದಿ, ಹಳೆ ಅಗ್ರಹಾರ, ಮೈಸೂರು

ಶಬ್ದದರ್ಶನದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕೆಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟದೆ ಕ್ರಯ 3 ಆಣೆ ಅರಕ್ಕೊಂದು ಉಚಿತ

[187 24] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್ ಮೈಸೂರು

ನಮೂನೆ ಮುಫತ್ತು

ಕೇಶಕುಸುಮಾಕರ ತೈಲವು.

ಸಾಟಿಯಿಲ್ಲದ ಈ ತೈಲವು ಒಳ್ಳೆ ಪಚನಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಸನಮಾಡುವದರಲ್ಲಿಯೂ, ಒಟ್ಟೆ ತಲೆಯಲ್ಲಿ ಕೇಶವನ್ನು ಬೆಳೆಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ, ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುದ್ದಿ ತೈಲ ಕ್ರಯ 14 ಆಣೆ ಮೂರು ಬುದ್ದಿಗಳ ತೈಲ ಕ್ರಯ ರೂ 1-12 ಆ ಆರು ಬುದ್ದಿಗಳ ತೈಲ ಕ್ರಯ ರೂ 3-4 ಆ ಡಜನ್ ಬುದ್ದಿಗಳ ಕ್ರಯ ರೂ 6

ವಿ. ಪಿ ಅಂಚೆ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ

[82 5] ಔಷಧಾಲಯ, 177 ಚೀನಾ ಬಜಾರ್ ರೋಡ್, ಮದ್ರಾಸು

ಬೇಕಾಗಿದೆ.

ಏಜಂಟರುಗಳು ನಮ್ಮ ಔಷಧಿಗಳನ್ನು ವಿಕರಿಸಲು ಪ್ರತಿ ತಿಂಗಳಿಗೂ ಸಂಬಳವು 20 ರೂಪಾಯಿಗಳಿಂದ 100 ರ ವರೆಗೆ ಕೊಡಲ್ಪಡುತ್ತೆ. ಅಪೇಕ್ಷಿಸುವವರು ೩ ಅರ್ಧಾಣೆ ಸ್ಟಾಂಪಿನೊಡನೆ ಕೆಳಗಿನ ವಿಳಾಸಕ್ಕೆ ಬರೆಯಿರಿ. [89 1]

ದಿ ಶ್ರೀ ಮೆಡಿಕಲ್ ಕೌನ್ಸಲ್, 97 ಪೂಲಿ ಬಜಾರ್ ರೋಡು, ಮದ್ರಾಸು.

1911 ನೇ ವರ್ಷದ ಲೋವರ್ ಸೆಕೆಂಡರಿ ಕನ್ನಡ ಟೆಕ್ಸ್ಟ್ ನೋಟ್ಸು ವಿಕರಿಗೆ ಸಿದ್ಧವಾಗಿದೆ—ಕ್ರಯ 6 ಅಣೆ

ಡಿಸ್ಕೌಂಟು 10 ಕ್ಕೆ 1, 50 ಕ್ಕೆ 7; 100 ಕ್ಕೆ 20.

ನಮ್ಮ ನೋಟ್ಸು ಬೇಕಾಗಿದ್ದವರೆ ನೋಟ್ಸಿನ ಮೇಲೆ ನಮ್ಮ ಹೆಸರನ್ನು ನೋಡಿ ಕೊಳ್ಳಿ. [83-5]

ಎನ್. ಆರ್. ವೆಂಕಟಸುಬ್ಬಾಚಾರ್ಯರ್,
ಸುಬೋಧ ಗ್ರಂಥಾಲಯ, ಮೈಸೂರು

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ:—1 ಪಿನಲ್ ಕೋಡು, 2. ಪೊಲೀಸ್ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5. ರಕ್ತವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಹುಟ್ಟಿಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿದೆ.

ಪ್ರತಿ ಪಿನಲ್ ಸೆಕ್ಷನ್‌ಗೂ,— ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ ಯಾ ಕೂಡದೆ • ಮೊದಲು ಸಮನ್ಸ್ ಹುಟ್ಟಬೇಕೆ • ಯಾ ವಾರಂಟು ಹುಟ್ಟಬೇಕೆ • ಜಾಮೀನ್ ತೆಗೆದುಕೊಳ್ಳಬಹುದೆ • ಯಾ ಕೂಡದೆ • ರಾಜಿಯಾಗಬಹುದೆ • ಯಾ ಕೂಡದೆ • ಎಂಬ ಸಂಗತಿಗಳೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ. ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ. 22-5 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ. ಕ್ರಯ ರೂಪಾಯಿ 2-0 0 ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ಪೇವಾರೆಡ್ಡಿ,
ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್,
[101 1] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್

ಕೂದಲು ತೆಗೆಯುವ ನವೀನ ವಸ್ತು.

ಕಾರೊನೇಷನ್ ಸೋಪ್.

ಒಂದಾವರ್ತಿ ಚರ್ಮಕ್ಕೆ ಸವರಿದರೆ ದೇಹದ ಯಾವ ಭಾಗದ ಕೂದಲಾಗಲಿ ಚೊಕ್ಕಟವಾಗಿ ಹೋಗುತ್ತೆ. ಸ್ವಲ್ಪವೂ ನೋವಾಗುವದಿಲ್ಲ. ಎಷ್ಟು ಮಾತ್ರಕ್ಕೂ ಕಲೆ ಮಚ್ಚೆ ನಿಲ್ಲುವದಿಲ್ಲ. ವಿಶೇಷ ಸೂಚನೆ:—ಮೈ ಚರ್ಮದ ಸ್ವಾಭಾವಿಕ ಬಣ್ಣವನ್ನೂ ಗುಣವನ್ನೂ ಹೊಳಪನ್ನೂ ಸ್ವಲ್ಪವೂ ವ್ಯತ್ಯಾಸ ಮಾಡದೆ ಕಾಪಾಡತಕ್ಕ ಸಾಬೂನು ಇದು ಒಂದೇ ಎಂದು ನಿಶ್ಚಿತವಾಗಿ ತಿಳಿಯಿರಿ.

ಎಲ್ಲೆಲ್ಲೂ ಏಜಂಟರು ಬೇಕು—ಧಾರಾಳವಾದ ಕಮೀಷನ್.

ನಮ್ಮ ಹಾಪಿನ ಗುರುತು ಪೆಟ್ಟಿಗೆಯ ಮೇಲೆ ಇರುವದನ್ನು ನೋಡಿ ಕೊಂಡುಕೊಳ್ಳಿ. ಕ್ರಯ 3 ಬಿಲ್ಲೆಗಳ 1 ಪೆಟ್ಟಿಗೆ ರೂ 1. 2 ಪೆಟ್ಟಿಗೆ ರೂ 1 12-0. ಒಂದು ಬಿಲ್ಲೆಗೆ 6 ಅಣೆ ಪೋಸ್ಟೇಜು 4 ಅಣೆ. [100-1] ನಮ್ಮ ವಿಳಾಸ

ಷಾ ಭಗವಾನ್‌ದಾಸ್ ಚುನಿಲಾಲ್ ಕಂಪನಿ,
177, ಚೀನಾಬಜಾರ್ ರೋಡ್, ಮದರಾಸ್.

ಲೇಡೀಸ್ ವಾಚ್.

ಇದರ ಅನುಕೂಲ ಮತ್ತೆ ಯಾವದಕ್ಕೂ ಇಲ್ಲ. ನಿಮ್ಮ ಇಚ್ಛೆ ಬಂದಂತೆ ಕೈಯಲ್ಲಿಯೂ ಕಟ್ಟಿಕೊಳ್ಳಬಹುದು. ಜೇಬಿನಲ್ಲಿಯೂ ಹಾಕಿಕೊಳ್ಳಬಹುದು. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ತಲೆಯಲ್ಲಿ ಬೀಗವುಳ್ಳದ್ದು. ಶುದ್ಧವಾದ ನಿಕಲ್ ಮುಚ್ಚಳವುಳ್ಳದ್ದು. ಸುಂದರವಾದದ್ದು. ಖಾತ್ರಿಯಾದ ಮಾಲು. ಇದರ ಕ್ರಯ ಸುಂದರವಾದ ವಾಚ್ ಸರಪಣಿ ಮತ್ತು ಕೈಯಲ್ಲಿ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಮೇತ 3-8-0 ಮಾತ್ರ. [77—6]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ಬಿ ಆರ್. ವೆಂಕಟರಮಣ ಅಂಡ್ ಕಂಪನಿ,
ನಂ. 7 ಕೋನ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಕನ್ನಡ! ಕಾದಂಬರೀ ಸಂಗ್ರಹ ಮಾಸಪತ್ರಿಕೆ!!

ಪ್ರಥಮ ಸಂಪುಟದಲ್ಲಿ ಮೃತ್ಯುಪರೀಕ್ಷೆಯೇ ಮುಂತಾದ 8 ಸೊಗಸಾದ ಕಾದಂಬರಿಗಳಿವೆ. ಬೆಲೆ 1 8-0 ಪ್ರತಿಗಳು ಸ್ವಲ್ಪವಿವೆ. ಗ್ರಾಹಕರ ಸಂಖ್ಯೆ 800 ಹೊಸ ಚಂದಾದಾರರಿಗೆ ಪುಸ್ತಕಗಳ ಬಹುಮಾನವುಂಟು [101-1]

ನಮ್ಮ ವಿಳಾಸ—ಸಿ. ಪಿ. ಶಾಸ್ತ್ರಿ, ಚಾಮರಾಜನಗರ.

ಗೃಹಕೃತ್ಯದ ನೋಟೀಸು.

ಇದರಿಂದ ಹುಣಸೂರು ನಿವಾಸಿ ಮಡಿಕೇರಿ ಪತ್ರಾ ಸಾಬರ ಕುಮಾರ ಗೌಸ್ ಸಾಬಿಯು ಸಮಸ್ತ ಜನಗಳಿಗೂ ತೃಪ್ತಪಡಿಸುವುದು —ನಮ್ಮ ತಂದೆಯವರಿಗೆ ಈಗ ಸುಮಾರು 80-85 ವರುಷ ವಯಸ್ಸು. ಇವರಿಗೆ ಹಾಲಿ ಮೂರು ಮಂದಿ ಭಾರ್ಯೆಯರು ಇರುತ್ತಾರಾದರೂ ನಮ್ಮನ್ನೆಲ್ಲಾ ಹೊಟ್ಟೆಗೂ, ಬಟ್ಟೆಗೂ ಮಾರ್ಗವಿಲ್ಲದ ಪರಿತಾಪಕರವಾದ ಸ್ಥಿತಿಯಲ್ಲಿ ಬಿಟ್ಟು ನಮ್ಮ ತಂದೆ ಬುದ್ಧಿಹೀನರಾಗಿ ಕುಕ್ಕೆ ಹೆಣೆಯುವ ಕೊರಮರ ಕಾಳಿ ಎಂಬವಳ ಮಗಳು ತಿಮ್ಮಿ ಎಂಬವಳನ್ನು ಇಟ್ಟುಕೊಂಡು ಬದುಕುತ್ತಿದ್ದಾರೆ. ಅವಳನ್ನು ಕಲ್ಯಾಣಕೆ ಗ್ರಾಮದಲ್ಲಿಟ್ಟು ಅವಳ ದುರ್ಬೋಧನೆಗೆ ಕಿವಿಗೊಟ್ಟು, ನ್ಯಾಯವಾಗಿ ಹಕ್ಕುಳ್ಳವರಾದ ಕುಮಾರನಿಗೂ, ಭಾರ್ಯೆಯರಿಗೂ ಮೋಸಪಡಿಸಿ ಆಸ್ತಿಪಾಸ್ತಿಯನ್ನೆಲ್ಲಾ ಪೋಲುಮಾಡುತ್ತಿರುವರು. 350 ರೂಪಾಯಿ ಬಾಳುವ ಕಶೇ ಮಾವಿನ ಫಸಲನ್ನು 150 ರೂಪಾಯಿಗೆ ಗುತ್ತಿಗೆಗೆ ಕೊಟ್ಟಿರುವರು; 80 ಪಲ್ಲಾ ಭತ್ತವನ್ನು ನಮ್ಮಗಳ ಜೀವನಕ್ಕೆ ಸಿಕ್ಕದಂತೆ ಹೊರಗಡೆ ವಿಕ್ರಯಿಸಿ ವಿಶಿಷ್ಟ ಹಣ ಕಾಸನ್ನೂ ಮೋಸ ಸಮೂದಿಸಿರುವ ತಿಮ್ಮಿಯ ಸ್ವಾಧೀನಪಡಿಸಿರುತ್ತಾರೆ. ಇವರಿಗೆ ಬುದ್ಧಿ ಚಂಚಲವಾಗಿರುವುದರಿಂದ ಇನ್ನೂ ಇರುವ ಹೊಲ, ಗದ್ದೆ, ತೋಟ, ಮನೆ ಇತ್ಯಾದಿ ಆಸ್ತಿಗಳನ್ನು ಇವರನ್ನು ಮೋಸಪಡಿಸಿ ಯಾರೂ ಕ್ರಯ ಭೋಗ್ಯ ಆಧಾರಗಳಿಂದ ಸ್ವಾಧೀನಮಾಡಿಕೊಳ್ಳಕೂಡದು. ಇಲ್ಲವೇ ನಮ್ಮ ತಂದೆಯವರಾದರೂ ನ್ಯಾಯವಾದ ಹಕ್ಕುಳ್ಳ ನಮ್ಮಗಳ ಅನುಮತಿ ಇಲ್ಲದೆ ಮತ್ಯಾರಿಗೂ ಮಾರುವುದು ಧರ್ಮವಿರುದ್ಧವಾಗಿರುವುದರಿಂದ ಹಾಗೆ ಯಾರಾದರೂ ಪಡೆದುಕೊಂಡರೆ ಅದು ಊರ್ಜಿತವಾಗಲಾರದು. ಮುಂದೆ ಆಗುವ ನಮ್ಮಗಳ ನಷ್ಟಗಳಿಗೆಲ್ಲಾ ಅವರೇ ಗುರಿಯಾಗಬೇಕಾಗುವದೆಂದು ಈ ಮೂಲಕ ಸರ್ವರಿಗೂ ತಿಳಿಸಿ ಎಚ್ಚರಿಕೆ ಕೊಟ್ಟಿರುತ್ತೇನೆ [102-1]

ಮಡಿಕೇರಿ ಪತ್ರಾ ಸಾಬರ ಕುಮಾರ ಗೌಸ್ ಸಾಬಿ, ಹುಣಸೂರು

ನಾಣ್ಯವಾದ ವಾಚ್. ನಾಣ್ಯವಾದ ವಾಚ್.

ರೈಲ್ವೆ ಗಾರ್ಡ್ ಲೀವರ್ ಪಾಕೆಟ್ ವಾಚ್.

ಇದರ ಕ್ರಯ—ಬಾಗ್ಯವಾದ ವಾಚ್ ಸರಪಣಿ ಸಮೇತ ರೂ 2-8-0 ಮಾತ್ರ

5 ವರುಷಗಳ ಗ್ಯಾರಂಟಿ

ಇದು ಮಕ್ಕಳ ಆಟದ ಬೊಂಬೆಗಳಂತೆ ಕೆಲವು ದಿವಸಗಳು ಆಟವಾಡಿ ಕೆಟ್ಟು ಹೋಗತಕ್ಕಂಥಾ ಅಲ್ಪ ಗಡಿಯಾರವಲ್ಲ. ಸಾಧಾರಣವಾದ ವಾಚ್‌ಗಳಿಗಿಂತಾ



ಬಹು ಶ್ರೇಷ್ಠವಾದದ್ದು. ರೈಲ್ವೆ ಗಾರ್ಡ್, ರೈಲ್ವೆ ಇನ್‌ಸ್ಪೆಕ್ಟರ್ ಡ್ರೈವರ್ ಮುಂತಾದ ಅನೇಕ ರೈಲ್ವೆ ಉದ್ಯೋಗಸ್ಥರು ಇದನ್ನು ಇಟ್ಟುಕೊಂಡು ಉಪಯೋಗಿಸುತ್ತಿದ್ದಾರೆ. ಆದಕಾರಣವೇ ಇದಕ್ಕೆ ರೈಲ್ವೆ ಗಾರ್ಡ್ ವಾಚ್ ಎಂಬ ಬಿರುದು ಬಂದಿರುತ್ತದೆ. ಇದನ್ನು ಇಟ್ಟುಕೊಂಡು ರೈಲ್ವೆ ಗಾರ್ಡ್‌ರವರು ರೈಲ್ ನಡಿಸುತ್ತಾರೆ. ಈ ವಾಚ್ ವಿಚಾರವಾಗಿ ಹೆಚ್ಚಾಗಿ ಬರೆಯಲು ನಮ್ಮಿಂದ ಸಾಧ್ಯವಿಲ್ಲ. ಸಾವಿರಗಟ್ಲೆ ಬಹುಮಾನಗಿ ಲೆಕ್ಕವಿಲ್ಲದ ಯೋಗ್ಯತಾ ಪತ್ರಗಳನ್ನು ಹೊಂದಿರುತ್ತೇವೆ. ಕೆಲವು ವಾಚ್‌ಗಳು ಮಾತ್ರ ಉಳಿದಿರುತ್ತೆ. ಬೇಕಾದವರು ಶೀಘ್ರವಾಗಿ ಬರೆದು ತರಿಸಿಕೊಳ್ಳಿ. ತರಿಸಿಕೊಂಡು ಸಮ್ಮತವಿಲ್ಲದ ಪಕ್ಷದಲ್ಲಿ ಖಂಡಿತ ಹಣ ವಾಪಸು ಮಾಡಲ್ಪಡುತ್ತೆ. ನಮ್ಮ ವಿಳಾಸ — [68-7]

ಸುಪೀರಿಯರ್ ವಾಚ್ ಕಂಪನಿ, ಪೋಸ್ಟ್ ಬಾಕ್ಸ್ 167, ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ಹಸಿವಿಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಡದೆ ಬಾಯಾರಿಕೆ, ಬಳಲಿಕೆ, ಎದೆ ಕಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು; ತಲೆ ತಿರುಗುವಿಕೆ, ಮೈನೋವು, ಕೀಲುನೋವು, ಮರವು, ನಿತ್ರಾಣ, ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರಾಂಶಪ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶನೋ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಶುದ್ಧಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [142-38]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

9—5—1913 ರಿಂದ 16—5—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು.	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	1	2	103	69
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	15	11
ಹಾಸನ ,,	0	0	35	31
ಚಿತ್ರದುರ್ಗ ,,	0	0	0	0
ಕಡೂರ್ ,,	4	4	189	122
ಶಿವಮೊಗ್ಗ ,,	2	4	15	8
ಜುಮ್ಲಾ	7	10	357	241

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದಿ ಸಂವತ್ಸರೇ ಉತ್ತರಾಯಣೆ ವಸಂತಋತೌ ವೈಶಾಖ ಬಹುಳ ದಶಮಿ ಶುಕ್ರವಾರದಿಂದ ಜ್ಯೇಷ್ಠ ಶುದ್ಧ ಪಾಡ್ಯಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1913 ನೇ ಮೇ ಮತ್ತು ಜೂನ್.

ತಾ.	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಷಭ ಮಾಸ ತೇದಿ
30	ಶುಕ್ರ	ದಶಮಿ	36 38	ಉತ್ತರಾಭಾ	12-15	17
31	ಶನಿ ‡	ಏಕಾದಶಿ	42 52	ರೇವತಿ	47-50	18
1	ಭಾನು †	ದ್ವಾದಶಿ	45-56	ಅಶ್ವಿನಿ	52 34	19
2	ಸೋಮ §	ತ್ರಯೋದಶಿ	47-47	ಭರಣಿ	55-57	20
3	ಮಂಗಳ .	ಚತುರ್ದಶಿ	48-22	ಕೃತ್ತಿಕೆ	58-7	21
4	ಬುಧ •	ಅಮಾವಾಸ್ಯ	47 36	ರೋಹಿಣಿ	58-59	22
5	ಗುರು ,,	ಪಾಡ್ಯಮಿ	45-47	ಮೃಗಶಿರ	57-16	23

‡ ಸರ್ವತ್ರ ಏಕಾದಶಿ, ಮಳೆ ನಕ್ಷತ್ರ—ರೋಹಿಣಿ 1 ನೇ ಪಾದ † ದಗ್ಧಯೋಗ § ಸೋಮಪ್ರದೋಷ ಮಾಸಶಿವರಾತ್ರಿ, ಮಳೆ ನಕ್ಷತ್ರ—ರೋಹಿಣಿ 4 ನೇ ಪಾದ • ಸರ್ವತ್ರ ಅಮಾವಾಸ್ಯ, ವೃಷಭೆ (ಗ್ರಹಾ: ರ, ಚಂ, ಬು, ಶ. ,, ರಂಭಾನಾಗಗೌರೀ ವ್ರತ, ಮೃತ್ಯುಯೋಗ

ಪೇಟೆ ಧಾರಣೆ.

ದಿನಸಿ.	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ.	೧೫ ೪-೦	೧೭-೮-೦
ಕೆಂಬೂತಿ ಅಕ್ಕಿ ಅವಲ್	೧೬-೦-೦	೧೭-೮-೦
,, ದುಯಂ	೧೫-೦-೦	೧೭-೦-೦
ಜಾಪತ್ರೆ ಅಕ್ಕಿ	೧೫-೦-೦	೧೭-೪-೦
ಸಣ್ಣಕ್ಕಿ ಅವಲ್	೨೪-೦-೦	೧೮ ೮-೦
,, ದುಯಂ	೧೩-೦-೦	೧೭-೮-೦
ಕೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೨೫-೦-೦	೧೩-೮-೦
,, ದುಯಂ ,,	೧೪-೮-೦	೧೨-೮-೦
ಕ್ವೆಜ್ ರಾಗಿ ಪಲ್ಲಾ ೧ಕ್ಕೆ	೭-೪-೦	೫-೦-೦
ಕಾರಾಗಿ ,,	೬-೮-೦	೪-೧೨-೦
ಜೋಳ ,,	೭-೪-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ	೧೦-೪-೦	೧೩-೧೨-೦
ಬಳೆ ಅವರೆ ,,	೧೨-೪-೦	೧೧-೦-೦
ಹೆಸರು ,,	೧೩-೦-೦	೧೪-೦-೦
ಉದ್ದು ,,	೧೪-೮-೦	೧೬-೦-೦
ಕಡಲೆ ,,	೧೦-೮-೦	೧೨-೦-೦
ಎಳ್ಳು ಸೇರು ೧೨೭ಕ್ಕೆ	೨೭-೦-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೬-೧೨ ೦	೭-೦-೦
ಹರಳು ೧೨೭ ಸೇರಿಗೆ	೧೩-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೨-೪ ೦	೩-೮-೦
ಮೆಣಸಿನಕಾಯಿ ,,	೪-೦-೦	೩-೪-೦
,, ದುಯಂ	೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೪-೮-೦	ಮಣ ೫ ೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೮-೦	೬-೬-೦
ಹರಳೆಣ್ಣೆ ,, ,,	೫-೬-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫ ೨-೦	೫-೪-೦
ಉಪ್ಪು ,, ,,	೫-೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧-೧೨ ೦	೧-೪-೦
,, ಹಳೇದು ,,	೧-೯-೦	೧-೧೪-೦
ತುಪ್ಪ ಮಣ ೧ಕ್ಕೆ	೨೨ ೮-೦	೨೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೧೧-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೭-೦ ೦	೬-೦-೦
ಆಲೂಗೆಡ್ಡೆ ಮಣ ೧ಕ್ಕೆ	೧-೬-೦	೧-೦-೦
ಆಂಟ್ರಾಳದಕಾಯಿ ಮಣ ೧ಕ್ಕೆ	೦-೧೨-೦	೧-೮-೦
ಚಿನ್ನ (ಪೌನ್) ಕೆಂಪು	೧೫-೮-೦	೧೫-೮-೦
,, ,, ಪಸಿಮೆ	೧೫ ೧೪-೬	೧೫-೧೪-೬
,, ,, ಗಟ್ಟಿ ತೋಲ ೧ಕ್ಕೆ	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೋಲ ೧೦೦ಕ್ಕೆ	೮೧-೦-೦	೮೧-೩-೦

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೩ ನೇ ಇಸವಿ ಮೇ ತಾ. ೨೯ ನೇ ಗುರುವಾರ.

ಕನ್ನಂಬಾಡಿ ತಲಾವಿನ ಏರ್ಪಾಡು.

ಮೈಸೂರು ಗವರ್ನಮೆಂಟಿನವರು ಪ್ರಾರಂಭಮಾಡಿರುವ ಕನ್ನಂಬಾಡಿ ತಲಾವಿನ ಕಾಮಗಾರಿಯನ್ನು ಸಾರ್ಥಕವಾಗಿ ಮುಕ್ತಾಯಮಾಡುವುದಕ್ಕೆ ತುಂಬಾ ಶ್ರಮಪಡಬೇಕಾಗಿರುತ್ತದೆ. ಸದ್ಯದಲ್ಲಿ ಕಾಮಗಾರಿಗಳೆಲ್ಲಾ ತೃಪ್ತಿಕರವಾಗಿಯೂ ಜಾಗ್ರತೆಯಿಂದಲೂ ನಡೆಯುತ್ತಿರೋಣವರಿಂದ ಆಣೆಯ ಕೆಲಸಗಳು ಚೆನ್ನಾಗಿ ಜರುಗಿರುವವು. ಈಗ ಗವರ್ನಮೆಂಟಿನವರಿಗೆ ಒದಗಿರುವ ಒಂದು ದೊಡ್ಡ ಕಷ್ಟವೇನೆಂದರೆ, ಈ ತಲಾವಿನ ಪಾತ್ರ ವಿಸ್ತಾರವು ಅಪಾರವಾದದ್ದು ಬಹು ವಿಸ್ತಾರವಾದ ಭೂಪ್ರದೇಶವು ಅದರೊಳಗೆ ಮುಳುಗಿಹೋಗುತ್ತದೆ. ಆದಕಾರಣ ಆ ಪ್ರಾಂತ್ಯದ ಪ್ರಜೆಗಳಿಗೆ ಸರ್ಕಾರದವರು ಮನೆ ಮಠಗಳನ್ನು ಕಟ್ಟಿಕೊಳ್ಳುವುದಕ್ಕೂ, ಸಾಗುವಳಿ ಜಮಿಾನುಮಾಡಿಕೊಳ್ಳುವುದಕ್ಕೂ ಸರಿಯಾದಷ್ಟು ಸ್ಥಳವನ್ನು ಒದಗಿಸಿ ಕೊಡಬೇಕಾಗಿದೆ.

ಈ ತಲಾವಿಗಾಗಿ ಸರ್ಕಾರದವರಿಗೆ 10,000 ಎಕರೆಗಳ ಭೂಪ್ರದೇಶವು ಬೇಕಾದೀತು ; ಇದರಿಂದ ಸುತ್ತುಮುತ್ತಣ ನಾಲ್ವತ್ತೆಂಟು ಗ್ರಾಮಗಳಿಗೆ ಕಷ್ಟನಷ್ಟಗಳುಂಟಾಗುವವು. ಆ ಪೈಕಿ ಎಂಟು ಗ್ರಾಮಗಳೇನೋ ಸಂಪೂರ್ಣವಾಗಿ ತೊಡೆದು ಹೋಗಿ, ಸರ್ಕಾರದವರು ಸುಮಾರು 5,000 ಪ್ರಜೆಗಳಿಗೆ ಗ್ರಾಮ ಭೂಮಿಗಳನ್ನು ಒದಗಿಸಿಕೊಡಬೇಕಾಗುತ್ತದೆ. ಇದಕ್ಕೆ ಪ್ರತಿಯಾಗಿ ಗವರ್ನಮೆಂಟಿನವರು ಆ ಪ್ರಜೆಗಳನ್ನು ಕರೆದು—ಇಗೋ, ನಿಮ್ಮ ಮನೆ ಮಠಗಳೂ ಜಮಿಾನುಗಳೂ ಸರ್ಕಾರಕ್ಕೆ ಬೇಕಾಗಿವೆ, ಅವುಗಳಿಗಾಗಿ ನಿಮಗೆ ಇಷ್ಟು ರೂಪಾಯಿ ಪ್ರತಿಫಲ ಕೊಡುತ್ತೇವೆ, ಇದನ್ನು ತೆಗೆದುಕೊಂಡು ಹೋಗಿ ಎಂದು ಹೇಳಿ ಹಣವನ್ನು ಕೊಟ್ಟುಬಿಡುವುದು ಬಹಳ ಸುಲಭವಾಗಿತ್ತು. ಹೀಗೆ ಸರ್ಕಾರದವರು ಮಾಡಿಬಿಟ್ಟಿದ್ದ ಪಕ್ಷದಲ್ಲಿ ಪ್ರತಿಫಲವನ್ನು ಪಡೆದ ಅನೇಕಾನೇಕ ರೈತಪ್ರಜೆಗಳು ಬಹಳ ಬೇಗನೆ ದರಿದ್ರಾವಸ್ಥೆಗೆ ಬಂದು ಕೆಟ್ಟುಹೋಗುತ್ತಿದ್ದರೆನ್ನುವುದಕ್ಕೆ ಸಂಶಯವಿಲ್ಲ.

ಈ ರೀತಿ ಮಾಡದೆ ಸರ್ಕಾರದವರು ಜಮಿಾನುಗಳನ್ನು ಕಳೆದುಕೊಳ್ಳುವಂಥಾ ಪ್ರಜೆಗಳಿಗೆ ಸಾಟಿಯಾಗಿ ಬೇರೆಕಡೆ ಜಮಿಾನುಗಳನ್ನು ಕೊಡಬೇಕೆಂದು ಇದಕ್ಕಾಗಿ ನೇಮಕವಾಗಿರುವ ಅಧಿಕಾರಿಗೆ ಹುಕುಂ ಕೊಟ್ಟು ತಿಳಿಸಿರುವುದು ಬಹಳ ಸ್ತೋತ್ರಾರ್ಹವಾದದ್ದಾಗಿರುತ್ತದೆ. ಈ ಭಾರಿ ತಲಾವಿಗೆ ಸಂಬಂಧಪಟ್ಟಂತೆ ಕೆಲವು ಹೊಸ ನಾಲಾ ಬಡಾವಣೆಯ ಕಾಮಗಾರಿಗಳು ನಡೆಯಬೇಕಾಗುತ್ತಾದದ್ದರಿಂದ ಈಗ ಜಮಿಾನುಗಳನ್ನು ಕಳೆದುಕೊಳ್ಳುವವರಿಗೆ ಹೊಸ ನಿವೇಶನಗಳನ್ನೂ ಜಮಿಾನುಗಳನ್ನೂ ಒದಗಿಸುವುದು ಸಾಧ್ಯವಾದೀತೆಂದು ತೋರುತ್ತದೆ. ಈ ಕಾರ್ಯಗಳಿಗೆ ಹದಿನೂರು ಲಕ್ಷ ರೂಪಾಯಿ ತನಕ ಖರ್ಚಾಗುವುದಾದರೂ ಕಾಲಾನುಕಾಲದಲ್ಲಿ ಇದರಿಂದ ಸಂಸ್ಥಾನಕ್ಕೆ ಎಷ್ಟೋ ಪ್ರಯೋಜನವಾದೀತೆಂದು ಹೇಳಬಹುದಾಗಿದೆ.

ಇದೆಲ್ಲಾ ಸರಿಯಾಗಿ ನೆರವೇರಬೇಕೆಂಬ ಉದ್ದೇಶದಿಂದ ಸರ್ಕಾರದವರು ಕೆಲವು ಸಲಹೆಗಳನ್ನು ಕೊಟ್ಟಿರುತ್ತಾರೆ. ಅಧಿಕಾರಿಗಳು ಆ ಸಲಹೆಗಳ ಪರ್ಯವಸಾನವನ್ನು ಕುರಿತು ಯೋಚಿಸಿ ಸರಿಯಾಗಿ ರೂಢಿಸಲ್ಪಡುವ ಭಾಗಗಳನ್ನು ಗವರ್ನಮೆಂಟಿಗೆ ರಿಪೋರ್ಟು ಮಾಡಬೇಕಾಗಿದೆ. ಈಗ ಸರ್ಕಾರದವರು ಸೂಚಿಸಿರುವ ಸಲಹೆಗಳು ಬಹಳ ಚೆನ್ನಾಗಿವೆ ಎಂದು ನಾವು ಒಪ್ಪಿಕೊಳ್ಳುತ್ತೇವೆ. ಅಧಿಕಾರಿಗಳು ಆ ಸಲಹೆಗಳಂತೆ ಜಾಗ್ರತೆಯಾಗಿಯೂ ನಿಷ್ಪಕ್ಷಪಾತತೆಯಿಂದಲೂ ಕಾರ್ಯಭಾಗ ನಡಿಸುವರೆಂದು ನಿರೀಕ್ಷಿಸುವೆವು. ಇದರಲ್ಲಿ ಕೆಲವು ಪ್ರಜೆಗಳಿಗೇನೋ ಕಷ್ಟ ಅನನುಕೂಲಗಳುಂಟಾಗುತ್ತವೆ ; ಆದರೆ ಸರ್ಕಾರಿ ಅಧಿಕಾರಿಗಳು ಅಂಥಾ ಕಷ್ಟ ಅನನುಕೂಲಗಳು ಕೂಡಿದ ಮಟ್ಟಿಗೂ ಕಡಮೆಯಾಗುವಂತೆ ನೋಡಿಕೊಳ್ಳಬೇಕು.

ಪ್ರಜೆಗಳಾದರೋ ಸರ್ಕಾರಿ ಅಧಿಕಾರಿಗಳಿಗೆ ಈ ಕಷ್ಟಕರವಾದ ಕಾರ್ಯದಲ್ಲಿ ತುಂಬಾ ಸಹಾಯಮಾಡಲು ಸಿದ್ಧರಾಗಿರಬೇಕು. ಕೆಲವು ಸಂದರ್ಭಗಳಲ್ಲಿ ಸ್ವಲ್ಪ ಜನರು ಸರ್ಕಾರದ ಅಧಿಕಾರಿಗಳಿಗೆ ನಾನಾ ರೀತಿಯಾದ ಅಡಚಣೆಗಳನ್ನು ತಂದುಹಾಕಿ, ಗವರ್ನಮೆಂಟಿನವರ ಉದ್ದೇಶವು ನೆರವೇರದಂತೆ ಮಾಡುವುದೂ ಉಂಟು. ಈ ಕನ್ನಂಬಾಡಿ ತಲಾವಿನ ಏರ್ಪಾಡಿನಿಂದ ಸಂಸ್ಥಾನಾಮಳೆಯ ಕ್ಷೇಮಾಭಿವೃದ್ಧಿಗೆ ತುಂಬಾ ಸಹಾಯವಾಗುವುದಾದ ಕಾರಣ ಪ್ರಜೆಗಳು ಅಲ್ಪಸ್ವಲ್ಪವಾದ ಕಷ್ಟ ಅನನುಕೂಲಗಳನ್ನು ವಿಶೇಷವಾಗಿ ಎಣಿಸದೆ, ಕಳೆದುಕೊಳ್ಳುವ ಸ್ಥಳಗಳಿಗೆ ಪ್ರತಿಯಾಗಿ ಗವರ್ನಮೆಂಟಿನವರು ತೋರಿಸುವಂಥಾ ಜಮಿಾನುಗಳ ಪೈಕಿ ತಮಗೆ ಒಪ್ಪಿಕೆಯಾಗುವವುಗಳನ್ನು ಅಂಗೀಕರಿಸುವುದೇ ಕ್ಷೇಮಕರವಾದದ್ದು. ಈ ಮಹತ್ಕಾರ್ಯವು ಸಾರ್ಥಕವಾಗಿಯೂ ಸರ್ವಪ್ರಜಾಸಮ್ಮತವಾಗಿಯೂ ನೆರವೇರುವ ಭಾಗದಲ್ಲಿ ಪ್ರಜೆಗಳೂ ಸರ್ಕಾರದವರೂ ಏಕೀಭವಿಸಿ ಪರಸ್ಪರ ಸಹಾಯಕರಾಗುವರೆಂದು ನಂಬಿ ನಿರೀಕ್ಷಿಸುತ್ತೇವೆ.

ಮೈಸೂರು ಬ್ಯಾಂಕು.

ಈ ವಾರ ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಮೈಸೂರು ಬ್ಯಾಂಕಿನ ವಿಚಾರವಾದ ಒಂದು ಸೂಚನಾ ಪತ್ರಿಕೆಯೂ, ಮೈಸೂರು ಸಂಸ್ಥಾನದ ವ್ಯವಸಾಯ ಬ್ಯಾಂಕುಗಳ 1911-12 ನೇ ಸಾಲಿನ ಸರ್ಕಾರಿ ರಿಪೋರ್ಟೂ ನಮ್ಮಲ್ಲಿಗೆ ತಲುಪಿರುತ್ತವೆ.

ಈ ವ್ಯವಸಾಯದ ಬ್ಯಾಂಕುಗಳನ್ನು ಮೊದಲು ಈ ಸೀಮೆಯಲ್ಲಿ ಪ್ರಾರಂಭಿಸಿದಾಗ್ಗೆ ಅವುಗಳ ದೆಸೆಯಿಂದ ಸಂಸ್ಥಾನಕ್ಕೆ ವಿಶೇಷವಾದ ಪ್ರಯೋಜನವಾಗುವುದೆಂದೂ, ರೈತ ಪ್ರಜೆಗಳಿಗೆ ಅವುಗಳ ಮೂಲಕ ಹಣವು ಸುಲಭವಾಗಿ ದೊರಕುವಂತಾಗುವುದೆಂದೂ ಹೇಳಿದ್ದನ್ನು ನಾವು ಮರೆತು ಹೋಗಲಿಲ್ಲ. ಸರ್ಕಾರದವರು ಹಣವನ್ನು ಒದಗಿಸಿದ ಮೇಲೆ ಅನೇಕ ಬ್ಯಾಂಕುಗಳು ಏರ್ಪಾಡಾದವು. ಪ್ರಜೆಗಳು ಆತುರಪಟ್ಟು ಬಹು ಸಂತೋಷದಿಂದ ಸಾಲಗಳನ್ನು ಪಡೆದುಕೊಂಡರು. ಫಲಿತಾಂಶವನ್ನು ನೋಡುವಲ್ಲಿ ಈ ಬ್ಯಾಂಕುಗಳು ಒಳ್ಳೇ ಬುದ್ಧಿಯನ್ನು ಕಲಿಸಿಕೊಟ್ಟವು. ಕಳೆದ ಸಾಲಿನ ಪ್ರಾರಂಭದಲ್ಲಿ ಸಂಸ್ಥಾನಾಮಳೆ ಒಂಭತ್ತು ಬ್ಯಾಂಕುಗಳು ಇದ್ದು, ಜೇರ್ಣ ಹೊಂದಿ ಸಾಲಾಖೈರಿನಲ್ಲಿ ಆರಕ್ಕೆ ಇಳಿದವು. ಇವುಗಳಲ್ಲಿ ಲೇವಾದೇವಿ ನಡೆದದ್ದು ಬಹಳ ಸ್ವಲ್ಪ. ವರುಷದಲ್ಲೆಲ್ಲಾ ಒಟ್ಟು 20,000 ರೂಪಾಯಿನ ಜಮಾ ಖರ್ಚು ನಡೆದಿರುತ್ತದೆ. ಈ ರಿಪೋರ್ಟಿನಲ್ಲಿ "ಈ ಬ್ಯಾಂಕುಗಳಿಗೆ ಚೈತನ್ಯವಿಲ್ಲ" ಎಂದು ಬರೆಯಲ್ಪಟ್ಟಿರುವುದು.

ಈ ಬ್ಯಾಂಕುಗಳು ಕಲಿಸಿದ ಬುದ್ಧಿವಾದವೇನೆಂದು ಕೇಳಬಹುದು. ಕಾರ್ಯಾಪೇಕ್ಷೆಗಳಿಲ್ಲದೆಯೂ, ತಮ್ಮನ್ನೂ ತಮ್ಮ ಜಮಿಾನುಗಳನ್ನೂ ಅಭಿವೃದ್ಧಿಮಾಡಿಕೊಳ್ಳುವ ಭಾಗದಲ್ಲಿ ಕುತೂಹಲರಹಿತರಾಗಿಯೂ ಇರುವಂಥಾ ಪ್ರಜೆಗಳಿಗೆ ಸುಲಭಬಡ್ಡಿ ದರದ ಮೇಲೆ ಹಣವನ್ನು ಒದಗಿಸುವುದು ವ್ಯರ್ಥ; ಅದರಿಂದ ಯಾರಿಗೂ ಯಾವ ಪ್ರಯೋಜನವೂ ಆಗತಕ್ಕದ್ದಲ್ಲ. ರೈತರೇ ಮೊದಲಾದ ಪ್ರಜೆಗಳು ಸಾಲಮಾಡಿ ತರುವ ಹಣವನ್ನು ಬಾಹ್ಯಾಡಂಬರ ಪ್ರಯೋಜನಗಳಿಗೂ ಹಬ್ಬ ಹುಣ್ಣಿಮೆಗಳಿಗೂ ವಿನಿಯೋಗಿಸುತ್ತಾರೆಯೇ ಹೊರತು ತಮ್ಮ ಜಮಿಾನುಗಳನ್ನೂ ಕಸುಬುಗಳನ್ನೂ ಯಾವ ರೀತಿ ಅಭಿವೃದ್ಧಿಮಾಡಿಕೊಳ್ಳಬಹುದೆಂದು ಚಿಂತಿಸತಕ್ಕವರಾಗಿಯೂ ಇಲ್ಲ; ಅದಕ್ಕಾಗಿ ಕಷ್ಟಪಡತಕ್ಕವರಾಗಿಯೂ ಇಲ್ಲ. ಆದಕಾರಣ ಪ್ರಜೆಗಳಿಗೆ ಸ್ವಭಾವಸಿದ್ಧವಾಗಿರುವ ಇಂಥಾ ಗುಣಲಕ್ಷಣಗಳು ಸಂಪೂರ್ಣವಾಗಿ ಬದಲಾವಣೆಯಾದ ಹೊರತು ಯಥಾರ್ಥವಾದ ಅಭಿವೃದ್ಧಿಯಾಗಲಿ ಸೌಭಾಗ್ಯವಾಗಲಿ ಲಭ್ಯವಾಗತಕ್ಕದ್ದಲ್ಲ.

ಹೊಸ ಮೈಸೂರು ಬ್ಯಾಂಕಿನ ಏರ್ಪಾಡುಗಳು ಪ್ರತ್ಯೇಕವಾಗಿರುತ್ತವೆ. ಅದರ ಕಾರ್ಯಕ್ರಮವು ವ್ಯವಸಾಯದ ಬ್ಯಾಂಕುಗಳಂತಲ್ಲ. ಪ್ರಜೆಗಳು ಷೇರುಗಳನ್ನು ಕೊಂಡುಕೊಳ್ಳಬೇಕೆಂದು ಪ್ರೆಸಿಡೆಂಟರವರು ಸೂಚಿಸಿರುವ ಇಸ್ತಿಹಾರನ್ನು ಈ ಪತ್ರಿಕೆಯ ಇನ್ನೊಂದು ಭಾಗದಲ್ಲಿ ಪ್ರಕಟಮಾಡಿರುತ್ತೇವೆ. ಮೈಸೂರು ಗವರ್ನಮೆಂಟಿನವರು ಬಹು ಧಾರಾಳವಾಗಿ ಈ ಬ್ಯಾಂಕಿಗೆ ಸಹಾಯಮಾಡುವರು ಇಂಥಾ ಬ್ಯಾಂಕಿನಿಂದ ಸಂಸ್ಥಾನಕ್ಕೆ ಅಪಾರವಾದ ಪ್ರಯೋಜನವಾಗಬೇಕೆಂದು ನಿರೀಕ್ಷಿಸುವೆವು. ಈ ಬ್ಯಾಂಕಿನ ಅಡಳಿತಗಳನ್ನು ಸರಿಯಾಗಿಯೂ ತೃಪ್ತಿಕರವಾಗಿಯೂ ನೋಡಿಕೊಳ್ಳುವುದಕ್ಕೆ ಆ ವಿಷಯದಲ್ಲಿ ನಿಪುಣನಾಗಿರುವಂಥಾ ಪುರುಷನು ಒದಗಿ ನೇಮಕವಾಗಿರುವನೇ ಎಂದು ತಿಳಿಯಲಪೇಕ್ಷಿಸುತ್ತೇವೆ. ಯಾಕಂದರೆ ಆತನ ಸಾಹಸಪ್ರಯತ್ನಗಳಿಂದಲೇ ಬ್ಯಾಂಕಿನ ಉದ್ದೇಶಗಳು ಕೈಗೂಡಬೇಕಾಗಿರುತ್ತದೆ.

ಭಾರತೀಯರಿಗೆ ಯೇಸು ಕ್ರಿಸ್ತನು ಬೇಕಾಗಿರುತ್ತಾನೊ?

ಮತವಿಹೀನರಾಗಿರುವವರು ಕೆಲವರು ಇರುತ್ತಾರೆ ಏಕೆಂದರೆ ಅವರಿಗೆ ತಮ್ಮನ್ನು ಸೃಷ್ಟಿಸಿ ಈ ಲೋಕದಲ್ಲಿ ಇಟ್ಟಿರುವ ದೇವರನ್ನು ಸೇವಿಸಿ ಆತನನ್ನು ಸಂತೋಷಪಡಿಸಬೇಕೆಂಬ ಅಪೇಕ್ಷೆಯು ಇರುವುದಿಲ್ಲ ತಮಗೂ ತಮ್ಮ ಕುಟುಂಬದವರಿಗೂ ಉಣ್ಣುವುದಕ್ಕೂ ಉಡುವುದಕ್ಕೂ ಬೇಕಾದಷ್ಟು ಇರಬೇಕು ; ವಾಸಕ್ಕೆ ಅನುಕೂಲವಾದ ಮನೆಯು ಬೇಕು, ಸಾಧ್ಯವಾದ ಮಟ್ಟಿಗೆ ಸಕಲ ಭೋಗಗಳನ್ನು ಅನುಭವಿಸಬೇಕು ಎಂಬುದೇ ಅವರ ಮುಖ್ಯೋದ್ದೇಶವಾಗಿರುತ್ತದೆ. ಅವರು ಕೆಲವು ಮತಾಚಾರಗಳನ್ನು ಕೈಕೊಳ್ಳುವವರಾಗಿರಬಹುದು ಆದರೆ ಸುಮ್ಮನೆ ಪದ್ಧತಿಯನ್ನನುಸರಿಸಿ ಹಾಗೆ ಮಾಡುತ್ತಾರೆಯೇ ಹೊರತು ತಾವು ಏಕೆ ಹಾಗೆ ಮಾಡುತ್ತೇವೆಂಬುದು ಅವರಿಗೆ ತಿಳಿದಿರುವುದಿಲ್ಲ ಇವರು ಕಾರ್ಯತಃ ನಾಸ್ತಿಕರಾಗಿರುತ್ತಾರೆ ಇವರ ಜೀವನದ ಕಾರ್ಯಗಳೆಲ್ಲವೂ ದೇವರಲ್ಲಿ ಅಭಿಮಾನವಿಲ್ಲದೆ ನಡೆಯುತ್ತವೆ. ತಮ್ಮ ಗುಣನಡತೆಗಳು ದೇವರಿಗೆ ಮೆಚ್ಚಿಕೆಯಾದುವುಗಳೋ ಅಲ್ಲವೋ ಎಂಬುದನ್ನು ಅವರು ವಿಚಾರಮಾಡಿಕೊಳ್ಳುವುದೇ ಇಲ್ಲ. ತಮಗೆ ಸುಖವೂ ಆದಾಯವೂ ಲಭ್ಯವಾದರೆ ಅಷ್ಟು ಸಾಕೆಂದು ಕೊಳ್ಳುತ್ತಾರೆ. ಇಂಥಹ ಪುರುಷರೂ ಸ್ತ್ರೀಯರೂ ದೇವರನ್ನು ಬಿಟ್ಟು ಅಗಲಿದವರಾಗಿರುತ್ತಾರೆ.

ಬೇರೆ ಕೆಲವರು ಮತಾಸಕ್ತರಾಗಿರುತ್ತಾರೆ ಅವರು ನಿತ್ಯಕರ್ಮಗಳನ್ನು ಆಚರಿಸಿ ಸಂಧ್ಯಾವಂದನೆಯನ್ನು ಮಾಡುತ್ತಾರೆ ದೇವರು ತಮ್ಮಿಂದ ಕೋರುವುದನ್ನು ಮಾಡುವುದಕ್ಕೆ ಇಷ್ಟವುಳ್ಳವರಾಗಿರುತ್ತಾರೆ. ಹೀಗಿದ್ದಾಗ್ಯೂ ಅನೇಕ ಸಂದರ್ಭಗಳಲ್ಲಿ ತಮ್ಮ ಮತಧರ್ಮವನ್ನು ಸುಮ್ಮನೆ ಪದ್ಧತಿಯ ಪ್ರಕಾರ ಕೈಕೊಳ್ಳುವವರಾಗಿರುತ್ತಾರೆ. ತಮ್ಮ ಆಚಾರಗಳಲ್ಲಿ ಸ್ವಲ್ಪ ವ್ಯತ್ಯಸ್ತವಾಗಿ ನಡೆದರೆ ತಾವು ದೇವರ ಕೋಪಕ್ಕೆ ಗುರಿಯಾಗುವುದಲ್ಲದೆ ತಮಗೆ ಏನಾದರೂ ಒಂದು ವಿಪತ್ತು ಬಂದೊದಗುವುದೆಂದು ನಂಬುತ್ತಾರೆ. ಇಂಥವರು ದೇವರ ನೈಜ ಸ್ವಭಾವವನ್ನು ತಿಳಿದವರಲ್ಲ ನಾವು ಏಕೆ ಪ್ರಾರ್ಥನೆಮಾಡಬೇಕು ಅಥವಾ ಏಕೆ ಆಚಾರಗಳನ್ನು ಕೈಕೊಳ್ಳಬೇಕು ಎಂದು ವಿಚಾರಮಾಡುವುದಕ್ಕೆ ಇವರು ಪ್ರಯತ್ನಪಡುವುದಿಲ್ಲ. ಇಂಥವರು ಪೂರ್ಣ ಬುದ್ಧಿಯಿಂದಲೂ ಪೂರ್ಣ ಮನಸ್ಸಿನಿಂದಲೂ ದೇವರನ್ನು ಸೇವಿಸುವಂತೆ ಇವರಿಗೆ ಆತನ ಗುಣಾತಿಶಯಗಳನ್ನು ಕಲಿಸಿಕೊಡಬೇಕು ಉತ್ತಮರೂ ಮತಾಸಕ್ತರೂ ಆಗಿರುವವರಲ್ಲಿ ಅನೇಕರು ತಾವು ಆನುಸರಿಸುತ್ತಾ ಬರುವ ದೇವತಾರಾಧನೆಯ ರೀತಿಗೆ ಕಾರಣವನ್ನೇ ತಿಳಿಯದೆ ಕಣ್ಣು ಮುಚ್ಚಿಕೊಂಡು ವೃದ್ಧಾಚಾರವನ್ನು ಅನುಸರಿಸುತ್ತಾ ಬರುತ್ತಾರೆ ವಿವೇಕಿಗಳಾದ ಸ್ತ್ರೀ ಪುರುಷರುಗಳು ಇಷ್ಟರಲ್ಲಿ ಸಂತೃಪ್ತರಾಗಿ[illegible] • • •

ಲೋಕದಲ್ಲಿ ಅನೇಕ ಮತಗಳು ಇರುವುದರಿಂದ ಅನೇಕರ ಮನಸ್ಸುಗಳಲ್ಲಿ ತುಂಬಾ ಗಲಿಬಿಲಿಯು ಇರುತ್ತವೆ ಆದರೆ ಇಂಥಹ ಗಲಿಬಿಲಿಯ ದೆಸೆಯಿಂದ ಮನಗುಂದಿಹೋಗಬೇಕಾದ ಅಗತ್ಯವಿರುವುದಿಲ್ಲ. ದೇವರನ್ನು ತಿಳಿಯುವುದಕ್ಕೂ ನಿರ್ಮಲವಾದ ಮನಸ್ಸಾಕ್ಷಿಯನ್ನು ಹೊಂದುವುದಕ್ಕೂ ಹಾರೈಸುವ ವಿವೇಕಶಾಲಿಗಳು ತಮಗೆ ಸಂತೃಪ್ತಿಯನ್ನುಂಟುಮಾಡುವ ಮತವನ್ನು ಬೇಗನೆ ಕಂಡುಕೊಳ್ಳಬಲ್ಲರು. ಚೀನಾ ದೇಶವು ಇದಕ್ಕೆ ಒಂದು ಒಳ್ಳೆಯ ದೃಷ್ಟಾಂತವಾಗಿಯುತ್ತದೆ. ಅನೇಕ ಶತಮಾನಗಳಿಂದ ಚೀನಾ ದೇಶದಲ್ಲಿ ಬೌದ್ಧ ಮತವೂ ಕನ್‌ಫೂಸಿಯಸ್ ಮತವೂ ಇದ್ದುವು. ಇವುಗಳು ಚೀನಾದವರಿಗೆ ದೇವರ ವಿಷಯವಾದ ತಿಳುವಳಿಕೆಯನ್ನಾದರೂ ಅವರ ಮನಸ್ಸುಗಳಿಗೆ ಸಂತೃಪ್ತಿಯನ್ನಾದರೂ ಉಂಟುಮಾಡಿರುವುದಿಲ್ಲ. ಚೀನಾ ದೇಶದ ಹೊಸ ಸರಕಾರದವರು ಕ್ರೈಸ್ತರು ತಮಗೋಸ್ಕರವಾಗಿ ಪ್ರಾರ್ಥನೆಮಾಡಬೇಕೆಂದು ಕೇಳುತ್ತಾ ಇರುತ್ತಾರೆ. ಅವರು ದೇವರ ಬಳಿಗೆ ಹೋಗುವ ಮಾರ್ಗವನ್ನು ಕಂಡುಕೊಂಡಿರುವುದಿಲ್ಲ. ಅವರಿಗೆ ತಿಳುವಳಿಕೆಯನ್ನು ಕೊಟ್ಟು ನಡಿಸುವವನು ಬೇಕು. ಅವರ ಪ್ರಮುಖರಲ್ಲಿ ಅನೇಕರು—ಬುದ್ಧನಲ್ಲಿಯೂ ಕನ್‌ಫೂಷಿಯಸ್‌ನಲ್ಲಿಯೂ ನಮಗೆ ಬೇಕಾದ ಸಹಾಯವು ದೊರೆಯಲಾರದು, ಯೇಸು ಕ್ರಿಸ್ತನಲ್ಲಿ ಅದು ನಮಗೆ ಸಿಕ್ಕಬೇಕು. ಏಕೆಂದರೆ ಬಾಕ್ಸರುಗಳ ದಂಗೆಯಲ್ಲಿ ಕ್ರೈಸ್ತ ಸ್ತ್ರೀ ಪುರುಷರುಗಳು ಚಿತ್ರಹಿಂಸೆಯನ್ನೂ ಮರಣವನ್ನೂ ಅನುಭವಿಸಿದಾಗ ಯಾವುದು ಅಂಥ ಪ್ರಾಣಾಪತ್ತಿನಕಾಲದಲ್ಲಿ ಅವರಿಗೆ ಧೈರ್ಯವನ್ನೂ ಆದರಣೆಯನ್ನೂ ಮನಶ್ಶಾಂತಿಯನ್ನೂ ಕೊಟ್ಟಿತೋ ಅದು ಯೇಸುವಿನ ಮತದಿಂದಲೇ ಅವರಿಗೆ ಸಿಕ್ಕಿತು ಎಂದು ಹೇಳುತ್ತಾ ಇರುತ್ತಾರೆ

ಸ್ತ್ರೀ ಪುರುಷರಲ್ಲಿ ಪ್ರತಿಯೊಬ್ಬರೂ ಈ ಕೆಳಗಿನ ಪ್ರಶ್ನೆಗಳನ್ನು ತಮಗೆ ಹಾಕಿಕೊಂಡು ಅವುಗಳಿಗೆ ಯಥಾರ್ಥವಾದ ಉತ್ತರಗಳನ್ನು ತಮ್ಮ ಮನಸ್ಸಾಕ್ಷಿಯಿಂದ ಹೊಂದಿಕೊಳ್ಳುವವರಾಗಲಿ—ನಾನು ಅವಲಂಬಿಸಿರುವ ಮತವು ನನ್ನನ್ನು ದೇವರ ಬಳಿಗೆ ನಡಿಸುತ್ತಾ ಇರುತ್ತದೋ ? ದೇವರು ನನ್ನ ಅಪರಾಧಗಳನ್ನೆಲ್ಲಾ ಕ್ಷಮಿಸಿ ನನ್ನನ್ನು ತನ್ನ ಮಗನಾಗ ಮಾಡಿಕೊಂಡಿದ್ದಾನೆಂದು ಅದರಿಂದ ನನಗೆ ತಿಳಿದಿರುತ್ತದೋ ? ನಾನು ಪಾಪವನ್ನು ನಿಗ್ರಹಿಸಿ ತ್ರಿಕರಣಶುದ್ಧನಾಗಿ ಜೀವಿಸುವುದಕ್ಕೆ ಅದರಿಂದ ಶಕ್ತನಾಗಿರುತ್ತೇನೋ ? ನನ್ನ ಮತವು ಈ ಜೀವಮಾನದ ಕಷ್ಟದುಃಖಗಳ ಮಧ್ಯದಲ್ಲಿ ನನಗೆ ಮನಶ್ಶಾಂತಿಯನ್ನೂ ಸಂತೃಪ್ತಿಯನ್ನೂ ಕೊಡುತ್ತದೆಯೋ ? ನನ್ನ ಮತವು ನಾನು ಇತರರನ್ನು ಪ್ರೀತಿಸಿ ಅವರಿಗೆ ಸಹಾಯಮಾಡುವುದಕ್ಕೆ ನನ್ನನ್ನು ಶಕ್ತನನ್ನಾಗಿ ಮಾಡುತ್ತದೆಯೋ ? ಈ ಪ್ರಶ್ನೆಗಳಿಗೆ ಯಥಾರ್ಥವಾದ ಉತ್ತರವನ್ನು ತನ್ನ ಮನಸ್ಸಿನಲ್ಲಿ ಹೊಂದಿಕೊಳ್ಳುವವನು ತಾನು ಅವಲಂಬಿಸಿರುವ ಮತವು ತನಗೆ ಪ್ರಯೋಜನಕಾರಿಯೋ ಅಲ್ಲವೋ ಎಂಬುದನ್ನು ಬೇಗ ಕಂಡುಕೊಳ್ಳುವನು. ತಮ್ಮ ಮನ ಒಪ್ಪುವಂತೆ ನಡೆದುಕೊಳ್ಳುವವರು ಕೇವಲ ವಿರಳ ಅವರು ಪದ್ಧತಿಯನ್ನು ಅನುಸರಿಸಿ ನಡೆಯುತ್ತಾರೆ ಅದನ್ನು ಬಿಡುವುದಕ್ಕೆ ಅವರಿಗೆ ಇಷ್ಟವಿರುವುದಿಲ್ಲ. ಇಂಥವರಿಗೆ ಸಹಜವಾದ ಮನಶ್ಶಾಂತಿಯು ಎಂದಿಗೂ ದೊರೆಯಲಾರದು.

ಪುರುಷರಿಗೂ ಸ್ತ್ರೀಯರಿಗೂ ದೇವರ ವಿಷಯವಾದ ತಿಳುವಳಿಕೆಯನ್ನು ಹುಟ್ಟಿಸಿ ಆತನ ಬಳಿಗೆ ಹೋಗತಕ್ಕ ಮಾರ್ಗವನ್ನು ಪ್ರಕಟಿಸಿರುವಾತನು ಯೇಸು ಕ್ರಿಸ್ತನೇ ಆಗಿರುತ್ತಾನೆ ನಮ್ಮನ್ನು ಸೃಷ್ಟಿಸಿ ಈ ಲೋಕದಲ್ಲಿ ಇಟ್ಟಿರುವಾತನು ನಮ್ಮನ್ನು ಪ್ರೀತಿಸುವವನಾಗಿರುತ್ತಾನೆಂದೂ ತಂದೆಯೆಂಬುದು ಆತನಿಗೆ ಸಲ್ಲತಕ್ಕ ಅತ್ಯುತ್ತಮವಾದ ನಾಮವಾಗಿದೆಯೆಂದೂ ನಾವು ಇದನ್ನು ಗ್ರಹಿಸಿಕೊಂಡು ತಂದೆಯೆಂಬದಾಗಿ ಪ್ರತಿ ದಿನವೂ ಆತನಿಗೆ ಪ್ರಾರ್ಥನೆಮಾಡಿ ಆತನನ್ನು ಆರಾಧಿಸಬೇಕೆಂದೂ ಆತನು ತಿಳಿಸಿರುತ್ತಾನೆ ಈ ನಮ್ಮ ಭರತ ಖಂಡದಲ್ಲಿ ತ್ರಿಕರಣಶುದ್ಧರಾಗಿ ನಡೆಯುವುದಕ್ಕೆ ಅನೇಕರಿಗೆ ಇಷ್ಟವಿರುತ್ತದೆ. ಆದರೆ ಹೇಗೆ ಅಂಥವರಾಗಬಹುದೆಂದು ಅವರಿಗೆ ತಿಳಿದಿರುವುದಿಲ್ಲ. ಯೇಸು ಕ್ರಿಸ್ತನು ಅವರಿಗೆ ಪರಮಗುರುವಾಗಿರುತ್ತಾನೆ ಅವರು ಆತನ ಅಡಿದಾವರೆಯನ್ನು ಆಶ್ರಯಿಸಿ ದೀನಮನಸ್ಸುಳ್ಳ[illegible]ಆತನಿಂದ ಕಲಿತುಕೊಂಡರೆ ಅವರಿಗೆ ಮನಶ್ಶಾಂತಿಯು ಸಿಕ್ಕುವುದು. ನೈಜ ಭಕ್ತಿಯು ಏನೆಂಬುದು ಮುಂದಟ್ಟಾಗುವುದು.

ಒಳದೇಶದ ವೃತ್ತಾಂತಗಳು.

ಕನ್ನಾಗಾಲದ ದಂಗೆ ಮೊಕದ್ದಮೆಯಲ್ಲಿ ಅಪರಾಧಿಗಳ ಪೈಕಿ ಕಾಯಿಲೆಯಾಗಿದ್ದ 131 ನೇ ಬೊಮ್ಮೆಪಟ್ಟನ ಪುಟ್ಟನೆಂಬ ಹೊಲೆಯವರವನು ಕಳೆದ ಬುಧವಾರ ಬಂದೀಖಾನೆಯಲ್ಲಿ ಕಾಲವಾದನೆಂದು ತಿಳಿಯುತ್ತದೆ

• • •

ಕಳೆದ ವಾರ ರಾಜಧಾನಿಯಲ್ಲಿ ಒಂದೆರಡು ಮಳೆಗಳಾದವು. ಹವಾ ತಂಪಾಗಿದೆ ಸಾಯಂಕಾಲದ ಹೊತ್ತು ಮೋಡವಾಗುವುದೇ ಹೊರತು ಮಳೆ ಬರಲಿಲ್ಲ ಈ ರೀತಿ ಮುಂಗಾರು ಮಳೆಗಳು ತಪ್ಪುತ್ತಿರುವುದನ್ನು ನೋಡಿ ಪ್ರಜೆಗಳು ಚಿಂತೆ ಪಡಲಾರಂಭವಾಗಿದೆ.

• • •

ಈ ವರುಷ ನಡೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ರಾಜಧಾನಿಯ ಮಹಾರಾಜಾ ಕಾಲೇಜಿನಲ್ಲಿ 80 ಕ್ಕೆ 16 ಮಂದಿಯೂ, ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿ 28 ಕ್ಕೆ 17 ಮಂದಿಯೂ, ಮಿಷನ್ ಹೈಸ್ಕೂಲಿನಲ್ಲಿ 66 ಕ್ಕೆ 16 ಮಂದಿಯೂ ವಿದ್ಯಾರ್ಥಿಗಳು ತೇರ್ಗಡೆಯಾದರೆಂದು ಪ್ರಕಟವಾಗಿದೆ.

• • •

ಮಾಜಿ ದಿವಾನ್ ಮಿ| ವಿ ಪಿ ಮಾಧವರಾಯರು ದಕ್ಷಿಣ ದೇಶದಲ್ಲಿ ಸಂಚಾರ ಮಾಡಿಕೊಂಡು, ಕಳೆದ ಬುಧವಾರ ಬೆಂಗಳೂರಿಗೆ ವಾಪಸು ಬಂದಿರುತ್ತಾರೆ ತಂಜಾವೂರಿನಲ್ಲಿ ನಡೆಯುವ ಡಿಸ್ಟ್ರಿಕ್ಟ್ ಸಭಾ ಸಭೆಗೆ ಪ್ರೆಸಿಡೆಂಟರಾಗಿ ನೇಮಕವಾಗಿರೋಣದರಿಂದ ಅವರು ಅಲ್ಲಿಗೆ ಹೋಗಿಬರುವರೆಂದು ಪ್ರಕಟವಾಗಿದೆ

• • •

ಬೆಂಗಳೂರು ದಂಡಿನ ಗುಜರಿಯಲ್ಲಿ ಉಸ್ಮಾನ್ ಖಾನ್ ಮತ್ತು ರಹೀಂಖಾನ್ ಎಂಬಿಬ್ಬರು ವರ್ತಕರು ಕಳುವು ಮಾಲುಗಳನ್ನು ತೆಗೆದುಕೊಂಡರೆಂದು ಮೊಕದ್ದಮೆ ಬಂದಿತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ವಿಚಾರಣೆಮಾಡಿ, ಮೊದಲನೇ ಅಪರಾಧಿಗೆ ಎರಡು ತಿಂಗಳು ಕಠಿಣ ಸಜಾ, 50 ರೂಪಾಯಿ ಜುಲ್ಮಾನೆಯನ್ನೂ, ಎರಡನೇ ಅಪರಾಧಿಗೆ ಆರು ವಾರಗಳ ಕಠಿಣ ಸಜಾ, 20 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು.

• • •

ಚಾಲ್ತಿವರುಷದ ಅಂತ್ಯ ಭಾಗದಲ್ಲಿ ವೈಸ್‌ರಾಯಿ ಪ್ರಭುಗಳು ನಮ್ಮ ಸಂಸ್ಥಾನಕ್ಕೆ ಚಿತ್ತೈಸುವವರಾಗಿರೋಣದರಿಂದ ಅವರ ಸಂತೋಷಾರ್ಥವಾಗಿ ನಮ್ಮ ಸರ್ಕಾರದವರು ಖಾಕನಕೋಟೆಯಲ್ಲಿ ಆನೆಗಳನ್ನು ಹಿಡಿಯುವುದಕ್ಕೆ

...ನ್ನು ವಿಸ್ತಾರವಾಗಬೇಕೆಂದು ಹುಕುಂ ಕೊಟ್ಟು, ಆ ಪ್ರಾಂತ್ಯದಲ್ಲಿ ರಸ್ತೆ ಮುಂತಾದವುಗಳನ್ನು ಸಂಪಾದಿಸುವುದಕ್ಕಾಗಿ ಹಣವನ್ನು ಸ್ಯಾಂಕ್ಷನ್ ಮಾಡಿ, ...ಪುರದ ಕ್ಯಾಂಪಿನ ವಿಸ್ತಾರಕ್ಕೆ ಒಬ್ಬ ಇಂಜನಿಯರನ್ನು ನೇಮಿಸಿರುತ್ತಾರೆ

⁂

ಒಬ್ಬ ವರ್ತಮಾನದಾರರಿಂದ—ಶ್ರೀ ರಾಮಾನುಜಾಚಾರ್ಯರ ಜಯಂತಿ ಉತ್ಸವ ನಿಮಿತ್ತವಾಗಿ ಕಳೆದ ಶುಕ್ರವಾರ ಬೆಂಗಳೂರು ಶ್ರೀನಿವಾಸ ಮಂದಿರದಲ್ಲಿ ಸುಮಾರು 600 ಮಂದಿ ಕೀಳುಜಾತಿಯ ಬಡಜನರಿಗೂ ಅಂಗಹೀನರಿಗೂ ಬಹು ... ಭೋಜನವನ್ನು ಮಾಡಿಸಿದರು ಎಲ್ಲರಿಗೂ ತೀರ್ಥ ಪ್ರಸಾದಗಳನ್ನು ... ಮೀತಿ ಶ್ರೀಶಂಕರಾಚಾರ್ಯರ ಸರ್ವಶ್ರೇಷ್ಠವಾದ ಭಕ್ತಿಮಾರ್ಗವನ್ನು ... ಅಲ್ಲಿ ಸೇರಿದ್ದವರಿಗೆ ಉಪನ್ಯಾಸವಾದಲಾಯಿತು ಈ ಕಾರ್ಯಗಳಿ... ಸ್ತ್ರೀಮಂಡಲಿಯವರು ಸ್ತ್ರೀ ಸೆಕ್ರೆಟರಿಯವರಿಗೆ ತುಂಬಾ ಸಹಾಯಮಾಡಿ ... ಸಾರ್ಥಕವಾಗಿಯೂ ಸಾಂಗವಾಗಿಯೂ ಎಲ್ಲಾ ಕಾರ್ಯಗಳೂ ನೆರವೇರಿ ...ವೆಂದು ಅವರು ಆ ಮಂಡಲಿಯವರನ್ನು ವಂದಿಸಿರುತ್ತಾರೆ

⁂

ಪೂನಾ ಪಟ್ಟಣದ ಸಿ ಐ ಡಿ ಎಂಬ ಪೋಲೀಸ್ ಇಲಾಖೆಯವರು ಬಾಮ್ಬೆ ... ಕಳ್ಳರ ಗುಂಪನ್ನು ಹಿಡಿದು ಶೋಧನೆಮಾಡುವಲ್ಲಿ ಅವರ ಬಳಿ ಸುಮಾರು ...,000 ರೂಪಾಯಿನ ಚಿನ್ನ ಬೆಳ್ಳಿ ಒಡವೆಗಳೂ ಇತರ ಸೊತ್ತುಗಳೂ ಸಿಕ್ಕಿರು... ಇವರು ರೈಲ್ ಗಾಡಿಗಳಲ್ಲಿ ಕಳವು ಮಾಡುತ್ತಿದ್ದರೆಂದೂ, ಕಳೆದ 18... ಜನವರಿ ತಿಂಗಳಲ್ಲಿ ಮೈಸೂರಿಗೂ ಬೆಂಗಳೂರಿಗೂ ಮಧ್ಯೆ ರೈಲ್ ಗಾಡಿಗಳಲ್ಲಿ ಕಳವು ಮಾಡಿದ ಮಾಲುಗಳು ಈಗ ಸಿಕ್ಕಿರುವ ಸೊತ್ತುಗಳಲ್ಲಿ ಸೇರಿರಬಹುದೆಂದೂ ...ಬಂದಿರುವುದರಿಂದ ಅವುಗಳ ಮಾಲೀಕರು ನಮ್ಮ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಬರೆದುಕೊಂಡು ರುಜುವಾತುಕೊಡತಕ್ಕದ್ದೆಂದು ಸರ್ಕಾರದವರು ...ಹಾರು ಕೊಟ್ಟು ಆ ನಗಗಳ ತಪಸೀಲನ್ನು ಕಳೆದ ವಾರದ ಗೆಜೆಟ್ಟಿನಲ್ಲಿ ಪ್ರಕಟ ಪಡಿಸುತ್ತಾರೆ

⁂

ಶ್ರೀ ವ್ಯಾಸರಾಜಮಠದ ಸ್ವಾಮಿಗಳವರು ನೆನ್ನೆ ಬೆಂಗಳೂರಿಗೆ ದಯಮಾಡಿಸಿದ್ದಾರೆ ಅವರು ನಾಲ್ಕೈದು ಮೂರು ದಿನ ಅಲ್ಲಿ ಒಂದು ವಿದ್ವತ್ ಸಭೆಯನ್ನು ಸೇರಿಸಿ ಪಂಡಿತರಿಗೆ ಬಹುಮಾನಗಳನ್ನು ದಯಪಾಲಿಸುವವರಾಗಿದ್ದಾರೆ ...ಕ್ಕಾಗಿ ಸರ್ಕಾರದವರು ಮಠದ ಫಂಡಿನಿಂದ 7,000 ರೂಪಾಯಿ ಸ್ಯಾಂಕ್ಷನ್ ... ಸ್ವಾಮಿಗಳಿಗೆ ಮಾಸವಂದಿ ಸವರ್ತನೆಗಳು ಪದ್ಧತಿಯಂತೆ ನಡೆಯುತಕ್ಕದ್ದೆಂದು ಹುಕುಂ ಕೊಟ್ಟಿರುವರು ಮಿ ಎಚ್ ರಾಮಯ್ಯನವರೂ, ಮ್ಮ ಟಿ ಲಕ್ಷ್ಮಯ್ಯನವ ...ರೂ ಸೆಕ್ರೆಟರಿಗಳಾಗಿ ನಿಂತು ವಿದ್ವತ್ ಸಭಾಕಾರ್ಯಗಳನ್ನು ನಡೆ...ಸುವರು, ಮಠದ ಪಂಡಿತ ವಿಜಯೀಂದ್ರಾಚಾರ್ಯರು ಮಹಾರಾಜರವರಿಗೂ ...ರ್ನರವರಿಗೂ ಒಪ್ಪಿಸುವುದಕ್ಕಾಗಿ ಸ್ವಾಮಿಗಳಿಂದ ರಾಯಸವನ್ನು ತೆಗೆದು ...ಕೊಂಡು ನೀಲಗಿರಿಗೆ ಹೋಗಿರುತ್ತಾರೆಂದೂ ತಿಳಿದುಬರುತ್ತದೆ

ಮೈಸೂರು ಗಜೆಟ್ ಸಂಗ್ರಹ.

ಮೈಸೂರು ನಂಜರಾಜ ಬಹದ್ದೂರವರ ಧರ್ಮ ಛತ್ರದ ಮೌಲ್ವಿ ಬಾಂಗಾ ...ಲಿಗೆ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟಿಗೆ ಪ್ರತಿಯಾಗಿ ಡಿಸ್ಟ್ರಿಕ್ಟ್ ಖಿಜಾ ...ಮ ಅ ಕಮಿಷನರ್‌ರವರು ಸೆಕ್ರೆಟರಿಯಾಗಿಯೂ, ಮ್ಯುನಿಸಿಪಲ್ ಪ್ರೆಸಿಡೆಂಟರ ...ನು ಮೆಂಬರಾಗಿಯೂ ನೇಮಿಸಲ್ಪಟ್ಟಿದ್ದಾರೆ

ರೆವಿನ್ಯೂ ಕಮಿಷನರ್ ಮಿ|| ಕೆ ಎಸ್ ದೊರೆಸ್ವಾಮಿ ಅಯ್ಯರವರು ರಜಾ ... ಕೂಡಲೇ ... ಕೆಲಸದ ಮೇಲೆ ಹಾಜರಾಗುವಂತೆ ಕರೆಸಲ್ಪಟ್ಟಿದ್ದಾರೆ

ಕುಲೀನ್‌ಪೇಟೆ ಸಬ್ ಡಿವಿಜನ್ ಆಫಿಸರ್ ಮಿ|| ಟಿ ಇ ಜಯರಾಮ ...ಯ್ಯರವರಿಗೆ ಮೇ ತಾ 1 ರಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ ಮಿ|| ಎ ಎಸ್ ಕುಪ್ಪುಸ್ವಾಮಿ ಅಯ್ಯಂಗಾರ್ರವರು ಈ ಸಬ್ ...ಜನ್ ಛಾರ್ಜನ್ನೂ ವಹಿಸಿರತಕ್ಕದ್ದು

ಸಾಗರದ ಸಬ್ ಡಿವಿಜನ್ ಆಫೀಸರ್ ಮಿ|| ಎಸ್ ನಾರಾಯಣರಾಯರಿಗೆ ...ಟ್ಟಿರುವ ಆರು ವಾರಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿ ಮಾಡಿದೆ ಚನ್ನರಾಯಪಟ್ಟಣದ ತಾಲ್ಲೂಕ್ ಅಮಲ್ದಾರ್ ಮಿ|| ಸಿ ನಾರಾ ...ಣರಾಯರು ಕೂಡಲೇ ರಜದಿಂದ ಬಂದು ಸಾಗರದ ಸಬ್ ಡಿವಿಜನ್ ಆಫೀಸ ...ಗಿ ಕೆಲಸಮಾಡತಕ್ಕದ್ದು

ತುಮಕೂರು ಡಿಸ್ಟ್ರಿಕ್ಟ್ ಖಿಜಾನೆಯ ಅ ಕಮಿಷನರ್ ಮಿ ಬಿ ಟಿ ...ಶವ ಅಯ್ಯಂಗಾರ್ರಿಗೆ ಜೂನ್ ತಾ 1 ರಿಂದ ಅಥವಾ ಅವರು ಉಪಯೋಗಿಸಿ ...ಳ್ಳುವ ತಾರೀಖಿನಿಂದ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ...ಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮಿ ಟಿ ರಾಯಲು ಚೆಟ್ಟಿಯವರು ಟ್ರೆಜರಿ ...ರ್ಜನ್ನೂ ವಹಿಸಿರತಕ್ಕದ್ದು

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಅಸಿಸ್ಟೆಂಟರಾದ ಮಿ ಎಂ ...ಶಾಸ್ತ್ರಿಯವರಿಗೆ ಮೇ ತಾ 15 ರಿಂದ ಅಥವಾ ಅವರು ಉಪಯೋಗಿಸಿ ...ಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಡಾಕ್ಟರ್ ಎಚ್ ಬಿ ಮೆಲ್ಲಿಗಾ ...ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನ ಪ್ರಿವಿಲೆಜ್ ರಜಾ ಕೊಟ್ಟಿದೆ ಅ| ಸರ್ಜನ್ ಮಿ ಎಸ್ ನಾರಾಯಣರಾ... ಅವರ ಕೆಲಸಗಳ ಛಾರ್ಜನ್ನು ವಹಿಸಿರತಕ್ಕದ್ದು

ಅ|| ಸರ್ಜನ್ ಮಿ|| ಎಸ್ ಕೆ ಹನುಮಂತರಾಯರಿಗೆ ಕೊಟ್ಟಿರುವ ಒಂದು ...ಳ ಸಂಬಳವಿಲ್ಲದ ರಜವನ್ನು ಇನ್ನೂ ಹದಿನೈದು ದಿನ ಜಾಸ್ತಿಮಾಡಿದೆ

ಕಾಲವಾದ ಮಿ| ಆರ್ ಸುಂದರರಾಯರಿಗೆ ಬದಲಾಗಿ ತುಮಕೂರು ...ಸ್ಟ್ರಿಕ್ಟ್ ಶಿರಸ್ತೇದಾರ್ ಮಿ|| ಟಿ ಕೆ ಲಕ್ಷ್ಮಣ ಅಯ್ಯರವರನ್ನು ...ನಹಳ್ಳಿ ತಾಲ್ಲೂಕು ಅಮಲ್ದಾರ್ ಮತ್ತೂ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ ...ಗಿ ಬದಲಿ ನೇಮಿಸಿದೆ.

ಮಿ ಎಚ್ ವಿ ರಾಮಸ್ವಾಮಿಯವರನ್ನು 3 ನೇ ಕ್ಲಾಸ್ ಅ ಕಮಿ... ...ರಾಗಿ ಜನವರಿ ತಾ 6 ರಿಂದ ಖಾಯಂ ಮಾಡಿದೆ

ನಂಜನಗೂಡು ಮುನ್ಸಿಫ್ ಮಿ| ಟಿ ಕೃಷ್ಣ ಅಯ್ಯಂಗಾರರನ್ನು ಜನವರಿ ... ರಿಂದ 3 ರಿಂದ 2 ನೇ ಕ್ಲಾಸಿಗೆ ಬಡ್ತಿ ಮಾಡಿದೆ

ನೆಲಮಂಗಲದ ತಾಲ್ಲೂಕು ಅಮಲ್ದಾರ್ ಮಿ| ಸಯ್ಯದ್ ಜಾಕೂಬ್‌ರವರ ಬೆಂಗಳೂರು ತಾಲ್ಲೂಕಿಗೆ ವರ್ಗಮಾಡಿದೆ

ಮೊದಲನೇ ಕೌನ್ಸಿಲರವರ ಪ|| ಅಸಿಸ್ಟೆಂಟ್ ಮಿ|| ಸಿ ಸೂರ್ಯನಾರಾಯಣಶಾಸ್ತ್ರಿಯವರನ್ನು ರಜದಿಂದ ಕರೆಸಿ ನೆಲಮಂಗಲದ ತಾಲ್ಲೂಕ್ ಅಮಲ್ದಾರ್ ಮತ್ತೂ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಕಮಾಡಿದೆ

ಶಿವಮೊಗ್ಗ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಮಿ|| ಸಿ ಕೃಷ್ಣಮಾಚಾರ್ಯರವರನ್ನು ಮೈಸೂರಿಗೆ ವರ್ಗಮಾಡಿದೆ ಮಿ|| ಎಂ ಪಿ ವಿಶ್ವನಾಥರಾಯರಿಗೆ ಛಾರ್ಜ ಕೊಟ್ಟು ಬಳಿಕ ಹೋಗತಕ್ಕದ್ದು

ಮಿ|| ಸಿ ಆರ್ ನಾರಾಯಣಸ್ವಾಮಿ ಮುದಲಿಯರ್ರು ಮ| ಸಿ ಕೃಷ್ಣಮಾಚಾರ್ಯರಿಗೆ ಛಾರ್ಜ ಕೊಟ್ಟು ಬಳಿಕ ಅಮಲ್ದಾರೀಗೆ ವಾಪಸು ಹೋಗತಕ್ಕದ್ದು

ಮುಂದೆ ಹೇಳುವ ಅ ಕಮಿಷನರುಗಳ ವರ್ಗಾವರ್ಗಿ ಹುಕುಂ ಮಾಡಿದೆ—ಮಿ ಕೆ ಪಿ ಅನಂತರಾಮನ್‌ರವರನ್ನು ರೆವಿನ್ಯೂ ಕಮಿಷನರವರ ಆಫೀಸಿನಿಂದ ಹಾಸನದ ಪೋಲೀಸ್ ಇಲಾಖೆಗೆ ಮಿ|| ಎಂ ಪಿ ವಿಶ್ವನಾಥರಾಯರನ್ನು ಹಾಸನದ ಪೋಲೀಸ್ ಇಲಾಖೆಯಿಂದ ಶಿವಮೊಗ್ಗ ಎಕ್ಸೈಸ್ ಇಲಾಖೆಗೆ ಮಿ|| ಡಿ ಶ್ರೀನಿವಾಸಯ್ಯಂಗಾರ್ರನ್ನು ಬೆಂಗಳೂರು ರೆವಿನ್ಯೂ ಇಲಾಖೆಯಿಂದ ಕಡೂರು ಎಕ್ಸೈಸ್ ಇಲಾಖೆಗೆ, ಮಿ| ಬಿ ಭೀಮರಾಯರನ್ನು ಮೈಸೂರಿನಿಂದ ಚಿತ್ರದುರ್ಗದ ಖಿಜಾನೆ ಛಾರ್ಜಿಗೆ, ಮಿ|| ಎಂ ಸದಾಶಿವರಾಯರನ್ನು ಚಿತ್ರದುರ್ಗದಿಂದ ಸಕಲೇಶಪುರದ ಸಬ್ ಡಿವಿಜನ್‌ಗೆ, ಮಿ| ಮಾಚಯ್ಯನವರನ್ನು ಹಾಸನದಿಂದ ಚಿತ್ರದುರ್ಗದ ಪೋಲೀಸ್ ಇಲಾಖೆಗೆ, ಮಿ| ವೆ ವಿ ಕೃಷ್ಣಮೂರ್ತಿಯವರನ್ನು ಚಿತ್ರದುರ್ಗದ ಪೋಲೀಸ್ ಇಲಾಖೆಯಿಂದ ಮೈಸೂರು ಡಿಸ್ಟ್ರಿಕ್ಟ್ ಖಿಜಾನೆ ಛಾರ್ಜಿಗೆ, ಮಿ| ಎ ವೇದಾಂತ ದೇಶಿಗಂ ಅಯ್ಯಂಗಾರ್ರನ್ನು ಕೋಲಾರದ ಪೋಲೀಸ್ ಇಲಾಖೆಯಿಂದ ಫ್ರೆಂಚ್ ರಾಕ್ಸ್ ಪೋಲೀಸ್ ಇಲಾಖೆಗೆ, ಮಿ|| ಅಬ್ದುಲ್ ವಜೀದ್‌ಯವರನ್ನು ಫ್ರೆಂಚ್ ರಾಕ್ಸಿನಿಂದ ಶಿವಮೊಗ್ಗ ಪೋಲೀಸ್ ಇಲಾಖೆಗೆ, ಮಿ| ಬಿ ರಾಮಸ್ವಾಮಯ್ಯನವರನ್ನು ಶಿವಮೊಗ್ಗೆಯಿಂದ ಕೋಲಾರಕ್ಕೆ ವರ್ಗಮಾಡಿದೆ

ಎಗ್ಜಿಕ್ಯುಟಿವ್ ಇಂಜನಿಯರ್ ಮಿ ಎಫ್ ಎ ಸ್ಟೀಲ್‌ರವರು ರಜದ ಮೇಲಿರುವಾಗ್ಗೆ ಅ| ಇಂಜನಿಯರ್ ಮಿ|| ಎ ಪುಟ್ಟಸ್ವಾಮಯ್ಯನವರನ್ನು ಕಳೆದ ಸೆಪ್ಟಂಬರ್ ತಾ 1 ರಿಂದ 1 ನೇ ಕ್ಲಾಸ್ ಎಗ್ಜಿಕ್ಯುಟಿವ್ ಇಂಜನಿಯರಾಗಿ ನೇಮಕವಾಗಿದೆ

ಹಾಸನ್ ತಾಲ್ಲೂಕು ಅಮಲ್ದಾರ್ ಮಿ| ವಿ ಎಸ್ ರಾಜಗೋಪಾಲಾಚಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಆಲೂರ್ ಸಬ್ ತಾಲ್ಲೂಕಿನ ಡೆಪ್ಟಿ ಅಮಲ್ದಾರ್ ಮಿ|| ಎಂ ಚಕ್ರಪಾಣಿರಾಯರು ಹಾಸನ್ ತಾಲ್ಲೂಕ್ ಛಾರ್ಜನ್ನೂ ವಹಿಸಿರತಕ್ಕದ್ದು

ತಾಲ್ಲೋಕು ವರ್ತಮಾನಗಳು

ಅರಸೀಕೆರೆ ತಾ|| ಹಾರನಹಳ್ಳಿ —ಅರಸೀಕೆರೆಯಿಂದ ಹಾಸನಕ್ಕೆ ರೈಲ್ ಹಾಕುವುದಕ್ಕೋಸ್ಕರ ಈ ಗ್ರಾಮಕ್ಕೆ ಸಮೀಪದಲ್ಲಿ ಮೊದಲು ಸರ್ವೆಮಾಡಿದ್ದನ್ನು ಬಿಟ್ಟು ಈಗ ಪುನಃ ಈ ಗ್ರಾಮಕ್ಕೆ 1 5 ಮೈಲಿ ದೂರದಲ್ಲಿ ಲೈನ್ ಹಾಕುವುದಾಗಿಯೂ, ಸ್ಟೇಷನ್ ಮಾಡುವುದಾಗಿಯೂ ಕೇಳಿದ್ದಲ್ಲದೆ ಸರ್ವೆ ಪುನಃ ಮಾಡುತ್ತಾರೆಂದೂ ಕೇಳುತ್ತೇವೆ ಆದರೆ ಈಗ ಹಾಕತಕ್ಕ ಆ ಲೈನಿಂದ ಈ ಗ್ರಾಮಕ್ಕೂ ಮತ್ತು ಸುತ್ತಮುತ್ತಲಿರುವ ಹಳ್ಳಿಗಳಿಗೂ ಯಾವ ವಿಧವಾದ ಪ್ರಯೋಜನವೂ ದೊರೆಯುವಂತಿಲ್ಲ ಈ ಗ್ರಾಮವು 700 800 ಮನೆಗಳುಳ್ಳದ್ದಾಗಿಯೂ, 2,000 2,300 ಪ್ರಜೆಗಳುಳ್ಳದ್ದಾಗಿಯೂ ಇದೆ ಆದ್ದರಿಂದ ಘನವನ್ನು ಹೊಂದಿದ ಸರ್ಕಾರದವರು ಲೈನನ್ನು ಮೊದಲು ಸರ್ವೆ ಮಾಡಿರುವ ಪ್ರಕಾರ ಈ ಊರಿಗೆ ಹತ್ತಿರದಲ್ಲಿ ಹಾಕಿಸಿ ಸ್ಟೇಷನ್ ಇಡಿಸುವುದರಿಂದ ಈ ಗ್ರಾಮಕ್ಕೂ ಈ ಊರಿಗೆ ಸಮೀಪದಲ್ಲಿರುವ ಸಾವಿರಾರು ಹಳ್ಳಿಗಳಿಗೂ ಸಹ ಆಮದುರಫ್ತುಗೂ ವ್ಯಾಪಾರಕ್ಕೂ ಅನುಕೂಲವಾಗುವದಲ್ಲದೆ ಶಿಥಿಲವಾಗಿರುವ ಈ ಗ್ರಾಮವೂ ಕೂಡ ಮತ್ತೆ ಅಭಿವೃದ್ಧಿಗೆ ಬರುವುದರಲ್ಲಿ ಯಾವ ಸಂದೇಹವೂ ಇಲ್ಲ ಮತ್ತು ರೈಲ್ವೆ ಉತ್ಪತ್ತಿಯೂ ಬಹಳವಾಗುವದು

ಫ್ರೆಂಚ್‌ರಾಕ್ಸ್ —ಹವಾ ತಕ್ಕಮಟ್ಟಿಗೆ ಆರೋಗ್ಯಕರವಾಗಿದೆ ಕಳೆದ ವಾರವೂ ಈ ವಾರವೂ ಒಳ್ಳೇ ಮಳೆಗಳು ಬಿದ್ದವು ಆದರೆ ಕೆರೆಗೆ ಮಾತ್ರ ಸ್ವಲ್ಪವಾದರೂ ನೀರು ಬರಲಿಲ್ಲ ಈ ವರ್ಷ ನೀರು ಬಾರದೆಹೋದರೆ ಕೆರೆಯ ಹಿಂಭಾಗದಲ್ಲಿ ಬೆಳೆ ಮಾಡತಕ್ಕ ರೈತರಿಗೆಲ್ಲಾ ತುಂಬಾ ನಷ್ಟವಾಗುತ್ತೆ —ಇಲ್ಲಿನ ಮ್ಯುನಿಸಿಪಾಲಿಟಿ ಏರ್ಪಾಡುಗಳು ತೃಪ್ತಿಕರವಾಗಿಲ್ಲ ಸಂದುಗೊಂದುಗಳಲ್ಲಿ ದುರ್ವಾಸನೆಯೂ, ಕೊಳಕೂ ಇದ್ದೇ ಇದೆ ಹೀಗೆ ಇರುವ ಪಕ್ಷದಲ್ಲಿ ಪುನಃ ಕಾಲರಾ ತಲೆದೋರುತ್ತದೋ ಎಂಬ ಸಂಶಯವುಂಟು ಈ ವಿಷಯದಲ್ಲಿ ಮ್ಯುನಿಸಿಪಾಲಿಟಿಯ ಅಧಿಕಾರಿಗಳು ಜಾಗ್ರತೆ ಗಮನಕೊಡುವದು ಒಳ್ಳೇದು —ನಮ್ಮ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ ಅಬ್ದುಲ್ ವಾಜಿದ್, ಬಿ ಎ ಯವರಿಗೆ ಇಲ್ಲಿಂದ ಶಿವಮೊಗ್ಗ ಡಿಸ್ಟ್ರಿಕ್ಟಿಗೆ ವರ್ಗವಾಯಿತೆಂಬ ಸಂಗತಿಯು ಫ್ರೆಂಚ್ ರಾಕ್ಸ್ ಸರ್ಕಲ್ಲಿಗೆ ಸೇರಿದ ಪೋಲೀಸ್ ಇಲಾಖೆಯವರು ಮೊದಲ್ಗೊಂಡು ಸಕಲ ಪ್ರಜೆಗಳಿಗೂ ತುಂಬಾ ವ್ಯಸನವನ್ನುಂಟುಮಾಡಿದೆ ಇವರು ಈ ಸ್ಥಳಕ್ಕೆ ಬಂದು ಸುಮಾರು 11 ತಿಂಗಳು ಮಾತ್ರ ಆಯಿತು ಇಷ್ಟು ಸ್ವಲ್ಪ ಕಾಲದಲ್ಲಿ ಇವರು ಸಕಲ ಪ್ರಜೆಗಳ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿರುವದಕ್ಕೆ ಇವರ ನಿಷ್ಪಕ್ಷಪಾತವಾದ ನಡತೆಯೇ ಕಾರಣವಾಗಿದೆ ಇವರು ಇನ್ನೂ ಸಣ್ಣ ವಯಸ್ಸಿನವರಾದಾಗ್ಯೂ ಪೂರ್ವದ ಪಾಶ್ಚಾತ್ಯಾದಿ ಗುಣಗಳಿಂದ ಕೂಡಿರುತ್ತಾರೆ ಮುಖ್ಯವಾಗಿ ಇವರ ಕಾಲದಲ್ಲಿ ಸಂತೆಯಲ್ಲಿ ನಡೆಯುತ್ತಿದ್ದ ಹಸಿಗೆ, ಊರಿನಲ್ಲಿ ನಡೆಯುತ್ತಿದ್ದ ಜೂಜಾಟಗಳು, ಕಳ್ಳತನ, ಸಣ್ಣ ನೌಕರರಲ್ಲಿದ್ದ ಲಂಚ ರುಷುವತ್ತು ಮೊದಲಾದ ದುರಭ್ಯಾಸಗಳೆಲ್ಲಾ ಸಂಪೂರ್ಣವಾಗಿ ನಿಲ್ಲಿಸಲ್ಪಟ್ಟವು ಇವರ ಕೈಕೆಳಗಿದ್ದ ಇನ್ಸ್‌ಪೆಕ್ಟರುಗಳು ಸಹ ತಮ್ಮ ಆಫೀಸರವರ ನಡತೆಯನ್ನು ಅನುಸರಿಸಿ ಕೆಲಸ ಮಾಡುತ್ತಿದ್ದರು ಸರ್ಕಾರದವರು ಇನ್ನೂ 2 3 ವರ್ಷಗಳು ಇವರನ್ನು ಇದೇ ಸ್ಥಳದಲ್ಲಿ ಇರಿಸಿದ್ದರೆ ಈ ಸರ್ಕಲ್ಲಿಗೆ ತುಂಬಾ ಪ್ರಯೋಜನವಾಗುತ್ತಿತ್ತು —ನಮ್ಮ ಡಾಕ್ಟರವರು ಮುದ್ದು ಕಾಸು ತೆಗೆದುಕೊಳ್ಳದೆ ಬಡವರ ಮನೆಗಳಿಗೆ ಹೋಗಿ, ಅವರಿಗೆ ಔಷಧ ಮುಂತಾದವನ್ನು ಕೊಡುವದೂ ಅಲ್ಲದೆ ಆಸ್ಪತ್ರೆಗೆ ಹೋಗತಕ್ಕವರನ್ನು ತುಂಬಾ ಮರ್ಯಾದೆಯಿಂದ ಕಾಣುತ್ತಾ ಇಲ್ಲಿನ ಜನಗಳ ಪ್ರೀತಿಗೆ ಪಾತ್ರರಾಗಿದ್ದಾರೆ

ಇಂಡಿಯಾ ದೇಶದ ವೃತ್ತಾಂತಗಳು.

ದಕ್ಷಿಣ ಆರ್ಕಾಟ್ ಜಿಲ್ಲಾದೊಳಗೆ ತೊಲುದೂರು ಕೆರೆಯ ಭಾರೀ ಕಾಮಗಾರಿಯನ್ನು ಇಂಡಿಯಾ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ ಇದಕ್ಕೆ ಸುಮಾರು ಐದು ಲಕ್ಷ ರೂಪಾಯಿ ಖರ್ಚಾದೀತೆಂದು ಅಂದಾಜಾ ಆಗಿದೆ

⁂

ಬೊಂಬಾಯಿನ ಹತ್ತಿರ ರೈಲ್ವೆ ಕಾರ್ಖಾನೆ ಇರುವ ಪರೇಲ್ ಎಂಬ ಸ್ಥಳದಲ್ಲಿ ಸುಮಾರು 300 ಮಂದಿ ರೈಲ್ವೆ ನೌಕರರು ತಮ್ಮ ಸಂಬಳವನ್ನು ಹೆಚ್ಚಿಸಿ ಕೊಡಬೇಕೆಂದು ಮುಂತಾಗಿ ಹಟ ಹಿಡಿದು ಕೆಲಸಕ್ಕೆ ಹೋಗದೆ ನಿಂತು ಬಿಟ್ಟಿರುತ್ತಾರೆ

⁂

ಕಳೆದ ಏಪ್ರೆಲ್ ತಿಂಗಳಲ್ಲಿ ಜಹಜುಗಳ ಮೇಲೆ ಪರಸ್ಥಳಗಳಿಂದ 390 ಲಕ್ಷ ರೂಪಾಯಿನ ಸರಕು ಕಲ್ಕತ್ತಾ ಪಟ್ಟಣಕ್ಕೆ ಆಮದಾಗಿ ಬಂದಿತೆಂದೂ, ಆ ಪಟ್ಟಣದಿಂದ 170 ಲಕ್ಷ ರೂಪಾಯಿಗಳ ಸರಕು ಜಹಜುಗಳ ಮೇಲೆ ಇತರ ಕಡೆಗಳಿಗೆ ರಫ್ತಾಗಿರುವುದೆಂದೂ ತಿಳಿದುಬಂದಿದೆ

⁂

ಉತ್ತರ ದೇಶದಲ್ಲಿ ಮಳೆ ಸಾಲದು ಬೊಂಬಾಯಿ ಅಧಿಪತ್ಯದ ಆರು ತಾಲ್ಲೂಕುಗಳಲ್ಲಿ ಪ್ರಜೆಗಳಿಗೆ ಕ್ಷಾಮಬಾಧೆಯು ಇನ್ನೂ ನಿವಾರಣೆಯಾಗಲಿಲ್ಲ ಈಗ 14,776 ಪ್ರಜೆಗಳು ಸರ್ಕಾರಿ ಧರ್ಮ ಸತ್ರಗಳಲ್ಲಿ ನಿಂತು ಹೊಟ್ಟೆ ಹೊರಕೊಳ್ಳುತ್ತಿದ್ದಾರೆ ಬಂಗಾಳಾಕ್ಕೆ ಸೇರಿದ ಒಂಭತ್ತು ಡಿಸ್ಟ್ರಿಕ್ಟುಗಳೊಳಗೂ, ಚೋಟಾನಾಗಪುರ ಮತ್ತು ಒರಿಸಾಗಳಲ್ಲೂ ದನಗಳಿಗೆ ರೋಗಹುಟ್ಟಿ ಅನೇಕವಾಗಿ ಸಾಯುತ್ತಿವೆ ಎಲ್ಲಾ ಕಡೆಗಳಲ್ಲೂ ಆಹಾರ ಧಾನ್ಯಾದಿಗಳ ಧಾರಣೆವಾಸಿಗಳು ಹೆಚ್ಚುವಂತೆಯೇ ಇವೆ

⁂

ಕಳೆದ ಸೋಮವಾರ ರಾತ್ರಿ ಪೂರ್ವ ಬಂಗಾಳಾ ಸ್ಟೇಟ್ ರೈಲ್ವೆ ಲೈನಿನಲ್ಲಿ ರೈಲ್ ಗಾಡಿಯನ್ನು ಕೆಡವಿ ಅನಾಹುತವನ್ನುಂಟುಮಾಡಬೇಕೆಂದು ದುಷ್ಟರ್ಯಾರೋ ರೈಲ್ ಕಂಬಿಗಳ ಮೇಲೆ ಅಡ್ಡಲಾಗಿ ಅನೇಕ ಮರದ ಕೊಂಟುಗಳನ್ನೂ ಕಲ್ಲು ಬಂಡೆಗಳನ್ನೂ ಪೇರಿಸಿ ಇಟ್ಟಿದ್ದರು ಆ ರಾತ್ರಿ ದೈವಾನುಗ್ರಹದಿಂದ ಬೆಳದಿಂಗಳು ಯಥೇಷ್ಟವಾಗಿಯೂ ಪ್ರಕಾಶಮಾನವಾಗಿಯೂ ಇದ್ದ ಕಾರಣ ರೈಲ್‌ಗಾಡಿ ನಡಿಸುವವನಿಗೆ ದೂರದಲ್ಲಿದ್ದ ಆ ಅಪಾಯವು ಕಂಡುಬಂದಿತು ಆತನು ತಕ್ಷಣವೇ ಗಾಡಿಯನ್ನು ಸ್ವಲ್ಪ ಹೊತ್ತು ನಿಲ್ಲಿಸಿ, ಅಪಾಯವನ್ನೆಲ್ಲಾ ತೆಗಿಸಿಹಾಕಿ ಗಾಡಿಯನ್ನು ಮುಂದಕ್ಕೆ ಬಿಟ್ಟುಕೊಂಡು ಹೋದನು ಇದೆಲ್ಲಾ ದರ್ಶನಾರ್ ಎಂಬ ಸ್ಟೇಷನ್ ಬಳಿ ನಡೆದಿತೆಂದು ತಿಳಿದು ಬಂದಿದೆ

⁂

ಕಳೆದ ವಾರ ಲಾಹೋರ್ ಪಟ್ಟಣದಲ್ಲಿ ಸಿಡಿಮದ್ದಿನ ಗುಂಡು ಮಹಾ ಶಬ್ದದೊಡನೆ ಹಾರಿ ಒಬ್ಬ ಜವಾನನು ಅಕಾಲಮರಣವನ್ನು ಹೊಂದಿದನು ಇಂಗ್ಲಿಷ್ ಅಧಿಕಾರಿಗಳೂ ದೇಶೀಯ ದೊಡ್ಡ ಮನುಷ್ಯರೂ ವಿಹಾರಕ್ಕಾಗಿ ಸಾಯಂಕಾಲದ ಹೊತ್ತು ಸೇರುವ ಕ್ಲಬ್ ಹೌಸ್ ಎಂಬ ಬಂಗಲೆಯ ಆವರಣದಲ್ಲಿ ಈ ಸಿಡಿಮದ್ದಿನ ಗುಂಡನ್ನು ಕ್ಷುದ್ರಾತ್ಮರ್ಯಾರೋ ಬೇಕೆಂದು ಇಟ್ಟಿದ್ದರೆಂತ ತಿಳಿದುಬರುತ್ತದೆ ಆ ದುರಾತ್ಮರ್ಯಾರೋ ಇನ್ನೂ ಸಿಕ್ಕಿ ಇಲ್ಲ ಅವರನ್ನು ಹಿಡಿದುಕೊಡುವವನಿಗೆ 5,000 ರೂಪಾಯಿ ಇನಾಮುಕೊಡುತ್ತೇವೆಂದು ಪಂಜಾಬ್ ಗವರ್ನ್‌ಮೆಂಟಿನವರು ಇಸ್ತಿಹಾರು ಹಾಕಿಸಿರುತ್ತಾರೆ ಪೋಲೀಸಿನವರು ಕಲ್ಕತ್ತೆಯಿಂದಲೂ ಹೋಗಿ ಪತ್ತೆ ತರದೂದು ನಡಿಸುತ್ತಿರುವರು

⁂

ಪೂನಾ ಪಟ್ಟಣದಲ್ಲಿದ್ದ ಮಿ|| ಬಾಲಗಂಗಾಧರ ತಿಲಕರ ಮೇಲೆ ರಾಜದ್ರೋಹದ ಮೊಕದ್ದಮೆ ಬಂದು ದರ್ಯಾಫ್ತಿಯಾಗಿ ಅವರಿಗೆ ಬಂಧನದ ಶಿಕ್ಷೆ ವಿಧಿಸಲ್ಪಟ್ಟು ಅವರನ್ನು ಬರ್ಮಾ ಅಧಿಪತ್ಯಕ್ಕೆ ಸೇರಿದ ಮಾಂಡಲೆಪಟ್ಟಣದ ಬಂದೀಖಾನೆಯಲ್ಲಿ ಇಟ್ಟಿರುತ್ತಾರಷ್ಟೆ ಈಚೆಗೆ ಇವರ ಪಕ್ಷದವರು ಕಾಲವಾದರು ಚಕ್ರವರ್ತಿಯವರ ಕಿರೀಟಧಾರಣೆಗೆ ಸಂಬಂಧಪಟ್ಟ ಉತ್ಸವಕಾಲದಲ್ಲಿ ಅವರಿಗೆ ಕ್ಷಮಾಪಣೆ ದೊರಕಲಿಲ್ಲ ಈಗ ವೃದ್ಧಾಪ್ಯ ಕಾಲದಲ್ಲಿ ಅವರಿಗೆ ವಾಸಿಯಾಗದೆ ಇರುವಂಥಾ ಮೂತ್ರರೋಗವು ಪ್ರಾಪ್ತವಾಗಿ ಕಷ್ಟಪಡುತ್ತಿದ್ದಾರೆಂದೂ, ಅವರನ್ನು ಬಂಧನದಿಂದ ಬಿಡುಗಡೆ ಮಾಡಿಕೊಡಬೇಕೆಂದೂ ಅವರ ರಕ್ತಸಂಬಂಧಿಗಳೂ ಇಷ್ಟಮಿತ್ರರೂ ಸೇರಿ ಚಕ್ರವರ್ತಿ ಸಾರ್ವಭೌಮರವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದುಕೊಂಡಿದ್ದರು ವಿಜ್ಞಾಪನಾ ಪತ್ರಿಕೆಯು ನಿರಾಕರಿಸಲ್ಪಟ್ಟಿತೆಂದು ತಿಳಿಯುತ್ತದೆ

⁂

ಕೆಲವು ದಿನಗಳ ಹಿಂದೆ ಆಗ್ರಾ ಪಟ್ಟಣದಲ್ಲಿ ನಡೆದಂಥಾ ಕೊಲೆಯು ಬಂಗಾಳಾ ಅಧಿಪತ್ಯಕ್ಕೆ ಸೇರಿದ ಒರ್ದವಾನ್ ಪಟ್ಟಣದಲ್ಲೂ ನಡೆದಿರುವುದಾಗಿ ತಂತಿವರ್ತಮಾನ ಬಂದಿದೆ ಓದುಬರಹ ತಿಳಿಯದ ಸ್ಯಾಂಚನ್ ಎಂಬೊಬ್ಬ ಚಟ್ಟೀಗಾರನು ಕಳೆದ ನವೆಂಬರ್ ತಿಂಗಳಲ್ಲಿ ವಿದ್ಯೆ ಕಲಿತಿರುವ ಒಬ್ಬ ಯೌವನವತಿಯನ್ನು ಮದುವೆಮಾಡಿಕೊಂಡನು ಗಂಡ ಹೆಂಡರಿಗೆ ಹೊಂದಿಕೆಯಾಗಲಿಲ್ಲ ಹೆಂಡತಿಯು ಗಂಡನನ್ನು ಸಮಾಪ್ತಿಮಾಡಬೇಕೆಂದು ನಿಶ್ಚಯಿಸಿಕೊಂಡು, ಗಂಡನಿಗೆ ಆಹಾರದಲ್ಲಿ ವಿಷಹಾಕಿ ಕೊಟ್ಟಳು ಅವನು ಅದನ್ನು ತಿಂದು ರಾಯಿಲೆ ಆಗಿ ನರಳಿ ಸತ್ತುಹೋದನು ಗಂಡನನ್ನು ಕೊಂದಳೆಂದು ಅವಳನ್ನು ಹಿಡಿದು ಬರ್ದವಾನ್ ಸೆಷನ್ಸ್ ಜಡ್ಜರವರ ಕೋರ್ಟಿನಲ್ಲಿ ದರ್ಯಾಫ್ತಿಮಾಡಿದರು ಕೊಲೆಮಾಡಿದ ಅಪರಾಧವು ಅವಳ ಮೇಲೆ ರುಜುವಾತಾಯಿತು ಸೆಷನ್ಸ್ ಜಡ್ಜರು ಮರಣದಂಡನೆಯನ್ನು ವಿಧಿಸದೆ ಅವಳ ಚಿಕ್ಕ ವಯಸ್ಸಿನ ಮೇಲೆ ದೃಷ್ಟಿಯಿಟ್ಟು, ಅವಳು ಯಾವಜ್ಜೀವವೂ ಬಂಧೀಖಾನೆ ಶಿಕ್ಷೆಯನ್ನು ಅನುಭವಿಸಬೇಕೆಂಬ ಶಿಕ್ಷೆಯನ್ನು ವಿಧಿಸಿರುತ್ತಾರೆ

⁂

ಕನ್ನಾನೂರಿನಲ್ಲಿರುವ 88 ನೇ ಕರ್ನಾಟಕ ಇನ್‌ಫೆಂಟ್ರಿ ಎಂಬ ರಿಜಿಮೆಂಟಿನ ಕೆಲವು ಹುದ್ದೇದಾರರು ಸೇರಿಕೊಂಡು ಗವರ್ನ್‌ಮೆಂಟಿನ ಹಣವನ್ನೂ ರಿಜಿಮೆಂಟಿನ ಹಣವನ್ನೂ ಸುಮಾರು 9,000 ರೂಪಾಯಿ ತನಕ ತಿಂದುಹಾಕಿರುತ್ತಾರೆಂದು ಮಿಲ್ಟೇರಿ ಕೋರ್ಟಿನವರು ಕೂಲಂಕಷ ದರ್ಯಾಫ್ತಿಮಾಡಿ ತಮ್ಮ ತೀರ್ಮಾನವನ್ನು ಹಿಂದುಸ್ಥಾನದ ಸೈನ್ಯಾಧಿಪತಿಯವರಿಗೆ ರಿಪೋರ್ಟುಮಾಡಿದರು ಸೈನ್ಯಾಧಿಪತಿಯು ಈ ಮೊಕದ್ದಮೆಯ ಕಟ್ಟನ್ನು ಪರಿಶೋಧಿಸಿ ಕಳೆದ ಶುಕ್ರವಾರ ಮುಂದೆ ವಿವರಿಸುವ ಶಿಕ್ಷೆಗಳನ್ನು ವಿಧಿಸಿ ಹುಕುಂಕೊಟ್ಟಿರುತ್ತಾರೆ ಸೆಂಟ್ ಜಾನ್, ಕೋಲಿನ್ಸ್, ಫುಲ್ಲರ್ ಎಂಬ 3 ಮಂದಿ ಕ್ಯಾಪ್ಟನ್‌ರೂ ನಿಂದಿಸಲ್ಪಟ್ಟರು, ಕ್ಯಾಪ್ಟನ್ ಸ್ಮಿತ್ ಎಂಬಾತನನ್ನು ಕೆಲಸದಿಂದ ವಜಾಮಾಡಿ, ಆತನಿಗೆ ಒಂದು ವರುಷ ಕಠಿಣಸಜಾ ವಿಧಿಸಿದರು, ಅಬ್ದುಲ್ ರಹಮಾನ್ ಎಂಬ ಜಮಾದಾರನಿಗೆ ರೆಜಿಮೆಂಟಿನ ನೌಕರಿಯಿಂದ ವಜಾ ಆಯಿತು, ಹಾವಿಲ್ದಾರ್ ಮಹಮ್ಮದ್ ಸಿಕಂದರನನ್ನೂ ನಾಯಕ್ ಅಬ್ದುಲ್ ಅಜೀಜನನ್ನೂ ಕೆಂಪುಮಾಡಿದರು, ಕಲರ್ ಹಾವಿಲ್ದಾರ್ ಮಹಮದ್ ಆರೀಫ್ ಎಂಬವನಿಗೆ ಮೂರು ವರುಷ ಕಠಿಣಸಜವೂ, ಹಾವಿಲ್ದಾರ್ ಮಹಮದ್ ಷರೀಫ್ ಎಂಬವನಿಗೆ ಎರಡು ವರುಷಗಳ ಕಠಿಣಸಜವೂ ವಿಧಿಸಿರುತ್ತಾರೆ

ಚಿತ್ರದುರ್ಗ ಡಿಸ್ಟ್ರಿಕ್ಟು ಉಪಾಧ್ಯಾಯ ಸಂಘ.

1913 ನೇ ಮೇ ತಿಂಗಳು.

ಬೇಸಗೇ ರಜದ ಕಾಲವಾದ್ದರಿಂದ ಮೇ ಮತ್ತು ಜೂನ್ ಮಾಹೆಗಳಲ್ಲಿ ನಡೆಯತಕ್ಕ ತಿಂಗಳುಗಟ್ಲೆ ಮೀಟಿಂಗುಗಳಿಗೂ ರಜಾ ಕೊಡಲ್ಪಟ್ಟಿರುತ್ತದೆ. ಜೂನ್ನ ತಾ 6 ನೇ ಭಾನುವಾರ ಪುನಃ ಪ್ರಾರಂಭವಾಗಿ ತಿಂಗಳಗಟ್ಲೆ ಮೀಟಿಂಗು ನಡಿಸಬೇಕಾದ್ದರಿಂದ ಸಂಘದ ಎಲ್ಲಾ ಮೆಂಬರುಗಳೂ ಆ ದಿವಸ ಮಧ್ಯಾಹ್ನಕ್ಕೆ ಚಿತ್ರದುರ್ಗದ ಎ ವಿ ಸ್ಕೂಲು ಹಾಲಿನಲ್ಲಿ ಸೇರಬೇಕೆಂದು ಈ ಮೂಲಕ ಸೂಚಿಸಲಾಗಿದೆ. ಆ ದಿವಸ ಚರ್ಚೆಮಾಡಬೇಕಾದ ಮುಖ್ಯಾಂಶಗಳ್ಯಾವುವೆಂದರೆ—1 ನೀತಿಬೋಧೆ, ಮತಬೋಧೆಗಳೆಂದರೇನು? ಒಂದಕ್ಕೊಂದಕ್ಕೆ ಎಷ್ಟರಮಟ್ಟಿಗೆ ಸಂಬಂಧವಿದೆ? 2 ಪ್ರಾಕ್ಟಿಕಲ್ ಕ್ಲಾಸು (ಗಣಿತವಿಚಾರ), 3. ಪ್ರತಿ ನಿತ್ಯವೂ ಪಾಠಪ್ರಾರಂಭವಾಗುವುದಕ್ಕೆ ಮೊದಲು ಉಪಾಧ್ಯಾಯರು ತಮ್ಮ ಬಾಲಕರ ಆರೋಗ್ಯವನ್ನು ವಿಚಾರಿಸಿಕೊಳ್ಳಬೇಕೆಂಬ ವಿಷಯ

ವೀ. ಬಸಪ್ಪ, ಸಕ್ರೆಟರಿ

ಪ್ಲೇಗಿಗೂ ಏಡುಬಿಗೂ ಗುಣಕಂಡ ಔಷಧವು

ಟಿಂಕ್ಚರ್ ಆಫ್ ಅಯೋಡೈನ್.

ಹಿಂದುಸ್ಥಾನದ ವಾಯುವ್ಯ ಭಾಗದಲ್ಲಿರುವ ಸಂಯುಕ್ತ ಸಂಸ್ಥಾನಗಳಲ್ಲಿ ಪ್ಲೇಗ್ ಉಪದ್ರವ ಹಾವಳಿಯು ಈಚೆಗೆ ಹೆಚ್ಚಾಗಿರುವುದನ್ನು ನೋಡಿ ಸಾಲ್ವೇಷನ್ ಆರ್ಮಿಯ ಕಮಿಷನರವರಾದ ಬೂತ್ ಟುಕರವರು ಟಿಂಕ್ಚರ್ ಆಫ್ ಅಯೋಡೈನ್ ಎಂಬ ಔಷಧವು ಪ್ಲೇಗ್ ರೋಗಕ್ಕೆ ಉತ್ತಮವಾದ ಗುಣಕಂಡ ಔಷಧವಾಗಿದೆ ಎಂದು ತಮ್ಮ ಅನುಭವವನ್ನು ತಿಳಿಸಿರುತ್ತಾರೆ ಅವರು ಹೇಳುವ ಅಭಿಪ್ರಾಯವೇನೆಂದರೆ—ಕಳೆದ ಎರಡು ವರುಷಗಳಿಂದ ನಾವು ಪ್ಲೇಗ್ ರೋಗಿಗಳಿಗೆ ಟಿಂಕ್ಚರ್ ಆಫ್ ಅಯೋಡೈನ್ ಎಂಬ ಔಷಧವನ್ನು ಕೊಡುತ್ತಾ ಬಂದಿದ್ದರಲ್ಲಿ ಅದರಿಂದ ತುಂಬಾ ಪ್ರಯೋಜನವಾಗಿರುತ್ತದೆಂದು ನಮಗೆ ಗೊತ್ತಾಗಿದೆ ನಮ್ಮ ಕೈ ಕೆಳಗಿನ ಒಬ್ಬ ಅಧಿಕಾರಿಯು ಈ ಔಷಧವನ್ನು ಅರವತ್ತು ಮಂದಿ ಪ್ಲೇಗ್ ರೋಗಿಗಳಿಗೆ ಕೊಟ್ಟನು ಆ ಪೈಕಿ ಐವತ್ತಾರು ಜನರಿಗೆ ಗುಣವಾಗಿರುತ್ತದೆ ಎಂದು ಆತನು ಬರೆದಿರುತ್ತಾನೆ ಈಚೆಗೆ ಪಂಜಾಬ್ ಸೀಮೆಯಲ್ಲಿ ನಮ್ಮ ಕಡೆಯ ಒಬ್ಬ ಸ್ತ್ರೀಯು ಐವತ್ತೊಂದು ಮಂದಿ ಪ್ಲೇಗ್ ಕಾಯಿಲೆಯವರಿಗೆ ಈ ಔಷಧವನ್ನು ಕೊಟ್ಟದ್ದರಲ್ಲಿ ಐವತ್ತು ಜನರಿಗೆ ವಾಸಿಯಾಯಿತು. ಈ ಔಷಧವನ್ನು ಉಪಯೋಗಿಸುವ ಕ್ರಮವೇನೆಂದರೆ—ಒಂದು ತೊಟ್ಟು ಟಿಂಕ್ಚರ್ ಆಫ್ ಅಯೋಡೈನ್ ಎಂಬ ಔಷಧವನ್ನು ಸ್ವಲ್ಪ ನೀರಿನಲ್ಲಿ ಹಾಕಿ ಕಲಕಿ ಎರಡು ಗಂಟೆಗೆ ಒಂದು ಸಲದಂತೆ ಪ್ಲೇಗ್ ರೋಗಿಗೆ ಕೊಡಬೇಕು ಪ್ಲೇಗ್ ಗಡ್ಡೆಗಳು ಕಾಣಿಸಿಕೊಂಡಿದ್ದರೆ ಅದಕ್ಕೂ ಈ ಟಿಂಕ್ಚರನ್ನೇ ಮರುಗಾಗಿ ಹಚ್ಚಿ, ಅದು ಆರಿದ ಹಾಗೆಲ್ಲಾ ಮತ್ತೆ ಮತ್ತೆ ಅದನ್ನು ಸವರುತ್ತಿರಬೇಕು

ಮಕ್ಕಳಿಗೆ ಜ್ವರ ಬಂದು ದೊಡ್ಡ ಸಿಡುಬು ಕಾಣಿಸಿಕೊಂಡಾಗ ಟಿಂಕ್ಚರ್ ಆಫ್ ಅಯೋಡೈನ್ ಎಂಬ ಔಷಧವನ್ನು ಮೈಗೆಲ್ಲಾ ಸವರಿದರೆ ಬೇಗನೆ ಹುಣ್ಣು ಮಾಗುತ್ತದೆ, ರೋಗಿಗೆ ಬಹಳ ಅನ್ಯಾಯವಾಗಿದ್ದು, ಸ್ವಲ್ಪವೂ ರೋಗಿಗೆ ಬಾಧಪಡಿಸದೆ ಮೈಗೆ ತಂಪುಕೊಟ್ಟು ವಾಸಿಮಾಡುವುದು ಎಂಬದಾಗಿ ಉತ್ತರ ದೇಶದ ಎಂ ಪಡಲ್ ಎಂಬೊಬ್ಬ ಡಾಕ್ಟರವರು ತಿಳಿಸಿರುತ್ತಾರೆ

ಮೈಸೂರು ಸರ್ಕಾರು ಹುಕುಮುಗಳು

ಸರ್ಕಾರಿ ಅಧಿಕಾರಿಗಳಿಗೆ ರಜಾ ಕೊಡುವುದು—ನವರಾತ್ರಿಯ ಮತ್ತು ಕ್ರಿಸ್ಮಸ್ ಹಬ್ಬಗಳ ನಿಮಿತ್ತ ಕೊಡಲ್ಪಡುವ ಸರ್ಕಾರಿ ರಜಾವನ್ನು ಅಸಿಸ್ಟೆಂಟ್ ಕಮಿಷನರುಗಳೇ ಮೊದಲಾದ ಅಧಿಕಾರಿಗಳು ಉಪಯೋಗಿಸಿಕೊಳ್ಳುವ ಭಾಗದಲ್ಲಿ ಸರ್ಕಾರದವರು ಇದುವರೆಗೆ ಖಂಡಿತವಾದ ಹುಕುಮನ್ನು ಕೊಟ್ಟಿರಲಿಲ್ಲ. ಈಗ ಗವರ್ನಮೆಂಟಿನವರು ಅಂಥಾ ರಜಾ ಕಾಲದಲ್ಲಿ ಆ ಅಧಿಕಾರಿಗಳಿಗೆ ಐದೈದು ದಿನಗಳಿಗೆ ಮೀರದಂತೆ ರಜಾ ಕೊಡಬಹುದೆಂದು ಡೆಪ್ಟಿ ಕಮಿಷನರುಗಳಿಗೆ ಅಧಿಕಾರವನ್ನು ವಹಿಸಿ, ಹಾಗೆ ರಜಾ ಕೊಟ್ಟ ವಿಚಾರವನ್ನು ಅವರು ಕೂಡಲೇ ಆಯಾ ಇಲಾಖೆಯ ಮೇಲ್ವಿಚಾರಕರಿಗೆ ತಿಳಿಯಪಡಿಸಬೇಕೆಂದು ಹುಕುಂ ಮಾಡಿರುತ್ತಾರೆ

ನ್ಯಾಯವಿಧಾಯಕ ಕೌನ್ಸಿಲ್ ಪ್ರೊಸೀಡಿಂಗ್ಸ್—ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ನಡೆಯುವ ಕಾರ್ಯಗಳನ್ನೆಲ್ಲಾ ಸರ್ಕಾರದವರು ಸಭೆ ನಡೆದ ಬಳಿಕ ಗವರ್ನಮೆಂಟ್ ಗೆಜೆಟ್ಟಿನಲ್ಲಿ ಪ್ರಕಟಮಾಡುತ್ತಾರೆ ಈ ಪ್ರೊಸೀಡಿಂಗ್ಸನ್ನು ಕನ್ನಡಕ್ಕೂ ತರ್ಜುಮೆಮಾಡಿ ಪ್ರಕಟಿಸುವರು. ಈ ಪ್ರೊಸೀಡಿಂಗ್ಸನ್ನೇ ಪ್ರತ್ಯೇಕವಾಗಿ ಕನ್ನಡದಲ್ಲಾಗಲಿ ಇಂಗ್ಲೀಷಿನಲ್ಲಾಗಲಿ ತರಿಸಿಕೊಂಡು ಓದಬೇಕೆನ್ನುವವರಿಗೆ ಅವು ಇದುವರೆಗೆ ಲಭ್ಯವಾಗುತ್ತಿರಲಿಲ್ಲ ಸರ್ಕಾರದವರು ಪ್ರಜೆಗಳಿಗಿರುವ ಈ ಅನಾನುಕೂಲವನ್ನು ನಿವಾರಣೆಮಾಡುವುದಕ್ಕೋಸ್ಕರ ಆ ಪ್ರೊಸೀಡಿಂಗ್ಸನ್ನು ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಸರ್ಕಾರಿ ಮುದ್ರಾಯಂತ್ರದಲ್ಲಿ ಅಚ್ಚುಮಾಡಿ ಬಿಕರಿಗೆ ಇಡಬೇಕೆಂದು ಹುಕುಂ ಕೊಟ್ಟಿರುತ್ತಾರೆ.

ಯೂರೋಪಿಯನ್ ನೌಕರರ ಸಂಬಂಧಿಗಳು.—ಸಂಸ್ಥಾನದ ಸರ್ವೀಸಿನಲ್ಲಿರುವ ಯೂರೋಪಿಯನ್ ಅಧಿಕಾರಿಗಳು ಕಾಲವಾದರೆ ಸರ್ಕಾರದವರು ಸೀಮೆಯಲ್ಲಿರುವ ಅವರ ಸಂಬಂಧಿಗಳಿಗೆ ಆ ಸುದ್ದಿಯನ್ನು ತಿಳಿಸಲಪೇಕ್ಷಿಸಿದ ಪಕ್ಷದಲ್ಲಿ ಅಂಥಾ ಸಂಬಂಧಿಗಳ ಹೆಸರು ವಿಳಾಸಗಳು ಗೊತ್ತಾಗಲು ಅವಕಾಶವಿಲ್ಲದೆ ಹೋಗಿರೋಣದರಿಂದ ಇನ್ನು ಮುಂದೆ ಈ ಲೋಪವನ್ನು ಸರಿಪಡಿಸುವುದಕ್ಕೆ ಆಯಾ ಡೆಪ್ಟಿ ಕಮಿಷನರು ತಮ್ಮ ಡಿಸ್ಟ್ರಿಕ್ಟಿನಲ್ಲಿರುವಂಥಾ ಯೂರೋಪಿಯನ್ ನೌಕರರ ಸೀಮೆಯಲ್ಲಿರುವ ಸಂಬಂಧಿಗಳ್ಯಾರೆಂಬುವುದನ್ನು ಆಗಾಗ್ಗೆ ಸರ್ಕಾರಕ್ಕೆ ತಿಳಿಸುತ್ತಾ ಬರಬೇಕೆಂದು ಸರ್ಕ್ಯುಲರ್ ಹುಕುಂ ಕೊಟ್ಟಿರುತ್ತಾರೆ

ಬಾತ್ಮೀದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಬಿ ಏಚ್, ಬೆಳವಾಡಿ—ಈ ಬಾತ್ಮಿಯಲ್ಲಿ ಒಂದೇ ಹೊಗಳಿಕೆಯಲ್ಲದೆ ವರ್ತಮಾನವೇನೂ ಕಾಣುವುದಿಲ್ಲ

ಹಿತೈಷಿ, ನಂಜನಗೂಡು—ನಿಮ್ಮ ಬಾತ್ಮಿಯನ್ನು ಪ್ರಕಟಿಸುವುದರಲ್ಲಿ ಹಿತವೇನೂ ಆಗಲಾರದೆಂದು ತಿಳಿದಿರುತ್ತೇವೆ

ಬಂದಾಧಾರ್, ಚಿತ್ರದುರ್ಗ—ನೀವು ಬರೆಯುವುದು ನಮಗೆ ಅರ್ಥವೇ ಆಗುವುದಿಲ್ಲ. ಸ್ಪಷ್ಟವಾಗಿ ವಿರಳವಾಗಿ ನಿಮ್ಮ ಅಭಿಪ್ರಾಯವನ್ನು ಬರೆಯುವುದು ಒಳ್ಳೇದು

—ಎಡಿ.]

ಕರೆಸ್ಪಾಂಡೆನ್ಸ್.

ಸೆಷನ್ಸ್ ಮೊಕದ್ದಮೆಗಳೂ ಜೂರಿ ವಿಚಾರಣೆಯೂ.

ಅಯ್ಯಾ,

ಮೈಸೂರು ಸೀಮೆಯ ಪ್ರಜಾಪ್ರತಿನಿಧಿಗಳು ಕೆಲವು ವರುಷಗಳಿಂದ ಈ ಸಂಸ್ಥಾನದಲ್ಲಿ ಜೂರಿ ಪಂಚಾಯತರನ್ನು ನೇಮಕ ಮಾಡುವುದನ್ನು ಜಾರಿಗೆ ತರಬೇಕೆಂದು ಗವರ್ನಮೆಂಟಿನವರನ್ನು ಪ್ರತಿನಿಧಿ ಸಭೆಯಲ್ಲಿ ಪ್ರಾರ್ಥಿಸಿ ಕೇಳಿಕೊಳ್ಳುತ್ತಾ ಬಂದರು ಕಳೆದ ಪ್ರತಿನಿಧಿಸಭೆಯಲ್ಲಿ ಈ ಪ್ರಾರ್ಥನೆಗೆ ಜವಾಬಾಗಿ ದಿವಾನರವರು—"ಜೂರಿ ವಿಚಾರಣೆಯನ್ನು ಪರೀಕ್ಷಾರ್ಥವಾಗಿ ಮೊದಲು ಬೆಂಗಳೂರು, ಮೈಸೂರು ಮತ್ತೂ ಶಿವಮೊಗ್ಗಾಗಳಲ್ಲಿ ಸೆಷನ್ಸ್ ಮೊಕದ್ದಮೆಗಳ ವಿಚಾರಣೆಯಲ್ಲಿ ನೇಮಕಮಾಡಿ ನೋಡುವೆವು" ಎಂದು ಅಪ್ಪಣೆ ಕೊಡಿಸಿದರು ಹೀಗೆ ಅಪ್ಪಣೆ ಕೊಡಿಸಿ ಇಲ್ಲಿಗೆ ಆರು ತಿಂಗಳು ಕಳೆದು ಏಳನೆಯ ತಿಂಗಳೂ ಮುಗಿಯುತ್ತಾ ಬಂದಿದೆ ಅದು ಇನ್ನೂ ಜಾರಿಗೆ ಬರಲಿಲ್ಲ ಈ ಅಪ್ಪಣೆಯು ಜಾರಿಗೆ ಬರುವುದು ಇನ್ಯಾವಾಗಲೋ ಊಹಿಸಲಾಗದು ಸರ್ಕಾರದವರು ನುಡಿದ ಮಾತು ಇಷ್ಟು ದೀರ್ಘಕಾಲವಾದರೂ ಇನ್ನೂ ನೆರವೇರದೆ ಇರಲು ಕಾರಣವೇನೋ ತಿಳಿಯಲಿಲ್ಲ ಒಂದು ವೇಳೆ ಅದನ್ನು ಜಾರಿಗೆ ತರುವುದು ಇಷ್ಟವಿಲ್ಲದಿರಬಹುದು ಹಾಗಾದರೆ ದಿವಾನರವರು ಆ ರೀತಿ ಆಸೆಹುಟ್ಟಿಸಿದ್ದಕ್ಕೆ ಕಾರಣವೇನಾಗಿದ್ದಿತು? ಅವರಿಗೆ ಅದು ಇಷ್ಟವಿಲ್ಲದಿದ್ದರೆ ಆ ರೀತಿ ಖಂಡಿತವಾಗಿ ಹೇಳಬಹುದಾಗಿತ್ತು, ಇಲ್ಲವೇ ಇತರ ಅನೇಕ ವಿಷಯಗಳಿಗೆ ಉತ್ತರ ಕೊಡುವಂತೆ "ಗುರುತು ಮಾಡಿಕೊಂಡಿದೇವೆ", "ಆಗಲಿ, ನೋಡೋಣ", "ಸದ್ಯ ಆಗತಕ್ಕದ್ದಲ್ಲ" ಎಂಬೀ ರೀತಿ ಹೇಳಿಬಿಟ್ಟಿದ್ದರೆ ಚೆನ್ನಾಗಿತ್ತು ಮಾತು ಕೊಡಬಾರದು, ಕೊಟ್ಟ ಮೇಲೆ ನಡಿಸಿಕೊಡುವುದೇ

ಧರ್ಮ

ಸಂಸ್ಥಾನದ ಬಂದೀಖಾನೆಗಳೂ ಆಹಾರಧಾನ್ಯಗಳೂ

ಅಯ್ಯಾ,

ಮೈಸೂರು ಸಂಸ್ಥಾನದಲ್ಲಿ ಬಂದೀಖಾನೆಗಳೊಳಗೆ ಹೋಗಿ ಸೇರುವ ಎಲ್ಲಾ ಕೋಮುಗಳವರಿಗೂ ಅಂದರೆ ಹಿಂದು ಮುಸಲ್ಮಾನರಿಗೆಲ್ಲಾ ರಾಗಿ ಹಿಟ್ಟು ಮುದ್ದೆಯನ್ನೇ ಆಹಾರವಾಗಿ ಕೊಡುತ್ತಾರೆ ಬಂದೀವಾನರಾದ ಚಟ್ಟೇಗಾರರಿಗೂ ಯೂರೋಪಿಯನ್ನರಿಗೂ ಮಾತ್ರ ಅವರ ಜಾತ್ಯಾಚಾರಗಳಿಗೆ ಸ್ವಲ್ಪವೂ ಲೋಪವಿಲ್ಲದಂತೆ ಕೊಡಿಸಿ ಅವರನ್ನು ಸಂರಕ್ಷಣೆಮಾಡುವರು ಹಿಂದೂ ಮುಸಲ್ಮಾನರೊಳಗೆ ಅನೇಕರು ವಿಶೇಷವಾಗಿ ರಾಗಿಯನ್ನೂ, ಕೆಲವರು ಮುಖ್ಯವಾಗಿ ಅಕ್ಕಿಯನ್ನೂ, ಇನ್ನೂ ಕೆಲವರು ಜೋಳವನ್ನೂ ತಮ್ಮ ಮನೆಗಳಲ್ಲಿರುವಾಗ್ಗೆ ತಿನ್ನುವ ವಾಡಿಕೆಯುಂಟು ಆದರೆ ಇಂಥಾವರಿಗೆಲ್ಲಾ ಬಂದೀಖಾನೆಗಳಲ್ಲಿ ಅವರವರ ಪ್ರಕೃತಿಗಳಿಗೆ ಸ್ವಭಾವಸಿದ್ಧವಾದ ಆಹಾರಗಳನ್ನು ಕೊಡದೆ ಏಕಮುಖವಾಗಿ ರಾಗಿ ಹಿಟ್ಟನ್ನೇ ಹಾಕುತ್ತಾರೆ ಇದರಿಂದ ರಾಗಿ ತಿಂದರಿಯದ ಬಂದೀವಾನರಿಗೆ ಭೇದಿಯೇ ಮೊದಲಾದ ರೋಗಗಳುಂಟಾಗುವವು ಅವರ ಶರೀರ ಸ್ಥಿತಿಯು ಕೆಟ್ಟುಹೋಗುತ್ತದೆ ಈ ವಿಚಾರದಲ್ಲಿ ಬಂದೀವಾನರ ಹಿತಚಿಂತಕರಾದ ಮ॥ ಕೇಶವಪಿಳ್ಳೆಯವರು ಮದರಾಸ್ ಗವರ್ನಮೆಂಟಿನ ಕೂಡ ಬಹುಕಾಲ ಚರ್ಚೆಗಳನ್ನು ನಡಿಸಿ, ಅನೇಕವಾಗಿ ದೃಷ್ಟಾಂತಗಳನ್ನು ತೋರಿಸಿ ಕಡೆಗೆ ಗವರ್ನಮೆಂಟಿನವರನ್ನು ಒಪ್ಪಿಸಿದರು ಈಗ ಮದರಾಸ್ ಗವರ್ನಮೆಂಟಿನವರು ಜೈಲ್‌ಖಾನೆಗಳಿಗೆ ಹುಕುಂ ಕೊಟ್ಟಿರುವುದೇನೆಂದರೆ, ಪ್ರತಿ ಒಬ್ಬ ಬಂದೀವಾನನಿಗೂ ವಾರಕ್ಕೆ 1½ ತೊಲಾದಷ್ಟು ಉಪ್ಪು ಕೊಡಬೇಕು ಮತ್ತೂ ಸ್ವಭಾವವಾಗಿ ಅಕ್ಕಿಯನ್ನೇ ತಿನ್ನುತ್ತಿದ್ದ ಬಂದೀವಾನರಿಗೆ ರಾಗಿ ಹಿಟ್ಟು ಕೊಡಿಸದೆ ಅಕ್ಕಿ ಅನ್ನವನ್ನೇ ಹಾಕಿಸಬೇಕು ಈ ಹುಕುಮು ಕಳೆದ ಏಪ್ರಲ್ ತಿಂಗಳಲ್ಲಿ ಜಾರಿಗೆ ಬಂದಿರುತ್ತದೆ ಮೈಸೂರು ಗವರ್ನಮೆಂಟಿನವರು ಬಂದೀವಾನರ ಮೇಲೆ ಕರುಣೆ ಇಟ್ಟು, ಯಾವ ಯಾವ ತರಹಾ ಧಾನ್ಯ ತಿನ್ನುವ ಜನರು ಬಂದೀಖಾನೆಗೆ ಬರುತ್ತಾರೋ ಅವರವರಿಗೆ ಪ್ರಕೃತಿಗೆ ವಿರೋಧವಾಗದಂತೆ ಅವರ ಮನೆಗಳಲ್ಲಿ ಅಭ್ಯಾಸವಾಗಿರುವಂಥಾ ಅಕ್ಕಿ, ರಾಗಿ ಅಥವಾ ಜೋಳವನ್ನು ಆಹಾರಕ್ಕೆ ಕೊಡತಕ್ಕದ್ದೆಂದೂ, ಮದರಾಸ್ ಗವರ್ನಮೆಂಟಿನವರು ಹುಕುಂ ಮಾಡಿರುವಂತೆ ಒಂದು ಪಂಗಡದ ಬಂದೀವಾನರು ಹಾಕಿಕೊಳ್ಳುತ್ತಿದ್ದ ಬಟ್ಟೆಹೋಗುವಂಥಾ ಉಡುಪುಗಳನ್ನು ಇನ್ನೊಂದು ಪಂಗಡದ ಜನರು ಬಂದೀವಾನರಾಗಿ ಬಂದರೆ ಅವರಿಗೆ ಕೊಡಿಸದೆ, ಆಯಾ ಪಂಗಡದವರ ಉಡುಪುಗಳನ್ನು ಆಯಾ ಪಂಗಡದವರಿಗೇ ಕೊಡಿಸುತ್ತಾ ಬರುವಂತೆಯೂ, ಹೆಂಗಸರು ಅಪರಾಧಮಾಡಿ ಬಂದೀಖಾನೆಗೆ ಬಂದರೆ ಅವರ ಮಾನವನ್ನು ಕಾಪಾಡುವುದಕ್ಕಾಗಿ ಹದಿನಾರು ಮೊಳದ ಬಟ್ಟೆಯನ್ನು ಉಡುವುದಕ್ಕೆ ಕೊಡಿಸುತ್ತಾ ಬರುವಂತೆಯೂ ಹುಕುಂ ಮಾಡಿದರೆ ಎಷ್ಟೋ ಉಪಕಾರವಾದೀತು ನಮ್ಮ ಸಂಸ್ಥಾನದಲ್ಲಿ ಅಂಥಾ ಕೇಶವಪಿಳ್ಳೆಗಳು ಹುಟ್ಟುವುದಕ್ಕೆ ಇನ್ನೂ ಬಹಳ ಕಾಲ ಹಿಡಿದೀತಾಗಿ ಸರ್ಕಾರದವರೇ ಈ ಬದಲಾವಣೆಗಳನ್ನು ರೂಢಿಸುವುದು ಧರ್ಮವಾಗಿದೆ

ಬಂದೀವಾನರ ಹಿತಚಿಂತಕ

[ಬಂದೀಖಾನೆಯೊಳಗೆ ಬಂದೀವಾನರಿಗೆ ಸೌಕರ್ಯಗಳನ್ನೆಲ್ಲಾ ಒದಗಿಸಿಕೊಡುವುದು ಯೋಗ್ಯವಲ್ಲ —ಎಡಿ]

ಹೊಸ ಕಾನೂನಿನಂತೆ ನಡೆಯುತ್ತಿಲ್ಲ

ಅಯ್ಯಾ,

ನಮ್ಮ ಮೈಸೂರು ದೇಶದಲ್ಲಿ ಪೂರ್ವದಲ್ಲಿ ಇದ್ದ ತರತರಹೆಯ ಅಳತೆ ತೂಕವು ಬದಲಾವಣೆಯಾಗಿ ಈಗ ಹೊಸ ಅಳತೆ, ಹೊಸ ತೂಕ ಏರ್ಪಟ್ಟು ನಮ್ಮ ಸಂಸ್ಥಾನದಲ್ಲೆಲ್ಲಾ ಒಂದೇ ವಿಧವಾಗಿರುವಂತೆ ಹೊಸ ಕಾನೂನು ಏರ್ಪಾಟಾಗಿ ಕೆಲವು ದಿನಗಳಾಗುತ್ತಾ ಬಂತು ಕೆಲವು ವರ್ತಕರು ಮಾತ್ರ ಹೊಸ ಸೇರು ಹೊಸ ತೂಕದ ಬಟ್ಟುಗಳನ್ನು ಇಟ್ಟಿರುತ್ತಾರೆಯೇ ವಿನಹ ಬಹಳ ಜನರು ಹಳೇ ತೂಕ, ಹಳೇ ಅಳತೆಯನ್ನೇ ಉಪಯೋಗಿಸುತ್ತಿದಾರೆ. ಯಾವ ಜಾತ್ರೆ, ಯಾವ ಸಂತೆ, ಯಾವ ಅಂಗಡೀಲಿ ನೋಡಿದಾಗ್ಯೂ ಹಳೇ ಅಳತೆ, ಹಳೇ ತೂಕವನ್ನೇ ಉಪಯೋಗಿಸುತ್ತಿದಾರೆ ಪೋಲೀಸಿನವರು ಮುಂತಾಗಿ ಎಲ್ಲಾ ಸರ್ಕಾರಿ ನೌಕರರೂ ಅದೇ ಅಳತೆ ತೂಕದಲ್ಲೇ ಕೊಂಡುಕೊಳ್ಳುತ್ತಿದಾರೆ ಹೊಸ ಕಾನೂನು ಆದ ಮಾತ್ರಕ್ಕೇ ಫಲವಿಲ್ಲ ಅದರಂತೆ ಸರ್ವರೂ ಆಚರಣೆಗೆ ತರುವದು ಫಲಕಾರಿಯು ಅಲ್ಲಲ್ಲಿ ಪೋಲೀಸಿನವರು ಈ ವಿಷಯದಲ್ಲಿ ತುಂಬಾ ನಿಗಾ ಇಟ್ಟು ಹೊಸ ಅಳತೆ, ತೂಕಗಳನ್ನು ಉಪಯೋಗಿಸುವಂತೆ ಬಲಾತ್ಕಾರ ಮಾಡುತ್ತಾ ಬರಬೇಕು ಮತ್ತೂ ಹೊಸ ಸಾಧನಗಳು ಇಲ್ಲದಿದ್ದಲ್ಲಿ ಬೆಂಗಳೂರು ಸೆಂಟ್ರಲ್ ಜೈಲ್‌ನಿಂದ ತರಿಸಿಕೊಳ್ಳುವಂತೆ ತಿಳಿಸುತ್ತಾ ಬರಬೇಕು ಹಾಗೂ ಗಮನಕ್ಕೆ ಕರೆದಿದ್ದಲ್ಲಿ ಒಬ್ಬಿಬ್ಬರನ್ನು ಶಿಕ್ಷೆಗೆ ಗುರಿಪಡಿಸಿದರೆ ಇತರರಿಗೆ ಎಚ್ಚರಿಕೆಯಾದೀತು ಅನೇಕರು ಹೊಸ ಕಾನೂನು ಜಾರಿಯಲ್ಲಿರುವದು ಗೊತ್ತಿದ್ದಾಗ್ಯೂ ಅಳೆಸಿಕೊಳ್ಳುವಾಗ ಮಂಡಿ ಸೇರುಗಳನ್ನೂ, ಕೊಡುವಾಗ ಕಮ್ಮಿ ಸೇರುಗಳನ್ನೂ ಉಪಯೋಗಿಸುತ್ತಿದಾರೆ ಇದಕ್ಕೆ ಸರ್ಕಾರದವರ ನಿಗಾ ತುಂಬಾ ಬೇಕಾಗಿರುತ್ತದೆ.

ಒಬ್ಬ ವರ್ತಕರು 100 ಹೊಸ ಸೇರುಗಳನ್ನು ಮಾರಾಟಕ್ಕೆ ತಂದಿದ್ದರು ಅನೇಕ ಜನ ವರ್ತಕರು ಸೇರಿ ಒಂದು ಸೇರಿಗೆ ಮತ್ತೊಂದು ಸೇರು ತಾಳೆ ನೋಡಿದಾಗ ಒಂದಕ್ಕೊಂದು ಸರಿಹೋಗಲಿಲ್ಲ ಮುದ್ರೆ ಮಾತ್ರ ಪ್ರತಿ ಒಂದಕ್ಕೂ ಒಂದೇ ರೀತಿ ಇದ್ದವು ಪ್ರತಿ ವರ್ತಕರೂ ಈ ಸೇರುಗಳಲ್ಲಿ ಸಲ್ಲಾ ಒಂದಕ್ಕೆ 2-3 ಸೇರು ಜಾಸ್ತೀ ಬರುವ ಒಂದು ಸೇರನ್ನೂ, 2 3 ಸೇರು ಕಮ್ಮಿ ಬರುವ ಒಂದು ಸೇರನ್ನೂ, ಇವಕ್ಕೆ ಸರಿಬರುವ ಅರ್ಧ ಸೇರು, ಕಾಲು ಸೇರು, ಅರೆ ಪಾವು, ಕಾಲು ಪಾವು, ಇವುಗಳನ್ನೂ ಈ ರೀತಿ ಎರಡೆರಡು ಸೆಟ್ಟುಗಳನ್ನು ಕೊಂಡುಕೊಂಡದ್ದು ನಾನು ಪ್ರತ್ಯಕ್ಷವಾಗಿ ಕಂಡೆನು ಈ ರೀತಿ ಆಗುವದರಿಂದ ಸೇರುಗಳೇನೋ ಜಾಸ್ತಿಯಾಗಿ ಬಿಕರಿಯಾಗುವದಕ್ಕೆ ಕಾರಣವಾಯಿತೇ ಹೊರತು ಸರಿಯಾದ ಅಳತೆ, ತೂಕ ದೊರಕುವಂತೆ ಆಗಲಿಲ್ಲ ಈ ವಿಷಯದಲ್ಲಿ ಮೇಲ್ಕಂಡ ಹೊಸ ಅಳತೆ ತೂಕಗಳ ಸಾಧನಗಳನ್ನು ಮಾಡಿಸುವ ಆಫೀಸರು ತುಂಬಾ ನಿಗಾ ತೆಗೆದುಕೊಳ್ಳಬೇಕಾಗಿದೆ

ನಮ್ಮ ದೇಶದಲ್ಲೆಲ್ಲಾ ಕೊಡುವಾಗಲೂ ತೆಗೆದುಕೊಳ್ಳುವಾಗಲೂ ಒಂದೇ ತರಹೇ ಅಳತೆ ತೂಕಗಳಿರಬೇಕೆಂದು ಸರ್ಕಾರದವರು ಈ ಹೊಸ ಕಾನೂನನ್ನು ಜಾರಿಗೆ ತಂದಿರುತ್ತಾರೆ ವರ್ತಕರು ಧಾರಣೆ ವ್ಯತ್ಯಾಸದಲ್ಲಿ ಲಾಭ ಸಂಪಾದನೆ ಮಾಡುವದು ಅವರಿಗೆ ಧರ್ಮವಾದದ್ದೇ ವಿನಹ ಅಳತೆ ತೂಕಗಳ ವ್ಯತ್ಯಾಸದಿಂದ ಲಾಭ ಸಂಪಾದನೆ ಮಾಡುವದು ಧರ್ಮವಲ್ಲ ಈ ರೀತಿ ಮಾಡುವದು ಪಾಪ ಸಂಪಾದನೆಯು ಅಲ್ಲದೆ ಈ ರೀತಿ ಮಾಡುವದು ಸರ್ಕಾರದವರ ನಿಗಾಕ್ಕೆ ಬಿದ್ದು ದಂಡ ಮೊದಲಾದ ಶಿಕ್ಷೆಗಳಿಗೆ ಪಾತ್ರರಾಗುವದಕ್ಕಿಂತ ನಮ್ಮನ್ನಾಳುವ ಪ್ರಭುಗಳು ನೇಮಿಸಿರುವ ಕಾನೂನು ಮೇರೆಗೆ ಜಾರಿಗೆ ತರುವದು ಗೌರವವೂ ಧರ್ಮವೂ ಆಗಿರುತ್ತದೆ ಆದ್ದರಿಂದ ವರ್ತಕಮಹಾಶಯರು ಅಳತೆ ತೂಕಗಳಲ್ಲಿ ಸತ್ಯವಾಗಿರಬೇಕೆಂದು ಕೋರುತ್ತೇನೆ

ಬೆಂಗಳೂರು ಕೆ ವೆಂಕಟರಾಮಶೆಟ್ಟಿ

ಮೈಸೂರು ಪ್ರಜಾಪ್ರತಿನಿಧಿ ಸಭೆಯು

ಅಯ್ಯಾ,

ಕಳೆದ ವಾರ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಕಾರ್ಯಗಳನ್ನು ಕುರಿತು ತಾವು ಈ ಪತ್ರಿಕೆಯಲ್ಲಿ ಬರೆದಿದ್ದ ಅಭಿಪ್ರಾಯಗಳನ್ನು ಓದಿದೆನು ಅದಕ್ಕೆ ಪ್ರತ್ಯುತ್ತರವಾಗಿ ನಾನು ಕೆಲವು ಸಂಗತಿಗಳನ್ನು ತಿಳಿಸುವೆನು ಕಳೆದ ಅಕ್ಟೋಬರ್ ತಿಂಗಳಲ್ಲಿ ನಡೆದ ಸಭೆಯಲ್ಲಿ ಚರ್ಚಿಸುವದಕ್ಕೋಸ್ಕರ ಮೆಂಬರುಗಳು 395 ವಿಚಾರಗಳನ್ನು ತಂದಿದ್ದರು ಇವುಗಳ ಪೈಕಿ ಹಲವು ವಿಷಯಗಳು ಸಾಧಾರಣವಾಗಿ ಅನೇಕ ವರ್ಷಗಳಿಂದ ಬಂದ ವಿಚಾರಗಳೇ. ಇವು ಪುನಃ ವಿಚಾರವಾಗಬೇಕಾದದ್ದಕ್ಕೆ ಖಂಡಿತವಾದ ಉತ್ತರ ಬಾರದ್ದರಿಂದ ಮೆಂಬರುಗಳು ಮತ್ತೆ ಅವುಗಳನ್ನು ವಿಚಾರಕ್ಕೆ ತರಬೇಕಾಗಿಬಂದವು ಒಂದು ವೇಳೆ ಸರ್ಕಾರದವರು ವಿಷಯಗಳಿಗೆ ಯೋಚನೆ ಮಾಡಬೇಕೆಂದಾಗಲಿ, ನೋಟ್‌ಮಾಡಿದೇವೆಂದಾಗಲಿ ಹೇಳಿದ್ದರೆ ಮುಂದಿನ ವರ್ಷ ವಿಷಯಗಳನ್ನು ಕಳುಹಿಸುವದರೊಳಗಾಗಿ ಯಾವ ರೀತಿಯಾದರೂ ಫೈಸಲಾಗಿದ್ದರೆ ಚರ್ಚೆಗೆ ತರಲು ಕಾರಣವಿಲ್ಲ ಇದರಿಂದ ವಿಷಯಗಳ ಪೈಕಿ ಅರ್ಧಾಂಶವು ಕಡಮೆಯಾಗುತ್ತಿತ್ತು.

ಅನೇಕ ಮೆಂಬರುಗಳಿಗೆ ಈ ಸಂಸ್ಥಾನದಲ್ಲಿ ಜಾರಿಯಲ್ಲಿರುವಂಥಾ ಕಾನೂನುಗಳಾಗಲಿ, ರೂಲುಸುಗಳಾಗಲಿ ತಿಳಿದಿರುವದಿಲ್ಲವೆಂದೇ ಇಟ್ಟುಕೊಳ್ಳೋಣ ಡಿಸ್ಟ್ರಿಕ್ಟು ಕಮಿಟಿಗಳಲ್ಲಿ ಡೆಪ್ಯುಟಿ ಕಮಿಷನರವರ ಅಗ್ರಾಸನದಲ್ಲಿ ಚರ್ಚೆಗೆ ಬಂದಾಗ ಅವರು ಇಂಥಿಂಥಾ ರೂಲ್ಸು ಯಾ ಕಾನೂನು ಜಾರಿಯಲ್ಲಿವೆ ಎಂದು ಆ ಮೆಂಬರುಗಳಿಗೆ ಯಾಕೆ ತಿಳಿಸಬಾರದಾಗಿತ್ತು ಹಾಗೆ ತಿಳಿಸಿದ್ದರೆ ಕಾನೂನ್ ಯಾ ರೂಲ್ಸು ವಿಚಾರವಾದ ವಿಷಯಗಳು ಕಾಲು ಭಾಗಕ್ಕಿಂತಲೂ ಹೆಚ್ಚಾಗಿಯೇ ಕಡಮೆಯಾಗುತ್ತಿತ್ತು ಪ್ರಾಯಶಃ ಬಹು ಅಧಿಕಾರಿಗಳಿಗೆ ಜಾರಿಯಲ್ಲಿರುವ ಕಾನೂನ್ ಯಾ ರೂಲ್ಸು ಗೊತ್ತಿಲ್ಲದೆ ಇದೆ, ಇಂಥಾದ್ದರಲ್ಲಿ ಮೆಂಬರುಗಳಾದ ವರ್ತಕ, ಪಟೇಲ, ಶ್ಯಾನುಭೋಗ ಮತ್ತು ಹಿಡುವಳಿದಾರ ಮುಂತಾದವರಿಗೆ ಹ್ಯಾಗೆತಾನೇ ಗೊತ್ತಾಗಬೇಕು? ಈಗ 395 ವಿಷಯಗಳ ಪೈಕಿ ಕಾಲು ಭಾಗಕ್ಕಿಂತಲೂ ಕಮ್ಮಿಯಾಗಿಯೇ ಉಳಿದಂತಾದುದು. ಇವುಗಳನ್ನು ಬಹು ಸಮರ್ಪಕದಿಂದ 9 ದಿನಗಳಲ್ಲಿ ಚರ್ಚಿಸಬಹುದಾಗಿದ್ದಿತು ಈ ಸಲ ಚರ್ಚೆಗೆ ತಂದ ಅನೇಕ ವಿಷಯಗಳ ಪೈಕಿ ಸರ್ಕಾರದವರು ಪ್ರಜೆಗಳ ಕ್ಷೇಮ ಮತ್ತು ದೇಶೋನ್ನತಿಗೆ ಅನುಕೂಲವಾಗಿ ಕೊಟ್ಟಿರುವ ಉತ್ತರಗಳನ್ನು ಎಷ್ಟು ಹುಡುಕಿ ನೋಡಿದರೂ ಒಂದೆರಡಕ್ಕಿಂತ ಹೆಚ್ಚಾಗಿರುವಂತೆ ಕಾಣಬರಲಿಲ್ಲ. ಆದುದರಿಂದಲೇ ಮೆಂಬರುಗಳು ಹೆಚ್ಚು ವಿಷಯಗಳನ್ನು ಚರ್ಚೆಗೆ ತಂದರೆ ಇನ್ನೂ ಒಂದೆರಡು ಅನುಕೂಲವಾದ ಉತ್ತರವು ಬಂದೀತೆಂಬ ಆತುರದಿಂದ ಹೆಚ್ಚಾಗಿ ವಿಷಯಗಳನ್ನು ತರುವಂತೆ ತೋರುತ್ತದೆ ಅಲ್ಲದೆ ಈ ಸಭೆಗೆ 250 ಮೆಂಬರುಗಳ ಮೇಲೆ ಚುನಾಯಿಸಲ್ಪಡುತ್ತಾರೆ ಒಬ್ಬೊಬ್ಬ ಮೆಂಬರೂ ಎರಡೆರಡು ವಿಷಯಗಳನ್ನು ಚರ್ಚೆಗೆ ತರುವುದರಿಂದ 500 ವಿಷಯಗಳಾಗುವವು. ಇದರಿಂದ ಈ ಸಲ ಸಭೆಗೆ 395 ವಿಚಾರಗಳು ತಂದಿರತಕ್ಕದ್ದು ಹೆಚ್ಚೇನೂ ಅಲ್ಲ, ಎಷ್ಟು ವಿಷಯಗಳನ್ನು ತಂದರೆ ತಾನೇ ಏನು ನಷ್ಟ? ಜಿ ಐ ಪಿ. ರೈಲ್ವೇಗಿಂತಲೂ ಚರ್ಚೆಯು ಇನ್ನೂ ವೇಗವಾಗಿಯೇ ಜರುಗುವುದು

ನಾವು ಎಷ್ಟಿರುವಂತೆ ಕೆಲವು ಮೆಂಬರುಗಳು ಒಳ್ಳೇ ವಿಷಯಗಳನ್ನು ಸೂಚಿಸುವರು ಇವುಗಳನ್ನು ರೂಢಿಸುವದು ಸಾಧ್ಯವಲ್ಲವೆಂದು ಖಂಡಿತವಾಗಿಯೂ ಹೇಳಲಿಕ್ಕಾಗದು. ಹೇಗೆಂದರೆ ಈಗಲೂ ಸತ್ಯವಾಗಿಯೂ, ನಂಬಿಕೆಯಿಂದಲೂ ಪ್ರಾಮಾಣಿಕನಂಥಾ ನೌಕರನೂರೇರುಗಳು ದೊರೆಯುವದೇನೂ ಅಸಾಧ್ಯವಲ್ಲ ಸ್ವಾತಂತ್ರ್ಯವನ್ನು ಕೊಡುವ ವಿಚಾರದಲ್ಲಿ ಪ್ರಭುಗಳು ವಿಚಾರವಿಲ್ಲದಿರುವುದನ್ನೂ, ವಿದ್ಯೆಯನ್ನೂ, ಸಹತೆಯನ್ನೂ ಮತ್ತು ದೇಶವಾತ್ಸಲ್ಯವನ್ನೂ ಉಳ್ಳವರಾದ ನಮ್ಮ ಸೀಮೆಯವರನ್ನೇ ನೌಕರಿಗಳಿಗೆ ನಿಯಮಿಸಿದರೆ ಏಕೆ ತಾನೇ ಒಳ್ಳೇ ವಿಷಯಗಳನ್ನು ರೂಢಿಗೆ ತರುವದಕ್ಕೆ ಸಾಧ್ಯವಲ್ಲ. ಹಾಗೂ ಆಗದ ಪಕ್ಷದಲ್ಲಿ ಸರ್ಕಾರದವರು ಮೆಂಬರನ್ನು ಕುರಿತು - ಇಂಥಾ ವಿಷಯವನ್ನು ನೀನು ಚರ್ಚೆಗೆ ತಂದಿರುವಿ, ನಮ್ಮಲ್ಲಿರುವ ನೌಕರರುಗಳಿಂದ ಸದರಿ ವಿಷಯವನ್ನು ರೂಢಿಗೆ ತರಲು ಸಾಧ್ಯವಿಲ್ಲ, ನೀನು ರೂಢಿಗೆ ತರುವದಕ್ಕೆ ಸಾಮರ್ಥ್ಯವುಳ್ಳವನಾದರೆ ನಮ್ಮಿಂದ ಏನೊಂದು ಪ್ರಯೋಜನವನ್ನೂ ಎಣಿಸದೆ ನಿನ್ನ ವಿಷಯವನ್ನು ರೂಢಿಗೆ ತರುವುದರಲ್ಲಿ ನಮಗೆ ಸಹಾಯವನ್ನು ಮಾಡುವಿಯಾ - ಎಂದು ಪ್ರಶ್ನಿಸಿದರೆ ಆಗ ಅಂಥಾ ಮೆಂಬರು ದೇಶವಾತ್ಸಲ್ಯಕ್ಕಾಗಿಯೂ, ಸ್ವಾಮಿ ಭಕ್ತಿಗಾಗಿಯೂ ಎಂದಿಗೂ ಹಿಂತೆಗೆಯಲಾರನು

ಸಭೆಯಲ್ಲಿ ಚರ್ಚೆಗೆ ಬರುವ ಅನೇಕ ವಿಷಯಗಳನ್ನು ಮೊದಲು ಆಯಾ ಡಿಸ್ಟ್ರಿಕ್ಟಿನ ಅಧಿಕಾರಿಗಳ ಬಳಿ ಹೇಳಿಕೊಳ್ಳುವದೇನೋ ಸಹಜ. ಮೆಂಬರುಗಳು ಚರ್ಚೆಗೆ ತಂದಿರುವ ಆಯಾ ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ವಿಷಯಗಳನ್ನು ಡೆಪ್ಯುಟಿ ಕಮಿಷನರವರು (ದಿವಾನರ ಪ್ರೆಸಿಡೆಂಟರು) ಯಾವ ಯಾವ ಇಲಾಖೆಗೆ ಸಂಬಂಧಪಟ್ಟವುಗಳನ್ನು, ಆಯಾ ಇಲಾಖೆಯವರು ರಿಪೋರ್ಟ್ ಮಾಡತಕ್ಕವುಗಳು ಹೇಳಿದ ಅಂಶಗಳು ಅನೇಕವಾಗಿರುವವು. ಈ ವರೆಗೂ ಸದರಿ ಇಲಾಖೆಗಳವರು ತಮಗೆ ಕಳುಹಿಸಲ್ಪಟ್ಟ ವಿಷಯಗಳನ್ನು ಪ್ರಜೆಗಳಿಗೆ ಅನುಕೂಲ ಮಾಡಿಕೊಟ್ಟಿರುವರು. ಇದನ್ನು ವಿಚಾರಿಸಿ ನೋಡೋಣ

ನನಗೆ ತಿಳಿದ ಮಟ್ಟಿಗೂ ಆಯಾ ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಯಾವ ವಿಷಯವೇ ಆಗಲಿ ಈ ಪ್ರಜಾಪ್ರತಿನಿಧಿ ಸಭೆಯು ಹುಟ್ಟಿದ ಆಗಾಯಿತು ಅಧಿಕಾರಿಗಳು ಯಾವ ರೀತಿಯಾದರೂ ತೀರ್ಮಾನಿಸಿರುವಂತೆ ಕಾಣುವದಿಲ್ಲ. ಹೀಗಿರುವದರಿಂದಲೇ ಆಯಾ ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ವಿಷಯಗಳು ಕೂಡ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ತರಬೇಕಾದದ್ದು ಅವಶ್ಯಕವಾಯಿತು. ದಿವಾನರವರು ವರ್ಷಕ್ಕೊಂದಾವರ್ತಿ ಪ್ರತಿ ಡಿಸ್ಟ್ರಿಕ್ಟಿಗೂ ಹೋಗಿ ಆಯಾ ಡಿಸ್ಟ್ರಿಕ್ಟಿನ ಮುಖಂಡ ಪ್ರಜೆಗಳನ್ನು ಕರೆಸಿಕೊಂಡು, ಅವರೊಡನೆ ಕಲೆತು ಅವರ ಕಷ್ಟ ಅನುಕೂಲಗಳನ್ನು ವಿಚಾರಿಸಬೇಕೆಂಬ ವಿಷಯವನ್ನು ಸಭೆಗೆ ಚರ್ಚಿಸುವುದಕ್ಕೋಸ್ಕರ ಒಬ್ಬ ಮೆಂಬರು ಆ ವಿಷಯವನ್ನು ಪ್ರಥಮ ಮೀಟಿಂಗಿನಲ್ಲಿ ಡೆಪ್ಯುಟಿ ಕಮಿಷನರವರಲ್ಲಿ ಚರ್ಚಿಸಿದಾಗ ಈ ವಿಷಯವು ಮೇಲಕ್ಕೆ ಪ್ರತಿನಿಧಿಸಭೆಗೆ ಹೋಗತಕ್ಕ ಅವಶ್ಯಕವಿಲ್ಲವೆಂದು ತೆಗೆದುಹಾಕಿರುವರು. ಇದೇ ವಿಷಯವು ಚರ್ಚೆಗೆ ಸಭೆಗೆ ಹೋಗಿದ್ದ ವಿಷಯದಲ್ಲಿ ದಿವಾನರವರು ಯಾ ಕೌನ್ಸಿಲ್ ಮೆಂಬರುಗಳು ವರ್ಷಕ್ಕಾದರೂ ಒಂದಾವರ್ತಿ ಪ್ರತಿ ಡಿಸ್ಟ್ರಿಕ್ಟಿಗೂ ಹೋಗಿ ಪ್ರಜೆಗಳ ಅನನುಕೂಲಗಳನ್ನು ವಿಚಾರಿಸುವದು ತಮ್ಮ ಕರ್ತವ್ಯವೆಂದು ಅವರುಗಳಿಗೆ ಗೊತ್ತಾಗುತ್ತಿತ್ತು. ಇಂಥಾ ಅವಶ್ಯಕವಾದ ವಿಷಯವನ್ನು ಸಭೆಗೆ ಡೆಪ್ಯುಟಿ ಕಮಿಷನರವರು ಕಳುಹಿಸದೆ ಹೋದದ್ದು ತುಂಬಾ ಶೋಚನೀಯವಾದದ್ದಲ್ಲವೇ - ದಿವಾನರವರು ಯಾ ಕೌನ್ಸಿಲ್ ಮೆಂಬರುಗಳು ಪ್ರತಿ ಡಿಸ್ಟ್ರಿಕ್ಟಿಗೂ ವರ್ಷಕ್ಕೆ ಒಂದಾವರ್ತಿ ಸಂಚಾರ ಹೋಗುವವರಲ್ಲಿ ಸ್ಥಳದ ಅಧಿಕಾರಿಗಳಿಗೆ ತಮ್ಮ ಗುಟ್ಟು ಬೈಲಿಗೆ ಬೀಳುವದೆಂಬ ಶಂಕೆಯಿಂದ ಅಂಥಾ ವಿಷಯಗಳನ್ನು ಸಭೆಗೆ ಚರ್ಚಿಸುವದಕ್ಕೆ ಕಳುಹಿಸಲು ಒಪ್ಪುವದಿಲ್ಲ. ಪ್ರಜಾಪ್ರತಿನಿಧಿಗಳು ಕೂಡ ಸ್ವಪ್ರಯೋಜನವನ್ನು ಬಿಟ್ಟು, ಚರ್ಚೆಗೆ ತರತಕ್ಕ ವಿಷಯಗಳ ಪೂರ್ವಾಪರಗಳನ್ನು ಚೆನ್ನಾಗಿ ಗ್ರಹಿಸಿ, ಪ್ರಜೆಗಳಿಗೆ ಕ್ಷೇಮಾಭ್ಯುದಯ ಲಭ್ಯವಾಗುವಂತೆ ಸಾಧಿಸ ಬೇಕಾದದ್ದೇ ಸರಿ. ಸರ್ಕಾರದವರು ಈ ಕೂಟವನ್ನು ಅರ್ಜಿದಾರರ ಕೂಟವೆಂದೆಣಿಸದೆ, ಬಹು ಗೌರವದಿಂದ ತಮಗೆ ಸಹಕಾರಿಯಾದ ಸಭೆಯೆಂದೆಣಿಸಿ, ಪ್ರಜೆಗಳಿಗೆ ಹಿತವಾಗಿಯೂ, ದೇಶೋನ್ನತಿಗೆ ಬೇಕಾದದ್ದಾಗಿಯೂ ಇರುವ ವಿಷಯಗಳಿಗೆ ಅನುಕೂಲ ಮಾಡಿಕೊಡುತ್ತಾ ಬಂದಲ್ಲಿ ಈ ಸಭೆಯನ್ನು ಸ್ಥಾಪಿಸಿದ ಮೂಲ ಪುರುಷರ ಅಭಿಲಾಷೆಯು ಸಾರ್ಥಕ ಹೊಂದುವುದು

ಒಬ್ಬಾನೊಬ್ಬ ಪ್ರಜಾಪ್ರತಿನಿಧಿಯು

ತಾಲ್ಲೂಕು ವರ್ತಮಾನಗಳು

ಬೆಂಗಳೂರು ತಾ ಬುಲಹಂಕ — ಇಲ್ಲಿ ಮಳೆ ಇಲ್ಲದೆ ಬಿಸಿಲಿನ ತಾಪ ಬಹಳ ಹೆಚ್ಚಾಗಿತ್ತು. ಕಳೆದ ಗುರುವಾರವೂ, ಅದಕ್ಕೆ ಹಿಂದೆಯೂ ಸ್ವಲ್ಪ ಮಳೆ ಆಯಿತು. ರೈತರು ಬಹಳ ಸಂತೋಷದಿಂದ ಹೊಲದ ಸಾಗುವಳಿ ಮುಂತಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಇಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಶ್ರೀರಾಮ ಮಂದಿರದಲ್ಲಿ ಪ್ರತಿ ಸತ್ಯವೂ ನಾಡಿಕೆ ಸಂಗೀತಗಳೂ, ಪ್ರತಿ ಶನಿವಾರವೂ ಭಜನೆ ಮುಂತಾದವೂ ನಡೆಯುತ್ತಾ ಒಳ್ಳೇ ಅಭಿವೃದ್ಧಿ ಸ್ಥಿತಿಯಲ್ಲಿದೆ — ಈ ಊರಲ್ಲಿ ಈ ಸಲ ಶ್ರೀವೇಣುಗೋಪಾಲಸ್ವಾಮಿ ರಥೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ಸಾವಿರಾರು ಜನರು ಸೇರಿದ್ದರು. ಕಲ್ಯಾಣೋತ್ಸವದ ದಿನ ರಾಮ ಮಂದಿರದವರು ಮುತ್ತಿನ ಪ್ರಭಾವಳಿಯನ್ನು ಬಹಳ ಶ್ಲಾಘ್ಯವಾಗಿ ಸಿದ್ಧಪಡಿಸಿ ಅಲಂಕಾರ ಮಾಡಿದ್ದನ್ನು ಬಹಳ ಜನರು ನೋಡಿ ಸಂತೋಷಪಟ್ಟರು. ಇಲ್ಲಿನ ಬೋರ್ಡ್ ಮೆಂಬರು ಮ ನಾರಾಯಣನವರೂ, ಧರ್ಮದರ್ಶಿ ಶ್ರೀನಿವಾಸನವರೂ, ಇತರರೂ ಸೇರಿ ಬಹಳ ಮುತುವರ್ಜಿಯಿಂದ ಎಲ್ಲಾ ಕಾರ್ಯಗಳನ್ನೂ ನಡೆಯಿಸಿದರು

ದೊಡ್ಡ ಬಳ್ಳಾಪುರ — ಕಳೆದ ಬುಧವಾರದ ದಿನ ಈ ಊರಲ್ಲೂ ಸುತ್ತಣ ಗ್ರಾಮಗಳಲ್ಲೂ ದಿವ್ಯವಾದ ಮಳೆ ಆಗಿ ಕೆರೆ ಕುಂಟೆಗಳಿಗೆ ನೀರು ಬಂದಿದೆ — ಕೆರೆಗಳಲ್ಲಿ ಕಮ್ಮಿ ನೀರುಗಳು ಜನರಿಗೆ ತುಂಬಾ ಉಪಕಾರ ಮಾಡುತ್ತಿವೆ — ಒಬ್ಬ ಅರ್ಕಸಾಲಿ ಪುಟ್ಟಪ್ಪನೆಂಬ ಆಚಾರ್ಯವೃದ್ಧನು ರಾತ್ರಿ ಕಾಲದಲ್ಲಿ ಸೆಕೆ ತಾಳಲಾರದೆ ಮಾಳಿಗೆ ಮೇಲೆ ಮಲಗಿದ್ದು ನಿದ್ರೆಯಲ್ಲಿ ಕೆಳಗೆ ಬಿದ್ದು ತುಂಬಾ ಪೆಟ್ಟಾಯಿತು. ಆಗಿದೆ — ಗ್ರಾಮ ಸಾಕೇಬು ಸುಮಾರಾಗಿದೆ. ಆದರೆ ಮ್ಯುನಿಸಿಪಲ್ ಲಾಂದ್ರಗಳ ತುಂಬಾ ಕಪ್ಪುಹೊಗೆ ತುಂಬಿ ದೀಪಗಳು ಪ್ರಕಾಶಿಸುವದಿಲ್ಲ. ಒಳ್ಳೆ ಎಣ್ಣೆ ಉಪಯೋಗಿಸಿ ಚಿಮಣಿ ತೊಳೆದರೆ ಅನುಕೂಲ. — ಇಲ್ಲಿ ಗರ್ಲ್ಸ್ ಸ್ಕೂಲೂ, ಹಿಂದುಸ್ಥಾನಿ ಸ್ಕೂಲೂ ನಡೆಯುವ ಹಳೇ ಕಛೇರಿ ಕಟ್ಟಡವು ಪುರಾತನವಾದದ್ದು. ಅದರಲ್ಲಿ ಗಂಡುಹೆಣ್ಣು ಮಕ್ಕಳು ನೆಮ್ಮದಿಯಾಗಿ ವಿದ್ಯಾಭ್ಯಾಸ ಮಾಡಲಿಕ್ಕಾಗುವದಿಲ್ಲ. ಕಟ್ಟಡದ ಮೇಲ್ಛಾವಣಿ ಹೆಂಚುಗಳು ಒಡೆದು, ಮಳೆ ಬರುವಾಗ್ಗೆ ಒಳಗೆಲ್ಲಾ ಜಲಮಯವಾಗುತ್ತಿದೆ. ಆದ್ದರಿಂದ ವಿದ್ಯಾಭ್ಯಾಸ ಇಲಾಖೆಯವರು ಈ ಕಟ್ಟಡವನ್ನು ಸರಿಮಾಡಿಸಿದರೆ ಕ್ಷೇಮವಾದೀತು

ಹುಣಸೂರು — ಕಳೆದ 1 ½ ತಿಂಗಳ ಕೆಳಗೆ ಈ ಟವನಿನಲ್ಲಿ ಕಾಲರಾ ಜಾಡ್ಯವು ವ್ಯಾಪಿಸಿ ಕೆಲವರು ಅಕಾಲ ಮರಣವನ್ನೈದಿದರು. ಜನರು ಭಯಗ್ರಸ್ತರಾಗಿ ಬೇರೆ ಬೇರೆ ಕಡೆಗಳಿಗೆ ಚದರಿಹೋಗಿದ್ದರು. ಆದರೆ ಈಗ್ಗೆ ಸುಮಾರು 1 ತಿಂಗಳಿಂದ ಯಾವ ಗಲಾಟೆಯೂ ಇಲ್ಲದೆ ಇರುವುದು. ಕೆಲವು ಸಾಗಿ ಸುಮಾರು ಒಳ್ಳೇ ಹದ ಮಳೆಗಳಾದುವು. ರೈತಾಬಿಗಳು ಬೇಸಾಯ ಕೆಲಸಗಳನ್ನು ಪ್ರಾರಂಭಿಸಿರುವರು. ಧಾರಣೆವಾಸಿಗಳು ಇನ್ನೂ ಇಳಿತರವಾಗಿಲ್ಲ. ಜನರು ಹಸನ್ಮುಖಿಗಳಾಗಿ ಮದುವೆ ಮುಂತಾದ ಶುಭಕಾರ್ಯಗಳನ್ನು ಅಲ್ಲಲ್ಲಿ ಆರಂಭ ಮಾಡಿರುವರು — ಕಳೆದ ವಾರ ಈ ಊರು ಶ್ರೀ ಲಕ್ಷ್ಮೀನರಸಿಂಹಸ್ವಾಮಿಯ ರಥೋತ್ಸವವನ್ನು ಬ್ರಾಹ್ಮಣರೇ ಮುಂತಾದ ಪ್ರಜೆಗಳು ನಡೆಯಿಸಿದರು. ವಾಹನೋತ್ಸವ, ತೆಪ್ಪೋತ್ಸವಗಳನ್ನು ಮಾಡಿದ್ದು ಮಾತ್ರವಲ್ಲದೆ ಬ್ರಾಹ್ಮಣ, ವೈಶ್ಯ ಮುಂತಾದ ಜನಗಳಿಗೆ ಸಂತರ್ಪಣೆಗಳಾದುವು. ಆದರೆ ವಾಹನೋತ್ಸವದ ಮುಂದೆ ವೇಶ್ಯಾಂಗನೆಯ ನರ್ತನವೂ ತಾಳೆಯೂ ನಡೆದದ್ದು ಉತ್ಸವಕ್ಕೆ ಅಮಂಗಲವನ್ನುಂಟುಮಾಡಿತು. ದೇವರು ಹಿಂದೆ, ವೇಶ್ಯಾಂಗನೆ ಮುಂದೆ ಇದ್ದುದು ಮಾನಸ್ಥರಿಗೂ, ಭಕ್ತಿಯುಳ್ಳವರಿಗೂ ಮೆಚ್ಚಿಕೆಯಾಗಿರಲಿಲ್ಲ.

ಕೃಷ್ಣರಾಜಪೇಟೆ ತಾ|| ಸಿಂಧುಗಟ್ಟ — ಬಿಸಿಲಿನ ಧಗೆ ಹೆಚ್ಚು. ಮೋಡವಾದುದೂ ಸಿಂತಲ್ಲ. ಮುಂಗಾರುಮಳೆ ಸುತರಾಂ ಇಲ್ಲವೇ ಇಲ್ಲ. ರೈತರು ಮಳೆಯನ್ನೇ ನಿರೀಕ್ಷಿಸುತ್ತಿದ್ದಾರೆ. — ಕೆರೆಯಲ್ಲಿ ಕುಡಿಯುವ ನೀರು ಇದ್ದರೂ ಬಹಳ ಮಟ್ಟಿಗೆ ಕೆಡುತ್ತಿದೆ. ಇದಕ್ಕಾಗಿ ಸರ್ಕಾರದವರ ಸಬ್ಬಂದವಿಲ್ಲ. [ಗ್ರಾಮದ ಮುಖಂಡರು ಯಾಕೆ ಕಲ್ಪಿಸಿಕೊಳ್ಳಬಾರದು ? — ಎಡಿ] ಗ್ರಾಮದವಾಲೆಗಳು ಪಾರಕ್ಕೆರಡು ಸಲ ಬೀದಿ ಗುಡಿಸುವುದೇ ಕಷ್ಟವಾಗಿದೆ. ಯೂನಿಯನ್ ಮೀಟಿಂಗು ಇಲ್ಲಿ ನಡೆದು ಎಷ್ಟು ದಿನವಾಯಿತೋ ತಿಳಿಯದು. ಅಮಲ್ದಾರ್ರು ಮುದ್ದಾಗಿ ತಿಪ್ಪೆಗಳನ್ನು ಊರೊಳಗೆ ಹಾಕುವ ಭಾಗ ತಪ್ಪಿಸಲು ಪಟೇಲರಿಗೆ ಆಜ್ಞೆ ಮಾಡಿದರೂ ಸಂಶೇಂದಿಯಲ್ಲಿ ಹೆಚ್ಚುತ್ತಿದೆ — ಇಲ್ಲಿನ ಆಸ್ಪತ್ರೆಯು ಪ್ರಜೆಗಳಿಗೆ ಎಷ್ಟರ ಮಟ್ಟಿಗೆ ಉಪಕಾರವಾಗಿದೆ ಎಂಬುವ ಭಾಗವನ್ನು ಮೇಲ್ಪಟ್ಟವರು ವರ್ಷಕ್ಕೆ ಒಂದು ಸಲವಾದರೂ ಬಂದು ನೋಡಿಕೊಂಡು ಹೋದರೆ ಸರ್ಕಾರದವರು ಇದಕ್ಕಾಗಿ ಖರ್ಚು ಮಾಡುತ್ತಿರುವ ಸಾವಿರಾರು ರೂಪಾಯಿ ಸಾರ್ಥಕವಾದೀತು — ಈ ತಾಲ್ಲೂಕಿಗೆ ಸೇರಿದ ಕಿಕ್ಕೇರಿಯಲ್ಲಿ ಚರ್ಮದ ವ್ಯಾಪಾರಮಾಡುತ್ತಿದ್ದ ಒಬ್ಬ ಸಾಬಿಯು ನೇಣು ಹಾಕಿಕೊಂಡು ಪ್ರಾಣಬಿಟ್ಟದ್ದಾಗಿಯೂ, ತಲೆಕಟ್ಟು ಆಲದಮರದ ಬಳಿ ಒಬ್ಬ ಹಿಂದುವು ಖೂನಾಗಿರುವಂತೆಯೂ ವರ್ತಮಾನ ಕೇಳುತ್ತೇವೆ. ಇವೆರಡಕ್ಕೂ ಸರ್ಕಾರದವರು ಕಾರಣವನ್ನು ತಿಳಿದು ಬಂದೋಬಸ್ತು ಮಾಡಿದರೆ ಉತ್ತಮ

ಶಿವಮೊಗ್ಗ ತಾ|| ಬೆಂಕಿಪುರ — ಚೈತ್ರಮಾಸದಲ್ಲಿ 2 ಹದ ಮಳೆ ಆಯಿತು. ಅಲ್ಲಿಂದ ಇದುವರೆಗೂ ಮಳೆ ಇಲ್ಲದೆ, ಬಿಸಿಲಿನ ತಾಪ ಸಹಿಸಲು ಅಸಾಧ್ಯವಾಗಿದೆ. ತಾ 9 ರ ಲಾಗಾಯ್ತು ಕಾಲರಾ ಜಾಡ್ಯವು ಶುರುವಾಗಿ ಇದುವರೆಗೆ 25 ಮಂದಿಗೆ ತಗಲಿ ಹತ್ತು ಹನ್ನೆರಡು ಮರಣವಾಗಿರುತ್ತೆ. ತಾಲ್ಲೂಕು ಅಮಲ್ದಾರ್ರು, ಸಬ್ ಅಸಿಸ್ಟೆಂಟ್ ಸರ್ಜನ್‌ರವರೂ, ಸ್ಯಾನಿಟರಿ ಇನ್‌ಸ್ಪೆಕ್ಟರವರೂ ತುಂಬಾ ಮುತುವರ್ಜಿಯಿಂದ ಪ್ರತಿ ಒಬ್ಬ ರೋಗಿಯ ಮನೆಗೆ ದಯಮಾಡಿ ತಕ್ಕ ಚಿಕಿತ್ಸೆ ಮಾಡಿಸುವದಲ್ಲದೆ ನದಿ ಪಕ್ಕಗಳಲ್ಲಿ 5 ಭಾವಿಗಳನ್ನು ತೆಗಿಸಿ ಪ್ರತಿ ಒಬ್ಬರೂ ಅವರಲ್ಲಿಯೇ ನೀರು ತೆಗೆದುಕೊಳ್ಳುವಂತೆಯೂ, ನೀರನ್ನು ಚೆನ್ನಾಗಿ ಕಾಯಿಸಿಕೊಂಡು ಪಾನಕ್ಕೆ ಉಪಯೋಗಿಸುವಂತೆಯೂ ಟಾಂ ಟಾಂ ಮೂಲಕ ತಿಳಿಯಪಡಿಸಿರುತ್ತಾರೆ. ಮೊನ್ನೆ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರವರು ದಯಮಾಡಿ, ಎಲ್ಲಾ ಪರಾಂಬರಿಸಿಕೊಂಡು ಜನಗಳಿಗೆ ನೀರನ್ನು ಕಾಯಿಸಿ ಕುಡಿಯುವಂತೆ ಬುದ್ಧಿವಾದ ಹೇಳಿ ಹೋದರು. ಹೊಳೆಯಲ್ಲಿ ಕಾಯಿಲೆ ಜನಗಳ ಮನೆಯವರು ಬಟ್ಟೆ ವಗೈರೆ ನೀರಿನಲ್ಲಿ ತೊಳೆಯುತ್ತಾರೆ. ಪೋಲೀಸಿನವರ ನಿಗಾಕ್ಕೆ ಬಿದ್ದರೂ ನಿಲ್ಲಿಸದೆ ಇರುತ್ತಾರೆ. — ಇಲ್ಲಿನ ಮುಸಾಫರ್‌ಖಾನಾದಲ್ಲಿ ಕೆಲವರು ಬಹಳ ದಿವಸದಿಂದ ಅಲ್ಲಿಯೇ ವಾಸವಾಗಿರುತ್ತಾರೆ. ಪ್ರಯಾಣಿಕರು ಬಂದರೆ ತುಂಬಾ ತೊಂದರೆಯಾಗಿರುತ್ತೆ. ನಮ್ಮ ಅಮಲ್ದಾರ್ರವರು ಈ ವಿಷಯದಲ್ಲಿ ಜಾಗ್ರತೆ ಗಮನಕೊಟ್ಟು ಸರಿಪಡಿಸುವರೆಂದು ನಂಬಿರುತ್ತೇವೆ.

ಹೊಸದುರ್ಗ ತಾ|| ಬೆಲಗೂರು — ಈ ಪ್ರಾಂತ್ಯ ಈಚೆಗೆ ಮಳೆ ಬಂದಿಲ್ಲ. ಬಿಸಿಲಿನ ತಾಪ ಜಾಸ್ತಿ ಇರುತ್ತದೆ. ಕೆರೆಯಲ್ಲಿ ನೀರಿಲ್ಲ. ಜನರು ಭಾವಿಗಳಲ್ಲೇ ನೀರು ತರುವರು. ಒಗೆಯುವದಕ್ಕೆ ಅನುಕೂಲವಿಲ್ಲ — ಇಲ್ಲಿನ ಯೂನಿಯನ್ ಸ್ವೀಪರುಗಳು 15-20 ದಿನಗಳಿಗೊಂದಾವರ್ತಿ ಕಸಾ ಗುಡಿಸುತ್ತಾರೆ. ಆದರೂ ಇವರಿಗೆ ಪೂರಾ ಸಂಬಳ ಪಾವತಿಮಾಡುವದು ಬಹಳ ಅನ್ಯಾಯವಾಗಿರುತ್ತದೆ. ಇದುವರೆಗೆ ಪ್ರತಿ ತಿಂಗಳಲ್ಲೂ ಯೂನಿಯನ್ ಮೀಟಿಂಗುಗಳು ನಡೆದಿವೆ. ಚರ್ಚಿಸಿರುವ ವಿಷಯವ್ಯಾವದೂ ಜಾರಿಗೆ ಬಂದಿಲ್ಲ. ಯೂನಿಯನ್ ಆದ ಫಲವು ಈ ಗ್ರಾಮದಲ್ಲಿ ಯಾವದೂ ತೋರಿಬಂದಿರುವದಿಲ್ಲ — ಮ ಗಾಳಪೂಜೆ ತಿಮ್ಮಣ್ಣನವರ ವಶಕ್ಕೆ ಆಂಜನೇಯ ದೇವಸ್ಥಾನವನ್ನು ಕಟ್ಟಿಸಲು ಗ್ರಾಮಸ್ಥರು ಕೊಟ್ಟಿದ್ದ ಮೊಬಲಗಿನಲ್ಲಿ ಕಾಮಗಾರಿಯು ನಡೆಯುತ್ತಿಲ್ಲ. ಮನೆಯಲ್ಲಿಟ್ಟುಕೊಳ್ಳುವದಕ್ಕೆ ಮೊಬಲಗು ಕೊಟ್ಟಿರಲಿಲ್ಲ. ಇವರು ಈಗಲೂ ಜಾಗ್ರತೆಯಾಗಿ ಕಟ್ಟಿಸಲು ಕೋರಿಕೊಂಡಿವೆ — ಈ ಗ್ರಾಮದ ದೇವಾಂಗದವರು ಅವರ ಮನೆ ಮೇಲೆ ಹಣ ವಸೂಲ್ ಮಾಡಿಕೊಂಡು ಅವರ ಬೀದಿ ಮಧ್ಯೆ ಇರುವ ಕುಲದೇವತೆಯಾದ ಬನಶಂಕರಿ ದೇವಸ್ಥಾನವನ್ನು ಕಟ್ಟಿಸಿ, ದೇವರ ಪ್ರತಿಷ್ಠೆ ಮಾಡಿದರು. ಈಗ 7-8 ದಿನಗಳಿಂದಲೂ ಜಾತ್ರೆ ನಡೆಯುತ್ತಿದೆ. ತಾ. 19 ನೇ ಸೋಮವಾರ ಕೋಮುವಾರು ಜನರಿಗೆ ಭೋಜನಾದಿಗಳನ್ನು ನಡಿಸಿದರು. ದೇವಾಂಗ ಮುಖಂಡರಾದ ಯೂನಿಯನ್ ಮೆಂಬರು ಮ|| ರಾಮಣ್ಣನವರೂ, ಮ|| ನಿರುಗಲ್ ಬಸಣ್ಣನವರೂ, ಪೇಟೆಯ ವರ್ತಕ ಮಂಡಲಿಯವರನ್ನೂ ರೈತ ದೊಡ್ಡಮನುಷ್ಯರನ್ನೂ ಕರೆಸಿಕೊಂಡು ಒಂದು ದೊಡ್ಡ ಸಭೆ ನಡಿಸಿ ಸರ್ವರಿಗೂ ಫಲತಾಂಬೂಲಾದಿಗಳನ್ನು ಸಲ್ಲಿಸಿದ್ದಕ್ಕೆ ಇವರನ್ನು ಸರ್ವರೂ ವಂದಿಸುವರು. ದೇವಾಂಗ ಜನರಲ್ಲಿ ಧನಿಕರ್ಯಾರೂ ಇರುವದಿಲ್ಲ. ಈ ಕಾರ್ಯಕ್ಕೆ ಸುಮಾರು ಒಂದು ಸಾವಿರ ರೂಪಾಯಿ ತನಕ ಖರ್ಚು ಮಾಡಿರುತ್ತಾರೆ — ಈ ಬೆಲಗೂರಲ್ಲಿ ಒಂದು ಕೋಆಪರೇಟಿವ್ ಸೊಸೈಟಿ ಇಟ್ಟು ಕೊಡಲು ಈ ಸಂಸ್ಥೆಗಳೆಲ್ಲಾ ಸೂಚಿಸಿ ಪ್ರಾರಂಭಮಾಡಿಕೊಡಬೇಕೆಂದು ರಿಜಿಸ್ಟ್ರಾರವರಿಗೆ ಅರ್ಜಿ ಬರೆದುಕೊಂಡು ಬಹಳ ದಿನವಾಯ್ತು. ಇವರು ಜಾಗ್ರತೆ ಬಂದು ಸೊಸೈಟಿಯನ್ನು ಇಡಿಸಿಕೊಡ್ತಾರೆಂದು ಕೋರಿಕೊಂಡಿದೆ

ಗೌರಿಬಿದನೂರು ತಾ|| ಗೊಲ್ಲಹಳ್ಳಿ — ಇಲ್ಲಿ ಈ ತಿಂಗಳ ತಾ. ೨೭, ೨೮ ರಲ್ಲಿ ಮಳೆ ಸುರಿದು ಹದವಾಗಿ ಭೂಮಿಯು ಸ್ವಲ್ಪ ತಂಪಾಗಿದೆ. ರೈತರು ಉಳುವುದಕ್ಕೆ ಪ್ರಾರಂಭಿಸಿದಾರೆ — ಧಾರಣೆವಾಸಿ ಅಕ್ಕಿ ರೂಪಾಯಿಗೆ 6½-7 ಸೇರೂ, ರಾಗಿ 17 ಸೇರೂ ಇದೆ — ಮೊನ್ನೆ ತಾ 23 ನೇ ಗುರುವಾರ ಸಾಯಂಕಾಲ ಇಲ್ಲಿಗೆ ಸಮೀಪವಾದ ವಾಟದಹೊಸಹಳ್ಳಿಯಲ್ಲಿ ಪ್ರತಿ ವರ್ಷವೂ ನಡೆಯುವುದಕ್ಕಿಂತ ಅತಿಶಯವಾಗಿ ಚಿರತೆಯ ಪಾರಿವಾಟದ ಉತ್ಸವವು ನಡೆಯಿತು. ಈ ಉತ್ಸವಕ್ಕೆ 2-3 ದಿನ ಮುಂಚೆ ಸದರಿ ಗ್ರಾಮದ ವೆಂಕಟಲನಾರಾಯಣ ಎಂಬವನು ಊರ ಪಕ್ಕದ ಗುಡ್ಡದ ಬಳಿ 3-4 ಸಿಡಿಬೋನು ಎತ್ತಿ ಪ್ರತಿಯೊಂದರಲ್ಲೂ ಮೇಕೆಯನ್ನು ಕಟ್ಟಿದನು. ಅವುಗಳ ಆಸೆಗೆ 4 ರಾತ್ರಿಗಳಲ್ಲೂ 4 ದೊಡ್ಡ ಗಂಡು ಚಿರತೆಗಳು ಬಿದ್ದವು. ಶ್ರೀ ಚನ್ನಕೇಶವಸ್ವಾಮಿಯ ರಥೋತ್ಸವವಾದ ಮೂರನೇ ದಿನ ಈ ತಿಂಗಳ 22 ತಾ ಸಾಯಂಕಾಲ 2 ಚಿರತೆಗಳನ್ನು ಸಿಡಿಬೋನಿನಿಂದ ಬಿದಿರ ಜೋಡಿಂದಾದ - ಕೊಡಮೆ - ಎಂಬ ಸಣ್ಣ ಬೋನುಗಳಿಗೆತ್ತಿ, ಅವುಗಳ ನಡುವಿಗೆ ಕಬ್ಬಿಣದ ಸರಪಣಿ ಬಿಗಿದು, ಪಾರಿವಾಟದುತ್ಸವದ ಊರಾಚೆ ಬಯಲಿನಲ್ಲಿ ಎರಡು ದೊಡ್ಡ ಕಂಭಗಳನ್ನು ನೆಟ್ಟು ಅವಕ್ಕೆ ಮೇಲ್ಗಡೆ ಸರಪಣಿಗಳನ್ನು ತಗುಲಿಸಿ, ಮೂತಿಗಳನ್ನು ಸಡಿಲಿಸಿ, ಕೊಡಮೆಗಳನ್ನು ಹಿಂದಕ್ಕೆ ಎಳೆದುಕೊಂಡ ಕೂಡಲೇ ಚಿರತೆಗಳು ಹೊರಬಿದ್ದು ರೋಷದಿಂದ ಆರ್ಭಟಿಸುತ್ತಾ, ಜನರ ಕಡೆ ಗುರಿಹಿಡಿದು ನುಗ್ಗುತ್ತಾ ಸ್ವಲ್ಪ ಹೊತ್ತು ಓಡಾಡಿ ಹಟ್ಟು ಬಿದ್ದು ಮಲಗಲು, ಸಂಜೆಯಾಗುತ್ತಾ ಬಂದದ್ದರಿಂದ ಅವುಗಳಲ್ಲಿ ಒಂದನ್ನು ಗೌರಿಬಿದನೂರು ಪೋಲೀಸ್ ಇನ್‌ಸ್ಪೆಕ್ಟರೂ, ಮತ್ತೊಂದನ್ನು ವೆಂಕಟಲನಾರಾಯಣನೂ ಸುಟ್ಟರು. ಅನಂತರ ವಾದ್ಯವಿಶೇಷಗಳೊಂದಿಗೆ ದೇವರ ಉತ್ಸವ ಬೆಳೆಯಿತು. ಈ ಉತ್ಸವಕ್ಕೆ ಗೌರಿಬಿದನೂರು, ಗುಡಿಬಂಡೆ ತಾಲ್ಲೂಕುಗಳ ಅಮಲ್ದಾರರೇ ಮೊದಲಾದ ಸರ್ಕಾರದ ಉದ್ಯೋಗಸ್ಥರೂ, ತಕ್ಕಷ್ಟು ಪೋಲೀಸ್ ಸಿಬ್ಬಂದಿಯವರೂ, ಸಾವಿರಾರು ಜನ ನೋಟಕರೂ ಬಂದಿದ್ದು, ಸಿಕ್ಕಿಬಿದ್ದ ಚಿರತೆಗಳ ಹಿಂಸಾರೂಪಕವಾದ ಮರಣವನ್ನು ನೋಡಿ ದಣಿದರು. ಇನ್ನೊಂದು ಚಿರತೆಯು ಇನ್ನೂ ಬೋನಿನಲ್ಲೇ ಇದೆ. ಹೀಗೆ ಯಾವ ವರ್ಷವೂ ಮೂರು ಚಿರತೆಗಳು ಸಿಕ್ಕಿರಲಿಲ್ಲವಂತೆ

ವಿದೇಶ ವೃತ್ತಾಂತಗಳು.

ಅರೇಬಿಯಾ ಎಂಬ ಜಹಜು ಸುಮಾರು 22,50,000 ರೂಪಾಯಿನ ಚಿನ್ನವನ್ನು ಹಿಂದುಸ್ಥಾನಕ್ಕೆ ಸಾಗಿಸಿಕೊಂಡು ಬರುತ್ತಿದೆ

ಜರ್ಮನ್ ರಾಜ್ಯದಲ್ಲಿರುವ ಜಹಜುಗಳ ಟಪ್ಪಾಲ್ ಕಂಪನಿಯವರು ಇಂಗ್ಲಿಷ್ ಕಂಪನಿಯವರಿಂದ ಕಳೆದ ವಾರ ಮೂರು ದೊಡ್ಡ ಜಹಜುಗಳನ್ನು 10,35,000 ರೂಪಾಯಿ ಕೊಟ್ಟು ಕೊಂಡುಕೊಂಡಿದಾರೆ.

ಲಂಡನ್ ಪಟ್ಟಣದಲ್ಲಿರುವ ಎಡಿಂಬರ್ಗ್ ಅಬ್ಸರ್ವೇಟರಿ ಎಂಬ ಜ್ಯೋತಿಶ್ಶಾಸ್ತ್ರ ಪಂಡಿತರ ಪರೀಕ್ಷಾ ಮಂದಿರದೊಳಗೆ ಸ್ತ್ರೀಯರ ದಾಂಧಳೆಯ ದೆಸೆಯಿಂದ ಕಳೆದ ವಾರ ಒಂದು ಸಿಡಿಮದ್ದಿನ ಗುಂಡು ಹಾರಿ ಬಹಳ ನಷ್ಟವನ್ನುಂಟುಮಾಡಿದೆ

ಸಯಾಂ ರಾಜ್ಯಕ್ಕೆ ಸೇರಿದ ಪಿರಾಕ್ ಡಿಸ್ಟ್ರಿಕ್ಟಿನಲ್ಲಿ ಕಾಡಾನೆಗಳ ಕಾಟ ಈಚೆಗೆ ಹೆಚ್ಚಾಗಿರುತ್ತದೆ. ಸುಂಗೆ ಸ್ಯೂಟ್ ಎಂಬ ರಬ್ಬರ್ ತೋಟಗಳೊಳಗೆ ಸಾವಿರಾರು ಮರಗಳು ನಾಶಹೊಂದಿದವು. ಆನೆಗಳು ಹಿಂಡುಹಿಂಡಾಗಿ ನುಗ್ಗಿ ಗಿಡ ಮರಗಳನ್ನು ಸೊಂಡಲಿನಿಂದ ಕಿತ್ತುಹಾಕಿ ಬೇರುಗಳನ್ನು ತಿನ್ನುತ್ತಾ ಬಂದಿರುವವು. ಆ ತೋಟಗಳ ಮಾಲೀಕರಿಗೆ ಇದರಿಂದ ಬಹಳ ನಷ್ಟ ಸಂಭವಿಸಿರುತ್ತದೆ

ಲಂಡನ್ ಪಟ್ಟಣದಲ್ಲಿ ಕಳೆದ ಗುರುವಾರ ಒಂದು ಸಭೆ ನಡೆಯಿತು. ಮಾಂಟ್ರಿಯಲ್ ನಗರದಲ್ಲಿ ಕಾಲವಾದ ಮಿಸ್ ಡೌ ಎಂಬಾಕೆಯು ಗುಜರಾತಿನಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿ ನಡಿಸುತ್ತಾ ಬರಬೇಕೆಂದೂ, ಅದಕ್ಕಾಗಿ ತನ್ನ ಆಸ್ತಿಯಿಂದ ಮೂರು ಲಕ್ಷ ರೂಪಾಯಿಯನ್ನು ಖರ್ಚು ಮಾಡತಕ್ಕದ್ದೆಂದೂ ಮರಣಶಾಸನವನ್ನು ಬರೆದಿರುತ್ತಾಳೆಂಬ ಸಂಗತಿಯನ್ನು ಆ ಮಹಾ ಸಭೆಯಲ್ಲಿ ತಿಳಿಸಲಾಗಿದೆ

ದಿಜಾವಿದ್ ಪಾಷಾರವರ ಕೈಕೆಳಗಿದ್ದ ಸ್ಕೂಟರಲ್ಲಿ ಕಾಯಿಲೆಬಿದ್ದೂ, ಗಾಯಪಟ್ಟೂ ಇರುವ ಎರಡು ಸಾವಿರ ಸಿಪಾಯಿಗಳನ್ನು ಟರ್ಕಿಯವರು ಜಹಜಿನಲ್ಲಿ ಮತಿಯೋನಾದಿಂದ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣಕ್ಕೆ ಸಾಗಿಸಿದರು. ಅವರಿಗೆಲ್ಲಾ ಅರಹೊಟ್ಟೆ ಆಹಾರ ಸಿಕ್ಕುವುದೇ ಕಷ್ಟವಾಗಿ, ಪ್ರಯಾಣದಲ್ಲೇ ಹೊಟ್ಟೆಗಿಲ್ಲದೆ ಇಪ್ಪತ್ತೆರಡು ಮಂದಿ ಸತ್ತುಹೋದರೆಂದು ತಂತೀವರ್ತಮಾನ ಬಂದಿದೆ

ಇಂಗ್ಲಾಂಡಿಗೆ ಸೇರಿದ ವಿಲ್ಟ್‌ಷೈರಿನಲ್ಲಿ ಒಬ್ಬನು ತನ್ನ ವೃದ್ಧ ತಂದೆ ತಾಯಿಗಳನ್ನೂ ಸಹೋದರಿಯನ್ನೂ ಬಹಳ ತೀವ್ರವಾದ ಹಿಂಸೆಗಳಿಗೆ ಗುರಿ ಮಾಡುತ್ತಿದ್ದದ್ದನ್ನು ಕಂಡು ಸಹಿಸಲಾರದೆ ಅವನ ಸಹೋದರನು ರೋಷಗೊಂಡು ಆ ಮನುಷ್ಯನನ್ನು ಕೊಂದುಬಿಟ್ಟನು. ಈ ಕೊಲೆಯ ಮೊಕದ್ದಮೆ ವಿಚಾರಣೆಗೆ ಬಂದಾಗ ಜೂರಿ ಪಂಚಾಯತರು ಅಪರಾಧಿಯ ಕೃತ್ಯವನ್ನು ಸಹಜವಾದದ್ದೆಂದು ಬಹು ಸಂತೋಷದಿಂದ ಒಪ್ಪಿಕೊಂಡು ಅವನನ್ನು ಖುಲಾಸ್ ಮಾಡಿರುತ್ತಾರೆ

ಮಿ ಹೆನ್ರಿ ಫ್ಲಾಗ್ಲರ್ ಎಂಬಾತನು ಕಳೆದ ವಾರ ಕಾಲವಾದನೆಂದು ತಿಳಿದು ಬಂದಿದೆ. ಈತನು 1830 ನೇ ಇಸವಿಯಲ್ಲಿ ಅಮೇರಿಕದಲ್ಲಿ ಜನಿಸಿ ಒಂದು ಗ್ರಾಮದ ದಿನಸಿ ಅಂಗಡಿಯೊಳಗೆ ಗುಮಾಸ್ತೆಯಾಗಿ ಸೇರಿಕೊಂಡು, ಬಹು ಉತ್ಸಾಹದಿಂದಲೂ ಚಟುವಟಿಕೆಯಾಗಿಯೂ ಕೆಲಸಮಾಡುತ್ತಾ ಬಂದು, ಉಪ್ಪಿನ ಮೂಟೆಗಳನ್ನು ಕಂಟ್ರಾಕ್ಟು ಮಾಡಲಾರಂಭಿಸಿ ದ್ರವ್ಯ ಸಂಪಾದನೆಮಾಡಿ, ಕಡೆಗೆ ಪ್ರಖ್ಯಾತನಾದ ರಾಕ್‌ಫೆಲರ್ ಎಂಬ ಕೋಟ್ಯಾಧೀಶ್ವರನ ಕೂಡ ಪಾಲುಗಾರನಾಗಿ ಸೇರಿಕೊಂಡನು. ಈಚೆಗೆ ಸ್ಟಾಂಡರ್ಡ್ ಸೀಮೆ ಎಣ್ಣೆ ಕಂಪನಿಯನ್ನು ಸ್ಥಾಪಿಸಿದವನು ಈತನೇ. ಈತನು ಫ್ಲಾರಿಡಾ ಪಟ್ಟಣದಲ್ಲಿ ದಿವ್ಯವಾದ ಎರಡು ಭಾರಿ ಹೋಟೇಲುಗಳನ್ನು ಇಟ್ಟು ನಡಿಸುತ್ತಾ ಬಂದನು. ಅವೆರಡನ್ನೂ ಕಟ್ಟುವದಕ್ಕೇ 90 ಲಕ್ಷ ರೂಪಾಯಿ ಖರ್ಚುಮಾಡಿರುತ್ತಾನೆ. ಇದಲ್ಲದೆ ಅದೇ ಸ್ಥಳದಲ್ಲಿ ಈತನೇ ಸ್ವಂತವಾಗಿ ಒಂದು ರೈಲ್ ರಸ್ತೆಯನ್ನು ಕಟ್ಟಿ ರೈಲ್ ಗಾಡಿಗಳನ್ನು ನಡಿಸುತ್ತಾ ಬಂದಿದ್ದನು. ಇಂಥಾ ಸಾಹಸಿಯು 83 ವರುಷಗಳ ಮುದುಕನಾಗಿ ಬದುಕಿ ಕಾಲವಾಗಿರುತ್ತಾನೆ

ಚೀನಾ ಪ್ರಜಾಪ್ರಭುತ್ವಕ್ಕೆ ಸೇರಿದ ಹೂನಾನ್ ಮತ್ತು ದಯೋಂಗಾಯು ಎಂಬೀ ಎರಡು ಅಧಿಪತ್ಯಗಳಲ್ಲಿ ಸೈನ್ಯಗಳು ಸರ್ಕಾರದವರ ಮೇಲೆ ದಂಗೆಯೆದ್ದಿರುವುದಾಗಿಯೂ, ಸರ್ಕಾರದವರು ಆ ದಂಗೆಕೋರರಲ್ಲಿ ಪ್ರಮುಖರಾದವರನ್ನೆಲ್ಲಾ ವಸ್ತಗರಿವಾಡಿ ಕಡಿದುಹಾಕಿದರೆಂದೂ ತಂತೀವರ್ತಮಾನ ಬಂದಿದೆ

ಅಮೇರಿಕಕ್ಕೆ ಸೇರಿದ ಲಾರೆನ್ಸ್ ನಗರದಲ್ಲಿ ಕಳೆದ ವರುಷ ಜನವರಿ ತಿಂಗಳಲ್ಲಿ ಕೂಲಿಕಾರರು ಸಾವಿರಾರು ಮಂದಿ ಗಲಭೆ ಮಾಡಿದರು ಆ ಸಮಯದಲ್ಲಿ ಒಂದು ಸಿಡಿಮದ್ದಿನ ಗುಂಡು ಒಡೆದು ಬಹಳ ಅನಾಹುತವನ್ನುಂಟುಮಾಡಿತು ಈ ಕಾರ್ಯಕೃತ್ಯ ನಡೆದದ್ದರಲ್ಲಿ ಮಿ|| ಗಳಾದ ವುಡ್, ಅಟ್ಕೀ, ದೆನಿಸ್ ಎಂಬೀ ಗಣ್ಯರಾದ ಮಹಶ್ವೈರ್ಯವಂತರು ಸೇರಿರುತ್ತಾರೆಂದು ಹಿಡಿಯಲ್ಪಟ್ಟಿದಾರೆ. ಈಗ ಬೋಸ್ಟನ್ ಪಟ್ಟಣದಲ್ಲಿ ಈ ಮೊಕದ್ದಮೆಯು ವಿಚಾರಣೆಗೆ ಪ್ರಾರಂಭವಾಗಿದೆ ಈ ಮೊಕದ್ದಮೆಯು ಅನೇಕರಲ್ಲಿ ಕಳವಳವನ್ನೂ ಉತ್ಸಾಹವನ್ನೂ ಉಂಟುಮಾಡಿರುವುದು

ವಾಟ್ಸ್ ಎಂಬೊಬ ಪರೋಪಕಾರಿಯು 80 ವರುಷ ಬದುಕಿದ್ದು ಕಳೆದ ವಾರ ತೀರಿಹೋದನು ನೀರಿನೊಳಗೆ ಮುಳುಗುವುದರಲ್ಲಿ ಈತನು ತುಂಬಾ ಹೆಸರುವಾಸಿಯನ್ನು ಪಡೆದಿದ್ದು, ಸುಮಾರು ಮೂವತ್ತಾರು ಜನರನ್ನು ಜಲಮರಣದಿಂದ ತಪ್ಪಿಸಿ ಬದುಕಿಸಿರುತ್ತಾನೆ ಮಿ|| ಕಾರ್ನೆಗಿ ಎಂಬ ಕೋಟ್ಯಾಧೀಶ್ವರನು ಈತನ ಸಾಹಸಕಾರ್ಯಗಳನ್ನು ಮೆಚ್ಚಿಕೊಂಡು ಈತನಂಥಾ ಧೈರ್ಯವಂತನೂ ಪರಾಕ್ರಮಶಾಲಿಯೂ ತಾನು ನೋಡಿದ್ದಿಲ್ಲವೆಂದು ಹೇಳಿದ್ದಲ್ಲದೆ ಅಂಥವರಿಗಾಗಿ ತಾನು ಹಾಕಿರುವ ಪರೋಪಕಾರದ ಫಂಡಿನಿಂದ ಆತನಿಗೆ ಸಾಯುವ ತನಕ ಪೆನ್ಷನ್ ಕೊಡಿಸುತ್ತಿದ್ದನು

ಕಳೆದ 1900 ರಿಂದ 1901 ನೇ ಇಸವಿಯ ತನಕ ಮೂರು ವರುಷ ನಡೆದ ದಕ್ಷಿಣ ಆಫ್ರಿಕಾ ಯುದ್ಧಕಾಲದಲ್ಲಿ ಇಂಗ್ಲಿಷರು ಹದಿನಾಲ್ಕು ಮಂದಿ ಬೋಅರ್ ಶತ್ರುಗಳನ್ನು ಹಿಡಿದು ಪೋರ್ಚುಗಲ್ ರಾಜಧಾನಿಯಾದ ಲಿಸ್ಬನ್ ಪಟ್ಟಣದಲ್ಲಿ ಬಂಧನದಲ್ಲಿಟ್ಟಿದ್ದರು ಈ ಹದಿನಾಲ್ಕು ಮಂದಿಯೂ ಅಲ್ಲಿ ಕಾಲವಾದ ಕಾರಣ ಅವರ ಸಮಾಧಿಯಲ್ಲಿ ಅವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ದಕ್ಷಿಣ ಆಫ್ರಿಕಾ ಗವರ್ನ್‌ಮೆಂಟಿನವರು ದ್ರವ್ಯವನ್ನು ಖರ್ಚುಮಾಡಿ ಅಲ್ಲಿ ಒಂದು ಶಾಸನಸಹಿತವಾದ ಗೋಪುರವನ್ನು ಕಟ್ಟಿಸಿದರು ರಾಯಭಾರಿಯಾದ ಸರ್ ಎ ಹಾರ್ಡಿಂಗರವರು ಆ ಕಟ್ಟಡವನ್ನು ಕಳೆದ ಸೋಮವಾರ ಪ್ರತಿಷ್ಠೆ ಮಾಡಿರುತ್ತಾರೆ

ಇಂಗ್ಲಾಂಡಿನಲ್ಲಿ ನಾಕ್ ತರಹೇತು ಮಾಡಲ್ಪಡುವ ಜೂಜಿನ ಕುದುರೆಗಳಿಗೆ ಈಚೆಗೆ ಒಳ್ಳೇ ಕ್ರಯ ಬರುತ್ತದೆ 1900ನೇ ಇಸವಿಯಲ್ಲಿ ಭಾರೀ ಜೂಜನ್ನು ಗೆದ್ದ ಫ್ಲೈಯಿಂಗ್ ಫಾಕ್ಸ್ ಎಂಬ ಒಂದು ಕುದುರೆಯನ್ನು ಫ್ರೆಂಚರು 5,90,125 ರೂಪಾಯಿಗೆ ಕೊಂಡುಕೊಂಡರು ಸಿಲ್ಲೆನೆ ಎಂಬ ಕುದುರೆಯನ್ನು ಅರ್ಜೆಂಟೈನ್ ಸೀಮೆಯವರು 1,72,500 ರೂಪಾಯಿಗೆ ತೆಗೆದುಕೊಂಡರು 3,75,000 ರೂಪಾಯಿಗೆ ಬಿಕರಿಯಾಗಿದ್ದ ರಾಕ್ ಸ್ಯಾಂಡ್ ಎಂಬ ಕುದುರೆಯನ್ನು ಅಮೇರಿಕದವರು 7,50,000 ರೂಪಾಯಿ ಕೊಟ್ಟು ಕೊಂಡುಹೋಗಿದಾರೆ ಈಚೆಗೆ ಸುಮಾರು ಮೂರು ವಾರಗಳ ಹಿಂದೆ ವೈಟ್ ನೈಟ್ ಎಂಬ ಜೂಜಿನ ಕುದುರೆಯನ್ನು ಲಂಡನ್ ಪಟ್ಟಣದಲ್ಲಿ ಅನ್ಯದೇಶೀಯರು 6,00,000 ರೂಪಾಯಿಗೆ ಕೊಂಡು ಸಾಗಿಸಿಕೊಂಡು ಹೋಗಿರುತ್ತಾರೆ

ಜರ್ಮನ್ ಚಕ್ರವರ್ತಿಯವರಿಗೆ ನ್ಯೂಮೋನಿಯಾ ಎಂಬ ಕಠಿಣವಾದ ಜ್ವರವು ಪ್ರಾಪ್ತವಾಗಿದೆ ಎಂಟು ಮಂದಿ ಗಟ್ಟಿಗರಾದ ವೈದ್ಯರು ಅವರ ಬಳಿ ಇದ್ದುಕೊಂಡು ಔಷಧಗಳನ್ನು ಕೊಟ್ಟು ಉಪಚಾರಮಾಡುತ್ತಿದಾರೆ ಅಮೇರಿಕಕ್ಕೆ ಸೇರಿದ ಸ್ಯಾನ್ ಫ್ರಾನ್ಸಿಸ್ಕೋ ನಗರದಲ್ಲಿ ಪ್ರಕಟವಾಗುವ ಜರ್ಮನಿಯವರ ಒಂದು ವರ್ತಮಾನ ಪತ್ರಿಕೆಯು ಜರ್ಮನ್ ಚಕ್ರವರ್ತಿಯವರು ಕಾಲವಾದರೆಂಬ ಸುದ್ದಿಯನ್ನು ಪ್ರಚುರಪಡಿಸಿತು ಅದನ್ನು ಓದಿ ಜರ್ಮನಿಯವರೂ ಇತರರೂ ತುಂಬಾ ಗಾಬರಿಯಾದರು ಅಷ್ಟರೊಳಗೆ ಜರ್ಮನಿಯಿಂದ ಇನ್ನೊಂದು ತಂತೀ ವರ್ತಮಾನ ತಲುಪಿ, ಚಕ್ರವರ್ತಿಯವರು ಆರೋಗ್ಯಹೊಂದುತ್ತಿದಾರೆಂದು ತಿಳಿಸಿತು ಶುಕ್ರವಾರ ಮಧ್ಯಾಹ್ನ 4 ಗಂಟೆಯಲ್ಲಿ ಚಕ್ರವರ್ತಿಯವರಿಗೆ 102 ಡಿಗ್ರಿಗಿಂತಲೂ ಸ್ವಲ್ಪ ಹೆಚ್ಚಾದ ಜ್ವರವಿತ್ತೆಂದು ತಿಳಿಯುತ್ತದೆ

ಮೆಕ್ಸಿಕೋ ಪ್ರಜಾಪ್ರಭುತ್ವದ ರಾಯಭಾರಿಯು ಪಾರಿಸ್ ಪಟ್ಟಣದಲ್ಲಿ ವಾಸಮಾಡುವ ಬಂಗಲೆಯೊಳಗೆ 60 ಸಾವಿರ ರೂಪಾಯಿನ ಆಭರಣಗಳೂ ಹಣಕಾಸೂ ಕಳುವಾಗಿ ಕೆಲವು ತಿಂಗಳಾಗಿತ್ತು ಪೋಲೀಸಿನವರು ಆ ರಾಯಭಾರಿಯ ಒಬ್ಬ ಸೇವಕನನ್ನೂ ಅವನ ಇಬ್ಬರು ಜೊತೆಗಾರರನ್ನೂ ಅನುಮಾನದ ಮೇಲೆ ಲಂಡನ್ ಪಟ್ಟಣದಲ್ಲಿ ಹಿಡಿದು ಸ್ವಲ್ಪ ವಿಚಾರಣೆಮಾಡಿ ಬಿಟ್ಟುಬಿಟ್ಟರು ಆಗ ಅವರ ಬಳಿ ಆಭರಣಗಳಾಗಲಿ ಹಣವಾಗಲಿ ಇರಲಿಲ್ಲ ಈಚೆಗೆ ಬೇರೆ ಸ್ಥಳಗಳಲ್ಲಿ ಕೆಲವು ಆಭರಣಗಳು ಸಿಕ್ಕಿದವು ಆಗ ಪ್ಯಾರಿಸ್ ಪಟ್ಟಣದ ಪೋಲೀಸಿನವರು ಆ ರಾಯಭಾರಿಯ ಸೇವಕನ ಪೆಟ್ಟಿಗೆಗಳನ್ನು ಪರೀಕ್ಷೆಮಾಡಬೇಕೆಂದು ಗೊತ್ತುಮಾಡಿ, ಕೈಸಿಕೆಲ್ಲನ್ನು ತೂಮತುಂಡಾಗಿ ಬಿಚ್ಚಿ ನೋಡಿದಾಗ ಒಂದು ಕೊಳವೆಯೊಳಗೆ 1,500 ರೂಪಾಯಿನ ಬ್ಯಾಂಕ್ ನೋಟುಗಳು ಸಿಕ್ಕಿದವು ಅದರ ಮೇಲೆ ಈ ಭಾರಿ ಕಳವು ಪತ್ತೆ ಆಯಿತು

ಆಫ್ರಿಕಾ ಖಂಡದ ಉತ್ತರ ಭಾಗದಲ್ಲಿರುವ ಟ್ರಿಪೊಲಿ ದೇಶವನ್ನು ಇಟಲಿಯವರು ಟರ್ಕಿಯವರಿಂದ ಗೆದ್ದುಕೊಂಡಿರುವರಷ್ಟೆ ಸ್ವದೇಶಿಗಳಾದ ಅರಬ್ಬಿಯವರಿಗೂ ಅಲ್ಲಿ ರಾಜ್ಯಾಧಿಕಾರಮಾಡುತ್ತಿರುವ ಇಟಲಿಯವರಿಗೂ ಇನ್ನೂ ಸರಿಹೋಗಿಲ್ಲ ಅರಬ್ಬಿಯವರು ಇಟಲಿಯವರ ಮೇಲೆ ಕದನಗಳನ್ನು ಮಾಡುತ್ತಲೇ ಇದ್ದಾರೆ ಸೀದಿಗಾಬಾರ್ ಮತ್ತು ಸೇಲ್ಆಯಿನ್ ಎಂಬೀ ಸ್ಥಳಗಳಲ್ಲಿ ಠಾಣ್ಯ ಹಾಕಿಕೊಂಡಿದ್ದ ಅರಬ್ಬಿಯವರ ಮೇಲೆ ಇಟಲಿಯವರು ನುಗ್ಗಿ ಅರಬ್ಬಿಯವರನ್ನು ಅಲ್ಲಿಂದ ಓಡಿಸಿದರು ಅರಬ್ಬಿಯವರು ಅಲ್ಲಿಂದ ನುಗ್ಗಿಹೋಗಿ ಇಟಲಿಯವರನ್ನು ಸುತ್ತಿಕೊಂಡು ಯುದ್ಧಮಾಡಿದ್ದರಲ್ಲಿ ಹೊಸ ಸೈನ್ಯಗಳು ಸೇರಿಕೊಂಡು ಅರಬ್ಬಿಯವರು ಸೋತುಹೋದರು ಇಟಲಿಯವರಲ್ಲಿ 7 ಮಂದಿ ದುಪ್ಪೇದಾರರೂ, 72 ಮಂದಿ ಸೈನಿಕರೂ ಕೊಲ್ಲಲ್ಪಟ್ಟರು 20 ಜನ ದುಪ್ಪೇದಾರರಿಗೂ, 250 ಜನ ಸಿಪಾಯಿಗಳಿಗೂ ಗಾಯಗಳಾಗಿವೆ

ಲೆಫ್ಟಿನೆಂಟ್ ಟ್ರೆಂಚ್ ಮತ್ತು ಮಿ|| ಸ್ಟುವರ್ಟ್ ಎಂಬ ಇಂಗ್ಲಿಷ್ ಪ್ರಜೆಗಳಿಬ್ಬರು 1910 ನೇ ಡಿಸೆಂಬರ್ ತಿಂಗಳಲ್ಲಿ ಜರ್ಮನಿಗೆ ಹೋಗಿ ಅಲ್ಲಿ ಗೂಢಚಾರರ ಕೃತ್ಯವನ್ನು ನಡೆಸುತ್ತಿದ್ದರೆಂಬ ಅಪರಾಧದಲ್ಲಿ ಸರ್ಕಾರದಿಂದ ಜರ್ಮನಿಯವರು ಅವರಿಬ್ಬರನ್ನೂ ಹಿಡಿದು ಗ್ಲಾಟ್ಸ್ ಎಂಬ ಪಟ್ಟಣದ ಬಂದೀಖಾನೆಯಲ್ಲಿ ಹಾಕಿದ್ದರು ಜರ್ಮನಿಯ ಚಕ್ರವರ್ತಿಯವರು ಹದಿನಾರು ತಿಂಗಳ ಮೇಲೆ ಅವರಿಬ್ಬರಿಗೂ ಕ್ಷಮಾಪಣೆಯನ್ನು ದಯಪಾಲಿಸಿ, ಅವರನ್ನು ಜರ್ಮನಿಯ ಎಲ್ಲೆಕಟ್ಟಿನ ಆಚೆಗೆ ಬಿಟ್ಟು ಬರುವಂತೆ ಆಜ್ಞೆಮಾಡಿದರು ಈ ಹದಿನಾರು ತಿಂಗಳಲ್ಲಿ ಒಂದೇ ಬಂದೀಖಾನೆಯಲ್ಲಿದ್ದರೂ ಅವರಿಬ್ಬರೂ ಒಬ್ಬರಕೊಬ್ಬರು ಮಾತನಾಡಿದಲ್ಲ ಜೈಲಿನೊಳಗೆ ತಮ್ಮಿಬ್ಬರನ್ನೂ ಬಹಳ ಚೆನ್ನಾಗಿ ನೋಡಿಕೊಳ್ಳುತ್ತಿದ್ದರೆಂದು ಅವರು ಹೇಳುತ್ತಾರೆ ಈಚೆಗೆ ಕೋಪನ್‌ಹೇಗನ್ ಎಂಬ ಕೋಟೆಯೊಳಗೆ ಇಡಲ್ಪಟ್ಟಿದ್ದ ಬಿಷಪ್ ಬ್ರಾಂಡನ್ ಎಂಬಾತನಿಗೂ ಕ್ಷಮಾಪಣೆ ದೊರಕಿ, ಆತನೂ ಕಳೆದ ವಾರ ವಾಪಸು ಇಂಗ್ಲಾಂಡಿಗೆ ಪ್ರಯಾಣ ಮಾಡಿದನು

ಆಸಾ ಖಂಡದ ಪ್ರದೇಶಗಳಲ್ಲಿ ಯಾರಾದರೂ ಲಂಡನ್ ಪಟ್ಟಣಕ್ಕೆ ಹೋಗಿ ನಿರ್ಗತಿಕರಾದರೆ ಅಂಥವರ ಜೀವನವನ್ನು ನಡೆಸುವುದಕ್ಕೆ ಆ ಮಹಾ ಪಟ್ಟಣದಲ್ಲಿ ಒಂದು ನಿಲಯವನ್ನು ಕಲ್ಪಿಸಿ ಇರಿಸಿದಾರೆ ಆ ನಿಲಯದ ಮೇಲ್ವಿಚಾರಣಾ ಕಮಿಟಿಯ ಮೀಟಿಂಗು ಎರಡು ವಾರಗಳ ಕೆಳಗೆ ಜರುಗಿತು ಸರ್ ಜೆ ಡಿ ಲ್ಯಾಟೂಚ್‌ರವರು ಅಗ್ರಾಸನವನ್ನು ವಹಿಸಿ ಮೆಂಬರುಗಳನ್ನು ಕುರಿತು ಹೇಳಿದ ಅಭಿಪ್ರಾಯಗಳೇನೆಂದರೆ—ಏಷ್ಯಾ ಖಂಡದ ಇತರ ಭಾಗಗಳಿಂದ ಬಂದು ಈ ನಿಲಯಕ್ಕೆ ಪಾಪಿಲರಾಗಿಕೊಂಡವರ ಪೈಕಿ ಹಿಂದುಸ್ಥಾನದ ಜನರೇ ಹೆಚ್ಚಾಗಿದಾರೆ ಹಿಂದುಸ್ಥಾನದವರು ಆ ಸ್ಥಿತಿಯಲ್ಲಿ ತಮ್ಮ ಜನ್ಮಭೂಮಿಯನ್ನು ಬಿಟ್ಟು ಬಾರದಂತೆ ಅವರನ್ನು ತಡೆಯುವುದು ಅಪೇಕ್ಷಣೀಯವಾದದ್ದು ಸಣ್ಣ ವಯಸ್ಸಿನವರು ಅನೇಕರು ಈ ದೇಶದಲ್ಲಿ ತಮಗೇನೋ ಮಹತ್ತರವಾದ ಪ್ರಯೋಜನವಾಗುವುದೆಂದು ಊಹಿಸಿ ಬರುತ್ತಾರೆ ಕಡೆಗೆ ಅವರ ಆಶೆಯು ನಿರಾಶೆಯಾಗಿ ಬಹಳ ಕಷ್ಟನಷ್ಟಗಳಿಗೆ ಗುರಿಯಾಗುತ್ತಿರುವುದು ವ್ಯಸನಕರವಾಗಿರುತ್ತದೆ ಆ ನಿಲಯದ 1912ನೇ ವರುಷದ ರಿಪೋರ್ಟಿನಿಂದ ಒಟ್ಟು 1,013 ಮಂದಿ ಏಷ್ಯಾ ಜನರು ಅಲ್ಲಿ ನೆಲಸಿದರು ಆ ಪೈಕಿ ಹಿಂದುಸ್ಥಾನದವರ 617 ಜನರು, ಚೀನಾದವರು 171, ಅರೇಬಿಯದವರು 125, ಸಿಲೋನ್ (ಲಂಕಾ) ದ್ವೀಪದವರು 95, ಮಲಯ ಪರ್ಯಾಯ ದ್ವೀಪದವರು 57, ಸಿಯಾಮ್ ನವರು 11 ಮಂದಿ ಎಂದು ತಿಳಿದು ಬರುತ್ತದೆ

ಅತ್ಯುತ್ತಮವಾದ ಸೀಲಿಕಪ್ಪು ಶಾಯಿಪುಡಿ

ವಿ ಪಿ ಮೂಲಕ 400 ಪೊಟ್ಟಣಗಳ ಬೆಲೆ ರೂ 1-8-0 1,000ಕ್ಕೆ ರೂ 3 ಒಂದು ಪೊಟ್ಟಣದಲ್ಲಿ 2 ಔನ್ಸು ಶಾಯಿ ಆಗುತ್ತದೆ ಅಂಗಡಿಯವರು ತರಿಸಿ ಮಾರಿದರೆ ಒಳ್ಳೇ ಲಾಭವುಂಟು [97 2]

ವಿಳಾಸ—“ ವಿಕಟಪ್ರತಾಪ ” ಪ್ರೆಸ್, ಕುಪ್ಪಂ ಪೋಸ್ಟ್.

ಹಾಸಿಗೆಯ ತಿಗಣೆಯನ್ನು ನಾಶಮಾಡುತ್ತ

ಇದು ಬಹಳ ಅಗತ್ಯವಾದದ್ದು ಸುಲಭವಾದ ಪ್ರಯೋಗ 18 ಗಂಟೆ ಒಳಗೆ ತಿಗಣೆಯ ಕಾಟ ತೊಲಗಿಹೋಗುತ್ತೆ ಉಪಯೋಗಿಸುವ ವಿಧಾನ ಸಹಿತ ಬಾಟ್ಲಿಗೆ ಕ್ರಯ ಒಂದೇ ರೂಪಾಯಿ ಅಂಚೆ ವೆಚ್ಚ ಬೇರೆ ಎಸ್—ಎಸ್ ಹಾಮಿದ್ ಕಂಪನಿ, 71 ಪೈಕ್ರಾಫ್ಟ್ಸ್ ರೋಡ್, ಮದರಾಸ್ [102]

1914ನೇ ಪೋಸ್ಟ್ ಕೈ ಡೈರಿ 5 ಆಣೆ, ನೋಟ್ಸು ಯರ್ ಆಲ್ ವೆಂಕಟಸುಬ್ಬ ಶಾಸ್ತ್ರಿರರು 6 ಆಣೆ ಮೈಸೂರು ಚರಿತ್ರೆ ಸುಲಭ ಪಾಠಗಳು 10 ಭೂಗೋಳಶಾಸ್ತ್ರದ 1 3ನೇ ಪುಸ್ತಕ 1 ಆಣೆ ಆರೋಗ್ಯ ಪ್ರಶ್ನೋತ್ತರ 1 ಆಣೆ ಪತ್ರರತ್ನಾಕರ 8 ಆಣೆ, ಸಂಸ್ಕೃತ ಪ್ರವೇಶಿಕೆ 1 ಆಣೆ [61 10]

ವಿಳಾಸ—ಹೆಚ್ ವೆಂಕಟರಾಮಯ್ಯ, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

ಎಂ ಎಸ್ ಬಿ. ಯವರ ಸಿದ್ಧೌಷಧಗಳು.

ಜೀರಿಗೆ ಲೇಹ್ಯವು—ಇದರ ಸೇವನೆಯಿಂದ ವಾಂತಿ, ಭ್ರಾಂತಿ, ಮೂರ್ಛೆ, ಬಳಲಿಕೆ, ಮಂದಾಗ್ನಿ, ಅರೋಚಕ ಮುಂತಾದ ಪಿತ್ತರೋಗಗಳು ಪರಿಹಾರವಾಗುವವು ಕ್ರಯ ಡಬ್ಬಿಗೆ ರೂ ೧

ಧಾತುಪುಷ್ಟಿ ಲೇಹ್ಯವು—ಪ್ರತಿಯೊಬ್ಬರಿಗೂ ಸೇವನಾರ್ಹವಾದುದು ದೇಹದಲ್ಲಿ ದುರ್ಬಲವೊಂದುತ್ತಿರುವ ಎಲ್ಲಾ ಧಾತುಗಳೂ ಪುಷ್ಟಿಗೊಳ್ಳುವುವು ಕ್ರಯ ಡಬ್ಬಿಗೆ ರೂ ೧ [101 1]

ಬಾಲಾಂತೀ ಲೇಹ್ಯವು—ಸ್ತ್ರೀಯರು ಪ್ರಸೂತಿ ಸಮಯದಲ್ಲಿ ಇದನ್ನು ಸೇವಿಸುವುದರಿಂದ ಸೂತ್ರರೋಗಗಳಿಗಡಗೊಡದೆ, ಛೇದಿ, ಜ್ವರ, ಸನ್ನಿ, ಕ್ಷಯ ಮುಂತಾದ ಪ್ರಬಲರೋಗಗಳೂ ಪರಿಹಾರವಾಗುವುವು ಕ್ರಯ ಡಬ್ಬಿಗೆ ರೂ ೧

“ ಸರ್ವಜನೋಪಕಾರಿಣಿ ” ಔಷಧಾಲಯ, ಮೈಸೂರು

ಗೃಹಕೃತ್ಯದ ನೋಟೀಸು

ಯಡತೊರೆ ತಾ ಚುಂಚನಕಟ್ಟೆ ಹೋಬಳಿ ಸಹವಾಸ್ನ ಹಳಿಯೂರು ಗ್ರಾಮದಲ್ಲಿದ್ದ ರಿಚರ್ಡ್ ಚನ್ನನ ಬಳಿ ವೆಂಕಟರಾಮಯ್ಯನವರಿಗೆ ನಾನು ದತ್ತಪತ್ರನೋಂದಾಯಿಸಿ 21 ನೇ ವರ ಅಕ್ಟೋಬರ್ 1910 11 3 ಇಸಿ ಸಿ ಎಸ್ 2ನೇ ನಂ ಮೊಕದ್ದಮೆಯಲ್ಲಿ ದತ್ತ ದಾಖಲೆ ನನ್ನ ದತ್ತದಯ ಬಾಬತು ಡಿಟೋ ಹೋಬಳಿ ಸವರ್ಣದ ಪ ಗ್ರಾಮದಲ್ಲಿ 1ನೇ ಸಜ್ಜೆ ವೃತ್ತಿಯೂ, ಇದರಲ್ಲಿ ಮಾಜಿ 101 ನೇ ನಂ ಪೈಕಿ 23 ಗುಂಟೆಯುಳ್ಳ ಒಂದು ಗದ್ದೆಯೂ ಅದೇ ಹೋ ಸರ್ಕಾರಿ ಹಾದ್ದದ ಬಂಕದಲ್ಲಿ ಸರ್ವೆ 103 ಮತ್ತು 104 ನೇ ನಂ 1 ಎಕರೆಯ ಒಂದು ತಾಕು ಗದ್ದೆಯೂ ಹಳಿಯೂರು ಗ್ರಾಮದಲ್ಲಿ ಒಂದು ಹೆಂಚಿನ ಮನೆ ಒಂದು ಹಿತ್ತಲು ನಿವೇಶನವು, ಡಿಟೋ ಕೇರಿ ಹೊ ಬಳಿ ಕಾಟ್ನಾಳು ಪಂಪದಲ್ಲಿ ಸರ್ವೆ 211 2ನೇ ಪೈಕಿ 6 ಎಕರೆ 11 ಗುಂಟೆ ಉಳ್ಳ ರಾಮಣ್ಣನ ಕೆರೆಯ ಕಾಕೆಂಬ ಒಂದು ಗದ್ದೆ, ಇದಕ್ಕೆ ಸೇರಿದ ಮುಜಮಾನು ಸಹ ಸರ್ವೆ 237, 5 ನೇ ಉಳ್ಳ 35 ಗುಂಟೆ ಜಮೀನು ಸೇರಿ 7 ಎಕರೆ 11 ಗುಂಟೆ ಉಳ್ಳ ಕಾಟ್ನಾಳುಕೆರೆ ತಾಕೆಂಬ ಗದ್ದೆಯೂ ಸರ್ವೆ 201 ನೇ ನಂ 1 ಎಕರೆ 39 ಗುಂಟೆ ಉಳ್ಳ ಬೈಪಾರದ ಗದ್ದೆ ಎಂಬ ತಾಕು 1 ಒಟ್ಟು 7 ತಾಕು ತರೀ ಜಮೀನು ಸಹಾ ಇರುತ್ತವೆ ಯಾವ ಹಕ್ಕೂ ಇಲ್ಲದ ನನ್ನ ದತ್ತ ತಾಯಿಯಾದ ಸುಬ್ಬಮ್ಮನೆಂಬುವರು ಎನಗೆ ಮೋಸದ ನಗೆ ಒಳಪಟ್ಟು ಮುಂದಕ್ಕೆ ಬಂದಿರುವ ಹಕ್ಕುದಾರನಾದ ನನಗೆ ಮೋಸಪಡಿಸಬೇಕೆಂದು ಮೇಲ್ಕಂಡ ಸ್ವತ್ತುಗಳನ್ನು ಪರಾಧೀನಪಡಿಸಬೇಕೆಂಬ ಉದ್ಯುಕ್ತರಾದರುತ್ತದಂತೆ ತಿಳಿಯುವುದು ಯಾರೊಬ್ಬರೂ ಸದರಿ ಸ್ವತ್ತುಗಳನ್ನು ನನ್ನ ಸಮ್ಮತಿಯಿಲ್ಲದೆ ಯಾವ ರೀತಿಯಲ್ಲಿ ಅವರೂ ಆಕೆಯ ಮೂಲಕ ಪಡೆದುಕೊಂಡಾಗ್ಯೂ ಅದು ಸಿಂಧುವಾಗದೆ ಹಣವನ್ನು ಕಳೆದುಕೊಳ್ಳುವುದು ಮಾತ್ರವಲ್ಲ ನನ್ನ ಎಲ್ಲಾ ನಷ್ಟಗಳಿಗೂ ಗುರಿಯಾಗಬೇಕಾಗಿರುತ್ತೆಂದೂ, ಮತ್ತು ಡಿಟೋ ವ್ಯಾಜ್ಯ ವಿಕರ ಕಂಡಾಯವನ್ನು ನನಗೇ ಜಮಾಮಾಡಿ ಕ್ರಮವಾಗಿ ಪಡೆಯಬೇಕಲ್ಲದೆ ನನ್ನ ದತ್ತ ತಾಯಿಗೆ ಪಾವತಿಮಾಡಕೂಡದೆಂದೂ ಈ ಮೂಲಕ ಎಚ್ಚರಿಸಿರುತ್ತೇನೆ

[105 1] ಮೈಸೂರು 28-5 1913 ವೈ ವಿ ನಾರಾಯಣ, ಇನಾಂದಾರ್

ಮಕ್ಕಳ ಹಿತಕಾರಿ

ಎಂದು

SCOTT'S EMULSION

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷದಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದಾರೆ ಯಾಕಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಶಾಯಿಲ್ಯ ಮಕ್ಕಳನ್ನು ಆರೋಗ್ಯಮಾಡುವುದು ಬಿಕ್ಕರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

“ ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ ” ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಉಚಿತವಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ Messrs OAKES & Company, Mount Road, Madras.

[4-10] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H Gulliford, Proprietor and Manager, Wesleyan Mission Press Mysore 29/5/1918

[redacted]

[redacted]

[redacted]

FLASHNO-

2

[redacted]

[redacted]

[redacted]

Vol-II

5-6-1913

28-5-1914

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೩೭. ಮೈಸೂರು—ಸನ್ ೧೯೧೩ ನೇ ಇಸವಿ ಜೂನ್ ತಾರೀಖು ೫ ನೇ ಗುರುವಾರ. ಸಂಚಿಕೆ ೧

ಗೃಹಕೃತ್ಯದ ನೋಟೀಸ್.

ಇದರಿಂದ ಹುಣಸೂರು ವಾಸಿ ಮಡಿಕೆರೆ ಸಯ್ಯದ್ ಪತ್ತಾ ಸಾಬರ ಕುಮಾರ ಸಯ್ಯದ್ ಗೌಸ್ ಸಾಬಿಯು ಸಮಸ್ತ ಜನಗಳಿಗೂ ಶೃತಪಡಿಸುವುದು — ನಮ್ಮ ತಂದೆಯವರಿಗೆ ಈಗ ಸುಮಾರು 80 85 ವರುಷ ವಯಸ್ಸು ಇವರಿಗೆ ಹಾಲಿ ಮೂರು ಮಂದಿ ಭಾರ್ಯೆಯರು ಇರುತ್ತಾರಾದರೂ ನಮ್ಮನ್ನೆಲ್ಲಾ ಹೊಟ್ಟೆಗೂ, ಬಟ್ಟೆಗೂ ಮಾರ್ಗವಿಲ್ಲದ ಪರಿತಾಪಕರವಾದ ಸ್ಥಿತಿಯಲ್ಲಿ ಬಿಟ್ಟು ನಮ್ಮ ತಂದೆ ಬುದ್ಧಿಹೀನರಾಗಿ ಕುಕ್ಕೆ ಹೆಣೆಯುವ ಕೊರಮರ ಕಾಳಿ ಎಂಬವಳ ಮಗಳು ತಿಮ್ಮಿ ಎಂಬವಳನ್ನು ಇಟ್ಟುಕೊಂಡು ಬದುಕುತ್ತಿದಾರೆ ಅವಳನ್ನು ಕಲ್ಕುಣಿಕೆ ಗ್ರಾಮದಲ್ಲಿಟ್ಟು ಅವಳ ದುರ್ಬೋಧನೆಗೆ ಕಿವಿಗೊಟ್ಟು, ನ್ಯಾಯವಾಗಿ ಹಕ್ಕುಳ್ಳವರಾದ ಕುಮಾರನಿಗೂ, ಭಾರ್ಯೆಯರಿಗೂ ಮೋಸಪಡಿಸಿ ಆಸ್ತಿಪಾಸ್ತಿಯನ್ನೆಲ್ಲಾ ಪೋಲುಮಾಡುತ್ತಿರುವರು 350 ರೂಪಾಯಿ ಬಾಳುವ ಕಾಂ ಮಾವಿನ ಫಸಲನ್ನು 150 ರೂಪಾಯಿಗೆ ಗುತ್ತಿಗೆಗೆ ಕೊಟ್ಟಿರುವಲು, 80 ಪಲ್ಲಾ ಭತ್ತವನ್ನು ನಮ್ಮಗಳ ಜೀವನಕ್ಕೆ ಸಿಕ್ಕದಂತೆ ಹೊರಗಡೆ ವಿಕ್ರಯಿಸಿ ವಿಶಿಷ್ಟ ಹಣ ಕಾಸನ್ನೂ ಮೋಸಮಾಡಿಸಿರುವ ತಿಮ್ಮಿಯು ಸ್ವಾಧೀನಪಡಿಸಿರುತ್ತಾರೆ ಇವರಿಗೆ ಬುದ್ಧಿ ಚಂಚಲವಾಗಿರುವುದರಿಂದ ಇನ್ನೂ ಇರುವ ಹೊಲ, ಗದ್ದೆ, ತೋಟ, ಮನೆ ಇತ್ಯಾದಿ ಆಸ್ತಿಗಳನ್ನು ಇವರನ್ನು ಮೋಸಪಡಿಸಿ ಯಾರೂ ಕ್ರಯ ಭೋಗ್ಯ ಆಧಾರಗಳಿಂದ ಸ್ವಾಧೀನಮಾಡಿಕೊಳ್ಳಕೂಡದು ಇಲ್ಲವೇ ನಮ್ಮ ತಂದೆಯವರಾದರೂ ನ್ಯಾಯವಾದ ಹಕ್ಕುಳ್ಳ ನಮ್ಮಗಳ ಅನುಮತಿ ಇಲ್ಲದೆ ಮತ್ತಾರಿಗೂ ಮಾಡುವುದು ಧರ್ಮವಿರುದ್ಧವಾಗಿರುವುದರಿಂದ ಹಾಗೆ ಯಾರಾದರೂ ಪಡೆದುಕೊಂಡರೆ ಅದು ಊರ್ಜಿತವಾಗಲಾರದು ಮುಂದೆ ಆಗುವ ನಮ್ಮಗಳ ನಷ್ಟಗಳಿಗೆಲ್ಲಾ ಅವರೇ ಗುರಿಯಾಗಬೇಕಾಗುವದೆಂದು ಈ ಮೂಲಕ ಸರ್ವರಿಗೂ ತಿಳಿಸಿ ಎಚ್ಚರಿಕೆ ಕೊಟ್ಟಿರುತ್ತೇನೆ

ಮಡಿಕೆರೆ ಸಯ್ಯದ್ ಪತ್ತಾ ಸಾಬರ ಕುಮಾರ ಸಯ್ಯದ್ ಗೌಸ್ ಸಾಬಿ, ಹುಣಸೂರು

ವಿಶೇಷ ಸೂಚನೆ!

ಹತ್ತಿಯ ತುಪ್ಪ, ಹಿಂಡಿ ಮತ್ತು ಹೊಟ್ಟು

ಈ ತಿಂಗಳ ಕಡೆಯ ವರೆಗೆ ಮಾತ್ರ ಕಡಮೆ ಖರೀದಿ!

ತುಪ್ಪ, ಮಣ್ಣು 1 ಕ್ಕೆ ರೂ 1 , ಹಿಂಡಿ ಮೂಟೆಗೆ ರೂ ೪, ಹೊಟ್ಟು ಮೂಟೆಗೆ ರೂ 1½. ಬೇಕಾದವರು ತ್ವರೆಮಾಡಿ

ಅನುಭವಸ್ಥರ ಅಭಿಪ್ರಾಯ —(1) ಎಮ್ ಕೃಷ್ಣಮೂರ್ತಿ, ಫಾರೆಸ್ಟ್ ರೇಂಜರ್, ಪಾಲಕೋಡ, ವಿಶಾಖಪಟ್ಟಣದ ಡಿ॥ ತಾವು ಕಳುಹಿಸಿದ ಹತ್ತಿಯ ಹೊಟ್ಟಿನಿಂದ ನನ್ನ ಕುದುರೆಗೆ ಬಹಳ ಪ್ರಯೋಜನವಾಯ್ತು ಹುರುಳಿಯ ಜತೆಯಲ್ಲೂ ಹಿಂಡಿಯ ಜತೆಯಲ್ಲೂ ಅದನ್ನು ಮಿಶ್ರಮಾಡಿ ಕೊಟ್ಟದ್ದರಿಂದ ಅಜೀರ್ಣವಾಗುತ್ತಿದ್ದದ್ದು ನಿಂತುಹೋಯ್ತು" (2) ಎಮ್ ವಿ ನರಸಿಂಹಯ್ಯ, ಬಿ ಎ, ಫಾರೆಸ್ಟ್ ರೇಂಜರು, ಹಸ್, ಕಡೂರು ಡಿ॥ "ಮೊದಲು ಮೊದಲು ಎತ್ತುಗಳು ಸರಾಗವಾಗಿ ತಿನ್ನದಿದ್ದರೂ ಈಗ ಹೊಟ್ಟು ಹಿಂಡಿಗಳನ್ನು ಬಹು ಪ್ರೀತಿಯಿಂದ ಸೇವಿಸುತ್ತವೆ ವ್ಯಯವೂ ಕಡಮೆಯಾಗಿ ಲಘುವಾಗಿಯೂ ಮೊದಲಿಗಿಂತ ಬಲವಾಗಿಯೂ ಆಯಾಸ ದಣಿಯದೆ ಹೆಚ್ಚು ಕೆಲಸ ಮಾಡುತ್ತವೆ ಇತರ ರೋಗಗಳಿಲ್ಲ ಮತ್ತೊಂದು ಮೂಟೆ ಹಿಂಡಿಯನ್ನೂ ಅಷ್ಟೇ ಹೊಟ್ಟನ್ನೂ ಕಳುಹಿಸಬೇಕು" (3) "ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್‌ನಿಂದ ನಾನು ಹತ್ತಿಯ ತುಪ್ಪವನ್ನು ಬಹಳ ಮಟ್ಟಿಗೆ ಕೊಂಡುಕೊಂಡಿದೇನೆ ಎಲ್ಲಾ ಬಗೆಯ ಅಡಿಗೆಗೂ ಅದು ಅತ್ಯುತ್ತಮವಾದದ್ದೆಂದು ತೋರುತ್ತೆ" ಮ ಟ್ರಾಟ್ರಿಕ್, ಏಳನೆಯ ಮುಸ್ಲಾರ್ ಬೀದಿ.... ನಮ್ಮ ವಿಳಾಸ —

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

[110-1] 159, ಕಿಲಾರಿ ರೋಡ್, ಬೆಂಗಳೂರು ಸಿಟಿ

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸು—ಅಜ್ಮೀರ್. ಬ್ರಾಂಚ್ ಆಫೀಸು—ಬೆಂಗಳೂರು ಸಿಟಿ

ಮೇಲ್ಕಂಡ ವಿಮಾ ಸಂಘದ ಆದಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಅಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಮರವಸೆಯ ಠೇವಣಾತಿ ಮೊಬಲಗು ಸದಾ ಇಂಡಿಯಾ ಸರಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೆದಾರರು ಪಾವತಿಮಾಡುವ ಮೊಬಲಗಿಗೆ ಆಗಲೀ, ಅಥವಾ ವಿಮಾ ಸಂಘದ ಸ್ಥಿರತೆಯ ವಿಚಾರದಲ್ಲಿ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಜನಗಳ ಅನುಕೂಲಕ್ಕಾಗಿ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹ ಮಾಡಲ್ಪಟ್ಟು ವಿಮೆದಾರರಿಗೆ ಬಹುಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು ವಿಮೆಯಮಾಡುವದು ಪ್ರತಿಯೊಬ್ಬರಿಗೂ ಅತ್ಯವಶ್ಯಕವಾದದ್ದು ಇವತ್ತಿನ ಅನುಕೂಲವೂ ಆರೋಗ್ಯವೂ ನಾಳೆ ಇರಲಾರದು ಆದ್ದರಿಂದ ಜಾಗ್ರತೆಯಲ್ಲೇ ವಿಮೆ ಮಾಡುವುದು ಉತ್ತಮ ವೃದ್ಧಾಪ್ಯದಲ್ಲಿ ನಮಗೆ ಒಂದು ಆಸ್ತಿಯಾಗಿರುವುದು ದುರದೃಷ್ಟದಿಂದ ಒಂದು ವೇಳೆ ಮೃತಪಟ್ಟರೆ ನಮ್ಮನ್ನು ನಂಬಿದವರನ್ನು ಕೈಬಿಟ್ಟಂತೆ ಆಗುವುದಿಲ್ಲ ಮೇಲ್ಕಂಡ ಕಾರಣಗಳಿಂದ ತಡಮಾಡದೆ ಎಷ್ಟರ ಮಟ್ಟಿನ ಮೊತ್ತಕ್ಕೆ ವಿಮೆ ಮಾಡಿಕೊಳ್ಳಲು ಅನುಕೂಲವೋ ಅಷ್ಟರ ಮಟ್ಟಿಗೆ ಸ್ವಲ್ಪವಾದರೂ ತಡ ಮಾಡದೆ ವಿಮೆ ಪತ್ರಗಳನ್ನು ಹೊಂದುವುದು ಸರ್ವೋತ್ತಮವಾದದ್ದು [109 1]

ಏಜೆಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

ನಮ್ಮ ವಿಳಾಸ —— ಎಸ್ ಹೆಬ್ಬಾರ್ ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ಪರೀಕ್ಷಿಸಿ ನೋಡದ ಅಗ್ಗದ ಕೇಶ ಎಣ್ಣೆಗಳು ಈಗ ಎಲ್ಲೆಲ್ಲೂ ಬಿಕರಿಯಾಗುತ್ತಿವೆ ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಅಗ್ಗವಾಗಿ ಸಿಕ್ಕುವ ಕೇಶ ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತುಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ" ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣ ಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಹೊಳೆಯುವಂತೆ, ಸಬಿರವಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ಹರಿದು ಉದುರಿ ಹೋಗದೆ ದಟ್ಟವಾಗಿ ಬೆಳೆಯುವದು ಕೂದಲಿಗೆ ಹೊಳಪುಕೊಡುತ್ತೆ ತಲೆ ಬುರುಡೆಯನ್ನು ಶುದ್ಧವಾಡುತ್ತೆ ..ನ ಹೊಟ್ಟನ್ನು ಅಡಗಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳ ... ಕಾರಣ ಕೂದಲಿಗೆ ಹಚ್ಚಿಕೊಳ್ಳ ... ಆನಂದವನೂ ಹರ್ಷ ... ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ

ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು

3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0 7-0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ

ಮೈಸೂರು ಎಗ್ಜಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ॥ ಡಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ" ವಿರುಧುಪಟ್ಟಿ ಕೆ ವಿ ಎಸ್ ಹೈಸ್ಕೂಲ್ ಹೆಡ್ ಮಾಸ್ಟರ್ ಮಿ॥ ಎಂ ಸುಬ್ರಹ್ಮಣ್ಯಪಿಳ್ಳೆಯವರು ಬರೆಯುವದು—"ನಿಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ಪರೀಕ್ಷೆಮಾಡಿದೇನೆ ಅದು ಕೂದಲನ್ನು ಹುಟ್ಟಿಸಿ ಅಂದವಾಗಿಯೂ, ಕೋಮಲವಾಗಿಯೂ, ಸೊಂಪಾಗಿಯೂ ಬೆಳಸುವದೆಂದು ಖಂಡಿತವಾಗಿ ಹೇಳಬಲ್ಲೆನು ದಯವಿಟ್ಟು ಇನ್ನು ಮೂರು ಬಾಟ್ಲಿ ಎಣ್ಣೆ ಕಳಿಸಿಕೊಡಿ" ಪನೆಪಾ ಡಿಸ್ಟ್ರಿಕ್ಟ್ ಕಂಟ್ರೋಲರ್ ಆಫೀಸ್ ... ಗೋಪಾಲರಾವ್ ... ಬರೆಯುವದು—"ದಯವಿಟ್ಟು ನಮ್ಮ ಕಾಮಿನಿಯಾ ಎಣ್ಣೆ ಆರು ಬಾಟ್ಲಿ ಕಳಿಸಿಕೊಡಿ ಒಂದು ತಿಂಗಳ ಹಿಂದೆ ನೀವು ಕಳಿಸಿದ ಬಾಟ್ಲಿಗಳು ಮುಗಿದುಹೋಯಿತು ಇದೇ ಉತ್ತಮೋತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳಬಲ್ಲೆನು" ಆದಕಾರಣ ನೀವು ಒಂದು ಸಲ ತರಿಸಿ ಪರೀಕ್ಷೆ ಮಾಡಿ

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಸಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನಿಮ್ಮ ಸ್ಥಳದ ವ್ಯಾಪಾರಿಗಳಲ್ಲಿ ಅದು ಇಲ್ಲದಿದ್ದರೆ ಅವನ ಹೆಸರು ವಿಳಾಸದ ಸಮೇತ ನಮಗೆ ತಿಳಿಸಿ ನೀವು ಕೇಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ವಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

ಎಲ್ಲಾ ಸ್ಥಳಗಳಲ್ಲಿಯೂ ಏಜೆಂಟರು ಬೇಕು.

ಏಜೆಂಟ್, ಬಿ. ಉಲನ್ ಮಾರ್ಟ್, ಮಂಗಳೂರು

ನಮ್ಮ ವಿಳಾಸ — [8 21]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸೀದ್, ಬೊಂಬಾಯಿ.

ಸೊಗಸಾದ ಕನ್ನಡ ಕಾದಂಬರಿಗಳು.

ದೈವಾನುಗ್ರಹ 1½ ಆಣೆ, ವಿಲಕ್ಷಣದೈವಘಟನೆ 4 ಆಣೆ, ವಿರಕ್ತಳಾದ ಸೌದಾಮಿನಿ 6½ ಆಣೆ, ಬೃಂದಾವನ 2 ಆಣೆ, ಕುಮಾರ ಭೀಮಸಿಂಹ 1 ಆಣೆ, ಸುಮನೋರಮಾ 2 ಆಣೆ, ವಿಶ್ವನಾಥ 1 ಆಣೆ, ಕಾದಂಬರೀ ಸಂಗ್ರಹದ ವಾರ್ಷಿಕ ಚಂದಾ 1-4-0

[101 2] ನಮ್ಮ ವಿಳಾಸ—ಸಿ. ವಿ ಶಾಸ್ತ್ರಿ, ಚಾಮರಾಜನಗರ.

ಜರ್ಮನ್ ಜೇಬು ದೀಪ.

ಬೆಲೆ ರೂ. 1 15 0

ಈ ನಕ್ಷೆಯಲ್ಲಿ ಕಾಣಿಸಿರುವ ಜರ್ಮನ್ ಜೇಬು ದೀಪಗಳು ಜರ್ಮನ್ ದೇಶದ ಶಾಸ್ತ್ರಜ್ಞರಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟು ಈಗತಾನೆ ನಮ್ಮ ಒಂದೊ ದೇಶಕ್ಕೆ ಕಳುಹಿಸಿರುತ್ತಾರೆ ಇದು



ವಿದ್ಯುಚ್ಛಕ್ತಿಯ ದೆಸೆಯಿಂದ ಪ್ರಕಾಶಮಾನವಾಗಿ ಉರಿಯುತ್ತೆ ಇದನ್ನು ಹಚ್ಚುವದಕ್ಕೆ ಬೆಂಕಿ ಕಡ್ಡಿ ಅವಶ್ಯಕವಿಲ್ಲ ದೀಪದ ಮಧ್ಯದಲ್ಲಿರುವ ಗುಂಡಿಯನ್ನು ಬೆರಳಿನಿಂದ ಒತ್ತಿದರೆ ದೀಪವು ತನ್ನಷ್ಟಕ್ಕೆ ತಾನೇ ಮುಚ್ಚಳವನ್ನು ತೆರೆದುಕೊಂಡು ನೋಡುವವರಿಗೆ ಆಶ್ಚರ್ಯವಾಗುವ ಹಾಗೆ ಹತ್ತಿ ಉರಿಯುತ್ತೆ [108-1]

ಈ ದೀಪ ಒಂದನ್ನು ತರಿಸಿಕೊಂಡರೆ ಯಾವಾಗ್ಲೂ ದೀಪದ ಕಡ್ಡಿ ಅವಶ್ಯಕವೇ ಇರುವುದಿಲ್ಲ ಜನರಿಗೆ ಇದು ಬಹಳ ಉಪಯೋಗ ಇದು ಇತರ ದೀಪಗಳನ್ನು ಹಚ್ಚುವದಕ್ಕೂ ಪ್ರಯಾಣಮಾಡುವಾಗ ಜೇಬಿನಲ್ಲಿ ಇಟ್ಟುಕೊಂಡು ಬೇಕಾದಾಗ ಬೇಕಾದವುಗಳನ್ನು ಹಚ್ಚುವದಕ್ಕೂ ಬಹಳ ಉಪಯೋಗವಾದದ್ದು ಇದನ್ನು ಸುಲಭವಾಗಿ ಉಪಯೋಗಿಸಬಹುದು ಇದರಿಂದ ಯಾವ ಕೆಡಕೂ ಉಂಟಾಗುವದಿಲ್ಲ

ವಿಳಾಸ—ಎ ಎನ್ ಪದ್ಮನಾಭರಾವ್,

101, ಜೈನಾಬಜಾರ್ ರೋಡ್, ಮದರಾಸು.

ಸೆಲ್ಫ್ ಕ್ಲೋಸಿಂಗ್ ಬ್ರೇಸ್ಲೆಟ್ ವಾಚ್

ಬೆಲೆ ರೂಪಾಯಿ 3-15-0.

ಈ ಗಡಿಯಾರ ಬಹಳ ಸೊಗಸಾದದ್ದು ಇವಕ್ಕೆ ಭಂಗಾರದ ಗಿಲೀಟು ಕೊಟ್ಟಿವೆ ಇದು ಇತರ ಗಡಿಯಾರದ ಗಿಲೀಟು ಹಾಗೆ ಕಪ್ಪಾಗಿ ಹೋಗುವದಿಲ್ಲ ಇವನ್ನು ಹೆಂಗಸರೇ ಆಗಲಿ, ಗಂಡಸರೇ ಆಗಲಿ ಆಭರಣದೋಪಾದಿಯಲ್ಲಿ ಧರಿಸಿಕೊಳ್ಳಬಹುದು ಇಷ್ಟು ಸುಲಭ ಕ್ರಯಕ್ಕೆ ಮಾರುವದು ನನ್ನ ಹೆಸರು ಪ್ರಸಿದ್ಧವಾಗುವದಕ್ಕೋಸ್ಕರ [108 1]

ವಿಳಾಸ— ಎ ಎನ್ ಪದ್ಮನಾಭರಾವ್,

101, ಜೈನಾಬಜಾರ್ ರೋಡು, ಮದರಾಸು

ಮರೆಯಬ್ಯಾಡಿರಿ ಮರೆಯಬ್ಯಾಡಿರಿ

ಹಬಾರ್ಡ್ಸ್ ಸಾಬೂನು

ಏಜಂಟುಗಳು ಬೇಕಾಗಿದೆ! ಒಳ್ಳೇ ಕಮಿಷನ್ ದೊರೆಯುವದು

ಅಪಾಯವಿಲ್ಲದ ರೋಮಸಂಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು ಉರಿ, ನವೆ ಮುಂತಾದ ಬಾಧೆಗಳಿಲ್ಲವು ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು ಮರೆಯಬ್ಯಾಡಿರಿ

3 ಸಬ್ಬುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ 1½ ಆಣೆ

2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ. 1-10-0

ಅಂಚೇ ಹಾಸಲು ¼ ಆಣೆ

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ [107-1]

ವಿಳಾಸ—ವಿ ಪಿ ಎಸ್ ಪಾಣಿ ಕಂಪೆನಿ,

3, ಇರುಳಪ್ಪನ್ ಬೀದಿ, ಮದರಾಸು.

ನಮ್ಮ ಏಜಂಟರಿಗೆ ನೋಟೀಸ್

ಕಳೆದ ಮೇ ತಿಂಗಳ ಒನ್ನೆರಿಗೆ "ವೃತ್ತಾಂತ ಪತ್ರಿಕೆ"ಯ ಸಂವತ್ಸರವು ಪೂರೈಸುತ್ತಾನ ನಮ್ಮ ಏಜಂಟರುಗಳು ವರುಷದ ಲೆಕ್ಕಗಳನ್ನೆಲ್ಲಾ ಚುಕ್ತಾಮಾಡಿ, ಉಳಿದ ಪಟ್ಟಿಗಳನ್ನು ಕಳುಹಿಸಬೇಕು ಈ ಜೂನ್ ಪ್ರಾರಂಭದಿಂದ ಅಡ್ವಾನ್ಸು ಚಂದಾ ಪಾವತಿ ಆದ ಹೊರತು ಏಜಂಟರು ಯಾರಿಗೂ ಪತ್ರಿಕೆಗಳನ್ನು ಕೊಡಕೂಡದು ಹೊಸದಾಗಿ ಚಂದಾ ಕೊಡತಕ್ಕವರು ಒಂದು ವರುಷದ ಚಂದಾ ೧ ರೂಪಾಯನ್ನು ಅಡ್ವಾನ್ಸಾಗಿಯೇ ನಮ್ಮ ಏಜಂಟರಿಗೆ ಪಾವತಿಮಾಡಬೇಕೆಂದೂ, ಅವರಿಂದ ಅ ಬಗ್ಗೆ ಕ್ರಮವಾದ ಪ್ರಿಂಟಾದ ರಶೀತಿಯನ್ನು ಪಡೆದುಕೊಳ್ಳಬೇಕೆಂದೂ ಈ ಮೂಲಕ ಪ್ರಕಟಿಸುತ್ತೇವೆ

ಮ್ಯಾನೇಜರ್, ವೃತ್ತಾಂತ ಪತ್ರಿಕೆ,' ಮೈಸೂರು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

101 2

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ಕೀಲು, ಆರತವು, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಸ್ನಾಯುರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೊ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೊ ಈ ಯುಕ್ತಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು—(1) ಎಸ್ ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸೈವಾಕಂ, ವೇಪೇರಿ, ಮದರಾಸ್, (2) ಜೆ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಲೇಡೀಸ್ ವಾಚ್.

ಇದರ ಅನುಕೂಲ ಮತ್ತೆ ಯಾವದಕ್ಕೂ ಇಲ್ಲ ನಿಮ್ಮ



ಇಚ್ಛೆ ಬಂದಂತೆ ಕೈಯಲ್ಲಿಯೂ ಕಟ್ಟಿಕೊಳ್ಳಬಹುದು ಜೇಬಿನಲ್ಲಿಯೂ ಹಾಕಿಕೊಳ್ಳಬಹುದು ಸರಿಯಾದ ಕಾಲವನ್ನು ತೋರಿಸತಕ್ಕದ್ದು. ತನ್ನಲ್ಲಿ ಬೀಗವುಳ್ಳದ್ದು ಶುದ್ಧವಾದ ನಿಕಲ್ ಮುಚ್ಚಳವುಳ್ಳದ್ದು ಸುಂದರವಾದದ್ದು ಖಾತ್ರಿಯಾದವೂ ಇದರ ಕ್ರಯ ಸುಂದರವಾದ ವಾಚ್ ಸರಪಣಿ ಮತ್ತು ಕೈಯಲ್ಲಿ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಮೇತ

ರೂ 3-8-0 ಮಾತ್ರ [77-7]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ಬಿ ಆರ್ ವೆಂಕಟರಮಣ ಅಂಡ್ ಕಂಪನಿ,

ನಂ 7 ಕೋನ ವೆಂಕಟಾಚಲಯ್ಯರ್ ಬೀದಿ, ಮದರಾಸು

ನಾಣ್ಯವಾದ ವಾಚ್ ನಾಣ್ಯವಾದ ವಾಚ್

ರೈಲ್ವೆ ಗಾರ್ಡ್ ಲೀವರ್ ಪಾಕೆಟ್ ವಾಚ್

ಇದರ ಕ್ರಯ—ನಾಣ್ಯವಾದ ವಾಚ್ ಸರಪಣಿ ಸಮೇತ ರೂ 2 9 0 ಮಾತ್ರ

6 ವರುಷಗಳ ಗ್ಯಾರಂಟಿ

ಇದು ಮಕ್ಕಳ ಆಟದ ಬೊಂಬೆಗಳಂತೆ ಕೆಲವು ದಿವಸಗಳು ಆಟವಾಡಿ ಕೆಟ್ಟುಹೋಗತಕ್ಕಂಥಾ ಅಲ್ಪ ಗಡಿಯಾರವಲ್ಲ ಸಾಧಾರಣವಾದ ವಾಚ್‌ಗಳಿಗಿಂತಾ

ಬಹು ಶ್ರೇಷ್ಠವಾದದ್ದು ರೈಲ್ವೆ ಗಾರ್ಡ್, ರೈಲ್ವೆ ಇಂಜಿನ್ ಡ್ರೈವರ್ ಮುಂತಾದ ಅನೇಕ ರೈಲ್ವೆ ಉದ್ಯೋಗಸ್ಥರು ಇದನ್ನು ಇಟ್ಟುಕೊಂಡು ಉಪಯೋಗಿಸುತ್ತಿದ್ದಾರೆ ಆದಕಾರಣವೇ ಇದಕ್ಕೆ ರೈಲ್ವೆ ಗಾರ್ಡ್ ವಾಚ್ ಎಂಬ ಬಿರುದು ಒದಗಿರುತ್ತದೆ ಇದನ್ನು ಇಟ್ಟುಕೊಂಡು ರೈಲ್ವೆ ಗಾರ್ಡ್‌ಗಳವರು ರೈಲ್ ನಡಿಸುತ್ತಾರೆ ಈ ವಾಚ್ ವಿಚಾರವಾಗಿ ಹೆಚ್ಚಾಗಿ ಬರೆಯಲು ನಮ್ಮಿಂದ ಸಾಧ್ಯವಿಲ್ಲ ಸಾವಿರಗಟ್ಟಲೆ ಜನಗಳು ಲೆಕ್ಕವಿಲ್ಲದ ಯೋಗ್ಯತಾ ಪತ್ರಗಳನ್ನು ಹೊಂದಿರುತ್ತೇವೆ ಕೆಲವು ವಾಚ್‌ಗಳು ಮಾತ್ರ ಉಳಿದಿರುತ್ತೆ ಬೇಕಾದವರು ಶೀಘ್ರವಾಗಿ ಬರೆದು ತರಿಸಿಕೊಳ್ಳಿ ತರಿಸಿಕೊಂಡದ್ದು ಸಮ್ಮತವಿಲ್ಲದ ಪಕ್ಷದಲ್ಲಿ ಖಂಡಿತ ಹಣ ವಾಪಸು ಮಾಡಲ್ಪಡುತ್ತೆ ನಮ್ಮ ವಿಳಾಸ — [19 ?]

ಸುಪೀರಿಯರ್ ವಾಚ್ ಕಂಪನಿ, ಪೋಸ್ಟ್ ಬಾಕ್ಸ್ 10?, ಮದರಾಸು

CHAMBERLAIN'S PAIN BALM

ಚೇಂಬರ್ಲೀನ್ ಯವರು ಮಾಡಿದ ನೋವುಹರ ಔಷಧವು.



1 23

ಪಕ್ಕೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಕೀಲುಗಳಲ್ಲಿ ಹುಟ್ಟುವ ನೋವು, ಕೀಲುನೋವು, ... ಕಡಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕಾಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಕೀಲುಗಳಲ್ಲಿ ಇಂಗಿಯುವುದು, ನಿಶ್ಯಕ್ತಿ ಕೊಡದೆ ಇರುವುದು, ನಿದ್ರೆ ಹತ್ತದೆ ಇರುವುದು—ಇದೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುತ್ತವೋ ಆಗ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೀನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹ ನಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಮಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಲು ವಿಷವೂ ಅಲ್ಲ

ಇದು ಎಲ್ಲೆಲ್ಲೂ ವಿಕ್ರಯವಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ಬೇಕಾಗಿದೆ

ಏಜಂಟರುಗಳು ನಮ್ಮ ಔಷಧಿಗಳನ್ನು ವಿಕ್ರಯಿಸಲು ಪ್ರತಿ ತಿಂಗಳಿಗೂ ಸಂಬಳವು 20 ರೂಪಾಯಿಗಳಿಂದ 100 ರ ವರೆಗೆ ಕೊಡಲ್ಪಡುತ್ತೆ ಅಪೇಕ್ಷಿಸುವವರು 2 ಅರ್ಧಾಣೆ ಸ್ಟಾಂಪಿನೊಡನೆ ಕೆಳಗಿನ ವಿಳಾಸಕ್ಕೆ ಬರೆಯಿರಿ [9? ?]

ದಿ ಸ್ರಿ ಮೆಡಿಕಲ್ ಕೌನ್ಸಿಲ್, 17 ಪೂಲಿ ಬಜಾರ್ ರೋಡು, ಮದ್ರಾಸು

ಕುಂತಳಾನಂದ ತೈಲವು

147 17

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಒಂದು ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪನಿ,

ವೇಪೇರಿ, ಮದರಾಸ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 23

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಯಿಸುತ್ತಿರುವ ಟೋಪಿಗಳ ದಾರವೆಲ್ಲಾ ಬೇಗ ಕೆಡುವದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೆಯದಾದ, ಚನ್ನಾಗಿ ಹಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೨ ಆ ೧ ರೂ ೬ ಆ ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧—೮ ರೂ ೧—೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ಪಾರಿದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ ... ರೂ ೬ ೬

ಮುಸುಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ

ಕಾಗದಗಳ ಮೇಲೆ, ಪೂರ್ತಿ ವಿಳಾಸದೊಡನೆ ಆರ್ಡರ್ ಮಾಡುವದು, ತಲೆಯ ಸುತ್ತಳತೆ ಪಟ್ಟಿ, ಇಲ್ಲವೆ ಉಪಯೋಗಿಸುವ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವರು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಈಗ ಹಾಸಿಗೆಯ ತಿಗಣೆಯನ್ನು ನಾಶಮಾಡುತ್ತೆ

ಇದು ಬಹಳ ಅಗತ್ಯವಾದ್ದು ಸುಲಭವಾದ ಪ್ರಯೋಗ 18 ಗಂಟೆಯೊಳಗೆ ತಿಗಣೆಯ ಕಾಟ ತೊಲೆದುಹೋಗುತ್ತೆ ಉಪಯೋಗಿಸುವ ವಿಧಾನ ಸಹಿತ ಬಾಟ್ಲಿಗೆ ಕ್ರಯ ೨ ರೂಪಾಯಿ ಅಂಚೆ ವೆಚ್ಚ ಬೇರೆ ವಿಳಾಸ—ಎಸ್ ಹಮೀದ್ ಕಂಪನಿ 71 ಸ್ಟ್ರಿಂಗ್ಫೋರ್ಡ್ ರೋಡ್, ಮದರಾಸ್ [9? ?]

1911 ನೇ ವರ್ಷದ ಲೋವರ್ ಸೆಕಂಡರಿ ಕನ್ನಡ

ಟೆಕ್ಸ್ಟ್ ನೋಟ್ಸು ಶಿಕ್ಷಕರಿಗೆ ಸಿದ್ಧವಾಗಿದೆ—ಕ್ರಯ 6 ಆಣೆ

ಡಿಸ್ಕೌಂಟು 10 ಕ್ಕೆ 1, 50 ಕ್ಕೆ 7, 100 ಕ್ಕೆ 20

ನಮ್ಮ ನೋಟ್ಸು ಬೇಕಾಗಿದ್ದರೆ ನೋಟಿನ ಮೇಲೆ ನಮ್ಮ ಹೆಸರನ್ನು ನೋಡಿ ತೆಗೆದುಕೊಳ್ಳಿ [43 0]

ಎಸ್ ಆರ್ ವೆಂಕಟಸುಬ್ಬಾಚಾರ್ಯರ್,

ಸುಬೋಧ ಗ್ರಂಥಾಲಯ, ಮೈಸೂರು

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ 1 ಪಿನಲ್ ಕೋಡು, 2 ದಾಡ್ಲಿ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್ 4 ಆಯುಧಗಳ ರೆಗ್ಯುಲೇಷನ್, 5 ವಿಷ ವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್ 8 ಬಾಲ್ಯವಿವಾಹಗಳ ರೆಗ್ಯುಲೇಷನ್, 9 ಸ್ಟಾಂಪ್ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲ್ಪಟ್ಟಿವೆ

ಪ್ರತಿ ಸೆಕ್ಷನ್ ಸಕ್ಷನ್‌ಗೂ – ವಿಚಾರಣೆಯಾಗತಕ್ಕ ಕೋರ್ಟು ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ ಯಾ ಕೂಡದ ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟಬೇಕೇ? ಜಾಮೀನ್ ತೆಗೆದುಕೊಳ್ಳಬಹುದೆ ಯಾ ಕೂಡದೆ? ರಾಜಿಯಾಗಬಹುದೆ? ಯಾ ಕೂಡದೆ ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 22 1 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 1 0 0 ಟಪಾಲ್ ಹಾಸಲು 1 ಆಣೆ

ವಿಳಾಸ: ಎಲ್. ವೇಮಾರೆಡ್ಡಿ,

ಕಂಟ್ರಾಕ್ಟರ್ ಮತ್ತು ಕ್ರಿಮಿನಲ್ ಪ್ಲೀಡರ್,

[103 2] ನಾಗಲಾಪುರ—ಕೋಲಾರ ಡಿಸ್ಟ್ರಿಕ್ಟು

ಸಮಾನವೇ ಮುನ್ನತ್ತು

ಕೇಶಕುಸುಮಾಕರ ತೈಲವು.

ಕಾಟಯಿಲ್ಲದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸಮಾಡುವದರಲ್ಲಿಯೂ, ಒಟ್ಟು ತಲೆಯಲ್ಲಿ ಕೇಶವನು ಬೆಳೆಸುವದರಲ್ಲಿಯೂ ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ, ಮಿದುಳಿಗೆ ತಂಪನ್ನು ಟಮಾಡುವದರಲ್ಲಿಯೂ, ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುಡ್ಡಿ ತೈಲ ಕ್ರಯ 10 ಆಣೆ ಮೂರು ಬುಡ್ಡಿಗಳ ತೈಲ ಕ್ರಯ ರೂ 1 13 ಆ ಆರು ಬುಡ್ಡಿಗಳ ... ಕ್ರಯ ರೂ 1 ಆ ಡಜನ್ ಬುಡ್ಡಿಗಳ ಕ್ರಯ ರೂ 1

ವಿ ಪಿ ಅಂಚೆ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋಷಧಾಲಯ, 177 ಸಿನಾ ಬಜಾರ್ ರೋಡ್, ಮದ್ರಾಸು [84 0]



Mysore Bank Office,
Edinburgh House, Shankarpur,
BANGALORE CITY.

(Sd) K. P. PUTTANNA CHETTY,
Chairman.

[99-2]

Notes on 'Round the World in Eight Days', the Lower Secondary English Text, by S. V. Pichamuttu, B.A., English & History Assistant, W. H. S., Bangalore, can be had from the Manager, Mission Book Depot, Bangalore City. Price Four annas.

ಎಗ್ಝಾಮಿನರ್ ಮಾಸ ಪುಸ್ತಕವೂ, ಟೆಕ್ಸ್ಟ್ ನೋಟ್ಸ್ ಬಹುಮಾನವೂ ಚಂದಾ ರೂ. 1-4-0 , ಕನ್ನಡ ಟೆಕ್ಸ್ಟ್ ನೋಟ್ಸ್ 4 ಆಣೆ. ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದ ಈ ಮಾಸಪತ್ರಿಕೆಗೆ ಜೂನ್ ಆಖೈರಿನೊಳಗೆ ಚಂದಾದಾರರಾಗ ತಕ್ಕವರಿಗೆ ಮೇಲ್ಕಂಡ ನೋಟ್ಸ್ ಬಹುಮಾನ ಕ್ಯಾಟಲಾಗ್ ತರಿಸಿ ನೋಡಿ

ಸಿ ಪುಟ್ಟಯ್ಯ, ಮ್ಯಾನೇಜರ್, ಎಗ್ಝಾಮಿನರ್ ಆಫೀಸ್, ಚಿಕ್ಕಬಳ್ಳಾಪುರ.

ಗರ್ಭಿಣೀಶಿಶುಸಂರಕ್ಷಣಾ.

MIDWIFERY—ಕನ್ನಡ ಮಿಡ್‌ವೈಫರಿ ಸ್ತ್ರೀಯರಿಗೂ, ಮಿಡ್‌ವೈಫ್ ಪರೀಕ್ಷೆಗೆ ಓದುವವರಿಗೂ ಪ್ರಯೋಜನವಾದದ್ದು, ಕ್ರಯ ೧೨ ಆಣೆ [10-19]

ವಿಳಾಸ:—"ದಿ ಜನರಲ್ ಏಜೆನ್ಸಿ" ಮೈಸೂರು.

ವೃತ್ತಾಂತ ಪತ್ರಿಕೆ.

——o——

ಶಕೆ ೧೯೧೩ ನೇ ಇಸವಿ ಜೂನ್ ತಾ ೫ ನೇ ಗುರುವಾರ

ಮೈಸೂರು ಸೀಮೆಯಲ್ಲಿ ಪ್ರೈಮರಿ ವಿದ್ಯಾಭ್ಯಾಸವು.

ಮೈಸೂರು ಗವರ್ನ್‌ಮೆಂಟಿನವರು ಪ್ರಥಮ ವಿದ್ಯಾಭ್ಯಾಸವನ್ನು ಹರಡುವುದಕ್ಕೆ ಎರಡು ಲಕ್ಷ ರೂಪಾಯಿ ವಿನಿಯೋಗಿಸಬೇಕೆಂದು ನಿಶ್ಚಯಮಾಡಿಕೊಂಡಿದಾರೆ. ಈ ಪೈಕಿ ಒಂದು ಲಕ್ಷ ರೂಪಾಯಿ ಮುಟ್ಟಿಸಿ ಸ್ಕೂಲ್ ಮನೆಗಳನ್ನು ಕಟ್ಟಿಸುವರು, ಇನ್ನೊಂದು ಲಕ್ಷ ರೂಪಾಯಿನಲ್ಲಿ ಹೊಸ ಸ್ಕೂಲುಗಳನ್ನು ಏರ್ಪಾಡುಮಾಡುವುದಕ್ಕೂ ಇರುವ ಸ್ಕೂಲುಗಳಿಗೆ ಅವಶ್ಯವಾದ ಸಾಮಗ್ರಿಗಳನ್ನು ಒದಗಿಸುವುದಕ್ಕೂ ದ್ರವ್ಯವನ್ನು ಒದಗಿಸುತ್ತಾರೆ. ಈ ಭಾಗದಲ್ಲಿ ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರು ಶಿಫಾರಸುಮಾಡಿರುವುದೇನೆಂದರೆ—(1) ಸಾಲೀಯಾನಾ 21,000 ರೂಪಾಯಿ ಖರ್ಚಾಗುವ 111 ಹೊಸ ಸ್ಕೂಲುಗಳನ್ನು ಪ್ರಾರಂಭಿಸುವುದು, (2) ಸಾಲ್ ಒಂದಕ್ಕೆ 10,500 ರೂಪಾಯಿ ಖರ್ಚಿಟ್ಟು ಈಗಿರುವ ಸ್ಕೂಲುಗಳ ಉಪಾಧ್ಯಾಯರ ಸಂಖ್ಯೆಯನ್ನು ಹೆಚ್ಚು ಮಾಡುವುದು, (3) ದಾವಣಗೆರೆಯಲ್ಲೂ ನಂಜನಗೂಡಿನಲ್ಲೂ ಒಂದೊಂದು ಅಪ್ಪರ್ ಸೆಕೆಂಡರಿ ಸ್ಕೂಲನ್ನು ಏರ್ಪಾಡುಮಾಡುವುದು, ಇವೆರಡಕ್ಕೂ ಸಾಲೀಯಾನಾ 2,700 ರೂಪಾಯಿ ಆಗುವುದು, (4) ಉಪಾಧ್ಯಾಯರುಗಳ ಸಂಬಳದ ದರಗಳನ್ನು ಕ್ರಮಪಡಿಸಿ ವರುಷಕ್ಕೆ ಒಟ್ಟು 16,300 ರೂಪಾಯಿ ಖರ್ಚಾಗುವಂತೆ ಮಾಡುವುದು, (5) ನಾರ್ಮಲ್ ಟ್ರೈನಿಂಗ್ ಎಂಬ ಉಪಾಧ್ಯಾಯ ಪರೀಕ್ಷಣಕ್ರಮಗಳನ್ನು ಹೆಚ್ಚು ಮಾಡುವುದಕ್ಕೆ ಸಾಲೀಯಾನಾ 14,000 ರೂಪಾಯಿ ಖರ್ಚು ಮಾಡುವುದು; (6) ವರುಷಕ್ಕೆ 1,000 ರೂಪಾಯಿ ಖರ್ಚಿಟ್ಟು ಪಂಚಮರಿಗಾಗಿ ಒಂದು ಬೋರ್ಡಿಂಗ್ ಸ್ಕೂಲನ್ನು ಪ್ರಾರಂಭಿಸುವುದು ಗವರ್ನ್‌ಮೆಂಟಿನವರು ಪರ್ಯಾಲೋಚನೆಯಿಂದ ಉಪಾಧ್ಯಾಯರುಗಳ ಸಂಬಳ ವಿನಾ ಉಳಿದ 1, 2, 4, 5, 6 ನೇ ಸಂಖ್ಯೆಗಳನ್ನು ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ.

ಗವರ್ನ್‌ಮೆಂಟಿನವರು ಇಷ್ಟುಮಟ್ಟಿಗೆ ಸ್ಯಾಂಕ್ಷನ್ ಮಾಡಿರುವುದನ್ನು ನೋಡಿ ನಾವು ಆನಂದಪಡುತ್ತೇವೆ ಆದರೆ ಸರ್ಕಾರದವರು ಸ್ಕೂಲುಗಳಿಗೆ ಹೋಗುವಂಥಾ ಮಕ್ಕಳ ಸಂಖ್ಯೆಯು ಹ್ಯಾಗಾದರೂ ಹೆಚ್ಚುವುದು ಮುಖ್ಯವೆಂದು ಊಹಿಸುತ್ತಿದಾರೆಂದೂ ಶಂಕೆಪಡುತ್ತೇವೆ. ಈ ಗವರ್ನ್‌ಮೆಂಟ್ ಆರ್ಡರನ್ನು ಓದಿ ನೋಡುವಲ್ಲಿ ಸರ್ಕಾರದವರ ಕಾರ್ಯೋದ್ದೇಶವು ಇಂಥಾದ್ದೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ ಆದದ್ದರಿಂದ ಗವರ್ನ್‌ಮೆಂಟಿನವರಿಗೆ ಅವರ ಅಭಿಮತವೇನೆಂಬುವುದು ಗೊತ್ತಿದೆಯೋ ಇಲ್ಲವೋ ಎಂದು ನಮಗೆ ಸಂಶಯವುಂಟಾಗಿದೆ

ಈ ಏರ್ಪಾಟಿನ ವಿಷಯದಲ್ಲಿ ನಮಗೆ ಕಂಡುಬಂದಿರುವ ಆಕ್ಷೇಪಣೆಗಳೇನೆಂದರೆ -(1) ಗವರ್ನ್‌ಮೆಂಟಿನವರು ಹೊಸ ಸ್ಕೂಲುಗಳನ್ನು ಸ್ಥಾಪಿಸಬೇಕೆಂದು ಕುತೂಹಲಪಡುತ್ತಾರೆ ಇದು ಅವಶ್ಯವೂ ಸ್ತೋತ್ರಾರ್ಹವೂ ಆದದ್ದೆಂದು ನಾವು ಒಪ್ಪಿಕೊಳ್ಳುವೆವು. ಆದರೆ ಹೊಸ ಸ್ಕೂಲುಗಳಿಗೆ ಉಪಾಧ್ಯಾಯರನ್ನು ಹೇಗೆ ಒದಗಿಸುವರೋ ನಮಗೆ ತಿಳಿಯಲಿಲ್ಲ. ಈಗ ಇರುವಂಥಾ ಸ್ಕೂಲುಗಳಿಗೇನೇ ಬೇಕಾಗಿರುವಷ್ಟು ಉಪಾಧ್ಯಾಯರುಗಳನ್ನು ಟ್ರೈನಿಂಗ್ ಸ್ಕೂಲುಗಳು ಒದಗಿಸಲಾರದೆ ಇರುವವು; ಮತ್ತು ಹೆಚ್ಚು ಸಂಖ್ಯೆಯ ಉಪಾಧ್ಯಾಯರನ್ನು ತರಪೇತುಮಾಡುವುದಕ್ಕೆ ಸರ್ಕಾರದವರು ಈಗ ಹೊಸ ಏರ್ಪಾಡೇನೂ ಮಾಡಿರುವುದಿಲ್ಲ. ಹೀಗಿರುವಲ್ಲಿ ಹೊಸ ಸ್ಕೂಲುಗಳಿಗೆ ಉಪಾಧ್ಯಾಯರನ್ನು ಎಲ್ಲಿಂದ ತಾನೇ ಒದಗಿಸುವರು! ಇನ್ಸ್‌ಪೆಕ್ಟರುಗಳು ಬೀದಿಗಳಲ್ಲಿ ಸಿಕ್ಕುವಂಥವರುಗಳನ್ನೋ ಅಥವಾ ಜವಾನುಗಳಲ್ಲಿ ಕೆಲಸಮಾಡತಕ್ಕವರುಗಳನ್ನೋ ಹಿಡಿದು ಲಾಯಖಾದ ಉಪಾಧ್ಯಾಯರುಗಳೆಂದು ಹೊಸ ಸ್ಕೂಲುಗಳಿಗೆ ನೇಮಕಮಾಡಬೇಕಾಗಿದೆಯೋ? ಸಂದರ್ಭವು ಈ ರೀತಿ ಇರುವಾಗ್ಗೆ ಗವರ್ನ್‌ಮೆಂಟಿನವರಿಗೆ ಇದರ ಮರ್ಮ ಗೊತ್ತಾಗದೆ ಆತುರಪಟ್ಟು ಕಣ್ಣುಮುಚ್ಚಿಕೊಂಡು ನುಗ್ಗಿಹೋಗುತ್ತಿರುವಂತೆ ಕಾಣುತ್ತದೆ

(2) ನಮ್ಮ ಗವರ್ನ್‌ಮೆಂಟಿನವರು ಉಪಾಧ್ಯಾಯಗಿರಿಯನ್ನು ಯೋಗ್ಯವಾದದ್ದನ್ನಾಗಿ ಮಾಡದೆ ಹೋದ ಪಕ್ಷದಲ್ಲಿ ಸ್ಕೂಲುಗಳಲ್ಲಿ ಪಾಠಪ್ರವಚನಗಳು ತೃಪ್ತಿಕರವಾಗಿಯೂ ಚಟುವಟಿಕೆಯಿಂದಲೂ ನಡೆಯುವುದಿಲ್ಲ. ಈಗಲೇ ವಿದ್ಯಾಭ್ಯಾಸದ ಇಲಾಖೆಯಲ್ಲಿ ತುಂಬಾ ಗೊಣಗಾಟವಿದೆ: ಅನೇಕ ಮಂದಿ ಉಪಾಧ್ಯಾಯರಲ್ಲಿ ತಲಬೂ, ಬಡತಿಗಳೂ ತೃಪ್ತಿಕರವಾಗಿಲ್ಲವೆಂದು ಅಸಮಾಧಾನವುಂಟಾಗಿದೆ, ಇದರ ನಿವಾರಣೆಗೋಸ್ಕರ ಇನ್ಸ್‌ಪೆಕ್ಟರ್ ಜನರಲ್‌ರವರು ಉಪಾಧ್ಯಾಯರುಗಳ ಸಂಬಳಗಳ ಬಡ್ತಿ ವಿಷಯದಲ್ಲಿ ಶಿಫಾರಸು ಮಾಡಿದ್ದರೂ ಗವರ್ನ್‌ಮೆಂಟಿನವರು ಅದನ್ನು ಅಂಗೀಕರಿಸಿ ಸ್ಯಾಂಕ್ಷನ್ ಮಾಡದೆಹೋಗಿರುತ್ತಾರೆ. ಈಗ ಇರತಕ್ಕ ಸ್ಕೂಲುಗಳಲ್ಲಿ ಕೆಲಸಗಳು ತೃಪ್ತಿಕರವಾಗಿ ನಡೆಯುವಂತೆ ಮಾಡದೆಹೋಗುವ ಪಕ್ಷಕ್ಕೆ ಹೊಸ ಸ್ಕೂಲುಗಳನ್ನು ಪ್ರಾರಂಭಿಸುವುದರಲ್ಲಿ ಪ್ರಯೋಜನವೇನಾದೀತು? ಬಹುಕಾಲದಿಂದಲೂ ನಮ್ಮ ಸೀಮೆಯಲ್ಲಿ ಸರಿಯಾದ ಉಪಾಧ್ಯಾಯರುಗಳಿಲ್ಲದೆ ವಿದ್ಯಾಭ್ಯಾಸದ ಕ್ರಮವೇ ಮಲಿನದೆಸೆಯಲ್ಲಿ ಇದ್ದುಕೊಂಡು ಬಂದಿತ್ತು. ಈಗ ನಮ್ಮ ಗವರ್ನ್‌ಮೆಂಟಿನವರು ಈ ಮಲಿನಾವಸ್ಥೆಯನ್ನು ವೃದ್ಧಿಮಾಡಿ ಅಂಧಕಾರ ಕವಿಯುವಂತೆ ಮಾಡುವವರಾಗಿದಾರಲ್ಲಾ ? ಈ ಸೀಮೆಯ ವಿವೇಕಶಾಲಿಗಳೂ ಬುದ್ಧಿಕುಶಲರೂ ಎಲ್ಲಾ ಏನಾದರು ?

(3) ಸಂಸ್ಥಾನಾಮಲೆ ಈಗ ಗ್ರ್ಯಾಂಟುಪಡೆಯುತ್ತಿರುವ ಸ್ಕೂಲುಗಳಿಗೆ ಪ್ರೋತ್ಸಾಹವಾಗುವಂತೆ ಸರ್ಕಾರದವರು ಯಾವುದೊಂದು ಅವಕಾಶವನ್ನೂ ಮಾಡಿರುವುದಿಲ್ಲ. ಗವರ್ನ್‌ಮೆಂಟಿನವರು ತಮಗೆ ಸೂಕ್ತತೋರಿದಾಗ ಮಾತ್ರ ಖಾಸಗಿ ಸ್ಕೂಲುಗಳನ್ನು ಸ್ಥಾಪಿಸಿಕೊಂಡು ಸಂಸ್ಥಾನಾಮಲೆ ವಿದ್ಯೆಯನ್ನು ಹರಡುತ್ತಿರುವಂಥಾ ದೊಡ್ಡಮನುಷ್ಯರನ್ನೂ ಸಂಘಗಳನ್ನೂ ಆದರಪೂರ್ವಕವಾಗಿಯೂ ಕೃತಜ್ಞತೆಯಿಂದಲೂ ಹೊಗಳುತ್ತಾರೆ, ಆದರೆ ಕಾರ್ಯತಃ ನೋಡುವಲ್ಲಿ ಗವರ್ನ್‌ಮೆಂಟಿನವರಿಗೆ ಈ ಖಾಸಗಿ ಸ್ಕೂಲುಗಳೇ ಬೇಡವೆಂದು ಕಾಣುತ್ತದೆ. ಈಚಿಗೆ ಗವರ್ನ್‌ಮೆಂಟಿನವರು ಪ್ರೈಮರಿ ತರಗತಿಗಳಲ್ಲಿ ಸ್ಕೂಲ್ ಫೀಯನ್ನು ವಜಾಮಾಡಿಬಿಟ್ಟರು, ಇದರಿಂದ ಖಾಸಗಿ ಸ್ಕೂಲುಗಳ ಉತ್ಪತ್ತಿಯು ಕಡಮೆಯಾದರೂ ಅಂಥಾ ನಷ್ಟಪರಿಹಾರಕ್ಕಾಗಿ ಯಾವುದೊಂದು ಸಹಾಯವನ್ನೂ ಮಾಡದೆಹೋದರು ಈಗ ಅಂಥಾ ಸ್ಕೂಲುಗಳ ಸ್ಥಿತಿಯನ್ನು ಅಭಿವೃದ್ಧಿಮಾಡುವುದಕ್ಕೆ ಒಳ್ಳೇ ಸಂದರ್ಭ ಒದಗಿದ್ದಾಗ್ಯೂ ಸರ್ಕಾರದವರು ಆ ಸ್ಕೂಲುಗಳನ್ನು ಸಂಪೂರ್ಣವಾಗಿ ಒತ್ತರಿಸಿಬಿಟ್ಟು ಅವುಗಳಿಗೆ ಒಂದು ಕಾಸನ್ನಾದರೂ ಕೊಡದೆ ಹೋಗಿರುತ್ತಾರೆ ಈ ರೀತಿಯಾದ ಕಾರ್ಯಕ್ರಮವನ್ನು ನೋಡಿದರೆ ಗವರ್ನ್‌ಮೆಂಟಿನವರ ಉದ್ದೇಶವು ಬರಿಯ ಪಟಾಟೋಪವಾದದ್ದಂಬೇ ಕಾಣುವುದಿಲ್ಲವೇ? ಹಾಗಿಲ್ಲವಾದರೆ ಈ ಖಾಸಗಿ ಸ್ಕೂಲುಗಳ ಸ್ಥಿತಿಯು ಹೇಗೆತಾನೇ ಚೆನ್ನಾಗಬಹುದು?

(4) ಪಂಚಮರ ಬಾಲಕರಿಗಾಗಿ ಒಂದು ಬೋರ್ಡಿಂಗ್ ಸ್ಕೂಲನ್ನು ಇಟ್ಟು ನಡಿಸುವುದು ವಿವೇಕಪೂರ್ವಕವಾದದ್ದೋ ಎಂದು ನಮಗೆ ಸಂಶಯವುಂಟಾಗಿದೆ ಇನ್ಸ್‌ಪೆಕ್ಟರ್ ಜನರಲ್‌ರವರು ಬರೆದಿರುವ ಶಿಫಾರಸಿನಲ್ಲಿ ಅಂಥಾ ಸ್ಕೂಲು ಇಡುವದು ಅವಶ್ಯವೆನ್ನುವುದಕ್ಕೆ ಯೋಗ್ಯವಾದ ಕಾರಣಗಳೇನೂ ತೋರಿಸಿರುವಂತೆ ಕಂಡುಬರುವುದಿಲ್ಲ, ಮತ್ತು ಈ ಸ್ಕೂಲಿನ ಉದ್ದೇಶವೇನೆಂಬುವುದೂ ಸ್ಪಷ್ಟವಾಗಿ ವಿವರಿಸಿಲ್ಲ ಪಂಚಮರೇನೋ ಇತರರಿಗಿಂತ ಹೀನವಾದವರೇ ಹೌದು, ಆದರೆ ಅವರಿಗೇನೇ ಪ್ರತ್ಯೇಕವಾದ ಸ್ಕೂಲಿಟ್ಟು ವಿದ್ಯೆಕಲಿಸುವುದರಲ್ಲಿ ಯಥಾರ್ಥವಾಗಿ ಅವರು ಉದ್ಧಾರವಾಗಲಾರರು. ಇಂಥಾ ಏರ್ಪಾಡಿನಿಂದ ಅವರು ವಿದ್ಯೆ ಕಲಿತರೂ ಇತರರ ಕೂಡ ಬೆರೆಯಲು ತಾವು ಯೋಗ್ಯರಲ್ಲವೆಂಬ ಶಂಕೆಯು ಅವರಿಗೆ ತಪ್ಪುವ ಹಾಗಿಲ್ಲ. ಆದಕಾರಣ ಇಂಥಾ ಪ್ರತ್ಯೇಕ ಪ್ರತ್ಯೇಕವಾದ ಏರ್ಪಾಡುಗಳನ್ನು ಮಾಡೋಣದರಲ್ಲಿ ಯಾವ ಫಲವೂ ಆಗಲಾರದೆಂದು ನಮಗೆ ತೋರುತ್ತದೆ ಆಯಾ ಪಂಗಡದವರೇ ಅಂಥಾ ಏರ್ಪಾಡನ್ನು ಇಟ್ಟು ನಡಿಸಬೇಕೆಂದೂ, ಅದರ ಆವಶ್ಯಕತೆಗೆ ತಕ್ಕಂತೆ ಸರ್ಕಾರದವರು ಸಹಾಯ ಮಾಡಬೇಕೆಂದೂ ಅಭಿಪ್ರಾಯಪಡುತ್ತೇವೆ

ವಿದ್ಯಾಭಿವೃದ್ಧಿಗೋಸ್ಕರ ವಿನಿಯೋಗಿಸುವುದಕ್ಕೆ ಗವರ್ನ್‌ಮೆಂಟಿನಲ್ಲಿ ಹಣವಿದೆ ಎಂದು ಗೊತ್ತಾಯಿತು ಆದರೆ ಅದು ಖರ್ಚಾಗುವಂಥಾ ವಿಧಾನವನ್ನು ನೋಡಿದರೆ ಅದರಿಂದ ಪ್ರಜೆಗಳಿಗೆ ಪ್ರಯೋಜನವಾಗುವುದಕ್ಕೆ ಪ್ರತಿಯಾಗಿ ಬಹು ಭಾಗ ಅನಾರ್ಥಕವೇ ಆದೀತೆಂದು ಹೇಳಬಹುದಾಗಿದೆ ಮೇಲ್ಕಂಡ ಮುಕುಮನ್ನು ಬರೆದಿರುವ ಜವಾಬ್ದಾರಿಯನ್ನು ಗವರ್ನ್‌ಮೆಂಟಿನ ಯಾವ ಮೆಂಬರು ವಹಿಸಿದ್ದರೋ ನಮಗೆ ತಿಳಿಯದು. ಆದರೆ ಅದನ್ನು ಬರೆದ ಅಧಿಕಾರಿಗೆ ನಮ್ಮ ಸೀಮೆಯ ಸ್ವಜನಾನ ಕೊರತೆಗಳೇನು? ಅವುಗಳನ್ನು ಪರಿಹರಿಸುವ ರೀತಿ ಹೇಗೆ? ಎಂಬ ವಿಚಾರಗಳು ಸರಿಯಾಗಿ ಗೊತ್ತಾಗಲಿಲ್ಲವೆಂದು ಕಂಡುಬರುತ್ತದೆ

ಬಾಲ್ಕನ್ ಸಂಸ್ಥಾನಗಳೂ ಟರ್ಕಿಯೂ

ಕಡೆಗೆ ಯುದ್ಧವನ್ನು ನಿಲ್ಲಿಸಿ ಕರಾರುಮಾಡಿಕೊಳ್ಳುತ್ತೇವೆಂದು ಒಪ್ಪಿಕೊಂಡು ಒಂದು ಕಡೆ ಟರ್ಕಿಯವರೂ, ಇನ್ನೊಂದು ಕಡೆ ಗ್ರೀಸ್, ಬಲ್ಗೇರಿಯ, ಸರ್ವಿಯ, ಮಾಂಟಿನೀಗ್ರೊ ರಾಯಭಾರಿಗಳೂ ರುಜುಮಾಡಿದ್ದಾಯಿತು. ಇದರಿಂದ ಟರ್ಕಿಯವರಿಗೂ ಬಾಲ್ಕನ್ ಸಂಸ್ಥಾನಗಳಿಗೂ ಯುದ್ಧವು ಮುಕ್ತಾಯವಾಗಿರುತ್ತದೆ ಈಗಲೀಗ ಟರ್ಕಿಯವರು ಏಷ್ಯಾ ಮೈನರಿನಲ್ಲಿ ಅವಶ್ಯವಾದ ರಾಜಕೀಯ ಬದಲಾವಣೆಗಳನ್ನು ಮಾಡಿಕೊಂಡು ಸರಿಯಾದ ಗವರ್ನ್‌ಮೆಂಟನ್ನು ಸ್ಥಾಪಿಸಿಕೊಳ್ಳುವುದಕ್ಕೆ ಅವಕಾಶವಾಯಿತು

ಇಂಗ್ಲಿಷ್ ರಾಜ್ಯಭಾರದ ಮಂತ್ರಿ ಸಭೆಯ ಮೆಂಬರಾದ ಸರ್ ಎಡ್ವರ್ಡ್ ಗ್ರೇಯವರ ವಿಶೇಷವಾದ ಸಾಹಸ ಪ್ರಯತ್ನದಿಂದಲೇ ಈಗ ಮೇಲ್ಕಂಡ ಕರಾರು ಆಗಿರುತ್ತದೆ ಅವರು ಪರರಾಜ್ಯಗಳವರ ಪಕ್ಷವನ್ನು ವಹಿಸಿ ವಿಶೇಷವಾಗಿ ಸರ್ವಿಯ ಮತ್ತು ಬಲ್ಗೇರಿಯ ರಾಯಭಾರಿಗಳ ಕಡೆ ಬಹಳ ಖಂಡಿತವಾಗಿ ಮಾತನಾಡಿದರು. ಇದುವರೆಗೆ ಯೂರೋಪಿಯನ್ ರಾಜ್ಯಗಳವರೆಲ್ಲಾ ಏಕೀಭವಿಸಿ ಕಾರ್ಯಭಾಗವನ್ನು ನಡಿಸಿರುವುದು ಸಂತೋಷಪ್ರದವಾಗಿದೆ ಈ ಏಕಮತ್ಯವಿದ್ದದ್ದರಿಂದಲೇ ಈ ಯುದ್ಧವು ಇತರ ಕಡೆಗಳಿಗೆ ಹರಡದಂತೆ ತಡೆಯಾಯಿತು

ಈಗ ಈ ಒಪ್ಪಂದದಿಂದ ಬಾಲ್ಕನ್ ಸಂಸ್ಥಾನಗಳವರು ಟರ್ಕಿಯ ಮೇಲೆ ಯುದ್ಧ ಮಾಡುವುದು ನಿಂತು ಹೋಯಿತಾದರೂ, ಆ ಸಂಸ್ಥಾನಗಳಿಗೆ ಅವರವರಲ್ಲೇ ಪರಸ್ಪರ ಕಡಿದಾಟವು ಬೀಳಬಹುದೆಂದು ಕಾಣುತ್ತಿದೆ. ಇವರೆಲ್ಲಾ ಸೇರಿ ಟರ್ಕಿಯವರಿಂದ ಗೆದ್ದುಕೊಂಡಿರುವ ಸೀಮೆಯನ್ನು ಸಮಾಧಾನವಾಗಿ ತಮ್ಮ ತಮ್ಮಲ್ಲಿ ಹಂಚಿಕೊಳ್ಳುವ ಭಾಗದಲ್ಲಿ ಏಕೀಭವಿಸಿ ಹೋದರೆ ಈ ಯುದ್ಧದಿಂದ ಅವರಿಗೆ ಲಭ್ಯವಾದ ಪ್ರಯೋಜನಗಳನ್ನು ಕಳೆದುಕೊಳ್ಳಬಹುದು ಈ ಹಂಚಿಕೆಯ ವಿಚಾರವನ್ನು ವ್ಯವಸ್ಥೆಮಾಡುವುದಕ್ಕೆ ಅವರು ಪಂಚಾಯತರಿಗೆ ಒಪ್ಪಿಸಿ ಅವರಿಗೆ ತಮ್ಮ ಮನಸ್ತಾಪಗಳನ್ನು ಹೇಳಿಕೊಳ್ಳುವುದು ಒಳ್ಳೆಯದು ಯಾಕೆಂದರೆ ಅವರು ಈ ಯುದ್ಧದಲ್ಲಿ ಬಹು ಪರಾಕ್ರಮದಿಂದ ಕಾದಾಡಿ ಅನೇಕ ಪ್ರಜೆಗಳನ್ನು ಕಳೆದುಕೊಂಡು ತುಂಬಾ ನಷ್ಟಪಟ್ಟಿರುವರು ಪಂಚಾಯತರು ವಿಚಾರಣೆಯಿಂದ ಅವರವರ ಪಾಲನ್ನು ಸಮರ್ಪಕವಾದ ರೀತಿಯಲ್ಲಿ ವಿಂಗಡಿಸಿಕೊಡಬಲ್ಲರು ಈಗ ಬಂದಿರುವ ವರ್ತಮಾನದಿಂದ ಈ ಸಂಸ್ಥಾನಗಳವರಲ್ಲಿ ಪರಸ್ಪರವಾದ ಸಹನಭಾವವು ಉಂಟಾಗಿರುವಂತೆ ತಿಳಿದುಬರುತ್ತದೆ

ಕೆಲವು ಸರ್ಕಾರಿ ರಿಪೋರ್ಟುಗಳು

ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖೆ—ಕಳೆದ ಸಾಲಿನಲ್ಲಿ ಈ ಇಲಾಖೆಯು ಒಟ್ಟು 13,67,310 ರೂಪಾಯನ್ನು ಖರ್ಚುಮಾಡಿತು ಅವುಗಳಲ್ಲೆಲ್ಲಾ ಕನ್ನಂಬಾಡಿ ತಲಾವಿನ ಕಾಮಗಾರಿಯೇ ಪ್ರಧಾನವಾದದ್ದು, ಇದಕ್ಕೆ ಇಂಜನಿಯರ್ ಇಲಾಖೆಯವರು ಸುಮಾರು 9 ಲಕ್ಷ ರೂಪಾಯಿ ಖರ್ಚುಮಾಡಿದಾರೆ. ವಿದ್ಯಾಭ್ಯಾಸದ ಮತ್ತು ವೈದ್ಯದ ಇಲಾಖೆಗಳಿಗೆ ಸಂಬಂಧಪಟ್ಟ ಕಾಮಗಾರಿಗಳು ವಿಶೇಷವಾಗಿ ನಡೆದಿರುವವು ಈ ಪೈಕಿ ಮುಖ್ಯವಾದವುಗಳ್ಯಾವವೆಂದರೆ—ಬೆಂಗಳೂರಿನಲ್ಲಿ ಕಟ್ಟಿದ ಕಣ್ಣಾಸ್ಪತ್ರೆ, ಬೆಂಗಳೂರು ಸೆಂಟ್ರಲ್ ಕಾಲೇಜಿನ ಬಡಾವಣೆ, ಬೆಂಗಳೂರು ಹೈ ಸ್ಕೂಲು, ಮೈಸೂರು ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್‌ಟಿಟ್ಯೂಟ್ ಎಂಬ ಕಸಬುದಾರಿ ಸ್ಕೂಲು ಮಾರಿಕಣಿವೆ ತಲಾವಿನ ಕಾಮಗಾರಿಯು ಮುಕ್ತಾಯವಾಯಿತೆಂದೇ ಹೇಳಬಹುದು, ಆದರೆ ಅದರ ಕೆಳಗೆ ಜಮೀನುಗಳಿಗೆ ದರಖಾಸ್ತು ಬಂದು ವ್ಯವಸಾಯ ಮಾತ್ರ ಆಗಲಿಲ್ಲ ಮೈಸೂರು ಗವರ್ನ್‌ಮೆಂಟಿನವರು ಸಂಸ್ಥಾನಾಮಲೆ ಸಣ್ಣ ಪುಟ್ಟ ಕೆರೆ ನಾಲೆಗಳನ್ನು ದುರುಸ್ತು ಮಾಡಿಸಿ ಆಬಾದಾದ ಸ್ಥಿತಿಯಲ್ಲಿಡುವುದಕ್ಕೂ, ಗ್ರಾಮಾಂತರಗಳಿಗೆ ರಸ್ತೆಗಳನ್ನು ಮಾಡಿಸುವುದಕ್ಕೂ, ಗ್ರಾಮಾಂತರಗಳಲ್ಲಿ ವಾಸಮಾಡುವ ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರನ್ನು ಒದಗಿಸಿ ಆರೋಗ್ಯಾಭಿವೃದ್ಧಿಯ ಕಾರ್ಯಗಳನ್ನು ಮಾಡಿಸುವುದಕ್ಕೂ ಇನ್ನೂ ಹೆಚ್ಚು ದ್ರವ್ಯವನ್ನು ರಾಜಾದಾಯದಿಂದ ವಿನಿಯೋಗಿಸುತ್ತಾ ಬರುವುದನ್ನು ನೋಡಲಪೇಕ್ಷಿಸುತ್ತೇವೆ

ಕೊಡಗಿನ ಕೋಆಪರೇಟಿವ್ ಸೊಸೈಟಿಗಳು—ಈ ರಿಪೋರ್ಟು ಬಹಳ ಲಂಬಿಸಿ ಬರೆಯಲ್ಪಟ್ಟಿದ್ದಲ್ಲವಾದರೂ ವಿಷಯಗಳು ಸ್ವಾರಸ್ಯವಾಗಿಯೂ, ತೃಪ್ತಿಕರವಾಗಿಯೂ ಇರುವವು ಕಳೆದ ವರುಷ ಹೊಸದಾಗಿ ಸೊಸೈಟಿಗಳು ಏರ್ಪಾಡಾಗಲಿಲ್ಲ, ಆದರೆ ಇರುವ ಸೊಸೈಟಿಗಳಿಗೆ ಇನ್ನೂ 183 ಮೆಂಬರುಗಳು ಚಂದಾದಾರರಾಗಿ ಸೇರಿಕೊಂಡರು ಸೊಸೈಟಿಗಳ ಮೂಲಧನವು ವರುಷದ ಪ್ರಾರಂಭದಲ್ಲಿ 61,163 ರೂಪಾಯಿ ಇದ್ದದ್ದು ವರುಷಾಂತ್ಯದಲ್ಲಿ 78,792 ರೂಪಾಯಿಗೆ ಹೆಚ್ಚಿತು ಮೆಂಬರುಗಳಿಗೆ ಸಾಲಕೊಡುವುದೇ ಹೊರತಲ್ಲದೆ ಸೊಸೈಟಿಗಳಲ್ಲಿ ಇನ್ಯಾವ ತರದ ಕಾರ್ಯಗಳೂ ನಡೆಯುವಂತೆ ಕಂಡುಬರುವುದಿಲ್ಲ.

ಕೊಡಗಿನ ಫಾರೆಸ್ಟ್ ಇಲಾಖೆಯು—ಈ ಸಣ್ಣ ಸೀಮೆಗೆ ಸೇರಿರುವ ಕಾಡುಗಳನ್ನು ಬಹಳ ಚೆನ್ನಾಗಿ ನೋಡಿಕೊಳ್ಳುತ್ತಿರುವಂತೆ ಕಾಣುತ್ತದೆ ಆದದ್ದರಿಂದಲೇ ಫಾರೆಸ್ಟ್ ಹುಟ್ಟುವಳಿಯು ವಿಶೇಷವಾಗಿರುವದು ಅಂದರೆ ಕಳೆದ ವರುಷ ಖರ್ಚು ಹೋಗಿ ಸರ್ಕಾರಕ್ಕೆ 1,81,144 ರೂಪಾಯಿ ಲಾಭ ಸಂಪಾದನೆಯಾಗಿರುತ್ತದೆ ಕಳೆದ ವರುಷ ಫಾರೆಸ್ಟ್ ಬಾಬಿನಲ್ಲಿ ಒಟ್ಟು 3,05,060 ರೂಪಾಯಿ ಹುಟ್ಟುವಳಿ ಆಗಿರುತ್ತದೆ ಕಾಡುಗಳಲ್ಲಿ ಅನೇಕ ಭಾಗಗಳು ದುರ್ಗಮಗಳಾಗಿರುವವು ಆದಕಾರಣ ಉತ್ತಮೋತ್ತಮವಾದ ಗಿಡಮರಗಳನ್ನು ಕಡಿದು ಸಾಗಿಸಿಕೊಂಡು ಬರುವುದು ಬಹಳ ಪ್ರಯಾಸವಾಗಿರುತ್ತದೆ ಸರ್ಕಾರದವರು ಕಾಡುಗಳನ್ನು ಬಹಳ ಚೆನ್ನಾಗಿ ಕಾಪಾಡಿಕೊಂಡು ಬರಲು ತುಂಬಾ ಸಾಹಸ ಪಡುತ್ತಾರೆ. ಇದಲ್ಲದೆ ಬೆಳೆವಾಸಿ ಮರಗಳನ್ನು ಕಡಿದು ಸಾಗಿಸುವುದಕ್ಕೆ ಅನುಕೂಲವಾದ ರಸ್ತೆಗಳನ್ನೂ ಮಾಡಿಸುತ್ತಿರುವರು

ಜ್ಞಾನ ಬೇಕೆಂದು ಪ್ರಾರ್ಥಿಸಿದ ಅರಸನು

ದಾವೀದ ರಾಜನು ಮೃತಪಟ್ಟಾಗ ಅವನ ಮಗನಾದ ಸೊಲೊಮೋನನು ಸುಮಾರು ಹದಿನೆಂಟು ವರುಷದ ಯೌವನಸ್ಥನಾಗಿದ್ದನು ದಾವೀದ ರಾಜನು ಪರಾಕ್ರಮಶಾಲಿಯಾಗಿದ್ದು ದೇಶವನ್ನು ಚತುರ್ದಿಕ್ಕುಗಳಿಗೂ ವಿಸ್ತರಿಸಿದ್ದನು. ಸೊಲೊಮೋನನು ಅವನ ತಂದೆಯು ಮೃತಪಟ್ಟ ನಂತರ ಆ ವಿಸ್ತಾರವಾದ ದೇಶಕ್ಕೆಲ್ಲಾ ಅರಸನಾದನು ದೇಶದ ವಿಸ್ತೀರ್ಣವನ್ನು ಕುರಿತು ಚರಿತ್ರೆಕಾರರು ಹೇಳುವದೇನೆಂದರೆ—ಪಾಲೆಸ್ಟೀನ್ ದೇಶವು ಆ ಕಾಲದಲ್ಲಿಯೇ ಯೂಫ್ರೆಟೀಸ್ ನದಿಯು ಮೊದಲ್ಗೊಂಡು ನೈಲ್ ನದಿಯ ವರೆಗೂ ವ್ಯಾಪಿಸಿತ್ತು ಮತ್ತು ಪರರಾಜ್ಯದ ಅರಸುಗಳೂ ದಾವೀದನಿಗೆ ಕಪ್ಪಕಾಣಿಕೆಗಳನ್ನು ಸಲ್ಲಿಸುತ್ತಿದ್ದರು ಇಂತಹ ರಾಜ್ಯದ ಮೇಲೆ ಅರಸಾಗಿದ್ದೀ ಎಂದು ಸೊಲೊಮೋನಗೆ ಹೇಳಿದಾಗ ಅವನು ಉಬ್ಬಿದ ಮನಸ್ಸಿನಿಂದ ಸಂತೋಷಪಡದೆ ಇಷ್ಟೊಂದು ದೊಡ್ಡ ರಾಜ್ಯವನ್ನೂ ಅದರಲ್ಲಿ ವಾಸಮಾಡುವ ಜನಗಳನ್ನೂ ಆಳುವದಕ್ಕೆ ತಾನು ಅಶಕ್ತನಾಗಿದ್ದೇನೆಂದು ತಿಳಿದು ಭಯಪಟ್ಟನು ಅವನು ಭಯಪಡುವದಕ್ಕೆ ತಕ್ಕ ಕಾರಣಗಳೂ ಇದ್ದವು ಹೇಗಂದರೆ, ಈ ಕಾಲದಲ್ಲಿ ಎಲ್ಲಿ ನೋಡಿದರೂ ನಾಂಕುಶಪ್ರಭುತ್ವವೇ ನೆಲೆಗೊಂಡಿದೆ ಮತ್ತು ಅರಸನ ಸಹಾಯಕ್ಕಾಗಿ ರಾಜನೀತಿವಿಶಾರದರಾದ ಮಂತ್ರಿಗಳೂ ಪ್ರಧಾನಿಗಳೂ ಪ್ರಜೆಗಳ ನೆಮ್ಮದಿಗೂ ದೇಶಾಭ್ಯುದಯಕ್ಕೂ ತಕ್ಕ ಕಟ್ಟಳೆ, ಕಾನೂನುಗಳನ್ನು ಏರ್ಪಡಿಸಿ ರೂಢಿಸತಕ್ಕ ನ್ಯಾಯವಿಧಾಯಕ ಸಭೆಗಳೂ ನಾಗರಿಕವಾದ ಸಕಲ ದೇಶಗಳಲ್ಲಿಯೂ ಏರ್ಪಡಿಸಲ್ಪಟ್ಟು ಅರಸನಿಗೆ ರಾಜ್ಯಾಡಳಿತದಲ್ಲಿ ಬೆಂಬಲವಾಗಿ ನಿಂತಿವೆ ಆದರೆ ಸೊಲೊಮೋನನು ಈಗ ಸುಮಾರು ಐದು ಸಾವಿರ ವರುಷಗಳಿಗೆ ಮುಂಚೆ ಆಳುತ್ತಿದ್ದನು ಆಗ ನಿರಂಕುಶಪ್ರಭುತ್ವವೇ ಭೂಲೋಕದಲ್ಲ ವಾಡಿಕೆಯಲ್ಲಿದ್ದಿತು ಅಂದರೆ ರಾಜ್ಯಭಾರದಲ್ಲಿ ಪ್ರಜೆಗಳ ಅನುಮತಿಯನ್ನು ಪಡೆದು

ಅವರು ಒಪ್ಪುವ ರೀತಿಯಲ್ಲಿ ಆಡಳಿತವನ್ನು ಮಾಡಬೇಕೆಂಬ ನಿರ್ಬಂಧವಿರಲಿಲ್ಲ. ಅರಸನೇ ತನ್ನ ಸ್ವೇಚ್ಛೆಗೆ ಸರಿಯೆಂದು ತೋರಿದ ಕಾನೂನುಗಳನ್ನು ಮಾಡಿ ಅವುಗಳನ್ನು ತಾನೇ ಜಾರಿಗೆ ತರಬೇಕಾಗಿದ್ದಿತು ಪ್ರಜೆಗಳು ತಮ್ಮ ಹಕ್ಕು ಬಾಧ್ಯತೆ, ಕರ್ತವ್ಯಗಳೇನೆಂದು ಯೋಚಿಸಿ ದೇಶಹಿತವನ್ನೂ ಪ್ರಜಾಹಿತವನ್ನೂ ಕುರಿತು ಗಮನಿಸಲಾರದ ಸ್ಥಿತಿಯಲ್ಲಿದ್ದರು ಪ್ರಜೆಗಳ ಪ್ರಾಣ, ಮಾನ, ಧನಗಳು ಅರಸನನೊತ್ತಾಗಿದ್ದವು ಅವನು ತನಗೆ ಬೇಕಾದವರನ್ನು ಕೊಂದು ಬೇಕಾದವರನ್ನು ಉಳಿಸಬಹುದಾಗಿದ್ದಿತು ಇಂತಹ ಸಮಯಗಳಲ್ಲಿ ಅರಸನ ಪ್ರಾಣವೂ ಮತ್ತು ರಾಜ್ಯವೂ ಸಹ ಮಹಾ ಅಪಾಯಕರವಾದ ಸ್ಥಿತಿಗೆ ಗುರಿಯಾಗಿದ್ದವು ಏಕೆಂದರೆ ಪ್ರಜೆಗಳ ಇಂಗಿತವನ್ನು ತಿಳಿಯದೆ ಅರಸನು ಸ್ವೇಚ್ಛೆಯಾಗಿ ನಡೆದರೆ ಪ್ರಜೆಗಳು ತಿರುಗಿ ಬಿದ್ದು ರಾಜ್ಯಾಪಹಾರಕ್ಕೆ ಕಾರಣವಾಗುವದು ಅಧಿಕಾರಿಗಳೂ ಸಾಮಾಜಿಕರೂ ಪಿತೂರಿಯನ್ನು ನಡಿಸಿ ಅರಸನ ಪ್ರಾಣಕ್ಕೇ ಮುಳುವಾಗುವರು ಸಾಂಕುಶಪ್ರಭುತ್ವವೂ ಪ್ರತಿಯೊಂದು ಬಾಬಿಗೆ ತಕ್ಕ ಮಂತ್ರಿವರ್ಗರೂ ನ್ಯಾಯ ವಿಧಾಯಕ ಸಭೆಯೂ ಉಳ್ಳ ಇಂಗ್ಲೆಂಡ್ ದೇಶಕ್ಕೆ ರಾಣಿಯಾಗಬೇಕೆಂದು ವಿಕ್ಟೋರಿಯಾ ಮಹಾರಾಜ್ಞಿಯವರಿಗೆ ತಿಳಿಸಲ್ಪಟ್ಟಾಗ ಅವರು ಆ ಶುಭವಾರ್ತೆಯನ್ನು ಕೇಳಿ ಸಂತೋಷಪಡದೆ—ಇಷ್ಟೊಂದು ಪ್ರಜೆಗಳ ಭಾರವನ್ನೂ ಜವಾಬ್ದಾರಿಕೆಯನ್ನೂ ನಾನು ಹೇಗೆ ಹೊತ್ತು ಪೂರೈಸಲಿಯೆಂದು ಶೋಕಮಾಡಿದರೆಂದು ಚರಿತ್ರೆಗಳು ಹೇಳುತ್ತವೆ ಈ ಸೌಕರ್ಯಗಳ್ಯಾವವೂ ಇಲ್ಲದೆ ಹಿಂದೂ ಮುಂದೂ ತಿಳಿಯದ ಹದಿನೆಂಟು ವರುಷದ ತರುಣನಾದ ಸೊಲೊಮೋನನು ಭಯಪಟ್ಟದ್ದೂ ಆಶ್ಚರ್ಯವೆ

ರಾಜ್ಯಭಾರಕ್ಕೆ ತಕ್ಕ ಸಹಾಯಗಳೂ ಜ್ಞಾನವೂ ಇಲ್ಲದಿದ್ದದ್ದನ್ನು ತಿಳಿದು ಸೊಲೊಮೋನನು ಬಹು ಒಳ್ಳೆ ಹಂಚಿಕೆಯನ್ನು ಹುಡುಕಿದನು ಏನೆಂದರೆ ಸಕಲ ಜ್ಞಾನಕ್ಕೂ ಮೂಲಾಧಾರವಾದ ದೇವರ ಹತ್ತಿರ ಹೋಗಿ ಆತನನ್ನು ಹೀಗೆಂದು ಪ್ರಾರ್ಥಿಸಿದನು ದೇವರೇ, ನನ್ನ ತಂದೆಯಾದ ದಾವೀದನಿಗೆ ನೀನು ಬಹು ಕೃಪೆಯನ್ನು ತೋರಿಸಿ ಅವನಿಗೆ ಬದಲಾಗಿ ನನ್ನನ್ನು ಅರಸನನ್ನಾಗಿ ಮಾಡಿದಿ ಲಿಪಿಯಲ್ಲಿ ಧೂಳಿಯ ಹಾಗೆ ಹೆಚ್ಚಾಗಿರುವ ಈ ನಿನ್ನ ಪ್ರಜೆಗಳನ್ನು ಆಳುವದಕ್ಕೆ ನನಗೆ ಜ್ಞಾನವನ್ನೂ ತಿಳುವಳಿಕೆಯನ್ನೂ ಕೊಡು ಈ ನಿನ್ನ ಮಹಾ ಜನಕ್ಕೆ ನ್ಯಾಯತೀರಿಸತಕ್ಕ ಶಕ್ತನು ಯಾರು ? ಆಗ ದೇವರು ಸೊಲೊಮೋನನಿಗೆ—ಇದು ನಿನ್ನ ಹೃದಯದ ಅಪೇಕ್ಷೆಯಾಗಿರುವದರಿಂದಲೂ, ನೀನು ಐಶ್ವರ್ಯವನ್ನೂ ಸ್ಥಿತಿಯನ್ನೂ ಧನವನ್ನೂ ಶತ್ರುಗಳ ಪ್ರಾಣವನ್ನೂ ಕೇಳದೆ, ನಾನು ಯಾರ ಮೇಲೆ ನಿನ್ನನ್ನು ಅರಸನನ್ನಾಗಿ ಮಾಡಿದೆನೋ ಆ ನನ್ನ ಜನರಿಗೆ ನೀನು ನ್ಯಾಯತೀರಿಸುವ ಹಾಗೆ ಜ್ಞಾನವನ್ನೂ ತಿಳುವಳಿಕೆಯನ್ನೂ ನೀನು ಬೇಡಿದ್ದರಿಂದಲೂ ಜ್ಞಾನವೂ ತಿಳುವಳಿಕೆಯೂ ನಿನಗೆ ಕೊಡಲ್ಪಟ್ಟಿವೆ ಮತ್ತು ನೀನು ಕೇಳದೆ ಬಿಟ್ಟ ಐಶ್ವರ್ಯವನ್ನೂ ಸ್ಥಿತಿಯನ್ನೂ ಧನವನ್ನೂ ಕೊಡುವೆನು ಅಂದನು

ಸೊಲೊಮೋನನಷ್ಟು ದೊಡ್ಡ ರಾಜ್ಯಭಾರವೂ ಪ್ರಜಾಹಿತಚಿಂತನೆಯೂ ಸಾಮಾನ್ಯವಾದ ಬುದ್ಧಿ ಶಕ್ತಿಗಳುಳ್ಳ ನಮಗೆ ವಹಿಸಲ್ಪಟ್ಟಿಲ್ಲ ಆದರೂ ನಮ್ಮ ನಮ್ಮ ಬುದ್ಧಿ ಶಕ್ತಿಗಳಿಗೆ ತಕ್ಕಷ್ಟು ಜವಾಬ್ದಾರಿಕೆಯೂ ಇತರರನ್ನು ನಡಿಸಬೇಕಾದ ಕರ್ತವ್ಯವೂ ನಮ್ಮಲ್ಲಿ ಮುಕ್ಕಾಲು ಮೂರು ವೀಸಪಾಲು ಜನಗಳಿಗೆ ವಹಿಸಲ್ಪಟ್ಟಿವೆ ಉಪಾಧ್ಯಾಯರು ಬಾಲಕರಿಗೂ ತಂದೆತಾಯಿಗಳು ಮಕ್ಕಳಿಗೂ ಯಜಮಾನರು ಆಳುಗಳಿಗೂ ಅಧಿಕಾರಿಗಳು ತಮ್ಮ ಕೈಕೆಳಗಿರುವ ನೌಕರರಿಗೂ ಜವಾಬ್ದಾರರಾಗಿದ್ದಾರೆ ಎಲ್ಲರೂ ತಮ್ಮ ತಮ್ಮ ಕರ್ತವ್ಯದ ಮುಖ್ಯತ್ವವನ್ನು ಗಮನಿಸಿ ತಿಳಿದಿದ್ದಾರೋ ? ಯೋಚಿಸಿ ನೋಡಿದರೆ ಸೊಲೊಮೋನನ ಹಾಗೆ ತಾವೂ ಭಯಪಟ್ಟು, ಅಶಕ್ತರೂ ಜ್ಞಾನಹೀನರೂ ಎಂತ ಒಪ್ಪಬೇಕಲ್ಲವೆ ?

ಸೊಲೊಮೋನನು ದೇವರಿಂದ ಜ್ಞಾನವನ್ನು ತಿಳುವಳಿಕೆಯನ್ನು ಬೇಡಿ ಆತನನ್ನು ಆಶ್ರಯಿಸಿದವರೆಗೂ ರಾಜ್ಯವನ್ನು ಚೆನ್ನಾಗಿ ಆಳಿದನು ದೇವಾಲಯವನ್ನು ಕಟ್ಟಿಸಿ ಜನಗಳಲ್ಲಿ ದೇವಭಕ್ತಿಯನ್ನು ಸ್ಥಾಪಿಸಿದನು ವಿತರಣೆಯಿಂದ ನ್ಯಾಯತೀರಿಸಿ ಮನುಷ್ಯರಲ್ಲಿ ಅತ್ಯಂತ ಜ್ಞಾನಿಯೆಂದು ಹೊಗಳಿಸಿಕೊಂಡನು ಜ್ಞಾನವನ್ನೂ ನೀತಿಯನ್ನೂ ಸತ್ಯವನ್ನೂ ಹರಡುವ ಗಾದೆಗಳನ್ನು ಸಂಗ್ರಹಿಸಿ ಒಂದು ದಿವ್ಯ ಗ್ರಂಥವನ್ನು ರಚಿಸಿದನು ಅದು ಈಗಲೂ ಸತ್ಯವೇದದ ಹಳೇ ಒಡಂಬಡಿಕೆ ಎಂಬ ಭಾಗದಲ್ಲಿದೆ ಅದನ್ನು ವಾಚಕರು ಸಂಪಾದಿಸಿಕೊಂಡು ಓದಿದರೆ ಸೊಲೊಮೋನನ ಜ್ಞಾನವೂ ಅನೇಕ ಲೌಕಿಕ ವೈದಿಕ ನಡವಳಿಕೆಗಳೂ ಹೃದಯಂಗಮವನಾಗಿ ವೇದ್ಯವಾಗುವವು

ಆದರೆ ಸೊಲೊಮೋನನು ಕೆಲವು ಕಾಲದ ನಂತರ ದುಸ್ಸಹವಾಸದಿಂದ ಪಾಪ ಮಾಡಿದನು ಆದರೇನು ಸೊಲೊಮೋನನಿಗಿಂತ ಮಹಿಮಾತೀತನನ್ನು ನಾವು ವಾಚಕರಿಗೆ ಪರಿಚಿತ ಮಾಡಿಸಬಲ್ಲೆವು ಆತನ್ಯಾರೆಂದರೆ ಯೇಸು ಸ್ವಾಮಿಯೇ ಈತನ ವಿಷಯದಲ್ಲಿ ದೇವರು ಹೇಳುವದನ್ನು ಕೇಳಿ ಮನಸ್ಸುಮಾಡಿರಿ ಅದೇನೆಂದರೆ—ಇಗೋ ನನ್ನ ಸೇವಕನು, ಈತನನ್ನು ನಾನು ಆರಿಸಿಕೊಂಡೆನು ಈತನು ನನಗೆ ಇಷ್ಟನು ನನ್ನ ಪ್ರಾಣ ಪ್ರಿಯನು ಈತನಲ್ಲಿ ನನ್ನ ಆತ್ಮವನ್ನು ಇರಿಸುವೆನು ಈತನು ಅನ್ಯಜನಗಳಿಗೂ ನ್ಯಾಯವಿಧಿಯನ್ನು ಸಾರುವನು ಈತನು ಜಗಳಾಡುವದಿಲ್ಲ ಕೂಗಾಡುವದಿಲ್ಲ ಜಜ್ಜಿದ ದಂಟಿನಂತೆ ನೋವುಂಡು ಬಿದ್ದಿರುವ ಮನುಷ್ಯನನ್ನು ನಸುಗುಜ್ಜಿ ಮಾಡದೆ ಆರಿಹೋಗುತ್ತಿರುವ ದೀಪದಂತೆ ಒದ್ದಾಡುತ್ತಿರುವವರನ್ನು ನಂದಿಸದೆ ನ್ಯಾಯಕ್ಕೆ ವಿಜಯವನ್ನು ಉಂಟುಮಾಡುವನು ಈತನ ಹೆಸರನ್ನು ಕೇಳಿದ ಸಕಲ ಜನರಿಗೂ ಈತನ ಮೇಲೆ ಆಶೆ ಹುಟ್ಟುವದು ಈತನು ಕುರುಡರಿಗೆ ಕಣ್ಣನ್ನು, ಕುಗ್ಗಿ ಹೋಗಿರುವವರಿಗೆ ಹೊಸ ಜೀವವನ್ನು ಕೊಡುವದಕ್ಕೂ ದೇವರಿಂದ ಕಳುಹಿಸಲ್ಪಟ್ಟವನು ಈತನಲ್ಲಿ ಸಕಲ ಜ್ಞಾನವೂ ಮೂರ್ತಿವತ್ತಾಗಿ ನೆಲಸಿದೆ ಈತನನ್ನು ಆಶ್ರಯಿಸುವವರು ಸೊಲೊಮೋನನಲ್ಲಿದ್ದ ಜ್ಞಾನವನ್ನು ನಿರಂತರ ಹೊಂದುವರು

ಒಳದೇಶದ ವೃತ್ತಾಂತಗಳು

ನಾಳೆ 8ನೇ ತಾ ಭಾನುವಾರ ಶ್ರೀಮನ್ ಮಹಾರಾಜರವರು ನೀಲಗಿರಿಬೆಟ್ಟದಿಂದ ಪರಿವಾರಸಮೇತ ವಾಪಸು ರಾಜಧಾನಿಗೆ ಚಿತ್ತೈಸುವರೆಂದು ತಿಳಿಯುತ್ತದೆ

ಬೆಂಗಳೂರಿನಲ್ಲಿ ಕೆಟ್ಟ ತುಪ್ಪವನ್ನು ಬಿಕರಿ ಮಾಡುತ್ತಿದ್ದ ಮೂರು ಮಂದಿ ವರ್ತಕರಿಗೆ (ಒಬ್ಬ ಹಿಂದು, ಇಬ್ಬರು ಮಹಮದೀಯರು) ಬೆಂಚ್ ಮ್ಯಾಜಿಸ್ಟ್ರೇಟರು ಕಳೆದ ವಾರ ತಲಾ 100 ರೂಪಾಯಿ ಜುಲ್ಮಾನೆ ವಿಧಿಸಿದರು

ಮೊನ್ನೆ ಮಂಗಳವಾರ ಜರುಗಿದ ಚಕ್ರವರ್ತಿ ಸಾರ್ವಭೌಮರವರ ಹುಟ್ಟಿದ ಹಬ್ಬದಲ್ಲಿ ಕೊಡಗಿನ ಅ|| ಕಮಿಷನರಾದ ಮಿ|| ಕೋದಂಡ್ರ ಅಪ್ಪಯ್ಯನವರಿಗೆ ರಾವ್ ಬಹದೂರ್ ಎಂಬ ಬಿರುದು ಬಂದಿದೆ ಎಂದು ತಿಳಿಸಲು ಸಂತೋಷಪಡುತ್ತೇವೆ

ಸಿಕಾರಿಪುರದ ತಾಲ್ಲೂಕು ಅಮಟೆಕೊಪ್ಪದ ಅಡವಿ ಬಾಡದಲ್ಲಿ ಒಂಟಿ ಸಲಗ ಆನೆಯು ಸಂಚರಿಸುತ್ತಿದೆ ಎಂದೂ ಅದನ್ನು ಹೊಡೆದು ಕೊಲ್ಲಲು ಇಷ್ಟವುಳ್ಳವರು ಅರ್ಜಿಬರೆದುಕೊಳ್ಳಬೇಕೆಂದೂ ಶಿವಮೊಗ್ಗ ಡೆಪ್ಯುಟಿ ಕಮಿಷನರವರು ತಿಳಿಸುತ್ತಾರೆ

ಕಳೆದ ಶನಿವಾರ ಸಾಯಂಕಾಲ ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀ ಮಂಡಲಿಯವರು ಸಭೆಸೇರಿ ಶ್ರೀಮನ್ ಯುವರಾಜರವರ ಶ್ರೇಯಸ್ಸನ್ನು ಬಯಸಿದರು ಮದರಾಸ್ ಹೈಕೋರ್ಟ್ ಜಡ್ಜರಾದ ಮಿ|| ಟಿ ಸದಾಶಿವಅಯ್ಯರವರ ಪತ್ನೀರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು

ರಾಜಧಾನಿಯ ಪ್ರಜೆಗಳು ಇಲ್ಲಿ ವೈಸ್ ಪ್ರೆಸಿಡೆಂಟರಾಗಿದ್ದ ಮಿ|| ಎಂ ಜಿ ಕೃಷ್ಣಸ್ವಾಮಿರಾಯರಿಗೆ ನಾಳೆ ಶನಿವಾರ ಸಾಯಂಕಾಲ ಟೌನ್ ಹಾಲ್ ಬಂಗಲೆಯಲ್ಲಿ ಒಂದು ಎಂಟರ್‌ಟೇನ್‌ಮೆಂಟ್ ಕೊಟ್ಟು ಅವರಲ್ಲಿ ತಮಗಿರುವ ಭಕ್ತಿ ವಿಶ್ವಾಸಗಳನ್ನು ಪ್ರಕಾಶಪಡಿಸಬೇಕೆಂದು ಏರ್ಪಾಡುಮಾಡುತ್ತಿದ್ದಾರೆ

ಮೈಸೂರು ಸೀಮೆಯ ಪ್ರಜೆಗಳಲ್ಲಿ ಹೆಂಗಸರನ್ನೂ ಸಣ್ಣ ವಯಸ್ಸಿನವರೇ ಮೊದಲಾದವರನ್ನೂ ಇತರ ಕಡೆಗಳಲ್ಲಿ ಕೂಲಿನಾಲಿ ಮುಂತಾದದ್ದು ಮಾಡುವದಕ್ಕಾಗಿ ಅಕ್ರಮೋತ್ತರಗಳನ್ನು ಹುಟ್ಟಿಸಿ ಕರೆದುಕೊಂಡು ಹೋಗುವ ವಿಚಾರವಾದ ಕಾನೂನನ್ನು ಶ್ರೀಮನ್ ಮಹಾರಾಜರವರು ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ

ಒಬ್ಬ ಜಾತ್ರಿದಾರರಿಂದ—ತ್ಯಾಮಗೊಂಡ್ಲಿನಲ್ಲಿ ತಾ 1 ನೇ ಭಾನುವಾರ ಮಧ್ಯಾಹ್ನ ಒಂದು ಪಾರಿವಾಳ ಪಕ್ಷಿಯು ಮಿಷನ್ ಸ್ಕೂಲ್ ಮಾಸ್ಟರ ಮನೆಗೆ ಬಂದಿಳಿಯಿತು ಅದರ ಕಾಲಿನಲ್ಲಿ ಬೆಳ್ಳಿ ಬಳೆ ಇದೆ 1913 ನೇ ಇಸವಿ ಎಂದೂ, ನಂಬರು 307 ಎಂದೂ, ಎಸ್ ಇ ಎಂ ಎಂದೂ ಇಂಗ್ಲಿಷಿನಲ್ಲಿ ಬರೆದಿದೆ ಇದು ಯಾರದೋ, ಎಲ್ಲಿಂದ ಬಂತೋ ತಿಳಿಯಲಿಲ್ಲ

ಅ|| ಸೆಕ್ರೆಟರಿ ಮ|| ಎಚ್ ಕೆ ವೀರಬಸವಯ್ಯನವರು ತಿಳಿಸುವುದು —ಪರಸ್ಥಳದಿಂದ ಬಂದು ಬೆಂಗಳೂರಿನಲ್ಲಿ ವಿದ್ಯಾಭ್ಯಾಸಮಾಡುವ ವೀರಶೈವ ವಿದ್ಯಾರ್ಥಿಗಳಿಗೋಸ್ಕರ ಸ್ಥಾಪಿತವಾಗಿದ್ದ ವೀರಶೈವಾಶ್ರಮವು ಇದೇ ಜೂನ್ ತಿಂಗಳು 1 ನೇ ತಾ ನಿಂದ ಕೋಟೆ ಬಳಿ ಇರುವ ಶ್ರೀಮರುಸ್ವಾಮಿ ಮಠದಲ್ಲಿ ಸ್ಥಾಪಿಸಲ್ಪಟ್ಟಿರುತ್ತೆ ಆಶ್ರಮಕ್ಕೆ ಬರುವ ವಿದ್ಯಾರ್ಥಿಗಳು ಸೆಕ್ರೆಟರಿಯವರಿಗೆ ಜಾಗ್ರತೆಯಾಗಿ ಅರ್ಜಿ ಬರೆದುಕೊಳ್ಳತಕ್ಕದ್ದು

ಕಳೆದ ತಿಂಗಳ 20ನೇ ತಾ ರಿಂದ ಸೌತ್ ಮದರಾಸ್ ರೈಲ್ವೆ ಕಂಪನಿಯ ಸ್ಟೇಷನ್‌ಗಳಲ್ಲಿ ಕೆಲಸಮಾಡುವ ನೌಕರಮಾಸ್ತರುಗಳೂ, ಕೆಲವುಮಂದಿ ಗಾಡಿ ನಡಿಸುವ ಗಾರ್ಡುಗಳೂ ತಮ್ಮ ಸಂಬಳದ ದರಗಳನ್ನು ಹೆಚ್ಚಿಸಿಕೊಡದಿದ್ದರೆ ಕೆಲಸಕ್ಕೆ ಬರುವುದಿಲ್ಲವೆಂದು ಹಟಹಿಡಿದು ನಿಂತುಬಿಟ್ಟರು ಇದರ ದೆಸೆಯಿಂದ ಬೆಂಗಳೂರು, ಜೋಲಾರಪೇಟೆ, ಅರಕೋಣ, ರಾಯಚೂರು, ವಾಲ್ಟೇರು, ಈ ಮೊದಲಾದ ಹಲವು ಸ್ಟೇಷನ್‌ಗಳಲ್ಲಿ ರೈಲ್ ಗಾಡಿಗಳು ಹೋಗಿ ಬರುವುದು ಬಹಳ ಪ್ರಯಾಸವಾಗಿ, ಜನರ ಸಂಚಾರಕ್ಕೂ, ಸಾಮಾನುಗಳ ಆಮದು ರಫ್ತಿಗೂ ಅಟಂಕವಾಯಿತು ನಾಲ್ಕಾರು ದಿನಗಳವರೆಗೆ ಅಂಚೆ ಕಾಗದಗಳು ಬಹಳ ನಿಧಾನವಾಗಿ ತಲುಪಿದವು ಕಂಪನಿಯವರು ಕೆಲವು ಕಡೆ ಅಲ್ಪಸಂಬಳಗಾರರಿಗೆ ಒಂದೆರಡು ರೂಪಾಯಿ ಬಡ್ತಿಮಾಡಿದ್ದರಿಂದ ಮೊನ್ನೆ ಭಾನುವಾರದ ಬಾಗಾಯಿತು ರೈಲ್ ಗಾಡಿಗಳ ಸಂಚಾರವು ತಕ್ಕಮಟ್ಟಿಗೆ ಕ್ರಮಕ್ಕೆ ಬಂದಿದೆ ಆದರೂ ಸಾಮಾನುಗಳ ಆಮದು ರಫ್ತು ಇನ್ನೂ ಸರಿಹೋಗಿಲ್ಲ ಇನ್ನೂ ಕೆಲವು ದೊಡ್ಡ ಸಂಬಳಗಾರರು ಕೆಲಸದ ಮೇಲೆ ಬಾರದೆ ಇರುತ್ತಾರೆ ಈ ವಾರ ಕ್ರಮಪಟ್ಟೀತೆಂದು ನಿರೀಕ್ಷಿಸಬಹುದಾಗಿದೆ

ಮರಾಟಿ ವಿ ವೆಂಕಟರಾವು ವಿದ್ಯಾರ್ಥಿನಿಲಯದ ಸೆಕ್ರೆಟರಿ ಮ|| ಯಂ ಮುಕುಂದರಾವು ಸಿಂಧೆಯವರು ಮರಾಟಿ ವಿದ್ಯಾರ್ಥಿಗಳಿಗೆ ತಿಳಿಯಪಡಿಸುವದೇನೆಂದರೆ—ಬೆಂಗಳೂರು ಬಸವನಗುಡಿ ಬಡಾವಣೆಯ 3 ನೇ ಕ್ರಾಸ್ ರೋಡಿನಲ್ಲಿ ಮರಾಟಿ ವಿ ವೆಂಕಟರಾವು ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಟಾಗಿದೆ ವಿದ್ಯಾರ್ಥಿಗಳು ಮರಾಟಿಗಳಾಗಿಯೂ, ಇಂಗ್ಲಿಷ್ ಲೋವರ್ ಸೆಕಂಡರಿಗೆ ಕಡಮೆಯಿಲ್ಲದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರಬೇಕು ಮತ್ತು ಪ್ರೌಢ ವಿದ್ಯಾಭ್ಯಾಸ ಮಾಡಲು ಚೈತನ್ಯವಿಲ್ಲದವರಿಗೆ ಮಾತ್ರ ಅವಕಾಶ ದೊರೆಯುವದು ಚೈತನ್ಯವಿಲ್ಲವೆಂಬುವದಕ್ಕೆ ಸ್ಥಳಿಕ ಪ್ರಮುಖರಿಂದ ಸರ್ಟಿಫಿಕೇಟ್ ತರಬೇಕಲ್ಲದೆ, ತಾವು ಹಿಂದೆ ಓದಿದ ಸ್ಕೂಲ್ ಯಾ ಕಾಲೇಜ್ ಮುಖೋಪಾಧ್ಯಾಯರಿಂದಲೂ ತಮ್ಮ ಯೋಗ್ಯತೆಯ ವಿಚಾರವಾಗಿ ಸರ್ಟಿಫಿಕೇಟ್ ತರತಕ್ಕದ್ದು ಕಳೆದ ವರುಷ ಇದ್ದ ವಿದ್ಯಾರ್ಥಿಗಳ ಪೈಕಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಿಗೆ ಮಾತ್ರ ಮೊದಲು ಅವಕಾಶ ಕೊಟ್ಟು, ಅನಂತರ ಇತರರಿಗೆ ಅವರವರ ಯೋಗ್ಯತೆಯ ಪ್ರಕಾರ ಸಾಧ್ಯವಾದಷ್ಟು ಕ್ಲುಪ್ತವಾಗಿ ಸ್ಥಳ ದೊರೆಯುತ್ತೆ ಅಪೇಕ್ಷೆಯುಳ್ಳವರು ಸೆಕ್ರೆಟರಿಯವರಿಗೆ ಜೂನ್ ತಾ 15 ರೊಳಗಾಗಿ ಬರೆದುಕೊಳ್ಳತಕ್ಕದ್ದು

ಮೈಸೂರು ಗೆಜೆಟ್ ಸಂಗ್ರಹ

ನಂಜನಗೂಡು ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮಿ| ಬಿ ಭೀಮರಾಯರಿಗೆ ಏಪ್ರೆಲ್ ತಾ [illegible] ರಿಂದ ಇಪ್ಪತ್ತು ದಿನಗಳ ಕಾಯಿಲೆ ರಜಾ ಕೊಟ್ಟಿತ್ತು ಶಿರಸ್ತೆದಾರ್ ಮಿ| ಎಂ ಎಸ್ ಚಕ್ರವರ್ತಿಅಯ್ಯಂಗಾರ್ಯ ತಾಲ್ಲೂಕಿನ ಛಾರ್ಜನ್ನು ವಹಿಸಿದ್ದರು

ಸಕಲೇಶಪುರದ ಸಬ್ ಡಿವಿಜನ್ ಆಫೀಸರ್ ಮಿ| ಸಿ ವಾಚಯ್ಯನವರಿಗೆ ಹದಿಮೂರು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ ಚನ್ನರಾಯಪಟ್ಟಣದ ಸಬ್ ಡಿವಿಜನ್ ಆಫೀಸರ್ ಮಿ ಎನ್ ಎನ್ ಅಪ್ಪಣ್ಣಅಯ್ಯಂಗಾರ್ಯ ಸಕಲೇಶಪುರದ ಸಬ್ ಡಿವಿಜನ್ ಛಾರ್ಜನ್ನು ವಹಿಸಿರತಕ್ಕದ್ದು

ಮೈಸೂರು ರೆವಿನ್ಯೂ ಸರ್ವೆ ಇಲಾಖಾ ಅ ಕಮಿಷನರ್ ಮಿ| ಕೆ. ಜಿ ಶಾಮಣ್ಣನವರಿಗೆ ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಹಾಸನದ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರ್ ಮಿ|| ಎಸ್ ಜಿ ಆನಂದಯ್ಯವರಿಗೆ ಹದಿನಾಲ್ಕು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಮುಂದೆ ಹೇಳುವ ಡೆಪ್ಯುಟಿ ಕಮಿಷನರುಗಳ ಬಡ್ತಿಯನ್ನು ಜನವರಿ ತಾ 6 ರಿಂದ ಹುಕುಂ ಮಾಡಿದೆ —(1) ಮಿ| ಬಿ ಜಿ ಕುಮಾರಸ್ವಾಮಿನಾಯಕರನ್ನು 1 ನೇ ಕ್ಲಾಸಿನಲ್ಲಿ ಖಾಯಂ ಮಾಡಿದೆ, (2) ಮಿ|| ಎಂ ರಾಮರಾಯರನ್ನು 3 ರಿಂದ 2 ನೇ ಕ್ಲಾಸಿಗೆ (ಇವರು ವಿದ್ಯಾಭ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ರಾಗಿಯೇ ಇರತಕ್ಕದ್ದು)

ಮಿ|| ಸಿ ನಾರಾಯಣರಾಯರು ಸಾಗರದ ಸಬ್ ಡಿವಿಜನ್ ಛಾರ್ಜಿನಲ್ಲಿರುವಾಗ 1ನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು

ಮಿ|| ಕೆ ನಾಗೇಶರಾಯರು ಹುಣಸೂರು ತಾಲ್ಲೂಕ್ ಛಾರ್ಜಿನಲ್ಲಿರುವಾಗ 1ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು

ಅ|| ಸರ್ಜನ್ ಮಿ|| ಎನ್ ಎಸ್ ನಂಜುಂಡಯ್ಯನವರನ್ನು ಮೇ ತಾ 23ರಿಂದ 6ನೇ ಕ್ಲಾಸಿಗೆ ಬಡ್ತಿಮಾಡಿದೆ

ಮಿ| ಕೆ ಆರ್ ಶ್ರೀನಿವಾಸಯ್ಯಂಗಾರರನ್ನು ಗವರ್ನ್‌ಮೆಂಟಿನ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿಯಾಗಿ ಖಾಯಂ ಮಾಡಿದೆ

ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರಾಗಿರುವ ಮಿ| ಸಿ ವೆಂಕಟರಾಯರನ್ನು 3ನೇ ಕ್ಲಾಸ್ ಅ|| ಕಮಿಷನರಾಗಿ ನೇಮಕಮಾಡಿದೆ

ಮಿ| ಸಿ ವೆಂಕಟರಾಯರನ್ನು ಸೀನಿಯರ್ ಅ|| ಕಮಿಷನರಾಗಿ ಖಾಯಂ ಮಾಡಿದೆ, ಮಿ| ಮಹಮದ್ ಜಹಿರುದ್ದೀನ್ ಮೆಕ್ಕಾಯಿಯವರೂ, ಮಿ| ಬಿ ವೆಂಕೋಬರಾಯರೂ ಆಕ್ಟಿಂಗ್ ಸೀನಿಯರ್ ಅ| ಕಮಿಷನರಾಗಿರತಕ್ಕದ್ದು

ಮುಂದೆ ಹೇಳುವ ಡೆಪ್ಯುಟಿ ಕಮಿಷನರುಗಳ ವರ್ಗಾವರ್ಗಿ ಹುಕುಂ ಮಾಡಿದೆ —ಮಿ| ಬಿ ಜಿ ಕುಮಾರಸ್ವಾಮಿನಾಯಕರವರನ್ನು ಬೆಂಗಳೂರಿನಿಂದ ತುಂಕೂರು ಡಿಸ್ಟ್ರಿಕ್ಟಿಗೆ, ಮಿ|| ವಿ ಆರ್ ತ್ಯಾಗರಾಜ ಅಯ್ಯರವರನ್ನು ತುಂಕೂರಿನಿಂದ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ

ಮಿ|| ಕೆ ಎಸ್ ದೊರಸಾಮಿ ಅಯ್ಯರವರು ಮೇ ತಾ 21 ರಲ್ಲಿ ರೆವಿನ್ಯೂ ಕಮಿಷನರವರ ಆಫೀಸ್ ಛಾರ್ಜನ್ನು ಮಿ|| ಆನಂದರಾವ್ ಸಿರ್ಸಿಯವರಿಂದ ವಹಿಸಿಕೊಂಡಿದಾರೆ

ವಿದ್ಯಾಭ್ಯಾಸದ ಇಲಾಖೆಯಲ್ಲಿ ಮುಂದೆ ಹೇಳುವ ವರ್ಗಾವರ್ಗಿ ಹುಕುಂ ಮಾಡಿದೆ —ಮಿ|| ಎಫ್ ಡಬ್ಲಿಯು ಕ್ವೆನ್‌ಟೆನ್ ಅಂಡ್ರಸನ್‌ರವರನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ ಮೈಸೂರು ಮಹಾರಾಜರವರ ಕಾಲೇಜಿಗೆ, ಮಿ|| ಎಸ್ ಕೃಷ್ಣಸ್ವಾಮಿ ಅಯ್ಯಂಗಾರ್ರನ್ನು ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸಿನಿಂದ ಬೆಂಗಳೂರು ಸೆಂಟ್ರಲ್ ಕಾಲೇಜಿಗೆ, ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಇನ್‌ಸ್ಪೆಕ್ಟರ್ ಮಿ|| ಎಂ ರಾಮಸ್ವಾಮಯ್ಯನವರನ್ನು ಇನ್‌ಸ್ಪೆಕ್ಟರ್ ಜನರಲ್‌ರವರ ಆಫೀಸಿಗೆ

ವಿದ್ಯುಚ್ಛಕ್ತಿಯ ಇಲಾಖೆಯಲ್ಲಿರುವ ಅ|| ಇಂಜನಿಯರ್ ಮಿ|| ಎಸ್ ವೆಂಕಟಸುಬ್ಬ ಶೆಟ್ಟರು ಮೂರು ವರುಷ ವಿದ್ಯಾ ಇಲಾಖೆಯಲ್ಲಿ ಕೆಲಸ ಮಾಡತಕ್ಕದ್ದು

ರೈಲ್ವೆ ಚೀಫ್ ಇಂಜನಿಯರ್ ಮಿ|| ಇ ಎ ಎಸ್ ಬೆಲ್‌ರವರು ಮೇ ತಾ 19 ರಲ್ಲಿ ರಜದಿಂದ ವಾಪಸು ಬಂದು ಕೆಲಸದ ಛಾರ್ಜನ್ನು ವಹಿಸಿಕೊಂಡಿರುತ್ತಾರೆ

ಹೊನ್ನಾಳ್ಳಿ ತಾಲ್ಲೂಕು ಅಮಲ್ದಾರ್ ಮಿ|| ಕೆ ಕೇಶವಾಚಾರ್ಯರಿಗೆ ಮೇ ತಾ 21 ರಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ ಶಿರಸ್ತೆದಾರ್ ಮಿ|| ತಿಲ್ಲನಾಯಗಂ ಮುದಲಿಯಾರ್ಯ ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದು

ಸಿಕಾರಿಪುರದ ತಾಲ್ಲೂಕು ಅಮಲ್ದಾರ್ ಮಿ|| ಎಚ್ ವೆಂಕಟನರಸಯ್ಯನವರಿಗೆ ಮೇ ತಾ 18 ರಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ ಶಿರಸ್ತೆದಾರ್ ಮಿ|| ಎನ್ ಕೃಷ್ಣಯ್ಯಂಗಾರ್ಯ ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು

ತಾಲ್ಲೋಕು ವರ್ತಮಾನಗಳು

ಹಾಸನ —ಕಳೆದ ತಿಂಗಳು 21, 25 ನೇ ತಾರೀಖು ಇಲ್ಲಿ ಬಹು ವಿಶೇಷವಾದ ಮಳೆಯಾಯಿತು ವಿಪರೀತವಾಗಿ ಬಂದ ಸಿಡಿಲು, ಗುಡುಗು, ಮಿಂಚು, ಬಿರುಗಾಳಿ ಇವುಗಳನ್ನು ಸಹಿಸುವದು ಅಸಾಧ್ಯವಾಗಿತ್ತು ಇಲ್ಲಿಂದ 3 ಮೈಲಿ ದೂರದಲ್ಲಿರುವ ಭುವನಹಳ್ಳಿ ಎಂಬ ಗ್ರಾಮದಲ್ಲಿ ಅದೇ ಭಾನುವಾರ ಸಾಯಂಕಾಲ ಆರು ಎಟ್ಟುಕೊಂಡುಬಂದು ಜಗುಲಿಯ ಮೇಲೆ ಕುಳುತಿದ್ದವನೊಬ್ಬನಿಗೂ, ಅವನ ಪಕ್ಕದಲ್ಲಿ ಕುಳುತಿದ್ದ ಇನ್ನೊಬ್ಬ ಹುಡುಗನಿಗೂ ಸಿಡಿಲು ಬಡಿದು ತತ್‌ಕ್ಷಣವೇ ಅವರಿಬ್ಬರೂ ಕುಳಿತಲ್ಲಿಯೇ ಸತ್ತರು ಮತ್ತು ಸಮೀಪದಲ್ಲೇ ಕುಳುತಿದ್ದ 14 ಮಂದಿಗೆ ಸ್ಮೃತಿತಪ್ಪಿ ಬಿದ್ದು ಹೋದರು 4-5 ಘಂಟೆಗಳವರಿವಿಗೂ ಅವರು ಚೇತರಿಸಿಕೊಳ್ಳಲೇ ಇಲ್ಲ ಪಕ್ಕದಲ್ಲಿ ಕುಳುತಿದ್ದ ಒಬ್ಬ ಮೇದರವನಿಗೂ ಇನ್ನೊಬ್ಬನಿಗೂ 4 5 ಸುಟ್ಟ ಗಾಯಗಳಾಗಿದ್ದರೂ ಪ್ರಾಣಭೀತಿಯೇನೂ ಆಗಲಿಲ್ಲ ಮೃತಪಟ್ಟವನಿಗೆ ಇಬ್ಬರು ಹೆಂಡತಿಯರೂ, ಪ್ರತಿಯೊಬ್ಬಳಿಗೂ ಒಂದೊಂದು ಸಣ್ಣ ಗಂಡುಕೂಸೂ ಇರುವರು ಅದೇ ದಿನ ಒಂದು ದೊಡ್ಡ ಹಲಸಿನ ಮರಕ್ಕೆ ಸಿಡಿಲೆರಗಿ ಅದು ಅರ್ಧಭಾಗ ಸುಟ್ಟುಹೋಗಿದೆ ಇಲ್ಲಿ ಊರೊಳಗಿನ ಒಂದು ಕಂಪನಿಯ ಮಳಿಗೆಗೆ ಸಿಡಿಲುಬಿದ್ದು ಶಾನೆ ಬಿದ್ದು ಹೋಗಿದೆಯೆಂದು ತಿಳಿದುಬಂದಿದೆ ಈಚೆಗೆ ಆಗಾಗ್ಗೆ ಅಲ್ಪಸ್ವಲ್ಪ ಮಳೆಯಾಗುತ್ತಲೇ ಇದೆ ಕೆರೆಗಳು ಸ್ವಲ್ಪ ಹೆಚ್ಚುಕಡಮೆ ಮುಕ್ಕಾಲುಪಾಲು ಭರ್ತಿಯಾಗುವಷ್ಟು ನೀರು ಬಂದಿದೆ ಬಿತ್ತನೆ ಕೆಲಸವು ಪೂರೈಸಿ ರೈತರು ಪರಕೆಗಳನ್ನು ಹೊಡೆಯುತ್ತಿದಾರೆ ಸಾಂಕ್ರಾಮಿಕ ಉಪದ್ರವಗಳೇನೂ ಇಲ್ಲ ದಿನಸಿಗಳ ಧಾರಣೆಯು ದಿನ ಕ್ರಮೇಣ ಹೆಚ್ಚಾಗುತ್ತಲೇ ಇದೆ

ತುಮಕೂರು —ಈ ವಾರ ಮೂರು ನಾಲ್ಕು ಹದ ಮಳೆಯಾಗಿ ಕೆರೆಗೆ ನೀರು ಬಂದಿರುವುದು ಹವ ಆರೋಗ್ಯವಾಗಿದೆ ಧಾರಣೆವಾಸಿಗಳು ಸ್ವಲ್ಪ ಇಳಿಮುಖವಾಗಿರುವವು —28 29 30 ನೇ ತಾ ಗಳಲ್ಲಿ ಈ ಡಿಸ್ಟ್ರಿಕ್ಟಿನ ಪರಸ್ಪರ ಸಹಾಯ ಸಂಘಗಳ ಪ್ರಥಮ ಸಭೆಯು ಬಹಳ ವಿಚಕ್ಷಣೆಯಿಂದ ಜರುಗಿತು ಇದಕ್ಕೆ 58 ಸೊಸೈಟಿಗಳಿಂದ 70 ಜನ ಡೆಲಿಗೇಟು (ಪ್ರತಿನಿಧಿ) ಗಳು ಬಂದಿದ್ದರು ಇಲ್ಲಿನ ಡೆಪ್ಯುಟಿ ಕಮಿಷನರಾದ ಮಿ| ವಿ ತ್ಯಾಗರಾಜ ಅಯ್ಯರವರು ಸಭೆಯ ಅಗ್ರಾಸನಾಧಿಪತಿಗಳಾಗಿದ್ದರು ಈ ಸಭೆಗೆ ಸೀನಿಯರ್ ಸರ್ಜನ್‌ರಾದ ಡಾ|| ಅಚ್ಯುತರಾಯರೂ, ರಿಟೈರ್ಡ್ ಡೆಪ್ಯುಟಿ ಕಮಿಷನರಾದ ಮ|| ಚಂಗಯ್ಯ ಶೆಟ್ಟರೂ ದಯಮಾಡಿದ್ದದ್ದು ಬಹಳ ಸಂತೋಷಕರವಾದ ವಿಷಯವು ಅಗ್ರಾಸನಾಧಿಪತಿಗಳ ಭಾಷಣವು ಸ್ವಲ್ಪವಾಗಿದ್ದರೂ, ಹಲವು ಒಳ್ಳೆಯ ಸಲಹೆಗಳಿಂದ ಭರಿತವಾಗಿದ್ದಿತು ಮೊದಲನೆಯ ದಿವಸ ಮ|| ವೆಂಕಟರಾಮಯ್ಯನವರು ಪರಸ್ಪರ ಸಹಾಯ ಸಂಘಗಳ ಪ್ರಯೋಜನವನ್ನು ಕುರಿತೂ, ಮ|| ಟಿ ವಿಶ್ವೇಶ್ವರಯ್ಯನವರು ವಿದ್ಯಾಭ್ಯಾಸವು ಕೋಆಪರೇಷನ್ ವಿಷಯಕ್ಕೆ ಅವಶ್ಯಕವೆಂತಲೂ, ಮ| ಎಚ್ ವೆಂಕಟರಾಮಯ್ಯನವರು ಕೈಗಾರಿಕೆ ಮತ್ತು ವ್ಯವಸಾಯಗಳ ಅಭಿವೃದ್ಧಿಯ ವಿಷಯದಲ್ಲಿ ಕೋಆಪರೇಟಿವ್ ಸಂಘಗಳು ಎಷ್ಟರಮಟ್ಟಿನ ಪ್ರಯೋಜನಕಾರಿಗಳಾಗಿವೆ ಎಂಬ ವಿಷಯದಲ್ಲಿಯೂ, ಮ| ನರಸಿಂಗರಾಯರು ಈ ಸಂಘಗಳಿಂದ ಜನಗಳಿಗುಂಟಾಗುವ ಸುಗುಣಾತಿಶಯಗಳು ಎಂಬುದನ್ನು ಕುರಿತೂ ಉಪನ್ಯಾಸ ಮಾಡಿದರು ಈ ಡಿಸ್ಟ್ರಿಕ್ಟಿನಲ್ಲಿರುವ ಸೊಸೈಟಿಗಳ ಕೆಲಸ ಕಾರ್ಯಗಳು ಬಹಳ ತೃಪ್ತಿಕರವಾಗಿ ನಡೆಯುತ್ತಿರುವುವಲ್ಲದೆ ಇತರ ಡಿಸ್ಟ್ರಿಕ್ಟುಗಳಲ್ಲಿರುವ ಸೊಸೈಟಿಗಳಿಗೆ ಮೇಲುಪಙ್ತಿಯಾಗಿರುವುದು ಕೇವಲ ಆನಂದಕರವಾದ ಸಂಗತಿಯಾಗಿದೆ —ಪ್ರೆಸಿಡೆಂಟರಾದ ಮ|| ವಿ ಆರ್ ತ್ಯಾಗರಾಜ ಅಯ್ಯರವರು ಸೊಸೈಟಿಗಳ ಡೆಲಿಗೇಟುಗಳಿಗೂ, ಸ್ಥಳೀಯ ಇತರ ದೊಡ್ಡಮನುಷ್ಯರಿಗೂ ತಾ 29ನೇ ಗುರುವಾರ ತಮ್ಮ ಬಂಗಲೆಯಲ್ಲಿ ಟೀ ಪಾರ್ಟಿಯನ್ನು ಏರ್ಪಡಿಸಿ, ರೈತ ಪ್ರಜೆಗಳಲ್ಲೂ ವರ್ತಕಮಂಡಲಿಯಲ್ಲೂ ತಮಗಿರುವ ಪ್ರೀತಿ ಗೌರವವನ್ನು ಪ್ರಕಾಶಗೊಳಿಸಿದರು ಇವರು ಇಲ್ಲಿಗೆ ದಯಮಾಡಿ ಮೂರು ತಿಂಗಳು ಮಾತ್ರ ಆಗಿ ಇಷ್ಟು ಕ್ಷಿಪ್ರದಲ್ಲಿಯೇ ಇವರಿಗೆ ವರ್ಗವಾಗಿರುವುದನ್ನು ನೋಡಿ ವಿಷಾದಪಡಬೇಕಾಗಿದೆ —ಈ ವಾರ ಇಲ್ಲಿಗೆ ಸರ್ಕಲ್ ಇನ್‌ಸ್ಪೆಕ್ಟರಾದ ಮ|| ಎಂ ಶ್ರೀನಿವಾಸರಾಯರು ಮತ್ತು ಸ್ಪೆಷಲ್ ಅ|| ರಾದ ಮ|| ಎ ಕೃಷ್ಣರಾಯರು ಬಂದು ಇಲ್ಲಿನ ಎ ವಿ ಸ್ಕೂಲನ್ನು ಪರೀಕ್ಷಿಸಿ ಈ ಸ್ಕೂಲು ಮೈಸೂರು ದೇಶದಲ್ಲಿ ಅತ್ಯುತ್ತಮವಾದ ಪಾಠಶಾಲೆಗಳಲ್ಲಿ ಒಂದೆಂದು ಅಭಿಪ್ರಾಯಪಟ್ಟಿರುವುದು ಸಂತೋಷಕರವಾಗಿದೆ ಈ ಸ್ಕೂಲು ದಿನಕ್ರಮದಲ್ಲಿ ಅಭಿವೃದ್ಧಿಯಾಗುತ್ತಿರುವುದರಿಂದಲೂ, ಈಗಿರುವ ಕಟ್ಟಡವು ಸಾಲದೆ ಇರುವುದರಿಂದಲೂ ಸದ್ಯಕ್ಕೆ ಇಲ್ಲಿರುವ ಎರಡು ಬಡಾವಣೆಗಳಲ್ಲಿ ಎರಡು ಬ್ರಾಂಚು ಸ್ಕೂಲುಗಳನ್ನು ಸ್ಥಾಪಿಸುವುದರಿಂದ ಅನುಕೂಲವಾದೀತು —ಇಲ್ಲಿನ ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮ|| ಟಿ ವಿಶ್ವೇಶ್ವರಯ್ಯನವರೂ, ಮಿಷನ್ ಸ್ಕೂಲುಗಳ ಲೇಡಿ ಸೂಪರಿಂಟೆಂಡೆಂಟರಾದ ಮಿಸ್ ಪೇಜಟ್‌ರವರೂ ತಮ್ಮ ತಮ್ಮ ಪಾಠಶಾಲೆಗಳಲ್ಲಿ «ಮಾಂಟಿಸೋರಿ» ಕ್ರಮದ ನವೀನ ಶಿಕ್ಷಣವನ್ನು ಏರ್ಪಡಿಸಿರುವರು —ಇಲ್ಲಿನ ಹೈಸ್ಕೂಲಿನಲ್ಲಿ ಸ್ಕೂಲ್ ಫೈನಲ್ ಪರೀಕ್ಷೆಗೆ ಕಳುಹಿಸಿದ 66 ವಿದ್ಯಾರ್ಥಿಗಳ ಪೈಕಿ 47 ಜನ ತೇರ್ಗಡೆಹೊಂದಿರುವುದು ಸಂತೋಷಪ್ರದವಾಗಿದೆ

ಮೈಸೂರು ಸರ್ಕಾರ ಹುಕುಮು.

ಹೊಸ ಸ್ಕೂಲುಗಳಿಗೆ ಗ್ರಾಂಟು ಸ್ಯಾಂಕ್ಷನ್ ಆಗಿರುವುದು —ಮುಂದೆ ಹೇಳುವ 19 ಸ್ಕೂಲುಗಳಿಗೆ ಸರ್ಕಾರದವರು ಗ್ರಾಂಟುಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆ —ಬೆಂಗಳೂರು ಚಿಕ್ಕಪೇಟೆ ಹಿಂದುಸ್ಥಾನಿ ಹುಡುಗರ ಸ್ಕೂಲು, ಬೆಂಗಳೂರು ಶೇಷಾದ್ರಿಪುರದ ಮಿಕ್ಸೆಡ್ ಎಲಿಮೆಂಟರಿ ಸ್ಕೂಲು, ಬೆಂಗಳೂರು ಕುಂಬಾರಪೇಟೆ ಇಂಗ್ಲಿಷ್ ಪಾರ್ಸಿ ಸ್ಕೂಲು ತಲಾ 10 ರೂಪಾಯಿ, ಮೈಸೂರು ಕಾನ್ವೆಂಟ್ ಇಂಗ್ಲಿಷ್ ಗರಲ್ಸ್ ಸ್ಕೂಲಿಗೆ ಸೇರಿದ ಇಂಡಸ್ಟ್ರಿಯಲ್ ಸ್ಕೂಲಿಗೆ ರೂ 10, ಮೈಸೂರು ಅಕ್ಷರಶಾಲೆಗೆ ರೂ 15, ಗುಂಡ್ಲುಪೇಟೆ ಸಂಸ್ಕೃತಪಾಠಶಾಲೆಗೆ ರೂ 8, ಬೆಂಗಳೂರು ತಾರಾಮಂಡಲಪೇಟೆ ಹಿಂದುಸ್ಥಾನಿ ರಾತ್ರಿ ಸ್ಕೂಲು, ಬೆಂಗಳೂರು ತಾ ದೊರೆಸಾನಿಪಾಳ್ಯದ ರೋಮನ್ ಕ್ರೈಸ್ತ ಪ್ರೈಮರಿ ಸ್ಕೂಲು, ಮಾಗಡಿ ತಾ|| ಸೋಲೂರು ರೋಮನ್ ಪ್ರೈಮರಿ ಪಂಚಮ ಸ್ಕೂಲು, ಬೆಂಗಳೂರು ತಾ|| ಕಸಕರಪುರದ ರೋಮನ್ ಪ್ರೈಮರಿ ಸ್ಕೂಲು, ತುಮಕೂರು ತಾ|| ಬೆಳ್ಳಾರು ಪಂಚಮ ಸ್ಟೇಟ್ ಸ್ಕೂಲು, ಮದ್ದಗಿರಿ ತಾ|| ಕೊದಗೇನಹಳ್ಳಿ ಕನ್ನಡ ಸ್ಟೇಟ್ ಸ್ಕೂಲು, ಬೆಂಗಳೂರು ಪಟ್ಟೂಲ್‌ಪೇಟೆ ಹಿಂದುಸ್ಥಾನಿ ಗರಲ್ಸ್ ಸ್ಕೂಲು, ಹಿರಿಯೂರು ತಾ ಐಮಂಗಲದ ಹಿಂದುಸ್ಥಾನಿ ಸ್ಕೂಲು, ಮಂಜರಾಬಾದು ತಾ|| ವಣಗೂರು ರೋಮನ್ ಪಂಚಮ ಸ್ಟೇಟ್ ಸ್ಕೂಲು, ಶ್ರವಣಬೆಳ್ಗೊಳದ ಕನ್ನಡ ಸ್ಟೇಟ್ ಸ್ಕೂಲು (ಒಂದು ವರುಷ ಹಂಗಾಮಿ), ಹೊಳೆನರಸೀಪುರದ ಸಂಸ್ಕೃತ ಪಾಠಶಾಲೆ, ಬೆಂಗಳೂರು ಶ್ರೀಶಾರದಾ ಗುರುಕುಲ ಸಂಸ್ಕೃತ ಸ್ಕೂಲು, ಆನೇಕಲ್ ತಾ|| ದೊಮ್ಮಸಂದ್ರದ ಶ್ರೀರಂಗನಾಥ ವಿಲಾಸ ನೈಟ್ ಸ್ಕೂಲು ತಲಾ ರೂ 5 ಈ ರೀತಿ ಆಗುವ 155 ರೂಪಾಯಿ ಗ್ರಾಂಟನ್ನು ಪ್ರತಿ ತಿಂಗಳೂ ಮೇಲ್ಕಂಡ 19 ಸ್ಕೂಲುಗಳಿಗೆ 1913 ನೇ ಜೂನ್‌ನಿಂದ ಪಾವತಿ ಮಾಡಬೇಕೆಂದು ಸರ್ಕಾರದವರು ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರ ಶಿಫಾರಸನ್ನು ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ

ಮ್ಯುನಿಸಿಪಲ್ ಮೀಟಿಂಗುಗಳು

ಮೈಸೂರು ಪಟ್ಟಣದ ಮ್ಯುನಿಸಿಪಾಲಿಟಿ

ಕಳೆದ ಶುಕ್ರವಾರ ಬೆಳಗ್ಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮ್ಯುನಿಸಿಪಲ್ ಮೀಟಿಂಗನ್ನು ನಡೆಸಿದರು ಕಳೆದ ಏಪ್ರಿಲ್ ತಿಂ[illegible]ಟಿಗೆ ಎಲ್ಲಾ ಬಾಬುಗಳಿಂದ ರೂ 10,796-7-11 ಪೈ ಜಮಾ ಆಯಿತು, ರೂ 13,311 11 ಪೈ ಖರ್ಚಾಯಿತು ಆ ತಿಂಗಳಲ್ಲಿ ಜನನ 122, ಮರಣ—ಕಾಲರಾ 22, ಸಿಡುಬು ,, ಜ್ವರ 11, ಇತರ ರೋಗಗಳು 10,, ಒಟ್ಟು 194 ಹೊರಗಿನಿಂದ ಬಂದವರೇ ಕಾಲರಾದಲ್ಲಿ ಸತ್ತರೆಂದೂ, ಪುರವಾಸಿಗಳಲ್ಲಿ ಯಾರಿಗೂ ಆ ರೋಗ ತಗಲಲಿಲ್ಲವೆಂದೂ ಹೆಲ್ತ್ ಆಫೀಸರವರು ತಿಳಿಸಿದರು ಮ್ಯುನಿಸಿಪಲ್ ಜಮಾ ಖರ್ಚನ್ನು ತನಿಖೆಮಾಡಿದ ಆಡಿಟರುಗಳು ಲೆಕ್ಕಗಳು ಸರಿಯಾಗಿವೆ ಎಂತಲೂ, ಮೊಹತರ್ಫಾ ಕಂದಾಯದ ವಸೂಲಿ ಹೋದ ಸಾಲಿಗಿಂತ ಹೆಚ್ಚಾಗಿದೆ ಎಂದೂ, ಅಕ್ಟ್ರಾಯಿ ಉತ್ಪತ್ತಿಯಲ್ಲಿ ಮಾತ್ರ 1,305 ರೂಪಾಯಿ ತನಕ ಕಡಿಮೆಯಾಗಿದೆ ಎಂತಲೂ ಬರೆದಿದ್ದರು ಈ ಅಕ್ಟ್ರಾಯಿ ಬಾಬಿನ ಉತ್ಪತ್ತಿಯನ್ನು ಸರಿಯಾಗಿ ಕ್ರಮಪಡಿಸಬೇಕಾದದ್ದು ಅಗತ್ಯವೆಂದು ಮೆಂಬರುಗಳು ಅಭಿಪ್ರಾಯಪಟ್ಟರು

ಕೃಷ್ಣರಾಜ ಮೊಹಲ್ಲೆಯಲ್ಲಿ ಆರೋಗ್ಯಕರವಾದ ದನಗಳ ಕೊಟ್ಟಿಗೆಯನ್ನು ಮ್ಯುನಿಸಿಪಾಲಿಟಿಯ ಹಣದಿಂದ ಕಟ್ಟಿಸಿಕೊಡುವ ಬಾಗದಲ್ಲಿ ಚರ್ಚೆನಡೆಯಿತು ಆ ಮೊಹಲ್ಲೆಯಲ್ಲಿರುವ ಕಸಾಯಿಗರು ಮ್ಯುನಿಸಿಪಲ್ ಕೊಟ್ಟಿಗೆಗೆ ತಮ್ಮ ದನಗಳನ್ನು ತಂದು ಕಟ್ಟಲು ಒಪ್ಪುವುದಿಲ್ಲವೆಂದು ಹೆಲ್ತ್ ಆಫೀಸರವರೂ, ಇತರ ಮೆಂಬರುಗಳೂ ತಿಳಿಸಿದ್ದರ ಮೇಲೆ ಈ ವಿಚಾರದಲ್ಲಿ ಮೊದಲು ಹೆಲ್ತ್ ಬೈಲಾಗಳನ್ನು ಜಾರಿಗೆ ತರುವುದು ಅವಶ್ಯವೆಂದೂ, ಹೆಲ್ತ್ ಕಮಿಟಿಯವರು ಈ ಬಾಗವನ್ನು ಚರ್ಚಿಸಿ ರಿಪೋರ್ಟು ಕಳುಹಿಸಬೇಕೆಂದೂ ತೀರ್ಮಾನ ಮಾಡಿದರು —ಪಟ್ಟಣದಲ್ಲಿ ಪ್ರಜೆಗಳಿಗೆ ಪ್ರಪಂಚಜ್ಞಾನವನ್ನು ವೃದ್ಧಿಮಾಡುವುದಕ್ಕಾಗಿ ಮ್ಯುನಿಸಿಪಾಲಿಟಿಯಿಂದ ದರ್ಮಾರ್ಥವಾದ ಪಬ್ಲಿಕ್ ಸರಸ್ವತೀ ಭಂಡಾರವನ್ನೂ ವಾಚಕಶಾಲೆಯನ್ನೂ ಇಡಿಸಬೇಕೆಂಬ ವಿಚಾರ ಚರ್ಚೆಯಾಯಿತು ಇದಕ್ಕಾಗಿ ಏರ್ಪಟ್ಟ ಕಮಿಟಿ ಮೆಂಬರುಗಳು ಸೇರಿ ಅದನ್ನು ಯಾವ ರೀತಿ ನಡೆಸಬಹುದೆಂದು ಯೋಚಿಸಿ ರಿಪೋರ್ಟು ಕಳುಹಿಸತಕ್ಕದೆಂದು ಮೆಂಬರುಗಳು ಇತ್ಯರ್ಥಮಾಡಿದರು

ಮ್ಯುನಿಸಿಪಾಲಿಟಿಯಲ್ಲಿ ಮಹಜರುಖಾನೆ ಲೆಕ್ಕಗಳನ್ನು ಬರೆದು ಕ್ರಮವಾಗಿ ಇಡುತ್ತಾ ಬರಬೇಕೆಂಬ ಉದ್ದೇಶದಿಂದ ಆರು ಮಂದಿ ಗುಮಾಸ್ತರನ್ನು ಎರಡು ವರುಷಗಳವರೆಗೂ ಹಂಗಾಮಿಯಾಗಿ ನೇಮಿಸಿಕೊಂಡಿದ್ದರು ಇವರಿಗೆ ಸಂಬಳ ತಲಾ 12 ರಿಂದ 15 ರೂಪಾಯಿಗೆ ಬಡ್ತಿ ಆಗುವುದಾಗಿದೆ ಈಗ ಈ ಆರು ಮಂದಿಯನ್ನೂ ಖಾಯಮಾಗಿ ನೇಮಿಸಿಕೊಳ್ಳಬೇಕೆಂದು ವೈಸ್ ಪ್ರೆಸಿಡೆಂಟರು ಸೂಚಿಸಿ ಅವರು ಮಾಡುವ ಕೆಲಸವು ತೃಪ್ತಿಕರವಾಗಿದೆ ಎಂದು ತಿಳಿಸಿದ್ದರ ಮೇಲೆ ಆ ರೀತಿ ಮಾಡಬಹುದೆಂದು ಮೆಂಬರುಗಳು ಸಮ್ಮತಿಪಟ್ಟರು —ಹೆಲ್ತ್ ಆಫೀಸಿನಲ್ಲಿ ಹನ್ನೆರಡು ವರುಷಗಳಿಂದ 15 ರೂಪಾಯಿ ಸಂಬಳದಲ್ಲಿ ಹಂಗಾಮಿಯಾಗಿ ಕೆಲಸಮಾಡುತ್ತಿರುವ ಗುಮಾಸ್ತೆಯನ್ನು ಖಾಯಂ ಮಾಡುವುದನ್ನು ಇನ್ನೊಂದು ಮೀಟಿಂಗಿನಲ್ಲಿ ಇತ್ಯರ್ಥಮಾಡಬೇಕೆಂದು ಮೆಂಬರುಗಳು ಅಭಿಪ್ರಾಯಪಟ್ಟರು

ಸಂತೆಪೇಟೆ ಬಿಡಾರ್ ರಸ್ತೆಯಲ್ಲಿ ಸಾಯರ್ ಕಚೇರಿಯ ಉತ್ತರಪಾರ್ಶ್ವಕ್ಕೆ ಇರುವ ಖಾಲಿ ನಿವೇಶನದಲ್ಲಿ ಮ್ಯುನಿಸಿಪಲ್ ಆಫೀಸನ್ನು ಕಟ್ಟಿಸಬೇಕೆಂದು ಚರ್ಚೆಯಾಯಿತು ಮಾರ್ಕೆಟ್ಟನ್ನು ಬದಲಾವಣೆ ಮಾಡಬೇಕಾಗಿರುವುದರಿಂದ ಆ ನಿವೇಶನವನ್ನು ಆಫೀಸಿಗೆ ವಿನಿಯೋಗಿಸುವುದು ತರವಲ್ಲವೆಂದೂ, ಬೇರೆ ಸ್ಥಳವನ್ನು ಆಫೀಸ್ ಕಟ್ಟಡಕ್ಕೆ ಚುನಾಯಿಸಬೇಕೆಂದೂ ಮೆಂಬರುಗಳು ಅಭಿಪ್ರಾಯಪಟ್ಟರು — ಈಗ ಮಾರ್ಕೆಟ್ಟಿನ ಪೂರ್ವಭಾಗದ ಹೊರಪಾರ್ಶ್ವದಲ್ಲಿ ಹಣ್ಣುಕಾಯಿ ಅಂಗಡಿಗಳನ್ನಿಟ್ಟುಕೊಳ್ಳಲಾಗಿರುವುದರಿಂದ ಆ ಅಂಗಡಿಗಳನ್ನು ಮಾರ್ಕೆಟ್ಟಿನೊಳಗೆ ಹಾಕುವಂತೆಯೂ, ಹೊರಪಾರ್ಶ್ವದಲ್ಲಿ ಕೆಲಸ ಕಾಮಗಾರಿಗಳನ್ನು ಮಾಡಿ ಹವಳ ಮೊದಲಾದ ಹೂವುಗಳನ್ನು ಇಡುವುದಕ್ಕೆ ಅವಕಾಶವಾಗಿ ಕೊಡಬೇಕೆಂದೂ ಮೆಂಬರುಗಳು ಒಪ್ಪಿಕೊಂಡರು —ಸ್ಕೂಲುಗಳ ಇನ್ಸ್‌ಪೆಕ್ಟರಾಗಿರುವ ಮ|| ಲಕ್ಷ್ಮೀನರಸಿಂಹಯ್ಯನವರನ್ನು ಮ್ಯುನಿಸಿಪಲ್ ಸ್ಕೂಲ್ ಕಮಿಟಿ ಮೆಂಬರಾಗಿ ನೇಮಿಸಿಕೊಳ್ಳಬೇಕೆಂದೂ, ಹಳೆ ಪೋಸ್ಟ್ ಆಫೀಸ್ ರಸ್ತೆಯನ್ನು • ಕಿನ್ನರ ಮೂಗರ ಮತ್ತು ಕುರುಹಿನ ಶಾರದಾಲಯ ರಸ್ತೆ ಎಂದು ಹೆಸರು ಬದಲಾವಣೆ ಮಾಡಬೇಕಾದ ಅಗತ್ಯವಿಲ್ಲವೆಂದೂ, ಲಕ್ಷ್ಮೀವಿಲಾಸ ಅಗ್ರಹಾರದಲ್ಲಿ ಉದ್ದಕ್ಕೂ ಮನೆಗಳ ಮುಂಭಾಗದಲ್ಲಿರುವ ಖಾಲಿ ನಿವೇಶಕ್ಕೆ ಆಯಾ ಮನೆಯವರು ಒಂದೇ ಆಕೃತಿಯ ಕಂಪೌಂಡು ಗೋಡೆ ಹಾಕಿಸಿಕೊಳ್ಳುವ ಬಾಗದಲ್ಲಿ ಆಯಾ ಮನೆಯವರಿಗೆ ಇನ್ನು ಮೂರು ತಿಂಗಳ ಕಾಲಾವಧಿ ಕೊಟ್ಟು, ಆ ರೀತಿ ಮಾಡದಿದ್ದಲ್ಲಿ ಆ ರಸ್ತೆಯನ್ನು ನಿಸ್ತರಿಸುವ ಯೋಚನೆಮಾಡತಕ್ಕದ್ದೆಂದೂ, ಮಾರ್ಕೆಟ್ಟಿನಲ್ಲಿಟ್ಟಿರುವ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಗಳ ಅಸಿಸ್ಟೆಂಟ್ ವೈದ್ಯರ ಸಂಬಳವನ್ನು ಬಡ್ತಿಮಾಡುವ ವಿಚಾರದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಅಭಿಮತವನ್ನು ಕೇಳಬೇಕೆಂದೂ, ಪಟ್ಟಣದಲ್ಲಿ ಬೀಳುವ ಕಸವನ್ನೂ ಗೊಬ್ಬರ ಮುಂತಾದದ್ದನ್ನೂ ಜಾಗ್ರತೆಯಿಂದಲೂ ಚೊಕ್ಕಟವಾಗಿಯೂ ಸಾಗಿಸುವುದಕ್ಕೆ ಮೋಟಾರ್ ವ್ಯಾಗನ್ ಗಾಡಿಯನ್ನು ಕೊಂಡು ತರಿಸುವ ವಿಷಯವನ್ನು ಹೆಲ್ತ್ ಕಮಿಟಿ ಮೆಂಬರುಗಳು ಚೆನ್ನಾಗಿ ಆಲೋಚನೆ ಮಾಡಿ ರಿಪೋರ್ಟು ಕಳುಹಿಸಬೇಕೆಂದೂ, ರಾಜಧಾನಿಯಲ್ಲಿ ಇಂಜಿನಿಯರ್ ಇಲಾಖಾ ಸೂಪರ್‌ವೈಜರಾಗಿರುವ ಮಿ|| ರಾಮಕೃಷ್ಣರಾಯರನ್ನು ಸರ್ಕಾರದವರು ಮ್ಯುನಿಸಿಪಲ್ ಇಂಜಿನಿಯರ್ ಕೆಲಸಕ್ಕೆ ನೇಮಿಸಿಕೊಡುವಂತೆ ಕೇಳಿಕೊಳ್ಳಬೇಕೆಂದೂ ಮೆಂಬರುಗಳು ತೀರ್ಮಾನಮಾಡಿರುತ್ತಾರೆ

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ

ಕಳೆದ ಶನಿವಾರ ಬೆಳಗ್ಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳು ಮ್ಯುನಿಸಿಪಲ್ ಆಫೀಸ್ ಕಟ್ಟಡದಲ್ಲಿ ಸಭೆ ಸೇರಿ ತಿಂಗಳು ಕಟ್ಟಳೆಯ ಮೀಟಿಂಗನ್ನು ನಡಿಸಿ, ವ್ಯವಸ್ಥೆ ಮಾಡಿದ ವಿಚಾರಗಳೇನೆಂದರೆ—

ಬಸವನಗುಡಿ ಮತ್ತು ಮಲ್ಲೇಶ್ವರದ ಬಡಾವಣೆಗಳಲ್ಲಿ ರಸ್ತೆಗಳ ದುರಸ್ತು ಮುಂತಾದದ್ದಕ್ಕೆ ಸರ್ಕಾರದ ರಾಜಾದಾಯದಿಂದ ಗ್ರಾಂಟು ಕೊಡಲಾಗದೆಂದು ಗವರ್ನ್‌ಮೆಂಟ್ ಸೆಕ್ರೆಟರಿಯವರು ಬರೆದಿದ್ದರು ಮ್ಯುನಿಸಿಪಲ್ ಮೆಂಬರುಗಳು ಈ ವಿಚಾರವನ್ನು ಚರ್ಚೆಮಾಡಿ, ಸರ್ಕಾರದವರು ವರುಷಕ್ಕೆ 25,000 ರೂಪಾಯಿ ನಂತೆ ಕೆಲವು ಕಾಲದ ತನಕ ಗ್ರಾಂಟು ಕೊಡಬೇಕೆಂದೂ, ಆ ಬಡಾವಣೆಗಳು ಆಬಾದಿಗೆ ಬಂದು ಮ್ಯುನಿಸಿಪಲ್ ಉತ್ಪತ್ತಿಯು ಹೆಚ್ಚಾದಾಗ್ಯೆ ಗ್ರಾಂಟನ್ನು ಸರ್ಕಾರದವರು ನಿಲ್ಲಿಸಿಬಿಡಬಹುದೆಂದೂ ಕೇಳಿಕೊಳ್ಳುವಂತೆ ತೀರ್ಮಾನಮಾಡಿದರು —ಮ್ಯುನಿಸಿಪಾಲಿಟಿಯಲ್ಲೂ ಆಸ್ಪತ್ರೆಗಳಲ್ಲೂ ಕೆಲಸಮಾಡುವ ವೈದ್ಯರು ಮತ್ತೂ ನೌಕರಮಾನೆಯರುಗಳ ಬೈಸಿಕಲ್‌ಗಳಿಗೆ ತೆರಿಗೆಯನ್ನು ಮಜಾಮಾಡಬೇಕೆಂದೂ, ಮ್ಯುನಿಸಿಪಾಲಿಟಿಯ ಪರವಾಗಿ ಮೊಕದ್ದಮೆಗಳನ್ನು ಹಿಡಿದು ಸಾಧಿಸುವುದಕ್ಕೆ ಮ್ಯುನಿಸಿಪಲ್ ಮೆಂಬರಾಗಿರುವ ಮಿ|| ಬಿ ವಿ ರಾಮಸ್ವಾಮಿ ಶೆಟ್ಟರನ್ನು ಖಾಯಂ ಲಾಯರಾಗಿ ನೇಮಕಮಾಡಿ ಅವರಿಗೆ ತಿಂಗಳಿಗೆ 100 ರೂಪಾಯಿನಂತೆ ಪ್ರಾಸಲ ಕೊಡುತ್ತಾ ಬರಬೇಕೆಂದೂ ಮೆಂಬರುಗಳು ಒಪ್ಪಿಕೊಂಡಿರುತ್ತಾರೆ

ಕನ್ನಂಬಾಡಿ ತಲಾವಿನ ವ್ಯವಸ್ಥೆ

ಸರ್ಕಾರ ಹುಕುಮಿನಲ್ಲಿ ಕಂಡ ಮುಖ್ಯ ಅಭಿಪ್ರಾಯಗಳು

ಆಳಲಕಟ್ಟೆ, ಹೇಮಗಿರಿ, ಮಂಡಗಿರಿ ಮುಂತಾದ ಎಡಾವಣೆಗಳಿಗೆ ಸುಮಾರಾಗಿ 20 ಲಕ್ಷ ರೂಪಾಯಿ ಖರ್ಚಾಗುವುದೆಂದು ಕನ್ನಂಬಾಡಿ ತಲಾವಿನ ಕಾಮಗಾರಿಯ ಯೋಚನೆ ಹುಟ್ಟುವುದಕ್ಕೆ ಮೊದಲೇ ಅಂದಾಜು ಮಾಡಲ್ಪಟ್ಟಿತ್ತು ಈಗ ಕನ್ನಂಬಾಡಿ ತಲಾವಿಗಾಗಿ ಜಮೀನುಗಳನ್ನು ಕೊಂಡುಕೊಳ್ಳುವುದಕ್ಕೆ ನೇಮಕವಾಗಿರುವ ಮಿ ಎಲ್ ಕೃಷ್ಣರಾಯರು ಮೇಲ್ಕಂಡ ಮೂರು ನಾಲೆಗಳ ಕಾಮಗಾರಿಗಳಲ್ಲೂ ಕೆಲವು ಬದಲಾವಣೆಗಳನ್ನೂ ವಿಚಾರಣೆಯನ್ನೂ ಮಾಡಿದಲ್ಲಿ ಕನ್ನಂಬಾಡಿ ತಲಾವಿನ ಕಾಮಗಾರಿಗೆ ತುಂಬಾ ಸಹಾಯವಾದೀತೆಂದು ಸೂಚಿಸುತ್ತಾರೆ

ಕನ್ನಂಬಾಡಿ ತಲಾವ್ ಕಾಮಗಾರಿಯ ಮೊದಲನೇ ಭಾಗಕ್ಕೆ ಜಮೀನುಗಳನ್ನು ಕೊಂಡುಕೊಳ್ಳಲು ಕಾಂಪೆನ್‌ಸೇಷನ್‌ಗಾಗಿ ಸರ್ಕಾರದವರು ಸುಮಾರು 10 ಲಕ್ಷ ರೂಪಾಯಿ ಖರ್ಚುಮಾಡಬೇಕಾದೀತೆಂದು ಕೆಲವು ವರುಷಗಳ ಹಿಂದೆಯೇ ರೆವಿನ್ಯೂ ಕಮಿಷನರ್ ಮಿ ಎ ರಂಗಸ್ವಾಮಿ ಅಯ್ಯಂಗಾರ್ಯರು ಅಂದಾಜು ಕಟ್ಟಿದ್ದರು ಈಗ ಜಮೀನುಗಳಿಗೆ ಹಣವನ್ನೇ ಪಾವತಿಮಾಡುವುದಾದರೆ ಅದಕ್ಕಿಂತ ಬಹಳ ಹೆಚ್ಚಾಗಿ ಖರ್ಚಾಗುವದೆಂದು ತಿಳಿದುಬರುತ್ತದೆ ಅದಕ್ಕೆ ಇನ್ನೂ 11 ಲಕ್ಷ ಬೇಕಾದೀತು ಈ 11 ಲಕ್ಷ ರೂಪಾಯಿಯನ್ನು ಖರ್ಚುಮಾಡಿ ಮೇಲ್ಕಂಡ ಮೂರು ಜಾಗಿ ನಾಲಾ ಬದಲಾವಣೆಯ ಕಾಮಗಾರಿ ಮಾಡಿಸಿಬಿಟ್ಟಲ್ಲಿ ಅದರಿಂದ ಜಮೀನಾದ ಪ್ರಯೋಜನವಾದೀತೆನ್ನುವುದಕ್ಕೆ ಸಂದೇಹವಿಲ್ಲ ಈ ಕಾಮಗಾರಿಗಳ ಅಂದಾಜುಪಟ್ಟಿಗಳು ತಯಾರಾಗಿ ಕೆಲವು ವರುಷಗಳಾಗಿದ್ದರೂ, ಅವುಗಳನ್ನು ಮಾಡಿಸಿಕೊಡಬೇಕೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಆಗಾಗ್ಗೆ ಕೇಳಿಕೊಳ್ಳುತ್ತಾ ಬಂದಿದ್ದರೂ ಬೇರೆ ಬಡಗ ಕೆಲಸದ ಕಾರ್ಯದ ಹೊರೆಯಿಂದ ಸರ್ಕಾರದವರು ಅವುಗಳನ್ನು ಸ್ಯಾಂಕ್ಷನ್ ಮಾಡಲಿಲ್ಲ ಈಗ ಕನ್ನಂಬಾಡಿ ತಲಾವು ಏರ್ಪಾಡಾಗುವುದರಿಂದ ನೀರಿನ ಕೊರತೆಯಾಗಿ, ಅದು ಒದಗಲಾರದೆಂಬ ಸಂದೇಹವೂ ಇಲ್ಲದೇಹೋಯಿತು ಈ ತಲಾವಿನ ಕೆಳಭಾಗದಲ್ಲಿರುವ ನಾಲೆಗಳನ್ನು ಬದಾವಣೆಮಾಡಬಹುದಾಗಿದೆ ಆದಕಾರಣ ಜಾಗರೂಕತೆಯಿಂದ ಕಾರ್ಯಭಾಗಗಳನ್ನು ನಡಿಸಿದ ಪಕ್ಷದಲ್ಲಿ ಮುಳುಗಿಹೋಗುವ ಜಮೀನುಗಳಿಗೆ ಪ್ರತಿಯಾಗಿ ಜಮೀನುಗಳನ್ನೇ ರೈತಪ್ರಜೆಗಳಿಗೆ ಕೊಡಿಸುವುದು ಪ್ರಜೆಗಳಿಗೂ ಸಂಸ್ಥಾನಕ್ಕೂ ಶ್ರೇಯಸ್ಕರವಾಗಿದೆಯೆಂದು ಸರ್ಕಾರದವರಿಗೆ ಕಂಡುಬಂದಿರುತ್ತದೆ

ಸ್ಪೆಷಲ್ ಅಕ್ವಿಜಿಷನ್ ಆಫೀಸರಾದ ಮಿ ಎಲ್ ಕೃಷ್ಣರಾಯರು ಸೂಪರಿಂಟೆಂಡಿಂಗ್ ಮತ್ತು ಚೀಫ್ ಇಂಜನಿಯರುಗಳ ಕೂಡ ಪರ್ಯಾಲೋಚಿಸಿ ಸೂಚಿಸಿರುವ ಏರ್ಪಾಡುಗಳನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿರುತ್ತಾರೆ ಆ ಏರ್ಪಾಡಿನ ಅಂಶಗಳೇನೆಂದರೆ—(1) ಈ ಬಾರೀ ತಲಾವಿಗೆ ಬೇಕಾಗುವ ಜಮೀನುಗಳನ್ನು ತೆಗೆದುಕೊಂಡರೆ ರೈತರಿಗೆ ಅವಕ್ಕೆ ಪ್ರತಿಯಾಗಿ ಸಾಧ್ಯವಾಗುವ ಮಟ್ಟಿಗೂ ಸಾಟಿಯಾದ ಜಮೀನನ್ನೇ ಕೊಡತಕ್ಕದ್ದು (2) ಇದಕ್ಕೋಸ್ಕರ ಅಕ್ಕಪಕ್ಕದಲ್ಲಿರುವ ವ್ಯವಸಾಯಕ್ಕೆ ಬರತಕ್ಕ ಸರ್ಕಾರಿ ಜಮೀನುಗಳನ್ನೆಲ್ಲಾ ಉಪಯೋಗಿಸಿಕೊಳ್ಳಬೇಕು ಈಗ ಆಳಲಕಟ್ಟೆ, ಹೇಮಗಿರಿ, ಮಂಡಗಿರಿ ನಾಲೆಗಳ ಕೆಳಗಿನ ಜಮೀನುಗಳ ಹಿಡುವಳಿದಾರರಲ್ಲಿ ಅನೇಕರು ತಮ್ಮ ಜಮೀನುಗಳಿಗೆ ಕೆಲವು ಭಾಗಗಳಿಗೆ ನೀರಿನ ವಸತಿಯನ್ನು ಶಾಶ್ವತವಾಗಿ ಕ್ರಮಪಡಿಸಿಕೊಡುವುದಾದರೆ ಉಳಿದ ಭಾಗಗಳನ್ನು ಸರ್ಕಾರಕ್ಕೆ ವಹಿಸಿಬಿಡುವುದಾಗಿ ಒಪ್ಪಿಕೊಂಡಿದ್ದಾರೆ ಮತ್ತು ಈಗ ಜಮೀನುಗಳನ್ನು ಕಳೆದುಕೊಳ್ಳುವ ವ್ಯವಸಾಯಗಾರರು ಸರ್ಕಾರದಿಂದ ಕೊಡಲ್ಪಡುವ ಹೊಲ್ಗಂಡದ ಜಮೀನುಗಳನ್ನು ಅಂಗೀಕರಿಸುವುದಕ್ಕೆ ಸಿದ್ಧರಾಗಿರುತ್ತಾರೆ (3) ಹೊಸದಾದ ಜಮೀನುಗಳಿಗೆ ಪ್ರತಿಫಲವನ್ನು ಯಾವ ರಿಯಾಯಿತಿ ಮೇರೆ ಪ್ರಕಾರ ಪಾವತಿಮಾಡಬೇಕೋ, ರೈತರು ಜಮೀನುಗಳನ್ನು ಸರ್ಕಾರಕ್ಕೆ ವಹಿಸುವ ಕಾಲದಲ್ಲಿ ಅವರಿಗೆ ಇನ್ಯಾವ ರಿಯಾಯಿತಿಗಳು ತೋರಿಸಬೇಕಾಗಿದೆಯೋ, ಇದನ್ನು ಪರ್ಯಾಯ ಪರಿಶೀಲನೆಗಿ ನಿಷ್ಕರ್ಷೆಮಾಡಿ, ಅಂಥಾ ಹಿಡುವಳಿದಾರರಿಂದ ಮುಚ್ಚಳಿಕೆಗಳನ್ನು ಬರೆಸಿಕೊಳ್ಳಬೇಕು (4) ಹಿಡುವಳಿದಾರರಿಂದ ತೆಗೆದುಕೊಳ್ಳುವ ಜಮೀನು ಅವರಿಗೆ ಹೊಸದಾಗಿ ಕೊಡುವ ಜಮೀನಿಗಿಂತ ಉತ್ಕೃಷ್ಟವಾದದ್ದಾಗಿದ್ದರೆ ಅವಕ್ಕೆ ರೈತರಿಗೆ ನಷ್ಟವಾಗದಂತೆ ತಕ್ಕ ಪ್ರತಿಫಲವನ್ನು ದ್ರವ್ಯರೂಪವಾಗಿ ಕೊಡಬೇಕು (5) ಇನಾಮತಿ ಜಮೀನುಗಳ ವಿಷಯದಲ್ಲಿ ಕಂದಾಯ ನಷ್ಟವಾಗದೆಯೂ ಇತರ ಯಾವ ನೂನ್ಯತೆಗಳೂ ಉಂಟಾಗದಂತೆಯೂ ಮೇಲ್ಕಂಡ ಏರ್ಪಾಡನ್ನೇ ಮಾಡತಕ್ಕದ್ದು (6) ಸರ್ಕಾರಕ್ಕೆ ಬೇಕಾಗುವ ಜಮೀನುಗಳು ಪರಾಧೀನವಾಗಿದ್ದರೆ ಅಂಥಾ ಪರಾಧೀನಕ್ಕೆ ಯಾವ ಕುಂದಕವೂ ಉಂಟಾಗದಂತೆ ಏರ್ಪಾಡುಮಾಡಬೇಕು ಅಂಥಾ ಸಾಲಗಾರರಿಗೆ ಸನ್ನಿವೇಶದಲ್ಲಿ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನ್ ಪ್ರಕಾರ ದ್ರವ್ಯರೂಪವಾದ ಪ್ರತಿಫಲವನ್ನು ಪಾವತಿಮಾಡಿ ಜಮೀನುಗಳನ್ನು ಸರ್ಕಾರಕ್ಕೆ ಪಡೆದುಕೊಳ್ಳಬೇಕು ಸಹಜವೆಂದು ಕಂಡುಬರುವ ಸಂದರ್ಭಗಳಲ್ಲಿ ಸಾಲಗಾರರಾಗಿರುವಂಥಾ ಜಮೀನ್‌ದಾರರಿಗೆ ಅವರ ಸಾಲವನ್ನು ತೀರಿಸುವುದಕ್ಕೆ ಸರ್ಕಾರದಿಂದ ಸಾಲವನ್ನು ಕೊಟ್ಟು, ಅವರಿಗೆ ಕೊಡುವ ಹೊಸ ಜಮೀನುಗಳನ್ನೇ ಈ ಸಾಲಕ್ಕೆ ಈಡುಮಾಡಿಕೊಂಡು, ಇಂಥಾ ಸಾಲವನ್ನು ರೈತರಿಂದ ಅನುಕೂಲವಾದ ಕಿಸ್ತುಗಳ ಪ್ರಕಾರ ವಸೂಲು ಮಾಡಿಕೊಳ್ಳಬೇಕು (7) ಸರ್ಕಾರದಿಂದ ರೈತರಿಗೆ ಸಾಟಿಯಾದ ಹೊಸ ಜಮೀನುಗಳನ್ನು ಕೊಡುವಲ್ಲಿ ಅಂಥಾ ರೈತರ ಪೈಕಿ ಯಾರಿಗಾದರೂ ಜಮೀನಿನ ಆಬಾದಿಗಾಗಿ ಸಾಲ ಬೇಕಾಗಿದ್ದರೆ ಆ ರೀತಿ ಅವರಿಗೆ ಸಾಲವನ್ನೂ ಕೊಡತಕ್ಕದ್ದು (8) ಸರ್ಕಾರದವರು ತೆಗೆದುಕೊಂಡ ಜಮೀನು ತರಿ ಅಥವಾ ಬಾಗಾಯತು ಆಗಿದ್ದು, ಅವಕ್ಕೆ ಪ್ರತಿಯಾಗಿ ಕೊಡುವ ಜಮೀನು ಸದ್ಯ ಖುಷ್ಕಿಯಾಗಿದ್ದು ತರಿ ಆಗುವುದಾದ ಪಕ್ಷದಲ್ಲಿ ಅಂಥಾ ಜಮೀನುಗಳ ಕಂದಾಯವನ್ನು ಕೆಲವು ವರುಷಗಳ ಕಾಲ ಸಂದರ್ಭಾನುಸಾರ ಪೂರ್ತಿಯಾಗಿಯೋ, ಒಂದು ಅಂಶವಾದರೋ ರಿಮಿಷನ್ ಮಾಡಬೇಕು (9) ಯಾವ ಕಾರಣದಿಂದಲಾಗಲಿ ಜಮೀನಿಗೆ ಜಮೀನು ಸಾಟಿಯಾಗಿ ಕೊಡುವುದು ಸಾಧ್ಯವಿಲ್ಲದೆ ಹೋದರೆ ದ್ರವ್ಯರೂಪವಾದ ಪ್ರತಿಫಲವನ್ನೇ ರೂಲಿನಂತೆ ಗೊತ್ತುಮಾಡಿ ಪಾವತಿ ಮಾಡಬಹುದು (10) ತಲಾವಿನೊಳಗೆ ಮುಳುಗಿಹೋಗುವ ಜಮೀನುಗಳ ಹಿಡುವಳಿದಾರರಿಂದಲೂ, ಅವು ಆಧಾರ ಭೋಗ್ಯ ವಿಗಳಾಗಿದ್ದರೆ ಅಂಥಾ ಪರಿವರ್ತನದಾರರಿಂದಲೂ ಸಾಟಿಯಾದ ಜಮೀನನ್ನು ತೆಗೆದುಕೊಳ್ಳುವ ಬಗ್ಗೆ ಅವರುಗಳಿಂದ ಕ್ರಮವಾದ ಮುಚ್ಚಳಿಕೆಗಳನ್ನು ಬರೆಸಿಕೊಳ್ಳಬೇಕು ಅಂಥಾ ಮುಚ್ಚಳಿಕೆ ಪತ್ರಗಳನ್ನು (ನಕಲನ್ನು) ಗವರ್ನ್‌ಮೆಂಟ್ ಆಡಿಟ್ ಆಫೀಸಿನಿಂದ ತಿದ್ದಿಸಿ ಗವರ್ನ್‌ಮೆಂಟಿಗೆ ಕಳುಹಿಸಬೇಕಾಗಿದೆ (11) ಮುಚ್ಚಳಿಕೆ ಬರೆದುಕೊಟ್ಟ ಬಳಿಕ ಅಂಥಾ ರೈತರ ಜಮೀನುಗಳನ್ನು ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು, ಮತ್ತು ಅಂಥವರಿಗೆ ಸಾಟಿಯಾದ ಜಮೀನು ಕೊಡಲು ಸಿದ್ಧವಾಗಿದ್ದರೆ ಕೂಡಲೇ ಕೊಟ್ಟು ಬಿಡಬೇಕು ಒಂದುವೇಳೆ ಸಾಟಿ ಜಮೀನನ್ನು ಒದಗಿಸುವುದು ಸಾವಕಾಶವಾದಲ್ಲಿ ಅದನ್ನು ಒಪ್ಪಿಸಿಕೊಡುವ ತನಕ ಮತ್ತು ಜಮೀನು ಮುಳುಗಿಹೋಗುವ ತನಕ ರೈತರ ವಶದಲ್ಲೇ ಜಮೀನು ಬಿಟ್ಟಿರಬಹುದು ಹಾಗಿಲ್ಲದೆ ಜಮೀನು ಮುಳುಗಿಹೋದ ಮೇಲೂ ಕೆಲವು ಕಾಲದ ತನಕ ಹೊಸ ಜಮೀನು ಸಾಟಿಯಾಗಿ ಕೊಡುವುದು ಸಾಧ್ಯವಿಲ್ಲವಾದರೆ ಅಂಥಾ ವಿಶೇಷ ಸಂದರ್ಭಗಳಲ್ಲಿ ಜಮೀನುಗಳ ನಿವ್ವಳ ಉತ್ಪತ್ತಿಗೆ ಜಾಸ್ತಿಯಾಗದಷ್ಟು ಪ್ರತಿಫಲವನ್ನು ದ್ರವ್ಯರೂಪವಾಗಿ ಡೆಪ್ಯುಟಿ ಕಮಿಷನರ ಸ್ಯಾಂಕ್ಷನ್ ಪಡೆದು ರೈತರಿಗೆ ಪಾವತಿ ಮಾಡಬಹುದು (12) ಕನ್ನಂಬಾಡಿ ತಲಾವಿನೊಳಗೆ ಮುಳುಗಿಹೋಗುವ ಸರ್ಕಾರಿ ಗ್ರಾಮಗಳ ಮತ್ತೂ ಇನಾಂ ಗ್ರಾಮಗಳ ರೈತರುಗಳ ಮನೆಮಠಾದಿಗಳಿಗೆ ಪ್ರತಿಯಾಗಿ, ಸಾಟಿ ಜಮೀನುಗಳನ್ನು ಪಡೆಯಲು ಮುಚ್ಚಳಿಕೆ ಬರೆದುಕೊಡುವವರಿಗೆ ಅಂಥಾ ಮನೆಮಠಗಳ ಕ್ರಯದ ರೊಖ್ಖವನ್ನೂ, ಬೆಂಕಿಯಿಂದ ಮನೆ ಕಳೆದುಕೊಂಡ ವ್ಯವಸಾಯಗಾರರಿಗೆ ಕೊಡುವ ಹಾಗೆ ಸಹಾಯಕ್ಕಾಗಿ ಮರಮುಟ್ಟು ಮುಂತಾದ ಸಾಮಾನುಗಳನ್ನೂ ಕೊಡತಕ್ಕದ್ದು

ಈ ವಿಚಾರವನ್ನು ಇತ್ಯರ್ಥಮಾಡುವಲ್ಲಿ ಕಷ್ಟವಾಗಲಿ ಸಂಶಯಗಳಾಗಲಿ ಕಂಡುಬಂದರೆ ಡೆಪ್ಯುಟಿ ಕಮಿಷನರವರೂ, ಸೂಪರಿಂಟೆಂಡಿಂಗ್ ಇಂಜನಿಯರವರೂ, ಸ್ಪೆಷಲ್ ಅಕ್ವಿಜಿಷನ್ ಆಫೀಸರವರೂ ಸೇರಿ ಯೋಚಿಸಿ ತಮ್ಮ ಒಟ್ಟಾದ ಅಭಿಮತವನ್ನು ರೆವಿನ್ಯೂ ಕಮಿಷನರವರಿಗೂ ಚೀಫ್ ಇಂಜನಿಯರವರಿಗೆ ತಿಳಿಸಬಹುದು —ಹೊಸ ನಾಲಾ ಬದಾವಣೆಗಳಿಗೆ ಸಂಬಂಧಪಟ್ಟ ವ್ಯವಸ್ಥಾ ಗೋಷವಾರೆಯಾದ ಪ್ಲಾನ್, ಅಂದಾಜು ಪಟ್ಟಿಗಳನ್ನು ಮೂರು ತಿಂಗಳೊಳಗೂ, ಆಪರ್‌ಪ್ಲಾನ್ ಮತ್ತು ಅಂದಾಜು ಪಟ್ಟಿಗಳನ್ನು ಆರು ತಿಂಗಳೊಳಗೂ ಚೀಫ್ ಇಂಜನಿಯರವರು ತಯಾರುಮಾಡಿಸಿ ಗವರ್ನ್‌ಮೆಂಟಿಗೆ ಕಳುಹಿಸಬೇಕಾಗಿದೆ ಈ ತಲಾವಿನ ವಿಚಾರವನ್ನೇ ಬೇರೆ ಮಾಡುವುದಕ್ಕಾಗಿ ಡೆಪ್ಯುಟಿ ಕಮಿಷನರವರು ಪ್ರತ್ಯೇಕವಾದ ಒಂದು ರೆವಿನ್ಯೂ ಸಬ್ ಡಿವಿಷನ್ ಕಲ್ಪಿಸಿಕೊಟ್ಟು, ಸ್ಪೆಷಲ್ ಅಕ್ವಿಜಿಷನ್ ಆಫೀಸರನ್ನು ಆ ರೆವಿನ್ಯೂ ಸಬ್ ಡಿವಿಷನ್ ಆಫೀಸರಾಗಿಮಾಡಿ, ಬೇಕಾದ ಇಬ್ಬರು ಡೆಪ್ಯುಟಿ ಅಮಲ್ದಾರರುಗಳನ್ನೂ ನಾಲ್ವರು ಶೇಕ್ದಾರರುಗಳನ್ನೂ ಅವರ ಕೈಕೆಳಗೆ ಕೆಲಸಕ್ಕಾಗಿ ನೇಮಿಸಿಕೊಡಬೇಕೆಂದು ಶಿಫಾರಸು ಮಾಡಿರುವುದನ್ನು ರೆವಿನ್ಯೂ ಕಮಿಷನರವರು ಒಪ್ಪಿಕೊಂಡಿರುತ್ತಾರೆ ಗವರ್ನ್‌ಮೆಂಟಿನವರು ಅದರಂತೆ ಆ ಏರ್ಪಾಡನ್ನು ಸ್ಯಾಂಕ್ಷನ್ ಮಾಡಿರುತ್ತಾರೆ —ಲ್ಯಾಂಡ್ ಅಕ್ವಿಜಿಷನ್ ಕಾನೂನಿನ ರೂಲಿನ 11 ನೇ ನಿಬಂಧನೆಯು ಸ್ಪೆಷಲ್ ಅಕ್ವಿಜಿಷನ್ ಆಫೀಸರಿಗೆ ಅನ್ವಯಿಸತಕ್ಕದ್ದಲ್ಲ ಈಗ ಅವರು ರಚಾಯಿಸಿರುವ ಕಾಂಪೆನ್‌ಸೇಷನ್ (ಪ್ರತಿಫಲ) ಅಂದಾಜು ಮೊಬಲಗನ್ನು ಶೇಕಡಾ 10 ರ ತನಕ ಜಾಸ್ತಿ ಮಾಡುವುದಕ್ಕೂ, ಒಬ್ಬರೆ ತನಗೆ ಪ್ರತಿಫಲವಾಗಿ 2,000 ರೂಪಾಯಿನ ತನಕ ಪಾವತಿಮಾಡುವುದಕ್ಕೂ ಸ್ಪೆಷಲ್ ಅಕ್ವಿಜಿಷನ್ ಆಫೀಸರಿಗೆ ಅಧಿಕಾರ ವಹಿಸಿದೆ ಈ ಮೊಬಲಗಿಗಿಂತ ಹೆಚ್ಚು ಹಣ ಪಾವತಿ ಆಗಬೇಕಾದ ಸಂದರ್ಭದಲ್ಲಿ ಅವರು ಡೆಪ್ಯುಟಿ ಕಮಿಷನರವರಿಗೆ ತಿಳಿಸಿ ಅವರ ಅಭಿಮತವನ್ನು ಪಡೆಯ ಬಹುದಾಗಿದೆ

ಇಂಥಾ ಕಷ್ಟಕರವಾದ ಕಾರ್ಯದ ಆರಂಭದಶೆಯಲ್ಲಿ ಸ್ಪೆಷಲ್ ಅಕ್ವಿಜಿಷನ್ ಆಫೀಸರ್ ಮಿ ಎಲ್ ಕೃಷ್ಣರಾಯರು ತುಂಬಾ ಚಿಂತೆಪಟ್ಟು ಉತ್ಸಾಹದಿಂದಲೂ ಜಾಗರೂಕತೆಯಿಂದಲೂ ಕಾರ್ಯಗಳನ್ನು ನಡಿಸಿರುವುದನ್ನು ನೋಡಿ ಸರ್ಕಾರದವರು ಅವರ ಕೆಲಸಗಳನ್ನು ಸಂತೋಷದಿಂದ ಮೆಚ್ಚಿಕೊಂಡಿರುತ್ತಾರೆ

ಬಾತ್ಮೀದಾರರಿಗೆ ನೋಟೀಸ್.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮೀಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮೀಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ

...ವರುಷ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಕೇವಲ ವಿಳಾಸವಿಲ್ಲದೆ ಬರತಕ್ಕ ಪತ್ರಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ಕಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಈ ಥವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಸಹ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಕರಸ್‌ಪಾಂಡೆನ್ಸ್

ಸರ್ಕಾರದ ಚಟುವಟಿಕೆ

ಅಯ್ಯಾ,

ನಾನು ಕಳೆದ ವರುಷ ಅಕ್ಟೋಬರ್ ತಿಂಗಳಲ್ಲಿ ಮೈಸೂರಿನಲ್ಲಿ ನಡೆದ ದಸರಾ ಇಂಡಸ್ಟ್ರಿಯಲ್ ಮತ್ತು ಅಗ್ರಿಕಲ್ಚರಲ್ ಯಗ್ಜಿಭಿಷನ್‌ಗೆ ಡೆಪ್ಯುಟಿ ಕಮಿಷನರ್ ಸಾಹೇಬರವರ ಆರ್ಡರ್ ಮೇರೆ ಸಾಮಾನುಗಳ ಉಸ್ತುವಾರಿ ಬಗ್ಗೆ ಹೋಗಿದ್ದು, ಆ ತಿಂಗಳೆಲ್ಲಾ ಯಗ್ಜಿಭಿಷನ್ ಹಾಲಿನಲ್ಲಿ ಕೆಲಸ ಮಾಡಿದೆನು ಎಂಟು ತಿಂಗಳಿಂದಲೂ ಗಿರಿಕ್ವೆಸ್ಟಾಗ್ಯೂ ಇದುವರೆಗೂ ನನಗೆ ಭತ್ತ್ಯದ ಹಣವಾಗಲೀ, ಟ್ರಾವಲಿಂಗ್ ಅಲೋಯನ್ಸಾಗಲೀ ದೊರೆಯಲಿಲ್ಲ ಬಡ ನೌಕರರು ಊರಿಂದ ಊರಿಗೆ ಹೋಗಿ ತಮ್ಮ ಕೈಯಿಂದ ಹಣ ಖರ್ಚುಮಾಡಿಕೊಂಡು ಸರ್ಕಾರದ ಕೆಲಸವನ್ನು ಮಾಡಿ, ಈ ರೀತಿ ಸಂಕಟಪಡುತ್ತಿರುವುದನ್ನು ದಯಾಳುಗಳಾದ ಗವರ್ನ್‌ಮೆಂಟಿನವರು ಗಣನೆಗೆ ತಾರದೆ ಇರುವುದು ತುಂಬಾ ಆಶ್ಚರ್ಯವೂ, ವ್ಯಸನವೂ ಆಗಿದೆ ಈ ವಿಷಯದಲ್ಲಿ ಯಗ್ಜಿಭಿಷನ್ ಸೆಕ್ರೆಟರಿಯವರಿಗೆ ಅರ್ಜಿ ಮೂಲಕ ಅರಿಕೆ ಮಾಡಿಕೊಂಡೆನು ಈ ವರೆವಿಗೂ ಉತ್ತರವೇ ಇಲ್ಲ ಈಗಲಾದರೂ ಸಂಬಂಧಪಟ್ಟವರು ಬಡವನ ಪ್ರಾರ್ಥನೆಯನ್ನು ಚಿತ್ತೈಸಿ ನನಗೆ ಸಲ್ಲಬೇಕಾದ ಭತ್ಯದ ಹಣ, ಟ್ರಾವಲಿಂಗ್ ಅಲೋಯನ್ಸು ಸಹಾ ಕೊಡಿಸುವರೆಂದು ನಿರೀಕ್ಷಿಸುತ್ತೇನೆ

ರಕ್ತಾಪುರ ಹಾಸನ ಜ ನಂಜರಾಜಯ್ಯ

ಪಿಂಡಾರೀಯ ಮಹಾ ಬುದ್ಧಿ

ಅಯ್ಯಾ,

ನಮ್ಮ ಮೇ ತಾ 22 ನೇ ಗುರುವಾರದ ಪತ್ರಿಕೆಯಲ್ಲಿ ಪಿಂಡಾರಿ ವಿಚಾರವಾಗಿ ಕೆಲವು ವಿಚಾರಗಳನ್ನು ಪ್ರಕಟಿಸಿರುತ್ತೀರಿ ಹಿಂದುಸ್ಥಾನದಲ್ಲಿ ಒಬ್ಬ ವರ್ತಕನು (00 ರೂಪಾಯಿ ಸಾಲ ಕೊಟ್ಟು ತೆಯೂ, ಒಟ್ಟು ಸಮೇತ 10,1 3 ರೂಪಾಯಿಗೆ ದಾವಾಮಾಡಿ ಕೋರ್ಟಿನ ಖರ್ಚು ಸಮೇತ 1 (6 (ರೂಪಾಯಿಗೆ ಡಿಕ್ರಿಪಡೆದಿರುತ್ತಾನೆಂತಲೂ, ಇನ್ನೂ ಕೆಲವು ಪಿಂಡಾರಿ ಸಂಬಂಧವಾಗಿ ಪ್ರಕಟಿಸಿರುತ್ತೀರಿ ಮೊಲ್ಕಂಡ 00 ರೂಪಾಯಿನ ದಾವಾ ಯಾವ ಕೋರ್ಟಿನಲ್ಲಿ ನಡೆದಿರುತ್ತೆ 1 (6 (ರೂಪಾಯಿಗೆ ಹ್ಯಾಗೆ ಡಿಕ್ರಿ ಆಯಿತು ಈ ವಿಚಾರದಲ್ಲಿ ನಮ್ಮ ತಿಳುವಳಿಕೆಗೋಸ್ಕರ ದಯವಿಟ್ಟು ಜವಾಬು ಬರಬೇಕಾಗಿ ಕೋರುತ್ತೇನೆ ಮತ್ತು ಈ ವಿಚಾರದಲ್ಲಿ ತಪಶೀಲಾಗಿ ಜವಾಬು ಜೂನ್ 5 ನೇ ಗುರುವಾರ ನಮ್ಮ ಪತ್ರಿಕೆಯಲ್ಲಿ ಎಡಿ

ಸಣ್ಣಗೌಡ, ಕಗ್ಗೆರೆ

[ನಾವು ಕಳೆದ 22 ನೇ ತಾ ಪತ್ರಿಕೆಯಲ್ಲಿ ಮೇಲ್ಕಂಡಂತೆ ಪ್ರಕಟಿಸಿರುವುದು ನಿಜ ಅದರಲ್ಲಿ ನಾವು ಹೇಳಿರುವಂತೆ - ಸಂಯುಕ್ತ ಆಧಿಸತ್ಯಗಳ ನ್ಯಾಯ ವಿಧಾಯಕ ಸಭೆಯ ಕೌನ್ಸಿಲರವರಾದ ನಿಜಾಮ್ ನಗರದ ಮಿ| ಮಹಾ ಗುಲಾಂ ಉಸಾಕ್ಸ್ ಎಂಬವರು ಸರ್ಕಾರದವರಿಗೆ ಅರಿಕೆಮಾಡಿರುತ್ತಾರೆ ಅವರು ಕೊಟ್ಟ ವೃತ್ತಾಂತಗಳು ನಾವು ತಿಳಿದಿರುವಂತೆ ಮೊಗಲು ಆಗ ಪ್ರಕಟವಾಗಿರುವ ವಲ್ಲದೆ ಇ ಥಾ ಊರಿನ ಇಂಥಾ ಕೋರ್ಟಿನಲ್ಲಿ ಇಂಥಾ ಸಾಹುಕಾರನು ಡಿಕ್ರಿ ಪಡೆದುಕೊಂಡಿರುವನೆಂದು ಪ್ರಕಟವಾಗಿಲ್ಲ ಆದರೂ ಆ ಕೌನ್ಸಿಲ್ ಮೆಂಬರು ಅಂಥಾ ವಿವರಗಳನ್ನೆಲ್ಲಾ ಗವರ್ನ್‌ಮೆಂಟಿನವರಿಗೆ ತಿಳಿಸಿಯೇ ಇರಬೇಕೆಂದು ನಂಬುತ್ತೇವೆ ವಿಚಾರಮಾಡಿದಲ್ಲಿ ಅಂಥಾ ಎಷ್ಟು ದರಗಳು ನಮ್ಮ ಸೀಮೆಯಲ್ಲೂ ಉಂಟೆಂದು ಗೊತ್ತಾಗುವವು —ಎಡಿ]

ರಾಜಧಾನಿಯ ನೀರಿನ ಇಲಾಖೆಯ ಮೇಲೆ ಆಕ್ಷೇಪಣೆ

ಅಯ್ಯಾ,

ನಮ್ಮ ಮಹಾರಾಜರು ಗವರ್ನ್‌ಮೆಂಟಿನವರು ಪ್ರಜೆಗಳ ಸೌಖ್ಯಕ್ಕೋಸ್ಕರ ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ಶುದ್ಧವಾದ ನೀರನ್ನು ಒದಗಿಸಿಕೊಟ್ಟು ತುಂಬಾ ಉಪಕಾರ ಮಾಡಿರುತ್ತಾರೆ ಅನ್ಯಾಯವಾಗಿ ಹೆಚ್ಚು ನೀರು ಖರ್ಚಾಗಬಾರದೆಂಬ ಇರಾದೆಯಿಂದಲೇ 2 ಪಟ್ಟಣಗಳಲ್ಲಿಯೂ ವಾಟರ್ ಮೀಟರ್ ಇಟ್ಟಿರುತ್ತಾರೆ ಆದರೆ ವಾಟರ್ ಮೀಟರಿಗೆ ಬೆಂಗಳೂರಲ್ಲಿ ನಿಗಾ ಕೊಡುವಷ್ಟು ಮೈಸೂರಲ್ಲಿ ಇಲ್ಲವೆಂದು ತೋರುತ್ತೆ ಬೆಂಗಳೂರಿಗಿಂತ ಮೈಸೂರಲ್ಲಿ ನಲ್ಲಿ ಏರ್ಪಾಡು ಮೊದಲಾದಾಗ್ಯೂ ಇನ್ನೂ ಅನೇಕ ಮನೆಗಳಿಗೆ ಮೀಟರ್ ಇಟ್ಟಿಲ್ಲ ಕೇಳಿದರೆ ಸ್ಟಾಕ್ ಇಲ್ಲ ಆಗಿದೆ, ಒಂದು ಕಡೆಯಿಂದ ಇಟ್ಟುಕೊಂಡು ಬರುತ್ತಾ ಇದ್ದೇವೆ ಎಂತ ಸಮಜಾಯಿಷಿ ಮಟ್ಟಿಗೆ ಹೇಳುತ್ತಾರೆ ಮೀಟರ್ ಇಟ್ಟು ಇರತಕ್ಕ ಮನೆಗಳಲ್ಲಿ ಕೆಲವು ಕಾಲದ ನಂತರ ಮಿನಿಮಂ ರೇಟಿಗಿಂತ ನೀರು ಹೆಚ್ಚಾಗಿ ಖರ್ಚಾಗುವದಿಲ್ಲವೆಂದು ತೋರಿಬಂದಲ್ಲಿ ವಾಟರ್ ಸಪ್ಲೈ ಇಂಜನಿಯರು ಆ ಮನೆಗೆ ಮೀಟರ್ ವಜಾ ಮಾಡಬಹುದೆಂದು ಗೌರ್ನಮೆಂಟ್ ರೂಲ್ಸು ಇದ್ದಾಗ್ಯೂ ನಲ್ಲಿ ಇಟ್ಟುಕೊಂಡು 1 1 ವರುಷಗಳಾದಾಗ್ಯೂ ನೀರು ತಹಲ್ ವರೆಗೆ ಕಮ್ಮಿಯಾಗಿ ಉಪಯೋಗಿಸತಕ್ಕ ಮನೆಗಳಿಗೆ ಮೀಟರನ್ನು ವಜಾ ಮಾಡಿಲ್ಲ ಮೀಟರ್ ಬಾಡಿಗೆ ಎಂಬದಾಗಿ ಪ್ರತಿ ಮಾಹೆಯಲ್ಲೂ 1 ಆಣೆಯಂತೆ ಅವರ ಆಫೀಸಿಗೆ ತೆಗೆದುಕೊಂಡು ಹೋಗಿ ಆಫೀಸ್ ಸೂಪರಿಂಟೆಂಡರ ಸಮಯ ಕಾದು ಅವರಿಗೆ ಪಾವತಿ ಮಾಡಿ ರಶೀತಿ ಪಡೆಯಬೇಕಾದ ಕೆಲಸವನ್ನು ಸಹ ವಾಟರ್ ಸಪ್ಲೈ ಡಿವಿಜನ್ ಆಫೀಸಿನವರು ನಲ್ಲಿ ಮತ್ತು ಮೀಟರ್ ಇಟ್ಟುಕೊಡತಕ್ಕವರಿಗೇನೇ ವಹಿಸಿರುತ್ತಾರೆ ಆ ರೀತಿ ಮಾಡದಿದ್ದರೆ ಕಾಯಿದೆಯ ಮೇಲೆ ನೋಟೀಸ್ ಕೊಟ್ಟು ನೀರು ನಿಲ್ಲಿಸಿಬಿಡುತ್ತಾರೆ ಈ ಮೀಟರ್ ವಿಚಾರ ... ಆಫೀಸಿನಲ್ಲಿ ಇರುವ ಸೂಪರಿಂಟೆಂಡರ ಕೆಲಸಗಳ ವಿಶೇಷವನ್ನು ಇನ್ನೊಂದು ವೇಳೆ ವಿವರಿಸುತ್ತೇನೆ ಮೀಟರ್ ಇರತಕ್ಕ ಮನೆಯವರಿಗೆ ಮನೆ ಕಂದಾಯದ ಮೇಲೆ 1,000 ಗ್ಯಾಲನ್‌ಗೆ ಕಮ್ಮಿ ಇಲ್ಲದೆ ಪ್ರತಿ ಮಾಹೆಯಲ್ಲಿಯೂ ನೀರು ಕೊಡುತ್ತಾರೆ ಅದಕ್ಕಿಂತ ಜಾಸ್ತಿ ಖರ್ಚಾದಲ್ಲಿ ಪ್ರತಿ ಸಾವಿರ ಗ್ಯಾಲನ್‌ಗೂ 4 ಆಣೆ ಇದು ಬೇರೆ ಬಿಲ್ ಬರುತ್ತದೆ ಮೀಟರ್ ಇರತಕ್ಕ ಮನೆಯವರಿಗೂ ಇಲ್ಲದ ಮನೆಯವರಿಗೂ ನೀರಿನ ತೆರಿಗೆ, ಮನೆ ತೆರಿಗೆ, ದೀಪದ ತೆರಿಗೆ, ಮತ್ತು ಕನ್ಸರ್ವೆನ್ಸಿ ತೆರಿಗೆ ಮಟ್ಟಿಗೆ ಒಂದೇ ಸಮನಾಗಿರುತ್ತೆ ಆದರೆ ನೀರಿನ ವಿಷಯದಲ್ಲಿ ಮೀಟರ್ ಇಲ್ಲದೆ ನಲ್ಲಿ ಇಟ್ಟುಕೊಂಡಿರತಕ್ಕವರು ತುಂಬಾ ಪುಣ್ಯವಂತರು ಇವರುಗಳು ಪ್ರತಿ ತಿಂಗಳಲ್ಲಿಯೂ ಪರಿಮಿತಿ ಇಲ್ಲದಷ್ಟು ಸಾಧಾರಣವಾಗಿ 10 15 ಸಾವಿರ ಗ್ಯಾಲನ್ ನೀರು ಉಪಯೋಗಿಸಿಕೊಂಡು ತರಕಾರಿ ಮತ್ತು ಚಮಾಲು ಕಾಂಪೌಂಡಿನಲ್ಲಿ ಬೇಕಾದ ಗಿಡಗಳು ಬೆಳೆಸಬಹುದು ಇದನ್ನು ವಾಟರ್ ಸಪ್ಲೈ ಡಿವಿಜನ್ ಆಫೀಸಿನವರು ನೋಡಿಯೂ ಅಡ್ಡಿ ಮಾಡದೇಯೂ ಮೀಟರ್ ಇಡದೇಯೂ ಇರತಕ್ಕದ್ದು ತುಂಬಾ ಆಶ್ಚರ್ಯವೆ ಸರಿ ಎಷ್ಟು ಲಂಬಿಸಿ ಬರೆದಾಗ್ಯೂ ಅಭಿಪ್ರಾಯ ಒಂದೇ ಆಗುತ್ತೆ ದಯಾಳುವಾದ ಸರ್ಕಾರದವರಿಗೆ ಎಲ್ಲಾ ಪ್ರಜೆಗಳೂ ಒಂದೇ ಸಮನಾದದ್ದರಿಂದ ಈ ಮೇಲ್ಕಂಡ ವಿಷಯದಲ್ಲಿ ನಿಗಾ ಕೊಟ್ಟು ಸರ್ಕಾರದವರಿಗೆ ನೂಕ್ತ ತೋರಿಬರುವಂತೆ ಮೀಟರ್ ಎಲ್ಲಾ ಮನೆಗೂ ಇಡಿಸಿಯೇ ಆಗಲಿ, ಅಥವಾ ವಜಾ ಮಾಡಿಸಿಯೇ ಆಗಲಿ ತೊಂದರೆಯನ್ನು ನಿವಾರಣೆ ಮಾಡ್ತಾರೆಂದು ನಂಬಿದ್ದೇನೆ

ಚಾಮರಾಜ ಮೊಹಲಾ, ಮೈಸೂರು ಓ ಎನ್ ರಾಮಚಂದ್ರರಾವ್

ತಾಲ್ಲೋಕು ವರ್ತಮಾನಗಳು

ದೊಡ್ಡ ಬಾಣಾವಾರ —ಈ ಗ್ರಾಮದಲ್ಲಿ ಮಳೆಯು ಸ್ವಲ್ಪ ಬಂದು ಕಾಲರಾ ವಗೈರೆ ಯಾವ ಗಲಾಟೆಯೂ ಇಲ್ಲದೆ ಸುರಕ್ಷಿತವಾಗಿರುತ್ತೆ ಆದರೆ ಈ ಗ್ರಾಮದ ಯೂನಿಯನ್ನಿನಲ್ಲಿ ಗಣಪತಿ ದೇವಸ್ಥಾನದ ಲಿಲಾಯಿತು ಹುಲಶಿ ಬೀದಿ ವರಿವಿಗ ಸ್ವಲ್ಪ ಮಳೆ ಬಂದಷ್ಟೇ ಆದರೆ ದಾರಿಯಲ್ಲಿ ತಿರುಗಾಡುವುದಕ್ಕೆ ಬಹಳ ತೊಂದರೆಯಾಗಿ ಜಾರಿಬೀಳುವುದು ವಗೈರೆ ಕಷ್ಟಕ್ಕೆ ಗುರಿಯಾಗಬೇಕಾಗುತ್ತೆ ಈಗ 1 ರಿ ವರುಷದಿಂದ ಕಾಮಗಾರಿಗೆ ಅಂದಾಜು ಆಗುವುದೂ, ಹಾಗೇ ಮನ್ನಾ ಆಗುವುದೂ, ಈ ರೀತಿ ಆಗುತ್ತಾ ಬಂದಿದೆ ಯಾವ ಕಾಲಕ್ಕೆ ಕಾಮಗಾರಿ ಆದೀತೋ ಗೊತ್ತಿಲ್ಲ —ಗೌ| ಗರಲ್ಸ್ ಸ್ಕೂಲಿಗೆ ಬಂದಿರುವ ಹೆಡ್ ಮಿಸ್ಟ್ರೆಸ್ ರವರು ಬಾಲಕಿಯರಿಗೆ ಬಹಳ ಮುತುವರ್ಜಿಯಿಂದ ಕಲಿಸುತ್ತಾ ಗೌರವವನ್ನು ಸಂಪಾದಿಸುತ್ತಾ ಇದ್ದಾರೆ ಅವರಿಗೆ ಸಂಗೀತದ ಮಾಸ್ತರೂ ಇದ್ದರೆ ಎಷ್ಟೋ ಅನುಕೂಲವಾದೀತು —ಇಲ್ಲಿಗೆ ಬಂದಿರುವ ಹೆಡ್ ಮಾಸ್ಟರ್ ಅವರೋ ಬಲಶಾಲಿಗಳು ಬಾಲಕರಲ್ಲಿಯೂ, ಮಾಸ್ಟರುಗಳಲ್ಲಿಯೂ ಒಳ್ಳೇ ನಡತೆಗಳನ್ನು ತೋರಿಸುತ್ತಾ ವಿದ್ಯಾಭಿವೃದ್ಧಿಗೆ ಪ್ರೋತ್ಸಾಹಪಡಿಸುತ್ತಾ ಇದ್ದಾರೆ

ಬೀರೂರು —ಕಳೆದ ತಾ 29 ರಲ್ಲಿ ಬೀರೂರು ರೈಲ್ವೆ ಸ್ಟೇಷನ್‌ನಲ್ಲಿ ಎಲ್ಲಾ ಸಣ್ಣ ನೌಕರರುಗಳೂ ತಮಗೆ ಸಂಬಳ ಸಾಲದೆಂದು ಕೆಲಸಕ್ಕೆ ಬಾರದ ನಿಂತುಹೋದ ಸಬಬು ದೊಡ್ಡ ನೌಕರರು ಸ್ಟೇಷನ್ ಮಾಸ್ಟರು ಲಾಗಾಯಿತು ಸಣ್ಣ ನೌಕರರುಗಳ ಕೆಲಸವನ್ನು ರಾತ್ರಿ ಹಗಲೂ ಮಾಡಿ ಪೂರೈಸಿ, ಈ ಬಗ್ಗೆ ಅವರ ಮೇಲ್ಪಟ್ಟ ಆಫೀಸರಿಗೆ ತಂತೀ ವರ್ತಮಾನ ಕೊಟ್ಟರು ಸಂಬಳ ಎರಡು ರೂಪಾಯಿ ಎಡ್ಡಿ ಕೊಡುವದಾಗಿಯೂ, ತಮ್ಮ ತಮ್ಮ ಕೆಲಸವನ್ನು ಮಾಡಬೇಕೆಂದಾಗಿಯೂ ಜವಾಬು ತಲುಪಿತು ಅದೇ ಮೇರೆಗೆ ಎಲ್ಲರೂ ಒಪ್ಪಿ ಈಗ ಕೆಲಸ ಮಾಡುತ್ತಾರೆ ಎಲ್ಲಾ ಇಲಾಖೆಯಲ್ಲಿಯೂ ಈ ತುಟ್ಟಿ ಕಾಲದಲ್ಲಿ 7 8 ರೂಪಾಯಿ ತಲವಿನಲ್ಲಿ ಜೀವನೋಪಾಯಮಾಡುವದು ಬಹು ಕಷ್ಟವಾಗಿದೆ —ನಿವಿಲೋಗ್ಗಿ ಪ್ಲಾಟ್‌ಫಾರಂನಲ್ಲಿ ದಿನಂಪ್ರತಿ ಮುಜೂರಿಗೆ ಬರತಕ್ಕ ಚಕ್ಕಡಿ ಗಾಡಿಯವರು ಒಬ್ಬರಿಗೊಬ್ಬರು ದ್ವೇಷದಿಂದ ಬಾಡಿಗೆ ವಿಷಯದಲ್ಲಿ ಮಸ್ಕಾನೆ ಗಲಾಟೆಗೆ ಅವಕಾಶ ಕೊಡುತ್ತಾರೆ ಈ ವಿಷಯದಲ್ಲಿ ರೈಲಿಗೆ ಸಂಬಂಧಪಟ್ಟ ಪೋಲೀಸಿನವರು ತಕ್ಕ ಬಂದೋಬಸ್ತು ಮಾಡುವರೆ ತ ನಂಬುತ್ತೇನೆ —ಪಂಕಿಪುರದಲ್ಲಿದ್ದ ಸ್ಟೇಷನ್ ಮಾಸ್ಟರ್ ಶ್ರೀನಿವಾಸರಾಯರಿಗೆ ಪೂರ ಕಡೆಗೆ ವರ್ಗವಾಗಿಹೋಗುತ್ತಾರೆಂದು ವರ್ತಮಾನ ಕೇಳುತ್ತೇವೆ —ಈಗ ಮಳೆ ಇಲ್ಲದ ಸಬಬು ದಿನವಹಿತ್ತು ಸಾಮಾನುಗಳು ದಿನದಿನ ತುಟ್ಟಿಯಾಗುತ್ತಾ ಬರುತ್ತೆ ಬಡ ನೌಕರರುಗಳು ಸಣ್ಣ ಸಂಬಳದಲ್ಲಿ ಕುಟುಂಬಸಂರಕ್ಷಣೆ ಮಾಡುವದು ಬಹು ಕಷ್ಟವಾಗಿದೆ

ಹುಣಸೂರು —ಕಳೆದ ವಾರ 2 (ಸಾರಿ ಒಳ್ಳೇ ಹದ ಮಳೆಯಾಯಿತು ಹವಾ ತಂಪಾಗಿಯೂ ಆರೋಗ್ಯಕರವಾಗಿಯೂ ಇರುವುದು —ಸಬ್ ಡಿವಿಜನ್ ಆಫೀಸರ್ ಮಿ ಮ ಲಾರಿರಾಯರು ಒಂದು ಟ್ರಿಪರನ್ನು ಇನ್ಸ್‌ಪೆಕ್ಷನ್ ಮಾಡುತ್ತಿರುವರು ಸೋಮವಾರ ಟಿವನ್ ಇನ್ಸ್‌ಪೆಕ್ಷನ್ ಎಗ್ಗ ಹೊರಟಿದ್ದರು ಹೆಗ್ಗಡದೇವನಕೋಟೆಗೆ ಬೈಸಿಕಲ್ ಮೇಲೆ ಹೋಗಿ ಬರುತ್ತಿರುವರು ಅಲ್ಲಿ ಸ್ವಲ್ಪ ಕಾಲರಾ ಗಲಾಟೆ ಇರುವುದರಿಂದ ಅವರ ಮೊಕ್ಕಾಂಗೆ ಅನುಕೂಲವಿಲ್ಲವಾಗಿ ಕಾಣುತ್ತೆ —ಹಾಸನ, ಹೊಳೆನರಸೀಪುರ ಯಡತೊರೆ, ಇಲವಾಲ, ಇವುಗಳ ಮೇಲೆ ಮೈಸೂರಿಗೆ ರೈಲ್ ರೋಡು ಹಾಕಲಿಕ್ಕಾಗಿ ಎಗ್ಜಿಕ್ಯುಟಿವ್ ಇಂಜನಿಯರ್ ಮಿ ಎಚ್ ಡಿ ಕ್ರೈಸ್‌ಸಾಹೇಬರು ತಮ್ಮ ಸಿಬ್ಬಂದಿಯೊಂದಿಗೆ ಬಂದು ಆಗಲೇ ಸರ್ವೆಮಾಡುತ್ತಿದ್ದಾರೆಂದು 1 3 ವಾರಗಳ ಹಿಂದೆ ಸೂಚನೆ ಇತ್ತು ದೊಡ್ಡ ತಾಲ್ಲೂಕಾದ ಈ ಹುಣಸೂರನ್ನೂ ಬಿಡದೆ ಸರ್ವೆಮಾಡಿ ರೈಲ್ ರೋಡು ಏರ್ಪಡಿಸಿದರೆ ಪ್ರಜೆಗಳಿಗೂ ಸರ್ಕಾರಕ್ಕೂ ಹೆಚ್ಚು ಅನುಕೂಲವೂ ಲಾಭವೂ ಆಗುವುದರಲ್ಲಿ ಅನುಮಾನವೇನೂ ಇರಲಾರದು ಈ ಅಂಶವನ್ನು ಗವರ್ನ್‌ಮೆಂಟಿನವರು ಮರೆಯಲಾರರೆಂದು ನಂಬಿಕೆಯುಂಟು —11 ನೇ ತಾ ಸೋಮವಾರ ನಾಯಕಕಾಲ ಸ್ಟೋರ್ ಬೀದಿಯಲ್ಲಿ ಒಂದಾನೊಂದು ಮದುವೆ ಮನೆಯಲ್ಲಿ ಒಬ್ಬ ಬಿಲುಗುಬುರಚಿಗರ ಜಾತಿಯ ಮನುಷ್ಯನು ಎಲ್ಲರೂ ನೀರು ತರಲಿಕ್ಕಾಗಿ ಹೊಳೆಗೆ ಹೋಗಿದ್ದ ವಾರನ್ ಮನೆಗೆ ಒಂದು ಕೋಣೆಯಲ್ಲಿ ಯಾವ ಕಾರಣದಿಂದಲೋ ಕತ್ತನ್ನು ಕೊಯಿದುಕೊಂಡು ಪಕ್ಕೆಗೆ ಭರ್ಜಿಯಿಂದ ತಿವಿದುಕೊಂಡಿದ್ದುದನ್ನು ನೋಡಿ ಜನರು ಗಾಬರಿಗೊಂಡು ಅಜಮಾಯಿಷಿಗಾಗಿ ಡಾಕ್ಟರವರನ್ನು ಕರೆದು ತಂದು ತೋರಿಸಿದರು ಆತನನ್ನು ಆಸ್ಪತ್ರೆಯಲ್ಲಿ ಇಲಾಜು ಮಾಡುತ್ತಿರುವರು ಯಥಾರ್ಥವಾದ ಕಾರಣ ಇನ್ನೂ ಗೊತ್ತಾಗಲಿಲ್ಲ ಇ ತರ ನವನಾಗರಿಕ ಕಾಲದಲ್ಲಿ ಜನರು ಸ್ವಪ್ರಾಣ ನಾಶಕೃತ್ಯಗಳಿಗೆ ಒಳಗಾಗುವುದನ್ನು ನೋಡಿದರೆ ತುಂಬಾ ಆಶ್ಚರ್ಯವಾಗುವುದು —ಮ್ಯುನಿಸಿಪಾಲಿಟಿಯವರು ಈ ಟವನಿನ ಕತ್ತೆಗಳ ವಿಷಯ ಒಂದು ಕಾನೂನು ಮಾಡುವುದು ಒಳ್ಳೆಯದು ಅಗಸರು ಅವುಗಳಿಂದ ದುಡಿಸಿಕೊಂಡು ತಮ್ಮ ಜೀವನ ಮಾಡಿಕೊಳ್ಳುತ್ತಾ ಅವುಗಳನ್ನು ಪಕ್ಕ ರೀತಿಯಲ್ಲಿಟ್ಟು ಪೋಷಣೆ ಮಾಡದೆ ಬಿಕ್ಕಾ ಬಿಟ್ಟಿ ಸಾಗುವುದಕ್ಕೆ ಬಿಟ್ಟು ಬಿಡುತ್ತಾರೆ ಅವು ಊರಲ್ಲೆಲ್ಲಾ ಸಂಚರಿಸುತ್ತಾ ಒಳ್ಳೇ ಸಮರಾತ್ರಿಯಲ್ಲಿ ಆವ ದುವವು ಕತ್ತಲೆಯ ಸಮಯದಲ್ಲಿ ಸಂಚರಿಸುವ ಜನರು ಕಾಣದೆ ಅವುಗಳ ಮೇಲೆ ಬಿದ್ದು ಏಟು ಗಾಯಪಟ್ಟುಕೊಳ್ಳುತ್ತಾರೆ ಕತ್ತೆಗಳನ್ನು ಪಾಡಿಗೆ ಸೇರಿಸಿದರೆ 1 ಆಣೆ ರುಸುಮನ್ನು ಕೆಲವು ಸ್ಥಳಗಳಲ್ಲಿ ಪೌಂಡಿನವರು ಕೊಡುವರು ಆ ರೀತಿ ಮಾಡಿದರೆ ಅಗಸರು ದಂಡ ತೆರುವುದರಿಂದಲೂ, ಅವುಗಳನ್ನು ಪೌಂಡಿಗೆ ಸೇರಿಸುವುದರ ಬಲೆಯಿಂದಲೂ ಅವುಗಳ ಹಾವಳಿ ತಪ್ಪಿ ಜನಗಳಿಗೆ ಸುಖವಾದೀತು ಈ ವಿಷಯದಲ್ಲಿ ಈ ಊರಿನ ಮ್ಯುನಿಸಿಪಾಲಿಟಿಯವರು ಕೆಲವು ಕಾಲ ವಿಶೇಷವಾಗಿ ಗಮನವಿಟ್ಟು ಜನಗಳಿಗೆ ಇವುಗಳ ಕಾಟವನ್ನು ತಪ್ಪಿಸಬೇಕಾಗಿದೆ

ಹೆಗ್ಗಡದೇವನಕೋಟೆ —ಕಳೆದ ವಾರ 3-4 ಹದ ಮಳೆಗಳಾದರೂ ಸೆಕೆ ಹೆಚ್ಚಾಗಿದೆ ದಿನಸಿಗಳ ಬೆಲೆಯಾದರೋ ದಿನೇ ದಿನೇ ಏರುತ್ತಾ ಕ್ಷಾಮಕಾಲವನ್ನು ಸೂಚಿಸುತ್ತವೆ ಅಕ್ಕಿ 6 ಸೇರು, ರಾಗಿ 16 ಸೇರು ಮಿಕ್ಕ ದಿನಸುಗಳೂ ಬಹಳ ತುಟ್ಟಿಯಾಗಿ ಮಾರಲ್ಪಡುತ್ತಿವೆ ಬಡನೌಕರರ ಕಷ್ಟ ಹೇಳತೀರದು ಈ ಊರ ಪ್ರಜೆಗಳ ಸ್ಥಿತಿಯು ಬಹಳ ವ್ಯಸನಕರವಾದದ್ದಾಗಿದೆ ಪ್ರತಿಯೊಂದು ವರ್ಷವೂ ಯಾವುದಾದರೊಂದು ಅಂಟುರಾದ್ಯವು ಖಂಡಿತವಾಗಿಯೂ ತಲೆದೋರುವದು ಕಳೆದ 5 6 ವರುಷಗಳಿಂದ ಪ್ಲೇಗ್ ರೋಗವು ವ್ಯಾಪಿಸಿ ನೂರಾರು ಜನಗಳು ಮೃತಿಹೊಂದಿದರು ಈ ವರುಷವಾದರೋ ಕಾಲರಾ ಉಪದ್ರವು ಆಗಲೇ ಷುರುವಾದ ಒಂದು ತಿಂಗಳೊಳಗೆ 60 ಮರಣಗಳಾದವು ಕಳೆದ ವಾರದಿಂದ ಬಹಳ ಜೋರಾಗಿ ದಿನಕ್ಕೆ 4 4 ರಂತೆ ಸಾಯುತ್ತಿದ್ದಾರೆ ಈಗ ನಮ್ಮ ವೈಸ್ ಪ್ರೆಸಿಡೆಂಟರೂ, ಮ್ಯುನಿಸಿಪಲ್ ಮೆಂಬರುಗಳೂ ಜನಗಳ ಕೊರತೆಗಳನ್ನು ತಿಳಿದು ತಕ್ಕ ಪರಿಹಾರವನ್ನು ಕಲ್ಪಿಸಿಕೊಡಲು ಪ್ರಯತ್ನಪಡುತ್ತಿರುವುದಕ್ಕಾಗಿ ಸಂತೋಷಪಡುತ್ತೇವೆ ಹೊಸ ಸ್ಯಾನಿಟರಿ ಇನ್ಸ್‌ಪೆಕ್ಟರು ಬಂದಾರಭ್ಯ ಊರು ಸ್ವಲ್ಪಮಟ್ಟಿಗೆ ಸಾಫಾಗುತ್ತಿದೆ ಊರಿನ ಪಾಲೀ ನಿವೇಶನಗಳೆಲ್ಲಾ ಕಾಡುಜಂತುಗಳಿಗೂ ಹೇನಿಗೂ ಆಶ್ರಯವಾಗಿವೆ ಬೀದಿ ಎಂದರೆ ಮುಂತಾದವು ಹಾರಾಡುತ್ತಿವೆ ಪ್ರಜೆಗಳನ್ನು ನಿರ್ಗಂಧಪಡಿಸುವ ತನಕ ಈ ಗಲೀಜು ತಪ್ಪಲಾರದು ದೀಪದ ವಿಚಾರವು ಸ್ವಲ್ಪ ಕ್ರಮಪಟ್ಟಿದೆ ದೊಡ್ಡ ರಸ್ತೆಯಲ್ಲಿ 5 ಕ್ಕೆ 3, ಬ್ರಾಹ್ಮಣರ ಬೀದಿಯಲ್ಲಿ 1 ಕ್ಕೆ 2 ಲಾಂದ್ರಗಳಿವೆ ತೊರೆಯರ ಕೇರಿಗೂ, ಕುರುಬರ ಕೇರಿಗೂ ಕಡೆಯ ಪಕ್ಷ ಎರಡೆರಡು ಲಾಂದ್ರಗಳನ್ನಾದರೂ ಇಡಿಸಬೇಕು ಹೊಲಗೇರಿಯಂತೂ ಮ್ಯುನಿಸಿಪಲ್ ದೀಪವನ್ನೇ ಕಾಣದು ದೇವಸ್ಥಾನದ ಬೀದಿಯಲ್ಲಿದ್ದ ಒಂದು ಲಾಂದ್ರವನ್ನೂ ತೆಗೆದುಬಿಟ್ಟರು —ಈಗ್ಗೆ 3 ವರುಷಗಳ ಹಿಂದೆ ಸ್ಥಾಪಿಸಿದ ಶ್ರೀ ವರದರಾಜ ಕೋಆಪರೇಟಿವ್ ಸೊಸೈಟಿಯು ಅಭಿವೃದ್ಧಿ ಸ್ಥಿತಿಯಲ್ಲಿದೆ. ಸೆಕ್ರೆಟರಿ ಮ ದ ಗೋಪಾಲಶೆಟ್ರು ಮುತುವರ್ಜಿಯಿಂದ ಕೆಲಸಮಾಡುತ್ತಿದ್ದಾರೆ. ವಾರ್ಷಿಕ ಮೀಟಿಂಗು ಇನ್ನೂ ನಡೆಯಲಿಲ್ಲ —ಇಲ್ಲಿನ ಹಳೇ ಸ್ಕೂಲು ಬಹಳ ಶಿಥಿಲವಾಗಿದ್ದದ್ದರಿಂದ ಹೊಸ ಸ್ಕೂಲು ಕಟ್ಟುವುದಕ್ಕೆ ಶಿಫಾರಸು ಆಗಿ ಆರ್ಡರೂ ಬಂತು ಹಾಗೆಂದು ಗೊತ್ತಾಗಿದೆ ಅದರ ಕಂಟ್ರಾಕ್ಟು 7,500 ರೂಪಾಯಿಗೆ ಮ|| ಮಾದಾಪುರದ ಸುಬ್ಬರಾಯರಿಗೆ ಆಗಿದೆ ಇನ್ನೂ ಕಾಮಗಾರಿ ಪ್ರಾರಂಭವಾಗಿಲ್ಲ —ಮೂರು ವರುಷಗಳಿಂದ ಇಲ್ಲಿ ಪೋಸ್ಟ್ ಮಾಸ್ಟರಾಗಿರುವ ಮ|| ಎಂ ಆರ್ ಸಯ್ಯದ್ ಇಸ್ಮಾಯಿಲ್ ರವರು ಮುಸಲ್ಮಾನರಾದಾಗ್ಯೂ ಎಲ್ಲರನ್ನೂ ಒಂದೇ ರೀತಿಯಾಗಿ ಕಾಣುತ್ತಾ ಅವರವರ ಕೆಲಸಗಳನ್ನು ಜಾಗ್ರತೆಮಾಡಿ ಕಳುಹಿಸುತ್ತಾರೆ ಬಡವರ ವಿಷಯದಲ್ಲಿ ಬಹಳ ಕನಿಕರ ಉಳ್ಳವರಾಗಿ ಕೈಲಾದ ಮಟ್ಟಿಗೂ ಸಹಾಯಮಾಡುತ್ತಾರೆ ಇಂಥಾ ಪೋಸ್ಟು ಮಾಸ್ಟರು ಹಿಂದೆ ಯಾವಾಗಲೂ ಇಲ್ಲಿಗೆ ಬಂದಿದ್ದಿಲ್ಲವೆಂದು ಜನಗಳು ಹೇಳುವರು —ಕಳೆದ 1908 ರಲ್ಲಿ ಪ್ರಾರಂಭವಾದ ಒಂದು ರೀಡಿಂಗ್ ರೂಮು 2 ವರುಷ ನಡೆದು ಪ್ರೋತ್ಸಾಹವಿಲ್ಲದ ನಿಂತುಹೋಯಿತು ನಮ್ಮ ಚಕ್ರವರ್ತಿ ಸಾರ್ವಭೌಮರವರ ಕಿರೀಟಧಾರಣೆ ಮಹೋತ್ಸವದ ಜ್ಞಾಪಕಾರ್ಥವಾಗಿ ಎಲ್ಲಿಲ್ಲಿಯೂ ಪ್ರಜೋಪಯೋಗವಾದ ಕಾರ್ಯಗಳು ನಡೆಸಲ್ಪಡುತ್ತಿರುವಲ್ಲಿ ಇಲ್ಲಿನವರು ಮೌನವಾಗಿರುವುದನ್ನು ನೋಡಿದರೆ ಆಶ್ಚರ್ಯವಾಗಿರುತ್ತೆ ಈಗಲೂ ಅದನ್ನು ಪ್ರಾರಂಭಿಸುವುದಕ್ಕೆ ನಮ್ಮ ಅಮಲ್ದಾರರು ಮ ಎಂ ಎನ್ ಶ್ರೀನಿವಾಸಯ್ಯಂಗಾರ್ರು ಪ್ರೋತ್ಸಾಹಮಾಡಿ ಅದು ಶಾಶ್ವತವಾಗಿ ನಡೆಯುವ ಏರ್ಪಾಡಿಟು ಕೀರ್ತಿವಡೆಯುವವರಾಗ ದು ಹಾರೈಸುತ್ತೇನೆ

ಚಿತ್ರದುರ್ಗ —ಮಳೆ ಬರುವಂತೆ ಪ್ರತಿ ನಿತ್ಯವೂ ಗುಡುಗೂ, ಮಿಂಚಿನ ಆರ್ಭಟವೂ ಇದ್ದೇ ಹೊರತು ಮಳೆ ಮಾತ್ರ ಬಂದಿಲ್ಲ ಧಗೆ ಬಹಳ ಜಾಸ್ತಿಯಾಗಿದೆ ಗ್ರಾಮಾಂತರಗಳಲ್ಲಿ ಅನುಕೂಲವಾಗಿ ಮಳೆಗಳು ಬಂದು ರೈತರು ವ್ಯವಸಾಯಕೆಲಸಕ್ಕೆ ಆರಂಭಿಸಿರುತ್ತಾರೆ ಪ್ರಜೆಗಳ ಮುಖ್ಯ ಬೇಳೆಜರ, ಹೊಟ್ಟೆಪಾಡು ಅಮರಂತೆ ಈ ಕಾಯಿತಗಳು ಇದ್ದೇ ಇವೆ —ದಿನಸಿ ಧಾರಣೆಗಳು ದಿನೇ ದಿನೇ ಹೆಚ್ಚುತ್ತಲೇ ಇವೆ ಕೊಂಡು ತಿನ್ನತಕ್ಕವರು ಬಹಳ ಕಷ್ಟಸ್ಥಿತಿಯಲ್ಲಿದ್ದಾರೆ ಅಕ್ಕಿ ರೂಪಾಯಿಗೆ 6 6 ಸೇರು, ರಾಗಿ 13-14 ಸೇರು, ಜೋಳ 1 ಸೇರು, ಪುಷ್ಪ ಮಣ 31 ರೂಪಾಯಿ, ಈ ರೀತಿ ಎಲ್ಲಾ ದಿನಸಿಗಳೂ ತುಟ್ಟಿಯಾಗಿ ಮಾರುವವು ಸುಭಿಕ್ಷದಲ್ಲಿ ನೇರಿದ ಈಗಿನ ದುರ್ಭಿಕ್ಷವನ್ನೂ, ಬಡವರ ಸಂಕಟವನ್ನೂ ನೋಡಿ ವೃದ್ಧರು ಆಶ್ಚರ್ಯಪಡುತ್ತಿದ್ದಾರೆ ಈ ಕಷ್ಟವನ್ನು ಗೌರ್ನಮೆಂಟನವರು ನೋಡಿ ಪ್ರಜಾಕ್ಕೆ ಅನುಕೂಲಮಾಡಿಕೊಡ್ತಾರಾಗಿ ಬಡಪ್ರಜೆಗಳು ಹಾರೈಸುತ್ತಾರೆ —ಈ ಡಿಸ್ಟ್ರಿಕ್ಟಿನಲ್ಲಿ ಕಳವುಗಳು, ಡಕಾಯಿತಿಗಳು ಜಾಸ್ತಿಯಾಯಿತು ಈ ಕೃತ್ಯಗಳು ಚಿತ್ರದುರ್ಗದ ಪ್ರಾಂತ್ಯದಿಂದ ಹತ್ತಿ ಭರ್ತಿ ಮಾಡಿಕೊಂಡು ದಾವಣಗೆರೆಗೆ ಹೋಗಿ ಅಲ್ಲಿನ ಸಾಹುಕಾರರಿಗೆ ಮಾರಿ ಹಣ ತೆಗೆದುಕೊಂಡು ವಾಪಸು ಬರತಕ್ಕ ಗಾಡಿಯವರ ಮೇಲೇನೇ ಹೆಚ್ಚಾಗಿ ನಡೆಯುತ್ತಿತ್ತು ಅವರಿಗೆ ಈ ಬೀತಿ ತಪ್ಪಿ ಅನುಕೂಲಮಾಡಿಕೊಡುವುದಕ್ಕಾಗಿ ದಾವಣಗೆರೆ ಸಾಹುಕಾರ್ ಎನ್ನುವ ನಗಳ್ಳಿ ಚೆನ್ನಬಸಪ್ಪ, ರುದ್ರಪ್ಪ ಇವರು ಈ ಚಿತ್ರದುರ್ಗದಲ್ಲೇ ತಮ್ಮ ಖಜಾನಾ ಇಟ್ಟುಕೊಂಡು ದಾವಣಗೆರೆಯಲ್ಲಿರತಕ್ಕ ತಮ್ಮ ಮಂಡಿಗೆ ಹತ್ತಿ ಹಾಕಿ ಅಲ್ಲಿರತಕ್ಕವರಿಂದ ಚೀಟಿ ತಂದ ತಮ್ಮ ಗಿರಾಕಿಗಳಿಗೆ ಚಿತ್ರದುರ್ಗದಲ್ಲೇ ಹಣ ಪಾವತಿಮಾಡುತ್ತಿದ್ದಾರೆ. ಈ ನಡವಳಿಕೆಯಿಂದ ರೈತರಿಗೆ ಬಹಳ ಅನುಕೂಲವಾಯಿತು ಆದರೂ ಅವರು ಹಣ ತೆಗೆದುಕೊಂಡು ತಮ್ಮ ಗ್ರಾಮಗಳಿಗೆ ಹೋಗತಕ್ಕ ಕಾಲಗಳಲ್ಲಿ ಸರ್ಕಾರದ ನೌಕರರು ಅವರ ಗಾಡಿಗಳನ್ನು ಹಿಡಿದು ತೊಂದರೆಪಡಿಸತಕ್ಕದ್ದು ಮಾತ್ರ ಅವರಿಗೆ ತಪ್ಪಲಿಲ್ಲ - ಈ ಡಿಸ್ಟ್ರಿಕ್ಟ್‌ನ ಪೋಲೀಸ್ ಸೂಪರಿಂಟೆಂಡೆಂಟರಾಗಿ 3 4 ವರ್ಷದಿಂದ ಇದ್ದ ಮಿ| ಷೈ ಪಿ ಕೃಷ್ಣಮೂರ್ತಿಯವರಿಗೂ, ಹೊಸದಾಗಿ ಟ್ರೆಷರಿ ಛಾರ್ಜಿಗೆ ಬಂದಿದ್ದ ಅಸಿಸ್ಟೆಂಟ್ ಕಮೀಷನರ್ ಮಿ ಎಂ ಪದ್ಮನಾಭರಾಯರಿಗೂ ಈ ಸ್ಥಳದಿಂದ ಬೇರೆ ಕಡೆಗೆ ವರ್ಗವಾಯಿತು ಇದರಿಂದ ಪೋಲೀಸ್ ಸೂಪರಿಂಟೆಂಡೆಂಟರಿಗೆ ಅವರಿಂದ ಹೊರಲಿಕ್ಕೆ ಅಸಾಧ್ಯವಾಗಿದ್ದ ಪೋಲೀಸ್ ಇಲಾಖೆಯ ಖಜಾನ ಹೊರೆ ತಪ್ಪಿ, ಸುಲಭವಾದ ಟ್ರೆಷರಿ ಛಾರ್ಜು ಸಿಕ್ಕಿದ್ದು ಅವರಿಗೆ ಅನುಕೂಲವಿರಬಹುದಾದಾಗ್ಯೂ ಈ ಡಿಸ್ಟ್ರಿಕ್ಟಿನಲ್ಲಿ ಅವರು ಮಾಡಿಕೊಂಡಿರತಕ್ಕ ಹತ್ತಿ ಕಾರ್ಖಾನೆ,

ಜಮೀನಿನ ವ್ಯವಸಾಯ, ಇವುಗಳ ಅಭಿವೃದ್ಧಿಗೆ ಅವರ ವರ್ಗವು ಅನನುಕೂಲ ಕಲ್ಪಿಸಿತು — ಡೆಪ್ಯುಟಿ ಕಮಿಷನರ್‌ರವರು ಸರ್ಕಾರಟು ದಯಮಾಡಿದಾರೆ ಅವರ ಅಧಿಕಾರವಿಚಕ್ಷಣೆಯು ಪ್ರಜೆಗಳಿಗೆ ಹಿತಕರವಾದದ್ದಾಗಿಯೂ, ನಂಬಿಕೆಯುಳ್ಳದ್ದಾಗಿಯೂ ಇದೆ — ಈಗ ಹತ್ತು ಹನ್ನೆರಡು ವರುಷಗಳಿಂದ ಇಲ್ಲಿಯ ಹೈಸ್ಕೂಲ್ ವಿದ್ಯಾರ್ಥಿಗಳನ್ನು ತರಪೇತು ಮಾಡಿ, ಜನರನೇಕರಿಂದ ಪ್ರೀತಿಪುರಸ್ಸರವಾದ ಮನ್ನಣೆಯಂ ಪಡೆದಿದ್ದ ಮ|| ರಘುನಾಥರಾವ್, ಬಿ ಎ (ಹೆಡ್ಮಾಸ್ಟರ್) ಯವರಿಗೆ ಪೆನ್‌ಷನ್ ಆಗಿ ಅವರು ಇನ್ನು ೩-೪ ದಿನಗಳಲ್ಲಿ ಈ ಊರನ್ನು ಬಿಟ್ಟು ಹೋಗುವರೆಂಬ ಸಂಗತಿಯು ಅನೇಕರಿಗೆ ದುಃಖವನ್ನುಂಟುಮಾಡುತ್ತಿರುವುದು — ಈಗ ನಮ್ಮ ಡಿಸ್ಟ್ರಿಕ್ಟಿಗೆ ಡೆಪ್ಯುಟಿ ಕಮಿಷನರ್‌ರಾಗಿರುವ ಮಿ|| ಮೆಕಾರ್ ಸಾಹೇಬರು ಸುಗುಣಗಳುಳ್ಳವರು ಇವರು ಇಲ್ಲಿಗೆ ದಯಮಾಡಿದಂದಿನಿಂದ ಗ್ರಾಮವನ್ನು ಪರಿಶುದ್ಧವಾಗಿಡಲು ಊರ ಒಳಕ್ಕೆ ಬಂದು ಮುತುವರ್ಜಿಯಿಂದ ನೋಡಿಕೊಳ್ಳುತ್ತಿರುವರು ಇವರು ಖಾಯಂ ಆಗಿ ಈ ಸ್ಥಳದಲ್ಲಿಯೇ ಇದ್ದರೆ ಪ್ರಜೆಗಳು ಸಂತೋಷಪಟ್ಟಾರೆನ್ನುವುದಕ್ಕೆ ಸಂಶಯವಿಲ್ಲ ಇವರು ನಿಷ್ಪಕ್ಷಪಾತಿಗಳಾಗಿ ಹಿಂದೂ ಮಹಮದೀಯ ಹದಿನೆಂಟು ಜಾತಿಗಳಲ್ಲಿಯೂ ನ್ಯಾಯ ವಿಮರ್ಶೆ ಮಾಡುತ್ತಿರುವರು — ಇಲ್ಲಿ ಪೂರ್ವದಲ್ಲಿ ಅಮಲ್ದಾರರಾಗಿ ಸದ್ಗುಣಪೂರಿತರಾಗಿ ಹೆಸರು ಪಡೆದ ಮಿ|| ಮಾಚಯ್ಯನವರು ಇಲ್ಲಿಗೆ ಪೋಲೀಸ್ ಸೂಪರಿಂಟೆಂಡೆಂಟರಾಗಿ ಬರುತ್ತಾರೆಂಬ ವಿಷಯವು ಅನೇಕರಿಗೆ ಸಂತೋಷವನ್ನುಂಟುಮಾಡಿದೆ

ಸನ್ ೧೮೭೬ ರಿಂದ ೧೯೧೩ ವರೆಗೆ

ಕಾಲದ ಪರೀಕ್ಷೆ!

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 2-23

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪುಷ್ಟೀಕರಣೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳುತ್ತಾರೆ

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷದವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಆಕ್ರಮಗಳು, ನಾನಾ ತರದ ಕೆಮ್ಮಲು

ಸಕಲವಿಧ ಕ್ಷಯಗಳು ಮಾಂಸಖಂಡಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ

Always get the Emulsion with this mark—the Fishman—the mark of the "Scott" process!

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವು ಇದೇ

ನೀತಿ ಕೈಸೋಕದೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್ ಇಂಗ್ಲೆಂಡ್

ಈ ಮಾನುಮುದ್ರೆ ಇರುವ ಔಷಧವನ್ನೇ ಕೊಂಡುಕೊಳ್ಳಿ

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ ೩ ಆಣೆ ಆರಕ್ಕೊಂದು ಉಚಿತ

[187 25] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

1914ನೇ ಲೋ|| ಸೆ|| ಕ|| ಟೆಕಸ್ಟು ೬ ಆಣೆ, ನೋಟ್ಸು ಯಮ್. ಆರ್. ವೆಂಕಟಸುಬ್ಬಾಚಾರ್ಯರದು 6 ಆಣೆ ಮೈಸೂರು ಚರಿತ್ರೆ ಸುಲಭ ಪಾಠಗಳು 3ಆ ಭೂಗೋಳಶಾಸ್ತ್ರದ 1 ೨ನೇ ಪುಸ್ತಕ 3 ಆಣೆ ಆರೋಗ್ಯ ಪ್ರಶ್ನೋತ್ತರ 1 ಆಣೆ, ವಕ್ರರತ್ನಾಕರ 8 ಆಣೆ, ಲೇಖ್ಯತತ್ವಪ್ರಕಾಶಿಕೆ 4 ಆಣೆ [61 11]

ವಿಳಾಸ —ಹೆಚ್ ವೆಂಕಟರಾಮಯ್ಯ, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

ಎಂ ಎಸ್. ಬಿ. ಯವರ ಸಿದ್ಧೌಷಧಗಳು.

ಜೀರಿಗೆ ಲೇಹ್ಯವು —ಇದರ ಸೇವನೆಯಿಂದ ವಾಂತಿ, ಭ್ರಾಂತಿ, ಮೂರ್ಛೆ, ಬಳಲಿಕೆ, ಮಂದೆನೋವು, ಅರೋಚಕ ಮುಂತಾದ ಪಿತ್ಥರೋಗಗಳು ಪರಿಹಾರವಾಗುವವು ಕ್ರಯ ಡಬ್ಬಿಗೆ ರೂ ೧

ಧಾತುಪುಷ್ಟಿ ಲೇಹ್ಯವು —ಪ್ರತಿಯೊಬ್ಬರಿಗೂ ಸೇವನಾರ್ಹವಾದುದು. ದೇಹದಲ್ಲಿ ದುರ್ಬಲಹೊಂದುತ್ತಿರುವ ಎಲ್ಲಾ ಧಾತುಗಳೂ ಪುಷ್ಟಿಗೊಳ್ಳುವವು ಕ್ರಯ ಡಬ್ಬಿಗೆ ರೂ ೧ [105 2]

ಬಾಣಂತೀ ಲೇಹ್ಯವು —ಸ್ತ್ರೀಯರು ಪ್ರಸವಿಸಿದ ನಂತರ ಇದನ್ನು ಸೇವಿಸುವುದರಿಂದ ಸ್ಥಿತ್ಯರೋಗಗಳಿಗೆಡಗೊಡದೆ, ಬೇದಿ, ಜ್ವರ, ಸನ್ನಿ, ಕ್ಷಯ ಮುಂತಾದ ಪ್ರಬಲರೋಗಗಳೂ ಪರಿಹಾರವಾಗುವುವು ಕ್ರಯ ಡಬ್ಬಿಗೆ ರೂ ೧

"ಸರ್ವಜನಹಿತೋಪಕಾರಿಣಿ" ಔಷಧಾಲಯ, ಮೈಸೂರು

ಮೇಲಾದ ಹೊಸ ಪುಸ್ತಕಗಳು.

ಉತ್ತಮ—ಬಹು ಸ್ವಾರಸ್ಯವಾದ ಕಥೆ ಈಗತಾನೆ ಅಚ್ಚಾಗಿದೆ 4 ಆಣೆ ಜಪಾನ್ ಸಾಮ್ರಾಜ್ಯ—ಅದ್ಭುತವಾದ ಸೂರ್ಯೋದಯ ರಾಜ್ಯದ ವಿಷಯ, ಸುಂದರವಾದ ಒಂದು ಪಟವೂ ಇದೆ, ತಿಳಿವಳಿಕೆ ಹೆಚ್ಚುತ್ತದೆ 6 ಆಣೆ ಉನ್ಮತ್ತೆ ಮನೋಹರವಾದ ಬಂಗಾಳಿ ನಾವಲ್ 2½ ಆಣೆ ಕಿಂಡರ್‌ಗಾರ್ಟನ್ ಕಥೆಗಳು ವಿನೋದಕರವಾದ ಕಥೆಗಳಿಂದಲೇ ಅನೇಕ ವಿಷಯಗಳು ತಿಳಿಯುವವು 10 ಆಣೆ ಬೋಧನಕ್ರಮ ಸಂಗ್ರಹ—ಪ್ರತಿ ಸ್ಕೂಲ್ ಮಾಸ್ತರಿಗೂ ಬೇಕಾದದ್ದು 1½ ಆಣೆ ಲೋ. ಸೆ ಪರೀಕ್ಷೆಯಲ್ಲಿ ಉತ್ತರ ಬರೆಯುವ ವಿಧಾನ 1 ಆಣೆ [111-1]

ವಿಳಾಸ —ಜಿ ಕೃಷ್ಣಶಾಸ್ತ್ರಿ, ಆ ಮಾ|| ನಾರ್ಮಲ ಸ್ಕೂಲ್, ಮೈಸೂರು

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—ನಿನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೋ ಎಂದು ನಿನ್ನನ್ನು ನೀನೇ ಕೇಳಿಕೋ,

(೧೨ ಆಣೆ ಬುಡ್ಡಿ ಪರಿಯಾಗ)

ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ನುಂಗಿಬಿಡು ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುವದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ ಅಗ್ನಿಮಾಂದ್ಯ, ಗಾಬರಿ, ಅಶಕ್ತಿ, ಎದೆಯು ತಲ್ಲಣಿಸುವುದು, ತಲೆತಿರುಗುವುದು ತಲೆನೋವು, ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು ಇವೇ ಮೊದಲಾದವು ಹಿಂಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಷವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ರೋಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [12 39]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುವು, ಅಥವಾ ಡೋನ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು

Mellin's Food

ಮೆಲಿನ್ಸ್ ಆಹಾರವು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಕೈಸೋಕದೆ ತಯಾರಾದದ್ದು.

ಮೆಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ತಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

"ಹಿಂದುಸ್ತಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದವರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಧರ್ಮಾರ್ಥವಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ

Messrs OAKES & Company, Mount Road, Madras.

[4-31] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

NATIONAL INSURANCE AND BANKING COMPANY, LIMITED, AMRITSAR

Chief Agency, Mysore.

The Amritsar National Insurance Buildings, Mysore,

Dated, 5th June, 1913

No

To,

All District Superintendents,

Taluk Agents, Canvassers and Provident Policy-Holders.

Chief Agent's Circular No 8, dated 30 5 1913

DEAR SIRS,

1 I have been receiving complaints daily from our agents and Provident Policy Holders that the Head Office has cancelled the agencies of the former and also asked the latter to remit their premiums direct to the Head Office and thus they are put to much inconvenience trouble and loss

2 I know fully well that my resignation of the Chief Agency of the Provident Fund Department alone had *shaken the confidence of the policy holders and also can* imagine the anxieties and troubles caused to them by the unexpected dismissal of our agents Although such things are not proper on the part of the Head Office yet from their stand point they were right in doing so as they did not know the position and status of our agents and as they could not hold any one responsible for their honesty and conduct after my resignation

3 Many of you might infer the reason why I was obliged to resign the Chief Agency of that Department and some of you and your policy holders seem to be under that impression that I have been dismissed So please note and announce to your policy holders that I was obliged to resign the Chief Agency of that Department as the Head Office cancelled the authority of my paying double the premiums paid on the marriage day and as they would not even advance cent per cent on the marriage day nor guarantee the minimum bonus to be paid to the policy holders in spite of my serious correspondence on the subject by letters and telegrams I could not press them any more as they have got their own reasons to stand to

4 Had I but cared for my commission which was amounting from Rs 400 to Rs 100 every month I could have continued the Chief Agency of that Department at the risk of my policy holders But I cared more for my reputation and our poor people's money than anything else Please do not imagine how I could have continued the Chief Agency of the Insurance Department and why the words "has been dismissed" have been struck off and substituted by the words "is no longer our agent" in the post card notices issued to all the policy holders by the Head Office if I had been really dismissed

5 You and your policy holders might be under that impression that I resigned the Chief Agency in order to shirk off my responsibility I feel very sorry if you have thought really so as it is needless to say that although I am not held legally responsible for all your troubles yet I am morally held responsible for the same, as I can understand the critical position in which you are put in and the troubles and loss which our policy holders are put to on account of their being unable to remit their premiums direct to the Head Office and thereby getting their policies lapsed being defaulters My conscience says that it is my bounden duty to remedy the difficulties of my agents and policy holders as you have worked depending upon me and the policy holders joined the Company depending upon your assurance I also know that you seem too low before your policy holders when they do not get advances on the marriage day as assured by you

6 Even after my resignation I tried my utmost to get the provident policy holders monies refunded but my efforts were in vain as the Company's rules would not permit the Directors to do so So the only possible remedy which I have thought of is to start another Company in Mysore which goes by the name of the Mysore Government Servants Life and Marriage Assurance Company, Limited quite independent of this Company and to get all the provident life and marriage policy holders who do not like to continue their policies in this Company transferred to the new Company with the permission of our Company and thus saving them the trouble and loss

7 You may also rest assured that our new Company will be based on sounder principles than those of other provident societies with an authorized capital of one lakh and the schemes will be framed so that they should be most advantageous to and also suit the convenience of our people here Of course advancing double the premium paid on the *marriage day will be brought into force in this new Com*pany and you will also continue as agents for the same as usual

8 Please note and announce to those policy holders whose marriages took place in the last quarter and will take place in the present quarter, that they will get their bonuses direct by money order from the Head Office in the beginning of June and September 1913 respectively

9 It has come to my notice that some unprincipled rival agents having taken advantage of the circumstances set forth herein have been trading on the ignorance of the people and misrepresenting our Company's affairs which are as satisfactory as ever So our agents and policy holders are requested to kindly let the undersigned know the names of such worthies as legal steps have surely to be taken against them

I am, Dear Sirs,

Yours faithfully,

M L Nagannah,

Chief Agent

Printed and Published by the REV H GULLIFORD Proprietor and Manager Wesleyan Mission Press Mysore 5/6/1913

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—ಸನ್ ೧೯೧೩ ನೇ ಇಸವಿ ಜೂನ್ ತಾರೀಖು ೧೨ ನೇ ಗುರುವಾರ. ಸಂಚಿಕೆ ೨

Notes on 'Round the World in Eighty Days', the Lower Secondary English Text, by S. V. Pichamuttu, B.A., English & History Assistant, W. H. S., Bangalore, can be had from the Manager, Mission Book Depot, Bangalore City. Price. Four annas

1914ನೇ ಲೋ॥ ಸೆ॥ ಕ॥ ಟೆಕಸ್ಟು 3 ಆಣೆ; ನೋಟ್ಸು ಎಸ್. ಆರ್ ವೆಂಕಟಸುಬ್ಬಾಚಾರ್ಯರದು 6 ಆಣೆ. ಮೈಸೂರು ಚರಿತ್ರೆ ಸುಲಭ ಪಾಠಗಳು 3ಆ. ಭೂಗೋಳಶಾಸ್ತ್ರದ 1-3 ನೇ ಪುಸ್ತಕ 4 ಆಣೆ ಆರೋಗ್ಯ ಪ್ರಶ್ನೋತ್ತರ 1 ಆಣೆ; ಪತ್ರರತ್ನಾಕರ 8 ಆಣೆ, ಅಂಕ್ಯತತ್ವಪ್ರಕಾಶಿಕೆ 4 ಆಣೆ. [61-12]
ವಿಳಾಸ:—ಹೆಚ್. ವೆಂಕಟರಾಮಯ್ಯ, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು.

ಹಾಸಿಗೆಯ ತಿಗಣೆಯನ್ನು ನಾಶಮಾಡುತ್ತೆ.

ಇದು ಬಹಳ ಅಗತ್ಯವಾದ್ದು ಸುಲಭವಾದ ಪ್ರಯೋಗ 48 ಗಂಟೆಯೊಳಗೆ ತಿಗಣೆಯ ಕಾಟ ತೊಲೆದುಹೋಗುತ್ತೆ. ಉಪಯೋಗಿಸುವ ವಿಧಾನ ಸಹಿತ ಬಾಟ್ಲಿಗೆ ಕ್ರಯ ಒಂದೇ ರೂಪಾಯಿ ಅಂಚೆ ವೆಚ್ಚ ಬೇರೆ. ವಿಳಾಸ—ಎಸ್. ಹಾನಿಫ್ ಕಂಪನಿ, 71 ಪೈಕ್ರಾಫ್ಟ್ಸ್ ರೋಡ್, ಮದರಾಸ್ [96-4]

ಎಗ್ಗಾಮಿನರ್ ಮಾಸ ಪುಸ್ತಕವೂ, ಟೆಕ್ಸ್ಟ್ ನೋಟ್ಸ್ ಬಹುಮಾನವೂ. ಚಂದಾ. ರೂ. 1-4-0; ಕನ್ನಡ ಟೆಕ್ಸ್ಟ್ ನೋಟ್ಸ್ 4 ಆಣೆ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದ ಈ ಮಾಸಪತ್ರಿಕೆಗೆ ಜೂನ್ ಆಖೈರಿನೊಳಗೆ ಚಂದಾದಾರರಾಗತಕ್ಕವರಿಗೆ ಮೇಲ್ಕಂಡ ನೋಟ್ಸ್ ಬಹುಮಾನ ಕ್ಯಾಟಲಾಗ್ ತರಿಸಿ ನೋಡಿ.
ಸಿ. ಪುಟ್ಟಯ್ಯ, ಮ್ಯಾನೇಜರ್, ಎಗ್ಜಾಮಿನರ್ ಆಫೀಸ್, ಚಿಕ್ಕಬಳ್ಳಾಪುರ.

ಗರ್ಭಿಣೀಶಿಶುಸಂರಕ್ಷಣಾ.

MIDWIFERY—ಕನ್ನಡ ಮಿಡ್‌ವೈಫರಿ ಸ್ತ್ರೀಯರಿಗೂ, ಮಿಡ್‌ವೈಫ್ ಪರೀಕ್ಷೆಗೆ ಓದುವವರಿಗೂ ಪ್ರಯೋಜನವಾದದ್ದು. ಕ್ರಯ ೧೨ ಆಣೆ [19-20]
ವಿಳಾಸ:—"ದಿ ಜನರಲ್ ಏಜೆನ್ಸಿ" ಮೈಸೂರು.

ಸೊಗಸಾದ ಕನ್ನಡ ಕಾದಂಬರಿಗಳು.

ದೈವಾನುಗ್ರಹ 1½ ಆಣೆ, ವಿಚಿತ್ರ ಗೃಹ್ಯಘಟನೆ 1ಆಣೆ, ವಿರಕ್ತಳಾದ ಸೌದಾಮಿನಿ 6½ ಆಣೆ, ಬೃಂದಾವನ 3ಆಣೆ, ಕುಮಾರ ಭೀಮಸಿಂಹ 1ಆಣೆ, ಸುಮನೋರಮಾ 3ಆಣೆ, ವಿಶ್ವನಾಥ 1ಆಣೆ, ಕಾದಂಬರೀ ಸಂಗ್ರಹದ ವಾರ್ಷಿಕ ಚಂದಾ 1-4-0.
[101-3] ನಮ್ಮ ವಿಳಾಸ—ಸಿ. ವಿ. ಶಾಸ್ತ್ರಿ, ಚಾಮರಾಜನಗರ.

1914 ನೇ ವರ್ಷದ ಲೋವರ್ ಸೆಕಂಡರಿ ಕನ್ನಡ ಟೆಕ್ಸ್ಟ್ ನೋಟ್ಸು ವಿಕರಿಗೆ ಸಿದ್ಧವಾಗಿದೆ—ಕ್ರಯ 6 ಆಣೆ.
ಡಿಸ್ಕೌಂಟು 10 ಕ್ಕೆ 1, 50 ಕ್ಕೆ 7; 100 ಕ್ಕೆ 20.
ನಮ್ಮ ನೋಟ್ಸು ಬೇಕಾಗಿದ್ದರೆ ನೋಟ್ಸಿನ ಮೇಲೆ ನಮ್ಮ ಹೆಸರನ್ನು ನೋಡಿ ತೆಗೆದುಕೊಳ್ಳಿ [83-7]
ಎಸ್. ಆರ್. ವೆಂಕಟಸುಬ್ಬಾಚಾರ್ಯರ್,
ಸುಬೋಧ ಗ್ರಂಥಾಲಯ, ಮೈಸೂರು.

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕೆಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ದರಜೆಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು. ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ 3 ಆಣೆ. ಅರಕ್ಕೊಂದು ಉಚಿತ
[187-26] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಎಂ ಎಸ್. ಬಿ. ಯವರ ಸಿದ್ಧೌಷಧಗಳು.

ಪೇಟಿಗೆ ಲೇಹ್ಯವು.—ಇದರ ಸೇವನೆಯಿಂದ ವಾಂತಿ, ಭ್ರಾಂತಿ. ಮೂರ್ಛೆ, ಬಳಲಿಕೆ, ಮಂದೇನೋವು, ಅಜೀರ್ಣ ಮುಂತಾದ ಪಿತ್ಥರೋಗಗಳು ಪರಿಹಾರವಾಗುವವು ಕ್ರಯ ಡಬ್ಬಿಗೆ ರೂ ೧
ಧಾತುಪುಷ್ಟಿ ಲೇಹ್ಯವು.—ಪ್ರತಿಯೊಬ್ಬರಿಗೂ ಸೇವನಾರ್ಹವಾದುದು ದೇಹದಲ್ಲಿ ದುರ್ಬಲಹೊಂದುತ್ತಿರುವ ಎಲ್ಲಾ ಧಾತುಗಳೂ ಪುಷ್ಟಿಗೊಳ್ಳುವುವು. ಕ್ರಯ ಡಬ್ಬಿಗೆ ರೂ ೧ [106-3]
ಬಾಣಂತೀ ಲೇಹ್ಯವು.—ಸ್ತ್ರೀಯರು ಪ್ರಸವಿಸಿದ ನಂತರ ಇದನ್ನು ಸೇವಿಸುವುದರಿಂದ ಶೈತ್ಯರೋಗಗಳಿಗೆಡೆಗೊಡದೆ, ಬೇಧಿ, ಜ್ವರ, ಸನ್ನಿ, ಕ್ಷಯ ಮುಂತಾದ ಪ್ರಬಲರೋಗಗಳೂ ಪರಿಹಾರವಾಗುವುವು ಕ್ರಯ ಡಬ್ಬಿಗೆ ರೂ. ೧,
"ಸರ್ವಜನಹಿತೋಪಕಾರಿಣಿ" ಔಷಧಾಲಯ, ಮೈಸೂರು.

ಮೈಸೂರು ಬ್ಯಾಂಕ್, ಲಿಮಿಟೆಡ್.

ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬಬಹದ್ದೂರವರ ಸರ್ಕಾರದವರ ಪೋಷಣೆಗೆ ಒಳಪಟ್ಟು ಅವರಿಂದ ಸಹಾಯವನ್ನು ಪಡೆಯುವದು

ಕ್ರಮವಾಗಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ಮೂಲಧನ 20,00,000 ರೂಪಾಯಿಗಳು.

ಷೇರೊಂದಕ್ಕೆ 100 ರೂಪಾಯಿಗಳಂತೆ 20,000 ಷೇರುಗಳಾಗಿ ವಿಭಾಗಿಸಲ್ಪಟ್ಟಿವೆ.

ಷೇರುಗಳನ್ನು ಹಂಚುವದರಲ್ಲಿ ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ ದಾಖಲಾ ಮೈಸೂರು ಸಂಸ್ಥಾನದ ಪ್ರಜೆಗಳಿಗೆ ಪ್ರಾಶಸ್ತ್ಯವು ಕೊಡಲ್ಪಡುವದು. ಇದರಡಿ ವಿವರಿಸಿರುವಂತೆ ಚಂದಾಗಳನ್ನು ಕೊಡತಕ್ಕದ್ದು.
ದರಖಾಸ್ತಿನೊಡನೆ ಷೇರೊಂದಕ್ಕೆ 10 ರೂಪಾಯಿಗಳು, ಹಂಚಿಹಾಕಿದ ಅನಂತರದಲ್ಲಿ ಷೇರೊಂದಕ್ಕೆ 15 ರೂಪಾಯಿಗಳು.
ಮೂರು ತಿಂಗಳು ನಂತರ ಷೇರೊಂದಕ್ಕೆ 5 ರೂಪಾಯಿಗಳು.

ಎರಡು ತಿಂಗಳಿಗೆ 10 ರೂಪಾಯಿನಂತೆ ಷೇರೊಂದಕ್ಕೆ ಇನ್ನು 20 ರೂಪಾಯಿಗಳನ್ನು ಒದಮಾಡಿಕೊಳ್ಳಲ್ಪಡುತ್ತೆ. ಷೇರೊಂದಕ್ಕೆ ಉಳಿದ 50 ರೂಪಾಯಿಯನ್ನು ಡೈರೆಕ್ಟರುಗಳಿಗೆ ಅವಶ್ಯ ಕಂಡುಬಂದಲ್ಲಿ 10 ರೂಪಾಯಿಗೆ ಮೀರದ ಕಂತುಗಳಲ್ಲಿ ಅಂಥಾ ಪ್ರತಿ ಕಂತಿಗೂ ಎರಡು ತಿಂಗಳು ವಾಯಿದೆ ಕೊಟ್ಟು ತರಿಸಿಕೊಳ್ಳಬಹುದು.
ಷೇರುದಾರರಾಗಲು ಇಷ್ಟಪಡುವವರು ಜಾಗ್ರತೆಯಾಗಿ ದರಖಾಸ್ತುಮಾಡುವದು ಉತ್ತಮ. ಷೇರುಗಳಿಗಾಗಿ ದರಖಾಸ್ತುಗಳು ವಿಶೇಷವಾಗಿ ಬರುತ್ತಿವೆ—ನಾಲ್ಕು ಲಕ್ಷ ರೂಪಾಯಿಗಳ ಷೇರುಗಳಿಗೆ ಇದಕ್ಕೆ ಮುಂಚೆಯೇ ಒಪ್ಪಂದವಾಗಿರುತ್ತೆ. ಸಾವಕಾಶ ಮಾಡಿದಲ್ಲಿ ದೊರಕಲಾರದು—ಪ್ರಸಿದ್ಧಪತ್ರಿಕೆ, ದರಖಾಸ್ತು ಫಾರಂ ವಗೈರೆ ಬ್ಯಾಂಕು ಸೆಕ್ರೆಟರಿಯವರಿಗೆ ಬರೆದು ತರಿಸಿಕೊಳ್ಳಬಹುದು.

Mysore Bank Office,
Edinburgh House, Shankarpur,
BANGALORE CITY.
[99-3]
(Sd.) K. P. PUTTANNA CHETTY,
Chairman.

ಹತ್ತಿಯ ತುಪ್ಪವು

ಒಂದು ವರ್ಷದವರೆಗೆ ಇಟ್ಟಿದ್ದರೂ ಕೆಡಲಿಲ್ಲ!

(4) ಎಸ್ ಕೋದಂಡರಾಮಯ್ಯನವರು, ಆಕ್ಟಿಂಗ್ ರೇಕದಾರ್, ಹೊಸಸೂರು.—ನಿಮ್ಮಿಂದ ತರಿಸಿದ ಹತ್ತಿಯ ತುಪ್ಪವು 1 ವರ್ಷವಾದ ಮೇಲೂ ಹೊಸ ತುಪ್ಪದಂತೆ ಸುವಾಸನೆಯಾಗಿದೆ ಅದರಲ್ಲಿ ಬೇಯಿಸಿದ ಸಾಮಾನೂ ಹೊಸ ತುಪ್ಪದಲ್ಲಿ ಮಾಡಿದಂತೆ ಇದೆ ಅಗ್ಗವಾಗಿ ಮಾರುತ್ತಿದು ಎಣ್ಣೆ ಬೆರೆಸುವುದರಿಂದ ಆ ರೋಗ್ಯವನ್ನುಂಟುಮಾಡುತ್ತದೆ ನಂಬಿಕೆಯಾದ ಏಜಂಟರು ದೊರೆಯುವ ವರೆಗೆ ತಮ್ಮ ಕಂಪೆನಿಯಿಂದಲೇ ನೀದಾ ಕಳುಹಿಸಬೇಕು

ಎಚ್ಚರಿಕೆ!

ಹತ್ತಿಯ ತುಪ್ಪವು ರೂಢಿಗೆ ಬಂದದಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ, ಇವುಗಳನ್ನು ಕೊಬ್ಬನ್ನು ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವರು ಮೋಸಹೋಗಲು ಅವಕಾಶವಿಲ್ಲ.
ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
[110-2] 159, ಕಿಲಾರಿ ರೋಡ್, ಬೆಂಗಳೂರು ಸಿಟಿ.

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ.)

ಈ ಪುಸ್ತಕದಲ್ಲಿ—1 ಪಿನಲ್‌ಕೋಡ್, 2. ಪೊಲೀಸ್ ಆಕ್ಟ್, 3. ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್. 5. ವಿಷ್ಯವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7. ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8. ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ.
ಪ್ರತಿ ಪೆನಲ್ ಸೆಕ್ಷನ್‌ಗೂ:—ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ? ಯಾ ಕೂಡದೆ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರ-ಟು ಹುಟ್ಟಬೇಕೆ?? ಜಾಮೀನ್ ತೆಗೆದುಕೊಳ್ಳಬಹುದೆ? ಯಾ ಕೂಡದೆ? ರಾಜಿಯಾಗಬಹುದೆ? ಯಾ ಕೂಡದೆ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿವೆ ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 22-5-1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 2-0-0 ಟಪಾಲ್ ದಾಸಲು 3 ಆಣೆ.

ವಿಳಾಸ:—ಎಲ್. ಪೇಮಾರೆಡ್ಡಿ,
ಕಂಟ್ರಾಕ್ಟರ್ ಮತ್ತು ಕ್ರಿ॥ ಪ್ಲೀಡರ್,
[101-3] ಮಾಲೂರು—ಕೋಲಾರ ಡಿಸ್ಟ್ರಿಕ್ಟ್.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

104 4

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಆರಶಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟಿದ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನು ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೊ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನೀನೂ ನಿಂದಿತವಾಗಿ ವಾಸಿಯಾಗುತ್ತದೆ
"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡ. ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು—(1) ಎಸ್ ಪೀಟರ್ಸ್, 37 ವಡಮಲೆಸಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಜಿ. ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು.

ಲೇಡೀಸ್ ವಾಚ್.

ಇದರ ಅನುಕೂಲ ಮತ್ತೆ ಯಾವದಕ್ಕೂ ಇಲ್ಲ. ನಿಮ್ಮ



ಇಚ್ಛೆ ಬಂದಂತೆ ಕೈಯಲ್ಲಿಯೂ ಕಟ್ಟಿಕೊಳ್ಳಬಹುದು. ಜೇಬಿನಲ್ಲಿಯೂ ಹಾಕಿಕೊಳ್ಳಬಹುದು. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ತಲೆಯಲ್ಲಿ ಬೀಗವುಳ್ಳದ್ದು. ಶುದ್ಧವಾದ ನಿಕಲ್ ಮುಚ್ಚಳವುಳ್ಳದ್ದು ಸುಂದರವಾದದ್ದು. ಖಾತ್ರಿಯಾದವಾಚು. ಇದರ ಕ್ರಯ ಸುಂದರವಾದ ವಾಚ್ ಸರಪಣಿ ಮತ್ತು ಕೈಯಲ್ಲಿ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಮೇತ

ರೂ 3-8-0 ಮಾತ್ರ [77-8]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—
ಬಿ. ಆರ್. ವೆಂಕಟರಮಣ ಅಂಡ್ ಕಂಪನಿ,
ನಂ. 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಬೇಕಾಗಿದೆ

ಏಜಂಟರುಗಳು ನಮ್ಮ ಔಷಧಿಗಳನ್ನು ವಿಕರಿಮಾಡಬು ಪ್ರತಿ ತಿಂಗಳಿಗೂ ಸಂಬಳವು 20 ರೂಪಾಯಿಗಳಿಂದ 100 ರ ವರೆಗೆ ಕೊಡಲ್ಪಡುತ್ತೆ ಅಪೇಕ್ಷಿಸುವವರು 3 ಅರ್ಧಾಣೆ ಸ್ಟಾಂಪಿನೊಡನೆ ಕೆಳಗಿನ ವಿಳಾಸಕ್ಕೆ ಬರೆಯಿ [68]

ದಿ ಸ್ರಿ ಮೆಡಿಕಲ್ ಕೌನ್ಸಲ್, 37 ಪೂಟಿ ಬಜಾರ್ ರೋಡು, ಮದ್ರಾಸು

ಕುಂತಳಾನಂದ ತೈಲವು

147 ಗ

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಖರ್ಚು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ ಓ ಎಮ್ ನಾಥ ಮತ್ತು ಕಂಪೆನಿ

ವೇಪೇರಿ, ಮದರಾಸ್

ನಮೂನೆ ಮುಫತ್ತು

ಕೇಶಕುಸುಮಾಕರ ತೈಲವು.

ಶಾಂತಿಯುಳ್ಳವ ಈ ತೈಲವು ವ್ಯಾಪಕ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ ಬುದ್ಧಿಯನ್ನು ವಿಕಾಸಗೊಳಿಸುವದರಲ್ಲಿಯೂ, ಬಿಳಿ ತಲೆಯನ್ನು ಕಪ್ಪಾಗಿ ಮಾಡುವದರಲ್ಲಿಯೂ ಮೂಳೆಯನ್ನು ಬಲಪಡಿಸುವದರಲ್ಲಿಯೂ ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ ಮೈಗೆ ತಂಪನ್ನು ಉಂಟುಮಾಡುವದರಲ್ಲಿಯೂ ಅಪೂರ್ವ ಪ್ರಭಾವವನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುದ್ದಿ ತೈಲ ಕ್ರಯ 10 ಆಣೆ ಮೂರು ಬುದ್ದಿಗಳ ತೈಲ ಕ್ರಯ ರೂ 1 12 ಆ ಆರು ಬುದ್ದಿಗಳ ತೈಲ ಕ್ರಯ ರೂ 1 4 ಆ ಡಜನ್ ಬುದ್ದಿಗಳ ಕ್ರಯ ರೂ ।

ವಿ ಪಿ ಅಂಚೆ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ

[82 7] ಔಷಧಾಲಯ 177 ಚೀನಾ ಬಜಾರ್ ರೋಡ್, ಮದ್ರಾಸು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 21

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಗ ಬಿಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಸೆಟ್ಟಿಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಶುದ್ಧವಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹು ಚನ್ನಾಗಿರತಕ್ಕ ಪ್ರತಿಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ ಚನ್ನಾಗಿ ಹಸೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ೮ ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ

ಕೂಸುಗಳ ಟೋಪಿ ಪೂರ್ತಿ ಮೇಜೋಡು ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ ಹಾಸನ

CHAMBERLAIN'S COUGH REMEDY.



ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು

1 21

ಶೀತದ ಕೆಮ್ಮು ಗಂಟಲು ಗೊರಗುಟ್ಟುವುದು, ಹುಡುಗರ ನಾಯಿಕೆಮ್ಮು, ಎಲ್ಲಾ ತರದ ಶೀತ ಗಂಟಲುನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳಿಗೂ ಈ ಔಷಧವು ಉಪಯುಕ್ತವಾದದ್ದು

ಆ ಕೆಮ್ಮನ್ನು ತಿಳಿಕ ಮಾಡದೆ ಇ ಅದು ಮಹಾ ರೋಗವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವದು ಶ್ವಾಸಾಂಗಗಳಲ್ಲಿ ರಕ್ತ ಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಟ್ಟಿಯಾದ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಸಡಿಲಿಸುತ್ತದೆ ಅಪಾಯಕರವಾದ ಕೆಮ್ಮಿನ ರೋಗವನ್ನು ನಿಲ್ಲಿಸುತ್ತದೆ ಎದೆ ಒಡೆಯುವಂಥಾ ಕೆಟ್ಟ ಕೆಮ್ಮನ್ನು ಸಂಪೂರ್ಣವಾಗಿ ಶಮನಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನಿದ್ರೆ ಸುಖವಾಗಿ ಬರುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳಿಂದ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ವಿಕರಿಯಾಗುವದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಪ್ರತಾಪಕಂಠೀರವ ಚರಿತ್ರೆ.

(1) ಮಹೀಶೂರಿನ ದೈವಸಹಾಯ ಅ ಗುರುವರಿಂದ ಅವರ ಯತ್ನಗಳಿಗೆ ತೊಂದರೆ ಎಂದರೂ ತೊಲಗಿಹೋಗುತ್ತವ ಎಂಬ ನೀತಿ (2) ಸ್ತ್ರೀಧರ್ಮ ಸ್ವಾಮಿಭಕ್ತಿ ಕೌಶಲ ಯುಕ್ತ ಸಾಹಸ ಬಾತುರ (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು (4) ವನ ಸರಸು ಆರಾಮಾದಿ ವರ್ಣನೆಗಳು (5) ಮನುಷ್ಯಯತ್ನಕ್ಕೆ ದೈವದ ಈಗಿನ ಅನುಭವಕ್ಕೆ ತಕ್ಕ ವಿಷಯಗಳು (6) ಎಲ್ಲರೂ ಓದಿ ತಿಳಿದುಕೊಳ್ಳುವಂತಾ ಸುಲಭ ಶೈಲಿ (7) ನವರಸಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂತಾ ಕಥಾಭಾಗಗಳು ಕೂಡಿವೆ ಕ್ರಯ —1 ರೂಪಾಯಿ ಟಪಾಲ್ ಹಾಸಲು ಬೇರೆ

[10-10] ನಮ್ಮ ವಿಳಾಸ —ಬಿ ಬಿ ಯಂ ಕಂಪನಿ, ಬೆಂಗಳೂರು ಸಿಟಿ

ಡೋಂಗರೆ ಇವರ ಬಾಲಾಮೃತ.

[115 48]

ಸಣ್ಣ ಮಕ್ಕಳಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದದರಿಂದ ಹುಡುಗರು ಬಹಳ ಆನಂದದಿಂದ ತೆಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ ಹೊಟ್ಟೆಯು ದೊಡ್ಡವಾಗಿರೋಣ ಅಸ್ತಿಗಳು ಕಾಣುವಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಲಕ್ಷಣದ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತು ೧೨ ಆಣೆ , ಟಪಾಲ್ ಖರ್ಚು ೪ ಆಣೆ

ಕ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಸಮಸ್ತ ವಿಧವಾದ ನೋವೂ ಶೀತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು ವಾಯುನೋವು ಚಳ್ಳಿನ ಸಳಿತ, ಕೀಲು ನೋವು, ಶೈತ್ಯ, ಈ ಮೊದಲಾದ ಅನೇಕ ತರದ ರೋಗಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ಬಿಕರಿಯಾಗುತ್ತಲಿವೆ ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ವಿಕರಿಯಾಗುವದು

ಮುಂಕಡ್ಡಿ ಔಷಧದ ದಬ್ಬಿಗ 6 ಆಣೆ 12 ಕುಪ್ಪಿಗ ರೂ 3-8 0 ಬುಡ್ಡುವಿ ದಬ್ಬಿಗ 3 ಆಣೆ, 12 ಕುಪ್ಪಿಗ ರೂ 1-2-0 ವಿ ಪಿ ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ [12-10]

ವಿಳಾಸ —ಅಮೃತಾಂಜನ ಡಿಪೋ, ೧೯ ಫ್ರಿಯರ್ ರೋಡ್ ಫೋರ್ಟ್, ಬೊಂಬಾಯಿ

ಮಹೀಶೂರ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಪವಿತ್ರ ಭಸ್ಮ ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಬಾಳುವ ಪದಾರ್ಥಗಳ ಮಿಶ್ರದಿಂದ ತಯಾರಿಸಿದ ಭೇದಜ್ವರ ಜ್ವರ ಹೊಟ್ಟೆ ಶೂಲೆ ಸ ದುಗಳ ನೋವು, ಮೈ ಕಾಲು ಸೋತ (ವಾತ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲು ನೋವು, ಕೆಮ್ಮಲು, ನೆಗಡಿ, ಬಿಕ್ಕಳ್ಳು ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ ಈ ಮಾತ್ರೆಯನ್ನು ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ವಿಷಳ ಹೊತ್ತು ಸುವಾಸನೆಯಾಗಿರುತ್ತಾ, ಎಷ್ಟು ಆಹಾರವನ್ನಾದರೂ ಸಂಗಗೆ ಳಿಸಿ, ದೂಷ ವಾಯುಗಳೂ ಬಾರಿಕಿಡದೆ ಶರೀರ ಪ್ರಾಣ ಬಲವನ್ನು ವಿಸ್ತರಿಸಿ, ರಕ್ತದಲ್ಲಿಯ ದೋಷವನ್ನು ನೀಗದು ಬುದ್ಧಿಶಕ್ತಿ ವೃದ್ಧಿಪಡಿಸುತ್ತವೆ ಪ್ರಿಯರ ಹುಡುಗರು ಮಕ್ಕಳ ಎಳೆಪು ಜ್ವರ, ಸಹು ಜ್ವರ, ಕೈಪತ್ಯಗಳನ್ನು ಗುಣಪಡಿಸುತ್ತವೆ ಇದನ್ನು ಸೇವಿಸುತ್ತಿರುವವರು ಎಂದಿಗಾಗಿಯೂ ಪ್ಲೇಗಿನ ರೋಗಕ್ಕೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ ೬ ಕುಪ್ಪಿಗೆ ಒಂದು ಕುಪ್ಪಿ ಉಚಿತ, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 1 ಆಣೆ [136 41]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವ ತೆರದಿಂದ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸಿ ಮೂತ್ರವು ಕಟ್ಟದೆ ಕೂಟ ಮೊದಲೇ ಹೇಳಿಯಲ್ಲೀ, ಗುಣವು ತೋರುತ್ತದೆ ಸಮಯದಲ್ಲಿ ಗಾಬರಿಪಡದೇ ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿದ್ದರೆ ಔಷಧೋಪಚಾರ ಸಹಾಯವಿಲ್ಲ ಆಪೇಕ್ಷಿಸುವ ಕಾಲದಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1 ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ನ್ಯಾಷನಲ್ ಇನ್ಷೂರೆನ್ಸ್, ಬ್ಯಾಂಕಿಂಗ್ ಕಂಪನಿ, ಲಿಮಿಟೆಡ್, ಅಮೃತಸರ್

ಬ್ರಾಂಚ್ ಏಜೆನ್ಸಿ—ಮೈಸೂರು.

ಅಮೃತಸರ್ ನ್ಯಾಷನಲ್ ಇನ್ಷೂರೆನ್ಸ್ ಬಿಲ್ಡಿಂಗ್ಸ್, ಮೈಸೂರು

ತಾರೀಖು ೬ ನೇ ಜೂನ್, 1913

ನಂಬರು

ಸಮಸ್ತ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರಿಗೂ, ತಾಲ್ಲೂಕು ಏಜಂಟರಿಗೂ, ಇನ್ಸ್ಪೆಕ್ಟರ್‌ಗಳಿಗೂ, ಪ್ರಾವಿಡೆಂಟ್ ಪಾಲಿಸಿ ಹೋಲ್ಡರುಗಳಿಗೂ

ಚೀಫ್ ಏಜಂಟರವರ ಸರ್ಕ್ಯುಲರ್ ನಂ 8, ತಾ 30 5 1913

ಸ್ವಾಮಿ,

1 ನಮ್ಮ ಹೆಡ್ ಆಫೀಸಿನವರು ಏಜನ್ಸಿಗಳನ್ನು ವಜಾಮಾಡಿ, ಪ್ರಾವಿಡೆಂಟ್ ಫಂಡಿನ ಪಾಲಿಸಿ ಹೋಲ್ಡರುಗಳು ಪ್ರೀಮಿಯಂ ಹಣಗಳನ್ನು ನೇರಾ ಹೆಡ್ ಆಫೀಸಿಗೇನೇ ಕಳುಹಿಸಬೇಕೆಂದು ತಿಳಿಸಿರುತ್ತಾರೆಂಬದಾಗಿಯೂ ಇದರಿಂದ ತಮಗೆಲ್ಲಾ ತುಂಬಾ ಅನಾನುಕೂಲತೆಯೂ, ತೊಂದರೆಯೂ, ನಷ್ಟವೂ ಉಂಟಾಗಿದೆ ಎಂಬದಾಗಿಯೂ ಏಜಂಟರುಗಳಿಂದಲೂ, ಪಾಲಿಸಿ ಹೋಲ್ಡರುಗಳಿಂದಲೂ ದಿನವೂ ನನಗೆ ಆಕ್ಷೇಪಣೆಯುಳ್ಳ ಕಾಗದಗಳು ಬರುತ್ತ ಬರುತ್ತಲಿವೆ

2 ನಾನು ಪ್ರಾವಿಡೆಂಟ್ ಫಂಡ್ ಬಾಬಿನ ಚೀಫ್ ಏಜನ್ಸಿ ಕೆಲಸಕ್ಕೆ ಮಾತ್ರ ರಾಜೀನಾಮೆ ಕೊಟ್ಟಿರುವುದರಿಂದ ಪಾಲಿಸಿ ಹೋಲ್ಡರುಗಳಿಗೆಲ್ಲಾ ಬರವಸೆಗೆ ಕುಂದಕವುಂಟಾಯಿತೆಂದು ಚೆನ್ನಾಗಿ ನನಗೆ ಗೊತ್ತಾಯಿತು ಮತ್ತು ಏಜನ್ಸಿಗಳನ್ನು ಅಕಸ್ಮಾತ್ತಾಗಿ ವಜಾ ಮಾಡಿದ್ದರಿಂದ ಅವರಿಗೆಲ್ಲಾ ಕಳವಳವೂ ತೊಂದರೆಯೂ ಪ್ರಾಪ್ತವಾಗಿದೆ ಎಂದು ನಾನು ಪರಿಷ್ಕಾರವಾಗಿ ಊಹಿಸಬಲ್ಲೆನು ಈ ರೀತಿ ಮಾಡುವುದು ಹೆಡ್ ಆಫೀಸಿನವರಿಗೆ ಸಹಜವಾದದ್ದಲ್ಲ ಆದರೆ ಅವರ ಸ್ಥಾನದಲ್ಲಿ ನಿಂತು ನೋಡಿದರೆ ಅವರು ಮಾಡಿದ್ದು ನ್ಯಾಯವೆಂದು ತೋರಬೇಕಾಗುತ್ತದೆ ಯಾಕೆಂದರೆ ನಾನು ರಾಜೀನಾಮೆ ಕೊಟ್ಟ ಬಳಿಕ ಹೆಡ್ ಆಫೀಸಿನವರು ನಮ್ಮ ಏಜಂಟರುಗಳ ಯೋಗ್ಯತಾಪಕ್ಷ ಮುಂತಾದದ್ದು ಗೊತ್ತಿಲ್ಲದೆ ಆ ಜವಾಬ್ದಾರಿಯನ್ನು ಇತರರಿಗೆ ವಹಿಸುವುದು ಹ್ಯಾಗೆ ಎಂಬ ಸಂಶಯದಿಂದ ಆ ರೀತಿ ಮಾಡಬೇಕಾಯಿತು

3 ನಾನು ಯಾವ ಕಾರಣಕ್ಕಾಗಿ ಆ ಬಾಬಿನ ಚೀಫ್ ಏಜನ್ಸಿಗೆ ರಾಜೀನಾಮೆ ಕೊಡಬೇಕಾಯಿತೋ ಅದು ನಿಮಗೆ ಗೊತ್ತಾಗಿರಬಹುದು ಮತ್ತು ನನ್ನ ಕೆಲಸಕ್ಕೆ ವಿರೋಧಿಸುವವರು ನನ್ನನ್ನು ವಜಾಮಾಡಿರುತ್ತಾರೆಂದು ಕೆಲವರು ಊಹಿಸಬಹುದು ಆದದ್ದರಿಂದ ನಿಜವಾದ ಸಂಗತಿಯನ್ನು ಓದಿ ಮುಂದಕ್ಕೆ ಪರಿಶೀಲಿಸಿಕೊಂಡು ನೀವು ಕಡೆಯ ಪಾಲಿಸಿ ಹೋಲ್ಡರುಗಳೆಲ್ಲಾ ಚೆನ್ನಾಗಿ ಯೋಚಿಸಬೇಕೆಂದು ಕೋರುತ್ತೇನೆ ಏನೆಂದರೆ ಮದುವೆಯ ದಿವಸ ಕಳೆದ ಬಳಿಕ ಆ ಪಾಲಿಸಿಯ ಹಣಕ್ಕೆ ಇರುವುದಕ್ಕಿಂತ ಹೆಚ್ಚಾಗಿಯಾದ ಹಣವನ್ನು ಕೊಡುವ ವಿಷಯದಲ್ಲಿ ಹೆಡ್ ಆಫೀಸಿನವರು ನನಗಿದ್ದ ಆ ಕಾರ್ಯವನ್ನು ವಜಾಮಾಡಿದರು ಮತ್ತು ಅವರು ಮಾಡುವ ಕಾಲದಲ್ಲಿ ನಾವು ಆಗಿದ್ದ ಪ್ರೀಮಿಯಂ ಹಣ ಬೋನಸ್ ಕೊಡಲೊಲ್ಲದೆಹೋದರು ಅಥವಾ ಪಾಲಿಸಿ ಹೋಲ್ಡರುಗಳಿಗೆ ಪ್ರಾಪ್ತವಾಗಿರುವಷ್ಟು ಮಿನಿಮಂ ಬೋನಸ್ಸನ್ನು ಕೊಡುವುದಕ್ಕೂ ಒಪ್ಪಿಕೊಳ್ಳಲಿಲ್ಲ ನಾನು ಸುಮಾರು ಬಹು ವಿಶೇಷವಾದ ಪ್ರಯತ್ನದಿಂದ ಈ ವಿಚಾರವಾಗಿ ಕಾಗದಗಳನ್ನು ಬರೆದು ಟೆಲಿಗ್ರಾಮುಗಳನ್ನು ಕಳಿಸಿ ಹೆಡ್ ಆಫೀಸಿನವರ ಕೂಡ ಬಹಳವಾಗಿ ಹೋರಾಡಿದೆನು ಕಡೆಗೆ ಅವರಿಗೆ ಕಂಡುಬಂದ ಕಾರಣಗಳನ್ನೇ ಅವರು ಹೇಳಿದರು ಆದ್ದರಿಂದ ನಾನು ಈ ವಿಷಯದಲ್ಲಿ ಹೋರಾಡಿ ಫಲವಿಲ್ಲವೆಂದು ರಾಜೀನಾಮೆ ಕೊಟ್ಟಿರುತ್ತೇನೆ

4 ಇವರಲ್ಲಿ ನನಗೆ ತಿಂಗಳು ಒಂದಕ್ಕೆ ದೊರಕುತ್ತಿದ್ದ ರೂ 100 ರೂಪಾಯಿ ಕಮೀಷನನ್ನೇ ನಾನು ಪ್ರಧಾನವೆಂದು ಎಣಿಸಿದವನಾಗಿದ್ದ ಪಕ್ಷದಲ್ಲಿ ನಮ್ಮ ಪಾಲಿಸಿ ಹೋಲ್ಡರುಗಳ ಹಿತವನ್ನು ಲಕ್ಷ್ಯ ಮಾಡದೆ ಚೀಫ್ ಏಜನ್ಸಿಯನ್ನೇ ವಹಿಸಿಕೊಂಡೇ ಇರಬಹುದಾಗಿತ್ತು ಆದರೆ ನನಗೆ ಒಳ್ಳೇ ಹೆಸರನ್ನು ಕಾಪಾಡಿಕೊಂಡು ಬರಬೇಕೆಂದೂ ನಮ್ಮ ಏಜಂಟರ ಪಕ್ಷಕ್ಕೆ ಅನಾಯ ಉಂಟಾಗಬಾರದೆಂದೂ ಚೆನ್ನಾಗಿ ಗೊತ್ತಾಯಿತು ಇಲ್ಲದಿದ್ದರೆ ಇನ್ಷೂರೆನ್ಸ್ ಬಾಬಿನ ಚೀಫ್ ಏಜನ್ಸಿಯನ್ನು ನಾನು ಯಾತಕ್ಕಾಗಿ ಬಿಟ್ಟುಕೊಡಬೇಕಾಯಿತೋ, ನನ್ನನ್ನು ನಿಜವಾಗಿಯೂ ವಜಾ ಮಾಡಿದ ಪಕ್ಷಕ್ಕೆ ಹೆಡ್ ಆಫೀಸಿನವರು ಪಾಲಿಸಿ ಹೋಲ್ಡರುಗಳಿಗೆ ಸಮಾಚಾರವಾಗಿ ಕಳುಹಿಸಿರುವ ಪ್ರಿಂಟ್ ಕಾರ್ಡಿನಲ್ಲಿ ವಜಾ ಮಾಡಲ್ಪಟ್ಟಿದೆ ಎಂಬ ಮಾತನ್ನು ಏನು ಮಾಡಿ ಅದಕ್ಕೆ ಪ್ರತಿಯಾಗಿ "ಇನ್ನು ಮುಂದೆ ನಮ್ಮ ಏಜಂಟ್ ಅಲ್ಲ" ಎಂಬೀ ಮಾತನ್ನು ಯಾತಕ್ಕಾಗಿ ಬರೆದಿರುತ್ತಾರೆಂಬುದನ್ನೇ ನೋಡಿ ಯೋಚಿಸಿಕೊಳ್ಳಿ

5 ನಾನು ನನ್ನ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಚೀಫ್ ಏಜನ್ಸಿಗೆ ರಾಜೀನಾಮೆ ಕೊಟ್ಟಿರುತ್ತೇನೆಂದು ನೀವು ನಿಮ್ಮ ತರಹದ ಪಾಲಿಸಿ ಹೋಲ್ಡರುಗಳೂ ಊಹಿಸಿರಬಹುದು ನೀವಾಗಿ ನೀವು ಆ ರೀತಿ ಯೋಚಿಸಿರುವುದಾದರೆ ನನಗೆ ಬಹಳ ವ್ಯಸನವಾಗುತ್ತದೆ ಯಾಕೆಂದರೆ ನಾನು ನಿಮ್ಮಗಳ ಎಲ್ಲಾ ತರದ ನಷ್ಟ ತೊಂದರೆಗಳಿಗೂ ನಾ ಯಾತಕ್ಕೆ ಜವಾಬ್ದಾರನಲ್ಲವಾದರೂ ನಿಮಗೂ ನಮ್ಮ ಕಡೆ ಪಾಲಿಸಿ ಹೋಲ್ಡರುಗಳಿಗೂ ಸಂಭವಿಸಿರುವ ಕಷ್ಟ ತೊಂದರೆಗಳನ್ನು ನೋಡಿ ನನ್ನ ಮನಸ್ಸಿಗೆ ವ್ಯಾಕುಲವುಂಟಾಗಿದೆ ಹೆಡ್ ಆಫೀಸಿಗೆ ನೇರಾ ಪ್ರೀಮಿಯಂ ಪಾವತಿ ಆಗುವುದರಲ್ಲಿ ಮುಂದೆ ಅವಕಾಶವಾದರೆ ಪಾಲಿಸಿಗಳೇ ನಷ್ಟವಾಗುವವಲ್ಲಾ, ನೀವುಗಳು ಇನ್ನು ಮುಂದಕ್ಕೆ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು, ನಿಮ್ಮ ನಷ್ಟ ತಪ್ಪಿಸಿ ಪಾಲಿಸಿ ಹೋಲ್ಡರುಗಳು ನಿಮ್ಮ ಮೇಲೂ ನಂಬಿಕೆ ಇಟ್ಟುಕೊಂಡು ಕಂಪನಿ ಸೇರಿದ್ದರಿಂದ ನಮ್ಮ ಏಜಂಟರಿಗೂ ಪಾಲಿಸಿ ಹೋಲ್ಡರುಗಳಿಗೂ ಸಂಭವಿಸಿರುವ ಕಷ್ಟಗಳನ್ನು ನಿವಾರಣೆ ಮಾಡುವುದು ನನ್ನ ಕರ್ತವ್ಯವೆಂದು ನನ್ನ ಮನಸ್ಸಿಗೆ ತೋರುತ್ತದೆ ನೀವು ವಿವರಿಸಿಕೊಟ್ಟಿರುವಂತೆ ನಿಮ್ಮ ಪಾಲಿಸಿ ಹೋಲ್ಡರುಗಳಿಗೆ ನಡೆಯುವ ಏನು ಅನುಕೂಲಗಳನ್ನು ನಾವು ತರಬೇಕೆಂದು ಯೋಚಿಸಿದರಿಂದ ಆ ಪಾಲಿಸಿ ಹೋಲ್ಡರುಗಳ ಪೈಕಿಯಲ್ಲಿ ನೀವು ಅಲ್ಲದೆ ಒಂದು ಉಪಾಯವನ್ನು ನಾನು ತಿಳಿಸುವೆನು

6 ನಾನು ರಾಜೀನಾಮೆ ಕೊಟ್ಟ ಮೇಲೂ ಪ್ರಾವಿಡೆಂಟ್ ಫಂಡಿನ ಪಾಲಿಸಿ ಹೋಲ್ಡರುಗಳಿಗೆ ಆದಷ್ಟು ಸಹಾಯ ಮಾಡಬೇಕೆಂದು ನನ್ನ ಕೆಲಸ ಮುಗಿದ ಮೇಲೆಯೂ ಪ್ರಯತ್ನಿಸಿದೆನು ಆದರೆ ಕಂಪನಿ ಏಜನ್ಸಿಯಲ್ಲಿ ಹಣ ವಿಷಯದಲ್ಲಿ ನನಗೆ ಮಾಡಲು ಅವಕಾಶವಿಲ್ಲದ್ದರಿಂದ ನನ್ನ ಪ್ರಯತ್ನವು ನಿಷ್ಫಲವಾಯಿತು ಆದಕ್ಕೆ ನಾನು ಒಂದು ಉಪಾಯವನ್ನು ಹೇಳುವೆನೆಂದರೆ—ನಾನು ಮೈಸೂರಿನಲ್ಲಿ "ಮೈಸೂರು ಗವರ್ನ್‌ಮೆಂಟ್ ಸಹಾಯ ಬೆನಿಫಿಟ್ ಮತ್ತು ನ್ಯಾಷನಲ್ ಇನ್ಷೂರೆನ್ಸ್ ಕಂಪನಿ, ಲಿಮಿಟೆಡ್" ಎಂಬುದನ್ನು ಹೊಸದಾಗಿ ಕಂಪನಿಗೆ ಸಂಬಂಧವಿಲ್ಲದ ರೀತಿ ಪ್ರತ್ಯೇಕವಾಗಿ ಸ್ಥಾಪಿಸಿ, ಮೊದಲಿನ ಕಂಪನಿಯವರ ಸಮ್ಮತಿಯನ್ನು ಪಡೆದು ಆ ಕಂಪನಿಯ ಪಾಲಿಸಿ ಹೋಲ್ಡರುಗಳ ಪೈಕಿ ಇಷ್ಟಪಡುವವರನ್ನು ಈ ಹೊಸ ಕಂಪನಿಯಲ್ಲಿ ಮೆಂಬರಾಗಿ ಸೇರಿಸಿಕೊಂಡಲ್ಲಿ ಯಾರಿಗೂ ಯಾವ ತರದ ಕಷ್ಟ ನಷ್ಟ ಮನಸ್ತಾಪಗಳೂ ಉಂಟಾಗಲಾರವು ಇದೇ ನಾನು ಮಾಡಬೇಕೆಂದಿರುವ ಪರಿಹಾರ

7 ನಮ್ಮ ಹೊಸ ಕಂಪನಿಯ ರೂಲುಗಳು ಮುಂತಾದದ್ದೆಲ್ಲಾ ಇನ್ನಾ ಇತರ ಕಂಪನಿಗಳಲ್ಲಿರುವದಕ್ಕಿಂತ ವಿಶೇಷ ಹಿತಕರವಾಗಿಯೂ ತುಂಬಾ ನೆರವುಳ್ಳದ್ದಾಗಿಯೂ ಇರುತ್ತದೆ ಇದರ ಮೂಲಧನವು ಒಂದು ಲಕ್ಷ ರೂಪಾಯಿ ಆಗಿರುತ್ತದೆ ಈ ಕಂಪನಿಯ ಬೇರೆ ಬೇರೆ ಭಾಗಗಳೆಲ್ಲಾ ನಮ್ಮ ದೇಶದ ಸಮಸ್ತ ಸ್ಥಿತಿಗತಿಗಳ ಪ್ರಜೆಗಳಿಗೂ ಅನುಕೂಲವಾಗಿರುವಂತೆ ಮಾಡಿಡಲ್ಪಡುವವು ಈ ಹೊಸ ಕಂಪನಿಯಲ್ಲಿ ಪಾಲಿಸಿ ಹೋಲ್ಡರುಗಳಿಗೆ ಮದುವೆ ಕಾಲದಲ್ಲಿ ದುಗುಣ ಪ್ರೀಮಿಯಂ ಹಣಗಳನ್ನು ಕೊಡುವುದಕ್ಕೇ ಏರ್ಪಾಡಿಟ್ಟು, ಏನು ಮಾಡಿದರೆ ನಿಮ್ಮನ್ನೇ ಈ ಕಂಪನಿಯ ಏಜಂಟರಾಗಿ ಅಂಗೀಕಾರಮಾಡುವೆವು

8 ಈಗ ಪಾಲಿಸಿ ಹೋಲ್ಡರುಗಳ ಮದುವೆಗಳು ಹಿಂದಿನ ಕಾಂಟ್ರಾಕ್ಟಿನಲ್ಲಿ ನಿರ್ಧರಿಸಲ್ಪಟ್ಟ, ಬರತಕ್ಕ ಜೂನ್ ಕಾಂಟ್ರಾಕ್ಟಿನಲ್ಲಿ ಜರುಗುವಂತೆ ಅಂಥವರಿಗೆ ಸಲ್ಲಬೇಕಾಗಿರುವ ಬೋನಸ್ ಹಣಗಳೆಲ್ಲಾ ಇದೇ ಜೂನ್ ಮತ್ತು ಸೆಪ್ಟೆಂಬರ್ ಪ್ರಾರಂಭದಲ್ಲಿ ಹೆಡ್ ಆಫೀಸಿನವರಿಂದ ನೇರಾ ದೊರಕುವವು ಎಂಬ ಸಂಗತಿಯನ್ನು ನಿಮ್ಮ ಕಡೆ ಪಾಲಿಸಿ ಹೋಲ್ಡರುಗಳಿಗೆಲ್ಲಾ ತಿಳಿಸಬೇಕೆಂದು ಈ ಮೂಲಕ ಕೃಪೆಯಿಡುತ್ತೇನೆ

9 ಮೇಲೆ ಹೇಳಿರುವ ವಿಚಾರಗಳನ್ನು ತಿಳಿದ ಕೆಲವು ಅಯೋಗ್ಯ ಜನಗಳು ಏನೂ ತಿಳಿಯದ ಜನಗಳಿಗೆ ಮೋಸಪಡಿಸಿ ನಮ್ಮ ಕಂಪನಿಯ ವಿಷಯದಲ್ಲಿ ಸುಳ್ಳು ಸುದ್ದಿಗಳನ್ನು ಹರಡುತ್ತಿದ್ದಾರೆಂದು ನನಗೆ ವರ್ತಮಾನ ಬಂದಿದೆ ನಮ್ಮ ಕಂಪನಿಯು ಎಂದಿನಂತೆ ಬಹು ಚೆನ್ನಾಗಿ, ಸ್ವಲ್ಪವೂ ಅನುಮಾನಕ್ಕೆ ಆಸ್ಪದವಿಲ್ಲದಂತೆ ನಡೆಯುತ್ತಿದೆ ಎಂದು ಖಚಿತವಾಗಿ ತಿಳಿಯುವುದು ಅಂಥಾ ಅಯೋಗ್ಯರಾದ ಜನರ ಹೆಸರು ಮುಂತಾದದ್ದನ್ನು ನಿಮ್ಮ ಏಜಂಟರೂ ಪಾಲಿಸಿ ಹೋಲ್ಡರುಗಳೂ ಹಿಂದಿನಂತೆ ನನಗೆ ತಿಳಿಸಬೇಕು ಯಾಕೆಂದರೆ ನಾವು ಅಂಥವರ ಮೇಲೆ ನ್ಯಾಯಸ್ಥಾನದಲ್ಲಿ ವ್ಯವಹಾರ ಮಾಡುವುದಕ್ಕೆ ಖಂಡಿತವಾಗಿಯೂ ನಿಶ್ಚಯಿಸಿಕೊಂಡಿರುತ್ತೇನೆ [115 1]

ನಿಮ್ಮ ವಿಧೇಯ

ಎಂ. ಎಲ್ ನಾಗಣ್ಣ,

ಚೀಫ್ ಏಜಂಟ್

ಪರೀಕ್ಷಿಸಿ ನೋಡದ ಅಗ್ಗದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ಬಿಕರಿಯಾಗುತ್ತಿವೆ ನಿಮ್ಮ ಕೇಶಾಭರಣವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ನಷ್ಟಹೋಗುತ್ತೆ ಆದಕಾರಣ ಪರೀಕ್ಷಿತವಾದುದಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ವಾಸನೆ ಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ ನಯವಾಗಿ, ಚಕಚಕಿಸುವವು ಚಿಕ್ಕದಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಪೋಷಕವೆಂದು ನೆತ್ತಿ ಹೊಟ್ಟನ್ನು ಶುದ್ಧ ಮಾಡುತ್ತೆ ಸುಂದರ ಮೊಟ್ಟನ್ನು ತೆಗೆಯುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳದ್ದರಿಂದ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಒಬಪಡಿಸಿ, ನರೆಕೂದಲನ್ನು ಕಪ್ಪುಮಾಡಿ ತಿರುಗಿಸಿ ಕೇಶರಾಶಿಯನ್ನು ಅಧಿಕವಾಗಿಯೂ ದಟ್ಟವಾಗಿಯೂ ಕೋಮಲವಾಗಿಯೂ ಇಟ್ಟುಕೊಳ್ಳುವುದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ಋತುಗಳಲ್ಲಿಯೂ ಉಪಯೋಗಿಸಲು ಅರ್ಹವಾಗಿರುತ್ತೆ

ಅಂದರೆ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-4 0 ಬೇರೆ ತೆರಬೇಕು

3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ

ಮೈಸೂರು ಎಗ್ಸಿಬಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಸಿಬಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ ಮನ್ನಾರ್‌ಗುಡಿ ಎಸ್ಟೇಟ್ ಸೆಕ್ರೆಟರಿ ಮಿ। ಡಿ ಸಾಹೋಮುನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಇದನ್ನು ವಿಶೇಷವಾಗಿ ಮೆಚ್ಚಿಕೊಂಡಿದ್ದಾರೆ ನಮ್ಮ ಮನೆ ಹೆಂಗಸರು ಇದನ್ನು ಬಹಳವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ" ವಿರುದುನಗರ್ ಕೆ ವಿ ಎನ್ ಹೈಸ್ಕೂಲ್ ಹೆಡ್ ಮಾಸ್ಟರ್ ಮಿ॥ ಎಂ ಗುರುಸ್ವಾಮಿಪಿಳ್ಳೆಯವರು ಬರೆಯುವದು—"ನಿಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ಪರೀಕ್ಷೆಮಾಡಿದೆನು ಇದು ಕೂದಲನ್ನು ಹುಲುಸಾಗಿ ಅಂದವಾಗಿಯೂ, ಕೋಮಲವಾಗಿಯೂ, ಕಪ್ಪಾಗಿಯೂ ಬೆಳೆಸುವುದೆಂದು ಖಂಡಿತವಾಗಿ ಹೇಳಬಲ್ಲೆನು ಎರಡು ಬಾಟ್ಲು ಇನ್ನು ಮೂರು ಬಾಟ್ಲಿ ಎಣ್ಣೆ ಕಳುಹಿಸಿಕೊಡಿ" ಏಸಿಸ್ಟೆಂಟ್ ಡಿಪ್ಟಿ ಕಂಟ್ರೋಲರ್ ಆಫೀಸಿನ ಗೋಪಾಲಸ್ವಾಮಿ ಚೆಟ್ಟಿಯವರು ಬರೆಯುವದು—"ದಯವಿಟ್ಟು ನಿಮ್ಮ ಕಾಮಿನಿಯಾ ಎಣ್ಣೆ ಆರು ಬಾಟ್ಲಿ ಕಳುಹಿಸಿಕೊಡಿ ಒಂದು ತಿಂಗಳ ಹಿಂದೆ ನೀವು ಕಳುಹಿಸಿದ ಬಾಟ್ಲುಗಳು ಮುಗಿದುಹೋಯಿತು ಇದೇ ಉತ್ತಮೋತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳಬಲ್ಲೆನು" ಆದಕಾರಣ ನೀವೂ ಒಂದು ಸಲ ತರಿಸಿ ಪರೀಕ್ಷೆ ಮಾಡಿ

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನಿಮ್ಮ ಸ್ಥಳದ ಷಾಪುಕೀಪರಲ್ಲಿ ಅದು ಇಲ್ಲದಿದ್ದರೆ ಅವನ ಹೆಸರು ವಿಳಾಸದ ಸಮೇತ ನಮಗೆ ತಿಳಿಸಿ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ಏಜೆಂಟ್, ದಿ ಉಲನ್ ಮಾರ್ಕೆಟ್, ಮಂಗಳೂರು

ನಮ್ಮ ವಿಳಾಸ — [8 22]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

16—5—1913 ರಿಂದ 23—5—1913 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು	ಪಟ್ಟಣ	0	0	0	0
ಮೈಸೂರು	,,	0	0	1	1
ಬೆಂಗಳೂರು	ಡಿಸ್ಟ್ರಿಕ್ಟು	0	0	108	53
ಮೈಸೂರು	,,	3	0	245	109
ಕೋಲಾರ್	,,	0	0	0	0
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು	ಡಿಸ್ಟ್ರಿಕ್ಟು	0	0	38	20
ಹಾಸನ	,,	0	0	105	58
ಚಿತ್ರದುರ್ಗ	,,	0	0	5	5
ಕಡೂರ್	,,	6	5	272	186
ಶಿವಮೊಗ್ಗ	,,	4	1	11	6
	ಜುಮ್ಲಾ	14	6	785	438

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದಿ ಸಂವತ್ಸರೇ ಉತ್ತರಾಯಣೆ ವಸಂತಋತೌ ಜ್ಯೇಷ್ಠ ಶುದ್ಧ ನವಮಿ ಶುಕ್ರವಾರದಿಂದ ಜ್ಯೇಷ್ಠ ಶುದ್ಧ ಪಾಡ್ಯಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಜೂನ್

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಷಭ ಮಾಸದ ತೇದಿ
13	ಶುಕ್ರ	†	ನವಮಿ	3 14	ಹಸ್ತ	51 1	31
14	ಶನಿ	‡	ಏಕಾದಶಿ	52 26	ಚಿತ್ತ	27 59	1
15	ಭಾನು		ದ್ವಾದಶಿ	18 2	ಸ್ವಾತಿ	25 11	2
16	ಸೋಮ	§	ತ್ರಯೋದಶಿ	14 11	ವಿಶಾಖ	23 16	3
17	ಮಂಗಳ		ಚತುರ್ದಶಿ	12 5	ಅನೂರಾಧ	21-10	4
18	ಬುಧ	*	ಪೌರ್ಣಮಿ	10 58	ಜ್ಯೇಷ್ಠ	22 36	5
19	ಗುರು	,,	ಪಾಡ್ಯಮಿ	10-50	ಮೂಲ	23 54	6

† ದಶಹರಾ, ಕಟಕೆ ವಿವಾಹ (ಹ ...) ‡ ಸ್ಮಾರ್ತ ... ಏಕಾದಶಿ, ಷಡಶೀತಿಪುಣ್ಯಕಾಲ, ಮಳೆ ನಕ್ಷತ್ರ—ಮೃಗಶಿರ ೩ ನೇ ಪಾದ ... ವೈಷ್ಣವ ... ಏಕಾದಶಿ, ಹರಿವಾಸರ, ದ್ವಾದಶಿ, ದಗ್ಧಯೋಗ § ಸೋಮಪ್ರದೋಷ ... ಮಳೆ ನಕ್ಷತ್ರ—ಮೃಗಶಿರ 1 ನೇ ಪಾದ ... ಸಾವಿತ್ರೀ ವ್ರತ, ... ಮನು, ... ಪೂರ್ಣಿಮಾ, ಶ್ರೀರಂಗಪಟ್ಟಣ ... , ಶ್ರೀರಂಗಪಟ್ಟಣ ತಿರುಪ್ಪಾವಡೆ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ।	೧೫-೮-೦	೧೬-೮-೦
ಕೆಂಪುಸಾಂಬಾರ(?) ಅಕ್ಕಿ ಅವಲ್		೧೬-೦-೦	೧೭-೮-೦
,, ,, ಮಧ್ಯಂ		೧೫-೦-೦	೧೭-೦-೦
ಜಾಪ್ರಾಣಿ ಅಕ್ಕಿ		೧೫-೦-೦	೧೭-೪-೦
ಗಣ್ಣಕ್ಕಿ ಅವಲ್		೧೬-೮-೦	೧೮-೮-೦
,, ದುಯಂ		೧೬-೦-೦	೧೭-೮-೦
ತೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ		೧೫-೦-೦	೧೩-೮-೦
,, ಮಧ್ಯಂ ,,		೧೨-೮-೦	೧೨-೮-೦
ಹೈಬ್ರಿಡ್ ರಾಗಿ ಪಲ್ಲಾ ೧ಕ್ಕೆ		೭-೧೨-೦	೫-೦-೦
ಕಾಡ್ರಾಗಿ ,,		೬-೧೨-೦	೪-೧೨-೦
ಜೋಳ ,,		೭-೦-೦	೭-೪-೦
ಹುರಳಿ ,, ಪಲ್ಲಾ ೧ಕ್ಕೆ		[illegible]	೧೩-೧೨-೦
ಬಿಳಿ ಅವರೆ ,,		೧೩-೦-೦	೧೧-೦-೦
ಹೆಸರು ,,		೧೩-೦-೦	೧೪-೦-೦
ಉದ್ದು ,,		೧೦-೦-೦	೧೬-೦-೦
ಕಡಲೆ ,,		೧೦-೧೨-೦	೧೨-೦-೦
ಎಳ್ಳು ಸೇರು ೧೦೦ಕ್ಕೆ		೩೬-೦-೦	೩೪-೦-೦
ಹುರುಳಿ ಪಲ್ಲಾ ೧ಕ್ಕೆ		೭-೪-೦	೭-೦-೦
ಹರಳು ೧೦೭ ಸೇರಿಗೆ		೧೨-೦-೦	೧೪-೦-೦
ಕೊಬ್ಬರಿ(?) ಮಣ ೧ಕ್ಕೆ		೨-೪-೦	೩-೮-೦
ಮೆಣಸಿನಕಾಯಿ ,,		೪-೦-೦	೩-೪-೦
,, ದುಯಂ		೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೪-೦-೦	ಮಣ ೫-೮-೦
ಬೆಳ್ಳುಳ್ಳಿ ಮಣ ೧ಕ್ಕೆ		೬-೦-೦	೬-೬-೦
ಈರುಳ್ಳಿ ,,		೬-೪-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೫-೬-೦	೫-೪-೦
ಜೀರಿಗೆ(?) ,, ,,		[illegible]	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ		೧-೧೦-೦	೧-೪-೦
,, ಹಳೇದು ,,		೧-೯-೦	೦-೧೪-೦
ಉಪ್ಪು ಮಣ ೧ಕ್ಕೆ		೩-೩-೮-೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೧೧-೦	೫-೦-೦
ತೆಂಗಿನಕಾಯಿ ೧೦೦ಕ್ಕೆ		೭-೦-೦	೬-೦-೦
ಅಳಲೇಕಾಯಿ ಮಣ ೧ಕ್ಕೆ		೦-೬-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ		೦-೧೩-೦	೧-೮-೦
ಚಿನ್ನ (ಪೌನ್) ಕೆಂಪು		೧೫-೮-೦	೧೫-೮-೦
,, ,, ಪಸುಮೆ		೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ		೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧-೦-೦	೮೧-೩-೦

ನಮ್ಮ ಏಜಂಟರಿಗೆ ನೋಟೀಸ್.

ಕಳೆದ ಮೇ ತಿಂಗಳ ಆಖೈರಿಗೆ "ವೃತ್ತಾಂತ ಪತ್ರಿಕೆ"ಯ ಸಂವತ್ಸರವು ಪೂರೈಸುತ್ತದೆ ನಮ್ಮ ಏಜಂಟರುಗಳು ವರುಷದ ಲೆಕ್ಕಗಳನ್ನೆಲ್ಲಾ ಚುಕ್ತಮಾಡಿ, ಆಖೈರ್ ಪಟ್ಟಿಗಳನ್ನು ಕಳುಹಿಸಬೇಕು ಇದಲ್ಲದೆ ಜೂನ್ ಪ್ರಾರಂಭದಿಂದ ಅಡ್ವಾನ್ಸು ಚಂದಾ ಪಾವತಿ ಹೊರತು ಏಜಂಟರು ಯಾರಿಗೂ ಪತ್ರಿಕೆಗಳನ್ನು ಕೊಡಲಾಗದು ಹೊಸದಾಗಿ ಚಂದಾ ಕೊಡತಕ್ಕವರು ಒಂದು ವರುಷದ ಚಂದಾ ೧ ರೂಪಾಯನ್ನು ಅಡ್ವಾನ್ಸಾಗಿಯೇ ನಮ್ಮ ಏಜಂಟರಿಗೆ ಪಾವತಿಮಾಡಬೇಕೆಂದೂ, ಅವರಿಂದ ಆ ಬಗ್ಗೆ ಕ್ರಮವಾದ ಪ್ರಿಂಟಾದ ರಶೀತಿಯನ್ನು ಪಡೆದುಕೊಳ್ಳಬೇಕೆಂದೂ ಈ ಮೂಲಕ ಕೃತಪಡಿಸುತ್ತೇವೆ

ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು

ವೃತ್ತಾಂತ ಪತ್ರಿಕೆ.

ಶಕೆ ೧೯೧೩ ನೇ ಇಸವಿ ಜೂನ್ ತಾ ೧೨ ನೇ ಗುರುವಾರ

ಮೈಸೂರು ಪ್ರಾಚೀನ ಶಿಲ್ಪಾನ್ವೇಷಣ ಇಲಾಖೆಯು

ಮೈಸೂರು ಸೀಮೆಯ ಪುರಾತನ ನಾಗರಿಕಾದಿ ಚಿಹ್ನೆಮಾನಗಳನ್ನು ಹುಡುಕಿ ಪ್ರಕಟಪಡಿಸುವಂಥಾ ಸರ್ಕಾರಿ ಇಲಾಖೆಯ ಕಳೆದ ವರುಷದ ರಿಪೋರ್ಟು ನಮ್ಮಲ್ಲಿಗೆ ಬಂದು ಕೆಲವು ದಿನಗಳಾದವು ಇದು ಓದುವುದಕ್ಕೆ ಸ್ವಾರಸ್ಯವಾಗಿಯೂ, ಉತ್ಸಾಹಕರವಾಗಿಯೂ ಇದೆ ಮ|| ಆರ್ ನರಸಿಂಹಾಚಾರ್ಯರವರು ಸಂಸ್ಥಾನಾದ್ಯಂತ ದೊರಕುವ ಶಾಸನಾದಿಗಳನ್ನು ಹುಡುಕಿ, ಅವುಗಳಲ್ಲಿರುವ ಬರೆವಣಿಗೆಗಳನ್ನು ಅರ್ಥವಾಗುವಂತೆ ಓದಿಸುವುದರಲ್ಲಿ ಕಳೆದ ವರುಷವೆಲ್ಲಾ ಬಹಳ ಚಟುವಟಿಕೆಯನ್ನೂ ಸಾಹಸವನ್ನೂ ಪಟ್ಟಿರುತ್ತಾರೆ

ಕನ್ನಂಬಾಡಿಯಲ್ಲಿರುವ ಪುರಾತನ ದೇವಸ್ಥಾನವನ್ನು ಸಾಧ್ಯವಾದರೆ ಸರ್ಕಾರದವರು ಉಳಿಸಿ ಕಾಪಾಡಿಕೊಂಡು ಬರುವುದು ಅವಶ್ಯ, ಯಾಕೆಂದರೆ ಅದರ ರಚನಾಕ್ರಮವೂ ಅದರ ಪೂರ್ವಚರಿತ್ರೆಯೂ ಬಹು ಅಮೂಲ್ಯವಾಗಿರುತ್ತವೆ ಈ ದೇವಸ್ಥಾನವನ್ನು ಕಿತ್ತು ಬೇರೆ ಕಡೆಗೆ ಸಾಗಿಸಿ ಕಟ್ಟುವುದು ಒಳ್ಳೇದೆಂಬ ಅಭಿಪ್ರಾಯವಿರುವಂತೆ ಕಾಣುತ್ತದೆ, ಇದು ನಿಜವಾದ ಪಕ್ಷದಲ್ಲಿ ಅದನ್ನು ಹೊಸದಾಗಿ ಕಟ್ಟತಕ್ಕ ಸ್ಥಳವು ವಿಶೇಷವಾದದ್ದಾಗಿಯೂ ಸಕಲ ಪ್ರಜೆಗಳೂ ಸುಲಭವಾಗಿ ಹೋಗಿಬರಲು ಅನುಕೂಲವಾದದ್ದಾಗಿಯೂ ಇರಬೇಕೆಂದು ಅಭಿಪ್ರಾಯಪಡುತ್ತೇವೆ

ಮ|| ನರಸಿಂಹಾಚಾರ್ಯರು ತಲಕಾಡಿನ ಮರಳನ್ನು ಬಗಿಸಿ, ಅಲ್ಲಿ ಸಿಕ್ಕಿದ ಶಾಸನವನ್ನು ನಕಲುಮಾಡಿಕೊಂಡು, ಆ ದೇವಸ್ಥಾನದ ಕಟ್ಟಡದ ರಚನೆಯನ್ನು ತೋರಿಸುವಂಥಾ ಫೋಟೋ ತೆಗಿಸಿರುವುದನ್ನು ನೋಡಿದಲ್ಲಿ ಪ್ರಾಚೀನ ಶಿಲ್ಪಾನ್ವೇಷಣಾ ಕಾರ್ಯದಲ್ಲಿ ಅವರಿಗೆ ಎಷ್ಟುಮಟ್ಟಿನ ಉತ್ಸಾಹವೂ ಕುತೂಹಲವೂ ಮುತುವರ್ಜಿಯೂ ಉಂಟೆಂಬುವುದೂ, ಎಷ್ಟು ಉದ್ದೇಶಪಟ್ಟ ಕಾರ್ಯವನ್ನು ಸಾಧಿಸಿಕೊಳ್ಳುವ ಭಾಗದಲ್ಲಿ ಅವರ ಮನೋಧರ್ಮವು ಎಷ್ಟು ಸೂಕ್ಷ್ಮವಾಗಿದೆ ಎಂಬುವುದೂ ಪ್ರಕಾಶವಾಗುತ್ತದೆ. ಆ ಮರಳನ್ನು ತೋಡಿ ಎತ್ತಿ ಸುರಿಯುವ ಕಾರ್ಯವು ಹದಿನಾಲ್ಕು ದಿನ ಹಿಡಿಯಿತು ಕಡೆಗೆ ಅದರಡಿಯಲ್ಲಿ ಹನ್ನೆರಡು ಶಾಸನಗಳು—ಎಂದರೆ, ತಮಿಳಿನಲ್ಲಿ ಎಂಟೂ, ಕನ್ನಡದಲ್ಲಿ ನಾಲ್ಕೂ ದೊರೆತವು ಇವುಗಳಲ್ಲಿ ಒಂದು ಶಿಲಾಶಾಸನದಲ್ಲಿ 1117ನೇ ಇಸವಿಯಲ್ಲಿ ವಿಷ್ಣುವರ್ಧನನು ಚೋಳರಾಜರ ವೈಸರಾಯಿ (ರಾಜಪ್ರತಿನಿಧಿ) ಆಗಿದ್ದ ಆದಿಯಮಾನನೆಂಬಾತನನ್ನು ನಾಶಮಾಡಿ ತಲಕಾಡನ್ನು ಸ್ವಾಧೀನಪಡಿಸಿಕೊಂಡನೆಂದು ಬರೆದಿರುತ್ತದೆ

ಮ|| ನರಸಿಂಹಾಚಾರ್ಯರು ತಲಕಾಡು ಮತ್ತು ತಿರುಮಕೂಡ್ಲು ನರಸೀಪುರದ ಸುತ್ತುಮುತ್ತಣ ಗ್ರಾಮ ಊರುಗಳಲ್ಲಿ ಸಂಚಾರಮಾಡಿ, ಕೆಲವು ಶಾಸನಗಳ ನಕಲುಗಳನ್ನು ಬರೆದು ತಂದಿದ್ದಾರೆ ಮೈಸೂರು ಸೀಮೆಯನ್ನು ಪ್ರೀತಿಸಿ, ಅದರ ಪೂರ್ವಚರಿತ್ರೆಯನ್ನು ತಿಳಿಯಲಪೇಕ್ಷಿಸುವ ಸಾಹಸವಂತರಿಗೆಲ್ಲಾ ಈ ಭಾಗವು ಬಹು ಸ್ವಾರಸ್ಯವಾದದ್ದಾಗಿದೆ

ರಾಜಧಾನಿಯ ಅಕ್ಕಪಕ್ಕಗಳಲ್ಲಿರುವ ಪ್ರದೇಶವನ್ನು ಶೋಧನೆಮಾಡಿದರು ಮತ್ತು ಹರಿಹರ, ದಾವಣಗೆರೆ, ತರೀಕೆರೆ ಪ್ರಾಂತ್ಯಗಳಲ್ಲಿ ಸಂಚಾರಮಾಡಿ, ಹಲವು ಚರಿತ್ರಾರ್ಹವಾದ ಕಟ್ಟಡಗಳ ವೃತ್ತಾಂತವನ್ನು ಬರೆದಿರುತ್ತಾರೆ, ಇದನ್ನು ಓದಲು ಎಲ್ಲರಿಗೂ ಹರ್ಷವಾಗುವುದು

ಈ ರಿಪೋರ್ಟಿನಲ್ಲಿ ಶಾಸನಗಳನ್ನು ಅರ್ಥವಾಗುವಂತೆ ಓದಿಸಿ ಬರೆಯಲ್ಪಟ್ಟಿರುವ ಭಾಗವೇ ಬಹಳವಾಗಿದೆ ಇದರಲ್ಲೂ ಅನೇಕ ಉತ್ಸಾಹಕರವಾದ ಸಂಗತಿಗಳು ವಿವರಿಸಲ್ಪಟ್ಟಿರುವವು ಇದನ್ನೆಲ್ಲಾ ಚೆನ್ನಾಗಿ ತಿಳಿದುಕೊಳ್ಳಬೇಕಾದರೆ ಹಳಗನ್ನಡದಲ್ಲೂ ಪ್ರಾಕೃತದಲ್ಲೂ ತುಂಬಾ ಪರಿಶ್ರಮವಿದ್ದ ಹೊರತು ಸಾಧ್ಯವಿಲ್ಲ ಆದರೂ ಸಾಮಾನ್ಯ ಪ್ರಜೆಗಳು ಕೂಡ ಇದನ್ನು ಓದಿದಲ್ಲಿ ಈ ಸೀಮೆಯ ಪುರಾತನ ಕಾಲದ ಸ್ಥಿತಿಗತಿಯು ಸ್ವಲ್ಪಮಟ್ಟಿಗೆ ಗೋಚರವಾಗದೇ ಇರುವುದಕ್ಕೆ ಸಂಶಯವಿಲ್ಲ

ಈ ರಿಪೋರ್ಟಿನ ಇನ್ನೊಂದು ಭಾಗದಲ್ಲಿ ಪುರಾತನ ನಾಣ್ಯಗಳ ವೃತ್ತಾಂತವೂ, ಅವುಗಳ ಅರ್ಥ ವಿವರಣೆಯೂ ಹೇಳಲ್ಪಟ್ಟಿದೆ

ಮ|| ನರಸಿಂಹಾಚಾರ್ಯರು ಈ ಸಾಲಿನಲ್ಲಿ ನಡೆಸಿರುವ ಕಾರ್ಯಗಳನ್ನು ನೋಡಿ ನಾವು ಸಂತೋಷಪಡುವೆವು ಇನ್ನು ಮುಂದೆಯೂ ಅವರು ಈ ವಿಶೇಷವಾದ ಕೆಲಸವನ್ನೇ ಮಾಡುವುದಕ್ಕೆ ತಮ್ಮ ಸಮಯವನ್ನೆಲ್ಲಾ ವಿನಿಯೋಗಿಸುವಂತಾಗಲೆಂದು ಹಾರೈಸುತ್ತೇವೆ. ಮೈಸೂರು ಸಂಸ್ಥಾನದ ಪ್ರಜೆಗಳಲ್ಲೂ ಸರ್ಕಾರಿ ನೌಕರರಲ್ಲೂ ಎಷ್ಟೆಷ್ಟು ಜನರಿಗೆ ಮ|| ನರಸಿಂಹಾಚಾರ್ಯರವರು ಮಾಡುತ್ತಿರುವ ಕಾರ್ಯದಲ್ಲಿ ಯಥಾರ್ಥವಾಗಿಯೂ ಉತ್ಸಾಹವೂ ಕುತೂಹಲವೂ ಇರುವುದೆಂದು ಕೇಳಬಯಸುವೆವು ಅವರು ವಹಿಸಿ ಮಾಡುತ್ತಿರುವ ಕಾರ್ಯವು ಬಹಳಾಗಿಯಾಗಿ ವಿಶೇಷ ಚಿಂತೆಯಿಂದ ಕೂಡಿದವರಾಗಿ ಮಾಡಬೇಕಾಗಿರುತ್ತದೆ ಇದರಲ್ಲಿ ಅವರಿಗೆ ಉತ್ತೇಜನ ಕೊಡತಕ್ಕವರಾಗಲಿ, ಅವರ ಸಂಗಡ ಇದ್ದು ಸಂತೋಷಪಡಿಸತಕ್ಕವರಾಗಲಿ ದೊರೆಯುವುದು ಅಪರೂಪ ಇದಕಾರಣ ಅವರ ಉದ್ಯೋಗವೇ ಅವರಿಗೆ ಸಂತೋಷವನ್ನುಂಟುಮಾಡುವುದು ಅವರು ಕಂಡುಹಿಡಿದ ಶಾಸನಗಳೂ, ಅವುಗಳಿಗೆ ಅವರು ಬಿಡಿಸಿರುವ ಅರ್ಥವೂ ವಿಶೇಷವಾದ ಬಹುಮಾನಗಳೆಂದು ನಾವು ಧಾರಾಳವಾಗಿ ಹೇಳಬಲ್ಲೆವು ಪಂಡಿತೋತ್ತಮರು ಶ್ರಮಪಡುವುದು ಹೊಗಳಿಕೆಗಾಗಲಿ, ದ್ರವ್ಯ ಸಂಪಾದನೆಗಾಗಲಿ ಅಲ್ಲ, ಸತ್ಯವೂ ಯಥಾರ್ಥವೂ ಆದದ್ದನ್ನು ಹುಡುಕಿ ಗೊತ್ತುಮಾಡಬೇಕೆನ್ನುವುದೇ ಅವರ ಉದ್ದೇಶವಾಗಿರುವುದು ಅವರು ಈ ವರುಷ ಕಂಡುಹಿಡಿದಿರುವ ಶಾಸನಾದಿಗಳ ದೆಸೆಯಿಂದ ಮೈಸೂರು ಸೀಮೆಯ ಪೂರ್ವಚರಿತ್ರೆಯು ಇನ್ನೂ ಸ್ವಲ್ಪ ವಿವರವಾಗಿ ತಿಳಿಯಲು ಸಹಾಯವಾಯಿತು

ಸರ್ಕಾರದವರು ಅಚ್ಚು ಹಾಕಿಸಿರುವ ಈ ರಿಪೋರ್ಟುಗಳನ್ನು ಆಫೀಸುಗಳೊಳಗೆ ಬಹುಕಾಲ ಬಂದರಮಾಡಿಟ್ಟುಕೊಳ್ಳುತ್ತಾರೆಂದು ಊಹಿಸುತ್ತೇವೆ. ಯಾರು ಅಪೇಕ್ಷಿಸಿದರೂ ಈ ರಿಪೋರ್ಟುಗಳನ್ನು ಕ್ರಯಕ್ಕೆ ಪಡೆದು ತರಿಸಿಕೊಳ್ಳಬಹುದು ಹೀಗೆ ಕೊಂಡು ತರಿಸಿಕೊಳ್ಳುವವರು ಬಹಳ ಕಡಿಮೆಯೆಂದು ಸಂಶಯಪಡುತ್ತೇವೆ ಈ ಸೀಮೆಯಲ್ಲಿ ಸಮರ್ಥರಾಗಿಯೂ ಸ್ವತಂತ್ರವಂತರಾಗಿಯೂ ಇರುವಂಥಾ ಯೌವನಸ್ಥರು ಇಂಥಾ ಪ್ರಾಚೀನ ಶಿಲ್ಪಾನ್ವೇಷಣ ಕಾರ್ಯದಲ್ಲಿ ಉದ್ಯುಕ್ತರಾಗಿ, ಮೊದಲು ಮೈಸೂರು ದೇಶದ ಪೂರ್ವಚರಿತ್ರೆಯನ್ನು ಸರಿಯಾಗಿ ಗೊತ್ತುಮಾಡಿ ಬರೆಯುವುದರಲ್ಲಿ ಆಸಕ್ತರಾದದ್ದನ್ನು ನೋಡಬೇಕೆಂದು ತುಂಬಾ ಕುತೂಹಲಪಡುತ್ತೇವೆ

ಮ|| ನರಸಿಂಹಾಚಾರ್ಯರವರು ಸಾಮಾನ್ಯ ಪ್ರಜೆಗಳು ಉತ್ಸಾಹದಿಂದ ಓದಿ ತಿಳಿದುಕೊಳ್ಳುವಂಥಾ ರೀತಿಯಲ್ಲಿ ಈ ಶಾಸನಗಳ ವಿಚಾರವಾದ ಒಂದು ಪುಸ್ತಕವನ್ನು ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಇಷ್ಟರಲ್ಲೇ ಬರೆದು ಪ್ರಕಟಿಸುವವರಾಗಲೆಂದು ನಂಬಿ ಹಾರೈಸುವೆವು ಇದುವರೆಗೆ ಕಂಡು ಹಿಡಿಯಲ್ಪಟ್ಟಿರುವ ಶಾಸನಾದಿಗಳಿಂದ ಅಂಥಾ ಒಂದು ಸ್ವಾರಸ್ಯವಾದ ಪುಸ್ತಕವನ್ನು ಬರೆಯಲು ತಕ್ಕಮಟ್ಟಿಗೆ ಸಲಕರಣೆಗಳು ಒದಗುವವೆಂದು ನಮಗೆ ತೋರುತ್ತದೆ ಅಂಥಾ ಪುಸ್ತಕವು ಕೈಯಲ್ಲಿದ್ದರೆ ಸಾಮಾನ್ಯ ಪ್ರಜೆಯೂ ಕೂಡ ಅದರಲ್ಲಿ ವಿವರಿಸುವ ಸ್ಥಳಾದಿಗಳಿಗೆ ಹೋಗಿ ಶಾಸನಾದಿಗಳನ್ನು ನೋಡಿ ಸಂತೋಷಪಟ್ಟುಕೊಂಡಾನೆಂಬುವುದಕ್ಕೆ ಸಂಶಯವಿಲ್ಲ ಈಗಲಾದರೋ ಆಯಾ ಊರಿನಲ್ಲಿ ರತಕ್ಕವರಿಗೇನೇ ತಮ್ಮ ಊರಿನಲ್ಲೂ ಸುತ್ತುಮುತ್ತಿನ ಪ್ರದೇಶಗಳಲ್ಲೂ ಇರುವಂಥಾ ಶಾಸನಾದಿಗಳನ್ನು ನೋಡುತ್ತಾರಾದರೂ ತಿಳುವಳಿಕೆ ಸಾಲದ್ದರಿಂದ ನೋಡಿದರೂ ನೋಡದವರಂತೆಯೇ ಇದ್ದುಕೊಂಡು ಬಂದಿದ್ದಾರೆ

ನೆಲ್ಲೀಕಾಯಿ

ಒಬ್ಬಾನೊಬ್ಬ ಮರಗಾಲುಳ್ಳ ಮುದಿ ಸಿಪಾಯಿಯು ಒಂದಾನೊಂದು ಗ್ರಾಮಕ್ಕೆ ಬಂದು ಆಕಸ್ಮಾತ್ತಾಗಿ ಅನಾರೋಗ್ಯವುಳ್ಳವನಾಗಿ ಮುಂದಕ್ಕೆ ಹೋಗಲಾರದೆ ಅಲ್ಲಿ ಒಂದು ಕಣಜದಲ್ಲಿದ್ದ ಹುಲ್ಲಿನ ಮೇಲೆ ಮಲಗಿಕೊಂಡು ಬಹಳ ಸಂಕಟಪಡುತ್ತಿದ್ದನು ಆಗ ಒಬ್ಬಾನೊಬ್ಬ ವ್ಯಾಪಾರಿಯ ಮಗಳಾದ ಕೆಂಪಿಯೆಂಬ ಚಿಕ್ಕ ಹುಡುಗಿಯು ಅವನನ್ನು ಕಂಡು ಪಶ್ಚಾತ್ತಾಪದಿಂದ ಪ್ರತಿದಿವಸವೂ ಪರಾಮರಿಸಿಕೊಳ್ಳುತ್ತಲೂ, ಒಂದೊಂದು ಹಣವನ್ನು ಕೊಡುತ್ತಲೂ ಇದ್ದಳು ಆಮೇಲೆ ಒಂದು ದಿವಸ ಸ್ವಸ್ಥವಂತನಾದ ಆ ಸಿಪಾಯಿಯು—"ಪ್ರಿಯವುಳ್ಳ ಮಗುವೇ, ನಿಮ್ಮ ತಂದೆತಾಯಿಗಳು ಬಹಳ ಬಡವರೆಂದು ನಾನು ಕೇಳುತ್ತೇನೆ ನೀನು ಇಷ್ಟು ಹಣವನ್ನು ಎಲ್ಲಿಂದ ತರುತ್ತೀಯೆ? ಯಥಾರ್ಥವಾಗಿ ಹೇಳು ಯಾತಕ್ಕೆಂದರೆ ಅಧರ್ಮವಾದ ಪ್ರವೃತ್ತಿಯಿಂದ ಜೀವಿಸುವದಕ್ಕೆ ಬದಲಾಗಿ ಹಸಿವಿನಿಂದ ಪ್ರಾಣವನ್ನಾದರೂ ಬಿಡುವೆನು" ಅಂದನು ಅದಕ್ಕಾ ಹುಡುಗಿಯು—"ಅಂಥಾ ಯೋಚನೆಯನ್ನು ಬಿಡು ನಾನು ಹಣವನ್ನು ನ್ಯಾಯವಾಗಿ ಸಂಪಾದಿಸುತ್ತಿದ್ದೇನೆ ನಾನು ಪ್ರತಿದಿವಸವೂ ಶಾಲೆಗೆ ಹೋಗಬೇಕಾದರೆ ಒಂದು ತೋಪಿನ ಮಧ್ಯೆ ಹೋಗಬೇಕಾಗಿ ಇದೆ ಅಲ್ಲಿ ನೆಲ್ಲೀಮರಗಳಿವೆ ಆ ಮರಗಳ ನೆಲ್ಲೀಕಾಯಿಗಳನ್ನು ಕಿತ್ತುಕೊಂಡುಬಂದು ಮಾರಿ ಅದರಲ್ಲಿ ಬರುವ ಒಂದು ದುಡ್ಡನ್ನು ನಿನಗೆ ತಂದುಕೊಡುತ್ತೇನೆ ಇದು ನನ್ನ ತಂದೆತಾಯಿಗಳಿಗೂ ತಿಳಿದಿದ್ದಾಗ್ಯೂ ಅವರು 'ನಮಗಿಂತಲೂ ಬಡವರು ಲೋಕದಲ್ಲಿರುವರು, ಆದರೂ ಎಂಥಾ ಬಡವರಾದರೂ ತಮಗೆ ಶಕ್ತಿ ಇದ್ದಷ್ಟು ಪರೋಪಕಾರವನ್ನು ಮಾಡಬೇಕು' ಎಂದು ನನ್ನನ್ನು ಪ್ರೋತ್ಸಾಹಪಡಿಸುತ್ತಾರೆ" ಎಂದಳು ಆಗ ಆ ವೃದ್ಧನು ಆನಂದಬಾಷ್ಪವನ್ನು ಸುರಿಸುತ್ತಾ—"ಮಗುವೇ, ನಿನಗೂ ಪರೋಪಕಾರ ಬುದ್ಧಿಯುಳ್ಳ ನಿಮ್ಮ ತಂದೆತಾಯಿಗಳಿಗೂ ಭಗವಂತನು ಮೇಲನ್ನುಮಾಡಲಿ" ಎಂದು ಹರಸಿದನು

"ಹೃದಯದಲ್ಲಿ ಪರೋಪಕಾರ ಬುದ್ಧಿಯುಂಟಾದರೆ, ಎಷ್ಟು ಬಡವರಾದರೂ ಉಪಕಾರವನ್ನಾದರೂ ಮಾಡಲು ಬಹುದು"

ಕೆಲವು ದಿವಸಗಳ ಮೇಲೆ ಒಬ್ಬಾನೊಬ್ಬ ಸೈನ್ಯಾಧಿಪತಿಯು ಆ ಗ್ರಾಮದ ಮಾರ್ಗವಾಗಿ ಹೋಗುತ್ತಾ ಅಲ್ಲಿ ತನ್ನ ರಥವನ್ನಿಳಿದು ಕುದುರೆಗಳನ್ನು ಮೇಯುವುದಕ್ಕೆ ಬಿಡುವಾಗ ಆ ಸಿಪಾಯಿಯು ನಿಶ್ಚಯವನ್ನು ಕೇಳಿ ಅವನ ಬಳಿಗೆ ಬಂದು ಯೋಗಕ್ಷೇಮವನ್ನು ವಿಚಾರಿಸಲಾಗಿ ಆತನು ಆ ಹುಡುಗಿಯ ವಿಚಾರವನ್ನು ಮೊದಲು ತಿಳಿಸಿದನು ಅದನ್ನು ಕೇಳಿ, "ಆಹಾ! ಆ ಬಡ ಹುಡುಗಿಯು ನಿನಗೆ ಇಷ್ಟು ಮಾಡಿದ ಮೇಲೆ ನಿನ್ನ ಹಳೇ ಧಣಿಯಾಗಿದ್ದ ನಾನು ಇನ್ನೂ ಹೆಚ್ಚಾಗಿ ಮಾಡಬೇಡವೇ? ನಾನು ಇಲ್ಲಿರುವ ಪತ್ರಕ್ಕೆ ಹೋಗಿ ಬೇಕಾದ ಏರ್ಪಾಡನ್ನು ಮಾಡುತ್ತೇನೆ" ಎಂದು ಹೇಳಿ ಹೋಗಿ ಅದರಂತೆಯೇ ಮಾಡಿದನು. ತರುವಾಯ ಆ ಹುಡುಗಿಯು ಇರುವ ಗುಡಿಸಲಿಗೆ ಹೋಗಿ "ಮಗುವೇ, ನಿನ್ನ ಪರೋಪಕಾರ ಕೃತ್ಯವು ನನ್ನ ಕಣ್ಣುಗಳಲ್ಲಿ ಆನಂದ ಬಾಷ್ಪಗಳನ್ನು ಸುರಿಸಿದೆ ನೀನು ಆ ಸಿಪಾಯಿಗೆ ಅನೇಕ ತಾಂಬ್ರದ ನಾಣ್ಯಗಳನ್ನು ಕೊಟ್ಟಿದ್ದೀಯೆ, ನಾನು ಅಷ್ಟು ಬಂಗಾರದ ನಾಣ್ಯಗಳನ್ನು ಕೊಡುತ್ತೇನೆ, ತೆಗೆದುಕೋ" ಎಂದನು ಅದನ್ನು ನೋಡಿ ತಂದೆತಾಯಿಗಳು "ಅದು ಬಹಳ ಹೆಚ್ಚು" ಎನ್ನಲು ಆ ಸೇನಾಧಿಪತಿಯು—"ಅಲ್ಲ, ಇದು ಅಲ್ಪವಾದ ಪ್ರತಿಫಲವು, ಈ ಒಳ್ಳೇ ಮಗುವಿಗೆ ಪರಲೋಕದಲ್ಲಿ ಇನ್ನೂ ಶ್ರೇಷ್ಠವಾದದ್ದು ಇದೆ" ಎಂದನು

"ನಾವು ಮಾಡುವ ಸತ್ಕಾರ್ಯಗಳಿಗೆ ಪ್ರತಿಫಲಗಳು ಇಹಪರಗಳಲ್ಲಿ ಸಹ ಉಂಟು"

ಒಳದೇಶದ ವೃತ್ತಾಂತಗಳು

ಶ್ರೀಮನ್ಮಹಾರಾಜರವರೂ ಮಹಾಮಾತೃಶ್ರೀಯವರೂ ಕಳೆದ ಭಾನುವಾರ ಸಾಯಂಕಾಲ ಸುಮಾರು 1 ಗಂಟೆ ಹೊತ್ತಿಗೆ ಪರಿವಾರ ಸಮೇತ ನೀಲಗಿರಿಯಿಂದ ಮೋಟಾರ್ ಗಾಡಿಗಳಲ್ಲಿ ನಂಜನಗೂಡು ಮಾರ್ಗವಾಗಿ ರಾಜಧಾನಿಗೆ ಚಿತ್ತೈಸಿದರು

* * *

ಬೆಂಗಳೂರು ಸಿಟಿಯಲ್ಲಿ ರೈಲೆ ಪೋಲೀಸಿನ ಇಬ್ಬರು ಪ್ಯಾದೆಗಳು ವಾರಿಸ್ ಇಲ್ಲದ 100 ಹೊಸ ಕೋರಿಗಳ ಒಂದು ಗಂಟನ್ನು ಕದ್ದು ಗೋಪಾಲಶೆಟ್ಟಿ ಎಂಬ ವರ್ತಕನಿಗೆ 100 ರೂಪಾಯಿಗೆ ವಿಕ್ರಯಿಮಾಡಿದಾರೆಂದು ಮೊಕದ್ದಮೆ ಬಂದು ತನಿಖೆ ನಡೆಯುತ್ತಿದೆ

* * *

ರಾಜಧಾನಿ ಅಡಿಷನಲ್ ಮುನ್ಸಿಪ್ ಕೋರ್ಟಿನಲ್ಲಿ ನಾಜರಾಗಿದ್ದು ಹಣವನ್ನು ವಸ್ತುಮಾಡಿದ್ದ ನಾರಾಯಣನನ್ನು ಅ|| ಸೆಷನ್ಸ್ ಜಡ್ಜ್ ಮಿ|| ಸುಬ್ರಹ್ಮಣ್ಯನವರು ದರ್ಯಾಫ್ತಿಮಾಡಿದ್ದರಲ್ಲಿ ಅಪರಾಧವು ರುಜುವಾತಾದದ್ದರಿಂದ ಅವನಿಗೆ ಮೂರು ತಿಂಗಳ ಕಠಿಣಸಜವನ್ನೂ ಮೂರು ತಿಂಗಳ ಸಾದಾಸಜವನ್ನೂ ವಿಧಿಸಿರುತ್ತಾರೆ

* * *

ರಾಜಧಾನಿಯ ಮಹಾರಾಣಿ ಕಾಲೇಜಿನಿಂದ ನಾರ್ಮಲ್ ಸ್ಕೂಲಿನ ಹೆಡ್ ಮಾಸ್ಟರಾಗಿ ಮೊನ್ನೆತಾನೇ ವರ್ಗವಾದ ಮಿ|| ಕೆ ಚಿಂತಾಮಣಿರಾಯರು ಮತ್ತೆ ಅದೇ ಕಾಲೇಜಿಗೆ ಹೋಗಬೇಕೆಂದೂ, ಆ ಕಾಲೇಜಿನ ಮಿ|| ಡಿ ವೆಂಕಟರಾಮಯ್ಯನವರು ನಾರ್ಮಲ್ ಸ್ಕೂಲ್ ಹೆಡ್ ಮಾಸ್ಟರಾಗಬೇಕೆಂದೂ ಹುಕುಂ ಆಗಿರುವಂತೆ ತಿಳಿಯುವುದು

* * *

ಮಹಾಮಾತೃಶ್ರೀ ಮಹಾರಾಣಿಯವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಸೂಪರಿಂಟೆಂಡೆಂಟರಾದ ಡಾಕ್ಟರ್ ಆರುಮುಗಂ ಮುದಲಿಯಾರ್ರವರು ನೆರವೇರಿಸಿದ ತಮ್ಮ ಕುಮಾರಿಯ ವಿವಾಹೋತ್ಸವವನ್ನು ಅರಿತು ನೂತನ ದಂಪತಿಗಳಿಗೆ ಅಮೂಲ್ಯವಾದ ಬೆಳ್ಳಿಪಾತ್ರೆಗಳನ್ನೂ ಒಂದು ಸಾವಿರ ರೂಪಾಯನ್ನೂ ದಯಪಾಲಿಸಿದರೆಂದು ತಿಳಿದುಬಂದಿದೆ

* * *

ಈ ದಿನ ಮಧ್ಯಾಹ್ನ 12 ಗಂಟೆಗೆ ರಾಜಧಾನಿಯ ಡಿಸ್ಟ್ರಿಕ್ಟ್ ಆಫೀಸ್ ದರ್ಬಾರ್ ಮಂದಿರದಲ್ಲಿ ಮೈಸೂರು ಸಂಪದಭಿವೃದ್ಧಿ ಸಮಾಜದ ಮೆಂಬರುಗಳು ಸೇರಿ ಚರ್ಚೆಗಳನ್ನು ನಡೆಸುವರು ಆದಾಯದ ಮೇಲೆ ತೆರಿಗೆಯನ್ನು ಹಾಕುವ ವಿಚಾರವನ್ನು ಕುರಿತು ಮಿ|| ಕೆ ಪಿ ಪುಟ್ಟಣ್ಣಶೆಟ್ಟಿಯವರು ಕಮಿಟಿಯ ರಿಪೋರ್ಟನ್ನು ಓದುತ್ತಾರೆಂದು ತಿಳಿಯುವುದು

* * *

ಯಾವನೋ ಒಬ್ಬನು ಕಳೆದ ತಾ 29ನೇ ಬುಧವಾರ ನಡುಮಧ್ಯಾಹ್ನದಲ್ಲಿ ಅರಮನೆಯ ಅಂಬಾವಿಲಾಸಕ್ಕೆ ಹತ್ತಿಹೋಗಿ ನಿಂತಿದ್ದನೆಂದೂ, ಅವನನ್ನು ಹಿಡಿದುತಂದು ಕೋಟೆಯ ಆಚೆಗೆ ಸಾಗಿಸಿದರೆಂದೂ ಕಂಟ್ರೋಲರವರಿಗೆ ತಿಳಿದ ಪ್ರಕಾರ ಅವರು ಅಂಥಾ ಸ್ಥಳದಲ್ಲಿ ಪಹರೆ ಇಲ್ಲದೆಹೋದದ್ದಕ್ಕೆ ಕಾರಣವೇನೆಂದು ಮುಖ್ಯವಾಗಿ ತನಿಖೆಮಾಡುತ್ತಿದ್ದಾರೆಂದು ಕೇಳುತ್ತೇವೆ

* * *

ಆನರರಿ ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟುಗಳು ಪ್ರಾರಂಭವಾದ ಸುಮಾರು ನಾಲ್ಕು ವರುಷಗಳಿಂದ ಮೈಸೂರಿನಲ್ಲೂ ಬೆಂಗಳೂರಿನಲ್ಲೂ ಬಹಳ ಚೆನ್ನಾಗಿ ಕೆಲಸನಡೆಯುತ್ತಿರುವುದಾಗಿಯೂ, ಅವನ್ನು ಖಾಯಂಮಾಡಬೇಕೆಂದೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳು ಶಿಫಾರಸು ಮಾಡಿದ್ದನ್ನು ಗವರ್ನಮೆಂಟಿನವರು ಒಪ್ಪಿಕೊಂಡು ಅವನ್ನು ಖಾಯಂಮಾಡಿ ಹುಕುಂ ಕೊಟ್ಟಿದ್ದಾರೆ

* * *

ಕಳೆದ 1ನೇ ತಾ ಮಂಗಳವಾರ ಬೆಂಗಳೂರು ಶ್ರೀನಿವಾಸ ಮಂದಿರದಲ್ಲಿ ಚಕ್ರವರ್ತಿಸಾರ್ವಭೌಮರವರ ಜನ್ಮದಿನದ ಪ್ರೀತ್ಯರ್ಥ ಪ್ರಾರ್ಥನಾ ಕಾರ್ಯಗಳು ಸಂತೋಷದಿಂದ ನಡಿಸಲ್ಪಟ್ಟವು ಸ್ತ್ರೀಸೆಕ್ರಿಟರಿಯವರೂ, ಒಬ್ಬ ಬಾಲಕನೂ ರಾಜಭಕ್ತಿಯನ್ನು ಕುರಿತು ಸಾರಸ್ಯವಾಗಿ ಉಪನ್ಯಾಸಗಳನ್ನು ನಡಿಸಿ, ಮಕ್ಕಳಿಗೆ ತಿಂಡಿ ಪದಾರ್ಥ ಜಯಘೋಷದೊಡನೆ ಕೂಟವನ್ನು ಮುಕ್ತಾಯಮಾಡಿದರು

* * *

ಅರಮನೆಯ ವಿದ್ವಾಂಸರಾಗಿಯೂ ವ್ಯಾಕರಣದಲ್ಲಿ ವಿಶೇಷ ಪಂಡಿತರಾಗಿಯೂ ಇದ್ದ ಪಂಡಿತ್ ಯಜ್ಞಂ ನರಸಿಂಹಾಚಾರ್ಯರು ಕಳೆದ ಶನಿವಾರ ಮಧ್ಯಾಹ್ನ ಸ್ವಗೃಹದಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವಸಾನಕಾಲದಲ್ಲಿ ಅವರಿಗೆ ಇನ್ನೂ 10 ವರುಷ ವಯಸ್ಸಾಗಿತ್ತು ಅವರ ವಿಯೋಗ ದುಃಖವನ್ನು ಅನುಭವಿಸುವದಕ್ಕೆ ಪತ್ನಿಯೂ ನಾಲ್ವರು ಮಕ್ಕಳೂ ಇರುತ್ತಾರೆ

* * *

ಶ್ರೀಮನ್ಮಹಾರಾಜರವರ ವರ್ಧಂತಿ ಕಟ್ಟಳೆಯ ಅರಸಕ್ಷತೆ ದರ್ಬಾರುಗಳು ನಾಳೆ ಶನಿವಾರ ಬೆಳಿಗ್ಗೆ ಅರಮನೆಯ ಅಂಬಾವಿಲಾಸದಲ್ಲೂ, ಸಾಯಂಕಾಲ ರಾಜಬೀದಿಗಳಲ್ಲಿ ಶ್ರೀಮನ್ಮಹಾರಾಜರವರ ಮೆರವಣಿಗೆ ಉತ್ಸವವೂ ಜರುಗುವುವು ದಿವಾನ್‌ರವರು ಮೊನ್ನೆ ಬೆಳಿಗ್ಗೆ ಪರಿವಾರ ಸಮೇತ ರಾಜಧಾನಿಗೆ ದಯಮಾಡಿರುತ್ತಾರೆ ಕೌನ್ಸಿಲರುಗಳೂ, ಇಲಾಖೆಗಳ ಮತ್ತು ಡಿಸ್ಟ್ರಿಕ್ಟುಗಳ ಮುಖ್ಯಾಧಿಕಾರಿಗಳೂ ಬರುತ್ತಿರುವರು

* * *

ಕಳೆದ ವಾರದಿಂದ ರಾಜಧಾನಿಯಲ್ಲಿ ಬಿಸಿಲ ಬೇಗೆಯು ತಪ್ಪಿ, ಮೋಡ ಕವಿದುಕೊಂಡು ಬಿರುಗಾಳಿ ಬೀಸುತ್ತಾ ಆಗಾಗ್ಗೆ ತುಂತುರು ಮಳೆ ಬೀಳುತ್ತಿದೆ

ತವಾ ತಂಪಾಗಿಯೂ ಆಹ್ಲಾದಕರವಾಗಿಯೂ ಇದೆ. ರೈಲಿನ ಸಂಚಾರಕ್ಕೆ ಕೆಲವುಕಾಲ ತೊಂದರೆಯುಂಟಾದದ್ದರಿಂದ ಮಾವಿನ ಹಣ್ಣು ದಿಗರು ಸ್ಥಳಗಳಿಗೆ ರಫ್ತಾಗಲು ಅವಕಾಶವಾಗದೆ ಬಹಳ ಅಗ್ಗವಾಗಿ ವಿಕರಿ ಆಗುತ್ತಿದೆ. ಈ ಹಣ್ಣಿನ ಕಂಟ್ರಾಕ್ಟರುಗಳಿಗೆ ಈ ಸಲ ರೈಲಿನ ಅನನುಕೂಲದಿಂದ ತುಂಬಾ ನಷ್ಟವಾಯಿತು.

ಒಬ್ಬ ಬಾತ್ಮಿದಾರರಿಂದ—ನಂಜನಗೂಡು ಎ. ವಿ. ಸ್ಕೂಲಿನಲ್ಲಿ ಈ ವರುಷ ಇಂಗ್ಲೀಷ್ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿದ್ದ ಹನ್ನೊಂದು ಜನ ಹುಡುಗರ ಪೈಕಿ ಹತ್ತು ಮಂದಿ ಪ್ಯಾಸಾದರು. ಈಗ ಇಲ್ಲಿನ ಮಿಸ್ಟರ್ ಎ ವಿ. ಸ್ಕೂಲಿನಲ್ಲಿ ಹೊಸವಾದರಿಯನುಸರಿಸಿ ಇಂಗ್ಲೀಷ್ ಪ್ರಾಥಮಿಕ ತರಗತಿಯು ಪ್ರಾರಂಭಿಸಲ್ಪಟ್ಟಿದೆ. ಬಡ ವಿದ್ಯಾರ್ಥಿಗಳಿಗೆ ಸಹಾಯವಾಗುವಂತೆ ಪ್ರಥಮ ತರಗತಿಯಲ್ಲಿ ಮೂವರಿಗೆ ಪೂರ್ಣ ಫೀಜೂ, ಇಬ್ಬರಿಗೆ ಅರ್ಧ ಫೀಜೂ ಉಚಿತವಾಗಿ ದೊರೆಯುತ್ತದೆ.

ಕಳೆದ ಶನಿವಾರ ಸಾಯಂಕಾಲ ಬೆಂಗಳೂರು ಲಾಲ್‌ಬಾಗ್ ತೋಟದಲ್ಲಿ ಮಾವಿನಹಣ್ಣುಗಳ ಮತ್ತು ಕಸಿ ಗಿಡಗಳ ಪ್ರದರ್ಶನ ನಡೆಯಿತು. ರಸಪುರಿ, ಬಾದಾಮಿ, ರಾಜಪುರಿ, ಗೋವೆ ಮುಂತಾಗಿ ಸುಮಾರು ಹತ್ತು ಜಾತಿಯ ಫಲಗಳು ಪ್ರದರ್ಶನಮಾಡಲ್ಪಟ್ಟಿದ್ದವು. ಮತ್ತು ಮಾವಿನಹಣ್ಣಿನಿಂದ ತಯಾರಾದ ಬೇರೆ ಬೇರೆ ತರದ ತಿಂಡಿ ಪದಾರ್ಥಗಳನ್ನೂ, ಹಣ್ಣು ಕೆಡದಂತೆ ಕಾಪಾಡುವ ವಿಧಾನವನ್ನೂ ಮಾಡಿ ತೋರಿಸಿದರು. ಉತ್ತಮವಾದ ಹಣ್ಣುಗಳಿಗೂ ಪದಾರ್ಥಗಳಿಗೂ ಗಿಡಗಳಿಗೂ ಪರೀಕ್ಷಕರು ಬಹುಮಾನಗಳನ್ನು ಕೊಡಿಸಿದರು.

ರೈಲ್ವೆ ಇಲಾಖೆಯ ಅಧಿಕಾರಿಗಳು ತಮ್ಮ ನೌಕರಮಾಸ್ತರುಗಳ ಮುಷ್ಕರವೆಲ್ಲಾ ನಿವಾರಣೆಯಾಗಿ ರೈಲ್ ಗಾಡಿಗಳ ಸಂಚಾರವು ಎಂದಿನಂತೆ ಕ್ರಮಪಟ್ಟಿದೆ ಎಂದು ನೋಟೀಸುಗಳನ್ನು ಪ್ರಕಟಿಸುತ್ತಿದ್ದಾರೆ. ರೈಲ್ವೆ ನೌಕರರಲ್ಲಿ ಕೆಲವರು ಕೆಲವುಕಡೆ ಕೆಲಸಕ್ಕೆ ಮತ್ತೆ ಬಂದು ಸೇರಿಕೊಂಡರೂ, ಇನ್ನು ಕೆಲವರು ಮುಷ್ಕರ ಹಿಡಿದು ರೈಲ್ವೆ ಕಂಪನಿಯವರಿಗೆ ವಿರೋಧವಾಗಿ ಮೀಟಿಂಗುಗಳನ್ನು ಮಾಡುತ್ತಿರುವರು. ಊರೂರುಗಳಲ್ಲಿರುವ ಪ್ರಜೆಗಳಿಗಾದರೋ ಕಾಲಕ್ಕೆ ಸರಿಯಾಗಿ ಕಾಗದ ಪತ್ರಗಳು ತಲುಪದೆ ಅನನುಕೂಲವಾಗಿರುವುದು ಇನ್ನೂ ಸರಿಹೋಗಲಿಲ್ಲ.

ಮೈಸೂರು ಗೆಜೆಟ್ ಸಂಗ್ರಹ.

ಸಾಗರ ತಾಲ್ಲೂಕು ಅಮಲ್ದಾರ್ ಮಿ॥ ಬಿ ಕೃಷ್ಣರಾಯರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿಮಾಡಿದೆ. ಸಾಗರದ ಸಬ್ ಡಿವಿಜನ್ ಆಫೀಸ್ ಹೆಡ್ ಕ್ಲಾರ್ಕ್ ಮಿ॥ ಎ. ವಿ. ಶೇಷಾದ್ರಿ ಅಯ್ಯಂಗಾರ್ರು ತಾಲ್ಲೂಕ್ ಛಾರ್ಜನ್ನು ವಹಿಸತಕ್ಕದ್ದು.

ಹೊಳಲ್ಕೆರೆ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮಿ॥ ಬಿ. ಲಿಂಗಯ್ಯನವರಿಗೆ ಕಳೆದ ಫೆಬ್ರವರಿ ತಾ 10 ರಿಂದ ಹತ್ತು ದಿನಗಳ ಕಾಯಿದ ರಜಾ ಕೊಟ್ಟಿತ್ತು. ಶಿರಸ್ತೇದಾರ್ ಮಿ॥ ಸಿ ಕಾಶೀನಾಥರಾಯರು ತಾಲ್ಲೂಕಿನ ಛಾರ್ಜನ್ನು ವಹಿಸಿದ್ದರು.

ಮಿ॥ ಜಿ ನಾರಾಯಣರಾಯರು ಆಕ್ಟಿಂಗ್ ಅ ಕಮಿಷನರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮೈಸೂರು ಡೆಪ್ಯುಟಿ ಕಮಿಷನರವರ ಆಫೀಸ್ ರೆವಿನ್ಯೂ ಹೆಡ್ ಮುನ್ಷಿ ಮಿ॥ ಎಚ್. ಶ್ರೀನಿವಾಸಯ್ಯಂಗಾರ್ರು ಚಾಮರಾಜನಗರದ ತಾಲ್ಲೂಕು ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದ್ದಾರೆ.

ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರ ಅಸಿಸ್ಟೆಂಟರಾದ ಮಿ॥ ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ರಿಗೆ ಮೇ ತಾ 13 ರಿಂದ ಹನ್ನೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಮಿ॥ ಸಿ ಕೃಷ್ಣರಾಯರು ಅವರ ಕೆಲಸದ ಛಾರ್ಜನ್ನು ವಹಿಸಿದ್ದರು.

ಎಗ್ಜಿಕ್ಯುಟಿವ್ ಇಂಜನಿಯರ್ ಮಿ॥ ಸಿ ಕೃಷ್ಣಯ್ಯಂಗಾರ್ರು ರಜದಿಂದ ಮೇ ತಾ 8 ರಲ್ಲಿ ಕೆಲಸದ ಮೇಲೆ ಹಾಜರಾದ ಸಬಬು ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದುಮಾಡಿದೆ.

ಮೈಸೂರು ಡಿವಿಜನ್ ಅ॥ ಇಂಜನಿಯರ್ ಮಿ॥ ಎಂ ಎ ಆನಂದಾಚಾರ್ಯರವರಿಗೆ ಮೇ ತಾ. 20 ರಿಂದ ಆರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಮೈಸೂರಿನಿಂದ ಯಡತೊರೆ, ಹೊಳೆನರಸೀಪುರ, ಹಾಸನದ ಮಾರ್ಗವಾಗಿ ಅರಸೀಕೆರೆಗೆ ರೈಲ್ ರಸ್ತೆ ಹಾಕುವುದಕ್ಕೆ ಕೆಲವು ಜಮೀನುಗಳು ಸರ್ಕಾರದವರಿಗೆ ಬೇಕಾಗಿರುತ್ತದರಿಂದ ಸರ್ಕಾರದವರು ರೈಲ್ವೆ ಚೀಫ್ ಇಂಜನಿಯರವರಿಗೆ ಆ ಲೈನಿನಲ್ಲಿ ಸರ್ವೆ ಮುಂತಾದದ್ದು ಮಾಡಲು ಅಧಿಕಾರವಹಿಸಿರುತ್ತಾರೆ.

1913 ನೆಯ ಸಾಲಿನ ದಸರಾ ಕ್ಯಾಲೆಂಡರು.

(1) ಆಷಾಢ ಶುದ್ಧ ಪೂರ್ಣಿಮೆ, 1913 ನೆಯ ಜೂಲೈ 17.—ಲೋಕಲ್ ಫಂಡ್ ಬೋರ್ಡುಗಳಿಂದಲೂ, ಮ್ಯುನಿಸಿಪಲ್ ಕೌನ್ಸಿಲುಗಳಿಂದಲೂ ಮತ್ತು ಅಂಗೀಕರಿಸಲ್ಪಟ್ಟ ಸಂಘಗಳಿಂದಲೂ ಕಳುಹಿಸಲ್ಪಡುವ ಮೆಂಬರುಗಳ ಹೆಸರುಗಳನ್ನು ಡೆಪ್ಯುಟಿ ಕಮಿಷನರುಗಳಿಗೆ ತಿಳಿಸಬೇಕು.—(2) ಆಷಾಢ ಬಹುಳ ಅಮಾವಾಸ್ಯೆ, 1913 ನೆಯ ಆಗಸ್ಟ್ 2 —ತಾಲ್ಲೂಕು ಮೆಂಬರುಗಳೂ, ಡಿಸ್ಟ್ರಿಕ್ಟ್ ಫಂಡ್ ಬೋರ್ಡುಗಳೂ, ಮ್ಯುನಿಸಿಪಲ್ ಕೌನ್ಸಿಲುಗಳೂ ಮತ್ತು ಅಂಗೀಕರಿಸಲ್ಪಟ್ಟ ಸಂಘಗಳೂ ಸಹ ಮೈಸೂರಿನಲ್ಲಿ ನಡೆಯುವ ಮುಂದಿನ ಮೀಟಿಂಗಿನಲ್ಲಿ ಚರ್ಚೆಗೆ ತರಬೇಕೆಂದಿರುವ ವಿಷಯಗಳಿಗೆ ಸಂಬಂಧಪಟ್ಟ ಅರಿಕೆಗಳ ಮತ್ತು ಸಲಹೆಗಳ ಮಹಜರಿಂಡವನ್ನು ಆಯಾ ಡೆಪ್ಯುಟಿ ಕಮಿಷನರುಗಳಿಗೆ ಕಳುಹಿಸಬೇಕು. ಕಳುಹಿಸಲ್ಪಡುವ ಜನಗಳ ಪಟ್ಟಿಯನ್ನೂ, ಈಗ ಇರುವಂತೆ, ಚುನಾಯಿಸಲ್ಪಟ್ಟ ತಾಲ್ಲೂಕು ಮೆಂಬರುಗಳ ಕರಾರ್ಖಾ ಪಟ್ಟಿಯನ್ನೂ ಸಹ ಮೀಟಿಂಗಿಗೆ ಬರಬಹುದಾದ ಮೆಂಬರುಗಳ ಸಂಖ್ಯೆಯ ಸಹಿ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರ ಕಚೇರಿಗೆ ಕಳುಹಿಸಬೇಕು.—(3) ಶ್ರಾವಣ ಬಹುಳ ಪಂಚಮಿ, 1913 ನೆಯ ಆಗಸ್ಟ್ 21 — ಒಟ್ಟುಗೂಡಿಸಲ್ಪಟ್ಟ ಪಟ್ಟಿಗೆ ಸೇರಿಸುವುದಕ್ಕಾಗಿ ಸರ್ಕಾರದ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರಿಗೆ ಕಳುಹಿಸಲ್ಪಡುವ ವಿಷಯಗಳನ್ನು ಆಖೈರಾಗಿ ಚುನಾಯಿಸುವುದಕ್ಕೋಸ್ಕರ ಪ್ರತಿಯೊಬ್ಬ ಡೆಪ್ಯುಟಿ ಕಮಿಷನರೂ ಡಿಸ್ಟ್ರಿಕ್ಟ್ ಸಭೆಗಳಲ್ಲಿ ಮೆಂಬರುಗಳನ್ನು ಸೇರಿಸಿ ಮೀಟಿಂಗ್ ಮಾಡಬೇಕು —(4) ಭಾದ್ರಪದ ಶುದ್ಧ ಪ್ರತಿಪತ್ತು, 1913 ನೆಯ ಸೆಪ್ಟೆಂಬರ್ 1 —ಸಭೆಯಲ್ಲಿ ಚರ್ಚಿಸಲ್ಪಡತಕ್ಕ ವಿಷಯಗಳ ಮಹಜರಿಂಡದ ಸಂಗ್ರಹವು ಡೆಪ್ಯುಟಿ ಕಮಿಷನರ ಷರಾ ಸಹಿ ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯವರ ಕಚೇರಿಗೆ ತಲುಪಬೇಕು.—(5) ಅಶ್ವಯುಜ ಶುದ್ಧ ಏಕಾದಶಿ, 1913 ನೆಯ ಅಕ್ಟೋಬರ್ 10 —ಪ್ರತಿನಿಧಿ ಸಭೆಯು ಆರಂಭವಾಗುವ ದಿವಸ ಒಪ್ಪಿಸಬೇಕೆಂದಿರುವ ಎಲ್ಲಾ ವಿಜ್ಞಾಪನಾಪತ್ರಿಕೆಗಳ ಅಥವಾ ಹೇಳಬೇಕೆಂದಿರುವ ಉಪನ್ಯಾಸಗಳ ನಕಲುಗಳನ್ನು 1913 ನೆಯ ಅಕ್ಟೋಬರ್ 10 ನೆಯ ತಾರೀಖಿನ ದಿವಸ ಅಥವಾ ಅದಕ್ಕೆ ಪೂರ್ವ ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿಯವರಿಗೆ ತಲುಪುವಂತೆ ಅವರಿಗೆ ಕಳುಹಿಸಬೇಕು —(6) ಅಶ್ವಯುಜ ಶುದ್ಧ ಚತುರ್ದಶಿ, 1913 ನೆಯ ಅಕ್ಟೋಬರ್ 13 —ಪ್ರತಿನಿಧಿ ಸಭೆಯು ಪ್ರಾರಂಭವಾಗುವ ದಿನ.

ಒಂದು ಸಂತೋಷ ಕೂಟವು.

ಮಿ॥ ಎಂ. ಜಿ ಕೃಷ್ಣಸ್ವಾಮಿರಾಯರನ್ನು ಸತ್ಕರಿಸಿದ್ದು

ರಾಜಧಾನಿಯ ಪುರನಿವಾಸಿಗಳು ಕಳೆದ ಶನಿವಾರ ಸಾಯಂಕಾಲ ಟೌನ್ ಹಾಲ್ ಬಂಗಲೆಯಲ್ಲಿ ಮಿ॥ ಎಂ. ಜಿ ಕೃಷ್ಣಸ್ವಾಮಿರಾಯರಿಗೆ ಒಂದು ಎಂಟರ್‌ಟೇನ್‌ಮೆಂಟ್ ಕೊಟ್ಟರು. ಆಗ್ಗೆ ಎಲ್ಲಾ ಕೋಮುಗಳ ಮತ್ತೂ ಕಸಬುಗಳ ಮುಖಂಡ ಪ್ರಜೆಗಳೂ, ಅಧಿಕಾರಿಗಳೂ, ಪ್ರಮುಖರಾದ ಅರಸುಗಳೂ ಈ ಸಂತೋಷ ಕೂಟದಲ್ಲಿ ಹಾಜರಾಗಿದ್ದರು. ಬಂಗಲೆಯ ಒಳಭಾಗದಲ್ಲೂ, ಮೇಲಂತಸ್ತಿನ ಬಾಲಾಖಾನೆಯಲ್ಲೂ ಪ್ರಜೆಗಳು ಹೇರಳವಾಗಿ ಸೇರಿದ್ದರು. ದಿವ್ಯವಾದ ಹಾರ್ಮೋನಿಯಂ ಸಂಗೀತವೂ, ಮನೋಹರವಾದ ಹಾಡುಗಾರಿಕೆಯೂ ನಡೆದು ಸಭಿಕರು ಆನಂದಪಟ್ಟರು. ಆಸ್ಥಾನದ ಮಹಾವಿದ್ವಾನ್ ಕವಿತಿಲಕ ಅಯ್ಯಾಶಾಸ್ತ್ರಿಗಳು ರಚಿಸಿ ಓದಿದ ಎರಡು ಪದ್ಯಗಳು ಸಮಯೋಚಿತವಾಗಿಯೂ, ಮನೋಜ್ಞವಾಗಿಯೂ ಇದ್ದವು—(1) ದೊರೆವಡೆದ ಮಹಿಶೂರನಗರದ | ಪುರಜನಪ್ರಮುಖಾಧಿಕಾರಮೊ | ಳಿರುತನೇಕ ಪ್ರಕರಣಂಗಳೊಳಿಮಗೆ ನೀನೊಲಿದು || ವಿರಚಿಸಿ ಪೂರ್ವಪಕಾರಗಳ ನಾಂ ಸ್ಮರಿಸುತಂ ಬಹುಕಾಲ ಸನ್ನುತ, ಚರಿತ ಕೃಷ್ಣಸ್ವಾಮಿರಾಯ ಕೃತಜ್ಞರಾಗಿಹೆವು || (2) ಸೌಮನಸ್ಯ ದಯಾದಿ ಸದ್ಗುಣ | ಧಾಮನೆಂದ ನಿಸರ್ಗ ಕೃಷ್ಣಸ್ವಾಮಿರಾಯನೆ ನಿನಗಮಿಾ ಕರ್ಣಾಟಜನಪದವ || ಪ್ರೇಮದಿಂ ಪೊರೆವನ್ನರಾಜಶಿ | ರೋಮಣಿ ಶ್ರೀಕೃಷ್ಣನೃಪಗಂ | ಕ್ಷೇಮ ದೀರ್ಘಾಯುಗಳ ಜಗದೀಶ್ವರನು ಕರುಣಿಸಲಿ ||

ಬಳಿಕ ಮ॥ ಎಂ. ವೆಂಕಟಕೃಷ್ಣಯ್ಯನವರು ಸಭಿಕರನ್ನು ಕುರಿತು ಮಿ॥ ಕೃಷ್ಣಸ್ವಾಮಿ ರಾಯರು ಸುಮಾರು ನಾಲ್ಕುವರೆ ವರುಷಕಾಲ ರಾಜಧಾನಿಯ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾಗಿಯೂ, ಟ್ರಸ್ಟ್ ಬೋರ್ಡಿನ ಎಕ್ಸಿಕ್ಯುಟಿವ್ ಆಫೀಸರಾಗಿಯೂ ಇದ್ದುಕೊಂಡು, ಪುರಾಭಿವೃದ್ಧಿ ಕಾರ್ಯಗಳನ್ನು ಪ್ರಜಾಹಿತಚಿಂತನೆಯಿಂದಲೂ, ಚಟುವಟಿಕೆಯಾಗಿಯೂ, ಶ್ರದ್ಧೆಯಿಂದಲೂ ನಡಿಸಿ, ಮ್ಯುನಿಸಿಪಲ್ ಕೌನ್ಸಿಲರುಗಳಲ್ಲೂ ಟ್ರಸ್ಟ್ ಬೋರ್ಡ್ ಮೆಂಬರುಗಳಲ್ಲೂ, ಸಾಮಾನ್ಯವಾಗಿ ಸಕಲ ಪ್ರಜೆಗಳಲ್ಲೂ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿರುತ್ತಾರೆಂಬುವುದಕ್ಕೆ ಆ ದಿನ ನಡೆದ ಸಂತೋಷೋತ್ಸವವೂ, ಅಲ್ಲಿ ಸೇರಿರುವ ಪ್ರಜಾಸಮೂಹವೂ ಸಾಕ್ಷಿಯಾಗಿದೆ ಎಂದೂ, ಮೈಸೂರು ಸಂಸ್ಥಾನದಲ್ಲಿ ಘನತರವಾದ ವಂಶಕ್ಕೆ ಸೇರಿದ ಮಿ॥ ಕೃಷ್ಣಸ್ವಾಮಿರಾಯರು ಈ ರೀತಿ ವಿಚಕ್ಷಣೆಯಾಗಿ ನಿಷ್ಪಕ್ಷಪಾತತೆಯಿಂದ ಕಾರ್ಯಗಳನ್ನು ನಡಿಸುತ್ತಾ ಬಂದಿರುವುದರಿಂದ ಮೈಸೂರಿನ ಪ್ರಜೆಗಳಿಗೆಲ್ಲಾ ತುಂಬಾ ಶ್ರೇಯಸ್ಕರವಾಗಿದೆ ಎಂದೂ ಸ್ವಲ್ಪದೂರ ಮಾತನಾಡಿದರು. ಮಿ॥ ಕೃಷ್ಣಸ್ವಾಮಿರಾಯರು ಅದಕ್ಕೆ ಪ್ರತಿಯಾಗಿ ಹೇಳಿದ ಅಭಿಪ್ರಾಯವೇನೆಂದರೆ—ಮೈಸೂರು ಪುರನಿವಾಸಿಗಳು ಇಷ್ಟು ಮಟ್ಟಿಗೆ ನನ್ನನ್ನು ಗೌರವಿಸಿ ನನಗೆ ಸನ್ಮಾನಮಾಡಲು ಕಾರಣವೇನೋ ನನಗೆ ತಿಳಿಯದು. ಇಷ್ಟಕ್ಕೆಲ್ಲಾ ನನಗೆ ಅರ್ಹತೆ ಇಲ್ಲವೆಂದು ತಿಳಿದಿದ್ದೇನೆ. ಕಳೆದ ನಾಲ್ಕೂವರ ವರುಷಗಳಲ್ಲಿ ನಾನು ಜನೋಪಕಾರವಾದ ಮತ್ತೂ ಜ್ಞಾಪಕವಿರುವಂಥಾ ಯಾವ ಕೆಲಸವನ್ನೂ ಮಾಡಿಲ್ಲ, ಹಾಗೇನಾದರೂ ಅಲ್ಪ ಸ್ವಲ್ಪ ನಡೆದಿದ್ದರೆ ಅದು ಮ್ಯುನಿಸಿಪಲ್ ಕೌನ್ಸಿಲರುಗಳ ಸಹಾಯದಿಂದಲೇ ನಡೆಯಿತೆಂದು ಹೇಳಬಲ್ಲೆನು. ಮ್ಯುನಿಸಿಪಲ್ ಆಡಳಿತದ ವಿಷಯದಲ್ಲಿ ಹೇಳತಕ್ಕ ಸಂಗತಿಗಳು ಅನೇಕವಾಗಿರುತ್ತವೆ. ಆದರೆ ಅದನ್ನು ವಿವರಿಸಲು ಇದು ತಕ್ಕ ಸಮಯವಲ್ಲ. ತಾವುಗಳೆಲ್ಲಾ ದಯಮಾಡಿ ಇಷ್ಟುಮಟ್ಟಿಗೆ ನನ್ನನ್ನು ಸನ್ಮಾನಮಾಡಿದ್ದಕ್ಕಾಗಿ ತಮ್ಮಗಳಿಗೆ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ.—ತರುವಾಯ ಮಿ॥ ಕೃಷ್ಣಸ್ವಾಮಿರಾಯರಿಗೆ ಸಭಿಕರ ಪರವಾಗಿ ಮ॥ ವೆಂಕಟಕೃಷ್ಣಯ್ಯನವರು ದಿವ್ಯವಾದ ಹಾರಾ ಹಾಕಿ ತುರಾಯಿ ಒಪ್ಪಿಸಿದರು. ಸಭಿಕರು ಎದ್ದು ಶ್ರೀಮನ್ ಮಹಾರಾಜರವರ ಮತ್ತೂ ಮ॥ ಕೃಷ್ಣಸ್ವಾಮಿರಾಯರ ಶ್ರೇಯಸ್ಸನ್ನು ಬಯಸಿ ಜಯಘೋಷಮೊಡನೆ ತೆರಳಿದರು. ಪ್ರಜೆಗಳ ಪರವಾಗಿ ಮ್ಯುನಿಸಿಪಲ್ ಕೌನ್ಸಿಲರ್ ಮ್ಯ॥ ಎನ್. ಶ್ರೀಕಂಠಯ್ಯನವರೂ, ಜಹಗೀರ್‌ದಾರ್ ಮ॥ ಮಾದಪ್ಪನವರೂ ಮುಂದಾಳಾಗಿ ನಿಂತು ಮಾಡಿದ ಈ ಸಂತೋಷಕೂಟದ ಏರ್ಪಾಡುಗಳೆಲ್ಲಾ ತೃಪ್ತಿಕರವಾಗಿಯೂ ಸಂತೋಷಪ್ರದವಾಗಿಯೂ ನೆರವೇರಿದವು.

ಅರಸೀಕೆರೆ ಮಂಗಳೂರು ರೈಲ್ವೆಯು.

ದಿವಾನರವರು ಮಂಗಳೂರಿಗೆ ದಯಮಾಡಿದ್ದದ್ದು.

ಇದೇ ತಿಂಗಳ ತಾರೀಖು ೧ನೇ ಆದಿತ್ಯವಾರ ಸಾಯಂಕಾಲ ಮೈಸೂರು ದಿವಾನರಾದ ನಾಮದಾರ್ ವಿಶ್ವೇಶ್ವರಯ್ಯನವರು ಪ್ರೈವೇಟ್ ಸೆಕ್ರೆಟರಿಗಳಾದ ರಾ॥ ಹಿರಣ್ಣಯ್ಯ ಮತ್ತು ಮೈಸೂರು ಗವರ್ನಮೆಂಟಿನ ಅಂಡರ್ ಸೆಕ್ರೆಟರಿಯವರಾದ ಮ॥ ಪಿ ಜಿ ಡಿಸೋಜರ ಸಹಿತವಾಗಿ ಉದಕಮಂಡಲದಿಂದ ಮಂಗಳೂರಿಗೆ ಚಿತ್ತೈಸಿದರು. ಮ್ಯುನಿಸಿಪಲ್ ಚೇರ್ಮನ್‌ರಾದ ದಿವಾನ್ ಬಹದ್ದೂರ್ ರಾ॥ ಮುಂಡಪ್ಪ ಬಂಗೇರರವರು ಆಮಂತ್ರಣಕೊಟ್ಟ ಗೃಹಸ್ಥರಲ್ಲನೇಕರು ದಿವಾನರ ಆಗ್ಮಡಿಯು ಬರುವ ಸಮಯ ರೈಲ್ವೇ ಸ್ಟೇಷನಿನಲ್ಲಿ ದಿವಾನರನ್ನು ಕಾದುಕೊಂಡಿದ್ದು ಅವರಿಗೆ ಸ್ವಾಗತವನ್ನಿತ್ತರು. ಅರಸೀಕೆರೆ ಮಂಗಳೂರು ರೈಲ್ವೇ ತೆರೆಯುವ ಸಂಬಂಧ ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡಿನವರ ಮತ್ತು ಊರ ಪ್ರಮುಖ ಗೃಹಸ್ಥರ ಕೂಡ ಮಾತನಾಡಿ ತಕ್ಕ ಏರ್ಪಾಡು ಮಾಡುವುದೇ ಅವರು ಮಂಗಳೂರಿಗೆ ಸಂದರ್ಶಿಸಿದ ಮುಖ್ಯ ಉದ್ದೇಶವಾಗಿತ್ತು. 2 ನೇ ತಾರೀಕಿನ ಬೆಳಿಗ್ಗೆ ದಿವಾನರು ಇಲ್ಲಿಯ ಸೆಂಟ್ ಅಲೋಸಿಯಸ್ ಕಾಲೇಜು, ಸೆಂಟ್ ಅನ್ನಸ್ ಗರ್ಲ್ಸ್ ಹೈ ಸ್ಕೂಲು, ಫಾದರ್ ಮುಲ್ಲರವರ ಧರ್ಮಾಸ್ಪತ್ರೆ, ಮೆ ಸಾವಿಯರ್ ಸಾಲ್ಟ್ ಕೊಠಾರ ಕಾಫಿ ಕಾರಖಾನೆ, ಜೆಪ್ಪು ಸೆಮಿನರಿ, ಬಾಸೆಲ್ ಮಿಷನ್ ಪಟ್ಟಿನ ಹಂಚಿನ ಕಾರಖಾನೆ, ಬಟ್ಟೆಯ ನೇಯುವ ಕಾರಖಾನೆಗಳನ್ನು ಸಂದರ್ಶಿಸಿದರು. ಮಧ್ಯಾನ್ಹ 3 ಗಂಟೆಗೆ ಕಲೆಕ್ಟರ ಕಚೇರಿಯಲ್ಲಿ ಕಲೆಕ್ಟರ್ ದೊರೆಗಳವರು ಹಾಜರಿದ್ದು ಪಟ್ಟಣದ ಪ್ರಮುಖ ಗೃಹಸ್ಥರ ಒಂದು ಸಭೆ ನೆರೆಯಿತು. ಈ ಸಭೆಯಲ್ಲಿ ದಿವಾನರು ಮಂಗಳೂರಿನಿಂದ ಈಗ ಮೈಸೂರು ಪ್ರಾಂತ್ಯಕ್ಕೆ ಹೋಗುವ ಮುಖ್ಯ ಸರಕುಗಳ್ಯಾವವು, ಮೈಸೂರಿನಿಂದ ಇಲ್ಲಿಗೆ ಬರುವ ಮುಖ್ಯ ಸರಕುಗಳ್ಯಾವವು, ಈಗ ಇಲ್ಲಿಂದ ಎತ್ತಿನ ಗಾಡಿ ಮೂಲಕ ಸರಕುಗಳನ್ನು ಮೈಸೂರಿಗೆ ಒಯ್ಯುವದಕ್ಕೆ ಉಂಟಾಗಬಹುದೆಂಬದನ್ನು ಕೂಡಿ ಬಂದ ಸಭಿಕರಿಂದ ವಿಚಾರಿಸಿ ತಿಳಕೊಂಡರು. ರೈಲ್ವೇ ಲೈನು ಸೀದಾ ಶಿವಮೊಗ್ಗ ಮಾರ್ಗವಾಗಿ ಮಲ್ಪೆಗೆ ತಕ್ಕೊಂಡು ಹೋಗುವುದೋ ಯಾ ಮಂಗಳೂರಿಗೆ ತರುವುದೋ ಎಂಬ ಪ್ರಸ್ತಾಪ ನಡೆದಲ್ಲಿ ಮೈಸೂರಿನಿಂದ ಮುಖ್ಯವಾಗಿ ಆಗುಂಬೆ ಘಟ್ಟ, ಬೂಂಧ್ ಘಟ್ಟ, ಮಂಜರಾಬಾದ್ ಘಟ್ಟ ಮಾರ್ಗವಾಗಿ ಕಾಫಿಯು ಮಂಗಳೂರಿಗೆ ಬರುವುದರಿಂದ ಶಿವಮೊಗ್ಗಾ ಮಾರ್ಗವಾಗಿ ಮಲ್ಪೆಗೆ ಸೀದಾ ರೈಲ್ವೆ ಹಾಕಿಸುವುದರಿಂದ ಹೆಚ್ಚಿನ ಪ್ರಯೋಜನವಾಗಲಿಕ್ಕಿಲ್ಲವಾದುದರಿಂದ ಹಾಸನದಿಂದ ಸೀದಾ ಮಂಗಳೂರಿಗೆ ರೈಲ್ವೆ ತರುವುದುತ್ತಮವೆಂದು ಕೂಡಿ ಬಂದ ಗೃಹಸ್ಥರು ಅಭಿಪ್ರಾಯಪಟ್ಟರು. ಆದುದರಿಂದ ಪ್ರಥಮತಾ ಮಂಗಳೂರಿಗೆ ರೈಲ್ವೆ ಹಾಕಿಸಿ ಅನಂತರ ಮಲ್ಪೆಯ ವಿಷಯ ಆಲೋಚಿಸಬೇಕೆಂದು ಸಭೆಯಲ್ಲಿ ನಿರ್ಣಯವಾಯಿತು. ತೆರೆಯಲ್ಪಡಲಿಕ್ಕಿರುವ ಅರಸೀಕೆರೆ ಮಂಗಳೂರು ರೈಲ್ವೆಗೆ ನೆರೋಗೇಜ್ ಎಂಬ ಸಪೂರ ದಾರಿಯನ್ನು ತೆರೆಯುವುದು ಉತ್ತಮವೆಂದು ದಿವಾನರ ಅಭಿಪ್ರಾಯವಾಗಿತ್ತು. ರೈಲ್ವೆಯನ್ನು ತೆರೆಯುವ ಖರ್ಚಿನ ಸಂಬಂಧ ದಿವಾನರು ಪ್ರಶ್ನೆ ಮಾಡಿದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರು ಶೇಕಡಾ 1 ೮ ದರದ ಬಡ್ಡಿ ಮಟ್ಟಿಗೆ ಜವಾಬ್ದಾರಿ ಕೊಡುವರೆ ಒಪ್ಪಿಕೊಂಡರು. ಇದನ್ನು ಭರ್ತಿಮಾಡುವರೆ ಬರುವ ವರ್ಷದಿಂದ ಮೂರು ಪೈಯಂತೆ ರೋಡ್ ಸೆಸ್ ಹೆಚ್ಚಿಸಲಾದೀತು. ಇದರಿಂದ ವರ್ಷ ಒಂದಕ್ಕೆ 35,000 ರೂಪಾಯಿಗಳು ಕೂಡಿಕೆಯಾಗುವುದು. ಅಂದರೆ 7¾ ಲಕ್ಷ ರೂಪಾಯಿಗೆ ಸೇಕಡಾ 4½ ದರದಲ್ಲಿ ಬಡ್ಡಿ ಬಂದಂತಾಗುವುದು. ಅಗತ್ಯವಿದ್ದರೆ ಮದ್ರಾಸ್ ಗವರ್ನಮೆಂಟಿನವರೂ ಸ್ವಲ್ಪಮಟ್ಟಿಗೆ ಜವಾಬ್ದಾರಿ ಕೊಡುವ ಹಾಗೆ ಗವರ್ನಮೆಂಟಿಗೆ ಶಿಫಾರಸು ಮಾಡುವುದು ಯುಕ್ತವೆಂಬ ಪ್ರಸ್ತಾಪವೂ ಸಭೆಯಲ್ಲಿ ನಡೆಯಿತು. ಮರುದಿನ ದಿವಾನರು ಪರಿವಾರದವರೂ ಪೋರ್ಟ ಆಫೀಸರರಾದ ಹೆಕೋಕ್ ದೊರೆಗಳ ಮತ್ತು ಡಿಸ್ಟ್ರಿಕ್ಟ್ ಬೋರ್ಡು ವೈಸ್ ಪ್ರೆಸಿಡೆಂಟರಾದ ರಾವ್ ಬಹದೂರ್ ಸುಬ್ರಾಯರ ಸಹಿತ ಮಲ್ಪೆ ಬಂದರ ನೋಡುವುದಕ್ಕೆ ಹೋಗಿ ಬಂದರವನ್ನು ನೋಡಿ ಬಂದರವು ಬಹು ಒಳ್ಳೇದೆಂತಲೂ ಹಣ ಖರ್ಚುಮಾಡಿ ಅದನ್ನು ಸರಿಗೊಳಿಸಿದರೆ ಜನರಿಗೆ ಹೆಚ್ಚಿನ ಪ್ರಯೋಜನವುಂಟಾಗಬಹುದೆಂತಲೂ ಅಭಿಪ್ರಾಯಪಟ್ಟದ್ದಾಗಿ ತಿಳಿಯುತ್ತೇವೆ. ದಿವಾನರು ಮಲ್ಪೆಯಿಂದ ತಾ 3 ರಲ್ಲು ಹಿಂದೆ ಬಂದು ತಾ 4 ನೇ ಪ್ರಾತಃಕಾಲ ಮಂಗಳೂರು ಅರಸೀಕೆರೆ ಮಾರ್ಗ ನೋಡುವ ಉದ್ದೇಶ ಮೋಟಾರ್ ಗಾಡಿಯ ಮೇಲೆ ರಾವ್ ಬಹದ್ದೂರ್ ಸುಬ್ರಾಯರ ಸಹಿತ ಅರಸೀಕೆರೆಗೆ ಹೋದರು. ಮಂಗಳೂರಲ್ಲಿ ದಿವಾನರು ರಾವ್ ಬಹದ್ದೂರ್ ಸುಬ್ರಾಯರ ಅತಿಥಿಯಾಗಿದ್ದರು. ಇಲ್ಲಿಯ ಕಲೆಕ್ಟರ ದೊರೆಗಳವರೂ, ಚೀಫ್ ಇಂಜಿನಿಯರ್ ದೊರೆಗಳೂ, ಮದ್ರಾಸ್ ಗವರ್ನಮೆಂಟಿನ ಸರ್ ಹರೋಲ್ಡ್ ಸ್ಟುವರ್ಟ್ ಮತ್ತು ಮೈಸೂರ್ ದಿವಾನ್ ಮೊದಲಾದವರು ಅರಸೀಕೆರೆ ಮಂಗಳೂರು ರೈಲ್ವೆಯು ಅಗತ್ಯವೆಂಬ ಅಭಿಪ್ರಾಯಪಡುತ್ತಾರಾದ್ದರಿಂದ ಈ ಸಾರಿ ಮಂಗಳೂರು ಅರಸೀಕೆರೆ ರೈಲ್ವೆಯು ತೆರೆಯಲ್ಪಡುವುದು ನಿಶ್ಚಯವೆಂದು ನಂಬಲು ಕಾರಣವಿದೆ.

ಅರಸೀಕೆರೆಯಿಂದ ಮಂಗಳೂರಿಗೆ ರೈಲ್ವೆ ಮಾರ್ಗವನ್ನು ಹಾಕಿಸುವ ವಿಷಯವು ಪ್ರಕೃತ ಮೈಸೂರು ಸರಕಾರದವರಿಂದಲೂ ಮದ್ರಾಸ್ ಸರಕಾರದವರಿಂದಲೂ ಪರ್ಯಾಲೋಚಿಸಲ್ಪಡುತ್ತಿರುವುದು. ಈ ಬಗ್ಗೆ ಮೈಸೂರು ದಿವಾನರವರು ಇಲ್ಲಿಗೆ ಚಿತ್ತೈಸಿದ್ದರು. ಮದ್ರಾಸು ಸರಕಾರದ ಸರ್ ಹೆರೊಲ್ಡ್ ಸ್ಟುವಾರ್ಟರವರ ಈ ವಿಷಯದ ಸೂಚನೆಗಳು ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡಿನವರಿಂದ ಗಮನಿಸಲ್ಪಟ್ಟು 3 ಪೈಗಳ ರೈಲ್ವೆ ಸೆಸ್ಸನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ವಿಧಿಸುವರೆ ಸಿದ್ಧವಿರುವರು. ಆದ್ದರಿಂದ ಈ ರೈಲ್ವೆ ಮಾರ್ಗವು ಹಾಕಲ್ಪಡುವ ಸಂಭವಗಳು ಮೊದಲಿನಕ್ಕಿಂತಲೂ ಈಗ ಹೆಚ್ಚಾಗಿವೆ. ಅದಲ್ಲದೆ ಈ ಸಂದರ್ಭದಲ್ಲಿ ಕೌಚ್‌ಮನ್ ದೊರೆಗಳವರೂ ಜಿಲ್ಲಾ ಕಲೆಕ್ಟರರವರು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರೂ ಆಗಿರುವುದರಿಂದ ಇವರ ಮೂಲಕ ಅರಸೀಕೆರೆ ಮಂಗಳೂರು ರೈಲ್ವೆ ಮಾರ್ಗವನ್ನು ಹಾಕಿಸುವ ಪ್ರಯತ್ನಗಳು ಸಾಧ್ಯವಾಗುವವು ಎಂಬುವ ವಿಶ್ವಾಸವು ಜನರಲ್ಲಿರುವುದು. ಈ ಜಿಲ್ಲೆಯ ಮಾಹಿತಿಯೊಂದಿಗೆ ಮೈಸೂರು ಸೀಮೆಯ ಸರಹದ್ದಾಗಿರುವ ಕೊಡಗು ಜಿಲ್ಲೆ ಮೊದಲಾದ ಪ್ರಾಂತ್ಯಗಳ ಅನುಭವವೂ ಮೆ॥ ಕೌಚ್‌ಮನ್ ದೊರೆಗಳಿಗಿರುವುದರಿಂದ ಮಂಗಳೂರು ಅರಸೀಕೆರೆ ರೈಲ್ವೆಯಿಂದ ಉಂಟಾಗುವ ಪ್ರಯೋಜನವನ್ನು ಇವರು ಸ್ವತಃ ಚೆನ್ನಾಗಿ ತಿಳಿದಿರುವರು. ಈ ವಿಷಯದಲ್ಲಿ ಇವರ ಅಭಿಪ್ರಾಯವು ಸರಕಾರದವರಿಂದಲೂ ಜಿಲ್ಲೆಯ ಜನರಿಂದಲೂ ಮನ್ನಿಸಲ್ಪಡತಕ್ಕಂತದೆ.—ಮೈಸೂರು ಸಂಸ್ಥಾನದ ವ್ಯಾಪಾರ ಅಭಿವೃದ್ಧಿಗಾಗಿ ಮೈಸೂರಿನಿಂದ ಸಮುದ್ರತೀರಾವರೆಗೆ ರೈಲು ಮಾರ್ಗವನ್ನು ವಿಸ್ತರಿಸುವದು ಅಗತ್ಯ. ಮಂಗಳೂರು ಅರಸೀಕೆರೆ ರೈಲು ಮಾರ್ಗವನ್ನು ಹಾಕಿಸುವರೆ ತಕ್ಕ ಪ್ರೋತ್ಸಾಹವು ದಕ್ಷಿಣ ಕನ್ನಡ ಜಿಲ್ಲೆಯಿಂದ ದೊರೆಯದಿದ್ದರೆ ಮುಂಬಯಿ ಸಂಸ್ಥಾನಕ್ಕೆ ಸೇರಿದ ಉತ್ತರ ಕನ್ನಡದ ಭಟ್ಕಳ ಬಂದರಿಗೆ ರೈಲ್ವೆ ಮಾರ್ಗವನ್ನು ಹಾಕಿಸುವುದುತ್ತಮವೆಂಬ ಅಭಿಪ್ರಾಯವು ಮೈಸೂರು ಸರಕಾರದವರಿಗಿರುವುದೆಂಬುದಾಗಿ ಕೇಳುತ್ತೇವೆ. ಆದರೆ ಇಂಥಾ ಅಭಿಪ್ರಾಯವು ಎಂದೂ ಯುಕ್ತವಲ್ಲವೆಂಬುದು ಈ ಜಿಲ್ಲಾ ಸಂದರ್ಶನದಿಂದ ಮೈಸೂರು ದಿವಾನರವರಿಗೆ ವಿಚಿತವಾಗಬಹುದು. ಭಟ್ಕಳವೆಂಬುದು ಒಂದು ಚಿಕ್ಕ ಹಳ್ಳಿ. ವ್ಯಾಪಾರ ವೈವಾಟಗಳಿಗೆ ಮಧ್ಯಸ್ಥಳವೂ ಅಲ್ಲ, ಹೇರಳ ಧಂಡವಾಳಕರೂ ವ್ಯಾಪಾರ ಧಂಡಸಾಲೆಗಳೂ ಕಾರ್ಖಾನೆಗಳೂ ಇರುವಂಥಾ ಸ್ಥಳವೂ ಅಲ್ಲ. ಮಲ್ಪೆಯಷ್ಟು ಉತ್ತಮವಾದ ರೇವೂ ಸಹ ಅಲ್ಲ. ಇಂಥಾ ರೇವಿನಿಂದ ರೈಲ್ವೆ ಮಾರ್ಗವು ಹಾಕಿಸಲ್ಪಟ್ಟರೆ ಹಲವು ವರುಷಗಳ ವರೆಗೆ ಈ ರೈಲ್ವೆ ಮಾರ್ಗದಿಂದ ಲಾಭವು ಹುಟ್ಟಿಬರುವುದು ಸಹ ಅನುಮಾನಕರ. ಅದಲ್ಲದೆ ಮಂಗಳೂರಿನೊಡನೆ ಮೈಸೂರಿಗೆ ರೈಲ್ವೆ ಸಂಬಂಧವು ಉಂಟಾದ್ದಲ್ಲಿ ಈ ಎರಡು ನಾಡುಗಳ ಒಳಪ್ರಾಂತ್ಯಗಳಲ್ಲಿರುವ ಪ್ರಜಾ ಜನಗಳ ವಿದ್ಯಾಭಿವೃದ್ಧಿಯು ಈ ಸಮ್ಮಂಧದಿಂದ ಸಾಂಗವಾಗಿ ನೆರವೇರುವರೆ ಸಹ ಆಸ್ಪದವಿದೆ ಎಂಬುದು ಇಲ್ಲಿ ಮತ್ತು ಬೆಂಗಳೂರು ಮೈಸೂರು ಪ್ರಾಂತ್ಯಗಳಲ್ಲಿರುವ ಶಾಲಾ ಕಾಲೇಜುಗಳು ಇರೋಧದರಿಂದಲೂ ವಿದ್ವತ್ ಜನರ ಸಂಖ್ಯೆಯಿಂದಲೂ ನಿರ್ಧರಿಸಬಹುದು. ಇಂಥಾ ಅನುಕೂಲ ಸಂದರ್ಭವು ಭಟ್ಕಳಕ್ಕೆ ರೈಲ್ವೆ ಮಾರ್ಗವನ್ನು ಹಾಕಿಸಿದ್ದರಿಂದ ಮೈಸೂರು ಸೀಮೆಯವರಿಗೆ ದೊರಕದು.—ಈ ಜಿಲ್ಲಾ ಜನರು ಸಹ ಮೈಸೂರಿನೊಂದಿಗೆ ರೈಲ್ವೆ ಸಂಬಂಧವನ್ನು ಬೆಳಸಲು ಬಹಳ ಕುತೂಹಲವುಳ್ಳವರಾಗಿರುವರು. 3 ಪೈಗಳ ರೈಲ್ವೆ ಸೆಸ್ಸನ್ನು ತೆರುವರೆ ಈ ಮೊದಲೇ ನಿರ್ಣಯಿಸಿರುವರು. ಅಂದರೆ 7¾ ಲಕ್ಷ ರೂಪಾಯಿಗಳ ಮೇಲೆ ಸೇಕಡಾ 4½ ರಂತೆ ಆಗುವ ರೂ. 35,000 ವು ಈ ಸೆಸ್ಸಿನಿಂದ ದೊರೆಯುವುದು. ಅರಸೀಕೆರೆ ಮಂಗಳೂರು ರೈಲ್ವೆಯ ಅಂದಾಜು ಖರ್ಚು 15 ಲಕ್ಷ ರೂಪಾಯಿಗಳಾಗಿರುತ್ತದೆ. ವೀರರಾಜೇಂದ್ರಪೇಟೆ, ಶ್ರೀಜವಪೇಟೆ, ಸಕಲೇಶಪುರಗಳಿಗೆ ರೈಲ್ವೆಯನ್ನು ಹಾಕಿಸುವ ಆಲೋಚನೆಯು ಮೈಸೂರು ಸರಕಾರದವರಿಗಿರುವುದರಿಂದ ಮಂಗಳೂರು ಅರಸೀಕೆರೆ ರೈಲ್ವೆಯು ಸ್ಥಾಪಿಸಲ್ಪಟ್ಟರೆ ಕೊಡಗು ಪ್ರಾಂತ್ಯದಿಂದ ಸರಕು ಮಂಗಳೂರಿಗೆ ತರಲು ಸಾಧ್ಯವಾಗಿ ಅರಸೀಕೆರೆ ಮಂಗಳೂರು ರೈಲ್ವೆಯು ಇನ್ನಷ್ಟು ಲಾಭಕರವಾಗುವುದು. ದಕ್ಷಿಣ ಕನ್ನಡಾ ಜಿಲ್ಲಾ ಜನರಿಂದ ಸಾಕಾದ ಪ್ರೋತ್ಸಾಹವು ಮಂಗಳೂರು ಅರಸೀಕೆರೆ ರೈಲ್ವೆಯನ್ನು ಹಾಕಿಸುವುದರಲ್ಲಿರುವುದರಿಂದಲೂ ಈ ರೈಲು ಮಾರ್ಗಕ್ಕೆ ತಗಲುವ ಖರ್ಚಿನ ಮೊಬಲಗಿನ ಬಡ್ಡಿಯು ಹುಟ್ಟಿಬರುವ ಸಂಭವಗಳು ಬಹಳವಾಗಿರುವುದರಿಂದಲೂ ಮೈಸೂರು ಮತ್ತು ಮದ್ರಾಸ್ ಸರಕಾರಗಳು ಶೀಘ್ರದಲ್ಲಿಯೇ ಮಂಗಳೂರು ಅರಸೀಕೆರೆ ರೈಲ್ವೆಯನ್ನು ಹಾಕಿಸುವುದರಲ್ಲಿ ಉದ್ಯುಕ್ತರಾಗಬೇಕೆಂದು ಇಲ್ಲಿಯ ಪ್ರಜಾವರ್ಗದ ಅಪೇಕ್ಷೆಯಾಗಿದೆ. ಈ ರೈಲು ಮಾರ್ಗವು ಸ್ಥಾಪಿಸಲ್ಪಟ್ಟೊಡನೆ ಮಂಗಳೂರಿನಿಂದ ಇದನ್ನು ಮಲ್ಪೆಗೆ ಒಯ್ಯುವುದು ಲಾಭಕರವೂ ಅಗತ್ಯವೂ ಎಂಬುದು ತನ್ನಿಂದೆಯೇ ವ್ಯಕ್ತವಾಗುವುದು.—ಸ್ವದೇಶಾಭಿಮಾನಿ.

ನಿರ್ಮಲವಾದ ಹಾಲು.

ಹಾಲು ನಿರ್ಮಲವಾಗಿರಬೇಕಾದರೆ ಕೆಳಗೆ ಹೇಳುವ ವಿಷಯಗಳಿಗೆ ಗಮನ ಕೊಡಬೇಕಾದ್ದು ಅವಶ್ಯಕ.—ಕರೆಯುವುದಕ್ಕೆ ಪ್ರಾರಂಭ ಮಾಡಿದೊಡನೆಯೇ ಬರತಕ್ಕ ಸ್ವಲ್ಪ ಹಾಲನ್ನು ಬಿಟ್ಟುಬಿಡಬೇಕು. ಹಸುಗಳಿಗೆ ನಿತ್ಯವೂ ಮೈ ಉಜ್ಜಿ ಕೆಚ್ಚಲನ್ನು ಕರೆಯುವುದಕ್ಕೆ ಮುಂಚೆ ತೊಳೆಯಬೇಕು. ದನಗಳು ತಿಂದು ಮಿಕ್ಕ ಕಸಮಿಶ್ರವಾದ ಮೇವನ್ನೂ, ಸಗಣಿಯನ್ನೂ ತೆಗೆಯತಕ್ಕ ಕೆಲಸವನ್ನೆಲ್ಲಾ ಹಾಲುಕರೆದ ಮೇಲೆ ಇಲ್ಲವೇ ಕರೆಯುವುದಕ್ಕೆ ಅನೇಕ ಗಂಟೆಗಳಿಗೆ ಮುಂಚೆಯೇ ಮಾಡಬೇಕು. ಕೊಟ್ಟಿಗೆಯನ್ನು ದಿನಕ್ಕೆ ಎರಡಾವರ್ತಿ ಗುಡಿಸುವುದಲ್ಲದೆ ಹಾಲು ಕರೆಯುವುದಕ್ಕೆ ಮೊದಲು ನೆಲವನ್ನು ಹೇರಳವಾಗಿ ನೀರಿನಿಂದ ತೊಳೆಯಬೇಕು. ಗಾಳಿ ಮತ್ತು ಬೆಳಕಿಗೆ ಸರಿಯಾದ ಏರ್ಪಾಡು ಮಾಡಿರಬೇಕು. ಹಾಲು ಕರೆಯುವವರು ಕರೆಯುವಾಗ ಶುಭ್ರವಾದ ಬಟ್ಟೆಗಳನ್ನು ಧರಿಸಿಕೊಳ್ಳಬೇಕು, ಮತ್ತು ಪ್ರತಿಯೊಂದು ಹಸುವನ್ನೂ ಕರೆಯುವುದಕ್ಕೆ ಮೊದಲೂ, ಕರೆದನಂತರವೂ ಕೈಯನ್ನು ತೊಳೆದುಕೊಳ್ಳಬೇಕು. ಕರೆದನಂತರ ಕೊಟ್ಟಿಗೆಯಲ್ಲಿ ಹಾಲನ್ನು ಹೆಚ್ಚು ಕಾಲ ಇಟ್ಟಿರಕೂಡದು ; ಅದನ್ನು ಕೂಡಲೇ ಶುಭ್ರವಾದ ಹೈನದಮನೆಗೆ ಸಾಗಿಸಿ ಅಲ್ಲಿ ಅದನ್ನು ತಂಪಾಗಿರುವಂತೆ ಇಟ್ಟಿರಬೇಕು. ಹಾಲು ಕರೆಯುವ ಪಾತ್ರೆಗಳನ್ನೆಲ್ಲಾ ಶುಭ್ರವಾಗಿಡಬೇಕಲ್ಲದೆ ಕರೆಯುವದಕ್ಕೆ ಮೊದಲು ಅವುಗಳನ್ನು ಕೊಟ್ಟಿಗೆಯಲ್ಲಿ ಇಟ್ಟಿರಕೂಡದು.

ಗೃಹಿಣಿಯೂ, ಗೃಹಕೃತ್ಯವೂ

ಕಾರ್ಯದಕ್ಷತೆ.—ಗೃಹಿಣಿಯು ಗೃಹಕಾರ್ಯದಲ್ಲಿ ದಕ್ಷಳಾಗಿರುವದು ಆಕೆಯ ಮುಖ್ಯ ಧರ್ಮವಾಗಿದೆ. ಕೆಲವು ಸ್ತ್ರೀಯರು ಹಿರೇತನ ಬಂದಕೂಡಲೇ ಎಲ್ಲ ಕಸಬೋಗೆಗಳನ್ನು ಕೈಕೆಳಗಿನ ಜನರಿಗೆ ಒಪ್ಪಿಸಿಕೊಟ್ಟು ತಾವು ಸ್ವಸ್ಥ ಕೂತುಕೊಳ್ಳುತ್ತಾರೆ. ಉಳಿದ ಜನರು ತಾವು ಹೇಳಿದ್ದನ್ನು ಮಾಡಿದರೋ ಇಲ್ಲೋ ಎಂಬುದನ್ನು ಸಹ ನೋಡುವದಿಲ್ಲ. ಇಂಥವರು ನಿಜವಾದ ಗೃಹಿಣಿಪದಕ್ಕೆ ಯೋಗ್ಯರಾಗಲಾರರು. ಹಿರಿಯವಳಾದವಳು ತಾನು ಸ್ವತಃ ಕೆಲಸಮಾಡುವದಲ್ಲದೆ ಇತರರು ಕೆಲಸವನ್ನು ಸರಿಯಾಗಿ ಮಾಡಿದರೋ ಇಲ್ಲೋ ಎಂದು ಪರೀಕ್ಷಿಸಲಿಕ್ಕೇ ಬೇಕು. ಕೈಕೆಳಗಿನ ಜನರು ಯಾವಾಗಲೂ ಯಜಮಾನರ ಕೈಗಳನ್ನು ನೋಡುವದು ಸ್ವಾಭಾವಿಕವಾಗಿದೆ. ಯಜಮಾನಳು ಸ್ವತಃ ಉದ್ಯೋಗಿಯುಳ್ಳವಳಿದ್ದರೆ ಉಳಿದವರಿಗೆ ಆಲಸ್ಯಕ್ಕೆ ಆಸ್ಪದವೇ ಸಿಗಲಾರದು. ಮನೆಗೆ ಹಿರಿಯಳಾದ ಮೇಲೆ ತಾನು ಮಾಡತಕ್ಕ ಕೆಲಸಗಳೇ ಇಲ್ಲೆಂದು ತಿಳಿಯಬಾರದು. ಸಾಮಾನುಗಳೂ ಸಾಹಿತ್ಯವೂ ತಕ್ಕಷ್ಟು ಉಂಟೋ ಇಲ್ಲೋ ಎಂಬುದನ್ನು ನೋಡಿ, ತರತಕ್ಕ ಸಾಮಾನುಗಳನ್ನು ತರಿಸಬೇಕು. ಸರ್ವರ ಊಟವು ಸರಿಯಾಗಿ ಆಯಿತೋ ಇಲ್ಲೋ ನೋಡಬೇಕು. ಮಲಗುವ ಹೊತ್ತಿನ ಕೂಡಾ ಇರತಕ್ಕ ಸಾಮಾನು ಯೋಗ್ಯ ಸ್ಥಳದಲ್ಲಿ ಇರಿಸಲ್ಪಟ್ಟಿತ್ತೇ ಇಲ್ಲೋ ನೋಡಿ, ಬಾಗಿಲುಗಳನ್ನು ಚೆನ್ನಾಗಿ ಹಾಕಿರಬೇಕು. ಮುಂಜಾನೆ ತಾನು ಬೇಗನೇ ಎದ್ದು, ಎಲ್ಲರನ್ನೂ ಎಬ್ಬಿಸಿ ಅವರವರ ಕೆಲಸಕ್ಕೆ ಅವರನ್ನು ತೊಡಗಿಸಬೇಕು. ಇವೇ ಮೊದಲಾದ ಕೆಲಸಗಳು ಹಿರೇತನವನ್ನು ಹೊತ್ತ ಗೃಹಿಣಿಯು ಮಾಡತಕ್ಕದ್ದು. ಸಾರಾಂಶ—ಅವಳು ಆಲಸ್ಯವನ್ನು ಬಿಟ್ಟು ಯಾವಾಗಲೂ ಗೃಹಕಾರ್ಯದಕ್ಷಳಾಗಿರಬೇಕು.

ಸ್ವಚ್ಛತೆ ಹಾಗು ಅಚ್ಚುಕಟ್ಟುತನ.—ಸಂಸಾರದಲ್ಲಿ ಶಾರೀರಕ ಸುಖವೇ ಮುಖ್ಯವಾದದ್ದು. ಇದು ಮುಖ್ಯವಾಗಿ ಸ್ವಚ್ಛತೆಯಿಂದಲೇ ಸಿಗುವದು. ಹೊಲಸಿನಿಂದ ಈ ಸುಖವನ್ನು ಒಂದುವೇಳೆ ಕಳಕೊಂಡರೆ ಬೇಕಾದಷ್ಟು ಸಂಪತ್ತಿದ್ದರೂ ವ್ಯರ್ಥವೇ. ಆದ್ದರಿಂದ ಮನೆಯಲ್ಲಿ ಆರೋಗ್ಯವನ್ನು ಕಾಯ್ದುಕೊಳ್ಳುವದು ಅವಶ್ಯಕವಾಗಿದೆ. ಗಂಡಸರು ಉದ್ಯೋಗದ ನಿಮಿತ್ತವಾಗಿ ಯಾವಾಗಲೂ ಹೊರಗೆ ಹೋಗುವದರಿಂದ ಮನೆಯ ಆರೋಗ್ಯವು ಮುಖ್ಯವಾಗಿ ಮನೆಯ ಯಜಮಾನಳನ್ನೇ ಅವಲಂಬಿಸಿರುವದು. ಆದ್ದರಿಂದ ಗೃಹಿಣಿಯು ಸ್ವಚ್ಛತೆ ಹಾಗು ಅಚ್ಚುಕಟ್ಟುತನದ ಬಗ್ಗೆ ವಿಶೇಷ ಲಕ್ಷ್ಯಗೊಡತಕ್ಕದ್ದು.—ಮನೆಯಲ್ಲಿಯ ಪದಾರ್ಥಗಳನ್ನು ಹರವಬಾರದು, ಒಂದಕ್ಕೊಂದು ಕೂಡಿ ಚಲ್ಲಬಾರದು, ಬೇಕಾದಕೂಡಲೆ ಸಿಗುವಂತೆ ಅಚ್ಚುಕಟ್ಟಾಗಿ ಇಟ್ಟಿರಬೇಕು. ಇವುಗಳನ್ನು ಇಡುವಲ್ಲಿ ಕಸಕಡ್ಡಿ ಮುಂತಾದ ಹೊಲಸು ಶೇಖರಿಸಬಾರದು. ಅಂಗಡಿಯಿಂದ ತಂದ ಧಾನ್ಯಾದಿಗಳನ್ನು ಹಸನುಮಾಡಿ ಇಲಿ ಬೆಕ್ಕು ಮುಂತಾದ ಪ್ರಾಣಿಗಳು ಹಾಳು ಮಾಡದಂತೆಯೂ, ಹುಳಹತ್ತದಂತೆಯೂ ನುಚ್ಚು ಅಥವಾ ಡಬ್ಬಿ [illegible] ಬೇಕು. ಯಾವ ಪದಾರ್ಥಗಳನ್ನೂ ತೆರೆದಿಡಬಾರದು. ತೆರೆದಿಟ್ಟರೆ ಇರುವೆ ಹಾಗು ಇತರ ಹೊಲಸು ಬೀಳುವ ಸಂಭವವುಂಟು. ಇಂಥ ಪದಾರ್ಥಗಳು ಹೊಟ್ಟೆಯಲ್ಲಿ ಹೋದರೆ ರೋಗಗಳು ಪ್ರಾಪ್ತವಾಗುತ್ತವೆ. ಮನೆಯಲ್ಲಿಯ ಪದಾರ್ಥಗಳನ್ನು ಇಟ್ಟಿರುವ ಪದ್ಧತಿ ಹಾಗು ಅವುಗಳ ನಿರ್ಮಲತೆಗಳ ಮೇಲಿಂದ ಆ ಮನೆಯ ಯಜಮಾನಳ ಯೋಗ್ಯತೆಯ ಪರೀಕ್ಷೆಯಾಗುತ್ತದೆ. ಯಾವ ಮನೆಯಲ್ಲಿ ಪದಾರ್ಥಗಳು ಸಿಕ್ಕ ಸಿಕ್ಕ ಹಾಗೆ ಮತ್ತು ಕಸದಿಂದ ಕೂಡಿ ಬಿದ್ದಿರುವವೋ ಆ ಮನೆಯ ಯಜಮಾನತಿಗೆ [illegible]ರೋಗ ಹತ್ತಿರುತ್ತದೆಂತಲೇ ತಿಳಿಯಬೇಕು.—ಮನೆಯಲ್ಲಿ ನೀರು ಚೆಲ್ಲಿ ತೇವವನ್ನು ಮಾಡಬಾರದು. ಬಚ್ಚಲಲ್ಲಿ ಕಸಕಟ್ಟಿ ಕೊಳೆತು ದುರ್ವಾಸನೆ ಬರದಂತೆ ಮಾಡಬೇಕು. ಕೂಡ್ರುವ ಹಾಗು ಮಲಗುವ ಕೋಣೆಗಳಲ್ಲಿ ಅನವಶ್ಯಕ ಪದಾರ್ಥಗಳನ್ನು ಇಡಬಾರದು. ಈ ಸ್ಥಳಗಳು ಆದಷ್ಟು ತೆರವು ಇರತಕ್ಕದ್ದು. ಅಡಿಗೆಯ ಮನೆಯಂತೂ ಸ್ವಚ್ಛ ಹಾಗು ಒಣಗಿದ್ದಾಗಿರಬೇಕು. ನಾವು ತಿನ್ನುವ ಪದಾರ್ಥಗಳು ಅಲ್ಲಿಯೇ ಭಕ್ಷಿಸಲ್ಪಡುವ ಕಾರಣ ಅಲ್ಲಿ ಹೊಲಸಿಗೆ ಆಸ್ಪದವೇ ಇರದಂತೆ ಮಾಡಬೇಕು. ಮೇಲಿಂದ ಮೇಲೆ ಮನೆಯ ಗೋಡೆಗಳನ್ನೂ ನೆಲವನ್ನೂ ನಿರ್ಮಲವಾಗಿ ಸಾರಿಸುತ್ತಿರಬೇಕು.—ಅಡಿಗೆಯ ಹಾಗು ನೀರಿನ ಪಾತ್ರೆಗಳನ್ನೂ, ಹಾಲು ಮೊಸರಿನ ಪಾತ್ರೆಗಳನ್ನೂ ದಿನಾಲು ಚೆನ್ನಾಗಿ ತೊಳೆಯುತ್ತಿರಬೇಕು. ತೊಳೆಯದಿದ್ದರೆ ಅವುಗಳಲ್ಲಿ ಸೇರುವ ಕಿಲುಬು ಕೊಳೆ ಮುಂತಾದ್ದು ಆಹಾರದ ಕೂಡಾ ಹೊಟ್ಟೆಯಲ್ಲಿ ಹೋಗಿ ರೋಗಗಳನ್ನುಂಟುಮಾಡುತ್ತದೆ. ಇದರಂತೆಯೇ ಹಾಸಿಗೆ ಹೊದಿಕೆಯನ್ನೂ, ಪ್ರತಿದಿವಸ ಉಡುತೊಡುವ ಬಟ್ಟೆಗಳನ್ನೂ ನಿರ್ಮಲವಾಗಿಟ್ಟುಕೊಳ್ಳತಕ್ಕದ್ದು.

ಸರಸ್ವತಿಬಾಯಿ, ಶ್ರೀಜ.

ಹಿಂದೂ ವಿಧವೆಯರ ದುಃಸ್ಥಿತಿಯು.

ಈಗ ಬ್ರಾಹ್ಮಣರಲ್ಲಿರುವ ಆಚರಣೆಗಳು

ಕಾಲ ವಿಪರೀತದಿಂದ ಒಬ್ಬ ಬ್ರಾಹ್ಮಣಸ್ತ್ರೀಗೆ ಪತಿವಿಯೋಗವುಂಟಾದರೆ ಬಂಧುಜನರು ಮಾಡುವ ಅನುರಂಜನೆ ಎಂಥಾದ್ದೆಂದರೆ, ಮೊದಲನೆಯ ದಿನವೇ ಆಕೆಗೂ ಮಕ್ಕಳಿಗೂ ಇರುವ ದುಃಖದಶೆಗೆ ಸುಲಿಗೆಯೂ ಪ್ರಾರಂಭವಾಗುವುದು. ಚೆನ್ನಾಗಿರುವಾಗ ಎಂದಿಗೂ ವಿಚಾರಿಸದಿದ್ದ ಬಂಧುಬಳಗದ ಮತ್ತು ನೆರೆಹೊರೆಯ ಹೆಂಗಸರು ನೂತನ ವಿಧವೆಯನ್ನು ನೋಡಿಹೋಗಲು ಬರುವರು. ಹಾಗೆ ನೋಡುವುದು ನೋಡತಕ್ಕವರಿಗೆ ಶುಭಕರವಂತೆ! ಮನೆಯಲ್ಲಿ ಬಳಗವೆಲ್ಲಾ ಸೇರಿ ರುಚಿಯಾದ ಅಡಿಗೆಗಳನ್ನು ಪ್ರೇತನ ಹೆಸರಿನಲ್ಲಿ ಮಾಡಿಸಿ ಊಟಮಾಡುವರು. ಏನೇನೋ ದಾನಗಳೆಂದು ಹೆಸರಿಟ್ಟು, ಹೊದ್ದು ಉಡುತ್ತಿದ್ದ ವಸ್ತ್ರಗಳೂ, ಹಾಸಿಗೆ, ಹೊಸ ವಸ್ತ್ರಗಳು, ಚಾಪೆ, ಜೋಮು, ಕೊಡೆ, ಹಸು, ಭೂಮಿ, ದಕ್ಷಿಣೆ, ಅಕ್ಕಿ (ಸಮೀಪ ಬಂಧುಗಳಿಗೆ) ಆಭರಣಗಳು ಇತ್ಯಾದಿ ಸರ್ವವನ್ನೂ ಬೇರೆ ಬೇರೆ ನೆವಗಳಿಂದ ಅಪಹರಿಸುವರು. ಹತ್ತನೆಯ ದಿನ ನೂತನ ವಿಧವೆಯ ರೂಪವು ಮಾರ್ಪಡುವ ಕಾಲದಲ್ಲಿ ಆಕೆಯ ದುಃಖವು ದೇವರಿಗೆ ವೇದ್ಯವು. ಆಕೆಯನ್ನು ವಪನಸ್ಥಾನಕ್ಕೆ ಒಯ್ಯುವಾಗ ಮುತ್ತೈದೆಯರೆಲ್ಲರೂ ಬೀದಿಯಲ್ಲಿ ಸಾಲಾಗಿ ನಿಂತು ನೋಡುವರು. ಹಾಗೆ ನೋಡದಿದ್ದರೆ ಅಶುಭವಂತೆ! ಪ್ರೇತಕರ್ಮ ನಡೆಯುವ ಸ್ಥಳದಲ್ಲಿ ವಿಧವೆಯ ವಿರೂಪಕರಣಾನಂತರ ದೊರೆಯುವ ದಕ್ಷಿಣೆಗಾಗಿ ಬ್ರಾಹ್ಮಣ ಮಂಡಲಿಯು ನೆರೆದಿರುವುದು. ವಿರೂಪಕರಣಕ್ಕೆ ಮಂತ್ರವೇನೂ ಇಲ್ಲ. ಅದು ಸ್ವಾರ್ಥಪರರಾದ ಬಂಧುಗಳು ಕಲ್ಪಿಸಿದ ತಂತ್ರವೇ ಎಂದು ತೋರುತ್ತದೆ. ಇಂಥಾ ಬ್ರಾಹ್ಮಣಕೃತ್ಯವು ಮನೆಯಲ್ಲಿ ಹಕ್ಕಿಗಳನ್ನೂ, ಜಿಂಕೆ ಮೊಲ ಮೊದಲಾದ ಪ್ರಾಣಿಗಳನ್ನೂ ಸಾಕಿ ಕಟುಕರಿಗೆ ಮಾರುವವರ ಉದ್ಯೋಗದಂತಿರುವುದು. ಈ ವಿರೂಪವನ್ನು ಹೊಂದಿದ ವಿಧವೆಯು ಮಾಡಬೇಕಾದ ಕರ್ಮಗಳೊಂದೂ ಇಲ್ಲ. ಇಂತಹ ನೋಟವನ್ನು ಒಂದು ಸಲ ನೋಡಿದ ಮೇಲೆ ಅದನ್ನು ಮರೆಯುವುದು ಅಸಾಧ್ಯ. ನಾನು ಬಹುಮಂದಿ ದೊಡ್ಡ ಬ್ರಾಹ್ಮಣರನ್ನು ವಿಚಾರಿಸಿದೇನೆ. ಅವರೆಲ್ಲರೂ ಶಾಸ್ತ್ರಸಮ್ಮತವೆಂದು ಹೇಳದರೂ "ಪೂರ್ವಾಚಾರ"ವೆಂದು ಕೈಮುಗಿದು ಅಂಗೀಕರಿಸುವರು. ಅದನ್ನು ತಪ್ಪಿಸಲು ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ವಿಧವೆಗೆ ಒಂದು ಹೊತ್ತು ಮಾತ್ರ ಊಟ. ಆಕೆಯನ್ನು ಬಿಟ್ಟು ಆಕೆಯ ತಾಯಿ ತಂದೆಗಳೂ, ಅಕ್ಕ ತಂಗಿಯರೂ, ಗಂಡು ಹೆಣ್ಣು ಮಕ್ಕಳೂ ನಿಸ್ಸಂಕೋಚವಾಗಿ ಊಟಮಾಡುವರು. ಅದೇನೂ ವಿಧವೆಗೇಕೆ ಎಂದು ಪ್ರತ್ಯಕ್ಷವಾಗಿಯೇ ಹೇಳುತ್ತ ತೆಗೆದುಕೊಳ್ಳುವರು. ವಿಧವೆಯ ಮುಖವನ್ನು ನೋಡುವುದು ಅಶುಭಕರವಂತೆ! ಈ ಮಾತನ್ನು ಎದುರಿಗೇ ಹೇಳುತ್ತಾರೆ. ಒಬ್ಬ ವಿದ್ವಾಂಸನಾದ ಮುದಿತಂದೆಯು ತನ್ನ ಮಗಳು ವಿಧವೆಯಾದಾಗ ಆಕೆಯ ಆಭರಣಗಳೆಲ್ಲವನ್ನೂ ಅಪಹರಿಸಿ ತನ್ನ ಚಿಕ್ಕ ಹೆಂಡತಿಗೆ ಕೊಟ್ಟುದನ್ನು ಬಲ್ಲೆನು. ಪತಿಯು ಗತಿಸಿದ 11, 12, 13 ನೇ ದಿನಗಳಲ್ಲಿಯೂ, ವರ್ಷದ ವರೆಗೆ ತಿಂಗಳು ತಿಂಗಳಿಗೂ ಪ್ರೇತನ ಹೆಸರಿನಲ್ಲಿ ಹಲವಾರು ಸಲ ಬಂಧು ಮಿತ್ರರೆಲ್ಲರೂ ಮೃಷ್ಟಾನ್ನ ಭೋಜನಮಾಡುವರು. ವಿಧವೆಯು ಮಾತ್ರ ಬಡವಳಾಗುವಳು. ಈ ಕಷ್ಟಕಾಲದಲ್ಲಿ ಒಂದು ವರ್ಷದ ವರೆಗೆ ಬಂಧು ಮಿತ್ರರೊಬ್ಬರ ಮನೆಗೂ ಹೋಗಕೂಡದು. ಹಾಗೆ ಹೋಗುವುದು ಅಮಂಗಳವಂತೆ! ಗತಿಸಿದ ನನ್ನ ಸ್ನೇಹಿತನೊಬ್ಬನ ಪತ್ನಿಯನ್ನು ಬಂಧುಗಳು ಅವರ ಊರಿಗೆ ಎರಡು ಮೈಲಿ ದೂರದಲ್ಲಿ ಒಂದು ಕೊಂಪೆಯಲ್ಲಿ ಒಬ್ಬಳನ್ನೇ ಒಂದು ಮನೆಮಾಡಿ ಇಟ್ಟಿದ್ದಾರೆ. ನನ್ನ ಬಂಧುಗಳಲ್ಲಿ ಒಬ್ಬ ದೊಡ್ಡ ಪಂಡಿತನೂ, ಮತ್ತೊಬ್ಬ ಮೂರನೇ ಮದುವೆಗೆ ಸನ್ನಾಹಮಾಡುತ್ತಿದ್ದವನೂ, "ನನ್ನ ಮರಣಾನಂತರ ನನ್ನ ಹೆಂಡತಿಗೆ ಏನಾದರೂ ಆಗಲಿ ಚಕ್ರಕೇಶವಾಗಲಿ, ಸಹಗಮನವು" ಎಂದು ಹೇಳಿದುದನ್ನು ಕೇಳಿದ್ದೇನೆ. ಅನೇಕ ಮಂದಿ ಲೌಕಿಕವ್ಯವಹಾರದಲ್ಲಿ ಚತುರರೂ, ಇಂಗ್ಲಿಷ್ ಕನ್ನಡ ಸಂಸ್ಕೃತಗಳಲ್ಲಿ ಪಂಡಿತರೂ ಈ ರೀತಿ ಬಾಯಿಯಲ್ಲಿ ಹೇಳದಿದ್ದರೂ ಅವರ ವ್ಯವಹಾರವನ್ನು ನೋಡಿದರೆ ಇದೇ ಅಭಿಪ್ರಾಯವಿದ್ದಂತೆ ತೋರುವುದು. ಕೆಲವು ಮುದುಕಿಯರು ವಿನಾ ಉಳಿದ ಬ್ರಾಹ್ಮಣರಲ್ಲಿ ಕರುಣೆಯು ಬಹಳ ಕಡಮೆ. ಬ್ರಾಹ್ಮಣ್ಯಕ್ಕೆ ಸಾಕು ಎಂದು ಹಿಂದೆಯೇ ಒಬ್ಬ ಬ್ರಾಹ್ಮಣನು ಹೇಳಿದುದಕ್ಕೆ ಇದ್ದ ಕಾರಣಗಳಿಗಿಂತಲೂ ಬ್ರಾಹ್ಮಣ ಸ್ತ್ರೀತ್ವವು ಸಾಕು ಎಂದು ಎಲ್ಲರೂ ಹೇಳಲು ಹೆಚ್ಚು ಕಾರಣಗಳಿವೆ. ಕೆಲವರು ವಿಧವೆಯನ್ನು ವಿರೂಪಮಾಡಿದರೆ ಪ್ರೇತಗೆ ಸಮ್ಮತವೆನ್ನುವರು. ನಾನು ಪ್ರೇತನಾದರೆ ನಾನು ಅದಕ್ಕೆಂದಿಗೂ ಸಂತೋಷಪಡುವುದಿಲ್ಲ. ದುಷ್ಟ ನಡತೆಗಳನ್ನು ತಪ್ಪಿಸಲು ಇದು ಪೂರ್ವಾಚಾರ್ಯರಿಂದ [illegible] ಕೆಲವರು ಹೇಳುವರು. ದುಷ್ಟ ನಡತೆಗಳು ಇದರಿಂದ ಹೆಚ್ಚು ಪ್ರಬಲವು [illegible] ಲೋಕಾನುಭವವುಂಟು. ಸಚ್ಚರಿತ್ರಳಿಗೆ ಈ ಶಿಕ್ಷೆಯು ಅವಶ್ಯಕವಿಲ್ಲ. ದುಷ್ಟಳಿಗೆ ಇದು ಪ್ರತಿಬಂಧಕವಾಗುವುದಿಲ್ಲ. ವೃದ್ಧ ವಿಧವೆಯರ ವಿಷಯದಲ್ಲಂತೂ ಈ ಕುಯುಕ್ತಿಯು ಅನ್ವಯಿಸುವುದೇ ಇಲ್ಲ. ಈ ಪರ್ವವು ಸ್ತ್ರೀಯರಿಗೆ ಸಮ್ಮತವೆಂದು ಕೆಲವರು ಹೇಳುವರು. ಸ್ವಾತಂತ್ರ್ಯವು ಬಾಲ್ಯದಿಂದ ಅವರಿಗೆ ಇರುವುದಿಲ್ಲ. ನನಗೆ ಪರಿಚಯವುಳ್ಳ ಬಂಧುಗಳಾದ ವಿಧವೆಯರಲ್ಲೊಬ್ಬರೂ ತಮ್ಮ ಸಂಕಲ್ಪದಿಂದ ಈ ರೂಪವನ್ನು ಸ್ವೀಕರಿಸಿದರೆಂದು ನನಗೆ ತೋರುವುದಿಲ್ಲ. ಇತರ ವಿಧವೆಯರೂ ಇವರಂತೆಯೇ ಅನೇಕ ತೆರದ ಕಷ್ಟಗಳಿಗೆ ಬಂಧುಗಳ ನಿರ್ಬಂಧದಿಂದ ತಲೆಯೊಡ್ಡುವರೆಂದು ನಾನು ದೃಢವಾಗಿ ಹೇಳಬಲ್ಲೆನು.

ಅಗಲಿಕೆಯ ನಿಜಸ್ವರೂಪ.

ಹುಟ್ಟಿದವನಿಗೆ ಮರಣವು ನಿಶ್ಚಯವು. ಮಹಾ ತರಂಗಗಳಿಂದ ಕೂಡಿದ ಸಮುದ್ರದಲ್ಲಿ ಎರಡು ಕಡ್ಡಿಗಳು ಹೇಗೆ ಕಲೆಯುವುವೋ, ಕಲೆತು ಸ್ವಲ್ಪ ಕಾಲದಲ್ಲಿಯೇ ಹೇಗೆ ಅಗಲಿಹೋಗುವುವೋ, ಹಾಗೆಯೇ ಸಂಸಾರದಲ್ಲಿ ಜನರು ಕೂಡಿ ಕಲೆತು ಅಗಲಿಹೋಗುವರು. ವಿವಾಹದಲ್ಲಿ ದಂಪತಿಗಳ ಸಂಮೇಳನವೂ ಹಾಗೆಯೇ ಸರಿ. ಒಂದು ಸಲ ಕಲೆತ ಇಬ್ಬರು ಮತ್ತೊಂದು ದಿನ ಅಗಲಿಹೋಗುವುದು ನಿಶ್ಚಯ. ಅಗಲಿಕೆಯು ಸಹಜವಾದುದೇ ಹೊರತು ಹೆಂಡತಿಯ ಪ್ರಾಕೃತ ಪಾಪದಿಂದ ಉಂಟಾಗುವದಿಲ್ಲ. ಅಲ್ಲದೆ ಹಿಂದಿನ ಜನ್ಮಗಳಲ್ಲಿ ಮಾಡಿದ ಕಾರ್ಯಗಳು ನಮಗೆ ಜ್ಞಾಪಕವಿರುವುದಿಲ್ಲ. ಅವುಗಳಿಗೆ ಶಿಕ್ಷೆ ವಿಧಿಸುವುದರಲ್ಲಿ ಫಲವೇನೂ ಕಾಣುವುದಿಲ್ಲ. ಕೃಪಾಸಮುದ್ರನಾದ ಭಗವಂತನು ನಿಷ್ಫಲವೂ ಕ್ರೂರವೂ ಆದ ಇಂಥಾ ಶಿಕ್ಷೆಯನ್ನು ವಿಧಿಸಲಾರನು. ಪತಿವಿಯೋಗವೂ ಪತ್ನೀವಿಯೋಗವೂ ಕಾಲಧರ್ಮವೇ ಹೊರತು ಮತ್ತೇನೂ ಅಲ್ಲ.

ಓದುಬರಹವಾಗಲಿ, ಕೊನೆಗೆ ಅಂಗಡಿಯಲ್ಲಿ ವ್ಯಾಪಾರ ಮಾಡುವುದಾಗಲಿ, ಮತ್ತಾವ ರೀತಿಯಲ್ಲಾದರೂ ಗೌರವದಿಂದ ಜೀವಿಸಲಾಗಲಿ ಬ್ರಾಹ್ಮಣ ಹೆಂಗಸರಿಗೆ ತಿಳಿದಿರುವುದಿಲ್ಲ. ಥಟ್ಟನೆ ಬೀದಿಗೆ ಹಾಕಿದಂತಾಗುವುದು. ಅತಿಸಮೀಪ ಬಂಧುಗಳಿಗೂ ಈ ಕಷ್ಟವು ಸಂಭವಿಸಿದಾಗ ಉಳಿದವರು ಸುಮ್ಮನಿರುವರು. ದಿನೇ ದಿನೇ ನೆರೆಹೊರೆಯವರಿಗೆ ಈ ಕಷ್ಟಗಳು ಬರುತ್ತಿದ್ದರೂ ಮುತ್ತೈದೆಯರು ಹೇಗೋ ತಮ್ಮ ಪೂರ್ವ ಪುಣ್ಯದಿಂದ ತಮಗೆ ಈ ಕಷ್ಟಗಳು ತಪ್ಪಿವೆಂದೂ, ಗಂಡಸರು ತಮ್ಮ ಕುಟುಂಬದ ಹೆಂಗಸರಿಗೆ ಈ ಕಷ್ಟಗಳು ಬರಲಾರವೆಂದೂ ಅಂದುಕೊಳ್ಳುತ್ತಾ ನಿಶ್ಚಿಂತರಾಗಿರುವುದು ಆಶ್ಚರ್ಯವಲ್ಲವೇ? ವಿಧವೆಗೆ ಇರುವ ಕಷ್ಟವನ್ನು ಹೆಂಗಸರೂ ಆದರಿಸಿ ಕೇಳುವುದಿಲ್ಲ. ಆದುದರಿಂದ ಅವರು ಯಾರಿಗೂ ಹೇಳುವುದೂ ಇಲ್ಲ. ಎಲ್ಲರೂ ತಮ್ಮ ಸುಖವನ್ನು ನೋಡಿಕೊಂಡು, ವಿಧವೆಯನ್ನು ಬಹು ತುಚ್ಛವಾಗಿ ಕಾಣುವರು. ಈ ಕಷ್ಟಗಳನ್ನು ನೋಡಲು ಅನೇಕರಿಗೆ ಅವಕಾಶವೂ, ಇಚ್ಛೆಯೂ ಇಲ್ಲದುದರಿಂದ ಅದರ ಸ್ವರೂಪವನ್ನು ತಿಳಿಯದೆ ಇದಾರೆ. ತಮ್ಮ "ಪ್ರಾಣಕಾಂತೆ"ಯರೂ, "ನವಮೋಹನಾಂಗಿ"ಯರೂ, "ಕೀರ್ತಿಸಂಪನ್ನೆ"ಯರೂ, "ಪ್ರಾಣಾಧಿಕರೂ" ಆಗಿರುವ ಮಡದಿಯರಿಗೂ, ತಮ್ಮ ಜೀವಿತ ಸರ್ವಸ್ವವಾಗಿರುವ ಹೆಣ್ಣುಮಕ್ಕಳಿಗೂ, ತಂದೆಗಿಂತಲೂ ಶತಾಧಿಕವೆಂದು ಹೇಳಿರುವ ವೃದ್ಧರಾದ ತಾಯಿಯರಿಗೂ ಈ ಕಷ್ಟವು ಮುಂದಲ್ಲಿ ಕಟ್ಟಿದುದೆಂದು ಒಬ್ಬರೂ ಚಿಂತಿಸುವುದಿಲ್ಲವಲ್ಲಾ! ಹಾಗೆ ಚಿಂತಿಸುವುದೂ ಅಶುಭವೆಂದು ತಿಳಿದಿರುವರು! ಇದಕ್ಕೆಲ್ಲಾ ಸ್ಥಿರವಾದ ಪ್ರೇಮವಿಲ್ಲದುದೇ ಕಾರಣ. ಅವರು ಮುತ್ತೈದೆಯರಾಗಿರುವಾಗ ಸಾಧ್ಯವಾದಷ್ಟು ಉಡಿಗೆ ತೊಡಿಗೆಗಳನ್ನು ಕೊಟ್ಟು ಮುದ್ದಿಸುವುದೇನೋ ನಿಜ. ಆದರೆ ಕಷ್ಟದೆಸೆ ಬಂದಾಗ ನಿಜವಾದ ಪ್ರೇಮವು ಹೊರಪಡತಕ್ಕದ್ದು. ಕಷ್ಟದೆಸೆಯೇ ಪ್ರೀತಿಯ ಒರೆಗಲ್ಲು.

ಆರ್ಯ ಸಮಾಜವು ತನ್ನಲ್ಲಿರುವ ಅನಾಥ ವಿಧವೆಯರನ್ನೂ ಮಕ್ಕಳನ್ನೂ ಪೋಷಿಸುವುದು ತನ್ನ ಕರ್ತವ್ಯವೆಂದು ಅಂಗೀಕರಿಸಿರುವುದು. ಬ್ರಾಹ್ಮಣರಾದರೋ ತಮ್ಮ ಪ್ರಾಣಪ್ರಿಯರಾದವರಿಗೆ ಬರುವ ಕಷ್ಟಗಳನ್ನೇ ನಿವಾರಿಸಲು ಯತ್ನಿಸುವುದಿಲ್ಲ. ಇಂತಹ ಸಮಾಜವು ಏಳಿಗೆಗೆ ಬರುವುದು ಹೇಗೆ? ಹೀಗೆಯೇ ಬ್ರಾಹ್ಮಣರ ಹೃದಯಗಳು ಕಲ್ಲದೆಯಾಗಿದ್ದು ತಮ್ಮ ವೃದ್ಧಮಾತೆಯರಿಗೂ, ಮಕ್ಕಳಿಗೂ, ಪ್ರಿಯತಮೆಯರಿಗೂ ಬರಬಹುದಾದ ಕಷ್ಟಗಳ ವಿಷಯದಲ್ಲಿ ಯೋಚನೆಯೇ ಇಲ್ಲದಿದ್ದರೆ ಆ ಸಮಾಜದ ಅಂತ್ಯವು ಸಮೀಪಸ್ಥವೇ ಸರಿ. ಅನೇಕ ಮಂದಿ 40-50 ವರ್ಷದವರು 10-12 ವರ್ಷದ ಮಕ್ಕಳನ್ನು ಮದುವೆಯಾಗಿದ್ದಾರೆ. ತಮ್ಮ ಪತ್ನಿಯರಲ್ಲಿಯಾದರೂ ಪತಿಗಳಿಗೆ ಪ್ರೇಮವಿದ್ದರೆ ಈ ಭಾವಿಕಷ್ಟಗಳನ್ನು ನೋಡುತ್ತ ಆ ಸಂಸಾರಗಳು ಸುಖಮಯವಾಗಿರುವುದು ಹೇಗೆ? ಈ ಪೂರ್ವಾಚಾರವು ಗತಿಸಿಹೋದರೆ ಪತಿಪತ್ನಿಯರ ಹೃದಯಗಳಲ್ಲಿ [illegible] ನೆಲೆಗೊಳ್ಳುವುದು. ವಿಧವೆಯರು ವಿರೂಪವನ್ನು ಪಡೆಯಬೇಕಾದುದಿಲ್ಲವೆಂದೂ, ಹೊಟ್ಟೆ ತುಂಬ ಎರಡು ಸಲ ಊಟ ಮಾಡಬಹುದೆಂದೂ, ವೈಧವ್ಯವು ಅಮಂಗಳಕರವಲ್ಲವೆಂದೂ ಶೀಘ್ರವಾಗಿಯೇ ಅಂಗೀಕೃತವಾಗಬೇಕು. ಗೃಹಸ್ಥರ ಹೃದಯದಲ್ಲಿ ಸದಾ ಕುದಿಯುತಲಿರುವ ಈ ದುಃಖವನ್ನು ಕರುಣಾಸಮುದ್ರರಾದ [illegible] ಸರ್ವಜ್ಞರಲ್ಲದ ಋಷಿವರ್ಯರಿಗೆ ಚೆನ್ನಾಗಿ ಮನಸ್ಸಿಗೆ ಹಿಡಿಯುವಂತೆ ಏಕಕಂಠದಿಂದ ನಿರೂಪಿಸಿದರೆ ಪೂರ್ವಾಚಾರಗಳು ತಿದ್ದುಪಾಟಾಗುವುದರಲ್ಲಿ ಸಂದೇಹವಿಲ್ಲ.

ಸ್ತ್ರೀಯರಲ್ಲಿ ವಿದ್ಯಾಭ್ಯಾಸವು ಹೆಚ್ಚಿದಮೇಲೆಲ್ಲಾ ಈ ಕಷ್ಟಗಳು ಕಡಮೆಯಾಗುವುವೆಂದು ಕೆಲವರು ಹೇಳುವರು. ಇದು ಹೃದಯದಲ್ಲಿನ ನಿಷ್ಕರುಣೆಯನ್ನು ತೋರಿಸುತ್ತದೆ. ಕೀಳುಜಾತಿಯ ಜನರೂ, ವ್ಯವಸಾಯಗಾರರೂ ತಮ್ಮ ಪುಷ್ಟಿಗೆ ತಾವೇ ವಿದ್ಯಾವಂತರೂ ಧನಿಕರೂ ಆಗುವರೆಂದು ದೇಶವತ್ಸಲರಾದ ಕರುಣಾಳುಗಳು ಸುಮ್ಮನಿರುವರೇ? ತನ್ನ ಪ್ರಾಣಕ್ಕೆ [illegible] ಹೆಂಡತಿಗೆ ಕಾಲವಶಾತ್ ಬರುವ ಕಷ್ಟದಲ್ಲಿ ಲಕ್ಷ್ಯವಿಲ್ಲದವನಿಂದ ದೇಶಸೇವೆಯಾಗಲಿ, ಲೋಕೋಪಕಾರವಾಗಲಿ ಆಗಲಾರದು. ಪ್ರತಿ ಬ್ರಾಹ್ಮಣ ಮುತ್ತೈದೆಯೂ ತನ್ನ ಗಂಡನನ್ನು—"ನಿನಗೆ ನನ್ನ ಮೇಲೆ ಪ್ರೀತಿಯಿದ್ದರೆ ಈ ಬಾಧಕಷ್ಟವನ್ನು ನನಗೂ ಇತರ ಹೆಂಗಸರಿಗೂ ತಪ್ಪಿಸಲು ಪ್ರಯತ್ನ ಮಾಡಿ ಸಾಧಿಸು" ಎಂದು ಪ್ರಾರ್ಥಿಸಬೇಕು. ಪ್ರತಿ ಗಂಡಸನೂ—"ನನಗೆ ನನ್ನ ಹೆಂಡತಿ, ವೃದ್ಧಳಾದ ತಾಯಿ, ಚಿಕ್ಕ ಹೆಣ್ಣುಮಕ್ಕಳು, ಇವರ ಮೇಲೆ ಪ್ರೀತಿ ಇದೆ. ಕಾಲವಶದಿಂದ ಅವರಿಗೆ ವೈಧವ್ಯ ಉಂಟಾದರೂ ಮೇಲೆ ಹೇಳಿದ ಕಷ್ಟಗಳು ಅವರಿಗೆ ಪ್ರಾಪ್ತವಾಗದಂತೆ ಸ್ಥಿರ ಪ್ರಯತ್ನದಿಂದ ಅವುಗಳನ್ನು ತಪ್ಪಿಸುತ್ತೇನೆ" ಎಂಬ ವ್ರತವನ್ನು ತಾಳಿ ಉದ್ಯೋಗಶೀಲರಾಗಬೇಕು. ಬ್ರಾಹ್ಮಣ ಸ್ತ್ರೀಯರು ಒಂದುವೇಳೆ ಕಾಲವಶಾತ್ ತಮಗೆ ಪತಿವಿಯೋಗವುಂಟಾದರೆ ಮೇಲೆ ಹೇಳಿದ ಕ್ರೂರ ಬಂಧನಗಳಿಗೆ ಸಂಮತಿಸುವದಿಲ್ಲ ಎಂದು ಧೈರ್ಯವಾಗಿ ಹೇಳಬೇಕು. ತಮ್ಮ ಕಷ್ಟಗಳನ್ನು ತಾವು ಧೈರ್ಯದಿಂದ ನಿವಾರಣೆ ಮಾಡಿಕೊಳ್ಳದೆ ಇತರರು ಸಹಾಯಮಾಡುವರೇ? ಮತ್ತು ಇಂಥವರನ್ನು ಬಂಧುವರು [illegible]. ಬ್ರಾಹ್ಮಣಸ್ತ್ರೀಯರಿಗಿರುವ ಈ ಪ್ರಕಾರವಾದ ಕಷ್ಟಗಳನ್ನು ಹೃದಯಕ್ಕೆ ತಂದುಕೊಂಡು ವಿಶೇಷ ಕರುಣಾಳುಗಳೂ ದೀನಬಂಧುಗಳೂ, ದೇಶಾಭಿಮಾನಿಗಳೂ [illegible] ಇದರ ಪರಿಹಾರಕ್ಕೆ [illegible] ಮಾಡಲು ಮುಂದಾಗುವರೆಂದು ಸರ್ವಜ್ಞನಾದ ಸರ್ವೇಶ್ವರನಿಂದ ನಿರೀಕ್ಷಿಸುತ್ತಲಿದ್ದೇನೆ.

ಎಂ. ಬಿ. ರಾವ್.

ಬಾತ್ಮಿದಾರರಿಗೆ ನೋಟೀಸ್.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

[illegible], ಚಿಕ್ಕಬಳ್ಳಾಪುರ—ಆ ಸಮಯದಲ್ಲಿ ಹಾಜರಿದ್ದವರು ಸೇರಿ ನಡೆದ ವಿದ್ಯಮಾನಗಳನ್ನು ಚೀಫ್ ಕೋರ್ಟಿಗೆ ಬರೆದು ತಿಳಿಸಿದರೆ ಅವರು ತನಿಖೆಯಿಂದ ಕೊರತೆಗಳನ್ನು ಪರಿಹರಿಸುವರು. ಇಂಥಾ ವಿದ್ಯಮಾನಗಳನ್ನು ಪ್ರಕಟಿಸುವುದು ಸುಲಭವಾದರೂ ರುಜುವಾತಿಗೆ ಬರುವಲ್ಲಿ ವಿದ್ಯಾವಂತರೂ ಗಣ್ಯರಾದವರೂ ಕೂಡ ಕಂಡದ್ದನ್ನು ಕಂಡಂತೆ ಧೈರ್ಯದಿಂದ ನುಡಿಯಲು ಇನ್ನೂ ಹಿಂಜರಿಯುವರೆಂದು ನಮಗೆ ಅನುಭವವಾಗಿದೆ. ಮುಖ್ಯವಾಗಿ ಪ್ರಜೆಗಳಿಗೆ ತಮ್ಮ ಹಕ್ಕುಬಾಧ್ಯತೆಗಳ ವಿಷಯದಲ್ಲಿ ಪರಿಷ್ಕಾರವಾದ ತಿಳುವಳಿಕೆಯೂ, ಅವುಗಳನ್ನು ಕಾಪಾಡಿಕೊಂಡುಬರುವುದರಲ್ಲಿ ಅಭಿಮಾನವೂ ಧೈರ್ಯಾದಿಗಳೂ ಯಥಾರ್ಥ

ವಾಗಿ ಸ್ಥಿರಪಟ್ಟಿಲ್ಲದೆ ಈ/ ಈ ವಾಕ್ಯೀವಾರದು ಎರೆದಿರುವಂಥಾ ವರ್ತನಗಳು ಕೊನೆಗಾಣಲಾರವೆಂದು ತೋರುತ್ತದೆ

ನಾರಾಯಣದೀಕ್ಷಿತ, ಮಂಡ್ಯ —ಈ ವಿಷಯಕ್ಕೆ ಛಾರ್ಜು ಕೊಟ್ಟರೆ ಪ್ರಕಟಿಸಬಹುದು

—ಎಡಿ]

ಕರೆಸ್‌ಪಾಂಡೆನ್ಸ್

ತರೀಕೆರೆ ತಾ॥ ಲಿಂಗದಹಳ್ಳಿ ಸ್ಕೂಲು

ಅಯ್ಯಾ,

ಈ ಗ್ರಾಮದಲ್ಲಿ ಸ್ಕೂಲ್ ಸ್ಥಾಪಿತವಾಗಿ 30 40 ವರುಷವಿರಬಹುದು ಆಲಾಗಾಯ್ತು ಹೀನಸ್ಥಿತಿಯಲ್ಲಿದ್ದ ಸ್ಕೂಲು ಹಾಲಿ ಹೆಡ್ ಮಾಸ್ಟರ್ ಮ॥ ಬೇಲೂರು ರಾಮಪ್ಪನೆಂಬುವರು ಬಂದ ಮೇಲೆ ಬಹಳ ಅಭಿವೃದ್ಧಿಗೆ ಬಂದು 16 ವರುಷಗಳಿಂದಲೂ ಪ್ರತಿ ವರುಷವೂ ಪರೀಕ್ಷೆಗೆ ಕಳುಹಿಸುತ್ತಲೂ, ಪರೀಕ್ಷೆಗೆ ಹೋದ ಬಾಲಕರು 1-2ನೇ ಕ್ಲಾಸುಗಳಲ್ಲಿ ತೇರ್ಗಡೆಯಾಗುತ್ತಲೂ ಇದಾರೆ ಮೆಹನತ್ತಿನಿಂದ ಕೆಲಸಮಾಡುತ್ತ ಬಹು ಉತ್ತಮಸ್ಥಿತಿಯಲ್ಲಿ ಇಟ್ಟುಕೊಂಡಿರುವ ಸ್ಕೂಲ್ ಮಾಸ್ಟರನ್ನು ಅತಲ್ಪವೇತನದಲ್ಲಿಟ್ಟು ಸಂಬಳ ಬಡತಿಮಾಡದಿರುವದು ಯಾವ ನ್ಯಾಯವೋ ಗೊತ್ತಿಲ್ಲ ಇನ್ನಾದರೂ ಇವರಿಗೆ ಪ್ರಮೋಷನ್ ಕೊಡಬಹುದಾಗಿ ಯೋಚಿಸುತ್ತೇವೆ ಹಿತಚಿಂತಕ

ದೊಡ್ಡಬಾಣಾವಾರದ ಸ್ಕೂಲು—ಆಕ್ಷೇಪಣೆ

ಅಯ್ಯಾ,

ಕಳೆದ 5 ನೇ ತಾ ವೃತ್ತಾಂತ ಪತ್ರಿಕೆಯಲ್ಲಿ ದೊಡ್ಡಬಾಣಾವಾರದ ತಾಲ್ಲೂಕು ವರ್ತಮಾನದಲ್ಲಿ ಇಲ್ಲಿನ ಗ ಕನ್ನಡ ಸ್ಕೂಲ್ ಹೆಡ್ ಮಾಸ್ಟರು ಮ ಅಯೋಬಲಶಾಸ್ತ್ರಿಗಳು ಇಲ್ಲಿನ ಮ್ಯಾಸ್ಟರುಗಳಲ್ಲಿಯೂ ಬಾಲಕರಲ್ಲಿಯೂ ಪ್ರೀತಿ ವಿಶ್ವಾಸಗಳನ್ನೇ ಬೆಳಸುತ್ತಾ ವಿದ್ಯಾಭಿವೃದ್ಧಿಯನ್ನು ಮುಂದುವರಿಯಿಂದ ಹೆಚ್ಚಿಸುತ್ತಾ ಇರುವರೆಂಬ ವರ್ತಮಾನವನ್ನು ನೋಡಿದೆನು ನಾನು 21 1 13 ನೇ ವೃತ್ತಾಂತ ಪತ್ರಿಕೆಯಲ್ಲಿ ಇಲ್ಲಿನ ಸ್ಕೂಲಿನ ಆಡಳಿತಗಳೂ ದರ್ಜೆವೂ ತೃಪ್ತಿಕರವಾಗಿಲ್ಲವೆಂದು ಕಂಡೆನು ಅದರಂತೆ ಈ ಸಾಗಿ ಲೋ ಸೆ ಪರೀಕ್ಷೆಯಲ್ಲಿ ಒಬ್ಬನೂ ತೇರ್ಗಡೆ ಆಗಲಿಲ್ಲವೆಂದು ತಿಳಿಸಲು ಬಹಳ ವಿಷಾದಿಸುತ್ತೇನೆ ಇವರ ಹಿಂದೆ ಇದ್ದ ಹೆಡ್ ಮಾಸ್ಟರ್ ಎಚ್ ಸೂರ್ಯನಾರಣಪ್ಪನವರ ಕಾಲದಲ್ಲಿ ಶೇಕಡ 75 ರಂತೆ ತೇರ್ಗಡೆ ಹೊಂದುತ್ತಿದ್ದರು ಇವರ ಕಾಲದಲ್ಲಿ ಸ್ಕೂಲು ಬರಿದಾಗಿರುವಾಗ್ಯೆ ಇವರು ಮುತುವರ್ಜಿಯಿಂದ ಕೆಲಸಮಾಡುತ್ತಾರೆಂಬುದು ಆಶ್ಚರ್ಯವಲ್ಲವೇ ಬಾತ್ಮೀದಾರರು ಸರಿಯಾಗಿ ವಿಮರ್ಶೆ ಮಾಡಲಿಲ್ಲವಾಗಿ ತೋರುವುದು ಮುಂದಾದರೂ ಸ್ಕೂಲಿನ ಸ್ಥಿತಿಯನ್ನು ಸರಿಯಾಗಿ ಇಟ್ಟುಕೊಂಡು ಮುತುವರ್ಜಿ ಯಿಂದ ಕೆಲಸಮಾಡುತ್ತಾ ಬರುವಂತೆ ಮಾಡದಲ್ಲಿ ದಯಾಳುವಾದ ಸರ್ಕಾರದವರ ಕಾರ್ಯದಕ್ಷತೆಯೂ, ಪ್ರಜೆಗಳ ಅಭಿಲಾಷೆಯೂ ತೃಪ್ತಿಹೊಂದುವದಲ್ಲದೆ ಬಾಲಕರು ಸಹ ತಿಳುವಳಿಕೆಯುಳ್ಳವರಾಗುವದರಲ್ಲಿ ಸಂದೇಹವಿಲ್ಲ ಪ್ರತ್ಯಕ್ಷದರ್ಶಿ

ಮದ್ದಗಿರಿ ಆರ್ಯಬಾಲಿಕಾ ಪಾಠಶಾಲಾ

ಅಯ್ಯಾ,

ಈ ಪಾಠಶಾಲೆಯು ಈಗ್ಗೆ ಸುಮಾರು 11 ವರುಷದ ಕೆಳಗೆ ಬಹಳ ಹೀನಸ್ಥಿತಿಯಲ್ಲಿದ್ದು ಈಚೆಗೆ ಮ॥ ಸುಬ್ಬಯ್ಯನವರು ಹೆಡ್ ಮಾಸ್ಟರಾಗಿ ಬಂದ್ದಾರನ್ನ ಅಭಿವೃದ್ಧಿಹೊಂದುತ್ತಿದೆ ಈ ಸ್ಕೂಲಿನಲ್ಲಿ ಹೊಲಿಗೆ, ಪಾಕಶಾಸ್ತ್ರಗಳನ್ನು ಬೋಧಿಸಲು ಏರ್ಪಾಟು ಇಲ್ಲದ್ದರಿಂದ ಕ್ಷೇತ್ರಗಣಿತವನ್ನು ತೆಗೆದುಕೊಂಡು ನಾಲ್ಕು ಜನ ವಿದ್ಯಾರ್ಥಿನಿಯರು ಈ ಸಲ ಹಾಜರಾಗಿದ್ದರು ಈ ಪೈಕಿ ನಮ್ಮ ಸಬ್ ಡಿವಿಷನ್ ಆಫೀಸರ್ ಮ ಕೃಷ್ಣಸ್ವಾಮಯ್ಯಂಗಾರ್ರ ಮಗಳು ಎ ಸುಂದರಮ್ಮನೂ, ಪ್ಲೀಡರ್ ಮ ಸಭಾಪತಿ ಅಯ್ಯರವರ ಮಗಳು ಕೆ ಸೀತಾಲಕ್ಷ್ಮಮ್ಮನೂ, ಪ್ಲೀಡರ್ ರಾಮಸ್ವಾಮಿ ಐಯ್ಯರವರ ಮಗಳು ಎ ಸರಸಮ್ಮನೂ ತೇರ್ಗಡೆಯಾಗಿರುತ್ತಾರೆ ಇದರಿಂದ ಮ॥ ಸುಬ್ಬಯ್ಯನವರು ಎಷ್ಟರಮಟ್ಟಿಗೆ ಕೆಲಸಮಾಡಿರುತ್ತಾರೆಂಬುದು ಗೊತ್ತಾಗುತ್ತದೆ ಇವರಿಗೆ 30 ವರುಷಗಳು ಸರ್ವಿಸ್ ಆಗಿ, ಅಪ್ಪರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುತ್ತಾರೆ ಈ ಇಲಾಖೆಯಲ್ಲಿ ಗ್ರೇಡ್ ಸರ್ವಿಸಿಗೆ ಸೇರದೆ ಇರುವ ಮಾಸ್ಟರುಗಳ ಪಾಡನ್ನು ಪ್ರಿಯ ಎಡಿಟರವರೇ, ತಮಗೆ ತಿಳಿಸಬೇಕಾದುದಿಲ್ಲ ಏಕೆಂದರೆ ನಾವು ಬಾರಿ ಬಾರಿಗೂ ತಮ್ಮ ಅನರ್ಘ್ಯವಾದ ಪತ್ರಿಕೆಯಲ್ಲಿ ಹೊಸ ಸ್ಕೇಲುಗಳನ್ನು ಏರ್ಪಡಿಸುವುದಕ್ಕೆ ಮೊದಲು ಈಗ ಹಾಲಿ ಶ್ರದ್ಧೆಯಿಂದ ಕೆಲಸ ಮಾಡತಕ್ಕವರಿಗೆ ತಕ್ಕ ಪ್ರೋತ್ಸಾಹವಿಲ್ಲವೆಂದು ವಾದಿಸುತ್ತಿರುತ್ತೇವೆ ಆದರೆ ಇದು ನಮ್ಮ ಸರ್ಕಾರದವರ ಗಮನಕ್ಕೆ ಬಿದ್ದಿರುವಂತೆ ತೋರುವುದಿಲ್ಲ ಈ ನಮ್ಮ ಸುಬ್ಬಯ್ಯನವರ ಕಲಬುಮೂವತ್ತು ವರುಷಗಳ ಉತ್ತಮವಾದ ಸರ್ವಿಸಿಗೂ ಹದಿನೈದು ರೂಪಾಯಿ ಮಾತ್ರ ಬುದ್ಧಿವಂತರಾಗಿ ಶ್ರದ್ಧೆಯಿಂದ ಕೆಲಸ ಮಾಡತಕ್ಕವರಿಗೆ ಈ ಇಲಾಖೆಯಲ್ಲಿ ಪ್ರೋತ್ಸಾಹವೇನಿದೆ? ಇಲಾಖೆಯವರು “ನಾವು ನಿಮಗೆ ಕೊಡುವುದು ಇಷ್ಟೇ ಸಂಬಳ ಇಷ್ಟರ ಮೇಲೆ ನೀವು ಹೇಗೆ ಕೆಲಸಮಾಡಿದರೂ ಹೆಚ್ಚಾಗಿ ಸಿಗಲಾರದು” ಎಂದು ಕಂಠೋಕ್ತವಾಗಿ ಏಕೆ ಹೇಳಬಾರದು? ಹೀಗೆ ಮಾಡಿದರೆ ಮುಂದೆ ಸೇರುವವರಿಗೆ ಉಪಕಾರ ಮಾಡಿದ ಹಾಗಾಗುವುದಿಲ್ಲವೇ?

ಬಾತ್ಮೀದಾರ್

ತುಮಕೂರು ವಿದ್ಯಮಾನಗಳು

ಅಯ್ಯಾ,

ನಮ್ಮ ಸಬ್ ಡಿವಿಜನ್ ಆಫೀಸರು ಮಿ ಕೆ ಮೈಲಾರಿರಾಯರು ಈ ಊರಿಗೆ ಬಂದು 5 6 ದಿನಗಳಿಂದಲೂ ತಾಲ್ಲೂಕ್ ಕಛೇರಿ ಇನ್‌ಸ್ಪೆಕ್ಷನ್ ಮಾಡಿದರು ದಿನಂಪ್ರತಿಯೂ 11 ಘಂಟೆಗೆ ಕಛೇರಿಗೆ ದಯಮಾಡಿ ರಾತ್ರಿ 7 8 ಘಂಟೆವರಿಗೆ ಪ್ರತಿ ಒಬ್ಬ ನೌಕರನಾಗಿರಲಿ ಸ್ವಲ್ಪವೂ ವಿರಾಮಕೊಡದೆ ತಾವೇ ಅವರನ್ನು ರೂಬರೂಬು ಇಟ್ಟುಕೊಂಡು ಲೆಕ್ಕಪತ್ರಗಳನ್ನೆಲ್ಲಾ ಪರಾಂಬರಿಸಿ ಚೆಕ್ಕು ಮಾಡಿದರು ಈ ರೀತಿಯಾಗಿ ಆಗಾಗ್ಗೆ ಮೇಲ್ಪಟ್ಟ ಆಫೀಸರು ಎಂದು ಚೆಕ್ಕು ಮಾಡುತ್ತಾ ಇದ್ದಲ್ಲಿ ಸರ್ಕಾರಿ ಕೆಲಸಗಳು ಸ್ವಲ್ಪವೂ ಸ್ಥಿರವಾಗಿ ಇಲ್ಲದ ನಡೆಯುವುದರಲ್ಲಿ ಅಡ್ಡಿಯೇ ಇಲ್ಲ ನಮ್ಮ ಸಬ್ ಡಿವಿಜನ್ ಸಾಹೇಬರು ಈ ರೀತಿಯಾಗಿ ಬೇಜಾರಿಲ್ಲದೆ ಒಂದೇ ಊರಲ್ಲಿ ಎಂತು ಇಷ್ಟು ಮುತುವರ್ಜಿ ಮತ್ತು ನಿಸ್ಪೃಹತೆಯಿಂದ ಸರ್ಕಾರಿ ಕೆಲಸಮಾಡತಕ್ಕದ್ದು ಇವರ ಕೈಕೆಳಗಿನ ನೌಕರರ ಮನಸ್ಸಿನ ಮತ್ತು ಈ ತಾಲ್ಲೂಕು ರೈತರುಗಳ ಪುಣ್ಯವೆಂದೇ ಹೇಳಬೇಕು — ನಮ್ಮ ಅಮಲ್ದಾರ್ ಮಿ॥ ನರಸಿಂಹಯ್ಯಂಗಾರ್ರು ರಜದಿಂದ ಇನ್ನು ಒಂದು ವಾರದಲ್ಲಿ ಬರಬಹುದು ಈ ತಾಲ್ಲೂಕು ಭಾರಿ, ಅನೇಕ ರೈತರು ಗ್ರಾಮಾಂತರಗಳಿಂದ ಕಛೇರಿಗೆ 30 35 ಮೈಲಿ ಫಾಸಲೆಯಿಂದ ಬರಬೇಕು ಈ ತಾಲ್ಲೂಕು ಮ್ಯಾಜಿಸ್ಟ್ರೇಟರಿಗೆ ಏರಿದ ಅಧಿಕಾರದ ವಿಷಯದಲ್ಲಿ ಕ್ರಿಮಿನಲ್ ಅರ್ಜಿ ಕೊಡಬೇಕಾದಲ್ಲಿ ರೈತರು ಇನ್ನೂ 30 ಮೈಲಿ ಹೆಚ್ಚಿಯಾಗಿ ಮೈಸೂರಿಗೆ ಹೋಗಬೇಕು ಅಂತು ಅವರು 60 65 ಮೈಲಿ ಹೋಗುವದೂ, 65 ಮೈಲಿ ಬರುವದೂ ಆಗುತ್ತೆ ಅನೇಕ ರೈತರುಗಳಿಗೆ ಇದು ತುಂಬಾ ಶ್ರಮ, ಮತ್ತು ಖರ್ಚು ಸಹಾ ಹೆಚ್ಚು ನಮ್ಮ ಅಮಲ್ದಾರರಿಗೆ ಸರ್ಕಾರದವರು 2 ನೇ ಕ್ಲಾಸ್ ಅಧಿಕಾರವನ್ನು ಕೊಟ್ಟಲ್ಲಿ ಈ ತೊಂದರೆಗಳೆಲ್ಲಾ ನಿವಾರಣೆಯಾಗುವವು —ಇಲ್ಲಿ 2-3 ದಿನಗಳಿಂದ ಬಿಸಿಲು ಕಮ್ಮಿ ಮೋಡ ಜಾಸ್ತಿ, ಸೋನೆಮಳೆ —ಅಗಸರ ಕತ್ತೆಗಳ ಓಡಾಟವೂ ಅನಾಥಶ್ರಮ ಪ್ರತಿ ಬೀದಿಯೂ ರಾತ್ರಿ ಹಗಲೂ ಇದ್ದೇ ಇರುತ್ತೆ ಈ ವಿಷಯಕ್ಕೆ ಮ್ಯುನಿಸಿಪಾಲಿಟಿಯವರು ಖಂಡಿತವಾಗಿಯೂ ನಿಗಾಕೊಡಬೇಕಾಗಿದೆ —ಊರು ತುಂಬಾ ಪ್ರತಿ ಮನೆ ಮುಂದುಗಡೆ ಕಾಡುಗಿಡ ಮುಳ್ಳುಗಿಡ ವಗೈರೆ ಕಚರಾ ಬೆಳೆದು, ಹಾವು ಹುಳ ಸೇರಲು ತುಂಬಾ ಅನುಕೂಲವೂ, ಜನಗಳಿಗೆ ತೊಂದರೆಯೂ ಆಗಿರುತ್ತೆ ಈ ವಿಷಯಕ್ಕೆ ಮ್ಯುನಿಸಿಪಲ್ ಮೆಂಬರು ತುಂಬಾ ನಿಗಾ ಇಟ್ಟು ಕೊಡ್ಲೆ ಈ ಕಚರಾಗಳನ್ನು ತೆಗಿಸಿ ಊರು ಸಾಕಾಗಿ ಇಡಲು ಏರ್ಪಾಡು ಮಾಡ್ತಾರೆಂದು ನಂಬಿದೇನೆ ಒಕ ಸಿ.

ತಾಲ್ಲೋಕು ವರ್ತಮಾನಗಳು

ಚಿಕ್ಕಬಳ್ಳಾಪುರ —ಈ ಊರಲ್ಲಿ 15 ದಿನಗಳಿಂದ ಬಿಸಿಲಿನ ತಾಪವು ಹೆಚ್ಚಿ ಜನಗಳಿಗೆ ಬಹಳ ಅನಾನುಕೂಲವಾಗಿದೆ ಪ್ರತಿದಿನವೂ ಸಾಯಂಕಾಲ ಮೋಡ ಕವಿಯುತ್ತಾ ಇದ್ದು ನೆನ್ನೆ ಸಲ್ಪ ಮಳೆಯಾಯಿತು ಕಂದವಾರದ ಕೆರೆಗೆ 15 ದಿನದ ನೀರು ಬಂತೆಂದು ಹೇಳುವರು —ಇಲ್ಲಿ ಮ॥ ಜವಳಿ ಆದಿಶೇಷಪ್ಪನವರ ಮನೆಯಲ್ಲಿ ಅವರ ಜ್ಯೇಷ್ಠಪುತ್ರನ ಉಪನಯನವು ಬಹು ಆಡಂಬರವಾಗಿ ನಡೆದುದಲ್ಲದೆ ಊರಿನ ಬ್ರಾಹ್ಮಣರೆಲ್ಲಾ ಊಟ ಉಪಚಾರ ಮರ್ಯಾದೆಗಳನ್ನು ಧಾರಾಳವಾಗಿ ಹೊಂದಿ ಅತಿಶಯ ಸಂತೋಷದಲ್ಲಿರುವರು ಈ ಸಣ್ಣವಯಸ್ಸಿನ ಪ್ರವಸ್ಥರು ಈ ಶುಭಕಾರ್ಯವನ್ನು ಇಷ್ಟು ದಕ್ಷತೆಯಿಂದ ನಡಿಸಿದ್ದು ಶ್ಲಾಘ್ಯವಾಗಿದೆ ನೆನ್ನೆ ಇಲ್ಲಿನ ದೊಡ್ಡಮನುಷ್ಯರಿಗೂ ಸ್ನೇಹಿತರುಗಳಿಗೂ ಅವರು ಔತಣ ಮಾಡಿ ಸಂತೋಷಪಡಿಸಿದರು ಮತ್ತು ಅದೇ ರಾತ್ರಿ ಮಟುವಿಗೆ ಮೆರವಣಿಗೆ ಉತ್ಸವವು ಅತ್ಯಂತ ಆಟ್ಟಹಾಸದಿಂದ ಜರಗಿತು

ಶ್ರೀನಿವಾಸಪುರ —ಈ ವರ್ಷ ಮಳೆಗಳು ಸಾಧ್ಯವಾದಮಟ್ಟಿಗೆ ಹಿಡಿಯುತ್ತಾ ಬಂದಿರುವದರಿಂದ ರಾಗಿ ಪೈರು ಚೆನ್ನಾಗಿ ಆಗಿರುತ್ತೆ ಜನಗಳು ಸಂತೋಷದಿಂದ ಗದ್ದೆಗಳ ಕಟಾವಿನಲ್ಲಿಯೂ ಹೊಲಗಳನ್ನು ಉಳುವುದರಲ್ಲಿಯೂ ಇರುತ್ತಾರೆ ಆದಾಗ್ಯೂ ಅಕ್ಕಿ ರೂಪಾಯಿಗೆ 6½-7 ಸೇರೂ, ರಾಗಿ 16 16½ ಸೇರೂ ಮಾರುತ್ತಿದ ಇಲ್ಲಿ ಎಡಜನಗಳಿಗೆ ಮುಖ್ಯವಾಗಿ ರಾಗಿಯೇ ಆಧಾರ —ಈಗ್ಗೆ ಸುಮಾರು 10 15 ದಿನದ ಹಿಂದ ಇದೇ ಊರಿನ ವರ್ತಕರಾದ ಸುಂಕರಾಮಯ್ಯನವರ ರೇರು ತಿರುಪತಿಗೆ ಹೋಗಿ ಬರುವಾಗ್ಗೆ ದಾರಿಯಲ್ಲಿ ಕಾಲರಾ ತಗಲಿ ಮನೆಗೆ ಬಂದ 1 2 ದಿನದಲ್ಲಿಯೇ ರಾಮಯ್ಯನೆಂಬಾತನು ಕಾಲವಾದನು ಮತ್ತು ಊರಿನಲ್ಲಿ 3 4 ಜನಕ್ಕೆ ತಗುಲಿದೆ ಎಂದು ಕೇಳುತ್ತೇನೆ ಆದ್ದರಿಂದ ನಮ್ಮ ಅಮಲ್ದಾರ್ರು, ಡಾಕ್ಟರವರೂ ಇದಕ್ಕೆ ತುಂಬಾ ನಿಗಾಕೊಟ್ಟು ಬೇರೆ ಕಡೆಗೆ ರೋಗ ವ್ಯಾಪಿಸದಂತೆ ನೋಡಿಕೊಂಡಾರೆಂದು ನಂಬಿದ್ದೇನೆ ಟವನ್ನಿನ ಸಾಕೀಪಾ ತೃಪ್ತಿಕರವಾಗಿಲ್ಲ ಕೆಲವು ಸ್ಥಳಗಳಲ್ಲಿ ಕೊಳಕು ಕಚಡಾ ತುಂಬಿ ಇರುತ್ತೆ ಇಂತಾ ಸಮಯದಲ್ಲಿ ಮ್ಯುನಿಸಿಪಾಲಿಟಿಯವರು ಇದಕ್ಕೆಲ್ಲಾ ತುಂಬಾ ನಿಗಾ ಕೊಡುವರೆಂದು ನಂಬುತ್ತೇನೆ

ಹೊಸಕೋಟೆ —ಕಳೆದ ತಾ 9 ನೇ ಶುಕ್ರವಾರ ಹೊಸಕೋಟೆ ತಾಲ್ಲೂಕು ಪ್ರಜೆಗಳ ಪ್ರಾರ್ಥನೆಯಂತೆ ಮ ಬಿ ಜಿ ಕುಮಾರಸ್ವಾಮಿ ನಾಯ್ಡುರವರೂ, ಮಿ ಚಾಂಡಿಯವರೂ ಮಧ್ಯಾಹ್ನ 3 ಗಂಟೆಗೆ ಮೋಟಾರ್ ಗಾಡಿಯಲ್ಲಿ ಹೊಸಕೋಟೆಗೆ ತಲುಪಿದರು ರೀಡಿಂಗ್ ರೂಂ ಮತ್ತು ಮ್ಯುನಿಸಿಪಲ್ ತೋಟಗಳು ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದವು ಅವರು ಶ್ರೀಘ್ರಾಗಮನಕ್ಕಾದ ಸ್ವಾಗತ ಎ ವಿ ಸ್ಕೂಲ್ ಬಾಲಕರ ಮತ್ತು ಬಾಲಕಿಯರ ಮಂಗಳಗಾನವೂ, ಅಡ್ರೆಸ್ಸುಗಳೂ ಜರಿದು, ಮ್ಯುನಿಸಿಪಲ್ ತೋಟದ ಕಾಂಪೌಂಡು ಗೋಡೆಯ ಅಸ್ತಿವಾರದ ಕಲ್ಲು ಹಾಕಲ್ಪಟ್ಟಿತು ಬಳಿಕ ಫೋಟೋ ತೆಗೆದುಕೊಂಡರು ಫಲಾಹಾರಗಳಾಗಿ ತಾಂಬೂಲ ಹಾರ ತುರಾಯಿ ಮುಂತಾದ್ದರಿಂದ ಅಲಂಕೃತರಾಗುವಾಗ ಬಾಲಕರಿಬ್ಬರು ಸಾಹೇಬರ ಮೇಲೆಯೂ ನೂತನವಾದ ಹಾಡುಗಳನ್ನು ಹಾಡಿದ್ದು ಬಹಳ ಮನೋಹರವಾಗಿತ್ತು 6 ಘಂಟೆಗೆ ಸಭೆ ಸಂಪೂರ್ತಿಯಾಗಿ ಇಬ್ಬರೂ ಮೋಟಾರಿನಲ್ಲಿ ಬಂಗಳೂರಿಗೆ ತೆರಳಿದರು ಆ ಕಾಲದಲ್ಲಿ ಒಪ್ಪಿಸಿದ ಇಂಗ್ಲಿಷ್ ಹಿಂದುಸ್ಥಾನಿ ಅಡ್ರೆಸ್ಸುಗಳಲ್ಲದೆ ಮ ಕೆ ಶ್ರೀನಿವಾಸಯ್ಯಂಗಾರ್ರು ಕನ್ನಡದಲ್ಲಿ ಒಂದನ್ನು ಓದಿ ಒಪ್ಪಿಸಿದರು [ಸ್ಥಳ ಸಂಕೋಚದಿಂದ ಈ ಅಡ್ರೆಸ್ಸನ್ನು ಪ್ರಕಟಿಸಲು ಆಗಲಿಲ್ಲವೆಂದು ವಿಷಾದಿಸುತ್ತೇವೆ —ಎಡಿ]

ಮಂಡ್ಯ —ಕಳೆದ ತಾ 7ನೇ ಶನಿವಾರ ಸಾಯಂಕಾಲ ಮಂಡ್ಯದ ವೆಸ್ಲಿಯನ್ ಮಿಷನ್ ಎ ವಿ ಸ್ಕೂಲ್ ಕಟ್ಟಡದಲ್ಲಿ ವಿವಾ ಪರ್ವಕ ಸ-ಘದ ನಾಲನೇ ವಾರ್ಷಿಕೋತ್ಸವವು ಕ್ರಮವಾಗಿ ನೆರವೇರಿತು ಆಗ ನಮ್ಮ ಸಬ್ ರೆಜಿಸ್ಟ್ರಾರ್ ಮ॥ ಜಿ ಸಂಪತ್ತಯ್ಯಂಗಾರ್ರು ಅಗ್ರಾಸನವನ್ನು ವಹಿಸಿದರು ಕಟ್ಟಡವು ಕದಳೀಸ್ತಂಭಗಳಿಂದಲೂ, ತೋರಣಗಳಿಂದಲೂ, ಚಕ್ರವರ್ತಿ ಚಕ್ರವರ್ತಿನಿಯವರ ಮತ್ತು ಮಹಾರಾಜರವರ ಫೋಟೋಗಳಿಂದಲೂ ಅಲಂಕರಿಸಲ್ಪಟ್ಟು, ವರ್ತಕರ ಮಂಡಲಿಯಿಂದಲೂ, ಉಪಾಧ್ಯಾಯರಿಂದಲೂ ತುಂಬಲ್ಪಟ್ಟು ಮನೋಹರವಾಗಿದ್ದಿತು ದೇವರ ಪ್ರಾರ್ಥನೆಯೂ ಕರ್ಣಾನಂದವಾದ ಕೆಲವು ಕನ್ನಡ, ಸಂಸ್ಕೃತ, ಇಂಗ್ಲೀಷ್ ಮತ್ತು ಹಿಂದೂಸ್ಥಾನಿ ಪದ್ಯಗಳೂ ಬಾಲಕರಿಂದ ಮುದ್ದಾಗಿ ಉಪಯೋಗಿಸಲ್ಪಟ್ಟವು ದೇಶಾಭಿಮಾನದ ವಿಷಯವಾಗಿ ಒಬ್ಬ ಬಾಲಕನು ಕನ್ನಡದಲ್ಲಿ ಉಪನ್ಯಾಸವಾಡಿದನು ಇನ್ನೊಬ್ಬನು ಲೇಡಿ ವಿಕ್ಟೋರಿಯಾ ರಾಣಿಯವರ ಜೀವ ಚರಿತ್ರೆಯನ್ನು ಇಂಗ್ಲೀಷಿನಲ್ಲಿ ಉಪನ್ಯಾಸ ಹೇಳಿದನು ಬಳಿಕ ಕೆಲವು ಹುಡುಗರು ನೀತಿಬೋಧಕವಾದ ಸಣ್ಣ ನಾಟಕವನ್ನು ಕನ್ನಡದಲ್ಲಿ ಅಭಿನಯಿಸಿ ಸತ್ಯ ತನಗೆ ಎತ್ತಲೂ ಜಯವೆಂಬ ನುಡಿಯನ್ನು ದೃಷ್ಟಾಂತಪಡಿಸಿದರು ಕೊನೆಯಲ್ಲಿ ಸಂಘದ ರಿಪೋರ್ಟು ಓದಲ್ಪಟ್ಟು ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳು ವಿನಿಯೋಗಿಸಲ್ಪಟ್ಟು ಮಹಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಸಭೆಯು ಮುಕ್ತಾಯವಾಯಿತು

ಚಾಮರಾಜನಗರ —ಇಲ್ಲಿ 2_3 ಹದ ಮಳೆಯಾಗಿ ಭೂಮಿಯು ಸ್ವಲ್ಪ ತಂಪಾಗಿದೆ ಆದರೂ ಕೆರೆಗಳಿಗೆ ನೀರು ಬರಲಿಲ್ಲ. ಜೋಳದ ಪೈರಿಗೆ ಅನುಕೂಲವಾಗಿದೆ ದಿನಸಿ ದಾರಣೆಯು ದಿನಕ್ರಮೇಣ ಹೆಚ್ಚಾಗುತ್ತಲೇ ಇದೆ —ಪ್ಲೇಗ್ ಗಲಾಟೆಗೋಸ್ಕರ ಪೇಟೆಗಳಲ್ಲಿದ್ದ ಕೆಲವರು ಊರಿಗೆ ಬಂದು ಸೇರಿದರು, ಇನ್ನೂ ಕೆಲವರು ಬರುವುದರಲ್ಲಿ ಇದಾರೆ ಇಲ್ಲಿಯೂ, ರಾಮಸಮುದ್ರದಲ್ಲಿಯೂ ಪ್ಲೇಗು ಕಾಲರಾ ಬಂದು ದಿನವಹಿ 1_2 ಕೇಸುಗಳಾಗುತ್ತಲೇ ಇರುವುದಲ್ಲದೆ ಬಾಯಿಲೆಗಳು ಇದ್ದೇ ಇರುತ್ತವೆ ಬಾಲಕರ ಸಂಖ್ಯೆಯು ಸ್ಕೂಲುಗಳಲ್ಲಿ ತುಂಬಾ ಕಮ್ಮಿಯಾಗಿದೆ ಇಲ್ಲಿ ಮಾವಿನ ಹಣ್ಣಿನ ಅಂಗಡಿಗಳು ಬಹಳ ಹೆಚ್ಚು, ಕೊಳೆತು ನಾರುವ ಹಣ್ಣುಗಳನ್ನು ಸಹ ಮಾರುತ್ತಾರೆ ಅಗ್ಗದ ಆಸೆಗೆ ಹುಡುಗರು ಕೆಟ್ಟ ಹಣ್ಣುಗಳನ್ನು ಕೊಂಡು ತಿನ್ನುತ್ತಾರೆ ಈ ವಿಷಯದಲ್ಲಿ ಅಧಿಕಾರಿಗಳು ನಿಗಾ ಇಡುವುದು ಒಳ್ಳೇದು ಮತ್ತು ಅಚ್ಚೆಳ್ಳು, ಹುಚ್ಚೆಳ್ಳು ಎಣ್ಣೆಯಂತು ಮರೆಯಾಗಿಹೋಗಿ, ಕಡಲೆಕಾಯಿ ಎಣ್ಣೆಯೇ ವಿಶೇಷವಾಗಿದೆ ಹೋಟೆಲ್ ಮತ್ತು ಮಿಠಾಯಿ ಅಂಗಡಿಗಳಲ್ಲಿ ಇದರಿಂದ ಮಾಡಿ ಬಿಕರಿಮಾಡುವ ತಿಂಡಿ ಪದಾರ್ಥಗಳನ್ನು ತಿನ್ನುವುದರಿಂದ ಜನರು ತರೆಸುತ್ತ ಬೀಳುವುದು, ವಾಂತಿಮಾಡುವುದು, ಹೀಗಾಗುತ್ತೆ. ಇದನ್ನು ನೋಡಿದವರು ಕಾಲರಾ ಬಂತೆಂದು ಭಯಪಡುತ್ತಾರೆ ಇಂಥಾ ತೊಂದರೆಗಳಿಗೆಲ್ಲಾ ಅವಕಾಶವಿಲ್ಲದಂತೆ ನೋಡಿಕೊಳ್ಳುವವರು ಯಾರೂ ಇಲ್ಲವಲ್ಲಾ ಎಂದು ಅನೇಕರು ಚಿಂತಾಕ್ರಾಂತರಾಗಿದಾರೆ ಸರ್ಕಾರದವರು ಈ ವಿಷಯಗಳನ್ನೆಲ್ಲಾ ಸರಿಪಡಿಸುವರೆಂದು ನಂಬಿದೇನೆ

ಹರಿಹರ ಸಬ್ ತಾ॥ ಮಲೆಬೆನ್ನೂರು —ಇಲ್ಲಿ ಮಳೆ ತಕ್ಕಮಟ್ಟಿಗೆ ಆಗಿದೆ. ರೈತರು ಬೀಜಬಿತ್ತುವುದಕ್ಕೆ ಸರಿಪಡಿಸಿರುತ್ತಾರೆ ಮಳೆ ಇಲ್ಲದ್ದರಿಂದ ಯಾವ ವಿಧವಾದ ಬೀಜವನ್ನೂ ಪೇರಾವುಮಾಡಿಲ್ಲ 2 3 ತಿಂಗಳಿಂದ ನೀರು ಮಳೆ ಇಲ್ಲದ್ದರಿಂದ ಜನಗಳಿಗೂ ದನಗಳಿಗೂ ನೀರಿಲ್ಲದೆ ಬಹಳ ತೊಂದರೆಯಾಗಿದ —ಈ ಗ್ರಾಮಕ್ಕೆ ಯೂನಿಯನ್ ಆಗಿ ಸುಮಾರು 10 12 ವರ್ಷಗಳಾಯ್ತು ನಾಲ್ಕು ಲಾಂದ್ರಗಳನ್ನು ಕೊಟ್ಟಿರುತ್ತಾರೆ ಇವು ಒಂದೆ ಭಾಗದ ಪ್ರದೇಶಕ್ಕೆ ಮಾತ್ರ ಕೇರಿಗೆ ಸರಿ ಇನ್ನು 10 15 ಲಾಂದ್ರಾ ಕೊಟ್ಟರೆ ಈ ಗ್ರಾಮಕ್ಕೆ ಸಾಕಾಗಬಹುದು ಹಾಲಿ ಕೊಟ್ಟಿರುವ ನಾಲ್ಕು ಲಾಂದ್ರಗಳೂ ಮೊದಲು 2 3 ತಿಂಗಳು ತನಕ ಎಣ್ಣೆ ಬತ್ತಿ ಕಂಡಿರಬಹುದು ಈಚೆಗೆ ಕತ್ತಲ ದೆಸೆಯಿಂದ ಅನೇಕ ಜನಗಳಿಗೂ ಸಣ್ಣ ಮಕ್ಕಳಿಗೂ ವಿಷಜಂತುಗಳು ಕಡಿದು ಬಹಳ ತೊಂದರೆಯುಂಟಾಗಿದೆ ಅಮಲ್ದಾರರಿಗೂ, ಸಬ್ ಡಿವಿಜನ್ ಸಾಹೇಬರವರಿಗೂ ಅನೇಕ ದಫ ಹೇಳಿಕೊಂಡರೂ ನಮ್ಮ ಕಷ್ಟಗಳನ್ನು ಸರಿಪಡಿಸಿಕೊಡತಕ್ಕವರೇ ಇಲ್ಲವಾಗಿದೆ ಇನ್ನುಮುಂದಾದರೂ ಸರ್ಕಾರದವರು ಈ ವಿಚಾರದಲ್ಲಿ ತಕ್ಕ ನಿಗಾದಿಂದ ಇಂಥಾ ಕಷ್ಟವನ್ನು ತಪ್ಪಿಸುವರೆಂಬದಾಗಿ ನಂಬಿರುತ್ತೇವೆ —ಈ ಗ್ರಾಮದಲ್ಲಿರುವ ರಾಜಸಾಹೇಬರ ಮಗ ಮಹಮದ್ ಹುಸೇನ ಸಾಬನೆಂಬವನು ತಾ 27 ರಲ್ಲಿ ದಾವಣಗೆರೆ ತಾ॥ ಕುಮ್ಮನಕಟ್ಟೆ ಗ್ರಾಮದ ಉರುಸಿಗೆ ಹೋಗಿದ್ದು ಅಲ್ಲಿ ನಡೆದ ಕುಸ್ತಿಗಳಲ್ಲಿ ಒಂಭತ್ತು ಮಂದಿಯನ್ನು ಗೆದ್ದು ಇದಕ್ಕಾಗಿ ಅಲ್ಲಿದ್ದ ಸಭಾಜನಗಳೆಲ್ಲರೂ ಆನಂದಪಟ್ಟುದಲ್ಲದೆ ಗೆದ್ದದ್ದಕ್ಕಾಗಿ ಈತನಿಗೆ ಒಂಭತ್ತು ವಸ್ತ್ರಗಳನ್ನೂ, ಮೇಲೆ ಒಂದು ಬೆಳ್ಳಿ ಬಳೆಯನ್ನೂ ಬಹುಮಾನವಾಗಿ ಕೊಟ್ಟರು ಅನಂತರ ಊರಿಗೆ ಬಂದ ಮೇಲೆ ಬಹು ವಿಜೃಂಭಣೆಯಿಂದ ಮೆರವಣಿಗೆ ನಡೆಸಲಾದ ಉತ್ಸವಗಳು ನಡೆದವು

ತಿಪ್ಟೂರು —ಈ ಊರಿಗೂ ಆಸ್‌ಪಾಸ್ ಹಳ್ಳಿಗಳಿಗೂ ವ್ಯಾಪಿಸಿದ್ದ ಕಾಲರಾ ತಾಪವು ನಿಶ್ಶೇಷವಾಗಿ ನಿಂತು ಪ್ರಜಾ ನೆಮ್ಮದಿ ಚೆನ್ನಾಗಿದೆ ಈಗ ಮುಂಗಾರು ಮಳೆಯಾದ್ದರಿಂದ ರೈತರು ಮುಂಗಾರು ಪೈರನ್ನು ಬಿತ್ತನೇ ಕೆಲಸದಲ್ಲಿದಾರೆ ಈ ವರುಷ ಮಾವಿನ ಹಣ್ಣು ಹಲಸಿನ ಹಣ್ಣು ಪೇಟೆಗೆ ವಿಶೇಷವಾಗಿ ಬರುತ್ತಿದೆ —ತಾ 2 ರಲ್ಲಿ ಬೆಂಗಳೂರಿಂದ ನಮ್ಮ ಸಂಸ್ಥಾನದ ಮಾಜಿ ಡೆಪ್ಯುಟಿ ಕಮಿಷನರವರಾದ ಮ॥ ಎಂ ವೆಂಕಟಯ್ಯ ಶೆಟ್ಟರು ಬಂದು ಈ ಊರು ತಾಲ್ಲೋಕು ಕಚೇರಿಯಲ್ಲಿ ಮೀಟಿಂಗ್ ನಡಿಸಿ ಮೈಸೂರು ಬ್ಯಾಂಕನ್ನು ಏರ್ಪಡಿಸಿದರು ಆಗ್ಗೆ ತುಮಕೂರಿಂದ ಬಂದಿದ್ದ ಆ ಕಮಿಷನರು ಮ ತಾಜಮಿಂದಾರರವರು ನಮ್ಮ ಅಮಲ್ದಾರ್ ಮ॥ ಬಸವರಾಜೆ ಅರಸಿನವರು ಸಹಾ ಸೇರಿ ಇಲ್ಲಿಯ ವರ್ತಕ ಮಂಡಲಿಯವರನ್ನು ಕರೆಸಿಕೊಂಡು ಬ್ಯಾಂಕಿನ ಪ್ರಸಿದ್ಧ ಪತ್ರಿಕೆಯನ್ನು ಸರ್ವರಿಗೂ ತಿಳಿಸಿದನಂತರ ಇಲ್ಲಿಯ ವರ್ತಕರು ಒಂದು ಲಕ್ಷದ ಮೇಲೆಯೇ ಷೇರುಗಳನ್ನು ತೆಗೆದುಕೊಂಡಿರುತ್ತಾರೆ ಮ ಚಂಗಯ್ಯ ಶೆಟ್ಟರು ಈ ಊರಲ್ಲಿ ಬ್ರಾಂಚನ್ನು ಸ್ಥಾಪಿಸಿ, ಇಲ್ಲಿಯ ವೈಶ್ಯ ಮಂಡಲಿಯವರಿಂದ ಮಾಡಲ್ಪಟ್ಟ ಸತ್ಕಾರವನ್ನು ಸ್ವೀಕರಿಸಿ ಮುಂದಕ್ಕೆ ಗುಬ್ಬಿಕಡೆ ಪ್ರಯಾಣ ಮಾಡಿದರು —ಈ ಟವನ್‌ಗೆ ನಲ್ಲಿಗಳ ಮೂಲಕ ನೀರನ್ನು ಸಪ್ಲೈ ಮಾಡಲು ಸ್ಟೇಟ್ ಜಿಯಾಲಜಿಸ್ಟ್ ಇಲಾಖೆಯವರು 1_2 ಕಡೆ ಬೋರಿಂಗ್ ಏರ್ಪಡಿಸಿಟ್ಟು ಜಲಾಧಾರವನ್ನು ನೋಡುತ್ತಿದಾರೆ —ಇಲ್ಲಿಗೆ ತರೀಕೆರೆಯಿಂದ ವರ್ಗವಾಗಿ ಬಂದಿರುವ ಸಬ್ ರೆಜಿಸ್ಟ್ರಾರ್ ಮೆ॥ ಸಿ ವಿ ಕೃಷ್ಣಮೂರ್ತಿಯವರು ಪ್ರಜಾನುರಾಗಿಗಳಾಗಿದಾರೆ —ಈ ಮಧ್ಯೆ ಇಲ್ಲಿ ಸಾಹುಕಾರ್ ಸರಾಫ್ ಗ್ರಂದಿಗೆ ಸಂಜುಂಡಶೆಟ್ರ ದತ್ತಪುತ್ರಿ ಸೌ ಚನ್ನಮ್ಮನೆಂಬಾಕೆಯು ಹೆಣ್ಣುಮಗುವನ್ನು ಹೆತ್ತು ಆಕಸ್ಮಾತ್ ಮೃತಪಟ್ಟದ್ದರಿಂದ ಕೇವಲ ವಿಷಾದಕರವಾಗಿದೆ ಈಕೆಯು ಸದ್ಗುಣಶಾಲಿಯಾಗಿ ಬಹು ಜನರು ಮರುಗುವದಲ್ಲದೆ ಈಕೆಯ ವಿಯೋಗ ದುಃಖಕ್ಕೆ ಗುರಿಯಾಗಿರುವ ಇವರ ಪತಿ ಮ ಭಾಸ್ಕರ ಶೆಟ್ಟರೂ ಒಬ್ಬ ಪುತ್ರನೂ ಇದಾರೆ — ತಿಪ್ಟೂರಿನಲ್ಲಿ ಅಕ್ರಮಸ್ತ್ರೀಸಂಗವೆಂಬ ಅಪರಾಧಕ್ಕೆ ಗುರಿಯಾಗಿದ್ದ ಇಲ್ಲಿಯ ತಾಲ್ಲೂಕ್ ಪೋಲೀಸ್ ಜಮೇದಾರ್ ನರಸಿಂಗರಾಯರೆಂಬುವರಿಗೆ ಇಲ್ಲಿಯ ತಾಲ್ಲೂಕು ಮ್ಯಾಜಿಸ್ಟ್ರೇಟರು ದರಿಯಾಪ್ತಿಯಿಂದ ಛಾರ್ಜಾಗಿ ಕಳೆದ ತಿಂಗಳು ೨೨ ರಲ್ಲಿ ೧೦೦ ರೂಪಾಯಿ ಜುಲ್ಮಾನೆಯೂ ಕೋರ್ಟು ಛೇದ್ ಆಗುವವರಿಗೂ ಸಜಾ ವಿಧಿಸಿರುತ್ತಾರೆ —ಈಗ್ಗೆ ಸುಮಾರು 25 ದಿನಗಳ ಕೆಳಗೆ ಕೇಡಿ ಮಾದನೆಂಬುವನು ಹಸುವನ್ನು ಕಳುವು ಮಾಡಿಕೊಂಡು ಬೀರೆ ಸಂತೆಗೆ ಮಾರಲು ಹೋಗುತ್ತಿದ್ದನು ಬಿದರೆ ಸ್ಟೇಷನ್ ದಫೇದಾರ್ ಫಕ್ರುದ್ದೀನ್ ಸಾಬರು ನವರಿ ಕಳ್ಳನನ್ನು ಹಿಡಿದು ರಿಪೋರ್ಟು ಮಾಡಿದರು ಈ ಮೊಕದ್ದಮೆಯು ಗುಬ್ಬಿ ಸಬ್ ಡಿವಿಜನ್ ಕೋರ್ಟಿನಲ್ಲಿ ವಿಚಾರಣೆ ತೀರ್ಮಾನವಾಗಿ ಅಪರಾಧಿ ಮಾದನಿಗೆ ಒಂದು ವರ್ಷ ಆರು ತಿಂಗಳು ಕಠಿಣ ಸಜಾ ವಿಧಿಸಿರುತ್ತಾರೆ

ದೊಡ್ಡಬಳ್ಳಾಪುರ —ಈ ಊರು ದೇವಾಂಗದವರಲ್ಲಿ 100 ಮನೆಯವರು ಒಂದು ಪಕ್ಷವಾಗಿಯೂ, 30 ಮನೆಯವರು ಮತ್ತೊಂದು ಪಕ್ಷವಾಗಿಯೂ ಕಳೆದ 18 ವರ್ಷಗಳಿಂದಲೂ ಅವರ ದೇವಸ್ಥಾನದ ಕೆಲಸದವರ ನಿಮಿತ್ತ ವ್ಯಾಜ್ಯ ಮಾಡುತ್ತಾ ಅನೇಕ ಸಾವಿರ ರೂಪಾಯಿಗಳನ್ನು ವ್ಯಯಮಾಡಿದ್ದರು ಇದರಿಂದ ಅವರೆಲ್ಲರಲ್ಲೂ ಮನಸ್ತಾಪವಿತ್ತು ಅನ್ಯೋನ್ಯವಿರಲಿಲ್ಲ ಇದನ್ನು ನೋಡಿ

ಬೆಂಗಳೂರಲ್ಲಿರುವ ಸಾಹುಕಾರ್ ಮತ್ತು ಬೆಂಚ್ ಮ್ಯಾಜಿಸ್ಟ್ರೇಟ್ ಮ|| ಬಿ ಆದೆಪ್ಪನವರು ಕಳೆದ ವಾರ ಬಂದು ಈ ಊರಿನ ಸಮಸ್ತ ದೇವಾಂಗದವರನ್ನೂ ಕೂಡಿಸಿ ಈ ವರೆಗೆ ಇವರಲ್ಲಿದ್ದ ವ್ಯಾಜ್ಯವನ್ನೂ ವಿರೋಧವನ್ನೂ ಹೋಗಲಾಡಿಸಿ ಅನ್ಯೋನ್ಯ ಪ್ರೀತಿಯನ್ನುಂಟುಮಾಡಿದ್ದಲ್ಲದೆ ಮುಂದೆ ಈ ವಿಧವಾದ ವಿರೋಧಕ್ಕೆ ಆಸ್ಪದವಿಲ್ಲದಂತೆ ದೇವಸ್ಥಾನದ ಮ್ಯಾನೇಜ್‌ಮೆಂಟ್ ಕಮಿಟಿಯನ್ನು ಸ್ಥಾಪಿಸಿ ಈ ಒಳ್ಳೆ ಕಾರ್ಯದ ನಿಮಿತ್ತ ದೇವಾಂಗದ ಐದು ಮಂದಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕೊಡಲು ಏರ್ಪಾಡುಮಾಡಿದ್ದು ಅತ್ಯಂತ ಶ್ಲಾಘನೀಯವಾಗಿದೆ — ಮ|| ಸಾಹುಕಾರ್ ಚಂದ್ರಶೇಖರಯ್ಯನವರು ರೈಲ್ವೆ ಸ್ಟೇಷನ್ ಬಳಿ ಕಟ್ಟಿಸಿರುವ ಬಂಗ್ಲೆಯು ವಾಸಕ್ಕೆ ಸಿದ್ಧವಾಗಿ, ಸದ್ಯಕ್ಕೆ ನಮ್ಮ ಅಮಲ್ದಾರ್ ಮಿ|| ಎ ಕೃಷ್ಣೇ ಅರಸಿನವರು ವಾಸಮಾಡುತ್ತಿದ್ದಾರೆ.—ಈಗ ಬಂದಿರುವ ಹೊಸ ಪೋಲೀಸ್ ಇನ್ಸ್ಪೆಕ್ಟರ ಮೆಯಿಂದ ಈ ಗ್ರಾಮದ ಕೆಲವು ಮುಖಂಡ ಕಳ್ಳರು ಸಿಕ್ಕಿಬಿದ್ದು ಶಿಕ್ಷೆಗೆ ಗುರಿಯಾದದ್ದರಿಂದ ಈಗ ದೊಡ್ಡಬಳ್ಳಾಪುರದಲ್ಲಿ ಸಮಾಧಾನವೂ ಸಂತೋಷವೂ ಲಭಿಸಿದೆ. ಈಚೆಗೆ ನಮ್ಮ ಇನ್ಸ್ಪೆಕ್ಟರಿಗೆ ತಮ್ಮ ತಾಬೇದಾರರ ಮತ್ತು ಜನಗಳ ಯೋಗ್ಯತೆಯು ಗೊತ್ತಾಗುತ್ತಾ ಬಂದಿರುವುದರಿಂದ ಮುಂದೆ ಇವರು ಪ್ರಜಾಕ್ಷೇಮವನ್ನು ಚೆನ್ನಾಗಿ ಕಾಪಾಡುವರೆಂಬ ಧೈರ್ಯ ಉಂಟಾಗಿದೆ —ಈ ಊರಿಗೆ ತಂಜಾವೂರು ಕಡೆಯಿಂದ ರಾಗಮಾಲೆ ಬಾರಿಸುವ ಒಬ್ಬ ಪುರುಷನು ಬಂದಿರುತ್ತಾನೆ. ಈತನಿಗೆ ಸುಮಾರು 40 ವರ್ಷವೆಂಗೂ, ಶ್ರೀವೈಷ್ಣವ ಬ್ರಾಹ್ಮಣನೆಂದೂ ತಿಳಿಯಿತು. ಈ ಊರಲ್ಲಿ ಈತನು ಕಳೆದ ವಾರ ಕೆಲವು ಸಾರಿ ಅಮೇಧ್ಯ ತಿಂದನು. ಈತನು ಮನುಷ್ಯರ ಅಮೇಧ್ಯವನ್ನು ಒಂದು ಮಡಿಕೆಯಲ್ಲಿ ಹಾಕಿ ನೀರಿನಿಂದ ಕಲಸಿ ಕಸ ಕಡ್ಡಿ ಮುಂತಾದ್ದನ್ನು ತೆಗೆದುಹಾಕಿ ಎರಡು ಎರಡು ಮುಂಗೈಗಳಿಗೂ ಸವರಿಕೊಂಡು ತರುವಾಯ ಎರಡು ಬೊಗಸೆಯಷ್ಟನ್ನು ತಿಂದು ಎರಡು ಬೊಗಸೆ ನೀರು ಕುಡಿದನು. ಆಗ ವಿಷನ್ ಏಜಂಟರೂ, ಪೋಲೀಸ್ ಇನ್ಸ್ಪೆಕ್ಟರವರೂ, ಇನ್ನೂ ಕೆಲವರೂ ನಿಂತು ನೋಡುತ್ತಿದ್ದರು ತರುವಾಯ ಈತನ ಹಿಂದೆ ದೊಡ್ಡ ಗುಂಪು ಹೋಗುವಾಗ್ಗೆ ಅಲ್ಲಲ್ಲಿ ನಾಲ್ಕಾಣೆ, ಎರಡಾಣೆ, ಮೂರು ಪೈ ಬಿಲ್ಲೆಗಳು ಉದುರಿಸಲ್ಪಟ್ಟವು. ಅನೇಕರು ಆಡುಕೊಂಡರು. ಈತನಿಗೆ ರಾಗಮಾಲಿಕೆ ಬಾರಿಸಲಿಕ್ಕೆ ಚೆನ್ನಾಗಿ ಬರುತ್ತೆ. ಈತನು ತರುವಾಯ ಪಾಕ್ಟರವರ ಮನೆಯಲ್ಲಿದ್ದನು. ಈತನು ಯಾತಕ್ಕೆ ಅಮೇಧ್ಯ ತಿನ್ನುತ್ತಾನೆಂದು ವಿಚಾರಿಸಿದ್ದರಲ್ಲಿ ಅದು ಉತ್ತಮವಾದ ಆಹಾರವೆಂತಲೂ, ಇದನ್ನು ಬೇರೆ ಆಹಾರಕ್ಕಾಗಿ ಪೀಡಿಸಬಾರದೆಂತಲೂ ಹೇಳಿದನು. ನಾಣ್ಯಗಳ ವಿಷಯ ಕೇಳಲಾಗಿ ಆತನಿಗೆ ರಾಗಮಾಲಿಕೆ ಬಾರಿಸುವದರ ಮೂಲಕ ಸಿಕ್ಕಿತೆಂದು ಹೇಳುತ್ತಾನೆ. ಇದನ್ನು ಈತನು ಉದರಿಸುವಾಗ ಈತನಲ್ಲಿ ಹಣದ ಚೀಲ ಇಲ್ಲದಿರುವದರಿಂದ ಜನರು ನಾನಾ ಪ್ರಕಾರ ಹೇಳುತ್ತಾರೆ ಈತನು ಒಚ್ಚಲ ನೀರು ಕುಡಿಯುತ್ತಾನೆ. ಉಪಚರಿಸುವವರ ಮನೆಗೆ ಹೋಗುತ್ತಾನೆ —ಮಳೆ ಬಹು ಜೋರಾಗಿದ್ದು ಉಳುವ ಕೆಲಸಕ್ಕೆ ತುಂಬಾ ಅನುಕೂಲವಾಗಿದೆ —ಕಳೆದ ಗುರುವಾರ ಬೆಳಿಗ್ಗೆ ಅಕಸ್ಮಾತ್ ಭಾವಿಯಲ್ಲಿ ಬಿದ್ದ ಒಬ್ಬ ಬಣಜಿಗ ಹೆಂಗಸನ್ನು ಬಣಜಿಗರ ಹನುಮಂತಪ್ಪನೆಂಬ ಯೌವನಸ್ಥನು ಬಹು ಸಾಹಸಪಟ್ಟು ಭಾವಿಯಿಂದೆತ್ತಿ ಆಕೆಯ ಪ್ರಾಣವನ್ನು ಉಳಿಸಿದನು.—ಮೈಸೂರು ಸರ್ಕಾರದವರು ಕೀಳು ಜನರಿಗೆ ವಿದ್ಯೆ ಕಲಿಸುವುದಕ್ಕೆ ಪ್ರೋತ್ಸಾಹ ಮಾಡುತ್ತಿದ್ದಾರೆ. ಆದರೆ ಇಲ್ಲಿನ ಮಾದಿಗರ ಸ್ಕೂಲಿಗೆ ನೇಮಕವಾಗಿರುವ ಉಪಾಧ್ಯಾಯನು ಎರಡುವರೆ ತಿಂಗಳ ಲಾಗಾಯಿತು ಕೆಲಸಕ್ಕೆ ಹಾಜರಾಗಿರುವದಿಲ್ಲವೆಂತ ಗ್ರಾಮಸ್ಥರೆಲ್ಲರೂ ತಿಳಿಸುತ್ತಾರೆ. ಮತ್ತು ಸ್ಕೂಲ್ ಮನೆ ಮುಚ್ಚಿಯೇ ಇರುತ್ತೆ ಇನ್ಸ್ಪೆಕ್ಟರುಗಳು ಈ ವಿಷಯವನ್ನು ಗ್ರಾಮಸ್ಥರಿಂದಲೂ ಇತರರಿಂದಲೂ ಚೆನ್ನಾಗಿ ವಿಚಾರಿಸಿ ಕ್ರಮಪಡಿಸಬೇಕಾಗಿದೆ ಇಲ್ಲಿನ ಡಾಕ್ಟರವರು ಮಾಡುತ್ತಿರುವ ಅಸಮಾನವಾದ ಚಿಕಿತ್ಸೆಗಳಿಂದ ಮಹಾ ಕಠಿಣವಾದ ಕೆಲವು ವ್ಯಾಧಿಗಳು ವಾಸಿಯಾಗುತ್ತಿವೆ ಅವರ ಮುತುವರ್ಜಿ ಮತ್ತು ವೈದ್ಯ ಅನುಭವ ಭೂತದಯೆ ಅಪರೂಪವೆಂತ ಹೇಳಬೇಕಾಗಿದೆ —ಇಲ್ಲಿನ ಇಂಡಸ್ಟ್ರಿಯಲ್ ಸ್ಕೂಲಿನ ಅಭಿವೃದ್ಧಿ ವಿಷಯದಲ್ಲಿಯೂ, ಆಡಳಿತ ವಿಚಾರದಲ್ಲೂ ಒಂದು ಕಮಿಟಿ ನೇಮಕವಾಗಬೇಕಾದದ್ದು ಅತ್ಯಂತ ಅವಶ್ಯವೆಂದು ಕಾಣುತ್ತದೆ

ಫ್ರೆಂಚ್‌ರಾಕ್ —ಒಂದು ವಾರದಿಂದಲೂ ಮೋಡವಾಡುತ್ತಿದೆ. ಇದೆ, ತಕ್ಕಮಟ್ಟಿಗೆ ಮಳೆಯಾಯಿತು ಜನಾ ಆರೋಗ್ಯವಾಗಿದೆ ಜೋಳದ ಪೈರು ಚೆನ್ನಾಗಿವೆ ಕೆರೆಗೆ ಅರ್ಧದ ಮಟ್ಟಿಗೆ ನೀರು ಬಂದಿದೆ.—ಇಲ್ಲಿನ ಬಜಾರಿನಲ್ಲೂ ಸಂತೆ ಮೈದಾನದ ಪಕ್ಕದ ರಸ್ತೆಯಲ್ಲೂ ಮುನಿಸಿಪಲ್ ಲಾಂದ್ರಗಳನ್ನು ಅವಶ್ಯವಾಗಿ ಇಟ್ಟುಕೊಡಬೇಕು. ಕತ್ತಲಲ್ಲಿ ಆ ಕಡೆ ಹಾವುಗಳ ಕಾಟವಿರುವದರಿಂದ ತಿರುಗಾಡತಕ್ಕ ಜನಗಳಿಗೆ ತೊಂದರೆಯಾಗಿದೆ ನಮ್ಮ ಡೆಪ್ಯುಟಿ ಅಮಲ್ದಾರರು ಇದನ್ನು ಕ್ರಮಪಡಿಸುವರೆಂದು ನಂಬಿದ್ದೇವೆ.—ಪೋಲೀಸ್ ಸೂಪ್ರೆಂಟರಾದ ಮಿ|| ಅಬ್ದುಲ್ ವಜೀದ್‌ಯವರು ಕಳೆದ ೬ ನೇ ತಾ. ಗುರುವಾರ ರಾತ್ರಿ ಶಿವಮೊಗ್ಗೆಗೆ ಪ್ರಯಾಣ ಬೆಳಸಿದರು.—ಶ್ರೀರಂಗಪಟ್ಟಣದ ಪ್ಲೀಡರ್ ಮ|| ದೇವೋಜಿರಾಯರು ಚೇಳಿನ ಔಷಧವನ್ನು ತಯಾರುಮಾಡಿ ಕೇಳಿದವರಿಗೆ ಉಚಿತವಾಗಿ ಕೊಡುತ್ತಿದ್ದಾರೆ. ಈ ಔಷಧವನ್ನು ನಾನು ಅವರಿಂದ ತಂದು ಚೇಳು ಕಡಿದು ಸಂಕಟಪಡುತ್ತಿದ್ದ ಅನೇಕರಿಗೆ ಉಪಯೋಗಿಸಿದ್ದರಲ್ಲಿ ಎಲ್ಲರಿಗೂ ತಕ್ಷಣವೇ ಗುಣವಾಯಿತೆಂದು ತಿಳಿಸಲು ಸಂತೋಷಪಡುತ್ತೇನೆ.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು.

ಕೆಮ್ಮು ಅಪಾಯದ ಕುರುಹು !

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ.

SCOTT'S EMULSION 3-31
(ಸ್ಕಾಟ್ಸ್ ಇಮಲ್ಷನ್)

ಎಂಬ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು.

Always get the Emulsion with this mark—the Fishman—the mark of the "Scott" process!

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷದ ಮಾರಾಟಗಾರರಲ್ಲಿ ದೊರಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷದವನ್ನೇ ಕೊಂಡುಕೊಳ್ಳಿ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ರೋಗಕ್ಕೇ ಗುರಿಯಾಗಬೇಕಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ; ಬಳಲಿಕೆ; ಎದೆ ತಲ್ಲಣಿಸುವುದು, ತಲೆನೋವು; ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು, ಬಾವು, ಪಿತ್ತಾಣ, ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರಾಶ್ಮರಿ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೀಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [142-10]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಅಜ್ಮೀರ್ ಜನರಲ್ ಆಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ.

ಮೇಲ್ಕಂಡ ವಿಮಾ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಬೇಕಾದಷ್ಟು ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೆ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ. ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹವಾದಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು.

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[109-2] ಎಸ್ ಕಟ್ಟೂರ್, ಬ್ರಾಂಚ್ ಸೆಕ್ರಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ.

ಬಹಳ ಪ್ರಖ್ಯಾತವಾದ ಪರಿಮಳ ಕೇಶವರ್ಧಿನೀ ತೈಲವು.

ಗಡಿಯಾರಗಳು ಇನಾಮಾಗಿ ಕೊಡಲ್ಪಡುವುವು.

ಇದು ಇದರ ಹೆಸರಿಗೆ ತಕ್ಕಂತೆ ಒಳ್ಳೆಯ ವಾಸನೆಯುಳ್ಳದ್ದಾಗಿಯೂ, ಮತ್ತು ಇದನ್ನು ಉಪಯೋಗಿಸುತ್ತಬಂದರೆ ತಲೆಕೂದಲು ಚೆನ್ನಾಗಿ ಬೆಳೆಯುವುದಲ್ಲದೆ ತಲೆನೋವು, ಕಣ್ಣುರಿ, ಅದರು, ಇನ್ನೂ ಅನೇಕ ಪಿತ್ತ ಸಂಬಂಧವಾದ ವ್ಯಾಧಿಗಳೆಲ್ಲವನ್ನೂ ಗುಣಪಡಿಸುತ್ತೆ ಇದು ದೇಹಕ್ಕೆ ಬಹಳ ತಂಪನ್ನುಂಟುಮಾಡುತ್ತೆ. ಇದನ್ನು ಒಂದು ಸಲ ತರಿಸಿ ಪರೀಕ್ಷಿಸಿದಲ್ಲಿ ಇದರ ಗುಣವು ತಿಳಿಯುವುದು. ಇದರ ಬೆಲೆ ಸೀಸೆ 1ಕ್ಕೆ ರೂ 0-12-0. ನಾಲ್ಕು ಬುಡ್ಡಿಯನ್ನು ಒಂದೇ ಸಲ ತರಿಸಿಕೊಳ್ಳುವವರಿಗೆ ಸರಿಯಾದ ಕಾಲವನ್ನು ತೋರಿಸುವ ಟೈಂಪೀಸ್ ಒಂದು. ಆರು ಸೀಸೆಗಳನ್ನು ಒಂದೇ ಸಲ ತೆಗೆಯುವವರಿಗೆ ಫ್ಲೈಟ್ ರೆಗುಲೇಟರ್ ಗಡಿಯಾರ ಒಂದು, ಒಂಬತ್ತು ಸೀಸೆಗಳನ್ನು ಒಂದೇ ಸಲ ತರಿಸಿಕೊಳ್ಳುವವರಿಗೆ ಜೇಬಿ ವಾಚು ಒಂದು, 12 ಸೀಸೆ ತೆಗೆದುಕೊಳ್ಳುವವರಿಗೆ ಬೆಳ್ಳಿಯ ಕೇಸುಳ್ಳ ಜೇಬೀ ವಾಚು ಕೈಪೆಟ್ಟಿಗೆಯೊಂದಿಗೆ ಬಹುಮಾನವಾಗಿ ಕೊಡಲ್ಪಡುವುದು. [116-1]

ವಿಳಾಸ:—ಜೆ ಪಿ ಪಾಲಾ ಕಂಪನಿ,
ನುಂಗಂಬಾಕಂ, ಮದರಾಸ್.

ಮಧುರೆ ಅಚ್ಚು ಕರಿಬಣ್ಣದ ನೂರು ಚುಕ್ಕೆಯುಳ್ಳ ಚುಂನಡಿ ಸೀರೆಗಳು

ಕ್ರಯ ರೂಪಾಯಿ 2-12 0.

ಇದು ಅನೇಕರು ಪ್ರಕಟಿಸುತ್ತಲಿರುವ ಸೀರೆಯಲ್ಲ ಮಧುರೆಯಲ್ಲಿಯೇ ತಯಾರಾಗಿ ಮಧುರ ಸೀರೆಯೆಂದು ಹೆಸರು ಪಡೆದ ಅಚ್ಚ ಕರೀ ಬಣ್ಣದ ಚುಂನಡಿ ಸೀರೆ ಇದು. ಬಹಳ ನಾಜೂಕಾಗಿಯೂ, ನೋಡುವದಕ್ಕೆ ಲಕ್ಷಣವಾಗಿಯೂ, ರಂಗು ಅಚ್ಚ ಸೇರಿ ಜನ್ಮದ ಪರ್ಯಂತ್ಯವಾಗಿಯೂ, ನೀರೆಯು ದಪ್ಪವಾಗಿಯೂ, ಧಾರಾಳವಾಗಿ 18 ಮೊಳವುಳ್ಳದ್ದಾಗಿಯೂ ಇದೆ ಇದನ್ನು ಬಾಗ್ಯವಂತರು ಸಹ ಬಹು ಪ್ರೇಮದಿಂದ ಉಡುತ್ತಿದ್ದಾರೆ ಮಾದರಿಗಳನ್ನು ತರಿಸಿ ಪರೀಕ್ಷಿಸಿ ನೋಡಿ ಇದರ ಬೆಲೆ ಹೆಚ್ಚಿಸದು ಹೇದರಬೇಡಿ ಇದು ಒಳ್ಳೇ ಮಲ್ಲು ಬಟ್ಟೆಯಲ್ಲಿ ತಯಾರು ಮಾಡಲ್ಪಟ್ಟಿದೆ ಆದ್ದರಿಂದ ಬಹಳ ದಿನ ಬಾಳಿಕೆ ಬರುತ್ತದೆ ಇದರ ಛಾಯಕ್ಕೆ ಗ್ಯಾರಂಟಿ ಕೊಡುತ್ತೇವೆ [117-1]

ವಿಳಾಸ —ಬಿ. ಎಸ್ ಕೃಷ್ಣರಾವ್,
101, ಪೈನಾಪಬಜಾರ್ ರೋಡ್, ಮದರಾಸ್.

ನಾಣ್ಯವಾದ ವಾಚ್, ನಾಣ್ಯವಾದ ವಾಚ್.

ರೈಲ್ವೆ ಗಾರ್ಡ್ ಲೀವರ್ ಪಾಕೆಟ್ ವಾಚ್.

ಇದರ ಕ್ರಯ—ನಾಣ್ಯವಾದ ವಾಚ್ ಸರಪಳಿ ಸಮೇತ ರೂ 2-8-0 ಮಾತ್ರ ೩ ವರುಷಗಳ ಗ್ಯಾರಂಟಿ.

ಇದು ಮಕ್ಕಳ ಆಟದ ಜೊಂಬಗಳಂತೆ ಕೆಲವು ದಿವಸಗಳು ಆಟವಾಡಿ ಕೆಟ್ಟುಹೋಗತಕ್ಕಂಥಾ ಅಲ್ಪ ಗಡಿಯಾರವಲ್ಲ ಸಾಧಾರಣವಾದ ವಾಚ್‌ಗಳಿಗಿಂತಾ ಬಹು ಶ್ರೇಷ್ಠವಾದದ್ದು. ರೈಲ್ವೆ ಗಾರ್ಡ್, ರೈಲ್ವೆ ಇನ್ಜನ್ ಡ್ರೈವರ್ ಮುಂತಾದ ಅನೇಕ ರೈಲ್ವೆ ಉದ್ಯೋಗಸ್ಥರು ಇದನ್ನು ಇಟ್ಟುಕೊಂಡು ಉಪಯೋಗಿಸುತ್ತಿದ್ದಾರೆ. ಆದಕಾರಣವೇ ಇದಕ್ಕೆ ರೈಲ್ವೆ ಗಾರ್ಡ್ ವಾಚ್ ಎಂಬ ಬಿರುದು ಬಂದಿರುತ್ತದೆ. ಇದನ್ನು ಇಟ್ಟುಕೊಂಡು ರೈಲ್ವೆ ಗಾರ್ಡ್‌ರವರು ರೈಲ್ ನಡಿಸುತ್ತಾರೆ ಈ ವಾಚ್ ವಿಚಾರವಾಗಿ ಹೆಚ್ಚಾಗಿ ಬರೆಯಲು ನಮ್ಮಿಂದ ಸಾಧ್ಯವಿಲ್ಲ. ಸಾವಿರಗಟ್ಟಲೆ ಪಿಟಾರಿಗೆ ಲೆಕ್ಕವಿಲ್ಲದ ಯೋಗ್ಯತಾ ಪತ್ರಗಳನ್ನು ಹೊಂದಿರುತ್ತೇವೆ. ಕೆಲವು ವಾಚ್‌ಗಳು ಮಾತ್ರ ಉಳಿದಿರುತ್ತೆ. ಬೇಕಾದವರು ಶೀಘ್ರವಾಗಿ ಬರೆದು ತರಿಸಿಕೊಳ್ಳಿ. ತರಿಸಿಕೊಂಡು ಸಮ್ಮತವಿಲ್ಲದ ಪಕ್ಷದಲ್ಲಿ ಖಂಡಿತ ಹಣ ವಾಪಸು ಮಾಡಲ್ಪಡುತ್ತೆ. ನಮ್ಮ ವಿಳಾಸ :— [68-9]

ಸುಪೀರಿಯರ್ ವಾಚ್ ಕಂಪನಿ, ಪೋಸ್ಟು ಬಾಕ್ಸ್ 167, ಮದರಾಸು.

Mellin's Food

ಮೆಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ವಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs. OAKES & Company, Mount Road, Madras.

[4-32] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. H. GULLIFORD, Proprietor and Manager, Wesleyan Mission Press, Mysore. 12/6/1918.

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—ಸನ್ ೧೯೧೩ ನೇ ಇಸವಿ ಜೂನ್ ತಾರೀಖು ೧೯ ನೇ ಗುರುವಾರ. ಸಂಚಿಕೆ ೩

ಪ್ರತಾಪಕಂಠೀರವ ಚರಿತ್ರೆ.

(1) "ಧರ್ಮಿಷ್ಠರಿಗೆ ಬಂದ ವಿಪತ್ತು ಎಂಥದ್ದೇ ಆದರೂ ಕಡೆಗೆ ಕೆಡಕು ತೊಲಗಿಹೋಗುತ್ತದೆ" ಎಂಬ ನೀತಿ, (2) ಸ್ತ್ರೀಧರ್ಮ ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ ಸಾಹಸ ಚತುರತೆ (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು (4) ವನ, ಸರಸ್ಸು, ಆರಾಮಾದಿ ವರ್ಣನೆಗಳು (5) ಮನುಷ್ಯಯತ್ನಕ್ಕೆ ವಿಧಿಯ ಅನುಕೂಲವಿರಬೇಕೆಂಬ ತತ್ವ ವಿಷಯಗಳು (6) ಎಲ್ಲರೂ ಓದಿ ತಿಳಿಯತಕ್ಕಂಥಾ ಸುಲಭ ಶೈಲಿ, (7) ಸರಸ ವರ್ಣನೆಗಳು ಮುಂತಾಗಿ ಓದಲಾರಂಭಿಸಿದರೆ ಪುಸ್ತಕವನ್ನು ಕೆಳಗಿಡದಂಥಾ ಕಥಾಭಾಗಗಳು ಕೂಡಿವೆ ಕ್ರಯ —1 ರೂಪಾಯಿ ಟಪಾಲ್ ಖರ್ಚು ಬೇರೆ

[10–17] ನಮ್ಮ ವಿಳಾಸ — ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ

ಡೋಂಗರೆ ಇವರ ಬಾಲಾಮೃತ.

[115-49]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಇದು ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಸಂತೋಷದಿಂದ ತೆಗೆದುಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಆಸ್ತಿಗಳು ಶಕ್ತಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೨ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ

ಸಮಸ್ತ ವಿಧವಾದ ನೋವೂ ಇರಿತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಬೆನ್ನಿನ ಸೆಳೆತ ಕೀಲುನೋವು, ಶೈತ್ಯ, ಈ ಮೊದಲಾದ ಬಹಳ ತರದ ಬಾಧೆಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಬಿಸಿ ರೊಟ್ಟಿಗಳಂತೆ ವಿಕರಿಯಾಗುತ್ತಲಿವೆ ಡಾಕ್ಟರುಗಳೂ ವೈದ್ಯಮಾರ್ತಾಂಡರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ವಿಕರಿಯಾಗುವದು

ಮುಕ್ಕಟ್ಟು ಔಷಧ ಡಬ್ಬಿಗೆ 6 ಆಣೆ, 12 ಕುಪ್ಪಿಗೆ ರೂ 1–8–0 ಹಲ್ಲುಪುಡಿ ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ 1–2–0 ವಿ ಪಿ ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ [42–17]

ವಿಳಾಸ —ಅಮೃತಾಂಜನ ಡಿಪೋ, ೧೯ ಫ್ರೀಯರ್ ರೋಡು, ಫೋರ್ಟ್, ಬೊಂಬಾಯಿ

ಮೈಸೂರು ಬ್ಯಾಂಕ್, ಲಿಮಿಟೆಡ್.

ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬರವರ ಸರ್ಕಾರದವರ ಪ್ರೋತ್ಸಾಹಕ್ಕೆ ಒಳಪಟ್ಟು ಅವರಿಂದ ಸಹಾಯವನ್ನು ಹೊಂದಿರುವದು

ಕ್ರಮವಾಗಿ ರಿಜಿಸ್ಟರ್ ಮಾಡಲ್ಪಟ್ಟಿದೆ

ಮೂಲಧನ 20,00,000 ರೂಪಾಯಿಗಳು.

ಷೇರೊಂದಕ್ಕೆ 100 ರೂಪಾಯಿಗಳಂತೆ 20,000 ಷೇರುಗಳಾಗಿ ವಿಭಾಗಿಸಲ್ಪಟ್ಟಿವೆ.

ಷೇರುಗಳು ... ಮೈಸೂರು ಸಂಸ್ಥಾನದ ಪ್ರಜೆಗಳಿಗೆ ...

ದರಖಾಸ್ತಿನೊಡನೆ ಷೇರೊಂದಕ್ಕೆ 10 ರೂಪಾಯಿಗಳು, ಹಂಚಿಹಾಕಿದ ಅನಂತರದಲ್ಲಿ ಷೇರೊಂದಕ್ಕೆ 15 ರೂಪಾಯಿಗಳು

ಮೂರು ತಿಂಗಳು ನಂತರ ಷೇರೊಂದಕ್ಕೆ 5 ರೂಪಾಯಿಗಳು

... ತಿಂಗಳಿಗೆ 10 ರೂಪಾಯಿಗಳಂತೆ ಷೇರೊಂದಕ್ಕೆ ಇನ್ನು 70 ರೂಪಾಯಿಗಳನ್ನು ... ಷೇರೊಂದಕ್ಕೆ ... 50 ರೂಪಾಯಿಗಳನ್ನು ... ಪ್ರತಿ ... ತಿಂಗಳು ...

ಷೇರುದಾರರಾಗಲು ಇಚ್ಛೆಯುಳ್ಳವರು ಜಾಗ್ರತೆಯಾಗಿ ದರಖಾಸ್ತು ಹಾಕಬೇಕು ... ಷೇರುಗಳಿಗಾಗಿ ದರಖಾಸ್ತುಗಳು ... ನಾಲ್ಕು ಲಕ್ಷ ರೂಪಾಯಿಗಳ ಷೇರುಗಳಿಗೆ ... ಸಾವಕಾಶ ಮಾಡಿದಲ್ಲಿ ದೊರೆಯಲಾರದು – ಪ್ರಸಿದ್ಧಪತ್ರಿಕೆ ದರಖಾಸ್ತು ಫಾರಂ ಮೈಸೂರು ಬ್ಯಾಂಕಿನ ... ತೆಗೆದುಕೊಳ್ಳಬಹುದು

Mysore Bank Office,
Edinburgh House, Shankarpur,
BANGALORE CITY.

[99 4]

(Sd.) K. P. PUTTANNA CHETTY,
Chairman

ಪರೀಕ್ಷಿಸಿ ನೋಡದ ಅಗ್ಗದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ಬೆಳೆದಿರುವದರಿಂದ ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತುಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಪುನಃ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಥಳಥಳಿಸುವವು, ನಿಬಿಡವಾದ ನೀಲವರ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ. ಮುಂದಿನ ಹೊಟ್ಟನ್ನು ಅಳಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳುವ ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಬಣ್ಣಕ್ಕೆ ತಿರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ

ಇದರ ಬೆಲೆ 1 ಸೀಸೆಗೆ ರೂ 1 0-0 ಅಂಚೆಯ ವೆಚ್ಚ 0-4-0 ಬೇರೆ ಕೊಡಬೇಕು

3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0 7-0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ

ಮೈಸೂರು ಎಗ್ಸಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಸಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ॥ ಡಿ ಸಾಲಿಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆಸೆಪಟ್ಟು ಹಚ್ಚಿಕೊಳ್ಳುತ್ತಾರೆ" ವಿರುದುನಗರ್ ಕೆ ವಿ ಎನ್ ಹೈಸ್ಕೂಲ್ ಹೆಡ್ ಮಾಸ್ಟರ್ ಮಿ॥ ಎಂ ಸುಬ್ರಹ್ಮಣ್ಯಯ್ಯರವರು ಬರೆಯುವದು—"ನಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ಪರೀಕ್ಷೆ ಮಾಡಿದ್ದೇನೆ ಅದು ಕೂದಲನ್ನು ಹುಟ್ಟಿಸಿ ಅಂದವಾಗಿಯೂ, ಕೋಮಲವಾಗಿಯೂ, ನೋಡಾಗಿಯೂ ಬೆಳೆಯುವದೆಂದು ಖಂಡಿತವಾಗಿ ಹೇಳಬಲ್ಲೆನು ದಯವಿಟ್ಟು ಇನ್ನು ಮೂರು ಬಾಟ್ಲಿ ಎಣ್ಣೆ ಕಳುಹಿಸಿಕೊಡಿ" ಪನೆಟಾ ಡಿಪ್ಟಿ ಕಂಟ್ರೋಲರ್ ಆಫೀಸ್ ಮಿ॥ ಗೊ ... ಬರೆಯುವದು — "ದಯವಿಟ್ಟು ನಿಮ್ಮ ಕಾಮಿನಿಯಾ ಎಣ್ಣೆ ಆರು ಬಾಟ್ಲಿ ಕಳುಹಿಸಿಕೊಡಿ ಒಂದು ತಿಂಗಳ ಹಿಂದೆ ನೀವು ಕಳುಹಿಸಿದ ಬಾಟ್ಲಿಗಳು ಮುಗಿದುಹೋಯಿತು ಇದೇ ಉತ್ತಮೋತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳಬಲ್ಲೆನು" ಆದಕಾರಣ ನೀವು ಒಂದು ಸಲ ತರಿಸಿ ಪರೀಕ್ಷೆ ಮಾಡಿ

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನಿಮ್ಮ ಸ್ಥಳದ ಷಾಪುಕೀಪರಲ್ಲಿ ಅದು ಇಲ್ಲದಿದ್ದರೆ ಅವನ ಹೆಸರು ವಿಳಾಸದ ಸಮೇತ ನಮಗೆ ತಿಳಿಸಿ ನೀವು ಕೊಳ್ಳುವಾಗ್ಗೆ ಮೋಸಗಾರರಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ವಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ಏಜೆಂಟ್, ವಿ ಉರ್ಲ ಮಾರ್ಕೆಟ್, ಮಂಗಳೂರು

ನಮ್ಮ ವಿಳಾಸ — [8-23]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸೀದಿ, ಬೊಂಬಾಯಿ.

ನಮ್ಮ ಏಜಂಟರಿಗೆ ನೋಟೀಸ್.

ಕಳೆದ ಮೇ ತಿಂಗಳ ಅಖೈರಿಗೆ "ವೃತ್ತಾಂತ ಪತ್ರಿಕೆ"ಯ ಸಂವತ್ಸರವು ಪೂರೈಸುತ್ತದೆ ನಮ್ಮ ಏಜಂಟರುಗಳು ವರುಷದ ಲೆಕ್ಕಗಳನ್ನೆಲ್ಲಾ ಖೈದುಮಾಡಿ, ಅಖೈರ್ ಪಟ್ಟಿಗಳನ್ನು ಕಳುಹಿಸಬೇಕು ಇದಲ್ಲದೆ ಜೂನ್ ಪ್ರಾರಂಭದಿಂದ ಅಡ್ವಾನ್ಸು ಚಂದಾ ಖಾವತಿ ಆದ ಹೊರತು ಏಜಂಟರು ಯಾರಿಗೂ ಪತ್ರಿಕೆಗಳನ್ನು ಕೊಡಲಾಗದು ಹೊಸದಾಗಿ ಚಂದಾ ಕೊಡತಕ್ಕವರು ಒಂದು ವರುಷದ ಚಂದಾ ೧ ರೂಪಾಯನ್ನು ಅಡ್ವಾನ್ಸಾಗಿಯೇ ನಮ್ಮ ಏಜಂಟರಿಗೆ ಖಾವತಿಮಾಡಬೇಕೆಂದೂ, ಅವರಿಂದ ಈ ಬಗ್ಗೆ ಕ್ರಮವಾದ ಪ್ರಿಂಟಾದ ರಶೀತಿಯನ್ನು ಪಡೆದುಕೊಳ್ಳಬೇಕೆಂದೂ ಈ ಮೂಲಕ ಶೃತಪಡಿಸುತ್ತೇವೆ

ಮ್ಯಾನೇಜರ್, "ವೃತ್ತಾಂತ ಪತ್ರಿಕೆ, ಮೈಸೂರು.

ಲೇಡೀಸ್ ವಾಚ್.



ಇದರ ಅನುಕೂಲ ಮತ್ತೆ ಯಾವದಕ್ಕೂ ಇಲ್ಲ ನಿಮ್ಮ ಇಚ್ಛೆ ಬಂದಂತೆ ಕೈಯಲ್ಲಿಯೂ ಕಟ್ಟಿಕೊಳ್ಳಬಹುದು ಜೋಬಿನಲ್ಲಿಯೂ ಹಾಕಿಕೊಳ್ಳಬಹುದು ಸರಿಯಾದ ಕಾಲವನ್ನು ತೋರಿಸತಕ್ಕದ್ದು ತಳದಲ್ಲಿ ಬೀಗವುಳ್ಳದ್ದು ಶುದ್ಧವಾದ ನಿಕಲ್ ಮುಚ್ಚಳವುಳ್ಳದ್ದು ಸುಂದರವಾದದ್ದು ಗಾತ್ರಿಯಾದವಾಲು ಇದರ ಕ್ರಯ ಸುಂದರವಾದ ವಾಚ್ ಸರಪಣಿ ಮತ್ತು ಕೈಯಲ್ಲಿ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಮೇತ

ರೂ ೩-೪-೦ ಮಾತ್ರ [77-9]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ಬಿ ಆರ್ ವೆಂಕಟರಮಣ ಅಂಡ್ ಕಂಪನಿ,

ನಂ 7 ಕೋನಾ ವೆಂಕಟಾ ಅಯ್ಯರ್ ಲೇನ್, ಮದರಾಸು

ಹತ್ತಿಯ ತುಪ್ಪವು

ಒಂದು ವರ್ಷದವರೆಗೆ ಇಟ್ಟಿದ್ದರೂ ಕೆಡಲಿಲ್ಲ!

(೪) ಎನ್ ಕೋದಂಡರಾಮಯ್ಯನವರು, ಅಕ್ಟಿಂಗ್ ಶೇರಿದಾರ್, ಹೊಸೂರು—ನಿಮ್ಮಿಂದ ತರಿಸಿದ ಹತ್ತಿಯ ತುಪ್ಪವು 1 ವರ್ಷವಾದ ಮೇಲೂ ಹೊಸ ತುಪ್ಪದಂತೆ ಸುವಾಸನೆಯಾಗಿದೆ ಅದರಲ್ಲಿ ಬೇಯಿಸಿದ ಸಾಮಾನೂ ಹೊಸ ತುಪ್ಪದಲ್ಲಿ ಮಾಡಿದಂತೆ ಇದೆ ಅಗ್ಗವಾಗಿ ಮಾರುವುದು ಎಣ್ಣೆ ಬೆರೆದಿರುವುದರಿಂದ ಅನಾರೋಗ್ಯವನ್ನುಂಟುಮಾಡುತ್ತದೆ ನಂಬಿಕೆಯಾದ ಏಜಂಟರು ದೊರೆಯುವವರೆಗೆ ತಮ್ಮ ಕಂಪೆನಿಯಿಂದಲೇ ಸೀದಾ ಕಳುಹಿಸಬೇಕು

ಎಚ್ಚರಿಕೆ!

ಹತ್ತಿಯ ತುಪ್ಪವು ರೂಢಿಗೆ ಬಂದಮೇಲೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

[110-1] 1?, ಕಿಲಾರಿ ರೋಡ್, ಬೆಂಗಳೂರು ಸಿಟಿ

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ—1 ಪಿನಲ್‌ಕೋಡು, 2 ಪೊಲೀಸ್ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ವಿಷವಸ್ತುಗಳ ರೆಗ್ಯುಲೇಷನ್, 6 ಬೇಟೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಹುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿದೆ

ಪ್ರತಿ ಪೆನಲ್ ಸೆಕ್ಷನ್‌ಗೂ—ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೇ ? ಯಾ ಕೂಡದೇ ? ಮೊದಲು ಸಮನ್ ಹುಟ್ಟಬೇಕೇ ? ಯಾ ವಾರಂಟು ಹುಟ್ಟಬೇಕೇ ? ಜಾಮೀನ್ ತೆಗೆದುಕೊಳ್ಳಬಹುದೇ ? ಯಾ ಕೂಡದೇ ? ರಾಜಿಯಾಗಬಹುದೇ ? ಯಾ ಕೂಡದೇ ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ಬೇಕಾದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 22-5 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 3-0-0 ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ವೇಮಾರೆಡ್ಡಿ,

ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್,

[103-4] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ್ ರವರ, ಹೊಟ್ಟೆ ಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



1 25

ಕೆಳ ಹೊಟ್ಟೆಯ ನೋವು, ಬೇಧಿಯಾಗುವುದು, ಆನುಕಂಪೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ರೋಗಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ನಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸುವುದಲ್ಲದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಒಂದು ಪದಸ್ಥ ಆಗಲಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಳಲಿಯಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಜೋಡೆಕ (ಭಾರ), ಮೈ ನಡುಕ, ಶೀತದ ಬಾಧೆ, ಅಜೀರ್ಣ ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ಊಟದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಬಾರಕೊಡದೆ, ನರಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಹುತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೈಸೆಳೆತಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ—30 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 1 ಆಣೆ [136 12]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈವಾರಿಕೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸಿದೆ ಮೂತ್ರವು ಕಟ್ಟಿದೆ ಕೈಕಾಲು ಸೆಳೆಯುತ್ತಿವೆ ಎನ್ನುವ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ ವೈದ್ಯೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ — ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

☞ ಹಾಸಿಗೆಯ ತಿಗಣೆಯನ್ನು ನಾಶಮಾಡುತ್ತೆ

ಇದು ಬಹಳ ಅಗತ್ಯವಾದ್ದು ಸುಲಭವಾದ ಪ್ರಯೋಗ 48 ಗಂಟೆಯೊಳಗೆ ತಿಗಣೆಯ ಕಾಟ ತೊಲೆದುಹೋಗುತ್ತೆ ಉಪಯೋಗಿಸುವ ವಿಧಾನ ಸಹಿತ ಬಾಟ್ಲಿಗೆ ಕ್ರಯ ಒಂದೇ ರೂಪಾಯಿ ಅಂಚೆವಚ್ಚ ಬೇರೆ ವಿಳಾಸ—ಎಸ್ ಹಾಮಿದ್ ಕಂಪನಿ, 71 ಪೈಕ್ರಾಫ್ಟ್ಸ್ ರೋಡ್, ಮದರಾಸ್ [96]

ಎಗ್ಸಾಮಿನರ್ ಮಾಸ ಪುಸ್ತಕವೂ, ಟೆಕ್ಸ್ಟ್ ನೋಟ್ಸ್ ಬಹುಮಾನವೂ ಚಂದಾ ರೂ 1-4-0, ಕನ್ನಡ ಟೆಕ್ಸ್ಟ್ ನೋಟ್ಸ್ 4 ಆಣೆ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದ ಈ ಮಾಸಪತ್ರಿಕೆಗೆ ಜೂನ್ ಆಖೈರಿನೊಳಗೆ ಚಂದಾದಾರರಾಗತಕ್ಕವರಿಗೆ ಮೇಲ್ಕಂಡ ನೋಟ್ಸ್ ಬಹುಮಾನ ಕ್ಯಾಟಲಾಗ್ ತರಿಸಿ ನೋಡಿ ?. ಪುಟ್ಟಯ್ಯ, ಮ್ಯಾನೇಜರ್, ಎಗ್ಸಾಮಿನರ್ ಆಫೀಸ್, ಚಿಕ್ಕಬಳ್ಳಾಪುರ

ಗರ್ಭಿಣೀಶಿಶುಸಂರಕ್ಷಣ.

MIDWIFERY ಕನ್ನಡ ಮಿಡ್‌ವೈಫರಿ ಸ್ತ್ರೀಯರಿಗೂ, ಮಿಡ್‌ವೈಫ್ ಪರೀಕ್ಷೆಗೆ ಓದುವವರಿಗೂ ಪ್ರಯೋಜನವಾದದ್ದು ಕ್ರಯ ೧೨ ಆಣೆ [1? -1]

ವಿಳಾಸ —"ಟಿ ಜನರಲ್ ಏಜನ್ಸಿ" ಮೈಸೂರು.

ಗಂಟೆಗ ಹಾಕುವ ಎಂಟು ದಿನಗಳಿಗೊಂದಾವರ್ತಿ

ಬೀಗ ಕೊಡುವ ದೊಡ್ಡ ಗಡಿಯಾರಗಳು



Rs 8-8-0

ಕೆಳಗಿನ ಚಿತ್ರದಲ್ಲಿ ತೋರಿಸುವ ದೊಡ್ಡ ಗಡಿಯಾರಗಳನ್ನು ಅನೇಕರು 17 ರೂಪಾಯಿಗೆ ಕಮ್ಮಿಯಿಲ್ಲದೆ ಮಾರುತ್ತಲಿದಾರೆ ಇದು ಸರ್ವರಿಗೂ ಉಪಯೋಗವಾಗಬೇಕೆಂಬ ಉದ್ದೇಶದಿಂದ ನಾವು ಇದನ್ನು ಅರ್ಧ ಕ್ರಯಕ್ಕೆ ಜುಲಾಯಿ ಆಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಕೊಡುತ್ತೇವೆ

ಇದು ಬ್ಯಾಂಕು, ಕೋರ್ಟು, ಕಚೇರಿ, ಸ್ಕೂಲ್, ಜವಳಿ ಅಂಗಡಿ, ಮೊದಲಾದ ಸ್ಥಳಗಳಲ್ಲಿ ಇರಿಸುವುದಕ್ಕೆ ಲಾಯಖಾದದ್ದು ಎಂಟು ದಿವಸಗಳಿಗೊಂದಾವರ್ತಿ ಬೀಗಕೊಡತಕ್ಕದ್ದು ಅನೇಕ ವರುಷಗಳು ಉಪಯೋಗಿಸಿದಾಗ್ಯೂ ಕೆಟ್ಟುಹೋಗದು ಇದರಲ್ಲಿ ಅನೇಕ ತರಹವಾರಿ ಗಡಿಯಾರಗಳು ಈಗತಾನೇ ಸೀಮೆಯಿಂದ ಬಂದಿರುತ್ತೆ ಇದರಲ್ಲಿ ಕೆಲವು ತರಹಗಳು ಮಾತ್ರವೇ ಈ ಕೆಳಗೆ ನಮೂದಿಸಿರುತ್ತೇವೆ

ಅನೇಕರು ಇಂಥಾ ಭಾರಿ ಕ್ರಯದ ಗಡಿಯಾರವನ್ನು ಇಷ್ಟು ಸುಲಭ ಖರೀದಿಗೆ ಕೊಡುವದು ಸುಳ್ಳೆಂದು ಹೇಳುತ್ತಲಿದಾರೆ ಯಾರಾದರೂ ವಿಪಿದರಿಗೆ ಒಂದನ್ನು ತರಿಸಿ ನೋಡಿದರೆ ಇದರ ನಿಜಸ್ಥಿತಿಯು ಗೊತ್ತಾಗುತ್ತದೆ ತಾಜಾಕಲಂ —ವಿಪಿ ಖಾಸ್ತುದಾರರು ಮುಂದಾಗಿ 2 ರೂಪಾಯಿ ಅಡ್ವಾನ್ಸ್ ಕಳುಹಿಸಬೇಕು

ವಿಳಾಸ—ಷಟ್ಟಿ ಅಂಡ್ ಕಂಪನಿ, ಜನರಲ್ ಮುತ್ಯಾಲಮೊದಲಿ ಸ್ಟ್ರೀಟ್,

[118-1] ??, ಸಾಹುಕಾರ್ ಪೇಟೆ, ಮದರಾಸ್

1913 ನೇ ಬೊ|| ಸೆ|| ಕ|| ಟೆಕ್ಸ್ಟ್ 5 ಆಣೆ, ನೋಟ್ಸು ಯನ್ ಆರ್ ವೆಂಕಟಸುಬ್ಬಾಚಾರ್ಯರದು 6 ಆಣೆ ಮೈಸೂರು ಚರಿತ್ರೆ ಸುಲಭ ಪಾಠಗಳು 1ಆ ಭೂಗೋಳಶಾಸ್ತ್ರದ 1 ನೇ ಪುಸ್ತಕ 1 ಆಣೆ ಆರೋಗ್ಯ ಪ್ರಶ್ನೋತ್ತರ 1 ಆಣೆ ಪತ್ರರತ್ನಾಕರ 8 ಆಣೆ, ಸಂಸ್ಕೃತ ಪ್ರಕಾಶಿಕೆ 4 ಆಣೆ [61-13]

ವಿಳಾಸ —ಕೆಚ್ ವೆಂಕಟರಾಮಯ್ಯ, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು

ಸೊಗಸಾದ ಕನ್ನಡ ಕಾದಂಬರಿಗಳು

ಪ್ರೇಮಾನುಗ್ರಹ 1½ ಆಣೆ, ವಿಲಕ್ಷಣವೆ ವಧುಟನೆ 1ಆಣೆ ವಿರಕ್ತಳಾದ ಸೌದಾಮಿನಿ 1½ ಆಣೆ, ಬೃಂದಾವನ 2ಆಣೆ, ಕುಮಾರ ಭೀಮಸಿಂಹ 1ಆಣೆ, ಸುಮನೋರಮಾ 2ಆಣೆ, ವಿಶ್ವನಾಥ 1ಆಣೆ, ಕಾದಂಬರೀ ಸಂಗ್ರಹದ ವಾರ್ಷಿಕ ಚಂದಾ 1-4-0

[101 1] ನಮ್ಮ ವಿಳಾಸ—ಸಿ. ?. ಶಾಸ್ತ್ರಿ, ಚಾಮರಾಜನಗರ

1913 ನೇ ವರ್ಷದ ಲೋವರ್ ಸೆಕೆಂಡರಿ ಕನ್ನಡ ಟೆಕ್ಸ್ಟ್ ನೋಟ್ಸು ವಿಕರಿಗೆ ಸಿದ್ಧವಾಗಿದೆ—ಕ್ರಯ 6 ಆಣೆ

ಡಿಸ್ಕೌಂಟು 10 ಕ್ಕೆ 1, 50 ಕ್ಕೆ 7, 100 ಕ್ಕೆ 20

ನಮ್ಮ ನೋಟ್ಸು ಬೇಕಾಗಿದ್ದರೆ ನೋಟ್ಸಿನ ಮೇಲೆ ನಮ್ಮ ಹೆಸರನ್ನು ನೋಡಿ ತೆಗೆದುಕೊಳ್ಳಿ [83 4]

ಯನ್ ಆರ್ ವೆಂಕಟಸುಬ್ಬಾಚಾರ್ಯರ್,

ಸುಬೋಧ ಗ್ರಂಥಾಲಯ, ಮೈಸೂರು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

1011

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರತಲೆ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾದೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯೋಪಾಧಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡ ಇದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು.—(1) ಎಸ್ ಹಿಂಟರ್, 37 ತಂಬುಚೆಟ್ಟಿ ಬೀದಿ, ಫೋರ್ಟ್‌ವಾಕಂ, ಪೇಪೇರಿ, ಮದರಾಸ್, (2) ಕೆ ಎಸ್ ಕೆನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ ! ಕನ್ನಡಕ್ಕೆ ಸುಲಭವಾದ ದಾರಿ !

ಮೈಸೂರು ಲೋವರ್ ಸೆಕೆಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು. ಈ ಪುಸ್ತಕವೊಂದಿದ್ದರೆ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು. ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ. ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ. ಕ್ರಯ ೩ ಆಣೆ. ಅರಕ್ಕೊಂದು ಉಚಿತ.

[187 37] ನಮ್ಮ ವಿಳಾಸ—ಚಂದ್ರಿಕಾ ಬುಕ್ ಡಿಪೋ, ಮೈಸೂರು

ಇಂಪೀರಿಯಲ್ ಜನರಲ್ ಅಶೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮಾ ಸಂಘದ ಆದೇಶಪತ್ರಗಳು 1913 ನೇ ಇಸವಿಯಲ್ಲಿ ಜಾರಿಗೆ ಬಂದ ಇಂಡಿಯನ್ ಲೈಫ್ ಅಶ್ಯೂರೆನ್ಸ್ ಕಂಪನೀಸ್ ಆಕ್ಟ್ ಎಂಬ ಶಾಸನಾನುಗುಣವಾಗಿರುವುದರಿಂದಲೂ ಈ ಶಾಸನಾನುಸಾರವಾಗಿ ಧರಾವತ್ತು ಸೇವಿಂಗ್ಸ್ ಬ್ಯಾಂಕಿನ ಮೂಲಕ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೆದಾರರು ಪಾವತಿಮಾಡುವ ಮೊಬಲಗಿಗೆ ಆಗಲೀ ಅಥವಾ ವಿಮೆ ಸಂಘದ ಸ್ಥಿರತ್ವದ ವಿಚಾರದಲ್ಲಾಗಲೀ, ಯಾವ ಸಂದೇಹವೂ ಇರುವುದಿಲ್ಲ. ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಹಿಸಲ್ಪಡುತ್ತಿರುವುದರಿಂದ ವಿಮೆದಾರರಿಗೆ ಬಹಳ ಹೆಚ್ಚಾಗಿ ಪ್ರೀಮಿಯಂ ದರಗಳು ಕೊಡಬೇಕಾದ್ದಿಲ್ಲ...

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತಾರೆ. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[10 1] ಎಂ. ಕಸ್ತೂರಿ ಬ್ರಾಂಚ್ ಸೆಕ್ರೆಟರಿ

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ಕುಂತಲಾನಂದ ತೈಲವು

14 1

ಈ ದಾಕ್ಷಿಣದ ಪೀರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನು ಎರಡು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕ ಜನ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳನ್ನು ಒಪ್ಪಿಕೊಂಡಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ತಪ್ಪಿಸುತ್ತದೆ. ಇದು ಪರಿಮಳದಲ್ಲಿ ಇದಕ್ಕೆ ಸಮಾನವಾದುದು ಬೇರೊಂದಿಲ್ಲ. ಒಳ್ಳೆ ಶೀತಳವೂ ಸುವಾಸನೆಯೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆರೋಗ್ಯವನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಒಂದು ಬಾಟಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ನೋಡಿ.

ನಮ್ಮ ವಿಳಾಸ—ಪಿ. ಎಂ. ನಾಥ ಮತ್ತು ಕಂಪೆನಿ

ನೌಚೆರಿ, ಮದ್ರಾಸ್

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 2

ಒಳ್ಳೇ ಟೋಪಿಗಳು ಯಾವುವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಯಿಸಲ್ಪಡುತ್ತಿರುವ ಟೋಪಿಗಳ ದಾರವೆಲ್ಲಾ ಕೊಳ್ಳುವುದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೇಟಿಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಮುದ್ದಾಗಿ ನಾವೇ ಎಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕ ವರ್ಣಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ ಬಣ್ಣಗಳ ಹಿಡಿದ ಎಷ್ಟೋ ಚಾಲಾಕಿಯಿರುವ ಟೋಪಿಗಳು ಬೇಕಾದರೆ ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು ಕಪ್ಪು, ಬಿಳಿ ಸಾಧಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧ ಆ ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಜರಿಯ ಟೋಪಿಗಳು ೧ ರೂ ೧೨ ಆ ೧ ರೂ ೮ ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ

ಕೂಸುಗಳ ಟೋಪಿ ಪುಷ್ಪಿ, ಮೇಜೋಡು ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಡಲ್ಪಡುವುದು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಬೇಕಾಗಿದೆ

ಏಜಂಟರುಗಳು ನಮ್ಮ ವಸ್ತುಗಳನ್ನು ಬಿಕರಿಮಾಡಲು ಪ್ರತಿ ತಿಂಗಳಿಗೆ ಸಂಬಳವು 25 ರೂಪಾಯಿಗಳಿಂದ 100 ರ ವರೆಗೆ ಕೊಡಲ್ಪಡುತ್ತೆ. ಅಪೇಕ್ಷಿಸುವವರು ೩ ಅರ್ಧಾಣೆ ಸ್ಟಾಂಪಿನೊಂದಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ [88 7]

ದಿ ಸ್ಟ್ರಿ ಮೆಡಿಕಲ್ ಹಾಲ್ 17 ಪಚ್ಚೆ ಬಜಾರ್ ರೋಡು, ಮದ್ರಾಸು

ಪ್ರಖ್ಯಾತವಾದ ಪಾರಿಸ್ ಫ್ಲೂಟ್ ಹಾರ್ಮೋನಿಯಂ



ಉತ್ತಮ ಪದಾರ್ಥ. ಯಾವ ಹವೆಯಲ್ಲೂ ಹೊರುವಂತಾದದ್ದು. ಬಹು ಬಲಿಷ್ಠವಾದ ಮರದಿಂದ ಮಾಡಲ್ಪಟ್ಟ ಪೆಟ್ಟಿಗೆಯುಳ್ಳ ಈ ಹಾರ್ಮೋನಿಯಂ ಮಹಾ ಸುಖಕರವಾಗಿದೆ. ಇದರಷ್ಟು ಒಳ್ಳೆ ಸ್ವರದ ಬೇರೊಂದಿಲ್ಲ. ... ಕಾರಣ ಈ ಪ್ರಖ್ಯಾತ ಪಾರಿಸ್ ಪಾರಿಸ್ ಹಾರ್ಮೋನಿಯಂ ಬಹಳ ಪ್ರಚಾರಕ್ಕೆ ಬರಬೇಕೆಂದು ಇದರ ಕ್ರಯವನ್ನು ಬಹಳ ಕಡಮೆಮಾಡಿದೆ. ಈಗ ನೋಡಿ. ಇಂಥಾ ಒಳ್ಳೆ ಸಮಯವನ್ನು ಕಳೆಯದೆ ಕೊಂಡುಕೊಳ್ಳಿ. ಕ್ರಯ ರೂ ... ಕೆಳಗಿನ ಬ್ರಾಕೆಟ್ ಆರ್ಡರ್ ... ಬಂದಲ್ಲದೆ ನಾವು ಕಳುಹಿಸಲಾರೆವು. ನಮ್ಮ ವಿಳಾಸ — [141]

ಮ್ಯಾನೇಜರ್ ಯಾಂಗ್ಲೋ ಪಾಪ್ಯುಲರ್ ಏಜನ್ಸಿ

ಧಾರಾವಿ, ಬೊಂಬಾಯಿ

ನವಪುಣ ಮುಹೂರ್ತ

ಕೇಶರಂಜನ ಕರ ತೈಲವು.

ಸಾಟಿಯಿಲ್ಲದ ಈ ತೈಲವು ಪ್ರಾಚೀನವಾದ ವೈದ್ಯಶಾಸ್ತ್ರ ವಿದ್ವತ್ತಿನಿಂದ ವಿಶೇಷ ಪರಿಶೋಧನೆಯಿಂದ ತಯಾರಾದುದು. ಒಳ್ಳೆ ಕೂದಲುಗಳನ್ನು ಬೆಳೆಸುವುದರಲ್ಲಿಯೂ ... ಬುದ್ಧಿಶಕ್ತಿಯನ್ನು ವೃದ್ಧಿಪಡಿಸುವುದರಲ್ಲಿಯೂ ಉತ್ತಮವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ ಸರ್ವೋತ್ಕೃಷ್ಟವೆನ್ನಿಸಿಕೊಂಡಿರುವುದು. ಇದು ಅಪೂರ್ವ ಪ್ರಖ್ಯಾತಿ ಹೊಂದಿದೆ. ಇದರ ವಾಸನೆಯು ಬಹಳ ಮನೋಹರವಾಗಿದೆ.

ಒಂದು ಬುದ್ದಿ ತೈಲ ಕ್ರಯ 10 ಆಣೆ. ಮೂರು ಬುದ್ದಿಗಳ ತೈಲ ಕ್ರಯ ರೂ 1 12 ಆ. ಆರು ಬುದ್ದಿಗಳ ತೈಲ ಕ್ರಯ ರೂ 3 ... ಡಜನ್ ಬುದ್ದಿಗಳ ಕ್ರಯ ರೂ ...

ವಿ. ಪಿ. ಅಂಚೆ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜೀ ಕೇಶವಜೀ ಆಯುರ್ವೇದೋದಯ

[82] ಔಷಧಾಲಯ 17 ಜೀನಾ ಬಜಾರ್ ರೋಡ್, ಮದ್ರಾಸು

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ದೇಹದ್ದೆಲ್ಲ ದುಷ್ಟವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗ ಸಂಭವಿಸುವುದುಂಟು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು ನಿದ್ರೆಯಿಲ್ಲದೆ ಇರುವುದು, ಮೂತ್ರವು ಕಲ್ಮಷವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ಕಳ್ಳನೆಸುವುದು, ತಲೆನೋವು, ಗಾಬರಿ, ಕಣ್ಣು ಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು ಮುಂತಾದವು. ನಿನ್ನಾಗ ಇವೇ ಮೊದಲಾದುವು ಉಲ್ಬಣವಾದರೆ ಮೂತ್ರಜ್ವರ, ಪಾಂಡು, ಮೈ ಬಾವು, ಉರಿಮೂತ್ರ, ಮೂತ್ರಕೋಶದ ಕ್ಷಯ ಮೊದಲಾದ ಮೂತ್ರಕೋಶಕ್ಕೆ ಸಂಬಂಧಪಟ್ಟ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು ಇವೆಲ್ಲಾ ಉಂಟಾಗುವುವು.

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನು ಸರಿಪಡಿಸಿ, ರಕ್ತದಿಂದ ದುಷ್ಟವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [143 41]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦ ಅಥವಾ ೬ ಬುದ್ದಿಗಳಿಗೆ ರೂ ೧೦—೮—೦. ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಫೋಸ್ಟರ್, ಮಿ ಕ ಲೆಲನ್ ಕಂ, ಬೊಂಬಾಯಿ—ಇವರಲ್ಲಿ ದೊರೆಯುವುವು.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

30—5—1913 ರಿಂದ 6—6—1914 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	2	2	21	24
ಮೈಸೂರು ,,	4	4	41	35
ಕೋಲಾರ್ ,,	1	1	23	18
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	10	[illegible]
ಹಾಸನ ,,	3	1	60	36
ಚಿತ್ರದುರ್ಗ	0	0	30	15
ಕಡೂರ್ ,,	1	1	100	64
ಶಿವಮೊಗ್ಗ	0	0	4	2
ಜುಮ್ಲಾ	[illegible]	6	337	210

ಶಾಲಿವಾಹನ ಶಕ ವರುಷಂಗಳು 1836 ನೆ ಪ್ರಮಾದೀಚ ಸಂವತ್ಸರೇ ಉತ್ತರಾಯಣೆ ಗ್ರೀಷ್ಮ ಋತೌ ಜ್ಯೇಷ್ಠ ಬಹುಳ ಬಿದಿಗೆ ಶುಕ್ರವಾರದಿಂದ ಜ್ಯೇಷ್ಠ ಬಹುಳ ಸಪ್ತಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಜೂನ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಷಭ ಮಿಥುನ ಶೀಡಿ
20	ಶುಕ್ರ	ಬಿದಿಗೆ	[illegible]	ಪೂಷಾ	26 [illegible]	7
21	ಶನಿ ‡	ತದಿಗೆ	[illegible] 11	ಉಷಾ	[illegible]	8
22	ಭಾನು	[illegible]	48 3	ಶ್ರವಣ	35 16	[illegible]
23	ಸೋಮ §	ಪಂಚಮಿ	[illegible]	ಧನಿಷ್ಠ	41 6	10
24	ಮಂಗಳ †	ಷಷ್ಠಿ	5[illegible]	ಶತಭಿಷ	17 31	11
25	ಬುಧ *	ಸಪ್ತಮಿ	60 0	ಪೂಭಾ	[illegible]	12
26	ಗುರು	ಸಪ್ತಮಿ	[illegible] 18	ಉಭಾ	60 0	13

‡ ಮಳೆ ನಕ್ಷತ್ರ—ಆರಿದ್ರಾ 1 ನೇ ಪಾದ

ಸಂಕಟಹರಚತುರ್ಥಿ

§ ಕೃತಿಕಾಯನಂ

† ಮೃತ್ಯುಯೋಗ ಮಳೆ ನಕ್ಷತ್ರ—ಆರಿದ್ರಾ 3 ನೇ ಪಾದ

* ತ್ರಿದ್ಯು ವಾಣೀವಿಲಾಸದವರ ವರ್ಧಂತಿ

ಪೇಟೆ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕೆಂಪು ಅಕ್ಕಿ ಪಲ್ಲಾ ೧ಕ್ಕೆ	ರೂ	೧೬ ೦ ೦	೧೭ ೮ ೦
ಕೆಂಬೂತಿ ಅಕ್ಕಿ ಅವಲ್		೧೬ ೦ ೦	೧೭ ೮ ೦
,, ,, ದುಯಂ		೧೫ ೦ ೦	೧೭ ೦ ೦
ಜೀವನ್ಮಣಿ ಅಕ್ಕಿ		೧೬ ೦ ೦	೧೭ ೪ ೦
ಸಣ್ಣಕ್ಕಿ ಅವಲ್		೨೦ ೦ ೦	೧೮ ೮ ೦
,, ದುಯಂ		೧೬ ೦ ೦	೧೭ ೮ ೦
ತೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ		೧೫ ೦	೧೩ ೮ ೦
,, ದುಯಂ		೧೪ ೦ ೦	೧೩ ೮ ೦
ಹೆಸರು ಬೇಳೆ ಪಲ್ಲಾ ೧ಕ್ಕೆ		೭ ೧೨ ೦	೫ ೦ ೦
ಕಾರ್‌ರಾಗಿ ,,		೬ ೧೨ ೦	೪ ೧೨ ೦
ಜೋಳ		೬ ೪ ೦	೭ ೪ ೦
ಹುರುಳಿ ಪಲ್ಲಾ ೧ಕ್ಕೆ		೧೦ ೦ ೦	೧೩ ೧೨ ೦
ಅವರೆ ,,		೧೩ ೦	೧೧ ೦ ೦
ಹೆಸರು		೧೨ ೦ ೦	೧೪ ೦ ೦
ಉದ್ದು		೧೩ ೦ ೦	೧೬ ೦ ೦
ಕಡಲೆ ,,		೧೧ ೦ ೦	೧೨ ೦ ೦
ಎಳ್ಳು ಸೇರು ೧೨೭ಕ್ಕೆ		೨ ೨ ೦	೨೪ ೦ ೦
ಹುರುಳಿ ಪಲ್ಲಾ ೧ಕ್ಕೆ		೬ ೧ ೦	೭ ೦ ೦
ಹರಳು ೧೨೭ ಸೇರಿಗೆ		೧೩ ೦	೧೪ ೦ ೦
ತೆಂಗಿನಕಾಯಿ ಮಣ ೧ಕ್ಕೆ		೨ ೪ ೦	೩ ೮ ೦
ಮೆಣಸಿನಕಾಯಿ		೦ ೦	೩ ೪ ೦
ದುಯಂ		೩ ೦ ೦	೧ ೫ ೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೩ ೮ ೦	ಮಣ ೫ ೮ ೦
ಒಳ್ಳೆಣ್ಣೆ ಮಣ ೧ಕ್ಕೆ		೬ ೦ ೦	೬-೬ ೦
ಹರಳೆಣ್ಣೆ ,,		೫ ೦	೬ ೦ ೦
ಕೊಬ್ಬರಿ ಪಲ್ಲಾ ೧ಕ್ಕೆ		೫ ೦	೫ ೪ ೦
ಉಪ್ಪು ,,		[illegible]	೬ ೦ ೦
ಹುಣಿಸೇ ಹಣ್ಣು ಮಣ ೧ಕ್ಕೆ		೧ ೭ ೦	೧ ೪ ೦
,, ಹಳೇದು ,,		೧ ೦	೦ ೧೪ ೦
ತುಪ್ಪ ಮಣ ೧ಕ್ಕೆ		೨೨ ೮ ೦	೧೯ ೦ ೦
ಹೊಗೆಸೊಪ್ಪು ಪಟ್ಟಿ ೧ಕ್ಕೆ		೫ ೧೧ ೦	೫ ೦ ೦
ತೆಂಗಿನಕಾಯಿ ೧೦೦ಕ್ಕೆ		೬ ೦ ೦	೬ ೦ ೦
ಅರಲೀಕಾಯಿ ಮಣ ೧ಕ್ಕೆ		೧-೬ ೦	೧ ೦ ೦
ಅಂಟ್ವಾಳದಕಾಯಿ ಮಣ ೧ಕ್ಕೆ		೦ ೧೨ ೦	೧-೮-೦
ಚಿನ್ನ (ಪವನ್) ತೊಲ		೧೫ ೮ ೦	೧೫-೮ ೦
,, ,, ಪಸಿಮ		೧೫ ೧೪ ೬	೧೫ ೧೪ ೬
,, ,, ಗಟ್ಟಿ ತೊಲ ೧ಕ್ಕೆ		೨೪ ೩ ೦	೨೪ ೦ ೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧ ೦ ೦	೮೧ ೩ ೦

ವೃತ್ತಾಂತ ಪತ್ರಿಕೆ.

ಸನ್ ೧೯೧೩ ನೇ ಇಸವಿ ಜೂನ್ ತಾ. ೧೯ ನೇ ಗುರುವಾರ

ಮೈಸೂರು ಸಂಪದಭಿವೃದ್ಧಿ ಸಮಾಜವು

ಮೈಸೂರು ಸಂಪದಭಿವೃದ್ಧಿ ಸಮಾಜದ ನಾಲ್ಕನೆಯ ವರುಷದ ಸಭೆಯು ಕಳೆದ ವಾರ ರಾಜಧಾನಿಯಲ್ಲಿ ಪ್ರಾರಂಭವಾಗಿ ನಡೆಯುತ್ತಿದೆ ಈ ಸಭೆಯ ಕಾರ್ಯಗಳನ್ನು ಗೋಪ್ಯದಲ್ಲಿ ನಡಿಸುತ್ತಾರೆ ಆದರೆ ಗವರ್ನ್‌ಮೆಂಟಿನವರು ವಿದ್ಯಾಭ್ಯಾಸ, ವ್ಯವಸಾಯ, ವ್ಯಾಪಾರ ಮತ್ತೂ ಕಸಬುಗಳೆಂಬ ಮೂರು ಕಮಿಟಿಗಳು ಕಳೆದ ವರುಷ ನಡಿಸಿರುವ ಕಾರ್ಯಗಳನ್ನು ವಿವರಿಸುವ ರಿಪೋರ್ಟನ್ನೂ, ಮೊನ್ನೆ ಸಮಾಜದಲ್ಲಿ ದಿವಾನ್‌ರವರು ಮಾಡಿದ ಭಾಷಣವನ್ನೂ ಅಚ್ಚು ಹಾಕಿ ಪ್ರಕಟಿಸಿರುತ್ತಾರೆ ಇದಲ್ಲದೆ ಗವರ್ನ್‌ಮೆಂಟಿನವರು ಒಂದು ಮೆಮೊರಾಂಡಮನ್ನು ಪ್ರಕಟಮಾಡಿ ಅದರಲ್ಲಿ ಈ ಸಮಾಜವನ್ನು ಸರಿಯಾಗಿ ಕ್ರಮಪಡಿಸಿ ಅದರ ಕಾರ್ಯಗಳು ಸರ್ಕಾರಿ ಇಲಾಖೆಗಳಲ್ಲಿ ಮಿಳಿತವಾಗುವ ರೀತಿ ಮಾಡಿಟ್ಟಿರುವಂತೆ ತಿಳಿಸುವರು ಆದಕಾರಣ ಈ ಸಭೆಯ ಕಾರ್ಯಗಳ ವಿಷಯದಲ್ಲಿ ತಕ್ಕಮಟ್ಟಿಗೆ ಅಭಿಪ್ರಾಯಗಳನ್ನು ತಿಳಿಸಲು ಈ ರಿಪೋರ್ಟುಗಳಲ್ಲಿ ಆಧಾರವಿರುವುದೆಂದು ನಂಬುತ್ತೇವೆ

ಗವರ್ನ್‌ಮೆಂಟಿನವರು ನಮ್ಮ ಸೀಮೆಯ ಗುಪ್ತಧನವನ್ನು ರೂಢಿಸಿ ಅಭಿವೃದ್ಧಿಗೆ ತರುವ ಭಾಗದಲ್ಲಿ ತುಂಬಾ ಸಾಹಸಪಡುತ್ತಿರುವುದನ್ನು ನೋಡಿ ನಾವು ಮನಃಪೂರ್ವಕವಾಗಿಯೂ, ಸಂಪೂರ್ಣವಾಗಿಯೂ ಸಂತೋಷಪಡುವೆವು ಈ ಸಂದರ್ಭದಲ್ಲಿ ನಾವು ಪಡುವ ಅಭಿಪ್ರಾಯಗಳು ಗವರ್ನ್‌ಮೆಂಟಿನವರಿಗೆ ಸಹಾಯಕವಾಗಬೇಕೆಂಬುವದೇ ನಮ್ಮ ಕುತೂಹಲವಲ್ಲದೆ ಅನ್ಯಥಾ ಅಲ್ಲ ದಿವಾನ್‌ರವರ ಭಾಷಣದಿಂದಲೂ, ಗವರ್ನ್‌ಮೆಂಟಿನವರು ಪ್ರಕಟಮಾಡಿರುವ ಮೆಮೊರಾಂಡಮ್ ರಿಪೋರ್ಟ್ ಮುಂತಾದವುಗಳಿಂದಲೂ ಗವರ್ನ್‌ಮೆಂಟಿನವರು ಪ್ರಜೆಗಳ ಸಹಾಯವನ್ನು ಅಪೇಕ್ಷಿಸುತ್ತಾರೆಂಬುವುದು ವ್ಯಕ್ತವಾಗುತ್ತದೆ ಈ ಕಾರ್ಯದಲ್ಲಿ ನಾವೂ ನಮ್ಮ ಪಾಲಿನ ಸಹಾಯವನ್ನು ಮಾಡಲು ಸಿದ್ಧವಾಗಿರುವೆವು

ಮೇಲ್ಕಂಡ ಹೊಸ ಮೆಮೊರಾಂಡಮಿನಿಂದ ಗವರ್ನ್‌ಮೆಂಟಿನವರು ಈ ಕಾನ್ಫರೆನ್ಸಿನ ಮೂರು ಶಾಖೆಗಳ ಕಾರ್ಯಗಳನ್ನೂ ಸಂಸ್ಥಾನದ ಆಯಾ ಇಲಾಖೆಗಳ ಕಾರ್ಯಗಳಲ್ಲಿ ಮಿಳಿತವಾಗುವಂತೆ ಮಾಡಿಟ್ಟದ್ದು ಅನುಕೂಲವೂ ಸಂತೋಷಪ್ರದವೂ ಆಗಿದೆ ಅವಶ್ಯವಾದ ಸಂಗತಿಗಳನ್ನು ತಿಳಿಯಬೇಕಾದರೂ, ಸ್ಕೀಂಗಳ್ ಆದ ಏರ್ಪಾಡುಗಳನ್ನು ಜಾರೀ ಮಾಡಬೇಕಾದರೂ ಈಗಿರುವ ಸರ್ಕಾರಿ ಇಲಾಖೆಗಳಿಂದಲ್ಲದೆ ಅನ್ಯಥಾ ಸಾಧ್ಯವಾಗಲಾರದು ಆದರೆ ಇದರಲ್ಲಿ ಬರಬಹುದಾದ ಅಪಾಯವಿಲ್ಲದಂಥಾ ವಿಸ್ತಾರ ಯೋಚನಾ ವಾದ ಅನೇಕ ಸಂಗತಿಗಳು ಕೂಡಲು ಅವಕಾಶವಿಲ್ಲವೆಂಬ ಶಂಕೆಯುಂಟಾಗಿದೆ ಯಾವ ತರದ ಸಂಗತಿ ತಿಳಿಯಬೇಕಾದರೂ ಒಮ್ಮೆ ಅಧಿಕಾರಿಗಳನ್ನು ಕೇಳುವರು, ಅದನ್ನೆಲ್ಲಾ ಅವರು ಸಮಗ್ರವಾಗಿ ವಿಚಾರಿಸಿ ಒದಗಿಸುವುದು ಸಾಧ್ಯವಲ್ಲ ಮತ್ತು ಅವರು ಸೂಚಿಸುವ ವಿಷಯಗಳು ಎಷ್ಟೋ ವಿಧವಾದವುಗಳೆಂದು ನಂಬಲಾಗದು ಒಂದು ವೇಳೆ ಅವರನ್ನು ಕೇಳುವ ವಿಚಾರಗಳಿಗೆ ಅವರು ಸರಿಯಾದ ಮತ್ತೂ ನಂಬಿಕೆಗೆ ಅರ್ಹವಾದ ಸಂಗತಿಗಳನ್ನು ಬರೆದು ಕಳುಹಿಸುವುದಾದರೆ ಇದರಿಂದ ಇತರ ಸಹಜವಾದ ಕಾರ್ಯಗಳಿಗೆ ತುಂಬಾ ನ್ಯೂನತೆಯುಂಟಾದೀತು ದೇಶೋನ್ನತಿಗಾಗಿ ನಡೆಯುವ ಕಾರ್ಯಗಳು ನಮ್ಮ ಸಂಸ್ಥಾನದ ಐಕ್ಯತೆಯ ಪಟುತ್ವವನ್ನು ಎಳ್ಳಷ್ಟೂ ಕುಂದಕಮಾಡದಂತೆ ನೋಡಿಕೊಳ್ಳಬೇಕಾಗಿದೆ ಈಗಲಾದರೂ ರೆವಿನ್ಯೂ, ಪೋಲೀಸ್, ನ್ಯಾಯಸ್ಥಾನಗಳ ಅಧಿಕಾರಿಗಳು ತಮ್ಮ ಕರ್ತವ್ಯಗಳನ್ನು ಮರೆತುಬಿಡುವಂತಾಗಿದೆ ಎಂದೂ, ಇದರಿಂದ ಸಂಸ್ಥಾನದ ಐಕ್ಯತೆಯ ಕಾರುಬಾರುಗಳು ಕಲಸುಮಟ್ಟಿಗೂ ಹೀನಸ್ಥಿತಿಗೆ ಬರುವಂತಿದೆ ಎಂದೂ ಶಂಕೆಯುಂಟಾಗಿದೆ ಆದಕಾರಣ ಗವರ್ನ್‌ಮೆಂಟಿನ ಇಲಾಖೆಗಳೂ ಸಂಪದಭಿವೃದ್ಧಿ ಸಮಾಜವೂ ಪರಸ್ಪರ ಐಕಮತ್ಯದಿಂದಲೂ, ಸಹಾಯಕವಾಗಿಯೂ, ಕರ್ತವ್ಯಾಂಶಗಳಿಗೆ ಲೋಪಬಾರದಂತೆಯೂ ಕಾರ್ಯಗಳನ್ನು ನಡಿಸುತ್ತಾ ಬರಬೇಕಾದದ್ದು ಪರಮಾವಶ್ಯಕವಾಗಿದೆ.

ದಿವಾನ್‌ರವರ ಭಾಷಣವನ್ನು ಓದಿ ನೋಡುವಲ್ಲಿ ನಮ್ಮ ಸಂಸ್ಥಾನದ ಮತ್ತೂ ಪ್ರಜೆಗಳ ಅನೇಕ ಕುಂದುಕೊರತೆಗಳು ಚೆನ್ನಾಗಿ ಪ್ರಕಾಶಕ್ಕೆ ಬರುವವು ಆದರೆ ದಿವಾನ್‌ರವರು ಹೋಲಿಕೆಗಾಗಿ ಉದಾಹರಿಸಿರುವ ಸಂಗತಿಗಳು ಸಹಜವಾದ ಹೋಲಿಕೆಗಳಲ್ಲವೆಂದು ಅಭಿಪ್ರಾಯಪಡುತ್ತೇವೆ ಯಾಕೆಂದರೆ ಮೈಸೂರು ಪ್ರಜೆಯ ಜೀವನೋಪಾಯವೂ ಮತ್ತೂ ಯೂರೋಪಿಯನ್ ಪ್ರಜೆಯ ಜೀವನೋಪಾಯವೂ ಹ್ಯಾಗೆ ನಡೆಯುತ್ತಿದೆ, ಅಪಾರ ಮೂದಲಾದ ಬಾಬುಗಳಲ್ಲಿ ಅವರಿಬ್ಬರಿಗೂ ಇರುವ ವ್ಯತ್ಯಾಸವೇನು ಎಂಬುವುದನ್ನು ಗಣನೆಗೆ ತಂದುಕೊಳ್ಳದೆ ಮನುಷ್ಯನ ಮೈಸೂರಿನವನ ವರಮಾನ 10 ರೂಪಾಯಿ, ಯೂರೋಪಿಯನ್ ಪ್ರಜೆಯ ವರಮಾನ 100 ರೂಪಾಯಿ ಎಂಬದಾಗಿ ಹೋಲೋಣದರಲ್ಲಿ ಅಷ್ಟೇನೂ ಪ್ರಯೋಜನ ಕಾಣುವುದಿಲ್ಲ ಪ್ರಜೆಗಳಿಗೆ ಸಂಸ್ಥಾನಕ್ಕಾಗಲಿ ದ್ರವ್ಯೋತ್ಪತ್ತಿಯೇ ಪ್ರಧಾನವಾದ ಉದ್ದೇಶವೆಂದು ನಮ್ಮ ದಿವಾನ್‌ರವರು ಇಟ್ಟುಕೊಂಡಿರುವಂತೆ ತೋರುತ್ತದೆ ಅಂಥಾ ಉದ್ದೇಶವು ಸರ್ವಥಾ ಉತ್ತಮೋತ್ತಮವೆನಿಸಲಾರದು ಗವರ್ನ್‌ಮೆಂಟಿನವರ ಮುಖ್ಯೋದ್ದೇಶವು ಪ್ರಜೆಗಳನ್ನು ಸ್ವತಂತ್ರರಾಗಿಯೂ, ಬುದ್ಧಿಶಾಲಿಗಳಾಗಿಯೂ, ಕುಶಲರಾಗಿಯೂ, ದೇವರಲ್ಲಿ ಭಯಭಕ್ತಿನಿರತರಾಗಿಯೂ, ರಾಜಭಕ್ತಿಪೂರಿತರಾಗಿಯೂ ಮಾಡುವುದಾಗಿರಬೇಕೆಂದೂ, ಅಂಥಾ ಪ್ರಜೆಗಳು ಬಡವರಾಗಿದ್ದರೆಯೇ ಭಾಗ್ಯವಂತರಾಗಿದ್ದಾರೆಯೇ ಎಂಬ ವಿಚಾರವು ಗವರ್ನ್‌ಮೆಂಟಿನವರಿಗೆ ಎರಡನೆಯ ಉದ್ದೇಶವಾಗಿರಬೇಕೆಂದೂ ನಾವು ಹೇಳಬೇಕಾಗಿದೆ ವಿದ್ಯೆಯ ವಿಚಾರದಲ್ಲಿ ದಿವಾನ್‌ರವರು ಸೂಚಿಸಿರುವ ಸಂಗತಿಗಳೆಲ್ಲಾ ಸಹಜವಾದವುಗಳೆಂದು ನಾವು ಧಾರಾಳವಾಗಿ ಒಪ್ಪಿಕೊಳ್ಳುತ್ತೇವೆ ಗವರ್ನ್‌ಮೆಂಟಿನವರು ಈ ಭಾಗದಲ್ಲಿ ಕಂಡುಬಂದಿರುವ ನ್ಯೂನತೆಯನ್ನು ಹೋಗಲಾಡಿಸಲು ಸಾಹಸಪಡುತ್ತಿರುವುದು ಆನಂದಪ್ರದವೇ ಸರಿ, ಆದರೆ ಅದಕ್ಕಾಗಿ ಅವರು ಮಾಡುತ್ತಿರುವ ಕಾರ್ಯಕ್ರಮಗಳು ಅಷ್ಟೇನೂ ವಿವೇಕಪೂರ್ವಕವಾದವುಗಳೆಂದು ನಮಗೆ ತೋರುವುದಿಲ್ಲ ನಮ್ಮ ದಿವಾನ್‌ರವರು ಪ್ರಜೆಗಳು ಸಹಾಯಕರಾಗಬೇಕೆಂದು ಕೇಳುವುದು ನ್ಯಾಯವೂ ಸಹಜವೂ ಅವಶ್ಯವೂ ಆಗಿದೆ ಆದರೆ ವಿದ್ಯಾಪ್ರಚಾರ ಕಾರ್ಯದಲ್ಲೇ ಉದ್ಯುಕ್ತರಾಗಿರುವಂಥವರ ವಿಷಯದಲ್ಲಿ ಮಾತ್ರ ಗವರ್ನ್‌ಮೆಂಟಿನವರು ಸಂಪೂರ್ಣವಾದ ವಿಶ್ವಾಸವನ್ನೂ ಫಲಕಾರಿಯಾದ ಸಹಾಯವನ್ನೂ ತೋರಿಸುತ್ತಾ ಇಲ್ಲ

ಈ ಸಂಪದಭಿವೃದ್ಧಿ ಸಮಾಜವು ನಿರ್ಮಾಣವಾಗಿ ಮೂರು ವರುಷಗಳಾದವು, ಆದರೆ ಅದಕ್ಕಾಗಿ ವಿನಿಯೋಗಿಸಿರುವ ಹಣಕ್ಕೆ ತಕ್ಕ ಪ್ರತಿಫಲವೇನೂ ಆಗಿರುವಂತೆ ಕಂಡುಬಂದಿರುವುದಿಲ್ಲ ಈ ಸಮಾಜದಿಂದಾದ ಪ್ರಯೋಜನಗಳನ್ನು ಕುರಿತು ಪ್ರಸ್ತಾಪಿಸುವಲ್ಲಿ ದಿವಾನ್‌ರವರು—ಬ್ಯಾಂಕು ಈಗ ರೂಪವಾಗು[illegible]ತ್ತಿದೆ, ಒಲಾತ್ತರಿಸಿ ವಿದ್ಯೆ ಕಲಿಸುವುದಕ್ಕೆ ಮಸೂದೆಯೊಂದನು ತಯಾರಾಗಿ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ಬಂದಿದೆ, ಪ್ರಥಮ ವಿದ್ಯಾಭ್ಯಾಸಕ್ಕೋಸ್ಕರ ಬಹಳ ಹಣವನ್ನು [illegible] ಮಾಡಿದೆ, ಕಸಬುಗಳ ಮತ್ತೂ [illegible] ಇಲಾಖೆಯನ್ನು ಪ್ರತ್ಯೇಕವಾಗಿ ಮಾಡಿದೆ, ಎಲ್ಲದ ತಯಾರಿಗೂ [illegible] ಪರೀಕ್ಷೆಗೂ ಕೆಲವು ಯಂತ್ರಗಳನ್ನು ತರಿಸಲಾಗಿದೆ ಕಸಬುಗಳ ಮತ್ತೂ ವ್ಯಾಪಾರ ವಿದ್ಯಾಶಿಕ್ಷಣದ ಪ್ರಚಾರವು ಬಹಳ ಮಟ್ಟಿಗೆ ಮುಂದುವರಿಸಲಾಗಿದೆ ಎಂಬದಾಗಿ ಹೇಳಿರುತ್ತಾರೆ

ಮೇಲ್ಕಂಡ ಬಾಬುಗಳೆಲ್ಲಾ ಇದುವರೆಗೆ ಬಹಳ ಪ್ರಚಾರವಾಗಿರುವುದು, ಆದರೆ ನಮ್ಮ ಸಂಸ್ಥಾನಕ್ಕೆ ಒಂದು ಕಾರ್ಯ ಪ್ರತಿಫಲವಾಗಿ ಬಂದಿರುವುದಿಲ್ಲ ಆ ಬಾಬುಗಳಲ್ಲಿ ಕೆಲವು ಬಂದರೆ ಒಲಾತ್ತರಿಸಿ ವಿದ್ಯೆ ಕಲಿಸುವ ಕಾನೂನಂಬುವಂಥವು ಸದ ನಮ್ಮ ಸಂಸ್ಥಾನಕ್ಕೆ ಅನಾವಶ್ಯಕವಾಗಿರುತ್ತವೆ ಉಳಿದ ವಿಷಯಗಳಾದರೋ ಈ ಸಂಪದಭಿವೃದ್ಧಿ ಸಮಾಜವು ಇಲ್ಲದೇನೇ ಅವುಗಳನ್ನು ರೂಢಿಗೆ ತರಬಹುದಾಗಿತ್ತು ನಮ್ಮ ಮುಂದಿರುವ ಸರ್ಕಾರಿ ರಿಪೋರ್ಟು ಮುಂತಾದವುಗಳನ್ನು ಸೂಕ್ಷ್ಮವಾಗಿ ಓದಿನೋಡುತ್ತಾ ಬರುವಲ್ಲಿ ಈ ಕಾನ್ಫರೆನ್ಸು ಮಾಡಿದ್ದು ಸಾರ್ಥಕವಾಗಿಲ್ಲವೆಂದೂ, ಅದಕ್ಕಾಗಿ ಇದುವರೆಗೆ ವಿನಿಯೋಗಿಸಿರುವ ವಿಶೇಷ ದ್ರವ್ಯವು ಸದ್ವ್ಯಯವಾಗಿಲ್ಲವೆಂದೂ ನಮಗೆ ಕಾಣುವುದು

ಸನ್ಯಾಸಿಯೂ ಕಳ್ಳರ ಮುಖಂಡನೂ

ಒಂದು ಗೊಂಡಾರಣ್ಯದಲ್ಲಿ ಪ್ರಸಿದ್ಧನಾದ ಒಬ್ಬ ಕಳ್ಳನು ತನ್ನಂತೆ ಕ್ರೂರರಾದ ಕೆಲವು ದುಷ್ಟರ ಮುಖಂಡನಾಗಿ ಆ ಪ್ರಾಂತದಲ್ಲಿ ಹೋಗಿಬರುವ ಪ್ರಯಾಣಿಕರನ್ನು ಹೊಡೆದು ಅವರ ಆಸ್ತಿಪಾಸ್ತಿಗಳನ್ನು ಸುಲಿದುಕೊಂಡು ಕೆಲವು ಕಾಲದೊಳಗಾಗಿ ಬಹಳ ಭಂಗಾರದ ಬೆಳ್ಳಿಯ ಒಡವೆಗಳನ್ನೂ ಅಗಣಿತವಾದ ಹಣಕಾಸುಗಳನ್ನೂ ಕೂಡಿಸಿಕೊಂಡನು

ಆ ಅರಣ್ಯದಲ್ಲಿ ಈ ಕಳ್ಳರ ನಿವಾಸಕ್ಕೆ ಸಲ್ಪ ದೂರವಾಗಿ ಒಬ ಸನ್ಯಾಸಿಯು ವಾಸವಾಗಿದ್ದನು ಈತನು ವೇದಾಧ್ಯಯನದಲ್ಲಿಯೂ ದೇವರ ಪ್ರಾರ್ಥನೆಯಲ್ಲಿಯೂ ನಿರತನಾಗಿದ್ದನು ಮತ್ತು ಇತರರಿಗೆ ಉಪದೇಶಿಸಲು ಪರೋಪಕಾರ ಮಾಡುವದನ್ನು ತನ್ನ ಕರ್ತವ್ಯವೆಂದು ಭಾವಿಸಿ ಪಾಂಡಿತ್ಯವಾದ [illegible] ಮಕ್ಕಳಿಗೂ ತನ್ನ ಎಲೆಗೊಳದಿಂದ ವೇಷಗೆಯಲ್ಲಿ ಕಿತ್ತಳಿನ ಫಲವನ್ನು ಒದಗಿಸುತ್ತಾ, ಸುತ್ತಮುತ್ತಲೂ ಇದ್ದ ಹಳ್ಳಿಹಳ್ಳಿ ಜನಗಳಲ್ಲಿ ಬಸವಾಗಿದ್ದವರನ್ನು ವಿಚಾರಿಸಿ ಅವರಿಗೆ ಔಷಧೋಪಚಾರಗಳನ್ನು ಮಾಡುತ್ತ ಮರಣಕ್ಕೆ ತುತ್ತಾದವರ ಬಗ್ಗೆ ವಿಯೋಗತಾಪದಿಂದ ಚಿಂತಾಕ್ರಾಂತರಾದವರಿಗೆ ಆನಂದದಿಂದ ಸಮಾಧಾನ ವಾಕ್ಯವನ್ನು ಹೇಳುತ್ತ ಅವರಿಂದ ಬಹಳ ಗೌರವಕ್ಕೆ ಪಾತ್ರನಾಗಿದ್ದನು

ಕಳ್ಳರ ನಾಯಕನು ಪವಿತ್ರನಾದ ಈ ಸನ್ಯಾಸಿಯ ದಯೆಯನ್ನೂ ಪರೋಪಕಾರವನ್ನೂ ತಿಳಿದು ತನ್ನ ದಿನನಿತ್ಯದ ಪಾಪಕೃತ್ಯಗಳ ಪ್ರಾಯಶ್ಚಿತ್ತಕ್ಕಾಗಿ ವ್ಯಾಕುಲಚಿತ್ತನಾಗಿ ಮನಶ್ಶಾಂತಿಯ ಬಾಧೆಯನ್ನು ಸಹಿಸಲಾರದೆ ಆ ಪುಣ್ಯಪುರುಷನಾದ ಸನ್ಯಾಸಿಯ ಬಳಿಗೆ ಬಂದು ಆತನಡಿಗಳಿಗೆರಗಿ ವಿಜ್ಞಾಪಿಸಿಕೊಂಡುದೇನೆಂದರೆ—ಸ್ವಾಮಿ, ನನ್ನ ಸ್ವಾಧೀನದಲ್ಲಿ ನೂರಾರು ವೀರರಾದ ಸಿಪಾಯಿಗಳಿದ್ದಾರೆ ಅವರೆಲ್ಲರು ತಪ್ಪದೆ ನನ್ನ ಆಜ್ಞೆಯನ್ನು ನಿರ್ವಹಿಸಿ ನಡಿಸುವದಕ್ಕೆ ಬದ್ಧರಾಗಿದ್ದಾರೆ ಮತ್ತು ನಾನು ಒಂದು ವಿಸ್ತಾರವಾದ ಭಂಡಾರ ಶಾಲೆಯನ್ನು ಕಟ್ಟಿ ಅದರಲ್ಲಿ ಅಸಂಖ್ಯಾತವಾದ ದ್ರವ್ಯವನ್ನು ಕೂಡಿಸಿರುವೆನು ಆದರೂ ನನ್ನ ಮನಸ್ಸಿಗೆ ಸಮಾಧಾನವಿಲ್ಲ ಬೇಗ ಮೃತ್ಯುವಶವಾಗುವೆನೆಂಬ ಬಾಧೆಯು ನನ್ನನ್ನು ಕಾಡುತ್ತಲಿದೆ ಸತ್ತ ಮೇಲೆ ನನ್ನ ಕೃತ್ಯಗಳ ಫಲವನ್ನು ಅನುಭವಿಸಬೇಕಾದೀತು ಎಂಬ ಶಂಕೆಯಿಂದ ತತ್ತರಿಸುತ್ತಿದ್ದೇನೆ ನನ್ನ ಮನಸ್ಸಿಗೆ ಸಮಾಧಾನವಾಗತಕ್ಕ ಉಪಾಯವೇನೂ ಇಲ್ಲವೇ ಎಂದು ಅರಿಕೆಮಾಡಿದನು

ಸನ್ಯಾಸಿಯು ಈ ಕಳ್ಳನನ್ನು ಎತ್ತರವಾಗಿಯೂ ಕಡಿದಾಗಿಯೂ ಇದ್ದ ಸಮೀಪದ ತೊಪ್ಪಲಿಗೆ ಕರೆದೊಯ್ದು ಹಾಗೆ ಅಲ್ಲಿ ಬಿದ್ದ ಮೂರು ಕಲ್ಲುಗಳನ್ನು ತೋರಿಸಿ—ಈ ಮೂರು ಕಲ್ಲುಗಳನ್ನು ಹೆಗಲ ಮೇಲೆ ಹೊತ್ತುಕೊಂಡು ನನ್ನ ಕೂಡ ಪರ್ವತಾಗ್ರಕ್ಕೆ ಹತ್ತು, ನಡೆ ಎಂದನು ಕಳ್ಳನು ಆ ಗಾತ್ರವಾದ ಕಲ್ಲುಗಳನ್ನು ಹೊತ್ತುಕೊಂಡು ಮುಂದಕ್ಕೆ ಹೋಗಿ ಇದುವರೆ ಪ್ರಯಾಸವಾಯಿತು ಬೆಟ್ಟದ ಮೇಲೆ ಹತ್ತುವದು ಕೇವಲ ಅಸಾಧ್ಯವೆಂದು ತಿಳಿದು—ಸ್ವಾಮಿ, ಇದು ಅಸಾಧ್ಯವಾದ ಕಾರ್ಯವೆಂದು ಕೂಗಿದನು ಸನ್ಯಾಸಿಯು ಹಿಂತಿರುಗಿ, ಒಂದು ಕಲ್ಲನ್ನು ಅಲ್ಲಿಯೇ ಬಿಟ್ಟು ಉಳಿದ ಎರಡು ಕಲ್ಲನ್ನು ಹೊತ್ತುಕೊಂಡು ಬಾ ಎಂದನು ಕಳ್ಳರ ನಾಯಕನು ಕೂಡಲೆ ಒಂದು ಕಲ್ಲನ್ನು ನೆಲಕ್ಕಿಳಿಸಿ ಮುಂದೆ ಹತ್ತತೊಡಗಿದನು ಸ್ವಲ್ಪದೂರ ಹೋಗುವದರೊಳಗಾಗಿ ಬಹಳ ದಣಿದು,—ಅಯ್ಯಾ, ಇದು ಅಸಾಧ್ಯವಾದ ಪ್ರಕರಣ ನಾನು ಈ ಭಾರವನ್ನು ಹೊತ್ತುಕೊಂಡು ಬೆಟ್ಟವನ್ನು ಹತ್ತಲಾರೆನೆಂದು ಕೂಗಿಕೊಂಡನು ಸನ್ಯಾಸಿಯು ಒಳ್ಳೇದು, ಇನ್ನೊಂದು ಕಲ್ಲನ್ನು ಬಿಟ್ಟು ಉಳಿದ ಒಂದನ್ನಾದರೂ ಎತ್ತಿಕೊಂಡು ಬಾ ಎನ್ನಲು, ಡೋಂಗಿನಾಯಕನು ಬಹಳ ಕಷ್ಟದಿಂದ ಇನ್ನೂ ಸ್ವಲ್ಪದೂರ ಹೋಗುವದರೊಳಗಾಗಿ ಮೈಯೆಲ್ಲಾ ಬೆವರಿನಿಂದ ನನೆದು ಕಣ್ಣಿನಿಂದ ನೀರು ತೊಟ್ಟಿಕ್ಕಲಾರಂಭಿಸಿ—ಜೀಯಾ, ನನಗೆ ಕ್ಷಮಿಸಿ ಇದು ನನ್ನಿಂದಾಗಲಾರದು ಎಂದು ವಿಸುಗುಟ್ಟುವನು ಯತೀಶ್ವರನು—ಆ ಕಲ್ಲನ್ನು ಬಿಸುಡಿ ಬರಿಗೈಯಿಂದ ನನ್ನ ಕೂಡ ಬಾ ಎಂದುಕೂಡಲೆ ಆ ಕಳ್ಳನು ಬರಿಗೈಯಿಂದ ಆ ಸನ್ಯಾಸಿಯನ್ನು ಬೇಗನೆ ಕಳೆತು ಅವನ ಕೂಡ ಬೇಗ ಬೆಟ್ಟದ ತುದಿಯನ್ನು ಸೇರಿದನು ಆ ಕಳ್ಳನನ್ನು ನೋಡಿ ಸನ್ಯಾಸಿಯು ನಸುನಗುತ್ತಾ—ಮಗನೇ ದೈವಸನ್ನಿಧಾನಕ್ಕೆ ಹೋಗದಹಾಗೆ ನಿನ್ನನ್ನು ಮೂರು ಭಾರವಾದ ಹೊರೆಗಳು ಅಡಿಯುತ್ತಿರುವವು ನೀನು ಸಗರವಾಗಿ ಸನ್ಮಾರ್ಗವನ್ನು ಹಿಡಿಯಲು ಮನಸ್ಸಾಗಿದ್ದರೆ ಕಳ್ಳರಿಂದೊಡಗೂಡಿದ ನಿನ್ನ ಸೈನ್ಯವನ್ನು ಅವರವರ ಸ್ಥಳಕ್ಕೆ ಅಗಲಿಸಿಬಿಡು ಇನ್ನು ಮೇಲೆ ಯಾರನ್ನೂ ಮೇಲೆ ಬಿದ್ದು ಸುಲಿಗೆಮಾಡಬೇಡ ನಿನ್ನಲ್ಲಿರುವ ಒಡವೆವಸ್ತುಗಳನ್ನು ಯಾರಿಂದ ಸುಲುಕೊಂಡಿಯೋ ಅವರಿಗೆ ಒಪ್ಪಿಸು ಅಂದನು

ಸತ್ಯವೇದದಲ್ಲಿ ಈ ಸನ್ಯಾಸಿಯ ಬುದ್ಧಿವಾತಿಗೊಪ್ಪುವ ಒಂದು ವಚನ ಉಂಟು ಏನೆಂದರೆ—ನಮಗೆ ಅಭ್ಯಂತರವಾಡುವ ಪ್ರತಿಯೊಂದು ಭಾರವನ್ನೂ ನಮಗೆ ಬಿಗಿಯಾಗಿ ಹತ್ತಿಕೊಂಡಿರುವ ಪಾಪವನ್ನೂ ತೆಗೆದುಹಾಕಿಬಿಟ್ಟು ನಮ್ಮ ಮುಂದೆ ಇಟ್ಟಿರುವ ಗುರಿಯನ್ನು ದೃಷ್ಟಿಸಿ ನೋಡುತ್ತಾ ಆ ಗುರಿಯನ್ನು ಮುಟ್ಟುವ ಹಾಗೆ ಓಡೋಣ ನಾವು ಈ ಲೋಕದಲ್ಲಿರುವದು ಒಂದು ಗುರಿಯನ್ನು ಮುಟ್ಟುವದಕ್ಕೆ ಓಡಬೇಕೆಂತಲ ಎಂತ ಎಲ್ಲರೂ [illegible]ಯಿಸಿಕೊಳ್ಳಬೇಕಾಗಿದೆ ಯಾರಾದರೂ ಈ ಗುರಿಯನ್ನು ತಿಳಿಯದೆ ಐಶ್ವರ್ಯವನ್ನು ಸಂಪಾದಿಸುವದಕ್ಕೆ ಅಥವಾ ಅಧಿಕಾರ, ಭೋಗ ಮೊದಲಾದ ಯಾವುದನ್ನಾಗಲಿ ಸಂಪಾದನೆಗಾಗಿ ಓಡುವದನ್ನೇ ತಮ್ಮ ಮುಖ್ಯೋದ್ದೇಶವೆಂದು [illegible] ಅದೇ ಪ್ರಯತ್ನದಲ್ಲಿ ತಮ್ಮ ಬುದ್ಧಿ ಶಕ್ತಿ [illegible] ವ್ಯಯಮಾಡುವವರೆ ಅವರು ಕಡೆಗೆ ಭಗ್ನಮನೋರಥರಾಗುವರು ಎಂದು ನಾವು ಹೇಳಬೇಕಾದುದಿಲ್ಲ

ನಾವು [illegible]ನಿತಕಾಲದಲ್ಲಿ [illegible] ಅನಂತಸ್ಥಾನವನ್ನು ಪಡೆಯುವದಕ್ಕೆ ಅತ್ಯವಶ್ಯಕವಾದ ಸುಚಿತ್ರತ್ವವನ್ನು ಸಂಪಾದಿಸುವದೇ ನಮ್ಮ ಮುಖ್ಯ ಗುರಿಯಾಗಿರಬೇಕು "ನಿರ್ಮಲಚಿತ್ತರು ಧನ್ಯರು ಅವರೇ ದೇವರನ್ನು ನೋಡುವರು" ಎಂದು ಯೇಸು ಸ್ವಾಮಿ ಹೇಳಿದನು ಮತ್ತು ನಿರ್ಮಲವಾದ ಪವಿತ್ರಮನಸ್ಸನ್ನು ಹೊಂದುವದಕ್ಕೆ ಅಡ್ಡಿಯಾಗಿರುವ ಸಕಲ ಪಾಪಗಳನ್ನು ಬಿಟ್ಟುಬಿಡುವದು ಮೊದಲನೇ ಕರ್ತವ್ಯ ಇನ್ನೊಂದು ಮುಖ್ಯ ಕರ್ತವ್ಯವನ್ನು ವಾಚಕರು ಮರೆಯಬಾರದು ಮನಸ್ಸಿಗೆ ಪಾಪವು ಹತ್ತದ ಹಾಗೆ ಶುದ್ಧವಾಗಿಟ್ಟರಬೇಕಾದರೆ ಪವಿತ್ರವಾದ ಗುಣ, ನಡತೆ, ಯೋಚನೆಗಳನ್ನು ಧರಿಸಿಕೊಂಡು ಅವುಗಳನ್ನು ಬೆಳೆಸಬೇಕು ಅಶುದ್ಧಗುಣಗಳನ್ನು ನಮ್ಮ ಮನಸ್ಸಿನ [illegible] ಅದನ್ನು ಬೊಕ್ಕಟವಾಗಿಟ್ಟುಕೊಂಡಿರಬೇಕಾದರೆ ಅದ್ದು [illegible] ಗಿಡು ಕೇಡು ಡಿಂದೆ ಅದರ ತುಂಬ [illegible] ಸತ್ಯ, ದಯೆ, ಪರೋಪಕಾರ [illegible] ಶ್ರೇಷ್ಠ [illegible] ದಿವ್ಯವಾದ ಸರಕುಗಳಿಂದ ಮನಸ್ಸೆಂಬ ಮನೆಯನ್ನು ಭರ್ತಿ ಮಾಡಬೇಕು ಇಲ್ಲದಿದ್ದರೆ ಅದರಲ್ಲಿ ಮೊದಲು ಓಡಿಸಲ್ಪಟ್ಟ ದುರ್ಗುಣಗಳು [illegible] ಆ ಬರಿ ಮನಸ್ಸನ್ನು ಹೆಚ್ಚಾಗಿ ಹೊಕ್ಕು ಅದನ್ನು ಸ್ವಸ್ಥ ತಮ್ಮ ಸ್ಥಾನವನ್ನಾಗಿ ಮಾಡಿಕೊಳ್ಳದೆ ಬಿಡವು ಎಂದು ಯೇಸು ಸ್ವಾಮಿಯು ಬೋಧಿಸಿದನು

ಟರ್ಕಿಯಲ್ಲಿ ಗಲಭೆಯು

ಪ್ರಧಾನ ವಜೀರರು ಕೊಲೆಯಾದದ್ದು

ಕಾನ್ಸ್ಟಾಂಟಿನೋಪಲ್, ಜೂನ್ ತಾ 11 ನೇ ಬುಧವಾರ —ಟರ್ಕೀ ರಾಜ್ಯವನ್ನು ನಡಿಸುವ [illegible] ಸಂಗಡದವರ ಮೇಲೆ ವಿರೋಧಮುಳ್ಳವರಿಗೆ ಕ್ಷತ್ರಗಳು ನಿತ್ಯವ್ಯವಸಾಗಿದೆ ಗ್ರಾಂಡ್ ವಜೀರರಾದ ಮಹಮ್ಮದ್ ಪಾಷಾರವರನ್ನು ಕೊಲೆಮಾಡಿದರು ವಜೀರರು ಮೋಟಾರಿನಲ್ಲಿ ಕುಳಿತು ಅರಮನೆಗೆ ಹೋಗುತ್ತಿದ್ದಾಗ [illegible] ಇದ್ದು ಕಾದಿದ್ದು ಎಸ್ಸೂ ಅವರನ್ನು ಕೊಂದುಹಾಕಿದರು

ಕಾನ್ಸ್ಟಾಂಟಿನೋಪಲ್, ಜೂನ್ ತಾ 12 ನೇ ಗುರುವಾರ —ಮಹಮ್ಮದ್ ಷೌಕತ್ ಪಾಷಾರವರ ಸಂಗಡ ಜಡಿಯಾಂಗರಬ್ಬರು ಮೋಟಾರಿನಲ್ಲಿ ಕುಳಿತಿದ್ದರು ಆ ವೈಶಿ ವಿಶ್ವನೆಂಬ ಇಬ್ರಾಹಿಂ ಎಂಬಾತನಿಗೂ ಗುಂಡಿನೇಟು ತಗಲಿ ಕೊಲೆಯಾದನು ರಸ್ತೆಯಲ್ಲಿ ಹೋಗುತ್ತಿದ್ದ ಒಬ್ಬ ಪ್ರಜೆಗೆ [illegible] ಗಾಯವಾಗಿದೆ ಮಂತ್ರಿಯನ್ನು ಕೊಲ್ಲಬೇಕೆಂದು ನಾಲ್ಕು [illegible] ಘಾತಕರು ಒಂದು ಮೋಟಾರ್ ಗಾಡಿಯಲ್ಲಿ ಕುಳಿತು ರಸ್ತೆಯ ಪಕ್ಕದಲ್ಲಿ ತಮ್ಮ ಗಾಡಿಯನ್ನು ನಿಲ್ಲಿಸಿಕೊಂಡು ಮಂತ್ರಿಯವರ ಗಾಡಿಯು ಬರುವವರನ್ನು [illegible] ತರಟ್ಟವರ ದಿನಗಳನ್ನು ಯುದ್ಧದ [illegible] ಬಂದಿ [illegible] ಮಾಡಿಕೊಂಡಿದ್ದ [illegible] —ಸದ್ಯದಲ್ಲಿ ಮಂತ್ರಿ ಪದವಿಯು [illegible] ಸಯಿದ್ ಹಲೀಂ ಯವರಿಗೆ ದೊರಕಲಾಗಿದೆ ಇತರ ಮಂತ್ರಿಗಳೆಲ್ಲ ತಮ್ಮ ತಮ್ಮ ಕಾರ್ಯಗಳನ್ನು ಯಥಾಪ್ರಕಾರ ನಡಿಸಿ ಮಾಡುತ್ತಿದ್ದಾರೆ ಕೊಲ್ಲಲ್ಪಟ್ಟ ಗ್ರಾಂಡ್ ವಜೀರರ ಶವವನ್ನು ಮಿಲಿಟರಿ ಮರ್ಯಾದೆ ಸಹಿತ ಮೆರವಣಿಗೆಯಲ್ಲಿ [illegible] ಮಾಡಿದರು ಇವರು ರಾಜ್ಯಕ್ಕೆ ಬಹಳ ಒಳ್ಳೆ [illegible] ಮಾಡುತ್ತಿದ್ದರೆಂದು ಅಲ್ಲಿನ ಪತ್ರಿಕೆಗಳು ಹೊಗಳುತ್ತಿವೆ —ಈ ಕೊಲೆಗೆ ಸಂಬಂಧಪಟ್ಟವರೆಂದು ಕೆಲವರು ಹಿಡಿಯಲ್ಪಟ್ಟಿದ್ದಾರೆ.

ತಾ 11 ನೇ ಶುಕ್ರವಾರ —ರಾಜಕುಮಾರ ಸಯಿದ್ ಹಲೀಂ ಯವರಿಗೆ ಗ್ರಾಂಡ್ ವಜೀರ್ ಪದವಿಯು ದೊರೆಯಿತು

ತಾ 11 ನೇ ದಿನ [illegible] ಸೈನಿಕರು [illegible] ಒಂದು ಮನೆಗೆ ಮುತ್ತಿಗೆಹಾಕಿದರು ಒಳಗಿದ್ದವರು [illegible] ಮೂರು ಮಂದಿ [illegible] ಆದರೆ ಒಳಗಿದ್ದವರು ಪೋಲೀಸಿನವರ ಮೇಲೆ [illegible] ಗುಂಡು ಹೊಡೆದರು ಇವರೂ ಮನೆಯೊಳಕ್ಕೆ ಗುಂಡುಗಳನ್ನು ಹಾರಿಸಿದರು [illegible] ಹೊತ್ತು ಗುಂಡುಗಳ ಹೊಡೆದಾಟವಾದ [illegible] ಮೂರು ಮಂದಿ ಕೊಲೆಗಾರರನ್ನು ಹಿಡಿದರು [illegible] ಪ್ರತಿಯ ಮನೆ [illegible] ಮುತ್ತಿಗೆ ಹಾಕಿಕೊಂಡಿದ್ದ [illegible] ಗವರ್ನರ [illegible] [illegible] ಆಗದೆ ಅವನೂ ತಪ್ಪಿಹೋದನು ಪ್ರಜೆಗಳು ಗವರ್ನ್‌ಮೆಂಟಿನ ಮೇಲೆ ಎರಗುತ್ತಾರೆ [illegible] ಪಕ್ಷದವರು [illegible] ನೋಡುತ್ತಾ ಬರಬೇಕೆಂದು ತೀರ್ಮಾನವಾಗಿದೆ

ಕಲ್ಕತ್ತಾದಲ್ಲಿ ಅಪಾರವಾದ ಮಳೆಯು

ಅನೇಕ ಪ್ರಾಣಗಳೂ ಹಾನಿಯಾದದ್ದು

ಕಲ್ಕತ್ತಾ, ಜೂನ್ ತಾ 11 ನೇ ಶುಕ್ರವಾರ —ಈ ಪಟ್ಟಣ ಕಲ್ಕತ್ತಾದಲ್ಲಿ ಅಗಾಧವಾದ ಮಳೆಯು ಸುರಿದು ಅಪಾರವಾದ ಕಷ್ಟನಷ್ಟಗಳನ್ನುಂಟುಮಾಡಿ [illegible] ಬಂದಿದೆ ಮಳೆಯು ಕಳೆದ ತಾ 11 ನೇ ಬುಧವಾರ ರಾತ್ರಿ ಪ್ರಾರಂಭವಾಗಿ [illegible] ಭಯಂಕರವಾದ [illegible] ಅಪಾರವಾಗಿ ಸುರಿದು [illegible] ಹರಿಯುವ ನದಿಯಲ್ಲಿ ಬಹಳ ಹೆಚ್ಚಾದ ಪ್ರವಾಹ [illegible] ಅಪಾರವಾಗಿಯೂ ದಿನಗಳ ಮೇಲೆ [illegible] ಮೋರೆಕ್ಕೆ ಸುಗ್ಗಿ [illegible] ಬಹಳ ಸುತ್ತು [illegible] ಭಯಂಕರವಾಗಿ [illegible] ಪ್ರಾಣಹಾನಿಯೂ, ಮೈಸರ [illegible] ಸಂಪೂರ್ಣವಾಗಿ [illegible] ಹೋಗಿರುತ್ತವೆ [illegible] ನಲ್ಲಿ [illegible] ಸರ್ ವರ್ಗ [illegible] ತ್ರಿಕೊಂಡಿರುವವರೂ, [illegible] ಜನರೂ [illegible] ಕಟ್ಟಡಗಳನ್ನೂ ಕಟ್ಟಿಸಿ ಧರ್ಮಾರ್ಥವಾಗಿ ಕೊಟ್ಟ

ದ್ದರು ಬೋರ್ಡಿಂಗು ಸ್ಕೂಲಿನ ವಿದ್ಯಾರ್ಥಿಗಳ ಪೈಕಿ ನಾಲ್ವತ್ತೆರಡು ಮಂದಿ ಮಾತ್ರ ಗಿಡಮರಗಳನ್ನು ಹತ್ತಿ ಪ್ರಾಣ ಉಳಿಸಿಕೊಂಡರು ಉಳಿದ ವಿದ್ಯಾರ್ಥಿಗಳು ನೀರಿನಲ್ಲಿ ಕೊಚ್ಚಿಹೋದರು. ಇಷ್ಟನಾ ಸಿಲುಕಿದಲ್ಲಿ ವಿಧವೆಯರೇ ಮುಂತಾದವರು ಎಷ್ಟು ಮಂದಿ ಇದ್ದರೋ ತಿಳಿದುಬರಲಿಲ್ಲ. ಅವರಲ್ಲಿ ಕೆಲವರು ವಿನಾ ಉಳಿದವರೆಲ್ಲಾ ನಾಶಹೊಂದಿದರು. ಪಟ್ಟಣದೊಳಗೂ ಈ ಅಪೂರ್ವವಾದ ಪ್ರವಾಹದ ವೇಗದಿಂದ ಮುಕ್ಕಾಲು ಭಾಗದ ಮನೆಗಳೆಲ್ಲಾ ಕಳಚಿ ಬಿದ್ದು ಕೊಚ್ಚಿಹೋದವು. ಸುಮಾರು ಮುನ್ನೂರು ಪ್ರಜೆಗಳು ಪ್ರವಾಹದಲ್ಲಿ ಸಿಕ್ಕಿ ಮೃತಿಹೊಂದಿದರೆಂದು ಹೇಳುತ್ತಾರೆ. ಪಾಲಿಟಾನಾ ಎಂಬುವುದು ಒಂದು ಸಂಸ್ಥಾನದಲ್ಲಿ ಜೈನ ಪ್ರಜೆಗಳ ಮುಖ್ಯ ಯಾತ್ರಾಸ್ಥಳವಾಗಿರುತ್ತದೆ ಜೈನ ಭಕ್ತಾದಿಗಳು ಸೇರಿ ಒಂದು ಗುಡ್ಡದ ಮೇಲೆ ಆ ಪಟ್ಟಣವನ್ನು ನಿರ್ಮಾಣಮಾಡಿ, ಅಲ್ಲಿ ಬಹು ಸುಂದರವಾದ ದೇವಾಲಯವನ್ನು ಕಟ್ಟಿಸಿರುತ್ತಾರೆ ಈ ದುಃಖಕರವಾದ ಸುದ್ದಿಯು ಬೊಂಬಾಯಿನಲ್ಲಿರುವ ಜೈನರಿಗೆ ವಿಶೇಷವಾಗಿಯೂ ಸಕಲ ಪ್ರಜೆಗಳಲ್ಲೂ ಮಹಾ ಸಂಕಟವನ್ನೂ ಗಾಬರಿಯನ್ನೂ ಉಂಟುಮಾಡಿರುತ್ತದೆ

ಪಾಲಿಟಾನಾದಲ್ಲಿ ಪ್ರವಾಹಗಳ ವೇಗದಿಂದ 500 ಪ್ರಜೆಗಳ ತನಕ ಲಯವಾಗಿರಬೇಕೆಂದು ಊಹಿಸಲ್ಪಟ್ಟಿದೆ. ಆ ಪಟ್ಟಣದಲ್ಲಿ ಅರ್ಧ ಭಾಗವೆಲ್ಲಾ ನಾಶವಾಗಿರುತ್ತದೆ. ಬೊಂಬಾಯಿನಲ್ಲಿರುವ ಪಾಲಿಟಾನಾ ಪ್ರಜೆಗಳು ಈ ದುಃಖಕರವಾದ ಸುದ್ದಿಯನ್ನು ಕೇಳಿ ಅಲ್ಲಿಗೆ ಹೋಗಿರುತ್ತಾರೆ. ಕಷ್ಟನಷ್ಟಗಳಿಗೆ ಗುರಿಯಾದ ಪ್ರಜೆಗಳಿಗೆ ಸಹಾಯ ಮಾಡುವುದಕ್ಕೋಸ್ಕರ ಧರ್ಮಫಂಡು ಪ್ರಾರಂಭವಾಗಿದೆ

ಬೊಂಬಾಯಿ, ಜೂನ್ ತಾ. 15 ನೇ ಭಾನುವಾರ.—ಪಾಲಿಟಾನಾ ಸಂಸ್ಥಾನದಲ್ಲಿ ರಾಜಧಾನಿಯೊಳಗೂ ಸುತ್ತುಮುತ್ತಿನ ಬೆಟ್ಟಗಳಲ್ಲೂ ಅಪಾರವಾದ ಮಳೆಗಳು ಸುರಿದವು. ಆರು ಗಂಟೆಗಳಲ್ಲಿ ಇಪ್ಪತ್ತಾರು ಅಂಗುಲ ಮಳೆ ಸುರಿಯಿತು. (30 ಅಂಗುಲ ಮಳೆ ಎಂದು ಕೆಲವರು ಹೇಳುತ್ತಾರೆ.) ಇದರಿಂದ ಪಟ್ಟಣದ ಒಂದು ಭಾಗವೆಲ್ಲಾ ನೀರಿನಲ್ಲಿ ಮುಳುಗಿಹೋಯಿತು ಪ್ರಜೆಗಳು ಆ ರಾತ್ರಿ ಊಟಮಾಡಿ ಮಲಗಿ ಸುಖನಿದ್ರೆಯಲ್ಲಿದ್ದಾಗ ಈ ಅನಾಹುತವಾದ ಮಳೆ ಸುರಿಯಲಾರಂಭವಾಯಿತು ಅನೇಕ ಮನೆಗಳು ಕಳಚಿಬಿದ್ದು ಒಳಗಿದ್ದವರೆಲ್ಲಾ ನಿದ್ರೆಮಾಡುವಲ್ಲೇ ಮೃತಪಟ್ಟರು. ಎಚ್ಚರಿಕೆಯಾದ ಜನಗಳು ಪ್ರಾಣ ಉಳಿಸಿಕೊಳ್ಳುವುದಕ್ಕೆ ಅವಕಾಶವಿಲ್ಲದೆ ಸತ್ತುಹೋದರು. ಅನೇಕ ಪ್ರಜೆಗಳು ತಮ್ಮ ಸಂಸಾರ ಮಕ್ಕಳನ್ನು ಬದುಕಿಸುವ ಪ್ರಯತ್ನದಲ್ಲಿ ಮೃತರಾದರು ಸರ್ಕಾರದವರು ಈ ಅನಾಹುತದಿಂದ 250 ಪ್ರಜೆಗಳು ಲಯವಾದರೆಂದು ಹೇಳುತ್ತಾರೆ, ಇದುವರೆಗೆ 200 ಹೆಣಗಳು ಸಿಕ್ಕಿರುವವು 450 ಜನರು ಸತ್ತುಹೋದರೆಂದು ಪ್ರವಾದವಿದೆ ಸುಮಾರು 1,500 ಮನೆಗಳು ಹಾಳಾದವು, ಸಾವಿರಾರು ಪ್ರಜೆಗಳು ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ಸಂಕಟಪಡುತ್ತಿದ್ದಾರೆ. ಪೊಲಿಟಿಕಲ್ ಏಜಂಟರಾದ ಕ್ಯಾಪ್ಟನ್ ವಿಕ್ ರವರೂ, ಆ ಸಂಸ್ಥಾನದ ಆಳ್ವಿಕೆಯನ್ನು ವಹಿಸಿ ನಡಿಸುತ್ತಿರುವ ಮೇಜರ್ ಸ್ಟ್ರಾಂಗ್ ರವರೂ, ಕಠ್ಯವಾಡ ಸಂಸ್ಥಾನಗಳ ಏಜಂಟರಾದ ಮಿ ಸ್ಲೇಟರ್ ರವರೂ ಕಷ್ಟನಿವಾರಣೆಯ ಕಾರ್ಯಗಳನ್ನು ನಡಿಸುತ್ತಿದ್ದಾರೆ ಈ ಅನಾಹುತದಲ್ಲಿ ಅನೇಕ ಸಂಸಾರಗಳು ಸಂಪೂರ್ಣವಾಗಿ ತೇಲಿಹೋದವು ಹತ್ತಿನಾಲ್ಕುವ ಎರಡು ಭಾರೀ ಫ್ಯಾಕ್ಟರಿಗಳು ಬಿರುಗಾಳಿ ಮಳೆಗೆ ತಡೆಯಲಾರದೆ ಕಳಚಿಬಿದ್ದು ಹಾಳಾಗಿವೆ ಅನೇಕ ಲಕ್ಷ ರೂಪಾಯಿಗಳ ಆಸ್ತಿಪಾಸ್ತಿಗಳು ನಾಶಹೊಂದಿದವೆಂದು ಹೇಳುವರು

ಶ್ರೀಮನ್ಮಹಾರಾಜರವರ ವರ್ಧಂತಿಯು.

ರಾಜಧಾನಿಯಲ್ಲಿ ನಡೆದ ಉತ್ಸವಾದಿಗಳು.

ಶ್ರೀಮನ್ಮಹಾರಾಜಾ ಸರ್ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದೂರ್, ಜಿ ಸಿ ಎಸ್ ಐ ರವರ ಮೂವತ್ತನೇ ವರುಷ ವರ್ಧಂತೀ ಉತ್ಸವವು ರಾಜಧಾನಿಯಲ್ಲಿ ಕಳೆದ ತಾ. 14 ನೇ ಶನಿವಾರ ಜರಗಿತು. ಆ ದಿನ ಬೆಳಗ್ಗೆ 7 ಗಂಟೆಗೆ ವರ್ಧಂತಿಯ ಜ್ಞಾಪಕಾರ್ಥವಾಗಿ ಕೋಟೆಕೊತ್ತಲದಿಂದ 10 ತೋಪುಗಳು ಹಾರಿಸಲ್ಪಟ್ಟವು. ಬಳಿಕ ಸುಮಾರು 10 ರಿಂದ 12 ಗಂಟೆಯ ತನಕ ಅರಮನೆಯ ಅಂಬಾವಿಲಾಸದಲ್ಲಿ ವರ್ಧಂತಿ ಕಟ್ಟಲೆಯ ಆರತಕ್ಷತೆ ದರ್ಬಾರು ಜರಗಿತು ಸಂಸ್ಥಾನದ ದಿವಾನ್ ರೇ ಮೊದಲಾದ ಮುಖ್ಯಾಧಿಕಾರಿಗಳೂ, ಮಾಜಿ ದಿವಾನ್ ಮಿ|| ಟಿ ಆನಂದರಾಯರೇ ಮೊದಲಾದ ಪೆನ್ಷನ್ದಾರರೂ, ರಾಜಬಂಧುಗಳೂ, ವೈದಿಕ ಮಂಡಲಿಯವರೂ, ಮ್ಯುನಿಸಿಪಲ್ ಕೌನ್ಸಿಲರುಗಳೂ, ಎಲ್ಲಾ ಕೋಮುಗಳ ಮತ್ತು ಕಸಬುಗಳ ಮುಖಂಡ ಪ್ರಜೆಗಳೂ, ಮಿಲಿಟರಿ ಮುದ್ದೆದಾರರೂ ದರ್ಬಾರಿನಲ್ಲಿ ಹಾಜರಾಗಿದ್ದರು ವಾದ್ಯಗಳು ಮೊಳಗುತ್ತಿರುವಲ್ಲಿ ಶ್ರೀಮನ್ ಮಹಾರಾಜರವರು ದಿವ್ಯವಾದ ಸಿಂಹಾಸನ ಪೋಷಾಕನ್ನು ತೊಟ್ಟು ಕಳಕಳಿಸುವ ರತ್ನಾಭರಣಗಳನ್ನು ಧರಿಸಿ 10½ ಗಂಟೆಗೆ ಅಂಬಾವಿಲಾಸಕ್ಕೆ ಚಿತ್ತೈಸಿ, ಶ್ರೀಸ್ವಾಮಿಗಳಲ್ಲಿ ಕುಳಿತಿದ್ದ ರಾಜಗುರುಗಳಾದ ಶ್ರೀ ಪರಕಾಲಸ್ವಾಮಿಗಳವರ ಬಳಿಗೆ ದಯಮಾಡಿ ಅಸ್ಖಲಿತಪಾದಾಭಿಗಳಿಂದ ಗುರುಗಳಿಗೆ ಪಾದಪೂಜೆ ಮಾಡಿ ಕಾಣಿಕೆ ವಿಲ್ಲತ್ತುಗಳನ್ನು ಒಪ್ಪಿಸಿ, ಗುರುಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ವಿಲ್ಲತ್ತು ತೀರ್ಥಪ್ರಸಾದಾದಿಗಳನ್ನು ಸ್ವೀಕರಿಸಿ, ಅವರನ್ನು ಮರ್ಯಾದೆಯಿಂದ ಮಠಕ್ಕೆ ಬಿಜಯಮಾಡಿಸಿ, ಭದ್ರಾಸನವನ್ನು ಅಲಂಕರಿಸಿದರು. ದರ್ಬಾರಿಗಳು ಮುಜರೆ ಮಾಡಿ ದರ್ಜಾವಾರು ಸಾಲುಕಟ್ಟಿ ಕುಳಿತುಕೊಂಡರು ಆರತಕ್ಷತೆ ಜರಗಿದ ಮೇಲೆ ಮಠ ದೇವಸ್ಥಾನಗಳ ಆಶೀರ್ವಾದಪೂರ್ವಕವಾದ ವಿಲ್ಲತ್ತು ಫಲಾಕ್ಷತೆಗಳು ಮಹಾರಾಜರವರಿಗೆ ಒಪ್ಪಿಸಲ್ಪಟ್ಟವು ವೈದಿಕರುಗಳು ಆಶೀರ್ವಾದ ಮಾಡಿ ಫಲಗಳನ್ನು ಒಪ್ಪಿಸಿದರು ಆ ಸಮಯದಲ್ಲಿ ಸಂಗೀತ ವಿದ್ವಾನ್ ಮಿ ಬಿ ಕೃಷ್ಣಪ್ಪನವರ ಹಾಡುಗಾರಿಕೆಯು ಮನೋಹರವಾಗಿ ನಡೆಯುತ್ತಿತ್ತು ಇಲಾಖೆಯವರು ದರ್ಬಾರಿಗಳಿಗೆಲ್ಲಾ ಹೂವಿನ ಹಾರ ಹಾಕಿ ಅಡಿಕೆ ಎಲೆ ಕೊಟ್ಟ ಮೇಲೆ ಅವರೆಲ್ಲಾ ಸಾಲುಸಾಲಾಗಿ ನಿಂತು ಮಹಾರಾಜರವರಿಗೆ ಮುಜರೆಮಾಡಿ ನಿಂತುಕೊಂಡಿರುವಲ್ಲಿ ಮಹಾರಾಜರವರು ಎದ್ದು ದರ್ಬಾರನ್ನು ಮುಕ್ತಾಯಮಾಡಿ ಒಳಕ್ಕೆ ದಯಮಾಡಿದರು ಸಾಯಂಕಾಲ 5½ ಗಂಟೆಗೆ ಶ್ರೀಮನ್ ಮಹಾರಾಜರವರು ಪದ್ಧತಿಯ ಪ್ರಕಾರ ಸಕಲ ಬಿರುದು ಸಲ್ತನತ್ ಸಮೇತ ಶ್ರೇಷ್ಠವಾದ ಕುದುರೆಯನ್ನೇರಿ ಅರಮನೆಯಿಂದ ಮೆರವಣಿಗೆಯಲ್ಲಿ ಅಲಂಕರಿಸಲ್ಪಟ್ಟ ದೊಡ್ಡಪೇಟೆಯ ಮಾರ್ಗವಾಗಿ ಗವರ್ನ್‌ಮೆಂಟ್ ಹೌಸ್ ಬಂಗಲೆಗೆ ಚಿತ್ತೈಸಿ, ಕತ್ತಲಾದ ಮೇಲೆ ದೀಪಗಳ ಪ್ರಕಾಶದಲ್ಲಿ ಸೈನಿಕರ ಕವಾತು ಮುಂತಾದವುಗಳನ್ನು ನೋಡಿಕೊಂಡು ಅಲ್ಲಿಂದ ಮೆರವಣಿಗೆಯಲ್ಲಿ ವಾಪಸು ದಯಮಾಡಿ ರಾತ್ರಿ ಸುಮಾರು 9 ಗಂಟೆಗೆ ಅರಮನೆಯನ್ನು ಸೇರಿ ದರ್ಬಾರ್ ನಡಿಸಿದರು. ಆಗ್ಗೆ ದಿವಾನ್‌ರೇ ಮೊದಲಾದ ಕೆಲವರು ಮಹಾರಾಜರವರಿಗೆ ನಜರುಗಳೊಪ್ಪಿಸಿದರು. ಆ ರಾತ್ರಿ ರಾಜಬೀದಿಗಳಲ್ಲೂ ಅರಮನೆ ಕಟ್ಟಡದ ಮುಂಭಾಗ ಮತ್ತು ಸುತ್ತ ಪ್ರಾಂತ್ಯದಲ್ಲೂ ದಿವ್ಯವಾದ ದೀಪೋತ್ಸವ ಬೆಳಗಿತು. ಪೋಲೀಸಿನವರ ಏರ್ಪಾಡು ತುಂಬಾ ತೃಪ್ತಿಕರವಾಗಿದ್ದುದರಿಂದ ಮೆರವಣಿಗೆಯು ಬಹು ಸೊಂಪಾಗಿಯೂ ಮನೋಹರವಾಗಿಯೂ ಜರುಗಿತು ಭಾನುವಾರವೂ ಸೋಮವಾರವೂ ಅಂಬಾವಿಲಾಸದಲ್ಲಿ ಆರತಕ್ಷತೆ ದರ್ಬಾರು ಜರಗಿತು. ಮೊದಲನೆಯ ದಿನ ದರ್ಬಾರಿಗಳೂ, ಎರಡನೆಯ ದಿನ ಮಿಲಿಟರಿ ಮತ್ತು ಪೋಲೀಸ್ ಮುದ್ದೆದಾರರೂ ಮಹಾರಾಜರವರಿಗೆ ನಜರು ಒಪ್ಪಿಸಿದರು

ಮಹಾರಾಜರವರು ಸೋಮವಾರ ರಾತ್ರಿ ಅರಮನೆಯಲ್ಲಿ ಮುಖ್ಯಾಧಿಕಾರಿಗಳಿಗೆಲ್ಲಾ ವರ್ಧಂತಿ ಕಟ್ಟಲೆಯ ಔತಣವನ್ನು ಮಾಡಿಸಿದರು ಈ ಔತಣವು ಬಹು ವಿಸ್ತರಣವಾಗಿಯೂ, ತುಂಬಾ ವಿಶಿಷ್ಟವಾಗಿಯೂ, ರಾಜಯೋಗ್ಯವಾಗಿಯೂ ಜರಗಿತು ನೆನ್ನೆ ಮಂಗಳವಾರ ರಾತ್ರಿ ದಿವಾನ್ ಮಿ|| ವಿಶ್ವೇಶ್ವರಯ್ಯನವರು ಸೇಷಾದ್ರಿಯವರ ಬಂಗಲೆಯಲ್ಲಿ ವರ್ಧಂತಿ ಕಟ್ಟಲೆಯ ಔತಣವನ್ನು ಮಾಡಿಸಿದರು. ಮುಖ್ಯವಾದ ರಾಜಬಂಧುಗಳೂ, ಶ್ರೀಮತಿ ಬ್ರಾಹ್ಮಣ ಅಧಿಕಾರಿಗಳೂ ದೊಡ್ಡಮನುಷ್ಯರೂ, ಇತರ ಪಂಗಡಗಳ ಅಧಿಕಾರಿಗಳೂ ಪ್ರಜೆಗಳ ಮುಖಂಡರೂ ಹಾಜರಾಗಿದ್ದರು. ಕೋಮುವಾರು ದಿವ್ಯಭೋಜನವು ಏರ್ಪಾಡಾಗಿ ಬಹು ತೃಪ್ತಿಕರವಾಗಿ ಜರಗಿತು ಶ್ರೀಮತಿ ಸ್ವತಃ ದಿವಾನ್‌ರವರೂ ಸೀಮೆಗೆ ಹೋಗಿ ಬಂದಿರುವ ಅಧಿಕಾರಿಗಳೂ ಕುಳಿತು ಸಹಪಂಕ್ತಿಭೋಜನಮಾಡಿದರು. ಭೋಜನಾನಂತರ ವಿದ್ವಾನ್ ಶೇಷಣ್ಣನವರ ವೀಣಾಗಾನವಾಗಿ ಸಮಸ್ತರೂ ಆನಂದಪಡುತ್ತಿರುವಲ್ಲಿ ದಿವಾನ್‌ರವರು ಅತಿಥಿಗಳಿಗೆಲ್ಲಾ ಗಂಧ ಪುಷ್ಪಗಳನ್ನು ಕೊಟ್ಟು, ಬಹು ಸರಸವಾಗಿ ಎಲ್ಲರ ಕೂಡ ಸಂಭಾಷಣೆ ಬೆಳಸಿದರು. ಈ ದಿವಾನ್‌ರವರು ಮಾಡಿದ ಔತಣಕ್ಕೆ ಕರಸಲ್ಪಟ್ಟಷ್ಟು ಅತಿಥಿಗಳನ್ನು ಹಿಂದಿದ್ದ ದಿವಾನ್‌ರುಗಳ್ಯಾರೂ ಕರೆಯಲಿಲ್ಲವೆಂದೂ, ಎಲ್ಲಾ ಕೋಮುಗಳವರಿಗೂ ಔತಣ ನಡೆದದ್ದು ಇದೇ ಮೊದಲೆಂದೂ, ಈ ಔತಣವು ಸಕಲರಲ್ಲೂ ತೃಪ್ತಿ ಸಂತೋಷಗಳನ್ನುಂಟುಮಾಡಿತೆಂದೂ ತಿಳಿದುಬಂದಿದೆ

ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರವರು ನೆನ್ನೆ ರಾಜಧಾನಿಗೆ ದಯಮಾಡಿದರು ಯೂರೋಪಿಯನ್ ಅತಿಥಿಗಳು ಸುಮಾರು 140 ಮಂದಿಯ ತನಕ ತಾ 22 ನೇ ಭಾನುವಾರ ಸ್ಪೆಷಲ್ ರೈಲುಗಳಲ್ಲಿ ರಾಜಧಾನಿಗೆ ದಯಮಾಡುವರು. ಮುಂದಿನ ವಾರ ರಾಜಧಾನಿಯಲ್ಲಿ ವರ್ಧಂತಿ ಕಟ್ಟಲೆಯ ಯೂರೋಪಿಯನ್ ಅತಿಥಿಗಳ ಸತ್ಕಾರವು ನಡೆಯುವುದು. ಪೋಲೋ ಪಂದ್ಯ, ಕುದುರೇ ಜೂಜು ಮುಂತಾದ ವಿನೋದಗಳು ಜರುಗುತ್ತವೆ ಯೂರೋಪಿಯನ್ ಅತಿಥಿಗಳೆಲ್ಲಾ ತಾ. 30 ರಲ್ಲಿ ರಾಜಧಾನಿಯಿಂದ ವಾಪಸು ತೆರಳುವಂತೆ ಏರ್ಪಾಡಾಗಿದೆ

ಒಳದೇಶದ ವೃತ್ತಾಂತಗಳು.

ಪೆನ್ಷನ್ ಅ| ಕಮಿಷನರ್ ಮಿ|| ಸಿ ಶೇಷಾದ್ರಿಯ್ಯಂಗಾರ್ರನ್ನು ಸರ್ಕಾರದವರು ತುಮಕೂರು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾಗಿ ನೇಮಿಸಿರುತ್ತಾರೆ.

ಸರ್ಕಾರದವರು ಮಿ|| ಎಂ ರಾಮರಾಯರನ್ನು ವಿದ್ಯಾ ಇಲಾಖೆಯ ಇನ್ಸ್ಪೆಕ್ಟರ್ ಜನರಲ್ಲಾಗಿ ಖಾಯಂ ಮಾಡಿದರೆಂದು ಕೇಳಿ ಸಂತೋಷಪಡುತ್ತೇವೆ.

ಮಿ|| ಕೆ. ಶ್ರೀನಿವಾಸರಾಯರು ಡೆಪ್ಯುಟಿ ಕಮಿಷನರ ಕೆಲಸದಿಂದ ನಿವೃತ್ತರಾದ ಕಾರಣ ಸರ್ಕಾರದವರು ಮಿ| ಕೆ ಮತ್ತಾನ್‌ರವರನ್ನು ಶಿವಮೊಗ್ಗಾ ಡೆಪ್ಯುಟಿ ಕಮಿಷನರಾಗಿ ಬದಲಿ ನೇಮಕ ಮಾಡಿರುತ್ತಾರೆಂದು ತಿಳಿಯುವುದು.

ಮಿ|| ಇ. ಎಚ್ ನಾರಿಸ್‌ರವರು ರಜಾ ಪಡೆದು ಸೀಮೆಗೆ ಹೋಗಿರೋದರಿಂದ ಸರ್ಕಾರದವರು ಮಿ, ಟಿ ಪರಮಶಿವಯ್ಯರವರನ್ನು ಚೀಫ್ ಕೋರ್ಟ್ ಜಡ್ಜರಾಗಿಯೂ, ಮಿ ವಿ ಎ ರಾಜರತ್ನಮುದಲಿಯಾರ್ರನ್ನು ಬೆಂಗಳೂರು ಸೆಷನ್ಸ್ ಜಡ್ಜರಾಗಿಯೂ, ಮಿ|| ಬಿ ಬಸವಾರಾಧ್ಯರನ್ನು ಚೀಫ್ ಕೋರ್ಟ್ ರಿಜಿಸ್ಟ್ರಾರಾಗಿಯೂ ಬದಲಿ ನೇಮಕ ಮಾಡಿದ್ದಾರೆ

ಶ್ರೀಮನ್ ಯುವರಾಜರವರು ಈಗ ಇಂಗ್ಲಂಡಿನಲ್ಲಿರುತ್ತಾರೆ ಎರಡು ವಾರಗಳ ಹಿಂದೆ ಅಲ್ಲಿರುವ ಚಿನ್ನದ ಗನಿ ಕಂಪನಿಗಳ ಪ್ರತಿನಿಧಿಗಳು ಯುವರಾಜರವರಿಗೆ ದಿವ್ಯವಾದ ಔತಣವನ್ನು ಮಾಡಿಸಿದರು. ಆಗ್ಗೆ ಕಂಪನಿಗಳ ಡೈರೆಕ್ಟರುಗಳಲ್ಲದೆ ಲಾರ್ಡ್ ಕ್ರೂ, ಲಾರ್ಡ್ ಕರ್ಜನ್, ಸರ್ ಡನ್‌ಲಾಪ್ ಸ್ಮಿತ್, ಸರ್ ಆರ್ಥರ್ ಫಾನ್ಷಾ, ಸರ್ ಜಿ ಫ್ರಾನ್ಸಿಸ್, ಮಿ| ಇ ಎಸ್. ಮಾಂಟೆಗ್ ಮೊದಲಾದ ಮಹನೀಯರು ಹಾಜರಾಗಿದ್ದರು ಲಾರ್ಡ್ ರಿಬ್ಸ್‌ಡೇಲ್‌ರವರು ಯುವರಾಜರವರಿಗೆ ಸುಸ್ವಾಗತವನ್ನು ಬಯಸಿ ಭಾಷಣಮಾಡಿದರು ಯುವರಾಜರವರು ಸಮಯೋಚಿತವಾಗಿ ಪ್ರತ್ಯುತ್ತರಕೊಟ್ಟು ಅವರನ್ನೆಲ್ಲಾ ವಂದಿಸಿದರು ಯುವರಾಜರವರು ವಾಪಸು ಬರುವ ತನಕ ಅವರ ಯೋಗಕ್ಷೇಮ ಮುಂತಾದ ವಿಚಾರವಾಗಿ ವಾರವಾರಕ್ಕೆ ಬರೆದು ಬರುವ ವಿಶೇಷ ಸಂಗತಿಗಳನ್ನೂ, ಅವರು ದಯಮಾಡುವಂಥಾ ಸ್ಥಳ ಮೊಕಾಮುಗಳನ್ನೂ ಅರಮನೆಯವರಾಗಲಿ ಸರ್ಕಾರದವರಾಗಲಿ ತಿಳಿಸುತ್ತಾ ಬರುವುದು ಪ್ರಜಾರಂಜಕವಾಗಿರುತ್ತದೆ.

ಮೈಸೂರು ಸಂಸ್ಥಾನದಲ್ಲಿ ಇನ್ನು ಮೇಲೆ ಆದಾಯದ ಮೇಲಣ ತೆರಿಗೆಯನ್ನು (ಇನ್‌ಕಂ ಟ್ಯಾಕ್ಸ್) ಹಾಕಿ ವಸೂಲ್ಮಾಡಬಹುದೆಂದು ಈ ವಾರ ರಾಜಧಾನಿಯಲ್ಲಿ ನಡೆದ ಸಂಪತ್ಪಾಭಿವೃದ್ಧಿ ಸಮಾಜದಲ್ಲಿ ಎಲ್ಲಾ ಮೆಂಬರುಗಳೂ ಏಕವಾಕ್ಯತೆಯಿಂದ ಒಪ್ಪಿಕೊಂಡರೆಂದು ಕೇಳುತ್ತೇವೆ ಮೆಂಬರುಗಳು ಶಿಫಾರಸು ಮಾಡಿರುವ ದರಗಳಾವುವೆಂದರೆ—ಸಾಲಿಯಾನಾ 1,000 ರೂಪಾಯಿಯೊಳಗೆ ವರಮಾನವಿರತಕ್ಕವರಿಗೆ ಈ ತೆರಿಗೆ ಇಲ್ಲ 1,000 ದಿಂದ 2,000 ರೂಪಾಯಿಯೊಳಗೆ ಬರುವ ವರಮಾನಗಳಿಗೆ 500 ರೂ ಮನ್ನಾಕೊಟ್ಟು, ಬಾಕಿ ವರಮಾನಕ್ಕೆ ರೂಪಾಯಿಗೆ 1 ಪೈ ನಂತೆ ತೆರಿಗೆ ಹಾಕಬೇಕು, 2,000 ದಿಂದ 3,000 ರೂಪಾಯಿನ ತನಕ ಬರುವ ವರಮಾನಗಳಿಗೆ ರೂಪಾಯಿಗೆ 1 ಪೈ ನಂತೆಯೂ, ವರಮಾನವು 3,000 ರೂಪಾಯಿಗೆ ಮೇಲಿದ್ದರೆ ರೂಪಾಯಿಗೆ 5 ಪೈ ನಂತೆಯೂ ತೆರಿಗೆ ಹಾಕಬೇಕು ಈ ತೆರಿಗೆಯನ್ನು ಹಾಕುವುದಕ್ಕೆ ಮೊದಲು ನ್ಯಾಯವಿಧಾಯಕ ಸಭೆಯಲ್ಲಿ ಒಂದು ಕಾನೂನು ಪಾಸಾಗಿ, ಶ್ರೀಮನ್ ಮಹಾರಾಜರವರ ಒಪ್ಪಿಗೆ ಪಡೆದ ಬಳಿಕ ಜಾರಿಗೆ ಬಂದೀತು ಅಂತು ಈ ತೆರಿಗೆಯಲ್ಲಿ ಉತ್ಪತ್ತಿಯಾದೀತೆಂದು ಅಂದಾಜು ಕಟ್ಟಿರುವ ಸುಮಾರು 5 ಲಕ್ಷ ರೂಪಾಯನ್ನೂ ಪ್ರಾಥಮಿಕ ವಿದ್ಯಾಭ್ಯಾಸಕ್ಕೇನೇ ವಿನಿಯೋಗಿಸುವರೆಂದು ಹೇಳುತ್ತಾರೆ.

ತಾಲ್ಲೋಕು ವರ್ತಮಾನಗಳು.

ದೊಡ್ಡಬಳ್ಳಾಪುರ.—ಈ ಊರು ಪೈಲೆ ಸ್ಟೇಷನ್ ಬಳಿ ಗುರುವಾರ ರಾತ್ರಿ ಜವಳಿ ಬೋಗನಂಜುಂಡಪ್ಪನವರ ಆಳನ್ನೂ ಬೇರೆ ಕೆಲವರನ್ನೂ ಕಳ್ಳರು ಹೊಡೆದು ಅವರಲ್ಲಿ ಇದ್ದ ಹಣಕಾಸು ಬಟ್ಟೆ ಬರೆಗಳನ್ನು ಕಿತ್ತುಕೊಂಡು ಹೋದರೆಂತ ತಿಳಿಯಲಾಗಿದೆ ಪೋಲೀಸ್ ಇನ್ಸ್ಪೆಕ್ಟರವರು ಮುತುವರ್ಜಿಯಿಂದ ಆಗಲೇ ಇಬ್ಬರನ್ನು ಹಿಡಿದು ಲಾಕಪ್ಪಿನಲ್ಲಿ ಇಟ್ಟಿರುತ್ತಾರೆ ಪ್ರಯಾಣಿಕರು ನಾಲ್ಕು ಮಂದಿ ಇದ್ದರೆಂದೂ, ಕಳ್ಳರು 20 ಮಂದಿವರೆಗೆ ಇದ್ದರೆಂದೂ ಕೇಳಲಾಗಿದೆ ರಾತ್ರಿ ಬೆಳದಿಂಗಳು ಸುಮಾರು 7½ ಘಂಟೆ ರೈಲ್ವೆ ಸ್ಟೇಷನ್‌ಗೆ ಸಮೀಪ ನಡೆದಿರುವ ಈ ದರೋಡೆಯು ಆಶ್ಚರ್ಯವಾದದ್ದೇ ಸರಿ.

ಆನೇಕಲ್ಲು —ಕಳೆದ ಗುರುವಾರ ಸಾಯಂಕಾಲ ಇಲ್ಲಿನ ಲಂಡನ್ ಮಿಷನ್ ಬಾಲಿಕಾ ಪಾಠಶಾಲೆಯಲ್ಲಿ ಬಾಲಕಿಯರಿಗೆ ಬಹುಮಾನ ಹಂಚಲು ಸರ್ಕಾರಿ ಉದ್ಯೋಗಸ್ಥರೂ ವರ್ತಕ ಮಂಡಲಿಯವರೂ ಸೇರಿದ್ದರು ಮ|| ಜೋಡಿದಾರ್ ಬಿ ಶ್ರೀನಿವಾಸಯ್ಯಂಗಾರ್ರು, ಅಮಲ್ದಾರ್ ಮ|| ಗೋಪಾಲರಾಜೆ ಅರಸಿನವರು, ರೆವ್ ಜೆ. ವಿಲ್ಕಿನ್ಸ್ ಸಾಹೇಬರವರು ಅಗ್ರಾಸನವನ್ನು ಅಲಂಕರಿಸಿದ್ದರು. ಬಾಲಕಿಯರ ಸಂಗೀತ ಮೊದಲಾದ ವಿನೋದಗಳನ್ನು ಸಭಿಕರು ಕೇಳಿ ಆನಂದಪಟ್ಟ ತರುವಾಯ ಬಾಲಕಿಯರಿಗೆ ಬಹುಮಾನಗಳು ಹಂಚಲ್ಪಟ್ಟವು ಮ|| ಬಿ ಶ್ರೀನಿವಾಸಯ್ಯಂಗಾರ್ರು ಸ್ಕೂಲಿನ ಅಭಿವೃದ್ಧಿ ವಿಷಯದಲ್ಲಿ ಹೆಡ್‌ಮಿಸ್ಟ್ರೆಸರ ರಿಪೋರ್ಟನ್ನು ಅನುಸರಿಸಿ ಉಪನ್ಯಾಸ ಮಾಡಿದ ಮೇಲೆ ಸಭಿಕರು ಪುಷ್ಪಮಾಲಾಲಂಕೃತರಾಗಿ ತೆರಳಿದರು ಮರುದಿನ ಬೆಳಗ್ಗೆ ಇಲ್ಲಿನ ಸಂಚಮರ ಬಾಲಕ ಬಾಲಕಿಯರಿಗೆ ಬಹುಮಾನ ಹಂಚಲು ಅಮಲ್ದಾರ್ರು, ಸಾಹೇಬರೂ, ಅಗ್ರಾಸನವನ್ನಲಂಕರಿಸಿ ಬಹುಮಾನ ವಿನಿಯೋಗವು ನಡಿಸಿದ ತರುವಾಯ ಪುಷ್ಪಮಾಲಿಕಾ ಭೂಷಿತರಾಗಿ ತೆರಳಿದರು. ಆ ದಿನ ಸಾಯಂಕಾಲ 5 ಘಂಟೆಗೆ ಲಂಡನ್ ಮಿಷನ್ ಎ ವಿ ಸ್ಕೂಲ್ ಹಾಲ್‌ನಲ್ಲಿ ವಿದ್ಯಾರ್ಥಿಗಳಿಗೆ ಸಾಂವತ್ಸರಿಕ ಬಹುಮಾನ ವಿನಿಯೋಗಕ್ಕೋಸ್ಕರ ಮ|| ಗೋಪಾಲರಾಜೆ ಅರಸಿನವರೂ ರೆವ್. ಜೆ ವಿಲ್ಕಿನ್ಸ್ ಸಾಹೇಬರು ಅಗ್ರಾಸನವನ್ನಲಂಕರಿಸಿ ಇದ್ದರು ಸ್ಕೂಲ್ ಬಾಲಕರಿಂದ ಕೀರ್ತನೆಗಳು ಗಾನಮಾಡಲ್ಪಟ್ಟ ತರುವಾಯ ಹೆಡ್‌ಮಾಸ್ಟರ್ ಮ|| ಬಿ ಶ್ರೀನಿವಾಸಯ್ಯಂಗಾರ್ರು ಸ್ಕೂಲ್ ರಿಪೋರ್ಟನ್ನು ಓದಿ ತೀರಿಸಲು ಬಾಲಕರು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ನಾಟಕವನ್ನು ಅಭಿನಯಿಸಿ ಸಭಿಕರ ಮನಸ್ಸನ್ನು ಆನಂದಗೊಳಿಸಿದರು ನಂತರ ಅಗ್ರಾಸನಾಧಿಪತಿಗಳು ಬಾಲಕರಿಗೆ ಬಹುಮಾನವನ್ನು ಕೊಟ್ಟು, ಸ್ಕೂಲ್ ಅಭಿವೃದ್ಧಿಯ ವಿಷಯದಲ್ಲಿ ಸಭಿಕರ ಮನಸ್ಸಿಗೆ ತೃಪ್ತಿಯಾಗುವಂತೆ ಉಪನ್ಯಾಸ ಮಾಡಿದರು ಮ|| ಗೋಪಾಲರಾಜೆ ಅರಸಿನವರು ವಿದ್ಯಾಭಿವೃದ್ಧಿಗಾಗಿ ಪ್ರಾರಂಭದಲ್ಲಿ ಮಿಷನ್ ಸಂಘದವರಿಂದಲೇ ದೇಶಗಳಲ್ಲೆಲ್ಲಾ ಸ್ಕೂಲುಗಳು ಸ್ಥಾಪಿಸಲ್ಪಟ್ಟವೆಂದೂ, ಆ ಸ್ಕೂಲುಗಳಲ್ಲಿ ವಿದ್ಯಾಭ್ಯಾಸಮಾಡಿ ಬಿ ಎ. ಬಿ ಎಲ್ ಕ್ಲಾಸ್ ಮಾಡಿದ ಅನೇಕ ದೊಡ್ಡ ಮನುಷ್ಯರು ಭಾರಿ ಸರ್ಕಾರಿ ಉದ್ಯೋಗಗಳಲ್ಲಿ ಸೇರಿ ಕಾರ್ಯಗಳನ್ನು ನಡಿಸುತ್ತಿದ್ದಾರೆಂದೂ ಅಪ್ಪಣೆ ಕೊಡಿಸಿದ್ದನ್ನು ರೆವ್ ಜೆ ವಿಲ್ಕಿನ್ಸ್ ಸಾಹೇಬರು ಕೇಳಿ, ಅವರಿಗೆ ಸ್ಕೂಲ್ ಪರವಾಗಿಯೂ, ಮಿಷನ್ ಪರವಾಗಿಯೂ ವಂದನೆಗಳನ್ನು ಸಲ್ಲಿಸಿದರು. ಬಾಲಕರಿಂದ ಮಹಾರಾಜರ ಶ್ರೇಯಃ ಪ್ರಾರ್ಥನಾ ಮಂಗಳವು ಗಾನಮಾಡಲ್ಪಟ್ಟು, ಸಭೆಯು ಬರಖಾಸ್ತಾಯಿತು.

ಹಾಸನ —ಈಗ್ಗೆ ಎಳೆಂಟು ದಿನಗಳಿಂದಲೂ ಸೋನೆಗಾಳಿ ಬೀಸುತ್ತಾ ತುಂತುರು ಮಳೆ ಬರುತ್ತಲಿದೆ ಇದಕ್ಕಿಂತ ಹಿಂದೆ ಒಳ್ಳೇ ಮಳೆಗಳಾದುದರಿಂದ ಹೊಲ ಗದ್ದೆಗಳ ಬಿತ್ತುವಟಿಗೆಗಳು ಸರಿಯಾಗಿ ನಡೆಯುತ್ತಾ ಬಂದಿದೆ ಧಾರಣೆವಾಸಿಗಳಂತು ಸುಭಿಕ್ಷದಲ್ಲಿಯೂ ದುರ್ಭಿಕ್ಷವೇ ಎಂಬಂತಿದೆ —ಕಳೆದ ತಾ. 3 ನೇ ಬುಧವಾರ ಸಾಯಂಕಾಲ ದಿವಾನ್ ಸಾಹೇಬರವರು ಸಕಲೇಶಪುರಮಾರ್ಗವಾಗಿ ಇಲ್ಲಿಗೆ ಬಂದು, ಅದೇ ರಾತ್ರಿ ಅರಸೀಕೆರೆ ಮಾರ್ಗವಾಗಿ ಬೆಂಗಳೂರಿಗೆ ಚಿತ್ತೈಸಿದರು —ಸುತ್ತ ಮುತ್ತಲಿನ ಹಳ್ಳಿ ಪಳ್ಳಿಗಳಲ್ಲಿ ಕಾಲರಾ ಜಾಡ್ಯವು ಹಾವಳಿ ಮಾಡುತ್ತಿದ್ದು, ಈಗ ಶಾಂತವಾಗಿರುತ್ತದೆ. ಮ್ಯುನಿಸಿಪಾಲಿಟಿಯವರು ಈ ನಗರದಲ್ಲಿ ಮುಖ್ಯವಾಗಿ ಸಂದುಗೊಂದಿಗಳನ್ನು ವಿಶೇಷವಾದ ಮುತುವರ್ಜಿಯಿಂದ ನೋಡಿಕೊಳ್ಳಬೇಕು. ನಮ್ಮ ಡೆಪ್ಯುಟಿ ಕಮಿಷನರವರು ಪ್ರತಿಭಾನುವಾರವೂ ಈ ನಗರದ ವಿಶಿಷ್ಟ ಭಾಗಗಳನ್ನೂ ಸುತ್ತಿ, ಸ್ವತಃ ಪರಾಮರ್ಶಿಸುತ್ತಿದ್ದಾರೆ. ಇವರು ಅದೇ ಪ್ರಕಾರ ಸಂದುಗೊಂದುಗಳನ್ನೂ ಪರಾಮರ್ಶಿಸಿದರೆ ಎಷ್ಟೋ ಉಪಕಾರವಾದೀತು. ಇಲ್ಲಿನ ಹೈಸ್ಕೂಲಿಗೆ ಕಳೆದ ವರ್ಷದಲ್ಲಿ ವರ್ಗವಾಗಿ ಬಂದಿರುವ ಮ|| ವಾಸುದೇವರಾಯರವರಿಗೆ ಅನಿರೀಕ್ಷಿತವಾಗಿ ಶಿವಮೊಗ್ಗಾಕ್ಕೆ ವರ್ಗದ ಆರ್ಡರು ಬಂದಿದೆ ಈ ಹೆಡ್ ಮಾಸ್ಟರನ್ನು ಯಾರ ಕೋರಿಕೆಯೂ ಇಲ್ಲದೆ ತತ್‌ಕ್ಷಣದಲ್ಲಿಯೇ ವರ್ಗಾಯಿಸಿರುವುದು ಆಶ್ಚರ್ಯಕರವಾಗಿರೋಣದರಿಂದ ಅವರನ್ನೇ ಇಲ್ಲಿಟ್ಟುಕೊಡಬೇಕೆಂದು ಇಲ್ಲಿನ ನಿವಾಸಿಗಳು ಸರ್ಕಾರಕ್ಕೆ ವಿಜ್ಞಾಪಿಸಿಕೊಂಡು ತೀರ್ಮಾನವನ್ನು ನಿರೀಕ್ಷಣೆ ಮಾಡುತ್ತಿದ್ದಾರೆ.—ನಮ್ಮ ಡೆಪ್ಯುಟಿ ಕಮಿಷನರವರು ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವಕ್ಕೋಸ್ಕರ ಮಿತಪರಿವಾರದೊಡನೆ ಮೈಸೂರಿಗೆ ಪ್ರಯಾಣಮಾಡಿದ್ದಾರೆ. ರೈತರ ಅರ್ಜಿ ಸವಾಲುಗಳು, ರೆವಿನ್ಯೂ ಕಾಗದ ಪತ್ರಗಳೂ ಈ ಡಿಸ್ಟ್ರಿಕ್ಟಿನಲ್ಲಿ ಬೇಗ ಬೇಗನೆ ತೀರ್ಮಾನವಾಗುವುದಿಲ್ಲವೆಂದೂ, ರಾತ್ರಿ 9-10 ಘಂಟೆಯಾದರೂ ಆಫೀಸ್ ಕೆಲಸ ಮುಗಿಯುವುದೇ ಇಲ್ಲವೆಂದೂ, ಇದರಿಂದ ವಕೀಲರುಗಳಿಗೂ, ರೈತಪ್ರಜೆಗಳಿಗೂ ತುಂಬಾ ತೊಂದರೆ ಎಂದೂ ಈ ಪ್ರಾಂತ್ಯದವರು ಗುಜುಗುಟ್ಟುತ್ತಿದ್ದಾರೆ —ಸಂಪದಭಿವೃದ್ಧಿ ಸಮಾಜದವರು ಈ ಸ್ಥಳದಲ್ಲಿ ಯಾವುದಾದರೊಂದು ಕಾರಖಾನೆಯನ್ನು ಸ್ಥಾಪಿಸಿ ಇಲ್ಲಿ ನಿರುದ್ಯೋಗಿಗಳಾಗಿಯೂ, ಸೋಮಾರಿಗಳಾಗಿಯೂ, ಜಗಳಗಂಟರಾಗಿಯೂ ಇರುವ ಬಡಜನರಿಗೂ. ಯುವಕರಿಗೂ ಉದ್ಯೋಗಗಳನ್ನು ಕಲ್ಪಿಸಿಕೊಟ್ಟು, ಜೀವನಕ್ಕೆ ಸಹಾಯಮಾಡಿದರೆ ಕ್ಷೇಮವಾದೀತು —ಇಲ್ಲಿನ ಆಸ್ಪತ್ರೆಯಲ್ಲಿ ರೋಗಿಗಳ ವಾರ್ಡುಗಳೆಲ್ಲವೂ ತುಂಬಿಹೋಗಿವೆ ಹೊಸದಾಗಿ ರೋಗಿಗಳು ಬರುತ್ತಲೇ ಇದ್ದಾರೆ. ವಾರ್ಡುಗಳು ಸಾಲದೆ ರೋಗಿಗಳು ನಿಲ್ಲುವುದಕ್ಕೆ ಸ್ಥಳವಿಲ್ಲದೆ ಕಷ್ಟಪಡಬೇಕಾಗಿದೆ. ಸರ್ಕಾರದವರು ಇನ್ನು ಕೆಲವು ವಾರ್ಡುಗಳನ್ನು ಕಟ್ಟಿಸಿದರೆ ಬಹಳ ಉಪಕಾರವಾದೀತು —ಇಲ್ಲಿಯೂ ಕಾರೊನೇಷನ್ ಕಟ್ಟಡದ ಕಾಮಗಾರಿಯು ಪ್ರಾರಂಭವಾಗಿದೆ. ಆದರೆ ಕೆಲಸವು ಅಷ್ಟು ಚುರುಕಾಗಿ ನಡೆಯುತ್ತಾ ಇಲ್ಲ

ಹುಣಸೂರು —2-3 ವಾರಗಳಿಂದ ಇಲ್ಲಿ ಸೋನೆಮಳೆ ರಾತ್ರಿ ಹಗಲೂ ಸುರಿಯುತ್ತಾ ಸೂರ್ಯ ರಶ್ಮಿಗೆ ಅವಕಾಶವಿಲ್ಲದಂತೆ ಇತ್ತು. ಈಗ 1-2 ದಿನಗಳಿಂದ ಮೋಡ ಕವಿದುಕೊಂಡಿದ್ದರೂ, ಸೋನೆಯಿಲ್ಲದೆ ಸ್ವಲ್ಪ ಬಿಸಿಲು ಕಾಣಿಸುತ್ತಾ ಇದೆ. ಜಿನಸಿ ಧಾರಣೆಗಳು ಯಥಾರೀತಿ ಇರುವವು —ಮೈಸೂರಿಂದ ಹುಣಸೂರಿಗೆ ಗಾಡಿಯಲ್ಲಿ ಪ್ರಯಾಣಮಾಡುವುದು ತುಂಬಾ ಅಪಾಯವಾಗಿದೆ ಕಳೆದ ಬುಧವಾರ ರಾತ್ರಿ ಮೈಸೂರಿಂದ ಪ್ರಯಾಣಮಾಡಿಕೊಂಡು ಬರುವಾಗ ಕಳ್ಳರು ಇಲವಾಲಕ್ಕೂ ಬಿಳಿಕೆರೆಗೂ ಮಧ್ಯ ಇರುವ ಅಂಕನಹಳ್ಳಿಯ ಹತ್ತಿರ ಗಾಡಿಗೆ ಇಳೀ ಬಿದ್ದಿದ್ದರು ಆಗ್ಗೆ ಗಾಡಿಯಲ್ಲಿದ್ದವರು ಸ್ವಲ್ಪ ಹುಷಾರಾಗಿದ್ದುದರಿಂದ ಬಚಾವಾದರು ಇಲ್ಲವಾದರೆ ಕಳ್ಳರು ಸಿಕ್ಕಿದ್ದನ್ನು ದೋಚಿಕೊಂಡು ಪ್ರಯಾಣಿಕರನ್ನು ಕಷ್ಟಕ್ಕೊಳಪಡಿಸುತ್ತಿದ್ದರು ಪ್ರಜೆಗಳ ಪ್ರಾಣ ಮಾನ ಧನಗಳನ್ನು ಕಾಪಾಡಲು ಬದ್ಧರಾಗಿರುವ ಸರ್ಕಾರದವರು ಆ ಕಡೆ ಉಸ್ತುವಾರಿ ಇಟ್ಟು ನೋಡಿಕೊಳ್ಳುವಂತೆ ಪೋಲೀಸ್ ಇಲಾಖೆಯವರಿಗೆ ಅಪ್ಪಣೆ ಮಾಡಬೇಕು. ಯಾಕಂದರೆ ಆ ಸರಹದ್ದಿನಲ್ಲಿ ಆಗಿಂದಾಗ್ಗೆ ಕಳವು, ಕೊಲೆ, ದರೋಡೆಗಳು ಸಂಭವಿಸುತ್ತಲೇ ಇರುತ್ತವೆ ಈ ಕಾರಣದಿಂದ ಪ್ರಯಾಣವು ಜನರಿಗೆ ಸುಖಕರವಾಗಿಯೂ, ಕೇಪನಾಯಕರಿಗೆ ಅಪಾಯಕರವಾಗಿಯೂ ಇರುವ ರೈಲ್ ರೋಡನ್ನು ಏರ್ಪಡಿಸುವುದು ಅತ್ಯಾವಶ್ಯಕವೂ ಅನಿವಾರ್ಯವೂ ಆದುದಾಗಿರುತ್ತದೆ. ಸರ್ಕಾರದವರು ಇನ್ಸ್‌ಪೆಕ್ಟರಿಗೆ ಸರ್ವೇ ಮಾಡಬೇಕೆಂದು ತಿಳಿಸಿರುವ ಮೈಸೂರು ಗೆಜೆಟ್ ಸಂಗ್ರಹದ ಭಾಗವನ್ನು ನೋಡುವಾಗ ಯಡತೊರೆಯಿಂದ ಮೈಸೂರೆಂದು ಹೇಳಿ, ಹುಣಸೂರನ್ನು ವಿನಾಯಿಸಿರುತ್ತಾರೆ ಇಷ್ಟು ದೊಡ್ಡ ತಾಲ್ಲೋಕನ್ನು ಯಾತಕ್ಕಾಗಿ ಸರ್ಕಾರದವರು ಬಿಡುತ್ತಾರೋ ಸರಿಯಾದ ಕಾರಣ ತೋರುವುದಿಲ್ಲ ಕೊಡಗಿನ ಕಡೆ ಹೀಗಿದೆ ಇದ್ದರೂ ತಮ್ಮ ಸರ್ಕಾರಕ್ಕೆ ಒಳಪಟ್ಟಿರುವ ಹುಣಸೂರು ಪ್ರಾಂತವಾದರೂ ಮೈಸೂರು ಸರ್ಕಾರದವರು ಯಾತಕ್ಕಾಗಿ ರೈಲು ಹಾಕಬಾರದೋ ತಿಳಿಯದು ಈ ತಾಲ್ಲೋಕಿನಲ್ಲೂ ಇದರ ಅಕ್ಕಪಕ್ಕದ ಗ್ರಾಮಾಂತರಗಳಲ್ಲಿಯೂ ಇರುವ ರೈತಾಪಿಗಳಿಗೆ ತುಂಬಾ ನಷ್ಟವೂ ಅನನುಕೂಲಗಳೂ ಇರುವವು ಒಳ್ಳೇ ಫಸಲ್ ಕಾಲದಲ್ಲಿ ಕಳ್ಳರ ಕಾಟವೂ, ಕಾಡುಮೃಗಗಳ ಆವಾಂತರವೂ ವಿಶೇಷವಾಗಿವೆ ಆದುದರಿಂದಲೇ ಈ ಕಡೆಯ ರೈತಾಪಿಗಳು ಸಾಮಾನ್ಯವಾಗಿ ಅಷ್ಟು ಪುಷ್ಟರಾಗಿಲ್ಲ ಮತ್ತು ಅವರು ಜಿರಾಯತ ಕಸಬನ್ನು ಅಷ್ಟು ಮುತುವರ್ಜಿಯಿಂದ ಮಾಡುವುದೂ ಇಲ್ಲ. ಗೇಯತಕ್ಕ ಉತ್ತಮ ರೈತಾಪಿಗಳು ಈ ಕಡೆ ದೊರೆಯುವುದೂ ಇಲ್ಲ ಮಾಡುವುದಕ್ಕೆ ಅವರಿಗೆ ತಕ್ಕ ಪ್ರೋತ್ಸಾಹವೂ ಇಲ್ಲ. ಇಷ್ಟು ಬೆಳೆಗಳನ್ನು ಕಾಪಾಡಿಕೊಳ್ಳುವುದೇ ತುಂಬಾ ಕಷ್ಟ ಅಲ್ಪಸ್ವಲ್ಪ ಕೂಲಿ ಸಂಬಳಗಳೆಲ್ಲಾದರೂ ದೊರಕಿದರೆ ಅಷ್ಟೇ ಸಾಕೆಂದು ರಾಜಾ ಕಸಬಾದ ವ್ಯವಸಾಯ ವೃತ್ತಿಯನ್ನು ಒತ್ತಟ್ಟಿಗೆ ತಳ್ಳಿ, ಕೇವಲ ಗರೀಬರಾಗಿರುವರು. ಆದುದರಿಂದ ಸರ್ಕಾರದವರು ಈ ಕಡೆ ಸ್ವಲ್ಪ ಕಣ್ಣಿಟ್ಟು ರೈತಾಪಿಗಳನ್ನು ಪ್ರೋತ್ಸಾಹಿಸುವುದುತ್ತಮ. ಮತ್ತು ತಮ್ಮ ಸಪ್ರಾಣಗಳ ಸಂರಕ್ಷಣೆಗೂ ಮತ್ತು ದುಷ್ಟಮೃಗಗಳ ಹಾವಳಿಗಳನ್ನು ತಡೆಯುವುದಕ್ಕೂ ಬಂದೂಕಿನ ಲೈಸೆನ್ಸುಗಳನ್ನು ಸ್ವಲ್ಪ ಧಾರಾಳವಾಗಿಯೂ ಶೀಘ್ರವಾಗಿಯೂ ಕೊಡುವುದು ಈ ಪ್ರಾಂತ್ಯ ಅವಶ್ಯವೆಂದು ಕಾಣುವುದು.

ಮೈಸೂರು ಬ್ಯಾಂಕ್, ಲಿಮಿಟೆಡ್

ರಾಜಧಾನಿಯಲ್ಲಿ ನಡೆದ ಮೀಟಿಂಗು

ಕಳೆದ ಭಾನುವಾರ ಮಧ್ಯಾಹ್ನ ರಾಜಧಾನಿಯ ಟೌನ್ ಹಾಲ್ ಮಂದಿರದಲ್ಲಿ ಇಲ್ಲಿನ ಶೆಟ್ಟಿವರ್ತಕರಲ್ಲೂ ಸಾಹುಕಾರರಲ್ಲೂ ಅಧಿಕಾರಿಗಳಲ್ಲೂ ಪ್ರಮುಖರಾದವರು ಸೇರಿ, ಮೈಸೂರು ಬ್ಯಾಂಕಿನ ಷೇರುಗಳ ಬಗ್ಗೆಗಾಗಿ ಒಂದು ಸಭೆಯನ್ನು ನಡಿಸಿದರು ಬ್ಯಾಂಕಿನ ಚೇರ್ಮನ್ ರಾದ ದಿವಾನ್ ಬಹದೂರ್ ಮ॥ ಕೆ ಪಿ ಪುಟ್ಟಣ್ಣಶೆಟ್ಟಿಯವರು ಸಭೆಯ ಅಗ್ರಾಸನವನ್ನು ವಹಿಸಿ, ಆ ಬ್ಯಾಂಕಿನ ಉದ್ದೇಶ, ಅದಕ್ಕೆ ಸರ್ಕಾರದವರಿಂದ ಕೊಡೋಣಾಗುವ ಸಹಾಯ ಪ್ರೋತ್ಸಾಹಾದಿಗಳನ್ನು ಕುರಿತು ಸ್ವಾರಸ್ಯವಾಗಿ ಭಾಷಣಮಾಡಿದರು ಸಭಿಕರು ಬ್ಯಾಂಕಿನ ವಿಚಾರವನ್ನು ಪ್ರಶ್ನೋತ್ತರ ರೂಪದಿಂದ ತಿಳಿದುಕೊಂಡರು

ರಾಜಧಾನಿಯಲ್ಲಿ ಭಾರಿ ವರ್ತಕರಾಗಿಯೂ ಈ ಬ್ಯಾಂಕಿನ ಡೈರೆಕ್ಟರಾಗಿಯೂ ಇರುವ ಮ॥ ಡಿ ಬಸವಯ್ಯನವರು ಆ ದಿನ ಸಭೆಯಲ್ಲಿ ಬಿಕರಿ ಆಗಿರುವ ಷೇರುಗಳ ವೃತ್ತಾಂತವನ್ನು ತಿಳಿಸಿರುತ್ತಾರೆ ಹ್ಯಾಗಂದರೆ ಮ, ಗಳಾದ ತಲಕಾಡು ಶ್ಯಾ॥ ಮತ್ತು ಜಹಗೀರ್ದಾರ್ ಟಿ ಎಸ್ ವೆಂಕಟಸುಬ್ಬಯ್ಯನವರು 200 ಷೇರುಗಳು ಅಂಬಳೆ ಅಣ್ಣಯ್ಯಪಂಡಿತರೂ, ಎಚ್ ಎಲ್ ದೇವರಾಜೆ ಅರಸಿನವರೂ ತಲಾ 100 ಷೇರುಗಳು, ಎಚ್ ನಂಜುಂಡರಾಜೆ ಅರಸಿನವರು, ಅಡ್ವೊಕೇಟ್ ಎ ರಾಮಣ್ಣನವರು, ಎಂ ಅನಂತರಾಜಯ್ಯನವರು, ಪದ್ಮರಾಜ ಪಂಡಿತರು, ಎನ್ ಎಸ್ ರಾವ್‌ರವರು, ಸಿ ಎಂ ಕೃಷ್ಣಶೆಟ್ಟರು, ಸಾ॥ ಎಂ ಪಾದಯ್ಯನವರು, ಗಂಜಾಂ ಬಾಲವಾಸಪ್ಪನವರ ಮಕ್ಕಳು ಸಾ॥ ಚೆನ್ನಕೃಷ್ಣಯ್ಯನವರು, ಮೊ॥ ಸೂರಣ್ಣನವರು ತಲಾ ೫0 ಷೇರುಗಳು, ಎಚ್ ರಂಗಸ್ವಾಮಯ್ಯಂಗಾರ್ರು 10 ಷೇರುಗಳು, ಎನ್ ಸಿದ್ದೋಜಿರಾಯರು 25 ಷೇರುಗಳು, ಆದಿರಾಜಯ್ಯನವರು, ಎಂ ಡಿ ಶ್ರೀನಿವಾಸಯ್ಯಂಗಾರ್ರು, ವೈ ಶ್ರೀನಿವಾಸರಾಯರು ತಲಾ 20 ಷೇರುಗಳು ಬಿ ಎನ್ ನರಸಾಚಾರ್ಯರು, ಪಟ್ಟಂ ರಾಮಶೆಟ್ಟರು, ಟಿ ಕೆ ಸುಂದರರಾಜಯ್ಯಂಗಾರ್ರು, ತಿರುವೆಂಗಡ ಮುದಲಿಯಾರ್ರು, ಎಚ್ ಹಿರಿಯಣ್ಣಪ್ಪನವರು ತಲಾ 10 ಷೇರುಗಳು ಈ ರೀತಿ 97,500 ರೂಪಾಯಿನ ಷೇರುಗಳನ್ನು ಪಡೆದು ಇರುತ್ತಾರೆ ಇವರಲ್ಲದೆ ಇನ್ನೂ ಅನೇಕರು ಷೇರುಗಳನ್ನು ತೆಗೆದುಕೊಂಡಿರುವರು ಮತ್ತು ಹಲವರು ಹೆಚ್ಚಿನ ಷೇರುಗಳನ್ನು ಕೊಂಡುಕೊಳ್ಳುವುದರಲ್ಲಿ ಉತ್ಸಾಹಭರಿತರಾಗಿರುವರೆಂಬ ಪರೀಕ್ಷೆ ಇದೊಂದರಿಂದ ಅಂಥವರು ಡೈರೆಕ್ಟರ್ ಮ ಡಿ ಬಸವಯ್ಯನವರನ್ನು ಕಂಡು ಅವರಿಂದ ಪಡೆಯಬಹುದಾಗಿದೆ

ಮೈಸೂರು ಸಿಟಿ ಮ್ಯುನಿಸಿಪಾಲಿಟಿ

ಹಾಲು ಮೊಸರು ಮೊದಲಾದವುಗಳಿಗೂ ದನಕರುಗಳ ಕೊಟ್ಟಿಗೆಗಳಿಗೂ ಸಂಬಂಧಪಟ್ಟ ಬೈಲಾಗಳು

(1) ಪ್ರೆಸಿಡೆಂಟರವರಿಂದ ಲೈಸೆನ್ಸನ್ನು ಪಡೆದ ಹೊರತು ಹಾಲು ಮೊಸರು ಮಾರತಕ್ಕ ಕಸಬನ್ನು ಯಾರೂ ಮಾಡಕೂಡದು ಡೈರಿ ಫಾರ್ಮ್ ಅಂದರೆ ಹಾಲು ಅಥವಾ ಬೆಣ್ಣೆ ವ್ಯಾಪಾರ ಮಾಡತಕ್ಕವನು ಅಥವಾ ಹಾಲು ಮಾರುವುದಕ್ಕೋಸ್ಕರ ಹಸು ಎಮ್ಮೆ ಮೊದಲಾದವುಗಳನ್ನು ಇಟ್ಟುಕೊಂಡಿರತಕ್ಕವನು (2) ಹಾಲು, ಮೊಸರು ಮೊದಲಾದವುಗಳನ್ನು ಮಾರಿ ಜೀವಿಸುವುದಕ್ಕೋಸ್ಕರ ಹಸು ಎಮ್ಮೆ, ಕರು ಮೊದಲಾದವುಗಳನ್ನು ಮನೆಯಲ್ಲಿಟ್ಟುಕೊಳ್ಳತಕ್ಕವರು ಪ್ರೆಸಿಡೆಂಟರಿಂದ ಲೈಸೆನ್ಸನ್ನು ಪಡೆಯಬೇಕು ಪ್ರೆಸಿಡೆಂಟರವರು ದನಗಳನ್ನು ಇಟ್ಟುಕೊಳ್ಳುವುದಕ್ಕೆ ಅನುಕೂಲವಾದ ಸ್ಥಳವಿದ್ದರೆ ಲೈಸೆನ್ಸನ್ನು ಕೊಡಬಹುದು ಇಲ್ಲವಿದ್ದರೆ ತಿರಸ್ಕರಿಸಬಹುದು (3) ಪ್ರತಿ ಸರ್ಕಾರಿ ವರುಷದ ಆದಿಯಲ್ಲಿ ತಿಂಗಳು ಪೂರೈಸುವುದರೊಳಗಾಗಿ ಎ ಪರೆ, ಜೂನ್ ಅಖೈರಿನೊಳಗಾಗಿ ಹಾಲು ಮೊಸರಿನ ಬಿಕರಿಗೋಸ್ಕರ ದನಗಳನ್ನು ಇಟ್ಟುಕೊಂಡಿರತಕ್ಕವರು ಅಥವಾ ಇಟ್ಟುಕೊಳ್ಳತಕ್ಕ ಅಪೇಕ್ಷೆಯುಳ್ಳವರು ಲೈಸೆನ್ಸಿಗೋಸ್ಕರ ಅಥವಾ ಲೈಸೆನ್ಸನ್ನು ನ್ಯೂರಿನ್ಯೂ ಮಾಡುವುದಕ್ಕೋಸ್ಕರ ಎಂದರೆ ಹೊಸದಾಗಿ ತೆಗೆದುಕೊಳ್ಳುವುದಕ್ಕೋಸ್ಕರ ಈ ಬೈಲಾಸಿಗೆ ಅನುಸಾರವಾಗಿ ಅರ್ಜಿಯನ್ನು ಹಾಕಿಕೊಳ್ಳಬೇಕು (4) ಇಂಥಾ ಲೈಸೆನ್ಸಿಗೆ ಎರಡು ರೂಪಾಯಿ ಫೀಜನ್ನು ಕೊಡಬೇಕು (5) ಹೀಗೆ ಲೈಸೆನ್ಸು ತೆಗೆದುಕೊಂಡವರು ವಾಸವಾಗಿರತಕ್ಕ, ಇದ್ದವರಾದತಕ್ಕ, ಅಥವಾ ಅಡಿಗೆಮಾಡತಕ್ಕ ಕೊಠಡಿಯಲ್ಲಿ ಅಥವಾ ಸ್ಥಳದಲ್ಲಿ ಹಾಲು, ಮೊಸರು ವಗೈರೆಗಳನ್ನು ಇಡಕೂಡದು (6) ಲೈಸೆನ್ಸು ತೆಗೆದುಕೊಂಡವರು ಹಾಲು, ಮೊಸರು ಮೊದಲಾದವುಗಳನು ಇಡತಕ್ಕ ಕೊಠಡಿಯ ಗೋಡೆಗಳನ್ನು, ಚಾವಣಿಯನ್ನು, ನೆಲವನ್ನು, ಬೀರು ಬೆಂಚು ವಗೈರೆಗಳನ್ನು ನಿರ್ಮಲವಾಗಿಟ್ಟುಕೊಂಡಿರಬೇಕು ಇವುಗಳನ್ನಿಡತಕ್ಕ ಪಾತ್ರೆಗಳನ್ನು ನಿರ್ಮಲವಾಗಿಡಬೇಕು ಪ್ರತಿನಿತ್ಯವೂ ಆ ಪಾತ್ರೆಗಳನ್ನು, ಹಾಲು, ಮೊಸರು, ಬಿಕರಿಯಾದ ಮೇಲೆ ಶುದ್ಧವಾಗಿ ತೊಳೆಯಬೇಕು (7) ಸಾಂಕ್ರಾಮಿಕ ರೋಗಗಳಿಂದಲಾಗಲೀ ಅಥವಾ ಇತರ ರೋಗಗಳಿಂದಲಾಗಲೀ ಪೀಡಿತರಾದವರ ಸಂಸರ್ಗವು ಹಾಲು, ಮೊಸರು ಮೊದಲಾದವುಗಳಿಗೆ ಅಥವಾ ಹಾಲು ಕರೆವತಕ್ಕ ದನಗಳಿಗೂ ಉಂಟಾಗದಂತೆ ಮಾಡಬೇಕು (8) ಲೈಸೆನ್ಸು ತೆಗೆದುಕೊಂಡವರು ಹಾಲು, ಮೊಸರು, ಬೆಣ್ಣೆ, ಮೊದಲಾದವುಗಳನ್ನು ಇಡುವುದಕ್ಕುಪಯೋಗಿಸುವ ಪಾತ್ರೆಗಳನ್ನು ತೊಳೆಯುವುದಕ್ಕೆ ನಲ್ಲಿ ನೀರನ್ನು ಉಪಯೋಗಿಸಬೇಕು ಅಥವಾ ಪ್ರೆಸಿಡೆಂಟರವರಿಂದ ಒಪ್ಪಲ್ಪಟ್ಟ ಭಾವಿ ನೀರನ್ನು ಉಪಯೋಗಿಸಬಹುದು ಬೇರೆ ನೀರನ್ನು ಉಪಯೋಗಿಸಕೂಡದು (9) ಲೈಸೆನ್ಸ್ ತೆಗೆದುಕೊಂಡಿರತಕ್ಕವನು ತಾನಿಟ್ಟುಕೊಂಡಿರತಕ್ಕ ದನಗಳಿಗೆ ಸಾಂಕ್ರಾಮಿಕ ರೋಗವೇನಾದರು ಬಂದರೆ ಆ ವಿಷಯವನ್ನು ತಕ್ಷಣವಲ್ಲಿಯೇ ಹೆಲ್ತಾಫೀಸರಿಗೆ ತಿಳಿಸಬೇಕು ಮತ್ತು ಖಾಯಿಲೆ ಇರತಕ್ಕ ದನಗಳ ಸಂಸರ್ಗವು ಇತರ ದನಗಳಿಗೆ ಉಂಟಾಗದಂತೆ ಮಾಡಬೇಕು ಅಂಥಾ ಸ್ಥಳವು ದೊರೆಯದೇ ಇದ್ದರೆ ಹೆಲ್ತಾಫೀಸರವರು ಅಥವಾ ಪ್ರೆಸಿಡೆಂಟರವರು ತೋರಿಸತಕ್ಕ ಸ್ಥಳಗಳಲ್ಲಿ ಖಾಯಿಲೆ ದನಗಳನ್ನು ಇಡಬೇಕು ಈ ಭಾಗದಲ್ಲಿ ಪ್ರೆಸಿಡೆಂಟರವರು ಅಥವಾ ಹೆಲ್ತಾಫೀಸರವರು ಕೊಡತಕ್ಕ ಹುಕುಂಗೆ ಅನುಸಾರವಾಗಿ ನಡೆಯಬೇಕು (10) ಲೈಸೆನ್ಸ್ ಪಡೆದಿರತಕ್ಕ ಮನುಷ್ಯನು ಖಾಯಿಲೆ ದನಗಳ ಹಾಲನ್ನು ಹೆಲ್ತಾಫೀಸರವರ ಲಿಖಿತಮೂಲಕವಾದ ಅಪ್ಪಣೆ ಇಲ್ಲದೆ ಉಪಯೋಗಿಸಕೂಡದು ಮತ್ತು ಮಾರಕೂಡದು (11) ಈ ಬೈಲಾಗಳಲ್ಲಿ ಕಂಡ ವಿಧಿಗಳನ್ನು ಉಲ್ಲಂಘಿಸಿದವರಿಗೆ 50 ರೂಪಾಯಿಗೆ ಮೀರದ ಜುಲ್ಮಾನೆಯು ವಿಧಿಸಲ್ಪಡುವುದು (12) ರೋಗದಿಂದ ಪೀಡಿತವಾದ ದನಗಳನ್ನು ಪ್ರತ್ಯೇಕವಾಗಿ ಇಡುವುದು, ಅವುಗಳಿಂದ ಹಾಲನ್ನು ಕರೆಯುವುದು, ಈ ವಿಷಯಗಳಲ್ಲಿ ಪ್ರೆಸಿಡೆಂಟರವರ ಅಥವಾ ಹೆಲ್ತಾಫೀಸರವರ ಅಪ್ಪಣೆಯ ಪ್ರಕಾರ ನಡೆಯುವುದಕ್ಕೆ ಲೈಸೆನ್ಸ್‌ದಾರರು ಬದ್ಧರಾಗಿರುತ್ತಾರೆ ಈ ರೂಲುಗಳನ್ನು ಅತಿಕ್ರಮಿಸಿ ನಡೆಯುತಕ್ಕವರು 50 ರೂಪಾಯಿ ಜುಲ್ಮಾನೆಗೆ ಗುರಿಮಾಡಲ್ಪಡುವರು

ಮೈಸೂರು ಸರ್ಕಾರದ ಪ್ರಕಟನೆಯು.

ಮೈಸೂರು ಸ್ಟೇಟ್ ಲೈಫ್ ಇನ್ಷೂರೆನ್ಸ್ ಕಂಪನಿಗೆ ಸೇರಿ ಭೀಮಾ ಮಾಡಿ ಭೀಮಾ ದಸ್ತಾವೇಜುಗಳು ಪಡೆದು ಮೃತಪಟ್ಟಿರುವ ಭೀಮಾದಾರರ ಹೆಸರುಗಳು ಈ ಕೆಳಗೆ ನಮೂದಿಸಲ್ಪಟ್ಟಿರುತ್ತೆ 1912 ನೇ ಇಸವಿ ಜುಲೈ 1 ನೇ ತಾರೀಖಿನ ವರಿವಿಗು ಅವರ ಭೀಮಾ ಮೊಬಲಗುಗಳು ಯಾರಿಗೂ ಪಾವತಿಯಾಗದೆ ನಿಂತಿರುವುದು ಈ ಕೆಳಗೆ ನಮೂದಿಸಲ್ಪಡುವ ಮೃತಪಟ್ಟ ಭೀಮಾದಾರರುಗಳ ವಾರಸ್‌ದಾರರು ಮೈಸೂರು ಸಂಸ್ಥಾನದ ಕೋರ್ಟಿನಿಂದ ತಕ್ಕ ಸಾಕ್ಸೆಸ್ ಸರ್ಟಿಫಿಕೇಟುಗಳನ್ನು ಪಡೆದು ಸರ್ಕಾರಿ ಇನ್ಷೂರೆನ್ಸ್ ಕಮಿಟಿಯ ಸೆಕ್ರೆಟರಿಯವರ ಆಫೀಸಿಗೆ ತಮ್ಮ ಹಕ್ಕುಗಳನ್ನು ಅರ್ಜಿ ಮೂಲಕವಾಗಿ ಸರ್ಟಿಫಿಕೇಟುಗಳ ಕೂಡ ತಮ್ಮ ಹಿತಕ್ಕೋಸ್ಕರ ಕಳುಹಿಸಿಕೊಡಬೇಕೆಂಬ ವಿಷಯವು ಇದರಿಂದ ಸೂಚಿಸಲ್ಪಡುತ್ತದೆ

ವಿದ್ಯಾಭ್ಯಾಸದ ಇಲಾಖೆ.—ಅರಕಲಗೂಡು ತಾಲ್ಲೂಕು ಕನ್ನಡ ಸ್ಕೂಲ್ ಸಂಸ್ಕೃತ ಅ ಮಾಸ್ಟರ್ ಎಂ ಅಲಮೇಲ್ವಾಚಾರ್, ಅರಕಲಗೂಡು ಗರಲ್ಸ್ ಸ್ಕೂಲ್ ಮಾಸ್ಟರ್ ಎಸ್ ಕೃಷ್ಣಪ್ಪ, ದೊಡ್ಡಬೆಲೆ ಸ್ಕೂಲ್ ಮಾಸ್ಟರ್ ವಿ ಹನುಮಂತರಾಯಚೆಟ್ಟಿ, ಮೈಸೂರು ಸರ್ಕಾರಿಯ ಕನ್ನಡ ಟ್ರಾನ್ಸ್‌ಲೇಟರ್ ಸಿ ಜಿ ನರಸಿಂಹಾಚಾರ್, ಟಿ ನರಸೀಪುರದ ಸ್ಕೂಲ್ ಮಾಸ್ಟರ್ ಡಿ ಶ್ರೀಕಂಠಶಾಸ್ತ್ರಿ, ಬೇಲೂರು ಪಂಚಮ ಸ್ಕೂಲ್ ಮಾಸ್ಟರ್ ಎ ಚಿಕ್ಕಹೊನ್ನಯ್ಯ, ಶಿವಮೊಗ್ಗ ಎ ವಿ ಸ್ಕೂಲ್ ಅ ಮಾಸ್ಟರ್ ಸಿ ರಾಮರಾವ್ ಚಿಂತಾಮಣಿ ಗರಲ್ ಸ್ಕೂಲ್ ಸ್ಯೂಯಿಂಗ್ ಮಿಸ್ಟ್ರೆಸ್ ಸಿ ಲಕ್ಷ್ಮಮ್ಮ, ಮಳವಳ್ಳಿ ಹಿಂದಿ ಬಾಯ್ಸ್ ಸ್ಕೂಲ್ ಹೆಡ್‌ಮಾಸ್ಟರ್ ಮಹಮದ್‌ಗೌಸ್, ಸೆರಿಯಾಪಟ್ಟಣದ ಸ್ಟೇಟ್ ಗೌನ್ಮೆಂಟ್ ಎ ವಿ ಸ್ಕೂಲಿನ ಫಸ್ಟ್ ಅ॥ ಮಾಸ್ಟರ್ ಆರ್ ಸುಬ್ಬರಾಯ, ದಾವಣಗೆರೆ ಕುಕ್ಕೆ ಎ ಇ ಸ್ಕೂಲ್ ಮಾಸ್ಟರ್ ಎಚ್ ಎ ಬಸವಲಿಂಗಯ್ಯ, ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಎ ಇ ಸ್ಕೂಲ್ ಅ॥ ಮಾಸ್ಟರ್ ಎ ವಾಸುದೇವರಾವ್, ಮಧುಗಿರಿ, ಕೊಡಗಿನಹಳ್ಳಿ ಎ ಇ ಸ್ಕೂಲ್ ಮಾಸ್ಟರ್ ಕೆ ರಾಮರಾವ್, ಸಿಕಾರಿಪುರ ತಾಲ್ಲೂಕು ಶಿರಾಳಕೊಪ್ಪದ ಎ ಇ ವಾಯ್ಸ್ ಸ್ಕೂಲಿನ ಮಾಸ್ಟರ್ ಎಚ್ ಶಂಕರರಾವ್ ನೆಲಮಂಗಲ ತಾಲ್ಲೂಕು ದಾಬಸ್ ಪೇಟೆಯ ಎ ಇ ಸ್ಕೂಲ್ ಮಾಸ್ಟರ್ ಎಸ್ ನಂಜುಂಡಶಾಸ್ತ್ರಿ, ಆನೆಕಲ್ ತಾಲ್ಲೂಕು ಕನ್ನಡ ಗರಲ್ ಸ್ಕೂಲ್ ಮಾಸ್ಟರ್ ಆರ್ ವೆಂಕಟಯ್ಯ, ಮುಳಬಾಗಿಲು ಎ ವಿ ಸ್ಕೂಲಿನ ಅ ಮಾಸ್ಟರ್ ಎಂ ಎಸ್ ನರಸಿಂಹಾಚಾರ್, ಮಧುಗಿರಿ ಎ ವಿ ಸ್ಕೂಲಿನ ಸಂಸ್ಕೃತ ಅ॥ ಮಾಸ್ಟರ್ ಎ ಲಕ್ಷ್ಮಣಾಚಾರ್, ಶೃಂಗೇರಿ ಎ ವಿ ಸ್ಕೂಲಿನ ಅ ಮಾಸ್ಟರ್ ಕೆ ಸಾ ಬಸವಶಾಸ್ತ್ರಿ, ತಿಪ್ಟೂರು ತಾಲ್ಲೂಕು ಗುಬ್ಬಿಗಹಳ್ಳಿ ಎ ಇ ಸ್ಕೂಲ್ ಮಾಸ್ಟರ್ ಪಿ ಶ್ರೀನಿವಾಸಾಚಾರ್ ದೇವನಹಳ್ಳಿ ತಾಲ್ಲೂಕು ಆವತಿ ಎ ಇ ಸ್ಕೂಲ್ ಮಾಸ್ಟರ್ ಎಂ ವೆಂಕಟರಮಣಯ್ಯ, ಗೌರಿಬಿದನೂರು ತಾಲ್ಲೂಕು ಹೊಸೂರಿನ ಎ ಇ ಸ್ಕೂಲ್ ಮಾಸ್ಟರ್ ಬಿ ನರಸಿಂಗರಾವ್, ತುಮಕೂರು ತಾಲ್ಲೂಕು ಹೊಳಸಿಗಿರಿ ಎ ಇ ಸ್ಕೂಲ್ ಮಾಸ್ಟರ್ ರಾಮಕೃಷ್ಣಯ್ಯ, ಬೆಂಗಳೂರು ಡ್ರಿಲ್ ಮತ್ತು ಜಿಮ್ನಾಸ್ಟಿಯಂ ಇನ್‌ಸ್ಪೆಕ್ಟರ್ ಎಂ ಸಿ ಪಾರ್ಥಸಾರಥಿ ಅಯ್ಯಂಗಾರ್, ಬೆಂಗಳೂರು ಸ್ಕೌಟ್ ಡೆಪ್ಯುಟಿ ಇನ್ಸ್ಪೆಕ್ಟರ್ ಆಫೀಸಿನ ಗುಮಾಸ್ತ ಜಿ ರಾಮಾಚಾರ್

ಪಬ್ಲಿಕ್ ವರ್ಕ್ಸ್ ಇಲಾಖೆ —ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖಾ ಸಬ್ ಓವರಿಸಿಯರ್ ಎನ್ ವೆಂಕೋಬರಾವ್, ತುಮಕೂರು ಡಿಟ್ಟೋ ಸಯದ್ ಜಲಾಲ್‌ಸಾಬ್, ಚಿಕ್ಕಬಳ್ಳಾಪುರದ ಪಬ್ಲಿಕ್ ವರ್ಕ್ಸ್ ಇಲಾಖಾ ನಾಲೆ ಮಣೆಗಾರ್ ಎಂ ನರಸಿಮ್ಮಯ್ಯ, ಸ್ಟೇಟ್‌ರಾಕ್ಸ್ ಟ್ರಾವಲ್ಸ್ ಡಿವಿಜನ್ ವಿಶಾಲಮ ಕೀಪರ್ ವಿ ಕುಪ್ಪಸ್ವಾಮಿ ಮೊದಲಿಯಾರ್

ಜುಡಿಷಿಯಲ್ ಇಲಾಖೆ —ಬೆಂಗಳೂರು ಅಡಿಷನಲ್ ಡಿಸ್ಟ್ರಿಕ್ಟ್ ಕೋರ್ಟಿನ ಮುನಸಿ ಬೆಂಗಳೂರು ಎಸ್ ರಾಮಚಂದ್ರರಾವ್, ಬೆಂಗಳೂರು ಸಬ್ ಜಡ್ಜಿ ಕೋರ್ಟಿನ ಡೆಪ್ಯುಟಿ ಮುನಸಿ ಬೆಂಗಳೂರು ಎ ಎಲ್ ನರಸಿಂಹಯ್ಯ ತುಮಕೂರು ಮುನ್ಸಿಫ್ ಕೋರ್ಟಿನ 2 ನೇ ಗ್ರೇಡ್ ಅಮೀನ್ ಬೆಂಗಳೂರು ಲಕ್ಷ್ಮೀನಾರಣಪ್ಪ, ಎಡೆಹಳ್ಳಿ ಮುನ್ಸಿಫ್ ಕೋರ್ಟಿನ ಹೆಡ್ ಮುನಸಿ ಶಿವಮೊಗ್ಗ ಬಿ ಶ್ರೀನಿವಾಸಯ್ಯ, ಶಿವಮೊಗ್ಗ ಡಿಸ್ಟ್ರಿಕ್ಟ್ ಮತ್ತು ಸೆಷನ್ಸು ಕೋರ್ಟಿನ ಅಸಿಸ್ಟೆಂಟ್ ನಾಜರ್ ಶಿವಮೊಗ್ಗ ಎಚ್ ಮೂಡ್ಲಿಗಿರಿರಾವ್, ನಂಜನಗೂಡಿನ ಮುನ್ಸಿಫ್ ಕೋರ್ಟಿನ ಅಮೀನ್ ಮೈಸೂರು ಎನ್ ರಾಮನಾಥಯ್ಯ, ಮೈಸೂರು ಸೆಂಟ್ರಲ್ ನಾಜರ್ ಬ್ರಾಟ ಅಮೀನ್ ಮೈಸೂರು ಬಿ ವೆಂಕಟಯ್ಯ

ಮ್ಯುನಿಸಿಪಲ್ ಡಿಪಾರ್ಟ್‌ಮೆಂಟ್ —ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಗುಮಾಸ್ತ ಎರೋನ್ಸ್ ಮಸ್ಸ್ರಿಯಾ

ಅಕೌಂಟ್ ಡಿಪಾರ್ಟ್‌ಮೆಂಟ್ —ಬೆಂಗಳೂರು ಕಂಟ್ರೋಲರ್ ಆಫೀಸ್ ಜೂನಿಯರ್ ಅಕೌಂಟೆಂಟ್ ಬಿ ಕೃಷ್ಣರಾವ್

ರಿಜಿಸ್ಟ್ರೇಷನ್ ಡಿಪಾರ್ಟ್‌ಮೆಂಟ್ —ಕಡೂರು ಸಬ್ ರಿಜಿಸ್ಟ್ರಾರ್ ಆಫೀಸ್ ರಿಜಿಸ್ಟ್ರೇಷನ್ ಕ್ಲಾರ್ಕು ಡಿ ರಾಮರಾವ್, ಗೌರಿಬಿದನೂರು ಫಸ್ಟ್ ಗ್ರೇಡ್ ಸಬ್ ರಿಜಿಸ್ಟ್ರಾರ್ ಪಿ ಶ್ರೀನಿವಾಸಾಚಾರ್, ಬೆಂಗಳೂರು ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಆಫೀಸಿನ ಮುಚ್ಚ ಬಿ ರಾಮಚಂದ್ರಯ್ಯ

ಎಕ್ಸೈಜು ಡಿಪಾರ್ಟ್‌ಮೆಂಟ್ - ಮೂಡಿಗೆರೆ ಎಕ್ಸೈಜ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ವಿ ಎನ್ ರಾಜರತ್ನಂಶೆಟ್ಟಿ, ಬೆಂಗಳೂರು ಡಿಟ್ಟೋ ಮಹಮದ್ ಖಯರುಲ್ಲಾ ಮುಲ್ಕೆ, ಮೈಸೂರು ಎಕ್ಸೈಜ್ ಸಬ್ ಇನ್ಸ್‌ಪೆಕ್ಟರ್ ಎನ್ ಸುಬ್ಬರಾವ್

ಪೋಲೀಸ್ ಡಿಪಾರ್ಟ್‌ಮೆಂಟ್ —ಹರಿಹರದ ಪೋಲೀಸ್ ದಫೇದಾರ್ ಸೀತಾರಾಮಯ್ಯಂಗಾರ್, ಗುಬ್ಬಿ ಟ್ಯಾಸ್ಕ್ ದಫೇದಾರ ನಂಬರ್ 111 ಹನುಮಂತಯ್ಯ, ಶಿವಮೊಗ್ಗ ತಾಲ್ಲೂಕು ಪೋಲೀಸ್ ಜಮೇದಾರ್ ಹೆಚ್ ಕೃಷ್ಣರಾವ್, ಮೈಸೂರು ಡಿಸ್ಟ್ರಿಕ್ಟ್ ರಿಜರ್ವ್ ಪೋಲೀಸ್ ಸೆಕೆಂಡ್ ಕ್ಲಾಸು ದಫೇದಾರ್ ಸಂಜೀವ ರಾಮರಾವ್, ಬೆಂಗಳೂರು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಆಫೀಸಿನ ಗುಮಾಸ್ತ ಎಂ ಜಿ ಪುಟ್ಟರಾವ್

ಮಿಲಿಟರಿ ಡಿಪಾರ್ಟ್‌ಮೆಂಟ್ —ಶಿವಮೊಗ್ಗ 2 ನೇ ಬೆಟ್ಯಾಲಿಯನ್ ಮೈಸೂರು ಇನ್‌ಫೆಂಟ್ರಿಯ ರೈಟರ್ ಟಿ ವೆಂಕಟರಾಮಯ್ಯ

ಮೈಸೂರು ರೆವಿನ್ಯೂ ಸರ್ವೇ ಡಿಪಾರ್ಟ್‌ಮೆಂಟ್ —ಮೈಸೂರು ರೆವಿನ್ಯೂ ಸರ್ವೇ ಕಾರ್ಕೂನ್ ಎನ್ ಆದಿನಾರಾಯಣ ಶಿವರಾಮಯ್ಯ, ಡಿಟ್ಟೋ ಮ್ಯಾಪರ್ ಶ್ರೀ, ವಾಸಕೃಷ್ಣ ಹೊನ್ನನಾರ್, ಡಿಟ್ಟೋ ಕಾರ್ಕೂನ್ ಗುರುರಾವ್ ರಾಘೋಜಿ, ಡಿಟ್ಟೋ ಮೋಜಣಿದಾರ್ ಬಿಸ್ಮೋನಾರಾಯಣ್, ಡಿಟ್ಟೋ ಕಾರ್ಕೂನ್ ಕೇಶವ ಗುರುರಾವ್

ರೆವಿನ್ಯೂ ಡಿಪಾರ್ಟ್‌ಮೆಂಟ್ —ಕಾರ್ಕಾನ್‌ಹಳ್ಳಿ ರೆವಿನ್ಯೂ ಗುಮಾಸ್ತ ಬೆಂಗಳೂರು ವಿ ಎನ್ ಪುಟ್ಟನರಸಯ್ಯ, ಹೊಸಕೋಟೆ ಡೆಪ್ಯುಟಿ ಮುನಸಿ ಬೆಂಗಳೂರು ಆರ್ ಕೃಷ್ಣಮೂರ್ತಿ, ಕೋಲಾರ ತಾಲ್ಲೂಕು ರೆವಿನ್ಯೂ ಗುಮಾಸ್ತ ಕೋಲಾರ ಸಯ್ಯದ್ ಅಬ್ದುಲ್‌ರಹೀಂ, ಗೌರಿಬಿದನೂರು ನಗದಿ ಗುಮಾಸ್ತ ಕೋಲಾರ ಕೆ ರಂಗಯ್ಯ, ಮಾಲೂರು ತಾಲ್ಲೂಕು ಆಫೀಸು ಡೆಪ್ಯುಟಿ ಮುನಸಿ ಕೋಲಾರ ಟಿ ರಂಗಾಚಾರ್, ತುಮಕೂರು ಜುಡಿಷಿಯಲ್ ಡೆಪ್ಯುಟಿ ಮುನಸಿ ತುಮಕೂರು ಸಿ ಶೇಷಗಿರಿರಾವ್, ನಗರದ ಸಬ್ ಡಿವಿಜನ್ ಆಫೀಸು ಮರಾಠಿ ಕ್ಲಾರ್ಕು ಶಿವಮೊಗ್ಗ ಎಲ ನರಸಿಂಹಯ್ಯಂಗಾರ್ ತರೀಕೆರೆ ರೆವಿನ್ಯೂ ಗುಮಾಸ್ತ ಕಡೂರು ವೆಂಕಟರಾವ್, ಚಿತ್ರದುರ್ಗದ ಡೆಪ್ಯುಟಿ ಕಮಿಷನರ್ ಆಫೀಸು ಎಕ್ಸೈಜ್ ಕ್ಲಾರ್ಕು ಚಿತ್ರದುರ್ಗ ಬಿ ರಾಮಯ್ಯಂಗಾರ್, ದಾವಣಗೆರೆ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಆಫೀಸ್ ಡೆಪ್ಯುಟಿ ಮುನಸಿ ಚಿತ್ರದುರ್ಗ ಬಿ ವೆಂಕಟರಾವ್, ಮಂಡ್ಯ ತಾಲ್ಲೂಕು ಶೇಕದಾರ ಮೈಸೂರು ಸೈಯದ್ ಮಹಮದ್ ಪೀರ್, ಹುಣಸೂರು ಮುನಿಸಿಪಲ್ ಮ್ಯಾನೇಜರ್ ಮತ್ತು ಡೆಪ್ಯುಟಿ ಮುನಸಿ ಮೈಸೂರು ಲಕ್ಷ್ಮೀ ನರಸಿಂಹಯ್ಯ ಬೇಲೂರು ರೆವಿನ್ಯೂ ಗುಮಾಸ್ತ ಮೈಸೂರು ಹೆಚ್ ಕೇಶವಯ್ಯ

ಫಾರೆಸ್ಟ್ ಡಿಪಾರ್ಟ್‌ಮೆಂಟ್ —ಮೂಡಿಗೆರೆ ಫಾರೆಸ್ಟ್ ರೇಂಜು ಆಫೀಸರ್ ಎನ್ ನಾರಾಯಣರಾವ್, ಬೆಂಗಳೂರು ಡಿಸ್ಟ್ರಿಕ್ಟ್ ಟೆಂಗಿನಹಳ್ಳಿ ರೇಂಜ್ ಫಾರೆಸ್ಟರ್ ಎಂ ವೆಂಕಟರಾವ್ ಸಿಂಧೆ, ಫ್ರೇಜರ್‌ಪೇಟೆ ರೇಂಜು ಫಾರೆಸ್ಟ್ ಆಫೀಸರ್ ಸಿ ಅಪ್ಪಯ್ಯ, ಮೈಸೂರು ಅಮ್ಮನಗುಡಿ ಸಬ್ ರೇಂಜು ಫಸ್ಟ್ ಗ್ರೇಡ್ ಫಾರೆಸ್ಟರ್ ಕೆ ವೆಂಕಟನಾರಣಪ್ಪ

ಮೆಡಿಕಲ್ ಡಿಪಾರ್ಟ್‌ಮೆಂಟ್ —ಮೈಸೂರು ಮೆಡಿಕಲ್ ಸರ್ವಿಸ್ 1 ನೇ ಕ್ಲಾಸು ಹಾಸ್ಪಿಟಲ್ ಅಸಿಸ್ಟೆಂಟ್ ಎಂ ಎಲ್ ರಾಮಣ್ಣ ಮಿಡ್‌ವೈಫ್ ಆನೆಕಲ್ ಎ ಆರ್ ಅಬ್ದುಲ್ ನಮ್ಮಾಳ್, ಹೊಸಕೋಟೆ, ಲೋಕಲ್ ಫಂಡ್ ಡಿಸ್ಪೆನ್ಸರಿ ಕಾಂಪೌಂಡರ್ ಶಿವಸಿಂಗ್, ಮಿಡ್‌ವೈಫ್ ಮಳವಳ್ಳಿ ಯಜಚೆತ ಬಂಗಾರು

ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯೇಟ್ —ಬೆಂಗಳೂರು ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯೇಟ್ ದಸ್ತಾಬಂದ ವೈ ವೆಂಕಟಕೃಷ್ಣಯ್ಯ

ಮೈಸೂರು ಸಂಪದಭ್ಯುದಯ ಸಮಾಜದ ವಾರ್ಷಿಕ ಸಭೆ

ದಿವಾನ್‌ರವರ ಉಪನ್ಯಾಸವು

ಕಳೆದ 12 ನೇ ತಾ ಗುರುವಾರ ಮಧ್ಯಾಹ್ನ 12 ಗಂಟೆಗೆ ಮೈಸೂರು ಸಂಪದಭ್ಯುದಯ ಸಮಾಜದ ವಾರ್ಷಿಕ ಮಹಾ ಸಭೆಯು ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ಉಪ್ಪರಿಗೆಯ ಮೇಲೆ ಪ್ರಾರಂಭವಾಯಿತು ಸಮಾಜದ ಮೆಂಬರುಗಳಾದ ಕೌನ್ಸಿಲ್ ಮೆಂಬರುಗಳೂ ಅಧಿಕಾರಿಗಳೂ, ಬೇರೆ ಜಿಲ್ಲಾ ಮೆಂಬರುಗಳೂ ಹಾಜರಾಗಿದ್ದರು ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ದಿವಾನ್ ಮಿ ಎಂ ವಿಶ್ವೇಶ್ವರಯ್ಯನವರು ದಯಮಾಡಿ ಸಭೆಯ ಅಗ್ರಾಸನವನ್ನು ವಹಿಸಿ ಸಭೆಯನ್ನು ಪ್ರಾರಂಭಮಾಡಿದಾಗ ಉಪನ್ಯಾಸ ಮಾಡಿದರು ಅವರು ಆಗ ಹೇಳಿದ ಮುಖ್ಯ ವಿಷಯಗಳನ್ನು ಕ್ರೋಢೀಕರಿಸಿ ಇಲ್ಲಿ ಪ್ರಕಟಿಸುವೆವು

ಶ್ರೀಮನ್ ಮಹಾರಾಜರವರ ಆಜ್ಞಾನುಸಾರವಾಗಿ ಈ ಸಾಲಿನಲ್ಲಿ ಮಹಾಸಭೆಯು ಮೆಂಬರುಗಳಾದ ನಮಗೆ ಸಮಾಗಮವನ್ನು ಸಂತೋಷದಿಂದ ಬಯಸಿ ನೀವೆ ಮಹಾಸಭೆಯಲ್ಲಿ ಈ ಸಭೆಯ ಮೆಂಬರುಗಳು ಈವರೆಗೆ ಆಲೋಚನೆಗಳನ್ನು ಮಾಡಿ ಚರ್ಚೆಗಳನ್ನು ನಡಿಸಿದ್ದರಲ್ಲಿ ಈ ದೇಶದ ಸಂಪದಭಿವೃದ್ಧಿಗೆ ಸಹಕಾರಿಗಳಾದ ಹಲವು ವಿಚಾರಗಳೂ ಕೊರತೆಗಳೂ ಹೊರಪಟ್ಟಿರುವವು ಈ ಕೊರತೆಗಳನ್ನು ಬೇಗನೆ ನಿವಾರಣೆಮಾಡಬೇಕಾಗಿರುವುದು ಮತ್ತು ಈ ದೇಶದ ಗುಪ್ತಧನವನ್ನು ಉಪಯೋಗಿಸಿಕೊಂಡು ಸಂಪದಭಿವೃದ್ಧಿಯನ್ನು ಮಾಡಬೇಕಾಗಿದೆ ವಿಚಾರಗಳೆಲ್ಲಾ ಇನ್ನೂ ಆಲೋಚನೆಯಲ್ಲೂ ಚರ್ಚೆಯಲ್ಲೂ ಇರೋಣದರಿಂದ ಅವು ಕಾಲಕ್ರಮದಲ್ಲಿ ಫಲಕಾರಿಗಳಾಗಿ ಪರಿಣಮಿಸಲು ಅನುಕೂಲಿಸುವುದೆಂದು ನಿರೀಕ್ಷಿಸುತ್ತೇವೆ ಖಂಡಿತವಾದ ಮಾರ್ಗಗಳು ನಿರ್ಧಾರವಾದಲ್ಲಿಟ್ಟು ಮೇಲೆ ಗವರ್ನ್‌ಮೆಂಟಿನವರೂ ಪ್ರಜೆಗಳೂ ಆ ರೀತಿ ಕಾರ್ಯಾರಂಭವಾಡುವುದು ಹಿತಕರವಾದೀತು

ಪ್ರಜೆಗಳ ಸ್ಥಿತಿಗತಿ —ನಮ್ಮ ಸೀಮೆಯ ಪ್ರಜೆಗಳಲ್ಲಿ ಬಹು ಭಾಗದವರಿಗೆ ವಿದ್ಯೆ ಇಲ್ಲ, ವ್ಯವಸಾಯವೇ ಅವರ ಮುಖ್ಯ ಕಸಬಾಗಿದೆ ಈಗಿನ ಕಾಲಕ್ಕೆ ತಕ್ಕಂಥ ಗಣ್ಯವಾದ ಕಸಬುಗಳಾಗಲಿ ವ್ಯಾಪಾರವಾಗಲಿ ಅವರಿಗೆ ಪರಿಶ್ರಮವಿಲ್ಲ ನಮ್ಮ ಸೀಮೆಯಂತೆ ವ್ಯವಸಾಯವನ್ನೇ ಮುಖ್ಯ ಕಸಬಾಗಿ ಇಟ್ಟುಕೊಂಡಿರುವ ಯಾವ ದೇಶವೂ ಉಚ್ಚ ಸ್ಥಿತಿಯಲ್ಲಿರಲಾರದು ನಮ್ಮ ಜನರಲ್ಲಿ ಸಾಮಾನ್ಯವಾದ ಜೀವನೋಪಾಯದಲ್ಲಿರುವ ಜನರಿಗೂ, ದರಿದ್ರಾವಸ್ಥೆಯಲ್ಲಿರುವ ಜನರಿಗೂ ವಿಶೇಷ ತಾರತಮ್ಯವೇನೂ ಕಾಣುವುದಿಲ್ಲ ಮಳೆ ಬಾರದೆ ಹಡೆದ ವರ್ಷದಲ್ಲಿ ದುರ್ಭಿಕ್ಷವು ಪ್ರಾಪ್ತವಾಯಿತೆಂದರೆ ನಮ್ಮ ಜನರಲ್ಲಿ ಅತಿ ದರಿದ್ರರಾದವರು ಬಹಳ ಸಂಕಟಕ್ಕೆ ಗುರಿಯಾಗುತ್ತಾರೆ 1877ನೇ ಇಸವಿಯಲ್ಲಿ ಪ್ರಾಪ್ತವಾದಂಥಾ ಕಠಿಣವಾದ ಕ್ಷಾಮವೇನಾದರೂ ಪ್ರಾಪ್ತವಾದಲ್ಲಿ ಮೈಸೂರಿನ ಅನೇಕಾನೇಕ ಪ್ರಜೆಗಳು ಹೊಟ್ಟೆಗಿಲ್ಲದೆ ಸಾಯುವ ಸ್ಥಿತಿಗೆ ಬಂದಾರು —ಆದುದು ರಸ್ತೆಗೆ ಅನುಕೂಲತೆಗಳು ಬೇಗಬೇಗನೆ ಹೆಚ್ಚುತ್ತಾ ಬಂದಿರೋಣದರಿಂದ ಪ್ರಪಂಚವೆಲ್ಲಾ ಒಂದೇ ದೇಶದಂತಾಗಿದೆ ಜೀವನಾಧಾರವಾದ ದಿನಸಿಗಳ ಮತ್ತೂ ಪದಾರ್ಥಗಳ ಧಾರಣೆಗಳು ಬರಬರುತ್ತಾ ಒಂದೇ ರೂಪವನ್ನು ಹೊಂದುತ್ತಿರುವವು ಅಂಥಾ ದಿನಸುಗಳನ್ನೂ ಪದಾರ್ಥಗಳನ್ನೂ ಕೊಂಡುಕೊಳ್ಳಲು ಸಮರ್ಥರಾದವರು ಮಾತ್ರ ಆರೋಗ್ಯವಾಗಿಯೂ ಸುಖದಿಂದಲೂ ಜೀವನಮಾಡಬಲ್ಲರು ಅಂಥವರು ಚಟುವಟಿಕೆಯಿಂದ ಕೆಲಸಮಾಡುವರು, ಅವರ ಬುದ್ಧಿ ಕುಶಲತೆಯು ತೀಕ್ಷ್ಣತೆಹೊಂದಿದ್ದಾಗಿರುವುದು, ಮತ್ತೂ ಅವರಿಗೆ ಪ್ರಪಂಚಜ್ಞಾನವು ವಿಶೇಷವಾಗಿರುವುದು ಇಂಥವರು ಮಾತ್ರ ಸುಖದಿಂದ ಜೀವಿಸುತ್ತಾರೆ —ಮೇಲ್ತರದ ಜೀವನ ನಡೆಯಬೇಕಾದರೆ ಜನರು ಚಟುವಟಿಕೆಯುಳ್ಳವರಾಗಿಯೂ, ಬುದ್ಧಿಶಾಲಿಗಳಾಗಿಯೂ, ತಿಳುವಳಿಕೆಯುಳ್ಳವರಾಗಿಯೂ, ಹೆಚ್ಚು ಕೆಲಸ ಮಾಡತಕ್ಕವರಾಗಿಯೂ ಇದ್ದ

ಹೊರತು ಅದು ಸಾಧ್ಯವಲ್ಲವೆಂದು ಯೂರೋಪಿನ ದೇಶೀಯರು ತಿಳಿದವರಾಗಿರುತ್ತಾರೆ. ಆ ದೇಶಗಳ ಸರ್ಕಾರದವರೂ ಪ್ರಜೆಗಳ ಮುಖಂಡರೂ ಸಾಮಾನ್ಯ ಪ್ರಜೆಗಳಿಗೆ ಅವಶ್ಯವಾದ ಕುಶಲತೆಯನ್ನೂ ಸಾಮರ್ಥ್ಯವನ್ನೂ ಕಲ್ಪಿಸಿಕೊಡುವ ಭಾಗದಲ್ಲಿ ಬಹಳ ಸಾಹಸಪಡುತ್ತಿದ್ದಾರೆ. ಆದಕಾರಣ ಆ ದೇಶಗಳು ವೃದ್ಧಿಹೊಂದುತ್ತಾ ಶ್ರೀಮಂತವಾಗಿರುವವಾಗಿರುತ್ತಾ ಬಂದಿರುವವು.

ಮೈಸೂರಿಗೂ ಇತರ ದೇಶಗಳಿಗೂ ಇರುವ ತಾರತಮ್ಯ—ನಮ್ಮ ಸೀಮೆಯವರು ಈಗ್ಗೆ ಇಪ್ಪತ್ತು ಅಥವಾ ಮೂವತ್ತು ವರುಷಗಳ ಹಿಂದೆ ಯಾವ ಸ್ಥಿತಿಯಲ್ಲಿದ್ದರೆಂಬುವುದನ್ನು ತಮ್ಮ ಈಗಿನ ಸ್ಥಿತಿಗೆ ಹೋಲಿಸಿ ನೋಡಿಕೊಳ್ಳುವುದರಲ್ಲಿ ಅಷ್ಟೇನೂ ಫಲವಾಗಲಾರದು. ನಮ್ಮ ಈಗಿನ ಸಾಹಸ ಎಷ್ಟುಮಟ್ಟಿನದಾಗಿದೆ, ನಾವು ಈಗ ಎಷ್ಟು ಸಂಪಾದನೆಮಾಡಬಲ್ಲೆವು ಎಂಬ ಸಂಗತಿಗಳನ್ನು ಉಚ್ಛ್ರಾಯಸ್ಥಿತಿಗೆ ಬರುತ್ತಿರುವ ಇತರ ದೇಶಗಳಲ್ಲಿರುವ ಜನರ ಯೋಗ್ಯತೆ ಸಂಪಾದನಾಶಕ್ತಿಗಳ ಕೂಡ ಹೋಲಿಸಿ ನೋಡಬೇಕಾಗಿದೆ.—ಈ ವಿಚಾರದಲ್ಲಿ ನಿಮಗೆ ಕೆಲವು ದೃಷ್ಟಾಂತಗಳನ್ನು ಹೇಳುವೆನು. ಈ ದೃಷ್ಟಾಂತಗಳು ಎಷ್ಟು ಬೇಸರ ಹುಟ್ಟಿಸಿದರೂ ಅಷ್ಟು ಒಳ್ಳೆಯದೇ. ಇವನ್ನು ನಮ್ಮ ಸೀಮೆಯ ಪ್ರತಿ ಒಬ್ಬರೂ ಚಿಕ್ಕವರೂ ದೊಡ್ಡವರೂ ತಿಳಿದಿರಬೇಕಾಗಿದೆ. ಈ ದೃಷ್ಟಾಂತಗಳು ಜನರನ್ನು ಆಲೋಚನಾಪರರನ್ನಾಗಿ ಮಾಡಿ, ಸೋಮಾರಿಗಳನ್ನು ಚಟುವಟಿಕೆಯಾಗಿ ಮಾಡಬಲ್ಲವು. ವಿದ್ಯಾವಿಚಾರವನ್ನು ಮೊದಲು ನೋಡೋಣ. ಮೈಸೂರು ಸಂಸ್ಥಾನದಲ್ಲಿ 57 ಲಕ್ಷ ಪ್ರಜೆಗಳಿದ್ದಾರೆ. ಈ ಪೈಕಿ 3½ ಲಕ್ಷ ಜನರಿಗೆ ಮಾತ್ರ ಅಂದರೆ 100 ರಲ್ಲಿ 6 ಮಂದಿಗೆ ಮಾತ್ರ ಓದುಬರಹ ಬರುತ್ತೆ. ಅಭಿವೃದ್ಧಿಯಾಗಿರುವ ದೇಶಗಳಲ್ಲಾದರೋ 100 ರಲ್ಲಿ 80 ರಿಂದ 95 ಜನರವರೆಗೆ ಅಕ್ಷರಸ್ಥರಾಗಿರುವರು. ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ವಿದ್ಯೆಗೋಸ್ಕರ ತಲೆ 1 ಕ್ಕೆ 14 ರೂಪಾಯಿನಂತೆ ಖರ್ಚುಮಾಡುವರು. ಮೈಸೂರಿನಲ್ಲಾದರೋ ತಲೆಗೆ 6 ಆಣೆಗಿಂತ ಕಡಮೆ ಖರ್ಚಾಗುತ್ತಿದೆ. ಅತ್ಯಂತ ಅಭಿವೃದ್ಧಿಸ್ಥಿತಿಯಲ್ಲಿರುವ ದೇಶಗಳಲ್ಲಿ ಪ್ರಜೆಗಳ ಪೈಕಿ ಐದನೇ ಒಂದು ಪಾಲಿನವರು ಪಾಠಶಾಲೆಗಳಲ್ಲಿ ಓದುವರು. ಮೈಸೂರಿನಲ್ಲಿ ಐವತ್ತನೇ ಒಂದು ಪಾಲಿನವರು ಸ್ಕೂಲುಗಳಲ್ಲಿ ಓದುತ್ತಿದ್ದಾರೆ. ನಮ್ಮ ಸೀಮೆಯಲ್ಲಿ ಸುಮಾರು 60 ಲಕ್ಷ ಪ್ರಜೆಗಳಿದ್ದರೂ ಒಂದಾದರೂ ಯೂನಿವರ್ಸಿಟಿ ಇರುವುದಿಲ್ಲ. ಕೆನಡಾದಲ್ಲಿ 20 ಯೂನಿವರ್ಸಿಟಿಗಳೂ, ಗ್ರೇಟ್ ಬ್ರಿಟನ್ನಲ್ಲಿ 20 ಯೂನಿವರ್ಸಿಟಿಗಳೂ, ಜರ್ಮನಿಯಲ್ಲಿ 21 ಯೂನಿವರ್ಸಿಟಿಗಳೂ ಇರುತ್ತವೆ. ವರ್ತಮಾನ ಪತ್ರಿಕೆಗಳ ಸಂಖ್ಯೆಯನ್ನು ನೋಡಿದರೆ ಗ್ರೇಟ್ ಬ್ರಿಟನ್ನಲ್ಲಿ 18,790 ಪ್ರಜೆಗಳಿಗೆ ಒಂದು ಪತ್ರಿಕೆಯಂತೆಯೂ, ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ 4,077 ಪ್ರಜೆಗೆ ಒಂದು ಪತ್ರಿಕೆಯಂತೆಯೂ ಪ್ರಕಟವಾಗುವವು. ನಮ್ಮ ಮೈಸೂರು ಸಂಸ್ಥಾನದಲ್ಲಾದರೋ 16 ಪತ್ರಿಕೆಗಳಿದ್ದಾಗ್ಯೂ 1,58,352 ಪ್ರಜೆಗೆ ಒಂದರಂತೆ ಪ್ರಕಟವಾಗುವವು. ಈ 16 ರಲ್ಲೂ ಹಲವು ಅಷ್ಟೇನೂ ಪ್ರಯೋಜನಕಾರವಾದವುಗಳಾಗಿಲ್ಲ.—ಪೂರ್ವದಲ್ಲಿ ಶೇಕಡ 5 ರಿಂದ 10 ರ ವರೆಗೆ ಮಾತ್ರ ಪ್ರಜೆಗಳು ವಿದ್ಯೆ ಕಲಿಯುತ್ತಿದ್ದರು. ಆಗ್ಗೆ ವ್ಯವಸಾಯ, ಕೈಗಾರಿಕೆ, ದೇಶಪಂಡಿತ ಎಂಬ ಕಸಬುಗಳಲ್ಲಿರತಕ್ಕ ಜನರಿಗೆ ವಿದ್ಯೆ ಅವಶ್ಯಕವಿಲ್ಲವೆಂಬ ಭಾವನೆ ಇತ್ತು. ಈಗಲಾದರೋ ನವನಾಗರಿಕ ದೇಶಗಳಲ್ಲಿ ವಿದ್ಯೆಯು ಸಮಸ್ತ ಕಸಬುಗಳನ್ನು ಅವಲಂಬಿಸಿರುವವರಿಗೂ ಅಗತ್ಯವೆಂದೂ, ಬುದ್ಧಿ ಕುಶಲತೆಯನ್ನೂ ಶಾಸ್ತ್ರವನ್ನೂ ಕಲಿತು ಪ್ರಯೋಗಿಸಿದರೆ ಯಾವ ಕಸಬೂ ಅಭಿವೃದ್ಧಿಗೆ ಬಂದು ಅಂಥಾ ಪ್ರಜೆಗಳು ಖಂಡಿತವಾಗಿ ಐಶ್ವರ್ಯವಂತರಾಗುತ್ತಾರೆಂದೂ ಕಂಡುಹಿಡಿದಿರುತ್ತಾರೆ. ಕಸಬುಗಳಲ್ಲೂ ವ್ಯಾಪಾರದಲ್ಲೂ ಹೆಚ್ಚು ಪ್ರಜೆಗಳು ಹೊರಟಿರುವ ದೇಶಗಳೇ ತುಂಬಾ ಅಭಿವೃದ್ಧಿಗೆ ಬಂದಿರುವವು. ಗ್ರೇಟ್ ಬ್ರಿಟನ್ನಲ್ಲಿ ಪ್ರತಿ ಒಬ್ಬನೂ 126 ರೂಪಾಯಿನಷ್ಟು ಬೆಲೆ ಬಾಳುವ ಸಾಮಾನನ್ನು ತಯಾರುಮಾಡಬಲ್ಲನು, ಅಂದರೆ ಮೈಸೂರಿನ ಪ್ರಜೆಗಿಂತ 30 ರಷ್ಟು ಹೆಚ್ಚು ಶಕ್ತನಾಗಿರುವನು—ಗ್ರೇಟ್ ಬ್ರಿಟನ್ನಲ್ಲಿ ಎಂಟನೇ ಒಂದು ಪಾಲಿನ ಜನರೂ, ಜರ್ಮನಿಯಲ್ಲಿ ಆರನೇ ಒಂದು ಪಾಲಿನ ಜನರೂ, ಜಪಾನ್ನಲ್ಲಿ ಐದನೇ ಮೂರು ಪಾಲಿನ ಜನರೂ, ಮೈಸೂರಿನಲ್ಲಾದರೋ ಮುಕ್ಕಾಲು ಪಾಲಿನ ಜನರೂ ಭೂವ್ಯವಸಾಯದಲ್ಲಿ ನಿರತರಾಗಿದ್ದಾರೆ. ಇತ್ತೀಚೆಗೆ ಪಶ್ಚಿಮ ದೇಶಗಳ ಸರಕುಗಳು ಪೋಟಾಪೋಟಿಗೆ ಬಂದು ಬುದ್ಧಿಕುಶಲತೆ ಇಲ್ಲದ ನಮ್ಮ ದೇಶದ ಕಸಬುದಾರರ ಸಾಮಾನುಗಳಿಗೆ ಮಾರಾಟ ತಪ್ಪಿಹೋಗಿ ಆ ಕಸಬುದಾರರು ತಮ್ಮ ಕಸಬನ್ನು ಬಿಟ್ಟು ಜಮೀನ್ ವ್ಯವಸಾಯಕ್ಕೆ ಸೇರಿಕೊಂಡಿದ್ದಾರೆ—ಪ್ರಜೆಗಳ ಸಂಪಾದನೆ ವಿಚಾರವನ್ನು ನೋಡಿದರೆ ಮೈಸೂರಿನ ಪ್ರಜೆಯು ವರುಷಕ್ಕೆ 10 ರೂಪಾಯಿ ಸಂಪಾದಿಸುವನು. ಯೂರೋಪಿನಲ್ಲಿ ಸಾಮಾನ್ಯವಾಗಿ ಪ್ರತಿ ಒಬ್ಬನೂ ವರುಷಕ್ಕೆ 100 ರೂಪಾಯಿಗೆ ಕಡಮೆಯಿಲ್ಲದೆ ಸಂಪಾದಿಸುತ್ತಾನೆ. ಇಂಗ್ಲೀಷ್ ಪ್ರಜೆಯ ವರಮಾನವು ವರುಷಕ್ಕೆ 600 ರಿಂದ 700 ರೂಪಾಯಿವರೆಗೆ ಆದೀತು—ಮೈಸೂರು ಸೀಮೆಯಲ್ಲಿ ಮರಣಸಂಖ್ಯೆಯು 1,000 ಕ್ಕೆ 30 ಆಗುವುದು, ಆದರೆ ಬಹಳ ನಾಗರಿಕ ದೇಶಗಳಲ್ಲಿ ಮರಣಸಂಖ್ಯೆಯು 15 ರಿಂದ 18 ಕ್ಕಿಂತ ಹೆಚ್ಚಿಲ್ಲ. ಮೈಸೂರಿನೊಳಗೆ ಪ್ರಜೆಯ ಆಯುಃಪರಿಮಾಣವು 25 ವರುಷವೆಂದೂ, ಅಮೇರಿಕ ಅಥವಾ ಯೂರೋಪಿನಲ್ಲಿ 40 ರಿಂದ 55 ವರುಷವೆಂದೂ ತಿಳಿಯಬಂದಿದೆ—ಈ ರೀತಿಯಾಗಿ ನಮ್ಮ ದೇಶದ ಮತ್ತು ಪ್ರಜೆಗಳ ಸ್ಥಿತಿಗತಿಯನ್ನು ಪರದೇಶಗಳ ಮತ್ತು ಅಲ್ಲಿನ ಪ್ರಜೆಗಳ ಸ್ಥಿತಿಗತಿಗೆ ಹೋಲಿಸಿ ನೋಡುವಲ್ಲಿ ದೇಶೋನ್ನತಿಗೂ ಪ್ರಜೆಗಳ ಶ್ರೇಯಸ್ಸಿಗೂ ಕಾರಣಭೂತವಾದ ಅನೇಕ ಗುಪ್ತ ವಿಚಾರಗಳು ಗೋಚರಕ್ಕೆ ಬಂದು ನಮ್ಮ ದೇಶವೂ ಪ್ರಜೆಗಳೂ ಅಭಿವೃದ್ಧಿ ಹೊಂದುವುದಕ್ಕೆ ಅವಶ್ಯವಾದ ಸಂಗತಿಗಳನ್ನು ಕಂಡುಹಿಡಿದು ನಾವು ಒಪ್ಪಿಕೊಳ್ಳುವುದಕ್ಕೂ ಸುಖಪಡುವುದಕ್ಕೂ ಸುಲಭವಾಗುತ್ತದೆ—ಇದುವರೆಗೆ ಸಂಸ್ಥಾನದಲ್ಲಿ ಚಿಂತೆ ಆಲೋಚನೆಗಳ ಭಾರವೆಲ್ಲಾ ಬಹುಮಟ್ಟಿಗೂ ಸರ್ಕಾರಿ ನೌಕರಮಾನೇರುಗಳಿಗೆ ವಹಿಸಲ್ಪಟ್ಟಿತ್ತು. ಇಲ್ಲಿಂದ ಮುಂದಕ್ಕೆ ಈ ಕಾರ್ಯಭಾರವನ್ನು ನೌಕರರೂ ಖಾಸಗಿಪ್ರಜೆಗಳೂ ಹಂಚಿಕೊಳ್ಳುವರು. ಕಡೆಯಲ್ಲಿ ಈ ಕಾರ್ಯವು ವಿಶೇಷವಾಗಿ ಖಾಸಗಿಪ್ರಜೆಗಳಿಗೇ ವಹಿಸಲ್ಪಡಬೇಕು.—ಸೀಮೆಯ ಸಂಪದಭಿವೃದ್ಧಿಗಾಗಿ ನಡೆಯುವ ಕಾರ್ಯಗಳನ್ನು ದೊಡ್ಡವರೂ ಚಿಕ್ಕವರೂ ಎಲ್ಲರೂ ಹಿಡಿದು ಮಾಡಬೇಕಾಗಿದೆ. ಪ್ರತಿ ಒಬ್ಬರಲ್ಲೂ ಅದರ ಚಿಂತೆ ಹುಟ್ಟಿ, ಶಕ್ತ್ಯಾನುಸಾರ ಪ್ರತಿ ಒಬ್ಬರೂ ಕಾರ್ಯಮಾಡುತ್ತಾ ಬರಬೇಕಾಗಿದೆ. ವ್ಯಾಪಾರದಲ್ಲಾಗಲಿ, ಆಯಾ ಕಸಬಿನಲ್ಲಾಗಲಿ ಅನುರಕ್ತರಾಗಿರುವವರೆಲ್ಲಾ—ಸ್ಥಳಾಂತರಗಳಲ್ಲಿರತಕ್ಕವರಾದರೂ ಚಿಂತೆಯಿಲ್ಲ—ಏಕೀಭವಿಸಿ ಸಾಧ್ಯವಾಗುವಮಟ್ಟಿಗೆ ತಮ್ಮ ವ್ಯಾಪಾರವನ್ನೂ ತಮ್ಮ ಕಸಬನ್ನೂ ಅಭಿವೃದ್ಧಿಮಾಡಿಕೊಳ್ಳುವ ಭಾಗದಲ್ಲಿ ತಯಾರ್ಯಾಲೋಚಿಸುವಂತೆಯೂ, ಕಾರ್ಯಗಳನ್ನು ಏಕಮುಖವಾಗಿ ನಡಿಸುವಂತೆಯೂ ಆಗಬೇಕು. ಈ ರೀತಿಯಾಗಿ ಅನೇಕ ಜನರು ದೇಶೋನ್ನತಿಯ ಕಾರ್ಯಗಳಲ್ಲಿ ಅನುರಕ್ತರಾದರೆ ಪ್ರಜೆಗಳು ಕಾಲಕ್ರಮೇಣ ಬುದ್ಧಿ ಕುಶಲರಾಗುವುದಕ್ಕೂ ಸಮರ್ಥರಾಗುವುದಕ್ಕೂ ಅನುಕೂಲತೆಯುಂಟಾಗಿ ಪ್ರಜೆಯ ಸಂಪಾದನಾ ಶಕ್ತಿಯು ವೃದ್ಧಿಹೊಂದಿ ಐಶ್ವರ್ಯ ವೃದ್ಧಿಯಾಗುವುದು.

ಈ ಕಾನ್ಫರೆನ್ಸಿನ ಕಾರ್ಯಗಳು—ಮೇಲೆ ವಿವರಿಸಲ್ಪಟ್ಟ ಮಾರ್ಗಗಳಲ್ಲಿ ಅನುಕೂಲತೆಗಳನ್ನು ಒದಗಿಸಿಕೊಡಬೇಕೆಂಬ ಉದ್ದೇಶದಿಂದಲೇ ಶ್ರೀಮನ್ ಮಹಾರಾಜಾ ಸರ್ಕಾರದವರು ಈ ಸಂಪದಭಿವೃದ್ಧಿ ಸಮಾಜವನ್ನು ಕಲ್ಪಿಸಿರುತ್ತಾರೆ. ಸಮಾಜದ ಕಾರ್ಯಗಳು ಕ್ರಮೇಣ ಪಕ್ವವಾಗುತ್ತಿರುವವು. ಆದರೆ ಇಂಥಾ ಸಮಾಜಗಳ ಕಾರ್ಯಗಳು ಪ್ರಜೆಗಳಲ್ಲಿ ಹೊಸ ಉದ್ದೇಶ ಅಭಿಪ್ರಾಯಗಳನ್ನು ರೂಢಿಸಬೇಕಾಗಿರುವುದರಿಂದ ಬೇಗಬೇಗನೆ ಜರುಗಲಾರವು. ರಿಪೋರ್ಟುಗಳನ್ನು ಓದಿನೋಡುವಲ್ಲಿ ಬ್ಯಾಂಕಿನ ಏರ್ಪಾಡು ರೂಪಹೊಂದುತ್ತಿದೆ ಎಂದೂ, ಬಲಾತ್ಕರಿಸಿ ವಿದ್ಯೆ ಕಲಿಸುವುದಕ್ಕೆ ಅವಶ್ಯವಾದ ಕಾನೂನಿನ ಮಸೂದೆಯು ನ್ಯಾಯವಿಧಾಯಕ ಕೌನ್ಸಿಲಿನಲ್ಲಿ ಚರ್ಚೆಗೆ ಇಡಲಾಗಿದೆ ಎಂದೂ, ಪ್ರೈಮರಿ ವಿದ್ಯಾಭ್ಯಾಸಕ್ಕೆ ವಿಶೇಷವಾಗಿ ದ್ರವ್ಯವನ್ನು ಒದಗಿಸಿದೆ ಎಂದೂ, ಕಸಬುಗಳ ಮತ್ತು ವ್ಯಾಪಾರದ ಇಲಾಖೆಯೊಂದು ಏರ್ಪಾಡಾಗಿದೆ ಎಂದೂ, ಜಿಲ್ಲಾ ತಯಾರಿಗಾಗಿಯೂ ಇತರ ಪರೀಕ್ಷಾರ್ಥವಾದ ಕಸಬುಗಳಿಗಾಗಿಯೂ ಡಿಪೋಗಳನ್ನು ಇಡುವ ಏರ್ಪಾಡು ಮಾಡಿದೆ ಎಂದೂ, ಕಸಬುಗಳ ಮತ್ತು ವ್ಯಾಪಾರದ ವಿದ್ಯಾಬೋಧನೆಗೆ ವಿಶೇಷ ಅನುಕೂಲವಾದ ಏರ್ಪಾಡು ಮಾಡಲಾಗಿದೆ ಎಂದೂ ಗೋಚರವಾಗುತ್ತದೆ. ಈ ಸಮಾಜದ ನಿಬಂಧನೆಗಳನ್ನು ಕ್ರಮಪಡಿಸಿ ಇದರ ಶಾಖೆಗಳ ಕಾರ್ಯಗಳು ಸುಲಭವಾಗಿ ಬೇಗಬೇಗನೆ ಜರುಗುವಂತೆ ಮಾಡಲಾಗಿದೆ—ಈ ಕಾನ್ಫರೆನ್ಸಿನವರು ಪರ್ಯಾಲೋಚಿಸಿ ದ್ರವ್ಯವನ್ನು ಖರ್ಚುಮಾಡುವ ಬಾಬುಗಳಾವವೆಂದರೆ—(1) ವಿದ್ಯಾಭ್ಯಾಸ, (2) ವ್ಯವಸಾಯ, (3) ಕಸಬುಗಳೂ ವ್ಯಾಪಾರವೂ—ಶೋಧನಾಭಾಗಕ್ಕೂ ಉದ್ಯೋಗಪ್ರೋತ್ಸಾಹಕ್ಕೂ ಈ ಸಮಾಜದ ಶಾಖೆಗಳು ಸಾಲಿಯಾನಾ ಒಂದೂವರೆ ಲಕ್ಷ ರೂಪಾಯಿನೊಳಗ ಖರ್ಚುಮಾಡುತ್ತವೆ. ಇತರ ವಿಪುಲವಾದ ಖರ್ಚಿನ ಭಾರವನ್ನೆಲ್ಲಾ ಸರ್ಕಾರದ ಮೂರು ಇಲಾಖೆಗಳು ವಹಿಸಿಕೊಂಡು ಮಾಡುವವು—ವಿದ್ಯಾಭಿವೃದ್ಧಿಗಾಗಿ ನಾವು ಬಹಳ ದ್ರವ್ಯವನ್ನು ವಿನಿಯೋಗಿಸುವವರಾಗಿದೇವೆ. ನಮ್ಮ ನೆರೆಯಲ್ಲಿರುವ ಮದರಾಸ್ ಆಧಿಪತ್ಯದಲ್ಲಿ 23 ವರುಷಗಳ ಹಿಂದೆ ವಿದ್ಯಾ ಇಲಾಖೆಯ ಖರ್ಚಿಗೆ 15 ಲಕ್ಷ ರೂಪಾಯಿ ಕೊಡುತ್ತಿದ್ದರು. ಈ ಸಾಲಿನಲ್ಲಿ ಅವರು 81 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಅಷ್ಟುಮಟ್ಟಿಗೆ ನಾವು ಹಣವನ್ನು ಹೆಚ್ಚಾಗಿ ಕೊಡುವುದು ಸಾಧ್ಯವಾಗದೆ ಇದೆ. ಆದರೂ ರಾಜಾದಾಯವನ್ನು ಹೆಚ್ಚು ಮಾಡುವುದಕ್ಕೆ ಪಬ್ಲಿಕ್ ಜನರು ಹೊಸ ಮಾರ್ಗಗಳನ್ನು ಕಂಡುಹಿಡಿಯುತ್ತಾರಾದ್ದರಿಂದ ಆ ಹಣವನ್ನು ವಿದ್ಯಾಭಿವೃದ್ಧಿಗೆ ವಿನಿಯೋಗಿಸಲು ಅನುಕೂಲವಾದೀತು. ವ್ಯವಸಾಯ ಇಲಾಖೆಯಲ್ಲಿ ಖರ್ಚುಬಾಬನ್ನು 79,000 ರೂಪಾಯಿನಿಂದ ಒಂದೂವರೆ ಲಕ್ಷ ರೂಪಾಯಿಗೆ ಹೆಚ್ಚು ಮಾಡಲಾಗುವುದು. ಈ ಬಾಬಿನಲ್ಲಿ ಅವಶ್ಯವಾಗಿರುವಷ್ಟು ಖರ್ಚಿಗೆ ಈ ಮೊಬಲಗು ಇನ್ನೂ ಸಾಲದು. ಕೆನಡಾ ರಾಜ್ಯದಲ್ಲಿ ಈ ಬಾಬಿಗೆ 1909-10ನೇ ಸಾಲಿನಲ್ಲಿ 30 ಲಕ್ಷ ರೂಪಾಯನ್ನು ಖರ್ಚುಮಾಡಿ ಅಲ್ಲಿನ ರೈತರಿಗೆ ಸಹಾಯಮಾಡಿರುತ್ತಾರೆ—ಕಸಬುಗಳ ಮತ್ತು ವ್ಯಾಪಾರದ ಇಲಾಖೆಗೆ ಒಂದೂಕಾಲು ಲಕ್ಷ ರೂಪಾಯಿ ಕೊಟ್ಟಿರುತ್ತೇವೆ. ಲಾಭ ಉತ್ಪತ್ತಿಯಾಗುವಂಥಾ ಕಸಬುಗಳ ಮತ್ತು ವ್ಯಾಪಾರಗಳ ಪ್ರೋತ್ಸಾಹಕ್ಕೆ ಸಾಲ ಮುಂತಾದದ್ದನ್ನು ಒದಗಿಸುವ ಭಾಗದಲ್ಲಿ ನಮ್ಮ ಏರ್ಪಾಡುಗಳು ಇನ್ನೂ ಕ್ರಮಪಟ್ಟಿಲ್ಲ. ಗವರ್ನ್ಮೆಂಟಿನವರ ದ್ರವ್ಯಾನುಕೂಲವು ಇನ್ನೂ ಸಾಲವಾಗಿದೆಯಾದಕಾರಣ ಅವಶ್ಯವೆಂದು ಕಾಣುವ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನು ಒದಗಿಸುವುದಕ್ಕೆ ಗವರ್ನ್ಮೆಂಟಿನವರು ಮಾಡುವ ಪ್ರಯತ್ನಗಳಿಗೆ ಪ್ರಜೆಗಳು ಬೆಂಬಲಕೊಟ್ಟು ಸಹಾಯಮಾಡುತ್ತಾರೆಂದು ನಿರೀಕ್ಷಿಸಲಾಗಿದೆ.

ಅಂತ್ಯೋಕ್ತಿಗಳು—ನಮ್ಮದು ಅಲ್ಪರಾಜ್ಯ. ನಾವು ವಿಶೇಷವಾಗಿ ದೇಹಶ್ರಮಪಡಲು ಸಾಧ್ಯವಾಗದು. ಆದಕಾರಣ ನಾವು ಪಶ್ಚಿಮರಾಜ್ಯಗಳಷ್ಟು ಐಶ್ವರ್ಯವುಳ್ಳ ಸ್ಥಿತಿಗೆ ಎಂದಿಗೂ ಹತ್ತಲಾರೆವು. ಆದಾಗ್ಯೂ ನಾವು ಮೇಲೆ ಸೂಚಿಸಿರುವ ಮಾರ್ಗಗಳಲ್ಲಿ ಏಕೀಭವಿಸಿ ಕಾರ್ಯಸಾಧನೆ ಮಾಡುತ್ತಾ ಬರುವೆವಾದರೆ ನಾವು ಕೂಡಿದ ಮಟ್ಟಿಗೂ ಶ್ರೇಯಸ್ಕರವಾದ ಸ್ಥಿತಿಗೆ ಬಂದೇವೆನ್ನುವುದಕ್ಕೆ ಸಂಶಯವಿಲ್ಲ.—ನಮ್ಮ ಪ್ರಜೆಗಳ ಬುದ್ಧಿ ವಿವೇಕ ಸಾಮರ್ಥ್ಯಾದಿಗಳನ್ನು ನಾವು ಕುದುರಿಸುತ್ತಾ ಬರುವುದರಲ್ಲಿ ಆಸಕ್ತರಾಗದೆ ಹೋದರೆ ಜನರ ದುಡಿಯುವ ಶಕ್ತಿಯೂ, ಅವರ ಜೀವನದ ಪಾಡೂ ಹೀನಸ್ಥಿತಿಯಲ್ಲೇ ಇರುವವು, ಪ್ರಜಾಸಂಖ್ಯೆಯು ಈಗಿನಂತೆಯೇ ವೃದ್ಧಿಹೊಂದುತ್ತಾ ಬಂದೀತು. ಪ್ರಜೆಗಳು ವಿದ್ಯೆಯಿಲ್ಲದೆ ಬುದ್ಧಿಹೀನರಾಗಿ ಸೋಮಾರಿತನದಿಂದ ಬೆಳೆದು ಕಷ್ಟಕರವಾದ ದುರ್ಭಿಕ್ಷಕಾಲವು ಪ್ರಾಪ್ತವಾದೊಡನೆಯೇ ಸಹಾಯಹೀನರಾಗಿ ಲಯವಾಗುವ ಸ್ಥಿತಿಗೆ ಬರುತ್ತಾರೆ. ಆದಕಾರಣ ಪ್ರಜೆಗಳನ್ನು ವಿದ್ಯಾವಂತರನ್ನಾಗಿಯೂ, ಕುಶಲಮತಿಗಳನ್ನಾಗಿಯೂ, ಚುರುಕಾಗಿ ಕೆಲಸ ಮಾಡತಕ್ಕವರನ್ನಾಗಿಯೂ ಮಾಡುವುದೇ ಕ್ಷೇಮಕರವಾಗಿದೆ. ನಮ್ಮ ಪ್ರಜೆಗಳ ಸಂಪದಭಿವೃದ್ಧಿಗೋಸ್ಕರ ನಾನಾ ಮಾರ್ಗಗಳನ್ನು ಕಲ್ಪಿಸಿಕೊಟ್ಟು ಅವರನ್ನು ಉದ್ಧಾರ ಮಾಡಬೇಕೆಂಬ ಉದ್ದೇಶದಿಂದಲೇ ಶ್ರೀಮನ್ಮಹಾರಾಜರವರ ಗವರ್ನ್ಮೆಂಟಿನವರು ಈ ರೀತಿಯಾದ ಕಾರ್ಯಾರಂಭ ಮಾಡಿರುತ್ತಾರೆ.

ದಿವಾನ್‌ರವರು ಮೇಲ್ಕಂಡ ಪ್ರಕಾರ ಭಾಷಣಮಾಡಿದ ಮೇಲೆ ಈ ಸಮಾಜದ ವಿದ್ಯಾಶಾಖೆಯ ಕಮಿಟಿ ಅಧ್ಯಕ್ಷರಾದ ಕೌನ್ಸಿಲರ್ ಮಿ॥ ಎಚ್. ವಿ. ನಂಜುಂಡಯ್ಯನವರು ತಮ್ಮ ಕಮಿಟಿಯ ಕಳೆದ ಸಾಲಿನ ರಿಪೋರ್ಟನ್ನೂ, ವ್ಯವಸಾಯ ಶಾಖೆಯ ಅಧ್ಯಕ್ಷರಾದ ರೆವಿನ್ಯೂ ಕಮಿಷನರ್ ಮಿ॥ ಕೆ. ಎಸ್. ದೊರೆಸಾಮಿ ಅಯ್ಯರವರ ಬದಲು ಅವರ ಸೆಕ್ರೆಟರಿ ಮಿ॥ ಕೆ. ಸುಬ್ಬರಾಯರು ವ್ಯವಸಾಯ ಕಮಿಟಿಯ ರಿಪೋರ್ಟನ್ನೂ, ಕಸಬುಗಳ ಮತ್ತು ವ್ಯಾಪಾರದ ಕಮಿಟಿ ಪ್ರೆಸಿಡೆಂಟರಾದ ಕೌನ್ಸಿಲರ್ ಸರ್ದಾರ್ ಎಂ. ಕಾಂತರಾಜೆ ಅರಸಿನವರು ತಮ್ಮ ಕಮಿಟಿಯ ರಿಪೋರ್ಟನ್ನೂ ಓದಿ ಹೇಳಿದರು.

ಈಚೆಗೆ ಪ್ರತಿ ದಿನವೂ ಈ ಸಮಾಜವು ಸಭೆ ಸೇರಿ ಇತರ ವಿಚಾರಗಳನ್ನು ಕುರಿತು ಚರ್ಚೆ ಮಾಡುತ್ತಾ ಬಂದಿದ್ದಾರೆ. ಈ ಚರ್ಚೆಗಳೆಲ್ಲಾ ಈ ದಿನವೋ ನಾಳೆಯೋ ಮುಕ್ತಾಯವಾಗಬಹುದು.

ಬಾತ್ಮೀದಾರರಿಗೆ ನೋಟೀಸ್.

ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಹೆಸರು ವಿಳಾಸವಿಲ್ಲದ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್.

ಸಿವಿಲ್ ಕೋರ್ಟು ವಿಷಯ.

ಅಯ್ಯಾ,

ಸಿವಿಲ್ ಕೋರ್ಟುಗಳಲ್ಲಿ ಕೇಸುಗಳು ಬಾಕಿ ಬೀಳುವದಕ್ಕೆ ಕಾರಣವೇನೆಂಬದು ಸರಕಾರದವರು ಸಹಾ ಕಂಡು ಹಿಡಿದಂತೆ ತೋರುವುದಿಲ್ಲ. ಇದಕ್ಕೆ ಕಾರಣಭೂತರು ಕೋರ್ಟು ಜವಾನರು. ಹ್ಯಾಗೆಂದರೆ—(1) ದಾವಾ ದಾಖಲಾದ ಒಡನೆ ಪ್ರತಿವಾದಿಗೆ ಹೋಗುವ ನೋಟೀಸು ಜಾರಿಯಾಗುವದೇ ಪ್ರತಿವಾದಿಯ ಮುಲಾಜೆಯಿಂದ ಬಹು ದಿವಸ ಹೋಗುತ್ತೆ. ಸುಳ್ಳು ಷರಾಗಳು ಆಗಿ ಬರುತ್ತವೆ. (2) ಪ್ರತಿವಾದಿ ಸ್ಟೇಟಮೆಂಟು ಬಿದ್ದ ಮೇಲೆ ವಾದಿ ಪ್ರತಿವಾದಿಗಳ ಪರ ಸಾಕ್ಷಿ ಸಮನುಗಳು ಹುಟ್ಟಿದ ಮೇಲೆ ಊರಲ್ಲಿ ಹಾಜರಿಲ್ಲವೆಂದು ಕೆಲವು ಸಾರಿ, ಭತ್ಯ ಕಡಮೆಯಾದ್ದರಿಂದ ಬರಲು ಆಗುವದಿಲ್ಲವೆಂದು ಕೆಲವು ಸಾರಿ, ಕಾಹಿಲೆಯಾದ್ದರಿಂದ ಹಾಜರಾಗಲು ಅವಕಾಶವಿಲ್ಲವೆಂದು ಕೆಲವು ಸಾರಿ, ಷರಾ ಮಾಡಿಸುವದಲ್ಲದೆ ಜಾರಿಗೆ ಕಾಲ ಸಾಲದೆಂದು ಕೆಲವು ಸಾರಿ, ಈರೀತಿ ಷರಾಗಳಿಂದಲೇ ಬಹು ದಿವಸ ಹೋಗುತ್ತೆ. (3) ಸಂತ್ರನಂತ್ರ, ಕೆಲವರಿಗೆ ಬೇ ಜಾರಿ, ಕೆಲವರಿಗೆ ಜಾರಿ, ಈರೀತಿ ಷರಾಗಳಿಂದ ಕೆಲವು ಕಾಲ ಹೋಗುತ್ತೆ. (4) ಜಾರಿಯಾದ ಕೆಲವರು ಕೋರ್ಟಿಗೆ ಬಂದರೆ ಎಲ್ಲರೂ ಒಂದೇ ಕಾಲಕ್ಕೆ ಬರದೆ ವಿಚಾರವಾಗಕೂಡದು ಎಂತ ಎದುರು ಲಾಯರು ಹೇಳುವದರಿಂದ ಕೆಲವು ಕಾಲ ಹೋಗುತ್ತೆ. (5) ಪುನಃ ಸಮನಿಗೂ ಮೇಲ್ಕಂಡಂತೆ ದಿವಸ ಬರುತ್ತೆ.

ಹೀಗಾಗಿ ಜವಾನರು ಮಾಡುವದು ಅಂತರಂಗ ಅನ್ಯಾಯ, ಬಹಿರಂಗ ನ್ಯಾಯ, ಈರೀತಿಯಲ್ಲಿ ತನ್ನ ಪ್ರಯೋಜನ ನೋಡಿಕೊಳ್ಳುವ ಸ್ವಾರ್ಥದ ಸಣ್ಣ ನೌಕರರು ಮಾಡುವ ತಂಟೆಗಳಿಂದ ಕೇಸುಗಳೆಲ್ಲವೂ ಬಹುಕಾಲ ಬಾಕಿ ಬಿದ್ದು ಪಾರಟಿಗಳು ಕುಲಕ್ಷಯವಾಗುವದಾಗಿದೆ. ಇದನ್ನು ಜಡ್ಜರು ಮನಸ್ಸಿಗೆ ತೆಗೆದುಕೊಳ್ಳುವದಿಲ್ಲ. ಹೀಗೆ ಮನಸ್ಸಿಗೆ ತೆಗೆದುಕೊಳ್ಳದೆ ಹೋಗುವದರಿಂದ ಕೇಸುಗಳು ಬಾಕಿ ಬಿದ್ದು ಕಕ್ಷಿಗಾರರಿಗೆ ನಷ್ಟವಾಗುವದು ಒಂದು, ಕೇಸುಗಳು ಬಾಕಿ ಬಿದ್ದವೆಂದು ಚೀಫ್ ಕೋರ್ಟಿನವರು ಮಾಡುವ ಆಕ್ಷೇಪಣೆಗೆ ಜಡ್ಜರು ಗುರಿಯಾಗುವದು ಒಂದು, ಇಷ್ಟು ಅನರ್ಥವೂ ಜವಾನರಿಂದ ಉಂಟಾಗುವದಾಗಿರುತ್ತೆ. ಇದಕ್ಕೆ ಕಾರಣವೇನೆಂದರೆ ಜವಾನರಿಗೆ 7-8 ರೂಪಾಯಿ ಸಂಬಳ. ಅವರು ಒಬ್ಬೊಬ್ಬರಿಗೆ ಜಾರಿ ಮಾಡಲು ಗುಡ್ಡ ಗವ್ಹಾರಗಳು ತಿರುಗಿ ಅನ್ನ ನೀರು ಕಾಣದೆ ಸುತ್ತು ಬಂದು ಸಾಕು ಸಾಕಾಗಿ ಸಂಸಾರ ಬಿಟ್ಟು 30-40 ಮೈಲಿ ತಿರುಗಿಯೂ 7-8 ರೂಪಾಯಿ ಸಂಬಳವೆನ್ನುವದು ಮನಸ್ಸಿಗೆ ಸಂಕಟವಾಗಿ ಸಂಸಾರ ಪೋಷಣೆಗೆ ಸಾಲದ ಪ್ರಯೋಜನ ಮಾಡಿಕೊಳ್ಳುವ ಮನಸ್ಸು ಹುಟ್ಟಿ ನಾನಾ ಬಗೆಯ ಸಂಪಾದನೆಗೆ ಇಳುಕೊಳ್ಳುವದಾಗಿದೆ.

ಈ ತೊಂದರೆಗಳು ಪರಿಹರಿಸಬೇಕಾದರೆ ಜವಾನರಿಗೆ 15-20 ರೂಪಾಯಿ ಸಂಬಳ ಮಾಡಬೇಕು. ಬೇಜಾರಿಮಾಡಿದ ಇಸಂಗೆ 8 ಆಣೆ ಜುಲ್ಮಾನ್ ಎಂಬ ರೂಲ್ಲು ಮಾಡಬೇಕು. ಹಾಗೂ ಸಮನು ಒಂದೇಸಾರಿ ಹೊರಡಬೇಕು. ಜಾರಿ ಆಗಿ ಬಂದವರ ವಿಚಾರಣೆಮಾಡಲೇಬೇಕು. 2ನೇ ಸಾರಿ ಅದಾಯ ಪಾರಟಿ ಲಾಯರರ ಮೇಲೆ ಜಾರಿಮಾಡಬೇಕು. ಆಪ್ರಕಾರ ಹಾಜರಾಗದೆಹೋದರೆ ಎಂದರು ಮನಸ್ಸಿನ ಮೇಲೆ ಫೈಸಲು ಕೊಡಬೇಕು. ಹೀಗೆ 2 ಹೀರಂಗಿಗೆ ಹೆಚ್ಚು ಹೀರಂಗೂ ಮಾಡುವದಿಲ್ಲವೆಂದು ಖಂಡಿತಮಾಡಿದರೆ ಕೋರ್ಟಿನ ಜಡ್ಜರಿಗೂ ಕ್ಷೇಮ, ಜವಾನರು ಬದುಕುತ್ತಾರೆ. ಅನ್ಯಾಯ ನಡೆಯುವದಿಲ್ಲ, ಪಾರಟಿಗಳಿಗೂ ಒಳ್ಳೇದು, ಜಾಗ್ರತೆ ಫೈಸಲು ಹೊಂದುತ್ತೆ, ಅನ್ಯಾಯದ ಕೇಸುಗಳು ಕೋರ್ಟಿಗೆ ಬರುವದು ಕಡಮೆಯಾಗುತ್ತೆ ಎಂಬದು ನಿಸ್ಸಂದೇಹವಾಗಿ ಹೇಳಬಹುದು. ಈ ಅಭಿಪ್ರಾಯವೂ ಈಗ ನಡೆಯುವ ಆಚರಣೆಯೇ ಅನುಕೂಲವಾಗಿ ಅದರಿಂದ ಫಲಹೊಂದುವವರಸಹಾ ಎಂದಿಗೂ ದಸರಾ ಪ್ರತಿನಿಧಿ ಸಭೆಯಲ್ಲಿ ಸಹಾ ಹೇಳಲಾರರು. ಮೇಲ್ಕಂಡ ಅಭಿಪ್ರಾಯವು ಗೌರ್ನಮೆಂಟಿನವರು ಮತ್ತು ಚೀಫ್ ಕೋರ್ಟಿನವರು ಪರಿಶೀಲನೆ ಮಾಡತಕ್ಕದ್ದಾಗಿದೆ. ಮತ್ತು

ಅಮೀನರು ಮಾಡುವ ಅನ್ಯಾಯಗಳೇನಂದರೆ, ಜಫ್ತಿಗೆ ಹಳ್ಳಿವಾಡಗಳಲ್ಲಿ ಹೋದಾಗ್ಗೆ ವಾದಿ ಪರದಿಂದ ತಾವೇ ಜಡರಾಗಿ ಕಾರ್ಯ ನಡಿಸುತ್ತಾರೆ. ಹ್ಯಾಗಂದರೆ, (1) ಸ್ಥಿರಸೊತ್ತು ಜಫ್ತಿಯನ್ನು ಇಷ್ಟಬಂದಲ್ಲಿ ಕೂತುಕೊಂಡು ಬರಕೊಳ್ಳುತ್ತಾರೆ, (2) ಡಿಟೋ ಹರಾಜನ್ನು ಬದಸ್ತೂರುಮಾಡುತ್ತಾರೆ, (3) ಕೋರ್ಟುಬಾಗಿಲಲ್ಲಿ ಹರಾಜಿಗೆ ಇಟ್ಟಿದ್ದನ್ನು ವಾರುಕೂಗಿಸದೆ ಬೇಕಾದ್ದು ಬರಮುಕೊಳ್ಳುವರು,—ಕೇಳಿದರೆ ಈ ಲಿಗಾಡಿ ಸಿವಾಕ್ಕೆಯೂ ಅನ್ನುವರು. (4) ವಾದಿ ಪ್ರತಿವಾದಿಗಳಲ್ಲಿ ಯಾವದಾದರೂ ಹೆಸರು ಕೋರ್ಟಿನಲ್ಲಿ ಕೆ ತಪ್ಪಿ ಬೇರೆ ದಾಖಲಾದಾಗ್ಯೂ, ಇವರು ಅದನ್ನು ದುರಸ್ತು ಮಾಡಿಕೊಳ್ಳುವರು, (5) ಪ್ರತಿವಾದಿಸೊತ್ತು ಬೇರೆ ಗ್ರಾಮದಲ್ಲಿ ಇದ್ದಾಗ್ಯೂ, ಅದನ್ನು ವಾರಂಟಿನಲ್ಲಿ ಕಂಡ ಗ್ರಾಮಕ್ಕೆ ತರಿಸಿಕೊಂಡು ಜಫ್ತು ಮಾಡುವದು, (6) ಪ್ರತಿವಾದಿಸೊತ್ತು ವಾರಂಟಿನಲ್ಲಿ ಇಲ್ಲದ ಗ್ರಾಮದಲ್ಲಿ ಇದ್ದಾಗ್ಯೂ—ಜಫ್ತು ಮಾಡುವದು, (7) ಪ್ರತಿವಾದಿ ವಾರಂಟಿನಲ್ಲಿ ಕಂಡ ಗ್ರಾಮವಲ್ಲದೆ ಬೇರೆ ಕಡೆ ಇದ್ದಾಗ್ಯೂ ಹಿಡಿತಂದು ವಾರಂಟಿನಲ್ಲಿ ಇದ್ದ ಗ್ರಾಮದಲ್ಲಿ ದಸ್ತಗಿರಿ ಮಾಡಿದಂತೆ ಮಾಡುವದು, (8) ಜಫ್ತಿಗೋಸ್ಕರ ಕೊಟ್ಟ ವಾರಂಟು ಕ್ರಮನಡಿಸಿ ವಾಪಸ್ ಮಾಡಬೇಕೆಂಬ ವಾಯಿದೆ ಕೊಟ್ಟದ್ದು ವಾಯಿದೆ ಗತಿಸಿದ ನಂತರವೂ ಸವರಿ ಪ್ರತಿವಾದಿಯದಲ್ಲದ ಸೊತ್ತು ಪ್ರತಿವಾದಿಯದೆಂದು ಬರೆದು ಜಫ್ತುಮಾಡುವದು. ಇವೆಲ್ಲವೂ ವಾದಿಪರದ ಲಾಭದ ಕೃತ್ಯಗಳು. ಚರಜಫ್ತಿ ವಾರಂಟು ಬಂದಿದೆ ಎಂಬುವು ಪ್ರತಿವಾದಿಪರ ಲಾಭದಿಂದ ಬಿಹಾರಿ ಮಾಡುವದು.

ಈ ಮುಂತಾದ ದಾಂಧಲೆಗಳಿಂದ ಅನೇಕರಿಗೆ ತೊಂದರೆ ಕೊಟ್ಟು ಲಾಭ ಹೊಂದುತ್ತಾರೆ. ಇದರಿಂದ ಅನ್ಯಾಯನಾದವರು ಬಾಧ್ಯತೆಗೆ ಬರಬೇಕಾಗುತ್ತೆ. ಹೀಗಾದ ಮೇಲೆ ಕೇಸಿನಲ್ಲಿ ಕೇಸುಗಳು ಹೆಚ್ಚುತ್ತವೆ. ಇದಲ್ಲದೆ ಜಫ್ತಿ ಬಿಟ್ಟ ಜಪ್ತಿಯಾದಾಸ್ತೀನೂ ಬದಲಾಯಿಸುವದುಂಟು. ಇದನ್ನು ಮಟ್ಟುಮಾಡಬೇಕಾ

ವರೆ ಜಪ್ತಿಯಾದಾಶ್ತು ಜಪ್ತಿಪಟ್ಟಿಗಳಿಗೆ ಪ್ರಿಂಟುಫಾರಂ ಮಾಡಿಕೊಡಬೇಕು ಒಬ್ಬೊಬ್ಬ ಅಮೀನನಿಗೆ ಇಷ್ಟೇ ಫಾರಂ ಕೊಟ್ಟಿದೆ ಎಂಬ ದಾಖಲೆ ಇಡಬೇಕು ಜಪ್ತಿವಾರಂಟ್ ಫಾರಂಗಳು ಒಬ್ಬರ ಕೈಯ ಅಮೀನನು ಕೋರಿಸಬೇಕು ಮತ್ತು ಜಪ್ತಿ ಕಾಲದಲ್ಲಿ ಒಬ್ಬಿಬ್ಬರೇ ಇದ್ದು ಜಪ್ತಿಪಟ್ಟಿಗೆ ಕಾರಣ್ಣ ಸುಬಗ್ನ ಎಂತ ಮನಸ್ಸೀ ಬದಲಾಯಿಸಿ ರುಜುಗಳು ಮಾಡುವದು ಉಂಟು ಇದನ್ನು ಮಟ್ಟು ಮಾಡಲು ಜಪ್ತಿ ವ ತರಾಪು ಪಂಚಾಯಿತರೆಲ್ಲರೂ ಹೆಬ್ಬೆಟ್ಟಿನ ಗುರುತು ಹಾಕುವಂತೆ ಏರ್ಪಡಿಸಬೇಕು ಆಗ್ಗೆ ಸುಳ್ಳು ರುಜುಗಳು ಹಾಕುವದು ನಿಲ್ಲುತ್ತೆ ಮತ್ತು ಜಪ್ತಿಮಾಲು ಜಾಮೀನು ಮೇಲೆ ಬಿಡುವದು ಪಟೇಲನ ಜಾಮೀನೇ ಪಡೆಯಬೇಕು ಜಾಮೀನಿಗೆ ಯೋಗ್ಯನಲ್ಲದವನಿಗೆ ಪಟೇಲಿ ಕೊಡಕೂಡದು, ಅಂದರೆ ಅನುಕೂಲಸ್ಥನಿಗೇನೇ ಪಟೇಲಿ ಇರಬೇಕೆಂಬ ಅರ್ಥ ಅನುಕೂಲ ಇಲ್ಲದವರ ಪಟೇಲಿಯು ಅನರ್ಥಕ್ಕೆ ಕಾರಣವಾಗುತ್ತೆ ಇದೂ ಗೌರ್ನಮೆಂಟಿನವರೂ ಚೀಫ್ ಕೋರ್ಟಿನವರೂ ವಿಚಾರ ತಗೆದುಕೊಳ್ಳತಕ್ಕ ವಿಷಯವಾಗಿದೆ ಈಗಿನ ಚಾಲತಿಯು ಅಮೀನರು ಒಪ್ಪಿದವರ ಜಾಮೀನು ಮೇಲೆ ಬಿಡುವದಾಗಿದೆ ಅಮೀನರು ಲಾಭವಿದ್ದವರ ಪಕ್ಷದ ಅನುಮತಿಯನ್ನು ಕೊಡುವದಾಗಿದೆ ಇದು ಮಾಲು ಖಿಲಲ್ ಆಗುವದಾಗಿದೆ

ಶಿವಮೊಗ್ಗಾ   ಸರ್ವಜನಕ್ಷೇಮಾಭಿಲಾಷಿ

ಶ್ರೀಮನ್ ಮಹಾರಾಜರವರ ವರ್ಧಂತಿ ಉತ್ಸವವು

ದೊಡ್ಡಬಳ್ಳಾಪುರ

ಕಳೆದ ಶನಿವಾರ ಶ್ರೀಮನ್ ಮಹಾರಾಜರವರ ವರ್ಧಂತಿ ಉತ್ಸವವಾದದ್ದರಿಂದ ಇಲ್ಲಿನ ಹಳೇ ಕಚೇರಿಯಲ್ಲಿ ಒಂದು ದೊಡ್ಡ ಸಭೆ ಸೇರಿತು ಊರಿನ ಪ್ರಮುಖರೆಲ್ಲಾ ದಯಮಾಡಿಸಿದ್ದರು ಮಂಗಳ ವಾದ್ಯ ವಿಶೇಷಗಳು ನಡೆದನಂತರ ಕಳೆದ 1911 ನೇ ವರುಷದಲ್ಲಿ ಪ್ಲೇಗ್ ಕಾಲದಲ್ಲಿ ಏಳು ಸಾವಿರ ಜನರಿಗೆ ಇನಾಕ್ಯುಲೇಷನ್ ಮಾಡಲು ಬಹು ಸಾಹಸಪಟ್ಟ ಈ ಊರು ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮ್ಯುನಿಸಿಪಲ್ ಮೆಂಬರಾದ ಮ ಕೊಂಗಾಡಿಯಪ್ಪನವರಿಗೆ ಶ್ರೀಮನ್ ಮಹಾರಾಜಾ ಸರ್ಕಾರದವರು ದಯಪಾಲಿಸಿರುವ ಬೆಳ್ಳಿಯ ಮೆಡಲನ್ನು ಅಮಲ್ದಾರ್ ಮ|| ಕೃಷ್ಣ ಅರಸಿನವರು ಉಚಿತ ಉಪನ್ಯಾಸದೊಡನೆ ಧರಿಸಿದರು ತರುವಾಯ ಒಬ್ಬ ಸನ್ಯಾಸಿಯು ಬಹು ಮನೋಹರವಾಗಿ ಹಾರ್ಮೋನಿಯಂ ಬಾರಿಸಿದರು ಕಡೆಯಲ್ಲಿ ಬಾಲಿಕಾ ಬಾಲಕರಿಗೆಲ್ಲಾ ಫಲಹಾರವೂ ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳೂ ಕೊಡಲ್ಪಟ್ಟವು ಶ್ರೀಮನ್ ಮಹಾರಾಜರವರ ಶ್ರೇಯಸ್ಸನ್ನು ಕೋರಿ ಮಂಗಳ ವಾದ್ಯದೊಡನೆ ಸಭೆ ಮುಕ್ತಾಯವಾಯಿತು ಮರುದಿನ ಸಾಯಂಕಾಲ ಸ್ಕೂಲ್ ಹುಡುಗರಿಗೆ ಆಟ ಪಾಟ ವಿನೋದಗಳು ನಡೆದವು

ಮೊಳಕಾಲ್ಮೂರು

ಈ ಸಾರಿ ನಮ್ಮ ಮಹಾರಾಜರವರ ವರ್ಧಂತಿ ಮಹೋತ್ಸವವು ಬಹಳ ವಿಜೃಂಭಣೆಯಿಂದ ನೆರವೇರಿತು ಊರಿನ ದೊಡ್ಡಮನುಷ್ಯರೆಲ್ಲಾ ಸೇರಿ ಚಂದಾ ಹಾಕಿ ಅನೇಕ ಬಡಬಗ್ಗರಿಗೆಲ್ಲಾ ಅನ್ನದಾನ ಮಾಡಿದರು ಮತ್ತು ಬಟ್ಟೆ ಬರೆಗಳನ್ನು ಕೊಡಿಸಿದರು ಸಾಯಂಕಾಲದಲ್ಲಿ ಎ ವಿ ಸ್ಕೂಲ್ ಬಳಿ ಹುಡುಗರ ಆಟಪಾಟಗಳ ತಮಾಷೆ ನಡೆಯಿತು ಮತ್ತು ಸ್ಕೂಲ್ ಹುಡುಗರು ಒಂದು ಚಿಕ್ಕ ನಾಟಕವನ್ನು ಅಭಿನಯಿಸಿದರು ಎಲ್ಲರಿಗೂ ಮಿಠಾಯಿ ದಿನಸುಗಳನ್ನು ಹಂಚಿದರು ಹಿಂದುಸ್ತಾನಿ ಸ್ಕೂಲ್ ಬಾಲಕರೂ, ಗರ್ಲ್ಸ್ ಸ್ಕೂಲ್ ಬಾಲಕಿಯರೂ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿದರು ಮೈಸೂರು ಎಗ್ಜಿಬಿಷನ್‌ನಿಂದ ಬಂದಿದ್ದ ಸರ್ಟಿಫಿಕೇಟುಗಳನ್ನು ಈಗ ಹಂಚಿದರು ಮತ್ತು ಅಮಲ್ದಾರ್ ಮ|| ಸುಬ್ಬರಾಯರವರು ಮಹಾರಾಜರ ವಿಷಯವಾಗಿಯೂ, ಗ್ರಾಮಾಭಿವೃದ್ಧಿ ವಿಷಯವಾಗಿಯೂ ಉಪನ್ಯಾಸವನ್ನು ಮಾಡಿದರು ನಂತರ ಎಲ್ಲರಿಗೂ ಪುಷ್ಪ ತಾಂಬೂಲಗಳನ್ನು ಹಂಚಿದರು ಈ ಊರಲ್ಲಿ ಇದುವರೆಗೆ ಇಂಥಾ ಉತ್ಸವಗಳನ್ನು ಎಷ್ಟೋ ನಾವು ನೋಡಿರಲಿಲ್ಲ ಈಗ ನಮ್ಮ ಅಮಲ್ದಾರರವರೂ, ಹೆಡ್ ಮಾಸ್ಟರವರೂ ತುಂಬಾ ಶ್ರಮವಹಿಸಿ ಇದರ ಮುಖ್ಯಗೆ ನಡೆಸಿರುವುದು ತುಂಬಾ ಶ್ಲಾಘನೀಯವಾಗಿದೆ ಆ ದಿನ ರಾತ್ರಿ ಒಂದು ಪಾರ್ಟಿ ಪರಿಗೂ ದೇವರ ಉತ್ಸವಗಳನ್ನು ಅಮಲ್ದಾರರವರೇ ಖುದ್ದಾಗಿ ನಿಂತು ನಡೆಸಿದರು

ಹುಣಸೂರು

ಕಳೆದ 11 ನೇ ತಾರೀಖು ಬುಧವಾರ ನಮ್ಮ ಮೈಸೂರು ಸೀಮೆಯ ಶ್ರೀ ಮನ್ ಮಹಾರಾಜ ಕೃಷ್ಣರಾಜ ಒಡೆಯರ್ ಜಿ ಸಿ ಎಸ್ ಐ ಯವರ 30 ನೇ ಜನ್ಮೋತ್ಸವದ ಸ್ಮರಣಾರ್ಥ ಮಹಾ ದಿನವಾಗಿರುವುದು ಆ ದಿನ ಮೈಸೂರಲ್ಲಿ ಬಹು ವಿಜೃಂಭಣೆಯಿಂದ ಉತ್ಸವ ನಡೆದಿರುವುದರಲ್ಲಿ ಯಾವ ಅನುಮಾನವೂ ಇರಲಾರದು ಅದಕ್ಕೆ ಅನುಸಾರವಾಗಿ ಈ ಸೀಮೆಯ ಎಲ್ಲಾ ಪ್ರಜೆಗಳೂ ಅಂದಿನ ನಾನಾ ಸಂತೋಷಗಳನ್ನು ಏರ್ಪಡಿಸಿ ಮಹಾ ಪ್ರಭುಗಳ ಚಿರಾಯುರಾರೋಗ್ಯ ನಿಮಿತ್ತ ವಿಜ್ಞಾಪಿಸಿರುವರು ಇಲ್ಲಿನ ಗೌರ್ನಮೆಂಟ್ ಎ ವಿ ಸ್ಕೂಲಿನಲ್ಲಿ ಆ ದಿನ ಗಂಡು ಹೆಣ್ಣು ಮಕ್ಕಳನ್ನು ಕೂಡಿಸಿ ಮಹಾರಾಜರವರ ಮತ್ತು ಚಕ್ರವರ್ತಿ ಪ್ರಭು ದಂಪತಿಗಳ, ಲೇಟ್ ಚಕ್ರವರ್ತಿ ಎಡ್ವರ್ಡ್ ಸಾರ್ವಭೌಮ ಪ್ರಭು ದಂಪತಿಗಳ ತೈಲಪಟಗಳನ್ನು ಎತ್ತಿ ಕಟ್ಟಿ ಪುಷ್ಪಮಾಲಿಕೆಗಳಿಂದಲಂಕರಿಸಿದರು ಆ ದಿನ ಸ್ಕೂಲ್ ಹಾಲಿನಲ್ಲಿ ಬಾಡಿಗೆ ಮನೆಯ ಗಳ ಬಿಡಿಸಿಕೊಂಡು ಎಸ್ಟೇಟ್ ಮ|| ಕೆ ನ ಗೋಪಾಲಯ್ಯನವರು ಅಗ್ರಾಸನವನ್ನು ವಹಿಸಿದ್ದರು ಇದರಲ್ಲಿ ಸಾಲಗನವಾಗಿ ಎ ವಿ ಸ್ಕೂಲ್ ಹೆಡ್ಮಾಸ್ಟರ್ ಮ|| ಆರ್ ರಾಮಯ್ಯಂಗಾರ್ರು ಕ್ರಮಪಡಿಸಿದರು ವ್ಯಾಧಿಸನ್ ಕಂಪನಿಯ ಮೂರು ಮಂದಿ ಯೂರೋಪಿಯನ್ ದೊಡ್ಡ ಮನುಷ್ಯರೂ, ಊರಿನ ಪ್ರಮುಖರಲ್ಲಿ ಹಲವು ಮಂದಿಯೂ ಸಂತೋಷದಿಂದ ಈ ಮಹಾ ಕಾರ್ಯದಲ್ಲಿ ಭಾಗಿಗಳಾಗಿದ್ದರು ಎಲ್ಲರೂ ಭಕ್ತಿಯುತರಾಗಿ ಕುಳಿತುಕೊಳ್ಳಲು ವೆಸ್ಲಿಯನ್ ಮಿಷನ್ ಗರ್ಲ್ಸ್ ಸ್ಕೂಲು ಬಾಲಕಿಯರೂ ಅವರ ಮಾಸ್ಟರುಗಳೂ ಬಹು ಇಂಪಾಗಿ ಪಿಟೀಲಿನೊಂದಿಗೆ ಮೈಸೂರು ಮತ್ತು ಬ್ರಿಟಿಷ್ ನ್ಯಾಷನಲ್ ಸಲಾಂ ಹಾಡನ್ನು ಹಾಡಿದರು ಹೆಡ್ಮಾಸ್ಟರವರು ಸಂಕ್ಷಿಪ್ತವಾದ ಸ್ವಾಗತವಾದ ಅಡ್ರೆಸ್ಸನ್ನು ಓದಿ ಮಹಾರಾಜ ಕೃಷ್ಣರಾಜ ಒಡೆಯರವರ ಆಳಿಕೆಯಲ್ಲಿ ಯಾವ ಯಾವ ಪ್ರಜೋಪಕಾರವಾದ, ಪ್ರಜಾರಂಜಕವಾದ ನವೀನ ಏರ್ಪಾಡುಗಳು ವೃದ್ಧಿಸ್ಥಾನವನ್ನು ಹೊಂದಿರುವವೆಂದು ವಿವರಿಸಿ ತಿಳಿಸಿದರು ಅನ್ಯುತಮಹಲ್ ಪರೋಗರು ಹಿಂದುಸ್ತಾನಿ ಮತ್ತು ಕನ್ನಡ ಭಾಷೆಯಲ್ಲಿ ಈಗಿನ ಮಹಾ ಪ್ರಭುಗಳ ಆಳಿಕೆಯು ಬಹು ಉತ್ತಮಕರವಾಗಿರುತ್ತದೆಂದು ತಿಳಿಸಿದರು ಪ್ರೆಸಿಡೆಂಟರು ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಉತ್ತಮವಾದ ಭಾಷಣಗಳನ್ನು ಮಾಡಿದರು ಮಕ್ಕಳಿಗೂ ಸಭಿಕರಿಗೂ ಸಕ್ಕರೆ, ಹಣ್ಣು, ಹೂವು, ತಾಂಬೂಲ, ಗಂಧ, ಮೊದಲಾದವುಗಳು ತರಿಸಿ ಎಲ್ಲರೂ ಸಂತೋಷಗೊಂಡು ಮೈಸೂರು ಮತ್ತು ಬ್ರಿಟಿಷ್ ನ್ಯಾಷನಲ್ ಸಂಗೀತವನ್ನು ಸ್ಕೂಲ್ ಬಾಲಕಿಯರು ಪಿಟೀಲಿನೊಂದಿಗೆ ಬಹು ಸಂತೋಷದಿಂದ ಹಾಡಿದರು ಕಡೆಯಲ್ಲಿ ಮಹಾರಾಜರವರಿಗೂ ಚಕ್ರವರ್ತಿ ಪ್ರಭುವರ್ಯರಿಗೂ ಮೂರು ಸಾರಿ ಜಯಘೋಷಮಾಡಿದರು

ತೀರ್ಥಹಳ್ಳಿ

ಕಾರೊನೇಷನ್ ಹಾಲಿನ ಪ್ರತಿಷ್ಠೆಯು ವರ್ಧಂತಿ ಉತ್ಸವವು—ಜೂನ್ 5 ನೇ ತಾ ಗೆ ಪ್ರಾರಂಭವಾದ ಮಳೆಯು 11 ನೇ ತಾ ರವರೆಗೆ ವಿರಾಮಕೊಟ್ಟಿತು ಕಳೆದ ವರುಷಕ್ಕಿಂತ ಈ ಸಾರಿ ಬಹು ಬೇಗನೆ ಮಳೆ ಪ್ರಾರಂಭವಾದದರಿಂದ ಅನೇಕರ ಕೆಲಸಗಳಿಗೆ ಬಹಳ ವಿಘ್ನಕಾರಿಯಾಯಿತು—ಈ ತಾಲ್ಲೂಕ್ ನಿವಾಸಿಗಳು ದೆಹಲಿ ದರ್ಬಾರಿನ ಜ್ಞಾಪಕಾರ್ಥವಾಗಿ ಚಂದಾ ಹಾಕಿ ಕಟ್ಟಿಸಿದ ಕಾರೊನೇಷನ್ ಎಂಬ ಕಟ್ಟಡವು ಪೂರೈಸಿ ಪ್ರಜೆಗಳ ಉಪಯೋಗಕ್ಕೆ ಸಿದ್ಧವಾದ್ದರಿಂದ ನಮ್ಮ ಶ್ರೀಮನ್ ಮಹಾರಾಜರವರ ವರ್ಧಂತಿ ಉತ್ಸವದ ದಿವಸಕ್ಕೇ ಮುಹೂರ್ತ ಮಾಡಿ ಕಾರೊನೇಷನ್ ಹಾಲ್ ಕೂಡ ಬಹು ಆಡಂಬರದಿಂದ ಪ್ರತಿಷ್ಠೆ ಮಾಡಲಾಯಿತು 11 ನೇ ತಾ ಬೆಳಿಗ್ಗೆ 9 ಗಂಟೆಗೆ ಅಮಲ್ದಾರ್ ಮ ದಯಮಾಡಿ ಊರಿನ ದೊಡ್ಡಮನುಷ್ಯರನ್ನು ವರ್ತಕರನ್ನೂ ತಾಲ್ಲೂಕಿನ ಎಲ್ಲಾ ಅಧಿಕಾರಿಗಳನ್ನೂ ಮೆರವಣಿಗೆ ಪೂರ್ವಕವಾಗಿ ಕರೆದುಕೊಂಡು, ಮೊದಲು ಕಾರೊನೇಷನ್ ಹಾಲಿನ ಮುಂಭಾಗದಲ್ಲಿ ಸೇರಿದರು ಸಾಹುಕಾರ್ ಮ|| ತಿಮ್ಮಣ್ಣಭಟ್ಟರು ಕಾರೊನೇಷನ್ ಹಾಲಿನ ಉದ್ದೇಶ ಮುಂತಾದವುಗಳ ವಿಷಯ ಒಂದು ಅಡ್ರೆಸ್ ಓದಿದರು ಅನಂತರ ಎಲ್ಲರೂ ಹರ್ಷದ ಚಪ್ಪಾಳೆ ಮಾಡಿದರು ಕೂಡಲೆ ಅಮಲ್ದಾರ್ರು ಸಭಿಕರ ಅನುಮತಿಯಂತೆ ಬೀಗವನ್ನು ತೆರೆದು ಎಲ್ಲರನ್ನೂ ಒಳಕ್ಕೆ ಸ್ವಾಗತಮಾಡಿದರು ಎಲ್ಲರೂ ಕ್ರಮವಾಗಿ ಕುಳಿತ ಮೇಲೆ ಇಂಡಿಯಾ ಚಕ್ರವರ್ತಿ ಮಹಾರಾಜರವರ ಶ್ರೇಯಸ್ಸನ್ನು ಎಲ್ಲರೂ ಭಕ್ತಿಪೂರ್ವಕವಾಗಿ ಹಾರೈಸಿ, ರಾಜ್ಯ ಸಂಗೀತ ಬಾಲಕ ಬಾಲಕಿಯರ ಹಾಡುಗಳಿಂದ ಸಂತೋಷಗೊಂಡು ಬಳಿಕ ನಾನಾ ವಿನೋದಗಳನ್ನು ನಡೆಸಿ ಸಂತೋಷಪಟ್ಟು ಕಡೆಗೆ ಸಕ್ಕರೆ ಗಂಧ ಪುಷ್ಪ ತಾಂಬೂಲಾದಿಗಳನ್ನು ಹಂಚಿ, ಇಂಡಿಯಾ ಚಕ್ರವರ್ತಿಗಳ ಮತ್ತು ಶ್ರೀಮನ್ ಮಹಾರಾಜರವರ ಆಯುರಾರೋಗ್ಯ ಭಾಗ್ಯಗಳನ್ನು ಕೋರಿ ಸಭೆಯು ಮುಕ್ತಾಯವಾಯಿತು ಮಧ್ಯಾಹ್ನ 3 ಗಂಟೆಯ ಮೇಲೆ ಮೊದಲೇ ನಿಯಮಿತವಾದ ರೀತಿ ಎ ವಿ ಸ್ಕೂಲಿನಲ್ಲಿ ಎಲ್ಲರೂ ಸೇರಿ ಹೆಡ್ ಮಾಸ್ಟರು ಸಿದ್ಧಪಡಿಸಿದ ಇಂಗ್ಲೀಷ್ ನಾಟಕವನ್ನು ಬಾಲಕರು ಬಹು ಚಟುವಟಿಕೆಯಾಗಿ ಆಡಿದ್ದನ್ನು ಎಲ್ಲರೂ ನೋಡಿ ಆನಂದಪಟ್ಟರು ಇದಾದಕೂಡಲೆ ಮುನಿಸಿಪಲ್ ಬಂಗ್ಲೆಯ ಮೈದಾನದಲ್ಲಿ ಎಲ್ಲರೂ ಸೇರಿ ಪೋಲೀಸಿನವರಿಂದ ಮಾಡಲ್ಪಟ್ಟ ಕವಾಯತುಗಳನ್ನೂ ನಾನಾ ವಿಧ ಸ್ಪೋರ್ಟ್ಸ್ ಆಟಗಳನ್ನೂ ಬಾಲಕರಿಂದ ಮಾಡಿಸಿ ನಾನಾ ರೀತಿಯಲ್ಲಿ ಎಲ್ಲರೂ ಸಂತೋಷಪಟ್ಟರು ಶ್ರೀಮನ್ ಮಹಾರಾಜರ ವರ್ಧಂತಿಯನ್ನು ತೀರ್ಥಹಳ್ಳಿ ನಿವಾಸಿಗಳು ಬಹು ಆಡಂಬರದಿಂದ ನಡೆಸಿದರು ಬಾಲಕ ಬಾಲಕಿಯರಿಗೆ ಆಡುವ ಪಾರಿತೋಷಕಗಳನ್ನೂ ಸಕ್ಕರೆ ಹಾಲು ಹಣ್ಣು ಮುಂತಾದ ಫಲಹಾರಗಳನ್ನೂ, ಗೆದ್ದವರಿಗೆಲ್ಲಾ ಬಹುಮಾನಗಳನ್ನೂ ಅಮಲ್ದಾರ್ರು ಅವರ ಸಹಾಯಕರೂ ಬಹು ಪ್ರೀತಿಯಿಂದ ಏರ್ಪಡಿಸಿದ್ದು ತುಂಬಾ ಶ್ಲಾಘನೀಯವಾಗಿ ನಡೆದವು ವರ್ಧಂತಿ ದಿವಸವೆಲ್ಲಾ ಮಳೆ ಇಲ್ಲದಿರುವದು ಎಲ್ಲರ ಸಂತೋಷಕ್ಕೆ ಕಾರಣವಾಯಿತು ಕಡೆಗೆ ಶ್ರೀಮನ್ ಮಹಾರಾಜರವರ ಹೆಸರು ಹೇಳಿ ಮೂರು ಸಲ ಜಯಕಾರವನ್ನು ಮಾಡಿ ರಾತ್ರಿ 10 ಗಂಟೆಗೆ ತೆರಳಿದರು ಈ ಉತ್ಸವ ಕಾಲದಲ್ಲಿ ಪೊಲೀಸ್ ಇನ್ಸ್‌ಪೆಕ್ಟರು ವ ಚತುರ್ಜಯಂ ಪ ಅಮಲ್ದಾರ್ರವರೆ ಸ ಗದ ಸೇರಿ ಊರಿನವರೆಲ್ಲರೂ ಸಹಾಯ ಮಾಡಿದರು

ಮಧುಗಿರಿ

ಕಳೆದ 11 ನೇ ತಾ ರೀಖು ನಮ್ಮನ್ನಾಳುವ ಮಹಾರಾಜಾ ಮಿಯವರಾದ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರವರ ವರ್ಧಂತಿಯ ದಿವಸವಾದುದರಿಂದ ಇಲ್ಲಿನ ಎ ವಿ ಸ್ಕೂಲಿನ ಉತ್ಸವಗಳು ಬಹು ವಿಜೃಂಭಣೆಯಿಂದ ಜರುಗಿದವು ಸಬ್ ಡಿವಿಜನ್ ಆಫೀಸರ್ ಮ|| ಎ ಶ್ರೀನಿವಾಸಯ್ಯಂಗಾರ್ರವರು ಅಗ್ರಾಸನವನ್ನು ವಹಿಸಿದ್ದರು ಊರಿನ ಸಕಲ ಗೃಹಸ್ಥರೂ ಕೆಲವು ಯೂರೋಪಿಯನ್ ದೊಡ್ಡ ಮನುಷ್ಯರುಗಳೂ ಸೇರಿದ್ದರು ಪ್ರಾರಂಭದಲ್ಲಿ ವೆಸ್ಲಿಯನ್ ಮಿಷನ್ ಗರ್ಲ್ಸ್ ಸ್ಕೂಲ್ ಬಾಲಕಿಯರು ರಾಜಭಕ್ತಿಯನ್ನು ಸೂಚಿಸುವ ಸಂಗೀತವನ್ನು ಹಾಡಿದರು ಬಳಿಕ ಹಿಂದುಸ್ತಾನಿ ಸ್ಕೂಲ್ ಬಾಲಕರು ಸಂಗೀತಗಳನ್ನು ಹಾಡಿದ ನಂತರ ಅಲಂಕರಿಸಲ್ಪಟ್ಟಿದ್ದ ಸ್ಕೂಲ್ ಹಾಲಿನಲ್ಲಿ ಸೇರಿದರು ಬಿ ಎ ಕೃಷ್ಣಸ್ವಾಮಯ್ಯಂಗಾರ್ರವರು ಅಗ್ರಾಸನವನ್ನು ಅಲಂಕರಿಸಿದರು ಗೌರ್ನಮೆಂಟ್ ಮತ್ತು ವೆಸ್ಲಿಯನ್ ಮಿಷನ್ ಗರ್ಲ್ಸ್ ಸ್ಕೂಲುಗಳ ಬಾಲಕಿಯರು ಭಗವಂತನ ಪ್ರಾರ್ಥನೆಯ ಕೀರ್ತನೆಗಳನ್ನು ಹಾಡಿದರು ಎ ವಿ ಸ್ಕೂಲಿನ ಮ|| ಎಚ್ ರಾಮರಾಯರು ಬ್ರಿಟಿಷ್ ಸಾರ್ವಭೌಮರ ಆಳ್ವಿಕೆಯಿಂದ ಹಿಂದೂದೇಶಕ್ಕೆ ಉಂಟಾಗಿರುವ ಅಪಾರವಾದ ಪ್ರಯೋಜನಗಳನ್ನು ಕುರಿತು ಉಪನ್ಯಾಸ ಮಾಡಿ ಯಾರಿಂದ ನಾಗರಿಕತೆ ಹೆಚ್ಚಿ ರೈಲ್ವೆ ಟೆಲಿಗ್ರಾಫ್ ಮೊದಲಾದವು ಬಂದು ವ್ಯಾಪಾರವೂ ಜನರ ಶಾಂತಿಯೂ ಹೆಚ್ಚಿದವೋ, ಯಾವ ರಾಜಶಾಸನದಿಂದ ಕಳ್ಳಕಾಕರ ಹಾವಳಿಯೂ ಸಹಗಮನವೂ ತಪ್ಪಿಸಲ್ಪಟ್ಟು ದೇಶದ ನೆಮ್ಮದಿಯು ಸ್ಥಿರಗೊಂಡಿತೋ, ಯಾರ ಉದಾರವಾದ ರಾಜ್ಯಭಾರದಿಂದ ದೇಶದಲ್ಲೆಲ್ಲಾ ಪಾಠಶಾಲೆಗಳು ಏರ್ಪಾಟಾಗಿ ವಿದ್ಯೆಯ ಅಭಿವೃದ್ಧಿಗೆ ಬಂದಿತೋ, ಯಾರ ಘನವಾದ ಆಳಿಕೆಯಿಂದ ನಾವು ಈಗ ಅನುಭವಿಸುತ್ತಿರುವ ಸೌಖ್ಯಗಳೆಲ್ಲವೂ ದೊರೆತವೋ ಅಂತಹ ಬ್ರಿಟಿಷ್ ಸಾರ್ವಭೌಮರವರ ನ್ಯಾಯವು ಶಾಶ್ವತವಾಗಿ ನಮ್ಮ ದೇಶದಲ್ಲಿ ನೆಲಸಲಿ ಭಗವಂತನು ಜಾರ್ಜ್ ಸಾರ್ವಭೌಮರವರಿಗೂ ಮೇರಿ ಚಕ್ರವರ್ತಿನಿಯವರಿಗೂ ಆಯುರಾರೋಗ್ಯವನ್ನಿತ್ತು ಕಾಪಾಡಲಿ ಎಂದು ಭಗವಂತನನ್ನು ಪ್ರಾರ್ಥಿಸಿ ಉಪನ್ಯಾಸವನ್ನು ಮುಗಿಸಿದರು ತರುವಾಯ ಹೆಡ್ ಮಾಸ್ಟರ್ ಮ|| ರಂಗರಾಯರು "ರಾಜಭಕ್ತಿ"ಯ ವಿಚಾರವಾಗಿ ಎಲ್ಲರ ಮನಸ್ಸಿಗೆ ನಾಟುವಂತೆ ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು ಚೇರ್‌ಮನ್‌ರವರು ಆ ದಿವಸ ಸಭೆಯು ಸೇರಿದ ಉದ್ದೇಶದ ವಿಚಾರವಾಗಿ ಕೆಲವು ಮಾತುಗಳನ್ನಾಡಿದ ತರುವಾಯ ಪ್ರಜೆಗಳು ಪ್ರಭುವಿನ ವಿಚಾರದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬ ವಿಷಯದಲ್ಲಿ ಬಾಲಕಬಾಲಕಿಯರ ಮನಸ್ಸಿಗೆ ಚೆನ್ನಾಗಿ ನಾಟುವಂತೆ ಉಪದೇಶ ಮಾಡಿದರು ತರುವಾಯ ಹೆಣ್ಣುಮಕ್ಕಳು ಬಹಳ ಇಂಪಾಗಿ ಬ್ರಿಟಿಷ್ ಸಾರ್ವಭೌಮರವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನೂ ಮಂಗಳವನ್ನೂ ಹಾಡಿದನಂತರ ಸಕಲರೂ ಆಟದ ಮೈದಾನದಲ್ಲಿ ಸೇರಿ ಪೋಲೀಸ್ ಡ್ರಿಲ್, ಸಲಾಂ ಆದನಂತರ ತಮ್ಮ ತಮ್ಮ ಮಂದಿರಗಳಿಗೆ ತೆರಳಿದರು ಮಧ್ಯಾಹ್ನ ಬಾಲಕ ಬಾಲಕಿಯರ ಆಟಪಾಟ ವಿನೋದಗಳು ಪ್ರಾರಂಭವಾಗಿ ಸೆಕ್ರೆಟರಿ ಮ|| ಕೃಷ್ಣಮೂರ್ತಿಗಳ ದಿವ್ಯವಾದ ಏರ್ಪಾಡಿನಿಂದ 6 ಗಂಟೆಗೆ ಸರಿಯಾಗಿ ಎಲ್ಲವೂ ಕ್ರಮವಾಗಿ ಜರುಗಿದವು ಅಲ್ಲಿ ಸಮಸ್ತ ಮಕ್ಕಳಿಗೂ ಮಿಠಾಯಿ ಹಂಚಲ್ಪಟ್ಟಿತು ಇದಾದ ಮೇಲೆ ಸಕಲರೂ ಸ್ಕೂಲ್ ದಾಲನಿಗೆ ಸೇರಿದರು ಬಾಲಕಿಯರು ಗಾನಮಾಡಿದರು ಸ್ಕೂಲಿನ ವಿದ್ಯಾಭಿವೃದ್ಧಿಯ ರಿಪೋರ್ಟನ್ನು ಹೆಡ್ ಮಾಸ್ಟರವರ ಇರಾದೆಯಂತೆ ಮ ರಾಮರಾಯರು ಓದಿದರು ಸ್ಕೂಲಿನಲ್ಲಿ ಬಾಲಕರ ಸಂಖ್ಯೆಯು ದಿನೇ ದಿನೇ ಅಭಿವೃದ್ಧಿ ಹೊಂದಿ ಅವರಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಬಲಪಡಿಸಿದ ತರುವಾಯ ಎ ವಿ ಕ್ಲಾಸುಗಳ ಸಂಖ್ಯೆಯು ಬಹು ಜಾಸ್ತಿಯಾಗಿದೆ ಎಂದೂ, ಆದರೆ ಅದಕ್ಕೆ ತಕ್ಕಂತೆ ಹೊಸ ಮಾಸ್ತರನ್ನು ಕೊಟ್ಟಿಲ್ಲವ ಕಲಾ, ಸ್ಕೂಲು ಮುಂದಿನ ಕೆಲವು ವರುಷಕ್ಕೆ ಉಪಾಧ್ಯಾಯರುಗಳೆಲ್ಲಾ ಏಕಮತದಿಂದ ಬಹು ಸಮಾಧಾನದಿಂದ ಕೆಲಸ ಮಾಡುತ್ತಿರುವರೆಂದೂ ತಿಳಿಸಿದರು ಪ್ರೆಸಿಡೆಂಟರವರು ಬಹುಮಾನಗಳನ್ನು ಹಂಚಿದರು ಆ ದಿನ ಗಾನಮಾಡಿದ ಬಾಲಕಿಯರುಗಳಿಗೆ ಪ್ರೆಸಿಡೆಂಟರವರು ಬಹುಮಾನವಾಗಿ ಪುಸ್ತಕಗಳನ್ನು ದಯಪಾಲಿಸಿದರು ತರುವಾಯ ಎ ವಿ ಸ್ಕೂಲ್ ಹೆಡ್ ಮಾಸ್ಟರು ನಮ್ಮ ಪಂಡಿತರಾದ ಮ|| ನರಸಿಂಹಯ್ಯನವರು, ಮ|| ಕೃಷ್ಣಸ್ವಾಮಯ್ಯಂಗಾರ್ರವರು ಬಂದು ನಿಂತು ಈ ಕೆಲಸವನ್ನು ಆಗಮಾಡಿಸುವದಕ್ಕಾಗಿ ಅವರಿಗೂ ಮತ್ತು ಈ ಕೆಲಸಕ್ಕೆ ಎಲ್ಲಾ ರೀತಿ ಸಹಾಯ ಮಾಡಿದ ಅಲ್ಲಿ ಸೇರಿದ್ದ ಮೊದಲಾದ ಮಹನೀಯರಿಗೂ ಸ್ಕೂಲಿನವರು ಬಹಳ ಕೃತಜ್ಞರಾಗಿರುವರು ಎಂದು ತಿಳಿಸಿದರು ಬಾಲಕಿಯರು ಮಂಗಳವನ್ನು ಹಾಡಿದರು ಸಭಿಕರು ಎಲ್ಲಾ ಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಜಯಘೋಷದೊಡನೆ ತೆರಳಿದರು

ಔಷಧಿ ಪಕ್ವೊಂದು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮವಲ್ಲಿರುವದು ಉತ್ತಮ

SCOTT'S EMULSION.

(ಸ್ಕಾಟ್ಸ್ ಇಮಲ್ಷನ್)

ಕೆಟ್ಟ ಶರೀರಸ್ಥಿತಿಯಿಂದ ಕ್ಷಯ, ನ್ಯುಮೊನಿಯಾ ರೋಗ ಮುಂತಾದವು ಅಥವಾ ಬೇರೆ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ಶರೀರದ ಬಲಹೀನತೆಯನ್ನೂ ದುರ್ಬಲತೆಯನ್ನೂ ಹೋಗಲಾಡಿಸುತ್ತದೆ

ಅ ನ್ನು ದೇಹ ಹೊರಗಲಾಡಿಸಿ, ಶರೀರದಲ್ಲಿರುವ ನಾನಾ ಭಾಗಗಳನ್ನು ಪುಷ್ಟಿಗೊಳಿಸಿ ಆರೋಗ್ಯವನ್ನು ಉಂಟುಮಾಡುತ್ತದೆ

ಕೈನೋಕದೆ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ದೊರೆಯುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್,

ಈ ಗುರುತು ಇರುವ ಔಷಧವನ್ನೇ ಕೊಂಡುಕೊಳ್ಳಿ

Mellin's Food

ಮೆಲಿನ್ಸ್ ಆಹಾರವು.

ಕೈನೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ತಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಸಿಕ್ಕುತ್ತವೆ

ಹಿಂದುಸ್ತಾನದಲ್ಲಿ ಮಕ್ಕಳ ಪೋಷಣೆ ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸುವ ಬೆಲೆಯನ್ನು ಕೊಡುವವರಿಗೆ ಬರೆದುಕೊಳ್ಳುವವರಿಗೆಲ್ಲಾ ಉಚಿತವಾಗಿ ಕಳುಹಿಸಲಾಗುತ್ತದೆ   Messrs. KEYS & Company, Mount Road, Madras.

ಮೆಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸು.

Printed and Published by the REV. H. GULLIFORD, Proprietor and Manager, Wesleyan Mission Press, Mysore 19/6/13

REGISTERED
M. 30

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸೆ ೧೯೧೩ ನೇ ಇಸವಿ ಜೂನ್ ತಾರೀಖು ೨೬ ನೇ ಗುರುವಾರ. ಸಂಚಿಕೆ ೪

ಒಳ್ಳೆಯ ಸಮಯ! **ನೋಟೀಸ್.** ಸುಲಭ ಕ್ರಯ"

ಮೈಸೂರು ಚರಿತ್ರೆ ಸಂಗ್ರಹ ಕ್ರಯ 1 ಆಣೆ.
ಕನ್ನಡ 2 ನೇ ರೀಡರಿನ ಕೀಸ್ ,, 1 ಆಣೆ. 1ಕ್ಕೆ 1 ಪ್ರತಿ ಹೆಚ್ಚು
ಲೇಖ್ಯಪ್ರದರ್ಶಿನಿ ,, 2 ಆಣೆ

[126 1] ವಿಳಾಸ—ಸರಾಫ್ ರಂಗಸ್ವಾಮಿಸೆಟ್ಟಿ, ಮಾಗಡಿ

ಬೇಕಾಗಿದೆ.

ಏಜಂಟರುಗಳು ನಮ್ಮ ಔಷಧಿಗಳನ್ನು ವಿಕ್ರಯಮಾಡಲು ಪ್ರತಿ ತಿಂಗಳಿಗೂ ಸಂಬಳವು 30 ರೂಪಾಯಿಗಳಿಂದ 100 ರ ವರೆಗೆ ಕೊಡಲ್ಪಡುತ್ತೆ. ಅಪೇಕ್ಷಿಸುವವರು 3 ಅರ್ಧಾಣೆ ಸ್ಟಾಂಪಿನೊಡನೆ ಕೆಳಗಿನ ವಿಳಾಸಕ್ಕೆ ಬರೆಯಿರಿ [88-8]

ದಿ ಫ್ರಿ ಮೆಡಿಕಲ್ ಕೌನ್ಸಲ್, 97 ಸೂಲೆ ಬಜಾರ್ ರೋಡು, ಮದ್ರಾಸು.

1914 ನೇ ವರ್ಷದ ಲೋವರ್ ಸೆಕಂಡರಿ ಕನ್ನಡ ಟೆಕ್‌ಸ್ಟ್ ನೋಟ್ಸು ವಿಕರಿಗೆ ಸಿದ್ಧವಾಗಿದೆ—ಕ್ರಯ 6 ಆಣೆ.

ಡಿಸ್ಕೌಂಟು 10 ಕ್ಕೆ 1, 50 ಕ್ಕೆ 7; 100 ಕ್ಕೆ 20.

ನಮ್ಮ ನೋಟ್ಸು ಬೇಕಾಗಿದ್ದರೆ ನೋಟ್ಸಿನ ಮೇಲೆ ನಮ್ಮ ಹೆಸರನ್ನು ನೋಡಿ ತೆಗೆದುಕೊಳ್ಳಿ [83-9]

ಎಸ್. ಆರ್. ವೆಂಕಟಸುಬ್ಬಾಚಾರ್ಯ,
ಸುಬೋಧ ಗ್ರಂಥಾಲಯ, ಮೈಸೂರು.

ಇಮಿಟೇಷನ್ ವಜ್ರದ ಒಡವೆಗಳು.

ಹೊಸದಾಗಿ ಸೀಮೆಯಿಂದ ತರಿಸಿರುತ್ತೆ.

ಇಮಿಟೇಷನ್ ವಜ್ರದ ಜಿಂದೋಲೆಯನ್ನು ಈಗತಾನೇ ವಿಲಾಯಿತಿಯಿಂದ ತರಿಸುತ್ತೇವೆ ಇದು ಉತ್ತಮವಾದ ವಜ್ರದ ಹೊಳಪುಳ್ಳ ಸಾರೋಟವೂ

ದನಿ ಕೆಂಪು ಒಡವೆ ... ಪ್ರಕಾರವಾಗಿರುತ್ತೆ ಇದನ್ನು ... ಕೊಡ ವಜ್ರದ ... ಬದಲಾಗಿ ಉಪಯೋಗಿಸುತ್ತಾರೆ ಇದನ್ನು ಅನೇಕವಾಗಿ ಗಿರಾಕಿಗಳು ಬರುತ್ತಿರುವುದರ ... ಜಾಗ್ರತೆ ... ಜೋಡಿ 1ಕ್ಕೆ ... ರೂ 1-12-0 ... ಹತ್ತಕಡಕು, ವೇಸರು, ... ಹತ್ತಕಡಕು ಜೋಡಿಗೆ ರೂ 1-8-0, ... 12 ಆಣೆ, ... ಜೊತೆಗೆ ರೂ 2, ಮೂಗುಬೊಟ್ಟುಗೆ 6 ಆಣೆ ... ಸುಲಭವಾದ ... ಮುತ್ತಿನ ಕೆಂಪಿಗೆ ರೂ 1-8-0 ಪಡಕೆನಿಲ್ಲದವರಿಗೆ 12 ಆಣೆ. [122-1]

ವಿಳಾಸ: ಪಿ. ಶೇಷಾ ಅಂಡ್ ಬ್ರದರ್ಸ್,
ಸಂಗುಂಪಾಕಂ, ಸೆಂಟ್ ಥಾಮಸ್ ಮೌಂಟ್ ಪೋಸ್ಟ್,
ಮದರಾಸ್.

ಇಂಪ್ರೂವಡು ರೈಲ್ವೆ ರೆಗುಲೇಟರ್ ಕ್ರಯ ರೂಪಾಯಿ 2 ... 0

ಈ ನಮೂನೆ ಗಡಿಯಾರ ನಮ್ಮ ಕಂಪನಿಯಲ್ಲಿ ಮಾತ್ರ ಇದೆ ಇದು ನಮ್ಮ ಗೋಲ್ಡನ್ ಗಟ್ಟಿಯಾದ ಸಾಮಾನುಗಳಿಂದ ಬಹಳ ದಿನ ಬಾಳಿಕೆ ಬರುವದಕ್ಕೋಸ್ಕರ ತಯಾರುಮಾಡಿದ್ದು ಅನೇಕ ಉದ್ಯೋಗಸ್ಥರು, ರೈಲ್ವೆ ನೌಕರರು, ಪ್ರಾಮಾಣಿಕರು, ಒಡೆಯರು ಸಹ ಪ್ರೀತಿಯಿಂದ ಇದನ್ನು ಕೊಂಡು ... ಯೋಗ್ಯವಾದ್ದಾಗಿ ... ಇದು ತಪ್ಪದೆ ... ಬಹಳ ಸುಂದರವಾದ, ... ಹಿಂದಾದ್ದರಿಂದ 3 ವರುಷ ಗ್ಯಾರಂಟಿ ಕೊಡುತ್ತೇವೆ ಒಂದು ಗಡಿಯಾರ ಕೊಂಡುಕೊಂಡರೆ ಮ್ಯಾಜಿಕ್ ಬೀಸಣಿಗೆ ಇನಾಮು ಎರಡಕ್ಕೆ ಒಂದು ಮ್ಯಾಜಿಕ್ ಪೆನ್ಸಿಲ್, ಮ್ಯಾಜಿಕ್ ಬಾಕ್ಸು, ಒಂದು ... ಮಾರ್ಕಿಂಗ್ ಇಂಕ್ (ಬಟ್ಟೆಗಳಿಗೆ ಗುರುತನ್ನು ಹಾಕುವ ಶಾಯಿ) ಇವನ್ನು ಇನಾಂ ಕೊಡುತ್ತೇವೆ ಚಿಕ್ಕ ಗಡಿಯಾರಕ್ಕೆ 1-15-0 ... ಗಾರ್ ... ಬ್ 2-1-0 ಡಿಟೊ ಸ್ಟೀಲ್ ರೆಗುಲೇಟರ್ 1-11-0 ಎಪ್ರೂವ್ಡ್ ರೆಗುಲೇಟರ್ 1-13-0 ಮ್ಯಾಜಿಕ್ ಜೇಬುದೀಪ 1-15-0. ಅಟ ... ಮೂರುಚಕ್ರದ ಚುಕ್ಕಿ ... 2-12-0 ಬಟ್ಟೆಗಳಿಗೆ ಒಂದಾವರ್ತಿ ಹಾಕಿದರೆ 8 ದಿವಸದ ವರೆಗೂ ಇರುವಂಥಾ ವಾಸನೆ ಸೀಸೆಗೆ 1 ... 0 [121-1]

ಇನ್ನು ಅನೇಕ ಸಾಮಾನುಗಳು ನಮ್ಮಲ್ಲಿವೆ.

ವಿಳಾಸ —ವಿ ಎಸ್ ನಾರಾಯಣ್ ಅಂಡ್ ಸನ್ಸ್,
101, ಚೀನಾ ಬಜಾರ್ ರೋಡ್, ಮದರಾಸ್.



ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ.)

ಈ ಪುಸ್ತಕದಲ್ಲಿ.—1. ಪಿನಲ್‌ಕೋಡು, 2 ಪೊಲೀಸ್ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4. ಆಯುಧಗಳ ರೆಗ್ಯುಲೇಷನ್, 5. ವಿಷ್ಯವಸ್ತುಗಳ ರೆಗ್ಯುಲೇಷನ್, 6. ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7. ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8. ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ಸ್ಟೇಟ್ಸ್ ರೆಗ್ಯುಲೇಷನ್, 10. ಟೆಲಿಗ್ರಾಫ್ ಆಕ್ಟ್, 11. ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ

ಕ್ರಿಮಿನಲ್ ಸೆಕ್ಷನ್‌ಗಳೂ—ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೇ? ಯಾ ಕೂಡದೆ? ಮೊದಲು ಸಮನ್ ಹುಟ್ಟಬೇಕೋ? ಯಾ ವಾರಂಟು ಹುಟ್ಟಬೇಕೋ? ಜಾಮೀನ್ ತೆಗೆದುಕೊಳ್ಳಬಹುದೆ? ಯಾ ಕೂಡದೆ? ರಾಜಿಮಾಡಬಹುದೇ? ಯಾ ಕೂಡದೆ? ಎಂಬ ಸಂಗತಿಗಳೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ. 22-5-1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ. ಕ್ರಯ ರೂಪಾಯಿ 2-0-0. ಟಪಾಲ್ ಹಾಸಲು 3 ಆಣೆ.

ವಿಳಾಸ:—ಎಲ್. ಪೇಮಾರೆಡ್ಡಿ,
ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್,
[103-5] ಮಾಲೂರು—ಕೋಲಾರ ಡಿಸ್ಟ್ರಿಕ್ಟ್.

ನೋಡಿದ ... 8 ದಿವಸಗಳಿಗೊಂದಾವರ್ತಿ ಬೀಗ ಕೊಡುವ ಗೋಡೆ ಗಡಿಯಾರ

ಈಗಿನ ಕ್ರಯ ರೂ 7 8-0; ಪೂರ್ವದ ಕ್ರಯ ರೂ 16.



... ತರಹೆವಾರಿ ಗುಣಗಳುಳ್ಳ ನವಂಬರ್ ತಿಂಗಳು ... ಈ ಪಕ್ಷದಲ್ಲಿ ಕಾಣುವ ಡ್ರಾನ್ ಆಕ್ಷನ್ ಎಂಬ ಗಂಟೆ ... ಗಳನ್ನು ಹೊಡೆಯುವ ಗೋಡೆಗೆ ತಗಲಿಸುವ ಗಡಿಯಾರಗಳು ..., ಊರು ವರುಷಗಳ ವರೆಗೂ ಬಾಳಿಕೆ ಬರುವ 15 ರೂಪಾಯಿನ ಗಡಿಯಾರವನ್ನು ರೂ 7-8-0 ಕ್ಕೆ ಮಾರುತ್ತೇವೆ ಈ ಗಡಿಯಾರಗಳು ... ಇರುವುದರಿಂದ ಕೂಡಲೆ ಹಣವನ್ನು ಕಳುಹಿಸುವವರಿಗೆ ಮಾತ್ರವೇ ಈ ಕ್ರಯಕ್ಕೆ ಕೊಡಲ್ಪಡುತ್ತೆ ಈ ಗಡಿಯಾರಗಳು ಪ್ರತಿಯೊಬ್ಬರ ಮನೆಯಲ್ಲಿಯೂ, ... ಆಫೀಸು, ಸ್ಕೂಲು, ಬಾಂಕು, ದೇವಸ್ಥಾನಗಳಲ್ಲಿಯೂ ಇಡತಕ್ಕದ್ದು. [120-1]

ಜಂಟಲ್‌ಮನ್ ಲೀವರ್ ವಾಚು

ಈಗಿನ ಕ್ರಯ ರೂ 1 15 0, ಪೂರ್ವದ ಕ್ರಯ 5 8-0

ಇದು ಗಟ್ಟಿ ... ನವರಲ್ಲಿ ಹೆಸರುವಾಸಿಯನ್ನು ಪಡೆದ ... ರಿಸಲ್ಪಟ್ಟದ್ದು ನಾವು ನೂತನವಾಗಿ ಇಂಡಿಯಾ ದೇಶದಲ್ಲಿ ಕಂಪೆನಿಯನ್ನು ಸ್ಥಾಪಿಸಿ ಇರುವದರಿಂದ ನಮ್ಮ ಹೆಸರು ಪ್ರಪಂಚದಲ್ಲೆಲ್ಲಾ ಪ್ರಖ್ಯಾತಿಯಾಗುವದಕ್ಕೋಸ್ಕರ ಈ ಗಡಿಯಾರವನ್ನು ಪೆಟ್ಟಿಗೆ ಮತ್ತು ಸರಪಣಿ ಸಹಾ 1-15-0 ಆಣೆಗೆ ಮಾತ್ರವೇ ಕೆಲವು ಕಾಲದ ವರಿವಿಗೆ ಕೊಡುತ್ತೇವೆ ಇದು ಎಂದಿಗೂ ಕೆಪ್ಪಾಗದ ನಿಕಲ್ ಬೆಳ್ಳಿಯಿಂದ ತಯಾರಿಸಲ್ಪಟ್ಟದ್ದು ಬಲವಾದ ಸಾಮಾನುಗಳನ್ನು ಹಾಕಿರುವದರಿಂದ ಬಹುಕಾಲದವರಿಗೆ ನಡೆಯುತ್ತೆ. ಇದಕ್ಕೆ ನಾವು 6 ವರುಷಗಳ ವರಿವಿಗೆ ಜವಾಬುದಾರಿ ಪತ್ರವನ್ನು ಕೊಡುತ್ತೇವೆ ಇದು ಪ್ರಾಂ ... ಗಡಿಯಾರ. ಜಾಗ್ರತೆ ಬರೆದು ತರಿಸಿಕೊಳ್ಳಿರಿ.



ವಿಳಾಸ ... ಡಕ್ಕನ್ ವಾಚ್ ಕಂಪನಿ, ಸೆಕೆಂಡ್ ಲೈನ್ ಬೀಚ್, ಮದರಾಸು.

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ.

ಮೇಲ್ಕಂಡ ವಿಮೇ ಸಂಘದ ಆದಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್‌ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿನನುಸಾರವಾಗಿ ಭರವಸೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ. ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಹಿಸಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು.

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತವೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[109-4] ಎಸ್. ಕಬ್ಬೂರ್, ಬ್ರಾಂಚ್ ಸೆಕ್ರೆಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

104-5

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಆರಡಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈಷ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 1 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು—(1) ಎಸ್ ಪೀಟರ್ಸ್, 37 ವಡಮಲೈಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಜೆ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ಡ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ.

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 4 ಆಣೆ.



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ... ಅನುಕೂಲವಾದದ್ದು. ... ಸಂಚಾರವಾಡಿ ... ಗಡಿಯಾರಗಳು ... ಸರಿಯಾದ ಕಾಲವನ್ನು ತೋರಿಸತಕ್ಕದ್ದು ... ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ

ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ,
[121-1] ಪೋಸ್ಟ್ ಬಾಕ್ಸ್, ನಂ 167, ಮದರಾಸು.

ಮುಖ್ಯವಾಗಿ ಗಮಿಸಿಸಿ ಓದಿರಿ

೧. ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್ಸೇಷನ್ ಬ್ಯಾಲೆನ್ಸು ಬಹು ಬಲಿಷ್ಟವಾದ 5 ವರುಷಗಳ ಗ್ಯಾರಂಟಿಯುಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 5-0-0 ಇದನ್ನು ಸೆಪ್ಟಂಬರ್ ಅಖೈರೊಳಗಾಗಿ ತರಿಸಿಕೊಳ್ಳುವವರಿಗೆ 30 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ.—ಧನಲಕ್ಷ್ಮಿ ಅಂಡ್ ಕಂಪೆನಿ,
[129-1] ನಾಯಕರ್ ಪೇಟೆ ಪೋಸ್ಟು, ಮದರಾಸು.

ಪ್ರಖ್ಯಾತವಾದ ಪಾರ್ಸಿ ಫ್ಲೂಟ್ ಹಾರ್ಮೋನಿಯಂ



ಉತ್ಕೃಷ್ಟ ಪದಾರ್ಥ ಯಾವ ಹವೆಯಲ್ಲೂ ಬೇರುಸೇರಾಗದ ಬಹು ಬಲಿಷ್ಠವಾದ ಮರ, ರೀಡುಗಳು ಅತ್ಯಂತ ಶ್ರೇಷ್ಠವಾದವು. ನಾದವು ಮಹಾ ಸುಖಕರವಾಗಿದೆ, ಇದರಲ್ಲಿ ಕೆಟ್ಟು ಹೋಗುವದು ಯಾವುದಿಲ್ಲ. ಮೂರೂಕಾಲು ಆಕ್ಟೇವುಗಳು, ಒಂದು ಸೆಟ್ ರೀಡುಗಳು ಎರಡು ಸ್ಟಾಪುಗಳು ಪಾರ್ಸಿ ಮತ್ತು ಹಿಂದೂ ಸಂಗೀತಕ್ಕೆ ಬಹಳ ಉಪಕಾರವಾಗಿದೆ. ಎಲ್ಲಿಯೂ ಪ್ರಚಾರಕ್ಕೆ ತರಬೇಕೆಂದು ಇದರ ಕ್ರಯವನ್ನು ಬಹಳ ಕಡಮೆಮಾಡಿದೆ. ಬೇಗ ನೋಡಿ ಇಂಥಾ ಒಳ್ಳೇ ಸಮಯವನ್ನು ಕಳಕೊಳ್ಳದೆ ಕೊಂಡುಕೊಳ್ಳಿ. ಕ್ರಯ ರೂ ೩೦ ರೆಜಿಸ್ಟರು ಫೀಜು ಪ್ರತ್ಯೇಕ. ಅಡ್ವಾನ್ಸು ೫ ರೂ ಬಂದಲ್ಲದೆ ನಾವು ಕಳುಹಿಸಲಾರೆವು. ನಮ್ಮ ವಿಳಾಸ — [110 2]

ಮ್ಯಾನೇಜರ್ ಬಾಂಬೇ ಪಾಪ್ಯುಲರ್ ಏಜನ್ಸಿ

ಗಿರಾವ್ ಬೊಂಬಾಯಿ

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

1 1/6



ಬೆನ್ನೆಲುಬಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಕೀಲುಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕಾಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಂಟುವಾಗುವದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಸಂದುಗಳಲ್ಲಿ ಜಗ್ಗಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹ ಉಷ್ಣವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಆದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಬುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷದ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು   ಸಣ್ಣ ಸೀಸೆಗೆ ೧ ರೂಪಾಯಿ   ದೊಡ್ಡ ಸೀಸೆಗೆ ೨ ರೂಪಾಯಿ

ನಮೂನೆ ಮುಫತ್ತು

ಕೇಶಕುಸುಮಾಕರ ತೈಲವು.

ವಾಸನೆಯುಳ್ಳ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ ಬುದ್ಧಿಯನ್ನು ವಿಕಾಸಗೊಳಿಸುವದರಲ್ಲಿಯೂ, ಒಟ್ಟಿಗೆ ತಲೆಯಲ್ಲಿ ಕೇಶವನ್ನು ಬೆಳಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ, ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ. ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುದ್ದಿ ತೈಲ ಕ್ರಯ 10 ಆಣೆ ಮೂರು ಬುದ್ದಿಗಳ ತೈಲ ಕ್ರಯ ರೂ 1 12 ಆ ಆರು ಬುದ್ದಿಗಳ ತೈಲ ಕ್ರಯ ರೂ 3 4 ಆ ಡಜನ್ ಬುದ್ದಿಗಳ ಕ್ರಯ ರೂ 6

ವಿ ಪಿ ಅಂಚೆ ಖರ್ಚು ಪ್ರತ್ಯೇಕ

ರಾಜವೈದ್ಯ ನಾರಾಯಣ ಜೀವರಾಜ್, ಆಯುರ್ವೇದೀಯ

[82 1]   ಔಷಧಾಲಯ 177 ವಿನಾ ಬಜಾರ್ ರೋಡ್, ಮದ್ರಾಸು

ಕುಂತಲಾನಂದ ತೈಲವು

147 10

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಚಿನ್ನದ ಪದಕಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಹಿಂದುಸ್ಥಾನದ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಗುಣಗೊಳಿಸುತ್ತದೆ. ಸುವಾಸನೆಯನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಲವೂ ಸುವಾಸನೆಯೂ ಆಗಿದ್ದು ಮಾನಸಿಕ ಶ್ರಮವನ್ನು ನೀಗಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟ್ಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ ಎನ್ ನಾಥ ಮತ್ತು ಕಂಪೆನಿ,

ವೇಪೇರಿ ಮದರಾಸ್

ಪರೀಕ್ಷಿಸಿ ನೋಡದ ಅಗ್ಗದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ವಿಕರಿಯಾಗುತ್ತಿವೆ. ನಿಮ್ಮ ಕೇಶ ಜಾತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಹಾಕುವದರಿಂದ ತಲೆನೋವು ಹುಟ್ಟುತ್ತದೆ. ಕೂದಲು ಸತ್ತುಹೋಗುತ್ತದೆ. ಆದಕಾರಣ ಸುವಾಸನೆಯುಳ್ಳದ್ದಾಗಿಯೂ ಪ್ರಖ್ಯಾತವಾಗಿಯೂ ಇರುವ ಕಾಮಿನಿಯಾ ತೈಲವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿ ಕೊಡುತ್ತದೆ, ಪ್ರಾಣ ಕೊಡುತ್ತದೆ. ಸತ್ತ ಮತ್ತು ಸಾಯುವ ಕೂದಲನ್ನು ಪುನಃ ಹುಟ್ಟಿಸಿ ಬೆಳೆಸುತ್ತದೆ. ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಿಕ್ಕಚಿಕ್ಕದಾಗಿ ಸುರುಳಿಯಾದ ನಾನಾ ರೀತಿಯ ಬೆಳೆಯುವುದು. ಆಗಾಗ್ಗೆ ಹಚ್ಚುವದರಿಂದ ಕೂದಲು ಬಿಳಿ ಹೋಗದೆ ಕಪ್ಪಾಗಿ ಬೆಳೆಯುವದು. ಇದು ಕೂದಲಿಗೆ ಹೊಳಪು ಕೊಡುತ್ತದೆ. ನೆತ್ತಿ ಬುರುಡೆಯನ್ನು ಶುದ್ಧವಾಡುತ್ತದೆ. ಸುಂದರ ಸೊಬಗನ್ನು ಉಂಟುಮಾಡುತ್ತದೆ. ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ್ದರಿಂದ ಕೂದಲಿಗೆ ಒಳ್ಳೆ ಸೊಗಸಿಗೂ ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ. ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪಾಗುವಂತೆ ಮಾಡಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು. ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ

ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0 4 0 ಬೇರೆ ತೆರಬೇಕು

3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕೆಂದರೆ ಒಂದು ಆಣೆಯ ಚೀಟಿಯನ್ನು ಕಳುಹಿಸಿರಿ

ಮೈಸೂರು ಎಗ್ಸಿಬಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲ್, ಅಲ್ಲಹಾಬಾದ್ ಎಗ್ಸಿಬಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರೆತಿರುತ್ತವೆ. ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸಲ್ಲಿಸಿರುವ ಪತ್ರಗಳು—ಬಿಡದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ. ಮನ್ನಾರ್‌ಗುಡಿ ಡಿಸ್ಟ್ರಿಕ್ಟ್ ಮುನ್ಸಿಫ್ ಎ ಆರ್ ನಾರಾಯಣ್‌ರವರು ಬರೆಯುವದು—"ದಯಮಾಡಿ ನೀವು ಒಂದು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ. ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ. ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದದಿಂದ ಹಚ್ಚಿಕೊಳ್ಳುತ್ತಾರೆ" ವಿರುದುನಗರ್ ಕೆ ವಿ ಎನ್ ಹೈಸ್ಕೂಲ್ ಹೆಡ್‌ಮಾಸ್ಟರ್ ಸಿ ಎಂ ಸುಬ್ರಹ್ಮಣ್ಯ ಪಿಳ್ಳೆಯವರು ಬರೆಯುವದು—"ನಿಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ಪರೀಕ್ಷೆಮಾಡಿದೆನು. ಅದು ಕೂದಲನ್ನು ಹುಲುಸಾಗಿ ಅಂದವಾಗಿಯೂ, ಕೋಮಲವಾಗಿಯೂ, ನೀಳವಾಗಿಯೂ ಬೆಳೆಸುವುದೆಂದು ನಿಶ್ಚಿತವಾಗಿ ಹೇಳಬಲ್ಲೆನು. ದಯವಿಟ್ಟು ಇನ್ನು ಮೂರು ಬಾಟ್ಲಿ ಎಣ್ಣೆ ಕಳಿಸಿಕೊಡಿ" ಏಜೆಂಟ್ ಡೆಪ್ಯುಟಿ ಕಂಟ್ರೋಲರ್ ಆಫೀಸ್ ಮಿ ಗೋಪಾಲದಾಸ್ ಜೋಷಿಯವರು ಬರೆಯುವದು—"ದಯವಿಟ್ಟು ನಿಮ್ಮ ಕಾಮಿನಿಯಾ ಎಣ್ಣೆ ಆರು ಬಾಟ್ಲಿ ಕಳಿಸಿಕೊಡಿ. ಎರಡು ತಿಂಗಳ ಹಿಂದೆ ನೀವು ಕಳಿಸಿದ ಬಾಟ್ಲಿಗಳು ಮುಗಿದುಹೋಯಿತು. ಇದೇ ಉತ್ತಮೋತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳಬಲ್ಲೆನು" ಅವಕಾಶವಿದ್ದಾಗ ಒಂದು ಸಲ ತರಿಸಿ ಪರೀಕ್ಷೆಮಾಡಿ

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ನಾಮಧೇಯಗಳೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ. ನಿಮ್ಮ ಸ್ಥಳದ ವ್ಯಾಪಾರಿಗಳಲ್ಲಿ ಇದು ಇಲ್ಲದಿದ್ದರೆ ಅವರ ಹೆಸರು ವಿಳಾಸದ ಸಮೇತ ನಮಗೆ ತಿಳಿಸಿ. ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ವಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ. "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು. ನಾವು ತಮಗೆ ಸಿಕ್ಕಿದರೆ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

ಎಲ್ಲಾ ಸ್ಥಳಗಳಲ್ಲಿಯೂ ಏಜೆಂಟರು ಬೇಕು

ಏಜೆಂಟ್, ದಿ ಅರ್ಲ್ ಮಾರ್ಟ್, ಮಂಗಳೂರು

ನಮ್ಮ ವಿಳಾಸ — [8 21]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪೆನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-2

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಬೇರೆ ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ನಿಂತಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ; ೧ ರೂ ೬ ಆ ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧—೭, ರೂ ೧—೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ ೧ ರೂ ೮ ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ

ಕೊರಳಿನ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕಚ್ಚೆ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಹತ್ತಿಯ ತುಪ್ಪವು

ಒಂದು ವರ್ಷದವರೆಗೆ ಇಟ್ಟಿದ್ದರೂ ಕೆಡಲಿಲ್ಲ!

(1) ಎನ್ ಕೋದಂಡರಾಮಯ್ಯನವರು, ಅಸಿಸ್ಟೆಂಟ್ ಕೇಶವಮೂರ್ತಿ ಹೊಸೂರು —ನಿಮ್ಮಿಂದ ತರಿಸಿದ ಹತ್ತಿಯ ತುಪ್ಪವು 1 ವರ್ಷವಾದ ಮೇಲೂ ಹೊಸ ತುಪ್ಪದಂತೆ ಸುವಾಸನೆಯುಳ್ಳದಾಗಿದೆ. ಅದರಲ್ಲಿ ಬೀಯಿಸಿದ ಆಹಾರವು ಹೊಸ ತುಪ್ಪದಲ್ಲಿ ಮಾಡಿದಂತೆ ಇದೆ. ಅಜೀರ್ಣವಾಗಿ ನರಳುವವರು ಎಣ್ಣೆ ಬೆರೆತಿರುವುದರಿಂದ ಆ ರೋಗವನ್ನುಂಟುಮಾಡುತ್ತದೆ. ನವಿಕೋನವದ ವಿನಃ ಇದರಿಂದ ಯಾವ ವಿಧವಾದ ಕಂಟಕವಿಲ್ಲವೆಂದೇ ಹೇಳಬೇಕು

ಎಚ್ಚರಿಕೆ!

ಹತ್ತಿಯ ತುಪ್ಪವು ರೋಗಿಗಳಿಗೆ ಬಂದವರೆಲ್ಲರೂ ಅದರಲ್ಲಿ ಆಗ್ಗವಾದ ಎಣ್ಣೆಗಳನ್ನು ಬೆರೆಯಿಸುವರು, ಅನಾರೋಗ್ಯಕರವಾದ ಕಡಲೆಕಾಯಿ ಎಣ್ಣೆ ಕೊಬ್ಬರಿ ಎಣ್ಣೆ, ಇವುಗಳನ್ನು ಕೊಬ್ಬು ನಮ್ಮ ಹತ್ತಿಯ ತುಪ್ಪವೆಂದು ಆಶವಾಗಿ ಮಾರುವುದೂ ಬಲವಾಗುತ್ತಿದೆ

ನಮ್ಮ ಕಂಪೆನಿಯ ಏಜೆಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್,

[110—1] 1ನ, ಕಿಲ್ಪಾಕ್ ರೋಡ್, ಬೆಂಗಳೂರು ಸಿಟಿ

ಲೇಡೀಸ್ ವಾಚ್.

ಇದರ ಅನುಕೂಲ ಮತ್ತೆ ಯಾವದಕ್ಕೂ ಇಲ್ಲ. ನಿಮ್ಮ ಇಚ್ಛೆ ಬಂದಂತೆ ಕೈಯಲ್ಲಿಯೂ ಕಟ್ಟಿಕೊಳ್ಳಬಹುದು. ಜೇಬಿನಲ್ಲಿಯೂ ಹಾಕಿಕೊಳ್ಳಬಹುದು. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ತಲೆಯಲ್ಲಿ ಬೀಗವುಳ್ಳದ್ದು. ಶುದ್ಧವಾದ ನಿಕಲ್ ಮುಚ್ಚಳವುಳ್ಳದ್ದು. ಸುಂದರವಾದದ್ದು. ಖಾತ್ರಿಯಾದದ್ದೂ ಇದರ ಕ್ರಯ ಸುಂದರವಾದ ವಾಚ್ ಸರಪಣಿ ಮತ್ತು ಕೈಯಲ್ಲಿ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಮೇತ



ರೂ 3 ೦ ೦ ಮಾತ್ರ   [77—10]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ಬಿ ಆರ್ ವೆಂಕಟರಮಣ ಅಂಡ್ ಕಂಪೆನಿ,

ನಂ. 7 ಕಲ್ಲಾರ್ ವೆಂಕಟಾಚಲಮ್ಮ ರ ಬೀದಿ, ಮದರಾಸು.

ಪ್ರತಾಪಕಂಠೀರವ ಚರಿತ್ರೆ.

(1) ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ " ಎಂಬ ನೀತಿ, (2) ಸ್ತ್ರೀಧರ್ಮ ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ-ಚಾತುರ್ಯ ; (3) ಅತ್ಯಂತವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು ; (4) ವನ, ಸರಸ್ಸು, ಆರಾಮಾದಿ ವರ್ಣನೆಗಳು ; (5) ಮನುಷ್ಯಯತ್ನಕ್ಕೆ ವಿಚಾರಕ್ಕೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು ; (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭ ಶೈಲಿ, (7) ಸರಪಣಿ ಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ ಕ್ರಯ —1 ರೂಪಾಯಿ; ಟಪಾಲ್ ಹಾಸಲು ಬೇರೆ.

[16—18] ನಮ್ಮ ವಿಳಾಸ.—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಡೋಂಗರೆ ಇವರ ಬಾಲಾಮೃತ.

[115-50]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ಥಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೨ ಆಣೆ ; ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ

ಸಮಸ್ತ ವಿಧವಾದ ನೋವೂ ಇಂತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವ, ಜೆನ್ನಿನ ಸೆಳೆತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ.

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ವಿಕರಿಯಾಗುತ್ತಲಿವೆ. ಡಾಕ್ಟರುಗಳೂ ವೈದ್ಯಶಾಸ್ತ್ರಜ್ಞರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ವ್ಯಾಪಾರದ ಅಂಗಡಿಗಳಲ್ಲಿ ವಿಕರಿಯಾಗುವದು.

ದೊಡ್ಡ ಔಷಧ ಡಬ್ಬಿಗೆ 6 ಆಣೆ, 12 ಕುಪ್ಪಿಗೆ ರೂ. 3-8-0. ಹಲ್ಲುಪುಡಿ ಡಬ್ಬಿಗೆ 2 ಆಣೆ; 12 ಕುಪ್ಪಿಗೆ ರೂ. 1-2-0. ವಿ. ಪಿ. ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ. [12-18]

ವಿಳಾಸ :—ಅಮೃತಾಂಜನ ಡಿಪೋ, ೧೧ ಫ್ರೈಯರ್ ರೋಡ್, ಫೋರ್ಟ್, ಬೊಂಬಾಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೆ ನುಲಿ, ಸಂದುಗಳ ನೋವು, ಮೈ ಕಾಲು ಬೊಜ್ಜತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಶಕ್ತರನ್ನಾದರೂ ಬಲಿಷ್ಠರನ್ನಾಗಿ, ಯಾವ ಕಾಯಿಲೆಗೂ ಬಾರದಂತೆ, ನರಗಳ ಹಸಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ನೀಗಿಸಿ ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ, ನಟ್ಟುಜ್ವರ, ಕ್ರಿಮಿಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ತೊಂದರೆಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—220 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [136-43]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮೇಲೆ ತಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೂಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ । ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ ವಿಷಘೋರಬಾರದ ಕಾಯಿಲೆಯನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ. 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೦ ಪುಟಗಳು)

ಶುಕಮುಖದಿಂದ ಲೋಕದ ಸಕಲ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರಪಡಿಸಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ದಾನ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಾದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯೋಪಯೋಗವಾಗಿರುವದು (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು. ಹೀಗೆ ಸಮಸ್ತರಿಗೂ ಉಪಯೋಗವಾಗಿರುವ ಪವಿತ್ರ ಈ ಗ್ರಂಥವು ಪ್ರತಿ ಮನೆಯಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1-8-0; ಟಪಾಲು ಹಾಸಲು 4 ಆಣೆ.

ಸಟೀಕಾ ತಾತ್ಪರ್ಯ ಜೈಮಿನಿ ಭಾರತವು.

(೩೪ ಸಂಧಿ) (ಸಂಪೂರ್ಣ ಗ್ರಂಥ) (೯೩೦ ದೊಡ್ಡ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವ 3 ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಕಥಾರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವಿವರಣೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇವು ಮೊದಲಾದವನ್ನು ಸವಿಸ್ತಾರವಾಗಿ ವಿಂಗಡಿಸಿ ರಚಿಸಿದೆ.

ಇದರ ಕ್ರಯ ಪ್ರತಿ 1 ಕ್ಕೆ ರೂ. 1 ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು. [127-1]

ನಮ್ಮ ವಿಳಾಸ —ಎಮ್. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

6—6 - 1913 ರಿಂದ 13—6—1913 ರ ವರೆಗೆ

ಸ್ಥಳ		ಪ್ಲೇಗ್		ಕಾಲರಾ	
		ತಗಲಿದ್ದು	ಮೃ.	ತಗಲಿದ್ದು.	ಸತ್ತದ್ದು.
ಬೆಂಗಳೂರು	ಪಟ್ಟಣ	1	0	0	0
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು		0	0	23	14
ಮೈಸೂರು	,,	1	0	57	33
ಕೋಲಾರ್	,,	1	1	26	16
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು ಡಿಸ್ಟ್ರಿಕ್ಟು		0	0	10	4
ಹಾಸನ	,,	6	4	107	72
ಚಿತ್ರದುರ್ಗ	,,	0	0	30	9
ಕಡೂರ್	,,	7	5	125	73
ಶಿವಮೊಗ್ಗಾ	,,	3	1	6	2
ಜುಮ್ಲಾ		19	11	384	222

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ಉತ್ತರಾಯಣೆ ಗ್ರೀಷ್ಮಋತೌ ಜ್ಯೇಷ್ಠ ಬಹುಳ ಅಷ್ಟಮಿ ಶುಕ್ರವಾರದಿಂದ ಜ್ಯೇಷ್ಠ ಬಹುಳ ಚತುರ್ದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಜೂನ್ ಮತ್ತು ಜುಲೈ.

ತಾ	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಮಿಥುನ ಮಾಸ ತೇದಿ
27	ಶುಕ್ರ ;;	ಅಷ್ಟಮಿ	7-26	ಉತ್ತರಾಭಾ	0-28	14
28	ಶನಿ ‡	ನವಮಿ	11-24	ರೇವತಿ	6-12	15
29	ಭಾನು	ದಶಮಿ	14-30	ಅಶ್ವಿನಿ	10-57	16
30	ಸೋಮ §	ಏಕಾದಶಿ	16-25	ಭರಣಿ	14-29	17
1	ಮಂಗಳ †	ದ್ವಾದಶಿ	16-57	ಕೃತ್ತಿಕೆ	16-51	18
2	ಬುಧ *	ತ್ರಯೋದಶಿ	16-17	ರೋಹಿಣಿ	17-58	19
3	ಗುರು :.	ಚತುರ್ದಶಿ	14-18	ಮೃಗಶಿರ	17-55	20

;; ಅಮೃತಸಿದ್ಧಿಯೋಗ. ‡ ದಗ್ಧಯೋಗ, ಮಳೆ ನಕ್ಷತ್ರ—ಆರಿದ್ರಾ 3 ನೇ ಪಾದ. § ಸರ್ವತ್ರ ಸಾರ್ವಏಕಾದಶಿ, ದಗ್ಧಯೋಗ † ಪ್ರದೋಷ, ಮಳೆ ನಕ್ಷತ್ರ—ಆರಿದ್ರಾ 4 ನೇ ಪಾದ. * ವ್ಯಪ್ರೀ, ಮಾಸಶಿವರಾತ್ರಿ. :. ಸರ್ವತ್ರ ಅಮಾವಾಸ್ಯ, ಮೃತ್ಯುಯೋಗ

ಪೇಟೇ ಧಾರಣೆ.

ದಿನಸಿ.		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೬-೦-೦	೧೭-೮-೦
ಕೆಂಬೂತಿ ಅಕ್ಕಿ ಅವಲ್		೧೬-೮-೦	೧೭-೮-೦
,, ,, ದುಯಂ		೧೫-೮-೦	೧೭-೦-೦
ಜೀರಸಾಲೆ ಅಕ್ಕಿ		೧೬-೦-೦	೧೭-೪-೦
ಸಣ್ಣಕ್ಕಿ ಅವಲ್		೧೮-೦-೦	೧೮-೮-೦
,, ದುಯಂ		೧೭-೦-೦	೧೭-೮-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ		೧೫-೮-೦	೧೩-೮-೦
,, ದುಯಂ ,,		೧೪-೮-೦	೧೨-೮-೦
ಸಣ್ಣ ರಾಗಿ ಪಲ್ಲಾ ೧ಕ್ಕೆ		೭-೧೨-೦	೫-೦-೦
ಕಾರ್ರಾಗಿ ,,		೬-೧೨-೦	೪-೧೨-೦
ಜೋಳ ,,		೭-೪-೦	೬-೪-೦
ಹಲಸಂದೆ ಪಲ್ಲಾ ೧ಕ್ಕೆ		೧೦-೮-೦	೧೩-೧೨-೦
ಬೇ[illegible] ,,		೧೨-೦-೦	೧೧-೦-೦
ಹೆಸರು ,,		೧೨-೮-೦	೧೪-೦-೦
ಉದ್ದು ,,		೧೨-೦-೦	೧೬-೦-೦
ಕಡಲೆ ,,		೧೧-೦-೦	೧೨-೦-೦
ಎಳ್ಳು ಸೇರು ೧೨೭ಕ್ಕೆ		೨೬-೦-೦	೨೪-೦-೦
ಹುರುಳೀ ಪಲ್ಲಾ ೧ಕ್ಕೆ		೭-೫-೦	೭-೦-೦
ಹರಳು ೧೨೭ ಸೇರಿಗೆ		೧೩-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ		೨-೪-೦	೩-೮-೦
ಮೆಣಸಿನಕಾಯಿ ,,		೪-೦-೦	೩-೪-೦
,, ದುಯಂ		೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	...	೪-೮-೦	ಮಣ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ		೬-೧೨-೦	೬-೬-೦
ಹರಳೆಣ್ಣೆ ,, ,,		೫-೪-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೫-೬-೦	೫-೪-೦
ಉಪ್ಪು ,, ,,		೬-೪-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ		೧-೧೨-೦	೧-೪-೦
,, ಹಳೇದು ,,		೧-೯-೦	೦-೧೪-೦
ತುಪ್ಪ ಮಣ ೧ಕ್ಕೆ	..	೨೦-೦-೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೧೧-೦	೫-೦-೦
ತೆಂಗಿನಕಾಯಿ ೧೦೦ಕ್ಕೆ		೭-೦-೦	೬-೦-೦
ಅಡಕೇಕಾಯಿ ಮಣ ೧ಕ್ಕೆ	...	೧-೬-೦	೧-೦-೦
ಅಂಟ್ವಾಳಕಾಯಿ ಮಣ ೧ಕ್ಕೆ		೦-೧೫-೦	೧-೮-೦
ಚಿನ್ನ (ಪೌನ್) ಕೆಂಪು	..	೧೫-೮-೦	೧೫-೮-೦
,, ,, ಪಸಿಮೆ	..	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	.	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	..	೮೧-೦-೦	೮೧-೩-೦

ಗರ್ಭಿಣೀಶಿಶುಸಂರಕ್ಷಣ.

MIDWIFERY ಕನ್ನಡ ಮಿಡ್‌ವೈಫರಿ ಸ್ತ್ರೀಯರಿಗೂ, ಮಿಡ್‌ವೈಫ್ ತರಗತಿಗೆ ಓದುವವರಿಗೂ ಪ್ರಯೋಜನವಾದದ್ದು ಕ್ರಯ ೧೨ ಆಣೆ [19-23]
ವಿಳಾಸ ಮ್ಯಾನೇಜರ್. ಸಿ ಎಲ್ ಎಸ್ ಡಿಪೊ, ಮೈಸೂರು

ಬಳ್ಳ ಸಮಯವಾಗಿದೆ—ಬೇಗ ತರಿಸಿಕೊಳ್ಳಿರಿ

ತರಕಾರಿ ಬೀಜಗಳು 10 ಪ್ಯಾಕೆಟ್ಟು ರೂ 1, 20 ಪ್ಯಾಕೆಟ್ಟು ರೂ 1½ 12 ಪ್ಯಾಕೆಟ್ಟು ರೂ 2 ಹೂವಿನ ಬೀಜಗಳು 40 ಪ್ಯಾಕೆಟ್ಟು ರೂ. 5, 20 ಪ್ಯಾಕೆಟ್ಟು ರೂ 3, 12 ಪ್ಯಾಕೆಟ್ಟು ರೂ 2 ಗುಲಾಬಿ (ರೋಜಾ) ಗಿಡಗಳು 100 ಕ್ಕೆ ರೂ 15 ರಿಂದ 25 ವರೆಗೆ, ಡಜನ್ ರೂ 3 ರಿಂದ ರೂ 5 ಕಟ್ಟಿದ ಮಾವಿನ ಗಿಡಗಳು 100 ಕ್ಕೆ ರೂ 60 ರಿಂದ 70, ಡಜನ್ ರೂ 8 ರಿಂದ ರೂ 10 ಕಟ್ಟಿದ ಸೀಬೆ, ನಿಂಬೆ, ಕಿತ್ತಳೆ, ದಾಳಿಂಬೆ, ಚಕೋತ್ರ ಡಜನ್ ರೂ 4 ರಿಂದ 6 ಇನ್ನೂ ಬೇಕಾದ ಅನೇಕ ತರಹಾ ಗಿಡಗಳು, ಬೀಜಗಳು, ಹಣ್ಣು, ಹೂವು, ತರಕಾರಿ ವಗೈರೆ ಕ್ಯಾಟಲಾಗ್ (ಕ್ರಯದಪಟ್ಟಿ) ತರಿಸಿಕೊಳ್ಳಿರಿ [125 1]
ಬಿ. ಎಲ್ ಪೈಯನ್ನ ಬ್ರದರ್ಸ್, 63 ಲಾಲ್‌ಬಾಗ್ ರೋಡ್, ಬೆಂಗಳೂರು ಸಿಟಿ

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆ ಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭರೀತಿಯಲ್ಲಿ ಬರೆಯಲ್ಪಟ್ಟಿವೆ ಕ್ರಯ 9 ಆಣೆ ಅರಕ್ಕೊಂದು ಉಚಿತ
[187-28] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಗೃಹಕೃತ್ಯದ ನೋಟೀಸು

ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಮೇಲುಕೋಟೆ ಹೋಬಳಿ ಕಾಡೇನಹಳ್ಳಿ ಗ್ರಾಮದಲ್ಲಿರುವ ಮುದ್ದೇಗೌಡನ ಮಗ ಸಿಂಗೇಗೌಡನು ತಿಳಿಸುವದೇನಂದರೆ—ಡಿಟೋ ಕಾಡೇನಹಳ್ಳಿ ಗ್ರಾಮದಲ್ಲಿರುವ ನನ್ನ ಚಿಕ್ಕಪ್ಪನ ಮಗ ಸವತಿ ವೆಂಕಟೇಗೌಡನ ಹೆಂಡತಿ ಸುಮಾರು 30 ವರುಷದ ಕೆಂಪಮ್ಮನೆಂಬವಳು ಸಾ ದಿನದಲ್ಲಿ ಹೊಲ ಮನೆ ಎತ್ತು ಹಸು ಕುರಿ ಮತ್ತು 200 ರೂಪಾಯಿನ ಚಿನ್ನದ ನಗ, 25 ರೂಪಾಯಿನ ಬೆಳ್ಳಿ ನಗಗಳು, ಸುಮಾರು 100 300 ರೂಪಾಯಿ ಲೇವಾದೇವಿ ಸಹಾ ಇರುತ್ತೆ ಅವಳಿಗೆ ಹಕ್ಕಿಲ್ಲವಾದ್ದರಿಂದ ಅವಳಿಂದ ಡಿಟೋ ಸ್ಥಿರ ಚರ ಆಸ್ತಿಗಳನ್ನು ಯಾರಾದರೂ ಖರೀದಿ ಆಧಾರ ಭೋಗ್ಯ ವಗೈರೆ ಮಾಡಿಕೊಂಡಲ್ಲಿ ಅದು ಸ್ಥಿರಪಡದೆ ನನ್ನ ಎಲ್ಲಾ ಲುಕ್ಸಾನಿಗೂ ಗುರಿಯಾಗಬೇಕಾದೀತೆಂದು ಎಚ್ಚರಿಸಿದೇನೆ [124 1]
19ನೇ ಜೂನ್, 1913 ಸಿಂಗೇಗೌಡನ ರುಜು

ಹೊಸಪುರದ ಇನಾಂದಾರ್ರವರ ಇಸ್ತಿಹಾರು.

ನಂಜನಗೂಡು ತಾ|| ಹೊಸಪುರಗ್ರಾಮದ ನಮ್ಮ ರೈತರು ಇತರ ಜನಗಳ ದುರ್ಬೋಧನೆಯಿಂದ ತಮ್ಮ ಮನೆಗಳ ಮೇಲ್‌ಛಾವಣಿಗಳನ್ನು ಕಿತ್ತುಕೊಂಡು ಇತರ ಗ್ರಾಮಗಳಿಗೆ ವಾಸಕ್ಕೆ ಹೋಗುವರಾಗಿಯಾರೆಂತ ತಿಳಿಯಬರುತ್ತೆ ಇದು ನಿಜವಾದ ಪಕ್ಷ ಬೇರೆ ಜನಗಳನ್ನು ತಂದು ಮನೆ ಕಟ್ಟಿಸಿ ಗ್ರಾಮ ಬೇಚರಾಕಾಗದಂತೆ ಮಾಡಬೇಕೆಂದಿದ್ದೇನೆ ಈಗಿರುವಲ್ಲಿ ಕೆಲವರು ಅಂಥಾ ನಿವೇಶನಗಳನ್ನು ಅವರುಗಳಿಂದ ಕ್ರಯಕ್ಕೆ ಪಡೆಯುವವರಾಗಿ ತಿಳಿಯಬರುತ್ತೆ ಇದು ನಿಜವಾದಪಕ್ಷ ನಿವೇಶನಗಳನ್ನು ನಮ್ಮ ಅನುಮತಿ ಪಡೆದು ಸ್ಯಾನಿಟೇಷನ್ ರೂಲ್ಸು ಪ್ರಕಾರ ಮನೆಗಳನ್ನು ಕಟ್ಟಿಸಿ ಜನಗಳನ್ನು ವಾಸವಾಗಿಡಲು ತಕ್ಕಂತೆ ಏರ್ಪಾಟು ಮಾಡಬೇಕು. ಆ ರೀತಿ ಮಾಡದೆ ನಿವೇಶನವನ್ನು ಇತರ ಕೆಲಸಕ್ಕೆ ಉಪಯೋಗಿಸಿದಲ್ಲಿ ರೂಲ್ಸು ಮೇರೆ ಕ್ರಮ ಜರುಗಿಸಲ್ಪಡುತ್ತೆಂದೂ, ಇದರಿಂದ ಉಂಟಾಗತಕ್ಕ ನಷ್ಟಗಳಿಗೆಲ್ಲಾ ಗುರಿಪಡಿಸಲ್ಪಡುತ್ತೆಂದೂ ಈ ಮೂಲಕ ಎಚ್ಚರಿಸಿರುತ್ತೇನೆ
ತಾ 24-6-1913 ದಮ್ಮಿಷ್ಠಳದ ಲಕ್ಷ್ಮೀನಾರಾಯಣಶಾಸ್ತ್ರಿ,
[128-1] ಹೊಸಪುರದ ಇನಾಂದಾರ್

ನಮ್ಮ ಏಜಂಟರಿಗೆ ನೋಟೀಸ್.

ಕಳೆದ ಮೇ ತಿಂಗಳ ಆಖೈರಿಗೆ "ವೃತ್ತಾಂತ ಪತ್ರಿಕೆ"ಯ ಸಂವತ್ಸರವು ಪೂರೈಸುತ್ತದೆ ನಮ್ಮ ಏಜಂಟರುಗಳು ವರುಷದ ಲೆಕ್ಕಗಳನ್ನೆಲ್ಲಾ ತೈರುಮಾಡಿ, ಜಮೈರಾ ಪಟ್ಟಿಗಳನ್ನು ಕಳುಹಿಸಬೇಕು ಇದಲ್ಲದೆ ಜೂನ್ ಪ್ರಾರಂಭದಿಂದ ಅಡ್ವಾನ್ಸು ಚಂದಾ ಪಾವತಿ ಇದ ಹೊರತು ಏಜಂಟರು ಯಾರಿಗೂ ಪತ್ರಿಕೆಗಳನ್ನು ಕೊಡಲಾಗದು ಹೊಸದಾಗಿ ಚಂದಾ ಕೊಡತಕ್ಕವರು ಒಂದು ವರುಷದ ಚಂದಾ ೧ ರೂಪಾಯನ್ನು ಅಡ್ವಾನ್ಸಾಗಿಯೇ ನಮ್ಮ ಏಜಂಟರಿಗೆ ಪಾವತಿಮಾಡಬೇಕೆಂದೂ, ಅವರಿಂದ ಆ ಬಗ್ಗೆ ಕ್ರಮವಾದ ಪ್ರಿಂಟಾದ ರಶೀತಿಯನ್ನು ಪಡೆದುಕೊಳ್ಳಬೇಕೆಂದೂ ಈ ಮೂಲಕ ಪ್ರಕಟಪಡಿಸುತ್ತೇವೆ
ಮ್ಯಾನೇಜರ್, "ವೃತ್ತಾಂತ ಪತ್ರಿಕೆ," ಮೈಸೂರು

ವೃತ್ತಾಂತ ಪತ್ರಿಕೆ.

ಸನ್ ೧೯೧೩ ನೇ ಇಸವಿ ಜೂನ್ ತಾ. ೨೬ ನೇ ಗುರುವಾರ

ರಾಜಾದಾಯದ ವಿನಿಯೋಗವು

ಗವರ್ನಮೆಂಟುಗಳೂ, ಡಿಸ್ಟ್ರಿಕ್ಟ್ ಬೋರ್ಡುಗಳೂ, ಮ್ಯುನಿಸಿಪಾಲಿಟಿಗಳೂ ದ್ರವ್ಯವಿಲ್ಲದೆ ತಮ್ಮ ತಮ್ಮ ಕರ್ತವ್ಯ ಕಾರ್ಯಗಳನ್ನು ನೆರವೇರಿಸಲಾರವು ಆದರೆ ಅವುಗಳಿಗೆ ಕಂದಾಯ ತೆರಿಗೆ ಸುಂಕಗಳನ್ನು ಹಾಕತಕ್ಕ ಅಧಿಕಾರವಿರೋಣದರಿಂದ ಈ ಮಾರ್ಗದಿಂದ ಹಣವನ್ನು ಒದಗಿಸಿಕೊಳ್ಳುತ್ತಾರೆ ಗವರ್ನಮೆಂಟಿನವರು ಪ್ರಜಾ ಹಿತಕ್ಕಾಗಿ ಒಳ್ಳೆಯ ರಸ್ತೆಗಳನ್ನೂ, ಹೊಕ್ಕಟವಾದ ಮೀಟಗಳನ್ನೂ, ನಿರ್ಮಲವಾದ ನೀರನ್ನೂ, ಕತ್ತಲು ಕಾಣದ ಬೆಳಕನ್ನೂ, ವಿದ್ಯೆಯೇ ಮೊದಲಾದ ಇನ್ನೂ ನಾನಾ ಪ್ರಕಾರದ ಸೌಕರ್ಯಗಳನ್ನೂ ಒದಗಿಸುತ್ತಾರಾದ ಕಾರಣ ಪ್ರಜೆಗಳು ಸರ್ಕಾರಕ್ಕೆ ಹಣವನ್ನು ಪಾವತಿ ಮಾಡುತ್ತಾ ಬರುವುದು ನ್ಯಾಯವೂ ಸಹಜವೂ ಆಗಿದೆ ಆದರೆ ಪ್ರಜೆಗಳಿಂದ ವಸೂಲಾಗುವ ರಾಜಾದಾಯವೆಂಬ ದ್ರವ್ಯವನ್ನು ವಿನಿಯೋಗಿಸತಕ್ಕವರು ಅನೇಕ ವೇಳೆ ಸಿಲ್ಲಕ್ಷ್ಯದಿಂದ ನಿಷ್ಪ್ರಯೋಜನವಾಗಿ ಖರ್ಚುಮಾಡುತ್ತಿರುವುದನ್ನೂ ಖರ್ಚಿಗಾಗಿ ಈ ದ್ರವ್ಯವನ್ನು ಪಾಲುಮಾಡಿ ಸಂಚಿಹಾಕತಕ್ಕವರು "ಇಷ್ಟು ಹಣ ಕೊಡಬೇಕಾಗಿದೆಯಲ್ಲಾ" ಎಂಬ ಚಿಂತನಸ್ವಭಾವದಿಂದ ಕೂಡುತ್ತಿರುವುದನ್ನೂ, ಕಂದಾಯ ಶೌಳಗಳನ್ನು ಕೂಡುವುದರಲ್ಲಿ ಪ್ರಜೆಗಳು ಜಿಗುಪ್ಸಪಟ್ಟುಕೊಂಡು ಪಾವತಿ ಮಾಡುತ್ತಿರುವುದನ್ನೂ ನೋಡಿದರೆ ನಮಗೆ ಎಷ್ಟೋ ವ್ಯಸನವಾಗುತ್ತದೆ ಸರ್ಕಾರಿ ನೌಕರರು ಇಷ್ಟು ಅಲಕ್ಷ್ಯ ಪ್ರಿಯರಾಗಿಯೂ, ಪ್ರಜೆಗಳು ಜುಗುಪ್ಸಯುಳ್ಳವರಾಗಿಯೂ ಇರಲು ಕಾರಣವೇನೆಂಬ ಪ್ರಶ್ನೆ ಹುಟ್ಟುವದು ಸರ್ಕಾರದಲ್ಲಿ ನಡೆಯುವ ಕಾರುಬಾರುಗಳನ್ನೂ ನೌಕರರು ಬರೆಯುವ ಕಾಗದ ಪತ್ರಗಳನ್ನೂ ಸಕಲರೂ ಓದಿ ತಿಳಿದುಕೊಳ್ಳುವಂತೆ ಸಂಪೂರ್ಣವಾಗಿ ಪ್ರಕಟಮಾಡುವುದಾದರೆ ಅನೇಕ ಆಶ್ಚರ್ಯಕರವಾದ ಸಂಗತಿಗಳು ಗೋಚರಕ್ಕೆ ಬಂದು ವಿಸ್ಮಯವನ್ನುಂಟುಮಾಡುವವು ಈಗಲಾದರೋ ಅಪರೂಪಕ್ಕೆ ಒಂದೊಂದು ಸಂಗತಿ ಹೊರಬೀಳುತ್ತದೆ ಇದನ್ನು ನೋಡುವಲ್ಲಿ ಹೀಗೆಯೇ ಇನ್ನೂ ಹೆಚ್ಚು ಸಂಗತಿಗಳನ್ನು ಪ್ರಕಟಮಾಡಿದರೆ ಬಹಳ ಪ್ರಯೋಜನವಾಗುವುದೆಂದು ನೆನಸುತ್ತೇವೆ

ಕಳೆದ ವಾರದ ಗಜೆಟ್ಟಿನ ಸಂಗಡ ಮೈಸೂರು ಸಂಸ್ಥಾನದ ಖಜಾನಾ ಛಕ್ಷಿಯವರಾದ ಮಿ|| ಚಕ್ರವರ್ತಿಯವರು ಈ ಸೀಮೆಯ 1911 12 ನೇ ಸಾಲಿನ ಜಮಾಖರ್ಚುಗಳ ಬಾಬುವಾರಿ ರಿಪೋರ್ಟನ್ನು ಪ್ರಕಟಮಾಡಿರುತ್ತಾರೆ ಆ ಸಾಲಿನಲ್ಲಿ ಹುಟ್ಟುವಳಿಯು ಖರ್ಚಿಗಿಂತ 1,31,000 ರೂಪಾಯಿ ಕಡಮೆಯಾದೀತೆಂದು ವರುಷಾರಂಭದಲ್ಲಿ ಅಂದಾಜು ಕಟ್ಟಿದ್ದರು ಆದರೆ ಸಾಲಾಖೈರಿನಲ್ಲಿ ಜಮಾಖರ್ಚನ್ನು ನೋಡಿದರೆ ಖರ್ಚು ಕಳೆದು 14,89,000 ರೂಪಾಯಿ ಮಿಕ್ಕಿರುತ್ತದೆಂದು ಚಕ್ರಿಯವರು ತಿಳಿಸಿರುವುದು ಸಂತೋಷಪ್ರದವಾಗಿರುತ್ತದೆ ಇದನ್ನು ನೋಡುವಲ್ಲಿ ಸರ್ಕಾರದವರು ಪ್ರಜೆಗಳ ಮೇಲೆ ಹೊಸ ತೆರಿಗೆಯ ಭಾರವನ್ನು ಹೊರಿಸಬೇಕಾದ ಅಗತ್ಯವೇನೂ ಕಾಣುವುದಿಲ್ಲ ಆದರೆ ನಮ್ಮ ಮುಂದಿರುವ ರಿಪೋರ್ಟನ್ನು ಓದುತ್ತಾ ಬಂದರೆ ಸರ್ಕಾರದ ನೌಕರರು ಗವರ್ನಮೆಂಟ್ ರೂಲುಸು ಅನುಸರಿಸಿ ನಡೆಯದೆ ಹೋಗಿರೋಣದರಿಂದ ಜಮಾಖರ್ಚಿನ ಲೆಕ್ಕಗಳನ್ನು ಸ್ಥಿರಮಾಡುವುದು ಸಾಧ್ಯವಿಲ್ಲದೆ ಹೋಗಿದೆಯೆಂದು ಗೊತ್ತಾಗುತ್ತದೆ ಇಂಥಾ ಅಕ್ರಮಗಳನ್ನು ಅಧಿಕಾರಿಗಳಿಗೆ ಎತ್ತಿ ತೋರಿಸಿ, ಅವರಿಂದ ಏನೋ ಒಂದು ಸಮಾಧಾನ ಬರೆದುಬಂದ ಮೇಲೆ ಮುಗಿಸಿ ಆ ವಿಷಯವನ್ನು ಅಷ್ಟಕ್ಕೇ ನಿಲ್ಲಿಸಿಬಿಡುವರು ಗವರ್ನಮೆಂಟಿನವರ ವರ್ತನವು ಈ ರೀತಿಯಾಗಿರೋಣದರಿಂದ ಅಧಿಕಾರಿಗಳಲ್ಲಿ ಜವಾಬ್ದಾರಿಕೆಯ ಪ್ರತ್ಯಾಸವೇನೂ ಇರಲಾರದು, ಕ್ರಮವರಿತು ನಡೆಯುವವರಿಗೆ ಪ್ರೋತ್ಸಾಹವಾಗಲಿ, ಅಲಕ್ಷ್ಯದಿಂದಿರತಕ್ಕವರಿಗೆ ಶಿಕ್ಷೆಯಾಗಲಿ ಇರುವಂತಿಲ್ಲ

ಮಿ|| ಚಕ್ರವರ್ತಿಯವರು ತಿಳಿಸುವ ಸಂಗತಿಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸುತ್ತೇವೆ —ರೆವಿನ್ಯೂ ಕಮಿಷನರವರೂ, ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್‌ರವರೂ, ಗವರ್ನಮೆಂಟ್ ಉದ್ಯಾನವನಗಳ ಸೂಪರಿಂಟೆಂಡೆಂಟರವರೂ ಸಾಮಾನುಗಳು ಬರುವುದಕ್ಕೆ ಮುಂಚೆಯೇ ಅವುಗಳ ಕ್ರಯದ ಹೊಬಲಗನ್ನು ಖಜಾನೆಯಿಂದ ತರಿಸಿಕೊಂಡರು ಹಾಸನದ ಡಿಸ್ಟ್ರಿಕ್ಟಿನಲ್ಲಿ ಇಬ್ಬರು ಅ|| ಕಮಿಷನರುಗಳು ಸಾದಿಲ್ವಾರ್ ಲೆಕ್ಕಗಳನ್ನು ಕಳುಹಿಸದೆ ಬಹಳ ಸುಸ್ತಿಮಾಡಿದ್ದರಿಂದ ಇನ್ನು ಮುಂದೆ ಅವರು ಕಳುಹಿಸುವ ಲೆಕ್ಕದ ಪಟ್ಟಿಗಳಂತೆ ಹಣ ಪಾವತಿ ಮಾಡಕೂಡದೆಂದು ಹುಕುಂ ಕೊಡಲಾಯಿತು ಇಷ್ಟು ಸಾವಕಾಶವಾದದ್ದಕ್ಕೆ ಡಿಸ್ಟ್ರಿಕ್ಟ್ ಟ್ರೆಜರರವರ ಆಫೀಸೇ ಕಾರಣವೆಂದು ಹೊರಪಟ್ಟಿದೆ ಒಬ್ಬ ಸಬ್ ಅ|| ಸರ್ಜನ್ನು ಒಂದು ತಿಂಗಳ ಸಂಬಳವನ್ನು ಎರಡಾವರ್ತಿ ಬಿಲ್ ಮಾಡಿ ತೆಗೆದುಕೊಂಡನು ರೆವಿನ್ಯೂ, ಮಿಲಿಟರಿ, ವಿದ್ಯಾಭ್ಯಾಸ, ಫಾರೆಸ್ಟ್, ವೈದ್ಯ, ಸಂಪದಭಿವೃದ್ಧಿ ಸಮಾಜ, ಹುಜೂರು ಸಕ್ರೆಟರಿ, ಈ ಇಲಾಖೆಗಳ ಎಂಟು ಜನ ಅಧಿಕಾರಿಗಳು ಎರಡಾವರ್ತಿ ತೆಗೆದುಕೊಂಡ ಪ್ರಯಾಣದ ಭತ್ಯಕ್ಕೆ ಎರಡನೆಯಾವರ್ತಿ ಹಣ ಬರಬೇಕೆಂದು ಲೆಕ್ಕದ ಪಟ್ಟಿಗಳನ್ನು ಕಳುಹಿಸಿದರು ಇಂಥಾ ಅತ್ಯಾಚಾರಗಳಿಗೆ ಆಯಾ ಅಧಿಕಾರಿಗಳು ಸಮಾಧಾನವನ್ನು ಬರೆದು ಕಳುಹಿಸಿರಬಹುದು. ಆದರೆ "ಈ ತಪ್ಪುಗಳು ಗುಮಾಸ್ತರು ನೋಡದ ಬಜಾಗರೂಕರಾಗಿದ್ದ ಕಾರಣ ಪ್ರಾಪ್ತವಾದವು, ಅಂಥವರನ್ನು ತಕ್ಕಹಾಗೆ ಎಚ್ಚರಿಸಿ ಶಿಕ್ಷೆ ಮಾಡಲಾಗಿದೆ" ಎಂಬಿದಾಗಿ ಒಬ್ಬ ಅಧಿಕಾರಿಯು ಬರೆದಿರುವ ಸಮಾಧಾನವನ್ನು ಓದುವುದು ಬೇಕಾಗಿಲ್ಲ ಮುಂದೆ ಹೇಳುವ ಸಂಗತಿ ಯಾವ ರೀತಿ ಇತ್ಯರ್ಥವಾಗುವುದೋ ಎಂದು ಕುತೂಹಲದಿಂದ ನಿರೀಕ್ಷಿಸುತ್ತೇವೆ—ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಸಂಪದಭಿವೃದ್ಧಿ ಸಮಾಜದ ಡಿಸ್ಟ್ರಿಕ್ಟ್ ಕಮಿಟಿ ಮೆಂಬರೊಬ್ಬರು ಒಂದಾವರ್ತಿ ಅಲೋಯನ್ಸನ್ನು ಪಡೆದು ಎರಡನೆಯಾವರ್ತಿ ಅದೇ ಹಣಕ್ಕೆ ಲೆಕ್ಕ ಬರೆದು ಕಳುಹಿಸಿದರು ಆ ಕಮಿಟಿಯ ಪ್ರೆಸಿಡೆಂಟರು ಈ ಲೆಕ್ಕಕ್ಕೆ ತಮ್ಮ ರುಜುಮಾಡಿ ಕಂಟ್ರೋಲರವರ ಆಫೀಸಿಗೆ ರವಾನೆಮಾಡಿದರು ಕಂಟ್ರೋಲರ್ ಆಫೀಸಿನವರು ಆ ಲೆಕ್ಕವನ್ನು ವಾಪಸ್ ಕಳುಹಿಸಿ, ಈ ರೀತಿ ತಪ್ಪಾಗಲು ಕಾರಣವೇನೆಂದು ಕೇಳಿದಾರೆ ಇನ್ನೂ ಸ್ವಲ್ಪ ಮುಂದೆ ಓದಿಕೊಂಡು ಹೋದರೆ ಖಜಾನಾ ಛಕ್ಷಿಯವರು "ಅಧಿಕಾರಿಗಳು ಸರಿಯಾಗಿ ಅಲ್ಲಲ್ಲೇ ಲೆಕ್ಕಗಳನ್ನು ತನಿಖೆಮಾಡದೆಹೋಗಿರೋಣದರಿಂದ ಕೆಲವು ಸರ್ಕಾರದ ಹಣಗಳು ಅಕ್ರಮವಾಗಿಯೂ ಅನ್ಯಾಯವಾಗಿಯೂ ಖರ್ಚಾಗಿವೆ ಎನ್ನುವುದಕ್ಕೆ ಸಂಶಯವಿಲ್ಲ" ಎಂದು ಹೇಳುತ್ತಾರೆ

ಮೈಸೂರು ಗವರ್ನಮೆಂಟಿನವರು ಸರ್ಕಾರದ ಹಣವನ್ನು ಯಾರ್ಯಾರಿಗೆ ಎಷ್ಟೆಷ್ಟು ಮುಂಗಡವಾಗಿ ಪಾವತಿ ಮಾಡಿದಾರೆಯೋ ಅಂಥಾ ಜನರ ಮತ್ತೂ ವರ್ತಕರ ಹೆಸರುಗಳನ್ನು ಪ್ರಕಟಿಸುವುದಾದರೆ ಆ ಸ್ಥಿತಿ ಎಷ್ಟು ಹಣ ವಾಪಸು ಬರಬಹುದೋ ತಿಳಿದುಕೊಳ್ಳಬಹುದು

ಬೆಂಗಳೂರು ಮ್ಯುನಿಸಿಪಾಲಿಟಿಯ ವಿಷಯದಲ್ಲಿ ಗವರ್ನಮೆಂಟಿನವರು ಬರೆದಿರುವ ವಿಚಾರಗಳನ್ನು ನೋಡುವಲ್ಲಿ ಆ ಮ್ಯುನಿಸಿಪಾಲಿಟಿಯ ಕಾರುಬಾರುಗಳು ಅಕ್ರಮಕ್ಕೆ ಬಿದ್ದಿವೆ ಎಂದು ಗೋಚರವಾಗುತ್ತದೆ. ಗವರ್ನಮೆಂಟಿನವರು ಹೇಳುವುದೇನಂದರೆ —ಲೆಕ್ಕಗಳನ್ನು ತನಿಖೆಮಾಡಿಸಿದ್ದರಲ್ಲಿ (1) ಮ್ಯುನಿಸಿಪಲ್ ಉತ್ಪತ್ತಿಯ ಹಣವನ್ನು ಎಂದು ಹಾಕಿದಾರೆ, (2) ವಸೂಲಾಗದೆ ಇರುವ ಕಂದಾಯಗಳು ಬಹಳ ಹಣ ಬಾಕಿ ಬಿದ್ದಿದೆ, (3) ಆಫೀಸಿನಲ್ಲಿ ರಿಜಿಸ್ಟರುಗಳನ್ನೂ ಲೆಕ್ಕಗಳನ್ನೂ ಸರಿಯಾಗಿ ಇಟ್ಟಿಲ್ಲ, (4) ಕೆಲವು ರಿಜಿಸ್ಟರುಗಳೂ ಲೆಕ್ಕಗಳೂ ಗೈರ್ಹಾಜರಾಗಿ ಸಿಕ್ಕಲಿಲ್ಲ

ಈ ರೀತಿಯಾಗಿ ಅಕ್ರಮಗಳನ್ನೂ ತಪ್ಪುಗಳನ್ನೂ ಗವರ್ನಮೆಂಟಿನವರು ಒಂದೊಂದು ವಿವರಿಸಿ ಹೇಳುತ್ತಿರುವರು ಒಳ್ಳೇದೇನು, ಆದರೆ ಇಂಥಾ ನಡವಳಿಕೆಯು ನ್ಯಾಯವಾದದ್ದಲ್ಲವೆಂಬ ಆಗ್ರಹವನ್ನೂ ಅಸಮಾಧಾನವನ್ನೂ ಸರ್ಕಾರದವರು ಹೊರಪಡಿಸಲು ಏನಾದರೂ ಮಾಡಲಿಲ್ಲವೇ? ಯೋಗ್ಯವೆಂದೂ ಅಬಾಗರೂಕನೆಂದೂ ಗವರ್ನಮೆಂಟಿನವರು ಯಾವ ದೊಡ್ಡ ಅಧಿಕಾರಿಯನ್ನಾದರೂ ಕೆಲಸದಿಂದ ವಜಾಮಾಡಿದರೋ? ಅವರು ಹಾಗೆ ಮಾಡಲಿಲ್ಲವೆಂದಾದರೆ ಖಜಾನಾ ಛಕ್ಷಿಯವರು ವರುಷೇ ವರುಷ ಇದೇ ಕಥೆಯನ್ನು ಹೇಳುತ್ತಾ ಬಂದಾರೆಂದೂ, ಆ ಕಥೆಯು ವರುಷೇ ವರುಷ ಅತಿ ವಿಸ್ತಾರವಾಗುತ್ತಾ ಬಂದೀತೆಂದೂ ಹೇಳುತ್ತೇವೆ.

ಪ್ರಜೆಗಳ ಹಣವನ್ನು ವಿನಿಯೋಗಿಸುವುದರಲ್ಲಿ ಸರ್ಕಾರದ ಅಧಿಕಾರಿಗಳು ವಹಿಸಿರುವ ಅಲಕ್ಷ್ಯ ಬಾವವೇ ಸರಾಸರಿ ಪ್ರಜೆಗಳು ಗವರ್ನಮೆಂಟಿಗೆ ಹಣವನ್ನು ಒದಗಿಸುವ ಬಾಗದಲ್ಲಿ ಅಸಮಾಧಾನಪಡುವದಕ್ಕೂ ಗುರುಗುಟ್ಟುವುದಕ್ಕೂ ಕಾರಣ. ಇನ್ನು ಮೇಲಾದರೂ ಎಲ್ಲ ರಾಜಾದಾಯವನ್ನು ವಿನಿಯೋಗಮಾಡುವ ವಿಚಾರದಲ್ಲಿ ಗವರ್ನಮೆಂಟಿನವರು ಜಾಗರೂಕತೆಯನ್ನೂ, ಮಿತವ್ಯಯ ಸ್ವಭಾವವನ್ನೂ, ಚಾಕಚಕ್ಯತೆಯನ್ನೂ ಪ್ರಕಾಶಪಡಿಸುತ್ತಾ ಬಂದರೆ ಪ್ರಜೆಗಳು ಅದರ ಪ್ರಯೋಜನವನ್ನು ಹೊಂದಿ ಈ ಸೀಮೆಯ ಪ್ರಗತಿಯ ಕಾರ್ಯಗಳಿಗೆ ಬೇಕಾಗುವಷ್ಟು ದ್ರವ್ಯವನ್ನು ಒದಗಿಸಲು ಸಂತೋಷದಿಂದ ಒಪ್ಪಿಕೊಂಡು ಕೊಡದಿರರು ಆದಕಾರಣ ಮೈಸೂರು ಗವರ್ನಮೆಂಟಿನವರು ಈಗ ವಸೂಲಾಗುವ ರಾಜಾದಾಯವನ್ನು ವಿವೇಕಪೂರ್ವಕವಾಗಿ ವಿನಿಯೋಗಮಾಡದಿದ್ದರೆ ಇದಕ್ಕಿಂತ ಹೆಚ್ಚು ದ್ರವ್ಯವನ್ನು ಪ್ರಜೆಗಳು ಮನಃಪೂರ್ತಿಯಾಗಿ ಕೊಡಲಾರರು

ವಿಚಿತ್ರವಾದ ಸ್ವಭಾವ

ಕೆಲವು ಜೀವಿಗಳು ಎಷ್ಟು ನೀರು ಕುಡಿಯುತ್ತವೆ ಇನ್ನೂ ಕೆಲವು ಎಷ್ಟು ನೀರು ಹಿಡಿಯುವವು ಬಟ್ಟು ಹಕ್ಕಿ ಕೆಲವು ನೂರು ಅಥವಾ ಸಾವಿರಪಟ್ಟು ನೀರು ಹಿಡಿಯುವವೂ ಉಂಟು ಬೇರೆ ಕೆಲವು ಜೀವಿಗಳು ಹೊಟ್ಟೆಗೆ ಚಿಕ್ಕ ಪ್ರಮಾಣವುಳ್ಳವುಗಳಾಗಿ ಕಾಣಿಸಿದರೂ ತುಂಬುವದಕ್ಕೆ ಆರಂಭಿಸಿ ತುಂಬುತ್ತ ತುಂಬುತ್ತ ಅವುಗಳ ಗಾತ್ರದ ಹತ್ತು ಪಟ್ಟು ಅವುಗಳ ಮೂಲದ ಪ್ರಮಾಣಕ್ಕಿಂತ ಅಮಿತವಾದ ವಸ್ತುಗಳನ್ನು ಹಿಡಿಯುವವು ಇವರು ನೋಟಕ್ಕೆ ಚಿಕ್ಕವಾಗಿ ಕಂಡರೂ ಎಳೆಯುತ್ತ ಎಳೆಯುತ್ತ ಅವುಗಳ ಉದ್ದವೂ ಅಗಲವೂ ಹೆಚ್ಚುವವು ಇವು ಏನು ಮಾಡಿದರೂ ಕೆಲವು ಎಷ್ಟು ನೀರು ಮಾತ್ರ ಹಿಡಿಯುವಂತೆ ತೋರಿದರೂ ಅವನ್ನು ತುಂಬುವ ಪ್ರಕಾರ ಇನ್ನೆಷ್ಟು ನೀರನ್ನಾದರೂ ಹಿಡಿಯಬಹುದು

ನಮ್ಮ ಮನಸ್ಸುಗಳನ್ನು ಇದೇ ರೀತಿ ಜೀವಿಗಳಿಗೆ ಹೋಲಿಸಬಹುದು ಕೆಲವರ ಮನಸ್ಸುಗಳು ಬಹು ಚಿಕ್ಕವು, ವಿಸ್ತಾರವಾದವುಗಳಲ್ಲ ಅಂಥವರಿಗೆ ಈ ಹೊತ್ತಿನ ಊಟ ಸಿಕ್ಕಿದರೆ ಸಾಕು ಮುಂದಾಲೋಚನೆಯು ಅಥವಾ ಬೇರೆ ಇನ್ಯಾವ ತರದ ಆಲೋಚನೆಯೂ ಅವರ ಮನಸ್ಸನ್ನು ಹೊಗುವದಿಲ್ಲ ಇನ್ನೂ ಕೆಲವರು ವರುಷಾಂತ್ಯದವರೆಗೂ ತಕ್ಕಷ್ಟು ದವಸವೂ ಬಟ್ಟೆಬರೆಗಳೂ ಮನೆ, ಹೊಲ, ಗದ್ದೆ, ಚಿನ್ನ, ಬೆಳ್ಳಿ ಇದ್ದರೆ ಪೂರ್ಣತೃಪ್ತರಾಗಿರುವರು ಇಂಥವರು ತಮ್ಮ ದೇಹವನ್ನು ಕುರಿತು ಮಾತ್ರ ಚಿಂತಿಸುತ್ತಾರೆ ದೇಹವೇ ಲಯಹೊಂದುವದಲ್ಲವೇ ಆಗ ಅವರ ರಕ್ಷಣಾರ್ಥವಾಗಿ ಸಂಗ್ರಹಿಸಿದ ಸಾಧನಗಳು ದೇಹಕ್ಕೆ ಪ್ರಯೋಜನಕಾರಿಗಳಾಗಿ ಇರುವವೇ? ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ತನ್ನ ಪ್ರಾಣ ನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು?

ನೀತಿಯುಕ್ತವಾದ ನಡತೆ, ದಯಾಪರತೆ, ಪಾರಮಾರ್ಥಿಕ ಈ ವಿಷಯಗಳಲ್ಲಿ ಮನುಷ್ಯರ ಮನೋಗತಗಳನ್ನು ವಿಚಾರಿಸೋಣ ಸತ್ಯದಕ್ಷತೆ, ಸ್ವಾರ್ಥತ್ಯಾಗ, ದಮೆ, ಪರೋಪಕಾರ ಮುಂತಾದ ಸುಗುಣಗಳು ಸರ್ವರೂ ಶ್ಲಾಘಿಸತಕ್ಕವುಗಳಾಗಿವೆ ಮನುಷ್ಯನು, ಪಾಪಿಷ್ಠನೂ, ಅನ್ನಿಸಿಕೊಳ್ಳುವದಕ್ಕೆ ಯಾರಿಗೂ ಮನಸ್ಸಿರುವದಿಲ ಅದನ್ನೂ ಜನರ ಅಭಿಪ್ರಾಯಕ್ಕೆ ಹೆದರುವ ಹಾಗೆ ದುರ್ನಡತೆಗೆ ಹೆದರುವದಿಲ್ಲ ಪಾಪವನ್ನೇ ಮಾಡುತ್ತಲಿದ್ದರೂ ನಿರ್ದೋಷಿಯೆನ್ನಿಸಿಕೊಳ್ಳಬೇಕೆಂಬ ಮನಸ್ಸಿರುತ್ತದೆ ಪಾಪಕೃತ್ಯಗಳು ಬಯಲಿಗೆ ಮಾತ್ರ ಬರಬಾರದು ಯಾಕೆಂದರೆ ಜನರಲ್ಲಿ ನಮ್ಮ ವಿಷಯವಾಗಿರುವ ಒಳ್ಳೇ ಅಭಿಪ್ರಾಯವು ಹೋಗಿ ನಮ್ಮನ್ನು

ದುಷ್ಟರೆಂದು ಭಾವಿಸಿ ವರ್ಜಿಸುವರು ನಮ್ಮ ಗುಟ್ಟು ರಟ್ಟಾದರೆ ಒಂದು ವೇಳೆ ನಮ್ಮನ್ನು ಧಿಕ್ಕರಿಸುವರು ಆದರೆ ದೇವರು ಸರ್ವಸಾಕ್ಷಿ, ಸಕಲವೂ ಆತನಿಗೆ ಬಟ್ಟಬಯಲಾಗಿದೆ ಮತ್ತು ಆತನೇ ನಮ್ಮ ಮನೋಗತವನ್ನೂ ನಡತೆಯನ್ನೂ ವಿಚಾರಿಸಿ ನಮಗೆ ಯುಕ್ತವಾದ ಸುಖವನ್ನೋ ಯಾ ದುಃಖವನ್ನೋ ನಿರ್ಣಯಿಸುವವನು ಆದರೆ ನಾವು ಇವೆಲ್ಲವನ್ನೂ ಮರೆತು ಅಥವಾ ಲಕ್ಷಿಸದೆ ಪಾಪವನ್ನು ಮಾಡುತ್ತ ಮನುಷ್ಯರ ಮುಂದೆ ಮಾತ್ರ ಪಾಪಭೀತರಾಗಿಯೂ ಸದಾಚರಣೆಯುಳ್ಳವರಾಗಿಯೂ ನಡೆಯುವಂತೆ ನಟಿಸುವದೂ ಇಂಥಾ ಒಳ್ಳೆಯ ಅಭಿಪ್ರಾಯಕ್ಕೆ ನಾವು ಅನರ್ಹರೆಂದು ತಿಳಿದಾಗ್ಯೂ ದೇವರ ಮುಂದೆ ಬಟ್ಟಬಯಲಾಗಿರುವ ನಮ್ಮ ಸ್ಥಿತಿಯು ಮನುಷ್ಯರಿಗೆ ಪ್ರಕಟವಾಗದಿರಬೇಕೆಂದು ಯತ್ನಿಸುವದು ವಿಕಸಿತವಾದ ಮನಸ್ಸಿನ ಲಕ್ಷಣವು.

ಇನ್ನೊಂದು ಸ್ವಭಾವದ ಜನಗಳಿದ್ದಾರೆ ಮಂದಿಯ ಮುಂದೆ ನಮ್ಮ ಗುಟ್ಟು ಪ್ರಕಟವಾದರೂ ಬಹಳ ಚಿಂತೆಯೂ ಅವಮಾನವೂ ನಾಚಿಕೆಯೂ ಅವರಿಗಿಲ್ಲ ಆದರೆ ನಮ್ಮ ಯಜಮಾನನು ನಮ್ಮ ದುರ್ನಡತೆಯನ್ನು ತಿಳಿದು ನಮ್ಮ ಸಂಬಳವನ್ನು ಕಡಿಮೆಮಾಡಿದರೆ ಅಥವಾ ನಮ್ಮನ್ನು ಕೆಲಸದಿಂದ ವಜಾ ಮಾಡಿದರೆ ನಮಗೆ ಅತ್ಯಂತ ದುಃಖಕ್ಕೆ ಕಾರಣವಾಗುವದು ಹೀಗೆ ಯೋಚಿಸುವವರು ತಮ್ಮನ್ನು ಕೆಡಿಸಿ ತಮ್ಮ ಗುಣವನ್ನು ನಷ್ಟಪಡಿಸಿದ ಪಾಪಕ್ಕಾಗಿ ವ್ಯಸನಪಡುವದಿಲ್ಲ ತಮ್ಮ ತಂದೆತಾಯಿಗಳಿಗೂ ಅತ್ಯಂತ ಆಪ್ತರಾದವರಿಗೂ ನೆರೆಹೊರೆ ಮುಂತಾದ ಬಳಗದವರಿಗೂ ತಮ್ಮ ದುರ್ನಡತೆಯಿಂದ ಪ್ರಾಪ್ತಿಸಿದ ಅವಮಾನವನ್ನೂ ಕುರಿತು ಯೋಚಿಸಿ ಪ್ರಲಾಪಿಸುವದಿಲ್ಲ ದೇವರು ಕೊಟ್ಟ ಸದ್ಗುಣತೆ ಎಂಬ ಕಿರೀಟವು ಹಾಳಾಗಲಿ ಹೆತ್ತವರ ಮಾನಕ್ಕೆ ಕುಂದುಪತ್ತಲಿ ಚಿಂತೆಯಿಲ್ಲ ಹೊಟ್ಟೆಪಾಡಿನ ಸ್ಥಿತಿಗೆ ಕೆಟ್ಟುಬಿದ್ದಂದರೆ ಅವಾಚ್ಯವಾದ ಅನಿಷ್ಟವು ಪ್ರಾಪ್ತಿಸಿತೆಂದು ಗೋಳಾಡುವದು ದೀರ್ಘದೃಷ್ಟಿಯಿಲ್ಲ ಸನ್ನಡತೆಯಾದ ಸದ್ನಡತೆಗೆ ದೇವರ ಮೇಲಣ ಪ್ರೀತಿಯೇ ನಿಜವಾದ ಆಧಾರ ಮಂದಿಯ ಭಯಕ್ಕಾಗಲೀ ಲಾಭದ ಆಸೆಯಿಂದಾಗಲೀ ಸನ್ನಡತೆಯನ್ನು ನಡೆಯುವನೆಂದು ಎಣಿಸಿಕೊಳ್ಳುವವನು ಸನ್ನಡತೆಗೆ ಅತ್ಯಗತ್ಯವಾದ ಪ್ರೀತಿಯನ್ನು ತಿಳಿದವನಲ್ಲ ಸನ್ನಡತೆಗೆ ಶಿಕ್ಷೆಯ ಭಯವೂ ಲಾಭವೂ ತಕ್ಕ ಪ್ರೇರಕಗಳಲ್ಲ ಅವುಗಳಿಂದ ತಕ್ಕ ಪ್ರೋತ್ಸಾಹವೂ ಲಭಿಸಲಾರದು

ಸನ್ನಡತೆಗೆ ಪ್ರೀತಿಯು ತಕ್ಕ ಉತ್ತೇಜನವಾಗಿರುವದೇ ಹೇಗೆಂದರೆ ಮನುಷ್ಯನು ಯಾರು ದೇವರ ನಿಜ ಸ್ವರೂಪದಲ್ಲಿ ಸೃಷ್ಟಿಯಾದಲ್ಪಟ್ಟವನು ಆದ್ದರಿಂದ ದೇವರ ಸಂಬಂಧಿಯು, ದೇವರ ಮಗನು ದೇವರ ಮಗನಿಗೆ ಯೋಗ್ಯವಾದ ಸ್ವಭಾವವನ್ನು ಪಡೆದು ಆ ಪಕ್ತಿಯಲ್ಲಿ ನಿಂತಿರುವದು ಮನುಷ್ಯನ ಸಹಜವಾದ ಧರ್ಮ ತಂದೆಯ ಸ್ವಭಾವವೂ ಗುಣವೂ ನಡತೆಯೂ ಮಗನ ಹಕ್ಕುಗಳಾಗಿರುತ್ತವೆ ಆ ದೇವರನ್ನು ತಂದೆಯೆಂದು ತಿಳಿದು ಆತನ ಮಕ್ಕಳಾದ ನಾವು ಆ ಪರಮತಂದೆಗೆ ಅಪಕೀರ್ತಿಯೂ ದುಃಖವೂ ಆಗಬಾರದೆಂತ ನಾವು ಆತನನ್ನು ಪ್ರೀತಿಸಿ ಆತನ ಸ್ವಭಾವ ಗುಣ ಲಕ್ಷಣಗಳಿಗೆ ವಿರೋಧವು ಮಕ್ಕಳಾದ ನಮ್ಮಿಂದ ಪ್ರಾಪ್ತವಾಗದಂತೆ ನಡೆಯಬೇಕು ತಂದೆಯ ಮೇಲಣ ಪ್ರೇಮವು ನಮ್ಮನ್ನು ದುರ್ನಡತೆಗೆ ದೂರವಾಗಿ ಸನ್ನಡತೆಯಲ್ಲಿ ನಮ್ಮನ್ನು ದೃಢಪಡಿಸಬೇಕು ನಾವು ಹೀಗೆ ದೃಢಪಡದೆ ಇರುವದು ದೇವರಿಗೆ ನಷ್ಟವಾಗಿದೆ ಯಾಕೆಂದರೆ ದೇವರಿಗೆ ಈ ಲೋಕದಲ್ಲಿರುವ ಸಕಲ ಆಸ್ತಿಗಳಲ್ಲಿ ಆತನ ಮಕ್ಕಳಾದ ಮನುಷ್ಯರೇ ಅತಿ ಮುಖ್ಯವಾದ ಅತಿ ಅಮೂಲ್ಯವಾದ ಆಸ್ತಿ

ಇಂತಹ ಯೋಚನೆಯು ದೇವರ ಮೇಲಣ ಪ್ರೀತಿಯಿಂದ ನಮ್ಮ ಮನಸ್ಸುಗಳನ್ನು ವಿಕಾಸಪಡಿಸುವದು ಪಾಪದಿಂದ ನಮ್ಮ ಸ್ಥಿತಿ ಗುಣ, ಸ್ವಭಾವಗಳು ಕೆಡುವದೂ ಅಲ್ಲದೆ ನಮ್ಮ ಸಹೋದರರಾದ ಇತರರು ಕೆಡುವದಕ್ಕೂ ಮತ್ತು ಲೋಕವು ಕೆಡುವದಕ್ಕೂ ಕಾರಣವಾಗುತ್ತದೆ ನಮ್ಮ ಸ್ಥಿತಿಯೂ ಗುಣ ಸ್ವಭಾವಗಳೂ ದೇವರಿಗೆ ಅಮೂಲ್ಯವಾಗಿರುವ ಹಾಗೆ ಇತರರ ಸ್ಥಿತಿ ಗುಣ ಸ್ವಭಾವಗಳೂ ಆತನಿಗೆ ಅಮೂಲ್ಯವಾಗಿರುತ್ತವೆ ಅವರಲ್ಲಿ ಒಬ್ಬನನ್ನು ಕೆಡಿಸಿದ ಪಾಪವು ನಮ್ಮ ಪಾಪವನ್ನು ದ್ವಿಗುಣವಮಾಡುವದು ನಮ್ಮ ಸನ್ನಡತೆಯಿಂದ ದೇವರನ್ನು ನಾವು ಮೆಚ್ಚಿಸುತ್ತೇವೆ ಮತ್ತು ನಮ್ಮ ಸಹೋದರರಾದ ಬೇರೆ ಮನುಷ್ಯರನ್ನು ನಾವು ದೇವರಿಗೆ ಸಂಪಾದಿಸಿಕೊಡುತ್ತೇವೆ ದೇವರ ಮೇಲಣ ಪ್ರೀತಿಯೂ ಮನುಷ್ಯರ ಮೇಲಣ ಪ್ರೀತಿಯೂ ಪಾಪಕ್ಕೆ ನಿಜವಾದ ಪ್ರತಿಬಂಧಕಗಳು

ಒಳದೇಶದ ವೃತ್ತಾಂತಗಳು

ಆಲ್ವಾರ್ ಸಂಸ್ಥಾನದ ಮಹಾರಾಜರವರು ನಮ್ಮ ಮಹಾರಾಜರವರ ಅತಿಥಿಗಳಾಗಿ ನೆನ್ನೆ ರಾಜಧಾನಿಗೆ ದಯಮಾಡುವವರಿದ್ದರು

ಸಂಸ್ಥಾನದಲ್ಲಿ ಜನನ ಮರಣಗಳ ರೆಜಿಸ್ಟರುಗಳನ್ನು ಏಕರೀತಿಯಾಗಿ ಹತ್ತು ವರುಷಗಳ ತನಕ ನಾಶಪಡಿಸದೆ ಎಲ್ಲಾ ಕಚೇರಿಗಳಲ್ಲೂ ಇಟ್ಟು ಕಾಪಾಡಿಕೊಂಡು ಬರಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ

ಕಳೆದ ಶುಕ್ರವಾರ ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್ ಪ್ರಭುಗಳ ಜನ್ಮದಿನವಾದದ್ದರಿಂದ ಆ ದಿನ ರಾಜಧಾನಿಯ ಎಲ್ಲಾ ಸ್ಕೂಲುಗಳಿಗೂ ರಜಾ ಕೊಟ್ಟು, ಮಕ್ಕಳಿಗೆ ತಿಂಡಿಪದಾರ್ಥಗಳನ್ನು ಹಂಚಿ ಸಂತೋಷಪಡಿಸಿ, ವೈಸ್‌ರಾಯಿಯವರ ಶ್ರೇಯಸ್ಸನ್ನು ಬಯಸಿದರು

ಅರಮನೆ ಮರಾಮತ್ ಇಲಾಖಾ ಮೊಖ್ತೇಸರರಾಗಿ ಅನೇಕ ವರುಷಗಳಿಂದ ಕೆಲಸಮಾಡುತ್ತಿರುವ ಮ ಎಚ್ ಲಿಂಗರಾಜೆ ಅರಸಿನವರಿಗೆ ಶ್ರೀಮನ್ ಮಹಾರಾಜರವರು ಕಳೆದ ವಾರ ಸಂಬಳವನ್ನು ಬಡ್ತಿಮಾಡಿದ್ದಲ್ಲದೆ ಭಕ್ಷೀಗಿರಿಯನ್ನು ದಯಪಾಲಿಸಿದರೆಂದು ಕೇಳಿ ಸಂತೋಷಪಡುತ್ತೇವೆ

ಚಿಕ್ಕಜಾಜೂರಿನಿಂದ ಚಿತ್ರದುರ್ಗಕ್ಕೆ ರೈಲ್‌ರಸ್ತೆ ಹಾಕುವದಕ್ಕೆ ಆ ಡಿಸ್ಟ್ರಿಕ್ಟಿನ ಜಮೀನ್ ಕಂದಾಯದ ಮೇಲೆ ರೂಪಾಯಿಗೆ ಒಂದು ಆಣೆಯಂತೆ ರೈಲ್ವೆ ಸೆಸ್ಸನ್ನು ಹಾಕಿ ವಸೂಲ್ಮಾಡಬೇಕೆಂದೂ, ಡಿಬೆಂಚರ್ ಪತ್ರಗಳನ್ನು ಬಿಕರಿಮಾಡಿ ಹಣವನ್ನು ಕೂಡಿಸಬೇಕೆಂದೂ ಆ ಡಿಸ್ಟ್ರಿಕ್ಟ್ ಬೋರ್ಡಿನವರು ತೀರ್ಮಾನ ಮಾಡಿರುತ್ತಾರೆ

ಸರ್ಕಾರದವರು ಮಿ|| ಕೆ ಶ್ರೀನಿವಾಸರಾಯರು ಇನ್ನೊಂದು ತಿಂಗಳು ಅಂದರೆ ಜುಲೈ ತಾ 31ರ ತನಕ ಶಿವಮೊಗ್ಗಾ ಡೆಪ್ಯುಟಿ ಕಮಿಷನರ್‌ರಾಗಿ ಕೆಲಸ ಮಾಡತಕ್ಕದ್ದೆಂದೂ, ಮಿ|| ಕೆ ಮತ್ತಣ್‌ರವರು ಮಲೆನಾಡು ಪ್ರಾಂತ್ಯಗಳಲ್ಲಿ ಸಂಚಾರಮಾಡಿ ಪ್ರಜಾಲಯವಾಗುವುದಕ್ಕೆ ಕಾರಣಾದಿಗಳನ್ನು ವಿಚಾರಿಸಿ ರಿಪೋರ್ಟು ಬರೆದುಕೊಡಬೇಕೆಂದೂ ಹುಕುಂ ಮಾಡಿರುತ್ತಾರೆ

ರಾಜಧಾನಿಯ ಗಾಯನ ಸಮಾಜದವರು ಕಳೆದ ಶುಕ್ರವಾರ ಬೆಳಗ್ಗೆ ಸಂತೇಪೇಟೆಯಲ್ಲಿರುವ ಭಕ್ಷಿ ಬಸಪ್ಪಾಜಿ ಅರಸಿನವರ ಛತ್ರದಲ್ಲಿ ಸಭೆಸೇರಿ ಒಂದು ಸಂಗೀತ ಪಾಠಶಾಲೆಯನ್ನು ಬಹಳ ವಿಜೃಂಭಣೆಯಿಂದ ಪ್ರಾರಂಭಮಾಡಿದರು ಸಮಾಜದ ಸೆಕ್ರೆಟರಿಗಳೂ, ಆಸ್ಥಾನ ಸಂಗೀತ ವಿದ್ವಾಂಸರೂ ವಿಶ್ವಾಸದಿಂದಲೂ, ಮುತುವರ್ಜಿಯಾಗಿಯೂ ಈ ಪಾಠಶಾಲೆಯನ್ನು ಶಾಶ್ವತವಾಗಿ ನಡಿಸಿ ಅಭಿವೃದ್ಧಿಗೆ ತಂದಾರೆಂದು ಹಾರೈಸಲ್ಪಟ್ಟಿದೆ

ವರ್ಧಂತಿ ಉತ್ಸವಗಳ ನಿಮಿತ್ತ ರಾಜಧಾನಿಗೆ ದಯಮಾಡಿದ ಅಧಿಕಾರಿಗಳೂ, ದೇಶೀಯ ಅತಿಥಿಗಳೂ ಕಳೆದ ವಾರ ವಾಪಸು ಪ್ರಯಾಣಮಾಡಿದರು ದಿವಾನ್‌ರೂ, ಕೌನ್ಸಿಲರುಗಳೂ ಮಾತ್ರ ಇನ್ನೂ 10 12 ದಿನಗಳ ತನಕ ರಾಜಧಾನಿಯಲ್ಲೇ ಇದ್ದು ಮುಂದಿನ ವರುಷದ ಜಮಾಖರ್ಚಿನ ಅಂದಾಜಾ ಪಟ್ಟಿಗಳನ್ನು ತಯಾರ್ ಮಾಡುವುದಲ್ಲದೆ ಅಧಿಕಾರಿಗಳ ಬದಲಾವಣೆ ವರ್ಗಾವರ್ಗಿ ಮುಂತಾದ್ದನ್ನು ಇತ್ಯರ್ಥವಮಾಡುವರೆಂದು ಕೇಳುತ್ತೇವೆ

ಮೊನ್ನೆ ಭಾನುವಾರ ನಮ್ಮ ಮಹಾರಾಜರವರ ವರ್ಧಂತಿ ಕಟ್ಲೆಯ ಉತ್ಸವಗಳ ನಿಮಿತ್ತ ಬ್ರಿಟಿಷ್ ರೆಸಿಡೆಂಟರೇ ಮೊದಲಾದ ಸುಮಾರು 150 ಮಂದಿ ಯೂರೋಪಿಯನ್ ಸರದಾರರು ರಾಜಧಾನಿಗೆ ಬಂದು, ಗವರ್ನ್‌ಮೆಂಟ್ ಹೌಸ್ ಬಂಗಲೆಯಲ್ಲಿ ಸತ್ಕಾರ ಹೊಂದುತ್ತಿರುವರು ಇವರ ವಿನೋದಕ್ಕಾಗಿ ಚಾಮುಂಡಿ ಬೆಟ್ಟದ ಬಳಿ ದಿನವೂ ಸಾಯಂಕಾಲದ ಹೊತ್ತು ಕುದುರೆ ಜೂಜುಗಳೂ ಪೋಲೋಪಂದ್ಯಗಳೂ ನಡೆಯುತ್ತಿವೆ ಪುರಜನರು ಸಾವಿರಗಟ್ಟಲೆ ಅಲ್ಲಿಗೆ ಹೋಗಿ ಆಟಗಳನ್ನು ನೋಡಿ ಬರುತ್ತಿದ್ದಾರೆ ಅತಿಥಿಗಳೆಲ್ಲಾ ಮುಂದಿನ ಸೋಮವಾರ ರಾಜಧಾನಿಯಿಂದ ವಾಪಸು ತೆರಳುವರೆಂದು ತಿಳಿದು ಬಂದಿದೆ

ರಾಜಧಾನಿಯಲ್ಲಿ ದೇವರಾಜಮಾರ್ಕೆಟ್ಟಿನ ಎದುರಿಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮ| ಶ್ರೀಕಂಠಯ್ಯನವರ ಜವಳಿ ಅಂಗಡಿಯಲ್ಲಿ ಕಳುವು ಮಾಡಬೇಕೆಂದು ಯಾರೋ ಎರಡು ಬೀಗಗಳನ್ನು ಕಳೆದ ಶುಕ್ರವಾರ ಬೆಳಗ್ಗೆ ಒಡೆದು ಹಾಕಿದ್ದರು ಇಂಥಾ ಮಧ್ಯರಾಷ್ಟ್ರದಲ್ಲಿ ಪೋಲೀಸ್ ಸ್ಟೇಷನ್ ಪಕ್ಕದಲ್ಲಿ ಈ ರೀತಿ ನಡೆದದ್ದು ಪೋಲೀಸಿನವರ ಚಟುವಟಿಕೆಗೆ ಕುಂದಕವಾಗಿರುತ್ತದೆ ಆ ಸಮೀಪದಲ್ಲೇ ಕೆಲವು ಜವಳಿ ಮತ್ತು ಜೀನಸು ಅಂಗಡಿಗಳಿಗೆ ಹಿಂದೆ ಕಳ್ಳರು ಬಿದ್ದು ಸನಗುಗಳನ್ನು ಅಪಹರಿಸಿರುತ್ತಾರೆ ಅಲ್ಲಿನ ವರ್ತಕರು ಈ ವಿಚಾರವನ್ನೆಲ್ಲಾ ಕಾಣಿಸಿ ಡೆಪ್ಯುಟಿಕಮಿಷನರವರಿಗೆ ಅರ್ಜಿ ಬರೆದುಕೊಂಡಿರುವಂತೆ ಕೇಳಿ, ಅವರು ತಕ್ಕ ಬಂದೋಬಸ್ತು ಮಾಡುವರೆಂದು ನಿರೀಕ್ಷಿಸುವೆವು

ಮೈಸೂರು ಗಜೆಟ್ ಸಂಗ್ರಹ

ಮೈಸೂರು ಸಿಟಿ ಮುನಿಸಿಪಲ್ ಸರಹದ್ದಿನೊಳಗೆ 1913ನೇ ಜೂಲೈ ಲಾಗಾಯಿತು ಇನ್ನು ಮೂರು ವರುಷದ ವರೆಗೆ ಬಲಾತ್ಕರಿಸಿ ದೇವಿ ಇಡುಬು ಹಾಕುವ ಕಾನೂನು ಜಾರಿಯಲ್ಲಿರತಕ್ಕದ್ದು

ಕುಣಿಗಲ್ ತಾ ಹುಂಡಲಗೆರೆಯಲ್ಲಿ ಎರಡು ತಿಂಗಳಿಂದ ಆರೋಗ್ಯವಾಗಿರುವುದರಿಂದ ಅದು ಪ್ಲೇಗ್ ಉಪದ್ರವಿಲ್ಲದ ಸ್ಥಳವೆಂದು ತಿಳಿಯತಕ್ಕದ್ದು

ಬೆಂಗಳೂರು ತಾ| ರೂಪೇನ ಅಗ್ರಹಾರದಲ್ಲೂ, ಹೊಸಕೋಟೆ ತಾ ಪೂಜೇನ ಅಗ್ರಹಾರದಲ್ಲೂ ಪ್ಲೇಗ್ ಉಪದ್ರವಿದೆ ಎಂದು ತಿಳಿಯತಕ್ಕದ್ದು

ಚಿತ್ರದುರ್ಗ ಟವನ್ ಮುನಿಸಿಪಲ್ ಸರಹದ್ದಿನಲ್ಲಿ 1913ನೇ ಆಗಸ್ಟ್ ಲಾಗಾಯಿತು ಎರಡು ವರುಷ ಕಾಲ ಬಲಾತ್ಕರಿಸಿ ದೇವಿ ಇಡುಬನ್ನು ಹಾಕುವ ಕಾನೂನು ಜಾರಿಯಲ್ಲಿರತಕ್ಕದ್ದು

ಬೆಂಗಳೂರು ತಾ ನರಸೂರು ಗ್ರಾಮವನ್ನು 1913ನೇ ಜೂಲೈ ಲಾಗಾಯಿತು ಯೂನಿಯನ್ನಾಗಿ ಮಾಡಿದೆ

ಶಿವಮೊಗ್ಗಾ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿ ವರ್ಗವಾಗಿರುವ ಮಿ ಎ ವಿ ವಿಶ್ವನಾಥರಾಯರಿಗೆ ಅವರು ಮಿ ಕೆ ವಿ ಅನಂತರಾಮ್‌ರವರಿಗೆ ಛಾರ್ಜುಕೊಡುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಚಿತ್ರದುರ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ ಆಫೀಸ್ ಜುಡಿಷಲ್ ಹೆಡ್ ಮುನ್ಷಿ ಮಿ ಎಚ್ ಶ್ರೀನಿವಾಸರಾಯರು ಯಳಂದೂರು ಜಹಗೀರಿಯ ಅಮಲ್ದಾರ್ ಮತ್ತು 1ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಎರಡು ವರುಷ ನೇಮಿಸಲ್ಪಟ್ಟಿದ್ದಾರೆ ಮಿ ಎಂ ವಾಸುದೇವರಾಯರು ವಾಪಸು ಪೋಲೀಸ್ ಇನ್ಸ್ಪೆಕ್ಟರಾಗಿ ಹೋಗತಕ್ಕದ್ದು

ನಗರದ ತಾಲ್ಲೂಕು ಅಮಲ್ದಾರ್ ಎ ಸರ್ವೋತ್ತಮರಾಯರವರಿಗೆ 1ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ

ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿರುವ ಮಿ ಸಿ ವಿ ಕೃಷ್ಣಸ್ವಾಮಿರಾಯರು ನಾಗಮಂಗಲ ತಾಲ್ಲೂಕು ಅಮಲ್ದಾರರಾಗಿಯೂ, ಮಿ ಸಿ ಆರ್ ನಾರಾಯಣರಾವ ಮಿ ಮುದಲಿಯಾರ್ರು ಚಿಕ್ಕನಾಯಕನಹಳ್ಳಿ ತಾಲ್ಲೂಕ್ ಅಮಲ್ದಾರರಾಗಿಯೂ ವಾಪಸು ಹೋಗತಕ್ಕದ್ದು

ಮಿ| ಬಿ ಮೂರ್ತಿ ಸೆರಿಸ್ಟೆದಾರ್‌ಯವರು ಪ್ರೊಬೇಷನರಾಗಿಯೂ ಮಿ ಟಿ ಕೆ ಲಕ್ಷ್ಮಣ ಅಯ್ಯರವರು ಮೊದಲಿನ ಕೆಲಸಕ್ಕೂ ವಾಪಸು ಹೋಗತಕ್ಕದ್ದು

ಮಿ ಎಂ ರಾಮರಾಯರನ್ನು ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್ಲಾಗಿ ಖಾಯಂ ಮಾಡಿದೆ

ತಾಲ್ಲೂಕು ವರ್ತಮಾನ

ರಾಬರ್ಟ್ಸನ್‌ಪೇಟೆ —ಶ್ರೀಮದಿಂಡಿಯಾ ಚಕ್ರವರ್ತಿ ಪ್ರತಿನಿಧಿಪದ ಪ್ರತಿಷ್ಠಾಪಿತ ಶ್ರೀಮಂತ ಲಾರ್ಡ್ ಹಾರ್ಡಿಂಗ್ ಪ್ರಭುವರ್ಯರ ಜನ್ಮದಿನ ಮಹೋತ್ಸವ ಸಮಾವೇಶ ವಿಶೇಷವು ಈ ಊರಿನ ಗೌ|| ಎ ವಿ ಸ್ಕೂಲ್ ಬಾಲಕರಿಂದ ನೆರವೇರಿಸಲ್ಪಟ್ಟಿತು ಶಾಲಾ ಮಂದಿರವು ಪಲ್ಲವ ಕುಸುಮ ತೋರಣಗಳಿಂದ ಅಲಂಕೃತವಾಗಿತ್ತು ಉಪಾಧ್ಯಾಯರೂ, ಬಾಲಕರೂ ವಿಶೇಷ ಉತ್ಸಾಹಭರಿತರಾಗಿದ್ದರು ಬಾಲಕರ ವದನವು ಅವರ ಅಂತರ್ಯದಲ್ಲಿ ಉಲ್ಲಾಸಾತಿಶಯವನ್ನು ಪ್ರಕಾಶಪಡಿಸುತಲಿತ್ತು ಈ ಸ್ಕೂಲ್ ಹೆಡ್ ಮಾಸ್ಟರ್ ಕೃಷ್ಣಯ್ಯನವರು ಶ್ರೀ ಹಾರ್ಡಿಂಗ್ ಪ್ರಭುಗಳವರ ವಿಷಯವಾಗಿ ಇಂಗ್ಲೀಷಿನಲ್ಲಿ ಬಾಲಕರಿಗೆ ಬೋಧೆಯಾಗುವಂತೆ ಸರಳವಾಗಿ ಉಪನ್ಯಾಸ ಮಾಡಿದರು ತದರ್ಥವನ್ನೇ ಭಾಷಾಂತರಗಳಲ್ಲಿ ಅಣ್ಣಯ್ಯನವರೂ, ರಾಮಸ್ವಾಮಯ್ಯರವರೂ ಉಪನ್ಯಾಸ ಮಾಡಿದರು ಬಾಲಕರ ಜಯಘೋಷವು ಉಪರತಿಯಾಗುತ್ತಲೇ ಇದ್ದಿತ್ತು ತತ್ಕಾಲೋಚಿತವಾಗಿ ಶ್ರೀ ಹಾರ್ಡಿಂಗ್ ಪ್ರಭುಗಳವರು ನಮಗೆ ಮಾಡಿರುವ ಉಪಕಾರಗಳ ವಿಷಯಕವಾಗಿ ಸುಬ್ಬರಾಯರು ಬರೆದ ಲೇಖನವನ್ನು ಓದಿದರು ಪೂರ್ವಸ್ಥಾಯಿಯಾಗಿ ವಿದ್ವಾನ್ ವೆಂಕಟಾಚಾರ್ಯರು ಹಾರ್ಡಿಂಗ್ ಪ್ರಭುಗಳವರಿಗೆ ಹಿಂದೆ ಯಾರೋ ಪಾಪಿಯು ಮಾಡಿದ ಘಾತುಕತನವನ್ನೂ, ಆಗ ಭಾರತೀಯರು ಪಟ್ಟ ಪರಿತಾಪ ವಿವರವನ್ನೂ, ಪ್ರಭುಗಳವರಿಗೆ ಜಗದೀಶ್ವರನ ದಯೆಯಿಂದ ವಿಪತ್ಪರಿಹಾರವಾಗಿ ಆಯುರಾರೋಗ್ಯಗಳುಂಟಾದ ಸಂತೋಷ ಸಂಭ್ರಮಗಳ ವಿಷಯವನ್ನೂ, ಹಾರ್ಡಿಂಗ್ ಪ್ರಭುಗಳವರ ಧರ್ಮ ಪ್ರಜಾಪರಿಪಾಲನಾ ಕಾಯತತ್ಪರತೆಯನ್ನೂ, ರಾಜಭಕ್ತಿಯಲ್ಲಿ ಗರ್ಭೀಕರಿಸಿ ಉಪನ್ಯಾಸಮಾಡಿದರು ಪುನಃ ಪುನಃ ಪ್ರಭುಗಳವರಿಗೆ ಶತೋಪಸ್ಥಿತಿಯಾಯವಾದ ಪ್ರಾರ್ಥನ ಪ್ರತಿಷ್ಠಾಯುವಾರೋಗ್ಯ ವೈಶ್ವರ್ಯಭೋಗ ಭಾಗ್ಯಗಳುಂಟಾಗಲೆಂದು ಎಲ್ಲರೂ ಉದ್ಘೋಷಿಸುತ್ತಾ ತಮ್ಮ ಉತ್ಸಾಹ ಉತ್ಕಂಠಾತಿಶಯ ಭಕ್ತಿ ವಿಶ್ವಾಸಗಳನ್ನು ಪ್ರಕಾಶಪಡಿಸಿದರು. ಮಕ್ಕಳಿಗೆ ಉಪಹಾರವೂ ಸಭಾಸ್ತರರಿಗೆ ಗಂಧ ಕುಸುಮಗಳೂ ವಿನಿಯೋಗಿಸಲ್ಪಟ್ಟು ಸಭೆಯು ಮುಕ್ತಾಯವಾಯಿತು

ಇಂಡಿಯಾ ದೇಶದ ವೃತ್ತಾಂತಗಳು.

ಇಂಗ್ಲಿಷ್ ಗವರ್ನ್‌ಮೆಂಟಿನವರು ಸರ್ ರಾಬರ್ಟ್ ಚಾಲ್ಮರ್ಸ್‌ಯವರನ್ನು ಸಿಲೋನ್ ದ್ವೀಪದ ಗವರ್ನರಾಗಿ ನೇಮಕಮಾಡಿದಾರೆ

ನಿದ್ದೆ ಬಾರದೆ ಇರುವಂಥವರು ಮಲಗುವುದಕ್ಕಿಂತ ಮುಂಚೆ ಒಂದು ಕಿತ್ತಲೆ ಹಣ್ಣನ್ನೋ ಅಥವಾ ಒಂದು ಸೇಬಿನಹಣ್ಣನ್ನೋ ತಿಂದು ಮಲಗಿಕೊಂಡರೆ ಒಳ್ಳೇ ನಿದ್ದೆ ಬರುವುದೆಂದು ಒಬ್ಬ ವೈದ್ಯನು ತಿಳಿಸುತ್ತಾನೆ

ಟರ್ಕಿ ದೇಶದಲ್ಲಿ ಯುದ್ಧದ ನಿಮಿತ್ತ ಕಷ್ಟನಷ್ಟಗಳಿಗೆ ಗುರಿಯಾದ ಸಂಸಾರಗಳಿಗೆ ಸಹಾಯ ಮಾಡುವುದಕ್ಕಾಗಿ ಒಂದು ಫಂಡು ಏರ್ಪಾಡಾಗಿದೆಯಷ್ಟೆ ಈ ಫಂಡಿಗೆ ಹಿಂದುಸ್ಥಾನದಲ್ಲಿ ಇದೇ ಜೂನ್ ಪ್ರಾರಂಭದ ವರೆಗೆ ಒಟ್ಟು 3,64,000 ರೂಪಾಯಿ ವಸೂಲಾಯಿತೆಂದೂ, ಇಂಗ್ಲಿಷ್ ಅಧಿಕಾರಿಗಳು ಈ ಫಂಡಿನ ಹಣದಿಂದ ಅಲ್ಲಿನ ಪ್ರಜೆಗಳಿಗೆ ಸಹಾಯ ಮಾಡುತ್ತಿದ್ದಾರೆಂದೂ ತಿಳಿದುಬಂದಿದೆ

ಬೊಂಬಾಯಿ ಪಟ್ಟಣದಲ್ಲಿರುವ ಡಾಕ್ಟರ್ ಎಸ್ ಜಿ ರಾನಡೆಯವರ ಪತ್ನೀ ರಾಣಿ ಲಕ್ಷ್ಮೀಬಾಯಿಯವರು ಕಳೆದ ವಾರ ಕಾಲವಾದರೆಂದು ವಿಷಾದಿಸಬೇಕಾಗಿದೆ ಇವರು ಆ ಪಟ್ಟಣದ ಹಿಂದೂ ಸ್ತ್ರೀಯರಲ್ಲಿ ವಿಶೇಷವಾದ ಕೀರ್ತಿಯನ್ನು ಪಡೆದು, ಸೇವಾ ಸದನ ಮತ್ತು ಪ್ರಾರ್ಥನಾ ಸಮಾಜಗಳಲ್ಲಿ ಬಹಳ ಶ್ರೇಷ್ಠವಾದ ಪರೋಪಕಾರಕ ಕಾರ್ಯಗಳನ್ನು ಮಾಡುತ್ತಿದ್ದರು ಇವರು ತಮ್ಮ ಪತಿಯ ಕೂಡ ಬಹಳವಾಗಿ ದೇಶಾಟನಮಾಡಿ ಯೂರೋಪಿಗೂ ಹೋಗಿ ಬಂದಿದ್ದರು

ಕಳೆದ 14ನೇ ತಾ ಗೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ 900 ಜನರಿಗೆ ಪ್ಲೇಗ್ ಉಪದ್ರ ತಗಲಿತು 806 ಜನರು ಈ ರೋಗದಲ್ಲಿ ಕಾಲವಾದರು ಈ ಮರಣ ಸಂಖ್ಯೆಯ ಹಂಚಿಕೆ ಹ್ಯಾಗಂದರೆ—ಬೊಂಬಾಯಿ ಅಧಿಪತ್ಯ 80, ಮದರಾಸ್ 8, ಬಂಗಾಳಾ 20, ಬೇಹಾರ್ 24, ಸಂಯುಕ್ತ ಪ್ರಾಂತ್ಯಗಳು 281, ಪಂಜಾಬ್ 305, ಬರ್ಮಾ 119, ಮೈಸೂರು ಸಂಸ್ಥಾನ 15, ಹೈದರಾಬಾದ್ 2, ರಾಜಪುಟಾನಾ 20, ವಾಯವ್ಯ ಸರಹದ್ದು ಪ್ರಾಂತ್ಯ 2

ಪೂನಾ ಪಟ್ಟಣದಲ್ಲಿ ಭಾಯಾ ಸಾಹೇಬ್ ಎಂಬ ದೊಡ್ಡ ವಂಶಕ್ಕೆ ಸೇರಿದ ವಾಬುರಾವ್ ಬಲವಂತರಾವ್ ಗೋಖ್ಲೆ ಎಂಬಾತನು ಕಂಪೌಂಡ್ ಗೋಡೆಯ ತಂತಿಕಂಭದ ಮೇಲೆ ಸಿಕ್ಕಿಕೊಂಡು ಸತ್ತುಹೋಗಿದ್ದನು ಸರ್ಕಾರದವರು ಆ ಶವವನ್ನು ಎತ್ತಿ ಆಸ್ಪತ್ರೆಯಲ್ಲಿ ಮಹಜರು ಮಾಡಿ ಈ ಮರಣದ ವಿಷಯದಲ್ಲಿ ಅನುಮಾನ ಪಟ್ಟು ತನಿಖೆಮಾಡುತ್ತಿದ್ದಾರೆ ಈತನು ಒಂದೆರಡು ತಿಂಗಳ ಕೆಳಗೆ ತನ್ನ ಜೀವಮಾನವನ್ನು 80,000 ರೂಪಾಯಿಗೆ ಕಂಪನಿಯಲ್ಲಿ ವಿಮೆಮಾಡಿ, ಒಂದೆರಡು ಕಿಸ್ತುಗಳನ್ನು ಕಟ್ಟಿದ್ದನು

ತಂಜಾವೂರಿನಲ್ಲಿ ವೈದ್ಯನಾಥಪಿಳ್ಳೆ ಎಂಬವನ ಮಗನು ತನ್ನ ಹೆಂಡತಿಯನ್ನು ಕೊಂದುಹಾಕಿದನೆಂದು ಮೊಕದ್ದಮೆ ಆಗಿ ರುಜುವಾತು ಆಗದೆ ಬಿಡುಗಡೆ ಹೊಂದಿದನು ಅದರ ಮೇಲೆ ಮಾವನೇ ಸೊಸೆಯನ್ನು ಕೊಂದನೆಂದು ಮೊಕದ್ದಮೆ ಬಂದು ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆ ನಡೆದು ಮಾವನಾದ ವೈದ್ಯನಾಥಪಿಳ್ಳೆಗೆ ಮರಣದಂಡನೆ ವಿಧಿಸಲಾಯಿತು ಅವನು ಮದರಾಸ್ ಹೈ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡನು ಹೈಕೋರ್ಟ್ ಜಡ್ಜಿಗಳು ವಿಚಾರಣೆಯಿಂದ ಮರಣದಂಡನೆಯನ್ನೇ ಖಾಯಂ ಮಾಡಿದರು ಅದರ ಮೇಲೆ ವೈದ್ಯನಾಥಪಿಳ್ಳೆಯು ಎಲ ಯತಿಯಲ್ಲಿರುವ ಪ್ರಿವಿ ಕೌನ್ಸಿಲ್ ಎಂಬ ನ್ಯಾಯಸ್ಥಾನದಲ್ಲಿ ಅಪೀಲ್‌ಮಾಡಿ ಲಾಯರನ್ನಿಟ್ಟು ವಾದಿಸಿದನು ಪ್ರಿವಿ ಕೌನ್ಸಿಲ್ ಜಡ್ಜಿಗಳು ಎರಡು ಕೋರ್ಟುಗಳ ತೀರ್ಮಾನವನ್ನೂ ರದ್ದುಮಾಡಿ ಅಪರಾಧಿಯನ್ನು ಬಿಡುಗಡೆ ಮಾಡತಕ್ಕದ್ದೆಂದು ತೀರ್ಮಾನ ಹೇಳಿರುತ್ತಾರೆ

ವಿದೇಶದ ವೃತ್ತಾಂತಗಳು

ಸ್ಪೈಯಿನ್‌ರಾಷ್ಟ್ರದ ದೊರೆಯವರಿಗೆ ಕಳೆದ ವಾರ ಯುವರಾಜ ಪುತ್ರಸಂತಾನವಾಯಿತು

ಜರ್ಮನ್ ಚಕ್ರವರ್ತಿಯವರು ಕಳೆದ ವಾರದಿಂದೀಚೆಗೆ ಆರೋಗ ಹೊಂದುತ್ತಿದಾರೆಂದು ತಂತೀವರ್ತಮಾನ ಬಂದಿದೆ

ಫ್ರಾನ್ಸಿಗೆ ಸೇರಿದ ಪೋರ್ಟ್ ವೆಂಡಿ ಎಂಬ ಸ್ಥಳದಲ್ಲಿ ಡೈನಮೈಟ್ ಕಾರ್ಖಾನೆಯೊಳಗೆ ಕಳೆದ ಗುರುವಾರ ಆಕಸ್ಮಾತಾಗಿ ಮದ್ದು ಹಾರಿ ಆರು ಜನರು ಮೃತಪಟ್ಟರು ಹತ್ತು ಜನರಿಗೆ ಗಾಯಗಳಾದವು

ಪ್ರಪಂಚದ ಎಲ್ಲಾ ರಾಜ್ಯಗಳಿಂದಲೂ ಪ್ರವೀಣರಾದ ವೈದ್ಯರು ಲಂಡನ್ ಪಟ್ಟಣಕ್ಕೆ ಹೋಗಿ ಸೇರಿ ಒಂದು ವೈದ್ಯ ಸಮಾಜವನ್ನು ನಡಿಸುವವರಾಗಿದಾರೆ ಈ ಮಹಾ ಸಭೆಯು ಆ ದಿವ್ಯ ನಗರದಲ್ಲಿ ಮುಂದಿನ ಆಗಸ್ಟ್ ತಾ 6 ರಿಂದ ಪ್ರಾರಂಭವಾಗಿ ಒಂದು ವಾರ ನಡೆಯುವುದೆಂದೂ, ಸುಮಾರು 600 ಮಂದಿ ಪಂಡಿತೋತ್ತಮರು ಈ ಸಭೆಗೆ ದಯಮಾಡುವರೆಂದೂ ಪ್ರಕಟವಾಗಿದೆ

ಟರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲಿ ಒಂದು ಗುಂಪಿನ ಜನಗಳಿಗೆ ಈಗಿನ ಅಧಿಕಾರಿಗಳ ಮೇಲೆ ದ್ವೇಷವುಂಟಾಗಿ ಮಂತ್ರಿಯನ್ನು ಕಳೆದ ವಾರ ಕೊಲ್ಲಿಸಿದರಷ್ಟೆ ಅಧಿಕಾರಿಗಳು ಆ ಗುಂಪಿನ ಜನರನ್ನು ಹಿಡಿದು ಕೆಲವರನ್ನು ಗಡೀಪಾರು ಮಾಡಿದರು ಇನ್ನುಕೆಲವರನ್ನು ದಸ್ತಗಿರಿ ಇಟ್ಟುಕೊಂಡಿದಾರೆ ಅವರಲ್ಲಿ ಹಲವರು ಬಹಳ ಮುಖ್ಯಸ್ಥರಾದ ಅಧಿಕಾರಿಗಳಾಯೂ ಘನತೆಯನ್ನು ಪಡೆದ ದೊಡ್ಡಮನುಷ್ಯರಾಗಿಯೂ ಇರುವಂತೆ ತಿಳಿದು ಬಂದಿದೆ

ಟರ್ಕಿಯವರಿಂದ ಇಟಲಿಯವರು ವಶಪಡಿಸಿಕೊಂಡಿರುವ ಟ್ರಿಪೊಲಿ ದೇಶದಲ್ಲಿ ದೇಶೀಯ ಮಹಮದೀಯ ಪಂಗಡದವರು ಇಟಲಿಯವರಿಗೆ ಇನ್ನೂ ವಶವಾಗಿಲ್ಲ ಎಂದಿಲ್ಲ ಆಗಾಗ್ಗೆ ಇಟಲಿಯ ಸೈನಿಕರಿಗೂ ಮಹಮದೀಯರಿಗೂ ಕಾದಾಟಗಳು ಆಗುತ್ತಿರುವವು ಅರಬ್ಬಿಯವರಿಗೂ ಇಟಲಿ ಸೈನಿಕರಿಗೂ ಕಳೆದ ವಾರ ಸಂಧಿಯಾಗಿ ಯುದ್ಧವಾಯಿತು ಈ ಕಾದಾಟದಲ್ಲಿ ಇಟಲಿ ಸೈನಿಕರಲ್ಲಿ ಒಬ್ಬ ಮುಖ್ಯಾಧಿಕಾರನೂ 18 ಜನ ಸೈನಿಕರೂ ಕೊಲೆಯಾದರು 5 ಮಂದಿ ಮುಖ್ಯಾಧಿಕಾರಿಗಳೂ, 317 ಸಿಪಾಯಿಗಳಿಗೂ ಗಾಯಗಳಾಗಿವೆ

ಮೈಸೂರು ವಿದ್ಯಾಭ್ಯಾಸದ ಇಲಾಖೆ

ಸ್ಕೂಲುಗಳಿಗೆ ಗ್ರಾಂಟುಗಳನ್ನು ಹೆಚ್ಚು ಮಾಡಿದ್ದು

ಮೈಸೂರು ವಿದ್ಯಾ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್‌ರವರು ಸಂಸ್ಥಾನದಲ್ಲಿರುವ ಕೆಲವು ಸಾಹುಕಾರಿ ಸ್ಕೂಲುಗಳಿಗೆ ಗ್ರಾಂಟನ್ನು ಹೆಚ್ಚಿಸಿ ಕೊಡಬೇಕೆಂದು ಶಿಫಾರಸು ಮಾಡಿದ್ದರು. ಅವರು ತಿಂಗಳಿಗೆ 108½ ರೂಪಾಯಿ ಅಥವಾ ವರುಷಕ್ಕೆ 1,302 ರೂಪಾಯಿ ಗ್ರಾಂಟು ಜಾಸ್ತಿ ಮಾಡಬೇಕೆಂದೂ, ಇದು 1913 ನೇ ಜುಲೈ ಲಾಗಾಯಿತು ಜಾರಿಗೆ ಬರುವಂತೆ ಆಗಬೇಕೆಂದೂ ಸೂಚಿಸಿದ್ದರು. ಸರಕಾರದವರು ಕೆಲವನ್ನು ಸ್ಯಾಂಕ್ಷನ್ ಮಾಡಿ, ಉಳಿದ ಸ್ಕೂಲುಗಳಿಗೆ ಗ್ರಾಂಟು ಜಾಸ್ತಿಮಾಡಲಾಗುವುದಿಲ್ಲವೆಂದು ಅಪ್ಪಣೆ ಕೊಟ್ಟಿರುತ್ತಾರೆ. ಈಗ ಜಾಸ್ತಿ ಮಾಡಿರುವ ಸ್ಕೂಲುಗಳು ಯಾವವೆಂದರೆ—

ಬೆಂಗಳೂರು ವೆ ಮಿಷನ್ ಕನ್ನಡ ಗರಲ್ಸ್ ಸ್ಕೂಲಿಗೆ 165 ರೂ. ನಿಂದ 200 ರೂಪಾಯಿ, ಬೆಂಗಳೂರು ಚಾಮರಾಜಪೇಟೆ ವೆ|| ಮಿಷನ್ ಕನ್ನಡ ಗರಲ್ಸ್ ಸ್ಕೂಲು 25 ರೂ. ನಿಂದ 30 ರೂಪಾಯಿ, ಬೆಂಗಳೂರು ಬಸವನಗುಡಿ ವೆ|| ಮಿಷನ್ ಕನ್ನಡ ಗರಲ್ಸ್ ಸ್ಕೂಲು 30 ರೂ. ನಿಂದ 33, ದಾವಣಗೆರೆ ವೆ|| ಮಿಷನ್ ಕನ್ನಡ ಗರಲ್ಸ್ ಬ್ರಾಂಚ್ ಸ್ಕೂಲು 12 ರಿಂದ 15, ಹರಿಹರದ ವೆ|| ಮಿಷನ್ ಕನ್ನಡ ಗರಲ್ಸ್ ಸ್ಕೂಲು 15 ರಿಂದ 20, ಆನೇಕಲ್ ಲಂ|| ಮಿಷನ್ ಕನ್ನಡ ಗರಲ್ಸ್ ಸ್ಕೂಲು 10 ರಿಂದ 15; ಕಾಸಕಾನಹಳ್ಳಿ ತಾ|| ತಟ್ಟಿಕುಪ್ಪೆ ರೋ|| ಮಿಕ್ಸೆಡ್ ಸ್ಕೂಲು 7 ರಿಂದ 10, ತ್ಯಾಮಗೊಂಡ್ಲು ವೆ ಮಿಷನ್ ಕನ್ನಡ ಗರಲ್ಸ್ ಸ್ಕೂಲು 15 ರಿಂದ 22, ತುಮಕೂರು ತಾ|| ಕ್ಯಾತಸಂದ್ರದ ವೆ ಮಿಷನ್ ಕನ್ನಡ ಗರಲ್ಸ್ ಸ್ಕೂಲು 10 ರಿಂದ 15, ತುಮಕೂರು ತಾ|| ಗೂಳೂರು ವೆ|| ಮಿಷನ್ ಕನ್ನಡ ಸ್ಕೂಲು 15 ರಿಂದ 18, ಮದ್ದಗಿರಿ ತಾ|| ಕೊಡಿಗೇನಹಳ್ಳಿ ನ್ಯಾಷನಲ್ ಕನ್ನಡ ಗರಲ್ಸ್ ಸ್ಕೂಲು 10 ರಿಂದ 15, ಮೈಸೂರು ಕೊಂಚಿಟಿಗರ ಎ. ವಿ. ಸ್ಕೂಲು 20 ರಿಂದ 35 ಮೈಸೂರು ಕಾನ್ವೆಂಟ್ ಇಂಗ್ಲಿಷ್ ಗರಲ್ಸ್ ಸ್ಕೂಲು 37½ ಯಿಂದ 100, ಕೋಲಾರು ಲಕ್ಷ್ಮೀವಿಲಾಸ ಬಾಲಿಕಾ ಪಾಠಶಾಲೆಗೆ 10 ರಿಂದ 15, ಚಿತ್ರದುರ್ಗದ ಸೆಯಿಗೆ ಸ್ಕೂಲು 15 ರಿಂದ 30, ಕೋಲಾರದ ಮಿಷನ್ ನಾರ್ಮಲ್ ಮತ್ತು ಟ್ರೈನಿಂಗ್ ಇನ್‌ಸ್ಟಿಟ್ಯೂಟಿಗೆ 100 ರಿಂದ 135, ಬೆಂಗಳೂರು ಮಹದೇವ ಇಂದಸ್ಟ್ರಿಯಲ್ ಸ್ಕೂಲಿಗೆ 30 ರಿಂದ 40, ಕಾನಕಾನಹಳ್ಳಿ ತಾ|| ಹಾರೋಹಳ್ಳಿ ರೋ|| ಕನ್ನಡ ಸ್ಕೂಲು 5 ರಿಂದ 7, ಮೈಸೂರು ವೆ|| ಮಿಷನ್ ಹೈ ಸ್ಕೂಲು 300 ರಿಂದ 310 ಬೆಂಗಳೂರು ವೆ ಮಿಷನ್ ಹೈ ಸ್ಕೂಲು 300 ರಿಂದ 310 ಬೆಂಗಳೂರು ಲಂಡನ್ ಮಿಷನ್ ಹೈ ಸ್ಕೂಲು 300 ರಿಂದ 310; ಕುಣಿಗಲ ಆರ್ಯಬಾಲಿಕಾ ಪಾಠಶಾಲಾ 20 ರಿಂದ 25, ಬೆಂಗಳೂರು ಕಬ್ಬನ್‌ಪೇಟೆ, ಹೊಸಪೇಟೆ, ಅಕ್ಕಿಪೇಟೆ ಮತ್ತು ಕುಂಬಾರಪೇಟೆಗಳ ಲಂಡನ್ ಮಿಷನ್ ಗರಲ್ಸ್ ಸ್ಕೂಲುಗಳಿಗೆ 150 ರಿಂದ 170 ಈ ರೀತಿ 20 ಸ್ಕೂಲುಗಳಿಗೆ ಗ್ರಾಂಟನ್ನು ತಿಂಗಳಿಗೆ 257½ ರೂಪಾಯಿ ಅಥವಾ ವರುಷಕ್ಕೆ 3,090 ರೂಪಾಯಿಗೆ ಹೆಚ್ಚು ಮಾಡಿದಾರೆ ಇದು 1913 ನೇ ಜುಲೈ ಪ್ರಾರಂಭದಿಂದ ಜಾರಿಗೆ ಬರುವುದು

ಬ್ರೋಚ್ ಜಾತಿಯ ಹತ್ತಿ ಬೀಜ

ಬಿಳೇವಾರಿ ಮಾಡುವ ವಿಷಯ

ಹಾಲಿ ಮೈಸೂರು ಸೀಮೆಯಲ್ಲಿ ಹತ್ತಿ ಬೆಳೆಯನ್ನು ಮಾಡುತ್ತಿರುವ ಪ್ರದೇಶಗಳಲ್ಲಿ ವ್ಯವಸಾಯ ಅಭಿವೃದ್ಧಿಯನ್ನು ತಕ್ಕಮಟ್ಟಿಗೆ ಮಾಡಬೇಕೆಂಬ ಉದ್ದೇಶದಿಂದ ಈಗ ರೈತರು ವಿಶೇಷವಾಗಿ ಬೆಳೆಯುತ್ತಿರುವ ಹತ್ತಿ ಗಿಡಗಳಿಂದ ಬರುವುದಕ್ಕಿಂತಲೂ ರೈತರುಗಳಿಗೆ ಹೆಚ್ಚು ಆದಾಯವು ಬರಬಹುದಾದ ಹೊಸ ಜಾತಿ ಹತ್ತಿಯ ಬೆಳೆಯನ್ನು ಇಡುವದನ್ನು ಚಲಾವಣೆಗೆ ತರುವದಕ್ಕಾಗಿ 1912-13 ನೇ ಸಾಲಿನಲ್ಲಿ ವ್ಯವಸಾಯದ ಇಲಾಖೆಯವರು ಮೊದಲುಮಾಡಿದರು 1912 ನೇ ಇಸವಿಯ ಮೊದಲಿನಲ್ಲಿ ಹತ್ತಿಯನ್ನು ಬೆಳೆಯುವ ಪ್ರಾಂತ್ಯಗಳಲ್ಲೆಲ್ಲಾ ತಿರುಗಿ ಅಲ್ಲಿನ ಜಮೀನುಗಳ ಸ್ಥಿತಿಗತಿಗಳನ್ನು ವಿಚಾರಣೆಮಾಡಿ ನೋಡಿದ್ದರಲ್ಲಿ ಹಾಲಿ ಅಲ್ಲಿನ ಎರೇ ಜಮೀನುಗಳಲ್ಲಿ ಬೆಳೆಯುತ್ತಿರುವ ಸಣ್ಣಹತ್ತಿ ಅಥವಾ ಜವಾರಿ ಹತ್ತಿಗೆ ಬದಲಾಗಿ ಬ್ರೋಚ್ ಹತ್ತಿಯನ್ನು ಬೆಳೆಯಬಹುದೆಂಬ ಸಂಗತಿಯು ತಿಳಿದುಬಂತು ಬ್ರೋಚ್ ಹತ್ತಿಯ ಬೆಳೆಯನ್ನು ಇಡುವದಕ್ಕೆ ಶುರು ಮಾಡಿರುವ ಉದ್ದೇಶದಿಂದ ಹತ್ತಿ ಬೆಳೆಯುವ ಪ್ರಾಂತ್ಯದಲ್ಲಿನ ರೈತರುಗಳಿಗೆ ಅದನ್ನು ಬೆಳೆದು ನೋಡುವ ಅಭಿಲಾಷೆಯುಳ್ಳವರೂ ಇರುವರೇ ಎಂದು ವಿಚಾರಿಸಿ ಗ್ರಾಮಾಂತರಗಳಲ್ಲಿ ಸಭೆಗಳನ್ನು ಮಾಡಿ ಹೊಸ ಜಾತಿಯ ಹತ್ತಿಯ ಅನುಕೂಲವನ್ನು ಜನಗಳಿಗೆಲ್ಲಾ ತಿಳಿಸಿದ್ದಲ್ಲದೆ ಅದರ ವ್ಯವಸಾಯಕ್ಕೆ ಸಂಬಂಧಪಟ್ಟ ಸಂಗತಿಗಳನ್ನೆಲ್ಲಾ ಕನ್ನಡದಲ್ಲಿಯೇ ಬರೆದು ಚಿಕ್ಕಪತ್ರಿಕೆಯೊಂದನ್ನು ಪ್ರಚುರಪಡಿಸಿತು 140 ಜನ ವ್ಯವಸಾಯಗಾರರು ಆ ಹತ್ತಿಯನ್ನು ಬೆಳೆದು ನೋಡುವುದಕ್ಕೆ ಒಪ್ಪಿದ್ದರ ಮೇಲೆ ಬೊಂಬಾಯಿ ಸೀಮೆಯ ವ್ಯವಸಾಯದ ಇಲಾಖೆಯವರ ಮೂಲಕ 1,606 ಪೌಂಡು ಬೀಜವನ್ನು ಸರ್ಕಾರದಿಂದ ತರಿಸಿ ಅವರಿಗೆಲ್ಲಾ ಬಿಳೇವಾರಿ ಮಾಡಿದ್ದಾಯಿತು.—ಆ ಪೈರು ಬೆಳೆಯುತ್ತಿದ್ದ ಕಾಲದಲ್ಲಿ ಇಲಾಖೆಯ ಉದ್ಯೋಗಸ್ಥರು ಅನೇಕಾವರ್ತಿ ಹೋಗಿ ಅದನ್ನೆಲ್ಲಾ ಪರಾಂಬರಿಸಿದ್ದರಿಂದ ಫಸಲೆಲ್ಲಾ ಬಹು ತೃಪ್ತಿಕರವಾಗಿರುವದೆಂಬ ಸಂಗತಿಯು ತಿಳಿದುಬಂತು ಬೆಳೆದ ಹತ್ತಿ ಎಷ್ಟು ಮಟ್ಟಿಗೆ ಮಾರಾಟಕ್ಕೆ ಬರಬಹುದೆಂಬುವದನ್ನು ತಿಳಿದುಕೊಂಡು ಮೈಸೂರು ದೇಶದಲ್ಲಿ ಬೆಳೆದ ಬ್ರೋಚ್‌ಜಾತಿಯ ಹತ್ತಿಗೆ ಕೂಲಿಪಡಿಮಟ್ಟಿಗೂ ಒಳ್ಳೆ ಬೆಲೆಯನ್ನು ಕೊಡಿಸುವ ಉದ್ದೇಶದಿಂದ ಅದರ ವ್ಯಾಪಾರವನ್ನು ಭಾಗಶಃ ಮಾಡುವವರಿಗೆಲ್ಲಾ ವ್ಯವಸಾಯದ ಇಲಾಖೆಯಿಂದ ಬಿಡಿಸಿಯೇ ಕಾಗದಗಳನ್ನು ಬರೆಯಿಸಿತು. ಅವರುಗಳಿಂದ ಜವಾಬು ಬಂದ ಮೇಲೆ ಯಾರು ಜಾಸ್ತಿ ಕ್ರಯವನ್ನು ಕೊಡುತ್ತಾರೆ ಎಂಬ ಸಂಗತಿಯನ್ನು ಆ ಹತ್ತಿಯನ್ನು ಬೆಳೆದಿದ್ದ ರೈತರುಗಳಿಗೆಲ್ಲಾ ಅಚ್ಚು ಹಾಕಿದ ಸರ್ಕ್ಯುಲರ್ ಮೂಲಕ ಒಡನೆಯೇ ತಿಳಿಸಲಾಯಿತು ಸಣ್ಣ ಹತ್ತಿಗೆ ಬಂದ ಬೆಲೆಗಿಂತ ಮಣ ಒಂದಕ್ಕೆ 12 ಆಣೆ ಜಾಸ್ತಿ ಬೆಲೆಯು ಅಂದರೆ ಮಣ ಒಂದಕ್ಕೆ ಮೂರುವರೆ ರೂಪಾಯಿನ ಮೇಲೆ ಒಳ್ಳೆ ಬ್ರೋಚ್ ಹತ್ತಿಗೆ ದೊರೆಯಿತೆಂಬ ಸಂಗತಿಯನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರೆಲ್ಲರೂ ಗಮನಿಸಬಹುದು.—ಮೇಲೆ ಹೇಳಿರುವ ಸಂದರ್ಭಗಳಿಂದ ಬ್ರೋಚ್ ಜಾತಿ ಹತ್ತಿಯ ವ್ಯವಸಾಯವು ಈ ಸಾಲಿನಲ್ಲಿ ಇನ್ನೂ ಬಹಳ ಜಾಸ್ತಿಯಾಗುವದೆಂದು ನಂಬಿಕೆಯುಂಟಾಗಿರುತ್ತೆ. ಬೇಕಾದವರಿಗೆ ಬೀಜವನ್ನು ಹೊಂದಿಸಿಕೊಡುವದಕ್ಕಾಗಿ 20,000 ಪೌಂಡು ಒಳ್ಳೆ ಬೀಜವನ್ನು ಬೊಂಬಾಯಿ ವ್ಯವಸಾಯದ ಇಲಾಖೆಯಿಂದ ಈ ಸೀಮೆಯ ವ್ಯವಸಾಯದ ಇಲಾಖೆಯವರು ಬೇರೆಯಾಗಿ ತರಿಸಿರುತ್ತಾರೆ ಕೇಳಿದ ಶೇಕಡ 34 ಕ್ಕಿಂತ ಜಾಸ್ತಿಯಾಗಿ ಅಂದರೆ, ಮಣಕ್ಕೆ 17 ಸೇರು ಅರಳೆಯು ಇಳಿದ ಹತ್ತಿಯಿಂದ ಈ ಬೀಜವನ್ನು ಬೊಂಬಾಯಿಂದ ತರಿಸಿರುತ್ತೆಂಬ ಸಂಗತಿಯನ್ನು ವ್ಯವಸಾಯಗಾರರೆಲ್ಲರೂ ಗಮನಿಸಬೇಕು. ಸ್ಥಳದಲ್ಲೇ ಬೆಳೆದ ಹತ್ತಿಯಿಂದ ಬಂದ ಬೀಜವನ್ನು ಹಾಕುವದು ಒಳ್ಳೇದಾಗಿ ತೋರುವುದಿಲ್ಲ ಯಾಕೆಂದರೆ ಅದರಿಂದಾಗುವ ಹತ್ತಿಯಿಂದ ಅರಳೆಯು ಕಮ್ಮಿಯಾಗಿ ಇಳಿಯಬಹುದೆಂಬ ಪ್ರಮೇಯ ವಿರುವಂತೆ ತಿಳಿದುಬಂದಿರುತ್ತೆ ಇದೂ ಅಲ್ಲದೆ ಇಲ್ಲಿನ ಬ್ರೋಚ್ ಹತ್ತಿಯ ಬೀಜದೊಂದಿಗೆ ಜವಾರಿ ಹತ್ತಿಯ ಬೀಜವೂ ಬೆರಕೆಯಾಗುವ ಸಂದರ್ಭವೂ ಇರುವದು ಈ ಎರಡು ಅಂಶಗಳೂ ಕೂಡಿಕೊಂಡರೆ ಬ್ರೋಚ್ ಹತ್ತಿಗೆ ಬರುವ ಬೆಲೆಯೇ ಕಮ್ಮಿಯಾಗಿಹೋಗಬಹುದಲ್ಲದೆ ಮೈಸೂರು ಸೀಮೆಯಲ್ಲಿ ಬೆಳೆಯುವ ಬ್ರೋಚ್ ಹತ್ತಿಯ ಹೆಸರೇ ಕೆಟ್ಟುಹೋಗುತ್ತೆ

ಬಿತ್ತನೆಗೆ ಬೇಕಾದ ಬೀಜವನ್ನು (1) ಹರಿಹರ, ದಾವಣಗೆರೆ, ಜಗಲೂರು, ಮೊಳಕಾಲಮೂರು, ಚಳ್ಳಕೆರೆ, ಹಿರಿಯೂರು, ಚಿತ್ರದುರ್ಗ, ಹೊಸದುರ್ಗ, ಹೊಳಲಕೆರೆ, ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕು ಆಫೀಸುಗಳಲ್ಲಿಯೂ (2) ಚಿತ್ರದುರ್ಗದಲ್ಲಿರುವ ವ್ಯವಸಾಯ ಸಂಘದ ಆಫೀಸಿನಲ್ಲಿಯೂ; (3) ಬೆಂಗಳೂರಿನಲ್ಲಿರುವ ಕೆಳಗೆ ರುಜು ಮಾಡಿರುವವರ ಆಫೀಸಿನಲ್ಲಿಯೂ ದಾಸ್ತಾನು ಇಟ್ಟಿರುತ್ತೆ 35 ಪೌಂಡುಗಳ ಮಣ ಒಂದಕ್ಕೆ ಒಂದು ರೂಪಾಯಿನಂತೆ ಬೀಜವನ್ನು ಮೇಲೆ ಹೇಳಿರುವ ಯಾವ ಸ್ಥಳದಿಂದಲಾದರೂ ತರಿಸಿಕೊಳ್ಳಬಹುದು

ವ್ಯವಸಾಯದ ಇಲಾಖೆಯ 5 ನೇ ಸರ್ಕ್ಯುಲರ್‌ನಲ್ಲಿರುವ ಬ್ರೋಚ್ ಹತ್ತಿ ನಾಟುವಳಿ ಅಂಶಗಳನ್ನು ರೈತರ ತಿಳುವಳಿಕೆಯ ಬಗ್ಗೆ ಕೆಳಗೆ ನಮೂದಿಸಿದೆ

ಬ್ರೋಚ್ ಹತ್ತಿ —ಎಕರೆಯೊಂದಕ್ಕೆ 5 ಪೌಂಡು ಬೀಜದಂತೆ 3½ ಅಡಿಗೆ ಒಂದೊಂದು ಸಾಲು ಮಾಡಿಕೊಂಡು ಎರೇ ಜಮೀನುಗಳಲ್ಲಿ ಈ ಬೀಜವನ್ನು ಜುಲೈ ತಿಂಗಳಲ್ಲಿ ಬಿತ್ತಬೇಕು ಪೈರು ಎದ್ದ ನಂತರ ಸಾಲುಗಳಲ್ಲಿ ಅಡಿಯೊಂದಕ್ಕೆ ಒಂದು ಗಿಡದಂತೆ ನಿಲ್ಲಿಸಿ ಜಾಸ್ತಿಯಾದದ್ದನ್ನೆಲ್ಲಾ ತೆಗೆದುಹಾಕಬೇಕು ಗಿಡಗಳು ಮೂರಡಿ ಎತ್ತರ ಬೆಳೆದನಂತರ ತಲೆಗಳನ್ನು ಚಿಗುಟಬೇಕು ಇತರ ವಿಧವಾದ ವ್ಯವಸಾಯದ ಕೆಲಸವನ್ನೆಲ್ಲಾ ಹಾಲಿ ಬೆಳೆಯುತ್ತಿರುವ ಜವಾರಿ ಅಥವಾ ಸಣ್ಣ ಹತ್ತಿ ಬೆಳೆಗೆ ಮಾಡುತ್ತಿರುವಂತೆಯೇ ಮಾಡಬೇಕು

ಲೆಸ್ಲಿ ಸಿ. ಕೋಲ್ಮನ್, ಎಂ.ಎ, ಪಿ ಎಚ್ ಡಿ
ವ್ಯವಸಾಯದ ಇಲಾಖಾ ಡೈರೆಕ್ಟರ್

ಅರಸೀಕೆರೆ ಮಂಗಳೂರು ರೈಲ್ವೆ

ಅರಸೀಕೆರೆ ಮಂಗಳೂರು ರೈಲ್ವೆಯನ್ನು ಹಾಕಬೇಕೆಂಬ ಮಾತು ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಹೊಸಮಾತಲ್ಲ ಈ ರೈಲ್ವೆಯು ಅಗತ್ಯವಾಗಿದೆ ಎಂಬದು ಹೆಚ್ಚುಕಡಮೆ 30 ವರ್ಷದ ಮೊದಲೇ ಮಂಗಳೂರಿನವರಿಗೆ ಗೋಚರವಾಗಿತ್ತು ಆ ಕಾಲದಲ್ಲಿ ವೈಸರಾಯರು ಮೈಸೂರಿಗೆ ಚಿತ್ತೈಸಿದ್ದಲ್ಲಿ ಮಂಗಳೂರು ಮುನಿಸಿಪಾಲಿಟಿಯ ಕಡೆಯಿಂದ ದಿವಾನ ಬಹದೂರ್ ಎಸ್ ಶಿವರಾಯರು, ಎಲ್ಲಾಸರ್ ದೊರೆಗಳು, ಎಚ್ ಮೋರ್ಗನ್ ದೊರೆಗಳು, ರಾವ್ ಬಹದೂರ್ ಎಸ್ ಎಫ್ ಬ್ರಿಟ್ಟೋರವರು, ಮಿಸ್ಟರ್ ಬ್ರಿಗ್ಗಗರು, ಸೆಲ್ಲಿಕಾಯಿ ಗುಂಡುರಾಯರು, ಪೈ ಕೋರ್ಟಿನ ವಕೀಲ ಕೃಷ್ಣಭಟ್ಟರು, ಕಲ್ಯಾಣಪುರ ನಾರಾಯಣರಾಯರು ಮುಂತಾದ ಪ್ರತಿನಿಧಿಗಳು ಮೈಸೂರಿಗೆ ಹೋಗಿ, ಈ ರೈಲ್ವೆಯನ್ನು ದಯಪಾಲಿಸಬೇಕೆಂದು ವಿವಿಧ ಕಾರಣಗಳನ್ನು ತೋರಿಸಿ ಮೊಹ್ತಾ ವೈಸರಾಯರಿಗೆ ಅರಿಕೆಮಾಡಿಕೊಂಡಲ್ಲಿ—ಸದ್ಯಕ್ಕೆ ಉಪಾಯವಿಲ್ಲ; ಸಂದರ್ಭ ದೊರಕಿದಾಗ ಗಮನಕ್ಕೆ ತಂದುಕೊಳ್ಳುವೆವು ಎಂಬ ಉತ್ತರ ಸಿಕ್ಕಿತು ತರುವಾಯ ಮದ್ರಾಸ್ ಗವರ್ನರರಾಗಿದ್ದ ವೆನ್ಲಾಕ್ ಪ್ರಭುಗಳು 1893 ರಲ್ಲಿ ಮಂಗಳೂರಿಗೆ ಚಿತ್ತೈಸಿದಾಗ ಮಂಗಳೂರು ನಿವಾಸಿಗಳು ಬಹು ವಿಧವಾಗಿ ಮಂಗಳೂರಿಗೆ ರೈಲ್ವೆ ಅಗತ್ಯವಾಗಿದೆ ಎಂಬದನ್ನು ತೋರಿಸಿ ಬೇಡಿಕೊಂಡಲ್ಲಿ ಅವರು ಅದಕ್ಕೆ ಪ್ರಯತ್ನ ಮಾಡುವೆವೆಂದು ಮಾತುಕೊಟ್ಟಿದ್ದರು ಆದರೆ ಅಮ್ಟ್‌ಹಿಲ್ ಪ್ರಭುಗಳು ಮದ್ರಾಸ್ ಗವರ್ನರರಾಗಿದ್ದಾಗ್ಗೆ (1900 1906) ಅವರ ಸೂಚನೆಯ ಮೇರೆಗೆ ಆಗ ವೈಸರಾಯರಾಗಿದ್ದ ಕರ್ಜನ್ ಪ್ರಭುಗಳು (1899 1905) ಪಶ್ಚಿಮ ತೀರದ ಅಜಕಲ್ ಮಂಗಳೂರು ರೈಲ್ವೆ ಮಾಡಿಸಲಿಕ್ಕೆ ಹುಕುಂ ಕೊಟ್ಟ ಮೇರಿಗೆ 1903 ರಿಂದ ಅದರ ಕೆಲಸ ತೊಡಗಿ 1907 ನೇ ಇಸವಿಯ ಜುಲಾಯಿ 3 ನೇ ತಾರೀಖಿನಲ್ಲಿ ಮೊದಲನೇ ಸಾರಿ ಆ ರೈಲ್ವೆ ಬಂಡೇ ಬಂತು ಇದರಿಂದ ಪಶ್ಚಿಮ ಕರಾವಳಿಯಲ್ಲಿಯೂ ಪಶ್ಚಿಮ ಕರಾವಳಿಯಿಂದ ಪೂರ್ವ ಕಡೆಯ ಊರು ದೇಶಗಳಿಗೂ ಪ್ರಯಾಣ ಮಾಡುವವರಿಗೆ ದೊಡ್ಡ ಪ್ರಯೋಜನವುಂಟಾದದ್ದಲ್ಲದೆ ಪಶ್ಚಿಮ ಕರಾವಳಿಯಲ್ಲಿ ನಡೆಯುವ ವಿವಿಧ ವ್ಯಾಪಾರಗಳಿಗೆ ಬಹಳ ಸಹಾಯವುಂಟಾಯಿತು ಇದರ ವಿಷಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯವರು ಸರಕಾರದವರಿಗೆ ತುಂಬಾ ಕೃತಜ್ಞತೆಯುಳ್ಳವರಾಗಿದಾರೆ

ಆದರೆ ಈ ರೈಲ್ವೆಯ ದೆಸೆಯಿಂದ ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಸಂಪೂರ್ಣ ತೃಪ್ತಿಯಾಯಿತೆಂದು ಹೇಳಕೂಡದು ರೈಲ್ವೆಯ ದೆಸೆಯಿಂದ ದಕ್ಷಿಣ ಕನ್ನಡ ಜಿಲ್ಲೆಯವರಿಗೆ ತೃಪ್ತಿಯಾಗಬೇಕಾದರೆ ನಾವು ಮೇಲೆ ಸೂಚಿಸಿದ ಅರಸೀಕೆರೆ ಮಂಗಳೂರು ರೈಲ್ವೆಯನ್ನು ಹಾಕಬೇಕು. ಅದು ಯಾಕೆಂದು ಈ ಕೆಳಗಿನ ಕಾರಣಗಳಿಂದ ತಿಳಿಯಬಹುದು ಈಗಿನ ಪ್ರಕಾರ ಅರಸೀಕೆರೆಯಲ್ಲ, ಹಾಸನವೇ ಮಂಗಳೂರಿಗೆ ಹತ್ತರದ ಸ್ಟೇಷನಾಗಿರುವದು. ಯಾಕೆಂದರೆ ಮೈಸೂರಿನಿಂದ ಹಾಸನಕ್ಕೆ ಈಗ ಹೊಸ ರೈಲ್ವೆಯನ್ನು ತಯಾರಿಸುತ್ತಾರೆ ಮತ್ತು ಅರಸೀಕೆರೆಯಿಂದ ಹಾಸನಕ್ಕೆ ನೇರವಾಗಿ ರೈಲು ಹಾಕಬೇಕೆಂಬ ಪ್ರಸ್ತಾಪ ನಡೆಯುತ್ತದೆ ಇಲ್ಲಿ ಹಾಕಬೇಕೆಂತ ... ಅರಸೀಕೆರೆ ಮಂಗಳೂರ ರೈಲ್ವೆಯು 3½ ಅಡಿ ಮಾತ್ರ ಅಗಲವಿರುವ ... ಈ ದಾರಿಯಲ್ಲಿ ನದಿಗಳು ಇಲ್ಲದಿರುವುದರಿಂದ ... ಕಡಮೆ ಆದರೆ ಪಶ್ಚಿಮ ಘಟ್ಟಗಳ ಎತ್ತರವಾದ ಕಣಿವೆಗಳನ್ನು ಹಾಯುವ ಕಷ್ಟವಿರುವದು ಆದರೆ ಮುಂಬಯಿಯ ... ಮತ್ತು ಬಿ ಬಿ ಎಂಡ್ ಸಿ.ಐ ರೈಲುಗಳು ಹಾಯುವ ಬೋರ್ ಘಾಟ್ ಮತ್ತು ... ಘಾಟ್ ಕಣಿವೆಗಳಿಗಿಂತ ಹೆಚ್ಚಿನ ಉಪದ್ರವ ಇಲ್ಲಿ ಇರಲಿಕ್ಕಿಲ್ಲವಂತ ನೆನಸುತ್ತೇವೆ ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚಿನ ವ್ಯಾಪಾರವು ಪೂರ್ವದಿಕ್ಕಿನ ದೇಶದ ಇಲ್ಲಿಗೆ ಆಮದು ಮತ್ತು ರಫ್ತಾಗುವ ವಸ್ತುಗಳೇ. ಇದು ಹೇಗೆಂತ ಬೇಸಿಗೆ ಕಾಲದಲ್ಲಿ ದಿನಾಲೂ ಸಾಲುಸಾಲಾಗಿ ಮಂಗಳೂರಿಗೆ ಬಂದು ಕೆಲವು ಘಂಟೆಗಳ ತನಕ ದಾರಿಯಲ್ಲಿ ಮಾಳು ತುಂಬಿರುವ ನೂರಾರು ಗಾಡಿಗಳನ್ನು ನೋಡಿ ತಿಳಿಯಬಹುದು ಈ ಗಾಡಿಗಳ ಮೂಲಕ ಘಟ್ಟದ ಮೇಲಿನ ಸೀಮೆಗಳಿಂದ ಅಸಂಖ್ಯ ಕಾಫಿ ಗೋಣಿಗಳು, ಗಂಧದ ಕಟ್ಟಿಗೆ, ವಿವಿಧ ಧಾನ್ಯಗಳು, ಸಂಬಾರ ಜಿನಸುಗಳು ಇತ್ಯಾದಿ ವಸ್ತುಗಳು ಇಲ್ಲಿಗೆ ಒಯ್ಯಲ್ಪಡುತ್ತವೆ ಮತ್ತು ಇಲ್ಲಿಂದ ಹಂಚು ಮೀನು ಇತ್ಯಾದಿ ವಸ್ತುಗಳು ಘಟ್ಟದ ಮೇಲೆಗೆ ರಫ್ತಾಗುತ್ತವೆ ಇವುಗಳು ಇಲ್ಲಿಗೆ ಮುಟ್ಟಲು 5 7 ದಿವಸಗಳು ತಡವಾಗುವದಲ್ಲದೆ ಗಾಡಿ ಒಂದಕ್ಕೆ ಬಹಳ ಬಾಡಿಗೆ ಕೊಡಬೇಕಾಗುತ್ತದೆ ರೈಲು ಬಂದ ಪಕ್ಷದಲ್ಲಿ ಇವುಗಳು ಒಂದು ದಿವಸದೊಳಗೆ ಸುಮಾರು ಹತ್ತರಷ್ಟು ಕಡಿಮೆಯಾದ ದರದಲ್ಲಿ ಇಲ್ಲಿಗೆ ತಲಪುವವು ಇದರ ದೆಸೆಯಿಂದ ವ್ಯಾಪಾರಕ್ಕೆ ಬಹಳ ಅನುಕೂಲವಾದ ವ್ಯಾಪಾರವು ಹೆಚ್ಚು ಬೆಳೆಯುವದು ಎಂಬಕ್ಕೆ ಸಂದೇಹವಿಲ್ಲ. ಇದಲ್ಲದೆ ಇತ್ತಕಡೆ ಅಕ್ಕಿ ಬಹಳ ಪ್ರಿಯವಾಗಿಹೋದದ್ದರಿಂದ ಮೂಡು ಕಡೆಯ ಅಕ್ಕಿಯನ್ನು ಇಲ್ಲಿಗೆ ಅಗ್ಗವಾಗಿಯೂ ಸುಲಭವಾಗಿಯೂ ತರಲಿಕ್ಕೆ ಮಾರ್ಗವಾಗುವದಲ್ಲದೆ ಬಡಜನರ ಆಹಾರಜಿನಸುಗಳಾಗಿರುವ ರಾಗಿ, ಗೋಧಿ, ಹುರಳಿ, ತೊಗರಿ, ಅವರೆ ಮೊದಲಾದ ಧಾನ್ಯಗಳನ್ನು ಇಲ್ಲಿಗೆ ತರಿಸಬಹುದು ಇದರ ಹೊರ್ತು ಅತ್ತಕಡೆಯಿಂದ ಸಾಧಾರಣ ಬರುತ್ತಿರುವ ಕೊತ್ತುಂಬರಿ, ಮೆಣಸು, ಮೆಂತ್ಯ, ಜೀರಿ, ಏಲಕ್ಕಿ, ಲವಂಗ, ದಾಲ್ಚಿನ್ನಿ ಮೊದಲಾದ ಸಂಬಾರ ಜಿನಸುಗಳನ್ನೂ ಅಡಿಕೆ, ಗಂಧದ ಕಟ್ಟಿಗೆ, ಕಾಸರಕನ ಬೀಜ, ಗೇರುಬೀಜ ಇತ್ಯಾದಿ ವ್ಯಾಪಾರ ಜಿನಸುಗಳನ್ನೂ ಸುಲಭವಾಗಿ ಒಯ್ಯಬಹುದು ಈ ಕಾರಣಗಳಿಂದ ಬಡಜನರ ಆಹಾರ ಸಾಮಗ್ರಿಗಳು ಸುಲಭವಾಗಿ ದೊರಕುವವಲ್ಲದೆ ಅಕ್ಕಿಯ ಕ್ರಯವೂ ತಗ್ಗುವದು ಮತ್ತು ಇದರ ದೆಸೆಯಿಂದ ಮೂಡುಕಡೆಯಲ್ಲಿ ಇದರ ಬೆಳವಣಿಗೆಯು ಧಾರಾಳವಾಗಿ ಹೆಚ್ಚಿ, ದೇಶವು ಸುಧಾರಣೆಗೆ ಬಂದು, ಸರಕಾರದ ತೀರ್ವೆಯೂ ಹೆಚ್ಚು ಬೆಳೆಯುವದು, ಮತ್ತು ಅತ್ತಕಡೆ ಸಾಗುವಳಿ ಮಾಡದೆ ಬಂಜರು ಬಿದ್ದ ಅನೇಕ ಸ್ಥಳಗಳು ಹಸನು ಮಾಡಲ್ಪಡುವವು ಈ ಪಶ್ಚಿಮ ಕರಾವಳಿಯಲ್ಲಿ ಕೆಲಸ ವಗೈರೆ ಇಲ್ಲದ ಬಡವರಾಗಿರುವ ಜನರು ಅತ್ತಕಡೆ ಹೋಗಿ, ಬಂಜರು ಭೂಮಿಗಳನ್ನು ತಮಗೆ ದರಖಾಸ್ತು ಮಾಡಿಕೊಂಡು, ವಿವಿಧ ಬೆಳೆಗಳನ್ನು ಬೆಳೆಯಿಸಿ ಸ್ಥಿತಿವಂತರಾಗಲಿಕ್ಕೆ ಮಾರ್ಗವಾಗುವದು ಈಗ ಮೂಡಣ ಕಡೆ ಇರುವ ತೋಟಗಳು ಹೆಚ್ಚು ಸುಧಾರಣೆಗೆ ಬರಲಿಕ್ಕೆ ಮಾರ್ಗವಾಗುವವಲ್ಲದೆ, ಇಲ್ಲಿಂದ ಅತ್ತಕಡೆ ಗೇಯಲಿಕ್ಕೆ ಹೋಗುವ ಆಳುಗಳಿಗೆ ಬಹಳ ಸುಲಭ ಮಾರ್ಗವಾಗುವದು ರೈಲ್ವೆಯ ಕಾಮಗಾರಿಯಿಂದಲೇ ಅನೇಕರು ಹೊಟ್ಟೆ ಹೊರಕೊಳ್ಳಲಿಕ್ಕೆ ಮಾರ್ಗವಾಗುವದು ಇನ್ನೂ ಪಶ್ಚಿಮ ಘಟ್ಟಗಳಲ್ಲಿ ವಿವಿಧ ಲೋಹಗಳು ಸಿಕ್ಕುವ ಸಂಭವವಿದೆ ಎಂಬದಾಗಿ ತಿಳಿದುಬಂದಿದೆ ಹಾಗಾದರೆ ಈ ರೈಲಿನ ದೆಸೆಯಿಂದ ಈ ವಿಶೇಷ ಕಾರ್ಯವು ಸುಲಭವಲ್ಲದೆ ಕೈಗೂಡಿಬರುವದು. ಪೂರ್ವಕಡೆ ಇರುವ ಹಳ್ಳಿಗಳು ಬೇಗ ಏಳಿಗೆಯಾಗಿ ಬೆಳೆಯುವದಲ್ಲದೆ, ನಾಗರಿಕತನ ಹೆಚ್ಚುವದು, ಅದಲ್ಲದೆ ಅತ್ತಕಡೆ ವಿದ್ಯೆ ಕಲಿತ ಜನರು ಬಹಳ ಕಡಮೆ, ರೈಲಿನ ದೆಸೆಯಿಂದ ವಿದ್ಯೆಗೆ ಅನುಕೂಲವಾಗಲೂ ಬಹುದು ಮತ್ತು ಈ ದಾರಿಯು ಮೈಸೂರು, ಬೆಂಗಳೂರು, ಮದ್ರಾಸ್, ಮುಂಬಾಯಿಯತ್ತಕಡೆ ಪ್ರಯಾಣ ಮಾಡುವವರಿಗೆ ಹತ್ತರವಾದ ಅನುಕೂಲವಾದ ದಾರಿಯಾಗಿದೆ ಇಷ್ಟು ಮತ್ತು ಇದಕ್ಕಿಂತ ಹೆಚ್ಚು ಪ್ರಯೋಜನವುಳ್ಳ ಈ ರೈಲು ಹಾಕಿಸುವದಕ್ಕೆ ಕಾಲ ಬಂತು ಎಂಬ ಮಾತು ಈ ಜಿಲ್ಲೆಯವರಿಗೂ ಮೈಸೂರು ಪ್ರಾಂತಗಳವರಿಗೂ ಮಂಗಳ ವಚನವಾಗಿರುತ್ತದೆ ಎಂಬದಕ್ಕೆ ಸಂದೇಹವಿಲ್ಲ, ಮತ್ತು ಈ ರೈಲಿಗೆ ಆಗತಕ್ಕ 30-40 ಲಕ್ಷ ರೂಪಾಯಿ ವೆಚ್ಚದಿಂದ ಏನಾದರೂ ಲಾಭ ಉಂಟಾದೀತೋ, ಅಥವಾ 1 ರೂಪಾಯಿ ಬಡ್ಡಿಯಾದರೂ ಹುಟ್ಟೀತೋ ಎಂಬ ಅನುಮಾನಕ್ಕೆ ಆಸ್ಪದವಿಲ್ಲ ಸ

ವೈಸ್‌ರಾಯಿಯವರ ಕ್ಷೇಮವನ್ನು ಬಯಸಿದ್ದು.

ತುಮಕೂರು

ದಿ ಜೆಲ್‌ಫ್ರೆಂಡ್ ಡೇ ಎಂಬ ಉತ್ಸವವು 20 ನೇ ತಾ|| ಶುಕ್ರವಾರ ಬಹು ಸಂಭ್ರಮದಿಂದ ಇಲ್ಲಿನ ಎ ವಿ ಸ್ಕೂಲಿನಲ್ಲಿ ನೆರವೇರಿತು. ಬಾಲಕರಿಗೆ ಅನೇಕ ವಿಧವಾದ ವಿನೋದಗಳೂ, ಆಟಗಳೂ ಏರ್ಪಡಿಸಲ್ಪಟ್ಟಿದ್ದವು ಪ್ರಾತಃಕಾಲ 8 ಗಂಟೆಯಿಂದ 10 ಗಂಟೆಯ ವರೆವಿಗೂ ಇವುಗಳೆಲ್ಲವೂ ಜರುಗಿದನಂತರ ಇಲ್ಲಿನ ರಿಟೈರ್ಡ್ ಅ|| ಕಮೀಷನರಾದ ಮ|| ಶೇಷಾದ್ರಿಯ್ಯಂಗಾರ್ಯರವರು ಈ ಶುಭದಿನದಲ್ಲಿ ಸಭೆ ಸೇರಿದ ಉದ್ದೇಶವನ್ನು ಕುರಿತು ಬಹು ಸ್ವಾರಸ್ಯವಾಗಿ ಭಾಷಣ ಮಾಡಿದರು ಅನಂತರ ಬಾಲಕರೆಲ್ಲರೂ ಮಾರ್ಚ್ ಮಾಡಿ ಯೂನಿಯನ್ ಜಾಕ್ ಧ್ವಜಕ್ಕೆ ಎಲ್ಲರೂ ಸೆಲ್ಯೂಟ್ ಮಾಡಿ ಇಂಗ್ಲಿಷ್ ಸಲಾಂ ಬಾಜಾವನ್ನು ಹಾಡಿದರು ಮಧ್ಯಾಹ್ನದಲ್ಲಿ ಬಾಲಕರಿಗೆಲ್ಲಾ ಮಿಠಾಯಿ, ಲಾಡು ವಗೈರೆ ತಿಂಡಿಯ ಸಾಮಾನುಗಳೂ, ಪೆನ್ಸಿಲ್, ಕ್ರೇಯನ್, ವಗೈರೆ ಬಾಲಕರಿಗೆ ಓದಲು ಅನುಕೂಲವಾದ ಸಾಮಾನುಗಳೂ ಹಂಚಲ್ಪಟ್ಟವು ಮಕ್ಕಳ ತರಗತಿಯಲ್ಲಿನ ಕೆಲವು ಕೇವಲ ಬಡಹುಡುಗರಿಗೆ ಕೋಟುಗಳು ಹೊಲಿಸಿಕೊಡಲ್ಪಟ್ಟವು ಕ್ರಿಕೆಟ್, ಫುಟ್‌ಬಾಲ್, ಕೊಕ್ಕೊ ನಾಟಿ, ಗಣಪತಿಯಾಟ ಮೊದಲಾದ ಅನೇಕ ಆಟಗಳು ನಡೆಸಲ್ಪಟ್ಟವು ಸಾಯಂಕಾಲದಲ್ಲಿ ಶ್ರೀರಾಮ ದೇವರ ದೇವಸ್ಥಾನದಲ್ಲಿ ದೇವತಾ ಪೂಜೆಯು ನೆರವೇರಿಸಲ್ಪಟ್ಟಿತು. ವೈಸ್‌ರಾಯಿ ಪ್ರಭುಗಳಿಗೂ, ಶ್ರೀಮನ್ ಮಹಾರಾಜರವರಿಗೂ ಆಯುರಾರೋಗ್ಯವನ್ನು ಜಗದೀಶ್ವರನು ದಯಪಾಲಿಸಬೇಕು ಎಲ್ಲರೂ ಪ್ರಾರ್ಥಿಸಿ ಆ ದಿವಸದ ಶುಭಕಾರ್ಯವು ಮುಕ್ತಾಯವಾಯಿತು

ಹಾಸನ

ಮೊನ್ನೆ ತಾ 20 ನೇ ಶುಕ್ರವಾರ ನಮ್ಮ ಚಕ್ರವರ್ತಿಯವರ ಪ್ರತಿನಿಧಿಗಳಾಗಿ ಈ ದೇಶವನ್ನಾಳುತ್ತಲಿರುವ ಘನತೆಯನ್ನೊಂದಿದ ಲಾರ್ಡ್ ಹಾರ್ಡಿಂಗ್ ಪ್ರಭುಗಳವರ ವರ್ಷ ವರ್ಧಂತೀ ಮಹೋತ್ಸವ ಪ್ರಯುಕ್ತ ತತ್ಪೂರ್ವ ದಿವದಲ್ಲಿಯೇ ಏರ್ಪಾಡಾಗಿದ್ದ ಮೇರೆಗೆ ಈ ಮ್ಯುನಿಸಿಪಾಲಿಟಿಯ ಗಡಿಯಲ್ಲಿರುವ ಕನ್ನಡ, ಹಿಂದೂಸ್ತಾನಿ, ಇಂಗ್ಲೀಷ್ ಪಾಠಶಾಲೆಗಳ ವಿದ್ಯಾರ್ಥಿ ಬಾಲಕಬಾಲಿಕೆಯರಿಗೂ ಪಂಚಮರ ಸ್ಕೂಲಿಗೆ ಸಹ ಪ್ರಾತಃಕಾಲ ಆಯಾ ಶಾಲೆಗಳಲ್ಲಿಯೇ ಮಾವಿನಹಣ್ಣು ಬಾಳೇಹಣ್ಣು ಲಾಡುಗಳನ್ನು ವಿನಿಯೋಗಿಸಿ ಸಂತೋಷಪಡಿಸಿ, ನಮ್ಮ ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್ ಪ್ರಭುಗಳಿಗೆ ಕ್ರೂರಿಯೂ, ನೀಚನೂ, ಕೊಲೆಪಾತಕನೂ ಆದ ಕ್ರೂರಾತ್ಮನು ಉಂಟುಮಾಡಿದ್ದ ಅಪಾಯವನ್ನು ಪರಮ ಕೃಪಾಸಿಂಧುವಾದ ಭಗವಂತನು ಈ ದೇಶೀಯರ ಹಿತಾರ್ಥವಾಗಿ ತಪ್ಪಿಸಿ ಸಂರಕ್ಷಿಸುವದಕ್ಕೋಸ್ಕರವೂ, ಅಂತಹ ಆಪತ್ತಿನಲ್ಲಿಯೂ ಅಧಿಕವಾದ ಸ್ಥೈರ್ಯ ಧೈರ್ಯಗಳನ್ನು ಅವಲಂಬಿಸಿ ಉಚಿತ ಕಾರ್ಯಗಳನ್ನು ನೆರವೇರಿಸುತ್ತಾ ಬಂದು, ಈ ದೇಶೀಯರಾದ ಸಮಸ್ತರಿಂದಲೂ ಬಹುಮಾನಿತರಾಗಿ ಕೊಂಡಾಡಲ್ಪಡುತ್ತಿರುವ ನಮ್ಮ ಲಾರ್ಡ್ ಹಾರ್ಡಿಂಗ್‌ರವರ ಕೀರ್ತಿಪ್ರಶಂಸೆಗೋಸ್ಕರವೂ ತತ್ಕಾಲೋಚಿತವಾದ ಉಪನ್ಯಾಸಗಳು ಆಯಾ ಶಾಲೆಯ ಮುಖ್ಯೋಪಾಧ್ಯಾಯರಿಂದ ನಡಿಸಲ್ಪಟ್ಟವು ಮಧ್ಯಾಹ್ನದ ಮೇಲೆ ಎಲ್ಲಾ ಪಾಠಶಾಲೆಗಳ ಬಾಲಿಕಾಬಾಲಕರೂ, ಉಪಾಧ್ಯಾಯರುಗಳೂ, ಅಧಿಕಾರಿಗಳೂ, ಪುರವಾಸಿಗಳೂ ಇಲ್ಲಿನ ಪ್ರಖ್ಯಾತವಾದ ಜೂಬಿಲೀ ಹಾಲ್ ಮೈದಾನದಲ್ಲಿ ಸೇರಿ, ವಿದ್ಯಾರ್ಥಿಗಳಿಂದ ನಾನಾಕರದ ಆಟಪಾಟಗಳನ್ನು ಆಡಿಸಿ, ಗೆದ್ದವರಿಗೆ ಬಹುಮಾನಗಳನ್ನು ಕೊಟ್ಟರು ಕಡೆಯಲ್ಲಿ

ನಮ್ಮನ್ನಾಳುತ್ತಲಿರುವ ಚಕ್ರವರ್ತಿಯವರಿಗೂ ಅವರ ಪ್ರತಿನಿಧಿಗಳಾದ ಲಾರ್ಡ್ ಹಾರ್ಡಿಂಗ್ ಪ್ರಭು ದಂಪತಿಗಳಿಗೂ, ನಮ್ಮ ಶ್ರೀಮನ್ ಮಹಾರಾಜರವರಿಗೂ ಶ್ರೇಯಃಪ್ರಾರ್ಥನೆಗಳು ನಡೆದವು ಕಡೆಯಲ್ಲಿ ಜಯಧ್ವನಿ, ಹರ್ಷಧ್ವನಿಗಳೊಡನೆ ಆ ಸಭೆಯು ಮುಕ್ತಾಯವಾಯಿತು

ಮಂಡ್ಯ

ಕಳೆದ ೨೦ನೇ ತಾ ಶುಕ್ರವಾರ ಬೆಳಿಗ್ಗೆ ಶಾಲಾವಿದ್ಯಾರ್ಥಿಗಳು ಬಹಳ ಉತ್ಸಾಹದಿಂದಲೂ, ಸಂಭ್ರಮದಿಂದಲೂ ಕೂಡಿದವರಾಗಿ ಶಾಲಾ ಕಟ್ಟಡವನ್ನು ತೋರಣ ಕದಳೀಸ್ತಂಭ ಬಾವುಟಗಳಿಂದ ಅಲಂಕರಿಸಿ ಒಳಗಡೆ ನಮ್ಮ ಶ್ರೀಮನ್ ಚಕ್ರವರ್ತಿ ಸಾರ್ವಭೌಮ ದಂಪತಿಗಳ ಭಾವಚಿತ್ರವನ್ನು ಮತ್ತು ಮೈಸೂರು ದೇಶದ ಶ್ರೀಮನ್ ಮಹಾರಾಜರವರ ಭಾವಚಿತ್ರವನ್ನೂ ಇಟ್ಟು ಪುಷ್ಪಾದಿಗಳಿಂದ ಅಲಂಕರಿಸಿದರು ಅನಂತರ ಉಪಾಧ್ಯಾಯರುಗಳನ್ನೂ ವಿದ್ಯಾರ್ಥಿನಿಯರನ್ನೂ ಬರಮಾಡಿಕೊಂಡು ಸಂತೋಷ ಕೂಟವನ್ನು ಆರಂಭಿಸಿ, ಕೆಲವು ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿಯರು ದೇವರ ಸ್ತೋತ್ರವನ್ನು ಮಾಡಿದರು ಹೆಡ್ ಮಾಸ್ಟರವರು ಅಗ್ರಾಸನವನ್ನು ವಹಿಸಿದರು ವಿದ್ಯಾರ್ಥಿನಿಯರು ಅನುಕೂಲ ಗೀತಗಳನ್ನು ಹೇಳಿಕೊಂಡು ಬಹು ಸ್ವಾರಸ್ಯವಾಗಿ ಆಟವಾಡಿ ತೋರಿಸಿದರು ಅನಂತರ ಅಗ್ರಾಸನಾಧಿಪರು ಈಗ ನಮ್ಮ ಇಂಡಿಯಾ ದೇಶದ ವೈಸರಾಯ್‌ರವರಾದ ಲಾರ್ಡ್ ಹಾರ್ಡಿಂಗ್ ಪ್ರಭುಗಳು ತಮ್ಮ ಜನ್ಮದಿನವಾದ ಆ ದಿನಕ್ಕೆ ಮಕ್ಕಳ ದಿನವೆಂಬ ಹೆಸರನ್ನಿಟ್ಟು, ಇಂಡಿಯಾ ದೇಶದ ಎಲ್ಲಾ ಬ್ರಿಟಿಷ್ ಮತ್ತು ದೇಶೀಯ ಸಂಸ್ಥಾನಗಳ ಪಾಠಶಾಲೆಗಳ ಬಾಲಕಬಾಲಕಿಯರುಗಳಿಗೆ ಆಟಪಾಟಗಳನ್ನು ಕಲ್ಪಿಸಿ ಮಿಠಾಯಿ ವಗೈರೆ ತಿಂಡಿಯನ್ನು ಹಂಚಿ ಸಂತೋಷಪಡಿಸುವುದಕ್ಕೆ ಬೇಕಾದ ಅನುಕೂಲಗಳನ್ನು ಮಾಡಿಸಿ ಕೊಟ್ಟಿದ್ದ ಉದ್ದೇಶವನ್ನು ಎಲ್ಲರಿಗೂ ವಿಶದಪಡಿಸಿ, ಆ ಮೂಲಕವಾಗಿ ಬಾಲಕಬಾಲಕಿಯರಿಗೆ ರಾಜಭಕ್ತಿ ಎಂಬುವದು ಮನಸ್ಸಿಗೆ ಚೆನ್ನಾಗಿ ನಾಟುವಂತೆ ತಿಳಿಯಪಡಿಸಿದರು ಅನಂತರ ಬಾಲಕಬಾಲಕಿಯರು ಮಂಗಳವನ್ನು ಹಾಡಿದರು ತರುವಾಯ ಸಭಿಕರಿಗೆ ಪುಷ್ಪ ತಾಂಬೂಲಾದಿಗಳೂ, ಮಕ್ಕಳಿಗೆ ಸಕ್ಕರೆ ಹಣ್ಣುಗಳೂ ಹಂಚಲ್ಪಟ್ಟವು ಆಗ ಎಲ್ಲರೂ ಸೇರಿ ನಮ್ಮ ಶ್ರೀಮನ್ ಚಕ್ರವರ್ತಿ ಸಾರ್ವಭೌಮರಿಗೂ, ಶ್ರೀಮನ್ ವೈಸರಾಯ್ ಪ್ರಭುಗಳಿಗೂ ಮತ್ತು ನಮ್ಮ ಶ್ರೀಮನ್ ಮಹಾರಾಜರವರಿಗೂ ಆಯುರಾರೋಗ್ಯಾದಿಗಳನ್ನು ಬಯಸಿ ಶ್ರೇಯಃಪ್ರಾರ್ಥನೆ ಮಾಡುತ್ತಾ ತಮಗೆ ಇಂಗ್ಲಿಷು, ಕನ್ನಡ ವಿದ್ಯಾಭ್ಯಾಸಕ್ಕೆ ಸಾಕಾದಷ್ಟು ಅನುಕೂಲ ಮಾಡಿಕೊಟ್ಟಿರುವ ಮಿಷನ್ ಸಂಘದವರ ಉದಾರವಾದ ಗುಣವನ್ನು ಹೊಗಳುತ್ತಾ ತೆರಳಿದರು

ಬಾತ್ಮೀದಾರರಿಗೆ ನೋಟೀಸ್

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಹಿತಚಿಂತಕ ಹಾರನಹಳ್ಳಿ ಲಿಂಗಪ್ಪ, ನಾಗನಪ್ಪ ಈ ವರ್ತಮಾನಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ

ಹಟ ಕಾಪಪ್ಪ, ಅಣ್ಣಿಹಾಳು ಈ ಬಾತ್ಮಿಯನ್ನು ಪ್ರಕಟಿಸೋಣದರಲ್ಲಿ ಫಲವೇನೂ ಆದೀತೆಂದು ಕಾಣುವುದಿಲ್ಲ

ಪ್ರಜಾಹಿತಚಿಂತಕ, ಬೆಂಗಳೂರು — ಪ್ರಜೆಗಳ ಮುಖಂಡರು ಸೇರಿ ಸಂಸ್ಥಾನದ ಸೀನಿಯರ್ ಸರ್ಜನ್‌ರವರಿಗೆ ಅರ್ಜಿ ಬರೆದುಕೊಳ್ಳಬೇಕು ಇದಲ್ಲದೆ ಆ ಪ್ರಾಂತ್ಯದ ಮೆಂಬರುಗಳು ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್‌ರವರಿಗೆ ಅರಿಕೆಮಾಡಿಕೊಂಡು ಪ್ರಜೆಗಳ ಕಷ್ಟ ಅನನುಕೂಲಗಳನ್ನು ತಿಳಿಸಿಕೊಂಡಲ್ಲಿ ಇಷ್ಟಾರ್ಥವು ನೆರವೇರುವುದೆಂದು ನಂಬುತ್ತೇವೆ.

ಶ್ರೀಮನ್ ಮಹಾರಾಜರವರ ವರ್ಧಂತಿ ಉತ್ಸವವನ್ನು ಬಹು ಉತ್ಸಾಹದಿಂದ ನೆರವೇರಿಸಿರುವಂತೆ ಮುಂದೆ ಹೇಳುವ ಸ್ಥಳಗಳಿಂದ ನಮಗೆ ಬಾತ್ಮಿಗಳು ತಲುಪಿರುತ್ತವೆ ರಾಂಪುರ, ಬಿಳಿಕೆರೆ, ಕಾಕೋಳು, ಬೆಂಗಳೂರು

ಕರೆಸ್ಪಾಂಡೆನ್ಸ್

ಕಂಪೌಂಡರ ಸಂಬಳವು

ಅಯ್ಯಾ,

ಧರ್ಮಪ್ರಭುಗಳಾದ ಮೈಸೂರು ಸರ್ಕಾರದ ಸೀನಿಯರ್ ಸರ್ಜನ್ ಡಾಕ್ಟರ್ ಪಿ ಎಸ್ ಅಚ್ಯುತರಾಯರು ಬಾಳ್ತಿ ಇಸವಿ ಸೆಪ್ಟೆಂಬರ್ ಮಾಹೆಯಲ್ಲಿ ತಮ್ಮ ಉದ್ಯೋಗದಿಂದ ವಿಶ್ರಾಂತಿಹೊಂದುವವರಾಗಿರುವುದರಿಂದ ತಮ್ಮ ಇಲಾಖಾ ಬಡ ನೌಕರರಾದಂಥಾ ಕಾಂಪೌಂಡರುಗಳಿಗೆ ಹಾಲಿ ಇರತಕ್ಕ ಸ್ಕೇಲ್ ಸಂಬಳಗಳನ್ನು ಬದಲಾಯಿಸಿ ಪ್ರಾಗ್ಗಿಮಂ ಇಪ್ಪತ್ತು ರೂಪಾಯಿಗಳ ಮಟ್ಟಿಗಾದರೂ ರಿವೈಜ್ ಮಾಡಿ ಕ್ಷಿಪ್ರದಲ್ಲಿಯೇ ಜಾರಿಗೆ ಬರುವಂತೆ ಮಾಡಿಸಿ ಕೀರ್ತಿಪಾತ್ರರಾಗಬೇಕಾಗಿ ಬೇಡುವ

ಒಬ್ಬ ಉಪಕಾರಿ

ಗಾಡಿಗಳನ್ನು ಬಿಟ್ಟಿ ಹಿಡಿಯುವುದು

ಅಯ್ಯಾ,

ತಮ್ಮ ತಾ ೧ನೇ ಪತ್ರಿಕೆಯ ಚಿತ್ರದುರ್ಗದ ಬಾತ್ಮಿಯಲ್ಲಿ ಆದವರೂ ಅವರು ಹಣ ತೆಗೆದುಕೊಂಡು ತಮ್ಮ ಗ್ರಾಮಗಳಿಗೆ ಹೋಗತಕ್ಕ ಕಾಲದಲ್ಲಿ ಸರ್ಕಾರದ ನೌಕರರು ಅವರ ಗಾಡಿಗಳನ್ನು ಹಿಡಿದು ತೊಂದರೆ ಪಡಿಸತಕ್ಕದ್ದು ಮಾತ್ರ ಅವರಿಗೆ ತಪ್ಪಲಿಲ್ಲ ಎಂದು ಬರೆದಿರತಕ್ಕದ್ದನ್ನು ಓದಿದೆನು ಇದು ನಿಜವಾದ ಮಾತೇ ಸರಿ ಒಂದು ದಫಾ ನಾನು ಚಿತ್ರದುರ್ಗಕ್ಕೆ ಹೋದಾಗ ನನ್ನ ಗಾಡಿಯನ್ನು ಬಿಟ್ಟಿ ಹಿಡಿಯಬೇಕಾಗಿದೆ ಎಂದು ಅಡ್ಡಗಟ್ಟಿ ತೊಂದರೆಪಡಿಸಿದ್ದರಿಂದ ಗಾಡಿ ಅಡ್ಡಕಟ್ಟಿದ ನೌಕರನಿಗೆ ಎಂಟು ಆಣೆ ಕೊಟ್ಟು ಬಂಡಿ ಬಿಡಿಸಿಕೊಂಡು ಬಂದೆನು ಈ ಪ್ರಕಾರ ರೈತರಿಗೆ ಉಂಟಾಗುವ ತೊಂದರೆಯನ್ನು ರೈತ ಪಕ್ಷದ ಅಧಿಕಾರಿಗಳು ವಿಚಾರಣೆ ಮಾಡಬೇಕು ಎಂದು ನಂಬಿದ್ದೇನೆ

ಪ್ರತ್ಯಕ್ಷ ಅನುಭವಿ

ಉಪಾಧ್ಯಾಯರ ಸಂಬಳವು

ಅಯ್ಯಾ,

ವಿದ್ಯಾಭಿಮಾನಿಗಳಾದ ವಾಚಕಮಹಾಶಯರೇ ಕಳೆದ ೯ನೇ ತಾ ವೃತ್ತಾಂತ ಪತ್ರಿಕೆಯಲ್ಲಿ ವಿದ್ಯಾಬ್ಯಾಸದ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ತಮ್ಮ ಇಲಾಖೆಯಲ್ಲಿ ನಡೆಯಬೇಕಾದ ಏರ್ಪಾಡುಗಳನ್ನು ಪರ್ಯಾಲೋಚನೆಯಿಂದ ಆರು ಐದಾಗಿ ವಿಂಗಡಿಸಿ ಗೌರ್ನಮೆಂಟಿಗೆ ಸಲಹೆ ಕೊಟ್ಟಿದ್ದರಂತಲೂ ಆ ಪೈಕಿ ಐದು ವಿಷಯಗಳನ್ನು ಮಾತ್ರ ಗೌರ್ನಮೆಂಟಿನವರು ಅನುಮೋದಿಸಿ ಇಲಾಖೆಯಲ್ಲಿ ಹಾಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳ ವೇತನ ವಿಚಾರ ಮಾತ್ರ ಮಂಜೂರ್ ಮಾಡಲಿಲ್ಲವೆಂದೂ ಪ್ರಕಟವಾಗಿರುತ್ತೆ ಈ ವಿಷಯವನ್ನು ನೋಡಿದರೆ ಉಪಾಧ್ಯಾಯರಿಗೆ ಉಂಟಾಗಿರುವ ಸಂತೋಷವನ್ನೂ ಮತ್ತು ಅವರು ಎಷ್ಟರಮಟ್ಟಿಗೆ ಉತ್ಸಾಹದಿಂದ ಕೆಲಸ ಮಾಡುತ್ತಾರೆಂಬುವದನ್ನೂ ವಾಚಕಮಹಾಶಯರೇ ಊಹಿಸಿಕೊಳ್ಳಬಹುದು

ಈ ಇಲಾಖೆ ಒಂದರಲ್ಲಿ ವಿನಾ ಉಳಿದ ಎಲ್ಲಾ ಇಲಾಖೆಗಳಲ್ಲಿ ನೌಕರರಿಗೆ ಕೊನೇಪಕ್ಷ ಮೂರು ನಾಲ್ಕು ವರ್ಷಕ್ಕೊಂದಾವರ್ತಿಯಾದರೂ ವೇತನ ಬದಲಾವಣೆಯಾಗೋಣದರಿಂದ ಅಲ್ಲಿನ ನೌಕರರೆಲ್ಲಾ ಉತ್ಸಾಹಪೂರಿತರಾಗಿ ಕೆಲಸ ಮಾಡುತ್ತಿರುತ್ತಾರೆ ಈ ಇಲಾಖೆಯಲ್ಲಾದರೋ ಹತ್ತುಹದಿನೈದು ವರ್ಷ ಸರ್ವೀಸ್ ಆದರೂ ಕೂಡಾ ವೇತನ ಬದಲಾವಣೆ ಇಲ್ಲದೆಹೋದರೆ ಇಲಾಖಾ ನೌಕರರಿಗೆ ಕೆಲಸ ಮಾಡುವದರಲ್ಲಿ ಎಷ್ಟರಮಟ್ಟಿನ ಉತ್ಸಾಹವಿರಬಹುದು ? ಹೀಗೆ ಯಾವದೊಂದೂ ಆಶೆ ಇಲ್ಲದೆ ಕೆಲಸ ಮಾಡುತ್ತಿರಬೇಕೆಂದು ಗೌರ್ನಮೆಂಟಿನವರು ಹೇಳುವದನ್ನು ನೋಡಿದರೆ " ಕೊಡುವದು ಒಂದು ಕಾಸು, ಕೋಣೆ ತುಂಬಾ ಹಾಸು " ಎಂಬ ನಾಣ್ಣುಡಿಗನುಸಾರವಾಗಿರುತ್ತೆಂದು ತೋರುತ್ತೆ ಮತ್ತು ಮನಃಪೂರ್ತಿ ಕೆಲಸ ಮಾಡತಕ್ಕವರಿಗೆ ಪ್ರೋತ್ಸಾಹವೂ, ಉದಾಸೀನಭಾವದಲ್ಲಿರತಕ್ಕವರಿಗೆ ಶಿಕ್ಷೆಯೂ ಇಲ್ಲದಂತಾಗಿದೆ

ಯೋಗ್ಯತಾ ವಿಚಾರದಲ್ಲಾದರೋ ಇಂಗ್ಲಿಷಿನಲ್ಲಿ ಬಿ.ಎ ಪರೀಕ್ಷೆಯಲ್ಲಿ ಒಂದೆರಡು ಭಾಗ ತೇರ್ಗಡೆಯಾಗಿರತಕ್ಕವರೂ, ಪೂರ್ವದ ಎಫ್ ಎ ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕವರೂ, ಮೆಟ್ರಿಕ್ಯುಲೇಷನ್ ಆಗಿರತಕ್ಕವರೂ ಎಲ್ಲರೂ ಒಂದೇ ಸಮನಾಗಿರುತ್ತಾರೆಯೇ ಹೊರತು ವೇತನ ವ್ಯತ್ಯಾಸವೇನೂ ತೋರುವುದಿಲ್ಲ ಕನ್ನಡದಲ್ಲಿಯಾದರೋ ಹೇಳಲೇ ಕೆಲಸವಿಲ್ಲ ಪಂಡಿತ ಪರೀಕ್ಷೆಯಾಗಿರತಕ್ಕವರೂ, ಅಪ್ಪರ್ ಸೆಕೆಂಡರಿ ಟ್ರೈನಿಂಗ್ ಆಗಿರತಕ್ಕವರೂ, ಲೋಯರ್ ಸೆಕೆಂಡರಿ ಟ್ರೈನಿಂಗ್ ಆಗಿರತಕ್ಕವರೂ, ಸರ್ವೀಸ್‌ದಾರರೂ, ಈಗ ಹೊಸದಾಗಿ ಸರ್ವೀಸಿಗೆ ಸೇರತಕ್ಕವರೂ ಎಲ್ಲರೂ ಒಂದೇ ದರ್ಜೆಯಲ್ಲಿರುತ್ತಾರೆ ಆದ್ದರಿಂದ ಉಪಾಧ್ಯಾಯರನ್ನು ನಾರ್ಮಲ್ ಸ್ಕೂಲಿಗೆ ಬಲಾತ್ಕಾರವಾಗಿ ಓದಲು ಕಳುಹಿಸುವದನ್ನು ನೋಡಿದರೆ ಗೌರ್ನಮೆಂಟಿಗೆ ದ್ರವ್ಯ ವ್ಯಯವಾಗುವುದು ಒಂದೇ ಫಲವಾಗುತ್ತದೆಯೇ ಹೊರತು ಇಲಾಖೆಗೆ ವಿದ್ಯಾಭಿವೃದ್ಧಿಯ ಫಲ ಲೇಶವೂ ಕಾಣಬರುವದಿಲ್ಲ ಯಾತಕ್ಕೆಂದರೆ ಉಪಾಧ್ಯಾಯರಿಗೆ ಅವರವರ ಯೋಗ್ಯತೆ ಮತ್ತು ಸರ್ವೀಸಿಗನುಸಾರ ಅನುವಾತ್ರವೂ ವ್ಯತ್ಯಾಸವನ್ನು ತೋರಿಸದೆ ಹೋದರೆ ಯೋಗ್ಯರಾದ ಉಪಾಧ್ಯಾಯರು ಹೇಗೆ ದೊರೆತಾರು ? ಮತ್ತು ಎಷ್ಟು ಉತ್ಸಾಹದಿಂದ ಕೆಲಸ ಮಾಡಿಯಾರು ? ಹಾಗೆ ಯೋಗ್ಯರಾದ ಉಪಾಧ್ಯಾಯರು ದೊರಕದಿದ್ದರೆ ವಿದ್ಯಾಭಿವೃದ್ಧಿಯು ಹೇಗೆತಾನೇ ಆದೀತು ? ತಾನೇ ಯೋಚಿಸಬಹುದು

ಈಗ ಇಲಾಖೆಯಲ್ಲಿ ಹಾಲಿ ಇರತಕ್ಕ ಬೋಧಕರಿಗೆ ಹತ್ತುಹನ್ನೆರಡು ವರ್ಷದಿಂದಲೂ ಯಾವದೊಂದು ಆಶೆಯೂ ಇಲ್ಲದೆ ಅತೃಪ್ತಿ ಎಂಬುದು ನೆಲೆಗೊಂಡಿರತಕ್ಕ ಕಾಲದಲ್ಲಿ ಹಳೆ ಸ್ಕೇಲಿನ ಏರ್ಪಾಡಿನಿಂದ ಏನು ಪ್ರಯೋಜನವಾದೀತು ? ಜೀವನಕ್ಕೆ ಬೇರೆ ಯಾವ ಅನುಕೂಲವೂ ಇಲ್ಲದೆ ಈ ಇಲಾಖೆಯಲ್ಲಿ ಸೇರಿಕೊಂಡಿರುವದೇ ತಪ್ಪೇ ? ಈ ಇಲಾಖೆಯಲ್ಲಿ ಓದಿ ಬೇರೆ ಇಲಾಖೆಯಲ್ಲಿ ಜಾಕಾಲದಲ್ಲಿ ಕೆಲಸಕ್ಕೆ ಸೇರತಕ್ಕವರ ತಾರತಮ್ಯವನ್ನು ಹತ್ತು ವರ್ಷಗಳೊಳಗಾಗಿ ಪ್ರತ್ಯಕ್ಷವಾಗಿ ನೋಡಬಹುದು ಬೇರೆ ಇಲಾಖೆಯಲ್ಲಿ ಇದು ಕಾಲದೊಳಗೆ ಪ್ರಾರಂಭ ವೇತನ ದ್ವಿಗುಣವನ್ನಾದರೂ ಹೊಂದುತ್ತಿದ್ದಾರೆ ಈ ಇಲಾಖೆಯಲ್ಲಾದರೋ ಗುರುವೇತನವಷ್ಟೇ ಅನೇಕರು ಸಂಕಟಪಡುತ್ತಿರುತ್ತಾರೆ ಈ ಸಭೆಗಳ ಪುರದ ಕಷ್ಟವನ್ನು ಎಷ್ಟೆಂದು ಹೇಳೋಣ ? ಬೇರೆ ಇಲಾಖೆ ಜವಾನರು ೯-೧೦ ರೂಪಾಯಿ ವೇತನ ಪಡೆಯುವಾಗ್ಗೆ ಈ ಇಲಾಖೆಯವರು ೯ ರೂಪಾಯಿ ನಷ್ಟೇ ಪಡೆಯುತ್ತಿದ್ದಾರೆ ಈ ವಿಚಾರವಲ್ಲಾ ಘನಹೊಂದಿದ ನಮ್ಮ ಶ್ರೀಮನ್ ಮಹಾರಾಜರವರ ದಿವ್ಯದೃಷ್ಟಿ ಪಥಕ್ಕೆ ಗೋಚರವಾದರೆ ಈ ಇಲಾಖೆಯ ದೌರ್ಭಾಗ್ಯವು ತೊಲಗೀತು ಎಂಬುವದರಲ್ಲಿ ಸ್ಪಂದೇಹ ಈಗಿರತಕ್ಕ ಬೋಧಕರಿಗೆ ವೇತನ ಬದಲಾವಣೆ ಅವಶ್ಯಕವಿಲ್ಲವೆಂದು ಯಾವ ಮಹಾತ್ಮರು ಸೂಚಿಸಿದರೋ ಅವರಿಗೆ ತುಂಬಾ ವಂದನೆಯನ್ನು ಮಾಡಬೇಕಾಗಿದೆ

ವಿದ್ಯಾಭಿಮಾನಿ

ತಾಲ್ಲೋಕು ವರ್ತಮಾನಗಳು.

ಕಡೂರು — ಈಗ ೯-10 ದಿವಸದಿಂದ ಮಳೆ ಇಲ್ಲ ಎಳ್ಳಿನ ಪೈರು ಒಣಗುತ್ತಾ ಇದೆ ಒಂದು ಹದ ಮಳೆ ಬಂದರೆ ಉತ್ತಮ ಅಕ್ಕಿ ೬ ಸೇರೂ, ರಾಗಿ 10 ಸೇರೂ ಮಾರುತ್ತೆ ಈಗ ಒಂದು ತಿಂಗಳಿಂದಲೂ ಪೇಟೆ ವಾಸಸ್ಥರು ನೀರಿಗೋಸ್ಕರ ಪಡುತ್ತಿರುವ ತೊಂದರೆಯನ್ನು ನಮ್ಮ ಅಮಲ್ದಾರರವರು ಚಿತ್ತಕ್ಕೆ ತಂದು ಪೇಟೆ ಹೊಂದಿಕೊಂಡು, ಹಳೇಪೇಟೆ ಹತ್ತಿರ ಇರುವ ಕಟ್ಟೆಗಳ ಅವರ ನೀರು ಬಿಡಿಸಿರುತ್ತಾರೆ ತುಂಬಾ ನೀರು ಬಿಡಿಸಿದರೆ ಉತ್ತಮ ಹಳೇಪೇಟೆ ಕಟ್ಟೆಯಲ್ಲಿ ಜನಗಳು ನಾನಾ ವಿಧದಿಂದ ನೀರನ್ನು ಕೆಡಿಸುತ್ತಾರೆ ಮುಸಾಫರಖಾನೆ ಧರ್ಮದ ಬಾವಿಯನ್ನು ಕಾವಲು ನೋಡಿಕೊಳ್ಳುವಂತೆ ಅಮಲ್ದಾರರವರು ಅಪ್ಪಣೆ ಮಾಡಿದರೆ ಉತ್ತಮ ಮುನಿಸಿಪಲ್ ಲಾಂದ್ರಗಳನ್ನು ಸರಿಯಾಗಿ ಹಚ್ಚುವದಿಲ್ಲ ಹಿಂದೆ ಕೊಡುತ್ತಿದ್ದ ಹಣಕ್ಕಿಂತಲೂ ಹೆಚ್ಚಾಗಿ ಕೊಟ್ಟಿರುತ್ತಾರೆ ಸಂತೆ ತೋಪಿನಲ್ಲಿ ಒಂದು ಕಂಭ ಹಾಕಿಬಿಟ್ಟು ೭ ತಿಂಗಳಾಯಿತು ಅದು ತ್ಯೆ ನೋಡಿನ ಪಕ್ಕದಲ್ಲಿದೆ ಇದನ್ನು ಯಾರೂ ವಿಚಾರಿಸಲಿಲ್ಲ ದೀಪವನ್ನು ರಾತ್ರಿ ೯ ಘಂಟೆಗೆ ಹಚ್ಚುತ್ತಾರೆ ಇದನ್ನೆಲ್ಲಾ ನಮ್ಮ ಅಮಲ್ದಾರರವರು ಗಮನಕ್ಕೆ ತಂದು ತಕ್ಕ ಬಂದೋಬಸ್ತು ಮಾಡಬೇಕು — ಇಲ್ಲಿಯ ಸ್ಕೂಲ್ ದಿನೇ ದಿನೇ ಹೀನಸ್ಥಿತಿಗೆ ಬರುತ್ತಾ ಇದೆ ಅದರ ಒಳ ಆಡಳಿತವನ್ನು ಮೇಲ್ಪಟ್ಟವರು ಕ್ರಮಪಡಿಸುವದು ಅವಶ್ಯಕವಾಗಿದೆ

ಹರಿಹರ ತಾ ಮಲೆಬೆನ್ನೂರು — ಈ ಗ್ರಾಮದಲ್ಲಿ ೭ ೮ ವಾರಗಳಿಂದ ಮಳೆಯೇ ಇಲ್ಲ ರೈತರೆಲ್ಲರೂ ಮಳೆ ಬೇಕೆಂದು ಹಾರೈಸುತ್ತಾರೆ ಹತ್ತಿ, ಎಳ್ಳು ಬಿತ್ತಿರುತ್ತಾರೆ ಮಳೆ ಇಲ್ಲದಿದ್ದರಿಂದ ಮಿಡತೆಗಳು ತಿನ್ನುತ್ತವೆ ದಿನೇ ದಿನೇ ಧಾರಣೆಗಳು ಹೆಚ್ಚುತ್ತವೆ ಅಕ್ಕಿ ರೂಪಾಯಿಗೆ ೬ ೬1 ಸೇರು, ರಾಗಿ 15 ೧೬ ಸೇರು ಈ ರೀತಿ ಇದೆ ಬಡಬಗ್ಗರು ಜೀವನ ಮಾಡುವುದೇ ದುರ್ಲಭವಾಗಿದೆ — ಈ ಊರಲ್ಲಿ ಮುನಿಸಿಪಲ್ ರಸ್ತೆಯು ಚರಂಡಿಯು ಒಂದು ಭಾಗ ಕಲ್ಲುಕಟ್ಟಿದ, ಇನ್ನೊಂದು ಭಾಗ ಹಾಗೆಯೇ ಈಗ 7-8 ವರ್ಷದಿಂದ ಇರುತ್ತೆ ಈ ಊರು ಮುಂಭಾಗದಲ್ಲಿರುವ ಹೊಂಡದಲ್ಲಿ ಸುಮಾರು 6-7 ವರ್ಷದ ಕಾಗಾಯಿತು ಮಣ್ಣು ಕಲ್ಲು ತೆಗೆಸಿರುವುದಿಲ್ಲ ಸರ್ಕಾರದವರು ಮೇಲ್ಕಂಡ ಎರಡು ವಿಷಯಗಳನ್ನು ಮುತುವರ್ಜಿ ವಹಿಸಿ ಮಾಡಿಸುತ್ತಾರೆಂದು ನಂಬಿಕೊಂಡಿದ್ದೇವೆ — ನಮ್ಮ ಮಹಾರಾಜರವರ ಹುಟ್ಟಿದ ದಿವಸದ ಉತ್ಸವಾದಿಗಳನ್ನು ಬಹಳ ವಿಜೃಂಭಣೆಯಿಂದ ನಡಿಸಿದರು ಮಕ್ಕಳಿಗೆ ತಿಂಡಿ ಹಂಚಿದರು — ಮೊನ್ನೆ ಮಂಗಳವಾರ ಮಧ್ಯಾಹ್ನ ೨ ಗಂಟೆ ಹೊತ್ತಿನಲ್ಲಿ ಅಕಸ್ಮಾತ್ತಾಗಿ ಬೆಂಕಿ ಬಿದ್ದು ಸುಮಾರು 40-50 ಮನೆಗಳು ಸುಟ್ಟು ಹೋದವು ಬಡಬಗ್ಗರಂತೂ ನಿಲ್ಲಲಿಕ್ಕೆ ನೆರಳಿಲ್ಲದೆ ಬಹಳ ಕಷ್ಟಪಡುತ್ತಾರೆ ಸುಮಾರು 10 12 ಸಾವಿರ ರೂಪಾಯಿ ನಷ್ಟವಾಗಿದೆ. ಆ ಜನಗಳ ಗೋಳು ಹೇಳತೀರದು

ಹಾಸನ — ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರಾದ ಮ|| ಶ್ರೀನಿವಾಸಮೂರ್ತಿಯವರು ರಜಾ ಮೇಲೆ ಇರುವುದರಿಂದ ಅವರ ಕೆಲಸವನ್ನೂ, ಈ ಡಿಸ್ಟ್ರಿಕ್ಟ್ ಜನರಲ್ ಅ|| ಕಮಿಷನರ್ ಮ|| ಎಸ್ ಎನ್ ಅಪ್ಪಣ್ಣಯ್ಯಂಗಾರ್ರವರೇ ವಹಿಸಿ ನಡಿಸುತ್ತಲಿರುವರು ಇವರ ವಿಚಾರಣೆಯಲ್ಲಿ ಪಟ್ಟಣದ ಎಲ್ಲಾ ಪ್ರಾಂತ್ಯವೂ ಶುಚಿಯಾಗಿಯೂ ಆಗುತ್ತಲೂ ಇದೆ — ಈ ಸ್ಥಳ ನಿವಾಸಿಗಳಿಗೆ ಕುಡಿಯುವ ನೀರಿನ ಮುಖ್ಯಾಶ್ರಯವಾದ ದೇವೀಕೆರೆಯಲ್ಲಿ ಪಹರೆ ಮಾತ್ರ ಕೆಲವು ಕಾಲದಿಂದ ಸರಿಯಾಗಿಲ್ಲವೆಂದು ಹೇಳಬೇಕಾಗಿದೆ ಕಳೆದ ಮಂಗಳವಾರ ಒಬ್ಬ ಮಹಮ್ಮದೀಯ ಯುವಕನು ಈ ಕೆರೆಯಲ್ಲಿ ಬಿದ್ದು ಸತ್ತುಹೋದನು ಆ ಶವವು ತೇಲಿ ಬಂದ ಮೇಲೆ ಮಾತ್ರ ಎಲ್ಲರಿಗೂ ಪ್ರಕಟವಾಯಿತು ಇದಲ್ಲದೆ ಸಾಮಾನ್ಯವಾಗಿ ರಾತ್ರಿ 7 8 ಘಂಟೆಯ ಮೇಲೆ ಈ ಕೆರೆಯಲ್ಲಿ ಯಾವ ಹೇಸಿಕೆ ಕೆಲಸ ನಡೆದರೂ ಕೇಳುವವರೇ ಇಲ್ಲವಾಗಿದೆ ಇದನ್ನು ನಮ್ಮ ವೈಸ್ ಪ್ರೆಸಿಡೆಂಟರು ಬೇಗನೆ ಸರಿಪಡಿಸುವರೆಂದು ಎಲ್ಲರೂ ನಿರೀಕ್ಷಿಸುತ್ತಾರೆ — ಹಿಂದೆ ಇಲ್ಲಿನ ಡಿಸ್ಟ್ರಿಕ್ಟ್ ಜೈಲಿನಿಂದ ತಪ್ಪಿಸಿಕೊಂಡು ಹೋಗಿದ್ದ ದರೋಡೆ ಕಳ್ಳರಲ್ಲಿ 6 ಮಂದಿ ಗಂಡಸರೂ ಇಬ್ಬರು ಹೆಂಗಸರೂ ವಾಣಿಯಂಬಾಡಿಯಲ್ಲಿ ಹಿಡಿಯಲ್ಪಟ್ಟು, ಇಲ್ಲಿಗೆ ಕರೆತಂದಿದ್ದಾರೆ ವಿಚಾರಣೆಯು ನಿರೀಕ್ಷಣೆಯಲ್ಲಿದೆ — ಈಗ್ಗೆ ಒಂದು ವಾರದಿಂದಲೂ ಸೋನೆ ಮಳೆ ಗಾಳಿ ಸಹ ನಿಂತು ಸ್ವಲ್ಪ ಮಟ್ಟಿಗೆ ಹೊಳವಾಗಿದೆ. ಅಲ್ಲಲ್ಲಿ ಸಿಡುಬು ವ್ಯಾಧಿಯುಂಟು.

ದೇವನಹಳ್ಳಿ — ಸುಮಾರು 8 10 ದಿನಗಳಿಂದ ಮೋಡಾಡಂಬರಗಳು ವಿಶೇಷವಾಗಿದ್ದರೂ ಮಳೆ ಮಾತ್ರ ಬೀಳಲಿಲ್ಲ ಧಾರಣೆವಾಸಿಗಳು ಯಥಾಸ್ಥಿತಿಯಲ್ಲಿಯೇ ಇರುತ್ತವೆ ರೂಪಾಯಿಗೆ 6-6 ಸೇರು ಅಕ್ಕಿ, 14 15 ಸೇರು ರಾಗಿ ವಿಕರಿಯಾಗುತ್ತದೆ ಅಳತೆ ಸೇರು ಮತ್ತು ತೂಕದ ಬಟ್ಟುಗಳಿಂದ ಪ್ರಜೆಗಳ ನಷ್ಟಗಳು ತಪ್ಪಲೇ ಇಲ್ಲ ಈ ವಿಷಯವಾದ ಹೊಸ ಕಾನೂನು ಜಾಗ್ರತೆ ಜಾರಿಗೆ ಬಂದರೆ ತುಂಬಾ ಅನುಕೂಲ — ಊರಿನ ಪಾಕೀಜಾ ತಕ್ಕಮಟ್ಟಿಗೆ ಚೆನ್ನಾಗಿದ್ದಾಗ್ಯೂ ಕುಂಬಾರರ ಆವಿಗಳು ಊರಿನಲ್ಲೇ ಇರುವುದರಿಂದ ಹವಾ ಕೆಟ್ಟು ತುಂಬಾ ಅನಾರೋಗ್ಯಕ್ಕೆ ಕಾರಣವಾಗಿರುತ್ತವೆ ಸೀಹಿನೀರಿನ ಕೆರೆಯಲ್ಲಿ ಬಹಳ ಜನಗಳು ನೀರನ್ನು ಬಳಸುತ್ತಿದ್ದಾಗ್ಯೂ ನೀರಿನ ಪಾಕೀಜಾ ವಿಷಯ ಕೊಂಚವೂ ಸರಿಯಾಗಿಲ್ಲ ದನ ಕರುಗಳು ಯಾವಾಗಲೂ ಕೆರೆಯಲ್ಲಿಯೇ ಮೇಯುತ್ತಿರುವುದಲ್ಲದೆ ಪಾಚಿ ಬೆಳೆದು ನೀರೆಲ್ಲಾ ಕೆಟ್ಟುಹೋಗುತ್ತಲಿದೆ ಈ ವಿಷಯಗಳಲ್ಲಿ ನಮ್ಮ ಸ್ಯಾನಿಟರಿ ಇಲಾಖೆಯವರು ಜಾಗ್ರತೆ ನಿಗಾ ಕೊಡುವರೆಂದು ನಂಬುತ್ತೇವೆ — ಟವುನಿನಲ್ಲಿ ರಾತ್ರಿಹೊತ್ತು ಕತ್ತಲೆಗಳ ಕಾಟದಿಂದ ಜನರ ಸಂಚಾರಕ್ಕೆ ತುಂಬಾ ತೊಂದರೆಯಾಗಿದೆ — 7 ೮ ದಿನಗಳ ಕೆಳಗೆ ಸಬ್ ರೆಜಿಸ್ಟ್ರಾರ್ ಆಫೀಸಿನಲ್ಲೂ, ಪೋಲೀಸ್ ಆಫೀಸಿನಲ್ಲೂ ಮತ್ತು ಷರಾಬ್ ಅಂಗಡಿಯಲ್ಲೂ ಒಂದೇ ದಿನ ರಾತ್ರಿ ಕಳುವಾಗಿರುತ್ತವೆ ಮಿಡಿನೆ ಪಕ್ಕದಲ್ಲೇ ಸಬ್ ರೆಜಿಸ್ಟ್ರಾರ್ ಆಫೀಸೂ ಕಚೇರಿಯಲ್ಲೇ ಪೋಲೀಸ್ ಆಫೀಸೂ ಇದ್ದು ಈ ಸ್ಥಳಗಳಲ್ಲಿ ಯಾವಾಗಲೂ ಪೋಲೀಸ್ ಪಹರೆ ಇರಬೇಕಾಗಿದ್ದಾಗ್ಯೂ ಚೋರಿ ನಡೆದಿರುವಲ್ಲಿ ಊರಿನಲ್ಲಿ ಪೋಲೀಸಿನವರು ಗಸ್ತು ಹೇಗೆ ಮಾಡುತ್ತಾರೆಂಬುದನ್ನು ವಿವರಿಸಬೇಕಾಗಿಲ್ಲ

ನಂಜನಗೂಡು — ಇಲ್ಲಿನ ಹವಾ ಅನುಕೂಲವಾದ ಸ್ಥಿತಿಯಲ್ಲಿರುತ್ತೆ ಧಾರಣೆವಾಸಿಗಳು ಧಾರಾಳವಾಗಿರುತ್ತೆ ಜೋಳದ ಪೈರು ಮಳೆ ಇಲ್ಲದೆ ಒಣಗುತ್ತಾ ಇದೆ — ಈಗ್ಗೆ 7-8 ದಿವಸಗಳ ಕೆಳಗೆ ಈ ಊರು ಶ್ರೀರಾಘವೇಂದ್ರಸ್ವಾಮಿಗಳ ಮಠದ ಬಳಿ ಇರುವ ಗಣೇಶಾಚಾರ್ಯರ ಮನೆಗೆ ಅರ್ಧರಾತ್ರಿಯಲ್ಲಿ ಬೀದಿ ಕಿಟಕಿ ಕಳಚಿ ಕಳ್ಳರು ಬಿದ್ದು ಒಳಗಿನ ಬಾಗಿಲನ್ನು ಹಾಕಿಕೊಂಡು, ಪಡಸಾಲೆಯಲ್ಲಿದ್ದ ಸುಮಾರು 37 28 ಸಾವಿರ ರೂಪಾಯಿ ನಗಗಳನ್ನು ಅಪಹರಿಸುತ್ತಿದ್ದಾಗ ಮನೆ ಹೆಂಗಸರಿಗೆ ಗೊತ್ತಾಗಿ ಕೂಗಿಕೊಳ್ಳುವಾಗ್ಗೆ ಅದೇ ಕಿಟಕಿಯಿಂದಲೇ ಕಳ್ಳರು ನಗಗಳ ಸಹಿತ ಪರಾರಿಯಾದರು ಕೂಡಲೆ ಹೆಂಗಸರು ದೀಪವನ್ನು ಕೈಲಿ ಹಿಡಿದು ಬೀದಿಯಲ್ಲಿ ಕೂಗಿಕೊಂಡು ಬಂದರೂ ಏನೂ ಪ್ರಯೋಜನವಾಗಲಿಲ್ಲ ಮಾರನೇ ಬೆಳಿಗ್ಗೆ ಪೋಲೀಸ್ ಜಮೇದಾರ್ರು ಕಳುವಾದ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಒಂದು ಸೀಟಿ ಸಿಕ್ಕಿದಂತೆಯೂ, ಗುಂಡ್ಲುಹಳ್ಳಿ ಬಳಿ [illegible] ನಲ್ಲಿ ಕೆಲವು ಬಟ್ಟೆಗಳು ಬಿದ್ದಿದ್ದುವೆಂತೆಯೂ ವರ್ತಮಾನವಿದೆ ಮಾರನೇ ದಿವಸ ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರವರು ದಯಮಾಡಿ ನೋಡಿಕೊಂಡು ಹೋದರು ಗುಮಾಸ್ತೆ ಮೇಲೆ ಆ ಮನೆಗೆ ಕಿಟಕಿ ಮಾಡಿದ ಗಾರೆಯವನನ್ನೂ ಅತನ ಮಗ ಮುಂತಾದವರನ್ನೂ ಹಿಡಿದು ಇರುತ್ತಾರೆ ಆದರೆ ಈ ಜನಗಳನ್ನು ಪೋಲೀಸಿನಲ್ಲಿ ಮಡಗಿಕೊಳ್ಳದೆ ರಾತ್ರಿವೇಳೆ ೨ ೩ ದಿವಸ ಶ್ರೀಯವರ ಮಠದಲ್ಲಿ ಕೂಡಿಕೊಂಡಿದ್ದರು ಏನೂ ಗೊತ್ತಾಗಲಿಲ್ಲ ಇದುವರೆಗೂ ಮಾಲು ಯಾವದೂ ಪತ್ತೆ ಆಗಲಿಲ್ಲ ಈಗ ಕಳುವಾದ ನಗಗಳು ಅಂದು ಮಠದಲ್ಲಿ ಜೋಡಿಯಾದ ಸಂದರ್ಭದಲ್ಲಿ ಮಠವನ್ನು ಅಜಮಾಯಿಷಿ ಮಾಡಿದ ಕಾಲದಲ್ಲಿ ಮೇಲ್ಕಂಡ ನಗಗಳು ಹಾಕಿದ ಪೆಟ್ಟಿಗೆಯನ್ನು ಮಾಲೀಕರು ಜೋಪಾನಕ್ಕಾಗಿ ಮಠದಲ್ಲಿ ಮಡಗಿದ್ದ ಕಾರಣದಿಂದ ಪ್ರತಿ ನಗಗಳೂ ಅಜಮಾಯಿಷಿಯಾಗಿ ಎಲ್ಲರೂ ತಿಳಿದದ್ದಾಗಿರುತ್ತೆ. ಈ ನಗಗಳ ಪತ್ತೆ ಹಚ್ಚುವ ವಿಚಾರದಲ್ಲಿ ಪೋಲೀಸ್ ಇಲಾಖೆಯವರು ತುಂಬಾ ಶ್ರಮವನ್ನು ತೆಗೆದುಕೊಂಡಾರೆಂದು ನಂಬುತ್ತೇವೆ

ಚಿತ್ರದುರ್ಗ — ಬಿಸಿಲಿನ ಧಗೆ ಕಮ್ಮಿಯಾಯಿತು ಗಾಳಿ ಬಹಳ ಜಾಸ್ತಿಯಾಗಿದೆ ಈಗ ನಾಲ್ಕಾರು ದಿವಸದಿಂದ ಆಗಾಗ್ಗೆ ಸ್ವಲ್ಪಸ್ವಲ್ಪ ಮಳೆ ಬರುತ್ತಾ ರೈತರು ವ್ಯವಸಾಯದ ಕೆಲಸದಲ್ಲಿ ನಿರತರಾಗಿದ್ದಾರೆ ದಿನಸಿ ಧಾರಣೆಗಳು ಸ್ವಲ್ಪ ಇಳಿಕೆಯೇ ತುಟ್ಟಿಯಾಗಿದೆ ಈ ವರುಷ ಮಾವಿನಹಣ್ಣು ವಿಶೇಷ ಅದರಿಂದ ಉಂಟಾಗತಕ್ಕ ಕೆಮ್ಮು, ಆಮಶಂಕೆ, ಜ್ವರ ಮುಂತಾದ ಕಾಯಿಲೆಗಳು ಈಗಾಗಲೇ ಆರಂಭವಾಗಿವೆ — ಈಗ್ಗೆ ಕೆಲವು ವರ್ಷಗಳಿಂದ ವಿಶೇಷವಾಗಿ ಈ ಸ್ಥಳಕ್ಕೆ ವೈಷ್ಣವರ ಸ್ವಾಮಿಗಳೂ, ಶಿವಾದರೆ ಸ್ವಾರ್ತರ ಸ್ವಾಮಿಗಳೂ, ಅವಧೂತರೂ, ಮಂತ್ರವಾದಿಗಳೂ ಆಗಾಗ್ಗೆ ಬರತಕ್ಕದ್ದೂ, ಅವರ ಸಂಬಂಧವಾದ ಪೂಜಾ, ಬ್ರಾಹ್ಮಣರ ಸಂತರ್ಪಣೆ, ಮಂತ್ರ, ತಂತ್ರಗಳನ್ನು ಮಾಡತಕ್ಕದ್ದೂ, ಇವು ಬಹಳ ಜಾಸ್ತಿಯಾಗಿವೆ — ಈ ಸ್ಥಳದಲ್ಲಿ ಅಕ್ಟಿಂಗ್ ಡೆಪ್ಯುಟಿ ಕಮಿಷನರ್ರಾಗಿದ್ದ ಮೈಕ್ ಮಧಾಕ್ ಸಾಹೇಬರವರು ಮ|| ಶಾಂಗರಾಜ ಅಯ್ಯಂಗಾರ್ 12ನೇ ತಾ ಡಿಸ್ಟ್ರಿಕ್ಟು ಚಾರ್ಜು ಕೊಟ್ಟು ಸಂಸಾರಸಮೇತ ಈ ಸ್ಥಳದಲ್ಲೇ ವಾಸಮಾಡಿಕೊಂಡಿದ್ದಾರೆ ಹೊಸದಾಗಿ ಬಂದ ಚಾರ್ಜು ವಹಿಸಿದ ಡೆಪ್ಯುಟಿ ಕಮಿಷನರ್ರವರು ಅದೇ ದಿವಸವೇ ಮೈಸೂರಿಗೆ ದಯಮಾಡಿಸಿದರು ಮೈ ಕೆ ಮಧಾಕ್ ಸಾಹೇಬರವರು ಈ ಡಿಸ್ಟ್ರಿಕ್ಟಿಗೆ ದಯಮಾಡಿಸಿ ಸ್ವಲ್ಪ ದಿವಸವೇ ಆದಾಗ್ಯೂ ಅವರು ಈ ಸ್ವಲ್ಪಕಾಲದಲ್ಲಿ ಮಾಡಿದ ಕೆಲಸಗಳಿಂದ ಇಂಥಾ ದಕ್ಷತೆ, ಸಮಾಧಾನ, ಪ್ರಜೆಗಳಲ್ಲಿ ಮರ್ಯಾದೆಯಿರತಕ್ಕದ್ದು, ಸಮಸ್ತ ಜಾತಿಗಳಲ್ಲೂ ಪೂರ್ಣವಾದ ಅನುಭವ, ಪ್ರತಿ ವಿಷಯವೂ ಮನಸ್ಸು ಕೊಟ್ಟು ವಿಚಾರಿಸುವ ಗುಣವಾಗೂ, ಒಳ್ಳೆಯವರಿಗೂ ಸಮವಾದ ನ್ಯಾಯ ಕೊಡತಕ್ಕದ್ದು, ಪ್ರಜೆಯೊಬ್ಬರಿಗೂ ತಮ್ಮ ಕಷ್ಟಗಳನ್ನು ತಮ್ಮಲ್ಲಿ ಹೋಗಿ ಹೇಳಿಕೊಂಡು, ನ್ಯಾಯ ಹೊಂದಬಹುದೆಂಬ ನಂಬಿಕೆ ಹುಟ್ಟಿ

ಪ್ರಜೆಗಳಲ್ಲಿ ಸಂತೋಷವನ್ನುಂಟುಮಾಡಿದ್ದರಿಂದ ಈ ಡಿಸ್ಟ್ರಿಕ್ಟಿನ ಪ್ರಜೆಗಳೆಲ್ಲಾ ಇವರೇ ಖಾಯಂ ಆಗಿದ್ದರೆ ಸಾಕೆಂತ ಪ್ರಾರ್ಥಿಸುತ್ತಿದ್ದರು ಅದು ಸಾರ್ಥಕವಾಗಲಿಲ್ಲ —ಈ ಡಿಸ್ಟ್ರಿಕ್ಟಿಗೆ ಬರಬೇಕಾದ ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ಮಾಚಯ್ಯನವರೂ, ಟ್ರೆಜರಿ ಅ॥ ಕಮಿಷನರ್ ಮ॥ ಭೀಮರಾಯರೂ ಇನ್ನೂ ಬಂದಿಲ್ಲ ಮೊದಲಿನವರೇ ಇದಾರೆ

ಆನೇಕಲ್ ತಾ॥ ದೊಮ್ಮಸಂದ್ರ —ಈ ಊರಿನಲ್ಲಿ ಲಂಡನ್ ಮಿಷನ್ ಸ್ಕೂಲುಗಳ ಬಾಲಕ ಬಾಲಕಿಯರ ಆಟದ ಪಂದ್ಯಗಳು ಕಳೆದ 17ನೇ ತಾ ಮಂಗಳವಾರ ಮಧ್ಯಾಹ್ನ ನಡೆದವು ಆಗ್ಗೆ ಈ ಮಿಷನಿನ ರೆವ್ ವಿಲ್ಕಿನ್ಸ್ ಧೊರೆಯವರೂ, ನಮ್ಮ ಅಮಲ್ದಾರರಾದ ಮ್ಮ॥ ಗೋಪಾಲರಾಜೆ ಅರಸಿನವರೂ ದಯಮಾಡಿದರಲ್ಲದೆ ಗ್ರಾಮಸ್ಥರೂ ಬಂದಿದ್ದರು ಆಟದ ಪಂದ್ಯಗಳಲ್ಲಿ ಗೆದ್ದ ಹುಡುಗರಿಗೆ ಮಾರನೇ ದಿನ ಅವರ ತರಗತಿ ಬಹುಮಾನಗಳನ್ನು ಹಂಚುವಾಗ್ಗೆ ಈ ಬಹುಮಾನವನ್ನೂ ಹಂಚಿದರು ಜಾರ್ಜ ಚಕ್ರವರ್ತಿಯವರ ಕ್ಷೇಮ ಪ್ರಾರ್ಥನೆ ಮಾಡಿದ ಮೇಲೆ ಕೂಟವು ಮುಗಿಯಿತು ಮಾರನೇ ದಿನ ಬೆಳಿಗ್ಗೆ ಲಂಡನ್ ಮಿಷನ್ ಬಾಲಕರ ಪಾಠಶಾಲೆಯಲ್ಲಿ ಹುಡುಗಿಯರ ಬಹುಮಾನಗಳು ಹಂಚಲ್ಪಟ್ಟವು ರೆ॥ ಜಾ ವಿಲ್ಕಿನ್ಸ್ ಸಾಹೇಬರವರ ಕೋರಿಕೆಯಂತೆ ನಮ್ಮ ಅಮಲ್ದಾರ್ ಸಾಹೇಬರು ಅಗ್ರಾಸನವನ್ನು ವಹಿಸಿ ಹುಡುಗಿಯರ ಡೈಲಾಗ್ ರೆಸಿಟೇಷನ್‌ಗಳನ್ನು ಶಬ್ದಾಂಬರಿಸಿ ಈ ಸ್ಕೂಲಿನ ರಿಪೋರ್ಟನ್ನು ಕೇಳಿ ಹುಡುಗಿಯರಿಗೆ ಬಹುಮಾನಗಳನ್ನು ಹಂಚಿದರು ಆಗ ರೆವ್ ವಿಲ್ಕಿನ್ಸ್ ಧೊರೆಯವರ ಜ್ಞಾಪಕಾರ್ಥವಾಗಿ ಹುಡುಗಿಯರು ರಚಿಸಿದ್ದ ಪ್ರದರ್ಶನ ರಾಶಿಯನ್ನು ಸಾಹೇಬರೇ ಪ್ರಾರಂಭಿಸಿ ಎಲ್ಲರಿಗೂ ತೋರಿಸಿದರು ಮಂಗಳ ಹಾಡಿದ ಮೇಲೆ ಸಭೆಯು ಮುಕ್ತಾಯವಾಯಿತು ಮಧ್ಯಾಹ್ನ ಈ ಸ್ಕೂಲಿನಲ್ಲಿ ಬಾಲಕರಿಗೆ ಬಹುಮಾನ ಹಂಚಲಾಯಿತು ಸಾಹೇಬರೂ ಅಮಲ್ದಾರ್ರೂ ಮುಂತಾದವರೂ ಹಾಜರಾಗಿದ್ದರು ಇಂಥಾ ಉಪಯುಕ್ತವಾದ ಕೆಲಸಗಳನ್ನು ನಡೆಸಲು ಗ್ರಾಮಸ್ಥರು ಮಾಸ್ತರುಗಳಿಗೆ ಸಹಾಯ ಮಾಡಬೇಕೆಂದು ಅಮಲ್ದಾರ್ ಸಾಹೇಬರವರು ಬುದ್ಧಿವಾದಗಳನ್ನು ಹೇಳಿ ಹುಡುಗರಿಗೆ ಯೋಗ್ಯತಾನುಸಾರ ಮಿಠಾಯಿ ಮತ್ತು ಬಹುಮಾನಗಳು ಹಂಚಲ್ಪಟ್ಟವು ರೆವ್ ಜಾರ್ಜ ವಿಲ್ಕಿನ್ಸ್ ಸಾಹೇಬರು ಈ ಸ್ಕೂಲಿನ ಮೇಲ್ವಿಚಾರಣಾ ಕೆಲಸವನ್ನು ಬಿಟ್ಟು ಹುಡುಗರ ಬೋರ್ಡಿಂಗ್ ಮತ್ತು ಸಭೆಯ ಕೆಲಸ ನೋಡಲು ಹೋಗುತ್ತಾರೆಂದು ಬಹಳ ವಿಷಾದಿಸಬೇಕಾಗಿದೆ ಯಾಕೆಂದರೆ ಈ ಸ್ಕೂಲುಗಳನ್ನು ಅಭಿವೃದ್ಧಿಗೆ ತಂದು ಅವುಗಳಿಗೆ ಆಗಾಗ್ಗೆ ಬೇಕಾಗುತ್ತಿದ್ದ ಸಲಕರಣಗಳನ್ನು ಉದಾರವಾಗಿ ಒದಗಿಸುತ್ತಾ ದೊಡ್ಡ ಕಟ್ಟಡವನ್ನು ಕಟ್ಟಿಸಿಕೊಟ್ಟು ತುಂಬಾ ಸಹಾಯಮಾಡಿ ಕೀರ್ತಿ ಪಡೆದಿದ್ದರು ಈ ಸಂದರ್ಭದಲ್ಲಿ ಇವರಿಗೆ ಮಾಸ್ತರುಗಳ, ವಿದ್ಯಾರ್ಥಿಗಳ ಮತ್ತು ಗ್ರಾಮಸ್ಥರ ಪರವಾಗಿ ಹೆಡ್ ಮಾಸ್ತರವರು ಒಂದು ಅಡ್ರೆಸ್ಸನ್ನು ಓದಿ ಅರ್ಪಿಸಿದರು

ತರೀಕೆರೆ —ಕೆಲವು ದಿನಗಳ ಹಿಂದೆ ಸಾಕಾದಷ್ಟು ಮಳೆ ಬಂದದ್ದರಿಂದ ಜನರು ಹೊಲ ಗದ್ದೆಗಳನ್ನು ಉತ್ತು ಹಸನುಮಾಡಿ ಭತ್ತ ಬಿತ್ತುತ್ತಾ ಇದಾರೆ ಸದ್ಯಕ್ಕೆ ಮಳೆಯು ಕೆಲವು ದಿನಗಳಿಂದ ನಿಂತು ಇರುವದರಿಂದ ಜನರಲ್ಲಿ ಸ್ವಲ್ಪ ಗಾಬರಿ ಕಾಣುತ್ತೆ ಮಳೆ ಬರುವ ಸೂಚನೆಗಳಿರುವದರಿಂದ ಸ್ವಲ್ಪ ಮಟ್ಟಿಗೆ ಸಮಾಧಾನವೂ ಉಂಟು ಬಿತ್ತಿರುವ ಕೆಲವು ಕಡೆ ಭತ್ತದ ಪೈರು ಚೆನ್ನಾಗಿದೆ ಈಗ ಮಳೆ ಬಂದರೆ ಪೈರಿಗೆ ಒಳ್ಳೇ ಹದವಾಗುತ್ತೆ —ಈ ಊರಲ್ಲಿ ಜನರು ಕುಡಿಯುವದಕ್ಕೆ ಕೆರೆ ನೀರನ್ನೇ ಬಹಳ ಕಾಲದಿಂದ ಉಪಯೋಗಿಸುತ್ತಾರೆ ಆದರೆ ಕುಡಿಯುವ ನೀರಿನಲ್ಲೇ ಜನರು ಎಂದಿಗೆ ಬಳಗುವದು, ಸೀರೆ ಪಂಚೆ ಒಗೆಯುವದು, ಸಾಲದ್ದಕ್ಕೆ ಮುಖತೊಳೆದು ಉಗಿಯುವದು, ನೀರಿನ ಅಂಚಿನಲ್ಲಿ ದೇಹಬಾಧೆ ತೀರಿಸಿ ನಂತರ ನೀರನ್ನು ಮುಟ್ಟುವದು ಒಂಗೊಲ್ಲ ಮಾಡಿ ನೀರನ್ನು ಕೆಡಿಸುವದು ನೀರನ್ನು ಕೆಡಿಸದಂತೆ ಕಾಯುವದಕ್ಕೆ ಕಾವಲುಗಾರನಿದ್ದರೂ ಬೆಳಿಗ್ಗೆ ಹೊತ್ತಿಗೆ ಮುಂಚೆ ಬಂದಿರುವದಿಲ್ಲ ಬೆಳಿಗ್ಗೆ ಇದ್ದರೆ ಮಧ್ಯಾಹ್ನ ಇಲ್ಲ ಇದ್ದರೂ ನೀರನ್ನು ಕೆಡಿಸುವವರನ್ನು ಕೇಳದೆ ಸುಮ್ಮನಿರುವದು, ಹೀಗಾಗಿದೆ ಮೇಲ್ಪಟ್ಟವರು ಇದಕ್ಕೆ ಏನಾದರೂ ಕೊಡದಿದ್ದರೆ ಹೊಸ ನೀರು ಬರುವದರಿಂದಲೂ ನೀರನ್ನು ಕೆಡಿಸುವದರಿಂದಲೂ ನಿಂತುಹೋದ ಕಾಲರಾ ರೋಗವು ಪುನಃ ತಲೆದೋರೀತು ಎಂಬ ಭಯವಿದೆ —ಈ ಊರಲ್ಲಿ ಸಾರಾಯಿ ಅಂಗಡಿಯಲ್ಲಿ ಬಹು ಅನ್ಯಾಯವಿದೆ ಎಂದು ಜನರು ಹೇಳುತ್ತಾರೆ ಪ್ರಾಗಂದರೆ ನಿಯಮದಂತೆ ೨ ಆ, ೨½ ಆ, ೩। ಆಣೆಯಂತೆ ಡ್ರಾಂ ಒಂದಕ್ಕೆ ಮಾರುವದಾಗೂ, ಡ್ರಾಂ ಅಳೆಯುವ ಪಾತ್ರೆಯಲ್ಲಿ ಅಳೆಯದೆ ಬೇರೆ ಪಾತ್ರೆಯಲ್ಲಿ ಅಳೆಯುವಂತೆಯೂ ಕೇಳುತ್ತೇವೆ ಮೇಲ್ಪಟ್ಟ ಅಧಿಕಾರಿಗಳು ಇದನ್ನು ವಿಚಾರಿಸುವದಾದರೆ ಒಳ್ಳೇದು ಹೀಗೆ ಮೋಸವಾದರೂ ಜನರು ಸದರಿ ಅಂಗಡಿಯಲ್ಲಿ ತುಂಬಿರುವದು ಬಹಳ ಆಶ್ಚರ್ಯ ಯಾಕೆಂದರೆ ತಮ್ಮ ಕಷ್ಟಾರ್ಜಿತವನ್ನು ಹೀಗೆ ಅನ್ಯಾಯವಾಗಿ ಕಳೆದುಕೊಳ್ಳುತ್ತಾರೆ —ಸಂತೆಯಲ್ಲಿನ ಧಾನ್ಯಪಾಸಿಗಳು ಕಪ ಕಾಲದ ಕಯ್ಯೇ ಹಿಡಿಸುತ್ತಾವೆ ಅವರಲ್ಲಿ ಅಳತೆ ಸೇರು ತೂಕದ ಬಟ್ಟುಗಳನ್ನು ಕೇಳುವವರೇ ಇಲ್ಲ ಕೆಲವರು ಕಾಡುಕಲ್ಲು ಗುಂಡುಗಳನ್ನೂ, ಪೆಟ್ಟುಕಲ್ಲಿನ ಒಡಕುಚೂರುಗಳನ್ನೂ, ಜವಳಿ ಮೂಟೆಯ ಕಬ್ಬಿಣದ ಕಟ್ಟಿಗೆ ಹಾಕುವ ಬಳೆಗಳನ್ನೂ ತೂಕಕ್ಕೆ ಇಟ್ಟುಕೊಂಡಿದಾರೆ ಸರಕಾರದವರು ಬಡಪ್ರಜೆಗಳನ್ನು ಕಾಪಾಡುವದಕ್ಕಾಗಿ ಬೇಗ ಹೊಸ ಸೇರುಗಳನ್ನೂ, ತೂಕದ ಬಟ್ಟುಗಳನ್ನೂ ಜಾರಿಮಾಡಿ, ಅವುಗಳನ್ನೇ ಉಪಯೋಗಿಸುವಂತೆ ನಿರ್ಬಂಧಪಡಿಸಬೇಕು ಇಲ್ಲವೇ ಹೊಸ ಸೇರು ಬಟ್ಟುಗಳು ಬರುವವರಿಗೂ ಎಲ್ಲರೂ ಈಗ ಇರುವ ಸರಿಯಾದವುಗಳನ್ನೇ ಉಪಯೋಗಿಸುವಂತೆ ಮಾಡಬೇಕು ಮತ್ತು ಸಂತೆಯಲ್ಲಿ ಕೆಲವರು ಲೈಸೆನ್ಸ್ ಇದ್ದು, ಕೆಲವರು ಇಲ್ಲದೆಯೂ ಜೂಜು ಆಡುವದುಂಟು ಪೋಲೀಸಿನವರೂ ಆದುದು ಇನ್ನೂ ವಿಶೇಷವೇ ಸರಿ —ಇಲ್ಲಿಗೆ ೩ ಮೈಲಿ ದೂರದಲ್ಲಿರುವ ಬೀಳಸಳ್ಳಿಯಲ್ಲಿ ರೈಸಭಕ್ತ

ರಲ್ಲೊಬ್ಬನನ್ನು ಅವನ ಹೋರಿ ಹಾದು ಬಲಗಡೆ ಎದೆಯಲ್ಲಿ ಗಾಯವಾಗಿ ಆಸ್ಪತ್ರೆಯಲ್ಲಿದಾನೆ —ಈ ಊರಿಗೆ ಸುತ್ತಮುತ್ತಲೂ ಇನ್ನೂ ಅನೇಕ ಕಡೆಗಳಲ್ಲಿ ಖರಾಬು ಜಮೀನು ಇದೆ ಈ ಜಮೀನು ಬೇಕಾದವರು ಅರ್ಜಿ ಕೊಟ್ಟರೆ ಹರಾಜಿಗೆ ಬರುತ್ತೆ ಆಗ ಜಮೀನು ಹಣವಿದ್ದವರ ಪಾಲೇ ಹೊರ್ತು ಅನೇಕ ಸಾರಿ ಅರ್ಜಿ ಕೊಟ್ಟವರಿಗೆ ಸಿಕ್ಕುವದೇ ಇಲ್ಲ ಹೆಚ್ಚು ಹಣವಿಲ್ಲದವರು —ನಾವು ಜಮೀನು ಇದ್ದರೆ ಹ್ಯಾಗೂ ಜೀವನಮಾಡಿಕೊಳ್ಳುತ್ತೇವೆ ಆದರೆ ಮೊದಲು ಹರಾಜಿಗೆ ಬಂದಾಗ ಪೋಟಾಪೋಟಿ ಮಾಡುವವರಿಂದ ನಮಗೆ ಜಮೀನು ಇಲ್ಲದೇನೇ ಹೋಗಿ ಕಡೆಗೆ ಏನೂ ಇಲ್ಲದೆ ಕೂಲಿನಾಲಿ ಮಾಡಬೇಕಾಗುತ್ತೆಂದು ಹೇಳುವರು ಸರಕಾರದವರು ಹರಾಜಿನಲ್ಲಿ ಹೆಚ್ಚು ಹಣ ಬರುವದನ್ನು ನೋಡುತ್ತಾರೆಯೇ ಹೊರ್ತು—ಬಡವರಿಗೂ ಜಮೀನು ಇರಲಿ, ಬಡವರೂ ಸ್ವಲ್ಪ ಕಷ್ಟಪಟ್ಟು ಮುಂದೆ ಬಂದು ಐಶ್ವರ್ಯವಂತರಾಗಲಿ ಎಂಬುದನ್ನು ಯಾತಕ್ಕೆ ನೋಡಬಾರದು? ಇದರ ವಿಷಯ ಸರಕಾರದವರು ಯೋಚಿಸಿ ಜಮೀನು ಬೇಕೆಂದು ಯಾರು ಕೇಳುತ್ತಾರೋ ಅವರಿಗೆ ಕೊಡಿಸಿದರೆ ಉತ್ತಮ ಆದರೂ ಕೆಲವರು ಈ ಜಮೀನನ್ನು ಯಾರೂ ತೆಗೆದುಕೊಳ್ಳಬಾರದೆಂದು ಸುಮ್ಮನೆ ಹೆಚ್ಚಿಸುವದುಂಟು ಮತ್ತು ತೆಗೆದುಕೊಂಡು ಸ್ವಲ್ಪ ಕಾಲವಾದ ಮೇಲೆ ರಾಜಿನಾಮೆ ಕೊಡುವರು ಅನ್ಯ ಇನ್ನೊಬ್ಬನು ಅದೇ ಜಮೀನಿಗೆ ಅರ್ಜಿ ಕೊಟ್ಟರೆ ಆಗ ರಾಜಿನಾಮೆ ಕೊಟ್ಟವನು ಈ ಜಮೀನು ಹೋಗುತ್ತದಲ್ಲಾ ಎಂದು ಪುನಃ ತೆಗೆದುಕೊಂಡು ಕೊಂಚಕಾಲವಾದ ಮೇಲೆ ರಾಜಿನಾಮೆ ಕೊಡುವನು ಹೀಗೆ ಮಾಡುವದು ಜಮೀನು ಇನ್ನೂ ಬೇಕೆಂಬ ಆಶೆಯಿಂದ, ಇಲ್ಲವೇ ಇತರರು ಜಮೀನು ತೆಗೆದುಕೊಳ್ಳುವದನ್ನು ತಪ್ಪಿಸಬೇಕೆಂಬ ಯೋಚನೆಯಿಂದ, ಇಲ್ಲವೇ ತನ್ನ ಜಮೀನಿನ ಹತ್ತಿರ ಇನ್ನೊಬ್ಬನು ಬಂದು ಸೇರಿದರೆ ತನಗೆ ತೊಂದರೆ ಬಂದೀತೆಂಬ ಯೋಚನೆಯಿಂದ ಅನೇಕರಿಗೆ ಜಮೀನು ಸಿಕ್ಕುವದಿಲ್ಲ ಹಾಗೂ ಈ ಅಡ್ಡಿಗಳನ್ನೆಲ್ಲಾ ಸರಿಮಾಡಿಕೊಂಡು ತೆಗೆದುಕೊಳ್ಳೋಣವೆಂದರೆ ಶಾನುಭೋಗರು ತಮಗೆ ಬೇಕಾದ ಹೊರತು ಆ ಜಮೀನಿನ ಚಕ್ಕುಬಂದಿ, ಆಕಾರ, ಸರ್ವೇ ನಂಬರು ಮೊದಲಾದವುಗಳನ್ನು ಹೇಳುವದಿಲ್ಲ ಇಂಥಾ ಕಾರ್ಯ ಅನೇಕ ಕಡೆಯಲ್ಲಿ ನಡೆಯುತ್ತೆ ಮೈಸೂರು ಸಂಪದಭ್ಯುದಯ ಸಂಘದವರು ಇದನ್ನು ಜ್ಞಾಪಕದಲ್ಲಿಟ್ಟು ಜಮೀನು ಬೇಕೆಂದು ಕೇಳುವವರಿಗೆ ಹ್ಯಾಗಾದರೂ ಜಮೀನು ಕೊಟ್ಟರೆ ಒಳ್ಳೇದೆಂದು ನಂಬುತ್ತೇವೆ

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣವಾದ ಪಾದಸ್ಥಳದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣ ಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲ ಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION ೨ ೨೧

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧದಲ್ಲಿ ಮುಖ್ಯ ಸಮಸ್ತ ಆರೋಗ್ಯ ಬಲಪಡಿಸುವಂಥಾ ಎಲ್ಲಾ ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತ್ಯಾವದೂ ಇಲ್ಲ

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಬಳಿಕ ಅದರ ಗುಣಗಳು ಕಂಡುಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೋನ್, ಲಿಮಿಟೆಡ್,

ಔಷಧಗಳ ಕಾರಖಾನೆ,

ಲಂಡನ್, ಇಂಗ್ಲಂಡ್

ವಿವಾನುಮುಸರ ಇರುವ ಈ ಔಷಧದ ಗುರುತು

ಸೋಡಿಗ ಹಾಕುವ ಎಂಟು ದಿನಗಳಿಗೊಂದಾವರ್ತಿ

ಬೀಗ ಕೊಡುವ ದೊಡ್ಡ ಗಡಿಯಾರಗಳು

ಕೆಳಗಿನ ನಕ್ಷೆಯಲ್ಲಿ ತೋರಿಸುವ ದೊಡ್ಡ ಗಡಿಯಾರಗಳನ್ನು ಅನೇಕರು 17 ರೂಪಾಯಿಗೆ ಕಮ್ಮಿಯಿಲ್ಲದೆ ಮಾರುತ್ತಲಿದಾರೆ ಇದು ಸರ್ವರಿಗೂ ಉಪಯೋಗವಾಗಬೇಕೆಂಬ ಉದ್ದೇಶದಿಂದ ನಾವು ಇದನ್ನು ಅರ್ಧ ಕ್ರಯಕ್ಕೆ ಜುಲೈ ೩೧ ಅಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಕೊಡುತ್ತೇವೆ



ರೂ 8-8-0

ಇದು ಬ್ಯಾಂಕು, ಕೋರ್ಟು, ಕಚೇರಿ, ಸ್ಕೂಲ್, ಜವಳಿ ಅಂಗಡಿ, ಮೊದಲಾದ ಸ್ಥಳಗಳಲ್ಲಿ ಇರಿಸುವದಕ್ಕೆ ಲಾಯಖಾದದು ಎಂಟು ದಿವಸಗಳಿಗೊಂದಾವರ್ತಿ ಬೀಗಕೊಡತಕ್ಕದ್ದು ಅನೇಕ ವರುಷಗಳು ಉಪಯೋಗಿಸಿದಾಗ್ಯೂ ಕೆಟ್ಟುಹೋಗದು ಇದರಲ್ಲಿ ಅನೇಕ ತರವಾರಿ ಗಡಿಯಾರಗಳು ಈಗತಾನೇ ಸೀಮೆಯಿಂದ ಬಂದಿರುತ್ತೆ ಇದರಲ್ಲಿ ಕೆಲವು ತರಹಗಳು ಮಾತ್ರವೇ ಈ ಕೆಳಗೆ ನಮೂದಿಸಿರುತ್ತೇವೆ

ಅನೇಕರು ಇಂಥಾ ಬಾರಿ ಕ್ರಯದ ಗಡಿಯಾರವನ್ನು ಇಷ್ಟು ಸುಲಭ ಕ್ರಯಕ್ಕೆ ಕೊಡುವದು ಸುಳ್ಳು ಎಂದು ಹೇಳುತ್ತಲಿದಾರೆ ಯಥಾರ್ಥ ಮಾಡಲಿಕ್ಕೆ ಒಂದನ್ನು ತರಿಸಿ ನೋಡಿದರೆ ದರ ವಾಸ್ತವವು ಗೊತ್ತಾಗುತ್ತದೆ ತಾಜಾಕಲಂ —ದರ ಖಾಸ್ತುದಾರರು ಮುಂದಾಗಿ ೨ ರೂಪಾಯಿ ಅಡ್ವಾನ್ಸ್ ಕಳುಹಿಸಬೇಕು

ವಿಳಾಸ —ಪತ್ತಿ ಅಂಡ್ ಕಂಪನಿ, ಜನರಲ್ ಮುತ್ಯಾಲಪೇಟೆ ಸ್ಟ್ರೀಟ್,

[೧೧೪೨] ೨೧, ಸಾಹುಕಾರ್ ಪೇಟೆ, ಮದರಾಸ್

ಬಹಳ ಮೇಲಾದ ಅಚ್ಚ ಕರೀ ಬಣ್ಣದ ಮಧುರೆ ಚಿಂನದಿ ಅಂಚಿನ ಸೀರೆಗಳು.

ಅಸಲ್ ತಯಾರಿ ಕ್ರಯ ರೂ ೨೧೦

ಇವರ ದವರ್ತಕರಿಗೆ ಬಣ್ಣದ ಸೀರೆಗೂ, ಬಡವರಿಗೂ ತಿಳಿಸುವುದೇನೆಂದರೆ—ನಮ್ಮಲ್ಲಿನ ಕರೀ ಬಣ್ಣದ ಮಧುರೆ ಚಿಂನದಿ ಸೀರೆಗಳು ಉಡುವುದಕ್ಕೆ ದಡಸಾಗಿಯೂ ನೋಡುವುದಕ್ಕೆ ನಯವಾಗಿಯೂ ಸರ್ವರಿಗೂ ಲಾಯಖಾಗಿಯೂ, ಕೆಲ್ಲಲು ಬೇಕಾದ ಸುಂದರವಾಗಿಯೂ ತಯಾರಿಸಿವೆ ಎಷ್ಟು ವರ್ತಿ ಒಗೆದು ಉಟ್ಟರೂ ಬಣ್ಣ ಸ್ವಲ್ಪವೂ ಬದಲಾಯಿಸುವುದಿಲ್ಲ ಇದರ ಸೆರಗುಗಳು ಬಹು ಪಸಂದಾಗಿವೆ ಸೀರೆಯ ಉದ್ದವು ಧಾರಾಳವಾಗಿ 1೯ ಮೊಳವಿದೆ ಪರೀಕ್ಷಾರ್ಥ ಒಂದನ್ನು ತರಿಸಿ ನೋಡಿ ವ್ಯಾಪಾರಿಗಳು ಅನೇಕ ರುಗಳಿಗೆ ಬರೆಯುವರು ಟಸ್ಸು ಅಲ್ ... ರಿಗುಲೇಟೆಡ್ ... ೧೧೧೦ ಪುಷ್ಪಕಾಂತಿ ಪೇಟಾಯಲ್ ಬುಡ್ಡಿ ೧೩೧೦ [೧೨೩೧]

ವಿಳಾಸ —ಡಿ ವಿ ಪಾಲ್ ಕಂಪನಿ, ಸುಂಗಲ್ಕರೆ, ಮದರಾಸು

ನಿನಗೆ ಮೈ ಸ್ವಸ್ಥವಿಲ್ಲವೋ?

ನಿನಗ ಮೈ ಸ್ವಸ್ಥವಿಲ್ಲದ ಹಾಗೆ ತೋರಿದಾಗ—ಎಂದರೆ, ನಿನಗೆ ಯಾವ ರೋಗವೇ ಉಂಟಾಗಲಿ— ನಿನಗೆ ದಿನಕ್ಕೆ ಒಂದು ಸಲವಾದರೂ ಶೌಚಪ್ರವೃತ್ತಿಯಾಗುತ್ತ



(೧೨ ಆಣೆ ಬುಡ್ಡಿ ಪರಿಮಾಣ)

ದೆಯೋ ಎಂದು ನಿಶ್ಚಯಿಸು ನೀನೇ ನೋಡಿಕೋ, ಹಾಗೆ ಆಗದಿದ್ದರೆ ಡಾಕ್ಟರವರ ಬೀರ್ತಿದಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲ ಪ್ರಸನ್ನವಾಗಿ ನಿನಗೆ ಮೈ ಸ್ವಸ್ಥವಾಗುವದು ಮಲಬಂಧವೆಂಬುದರ ಅರ್ಥವೇ ನೀವರೆ ಮಲಬದ್ಧತೆಯಿಂದ ಮಲವು ಹೊರಗೆ ಬಾರದೆ ಒಳ್ಳೆಯೇ ಎಡಳ ಹೊತ್ತು ಕರುಳಲ್ಲಿ ಬಿದ್ದಿದ್ದು ವಿಷವಾಗಿ ಹೋಗುವುದು ... ಪ್ರತಿಬಂಧ ... ಅನೇಕ ರೋಗಗಳಿಗೆ ... ಉಂಟುಮಾಡುವದು ... ಆ ರೋಗಗಳ ಸಂಬಂಧ —ಪ್ರಕೋಪ ರೋಗ, ಪಿತ್ತಜ್ವರ, ಅಜೀರ್ಣ ಅಗ್ನಿಮಾಂದ್ಯ ಗಾಬರಿ ಆಲಸ್ಯ, ಎದೆಯು ತಲ್ಲಣಿಸುವದು ತಲೆತಿರುಗುವದು ತಲೆನೋವು ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆನೋವು ಇಂಗಪರ ನಾಡಿಗಳು ಇವೇ ಮೊದಲಾದವು ಹೀಗೆಯೇ ಬಹು ಬೇಗ ರಕ್ತದ ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡಾಕ್ಟರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದದ್ದು ಗಳು ದೇಹಕ್ಕೆ ಬಹು ಹಿತಕರವಾಗಿ ಮಕ್ಕಳಿಗೂ ದೊಡ್ಡವರಿಗೂ ಕರುಳಲ್ಲಿರುವ ಮಲವನ್ನೂ ಕೆಟ್ಟದಾದ ವಾಯುವನ್ನೂ ಮಲದ್ವಾರದಿಂದ ಹೊರಕ್ಕೆ ತಳ್ಳಿ ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಸುಖವಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗನೆ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವವು [೪೨ ೪೨]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವವು ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು, ಅಥವಾ ಡಾಕ್ಟರ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

Mellin's Food

ಮೆಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ವಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕ್ಕಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs. OAKES & Company, Mount Road, Madras.

[೪-೩೧] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H Gulliford, Proprietor and Manager Wesleyan Mission Press, Mysore. 26/6/1918

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸೆ ೧೯೧೩ ನೇ ಇಸವಿ ಜೂಲೈ ತಾರೀಖು ೩ ನೇ ಗುರುವಾರ. ಸಂಚಿಕೆ ೫

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೦ ಪುಟಗಳು)

ಶುಕಮುಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ ಬುದ್ಧಿಚಾಂಚಲ ನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (೫) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1 8 0 ಟಪ್ಪಾಲು ಹಾಸಲು 4 ಆಣೆ

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ ರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗಳ ಪ್ರತಿಪದ ಟೀಕಾ, ಕಥಾರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ 4, ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127 2]

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ಕು ಪಬ್ಲಿಷರ್ಸ್ ಬೆಂಗಳೂರು ಸಿಟಿ

ಗರ್ಭಿಣೀಶಿಶುಸಂರಕ್ಷಣಾ.

MIDWIFERY—ಕನ್ನಡ ಮಿಡ್‌ವೈಫರಿ ಸ್ತ್ರೀಯರಿಗೂ ಮಿಡ್‌ವೈಫ್ ಪರೀಕ್ಷೆಗೆ ಓದುವವರಿಗೂ ಪ್ರಯೋಜನವಾದದ್ದು ಕ್ರಯ ೧೨ ಆಣೆ [19 23]

ವಿಳಾಸ ಪ್ರಾವಿನ್ಷಿಯಲ್ ಬುಕ್ ಡಿಪೋ, ಮೈಸೂರು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

ಒಳ್ಳೇ ಟೋಪಿಗಳು ಯಾವುವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದವನ್ನು ಅದೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಗಟ್ಟಿಯಾಗಿ ... ಬರುವದು (೨) ಟೋಪಿಗಳನ್ನು ... ಉಳ್ಳಾಗಿ ... ಕಳುಹಿಸುತ್ತೇವೆ

ಒಳ್ಳೆಯದಾದ ಚನ್ನಾಗಿ ... ಬಹು ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ... ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೨ ಆ ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮ ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ ೧ ರೂ ೩ ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ

ಕೂಸುಗಳ ಟೋಪಿ, ಪೂರ್ತಿ ಮೋಜೋಡು, ಅರ್ಧ ಮೋಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಒಳ್ಳೇ ಸಮಯವಾಗಿದೆ—ಬೇಗ ತರಿಸಿಕೊಳ್ಳಿರಿ

ತರಕಾರಿ ಬೀಜಗಳು 10 ಪ್ಯಾಕೆಟ್ಟು ರೂ 6, 20 ಪ್ಯಾಕೆಟ್ಟು ರೂ 3? 12 ಪ್ಯಾಕೆಟ್ಟು ರೂ 2 ಹೂವಿನ ಬೀಜಗಳು 40 ಪ್ಯಾಕೆಟ್ಟು ರೂ ?, 20 ಪ್ಯಾಕೆಟ್ಟು ರೂ 3 12 ಪ್ಯಾಕೆಟು ರೂ ? ಗುಲಾಬಿ (ರೋಜಾ) ಗಿಡಗಳು 100 ಕ್ಕೆ ರೂ 1? ರಿಂದ 2? ವರೆಗೆ ಡಜನ್ ರೂ 3 ರಿಂದ ರೂ 5 ಕಟ್ಟಿದ ಮಾವಿನ ಗಿಡಗಳು 100 ಕ್ಕೆ ರೂ 60 ರಿಂದ 70 ಡಜನ್ ರೂ 8 ರಿಂದ ರೂ 10 ಕಟಿದ ಕಿತ್ತಳೆ ... ಡಜನ್ ರೂ 4 ರಿಂದ 6 ಇನ್ನೂ ಬೇರಾದ ಅನೇಕ ತರಹಾ ಗಿಡಗಳು ಬೀಜಗಳು, ಹಣ್ಣು, ಹೂವು ತರಕಾರಿ ... ಕ್ಯಾಟಲಾಗ್ (ಕ್ರಯಪಟ್ಟಿ) ತರಿಸಿಕೊಳ್ಳಿರಿ [125 2]

ಬಿ ಎಲ್ ಜೈಯಣ್ಣ ಬ್ರದರ್ಸ್,

೬೩ ಲಾಲ್‌ಬಾಗ ರೋಡ್, ಬೆಂಗಳೂರು ಸಿಟಿ

ಹೊಸಪುರದ ಇನಾಂದಾರ್ರವರ ಇಸ್ತಿಹಾರು

ನಂಜನಗೂಡು ತಾ ಹೊಸಪುರಗ್ರಾಮದ ನಮ್ಮ ರೈತರು ಇತರ ಜನಗಳ ದುಮೋಧನೆಯಿಂದ ತಮ್ಮ ಮನೆಗಳ ಮೇಲ್‌ಛಾವಣಿಗಳನ್ನು ಕಿತ್ತುಕೊಂಡು ಇತರ ಗ್ರಾಮಗಳಿಗೆ ವಾಸಕ್ಕೆ ಹೋಗುವರಾಗಿರುವರೆಂತ ತಿಳಿಯಬರುತ್ತೆ ಇದು ನಿಜವಾದ ಪಕ್ಷ ಬೇರೆ ಜನಗಳನ್ನು ತ ... ಮನೆ ಕಟ್ಟಿಸಿ ಗ್ರಾಮ ... ಕಾಗದ ಕೆ ಮಾಡಬೇಕೆಂದಿದ್ದೇನೆ ಹೀಗಿರುವಲ್ಲಿ ಕೆಲವರು ಅಂಥಾ ನಿವೇಶನಗಳನ್ನು ಅವರುಗಳಿಂದ ಕ್ರಯಕ್ಕೆ ಪಡೆಯುವದಾಗಿ ತಿಳಿಯಬರುತ್ತೆ ಇದು ನಿಜವಾದಪಕ್ಷ ನಿವೇಶನಗಳನ್ನು ನಮ್ಮ ಅನುಮತಿ ಪಡೆದು ... ರೂಲ್ಸು ಪ್ರಕಾರ ಮನೆಗಳನ್ನು ಕಟ್ಟಿ ಜನಗಳನ್ನು ವಾಸವಾಗಿಸ... ತಕ್ಕಂತೆ ಏರ್ಪಾಟು ಮಾಡಬೇಕು ... ಇತರ ಕೆಲಸಕ್ಕೆ ಉಪಯೋಗಿಸಿದಲ್ಲಿ ... ನಷ್ಟಕ್ಕೆ ... ಹೊಣೆ ...

[138 2] ಹೊಸಪುರದ ಇನಾಂದಾರ್

ನಮ್ಮ ಏಜಂಟರಿಗೆ ನೋಟೀಸ್

... "ವೃತ್ತಾಂತ ಪತ್ರಿಕೆ"ಯ ... ನಮ್ಮ ಏಜಂಟರುಗಳು ... ರಸೀದಿ ಪುಸ್ತಕ, ಬಿಲ್ಲು ಪಟ್ಟಿಗಳನ್ನು ... ಆಗಸ್ಟ್ ಪ್ರಾರಂಭದಿಂದ ... ಯಾರಿಗೂ ಪತ್ರಿಕೆಗಳನ್ನು ... ಹೊಸದಾಗಿ ... ಒಂದು ವರುಷದ ... ಗೆ ... ಹಂಚುವ ಕ್ರಮವಾದ ... ಪಡೆದುಕೊಳ್ಳಬೇಕೆಂದೂ ಈ ಮೂಲಕ ಪ್ರಕಟಪಡಿಸುತ್ತೇನೆ

ಮ್ಯಾನೇಜರ್ ವೃತ್ತಾಂತ ಪತ್ರಿಕೆ ಮೈಸೂರು

ಪರೀಕ್ಷಿಸಿ ನೋಡದ ಅಗ್ಗದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ಬೆಳೆಯಾಗುತ್ತಿವೆ ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಉದಾಸೀನದಿಂದ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತುಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ" ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿ ಬೆಳೆಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಳಚಳನೆ ... ಕೂಡಿ, ಆಗಾಗ್ಗೆ ಹಂದು ಬಿದ್ದು ಹೋಗದೆ ... ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ ... ಹೊಟ್ಟನ್ನು ... ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ... ಕೂದಲಿಗೆ ಹಚ್ಚಿಕೊಳ್ಳಲು ... ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ... ಕೋಮಲವಾಗಿಯೂ ಇಟ್ಟು ಬೆಳೆಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಜೋಡಿಯೇ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ

ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-4 0 ಬೇರೆ ತೆರಬೇಕು

3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ

ಮೈಸೂರು ಎಗ್ಜಿಭಿಷನ್ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ॥ ಡಿ ... ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆಸೆಪಟ್ಟು ಹಚ್ಚಿಕೊಳ್ಳುತ್ತಾರೆ" ವಿರುದುಪಟ್ಟಿ ಕೆ ವಿ ಎಸ್ ಹೈ ಸ್ಕೂಲ್ ಹೆಡ್ ಮಾಸ್ಟರ್ ಮಿ॥ ಎಂ ಸುಬ್ರಹ್ಮಣ್ಯಪಿಳ್ಳೆಯವರು ಬರೆಯುವದು—"ನಿಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ಪರೀಕ್ಷೆಮಾಡಿದೇನೆ ಅದು ಕೂದಲನ್ನು ಹುಟ್ಟಿಸುವದಾಗಿಯೂ, ಕೋಮಲವಾಗಿಯೂ, ಸೊಂಪಾಗಿಯೂ ಬೆಳೆಸುವುದೆಂದು ಖಂಡಿತವಾಗಿ ಹೇಳಬಲ್ಲೆನು ದಯವಿಟ್ಟು ಇನ್ನು ಮೂರು ಬಾಟ್ಲಿ ಎಣ್ಣೆ ಕಳುಹಿಸಿಕೊಡಿ" ಪನೆಟಾ ಡೆಪ್ಯುಟಿ ಕಂಟ್ರೋಲರ್ ಆಫೀಸ್ ಮಿ॥ ಗೋಪಾಲಹರಿ ... ಯವರು ಬರೆಯುವದು—"ದಯವಿಟ್ಟು ನನ್ನ ಕಾಮಿನಿಯಾ ಎಣ್ಣೆ ಆರು ಬಾಟ್ಲಿ ಕಳುಹಿಸಿಕೊಡಿ ಒಂದು ತಿಂಗಳ ಹಿಂದೆ ನೀವು ಕಳುಹಿಸಿದ ಬಾಟ್ಲಿಗಳು ಮುಗಿದುಹೋಯಿತು ಇದೇ ಉತ್ತಮೋತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳಬಲ್ಲೆನು" ಆದಕಾರಣ ನೀವು ಒಂದು ಸಲ ತರಿಸಿ ಪರೀಕ್ಷೆ ಮಾಡಿ

ಎಚ್ಚರಿಕೆ—ಜೋಡಾಗಿ ಇಟ್ಟಿರುವ ಪಾತ್ರೆಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ... ನಮ್ಮ ... ಹೆಸರು ವಿಳಾಸದ ಸಮೇತ ನಮಗೆ ... ನೀವು ಕೊಳ್ಳುವಾಗ್ಗೆ ಮೋಸಗಾರರಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಬಿಕರಿಮಾಡುತ್ತಾರೆನ್ನುವದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು ಈ ಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು

ಏಜೆಂಟ್, ದಿ ಉಲನ್ ಮಾರ್ಟ್ ಮಂಗಳೂರು

ನಮ್ಮ ವಿಳಾಸ — [8 25]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸೀದ್. ಬೊಂಬಾಯಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

13—6—1913 ರಿಂದ 20—6—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	11	8	24	12
ಕೋಲಾರ್ ,,	0	0	0	7
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	7	3
ಹಾಸನ ,,	6	5	76	59
ಚಿತ್ರದುರ್ಗ ,,	0	0	88	35
ಕಡೂರ್ ,,	3	3	45	22
ಶಿವಮೊಗ್ಗ ,,	0	0	5	6
ಜುಮ್ಲಾ	20	16	251	144

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ಉತ್ತರಾಯಣೇ ಗ್ರೀಷ್ಮಯತೌ ಜ್ಯೇಷ್ಠ ಬಹುಳ ಅಮಾವಾಸ್ಯೆ ಶುಕ್ರವಾರದಿಂದ ಆಷಾಢ ಶುದ್ಧ ಸಪ್ತಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಜೂಲೈ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಥುನ ಮಾಸ ತೇದಿ
4	ಶುಕ್ರ	ಅಮಾವಾಸ್ಯೆ	11 17	ಆರಿದ್ರಾ	16 42	21
5	ಶನಿ ‡	ಪಾಡ್ಯಮಿ	7 18	ಪುನರ್ವಸು	11-31	22
6	ಭಾನು	ಬಿದಿಗೆ	2 30	ಪುಷ್ಯ	54 56	23
7	ಸೋಮ §	ಚೌತಿ	51 23	ಆಶ್ಲೇಷ	8 4	24
8	ಮಂಗಳ †	ಪಂಚಮಿ	45-6	ಮಖಾ	1 8	25
9	ಬುಧ	ಷಷ್ಠಿ	38-18	ಉತ್ತರಾ	55 40	26
10	ಗುರು	ಸಪ್ತಮಿ	33 45	ಹಸ್ತ	51 13	27

‡ ನಂಜನಗೂಡಿನಲ್ಲಿ ಮಾರ್ಕಂಡೇಯೋತ್ಸವ, ಚಂದ್ರೋದಯ, ಪಾಚಾರ್ ಚಂದ್ 1 ಮಳೆ ನಕ್ಷತ್ರ—ಪುನರ್ವಸು 1 ನೇ ಪಾದ § ದೇಶರಾಜೆ ಅರಸಿನವರ ಕುಮಾರರ ವರ್ಧಂತಿ † ವಗ್ದಯೋಗ, ಮಳೆ ನಕ್ಷತ್ರ—ಪುನರ್ವಸು 2 ನೇ ಪಾದ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಶಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೬-೦-೦	೧೭-೮-೦
ಕೆಂಬೂತಿ ಅಕ್ಕಿ ಅವಲ್	೧೬-೮-೦	೧೭-೮-೦
,, ,, ದುಯಂ	೧೫-೮-೦	೧೭-೦-೦
ಜಾಪಾನ್ರಾಣಿ ಅಕ್ಕಿ	೧೬-೦-೦	೧೭-೪-೦
ಸಣ್ಣಕ್ಕಿ ಅವಲ್	೨೨-೦-೦	೧೮-೮-೦
,, ದುಯಂ	೧೭-೦-೦	೧೭-೮-೦
ತೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ	೨೫-೮-೦	೧೯-೮-೦
,, ದುಯಂ ,,	೧೪-೮-೦	೧೩-೮-೦
ಕ್ಯಾರ್ ರಾಗಿ ಪಲ್ಲಾ ೧ಕ್ಕೆ	೭-೧೨-೦	೫-೦-೦
ಕಾರ್ರಾಗಿ ,,	೬-೧೨-೦	೪-೧೨-೦
ಜೋಳ ,,	೭-೪-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ	೨೦-೮-೦	೧೯-೧೨-೦
ಬೇಳೇ ಅವರೆ ,,	೧೯-೦-೦	೧೧-೦-೦
ಹೆಸರು ,,	೨೩-೪-೦	೧೪-೦-೦
ಉದ್ದು ,,	೧೯-೦-೦	೧೬-೦-೦
ಕಡಲೆ ,,	೧೧-೭-೦	೧೨-೦-೦
ಎಳ್ಳು ಸೇರು ೧೨೭ಕ್ಕೆ	೩೪-೦-೦	೩೪-೦-೦
ಹುರುಳಿ ಪಲ್ಲಾ ೧ಕ್ಕೆ	೭-೨-೦	೭-೦-೦
ಹರಳು ೧೨೭ ಸೇರಿಗೆ	೧೯-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೯-೮-೦
ಮೆಣಸಿನಕಾಯಿ ,,	೪-೦-೦	೯-೪-೦
,, ದುಯಂ	೯-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೪-೮-೦	ಮಣ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೧೦-೦	೬-೬-೦
ಹರಳೆಣ್ಣೆ ,, ,,	೫-೪-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫-೬-೦	೫-೪-೦
ಉಪ್ಪು ,, ,,	೬-೪-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧-೧೨-೦	೧-೪-೦
,, ಹಳೇದು ,,	೧-೯-೦	೦-೧೪-೦
ತುಪ್ಪ ಮಣ ೧ಕ್ಕೆ	೨೨-೦-೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೧೧-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೭-೦-೦	೬-೦-೦
ಅಳಲೇಕಾಯಿ ಮಣ ೧ಕ್ಕೆ	೧-೬-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೧-೨-೦	೧-೮-೦
ಚಿನ್ನ (ಸಾ°) ಕೆಂಪು	೧೫-೮-೦	೧೫-೮-೦
,, ,, ಪಸಿಮೆ	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೯-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ ...	೮೧-೦-೦	೮೧-೯-೦

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡುಹಿಡಿದ ಕೆಮ್ಮಿನ ಔಷಧವು

1 27



ಶೀತದ ಕೆಮ್ಮು, ಗಂಟ್ಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರಗ ಶೀತ, ಗಂಟ್ಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಚಾಪ್ರಾಯವಾದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಿಸಿಬಿಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಪ್ರಭಾವನ್ನು ನಿಲ್ಲಿಸಿಬಿಡುತ್ತವೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ಸೀಘ್ರ ಸುಖವಾಗಿ ಎದ್ದೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷದವಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಸಮಸ್ತ ವಿಧವಾದ ನೋವೂ ಇರಿತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಚಳ್ಳಿನ ಸೆಳತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ಬಿಕರಿಯಾಗುತ್ತಲಿವೆ ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲ ಬಿಕರಿಯಾಗುವದು

ಮಳೆಕಡ್ಡಿ ಔಷಧ ಡಬ್ಬಿಗೆ 6 ಆಣೆ, 12 ಕುಪ್ಪಿಗೆ ರೂ 3-8-0. ಹಲ್ಲುಪುಡಿ ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ 1-2-0 ವಿ ಪಿ. ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ [12-10]

ವಿಳಾಸ —ಅಮೃತಾಂಜನ ಡಿಪೋ, ೧೯ ಫ್ರೈಯರ್ ರೋಡ್, ಫೋರ್ಟ್, ಬೊಂಬಾಯಿ

ಡೋಂಗರೆ ಇವರ ಬಾಲಾಮೃತ.

[115-51]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತು ೧೨ ಆಣೆ, ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ 8 ಆಣೆ ಅರಕ್ಕೊಂದು ಉಚಿತ

[187 21] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಪ್ರಖ್ಯಾತವಾದ ಪೌರ್ಸಿ ಫ್ಲೂಟ್ ಹಾರ್ಮೋನಿಯಂ



ಉತ್ಕೃಷ್ಟ ಪದಾರ್ಥ, ಯಾವ ಹವೆಯಲ್ಲೂ ಹೇರುಫೇರಾಗದ ಬಹು ಬಲಿಷ್ಠವಾದ ಮರ, ರೀಡುಗಳು ಅತ್ಯಂತ ಶ್ರೇಷ್ಠವಾದವು, ನಾದವು ಮಹಾ ಸುಖಕರವಾಗಿವೆ ಇದರಷ್ಟು ಬಾಳಿಕೆ ಬರುವದು ಬೇರೊಂದಿಲ್ಲ, ಮೂರೂ ಕಾಲು ಆಕ್ಟೇವುಗಳು, ಒಂದು ಸೆಟ್ ರೀಡುಗಳು, ಬ್ಯಾಕ್ ತಿತ್ತಿಗಳು ಪಾರ್ಸಿ ಮತ್ತು ಹಿಂದೂ ಸಂಗೀತಕ್ಕೆ ಬಹಳ ಹಿತಕರವಾಗಿವೆ ಎಲ್ಲೆಲ್ಲೂ ಪ್ರಚಾರಕ್ಕೆ ತರಬೇಕೆಂದು ಇದರ ಕ್ರಯವನ್ನು ಬಹಳ ಕಡಮೆಮಾಡಿದೆ ಬೇಗ ನೋಡಿ ಇಂಥಾ ಒಳ್ಳೇ ಸಮಯವನ್ನು ಕಳಕೊಳ್ಳದೆ ಕೊಂಡಿಟ್ಟುಕೊಳ್ಳಿ ಕ್ರಯ ರೂ 25 ರೈಲ್ ಛಾರ್ಜು ಪ್ರತ್ಯೇಕ ಅಡ್ವಾನ್ಸು 5 ರೂ ಬಂದಲ್ಲದೆ ನಾವು ಕಳುಹಿಸಲಾರೆವು ನಮ್ಮ ವಿಳಾಸ — [119-3]

ಮ್ಯಾನೇಜರ್, ಬಾಂಬೆ ಪಾಪ್ಯುಲರ್ ಏಜನ್ಸಿ,
ಧಾರಾವಿ, ಬೊಂಬಾಯಿ.

ಅಜ್ಮೀರ್ ಜನರಲ್ ಇನ್ಷೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮಾ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭರವಸೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮಾ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[109 5] ಎಸ್ ಕಬ್ಬೂರ್, ಬ್ರಾಂಚ್ ಸೆಕ್ರಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ.

ಕುಂತಳಾನಂದ ತೈಲವು.

147-41

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ:—ಬಿ ಎಮ್ ನಾಥ ಮತ್ತು ಕಂಪನಿ,
ವೇಪೇರಿ, ಮದರಾಸ್.

ರಾತ್ರಿಯ ತುಪ್ಪವು

ಒಂದು ವರ್ಷದವರೆಗೆ ಇಟ್ಟಿದ್ದರೂ ಕೆಡಲ್ಲಿ!

(1) ಎಲ್. ಕೋದಂಡರಾಮಯ್ಯನವರು, ಆಕ್ಟಿಂಗ್ ತಹಸೀಲ್ದಾರ್, ಹೊಸಕೋಟೆ — ನಿಮ್ಮಿಂದ ತರಿಸಿದ ಹತ್ತಿಯ ತುಪ್ಪವು 1 ವರ್ಷವಾದ ಮೇಲೂ ಹೊಸ ತುಪ್ಪದಂತೆ ಸುವಾಸನೆಯಾಗಿದೆ. ಅದರಲ್ಲಿ ಬೆರೆಯಿಸಿದ ಸಾಮಾನೂ ಹೊಸ ತುಪ್ಪದಲ್ಲಿ ಮಾಡಿದಂತೆ ಇದೆ. ಅಧ್ಭುತವಾಗಿ ಮಾರುವುದು ಎಣ್ಣೆ ಬೆರೆಸಿರುವುದರಿಂದ ಅನಾರೋಗ್ಯವನ್ನುಂಟುಮಾಡುತ್ತದೆ. ನಂಬಿಕೆಯಾದ ಏಜಂಟರು ದೊರೆಯುವ ವರೆಗೆ ನಮ್ಮ ಕಂಪೆನಿಯಿಂದಲೇ ನೇರಾ ತರಸಿಕೊಳ್ಳಬೇಕು

ಎಚ್ಚರಿಕೆ!

ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಬೆ ಎಣ್ಣೆ, ಇವುಗಳನ್ನು ಕೊಟ್ಟು ಇದು ಹತ್ತಿಯ ತುಪ್ಪವೆಂದು ಅಧ್ಭುತವಾಗಿ ಮಾರುವುದೂ ಬಲವಾಗುತ್ತಿವೆ.

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ.

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

[110-1] 159, ಕಿಲಾರಿ ರೋಡ್, ಬೆಂಗಳೂರು ಸಿಟಿ.

ಲೇಡೀಸ್ ವಾಚ್.

ಇದರ ಅನುಕೂಲ ಮತ್ತೆ ಯಾವದಕ್ಕೂ ಇಲ್ಲ. ನಿಮ್ಮ ಇಚ್ಛೆ ಬಂದಂತೆ ಕೈಯಲ್ಲಿಯೂ ಕಟ್ಟಿಕೊಳ್ಳಬಹುದು ಜೇಬಿನಲ್ಲಿಯೂ ಹಾಕಿಕೊಳ್ಳಬಹುದು ಸರಿಯಾದ ಕಾಲವನ್ನು ತೋರಿಸತಕ್ಕದ್ದು ತಲೆಯಲ್ಲಿ ಬೀಗವುಳ್ಳದ್ದು ಶುದ್ಧವಾದ ನಿಕಲ್ ಮುಚ್ಚಳವುಳ್ಳದ್ದು ಸುಂದರವಾದದ್ದು ಖಾತ್ರಿಯಾದವೂ ಇದರ ಕ್ರಯ ಸುಂದರವಾದ ವಾಚ್ ಸರಪಣಿ ಮತ್ತು ಕೈಯಲ್ಲಿ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಮೇತ



ರೂ 1-8-0 ಮಾತ್ರ. [77-11]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ಬಿ ಆರ್ ವೆಂಕಟರಮಣ ಅಂಡ್ ಕಂಪನಿ,

ನಂ 7 ಕೋಪ ವಂಕಟಾಚಲಯ್ಯರ್ ಬೀದಿ, ಮದರಾಸು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

104 6

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಜ್ವಾಲಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿತ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 13 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ ನಿನಗೂ ಖಂಡಿತವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 13 ಆಣೆ ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಫ್ರೀ ಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಜೆ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ನಮೂನೆ ಮುಫತ್ತು

ಕೇಶಕುಸುಮಾಕರ ತೈಲವು.

ಗುಣಯುಳ್ಳ ಈ ತೈಲವು ಜ್ಞಾನ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸಮಾಡುವದರಲ್ಲಿಯೂ, ಒಟ್ಟಿನಲ್ಲಿ ಕೇಶವನ್ನು ಬೆಳಸುವದರಲ್ಲಿಯೂ ಮಿದುಳನ್ನು ಎಲವಡಿಸುವದನ್ನುಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ, ನೆತ್ತಿಗೆ ತಂಪನ್ನುಂಟುಮಾಡುವದರಲ್ಲಿಯೂ, ಅದ್ವಿತೀಯ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ.

ಒಂದು ಬುದ್ಧಿ ತೈಲ ಕ್ರಯ 10 ಆಣೆ ಮೂರು ಬುದ್ಧಿಗಳ ತೈಲ ಕ್ರಯ ರೂ 1 12 ಆ ಆರು ಬುದ್ಧಿಗಳ ತೈಲ ಕ್ರಯ ರೂ 3-4 ಆ ಡಜನ್ ಬುದ್ಧಿಗಳ ಕ್ರಯ ರೂ 6

ವಿ ಪಿ ಅಂಚೇ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ

[82 10] ಔಷಧಾಲಯ, 177 ಒಂದಾ ಬಜಾರ್ ರೋಡ್, ಮದ್ರಾಸು.

ಪ್ರತಾಪಕಂಠೀರವ ಚರಿತ್ರೆ.

(1) ಧರ್ಮಸ್ವರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ಕೊನೆಗೆ ಕೈಗೂಡುತ್ತವೆ ಎಂಬ ನೀತಿ, (2) ಶ್ರೀಧರ್ಮ ಸ್ತ್ರೀಬುದ್ಧಿಕೌಶಲ್ಯ ಪ್ರೀತಿಯುಕ್ತ ಸಾಹಸ ಚತುರ, (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು, (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ವಿರುದ್ಧವಾದ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭ ಶೈಲಿ, (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ. ಕ್ರಯ —1 ರೂಪಾಯಿ, ಟಪಾಲ್ ಹಾಸಲು ಬೇರೆ.

[16-19] ನಮ್ಮ ವಿಳಾಸ — ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ.— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಜೋಡೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಜಾಗೆಯ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಯೂ ದಾರಿಕೊಡದೆ, ನೀರುಗಳ ಹವಾ ಬದಲ ವೆಳೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಬುದ್ಧಿ ಶುದ್ಧಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕೈಕಶ್ಯಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ —320 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ [136-44]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ) ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕ್ಷೆಮಾರಿಂದು ಹೋರಿದಾಗಲೂ ಅಶ್ವರ್ಯಕರವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಕೆ, ಮೂತ್ರವು ಕಟ್ಟಿದರೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ಧಿಯು ನಿಮ್ಮಲ್ಲಿದ್ದರೆ ಔಷಧೋಪಚಾರ ಸಹಾಯವನ್ನು ಅಪೇಕ್ಷಿಸುವ ಕಾಲದವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ. ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಗೋಡೆಗೆ ಹಾಕುವ ಎಂಟು ದಿನಗಳಿಗೊಂದಾವರ್ತಿ

ಕೀಗ ಕೊಡುವ ದೊಡ್ಡ ಗಡಿಯಾರಗಳು

ಕೆಳಗಿನ ಪಟ್ಟಿಯಲ್ಲಿ ತೋರಿಸುವ ದೊಡ್ಡ ಗಡಿಯಾರಗಳನ್ನು ಅನೇಕರು 17 ರೂಪಾಯಿಗೆ ಕಮ್ಮಿಯಿಲ್ಲದೆ ಮಾರುತ್ತಲಿದಾರೆ. ಇದು ಸರ್ವರಿಗೂ ಉಪಯೋಗವಾಗಬೇಕೆಂಬ ಉದ್ದೇಶದಿಂದ ನಾವು ಇದನ್ನು ಅರ್ಧ ಕ್ರಯಕ್ಕೆ ಜುಲಾಯಿ ಆಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಕೊಡುತ್ತೇವೆ.



Rs 8-8-0

ಇದು ಬ್ಯಾಂಕುಗಳು, ಕೋರ್ಟು, ಕಚೇರಿ, ಸ್ಕೂಲ್, ಜವಳಿ ಅಂಗಡಿ, ಮೊದಲಾದ ಸ್ಥಳಗಳಲ್ಲಿ ಇರಿಸುವುದಕ್ಕೆ ಲಾಯಖಾದದ್ದು. ಎಂಟು ದಿನಗಳಿಗೊಂದಾವರ್ತಿ ಕೀಗೊಡತಕ್ಕದ್ದು. ಅನೇಕ ವರುಷಗಳು ಉಪಯೋಗಿಸಿದಾಗ್ಯೂ ಕೆಟ್ಟುಹೋಗದು ಇದರಲ್ಲಿ ಅನೇಕ ತರವಾದ ಗಡಿಯಾರಗಳು ಈಗನೇ ಸೀಮೆಯಿಂದ ಬಂದಿರುತ್ತೆ. ಇದರಲ್ಲಿ ಕೆಲವು ತರಹಗಳು ಮಾತ್ರವೇ ಈ ಕೆಳಗೆ ನಮೂದಿಸುತ್ತೇವೆ. ಅನೇಕರು ಇಂಥಾ ಚಾರಿ ಕ್ರಯದ ಗಡಿಯಾರವನ್ನು ಇಷ್ಟು ಸುಲಭ ಖರೀದಿಗೆ ಕೊಡುವದು ಸುಳ್ಳೆಂದು ಹೇಳುತ್ತಲಿದಾರೆ. ಯಾರಾದರೂ ನಮಗೆ ಒಂದನ್ನು ತರಿಸಿಕೊಂಡರೆ ಇದರ ನಿಜಸ್ಥಿತಿ ನಿಮ್ಮ ಗೊತ್ತಾಗುತ್ತದೆ. ತಾಜಾಕಲಂ —ದರ ಮಾಡುದಾರರು ಮುಂದಾಗಿ 2 ರೂಪಾಯಿ ಅಡಾನ್ಸ್ ಕಳುಹಿಸಬೇಕು

ವಿಳಾಸ —ಪ್ಲಾ ಅಂಡ್ ಕಂಪನಿ, ಜನರಲ್ ಮರ್ಚೆಂಟ್ಸ್ ಮುನ್ಸಿ ಸ್ಟ್ರೀಟ್,

[118 4] 39, ಸಾಹುಕಾರ್ ಪೇಟೆ, ಮದರಾಸ್

ರಾಸ್‌ಕೋಫ್ ಸಿಸ್ಟಂ ಲೀವರ್ ರಿಜಿಸ್ಟರ್ಡ್ ಗಡಿಯಾರ

ಇದರ ಕ್ರಯ ಇದರ ಸರಪಣಿ ಸಮೇತ [illegible]

ರೂ 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ

ಟಪಾಲ್ ಖರ್ಚು ಪ್ರತ್ಯೇಕ 1 ಕ್ಕೆ 4 ಆಣೆ

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾಗಿದೆ. ನೋಡುವದಕ್ಕೆ ಗಂಭೀರವಾಗಿಯೂ ಏರು ಸು ವರವಾಗಿಯೂ ಇರುತ್ತೆ. ಬಡವರು ಕೂಲಿ ಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ಸ್ಥಿರವಾಗಿ ನಡೆಯುತ್ತದೆ. ಇದು ಎಂದಿಗೂ ನಿಲ್ಲದೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ ಕೂಡ್ಲೆ ಬರೆದು ತರಿಸಿಕೊಳ್ಳಿ.

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,

[120 4] ಪೋಸ್ಟ್ ಬಾಕ್ಸ್, ನಂ 167, ಮದರಾಸು.

ಮುಖ್ಯವಾಗಿ ಗಮನಿಸಿ ಓದಿರಿ

ಹೆಂಗಸರು ಮತ್ತು ಗಂಡಸರು ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ

ಈ ಪಟ್ಟಿಯಲ್ಲಿ ಕಂಡ ಲೆದರ್ ವಾಚ್ ಕೇಸಿಸ್ ಲೀವರ್ ವಾಚ್ ನೆ ಸಿಕ್ಕು ಕಾನ್ಫರ್ ಗ್ಯಾರ್ಡ್ ಬ್ರೇಸ್ಲೆಟ್ ಒಂದು ಬಲವಾದ ಪಾಯಿದೆಯ ಚರ್ಮದ ಪಟ್ಟಿ ನೊಂದಿಗೆ ಗಡಿಯಾರ ಕೆಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 3 10 ಇದನ್ನು ನೆಟ್ಟ ಬಗ್ಗೆ ಅಕ್ವೆರ್ಡರ್‌ಗಳಿಗಾಗಿ ಶರಸಿಕೊಳ್ಳುವವರಿಗೆ 10 ಗಂಟೆಗೊಂದಾವರ್ತಿ ಕೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ —ಧನಲಕ್ಷ್ಮಿ ಅಂಡ್ ಕಂಪನಿ

[121 2] ಸಾಹುಕಾರ್ ಪೇಟೆ ಪೋಸ್ಟ್, ಮದರಾಸು.

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ —1 ಪಿನಲ್‌ಕೋಡು, 2 ದೊಡ್ಡೀ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ದಸ್ತವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಧುಮ್ರಪಾನ ಸೇವಿಸಕೂಡದೆಂಬ ರೆಗ್ಯುಲೇಷನ್, 8 ಬಾಲ್ಯವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿದೆ.

ಪ್ರತಿ ಪಿನಲ್ ಸೆಕ್ಷನ್‌ಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ? ಯಾ ಕೂಡದೆ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟ್ಟಬೇಕೇ? ಜಾಮಿನ್ ತೆಗೆದುಕೊಳ್ಳಬಹುದೆ? ಯಾ ಕೂಡದೆ? ರಾಜಿಯಾಗಬಹುದೇ? ಯಾ ಕೂಡದೆ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ. ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ. 22-6 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ. ಕ್ರಯ ರೂಪಾಯಿ 2-0 0 ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ವೇಮಾರೆಡ್ಡಿ,

ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್,

[103-6] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್.

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಸ್ವಾಯಶಃ ಶರೀರಕ್ಕೆ ರೋಗವುಂಟಾಗುವುದು.

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಶೇಷವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು, ಮನವು, ಸಿತ್ತಾರಿ ಇವೇ ಮೊದಲಾದವು. ಅಲಕ್ಷ್ಯಮಾಡಿದರೆ ಮೂತ್ರಪ್ರಮೇಹ, ವಾಯು, ಮೈಬಾವು, ಊರುಮೂತ್ರ, ಮೂತ್ರಕೋಶದ ಕ್ಷಯಪೀಡೆಗಳುಂಟಾಗುವುವು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳೂ, ಇವೆಲ್ಲಾ ಉಂಟಾಗುವುವು.

ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು. [142 43]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು.



ರೂ. ೩—೦—೦ ಅಥವಾ ೬ ಬುದ್ಧಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು ಅಥವಾ ಡೋನ್ಸ್, ಪಿ ಒ ಬಾಕ್ಸ್ ೩೦, ಬೊಂಬಾಯಿ—ಇವರಲ್ಲಿ ದೊರೆಯುವುವು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

13—6—1913 ರಿಂದ 20—6—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	0	0	0	0
ಮೈಸೂರು ,,	11	8	24	12
ಕೋಲಾರ್ ,,	0	0	9	7
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟು	0	0	7	3
ಹಾಸನ ,,	6	5	76	59
ಚಿತ್ರದುರ್ಗ ,,	0	0	88	35
ಕಡೂರ್ ,,	1	1	15	22
ಶಿವಮೊಗ್ಗಾ ,,	0	0	5	6
ಜುಮ್ಲಾ	20	16	254	144

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ಉತ್ತರಾಯನೆ ಗ್ರೀಷ್ಮ ಋತೌ ಜ್ಯೇಷ್ಠ ಬಹುಳ ಅಮಾವಾಸ್ಯೆ ಶುಕ್ರವಾರದಿಂದ ಆಷಾಢ ಶುದ್ಧ ಸಪ್ತಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಜೂಲೈ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಥುನ ಮಾಸ ತೇದಿ
4	ಶುಕ್ರ	ಅಮಾವಾಸ್ಯೆ	11-17	ಆರಿದ್ರಾ	16 12	21
5	ಶನಿ ‡	ಪಾಡ್ಯಮಿ	7 18	ಪುನರ್ವಸು	11 31	22
6	ಭಾನು	ಬಿದಿಗೆ	2-30	ಉಷರಿ	51-55	23
7	ಸೋಮ §	ಚೌತಿ	51-23	ಆಶ್ಲೇಷ	8 4	24
8	ಮಂಗಳ †	ಪಂಚಮಿ	45 6	ಮಖಾ	4 8	25
9	ಬುಧ	ಷಷ್ಠಿ	38 18	ಉತ್ತರಾ	55 19	26
10	ಗುರು	ಸಪ್ತಮಿ	32 45	ಹಸ್ತ	51 13	27

‡ ನಂಜನಗೂಡಿನಲ್ಲಿ ಮಾರ್ಕಂಡೇಯೋತ್ಸವ, ಚಂದ್ರೋದಯ, ಷಾಬಾಕ್ ಚಂದ್ 1 ಮಳೆ ನಕ್ಷತ್ರ—ಪುನರ್ವಸು 1 ನೇ ಪಾದ § ದೇವರಾಜ ಅರಸಿನವರ ಕುಮಾರರ ವರ್ಧಂತಿ † ವೃದ್ಧಿಯೋಗ, ಮಳೆ ನಕ್ಷತ್ರ—ಪುನರ್ವಸು 2 ನೇ ಪಾದ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೬-೦-೦	೧೭ ೮-೦
ಕೆಂಬೂತಿ ಅಕ್ಕಿ ಅವಲ್	೧೬-೮ ೦	೧೭ ೮ ೦
,, ,, ದುಯಂ	೧೫-೮-೦	೧೭-೦-೦
ಜಾಪ್ರಾಣಿ ಅಕ್ಕಿ	೧೬-೦ ೦	೧೭-೪-೦
ಸಣ್ಣಕ್ಕಿ ಅವಲ್	೭೮-೦ ೦	೧೮-೮-೦
,, ದುಯಂ	೧೭-೦-೦	೧೭ ೮ ೦
ತೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ	೭೫ ೮ ೦	೧೩-೮-೦
,, ದುಯಂ ,,	೧೪-೮-೦	೧೨-೮ ೦
ಹೈಟ್ ರಾಗಿ ಪಲ್ಲಾ ೧ಕ್ಕೆ	೭ ೧೨-೦	೫ ೦ ೦
ಕಾರ್ರಾಗಿ ,,	೬-೧೨-೦	೪ ೧೨-೦
ಜೋಳ ,,	೭ ೪-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ	೭೦-೮-೦	೧೩-೧೨-೦
ಬಿಳೀ ಅವರೆ ,,	೧೩-೦ ೦	೧೧-೦ ೦
ಹೆಸರು ,,	೭೨ ೮ ೦	೧೪ ೦-೦
ಉದ್ದು ,,	೧೩-೦-೦	೧೬-೦-೦
ಕಡಲೆ ,,	೧೧-೮-೦	೧೨-೦ ೦
ಎಳ್ಳು ಸೇರು ೧೨೭ಕ್ಕೆ	೨೪-೦ ೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೭-೨ ೦	೨-೦ ೦
ಹರಳು ೧೨೭ ಸೇರಿಗೆ	೧೩-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೨-೪ ೦	೩-೮ ೦
ಮೆಣಸಿನಕಾಯಿ ,,	೪ ೦ ೦	೩-೪-೦
,, ದುಯಂ	೩ ೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೪-೮-೦	ಮಣ ೫ ೮-೦
ಒಳ್ಳೆಣ್ಣೆ ಮಣ ೧ಕ್ಕೆ	೬ ೧೦-೦	೬ ೬-೦
ಹರಳೆಣ್ಣೆ ,, ,,	೫ ೪-೦	೬ ೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫-೬ ೦	೫ ೪-೦
ಉಪ್ಪು ,, ,,	೬-೪-೦	೬ ೦-೦
ಹುಣಸೇ ಹಣ್ಣು ಮಣ ೧ಕ್ಕೆ	೧-೧೨-೦	೧-೪-೦
,, ಹಳೇದು ,,	೧-೯ ೦	೦ ೧೪-೦
ತುಪ್ಪ ಮಣ ೧ಕ್ಕೆ	೨೨ ೦-೦	೧೯-೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೧೧-೦	೫-೦ ೦
ತೆಂಗಿನಕಾಯಿ ೧೦೦ಕ್ಕೆ	೭ ೦ ೦	೬-೦ ೦
ಅಳಲೇಕಾಯಿ ಮಣ ೧ಕ್ಕೆ	೧-೬-೦	೧ ೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೧೨-೦	೧-೮-೦
ಚಿನ್ನ (ಪೌನ್) ಕೆಂಪು	೧೫ ೮ ೦	೧೫ ೮-೦
,, ,, ಪಸಿಮೆ	೧೫ ೧೪-೬	೧೫ ೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ .	೮೧-೦-೦	೮೧-೩-೦

CHAMBERLAIN'S COUGH REMEDY.

ಚೇಂಬರ್ಲೇನಯವರು ಕಂಡುಹಿಡಿದ ಕೆಮ್ಮಿನ ಔಷಧವು

1 27



ಶೀತದ ಕೆಮ್ಮು, ಗಂಟ್ಲು ಗೂರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾದೆ

ಶೀ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿನವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಕಫವನ್ನು ಸಡ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಸಮಸ್ತ ವಿಧವಾದ ನೋವೂ ಉರಿತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲನೋವು, ವಾಯುನೋವು, ಜನ್ನಿನ ಸೆಳೆತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ವಿಕರಿಯಾಗುತ್ತಲಿವೆ ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷದ ಮಾರಾಟದ ಅಂಗಡಿಗಳಲ್ಲಿ ವಿಕರಿಯಾಗುವದು

ಹುಣ್ಣಕಡ್ಡಿ ಔಷದ ಡಬ್ಬಿಗೆ 6 ಆಣೆ, 12 ಕುಪ್ಪಿಗೆ ರೂ 3—8—0 ಹಲ್ಲುಪುಡಿ ಡಬ್ಬಿಗೆ 2 ಆಣೆ; 12 ಕುಪ್ಪಿಗೆ ರೂ 1—2—0 ವಿ ಪಿ ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ [12—19]

ವಿಳಾಸ —ಅಮೃತಾಂಜನ ಡಿಪೋ, ೧೯ ಫ್ರೈಯರ್ ರೋಡ್, ಫೋರ್ಟ್, ಬೊಂಬಾಯಿ

ಡೋಂಗರೆ

ಇವರ ಬಾಲಾಮೃತ.

[115-51]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತು ೧೦ ಆಣೆ, ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ ೩ ಆಣೆ ಆರಕ್ಕೊಂದು ಉಚಿತ

[187 29] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಪ್ರಖ್ಯಾತವಾದ ಪಾರ್ಸಿ ಫ್ಲೂಟ್ ಹಾರ್ಮೋನಿಯಂ



ಉತ್ಕೃಷ್ಟ ಪದಾರ್ಥ, ಯಾವ ಹವೆಯಲ್ಲೂ ಹೇರುಫೇರಾಗದ ಬಹು ಬಲಿಷ್ಟವಾದ ಮರ, ರೀಡುಗಳು ಅತ್ಯಂತ ಶ್ರೇಷ್ಠವಾದವು, ನಾದವು ಮಹಾ ಸುಖಕರವಾಗಿದೆ, ಇದರಷ್ಟು ಜಾಳಿಕೆ ಬರುವದು ಬೇರೊಂದಿಲ್ಲ, ಮೂರೂಕಾಲು ಆಕ್ಟೇವುಗಳು, ಒಂದು ಸೆಟ್ ರೀಡುಗಳು, ಬ್ಯಾಕ್ ಕಿತ್ತಿಗಳು ಪಾರ್ಸಿ ಮತ್ತು ಹಿಂದೂ ಸಂಗೀತಕ್ಕೆ ಬಹಳ ಹಿತಕರವಾಗಿದೆ ಎಲ್ಲೆಲ್ಲೂ ಪ್ರಚಾರಕ್ಕೆ ತರಬೇಕೆಂದು ಇದರ ಕ್ರಯವನ್ನು ಬಹಳ ಕಡಮೆಮಾಡಿದೆ ಬೇಗ ನೋಡಿ ಇಂಥಾ ಒಳ್ಳೇ ಸಮಯವನ್ನು ಕಳಕೊಳ್ಳದೆ ಕೊಂಡುಕೊಳ್ಳಿ ಕ್ರಯ ರೂ 25 ರೈಲ್ ಖರ್ಚು ಪ್ರತ್ಯೇಕ ಅಡ್ವಾನ್ಸು ೫ ರೂ ಬಂದಲ್ಲದೆ ನಾವು ಕಳುಹಿಸಲಾರೆವು ನಮ್ಮ ವಿಳಾಸ — [119-3]

ಮ್ಯಾನೇಜರ್, ಬಾಂಬೆ ಪಾಪ್ಯುಲರ್ ಏಜನ್ಸಿ,
ಧಾರಾವಿ, ಬೊಂಬಾಯಿ.

ಅಜ್ಮೀರ್ ಜನರಲ್ ಅಶೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್ ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೇ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಶೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭರವಸೆಯ ಠೇವಣಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹವಾಡಲ್ಪಟ್ಟು ವಿಮೇದಾರರಿಗೆ ಬಹಳ ಕಡಿಮ್ಮೆಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[109-5] ಎಸ್ ಕಟ್ಟೂರ್, ಬ್ರಾಂಚ್ ಸೆಕ್ರೆಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ.

ಕುಂತಳಾನಂದ ತೈಲವು.

147 41

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲೋಡಿಸುತ್ತದೆ

ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ—ಬಿ ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

ಪಾತ್ರಿಯ ತುಪ್ಪವು

ಒಂದು ವರ್ಷದವರಗೆ ಇಟ್ಟಿದ್ದರೂ ಕೆಡಲಿಲ್ಲ!

(1) ಎನ್ ಕೋದಂಡರಾಮಯ್ಯನವರು, ಅಕ್ಟಿಂಗ್ ಶೇಕದಾರ್ ಹೊಸ ಕೂರು — ನಿಮ್ಮಿಂದ ತರಿಸಿದ ಪತ್ರಿಯ ತುಪ್ಪವು 1 ವರ್ಷವಾದ ಮೇಲೂ ಹೊಸ ತುಪ್ಪದಂತೆ ಸುವಾಸನೆಯಾಗಿದೆ ಅದರಲ್ಲಿ ಬೇಯಿಸಿದ ಸಾಮಾನೂ ಹೊಸ ತುಪ್ಪದಲ್ಲಿ ಮಾಡಿದಂತೆ ಇದೆ ಅಗ್ಗವಾಗಿ ಮಾರುವುದು ಎಣ್ಣೆ ಬೆರೆದಿರುವುದರಿಂದ ಅನ ರೋಗ್ಯವನ್ನುಂಟುಮಾಡುತ್ತದೆ ನಂಬಿಕೆಯಾದ ಏಜಂಟರು ದೊರೆಯುವ ವರೆಗೆ ನಮ್ಮ ಕಂಪೆನಿಯಿಂದಲೇ ಸೀದಾ ಕಳುಹಿಸಬೇಕು

ಎಚ್ಚರಿಕೆ!

ಪತ್ರಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಪತ್ರಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

[110-1] 151, ಕಿಲಾರಿ ರೋಡ್, ಬೆಂಗಳೂರು ಸಿಟಿ

ಲೇಡೀಸ್ ವಾಚ್.

ಇದರ ಅನುಕೂಲ ಮತ್ತೆ ಯಾವದಕ್ಕೂ ಇಲ್ಲ ನಿಮ್ಮ



ಇಚ್ಛೆ ಬಂದಂತೆ ಕೈಯಲ್ಲಿಯೂ ಕಟ್ಟಿಕೊಳ್ಳಬಹುದು ಜೇಬಿನಲ್ಲಿಯೂ ಹಾಕಿಕೊಳ್ಳಬಹುದು ಸರಿಯಾದ ಕಾಲವನ್ನು ತೋರಿಸತಕ್ಕದ್ದು ತಲೆಯಲ್ಲಿ ಜೇಗವುಳ್ಳದ್ದು ಶುದ್ಧವಾದ ನಿಕಲ್ ಮುಚ್ಚಳವುಳ್ಳದ್ದು ಸುಂದರವಾದದ್ದು ಖಾತ್ರಿಯಾದ ಮಾಲು ಇದರ ಕ್ರಯ ಸುಂದರವಾದ ವಾಚ್ ಸರಪಣಿ ಮತ್ತು ಕೈಯಲ್ಲಿ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಮೇತ

ರೂ 3-8-0 ಮಾತ್ರ [77-11]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ಬಿ ಆರ್ ವೆಂಕಟರಮಣ ಅಂಡ್ ಕಂಪನಿ,

ನಂ 7 ಕೋಸ್ ವೆಂಕಟಾಚಲಯ್ಯರ್ ಬೀದಿ, ಮದರಾಸು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

104 6

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರತಲೆ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗುಟ್ಟು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಡ್ಡು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬುಟ್ಟಿ ಕೊಡಿ ಎಂದು ಕೇಳು ಅವಳಿಗೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸು ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದ್ದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಫ್ರೀಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು — (1) ಎಸ್ ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ಪೇಟೆ 0, ಮದರಾಸ್ (2) ಜೆ ಎಸ್ ಕೆನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

ನಮೂನೆ ಮುಫತ್ತು

ಕೇಶಕುಸುಮಾಕರ ತೈಲವು.

ಸಾಟಿಯಿಲ್ಲದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸಗೊಳಿಸುವದರಲ್ಲಿಯೂ, ಒಕ್ಕತಲೆಯಲ್ಲಿ ಕೂದಲನ್ನು ಬೆಳೆಸುವದರಲ್ಲಿಯೂ ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ ತಲೆಗೆ ತಂಪನ್ನುಂಟುಮಾಡುವದರಲ್ಲಿಯೂ, ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುಡ್ಡಿ ತೈಲ ಕ್ರಯ 10 ಆಣೆ ಮೂರು ಬುಡ್ಡಿಗಳ ತೈಲ ಕ್ರಯ ರೂ 1 12 ಆ ಆರು ಬುಡ್ಡಿಗಳ ತೈಲ ಕ್ರಯ ರೂ 3 4 ಆ ಡಜನ್ ಬುಡ್ಡಿಗಳ ಕ್ರಯ ರೂ 6

ವಿ ಪಿ ಅಂಚೆ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋಷಧ

[82 10] ಔಷಧಾಲಯ 177 ಚೀನಾ ಬಜಾರ್ ರೋಡ್, ಮದ್ರಾಸು

ಪ್ರತಾಪಕಂಠೀರವ ಚರಿತ್ರೆ.

(1) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ, (2) ಸ್ತ್ರೀಧರ್ಮ ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತ ಸಾಹಸ ಚಾತುರ್ಯ (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು, (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ವಿಹಾರವೆ ಈಗ ಅನುಭವಕ್ಕೆ ಶಕ್ಯ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭ ಶೈಲಿ, (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಸೆಳೆಯುವಂಥಾ ಕಥಾಭಾಗಗಳು ಕೂಡಿವೆ ಕ್ರಯ — 1 ರೂಪಾಯಿ ಟಪಾಲ್ ಹಾಸಲು ಬೇರೆ

[16-19] ನಮ್ಮ ವಿಳಾಸ — ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಜೋಡಿಸ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲ ವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ — 320 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ [136 44]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದ್ದು ಕೈವಾರಿತೆಂದು ತೋರಿಸಾಗಲೂ ಆಶ್ಚರ್ಯಕರವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ — ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು.

ಗೋಡೆಗೆ ಹಾಕುವ ಎಂಟು ದಿನಗಳಿಗೊಂದಾವರ್ತಿ ಬೀಗ ಕೊಡುವ ದೊಡ್ಡ ಗಡಿಯಾರಗಳು

ಕೆಳಗಿನ ನಕ್ಷೆಯಲ್ಲಿ ತೋರಿಸುವ ದೊಡ್ಡ ಗಡಿಯಾರಗಳನ್ನು ಅನೇಕರು 17 ರೂಪಾಯಿಗೆ ಕಮ್ಮಿಯಿಲ್ಲದೆ ಮಾರುತ್ತಲಿದ್ದಾರೆ ಇದು ಸರ್ವರಿಗೂ ಉಪಯೋಗವಾಗಬೇಕೆಂಬ ಉದ್ದೇಶದಿಂದ ನಾವು ಇದನ್ನು ಅರ್ಧ ಕ್ರಯಕ್ಕೆ ಜುಲಾಯಿ ಆಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಕೊಡುತ್ತೇವೆ



Rs 8-8-0

ಇದು ಬ್ಯಾಂಕು ಕೋರ್ಟು, ಕಚೇರಿ, ಸ್ಕೂಲ್ ಜವಳಿ ಅಂಗಡಿ ಮೊದಲಾದ ಸ್ಥಳಗಳಲ್ಲಿ ಇರಿಸುವುದಕ್ಕೆ ಲಾಯಖಾದದು ಎಂಟು ದಿವಸಗಳಿಗೊಂದಾವರ್ತಿ ಬೀಗಕೊಡತಕ್ಕದ್ದು ಅನೇಕ ವರುಷಗಳು ಉಪಯೋಗಿಸಿದಾಗ್ಯೂ ಕೆಟ್ಟುಹೋಗದು ಇದರಲ್ಲಿ ಅನೇಕ ತರಹವಾದ ಗಡಿಯಾರಗಳು ಈಗತಾನೇ ಸೀಮೆಯಿಂದ ಬಂದಿರುತ್ತೆ ಇದರಲ್ಲಿ ಕೆಲವು ತರಹಗಳು ಮಾತ್ರವೇ ಈ ಕೆಳಗೆ ನಮೂದಿಸಿರುತ್ತೇವೆ

ಅನೇಕರು ಇಂಥಾ ಭಾರಿ ಕ್ರಯದ ಗಡಿಯಾರವನ್ನು ಇಷ್ಟು ಸುಲಭ ಖರೀದಿಗೆ ಕೊಡುವದು ಸುಳ್ಳೆಂದು ಹೇಳುತ್ತಲಿದ್ದಾರೆ ಯಾರಾದರೂ ಮಾದರಿಗೆ ಒಂದನ್ನು ತರಿಸಿ ನೋಡಿದರೆ ಇದರ ಯೋಗ್ಯತೆಯು ಗೊತ್ತಾಗುತ್ತದೆ ತಾಪಾಕೆಲಂ — ದರಖಾಸ್ತುದಾರರು ಮುಂದಾಗಿ 3 ರೂಪಾಯಿ ಅಡ್ವಾನ್ಸ್ ಕಳುಹಿಸಬೇಕು

ವಿಳಾಸ — ಪತ್ನಿ ಅಂಡ್ ಕಂಪನಿ, ಜನರಲ್ ಮುಕ್ತಾಪೋಡ್ಸ್ ಸ್ಟ್ರೀಟ್,

[118 3] 19 ಸಾಹುಕಾರ್ ಪೇಟೆ, ಮದರಾಸ್

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ

ಅಂಚೆ ಹಾಸಲು ಪ್ರತ್ಯೇಕ 1 ಕ್ಕೆ 4 ಆಣೆ

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಿಸಲ್ಪಟ್ಟಿದ್ದು ನೋಡುವದಕ್ಕೆ ಗಂಭೀರವಾಗಿಯೂ ಹಗುರವಾಗಿಯೂ ಇರುತ್ತೆ ಎಂಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೆ ನಡೆಯುತ್ತದೆ ಸಾವಿರಗಟ್ಲೆ ಗಡಿಯಾರಗಳು ಮಾರಾಟವಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ ಕೂಡಲೆ ಬರೆದು ತರಿಸಿಕೊಳ್ಳಿ

ವಿಳಾಸ — ಸುಪೀರಿಯರ್ ವಾಚ್ ಕಂಪೆನಿ,

[171 2] ಪೋಸ್ಟ್ ಬಾಕ್ಸ್ ನಂ 167 ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ

೭ ಜುವೆಲ್ಲಾ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲೀವರ್ ... ಒಳ್ಳೆ ... ವರುಷಗಳ ಗ್ಯಾರಂಟಿಯುಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 5-0-0 ಇದನ್ನು ಸೆಪ್ಟೆಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 10 ದಿನಗಳಿಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ — ಧನಲಕ್ಷ್ಮಿ ಅಂಡ್ ಕಂಪನಿ

[129 3] ಸಾಹುಕಾರ್ ಪೇಟೆ ಪೋಸ್ಟು ಮದರಾಸ

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ — 1 ಪಿನಲ್‌ಕೋಡು, 2 ದೊಡ್ಡೀ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ದಹ್ಯವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ

ಪ್ರತಿ ಪೀನಲ್ ಸೆಕ್ಷನ್‌ಗೂ — ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ? ಯಾ ಕೂಡದೆ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟ್ಟಬೇಕೇ? ಜಾಮೀನ್ ತೆಗೆದುಕೊಳ್ಳಬಹುವೆ? ಯಾ ಕೂಡದೆ? ರಾಜಿಯಾಗಬಹುದೆ? ಯಾ ಕೂಡದೆ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 22-5 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 2 0 0 ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ವೇಮಾರೆಡ್ಡಿ,

ಕಂಟ್ರಾಕ್ಟರ್ ಮತ್ತು ಕ್ರಿ॥ ಪ್ಲೀಡರ್,

[103-6] ಮಾಲೂರು— ಕೋಲಾರ್ ಡಿಸ್ಟ್ರಿಕ್ಟ್.

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ ಮೈನೋವು ಕೀಲುನೋವು ಮರವು, ನಿತ್ರಾಣ ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೇಂದ್ರಿಯ, ವಾಯು, ನೀರ್ಬಾವು, ಉರುಮೂತ್ರ, ಮೂತ್ರಕೋಶದ ಕ್ಷಯರೋಗವುಂಟಾಗುವುದು ... ಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [142-43]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦, ಅಥವಾ ೬ ಡಬ್ಬಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು ಅಥವಾ ಫೋಸ್ಟರ್, ಪಿ ಓ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು

ಮಾರಾಟದ ಪುಸ್ತಕಗಳು.

ಉತ್ತಮ—ಬಹು ಸ್ವಾರಸ್ಯವಾದ ಕಥೆ ಈಗ ಕಾಣಿ ಅಚ್ಚಾಗಿದೆ 1 ಆಣೆ ಜಪಾನ್ ಸಾಮ್ರಾಜ್ಯ—ಅದ್ಭುತವಾದ ಸೂರ್ಯೋದಯ ರಾಜ್ಯದ ವಿಷಯ, ಸುಂದರವಾದ ಒಂದು ಪಟವೂ ಇದೆ, ತಿಳುವಳಿಕೆ ಹೆಚ್ಚುತ್ತದೆ 6 ಆಣೆ ಉನ್ಮತ್ತೆ ಮನೋಹರವಾದ ಬಂಗಾಳಿ ನಾವಲ್ 2½ ಆಣೆ ಕಿಂಡರ್‌ಗಾರ್ಟನ್ ಕಥೆಗಳು—ವಿನೋದಕರವಾದ ಕಥೆಗಳಿಂದಲೇ ಅನೇಕ ವಿಷಯಗಳು ತಿಳಿಯುವವು 10 ಆಣೆ ಲೋ. ಸೆ ಪರೀಕ್ಷೆಯಲ್ಲಿ ಉತ್ತರ ಬರೆಯುವ ವಿಧಾನ 1 ಆಣೆ [111-2]

ವಿಳಾಸ —ಜೆ ಕೃಷ್ಣಶಾಸ್ತ್ರಿ, ಅ|| ಮಾ|| ನಾರ್ಮಲ್ ಸ್ಕೂಲ್, ಮೈಸೂರು

ಮೂರು ಸಿದ್ಧೌಷಧಗಳು.

ವಜ್ರಾನಂದಕರೀಮಾತ್ರೆ ಮೂಲಿಕೆ ಪರಿಮಳದ್ರವ್ಯಗಳಿಂದ ತಯಾರಿಸಿದೆ ಒಂದನ್ನು ತಾಂಬೂಲದೊಡನೆ ಅಥವಾ ಬರೀ ಬಾಯಿಗೆ ಸೇವಿಸಿದರೆ ದುರ್ಗಂಧ ಹೋಗಿ ಸುವಾಸನೆಯಾಗುತ್ತೆ ರಕ್ತವನ್ನು ಶುದ್ಧಿಮಾಡುತ್ತೆ ಕರುಳು, ಗಂಟಲು, ಬಾಯಿ, ಇವುಗಳು ಹುಣ್ಣಾದರೆ ಅರ್ಧ ತೋಲಾ ಬಾದಾಮಿ ಎಣ್ಣೆಯಲ್ಲಿ ಒಂದು ಮಾತ್ರೆ ತೇದು ಮಲಗುವ ಸಮಯದಲ್ಲಿ ತೆಗೆದುಕೊಂಡರೆ ಗುಣವಾಗುವದು 200 ಮಾತ್ರೆ ಶೀಸಾ 1 ಕ್ಕೆ 1 ಆಣಾ ಇಸಬು, ಖಜ್ಜಿ, ತುರಿ ಇವುಗಳಿಗೆ ಪಾಮಹರಿಣೀ ಪೌಡರ್ ತೋಲಾ 1 ಕ್ಕೆ 2 ಆಣೆ ಬಾಣಂತಿಯರು ಮಕ್ಕಳ ರೋಗ ನಿಗಡಿ ಇವುಗಳಿಗೆ ಉಪಯೋಗಿಸತಕ್ಕ ಕಸ್ತೂರಿಮಾತ್ರೆ 25 ಮಾತ್ರೆಗೆ 8 ಆಣೆ ಬಾಣಂತಿಯರು ಉಪಯೋಗಿಸತಕ್ಕ ಪಂಚಾಮೃತವೆಂಬ ಆರೋಗ್ಯದ ಲೇಹ್ಯ 12 ತೋಲಾ ಡಬ್ಬಿಗೆ 6 ಆಣೆ ಅಪೇಕ್ಷಿಸುವವರು ತಮ್ಮ ವಿಳಾಸ ವಿವರವಾಗಿ ಬರೆಯಬೇಕು ಅಂಚೆ ಹಾಸಲು ಬೇರೆ, ತರಿಸಿಕೊಳ್ಳತಕ್ಕವರು ವಹಿಸತಕ್ಕದ್ದು 1 ಡಜನ್‌ಗೆ 1 ಶೀಸಾ ಡಿಸ್ಕೌಂಟು ವ್ಯಾಪಾರಸ್ಥರಿಗೆ ಒಳ್ಳೆ ಕಮಿಷನ್ ಮುಂಚೆ ಸ್ವಲ್ಪ ತರಿಸಿ ನೋಡಿ ನಂತರವಾದರೂ ತರಿಸಿಕೊಳ್ಳಿ

ನಮ್ಮ ವಿಳಾಸ —ಶೇಷಭಟ್ಟರು.

ನೇಟಿವ್ ಪಂಡಿತ್, ಪೂರ್ಣಯ್ಯನವರ ಬೀದಿ, ಶ್ರೀರಂಗಪಟ್ಟಣ

ವೃತ್ತಾಂತ ಪತ್ರಿಕೆ

— ೦ —

ಸನ್ ೧೯೧೩ ನೇ ಇಸವಿ ಜೂಲೈ ೩ ನೇ ಗುರುವಾರ

ಮೈಸೂರು ಸಂಸ್ಥಾನದ ರೆವಿನ್ಯೂ ಆಡಳಿತಗಳು

ಮೈಸೂರು ಸೀಮೆಯ 1911 12 ಸಾಲಿನ ರೆವಿನ್ಯೂ ಆಡಳಿತದ ವಿಷಯದಲ್ಲಿ ರೆವಿನ್ಯೂ ಕಮೀಷನರವರ ರಿಪೋರ್ಟಿನ ಮೇಲೆ ಗವರ್ನ್‌ಮೆಂಟಿನವರು ಬರೆದಿರುವ ಹುಕುಮಿನ ನಕಲು ನಮಗೆ ತಲುಪಿರುತ್ತದೆ, ಆದರೆ ಆ ರೆವಿನ್ಯೂ ಕಮೀಷನರವರ ರಿಪೋರ್ಟು ಮಾತ್ರ ಇನ್ನೂ ನಮ್ಮ ಬಳಿಗೆ ಬಂದಿರುವುದಿಲ್ಲ ಗವರ್ನ್‌ಮೆಂಟಿನವರು ಆ ರಿಪೋರ್ಟನ್ನು ನೋಡಿ ಬರೆದಿರುವ ಷರಾ ಸಹಜವಾದವುಗಳೆಂದು ಧಾರಾಳವಾಗಿ ಹೇಳುತ್ತೇವೆ ಆದರೂ ಆ ರೀತಿಯಾದ ಷರಾಗಳನ್ನು ಗವರ್ನ್‌ಮೆಂಟಿನವರು ಯಾವ ಆಧಾರದ ಮೇಲೆ ಬರೆದರೋ ಅದು ನಮಗೆ ದೊರಕಲಿಲ್ಲ

ಸಂಸ್ಥಾನದಲ್ಲಿ ರೆವಿನ್ಯೂ ಖಾತೆಯ ಆಡಳಿತಗಳು ಅತ್ಯಂತ ಪ್ರಾಮುಖ್ಯವಾಗಿರುತ್ತವೆ ನೌಕರಮಾನೇರುಗಳು ತಮ್ಮ ಕರ್ತವ್ಯಾಂಶಗಳನ್ನು ನೆರವೇರಿಸುವುದರಲ್ಲಿ ಆಲಸ್ಯಮಾಡಿದ ಪಕ್ಷಕ್ಕೆ ಲಕ್ಷಾಂತರ ಪ್ರಜೆಗಳಿಗೆ ಕಷ್ಟ ನಷ್ಟ ಅನನುಕೂಲಗಳು ಪ್ರಾಪ್ತವಾಗುವವು ಗವರ್ನ್‌ಮೆಂಟಿನವರು ಬರೆಯುವ ಹುಕುಮನ್ನು ನೋಡಿದರೆ ಡೆಪ್ಯುಟಿ ಕಮೀಷನರುಗಳು ಮೊದಲುಗೊಂಡು ರೆವಿನ್ಯೂ ಅಧಿಕಾರಿಗಳೂ ನೌಕರಮಾನೇರುಗಳೂ ತಮ್ಮ ತಮ್ಮ ಕರ್ತವ್ಯ ಕಾರ್ಯಗಳನ್ನು ನೆರವೇರಿಸದೆ ತಪ್ಪಿ ಇರುತ್ತಾರೆಂಬ ಅಭಿಪ್ರಾಯವುಳ್ಳವರಾಗಿದ್ದಾರೆಂದು ಗೊತ್ತಾಗುವುದು ಅವರು ತಿರಸ್ಕಾರ ಮಾಡಿರುವ ಕರ್ತವ್ಯಾಂಶಗಳ್ಯಾವವೆಂದರೆ—ರಿಪೋರ್ಟುಗಳನ್ನು ಬರೆದು ಕಳುಹಿಸುವುದು, ದರಖಾಸ್ತುಗಳನ್ನು ವ್ಯವಸ್ಥೆಮಾಡುವುದು, ಜಮಾಬಂದಿ ಲೆಕ್ಕಪತ್ರಗಳನ್ನು ತನಿಖೆಮಾಡುವುದು, ಕಂದಾಯ ಕೌಲಿಗಗಳನ್ನು ವಸೂಲ್ಮಾಡುವುದು, ಕರೆ ಕಟ್ಟೆಗಳನ್ನೂ ಬೌಂಡರಿ (ಬಾಂದು) ಗುರುತುಗಳನ್ನೂ ಅಜಮಾಯಿಷಿ ಮಾಡುವುದು, ಗ್ರಾಮಾಂತರಗಳ ಮೇಲೆ ಸಂಚಾರ ಹೋಗಿ ಬರುವುದು ಗವರ್ನ್‌ಮೆಂಟಿನವರ ಹುಕುಮನ್ನು ನೋಡುವಲ್ಲಿ ಕೆಲವು ಅಧಿಕಾರಿಗಳು (ಡೆಪ್ಯುಟಿ ಕಮೀಷನರೂ, ಸಬ್ ಡಿವಿಜನ್ ಆಫೀಸರುಗಳೂ) ಮೇಲ್ಕಂಡ ಪ್ರತಿ ಬಾಬಿನಲ್ಲೂ ಬಹಳಮಟ್ಟಿಗೆ ಅಲಕ್ಷ್ಯಭಾವವನ್ನೂ ಆಲಸ್ಯವನ್ನೂ ತೋರಿಸಿರುವಂತೆ ಸರ್ಕಾರದವರೇ ಬರೆದಿರುತ್ತಾರೆ

ದರಖಾಸ್ತುಗಳನ್ನು ವ್ಯವಸ್ಥೆ ಮಾಡುವುದರಲ್ಲಿ ಅಧಿಕಾರಿಗಳಿಗೆ ಯಾವ ಕಷ್ಟವಿದೆಯೋ ನಮಗೆ ತಿಳಿಯುವುದಿಲ್ಲ. ಕಳೆದ ಸಾಲಿನಲ್ಲಿ ಜಮೀನ್ ವ್ಯವಸಾಯಕ್ಕಾಗಿ ಬಂದ 18,761 ದರಖಾಸ್ತುಗಳ ಪೈಕಿ 10,479 ಮಾತ್ರ ವ್ಯವಸ್ಥೆಯಾಗಿರುತ್ತವೆ ಈ ಭಾಗದಲ್ಲಿ ಗವರ್ನ್‌ಮೆಂಟಿನವರು ಬರೆದಿರುವುದು ನ್ಯಾಯವಾಗಿದೆ ಎಂದು ನಮಗೆ ತೋರುವುದು—ಹೊಸದಾಗಿ ಜಮೀನುಗಳು ವ್ಯವಸಾಯಕ್ಕೆ ಬಂದದ್ದು ಬಹಳ ಸ್ವಲ್ಪ; ಇದಕ್ಕೆ ದರಖಾಸ್ತುಗಳು ಬೇಗಬೇಗನೆ ವ್ಯವಸ್ಥೆಯಾಗದೆ ತಾಮಸಕ್ಕೆ ಬಿದ್ದದ್ದೇ ತಕ್ಕಮಟ್ಟಿಗೆ ಕಾರಣವಾಗಿರುತ್ತದೆ ಈ ಭಾಗದಲ್ಲಿ ರೆವಿನ್ಯೂ ಅಧಿಕಾರಿಗಳು ಇನ್ನೂ ವಿಶೇಷವಾದ ಉತ್ಸಾಹವನ್ನೂ ಚಟುವಟಿಕೆಯನ್ನೂ ತೋರಿಸಬೇಕಾಗಿದೆ ಎಂಬೀ ರೀತಿಯಾಗಿ ಸರ್ಕಾರದವರು ಬರೆಯುತ್ತಾರೆ

ಬೆಂಗಳೂರು ಡೆಪ್ಯುಟಿ ಕಮೀಷನರವರು ಒಂದು ತಾಲ್ಲೂಕಿನ ಜಮಾಬಂದಿಯನ್ನು ಮೂರು ದಿನಗಳಲ್ಲೂ, ಸಬ್ ಡಿವಿಜನ್ ಆಫೀಸರ್ ಮಿ|| ಸಿ ವೆಂಕಟರಾಯರು ಇನ್ನೊಂದು ತಾಲ್ಲೂಕಿನ ಜಮಾಬಂದಿಯನ್ನು ನಾಲ್ಕು ದಿನಗಳಲ್ಲೂ ಮಾಡಿ ಪೂರೈಸಿದರೆಂದು ಹೇಳಲಾಗಿದೆ ಹೀಗಾದರೆ ಈ ಜಮಾಬಂದಿಯು ಸಂಪೂರ್ಣವಾಗಿಯೂ ಸಮರ್ಪಕವಾಗಿಯೂ ನಡೆದಿದೆ ಎಂದು ಹೇಳಲಾದೀತೇ? ಆಯಾ ಅಧಿಕಾರಿಗಳು ತಿಂಗಳಲ್ಲಿ ಇಷ್ಟಿಷ್ಟು ದಿನಗಳ ತನಕ ತಮ್ಮ ಅಧಿಕಾರಕ್ಕೊಳಪಟ್ಟ ಪ್ರದೇಶಗಳಲ್ಲಿ ಸಂಚಾರ (ಸರ್ಕೀಟು) ಮಾಡಿಕೊಂಡು ಬರಲೇ ಬೇಕೆಂಬದಾಗಿ ಸರ್ಕಾರದವರು ನಿಬಂಧನೆ ಮಾಡಿರುತ್ತಾರಾದಾಗ್ಯೂ ಆ ನಿಬಂಧನೆಯ ಪ್ರಕಾರ ಯಾವ ಅಧಿಕಾರಿಯೂ ಸರ್ಕೀಟು ಮಾಡಲಿಲ್ಲ ಇದರಿಂದ ಪ್ರಜೆಗಳ ಕಷ್ಟ ನಷ್ಟ ಅನನುಕೂಲಗಳು ಅಧಿಕಾರಿಗಳ ಗಮನಕ್ಕೆ ಬಂದು ಪರಿಹಾರವಾಗುವುದಕ್ಕೆ ಅವಕಾಶವಿಲ್ಲದೆ ಪ್ರಜೆಗಳಲ್ಲಿ ಅಸಮಾಧಾನವೂ ಗೊಣಗಾಟವೂ ಹುಟ್ಟಿ ಹೆಚ್ಚಲು ಕಾರಣವಾಗುವುದು ಇದಕ್ಕೆ ದೃಷ್ಟಾಂತವಾಗಿ ನಮ್ಮ ಮದ್ದೂರಿನ ವಾರ್ತಾದಾರರು ಈ ವಾರ ಹೇಳುವ ಪ್ರಕಾರ ಅಧಿಕಾರಿಗಳ ಆಲಸ್ಯದಿಂದ ರೆವಿನ್ಯೂ ವಿಷಯಗಳು ಬೇಗನೆ ಇತ್ಯರ್ಥವಾಗದೆ ರೈತರಿಗೆ ತೊಂದರೆಯುಂಟಾಗಿರುವುದನ್ನು ಈ ಸಂದರ್ಭದಲ್ಲಿ ಸೂಚಿಸಿರುತ್ತೇವೆ ರೆವಿನ್ಯೂ ಅಧಿಕಾರಿಗಳು ವಿಶೇಷವಾಗಿ ಗ್ರಾಮಾಂತರಗಳ ಮೇಲೆ ಸಂಚಾರಮಾಡುತ್ತಾ, ರೈತರ ಕಷ್ಟ ಅನನುಕೂಲಗಳನ್ನು ಅಲ್ಲಲ್ಲೇ ತನಿಖೆಯಿಂದ ವ್ಯವಸ್ಥೆಮಾಡುತ್ತಾ ಬಂದ ಪಕ್ಷದಲ್ಲಿ ರೈತಪ್ರಜೆಗಳು ಮೊಕದ್ದಮೆಗಳನ್ನು ಕಟ್ಟಿಕೊಂಡು ಕೋರ್ಟುಗಳಿಗೆ ಅಲೆಯುವುದು ಬಹಳ ಕಡಮೆಯಾದೀತು. ಪ್ರಜೆಗಳಲ್ಲಿ ನೆಮ್ಮದಿಯೂ ಸಂತೃಪ್ತಿಯೂ ಹುಟ್ಟಿ ಹೆಚ್ಚುವವು ಪ್ರಜೆಗಳು ತೃಪ್ತರಾಗಿಯೂ ಸುಖದಿಂದಲೂ ಇರಬೇಕಾದರೆ ರೆವಿನ್ಯೂ ಅಧಿಕಾರಿಗಳು ವಿಶೇಷವಾಗಿ ಸಂಚಾರಮಾಡುತ್ತಾ ಅವರ ಒಳಿತೆಯಲ್ಲಿರಬೇಕಾದದ್ದು ಪರಮಾವಶ್ಯಕ

ಗವರ್ನ್‌ಮೆಂಟ್ ಹುಕುಮಿನಲ್ಲಿ ಈ ಸಂಸ್ಥಾನದೊಳಗೆ ವಿಶೇಷ ರೂಢಿಗೆ ಬಂದಿರುವ ಒಂದು ವಿಶೇಷ ಸಂಗತಿಯು ಕಂಡುಬರುತ್ತದೆ ಕರೆಗಳ ಪಂಚಾಯಿತಿ ರೆಗ್ಯುಲೇಷನ್ ಎಂಬ ಕಾನೂನು ಪಾಸಾಗಿ ಎರಡು ವರುಷಗಳಾದವು ಆದರೆ ಈ ಕಾನೂನನ್ನು ಯಾವ ಅಧಿಕಾರಿಯೂ ಜಾರಿಗೆ ತರಲಿಲ್ಲ ಈ ಸಂಸ್ಥಾನದ ಕಾನೂನುಗಳ ಭಂಡಾರದಲ್ಲಿ ಈ ಕಾನೂನು ಸಿಕ್ಕಿಕೊಂಡು ಕೊಳೆಯುತ್ತಾ ಬಿದ್ದಿದೆ ಇದರಂತೆಯೇ ಇನ್ನೂ ಎಷ್ಟು ಕಾನೂನುಗಳು ನಿಷ್ಪ್ರಯೋಜಕವಾಗಿರುವವೋ ತಿಳಿಯಲಪೇಕ್ಷಿಸುತ್ತೇವೆ ನಮ್ಮ ಜ್ಞಾಪಕಕ್ಕೆ ಬಂದ ಒಂದು ಕಾನೂನಿನ ವಿಚಾರವನ್ನು ಇಲ್ಲಿ ಸೂಚಿಸುವೆವು ಸಂತೆಗಳಲ್ಲೂ ಜಾತ್ರೆಗಳಲ್ಲೂ ಪೊಲೀಸಿನವರ ಕಣ್ಣೆದುರಿಗೇ ದುಷ್ಟವಾದ ಜೂಜಾಟ ನಡೆಯುತ್ತಿದ್ದರೂ ಅಂಥಾ ಜೂಜುಕೋರರನ್ನಾದರೂ ಶಿಕ್ಷಿಸಲ್ಪಡಲಿಲ್ಲವೆಂದು ನಮ್ಮ ವಾರ್ತಾದಾರರು ಈ ವಾರದಲ್ಲೂ ಬರೆದಿದ್ದಾರೆ. ಅನೇಕ ಕಡೆ ಸಂತೆಗಳಲ್ಲೂ ಅಂಗಡಿಗಳಲ್ಲೂ ಮಾರ್ಕೆಟ್ಟುಗಳಲ್ಲೂ ಅನೇಕಾನೇಕ ವರ್ತಕರು ಕಳ್ಳತಕ್ಕಡಿ ಬಟ್ಟುಗಳನ್ನೂ, ಸುಳ್ಳು ಅಳತೆಗಳ ಸಾಧನಗಳನ್ನೂ ಇಟ್ಟುಕೊಂಡು ವ್ಯಾಪಾರಮಾಡುತ್ತಾ ಬಡಬಗ್ಗರನ್ನು ಮೋಸಪಡಿಸುತ್ತಾ ಬಂದಿದ್ದಾರೆ ಇದನ್ನು ನಿಲ್ಲಿಸುವುದಕ್ಕೂ ಸರ್ಕಾರದವರು ಕಾನೂನ್ ಮಾಡಿದ್ದಾಯಿತು ಹದಿನಾರು ವರುಷದೊಳಗಣ ಹುಡುಗರು ಹೊಗೆಸೊಪ್ಪು ಬೀಡಿ ಚುಟ್ಟಾ ಸಿಗರೇಟುಗಳನ್ನು ಸೇದದಂತೆ ನಿರ್ಬಂಧ ಪಡಿಸುವುದಕ್ಕೆ ಒಂದು ಕಾನೂನ್ ಆಗಿದೆ ಇಂಥಾ ಅತಿಬಾಧೆಗಳನ್ನು ತಪ್ಪಿಸಿ ಪ್ರಜೆಗಳನ್ನು ಕಾಪಾಡುವ ಭಾರವು ಯಾವ ಅಧಿಕಾರಿಗಳದೋ ತಿಳಿಯದು ತಾಲ್ಲೂಕುಗಳಲ್ಲಿ ಅಮಲ್ದಾರರು ಇಲ್ಲವೇ ಪೊಲೀಸ್ ಇನ್ಸ್‌ಪೆಕ್ಟರುಗಳು ಸಂತೆ ಮಾರ್ಕೆಟ್ಟು ಅಂಗಡಿಗಳನ್ನು ಆಗಿಂದಾಗ್ಗೆ ಪ್ರವೇಶಿಸಿ ವಿಚಾರಣೆ ಮಾಡುತ್ತಾ ಬಂದರೆ ಪ್ರಜೆಗಳಿಗೆ ಎಷ್ಟೋ ಸಹಾಯವಾದೀತು, ಮೋಸಗಳೂ ದುಷ್ಕಾರ್ಯಗಳೂ ಬಹಳಮಟ್ಟಿಗೆ ಅಣಗಿಹೋಗುವವು ಈಗಿನ ಸ್ಥಿತಿಗತಿಯನ್ನು ನೋಡಲಾಗಿ ಮೈಸೂರು ಗವರ್ನ್‌ಮೆಂಟಿನವರು ಹಟಕ್ಕಾಗಿ ಕಾನೂನುಗಳನ್ನು ರಚಿಸಿ ಇಟ್ಟುಕೊಳ್ಳುವುದರಲ್ಲಿ ಆನಂದಪಡುವಂತೆಯೂ, ಅಂಥಾ ಕಾನೂನುಗಳನ್ನು ದರ್ಪವಿಟ್ಟು ಜಾರಿಯಲ್ಲಿಡುವ ಭಾಗದಲ್ಲಿ ಅವರು ಅಷ್ಟೇನೂ ಶ್ರಮಪಡುವವರಾಗಿಲ್ಲವೆಂದೂ ಕಾಣುತ್ತದೆ ಗವರ್ನ್‌ಮೆಂಟಿನವರು ಚಿತ್ತಮನಸ್ಸಿನಿಂದ ಮಾಡಿದ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಮಾಡದೆ ಹೋಗುವತನಕ ಈ ಸಂಸ್ಥಾನವು ಶ್ರೇಯಸ್ಸಿಗೆ ಬರಲಾರದು.

ಬಾಲ್ಕನ್ ಸಂಸ್ಥಾನಗಳು

ಟರ್ಕಿಯವರೂ, ಬಲ್ಗೇರಿಯ, ಸರ್ವಿಯ, ಮಾಂಟಿನೀಗ್ರೊ, ಗ್ರೀಸ್ ರಾಜ್ಯಗಳವರೂ ಪರಸ್ಪರ ಯುದ್ಧಮಾಡದಂತೆ ಸಮಾಧಾನಸ್ಥಿತಿಯಲ್ಲಿರಲು ಎಲ್ಲರೂ ಸೇರಿ ಒಪ್ಪಂದಕ್ಕೆ ರುಜು ಹಾಕಿದ್ದಾಗ್ಯೂ ಅವರವರಿಗೆ ರಾಜ್ಯಾಡಳಿತದ ವಿಷಯದಲ್ಲಿ ತಹನಾಮೆಗಳು ಇನ್ನೂ ನಡೆದಿರುವುದಿಲ್ಲ. ಟರ್ಕಿ ರಾಜ್ಯದಲ್ಲಿ ಪ್ರಧಾನ ಮಂತ್ರಿಯವರನ್ನು ಕೊಂದುಹಾಕಿದಾರಭ್ಯ ನಾನಾ ವಿಧವಾದ ಗಲಭೆಗಳು ಹುಟ್ಟಿರುತ್ತವೆ. ರಾಜ್ಯದ ತಳಹದಿಗೇ ಕುಂದಕ ಉಂಟಾಗಿರುವಂತೆ ಕಾಣುವುದು ಪ್ರತಿ ಪಕ್ಷದವರೂ ವಿರೋಧ ಪಕ್ಷದ ಮುಖಂಡರನ್ನು ಹುಡುಕುತ್ತಾ ಅವರ ನಡವಳಿಕೆಗಳನ್ನು ಕಾಯುತ್ತಾ ಬರಲಾರಂಭಿಸಿದ್ದಾರೆ ರಾಜ್ಯದಲ್ಲಿ ರಾಜಕೀಯ ಪಕ್ಷ ಪರಪಕ್ಷಗಳವರು ಹೊಡೆದಾಡುತ್ತಾ ಬಂದಿರುವಲ್ಲಿ ದೇಶದ ಸ್ಥಿತಿಗತಿಯು ಹಾಳಾಗುತ್ತಿರುವುದು

ಅತ್ತಲಾಗಿ ಬಾಲ್ಕನ್ ಸಂಸ್ಥಾನಗಳ ಕಾರುಬಾರುಗಳನ್ನು ನೋಡಿದರೆ ಅವರವರಲ್ಲೇ ಮನಸ್ತಾಪಗಳುಂಟಾಗಿ, ಪರಸ್ಪರ ಯುದ್ಧವು ಸಂಭವಿಸುವುದೋ ಎಂಬ ಸ್ಥಿತಿಯಲ್ಲಿರುವುದು. ಒಂದೆರಡು ವೇಳೆ ಅವರು ಕಾದಾಡಿಯೂ ಇರುತ್ತಾರೆ. ಈ ಬಾಲ್ಕನ್ ಸಂಸ್ಥಾನಗಳಲ್ಲಿ ಪರಸ್ಪರ ಯುದ್ಧವಾಗದಂತೆ ತಡೆಯಬೇಕೆಂದು ರಷ್ಯಾ ಚಕ್ರಾಧಿಪತ್ಯದ ಜಾರ್‌ರವರು ಬಹಳ ಸಾಹಸಪಡುತ್ತಿದ್ದಾರೆ, ಈಗ ಅವರ ಪ್ರಯತ್ನಗಳು ಸಫಲವಾಗಬಹುದೆಂದು ಕಾಣುತ್ತದೆ ಈ ಸಂಸ್ಥಾನಗಳಲ್ಲಿ ಪರಸ್ಪರ ಉಂಟಾಗಿರುವ ಕಲಹಗಳು ಮಧ್ಯಸ್ಥಿಕೆಯಿಂದ ವ್ಯವಸ್ಥೆಯಾದೀತೆಂದು ನಿರೀಕ್ಷಿಸಲ್ಪಟ್ಟಿದೆ, ಆದರೂ ಇದಕ್ಕೆ ಬಹಳ ಹೋರಾಟವೂ ದೀರ್ಘಕಾಲವೂ ಆದೀತೆಂದು ತೋರುವುದು. ಒಂದು ವೇಳೆ ಈ ಹೋರಾಟಗಳ ದೆಸೆಯಿಂದ ಯುದ್ಧವೇ ಪ್ರಾರಂಭವಾದರೂ ಆಗಬಹುದು, ಆದರೆ ಈಗಿನ ಸಂದರ್ಭಗಳನ್ನು ನೋಡಿದರೆ ಈ ಸಂಸ್ಥಾನಗಳವರು ಟರ್ಕಿಯವರಿಂದ ಗದ್ದುಕೊಂಡಿರುವ ಸೀಮೆಗಳನ್ನು ಯೂರೋಪಿನ ರಾಜ್ಯಾಧಿಪತಿಗಳ ಮಧ್ಯಸ್ಥಿಕೆಯಲ್ಲಿ ಪಾಲುಮಾಡಿಕೊಳ್ಳುವರೆಂದು ಕಾಣುತ್ತದೆ ಎಲ್ಲಾ ಇತ್ಯರ್ಥಹೊಂದಿ ಖಂಡಿತವಾದ ತಹನಾಮೆಯು ನಡೆದು ಈ ಸಂಸ್ಥಾನಗಳವರೆಲ್ಲಾ ಅದಕ್ಕೆ ಸಮ್ಮತಿ ರುಜುವನ್ನು ಹಾಕುವ ತನಕ ಆಯಾ ಸಂಸ್ಥಾನಗಳಾಗಲಿ, ಅವುಗಳ ಪ್ರಜೆಗಳಾಗಲಿ ಶ್ರೇಯೋಭಿವೃದ್ಧಿಗೂ ನೆಮ್ಮದಿಗೂ ಪಾಲುಗಾರರಾಗುವುದು ಸಾಧ್ಯವಲ್ಲ.

ಪಾಪದ ಸಂಬಳ ಮರಣ

ಒಬ್ಬ ದೊರೆಯು ಒಂದು ದಿನ ತನ್ನ ರಾಜಧಾನಿಯಲ್ಲಿದ್ದ ಕಮ್ಮಾರನ ಕುಲುಮೆಗೆ ಹೋಗಿ ಆ ಕಮ್ಮಾರನನ್ನು ಕುರಿತು—ಕಮ್ಮಾರನೇ, ನನಗೊಂದು ಬಲವಾದ ಕಬ್ಬಿಣದ ಸರಪಣಿಯು ಬೇಕಾಗಿದೆ ನಿನ್ನ ಹತ್ತಿರವಿರುವ ಕಬ್ಬಿಣವನ್ನೆಲ್ಲಾ ಪ್ರಯೋಗಿಸಿ ಸರಪಣಿಯನ್ನು ಸಿದ್ಧಮಾಡು ನಾನು ನಿನ್ನ ಕಬ್ಬಿಣದ ಕ್ರಯವನ್ನೂ ಸರಪಣಿ ಮಾಡಿದ ಕೂಲಿಯನ್ನೂ ಕೊಟ್ಟು ಸರಪಣಿ ಕೊಂಡುಕೊಳ್ಳುತ್ತೇನೆಂದು ಹೇಳಿಹೋದನು ಕಮ್ಮಾರನು ದೊರೆಯ ಅಪ್ಪಣೆಯಿಂದ ಬಹಳವಾಗಿ ಕಷ್ಟಪಟ್ಟು ತನ್ನಲ್ಲಿದ್ದ ಕಬ್ಬಿಣವನ್ನು ಪ್ರಯೋಗಿಸಿ ಸರಪಣಿಯನ್ನು ಮಾಡಿದನು ದೊರೆಯು ಗೊತ್ತಾದ ದಿನ ಕುಲುಮೆಗೆ ಬಂದು ಆ ಸರಪಣಿಯನ್ನು ಪರೀಕ್ಷಿಸಿ ನೋಡಿ ಇದು ಬಲವಾಗಿದೆಯೆಂದು ಸಂತೋಷಪಟ್ಟು—ಅಯ್ಯಾ ಕಮ್ಮಾರನೇ, ಇದು ಒಳ್ಳೆ ಸರಪಣಿ ಚೆನ್ನಾಗಿದೆ ಆದರೆ ಉದ್ದ ಸಾಲದು ಇನ್ನು ಸ್ವಲ್ಪ ಕಬ್ಬಿಣವನ್ನು ಹಾಕಿ ಇದರೆರಡರಷ್ಟು ಉದ್ದವಾದ ಸರಪಣಿಯನ್ನು ಸಿದ್ಧಮಾಡು ನಿನಗೆ ತಕ್ಕ ಕೂಲಿಯನ್ನೂ ಬಹುಮಾನವನ್ನೂ ಕೊಡುತ್ತೇನೆಂದು ಹೇಳಿ ಹೊರಟುಹೋದನು ಇತ್ತ ಕಮ್ಮಾರನು ಕೈಯಲ್ಲಿ ಬಿಡಿಗಾಸು ದುಡ್ಡಿಲ್ಲವಲ್ಲಾ ಎಂದು ಚಿಂತಿಸುತ್ತಾ, ಚಿಂತೆಯಲ್ಲಿ ಹೇಗಾದರೂ ಅರಸನ ಪ್ರಮಾಣಕ್ಕೆ ತಕ್ಕಷ್ಟು ಸರಪಣಿಯನ್ನು ಮಾಡಿದರೆ ಆವರೆಗಿನ ಪರಿಶ್ರಮಕ್ಕೂ ಕೆಲಸಕ್ಕೆ ತಕ್ಕ ಕೂಲಿಯೂ ಸಿಕ್ಕುವವು ಅರಸನು ಇದರ ಮೇಲೆ ಬಹುಮಾನವನ್ನೂ ಕೊಡುವೆನೆಂತ ವಚನ ಕೊಟ್ಟಿದ್ದಾನೆ ನೋಡೋಣವೆಂದು ಧೈರ್ಯವನ್ನು ತಾಳಿ ತನ್ನಲ್ಲಿದ್ದ ಯಾವತ್ತು ಕಬ್ಬಿಣವನ್ನು ಪ್ರಯೋಗಿಸಿ ಮುಂಚೆ ಇದ್ದ ಸರಪಣಿಗೆ ಇನ್ನೂ ಅಷ್ಟನ್ನು ಸೇರಿಸಿ ಎರಡರಷ್ಟು ಉದ್ದಮಾಡಿ ಕಾದುಕೊಂಡಿದ್ದನು ಅರಸನು ಮಾರನೆ ದಿನ ಅಲ್ಲಿಗೆ ಬಂದು ಕಮ್ಮಾರನನ್ನು ನೋಡಿ, ಕಮ್ಮಾರನೇ ನಿನ್ನ ಕೆಲಸ ಚೆನ್ನಾಗಿದೆ ಆದರೆ ಸರಪಣಿಯು ನಮ್ಮ ಕೆಲಸಕ್ಕೆ ತಕ್ಕಷ್ಟು ಉದ್ದವಾಗಿಲ್ಲ ನೀನು ಏನಾದರೂ ಮಹನತ್ತುಮಾಡಿ ಈ ಸರಪಣಿಗೆ ಇನ್ನಷ್ಟನ್ನು ಸೇರಿಸಿ ಉದ್ದ ಮಾಡು ಆಗ ಅದು ನಮ್ಮ ಕೆಲಸಕ್ಕೆ ಅನುಕೂಲವಾಗಿರುವದು ಎಂದು ಹೇಳಿದ್ದನ್ನು ಕೇಳಿ ಕಮ್ಮಾರನು—ಸ್ವಾಮಿ, ನನಗೀಗ ಐದಾರು ದಿನಗಳಿಂದ ಕೂಲಿ ಇಲ್ಲ ಇದ್ದ ಕಬ್ಬಿಣವನ್ನೆಲ್ಲಾ ತಮ್ಮ ಸೇವೆಗೆ ಪ್ರಯೋಗಿಸಿದ್ದಾಯಿತು ನನ್ನಲ್ಲಿ ಈಗ ಏನೂ ಇಲ್ಲವೆಂದು ಅಂಗಲಾಚಿದನು ದೊರೆಯು—ಅಯ್ಯಾ, ನೀನು ಈ ಪ್ರಕಾರ ಚಿಂತಿಸಬೇಡ ಕೊನೆಗೆ ನಿನಗೆ ಬರುವ ಬಹುಮಾನದ ಮೇಲೆ ದೃಷ್ಟಿ ಇದು ಇನ್ನು ಸ್ವಲ್ಪದಲ್ಲಿ ಯಾಕೆ ಬೇಸರಪಡುತ್ತೀ? ಎಂದು ಒಪ್ಪಿಸಿದನು ಕಮ್ಮಾರನು ಬೇಸತ್ತು ಹೋಗಿದ್ದರೂ ಇನ್ನೇನು ಮಾಡುವವನು ಉಪಾಯವಿಲ್ಲದೆ ಇದ್ದಬದ್ದ ಕಬ್ಬಿಣವನ್ನೆಲ್ಲಾ ಅದಕ್ಕೆ ಹಾಕಿ ಸರಪಣಿಯನ್ನು ತಯಾರಿಸಿ ಕಾದುಕೊಂಡಿದ್ದನು ಹೀಗೆ ಕೆಲವು ಕಾಲ ಗತಿಸಿದ ನಂತರ ದೊರೆಯು ಸರಪಣಿ ಈಗ ಸಿದ್ಧವಾಗಿದೆಯೆಂದು ತಿಳಿದು ನಾಲ್ಕೈದು ಮಂದಿ ಬಲವಾದ ಸಿಪಾಯಿಗಳನ್ನು ಸಂಗಡ ಕರೆದುಕೊಂಡು ಕುಲುಮೆಗೆ ಬಂದು ಅಲ್ಲಿ ಆಸೆಯಿಂದ ಕಾದುಕೊಂಡಿದ್ದ ಕಮ್ಮಾರನನ್ನು ಹಿಡಿಸಿ ಅವನು ತನ್ನ ಸ್ವಂತ ಕಷ್ಟದಿಂದ ಸ್ವಂತ ಲಾಗುವಡಿನಿಂದ ತಯಾರಿಸಿದ್ದ ಸರಪಣಿಯಿಂದ ಅವನನ್ನೇ ಕಟ್ಟಿಸಿ ಸೆರೆಯಲ್ಲಿಡಿಸಿದನು

ಆ ದೊರೆಯು ಎನ್ನೆಂತಹ ಕ್ರೂರಾತ್ಮನಿರಬಹುದೆಂದು ವಾಚಕರು ಆಕ್ಷೇಪಿಸಬಹುದು ಇವನು ಕಡುಕ್ರೂರನು, ದುರಾತ್ಮನು ಇದಕ್ಕೆ ಸಂದೇಹವಿಲ್ಲ. ಆದರೆ ಇಂಥಹ ಅಧಮಾಧಮನಾದ ದುರಾತ್ಮನ ಸೇವೆಯು ನನಗಿರಲಿ ನಾನು ಇಂತಹ ದುರಾತ್ಮನ ಸೇವಕನಾಗಿರುವುದಕ್ಕೆ ಸಂತೋಷದಿಂದ ಒಪ್ಪುತ್ತೇನೆಂದು ಹೇಳಿದರೆ ಆ ಸೇವಕನನ್ನು ಕುರಿತು ಏನು ಹೇಳುವಿರಿ?

ಇಂಥಾ ಕೆಟ್ಟ ದೊರೆಯು ಯಾರೂ ಇಲ್ಲ ಅಂಥವನ ಸೇವೆಯನ್ನೊಪ್ಪಿ ಮಾಡುವ ಸೇವಕನೂ ಇಲ್ಲ ಇದು ಬರೀ ಊಹೆ ಅಥವಾ ಕಲ್ಪಿತ ಕಥೆಯೆಂದು ಹೇಳುವಿರಿ ಇಂಥಾ ದುಷ್ಟ ದೊರೆಯೂ ಅವನನ್ನು ಸೇವಿಸುವದಕ್ಕೆ ಸಮ್ಮತಿಸುವ ಸೇವಕನೂ ಈ ಲೋಕದಲ್ಲಿರುವದು ಅಪರೂಪವೆಂತ ಭಾವಿಸಬಹುದು ಆದರೆ ಹಾಗೆ ನಿರ್ಣಯಿಸುವದಕ್ಕಿಂತ ಮುಂಚೆ ಸ್ವಲ್ಪ ಯೋಚಿಸಿರಿ

"ಪಾಪ ಮಾಡುವವರೆಲ್ಲರೂ ಪಾಪಕ್ಕೆ ದಾಸರಾಗಿದ್ದಾರೆ" ಎಂದು ಕ್ರಿಸ್ತನು ಹೇಳಿದನು ಇದರ ತಾತ್ಪರ್ಯವೇನೆಂದರೆ—ಪಾಪವೆಂಬವನೊಬ್ಬ ಕ್ರೂರ ಯಜಮಾನನು ಇದ್ದಾನೆ ಅವನು ಆಸೆತೋರಿಸಿ ಜನರನ್ನು ಮರುಳುಮಾಡಿ ತನ್ನ ಸೇವೆಮಾಡುವದಕ್ಕೆ ಒಪ್ಪಿಸಿಕೊಳ್ಳುತ್ತಾನೆ ಬುದ್ಧಿಹೀನರು ಅವನ ಪಾಶಕ್ಕೆ ಸಿಕ್ಕಿ ಅವನ ದಾಸರಾಗಿ ಕೆಟ್ಟು ಕಡೆಗೆ ನಾಶವಾಗುತ್ತಾರೆ ಇದು ನಿಜವೋ? ವಿಚಾರಿಸೋಣ ಹೆಂಡ ಸಾರಾಯಿ ಮೊದಲಾದ ಮದ್ಯಪಾನಕಗಳನ್ನು ಕುಡಿಯುವವರು ಮೊದಲು ಅವುಗಳಿಂದ ಪ್ರಯೋಜನವಿದೆಯೆಂತ ಭಾವಿಸಿರಬಹುದು ಮನಸ್ಸಿಗೆ ಸಂತೋಷ, ಉಲ್ಲಾಸ, ಹಬ್ಬಹರಿದಿನ ವಿವಾಹ ಮುಂತಾದ ಕಾಲಗಳಲ್ಲಿ ಅವರ ಸಂತೋಷವೂ ಬಂಧುಬಳಗದವರ ಸಂತೋಷವೂ ಮದ್ಯಪಾನಕವನ್ನು ಸ್ವಲ್ಪವಾಗಿ ತೆಗೆದುಕೊಳ್ಳುವದರಿಂದ ವಿಶೇಷವಾಗಿ ಹೆಚ್ಚುತ್ತಾ ಬಂದು ಕಡೆಕಡೆಗೆ ಅದರಿಂದ ಪ್ರಾಪ್ತಿಸುವ ದುರ್ವ್ಯಸನ, ಮಾನನಷ್ಟ, ಗುಣನಷ್ಟಗಳನ್ನು ತಿಳಿದು ಆ ದುರಭ್ಯಾಸವನ್ನು ತ್ಯಜಿಸಬೇಕೆಂದು ಅನೇಕಾವರ್ತಿ ನಿಶ್ಚಯಿಸಿಕೊಂಡರೂ ಬಿಡುವದು ಅಸಾಧ್ಯವೆಂತ ಅನೇಕರು ಅರಿಕೆಮಾಡುತ್ತಾರೆ ಇದು ಕ್ರೂರ ದುರಾತ್ಮನನ್ನು ಸೇವಿಸುವದಕ್ಕೆ ಒಪ್ಪಿ ಕಡೆಕಡೆಗೆ ಅವನ ದಾಸತ್ವಕ್ಕೆ ಬಿದ್ದು ಬಿಡಿಸಿಕೊಳ್ಳಲಾರದವನ ಗತಿಯಲ್ಲವೋ?

ವಿಷಯಾಸಕ್ತಿ ಮುಂತಾದ ಮನೋರೋಗಗಳು ಮೊದಮೊದಲು ಮನಸ್ಸಿನಲ್ಲಿ ಆಗಾಗ್ಗೆ ಸುಳಿದಾಡುವದುಂಟು ಇವುಗಳಿಗೆ ಮನಸ್ಸಿನಲ್ಲಿ ಇಂಬುಗೊಟ್ಟು ಇವುಗಳನ್ನು ಕುರಿತು ಯೋಚಿಸುವುದರಲ್ಲಿ ಸಂತೋಷಪಡುವವನು ಕೆಲವು ಕಾಲದ ನಂತರ ಅವುಗಳು ಮನಸ್ಸಿನಲ್ಲಿ ಬೇರೂರಿ ಅವುಗಳನ್ನು ವರ್ಜಿಸುವದು ಅಸಾಧ್ಯವಾಗುವದು ಏಕೆಂದರೆ ಅಶುದ್ಧ ಯೋಚನೆಗಳಿಂದ ಮನಸ್ಸನ್ನು ತುಂಬುವವನು ಪರಿಶುದ್ಧವಾದ ಯೋಚನೆಗಳಿಗೆ ಮನದಲ್ಲಿ ಸ್ಥಳವಿಲ್ಲದಂತೆ ಮಾಡಿಕೊಳ್ಳುವನು

ಕುರುಡನು ಬಣ್ಣದ ವ್ಯತ್ಯಾಸವನ್ನು ತಿಳಿಯುವನೇ? ಕಿವುಡನು ಸಂಗೀತದ ಇಂಪನ್ನು ಅನುಭವಿಸ ಬಲ್ಲನೇ ಯಾಕೆ ಅನುಭವಿಸಲಾರನು? ಕುರುಡ

ನಿಗೆ ಸಾಟವದ ಸರಗಳಿಲ್ಲ ಕಿವುಡನಿಗೆ ಶಬ್ದವನ್ನು ಗ್ರಹಿಸುವ ನರಗಳು ಸತ್ತು ಹೋಗಿವೆ ಕೆಲಸು ಯೋಚನೆಗಳಿಂದ ಮಲಿನವಾದ ಮನಸ್ಸಿನಲ್ಲಿ ಪರಿಶುದ್ಧತ್ವದ ಅಂದವನ್ನು ಗ್ರಹಿಸುವ ಅಭಿರುಚಿ ಇರುವದಿಲ್ಲ ಅದು ಸತ್ತುಹೋಗಿದೆ ದುರ್ಭಾಷೆ, ಸುಳ್ಳು, ಚಾಡಿ ಹರಟೆಗಳಲ್ಲಿ ಆಸಕ್ತರಾಗಿರುವವರಿಗೆ ನೀತಿ, ಸದ್ಗುಣಗಳನ್ನು ಅಪೇಕ್ಷಿಸುವ ಮನಸ್ಸು ಸತ್ತುಹೋಗಿರುತ್ತದೆ ಪಾಪದ ಸಂಬಳ ಮರಣ ಕಣ್ಣು, ಕಿವಿ, ಕೈಕಾಲುಗಳನ್ನು ಯೋಗಿಯಾಗಿಸಿಕೊಳ್ಳುವದು ಮಹಾ ದುರದೃಷ್ಟವೆಂದು ಹೇಳಬೇಕಾದುದಿಲ್ಲ ಸತ್ಯ, ಶಾಂತಿ, ಪ್ರೀತಿ, ದೇವರು ಇವುಗಳನ್ನು ತಿಳಿಯದ ಹಾಗೆ ಪಾಪದಿಂದ ಮನೋನೇತ್ರಗಳನ್ನು ಹೋಗಲಾಡಿಸಿಕೊಂಡು ಆತ್ಮನನ್ನು ನಾಶಕ್ಕೆ ಒಪ್ಪಿಸುವ ದುರದೃಷ್ಟವು ಪ್ರಾಪ್ತವಾಗದ ಹಾಗೆ ನೋಡಿಕೊಳ್ಳಬೇಡವೇ? ಪಾಪವನ್ನೂ ಅದರ ಸ್ವಭಾವವನ್ನೂ ಅದು ತನ್ನ ವಶವರ್ತಿಗಳ ಮೇಲೆ ನಡೆಸುವ ಬಲಾತ್ಕಾರವನ್ನೂ ತಿಳಿದು ಅದನ್ನು ಸೇವಿಸುವದಕ್ಕೆ ಒಪ್ಪುವದು ಹೇಗೆ? ಪಾಪವನ್ನು ಅಭ್ಯಾಸಿಸುವವನ ಮನಸ್ಸೂ ಹೃದಯವೂ ನಾಶಕ್ಕೆ ಈಡಾಗಲ್ಪಟ್ಟಿವೆ

ಒಳನಾಡಿನ ವೃತ್ತಾಂತಗಳು

ರಾಜಧಾನಿಯಲ್ಲಿ ಉಳುಕೊಂಡಿದ್ದ ದಿವಾನ್ ರೇ ಮೊದಲಾದ ಅಧಿಕಾರಿಗಳು ನೆನ್ನೆ ವಾಪಸು ಬೆಂಗಳೂರಿಗೆ ದಯಮಾಡುವವರಾಗಿದ್ದರು

* * *

ಕಳೆದ ಭಾನುವಾರವೂ, ಮೊನ್ನೆ ಮಂಗಳವಾರವೂ ರಾಜಧಾನಿಯಲ್ಲಿ ಎರಡು ಹದ ಒಳ್ಳೇ ಮಳೆಗಳಾಗಿ ಹವಾ ತಂಪಾಗಿಯೂ, ಮನೋಹರವಾಗಿಯೂ ಇದೆ

* * *

ನಮ್ಮ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಸರ್ ಹ್ಯೂ ಡೇಲಿಯವರು ಈ ತಿಂಗಳಲ್ಲಿ ಸಿಮ್ಲಾ ಪಟ್ಟಣಕ್ಕೆ ದಯಮಾಡಿ ನಾಲ್ಕಾರು ದಿನಗಳ ವರೆಗೆ ವೈಸ್‌ರಾಯಿ ಪ್ರಭುಗಳ ಆತಿಥ್ಯದಲ್ಲಿದ್ದು ವಾಪಸು ಬರುವರೆಂದು ಪ್ರಕಟವಾಗಿದೆ

* * *

ಈ ಸಲ ರಾಜಧಾನಿಯಲ್ಲಿ ನಡೆದ ಸಂಪದಭಿವೃದ್ಧಿ ಸಮಾಜದ ನಾಲ್ಕನೇ ಸಭೆಯಲ್ಲಿ ಮೆಂಬರುಗಳು ಚರ್ಚೆಮಾಡಿ ತೀರ್ಮಾನ ಮಾಡಿರುವ ವಿಷಯಗಳನ್ನು ಸೆಕ್ರೆಟರಿಯವರು ನಮ್ಮಲ್ಲಿಗೆ ಕಳುಹಿಸಿ ಕೊಟ್ಟಿದಾರೆ ಮುಂದಿನ ವಾರ ಈ ವಿಚಾರವಾಗಿ ನಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದಿದೇವೆ

* * *

ದಿವಾನ್ ವಿ. ಎಂ ವಿಶ್ವೇಶ್ವರಯ್ಯನವರು ಕಳೆದ ಭಾನುವಾರ ಸಾಯಂಕಾಲ ರಾಜಧಾನಿಯ ಜಗನ್ಮೋಹನ ಮೈದಾನದಲ್ಲಿ ಯೂರೋಪಿಯನ್ ಅತಿಥಿಗಳನ್ನು ಕರೆಸಿಕೊಂಡು ಅವರಿಗಾಗಿ ನಾನಾ ವಿನೋದಗಳನ್ನೂ ಫಲಾಹಾರಾದಿಗಳನ್ನೂ ಏರ್ಪಡಿಸಿ ಸತ್ಕಾರಮಾಡಿ ಸಂತೋಷಪಡಿಸಿದರು

* * *

ಬೆಂಗಳೂರಿನಲ್ಲಿರುವ ಕೃಷ್ಣದೇವನಾಯಕನೆಂಬಾತನು ತನ್ನದೊಂದು ಔಷಧದ ಅಂಗಡಿ ಉಂಟೆಂದೂ, ಔಷಧಗಳ ಬಿಕರಿಗೆ ಏಜಂಟರು ಬೇಕಾಗಿದೆ ಎಂದೂ ಪ್ರಕಟಮಾಡಿ ಪದಸ್ಥರಿಂದ ಬಂದ ಹಣವನ್ನು ತೆಗೆದುಕೊಂಡು ಮೋಸಮಾಡಿರುತ್ತನೆಂದು ಪೋಲೀಸಿನವರು ಆತನನ್ನು ದಸ್ತಗಿರಿಮಾಡಿದಾರೆ

* * *

ಬೆಂಗಳೂರು ಸಿಟಿ ಅಲಸೂರು ಪೇಟೆ ಪೋಲೀಸ್ ಸ್ಟೇಷನ್‌ನಲ್ಲಿ ಪಹರೆಗಾಗಿ ಇಟ್ಟಿದ್ದ ಒಂದು ಸೀರೆಯನ್ನು ಪೊನ್ನುಸಾಮಿ ಎಂಬ ಪೋಲೀಸ್ ಪ್ಯಾದೆಯು ಕದ್ದುಬಿಟ್ಟನು ವಿಚಾರಣೆಯಲ್ಲಿ ಅವನು ಕದ್ದದ್ದು ನಿಜವೆಂದು ಒಪ್ಪಿಕೊಂಡನು ಸಿಟಿ ಮಾಜಿಸ್ಟ್ರೇಟರು ಅವನಿಗೆ ಮೂರು ತಿಂಗಳ ಕಠಿಣ ಸಜಾ ವಿಧಿಸಿದರು

* * *

ಬೆಂಗಳೂರು ಡಿವಿಜನ್‌ಗೆ ಸೇರಿದ ದೊಡ್ಡಬಳ್ಳಾಪುರದಲ್ಲಿ ಗುಟ್ಟನೆಂಬುವನು ಬಸವಿ ಎಂಬುವಳನ್ನು ಕಳೆದ ಏಪ್ರಿಲ್ ತಿಂಗಳಲ್ಲಿ ಕೊಂದುಹಾಕಿದನೆಂದು ಮೊಕದ್ದಮೆ ಆಯಿತು ಸೆಷನ್ಸ್ ಜಡ್ಜರು ವಿಚಾರಣೆಮಾಡಿ ಅವನು ಸ್ವಾಧೀನತಪ್ಪಿದ್ದನೆಂಬ ಅಭಿಪ್ರಾಯದ ಮೇಲೆ ಅವನಿಗೆ ಯಾವಜ್ಜೀವ ಎಂಡಮಾನ್ ಶಿಕ್ಷೆಯನ್ನು ವಿಧಿಸಿರುತ್ತಾರೆ

* * *

ಬೆಂಗಳೂರು ಒಕ್ಕಲಿಗರ ಪತ್ರಿಕೆಯ ಸಂಪಾದಕರ ಮೇಲೆ ಬಂದಿರುವ ಮಾನನಷ್ಟದ ಮೊಕದ್ದಮೆಯಲ್ಲಿ ಅಲ್ಲಿನ ಸಿಟಿ ಮ್ಯಾಜಿಸ್ಟ್ರೇಟರು ಮೈಸೂರು ಸರ್ಕಾರಿ ಓರಿಯಂಟಲ್ ಲೈಬ್ರರಿಯ ಕ್ಯೂರೇಟರ್ ಮಿ ಎ ಮಹದೇವಶಾಸ್ತ್ರಿಗಳ ಸಾಕ್ಷ್ಯವನ್ನು ಕಳೆದ ಸೋಮವಾರ ಸ್ವಲ್ಪಮಟ್ಟಿಗೆ ಬರೆದುಕೊಂಡು, ಮುಂದಿನ ವಿಚಾರಣೆಯನ್ನು ಈ ತಿಂಗಳ ಅಂತ್ಯಕ್ಕೆ ಇಟ್ಟಿದಾರೆ

* * *

ಮೈಸೂರು ಸಂಸ್ಥಾನದಲ್ಲಿ ರೈಲ್ವೆ ರಸ್ತೆಗಳ ವಿಸ್ತಾರವಾಗಬೇಕೆಂದು ಸರ್ಕಾರದವರು ತೀರ್ಮಾನಮಾಡಿರುವುದರಿಂದ ಕಂಬಿಗಳ ಕೆಳಗೆ ಹಾಸುವಂಥಾ ಮರದ ದಿಮ್ಮಿಗಳು (ಸ್ಲೀಪರುಗಳು) ಸುಮಾರಾಗಿ 1,37,500 ರ ವರೆಗೆ ಬೇಕಾಗಿದೆಯೆಂದೂ, ಸಂಸ್ಥಾನದಲ್ಲಿರುವ ನಾಗುವಾನಿ ವರ್ತಕರು ಅವುಗಳನ್ನು ಮಾಡಿ ಒಪ್ಪಿಸುವುದಕ್ಕೆ ದರಖಾಸ್ತು ಕಳುಹಿಸಬಹುದೆಂದೂ ರೈಲ್ವೆ ಚೀಫ್ ಇಂಜನಿಯರವರು ತಿಳಿಸುತ್ತಾರೆ

* * *

ಕಳೆದ ವಾರ ರಾಜಧಾನಿಯಲ್ಲಿ ನಡೆದ ಕುದುರೆ ಪಂದ್ಯದಲ್ಲಿ ನಮ್ಮ ಮಹಾರಾಜರವರ ಕುದುರೆ ಚಾಬುಕ್ ಸವಾರನಾದ ಶಂಕರರಾವ್ ಎಂಬಾತನು ಪಂದ್ಯದಲ್ಲಿ ಕುದುರೇ ಮೇಲಿನಿಂದ ಬಿದ್ದು ಜ್ಞಾನ ತಪ್ಪಿಹೋಗಿತ್ತು ಮಹಾರಾಜರವರು ತುಂಬಾ ಆದರದಿಂದ ಕೂಡಲೇ ಆತನನ್ನು ಉಪಚರಿಸಿ ಆಸ್ಪತ್ರೆಗೆ ಕಳುಹಿಸಿಕೊಟ್ಟರು ಎರಡು ದಿನಗಳ ಮೇಲೆ ಆತನಿಗೆ ಪ್ರಜ್ಞೆಯುಂಟಾಗಿ ಈಗ ಚೇತರಿಸಿಕೊಳ್ಳುತ್ತಿದಾನೆಂದು ಕೇಳುತ್ತೇವೆ

* * *

ಕ್ರೆಂಚ್ ರಾಕ್ಸ್ ಸಬ್ ತಾಲ್ಲೂಕಿಗೆ ಸೇರಿದ ಮುಂಡಿಬೆಟ್ಟಹಳ್ಳಿ ಗ್ರಾಮದಲ್ಲಿರುವ ಬಲಗ್ಗೆ ಹೊನ್ನ ಉರುಫ್ ದೇವರಗುಡ್ಡನೆಂಬಾತನು ಕೃಷ್ಣರಾಜಪೇಟೆ ತಾಲ್ಲೂಕು ಅಳಪಳ್ಳಿ ಗ್ರಾಮದಲ್ಲಿ ಶಿಥಿಲವಾಗಿದ್ದ ಬಸವೇಶ್ವರ ದೇವಸ್ಥಾನವನ್ನು ಜೀರ್ಣೋದ್ಧಾರಮಾಡಿ ಕಳೆದ ತಾ 16ನೇ ಸೋಮವಾರ ಆ ಪ್ರಾಂತದ ಸುಮಾರು ಒಂಬತ್ತು ಸಾವಿರ ಪ್ರಜೆಗಳಿಗೆ ಸುಭೋಜನವನ್ನು ಮಾಡಿಸಿ ಸಂತೋಷಪಡಿಸಿದನೆಂದು ಒಬ್ಬ ಬಾತ್ಮಿದಾರರು ತಿಳಿಸುತ್ತಾರೆ

* * *

ಬೆಂಗಳೂರು ದಂಡಿನಲ್ಲಿ ಕೆಲವು ದಿನಗಳಿಗೆ ಮುಂಚೆ ಒಂದು ಬೀದೀ ಜಗಳವಾಯಿತು ಅಲ್ಲಿ ಏಟುತಿಂದ ಪ್ಯಾಟ್ರಿಕ್ ಮಿಲ್ಲರ್ ಎಂಬುವನು ಸತ್ತುಹೋದನು ಈ ಮೊಕದ್ದಮೆಯಲ್ಲಿ ಪೋಲೀಸಿನವರು ಮಾರ್ಟಿನ್, ಮುತ್ತು, ಸಿ ಮುನಿಸಾಮಿ, ಎಸ್ ಮುನಿಸಾಮಿ ಎಂಬೀ ನಾಲ್ಕು ಜನರನ್ನು ಹಿಡಿದು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿದರು ಕಳೆದ ವಾರ ಈ ನಾಲ್ವರಿಗೂ ತಲಾ ಏಳೇಳು ವರುಷಗಳಂತೆ ಕಠಿಣ ಸಜಾ ವಿಧಿಸಲ್ಪಟ್ಟಿದೆ

* * *

ಮೈಸೂರು ಬ್ಯಾಂಕಿನ ಇಸ್ತಿಹಾರು ಪ್ರಕಟವಾಗಿ ಒಂದು ತಿಂಗಳಾಯಿತು ಇಷ್ಟರೊಳಗಾಗಿ ಮೈಸೂರಿನ ಪ್ರಜೆಗಳು ಒಂಭತ್ತು ಲಕ್ಷ ರೂಪಾಯಿ ವರೆಗೆ ಷೇರುಗಳನ್ನು ಪಡೆದುಕೊಳ್ಳಲು ಇಷ್ಟಪಟ್ಟು ಇರುತ್ತಾರೆ ಡೈರೆಕ್ಟರುಗಳು ಇದೇ ಜೂಲೈ ತಿಂಗಳಲ್ಲಿ ಷೇರುಗಳನ್ನು ಹಂಚಿಹಾಕುವವರಾಗಿರೋಣದರಿಂದ ಷೇರುಗಳನ್ನು ಕೊಂಡುಕೊಳ್ಳಬೇಕೆಂದು ಅಪೇಕ್ಷಿಸುವವರೆಲ್ಲಾ ಬೇಗ ಬೇಗನೆ ದರಖಾಸ್ತುಗಳನ್ನು ಕಳುಹಿಸುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ

* * *

ಆಲ್ವಾರ್ ಮಹಾರಾಜರವರು ಪರಿವಾರ ಸಮೇತ ಕಳೆದ ಶುಕ್ರವಾರ ಮಧ್ಯಾಹ್ನ ನೀಲಗಿರಿ ಬೆಟ್ಟದಿಂದ ಮೋಟಾರಿನಲ್ಲಿ ರಾಜಧಾನಿಗೆ ದಯಮಾಡಿ, ಬಾಸ್ ಬಂಗಲೆಯಲ್ಲಿ ನಾಲ್ಕು ದಿನ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಿದ್ದು, ಮೊನ್ನೆ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ವಾಪಸು ನೀಲಗಿರಿಗೆ ದಯಮಾಡಿದರು ಅವರು ಬಂದಾಗಲೂ, ವಾಪಸು ಹೋದಾಗಲೂ ಗೌರವಾರ್ಥವಾದ 15 ತೋಪುಗಳು ಹಾರಿಸಲ್ಪಟ್ಟವು

* * *

ಬ್ರಿಟಿಷ್ ರೆಸಿಡೆಂಟರವರೂ, ಯೂರೋಪಿಯನ್ ಆಫೀಸರುಗಳೂ ರಾಜಧಾನಿಯಲ್ಲಿ ನಮ್ಮ ಮಹಾರಾಜರವರ ವರ್ಧಂತಿ ಉತ್ಸವಗಳನ್ನು ತೀರಿಸಿಕೊಂಡು ಮೊನ್ನೆ ವಾಪಸು ದಯಮಾಡಿದರು ಮಹಾರಾಜರವರು ಅವರಿಗಾಗಿ ಅರಮನೆಯಲ್ಲಿ ಸಂಗೀತಾದಿಗಳನ್ನು ನಡಿಸಿ ಸಂತೋಷಪಡಿಸಿದರು ಮೂರು ನಾಲ್ಕು ದಿನ ಅರಮನೆಯ ಮುಂಭಾಗದಲ್ಲೂ ಮೇಲ್ಗಡೆ ಶಿಖರಗಳಲ್ಲೂ ಸಾವಿರಾರು ವಿದ್ಯುಚ್ಛಕ್ತಿಯ ದೀಪಗಳನ್ನು ಹಚ್ಚಿ ನೇತ್ರಾನಂದಕರವಾಗಿ ಮಾಡಿದ್ದರು

* * *

ಶಿವಗಂಗಾ ಸ್ವಾಮಿಗಳವರು ಬೆಂಗಳೂರಿಗೆ ದಯಮಾಡಿದ್ದ ಕಾಲದಲ್ಲಿ ಅಲ್ಲಿನ ಶುಕ್ಲಯಜುರ್ವೇದ ಪಾಠಶಾಲೆಯನ್ನು ನೋಡಿ ಸಂತೋಷಪಟ್ಟು ಅಲ್ಲಿನ ವಿದ್ಯಾರ್ಥಿಗಳ ಭೋಜನದ ಖರ್ಚು ಮುಂತಾದದ್ದಕ್ಕೆ ಹತ್ತು ರೂಪಾಯಿಸಂತೆ ಮಾಸಾಶನವನ್ನು ಮಠದಿಂದ ಕೊಡುವುದಾಗಿ ಹೇಳಿದ್ದಲ್ಲದೆ 100 ರೂಪಾಯನ್ನು ನಗದಾಗಿ ಕೊಟ್ಟು, ಪಾಠಶಾಲೆಯ ಮೂಲಧನಕ್ಕೆ 1,000 ರೂಪಾಯಿ ಮುಂದಿನ ಸಂಚಾರದಲ್ಲಿ ಕೊಡಿಸುವುದಾಗಿ ವಾಗ್ದಾನ ಮಾಡಿರುತ್ತಾರೆಂದು ತಿಳಿದುಬಂದಿದೆ

* * *

ಕುಂಭಕೋಣದ ರಾಮಲಿಂಗ ಪಡದೇವಿ ಎಂಬಾತನು ಟಿ ನರಸೀಪುರದ ತಾ ಗರ್ಗೇಶ್ವರಿಯಲ್ಲಿರುವ ದೇವಸ್ಥಾನವನ್ನು ದುರುಸ್ತು ಮಾಡಿಸುವುದಕ್ಕೆಂದು ರೂ 806 12 3 ಪೈಯನ್ನು ತಾಲ್ಲೂಕ್ ಖಜಾನೆಯಲ್ಲಿ ಠಂವಿಟ್ಟು ಬಹಳ ದಿನಗಳಾದವು ಆತನಾಗಲಿ ಆತನ ವಾರಸ್‌ದಾರರಾಗಲಿ ಸೆಪ್ಟಂಬರ್ ಅಂತ್ಯದೊಳಗೆ ಬಂದು ಆ ಹಣವನ್ನು ತೆಗೆದುಕೊಳ್ಳದೆ ಹೋದರೆ ಆ ಮೊಬಲಗನ್ನು ದೇವಸ್ಥಾನದ ಕೆಲಸಗಳಿಗೆ ವಿನಿಯೋಗಿಸಿಬಿಡುತ್ತೇವೆಂದು ಮೈಸೂರು ಡೆಪ್ಯುಟಿ ಕಮಿಷನರ್ ರವರು ತಿಳಿಸಿದಾರೆ

* * *

ಕಳೆದ ಮೇ ತಿಂಗಳಲ್ಲಿ ಸರ್ಕಾರದಲ್ಲಿ ರೆಜಿಸ್ಟರ್ ಮಾಡಲ್ಪಟ್ಟಿರುವ ಕೋಆಪರೇಟಿವ್ ಸೊಸೈಟಿಗಳ್ಯಾವವೆಂದರೆ—ತರೀಕೆರೆ ತಾ ತಿಪನೆಯ ಪರಸ್ಪರ ಸಹಾಯಕ ಸಂಘ, ತುಮಕೂರು ತಾ ನವಮಂಗಲದ ಸಂಘ, ನೆಲಮಂಗಲದಲ್ಲೂ ಆ ತಾಲ್ಲೂಕು ಗೋರಪಟ್ಟದಲ್ಲೂ ಎರಡು ಸಂಘಗಳು, ಹೆಗ್ಗಡದೇವನಕೋಟೆ ತಾ ಕೊಳ್ಳೇಗಾಲದ ಸಂಘ, ಚನ್ನರಾಯಪಟ್ಟಣದ ತಾ ಬಾಳಗಂಚಿಯ ಮತ್ತು ರಿಪೆರಾವೆಯ ಸಂಘಗಳು, ಮಧುಗಿರಿ ತಾ ಗೋಣಿಬೀಡು ಸಂಘ ಪಾವಗಡ ತಾ ಅರಸೀಕೆರೆ ಸಂಘ—ಈ 9 ಸಂಘಗಳು ರೆಜಿಸ್ಟರಾಗಿವೆ

* * *

ಮನೆ ಮಠಾದಿಗಳನ್ನು ದಾಯಾದಿಗಳು ವಿಭಾಗ ಮಾಡಿಕೊಳ್ಳುವ ಸಂದರ್ಭದಲ್ಲಿ ಅಂಥಾ ವಿಭಾಗವನ್ನು ಸಹಜವಾಗಿಯೂ ಅನುಕೂಲವಾಗಿಯೂ ಮಾಡುವುದು ಸಾಧ್ಯವಲ್ಲವೆಂದು ಕೋರ್ಟಿನವರಿಗೆ ಕಂಡುಬಂದರೆ ಅಂಥಾ ಮನೆಮಠಾದಿಗಳನ್ನು ವಿಭಾಗಮಾಡದೆ ಅವುಗಳಿಗೆ ಕ್ರಯಕಟ್ಟಿ ದಾಯಾದಿಗಳ ಪೈಕಿ ಒಬ್ಬರಿಗೆ ಬಿಕರಿಮಾಡಿ, ಹಣವನ್ನು ಉಳಿದವರಿಗೆ ಹಂಚಿಕೊಡಬಹುದೆಂಬ ಅರ್ಥಕ್ಕೆ ಸರ್ಕಾರದವರು ಒಂದು ಕಾನೂನ್ ಮಾಡಿರುತ್ತಾರೆ ಇದಕ್ಕೆ ಶ್ರೀಮನ್ ಮಹಾರಾಜರವರು ಇದೇ ಜೂನ್ ತಾ 11 ರಲ್ಲಿ ಸಮ್ಮತಿಪಾಲಿಸಿದರು ಈ ಕಾನೂನು ಕೂಡಲೇ ಜಾರಿಗೆ ತರಲ್ಪಟ್ಟಿದೆ ಎಂದು ಹುಕುಂ ಆಗಿದೆ

* * *

ಈ ಸಲ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವ ಅನೇಕ ವಿದ್ಯಾರ್ಥಿಗಳಿಗೆ ಮೇಲಣ ತರಗತಿಗಳಲ್ಲಿ ಓದಲು ಅವಕಾಶವಿಲ್ಲವೆಂದು ಬೆಂಗಳೂರು ಮೈಸೂರು ಕಾಲೇಜುಗಳ ಅಧಿಕಾರಿಗಳು ತಿರಸ್ಕರಿಸಿದ್ದರಿಂದ ಅಂಥವರಿಗೆ ತಕ್ಕ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುವುದಕ್ಕೋಸ್ಕರ ಕಳೆದ ವಾರ ಬೆಂಗಳೂರು ದೊಡ್ಡಣ್ಣನವರ ಕಟ್ಟಡದಲ್ಲಿ ಒಂದು ಮಹಾಜನ ಸಭೆ ನಡಿಯಿತು ದಿವಾನ್ ಬಹದೂರ್ ಕೆ ಪಿ ಪುಟ್ಟಣ್ಣಚೆಟ್ಟಿ ರವರು ಸಭೆಯ ಅಗ್ರಾಸನವನ್ನು ವಹಿಸಿ, ಸಭಿಕರ ಅಭಿಮತವನ್ನು ಗವರ್ನ್‌ಮೆಂಟಿಗೆ ಅರಿಕೆಮಾಡುವುದಾಗಿ ಒಪ್ಪಿಕೊಂಡರು

* * *

ಅರಮನೆಯ ಕಂಪನಿಯವರು ಕಳೆದ ಬುಧವಾರ ರಾತ್ರಿ ಟವನ್ ಹಾಲ್ ಮಂದಿರದಲ್ಲಿ ಗಯಚರಿತ್ರೆ ಎಂಬ ನಾಟಕವನ್ನು ಸ್ವಾರಸ್ಯವಾಗಿಯೂ, ಆಹ್ಲಾದಕರವಾಗಿಯೂ ಅಭಿನಯಿಸಿದರು ದೃಶ್ಯಗಳು ನೇತ್ರಾನಂದಕರವಾಗಿದ್ದವು ಕೌನ್ಸಿಲರ್ ಸರ್ದಾರ್ ಕಾಂತರಾಜೆ ಅರಸಿನವರು, ಮರಹೂಮ್ ಭಕ್ಷಿ ಎಚ್ ಲಿಂಗರಾಜೆ ಅರಸಿನವರು, ಮಿ ಆಂಡ್ರಸನ್ ರವರು, ಮಿಸೆಸ್ ಆಂಡ್ರಸನ್ ರವರು, ಶ್ರೀರಂಗಮ್ಮನವರು, ಇನ್‌ಸ್ಪೆಕ್ಟರ್ ಜನರಲ್ ಮಿ ಸಿ ಶ್ರೀಕಂಠೇಶ್ವರ ಅಯ್ಯರವರು, ಸೆಕ್ರೆಟರಿ ಕೆ ಆರ್ ಶ್ರೀನಿವಾಸಯ್ಯಂಗಾರ್ಯರೇ ಮೊದಲಾದ ಅನೇಕ ದೊಡ್ಡ ಮನುಷ್ಯರು ನಾಟಕವನ್ನು ನೋಡಿ ತುಂಬಾ ಸಂತೋಷಪಟ್ಟುಕೊಂಡರು

* * *

ಒಬ್ಬ ಬಾತ್ಮಿದಾರರಿಂದ— ಮೇಲುಕೋಟೆಯಲ್ಲಿ ದಯಮಾಡಿಸಿದ್ದ ಶ್ರೀ ಯತಿರಾಜ ಮಠದ ಸ್ವಾಮಿಗಳಾದ ಶ್ರೀಮದಿತ್ಯಾದಿ ಪರಮಹಂಸ ಶ್ರೀ ಯತಿರಾಜಸ್ವಾಮಿಗಳವರು ಜೂನ್ 11ನೇ ತಾ ಶನಿವಾರ ಸಂಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ವೈರಮುಡಿ ಉತ್ಸವಕಾಲದಲ್ಲಿಯೂ, ಇತರ ಕಾಲಗಳಲ್ಲಿಯೂ ಇಲ್ಲಿಗೆ ಬರತಕ್ಕ ಯಾತ್ರಿಕರಿಗೆ ಅನ್ನದಾನ ಮಾಡುವುದರಲ್ಲಿಯೂ, ಅವರನ್ನು ಆದರಿಸುವುದರಲ್ಲಿಯೂ ಬಹಳ ಆಸಕ್ತರಾಗಿ ಯಶಸ್ಸನ್ನು ವಿಶಾಲವಾಗಿ ಸಂಪಾದಿಸಿರುತ್ತಾರೆ ಹಿಂದೆ ಆಶ್ರಮವನ್ನು ಸ್ವೀಕರಿಸಿದ ಯಾರೂ ಇಷ್ಟು ಅನ್ನದಾನ ಮಾಡುತ್ತಿರಲಿಲ್ಲ ಮುಂದೆ ಆಶ್ರಮವನ್ನು ಸ್ವೀಕರಿಸುವವರು ಇವರಂತೆ ನಿಷ್ಪಕ್ಷಪಾತದಿಂದ ಖ್ಯಾತಿಯನ್ನು ಸಂಪಾದಿಸುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ

* * *

ಬೆಂಗಳೂರು ಸಿಟಿ ಅಬಲಾಬಾಲಿಕಾ ಪಾಠಶಾಲಾ ವಿದ್ಯಾರ್ಥಿನಿಯರಿಗೆ ಕಳೆದ ಶನಿವಾರ ಡೆಪ್ಯುಟಿ ಕಮಿಷನರ್ ಮಿ ಕೆ ಬಂಡಿಯವರು ಸಭೆಯ ಅಗ್ರಾಸನವನ್ನು ವಹಿಸಿ ಬಹುಮಾನಗಳನ್ನು ಹಂಚಿದರು ಎ ಚಂದ್ರಶೇಖರ ಅಯ್ಯರವರ ಪತ್ನಿಯವರು ಕೆಲವು ಬಾಲಕಿಯರಿಗೆ ಬೆಳ್ಳಿಯ ಸಾಮಾನುಗಳನ್ನು ಬಹುಮಾನ ಕೊಟ್ಟರು ಹೆಡ್ ಮಿಸ್ಟ್ರೆಸ್ ರವರಾದ ಶ್ರೀಮತಿ ರಂಗನಾಯಕಮ್ಮನವರ ವಿವೇಕಪೂರ್ವಕವಾದ ಮತ್ತೂ ಪ್ರೀತಿಯುಕ್ತವಾದ ಸಾಹಸ ಪ್ರಯತ್ನದಿಂದ ಆ ಸ್ಕೂಲಿನಲ್ಲಿ 250 ಮಂದಿಯ ತನಕ ಹೆಣ್ಣುಮಕ್ಕಳು ಸೇರಿ ವಿದ್ಯೆ ಕಲಿಯುತ್ತಿರುವುದು ಸಂತೋಷಪ್ರದವಾಗಿದೆ ಎಂದು ಮಿ ಬಾಂಡಿಯವರು ಹೇಳಿ ಇಂಥಾ ಸ್ಕೂಲಿಗೆ ಸರ್ಕಾರದ ಸಹಾಯವೂ ಪ್ರೋತ್ಸಾಹವೂ ವಿಶೇಷವಾಗಿ ದೊರಕುವುದು ಅವಶ್ಯವೆಂದು ತಿಳಿಸಿದರು

* * *

ರಾಜಧಾನಿಯ ಹಳೇ ಅಗ್ರಹಾರದಲ್ಲಿರುವ ಸೆಟ್ಟಪ್ಪನವರ ಮಕ್ಕಳು ಪಸಾರೆ ಅಂಗಡಿ ಮ|| ಸಿದ್ದಪ್ಪನವರು ಕಳೆದ ಶುಕ್ರವಾರ ಅಲಂಕಾರ ಸಹಿತವಾದ ಹತ್ತು ಮದುವೆಗಳನ್ನು ಧರ್ಮಾರ್ಥವಾಗಿ ಮಾಡಿಸಿ, ಶನಿವಾರ ರಾತ್ರಿ ಆ ದಂಪತಿಗಳನ್ನೆಲ್ಲಾ ಕೂಡಿಸಿ ಪಟ್ಟಣದ ರಾಜಬೀದಿಗಳಲ್ಲಿ ನೇತ್ರಾನಂದಕರವಾಗಿ ಮೆರವಣಿಗೆ ಮಾಡಿಸಿದ್ದಲ್ಲದೆ ತುಂಬಾ ಅನ್ನದಾನವನ್ನೂ ನಡಿಸಿದರು ಈ ಮದುವೆಗಳಿಗೆ ಬಹುಮಂದಿ ದೊಡ್ಡ ಮನುಷ್ಯರೂ ವರ್ತಕರೇ ಮುಂತಾದವರೂ ಹೋಗಿದ್ದು ಅವರ ಔದಾರ್ಯವನ್ನು ನೋಡಿ ಸಂತೋಷಪಟ್ಟರು ಮ|| ಸಿದ್ದಪ್ಪನವರು ಈ ಹಿಂದೆ ಐದು ಮದುವೆಗಳನ್ನು ಹೀಗೆಯೇ ಮಾಡಿಸಿರುತ್ತಾರೆ ಅವರು ಇಂಥಾ ಕಾರ್ಯಗಳ ಜೊತೆಗೆ ತಮ್ಮ ಹೆಸರಿನ ಮೇಲೆ ಒಂದು ಸ್ಕೂಲನ್ನೋ ಆಸ್ಪತ್ರೆಯನ್ನೋ ಕಟ್ಟಿಸಿ ನಡೆಯುವಂತೆ ಮಾಡಿದರೆ ಅವರ ಹೆಸರು ಶಾಶ್ವತವಾಗಿ ನಿಲ್ಲಲು ಇನ್ನೂ ಸಹಾಯವಾದೀತೆಂದು ಸೂಚಿಸುತ್ತೇವೆ

* * *

ವೈಸ್‌ರಾಯರವರು ಮೈಸೂರು ಸಂಸ್ಥಾನದಲ್ಲಿ ಕೆಳಗೆ ಕಂಡ ಪ್ರಕಾರ ಸಂಚಾರಮಾಡಿಕೊಂಡು ದಯಮಾಡುವರೆಂದು ಪ್ರಕಟವಾಗಿದೆ ಈಗಿನ ಏರ್ಪಾಡಿನಂತೆ ಅವರು ನೊವೆಂಬರ್ ತಾ 3ರಲ್ಲಿ ಗೇರಸೊಪ್ಪಾ ಜಲಪಾತವನ್ನು ನೋಡಿಕೊಂಡು ಮರುದಿನ ಶಿವಮೊಗ್ಗೆಯನ್ನು ತಲಪುವರು ಅಲ್ಲಿಂದ ಅವರು ಸ್ಪೆಷಲ್ ರೈಲು ಹತ್ತಿ ತಾ 5ನೇ ಬೆಳಿಗ್ಗೆ ರಾಜಧಾನಿಯಲ್ಲಿ ಇಳಿದು ಮೂರು ದಿನ ತಂಗುವರು 8ನೇ ತಾ ಬೆಳಿಗ್ಗೆ ರಾಜಧಾನಿಯಿಂದ ಹೊರಟು, ಖಾರಾಪುರದ ಜಂಗಲಿನಲ್ಲಿ ಒಂದು ವಾರದ ತನಕ ಇದ್ದು ಆನೆಗಳ ಕೆಡ್ಡಾ ಮತ್ತು ಶಿಕಾರಿಯನ್ನು ತೀರಿಸಿಕೊಂಡು ತಾ 16ಕ್ಕೆ ವಾಪಸು ಬಂದು ಮರುದಿನ ರಾಜಧಾನಿಯಿಂದ ಕೋಲಾರಕ್ಕೆ ಹೋಗಿ ಅಲ್ಲಿನ ವಿದ್ಯಮಾನಗಳನ್ನು ಪರಾಂಬರಿಸಿ ಆ ಸಾಯಂಕಾಲವೇ ಹಿಂತಿರುಗಿ ಮೈಸೂರಿಗೆ ಬಂದು, ತಾ 18ರಲ್ಲಿ ಕೋಲಾರದ ಚಿನ್ನದ ಗಣಿಗಳನ್ನು ನೋಡಿಕೊಂಡು, ಮರುದಿನ ಮದರಾಸನ್ನು ಕುರಿತು ತೆರಳುವರೆಂದು ಪ್ರಕಟವಾಗಿದೆ

ಮೈಸೂರು ಗೆಜೆಟ್ ಸಂಗ್ರಹ

ಹಿರಿಯೂರು ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮಿ| ಜಿ ಶಾಂತವೀರಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ಚಿತ್ರದುರ್ಗದ ಸಬ್ ರೆಜಿಸ್ಟ್ರಾರ್ ಮಿ| ಕೆ ದೊರಸಾಮಿ ಅಯ್ಯಂಗಾರ್ಯರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹಿರಿಯೂರು ತಾಲ್ಲೂಕು ಅಮಲ್ದಾರ್ ಮತ್ತು ಎಸ್ ಕ್ಲಾಸ್ ಮಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದೆ

ಮೊಳಕಾಲ್ಮುರು ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮಿ|| ಎನ್ ಸುಬ್ಬರಾಯರಿಗೂ, ಹೊಳಲ್ಕೆರೆ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮಿ| ಬಿ ಲಿಂಗಯ್ಯನವರಿಗೂ 2ನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರ ವಹಿಸಲ್ಪಟ್ಟಿದೆ

ಅ|| ಕಮಿಷನರ್ ಮಿ| ಮಿರ್ಜಾ ಎಂ ಇಸ್ಮೈಲ್‌ರವರನ್ನು ಮೇ ತಾ 23 ರಿಂದ 1 ನೇ ಕ್ಲಾಸಿಗೆ ಬಡ್ತಿಮಾಡಿದೆ

ವೈದ್ಯ ಇಲಾಖೆಯಲ್ಲಿ ಅ| ಸರ್ಜನ್ ಮಿ ಬಿ ಕೃಷ್ಣಮೂರ್ತಿರಾಯರನ್ನು ನಂಜನಗೂಡಿನಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ್ ಆಸ್ಪತ್ರೆಗೂ, ಅ|| ಸರ್ಜನ್ ಮಿ|| ಸಿ ರಾಜಗೋಪಾಲ ಮುದಲಿಯಾರ್ರನ್ನು ದಾವಣಗೆರೆಯಿಂದ ನಂಜನಗೂಡು ಆಸ್ಪತ್ರೆಗೂ ವರ್ಗಮಾಡಿದೆ

ಅ ಇಂಜನಿಯರ್ ಮಿ|| ಎಸ್ ವೆಂಕಟಸುಬ್ಬಸೆಟ್ಟರನ್ನು ಮೇ ತಾ 12 ರಿಂದ ಬೆಂಗಳೂರು ಮೆಕಾನಿಕಲ್ ಇಂಜನಿಯರಿಂಗ್ ಸ್ಕೂಲಿನ ಸೂಪರಿಂಟೆಂಡೆಂಟರಾಗಿ ನೇಮಕಮಾಡಿದೆ

ಕಾವೇರಿ ತಲಾಪ್ ಡಿವಿಜನ್ ಅ|| ಇಂಜನಿಯರಾ ಮಿ|| ಆರ್ ಡಬ್ಲಿಯು ಸ್ಮಾಲ್‌ವುಡ್ ರವರಿಗೆ ಜೂನ್ ತಾ 15 ರಿಂದ ಅಥವಾ ಅವರಿಗೆ ಬಿಡುಗಡೆಯಾಗುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿದೆ

ತಾಲ್ಲೂಕು ವರ್ತಮಾನ

ತರೀಕೆರೆ—ಈ ಊರಲ್ಲಿ ಕಡೂರಿನ ಸಾಹುಕಾರರಾದ ಒಬ್ಬ ಶೆಟ್ಟರು ಲಗ್ನದ ಆಭರಣಗಳನ್ನು ಮಾರುತ್ತಿದ್ದರು ಮತ್ತು ಈ ಮದುವೆಗಳ ಕಾಲದಲ್ಲಿ ಹೆಚ್ಚಿನ ಆದಾಯದಿಂದ ಬಹಳ ಆಭರಣಗಳನ್ನು ತರಿಸಿಟ್ಟುಕೊಂಡಿದ್ದರು ಕಳೆದ ತಾ 23ನೇ ಸೋಮವಾರ ರಾತ್ರಿ ದುಷ್ಟರು ಯಾರೋ ಕೂಡಿಕೊಂಡು 2 ಘಂಟೆ ಸಮಯದಲ್ಲಿ ಸದರಿ ಸಾಹುಕಾರರು ವಠಸಾಲೆಯಲ್ಲಿ ಅಂಗಡಿಯಲ್ಲಿ ಮಲಗಿರುವಾಗ್ಗೆ ತಿರಚೆ ಇಸವಮಾಡಲು ಯತ್ನಿಸಿ ಹೊಡೆದ ಏಟು ಬಲಗಡೆ ದವಡೆಯ ಮೇಲೆ ಬಿದ್ದುಬಿಟ್ಟಿತು ಈ ಪೆಟ್ಟಿನಿಂದ ಶೆಟ್ಟರ ಹಲ್ಲುಗಳು ಚೂರುಚೂರಾಗಿ, ದವಡೆಯ ಎಲುಬು ಮುರಿದು, ನಾಲಗೆಗೂ ನಾಲಗೆಯೂ ಸ್ವಲ್ಪ ಘಾಯವಾಗಿದೆ ಏಟು ಬಿದ್ದ ಕೂಡಲೇ ಸಾಹುಕಾರರು ಎದ್ದು ಅಬ್ಬರಿಸಿಕೊಂಡಾಗ ಆಸಾಮಿಗಳು ಪರಾರಿಯಾದರು ಆಗ ಶೆಟ್ಟರು ಮತ್ತೊಂದು ಮನೆಯಲ್ಲಿ ಮಲಗಿದ್ದ ತಮ್ಮ ಮಗನನ್ನೂ ಇನ್ನೂ ಕೆಲವರನ್ನೂ ತಾವೇ ಹೋಗಿ ಎಬ್ಬಿಸಿ ಅವರ ಜೊತೆಯಲ್ಲಿ ಹೋಗಿ ಡಾಕ್ಟರವರನ್ನು ಕಂಡು ಅವರಿಂದ ಸ್ವಲ್ಪ ಇಲಾಜುಮಾಡಿಸಿಕೊಂಡು ದವಡೆಯ ಎಲುಬು ಮುರಿದಿರುವದರಿಂದ ಚಿಕಿತ್ಸೆಗಾಗಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಹೋದರು ದೊಡ್ಡಪೇಟೆಯಲ್ಲಿ, ಮುಂದೆ ಹಿಂದೆ ಮದುವೆ ಮನೆಯಲ್ಲಿ ಎಚ್ಚರ ಮಧ್ಯದಲ್ಲಿ ಅಬ್ಬರ ಇದು ಯಾರ ಅಜಾಗ್ರತೆಯೋ ತಿಳಿಯದು ಒಬ್ಬನು ಹೇಳಿದ್ದೇನಂದರೆ—ಪೋಲೀಸ್ ಜವಾನರು ಎಷ್ಟು ರಬೇಕೋ ಅಷ್ಟು ಜನ ಟವನ್‌ನಲ್ಲೂ ಇಲ್ಲ, ತಾಲ್ಲೂಕಿಗೂ ಇಲ್ಲ ಅಲ್ಲದೆ ಟವನ್ನಿನಲ್ಲಿ ಇರುವ 6 7 ಜನರಲ್ಲಿ ಕೆಲವರು ರಾಜನಾಮೆ ಕೊಟ್ಟಿದಾರೆ ಎಂದು ಹೇಳಿದನು ಇದೀಗ ಕಳ್ಳರಿಗೆ ಒಳ್ಳೇ ಸಮಯ ಈಗ ಅಧಿಕಾರಿಗಳು ಬೇಗ ಜವಾನರನ್ನು ಭರ್ತಿಮಾಡುವದಾದರೆ ಪ್ರಜೆಗಳಿಗೆ ನೆಮ್ಮದಿ ಇಲ್ಲವಾದರೆ ಇಂಥಾ ಕೃತ್ಯಗಳು ಇನ್ನೆಷ್ಟು ನಡೆಯಬಹುದೋ ತಿಳಿಯದು —ಸಮೀಪದ ಹಳ್ಳಿಯಲ್ಲಿದ್ದ ಸುಕಾಲಿಗನೊಬ್ಬನು ಮನೆಗೆ ಹುಲ್ಲು ಹೊದಿಸುವಾಗ ಕೆಳಗೆ ಬಿದ್ದು, ಕೂಡಲೇ ಆಸ್ಪತ್ರೆಗೆ ಬಂದು ಎರಡು ದಿನ ಇದ್ದು ಬದುಕುವಹಾಗಿಲ್ಲದ್ದರಿಂದ ತನ್ನ ಮನೆಗೆ ಹೋದನು — ಈ ಕಡೆ ಇನ್ನು ಕೆಲವು ದಿನಗಳೊಳಗಾಗಿ ಜಡಿ ಹಿಡಿಯುತ್ತದೆ ಪಟ್ಟಣದೊಳಗೆ ಮ್ಯುನಿಸಿಪಾಲಿಟಿಯವರು ಅಲ್ಲಲ್ಲಿ ಬಿದ್ದಿರುವ ರಾಡಿಯಾದ ಭತ್ತದ ಹೊಟ್ಟು, ಅಡಕೆಕಾಯಿ ಸಿಪ್ಪೆ ಮುಂತಾದ್ದನ್ನು ತೆಗಿಸಿದರೆ ಮಳೆಗಾಲದಲ್ಲಿ ಮಹಾಮಾರಿಯೂ, ಸೊಳ್ಳೆ ಕಾಟವೂ ತಪ್ಪುತ್ತೆ ಇದಕ್ಕೆ ಮ್ಯುನಿಸಿಪಾಲಿಟಿಯವರು ಗಮನಕೊಡುವರೆಂದು ನಂಬುತ್ತೇನೆ —ಈ ಊರಿಗೆ ಈಗ ಒಬ್ಬ ಸನ್ಯಾಸಿ ಬಂದು ದೇವಸ್ಥಾನದಲ್ಲಿದ್ದುಕೊಂಡು ಜನರಿಂದ ಭಂಗಿಸೊಪ್ಪು ಮೊದಲಾದದ್ದನ್ನು ತರಿಸಿಕೊಂಡು ಕುಡಿದು, ಜನರಿಗೆ ಇಂಥಿಂಥಾ ಕಡೆ ಹಣವಿದೆ ನಾನು ಅಂಜನ ಹಾಕಿ ನೋಡುತ್ತೇನೆ ಯಾರಿಗಾದರೂ ಬೇಕಾದರೆ ತೋರಿಸುತ್ತೇನೆ ಹಣ ಅವರ ವಶಮಾಡುತ್ತೇನೆ ಎಂದು ಹೇಳಿಕೊಂಡು ಜೀವನಮಾಡುತ್ತಿದಾನೆ ಊರಿನ ಭಂಗಿಕೋರರೂ ಇತರರೂ ನಿತ್ಯವೂ ಹೋಗಿ ಸನ್ಯಾಸಿಯ ಸೇವೆಮಾಡುವರು ಅವನಿಂದ ಬಡವರು ತಮ್ಮಲ್ಲಿನ ಕಾಸನ್ನು ಭಂಗಿಸೊಪ್ಪು ಮೊದಲಾದದ್ದಕ್ಕೆ ಕೊಟ್ಟು, ಎಷ್ಟರಮಟ್ಟಿಗೆ ಧನ್ಯರಾಗುವರೋ ನೋಡಬೇಕು ಪೋಲೀಸಿನವರು ಇಂಥಾ ಹಣ ತೆಗೆಯುವ ಮಹಾತ್ಮರನ್ನು ಕಾಲಿಗೆ ಬುದ್ಧಿ ಹೇಳುವಂತೆ ಮಾಡಿದರೆ ಉತ್ತಮವೆಂದು ಭಾವಿಸಲ್ಪಟ್ಟಿದೆ

ಬಂಗಾಳಾದಲ್ಲಿ ರೈಲ್ವೆ ಅನಾಹುತವು

ಹತ್ತಾರು ಜನರು ಪ್ರಾಣ ಕಳೆದುಕೊಂಡರು

ಈಸ್ಟ್ ಇಂಡಿಯಾ ರೈಲ್ವೆ ಕಂಪನಿಯ ರೈಲ್ ಶಾಖೆಗಳಾದ ದೇವರಾಜಪುರ-ಚಿತ್ತಾಮಿ ಸ್ಟೇಷನ್‌ಗಳ ಮಧ್ಯೆಯೂ, ಓಂಡೋಲ್ ಸೇಂಥಿಯಾ ಸ್ಟೇಷನ್‌ಗಳ ಮಧ್ಯೆಯೂ ಕಳೆದ ವಾರ ವಿಶೇಷವಾದ ಮಳೆಗಳು ಸುರಿದು ಸಣ್ಣ ಹೊಳೆಗಳಲ್ಲಿ ಅಪಾರವಾದ ಪ್ರವಾಹಗಳು ಹರಿದವು ರೈಲ್ ರಸ್ತೆಯಲ್ಲಿ ಕಟ್ಟಿದ್ದ ಮೂರು ನಾಲ್ಕು ಸೇತುವೆಗಳು ಪ್ರವಾಹಗಳಲ್ಲಿ ಕೊಚ್ಚಿಹೋದವು ಓಂಡೋಲ್ ಸ್ಟೇಷನ್‌ನಿಂದ ಗಯೆಯ ಮಾರ್ಗವನ್ನು ಹಿಡಿದು ಹೋಗುತ್ತಿದ್ದ ರೈಲ್ ಗಾಡಿಯು ಕಳೆದ ಶನಿವಾರ ಬೆಳಗಿನ ಝಾಮದಲ್ಲಿ ಕೊಚ್ಚಿಹೋಗಿದ್ದ ಸೇತುವೆಯ ಮೇಲೆ ಹರಿದು ಗಾಡಿಗಳೆಲ್ಲಾ ಎತ್ತರ ಪ್ರದೇಶದಿಂದ ಪ್ರವಾಹವಿದ್ದ ಹೊಳೆಯೊಳಕ್ಕೆ ಒಂದೊಂದಾಗಿ ಬಹು ಬೇಗನೆ ಮಗುಚಿಕೊಂಡು ಒಡೆದು ಚೂರುಚೂರುಗಳಾದವು ಅದೇ ಸಮಯದಲ್ಲಿ ಎದುರು ಕಡೆಯಿಂದ ಬಂದ ಒಂದು ರೈಲ್ ಗಾಡಿಯೂ ಹಾಗೆಯೇ ಪ್ರವಾಹದಲ್ಲಿ ಮಗುಚಿಕೊಂಡಿತು ಈ ಅನಾಹುತದಲ್ಲಿ ಎಷ್ಟು ಜನ ಪ್ರಯಾಣಿಕರು ಮೃತಪಟ್ಟರೋ ಎಷ್ಟು ಜನರಿಗೆ ಗಾಯಗಳಾದವೋ ಇನ್ನೂ ಸರಿಯಾಗಿ ತಿಳಿದುಬರಲಿಲ್ಲ ಈ ದುಃಖಕರವಾದ ಸುದ್ದಿಯು ಹೌರಾ ಪಟ್ಟಣಕ್ಕೆ ತಲಪಿದ ಕೂಡಲೇ ಅಂದರೆ ಶನಿವಾರ ಬೆಳಗ್ಗೆ 11 ಗಂಟೆಗೆ ಚೀಫ್ ಇಂಜನಿಯರವರು ಆವಶ್ಯವಾದ ಸಹಾಯಸಂಪತ್ತುಗಳನ್ನೆಲ್ಲಾ ಒದಗಿಸಿಕೊಂಡು ಸ್ಪೆಷಲ್ ರೈಲಿನಲ್ಲಿ ಆ ಸ್ಥಳಕ್ಕೆ ಹೋಗಿ ಅಜಮಾಯಿಷಿಮಾಡಿದರು ಅನಾಹುತ ಸಂಭವಿಸಿದ ರೈಲಿನಲ್ಲಿ ಒಂಭತ್ತು ಗಾಡಿಗಳಿದ್ದವೆಂದೂ, ಆ ಪೈಕಿ ಒಂದು 3 ನೇ ಕ್ಲಾಸ್ ಗಾಡಿಯೆಂದೂ ತಿಳಿಯುತ್ತದೆ ಪ್ರವಾಹದೊಳಗೆ ಮುಳುಗಿ ಮುಂದು ಹೋಗಿರುವ ಗಾಡಿಗಳಲ್ಲಿ ಪ್ರಯಾಣಮಾಡುತ್ತಿದ್ದವರೆಲ್ಲಾ ಅವುಗಳ ಕೆಳಗೆ ಸಿಕ್ಕಿ ಮೃತಪಟ್ಟಿರಬೇಕು ಕೆಲವು ಅಂದರೆ 8 10 ಹೆಣಗಳು ಮಾತ್ರ ಮೇಲ್ಭಾಗದಲ್ಲಿ ಸಿಕ್ಕಿರುತ್ತವೆ ಕೆಲವು ಪ್ರಯಾಣಿಕರು ಕಿಟಕಿಗಳಿಂದ ಹೊರಕ್ಕೆ ಹಾರಿದ್ದು ಪೂರಾ ಗಾಯಪಟ್ಟಿದ್ದರು ಇವರನ್ನೆಲ್ಲಾ ಸೂರಿ ಪಟ್ಟಣದ ಆಸ್ಪತ್ರೆಗೆ ಕಳುಹಿಸಿರುತ್ತಾರೆ ಮರಣಸಂಕಟದಲ್ಲಿರುವ ಕೆಲವರು ಗಾಡಿಗಳ ಮಧ್ಯೆ ಸಿಕ್ಕಿಕೊಂಡಿರೋಣದರಿಂದ ಅವರನ್ನು ಬಿಡಿಸಿಕೊಳ್ಳುವುದು ಪ್ರಯಾಸವಾಗಿದೆ ರೈಲ್ವೆ ಅಧಿಕಾರಿಗಳೂ ಇತರರೂ ಸೇರಿ ಅವಶ್ಯವಾದ ಸಹಾಯಗಳನ್ನು ಮಾಡುತ್ತಿದ್ದಾರೆ

ಬರ್ಮಾದಲ್ಲಿ ಡಕಾಯತಿಗಳು

ಪ್ರಸಿದ್ಧ ಕಳ್ಳರು ಸಿಕ್ಕಿಬಿದ್ದರು

ಕಳೆದ ವಾರ ಬರ್ಮಾ ಆಧಿಪತ್ಯದಲ್ಲಿ ಪೋಲೀಸಿನವರು ಸಾಹಸಪಟ್ಟು ಕಳ್ಳರ ಗುಂಪುಗಳನ್ನು ಹಿಡಿದಿರುತ್ತಾರೆ ಈ ಕಳ್ಳರ ಗುಂಪುಗಳು ಪೆಗೂ, ಮಿನ್ಬು ಮುಂತಾದ ಡಿಸ್ಟ್ರಿಕ್ಟುಗಳಲ್ಲಿ ಹತ್ತಾರು ವರುಷಗಳಿಂದ ದರೋಡೆಗಳನ್ನು ನಡಿಸುತ್ತಾ ಪ್ರಜೆಗಳಿಗೆ ಕಳವಳವನ್ನುಂಟುಮಾಡಿದ್ದವು ಈ ಕಳ್ಳರು ಇಂಥವರೆಂದು ಗ್ರಾಮಸ್ಥರಿಗೆ ತಿಳಿದಿದ್ದಾಗ್ಯೂ ಗ್ರಾಮಸ್ಥರು ಸರ್ಕಾರದವರಿಗೆ ಹಿಡಿದು ಕೊಡಲಿಲ್ಲವೆಂದು ಹೇಳಿ ಸರ್ಕಾರದವರು ಹತ್ತೊಂಭತ್ತು ಗ್ರಾಮಗಳಿಗೆ ವಿಶೇಷವಾದ ಪೋಲೀಸನ್ನು ನೇಮಕ ಮಾಡಿ ನಾಲ್ಕಾರು ವರುಷಗಳಿಂದ ಆ ಪೋಲೀಸಿನವರ ಸಂಬಳವನ್ನು ಗ್ರಾಮಸ್ಥರಿಂದ ವಸೂಲ್ಮಾಡಿ ಕೊಡಿಸುತ್ತಾ ಬಂದಿದ್ದಾರೆ ಈಗ ಈ ಕಳ್ಳರ ಗುಂಪು ಸಿಕ್ಕಿರುತ್ತದೆ ಅದನ್ನು ಪೋಲೀಸಿನವರು ಪತ್ತೆಮಾಡಿ ಹಿಡಿದ ಕ್ರಮ ಹ್ಯಾಗೆಂದರೆ—ಒಬ್ಬ ಬರ್ಮಾಯನು ತನ್ನ ಮನೆಯಲ್ಲಿ ವಯಸ್ಸಾದ ಅತ್ತಿಗೆಯನ್ನು ಬಿಟ್ಟು ಕಾರ್ಯಾರ್ಥವಾಗಿ ಪರಸ್ಥಳಕ್ಕೆ ಹೋದನು ಆ ಸಮಯವನ್ನು ನೋಡಿಕೊಂಡಿದ್ದ ಕಳ್ಳರು ಅವನ ಮನೆಗೆ ನುಗ್ಗಿದರು ಅತ್ತಿಗೆಯಾದವಳು ಕಳ್ಳರು ಬಂದದ್ದನ್ನು ಕಂಡು ಹಿತ್ತಲುಕಡೆಯಿಂದ ತಲೆ ತಪ್ಪಿಸಿಕೊಂಡು ಹೋಗಬೇಕೆಂದು ಪ್ರಯತ್ನಪಟ್ಟಳು ಕಳ್ಳರು ಅವಳನ್ನು ಬಿಡದೆ ಹಿಡಿದುತಂದು ಚೆನ್ನಾಗಿ ಹೊಡೆದುಬಡಿದು ಮನೆಯಲ್ಲಿ ಒಡವೆವಸ್ತು ಇಟ್ಟಿರುವ ಸ್ಥಳಗಳನ್ನು ಅವಳಿಂದ ತಿಳಿದು ಕೊಳ್ಳೆಹೊಡೆದರು ಅಷ್ಟರಲ್ಲೇ ನೆರೆಮನೆಯವರು ಜಾಗಟೆ ಬಡಿದು ಗಲಭೆಮಾಡಿದರು ಗ್ರಾಮಸ್ಥರೆಲ್ಲಾ ಬಂದು ಜಮಾಯಿಸಿಕೊಂಡರು ಪೋಲೀಸಿನವರೂ ಆಯುಧಪಾಣಿಗಳಾಗಿ ಬಂದರು ಅಷ್ಟರೊಳಗೆ ಕಳ್ಳರು ಚಮತ್ಕಾರವಾಗಿ ತಪ್ಪಿಸಿಕೊಂಡು ಕಾಡಿಗೆ ಹೋಗಿ ಸೇರಿಕೊಂಡರು ಪೋಲೀಸಿನವರು ಬೆನ್ನುಹತ್ತಿಹೋಗಿ ಕಾಡೆಲ್ಲಾ ಹುಡುಕುತ್ತಾ ಬಂದಾಗ ಕಳ್ಳರ ಮುಖಂಡನೂ ಅವನ ಚೇಲಾಗಳೂ ಸಿಕ್ಕಿಬಿದ್ದರು ಅವರ ಹತ್ತಿರ ಎರಡು ಬಂದೂಕುಗಳೂ, ಎರಡು ಪಿಸ್ತೂಲುಗಳೂ, ಒಂದು ಕತ್ತಿಯೂ ಇದ್ದಾಗ್ಯೂ ಅವನು ಅವುಗಳನ್ನು ಪ್ರಯೋಗಮಾಡಲು ಅವಕಾಶವಾಗದೆಹೋಯಿತು ಇದಲ್ಲದೆ ಈ ಕಳ್ಳರ ಗುಂಪಿನವರು ಹಿಂದೆ ಹತ್ತು ಡಕಾಯತಿಗಳನ್ನು ಮಾಡಿ ಸಿಕ್ಕದೆ ತಪ್ಪಿಸಿಕೊಂಡಿದ್ದರೆಂದು ತಿಳಿದುಬರುತ್ತದೆ

ಪೋಲೀಸಿನವರು ಇನ್ನೊಂದು ಗ್ರಾಮದಲ್ಲಿ ಅದೇ ದಿನ ಇನ್ನೊಂದು ಗುಂಪಿನ ಕ್ರೂರಾತ್ಮರನ್ನು ಹಿಡಿದಿರುತ್ತಾರೆ ಈ ಕಳ್ಳರು ಒಂದು ಮನೆಗೆ ನುಗ್ಗಿ ಒಬ್ಬ ಹೆಂಗಸಿನ ಮೇಗೆ ದೀಪದ ಎಣ್ಣೆ ಸುರಿದು ದೀಪಹಚ್ಚಿ ಅವಳನ್ನು ಜೀವಸಹಿತ ಸುಟ್ಟು ಕೊಂದುಬಿಟ್ಟು ಅವಳ ಮನೆಯನ್ನು ಕೊಳ್ಳೆಹೊಡೆದು ಇದ್ದರೆಂದು ತಿಳಿಯುತ್ತದೆ

ಮಳೆಯಿಂದಾದ ಎರಡನೇ ಅನಾಹುತವು

ಬೊಂಬಾಯಿ ಪಟ್ಟಣದಲ್ಲಾದ ಮಳೆ

ಕಳೆದ ವಾರ ಬೊಂಬಾಯಿನಲ್ಲಿ ಅಪಾರವಾದ ಮಳೆ ಸುರಿಯಿತು ಕಳೆದ ತಾ 21 ನೇ ಗುರುವಾರ ರಾತ್ರಿ ಹಿಡಿದ ಮಳೆ ಕೆಲವು ಗಂಟೆಗಳ ಹೊತ್ತು ಸುರಿದದ್ದಲ್ಲದೆ ಮರು ದಿನವೂ ನಿಲ್ಲಲಿಲ್ಲ ಕಳೆದ ಆರು ದಿನಗಳಲ್ಲಿ ಆ ಪಟ್ಟಣದೊಳಗೆ ಹದಿನಾರು ಅಂಗುಲ ಮಳೆಯಾಗಿರುವಂತೆ ತಿಳಿಯುತ್ತದೆ ಆ ಪೈಕಿ ಗುರುವಾರ ಒಂದೇ ದಿವಸ [illegible] ಅಂಗುಲ ಸುರಿಯಿತು ಹವಾ ಬಹಳ ವಿಪರೀತವಾಗಿ [illegible] ಸಮುದ್ರವು ಅಲ್ಲೋಲಕಲ್ಲೋಲವಾಗಿ ಒಂದೊಂದು ಬಾರಿ ದೋಣಿಗಳು ರೇವಿನಲ್ಲಿ ಮುಳುಗಿಕೊಂಡವು ಅನೇಕಜನರು ಸಮುದ್ರಕ್ಕೆ ಮಗುಚಿಬಿದ್ದರು [illegible] ಒಂದು ಹಡಗು ಹೋಗಿ [illegible] ಸಮುದ್ರದಿಂದ ಬಡಿಯಿತು ಸಾಮಾನುಗಳೆಲ್ಲಾ ನಷ್ಟವಾದವು

ಕಠ್ಯಾವಾಡದಲ್ಲಿ ಮತ್ತೆ ಮಳೆಯಿಂದಾದ ನಷ್ಟಗಳು

ಕಠ್ಯಾವಾಡಕ್ಕೆ ಸೇರಿದ ಕೆಲವು ಪಟ್ಟಣಗಳಲ್ಲಿ ಹಿಂದೆ ಎರಡು ವಾರಗಳೊಳಗೆ ಸಂಭವಿಸಿದ ಅಪೂರ್ವವಾದ ಮಳೆಗಳಿಂದ ವಿಶೇಷ ಪ್ರಾಣಹಾನಿಯೂ, ಮನೆಮಠ ಆಸ್ತಿಪಾಸ್ತಿಗಳ ನಷ್ಟವೂ ಸಾಲದೆಂಬ ಅರ್ಥಕ್ಕೆ ಕಳೆದ ವಾರವೂ ಮತ್ತೆ ಭಯಂಕರವಾದ ಮಳೆಗಳು ಪ್ರಾಪ್ತವಾಗಿ ಪ್ರವಾಹಗಳು ಹುಟ್ಟಿದವು ಪಶ್ಚಿಮ ದಿಗ್ಭಾಗಗಳಲ್ಲೂ ಭಾವಾನಗರ, ಕುಂಡ್ಲ, ಪೀರವಾಳ್ ಮುಂತಾದ ಕೆಲವು ಪ್ರದೇಶಗಳಲ್ಲೂ ಆಕಾಶವು ಒಡೆದು ಹೋದಂತೆ ಮಳೆಗಳು ಸುರಿದು ಅನಾಹುತವನ್ನುಂಟುಮಾಡಿದವು ಕಳೆದ ಗುರುವಾರ ಕುಂಡ್ಲಾದಲ್ಲಿ 18 ಗಂಟೆಗಳಲ್ಲಿ 16 ಅಂಗುಲ ಮಳೆ ಸುರಿಯಿತೆಂದು ರಿಲೀಫ್ ಫಂಡಿನ ಸೆಕ್ರೆಟರಿ ಮಿ॥ ಪ್ರಭುದಾಸ್ ಲಲ್ಲುಭಾಯಿ ಮೋಡಿಯವರು ತಿಳಿಸುತ್ತಾರೆ ಎರಡು ವಾರಗಳ ಹಿಂದೆ ಪ್ರವಾಹಗಳಲ್ಲಿ ಕಳೆದು ಉಳಿದಿದ್ದ ಕಟ್ಟಡಗಳೂ ಮನೆಮಠಾದಿಗಳೂ ಈ ಸಲ ಕಳಚಿಬಿದ್ದು ಹಾಳಾದವು ಅಲ್ಲಿ ಪ್ರಾಪ್ತವಾಗಿರುವ ಕಷ್ಟನಷ್ಟಗಳು ಅಷ್ಟಿಷ್ಟೆಂದು ವಿವರಿಸಲಸಾಧ್ಯವಾಗಿದೆ ಪ್ರಜೆಗಳೆನಿತರೂ ಲಯವಾದರೋ ಇನ್ನೂ ಗೊತ್ತು ಮಾಡಲು ಸಾಧ್ಯವಾಗಿಲ್ಲ ಕಷ್ಟಸಂಕಟಗಳಿಗೆ ಗುರಿಯಾಗಿರುವಂಥಾ ಪ್ರಜೆಗಳಿಗೆ ಸಹಾಯಮಾಡುವುದಕ್ಕೋಸ್ಕರ ಬೊಂಬಾಯಿನಿಂದ ಕೆಲವು ಸಾಹುಕಾರರೂ ದೊಡ್ಡಮನುಷ್ಯರೂ ಅಲ್ಲಿಗೆ ಹೋಗಿ ಅಲ್ಲಿನ ದುಃಖಕರವಾದ ಸ್ಥಿತಿಗತಿಯನ್ನು ಕುರಿತು ಪ್ರಕಟಿಸಿ ಪರಹಿತಚಿಂತಕರೆಲ್ಲಾ ಧರ್ಮಫಂಡಿಗೆ ಹಣ ಕಳುಹಿಸಿಕೊಡಬೇಕೆಂದು ಕೇಳುತ್ತಾರೆ ಇದುವರೆಗೆ ಕಠ್ಯಾವಾಡದ ರಿಲೀಫ್ ಫಂಡಿಗೆ ಬೊಂಬಾಯಿ ಮುಂತಾದ ಕಡೆಗಳ ಪರೋಪಕಾರಿಗಳು 36,000 ರೂಪಾಯಿ ಕೊಡಿಸಿ, ಇದು ಅಲ್ಲಿನ ಕಷ್ಟನಿವಾರಣೆಗೆ ಸಾಲದಾಗುವುದಿಲ್ಲವೆಂದು ತಿಳಿಸಿರುವರು

ಮತ್ತೆ ಪಾಲಿಟಾನಾದಲ್ಲಿ ಪ್ರವಾಹಗಳು

ಕಳೆದ ಗುರುವಾರ ಪಾಲಿಟಾನಾ ಎಂಬ ದೇಶೀಯ ಸಂಸ್ಥಾನದ ರಾಜಧಾನಿಯಲ್ಲಿ ಅಪಾರವಾದ ಮಳೆ ಸುರಿದು ಪಟ್ಟಣದಲ್ಲೆಲ್ಲಾ ನೀರು ನಿಂತುಬಿಟ್ಟಿತು ಕಳೆದ 13 ನೇ ತಾ ರಾತ್ರಿ ಸಂಭವಿಸಿದಷ್ಟು ಮಳೆ ಸುರಿಯಲಿಲ್ಲವಾದರೂ ನದಿಯಲ್ಲಿ ಪ್ರವಾಹ ಹೆಚ್ಚಿ ಪಟ್ಟಣದೊಳಕ್ಕೆ ಹೊರಳಿ ಸ್ಟೇಷನ್ ಆವರಣದೊಳಗೆಲ್ಲಾ ನಾಲ್ಕಾರು ಅಡಿಯ ಪ್ರಮಾಣ ನೀರು ನಿಂತುಬಿಟ್ಟಿತು ದೀರವಾಳಿನಲ್ಲಿ 9 ಅಂಗುಲದ ಮಳೆಯೂ, ಭಾವಾನಗರದಲ್ಲಿ 7 ಅಂಗುಲದ ಮಳೆಯೂ ಸುರಿದು ಆ ಪಟ್ಟಣಗಳ ಸಮಸ್ತ ಭಾಗಗಳೊಳಗೂ ನೀರು ನಿಂತುಬಿಟ್ಟಿತು ಬಡಬಗ್ಗರ ಮನೆಮಠಾದಿಗಳು ಕಳಚಿ ಬಿದ್ದುಹೋಗಿರುತ್ತವೆ ಪಾಲಿಟಾನಾದಲ್ಲಿ ಪ್ರಜೆಗಳ ಕಷ್ಟನಿವಾರಣೆಗೋಸ್ಕರ ಒಂದು ಧರ್ಮಫಂಡು ಏರ್ಪಾಡಾಗಿ ಅದಕ್ಕೆ ಆ ಸಂಸ್ಥಾನದವರು 20,000 ರೂಪಾಯಿ ಕೊಟ್ಟಿದ್ದಾರೆ ಹಿಂದುಸ್ಥಾನದ ಎಲ್ಲಾ ಪ್ರಾಂತ್ಯಗಳಿಂದಲೂ ಇದುವರೆಗೆ ಈ ಫಂಡಿಗೆ 10,000 ರೂಪಾಯಿ ಚಂದಾ ವಸೂಲಾಗಿ ಇನ್ನೂ ವಸೂಲಾಗುತ್ತಿರುವುದು

ಕೊಲೆಯೋ ದಂಡನೆಯೋ

ಅಯೋಧ್ಯೆಯ ಜಮೀನ್‌ದಾರರ ಮೊಕದ್ದಮೆ

ಇಂಗ್ಲಿಷ್ ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಗಳು

ಕಳೆದ 1912 ನೇ ಇಸವಿಯಲ್ಲಿ ಬುಜ್‌ಕುವಾರ್‌ಸಿಂಗ್, ರಿಯಿಧರಸಿಂಗ್ ಎಂಬ ಅಯೋಧ್ಯೆಯ ಜಮೀನ್‌ದಾರರಿಬ್ಬರನ್ನೂ ಗಂಗಾಸಿಂಗ್ ಎಂಬವನನ್ನೂ ಇವರು ಕೊಲೆಮಾಡಿದರೆಂದು ಪೋಲೀಸಿನವರು ದಸ್ತಗಿರಿ ಮಾಡಿ ಅವರ ಮೇಲೆ ಮೊಕದ್ದಮೆ ತಂದರು ಸೀತಾಪುರದ ಸೆಷನ್ಸ್ ಜಡ್ಜರವರು ಈ ಮೊಕದ್ದಮೆಯನ್ನು ದರ್ಯಾಪ್ತಿ ಮಾಡಿ ಅವರ ಮೇಲೆ ಕೊಲೆಮಾಡಿದರೆಂಬ ತಪ್ಪು ರುಜುವಾತಾಗಲಿಲ್ಲವೆಂದು ತೀರ್ಮಾನ ಮಾಡಿ ಅವರನ್ನೆಲ್ಲಾ ಖುಲಾಸ್‌ಮಾಡಿಬಿಟ್ಟರು ಬಳಿಕ ಸರ್ಕಾರದವರು ನಾಲ್ಕಾರು ತಿಂಗಳ ಮೇಲೆ ಆ ಮೂರು ಜನರನ್ನೂ ಮತ್ತೆ ಹಿಡಿದು, ಸೆಷನ್ಸ್ ಜಡ್ಜರು ಅವರನ್ನು ಬಿಟ್ಟುಬಿಟ್ಟದ್ದು ನ್ಯಾಯವಲ್ಲವೆಂದೂ, ಅವರ ಮೇಲೆ ಕೊಲೆಯ ಅಪರಾಧ ರುಜುವಾತು ಆಗಿರುವುದರಿಂದ ಅವರನ್ನು ತಕ್ಕಹಾಗೆ ಶಿಕ್ಷಿಸಬೇಕೆಂದೂ ಅಪೀಲ್ ಮಾಡಿದರು ಗವರ್ನ್‌ಮೆಂಟಿನವರು ಈ ಮೊಕದ್ದಮೆಯನ್ನು ದರ್ಯಾಪ್ತಿಮಾಡಿ ಇತ್ಯರ್ಥಪಡಿಸುವುದಕ್ಕೆ ಇಬ್ಬರು ಜುಡಿಷಲ್ ಕಮಿಷನರುಗಳನ್ನು ಜಡ್ಜರನ್ನಾಗಿ ನೇಮಕಮಾಡಿದರು ಈ ಇಬ್ಬರು ಜಡ್ಜುಗಳು ಕೂಡಾ ಆ ಮೊಕದ್ದಮೆಯನ್ನು ಮತ್ತೆ ದರ್ಯಾಪ್ತಿ ಮಾಡಿದ್ದರಲ್ಲಿ ಅಪರಾಧಿಗಳು ಕೊಲೆಮಾಡಿದರೆಂದು ರುಜುವಾತಾದದ್ದನ್ನು ಕಂಡು, ಆ ಮೂವರ ಪೈಕಿ ಇಬ್ಬರು ಜಮೀನ್‌ದಾರರಿಗೂ ಗಲ್ಲುಶಿಕ್ಷೆಯನ್ನೂ, ಮೂರನೆ ಅಪರಾಧಿಗೆ ಯಾವ [illegible] ಎಂಕೋಲ್ ಶಿಕ್ಷೆಯನ್ನೂ ವಿಧಿಸಿದರು ಈ ತೀರ್ಮಾನದ ಪ್ರಕಾರ ಕಳೆದ ಸೆಪ್ಟೆಂಬರ್ ತಾ 7 ರಲ್ಲಿ ಆ ಜಮೀನ್‌ದಾರರಿಬ್ಬರೂ ಗಲ್ಲಿಗೆ ಹಾಕಲ್ಪಟ್ಟರು ಗಂಗಾಸಿಂಗನು ಆಗಿಂದ [illegible] ಶಿಕ್ಷೆಯನ್ನು ಅನುಭವಿಸುತ್ತಿದ್ದಾನೆ

ಈ ಮೊಕದ್ದಮೆಯ ವಿಚಾರವು ಇಂಗ್ಲಿಷ್ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಲು ಕಾರಣವೇನಾಯಿತೆಂದರೆ—ಎರಡನೇ ದರ್ಯಾಪ್ತಿಯಲ್ಲಿ ಮರಣದಂಡನೆಯು ವಿಧಿಸಲ್ಪಟ್ಟ ಕೂಡಲೇ ಆ ಇಬ್ಬರು ಜಮೀನ್‌ದಾರರೂ ಇಂಡಿಯಾ ಗವರ್ನ್‌ಮೆಂಟಿನವರಿಗೆ (ಅಂದರೆ, ವೈಸ್‌ರಾಯರವರಿಗೆ) ಮರ್ಸಿ ಅರ್ಜಿಯನ್ನು ಬರೆದುಕೊಂಡು, ಮೊದಲನೇ ದರ್ಯಾಪ್ತಿಯಲ್ಲಿ ತಾವು ಖುಲಾಸಾದದ್ದನ್ನೂ ಎರಡನೇ ದರ್ಯಾಪ್ತಿಯಲ್ಲಿ ತಮಗೆ ಮರಣದಂಡನೆ ವಿಧಿಸಿದ್ದನ್ನೂ ವಿವರಿಸಿ, ತಮಗೆ ನ್ಯಾಯದೊರೆಯಲಿಲ್ಲವೆಂದೂ ತಪ್ಪು [illegible] ತಿಳಿಸಿಕೊಂಡು [illegible] ತಮಗೆ ಕ್ಷಮಾಪಣೆ ಕೊಟ್ಟು ದಯಮಾಡಿ ಪರಿಪಾಲಿಸಬೇಕೆಂದು ಬೇಡಿಕೊಂಡರು ಈ ಅರ್ಜಿಯು ಆ ಆಧಿಪತ್ಯದ ಲೆಫ್ಟಿನೆಂಟ್ ಗವರ್ನರಾಗಿದ್ದ ಸರ್ [illegible] ಹ್ಯೂವೆಟ್‌ರವರ ಬಳಿಗೆ ಹೋದಾಗ ಅವರು ಅದನ್ನು ಪರಾಂಬರಿಸಿ ಅಪರಾಧಿಗಳನ್ನು ಗಲ್ಲಿಗೆ ಹಾಕುವಂತೆ [illegible] ವೈಸ್‌ರಾಯರವರಿಂದ ಜವಾಬು ಬರಲು ಅವಕಾಶ [illegible] ಅವರ ಅರ್ಜಿಯನ್ನು ವೈಸ್‌ರಾಯರವರಿಗೆ ರವಾನೆ ಮಾಡ [illegible] ಅವರ ಮೇಲೆ ಜೈಲ್ ಅಧಿಕಾರಿಗಳಿಗೆ ಜ್ಞಾಪನೆಯ [illegible] ಆ ಇಬ್ಬರು ಜಮೀನ್‌ದಾರರನ್ನೂ [illegible] ಗಲ್ಲಿಗೆ ಹಾಕಿಬಿಟ್ಟರು

ಕಳೆದ ವಾರ [illegible] ಪಾರ್ಲಿಮೆಂಟಿನ ಮೆಂಬರುಗಳು [illegible] ಲೆಫ್ಟಿನೆಂಟ್ ಗವರ್ನರ್ ಸರ್ [illegible] ಅರ್ಜಿಯನ್ನು ವೈಸ್‌ರಾಯರವರಿಗೆ [illegible] ಬದಲಾವಣೆ ಮಾಡಿದ ಬೇಕೆಂದೂ, ಇಂಥಾ ಅನ್ಯಾಯಮಾಡಿ ಇಬ್ಬರನ್ನು ಗಲ್ಲಿಗೆ ಎತ್ತಿಸಿದ ಸರ್ ಜಾನ್ ಹ್ಯೂಯೆಟ್‌ರವರಿಗೆ ಜಿ ಸಿ ಎಸ್ ಐ ಎಂಬ ಬಿರುದು ಕೊಟ್ಟದ್ದು ಯಾವ ನ್ಯಾಯವೆಂದೂ, ರಜಾ ಪಡೆದು ಸೀಮೆಗೆ ಬಂದಿರುವ ಸರ್ ಜಾನ್ ಹ್ಯೂಯೆಟ್‌ರವರನ್ನು ಅವರು ಯಾಕೆ ವೈಸ್‌ರಾಯರವರಿಗೆ ಆ ಅರ್ಜಿಯನ್ನು ಕಳುಹಿಸದೆ ತಡೆದುಬಿಟ್ಟರೆಂದು ಕೇಳಿ ಅವರ ಅಭಿಪ್ರಾಯವನ್ನು ತಿಳಿಯ ಬೇಕಾದದ್ದು ಅವಶ್ಯವೆಂದೂ, ಇನ್ನು ಮುಂದಾದರೂ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಅಪರಾಧಿಗಳಿಂದ ಬರುವ ಅಂಥಾ ಕ್ಷಮಾಪಣೆ ಬೇಡುವ ಮರ್ಸಿ ಅರ್ಜಿಗಳನ್ನು ಸ್ಥಳೀಯ ಅಧಿಪತಿಗಳು ತಡೆಹಿಡಿಸಿಕೊಳ್ಳದೆ ವೈಸ್‌ರಾಯರವರ ಬಳಿಗೆ ರವಾನೆಮಾಡುವಂತೆ ಆಗಬೇಕೆಂದೂ ಆಕ್ಷೇಪಣೆಮಾಡಿದರು ಸ್ಟೇಟ್ ಸೆಕ್ರೆಟರಿಯವರು ಈ ಮೊಕದ್ದಮೆಯ ವಿದ್ಯಮಾನಗಳನ್ನೆಲ್ಲಾ ಸಂಪೂರ್ಣವಾಗಿ ಬರೆದು ತಿಳಿಸಬೇಕೆಂದು ಇಂಡಿಯಾ ಗವರ್ನ್‌ಮೆಂಟಿನವರನ್ನು ಕೇಳುವುದಾಗಿಯೂ, ಅವರಿಂದ ಜವಾಬು ಬಂದನಂತರ ಮೆಂಬರುಗಳು ಆಕ್ಷೇಪಣೆಮಾಡಿರುವ ಭಾಗಗಳನ್ನು ಸರ್ವಸಮರ್ಪಕವಾದ ರೀತಿಯಲ್ಲಿ ವಿಚಾರಣೆಯಿಂದ ಬದಲಾಯಿಸಿ ಸಂಪಡಿಸುವುದಾಗಿಯೂ ಹೇಳಿ ಮೆಂಬರುಗಳನ್ನು ಸಮಾಧಾನಪಡಿಸಿದರು

ರಾಜಧಾನಿಯ ಮ್ಯುನಿಸಿಪಲ್ ಮೀಟಿಂಗು

ಕಳೆದ ಶನಿವಾರ ಬೆಳಗ್ಗೆ ಮೈಸೂರು ಪಟ್ಟಣದ ತಿಂಗಳು ಕಟ್ಟಳೆಯ ಮ್ಯುನಿಸಿಪಲ್ ಮೀಟಿಂಗು ಇಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಜರುಗಿತು ಕಳೆದ ಮೇ ತಿಂಗಳಲ್ಲಿ ಜನನ 115 ಎಂದೂ, ಮರಣ 169 ಎಂದೂ ಲೆಕ್ಕ ಓದಿದರು ಮ್ಯುನಿಸಿಪಾಲಿಟಿಯ ಜಮಾ ಖರ್ಚಿನ ಲೆಕ್ಕಗಳು ಸರಿಯಾಗಿವೆ ಎಂದು ಆಡಿಟರುಗಳು ಬರೆದಿದ್ದ ರಿಪೋರ್ಟು ಓದಲಾಯಿತು —ರಸ್ತೆಗಳಲ್ಲೂ ಬೀದಿಗಳಲ್ಲೂ ಮನೆ ಕಟ್ಟುವ ಪ್ರಜೆಗಳು ಅನುದಿನವೂ ಸ್ಥಳವಿಲ್ಲದಂತೆ ಮಣ್ಣು ಇಟ್ಟಿಗೆ ಮುಂತಾದ ಸಾಮಾನು ಬಿತ್ತರಿಸಿಡುವುದನ್ನು ತಪ್ಪಿಸಬೇಕೆಂದು ಮ್ಯುನಿಸಿಪಲ್ ಇಂಜನಿಯರ್ ಮಿ॥ ಅಪ್ಪಾಚಾರ್ಯರು ಸೂಚಿಸಿದ್ದರು ಈ ವಿಚಾರವನ್ನು ಮ್ಯಾನೆಜಿಂಗ್ ಕಮಿಟಿಯವರು ಆಲೋಚಿಸಿ ಅದನ್ನು ನಿರ್ಬಂಧಪಡಿಸುವುದಕ್ಕೆ ರೂಲಸು ಮಾಡಿ ಮೀಟಿಂಗಿಗೆ ತರಬೇಕೆಂದು ಇತ್ಯರ್ಥವಾಯಿತು —ಮ್ಯುನಿಸಿಪಲ್ ಗಾಯಕವಾಡ್ ಖಾನೆಯಲ್ಲಿ ನೀರು ವಿನಿಯೋಗವಾದುದಕ್ಕೆ ಹಿಂದಿನ ಮೂರು ತಿಂಗಳಿಗೆ ಬಾಬತು 13 ಚಿಲ್ಲರೆ ರೂಪಾಯಿ ಪಾವತಿ ಮಾಡಬೇಕೆಂದು ನೀರಿನ ಇಲಾಖೆಯವರು ಮ್ಯುನಿಸಿಪಾಲಿಟಿಗೆ ಬಿಲ್ ಕಳುಹಿಸಿದ್ದದ್ದನ್ನು ಕೇಳಿ ಮೆಂಬರುಗಳು ಆಶ್ಚರ್ಯಪಟ್ಟು, ಈ ವಿಚಾರದಲ್ಲಿ ಮ್ಯಾನೇಜಿಂಗ್ ಕಮಿಟಿಯವರ ಅಭಿಮತವನ್ನು ತಿಳಿಯಬೇಕೆಂದು ತೆಗೆದಿಟ್ಟರು — ಈರನಗೆರೆಯಲ್ಲಿ ರೋಮನ್ ಕ್ರೈಸ್ತ ಸಮಾಜಕ್ಕೆ ಇನ್ನೂ ಸ್ವಲ್ಪ ಹೆಚ್ಚು ನಿವೇಶನವನ್ನು ಕೊಡಿಸಬೇಕೆಂದು ಕೇಳಿದ್ದರು ಮೂರು ಮಂದಿ ಮೆಂಬರುಗಳು ಆ ಪ್ರದೇಶವನ್ನು ಅಜಮಾಯಿಷಿ ಮಾಡಿ, ಯಾವ ಪ್ರದೇಶ ಅದಕ್ಕೆ ಬೇಕಾದೀತೆಂಬುವುದನ್ನು ತಿಳಿಸುವಂತೆ ಏರ್ಪಾಡಾಯಿತು — 1913 ನೇ ಜುಲೈಯಿಂದ ಮೂರು ವರುಷಕಾಲ ಮೈಸೂರು ಮ್ಯುನಿಸಿಪಾಲಿಟಿಯವರು ಬಲಾತ್ಕಾರ ಪ್ರಜೆಗಳಿಗೆ ಬೇಧಿಸಿಡುಬು ಹಾಕುವ ಕಾನೂನನ್ನು ಜಾರಿಯಲ್ಲಿಡಬೇಕೆಂದು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿರುತ್ತಾರೆ —ಮ್ಯುನಿಸಿಪಲ್ ಟೋಲ್ ಗೇಟುಗಳ ಉತ್ಪನ್ನದ ಹರಾಜಿನಲ್ಲಿ ಈಗ ಖರೀದಿ ಮಾಡಿರುವ ಒಬ್ಬ ವರ್ತಕನ ಹೆಸರಿನಲ್ಲೇ ಖಾಯಂ ಮಾಡಬೇಕೆಂದೂ ಮತ್ತೆ ಬೇರೆ ಬೇರೆಯಾಗಿ ಹರಾಜು ಹಾಕಬೇಕಾದದಿಲ್ಲವೆಂದೂ ಮೆಂಬರುಗಳು ತೀರ್ಮಾನ ಮಾಡಿದರು —ಕೋರ್ಟುಗಳ ಬಳಿ ಹೊಸ ರೈಲ್ವೆ ಸ್ಟೇಷನ್ ಮಾಡುವ ಸ್ಥಳಕ್ಕೆ ರೈಲ್ವೆ ಇಲಾಖೆಯಿಂದ 3, ರೂಪಾಯಿಗಿಂತ ಹೆಚ್ಚಾಗಿ ಪ್ರತಿಫಲವನ್ನು ಕೇಳಕೂಡದೆಂದು ಸರ್ಕಾರದವರು ತಿಳಿಸಿದ್ದದ್ದನ್ನು ಮೆಂಬರುಗಳು ರೆಕಾರ್ಡು ಮಾಡಿಕೊಂಡರು

ಮಿ॥ ಎಂ ಎ ಅಪ್ಪಾಚಾರ್ಯರಿಗೆ ಮ್ಯುನಿಸಿಪಲ್ ಇಂಜನಿಯರ್ ನೌಕರಿ ಸಲುವನ್ನು ಖಾಯಂಮಾಡಬಹುದೆಂದು ಸರ್ಕಾರದವರು ಸಮ್ಮತಿಸಿದ್ದಾರೆ — ಗಾರ್ಡನ್ ಪಾರ್ಕಿನ ಒಂದು ಪಾರ್ಶ್ವದಲ್ಲಿ ಕಾಸ್ಮಾಪಾಲಿಟನ್ ಕ್ಲಬ್ಬನ್ನು ಕಟ್ಟಿಕೊಳ್ಳುವುದಕ್ಕೆ ನಿವೇಶನವನ್ನು ಮುಫತ್ತಾಗಿ ಕೊಟ್ಟಿದೆ ಎಂದು ಸರ್ಕಾರದವರು ತಿಳಿಸಿದ್ದಾರೆ —ಮ್ಯುನಿಸಿಪಲ್ ಇಂಜನಿಯರ್ ಕೆಲಸಕ್ಕೆ ಎರಡನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಇಂಜನಿಯರೊಬ್ಬರನ್ನು ನೇಮಿಸಿಕೊಟ್ಟರೆ ಸಾಕೇ ಎಂದು ಸರ್ಕಾರದವರು ಕೇಳಿದ್ದರು ಈ ವಿಚಾರವನ್ನು ವೈಸ್‌ರಾಯಿಯವರು ರಾಜಧಾನಿಗೆ ಬಂದು ಹೋಗುವ ತನಕ ಚರ್ಚಿಸಬೇಕಾದ ಅಗತ್ಯವಿಲ್ಲವೆಂದು ಮೆಂಬರುಗಳು ತೆಗೆದಿಟ್ಟರು —ಜನನ ಮರಣಗಳ ಲೆಕ್ಕವನ್ನು ಕೂಡಿಸುವ ಗುಮಾಸ್ತರಿಗೆ ಸಂಬಳವನ್ನು ಬಡ್ತಿಮಾಡಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದಾರೆ — ಲಕ್ಷ್ಮೀಪುರದಲ್ಲಿರುವ ರತ್ನದ ಕಾರ್ಖಾನೆಯ ಚಿಮಣಿಯಿಂದ ಬೂದಿ ವಿಶೇಷವಾಗಿ ಬಂದು ಮನೆಗಳ ಮೇಲೂ, ಒಳಗೂ ಬೀಳುವುದನ್ನು ತಪ್ಪಿಸಬೇಕೆಂದು ಚರ್ಚೆಯಾಯಿತು ಮಿ॥ ಓಟರ್ನರವರನ್ನು ಕೇಳಿದ್ದಕ್ಕೆ ಅವರು 1,000 ರೂಪಾಯಿ ಸಾಲಕೊಟ್ಟರೆ ಅದಕ್ಕೆ ತಕ್ಕ ಪರಿಹಾರವನ್ನು ಯೋಚಿಸಬಹುದೆಂದು ತಿಳಿಸಿದ್ದರು ಆದರೆ ಮೇಲೆ ಮೆಂಬರುಗಳು ಈ ವಿಚಾರವನ್ನು ಸಂಪದಭಿವೃದ್ಧಿ ಸಮಾಜದ ಸೆಂಟ್ರಲ್ ಕಮಿಟಿಯವರ ಆಲೋಚನೆಗೆ ಒಪ್ಪಿಸುವುದು ಉತ್ತಮವೆಂದು ತೀರ್ಮಾನಮಾಡಿದರು — ರಾಜಧಾನಿಯಲ್ಲಿ ಸಾರ್ವಜನಿಕ ಪಬ್ಲಿಕ್ ರೀಡಿಂಗ್ ರೂಂ ಮತ್ತು ಪುಸ್ತಕ ಭಂಡಾರವನ್ನು ಕಲ್ಪಿಸಬೇಕೆಂದು ಮೆಂಬರುಗಳು ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ ಶಿವರಾಂಪೇಟೆ ಕನ್ನಡ ಗಂಡುಹುಡುಗರ ಸ್ಕೂಲ್ ಪಕ್ಕದಲ್ಲಿರುವ ನಿವೇಶನದಲ್ಲಾಗಲಿ, ಅರಮನೆ ಆಸ್ಪತ್ರೆಯ ಬಳಿ ಇರುವ [illegible] ನಿವೇಶನದಲ್ಲಾಗಲಿ 12 10 ಸಾವಿರ ರೂಪಾಯಿ ವೆಚ್ಚದಲ್ಲಿ ಕಟ್ಟಡವನ್ನು ಕಟ್ಟಬೇಕೆಂದೂ, ಸಿಬ್ಬಂದಿ ಮೊದಲಾದ ಖರ್ಚಿಗೆ ಸಾಲಿಯಾನಾ 1,200 ರೂಪಾಯಿ ಆಗುವುದೆಂದೂ, ಸಾಮಾನು ಮುಂತಾದದ್ದಕ್ಕೆ 3,000 ರೂಪಾಯಿ ಬೇಕಾಗುವುದೆಂದೂ ಮೆಂಬರುಗಳು ಸೂಚಿಸಿದ್ದಾರೆ — ಮಿ॥ ಎ ವೆಂಕಟಕೃಷ್ಣಯ್ಯನವರು ಮ್ಯುನಿಸಿಪಲ್ ಸ್ಕೂಲ್ ಕಮಿಟಿಯ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟರು —ಮೆಂಬರುಗಳಾದ ಎಂ ವೆಂಕಟಕೃಷ್ಣಯ್ಯನವರು ಎ ಸಿ ರಂಗಯ್ಯಂಗಾರ್ರು ಎಂ ವಸಂತರಾಜಯ್ಯನವರು ಅಂಬಳೆ ಅಣ್ಣಯ್ಯ ಪಂಡಿತರು— ಈ ನಾಲ್ಕು ಮಂದಿಯೂ ಮ್ಯುನಿಸಿಪಲ್ ಕೌನ್ಸಿಲ್ ತರಫು ಈ ವರುಷ ಪ್ರತಿನಿಧಿ ಸಭೆಯ ಮೆಂಬರಾಗಿ ಚುನಾಯಿಸಲ್ಪಟ್ಟರು

ಬಾತ್ಮಿದಾರರಿಗೆ ನೋಟೀಸ್

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು ಆವಕಾರಣ ಬಾತ್ಮಿದಾರರು ನಮಗೆ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು

ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಜ ವಿ ರಾಮಸ್ವಾಮಿ ಅಯ್ಯಂಗಾರ್, ಶ್ರವಣ ಬೆಳ್ಗೊಳ—ನೀವು ಹೇಳುವ ಆಕ್ಷೇಪಣೆಗಳೆಲ್ಲಾ ಮೊದಲೇ ಮಾಡಿಯ್ದಾಗಿದೆ ಮತ್ತೆ ಮತ್ತೆ ಅದೇ ವಿಷಯವನ್ನು ಕುರಿತು ಬರೆಯುವುದರಲ್ಲಿ ಸ್ವಾರಸ್ಯವಿರಲಾರದು

ಪ್ರತ್ಯಕ್ಷದರ್ಶಿ, ಚಾಮಗಲ್ಲು—ಈ ವಿಷಯ ಪ್ರಕಟಿಸತಕ್ಕದ್ದಲ್ಲ ಇಲಾಖಾ ಅಧಿಕಾರಿಗಳಿಗೂ, ಪೋಲೀಸಿಗೂ ತಿಳಿಸಿ ವ್ಯವಹರಿಸಿಕೊಳ್ಳತಕ್ಕದ್ದಾಗಿದೆ

ಗೋರಿಬಿದನೂರು ತಾಲ್ಲೂಕು ಕಾವಲವೇಣಿ ಗ್ರಾಮದಲ್ಲಿ ನಡೆದಂತೆ ನಮ್ಮಲ್ಲಿಗೆ ಬರೆದು ಎಂದಿರುವ ಬಾತ್ಮಿಯನ್ನು ಪ್ರಕಟಿಸಲಾರೆವು ಸ್ಥಳಾಧಿಕಾರಿಗಳಿಗೆ ತಿಳಿಸಿ ಸರಿಯಾದ ರುಜುವಾತು ಕೊಟ್ಟರೆ ಅಂಥಾ ದುಷ್ಟರಿಗೆ ತಕ್ಕ ಶಿಕ್ಷೆಯಾದೀತೆನ್ನುವುದಕ್ಕೆ ಸಂಶಯವಿಲ

ಹುಚ್ಚೈಷಿ, ದೇವನಹಳ್ಳಿ—(1) ಕಳೆದುಹೋದ ವಿಷಯವನ್ನು ಎತ್ತಿ ಆಡುವುದರಲ್ಲಿ ಪ್ರಯೋಜನವಿಲ್ಲ (2) ಇಲಾಖೆಯ ಮುಖ್ಯಾಧಿಕಾರಿಗೆ ಬರೆದುಕೊಳ್ಳುವುದು ಒಳ್ಳೇದು

ಮಾವಿನ ಕೆರೆಯ ಪಟೇಲ್ ಕಳಸಯ್ಯ ಹೆಪ್ಪಾರರು ಭಕ್ತಿ ವಿಜಯವೆಂಬ ಮೈಸೂರಿನಲ್ಲಿ ಪ್ರಕಟವಾಗುವ ಮಾಸ ಪತ್ರಿಕೆಗೆ ಚಂದಾ ಕೊಟ್ಟಿದ್ದರೂ ಅವರಿಗೆ ಈಚೆಗೆ ಸಂಚಿಕೆಗಳೇ ತಲಪಲಿಲ್ಲವೆಂದೂ, ಸಂಪಾದಕರಿಗೆ ಎಷ್ಟುಸಲ ಬರೆದರೂ ಜವಾಬು ಕೊಡಲಿಲ್ಲವೆಂದೂ, ಅವರ ಪ್ರಕಟನೆಯು ನಮ್ಮ ಪತ್ರಿಕೆಯಲ್ಲಿ ಇದ್ದದ್ದನ್ನು ನೋಡಿ ಅವರು ಅದಕ್ಕೆ ಚಂದಾ ಕಟ್ಟಿದರೆಂದೂ ನಮಗೆ ಬರೆದಿದಾರೆ ಭಕ್ತಿ ವಿಜಯದ ಸಂಪಾದಕರು ಅವರಿಗೆ ಜವಾಬು ಕೊಟ್ಟಾರೆಂದು ನಿರೀಕ್ಷಿಸುತ್ತೇವೆ

—ಎಡಿ]

ಕರೆಸ್‌ಪಾಂಡೆನ್ಸ್

ಸ್ಕೂಲಿಗೆ ಕಟ್ಟಡ ಬೇಕು

ಅಯ್ಯಾ,

ಹಾಸನ ತಾಲ್ಲೂಕಿನಲ್ಲಿ ಕೆಲವು ಸ್ಕೂಲ್ ಕಟ್ಟಡಗಳನ್ನು ಕಟ್ಟಬೇಕೆಂದು ವಿಚಾರಗಳು ನಡೆಯುತ್ತಿರುವಂತೆ ಕೇಳುತ್ತೇನೆ ಮತ್ತು ಅಲ್ಲಲ್ಲಿ ಕೆಲವು ಕಟ್ಟಡಗಳು ಕಟ್ಟುತ್ತಿರುವುದನ್ನು ಕಂಡೂ ಕೇಳಿಯೂ ಇರುತ್ತೇನೆ ಶಾಗತ ಎಂಬ ಗ್ರಾಮವು ಸ್ವಲ್ಪ ಭಾರಿಯಾಗಿದೆ ಸುತ್ತ ಮುತ್ತಣ ಕೆಲವು ಗ್ರಾಮಗಳಿಂದ ಹುಡುಗರು ಸ್ಕೂಲಿಗೆ ಬರುವ ಸಂಭವವುಂಟು ಈ ಗ್ರಾಮಕ್ಕೆ ಸರಿಯಾದ ಸ್ಕೂಲ್ ಕಟ್ಟಡವಿಲ್ಲ ಸರ್ಕಾರದವರು ಈ ಗ್ರಾಮಕ್ಕೆ ಒಂದು ಸ್ಕೂಲ್ ಕಟ್ಟಡವನ್ನು ಸ್ಯಾಂಕ್ಷನ್ ಮಾಡಿದ್ದಲ್ಲಿ ಈ ಗ್ರಾಮದ ಪ್ರಜೆಗಳಿಗೆ ಬಹಳಾ ಸಹಾಯವಾಗುವುದು ಉಪಾಧ್ಯಾಯರಿಗೂ ಮತ್ತಷ್ಟು ಪ್ರೋತ್ಸಾಹವಾಗುವುದು ಈಗ ಸ್ಕೂಲು ನಡೆಯುತ್ತಿರುವ ಛತ್ರದಲ್ಲಿ ಬಹು ಮಂದಿ ರೋಗಿಗಳೂ ಸನ್ಯಾಸಿಗಳು ಪರ್‍ಯಟನ ಮಾಡುವವರು, ದನಕರುಗಳೂ ಸಹ ಸೇರುವುದರಿಂದಲೂ, ಸಮೀಪದಲ್ಲೇ ತಿಪ್ಪೆಗಳು ಇದ್ದು ಕತ್ತಾಳೆಗಳನ್ನು ಕೊಳೆಯಹಾಕುವುದರಿಂದಲೂ ಬಾಲಕರ ಆರೋಗ್ಯವು ಕೆಡಲು ಅವಕಾಶವುಂಟು ಸರ್ಕಾರದವರು ಇದನ್ನು ಸರಿಪಡಿಸುವರೆಂದು ಪ್ರಾರ್ಥಿಸುತ್ತೇನೆ

ಗ್ರಾಮವಾಸಿ

ಜೂಜಿನ ಹಾವಳಿ

ಅಯ್ಯಾ,

ತರೀಕೆರೆಗೆ ತರ್ಲೆಕೆರೆ ಎಂಬ ಉಪನಾಮವು ಬಹುಕಾಲಾಂತರದಿಂದ ಬಂದಿದೆ ಯಾಕೆಂದರೆ ಆಗಾಗ್ಗೆ ಜಗಳಗಳೂ, ಕಳ್ಳತನವೂ, ಜೂಜೂ ನಡೆಯುವುದರಿಂದಲೇ ಅಲ್ಲದೆ ಈ ಊರಿನ ಸಂತೆಯಲ್ಲಿ ಜೂಜಾಟದವರ ಗುಂಪು ಸಂತೆಸಂತೆಗೂ ತಪ್ಪುವದೇ ಇಲ್ಲ ಕಳೆದ ಶುಕ್ರವಾರ ಮೂರು ಗುಂಪಾದ ಸ್ಥಳ ಅವು ಜೂಜಿನವು ಕ್ರಮ ಚೆನ್ನಾಗಿತ್ತು ಅಂದರೆ, ಒಂದು ಕಡೆ ವೃದ್ಧಪ್ರಾಯದವರು ಇನ್ನೊಂದು ಕಡೆ ಯೌವನಸ್ಥರು ಮತ್ತೊಂದು ಕಡೆ (7 ವರ್ಷದಿಂದ 18-20 ವರ್ಷದವರು) ನೋಟಕ್ಕೆ ಅಂದ ಜನರಬುದ್ಧಿ ಮುಂದೆ ಆಟದವರಿಗೆ ಬೆಂದ ಸರ್ಕಾರದವರು ಇಂಥಾ ಜೂಜುಕೋರರಿಗೆ ಲೈಸೆನ್ಸು ಕೊಡುವವರಿಂದಾಗುವ ಹುಟ್ಟುವಳಿ ನೋಡಬೇಕೋ ಇಲ್ಲವೇ ಜನರು ಎಲ್ಲಾ ಕಾಲವಲ್ಲೂ ಕೆಟ್ಟಿರುವದನ್ನು ನೋಡಬೇಕೋ ? ಇಲ್ಲವೇ ಒಬ್ಬ ಜೂಜಾಟದವನು ಬೇಕೋ ? ಅನೇಕ ಯೋಗ್ಯರಾದವರು ಬೇಕೋ ? ಪ್ರಜೆಗಳು ನೆಮ್ಮದಿಯಾಗಿರುವುದನ್ನು ಕೋರಬೇಕೋ ? ದುಷ್ಪ್ರವರ್ತನೆಯಲ್ಲಿರುವದನ್ನು ಕೋರುವರೋ ? ಎಂಬೀ ಪ್ರಶ್ನೆಗೆ ಉತ್ತಮವಾದ ಉತ್ತರವೇ ಇದೆ ಆದರೂ ಇಂಥಾ ಕೇಡಿನ ನಡವಳಿಕೆಗಳನ್ನು ದಯಾಳು ಸರ್ಕಾರದವರು ದರ್ಪದಿಂದ ನಿಲ್ಲಿಸುವರೆಂದು ನಂಬಿ ಕಾನೂನನ್ನು ಎದುರುನೋಡುತ್ತೇನೆ

ದೇಶಾಭಿಮಾನಿ

ಕಂಪನಿಯವರ ವಿಚಾರದಲ್ಲಿ ಎಚ್ಚರಿಕೆ

ಅಯ್ಯಾ,

ನಾನು ವೃತ್ತಾಂತ ಪತ್ರಿಕೆಯ ಫೆಬ್ರವರಿ ತಾ 27 ನೇ ವಾರದ ಪತ್ರಿಕೆಯಲ್ಲಿ ಬಿ ಶೇಷಾ ಅಂಡ್ ಬ್ರದರ್ಸ್, ನಂಗಂಬಾಕಂ ಗ್ರಾಮ, ಸೈದಾಪೇಟೆ ತಾಲ್ಲೋಕು, ಪರಂಗಿಮಲೈ ಪೋಸ್ಟು, ಮದರಾಸ್, ಇವರಿಂದ ಎಲಕ್ಟ್ರಿಕ್ ಪಾಕೆಟ್ ಲ್ಯಾಂಪ್ ಒಂದನ್ನು ಮೇ ತಾ 6 ರಲ್ಲಿ ವಿ ಪಿ ತರಿಸಿ, ಅದರ ಬೆಲೆ 1 ರೂಪಾಯಿ 1 ಆಣೆಯನ್ನು ತಾ 11 ರಲ್ಲಿ ಪಾವತಿಮಾಡಿ ಭಾಂಗಿಯನ್ನು ಒಡೆದು ನೋಡಲು ಲ್ಯಾಂಪು ಕೆಟ್ಟುಹೋಗಿತ್ತು ಆ ದಿವಸವೇ ಅದನ್ನು ರಿಜಿಸ್ಟರ್ ಪಾರ್ಸಲ್ ಮಾಡಿ ವಾಪಸು ಕಳಿಸಿದ್ದಾಯಿತು ಇದುವರೆಗೂ ಅನೇಕ ಕಾಗದಗಳನ್ನು ಬರೆದಾಗ್ಯೂ ಅವರು ಸರಿಯಾದ ಲ್ಯಾಂಪನ್ನು ವಾಪಸು ಕಳಿಸಿಕೊಡಲಿಲ್ಲ ಆದ್ದರಿಂದ ಈ ಕಂಪನಿಯವರ ವಿಚಾರದಲ್ಲಿ ಸರ್ವರೂ ಎಚ್ಚರಿಕೆಯುಳ್ಳವರಾಗಿರಬೇಕೆಂದು ಕೋರುವ

ಕೆ ವೆಂಕಟಕೃಷ್ಣಪ್ಪ, ಸ್ಕೂ ಮಾ .

ಸಂತೆಮರಹಳ್ಳಿ, ಚಾಮರಾಜನಗರದ ತಾಲ್ಲೂಕು

[ಅಂಚೆಯ ಮೇಲೆ ಬರುವಾಗ್ಗೆ ಆ ದೀಪವು ಒಡೆದುಹೋಗಿದ್ದರೆ ಅದಕ್ಕೆ ಕಂಪನಿಯವರು ಜವಾಬ್ದಾರರಾಗುವುದಿಲ್ಲ ಅದನ್ನು ಅವರು ಸರಿಯಾಗಿಟ್ಟು ಚೆನ್ನಾಗಿ ಭಾಂಗಿಮಾಡದೆ ಹೋಗಿದ್ದರೆ ಅವರ ತಪ್ಪಾಗಿದೆ ಹ್ಯಾಗೂ ನಿಮ್ಮ ಕಾಗದಕ್ಕೆ ಕಂಪನಿಯವರು ಜವಾಬು ಕೊಡಬೇಕಾಗಿತ್ತು —ಎಡಿ]

ಉಪಾಧ್ಯಾಯರುಗಳ ಸ್ಥಿತಿ

ಅಯ್ಯಾ,

ತಮ್ಮ ಜೂನ್ ಮಾಹೆ 15 ನೇ ತಾ ಪತ್ರಿಕೆಯಲ್ಲಿ ಮೈಸೂರು ಸ್ಟೇಟ್ ಲೈಫ್ ಇನ್‌ಷೂರೆನ್ಸ್ ಕಂಪೆನಿಯಲ್ಲಿ ಭೀಮಾಮಾಡಿ ಮೃತಪಟ್ಟ ಮೊಬಲಗು ಪಾವತಿಯಾಗದೆ ನಿಂತು ಇರುವ ಜನಗಳ ಸಂಖ್ಯೆಯು ಯಾವ ಉಗಾಯ್ತು ಎಂಬುದೇ ಆಗಲಿ, ಅಥವಾ ಅದು ಒಟ್ಟು ಮರಣ ಸಂಖ್ಯೆಯೋ ಎಂಬುದೇ ಆಗಲಿ ಖಂಡಿತವಾಗಿ ಗೊತ್ತಾಗುವುದಿಲ್ಲ ಆದಾಗ್ಯೂ ವಿದ್ಯಾಭ್ಯಾಸದ ಇಲಾಖೆಯಲ್ಲಿ ಮೃತಪಟ್ಟಿರುವವರ ಸಂಖ್ಯೆ ಹೆಚ್ಚಾಗಿದೆ ಎಂದೂ, ಈ ಇಲಾಖೆಯ ಹತ್ತರಷ್ಟಕ್ಕಿಂತಲೂ ಹೆಚ್ಚಾದ ನೌಕರರುಗಳಿರಬಹುದಾದ ರೆವಿನ್ಯೂ ಇಲಾಖೆಯಲ್ಲಿ ಇದರ ಅರ್ಧಪಾಲಿನಷ್ಟು ಜನಗಳೂ ಮತ್ತು ಇದರ ಎರಡು ಮೂರರಷ್ಟು ಮತ್ತು ಇಷ್ಟೇ ನೌಕರರೂ ಇರಬಹುದಾದ ಇತರ ಇಲಾಖೆಗಳಲ್ಲಿ ಇದರ ಕಾಲುಭಾಗಕ್ಕಿಂತಲೂ ಕಮ್ಮಿಯಾದ ಜನಗಳೂ ಮೃತಪಟ್ಟಿದಾರೆಂಬುದು ಊಹಿಸಲು ಸಾಧ್ಯವೆಂದು ಹೇಳಬಹುದು ಅದಲ್ಲೂ ಈ ಇಲಾಖೆಯ ಒಟ್ಟು ಮರಣಸಂಖ್ಯೆಯಲ್ಲಿ ಶೇಕಡ 85 ಕ್ಕಿಂತಲೂ ಹೆಚ್ಚಾಗಿ ಎ ವಿ ಮತ್ತು ವಿ ಇ ಸ್ಕೂಲ್ ಮಾಸ್ಟರುಗಳೇ ಮೃತ್ಯುವಶರಾಗಿದಾರೆಂಬುದೂ ಗೊತ್ತಾಗಬಹುದು ಹೀಗಾಗಲು ಕಾರಣವನ್ನು ಯೋಚಿಸಿದರೆ (1) ಇವರಿಗೆ ಬುದ್ಧಿಶಕ್ತಿಗೆ ಸಂಬಂಧಪಟ್ಟ ಕೆಲಸವು ವಿಪರೀತವಾಗಿರುವುದು, (2) ಇದರಿಂದ ಸವೆಸಿಹೋದ ಶರೀರವನ್ನು ಪುನಃ ಸರಿಪಡಿಸಿಕೊಳ್ಳಲು ಸಾಕಾದಷ್ಟು ಅನ್ನ ವಸ್ತ್ರಗಳಿಗೆ ಅನುಕೂಲವಿಲ್ಲದೆ ಇರುವುದು, (3) ಪ್ಲೇಗ್ ಕಾಲದಾ ಕಾಲಗಳಲ್ಲಿ ಎಲ್ಲರಂತೆಯೇ ತಾವೂ ಮುಂದಾಗಿ ಊರ ಹೊರಗೆ ವಾಸಿಸಲು ಅನುಕೂಲವಿಲ್ಲದೆ ಇರುವುದು ಎಂಬ ಈ ಮೂರು ವಿಷಯಗಳೂ ಮುಖ್ಯ ಕಾರಣಗಳೆಂದು ತಿಳಿಯಬರುತ್ತವೆ

ಅಲ್ಪಜ್ಞ

ತುಂಕೂರು ಮಿಡ್ಲ್ ಸ್ಕೂಲ್ ಉಪಾಧ್ಯಾಯರ ಗೋಳಾಟ

ಅಯ್ಯಾ,

ಈಗಿನ ಕಾಲದಲ್ಲಿ ಗೌರ್ನಮೆಂಟ್ ಸ್ಕೂಲುಗಳ ಎಲ್ಲಾ ಕೀಳುತರಗತಿಯ ಉಪಾಧ್ಯಾಯರುಗಳಿಗೂ ಹತ್ತು ರೂಪಾಯಿ ಸಂಬಳವು ನಗದಿಯಾಗಿ ಬರುತ್ತಿದೆ ಇದು ಕೂಡ ಕಾಲವೆಂದು ಆ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಮ॥ ಎಂ ರಾಮರಾಯರು ಸರ್ಕಾರದವರೊಂದಿಗೆ ಹೋರಾಡುತ್ತಾ, ಹದಿನೈದು ರೂಪಾಯಿಗೆ ಕಡಮೆಯಿಲ್ಲದೆ ಉಪಾಧ್ಯಾಯರ ಸಂಬಳವು ಇರಬೇಕೆಂದು ಉದ್ಯುಕ್ತರಾಗಿ ಕಾರ್ಯಸಾಧನೆಯಲ್ಲಿ ನಿರತರಾಗಿದಾರೆ ಮಿಡ್ಲ್ ಸ್ಕೂಲುಗಳ ಉಪಾಧ್ಯಾಯರಾದರೋ ಐದು ರೂಪಾಯಿ ಮೊದಲ್ಗೊಂಡು 10 ರೂಪಾಯಿವರೆಗೆ ದೊಡ್ಡ ದರ್ಜೆಯನ್ನು ಹೊಂದುತ್ತಿರುವರು ಈ ದಿನದಲ್ಲಿ ಇಷ್ಟು ಅಲ್ಪ ಸಂಬಳದಿಂದ ಅವರು ಹೇಗೆತಾನೇ ಜೀವಿಸ್ಯಾರು ? ಪಾಪ, ಇವರನ್ನು ವಿಚಾರಿಸುವವರೇ ಇಲ್ಲವಾಗಿದೆ ಇವರಿಗೆ ಪೆನ್ಷನ್ ಇಲ್ಲ, ಗ್ರ್ಯಾಂಟ್ ಇಲ್ಲ ಈ ಬಡ ಉಪಾಧ್ಯಾಯರು ಚಿಕ್ಕಪ್ರಾಯದಲ್ಲಿ ಕಷ್ಟಪಟ್ಟು ವಯಸ್ಸಾದ ಮೇಲೆ ಕೆಲಸ ಕಳೆದುಕೊಳ್ಳಬೇಕಾಗುತ್ತೆ ಕೆಲಸ ಮಾಡುವಷ್ಟು ಕಾಲವಾದರೂ ಹೊಟ್ಟೆ ತುಂಬಾ ಗಂಜಿ ಇದೆಯೆ ? ಈ ವಿಷಯದಲ್ಲಿ ಗೌರ್ನಮೆಂಟಿನವರಾದರೂ ಕೊಂಚ ಭಾರವನ್ನು ವಹಿಸಬಾರದೇ ಇವರು ಮಾಡುವ ಕೆಲಸವು ಗೌರ್ನಮೆಂಟ್ ಉಪಾಧ್ಯಾಯರ ಕೆಲಸಕ್ಕೆ ಯಾವ ವಿಷಯದಲ್ಲಾದರೂ ಕಡಮೆಯೇ ? ಈ ಉಪಾಧ್ಯಾಯರ ಗೋಳಾಟವನ್ನು ನೋಡಿ ನನಗೆ ಪರಿತಾಪ ಹುಟ್ಟಿತು ಒಬ್ಬ ಝಾಡಮಾಲಿಗೆ 7-8 ರೂಪಾಯಿ ಸಂಬಳ ಕೊಡುತ್ತಾರೆ ಅವರಿಗಿಂತ ಈ ಉಪಾಧ್ಯಾಯರು ನಿಕೃಷ್ಟವೇ ? ಈ ರೀತಿ ವೇತನಕೊಟ್ಟು ಹೆಚ್ಚು ಪಾಠಶಾಲೆಗಳನ್ನಿಡುವುದಕ್ಕೆ ಬದಲಾಗಿ ಕೆಲವು ಪಾಠಶಾಲೆಗಳನ್ನು ಮುಚ್ಚಿ ಮತ್ತೆ ಕೆಲವಕ್ಕಾದರೂ ಸರಿಯಾದ ಪ್ರೋತ್ಸಾಹ ಕೊಡಬಾರದೇ ? ಸತ್ಯವಂತರಾದ ಮತ್ತು ತೊಳಕ್ಕೆಲ್ಲಾ ಪಾತ್ರರಾದ ಮಿಡ್ಲ್ ಇಲಾಖೆಯವರೂ, ಸರ್ಕಾರದವರೂ ಪರ್ಯಾಲೋಚನೆ ಮಾಡಿ ಈ ಬಡಪಾಯಿಗಳಿಗೆ ಹೊಟ್ಟೆ ತುಂಬ ಗಂಜಿ ಕೊಟ್ಟು ಕೆಲಸ ತೆಗೆದು ಕೊಳ್ಳುವವರಾಗಲಿ ಎಂದು ಕೋರುತ್ತೇನೆ

ತುಂಕೂರು ಮಂಡಿ ವರ್ತಕ ಕೆಂಚಪ್ಪ

[ಸ್ಕೂಲ್ ಮ್ಯಾನೇಜರುಗಳು ಸ್ಕೂಲ್ ಮಾಸ್ಟರುಗಳ ಸಂಬಳ ದರಗಳನ್ನು ಬಡ್ತಿಮಾಡಿಕೊಡುವುದಕ್ಕೆ ಅನುಕೂಲಿಸುವಂತೆ ಮಂಡಿಯ ವರ್ತಕ ಮಹಾಜನಗಳು ಸ್ಕೂಲ್ ಮ್ಯಾನೇಜರುಗಳಿಗೆ ಚಂದಾ ಕೊಡುವುದರ ಮೂಲಕ ಸಹಾಯ ಮಾಡುತ್ತಾ ಬರಬಲ್ಲರೇ ? —ಎಡಿ]

ತಾಲ್ಲೋಕು ವರ್ತಮಾನಗಳು

ಬೆಂಗಳೂರು ಸಿಟಿ—ಬೆಂಗಳೂರು ಲಾಲ್‌ಬಾಗಿನ ಬೋನಿನಿಂದ ಈ ದಿನ ಅಂದರೆ 24 ನೇ ತಾ ಮಂಗಳವಾರ ಬೆಳಿಗ್ಗೆ ಸುಮಾರು 7 ಗಂಟೆಯಲ್ಲಿ ಪುಂಗನೂರಿನಿಂದ ತಂದ ಹುಲಿಯು ಬೋನಿನಿಂದ ತಪ್ಪಿಸಿಕೊಂಡು ಈಚೆಗೆ ಬಂದು ಕಂಪೌಂಡು ದಾಟಿ ಪಕ್ಕದಲ್ಲಿರುವ ತೋಟದ ಮಾಲೀ ಮನೆಯಲ್ಲಿ ಸ್ವಲ್ಪ ತಂಗಿದ್ದು ಅಲ್ಲಿಂದ ಹೊರಟು ಲಾಲ್‌ಬಾಗ್ ಕೆರೆ ಕಟ್ಟೆಯ ಮೆಟ್ಟಲುಗಳ ಪಕ್ಕದಲ್ಲಿ ಒಂದು ಪೊದರಿನಲ್ಲಿ ಸೇರಿಕೊಂಡಿತು ತರುವಾಯ ಲಾಲ್‌ಬಾಗ್ ಸೂಪರಿಂಟೆಂಡೆಂಟರೂ ಮತ್ತು 1 ಜನ ಮಿಲಿಟರಿ ಧೊರೆಗಳೂ ಸೇರಿ ಹಿಡಿಯಲು ಪ್ರಯತ್ನಪಟ್ಟು ಬಹಳ ಸಾಹಸದಿಂದಲೂ ಧೈರ್ಯದಿಂದಲೂ ಪೊದರಿನ ಸುತ್ತಲೂ ಕಂಬಿಯ ಬೇಲಿಯನ್ನು ಕಟ್ಟಿ ಎದುರಿನಲ್ಲಿ ಒಂದು ಬೋನು ಇಟ್ಟು ಒಳಕ್ಕೆ ಅಟ್ಟಲು ಪ್ರಯತ್ನಿಸುವಷ್ಟರಲ್ಲಿ ಅದು ಪಕ್ಕದಲ್ಲಿ ಮೆಟ್ಟಲುಗಳ ಕೆಳಗೆ ನೀರು ಹಾದುಹೋಗುವದಕ್ಕೆ ಕಟ್ಟಿದ್ದ ನೀರು ಕಾಲುವೆಯ ಒಳಗೆ ನುಗ್ಗಿ ಸೇರಿಕೊಂಡಿತು ಅದನ್ನು ಕಂಡು ಅದರ ಮುಚ್ಚಿದ ಕಡೆ ಇರುವ ಕಾಲುವೆಯ ರಂಧ್ರಕ್ಕೆ ಸರಿಯಾಗಿ ಒಂದು ಬೋನು ಇಟ್ಟು ಅದು ಪ್ರವೇಶಮಾಡಿದ ರಂಧ್ರವನ್ನು ಮುಚ್ಚಿದ ಮೇಲೆ ಸಾಯಂಕಾಲ ಸುಮಾರು 6 ಗಂಟೆಯಲ್ಲಿ ಹುಲಿಯು ಬೋನಿಗೆ ಬಂದು ಸೇರಿತು ತರುವಾಯ ಅದನ್ನು ಮೊದಲಿದ್ದ ಬೋನಿಗೆ ತಂದು ಸೇರಿಸಿದರು ಇದು ಜನಗಳಿಗೆ ಏನೂ ಅಪಾಯಮಾಡಲಿಲ್ಲ

ಹೊಳೆನರಸೀಪುರ—ಈ ಪ್ರಾಂತ್ಯ ಮಳೆ ಇಲ್ಲದೆ ಪೈರುಗಳೆಲ್ಲಾ ಒಣಗುತ್ತಾ ಇವೆ ಈ ಕಾಲದಲ್ಲಿ ಯಾವಾಗಲೂ ಸೋನೆ ಮಳೆ ಇರುತ್ತಿತ್ತು—ಇಲ್ಲಿ ಕಾಲರಾ ಉಪದ್ರದಿಂದ ಕೆಲವರು ಮೃತಪಟ್ಟರು ಈ ಬಾಯಿಲೆ ಇನ್ನೂ ಹೋಗಲಿಲ್ಲ ಇದರ ದೆಸೆಯಿಂದ ಸೌದೆ, ಹುಲ್ಲು ಬಾರದೆ ಇರುತ್ತದೆ ಜನಗಳಿಗೆ ಬಹಳ ಕಷ್ಟ ಉಂಟು ದವಸ ಧಾನ್ಯಗಳ ಧಾರಣೆ ದಿನೆ ದಿನೆ ಏರುತ್ತಾ ಇವೆ ಬಡವರ ಕಾಲಕ್ಷೇಪ ಬಹಳ ಕಷ್ಟಕ್ಕೆ ಬಂದಿದೆ—ಬಾಯಿಲೆ ಕಾಲದಲ್ಲಿ ನಮ್ಮ ಡಾಕ್ಟರವರ ಪರಾಬರಿಕೆ ಚೆನ್ನಾಗಿದೆ ನಮ್ಮ ಅಮಲ್ದಾರ್ರು ಬಾಯಿಲೆ ಇರುವ ಸ್ಥಳಗಳಿಗೆ ಹೋಗಿ ಅಲ್ಲಿರುವ ಅನನುಕೂಲಗಳನ್ನು ಸರಿಪಡಿಸಿ ಜನಗಳಿಗೆ ಎಚ್ಚರಿಕೆ ಹೇಳುತ್ತಾರೆ ಈ ಕಾಲದಲ್ಲಿ ಮ್ಯುನಿಸಿಪಾಲಿಟಿಯವರು ಊರಿನ ಪಾಕೀಜಾ ವಿಷಯದಲ್ಲಿ ಹೆಚ್ಚು ಗಮನ ಕೊಡಬೇಕು—ಜೂಜಾಟ ಕಡಮೆಯಾಗಲಿಲ್ಲ ಜೂಜುಗಾರರನ್ನು ಪೋಲೀಸಿನವರು ಹಿಡಿದು ಅವರನ್ನು ತಪ್ಪಿತಸ್ಥರನ್ನಾಗಿ ಮಾಡುವದಕ್ಕೆ ಸರಕಾರದ ಹುಕುಂ ಬಂದಿದ್ದರೂ ಅದು ಜಾರಿಗೆ ಬಾರದೆ ಇರುವದು ಆಶ್ಚರ್ಯ ದೊಡ್ಡ ಹೊಲಗೇರಿಯಲ್ಲಿ ಈ ಜೂಜುಕೋರರ ಕಾಟ ಜಾಸ್ತಿಯಾಗಿದೆ ಅಲ್ಲಿರುವ ಹಿರಿಯರು ಕೂಡ ಸೇರಿ ಆಡುವವರನ್ನು ಹಿಡಿದು ಬುದ್ಧಿ ಹೇಳಿದರೂ ಅವರು ಬಿಟ್ಟಿಲ್ಲ ಇದರಿಂದ ಕಳ್ಳತನಗಳಿಗೆ ಕಾರಣವಾಗುತ್ತೆ ಸರಕಾರದವರು ಇದನ್ನು ಗಮನಕ್ಕೆ ತಂದು ನಿಲ್ಲಿಸಿದರೆ ಜನಗಳಿಗೆ ಬಹಳ ಪ್ರಯೋಜನವಾಗಬಹುದು

ಯಡತೊರೆ ತಾ॥ ಮಿರ್ಲೆ—ಈ ಸ್ಥಳದ ಶ್ರೀ ಕೃಷ್ಣರಾಜೇಂದ್ರ ಪರಸ್ಪರ ಸಹಾಯಕ ಸಂಘದ ಜನರಲ್ ಮೀಟಿಂಗು ಕಳೆದ ತಾ 21 ರಲ್ಲಿ ಮೈಸೂರು ಸೀಮೆಯ ರೆಜಿಸ್ಟ್ರಾರ್ ಸಾಹೇಬರವರಿಂದ ಅಗ್ರಾಸನಾಧಿಪತ್ಯವು ವಹಿಸಲ್ಪಟ್ಟು ಗೌರ್ನಮೆಂಟು ಕನ್ನಡ ಸ್ಕೂಲಿನಲ್ಲಿ ನಡಿಯಿತು ಸಭೆಗೆ ಸಂಘದ ಕಮಿಟಿ ಮೆಂಬರುಗಳೂ, ಅಮಲ್ದಾರ್ರು, ಇನ್‌ಸ್ಪೆಕ್ಟರ್ ಮ॥ ಪುಟ್ಟತಾಮ್ಮಯ್ಯನವರೂ ಸಹ ಬಂದಿದ್ದರು ಸಂಘದ ಸೆಕ್ರೆಟರಿ ಮ॥ ಎಂ ಸುಬ್ರಹ್ಮಣ್ಯಯ್ಯನವರು ಸಂಘದ ರಿಪೋರ್ಟನ್ನು ಓದಿದ್ದಲ್ಲದೆ ರೆಜಿಸ್ಟ್ರಾರವರು ದಯಮಾಡಿ ಸಭೆಯ ಅಗ್ರಾಸನಾಧಿಪತ್ಯವನ್ನು ವಹಿಸಿದ್ದು ಸಂತೋಷಕರವಾಗಿದೆ ಎಂದೂ, ಸಂಘದ ಬಂಡವಾಳವನ್ನು ಹೆಚ್ಚಿಸಿಕೊಳ್ಳಲು ಇಂಥಾ ಸುಸಮಯವು ಮತ್ತೆ ದೊರೆಯಲಾರದೆಂದೂ, ಈ ಸಂಘದ ಮೆಂಬರುಗಳು ಕಾನ್‌ಫರೆನ್ಸಿಗೆ ಹೋಗಿಬರುವದಕ್ಕೆ ಮುಂಚೆ ಸೊಸೈಟಿ ಬಂಡವಾಳವು ಕಮ್ಮಿಯಾಗಿದ್ದು ಈಗ ಹೆಚ್ಚಿತೆಂದೂ, ಶ್ರೀಮನ್ಯುವರಾಜರವರು ಪ್ರತಿ ಕಾನ್‌ಫರೆನ್ಸಿನಲ್ಲಿಯೂ ದರ್ಶನವಿತ್ತು ಮೆಂಬರುಗಳನ್ನು ವಿನೋದ ಮುಂತಾದವುಗಳಲ್ಲಿ ತೃಪ್ತಿಪಡಿಸಿ ಸಂಘಗಳ ಪುರೋವೃದ್ಧಿಗೆ ಹೆಚ್ಚಿಕೆಯನ್ನು ಕೊಟ್ಟದ್ದು ಬಡರೈತರ ಸಂಶಯಗಳು ತೊಲಗಿ ಬಂಡವಾಳ ಹೆಚ್ಚಲು ಕಾರಣವಾಯಿತೆಂದೂ ತಿಳಿಸಲಾಗಿ ಎಲ್ಲರೂ ಅನುಮೋದಿಸಿದರು ಕಡೆಯಲ್ಲಿ ಮೈಸೂರು ಸೆಂಟ್ರಲ್ ಬ್ಯಾಂಕಿನಿಂದ ಕೊಡ್ಲ 25 ಸಾವಿರ ರೂಪಾಯನ್ನು ಸಾಲ ತರಬೇಕೆಂದೂ, ಸಂಘದ ಮೆಂಬರುಗಳು ಸೊಸೈಟಿಯಲ್ಲಿ ಅಲ್ಲದೆ ಇತರರಲ್ಲಿ ಸಾಲ ಮಾಡಕೂಡದೆಂದೂ, ಪೂರ್ವಾದಿ ವಗ್ಗೈರೆ ಇದ್ದರೆ ಇಲ್ಲಿಯೇ ಮೊಬಲಗು ಪಡೆದು ತೀರಿಸಬೇಕೆಂದೂ ತೀರ್ಮಾನವಾಯಿತು ತರುವಾಯ ರೆಜಿಸ್ಟ್ರಾರವರು ಮೆಂಬರುಗಳಿಗೆ ಸೊಸೈಟಿಯ ವಿಷಯದಲ್ಲಿ ಉಂಟಾಗಿದ್ದ ಸಂಶಯಗಳನ್ನು ಪರಿಹರಿಸಿ, ಸಂಘದಿಂದ ಉಂಟಾಗುವ ಪ್ರಯೋಜನಗಳನ್ನು ತಿಳಿಸಿ ವಿಚಾರಗಳನ್ನು ಮುಕ್ತಾಯ ಮಾಡಿದರು.

ಕೊಡಗು ಶಿರಗಂದೂರು—ನಮ್ಮ ವೈಸರಾಯರವರ ಜನ್ಮದಿನವಾದ ಜೂನ್ ತಾ 20 ರಲ್ಲಿ ಅವರ ಜ್ಞಾಪಕಾರ್ಥವಾಗಿ ಇಲ್ಲಿ ಆಡಂಬರದಿಂದ ನಡೆದ ಉತ್ಸವನ್ನು ತಮ್ಮ ಪತ್ರಿಕೆಯಲ್ಲಿ ನಮ್ಮ ಚಂದಾಪಟ್ಟಿ ಸಮೇತ ನಮೂದಿಸಿ ಪ್ರಕಟಿಸಿ ಮಾಡಬೇಕಾಗಿ ಪ್ರಾರ್ಥಿಸಲಾಗಿದೆ ಚಂದಾಪಟ್ಟಿಯಲ್ಲಿ ನಮೂದಿರುವ ಮಹನೀಯರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಮಾಡದಿದ್ದರೆ ಗ್ರಾಮಸ್ಥರು ತಮ್ಮ ಹೆಸರನ್ನು ನ್ಯೂಸ್‌ಪೇಪರಿನಲ್ಲಿ ಬರೆಯದೆ ಹೋದ ಮೇಲೆ ತಾವುಗಳೆಲ್ಲರೂ ಚಂದಾಹಾಕಿದ್ದು ನಿಷ್ಫಲವೇ ಸರಿ ಇನ್ನು ಮುಂದೆ ಇಂಥಾ ಉತ್ಸವಗಳಿಗೆ ಸೇರುವವರಿಂದ ಯಾವ ಪ್ರತಿ ಫಲವೂ ಇಲ್ಲವೆಂಬುವಾಗಿ ಮುಷ್ಕರ ಹಿಡಿಯುವುದರಿಂದ ತಾವು ಪ್ರೀತಿಯಿಟ್ಟು ಇದನ್ನು ನಮೂದಿಸುವಿರೆಂದು ನಂಬೋಣಾಗಿದೆ ಆ ದಿನ ಇಲ್ಲಿನ ಸ್ಕೂಲಿನಲ್ಲಿ ಹುಡುಗರಿಂದ ಕಥೆಗಳು, ಕೋಲಾಟ, ಟಗ್ಗ್‌ಆಫ್ ವಾರ್, ಸ್ಪೋರ್ಟ್ಸ್, ಇತ್ಯಾದಿಗಳು ಮಾಡಲ್ಪಟ್ಟು ಗೆದ್ದವರಿಗೆ ಇನಾಮುಗಳು ಕೊಡಲ್ಪಟ್ಟವು ಸಭಿಕರು ಹುಡುಗರು ಮೊದಲ್ಗೊಂಡು ಟೀ, ಬಿಸ್ಕೀಟು, ಮಿಠಾಯಿ, ಇನ್ನೂ ಇತರ ತಿಂಡಿ ಪದಾರ್ಥಗಳನ್ನು ಹಂಚಲಾಯಿತು ಲೆಕ್ಚರುಗಳು ಆದ ಬಳಿಕ ತಾಂಬೂಲಾದಿಗಳಿಂದ ಸಭೆಯು ಬರಖಾಸ್ತಾಯಿತು ಚಂದಾ ವಿವರ—ಮ॥ ಗಳಾದ ಸ ಲಿಂಗಪ್ಪ ಮತ್ತು ಎ ಅಯ್ಯಪ್ಪ, ತಲಾ ರೂ 5 ಸಿ ಕಾಳಪ್ಪ ರೂ 1, ಸಿ ಮಾಷೆಯ್ಯ, ಬಿ ಬಸಪ್ಪ, ಬಿ ಸುಬೆಯ್ಯ, ಬಿ ಮಾದೈಯ್ಯ, ಬಿ ಕುಶಾಲಪ್ಪ ಮತ್ತು ಹೆಚ್ ಮಂಚೈಯ್ಯ, ತಲಾ ರೂ 2, ಸಿ ಪೂವೈಯ್ಯ, ಎ ಪೊನ್ನು, ಲಿ ಸಾಂತೈಯ್ಯ, ಬಿ ಸುಬ್ಬಪ್ಪ, ಕೆ ನಿಂಗಪ್ಪ, ಜಿ ನಿಂಗಪ್ಪ ಮತ್ತು ಹೆಚ್ ಈರಪ್ಪ, ತಾಲಾ ರೂ 1, ಸಿ ಸೋಮೈಯ್ಯ, ಸಿ ಮಲ್ಲಪ್ಪ, ಸಿ ಬೆಳ್ಳಪ್ಪ, ಸಿ ಉತ್ತೈಯ್ಯ, ಜಿ ಉತ್ತೈಯ್ಯ, ಜಿ ಕಲ್ಲೈಯ್ಯ, ಜಿ ಮಾದೈಯ್ಯ, ಎ ಗುರುವಪ್ಪ, ಯಸ್ ಲಿಂಗಪ್ಪ ಮತ್ತು ಯಂ ಮಲ್ಲಪ್ಪ, ತಲಾ 8 ಆಣೆ, ಹೆಚ್ ಪೂವೈಯ್ಯ, ಎ ತಿಮ್ಮಪ್ಪ, ಯಂ ಈರಪ್ಪ, ಯಂ ಮಲ್ಲನ ಮತ್ತು ರುದ್ರೈಯ್ಯ, ತಲಾ 4 ಆಣೆ ಜುಮ್ಲ ವಸೂಲಾದ 40 ರೂಪಾಯಿ ಪೈಕಿ ಖರ್ಚು ಕಳೆದು ಉಳಿದ ರೂ 35-6 ಗೆ ವೈಸರಾಯರವರ ಹೆಸರಿನಲ್ಲಿ ಒಂದು ಟ್ರಾಫಿಸು ಇಡುವಂತೆ ಏರ್ಪಾಡುಮಾಡಿದೆ

ದೊಡ್ಡಬಳ್ಳಾಪುರ—ಕಳೆದ ಶನಿವಾರ ಈ ಊರಲ್ಲಿರುವ ಮ್ಯುನಿಸಿಪಲ್ ಮೆಂಬರು ಮ॥ ರುದ್ರಾಣಿ ರಪ್ರಪ್ಪನವರು ಸುಮಾರು 25 ಸಾವಿರ ರೂಪಾಯಿ ಮುಟ್ಟಿಸಿ ಕಟ್ಟಿಸಿರುವ ಪೂರ್ಣ ಕಲ್ಲುಕಟ್ಟಡದ ಛತ್ರವನ್ನು ಶಾಸ್ತ್ರೋಕ್ತವಾಗಿ ಪ್ರತಿಷ್ಠೆಮಾಡಿದರು ನೂರಾರು ಮಂದಿ ವೈದಿಕ ಶಿರೋಮಣಿಗಳೂ, ತಾಲ್ಲೂಕು ಅಧಿಕಾರಿಗಳೂ, ಗ್ರಾಮದ ಮುಖಂಡರೂ ಜಮಾಯಿಸಿದ್ದರು ಬೆಂಗಳೂರಿಂದ ಕೆಲವು ಭಾರಿ ವರ್ತಕರೂ ದಯಮಾಡಿದ್ದರು ಮಂಗಳವಾದ್ಯಗಳೊಡನೆ ಸಭಾಪ್ರಾರಂಭವಾಯಿತು ಶಾಸ್ತ್ರೋಕ್ತವಾಗಿ ದಂಪತಿಗಳನ್ನು ಅಗ್ನಿಕುಂಡದ ಮುಂದೆ ಕೂರಿಸಿ ಹೋಮಾದಿಗಳನ್ನು ನಡಿಸಿದರು ಲಿಂಗಾಯಿತ ಪುರೋಹಿತರೇ ಈ ಕಾರ್ಯವನ್ನು ಮಾಡಿಸಿದರು ಸಮಸ್ತ ಸಭೆಗೆ ಗಂಧ ಪುಷ್ಪ ತಾಂಬೂಲ ಫಲದ್ರವ್ಯಾದಿಗಳು ಕೊಡಲ್ಪಟ್ಟವು ಅದೇ ದಿನ ಸುಮಾರು 600 ಮಂದಿ ಲಿಂಗಾಯತರಿಗೆ ದಿವ್ಯವಾದ ಭೋಜನವೂ, ಈಚೆಗೆ ಬಡಬಗ್ಗರಿಗೆಲ್ಲಾ ಆಹಾರ ವಸ್ತ್ರಗಳೂ ಕೊಡಲ್ಪಟ್ಟವು—ಕಳೆದ 19 ನೇ ತಾ ಮಧ್ಯಾಹ್ನ ಈ ಊರಲ್ಲಿರುವ ಮ್ಯುನಿಸಿಪಲ್ ಮೆಂಬರು ಮ॥ ಸಾಹುಕಾರ್ ಚಂದ್ರಶೇಖರಯ್ಯನವರ ವಿವಾಹೋತ್ಸವವು ಅತ್ಯಂತ ವಿಜೃಂಭಣೆಯಿಂದ ನಡಿಯಿತು ಈ ದೊಡ್ಡ ಮನುಷ್ಯರು ಸಾಧಾರಣವಾಗಿ ಬಹು ಉದಾರಸ ಭಾವವೂ ವಿಶೇಷ ಅಂತಃಕರಣವೂ ಉಳ್ಳವರಾಗಿರುವುದರಿಂದ ಇವರು ತಮ್ಮ ಮದುವೆಯಾದ ಬಳಿಕ ತಮ್ಮವರಿಗೆಲ್ಲಾ ಮೂರು ದಿನಗಳ

ವರೆಗೂ ಶ್ರೇಷ್ಠವಾದ ಭೋಜನವೂ ಇತರ ಸ್ನೇಹಿತರಿಗೆಲ್ಲಾ ತಕ್ಕ ಮರ್ಯಾದೆಯೂ ಜರುಗುವಂತೆ ಮಾಡಿದರು —ಡಾಕ್ಟರ್ ಮುತ್ತುಸ್ವಾಮಿ ದಾಸ್‌ರವರು ತಾ 33 ನೇ ಸೋಮವಾರ ಸಾಯಂಕಾಲ ಈ ಊರು ಹಳೇ ಕಛೇರಿಯಲ್ಲಿ ಆರೋಗ್ಯವಿಚಾರವಾಗಿಯೂ, ಅಕಸ್ಮಿಕವಾಗಿ ಸಂಭವಿಸುವ ಅಪಾಯಗಳ ವಿಷಯವಾಗಿಯೂ ಬಹು ಪ್ರಯೋಜನಕರವಾದ ಉಪನ್ಯಾಸ ಮಾಡಿದ್ದನ್ನು ನೂರಾರು ಮಂದಿ ಗ್ರಾಮಸ್ಥರು ಕೇಳಿ ಸಂತೋಷಪಟ್ಟರು —ತಾ 18 ನೇ ಬುಧವಾರ ಸಾಯಂಕಾಲ ದೇವಾಂಗದ ಎಲ್ಲಿಮನೆ ದಾಸಪ್ಪನ 6 ವರ್ಷದ ಹುಡುಗನು ದರ್ಗಾದಲ್ಲಿರುವ ಸಣ್ಣಕಟ್ಟೆಯಲ್ಲಿ ಈಜಲಿಕ್ಕೆ ಹೋಗಿ ಮೃತಪಟ್ಟನು — ಕಳೆದ ವಾರ ಮ|| ನಾರಾಯಣರಾವ್ ನಿರ್ಮಲೆಯವರ ಸರ್ಕಸ್ ಆಟದವರು ಈ ಊರಲ್ಲಿ ಮೂರು ನಾಲ್ಕುದಿನ ಇದ್ದು ತಮ್ಮ ಆಟಗಳಿಂದ ಅನೇಕರನ್ನು ಸಂತೋಷಪಡಿಸಿದರು ಈ ಮ್ಯಾನೇಜರಿಗೆ ನಮ್ಮ ಮಹಾರಾಜರವರು ಒಂದು ಭಾರಿ ಚಿನ್ನದ ಪದಕವನ್ನು ದಯಪಾಲಿಸಿರುತ್ತಾರೆ ಇವರು ತೋರಿಸುವ ಮರದ ತೊಟ್ಟಿಯಲ್ಲಿ ಬೈಸಿಕಲ್ ಓಡುವಿಕೆಯ ಆಟವು ಬಹು ಅಪರೂಪವೂ ಆಶ್ಚರ್ಯವೂ ಆಗಿದೆ ಇವರು ಕಳೆದ ಮಂಗಳವಾರ ಬೆಂಗಳೂರು ಮಾರ್ಗವಾಗಿ ಪ್ರಯಾಣ ಮಾಡಿದರು

ಚಿತ್ರದುರ್ಗ —ಬಿಸಲಿನ ಝಳ ಕಮ್ಮಿಯಾಯಿತು ಗಾಳಿ ಬಹಳ ಜಾಸ್ತಿಯಾಗಿದೆ ಈ ಪ್ರಾಂತ್ಯ ಭೂವ್ಯವಸಾಯಕ್ಕೆ ಬೇಕಾದಷ್ಟು ಮಳೆಗಳು ಬರಲಿಲ್ಲ ಆಗಾಗ್ಗೆ ಸ್ವಲ್ಪ ಸ್ವಲ್ಪ ತುಂತುರು ಹನಿಗಳು ಬೀಳುತ್ತ ಅದರಿಂದ ಶೀತ ಮಾತ್ರ ಹೆಚ್ಚಿ ಅದರ ಸಮ್ಮಂಧವಾದ ಚಳಿ, ಜ್ವರ, ವಾಂತಿ, ಕೆಮ್ಮು, ಭೇದಿ ಇವು ಜಾಸ್ತಿಯಾಗಿದೆ ದಿನಸಿ ಧಾರಣೆಗಳಂತೂ ಹೇಳತಕ್ಕದ್ದಾಗಿಯೇ ಇಲ್ಲ ಕ್ಷಾಮ ಕಾಲಕ್ಕಿಂತಲೂ ಹೆಚ್ಚು ತುಟ್ಟಿಯಾಗಿ ಮಾರುತ್ತಾ ಇವೆ —ಮೈಸೂರಿನವರ ಜನ್ಮದಿನದ ಉತ್ಸವವು ಚೆನ್ನಾಗಿ ನಡೆದೀತೆಂಬ ಆಶೆ ಇಲ್ಲಿ ಪ್ರಜೆಗಳಿಗೆ ಹೆಚ್ಚಾಗಿತ್ತು ಮ್ಯುನಿಸಿಪಾಲಿಟಿಯವರು ಅದಕ್ಕೆ ಪ್ರಯತ್ನಪಡಲಿಲ್ಲವಾದ್ದರಿಂದ ಸ್ಕೂಲ್ ಹುಡುಗರಿಗೆ ರಜಾ ಕೊಡತಕ್ಕದ್ದರಲ್ಲಿ ಮಾತ್ರ ಈ ಉತ್ಸವವು ಪರಿಣಾಮವಾಯಿತು ಮೈಸೂರಿಗೆ ದಯಮಾಡಿದ ಡೆಪ್ಯುಟಿ ಕಮಿಷನರ್‌ರವರು ವಾಪಸ್ ಬಂದರು ಮ|| ಮಾಥ್ಯೂರವರ ಕುಟುಂಬ ಅನಾಸುಕೂಲದ ದೆಸೆಯಿಂದ ಇಲ್ಲೇ ವಾಸವಾಗಿದ್ದಾರೆ —ಹಿಂದೆ ಈ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್‌ರಾಗಿದ್ದು ವಿಶ್ರಾಂತಿ ಸುಖವನ್ನು ಹೊಂದಿ ಈಗ ಮೈಸೂರು ಬ್ಯಾಂಕ್ ಎಂಬ ದೇಶೋದ್ಧಾರಕವಾದ ಕಾರ್ಯದಲ್ಲಿ ಪ್ರವರ್ತಿಸಿ ಅದರ ವಿವರ ದೇಶದಲ್ಲಿರತಕ್ಕ ಪ್ರಜೆಗಳಿಗೆಲ್ಲಾ ತಿಳಿಸಿ ಅದರ ಫಲವನ್ನು ಅವರು ಅನುಭವಿಸುವಂತೆ ಮಾಡಲು ಪ್ರಯತ್ನಪಟ್ಟಿರುವ ಮೆ|| ಎಂ ಚೆಂಗಯ್ಯಶೆಟ್ಟರವರು ಈ ಸ್ಥಳಕ್ಕೆ ದಯಮಾಡಿ ತಾ 23 ರಲ್ಲಿ ಚಾಮರಾಜೇಂದ್ರ ಮೆಮೋರಿಯಲ್ ಹಾಲಿನಲ್ಲಿ ದೊಡ್ಡ ಮೀಟಿಂಗ್ ಮಾಡಿ ಈ ಬ್ಯಾಂಕಿನ ಉದ್ದೇಶ, ಅದರಿಂದ ಉಂಟಾಗತಕ್ಕ ಫಲ, ಇವುಗಳನ್ನು ವಿಶದವಾಗಿ ತಿಳಿಸಿ, ಪ್ರಿಂಟಾದ ಅದರ ನಡವಳಿಕೆ ಪತ್ರಿಕೆಗಳು ಎಲ್ಲರಿಗೂ ಹಂಚಿದರು ಈ ದೊಡ್ಡ ಮನುಷ್ಯರನ್ನು ಈ ಪ್ರಾಂತ್ಯದ ಪ್ರಜೆಗಳು ಬಹಳವಾಗಿ ವಿಶ್ವಾಸಿಸುತ್ತಲಿದ್ದಾರೆ — ಪಂಚಮರ ವಿದ್ಯಾಭಿವೃದ್ಧಿ ವಿಷಯ ಪ್ರತಿಯೊಬ್ಬರ ಬಾಯಿಯಲ್ಲೂ ಇದ್ದೇ ಇದೆ ಈ ಚಿತ್ರದುರ್ಗದಲ್ಲಿರತಕ್ಕ ಮಹಾರಾಜ್ಞಿ ಪಂಚಮ ಸ್ಕೂಲಿನ ಬಾಲಕರು ಕೆಲವು ಸಣ್ಣ ಸಾಮಾನುಗಳನ್ನು ತಯಾರ್ಮಾಡಿ ಶ್ರೀರಂಗಪಟ್ಟಣದಲ್ಲಿ ನಡೆದ ಪಂಚಮರ ಸಭೆಗೆ ಕಳುಹಿಸಿದ್ದಕ್ಕೆ ಅದನ್ನು ಮೆಚ್ಚಿ ಆ ಕಮಿಟಿಯವರು ಈ ಬಾಲಕರಿಗೆ ನಾಲ್ಕು ಪುಸ್ತಕಗಳು ನಗದು ಒಂದು ರೂಪಾಯಿ ಸಹ ಬಹುಮಾನವಾಗಿ ಕಳುಹಿಸಿದ್ದದನ್ನು ಮೆ|| ಎಂ ಚೆಂಗಯ್ಯಶೆಟ್ಟರವರ ಅಗ್ರಾಸನದಲ್ಲಿ ಹುಡುಗರಿಗೆ ಹಂಚಲ್ಪಟ್ಟಿತು ಆ ಕಾಲದಲ್ಲಿ ಈ ಪಂಚಮ ಸ್ಕೂಲು ಇವಕ್ಕೆ ಆಧಾರವಾದ ಡಿಪ್ರೆಸ್ಡ್ ಸ್ಟೂಡೆಂಟ್ಸ್ ಹೋಂ ಇವುಗಳ ಮ್ಯಾನೇಜರಾದ ಮ|| ಹನುಮಂತರಾಜುಯವರು ಹೋಮನ್ನು ಈ ಅಗ್ರಾಸನಾಧಿಪತಿಗಳಾದ ದೊಡ್ಡ ಮನುಷ್ಯರು ಈ ಸ್ಥಳದಲ್ಲಿ ಸಾಕ್ಷಿಭೂತರಾದರು ಇವರಿಗೆ ಅದರ ನಡವಳಿಕೆಗಳನ್ನು ಕುರಿತ ಒಂದು ರಿಪೋರ್ಟ್ ಸಭೆಯಲ್ಲಿ ಓದಿದರು ಅದಕ್ಕೆ ಅಗ್ರಾಸನಾಧಿಪತಿಗಳು ಸಂತೋಷಪಟ್ಟು ಇವುಗಳ ಮುಂದಿನ ಅಭಿವೃದ್ಧಿ ವಿಷಯದಲ್ಲಿ ಯುಕ್ತವಾದ ಬುದ್ಧಿವಾದವನ್ನು ಅಪ್ಪಣೆ ಕೊಡಿಸಿದರು

ಮಧುಗಿರಿ ತಾ|| ಬಡಗೌಡನಹಳ್ಳಿ —ಇಲ್ಲಿ ಸುಮಾರು 20 25 ದಿನಗಳಿಂದ ಮಳೆ ಇಲ್ಲದೇಲೂ ಗಾಳಿ ಮಾತ್ರ ಹೆಚ್ಚಾಗಿರುವುದರಿಂದಲೂ ಈ ಪ್ರಾಂತ್ಯದ ಜನಗಳು ಮುಂಗಾರು ಮಳೆಯೇ ಈ ರೀತಿ ಇರುವಾಗ್ಗೆ ಹಿಂಗಾರು ಮಳೆ ಸುರಿಯುವುದುಂಟೇ ಎಂಬದಾಗಿ ಈಗಾಗಲೇ ಕಳವಳಪಡುತ್ತಲಿದ್ದಾರೆ —ಈ ಗ್ರಾಮದಲ್ಲಿ ಕಳೆದ ತಾ 16 ನೇ ಸೋಮವಾರ ರಾತ್ರಿ ಒಕ್ಕಲಿಗರ ಪುಟ್ಟಣ್ಣ ಎಂಬುವನ ಎರಡು ಭಾರೀ ಹುಲ್ಲು ಬಣವೆಗಳಿಗೆ ಯಾರೋ ಬೆಂಕಿ ಇಟ್ಟರು ಇದನ್ನು ಆರಿಸಲು ಗ್ರಾಮದ ಜನರೆಲ್ಲಾ ಎಷ್ಟು ಪ್ರಯಾಸಪಟ್ಟಾಗ್ಗೂ ಬೆಂಕಿ ಆರದೆ ಬಣವೆಯು ಸಂಪೂರ್ಣವಾಗಿ ಸುಟ್ಟುಹೋಯಿತು ಆದರೆ ಆ ಬಣವೆಯ ಪಕ್ಕದಲ್ಲಿದ್ದ ಬಣವೆಗಳಿಗೆ ಬೆಂಕಿ ತಗಲದಂತೆ ಆ ರಾತ್ರಿಯೆಲ್ಲಾ ಗ್ರಾಮಸ್ಥರು ಕಾವಲಿದ್ದು ಹೆಚ್ಚಿನ ನಷ್ಟಕ್ಕೆ ಅವಕಾಶಕೊಡಲಿಲ್ಲ ಈ ಕೆಲಸವು ದ್ವೇಷಿಗಳಿಂದ ಆದದ್ದೇ ಎಂದು ಸದರಿ ಪುಟ್ಟಣ್ಣನು ಹೇಳುತ್ತಾನೆ ಪಟೇಲನ ರಿಪೋರ್ಟಿನಲ್ಲಿಯೂ ಯಾರೋ ದ್ವೇಷಿಗಳು ಇಟ್ಟಿರುತ್ತಾರೆಂದು ಪೋಲೀಸಿಗೆ ತಿಳಿಸಿರುತ್ತಾನೆ ಈ ರಿಪೋರ್ಟು ಪಟೇಲನಿಂದ ಹೋದ ಮೇಲೆ ಪೋಲೀಸಿನವರು ಪುಟ್ಟಣ್ಣನನ್ನು ಮಧುಗಿರಿಗೆ ಕರೆಸಿಕೊಂಡು ಆತನ ಕೈಫಿಯತ್ತನ್ನು ಅಲ್ಲಿಯೇ ತೆಗೆದುಕೊಂಡರು ಸ್ಥಳಕ್ಕೆ ಒಂದು ಇನ್ನೂ ಅಜಮಾಯಿಷಿಮಾಡಿ ಪತ್ತೆ ಹಚ್ಚುವುದನ್ನು ಯಾವ ಅಧಿಕಾರಿಗಳೂ ಮಾಡಲಿಲ್ಲ ಯಾವ ಕಾರಣವೋ ತಿಳಿಯದು ಮೇಲ್ಕಂಡ ಬೆಂಕಿಯ ಅಪಾಯದ ಕಾಲದಲ್ಲಿ ಪರಗ್ರಾಮದಲ್ಲಿರುವ ಈ ಗ್ರಾಮದ ಪಟೇಲನು ತೋಟಿ ತಳವಾರರೊಂದಿಗೆ ಬಂದು ಮಾಡಿದ ಸಾಹಸಕಾರ್ಯವನ್ನು ಎಷ್ಟೆಂದು ಹೇಳೋಣ —ಚನ್ನಸಾಗರದವರಿಗೂ, ನಿಟ್ರಹಳ್ಳಿ, ಬಡಗೌಡನಹಳ್ಳಿ, ತಿಮ್ಮನಹಳ್ಳಿ ಗ್ರಾಮಗಳ ರೈತರಿಗೂ ನಡೆದಿರುವ ಕಾಲುವೆ ವ್ಯಾಜ್ಯವನ್ನು ಮೂರು ನಾಲ್ಕು ಜನ ಅಸಿಸ್ಟೆಂಟ್ ಕಮಿಷನರುಗಳು ಬಂದು ನೋಡಿ ಯಾವ ತೀರ್ಪನ್ನೂ ಕೊಡದೆ ಹೊರಟುಹೋದರು ಈಗ ಬಂದಿರುವ ಅಸಿಸ್ಟೆಂಟನವರು ಒಂದಾವರ್ತಿ ಬಂದು ನೋಡಿ ಉಭಯ ಪಕ್ಷದವರನ್ನೂ ಮಧುಗಿರಿಗೆ ಕರೆಸಿಕೊಂಡು ಎರಡು ಕಡೆಯಲ್ಲೂ ಕೆಲವು ಸಾಕ್ಷಿಗಳನ್ನು ವಿಚಾರಿಸಿ, ಮೇ ತಿಂಗಳು ತಾ 21 ಕ್ಕೆ ತೀರ್ಮಾನ ಹೇಳುವುದಾಗಿ ಅಪ್ಪಣೆ ಕೊಟ್ಟರು ಆ ದಿನ ಎರಡು ಕಡೆಯವರೂ ಹೋಗಿ ನೋಡುವಾಗ್ಗೆ ಅಸಿಸ್ಟೆಂಟರು ಕೊರಟಗೆರೆ ಕಡೆ ಸರ್ಕೀಟುಹೋಗಿದ್ದರು ಆಗ ಗುಮಾಸ್ತರು ಉಭಯ ಪಕ್ಷದವರ ಕೈಫಿಯತ್ತನ್ನೂ ತೆಗೆದುಕೊಂಡು— ಮೇ ತಾ 25-26 ಕ್ಕೆ ಬರುತ್ತಾರೆ ಆ ಎರಡು ದಿನವೂ ಬಂದು ಕಾದಿರಬೇಕೆಂದು ಎರಡು ಕಡೆಯವರಿಗೂ ತಿಳಿಸಿದರು ತಾ 25 ರಲ್ಲಿ ಅಸಿಸ್ಟೆಂಟರು ತೀರ್ಮಾನವನ್ನು ಹೇಳುವುದಕ್ಕೆ ಆಗುವುದಿಲ್ಲವೆಂದೂ, ಮತ್ತೆ ಅಲ್ಲಿಗೆ ಬಂದು ನೋಡಿ 7 8 ದಿನಗಳೊಳಗಾಗಿ ಇತ್ಯರ್ಥಮಾಡುತ್ತೇವೆಂದೂ ಭರವಸೆ ಕೊಟ್ಟವರು ಇದುವರೆಗೂ ಈ ಬಡರೈತರ ವ್ಯಾಜ್ಯವನ್ನು ವಿಚಾರಿಸಲಿಲ್ಲ ಇದು ಮುಂಗಾರು ಕಾಲವಾದ್ದರಿಂದ ಫೈಸಲ್ ಮಾಡಿದ್ದರೆ ಸಾಗುವಳಿಗೆ ನೀರು ಬರಲು ಅನುಕೂಲವಾಗುತ್ತಾ ಇತ್ತು ಈಗಲಾದಲೂ ಸರ್ಕಾರದವರು ಈ ಜನರ ತೊಂದರೆಯನ್ನು ವಿಚಾರಿಸಿ ಕಾಪಾಡಿಯಾರೆಂದು ಹಾರೈಸುತ್ತೇನೆ

ಬಿರುದೂ ಪದಕವೂ

ಮೈಸೂರು ಬೆಂಗಳೂರಿನಲ್ಲಿ ಇರುವ ಕುರುಬರ ಸಂಗಡದವರ ಪರವಾಗಿ ಯಜಮಾನ್ ಮ|| ರಾ|| ಬೋಜಪ್ಪನವರು ಲಕ್ಕಣ್ಣನವರು ಸಹಾ ಮೈಸೂರು ಜನರಲ್ ಆಸ್ಪತ್ರೆ ಬಳಿಯಿರುವ ಮ| ರಾ|| ಟಿ ದಾಸಪ್ಪನವರಿಗೆ ಮತವನ್ನು ಜೀರ್ಣೋದ್ಧಾರಮಾಡುವ ವಿಷಯದಲ್ಲಿ ಯುಕ್ತವಾಗಿ ಸಾಹಸಪಡುತ್ತಿರುವ ಮಹನೀಯರಿಗಾಗಿ "ಮತೋದ್ಧಾರಕ" ಎಂಬ ಹೆಸರಿನಿಂದ ಬಂಗಾರದ ಪದಕವ ಕೊಡುವದಾಗಿಯೂ ಮತ್ತು ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಡಿಟೋ ಸಂಗಡದವರೆಲ್ಲಾ ಸೇರಿ "ವಂಶರತ್ನ" ಎಂಬ ಬಂಗಾರದ ಪದಕವನ್ನು ಕೊಡುವದಾಗಿಯೂ ವಿಚಾರವು ಆಗಿದೆ ಈ ಸಂಗಡದವರಲ್ಲಿ ಈ ರೀತಿ ಬಹುಮಾನಪಡೆಯುವವರು ಇವರೇ ಮೊದಲನೆಯವರಾಗಿದ್ದಾರೆ ಮತಾಭಿಮಾನವೆಂಬುವುದು ಹೀಗಲ್ಲವೆ ಇರಬೇಕಾದದ್ದು [130-1] ಬಿ ಲಿಂಗಪ್ಪ

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳದಂತೆ ಕೇಳದ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು

ಅದು ಸಂತೋಷವೂ ಆನಂದವೂ ಸಮನವಾಗಿ ಆದಾರದ ರುಚಿ ಹೊಂದಿ ಸುಖ ಒತ್ತಿ ತೋರಿಸುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಸಧ ಮಾರುವವರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಸಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್,

ಈ ಮೀನುಮನುಷ್ಯ ಇರುವ ಔಸದವನ್ನೇ ಕೊಂಡುಕೊಳ್ಳಿ



ಪಾರ್ಸಿ ಸ್ಟ್ರಾಂ ಹಾರ್ಮೋನಿಯಂ.

ಕ್ರಯ ರೂ 18-16 0

ಇದು ಬಹು ಬಲಿಷ್ಠವಾದ ಮರದಿಂದ ತಯಾರಿಸಲ್ಪಟ್ಟಿರುತ್ತೆ ಇದು ಅತ್ಯಂತ ಶ್ರೇಷ್ಠವಾದದ್ದು ಮತ್ತು ಮನೋಹರವುಳ್ಳ ನಾದವುಳ್ಳದ್ದು ಬಹು ಕಾಲದವರೆವಿಗೆ ಬಾಳಿಕೆ ಬರತಕ್ಕದ್ದು ಮೂರು ಕಾಲು ಅಕ್ಟೇವುಗಳು, ಒಂದು ಸೆಟ್ ರೀಡುಗಳು, ಬ್ಯಾಕ್ ತಂತಿಗಳು ಸಹ ಹಾಕಿರುವದರಿಂದ ಪಾರ್ಸಿ ಮತ್ತು ಹಿಂದೂ ಸಂಗೀತಕ್ಕೆ ಬಹಳ ಹಿತಕರವಾಗಿದೆ ಇದು ಎಲ್ಲೆಲ್ಲೂ ಪ್ರಖ್ಯಾತಿಯಾಗಬೇಕೆಂದು ಕ್ರಯವನ್ನು ತಗ್ಗಿಸಿರುತ್ತೇವೆ [120-2]

ವಿಳಾಸ —ದಕರ್ ಹಾಜು ಕಂಪನಿ,
ನಕಂದ್ ಕ್ರೈನ್ ಬೀಜು, ಮದರಾಸು

ಇಮಿಟೇಷನ್ ವಜ್ರದ ಒಡವೆಗಳು.

ಹೊಸದಾಗಿ ಸೀಮೆಯಿಂದ ತರಿಸಿರುತ್ತೆ

ಇಮಿಟೇಷನ್ ವಜ್ರದ ಬೆಂಡೋಲೆಯನ್ನು ಈಗತಾನೇ ವಿಲಾಯಿತಿಯಿಂದ ತರಿಸಿರುತ್ತೇವೆ ಇದು ಉತ್ತಮವಾದ ವಜ್ರದ ಓಲೆಯಲ್ಲಿರುವ ನೀರೋಟದೊಡನೆ ಕೂಡಿ ಬಹಳ ದಿನಗಳು ಕೆಡದೆ ಅತ್ಯಂತ ಪ್ರಕಾಶವಾಗಿರುತ್ತೆ



ಇದನ್ನು ಧನವಂತರೂ ಕೂಡ ವಜ್ರದ ಓಲೆಗೆ ಬದಲಾಗಿ ಉಪಯೋಗಿಸುತ್ತಾರೆ ಇದಕ್ಕೆ ಅನೇಕವಾಗಿ ಗಿರಾಕಿಗಳು ಬರುತ್ತಿರುವುದರಿಂದ ಬೇಕಾದವರು ಜಾಗ್ರತೆ ತರಿಸಿಕೊಳ್ಳಬೇಕು ಜೊತೆ 1ಕ್ಕೆ ಬೆಲೆ ರೂ 1 12 0 ಇದೇ ಕಲ್ಲಿನಿಂದಲೇ ಹತ್ತಕಡಕು, ಬೇಸರಿ, ಕುರುಟು ವಾಲೆ ಮೊದಲಾದವು ಸಿದ್ಧವಾಗಿವೆ ಹತ್ತಕಡಕು ಜೊತೆಗೆ ರೂ 1-8 0 ಬೇಸರಿಗೆ 12 ಆಣೆ ಕುರುಟುವಾಲೆ ಜೊತೆಗೆ ರೂ 2, ಮೂಗುಬೊಟ್ಟಿಗೆ 6 ಆಣೆ ಪದಕ ಸಹಿತವಾದ ನಾಲ್ಕು ಎಳೆ ಮುತ್ತಿನ ಕಂಠಿಗೆ ರೂ 1 9 0 ಪದಕವಿಲ್ಲದ ಸರಕ್ಕೆ 12 ಆಣೆ [122 2]

ವಿಳಾಸ —ಬಿ ಶೇಷಾ ಅಂಡ್ ಬ್ರದರ್ಸ್,
ಸಾಗುಂಡಾಕ , ಸೆಂಟ್ ಥಾಮಸ್ ಮೌಂಟ್ ಪೋಸ್ಟ್, ಮದರಾಸ್



ಕರೀ ಬಣ್ಣದ ಮಧುರೆ ಚುಂನಡಿ ಸೀರೆಗಳು.

ಕರೀ ಸೀರೆ ಅವಲ್ ರಹಿಂ ಕ್ರಯ ರೂ 2 0 0
ಕೆಂಪು ಸೀರೆ ಅವಲ್ ರಹಿಂ ರೂ 2 11 0
ಅವಲ್ ರಹಿಂ ಕಿರಗೆ 1 ಕ್ಕೆ , ರೂ 1 11 0

ಇದರಿಂದ ವರ್ತಕರಿಗೂ ಇತರರಿಗೂ ತಿಳಿಸುವದೇನೆಂದರೆ, ನಮ್ಮಲ್ಲಿ ತಯಾರಾಗುವ ಚುಂನಡಿ ಸೀರೆಗಳು ಬಹಳ ಶ್ರೇಷ್ಠವಾದದ್ದಾಗಿಯೂ ಉಪಯೋಗಕ್ಕೆ ಅನುಕೂಲವಾಗಿಯೂ ಪೂರಾ 18 ಮೊಳವುಳ್ಳದ್ದಾಗಿಯೂ ಇರುತ್ತೆ ಎಷ್ಟು ಸಲ ಒಗೆದು ಉಟ್ಟಾಗ್ಯೂ ರಂಗು ಹೋಗದು ಇನ್ನೂ ಅನೇಕ ತರಹವಾರಿ ಜವಳಿಗಳು ನಮ್ಮಲ್ಲಿ ಸಿದ್ಧವಾಗಿರುತ್ತೆ [120 2]

ವಿಳಾಸ —ಸಿತಾಂಬರಂ ಕಂಪನಿ,
ನಂ 18 ಸೆಕೆಂಡ್ ಲೈನ್ ಬೀಚು ಮದರಾಸು.

ಎಂಬ್ರಾಯಿಡರಾದ ಇಮಿಟೇಷನ್ ಪಟ್ಟೆ ಸೀರೆಗಳು

ಕ್ರಯ ರೂಪಾಯಿ 6 8 0

ಈ ಸೀರೆ ಹೊಸ ನಮೂನೆಯಾಗಿರುವದರಿಂದಲೂ, ಅನೇಕರು ನೋಡಿದ ಕೂಡಲೇ ಅತಿ ಪ್ರಿಯಪಡುವದರಿಂದಲೂ ನೋಡುವದಕ್ಕೆ ಪಟ್ಟೆ ಸೀರೆಯಂತೆ

ಇರುವದರಿಂದಲೂ ಎನವರೂ ಹಣವಂತರೂ ಸತ್ಯ ಯಾರಾದರೇನು ತೆಗೆಯುವಂಥಾ ಸುಲಭವಾದ ಬೆಲೆಯುಳ್ಳದ್ದಾಗಿರುವದರಿಂದಲೂ ಪ್ರಕಟಿಸುವೆ ಇದು ಪಟ್ಟೆಗಿಂತ ಹೆಚ್ಚಾಗಿ ಪ್ರಕಾಶಿಸುತ್ತದೆ ಅಂಚಿನಲ್ಲಿಯೂ ಸೆರಗಿನಲ್ಲಿಯೂ ಪಟ್ಟೆ ಹೂಲಿಗೆಯ ಮುತ್ತುಗಳು ಹಾಕಿವೆ ಪಾರಸಿ ಹೆಂಗಸರು ಉಟ್ಟುಕೊಳ್ಳುವ ನಮೂನೆಯಾದ ಸೀರೆ ನೀರಿನಲ್ಲಿ ಒಗೆದು ಉಟ್ಟುಕೊಳ್ಳಬಹುದು ಛಾಯೆಯೂ ಜ್ವಲನೆಯೂ ಕೆಡುವದಿಲ್ಲ ಯಾವ ವರ್ಣದಲ್ಲಿ ಅಥವಾ ರಂಗಿನಲ್ಲಿ ಬೇಕಾದರೇನು ನಮ್ಮಲ್ಲಿ ಇವೆ ಈ ಸೀರೆಯನ್ನು ಒಂದು ಸರಿ ನೋಡಿದ ಕೂಡಲೆ ಅನೇಕರು ಅನೇಕ ರೂಪಗಳಲ್ಲಿ ಬೇಕೆಂದು ಆಶೆಪಡುವದಕ್ಕೆ ಸಂದೇಹವಿಲ್ಲ ಪರೀಕ್ಷಾರ್ಥವಾಗಿ ಮಾದರಿಗೆ ಒಂದು ತರಿಸಿ ನೋಡಿರಿ ಇದರ ಗುಣವನ್ನು ಬರೆದು ಸಾಧ್ಯವಿಲ್ಲ ಅತ್ತರ್ ಒಬ್ಬದ ಹೂವಿನ ಚುಕ್ಕೆ ಬುಂದಿಗೆ 2-10 0 ಇಂಪ್ರೂವ್ಡ್ ರಿಸ್ಟ್ ರೆಗ್ಯುಲೇಟರ್ ವಾಚ್ 2 2 0 ಕೈನಲ್ಲಿ ಕಟ್ಟಿಕೊಳ್ಳುವ ಬೆಳ್ಳಿ ಲೀವರ್ ವಾಚ್ 1-15 0 ಜರ್ಮನ್ ಪಾಕೆಟ್ ದೀಪ 1-12 0, ಸೆಲ್ಫ್ ಕ್ಲೋಸಿಂಗ್ ಬ್ರೇಸ್ಲೆಟ್ ವಾಚ್ 1 12 0 ಇನ್ನೂ ಯಾವ ಸಾಮಾನುಗಳು ಬೇಕಾದರೇನು ಕಳುಹಿಸುತ್ತೇವೆ [131-2]

ವಿಳಾಸ —ವಿ ಎಸ್ ನಾರಾಯಣ್ ಅಂಡ್ ಸನ್ಸ್,
101 ಚೀನಾ ಬಜಾರ್ ರೋಡು, ಮದರಾಸು

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಉಚಿತವಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ Messrs. OAKES & Company, Mount Road, Madras.

[4-35] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H Gulliford, Proprietor and Manager, Wesleyan Mission Press Mysore 1/7/1918.

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—೧೯೧೩ ನೇ ಇಸವಿ ಜೂಲೈ ತಾರೀಖು ೧೦ ನೇ ಗುರುವಾರ. ಸಂಚಿಕೆ ೬

ಪ್ರತಾಪಕಂಠೀರವ ಚರಿತ್ರೆ.

(1) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ, (2) ಸ್ತ್ರೀಧರ್ಮ ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ-ಚಾತುರ್ಯ; (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು; (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭ ಶೈಲಿ, (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ. ಕ್ರಯ:—1 ರೂಪಾಯಿ, ಟಪ್ಪಾಲ್ ಹಾಸಲು ಬೇರೆ

[46-20] ನಮ್ಮ ವಿಳಾಸ:—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಸಮಸ್ತ ವಿಧವಾದ ನೋವೂ ಉರಿತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಬೆನ್ನಿನ ಸೆಳೆತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ.

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ಬಿಕರಿಯಾಗುತ್ತಲಿವೆ. ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ಬಿಕರಿಯಾಗುವದು.

ಹುಳಕಡ್ಡಿ ಔಷಧ ಡಬ್ಬಿಗೆ 6 ಆಣೆ; 12 ಕುಪ್ಪಿಗೆ ರೂ. 3-8 0. ಹಲ್ಲುಪುಡಿ ಡಬ್ಬಿಗೆ 2 ಆಣೆ; 12 ಕುಪ್ಪಿಗೆ ರೂ. 1-2-0 ವಿ. ಪಿ. ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ. [42-20]

ವಿಳಾಸ:—ಅಮೃತಾಂಜನ ಡಿಪೋ, ೧೧೯ ಫ್ರಿಯರ್ ರೋಡ್, ಫೋರ್ಟ್, ಬೊಂಬಾಯಿ.

ನಮೂನೆ ಮುಖತ್ತು.

ಕೇಶಕುಸುಮಾಕರ ತೈಲವು.

ಸಾಟಿಯಿಲ್ಲದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸಮಾಡುವದರಲ್ಲಿಯೂ, ಬಟ್ಟತಲೆಯಲ್ಲಿ ಕೇಶವನ್ನು ಬೆಳೆಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ, ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ, ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ.

ಒಂದು ಬುಡ್ಡಿ ತೈಲ ಕ್ರಯ 10 ಆಣೆ. ಮೂರು ಬುಡ್ಡಿಗಳ ತೈಲ ಕ್ರಯ ರೂ 1-12 ಆ. ಆರು ಬುಡ್ಡಿಗಳ ತೈಲ ಕ್ರಯ ರೂ 3-4 ಆ. ಡಜನ್ ಬುಡ್ಡಿಗಳ ಕ್ರಯ ರೂ. 6.

ವಿ. ಪಿ. ಅಂಚೇ ಹಾಸಲು ಪ್ರತ್ಯೇಕ.

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ

[82-11] ಔಷಧಾಲಯ, 177 ಚೀನಾ ಬಜಾರ್ ರೋಡ್, ಮದ್ರಾಸು.

65 ಸಾಹಸಕಥೆಗಳು. ಅಪೂರ್ವಗ್ರಂಥ. 360 ಪುಟಗಳು.

ಅರವತ್ತು ನಾಲ್ಕು ವಿದ್ಯೆಗಳಲ್ಲಿ ಪ್ರವೀಣೆಯಾದ

ಸಚಿತ್ರ ವಿದ್ಯಾಮಂಜರಿ ಕಥೆಗಳು

ಎಲ್ಲರೂ ತರಿಸಿ ಓದಲೆಂದು ಕ್ರಯವನ್ನು ಬಹಳ ಕಡಮೆ ಮಾಡಿದೆ.

ಈಗ್ಗೆ ಎರಡು ಸಾವಿರ ವರುಷಗಳಲ್ಲಿ ವಿಕ್ರಮಾರ್ಕ ಶಕೆಗೆ ಮೊದಲು ಸುಮಾರು ೩೦೦ ವರುಷಗಳ ಹಿಂದೆ ಗೋದಾವರಿ ನದಿಯ ಪ್ರಾಂತ್ಯದಲ್ಲಿ ಪ್ರಸಿದ್ಧಿಯಾದ ನೀಲಾವತಿ ನಗರದಲ್ಲಿ ಶೂರಸೇನರಾಯನೆಂಬ ರಾಜಶ್ರೇಷ್ಠನು ಪ್ರಖ್ಯಾತಿಯನ್ನು ಹೊಂದಿ ಆಳುತ್ತಿದ್ದನು ಈತನಿಗೆ ನಹುಷನೆಂಬ ಮುಖ್ಯಮಂತ್ರಿಯು ಇದ್ದನು. ಈ ರಾಜನಿಗೆ ಬಹುಕಾಲದಿಂದಲೂ ಪುತ್ರಸಂತಾನವಿಲ್ಲದಿರಲು ಶಾರದಾದೇವಿಯ ವರಪ್ರಸಾದದಿಂದ ಓರ್ವ ಪುತ್ರಿಯು ಜನಿಸಿ ಮಂಜರಿ ಎಂಬ ಹೆಸರುಗೊಂಡು ಪ್ರವರ್ಧಮಾನಳಾಗಿ ಅರವತ್ತುನಾಲ್ಕು ವಿದ್ಯೆಗಳಲ್ಲಿಯೂ ಪೂರ್ಣ ಪಾಂಡಿತ್ಯಹೊಂದಿದ ಸಕಲಕಲಾ ಪ್ರವೀಣೆಯಾಗಿ ವಿದ್ಯಾಮಂಜರಿ ಎಂಬ ಹೆಸರಂ ಪಡೆದಳು ಈಕೆಯ ವಿದ್ಯಾಕೌಶಲ್ಯಕ್ಕೆ ತಕ್ಕ ವರನು ದೊರೆಯದಿರುವಲ್ಲಿ ಚಂಪಕಾವತಿ ನಗರವಂ ಆಳುತ್ತಿದ್ದ ಬಲದೇವರಾಯನಿಗೆ ಜಗಸಿಂಹನೆಂಬ ಓರ್ವ ಪುತ್ರನಿದ್ದನು ಬಲದೇವರಾಯನ ಮಂತ್ರಿಯಾದ ಜಯನೆಂಬುವನಿಗೆ ಮಹೇಂದ್ರನೆಂಬ ಓರ್ವ ಪುತ್ರನಿದ್ದನು. ರಾಜಪುತ್ರನು ಮಂತ್ರಿಪುತ್ರನು ಇವರಿಬ್ಬರೂ ಪ್ರವರ್ಧಮಾನರಾಗಿ ಸಕಲಕಲಾ ಪ್ರವೀಣತೆಯಂ ಹೊಂದಿ ನೀಲಾವತೀ ನಗರವಂ ಸೇರಿ ವಿದ್ಯಾಮಂಜರಿಯ ಸಮಾಚಾರವಂ ತಿಳಿದು ಮಹೇಂದ್ರನು ಕಾಳಿಕಾ ದೇವಿಯ ವರಪ್ರಸಾದವಂ ಪಡೆದು ದೇವಿಯ ಸಹಾಯದಿಂದ ಅನೇಕ ರೂಪಗಳಂ ತಳೆದು, ಅನೇಕ ರಾಕ್ಷಸರಂ ಸಂಹರಿಸಿ, ರಾಕ್ಷಸರ ಸೆರೆಯಲ್ಲಿದ್ದ ದೇವಕನ್ನಿಕೆಯರನ್ನೂ, ರಾಜಕನ್ನಿಕೆಯರನ್ನೂ ತನ್ನ ಸ್ವಾಧೀನಪಡಿಸಿಕೊಂಡು, ಅನೇಕರ ಶಾಪವಿಮೋಚನೆಯಂ ಮಾಡಿ, ಪರಕಾಯಪ್ರವೇಶ ವಿದ್ಯದಿಂದ ಅನೇಕರಂ ಜಯಿಸಿ ಜಲಕ್ರೀಡೆಗಾಗಿ ಬಂದ ದೇವಕನ್ನಿಕೆಯರಂ ಸೆರೆಯಲ್ಲಿಟ್ಟು, ತನ್ನ ಶೌರ್ಯದಿಂದ ಇಂದ್ರನಂ ಮೆಚ್ಚಿಸಿ, ವಿದ್ಯಾಮಂಜರಿಯಂ ವಿದ್ಯೆಗಳಲ್ಲಿ ಜಯಿಸಿ ಅವಳಂ ವಿವಾಹಮಾಡಿಕೊಂಡು, ಇಂದ್ರನ ಕೃಪಾಪಾತ್ರನಾಗಿ ಇಂದ್ರನ ಕುಮಾರಿಯಂ ವಿವಾಹಮಾಡಿಕೊಂಡು, ಭೂಲೋಕದಿಂದ ಇಂದ್ರಲೋಕಕ್ಕೆ ಯಾವ ಕಾಲದಲ್ಲಿ ಬೇಕಾದರೂ ಹೋಗಿಬರುವಂತೆ ಇಂದ್ರನಿಂದ ವರವಂ ಪಡೆದು ಚಂದ್ರಾಯುಧವಂ ಪಡೆದವನಾದ್ದರಿಂದ ಮಹೇಂದ್ರನು ವಿಕ್ರಮಾದಿತ್ಯರಾಯನ ಸಾಹಸಗಳಿಗಿಂತಲೂ ಹೆಚ್ಚಾದ ಸಾಹಸಗಳಂ ಮಾಡಿ ಸಕಲ ರಾಜರಿಂದಲೂ ಸನ್ಮಾನಿತನಾಗಿ ನೀಲಾವತೀ ನಗರವಂ ಆಳುತ್ತಿದ್ದನು. ಮುಖ್ಯ ವಿಷಯಗಳನ್ನು ಸೂಕ್ಷ್ಮವಾಗಿ ತಿಳಿಸಿರುತ್ತೆ. ಪುಸ್ತಕವನ್ನು ತರಿಸಿಕೊಂಡು ಓದುವಂಥವರಿಗೆ ಮೊದಲಿನಿಂದಲೂ ಕಡೇ ವರಿವಿಗೂ ಮಹೇಂದ್ರನ ಸಾಹಸ, ಚಮತ್ಕಾರ, ಔದಾರ್ಯ, ಪರೋಪಕಾರ, ಬುದ್ಧಿಕುಶಲತ್ವ, ಇವೇ ಮೊದಲಾದ ಅನೇಕ ವಿಷಯಗಳು ತಿಳಿಯಬರುತ್ತವೆ. ಕಥಾ ರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿಯೂ, ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವಸೂಚಕ ಚಿತ್ರಗಳನ್ನು ಇಟ್ಟಿರುವುದರಿಂದ ಓದುವವರಿಗೂ ಮನೋರಂಜಿತವಾಗಿಯೂ ಇರುವುದು ಸರ್ವರೂ ಓದಬಹುದು. ದಪ್ಪಕಾಗದ, ಸ್ಫುಟವಾದ ಅಕ್ಷರ, ಸೊಗಸಾದ ಬೈಂಡು, ಬಿಕರಿಗೆ ಸಿದ್ಧವಾಗಿದೆ.

ಓದುವದಕ್ಕೆ ಪ್ರಾರಂಭಿಸಿದರೆ ಮುಗಿಸುವ ವರೆಗೂ ಬಿಡುವದಕ್ಕೆ ಮನಸ್ಸಾಗುವದಿಲ್ಲ.

ಅವಲ್ ಬೈಂಡು ಕ್ರಯ ಪ್ರತಿ ರೂ. ೧-೪-೦; ಟಪಾಲು ಹಾಸಲು ೩ ಆಣೆ.

ಇದಲ್ಲದೆ ನಮ್ಮಲ್ಲಿ ಕನ್ನಡ ಕಥೆ, ಕಾವ್ಯ, ವೇದಾಂತ, ನಾಟಕ, ಯಕ್ಷಗಾನ, ಜ್ಯೋತಿಷ್ಯ, ವೈದ್ಯ ಮುಂತಾದ ಅನೇಕ ಗ್ರಂಥಗಳೂ ಮತ್ತು ಪ್ರತಿ ವರ್ಷವೂ ಆರು ನಮೂನೆ ಕ್ಯಾಲೆಂಡರುಗಳೂ ಸಹ ಸುಲಭ ಕ್ರಯದಿಂದ ದೊರೆಯುವವು. ನಮ್ಮ ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ:—ಎಂ. ಆರ್. ವೆಂಕಟಾಚಲಂ ಶೆಟ್ಟಿ,

[133-1] ರಾಧಾಮಾಧವವಿಲಾಸ ಪ್ರೆಸ್ ಪ್ರೊಪ್ರೈಟರ್, ಬುಕ್ ಡಿಪೋ, ಚಿಕ್ಕ ಪೇಟೆ, ಬೆಂಗಳೂರು ಸಿಟಿ.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

104 7

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ಕೀಲು, ಅರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರವೆ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೊ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 4 ಆಣೆ 1 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು -(1) ಎಸ್ ಪೀಟರ್ಸ್, 97 ವಡಮಲೆಪಿಳ್ಳೆ ಬೀದಿ, ಪುರಸೈವಾಕಂ, ವೇಪೇರಿ, ಮದರಾಸ್, (2) ಜಿ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೆನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



1 28

ಕೀಳ ಹೊಟ್ಟೆಯ ನೋವು, ಎದೆ ಉರಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ರೋಗಗಳು—ಈ ರೋಗಗಳನ್ನೆಲ್ಲಾ ಗುಣಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬಡಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ಪಾರು ಮಾಡಿರುವಷ್ಟು ಪ್ರಪಂಚದಲ್ಲಿ ಇನ್ನಾವ ಔಷಧವೂ ಮಾಡಿರುವುದಿಲ್ಲ ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 1 ಆಣೆ



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾದಲ್ಪಟ್ಟದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸ ಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರವಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಜಾಕ್ರಿಯಾದ ಗಡಿಯಾರ ಕೂಡ್ಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,

[129-3] ಪೋಸ್ಟ್ ಬಾಕ್ಸ್, ನಂ 167, ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂವೆಕ್ಸ್ ಗ್ಲಾಸು ಒಳ್ಳೆ ಬಲಿಷ್ಠವಾದ ೨ ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 6 0 0 ಇದನ್ನು ಸೆಪ್ಟಂಬರ್ ಆಖ್ಯರೊಳಗಾಗಿ ತರಿಸಿಕೊಳ್ಳುವವರಿಗೆ 10 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ಧನಲಕ್ಷ್ಮಿ ಅಂಡ್ ಕಂಪೆನಿ,

[120 3] ಸಾಹುಕಾರ್ ಪೇಟೆ ಪೋಸ್ಟು, ಮದರಾಸು

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತದ ಕಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ ೨ ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿಯ ವರೆಗೆ ಪೋಸ್ಟೇಜು 1 ಆಣೆ [130 15]



೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಬೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಬಿಟ್ಟರೆಂದು ಕೋರಿದರೋಗಗಳೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸಿದೆ ಮೂತ್ರವು ಕಟ್ಟಿದರೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡದೇ ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧೌಷಧ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ,

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಲೇಡೀಸ್ ವಾಚ್.

ಇದರ ಅನುಕೂಲ ಮತ್ತು ಯಾವದಕ್ಕೂ ಇಲ್ಲ ನಿಮ್ಮ ಇಚ್ಛೆ ಬಂದಂತೆ ಕೈಯಲ್ಲಿಯೂ ಕಟ್ಟಿಕೊಳ್ಳಬಹುದು ಜೇಬಿನಲ್ಲಿಯೂ ಹಾಕಿಕೊಳ್ಳಬಹುದು ಸರಿಯಾದ ಕಾಲವನ್ನು ತೋರಿಸತಕ್ಕದ್ದು. ತಳೆಯಲ್ಲಿ ಬಿಗವುಳ್ಳದ್ದು ಶುದ್ಧವಾದ ನಿಕಲ್ ಮುಚ್ಚಳವುಳ್ಳದ್ದು ಸುಂದರವಾದದ್ದು ಖಾತ್ರಿಯಾದವುಗಳು ಇದರ ಕ್ರಯ ಸುಂದರವಾದ ವಾಚ್ ಸರಪಣಿ ಮತ್ತು ಕೈಯಲ್ಲಿ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಮೇತ



ರೂ. 3-8-0 ಮಾತ್ರ [77-12]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ಬಿ ಆರ್ ವೆಂಕಟರಮಣ ಅಂಡ್ ಕಂಪನಿ,

ನಂ 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು

ಕುಂತಲಾನಂದ ತೈಲವು

147 42

ಹಿಂದುಸ್ಥಾನದ ಪೇಟೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಯಿದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಲವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ ಬಿ ಎಮ್ ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 18

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಕಾರೊನೇಷನ್ ಸೋಪ್.

137 1

ಇಪ್ಪತ್ತನೇ ಶತಮಾನದ ವಿಚಿತ್ರವು.

ಕಾಲವಿಳಂಬ ಅವಶ್ಯವಿಲ್ಲ! ಅಸಹ್ಯವೇ ಇಲ್ಲ!

ಕತ್ತಿ ಇನ್ನು ಬೇಡ! ಗಾಯಗಳ ಭೀತಿ ಇಲ್ಲ!

ಒಂದು ಸಲ ಈ ಸಾಬೂನು ಹಚ್ಚಿದರೆ ಅನವಶ್ಯವಾದ ಕೂದಲು ದೇಹದ ಯಾವ ಕಡೆಯಲ್ಲಾದರೂ ಶೀಘ್ರವಾಗಿ ಹೋಗಿಬಿಡುತ್ತೆ ಈ ಸೋಪು ಚರ್ಮವನ್ನು ಸ್ವಲ್ಪವೂ ನೋಯಿಸುವುದಿಲ್ಲ ಹುಣ್ಣಾಗಲೂ, ಹಚ್ಚಿದ ಮೇಲೂ ಉರಿಯ ಬಾಧೆ ಸ್ವಲ್ಪವೂ ಇರದು ಚರ್ಮದ ಮೇಲೆ ಸ್ವಲ್ಪವೂ ಕಲೆ ಬೀಳದು ಒಂದಾವರ್ತಿ ಪರೀಕ್ಷಿಸಿ, ಇದನ್ನು ನಿಶ್ಚಯಿಸಿಕೊಳ್ಳಿ

3 ಬಿಲ್ಲೆ ಇರುವ ಒಂದು ಪೆಟ್ಟಿಗೆಗೆ ಕ್ರಯ ರೂ 1-0-0

1 ಬಿಲ್ಲೆಗೆ 6 ಆಣೆ ಪೋಸ್ಟೇಜ್ ಮುಂತಾದ್ದು 4 ಆಣೆ

ಎಲ್ಲೆಲ್ಲೂ ಬಿಕರಿಯಾಗುವುದು

ನಮ್ಮ ವಿಳಾಸ—ಪಿ ಭಗವಾನದಾಸ್ ಚತುರ್ಭುಜ್ ಕಂಪನಿ,

177, ಜೇನಾ ಬಜಾರ್ ರೋಡ್ ಮದರಾಸ್

ಕ್ರಿಮಿನಲ್ ಲಾ ಸಂಗ್ರಹ

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ —1 ಪಿನಲ್‌ಕೋಡು, 2 ದೊಡ್ಡೀ ಆಕ್ಟ್, 3 ಎಕ್ಸೈಜು ರಿಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ದಸ್ತಾವೇಜುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11. ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ

ಪ್ರತಿ ಪೆನಲ್ ಸೆಕ್ಷನ್‌ಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೇ? ಯಾ ಕೂಡದೆ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟ್ಟಬೇಕೇ? ಚಾರ್ಜ್ ತೆಗೆದುಕೊಳ್ಳಬಹುದೇ? ಯಾ ಕೂಡದೇ? ರಾಜಿಯಾಗಬಹುದೇ? ಯಾ ಕೂಡದೆ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ತಿಳಿಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 23 3 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 3 0-0 ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ವೇಮಾರೆಡ್ಡಿ,

ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್,

[101-7] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್

ಡೋಂಗರೆ ಇವರ ಬಾಲಾಮೃತ.

[115-52]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸಿ ಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೪೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯ ನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (5) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1-8-0, ಟಪ್ಪಾಲು ಹಾಸಲು 4 ಆಣೆ

(೩೬ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 31 ಸಂಧಿಗೂ ಪ್ರತಿಪದ ಟೀಕಾ, ಕಥಾರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ 1, ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127 3]

ನಮ್ಮ ವಿಳಾಸ ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ಕು ಸಪ್ಲೈಯರ್ಸ್, ಬೆಂಗಳೂರು ಸಿಟಿ

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕೆಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ 3 ಆಣೆ ಆರಕ್ಕೊಂದು ಉಚಿತ

[187 10] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಅಜ್ಮೀರ್ ಜನರಲ್ ಇನ್ಶೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್ ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮಾ ಸಂಘದ ಆಡಳಿತಗಳು 1913 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭದ್ರವಸೆಯ ಠೇವಣಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗಾಗಲೀ, ಅಥವಾ ವಿಮಾ ಸಂಘದ ಸ್ಥಿರತ್ವದ ವಿಚಾರದಲ್ಲಾಗಲಿ, ಯಾವ ಸಂದೇಹಕ್ಕೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜೆಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತವೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[1016] ಎಸ್ ಕಸ್ತೂರ್ ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ಪ್ರಖ್ಯಾತವಾದ ಪಾರ್ಸಿ ಫ್ಲೂಟ್ ಹಾರ್ಮೋನಿಯಂ



ಉತ್ಕೃಷ್ಟ ಪದಾರ್ಥ ಯಾವ ಹವೆಯಲ್ಲೂ ಕೆಡದ ಬಹು ಬಲಿಷ್ಠವಾದ ಸುರ, ರೀಡುಗಳು ಅತ್ಯಂತ ಶ್ರೇಷ್ಠವಾದವು, ನಾದವು ಮಹಾ ಸುಖಕರವಾಗಿದೆ ಇದರಷ್ಟು ಒಳ್ಳೆ ಬರುವದು ಬೇರೊಂದಿಲ್ಲ, ಮೂರುಕಾಲು ಆಕ್ಟೇವುಗಳು, ಒಂದು ಸೆಟ್ ರೀಡುಗಳು ಎಕ್ಸ್‌ಟ್ರಾ ಶಿಪ್ಟುಗಳು ಪಾರಸೀ ಮತ್ತು ಹಿಂದೂ ಸಂಗೀತಕ್ಕೆ ಬಹಳ ಹಿತಕರವಾಗಿದೆ ಎಲ್ಲೆಲ್ಲೂ ಪ್ರಚಾರಕ್ಕೆ ತರಬೇಕೆಂದು ಇದರ ಕ್ರಯವನ್ನು ಬಹಳ ಕಡಮೆಮಾಡಿದೆ ಈಗ ನೋಡಿ ಇಂಥಾ ಒಳ್ಳೇ ಸಮಯವನ್ನು ಕಳಕೊಳ್ಳದೆ ಕೊಂಡುಕೊಳ್ಳಿ ಕ್ರಯ ರೂ 35 ರೈಲ್ ಚಾರ್ಜು ಪ್ರತ್ಯೇಕ ಅಡ್ವಾನ್ಸು 5 ರೂ ಒಂದಲ್ಲದೆ ನಾವು ಕಳುಹಿಸಲಾರೆವು ನಮ್ಮ ವಿಳಾಸ — [119-4]

ಮ್ಯಾನೇಜರ್, ಬಾಂಬೇ ಪಾಪ್ಯುಲರ್ ಏಜನ್ಸಿ

ಧಾರಾವಿ ಬೊಂಬಾಯಿ.

ಅನುಭವಸ್ಥರು ಹೇಳುವುದು.

ಹತ್ತಿಯ ತುಪ್ಪವು ಎಳೇಮಕ್ಕಳಿಗೂ ಹಿತಕಾರಿ!

(5) ಬಿ ರಾಮಯ್ಯನವರು, ಬಿ ಎ, ಮ್ಯಾನೇಜರು, ಮುಜರಾಯಿ ಸೆಕ್ರೆಟೆರಿಯವರ ಆಫೀಸು, ಬೆಂಗಳೂರು —"ಹತ್ತಿಯ ತುಪ್ಪವನ್ನು 10 ತಿಂಗಳಿಂದ ಸೇವಿಸುತ್ತಿದ್ದೇವೆ ನನಗೂ ಮಕ್ಕಳಿಗೂ ಆಶ್ಚರ್ಯಕರವಾಗಿ ಒಗ್ಗಿದೆ ಶುದ್ಧವಾದುದು ಬಸವನಗುಡಿ ಕೋಆಪರೇಟಿವ್ ಸೊಸೈಟಿಯಲ್ಲಿ ದೊರೆಯುವುದರಿಂದ ಅಲ್ಲಿಂದಲೇ ತರಿಸಿಕೊಳ್ಳುತ್ತೇನೆ ಪೇಟೆಯಲ್ಲಿ ಬೆರಕೆಮಾಡುವುದರಿಂದ ಶುದ್ಧವಾದುದಕ್ಕೂ ಕೆಟ್ಟ ಹೆಸರು ಬಂದಿರುವಂತೆ ಅರಿಯುತ್ತದೆ ಶುದ್ಧವಾದದ್ದು ರುಚಿಯಾಗಿದೆ ಆರೋಗ್ಯವಾಗಿದೆ ಇಂತಹದನ್ನೇ ಮಾರುವ ಅಂಗಡಿಗಳು ಬಹಳ ಕಡಮೆ"—10 6 1913

ಪತ್ರಿಕೆ '—ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪೆನಿಯು ಏಜೆಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

[110-1] 159, ಕಿಲಾರಿ ರೋಡ್, ಬೆಂಗಳೂರು ಸಿಟಿ

ಗೋಡೆಗೆ ನೇತುಹಾಕುವ ಎಂಟು ದಿನಗಳಿಗೊಂದಾವರ್ತಿ

ಕೀ ಕೊಡುವ ದೊಡ್ಡ ಗಡಿಯಾರಗಳು

ಕೆಳಗೆ ನಕ್ಷೆಯಲ್ಲಿ ತೋರಿಸುವ ದೊಡ್ಡ ಗಡಿಯಾರಗಳನ್ನು ಅನೇಕರು 17 ರೂಪಾಯಿಗೆ ಕಮ್ಮಿಯಿಲ್ಲದೆ ಮಾರುತ್ತಲಿದ್ದಾರೆ ಇದು ಸರ್ವರಿಗೂ ಉಪಯೋಗವಾಗಬೇಕೆಂಬ ಉದ್ದೇಶದಿಂದ ನಾವು ಇದನ್ನು ಅರ್ಧ ಕ್ರಯಕ್ಕೆ ಅಂದರೆ ಕೆಳಗಿನ ಮೂರು ತಿಂಗಳವರೆಗೆ ಮಾತ್ರ ಕೊಡುತ್ತೇವೆ



ರೂ 8-8-0

ಇದು ಬ್ಯಾಂಕು ಕೋರ್ಟು, ಕಛೇರಿ, ಸ್ಕೂಲ್, ಷಾಪು ಅಂಗಡಿ, ಮೊದಲಾದ ಸ್ಥಳಗಳಲ್ಲಿ ಇರಿಸುವದಕ್ಕೆ ಅನುಕೂಲವಾದದ್ದು ಎಂಟು ದಿವಸಗಳಿಗೊಂದಾವರ್ತಿ ಕೀ ಕೊಡತಕ್ಕದ್ದು ಅನೇಕ ವರುಷಗಳು ಉಪಯೋಗಿಸಿದಾಗ್ಯೂ ಕೆಟ್ಟುಹೋಗದು ಇದರಲ್ಲಿ ಅನೇಕ ತರಹವಾದ ಗಡಿಯಾರಗಳು ಈಗತಾನೇ ಸೀಮೆಯಿಂದ ಬಂದಿರುತ್ತವೆ ಇದರಲ್ಲಿ ಕೆಲವು ತರಹಗಳು ಮಾತ್ರವೇ ಈ ಕ್ರಯಕ್ಕೆ ಸಮಯೋಚಿತವಾಗಿ ಕೊಡಲ್ಪಡುತ್ತವೆ

ಅನೇಕರು ಇಂಥಾ ಭಾರಿ ಕ್ರಯದ ಗಡಿಯಾರವನ್ನು ಇಷ್ಟು ಸುಲಭ ಬೆಲೆಗೆ ಕೊಡುವದು ಸುಳ್ಳೆಂದು ಹೇಳುತ್ತಲಿದ್ದಾರೆ ಯಾರಾದರೂ ಈ ದಿವಸದೊಳಗೆ ಒಂದನ್ನು ತರಿಸಿ ನೋಡಿದರೆ ಇದರ ಸತ್ಯಾಸತ್ಯತೆಯು ಗೊತ್ತಾಗುತ್ತದೆ ತಾಕೀತು —ಆರ್ಡರು ಮಾಡುವವರು ಮುಂದಾಗಿ 2 ರೂಪಾಯಿ ಅಡ್ವಾನ್ಸ್ ಕಳುಹಿಸಬೇಕು

ವಿಳಾಸ — ಪಿ ಆರ್ ಕಂಪನಿ, ಜನರಲ್ ಮರ್ಚೆಂಟ್ಸ್ ಅಂಡ್ ಕಮೀಷನ್ ಏಜಂಟ್ಸ್,

[118 1] 39, ನಾಮಕ್ಕಾರ ಬೀದಿ ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

20—6—1913 ರಿಂದ 27—6—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	2	2	0	0
ಮೈಸೂರು ,,	20	12	38	26
ಕೋಲಾರ್ ,,	0	0	7	6
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	0	0	7	4
ಹಾಸನ ,,	0	0	39	24
ಚಿತ್ರದುರ್ಗ ,,	0	0	44	26
ಕಡೂರ್ ,,	7	6	37	23
ಶಿವಮೊಗ್ಗ ,,	22	12	6	2
ಜುಮ್ಲಾ	51	32	178	111

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ಉತ್ತರಾಯಣೆ ಗ್ರೀಷ್ಮಋತೌ ಆಷಾಢ ಶುದ್ಧ ಅಷ್ಟಮಿ ಶುಕ್ರವಾರದಿಂದ ಆಷಾಢ ಶುದ್ಧ ಚತುರ್ದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಜೂಲೈ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಥುನ ವೃಷಭ ತೇದಿ
11	ಶುಕ್ರ *	ಅಷ್ಟಮಿ	26 59	ಚಿತ್ತ	48 5	28
12	ಶನಿ ‡	ನವಮಿ	21-25	ಸ್ವಾತಿ	46 9	29
13	ಭಾನು ,,	ದಶಮಿ	17 24	ವಿಶಾಖ	12-56	30
14	ಸೋಮ §	ಏಕಾದಶಿ	13 40	ಅನುರಾಧ	41-45	31
15	ಮಂಗಳ †	ದ್ವಾದಶಿ	11-17	ಜ್ಯೇಷ್ಠ	41 36	32
16	ಬುಧ	ತ್ರಯೋದಶಿ	9-57	ಮೂಲ	42-42	1
17	ಗುರು	ಚತುರ್ದಶಿ	9-48	ಪೂರ್ವಾಷಾಢ	45-0	2

* ಅಷ್ಟಮಿತಿಥಿ, ದಗ್ಧಯೋಗ ‡ ತಿಥಿದ್ವಯಂ, ದಗ್ಧಯೋಗ, ಮಳೆ ನಕ್ಷತ್ರ—ಪುನರ್ವಸು 3 ನೇ ಪಾದ , ಏಕಾದಶೀ ತಿಥಿ, ವೈವಸ್ವತಮನ್ವಾದಿ, ಶ್ರೀಮತಿ ಚೆಲುವಾಜಮ್ಮಣ್ಣಿಯವರ ವರ್ಧಂತಿ § ಸರ್ವತ್ರ ಪ್ರಥಮ ಏಕಾದಶಿ, ಗೋಪದ್ಮವ್ರತ, ದಗ್ಧಯೋಗ † ಪ್ರದೋಷ, ಶಯನದ್ವಾದಶಿ, ದಕ್ಷಿಣಾಯನ ಪುಣ್ಯಕಾಲ, ಮಳೆ ನಕ್ಷತ್ರ—ಪುನರ್ವಸು 4 ನೇ ಪಾದ

ಪೇಟೇ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೬-೮-೦	೧೭-೮-೦
ಕೆಂಬೂತಿ ಅಕ್ಕಿ ಅವಲ್		೧೬-೧೨-೦	೧೭-೮-೦
,, ,, ದುಯಂ		೧೬-೦-೦	೧೭-೦-೦
ಜಾಪ್ರಾಣಿ ಅಕ್ಕಿ		೧೬-೮-೦	೧೭-೪-೦
ಸಣ್ಣಕ್ಕಿ ಅವಲ್		೧೮-೦-೦	೧೮-೮-೦
,, ದುಯಂ		೧೭-೦-೦	೧೭-೮-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ		೧೫-೪-೦	೧೩-೮-೦
,, ದುಯಂ ,,		೧೪-೮-೦	೧೨-೮-೦
ಹೈಬ್ರೀ ರಾಗಿ ಪಲ್ಲಾ ೧ಕ್ಕೆ		೭-೮-೦	೫-೦-೦
ಕಾರ್ರಾಗಿ ,,		೬-೧೨-೦	೪-೧೨-೦
ಜೋಳ ,,		೭-೮-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ		೧೦-೦-೦	೧೩-೧೨-೦
ಬೇಳೆ ಅವರೆ ,,		೧೩-೦-೦	೧೧-೦-೦
ಹೆಸರು ,,		೧೨-೪-೦	೧೪-೦-೦
ಉದ್ದು ,,		೧೨-೮-೦	೧೬-೦-೦
ಕಡಲೆ ,,		೧೦-೦-೦	೧೨-೦-೦
ಎಳ್ಳು ಸೇರು ೧೨೭ಕ್ಕೆ		೨೯-೦-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ		೬-೦-೦	೭-೦-೦
ಹರಳು ೧೨೭ ಸೇರಿಗೆ		೧೩-೦-೦	೧೪-೦-೦
ಸೀಗೇಕಾಯಿ ಮೂ ೧ಕ್ಕೆ		೨-೪-೦	೩-೮-೦
ಮೆಣಸಿನಕಾಯಿ ,,		೯-೦-೦	೩-೪-೦
,, ದುಯಂ		೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೪-೮-೦	ಮೂಟೆ ೫-೮-೦
ಒಳ್ಳೆಣ್ಣೆ ಮೂ ೧ಕ್ಕೆ		೬-೦-೦	೬-೬-೦
ಹರಳೆಣ್ಣೆ ,,		೫-೪-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೫-೬-೦	೫-೪-೦
ಉಪ್ಪು ,,		೬-೪-೦	೬-೬-೦
ಹುಣಸೇ ಹಣ್ಣು ಮೂ ೧ಕ್ಕೆ		೧-೧೨-೦	೧-೪-೦
,, ಹಳೇದು ,,		೧-೯-೦	೦-೧೪-೦
ಜುಷ್ಟ ಮೂ ೧ಕ್ಕೆ		೨೦-೦-೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೧೧-೦	೫-೦-೦
ತೆಂಗಿನಕಾಯಿ ೧೦೦ಕ್ಕೆ		೭-೦-೦	೬-೦-೦
ಅಡಕೇಕಾಯಿ ಮೂ ೧ಕ್ಕೆ		೧-೬-೦	೧-೦-೦
ಅಂಟ್ವಾಳದಕಾಯಿ ಮೂ ೧ಕ್ಕೆ		೧-೧೨-೦	೧-೮-೦
ಚಿನ್ನ (ಪೌನ್) ಕೆಂಪು		೧೫-೮-೦	೧೫-೮-೦
,, ,, ಪವನು		೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ		೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧-೦-೦	೮೧-೩-೦

THE MYSORE GOVERNMENT SECURITY

LIFE AND MARRIAGE ASSURANCE COMPANY, LIMITED,

MYSORE.

The Amritsar National Insurance Buildings,
MYSORE.

Dated, 10th July 1913

NOTICE.

1 In continuation of the Circular No 8, dated 30th May, 1913, of the Chief Agent of the "AMRITSAR NATIONAL INSURANCE AND BANKING COMPANY LTD," MYSORE, published in the *Vrittanta Patrika*, dated 5th and 12th ultimo, the Agents and Provident Policy Holders of this Company will be glad to note that as promised in the above Circular, the "MYSORE GOVERNMENT SECURITY LIFE AND MARRIAGE ASSURANCE COMPANY, LIMITED" has been duly incorporated on the 3rd instant under the Mysore Companies Regulation, No III of 1895, and also started with an authorized capital of one lakh of rupees after my Office being kindly inspected on the 27th ultimo by the ASSISTANT REGISTRAR OF JOINT STOCK COMPANIES IN MYSORE, and the kind permission has also been received to get all the Provident Life and Marriage Policy Holders in my jurisdiction transferred to the new Company from the 1st instant from the Amritsar Company

2 As it is likely that most of the Provident Life and Marriage Policies must have lapsed owing to my unexpected resignation of the Chief Agency of the Provident Fund Department of the Amritsar Company the lapsed policies irrespective of the duration of default will be considered as they were in force as per the Memorandum of the new Company, with the object of giving a chance to all the defaulters since the very beginning of my Chief Agency to get their policies revived and thus putting no body to any loss

3 So, all the Provident Life and Marriage Policy Holders of the Amritsar Company secured through the Mysore Chief Agency, whether their policies are in force or have lapsed are requested to send in their applications to this Office along with a remittance of the subscriptions in arrears up to the 30th June, 1913, and also that of this month as well as a detailed list of the premiums paid to the Amritsar Company supported by proper vouchers, so that they should reach this Office on or before the 31st instant

4 The Policy Holders should please note that the premiums they have paid to the Amritsar Company, excluding the admission and stamp fees and the arrears up to the 30th June 1913, they pay now to this Company, will be duly given credit to by this Company but the same will be reserved as the backbone of the Company considering the same as not paid to this Company as this is started only in this month Moreover, as fresh Policies are to be issued by this Company, the Policy Holders should pay eight annas extra per each Policy, being the cost of the same, and their July month's subscription will be taken for the entrance fee

5 The following attractive and special features show that our new Company is based on sounder principles and suits the convenience of our Policy Holders The other Provident Marriage Companies, working in the field, have none of these features, without which there is no safety for the Policy Holders So, our Company being unrivalled, is unquestionable

THE SPECIAL FEATURES OF THE COMPANY

1 **Absolute Security** The Company's authorized capital is one lakh and the funds of the Company will be invested in the Mysore Government and other approved securities Moreover the Company is very particular in building reserve funds which along with the share capital are liable to the Policy Holders unlike other Provident Companies as they do not guarantee any minimums and consequently the Policy Holders have to depend upon only further collections

2 The Company's Head Office is at Mysore and the Funds of the Company remain in the Mysore Province alone

3 Double the premiums received by the Company will be paid on the marriage day as maximum bonus

4 The Company guarantees the minimum of the actual subscriptions paid to the Company by the Policy Holders, which no other Marriage Company does

5 Therefore, as per our rules, the policy holders will get double the premiums paid to this Company on the marriage day as bonus, and the Company guarantees to pay the premiums they will have paid to both the Amritsar Company and this Company as the deficiency will be met with by this Company if the bonus goes down

6 So I hope that our Agents and Policy Holders are quite satisfied I think I have done my duty in bringing the Company within their reach and it is their turn to help the Company by introducing their friends and relatives to take up policies in the Company in consideration of the special features of the Company as the increase of membership aids to the prosperity of the Company

7 If any one of our *bona fide* readers entertain any doubts regarding the working and stability of the Company I shall be very happy in solving the same to his entire satisfaction

8 I am aware that most of the Marriage Policy Holders, whose marriages took place during the last two quarters, have received their bonuses, while a few do not seem to have received the same as yet If they kindly let me know when and where to their marriage proofs are sent and also the amount they have actually paid, I shall be very happy to see that their claims are settled as early as possible

(By Order of the Board)

M. L. NAGANNAH,

Managing Agent,

THE MYSORE GOVERNMENT SECURITY LIFE AND MARRIAGE ASSURANCE COMPANY, Ltd., MYSORE,

AND

Chief Agent,

THE AMRITSAR NATIONAL INSURANCE AND BANKING Co, Ltd., MYSORE.

[139 1]

ವೃತ್ತಾಂತ ಪತ್ರಿಕೆ
— ೦ —
ಸನ್ ೧೯೧೩ ನೇ ಇಸವಿ ಜುಲೈ ತಾ ೧೦ ನೇ ಗುರುವಾರ

ಮೈಸೂರು ಸಂಪದಭಿವೃದ್ಧಿ ಸಮಾಜವು

ಕಳೆದ ವಾರ ನಾವು ಸೂಚಿಸಿದಂತೆ ಈ ಸಲ ಸಂಪದಭಿವೃದ್ಧಿ ಸಮಾಜದಲ್ಲಿ ಒಪ್ಪಂದವಾಗಿರುವ ವಿಷಯಗಳನ್ನು ಸೆಕ್ರೆಟರಿಯವರು ಅಚ್ಚು ಮಾಡಿಸಿ ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿ ಕೊಟ್ಟಿದ್ದಾರೆ ಈ ಸಮಾಜದ ಮೆಂಬರುಗಳು ಈ ಸೀಮೆಯ ಸಂಪತ್ತನ್ನು ವೃದ್ಧಿಪಡಿಸಿ ಪ್ರಜೆಗಳಿಗೆ ಸೌಭಾಗ್ಯವನ್ನುಂಟುಮಾಡಬೇಕೆಂದು ಕುತೂಹಲಪಡುತ್ತಿದ್ದಾರೆನ್ನುವುದಕ್ಕೆ ಸಂಶಯವಿಲ್ಲ ಮತ್ತು ಈ ಸಭೆಯ ಉದ್ದೇಶಗಳೇನೋ ಸರ್ವಸಮ್ಮತವಾಗಿವೆ ಎಂದು ಎಲ್ಲರೂ ಒಪ್ಪಿಕೊಳ್ಳತಕ್ಕದ್ದಾಗಿದೆ ಆದರೆ ಈ ಸಮಾಜದವರ ತೀರ್ಮಾನಗಳನ್ನು ಚೆನ್ನಾಗಿ ಓದಿ ತಿಳಿದುಕೊಂಡಲ್ಲಿ ಆಚರಣೆಗೆ ತರಬಹುದಾದ ತೀರ್ಮಾನಗಳು ಕೆಲವು ಮಾತ್ರ ಇರಬಹುದೆಂದೂ ಅವುಗಳಿಂದ ಸಂಸ್ಥಾನಕ್ಕೆ ಅಷ್ಟೇನೂ ಹಿತವಾಗುವಂತೆ ಕಾಣುವುದಿಲ್ಲವೆಂದೂ ನಮಗೆ ತೋರುತ್ತದೆ

ಸಮಾಜದಲ್ಲಿ ಮೆಂಬರುಗಳು ಮೊದಲು ವಿದ್ಯಾಭ್ಯಾಸದ ವಿಷಯವನ್ನು ಕುರಿತು ಚರ್ಚೆಮಾಡಿದರು ಪಾಠಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳ ದೇಹಸ್ಥಿತಿಯನ್ನು ಆಗಿಂದಾಗ್ಗೆ ವೈದ್ಯರು ಹೋಗಿ ಪರೀಕ್ಷೆ ಮಾಡಬೇಕೆಂಬ ವಿಚಾರವೇನೋ ಅದು ಕ್ರಮವಾಗಿಯೂ ತೃಪ್ತಿಕರವಾಗಿಯೂ ನಡೆಯುವುದಾದರೆ ಬಹಳ ಒಳ್ಳೇದೇ ಸರಿ ಆದರೆ ಸರ್ಕಾರದವರು ಈಗಿರುವ ವೈದ್ಯ ಇಲಾಖೆಯ ಸಿಬ್ಬಂದಿಯನ್ನು ಹೆಚ್ಚಿಸಿ, ಮಕ್ಕಳ ಆರೋಗ್ಯಭಾಗ್ಯವನ್ನು ನೋಡಿಕೊಳ್ಳುವ ಭಾಗಕ್ಕೇ ಕೆಲವರನ್ನು ಪ್ರತ್ಯೇಕವಾಗಿ ನೇಮಿಸದೆ ಹೋದ ಪಕ್ಷದಲ್ಲಿ ಸಮಾಜದವರ ಈ ತೀರ್ಮಾನದಿಂದ ಯಾವ ಫಲವೂ ಲಬ್ಧವಾಗಲಾರದು ಸಮಾಜದವರು ಈ ರೀತಿಯಾದ ಏರ್ಪಾಡನ್ನು ಸೂಚಿಸಿರುವುದಿಲ್ಲ

ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಮತಭಕ್ತಿಯನ್ನು ಕುರಿತು ಬೋಧೆಮಾಡಬೇಕೆಂಬ ವಿಚಾರವು ಸಮಾಜದಲ್ಲಿ ಸ್ವಲ್ಪ ವಿಸ್ತಾರವಾಗಿ ಚರ್ಚಿಸಲ್ಪಟ್ಟು ತೀರ್ಮಾನವೇನೂ ಆಗದೆ ಹಾಗೆ ನಿಂತುಹೋಯಿತು ಗವರ್ನಮೆಂಟಿನವರು ಮತಬೋಧೆಯನ್ನು ಹೇಗೆ ಮಾಡಬಲ್ಲರೋ ನಮಗೆ ತಿಳಿಯದು ಆದರೂ ಮಕ್ಕಳಿಗೆ ಸದ್ಗುಣ ಸಚ್ಚರಿತ್ರೆಗಳನ್ನು ಬೋಧಮಾಡುವುದಕ್ಕೆ ಯಾವುದಾದರೊಂದು ಕ್ರಮವನ್ನು ರೂಢಿಸಬೇಕಾದದ್ದು ಪರಮಾವಶ್ಯಕವೆಂದು ನಮಗೆ ತೋರುತ್ತದೆ ಸಮಾಜದವರು ಈ ಕಮಿಟಿಯವರಿಗೆ ಚರ್ಚೆಮಾಡುವುದಕ್ಕೋಸ್ಕರ ಹತ್ತು ವಿಷಯಗಳನ್ನು ವಹಿಸಿರುವರು ಆದರೆ ಆ ಪೈಕಿ ಆಚರಣೆಗೆ ತರುವುದು ಸಾಧ್ಯವೆಂದು ಕಂಡುಬರತಕ್ಕವುಗಳೇನೋ ಬಹಳ ಸ್ವಲ್ಪ

ಸಮಾಜದವರು ಅನೇಕ ವಿಷಯಗಳನ್ನು ವ್ಯವಸಾಯ ಕಮಿಟಿಯವರ ಚರ್ಚೆಗೆಂದು ಒಪ್ಪಿಸಿದ್ದಾರೆ ಆದರೆ ಆ ಪೈಕಿ ಯಾವ ಒಂದು ವಿಷಯವೂ ರೈತರಿಗೆ ಪ್ರಯೋಜನವನ್ನುಂಟುಮಾಡತಕ್ಕ ರೀತಿಯಲ್ಲಿ ಪಕ್ವಕ್ಕೆ ಬಂದಿರುವುದಿಲ್ಲ ರೈತನನ್ನು ಉದ್ಧಾರ ಮಾಡಬೇಕೆಂದು ಸಾಹಸಪಡುತ್ತಿರುವಂಥವರಿಗೆ ಈ ಕಮಿಟಿಯವರು ಅಷ್ಟು ಪ್ರೋತ್ಸಾಹಕೊಟ್ಟು ಸಹಾಯಮಾಡುವುದನ್ನು ಬಿಟ್ಟು ಅಂಗಡಿ ಮುಂತಾದದ್ದನ್ನು ಏರ್ಪಾಡುಮಾಡಿ ಖಾಸಗಿ ಜನರ ಕೂಡ ಸ್ಪರ್ಧೆಗೆ ನಿಲ್ಲುವಂತಾಗಿದೆಯೋ ಏನೋ ಎಂದು ನಮಗೆ ಸಂಶಯವುಂಟಾಗಿದೆ ಬೆಂಗಳೂರಿನಲ್ಲಿ ವ್ಯವಸಾಯೋಪಕರಣಗಳನ್ನು ತರಿಸಿಟ್ಟು ವಿಕ್ರಯ ಮಾಡುವುದಕ್ಕೆ ಒಂದು ಖಾಸಗಿ ಅಂಗಡಿ ಇರುತ್ತದೆ ಗವರ್ನಮೆಂಟಿನವರು ಅಂಥಾ ಅಂಗಡಿಯವರಿಗೆ ಸಹಾಯಮಾಡುವುದಕ್ಕೆ ಪ್ರತಿಯಾಗಿ ತಾವೇ ಅಂಥಾ ಒಂದು ಡಿಪೋವನ್ನು ಸರ್ಕಾರದಿಂದ ಇಡಿಸಿರುತ್ತಾರೆಂದು ಕೇಳಿದೆವು ಪ್ರಜೆಗಳು ಸ್ವತಂತ್ರಾವಲಂಬಿಗಳಾಗಬೇಕೆಂದು ದಿವಾನ್‌ರವರು ಅಪ್ಪಣೆ ಕೊಡಿಸುತ್ತಿರುವುದೇನೋ ನ್ಯಾಯವೂ ಆವಶ್ಯವೂ ಆಗಿದೆ ಹಾಗಿದ್ದ ಪಕ್ಷದಲ್ಲಿ ಗವರ್ನಮೆಂಟಿನವರು ಖಾಸಗಿ ಜನರ ಕೂಡ ಪೋಟಾಪೋಟಿ ಮಾಡುವಂತೆ ಅಂಗಡಿ ಮುಂಗಟ್ಟುಗಳನ್ನಾರಂಭಿಸಿದರೆ ಪ್ರಜೆಗಳು ಸ್ವತಂತ್ರಾವಲಂಬಿಗಳಾಗಲು ಮಾರ್ಗವಿಲ್ಲದೆ ತಮ್ಮ ಅಂಗಡಿಗಳನ್ನು ಮುಚ್ಚಿ ಮುದುರಿಕೊಳ್ಳಬೇಕಾಗುತ್ತದೆ

ತೆರಿಗೆಗಳ ವಿಚಾರದಲ್ಲಿ ಸಮಾಜದ ಮೆಂಬರುಗಳು ಹಲವು ತೀರ್ಮಾನಗಳನ್ನು ಮಾಡಿಕೊಂಡಿದ್ದಾರೆ ಆದರೆ ಸಭೆಯಲ್ಲಿ ನಿಂತ ಆ ತೀರ್ಮಾನಗಳಿಗೆ ಬೆಂಬಲವನ್ನು ಕೊಟ್ಟಂಥಾ ಮೆಂಬರುಗಳಿಗೆ ಕಂದಾಯಗಳನ್ನು ಹಾಕತಕ್ಕ ವಿಚಾರದಲ್ಲಿ ಸರಿಯಾದ ತಿಳುವಳಿಕೆಯಾಗಲಿ, ತಮ್ಮ ತೀರ್ಮಾನಗಳ ಪರಿಣಾಮವೇನಾಗುವುದೆಂಬಾಗಲಿ ಗೋಚರವಾಗಿದೆಯೋ ಇಲ್ಲವೋ ಎಂದು ನಾವು ಸಂಶಯಪಡುತ್ತೇವೆ ಈಗ ನೋಡುವುದರಲ್ಲಿ ಕಂದಾಯ ಕೊಡಲು ಅರ್ಹರಾದ ಮತ್ತೂ ವ್ಯವಸ್ಥೆಯುಳ್ಳ ಅನೇಕರು ಬಹಳ ಸ್ವಲ್ಪವೇ ಕೊಡುವರು, ಅತ್ತಲಾಗಿ ಅನೇಕ ಬಡಪ್ರಜೆಗಳು ನ್ಯಾಯವಾದದ್ದಕ್ಕಿಂತಲೂ ಹೆಚ್ಚು ಕಂದಾಯಗಳನ್ನು ಕೊಡುತ್ತಿದ್ದಾರೆ ಆದ ಕಾರಣ ಸಮರ್ಥರಾದವರು ಕುಳಿತು ಈ ಕಂದಾಯದ ಶಿಸ್ತನ್ನು ಪುನರಾಲೋಚನೆಮಾಡಿ ಬಡವರಿಗೆ ಭಾರ ಕಡಿಮೆಯಾಗುವಂಥಾ ಮತ್ತೂ ಭಾಗ್ಯವಂತರು ಸುಲಭವಾಗಿ ಕೊಡಬಹುದಾದಂಥಾ ರೀತಿಯಲ್ಲಿ ವ್ಯವಸ್ಥೆಮಾಡಬೇಕಾದದ್ದು ಸಹಜವೂ ಧರ್ಮವೂ ಆವಶ್ಯಕವೂ ಆಗಿದೆ ಈಗ ಆದಾಯದ ಮೇಲಣ ತೆರಿಗೆಯನ್ನು ಹಾಕಬೇಕೆಂದು ಒಪ್ಪಿಕೊಂಡಿರುವವರೂ ಅದರ ಮೂಲಪುರುಷರೂ ನಿರೀಕ್ಷಿಸಿಕೊಂಡಿರುವಷ್ಟು ಪ್ರಯೋಜನವು ಈ ತೆರಿಗೆಯಿಂದ ಉಂಟಾಗುವುದೆಂದು ನಾವು ಧೈರ್ಯವಾಗಿ ಹೇಳಲಾರೆವು

ಈ ಸಂಪದಭಿವೃದ್ಧಿ ಸಮಾಜದವರು ಚಾಲ್ತೀ ಸಾಲಿನಲ್ಲಿ 1,22,200 ರೂಪಾಯಿ ಖರ್ಚುಮಾಡುತ್ತೇವೆಂದು ಒಪ್ಪಿಕೊಂಡಿದಾರೆ ಪುಡುಕಾಡುವುದಕ್ಕೂ ಏರ್ಪಾಡುಗಳನ್ನು ಸೂಚಿಸುವುದಕ್ಕೂ ವರುಷೇವರುಷ ಇಷ್ಟೊಂದು ಹಣವನ್ನು ವಿನಿಯೋಗಿಸುವುದು ಸಧ್ಯವಾದೀತೇ ಎಂದು ಶಂಕೆಪಡುತ್ತೇವೆ ಹ್ಯಾಗೂ ಇದರ ಫಲಿತಾಂಶವು ಬೇಗನೆ ಪ್ರಕಾಶವಾಗಲೇ ಬೇಕು ಆಗಲಿ, ಇನ್ನೊಂದು ವರುಷ ನೋಡುತ್ತಾ ಕಾದಿರೋಣ

ಬಾಲ್ಕನ್ ಸೀಮೆಯಲ್ಲಿ ಕಡಿದಾಟಗಳು.

ಕಳೆದ ವಾರ ನಾವು ಸೂಚಿಸಿದಂತೆ ಬಲ್ಗೇರಿಯ, ಸರ್ವಿಯ, ಮಾಂಟಿನೀಗ್ರೊ, ಗ್ರೀಸ್ ಸಂಸ್ಥಾನಗಳ ಪರಸ್ಪರವಾದ ವಿರೋಧಗಳು ಸುರಕ್ಷಿತವಾಗಿ ಇತ್ಯರ್ಥಹೊಂದದೆ ಕಡಿದಾಟಗಳು ಹುಟ್ಟಿರುತ್ತವೆ ಯಥಾರ್ಥವಾಗಿ ಅಲ್ಲಿ ನಡೆದಿರುವ ವಿದ್ಯಮಾನಗಳೇನೋ ತಿಳಿದು ಹೇಳುವುದು ಬಹಳ ಕಷ್ಟವಾಗಿದೆ ಆ ಸಂಸ್ಥಾನಗಳವರು ಯುದ್ಧಮಾಡುತ್ತೇವೆಂಬುವುದನ್ನು ಬಹಿರಂಗವಾಗಿ ನುಡಿಯದೇನೇ ಒಬ್ಬರ ಮೇಲೊಬ್ಬರು ನುಗ್ಗಿ ಕಡಿದಾಡುತ್ತಿರುವರು ಸರ್ವಿಯಾ ಮಾಂಟಿನೀಗ್ರೋದವರು ಒಂದು ಕಡೆಯೂ, ಗ್ರೀಸಿನವರು ಇನ್ನೊಂದು ಕಡೆಯೂ ಬಲ್ಗೇರಿಯದವರ ಮೇಲೆ ನುಗ್ಗಿ ಯುದ್ಧಮಾಡಿದರೋ, ಅಥವಾ ಬಲ್ಗೇರಿಯದವರೇ ಅವರ ಮೇಲೆ ಬಿದ್ದು ಕದನಮಾಡಿದರೋ ಗೊತ್ತುಮಾಡಿ ಹೇಳುವುದು ಕಷ್ಟ

ಈ ಯುದ್ಧಗಳ ಪರಿಣಾಮವನ್ನು ತಿಳಿದು ಹೇಳುವುದೂ ಸುಲಭವಾಗಿಲ್ಲ, ಯಾಕೆಂದರೆ ಉಭಯಪಕ್ಷದವರೂ ತಮಗೆ ಜಯಪ್ರದವಾಯಿತೆಂದು ಹೇಳಿಕೊಳ್ಳುವರು ಮಾಂಟಿನೀಗ್ರೋದವರೂ ಸರ್ವಿಯಾದವರೂ ಏಕೀಭವಿಸಿ ಬಲ್ಗೇರಿಯದವರನ್ನು ಸೋಲಿಸಿ ಶತ್ರುಸೈನ್ಯದಲ್ಲಿ ಬಹುಮಂದಿಯನ್ನು ಕೈಸೆರೆ ಹಿಡಿದೆವೆಂದೂ ಶತ್ರುಗಳ ಫಿರಂಗಿಗಳನ್ನು ಸ್ವಾಧೀನಪಡಿಸಿಕೊಂಡೆವೆಂದೂ ಹೇಳುತ್ತಾರೆ ಅತ್ತಲಾಗಿ ಬಲ್ಗೇರಿಯದವರು ಸರ್ವಿಯಾ ಮಾಂಟಿನೀಗ್ರೋದವರನ್ನು ಸೋಲಿಸಿರುತ್ತೇವೆಂದು ತಿಳಿಸಿರುವರು ಗ್ರೀಕರಾದರೋ ಸಾಲೋನಿಕದಿಂದ ಉತ್ತರಕ್ಕೆ ನುಗ್ಗಿಹೋಗಿ ಬಾಲ್ಗೇರರು ತಮ್ಮದೆಂದು ಹೇಳುವ ಪ್ರದೇಶವನ್ನು ಆಕ್ರಮಿಸಿಕೊಂಡಿದಾರೆ ಯಥಾರ್ಥವಾದ ಸಂಗತಿಗಳು ಇಷ್ಟರಲ್ಲೇ ತಿಳಿದು ಬರಬಹುದು ಸಧ್ಯದಲ್ಲಿ ಯುದ್ಧಗಳು ನಡೆಯುತ್ತಾ ಇವೆ ಎಂದೂ, ಉಭಯಪಕ್ಷಗಳಲ್ಲೂ ಅನೇಕರು ಕೊಲೆಯಾಗಿ ಬಹುಮಂದಿ ಗಾಯಪಟ್ಟಿದಾರೆಂದೂ ಗೊತ್ತಾಗಿ ತಿಳಿದು ಬಂದಿದೆ

ಈ ಬಾಲ್ಕನ್ ಸೀಮೆಯ ವಿದ್ಯಮಾನಗಳು ಈಗ ಬಹು ದುಃಖಕರವಾಗಿರುವವು ಅವರು ಟರ್ಕಿಯ ಮೇಲೆ ಯುದ್ಧಮಾಡಿ ಗೆದ್ದುಕೊಂಡಿರುವ ಪ್ರದೇಶಗಳನ್ನು ಬಹುಶಾ ಕಳೆದುಕೊಂಡಾರೆಂದು ತಾಬುತ್ತದೆ ಯುದ್ಧವೂ ಕಡಿದಾಟಗಳೂ ನಿಲ್ಲುವ ತನಕ ಆ ಸೀಮೆಗಳಲ್ಲಿ ನೆಮ್ಮದಿಯೂ ಏಳಿಗೆಯೂ ನೆಲೆಗೊಳ್ಳಲಾರವು ಈ ಕಡಿದಾಟಗಳ ದೆಸೆಯಿಂದ ಅವರವರಲ್ಲಿ ದ್ವೇಷಾಸೂಯೆಗಳು ಬಹುಕಾಲ ನೆಲೆಗೊಂಡು, ಬಹಳ ಕೇಡಾದೀತೆಂದು ಹೇಳಬಹುದು ಆದಕಾರಣ ಬೇಗನೆ ಅವರವರಿಗೆ ಕರಾರು ನಡೆದು ನೆಮ್ಮದಿಯುಂಟಾಗಲೆಂದು ಹಾರೈಸುತ್ತೇವೆ ರಷ್ಯಾ ರಾಜ್ಯದ ಚಕ್ರವರ್ತಿಯವರೋ, ಇಲ್ಲವೇ ಯೂರೋಪಿನ ರಾಜ್ಯಾಧಿಪತಿಗಳೋ ಇಷ್ಟರಲ್ಲೇ ಹಿತೋಕ್ತಿಗಳ ಪ್ರಯೋಗದಿಂದ ಅವರವರು ಕರಾರು ಮಾಡಿಕೊಳ್ಳುವಂತೆ ಮಾಡಿ ಮುಂದಲೂ ನೆಮ್ಮದಿಯಾಗಿಯೂ ಬಾಳುವಂತೆ ಮಾಡದಿರಲಾರರೆಂದು ನಿರೀಕ್ಷಿಸುವೆವು

ದೇವರದನ್ನು ದೇವರಿಗ ಕೊಡಿರಿ

ನಾನು ನನ್ನ ಕೊಟಡಿಯಲ್ಲಿ ಮೇಜಿನ ಮೇಲೆ ನನ್ನ ಗಡಿಯಾರವನ್ನು ಇಟ್ಟು ಅದರ ಮುಂದೆ ಕೂತುಕೊಂಡು ಬರೆಯುತ್ತಿದ್ದೆನು ಆಗ ಯಾರೋ ಒಬ್ಬನು ಆಕಸ್ಮಿಕವಾಗಿ ಬಂದು ನನ್ನ ಎದುರಿನಲ್ಲಿ ನಾನು ಇಟ್ಟುಕೊಂಡಿದ್ದ ಗಡಿಯಾರವನ್ನು ಅಪಹರಿಸಿಕೊಂಡು ಹೋದನು ಮತ್ತೆ ಅವನನ್ನು ಎಲ್ಲಿ ಹುಡುಕಿದರೂ ಸಿಕ್ಕಲೇ ಇಲ್ಲ ಅವನು ಈವರೆಗೂ ಪತ್ತೆಯಾಗದೆ ಇರುವದರಿಂದ ನಾನು ಇನ್ನೂ ಗಡಿಯಾರವಿಲ್ಲದೆ ಇದ್ದೇನೆ ನನ್ನ ಒಡವೆಯನ್ನು ಕಳೆದುಕೊಂಡು ಇನ್ನೊಂದನ್ನು ಕೊಂಡುಕೊಳ್ಳಲಾರದೆ ಇದ್ದೇನೆ

ಒಬ್ಬೊಬ್ಬನ ಮಾಲು ಆಯಾ ಮಾಲೀಕನ ವಶದಲ್ಲಿರಬೇಕಲ್ಲವೆ ? ನಾನು ಕಳಕೊಂಡ ಗಡಿಯಾರವು ನನ್ನದು ಅದು ನನ್ನ ಸ್ವಂತ ಒಡವೆ ಆದರೂ ಅದು ಈಗ ನನ್ನ ವಶದಲ್ಲಿಲ್ಲ ಯಾವನೋ ದುಷ್ಟನು ಅಪಹರಿಸಿದನು ಅದು ಅವನದಲ್ಲ ಆದರೇನು ಅವನು ಅದನ್ನು ವಶಪಡಿಸಿಕೊಂಡು ಉಪಯೋಗಿಸುತ್ತಿದ್ದಾನೆ ಇದು ನ್ಯಾಯವಲ್ಲ ಅವನು ನ್ಯಾಯಸ್ಥನಾಗಿದ್ದರೆ ನಾನು ಕ್ರಯಕೊಟ್ಟು ಕೊಂಡುಕೊಂಡಿದ್ದ ನನ್ನ ಒಡವೆಯನ್ನು ನನಗೆ ಕೊಡುವನು ವಾಚಕರೇ, ನೀವು ಯಾರವರು ? ನಿಮ್ಮ ದೇಹ, ನಿಮ್ಮ ಜೀವ, ನಿಮ್ಮ ಮನಸ್ಸು ಯಾರವುಗಳು ? ನಿಮ್ಮನ್ನು ನೀವೇ ಸೃಷ್ಟಿಮಾಡಿಕೊಳ್ಳಲಿಲ್ಲ ನಿಮಗೆ ಈಗ ಸುಮಾರು ಮೂವತ್ತೈದು ಅಥವಾ ನಲವತ್ತು ವಯಸ್ಸಾಗಿದೆಯೆಂದು ಊಹಿಸೋಣ ಮೂವತ್ತೈದು ಅಥವಾ ನಲವತ್ತು ವರುಷಗಳಿಗೆ ಮುಂಚೆ ಎಲ್ಲಿದ್ದಿರಿ ? ನಿಮಗೆ ಗೊತ್ತೋ ? ನಿಮಗೆ ಗೊತ್ತಿಲ್ಲ ನೀವು ಪ್ರಾಯಶಃ ಆಗ ಇರಲಿಲ್ಲ ಅನ್ನುವಿರಿ ಸಹಜ ಹಾಗಾದರೆ ಯಾವನೋ ಒಬ್ಬನು—ನೀವು ಹುಟ್ಟಿ ಬದುಕಿರಬೇಕೆಂದು ಸಂಕಲ್ಪಿಸಿ ಒಂದು ದೇಹವನ್ನು ಮಾಡಿ ಅದಕ್ಕೆ ಜೀವಕಳೆಯನ್ನು ತುಂಬಿ ಅದು ಬದುಕಿರಬೇಕೆಂದು ಈ ಲೋಕಕ್ಕೆ ತಂದುಬಿಟ್ಟನು ಈಗ ನೀವು ಯಾರವರು ? ನಾನು ಹೋಗಲಾಡಿಸಿಕೊಂಡ ಗಡಿಯಾರಕ್ಕೂ ನನಗೂ ಯಾವ ಸಂಬಂಧವಿದೆ ? ಅದು ನಾನು ಮಾಡಿದ್ದಲ್ಲ ಯಾರೋ ಒಬ್ಬ ಮಾಡಿದ್ದನ್ನು ನಾನು ಕೊಂಡುಕೊಂಡಿದ್ದೆ ಅದಕ್ಕೆ ಮುಂಚೆ ಅದನ್ನು ಮಾಡಿದವನ ಹತ್ತಿರವಿತ್ತು ಅದನ್ನು ಮಾಡಿದವನಾದರೂ ಪ್ರತ್ಯೇಕ ಪ್ರತ್ಯೇಕವಾಗಿ ಲೋಹದ ಚಕ್ರಗಳು, ಮೊಳೆಗಳು ಕೀಲುಗಳು ಮುಂತಾದವುಗಳನ್ನು ಚಮತ್ಕಾರದಿಂದ ಜೋಡಿಸಿದನೇ ಹೊರತು ಆ ~~ಲೋಹವಸ್ತುಗ~~ಳನು ಮಾಡಲಿಲ್ಲ ಅದನ್ನು ಮಾಡಿದವನ ಬುದ್ಧಿಯೂ ಅದನ್ನು ಮಾಡುವದಕ್ಕೆ ಅವನು ಪ್ರಯೋಗಿಸಿದ ವಸ್ತುಗಳೂ ದೇವರು ಸೃಷ್ಟಿಮಾಡಿದವುಗಳು

ಹೀಗಿರುವುದರಿಂದ ಗಡಿಯಾರವನ್ನು ನಾನು ನನ್ನದೆಂದು ಭಾವಿಸುವದಕ್ಕಿಂತ ವಿಶೇಷವಾದ ರೀತಿಯಲ್ಲಿ ದೇವರು ನಿಮ್ಮನ್ನೂ ನನ್ನನ್ನೂ ತನ್ನ ಒಡವೆಯೆಂತ ನಿರ್ಣಯಿಸುವದಕ್ಕೆ ಆಧಾರವಿದೆ

ಈಗ ಮೂವತ್ತೈದು ನಲವತ್ತು ವರುಷಗಳಿಂದ ನಿಮ್ಮನ್ನು ಕಾಪಾಡಿದವರು ಯಾರು ? ಎಳೆಯ ಕೂಸಾಗಿದ್ದಾಗ ನಿಮಗೆ ಅಳುವುದು ಮಾತ್ರ ಬರುತ್ತಿತ್ತು ನಿಮ್ಮ ತಂದೆತಾಯಿಗಳು ನಿಮ್ಮನ್ನು ಕಾಪಾಡಿದರು ಅವರಲ್ಲಿ ನಿಮ್ಮನ್ನು ಕಾಪಾಡಬೇಕೆಂಬ ಪ್ರೀತಿಯನ್ನಿಟ್ಟವನು ಯಾರು ? ಅದಿರಲಿ ಈಚೆಗೆ ನಿಮ್ಮನ್ನು ನೀವೇ ಕಾಪಾಡಿಕೊಳ್ಳಲಿಲ್ಲವೇ ? ಕಷ್ಟಪಟ್ಟು ದುಡಿದು ನಿಮ್ಮನ್ನು ನೀವು ಸಾಕಿಕೊಳ್ಳುತ್ತಲಿದ್ದೀವೆ ಅಂದೀರಿ ? ನಿಜ ಆದರೆ ಕಷ್ಟಪಡುವದಕ್ಕೆ ಬೇಕಾದ ಬಲವನ್ನೂ ಬುದ್ಧಿಯನ್ನೂ ನಿಮ್ಮಲ್ಲಿರಿಸಿದಾತನು ಯಾರು ? ನಿಮಗೆ ಬುದ್ಧಿ ಬಲಗಳನ್ನು ಕೊಟ್ಟಿರುವದಲ್ಲದೆ ಭೂಮಿಗೆ ಬೆಳೆಯುವ ಶಕ್ತಿಯನ್ನೂ ಬೆಳೆಯುವದಕ್ಕೆ ಸಹಕಾರಿಗಳಾದ ಗಾಳಿ ಮಳೆ ಬಿಸಿಲುಗಳನ್ನೂ ಕಾಲಕಾಲಕ್ಕೆ ಒದಗಿಸುವವನು ಯಾರು ? ದೇವರೇ ನಿನ್ನ ಕೆಲಸಗಳ ಫಲದಿಂದ ಭೂಮಿಯು ತೃಪ್ತಿಯಾಗುತ್ತದೆ ಪಶುಗಳಿಗೋಸ್ಕರ ಹುಲ್ಲನ್ನೂ ಮನುಷ್ಯನ ಸೇವೆಗೋಸ್ಕರ ಪಲ್ಯಗಳನ್ನೂ ಮೊಳೆಸುತ್ತೀ ಭೂಮಿಯೊಳಗಿಂದ ರೊಟ್ಟಿಯನ್ನು ಬರಮಾಡುತ್ತೀ ನೇಮಿಸಿದ ಕಾಲಗಳಿಗೋಸ್ಕರ ಚಂದ್ರನನ್ನು ಉಂಟುಮಾಡಿದ್ದೀ ಸೂರ್ಯನು ತನ್ನ ಅಸ್ತಮಾನವನ್ನು ತಿಳಿಸಿದ್ದಾನೆ ನೀನು ಕತ್ತಲನ್ನು ಬರಮಾಡುತ್ತೀ, ಆಗ ರಾತ್ರಿಯಾಗುತ್ತದೆ ಸೂರ್ಯನು ಪುನಹ ಉದಯವಾಗಲು ಮನುಷ್ಯನು ತನ್ನ ಕೆಲಸಕ್ಕೂ ಸಾಯಂಕಾಲದವರೆಗೆ ತನ್ನ ಸೇವೆಗೂ ಹೊರಡುತ್ತಾನೆ ಸ್ವಾಮಿಯೇ, ನಿನ್ನ ಕೆಲಸಗಳು ಎಷ್ಟೋ ಉಂಟು ಅವುಗಳನ್ನೆಲ್ಲಾ ಜ್ಞಾನದಿಂದ ಉಂಟುಮಾಡಿದ್ದೀ ಭೂಮಿಯು ನಿನ್ನ ಆಸ್ತಿಯಿಂದ ತುಂಬಿಯಿದೆಯೆಂದು ಒಬ್ಬ ಕವೀಶ್ವರನು ಬರೆದಿದ್ದಾನೆ

ದೇವರು ನಮ್ಮನ್ನು ಸೃಷ್ಟಿಸಿ ಪರಾಮರಿಸುತ್ತಿರುವದರಿಂದ ನಾವು ಆತನ ನಿಜಸೊತ್ತುಗಳಾಗಿದ್ದೇವೆ

ಇದಕ್ಕೆಲ್ಲಾ ಯಾವ ಅನುಮಾನವೂ ಇಲ್ಲ ಇದು ಸಕಲರೂ ತ್ರಿಕರಣಶುದ್ಧಿಯಾಗಿ ಒಪ್ಪುವ ಅಭಿಪ್ರಾಯ ನಾವು ದೇವರ ಸೊತ್ತುಗಳು, ಆಕ್ಷೇಪಣೆಯಿಲ್ಲ

ಆದರೆ ದೇವರ ಸೊತ್ತನ್ನು ದೇವರಿಗೆ ಕೊಟ್ಟಿದ್ದೀರೇ ? ಕಳೆದುಹೋದ ಗಡಿಯಾರವು ನನ್ನದು ಆದರೆ ಅದು ನನ್ನ ಹತ್ತಿರವಿಲ್ಲ ನನಗೆ ಅದು ಈಗ ಇಲ್ಲ ಒಬ್ಬ ಕಳ್ಳನು ಅದನ್ನು ಅಪಹರಿಸಿದನು ಆ ದಿನದಿಂದ ಅದು ನನ್ನ ಪ್ರಯೋಗಕ್ಕಿಲ್ಲದೆ ಹೋಯಿತು ದೇವರು ತನ್ನಿಷ್ಟದಂತೆ ನಿಮ್ಮನ್ನು ಪ್ರಯೋಗಿಸಲಿಯೆಂದು ತ್ರಿಕರಣಶುದ್ಧಿಯಾಗಿ ಆತನಿಗೆ ತಮ್ಮನ್ನು ಒಪ್ಪಿಸಿರುವವರು ಯಾರು ?

ನಾನು ಕೊಂಡುಕೊಂಡಿರುವ ಗಡಿಯಾರವು ನನ್ನ ಸೊತ್ತಾಗಿರುವದಕ್ಕಿಂತ ಹೆಚ್ಚಾಗಿ ದೇವರು ನಿಮ್ಮನ್ನೂ ನನ್ನನ್ನೂ ತನ್ನ ಸೊತ್ತೆಂತ ಹೇಳುವದಕ್ಕೆ ತಕ್ಕ ಕಾರಣವುಂಟು ಆದರೆ ಗಡಿಯಾರವು—ನಾನು ಇಂಥವನ ವಶದಲ್ಲಿರುತ್ತೇನೆ ಅಂಥವನ ವಶದಲ್ಲಿರುವುದಿಲ್ಲವೆಂದು ಹೇಳಲಾರದು ಇಂಥವನೇ ನನ್ನ ಒಡೆಯನಾಗಲಿಯೆಂದು ತನ್ನ ಯಜಮಾನನನ್ನು ಆರಿಸಿಕೊಳ್ಳಲಾರದು ಆದರೆ ನಿಮ್ಮನ್ನು ಸೃಷ್ಟಿಸಿದವನು ನಿಮ್ಮ ಇಷ್ಟಪೂರ್ತಿಯಿಂದ ಯಾರ ಆಳಾಗಿರುವದಕ್ಕೆ ನಿಮಗೆ ಮನಸ್ಸುಂಟೋ ಅವನನ್ನು ಆರಿಸಿಕೊಳ್ಳುವದಕ್ಕೆ ಸ್ವತಂತ್ರವನ್ನು ನಿಮಗೆ ಕೊಟ್ಟಿದ್ದಾನೆ ನೀವು ಇಲ್ಲದೆ ಇದ್ದಾಗ ನಿಮ್ಮನ್ನು ಸೃಷ್ಟಿಸಿದವನನ್ನು ಉಲ್ಲಂಘಿಸಿ ಆತನ ಶತ್ರುವಿನ ಪಕ್ಷವನ್ನು ಹಿಡಿದು ಅವನ ಸೇವೆಯನ್ನು ಮಾಡುವದಕ್ಕೆ ನಿಮಗೆ ಸ್ವತಂತ್ರವುಂಟು ಆ ಶತ್ರುವು ಯಾರು ? ಪಾಪವೇ ಆ ಶತ್ರು ಅವನು ದೇವರಿಗೂ ನಮಗೂ ಶತ್ರು ನಮ್ಮನ್ನು ಉಪಾಯದಿಂದ ತನ್ನ ಸ್ವಾಧೀನಮಾಡಿಕೊಂಡು ಕಡೆ ಕಡೆಗೆ ನಮ್ಮನ್ನು ತನ್ನ ಜೀತದಾಳುಗಳಂತೆ ಬಾಧಿಸಿ ಕಡೆಗೆ ಸಂಹರಿಸುವನು

- ಹಾಗಾದರೇನು ? ಪಾಪವನ್ನು ಮಾಡಬಹುದೋ ? ಎಂದಿಗೂ ಮಾಡಬಾರದು ನೀವು ಯಾವನಿಗೆ ವಿಧೇಯರಾಗುತ್ತೇವೆಂದು ನಿಮ್ಮನ್ನು ಆಳುಗಳಾಗಿ ಒಪ್ಪಿಸಿಕೊಡುತ್ತೀರೋ ಅವನಿಗೆ ನೀವು ಆಳುಗಳಾಗಿದ್ದು ಅವನು ಹೇಳಿದ ಹಾಗೆ ಕೇಳುವವರಾಗಿದ್ದೀರೆಂದು ನಿಮಗೆ ಗೊತ್ತಿಲ್ಲವೋ ? ಹೀಗಿರುವದರಿಂದ ನೀವು ದೇಹದ ದುರಾಶೆಗಳಿಗೆ ಒಳಗಾಗದಂತೆ ನಿಮ್ಮ ಮರ್ತ್ಯ ದೇಹದಲ್ಲಿ ಪಾಪವನ್ನು ಆಳಗೊಡಿಸಬೇಡಿರಿ ನಿಮ್ಮ ಅಂಗಗಳನ್ನು ದುರ್ನೀತಿಗೆ ಸಾಧನಗಳಾಗಮಾಡಿ ಪಾಪಕ್ಕೆ ಒಪ್ಪಿಸದೆ, ದೇವರಿಗೆ ನಿಮ್ಮನ್ನೂ ನೀತಿಗೆ ಸಾಧನಗಳಾಗಿ ನಿಮ್ಮ ಅಂಗಗಳನ್ನೂ ಒಪ್ಪಿಸಿಬಿಡಿರಿ ಯಾಕೆಂದರೆ ಪಾಪದಿಂದ ಬರುವ ಸಂಬಳವು ಮರಣ ?

ಒಳದೇಶದ ವೃತ್ತಾಂತಗಳು

ಶ್ರೀಮನ್ ಮಹಾರಾಜರವರು ನೆನ್ನೆ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡುತ್ತಾರೆಂಬ ವರ್ತಮಾನವಿತ್ತು

ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಸುಮಾರು 2,500 ರೂಪಾಯಿ ತನಿಖೆ ಗೈರ್ವತಯಾಗಿರುವುದನ್ನು ಪೋಲೀಸಿನವರು ತನಿಖೆಮಾಡುತ್ತಿದಾರೆ

ಬೆಂಗಳೂರು ನಾನಾಸಿಂಗ್‌ಪೇಟೆಯ ಒಂದು ಮನೆಯಲ್ಲಿ 2 ವರುಷದ ಮಗುವು ನೀರು ತುಂಬಿದ ಶೀಮೇಯೆಣ್ಣೆ ಡಬ್ಬಾದೊಳಕ್ಕೆ ಮಗುಚಿಕೊಂಡು ಸತ್ತುಹೋಯಿತು ಅದರ ತಾಯಿ ಮನೆ ಕೆಲಸದಲ್ಲಿದ್ದಳು

ಚಾಲ್ತಿ ವರುಷದಲ್ಲಿ ಈ ಸಂಸ್ಥಾನದ ಪೋಲೀಸ್ ಇಲಾಖೆಯ ನೌಕರಮಾನೇರುಗಳ ಸಂಬಳದ ದರಗಳನ್ನು ಹೆಚ್ಚಿಸುವುದಕ್ಕೋಸ್ಕರ ಸರ್ಕಾರದವರು 50 ಸಾವಿರ ರೂಪಾಯನ್ನು ವಿನಿಯೋಗಿಸುವಂತೆ ಸ್ಯಾಂಕ್ಷನ್ ಮಾಡಿದಾರೆ

ಬೆಂಗಳೂರಿನ ಬಳಿ ನೀಲಸಂದ್ರದ ರಸ್ತೆಯಲ್ಲಿ ಜೂಜಾಡುತ್ತಿದ್ದ ಏಳು ಮಂದಿ ಗಾಡಿಯವರನ್ನು ಇನ್‌ಸ್ಪೆಕ್ಟರ್ ಗುರುರಾಯರು ಹಿಡಿದು ಮೊಕದ್ದಮೆ ಮಾಡಿದ್ದರಲ್ಲಿ ಪ್ರತಿ ಒಬ್ಬನಿಗೂ ಐವತ್ತು ರೂಪಾಯಿ ಜುಲ್ಮಾನೆ ಆಗಿದೆ

ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿ ಪ್ರಜಾ ಕ್ಷೋಭೆಗೆ ಕಾರಣಗಳನ್ನು ವಿಚಾರಿಸುವುದಕ್ಕೆ ಸರ್ಕಾರದವರು ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿ, ಆ ಕೆಲಸವನ್ನು ಮಿ| ಕೆ ಮತ್ತಾನ್ ರವರಿಗೆ ವಹಿಸಿರುತ್ತಾರೆ

ಕಳೆದ ಶುಕ್ರವಾರ ಬೆಂಗಳೂರು ಪೇಟೆಯಲ್ಲಿ ಒಬ ಮಹಮದೀಯ ಸ್ತ್ರೀಯು ಮನೆಯೊಳಗೆ ಮದ್ದು ಅರೆಯುತ್ತಿದ್ದಾಗ ಅದು ಮಹಾ ಶಬ್ದ ಮೊಡನೆ ಹಾರಿ ಇಬ್ಬರು ಸತ್ತುಹೋದರು ಇನ್ನಿಬ್ಬರಿಗೆ ಗಾಯಗಳಾದವು ಆ ಮನೆಯ ಮೇಲ್ಛಾವಣಿ ಹಾರಿಹೋಯಿತು ಮನೆಯಲ್ಲಿ ಇನ್ನೂ ಕೆಲವು ನಷ್ಟಗಳಾದವು

ಕಳೆದ ಬುಧವಾರ ಸಾಯಂಕಾಲ ಬೆಂಗಳೂರಿನಲ್ಲಿ ಹುಜೂರು ಖಜಾನೆ ಆಫೀಸರಾದ ಮಿ| ಎನ್ ಕೃಷ್ಣಸ್ವಾಮಿರಾಯರಿಗೆ ಒಂದು ಮರದ ಕೆಳಗೆ ನಿಂತಿದ್ದಾಗ ಸಿಡಿಲುಬಡಿದು ಪ್ರಜ್ಞೆತಪ್ಪಿತ್ತು ಅವರನ್ನು ಮೋಟಾರಿನಲ್ಲಿ ಸಾಗಿಸಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಮಾಡಿದ ಮೇಲೆ ಆರೋಗ್ಯಹೊಂದಿದರೆಂದು ತಿಳಿದು ಸಂತೋಷಿಸುತ್ತೇವೆ

ಕಳೆದ ಸೋಮವಾರ ಬೆಂಗಳೂರು ಶೇಷಾದ್ರಿ ಮೆಮೋರಿಯಲ್ ಹಾಲ್ ಕಟ್ಟಡದಲ್ಲಿ ವಿದ್ಯಾ ಇಲಾಖೆಯ ಅಧ್ಯಕ್ಷರಾದ ಮಿ|| ಎಂ ರಾಮರಾಯರವರು ಮೆಕ್ಯಾನಿಕಲ್ ಇಂಜನಿಯರಿಂಗ್ ಎಂಬ ಕಸಬುದಾರಿ ಪಾಠಶಾಲೆಯನ್ನು ಪ್ರಾರಂಭ ಮಾಡಿದರು ಮಿ|| ಎಸ್ ವಿ ಚೆಟ್ಟಿಯವರು ಈ ಪಾಠಶಾಲೆಯ ಸೂಪರಿನ್‌ಟೆಂಡೆಂಟರಾಗಿ ನೇಮಕವಾಗಿದಾರೆ ಈಗ ಅಲ್ಲಿ ಯಂತ್ರವಿದ್ಯೆಯನ್ನು ಕಲಿಯಲು 40 ಮಂದಿ ವಿದ್ಯಾರ್ಥಿಗಳು ಸೇರಿರುವಂತೆ ಕೇಳುತ್ತೇವೆ

ಕಾನಕಾನಹಳ್ಳಿಯಲ್ಲಿ ಶಿವಣ್ಣನನ್ನು ಕೊಂದುಹಾಕಿದ ಮೊಕದ್ದಮೆಯು ಕಳೆದ ವಾರ ಇತ್ಯರ್ಥವಾಗಿ ಅಪರಾಧಿಗಳೆಂದು ಹಿಡಿಯಲ್ಪಟ್ಟಿದ್ದ ಪುಟ್ಟ, ಮಾರ ಎಂಬಿಬ್ಬರಿಗೂ ಖುಲಾಸೆ ಆಯಿತು ಈ ಮೊಕದ್ದಮೆಯ ತೀರ್ಮಾನದಲ್ಲಿ ಸೆಷನ್ಸ್ ಜಡ್ಜರು ಆ ತಾಲ್ಲೋಕ್ ಅಮಲ್ದಾರರಿಗೂ ಪೋಲೀಸ್ ಇನ್‌ಸ್ಪೆಕ್ಟರಿಗೂ ಪರಸ್ಪರ ಸಹೃದಯವಿಲ್ಲವೆಂದೂ ಹೀಗಾದರೆ ಮೊಕದ್ದಮೆಗಳು ಯಾವ ರೀತಿ ಪರಿಣಾಮ ಹೊಂದುವವೋ ಹೇಳಬೇಕಾಗಿಲ್ಲವೆಂದೂ ಬರೆದಿದಾರೆ ಕೊಲೆಯಾದದ್ದು ನಿಜವಾದರೂ ಇವರಿವರ ಮನಃಕಷಾಯದಿಂದ ಅಪರಾಧಿಗಳು ಸಿಕ್ಕದೆ ಹೋದರೇನೋ ಎಂದು ದುಃಖವಾಗುವುದು

ಮೈಸೂರು ಗೆಜೆಟ್ ಸಂಗ್ರಹ

ವರ್ತಕರು ಮಿ| ಮದ್ದಗಿರಿ ಸಂಜೀವಶೆಟ್ಟರನ್ನು ತುಮಕೂರು ಮ್ಯುನಿಸಿಪಲ್ ಕೌನ್ಸಿಲ್ ಮೆಂಬರಾಗಿ ನೇಮಕಮಾಡಿದೆ

ಮಿ|| ಮುದ್ದಪ್ಪನವರನ್ನು ಮೊಳಕಾಲ್ಮುರು ತಾಲ್ಲೂಕಿನ ಕೋಣಸಾಗರದ ಯೂನಿಯನ್ ಪಂಚಾಯತಿ ಮೆಂಬರಾಗಿ ನೇಮಿಸಿದೆ

ಮಿ|| ಜಿ ದೇವೋಜಿರಾಯರನ್ನು ಶ್ರೀರಂಗಪಟ್ಟಣದ ತಾಲ್ಲೂಕ್ ಬೋರ್ಡಿನ ಮೆಂಬರಾಗಿಯೂ, ಮಿ|| ಸುಬ್ಬರಾಯರನ್ನು ನಂಜನಗೂಡು ತಾಲ್ಲೂಕು ಬೋರ್ಡಿನ ಮೆಂಬರಾಗಿಯೂ ಆಯಾ ಮ್ಯುನಿಸಿಪಲ್ ಕೌನ್ಸಿಲರುಗಳು ಚುನಾವಣೆಮಾಡಿರುವುದನ್ನು ಒಪ್ಪಲಾಗಿದೆ

ಶಿಡ್ಲಘಟ್ಟ ತಾಲ್ಲೂಕು ಮೇಲೂರು ಮತ್ತು ರಾಗಿಮಾಕಲಹಳ್ಳಿ ಗ್ರಾಮಗಳನ್ನು ಯೂನಿಯನ್ ಪಂಚಾಯತಿಗಳಾಗಿ ಇದೇ ಜೂಲೈ ಪ್ರಾರಂಭದಿಂದ ಏರ್ಪಡಿಸಮಾಡಿದೆ

ಮೈಸೂರಿನಿಂದ ಚಿತ್ರದುರ್ಗಕ್ಕೆ ವರ್ಗಪಟ್ಟು ಒಂದು ತಿಂಗಳ ರಜಾ ಪಡೆದಿರುವ ಅ|| ಕಮಿಷನರ್ ಮಿ|| ಭೀಮರಾಯರಿಗೆ ಇನ್ನೊಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಸಾಗರದ ಸಬ್ ಡಿವಿಜನ್ ಆಫೀಸರ್ ಮಿ| ಎಸ್ ನಾರಾಯಣರಾಯರಿಗೆ ಕೊಟ್ಟಿರುವ ಪ್ರಿವಿಲೆಜ್ ರಜವನ್ನು ಇನ್ನೂ ಎರಡು ವಾರ ಜಾಸ್ತಿಮಾಡಿದೆ

ಕುಂಸಿ ಸಬ್ ತಾಲ್ಲೂಕು ಆಕ್ಟಿಂಗ್ ಡೆಪ್ಟಿ ಅಮಲ್ದಾರ್ ಮಿ| ಹೈದರಲ್ಲಿಖಾನ್ ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಆರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಟಿ ಕಮಿಷನರವರ ಆಫೀಸ್ ಹೆಡ್ ಕ್ಲಾರ್ಕ ಮಿ|| ಜಿ ಸಂತಾನಂಅಯ್ಯಂಗಾರ್ರು ಕುಂಸಿ ಸಬ್ ತಾಲ್ಲೂಕಿನ ಡೆಪ್ಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಹೊಸಕೋಟೆ ಅಮಲ್ದಾರ್ ಮಿ|| ಟಿ ಕೆ ಸೋಮೇಶ್ವರ ಅಯ್ಯರವರಿಗೂ, ಆನೆಕಲ್ ಅಮಲ್ದಾರ್ ಮಿ|| ಬಿ ಪಿ ಗೋಪಾಲರಾಜೆ ಅರಸಿನವರಿಗೂ 2ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ

ಅ| ಸರ್ಜನ್ ರಾದ ಮಿ| ಎನ್ ರಂಗಚಾರ್ರನ್ನೂ ಮಿ| ಎಸ್ ಜಿ ಆಶೀರ್ವಾದಂಯವರನ್ನೂ ಮಿ|| ಜೆ ಎ ಮಾಸ್ಕರೆನ್‌ಹಾಸ್‌ಯವರನ್ನು ಜೂನ್ ತಾ 1ರಿಂದ 3ನೇ ಕ್ಲಾಸಿಗೆ ಬಡ್ತಿಮಾಡಿದೆ

ಅ|| ಕಮಿಷನರ್ ಮಿ|| ಟಿ ಗೋವಿಂದರಾಯರನ್ನು ರೆವಿನ್ಯೂ ಸರ್ವೆ ಕೆಲಸಗಳನ್ನು ಕಲಿಯುವುದಕ್ಕೆ ಆ ಇಲಾಖೆಗೆ ವರ್ಗಮಾಡಿದೆ

ಮುಂದೆ ಹೇಳುವಂತೆ ಅ|| ಕಮಿಷನರುಗಳ ವರ್ಗಾವರ್ಗೀ ಹುಕುಂ ಮಾಡಿದೆ—ಮಿ|| ಎ ಎ ರಾಮನಾಥನ್ ರವರನ್ನು ಶಿವಮೊಗ್ಗೆಯಿಂದ ಸೆಕ್ರೆಟೇರಿಯಟ್ಟಿಗೆ, ಮಿ|| ಜೆ ಎ ಹೆಬ್ಲಿಕರ್‌ಯವರನ್ನು ಕೋಲಾರದಿಂದ ಶಿವಮೊಗ್ಗಾ ಸಬ್ ಡಿವಿಜನ್ ಗೆ ಮಿ|| ಎಂ ಜಿ ಕೃಷ್ಣಸ್ವಾಮಿರಾಯರನ್ನು ಮೈಸೂರಿನಿಂದ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಗೆ, ಮಿ|| ಆನಂದರಾವ್‌ಸಿರ್ಸಿಯವರನ್ನು ರೆವಿನ್ಯೂ ಕಮಿಷನರ ಆಫೀಸಿನಿಂದ ಕುಣಿಗಲ್‌ಪೇಟೆ ಸಬ್‌ಡಿವಿಜನ್ ಗೆ, ಮಿ|| ಟಿ ಬಿ ಜಯರಾಮಅಯ್ಯರವರನ್ನು ಬೆಂಗಳೂರಿನಿಂದ ರೆವಿನ್ಯೂ ಕಮಿಷನರ ಆಫೀಸಿಗೆ

ಜಿಯಲಾಜಿಕಲ್ ಇಲಾಖಾ ಅ|| ಸೆಕ್ರೆಟರಿ ಮಿ| ಇ ಡಬ್ಲಿಯು ವೆದರಲ್ ರವರಿಗೆ ಕೊಟ್ಟಿರುವ ನಾಲ್ಕುವರೆ ತಿಂಗಳ ಸಂಬಳವಿಲ್ಲದ ರಜವನ್ನು ಇನ್ನೂ ಮೂರು ತಿಂಗಳು ಜಾಸ್ತಿಮಾಡಿದೆ

ಕಾವೇರಿ ತಲಾವ್ ಡಿವಿಜನ್ ಅ|| ಇಂಜನಿಯರ್ ಮಿ| ಕೆ ಆರ್ ಶೇಷಾಚಾರ್ರಿಗೆ ಜೂನ್ ತಾ 5 ರಿಂದ ನಾಲ್ಕು ತಿಂಗಳ ಕಾಯಿಲೆ ರಜಾ ಕೊಟ್ಟಿದೆ

ಅ ಇಂಜನಿಯರ್ ಮಿ| ಎಂ ಎ ಆನಂದಾಳ್ವಾರ್‌ಯವರನ್ನು ದಕ್ಷಿಣ ಸರ್ಕಲ್‌ನಿಂದ ಕಾವೇರಿ ತಲಾವ್ ಡಿವಿಜನ್ ಗೆ ವರ್ಗಮಾಡಿದೆ

ಇಂಡಿಯಾ ದೇಶದ ವೃತ್ತಾಂತಗಳು.

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಫರೀದ್‌ಕೋಟ್ ಎಂಬ ಸಿಕ್ಕರ ದೇಶೀಯ ಸಂಸ್ಥಾನದ ಗ್ರಾಮಾಂತರಲ್ಲಿ ಪ್ರಜೆಗಳನ್ನು ಸದ್ಗುಣಗಳನ್ನಾಗಿಯೂ ಸಚ್ಚರಿತ್ರರನ್ನಾಗಿಯೂ ಮಾಡುವುದಕ್ಕೆ ಸರ್ದಾರ್ ಬಹದೂರ್ ಸರ್ದಾರ್ ದಯಾಳ್‌ಸಿಂಗ್ ಮಾನ್ ರವರು ಒಂದು ಸ್ವಾರಸ್ಯವಾದ ಏರ್ಪಾಡನ್ನು ರೂಢಿಗೆ ತಂದಿದಾರೆ. ಪ್ರತಿ ಒಂದು ಗ್ರಾಮದಲ್ಲೂ ಇರುವ ಪ್ರಜೆಗಳನ್ನು ಮೂರು ಪಂಗಡಗಳಾಗಿ ವಿಂಗಡಿಸಿ ಪಟ್ಟಿ ಬರೆದುಕೊಳ್ಳುವರು ಒಳ್ಳೇವರನ್ನು ಮೊದಲನೇ ದರ್ಜೆಗೂ, ಸಾಮಾನ್ಯರನ್ನು ಎರಡನೇ ದರ್ಜೆಗೂ, ಕೆಟ್ಟವರನ್ನು ಮೂರನೇ ದರ್ಜೆಗೂ ಸೇರಿಸಿ ಪಟ್ಟಿಗಳನ್ನು ತಯಾರುಮಾಡುತ್ತಾರೆ ಗ್ರಾಮದಲ್ಲಿರುವ ಪ್ರತಿ ಒಬ್ಬ ಪ್ರಜೆಯ ಹೆಸರೂ ಈ ರಿಜಿಸ್ಟರಿನಲ್ಲಿ ದಾಖಲಾಗುತ್ತದೆ ನೌಕರರು ಆಯಾ ಗ್ರಾಮಕ್ಕೆ ಹೋಗಿ ಅಲ್ಲಿರುವ ಮುಖಂಡರನ್ನೆಲ್ಲಾ ಕರಸಿಕೊಂಡು ಅವರ ಸಮಕ್ಷಮದಲ್ಲಿ ಎಲ್ಲರಿಗೂ ಗೊತ್ತಾಗುವಂತೆ ಪ್ರತಿ ಒಬ್ಬನ ಹೆಸರನ್ನೂ ಕೂಗಿಸಿ ಅವನವನ ಗುಣ ನಡತೆಯ ಪ್ರಕಾರ ಉತ್ತಮ, ಮಧ್ಯಮ, ಅಧಮ ಎಂಬ ಮೂರು ದರ್ಜೆಗಳಿಗೆ ಹಂಚಿಹಾಕಿ ಬರೆದುಕೊಳ್ಳುತ್ತಾರೆ ಇದರಿಂದ ಅಷ್ಟು ಜನರೆದುರಿಗೆ ಅಧಮನೆಂದು ಕಡೇ ದರ್ಜೆಗೆ ದಾಖಲಾಗಿರುವ ಗ್ರಾಮಸ್ಥನು ನಾಚಿಕೊಂಡು ಅವಮಾನಹೊಂದಿ ಮೇಲಣ ತರಗತಿಗಳಿಗೆ ಸೇರಿಕೊಳ್ಳುವಂತೆ ಒಳ್ಳೆಯವನಾಗಲು ಪ್ರಯತ್ನಪಡುತ್ತಾನೆ ಪ್ರತಿ ವರುಷವೂ ಹೆಸರುಗಳು ಬದಲಾವಣೆಯಾಗುವುದರಿಂದ ಜನರು ತಮ್ಮ ನಡತೆಯನ್ನು ತಾವೇ ತಿದ್ದಿಕೊಳ್ಳುವುದಕ್ಕೆ ಪ್ರೋತ್ಸಾಹವೂ ಅವಕಾಶವೂ ಆಗುವುದು ಈ ಹೊಸ ಕ್ರಮವು ರೂಢಿಗೆ ಬಂದು ಇನ್ನೂ ಆರು ತಿಂಗಳು ಮಾತ್ರ ಆಯಿತಾದರೂ ಅದರಿಂದ ಬಹಳ ಪ್ರಯೋಜನ ಕಂಡುಬಂದಿದೆ ಎಂದು ಪ್ರಕಟವಾಗಿದೆ

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಭಾವನಗರ ಸಂಸ್ಥಾನದಲ್ಲಿ ಈ ಸಲ ಕ್ಷಾಮನಿವಾರಣೆಗಾಗಿ ಮಾಡಿದ ಕಾರ್ಯಗಳು ಸ್ತೋತ್ರಾರ್ಹವಾಗಿರುತ್ತವೆ ಆ ಸಂಸ್ಥಾನದ ದಿವಾನ್ ರವರು ಕ್ಷಾಮ ಪ್ರಾಪ್ತವಾದ ಗ್ರಾಮ ಊರುಗಳಲ್ಲಿ ಸಂಚಾರಮಾಡಿ, ಜಮಾ ಕಂದಾಯದಲ್ಲಿ ರೂಪಾಯಿಗೆ ಆರು ಆಣೆಯಂತೆ ರಿಮಿಷನ್ ಮಾಡಿದರು ಇದರಿಂದ ಸಂಸ್ಥಾನಕ್ಕೆ 6 ಲಕ್ಷ ರೂಪಾಯಿ ಉತ್ಪತ್ತಿಯಲ್ಲಿ ಕಡಿಮೆಯಾಯಿತು ಉಳಿದ ಕಂದಾಯವನ್ನು ರಿಯಾಯತಿಯಿಂದ ವಸೂಲ್ಮಾಡಿಸಿದರು 14 ಲಕ್ಷ ರೂಪಾಯಿ ಕಂದಾಯವನ್ನು ಸುಭಿಕ್ಷ ಬಂದಾಗ ವಸೂಲ್ಮಾಡುವಂತೆ ಹುಕುಂ ಕೊಟ್ಟರು ಇದರಿಂದ ಆ ಸಂಸ್ಥಾನದ ಜಮಾ ಕಂದಾಯ 30 ಲಕ್ಷ ಉತ್ಪತ್ತಿ ಆಗುವಲ್ಲಿ 16 ಲಕ್ಷ ಮಾತ್ರ ವಸೂಲಾಗಿವೆ ಇದಲ್ಲದೆ ತಕಾವಿ ಸಾಲಗಳನ್ನು 1,11,000 ರೂಪಾಯಿ ತನಕ ರೈತರಿಗೆ ಕೊಡಿಸಿರುತ್ತಾರೆ ಗೋಶಾಲೆಗಳಿಗೋಸ್ಕರ ಬಹಳ ಹುಲ್ಲನ್ನು ಪರಸ್ಥಳಗಳಿಂದ ತರಿಸಿ ರೈತರಿಗೆ ಹಂಚಿಕೊಟ್ಟಿದ್ದಲ್ಲದೆ ಪರೋಪಕಾರಕ್ಕಾಗಿ ಸಾಹಸಪಡುತ್ತಿದ್ದ ಮಹಾಜನಸಭಾಕ್ಕೆ ಸರ್ಕಾರದಿಂದ 35,000 ರೂಪಾಯಿ ಗ್ರ್ಯಾಂಟುಕೊಡಿಸಿ ಅವರ ಪುಣ್ಯ ಕೆಲಸಗಳಿಗೆ ಸಹಾಯ ಮಾಡಿದರು ಇಷ್ಟೇ ಅಲ್ಲ ಮಹಾರಾಜರವರು ತಮಗೆ ಯುವರಾಜರವರು ಹುಟ್ಟಿದ ಆನಂದವನ್ನು ಪ್ರಕಾಶಪಡಿಸುವುದಕ್ಕಾಗಿ ಇಪ್ಪತ್ತು ಲಕ್ಷ ರೂಪಾಯಿ ಕೊಟ್ಟು ಕ್ಷಾಮನಿವಾರಣೆಯ ಫಂಡನ್ನು ಪ್ರಾರಂಭಮಾಡಿದಾರೆ ಈ ಮೂಲಧನದಿಂದ ವರುಷಕ್ಕೆ 80,000 ರೂಪಾಯಿ ಬಡ್ಡಿ ಉತ್ಪತ್ತಿಯಾಗುತ್ತದೆ ಪ್ರತಿ ವರುಷವೂ ಈ ಬಡ್ಡಿಯ ಪೈಕಿ 20,000 ರೂಪಾಯಿ ಮುಟ್ಟಿಸಿ ಸಂಸ್ಥಾನಾಮಳೆ ರೈತರ ಹಿತಾರ್ಥವಾಗಿ ಹೊಸ ಭಾವಿಗಳನ್ನು ತೋಡಿಸಬೇಕೆಂದೂ, ಹಳೆ ಭಾವಿಗಳನ್ನು ಆಳಮಾಡಿಸಬೇಕೆಂದೂ, ಇದಕ್ಕಾಗಿ ರೈತರಿಂದ ಒಂದು ಕಾಸೂ ತೆಗೆದುಕೊಳ್ಳಕೂಡದೆಂದೂ, ಪ್ರತಿ ವರುಷವೂ ಉಳಿಯುವ 60,000 ರೂಪಾಯಿ ಬಡ್ಡಿ ಹಣವನ್ನು ತೆಗೆದಿಟ್ಟು ಕ್ಷಾಮಪ್ರಾಪ್ತವಾದಾಗ್ಗೆ ರೈತ ಪ್ರಜೆಗಳಿಗೆ ದ್ರವ್ಯರೂಪವಾಗಿ ಸಹಾಯ ಮಾಡತಕ್ಕದ್ದೆಂದೂ ಮಹಾರಾಜರವರು ಆಜ್ಞೆಕೊಡಿಸಿರುತ್ತಾರೆ ಆದಕಾರಣ ಭಾವನಗರದ ರೈತನ ಸ್ಥಿತಿಯು ಎಷ್ಟೋ ಉತ್ತಮವಾಯಿತೆನ್ನುವುದಕ್ಕೆ ಸಂಶಯವಿಲ್ಲ

ಮೈಸೂರು ದಸರಾ ಪ್ರದರ್ಶನ

ಮೈಸೂರು ಸೀಮೆಯ ಶ್ರೀಮನ್ಮಹಾರಾಜಾ ಸರ್ಕಾರದವರ ಅಪ್ಪಣೆ ಅನುಸರಿಸಿ ಮೈಸೂರು ಪಟ್ಟಣದಲ್ಲಿ ಸನ್ 1913 ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ನಡೆಯುವ ದಸರಾ ಮಹೋತ್ಸವದಲ್ಲಿ ಕೈಗಾರಿಕೆಯ, ವ್ಯವಸಾಯದ ಮತ್ತು ದಾಸುಗಳ ಪ್ರದರ್ಶನವು ನಡೆಸಲ್ಪಡತಕ್ಕ ಬಗ್ಗೆ ಮುಂದೆ ವಿವರಿಸುವ ವಿಷಯವನ್ನು ಕಮಿಟಿಯವರು ಸಂಸ್ಥಾನದ ಪ್ರಜೆಗಳ ತಿಳುವಳಿಕೆಗಾಗಿ ಪ್ರಕಟಿಸಿರುತ್ತಾರೆ

ಪ್ರದರ್ಶನ ಪ್ರಾರಂಭ —ಈ ವರುಷ ಪ್ರದರ್ಶನವು ಅಕ್ಟೋಬರ್ 3 ನೇ ತಾರೀಖು ಶುಕ್ರವಾರದ ಲಾಗಾಯಿತು 17ನೇ ಶುಕ್ರವಾರದವರಿವಿಗೆ ತೆರೆಯಲ್ಪಡುವುದು ದನಗಳ ಮತ್ತು ಕೋಳಿಗಳ ಪ್ರದರ್ಶನವು, ನೇಯಿಗೆಯ ಪೋಟಾಪೋಟಿ ಸಹ ಅಕ್ಟೋಬರ್ 13ನೇ ತಾರೀಖು ಸೋಮವಾರ ಪ್ರಾರಂಭವಾಗಿ 15ನೇ ತಾರೀಖು ಬುಧವಾರ ಪೂರೈಸಲ್ಪಡುವುದು ಮರದ ಕೆತ್ತನೆ ಕೆಲಸದ ಮತ್ತು ಲೋಹದ ಕೆಲಸದ ಪೋಟಾಪೋಟಿಗಳು ಅಕ್ಟೋಬರ್ 3ನೇ ತಾರೀಖು ಲಾಗಾಯಿತು 18ನೇ ತಾರೀಖಿನವರಿವಿಗೆ ನಡೆಯುತ್ತವೆ ಕುಂಬಾರ ಕೆಲಸದ ಪೋಟಾಪೋಟಿಯು ಅಕ್ಟೋಬರ್ 14ರಲ್ಲು ಉಳುಮೆಯ ಪೋಟಾಪೋಟಿಯು 15ರಲ್ಲು ನಡೆಯುತ್ತವೆ

ಪ್ರದರ್ಶನಕ್ಕೆ ಸಾಮಾನುಗಳನ್ನು ಕಳುಹಿಸುವಿಕೆ —ಪ್ರದರ್ಶನಕ್ಕೆ ಕಳುಹಿಸಲ್ಪಡುವ ಸಾಮಾನುಗಳನ್ನು ಪ್ರದರ್ಶಕರಾಗಲಿ, ಅವರ ಏಜಂಟ್‌ಯಾ ಸೇವಕರಾಗಲಿ ತಂದು ಪ್ರದರ್ಶನದ ಸ್ಥಳದಲ್ಲಿ ಒಪ್ಪಿಸಬಹುದು, ಅಥವಾ ಟಪಾಲ್‌ಯಾ ರೈಲ್ವೆ ಮೂಲಕವಾಗಲಿ ಕಳುಹಿಸಬಹುದು ಆದರೆ ಎಲ್ಲಾ ತಾಲ್ಲೂಕು ಅಥವಾ ಡಿಸ್ಟ್ರಿಕ್ಟುಗಳ ಸಾಮಾನುಗಳು ಆಯಾಯ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಮೂಲಕವೇ ಕರಾರುವಾಕ್ ದ್ವಿಪ್ರತಿ ಲೀಸ್ಟುಗಳ ಸಮೇತ ಸೆಪಟಂಬರ್ 20ನೇ ತಾರೀಖಿನೊಳಗೆ ತಲಪುವಂತೆ ರವಾನಿಸಬೇಕು ಒಂದು ಲೀಸ್ಟನ್ನು ಸಾಮಾನಿನ ಜತೆಯಲ್ಲಿಯೇ ಕಳುಹಿಸಿಕೊಡಬೇಕು ಸಾಮಾನುಗಳನ್ನು ಲೀಸ್ಟುಪ್ರಕಾರ ಅಜಮಾಯಿಷಿ ಮಾಡಿ ಅವುಗಳು ಸರಿಯಾಗಿ ತಲಪಿವೆ ಎಂಬ ವಿಷಯವನ್ನು ಸೂಚಿಸಿ ಲೀಸ್ಟನ್ನು ಸೆಕ್ರೆಟರಿಯವರ ಸೈನ್ ನಿಂದ ವಾಪಸು ಮಾಡಲಾಗುತ್ತೆ

ಮೈಸೂರು ಸಂಸ್ಥಾನದ ಅಥವಾ ಇತರ ದೇಶದ ರೈತರಾಗಲೀ ಅಥವಾ ಶಿಲ್ಪಿಗಳಾಗಲೀ ರುಸುಂ ಕೊಟ್ಟು ಪ್ರದರ್ಶನಶಾಲೆಗೆ ಹೋಗಲು ಶಕ್ತರಿಲ್ಲದ ಪಕ್ಷದಲ್ಲಿ ಆಯಾ ತಾಲ್ಲೂಕು ಅಧಿಕಾರಿಗಳಿಂದ ಬರೆಸಿಕೊಂಡುಬಂದಲ್ಲಿ ಅಂಥವರು ಮುಫತ್ತಾಗಿ ಪ್ರದರ್ಶನಶಾಲೆಯಲ್ಲಿ ಬಿಡಲ್ಪಡುತ್ತಾರೆ

ಗೋಕಾಯಿಗಳು

ಒಳ್ಳೇ ಹಸುಗಳ ಲಕ್ಷಣಗಳು

ಹಸುಗಳನ್ನು ಕೊಳ್ಳುವವರು ಅವುಗಳಲ್ಲಿ ಕೆಳಗೆ ಹೇಳಿರುವ ಲಕ್ಷಣಗಳು ಕಂಡುಬಂದರೆ ಅವು ಒಳ್ಳೇ ತಳಿಯವುಗಳೆಂದು ತಿಳಿದುಕೊಳ್ಳಬಹುದು ಸಾಧುವಾದ ನೋಟವೂ, ಭಾರಿಯಾದ ಶರೀರವೂ, ಮೇವನ್ನು ಅಗಿಯಲು ಬಲವಾದ ದವಡೆಗಳೂ, ದಪ್ಪನಾದ ಕೆಚ್ಚಲು ಮತ್ತು ಮೊಲೆಗಳು ಇರಬೇಕು ಕೆಲವು ಹಸುಗಳಿಗೆ ಮುಂದಲ ಮೊಲೆಗಳು ಮಾತ್ರ ಚೆನ್ನಾಗಿ ದಪ್ಪನಾಗಿ ಬೆಳೆದು ಹಿಂದಿನ ಮೊಲೆಗಳು ಬಹಳ ಚಿಕ್ಕದಾಗಿರುವುವು ಇದು ಸುಲಕ್ಷಣವೆಂದು ಹೇಳಲಾಗದು ಕೆಚ್ಚಲಿಗೆ ಹಾಲನ್ನು ತಂದು ಬಿಡುವ ನಾಳವು ಸುಲಭವಾಗಿ ಹೆಬ್ಬೆಟ್ಟಿಗೆ ಸಿಕ್ಕಬೇಕು ಇಲ್ಲದಿದ್ದರೆ ಆ ಹಸುವು ಹೆಚ್ಚಾಗಿ ಹಾಲನ್ನು ಕೊಡಲಾರದೆಂದು ಹೇಳುತ್ತಾರೆ ಹಸುವಿನ ಎದೆ ಮತ್ತು ಹಿಂಭಾಗವು ಅಂದರೆ ಕೆಚ್ಚಲೂ ಮತ್ತು ಬಾಲದ ಬುಡವೂ ಸೇರುವ ಪ್ರದೇಶವಲ್ಲ ವಿಶಾಲವಾಗಿರಬೇಕು ಚರ್ಮವು ಪತ್ತಗಿದ್ದರೆ ಹಸುವು ಹೆಚ್ಚು ಹಾಲನ್ನು ಕರೆಯುವುದೆಂದು ಹೇಳುವರು ಚರ್ಮವು ಮೃದುವಾಗಿಯೂ ಮತ್ತು ಎಣ್ಣೆ ಬಳಿದಂತೆ ಮಿಂಚುತ್ತಿದ್ದರೆ ಮತ್ತೂ ಉತ್ತಮವೇ ಸರಿ ಹಸುವನ್ನು ಕೊಳ್ಳುವವನು ತಾನೇ ಹಸುವನ್ನು ಕರೆದು ನೋಡಬೇಕು ಹಾಲು ಗಟ್ಟಿಯಾಗಿಯೂ ಹಳದೀ ಬಣ್ಣದ್ದಾಗಿದ್ದರೆ ಅದು ಉತ್ತಮವಾದ ಹಾಲೆಂದು ತಿಳಿದುಕೊಳ್ಳಬೇಕು ಹಾಲು ತೆಳುವಾಗಿದ್ದರೆ ಬಹಳ ಕೊಂಚ ಬೆಣ್ಣೆಯು ಸಿಕ್ಕುವುದೆಂಬುದು ಎಲ್ಲರಿಗೂ ಗೊತ್ತೇ ಇದೆ ಆದ್ದರಿಂದ ಹಾಲಿನಲ್ಲಿ ಬೆಣ್ಣೆ ಅಂಶವು ಎಷ್ಟಿದೆ ಎಂಬುದನ್ನೂ ಮತ್ತು ಹಸುವಿನಲ್ಲಿ ಕ್ಷಯರೋಗದ ಚಿಹ್ನೆ ಏನಾದರೂ ಇದೆಯೋ ಎಂಬುದನ್ನೂ ಪರೀಕ್ಷಿಸಿ ನೋಡಬೇಕು ಒದೆಯುವುದು, ನೆಗೆಯುವುದು ಮತ್ತು ಇತರ ದನಗಳೊಡನೆ ಜಗಳವಾಡುವುದು ಇವೆಲ್ಲಾ ಸುಲಕ್ಷಣಗಳಲ್ಲ

ಕರೆಯುವ ಹಸುಗಳ ಪಾಲನೆ

ಕರೆಯುವ ಹಸುಗಳನ್ನು ಸ್ವಲ್ಪವೂ ಗಾಬರಿಮಾಡಕೂಡದು ದನಗಳಲ್ಲಿ ಹಾಲುಕೊಡುವುದು ಬಹಳ ತೊಡಕಾದ ಕೆಲಸ ಅವು ಹಾಲನ್ನು ಕೊಡುತ್ತಿರುವಾಗ ಅವುಗಳನ್ನ ಹೊಡೆಯುವುದು, ಬೈಯ್ಯುವುದು, ಗಾಬರಿಮಾಡುವುದು, ಈ ರೀತಿ ಮಾಡಿದರೆ ಹಾಲು ಕೊಡುತ್ತದೆ ನಿಂತು ಬರುಬರುತ್ತಾ ಹಾಲು ಕಡಿಮೆಯಾಗುವುದು ಆದ್ದರಿಂದ ಕರೆಯುವ ಹಸುಗಳನ್ನು ಮೇವಿಗೆ ಹೊಡೆದುಕೊಂಡು ಹೋಗುವಾಗಲೂ, ಕೊಟ್ಟಿಗೆಯಲ್ಲಿ ಕಟ್ಟುವಾಗ ಮತ್ತು ಹಾಲು ಕರೆಯುವಾಗಲೂ ಬಹಳ ಪ್ರೀತಿಯಾಗಿ ಕಾಣಬೇಕು ಅವುಗಳಿಗೆ ಸರಿಯಾದ ಹೊತ್ತುಹೊತ್ತಿಗೆ ಅವು ಹಸಿದಿರದಂತೆ ಮೇವನ್ನು ಹಾಕಬೇಕು —ಹಸುವನ್ನು ಕಟ್ಟತಕ್ಕ ಕೊಟ್ಟಿಗೆಯಲ್ಲಿ ಅವುಗಳು ಮಲಗಲು ಮೆತ್ತಗೆ ಹುಲ್ಲನು ಹಾಕಬೇಕಲ್ಲದೆ ಗಟ್ಟಿಯಾದ ಬರೀ ನೆಲದಮೇಲೆ ಅವು ಮಲಗುವಂತೆ ಮಾಡಬಾರದು ಅವುಗಳಿಗೆ ಸರಿಯಾಗಿ ಮೇವುಹಾಕದೆ ಅವುಗಳನ್ನು ದೊಣ್ಣೆಯಿಂದ ಹೊಡೆಯುವುದು, ಅವುಗಳ ಮುಂದೆ ನಿಂತು ಕಿರುಚಿ ಗಾಬರಿಮಾಡುವುದು ಇವೇ ಮೊದಲಾದ ಕೆಟ್ಟ ಕೆಲಸಗಳನ್ನು ಮಾಡಿದರೆ ಅವು ತಮ್ಮ ಮಾಲೀಕರಿಗೆ ತಕ್ಕ ಪ್ರಯೋಜನವನ್ನು ಮಾಡದೇ ಇರುವುದಿಲ್ಲ ಸ್ವಲ್ಪವೂ ಗಾಬರಿಯಿಲ್ಲದೆ ಶಾಂತವಾಗಿ ಮೆಲಕು ಹಾಕುತ್ತಾ ಯಾವ ಕೊಟ್ಟಿಗೆಯಲ್ಲಿ ದನಗಳು ಮಲಗಿರುತ್ತವೋ ಅದೇ ಅತ್ಯುತ್ತಮವಾದ ಕೊಟ್ಟಿಗೆಯೆಂದು ಹೇಳಬಹುದು ಮುಖ್ಯವಾಗಿ ಹಸುಗಳನ್ನು ಕರೆಯುವಾಗ ನಿಶ್ಶಬ್ದವಾಗಿರಬೇಕು

ಹುಲ್ಲು ಹಾಸದೆ ತಣ್ಣಗಿರುವ ಗಟ್ಟಿಯಾದ ನೆಲದಮೇಲೆ ಹಸುಗಳು ಮಲಗಿದರೆ ಅವುಗಳ ಕೆಚ್ಚಲಿಗೆ ಏಳಳ ಹಾನಿಯಾಗುವ ಸಂಭವವುಂಟು ಸ್ವಲ್ಪಕಾಲದ ನಂತರ ಅವು ಮಲಗುವುದನ್ನು ಬಿಟ್ಟು ವಿಶೇಷವಾಗಿ ನಿಂತೇ ಇರುವುವು ಸ್ವಲ್ಪ ಕಾಲ ನಂತರ ಕಾಲು ನೋವಾಗುವುದರಿಂದ ಅವು ಒಂದೇ ಕಡೆಯಲ್ಲಿ ನಿಲ್ಲದೆ ಸ್ಥಳವನ್ನು ಬದಲಾಯಿಸುತ್ತಿರುವುವು ಆಗ್ಗೆ ಮಗ್ಗುಲಲ್ಲಿ ಮಲಗಿರುವ ಇತರ ದನಗಳ ಕೆಚ್ಚಲನ್ನು ತುಳಿದು ಘಾಯಮಾಡುವುವು ಈ ರೀತಿಯಲ್ಲಿ ಅನೇಕ ಹಸುಗಳು ಗಾಯಪಡುವುವು —ಹೊತ್ತುಹೊತ್ತಿಗೆ ಹಸುಗಳಿಗೆ ಮೇವನ್ನು ಹಾಕುವುದೂ ಒಂದು ಮುಖ್ಯವಾದ ಕೆಲಸವಾಗಿದೆ ಒಳ್ಳೇ ಜಾತಿಯ ಹಸುವು ಮೇವು ಹಾಕುವ ಕಾಲವು ಸಮೀಪವಾದಕೂಡಲೆ ನಿಂತಲ್ಲಿ ನಿಲ್ಲದೆ ಮೇವನ್ನು ಹಾಕುವವನ ಆಗಮನವನ್ನೇ ನಿರೀಕ್ಷಿಸುತ್ತಿರುವುದು ಆಗ್ಗೆ ಸರಿಯಾಗಿ ಆದಕ್ಕೆ ಮೇವನ್ನು ಕೊಡದಿದ್ದರೆ ಅದರ ಹಾಲು ಖಂಡಿತವಾಗಿಯೂ ಕಡಿಮೆಯಾಗುವುದು — ಚಳಿಗಾಲದಲ್ಲಿ ಬಹಳ ಮಳೆಯಾಗಿರುವಾಗ್ಗೆ ಹಸುಗಳನ್ನ ಮೇವಿಗೆ ಹೊರಕ್ಕೆ ಅಟ್ಟಿದರೆ ಅವು ಅಲ್ಲಿ ಮೇಯ್ಯದೇ ಬೆನ್ನನ್ನು ಬಗ್ಗಿಸಿಕೊಂಡು ನಿಂತಿರುವುವಲ್ಲದೆ ಆದಿನ ಸರಿಯಾಗಿ ಹಾಲನ್ನು ಕೊಡುವುದಿಲ್ಲ ಅಲ್ಲದೆ ಮೇವಿನಲ್ಲಿ ಉಪ್ಪನ್ನು ಕೊಡುವುದೂ ಒಂದು ಮುಖ್ಯವಾದ ಕೆಲಸವಾಗಿರುತ್ತದೆ —ಮುಖ್ಯವಾಗಿ ಅವುಗಳಿಗೆ ಸಾಧ್ಯವಾದ ಅನುಕೂಲಗಳನ್ನೆಲ್ಲಾ ಕಲ್ಪಿಸಿಕೊಡಬೇಕು ಬಿಸಿಲು ಗಾಳಿಗಳ ಹೊಡತಕ್ಕೆ ಅವುಗಳನ್ನು ಗುರಿಮಾಡಬಾರದು ಅವುಗಳನ್ನು ಬೈಯಲೂಕೂಡದು ಯಾಕೆಂದರೆ ಮನುಷ್ಯರಂತೆ ಅವು ಮಾತನಾಡಲಾರದಿದ್ದಾಗ್ಯೂ ಮನುಷ್ಯರು ಆಡುವ ಮಾತನ್ನು ಅವು ಚೆನ್ನಾಗಿ ತಿಳಿದುಕೊಳ್ಳಬಲ್ಲವು

ಬಾತ್ಮಿದಾರರಿಗೆ ನೋಟೀಸ್

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಟಿ ಸುಬ್ಬರಾವ್, ಮುಳುವಾಗಲು—ತ ರೆವಿನ್ಯೂ ಆಫೀಸರಿಯ ಬೆಸೆಯಿಂದ ಗ್ರಾಮಾಧಿಕಾರಿಗಳಿಗೂ ಅಲ್ಲಿ ನೌಕರರಿಗೂ ವರ್ತಕರಿಗೂ ನೀವು ಹೇಳುವಷ್ಟು ಕಷ್ಟನಷ್ಟಗಳುಂಟಾಗುತ್ತಿದ್ದರೆ ಅವುಗಳನ್ನೆಲ್ಲಾ ಡಾಕ್ಟರ್ ಡೆಪ್ಯುಟಿ ಕಮಿಷನರ್‌ರಿಗೂ, ದಿವಾನರವರಿಗೂ ಅರ್ಜಿ ಬರೆದುಕೊಂಡು ತಿಳಿಸಿದರೆ ಅವರು ತನಿಖೆಯಿಂದ ಕ್ರಮಪಡಿಸುತ್ತಾರೆ ಕಷ್ಟನಷ್ಟಗಳನ್ನು ಅನುಭವಿಸುತ್ತಾ ಗೋಣಗಾಡುವುದರಲ್ಲಿ ಫಲವಿಲ್ಲ

ಪಟೇಲ್ ಕಂಬೇಗೌಡ, ಸಿರಾ ತಾಲ್ಲೂಕು—ನೀವು ಹೇಳುವ ವಿಚಾರ ಇನ್ನೂ ತನಿಖೆಯಲ್ಲಿದೆ ಇತ್ಯರ್ಥವಾಗುವುದಕ್ಕೆ ಮುಂಚೆ ಅದನ್ನು ಪ್ರಕಟಿಸಲಾಗದು

ಬಿ ರಂಗರಾವ್, ಶಿವಮೊಗ್ಗ —ನೀವು ಬರೆಯುವ ಸಂಗತಿ ಮೊದಲೇ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿದೆ ಅದನ್ನೇ ಮತ್ತೆ ಪ್ರಕಟಿಸಬೇಕಾದ ಅವಶ್ಯಕಾಣುವುದಿಲ್ಲ

ಚನ್ನಕೇಶವಯ್ಯ, ಶಿವಮೊಗ್ಗ —ನೀವು ಹೇಳುವ ವಿಷಯ ಜನರಲ್ಲಿ ಅಸೂಯೆ ಮತ್ತು ಅಸಮಾಧಾನವನ್ನು ಉಂಟುಮಾಡತಕ್ಕದ್ದಾಗಿರುವುದರಿಂದ ಅದನ್ನು ಪ್ರಕಟಿಸಲಾರೆವು

ಬಳಕೆರೆ, ಕಡೂರು ತಾ —ಈ ಬಾತ್ಮಿಯಲ್ಲಿ ವರ್ತಮಾನಗಳೇನೂ ಕಂಡುಬರುವುದಿಲ್ಲ

ಬೆಂಗಳೂರು ದಂಡಿನಲ್ಲಿರುವ ಕ್ರಿಶ್ಚಿಯನ್ ಬ್ರಹ್ಮಾನಂದ ಸ್ವಾಮಿಗಳು ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ ಚಿಕ್ಕಬಳ್ಳಾಪುರ, ರಾಬರ್ಟ್‌ಸನ್‌ಪೇಟೆ, ಬೌರಿಂಗ್‌ಪೇಟೆ ಪ್ರಾಂತ್ಯಗಳಲ್ಲಿ ಸಂಚರಿಸುತ್ತಾ ಉಪನ್ಯಾಸಗಳನ್ನು ಮಾಡುತ್ತಾ ಬಂದಿದ್ದಾರೆಂದು ತಿಳಿಯುತ್ತೇವೆ ಈ ಸಂಬಂಧವಾಗಿ ಬರೆದು ನಮ್ಮಲ್ಲಿಗೆ ಬರುತ್ತಿರುವ ಉಪನ್ಯಾಸಗಳನ್ನು ಸ್ಥಳಸಂಕೋಚದಿಂದ ಪ್ರಕಟಿಸಲಾರೆವೆಂದು ವ್ಯಸನಪಡುವೆವು —ಎಡಿ]

ವರ್ತಮಾನ ಪತ್ರಿಕೆ ಕರೆಸ್ಪಾಂಡೆನ್ಸ್

"ವೇದವಾಹಿನಿ" ಎಂಬ ಮಾಸಪತ್ರಿಕೆ

ಅಯ್ಯಾ,

ನಾನು "ವೇದವಾಹಿನಿ" ಎಂಬ ಮಾಸಪತ್ರಿಕೆಗೆ 1912ನೇ ಇಸವಿಯಲ್ಲಿ ಚಂದಾದಾರನಾಗಿದ್ದೆ ಆ ವರ್ಷದಲ್ಲಿ ಬರಬೇಕಾಗಿದ್ದ ಮಾಸಪತ್ರಿಕೆಗಳು ಪೂರಾ ಬಂದವು ಆದರೆ ಗ್ರಂಥವು [illegible] ಬರಲಿಲ್ಲ ಇನ್ನೂ ಆರು ತಿಂಗಳಲ್ಲಿ [illegible] ಎಡಿಟರವರ ನೇಟೀಸು ಮೇರೆ ಪುನಃ ಈ ವರ್ಷ [illegible] ನಾನು ಈ ವರ್ಷ ಮಾರ್ಗಶಿರ ಮಾಸದ ಲಾಗಾಯಿತು ಈ ವರೆಗೂ ಸದರಿ "ವೇದವಾಹಿನಿ" ಪತ್ರಿಕೆ ಬರಲಿಲ್ಲ ಈ ಬಗ್ಗೆ ನಾನು ಎಡಿಟರಿಗೆ ಕಾಗದ ಬರೆದ ಜವಾಬೇ ಇಲ್ಲ ನನ್ನಂತೆಯೇ ಈ ತೀರ್ಥಹಳ್ಳಿ ತಾಲ್ಲೂಕಿನ ವೇದವಾಹಿನೀ ಚಂದಾದಾರರಿಗೆಲ್ಲಾ ಪತ್ರಿಕೆಗಳೇ ಇಲ್ಲ ಈ ಪತ್ರಿಕೆಯನ್ನು ಏರ್ಪಾಡು ಕೊಳ್ಳುವುದೋ ಅಥವಾ ಕೊಟ್ಟ ಹಣವನ್ನು ವಾಪಸು ತರಿಸಿಕೊಳ್ಳುವುದಕ್ಕೆ ಪ್ರಯತ್ನಪಡಬೇಕಾಗಿದೆ

ಎನ್ ವಿ ಕೆ ವೆಂಕಟರಾವ್ ನೊಣಬೂರು ತೀರ್ಥಹಳ್ಳಿ

ವಿಚಾರವಿಲ್ಲದ ಫೈಸಲ್ ಉಚಿತವೆ?

ಅಯ್ಯಾ,

ಹೊಳೆನರಸೀಪುರದ ಮುನ್ಸಿಫ್ ಕೋರ್ಟಿನಲ್ಲಿ 1 7 ವರುಷಗಳ ಹಿಂದೆ ಒರಿಜಿನಲ್ ಮೊಕದ್ದಮೆಯಲ್ಲಿ ವಾದಿ ತಿಮ್ಮಮ್ಮನೆಂಬುವಳು ಸ್ವಾಧೀನವಿದ್ದ ಮೊಬಲಗನ್ನು ಹೊಂದಿದ್ದಾಗ್ಯೂ ಹಂಚಿಕೆಯಾದ ಜಮೀನಿನ ಮೇಲೆ ಡಿಕ್ರಿ ಪಡೆದು ಸದರಿ ಮೊಕದ್ದಮೆಗಳು ವಾಸಮಾಡುವ ಮನೆಯನ್ನು ಒಕ್ಕಲಿಸಿ ಹರಾಜು ಮಾಡಿಸಿದ್ದರ ಮೇಲೆ ಸದರಿ ಪ್ರತಿವಾದಿಗಳು ಡಿಕ್ರಿಯಲ್ಲಿ ಮೋಸಕರವಾದದ್ದನ್ನು ವಜಾಮಾಡಿಸಿ ತಾಜಾ ಫೈಸಲ್ ಕೊಡಿಸಬೇಕೆಂದು ಕಾನೂನು ರೀತ್ಯಾ ದಾವಾ ಮಾಡಿದ್ದಕ್ಕೆ ಸದರಿ ಕೋರ್ಟಿನಲ್ಲಿ ವಿಚಾರಣೆ ಇಲ್ಲದೆ ವಜಾ ಮಾಡಿಸಿದರು ಇದರ ಮೇರೆ ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ ಅಪೀಲ್ ಮಾಡಿದ್ದರಲ್ಲಿ ಅಲ್ಲಿಯೂ ಸಹ ವಿಚಾರವಿಲ್ಲದೆ ವಜಾ ಮಾಡಿಸಿದ್ದಾರೆ ಕೋರ್ಟಿನಲ್ಲಿ ನ್ಯಾಯ ಪರಿಪಾಲನೆ ಆಗುತ್ತೆಂತ ಬಹುಕಷ್ಟದಿಂದ ಕೋರ್ಟಿಗೆ ಸ್ಟ್ಯಾಂಪು ಕಿಮ್ಮತ್ತು ವಗೈರೆ ಬಹಳ ಖರ್ಚುಮಾಡಿದಾಗ್ಯೂ ವಿಚಾರಣೆ ಇಲ್ಲದೆ ಫೈಸಲಾಗಿರುತ್ತೆ ಈ ಅಂಥಕರಾದ ಬಡವರುಗಳಿಗೆ ನ್ಯಾಯದೊರಕುವದು ಹ್ಯಾಗೋ ತಿಳಿಯಲಿಲ್ಲ

ಮೈನರುಗಳ ಗಾರ್ಡಿಯನ್ ಲಕ್ಷ್ಮೀದೇವಮ್ಮ

[ವಿಚಾರಣೆ ಇಲ್ಲದೇನೇ ಎರಡು ಕೋರ್ಟುಗಳಲ್ಲೂ ಫೈಸಲಾಯಿತೆಂಬುವುದನ್ನು ನಾವು ನಂಬಲಾರೆವು ವಿಚಾರಣೆ ಕಾಲದಲ್ಲಿ ವಾದಿ ಪ್ರತಿವಾದಿಗಳು ರುಜುವಾತು ಕೊಡುವ ಸಾಕ್ಷಿ ಮುಂತಾದ ಆಧಾರದ ಮೇಲೆ ಜಡ್ಜಿಗಳು ಫೈಸಲು ಹೇಳುತ್ತಾರೆ ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಲ್ಲಿ ಅನುಕೂಲವಾದರೂ ಆಗಬಹುದು —ಎಡಿ]

ನಾಮಧಾರಿಜನರ ಪುನೋಽಭಿವೃದ್ಧಿಯ ಸಂಘ

ಅಯ್ಯಾ,

ಈ ನಮ್ಮ ತೀರ್ಥಹಳ್ಳಿ ತಾಲೂಕಿನಲ್ಲಿ ನಾಮಧಾರಿ ಜನಗಳ ಅಭಿವೃದ್ಧಿಗೋಸ್ಕರ ನಮ್ಮ ಜಾತಿಯ ಮುಖಂಡರಾದ ಮ|| ದೇವಾಂಗಿ ರಾ|| ರಾಮಣ್ಣಗೌಡರು ಈಗ ಎರಡು ವರುಷದಿಂದಲೂ ಪ್ರತಿವರುಷದ ಪುಷ್ಯಶುದ್ಧ ಪಾಡ್ಯದ ದಿವಸ ನಮ್ಮ ಜನರ ಮುಖಂಡರೆಲ್ಲರೂ ತೀರ್ಥಹಳ್ಳಿ ಮೊಕ್ಕಾಂನಲ್ಲಿ ಸೇರುವಂತೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿ ಬರಮಾಡಿಕೊಂಡು ಮೀಟಿಂಗು ನಡಿಸಿ ನಮ್ಮ ಜನರ ಅಭಿವೃದ್ಧಿಗೆ ಕುಂದಕವಾಗಿರತಕ್ಕ (1) ಮದ್ಯಪಾನ, (2) ಬಾಲ್ಯವಿವಾಹ, (3) ವಿವಾಹದಲ್ಲಿ ದುಂದುಗಾರಿಕೆ (4) ವಿದ್ಯಾವಿಹೀನತೆ, ಈ ಮುಂತಾದ ದೋಷಗಳನ್ನು ನಿವಾರಣೆ ಮಾಡುವಬಗ್ಗೆ ಅನೇಕ ವಿಧವಾಗಿ ಸಭೆಯವರಿಂದ ಚರ್ಚಿಸಿ ಅವುಗಳನ್ನೆಲ್ಲಾ ತಮ್ಮ ಪಾಟುಮಾಡಬೇಕೆಂದು ನಿಬಂಧನೆ ಮಾಡಿಕೊಂಡಿರುತ್ತಾರೆ ಈ ವರುಷದ ಸಭೆಯು ಮಾತ್ರ ಪುಷ್ಯಶುದ್ಧ ಪಾಡ್ಯದ ದಿವಸ ಸೇರುವದಕ್ಕೆ ಅನನುಕೂಲ ಇದ್ದದ್ದರಿಂದ ತಾ 31-1-14ಕ್ಕೆ ಸೇರಿತ್ತು ಆದರೆ ಸಭೆಯಲ್ಲಿ ಹಾಜರಾಗುವವರೆಲ್ಲಾ ಆಗ ನಡೆದ ತೀರ್ಮಾನಗಳಿಗೆ ಒಪ್ಪಿಕೊಂಡು ರಿಜಿಸ್ಟರ್ ಬುಕ್ಕಿನಲ್ಲಿ ರುಜುಮಾಡಿಹೋಗುತ್ತಾ ಇದ್ದಾರಲ್ಲದೆ ಸಭೆಯಲ್ಲಿ ನಡೆದ ತೀರ್ಮಾನದಂತೆ ಮದ್ಯಪಾನ ಮಾತ್ರ ಆಯಾ ಸೀಮೆಯ ಮುಖಂಡರೇ ಬಿಟ್ಟಿರುವಂತೆ ತೋರುವುದಿಲ್ಲ ಈ ರೀತಿ ನಿಬಂಧನೆಗಳು ಮಾಡುತ್ತಾ ಬಂದವರಲ್ಲಿ ಮುಖಂಡರಾದವರೇ ಶ್ರದ್ಧೆ ತೆಗೆದುಕೊಳ್ಳದೆ ಹೋಗಿರುವದರಿಂದ ಕುಡಿಕತನವೂ ಬರಬರುತ್ತಾ ಹೆಚ್ಚಾಗಿಬಿಟ್ಟು ಈ ತಾಲ್ಲೂಕಿನ ಗ್ರಾಮಾಂತರಗಳ ಸೇಂದಿ ಸಾರಾಯಿ ಅಂಗಡಿಗಳ ಕಂಟ್ರಾಕ್ಟು ವರವೂ ಒಂದಕ್ಕೆ ಹತ್ತರಷ್ಟು ಹೆಚ್ಚುತ್ತಾ ಬಂದಿರುತ್ತದೆ ಮದ್ಯಪಾನವನ್ನು ನಮ್ಮ ಜನಗಳು ಸಂಪೂರ್ಣ ಬಿಟ್ಟುಬಿಡುವಂತೆ ಮಾಡುವುದಕ್ಕೆ ಬಲವಾದ ನಿರ್ಬಂಧವನ್ನು ಯಾವ ಮಾರ್ಗದಿಂದ ಕಲ್ಪಿಸಬೇಕೋ ತಿಳಿಯದೆ ಇದೆ

ಆದರೆ ಈ ವರುಷದ ಮೀಟಿಂಗಿನಲ್ಲಿ ಚರ್ಚೆ ನಡೆದು ತೀರ್ಮಾನವಾಗಿ ನಿಂತಿರುವುದರ ಸ್ವಕೀಯ ಒಂದು ವಿಷಯಮಾತ್ರ ನಮ್ಮ ಜನರನ್ನು ಏಳಿಗೆಗೆ ತರಬಹುದೆಂದು ನಂಬಬಹುದಾಗಿದೆ ಅದು ಯಾವದೆಂದರೆ ನಮ್ಮ ಜನಗಳ ಲಗ್ನಕಾಲದಲ್ಲಿ ಪ್ರತಿ ಒಬ್ಬನೂ ನಮ್ಮ ಜನರ ವಿದ್ಯಾಭಿವೃದ್ಧಿ ಫಂಡಿಗಾಗಿ ನಾಲ್ಕು ರೂಪಾಯಿ ನಂತೆ ತೆಗೆದಿಟ್ಟು ಮ ದೇವಂಗಿ ರಾಮಣ್ಣಗೌಡರಲ್ಲಿಗೆ ಕಳುಹಿಸುತ್ತಾ ಒಂದು ಭಾರಿಯಾಗಿ ಹಣವನ್ನು ಜಮಾಯಿಸಿ ಈ ತಾಲ್ಲೂಕು ಹೆಡ್‌ಕ್ವಾರ್ಟರಾದ ತೀರ್ಥಹಳ್ಳಿಯಲ್ಲಿ ಒಂದು ದೊಡ್ಡ ಛತ್ರ ಕಟ್ಟಿ ಓದುವುದಕ್ಕೆ ಬರುವ ವಿದ್ಯಾರ್ಥಿಗಳಿಗೆ ಎಲ್ಲಾ ವಿಧವಾದ ಸೌಕರ್ಯಗಳನ್ನೂ ಕಲ್ಪಿಸುವ ಏರ್ಪಾಡು ಮಾಡಬೇಕೆಂಬುದೇ ಇದರಿಂದ ಕಂಡುಬರುವದೇನೆಂದರೆ ಆಯಾಯ ಸೀಮೆಯ ಮುಖಂಡರು ಮೊದಲು ಸಭೆಯ ಕಟ್ಟಳೆಗಳನ್ನು ಕೈಕೊಂಡು ನಡೆಯುತ್ತಾ ಇತರರನ್ನು ಪ್ರೋತ್ಸಾಹಿಸುತ್ತಾ ಬರುವುದರಿಂದಲೂ ನಮ್ಮಲ್ಲಿ ಪ್ರತಿ ಒಬ್ಬರೂ ತಂತಮ್ಮ ಮಕ್ಕಳನ್ನು ಚೆನ್ನಾಗಿ ವಿದ್ಯಾವಂತರನ್ನಾಗಿ ಮಾಡುವುದರಿಂದಲೂ ಉತ್ತರೋತ್ತರ ಈ ಅನಾಚಾರಗಳೆಲ್ಲಾ ಕಡಿಮೆಯಾಗುತ್ತಾ ಬರುವುದರಲ್ಲಿ ಸಂದೇಹವಿಲ್ಲ

ಗೋ ರಾ ವೆಂಕಪ್ಪಗೌಡ

ಮದ್ಯಪಾನ ವಿಸರ್ಜನವು

ಅಯ್ಯಾ,

ಮಂಡ್ಯ ತಾಲ್ಲೂಕು ಕೊಮ್ಮೇರಹಳ್ಳಿ ಎಂಬ ಗ್ರಾಮದಲ್ಲಿ ಸುಮಾರು 300-400 ಜನ ಪಂಚಮರ ವರ್ಗದವರು ಇರುತ್ತಾರೆ ಇವರೆಲ್ಲರೂ ವಿಶೇಷವಾಗಿ ನೇಯ್ಗೆ ಕಸಬಿನಿಂದಲೇ ಜೀವಿಸತಕ್ಕವರಾಗಿರುತ್ತಾರೆ ಇವರಿಗಾಗಿ ಒಂದು ಕೋಆಪರೇಟಿವ್ ಸೊಸೈಟಿಯು ಪಂಚಮರ ಕೋಆಪರೇಟಿವ್ ಸೊಸೈಟಿ ಎಂಬ ಹೆಸರಿನಿಂದ ಏರ್ಪಟ್ಟಿರುತ್ತದೆ ಈ ಸೊಸೈಟಿಯ ಆನರರಿ ಸೆಕ್ರೆಟರಿಯವರಾದ ಮ ಎಚ್ ಕೆ ಪುಟ್ಟಣ್ಣನವರು ಸದರೀ ಪಂಚಮರಿಗೆಲ್ಲಾ ದನ ಮತ್ತು ಕೋಣ ಮುಂತಾದ ಜಾನುವಾರುಗಳನ್ನು ಕೊಲ್ಲುವುದು ಪಾಪಕರ ಮತ್ತು ರೋಗಾದ್ಯುಪದ್ರವ ವಗೈರೆಗಳಿಂದ ಸತ್ತ ದನ ವಗೈರೆ ಪ್ರಾಣಿಗಳನ್ನು ತಿನ್ನುವುದು ಅನಾರೋಗ್ಯಕರವಾದ ಇವುಗಳನ್ನು ತ್ಯಜಿಸಬೇಕು ಎಂಬೀ ರೀತಿಯಾಗಿ ಬೋಧಿಸುತ್ತಲೂ, ವಾರಕ್ಕೊಮ್ಮೆ ಪುರಾಣೇತಿಹಾಸಗಳಿಂದ ಒಂದೊಂದು ಕಥೆಯನ್ನು ಓದಿ ಸರ್ವರಿಗೂ ತಿಳಿಸುತ್ತಲೂ ಇದ್ದರು ಮೇಲ್ಕಂಡವರ ಈ ಸದುಪದೇಶ ಜನಗಳಿಗೆಲ್ಲಾ ಮನಗಂಡು ಸರ್ವರೂ ಈ ಗ್ರಾಮಕ್ಕೆ ಸಮೀಪದಲ್ಲಿರುವ ಶ್ರೀನೃಸಿಂಹಸ್ವಾಮಿ ಬೆಟ್ಟದಲ್ಲಿ ಪ್ರಮಾಣಪೂರ್ವಕ ಈ ದುರಾಚಾರಗಳನ್ನು ಬಿಡುವುದಾಗಿ ನಿಶ್ಚಯಿಸಿಕೊಂಡರು ಇವರ ಸಂತೋಷ ಪ್ರಮಾಣಕ್ಕೆ ಸರಿಯಾದ ಏರ್ಪಾಡುಗಳನ್ನು ನಡಿಸುವುದಾಗಿ ಸೆಕ್ರೆಟರಿಯವರು ಹೇಳಿ ಒಂದು ಸಮಾಚಾರವನ್ನು ಸಾರಿಸಿದರು ಅವರ ಮುಖ್ಯಾಭಿಪ್ರಾಯವೇನೆಂದರೆ ಮದ್ಯಪಾನಮಾಡುವುದೂ ಗೋಮಾಂಸಭಕ್ಷಣೆ ಮಾಡುವುದೂ ಪರಂಪರೆಯಿಂದ ಬಂದದ್ದಾಗಿರುತ್ತೆ ಇದನ್ನು ಬಿಡುತ್ತೇವೆಂದು ನಿಶ್ಚಯಿಸಿಕೊಂಡಿರುವವರೆಲ್ಲರೂ ಮನದಲ್ಲಿ ಬಿಡಲು ಇಷ್ಟವಿಲ್ಲದೆ ದಾಕ್ಷಿಣ್ಯಕ್ಕೆ ಬಿಡುವುದಾಗಿ ನಿಶ್ಚಯಿಸಿಕೊಂಡಿದ್ದರೆ ಆ ಗ್ರಾಮದವರು ದೇವರ ಸನ್ನಿಧಿಯಲ್ಲಿ ಪ್ರಮಾಣಮಾಡಿ ಪ್ರಮಾಣಕ್ಕೆ ತಪ್ಪುವುದಕ್ಕಿಂತಲೂ ಮೊದಲೇ ಪ್ರಮಾಣಮಾಡದಿರುವುದು ಒಳ್ಳೆಯದು ಎಂಬುದಾಗಿ ಪ್ರಮಾಣದಿವಸವಾದ ತಾ 6 7 '913ನೇ ರವಿವಾರವು ಪ್ರಾಪ್ತವಾಗುತ್ತಲೇ ಸೆಕ್ರೆಟರಿಯವರಾದ ಮ ಪುಟ್ಟಣ್ಣನವರು ದೇವಸ್ಥಾನದಲ್ಲಿ ದೇವರಪೂಜೆ ಅಲಂಕಾರ ಮೊದಲಾದುವನ್ನು ತಮ್ಮ ಸ್ವಂತ ಖರ್ಚಿನಿಂದ ಏರ್ಪಾಡಿಟ್ಟಿದ್ದರು ಪೂಜೆವೇಳೆಗೆ ಸರಿಯಾಗಿ ಸೆಕ್ರೆಟರಿಯವರಾದ ಮ ಎಚ್ ಕೆ ಪುಟ್ಟಣ್ಣನವರು ಮತ್ತು ದೇವನಹಳ್ಳಿ ಪಟೇಲ್ ಮ ಎಂ ಆರ್ ಕೃಷ್ಣಯ್ಯರವರು ಮತ್ತು ಅಕ್ಕಪಕ್ಕದ ಗ್ರಾಮಸ್ಥರು ಹಾಜರಾದರು ಮೊದಲು ಪ್ರಮಾಣಮಾಡುವುದಾಗಿ ನಿಶ್ಚಯಿಸಿ

ಕೊಂಡಿದ್ದವರ ಪೈಕಿ ಅರ್ಧ ಭಾಗದ ಜನಗಳು ನಿಂತುಹೋಗಿದ್ದರು ಉಳಿದ ಅರ್ಧ ಜನಗಳಿಗೆ ಮದ್ಯಪಾನಮಾಡುವುದನ್ನು ಬಿಡದಂತೆ ಬೋಧಿಸಲು ಹಲವರು ಬಂದಿದ್ದರು ಎಲ್ಲರೂ ಸೇರಿದನಂತರ ಸೆಕ್ರೆಟರಿಯವರಿಗೂ, ಅಲ್ಲಿ ನೆರೆದಿದ್ದ ಜನಗಳಲ್ಲಿ ಕೆಲವರಿಗೂ ಸ್ವಲ್ಪ ಹೊತ್ತು ವಾಗ್ವಾದಗಳು ನಡೆದವು ಸೆಕ್ರೆಟರಿಯವರು ಕೇವಲ ಹಿತ ವಚನಗಳಿಂದ ಮುಕ್ಕಾಲು ಗಂಟೆ ವರಿವಿಗೆ ಸರ್ವರಿಗೂ ಚೆನ್ನಾಗಿ ಬೋಧೆಯಾಗುವಂತೆ ಉಪನ್ಯಾಸಮಾಡಿದರು ಅಲ್ಲಿಗೆ ಬಂದಿದ್ದ ಪಂಚಮರೆಲ್ಲರೂ—"ಸ್ವಾಮಿ, ನಾವು ಮದ್ಯಪಾನ ಮಾಂಸಭಕ್ಷಣೆ ಬಿಡುವುದಕ್ಕೆ ಸಿದ್ಧರಾಗಿದೇವೆ ಯಾವ ರೀತಿ ಪ್ರಮಾಣಮಾಡಬೇಕೋ ಅಪ್ಪಣೆಯಾದರೆ ಮಾಡುತ್ತೇವೆ ಎಂದು ಹೇಳಿದರು ದೇವಸ್ಥಾನದಲ್ಲಿ ಮೊದಲೇ ಏರ್ಪಾಟಾಗಿದ್ದಂತೆ ಮಂಗಳಾರತಿಯಾಯ್ತು ತೀರ್ಥವನ್ನು ಅಲ್ಲಿದ್ದ ಸರ್ವರಿಗೂ ಕೊಟ್ಟರು ಆಗ ಸರ್ವರೂ ತೀರ್ಥವನ್ನು ಅಂಗೈಯಲ್ಲಿ ಇಟ್ಟುಕೊಂಡು—"ಇನ್ನುಮುಂದೆ ನಾವು ಗೋಮಾಂಸಭಕ್ಷಣ, ಮದ್ಯಪಾನ ಮಾಡುವುದಿಲ್ಲ" ಎಂಬದಾಗಿ ಹೇಳಿಕೊಂಡು ತೀರ್ಥವನ್ನು ತೆಗೆದುಕೊಂಡರು ಅನಂತರ ಸೆಕ್ರೆಟರಿಯವರು ಅಲ್ಲಿ ಪ್ರಮಾಣಮಾಡಿದವರಿಗೆಲ್ಲಾ ಸುಮಾರು ಒಂದು ನೂರು ಜನಗಳ ವರಿವಿಗೆ ಒಂದು ಊಟವನ್ನು ತಮ್ಮ ಸ್ವಂತ ಖರ್ಚಿನಿಂದ ಕೊಟ್ಟರು ಸರ್ವರೂ ಸುಖಭೋಜನ ಮಾಡಿ ತಮ್ಮ ಕುಡಿತದ ಪಾತ್ರೆಗಳನ್ನೆಲ್ಲಾ ಒಡೆದುಹಾಕಿ ನಂತರ ಭಜನೆ ಕಾಲಕ್ಷೇಪದಿಂದ ಆ ದಿವಸವನ್ನು ಕಳೆದರು ಈ ರೀತಿ ದೇಶಬಾಂಧವರು ಜನಗಳಿಗೆಲ್ಲಾ ದುರಾಚಾರಗಳನ್ನು ಬಿಡುವಂತೆ ಪ್ರೋತ್ಸಾಹಿಸಿ ದುರಾಚಾರಗಳನ್ನು ಬಿಡಿಸಿದರೆ ಎಷ್ಟೋ ಉಪಕಾರಮಾಡಿದಂತಾಗುವುದಿಲ್ಲವೇ?

ಒಬ ಮದ್ಯಪಾನಮಾಡುವುದನ್ನು ಬಿಟ್ಟವನು

ತಾಲ್ಲೋಕು ವರ್ತಮಾನಗಳು

ನೆಲಮಂಗಲ—ಇಲ್ಲಿ ಮಳೆಗಾಲ ಬಂದ ಕೂಡಲೆ ಹೊಲದ ಮತ್ತು ಗಿಡದಲ್ಲಿರುವ ಹಳ್ಳಗಳ ನೀರು ಊರಿನೊಳಗೆ ನುಗ್ಗಿ ಬೀದಿಗಳಲ್ಲಿ ಹರಿಯುತ್ತಾ, ಮನೆಗಳಿಗೆ ಅಪಾಯವೂ ಬಹಳ ಗಲೀಜೂ ಆಗಿ ಜನಗಳಿಗೆ ಬಹಳ ತೊಂದರೆಯಾಗಿರುವುದಲ್ಲದೆ ದೊಡ್ಡದಾದ ಮಳೆ ಬಂದಾಗ ನೀರಿನ ಪ್ರವಾಹ ಹೆಚ್ಚಾಗಿ ಬೀದಿಯಲ್ಲಿಯೇ ನಿಂತು, ಜನ ಮತ್ತು ದನಗಳ ಸಂಚಾರಕ್ಕೆ ಒಂದೆರಡು ದಿವಸ ತಡೆಯಾಗಿ ಬಹಳ ಕಷ್ಟಪಡುತ್ತಿದಾರೆ ಇದಲ್ಲದೆ ಊರಿನ ಆಚೆ ಒಂದು ಫರ್ಲಾಂಗ್ ದೂರದಲ್ಲಿ ದೊಂಕಟ್ಟೆಎಂಬ ಕಟ್ಟೆಯು ಒಡೆದುಹೋಗಿ ಅನೇಕ ವರ್ಷವಾಗಿದೆ ಇದರಲ್ಲಿ ನೀರು ತಡಿಯಲ್ಲದ್ದರಿಂದ ಕೋಲಾರ್ ರೋಡಿನಿಂದ ಊರಿನೊಳಗೆಯೋಗೆ ಬರುವ ದಾರಿಗೆ ಅಡ್ಡಲಾಗಿ ಹರಿಯುತ್ತಾ ದೊಡ್ಡ ಕೆರೆಯ ಹಳ್ಳವಾಗಿದೆ ಇದರಿಂದ ತಿರುಗಾಡುವ ಜನಗಳಿಗೂ ಗಾಡಿಗಳಿಗೂ ತೊಂದರೆಯಾಗಿ ಜನಗಳ ಗೋಳಾಟವನ್ನು ವರ್ಣಿಸಲುಸಾಧ್ಯವಲ್ಲ ಈ ಪ್ರಜೆಗಳ ಕಷ್ಟವನ್ನು ಸರ್ಕಾರದವರು ನಿವಾರಣೆಮಾಡಿಕೊಡುವರೆಂದು ಕೋರುತ್ತೇನೆ

ದಾವಣಗೆರೆ—ಇಲ್ಲಿ ಇದುವರೆಗೂ ಕಾಲ ಕಾಲಕ್ಕೆ ಸರಿಯಾಗಿ ಮಳೆಯಾಗಿ ಈಗ ಮಾತ್ರ ಮಳೆಯಿಲ್ಲದೆ, ಬಿತ್ತುವ ಮತ್ತೂ ಬಿತ್ತಿದ ಪೈರುಗಳಿಗೆ ತುಂಬಾ ಅನನುಕೂಲವಾಗಿರುತ್ತೆ ಧಾರಣೆವಾಸಿಗಳು ಬರಗಾಲವನ್ನು ಜ್ಞಾಪಕಕ್ಕೆ ತರುವಂತಿವೆ—ರೋಗಿಗಳಿಗೆ ಚಿಕಿತ್ಸೆ ಮಾಡುವುದರಲ್ಲಿ ಬಹಳ ಹೆಸರುವಾಸಿ ಪಡೆದಿದ್ದ ಇಲ್ಲಿಯ ಡಾಕ್ಟರ್ ರಾಜಗೋಪಾಲ ಮುದಲಿಯಾರ್ರಿಗೆ ಬೇರೆ ಕಡೆಗೆ ವರ್ಗವೆಂಬುದನ್ನು ಕೇಳಿ ಇಲ್ಲಿಯ ಜನಗಳಿಗೆ ಬಹಳ ವ್ಯಸನವಾಗಿರುವುದರಿಂದ ಮ್ಯುನಿಸಿಪಲ್ ಮೆಂಬರುಗಳು ಈ ವಿಷಯವನ್ನು ಗೌರ್ನ್‌ಮೆಂಟಿಗೆ ನಿಜ್ಞಾಪಿಸಿಕೊಳ್ಳಬೇಕೆಂದು ಆಲೋಚಿಸುತ್ತಿದಾರೆ—ಕೆಲವು ದಿವಸಗಳ ಕೆಳಗೆ ಒಬ್ಬ ಕಳ್ಳನು ಗೌಡ ಕಳಸಪ್ಪನೆಂಬುವನ ಮನೆಯಲ್ಲಿ ಒಂದು ಎತ್ತನ್ನು ಕಳುವು ಮಾಡಿ ಕಸಬಾ ಶಾನುಭೋಗರಿಂದ ಸ್ವಲಚೀಟಿಯನ್ನು ಬರೆಯಿಸಿಕೊಂಡು ಪರಾರಿಯಾಗಿದನು ಇದನ್ನು ಇಲ್ಲಿಯ ಪೋಲಿಸ್ ಇನ್‌ಸೆಕ್ಟರ್ ಮ ನಾಗೇಶರಾಯರು ಬಹಳ ಚಮತಾರನಾಗಿ ಕಂಡುಹಿಡಿದು ಸದರಿ ಕಳ್ಳನಿಗೆ ಶಿಕ್ಷೆ ಮಾಡಿಸಿದನಂತರ ಕಳ್ಳ ಮಾಲಿಗೆ ಸ್ವಲಚೀಟಿಯನ್ನು ಬರೆದುಕೊಟ್ಟ ಲಪ್ಪಿತಕ್ಕಾಗಿ ಆ ಶ್ಯಾನುಭೋಗರನ್ನು ಹಿಡಿದು ವಿಚಾರಣೆಗೆ ಗುರಿಮಾಡಲು ಇಬ್ಬರು ಅಡೂಕೇಟುಗಳು ಬಂದು ಶ್ಯಾನುಭೋಗರ ಪರವಾಗಿ ವಾದಿಸಿದರು ಇದರ ಮೇಲೆ ಈಗ ನಮ್ಮ ಅಮಲ್ದಾರ್ ಮ್ಯಾಜಿಸ್ಟ್ರೇಟರು ಶ್ಯಾನುಭೋಗರ ಮೇಲೆ ಚಾರ್ಜುಮಾಡಿರುತ್ತಾರೆ

ಶಿವ್ಪುರು—ಕಳೆದ ಒಂದು ವಾರದಿಂದ ಇಲ್ಲಿ ಮಳೆ ಆಗುತ್ತಲೇ ಇದೆ—ಕಳೆದ ತಿಂಗಳ ಅಂತ್ಯದಲ್ಲಿ ತುಮಕೂರು ಡೆಪ್ಯುಟಿ ಕಮಿಷನರ್ ಸಾಹೇಬರವರು ಇಲ್ಲಿಗೆ ದಯಮಾಡಿಸಿ ತಾಲ್ಲೂಕ್ ಕಚೇರಿ ಇನ್‌ಸ್ಪೆಕ್ಷನ್ ಮಾಡಿಕೊಂಡು ಅದೇ ದಿನ ವಾಪಸ್ ದಯಮಾಡಿಸಿದರು ಅಮಲ್ದಾರ್ರೇ ಮೊದಲಾದ ದೊಡ್ಡ ಮನುಷ್ಯರೂ ವರ್ತಕ ಮಹನೀಯರೂ ಸ್ಟೇಷನ್ ಬಳಿ ಮರ್ಯಾದೆಪೂರ್ವಕವಾಗಿ ಹೊಸ ಡೆಪ್ಯುಟಿ ಕಮಿಷನರ್‌ರನ್ನು ಬರಮಾಡಿಕೊಂಡದಲ್ಲದೆ ಹೊರಡುವಾಗಲೂ ಮರ್ಯಾದೆಪೂರ್ವಕವಾಗಿ ಕಳುಹಿಕೊಟ್ಟರು ಕಳೆದ ವಾರ ಚನ್ನರಾಯಪಟ್ಟಣದ ತಾಲ್ಲೂಕಿನಿಂದ ಒಬ್ಬ ಗಾಡಿಯವನು ಸುಮಾರು 200 ರೂಪಾಯಿ ಬಾಳುವ ಒಂದು ಜೊತೆ ಎತ್ತುಗಳನ್ನು ಈ ಊರಿನ ಒಬ್ಬ ಗೌಡನಿಗೆ ಮಾರುತ್ತಾ ಇದ್ದದ್ದನ್ನು ಕಸಬಾ ಪಟೇಲ್ ನಂಜೇಗೌಡರು ನೋಡಿ ಗುಮಾನಿಯಿಂದ ಆಸಾಮಿಯನ್ನು ತನಿಖೆಮಾಡಿ ಮ್ಯಾಜಿಸ್ಟ್ರೇಟರವರ ಮುಂದೆ ಆಸಾಮಿಯನ್ನೂ ದನಗಳನ್ನೂ ನಿಲ್ಲಿಸಿದರು ಪೋಲೀಸ್ ಆಫೀಸರಲ್ಲಿ ಈ ವಿಚಾರ ತನಿಖೆಯಾಗುತ್ತಲಿತ್ತು ಸದರಿ ಆಸಾಮಿಯು ಪೋಲೀಸಿನವರ ವಶದಲ್ಲಿದ್ದು ಒಂದೆರಡು ದಿನಗಳ ನಂತರ ಪೋಲೀಸಿನವರಿಗೆ ಮೋಸಪಡಿಸಿ ಪರಾರಿಯಾದನು ದನಗಳನ್ನು ಕಳೆದುಕೊಂಡ ಮಾಲೀಕನಿಗೆ ಸುದ್ದಿ ತಿಳಿದು ಇಲ್ಲಿಗೆ ಬಂದು ಎತ್ತುಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡು ಹೋದನು ಆಸಾಮಿಯನ್ನು ಮಾತ್ರ ಯಾವಾಗ ಪೋಲೀಸಿನವರು ಪತ್ತೆಮಾಡುವರೋ ತಿಳಿಯತಕ್ಕದ್ದಾಗಿದೆ

ದೊಡ್ಡಬಳ್ಳಾಪುರ ಈ ಊರು ಕಸಬ ಗೌರ್ನಮೆಂಟ್ ಗರಲ್ ಸ್ಕೂಲಿನಿಂದ ಈ ವರ್ಷ ಲೋಯರ್ ಸೆಕಂಡರಿ ಪರೀಕ್ಷೆ ಪ್ಯಾಸಾದ ಮೂರು ಮಂದಿ ವಿದ್ಯಾರ್ಥಿನಿಯರಿಗೆ ಮೈಸೂರು ಶ್ರೀಮನ್ ಮಹಾರಾಣಿಯವರ ಕಾಲೇಜು ಲೇಡಿ ಸೂಪರಿನ್ ಟೆಂಡೆಂಟವರು ಟ್ರೇನಿಂಗ್ ಪರೀಕ್ಷೆ ಮಾಡಿಸಲು 12 ರೂಪಾಯಿ ಮೇರೆ ವೇತನವನ್ನು ಕೊಡಿಸಿರುತ್ತಾರೆ ಈ ಮೂವರು ವಿದ್ಯಾರ್ಥಿನಿಯರಲ್ಲಿ ಅಗಸರ ಚನ್ನಮ್ಮನೂ, ತೆಲುಗುಬಣಜಿಗರ ಲಕ್ಷ್ಮಮ್ಮನೂ ಆಗಲೇ ಕಾಲೇಜ್ ಸೇರಿರುತ್ತಾರೆ—ಈ ಊರು ದೇವಾಂಗದವರಲ್ಲಿ ಅನೇಕರು ತಮ್ಮ ಮಕ್ಕಳ ವಿದ್ಯಾಭಿವೃದ್ಧಿಗೆ ಅಟಂಕ ಮಾಡಿರುವದಲ್ಲದೆ ಅವರ ಅಭಿವೃದ್ಧಿಯನ್ನು ತಕ್ಷಣವೇ ನಿಲ್ಲಿಸಿಬಿಡುತ್ತಾರೆ ಮುಂದೆ ಈ ರೀತಿಮಾಡಲಾರರೆಂತ ನಿರೀಕ್ಷಿಸಬೇಕಾಗಿದೆ—ಮ ಡ್ಯಕ್ಕೆ ವರ್ಗವಾಗಿರುವ ಇಲ್ಲಿನ ಅಮಲ್ದಾರ್ ಮ॥ ಎ ಕೃಷ್ಣಅರಸಿನವರು ಈ ದಿನ ತಾಲ್ಲೋಕು ಚಾರ್ಜನ್ನು ಶಿರಸ್ತೇದಾರರಿಗೆ ಒಪ್ಪಿಸಿ ನಾಳೆ ಬೆಳಿಗ್ಗೆ ಇಲ್ಲಿಂದ ಪ್ರಯಾಣಮಾಡುವಂತೆ ಕೇಳಲಾಗಿದೆ—ಹೊಸದಾಗಿ ಈ ತಾಲ್ಲೋಕಿಗೆ ನೇಮಕವಾಗಿರುವ ಅಮಲ್ದಾರ್ ಮೆ॥ ಮಹಮ್ಮದ್‌ಸೈದ್ ಷರೀಫ್‌ಯವರು 7 ನೇ ತಾ ಸೋಮವಾರ ಈ ತಾಲ್ಲೋಕು ಚಾರ್ಜನ್ನು ವಹಿಸಿರುವಂತೆ ಕೇಳುತ್ತೇನೆ—ಕಳೆದ ಮೂರು ನಾಲ್ಕು ದಿವಸಗಳಿಂದ ಈ ಪ್ರಾಂತ್ಯ ಮಳೆ ಚೆನ್ನಾಗಿ ಸುರಿಯುತ್ತಿರುವದರಿಂದ ಬಿತ್ತನೆಗೆ ತುಂಬಾ ಅನುಕೂಲವಾಗಿದೆ ಕೆರೆಕುಂಟೆಗಳಲ್ಲಿ ಅರ್ಧಕ್ಕಿಂತಲೂ ಜಾಸ್ತಿ ನೀರು ನಿಂತಿದೆ ಕಳೆದ ಸೋಮವಾರ ರೆವ್ ಡಿ ಎ ರೀಸ್ ಸಾಹೇಬರವರು ಪತ್ನಿಸಮೇತ ಇಲ್ಲಿಗೆ ಬಂದು ಇಲ್ಲಿನ ಮಿಷನ್ ಕಾರ್ಯಗಳನ್ನು ಪರಾಂಬರಿಸಿ ಮೇರಿಬಾಯಿಯವರು ನಡಿಸುತ್ತಿರುವ ಹೋಂ ನೋಡಿಕೊಂಡು ತೆರಳಿದರು

ಫ್ರೆಂಚ್‌ರಾಕ್ಸ್—ಈಗ 4-5 ದಿವಸಗಳಿಂದಲೂ ಸೋನೆಮಳೆ ಹೊಯ್ಯುತ್ತಿರುವದರಿಂದ ರೈತರೆಲ್ಲಾ ತಮ್ಮ ಆರಂಭ ಕೆಲಸಗಳಲ್ಲಿ ಕುತೂಹಲವುಳ್ಳವರಾಗಿದಾರೆ ದಿನಸಿ ಧಾರಣೆಗಳು ಇನ್ನೂ ಭಢಾವಾಗಿಯೇ ಇರುತ್ತೆ ಬಡವರ ಜೀವನವು ತುಂಬಾ ಪ್ರಯಾಸವಾಗಿರುತ್ತೆ ಅಕ್ಕಿ ರೂಪಾಯಿಗೆ 6 ಸೇರು, ರಾಗಿ 14 ಸೇರು ಸಂತೆ ಮಾರಲ್ಪಡುತ್ತೆ ಇಂಥಾ ಕಷ್ಟಕಾಲದಲ್ಲಿಯೂ ಕಮ್ಮಿ ಅಳತೆ ಕಮ್ಮಿ ತೂಕ ತಪ್ಪಿಲ್ಲ ನಮ್ಮ ದಯಾಳು ಸರ್ಕಾರದವರು ಸರಿಯಾದ ಅಳತೆ ಸೇರು ಬಟ್ಟು ಮುಂತಾದ್ದನ್ನು ಜಾರಿ ತರುತ್ತಾರೆಂಬ ವಿಷಯವನ್ನು ಈಗ ಒಂದು ವರ್ಷದಿಂದಲೂ ಕೇಳುತ್ತಾ ಇರುತ್ತೇವೆ ಅದು ಯಾವಾಗ್ಗೆ ಬಂದು ಜನಗಳ ಕಷ್ಟ ನಿವಾರಣೆ ಆಗುತೋ ಗೊತ್ತಿಲ್ಲ—ಸಂತೆಯಲ್ಲಿ ಮೊಂಡರು ಮುಂತಾದ ಜನರು ತಮ್ಮ ಮನೆ ಮೇಲೆಲ್ಲಾ ಹೇಸಿಗೆ ಪದಾರ್ಥಗಳನ್ನು ಬಳಿದುಕೊಂಡು ಪ್ರತಿ ಒಂದು ಅಂಗಡಿಯಲ್ಲಿಯೂ ಮೂರು ಕಾಸು ಕೊಡಬೇಕು ಇಲ್ಲವಾದರೆ ತಿರಿಗಿ ಹೋಗುವದಿಲ್ಲವೆಂದು ಹೋರಾಡುತ್ತಾ ವ್ಯಾಪಾರಕ್ಕೆ ಬರತಕ್ಕ ಜನಗಳಿಗೆ ತುಂಬಾ ಜುಗುಪ್ಸೆ ಉಂಟುಮಾಡುವದರಿಂದಲೂ, ಟವರ್‌ನಲ್ಲಿ ಕತ್ತೆಗಳ ಮತ್ತು ನಾಯಿಗಳ ಕಾಟ ಹೆಚ್ಚಾಗಿ ರಾತ್ರಿ ಕಾಲದಲ್ಲಿ ಸಂಚರಿಸುವದಕ್ಕೆ ಅಪಾಯವಾಗಿರುವದರಿಂದಲೂ, ಟವರ್ ಬೀದಿಗಳಲ್ಲಿ ಕೆಲವು ಕಡೆ ವಿನಹ ಬಾಕೀ ಕಡೆಗಳಲ್ಲಿ ಲಾಂದ್ರಗಳು ಇಲ್ಲದೆಯೂ ಇರತಕ್ಕವುಗಳೂ ಕೂಡ ರಾತ್ರಿಕಾಲದಲ್ಲಿ ಮಿಣಕು ಹುಳುವಿನಂತೆ ಮಿಣುಗುಟ್ಟುತ್ತಲೂ ಇರುವದರಿಂದಲೂ ತೊಂದರೆಯಾಗಿರುತ್ತೆ ಮೇಲಿನ ಬಜಾರದಲ್ಲಿಯೂ, ಸಂತೆ ಮೈದಾನದಲ್ಲಿಯೂ ಲಾಂದ್ರಗಳು ಇಲ್ಲದೆ ರಾತ್ರಿಕಾಲದಲ್ಲಿ ಹಾವುಗಳ ಕಾಟದಿಂದ ಜನಗಳಿಗೆ ತುಂಬಾ ತೊಂದರೆಯಾಗಿರುತ್ತದೆ ಆದ್ದರಿಂದ ನಮ್ಮ ದಯಾಳು ಡಿಪ್ಟಿ ಅಮಲ್ದಾರ್ರವರು ಈ ವಿಷಯಗಳಲ್ಲಿ ತುಂಬಾ ನಿಗಾ ಇಟ್ಟು ಪ್ರಜೆಗಳ ಕಷ್ಟನಿವಾರಣೆ ಮಾಡುತ್ತಾರೆಂದು ನಂಬಿರುತ್ತೇನೆ—ಮದ್ದೂರು ಶಾವ್ಯನ ಹಬ್ಬದಲ್ಲಿ ನಡೆದ ಮಾರಾಮಾರಿ ಮೊಕದ್ದಮೆಯು ಇಲ್ಲಿನ ಸಬ್ ಡಿವಿಜನ್ ಸಾಹೇಬರವರ ಕೋರ್ಟಿನಲ್ಲಿ ದರ್ಯಾಪ್ತಿ ನಡೆದು ಅಪರಾಧಿಗಳಿಗೆ ಅವರವರ ಯೋಗ್ಯತಾನುಸಾರ ಅಂದರೆ 1 6 ತಿಂಗಳಂತೆ ಶಿಕ್ಷೆ ವಿಧಿಸಲ್ಪಟ್ಟಿರುತ್ತೆ ಇದರಿಂದ ಮುಂದೆ ಪುಂಡುಜನಗಳ ಹಾವಳಿ ಕಡಮೆಯಾಗಬಹುದೆಂದು ನಂಬಿರುತ್ತೇವೆ

ಹೊಳಲ್ಕೆರೆ ತಾ॥ ಓರೆಯಮ್ಮನಗನೂರು—ದಾವಣಗೆರೆ ತಾಲ್ಲೂಕು ಕಂದಗಲ್ಲು ಪೋಲೀಸ್ ಪಟೇಲ್ ಮ ಚನ್ನಬಸಪ್ಪನವರಿಗೆ ಇಲ್ಲಿನ ಪಟೇಲ್ ಮ॥ ಹನುಮಪ್ಪನವರ ಮಕ್ಕಳಿಂದ ಮುರಿಗವ್ವನನ್ನು ನಿಶ್ಚಯಪ್ರಸ್ತ ಮಾಡಿಕೊಳ್ಳಲಿಕ್ಕೆ ಅನೇಕ ಪ್ರಮುಖಜನರು ಬರೋಣವಾಗಿತ್ತು ತಾ 30 ನೇ ಸೋಮವಾರ ರಾತ್ರಿ 9 ಗಂಟೆಯೊಳಗಾಗಿ ನಿಶ್ಚಯಪ್ರಸ್ತ ಮಾಡಿಕೊಂಡು ಮರುದಿವಸ ಬೆಳಿಗ್ಗೆ 8 ಗಂಟೆಗೆ ಊರೊಳಗಿರುವ ಸ್ಕೂಲನ್ನು ಪರೀಕ್ಷೆಮಾಡುವುದಕ್ಕೆ ಬಂದರು 63 ಬಾಲಕರು ಹಾಜರಿದ್ದರು ಎಲ್ಲಾ ಬಾಲಕರನ್ನೂ ಪರೀಕ್ಷೆಮಾಡಿದರು ಎಲ್ಲಾ ಹುಡುಗರೂ ಬಹಳ ಚಟುವಟಿಕೆಯಾಗಿ ಹೇಳಿದ್ದಲ್ಲದೆ 3 ನೇ ಕ್ಲಾಸಿನ ಹುಡುಗರು 1907 (9 ನೇ ಜೋವರ್ ಸಕೆಂಡರಿ ಪರೀಕ್ಷಾ ಪತ್ರಿಕೆಗಳಲ್ಲಿರುವ ಲೆಕ್ಕಗಳನ್ನು ಬಹಳ ಚೆನ್ನಾಗಿ ಮಾಡಿದರು ಮತ್ತು ಹಾಡುಗಳನ್ನು ಬಹಳ ಸೊಗಸಾಗಿ ಹೇಳಿದರು ಅವರು ಬಾಲಕರನ್ನು ನೋಡಿ ಸಂತೋಷಪಟ್ಟು ಗ್ರಾಮಸ್ಥರನ್ನೆಲ್ಲಾ ಕರೆಸಿ ಒಂದು ಸಭಾಮಾಡಿದರು ಈ ಸಭೆಗೆ ದಾವಣಗೆರೆ ತಾಲ್ಲೂಕು ಮಳಲಕೆರೆ ಅಳುವದಾರರ ಕೊಟ್ರಪ್ಪನವರು ಅಗ್ರಾಸನವನ್ನು ವಹಿಸಿದ್ದರು ಸುಮಾರು 200 ಜನಗಳವರಿಗೂ ಸಭೆಯಲ್ಲಿ ಸೇರಿದ್ದರು ಸಭಾಧ್ಯಕ್ಷರಾದ ಮ ಕೊಟ್ರಪ್ಪನವರು ಈ ಸ್ಕೂಲ್ ಮಾಸ್ತರು ಮ ವಿರೂಪಾಕ್ಷಯ್ಯನವರು ಈ ಗ್ರಾಮಕ್ಕೆ ಬಂದು ಸುಮಾರು ಒಂದೂವರೆ ವರ್ಷವಾಗುತ್ತಾ ಬಂತು ಅದಕ್ಕೆ ಮೊದಲು ಈ ಊರಲ್ಲಿ ಸ್ಕೂಲು ಇರಲಿಲ್ಲ ಈ ವರಿವಿಗೆ 63 ಬಾಲಕರನ್ನು ಜಮಾಯಿಸಿಕೊಂಡು, ಬಹಳ ಮುತುವರ್ಜಿವಹಿಸಿ ಈ ಬಾಲಕರನ್ನು ತಯಾರುಮಾಡಿದ ವಿಷಯದಲ್ಲಿ ಪರೀಕ್ಷೆಮಾಡಿ ನೋಡಲು, ಚಿತ್ರದುರ್ಗ ಡಿಸ್ಟ್ರಿಕ್ಟ್ ಲೋಯರ್ ಸ್ಕೂಲುಗಳ ಪೈಕಿ ಮೊದಲನೆಯದಾಗಿದೆ ಎಂಬದಾಗಿ ಉಪನ್ಯಾಸಮಾಡಿದರು ಸ್ವಾಗತ ಕಮಿಟಿ ಅಧ್ಯಕ್ಷರಾದ ಮ॥ ದುಂಡಿಬಸಪ್ಪಶೆಟ್ಟಿ ವೀರಶೈವಮತದ ಸಂಬಂಧವಾದ ಏಕಮತ ವಿಷಯದಲ್ಲಿಯೂ, ಗುರು ಶಿಷ್ಯ ಸಂಬಂಧ ವಿಷಯದಲ್ಲಿಯೂ ಬಹಳ ಚೆನ್ನಾಗಿ ಉಪನ್ಯಾಸಮಾಡಿದರು ಕಾರ್ಯದರ್ಶಿಗಳಾದ ನೇರಲಗಿ ಪಟೇಲ್ ಮ॥ ಸಿದ್ದಾಮಪ್ಪನವರು ವಿದ್ಯಾಭಿವೃದ್ಧಿ, ಕೆಗಾರಿಕೆ ವಿಷಯಗಳಲ್ಲಿ ಉಪನ್ಯಾಸಮಾಡಿದರು ನಂತರ ಉಪನ್ಯಾಸವನ್ನು ನಾಡಿಗರ ವೆಂಕೋಬರಾವ್ ಎಂಬ ಬಾಲಕನು ಬಹಳ ಚಟುವಟಿಕೆಯಾಗಿ ಹೇಳಿದನು ಮತ್ತು ಎಲ್ಲಾ ಬಾಲಕರೂ ಇಂಡಿಯಾ ಚಕ್ರವರ್ತಿಯವರ ಪ್ರಾರ್ಥನೆಯನ್ನೂ, ಮಹಾರಾಜರವರ ಪ್ರಾರ್ಥನೆಯನ್ನೂ ಹಾಡುಗಳ ಮೂಲಕ ಬಹಳ ಇಂಪಾಗಿ ಹಾಡಿದರು ನಂತರ ಗಂಧ ಪುಷ್ಪ ಸಕ್ಕರೆ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆಯು ಮುಕ್ತಾಯವಾಯಿತು

ಹುಣಸೂರು—ಹವಾ ಕೆಲ ದಿನಗಳಿಂದಲೂ ತುಂಬಾ ಶೀತವಾಗಿರುವುದು ಸದ್ಯಕ್ಕೆ ಪ್ಲೇಗ್ ಕಾಲರಾ ಮೊದಲಾದ ಯಾವ ಸಾಂಕ್ರಾಮಿಕ ಜಾಡ್ಯಗಳೂ ಇಲ್ಲದಿರುವುದು ಸಂತೋಷಕರವಾಗಿದೆ ಮಳೆಯು ಬರಲಿಲ್ಲ ಬಿರಿ ಗಾಳಿ ಬೀಸುತ್ತಿರುವುದು ಊರಿನ ಸ್ಥಿತಿಯನ್ನು ನೋಡುವಾಗ ಮ್ಯುನಿಸಿಪಾಲಟಿಯು ಅಷ್ಟು ತೃಪ್ತಿಕರವಾಗಿಲ್ಲ ಚರಂಡಿಗಳಲ್ಲಿ ನಿಲ್ಲುವ ಗಲೀಜು ಸಲೀಸಾಗಿ ಹೋಗುವದಕ್ಕೆ ಮಾರ್ಗವಿಲ್ಲದೆ ನಿಂತಲ್ಲಿಯೇ ನಿಂತು ಎಲ್ಲಿ ನಗ್ಗುಗಿದೆಯೋ ಆಯಾ ಭಾಗದ ಗಲ್ಲಿಗಳಲ್ಲಿ ಕೊಳಕು ದುರ್ವಾಸನೆ ಹೊಡೆಯುತ್ತಿರುವುದು ಮಿಷನ್ ಗರ್ಲ್ಸ್ ಸ್ಕೂಲ್ ಮುಂಭಾಗದಲ್ಲಿ ದುರ್ಗಂಧಮಯವಾಗಿರುವುದು ಇದೇ ಊರಿನ ಮುಖ್ಯ ಭಾಗದಲ್ಲಿರುವ ದೊಡ್ಡ ಬೀದಿಯಾಗಿದೆ ಊರಿನಲ್ಲಿನ ಎಲ್ಲಾ ದೊಡ್ಡ ಮನುಷ್ಯರು ವಿರಾಮವಿಲ್ಲದೆ ಹಗಲೂ ರಾತ್ರಿ ಸಂಚರಿಸುವ ದೊಡ್ಡ ರಸ್ತೆಯೂ ಇದೇ ಸ್ಕೂಲಿನಲ್ಲಿ 100 ರ ಮೇಲೆ ಹೆಣ್ಣುಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವರು ಈ ಪರಿಯ ದುರ್ಗಂಧವನ್ನು ಆ ಮಕ್ಕಳು ಹೀರಿಕೊಳ್ಳಬೇಕಾಗಿರುವುದು ಸಾಧಾರಣವಾಗಿ ಆ ಭಾಗಕ್ಕೆ ಬರುವುದಕ್ಕೆ ಮುಂಚೆಯೇ ಜನರು ತಮ್ಮ ಮೂಗುಗಳನ್ನು ಮುಚ್ಚಿಕೊಂಡೇ ಸಂಚರಿಸಬೇಕಾಗಿದೆ ಟವನಿನ ಈ ಬಹಿರಂಗದ ಭಾಗವೇ ಆಫೀಸರುಗಳು ಗಮನಕ್ಕೆ ತಾರದೆ ಇದಾರೆ ಇತರ ಸಂದುಗೊಂದುಗಳ ವಿಷಯ ಹೇಳತಕ್ಕದ್ದೇನಿದೆ? ದೊಡ್ಡ ಅಂಗಡಿ ಬೀದಿಯ ಒಂದು ಚರಂಡಿಯ 2 3 ಚಪ್ಪಡಿ ಕಲ್ಲುಗಳು ಜಾರಿಹೋಗಿ ಕೆಲವು ದಿನಗಳಾದವು ಅಲ್ಲಿ ವಿಶೇಷವಾಗಿ ವ್ಯಾಪಾರಕ್ಕಾಗಿ ಬರುವ ಭರ್ತಿ ಗಾಡಿಗಳು ತಿರುಗಾಡುತ್ತಿರುವವು ಲಯ ತಪ್ಪಿದರೆ ಬಂಡಿಯು ಮುರಿದು, ಎತ್ತುಗಳು ಗಾಯ ಪಟ್ಟು, ಬಂಡಿಗಾರರಿಗೂ ಅಪಾಯವಾಗುವುದರಲ್ಲಿ ಅನುಮಾನವಿಲ್ಲ ಆಗಿಂದಾಗ್ಗೆ ಮ್ಯುನಿಸಿಪಲ್ ನೌಕರರು ಸಂಚರಿಸುತ್ತಿದ್ದರೂ ಅವರ ದೃಷ್ಟಿಯಾದರೂ ಆ ಕಡೆ ಬೀಳುವಂತಿಲ್ಲ ಮಳೆಗಾಲವು ಸಮೀಪವಾಯಿತು ಅಮಲ್ದಾರ್ರು ಟವನನ್ನು ಇನ್‌ಸ್ಪೆಕ್ಷನ್ ಮಾಡಿ, ಮ್ಯುನಿಸಿಪಾಲಿಟಿಯವರು ಸ್ವಲ್ಪ ಚಟುವಟಿಕೆಯಿಂದ ಕೆಲಸಗಳನ್ನು ನಡಿಸುವ ಏರ್ಪಾಡುಮಾಡಬೇಕು ಇಲ್ಲವಾದರೆ ಎಲ್ಲರೂ ತಾಮಸ ಭಾವದಿಂದಿರುವರು—ಮಿಷನ್ ಇಲಾಖಾ ಸೂಪರಿನ್‌ಟೆಂಡೆಂಟ್ ರೆವ್ ಎಚ್ ಸ್ಪೆನ್ಸರ್ ಯವರು 27 ನೇ ಜೂನ್ ಶುಕ್ರವಾರ ಸಾಯಂಕಾಲ ದಯಮಾಡಿ ಮುಸಾಫರ್ ಖಾನೆಯಲ್ಲಿ ಇಳುಕೊಂಡು ಮೂರು ದಿನ ಗರ್ಲ್ಸ್ ಸ್ಕೂಲು, ಪಂಚಮಾ ಸ್ಕೂಲುಗಳನ್ನು ಪರೀಕ್ಷಿಸಿ ಫಲಿತಾಂಶವನ್ನು ಚೆನ್ನಾಗಿ ಬರೆದಿಟ್ಟಿರುವುದು ಮಾತ್ರವಲ್ಲದೆ ಕೊರತೆಯವದ ಭಾಗಗಳನ್ನು ತಿದ್ದಿಕೊಳ್ಳುವಂತೆ ಬುದ್ಧಿವಾದಗಳನ್ನು ಹೇಳಿರುತ್ತಾರೆ ದೇವಸ್ಥಾನದಲ್ಲಿ ಆರಾಧನೆಯನ್ನು ನಡಿಸಿ ಸೋಮವಾರ ಮಧ್ಯಾಹ್ನ ಬೇಗ ಮೈಸೂರಿಗೆ ಪ್ರಯಾಣ ಬೆಳಸಿದರು—ಅದೇ ಜೂನ್ 30 ನೇ ಮತ್ತು ಜೂಲೈ 1 ನೇ ತಾ ಗಳಲ್ಲಿ ವಿದ್ಯಾಭ್ಯಾಸದ ಇಲಾಖಾ ಡೆಪ್ಟಿ ಇನ್‌ಸ್ಪೆಕ್ಟರು ಎ ವಿ ಸ್ಕೂಲ್, ಮಿಷನ್ ಗರ್ಲ್ಸ್ ಸ್ಕೂಲ್, ಪಂಚಮಾಸ್ಕೂಲುಗಳನ್ನು ಇನ್‌ಸ್ಪೆಕ್ಷನ್ ಮಾಡಿ ಎರಡು ದಿನ ಪರೀಕ್ಷಿಸಿ ತೃಪ್ತಿಕರವಾದ ಅಭಿಪ್ರಾಯಗಳನ್ನು ಬರೆದಿರುತ್ತಾರೆ ತಪ್ಪಾದ ಭಾಗಗಳನ್ನು ಕ್ರಮಪಡಿಸಿಕೊಳ್ಳುವಂತೆ ತಿಳಿಸಿದರು ಗರ್ಲ್ಸ್ ಸ್ಕೂಲಿಗೆ ಜಾಗವು ಸಾಲದೆ ತುಂಬಾ ಗಲಭೆಗೆ ಆಸ್ಪದವಿರುವುದರಿಂದ ಸ್ಕೂಲನ್ನು ಬೇಗನಾದರೂ ಬದಲಾವಣೆಮಾಡಬೇಕೆಂಬ ಅಭಿಪ್ರಾಯವನ್ನೂ ಬರೆದಿಟ್ಟಿರುತ್ತಾರೆ ಆ ಬಳಿಕ ಅವರು ಹನಗೋಡಿಗೆ ಹೋಗಿ ಅಲ್ಲಿನ ಸ್ಕೂಲನ್ನು ಪರೀಕ್ಷಿಸಿ 2 ನೇ ಜೂಲೈ ಬುಧವಾರ ಮೈಸೂರು ಕಡೆ ಅವಸರದಿಂದ ವಾಪಸ್ ಪ್ರಯಾಣಮಾಡಿದರು

ಇಂಡಿಯಾ ದೇಶದ ವೃತ್ತಾಂತಗಳು

ಪಾಟಿಯಾಲಾ ಸಂಸ್ಥಾನದ ಮಹಾರಾಜರವರು ತಮ್ಮ ಸಹೋದರರಾದ ಸರ್ ರಣಬೀರಸಿಂಗ್, ಕೆ ಸಿ ಎಸ್ ಐ ರವರನ್ನು ತಮ್ಮ ಸಂಸ್ಥಾನದ ಮಂತ್ರಿಯನ್ನಾಗಿ ನೇಮಕ ಮಾಡಿಕೊಳ್ಳುವವರಾಗಿದಾರೆಂದು ಪ್ರಕಟವಾಗಿದೆ

ಚಿದಂಬರದ ಪ್ರಜೆಗಳಿಗೆ ಒಳ್ಳೇ ಕುಡಿಯುವ ನೀರನ್ನು ನಲ್ಲಿಗಳ ಮೂಲಕ ತಂದು ಒದಗಿಸಬೇಕೆಂದು ದಿವಾನ್ ಬಹದೂರ್ ರಾಮಸ್ವಾಮಿಶೆಟ್ಟರು ಒಂದು ಲಕ್ಷ ರೂಪಾಯಿ ಧರ್ಮಾರ್ಥವಾಗಿ ಕೊಟ್ಟಿದ್ದರು ಈಗ ಆ ಹಣ ಸಾಲದೆಂದು ತಿಳಿದುಬಂದದ್ದರಿಂದ ಅವರು ಮತ್ತೆ 30,000 ರೂಪಾಯನ್ನು ಕೊಟ್ಟಿರುತ್ತಾರೆ ಈ ಕಾಮಗಾರಿಯೆಲ್ಲಾ ಬೇಗನೆ ಪೂರೈಸಿ, ಮುಂದಿನ ವರುಷ ನೀರನ್ನು ಪ್ರಜೆಗಳಿಗೆ ಒದಗಿಸಬಹುದೆಂದು ನಿರೀಕ್ಷಿಸಲ್ಪಟ್ಟಿದೆ

ಕಳೆದ ಜೂನ್ ತಾ 28ಕ್ಕೆ ಆಖೈರಾದ ಒಂದು ವಾರದಲ್ಲಿ 815 ಜನಗಳಿಗೆ ಹಿಂದುಸ್ಥಾನದಲ್ಲಿ ಪ್ಲೇಗ್ ಉಪದ್ರ ತಗಲಿತು 647 ರೋಗಿಗಳು ಈ ಉಪದ್ರದಲ್ಲಿ ತೀರಿಹೋಗಿದಾರೆ ಈ ಮರಣ ಸಂಖ್ಯೆಯ ವಿವರವೇನೆಂದರೆ—ಬೊಂಬಾಯಿ ಆಧಿಪತ್ಯ 120, ಮದರಾಸ್ 16, ಬಂಗಾಳಾ 20, ಬೀಹಾರ್ 57, ಸಂಯುಕ್ತ ಆಧಿಪತ್ಯಗಳು 280, ಪಂಜಾಬ್ 126, ಬರ್ಮಾ 16, ಕೊಡಗು 1, ಮೈಸೂರು 20, ಹೈದರಾಬಾದ್ 1, ರಾಜಪುಟಾನಾ 4, ವಾಯವ್ಯ ಸರಹದ್ದು ಪ್ರಾಂತ್ಯ 4, ಕಾಶ್ಮೀರ 2

ಒಂದು ವರುಷದ ಹಿಂದೆ ಮೆ ಟಿಳಾನಕರವರು ನಾಸಿಕದಲ್ಲಿ ಕಲೆಕ್ಟರಾಗಿದ್ದಾಗ ಪೂನಾ ಪಟ್ಟಣದ ಮ್ಯುನಿಸಿಪಲ್ ಆಫೀಸಿನ ಗುಮಾಸ್ತೆಯಾದ ಸುಮಾರು 15 ವಯಸ್ಸಿನ ನಾರಾಯಣ ಗೋವಿಂದ ಕಫೆ ಎಂಬ ಬ್ರಾಹ್ಮಣನು ಕೆಟ್ಟ ನೋಕ್ತಿಗಳುಳ್ಳ ಒಂದು ಕಾಗದವನ್ನು ಕಲೆಕ್ಟರಿಗೆ ಬರೆದನೆಂದು ಮೊಕದ್ದಮೆ ಹುಟ್ಟಿ ದೀರ್ಘವಾಗಿ ವಿಚಾರಣೆ ನಡೆದು, ಅವನ ಮೇಲೆ ಅಪರಾಧ ರುಜುವಾತಾಗಲಿಲ್ಲವೆಂದು ಕಳೆದ ವಾರ ಸೆಷನ್ಸ್ ಜಡ್ಜರು ಹೇಳಿ, ಅವನನ್ನು ಖುಲಾಸ್ ಮಾಡಿಸಿರುತ್ತಾರೆ

ಬಂಗಾಳಾ ಆದಿಪತ್ಯಕ್ಕೆ ಸೇರಿದ ಬ್ಯಾಂಕುರಾ ಪಟ್ಟಣದಲ್ಲಿ ಕಳೆದ ತಿಂಗಳ 28 ನೇ ತಾ ಬೆಳಿಗ್ಗೆ ಒಂದು ಮನೆಯಲ್ಲಿ 11 ವರುಷದ ಹುಡುಗಿಯೂ, 4 ವರುಷದ ಅವಳ ತಮ್ಮನೂ ಆಡುತ್ತಿರುವಾಗ್ಗೆ ಸಮೀಪದಲ್ಲಿ ಶಿಥಿಲವಾಗಿದ್ದ ದೊಡ್ಡ ಗೋಡೆ ಕಳಚಿ ಅವರಿಬ್ಬರ ಮೇಲೂ ಬಿದ್ದು ಅನಾಮತ್ತು ತತ್‌ಕ್ಷಣವೇ ಇಬ್ಬರನ್ನೂ ಕೊಂದುಬಿಟ್ಟಿತು ಈ ರೀತಿಯಾದ ಹಳೇ ಗೋಡೆಗಳು ಆ ಪಟ್ಟಣದಲ್ಲಿ ಅನೇಕವಾಗಿ ಇರುತ್ತವೆಂದೂ, ಮ್ಯುನಿಸಿಪಾಲಿಟಿಯವರು ಅವುಗಳನ್ನೆಲ್ಲಾ ಒಡೆದುಹಾಕಿಸಬೇಕೆಂದೂ ಅಲ್ಲಿನ ಪತ್ರಿಕೆಯು ತಿಳಿಸುತ್ತದೆ

ಕಾಶೀಪಟ್ಟಣದಲ್ಲಿ ಏರ್ಪಾಡಾಗಬೇಕೆಂದು ಪ್ರಯತ್ನ ನಡೆಯುತ್ತಿರುವ ಹಿಂದೂ ಯೂನಿವರ್ಸಿಟಿ (ಸರ್ವವಿದ್ಯಾಶಾಲೆ) ಫಂಡಿಗೆ ಆ ಫಂಡಿನ ಪ್ರೆಸಿಡೆಂಟರಾದ ದರ್ಭಾಂಗ ಮಹಾರಾಜರವರು ಮೊದಲು ಎರಡು ಲಕ್ಷ ರೂಪಾಯಿ ಚಂದಾ ಕೊಟ್ಟಿದ್ದರು ಈಗ ಅವರು ಇನ್ನೊಂದು ಲಕ್ಷ ರೂಪಾಯಿ ಚಂದಾ ಹಾಕಿರುತ್ತಾರೆ ಈಗ ಈ ಫಂಡಿನಲ್ಲಿ 25 ಲಕ್ಷ ರೂಪಾಯಿ ಚಂದಾ ವಸೂಲಾಗಿದೆ ಎಂದೂ, ಮಹನೀಯರಿಂದ ವಾಗ್ದಾನವಾಗಿರುವ ಸುಮಾರು 80 ಲಕ್ಷ ರೂಪಾಯಿ ಇನ್ನೂ ವಸೂಲಾಗಿಲ್ಲವೆಂದೂ, ಇಷ್ಟರಲ್ಲೇ ಆ ಫಂಡಿನ ಮುಖಂಡ ಮೆಂಬರುಗಳು ಚಂದಾ ಎತ್ತಲು ದಕ್ಷಿಣ ದೇಶಕ್ಕೂ ಬರುವುದರಲ್ಲಿದಾರೆಂದೂ ತಿಳಿದು ಬರುತ್ತದೆ

ತಂಜಾವೂರು ಜಾವಡಿ ಆಚೆ ನಾಲ್ಕು ಮೈಲಿಯಲ್ಲಿ 21 ಮನೆಗಳುಳ್ಳ ಒಂದು ಸಣ್ಣ ಗ್ರಾಮವಿದೆ ಅಲ್ಲಿ ಸುಮಾರು 59 ಪ್ರಜೆಗಳು ವಾಸಮಾಡುತ್ತಾರೆ ಅವರೆಲ್ಲಾ ನೇಯಿಗೆಯನ್ನು ಪ್ರಧಾನ ಉದ್ಯಮವಾಗಿ ಜೀವನಮಾಡತಕ್ಕವರು ಕಳೆದ

ತಿಂಗಳ 20ನೇ ತಾ ಆ ಗ್ರಾಮದ ಒಂದು ಮನೆಗೆ ಬೆಂಕಿ ಬಿದ್ದು ಪ್ರಚಂಡ ಗಾಳಿಯ ದೆಸೆಯಿಂದ ಗ್ರಾಮಕ್ಕೆಲ್ಲಾ ಉರಿಯು ಚಿಗಿದು ಆವರಿಸಿಕೊಂಡು 21 ಮನೆಗಳು ಸಂಪೂರ್ಣವಾಗಿ ಸುಟ್ಟುಹೋದವು ಮೂರು ಮನೆಗಳು ಮಾತ್ರ ಉಳುಕೊಂಡಿವೆ ಸುಮಾರು 10,000 ರೂಪಾಯಿನ ಮನೆಮರಗಳೂ ದವಸಧಾನ್ಯಗಳೂ ಸಾಮಾನುಗಳೂ ನಷ್ಟವಾದವು ಈಗ ಅವರೆಲ್ಲಾ ನಿಲ್ಲುವುದಕ್ಕೆ ನೆರಳಾಗಲಿ ತಿನ್ನುವುದಕ್ಕೆ ಆಹಾರವಾಗಲಿ ಇಲ್ಲದೆ ಗಿಡ ಮರಗಳ ಕೆಳಗೆ ನಿಂತು ಕಷ್ಟಪಡುತ್ತಿದಾರೆ

ಅತ್ಯುತ್ತಮವಾದ ನಿಲಿಕಪ್ಪುಕಾಯಿ ಪುಡಿ

ವಿ ಪಿ ಪೋಸ್ಟು ಮೂಲಕ 250 ಪೊಟ್ಟಣಗಳ ಬೆಲೆ 13 ಆಣೆ 500 ಕ್ಕೆ 1 9 0 1000 ಕ್ಕೆ ರೂ ೩ ರೈಲ್ ಮೂಲಕ 5000 ಕ್ಕೆ 13 9 0 ಒಂದು ಪೊಟ್ಟಣದಲ್ಲಿ ಒಂದು ಮಸಿಕುಡಿಕೆ ಶಾಯಿ ಆಗುತ್ತದೆ ತರಿಸಿ ಮಾರುವವರಿಗೆ ಒಳ್ಳೆ ಲಾಭವುಂಟು

[136-1] ವಿಳಾಸ —ಎ ಪಿ ಡಿಪೋ, ಕುಪ್ಪಂ ಪೋಸ್ಟು

ಗೃಹಕೃತ್ಯದ ನೋಟೀಸು.

ನಂಜನಗೂಡು ತಾಲ್ಲೋಕು ಒಳಗೆರ ಹೋಬಳಿ ಕಗಡೂರು ಗ್ರಾಮದಲ್ಲಿರುವ ಕಿರುಗ್ರಾಮದಿಗಡ ನಂಜಶೆಟ್ಟಿ ಮಗ ನಂಜಶೆಟ್ಟಿಯು ತಿಳಿಯಪಡಿಸುವದೇನಂದರೆ—ನಮ್ಮ ಅಣ್ಣ ಮಾದಶೆಟ್ಟಿ ಎಂಬುವನು ಫವತಿಯಾಗಿರುತ್ತಾನೆ ಇವನಿಗೆ ಮಕ್ಕಳಿಲ್ಲ ಇವನು ಮದುವೆಯಾದ ಹೆಂಡತಿ ಸಿದ್ದಿ ಎಂಬುವಳನ್ನು ಜೀವಂತನಾಗಿದ್ದಾಗಲೇ ಬಿಟ್ಟುಬಿಟ್ಟದ್ದರಿಂದ ಅವಳು ಎಲ್ಲೋ ಹೋಗಿದ್ದವಳು ಈಚಿಗೆ ಬಂದು ನನಗೆ ಆಗದ ಜನಗಳ ದುರ್ಬೋಧನೆಯಿಂದ ನಮ್ಮ ಪಿತರಾರ್ಜಿತದ ಆಸ್ತಿಯನ್ನು ಇತರರಿಗೆ ಪರಾಧೀನ ಪಡಿಸಬೇಕೆಂದು ಪ್ರಯತ್ನಪಡುತ್ತಿದಾಳೆ ಈ ಸ್ವತ್ತುಗಳನ್ನು ಯಾರಾದರೂ ಮೇಲ್ಕಂಡ ಸಿದ್ದಿ ಎಂಬುವವಳಿಂದ ಖರೀದಿ ವಗೈರೆ ಯಾವ ರೀತಿ ಮಾಡಿಕೊಂಡರೂ ಅವರಿಗೆ ದಕ್ಕಲಾರದು ಡಿಟೋ ಸಿದ್ದಿ ಎಂಬುವಳಿಗೆ ಸದರಿ ಸ್ವತ್ತುಗಳ ಮೇಲೆ ಯಾವ ಹಕ್ಕೂ ಇರುವದಿಲ್ಲ ಖಂಡಿತ ತಿಳಿಯತಕ್ಕದ್ದು [138 1]

ತಾ 7.7 1913 ನಂಜಶೆಟ್ಟಿ ರುಜು

ಗೃಹಕೃತ್ಯದ ನೋಟೀಸು

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನಂದರೆ—ನಂಜನಗೂಡು ಕಸಬಾ ಹುಲ್ಲಹಳ್ಳಿ ನಾಲಾ ಕೆಳಗೆ ದೇವಾಸ್ತ್ರದ ಬೈಲಿನಲ್ಲಿರುವ ಸರ್ವೆ 140 141 ಮತ್ತು 142 ನೆ ನಂಬರು ಜಮೀನು ಮತ್ತು ಇತರ ಜಮೀನುಗಳು ಸಹಾ ನನಗೆ ಮತ್ತು ಕೃಷ್ಣಶಾಸ್ತ್ರಿ, ಕಾಯಿಲ್ಲಿದ ಸೂರ್ಯನಾರಾಯಣದೀಕ್ಷಿತರು ಮತ್ತು ಇವರ ಮಗ ರಾಮಕೃಷ್ಣಶಾಸ್ತ್ರಿ ವಗೈರೆರುಗಳಿಗೆ ಸೇರಿದ ಅವಿಭಕ್ತ ಕುಟುಂಬದ ಆಸ್ತಿಯಾಗಿರುತ್ತೆ ಮೇಲ್ಕಂಡ ಜಮೀನುಗಳ ಮೇಲೆ ಸದರಿ ಸೂರ್ಯನಾರಾಯಣ ದೀಕ್ಷಿತರ ಮಗಳು ಕಾಶಿ ಪಾರ್ವತಮ್ಮನಿಗೆ ಯಾವ ವಿಧವಾದ ಹಕ್ಕು ಬಾಧ್ಯತೆಯೂ ಇರುವುದಿಲ್ಲ ನನಗೂ ಸದರಿ ಪಾರ್ವತಮ್ಮನಿಗೂ ಅವಿಭಕ್ತ ಕುಟುಂಬದ ಆಸ್ತಿ ವಿಚಾರದಲ್ಲಿ ಕಾಶಿಯಲ್ಲಿ ಸಿವಿಲ್ ಕೋರ್ಟಿನಲ್ಲಿ ವಿವಾದ ನಡೆಯುತ್ತಾ ಇದೆ ಹೀಗಿರುತ್ತಾ ಸದರಿ ಜಮೀನುಗಳನ್ನು ಯಾರೇ ಆಗಲಿ ಆಕೆಯಿಂದ ಕ್ರಯ, ಭೋಗ್ಯ, ಆಧಾರ ಮುಂತಾದ್ದರ ಮೂಲಕ ಪಡೆದಪಕ್ಷ ಅದರ ಖಂಡಿತ ಊರ್ಜಿತವಾಗಲಾರದೆಂದು ಈ ಮೂಲಕ ತಿಳಿಸಿರುತ್ತೇನೆ [131 1]

1 7-1913 ಅವತಿ ಕೋದಂಡರಾಮಯ್ಯ

ಗೃಹಕೃತ್ಯದ ನೋಟೀಸು

13› 1

ಮೈಸೂರು ಶ್ರೀರಾಂಪೇಟೆ ಕೊತ್ವಲ್ ರಾಮಯ್ಯನವರ ಬೀದಿ ಅನಂತಪ್ಪನವರ ಅಗ್ರಹಾರದಲ್ಲಿರುವ ತಲಕಾಡು ಶೀನಪ್ಪನು ತಿಳಿಯಪಡಿಸುವದೇನಂದರೆ—ಚಿಕ್ಕಬಳ್ಳಾಪುರದಲ್ಲಿರುವ ದಿಬ್ಬೂರು ರಾಮಾಭಟ್ಟರ ಮಗ ಪಾಲಿ ಖಿಹಾಯಿ ಅಂಗಡಿ ಇಟ್ಟಿರುವ ಗುಂಡಪ್ಪನು 1909 ಇಸವಿ ಮೇ ತಾ 28 ರಲ್ಲಿ ನನಗೆ ಈ ಕೆಳಗೆ ಕಾಣಿಸಿರುವ ಸ್ವತ್ತುಗಳನ್ನು ಭೋಗ್ಯಮಾಡಿ ಪತ್ರ ರಿಜಿಸ್ಟರ್ ಮಾಡಿ ಕೊಟ್ಟಿರುತ್ತಾನೆ ಸದರಿ ದಸ್ತವೇಜು ನನ್ನಲ್ಲಿ ಗ್ಯಾರಂಟಿ ಆಗಿರುತ್ತೆ ಷೆಡ್ಯೂಲಿನಲ್ಲಿ ಕಂಡ ಸ್ವತ್ತುಗಳು ಹರಾಜುಮಾಡಿರುವಂತೆ ಕೇಳುತ್ತೇನೆ ಈ ಸ್ವತ್ತುಗಳನ್ನು ಯಾರೇ ಆಗಲಿ ಖರೀದಿ ಅಥವಾ ಹರಾಜುಮೂಲಕ ತೆಗೆದುಕೊಂಡಲ್ಲಿ ಊರ್ಜಿತವಾಗುವದಿಲ್ಲ ಅವರು ನನ್ನ ನಷ್ಟಕ್ಕೆ ಗುರಿಯಾಗಬೇಕಾದೀತೆಂದು ಈ ಮೂಲಕ ತಿಳಿಸಿರುತ್ತೇನೆ ಸ್ವತ್ತುಗಳು —(1) ಚಿಕ್ಕಬಳ್ಳಾಪುರದ ಕಸಬಾ ಬಿದ್ದಪಟ್ಟದ ಬಾಗಲುವಂಟನಲ್ಲಿರತಕ್ಕ ಕೃಷ್ಣಂಭಟ್ಟರು ವಗೈರೆರ ಹೆಸರಿನ ಪಟ್ಟೆ ಉಳ್ಳ ಘಟ ಇನಾಂತಿ ಜಮೀನಿನಲ್ಲಿ ಜ್ಞಾತಿಗಳ ಅರ್ಧ ಹಿಸ್ಸೆ ಜಾತಾ ಬಾಕಿ ಒಟ್ಟು ಕುಟುಂಬದ ಬಗ್ಗೆ ನನ್ನ ಮೂರನೇ ಒಂದು ಹಿಸ್ಸೆ (2) ನರಸಿಂಹಯ್ಯ, ಸಂತೆಪ್ಪ ಇವರುಗಳಿಗೆ ಗುತ್ತಿಗ್ಗೆ ಕೊಟ್ಟಿರತಕ್ಕ ಎಡದು ಯಾತದ ಜಮೀನು ಬೀಜವರಿ ಮುಕ್ಕಾಲು ಎಕರೆ ಉಳ್ಳ ಪೂರಾ ಸ್ವತ್ತು (3) ಚಿಕ್ಕಬಳ್ಳಾಪುರದ ಕಸಬಾ ಗಂಗನದಿಬ್ಬೆ ವಂಟಿನಲ್ಲಿರತಕ್ಕ ಕೃಷ್ಣಂಭಟ್ಟರ ಹೆಸರಿನ ಪಟ್ಟೆ ದಾಖಲ ತಹಲ್ ನನ್ನ ಸ್ವಾಧೀನಾನುಭವದಬಗೆ ಸರ್ವೆ 11೦ ನೇ ನಂ ಜಮೀನ್ ಪೈಕಿ ನನ್ನ ಮೂರನೇ ಒಂದು ಹಿಸ್ಸೆ

7 7 1913 ತಲಕಾಡು ಸುಬ್ಬಣ್ಣನವರ ಮಗ ಶೀನಪ್ಪ ಮೈಸೂರು

ಮಕ್ಕಳ ಹಿತಕಾರಿ

ಎಂದು

SCOTT'S EMULSION

2 38

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷದಕ್ಕೆ ಕೋಟ್ಯಂತರ ತಂದೆತಾಯಿಗಳು ಹೆಸರಿಟ್ಟಿದಾರೆ ಯಾಕಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳಿಸುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

Always get the Emulsion with this mark—the Fishman—the mark of the "Scott" process!

ಈ ವಿಾನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷದ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷದಗಳ ಕಾರ್ಖಾನೆ,

ಲಂಡನ್, ಇಂಗ್ಲಂಡ್

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಥಳುಕು ನಿದ್ರೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು ತಲೆನೋವು ಗಾಬರಿ, ಕಣ್ಣುಮೊಬ್ಬು ತಲೆ ತಿರುಗುವಿಕೆ ಮೈನೋವು, ಕೀಲುನೋವು, ಜ್ವರವು, ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು ಉದುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [142 11]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ೬ ೭ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಮೂರು ಸಿದ್ಧೌಷಧಗಳು.

ವಕ್ತ್ರಾನಂದಕರೀಮಾತ್ರೆ ಮೂಲಿಕೆ ಪರಿಮಳದ್ರವ್ಯಗಳಿಂದ ತಯಾರಿಸಿದೆ ಒಂದನ್ನು ತಾಂಬೂಲದೊಡನೆ ಅಥವಾ ಬರೀ ಬಾಯಿಗೆ ಸೇವಿಸಿದರೆ ದುರ್ಗಂಧ ಹೋಗಿ ಸುವಾಸನೆಯಾಗುತ್ತೆ ರಕ್ತವನ್ನು ಶುದ್ಧಿಮಾಡುತ್ತೆ ಕರಳು, ಗಂಟಲು, ಬಾಯಿ, ಇವುಗಳು ಹುಣ್ಣಾದರೆ ಅರ್ಧ ತೋಲಾ ಬಾದಾಮಿ ಎಣ್ಣೆಯಲ್ಲಿ ಒಂದು ಮಾತ್ರೆ, ಕೀದು ಮಲಗುವ ಸಮಯದಲ್ಲಿ ತೆಗೆದುಕೊಂಡರೆ ಗುಣವಾಗುವದು 200 ಮಾತ್ರೆ, ಶೀಸಾ 1 ಕ್ಕೆ 1 ಆಣಾ ಇಸಬು, ಖಜ , ತುರಿ ಇವುಗಳಿಗೆ ಪಾಮಹರಿಣೀ ಪೌಡರ್ ತೋಲಾ 1 ಕ್ಕೆ 3 ಆಣೆ ಬಾಲಂತಿಯರು ಮಕ್ಕಳ ಶೀತ ನೆಗಡಿ ಇವುಗಳಿಗೆ ಉಪಯೋಗಿಸತಕ್ಕ ಕಸ್ತೂರಿಮಾತ್ರೆ 25 ಮಾತ್ರೆಗೆ 8 ಆಣೆ ಬಾಲಂತಿಯರು ಉಪಯೋಗಿಸತಕ್ಕ ಖಂಡಾದ್ರಕವೆಂಬ ಆರೋಗ್ಯದ ಲೇಹ್ಯ 12 ತೋಲಾ ಡಬ್ಬಿಗೆ 1 ಆಣಾ ಅಪೇಕ್ಷಿಸುವರು ತಮ್ಮ ವಿಳಾಸ ವಿಶದವಾಗಿ ಬರೆಯಬೇಕು ಅಂಚೆ ಹಾಸಲು ಬೇರೆ, ತರಿಸಿಕೊಳ್ಳತಕ್ಕವರು ವಹಿಸತಕ್ಕದ್ದು 1 ಡಜನ್‌ಗೆ 1 ಶೀಸಾ ಡಿಸ್ಕೌಂಟು ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಮುಂಚೆ ಸ್ವಲ್ಪ ತರಿಸಿ ನೋಡಿ ನಂತರವಾದರೂ ತರಿಸಿಕೊಳ್ಳಿ [131 2]

ನಮ್ಮ ವಿಳಾಸ —ಶೇಷಭಟ್ಟರು,

ನೇಟಿವ್ ಪಂಡಿತ್ ಪೂರ್ಣಯ್ಯನವರ ಬೀದಿ, ಶ್ರೀರಂಗಪಟ್ಟಣ

ಪರೀಕ್ಷಿಸಿ ನೋಡದ ಅಗ್ಗದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ಬಿಕರಿಯಾಗುತ್ತಿವೆ ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತುಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಕಚಕಿಸುವವು ನಿಬಿಡವಾದ ನೀಲಬಣ್ಣದಿಂದ ಕೂಡಿ, ಅಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ ಸುಂಡಿನ ಹೊಟ್ಟನ್ನು ಅಡಗಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಬಾಯಿಗೆ ತಿರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ

ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-4 0 ಬೇರೆ ತರಬೇಕು.

3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ

ಮೈಸೂರು ಎಗಿ ಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ ಅಲ್ಲಹಾಬಾದ್ ಎಗಿ ಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರೆಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಜದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಎ ಡಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಅನುಭವಿಸಿ ಹಚ್ಚಿಕೊಳ್ಳುತ್ತಾರೆ" ವಿರುದುನಗರ್ ಕೆ ವಿ ಎನ್ ಹೈಸ್ಕೂಲ್ ಹೆಡ್ ಮಾಸ್ಟರ್ ಎಂ ಎಂ ಸುಬ್ರಹ್ಮಣ್ಯಪಿಳ್ಳೆಯವರು ಬರೆಯುವದು—"ನಿಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ಪರೀಕ್ಷೆಮಾಡಿದೇನೆ ಅದು ಕೂದಲನ್ನು ಹುಟ್ಟಿಸಿ ಅಂದವಾಗಿಯೂ, ಕೋಮಲವಾಗಿಯೂ, ಸೊಂಪಾಗಿಯೂ ಬೆಳಸುವುದೆಂದು ಖಂಡಿತವಾಗಿ ಹೇಳಬಲ್ಲೆನು ದಯವಿಟ್ಟು ಇನ್ನು ಮೂರು ಬಾಟ್ಲಿ ಎಣ್ಣೆ ಕಳಿಸಿಕೊಡಿ" ಬನಟೂ ಡಿಪ್ಟಿ ಕಂಟ್ರೋಲರ್ ಆಫೀಸ್ ಪಿ ಗೋಪಾಲರಾವ್ ಬೋನ್ಸ್ಲೆಯವರು ಬರೆಯುವದು—"ದಯವಿಟ್ಟು ನನಗೆ ಕಾಮಿನಿಯಾ ಎಣ್ಣೆ ಆರು ಬಾಟ್ಲಿ ಕಳಿಸಿಕೊಡಿ ಒಂದು ತಿಂಗಳ ಹಿಂದೆ ನೀವು ಕಳಿಸಿದ ಬಾಟ್ಲಿಗಳು ಮುಗಿದುಹೋಯಿತು ಇದೇ ಉತ್ತಮೋತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳಬಲ್ಲೆನು" ಆದಕಾರಣ ನೀವು ಒಂದು ಸಲ ತರಿಸಿ ಪರೀಕ್ಷೆ ಮಾಡಿ

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನಿಮ್ಮ ಸ್ಥಳದ ಷಾಪುಕೀಪರಲ್ಲಿ ಅದು ಇಲ್ಲದಿದ್ದರೆ ಅವನ ಹೆಸರು ವಿಳಾಸದ ಸಮೇತ ನಮಗೆ ತಿಳಿಸಿ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

ಎಲ್ಲಾ ಸ್ಥಳಗಳಲ್ಲಿಯೂ ಏಜೆಂಟರು ಬೇಕು

ಏಜೆಂಟ್, ದಿ ಉಲನ್ ಮಾರ್ಟ್, ಮಂಗಳೂರು

ನಮ್ಮ ವಿಳಾಸ — [8 26]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

Mellin's Food

ಮೆಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಧರ್ಮಾರ್ಥವಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ Messrs OAKES & Company, Mount Road, Madras.

[4-30] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H Gulliford, Proprietor and Manager Wesleyan Mission Press, Mysore 10/7/1913

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨. ಮೈಸೂರು—ಸನ್ ೧೯೧೩ ನೇ ಇಸವಿ ಜೂಲೈ ತಾರೀಖು ೧೭ ನೇ ಗುರುವಾರ. ಸಂಚಿಕೆ ೨

ಅತ್ಯುತ್ತಮವಾದ ನೀಲಿಕಪ್ಪುಶಾಯಿ ಪುಡಿ

ವಿ. ಪಿ ಪೋಸ್ಟು ಮೂಲಕ 250 ಪೊಟ್ಲಗಳ ಬೆಲೆ 13 ಆಣೆ 500 ಕ್ಕೆ 1-9-0. 1000 ಕ್ಕೆ ರೂ. 3 ರೈಲ್ ಮೂಲಕ 5000 ಕ್ಕೆ 12-8-0 ಒಂದು ಪೊಟ್ಲದಲ್ಲಿ ಒಂದು ಮಸಿಕಾಳಿಕೆ ಶಾಯಿ ಆಗುತ್ತದೆ ತರಿಸಿ ನೋಡುವವರಿಗೆ ಒಳ್ಳೆ ಲಾಭವುಂಟು.

[136-2] ವಿಳಾಸ —ವಿ. ಪಿ. ಡಿಪೋ, ಕುಪ್ಪಂ ಪೋಸ್ಟು.

ಗೃಹಕೃತ್ಯದ ನೋಟೀಸು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—ನಂಜನಗೂಡು ಕಸಬಾ ಹುಲ್ಲಹಳ್ಳಿ ನಾಲಾ ಕೆಳಗೆ ದೇವಾಸ್ಥಾನದ ಬೈಲಿನಲ್ಲಿರುವ ಸರ್ವೆ 140, 141 ಮತ್ತು 142 ನೆ ನಂಬರು ಜಮೀನು ಮತ್ತು ಇತರ ಜಮೀನುಗಳು ನನಗೆ ಮತ್ತು ಕೃಷ್ಣಶಾಸ್ತ್ರಿ, ಕಾಶಿಯಲ್ಲಿದ್ದ ಸೂರ್ಯನಾರಾಯಣದೀಕ್ಷಿತರು ಮತ್ತು ಇವರ ಮಗ ರಾಮಕೃಷ್ಣಶಾಸ್ತ್ರಿ ವಗೈರೆಯವರಿಗೆ ಸೇರಿದ ಅವಿಭಕ್ತಕುಟುಂಬದ ಆಸ್ತಿಯಾಗಿರುತ್ತೆ. ಮೇಲ್ಕಂಡ ಜಮೀನುಗಳ ಮೇಲೆ ಸದರಿ ಸೂರ್ಯನಾರಾಯಣ ದೀಕ್ಷಿತರ ಮಗಳು ಕಾಶಿ ಪಾರ್ವತಮ್ಮನಿಗೆ ಯಾವ ವಿಧವಾದ ಹಕ್ಕು ಬಾಧ್ಯತೆಯೂ ಇರುವುದಿಲ್ಲ. ನನಗೂ ಸದರಿ ಪಾರ್ವತಮ್ಮನಿಗೂ ಅವಿಭಕ್ತಕುಟುಂಬದ ಆಸ್ತಿ ವಿಚಾರದಲ್ಲಿ ಕಾಶಿಯಲ್ಲಿ ಸಿವಿಲ್ ಕೋರ್ಟಿನಲ್ಲಿ ವಿವಾದ ನಡೆಯುತ್ತಾ ಇದೆ. ಹೀಗಿರುತ್ತಾ ಸದರಿ ಜಮೀನುಗಳನ್ನು ಯಾರೇ ಆಗಲಿ ಆಕೆಯಿಂದ ಕ್ರಯ, ಭೋಗ್ಯ, ಆಧಾರ ಮುಂತಾದ್ದರ ಮೂಲಕ ಪಡೆದದ್ದೆ ಆದರೆ ಖಂಡಿತ ಊರ್ಜಿತವಾಗಲಾರದೆಂದು ಈ ಮೂಲಕ ತಿಳಿಸಿರುತ್ತೇನೆ [131-3]

3-7-1913 ಅವತಿ ಕೋದಂಡರಾಮಯ್ಯ

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು. (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ ನಿವಾರಣೆ ಮುಂತಾದ್ದನ್ನು ತಿಳಿಸುವದು. (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು. (5) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವಸಹಿತ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು. ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1-8-0, ಟಪ್ಪಾಲು ಹಾಸಲು 4 ಆಣೆ.

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಕಥಾರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ.

ಇದರ ಕ್ರಯ ಪ್ರತಿ 1 ಕ್ಕೆ ರೂ 4; ಟಪಾಲು ಹಾಸಲು 10 ಆಣೆ. ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು. [127-4]

ನಮ್ಮ ವಿಳಾಸ —ಎಮ್. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಬಿಕರಿಗೆ ಸಿದ್ಧವಾಗಿದೆ! ಐದನೆಯ ಛಾಪು!! ಬಿಕರಿಗೆ ಸಿದ್ಧವಾಗಿದೆ!!!

ಒಕ್ಕಲಿಗರ ಸಂಘದ ಮುದ್ರಾದ ಮುದ್ರಣವು ಥಳಥಳಿಸುವ ದಪ್ಪಕಾಗದ, ಬಹು ಭದ್ರವಾದ ಅಟ್ಟೆ.

ಪ್ರಶ್ನೋತ್ತರ ಲೇಖ್ಯಬೋಧಿನಿ.

ಕ್ರಯ ಒಂದು ರೂಪಾಯಿ ನಾಲ್ಕಾಣೆ, ಅಂಚೆಯ ವೆಚ್ಚ ಬೇರೆ.

ಈ ಪುಸ್ತಕದ ಪ್ರಯೋಜನವು ಹೆಚ್ಚೆಂದು ನಾವು ಹೊಗಳಬೇಕಾದುದಿಲ್ಲ. ಅತ್ಯಲ್ಪಕಾಲದಲ್ಲಿ ನಾಲ್ಕು ಮುದ್ರಣದ ಪುಸ್ತಕಗಳು ಮುಗಿದು ಐದನೆಯ ಸಲ ಅಚ್ಚಾಗಿರುವ ಸಂಭವವೇ ಪುಸ್ತಕವು ಸರ್ವಜನೋಪಯೋಗಿ ಎಂದು ಸಾರುತಿದೆ—ಒಂದು, ಎರಡು, ಮೂರು, ನಾಲ್ಕನೆಯ ಮುದ್ರಣಗಳ ಪುಸ್ತಕಗಳಿಗಿಂತಲೂ ಐದನೆಯ ಮುದ್ರಣದ ಈ ಪುಸ್ತಕವು ಎಲ್ಲ ಬಗೆಗಳಲ್ಲಿಯೂ ತಿದ್ದುಪಾಟಿನಿಂದ ಅನೇಕ ಹೆಚ್ಚು ಸಂಗತಿಗಳು ಬಲು ಅಂದವಾಗಿರುವುದು—ಇರಳು ಹಗಲು ಕೋರ್ಟು ವ್ಯವಹಾರಗಳಲ್ಲಿ ಓಡಾಡುತ್ತಿರುವ ಸಿವಿಲ್, ಕ್ರಿಮಿನಲ್, ರೆವಿನ್ಯೂ ಇಲಾಖೆಗಳ ತತ್ತ್ವವನ್ನು ತಿಳಿದುಕೊಳ್ಳಬೇಕೆನ್ನುವವರಿಗೆ ಪರಮೋಪಕಾರಿ. ಇದುವರೆಗೆ ಓದಿರುವ ಅನೇಕರಿಗೆ ಅನುಭವವೇದ್ಯವು ಮುಂದೆ ಓದುವವರಿಗೆ ಅನುಮಾನ ಆಗತ್ಯವಿಲ್ಲ—ಈ ಪುಸ್ತಕವು ಮೊತ್ತಮೊದಲು 22-3-04 ರಲ್ಲಿ ಅಚ್ಚಾಯಿತು ಎರಡನೆಯ ಸಲ 2 1-06 ರಲ್ಲಿ ಮುದ್ರಿಸಲ್ಪಟ್ಟಿತು. ಮೂರನೆಯ ಸಲ 22-3-07 ರಲ್ಲಿ ಅಚ್ಚು ಮುಗಿಯಿತು. ನಾಲ್ಕನೆಯ ಸಲ 26-1-10 ರಲ್ಲಿ ಅಚ್ಚಾದುದು. ಒಟ್ಟಿನಲ್ಲಿ ಐದು ಸಾವಿರ ಪುಸ್ತಕಗಳು ಮಾರಿಗೆಯಾದವು. ಪ್ರತಿ ಮುದ್ರಣದ ಪುಸ್ತಕವೂ ಮಾರಿಗೆಯಾಗಿ ಗ್ರಾಹಕರಿಗೆ ಸಮಯಕ್ಕೆ ಪುಸ್ತಕ ದೊರೆಯದೆ ಪುನಃ ಮುದ್ರಣವಾಗುವ ವರೆಗೆ ಕಾದಿರಬೇಕಾಗುತ್ತಿದೆ!! ಅಪೇಕ್ಷಿತರು ಅವಸರಪಡುವುದುತ್ತಮ!!!

ಇದರೊಳಗಿರುವ ಸಂಗತಿಗಳನ್ನು ಓದಿನೋಡಿ.

ಕ್ಷೇಮಸಮಾಚಾರ ಕಾಗದಗಳು —ಬರೆಯುವದಕ್ಕೆ ಮೊದಲಿಡುವದು, ಮರಿಯಾದೆಗಳು, ಬಂಧುಗಳಿಗೆ, ಹಿರಿಯರು ಕಿರಿಯರಿಗೆ, ಕಿರಿಯರು ಹಿರಿಯರಿಗೆ, ಸಮಾನರಿಗೆ ಐಶ್ವರ್ಯವಂತರು, ಮಠಾಧಿಪತಿಗಳು, ಗುರುಗಳು, ಜಗದ್ಗುರುಗಳು ಮುಂತಾದವರಿಗೆ ಆಯಾ ಮತ ಪದ್ಧತಿಯನುಸರಿಸಿ ಬರೆಯುವ ಒಕ್ಕಣೆ, ಮರಿಯಾದೆಗಳು—ರೆವಿನ್ಯೂ ಕೋರ್ಟು—ದರಖಾಸ್ತು, ರಾಜೀನಾಮೆ, ವರ್ಗಾವಿರ್ಗಿ ಏಲಿಯಾಷನ್, ಜಿಲ್ಲೆ ಇತರ ಅನೇಕ ಬಾಬಿನ ತಕರಾರುಗಳು, ಲ್ಯಾಂಡು ರೆವಿನ್ಯೂ ರೂಲ್ಸು, ಅನುಸರಿಸಿ ರೈತರಿಗೆ ರಿಯಾಯಿತಿ ದೊರೆಯುವ ಬಗೆಬಗೆ ಸಂಗತಿಗಳಲ್ಲಿ ಅರ್ಜಿಗಳು—ಸಿವಿಲ್ ಕೋರ್ಟು ತಿಳುವಳಿಕೆ ನೋಟೀಸು, ಬಗೆಬಗೆ ದಾವಾ ಅರ್ಜಿಗಳು, ಸಮನ್, ಸಾಕ್ಷಿ, ಮೆಮೋ, ಪ್ರತಿವಾದಿಯ ಎದುರುತ್ತರ, ತಕರಾರುಗಳು, ವಿಚಾರಣೆ, ತೀರ್ಮಾನ, ಡಿಕರಿ, ಜಡ್ಜ್‌ಮೆಂಟು, ಜಾರಿ, ತಕರಾರು, ತೀರ್ಮಾನ, ಜಫ್ತು, ಹರಾಜ್, ಸ್ವೊತ್ತು ಸ್ವಾಧೀನ, ವಿವಾಹ, ವಾರಸು, ಮೈನರು, ಗಾರ್ಡಿಯನ್, ದಾಯಭಾಗ, ಮುಂತಾದ ಬಗೆಬಗೆ ವಿಷಯಗಳಲ್ಲಿ ನಡೆವಳಿಕೆ, ವಿಧಿ, ಸ್ಟಾಂಪು, ತಿಳುವಳಿಕೆ, ಸ್ಮಾಲ್‌ಕಾಜ್, ಒರಿಜಿನಲ್, ಅಪ್ಪೀಲು, ಸ್ಪೆಷಲ್ ಅಪ್ಪೀಲು, ರಿವ್ಯೂ ಮುಂತಾದ ವಿಷಯಗಳು ಸ್ಪಷ್ಟವಾಗಿ ಹೇಳಿರುತ್ತೆ—ಕ್ರಿಮಿನಲ್ ಕೋರ್ಟು—ಪೋಲೀಸು, ಫಿರ್ಯಾದು, ಕೆಡಕು, ಹೊಲಸು, ಪಿಸ್ತಾನ ಹಾಕುಕತ್ತೆ, ಕಳವು. ಅತಿಕ್ರಮಪ್ರವೇಶ, ಅಕ್ರಮ ತಡೆ, ಜುಲುಮೆ ದೊಂಬಿ ಅಕ್ರಮಕೂಟ, ಮೇಜಸ್ಟ್ರೇಟರವರಲ್ಲಿ ಫಿರ್ಯಾದಿ, ವಿಚಾರಣೆ, ಸಾಕ್ಷಿ, ತೀರ್ಮಾನ ಪುನರ್ವಿಚಾರಣೆ, ಅಪ್ಪೀಲು, ಅಪರಾಧಿಗಳಿಗೆ ಸರ್ಕಾರದವರ ಸಹಾಯ ಇಂಡಿಯನ್ ಪೀನಲ್‌ಕೋಡಿನ ಯಾವ ಯಾವ ಸೆಕ್ಷನುಗಳು ಯಾವ ಯಾವ ತಪ್ಪಿತಗಳಿಗೆ ಲಗಾವಾಗುತ್ತಿವೆ ಎಂಬುವದು, ಯಾವ ಯಾವ ಸೆಕ್ಷನುಗಳ ಸಂಬಂಧವಾದ ತಪ್ಪಿತಗಳನ್ನು ಯಾವ ಯಾವ ಮೇಜಸ್ಟ್ರೇಟರು ವಿಚಾರಿಸಬೇಕು, ಯಾವ ಯಾವ ಕೋರ್ಟಿಗೆ ಎಷ್ಟೆಷ್ಟು ಶಿಕ್ಷೆ ಕೊಡುವ ಅಧಿಕಾರವಿರುತ್ತೆ. ಪೋಲೀಸಿನವರಿಗಿರುವ ಅಧಿಕಾರದ ಪರಿಮಿತಿ ಮುಂತಾದ ಸಂಗತಿಗಳು ವಿವರಿಸಲ್ಪಟ್ಟಿವೆ—ಇತರ ಇಲಾಖೆಗಳು:—ಇಂಜನಿಯರು, ಫಾರೆಸ್ಟ್, ಎಕ್ಸೈಜ್, ವಿದ್ಯಾಭ್ಯಾಸ, ವ್ಯವಸಾಯ, ಮ್ಯುನಿಸಿಪಲ್ ಮುಂತಾದ ಅನೇಕ ಇಲಾಖೆಗಳಿಗೆ ಬೇರೆ ಬೇರೆ ಅವಶ್ಯಕವಾಗುವ ಸಂಗತಿಗಳ ಅರ್ಜಿ - ಲೇವಾದೇವಿ ರಶೀದಿ, ಖಂಡಿ ಆಧಾರ, ಭೋಗ್ಯ, ಕ್ರಯ, ದಾನ, ಪರಿವರ್ತನೆ, ಗೇಣಿ, ಪಾಲುವ್ಯವಸ್ಥೆ, ಮರಣಶಾಸನ, ಸಾಲೀಕಿತ್ತು, ಮುಂತಾದ ಬಗೆಬಗೆ ಪತ್ರಗಳು, ಅವುಗಳಿಗೆ ಅಲ್ಲಲ್ಲಿಯೇ ವಿಧಿ, ಸ್ಟಾಂಪು ರಿಜಿಸ್ಟ್ರೇಷನ್ ನಡೆವಳಿಕೆ, ಅನುಭವ ಮುಂತಾದವುಗಳನ್ನು ವಿವರಿಸಿದೆ—ವರ್ತಕರ ಲೆಖ್ಖಗಳು.—ರೋಜು ವರ್ಗ ಆಮದುಬುಕ್ಕು, ರಫ್ತು ಬುಕ್ಕು, ಭಂಡಾರದ ಬುಕ್ಕು, ಮಂಡಿಬುಕ್ಕು, ನಗದಿ ಖಿಲ್ಲುಬುಕ್ಕು, ತಂಡಲಾಬುಕ್ಕು, ಇವುಗಳಿಡುವ ರೀತಿ, ಇವುಗಳಿಂದ ಪ್ರಯೋಜನ ಮುಂತಾದವುಗಳನ್ನು ಇಂಗ್ಲೀಷ್ ಸಿಂಗಲ್ ಯಂಟ್ರಿ, ಡಬ್ಬಲ್ ಯಂಟ್ರಿ, ಪದ್ಧತಿಯನ್ನು ಸೂಕ್ಷ್ಮವಾಗಿ ವಿವರಿಸಿದೆ—ಶಾನುಭೋಗಿಕೆ ಲೆಖ್ಖಗಳು —ಲ್ಯಾಂಡು ರೆವಿನ್ಯೂಕೋಡಿನ ಪ್ರಕಾರ ಶಾನುಭೋಗರು ಬರೆಯುವ ಗ್ರಾಮದ ಲೆಖ್ಖಗಳು ಯಾವುದು? ಅವುಗಳಲ್ಲಿ ಏನನ್ನು ಬರೆಯುವುದು? ಹೇಗೆ ಬರೆಯುವುದೆಂಬುದನ್ನು ವಿವರಿಸಿದೆ—ಕಾನೂನುಗಳು:—ಸಿವಿಲ್ ಪ್ರೊಸೀಡ್ಯೂರ್ ಕೋಡು, ಇಂಡಿಯನ್ ಪೀನಲ್ ಕೋಡು, ಹಿಂದೂ ಲಾ, ಮಹಮ್ಮದೀಯ ಲಾ, ಕಂಟ್ರಾಕ್ಟ್, ದಾನೀಬು, ವಾರಸು, ಮೈನರು, ಲಿಮಿಟೇಷನ್, ಸ್ಟಾಂಪು, ಕೋರ್ಟುಫೀಜು, ರಿಜಿಸ್ಟ್ರೇಷನ್, ಸಾಕ್ಷ್ಯ, ಗ್ರಾಮಪೋಲೀಸು, ನಗರಪೋಲೀಸು, ಸ್ಯಾನಿಟರಿ, ಮ್ಯುನಿಸಿಪಲ್, ಕಂಪೆನೀಸ್ ಆಕ್ಟು, ಫಾರೆಸ್ಟು, ಎಕ್ಸೈಜ್, ರೆವಿನ್ಯೂಕೋಡ್, ರೂಲ್ಸ್, ಲ್ಯಾಂಡ್ ಇಂಪ್ರೂವ್‌ಮೆಂಟು, ಲ್ಯಾಂಡ್ ಅಕ್ವಿಜಿಷನ್, ದೊಡ್ಡಿ, ಆರಂಸು ಮುಂತಾದ ಉಪಯೋಗವಾದ ಎಲ್ಲ ಆಕ್ಟುಗಳ ಸಾರಾಂಶವನ್ನು ಅಡಗಿಸಿದೆ. ಸ್ವಲ್ಪಮಟ್ಟಿಗೆ ಓದುಬರಹ ಬಂದವರು ಕೂಡ ಸುಲಭವಾಗಿ ತಿಳಿಯುವಹಾಗೆ ಪ್ರಶ್ನೋತ್ತರ ರೀತಿಯಾಗಿ ಬರೆಯಲ್ಪಟ್ಟಿರುವ ಈ ಪುಸ್ತಕದಲ್ಲಿರುವ ಉಪಯೋಗವಾದ ವಿಷಯಗಳಿಷ್ಟೇ ಎಂದು ವಿವರಿಸುವದು ಸಾಧ್ಯವಲ್ಲವಾದರೂ ಸೂಕ್ಷ್ಮವಾಗಿ ವಿವರಿಸಿದ. ಈ ಅಂಶವು ಇದನ್ನು ಓದಿರುವ ಸಾವಿರಾರು ಮಂದಿಗೆ ಗೃತವೇ! ಈಗಲೂ ಮೊದಲನೆಯ ನಾಲ್ಕು ಛಾಪಗಳಿಗಿಂತಲೂ ಈ ಐದನೆಯ ಛಾಪೆಯಲ್ಲಿ ಹೇರಳವಾದ ವಿಷಯಗಳನ್ನು ಸೇರಿಸಿರುತ್ತೆ. ಕುಟುಂಬಕ್ಕೆ ಒಂದರಂತೆ ಈ ಪುಸ್ತಕವನ್ನು ಸಂಗ್ರಹಮಾಡಬೇಕು. ಬರೆಯುವಂಥವರು ತಾವಿರುವ ಊರು, ಆ ಊರಿನ ಬಳಿ ಇರುವ ಪೋಸ್ಟಾಫೀಸು, ಅದು ಸೇರಿರುವ ಹೋಬಳಿ, ತಾಲ್ಲೂಕು, ಇವುಗಳೊಂದಿಗೆ ತಂತಮ್ಮ ಹೆಸರುಗಳನ್ನು ಬಿಡಿಬಿಡಿಯಾದ ಅಕ್ಷರಗಳಲ್ಲಿ ಬರೆಯಲು ಪ್ರಾರ್ಥಿತರು. ಕ್ರಯ ಒಂದು ರೂಪಾಯಿ ನಾಲ್ಕಾಣೆ. ಅಂಚೆ ವೆಚ್ಚ ಬೇರೆ. ಪರಸ್ಪರದ ವ್ಯಾಪಾರಸ್ಥರಿಗೆ ದಸ್ತೂರಿ ಸಿಕ್ಕುವುದು. ಪ್ರತ್ಯುತ್ತರಾಪೇಕ್ಷಿತರು ರಿಪ್ಲೈಕಾರ್ಡು ಬರೆಯಬೇಕು. ನಮ್ಮ ವಿಳಾಸ ಬದಲಾಗಿದೆ.—

[116-1] ಭಾರತಿ ಸಂಪಂಗಿರಾಮ, ಅಥವಾ ಎಸ್. ಆರ್. ಭಾರತಿ, ಸಂಪಾದಕ—"ಸವಿನುಡಿ" ಮತ್ತು "ಭಾಷಾನಿಧಿ", ಬೆಂಗಳೂರು ಸಿಟಿ.

ಅನುಭವಸ್ಥರು ಹೇಳುವುದು.

ಹತ್ತಿಯ ತುಪ್ಪವು ಎಳೇಮಕ್ಕಳಿಗೂ ಹಿತಕಾರಿ!

(೬) ಬಿ ರಾಮಯ್ಯನವರು, ಬಿ ಎ, ಮ್ಯಾನೇಜರು, ಮುಜರಾಯಿ ಸೆಕ್ರಿಟರಿಯವರ ಇಲಾಖೆ, ಬೆಂಗಳೂರು —"ಹತ್ತಿಯ ತುಪ್ಪವನ್ನು 10 ತಿಂಗಳಿಂದ ಸೇವಿಸುತ್ತಿದೇವೆ ನನಗೂ ಮಕ್ಕಳಿಗೂ ಆಶ್ಚರ್ಯಕರವಾಗಿ ಒಗ್ಗಿದೆ ಶುದ್ಧವಾದುದು ಬಸವನಗುಡಿ ಕೋಆಪರೇಟಿವ್ ಸೊಸೈಟಿಯಲ್ಲಿ ದೊರೆಯುವುದರಿಂದ ಅಲ್ಲಿಂದಲೇ ತರಿಸಿಕೊಳ್ಳುತ್ತೇನೆ ಪೇಟೆಯಲ್ಲಿ ಬೆರಕೆಮಾಡುವುದರಿಂದ ಶುದ್ಧವಾದುದಕ್ಕೂ ಕೆಟ್ಟ ಹೆಸರು ಬಂದಿರುವಂತೆ ತಿಳಿಯುತ್ತದೆ ಶುದ್ಧವಾದದ್ದು ರುಚಿಯಾಗಿದೆ ಆರೋಗ್ಯವಾಗಿದೆ ಇಂತಹದನ್ನೇ ಮಾರುವ ಅಂಗಡಿಗಳು ಬಹಳ ಕಡಮೆ"—19 6-1913

ಎಚ್ಚರಿಕೆ !—ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ, ಇವುಗಳನ್ನೂ ಕೆಲವರು ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

[110-7] 159, ಕಿಲಾರಿ ರೋಡ್, ಬೆಂಗಳೂರು ಸಿಟಿ

ಪರೀಕ್ಷಿಸಿ ನೋಡದ ಅಗ್ಗವ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ಬಿಕರಿಯಾಗುತ್ತಿವೆ ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ

"ಕಾಮಿನಿಯಾ ತೈಲವು."

(ರಜಿಸ್ಟರ್ಡ್)



ಅಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತುಹೋಗುತ್ತೆ ಆ ಸಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ ನಯವಾಗಿ ಚಕಚಕಿಸುವವು ನಿಬಿಡವಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ಹಂದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ ಹುಂಡಿನ ಹೊಟ್ಟನ್ನು ಹೋಗಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳ ದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲದಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ

ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-1 0 ಬೇರೆ ತೆರಬೇಕು
3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕಾದರೆ ಒಂದು ಅಧಾಣೆಯ ಚೀಟನ್ನು ಕಳುಹಿಸಿರಿ

ಮೈಸೂರು ಎಗ್ಝಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ ಅಲ್ಲಹಾಬಾದ್ ಎಗ್ಝಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ ಮನ್ನಾರಗುಡಿ ಡಿಸ್ಟ್ರಿಕ್ಟ್ ಸೆಕ್ರಿಟರಿ ಮಿ॥ ಡಿ ಸಾಲೊಮನ್‌ರವರು ಬರೆಯುವದು—"ದಯವಿಟ್ಟು ಆರು ಬಾಟ್ಲು ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ" ವಿರುದುನಗರ್ ಕೆ ವಿ ಎಸ್ ಹೈಸ್ಕೂಲ್ ಹೆಡ್ ಮಾಸ್ಟರ್ ಮಿ॥ ಎಂ ಸುಬ್ರಹ್ಮಣ್ಯಪಿಳ್ಳೆಯವರು ಬರೆಯುವದು "ನಾನು ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ಪರೀಕ್ಷೆಮಾಡಿದೇನೆ ಇದು ಕೂದಲನ್ನು ಮಟ್ಟಸವಾಗಿಯೂ, ಕೋಮಲವಾಗಿಯೂ ನಿಡಿದಾಗಿಯೂ ಬೆಳೆಸುವುದೆಂದು ಖಂಡಿತವಾಗಿ ಹೇಳಬಲ್ಲೆನು ದಯವಿಟ್ಟು ಇನ್ನು ಮೂರು ಬಾಟ್ಲು ಎಣ್ಣೆ ಕಳಿಸಿಕೊಡಿ" ಪನೆಟೂ ಡೆಪ್ಯುಟಿ ಕಂಟ್ರೋಲರ್ ಆಫೀಸ್ ಮಿ॥ ಗೋಪಾಲಹರಿ ಜೋಷಿಯವರು ಬರೆಯುವದು—"ದಯವಿಟ್ಟು ನಮ್ಮ ಕಾಮಿನಿಯಾ ಎಣ್ಣೆ ಆರು ಬಾಟ್ಲು ಕಳಿಸಿಕೊಡಿ ಒಂದು ತಿಂಗಳ ಹಿಂದೆ ನೀವು ಕಳಿಸಿದ ಬಾಟ್ಲಗಳು ಮುಗಿದುಹೋಯಿತು ಇದೇ ಉತ್ತಮೋತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳಬಲ್ಲೆನು" ಆದಕಾರಣ ನೀವು ಒಂದು ಸಲ ತರಿಸಿ ಪರಿಕ್ಷೆ ಮಾಡಿ

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನಿಮ್ಮ ಸ್ಥಳದ ಷಾಪುಕೀಪರಲ್ಲಿ ಅದು ಇಲ್ಲದಿದ್ದರೆ ಅವನ ಹೆಸರು ವಿಳಾಸದ ಸಮೇತ ನಮಗೆ ತಿಳಿಸಿ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು ಇ ಘಾತಕಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು

ಏಜೆಂಟ್, ವಿ ಉಲ್ಕ ಮಾರ್ಟ್, ಮಂಗಳೂರು

ನಮ್ಮ ವಿಳಾಸ — [8 27]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪೆನಿ,

ಜುಮ್ಮಾಮಸೀದ್, ಬೊಂಬಾಯಿ.

CHAMBERLAIN'S PAIN BALM.

ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವು



1 29

ಬೆನ್ನೆಲುಬಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಸಂದುಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕರೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಈ ಉಗುರುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಸಂದುಗಳಲ್ಲಿ ಇಗಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೈನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟುವ್ಯೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಪ್ರತಾಪಕಂಠೀರವ ಚರಿತ್ರೆ.

(1) "ಪರಮೇಶ್ವರಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ (2) ಸ್ತ್ರೀಧರ್ಮ ಸ್ತ್ರೀಬುದ್ಧಿಕೌಶಲ ಸ್ತ್ರೀಯುಕ್ತ ಸಾಹಸ ಚಾತುರ್ಯ (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು (4) ಸರಸ್ಸು ಆರಾಮಾದಿ ವರ್ಣನೆಗಳು (5) ಮನುಷ್ಯಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭ ಶೈಲಿ (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ ಕ್ರಯ —1 ರೂಪಾಯಿ ಟಪಾಲ್ ಹಾಸಲು ಬೇರೆ

[1 -1] ನಮ್ಮ ವಿಳಾಸ —ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ

ಸಮಸ್ತ ವಿಧವಾದ ನೋವೂ ಶಾಂತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು ವಾಯುನೋವು ಬೆನ್ನಿನ ಸೆಳೆತ, ಕೀಲುನೋವು, ಶೈತ್ಯ ಈ ಮೊದಲಾದ ಅನೇಕ ತರಹ ವ್ಯಾಧಿಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ಬಿಕರಿಯಾಗುತ್ತಲಿವೆ ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಅಮೃತಾಂಜನವು ಎಲ್ಲಾ ಪಟ್ಟಣಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ವಿಕ್ರಯವಾಗುವದು

ಮುಕತಡ್ಡಿ ಔಷಧದ ಡಪ್ಪಿಗೆ 8 ಆಣೆ, 12 ಕುಪ್ಪಿಗೆ ರೂ 5-8 0 ಹಲ್ಲುಪುಡಿ ಡಪ್ಪಿಗೆ 2 ಆಣೆ, 12 ಡಪ್ಪಿಗೆ ರೂ 1 2-0 ವಿ ಪಿ ಮತ್ತು ಪ್ಯಾಕಿಂಗ್ ಚಾರ್ಜ್ ಪ್ರತ್ಯೇಕ [12 21]

ವಿಳಾಸ —ಅಮೃತಾಂಜನ ಡಿಪೋ, ೧೯ ಪ್ರಿಯರ್ ರೋಡ್ ಫೋರ್ಟ್, ಬೊಂಬಾಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ ಜ್ವರ, ಹೊಟ್ಟೆ ನೋವು ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ) ಮೈ ನಡುಕ, ನಿಶ್ಶಕ್ತಿಗಳ ಬಾಧೆ, ಅಜೀರ್ಣ, ಅಗ್ನಿನಷ್ಟ ಹಲ್ಲುನೋವು, ಕೆಮ್ಮಲು, ನೆಗಡಿ, ಸನ್ನಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಬಾರಿಕೊಡದೆ, ಋತುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ ಮಕ್ಕಳ ಏಳವು, ಜ್ವರ, ಸಂಧ್ಯಜ್ವರ ಕ್ಷಯ ಇತರಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ 240 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 10 ದ 12 ಕುಪ್ಪಿ ವರೆಗೆ ಪೋಸ್ಟೇಜು 1 ಆಣೆ [136 16]

ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧೌಷಧ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆ ರೂ 1 ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಕುಂತಳಾನಂದ ತೈಲವು

147 43

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ಕರಿದಾಗಿಯೂ ಬೆಳೆಯಿಸಿ ತಲೆಯ ಶಿರಸ್ಸಿನ ವ್ಯಾಧಿಗಳನ್ನೂ ರೋಗಗೋಚರವಾದ ದುರ್ಗಂಧವನ್ನು ಪರಿಹರಿಸುವುದು ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ನೀಗಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬುಡ್ಡಿಗೆ 1 ರೂಪಾಯಿ 4 ಬಾಟಲಿಗೆ 4 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪೆನಿ,
ವೇಪೇರಿ ಮದರಾಸ್

ಮೂರು ಸಿದ್ಧೌಷಧಗಳು.

ಪತ್ರಾನಂದಕರೀಮಾತ್ರೆ ಮೂಲಿಕೆ ಪರಿಮಳದ್ರವ್ಯಗಳಿಂದ ತಯಾರಿಸಿದೆ ಒಂದನ್ನು ತಾಂಬೂಲದೊಡನೆ ಅಥವಾ ಬರೀ ಬಾಯಿಗೆ ಸೇವಿಸಿದರೆ ದುರ್ಗಂಧ ಹೋಗಿ ಸುವಾಸನೆಯಾಗುತ್ತೆ ರಕ್ತವನ್ನು ಶುದ್ಧಿಮಾಡುತ್ತಾ ಕರಳು, ಗಂಟಲು, ಬಾಯಿ, ಇವುಗಳು ಹುಣ್ಣಾದರೆ ಅರ್ಧ ತೊಲಾ ಬಾದಾಮಿ ಎಣ್ಣೆಯಲ್ಲಿ ಒಂದು ಮಾತ್ರೆ ತೇದು ಮಲಗುವ ಸಮಯದಲ್ಲಿ ತೆಗೆದುಕೊಂಡರೆ ಗುಣವಾಗುವದು 200 ಮಾತ್ರೆ ಡಬ್ಬಿ 1 ಕ್ಕೆ 1 ಆಣಾ ಇಸಬು, ಹುಳು, ತುರಿ ಇವುಗಳಿಗೆ ಪಾಮಹರಿ ಪೌಡರ್ ತೊಲಾ 1 ಕ್ಕೆ 4 ಆಣೆ ಬಾಲಂತಿಯರು ಮಕ್ಕಳ ಶೀತ ನೆಗಡಿ ಇವುಗಳಿಗೆ ಉಪಯೋಗಿಸತಕ್ಕ ಕಸ್ತೂರಿಮಾತ್ರೆ 30 ಮಾತ್ರೆಗೆ 9 ಆಣೆ ಬಾಲಂತಿಯರು ಉಪಯೋಗಿಸತಕ್ಕ ಚಿಂತಾಪ್ರಶಮಕವೆಂಬ ಆರೋಗ್ಯದ ಲೇಹ್ಯ 12 ತೊಲಾ ಡಬಿಗೆ 8 ಆಣೆ ಅಪೇಕ್ಷಿಸುವರು ತಮ್ಮ ವಿಳಾಸ ವಿಶದವಾಗಿ ಬರೆಯಬೇಕು ಅಂಚೆ ಹಾಸಲು ಬೇರೆ, ತರಿಸಿಕೊಳ್ಳತಕ್ಕವರು ತಿಳಿಸತಕ್ಕದ್ದು 1 ವರ್ಷಕ್ಕೆ 1 ತಿಂಗಳು ಡಿಸ್ಕೌಂಟು ವ್ಯಾಪಾರಸ್ಥರಿಗೆ ಒಳ್ಳೇ ಕಮೀಷನ್ ಮುಂಚೆ ಸ್ವಲ್ಪ ತರಿಸಿ ನೋಡಿ ನಂತರವಾದರೂ ತರಿಸಿಕೊಳ್ಳಿ [131 3]

ನಮ್ಮ ವಿಳಾಸ —ಶೇಷಭಟ್ಟರು,

ನೇಟಿವ್ ಪಂಡಿತ್, ಪೂರ್ಣಯ್ಯನವರ ಬೀದಿ, ಶ್ರೀರಂಗಪಟ್ಟಣ

ಮೈಸೂರು ಗೌವರ್ನಮೆಂಟ್ ಸೆಕ್ಯೂರಿಟಿ ಲೈಫ್ ಮತ್ತು ಮ್ಯಾರಿಯೇಜ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಮೈಸೂರು.

ಅಮ್ರಿಟ್ಸರ್ ನ್ಯಾಷನಲ್ ಇನ್ಷೂರೆನ್ಸ್
ಕಟ್ಟಡಗಳು, ಮೈಸೂರು,
ತಾ|| 17-7 1913

ನೋಟೀಸ್.

1 ಕಳೆದ ತಿಂಗಳು 5 ಮತ್ತು 12 ನೇ ಮರ್ಯ್ಯಾನ ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿಸಿರುವ 1913 ನೇ ಇಸವಿ ಮೇ ತಿಂಗಳ 30 ನೇ ಮರ್ಯಂ ಅಮ್ರಿಟ್ಸರ್ ನ್ಯಾಷನಲ್ ಇನ್ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪೆನಿ ಲಿಮಿಟೆಡ್ ಛೀಫ್ ಏಜಂಟರವರ 8 ನೇ ನಂಬರು ಸರ್ಕ್ಯುಲರ್ ಅನುಸರಿಸಿ ನಮ್ಮ ಆಫೀಸನ್ನು ಮೈಸೂರಲ್ಲಿರುವ ಜಾಯಿಂಟ್ ಸ್ಟಾಕ್ ಕಂಪೆನಿಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್ರವರು ದಯಮಾಡಿ ಅಜಮಾಯಿಸಿಮಾಡಿದ ನಂತರ ವಿಭಾಯಿಸಲಾದ ಒಂದು ಲಕ್ಷ ರೂಪಾಯಿನ ಮೂಲಧನದೊಡನೆ 1895 ನೇ ಇಸವಿ III ನೇ ನಂಬರು ಮೈಸೂರು ಕಂಪೆನಿಗಳ ರೆಗ್ಯುಲೇಷನ್ ಪ್ರಕಾರ ಈ ತಿಂಗಳು ಮೂರನೇ ತಾರೀಖಿನಲ್ಲಿ "ಮೈಸೂರು ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಮತ್ತು ಮ್ಯಾರಿಯೇಜ್ ಕಂಪನಿ ಲಿಮಿಟೆಡ್" ಎಂಬ ನಾಮಾಂಕಿತದಿಂದ ಈ ಕಂಪನಿಯು ರಿಜಿಸ್ಟರ್ ಮಾಡಲ್ಪಟ್ಟು ಕೆಲಸವೂ ಸಹಾ ಆರಂಭವಾದಲ್ಪಟ್ಟಿರುತ್ತೆಂತಲೂ ಮತ್ತು ಈ ಸರಹದ್ದಿನಲ್ಲಿರುವ ನಮ್ಮ ಎಲ್ಲಾ ಪ್ರಾವಿಡೆಂಟ್ ಲೈಫ್ ಮತ್ತು ಮ್ಯಾರಿಯೇಜ್ ಪಾಲಿಸಿ ಹೋಲ್ಡರುಗಳನ್ನು ಈ ತಿಂಗಳು ಗುರ್ರೆ ಲಾಗಾಯಿತು ಅಮ್ರಿಟ್ಸರ್ ಕಂಪೆನಿಯಿಂದ ಈ ಹೊಸ ಕಂಪನಿಗೆ ವರ್ಗಮಾಡಿಕೊಳ್ಳಲೂ ಅಪ್ಪಣೆ ಸಹಾ ಬಂದಿರುತ್ತೆಂಬುವದನ್ನು ನಮ್ಮ ಏಜಂಟರುಗಳು ಮತ್ತು ಪ್ರಾವಿಡೆಂಟ್ ಪಾಲಿಸಿ ಹೋಲ್ಡರುಗಳು ಸಹಾ ಕೇಳಿ ಸಂತೋಷಪಡುವರೆಂದು ನಂಬಿದ್ದೇವೆ

2 ಅಮೃತಸರ್ ಕಂಪನಿಯ ಪ್ರಾವಿಡೆಂಟ್ ಸಂಡಿನ ಬ್ರಾಂಚಿನ ಛೀಫ್ ಏಜನ್ಸಿ ಕೆಲಸಕ್ಕೆ ನಾನು ಏಕಾಏಕಿ ರಾಜಿನಾಮೆ ಕೊಟ್ಟದ್ದರಿಂದ ಅನೇಕ ಪ್ರಾವಿಡೆಂಟ್, ಲೈಫ್ ಮತ್ತು ಮ್ಯಾರೇಜ್ ಪಾಲಿಸಿಗಳು, ಪಾಯಿದೆ ಗತಿಸಿ ಇರಬಹುದಾಗಿ, ಈ ಹೊಸ ಕಂಪನಿಯ ಮೆಮೊರಾಂಡಂ ಯಾನೆ ರೂಲ್ಸು ಅನುಸರಿಸಿ ಯಾರೊಬ್ಬ ಪಾಲಿಸಿ ಹೋಲ್ಡರಿಗೂ, ಯಾವ ವಿಧವಾದ ನಷ್ಟವೂ ಉಂಟಾಗಬಾರದೆಂಬ ಮುಖ್ಯ ಉದ್ದೇಶದಿಂದ, ಈ ಛೀಫ್ ಏಜನ್ಸಿ ಆರಂಭವಾದ ಲಾಗಾಯಿತು, ತಹಲ್ ವರವಿಗೆ, ಪಾಯಿದೆ ಗತಿಸಿ ನಿಂತುಹೋಗಿರುವ ವಿಶಿಷ್ಟ ಪಾಲಿಸಿಗಳನ್ನು ಈಗ ಜಾರಿಯಲ್ಲಿ ತರಲು ಈ ಏರ್ಪಾಡು ಮಾಡಲ್ಪಟ್ಟಿರುತ್ತೆ

3 ಈ ಮೈಸೂರು ಛೀಫ್ ಏಜನ್ಸಿ ಮೂಲಕ ಅಮೃತಸರ್ ಕಂಪನಿಗೆ ಸೇರಿರುವ ಪ್ರಾವಿಡೆಂಟ್, ಲೈಫ್ ಮತ್ತು ಮ್ಯಾರಿಯೇಜ್ ಪಾಲಿಸಿ ಹೋಲ್ಡರ್‌ಗಳೆಲ್ಲಾ ಅವರವರ ಪಾಲಿಸಿ ಜಾರಿಯಲ್ಲಿರಲಿ, ಅಥವಾ ಪಾಯಿದೆ ಗತಿಸಿ ಹೋಗಿರಲಿ 1913 ನೇ ಜೂನ್ ಆಖೈರುವರಿವಿಗೆ ಬಾಕಿ ಇರುವ ಚಂದಾ ಮೊಬಲಗು ಮತ್ತು ಚಾಲ್ತಿ ತಿಂಗಳ ಚಂದಾ ಮೊಬಲಗು ತಹಲ್‌ವರೆಗೆ ಅಮೃತಸರ್ ಕಂಪನಿಗೆ ಕೊಟ್ಟಿರುವ ಚಂದಾ ಹಣದ ತಪಸೀಲು ಪಟ್ಟಿ ಮತ್ತು ಅದನ್ನು ಕೊತ್ರಿಫೀಕರಿಸುವ ದಾಖಲಾತುಗಳೊಡನೆ ತಮ್ಮಗಳ ಅಪ್ಲಿಕೇಷನ್‌ಗಳನ್ನು ಈ ತಿಂಗಳು 31 ನೇ ತಾರೀಖು ಒಳಗಾಗಿ, ಈ ಆಫೀಸಿಗೆ ಕಳುಹಿಸಿಕೊಡಬೇಕಾಗಿ ಕೋರಿ ಇದೆ

4 ಪಾಲಿಸಿ ಹೋಲ್ಡರುಗಳು ಅಮೃತಸರದ ಕಂಪನಿಗೆ ಪಾವತಿ ಮಾಡಿರುವ ಮೊಬಲಗಿನಲ್ಲಿ ಅಡ್ಮಿಷನ್ ಮತ್ತು ಸ್ಟಾಂಪು ಫೀಜು ಮೊಬಲಗು ಹೊರ್ತು ಬಳಿಕ ಬಾಬು ಹಣವನ್ನು ಹಾಲಿ ಈ ಕಂಪನಿಗೆ ಕೂಡುವ ಪರ್ಸೆಂಟ್ 10 ರ ವರಿಗಿನ ಬಾಕಿ ಮೊಬಲಗು ಸಹಾ, ಈ ಕಂಪನಿಯು ಲೆಖ್ಖದಲ್ಲಿ ಅವರ ಹೆಸರಿಗೆ ಜಮಾ ಮಾಡಿಕೊಳ್ಳಲ್ಪಡುತ್ತೆ ಇದಲ್ಲದೆ, ಈ ಕಂಪನಿಯು ಚಾಲ್ತಿ ಗುರ್ರೆಲಾಗಾಯಿತು ಮಾತ್ರ ಆರಂಭವಾಗಿರುವದರಿಂದ ಮೇಲೆ ಹೇಳಿದ ಮೊಬಲಗನ್ನು ಈ ಕಂಪನಿಗೆ ಬರಲಿಲ್ಲವೆಂದು ಭಾವಿಸಿ ರಿಜರ್ ಫಂಡಿಗೆ ಸೇರಿಸುತ್ತದೆ—ಇದಾಯಿ ಈಗ ಸದರಿ ಎಲ್ಲಾ ಪಾಲಿಸಿ ಹೋಲ್ಡರುಗಳಿಗೂ, ಈ ಕಂಪನಿಯಿಂದ ಹೊಸದಾಗಿ ಪಾಲಿಸಿ ಕೊಡಬೇಕಾಗಿಯಿರುವದರಿಂದ ಇದರ ಕಿಮ್ಮತ್ತು ಪಾಲಿಸಿ ಒಂದಕ್ಕೆ ಎಂಟಾಣೆಯನ್ನು ಪಾಲಿಸಿ ಹೋಲ್ಡರುಗಳು ಕೊಡಬೇಕಾಗಿರುತ್ತೆ ಸದರಿ ಪಾಲಿಸಿ ಹೋಲ್ಡರುಗಳಿಂದ ವಸೂಲಾದ ಬಳಿಕ ಮಾಯಿದು ಚಂದಾ ಮೊಬಲಗು ಪ್ರವೇಶಧನ (Entrance Fee) ಕ್ಕೆ ತೆಗೆದುಕೊಳ್ಳಲ್ಪಡುತ್ತೆ

5 ಈ ಕೆಳಗೆ ಕಂಡ ದೃಷ್ಟಿ ಪಾತ್ರವಾದ ಮತ್ತು ಸ್ಪೆಷಲ್ ಸೌಕರ್ಯಗಳಿಂದ ಈ ಕಂಪನಿಯು ಒಳ್ಳೇ ಅಸ್ತಿಬಾರದೊಡನೆ ಸ್ಥಾಪಿಸಲ್ಪಟ್ಟಿರುತ್ತೆಂತಲೂ ಮತ್ತು ಪಾಲಿಸಿ ಹೋಲ್ಡರುಗಳ ಸೌಕರ್ಯಕ್ಕೆ ಅನುಗುಣವಾಗಿ ಇದೆ ಎಂಬುವ ವಿಷಯವು ಚೆನ್ನಾಗಿ ಸಿದ್ಧರಪಡಿಸುತ್ತದೆ ಇದರಂತೆ ಇರುವ ಇತರ ಮ್ಯಾರೇಜ್ ಕಂಪನಿಗಳಲ್ಲಿ ಇಂಥಾ ಯಾವದೊಂದು ಸೌಕರ್ಯವೂ ಇಲ್ಲದಾಗಿರೋಣದ್ದರಿಂದ ಅವುಗಳಲ್ಲದೆ ಪಾಲಿಸಿ ಹೋಲ್ಡರುಗಳಿಗೆ ಸರಿಯಾದ ಭರವಸೆ ಇರುವುದಿಲ್ಲ ಆದ್ದರಿಂದ ಈ ಕಂಪನಿಯು ಅತ್ಯುತ್ತಮವಾದದ್ದೆಂದು ಒತ್ತಿ ಹೇಳುವುದು ಅಪ್ರಕೃತವಾಗಿದೆ

ಈ ಕಂಪನಿಯ ಸ್ಪೆಷಲ್ ಸೌಕರ್ಯಗಳು.

ಸಿದ್ಧವಾದವಾದ ಭರವಸೆ

(a) ಈ ಕಂಪನಿಯ ಮೂಲಧನವು ಒಂದು ಲಕ್ಷ ರೂಪಾಯಿಗಳಾಗಿದೆ ಈ ಕ ಸಂಪು ಪಂಡು ಮೊಬಲಗು ಮೈಸೂರು ಗೌರ್ನಮೆಂಟಿನಲ್ಲೂ ಇತರ ವಿಧವಾದ ಭದ್ರತೆಯುಳ್ಳ ಸೆಕ್ಯೂರಿಟಿಗಳ ಮೇಲೂ ಇಡಲ್ಪಡುವದು ಶಿವಾಯಿ ಇತರ ಕಂಪನಿಗಳಲ್ಲಿ ಕೊಟ್ಟ ಮೊಬಲಗು ಸಹಾ ಕೊಡಲು ಜವಾಬ್ದಾರಿ ವಹಿಸದೆ ಇರುವದರಿಂದ ಪಾಲಿಸಿ ಹೋಲ್ಡರುಗಳು ಆಯಾಯ ಕಾರ್ಟರಿನ ಯಾ ವರ್ಷದ ವಸೂಲಿ ಮೊಬಲಗನ್ನೇ ನಂಬಬೇಕಾಗಿ ಇರುವದ್ದರಿಂದ ಈ ಕಂಪನಿಯಲ್ಲಿ ಆ ರೀತಿ ಇರದೆ ಪಾಲಿಸಿ ಹೋಲ್ಡರುಗಳಿಗೆ ಕಂಪನಿಯ ಮೂಲಧನದ ಮೇಲೂ ಮತ್ತು ರಿಜರ್ ಫಂಡಿನ ಮೇಲೂ ಸಂಪೂರ್ಣವಾದ ಹಕ್ಕು ಇರುತ್ತೆ

(b) ಈ ಕಂಪನಿಯ ಹೆಡ್ ಆಫೀಸು ಮೈಸೂರಿನಲ್ಲಿ ಇರುತ್ತೆ ಮತ್ತು ಕಂಪನಿಯು ಈ ಮೈಸೂರು ಪ್ರಾವಿನ್ಸಿನಲ್ಲಿ ಮಾತ್ರವೇ ಅಡಗಿರುತ್ತೆ.

(c) ಮದುವೆ ನಡೆಯುವ ದಿವಸ ಪಾಲಿಸಿ ಹೋಲ್ಡರ್‌ಗಳು ಪಾವತಿ ಮಾಡಿರುವ ಚಂದಾ ಮೊಬಲಗಿನ ಎರಡರಷ್ಟು ಮೊಬಲಗು ಪೂರ್ತ ಬೋನಸ್ ಆಗಿ ಕೊಡಲ್ಪಡುತ್ತೆ

(d) ಚಂದಾದಾರರು (Policy holders) ಕಂಪನಿಗೆ ಪಾವತಿ ಮಾಡಿರುವ ಪೂರಾ ಮೊಬಲಗಿಗೆ ಈ ಕಂಪನಿಯವರು ಜವಾಬ್ದಾರಿ ವಹಿಸಿರುತ್ತಾರೆ ಇತರ ಕಂಪನಿಗಳಲ್ಲಿ ಈ ಸೌಕರ್ಯವು ಇರುವುದಿಲ್ಲ

(e) ನ್ಯೋಲ್ಲಂಡ ಕಾರಣಗಳಿಂದ ಕಂಪನಿಯ ರೂಲಸು ಪ್ರಕಾರ ಲಗ್ನದ ದಿನವೇ ಈ ಕಂಪನಿಗೆ ಪಾವತಿ ಮಾಡಿರುವ ಮೊಬಲಗಿನ ಎರಡರಷ್ಟು ಮೊಬಲಗೂ ಪೂರ್ತ ಬೋನಸ್ಸು ಆಗಿ ಕೊಡಲ್ಪಡುತ್ತೆ ಒಂದುವೇಳೆ ಬೋನಸ್ಸು ಮೊಬಲಗು ಕಮ್ಮಿಯಾಗುವ ಸಂದರ್ಭದಲ್ಲಿ ಪಾಲಿಸಿ ಹೋಲ್ಡರುಗಳು ಅಮೃತಸರ್ ಮತ್ತು ಈ ಕಂಪನಿಗೆ ಸಹಾ ಕೊಟ್ಟಿರುವ ಪೂರಾ ಮೊಬಲಗಿಗೆ ಜವಾಬ್ದಾರರಾಗಿರುತ್ತಾರೆ

(f) ಇವೇ ಮುಂತಾದ ಸೌಕರ್ಯಗಳಿಂದ ನಮ್ಮ ಏಜಂಟರು ಮತ್ತು ಪಾಲಿಸಿ ಹೋಲ್ಡರುಗಳಿಗೆಲ್ಲಾ ಈ ಸೌಕರ್ಯಗಳು ತೃಪ್ತಿಕರವಾಗಿದೆಯೆಂದು ನಂಬುತ್ತೇನೆ ಇಂಥಾ ಕಂಪನಿ ಮೈಸೂರು ದೇಶದಲ್ಲೇ ನಾ ಪನೆ ಮಾಡಿರುವದರಿಂದಲೂ ಮತ್ತು ಕಂಪನಿಯ ರೂಲ್ಸುಗಳನ್ನು ಪಾಲಿಸಿ ಹೋಲ್ಡರುಗಳ ಸೌಕರ್ಯಕ್ಕೆ ಅನುಸಾರವಾಗಿ ಮಾಡಿರುವದರಿಂದಲೂ ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ ದು ತಿಳಿದಿದ್ದೇನೆ ಮುಂದೆ ಈ ಕಂಪನಿಯು ಅಭಿವೃದ್ಧಿಗೆ ಬರಲು ತಮ್ಮ ಸ್ನೇಹಿತರು ಮತ್ತು ಬಂಧುಜನಗಳಿಗೆ ಪ್ರೋತ್ಸಾಹಪಡಿಸಿ ಕಂಪನಿಯಲ್ಲಿ ಪಾಲಿಸಿ ತೆಗೆದುಕೊಳ್ಳುವಂತೆ ಮಾಡುವವರ ಮೂಲಕ ಕಂಪನಿಗೆ ಸಹಾಯ ಮಾಡುವ ಕೆಲಸ ಏಜಂಟರು ಮತ್ತು ಪಾಲಿಸಿ ಹೋಲ್ಡರುಗಳನ್ನೇ ಹೊಂದಿರುತ್ತೆ

(g) ಈ ಕಂಪನಿಯು ನಡೆಯುತ್ತಿರುವ ಏರ್ಪಾಡಿನ ವಿಚಾರದಲ್ಲಿಯಾಗಲಿ ಅಥವಾ ಆದರ ಆಡಳಿತದ ವಿಚಾರವಾಗಲಿ ನಮ್ಮ ವಾಚಕರಲ್ಲಿ ಯಾರಿಗಾದರು ಸಂದೇಹವುಂಟಾದ ಪಕ್ಷಕ್ಕೆ ಅವರು ತೃಪ್ತಿಯಾಗುವಂತೆ ವಿಶದವಾಗಿ ನಿವೇದಿಸಲು ನಾನು ಸಿದ್ಧವಾಗಿದ್ದೇನೆ

(h) ಪಾಲಿಸಿ ಹೋಲ್ಡರುಗಳ ಪೈಕಿ ಕಳೆದ ಎರಡು ಕ್ವಾರ್ಟರುಗಳಲ್ಲಿ ಲಗ್ನ ಮಾಡಿದ ಅನೇಕರಿಗೆ ಬೋನಸು ಮೊಬಲಗು ಸೀದಾ ಅಮೃತಸರ್ ಕಂಪನಿಯು ದ ತಲುಪಿರುವದಾಗಿಯೂ ಇನ್ನು ಕೆಲವರಿಗೆ ಬಾಕಿ ನಿಂತಿರುವದಾಗಿಯೂ ತಿಳಿಯಬಂದಿರುವದರಿಂದ, ಅಂಥಾ ಪಾವತಿಯಾಗದೆ ಇರತಕ್ಕವರು ತಾವು ಪಾವತಿ ಮಾಡಿರುವ ಮೊಬಲಗಿನ ತಪಸೀಲ್‌ನೊಂದಿಗೆ ಮ್ಯಾರೇಜ್ ಪ್ರೂಫ್‌ಗಳನ್ನು ಜಾಹೀರಾಗ ಬೇಗ ಕಳುಹಿಸುತ್ತಾರೆಂಬುವದನ್ನು ತಿಳಿಯಪಡಿಸಿದಲ್ಲಿ ಅಂದವರಿಗೆ ಸಲ್ಲತಕ್ಕ ಮೊಬಲಗು ಸಾಧ್ಯವಾದವುಟ್ಟಿಗೂ ಜಾಗ್ರತೆಯಾಗಿ ತಕ್ಕ ಪ್ರಯತ್ನ ಮಾಡಿ ತರಿಸಿಕೊಡಲು ಕುತೂಹಲವುಳ್ಳವನಾಗಿದ್ದೇನೆ.

(By Order of the Board)

M. L. NAGANNAH,

Managing Agent,

THE MYSORE GOVERNMENT SECURITY LIFE AND MARRIAGE ASSURANCE COMPANY, Ltd., MYSORE,

AND

Chief Agent,

THE AMRITSAR NATIONAL INSURANCE AND BANKING Co., Ltd., MYSORE.

[144 1]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

27—6—1913 ರಿಂದ 1—7—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	4	3	4	4
ಮೈಸೂರು ,,	12	11	17	11
ಕೋಲಾರ್ ,,	0	0	0	0
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	1	1	7	3
ಹಾಸನ ,,	0	0	27	13
ಚಿತ್ರದುರ್ಗ ,,	0	0	15	8
ಕಡೂರ್ ,,	3	3	44	34
ಶಿವಮೊಗ್ಗಾ ,,	11	6	10	7
ಜುಮ್ಲಾ	31	24	124	80

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ಗ್ರೀಷ್ಮ ಋತೌ ಆಷಾಢ ಶುದ್ಧ ಪೌರ್ಣಮಿ ಶುಕ್ರವಾರದಿಂದ ಆಷಾಢ ಬಹುಳ ಷಷ್ಠಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1913 ನೇ ಜೂಲೈ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ	ವ್ಯವಧಮಾಸ ತೇದಿ
18	ಶುಕ್ರ *	ಪೌರ್ಣಮಿ	10-56	ಉತ್ತರಾ	40-2	3
19	ಶನಿ ‡	ಪಾಡ್ಯಮಿ	14 20	ಶ್ರವಣ	53-16	4
20	ಭಾನು ,,	ಬಿದಿಗೆ	16-18	ಧನಿಷ್ಠ	58-56	5
21	ಸೋಮ §	ತದಿಗೆ	21-7	ಶತಭಿಷ	60-0	6
22	ಮಂಗಳ †	ಚೌತಿ	26-2	ಶತಭಿಷ	5-41	7
23	ಬುಧ ,,	ಪಂಚಮಿ	31-10	ಪೂಭಾ	12-12	8
24	ಗುರು	ಷಷ್ಠಿ	35-57	ಉತ್ತರಾಭಾ	18 18	9

* ವ್ಯಾಸಪೂರ್ಣಿಮಾ, ಆಡಿಶುಕ್ರವಾರ ‡ ಮಳೆ ನಕ್ಷತ್ರ—ಪುಷ್ಯ 1 ನೇ ಪಾದ ,, ತ್ರಿತೀಯಾ ತಿಥಿ, ಮೇಲುಕೋಟೆಯಲ್ಲಿ ಮಹಾಭಿಷೇಕ, ಕಲ್ಯಾಣೋತ್ಸವ. § ಶೂನ್ಯತಿಥಿ, ಸಂಕಟಹರಚತುರ್ಥಿ † ಚತುರ್ಥೀ ತಿಥಿ, ವ್ಯತೀಪಾತಯೋಗ. ,, ಟೀಕಾಚಾರ್ಯರ ಪುಣ್ಯದಿನ, ಮಳೆ ನಕ್ಷತ್ರ—ಪುಷ್ಯ 2 ನೇ ಪಾದ ಮೇಲುಕೋಟೆಯಲ್ಲಿ ಕೃಷ್ಣರಾಜಮುಡಿ ಉತ್ಸವ, ದಗ್ಧಯೋಗ

ಪೇಟೆ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಸಡ್ಡ ಅಕ್ಕಿ ಪಲ್ಲಾ ೧ಕ್ಕೆ	ರೂ	೧೬-೮-೦	೧೭-೮-೦
ಸಂಬಾಸಿ ಅಕ್ಕಿ ಅವಲ್		೧೬-೧೨-೦	೧೭-೮-೦
,, ,, ದುಯಂ		೧೬-೦-೦	೧೭-೦-೦
ಜಾವ್ರಾಣಿ ಅಕ್ಕಿ		೧೬-೮-೦	೧೭-೪-೦
ಸಣ್ಣಕ್ಕಿ ಅವಲ್		೧೮-೦-೦	೧೮-೮-೦
,, ದುಯಂ		೧೭-೦-೦	೧೭-೮-೦
ಬೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ		೧೫-೪-೦	೧೩-೮-೦
,, ದುಯಂ ,,		೧೫-೮-೦	೧೨-೮-೦
ಸ್ಫೆಷ್ ರಾಗಿ ಪಲ್ಲಾ ೧ಕ್ಕೆ		೭-೮-೦	೫-೦-೦
ಕಾರ್ರಾಗಿ ,,		೬-೧೨-೦	೪-೧೨-೦
ಜೋಳ ,,		೭-೮-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ		೧೦-೮-೦	೧೩-೧೨-೦
ಬಿಳಿ ಅವರೆ ,,		೧೩-೦-೦	೧೧-೦-೦
ಹೆಸರು ,,		೧೨-[illegible]-೦	೧೪-೦-೦
ಉದ್ದು ,,		೧೪-೮-೦	೧೬-೦-೦
ಕಡಲೆ ,,		೧೧-೦-೦	೧೨-೦-೦
ಎಳ್ಳು ಸೇರು ೧೨೭ಕ್ಕೆ		೨೪-೦-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ		೭-೩-೦	೭-೦-೦
ಹರಳು ೧೨೭ ಸೇರಿಗೆ		೧೩-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ		೨-೨-೦	೩-೮-೦
ಮೆಣಸಿನಕಾಯಿ ,,		೪-೦-೦	೩-೪-೦
,, ದುಯಂ		೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೪-೮-೦	ಮಣ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ		೬-೮-೦	೬-೬-೦
ಹರಳೆಣ್ಣೆ ,, ,,		೫-೪-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೫-೬-೦	೫-೪-೦
ಉಪ್ಪು ,, ,,		೬-೪-೦	೬-೦-೦
ಹುಣಿಸೇ ಹಣ್ಣು ಮಣ ೧ಕ್ಕೆ		೧-೧೨-೦	೧-೪-೦
,, ಹಳೇದು ,,		೧-೯-೦	೦-೧೪-೦
ಕುಪ್ಪ ಮಣ ೧ಕ್ಕೆ		೨೦-೦-೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೧೧-೦	೫-೦-೦
ತೆಂಗಿನಕಾಯಿ ೧೦೦ಕ್ಕೆ		೭-೦-೦	೬-೦-೦
ಅಳಲೇಕಾಯಿ ಮಣ ೧ಕ್ಕೆ		೧-೬-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ		೧-೧೨-೦	೧-೮-೦
ಚಿನ್ನ (ಪೌನ್) ಕೆಂಪು		೧೫-೮-೦	೧೫-೮-೦
,, ,, ಪಸಿಮೆ		೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ		೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧-೦-೦	೮೧-೩-೦

ಶ್ಯಾನುಭೋಗರಿಗೆ

ಮುಖ್ಯವಾಗಿ ಬೇಕಾಗಿರುವ ಬಾರಾನಮೂನೆ ಲೆಕ್ಕದ ಫಾರಂಗಳು ಉತ್ತಮ ಕಾಗದದಲ್ಲಿ ಪ್ರಿಂಟುಮಾಡಿ ಬಿಕರಿಗೆ ಸಿದ್ಧವಾಗಿದೆ. [143-1]

ಎಸ್. ಆರ್. ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರ್ ಸಿಟಿ.

ಪ್ರಿಂಟಿಂಗ್ ಟೈಡಲ್ ವಗೈರೆ.

ಒಂದು ಚಿಕ್ಕ ಆಫೀಸಿಗಾಗಬೇಕಾದ್ದೆಲ್ಲಾ ಸಾಮಾನುಗಳಿವೆ. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದುಕೊಂಡಲ್ಲಿ ವಿಶದವಾಗಿ ಪ್ರತ್ಯುತ್ತರ ದೊರೆಯುವುದು. [112-1]

ವಿಳಾಸ :—ಧರಣಯ್ಯ, ಮಂಡ್ಯ.

ಕ್ಷೇತ್ರಗಣಿತದ ಸೂತ್ರಗಳು.

ಐಚ್ಛಿಕಾಂಶವಾಗಿ ತೆಗೆದುಕೊಂಡಿರುವ ಪ್ರತಿಯೊಬ್ಬ ವಿದ್ಯಾರ್ಥಿ ಅತ್ಯವಶ್ಯಕವಾಗಿ ಓದಬೇಕಾದದ್ದು. ಪರೀಕ್ಷೆಗಳಲ್ಲಿ ಬಹುಮಟ್ಟಿಗೆ ಸಹಾಯ ಮಾಡುವುದು. ಕ್ರಯ 1 ಆಣೆ ಮಾತ್ರ. ೧೦ಕ್ಕೆ 1 ಉಚಿತ.

ವಿಳಾಸ.—ಎ. ಪಿರಿಯಣ್ಣಪ್ಪ, ಅ|| ಮಾಸ್ಟರ್, ಎ. ವಿ

[110-1] ಸ್ಕೂಲ್, ಹುಳಿಯಾರು (ತುಮಕೂರು ಡಿ.)

ROYAL BLUE-BLACK POWDER
FINEST QUALITY

Small Bottle (to make 16 oz of ink) Price, As 2.
Big „ („ 32 oz „) „ As. 4
Postage Free for one Dozen Bottles
One Fountain Pen Free for three Dozen Bottles

[141-1] *Address*

K. SRINIVASA RAO,
HARIHAR POST.

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕೆಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು. ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು. ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ. ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿವೆ. ಕ್ರಯ 3 ಆಣೆ. ಆರಕ್ಕೊಂದು ಉಚಿತ.

[187-31] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

104-8

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು ಕೀಲು, ಅರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೊ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೊ. ಈ ಯುಕ್ತಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದ್ದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 1 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ವಡಮಲಿಸಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಜಿ. ಎಸ್. ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ.)

ಈ ಪುಸ್ತಕದಲ್ಲಿ—1. ಪಿನಲ್‌ಕೋಡು, 2. ದೊಡ್ಡೀ ಆಕ್ಟ್, 3. ಎಕ್ಸೈಜು ರೆಗ್ಯುಲೇಷನ್, 4. ಆಯುಧಗಳ ರೆಗ್ಯುಲೇಷನ್, 5 ದಹ್ಯವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7. ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11. ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ಶಿಕ್ಷೆಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ.

ಪ್ರತಿ ಪಿನಲ್ ಸೆಕ್ಷನ್‌ಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೇ? ಯಾ ಕೂಡದೇ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟ್ಟಬೇಕೇ? ಜಾಮೀನ್ ತೆಗೆದುಕೊಳ್ಳಬಹುದೇ? ಯಾ ಕೂಡದೇ? ರಾಜಿಯಾಗಬಹುದೇ? ಯಾ ಕೂಡದೇ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ. ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ. 23-5-1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ. ಕ್ರಯ ರೂಪಾಯಿ 2-0-0. ಟಪಾಲ್ ಹಾಸಲು 3 ಆಣೆ.

ವಿಳಾಸ:—ಎಲ್. ಪೇಮಾರೆಡ್ಡಿ,
ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್,

[103-8] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್.

ಇಂಗ್ಲಿಷ್ ಸ್ವಿಸ್ ಲೀವರ್ ವಾಚ್.

77-13

ಇದರ ಕ್ರಯ 2-12-0 ಮಾತ್ರ. 3 ಬಹುಮಾನಗಳ ಸಮೇತ ಬಹುಮಾನಗಳ ತಪಸೀಲು. 5 ವರುಷಗಳ ಗ್ಯಾರಂಟಿ.

1 ಒಂದು ನಾಜೂಕಾದ ವಾಚ್ ಸರಪಣಿ.
2 ಅಧಿಕ ಸುವಾಸನೆಯುಳ್ಳ ಪರಿಮಳ ಅತ್ತರ್
3 ಹಣವನ್ನು ಹಾಕಿಕೊಳ್ಳುವ ಹಣದ ಚೀಲ

ಇದು ಮಕ್ಕಳ ಆಟದ ಬೊಂಬೆಗಳಂತೆ ಕೆಲವು ದಿವಸಗಳು ಆಟವಾಡಿ ನಂತರ ಕೆಟ್ಟುಹೋಗುವಂಥಾ ಅಲ್ಪಗಡಿಯಾರವಲ್ಲ. ಶ್ರೇಷ್ಠವಾದ ಮತ್ತು ಬಹು ಪ್ರಸಿದ್ಧವಾದ ಇಂಗ್ಲಿಷ್ ಸ್ವಿಸ್ ಲೀವರ್ ಕೆಲಸದಿಂದ ತಯಾರಾದದ್ದು. ಗಂಭೀರವಾದ ಘಂಟೆ ಮತ್ತು ಮಿನಿಟ್‌ಗಳ ಮುಳ್ಳುಗಳುಳ್ಳದ್ದು. ಬಹು ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರಸಾಮಾನುಗಳಿಂದ ತಯಾರಾಗಿರುತ್ತೆ. ಅನೇಕ ವರುಷಗಳ ಪರಿಯಂತರ ಬಾಳಿಕೆ ಬರುವಂಥಾದ್ದು. ಆದಕಾರಣವೇ ಆರ್ಡರುಗಳು ಬಂದು ಸುರಿಯುತ್ತಿವೆ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ಬಿ. ಆರ್. ವೆಂಕಟರಮಣ ಅಂಡ್ ಕಂಪನಿ,
ನಂ 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ಪೀಠ ಜವಾಬು.

1911 ನೇ ಇಸವಿ ಜನವರಿ ತಾರೀಖು 3ನೇ ವೃತ್ತಾಂತ ಪತ್ರಿಕೆ ನೋಡಲಾಯಿತು. ಅದರ ಉತ್ತರ ಏನೆಂದರೆ—1ನೇ ಷಾಲೀಹುಸೇನ್ಸಾ, 2ನೇ ಸೈದ್‌ಮೊಹದೀನ್ ಬಾಷ, ಇವರು ಯಾವ ಸಂಬಂಧವು ಮತ್ತು ಯಾವ ಆಧಾರವು ಇಲ್ಲದೆ ಚಂದಾ ಮೊಬಲಗು ತೆಗೆದುಕೊಳ್ಳುವದಕ್ಕೂ ಅಥವಾ ಜನಗಳು ಇವರುಗಳಿಗೆ ಚಂದಾ ಕೊಡುವದಕ್ಕೂ ಕಾರಣವೇ ತೋರಿಬರುವುದಿಲ್ಲ. ಹೀಗಿರುತ್ತಾ ಚಂದಾ ಮೊಬಲಗು ಅಪಹರಿಸುವದು ದ್ಯಾಗೆ? ಇದನ್ನು ಈ ನೋಟೀಸ್ ಪರಾಂಬರಿಸತಕ್ಕವರು ಯೋಚಿಸಬಹುದು. ಇನ್ನೂ ಸಜ್ಜಾದೆಯವರಿಗೆ ಬರತಕ್ಕ ಸದರಿ ಕಟ್ಟಡ ಕೆಲ್ಸಕ್ಕೋಸ್ಕರ ಚಂದಾ ಮೊಬಲಗು ಮತ್ತು ಗೌರ್ನಮೆಂಟಿನಿಂದ ವರುಷ ಒಂದಕ್ಕೆ ದರ್ಗಾಕ್ಕೆ ಬರತಕ್ಕ 1,200 ರೂಪಾಯಿಗಳು ಮತ್ತು ಜಾಜರಾತಿ ಹುಟ್ಟುವಳಿ ಸುಮಾರು 1,600 ರೂಪಾಯಿಗಳು ಮತ್ತು ಕಾಣಿಕೆ ವಗೈರೆ ಚಿನ್ನ ಬೆಳ್ಳಿ ಸಹ ಸುಮಾರು 1,500 ರೂಪಾಯಿಗಳು ಸಹ ದರಗಾಕ್ಕೆ ವಸೂಲು ಬರುವದು ಸರಿಯಷ್ಟೆ. ಈ ಎಲ್ಲಾ ಹಣದ ಬಿಚಾರ್ ಸರ್ಕಾರದ ಮುಂತಾದವರಿಗೆ ತೋರಿಸತಕ್ಕವರೇ ಅಪಹರಿಸುವದಕ್ಕೆ ತುಂಬಾ ಆಸ್ಪದವುಂಟೇ ಅಥವಾ ಇಲ್ಲವೇ ಎಂಬುವದು ಹಾಲಿ ನಡೆಯುವ ಬಿಚಾರಣೆಯಿಂದಲೂ ಮತ್ತು ಬರೆಯುವ ಸುಳ್ಳು ಲೆಕ್ಕದಿಂದಲೂ ವಿಚಾರಿಸುವದಾದರೆ ಸ್ಪಷ್ಟಪಡುತ್ತದೆ. ಈ ವಿಚಾರವಾಗಿ ಕೆಲವು ಚರ್ಚೆ ಮಾಡಿದ್ದರ ಮೂಲಕ ದ್ವೇಷ ಇಟ್ಟುಕೊಂಡು ಈ ರೀತಿ ಸಂಬಂಧಪಟ್ಟ ಸಜ್ಜಾದೆಯವರ ಖಾಸಾ ತಂಗಿ ಗಂಡ ಮತ್ತು ಅವರ ಖಾಸಾ ತಮ್ಮ ಉಭಯತ್ರರಿಗೂ ನಿಷ್ಕಾರಣ ದೂಷಣೆಮಾಡಿ, ಸಜ್ಜಾದೆಯವರು ತಮ್ಮ ಅನುಕೂಲತೆ ನೋಡಿಕೊಳ್ಳುತ್ತಾ ಇದಾರೆ. ಹಿಂದೆ ಸನ್ 1877 ನೇ ಇಸವಿಯ ಮೂರು ವರುಷದ ಕ್ಷಾಮ ಕಾಲದಲ್ಲಿ ಸಹ ಹಜರತ್ ಖಾನ್ ಬಹದ್ದೂರ್ ಸ್ವಾಮಿಗಳು ರಾಗಿ ರೊಟ್ಟಿ ದರ್ಗಾದಲ್ಲಿ ಯಾರಿಗೂ ಕೊಟ್ಟಿರಲಿಲ್ಲ, ಹಾಲಿ ರಾಗಿ ರೊಟ್ಟಿ ಭೋಜನ ದರ್ಗಾದಲ್ಲಿ ನಡೆಯುತ್ತಾ ಇದೆ. ಚಂದಾದಾರರು ಮಾಡಿಸಿರುವ ಬಿಲ್ಡಿಂಗ್ ವಗೈರೆ ಸರ್ಕಾರದಿಂದ ಬರತಕ್ಕ ಮೊಬಲಗಿನಲ್ಲಿ ಖರ್ಚು ಬಿದ್ದು ಇದೆ ಎಂದು ಹೇಳುವದಕ್ಕೂ ತಮ್ಮ ಕೈಯಿಂದ ಖರ್ಚು ಬಿದ್ದು ಇರುವದಾಗಿಯೂ ಹೇಳಿ ಅಪಹರಿಸಿ ಎಲ್ಲಕ್ಕೂ ದರ್ಗಾದ ಕಾರುಬಾರು ಕೆಡಿಸುವಂಥಾದ್ದು ಯಾರೊಬ್ಬರೂ ಕೇಳುವವರೇ ಇಲ್ಲ. ದರ್ಗಾದ ನನ್ನ ಏಜಂಟ್ ಅಥವಾ ವೈವಾಟ್‌ದಾರಿ ಹಿರಿಯರಲಾಗಾಯಿತಿನಿಂದ ನಡೆದುಬಂದಿರುತ್ತೆ. ಹಾಲಿ ಗಜ್ಜಾದೆಯವರು ನನ್ನನ್ನು ಮಜಾವಾಡಿದ್ದು ಸುಳ್ಳು, ನಾನು ದರಗಾ ಏಜಂಟೂ ಅಲ್ಲ. [138-1]

ತಾ 3-7-1913 ಸೈಯ್ಯದ್ ಷಾ ಅಲಿ ಹುಸೇನಿ.

ವೃತ್ತಾಂತ ಪತ್ರಿಕೆ.

—.o·—

ಸನ್ ೧೯೧೩ ನೇ ಇಸವಿ ಜೂಲೈ ತಾ ೧೭ ನೇ ಗುರುವಾರ

ಮೈಸೂರು ಸಂಸ್ಥಾನದಲ್ಲಿ ವಿದ್ಯಾಭಿವೃದ್ಧಿಯು

ಮೈಸೂರು ಸಂಸ್ಥಾನದ ವಿದ್ಯಾಭಿವೃದ್ಧಿಯ ರಿಪೋರ್ಟಿನ ವಿಷಯದಲ್ಲಿ ಗವರ್ನ್‌ಮೆಂಟಿನವರು ಒರೆದಿರುವ ಹುಕುಮಿನ ನಕಲು ನಮ್ಮಲ್ಲಿಗೆ ಬಂದಿದೆ; ಆದರೆ ವಿದ್ಯಾ ಇಲಾಖೆಯ ವಾರ್ಷಿಕ ರಿಪೋರ್ಟು ಮಾತ್ರ ನಮಗೆ ಇನ್ನೂ ತಲುಪಲಿಲ್ಲ. ಸರ್ಕಾರದವರು ಪುನರ್ವಿಮರ್ಶೆ ಮಾಡಿ ಬರೆದಿರುವ ಒಕ್ಕಣೆಯಿಂದ 1911—12ನೇ ಸಾಲಿನಲ್ಲಿ ಸಂಸ್ಥಾನಾಮುಳೆ ಪಾಠಶಾಲೆಗಳಲ್ಲಿ ಓದತಕ್ಕ ಗಂಡು ಹೆಣ್ಣು ಮಕ್ಕಳ ಸಂಖ್ಯೆಯು ಬಹಳ ಮಟ್ಟಿಗೆ ಹೆಚ್ಚಾಯಿತೆಂದು ಗೊತ್ತಾಗುತ್ತದೆ, ಆದರೆ ವಿದ್ಯಾವರ್ಧಕ ಕ್ರಮಗಳು ಕಟ್ಟುನಿಟ್ಟಾಗಿ ಅನುಸರಿಸಲ್ಪಟ್ಟವೆಂಬ ಭಾಗದಲ್ಲಿ ಸಂಶಯ ಪಡಬೇಕು. ಮೇಲ್ತರದ ಪರೀಕ್ಷೆಗಳ ಫಲಿತಾಂಶಗಳೇನೋ ಅಷ್ಟು ಗಣ್ಯವಾಗಿ ಇರಲಿಲ್ಲ.

ಈಚೀಚೆಗೆ ಪ್ರಜೆಗಳಲ್ಲಿ ವಿದ್ಯೆಯ ಪ್ರಯೋಜನಗಳು ಹೆಚ್ಚುಹೆಚ್ಚಾಗಿ ಹರಡಿಕೊಳ್ಳುತ್ತಾ ಬಂದಿರೋಣದರಿಂದ ವಿದ್ಯೆ ಕಲಿಯಬೇಕೆಂದು ಕುತೂಹಲ ಪಡುತ್ತಿರುವ ಮಕ್ಕಳಿಗೋಸ್ಕರ ಗವರ್ನ್‌ಮೆಂಟಿನವರು ಪಾಠಶಾಲೆಗಳನ್ನು ಒದಗಿಸಿಕೊಟ್ಟು, ಯೋಗ್ಯತಾಸಿದ್ಧಿಯನ್ನು ಪಡೆದು ಚಟುವಟಿಕೆಯಿಂದ ಕೆಲಸ ಮಾಡುವ ಉಪಾಧ್ಯಾಯರನ್ನು ನೇಮಕ ಮಾಡಬೇಕಾಗಿರುತ್ತದೆ. ವಿದ್ಯೆಯನ್ನು ಹರಡುವ ಭಾಗದಲ್ಲಿ ಕುತೂಹಲ ಪಡತಕ್ಕವರು ಅನೇಕರಿರುತ್ತಾರೆ; ಅವರು ಪಾಠಶಾಲೆಗಳನ್ನು ಸ್ಥಾಪಿಸುವುದಕ್ಕೂ ಸಿದ್ಧರಾಗಿದಾರೆ. ಗವರ್ನ್‌ಮೆಂಟಿನವರು ಅಂಥವರ ವಿಷಯದಲ್ಲಿ ಸಹಾಯವನ್ನು ಕೊಟ್ಟು ಪ್ರೋತ್ಸಾಹವನ್ನು ತೋರಿಸಿ ವಿದ್ಯಾಪ್ರಚಾರಣೆಯು ತೃಪ್ತಿಕರವಾಗಿಯೂ ಚಟುವಟಿಕೆಯಿಂದಲೂ ನಡೆಯುವಂತೆ ನೋಡಿಕೊಳ್ಳಬೇಕು.

ಕೀಳು ಜಾತಿಯವರನ್ನು ಉದ್ಧಾರ ಮಾಡಬೇಕೆಂದು ಪ್ರಾರಂಭವಾಗಿರುವ ನಾಪಸಕಾರ್ಯಗಳಲ್ಲಿ ಒಂದು ಅಪಾಯ ಕಂಡು ಬರುತ್ತಿದೆ. ಕಲವು ಆರಂಭಶೂರರ ಕಾರ್ಯಗಳಿಂದ ವಿದ್ಯಾಪ್ರಚಾರಕ್ಕೆ ಸಹಜವಾದ ಯಾವ ಸಹಾಯವೂ ಆಗಲಾರದು. ಚೆನ್ನಾಗಿ ಕೆಲಸ ನಡೆಯುತ್ತಿರುವ ಸ್ಕೂಲುಗಳಿಂದ ಮಕ್ಕಳನ್ನು ಕರೆದುಕೊಂಡುಹೋಗಿ ಹೊಸ ಸ್ಕೂಲುಗಳಿಗೆ ಸೇರಿಸಿಕೊಳ್ಳುವುದರಲ್ಲಿ ನಿಜವಾಗಿಯೂ ಹೊಸ ಸ್ಕೂಲುಗಳನ್ನು ಸ್ಥಾಪಿಸಿದಂತಾಗುವುದೇ? ಈಚೆಗೆ ನಾವು ಅಂಥಾ ಒಂದು ಪಾಠಶಾಲೆಯನ್ನು ನೋಡಿಬಂದೆವು. ಅಲ್ಲಿ ಹೆಣ್ಣುಮಕ್ಕಳು ಪುಸ್ತಕ ಹಿಡಿದು ಓದುತ್ತಿದ್ದದ್ದನ್ನು ಕಂಡು, ಓದುವುದನ್ನು ಎಲ್ಲಿ ಕಲಿತಿರೆಂದು ಪ್ರಶ್ನೆಮಾಡಿದಾಗ ಅವರು ಅನೇಕ ವರುಷಗಳಿಂದ ಆ ಹಳ್ಳಿಯಲ್ಲಿರುವ ಪಾಠಶಾಲೆಯಲ್ಲಿ ಕಲಿತುಕೊಂಡೆವೆಂದು ಮುಚ್ಚುಮರೆಮಾಡದೆ ಧಾರಾಳವಾಗಿ ಹೇಳಿದರು. ಈ ಪ್ರಕಾರ ಇತರರು ಅಪಾರವಾದ ಶ್ರಮಪಟ್ಟು ಮೌಢ್ಯದಲ್ಲಿ ಬಿದ್ದಿರುವವರ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುವುದರಲ್ಲಿ ವರುಷಾಂತರ ತಮ್ಮ ತನುಮನಧನಗಳನ್ನು ವಿನಿಯೋಗಿಸಿರುತ್ತಾರೆ. ಅಂಥಾ ಮಕ್ಕಳನ್ನು ಮೊದಲು ಓದುತ್ತಿದ್ದ ಪಾಠಶಾಲೆಯಿಂದ ಬಿಡಿಸಿ ಕರೆದುಕೊಂಡು ಹೋಗತಕ್ಕವರು ಬರೀ ಪಟಾಟೋಪಿಗಳೆನಿಸಿಕೊಳ್ಳತಕ್ಕವರೇ ಹೊರತು ಅವರಿಂದ ವಿದ್ಯಾಪ್ರಚಾರಕ್ಕೆ ಸತ್ವವೂ ಸಹಜವೂ ಆದ ಸಹಾಯವಾಗಲಿ ಪ್ರೋತ್ಸಾಹವಾಗಲಿ ಆಗಲಾರದು. ಯಾವುದೂ ಒಂದು ಮಠಕ್ಕೂ ಹೋಗಲವಕಾಶವಿಲ್ಲದೆ ವೃಥಾ ಅಲೆಯುತ್ತಿರುವ ಮಕ್ಕಳು ಹೇರಳವಾಗಿರುವರು. ಹೊಸ ಸ್ಕೂಲುಗಳನ್ನು ಇಂಥಾವರಿಗಾಗಿ ಇಟ್ಟು ನಡಿಸಿದರೆ ವಿದ್ಯಾಪ್ರಚಾರವೆಂಬ ಮಾತು ಸಾರ್ಥಕವಾದೀತು. ವಿದ್ಯೆಯನ್ನು ಹರಡುವುದರಲ್ಲಿ ಉತ್ಸಾಹಶೀಲರಾಗಿರತಕ್ಕ ಮಹನೀಯರು ಅಂಥಾ ಮಕ್ಕಳನ್ನು ಅಲ್ಲಲ್ಲಿ ಕೂಡಿಸಿ ಪಾಠಶಾಲೆಗಳನ್ನು ಸ್ಥಾಪಿಸುತ್ತಾ ಬರುವ ಪಕ್ಷದಲ್ಲಿ ಅವರ ಸಾಹಸ ಪ್ರಯತ್ನವನ್ನು ಕೊಂಡಾಡತಕ್ಕದ್ದಾಗಿದೆ, ಹಾಗಿಲ್ಲದೆ ಕಳ್ಳರು ಕದಿಯುವಂತೆ ಇನ್ನೊಂದು ಪಾಠಶಾಲೆಯಲ್ಲಿ ಓದುತ್ತಿರುವ ಮಕ್ಕಳನ್ನು ಕರೆದುಕೊಂಡು ಹೋಗಿ ಹೊಸ ಸ್ಕೂಲನ್ನು ಸ್ಥಾಪಿಸಿದೆವೆಂದು ಹೇಳುವ ಪಕ್ಷದಲ್ಲಿ ಅಂಥವರಿಗೆ ಮೂರ್ಖರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ನೈಜವಾದ ಪ್ರೀತ್ಯುತ್ಸಾಹಗಳುಂಟೆಂದು ಊಹಿಸಲಾದೀತೇ? ಪ್ರಜೆಗಳನ್ನು ನಾಗರಿಕರನ್ನಾಗಿ ಮಾಡಬೇಕಾದ ಕರ್ತವ್ಯವು ಒಬ್ಬರ ಕರ್ತವ್ಯವಲ್ಲ; ಅದು ನಾಗರಿಕನಾದ ಪ್ರತಿಒಬ್ಬ ಪ್ರಜೆಯ ಕರ್ತವ್ಯವಾಗಿರುತ್ತದೆ. ಮಕ್ಕಳನ್ನು ಒಂದು ಸ್ಕೂಲಿನಿಂದ ಬಿಡಿಸಿ ಇನ್ನೊಂದು ಸ್ಕೂಲಿಗೆ ಕದ್ದೊಯ್ಯುವುದು ಪ್ರಜೆಗಳ ನಾಗರಿಕವನ್ನು ಮೆರೆಯಿಸಲಾರದು.

ಸರ್ಕಾರದವರಿಗೆ ವಿದ್ಯೆಯನ್ನು ಹರಡಬೇಕೆಂಬ ಉದ್ದೇಶವಿದೆ ಎನ್ನುವುದು ನಿಜ; ಆದರೆ ಆ ಉದ್ದೇಶವು ನೆರವೇರುವುದಕ್ಕೆ ಅವರು ಯಾವ ಕ್ರಮಗಳನ್ನು ಅನುವರ್ತಿಸುವರೋ ಅದನ್ನು ಮಾತ್ರ ಇನ್ನೂ ಅವರು ಉಚಿತಮಾಡಿ ಪ್ರಕಟಿಸಿರುವುದಿಲ್ಲ. ಅದನ್ನು ಬೇಗನೆ ಪ್ರಕಟಮಾಡಿದ ಪಕ್ಷದಲ್ಲಿ ಎಷ್ಟೋ ಸಹಾಯವಾದೀತು. ಯಾಕೆಂದರೆ ಗವರ್ನ್‌ಮೆಂಟಿನವರು ಸುಮ್ಮನೆ ಅನೇಕ ಹೊಸ ಸ್ಕೂಲುಗಳು ಸ್ಥಾಪನವಾಗಬೇಕೆನ್ನುವರು. ವಿದ್ಯೆಯನ್ನು ಹರಡುವ ಕಾರ್ಯಭಾರವನ್ನು ಹೊತ್ತುಕೊಂಡು ಸಾಹಸ ಪಡುತ್ತಿರುವವರಿಗೆ ಗವರ್ನ್‌ಮೆಂಟಿನವರು ಯಾವ ಸಹಾಯ ಪ್ರೋತ್ಸಾಹಗಳನ್ನೂ ಕೊಡದೆ ಇರುತ್ತಾರೆ. ಆದಕಾರಣ ಗವರ್ನ್‌ಮೆಂಟಿನವರ ಕಾರ್ಯಕ್ರಮವು ಉಚಿತವಾಗಿ, ಗ್ರಾಂಟುಕೊಡತಕ್ಕ ನಿಬಂಧನೆಯನ್ನು ಪ್ರಸರಾಲೋಚನೆಯಿಂದ ಕ್ರಮಕ್ಕೆ ತಂದಿಟ್ಟು, ಅದರಂತೆ ನಡಸುತ್ತಾ ಬರುವುದರಲ್ಲಿ ಏನ್ನಕಂಕರ್ಯರಾದರೆ ಅದರಿಂದ, ಸಿಕ್ಕಿದಂತೆ ನಿರ್ಬಂಧವಿಲ್ಲದ ಲಕ್ಷಾಂತರ ರೂಪಾಯಿಗಳನ್ನು ವ್ಯರ್ಥವಾಗಿ ಖರ್ಚುಮಾಡುವುದಕ್ಕಿಂತ ಮತ್ತು ಬಲಾತ್ಕರಿಸಿ ವಿದ್ಯೆ ಕಲಿಸಬೇಕೆಂಬ ಪಟಾಟೋಪದ ಕಾನೂನನ್ನು ಮಾಡಿಸುವುದಕ್ಕಿಂತ ಎಷ್ಟೋ ಅನುಕೂಲವೂ ಕ್ಷೇಮವೂ ಆದೀತು.

ವಿದ್ಯೆಯನ್ನು ಹರಡುವುದಕ್ಕೆ ವಿಶೇಷ ಪ್ರಯತ್ನಮಾಡಬೇಕಾದ ಕಾಲವು ಪಕ್ವಕ್ಕೆ ಬಂದಿದೆ. ಆದರೆ ಬಲಾತ್ಕಾರ ಮಾಡುವುದರಿಂದ ಈ ಮಹತ್ಕಾರ್ಯವು ನೆರವೇರಲಾರದು. ಸಂಸ್ಥಾನಾಮುಳೆ ಯೋಗ್ಯವಾದ ಪಾಠಶಾಲೆಗಳನ್ನು ಸ್ಥಾಪಿಸಿ, ಸಮರ್ಥರಾದ ಉಪಾಧ್ಯಾಯರುಗಳನ್ನು ನೇಮಿಸಿ, ಸರಿಯಾದ ಮೇಲ್ವಿಚಾರಣೆ ಇಟ್ಟು ನೋಡಿಕೊಳ್ಳುತ್ತಾ ಬಂದರೆ ವಿದ್ಯೆಯು ಹರಡುವುದರಲ್ಲಿ ಸಂಶಯವಿಲ್ಲ. ಮೇಲ್ವಿಚಾರಣೆಗೆ ಈಗ ನೇಮಕವಾಗಿರುವ ಸಿಬ್ಬಂದಿಯು ಸಾಲದು; ಮತ್ತು ಕೆಲವು ಕಡೆ ಸಮರ್ಥರಾದವರು ಇಲ್ಲದಿರೋಣದರಿಂದ ಸರ್ಕಾರದವರು ಈ ಲೋಪಗಳನ್ನೆಲ್ಲಾ ಬೇಗನೆ ತಿದ್ದಿ ಕ್ರಮಪಡಿಸಬೇಕಾದದ್ದು ಆವಶ್ಯವಾಗಿದೆ.

ಬಾಲ್ಕನ್ ಸಂಸ್ಥಾನಗಳ ವಿದ್ಯಮಾನಗಳು.

ರಾಜಧಾನಿಗಳಾದ ಬೆಲ್‌ಗ್ರೇಡ್, ಸೋಫಾಯಾ, ಕಾನ್‌ಸ್ಟಾಂಟಿನೋಪಲ್ ಪಟ್ಟಣಗಳಿಂದ ಕಳೆದ ವಾರ ಬಂದಿರುವ ತಂತಿ ವರ್ತಮಾನಗಳು ಒಂದಕ್ಕೊಂದು ಸಮಂಜಸವಾಗಿಲ್ಲ. ಆದರೂ ಕದಿದಾಟಗಳಲ್ಲಿ ಬಲ್ಗೇರಿಯಾದವರಿಗೆ ದೊಡ್ಡ ಅಪಜಯವಾಗಿ ಈಗ ಅವರು ಕರಾರು ಮಾಡಿಕೊಳ್ಳಬೇಕೆಂದು ಆತುರಪಟ್ಟು ತಿಳಿಸಿರುವಂತೆ ಗೊತ್ತಾಗುತ್ತದೆ. ಆ ಯುದ್ಧಗಳ ವಿವರಗಳೇನೂ ಸರಿಯಾಗಿ ತಿಳಿದುಬರಲಿಲ್ಲ. ಆದಾಗ್ಯೂ ಅವರೆಲ್ಲಾ ಏಕೀಭವಿಸಿ ಟರ್ಕಿಯವರ ಮೇಲೆ ನಡಿಸಿದ ಘೋರ ಯುದ್ಧಗಳಂತೆ ಅವರವರಿಗೆ ಈಗ ಕದಿದಾಟಗಳಾಗಿವೆ ಎಂದು ತೋರುವುದು. ಸರ್ವಿಯ, ಗ್ರೀಸ್, ಮಾಂಟಿನೀಗ್ರೊ ಸಂಸ್ಥಾನಗಳವರು ಒಂದಾಗಿ ಬಲ್ಗೇರಿಯದವರ ಮೇಲೆ ಯುದ್ಧಮಾಡಲು ಬಲ್ಗೇರಿಯದವರು ತಮಗೆ ನ್ಯಾಯವಾಗಿ ಸೇರಬೇಕಾದ ಪ್ರದೇಶಗಳಿಗಿಂತ ಹೆಚ್ಚು ಸೀಮೆಯನ್ನು ಸೇರಿಸಿಕೊಳ್ಳಬೇಕೆಂದು ಪ್ರಯತ್ನಪಟ್ಟದ್ದೇ ಕಾರಣವೆಂದು ಹೇಳಬೇಕಾಗಿದೆ. ಇದಲ್ಲದೆ ಬಲ್ಗೇರಿಯದವರು ಯುದ್ಧಸನ್ನದ್ಧರಾಗಿ ನಿಲ್ಲದಂಥಾ ಜನರನ್ನು ಬಹಳ ಕ್ರೂರತನದಿಂದ ಕೊಂದುಹಾಕಿ ಕೆಟ್ಟ ಹೆಸರನ್ನು ಪಡೆದಿರುವಂತೆ ಹೇಳುವರು. ಆದಕಾರಣ

ದುರಾಶಾಪರರಾದ ಈ ಬಲ್ಗೇರಿಯದವರ ವಿಷಯದಲ್ಲಿ ಪರರಾಜ್ಯಗಳವರು ಪ್ರೀತಿ ಸಂತಾಪಪಡುವವರಾಗಿಲ್ಲ. ರಷ್ಯಾ ಚಕ್ರವರ್ತಿಯವರು ಅವರವರಿಗೆ ಕರಾರುಮಾಡಿಸಬೇಕೆಂದು ಪ್ರಯತ್ನ ನಡೆಯುತ್ತಿದೆ. ಹ್ಯಾಗೂ ಈ ಕಡಿದಾಟಗಳು ಆ ಜನಾಂಗಗಳಿಗೆ ಅಪಮಾನವನ್ನು ತಂದಿರುವವು. ಇನ್ನಾದರೂ ಈ ಯುದ್ಧಗಳು ಶಮನವಾಗಿ, ಆ ಸೀಮೆಗಳಲ್ಲಿ ನೆಮ್ಮದಿಯು ನೆಲೆಗೊಳ್ಳುವುದೆಂದೂ, ಪ್ರಜೆಗಳು ತಮ್ಮ ತಮ್ಮ ಕೆಲಸಕಾರ್ಯಗಳಲ್ಲಿ ನಿರತರಾಗುವರೆಂದೂ ನಂಬಿ ನಿರೀಕ್ಷಿಸುತ್ತೇವೆ.

ಕ್ರಿಸ್ತನು ಯಾರು ?

ಪ್ರಶ್ನೆ—ಲೋಕದಲ್ಲಿ ಅನೇಕ ಬೋಧಕರು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ಹುಟ್ಟಿ ಸತ್ಯವನ್ನು ವಿಚಾರಿಸುತ್ತ ತಮಗೆ ತಿಳಿದಷ್ಟು ಸತ್ಯವನ್ನು ತಮ್ಮ ಶಿಷ್ಯರಿಗೆ ಬೋಧಿಸುತ್ತಾ ಇದ್ದರು. ಅರಬಿಸ್ಥಾನದಲ್ಲಿ ಮಹಮ್ಮದನೂ ಹಿಂದುಸ್ಥಾನದಲ್ಲಿ ಬುದ್ಧನೂ ಗ್ರೀಕ್ ಅಥವಾ ಯವನ ದೇಶದಲ್ಲಿ ಪ್ಲೇಟೋ ಎಂಬ ಮಹಾತ್ಮನೂ ಪಾಲೆಸ್ಟೈನ್ ದೇಶದಲ್ಲಿ ಮೋಶೆಯು ಹುಟ್ಟಿ ಲೋಕದಲ್ಲಿ ಸತ್ಯದ ಮೂಲತತ್ವಗಳನ್ನು ಹರಡಿದರು. ಕ್ರಿಸ್ತನು ಸಹ ಇಂತಹ ಮತಸ್ಥಾಪಕನು ಎಂತ ನಾವು ಅನುಮಾನವಿಲ್ಲದೆ ನಂಬುತ್ತೇವೆ. ಆದರೆ ಕ್ರೈಸ್ತಪಾದ್ರಿಗಳಾದ ನೀವು—ಕ್ರಿಸ್ತನು ಅದ್ವಿತೀಯನು ಅಸಾಧಾರಣವಾದ ಬೋಧಕನು ಎಂದು ಹೇಳಿ ಇತರ ಬೋಧಕರ ತಲೆಯ ಮೇಲೆ ಆತನನ್ನು ಎತ್ತಿಡುತ್ತೀರಿ. ಅಂತಹ ಅಗ್ರಸ್ಥಾನವನ್ನು ಆತನಿಗೆ ಕೊಡುವದಕ್ಕೆ ಬೇರೆ ಬೋಧಕರಲ್ಲಿಲ್ಲದಿದ್ದ ವಿಶೇಷತ್ವವು ಆತನಲ್ಲಿ ಏನಾದರೂ ಇದ್ದಿತೋ ?

ಉತ್ತರ—ಲೋಕದಲ್ಲಿದ್ದ ಬೇರೆ ಬೇರೆ ಬೋಧಕರ ವಿಷಯದಲ್ಲಿ ನೀವು ಹೇಳಿದ್ದು ನಿಜ. ಅವರೆಲ್ಲರೂ ಸತ್ಯದ ಮೂಲತತ್ವವು ಯಾವುದೆಂದು ವಿಚಾರಿಸುವವರಾಗಿದ್ದರು. ಆದರೆ ಕ್ರಿಸ್ತನು ಸತ್ಯಮೂಲತತ್ವವಾಗಿದ್ದಾನೆ.

ಪ್ರಶ್ನೆ—ಇದು ಬಹಳ ಆಶ್ಚರ್ಯವಾದ ಮಾತು. ಆದರೆ ಈ ಮಾತು ಬರೀ ನಿಮ್ಮ ಬಾಯಿವಚನವೋ ? ಅಥವಾ ನಿಮ್ಮ ಮಾತಿಗೇನಾದರೂ ಆಧಾರವಿದೆಯೋ ?

ಉತ್ತರ—ಕ್ರಿಸ್ತನ ಶಿಷ್ಯರಾಗಿ ಆತನ ಸಂಗಡ ಯಾವಾಗಲೂ ಇದ್ದು ಆತನ ಬೋಧನೆಯನ್ನು ಕೇಳುತ್ತಿದ್ದವರು ಆತನ ಚರಿತ್ರೆಯನ್ನು ಬರೆದಿದ್ದಾರೆ. ಕ್ರಿಸ್ತನು ತಾನೇ ತನ್ನನ್ನು ಕುರಿತು ಹೇಳಿದ್ದನ್ನು ಅವರು ಆ ಪುಸ್ತಕದಲ್ಲಿ ಬರೆದರು. ನಾನು ಹೇಳಿದ ಮಾತುಗಳಿಗೆ ಕ್ರಿಸ್ತನು ಹೇಳಿದ ವಾಕ್ಯಗಳೇ ಆಧಾರವಾಗಿವೆ.

ಪ್ರಶ್ನೆ—ಈ ವಿಷಯದಲ್ಲಿ ಕ್ರಿಸ್ತನು ಹೇಳಿದ ವಾಕ್ಯಗಳನ್ನೇ ಕೇಳಬೇಕೆಂದು ಅಪೇಕ್ಷೆಯುಂಟು.

ಉತ್ತರ—ಸಂತೋಷದಿಂದ ಹೇಳುತ್ತೇನೆ. ಕೇಳಿರಿ. ಒಂದು ದಿನ ಒಬ್ಬ ಶಿಷ್ಯನು—ಸ್ವಾಮಿ, ಪರಲೋಕಕ್ಕೆ ಹೋಗುವ ಮಾರ್ಗವನ್ನು ನಮಗೆ ತೋರಿಸು ಎಂದು ಕೇಳಿದ್ದಕ್ಕೆ ಕ್ರಿಸ್ತನು ಅವನಿಗೆ—ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ. ನನ್ನ ಮೂಲಕವಾಗಿ ಹೊರತು ಯಾರೂ ತಂದೆಯಾದ ದೇವರ ಬಳಿಗೆ ಬರಲಾರರು. ನೀವು ನನ್ನನ್ನು ತಿಳುಕೊಂಡಿದ್ದರೆ ತಂದೆಯನ್ನು ತಿಳಿದುಕೊಂಡಿರುವಿರಿ ಅಂದನು. ಅನಂತರ ಇನ್ನೊಬ್ಬ ಶಿಷ್ಯನು—ಸ್ವಾಮಿ, ನಮಗೆ ತಂದೆಯನ್ನು ತೋರಿಸು. ನಮಗೆ ಅಷ್ಟೇ ಸಾಕು ಅಂದನು. ಕ್ರಿಸ್ತನು ಅವನ ಮಂದಬುದ್ಧಿಯನ್ನು ಕುರಿತು ಚಿಂತಿಸಿ—ಶಿಷ್ಯನೇ, ನಾನು ಇಷ್ಟು ದಿವಸ ನಿಮ್ಮ ಸಂಗಡ ಇದ್ದಾಗ್ಯೂ ನೀನು ಇನ್ನೂ ನನ್ನನ್ನು ತಿಳುಕೊಳ್ಳಲಿಲ್ಲವೇ ? ನನ್ನನ್ನು ನೋಡಿದವನು ತಂದೆಯಾದ ದೇವರನ್ನು ನೋಡಿದ್ದಾನೆ. ನಮಗೆ ತಂದೆಯನ್ನು ತೋರಿಸೆಂದು ನೀನು ಕೇಳುವದು ಯಾಕೆ ? ನಾನು ತಂದೆಯಲ್ಲಿದ್ದೇನೆ. ತಂದೆಯು ನನ್ನಲ್ಲಿದ್ದಾನೆ ಅಂದನು. ಇನ್ನೊಂದು ವೇಳೆಯಲ್ಲಿ ಒಬ್ಬ ಅಧಿಕಾರಿಯು ಆತನ ಬಳಿಗೆ ಬಂದು ಮೊಣಕಾಲೂರಿ—ಬೋಧಕನೇ, ನಾನು ನಿತ್ಯಜೀವವನ್ನು ಪಡೆಯಬೇಕಾದರೆ ಏನು ಒಳ್ಳೇ ಕಾರ್ಯವನ್ನು ಮಾಡಬೇಕೆಂದು ಕೇಳಿದನು. ಅದಕ್ಕೆ ಕ್ರಿಸ್ತನು—ನನ್ನನ್ನು ಹಿಂಬಾಲಿಸು, ನೀನು ನಿತ್ಯಜೀವವನ್ನು ಪಡೆಯುವಿಯೆಂದು ಹೇಳಿದನು. ಮತ್ತು ಆತನು ಬೇರೆ ಬೇರೆ ಸಮಯಗಳಲ್ಲಿ ಸಂದರ್ಭಕ್ಕೆ ತಕ್ಕ ಹಾಗೆ ತನ್ನನ್ನು ಅವರಿಗೆ ಪ್ರಕಟಮಾಡಿಕೊಳ್ಳುತ್ತಿದ್ದನು. ಹಸಿವೆಯಿಂದ ಕಂಗೆಟ್ಟಿದ್ದವರಿಗೆ ಆತನು ಊಟವನ್ನು ಮಾಡಿಸಿದ ಮೇಲೆ ಅವರಿಗೆ ಕೆಟ್ಟು ಹೋಗುವ ಆಹಾರಕ್ಕಾಗಿ ದುಡಿಯಬೇಡಿರಿ. ನಿತ್ಯಜೀವವನ್ನು ಕೊಡುವ ಆಹಾರಕ್ಕಾಗಿ ದುಡಿಯಿರಿ. ನಾನೇ ನಿತ್ಯಜೀವವನ್ನು ಕೊಡುವ ಆಹಾರ. ನನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ ಅಂದನು. ಇನ್ನೊಂದು ದಿನ ನೀರು ಸೇದುವದಕ್ಕೆಂದು ಬಂದ ಒಬ್ಬ ಸ್ತ್ರೀಯಳನ್ನು ಆತನು ನೋಡಿ—ಈ ನೀರನ್ನು ಕುಡಿಯುವವರೆಲ್ಲರಿಗೆ ತಿರಿಗಿ ನೀರಡಿಕೆಯಾಗುವದು. ಆದರೆ ನಾನು ಕೊಡುವ ನೀರನ್ನು ಕುಡಿದವರಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ. ನಾನು ಅವನಿಗೆ ಕೊಡುವ ನೀರು ಅವನಲ್ಲಿ ನೀರಿನ ಬುಗ್ಗೆಯಾಗಿ ಉಕ್ಕುತ್ತಾ ಉಕ್ಕುತ್ತಾ ನಿತ್ಯಜೀವವಾಗುವದು ಎಂದು ಹೇಳಿದನು. ಇಂತಹ ವಾಕ್ಯಗಳು ಸುವಾರ್ತೆಯೆಂಬ ಕ್ರಿಸ್ತನ ಚರಿತ್ರೆಯಲ್ಲಿ ಇನ್ನೂ ಅನೇಕವುಂಟು. ಅವುಗಳನ್ನೆಲ್ಲಾ ಎತ್ತಿ ಹೇಳುವದಕ್ಕೆ ಸ್ಥಳ ಸಂಕೋಚವಾಗಿದೆ. ಆ ಪುಸ್ತಕಗಳನ್ನು ಸಂಪಾದಿಸಿಕೊಂಡು ಓದಿದರೆ ನಿಮಗೆ ಅದರ ಪ್ರತಿಫಲ ದೊರೆಯುವದು. ಆದರೆ ಈಗ ನಾನು ಎತ್ತಿ ಹೇಳಿರುವ ವಾಕ್ಯಗಳು ಕ್ರಿಸ್ತನು ತನ್ನನ್ನು ಕುರಿತು ತಿಳಿಸಿದ್ದನ್ನು ನಿರ್ಣಯಿಸುವದಕ್ಕೆ ಸಾಕಾಗಿವೆ.

ಪ್ರಶ್ನೆ—ಈ ವಾಕ್ಯಗಳಿಂದ ಕ್ರಿಸ್ತನು ತನ್ನನ್ನೇ ಕುರಿತು ಬಹಳವಾಗಿ ಹೇಳಿಕೊಂಡಂತೆ ಕಾಣಬರುತ್ತವೆ. ಸತ್ಯದ ವಿಷಯವಾಗಿ ಮತ್ತು ನೀತಿಯ ವಿಷಯವಾಗಿ ಆತನು ಉಪದೇಶಮಾಡದೆ ತನ್ನನ್ನು ಸ್ತುತಿಸಿಕೊಂಡ ಹಾಗೆ ಇದೆಯಲ್ಲವೋ ?

ಉತ್ತರ—ಒಬ್ಬನು ತನ್ನನ್ನು ತಾನು ತಿಳಿಯದೆ ಉಬ್ಬಿದ ಮನಸ್ಸಿನಿಂದ ಗರ್ವಗೊಂಡು ಆತ್ಮಸ್ತುತಿಮಾಡಿಕೊಂಡರೆ ಅಂಥವನು ಬಡಿವಾರಕೊಚ್ಚುತ್ತಾನೆಂದು ಅವನನ್ನು ತಿರಸ್ಕರಿಸುವದು ನ್ಯಾಯ. ಆದರೆ ಒಬ್ಬನು ಅನೇಕರ ಕಷ್ಟನಷ್ಟಗಳನ್ನು ನಿವಾರಣೆಮಾಡುವ ಉಪಾಯವನ್ನು ತಿಳಿದವನಾಗಿದ್ದು ಕಷ್ಟನಷ್ಟಗಳಿಗೆ ಗುರಿಯಾಗಿರುವವರನ್ನು ಎದುರಿಗೆ ನಿಂತುಕೊಂಡು ನೋಡುತ್ತಾ ಸುಮ್ಮನಿದ್ದರೆ ಅದು ದೈನ್ಯವೋ ? ಅಥವಾ ಅಂಥವನನ್ನು ಸಭ್ಯನನ್ನಬಹುದೋ ? ಅವನನ್ನು ಕ್ರೂರಾತ್ಮನು ಸ್ವಾರ್ಥಪ್ರಿಯನು ಪರಹಿತವನ್ನು ಲಕ್ಷಿಸದವನು ಎಂತ ಹೇಳಬೇಕಾಗುವದಲ್ಲವೋ ? ಆದರೆ ಅವನು ಕಷ್ಟನಷ್ಟಗಳಿಗೆ ಗುರಿಯಾಗಿರುವವರನ್ನು ನೋಡಿ ತನಗೆ ತಿಳಿದಿರುವ ಉಪಾಯವನ್ನು ಹೇಳಿದರೆ ಅದು ಆತ್ಮಸ್ತುತಿಯೆಂತ ಭಾವಿಸುವದು ನ್ಯಾಯವೋ ?

ಪ್ರಶ್ನೆ—ಕಷ್ಟನಷ್ಟಗಳಿಗೆ ಸಿಕ್ಕಿರುವವರನ್ನು ಉಪಾಯಾಂತರದಿಂದ ರಕ್ಷಿಸುವವನು ಪರೋಪಕಾರಿ. ಅದು ಆತ್ಮಸ್ತುತಿಯಲ್ಲ. ಅದು ಆತ್ಮಾರ್ಪಣೆ. ಕ್ರಿಸ್ತನು ಇಂತಹ ಮಾತುಗಳನ್ನು ತನ್ನ ವಿಷಯವಾಗಿ ಹೇಳಿಕೊಂಡದ್ದು ಕಷ್ಟನಷ್ಟಗಳಿಗೆ ಗುರಿಯಾಗಿರುವವರನ್ನು ಬಿಡಿಸುವ ಅಪೇಕ್ಷೆಯಿಂದಲೋ ?

ಉತ್ತರ—ಸತ್ಯವನ್ನು ತಿಳಿಯುವದಕ್ಕೂ ಅದನ್ನು ಆಚರಿಸುವದಕ್ಕೂ ಮನುಷ್ಯನು ನಿರ್ಮಾಣವಾದನು. ಮತ್ತು ಸತ್ಯವನ್ನು ತಿಳಿದು ಆಚರಿಸಿದ ಹೊರತು ಮನುಷ್ಯನ ಮನೋಭಿಲಾಷೆಯು ತೃಪ್ತಿಯಾಗುವದಿಲ್ಲ. ಆದರೆ ಮನುಷ್ಯನು ಪಾಪವೆಂಬ ಕಾಳಸರ್ಪದಿಂದ ಕಚ್ಚಲ್ಪಟ್ಟವನಾಗಿದ್ದಾನೆ. ಸರ್ಪವಿಷವು ವ್ಯಾಪನೆಯಾದವನಿಗೆ ಸ್ಮೃತಿತಪ್ಪುವದು. ಹಾಗೆಯೇ ಮನುಷ್ಯನ ಮನಸ್ಸು ಸ್ಮೃತಿತಪ್ಪಿರುವದರಿಂದ ತನ್ನನ್ನು ತೃಪ್ತಿಪಡಿಸುವ ಸತ್ಯವು ಯಾವದೋ ತಿಳಿಯದವನಾಗಿದ್ದಾನೆ. ಪಾಪದ ವಿಷವು ಪೂರಾ ನಾಟಿದವನಲ್ಲಿ ಸತ್ಯದ ಮೇಲೆ ಅಪೇಕ್ಷೆಯೇ ಇಲ್ಲ. ನೀವು ಹೇಳಿದ ಕೆಲವು ಮತಸ್ಥಾಪಕರು ಸತ್ಯವ್ಯಾವುದೆಂದು ಹುಡುಕಿದರು. ಆದರೆ ಕ್ರಿಸ್ತನು ಬರಿ ಮತಸ್ಥಾಪಕನು ಮಾತ್ರವಲ್ಲ. ಆತನೇ ಸತ್ಯದ ಮೂಲತತ್ವ. ರೋಗಿಯನ್ನು ವಾಸಿಮಾಡುವ ವೈದ್ಯನು. ಆತನೇ ರೋಗನಿವಾರಕವಾದ ಔಷಧ. ಸತ್ತವರನ್ನು ಬದುಕಿಸುವ ಸಂಜೀವನ. ಸಾಯುತ್ತಿರುವವರನ್ನು ನಿತ್ಯಜೀವದ ಬಾಳುವಿಕೆಗೆ ವಾಸಿಮಾಡುವ ಅಮೃತ. ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ಲೋಕದ ವಾಸಿಗಳು ನಾಶವಾಗದೆ ನಿತ್ಯಜೀವವನ್ನು ಪಡೆಯಬೇಕೆಂದು ತನ್ನ ಒಬ್ಬನೇ ಕುಮಾರನನ್ನು ಕಳುಹಿಸಿದನು. ಆ ನಿತ್ಯಜೀವವನ್ನು ಕೊಡುವವನೇ ದೇವರ ನಿತ್ಯಕುಮಾರನಾದ ಯೇಸು ಕ್ರಿಸ್ತನು.

ಒಳದೇಶದ ವೃತ್ತಾಂತಗಳು.

ಕವೂರ್ಥಲ ಸಂಸ್ಥಾನದ ಟಿಕ್ಕಾ ಸಾಹೇಬರವರು ಮುಂದಿನ ವಾರ ಬೆಂಗಳೂರಿಗೆ ದಯಮಾಡಿ, ನಮ್ಮ ಮಹಾರಾಜರವರ ಆತಿಥ್ಯದಲ್ಲಿರುವರೆಂದು ತಿಳಿಯುತ್ತದೆ.

ದಿವಾನರವರು ಕಳೆದ ಬುಧವಾರ ಬೆಳಿಗ್ಗೆ ಪರಿವಾರ ಸಮೇತ ರಾಜಧಾನಿಗೆ ದಯಮಾಡಿ ಮೂರು ದಿನ ಇದ್ದು ಶುಕ್ರವಾರ ರಾತ್ರಿ ವಾಪಸು ಬೆಂಗಳೂರಿಗೆ ಪ್ರಯಾಣ ಮಾಡಿದರು.

ಮಹಾಮಾತೃಶ್ರೀಯವರು ರಾಜಧಾನಿಯ ಹೊಲಗೇರಿಯಲ್ಲಿ ಪ್ರಾರಂಭಿಸಲ್ಪಟ್ಟಿರುವ ಬಾಲಿಕಾ ಪಾಠಶಾಲೆಗಾಗಿ 1,000 ರೂಪಾಯನ್ನು ಉಚಿತವಾಗಿ ದಯಪಾಲಿಸಿರುತ್ತಾರೆಂದು ತಿಳಿಯುತ್ತೇವೆ.

ಮಿ॥ ಇ ಎಚ್ ವಾಲಿಸ್‌ಯವರು ಕಳೆದ ವಾರ ಸೀಮೆಯಿಂದ ವಾಪಸು ಬಂದು ಮೊನ್ನೆ ಮಂಗಳವಾರ ಚೀಫ್ ಕೋರ್ಟ್ ಜಡ್ಜರ ಕೆಲಸದ ಛಾರ್ಜನ್ನು ಮಿ॥ ಪರಮಶಿವ ಅಯ್ಯರವರಿಂದ ವಹಿಸಿಕೊಂಡರು.

ಬೆಂಗಳೂರಿನಿಂದ ಹೊಸೂರಿಗೆ ರೈಲ್ ರಸ್ತೆ ಆಗಬೇಕೆಂಬ ಉದ್ದೇಶವಿರುವುದರಿಂದ ಸರ್ಕಾರದವರು ರೈಲ್ವೆ ಇಲಾಖೆಯವರಿಂದ ಆ ಮಾರ್ಗವನ್ನು ಸರ್ವೆ ಮಾಡಿಸಲು ಇಂಜನಿಯರವರಿಗೆ ಹುಕುಂ ಕೊಟ್ಟಿದಾರೆ.

ನಮ್ಮ ಶ್ರೀಮದ್ಯುವರಾಜರವರಿಗೆ ಲಂಡನ್ ಪಟ್ಟಣದ ಪುರಾಧ್ಯಕ್ಷರಾದ ಲಾರ್ಡ್ ಮೇಯರವರು ಮ್ಯಾನ್ಷನ್ ಹೌಸ್ ಎಂಬ ಭವನದಲ್ಲಿ ದಿವ್ಯವಾದ ಔತನವನ್ನು ಮಾಡಿ ಸನ್ಮಾನಪಡಿಸಿದರೆಂದು ತಿಳಿದುಬರುತ್ತದೆ.

ರಾಜಧಾನಿಯಲ್ಲಿ ಒಂದೆರಡು ವಾರಗಳಿಂದ ಸರ್ವದಾ ಮೋಡಕವಿದುಕೊಂಡು ಬಿರುಗಾಳಿಯು ಬೀಸುತ್ತಾ ಶೈತ್ಯವನ್ನುಂಟುಮಾಡಿವೆ. ದೊಡ್ಡ ಮಳೆಗಳೇನೂ ಸುರಿಯಲಿಲ್ಲ. ಆಗಾಗ್ಗೆ ಅಲ್ಪಸ್ವಲ್ಪ ತುಂತುರು ಬೀಳುವುದು.

ಸರ್ಕಾರದವರು ಮಿ॥ ಎ ಕೆ ಪಾಣೆಯವರನ್ನು ಬೆಂಗಳೂರಿನಿಂದ ಮೈಸೂರಿಗೂ, ಮಿ॥ ಆರ್ ಸುಬ್ಬರಾಯರನ್ನು ಕಡೂರಿನಿಂದ ಬೆಂಗಳೂರಿಗೂ ಹೆಲ್ತ್ ಆಫಿಸರಾಗಿ ವರ್ಗಮಾಡಿದಾರೆ. ಮಿ॥ ವಿ ಎಲ್ ಶಂಕರರವರಿಗೆ ಮೈಸೂರಿನಿಂದ ಕೋಲಾರಕ್ಕೆ ವರ್ಗವಾಗಿರುವುದು.

ಈಗ ದಿನವಹಿ ರಾತ್ರಿ 10 10ಕ್ಕೆ ಮೈಸೂರಿನಿಂದ ಬೆಂಗಳೂರು ಕಡೆಗೂ, ರಾತ್ರಿ 9 ಗಂಟೆಗೆ ಬೆಂಗಳೂರಿನಿಂದ ಮೈಸೂರು ಕಡೆಗೂ ಹೋಗಿಬರುತ್ತಿರುವ ಹೆಚ್ಚುಗಟ್ಟಲೆಯ 3 ನೇ ಕ್ಲಾಸ್ ರೈಲ್ ಗಾಡಿಗಳನ್ನು ಈ ತಿಂಗಳ ಆಖೈರಿನಿಂದ ನಿಲ್ಲಿಸಿಬಿಡುವುದಾಗಿ ತಿಳಿದುಬಂದಿದೆ.

ಬ್ರಿಟಿಷ್ ರೆಸಿಡೆಂಟರವರು ಕಳೆದ ವಾರ ಒಂದು ದಿನದ ಮಟ್ಟಿಗೆ ರಾಜಧಾನಿಗೆ ದಯಮಾಡಿದ್ದು ಬೆಂಗಳೂರಿಗೆ ಹೋಗಿ ಅಲ್ಲಿಂದ ತಮ್ಮ ಅಸಿಸ್ಟೆಂಟ್ ಸಮೇತ ಭಾನುವಾರ ರಾತ್ರಿ ರೈಲು ಹತ್ತಿ ವೈಸ್‌ರಾಯರವರ ಭೇಟಿಗಾಗಿ ಸಿಂಲಾಪಟ್ಟಣವನ್ನು ಕುರಿತು ಪ್ರಯಾಣಮಾಡಿರುತ್ತಾರೆ.

ಕಾಂಕಾನಹಳ್ಳಿ ತಾಲ್ಲೂಕು ಹಾರುವಳಿ ಗ್ರಾಮದ ಬಳಿ ಒಬ್ಬ ಹೆಂಗಸು ಸತ್ತುಬಿದ್ದಿದ್ದದ್ದನ್ನು ಪಟೇಲರು ಕಂಡಾಗ ಹೆಣದ ಬಾಯಿಂದ ರಕ್ತ ಹರಿಯುತ್ತಿತ್ತೆಂದೂ, ಸಮೀಪದಲ್ಲಿ ರಕ್ತವಾಗಿದ್ದ ಒಂದು ಕಲ್ಲು ಬಿದ್ದಿತ್ತೆಂದೂ, ಈ ಕ್ರೂರಕೃತ್ಯದ ಪೂರ್ವೋತ್ತರವನ್ನು ಪೋಲೀಸಿನವರು ತನಿಖೆಮಾಡುತ್ತಿದಾರೆಂದೂ ಪ್ರಕಟವಾಗಿದೆ.

ಮೈಸೂರು ಗವರ್ನ್‌ಮೆಂಟ್ ಚೀಫ್ ಸೆಕ್ರೆಟರಿ ಮ॥ ಕೆ ಆರ್ ಶ್ರೀನಿವಾಸಯ್ಯಂಗಾರ್ರು ತಮ್ಮ ಕುಮಾರನಿಗೆ ಮ॥ ಗೋಪಾಲಾಚಾರ್ರವರ ಕುಮಾರ್ತೆಯನ್ನು ತಂದುಕೊಂಡು ಕಳೆದ ವಾರ ತಿರುವಳ್ಳೂರಿನಲ್ಲಿ ವಿವಾಹವನ್ನು ನಡೆಸಿದರು. ಈ ವಿವಾಹಕ್ಕೆ ಬೆಂಗಳೂರಿನಿಂದಲೂ, ಮದರಾಸಿನಿಂದಲೂ ಬಹುಮಂದಿ ಇಷ್ಟಮಿತ್ರರು ಅಲ್ಲಿಗೆ ಹೋಗಿದ್ದರೆಂದು ತಿಳಿಯುವುದು.

ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಮೈಸೂರು ಬ್ಯಾಂಕ್ ಲಿಮಿಟೆಡ್ ಕಂಪನಿಯಲ್ಲಿ ಆಗಲೇ 13,000 ಷೇರುಗಳನ್ನು ಕೊಂಡುಕೊಳ್ಳಲು ದರಖಾಸ್ತುಗಳು ಬಂದಿವೆ ಎಂದೂ, ಈ ತಿಂಗಳ 20 ನೇ ತಾರೀಖಿನಲ್ಲಿ ಡೈರೆಕ್ಟರುಗಳು ಷೇರು ಷೇರುಗಳನ್ನು ದರಖಾಸ್ತುದಾರರಿಗೆ ಹಂಚಿಕೊಡುವವರಾಗಿದಾರೆಂದೂ, ಅಷ್ಟರೊಳಗಾಗಿ ಅಪೇಕ್ಷಿಸುವವರೆಲ್ಲಾ ಷೇರ್ ದರಖಾಸ್ತುಗಳನ್ನು ಕಳುಹಿಸಿಕೊಡಬೇಕಾಗಿದೆ ಎಂದೂ ಬ್ಯಾಂಕಿನ ಸೆಕ್ರೆಟರಿ ಮಿ॥ ವೈ ನರಸಿಂಗರಾಯರು ತಿಳಿಸುತ್ತಾರೆ.

ಬೆಂಗಳೂರು ಗವರ್ನ್‌ಮೆಂಟ್ ಹೈಸ್ಕೂಲಿನಲ್ಲಿ ಸರ್ಕಾರದವರು ವ್ಯಾಪಾರ ವಿದ್ಯೆಯನ್ನು ಕಲಿಸುವುದಕ್ಕೆ ತರಗತಿಗಳನ್ನು ಏರ್ಪಾಡುಮಾಡಿದಾರೆ. ಬೆಳಿಗ್ಗೆ 7 30 ರಿಂದ 10 30 ರ ವರೆಗೂ, ಸಾಯಂಕಾಲ 5 30 ರಿಂದ 7-30 ರ ವರೆಗೂ ಪಾಠಗಳು ನಡೆಯುವವು. ಲೋವರ್ ಸೆಕೆಂಡರಿಯಷ್ಟು ಇಂಗ್ಲಿಷು ಕಲಿತವರನ್ನೂ, ಕನ್ನಡ ತಿಳಿದವರನ್ನೂ ಬೇರೆಬೇರೆ ತರಪೇತುಮಾಡುತ್ತಾರೆ. ಇಷ್ಟವುಳ್ಳವರು ಸೇರಬಹುದೆಂದು ಸ್ಕೂಲ್ ಸೂಪರಿಂಟೆಂಡೆಂಟರಾದ ಎಂ॥ ವಿ ಸುಬ್ರಹ್ಮಣ್ಯ ಅಯ್ಯರವರು ತಿಳಿಸುವರು.

ರಾಜಧಾನಿಯಲ್ಲಿ ಬಸ್ತಿಗುಡಿಯ ದಕ್ಷಿಣ ಭಾಗದಲ್ಲಿರುವ ಖಾಲಿ ನಿವೇಶನವನ್ನು ಕುಂಚಿಟಿಗರ ಸ್ಕೂಲನ್ನು ಕಟ್ಟುವುದಕ್ಕೆ ಮಹಾರಾಜರವರು ಕೊಡಿಸಿದಾರೆ. ಸಾಹುಕಾರ್ ಮ॥ ಬಸಮಯ್ಯನವರು ಆ ನಿವೇಶನದಲ್ಲಿ ಸುಮಾರು 20,000 ರೂಪಾಯಿ ವೆಚ್ಚಿಸಿ ಸ್ಕೂಲನ್ನು ಅಲಂಕಾರವಾಗಿಯೂ, ಅನುಕೂಲವಾಗಿಯೂ ಕಟ್ಟಿಸಿ, ಅದು ಶಾಶ್ವತವಾಗಿ ನಡೆಯುವಂತೆ 20,000 ರೂಪಾಯಿ ತನಖೆ ಮೂಲಧನವನ್ನು ಕೊಡುವವರಾಗಿದಾರೆಂದು ಕೇಳುತ್ತೇವೆ. ಈ ಶಾಶ್ವತವಾದ ಧರ್ಮದಿಂದ ಮ॥ ಬಸಮಯ್ಯನವರ ಹೆಸರು ರಾಜಧಾನಿಯಲ್ಲಿ ಚಿರಸ್ಥಾಯಿಯಾಗಲು ಅವಕಾಶವಾಯಿತೆಂದು ಸಂತೋಷಪಡುವೆವು.

ರಾಜಧಾನಿಯಿಂದ ವರ್ಗಪಟ್ಟ ಮಿ॥ ಎಂ ಜಿ ಕೃಷ್ಣಸ್ವಾಮಿರಾಯರಿಗೂ, ಮಿ॥ ಎಂ ರಾಮಸ್ವಾಮಯ್ಯನವರಿಗೂ, ಮಿ॥ ಬಿ ಭೀಮರಾಯರಿಗೂ ಕಳೆದ ವಾರ ಅವರ ಇಷ್ಟಮಿತ್ರರು ಔತನಾದಿಗಳನ್ನು ನಡಿಸಿದರು. ಇಲ್ಲಿನ ಕಾಸ್ಮಾಪಾಲಿಟನ್ ಕ್ಲಬ್ಬಿನ ಮೆಂಬರುಗಳು ಅವರಿಗೆ ಸತ್ಕಾರಮಾಡಿ ಅವರುಗಳಲ್ಲಿ ತಮಗಿರುವ ಸ್ನೇಹ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸಿದರು. ಮಿ॥ ರಾಮಸ್ವಾಮಯ್ಯನವರು ಭಾನುವಾರ ಮಧ್ಯಾಹ್ನ ಬೆಂಗಳೂರಿಗೆ ತೆರಳುವಾಗ ವಿದ್ಯಾ ಇಲಾಖೆಯ ಅಧಿಕಾರಿಗಳೂ ನೌಕರಮಾನೇರುಗಳೂ ಅವರಿಗೆ ಸ್ಟೇಷನ್‌ನಲ್ಲಿ ಮರ್ಯಾದೆ ಮಾಡಿದರು. ಭಾನುವಾರ ರಾತ್ರಿ ಮಿ॥ ಕೃಷ್ಣಸ್ವಾಮಿರಾಯರು ಬೆಂಗಳೂರಿಗೆ ಹೊರಟಾಗ ಅವರ ಇಷ್ಟಮಿತ್ರರೂ, ಮ್ಯುನಿಸಿಪಲ್ ಮತ್ತು ಟ್ರಸ್ಟ್ ಬೋರ್ಡ್ ಆಫೀಸುಗಳ ಚೇರ್‌ಮನ್‌ರಾದ ಮಿ॥ ಟಿ ಜಿ ಲಕ್ಷ್ಮಣರಾಯರೂ, ನೌಕರಮಾನೇರುಗಳೂ ಹೋಗಿ ಅವರಿಗೆ ಫಲಪುಷ್ಪಾದಿಗಳನ್ನು ಒಪ್ಪಿಸಿ ಸಾಗಕಳುಹಿಸಿದರು.

ಮೈಸೂರು ಗೆಜೆಟ್ ಸಂಗ್ರಹ

ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಶ್ರೀಮತು ಸುಶೀಲೇಂದ್ರ ತೀರ್ಥ ಶ್ರೀ ಪಾದಂಗಳವರು ಸಿವಿಲ್ ಕೋರ್ಟುಗಳಿಗೆ ಸಾಕ್ಷ್ಯಕ್ಕಾಗಿ ಹೋಗಬೇಕಾದದ್ದಿಲ್ಲವೆಂದು ಸರ್ಕಾರದವರು ಅವರಿಗೆ ವಿನಾಯತಿ ಮಾಡಿರುತ್ತಾರೆ.

ಯೇರಳಕಟ್ಟೆ ಪಟೇಲ್ ಮಿ॥ ತಿಮ್ಮಪ್ಪನವರನ್ನು ಜಗಲೂರು ತಾಲ್ಲೂಕು ಸೊಕ್ಕೆ ಯೂನಿಯನ್ ಪಂಚಾಯತಿಗೂ, ಮಿ॥ ವೈಶ್ಯರ ಸೋಮಣ್ಣನವರನ್ನು ಹರಿಹರ ಸಬ್ ತಾಲ್ಲೂಕು ಮಲೆಬೆನ್ನೂರುಯೂನಿಯನ್ ಪಂಚಾಯತಿಗೂ, ಮಿ॥ ಸಾಹುಕಾರ್ ಮರೂಬ್‌ಜಿಯವರನ್ನೂ ಚಳ್ಳಕೆರೆ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿಯೂ ನೇಮಕ ಮಾಡಿದೆ.

ಹಾಸನದ ಖಜಾನೆ ಛಾರ್ಜು ಅ॥ ಕಮಿಷನರ್ ಮಿ॥ ಎಂ ಶ್ರೀನಿವಾಸಮೂರ್ತಿಯವರಿಗೆ ಕೊಟ್ಟಿರುವ ನಾಲ್ಕು ವಾರಗಳ ಪ್ರಿವಿಲೆಜ್ ರಜವನ್ನು ಇನ್ನೂ ಮೂರು ವಾರ ಜಾಸ್ತಿಮಾಡಿದೆ.

ಸಾಗರ ತಾಲ್ಲೂಕು ಅಮಲ್ದಾರ್ ಮಿ॥ ಬಿ ಕೃಷ್ಣರಾಯರಿಗೆ ಕೊಟ್ಟಿರುವ ಎರಡು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ತಿಂಗಳು ಜಾಸ್ತಿಮಾಡಿದೆ.

ಮದ್ದಗಿರಿ ಸಬ್ ಡಿವಿಜನ್ ಆಫೀಸರ್ ಮಿ॥ ಎ ಕೃಷ್ಣಸ್ವಾಮಿ ಅಯ್ಯಂಗಾರ್ರಿಗೆ ಕೊಟ್ಟಿದ್ದ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾಗಿ ರದ್ದುಮಾಡಿದೆ.

ಪಾವಗಡ ತಾಲ್ಲೂಕು ಅಮಲ್ದಾರರಾಗಿ ವರ್ಗಪಟ್ಟಿರುವ ಮಿ॥ ಸಿ ಎ ಕೃಷ್ಣಸ್ವಾಮಿರಾಯರಿಗೆ ಅವರು ಕಡೂರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸಿನ ಛಾರ್ಜನ್ನು ಮಿ॥ ಡಿ ಶ್ರೀನಿವಾಸಯ್ಯಂಗಾರ್ರಿಗೆ ಒಪ್ಪಿಸಿದ ಬಳಿಕ ಆರು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಅ॥ ಸರ್ಜನ್ ಮಿ॥ ಎ ರಾಜಗೋಪಾಲ ಮುದಲಿಯಾರ್ರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಎರಡು ತಿಂಗಳು ಜಾಸ್ತಿಮಾಡಿದೆ, ಮಿ॥ ಎನ್ ಎಸ್ ನಂಜುಂಡಯ್ಯನವರು ದಾವಣಗೆರೆ ಆಸ್ಪತ್ರೆ ಛಾರ್ಜಿನಲ್ಲಿರತಕ್ಕದ್ದು.

ಪ್ರಾಚೀನ ಲಿಪಿ ನ್ವೇಷಣ ಇಲಾಖಾ ಆಫೀಸರಾದ ಮಿ॥ ಆರ್. ನರಸಿಂಹಾಚಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ—ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಅಧ್ಯಕ್ಷರಾದ ಮಿ॥ ಆರ್ ಶಾಮಶಾಸ್ತ್ರಿಯವರು ಆ ಆಫೀಸಿನ ಛಾರ್ಜನ್ನೂ ವಹಿಸಿರತಕ್ಕದ್ದು.

ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಮಿ॥ ಎಸ್ ಅಬ್ದುಲ್ ವಜೀದ್‌ಯವರನ್ನು ಕಳೆದ ಜನವರಿ ತಾ 5 ರಿಂದ 3 ನೇ ಕ್ಲಾಸ್ ಅ॥ ಕಮಿಷನರಾಗಿ ಖಾಯಂ ಮಾಡಿದೆ.

ಅಮಲ್ದಾರ್ ಮಿ॥ ಬಿ ಕೃಷ್ಣಶಿಂಗರನ್ನು ಚನ್ನಪಟ್ಟಣದಿಂದ ಚಿಕ್ಕಮಗಳೂರಿಗೂ, ಮಿ॥ ಎನ್ ಗೋಪಾಲಯ್ಯಂಗಾರನ್ನು ಚಿಕ್ಕಮಗಳೂರಿಂದ ಚಿಕ್ಕನಾಯಕನಹಳ್ಳಿಗೂ, ಮಿ॥ ಸಿ ಆರ್ ನಾರಾಯಣಸಾಮಿ ಮುದಲಿಯಾರನ್ನು ಚನ್ನಪಟ್ಟಣಕ್ಕೂ ವರ್ಗಮಾಡಿದೆ.

ತಾಲ್ಲೂಕು ವರ್ತಮಾನ

ಶಿಕಾರಿಪುರ—ಈಗಿನ ವರೆಗೂ ಕಾಲಕಾಲಕ್ಕೆ ಸರಿಯಾಗಿ ಮಳೆ ಬಂದಿರುವದರಿಂದ ರೈತರ ಕೆಲಸಗಳು ಅನುಕೂಲವಾಗಿ ನಡೆಯುತ್ತಲಿವೆ. ಪೇಟೆಯ ಜನಗಳು ಮೂರು ತಿಂಗಳಿಂದ ಊರು ಬಿಟ್ಟು, ಕ್ಯಾಂಪುಗಳಲ್ಲಿದ್ದು ಹದಿನೈದು ದಿನಗಳಿಂದ ಮತ್ತೆ ಊರು ಮನೆಗಳಿಗೆ ಹೋಗುತ್ತಾ ಇದ್ದರು. ಇಷ್ಟರಲ್ಲೇ ಕಳೆದ ವಾರ ಪುನಹ 3 4 ಪ್ಲೇಗ್ ಮರಣಗಳಾಗಲು ಅನೇಕರು ಕ್ಯಾಂಪುಗಳಲ್ಲೇ ನಿಂತರು. ಊರು ಸೇರಿದವರು ಪ್ಲೇಗ್ ಚುಚ್ಚುಮದ್ದು ಹಾಕಿಸಿಕೊಳ್ಳುತ್ತಾ ಇದಾರೆ. ಇಲ್ಲಿನ ಡಾಕ್ಟರು ಗಂಗಾಧರರಾಯರು ರೋಗಿಗಳ ಶುಶ್ರೂಷೆಯಲ್ಲೂ, ಮನೆಮನೆಗೆ ಹೋಗಿ ಇನಾಕ್ಯುಲೇಷನ್, ಔಷಧಿಗಳನ್ನು ಹಾಕುವದರಲ್ಲೂ ತುಂಬಾ ಸಹಾಯಮಾಡುತ್ತಾ ಉಪಕಾರಿಗಳಾಗಿದಾರೆ—ಇಲ್ಲಿನ ಮ್ಯುನಿಸಿಪಲ್ ವಿಚಾರಣೆ ತೃಪ್ತಿಕರವಾಗಿಲ್ಲ. ಕೋರ್ಟಿನಲ್ಲಿ ಸರಿಯಾದ ನ್ಯಾಯಗಳಿಲ್ಲದೆ ಅನೇಕ ತೊಂದರೆಗಳಿರುವದಾಗಿ ತಿಳಿದುಬರುತ್ತೆ. ಊರು ಸುತ್ತಲೂ, ಮಧ್ಯವೂ ಕಾಡುಗಿಡಗಳಿಂದಲೂ ಪೊದೆಗಳಿಂದಲೂ ಊರು ಕಾಡಾಗಿಯೇ ಕಾಣುತ್ತೆ. ಸದ್ಯ ಕೋಟೆ ಕಂದಕದಲ್ಲಿ ವಿಪರೀತ ಕಾಡಾಗಿರುತ್ತೆ. ದುಷ್ಟಮೃಗಗಳಿದ್ದರೂ ಇರಬಹುದು. ಗುಜಾರಿಗೆ ಬಂದಿಲ್ಲ. ಸಗಣಿ ಗೊಬ್ಬರಗಳ ಕುಪ್ಪೆಗಳು ಊರೊಳಗೂ ಶಾಪುಗಳ ನಡುವೆಯೂ ವಿಪರೀತವಾಗಿದ್ದು ಅನಾರೋಗ್ಯಕ್ಕೆ ಕಾರಣಗಳಾಗಿವೆ. ಅಮಲ್ದಾರ್ರು, ಹೆಲ್ತ್ ಆಫೀಸರುಗಳೂ, ಮ್ಯುನಿಸಿಪಲ್ ಮೆಂಬರುಗಳೂ ಈ ವಿಚಾರದಲ್ಲಿ ತುಂಬಾ ನಿಗಾ ಕೊಡುವದು ಅವಶ್ಯ. ಮ್ಯುನಿಸಿಪಲ್ ಹಣದ ಖರ್ಚಿಗೇನೂ ಅಟಂಕವಿಲ್ಲವಾದರೂ ಲಾಂದ್ರಗಳು ರಾತ್ರಿಯ ಬೆಳಕಿಗೋಸ್ಕರವಲ್ಲದೆ ದ್ವಾರದ ಊರಿನ ಲಕ್ಷಣಕ್ಕಾದರೂ ಸಾಕಾದಷ್ಟಿಲ್ಲ. ಪ್ರೆಸಿಡೆಂಟರು ಇವುಗಳಿಗೆ ಗಮನ ಕೊಡುವರೆಂದು ನಿರೀಕ್ಷಿಸುತ್ತೇವೆ—ನಮ್ಮ ಅಮಲ್ದಾರ್ ಮ॥ ವೆಂಕಟನರಸಪ್ಪನವರಿಗೆ ಯಾವ ಕಾರಣಗಳಿಂದಲೋ ಸಸ್ಪೆಂಡ್ ಆರ್ಡರು ಬಂದು, ತಾಲ್ಲೂಕು ಶಿರಸ್ತೆದಾರರಿಗೆ ಛಾರ್ಜ್ ಒಪ್ಪಿಸಿ 3-4 ದಿನಗಳಿಂದ ಶಿವಮೊಗ್ಗಾಕ್ಕೆ ಪ್ರಯಾಣಮಾಡಿರುವದಾಗಿ ತಿಳಿದುಬರುತ್ತೆ.

ಬಹುಮಾನ ವಿನಿಯೋಗ.

ಚಿಕ್ಕನಾಯಕನಹಳ್ಳಿ ಗೌರ್ನಮೆಂಟ್ ಬಾಲಿಕಾ ಪಾಠಶಾಲೆ.

ಇದೇ ತಿಂಗಳು 8 ನೇ ತಾ. ಮಂಗಳವಾರ ಮೇಲ್ಕಂಡ ಸ್ಕೂಲ್ ಬಾಲಕಿಯರಿಗೆ ಬಹುಮಾನವು ಕೊಡಲ್ಪಟ್ಟಿತು. ಈ ಕಾರ್ಯವು ಶ್ರೀಕಂಠಯ್ಯನವರ ಛತ್ರದಲ್ಲಿ ನೆರವೇರಿಸಲ್ಪಟ್ಟಿತು. ಆ ದಿನ ಮಧ್ಯಾಹ್ನ 3 ಗಂಟೆಗೆ ಸಭೆಯು ಪ್ರಾರಂಭವಾಯಿತು ಮನೋಹರವಾದ ಉಡುಪುಗಳನ್ನು ಧರಿಸಿಕೊಂಡು ಸ್ಕೂಲ್ ಬಾಲಕಿಯರೂ ವಿದ್ಯಾಭಿಮಾನಿಗಳಾದ ಇತರ ಸ್ತ್ರೀಯರೂ ಸಭೆಗೆ ಅಲಂಕಾರ ಪ್ರಾಯರಾಗಿದ್ದರು. ತಾಲ್ಲೂಕ್ ಅಮಲ್ದಾರ್ ಮೆ|| ಟಿ. ಕೆ ಲಕ್ಷ್ಮಣ ಅಯ್ಯರವರು ಅಗ್ರಾಸನವನ್ನಲಂಕರಿಸಿದ್ದರು. ಸಬ್ ರೆಜಿಸ್ಟ್ರಾರ್ ಮೆ|| ವೆಂಕಟಾಚಾರ್ಯರವರು, ಎಕ್ಸೈಸ್ ಇನ್‌ಸ್ಪೆಕ್ಟರು ಮೆ|| ಸ್ವಾಮಯ್ಯಂಗಾರ್ರವರು, ಎ. ವಿ ಸ್ಕೂಲ್ ಹೆ|| ಮಾ|| ಮೆ|| ನರಸಿಂಹಯ್ಯನವರು, ಇಂಡಸ್ಟ್ರಿಯಲ್ ಸ್ಕೂಲ್ ಸೂ|| ಮೆ|| ರಾಮಣ್ಣನವರು, ಕುರುಬರ ಶ್ರೇಣಿ ಸ್ಕೂಲ್ ಹೆ|| ಮಾ|| ಎನ್ ನಾರಾಯಣರಾಯರು, ಮತ್ತು ಸ್ಕೂಲ್ ಅ|| ಮಾಸ್ಟರುಗಳೂ, ಕಛೇರಿ ಉದ್ಯೋಗಸ್ಥರು ಮತ್ತು ಮ|| ಬಾಡಿಗಾರ್ಡ್ ಸೀತಾರಾಮಯ್ಯನವರು, ಮ|| ಜವಳಿ ಅಂಗಡಿ ಲಕ್ಷ್ಮಯ್ಯನವರು ಮ|| ಮೈಲಾರ ಸೆಟ್ಟರ ಮಕ್ಕಳೂ ಕಳಸಯ್ಯ ಸೆಟ್ಟರೇ ಮುಂತಾದ ಅನೇಕಮಂದಿ ಪುರನಿವಾಸಿಗಳಿಂದ ಈ ಸಭೆಯು ಅಲಂಕರಿಸಲ್ಪಟ್ಟಿತ್ತು ಹೆಡ್ ಮಿಸ್ಟ್ರೆಸ್ ಸೌ|| ಗೌರಮ್ಮನವರು ಬಾಲಕಿಯರಿಗೆ ವಿನೋದಕರವಾದ ಆಟಪಾಟಗಳನ್ನು ಕಲಿಸಿದ್ದರು ಸಂಗೀತದ ಮಾಸ್ಟರ್ ಮೆ ಸುಬ್ಬಾಚಾರ್ಯರವರು ಹಾರ್ಮೋನಿಯಂ ಬಾರಿಸುತ್ತಾ ಸ್ಕೂಲ್ ಬಾಲಕಿಯರಿಂದ ದೇವರ ಸ್ತೋತ್ರಗಳನ್ನೂ, ಶ್ರೀಮನ್ ಮಹಾರಾಜರವರ ಮತ್ತು ಚಕ್ರವರ್ತಿಗಳವರ ಶ್ರೇಯಃಪ್ರಾರ್ಥನೆಯನ್ನೂ ಸಭಿಕರಿಗೆ ಕರ್ಣಾನಂದವನ್ನುಂಟುಮಾಡುವಂತೆ ಹಾಡಿಸಿದರು. ಇಬ್ಬರು ಬಾಲಕಿಯರು ಹುಣಿಸೆ ಮತ್ತು ಬೇವು ಇವುಗಳ ಉಪಯೋಗದ ವಿಚಾರವಾದ ಸಂವಾದವನ್ನು ನಡಿಸಿದರು. ಮಕ್ಕಳ ತರಗತಿಯ ಚಿಕ್ಕವಯಸ್ಸಿನ ಬಾಲಕಿಯರು ಕಿಂಡರ್‌ಗಾರ್ಡನ್ ಹಾಡುಗಳನ್ನು ಹಾಡಿ ಸಭಿಕರನ್ನು ಆನಂದಪಡಿಸಿದರು ಕುರುಬರ ಶ್ರೇಣಿ ಸ್ಕೂಲ್ ಹೆ|| ಮಾ|| ನಾರಾಯಣರಾಯರವರು ಸ್ತ್ರೀ ವಿದ್ಯಾಭ್ಯಾಸದ ಆವಶ್ಯಕತೆಯನ್ನು ಕುರಿತು ಬಹು ಸ್ವಾರಸ್ಯವಾಗಿ ಒಂದು ಉಪನ್ಯಾಸವನ್ನು ಮಾಡಿದರು ಅನಂತರ ಸ್ಕೂಲ್ ರಿಪೋರ್ಟು ಓದಲ್ಪಟ್ಟಿತು ಅಗ್ರಾಸನಾಧಿಪತಿಗಳು ಬಾಲಕಿಯರಿಗೆ ಹಿತೋಕ್ತಿಗಳೊಡನೆ ಬಹುಮಾನ ಪುಸ್ತಕಗಳನ್ನು ಹಂಚಿದರು ಜಪಾನ್ ಮೊದಲಾದ ದೇಶೀಯರಂತೆ ನಮ್ಮ ದೇಶದ ಸ್ತ್ರೀಯರು ವಿದ್ಯಾವತಿಯರಾಗಬೇಕೆಂಬ ಅಂಶವನ್ನು ಸೂಚಿಸಿದರು ನಮ್ಮ ಅಮಲ್ದಾರ್ರವರ ಕುಟುಂಬ ಸೌ|| ಪಾರ್ವತಮ್ಮನವರು ಸ್ತ್ರೀ ಜಾತಿಯನ್ನು ವೃದ್ಧಿಗೆ ತರಲು ಸ್ವಭಾವವಾದ ಕರುಣೆ ಉಳ್ಳವರಾಗಿ ಬಾಲಕಿಯರಿಗೆಲ್ಲಾ ಲಾಡು ಉಂಡೆಗಳನ್ನು ಹಂಚಿಸಿದರು. ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲಾದಿಗಳು ಕೊಟ್ಟನಂತರ ಸಭೆಯು ಬರಕಾಸ್ತಾಯಿತು ಉಪಾಧ್ಯಾಯರ ಮತ್ತು ಸ್ಕೂಲ್ ಬಾಲಕಿಯರ ಫೋಟೋ ತೆಗೆಯಲ್ಪಟ್ಟನಂತರ ಸರ್ವರೂ ತಂತಮ್ಮ ಗೃಹಗಳನ್ನು ಕುರಿತು ತೆರಳಿದರು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಉಪಾಧ್ಯಾಯ ಸಂಘವು

1913 ನೇ ಜೂಲೈ ತಿಂಗಳ ಮೀಟಿಂಗು

ಈ ಸಂಘದ ಮೆಂಬರುಗಳು ಜೂಲೈ 6 ನೇ ತಾ. ಭಾನುವಾರ ಮಧ್ಯಾಹ್ನ ತಿಂಗಳಗಟ್ಲೆ ಮೀಟಿಂಗನ್ನು ನಡಿಸಿದರು ಪ್ರೆಸಿಡೆಂಟರವರೇ ದಯಮಾಡಿ, ಕೆಲಸಗಳು ಯಾವ ರೀತಿ ಜರುಗುತ್ತವೆಂಬುವದನ್ನು ಮುದ್ದಾಗಿ ಪರಾಂಬರಿಸಿದರು

(1) ಹಿಂದೆ ನಡೆದ ಪ್ರೊಸೀಡಿಂಗ್ಸಿನ ಪ್ರಕಾರ ಮುಖ್ಯಾಂಶಗಳನ್ನು ರಿಕಾರ್ಡು ಮಾಡಿದರು ಕೆಲವು ಜನ ಉಪಾಧ್ಯಾಯರುಗಳು ಮೀಟಿಂಗಿಗೆ ಬರದೇಲೂ, ಅನನುಕೂಲಗಳನ್ನು ತಿಳಿಸದೇಲೂ ಹಾಜರಾಗದೆ ನಿಂತದ್ದರಿಂದ ಅನೇಕ ತೊಂದರೆಗಳಿಗೆ ಕಾರಣವಾಗುವದು ಮುಂದಕ್ಕೆ ಈ ರೀತಿ ಮಾಡದೆ ಅವರು ಕ್ರಮವಾಗಿ ಬರುವಂತೆ ಏರ್ಪಾಡು ಮಾಡಬೇಕೆಂದು ಇತ್ಯರ್ಥವಾಡಿದರು (2) ಕಾಕ್ಬರ್ನ್‌ಸಿನವರು ಮಾಡಿರುವ ಸರ್ಕ್ಯುಲರ್ ಪ್ರಕಾರ ಗ್ರಾಮಸ್ಥರ ಮತ್ತು ಕಮಿಟಿ ಮೆಂಬರುಗಳ ಕರ್ತವ್ಯಗಳೇನೆಂಬುವದನ್ನು ಎಲ್ಲಾ ಉಪಾಧ್ಯಾಯರುಗಳಿಗೂ 2 ನೇ ಸಾರಿ ವಿವರಿಸಿ ಹೇಳಲಾಯಿತು. ಉಪಾಧ್ಯಾಯರು ಗ್ರಾಮದಲ್ಲಿ ಎಲ್ಲಾ ಜನಗಳನ್ನೂ ಕರಸಿಕೊಂಡು ವಿದ್ಯದ ಪ್ರಯೋಜನಾಂಶವನ್ನು ತಿಳಿಸಿ ಸ್ಕೂಲಿಗೆ ಬೇಕಾದ ಉಪಕರಣಗಳು ಅಂದರೆ ಚಿತ್ರಪಟಗಳು, ವ್ಯಾಯಾಮಕ್ಕಾಗಿ ಬೇಕಾಗುವ ಕ್ರಿಕೆಟ್ ಫುಟ್‌ಬಾಲ್ ಮುಂತಾದ ಆಟದ ಸಾಮಾನುಗಳನ್ನು ಅವರ ಸಹಾಯದಿಂದ ಹೊಂದಬೇಕು. ಅಲ್ಲದೆ ಸ್ಕೂಲಿನ ಶುಚಿತ್ವ ಅಂದರೆ ಒಳಗೂ ಹೊರಗಡೆಯೂ ಗುಡಿಸಿ ಚೊಕ್ಕಟವಾಗಿಡಿಸುವುದು, ಮತ್ತು ಗೋಡೆಗಳಿಗೆಲ್ಲಾ 6 ತಿಂಗಳಿಗೆ ಒಂದುಸಾರಿ ಸುಣ್ಣ ಹಚ್ಚುವುದು, ಇವುಗಳೂ ಕೂಡ ಅವರಿಂದಲೇ ಆಗತಕ್ಕವುಗಳಾಗಿವೆ ಆದ್ದರಿಂದ ಅವರಿಗೆ ಇವುಗಳ ಪ್ರಯೋಜನಾಂಶಗಳನ್ನು ಹೇಳಿ ಈ ಕಾರ್ಯಗಳನ್ನೆಲ್ಲಾ ಅವರು ಮಾಡಿಕೊಡುವಂತೆ ಒಪ್ಪಿಸಬೇಕಾದದ್ದು ಉಪಾಧ್ಯಾಯರ ಕರ್ತವ್ಯವು. ಇದರಂತೆ ಈ ಜೂಲೈ ಲಾಗಾಯಿತು ಏರ್ಪಾಟು ಮಾಡುವುದಾಗಿ ಎಲ್ಲಾ ಉಪಾಧ್ಯಾಯರೂ ಒಪ್ಪಿಕೊಂಡರು. (3) ವಿ ಪ ಸ್ಕೂಲುಗಳಲ್ಲಿ ಬರೆವಣಿಗೆಯಲ್ಲಿಯೂ ಶಬ್ದಗಳನ್ನು ಉಚ್ಚರಿಸುವದರಲ್ಲಿಯೂ ಬಾಲಕರು ಬಹಳ ತಪ್ಪುಗಳನ್ನು ಮಾಡುವರು. ಈ ವಿಷಯಗಳಿಗಾಗಿ ಉಪಾಧ್ಯಾಯರು ಹೆಚ್ಚು ಗಮನಕೊಡತಕ್ಕದ್ದೆಂದು ತೀರ್ಮಾನವಾಯಿತು. ಈ ವಿಷಯದಲ್ಲಿ ಯಾವ ಕ್ರಮದಲ್ಲಿ ಉಕ್ತಲೇಖನದ ಪಾಠವನ್ನು ನಡಿಸಬೇಕೆಂಬುವದನ್ನು ಮುಂದಿನ ತಿಂಗಳ ಮೀಟಿಂಗಿನಲ್ಲಿ ಪಾಠಶೋಧನೆಯನ್ನು ಇಟ್ಟುಕೊಳ್ಳಬೇಕೆಂದು ಗೊತ್ತಾಗಿದೆ (4) ನೀತಿಬೋಧೆ ಮತಬೋಧೆಯ ವಿಷಯದಲ್ಲಿ ಸ್ವಲ್ಪ ಚರ್ಚೆ ನಡಿಸಲ್ಪಟ್ಟಿತು ನೀತಿಬೋಧೆಯ ವಿಚಾರವಾಗಿ ಮ|| ವೀರಾಬಿಷ್ಟಪ್ಪನವರು ಚಿಕ್ಕದಾದ ಒಂದು ಉಪನ್ಯಾಸವನ್ನು ಹೇಳಿದರು. ಇನ್ನೂ 2-3 ಮೀಟಿಂಗುಗಳಲ್ಲಿಯೂ ಅನೇಕ ಅಂಶಗಳನ್ನು ಉಪನ್ಯಾಸರೂಪವಾಗಿ ಹೇಳಬೇಕೆಂದೂ, ಸ್ಕೂಲುಗಳಲ್ಲಿ ಬೋಧಿಸತಕ್ಕ ಅಂಶಗಳನ್ನು ಚರ್ಚಿಸಿ ನಿಬಂಧನೆಪಡಿಸತಕ್ಕದ್ದಾಗಿದೆ ಎಂದೂ ಗೊತ್ತುಮಾಡಿಕೊಂಡರು (5) ಮುಂದಿನ ತಿಂಗಳ ಮೀಟಿಂಗು ಆಗಸ್ಟ್ 3 ನೇ ತಾ ಭಾನುವಾರವಾಗುವುದು. ಮಳೆಗಾಲವಾದದ್ದರಿಂದ ಆ ದಿನ ಎಲ್ಲಾ ಮೆಂಬರುಗಳೂ ಮಧ್ಯಾಹ್ನ 3 ಘಂಟೆಯೊಳಗಾಗಿಯೇ ಸೇರಬೇಕೆಂದು ಕೇಳಿಕೊಂಡಿದೆ

ವೀರಾಬಿಷ್ಟಪ್ಪ, ಸಂಘದ ಸೆಕ್ರೆಟರಿ.

[ನಮಗೆ ತಲುಪಿರುವ ಮೇಲ್ಕಂಡ ನೀತಿಬೋಧೆಯ ಉಪನ್ಯಾಸವನ್ನು ಪ್ರಕಟಿಸಲು ಸ್ಥಳದೊರಕಲಿಲ್ಲವೆಂದು ವಿಷಾದಿಸುತ್ತೇವೆ—ಎಡಿ]

ಐಶ್ವರ್ಯವು ಯಾವದು?

ಆರೋಗ್ಯವೋ? ಆಸ್ತಿಪಾಸ್ತಿ ಹಣಕಾಸುಗಳೋ?

ವಾಚಕರೇ, ಮಾನವರಿಗೆಲ್ಲಾ ಮುಖ್ಯವಾದುದು ಯಾವುದು? ಯಾವುದರಲ್ಲಿ ಆಸಕ್ತಿ? ಎಂಬುವನ್ನು ವಿಚಾರಮಾಡಿದರೆ ಐಶ್ವರ್ಯವೇ ಮುಖ್ಯವಾದುದೆಂದೂ, ಧನಾರ್ಜನೆಯಲ್ಲಿಯೇ ಕೇವಲ ಆಸಕ್ತಿಯೆಂದೂ ಸಾಮಾನ್ಯವಾಗಿ ಎಲ್ಲರೂ ಹೇಳಬಹುದು ನೋಡಿ, ಎಳೇ ಮಕ್ಕಳೂ ಕೂಡ ಮೂರುಕಾಸಿನಬಿಲ್ಲೆಯನ್ನು ಕಂಡರೆ ಆ ಸಮಯದಲ್ಲಿ ಕೈಯಲ್ಲಿ ಅತ್ಯಂತರುಚಿಕರವಾದ ಮಿಠಾಯಿ ಇದ್ದರೂ ಅದನ್ನು ಅಲಕ್ಷಿಸಿ, ಆತುರದಿಂದ ತೆಗೆದುಕೊಳ್ಳುವವು. ಹೀಗೆ ಐಶ್ವರ್ಯವೇ ಮುಖ್ಯವೆಂದು ಭಾವಿಸುವವರು ಸ್ವಲ್ಪ ದೀರ್ಘವಾಗಿ ಆಲೋಚಿಸಬೇಕು. ಐಶ್ವರ್ಯದ ಮೂಲಕ ಲೌಕಿಕ ಭೋಗ ಭಾಗ್ಯಗಳ ವಿಷಯದಲ್ಲಿ ಕೋಟ್ಯಾಧೀಶ್ವರರಾದ ಆಂಡ್ರೂ ಕಾರ್ನೆಗಿ ಎಂಬವರಂತಿರುವ ಶ್ರೀಮಂತರಿಗೆ ಏನಾದರೂ ಕೊರತೆಯುಂಟೋ? ಅಂಥವರಿಗೆ ಅನೇಕಾನೇಕ ಮಂದಿ ಸೇವಕರಿರುವರು, ಪಂಚಾರಕರಿರುವರು, ಇಷ್ಟವಾದ ಆಹಾರಪದಾರ್ಥಗಳನ್ನು ಸಿದ್ಧಪಡಿಸಿ ತಂದುಕೊಡುವರು, ಇಷ್ಟಪಟ್ಟರೆ ಕಾಲೊತ್ತುವರು, ಕೈಯೊತ್ತುವರು, ಕೋರಿದ ಸ್ಥಳಕ್ಕೆ ಲೇಶವೂ ಆಯಾಸವಿಲ್ಲದಂತೆ ಕರೆದೊಯ್ಯುವರು, ಅರಮನೆಯಂತಹ ಭವನ, ಉದ್ಯಾನವನ, ತರತರವಾದ ರಥಗಳು, ಕುದುರೆಗಳು, ಇಷ್ಟಪಡುವ ಉಡಿಗೆ ತೊಡಿಗೆಗಳು, ಇತ್ಯಾದಿ ಸಕಲ ಭೋಗಭಾಗ್ಯಗಳೂ ಯಾವಾಗಲಂದರೆ ಆವಾಗ ಸಿದ್ಧವಾಗುವವು ಹಂಸತೂಲಿಕಾ ತಲ್ಪದಲ್ಲಿ ಮಲಗಿ ನಿದ್ರಿಸಬಹುದು, ಸಂಗೀತ ಸಾಹಿತ್ಯಾದಿಗಳನ್ನು ಸ್ವೇಚ್ಛೆಯಾಗಿ ಕೇಳಬಹುದು, ಸ್ವತಃ ಅಭ್ಯಾಸಮಾಡಲೂ ಬಹುದು ಕಣ್ಣಿಗೆ ಇಷ್ಟವಾದ ನೋಟಗಳನ್ನು ಎಲ್ಲಿದ್ದರೆ ಅಲ್ಲಿ ಹೋಗಿ ನೋಡಬಹುದು. ಈ ರೀತಿ ಐಹಿಕವಾದ ಯಾವ ಸುಖಸಂತೋಷಗಳು ಅಪೇಕ್ಷಿತವಾದರೂ ಆಯಾ ಕ್ಷಣದಲ್ಲಿಯೇ ಲೇಶವೂ ಶ್ರಮವಿಲ್ಲದೆ ಅನುಭವಿಸುತ್ತಾ ವಿನೋದ ಪಡಬಹುದು

ಆದರೆ ಅಂಥವನಿಗೆ ಸ್ವಲ್ಪಮಟ್ಟಿಗೆ ಆರೋಗ್ಯವು ಕೆಟ್ಟು ತಲೆನೋವು, ಜ್ವರ ಮುಂತಾದ್ದೇನಾದರೂ ಸಂಭವಿಸಿತೆಂದರೆ ಆಗ ಅವನ ಸ್ಥಿತಿಯನ್ನು ಸಲ್ಪ ನೋಡಿ ಆ ಸಮಯದಲ್ಲಿ ಪರಿಜನ, ಪರಿಚಾರಕರು, ಪತ್ನೀ ಪುತ್ರಾದಿಗಳು ಯಾರು ಬಂದು ಮಾತನಾಡಿಸಿದರೂ ಅವರ ಸಂಗಡ ಮಾತನಾಡುವುದಕ್ಕೇ ಅಸಹ್ಯಗೊಳ್ಳುವನು. ಎಂಥಹ ರುಚಿಕರವಾದ ವಸ್ತುವನ್ನು ತಂದಿತ್ತರೂ ಅದನ್ನು ಮುಟ್ಟಿಯೂ ನೋಡಲಾರನು ಅವುಗಳ ವಾಸನೆಗೇ ಬೇಸರ ಪಡುವನು ಸುವಾಸನಾ ದ್ರವ್ಯಗಳು ತಲೆನೋವನ್ನು ಇನ್ನೂ ಹೆಚ್ಚಿಸುವವೆಂದು ಭಯಪಡುವನು ವಿಚಿತ್ರನೋಟಗಳೂ ಕಣ್ಣಿಗೆ ಇಂಪಾಗುವದಿಲ್ಲ ಸಂಗೀತಗಾನವೂ ಇಷ್ಟಾಲಾಪವೂ ಆಗ ಬೇಸರಬೇಡ ಶ್ರೇಷ್ಠವಾದ ಉಡಿಗೆ ತೊಡಿಗೆಗಳಿಗೆ ಬದಲಾಗಿ ಕಂಬಳಿಗಳೇ ಸಾಕು ವನವಿಹಾರಾದಿಗಳಿಗೆ ಬದಲಾಗಿ ಹಾಸಿಗೆ ಮಲಗುವದೇ ಇಷ್ಟ ಅವನು ಮಲಗಬಹುದಾದ ಹಂಸತೂಲಿಕಾ ತಲ್ಪವೂ ಅವನ ತಲೆನೋವನ್ನು ನಿಲ್ಲಿಸಲಾರದು, ಜ್ವರವನ್ನು ಕಡಿಮೆ ಮಾಡಲಾರದು. ಬೆಳಕನ್ನೇ ನೋಡಲಾರದೆ ಕಣ್ಣು ಮುಚ್ಚಿಕೊಳ್ಳುವನು ಕಿಟಕಿಗಳನ್ನು ಮುಚ್ಚಿಕೊಳ್ಳುವನು ದೇವರ ಧ್ಯಾನವನ್ನಾದರೂ ಮಾಡುವನೋ ಅಂದರೆ ಅದಕ್ಕೂ ಸ್ಥಿರಮನಸ್ಸಿಲ್ಲ ನರಳುವುದೇ ಧ್ಯಾನ, ಕೊರಗುವುದೇ ಜಪ ಈ ಅನುಭವಗಳೆಲ್ಲವೂ ಯಾವುದರ ಫಲ? ಅಷ್ಟು ಭಾಗ್ಯವಿದ್ದರೂ ಇಷ್ಟು ದರಿದ್ರಾನುಭವವೇಕೆ? ಇದು ದರಿದ್ರಾನುಭವವೆಂದಾದರೂ ಹೇಳಬಹುದೇನು? ಆಗುವುದಿಲ್ಲ. ದರಿದ್ರನು ಹಗಲೆಲ್ಲಾ ಚೆನ್ನಾಗಿ ಕೆಲಸಮಾಡುವನು. ಹಸಿವಿನಕಾಲಕ್ಕೆ ಸಿಕ್ಕಿದ ಆಹಾರವನ್ನು ತಿಂದುಬಿಡುವನು. ಹೊರೆತ ನೀರನ್ನು ಕುಡಿಯುವನು ನೆಲದ ಮೇಲೆಯೇ ಹೊದ್ದಿಕೆಯಾವದೂ ಇಲ್ಲದೆ ಮಲಗಿ ಸುಖನಿದ್ರೆ ಮಾಡುವನು. ದೇವರು ಕೊಟ್ಟುದರಲ್ಲಿ ತೃಪ್ತಿಪಟ್ಟುಕೊಂಡು. ಸಂತೋಷವಾಗಿ ಕಾಲ ಕಳೆಯುವನು ಇಂತಹ ದರಿದ್ರನು ಬುದ್ಧಿಯಿಂದಲೂ, ಪ್ರಯಾಸದಿಂದಲೂ ಕೆಲಸಮಾಡುತ್ತಾ ಬರುತ್ತಿದ್ದರೆ ಕ್ರಮೇಣ ಐಶ್ವರ್ಯವಂತನೇ ಆಗಲೂ ಬಹುದು ಮೇಲೆ ಹೇಳಿದ ಆಂಡ್ರೂ ಕಾರ್ನೆಗಿ ಎಂಬ ಶ್ರೀಮಂತರು ಅವರ ಬಾಲ್ಯದೆಸೆಯಲ್ಲಿ ಕೇವಲ ಬಡತನದಲ್ಲಿದ್ದು, ತಂತೀವರ್ತಮಾನವನ್ನು ಜನರಿಗೆ ತಲುಪಿಸುವ ಕೆಲಸದಲ್ಲಿ ಸೇರಿಕೊಂಡು, ಮುಂದೆ ಆ ಉದ್ಯೋಗದಿಂದ ನಿವೃತ್ತರಾಗಿ ಸ್ವಂತ ಕಾರ್ಖಾನೆಯನ್ನು ಏರ್ಪಡಿಸಿಕೊಂಡು, ತನ್ಮೂಲಕ ಅಪರಿಮಿತ ಧನ ಸಂಪಾದನೆ ಮಾಡಿ, ಕೋಟ್ಯಾಧೀಶ್ವರರಾದರೆಂದೂ, ಈ ಮಹನೀಯರ ಉದಾರತೆಯು ಅಮೇರಿಕ ಮತ್ತು ಯೂರೋಪ್ ಖಂಡಗಳಲ್ಲಿರುವ ಅನೇಕಾನೇಕ ಪಟ್ಟಣಗಳಲ್ಲಿ ಆಸ್ಪತ್ರೆ ಧರ್ಮಶಾಲೆ, ಗ್ರಂಥಾಲಯ, ಪಾಠಶಾಲೆ, ಇತ್ಯಾದಿ ರೂಪಗಳಿಂದ ಶಾಶ್ವತವಾಗಿ ನೆಲೆಗೊಂಡಿವೆ ಎಂದೂ ಪತ್ರಿಕೆಗಳಲ್ಲಿ ಎಲ್ಲರೂ ಓದುತ್ತಿರುವರು.

ಪ್ರಿಯ ವಾಚಕರೇ, ಮೇಲೆ ಹೇಳಿದ "ಐಶ್ವರ್ಯವು ಯಾವುದು" ಎಂಬ ಶಿರನಾಮೆಯ ಪ್ರಶ್ನೆಗೆ ಈಗ ಸುಲಭವಾಗಿ ಯಾರಾದರೂ ಉತ್ತರಹೇಳಬಹುದಲ್ಲವೆ? "ಆರೋಗ್ಯವೇ ಐಶ್ವರ್ಯ, ಐಶ್ವರ್ಯವು ಆರೋಗ್ಯವೇ" ಎಂದು ಒತ್ತಿಹೇಳುವುದಕ್ಕೇನೂ ಅಡ್ಡಿಯಿಲ್ಲ. ಆಸ್ತಿಪಾಸ್ತಿ ಹಣಕಾಸುಗಳ ರೂಪವಾದದ್ದು ಐಶ್ವರ್ಯವೆನಿಸಿಕೊಳ್ಳುವುದು ಯಾವಾಗ? ಅವುಗಳನ್ನು ಅನುಭವಿಸುವವನಿಗೆ ಆರೋಗ್ಯ, ಅಂದರೆ ಕ್ಷೇಮವಿದ್ದಾಗಲಲ್ಲವೇ? ಆರೋಗ್ಯದಿಂದ ಐಶ್ವರ್ಯವನ್ನು ಸಂಪಾದಿಸಬಹುದೇ ಹೊರತು ಐಶ್ವರ್ಯದಿಂದ ಆರೋಗ್ಯವನ್ನು ಸಂಪಾದಿಸುವುದು ದುಸ್ತರ ಏತಕ್ಕೆಂದರೆ ಐಶ್ವರ್ಯವಂತರು ದೇಹಶ್ರಮಪಡುವುದೂ, ದೇಹಶ್ರಮಪಡದಿದ್ದ ಮೇಲೆ ಆರೋಗ್ಯ ಲಭ್ಯವಾಗುವುದೂ ಅಪೂರ್ವ ಆದದ್ದರಿಂದ ಮೊದಲು ಆರೋಗ್ಯವನ್ನು ಸಂಪಾದಿಸಿ ಕಾಪಾಡಿಕೊಳ್ಳಲು ಸರ್ವಪ್ರಯತ್ನವನ್ನೂ ಮಾಡಬೇಕು

ವೆಂಕಟಾಚಾರ್

ಬಾತ್ಮೀದಾರರಿಗೆ ನೋಟೀಸ್.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು . ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಅನುಭವವಾದಿ, ಜಾವಗಲ್— ನಿಮ್ಮ ಹೆಸರು ವಿಳಾಸಗಳ ಸಹಿತ ಪ್ರಕಟಿಸಬಹುದೆಂದು ತಿಳಿಸಿದರೆ ನಿಮ್ಮ ಬಾತ್ಮಿಯನ್ನು ಪ್ರಕಟಿಸಬಹುದು.

ಕಳೆದ ವಾರ ಈ ಪತ್ರಿಕೆಯ 8 ನೇ ಪುಟದ ಮೊದಲನೇ "ಗೃಹಕೃತ್ಯದ ನೋಟೀಸ್" 2 ನೇ ಪಙ್ತಿಯಲ್ಲಿ "ಕಿಲುಗ್ಗಾಡಿಗರ" ಎಂದು ತಪ್ಪಬಿದ್ದಿರುವುದನ್ನು "ಕಿರುಗಾಣಿಗರ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು

—ಎಡಿ.]

ಕರೆಸ್‌ಪಾಂಡೆನ್ಸ್.

ವಿದ್ಯಾರ್ಥಿನಿಲಯಕ್ಕೆ ಚಂದಾ ಬೇಕು

ಅಯ್ಯಾ,

ಶ್ರೀಮನ್ ಮೈಸೂರು ಮಹಾರಾಜ ರಾಜಾಸಾಹೇಬ್ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದೂರ್, ಜಿ ಸಿ ಯಸ್. ಐ ಯವರ ಸ್ವಾರಿ ಚಿಕ್ಕಮಗಳೂರಿಗೆ ದಯಮಾಡಿಸಿದ್ದಾಗ್ಯೆ ಶ್ರೀಮತ್ ಯಲಹಂಕದ ಮಠದ ಶ್ರೀ ಶಿವನಂಜುಂಡದೇಶಿಕೇಂದ್ರಸ್ವಾಮಿಗಳವರ ಅಪ್ಪಣೆಯಂತೆ ಮೈಸೂರುಸೀಮೆಯ ವೀರಶೈವಮತಸ್ಥರು ಸನ್ 1913 ನೇ ಫೆಬ್ರವರಿ 7 ನೇ ತಾ ದಿವಸ ಶ್ರೀಮನ್ ಕೃಷ್ಣರಾಜ ಒಡೆಯರ್ ಬಹದೂರವರ ಸನ್ನಿಧಾನಕ್ಕೆ ಒಪ್ಪಿಸಿದ ವಿಜ್ಞಾಪನ ಪತ್ರಿಕೆಯಲ್ಲಿ ಚಿಕ್ಕಮಗಳೂರಿನಲ್ಲಿ ಕಟ್ಟತಕ್ಕ ವಿದ್ಯಾರ್ಥಿನಿಲಯಕ್ಕೆ ಮಹಾಸ್ವಾಮಿಯವರ ಘನವಾದ ಅಮೃತಹಸ್ತದಿಂದ ಸುಪ್ರತಿಷ್ಠಾಶಿಲೆಯನ್ನು ಸ್ಥಾಪಿಸಬೇಕೆಂದು ವಿಜ್ಞಾಪಿಸಿಕೊಂಡದ್ದಕ್ಕೆ ಮಹಾಸ್ವಾಮಿಗಳವರೇ ಅಪ್ಪಣೆಕೊಡಿಸಿದ್ದೇನಂದರೆ, ನಮ್ಮಗಳಲ್ಲಿಯೇ ನಾವು ಚಂದಾಹಣವನ್ನು ಎತ್ತಿದ್ದಲ್ಲದೆ ನಮ್ಮ ಯಲಹಂಕದ ಶ್ರೀಸ್ವಾಮಿಗಳವರಿಂದಲೂ ಸಹಾಯಹೊಂದಿರುವದೇ ಬಹಳ ತೃಪ್ತಿಕರವಾಗಿರುತ್ತದೆ. ಈ ನಮ್ಮ ಸ್ವಾಮಿಗಳಿಗೆ ಇದಕ್ಕಾಗಿ ನೀವು ಬಹಳ ಕೃತಜ್ಞತರಾಗಿರಬೇಕೆಂದು ಅಪ್ಪಣೆಕೊಡಿಸಿದರು ಈಗ ಜಾಬಿಲ ಪ್ರವಾಹದ ಚಂದ್ರಶೇಖರ ಸ್ವಾಮಿಗಳವರು ಮತ್ತು ಯಲಹಂಕದ ಮಠದ ಚರಪಟ್ಟಾಧ್ಯಕ್ಷ ಚನ್ನವೃಷಭದೇಶಿಕೇಂದ್ರ ಸ್ವಾಮಿಗಳವರೇ ಸಹಾ ಈ ವಿದ್ಯಾರ್ಥಿನಿಲಯದ ಕಟ್ಟಡಕ್ಕೋಸ್ಕರ ಚಂದಾಹಣವನ್ನು ವಸೂಲ್‌ಮಾಡುತ್ತಲಿದ್ದಾರೆ ವೀರಶೈವರೆಲ್ಲರೂ ಮನಸ್ಸಿರಿಸಿ ಚಂದಾಹಣವನ್ನು ಕೊಟ್ಟು ಈಗ ಹಿಡಿದಿರುವ ಆಲಯದ ಕಾರ್ಯವನ್ನು ಸಾಂಗಗೊಳಿಸಿ ಕೀರ್ತಿಯನ್ನು ಪಡೆಯಬೇಕೆಂದು ಕೋರುತ್ತೇನೆ

ಎಂ ಚೆನ್ನಗೌಡ, ಮಾರನಗೆರೆ

ಹತ್ತು ವರುಷಗಳಿಂದ ನಾಲೆ ರಿಪೇರಿ ಇಲ್ಲವಂತೆ

ಅಯ್ಯಾ,

ಬೇಲೂರು ತಾಲ್ಲೂಕು ನಾರಸಾಪುರ ಮತ್ತು ಹೊಸಮನೇ ಹಳ್ಳಿ, ಹನುಮನ ಗ್ರಾಮಸ್ಥರು ಬರೆದುಕೊಂಡ ಅಹವಾಲು ಏನೆಂದರೆ— ಈ ಗ್ರಾಮದ ತರೀ ಜಮೀನುಗಳಿಗೆ ನೀರು ಹಾಯುವದಕ್ಕೆ ಬಿನಕನ ಹೊಳೆಗೆ ಚಿಕ್ಕಮಗಳೂರು ತಾಲ್ಲೂಕು ಬೈರಾಪುರದ ಹತ್ತಿರ ಅಣೆಕಟ್ಟು ಕಟ್ಟಿ ನಾಲೆಯನ್ನು ನಮ್ಮ ಗ್ರಾಮಕ್ಕೆ ತಂದಿರುತ್ತಾರೆ. ಈ ನಾಲಾ ಹತ್ತುವರುಷಗಳ ಲಾಗಾಯಿತು ರಿಪೇರಿ ಆಗಿಲ್ಲ ಈ ನಾಲಾ ಅಣೆಕಟ್ಟಿಗೂ ನಮ್ಮ ಗ್ರಾಮಕ್ಕೂ ಸುಮಾರು ನಲ್ಕು ಮೈಲಿ ಫಾಸಲೆಯಾಗುತ್ತೆ ನಮ್ಮೂರಿಂದ ಮುಂದಕ್ಕೆ ನಾಲೆ ಹೋಗಿಲ್ಲ ರಿಪೇರಿ ಇಲ್ಲದ್ದರಿಂದ ಈ ನಾಲೆ ಅಲ್ಲಲ್ಲೇ ಒಡೆದು ಬಿದ್ದು ತರೀ ಜಮೀನುಗಳಿಗೆ ನೀರು ಹಾಯದೆ ಯಾವ ಪೈರೂ ಆಗದೆ ಅನ್ಯಾಯವಾಗಿ ತರೀ ಕಂದಾಯವನ್ನು ಎಕರೆ ಒಂದಕ್ಕೆ 7 ರೂಪಾಯಿಗಳವರೆಗೂ ಕೊಡುತ್ತಾ ಇರುತ್ತೇವೆ ಮೇಲ ಕಂಡ ಗ್ರಾಮಗಳಲ್ಲಿ ತರೀ ಕಂದಾಯ ಸುಮಾರು ಒಂದು ಸಾವಿರ ರೂಪಾಯಿ ಆಗುತ್ತೆ ಈ ನಾಲೆಯನ್ನು ಕಾಮಗಾರಿ ಮಾಡಿಸಿ ಒಡೆದು ಬಿದ್ದಿರತಕ್ಕ ಸ್ಥಳದಲ್ಲಿ ಒಡಪು ಮುಚ್ಚಿಸಿ ಸರಿಯಾಗಿ ನೀರು ಹಾಯುವಂತೆ ಮಾಡಿಸಿಕೊಡಬೇಕೆಂತ ರೆವಿನ್ಯೂ ಕಮಿಷನರ್ ಸಾಹೇಬರವರಿಗೂ ಚಿಕ್ಕಮಗಳೂರು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೂ, ಚೀಫ್ ಇಂಜನಿಯರ್ ಸಾಹೇಬರವರಿಗೂ, ತಾಲ್ಲೂಕು ಅಮಲ್ದಾರ್ರವರಿಗೂ ಈಗ 5-6 ವರುಷಗಳ ಲಾಗಾಯಿತು ಅನೇಕ ಅರ್ಜಿಗಳನ್ನು ಗುಜರಾಯಿಸಿಕೊಂಡೆವು ಅಲ್ಲದೆ ಕಂಟ್ರಿಬ್ಯೂಷನ್ ಮೊಬಲಗು ರೂಪಾಯಿ ಒಂದಕ್ಕೆ ನಾಲ್ಕಾಣೆಯಂತೆ ಕೊಡುತ್ತೇವೆಂತ ಒಂಟೋರ್ ಛಾಪಾಕಾಗದದಲ್ಲಿ ಮುಚ್ಚಳಿಕೆ ಸಹಾ ಬರೆದುಕೊಟ್ಟೆವು ಆದಾಗ್ಯೂ ರಿಪೇರಿ ಮಾಡಿಸಿಕೊಡಲಿಲ್ಲ ಹಾಲಿ ಜಮೀನುಗಳಿಗೆ ಭತ್ತದ ಪೈರು ಮಾಡಿರುತ್ತೇವೆ. ಪೈರೆಲ್ಲಾ ನೀರಿಲ್ಲದೆ ಒಣಗುತ್ತಾ ಇವೆ ಈ ಸಾಲ್ ಕಂದಾಯವನ್ನು ಮಿನ್ಹ ಕಂದಾಯದಂತೆ ವಸೂಲ್ಮಾಡಬೇಕು: ಇಲ್ಲವಾದರೆ ಕೂಡಲೇ ರಿಪೇರಿ ಮಾಡಿಸಿಕೊಡಬೇಕೆಂತಲೂ, ಕಂಟ್ರಿಬ್ಯೂಷನ್ ಮೊಬಲಗು ರೂಪಾಯಿಗೆ 1 ಆಣೆಯಂತೆ ಕೊಡುತ್ತಾರೆಂತಲೂ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ನಮ್ಮಗಳನ್ನು ಉದ್ಧಾರಮಾಡಬೇಕಾಗಿ ಪ್ರಾರ್ಥಿಸುತ್ತೇವೆ.

ಆರ್ ಕೃಷ್ಣಪ್ಪ ವಗೈರೆರು

[ಗವರ್ನ್‌ಮೆಂಟ್ ಅಧಿಕಾರಿಗಳು ಪ್ರಜೆಗಳ ಕಷ್ಟ ಅನನುಕೂಲಗಳನ್ನು ಪರಿಹರಿಸಿಕೊಡುವುದರಲ್ಲಿ ಎಷ್ಟುಮಟ್ಟಿಗೆ ಉತ್ಸಾಹವುಳ್ಳವರಾಗಿಯೂ, ರೈತಹಿತಚಿಂತಕರಾಗಿಯೂ ಇದ್ದಾರೆಂಬುವುದು ಈ ಬಾತ್ಮಿಯಲ್ಲಿ ಕಂಡ ವಿಚಾರದಿಂದ ಪ್ರಕಾಶವಾಗುತ್ತದೆ ಸಂಸ್ಥಾನವನ್ನು ಅಭಿವೃದ್ಧಿಮಾಡುವುದಕ್ಕೆಂದು ಅಧಿಕಾರಿಗಳು ಸಮಯವನ್ನೂ ರಾಜಾದಾಯವನ್ನೂ ವ್ಯಥಾ ಖರ್ಚುಮಾಡುವುದಕ್ಕಿಂತ ಸಂಸ್ಥಾನವಾಸಿ ಪ್ರಜೆಗಳಿಗಿರತಕ್ಕ ಮೇಲ್ಕಂಡಂಥಾ ತೊಂದರೆಗಳನ್ನು ಮಿತವ್ಯಯದಿಂದಲೂ ಚಟುವಟಿಕೆಯಾಗಿಯೂ ಸರಿಪಡಿಸಿಕೊಡುತ್ತಾ ಬಂದರೆ ಎಷ್ಟೋ ಕ್ಷೇಮವೂ ಉಪಕಾರವೂ ನೆಮ್ಮದಿಯೂ ಆದೀತು —ಎಡಿ]

ಚಿತ್ರದುರ್ಗದ ವಿದ್ಯಮಾನಗಳು.

ಅಯ್ಯಾ

ಈ ಊರು ದೊಡ್ಡ ಪೇಟೆಯಲ್ಲಿ ಶ್ರೀ ಉತ್ಸವಾಂಬ ಅಮ್ಮನೆಂಬ ದೇವತೆಯ ಓಕಳೀ ಕೊಳದ ಪ್ರದಕ್ಷಿಣೆ ಜಾಗಾ ಒತ್ತಿಕೊಂಡು ಒಬ್ಬ ವ್ಯಾಪಾರಸ್ಥನು ಮನೆ ಕಟ್ಟಿರುತ್ತಾನೆ. ಆ ದೇವಸ್ಥಾನದ ಧರ್ಮ ಕರ್ತರು ಈ ವಿಷಯವನ್ನು ಕುರಿತು ಒತ್ತಲ್ಪಟ್ಟ ಜಾಗ ಬಿಡಿಸಿಕೊಡಲು ಅರ್ಜಿ ಹಾಕಿರುವಂತೆ ಕೇಳುತ್ತೇನೆ. ಸರ್ಕಾರದವರು ಆ ವರ್ತಕನಿಗೆ ಲೈಸನ್ಸು ಕೊಟ್ಟುಕೂಡ ಒತ್ತಿ ಕಟ್ಟಿರುವದು ನೋಡಿದರೆ ಆಶ್ಚರ್ಯ' ಸರ್ಕಾರದವರ ದರ್ಜೆಯನ್ನು ಸದರಿ ವರ್ತಕನು ಲಕ್ಷ್ಯಕ್ಕೆ

ತಂದಂತೆ ತೋರುವುದಿಲ್ಲ ಸರ್ಕಾರದವರು ಪಕ್ಷಪಾತಮಾಡದೆ ನ್ಯಾಯವಿದ್ದಂತೆ ನೋಡುವದು ಅವರ ಕರ್ತವ್ಯವಾಗಿರುತ್ತೆ ಸಾಮಾನ್ಯವಾಗಿ ತಪ್ಪಿತಸ್ಥರನ್ನು ಶಿಕ್ಷಿಸುವುದು ಸರ್ಕಾರದವರ ಕರ್ತವ್ಯವಾಗಿದ್ದು ಅಂಥವರನ್ನು ನಿರ್ಲಕ್ಷ್ಯದಿಂದ ಬಿಟ್ಟಲ್ಲಿ ಅವರು ಪ್ರಬಲಿಸಿ ಕ್ರಮೇಣ ಅವರನ್ನು ಅಡಗಿಸುವುದು ಸರ್ಕಾರಕ್ಕೂ ಬಹಳ ತೊಂದರೆಯಾಗಿ ಪರಿಣಮಿಸುವುದು ಈ ಓಕಳಿ ಕೊಳದ ವಿಷಯದಲ್ಲಿ ಸರ್ಕಾರದವರು ಹ್ಯಾಗೆ ತೀರ್ಮಾನ ಮಾಡುತ್ತಾರೆಯೋ ನೋಡತಕ್ಕದ್ದಿರುತ್ತೆ ನ್ಯಾಯಾನ್ಯಾಯ ಪರಿಶೋಧನೆಗೆ ಇದೀಗ ಕಾಲ

ಇಲ್ಲಿ ಬಹು ಕಾಲದಿಂದಲೂ ಕೆಲವು ರೆವಿನ್ಯೂ ಆಫೀಸರುಗಳು ಮತ್ತು ಮ್ಯುನಿಸಿಪಲ್ ಆಫೀಸರುಗಳು ಖಾಯಂ ವಸತಿಗಳಾಗಿರುತ್ತಾರೆ ಇವರುಗಳನ್ನು ಪ್ರಜೆಗಳ ಸೌಕರ್ಯಕ್ಕಾಗಿ ಬೇರೆ ಬೇರೆ ಸ್ಥಳಕ್ಕೆ ವರ್ಗಾಯಿಸುತ್ತಿದ್ದರೆ ಕ್ಷೇಮವಾದೀತು ಇಲ್ಲಿಗೆ ವರ್ಗಾಯಿಸಲ್ಪಟ್ಟ ಟ್ರೆಜರಿ ಮ॥ ಭೀಮರಾಯರು ಮತ್ತೂ ಪೊಲೀಸ್ ಸೂಪರಿಂಟೆಂಡೆಂಟ್ ಮ॥ ಮಾಚಯ್ಯನವರು ಇನ್ನೂ ಬರಲಿಲ್ಲ ಮ॥ ಮಾಚಯ್ಯನವರು ಇಲ್ಲಿನ ತಾಲ್ಲೂಕು ಅಮಲ್ದಾರರಾಗಿದ್ದಾಗ ಬಹು ವಿಚಕ್ಷಣೆಯಿಂದ ಕೆಲಸಮಾಡಿ ನ್ಯಾಯವಾದಿಗಳೆಂದು ಹೆಸರು ಪಡೆದವರು ಇವರು ಇಲ್ಲಿಗೆ ಯಾವಾಗ ಬಂದರೋ ಒಂದು ಎಲ್ಲರಿಂದ ನಿರೀಕ್ಷಿಸಲ್ಪಟ್ಟಿರುತ್ತೆ ಅವರು ಬರುತ್ತಾರೆಂಬ ವರ್ತಮಾನದಿಂದ ಪೊಲೀಸ್ ಇಲಾಖೆ ಚುರುಕಾಗಿ ಕೆಲಸಮಾಡುತ್ತಿರುವುದು ಬಂದನಂತರ ಇಲ್ಲಿನ ಪೊಲೀಸು ಬಹಳಮಟ್ಟಿಗೂ ಉತ್ತಮ ಸ್ಥಿತಿಗೆ ಬರುತ್ತೆಂದು ನಂಬುತ್ತೇನೆ

ಟವನ್ ಮ್ಯುನಿಸಿಪಲ್ ಮೆಂಬರುಗಳಲ್ಲಿ ಹೆಚ್ಚಾಗಿ ಅಡ್ವೋಕೇಟರುಗಳು ಲಾಯರುಗಳೇ ಇರುತ್ತಾರಲ್ಲದೆ ಕೆಲಸಕ್ಕೆ ಸ್ಥಳಬಿಟ್ಟು ಏಳದ ವೃದ್ಧರು ಯಾವಾಗ್ಯೂ ವ್ಯಾಪಾರದಲ್ಲಿ ನಿಮಗ್ನರಾದ ವರ್ತಕರು ಇರುತ್ತಾರೆ ಮೇಲ್ಕಂಡ ಲಾಯರುಗಳು ತಮ್ಮ ಕೇಸುಗಳಲ್ಲಿ ಹೆಚ್ಚಾಗಿ ಗಮನವಿರುತ್ತೇ ವಿನಹ ಪ್ರಜೆಗಳ ಸುಖದುಃಖದ ಲ್ಲಿಲ್ಲ ಈ ಮೇಲೆ ಹೇಳಿದ ಎರಡು ಪಂಗಡದವರು ಸಹ ಗ್ರಾಮದಲ್ಲಿ ಸಂಚರಿಸಿದ್ದಂತೆ ಕಾಣೋ ಕಾಣೆ ಹೀಗಿರುವಲ್ಲಿ ಪ್ರಜೆಗಳ ಸುಖದುಃಖ ಇವರಿಗೆ ಹ್ಯಾಗೆ ತಿಳಿಯುತ್ತೆ ? ಇಂಥವರಿಂದ ಪ್ರಜೆಗಳಿಗೆ ಯಾವ ಪ್ರಯೋಜನವಾದೀತು ? ತಮ್ಮ ತಮ್ಮ ಸುತ್ತುಮುತ್ತು ಇರತಕ್ಕದ್ದು ತಿಳಿಯುವದೇ ಇವರಿಗೆ ಕಷ್ಟವಾಗಿರುವಲ್ಲಿ ಬಾಕಿಯವುಗಳನ್ನು ಹ್ಯಾಗೆತಾನೇ ತಿಳಿಯುತ್ತಾರೆ ? ಕಾರಣ ಡಿಸ್ಟ್ರಿಕ್ಟ್ ಪ್ರೆಸಿಡೆಂಟರು ವಿದ್ಯಾವಂತರಾಗಿಯೂ, ಯೋಗ್ಯರಾಗಿಯೂ ಜನಾನುರಾಗಿಗಳಾಗಿಯೂ, ಪ್ರಜೆಗಳ ಇಂಗಿತಗಳನ್ನು ತಿಳಿಯತಕ್ಕವರಾಗಿಯೂ ಇರುವವರನ್ನು ಚುನಾಯಿಸಿದಲ್ಲಿ ಪ್ರಜೆಗಳಿಗೆ ಹೆಚ್ಚಾಗಿ ಸೌಕರ್ಯವುಂಟಾದೀತೆಂದು ನಂಬುತ್ತೇನೆ

ಚಿತ್ರದುರ್ಗದಲ್ಲಿ ಕೋಆಪರೇಟಿವ್ ಸೊಸೈಟಿಯು 1912 ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿತು ಇದನ್ನು ಸ್ಥಾಪಿಸಿದ ಮಹನೀಯರಿಗೆ ವಂದನೆ ಇಲ್ಲಿ ಮೆಂಬರುಗಳು ಮತ್ತು ಪ್ರೆಸಿಡೆಂಟರು ಸಹ ಎಲ್ಲರೂ ಒಂದೇ ಮತದವರು ಮತ್ತು ಇವರಲ್ಲಿ ಇಲ್ಲಿನ ಜನಗಳ ಸ್ಥಿತಿಗತಿಗಳನ್ನು ಎಲ್ಲವರು ಇಬ್ಬರೇ ವಿನಹ ಮತ್ತೆ ಯಾರೂ ಇಲ್ಲ ಬೇರೆ ಬೇರೆ ಮತಗಳಲ್ಲಿ ವಿದ್ಯಾವಂತರಾಗಿಯೂ ಗುಣವಂತರಾದವರು ಯಾರೂ ಇಲ್ಲವೇ ? ಈಗ ಬಹು ಭಾಗದ ಹಣವು ಆಫೀಸು ನೌಕರರಿಗೆ ಸಾಲಕೊಡಲ್ಪಟ್ಟಿರುತ್ತೆ ಬಡವರಾಗಿಯೂ ಯೋಗ್ಯರಾಗಿಯೂ, ಮನೆಬಾಗಿಲುಳ್ಳವರಾಗಿಯೂ ಇರತಕ್ಕವರಿಗೆ ಹಣ ಸಕಾಲಕ್ಕೆ ದೊರೆಯುವದು ಕಷ್ಟ ಆಫಿಷಿಯಲ್‌ಗಳಿಗೆ ಸಕಾಲಕ್ಕೆ ದೊರೆಯುತ್ತೆ ಬಡವರಿಗೆ ಸಾಲ ಬೇಕಾದರೆ ಅವರು ಜಾಮೀನು ಕೊಡಬೇಕು ಆಫಿಷಿಯಲ್‌ಗಳು ಮಾತ್ರ ಸ್ವಂತ ಜವಾಬ್ದಾರಿಯ ಮೇಲೆ ಸಾಲ ಪಡೆಯುತ್ತಾರೆ ಆಫಿಷಿಯಲ್‌ಗಳು ಸರ್ವಿಸ್ಸಿನಿಂದ ನಿವೃತ್ತಿಯಾದರೂ ಮತ್ತೆ ಯಾವಕಾರಣದಿಂದ ಬಿಟ್ಟರೂ ಕೂಡ ಅವರಿಂದ ಹಣ ಪಡೆಯಲು ತೊಂದರೆಯಾಗುತ್ತೆ ಈ ಗ್ರಾಮದ ವಾಸಸ್ಥರಿಗಾದರೋ ಅಂಥಾ ಸಂಭವಬಂದರೆ ತಮ್ಮ ಮನೆಮಠಗಳನ್ನು ಮಾರಿಯಾದರೂ ತಮ್ಮ ಮಾನ ಉಳಿಸಿಕೊಳ್ಳುತ್ತಾರೆ ಇವರಿಂದ ಹಣಬರುವುದಕ್ಕೆ ಯಾವ ತೊಂದರೆಯೂ ಇರುವುದಿಲ್ಲ ಇಂಥವರಿಗೆ ಹಣವನ್ನು ಕೊಡಲು ಅನೇಕ ತೊಂದರೆಬರುತ್ತವೆ ಇವುಗಳನ್ನು ಸರಿಪಡಿಸುತ್ತಾರೆಂದು ನಂಬುತ್ತೇನೆ

ಆ ಕೆ ವೀರಾಚಾರಿ ಚಿತ್ರದುರ್ಗ

ತಾಲ್ಲೋಕು ವರ್ತಮಾನಗಳು

ನಾಯಿಗ — ನರಾತಾಲ್ಲೋಕು ತಿಪ್ಪನಹಳ್ಳಿ ಗ್ರಾಮದಲ್ಲಿ ತುಮಕೂರು ಹಜಾಮರ ರುದ್ರಪ್ಪನ ಮಗಳು ರುದ್ರಮ್ಮನೆಂಬುವಳು ಗಂಡಸತ್ತ 23 ವರುಷದ ವಿಧವೆಯು ಗರ್ಭಿಣಿಯಾಗಿ ಹೆತ್ತಮಗುವನ್ನು ಹಾಳುಭಾವಿಗೆ ಹಾಕಿದ್ದು ರುಜುವಾತಿಗೆಬಂದು, ಮ್ಯಾಜಿಸ್ಟ್ರೇಟರು ಅವಳಿಗೆ ಒಂದು ತಿಂಗಳು ಸಜವನ್ನು ವಿಧಿಸಿರುತ್ತಾರೆ

ದೊಡ್ಡಬಳ್ಳಾಪುರ — ಕಳೆದ ಶನಿವಾರ ೯ನೇ ತಾ ಮಧ್ಯಾಹ್ನ ದೊಡ್ಡಬಳ್ಳಾಪುರದ ಮುಖಂಡರು ವರ್ಗವಾದ ಮ॥ ಅಮಲ್ದಾರ್ ಎ ಕೃಷ್ಣ ಅರಸಿನವರನ್ನೂ, ಹೊಸ ಮುನ್‌ಸೀಫ್ ಮ॥ ಮಹದೇವಯ್ಯನವರನ್ನೂ ದಿವ್ಯವಾದ ಭೋಜನಗಳಿಂದಲೂ ವಾದ್ಯ ವಿಶೇಷಗಳಿಂದಲೂ ಮ॥ ಸಾಹುಕಾರ್ ಚಂದ್ರಶೇಖರಯ್ಯನವರ ಬಂಗಲೆಯಲ್ಲಿ ಸತ್ಕರಿಸಿ, ಅಮಲ್ದಾರ್ರವರನ್ನು ಅವರ ಸ್ನೇಹಿತರೆಲ್ಲರೂ ರೈಲ್ವೆ ಸ್ಟೇಷನ್ ತನಕ ಕರೆದುಕೊಂಡು ಹೋಗಿ ಸಾಗಕಳುಹಿದರು ಇದಕ್ಕೆ ಮುಂಚಿತವಾಗಿ ಅದೇ ಬಂಗಲೆಯಲ್ಲಿ ಔತಣಕ್ಕೆ ಬಂದಿದ್ದವರೆಲ್ಲರ ಕೂಡ ಅಮಲ್ದಾರ್ರವರ ಫೋಟೋ ತೆಗೆಯಲ್ಪಟ್ಟಿತು ಪರಂತು ನಮ್ಮ ಅಮಲ್ದಾರ್ ಮ॥ ಎ ಕೃಷ್ಣ ಅರಸಿನವರು ಕಳೆದ ಮೂರೂವರೆ ವರುಷಗಳಿಂದ ಬಹು ಪ್ರೀತಿಯಾಗಿ ನಡೆದುಕೊಂಡು ಬಂದದ್ದರಿಂದ ವರ್ಗವಾದದ್ದು ಅವರ ಮಿತ್ರಮಂಡಲಿಯವರಿಗೆಲ್ಲಾ ತುಂಬಾ ವಿಷಾದ ಪ್ರಾಪ್ತವಾಗಿದೆ

ಕಡೂರು ತಾ॥ ಯರಿಗೆರೆ — ಇಲ್ಲಿ ಚೈತ್ರದಿಂದ ಮಳೆ ಸ್ವಲ್ಪವೂ ಇರಲಿಲ್ಲ ಆಷಾಢದಲ್ಲಿ ಸಮೃದ್ಧಿಯಾಗಿ ಮಳೆ ಆಯಿತು ವೈಶಾಖ ತಿಂಗಳಲ್ಲಿ ಕಾಲರಾ ಉಪದ್ರದಿಂದ ಈ ಗ್ರಾಮದೊಳಗೆ 2 ಜನಗಳು ಸತ್ತುಹೋದರು ಬೇಗಾರರ ಹಟ್ಟಿಯಲ್ಲಿ 7 8 ಜನಗಳು ಸತ್ತುಹೋದರು ಇಲ್ಲಿಗೆ ಕಷ್ಟವೆಲ್ಲಾ ಪರಾಭವ ಆಗಿಬಿಟ್ಟಿತ್ತು ಜೋಳ ರಾಗಿ ಹಾಕುವದಕ್ಕೆ ಪ್ರಾರಂಭಮಾಡಿರುತ್ತಾರೆ ಆದರೆ 8 ದಿವಸದಿಂದ ಮಳೆ ಸ್ವಲ್ಪ ವಿಡಲಿಲ್ಲ — ಅಂಥಾ ಮಳೆಯೊಳಗೆ ಉತ್ತರದೇಶದವರು ವಿಶ್ವಬ್ರಹ್ಮಜಾತಿಯವರು ಎರಡುಮಂದಿ ಆಲಪ್ಪ, ಪರಮೇಶ್ವರಪ್ಪ ಎಂಬುವರು ನಮ್ಮ ಗ್ರಾಮಕ್ಕೆ ಬಂದಿರುತ್ತಾರೆ ಇವರು ಹುಟು ಕುರುಡರು ಸಂಗೀತ, ತಬಲ, ಪಿಟೀಲು, ಪಿಯಾನು ಹಾಡಿಕೆಗಳಲ್ಲಿ ಬಹಳ ಚೆನ್ನಾಗಿ ಪಾಂಡಿತ್ಯಹೊಂದಿದಾರೆ ಗ್ರಾಮದ ದೊಡ್ಡಮನುಷ್ಯರು ಅವರನ್ನು ಕರಸಿಕೊಂಡು ಸಂಗೀತ ಮಾಡಿಸಿ ರೊಕ್ಕಗಳನ್ನು ಕೊಡುತ್ತಿದಾರೆ ಇಷ್ಟರಲ್ಲೇ ಇವರು ಮುಂದಿನ ಊರಿಗೆ ಹೋಗುವರು

ಬೆಂಗಳೂರು ತಾ॥ ಯಲಹಂಕ — ಇಲ್ಲಿ 7 8 ದಿನಗಳಿಂದಲೂ ಮಳೆಯು ಜೋರಾಗಿ ಮೋಡವು ಕವಿದು ಕವಿದುಕೊಂಡು ಛತ್ರದ ಪೈರಿನ ಕಟಾವಿಗೆ ಅಡಚಣೆಯಾಗಿರುವುದಲ್ಲದೆ ಊರಿನ ಹವಾ ಸಹ ಕೆಟ್ಟು ಅಲ್ಲಲ್ಲಿ ಛಳಿ ಜ್ವರ ಮುಂತಾದ ವ್ಯಾಧಿಗಳು ಕಾಣಿಸಿಕೊಳ್ಳುತ್ತಲಿವೆ ಅಲ್ಲದೆ ಪ್ರತಿ ಒಂದು ಸಂದಿ ರಸ್ತೆಯೂ ರೊಚ್ಚಾಗಿ ಜನಗಳ ಮತ್ತು ಮೂಗಪ್ರಾಣಿಗಳ ಸಂಚಾರಕ್ಕೆ ಬಹಳ ಅಡಚಣೆಯಾಗಿರುತ್ತದೆ ಮ್ಯುನಿಸಿಪಾಲಿಟಿಯವರು ಜಾಗ್ರತೆಯಲ್ಲಿ ರಸ್ತೆಗಳನ್ನು ರಿಪೇರಿಮಾಡಿಸುತ್ತಾರೆಂದು ಹಾರೈಸುತ್ತೇನೆ — ಇಲ್ಲಿಗೆ ಸುಮಾರು 3 ಮೈಲಿ ದೂರದಲ್ಲಿರುವ ಗಂಟಿಗಾನಹಳ್ಳಿ ಎಂಬ ಗ್ರಾಮದಲ್ಲಿ ಪ್ಲೇಗ್‌ಉಪದ್ರವವು ಪ್ರಾರಂಭವಾಗಿ ಎರಡು ಮರಣಗಳಾದವು ಮತ್ತು ಈ ಊರಿನ ಡಾಕ್ಟರ್ ಸಾಹೇಬರವರು ಪ್ರತಿನಿತ್ಯವೂ ಪ್ಲೇಗ್ ಹಗಲಿರುವ ಸ್ಥಳಕ್ಕೆಹೋಗಿ ರೋಗಿಗಳಿಗೆ ಔಷಧ ಮುಂತಾದದ್ದನ್ನು ಕೊಟ್ಟುಬರುತ್ತಿದಾರೆ — ಈ ಊರಲ್ಲಿಯೇ ಬಹಳ ವರುಷಗಳಿಂದಲೂ ವಾಸವಾಗಿರುವ ಕಡೂರು ಸೀತಾರಾಮಯ್ಯನವರ ಕುಮಾರರು ಮ॥ ವೆಂಕಟಾದ್ರಿಶೆಟ್ಟಿಯವರು ತಮಗೆ ವಿವಾಹವಾದ ಸಂತೋಷಕ್ಕಾಗಿಯೂ ಬೇರೆ ಕೆಲಸಕ್ಕಾಗಿಯೂ 400 ರೂಪಾಯನ್ನು ಧರ್ಮಾರ್ಥವಾಗಿ ಕೊಟ್ಟಿರುತ್ತಾರೆ

ಚಾಮರಾಜನಗರ — ಈ ಪ್ರಾಂತ್ಯ ತಾ 2 ೨ ನೇ ಮಂಗಳವಾರ ಬುಧವಾರ ರಾತ್ರಿ ಒಳ್ಳೇ ಮಳೆಯಾಗಿ ಕೆರೆ ಕುಂಟೆಗಳಲ್ಲೆಲ್ಲಾ ನೀರು ಸಮೃದ್ಧಿಯಾಗಿ ತುಂಬಿವೆ ಮಳೆಯಿಲ್ಲದೆ ಒಣಗುತ್ತಿದ್ದ ಜೋಳದ ಪೈರುಗಳೆಲ್ಲಾ ಬಹಳ ಚೆನ್ನಾಗಿವೆ ರೈತರು ಉಳುಮೆಮಾಡಿಟ್ಟಿದ್ದ ಹೊಲಗಳಿಗೆಲ್ಲಾ ರಾಗಿಯನ್ನು ಬಿತ್ತಿ ಮಳೆಯನ್ನು ಎದುರುನೋಡುತ್ತಲಿದಾರೆ ಧಾರಣೆವಾಸಿಗಳಂತು ಕ್ಷಾಮವನ್ನೇ ಸೂಚಿಸುತ್ತಲಿವೆ — ಪ್ಲೇಗಿನ ದೆಸೆಯಿಂದ ಷೆಡ್ಡುಗಳಲ್ಲಿದ್ದ ಕೆಲವರು ಊರಿಗೆ ಬರತೀ ಇಲ್ಲ ಷೆಡ್ಡಿಗೆ ಹೋಗದೆ ಮರೆಮಾಡಿಕೊಂಡಿದ್ದ ಕೆಲವು ಬೀದಿಗಳಲ್ಲಿ ಈಗ ದಿನಕ್ಕೆ 1-4 ರಂತೆ ಪ್ಲೇಗ್ ಮರಣಗಳಾಗುತ್ತಲಿವೆ ಆ ಪ್ರಾಂತ್ಯದ ಜನರೆಲ್ಲಾ ತರಾತುರಿಯಿಂದ ಷೆಡ್ಡುಗಳನ್ನು ಹಾಕುತ್ತಲೂ, ಷೆಡ್ಡಿಗೆ ಹೋಗುತ್ತಲೂ ಇದಾರೆ ಇದರ ದೆಸೆಯಿಂದ ಸ್ಕೂಲುಗಳಲ್ಲಿ ಬಾಲಕರ ಸಂಖ್ಯೆಯೇ ಕಡಮೆಯಾಗಿ ಗೌ॥ ಎ ವಿ ಸ್ಕೂಲಿನಲ್ಲಿ ಒಂದು ಹೊತ್ತು ಪಾಠಗಳನ್ನು ನಡಿಸುತ್ತಲಿದಾರೆ ಇಲ್ಲಿನ ಚಾಮರಾಜೇಶ್ವರ ಬ್ಯಾಂಕ್ ಏಜಂಟ್ ದಾಸಪ್ಪನವರು ಕಾಲರಾದಿಂದ ಮರಣವನ್ನು ಹೊಂದಿದರು ಈ ಬ್ಯಾಂಕಿನ ಪಂಡಿನಿಂದ ಕಟ್ಟಿಸುತ್ತಿದ್ದ ಛತ್ರದ ಕೆಲಸವೂ ಕೂಡ ನಿಂತುಹೋಗಿದೆ

ಹುಳಿಯಾರು — ಈಗ ೧ ೨ ತಿಂಗಳ ಕೆಳಗೆ ಒಬ್ಬ ವರ್ತಕನು ತನ್ನ ಮನೆಯ ಮುಂದೆ ರಸ್ತೆಯಲ್ಲಿ ತನ್ನ ಗಾಡಿಯನ್ನು ಬಿಟ್ಟುಕೊಂಡಿರಲು ರಾತ್ರಿ ಯಾರೋ ಆ ಗಾಡಿಯನ್ನೇ ಸಾಗಿಸಿರುತ್ತಾರೆ ಒಂದು ತಿಂಗಳ ಹಿಂದೆ ಇಲ್ಲಿನ ಸಬ್ ಓವರ್‌ಸೀಯರವರು ತಮ್ಮ ಕುದುರೆಯನ್ನು ತಾವು ವಾಸವಾಗಿದ್ದ ಮನೆಯ ಮುಂಭಾಗಕ್ಕೆ ಸ್ವಲ್ಪ ದೂರವಾಗಿದ್ದ ಒಂದು ಕೊಠಡಿಯಲ್ಲಿ ಸಾಯಂಕಾಲ ಕಟ್ಟಿ ಹುಲ್ಲು ಹಾಕಿ ಬಾಗಿಲು ಚಿಲುಕ ಹಾಕಿಕೊಂಡುಹೋಗಿ, ಊಟ ಮಾಡಿ ಸುಮಾರು 8 ಗಂಟೆಗೆ ನೋಡಲು ಕುದುರೆಯೇ ಇರಲಿಲ್ಲ ಯಾರೋ ಅಪಹರಿಸಿಬಿಟ್ಟರು ಈ ಎರಡು ವಿಷಯಗಳನ್ನೂ ಅಂದರೆ ಗಾಡಿ ಮತ್ತು ಕುದುರೆ ಕಳುವಾದದ್ದನ್ನು ಮಾಲೀಕರು ಪೊಲೀಸಿಗೆ ತಿಳಿಸಿದರು ಇದುವರೆಗೂ ಯಾವುದೊಂದೂ ಪತ್ತೆಯಾಗಲಿಲ್ಲ ಈಗ ಇದೇ ಗ್ರಾಮದ ಸ್ಕೂಲ್ ಮಾಸ್ಟರ 2 ವರ್ಷದ ಹೋರಿ ಕರು ಮನೆಗೆ ಬಂದು 10 12 ದಿವಸಗಳಾಯ್ತು ಸುತ್ತಲೂ ಎಲ್ಲೀ ಹುಡುಕಿದರೂ ಪತ್ತೇ ಇಲ್ಲ ಪೊಲೀಸಿಗೆ ತಿಳಿಸಿದರೆ ಏನೂ ಪ್ರಯೋಜನವಿಲ್ಲವೆಂದು ತಿಳಿದುಕೊಂಡು ಸುಮ್ಮನಿರಬೇಕಾಗಿದೆ ಪೊಲೀಸಿನವರು ಇಂಥ ಕಳ್ಳರನ್ನು ಪತ್ತೆಮಾಡಿ ಪ್ರಜೆಗಳ ಮತ್ತು ಮೇಲ್ಪಟ್ಟ ಅಧಿಕಾರಿಗಳ ಪ್ರೀತಿಗೆ ಪಾತ್ರರಾಗಬೇಕೆಂದು ಕೋರುವೆನು

ಹೊಸಕೋಟೆ ತಾ॥ ಬಾಚಹೊಸಹಳ್ಳಿ — ಈ ಗ್ರಾಮದಲ್ಲಿ ಗ್ರಾಮಸ್ಥರೆಲ್ಲಾ ಸೇರಿ 100 ರೂಪಾಯಿ ಚಂದಾ ವಸೂಲ್ಮಾಡಿ ಗೌರ್ನಮೆಂಟ್ ಸ್ಕೂಲಿಗೆ ಲಾಯಖಾಗಿಯೂ ಮಜಬೂತಾಗಿಯೂ ಕಟ್ಟಡ ಕಟ್ಟಿಸಿ ಕೊಟ್ಟಿರುತ್ತಾರೆ ಗ್ರಾಮಸ್ಥರ ಕೋರಿಕೆಯಂತೆ ಸ್ಕೂಲ್ ಅ॥ ಡೆಪ್ಯುಟಿ ಇನ್‌ಸ್ಪೆಕ್ಟರವರು ಇಲ್ಲಿಗೆ ದಯಮಾಡಿ ಹೊಸ ಕಟ್ಟಡದ ಗೃಹಪ್ರವೇಶದಲ್ಲಿ ಅಗ್ರಾಸನಾಧಿಪತ್ಯವನ್ನು ವಹಿಸಿದ್ದರು ಸ್ಕೂಲ್ ಬಾಲಕರಿಂದ ದೇವರ ಪ್ರಾರ್ಥನೆಯೂ ಮಹಾರಾಜರವರ ಶ್ರೇಯಃ ಪ್ರಾರ್ಥನೆಯೂ ನಡಿಸಲ್ಪಟ್ಟ ತರುವಾಯ ಸ್ಕೂಲ್ ಮಾಸ್ಟರು ಬಿ ವಾಸುದೇವಾಚಾರ್ರು ಸ್ಕೂಲ್ ಪ್ರೋಗ್ರೆಸ್ ರಿಪೋರ್ಟನ್ನು ಓದಿದರು ಬಳಿಕ ಸ್ಕೂಲ್ ಕಮಿಟಿ ಮೆಂಬರು ಮುನಿಸಾಮಪ್ಪನವರು ಅಡಹಾಲ್ ರಿಪೋರ್ಟನ್ನು ಓದಿದರು ನಂತರ ಸಂಗೀತವು ಬಹಳ ಆಹ್ಲಾದಕರವಾಗಿ ನಡೆಯಿತು ತರುವಾಯ ಅಗ್ರಾಸನಾಧಿಪತ್ಯವನ್ನು ವಹಿಸಿದ್ದ ಮ ಬಿ ಅನಂತಸುಬ್ಬರಾವ್ ಯವರು ವಿದ್ಯಾಭ್ಯಾಸದ ವಿಚಾರವಾಗಿ ಉಪನ್ಯಾಸ ಮಾಡಿದ್ದು ತುಂಬಾ ಮನೋರಂಜಕವಾಗಿದ್ದುದಲ್ಲದೆ ಹಾಜರಿದ್ದ ಮಾಸ್ಟರುಗಳಿಗೆಲ್ಲಾ ವಿದ್ಯಾರ್ಥಿಗಳನ್ನು ಸತ್‌ಪ್ರವರ್ತನೆಗಳಿಂದಾ ವಿದ್ಯಾಭಿವೃದ್ಧಿಯನ್ನು ಹೆಚ್ಚಿಸಬೇಕೆಂಬ ಕುತೂಹಲವುಂಟಾಗಿರುತ್ತದೆ ಹೊಸಕೋಟೆ ಎ ವಿ ಸ್ಕೂಲ್ ಹೆಡ್‌ಮಾಸ್ಟರವರು ವಿದ್ಯಾಧನವೇ ಶ್ರೇಷ್ಠವೆಂಬ ಅಂಶವನ್ನು ಕುರಿತು ಪ್ರಜೆಗಳ ಮನಸ್ಸಿಗೆ ನಾಟುವಂತೆ ಬಹಳ ಸ್ವಾರಸ್ಯವಾದ ಉಪನ್ಯಾಸಮಾಡಿದರು ಬಾಲಕಿಯರಿಂದಲೂ ಸಂಗೀತಗಾರರಿಂದಲೂ ಮಂಗಳ ವಾದ್ಯಗಳು ನಡೆದು, ಹುವ್ವು ಗಂಧ ಸಕ್ಕರೆ ಮಿಠಾಯಿ ಹಂಚಲ್ಪಟ್ಟು ಸಭೆಯು ಬರಖಾಸ್ತಾಯಿತು

ಬೇಲೂರು — ಈ ಸಾರಿ ಈ ಪ್ರಾಂತ್ಯ ಬಹಳ ಮದುವೆಗಳು ನಡೆದವು ಪೈಕಿ ಈ ಊರಿನಲ್ಲಿ ನಡೆದ ವಿವಾಹಗಳಲ್ಲಿ ಸಾಹುಕಾರ್ ಬಿ ಎಸ್ ಕೇಶವರಾಯ ಶೆಟ್ಟರವರು ತಮ್ಮ ಕುಮಾರಿಗೆ ವಿವಾಹ ನಡಿಸಿ ಬಹುಮಂದಿ ಅತಿಥಿ ಅಭ್ಯಾಗತರನ್ನು ಸತ್ಕರಿಸಿ ಬಹಳ ಆಟ್ಟಹಾಸದಿಂದ ವಿವಾಹವಂ ನೆರವೇರಿಸಿದರು — ಬೇಲೂರು ಎ ವಿ ಸ್ಕೂಲು ಒಳ್ಳೇ ಸ್ಥಿತಿಯಲ್ಲಿದ್ದು ಪ್ರತಿ ವರುಷವೂ ಒಳ್ಳೇ ಹೆಸರು ಪಡೆಯುತ್ತಿರುವುದು ಸಂತೋಷಪ್ರದವಾಗಿದೆ ಈ ಸಾರಿ ಬಹುಮಂದಿ ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪರೀಕ್ಷೆಗೆ ಹೋಗಿ ಒಬ್ಬಿಬ್ಬರು ವಿನಾ ಎಲ್ಲರೂ ಪ್ಯಾಸಾದರು ಈಗ ಹೊಸದಾಗಿ ಬಂದಿರುವ ಹೆಡ್ ಮಾಸ್ಟರು ಬಹಳ ಆಸಕ್ತಿಯಿಂದ ಕೆಲಸಮಾಡುತ್ತಿದಾರೆ — ಈ ಮಲ್ನಾಡು ಪ್ರಾಂತ್ಯವು ಬಾಯಿಲೆಗೆ ತೌರುಮನೆಯೆಂದು ಹೇಳಬೇಕಾಗಿಲ್ಲ ಪ್ರತಿ ವರುಷವೂ ಮೇ, ಜೂನ್ ತಿಂಗಳುಗಳಲ್ಲಿ ಪ್ರಾರಂಭವಾಗುತ್ತಿದ್ದ ಪ್ಲೇಗು ಕಳೆದ ಸಾರಿ ಇನಾಕ್ಯುಲೇಷನ್ ಏರ್ಪಾಡಿನಿಂದ ಬಾರಲಿಲ್ಲ ಈ ಸಲ ಕೊಳಕು ಹೆಚ್ಚಿ ಅಲ್ಲಲ್ಲಿ ಸಿಡುಬು ಛಳಿಜ್ವರ ಪ್ರಾಪ್ತವಾಗಿ ಬಹುಮಂದಿ ಮಕ್ಕಳು ಸಿಡುಬಿಗೆ ತುತ್ತಾದರು ಈಗ ಮಳೆಗಾಲವಾಗಿ ನಿತ್ಯವೂ ಸುರಿಯುವ ಮಳೆಯಲ್ಲಿ ಬೀದಿಗಳ ಕಶ್ಮಲವೆಲ್ಲಾ ಕರಗಿ ದುರ್ವಾಸನೆಯಾಗಿದೆ ಅದರಲ್ಲೂ ಗಲ್ಲಿಗಳ ವಿಚಾರ ಹೇಳಬೇಕಾದುದೇ ಇಲ್ಲ ಸರ್ಕಾರದವರು ಒಳ್ಳೆಯ ನೀರಿನ ಏರ್ಪಾಡು ಇಡದೆ, ಆಥವ ಎಲ್ಲರೂ ಬಳಸುವ ಕೆರೆಗೂ ಕೆಲವು ಭಾಗದಲ್ಲಿ ಕಟ್ಟುಮಾಡದೆ ಉದಾಸೀನರಾಗಿರುವುದರಿಂದ ಸದರಿ ನೀರು ಉಪಯೋಗಿಸುವ ಪ್ರಜೆಗಳಿಗೆ ಬಾಯಿಲೆ ಪ್ರಾಪ್ತವಾಗುವುದು ಈ ವಿಷಯದಲ್ಲಿ ನಮ್ಮ ಅಮಲ್ದಾರ್ರವರು ಪರಾಂಬರಿಸಿ ಸರಿಪಡಿಸಬೇಕಾಗಿದೆ ಊರಲ್ಲೆಲ್ಲಾ ಹಗಲೇ ಕತ್ತೆಗಳ ಗಲಾಟೆ ಜಾಸ್ತಿ, ಇನ್ನು ರಾತ್ರಿಯಂತೂ ಹೇಳಬೇಕಾದುದೇ ಇಲ್ಲ ನಮ್ಮ ಅಮಲ್ದಾರ್ರವರು ಈಗ ಸುರಿಯುವ ಮಳೆಯಲ್ಲಿ ಯಾವುದೊಂದು ಸಾಂಕ್ರಾಮಿಕ ರೋಗವೂ ಉತ್ಪತ್ತಿಯಾಗದಂತೆ ಸ್ಯಾನಿಟರಿ ಏರ್ಪಾಡನ್ನು ಕ್ರಮಪಡಿಸಿ ಪ್ರಜೆಗಳ ಆರೋಗ್ಯಭಾಗ್ಯವನ್ನು ಕಾಪಾಡ್ಯಾರೆಂದು ಕೋರುವೆನು

ಹಾಸನ — 8 10 ದಿನಗಳತನಕ ಚೆನ್ನಾಗಿ ಹೊಳವಾಗಿದ್ದು, ಈಚೆಗೆ 4 6 ದಿನಗಳಿಂದ ಮಳೆಯು ಪುನಃ ಹಿಡಿದಿದ್ದು ಈಗ ಸುಮಾರಾಗಿದೆ ಆರೋಗ್ಯಸ್ಥಿತಿಯು ತಕ್ಕಮಟ್ಟಿಗೂ ಚೆನ್ನಾಗಿದೆ ಮ್ಯುನಿಸಿಪಾಲಿಟಿಯು ಈ ಮಳೆಗಾಲದಲ್ಲಿ ಬಹು ಚಟುವಟಿಕೆಯಾಗಿ ಕೆಲಸಮಾಡುತ್ತಿದ್ದರೆ ಬಹು ಪ್ರಯೋಜನವುಂಟು — ಕಳೆದ ವಾರ ಈ ಸ್ಥಳನಿವಾಸಿಯಾದ ಮ॥ ದೊಡ್ಡಬಾಗಿಲು ಧರಣಯ್ಯನೆಂಬುವರು ಇಲ್ಲಿನ ಹುಣಸೇಕೆರೆಯಲ್ಲಿ ಬಿದ್ದು ಮೃತಪಟ್ಟುದು ಶೋಚನೀಯವಾಗಿದೆ ಇವರಿಗೆ ಯಾವುದೋ ಕ್ರೂರವಾದ ರೋಗವಿದ್ದುದರಿಂದ ಅದರ ಬಾಧೆಯನ್ನು ಸಹಿಸಲಾರದೆ ಹೀಗೆ ಆತ್ಮಹತ್ಯಮಾಡಿಕೊಂಡುದಾಗಿ ಹೇಳುತ್ತಾರೆ ಇಲ್ಲಿ ಮುನ್‌ಸಿಫರಾಗಿದ್ದ ಮ॥ ಶ್ರೀನಿವಾಸರಾಘವಾಚಾರ್ಯರಿಗೆ ಶ್ರೀರಂಗಪಟ್ಟಣಕ್ಕೆ ವರ್ಗವಾಗಿ ಇಲ್ಲಿಗೆ ಮ ಕೃಷ್ಣಯ್ಯಂಗಾರ್ರವರು ಬಂದಿದಾರೆ — ಇವರು ಬಾಕಿ ಕೆಲಸಗಳು ಆಗಾಗಲೇ ನಡೆಯಬೇಕೆಂಬ ಉದ್ದೇಶದಿಂದ ಎಡೆಬಿಡದೆ ಕೋರ್ಟಿನ ಕೆಲಸದಲ್ಲೇ ನಿರತರಾಗಿರುವರು — ಕಳೆದ ವಾರ ಮೈಸೂರಿನಿಂದ ಸೆಷನ್ಸ್ ಜಡ್ಜ್ ಮ ಫ್ಲಮರ್ ಸಾಹೇಬರವರು ಪರಿವಾರದೊಡನೆ ಇಲ್ಲಿಗೆ ಬಂದರು ಹಾಸನ, ಅರಕಲಗೂಡು, ಬೇಲೂರು ತಾಲ್ಲೂಕುಗಳಲ್ಲಿಂದ ತರಲ್ಪಟ್ಟಿದ್ದ ವಿಷಹಾಕಿದ್ದು, ಖೂನಿಮಾಡಿದದ್ದು ಈ ಮೊಕದ್ದಮೆಗಳು ವಿಚಾರಣೆಯಾಗಿ ವಿಷಹಾಕಿದ ಕೇಸೂ, ಬೇಲೂರು ತಾಲ್ಲೋಕಿನ ಖೂನೀ ಕೇಸೂ ವಜಾ ಆದವು ಅರಕಲಗೂಡು ಖೂನಿ ಕೇಸಿನಲ್ಲಿ ಮಾತ್ರ ಹನುಮೇಗೌಡ, ವೆಂಕಟೇಗೌಡ ಎಂಬ ಇಬ್ಬರಿಗೆ ಮರಣದಂಡನೆ ವಿಧಿಸಲ್ಪಟ್ಟಿತೆಂದು ತಿಳಿದುಬಂದಿತು — ಇಲ್ಲಿನ ಮಿಷನ್ ಆಸ್ಪತ್ರೆಯ ಲೇಡಿ ಡಾಕ್ಟರ್ ಮಿಸ್ ಲೋರವರು ಸುತ್ತುಮುತ್ತಣ ಸಂತೆಗಳಿಗೂ ಹೋಗಿ ಗ್ರಾಮಾಂತರದ ಬಡಜನರನ್ನು ಆದರ ಪೂರ್ವಕವಾಗಿ ನೋಡಿ ಅವರ ನಾನಾ ರೋಗಗಳಿಗೆ ಚಿಕಿತ್ಸೆಗಳನ್ನು ಆತ್ಮಾಸಕ್ತಿಯಿಂದ ಮಾಡುತ್ತಿದಾರೆ — ಇಲ್ಲಿ ವೈಷ್ಣವ ಸನ್ಯಾಸಿಗಳೊಬ್ಬರು ದಯಮಾಡಿಸಿದಾರೆ ಇವರು ಜನಗಳ ಮನಸ್ಸುಗಳು ಭಕ್ತಿಮಾರ್ಗದಲ್ಲಿ ವರ್ತಿಸಿ ಅಭಿವೃದ್ಧಿ ಹೊಂದುವಂತೆ ಭಾಗವತ ಪುರಾಣವನ್ನು ಶ್ರವಣ ಮಾಡಿಸುತ್ತಿರುವರು ಈ ಸ್ವಾಮಿಗಳಿಗೆ ಇಲ್ಲಿನ ಶಿಷ್ಯಮಂಡಲಿಯವರು ಆಸಕ್ತಿಯಿಂದ ಭಿಕ್ಷೆಮಾಡಿಸುತ್ತಾ ಸತ್ಕರಿಸುತ್ತಿದಾರೆ

ಮಳವಳ್ಳಿ ತಾ ಕೊತ್ತನಹಳ್ಳಿ — ಈ ಗ್ರಾಮದಲ್ಲಿ ನೂರಾರು ಪಂಚಮರ ಮನೆಗಳಿವೆ ಅಲ್ಲದೆ ನೂರು ಕೈಮಗ್ಗಗಳು ಇವೆ ನಮ್ಮ ಪಂಚಮರ ಪ್ರಜಾಸಂಖ್ಯೆ ಮಾತ್ರ 900 ಜನಗಳು ಇದಾರೆ ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ನಮ್ಮ ದಯಾಳು ಸರ್ಕಾರದವರು ಚಾಲ್ತಿ ಇಸವಿ ಅಂದರೆ 1913 ನೇ ಮಾರ್ಚಿ ಮಾಹೆ ತಾ 27 ರಲ್ಲಿ ಒಂದು ವಿಲೇಜು ಯಲಿಮೆಂಟರಿ ಪಂಚಮ ಸ್ಕೂಲನ್ನು ಸ್ಥಾಪಿಸಿ, ವಿದ್ಯಾಭ್ಯಾಸವನ್ನು ಅಭಿವೃದ್ಧಿಪಡಿಸುತ್ತಿದಾರೆ ಅಲ್ಲದೆ ತಾ 26-4 13 ರಲ್ಲಿ ನಮ್ಮ ಡೆಪ್ಯುಟಿ ಇನ್‌ಸ್ಪೆಕ್ಟರವರು ಇನ್‌ಸ್ಪೆಕ್ಷನ್ ಬಗ್ಗೆ ಇಲ್ಲಿಗೆ ದಯಮಾಡಿಸಿದ್ದಾಗ್ಗೆ ನಮ್ಮ ಗ್ರಾಮವನ್ನುನೋಡಿ ಬಾಲಕರ ಸಂಖ್ಯೆ ಜಾಸ್ತಿಯಾಗಿದ್ದದ್ದರಿಂದ ಸರ್ಕಾರದವರ ಸಹಾಯದಿಂದ ಒಂದು ಸ್ಕೂಲ್‌ಮನೆ ಕಟ್ಟಿಸಿಕೊಡುವಂತೆ ಅಪ್ಪಣೆಕೊಡಿಸಿದಾರೆ — ನಮ್ಮ ಸ್ಕೂಲ್ ಮಾಸ್ಟರಾಗಿ ಬಂದಿರುವ ಮ॥ ಎಚ್ ಮರೀಗೌಡರು ನಮ್ಮ ಜನಗಳ ವಿಷಯದಲ್ಲಿ ಬಹಳ ಮುತುವರ್ಜಿವಹಿಸಿ ವಿದ್ಯಾಭ್ಯಾಸದ ವಿಷಯದಲ್ಲಿ ಪ್ರೋತ್ಸಾಹಕೊಟ್ಟು ಮಕ್ಕಳನ್ನು ಸ್ಕೂಲಿಗೆ ಸೇರಿಸಿಕೊಡು ನಿಷ್ಪಕ್ಷಹರೂ ದಯಾಪೂರ್ಣಹೃದಯರೂ ಆಗಿ ಕೆಲಸಮಾಡುತ್ತಾರೆ ಹಾಲಿ 13 ಮಂದಿ ಮಕ್ಕಳಿದ್ದು ಸರಾಸರಿ ದಿನವಂ 33 34 ಮಂದಿ ತಪ್ಪದೆ ಹಾಜರು ಬರುತ್ತಾರೆ. ಇನ್ನೂ ಬಾಲಕರ ಸಂಖ್ಯೆ ಹೆಚ್ಚಲು ಅವಕಾಶವಿದೆ ಮುಂದೆಯೂ ನಮ್ಮ ಮಾಸ್ಟರವರು ಮ॥ ಮರೀಗೌಡರು ಈಗಿನಂತೆಯೇ ಶ್ರಮಿಸಿ ಸ್ಕೂಲನ್ನು ಸಾರ್ಥಕಗೊಳಿಸುವರೆಂದು ನಂಬಿದೇನೆ — ಇಲ್ಲಿನ ಪಂಚಮರು ಇತರ ಕಡೆಯವರಂತೆ ಮದ್ಯಪಾನ ಮಾಡತಕ್ಕವರಲ್ಲ ಇದು ಈ ಗ್ರಾಮದ ಪಂಚಮರ ವಿಷಯದಲ್ಲಿ ಆಸೇಯದಿಂದಲೂ ಮೊಲ್ಕಂಡಂತೆ ಮದ್ಯಪಾನ ಮಾಡುವುದಿಲ್ಲವಾದಕಾರಣ ಅವರು ಮುಂದೆ ಅಭಿವೃದ್ಧಿಗೆ ಬರಲು ಅವಕಾಶವಿರುತ್ತೆಂದು ದೃಢವಾಗಿ ಹೇಳುತ್ತೇನೆ — ನಮ್ಮ ಮಾಸ್ಟರು ಮರೀಗೌಡರ ಪ್ರೋತ್ಸಾಹದಿಂದ ನಮ್ಮಗಳ ಮಗ್ಗದ ಕೈಗಾರಿಕೆ ಕಸಬಿನ ಅಭಿವೃದ್ಧಿಗಾಗಿ ಒಂದು ಕೋಆಪರೇಟಿವ್ ಸೊಸೈಟಿ ಏರ್ಪಾಡಾಗುವುದರಲ್ಲಿದೆ ಮತ್ತು ಮದ್ದೂರು ತಾಲ್ಲೂಕು ಕೊಪ್ಪೇರಹಳ್ಳಿ ಪಂಚಮರ ಕೋಆಪರೇಟಿವ್ ಸೊಸೈಟಿಯಂತೆ ಇದೂ ಅಭಿವೃದ್ಧಿಗೆ ಬರುತ್ತೆಂದು ನಿಸ್ಸಂದೇಹವಾಗಿ ನಂಬಿದೇನೆ ಪರಸ್ಪರಸಹಾಯಕಸಂಘಗಳ ಇನ್‌ಸ್ಪೆಕ್ಟರಾದ ಮ॥ ಎಂ ಪುಟ್ಟಸ್ವಾಮಯ್ಯನವರು ನಮ್ಮ ಗ್ರಾಮಕ್ಕೆ ದಯಮಾಡಿ ಸೊಸೈಟಿ ಪ್ರಯೋಜನವನ್ನು ತಿಳಿಯಪಡಿಸಿರುತ್ತಾರೆ

ಇಂಡಿಯಾ ದೇಶದ ವೃತ್ತಾಂತಗಳು.

ಲೇಡಿ ಲೌದರ್ ಎಂಬ ಪುಣ್ಯಸ್ತ್ರೀಯು ಟರ್ಕಿ ರಿಲೀಫ್ ಫಂಡನ್ನು ಪ್ರಾರಂಭಿಸಿ ಯುದ್ಧದ ದೆಸೆಯಿಂದ ಕಷ್ಟ ಸಂಕಟಗಳಿಗೆ ಗುರಿಯಾಗಿರುವ ಟರ್ಕಿಸಂಸಾರಗಳಿಗೆ ಜೀವನ ನಡಿಸುವುದಕ್ಕಾಗಿ ಹಣವನ್ನು ಹಿಂದುಸ್ಥಾನದಲ್ಲಿ ಚಂದಾಎತ್ತಿ ಕಾನ್‌ಸ್ಟಾಂಟಿನೋಪಲ್ ನಗರದಲ್ಲಿ ಇಂಗ್ಲಿಷ್ ರಾಯಭಾರಿಯಾಗಿರುವ ತಮ್ಮ ಗಂಡನ ಹೆಸರಿಗೆ ಕಳುಹಿಸಿಕೊಟ್ಟರು ಈ ರೀತಿ ಆಕೆ ಕಳುಹಿಸಿರುವುದು ರೂ 1,38,647 11 5 ಪೈ ಎಂದು ತಿಳಿಯಲಾಗಿದೆ

* * *

ನಮ್ಮ ವೈಸ್‌ರಾಯರವರ ಪತ್ನೀಯವರು ಡಹಲಿ ನಗರದಲ್ಲಿ ದೇಶೀಯ ಸ್ತ್ರೀಯರನ್ನು ವೇತನಕೊಟ್ಟು ವೈದ್ಯರನ್ನಾಗಿ ತಯಾರು ಮಾಡುವುದಕ್ಕೋಸ್ಕರ ಒಂದು ವೈದ್ಯ ವಿದ್ಯಾಶಾಲೆಯನ್ನು ಸ್ಥಾಪಿಸಿ ಅದು ಶಾಶ್ವತವಾಗಿ ನಡೆಯುವಂತೆ ಮಾಡಬೇಕೆಂದು ಪ್ರಯತ್ನಪಟ್ಟಿದಾರೆ ಈ ವಿದ್ಯಾಶಾಲೆಯ ಫಂಡಿಗೆ ಹಿಂದುಸ್ಥಾನದ ಅನೇಕ ಮಹನೀಯರು ಚಂದಾ ಕೊಡುತ್ತಿರುವರು ಕಳೆದ ವಾರ ಹೈದರಾ

ಬಾದ್ ನೈಜಾಮರವರೂ, ಬರೋಡಾ ಸಂಸ್ಥಾನದ ಮಹಾರಾಜರವರೂ, ಜೋಧಪುರದ ಮಹಾರಾಜರವರೂ, ಕೋಟಾ ಮಹಾರಾಜರವರೂ, ತಲಾ ಒಂದೊಂದು ಲಕ್ಷ ರೂಪಾಯಿನಂತೆ ಚಂದಾ ಕಳುಹಿಸಿಕೊಟ್ಟರೆಂದು ತಿಳಿದುಬಂದಿದೆ

∴

ಹಿಂದಿನ ಶುಕ್ರವಾರ ರಾತ್ರಿ ಕಲ್ಕತ್ತಾ ಪಟ್ಟಣದಲ್ಲಿ ಅಣ್ಣತಮ್ಮಂದಿರಿಬ್ಬರು ಅಕ್ಕತಂಗಿಯರಾದ ಇಬ್ಬರು ಅವಳಿ ಹುಡುಗಿಯರನ್ನು ಮದುವೆಮಾಡಿಕೊಂಡರು ಈ ಮದುಮಕ್ಕಳನ್ನು ಕೂಡಿಸಿ ಕೋಲಿಬಜಾರಿನಲ್ಲಿ ಮೆರವಣಿಗೆ ಮಾಡಿಕೊಂಡು ಹೋಗುತ್ತಿದ್ದಾಗ ಒಂದು ಗುಂಪಿನ ಆಗಸರು ಮೆರವಣಿಗೆಯನ್ನು ತಡೆದು ಗಂಡುಗಳ ತಂದೆಯನ್ನು ಮದುವೆ ಉಡುಗೊರೆ ಕೊಡಬೇಕೆಂದು ಕೇಳಿದರು ಈ ವಿಷಯದಲ್ಲಿ ವಾಗ್ವಾದ ನಡೆಯಿತು ಕಡೆಗೆ ಹೊಡೆದಾಟವೂ ನಡೆದು, ಒಬ್ಬ ಮದುವಣಿಗನ ತಲೆಗೆ ಪೂರಾ ದೊಣ್ಣೆಯ ಏಟು ತಗಲಿ ಅವನನ್ನು ಆಸ್ಪತ್ರೆಗೆ ಸಾಗಿಸಿದರು ಆದರೆ ಅವನಿಗೆ ವಾಸಿಯಾಗದೆ ಆಸ್ಪತ್ರೆಯಲ್ಲಿ ಸತ್ತು ಹೋದನು ಪೋಲೀಸಿನವರು ಆ ದೊಂಬಿಗೆ ಕಾರಣರಾದ ಏಳು ಮಂದಿಯನ್ನು ಹಿಡಿದು ಸೆರೆಯಲ್ಲಿಟ್ಟು ತನಿಖೆ ಮಾಡುತ್ತಿದ್ದಾರೆ

ಸನ್ ೧೮೭೬ ರಿಂದ ೧೯೧೩ ವರೆಗೆ

ಕಾಲದ ಪರೀಕ್ಷೆ !

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 2 29

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಆಕ್ರಮಗಳು ನಾನಾ ತರದ ಕೆಮ್ಮಲು

ಸಕಲವಿಧ ಶೀತಗಳು ಮಾಂಸಖಂಡಗಳ ಕ್ಷೀಣತೆ

ಆಹಾರದಲ್ಲಿ ಅರುಚಿ

ಇದಲ್ಲದೆ ತಾಯಿಗೂ ಮಗುವಿಗೂ ಬಲಕಾರಿಯಾದ ಮತ್ತು ಅಂಗ ಬೆಳೆಸುವ ಸೇವನಾ ಔಷಧವು ಇದೇ

ಕೈಸೋಕದೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

Always get the Emulsion with this mark—the Fishman —the mark of the "Scott" process'

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷದಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೆ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ ಇಂಡಿಯನ್ ಲೈಫ್ ಇನ್‌ಷೂರೆನ್ಸ್ ಕಂಪನೀಸ್ ಆಕ್ಟ್ ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭರವಸೆಯ ಠೇವಣಿ ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೆದಾರರು ಸಾವನ್ನಪ್ಪುವ ಮೊಬಲಗಿಗೆ ಆಗಲಿ ಅಥವಾ ವಿಮೆ ಸಂಘದ ಸ್ಥಿರತ್ವದ ವಿಚಾರದಲ್ಲಾಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಹಿಸಲ್ಪಟ್ಟು ವಿಮೆದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[1017] ಎಸ್ ಕಬ್ಬೂರ್ ಬ್ರಾಂಚ್ ಸೆಕ್ರಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ನಮೂನೆ ಮುಫತ್ತು.

ಕೇಶಕುಸುಮಾಕರ ತೈಲವು.

ಸಾಟಿಯಿಲ್ಲದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸಮಾಡುವದರಲ್ಲಿಯೂ, ಬಟ್ಟತಲೆಯಲ್ಲಿ ಕೇಶವನ್ನು ಬೆಳೆಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ, ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುಡ್ಡಿ ತೈಲ ಕ್ರಯ 10 ಆಣೆ ಮೂರು ಬುಡ್ಡಿಗಳ ತೈಲ ಕ್ರಯ ರೂ 1 12 ಆ ಆರು ಬುಡ್ಡಿಗಳ ತೈಲ ಕ್ರಯ ರೂ 3-4 ಆ ಡಜನ್ ಬುಡ್ಡಿಗಳ ಕ್ರಯ ರೂ 6

ವಿ ಪಿ ಅಂಚೇ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ

[82 12] ಔಷದಾಲಯ, 177 ಚೀನಾ ಬಜಾರ್ ರೋಡ್, ಮದ್ರಾಸು

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 29

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ಪಾರವೆಲ್ಲಾ ಬೇಳಾದವು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಪಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಪಿರಕೆ ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧–೮ ರೂ ೧ ೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಜಾರಿನ ಟೋಪಿಗಳು ೧ ರೂ ೧೨ ಆ ೧ ರೂ ೮ ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೊಸುಗಳ ಟೋಪಿ, ಪೂರ್ತಿ ಮೇಜೋಡು ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ -

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ ಹಾಸನ

ಇಮಿಟೇಷನ್ ವಜ್ರದ ಒಡವೆಗಳು

ಹೊಸದಾಗಿ ಸೀಮೆಯಿಂದ ತರಿಸಿರುತ್ತೆ

ಇಮಿಟೇಷನ್ ವಜ್ರದ ಬೆಂಡೋಲೆಯನ್ನು ಈಗತಾನೇ ವಿಲಾಯತಿಯಿಂದ ತರಿಸಿರುತ್ತೇವೆ ಇದು ಉತ್ತಮವಾದ ವಜ್ರದ ಓಲೆಯಲ್ಲಿರುವ ಸೀಗೋಟಿ



ದನೆ ಕೂಡಿ ಬಹಳ ದಿನಗಳು ಕೆಡದೆ ಅತ್ಯಂತ ಪ್ರಕಾಶವಾಗಿರುತ್ತೆ ಇದನ್ನು ಧನವಂತರೂ ಕೂಡ ವಜ್ರದ ಓಲೆಗೆ ಬದಲಾಗಿ ಉಪಯೋಗಿಸುತ್ತಾರೆ ಇವಕ್ಕೆ ಅನೇಕವಾಗಿ ಗಿರಾಕಿಗಳು ಬರುತ್ತಿರುವುದರಿಂದ ಬೇಕಾದವರು ಜಾಗ್ರತೆ ತರಿಸಿಕೊಳ್ಳಬೇಕು. ಜೊತೆ 1ಕ್ಕೆ ಬೆಲೆ ರೂ 1 12 0 ಇದೇ ಕಲ್ಲಿನಿಂದಲೇ ಜತ್ತುಕಡಕು, ಬೇಸರಿ, ಕುರುಟುಬಾವಲಿ ಮೊದಲಾದವು ಸಿದ್ಧವಾಗಿವೆ ಹತ್ತುಕಡಕು ಜೊತೆಗೆ ರೂ 1 8 0 ಬೇಸರಿಗೆ 12 ಆಣೆ ಕುರುಟುಬಾವಲಿ ಜೊತೆಗೆ ರೂ 2, ಮೂಗುಬೊಟ್ಟಿಗೆ 6 ಆಣೆ ಪದಕ ಸಹಿತವಾದ ನಾಲ್ಕು ಎಳೆ ಮುತ್ತಿನ ಕಂಠಿಗೆ ರೂ 1 8 0 ಪದಕವಿಲ್ಲದ ಹಾರಕ್ಕೆ 12 ಆಣೆ [1-2 3]

ಜಂಟಲ್‌ಮನ್ ಲೀವರ್ ವಾಚು ಕ್ರಯ ರೂ 1 15 0

ಲೇಡೀಸ್ ಸಿಲ್ವರ್ ವಾಚ್ ಕ್ರಯ ರೂ 3 8-0

ಅಚ್ಚ ಕರಿಬಣ್ಣದ ಮೂರುಚೆಕ್ಕೆಯ ಮಧುರೆ ಚುಂಗಡಿ ಸೀರೆಗಳು — ಅವಲ್ ರಕಂ ಕ್ರಯ ರೂ 3 6-0 ದುಯಂ ರಕಂ ಕ್ರಯ ರೂ 3 3-0

ವಿಳಾಸ ಬಿ ಶೇಷಾ ಅಂಡ್ ಬ್ರದರ್ಸ್,

ನಂಬರ್ ೧೨ ಸೆಂಟ್ ಥಾಮಸ್ ಮೌಂಟ್ ಪೋಸ್ಟ್,

ಮದರಾಸ್.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 4 ಆಣೆ



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾಗಲ್ಪಟ್ಟಿದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಲೆ ಗಿರಾಕಿಗಳು ಖರೀದಿಸಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ ಕೂಡ್ಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪನಿ

[12] ಪೋಸ್ಟ್ ಬಾಕ್ಸ್, ನಂ 167 ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ

ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್‌ಸೇಷನ್ ಬ್ಯಾಲನ್ಸು ಬಹು ಬಲಿಷ್ಠವಾದ ೫ ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 5 ೦ ೦ ಇದನ್ನು ಸೆಪ್ಟಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ ೪೦ ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ದನಲಕ್ಷ್ಮಿ ಅಂಡ್ ಕಂಪೆನಿ,

[12 4] ಸಾಹುಕಾರ್ ಪೇಟೆ ಪೋಸ್ಟು, ಮದರಾಸು

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ ಎಂದರೆ, ನಿನಗೆ ಯಾವ ನೋವೆ ಉಂಟಾಗಿರಲಿ ನಿನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೋ ಎಂದು ನಿನ್ನನ್ನು ನೀನೇ ಕೇಳಿಕೊ,

(೧೨ ಆಣೆ ಬುಡ್ಡಿ ಪರಿಮಾಣ)

ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು ಮಲವೆಂದರೆ ಬಿಸುಡಿದ ಅರ್ಥವೇನೆ ಪರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ ಪಿತ್ತ ಪಿತ್ತಜ್ವರ ಅಜೀರ್ಣ ಅಗ್ನಿಮಾಂದ್ಯ ಗಾಬರಿ, ಅಶಕ್ತಿ, ಎದೆಯು ತಲ್ಲಣಿಸುವುದು ತಲೆತಿರುಗುವುದು ತಲೆನೋವು ಹೊಟ್ಟೆಯುಬ್ಬರ, ಹುಳಿತೇಗಿನ ಹೊಟೆನೋವು ಹಂಗಸರ ವ್ಯಾಧಿಗಳು ಇವೆ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಶವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [13 15]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ಮೂರರಷ್ಟು ಹೆಚ್ಚು ಮಾತ್ರೆಗಳಿರುವುವು ಔಷದಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುದು, ಅಥವಾ ಡೋನ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಲಿವೆ

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕ್ಕಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ Messrs OAKES & Company, Mount Road, Madras.

[4-37] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H Gulliford, Proprietor and Manager Wesleyan Mission Press Mysore 17/7/1913

Superior Watch Company.,

Post Box No 167. Madras. E.

ಸುಪೀರಿಯರ್ ವಾಚ್ ಕಂಪೆನಿ ಪೋಸ್ಟ್‌ಬಾಕ್ಸ್ ನೆಂ 167 ಮದರಾಸ್ ಇ

ನಮ್ಮ ಕಂಪೆನಿಯಲ್ಲಿ ಸಾಮಾನುಗಳು ತರಿಸಿಕೊಳ್ಳುವವರು ಕಳುಹಿಸುವ ಕಾಗದಗಳು ಮಣಿಯಾರ್ಡರುಗಳು ಚೆಕ್ಕು ಮೊದಲಾದವುಗಳನ್ನು ಈಕಳಗೆ ನಮೂದಿಸಿರುವ ಅಡ್ರಸ್ಸಿಗೆ ಕಳುಹಿಸತಕ್ಕದ್ದು

ಸೂಚನೆ ನಾವು ಬಹುಕಾಲದಿಂದ ವಾಚುಗಳ ವ್ಯಾಪಾರದಲ್ಲಿ ವಿಶೇಷ ಅನುಭವವುಳ್ಳವರಾಗಿರುವುದರಿಂದ ಬೆಲೆಗೆ ತಕ್ಕ ಶ್ರೇಷ್ಠವಾದ ನಮ್ಮ ಕಂಪೆನಿ ವಾಚುಗಳನ್ನು ಬಿಕರಿಮಾಡಿ ಅನೇಕರಿಂದ ಸಂತೋಷಪೂರ್ವಕವಾದ ಯೋಗ್ಯತಾಪತ್ರಗಳನ್ನು ಪಡೆಯುತ್ತಾ ಬಂದಿದ್ದೇವೆ ಈ ವಾಚುಗಳನ್ನು ಕೊಂಡುಕೊಳ್ಳುವುದರಿಂದ ಪದೇಪದೇ ರಿಪೇರಿಮಾಡಿಸಿ ಹಣವನ್ನು ಕಳೆದುಕೊಳ್ಳುವುದು ತಪ್ಪುತ್ತೆ ನಮ್ಮ ಪದಾರ್ಥವನ್ನು ನಾವೇ ಪ್ರಶಂಸಿಕೊಳ್ಳುವುದಕ್ಕಿಂತ ವಾಚಕರು ಒಂದುಸಾರಿ ನಮ್ಮಿಂದ ತರಿಸಿ ಪರೀಕ್ಷಿಸಿದಲ್ಲಿ ಸ್ವತಃ ವೇದ್ಯವಾಗುವುದಲ್ಲದೆ ಅವರೇ ತಮ್ಮ ಸ್ನೇಹಿತರಿಗೂ ನಮ್ಮ ವಿಷಯದಲ್ಲಿ ಶಿಫಾರಸುಮಾಡುವರೆಂದು ಸಂಶಯವಿಲ್ಲದೆ ಹೇಳಬಲ್ಲೆವು ಅಲ್ಪಕ್ರಯದ ಗಡಿಯಾರವನ್ನು ಕಳುಹಿಸುತ್ತಾರೆಂದು ತಿಳಿಯಬೇಡಿರಿ ವ್ಯಾಪಾರದ ವಿಷಯದಲ್ಲಿ ನಂಬುಗೆಯನ್ನು ಸಂಪಾದಿಸಿಕೊಳ್ಳಬೇಕೆಂಬುವುದೇ ನಮ್ಮ ಮುಖ್ಯೋದ್ದೇಶವಾಗಿದೆ ಪತ್ರವ್ಯವಹಾರಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಬರೆಯಬೇಕು

ಇದನ್ನು ಗಡಿಯಾರ ತರಿಸಿಕೊಳ್ಳುವವರಿಗೆ ಅಧಿಕಲಾಭವನ್ನು ಹೊಂದುವರು

ರೈಲ್ವೆ ಲೀವರ್ ಸ್ವಿಸ್ ಮೇಕರ್ ಕಂಪುಗಳು ಯಿಟ್ಟ ನಿಕ್ಕಲ್ ಬೆಳ್ಳಿ ಗಡಿಯಾರ

ಈಗಡಿಯಾರ ತರಿಸಿಕೊಳ್ಳುವವರಿಗೆ 100 ಸಾಮಾನುಗಳು ಯಿನಾಂ ಕೊಡುವವು ಇದರ ಬೆಲೆ ರೂ 6 0 0

2 ವರುಷಗಳು ಗ್ಯಾರಂಟು ಕೊಡಲ್ಪಡುವುದು ತ್ವರೆಮಾಡಿರಬೇಕು

ಮಿತ್ರರೇ ಈಗಡಿಯಾರವು ಸೀಮೆಯಲ್ಲಿ ಬಹುಮೇಲಾದ ಸಾಮಾನುಗಳಿಂದ ತಯಾರಿಸಿ ತರಿಸಿರುತ್ತೆ ಯಿದನ್ನು ನೋಡಿದರೆ ಪ್ರತಿಯೊಬ್ಬರೂ ಅವಶ್ಯಕವಾಗಿ ತೆಗೆಯತಕ್ಕದ್ದು ರೈಲ್ವೆ ಲೀವರ್ ಸ್ವಿಸ್ ಮೇಕರ್ ಕೆಂಪುಗಳುಯಿಟ್ಟ ನಿಕ್ಕಲ್‌ಬೆಳ್ಳಿ ಗಡಿಯಾರಗಳು ಬಹುಮೇಲಾದ್ದೆಂದೂ ಶ್ರೇಷ್ಠವಾದದ್ದೆಂದೂ ಲೋಕಕ್ಕೆಲ್ಲವೂ ತಿಳಿದಸಂಗತಿಯೇ ಅದರ ಎಲ್ಲಾ ಸಾಮಾನುಗಳೂ ಗಟ್ಟಿಯಾದ ಗಿಲೀಟ್ ಮಾಡಲ್ಪಟ್ಟವು ಬಲವಾದ ಲಿವರುಗಳುಂಟು ಕೆಂಪುಗಳು ಕೆತ್ತಿ ನಮ್ಮ ಬ್ಯಾಲೆನ್ಸ್ ಯಿಟ್ಟು ಎಂದಿಗೂ ಸವೆಯದಂತೆ ಬಹಳಮಜಬೂತಾಗಿ ರಚಿಸಲ್ಪಟ್ಟಿದೆ ಆದಕಾರಣ ಯಿದು ಸರ್ವರಿಗೂ ಅನುಕೂಲವಾದುದೆಂದು ನಾಯದಾರಾಳವಾಗಿ ಗ್ಯಾರಂಟಿಮಾಡಿ ಹೇಳಬಲ್ಲೆವು ಅದರ ಮುಖದ ಡೈಲುಮಿಂಚುವ ಎನಾಮಲ್ಲಿನಿಂದ ಮಾಡಿ ಮುದ್ದಾದ ಅಂಕಿಗಳಿಂದ ರಮ್ಯವಾಗಿ ಕಾಣುವಂತೆ ಮಾಡಲ್ಪಟ್ಟಿದೆ ಈವಾಚಿನ ಹಿಂಭಾಗದ ಮುಚ್ಚಳದಮೇಲೆ ರೈಲ್ವೆ ಯಿಂಜನ್‌ಮಾರ್ಕ್ ಯಿಟ್ಟಿರುತ್ತೆ



ನಮ್ಮ ರೈಲ್ವೆ ಲೀವರ್‌ಗಡಿಯಾರವು ಬಹುಳ ಮೇಲಾಗಿಯೂ ಸುಂದರವಾಗಿಯು ಯಿರುವುದು ಯಿದು ವೇಗವಾಗಿ ಓಡುವ ಕುದುರೆ ಕಾಲಿಗೆ ಕಟ್ಟಿ ವಾಯುವೇಗದಿಂದ ಸವಾರಿಮಾಡಿದಾಗ್ಯೂ ನಮ್ಮ ಗಡಿಯಾರವು ಯಾವಾಗ್ಯೂ ನಡಿಯತಕ್ಕದ್ದು

100 ಯಿನಾಂ ಸಾಮಾನುಗಳ ವಿವರ

ಸೀಳ್ ಬೆಲ್ಟು 1 ದೊಡ್ಡದನ್ನು ಚಿಕ್ಕದಾಗಿ ತೋರಿಸುವ ಭೂತಕನ್ನಡಿ 1 ವಾಸನೆಯಾದ ಅತ್ತರ್‌ಬಿಲ್ಲೆ 1 ಉನ್ನತವಾದ ಫಂಗರ 2 ಸೀಮೆಕತ್ತರಿ 1 ಸೀಮೆಯಬೀಗ ಕೈಸಹಾ 2 ಗಡಿಯಾರಸರಪಣಿ 1 ಸೀಮೆದಚಾಕು 1, ಉತ್ತರಮುಖಿ 2 ಕೈವಸ್ತ್ರ 2 ಸ್ಪ್ರಿಂಗ್ ಎಂಬ ಚಂಚಾ 1 ಮೇಲಾದ ಬೀಗದಕೈಬಿಲೆ 2 ರೂಪಾಯಿಗಳನ್ನು ಹಾಕಿಕೊಳ್ಳುವ ತೊಗಲಿನಜೇಬು 2 ಪಾಕೆಟ್ಟಡೈರಿ ನೋಟುಬುಕ್ಕು 1, ಫೋಟಗ್ರಾಫ್ ಪಟ 1, ಷರಟುಗುಂಡಿಗಳ ಸೆಟ್ಟು 1, ರೋಸ್‌ಸೋಪು 2 ವಾಸನೆಯುಳ್ಳ ಸಂಟುಸೀಸೆ ಆಭರಣಗಳು ಇಡತಕ್ಕ ಚಿತ್ರದಸೀಮೆಯದಬ್ಬಿಗಳು 12 ಗಡಿಯಾರಸರಪಣಿಯಲ್ಲಿ ಹಾಕತಕ್ಕ ಲಾಕೆಟ್ 1 ಗಡಿಯಾರವು ಚಿಕ್ಕತೊಗಲಿನಜೇಬು 1 ಗಡಿಯಾರಪಟ್ಟಿಗೆ 1 ಗಡಿಯಾರಮೇನ್ ಸ್ಪ್ರಿಂಗು 1 ಗಡಿಯಾರಕನ್ನಡಿ 1 ದಂತದ ಬಾಚಣಿಗೆ 1 ಪೆನ್ಸಲು 2 ಸೀಮೆಯಜಡೆಹೂವು 1 ಗಡಿಯಾರಕ್ಕೆಹಾಕುವ ಪರೇಷ್ಮಧಾರ 1 ಮುಖನೋಡಿಕೊಳ್ಳುವಕನ್ನಡಿ 2 ಆರುಕೋಟುಗುಂಡಿಗಳಸೆಟ್ಟು 1 ಸ್ತ್ರೀಗಳುಧರಿಸುವ ಗಿಣಿಗಳು 12, ಸ್ಕೇಲು ಗಿಬ್ಬನ್‌ಗಳು 12 ಸೀಮೆಪೆನ್‌ಹೋಲ್ಡರ್ 3 ನಿಕ್ಕಲ್‌ಬೆಳ್ಳಿಬಿಗಿಲ್ 2 ಪೋಷ್ಟುಕಾರ್ಡು 20 ಇಷ್ಟುಕೂಡಿ 100 ಸಾಮಾನುಗಳು ಬಹುಮಾನಹಾಗಿ ಕಳುಹಿಸಲ್ಪಡುವು ಇನಾಂಸಹಿತ ಗಡಿಯಾರ 1-ಕ್ಕೆ ಬೆಲೆ 6 0 0

ರೈಲ್ವೆ ಗಾರ್ಡ್ ಲೀವರ್ ಗಡಿಯಾರ 5 ವರುಷಕ್ಕೆ ಗ್ಯಾರಂಟಿ

ಗಡಿಯಾರವು ಸರಪಣಿಸಮೇತ ಕ್ರಯ ರೂ 2 8 0

ಈಗಡಿಯಾರವು ಪೂರ್ವದಲ್ಲಿ ರೂ 5—0—0ಗೆ ಮಾರುತ್ತಾಯಿದ್ದದ್ದು ಯಿವಾಗಬೆಲೆ ರೂ 2 8—0 ಗೆ ವಿಕ್ರಯಸುತ್ತೇವೆ ಯಿಾ ಗಡಿಯಾರವನ್ನು ರಯಿಲ್ವೇ ಉದ್ಯೋಗಸ್ತರೂ ಗಾರ್ಡುಗಳೂ ಸರ್ಕಾರು ಉದ್ಯೋಗಸ್ತರುಗಳು ಯಿನ್ನೂ ಅನೇಕರೂ ಅಪೇಕ್ಷಿಸಿ ಒಹಳವಾಗಿ ಖರ್ಚಿರುವದರಿಂದ, ನಾವು ವಿಶೇಷವಾಗಿ ಸಾವಿರಾರು ತರಿಸಿರುವ ಕಾರಣ ಯಿಾ ಕಮ್ಮಿಕ್ರಯಕ್ಕೆ ಕೊಡಲ್ಪಡಯುತ್ತೆ ಯಿಾ ಗಡಿಯಾರವನ್ನು ಜೇಬಿನಲ್ಲಿ ಯಿಟ್ಟುಕೊಂಡು ಯೆಷ್ಟುದೂರ ಓಡಿದಾಗ್ಯೂ ಕುದುರೆ, ಬಂಡಿ ಮೊದಲಾದವುಗಳು ಸವಾರಿಮಾಡಿದಾಗ್ಯೂ, ಮತ್ತು ಯಿಾ ಗಡಿಯಾರವು ಕೈತಪ್ಪಿ ನೆಲದಮೇಲೇ ಬಿದ್ದಾಗ್ಯೂ ಕೆಡುವದಿಲ್ಲ



ROSKOPF LEAVER WATCH

ರಾಸ್‌ಕೋಪ್ ಸಿಸ್ಟಂ ಲೀವರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2 4 0 ಮಾತ್ರ ವರುಷಗಳು ಗ್ಯಾರೆಂಟಿ

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರುಮಾಡಲ್ಪಟ್ಟದ್ದು ನೋಡುವದಕ್ಕೆಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ ಕೂಡಲೆ ಬರೆದು ತರಿಸಿಕೊಳ್ಳಿರಿ



ಯಿಾ ಗಡಿಯಾರ ಕ್ರಯ 1 ಕ್ಕೆ ಸರಪಣಿಸಮೇತ 2 4 0

ಟ್ರಾಂವೆ ರಿಗುಲೇಟರ್ ನೂತನ ಗಡಿಯಾರ

ಸುಂದರವಾದ ಸರಪಣಿಸಮೇತ ಇದರ ಕ್ರಯ ರೂ 1 12 0

3 ವರ್ಷಗಳ ಗ್ಯಾರಂಟಿ ಕೊಡಲ್ಪಡುತ್ತೆ

ಈ ಗಡಿಯಾರವು ನೂತನವಾಗಿ ತಯಾರುಮಾಡಲ್ಪಟ್ಟದ್ದು ನೋಡುವದಕ್ಕೆ ಬಹು ಸುಂದರವಾಗಿಯೂ ಇರುತ್ತೆ ಧನವಂತರುಬಿಳಿಗಳು ಮೊದಲಾದವರು ತರಿಸಿಕೊಳ್ಳುವದಕ್ಕೆ ಅನುಕೂಲವಾಗಿ ಬೆಲೆ ಸರಸವಾಗಿ ವಿಕ್ರಯ ಮಾಡುವರೆ ಇದರ ಟ್ರಾಂವೇ ಮಾರ್ಕು ಗಮನಿಸಿ ತರಿಸಿಕೊಳ್ಳಬೇಕು ಸರಿಯಾದಕಾಲವನ್ನು ನಡಿಯುತ್ತೆ ಒಂದನ್ನು ಪರೀಕ್ಷಿಸಿನೋಡಿದಲ್ಲಿ ಇದರ ನಿಜತ್ವವು ವ್ಯಕ್ತ ಪಡುತ್ತೆ. ತ್ವರೆಮಾಡಿ ತರಿಸಿಕೊಳ್ಳಬೇಕು



Rs. 1-12-0

ಇದರ ಕ್ರಯ ರೂ 1-12-0

Burma Time Piece

ಬರ್ಮಾಟೈಂಪೀಸು ದೊಡ್ಡ ಗಡಿಯಾರ

ಯಿದರಕೆಲಸ ಬಹುಕಾಲ ಬಾಳಿಕೆ ಯಿರುವಂತಾದ್ದು ನೋಡುವದಕ್ಕೆ ಬೆಳ್ಳಿಯತೆಯೇ ಥಳಥಳಿಸುವದು ದೊಡ್ಡದಾಗಿರುವ ದರಿಂದ ದೂರದಲಿದ್ದಲೇ ಕಾಲವನ್ನು ತಿಳಿದುಕೊಳ್ಳಬಹುದಾಗಿದೆ ಅಮೇರಿಕಾ ದೇಶದಲ್ಲಿ ಹೊಸದಾಗಿ ತಯಾರಿಸಿ, ಬಂದಿರಲ್ಪಟ್ಟಿದೆ ಯಿದು ಯೆಂದಿಗೂ ಕೆಡುವದಿಲ್ಲ ಆಯಿದು ವರುಷಕ್ಕೆ ಒಂದುಸಾರಿ ಯಿದನ್ನು ಬಿಚ್ಚಿ ಯೆಣ್ಣೆಹಚ್ಚಿ ಮುಚ್ಚಿಬಿಡಬಹುದು ಯೆಂತಾ ಘಟ್ಟಿಯಾದ



ಸಾದಾ ಬರ್ಮಾಟಯಿಂಪೀಸ್ 1 ಕ್ಕೆ ಕ್ರಯ	1 4 0
ಅಲಾರಂ 1 ಕ್ಕೆ ಕ್ರಯ	1 12 0
ತಾರೀಖುತೋರಿಸುವ ಟೇಬಲ್‌ಅಲಾರಂಗಡಿಯಾರ 1 ಕ್ಕೆ	2 9 0

CARRIAGE CLOCK.

ಗಂಟೆ ಹೊಡಿಯುವ ಕ್ಯಾರೇಜ್ ಕ್ಲಾಕು ಗಡಿಯಾರ

ವಿನೋದವಾದ ಯಿಾಗಡಿಯಾರ ಅರ್ಧ ಗಂಟೆಗೆ ಒಂದುಸಾರಿ ಗಂಟೆಗೆ ಒಂದುಸಾರಿ ಗಂಟೆ ಹೊಡಿಯುವದು ಮತ್ತು ಅಲಾರಂಬಾರಿಸುವದು ಯಿನ್ನೂ ಇತರವಾದ್ಯಗಳುಸಹಾ ಕೇಳುವವರಿಗೆ ಕರ್ಣಾನಂದವಾಗಿಬಾರಿಸುವದು ಯಿದಲ್ಲದೆ, ಯಿಾ ಗಡಿಯಾರವು ಮೆಟ್ಟಿನೋಡದೆ ಯೆಂತಾಸ್ಥಳದಲ್ಲಿ ಯಿಟ್ಟಾಗ್ಯೂ ನಿಲ್ಲದೇ ನಡಿಯುತ್ತಲಿರುವದು ಸರಿಯಾದ ಕಾಲವನ್ನು ತೋರಿಸುವದು, ಕೆಲವು ಗಡಿಯಾರಗಳು ಮೆಟ್ಟಿ ನೋಡಿಯಿಟ್ಟರೇ ಹೊರತು ನಡಿಯುವದಿಲ್ಲಾ, ಯಿದು ಹಾಗಿಲ್ಲದೇ ಯಿರುವದರಿಂದ, ಸರ್ವರೂ ಯಿಾ ಗಡಿಯಾರವನ್ನು ತಮ್ಮ ತಮ್ಮ ಮನೆಗಳಲ್ಲಿ ಅವಶ್ಯಕವಾಗಿ ಒಂದೇ ಯಿಡತಕ್ಕದ್ದಾಗಿರುವದು ಯಿದರಬೆಲೆಯು ಯಿವಾಗಿನ ಕಾಲದಲ್ಲಿ ಕಮ್ಮಿಯಾಗಿ ಯಿರುವದು



ಘಂಟೆ ಅರ್ಧಘಂಟೆ ಹೊಡೆಯುವದು	4-12-0
,, ಮತ್ತು ಅಲಾರಂ	5-4-0
ಒಂದುವಿಧವಾದ ವಾದ್ಯ ಬಾರಿಸುವದು	6-0-0

DEFYALL WATCH.

ಡೆಫಿಯಾಲ್ ಎನ್ನುವ ಲೀವರ್ ಸ್ವಿಸ್ ಮೇಕರ್ ಗಡಿಯಾರ

ಯಿಾ ಗಡಿಯಾರವು ಚಿಕ್ಕ ಸೈಜಾಗಿಯು ನೋಡುವದಕ್ಕೆ ಬಹುಅಂದವಾಗಿಯು ಯಿರುವದು ಹತ್ತು ಸಾವಿರಗಡಿಯಾರಗಳನ್ನು ಯಿವಾಗಲೇ ತರಿಸಿರುವದರಿಂದ ನಾವು ಜನಗಳಿಗೆ, ಸಂತೋಷಪಡಿಸಬೇಕೆಂದು ಲಾಭವಿಲ್ಲದಲೇ ಕಮ್ಮಿ ಕ್ರಯಕ್ಕೆ ಮಾರತ್ತೇವೆ ಬೇಕಾದವರು ಶೀಘ್ರದಿಂದ ಆರ್ಡರ್‌ಕೊಟ್ಟು ತರಿಸಿಕೊಳ್ಳಬಹುದು ಕಾಲತಾಮಸವಾದರೆ ಸಂತರಾದೊರಿಯುಲಾರದು



ಯಿದಕ್ಕೆ ಬೆಲೆ ಸರಪಣಿಸಮೇತ ರೂ 2-0 0

ಕೈಯಲ್ಲಿ ಧರಿಸಿಕೊಳ್ಳುವ ಲೇಡೀಸ್ ಗಡಿಯಾರ

ಇದು ಕೈಯಲ್ಲಿ ಕಟ್ಟಿಕೊಳ್ಳುವದಕ್ಕೆ ಉಪಯೋಗವಾದದ್ದು ಈಗಡಿಯಾರದ ಅನುಕೂಲವು ವರ್ಣಿಸುವದಕ್ಕೆ ಸಾಧ್ಯವಿಲ್ಲ ಯಾಕೆಂದರೆ ಸ್ತ್ರೀ ಪುರುಷರುಗಳೂ, ಬಾಲಕರೂಸಹ ಕುದುರೆ, ಬೈಸಿಕಲ್ ಮೋಟಾರ್ ಮುಂತಾದ ವೇಗವಾದ ಸವಾರಿಮಾಡುವ ಕಾಲದಲ್ಲಿ ಜೇಬಿನಿಂದ ಘಡಿಯಾರ ತಗದು ನೋಡುವದಕ್ಕೆ ಸಾವಕಾಶವಾಗುತ್ತೆ ಯಿದನ್ನು ಕೈಯಲ್ಲಿ ಕಟ್ಟಿಕೊಂಡರೆ ಸುಖವಾಗಿನೋಡಿಕೊಳ್ಳಬಹುದು ಈ ಘಡಿಯಾರದಮೇಲೆ ಸ್ಪಟಿಕದ ಬೆಲ್ಲಿಕನ್ನಡಿಯಿಂದ ಮುಚ್ಚಲಿಟ್ಟು ಬಿಗಕೊಡಲು ಸುಲಭವಾಗಿಯಿದೆ ಯಿಷ್ಟವಿದ್ದಾಗ ಕೈಯಲ್ಲಿ ಕಟ್ಟಿಕೊಳ್ಳಬಹುದು ಮತ್ತು ಜೇಬಿನಲ್ಲಿ ಯಿಟ್ಟುಕೊಳ್ಳಬಹುದು ಯಿದು ನಾಜೂಕಾಗಿ ಮಜಬೂತಾದ ಸಾಮಾನುಗಳಿಂದ ತಯಾರಿಸಿದ್ದು



ನಿಕ್ಕಲ್ ಸಿಲ್ವರ್ ಲೇಡೀಸ್ ಗಡಿಯಾರ ಕ್ರಯ	3-12-0
ಸ್ವಚ್ಛಬೆಳ್ಳಿಯ ಲೇಡೀಸ್ ಗಡಿಯಾರ ಕ್ರಯ	4-12-0

1-ಕ್ಕೆ ಕೈಯಲ್ಲಿ ಕಟ್ಟಿಕೊಳ್ಳುವ ಚರ್ಮದಪಟ್ಟಿ ಇನಾಂ

ಬೆಂಡಿನಿಂದ ತಯಾರಿಸಿರುವ ಜಡೆವಲ್ಲಿಗೆ ಹೂವು ಕುಚ್ಚು.

ಈ ಜಡೆಹೂವುಗಳು ಹೊಸದಾಗಿ ಬೆಂಡುಯನ್ನುವ ಬಹು ಹಗುರವಾದ ವಸ್ತುವಿನಿಂದ ತಯಾರಿಸಲ್ಪಟ್ಟಿವೆ. ನೋಡುವ ಪಕ್ಕೆ ನಿಜವಾದವು ಲ್ಲಿಗೆ ಗೊಂಚಲಿನಂತೆಯೇ ಇರುತ್ತೆ ಬೆಂಡಿನಿಂದ ಮಾಡಿದ್ದೆಂದು



ಹೇಳುವುದು ಅಸಾಧ್ಯ ಪ್ರತಿಗುತ್ತಿಯಲ್ಲಿಯೂ ಮೇಲುಭಾಗದಲ್ಲಿ ೨ ಅಥವ ೩ ಸಾಲುಹೂವುಯಿಟ್ಟು ಕೀಳುಭಾಗದಲ್ಲಿ ತರಹವಾರಿ ಬಣ್ಣಗಳ ನೂಲಿನಿಂದ ಜಡೆಯಂತೆ ಹಣದು ಅದರಲ್ಲಿ ರಸದ ಗುಂಡುಮುತ್ತುಗಳು ಯಿಟ್ಟಿರುತ್ತವೆ. ನೋಡುವದಕ್ಕೆ ಬಹು ಸುಂದರವಾಗಿಯೂ ಗಂಭೀರವಾಗಿಯೂ ಯಿರುವುದು ಇದನ್ನು ಸ್ತ್ರೀಗಳು ಬಾಲರು ಬಾಲಿಕೆಯರೂ ನಾಟಕವೇಷಧಾರಿಗಳೂ ಧರಿಸಬಹುದು ಬಹು ನಾಜೂಕಿನಿಂದ ಉಪಯೋಗಿಸಬೇಕು ರಾತ್ರಿ ಮಲಗುವಾಗ ತೆಗೆದಿಟ್ಟು ಮಲಗಬೇಕು

ಇದರ ಬೆಲೆ 3 ವರಸೆಯುಳ್ಳದ್ದು 1-ಕ್ಕೆ ರೂ 6 ಆಣೆ

,, 2 ವರಸೆಯುಳ್ಳದ್ದು 1-ಕ್ಕೆ ರೂ 4 ಆಣೆ

ಮುಖ ನೋಡಿಕೊಳ್ಳುವ ಕನ್ನಡಿಗಳು.

ಈ ಕನ್ನಡಿಯು ಮಿದಕ್ಕೆ ಸರಿಯಾದ ಒಂದುವಿಧ ರಸವನ್ನು ಸೇರಿಸಿ ಜಾಗ್ರತೆ ಮಂತ ಕೆಟ್ಟುಹೋಗದಂತೆ ಆನೆದಂತದ ಒಂದು ನಮೂನೆ ಕೈಪಿಡಿಯನ್ನು ಹಾಕಿಸಿ "ಯಾಪವಾಶ್ಲೀಕ್" ಬಣ್ಣದಿಂದ ತಯಾರಾಗಿ ಸಿದ್ಧವಾಯಿಂದು ಇರುತ್ತೆ. ಇದನ್ನು ಕೈಯಲ್ಲಿ ಹಿಡಿಯಲು ಮನಸ್ಸಿಗೆ ಲಕ್ಷ್ಯ ಹರುಷವನ್ನುಂಟುಮಾಡುವ ಕೆಲವು ಕನ್ನಡಿಗಳಲ್ಲಿ ಕಾಣುವಂತೆ ವಿಕಾರವೂ ದೊಡ್ಡ ಮುಖವೂ ನೀ



ಲವರ್ಣವೂ ಇಂಥಾ ದುರ್ಲಕ್ಷಣಗಳು ಯಿಲ್ಲದೆ ಸರಿಯಾನ ಅವರವರ ಭಾವದ ಆಕಾರವನ್ನು ತೋರಿಸಿ ಅಸಹ್ಯವಿಲ್ಲದಂತೆ ಮಾಡುವಕ್ತೆ ಈ ಕನ್ನಡಿಯಲ್ಲಿಟ್ಟು ತಯಾರಿಸಿ ಯಿರುವದು ಇದರಲ್ಲಿ ಎರಡುವಿಧವಿರುತ್ತೆ ಬೆಳ್ಳಿ ನಮೂನೆಯಾಗಿಯೂ ಬಾಪಾಲಿನ ಮೂನೆಯಾಗಿಯೂ ಯಿರುತ್ತೆ ಇದು ಒಂದುಸಮಯ ಕೈತಪ್ಪಿ ಕೆಳಗೆಬಿದ್ದಾಗ್ಯೂ ಅಷ್ಟು ಬೇಗನೇ ಬಿಡುಯಲಾರದು

ಇದರ ಬೆಲೆ 1-ಕ್ಕೆ ಕ್ರಯ 8 ಆಣೆ

ನಾ ಲ್ಕು ಬಿ ಲ್ಲೆ ಗ ಳ ಕ ನ್ನ ಡ ಕ ಗ ಳು

ಈ ಕನ್ನಡಕಗಳನ್ನು ಚಿಕ್ಕವರೂ ದೊಡ್ಡವರೂ ಸಹ ಉಪಯೋಗಿಸಬಹುದು ಇವು ಕಣ್ಣುಗಳಿಗೆ ಬಹಳ ತಂಪಾಗಿ ಇರುವುದು ಸುಂಬವಾಗಿ ಲೋಕದಲ್ಲಿ ಅನೇಕರು ಉಪಯೋಗಿಸಿ ಕೊಂಡಿರುವುದು



ಎಲ್ಲರಿಗೂ ತಿಳಿದವಿಷಯವೇ ನಾವು ಇದರವಿಷಯವಾಗಿ ಬರಯಬೇಕಾದ್ದು ಅನಾವಶ್ಯಕ ಇದನ್ನುಪಯೋಗಿಸುವುದರಿಂದ ಕಣ್ಣುಗಳಿಗೆ ಬಿಸಲಿನ ಝಳವಿಲ್ಲದ ಹಾಗೂ ಧೂಳು ಮಣ್ಣು ಬಂದು ಸೇರಿಕೊಳ್ಳದ ಹಾಗೂ ಕಣ್ಣುಗಳು ಶುದ್ಧವಾಗಿರುವದು ಇದರ ತಂತಿಗಳೂ ಯಾವಾಗಲೂ ಬೆಳ್ಳಿಯಹಾಗೆ ಬೆಳ್ಳಗಿರುತ್ತೆ ಇದರಲ್ಲಿ ಹಸರೂ. ಊದಾ, ನೀಲಿ, ಬೂದಿಬಣ್ಣ ಮೇಘವರ್ಣವೇ ಮೊದಲಾದ ನಾನಾವಿಧಗಳುಂಟು

ಪಕ್ಕ ೧-ಕ್ಕೆ ಎರಡು ಬಿಲ್ಲೆಗಳುಳ್ಳ ನಾಲ್ಕು ಬಿಲ್ಲೆಗಳುಳ್ಳ ಕನ್ನಡಕ ೧-ಕ್ಕೆ ಕ್ರಯ ರೂ 1 12 0

ಇದುಲ್ಲಿ ಮೇಘವರ್ಣವುಳ್ಳ ಬಹಳ ತಂಪುಳ್ಳ ಕನ್ನಡಕ ೧-ಕ್ಕೆ ಕ್ರಯ ರೂ 3 8 0

ಭೂ ತ ಕ ನ್ನ ಡಿ ಗ ಳು.

ಈ ಕನ್ನಡಿಗಳು ಕೆಂಪು, ವಜ್ರ, ಮೊದಲಾದ ರತ್ನಗಳನ್ನು ಪರೀಕ್ಷಿಸುವದಕ್ಕೂ ಓದಲು ತಿಳಿಯದಿರುವ ಅಕ್ಷರಗಳನ್ನು ಓದುವದಕ್ಕೂ ಬಹಳ ಉಪಯೋಗವಾದದ್ದಲ್ಲದೆ ಬಹಳ ಸಣ್ಣ ಸಣ್ಣ ವಸ್ತುಗಳು ದೊಡ್ಡದಾಗಿ ತಿಳಿಯುವುದು ಅಲ್ಲದೆ ಬೆಂಕಿಯನ್ನು ಉಂಟುಮಾಡುವದಕ್ಕೂ ಬಹಳ ಉಪಯೋಗವಾದದ್ದು ಅದು ಹ್ಯಾಗೆಂದರೆ ಹತ್ತಿಯನ್ನಾಗಲೀ, ಬಿಸಲು ಕಾಯುತ್ತಿರುವಾಗ ಕೆಳಗೆಯಿಟ್ಟು ಕನ್ನಡಿಯನ್ನು ಅದರಮೇಲೆ ಸೂರ್ಯನ ಕಿರಣವು ತಗಲುವಂತೆ ಸ್ವಲ್ಪಕಾಲ ಹಿಡಿದುಕೊಂಡಿರುವಲ್ಲಿ ಬೆಂಕಿಯುಂಟಾಗುತ್ತವೆ.



ನಂ 1 ನೇ ದು	ಇದರಕ್ರಯ	ರೂ	1 4 0
ನಂ 2 ನೇ ದು	,,	ರೂ	1 0 0
ನಂ 3 ನೇ ದು	,,	ರೂ	0 8 0
ನಂ 4 ನೇ ದು	,,	ರೂ	0 5 0

ಟ್ರಾ ವ ಲ ರ್ಸು ಟಂ ಬ್ಲ ರು ಗ ಳು.

ಈ ಲೋಟಾಗಳು ಬಹಳ ಚಮತ್ಕಾರವಾಗಿ, ಜರ್ಮನ್ ಬೆಳ್ಳಿಯಿಂದ ತಯಾರಿಸಲ್ಪಟ್ಟಿವೆ. ಎಂದಿಗೂ ಬಣ್ಣವು ಕೆಡುವದಿಲ್ಲ, ಇದರ ಚಮತ್ಕಾರ ವೇನಂದರೆ ಇದರಲ್ಲಿ ... ರ ಚಿಕ್ಕದಾಗುವದು. ಚಿಕ್ಕದಾಗಿ

ಯಿದನ್ನು ಜೇಬಿನಲ್ಲಿ ಯಿಟ್ಟುಕೊಳ್ಳ ಬಹುದು ಯಾವಾಗಲೂ ಸರ್ಕೀಟ್ಟು ಹೋಗುವವರಿಗೆ ಬಹಳ ಅನುಕೂಲವಾದದ್ದು ಇದು ಹೊರಗೆ ಪ್ರಯಾಣಮಾಡುವವರಿಗೂ, ರೈಲಿನಲ್ಲಿ ಪ್ರಯಾಣಮಾಡುವವರಿಗೂ ಬಹಳ ಅನುಕೂಲವಾದದ್ದು ಇದನ್ನು ಬೇಕಾದವರು ಮೇಲಕ್ಕೆ ಎಳದರೆ ನೊಗಸಾದ ಟಂಬ್ಲರಾಗುವದು ಕ್ಷಣಕ್ಕೆ ಅವಿಕಿದರೆ ಚಿಕ್ಕದಾಗುವುದು ಅವಾಗ್ಯ ಅದಕವಾಗಿರುತ್ತೆ ಜೇಬಿನಲ್ಲಿ ಹಾಕಿಕೊಳ್ಳಬಹುದು.

ಇದರ ಬೆಲೆ 1-ಕ್ಕೆ ರೂ -4-0

ಬೆ ಡ್ ರೂ ಮು ದೀ ಪ ಗ ಳು

ಈ ಪುಸ್ತಕ ದೀಪಗಳು ನಿಕ್ಕಲ್ ಬೆಳ್ಳಿಯಿಂದ ಮಾಡಿ ಮೇಜಗಳ ಮೇಲಿಡುವದಕ್ಕೂ ಅನುಕೂಲವಾದದ್ದು. ಅಲ್ಲದೆ ಗೋಡೆಗಳಲ್ಲಿ ಗೂಟಗಳಿಗೂ ತಗಲಿಹಾಕಬಹುದು

ಇದರ ಕ್ರಯ.

ಚಿಮಣಿ ಸಮೇತ ಕ್ಕೆ -2 0

ಚಿಮ್ನಿ ಇಲ್ಲದೇ ದೀಪ ಮಾತ್ರ ಯಿರುವದು 1-ಕ್ಕೆ ರೂ 1 0 0

ಮೇಜೋಡು ಎಂಬ ಕಾಲು ಚೇಲಗಳು.

ಕಾಲು ಚೇಲವೆಂದರೆ ಪಾದದಿಂದ ಹಿಡಿದ ಮೊಳಕಾಲ್‌ವರೆಗೂ ಹಾಕತಕ್ಕದ್ದು ಚೆನ್ನಾಗಿ ಮುರುಕಿದ ನೂಲಿನಿಂದ ಹಣೆಯಲ್ಪಟ್ಟಿದ್ದು ಮೋಜಾಗಳನ್ನು ಹಾಕಿಕೊಳ್ಳ ತಕ್ಕವರು. ಇದನ್ನು ಉಪಯೋಗಿಸಿದರೆ ಕಾಲಿಗೆ ಯಾವವಿಧವಾದ ಪೆಟ್ಟೂ, ಮೊಳೆ ಮೊದಲಾದವುಗಳು ತಗಲುವುದಿಲ್ಲ ಶೀತಸ್ವಭಾವ ವುಳ್ಳ ದೇಹದವರೂ. ಇದನ್ನು ಉಪಯೋಗಿಸಿ ದಲ್ಲಿ ಶೈತ್ಯವು ಬರುವುದಿಲ್ಲ



ಇದರ ಕ್ರಯ

ಹತ್ತಿಯನೂಲಿನಿಂದ ಹಣೆದ ಕಾಲುಚೆಲ ಜೊತೆ 1-ಕ್ಕೆ 4 ಆಣೆ.

ತುಪ್ಪಟದಿಂದ ಹಣೆದ ಕಪ್ಪು ಅಥವ ಇತರ ಬಣ್ಣದ ಕಾಲುಚೇಲ ಜೊತೆ 1-ಕ್ಕೆ ಕ್ರಯ 10 ಆಣೆ.

ತಾರೀಕು ತೋರಿಸುವ ಪೆಟ್ಟಿಗೆ.

ಈ ಪೆಟ್ಟಿಗೆಯು ಸಾಧಾರಣ ಕ್ಯಾಲೆಂಡರ್‌ಗಳಂತೆ ಬಯಾವರುಷವೂ ಹೊಸಕೊಳ್ಳಕ ಉಪಯೋಗವಿಲ್ಲದಾಗಿಹೋಗದಂತೆ ಎಷ್ಟು ವರುಷ ... ತಾರೀಕು, ದಿವಸ. ವಾರಗಳು ಮಾತ್ರ ತೋರಿಸುತ್ತೊಂಡು ಯಿರುವುದು. ಹೊಸ ಕ್ಯಾಲೆಂಡರು ಮೊದಲಾದವುಗಳ ಅವಶ್ಯಕವಿಲ್ಲ ಈ ಪೆಟ್ಟಿಗೆಯಲ್ಲಿ ತಾರೀಕು, ತಿಂಗಳು, ವಾರ ಮೊದಲಾದವುಗಳೂ ಅಡಗಿರುವುದು ಯಾವಕಂಪೆನಿ ಯವರಿಂದಲೂ ಪ್ರಕಟಿಸಲ್ಪಡದ, ನೂತನವಾಗಿದ್ದದು

ಇದರ ಕ್ರಯ ಪೆಟ್ಟಿಗೆ 1-ಕ್ಕೆ ರೂ 0 ..

ಸಭೆಯಲ್ಲಿ ಪನ್ನೀರು ಚಲ್ಲುವ ಯಂತ್ರ



ಈ ಪನ್ನೀರುಚಲ್ಲುವಯಂತ್ರ ಸ್ವದೇಶದ ಪನ್ನೀರು ಚೊಂಬುಗಳಂತಲ್ಲ ಘನವಾದ ಕನ್ನಡಿಯಿಂದ ತಯಾರಿಸಿ ಜರ್ಮನ್ ಬೆಳ್ಳಿಯ ಕೊಳವೆಗಳು ಇಟ್ಟಿರುತ್ತೆ ಆ ಜರ್ಮನ್‌ಬೆಳ್ಳಿಯ ಕೊಳವೆಗಳಲ್ಲಿ ರಬ್ಬರ್ ಕೊಳವೆಗಳೂ ರಬ್ಬರ್‌ಚೆಂಡುಗಳೂ ಇಟ್ಟಿವೆ ಪನ್ನೀರನ್ನು ತುಂಬಿ ಸಭೆಯ ಮಧ್ಯದಲ್ಲಿ ನಿಂತು ರಬ್ಬರ್‌ಚೆಂಡನ್ನು ಅದುಮಿದರೆ ಸಭೆಯಲ್ಲಿರುವ ಎಲ್ಲರಿಗೂ ಮಳೆ ಹನಿ ಬೀಳುವಂತೆ ಬೀಳುವುದು. ಸ್ವದೇಶ ಪನ್ನೀರುಚೊಂಬುಗಳಂತೆ ಪ್ರತಿಬ್ಬರೂ ಮೇಲು ಚಲ್ಲಬೇಕಾದ ಅವಶ್ಯಕವಿಲ್ಲಾ ಈ ನೂತನವಾದ ಯಂತ್ರವು ಇದುವರಿಗೂ ಬಂದಿರುವದಿಲ್ಲ.

ಇದರ ಕ್ರಯ 1-ಕ್ಕೆ ರೂ 1 0 0

ಫೌಂಟೆನ್ ಪೇನಾಗಳು.



ನಾವು ಉಪಯೋಗಿಸಿ ಕೊಂಡಿರುವ ಪೇನಾಗಳಂತೆ ಆಗಾಗ್ಗೆ ... ಬೇಕಾದ್ದಿಲ್ಲ ಮಸಿ ... ಇಲ್ಲ ಕೌಂಟೆನ್ ... ವಸ್ತುವಿನಿಂದ ತಯಾರಿಸಿ ಯಾವರೀತಿ ಇಟ್ಟು ಕೊಂಡಾಗ್ಯೂ ಶಾಯಿಯು ಸೋರಿ ಹೋಗುವದಿಲ್ಲ. ಈ ಪೇನಾ ಕೈಗ ಅದಕವಾಗಿಯೂ ಬಹಳಕಾಲ ಬಾಳಿಕೆ ಬರುವದಾಗಿಯೂ ಇರುವುದು. ಬಹಳ ಉತ್ತಮವಾದ ಸಾಮಾನುಗಳಿಂದ ತಯಾರಿಸಿದ್ದು. ಬರೆಯವಾಗಸೀಸದ ಕಡ್ಡಿಯಿಂದ ಬರಯುವಂತೆ ಸುಲಭವಾಗಿಯೂ ಸ್ಪಷ್ಟವಾಗಿಯೂ ಇರುವುದು. ಒಂದು ದಪ ಬರದ ಮಾತ್ರದಿಂದ ಪೇನಾವಿನಿಂದ ಬರಯಲು ಪ್ರಾರಂಭಿಸಬಹುದು.

ಇದರ ಬೆಲೆ ರೂ 0- 4-0

ಶಾಯಿ ಮಾತ್ರ ಉಳ್ಳ ಬುಡ್ಡಿ 1-ಕೆ 5 ಆಣೆ.

ಮೇಲ್ಕಂಡ ಪೇನಾವಿಗೆ ಹಾಕುವ ೭ ಮಾತು ಭಂಗಾರದ ತಯಾರಿಸಿದ್ದು ಮುಳ್ಳು -ಕೆ ಬೆಲೆ ರೂ -12- .

ಊಕೋ ನೆಂಟು ಎಂಬ ಪುಷ್ಪ ಸತ್ತ್ವಗ ಅತ್ತರ್.

ಇದನ್ನು ಸ್ವದೇಶ ಅತ್ತರುಗಳಂತೆ ಸಾವಿರಾರು ಉತ್ತಮವಾದ ಮೂಲಿಕೆಗಳಿಂದ ಆಂಗ್ಲೇಯ ವಾಸನೆಗಳಂತೆಯೇ ಆಲ್ಕೋಹಾಲ್ ಎಂಬದನ್ನು ಸೇರಿಸಿ ಮಾಡಲ್ಪಡದೆ ಒಳ್ಳೇ ಪುಷ್ಪಗಳಿಂದ ವಾಸನೆಯಾದ ರಸಾಯನಶಾಸ್ತ್ರಧರ್ಮದಿಂದ ತಯಾರಿ ಸಲ್ಪಟ್ಟದ್ದು ಪ್ರತಿ ಒಬ್ಬರು ಗಡಿಯಾರ ಜೇಬಿನಲ್ಲಿ ಯಾವಾಗ್ಯೂ ಇಟ್ಟುಕೊಂಡು ಹೋಗುವಂತೆ ಸೌಕರ್ಯ ವಾಗಿ ನೊಗಸಾದ ಮರದ ಪೆಟ್ಟಿಗೆಯಲ್ಲಿ ಚಿಕ್ಕ ಕನ್ನಡಿಯ ಸೂಜಿ ಯೋಡನೆ ನೊಗಸಾದ ಸೀಸೆಯಲ್ಲಿ ಪ್ಯಾಕ್ ಮಾಡಿರುವದರಿಂದ ಯಾವಬಗೆಯಿಂದಲೂ ಚಲ್ಲಿ ಹೋಗುವದಕ್ಕಾಗಲಿ ಒಡದು ಹೋಗುವದಕ್ಕಾಗಲಿ ಅವಕಾಶವಿರುವ

ದಿಲ್ಲ ಇದರಲ್ಲಿ ಅನೇಕವಿಧವಾದ ಅತ್ತರುಗಳುಂಟು. ಇದರ ವಾಸನೆಯು ಎಂದಿಗೂ ಹೋಗುವದಿಲ್ಲ, ಈ ಬುಡ್ಡಿಯಲ್ಲಿ ಮುಚ್ಚಿ ಇರುವುದು ಸೂಜಿಯಿಂದ ಸ್ವಲ್ಪವನ್ನು ತೆಗದು ಸವರಿಕೊಂಡರೆ ಸಾಕು, ಇತರ ಅತ್ತರುಗಳಂತೆ ಜಾಸ್ತಿಯಾಗಿ ಸವರ ಬೇಕಾದ್ದಿಲ್ಲ.

ಇದರ ಬೆಲೆ ಕಾಲು ಡ್ರಾಮಿಗೆ ಸೀಸೆ 10 ಆಣೆ

,, ಅರ್ಧ ಡ್ರಾಮಿಗೆ ಸೀಸೆ 12 ಆಣೆ

,, ಒಂದು ಡ್ರಾಮಿಗೆ ಸೀಸೆ ರೂ 1.

ವಿಚಿತ್ರ ಸ್ಪ್ರಿಂಗು ಮುಖನೋಡುವ ಕನ್ನಡಿ.

ಈ ಕನ್ನಡಿಯು ಜರ್ಮನಿದೇಶದಲ್ಲಿ ತಯಾರಾಗಿಬಂದದ್ದು ಇದರ ವಿಚಿತ್ರ ವೇನಂದರೆ ಮೇಲಿನಮುಚ್ಚಳ ತೆರಳಿನಿಂದಾ ಪತ್ತಿಪರೆಹ ಕೈಹೆಗೂತ್ತದೆ ಈ ಕನ್ನಡಿಯನ್ನು ಶುದ್ಧವಾದ ರಸಸೇರಿಸಿ ತಯಾರಿಸಿಯಿರುವುದರಿಂದ ನೋಡುವವರಿಗೆ ವಿಕಾರವಿಲ್ಲದೆ ಶುದ್ಧಭಾವವನ್ನು ತೋರುಸುತ್ತೆ. ಯಿದನ್ನು ಮೇಜನಮೇಲೂ ಗೋಡೆಗಳಮೇಲೂ, ಇಟ್ಟುಕೊಳ್ಳಹುದು

ಇದರ ಬೆಲೆ 1-ಕ್ಕೆ 8 ಆಣೆ.

ಹ್ಯಾಮಕ್ಕು ಯನ್ನುವ ಮಲಗುವ ತೊಟ್ಟಿಲು.

ಇದು ಪ್ರತಿ ಒಬ್ಬರಮನೆಯಲ್ಲಿಯೂ ಅವಶ್ಯಕವಾಗಿರಬೇಕು. ಬೇಸಿಗೆ ಕಾಲದಲ್ಲಿ ತಣ್ಣನ ಗಾಳಿ,ಬೇಕಾದಾಗ ಮನೆಯಲ್ಲಿ ಯರಡು ಸ್ತಂಭಗಳಿಗಾಗಲಿ ಚಿಲ್ಲಿ ಯರಡು ಮರಗಳ ಗಂಬಗಳಿಗಾಗಲಿ ಭದ್ರವಾಗಿ ಕಟ್ಟಿ ಆಗಲಿ ಮಲಗಲಿ ಮಕ್ಕಳಿಗೆ ಕೊಟ್ಟಲಲ್ಲಿ



ಗುನಂತೆ ಸುಖನಿದ್ರೆ ಬರುವುದು ವಿದ್ಯಾರ್ಥಿಗಳಿಗೂ ಬಹು ಅನುಕೂಲವಾದದ್ದು ಬಹಳ ಬಲವಾಗಿ ತಯಾರಿಸಿರುತ್ತೆ.

ಚಿಕ್ಕಮಕ್ಕಳಿಗೆ ಆಗುವಂಥಾದ್ದು 1-ಕ್ಕೆ ರೂ 2 0

ದೊಡ್ಡವರಿಗೆ ,, ,, ರೂ 2 12

ಕಶ್ಮೀರ್ ಬ್ರಾಂಡ್ ಎಂಬ ಇಡುಪಿನ ಕೆಂಪು ಪಟ್ಟಿ.

5 ಮೊಳ ಕೆಂಪು ರೇಷ್ಮೆಯಿಂದ ನೇಯಿದಂತಾದ್ದು ಮೇಲ್ಕಂಡ ಚಿತ್ರದಂತೆ ಮೇಲಾದರೇಷ್ಮೆಯಿಂದ ನೇಯಿದದ್ದು

ಇದರ ಕ್ರಯ 12 ಆಣೆ

ಪಟ್ಟಿಬೇಲೆ1-ಕ್ಕೆ 1-8-0

ಬಹಳಮೇಲಾದ್ದು 1-ಕ್ಕೆ ರೂ 2-12-0

ಕ್ಷೌರಕತ್ತಿ

ಕ್ಷೌರಕತ್ತಿಯು ಪ್ರತಿಒಬ್ಬರಲ್ಲೂ ಯಿರಬೇಕಾದ್ದು ಬಹಳ ಅವಶ್ಯಕ ಇದು ಇಟ್ಟು ಕೊಂಡು ಕ್ಷೌರಕನ ಕೈಯಲ್ಲಿ ಕೊಟ್ಟು ಕೆಲಸವನ್ನು ಮಾಡಿಕೊಂಡಲ್ಲಿ ಇ



ತರ ಶರೀರಸಂಬಂಧವಾದ ಕಜ್ಜಿ ತುರಿ ಮೊದಲಾದವುಗಳು ಬಾರ ದಂತೆ ತಲೆಯು ಶುದ್ಧವಾಗಿರುವದಲ್ಲದೆ ಉರಿಯೂ ಇಲ್ಲದಂತೆ ಸುಖವಾಗಿರುವುದು ಇದರ ಕ್ರಯ

ಕಪ್ಪು ಹಿಡಿಹಾಕಿದ ಮೇಲಾದ ರಾಜಸ್ ಕತ್ತಿ ೧ ಕ್ಕೆ 0 12 0
ಸೀಮೆಯಲ್ಲಿ ತಯಾರಿಸಿದ ರಾಜಸ್ ಕತ್ತಿ ೧ ಕ್ಕೆ 1 4 0
ಲೋಕದಲ್ಲಿ ಹೆಸರುವಾಸಿಯಾದ ಕಾಫ್ ರೇಜರ್ 3 8 0

ಬಹಳಮೇಲಾದಕತ್ತರಿಗಳು

ಈ ಕತ್ತರಿಗಳು ಬಹಳ ಹೆಸರುಹೊಂದಿದ ಕಂಪೆನಿಯವರಿಂದ ತಯಾರಿಸಿದ್ದು ಇದನ್ನು ಅನೇಕ ಕೆಲಸಗಳಿಗೆ ಉಪಯೋಗಿಸಬಹುದು ಇದರಕ್ರಯ 1 ನೇ ನಂಬರ್ ರೂ 0 . . 2 ನೇ ನಂಬರ್ 0 7 0 3 ನೇ ನಂಬರ್ 0 5 0

ಪಗಡೆ ಆಟದ ಮನೆ ಮತ್ತು ಕಾಳೆ

ನಮ್ಮ ದೇಶದವರು ಕಾಲಕಳೆಯುವದಕ್ಕಾಗಲಿ ಬೇಸರ ಪರಿಹಾರಕ್ಕಾಗಲಿ ವಿಶೇಷ ಹಾದಿ ಆಗಲಿ ಆಡುವದಕ್ಕೆಯೆ ಮೊದಲ ತರಹ ಆಟವಾಗಿಯಿರುತ್ತೆ ಅನೇಕತರಹದ ಕಲಾತ್ ಬನಾತುಗಳಿಂದ ಆಟದಮನೆಗಳನ್ನು ಹೊಂದಿರುತ್ತೆ 4 ವರ್ಣವುಳ್ಳ 16 ಪಗಡ ಕಾಯಿಗಳು ಒಂದೊಂದು ವರ್ಣ ದಾಳಗಳು ಸಹಿತ ಇರುತ್ತೆ



ಇದರ ಬೆಲೆ ಸೆಟ್ಟು 1-ಕ್ಕೆ ರೂ 0 7 0

ಟ್ರಾವೆಲರ್ಸ್ ರೈಟಿಂಗ್ ಔಟ್‌ಫಿಟ್

ನಕ್ಷೆಯಲ್ಲಿ ತೋರಿಸಿರುವಮೇಲೆ, ಪೇನಾ, ಪೆನ್ಸಿಲ್, ಚಾಕು ಈಮೂರು ಜರ್ಮನ್ ಬೆಳ್ಳಿಯ ಹಿಡಿಹಾಕಿದ ಹೋಲ್ಡರ್ ನಲ್ಲಿ ಹಾಕಿರುವದು ದೊಡ್ಡ ಕೊಳವೆಯಲ್ಲಿ ಮೇಲುಮುಚ್ಚಳದಲ್ಲೆ ಸಣ್ಣದಾದ



ಕಾಯಿಕಡ್ಡಿಕೆ ಇಟ್ಟಿರುವದು ಬಯಸಿದಾಗ ಬೇಕಾದಾಗ ಒಂದೊಂದಾಗಿ ತೆಗದು ಕೊಳ್ಳಬಹುದು ದೊಡ್ಡ ಕೊಳವೆಯಲ್ಲಿ ಹಾಕಿ ಗಡಿಯಾರದ ಚೇನಿನಲ್ಲಿ ಹಾಕಿಕೊಳ್ಳಬಹುದು ಸ್ಕೂಲ್‌ಮಾಸ್ಟರ್ ಗಳಿಗೂ ಉದ್ಯೋಗಸ್ಥರಿಗೂ, ಮುಖ್ಯವಾಗಿ ಬರಿಯತಕ್ಕ ಹೆಂಗಸರು, ಗಂಡಸರು, ಇವರುಗಳಿಗೆ ಬಹುಉಪಯೋಗವಾದದ್ದು ಜರ್ಮನ್ ಬೆಳ್ಳಿಯಿಂದ ತಯಾರಿಸಿ ಬೆಳ್ಳಿಯಿಂದಮಾಡಿದ ಇದರ ಗಿಲೀಟ್ ಎಂದಿಗೂ ಕೆಡುವದಿಲ್ಲ. ಇದರ ಬೆಲೆ 1 ಕ್ಕೆ 10 ಆಣೆ

ಚಿಕ್ಕದು 1-ಕ್ಕೆ 7 ಆಣೆ

ಮೋರ್‌ಸಿಂಗು ಯನ್ನುವ ಒಂದುವಿಧವಾದ ಬಾಯಿಯಲ್ಲಿ ಬಾರಿಸುವ ಸಂಗೀತವಾದ್ಯವು

ಈ ಮೋರ್‌ಸಿಂಗು ಯನ್ನುವ ವಾದ್ಯವು ಬಹುಕಾಲ ದಿಂದಲೂ ಯಾರಿಗೂ ತಿಳಿದಿರ ಲಿಲ್ಲಾ ಇದರಸುತ್ತೂ ಉಕ್ಕಿನಿಂದಲೂ ಮಧ್ಯೆ ಕಂಚಿಯ ಟೆಂಪರಿನಿಂದಲೂ ಮಾಡಲ್ಪಟ್ಟಿರುತ್ತೆ ಈ ಸೂಕ್ಷ್ಮವಾದ ವಾದ್ಯವನ್ನು ಚೆನ್ನಾ



ಗಿ ಕಲಿತು ದೊಡ್ಡ ಹಾಡುಕಚ್ಚೇರಿಗಳಲ್ಲಿ ಉಪಯೋಗಿಸುತ್ತಿರಾರೆ ಇದನ್ನು ಬಹಳಮಂದಿ ಕೇಳಿರುವದರಿಂದ ಈ ನಮ್ಮ ಪತ್ರಿಕೆಯಲ್ಲಿ ಪ್ರಚುರಪಡಿಸಿರುತ್ತೇವೆ. ಇದರ ಬೆಲೆ ರೂ 4 ಆಣೆ

ಪೇನಾ ಪೆನ್ಸಿಲ್ ಚಾಕು ಇವುಗಳು ಅಡಗಿರುವ ಬೀಗದ ಕೈಉಂಗುರ

ಇದನ್ನು ಬೆಳ್ಳಿಗೆ ಸಮಾನವಾದ ಒಂದುವಿಧವಾದ ಲೋಹದಿಂದ ಥಳಥಳಿಸುವಂತೆ ಮಾಡಲ್ಪಟ್ಟಿರುತ್ತೆ, ಇದರಲ್ಲಿ ಮೂರುಬೀಗದಕೈಗಳು ಇರುವೆ ಆಮೂರರಲ್ಲಿಯೂ ಒಂದೊಂದು ಪೇನಾ, ಪೆನ್ಸಿಲ್, ಚಾಕು ಇರುವುದು ಬಳಪಾಗ ಅದರ ಕೊನೆಯಲಿ ಬರುವುದು ಇದರಿಂದ ಕಾಗದ ಪತ್ರ ತೆಗಲನ್ನು ಬರೆಯಬಹುದು ಇದನ್ನೆ ಬೀಗದ ಕೈ ಗುತ್ತಿಯಲ್ಲಿಯೂ ತಗಲಿಸಿ ಕೊಳ್ಳಬಹುದು ವಿಚಿತ್ರವಾದದ್ದು



ಇದರ ಬೆಲೆ ಕ್ರಯ 1-ಕ್ಕೆ 8 ಆಣೆ

ಮ್ಯಾಜಿಕ್ ಬಾಕ್ಸ್ ಎಂಬ ಮರ್ಮದ ಪೆಟ್ಟಿಗೆ.

ಈ ಪೆಟ್ಟಿಗೆಯು ನಿಕ್ಕಲ್‌ಬೆಳ್ಳಿಯಿಂದ ತಯಾರಿಸಿದ್ದು ಇದರ ಪ್ರಕಾಶವು ಬೆಳ್ಳಿಯನ್ನು ಕೂಡ ಹಿಂಬಾಲಿಸುತ್ತದೆ ಜೇಬಿನಲ್ಲಿ ಇಟ್ಟುಕೊಳ್ಳಬಹುದು ಹಣವನ್ನಾದಲಿ ಚಿಕ್ಕಚಿಕ್ಕವಸ್ತುಗಳಾಗಲಿ ಹಾಕಿಕೊಂಡು ಎಡಗೈ ಪಕ್ಕದಲ್ಲಿ ಓರೆಮಾಡಿಕೊಂಡುತೆಗದರೆ ಇದರಲ್ಲಿ ಏನು ಪದಾರ್ಥಗಳು ತಿಳಿಯದೆ ಹೋಗುವವು ಪುನಃ ಬಲಗಡೆ ಸ್ವಲ್ಪ ಬಗ್ಗಿಸಿ ತೆರದರೆ ತಿಳಿಯದೇಹೋದ ಪದಾರ್ಥಗಳು ತಿಳಿಯುವದು ನೋಡುವವರು ಬಹಳ ಆಶ್ಚರ್ಯಪಡುವರು.

ಇದರ ಕ್ರಯ 1 ಕ್ಕೆ 7 ಆಣೆ

ಮಹಾರಾಜಾಮಣಿಕ್ಯೂರ್ಸ್.

ಈ ಮಣಿಕ್ಯೂರ್ಸ್ ಜರ್ಮನ್‌ಬೆಳ್ಳಿಯಿಂದ ತಯಾರಿಸಿದ್ದು ನೋಟಕ್ಕೆ ಸ್ವಚ್ಛ ಬೆಳ್ಳಿಯನ್ನು ಹಿಂಬಾಲಿಸುತ್ತದೆ ಸಾಧಾರಣವಾದ ತೊಗಲಿನ ಮಣಿಕ್ಯೂರ್ಸ್ ಜಾಗ್ರತೆಯಾಗಿ ಹರಿದುಹೋಗುವಂತೆ ಇದಕ್ಕ ಯಾವಾದರೂ ಕೇಡಕೂಇಲ್ಲ ಇದರಲ್ಲಿ ರೂಪಾಯಿ, ಅರ್ಧರೂಪಾಯಿ, ಕಾಲುರೂಪಾಯಿ, ಬೇಳೆರೂಪಾಯಿ ಮೊದಲಾದವುಗಳನ್ನು ತಾಂಬ್ರದ ನಾಣ್ಯಗಳನ್ನೂ ಇಟ್ಟು ಕೊಳ್ಳುವ ದಕ್ಕೆ ಕಾನಿಗಳು ಮಾಡಲ್ಪಟ್ಟಿವೆ ಇದರ ಕ್ರಯ 1 ಕ್ಕೆ 7 ಆಣೆ

ಮಕ್ಕಳು ಆಡಿಕೊಳ್ಳುವದಕ್ಕೆ ಅನುಕೂಲವಾದ ಮೋಟಾರ್ ರಿಕ್ಷಾ ಬಂಡಿಗಳು.

ನಾವು ಪ್ರಕಟಿಸಿರುವ ಚಿಕ್ಕ ರೈಲುಬಂಡಿಯಂತೆಯೇ ಇದಕೋ ಕೂಡ ಬೀಗ ಕೊಟ್ಟು ಮಟ್ಟವಾದ ಭೂಮಿ ಯಲ್ಲಿ ಬಿಟ್ಟರೆ ಬಹುಳವೇಗವಾಗಿ ಹೋಗುಬಲ್ಲದು ಇದರಲ್ಲಿ ಅನೇಕತರಹ ಹುಡುಗರು ಆಡುವದಕ್ಕೆ ಅನುಕೂಲ ವಾದವುಗಳು ಇವೆ. ಈಬಂಡಿಗಳಿಗೆ ತರಹಾವಾರಿ ಬಣ್ಣಗಳು ಹಾಕಿರುತ್ತೆ ನೋಡುವದಕ್ಕೆ ಬಹುಳ ತಮಾಷೆಯಾಗಿರುವದು



ಇದರ ಬೆಲೆ 1-ಕ್ಕೆ ಕ್ರಯ ರೂ 0 10 0

ಹೊಗೆಬಂಡಿ ಸಾಲುಗಳು

ಈ ಬಂಡಿಯ ಸಾಲಿನಲ್ಲಿ ಬಂಡಿಗಳು ಸೇರಿಸಲ್ಪಟ್ಟಿವೆ ಇಂಜನ್ ೧ ಜನಗಳು ಕೂಡುಕೊಳ್ಳುವಬಂಡಿ ೧ ಗಾರಡಬಂಡಿ ೧ ಮಟ್ಟಸವಾದಸಮಿಯಲ್ಲಿ ಈಬಂಡಿಯನ್ನು ಸೇರಿಕೊಂಡು ಇಂಜನ್‌ಬಂಡಿಗೆ ಬೀಗಕೊಟ್ಟಲ್ಲಿ ನಿಶ್ಚಯವಾದ ರೈಲುಬಂಡಿ ಸಾಲುಗಳಂತೆ ಬಂಡಿ ವೇಗವಾಗಿ ಓಡುವದು. ಚಿಕ್ಕವರಿಗೆ ಬಹುಮಾನ ಕೊಡುವದಕ್ಕೂ ವಿನೋದವನ್ನು ತೋರಿಸ ವುದಕ್ಕೂ ಶ್ರೇಷ್ಠವಾದದ್ದು ಇದರಕ್ರಯ ೩ ಬಂಡಿ ಶೇರಿಸಿದ್ದು ರೂ 0 4 0

೨ ಬಂಡಿ ಶೇರಿಸಿದ್ದು ರೂ 0 12 0

ಇಂಗ್ಲೀಷ್ ಲೆಟರ್‌ಲಾಕ್ ಎಂಬ ಅಕ್ಷರದ ಬೀಗಗಳು

ಕಾರ್‌ವೆಟ್ ಚೀಲಗಳಿಗೂ, ಹಣದ ಪೆಟ್ಟಿಗೆಗಳಿಗೂ, ಉಪಯೋಗವಾದವುಗಳು ಈಬೀಗಗಳಿಗೆ ಕೈಗಳೇಯಿಲ್ಲ, ಬೀಗದಮೇಲೆ ಬರೆದಿರತಕ್ಕ ಅಕ್ಷರಗಳನ್ನು ತೋರಿಸಿರುವ ಪ್ರಕಾರ ಸೇರಿಸಿ ತಿರುಗಿಸಿದಲ್ಲಿ ತೆಗೆಯಲ್ಪಡುವದು ಇಲ್ಲದಿದ್ದರೆ ೧೨ ವರ್ಷವಾದರೂ ತೆಗೆಯಲ್ಪಡಲಾರದು ಪರಸ್ಥಳದ ಪ್ರಯಾಣಿಕರಿಗೆ ಬಹಳ ಉಪಯೋಗವಾದದ್ದು ಇದರ ಕ್ರಯಗಳು.

3 ಸುತ್ತುಳ್ಳದ್ದು 7 ಆಣೆ 4 ಸುತ್ತುಳ್ಳದ್ದು 9 ಆಣೆ
5 „ 11 ಆಣೆ 6 „ 13 ಆಣೆ

ಬಾಲಕಲವಾ ಎಂಬ ಕಂಬಳಿ ಟೋಪಿ

ಈ ಟೋಪಿಗಳನ್ನೂ ಸಣ್ಣವಾಗಿ ಹಣಿಸಿದ ಉತ್ತಮವಾದ ಕಂಬಳಿನೂಲಿನಿಂದ ತಯಾರಿಸಿರುತ್ತೇ ಇದು ಮಳೆ ಹಿಮ ಈ ಕಾಲಗಳಲ್ಲಿಯೂ ಪ್ರೇಹಕ್ಕೆ ಸೀತಳ ಜನ್ನಿ ತಲೆನೋವು ಜಲದೋಷಮುಂತಾದದಕಷ್ಟಪಡುವವುಗಳೆ ಸಮಯಗಳಲ್ಲಿಯೂ ಉಪಯೋಗಿಸುವದರಿಂದ ಶಿರಸ್ಸುಗೆಪ್ಪ ಸೌಖ್ಯವುಂಟಾಗಿ ಸುಖವನ್ನು ಕೊಡುವದಲ್ಲದೆ ಯೆಂತಾ ಜನ್ನಿಯಾದರು ಹೋಗ ಲಾಡಿಸುವದು ಇದನ್ನು ಸಾಧಾರಣ ಟೋಪಿಯಂತೆಯು ಕಿವಿವರಿಗೂ ಕತ್ತಿನವರಿಗೂ ಉಪಯೋಗಿಸಬಹುದು ಇದಕ್ಕೆ ಅವರವರತಲೆಯ ಅಳತೆಯೇಅವಶ್ಯಕವಿಲ್ಲ ಪ್ರತಿಒಬ್ಬರು ತಲೆಗೂ ಸರಿಯಾಗಿಯೇ ಯಿರುವುದು ಇದುಪ್ರತಿಕುಟುಂಬದಲ್ಲಿಯು ಒಂದುಯಿದ್ದಲ್ಲಿ ಯಲ್ಲರಿಗು ಅನುಕೂಲವಾಗಿರುತ್ತೆ ಇದು ನಯವಾದ ಕಂಬಳಿ ನೂಲಿನಿಂದ ಹೆಣಿಸಿದ ಟೋಪಿ

೧ ನಂ 1-ಕ್ಕೆ ರೂ 1 0 0
೨ ನಂ 1-ಕ್ಕೆ ರೂ 0 12 0

ಮಕ್ಕಳಿಗೆ ಪಂಚವರ್ಣ ಚಿತ್ರದ ಉಡುಪುಗಳು

ಈ ಉಡುಪುಗಳು ಪಂಚರಂಗಿನಲ್ಲಿ ತಯಾರಿಸಲ್ಪಟ್ಟಿವೆ. ಇದನ್ನು ಈಗಹುಟ್ಟಿದ ಮಕ್ಕಳಿಂದ 3-ವರುಷವ್ರಾಯದವು ಕ್ಕಳವರಿಗೆ ಉಪಯೋಗಿಸಬಹುದು ಇದುಸ್ವಚ್ಛ ಕಂಬಳಿ ನೂಲಿನಿಂದ ತಯಾರಿಸಲ್ಪಟ್ಟದ್ದರಿಂದ ಯಾವಾಗಲೂ ಮಕ್ಕಳಿಗೆ ಸೌಖ್ಯವನ್ನೇ ಕೊಡುವದೇಹೊರ್‍ತು ದೋಷವನ್ನುಂಟು ಮಾಡುವದಿಲ್ಲ ಇದನ್ನು ಉಪಯೋಗಿಸುವದರಿಂದ ಸೀತಕಾಲದಲ್ಲಾ ಗಲಿಚೆಳಿ, ಜಲದೋಷ ಜ್ವರ ಬರಲಾರದು.

ಪಂಚವರ್ಣದ ಟೋಪಿ 1 ಪುಡುಪು 1. ಕಾಲಿನ ಮೇಜೋಡುಜೊತೆ 1 ಈಮೂರುಶೇರಿದ ಸೆಟ್ 1-ಕ್ಕೆ ಕ್ರಯ ರೂ 1 2 0

ಇದುಪ್ರತ್ಯೇಕವಾಗಿ ಕೇಳುಹಿಸುವದಿಕ್ಕೆ ಅಳತೆ ಅವಶ್ಯಕವಿಲ್ಲ.

ತಾಮಾಷಿಯಾದ ರಬ್ಬರ್ ಹಾವು.

ಇದು ರಬ್ಬರಿಂದ ತಯಾರಿಸಿದ್ದು ಇದನ್ನು ನಿಶ್ಚಯವಾದಹಾವೆಂದು ಹೇಳುವರೇ ಹೊರ್‍ತು ರಬರುಹಾವೆಂದು ಹೇಳಲಾರರು ಸ್ನೇಹಿತರುಗಳನ್ನೂ ಪರಿಹಾಸಮಾಡತಕ್ಕದ್ದು ಇದು ಬೇನದಹಾವಿನಂತೆಯೇ ಯಿರುವುದು. ಇದರಕ್ರಯ 7 ಆಣೆ

ರಬ್ಬರ್ ಬೊಂಬೆ

ಚಿಕ್ಕ ಮಕ್ಕಳು ಆಟ ಆಡುವದಕ್ಕೂ ಅವರುಗಳಿಗೆ ಆಟವನ್ನು ತೋರಿಸುವದಕ್ಕೂ ಬಹಳಉಪಯೋಗವಾದದ್ದು ಇದು ಕೆಳಗೆ ಬಿದ್ದರೂಒಡೆಯುವದಿಲ್ಲ ಮಕ್ಕಳಿಗೆ ಯಾವವಿಧವಾದ ಅಪಾಯವೂ ಉಂಟಾಗುವ ದಿಲ್ಲ ಇದನ್ನು ಅಮುಕುವಾಗ ಮಕ್ಕಳು ಕೂಗುವಂತೆ ಸದ್ದಾಗುವುದು.

ಇದರ ಬೆಲೆ 10 ಆಣೆ

೨ ನಂ ಚಿಕ್ಕ ಸೈಜ್ ಬೆಲೆ 8 ಆಣೆ

ಟ್ರಾನ್ಸ್‌ಫರ್ ಪಿಕ್ಚರುಗಳು ಅಂದರ ಅಂಟಿಸುವ ಬೊಮ್ಮೆಗಳು

ಈ ಪಟಗಳನ್ನು ಅಂಟಿಸ ವ ವಿಧವು ಚಿಕ್ಕಹುಡುಗರಿಗೂ ತಿಳಿರುವದು ಇದನ್ನು ಕನ್ನಡಿಪೆಟ್ಟಿಗೆ ಮೊದಲಾದವುಗಳ ಮೇಲೂ ಪುಸ್ತಕಗಳಲ್ಲಿಯೂ ಅಲಂಕಾರವಾಗಿ ಇರುವಂತೆ ಅಂಟಿಸಬಹುದು. ಇದರಲ್ಲಿ ಅನೇಕತರಹವಾದ ಪರಗಳವೆ ಜಾಗಳವಾದುವ ನಮೂನೆಗೂ, ಪಕ್ಷಿಜಾತಿಗಳೂ, ಮೃಗಜಾತಿಗಳೂ, ಸಿಪಾಯಿಗಳು ಅನೇಕ ತರಹಾವಾರಿಯವುಗಳೂ ಇರುವ ವಿಚಿತ್ರವಾದ ಬೊಮ್ಮೆಗಳು 500 ಇರುವ 12 ಕಾಗದಗಳ ಪ್ಯಾಕೆಟ್ಟು 1 ಕ್ಕೆ ಬೆಲೆ ರೂ 12 ಆಣೆ

ಸೇಪ್‌ಟಿ ರೇಜರು ಯನ್ನುವ ಕ್ಷೌರಕತ್ತಿ

ಈವೇಲ್ಸಿಂಡ ಕ್ಷೌರಕತ್ತಿಗಳು ಹೊಸದಾಗಿ ತಯಸಲ್ಪಟ್ಟಿವ ಇ

ವು ಬಹಳ ಉಪಯೋಗವಾದವುಗಳು ಹಳ್ಳಿಗಾಡಿನಲ್ಲಿರುವ ನರಿಗ ಹಳ್ಳಿಯಿಂದ ಪಟ್ಟಣಕ್ಕೆ ಹಳ್ಳಿಗ ಹಜಾಮ ನನ್ನು ಹುಡುಕಿಕೊಂಡು ಹೋಗುವಕಷ್ಟ ತಪ್ಪಿತ್ತು ಇದರಿಂದ ತಮಷ್ಟಕ್ಕೆ ತಾವೇ ಕ್ಷೌರಮಾಡಿಕೊಳ್ಳಬಹುದು, ಯಾವ ವಿಧವಾದ ಅಪಾಯವು ಇರುವದಿಲ್ಲಾ ತಿಳಿಯದವರೂಕೂಡ ಸುಲಭವಾಗಿ ಮಾಡಿಕೊಳ್ಳಬಹುದು ಈ ಕ್ಷೌರಕತ್ತಿಯನ್ನು ತಿಡ ಸಾಧಾರಣ ಕತ್ತಿಗಳಂತೆ ಮಾಡಬಹುದು ಒಂದನ್ನು ತರ್ಸಿನೋಡಿದಲ್ಲಿ ಇದರ ಉಪಯೋಗವು ತಿಳಿಯುತ್ತೆ

ಇದರ ಬೆಲೆ 1 ಕ್ಕೆ ರೂ 0-12-0

ಜಾಲರು ಯನ್ನುವ ಕೈತಾಳವು.

ಈ ನಕ್ಷೆಯಲ್ಲಿ ಕಾಣುವಂತೆಯೇ ಇರುವ, ಈತಾಳಗಳು

ಮೇಲಾದ ಕಂಚಿ ನಿಂದ ತಯಾರಾದವುಗಳು ಇವುಗಳನ್ನು ನಾಟಕ, ಹಾಮುಕಚೇರಿ ಭಜನೆ ಮನೆಗಳಲ್ಲಿ ಉಪಯೋಗಿಸಬಹುದು ಬಹಳ ಚನ್ನಾಗಿ ನಾದವನ್ನು ಕೊಡುತ್ತೆ

ಜಾಲರುತಾಳ ಜತ , ಕ್ಕೆ ಕ್ರಯ 7 ಅಣೆ
ಗುಬ್ಬಿ ತಾಳ ಜತ,1-ಕ್ಕೆ ಕ್ರಯ , ಅಣೆ

ಫೋಟೋಗ್ರಾಫು ಚಾಕು.

ಈ ಚಾಕುಗಳು ಬಹಳ ಉತ್ತಮವಾದ ಉಕ್ಕಿನಿಂದ ತಯಾರಿಸಿರುತ್ತೆ ನೋಡುವುದಕ್ಕೆ ಬಹಳ ಅಂದವಾಗಿಯೂ ಯಿರುವುದು ಅದರ ಕೊನೆಯಲ್ಲಿ ನೋಡಿದಲ್ಲಿ ಬಹಳ ತಮಾಷಿ ಯಾಗಿರುವ ಲೇಡಿಗಳನ್ನು ಪುರುಷರುಗಳನ್ನು ನೋಡಬಹುದು.

ಇದರ ಬೆಲೆ 1-ಕ್ಕೆ ಕ್ರಯ ರೂ 1 0 0

ಬಲೆಯಂತಿರುವ ಬನಿಯನ್



ಬನಿಯನ್‌ಗಳ ಪೈಕೆ ಇದುವರೆ ಲಕ್ಷ್ಯವಾದ ಬನಿಯನ್ ಬೇಸಿಗೆ ಕಾಲದಲ್ಲಿ ಬಹಳ ಅನುಕೂಲವಾದ್ದು ಶರೀರಕ್ಕೆ ತಂಪುಗಾಳಿ ಬರುತ್ತಿರುವುದು ಬೆವರು ಶರೀರದ ಮೇಲೆ ಇರುವದಿಲ್ಲಾ ಇಂಥಾ ಬನಿಯನ್ನು ಕೊಂಡ ಕೊಳ್ಳದ ಸಂತೋಷಪಡಿರಿ

ಇದರ ಬೆಲೆ ಕ್ಕೆ 4 ಅಣೆ
ಸಾದಾಬನಿಯನ್‌ಗಳು
7 ಅಣೆ ಮೊದಲು ಅಣೆ
ವರೆಗೂ ಇರುವುದು

ಮೊದ್ದವರಿಗ । ಅಣೆ ಮೊದಲು 4 ಅಣೆ ವರಿಗೂ ಇದೆ
ಪ್ರರಾತ್ರಿಯುಳ್ಳ ಬನೀನು ಮೇಲಾದ್ದು 1 ಕ್ಕೆ ರೂ 1-0-0
ಅಪೇಕ್ಷೆಯುಳ್ಳವರು ಇತರ ವಿವರವಾಗಿ ಬರೆದು ತರಿಸಿಕೊಳ್ಳಬೇಕು.

ಘಂಟೆ ಹೊಡಿಯುವ ಜರ್ಮಾದೇಶದ ದೊಡ್ಡ ಗಡಿಯಾರ

ಈಗಡಿಯಾರ ಬಹು ಮೇಲಾದ ಸಾಮಾನುಗಳಿಂದ ಜರ್ಮಾದೇ



ಘಂಟೆ ಅರ್ಧಗಂಟೆ ಹೊಡಿಯುವ ದೊಡ್ಡಗಡಿಯಾರ 6-9-0
ಡಿಟೋ ಗಂಟೆಮಾತ್ರ ಹೊಡೆಯುವ ಗಡಿಯಾರ 6 0 0

ಮನಮೋಹನ ಶಕುಂತಲ ಸುವಾಸನೆ ಯೆಣ್ಣೆ.

ಡಬ್ಬಿ 1-ಕ್ಕೆ 36 ವಿಧವಾದ ಇನಾಂ ಸಾಮಾನುಗಳಸಮೇತ ಕ್ರಯ ರೂ 1 0 0

ಈ ಯೆಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೇ ಬೆಳಿಯದೆ ಇರುವ ಕೂದಲ ಬೆಳೆಯುವದು ವರಟಾಗಿರುವ ಕೂದಲುಗಳು ಮೃದುವಾಗುವದು ನೇರಳೆಹಣ್ಣಿನಂತೆ ಕಪ್ಪಾಗಿ, ಥಳಥಳಿಸುವದು ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವದು ಕಣ್ಣಿಗೆ ತಂಪುಕೊಡುವದು ತಲೆಯಲ್ಲಿರುವ ಹೊಡದನ್ನು ಸರಿಮಾಡುವುದು, ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವರಿಗೆ ಆಹ್ಲಾದವನ್ನು ಉಂಟುಮಾಡುವದಲ್ಲದೆ, ಜವ್ವಾಜಿ, ಪುನುಗು ಅಂಬರ್, ಕೇಸರ್ ಪಚ್ಚಕರ್ಪೂರ ಮತ್ತು ಜಾಜಿಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರೂಪಾಕ್ಷಿ, ದವನಮರುಗ,

ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ವಂದುತೈಲವನ್ನು ತಲೆಯಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳವರಿಗೂ ಇದರ ವಾಸನೆ ಹೋಗುವದಿಲ್ಲಾ ಈತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಒಬ್ಬರಿಗೂ ಬಹಳಅನುಕೂಲವಾದದ್ದು ಪ್ರತಿಕುಟುಂಬದಲು ಈತೈಲವು ಅವಶ್ಯಕವಾಗಿ ಯಿರಬೇಕಾದ್ದು.

5-ವಲೆ ತೈಲವುಳ್ಳ ಡಬ್ಬಿ 1 ಕ್ಕೆ ಕ್ರಯ 36 ಇನಾಂ ಸಾಮಾನುಗಳಸಮೇತ ರೂ 1 0 0

ಇನಾಂ ಸಾಮಾನು ತಪ್ಸೀಲು ಸ್ತ್ರೀಗಳು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ 1 ದಂತದಬಾಚಣಿಕೆ 1, ಮುಖ ನೋಡಿಕೊಳ್ಳುವ ಕನ್ನಡಿ , ಜರ್ಮನ್‌ಸಿಲ್ವರ್ ಕಾಡಿಗೆ ಬರಣಿ 1 ಅತ್ತರುಬಿಲ್ಲೆ 1, ವಾಸನೆಯುಳ್ಳ ಸೋಪು 1 ತಾಂಬೂಲಪಾತ್ರೆ 12 ಕೊಂಡಗಿಣಿಗಳು ಕಾರ್‌ನೇಷನ್ ಬ್ರೂಚ್ 1, ಜವಾದುಡಬ್ಬಿ , ಇದರ 36 ಇನಾಂಕೊಡಲ್ಪಡುತ್ತೆ

ಕೃಷ್ಣಾಂಜನಂ.

ಪ್ರಸಿದ್ಧವಾದ ಔಷಧವು

ಈ ಕೃಷ್ಣಾಂಜನಂ ಎಂಬ ಔಷಧವು ಅನೇಕ ವೈದ್ಯರುಗಳೂ, ಡಾಕ್ಟರುಗಳೂ, ಪರೀಕ್ಷಿಸಿಲೋಕವೆಲ್ಲವೂ ಪ್ರಸಿದ್ಧಿಗೊಂಡಿದೆ

ತಲೆಯನೋವು, ಒಂದುಪಕ್ಕ ತಲೆನೋವು, ಕತ್ತುನೋವು ಇವುಗಳನ್ನು 5 ನಿಮಿಷಗಳಲಿ ಖಂಡಿಸುವುದು

ಕೆಮ್ಮಲು,ನಗಡ, ಕಫಕೊರಳಿ ನಿನನೋವು, ಇವುಗಳನ್ನು , ನಿಮಿಷಗಳಲ್ಲಿ ಖಂಡಿಸುವುದು

ಸೊಂಟ, ನೋವು,ಪಕ್ಕಶೂಲೆ, ಪಾರ್ಶ್ವವಾಯು, ಕೀಲುಗಳಬಾವು, ಹಿಡಿತ ಇವುಗಳಿಗೆ 3 ಹೊತ್ತು ಉಪಯೋಗಿಸಿ ಬಂದಲ್ಲಿ ಸೌಖ್ಯವಾಗುವುದು

ಚೇಳು, ಮೂಗಿಲಿ, ಸಾವಿರಕಾಲರ್, ಇವುಗಳು ಕಚ್ಚಿದ ದೇಶದಲ್ಲಿ ಈ ತೈಲವನ್ನು ಸವರಿ ಚನ್ನಾಗಿ ಉಜ್ಜುವದರಿಂದ ಒಡನೆ ಯೇಸುಖವಾಗುವುದು.

ಹಲ್ಲುನೋವು ಹಲ್ಲುಹೊಡೆತ, ಇವುಗಳಿನೋವು ಇರುವ ಪ್ರದೇಶದಲ್ಲಿ ಈ ತೈಲವನ್ನು ಒಂದು ಬೊಟ್ಟು ಹಾಕಿದ್ದಲ್ಲಿ ಒಡನೆಯೆ ಸೌಖ್ಯವಾಗುವುದು ಈ ತೈಲವು ಆಕಳಬೆಂಣೆಗೆ, ಪುನುಗು ಪಚ್ಚಕರ್ಪೂರ ಶೇರಿಸಿದಂತೆ ಬಹಳ ಮೇಲಾದ ವಾಸನೆಯುಳ್ಳದ್ದು,

ಇದರಬೆಲೆ ಡಬ್ಬಿ 1-ಕ್ಕೆ ರೂ 0-5-0
12 ಡಬ್ಬಿಗಳು 5 1 0





ರೋಜಾಹುವ್ವ.

ಶಾವಂತಿಹುವ್ವ

ದೊಡ್ಡ ದೊಡ್ಡ ಸ್ತ್ರೀರುಗಳು ತಲೆಯಲ್ಲಿ ಧರಿಸಿಕೊಳ್ಳುವದಕ್ಕೆ ಬಹಳ ಸೊಗಸಾದ ರೋಜಾಹೂವು, ಶಾವಂತಿಗೆಹೂವು ಈ ಎರಡುದಿನಸುಗಳೂ ಬೆಳ್ಳಿ ಹುರಿ ಗಿಲ್ಟು ಮೊದಲುಕೆಲಸ ದೊಡ್ಡ ಸ್ತ್ರೀರುಗಳೂಜಡೆಬಿಲ್ಲೆಯಂತೆತಲೆಯಲ್ಲಿಧರಿಸಿಕೊಳ ಬಹುದು.

ಇದರಬೆಲೆ ರೋಜಾಹುವ್ವ ಕ್ಕೆ ರೂ -0
ಶಾವಂತಿಗೆ ಹುವ್ವ 1-ಕ್ಕೆ ರೂ -1-0

ಜಡಕುಚ್ಚು

ಮದವೆಕಾಲದಲ್ಲೂ, ಮತ್ತು ವಿಶೇಷಕಾಲದಲ್ಲೂ, ಸ್ತ್ರೀರುಗಳಿಗೆತಲೆಯಲ್ಲಿ ಧರಿಸಿಕೊಳ್ಳಬಹುದಾದ ಜಡೆಕುಚ್ಚುಗಳು ಇದಕ್ಕೆ ಎಲೆಕ್ಟ್ರಿಕ್ ಬಂಗಾರದಗಿಲೀಟು ಹಾಕಿರುತ್ತದೆ 3 ಕುಚ್ಚುಗಳು ಅಡಗಿರುವದು

ಇದರ ಕ್ರಯ ರೂ. 1-8 0

ಇವಲ್ಲದೆ ಇನ್ನು ಅನೇಕ ಗಡಿಯಾರಗಳು, ಫ್ಯಾನ್ಸಿ ಸಾಮಾನುಗಳು ನಮ್ಮಲ್ಲಿ ದೊರಿಯುತ್ತವೆ ಟಪಾಲು ಚಾರ್ಜು ಅಲಾಯದ ಹಾಕಲ್ಪಡುತ್ತೆ

ನಮ್ಮ ವಿಲಾಸ:— ಸು ಪೀ ರಿ ಯ ರ್ ವಾ ಚ್ ಕಂ ಪೆ ನಿ.,
ಪೋಷ್ಟುಬಾಕ್ಸ ನಂ ೧೬೭. ಮದರಾಸ್. ಇ

MURAHARI PRESS MADRAS,

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸರ್ ೧೯೧೩ ನೇ ಇಸವಿ ಜೂಲೈ ತಾರೀಖು ೨೪ ನೇ ಗುರುವಾರ. ಸಂಚಿಕೆ ೪

ಶಂಕ್ಷಿಸಿ ನೋಡದ ಅಗ್ಗದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ಬಿಕರಿಯಾಗುತ್ತಿವೆ. ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ.

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತವೆ. ಕೂದಲು ಸತ್ತು ಹೋಗುತ್ತೆ. ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತನಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣ ಕೊಡುತ್ತೆ, ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳೆಸುತ್ತೆ. ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಕಚಕನುವವು, ನಿಬಿಡನಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ಹರಿದು ಬೀಳು ಹೋಗದೆ ದಟ್ಟವಾಗಿ ಬೆಳೆಯುವದು. ಕೂದಲಿಗೆ ಹೊಳಪುಕೊಡುತ್ತೆ, ನೆತ್ತಿ ಬುರುಡೆಯನ್ನು ಮದವಾದುತ್ತೆ, ಸುಂಡಿನ ಹೊಟ್ಟನ್ನು ಅಣಗಿಸುತ್ತೆ. ಉತ್ತಮೋತ್ತಮವಾದ ಸುಗಂಧವುಳ್ಳ ದ್ರಾವದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ. ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳೆಸುವದು. ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ.

ಇದರ ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಬೇರೆ ಕೊಡಬೇಕು.

3 ಸೀಸೆಗಳಿಗೆ ರೂ 2-10-0 ಅಂಚೆಯ ವೆಚ್ಚ 0-7-0

ನಮೂನೆಯು ಬೇಕಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿ

ಮೈಸೂರು ಎಗ್ಜಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು.

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಜದೆ ನನಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ. ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ|| ಡಿ ಸಾತೊಮರ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲು ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ. ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ. ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ" ವಿರುದುಪಟ್ಟಿ ಕೆ ವಿ ಎಸ್. ಸ್ಕೈಸ್ಕೂಲ್ ಹೆಡ್ ಮಾಸ್ಟರ್ ಮಿ|| ಎಂ ಸುಬ್ರಹ್ಮಣ್ಯಪಿಳ್ಳೆಯವರು ಬರೆಯುವದು—"ನಿಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ಪರೀಕ್ಷೆಮಾಡಿದೆನು. ಅದು ಕೂದಲನ್ನು ಹುಟ್ಟಿಸಿ ಅಂದವಾಗಿಯೂ, ಕೋಮಲವಾಗಿಯೂ, ಸೊಂಪಾಗಿಯೂ ಬೆಳೆಸುವುದೆಂದು ಖಂಡಿತವಾಗಿ ಹೇಳಬಲ್ಲೆನು. ದಯವಿಟ್ಟು ಇನ್ನು ಮೂರು ಬಾಟ್ಲು ಎಣ್ಣೆ ಕಳುಹಿಸಿಕೊಡಿ" ಐಸಟೋ ಡಿಸ್ಟ್ರಿಕ್ಟ್ ಕಂಟ್ರೋಲರ್ ಆಫೀಸ್ ಮಿ ಗೋಪಾಲಯರ್ ಜೋಸ್ಯಿಯವರು ಬರೆಯುವದು—"ದಯವಿಟ್ಟು ನಿಮ್ಮ ಕಾಮಿನಿಯಾ ಎಣ್ಣೆ ಆರು ಬಾಟ್ಲು ಕಳುಹಿಸಿರಿ. ಒಂದು ತಿಂಗಳ ಹಿಂದೆ ನೀವು ಕಳುಹಿದ ಬುದ್ದಿಗಳು ಮುಗಿದುಹೋಯಿತು. ಇದೇ ಉತ್ತಮೋತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳಬಲ್ಲೆನು" ಆದಕಾರಣ ನೀವು ಒಂದು ಸಲ ತರಿಸಿ ಪರೀಕ್ಷೆಮಾಡಿ.

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ನಾವುಗಳೆಲ್ಲಾ ಕಾಮಿನಿಯಾ ಎಣ್ಣೆ ಎಣ್ಣೆ ನಿಮ್ಮ ಸ್ಥಳದ ಷಾಪ್‌ಕೀಪರಲ್ಲಿ ಅದು ಇಲ್ಲದಿದ್ದರೆ ಅವನ ಹೆಸರು ವಿಳಾಸದ ಸಮೇತ ನನಗೆ ತಿಳಿಸಿ. ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು. ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ. ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು

ಏಜೆಂಟ್, ಡಿ. ಉಲ್ಲಾಕ್ ಮಾರ್ಟಿನ್, ಮಂಗಳೂರು

ತಮ್ಮ ವಿಳಾಸ:— [8-28]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಡೋಂಗರೆ ಇವರ ಬಾಲಾಮೃತ.

[150-1]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದದ್ದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕ್ಷೀಣ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ಥಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತು ೧೨ ಆಣೆ; ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ.

ಕ್ಷೇತ್ರಗಣಿತದ ಸೂತ್ರಗಳು.

ಹಚ್ಚ ಕಾಂಪನಾಗಿ ತೆಗೆದುಕೊಂಡಿರುವ ಪ್ರತಿಯೊಬ್ಬ ವಿದ್ಯಾರ್ಥಿ ಅತ್ಯವಶ್ಯಕವಾಗಿ ಓದಬೇಕಾದದ್ದು. ಪರೀಕ್ಷೆಗಳಲ್ಲಿ ಬಹುಮಟ್ಟಿಗೆ ಸಹಾಯ ಮಾಡುವುದು. ಕ್ರಯ 1 ಆಣೆ ಮಾತ್ರ. 5 ಕ್ಕೆ 1 ಉಚಿತ.

ವಿಳಾಸ —ಎ. ಹಿರಿಯಣ್ಣಪ್ಪ, ಅ|| ಮಾಸ್ಟರ್, ಎ. ವಿ.

[110-2] ಸ್ಕೂಲ್, ಹುಳಿಯಾರು (ತುಮಕೂರು ಡಿ)

ಕ್ಯಾಸುಭೋಗರಿಗೆ

ಮುಖ್ಯವಾಗಿ ಬೇಕಾಗಿರುವ ಬಾರಾಸಮೂನೆ ಲೆಕ್ಕದ ಫಾರಂಗಳು ಉತ್ತಮ ಕಾಗದದಲ್ಲಿ ಪ್ರಿಂಟುಮಾಡಿ ಬಿಕರಿಗೆ ಸಿದ್ಧನಾಗಿದೆ [113-2]

ಎಸ್. ಆರ್. ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರ್ ಸಿಟಿ.

ಪದಕಸಹಿತವಾದ ನಾಲ್ಕು ಎಳೆ ಮುತ್ತಿನ ಕಂಠಿ

ಈ ನಕ್ಷೆಯಲ್ಲಿ ತೋರಿಸಿರುವ ಹಾರವು ಮಕ್ಕಳೂ ದೊಡ್ಡವರೂ ಧರಿಸುವದಕ್ಕೆ ಯೋಗ್ಯವಾದದ್ದು. ಪ್ರಸಿದ್ಧಿಯಾದ ಚಿನ್ನ ಮಿಶ್ರದ ಮಧುರೆ ಹಿತ್ತಾಳೆ



ಕಂಬಿಯಲ್ಲಿ ಒಳ್ಳೆಯ ಮುತ್ತಿನಂತಹ ಗಟ್ಟಿ ಮುತ್ತನ್ನು ಅಸಲ್ ಮುತ್ತಿನಹಾರ ತಯಾರಿಸತಕ್ಕವರಿಂದ ಸುತ್ತಿಸಿ ಕೊರಳಿಗೆ ಭೂಷಣವೂ ಅಲಂಕಾರವೂ ಆದ ಈ ಮಾಲೆಯನ್ನು ತಯಾರಿಸಿರುತ್ತೇವೆ. ಯಾವ ಆಭರಣವಿಲ್ಲದಿದ್ದರೂ ಈ ಹಾರವನ್ನು ಧರಿಸುವುದರಿಂದ ಹೆಂಗಸರ ಸೌಂದರ್ಯವು ಮತ್ತಷ್ಟು ಹೆಚ್ಚುತ್ತದೆ. ಇದಕ್ಕೆ ನೀರೂ ಬೆವರೂ ತಗಲಿದಾಗ್ಯೂ ಕೆಡದೆ ಎಷ್ಟು ವರ್ಷಗಳಾದರೂ ಉಪಯೋಗಿಸುವುದಕ್ಕೆ ಯೋಗ್ಯವಾಗಿರುವ ಈ ಆಭರಣವನ್ನು ಎಲ್ಲರೂ ಪರೀಕ್ಷೆ ಬಗ್ಗೆ ತರಿಸಿ ನೋಡಿ

ಪದಕಸಹಿತವಾದ ಹಾರ 1 ಕ್ಕೆ ರೂ 1-8-0.

ಪದಕವಿಲ್ಲದ ಹಾರ 1 ಕ್ಕೆ ರೂ 0-12-0

[119-1] ವಿಳಾಸ—

ಏಕಾಂಬರಂ ಕಂಪೆನಿ,

18 ಸೆಕೆಂಡ್ ಲೈನ್ ಬೀಚ್, ಮದರಾಸ್.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

104 9

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತಗೆದುಕೋ. ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡ. ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು—(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಜಿ. ಎಸ್. ಕೆನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಬಹುಮತಿ ಗಡಿಯಾರಗಳು.

ಈ ಕೆಳಗೆ ನಮೂದಿಸಿರುವ 7 ರೂಪಾಯಿನ ಗಡಿಯಾರವು ಬರುವ ಡಿಸೆಂಬರ್ ಆಖೈರ್‌ವರೆಗೆ 3-15-0 ಕ್ಕೆ 10 ಬಹುಮಾನಗಳೊಡನೆ ಕೊಡಲ್ಪಡುತ್ತೆ. ಉತ್ತರ

ಮುಖಿ, ಸ್ಫಟಿಕದರ್ಪಣ, ಸಾಮಾನ್ಯಪ್ರಮಾಣ, ಸಂಕುಚಿತ ಪಾವರ್ತನವುಳ್ಳ ಗಡಿಯಾರವು 30 ವರುಷಗಳ ವರೆಗೆ ಚೆನ್ನಾಗಿ ನಡೆಯುತ್ತಿರುವದು. ಪೇಟೆಂಟು ಮಾದರಿಯಾದ ಹೊಸ ನಮೂನೆ. ಮುಳ್ಳುಗಳು ಸೆಕೆಂಡ್, ಸಮಯಕ್ರಮೋಪಕರಣ ಉಳ್ಳದ್ದು, ಹದಿನೈದು ಉಕ್ಕಿನ ಬಾಗಿಲುಳ್ಳದ್ದು, ದೂರು ಸೇರಿದ್ದು. ಸರಿಯಾದ ಕಾಲವನ್ನು ತೋರಿಸುತ್ತಿರುವುದು, ಸುಲಭವಾಗಿ ಸರಿಪಡಿಸಿಕೊಳ್ಳತಕ್ಕದ್ದು. ಈ ಗಡಿಯಾರವನ್ನು ತರಿಸಿಕೊಳ್ಳುವವರಿಗೆ ಈ ಕೆಳಗೆ ನಮೂದಿಸಿರುವ 10 ಬಹುಮತಿಯನ್ನು ಉಚಿತವಾಗಿ ಕೊಡಲ್ಪಡುತ್ತೆ. ಬಹುಮತಿ ಸಹಿತ ಕ್ರಯ ರೂ 3-15-0 ಮಾತ್ರವೇ. ನಾವು ಕೊಡುವ ಬಹುಮತಿಯು ಹತ್ತು ಕ್ರಮಕ್ಕಿಂತಲೂ ಎಷ್ಟೋ ಪಾಲು ಹೆಚ್ಚಾದದ್ದು —1 ಮೈಸೂರು ದೇಶದ ಸುಂದರವಾದ ಬಂಗಾರದ ಗಿಲ್ಟಿನ ಕೈಕಪ್ಪ ಕ್ರಯ ರೂ. 1; 2 ಎಲೆಕ್ಟ್ರೋ ಬಂಗಾರದ ರೇಖೆಯ ಕ್ರಮಕ್ಕಿಂತಿಗೆ ಹುವ್ವು ಕ್ರಯ 12 ಆಣೆ, 3 ಬಂಗಾರದ ಗಿಲ್ಟು ನಮೂನೆಯ ಸರಪಣಿ ಕ್ರಯ ರೂ. 1. 4 ಇಮಿಟೇಷನ್ ಡೈಮಂಡ ಷರಟ್ ಗುಂಡಿ ಕ್ರಯ 8 ಆಣೆ; 5 ಜರ್ಮನ್ ಬೆಳ್ಳಿಯ ಕುಂಕುಮ ಭರಣಿ ಕ್ರಯ 8 ಆಣೆ, 6 ಜರ್ಮನ್ ಬೆಳ್ಳಿಯ ಸಾದಿನ ಚಿಪ್ಪು ಕ್ರಯ 4 ಆಣೆ, 7 ಜರ್ಮನ್ ಬೆಳ್ಳಿಯ ಕಣ್ಣುಕಪ್ಪಿನ ಬರಣಿ ಕ್ರಯ 2 ಆಣೆ; 8 ಜರ್ಮನ್ ಬೆಳ್ಳಿಯ ಸಣ್ಣ ಪೆಟ್ಟಿ ಕ್ರಯ 8 ಆಣೆ, 9 ಜರ್ಮನ್ ಬೆಳ್ಳಿಯ ಹಾಲಿನ ಬಳಲೆ ಕ್ರಯ 6 ಆಣೆ, 10 ಅಚ್ಚಬೆಳ್ಳಿಯಿಂದ ತಯಾರಿಸಿ ಬಂಗಾರದ ಗಿಲ್ಟು ಹಾಕಿದ ಮೂಗು ಬೊಟ್ಟು ಕ್ರಯ 8 ಆಣೆ. [148-1]

ವಿಳಾಸ—ಡರ್ಬ ವಾಚ್ ಕಂಪನಿ, ಸೆಕೆಂಡ್ ಲೈನ್ ಬೀಚ್, ಮದರಾಸ್.

ರೈಲ್ವೆ ರಗ್ಯುಲೇಟರ್ ಲೀವರ್ ವಾಚ್.

ಕ್ರಯ ರೂ 2 0 0 ಸಕೇಡು ಹ್ಯಾಂಡು ಇರುವಂಥಾದ್ದು ರೂ 2-4-0.

ಇದು ಗಡಿಯಾರಗಳನ್ನು ತಯಾರಿಸುವದರಲ್ಲಿ ಹೆಸರುವಾಸಿಯನ್ನು ಪಡೆದ ಸ್ವಿಟ್ಜರ್‌ಲೆಂಡ್ ದೇಶದಲ್ಲಿ ತಯಾರಿಸಲ್ಪಟ್ಟದ್ದು. ಇವು ಗಂಭೀರವಾಗಿಯೂ ಬಹು



ಸುಂದರವಾಗಿಯೂ ಇರುತ್ತೆ. ಒರಟು ಕೆಲಸ ಮಾಡುವವರಿಗೆ ಅನುಕೂಲವಾದದ್ದು. ಬಹಳ ದಿನ ಬಾಳಿಕೆ ಬರುವ ದಕ್ಷೋತ್ಕೃಷ್ಟ ಗಟ್ಟಿಯಾದ ಸಾಮಾನುಗಳಿಂದ ತಯಾರು ಮಾಡಿದೆ. 2 ವರುಷ ಗ್ಯಾರಂಟಿ ಕೊಡುತ್ತೇವೆ.—ಕೈನಲ್ಲಿ ಕಟ್ಟಿಕೊಳ್ಳುವ ಚಿಕ್ಕ ಗಡಿಯಾರ 4 ರೂ. ಸ್ಪೈರ್ 4 ಸ್ಟ್ರಾಪ್ 9 ಕ್ಯಾರಟ್ ಬಂಗಾರದ ಫ್ರೇಂ ಎಲ್ಲಿ ಕಟ್ಟಿಕೊಳ್ಳುವ ಗಡಿಯಾರ ರೂ 15. ಬಿ ಟೈಂಪೀಸ್ 3-0-0. ಅಚ್ಚ ಕರೀ ಬಣ್ಣದ ಮೂರು ಚಿಕ್ಕ ಜುಂಗಡಿ ಸೀರೆ 2-8-0. ಜರ್ಮನ್ ಜೇಬು ದೀಪ 1-13-0. ಹೊಸದಾಗಿ ಕಂಡುಹಿಡಿದ ಎಲೆಕ್ಟ್ರಿಕ್ ಜೇಬು ದೀಪ ದೊಡ್ಡದು ರೂ 3, ಚಿಕ್ಕದು ರೂ 2-8-0. ಈ ದೀಪಕ್ಕೆ ಎಣ್ಣೆ ಹಾಕಬೇಕಾದದ್ದಿಲ್ಲ, ಗಾಳಿಗೆ ಆರಿಹೋಗುವದಿಲ್ಲ. ಬೆರಳಿಂದ ಗುಂಡಿಯನ್ನು ಒತ್ತಿದರೆ ಅತಿ ಪ್ರಕಾಶವಾಗಿ ಉರಿಯುತ್ತದೆ. ಬಹಳ ನೂತನವಾಗಿಯೂ ಸೊಗಸಾಗಿಯೂ ಇದೆ. ಕತ್ತಲೆಯಲ್ಲಿ ಎಲ್ಲಿಬೇಕಾದರೂ ಹಿಡಿದುಕೊಂಡು ಹೋಗಬಹುದು. ಜೇಬಿನಲ್ಲಿ ಹಾಕಿಕೊಳ್ಳುವದಕ್ಕೆ ತಕ್ಕಂಥಾದ್ದು. ಇನ್ನು ಯಾವ ಸಾಮಾನುಗಳು ಬೇಕಾದರೂ ಕಳುಹಿಸುತ್ತೇವೆ. ವಿಳಾಸ— [121-3]

ಎ. ಎನ್. ಪದ್ಮನಾಭರಾವ್, 101 ಚೈನಾ ಬಜಾರ್ ರೋಡ್, ಮದರಾಸ್.

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕೆಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ 3 ಆಣೆ ಅರಕ್ಕೊಂದು ಉಚಿತ

[187 12] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಇಂಗ್ಲಿಷ್ ಸ್ವಿಸ್ ಲೀವರ್ ವಾಚ್

77 14

ಇದರ ಕ್ರಯ	4 ಬಹುಮಾನಗಳ ಸಮೇತ	೬ ವರುಷಗಳ
3-12-0 ಮಾತ್ರ	ಬಹುಮಾನಗಳ ತಪಶೀಲು	ಗ್ಯಾರಂಟಿ

1 ಒಂದು ನಾಜೂಕಾದ ವಾಚ್ ಸರಪಳಿ

2 ಅಧಿಕ ಸುವಾಸನೆಯುಳ್ಳ ಸೆಂಪುಳ ಅತ್ತರ್

3 ತಲೆಗೆನ್ನು ಹಾಕಿಕೊಳ್ಳುವ ಹೂವಿನ ತೈಲ



ಇವು ಮಕ್ಕಳ ಆಟದ ಬೊಂಬೆಗಳಂತೆ ಕೆಲವು ದಿವಸಗಳು ಆಟವಾಡಿ ನಂತರ ಕೆಟ್ಟುಹೋಗುವಂಥಾ ಅಲ್ಪಗಡಿಯಾರಗಳಲ್ಲ ಶ್ರೇಷ್ಠವಾದ ಮತ್ತು ಬಹು ಪ್ರಸಿದ್ಧವಾದ ಇಂಗ್ಲಿಷ್ ಸ್ವಿಸ್ ಲೀವರ್ ಕೆಲಸದಿಂದ ತಯಾರಾದವು ಗಂಭೀರವಾದ ಘಂಟೆ ಮತ್ತು ಮಿನಿಟ್‌ಗಳ ಮುಳ್ಳುಗಳುಳ್ಳದ್ದು ಬಹು ಬಲಿಷ್ಠವಾದ ಮತ್ತು ನಾಜೂಕಾದ ಯಂತ್ರಸಾಮಾನುಗಳಿಂದ ತಯಾರಾಗಿರುತ್ತವೆ ಅನೇಕ ವರುಷಗಳ ಪರಿಯಂತರ ಬಾಳಿಕೆ ಬರುವಂಥಾದ್ದು ಆದಕಾರಣ ಆದರಾಗ ಒಂದು ಸುರಿಯುತ್ತವೆ

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ:—

ಬಿ ಆರ್ ವೆಂಕಟರಮಣ ಅಂಡ್ ಕಂಪೆನಿ,

ನಂ 7 ಜೋನ್ ಸಂಗಟಾಪಿಳ್ಳೈಯರ್ ಬೀದಿ ಮದರಾಸು

ನಮೂನೆ ಮುಫತ್ತು
ಕೇಶಕುಸುಮಾಕರ ತೈಲವು.

ಸಾಟಿಯುಳ್ಳದ ಈ ತೈಲವು ಜ್ಞಾಪಕಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ ಬುದ್ಧಿಯನ್ನು ವಿಕಾಸನಮಾಡುವದರಲ್ಲಿಯೂ, ಒತ್ತಾಗಿಯೂ ಕೇಶವನ್ನು ಬೆಳೆಸುವದರಲ್ಲಿಯೂ ಮೂಳೆಯನ್ನು ಬಲಪಡಿಸುವದರಲ್ಲಿಯೂ ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುಡ್ಡಿ ತೈಲ ಕ್ರಯ 10 ಆಣೆ ಮೂರು ಬುಡ್ಡಿಗಳ ತೈಲ ಕ್ರಯ ರೂ 1 12 ಆ ಆರು ಬುಡ್ಡಿಗಳ ತೈಲ ಕ್ರಯ ರೂ 3 1 ಆ ಡಜನ್ ಬುಡ್ಡಿಗಳ ಕ್ರಯ ರೂ 6

ವಿ ಪಿ ಅಂಚೆ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ

[82 11] ಔಷಧಾಲಯ 177 ಮಿಂಟ್ ಬಜಾರ್ ರೋಡ್, ಮದ್ರಾಸು

ರಾಸ್‌ಕೋಫ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಳಿ ಸಮೇತ

ರೂ 2-4 0 ಮಾತ್ರ 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 1 ಆಣೆ

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒಟ್ಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಟಲೆ ಗಡಿಯಾರಗಳು ಖರ್ಚಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ ಕೂಡಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,

[120 1] ಪೋಸ್ಟ್ ಬಾಕ್ಸ್, ನಂ 167, ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್‌ಸೇಟೆಡ್ ಬ್ಯಾಲೆನ್ಸು ಬಹು ಬಲಿಷ್ಠವಾದ ೬ ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 6 0 0 ಇದನ್ನು ಸೆಪ್ಟಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ಧನಲಕ್ಷ್ಮಿ ಅಂಡ್ ಕಂಪೆನಿ,

[121 5] ಸಾಹುಕಾರ್ ಪೇಟೆ ಪೋಸ್ಟು, ಮದರಾಸು

CHAMBERLAIN'S COUGH REMEDY.

ಚೇಂಬರ್ಲೀನ್ ಯವರು ಕಂಡುಹಿಡಿದ ಕೆಮ್ಮಿನ ಔಷಧವು

1 30



ಶೀತದ ಕೆಮ್ಮು ಗಂಟಲು ಗೊರಗೊರ ಎನ್ನುವುದು ಮುಟಿಗೆಮ್ಮು ನಾಯಿಗೆಮ್ಮು ಎಲ್ಲಾ ತರದ ಶೀತ, ಗಂಟಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು —ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾದೆ

ಆ ಕೆಮ್ಮನ್ನು ಅಲಕ್ಷ್ಯ ಮಾಡಿದರೆ ಅದು ಮಹಾ ಅಪಾಯವನ್ನು ಉಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ಶ್ವಾಸಕೋಶ ಉರಿಯುವಿಕೆ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೀನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ರಭಸವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೀನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೆಯಿಂದ ಮುಟ್ಟದ ತಯಾರಾಗಿದೆ

ಎಲ್ಲೆಲ್ಲೂ ವಿಕರಿಯಾಗುವದು	ಸಣ್ಣ ಸೀಸೆಗೆ ೧ ರೂಪಾಯಿ	ದೊಡ್ಡ ಸೀಸೆಗೆ ೨ ರೂಪಾಯಿ

ಪ್ರತಾಪಕಂಠೀರವ ಚರಿತ್ರೆ.

(1) ದರ್ಬಾರ್‌ದಲ್ಲಿ ವ್ಯಸನಹಾಯಿ ಉಂಟಾಗುವುದರಿಂದ ಅವರ ಯತ್ನಗಳ ತೊಂದರೆ ಎ ಪರಿ ಹೊಲಗೆ ಹೋಗುತ್ತವೆ ಎಂಬ ನೀತಿ (2) ಸ್ತ್ರೀಧರ್ಮ ಬುದ್ಧಿಕೌಶಲ ಪ್ರೀಯುಳ್ಳ ಸಾಹಸ ಚಾತುರ (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು (4) ವನ, ಸರಸ್ಸು, ಆರಾಮಾದಿ ವರ್ಣನೆಗಳು (5) ಮನುಷ್ಯಯತ್ನಕ್ಕೆ ಮಾರದೆ ಈಗಿನ ಅನುಭವಕ್ಕೆ ಚಿಕ್ಕ ವಿಷಯಗಳು (6) ಓದಿ ತಿಳಿದುಕೊಳ್ಳುವಂಥಾ ಸುಂದರ ಶೈಲಿ (7) ಸರಸಯುಂಕೆ ೭ ಪತ್ರ ದು ಜೋಡಿಸಲ್ಪಟ್ಟು ಮನಸ್ಸನು ಎಳೆಯುವಂಥಾ ಕಥಾಭಾಗಗಳು ಕೂಡಿವೆ ಕ್ರಯ —1 ರೂಪಾಯಿ ಟಪಾಲ್ ಹಾಸಲು ಬೇರೆ

[11] ನಮ್ಮ ವಿಳಾಸ —ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ

ಸಮಸ್ತ ವಿಧವಾದ ನೋವೂ ಉರಿತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು ವಾಯುನೋವು ಬೆನ್ನಿನ ಸೆಳೆತ, ಕೀಲುನೋವು, ಕ್ರಿಮಿ ಕಡಿತ ಮೊದಲಾದ ಅನೇಕ ತರದ ವ್ಯಾಧಿಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಒಂಟು ಹಗಗೆ ಒಂದರಂತೆ ವಿಕರಿಯಾಗುತ್ತಲಿವೆ ಡಾಕ್ಟರುಗಳೂ ವೈದ್ಯಮಾಹತರಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ಅಮೃತಾಂಜನವು ಎಲ್ಲಾ ಪಟ್ಟಣಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ವಿಕರಿಯಾಗುವದು

ಮುಕ್ಕಟ್ಟ ಔಷಧ ಡಬ್ಬಿಗೆ 6 ಆಣೆ 12 ಕುಪ್ಪಿಗೆ ರೂ 3 4 0 ಹಲ್ಲುಪುಡಿ ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ 1-2-0 ವಿ ಪಿ ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ [12-22]

ವಿಳಾಸ —ಅಮೃತಾಂಜನ ಡಿಪ್ಪೋ, ೧೯ ಪ್ರಿಯರ್ ರೋಡ್, ಫೋರ್ಟ್, ಬೊಂಬಾಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಪಚ್ಚೆ ಭಸ್ಮ ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದ ಛಳಿಜ್ವರ, ಹೊಟ್ಟೆ ಶೂಲೆ ಸಂದುಗಳ ನೋವು ಮೈ ಕಾಲು ಹೊದೆತ (ಭಾರ) ಮೈ ಸಡಿಲ, ಶೀತವಾತಗಳ ಬಾಧೆ ಅಜೀರ್ಣ, ಅಗ್ನಿನಷ್ಟ ಹಲ್ಲುನೋವು, ಕೆಮ್ಮಲು, ನೆಗಡಿ ನರಶಕ್ತಿ ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ ನೀರುಗಳ ಹವಾ ಬದಲ ಮೇಯನ್ನು ಸರಿಪಡಿಸಿ ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಸೂತಿ, ಮಕ್ಕಳ ಎಳವು ಜ್ವರ, ನಚ್ಚು ಜ್ವರ, ಕೃತತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ — 270 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ, 6 ಕುಪ್ಪಿಗೆ ಒಂದು ಕುಪ್ಪಿ ಮೆಚ್ಚು, 1 ರಿಂದ 12 ಕುಪಿ ವರೆಗೆ ಪೋಸ್ಟೇಜು 1 ಆಣೆ [136 17]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈನಿವಾರಿಕೆಂದು ತೊಂದರೆಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತವೆ ಸಮಯದಲ್ಲಿ ಪೇಟಾದಬೇಡಿ ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1 ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಮೂರು ಸಿದ್ಧೌಷಧಗಳು.

ವಕ್ತ್ರಾನಂದಕರೀಮಾತ್ರೆ ಮೂಲಿಕೆ ಪರಿಮಳದ್ರವ್ಯಗಳಿಂದ ತಯಾರಿಸಿದೆ ಒಂದನ್ನು ತಾಂಬೂಲದೊಡನೆ ಅಥವಾ ಬರೀ ಬಾಯಿಗೆ ಸೇವಿಸಿದರೆ ದುರ್ಗಂಧ ಹೋಗಿ ಸುವಾಸನೆಯಾಗುತ್ತೆ ರಕ್ತವನ್ನು ಶುದ್ಧಿಮಾಡುತ್ತೆ ಕರಳು ಗಂಟಲು ಬಾಯಿ, ಇವುಗಳು ತುಂಡಾದರೆ ಅರ್ಧ ತೊಲಾ ಬಾದಾಮಿ ಎಣ್ಣೆಯಲ್ಲಿ ಒಂದು ಮಾತ್ರೆ ತೇದು ಮಲಗುವ ಸಮಯದಲ್ಲಿ ತೆಗೆದುಕೊಂಡರೆ ಗುಣವಾಗುವದು 200 ಮಾತ್ರೆ ಸೀಸಾ 1 ಕ್ಕೆ 4 ಆಣಾ ಇಸುಬು, ಕಜ್ಜಿ, ತುರಿ ಇವುಗಳಿಗೆ ದಾಮಹರಿಣೀ ಪೌಡರ್ ತೋಲಾ 1 ಕ್ಕೆ 2 ಆಣೆ ಬಾಣಂತಿಯರು ಮಕ್ಕಳ ಶೀತ ನೆಗಡಿ ಇವುಗಳಿಗೆ ಉಪಯೋಗಿಸತಕ್ಕ ಕಸ್ತೂರಿಮಾತ್ರೆ 25 ಮಾತ್ರೆಗೆ 8 ಆಣೆ ಬಾಣಂತಿಯರು ಉಪಯೋಗಿಸತಕ್ಕ ಬಿಂದಾದ್ರ್ಯಕವೇಹ ಆರೋಗ್ಯದ ಶೀತ 12 ತೊಲಾ ದಬಿಗೆ 6 ಆಣಾ ಅವಶ್ಯಕವುಳ್ಳವರು ತಮ್ಮ ವಿಳಾಸ ವಿಶದವಾಗಿ ಬರೆಯಬೇಕು ಅಂಚೆ ಹಾಸಲು ಬೇರೆ, ತರಿಸಿಕೊಳ್ಳತಕ್ಕವರು ಮೆಚ್ಚತಕ್ಕದ್ದು 1 ಡಜನ್‌ಗೆ 1 ಸೀಸಾ ಡಿಸ್ಕೌಂಟು ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಮುಂಚೆ ಸ್ವಲ್ಪ ತರಿಸಿ ನೋಡಿ ನಂತರವಾದರೂ ತರಿಸಿಕೊಳ್ಳಿ [131 4]

ನಮ್ಮ ವಿಳಾಸ -ಶೇಷಭಟ್ಟರು,

ಸೇರಿವ್ ಪಂಡಿತ್ ಪೂರ್ಣಯ್ಯನವರ ಬೀದಿ, ಶ್ರೀರಂಗಪಟ್ಟಣ

ಕುಂತಳಾನಂದ ತೈಲವು

147 44

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ಶೀಘ್ರಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೧ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ, ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಶತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ ನಿವಾರಣೆ ಮುಂತಾದ್ದನ್ನು ತಿಳಿಸುವದು. (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು. (5) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ. ಇದರ ಕ್ರಯ ಪ್ರತಿ 1 ಕ್ಕೆ 1-8-0, ಟಪ್ಪಾಲು ಹಾಸಲು 4 ಆಣೆ

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಕಥಾರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ಜೋಡಿಸಿ ರಚಿಸಿದೆ.

ಇದರ ಕ್ರಯ ಪ್ರತಿ 1 ಕ್ಕೆ ರೂ. 4, ಟಪಾಲು ಹಾಸಲು 10 ಆಣೆ. ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು. [127-5]

ನಮ್ಮ ವಿಳಾಸ - ಎಮ್. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ.)

ಈ ಪುಸ್ತಕದಲ್ಲಿ—1. ಪಿನಲ್‌ಕೋಡು, 2 ದೊಡ್ಡಿ ಆಕ್ಟ್, 3. ಎಕ್ಸೈಜು ರೆಗ್ಯುಲೇಷನ್, 4. ಆಯುಧಗಳ ರೆಗ್ಯುಲೇಷನ್, 5. ದಹ್ಯವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7. ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10. ಟೆಲಿಗ್ರಾಫ್ ಆಕ್ಟ್, 11. ಪೋಸ್ಟ್ ಆಫೀಸ್ ಆಕ್ಟ್ ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿದೆ.

ಪ್ರತಿ ಪೆನಲ್ ಸೆಕ್ಷನ್‌ಗೂ ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ? ಯಾ ಕೂಡದೆ? ಮೊದಲು ಸಮನ್ ಹುಟ್ಟಬೇಕೆ? ಯಾ ವಾರಂಟು ಹುಟ್ಟಬೇಕೆ? ಜಾಮೀನ್ ತೆಗೆದುಕೊಳ್ಳಬಹುದೆ? ಯಾ ಕೂಡದೆ? ರಾಜಿಯಾಗಬಹುದೆ? ಯಾ ಕೂಡದೆ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 24-5-1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 2-0-0. ಟಪಾಲ್ ಹಾಸಲು 3 ಆಣೆ

ವಿಳಾಸ: ಎಲ್. ವೇಮಾರೆಡ್ಡಿ,

ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್,

[104 9] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-10

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವನ್ನಾ ಬೇಕಾದದ್ದು ಅವು ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ (೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವನ್ನಾ ಸ್ಟಗೆ ವಿಲಾಯಿತಿ ದೇಶ ಬಹುದು (೨) ಟೋಪಿಗಳನ್ನು ಕುದ್ದಾಗಿ ನಾವೇ ಎಂತು ಚನ್ನಾಗಿ ಮಾಡಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇ ಜರಿ, ಚನ್ನಾಗಿ ನೆಸೆದ ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದ ನಮ್ಮಲ್ಲಿ ದೊರೆಯುವದಿಲ್ಲ

ನಾನಾ ಕೆಂಪು, ಕಪ್ಪು, ಹಸಿರು, ಊದಾ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ

ಜುಚ್ಚಿಯುಳ್ಳ ಟೋಪಿಗಳು ರೂ ೧ ೮, ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ವಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಮುಸಲ್ಮಾನರ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ --

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಗೃಹಕೃತ್ಯದ ನೋಟೀಸು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—ನಂಜನಗೂಡು ಕಸಬಾ ಹುಲ್ಲಹಳ್ಳಿ ನಾಲಾ ಕೆಳಗೆ ದೇವಾಗ್ರದ ಬೈಲಿನಲ್ಲಿರುವ ಸರ್ವೆ 140, 141 ಮತ್ತು 142 ನೆ ನಂಬರು ಜಮೀನು ಮತ್ತು ಇತರ ಜಮೀನುಗಳು ನಮಗೆ ನನಗೆ ಮತ್ತು ಕೃಷ್ಣಶಾಸ್ತ್ರಿ, ಕಾಶಿಯಲ್ಲಿದ್ದ ಸೂರ್ಯನಾರಾಯಣದೀಕ್ಷಿತರು ಮತ್ತು ಇವರ ಮಗ ರಾಮಕೃಷ್ಣಶಾಸ್ತ್ರಿ ವಗೈರೆರುಗಳಿಗೆ ಸೇರಿದ ಅವಿಭಕ್ತ ಕುಟುಂಬದ ಆಸ್ತಿಯಾಗಿರುತ್ತೆ ಮೇಲ್ಕಂಡ ಜಮೀನುಗಳ ಮೇಲೆ ಸದರಿ ಸೂರ್ಯನಾರಾಯಣ ದೀಕ್ಷಿತರ ಮಗಳು ಕಾಶಿ ಪಾರ್ವತಮ್ಮನಿಗೆ ಯಾವ ವಿಧವಾದ ಹಕ್ಕು ಬಾಧ್ಯತೆಯೂ ಇರುವುದಿಲ್ಲ ನನಗೂ ಸದರಿ ಪಾರ್ವತಮ್ಮನಿಗೂ ಅವಿಭಕ್ತ ಕುಟುಂಬದ ಆಸ್ತಿ ವಿಚಾರದಲ್ಲಿ ಕಾಶಿಯಲ್ಲಿ ಸಿವಿಲ್ ಕೋರ್ಟಿನಲ್ಲಿ ವಿವಾದ ನಡೆಯುತ್ತಾ ಇದೆ ಹೀಗಿರುತ್ತಾ ಸದರಿ ಜಮೀನುಗಳನ್ನು ಯಾರೇ ಆಗಲಿ ಆಕೆಯಿಂದ ಕ್ರಯ, ಭೋಗ್ಯ, ಆಧಾರ ಮುಂತಾದ್ದರ ಮೂಲಕ ಪಡೆದರೆ ಅವರೆ ದಂಡಿತ ಊರ್ಜಿತವಾಗಲಾರದೆಂದು ಈ ಮೂಲಕ ತಿಳಿಸಿರುತ್ತೇನೆ [131-3]

3 7-1913 ಅವತಿ ಕೋದಂಡರಾಮಯ್ಯ

ಅನುಭವಸ್ಥರು ಹೇಳುವುದು.

ಹತ್ತಿಯ ತುಪ್ಪವು ಎಳೇಮಕ್ಕಳಿಗೂ ಹಿತಕಾರಿ!

(5) ಬಿ ರಾಮಯ್ಯನವರು, ಬಿ ಎ, ಮ್ಯಾನೇಜರು, ಮುಜರಾಯಿ ಸೆಕ್ರೆಟರಿಯವರ ಆಫೀಸು, ಬೆಂಗಳೂರು —"ಹತ್ತಿಯ ತುಪ್ಪವನ್ನು 10 ತಿಂಗಳಿಂದ ಸೇವಿಸುತ್ತಿದ್ದೇವೆ ನನಗೂ ಮಕ್ಕಳಿಗೂ ಆಶ್ಚರ್ಯಕರವಾಗಿ ಒಗ್ಗಿದೆ ಶುದ್ಧವಾದುದು ಬಸವನಗುಡಿ ಕೋಆಪರೇಟಿವ್ ಸೊಸೈಟಿಯಲ್ಲಿ ದೊರೆಯುವುದರಿಂದ ಅಲ್ಲಿಂದಲೇ ತಂದುಕೊಳ್ಳುತ್ತೇನೆ ಪೇಟೆಯಲ್ಲಿ ಬರಕವಾಗುವುದರಿಂದ ಶುದ್ಧವಾದುದಕ್ಕೆ ಕೆಟ್ಟ ಹೆಸರು ಬಂದಿರುವಂತೆ ತಿಳಿಯುತ್ತದೆ. ಶುದ್ಧವಾದದ್ದು ರುಚಿಯಾಗಿದೆ ಆರೋಗ್ಯವಾಗಿದೆ ಇಂತಹದನ್ನೇ ಮಾರುವ ಅಂಗಡಿಗಳು ಬಹಳ ಕಡಮೆ"—19 6-1913

ಎಚ್ಚರಿಕೆ :—ಹತ್ತಿಯ ತುಪ್ಪವು ರೂಢಿಗೆ ಬಂದಮೇಗಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಸುತ್ತಿದ್ದಾರೆ. ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುತ್ತಿರುವುದು ಎಲ್ಲಾಗುತ್ತಿದೆ

ನಮ್ಮ ಕಂಪೆನಿಯ ಏಜೆಂಟರಾಗಲಿ, ನಮ್ಮ ಡಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ

ಎಂಟರ್ ಪ್ರೈಸ್ ಕೋಆಪರೇಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್,

[116-5] 159, ಕಿಲಾರಿ ರೋಡ್, ಬೆಂಗಳೂರು ಸಿಟಿ

ಒಹಳ ಮೇಲಾದ ಅಚ್ಚ ಕರೀ ಬಣ್ಣದ ಮಧುರೆ ಚೌಂನಡಿ ಅಂಚಿನ ಸೀರೆಗಳು.

ಅವಲ್ ದರ್ಜೆ ಕ್ರಯ ರೂ 2 6-0



ಇದರ ಜ ವರ್ತಕರಿಗೂ, ಬಿಳಿಗ ಮಂತರಿಗೂ, ಬಡವರಿಗೂ ತಿಳಿಸುವುದೇನೆಂದರೆ—ನಮ್ಮಲ್ಲಿ ಕಪ್ಪು ಬಣ್ಣದ ಮಧುರೆ ಚೌಂನಡಿ ಸೀರೆಗಳು ಉಡುವುದಕ್ಕೆ ಧಮೂತಿಯಾಗಿಯೂ ನೋಡುವುದಕ್ಕೆ ನಯವಾಗಿಯೂ, ಸರ್ವರಿಗೂ ಲಾಯಖಾಗಿಯೂ, ಕೆಲವು ಜರಿ ಬಹಳ ಸುಲಭವಾಗಿಯೂ ತಯಾರಿಸಿದೆ ಎಷ್ಟುವರ್ಷ ಒಗೆದು ಉಟ್ಟರೂ ಎಷ್ಟು ಸ್ವಲ್ಪವೂ ಬಿಸಿಲಾರುಬುವುದಿಲ್ಲ ಇದರ ನೆರಿಗೆಗಳು ಬಹು ಘನ ವಾಗಿವೆ ಸೀರೆಯು ಉದ್ದ ಧಾರಾಳವಾಗಿ 17 ಮೊಳವಿದೆ ಪರೀಕ್ಷಾರ್ಥ ಒ ದನ್ನು ತರಿಸಿದರೆ ನಮ್ಮ ನೆರೆಹೊರೆಯವರು ಅನೇಕ ಸೀರೆಗಳಿಗೆ ಬರೆಯುವರು ಡಿಸ ಅಲ್ ಕ್ಲಾಸ್ ರಿಗ್ಯುಲೇಟರ್ ವಾಚ್ ರೂ. 1 17-0. ಪುಸ್ತಕಾಂತ ಹಾಂಡಾಯಿಲ್ ಬುದ್ಧಿ 1 ಕ್ಕೆ 0-8-0 [133-2]

ವಿಳಾಸ ಜಿ ಎ ಪಾಲ್ ಕಂಪನಿ, ನುಂಗಂಬಾಕಂ, ಮದರಾಸು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

4—7—1913 ರಿಂದ 11—7—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	1	2	6	5
ಮೈಸೂರು ,,	19	18	9	9
ಕೋಲಾರ್ ,,	0	0	56	19
ಕೋಲಾರ್ ಚಿನ್ನದ ಗಣಿಗಳು	0	0	0	0
ತುಂಕೂರು ಡಿಸ್ಟ್ರಿಕ್ಟ್	6	3	29	19
ಹಾಸನ ,,	0	0	26	9
ಚಿತ್ರದುರ್ಗ ,,	0	0	19	10
ಕಡೂರ್ ,,	5	5	48	34
ಶಿವಮೊಗ್ಗ ,,	9	6	3	3
ಜುಮ್ಲಾ.	40	34	195	108

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ಗ್ರೀಷ್ಮಋತೌ ಆಷಾಢ ಬಹುಳ ಸಪ್ತಮಿ ಶುಕ್ರವಾರದಿಂದ ಆಷಾಢ ಬಹುಳ ತ್ರಯೋದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1913 ನೇ ಜುಲೈ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ	ಮೈಸೂರು ಮಾಸ ತೇದಿ
25	ಶುಕ್ರ *	ಸಪ್ತಮಿ	10-10	ರೇವತಿ	24-31	10
26	ಶನಿ †	ಅಷ್ಟಮಿ	11-25	ಅಶ್ವಿನಿ	20-28	11
27	ಭಾನು ,,	ನವಮಿ	45-26	ಭರಣಿ	31-21	12
28	ಸೋಮ §	ದಶಮಿ	16-8	ಕೃತ್ತಿಕೆ	36-3	13
29	ಮಂಗಳ ‡	ಏಕಾದಶಿ	45-33	ರೋಹಿಣಿ	37-32	14
30	ಬುಧ ,,	ದ್ವಾದಶಿ	13-12	ಮೃಗಶಿರ	37-12	15
31	ಗುರು	ತ್ರಯೋದಶಿ	40-13	ಆರಿದ್ರಾ	36-11	16

* ಸಿಂಹಾಯನಂ, ಶ್ರೀ ಚಾಮುಂಡೇಶ್ವರೀ ಜನ್ಮೋತ್ಸವ. ಆಡಿಶುಕ್ರವಾರ, ಅಮೃತಸಿದ್ಧಿಯೋಗ. † ಮಳೆ ನಕ್ಷತ್ರ ಪುಷ್ಯ 3 ನೇ ಪಾದ. ,, ಮೇಲುಕೋಟೆಯಲ್ಲಿ ಕೃಷ್ಣರಾಜಮುಡೀ ರಥ. § ವಾತಾಭಾವ ‡ ಸರ್ವತ್ರ ಏಕಾದಶಿ ,, ಮಳೆ ನಕ್ಷತ್ರ ಪುಷ್ಯ 4 ನೇ ಪಾದ " ಪ್ರದೋಷ, ಮಾಸಶಿವರಾತ್ರಿ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೬-೮-೦	೧೭-೮-೦
ಕೆಂಬೂತಿ ಅಕ್ಕಿ ಅವಲ್	೧೬-೧೨-೦	೧೭-೮-೦
,, ,, ದುಯಂ	೧೬-೦-೦	೧೭-೦-೦
ಜಾಪ್ರಾಣಿ ಅಕ್ಕಿ	೧೬-೮-೦	೧೭-೪-೦
ಸಣ್ಣಕ್ಕಿ ಅವಲ್	೧೮-೦-೦	೧೮-೮-೦
,, ದುಯಂ	೧೭-೦-೦	೧೭-೮-೦
ಸೋಗಂ ಬೇಳೆ ಅವಲ್ ಪಲ್ಲ ೧ಕ್ಕೆ	೧೫-೪-೦	೧೩-೮-೦
,, ದುಯಂ ,,	೧೪-೮-೦	೧೨-೮-೦
ಹೊಸ ರಾಗಿ ಪಲ್ಲಾ ೧ಕ್ಕೆ	೭-೮-೦	೫-೦-೦
ಕಾರ್ರಾಗಿ ,,	೬-೧೨-೦	೪-೧೨-೦
ಜೋಳ ,,	೭-೮-೦	೭-೪-೦
ಹುರುಳಿ ಪಲ್ಲಾ ೧ಕ್ಕೆ	೧೦-೦-೦	೧೩-೧೨-೦
ಬೇಳೆ ಅವರೆ ,,	೧೫-೦-೦	೧೧-೦-೦
ಹೆಸರು ,,	೧೨-೦-೦	೧೪-೦-೦
ಉದ್ದು ,,	೧೪-೦-೦	೧೬-೦-೦
ಕಡಲೆ ,,	೧೧-೦-೦	೧೨-೦-೦
ಎಳ್ಳು ಸೇರು ೧೨೭ಕ್ಕೆ	೨೯-೦-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೭-೩-೦	೭-೦-೦
ಮೆಣಸು ೧೨೭ ಸೇರಿಗೆ	೧೩-೦-೦	೧೪-೦-೦
ಸೀಗೆಕಾಯಿ ಮೂಟೆ ೧ಕ್ಕೆ	೨-೬-೦	೩-೮-೦
ಮೆಣಸಿನಕಾಯಿ ,,	೯-೦-೦	೩-೪-೦
,, ದುಯಂ	೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೪-೮-೦	ಮೂಟೆ ೫-೮-೦
ಒಣ ಕೊಬ್ಬರಿ ಮೂಟೆ ೧ಕ್ಕೆ	೬-೯-೦	೬-೬-೦
ಹರಳೆಣ್ಣೆ ,, ,,	೫-೪-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫-೭-೦	೫-೪-೦
ಉಪ್ಪು ,, ,,	೬-೪-೦	೬-೦-೦
ಹುಣಸೇ ಹಣ್ಣು ಮೂಟೆ ೧ಕ್ಕೆ	೧-೧೨-೦	೧-೪-೦
,, ಹಳೇದು ,,	೧-೯-೦	೦-೧೪-೦
ಕುಪ್ಪ ಮೂಟೆ ೧ಕ್ಕೆ	೧೦-೮-೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೧೧-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೭-೦-೦	೬-೦-೦
ಅಡಿಕೆಕಾಯಿ ಮೂಟೆ ೧ಕ್ಕೆ	೧-೬-೦	೧-೦-೦
ಉಂಡ್ಯಾಳದಕಾಯಿ ಮೂಟೆ ೧ಕ್ಕೆ	೧-೧೨-೦	೧-೮-೦
ಚಿನ್ನ (ಪವನ್) ಕೆಂಪು	೧೫-೮-೦	೧೫-೮-೦
,, ,, ಪಸಿಮೆ	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦-೦	೮೧-೩-೦

ಬೆಲೆ ಸುಲಭ. ಗುಣ ಖಾತರಿ. ಫಲ ಅಧಿಕ.

ಯೂಕಲಿಪ್ಟಸ್ ಆಯಿಲ್.

ಜಾಗ್ರತೆಯಾಗಿ ಈ ಔಷಧವನ್ನು ಪರೀಕ್ಷಿಸಿ ಇಷ್ಟವುಳ್ಳವರು ತೆಗೆದುಕೊಳ್ಳಬಹುದು ಈ ನಾಲ್ಕು ವಿಷಯಗಳನ್ನು ತಕ್ಷಣವೇ ಪರೀಕ್ಷೆಮಾಡಿ ನೋಡತಕ್ಕದ್ದು. ತಲೆನೋವು, ಕಣ್ಣು ಉರಿ, ಹೊಟ್ಟೆನೋವು, ಹಲ್ಲುನೋವು

ಬೆಲೆ—1 ಬಾಟ್ಲಿಗೆ 8 ಆಣೆ. ವಿ. ಪಿ ಖರ್ಚು ಬೇರೆ

[141-2] ವಿಳಾಸ:—ಕೆ. ಶ್ರೀನಿವಾಸರಾವ್, ಬಸವರ ಪೋಸ್ಟ್.

ನೋಟೀಸ್.

151-1

ಗೋಕಾಕ ಮಿಲ್‌ಸಿನಲ್ಲಿ ತಯಾರಾಗುವ ನಂಬರ್‌ವಾರ್ ಹಸನು ನೂಲು ಬಿಕರಿಮಾಡಲು ನಮ್ಮನ್ನು ದಕ್ಷಿಣ ಇಂಡಿಯಾ ದೇಶದ ಸೋಲ್ ಏಜಂಟರನ್ನಾಗಿ ನೇಮಕ ಮಾಡಿರುವುದರಿಂದ ದರ ಮುಂತಾಗಿ ತಿಳಿಯಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು—

ಎಂ. ಎಸ್. ನಾರಾಯಣ ಕಂಪನಿ,

ಅವೆನ್ಯೂ ರೋಡ್, ಬೆಂಗಳೂರು ಸಿಟಿ

ಗೃಹಕೃತ್ಯದ ನೋಟೀಸು.

ಯಡತೊರೆಯಲ್ಲಿರುವ ವೆಂಡರ್ ಸುಬ್ಬಯ್ಯರ ಮಗ ಸುಬ್ರಾಮಯ್ಯ ಧವತಿ ಹೆಂಡತಿ ವಿಶಾಲಾಕ್ಷಮ್ಮ ನ್ಯಾಚುರಲ್ ಗಾರ್ಡಿಯನ್ ತಂದೆ ಮಹದೇವಪುರದ ವೆಂಕಟರಮಣಯ್ಯನು ತಿಳಿಯಪಡಿಸುವದೇನೆಂದರೆ-ಧವತಿ ಸುಬ್ರಾಮಯ್ಯನಿಗೆ ಮೈಸೂರು ಸಿಟಿ ಚಾಮರಾಜ ಮೊಹಲ್ಲಾ ಸೋನಾರ ಬೀದಿಯಲ್ಲಿ ೨೫ ನೇ ನಂ. ಮಹಡಿ ಮನೆ ಒಂದೂ, ಯಡತೊರೆ ತಾ|| ಮೂಡ್ಲುಕೊಪ್ಪಲು ಜೋಡಿ ಚಾಮಲಾಪುರ, ಕೆಪ್ಪಡಿ ಹಂತ, ಈ ಗ್ರಾಮಗಳಲ್ಲಿ ತರಿ, ಖುಷ್ಕಿ ಜಮೀನುಗಳೂ, ಯಡತೊರೆ ಕಸಬಾ ಎಕ್ಸ್‌ಟೆಂಷನ್‌ನಲ್ಲೂ ಯಡತೊರೆ ಊರೊಳಗೂ ಇರುವ ಮನೆ ನಿವೇಶನಗಳೂ ಇರುತ್ತವೆ ಇವುಗಳನ್ನು ನಾನು ವಿನಹ ಮತ್ತಾರಾದರೂ ಯಾವ ವಿಧವಾಗಿ ಸ್ವಾಧೀನ ಮಾಡಿದರೂ ಊರ್ಜಿತವಾಗತಕ್ಕದ್ದಲ್ಲ ಸದರಿ ಸುಬ್ರಾಮಯ್ಯನಿಗೆ ಬರತಕ್ಕ ಸಾಲದ ಬಾಬಲಗನ್ನೂ ಮತ್ತು ಮೇಲ್ಕಂಡ ಜಮೀನುಗಳ ಸಾಗುವಳಿದಾರರು ಗುತ್ತಿಗೆಯನ್ನೂ ಸಹ ನನಗೆ ವಿನಹಾ ಮತ್ತಾರಿಗೂ ಯಾವ ವಿಧವಾಗಿಯೂ ಕೊಡಕೂಡದೆಂದು ಇದರಿಂದ ಎಚ್ಚರಿಸಿದೇನೆ [152-1]

ಯಡತೊರೆ, 21-7-1913 ವೆಂಕಟರಮಣಯ್ಯ.

ವೃತ್ತಾಂತ ಪತ್ರಿಕೆ.

ಸನ್ ೧೯೧೩ ನೇ ಇಸವಿ ಜುಲೈ ತಾ. ೨೪ ನೇ ಗುರುವಾರ

ಮೈಸೂರು ಸಂಸ್ಥಾನದ ಮಲೆನಾಡು ಭಾಗಗಳು.

ಮೈಸೂರು ಗವರ್ನ್‌ಮೆಂಟಿನವರು ಮಲೆನಾಡು ಸೀಮೆಯಲ್ಲಿರುವ ಪ್ರಜೆಗಳ ಸ್ಥಿತಿಗತಿಯನ್ನು ವಿಚಾರಿಸಿ ತಿಳಿದುಕೊಳ್ಳಬೇಕೆಂದು ಕುತೂಹಲಪಟ್ಟು ಮಿ|| ಮತ್ತಾರ್‌ರವರನ್ನು ಆ ಕೆಲಸಕ್ಕಾಗಿ ನೇಮಕಮಾಡಿದಾರೆಂದು ತಿಳಿಯುತ್ತೇವೆ ಶಿವಮೊಗ್ಗಾ ಮತ್ತೂ ಕಡೂರು ಡಿಸ್ಟ್ರಿಕ್ಟುಗಳಲ್ಲಿ ಬಹು ಭಾಗವೆಲ್ಲಾ ಬೆಟ್ಟಗುಟ್ಟಗಳಿರುವ ಸೀಮೆಯಾಗಿದೆ. ಅಲ್ಲಿ ಮಳೆ ಸುರಿಯುವುದು ಬಹಳ ವಿಶೇಷ, ಆ ಪ್ರಾಂತ್ಯಗಳು ಸಾಮಾನ್ಯವಾಗಿ ಅನಾರೋಗ್ಯಕರವಾದುವುಗಳೆಂದು ಎಲ್ಲರೂ ತಿಳಿದುಕೊಂಡಿದಾರೆ. ಆದರೆ ಭೂಗುಣವು ಬಹಳ ರಸವತ್ತಾದದ್ದು, ಕಾಫಿ, ಅಡಿಕೆ, ಏಲಕ್ಕಿ ಮುಂತಾದವು ಹೇರಳವಾಗಿ ಬೆಳೆಯುತ್ತವೆ; ಇದಲ್ಲದೆ ಭತ್ತ ಮೊದಲಾದ ಧಾನ್ಯಗಳೂ ಹುಲುಸಾಗಿ ಬೆಳೆಯುವವು ಆದಕಾರಣ ಆ ಪ್ರದೇಶಗಳಲ್ಲಿ ಕ್ಷಾಮದ ರೋದನವು ಕೇಳಿಬರುವುದು ಬಹಳ ಅಪರೂಪ. ಇಷ್ಟೆಲ್ಲಾ ಅನುಕೂಲಗಳಿದ್ದಾಗ್ಯೂ ಈ ಸಲ ಕೂಡಿಸಿದ ಪ್ರಜಾಗಣತಿಯಲ್ಲಿ ಆ ಡಿಸ್ಟ್ರಿಕ್ಟುಗಳ ಪ್ರಜೆಗಳು ಬಹಳ ಮಟ್ಟಿಗೆ ಕಡಮೆಯಾಗಿರುತ್ತಾರೆಂದು ಗೊತ್ತಾಗುವುದು. ಆದಕಾರಣ ಗವರ್ನ್‌ಮೆಂಟಿನವರು ಅದಕ್ಕೆ ಕಾರಣಗಳನ್ನು ತಿಳಿದುಕೊಳ್ಳಬೇಕೆಂದು ಕುತೂಹಲಪಡುತ್ತಿರುವುದು ಸಹಜವಾಗಿದೆ

ಇದು ಬಹು ದೊಡ್ಡ ವಿಷಯ. ಇಂಥಾದ್ದನ್ನು ತನಿಖೆಯಿಂದ ಗೊತ್ತುಮಾಡುವ ಭಾಗದಲ್ಲಿ ಮಿ|| ಮತ್ತಾರ್‌ರವರಿಗೆ ಅಂಥಾ ವಿಶೇಷವಾದ ಪರಿಶ್ರಮವಿರುವುದೇ ಎಂದು ಸಂಶಯಪಡುತ್ತೇವೆ. ಈ ವಿಶೇಷವಾದ ಕಾರ್ಯವು ಒಬ್ಬಿಬ್ಬರಿಂದ ಸಾಧ್ಯವಾಗತಕ್ಕದ್ದೆಂದು ಹೇಳಲಾಗದು. ಪ್ರಜೆಗಳು ಕ್ಷಯವಾಗುತ್ತಿರುವುದಕ್ಕೆ ಇರಬಹುದಾದ ಕಾರ್ಯ ಕಾರಣಗಳನ್ನೆಲ್ಲಾ ಸಮಗ್ರವಾಗಿ ತನಿಖೆಮಾಡಿ ಗೊತ್ತುಮಾಡಲು ಹಲವರು ಬೇಕಾದೀತೆಂದು ನಮಗೆ ತೋರುತ್ತದೆ ಈ ಮಲೆನಾಡು ಪ್ರದೇಶವನ್ನೆಲ್ಲಾ ಸುತ್ತಿ ಚನ್ನಾಗಿ ಅನುಭವಮಾಡಿಕೊಂಡಿರುವ ಒಬ್ಬ ವೈದ್ಯನಿರಬೇಕು, ಆ ಎರಡು ಡಿಸ್ಟ್ರಿಕ್ಟುಗಳನ್ನೂ ಪರಿಷ್ಕಾರವಾಗಿ ಬಲ್ಲಂಥಾ ಒಬ್ಬ ರೆವಿನ್ಯೂ ಅಧಿಕಾರಿ ಇರಬೇಕು, ಇವರ ಜೊತೆಗೆ ಸಾಧ್ಯವಾದರೆ ಆಯಾ ಡಿಸ್ಟ್ರಿಕ್ಟಿನ ಸ್ಥಿತಿಗತಿ ವಿದ್ಯಮಾನಗಳನ್ನು ಖಚಿತವಾಗಿ ತಿಳಿದಿರುವಂಥಾ ಮುಖಂಡನಾದ ಒಬ್ಬ ಪ್ರಜೆಯೂ ಸೇರಬೇಕು. ಇವರೆಲ್ಲಾ ಏಕೀಭವಿಸಿ ಮಲೆನಾಡಿನ ಮುಖ್ಯ ಪ್ರದೇಶಗಳಿಗೆಲ್ಲಾ ಹೋಗಿ ಅಲ್ಲಲ್ಲಿರುವ ಪ್ರಜೆಗಳ ಸ್ಥಿತಿಗತಿಯನ್ನೂ, ಋತುಧರ್ಮಗಳನ್ನೂ, ಭೂಗುಣವನ್ನೂ ತನಿಖೆಯಿಂದ ಗೊತ್ತುಮಾಡಬೇಕಾಗಿರುತ್ತದೆ. ಹ್ಯಾಗೂ ಇಂಥಾ ವಿಶೇಷಕಾರ್ಯವು ಸಾರ್ಥಕವಾಗಿ ನೆರವೇರಿ, ಪ್ರಜೆಗಳಿಗೂ ಪ್ರಜಾಪಾಲಕರಿಗೂ ಶ್ರೇಯಸ್ಸುಂಟಾಗಬೇಕಾದರೆ ಈ ವಿಚಾರಣೆಯು ಕೂಲಂಕಷವಾಗಿಯೂ, ಪರಿಪೂರ್ಣವಾಗಿಯೂ ನೆರವೇರಬೇಕಾಗಿದೆ.

ಮಲೆನಾಡಿನ ಪ್ರಜೆಗಳು ಅನುಭವಿಸುತ್ತಿರುವ ಕಷ್ಟನಷ್ಟಗಳನ್ನು ಕುರಿತು ಆ ಪ್ರಾಂತ್ಯದ ನಮ್ಮ ವಾಚಕರೂ ಬಾತ್ಮಿದಾರರೂ ಅನೇಕವೇಳೆ ಈ ಪತ್ರಿಕೆಯಲ್ಲಿ ವಿವರಿಸುತ್ತಾ ಬಂದಿದಾರೆ. ಈ ವಿಚಾರವಾದ ಎರಡು ಬಾತ್ಮಿಗಳನ್ನು ಈ ವಾರವೂ ಪ್ರಕಟಿಸಿರುವವು. ಈಗ ಮಿ|| ಮತ್ತಾರ್‌ರವರು ತನಿಖೆಮಾಡಲು ಹೊರಟಿರುವುದರಿಂದ ನಮ್ಮ ಬಾತ್ಮಿದಾರರೂ ಇತರರೂ ಪ್ರಜಾಕ್ಷಯಕ್ಕೆ ಕಾರಣಗಳೆಂದು ತಮಗೆ ಕಂಡುಬಂದಿರುವ ವಿಚಾರಗಳನ್ನೆಲ್ಲಾ ಈ ಅಧಿಕಾರಿಯಲ್ಲಿ ಹೇಳಿಕೊಂಡಲ್ಲಿ ಅವರು ಆದರಪೂರ್ವಕವಾಗಿ ಅಂಗೀಕರಿಸತಕ್ಕವರೆಂದೂ ಪ್ರೀತಿಯಿಂದ ವಿಮರ್ಶೆಮಾಡಬಲ್ಲರೆಂದೂ ನಂಬುತ್ತೇವೆ.

ವಿದ್ಯೆ ಇಲ್ಲದಿರುವುದೇ ಈ ಪ್ರಜಾಕ್ಷಯಕ್ಕೆ ವಿಶೇಷವಾದ ಕಾರಣವೆಂದು ಹೇಳುತ್ತಾರೆ ಇದು ನಿರಾಧಾರವಾದ ಕಾರಣವೆಂದು ಹೇಳಲಾಗದು. ಆ ಪ್ರಾಂತ್ಯದ ಕೆಲವು ಪ್ರಜೆಗಳು ವಿದ್ಯೆಯ ಫಲ ಪ್ರಯೋಜನಗಳನ್ನು ಕಂಡು ವಿದ್ಯಾಶಾಲೆಗಳನ್ನು ಇಟ್ಟುಕೊಡಬೇಕೆಂದು ವೆಸ್ಲಿಯನ್ ಮಿಷನ್ ಸಂಘದವರನ್ನು ಕೇಳಿಕೊಳ್ಳುತ್ತಿರುವರು. ಆ ಸಂಘದವರು ಅವರ ಕೋರಿಕೆಯನ್ನು ಕೆಲವು ಮಟ್ಟಿಗೆ ನೆರವೇರಿಸಿರುತ್ತಾರೆಂದೂ, ಪ್ರಜೆಗಳು ಅವರಿಗೆ ವಿಶೇಷ ಸಹಾಯ ಮಾಡಿರುತ್ತಾರೆಂದೂ ತಿಳಿದು ಬರುತ್ತದೆ ಆದರೆ ಗವರ್ನ್‌ಮೆಂಟಿನವರು ಅದಕ್ಕೆ ಸಹಾಯಮಾಡುವ ಭಾಗದಲ್ಲಿ ಅಷ್ಟೇನೂ ಉತ್ಸಾಹವುಳ್ಳವರಾಗಿರುವಂತೆ ಕಾಣಲಿಲ್ಲ ಅವರು ಅಂಥಾ ಪಾಠಶಾಲೆಗಳಿಗೆ ಗಣ್ಯವಾದಷ್ಟು ಸಹಾಯದ್ರವ್ಯವನ್ನು ಸ್ಯಾಂಕ್ಷನ್ ಮಾಡುತ್ತಾ, ಪ್ರಜೆಗಳ ಪ್ರಯತ್ನವನ್ನು ಪ್ರೋತ್ಸಾಹಪಡಿಸಬೇಕಾದದ್ದು ಅವಶ್ಯವೂ ಧರ್ಮವೂ ಆಗಿರುತ್ತದೆ ಗವರ್ನ್‌ಮೆಂಟಿನವರ ಈ ರೀತಿಯಾದ ವರ್ತನದಿಂದ ಅವರು ಯಥಾರ್ಥವಾಗಿಯೂ ಪ್ರಜಾ ರಂಜಕರೆಂಬುದನ್ನು ಕಾರ್ಯತಃ ಪ್ರಕಟಮಾಡಿದಂತಾಗುವುದು

ಮಲೆನಾಡಿನ ಋತುಲಕ್ಷಣಗಳು ಅನಾರೋಗ್ಯ ಜನಕವಾದವುಗಳೆಂದು ಹೇಳಲಾಗಿದೆ. ಆದರೂ ಜ್ವರಾದಿ ಸಾಮಾನ್ಯ ರೋಗಗಳನ್ನು ಬಹುಮಟ್ಟಿಗೆ ನಿವಾರಣೆ ಮಾಡಬಹುದೆಂದೂ, ಪ್ರಜೆಗಳ ಸಂಕಟವನ್ನು ಪರಿಹರಮಾಡಬಹುದೆಂದೂ ನಮಗೆ ತೋರುತ್ತದೆ. ಇದಕ್ಕೆ ಗವರ್ನ್‌ಮೆಂಟಿನವರು ಪ್ರಜಾಹಿತಚಿಂತಕರಾದ ವೈದ್ಯರನ್ನೂ, ಸೂಲಗಿತ್ತಿಯರನ್ನೂ ಹೆಚ್ಚಾಗಿ ನೇಮಕಮಾಡಿಕೊಡಬೇಕು, ಇಲ್ಲವೇ ಇಂಥಾ ಏರ್ಪಾಡನ್ನು ಇತರರು ಮಾಡಿದರೆ ಅವರಿಗೆ ಹೆಚ್ಚಾದ ದ್ರವ್ಯವನ್ನು ಒದಗಿಸುತ್ತಾ ಸಹಾಯಮಾಡಬೇಕು ಆ ಪ್ರಾಂತ್ಯದಲ್ಲಿ ಪ್ರಜೆಗಳ ರೋಗಚಿಕಿತ್ಸಾರ್ಥವಾಗಿ ಈಗ ಒಂದು ಏರ್ಪಾಡು ನಡೆದು ಜಾರಿಯಲ್ಲಿರುತ್ತದೆ ಆದರೆ ಅದಕ್ಕೆ ಸಹಾಯ ಮಾಡುವ ಭಾಗದಲ್ಲಿ ಗವರ್ನ್‌ಮೆಂಟಿನವರು ತಕ್ಕ ಮಟ್ಟಿಗೆ ಕುತೂಹಲವನ್ನು ಪ್ರಕಾಶಪಡಿಸಿರುವುದಿಲ್ಲ ಮತ್ತು ಒಂದಾನೊಂದು ಸಮಯದಲ್ಲಿ ಪ್ರಜೆಗಳು ಪ್ರತಿಫಲವನ್ನು ಕೊಟ್ಟಾದರೂ ರೋಗಚಿಕಿತ್ಸೆ ಮಾಡಿಸಿಕೊಳ್ಳಲು ಸಿದ್ಧರಾಗಿದ್ದದ್ದನ್ನು ಕೂಡ ಅಡ್ಡಿಮಾಡಲುಳ್ಳವರಾಗಿದಾರೆಂಬ ಭಾವವು ಹೊರಪಟ್ಟಿತು. ನಮ್ಮ ಪಾಲಕರು ಕನಿಕರವನ್ನು ಇನ್ನೂ ಚೆನ್ನಾಗಿ ಪ್ರಕಾಶಪಡಿಸಬೇಕಾಗಿದೆ, ಪ್ರಜೆಗಳ ನರಳಾಟವನ್ನು ವಾಸಿಮಾಡುವ ವಿಷಯದಲ್ಲಿ ಸಾಹಸಪಡತಕ್ಕವರಿಗೆ ಅವರು ಕಾರ್ಯತಃ ಸಹಾಯ ಮಾಡುವವರಾಗಬೇಕು.

ಮದ್ಯಪಾನವು ಹೆಚ್ಚುತ್ತಿರುವುದೂ ಪ್ರಜಾ ಕ್ಷೀಣತೆಗೆ ಕಾರಣವೆಂದು ಸೂಚಿಸಲಾಗಿದೆ. ಸಾಮಾನ್ಯವಾಗಿ ಕುಡುಕುತನದ ಜೊತೆಯಲ್ಲೇ ಸೋಮಾರಿತನವೂ ಇರುವುದು. ಇವುಗಳಿಗೆ ಉತ್ತೇಜನ ಕೊಟ್ಟ ಪಕ್ಷದಲ್ಲಿ ಪ್ರಜೆಗಳು ನಾಶವಾಗುವುದೇ ಖಂಡಿತ. ಆದಕಾರಣ ಗವರ್ನ್‌ಮೆಂಟಿನವರು ಶೇಂದಿ, ಸಾರಾಯಿ ಮೊದಲಾದ ಮದ್ಯಗಳ ಮಾರಾಟದ ದುಕಾನುಗಳನ್ನು ಕ್ರಮೇಣ ಕಡಮೆ ಮಾಡುತ್ತಾ ಬರಬೇಕಾಗಿದೆ.

ಆದರೆ ಪ್ರಜೆಗಳ ಕರ್ತವ್ಯವೇನೂ ಇಲ್ಲವೇ ಎಂದು ಕೇಳಬಹುದು ಅವರು ಸ್ವತಃ ಉದ್ಯೋಗಿಗಳಾದ ಹೊರತು ಅವರಿಗೆ ಯಥಾರ್ಥವಾದ ಶ್ರೇಯಸ್ಸುಂಟಾಗುವುದಿಲ್ಲ ಮಲೆನಾಡಿನಲ್ಲಿರತಕ್ಕ ಕಷ್ಟಸಂಕಟಗಳೇನೆಂಬುವುದು ಕೆಲವರಿಗೆ ತಿಳಿದಿದೆ, ಅವರು ಅವುಗಳ ಪರಿಹಾರಕ್ಕಾಗಿ ಶ್ರಮಪಡುತ್ತಿದಾರೆ. ಇಂಥಾ ಪರಹಿತಚಿಂತಕರೆಲ್ಲಾ ಏಕೀಭವಿಸಿ, ಮಲೆನಾಡು ಪ್ರಾಂತ್ಯದಲ್ಲಿ ಸಂಚಾರ ಮಾಡುತ್ತಾ, ಪ್ರಜೆಗಳಿಗೆ ವಿದ್ಯೆ ಕಲಿಯಬೇಕೆಂದು ಪ್ರೋತ್ಸಾಹಪಡಿಸಿ, ಒಳ್ಳೆಯ ವೈದ್ಯರಿಂದ ಚಿಕಿತ್ಸೆಮಾಡಿಸಿಕೊಳ್ಳುವಂತೆ ವಿವೇಕವನ್ನು ಕಲಿಸಿ, ಚಟುವಟಿಕೆಯಾಗಿಯೂ ದುರಭ್ಯಾಸಗಳಿಲ್ಲದೆಯೂ ಸತ್ಯಪ್ರಿಯರಾಗಿಯೂ ಬಾಳುವಂತೆ ಪ್ರೋತ್ಸಾಹಪಡಿಸುತ್ತಾ ಬರಬೇಕು. ಸದ್ಯ ಅಂಥಾ ಒಳ್ಳೇ ನಡೆನುಡಿಯುಳ್ಳ ಪುರುಷರೂ ಸ್ತ್ರೀಯರೂ ದೊರೆಯುವುದು ಅಪರೂಪವಾಗಿದೆ. ದೇವರ ಭಯವಿದ್ದ ಹೊರತು ಜನರು ಇಂಥವರಾಗುವುದಿಲ್ಲ ಪ್ರಜೆಗಳಲ್ಲಿ ದೇವರು ತಂದೆಯೆಂದೂ, ತಾವು ಆತನ ಮಕ್ಕಳೆಂದೂ ನಂಬಿ ವರ್ತಿಸುವಂತೆ ಭಯಭಕ್ತಿಗಳುಂಟಾಗಬೇಕು. ಆಗ್ಗೆ ನಾಗರಿಕವೂ ಸಂಪತ್ತೂ ದೊರೆತು ಸಂಸ್ಥಾನವು ಅಭಿವೃದ್ಧಿಗೆ ಬರುವದು.

ಬಾಲ್ಕನ್ ಸಂಸ್ಥಾನಗಳ ವಿದ್ಯಮಾನಗಳು.

ಬಾಲ್ಕನ್ ಪ್ರಾಂತ್ಯದಿಂದ ಕಳೆದ ವಾರ ಬಂದಿರುವ ಸಮಾಚಾರಗಳು ಸಂಕುಚಿತವಾಗಿಯೂ, ಪರಸ್ಪರ ಅಸಮಂಜಸವಾಗಿಯೂ ಇದ್ದಾಗ್ಯೂ ಕೆಲವು ವಿದ್ಯಮಾನಗಳು ಯಥಾರ್ಥವಾದವುಗಳೆಂದು ಕಂಡುಬರುವವು. ರೊಮೇನಿಯಾ ಸಂಸ್ಥಾನದವರು ಈ ಹೋರಾಟಗಳಲ್ಲೂ ಕಡಿದಾಟಗಳಲ್ಲೂ ಯಾವ ಪಕ್ಷವನ್ನೂ ವಹಿಸದೆ ತಟಸ್ಥರಾಗಿದ್ದರು. ಈಗ ಅವರೂ ಸರ್ವಿಯಾ, ಗ್ರೀಸ್ ಮತ್ತು ಮಾಂಟೆನೀಗ್ರೋರವರ ಕೂಡ ಸೇರಿಕೊಂಡು ಬಲ್ಗೇರಿಯಾರವರ ಮೇಲೆ ಹೋರಾಡಲಾರಂಭಿಸಿದಾರೆ. ಸರ್ವಿಯಾದವರೂ ಗ್ರೀಸಿನವರೂ ಕಡೆಯ ತನಕ ಆಯುಧಪಾಣಿಗಳಾಗಿದ್ದೇ ನೋಡಬೇಕೆಂದು ನಿಶ್ಚಯಿಸಿಕೊಂಡಿರುವಂತೆ ಕಾಣುವುದು. ಅವರು ಬಲ್ಗೇರಿಯಾದವರನ್ನು ಗೆದ್ದು ಅವರ ರಾಜಧಾನಿಯಾದ ಸೋಫಿಯಾ ನಗರವನ್ನು ಆಕ್ರಮಿಸಿಕೊಂಡು ಆ ಪಟ್ಟಣದಲ್ಲಿ ನಿಂತೇ ಬಲ್ಗೇರಿಯಾದವರ ಕೂಡ ಕರಾರು ಮಾಡಿಕೊಳ್ಳುವವೆಂದು ಹೇಳುತ್ತಿದಾರೆ ರಷ್ಯಾ ಚಕ್ರವರ್ತಿಯವರಾದರೋ ಹ್ಯಾಗಾದರೂ ಈ ಸಂಸ್ಥಾನಗಳವರ ಹೋರಾಟವನ್ನು ನಿಲ್ಲಿಸಿ, ಅವರವರಿಗೆ ಸಮಾಧಾನವನ್ನುಂಟುಮಾಡಬೇಕೆಂದು ಸಾಹಸ ಪಡುತ್ತಲೇ ಇರುವರು. ಇದುವರೆಗೆ ನಡೆದ ಕಡಿದಾಟಗಳಲ್ಲಿ ಬಲ್ಗೇರಿಯಾದವರಿಗೆ ತುಂಬಾ ಅಪಜಯವಾಗಿರುತ್ತದೆ. ಅವರ ಸೈನಿಕರಲ್ಲಿ ಬಹು ಭಾಗದವರು ನಾಶಹೊಂದಿದರು, ಇಲ್ಲವೇ ಗಾಯಪಟ್ಟರು. ಈಗ ಅವರಿಗೆ ಪ್ರಾಪ್ತವಾಗಿರುವ ಅಪಜಯ ಮತ್ತೂ ಕಷ್ಟನಷ್ಟಗಳನ್ನು ನೋಡಿ ಪರರಾಜ್ಯಗಳವರು ಅಷ್ಟೇನೂ ಕನಿಕರ ಪಡುವಹಾಗಿಲ್ಲ. ಯಾಕಂದರೆ ಬಲ್ಗೇರಿಯಾದವರು ಈ ವಿಪತ್ತುಗಳನ್ನೆಲ್ಲಾ ತಮಗೆ ತಾವೇ ತಂದುಕೊಂಡಿರುತ್ತಾರೆ.

ಅವರ ಹೋರಾಟ ಕಡಿದಾಟಗಳಲ್ಲಿ ಟರ್ಕಿಯವರು ಪ್ರಯೋಜನ ಹೊಂದಬೇಕೆಂದು ತಲೆಹಾಕಿದರು. ಆ ಸಂಸ್ಥಾನಗಳಿಗೂ ಟರ್ಕಿಯವರಿಗೂ ಯುದ್ಧ ನಡದು ಕೊನೆಗಂಡ ಲಂಡನ್ ಪಟ್ಟಣದ ಕರಾರಿನ ಪ್ರಕಾರ ಟರ್ಕಿಯವರ ಸರಹದ್ದು ನಿಷ್ಕರ್ಷೆಯಾಗಿತ್ತು. ಈಗ ಟರ್ಕಿಯವರು ಆ ಸರಹದ್ದನ್ನು ದಾಟಿ ತಮ್ಮ ಸೈನ್ಯವನ್ನು ಮುಂದು ಮುಂದಕ್ಕೆ ನಡಿಸಿಕೊಂಡು ಹೋಗಿ ಯುದ್ಧವೂ ಹೋರಾಟವೂ ಸ್ವಲ್ಪ ಮಾತ್ರವೂ ಇಲ್ಲದೇನೇ ಅಡ್ರಿಯಾನೋಪಲ್ ಪಟ್ಟಣವನ್ನು ಪ್ರವೇಶಿಸಿ ಸ್ವಾಧೀನಪಡಿಸಿಕೊಂಡಿದಾರೆಂದು ಒಂದು ತಂತೀವರ್ತಮಾನವು ಹೇಳುತ್ತಿದೆ ಇದು ಎಷ್ಟು ಮಟ್ಟಿಗೆ ನಿಜವೋ ಮುಂದೆ ಗೊತ್ತಾಗಬೇಕು. ಇದು ನಿಜವಾದ ಪಕ್ಷದಲ್ಲಿ ಪರರಾಜ್ಯಗಳವರು ಅದನ್ನು ಒಪ್ಪಿಕೊಳ್ಳುವರೇ ಎಂದು ಸಂಶಯಪಡುತ್ತೇವೆ ಆದರೆ ಟರ್ಕಿಯವರು ಯುದ್ಧದಲ್ಲಿ ಕಳೆದುಕೊಂಡ ಪ್ರದೇಶಗಳನ್ನು ಪುನಹ ಆಕ್ರಮಿಸಿಕೊಂಡರೆ ಅದು ಸರಿಯಲ್ಲವೆಂದು ಅಡ್ಡಿಮಾಡುವುದಾಗಲಿ, ಅದನ್ನು ಅವರು ಬಿಟ್ಟುಕೊಡಬೇಕೆಂದು ಹೇಳುವುದಾಗಲಿ ಸಹಜವಾಗಿ ಕಾಣುವುದಿಲ್ಲ ಸಂದರ್ಭಪಡದ್ದಾಗ ಪುನಹ ಗೆದ್ದುಕೊಳ್ಳುವುದಕ್ಕೆ ಟರ್ಕಿಯವರಿಗೆ ಅವಕಾಶಕೊಡಬೇಕಾದದ್ದು ಸರಿಯಾಗಿದೆಯೆಂದು ತೋರುತ್ತದೆ ಆದರೂ ಟರ್ಕಿಯವರ ಈ ರೀತಿಯಾದ ವರ್ತನವು ಅವರು ಲಂಡನ್ ಪಟ್ಟಣದಲ್ಲಿ ಒಪ್ಪಿಕೊಂಡು ರುಜುಮಾಡಿರುವ ಕರಾರಿಗೆ ವಿರೋಧವಾಗಿರುವುದು

ಯೇಸು ಕ್ರಿಸ್ತನು ಯಾರು?

ನಮ್ಮ ಮೈಸೂರು ಸಂಸ್ಥಾನದಲ್ಲಿರುವ ಸಾವಿರಾರು ಮಂದಿ ಯೇಸುಕ್ರಿಸ್ತನ ವಿಷಯವಾಗಿ ಕೇಳಿ, ಆತನು ಯಾರೆಂಬುದರ ವಿಷಯ ಸ್ವಲ್ಪ ಹೆಚ್ಚು ಕಡಮೆ ಸ್ಪಷ್ಟವಾದ ತಿಳುವಳಿಕೆಯನ್ನು ಹೊಂದಿಕೊಂಡಿರುತ್ತಾರೆ ಯೇಸು ಕ್ರಿಸ್ತನು ಯಾರು ಎಂಬೀ ಪ್ರಶ್ನೆಗೆ ಸಾಧಾರಣವಾಗಿ ಕೊಡಲ್ಪಡುವ ಒಂದು ಉತ್ತರವೇನೆಂದರೆ—ಆತನು ದೇವರ ಮಗನಾಗಿದ್ದಾನೆ ಎಂಬುವುದೇ. ಅನೇಕರು ಇಂತಹ ಉತ್ತರವನ್ನು ಕೇಳಿ ಈ ಮಾತಿನ ವಿಷಯ ಪೂರ್ಣ ತಪ್ಪಾದ ಅಭಿಪ್ರಾಯವನ್ನು ಮಾಡಿಕೊಂಡಿರುತ್ತಾರೆ ದೇವರಿಗೆ ಒಬ್ಬ ಪತ್ನಿಯು ಇರುತ್ತಾಳೆ, ಲೋಕದಲ್ಲಿ ಮನುಷ್ಯರೊಳಗೆ ಬಂದುತ್ತವಿರುವ ಪ್ರಕಾರ ದೇವರಿಗೂ ಬಂಧುಗಳು ಇರುತ್ತಾರೆ ಎಂಬುವು ಕ್ರೈಸ್ತರ ನಂಬಿಕೆಯಾಗಿದೆ ಎಂದು ಅನರು ಭಾವಿಸಿಕೊಂಡಿರುವರು ಈ ಅಭಿಪ್ರಾಯವು ಸಂಪೂರ್ಣವಾಗಿ ತಪ್ಪಾಗಿರುತ್ತವೆ.

ಸತ್ಯವೇದವನ್ನು ಪರಿಶೀಲನೆಮಾಡಿ ನೋಡುವ ಯಾರಾದರು ಅದರಲ್ಲಿ ಇಂತಹ ಬೋಧನೆಯು ಇರುವುದೇ ಇಲ್ಲವೆಂಬುದನ್ನು ಸುಲಭವಾಗಿ ಕಂಡುಕೊಳ್ಳುವರು ದೇವರು ಒಬ್ಬನೇ ಎಂದು ಕ್ರೈಸ್ತರು ನಂಬಿರುತ್ತಾರೆ ಒಬ್ಬ ಮನುಷ್ಯನಲ್ಲಿ ದೇಹ, ಮನಸ್ಸು, ಆತ್ಮ ಎಂಬೀ ಮೂರು ಅಂಶಗಳು ಹೇಗೆ ಒಂದಾಗಿ ಕೂಡಿರುತ್ತವೋ ಹಾಗೆಯೇ ಒಬ್ಬನೇ ಆಗಿರುವ ದೇವರಲ್ಲಿ ಮೂರು ಅಂಶಗಳು ಇರುತ್ತವೆಂಬುದನ್ನು ಸಹ ನಂಬುತ್ತಾರೆ ಮನುಷ್ಯನಲ್ಲಿರುವ ಮೂರು ಅಂಶಗಳನ್ನು ದೇಹ, ಮನಸ್ಸು, ಆತ್ಮ ಎಂಬ ಹೆಸರುಗಳಿಂದ ಕರೆಯುವ ಪ್ರಕಾರ ದೇವತ್ವದಲ್ಲಿರುವ ಮೂರು ಅಂಶಗಳನ್ನು ತಂದೆ, ಮಗ, ಪವಿತ್ರಾತ್ಮನು ಎಂಬ ಹೆಸರುಗಳಿಂದ ಕರೆಯುವುದು ಕ್ರೈಸ್ತರಲ್ಲಿ ರೂಢಿಯಾಗಿರುತ್ತದೆ. ಕ್ರೈಸ್ತರು ತಂದೆ, ಮಗ ಎಂದು ಹೇಳುವದರಿಂದ ಅವರು ದೇವರಿಗೆ ಒಬ್ಬ ಹೆಂಡತಿಯು ಇರಬೇಕೆಂದು ನಂಬುತ್ತಾರೆಂದು ಅಭಿಪ್ರಾಯಮಾಡಿಕೊಳ್ಳುವುದು ಶುದ್ಧ ತಪ್ಪು ಹೀಗೆ ನಂಬುವಂಥ ಕ್ರೈಸ್ತನು ಒಬ್ಬನಾದರೂ ಇರುವುದೇ ಇಲ್ಲ. ಪ್ರತಿಯೊಬ್ಬ ಕ್ರೈಸ್ತನೂ ಇದನ್ನು ಸಂಪೂರ್ಣವಾಗಿ ವಿರೋಧಿಸುವವನಾಗಿರುತ್ತಾನೆ

ಹೀಗಿದ್ದಪಕ್ಷದಲ್ಲಿ ತಂದೆ, ಮಗ ಎಂಬೀ ಹೆಸರುಗಳನ್ನು ಕ್ರೈಸ್ತರು ಉಪಯೋಗಿಸುತ್ತಾ ಇರುವುದಕ್ಕೆ ಕಾರಣವೇನು? ಎಂದು ಯಾರಾದರು ಕೇಳಬಹುದು. ಇದಕ್ಕೆ ಉತ್ತರವೇನೆಂದರೆ—ದೇವರಲ್ಲಿರುವ ಅಂತರ್ಯದ, ಐಕ್ಯವಾದ, ಪ್ರೀತಿಯುಳ್ಳ ಸಂಬಂಧಗಳನ್ನು ಈ ಮಾತುಗಳು ವ್ಯಕ್ತಪಡಿಸುತ್ತವೆ ಎಂಬುದೇ ತಂದೆ, ಮಗ ಎಂಬೀ ಮಾತುಗಳು ಇವರಿಬ್ಬರಿಗೂ ಅತ್ಯಂತ ಹತ್ತಿರದ ಸಂಬಂಧವೂ ಪರಿಪೂರ್ಣವಾದ ಐಕ್ಯವೂ ಅಪಾರವಾದ ಪ್ರೇಮಾತಿಶಯವೂ ಇರುತ್ತವೆ ಎಂಬೀ ಭಾವನೆಯನ್ನು ನಮ್ಮ ಮನಸ್ಸಿಗೆ ತರುತ್ತವೆ ಈ ಅರ್ಥದಲ್ಲಿಯೇ ಈ ಮಾತುಗಳು ಉಪಯೋಗಿಸಲ್ಪಟ್ಟಿರುತ್ತವೆ ಕ್ರೈಸ್ತರು ಯೇಸು ಕ್ರಿಸ್ತನು ದೇವರ ಮಗನಾಗಿದ್ದಾನೆಂದು ಹೇಳುವಾಗ, ಆತನು ದೇವರಾಗಿದ್ದಾನೆ ಎಂಬುದೂ ಒಬ್ಬನೇ ಆಗಿರುವ ದೇವರಲ್ಲಿ ಮೂರು ಅಂಶಗಳು ಇದ್ದಾಗ್ಯೂ ಪೂರ್ಣ ಅನ್ಯೋನ್ಯತೆಯೂ ಐಕ್ಯವೂ ಇದೆ ಎಂಬುದೂ ಅವರ ಅಭಿಪ್ರಾಯವಾಗಿರುತ್ತದೆ. ದೇವರಿಗೆ ಹೆಂಡತಿಯು ಇದ್ದಾಳೆಂಬ ಭಾವನೆಯು ತಿಳುವಳಿಕೆಯುಳ್ಳ ಕ್ರೈಸ್ತನ ಮನಸ್ಸಿಗೆ ಎಂದಿಗೂ ಬರುವುದೂ ಇಲ್ಲ ಹಾಗೆ ಬರುವುದಕ್ಕೆ ಯಾವ ಕಾರಣವೂ ಇರುವುದಿಲ್ಲ.

ದೇವರು ತನ್ನನ್ನು ಯೇಸು ಕ್ರಿಸ್ತನ ಮೂಲಕವಾಗಿ ಮಾನವರಿಗೆ ಅತ್ಯುತ್ತಮವಾದ ರೀತಿಯಲ್ಲಿ ಪ್ರಕಟಪಡಿಸಿಕೊಂಡಿರುತ್ತಾನೆ ಈ ಲೋಕದಲ್ಲಿ ಜೀವಿಸಿದವರಲ್ಲಿ ಯೇಸು ಕ್ರಿಸ್ತನೊಬ್ಬನೇ ಪರಿಪೂರ್ಣವಾದ ಮನುಷ್ಯನಾಗಿದ್ದಾನೆ ಮನುಷ್ಯನು ದೇವರ ಸಂಗಡ ಪೂರ್ಣ ಅನ್ಯೋನ್ಯತೆಯನ್ನು ಪಡೆದು ಜೀವಿಸಿದರೆ, ಅವನು ಎಂಥವನಾಗಬಹುದೆಂಬುದನ್ನು ಆತನು ನಮಗೆ ಪ್ರಕಾಶಪಡಿಸಿರುತ್ತಾನೆ ಯೇಸು ಕ್ರಿಸ್ತನು ನಾವು ದೇವರ ಬಳಿಗೆ ಹೋಗತಕ್ಕ ದಾರಿಯನ್ನು ನಮಗೆ ತೋರಿಸುತ್ತಾನೆ ಆತನ ಮೂಲಕವಾಗಿ ಮನುಷ್ಯನು ಪಾಪಕ್ಷಮೆಯನ್ನೂ ದೇವರೊಂದಿಗೆ ಅನ್ಯೋನ್ಯತೆಯನ್ನೂ ದೇವರು ತನ್ನ ತಂದೆಯಾಗಿದ್ದಾನೆಂಬ ಮನೋಹರವಾದ ಮತ್ತು ದೃಢವಾದ ನಂಬಿಕೆಯನ್ನೂ ದೇವರ ಆಜ್ಞೆಗಳನ್ನು ಶಿರಸ್ಸಾವಹಿಸಿ ಕೈಕೊಂಡು ತ್ರಿಕರಣಶುದ್ಧನಾಗಿ ಜೀವಿಸಬೇಕೆಂಬ ಅಪೇಕ್ಷೆಯನ್ನೂ ಹಾಗೆ ಮಾಡುವುದಕ್ಕೆ ಶಕ್ತಿಯನ್ನೂ ಹೊಂದಿಕೊಳ್ಳಬಲ್ಲನು

ಅನೇಕರು ಕ್ರೈಸ್ತರನ್ನು ನಿರಾಕರಿಸುತ್ತಾರೆ ಕ್ರಿಸ್ತನ ವಿಷಯವಾಗಿ ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯು ಅವರಲ್ಲಿ ಇರುವುದಿಲ್ಲ ಇಂಥವರು ತಾವು ಈ ಲೋಕದಲ್ಲಿ ಹೊಂದಬಹುದಾದ ಅತ್ಯುತ್ತಮವಾದ ಭಾಗ್ಯವನ್ನು ಕಳೆದುಕೊಳ್ಳುವವರಾಗಿರುತ್ತಾರೆ ಯೇಸು ಕ್ರಿಸ್ತನೊಬ್ಬನೇ ತನ್ನ ಶಿಷ್ಯಮಂಡಲಿಯವರಿಗೆ ದೇವರ ವಿಷಯ ಸಹಜವಾದ ತಿಳುವಳಿಕೆಯನ್ನು ಕೊಟ್ಟು, ಅವರು ದೇವರು ತಮ್ಮ ತಂದೆಯಾಗಿದ್ದಾನೆಂದು ತಿಳಿದುಕೊಳ್ಳುವಂತೆ ಮಾಡುವ ನಿಜವಾದ ಗುರುವಾಗಿದ್ದಾನೆ ಆತನು ದುಃಖದಲ್ಲಿರುವವರಿಗೆ ಆದರಣೆಯನ್ನೂ ಬಲಹೀನರಿಗೆ ಬಲವನ್ನೂ ಶೋಧನೆಗಳನ್ನು ಜಯಿಸಿ ಪವಿತ್ರರಾಗಿ ಜೀವಿಸುವುದಕ್ಕೆ ಶಕ್ತಿಯನ್ನೂ ಕೂಡ ದಯಪಾಲಿಸುವನು ತ್ರಿಕರಣ ಶುದ್ಧರಾಗಿ ಜೀವಿಸತಕ್ಕಂಥ ಸ್ತ್ರೀಪುರುಷರುಗಳು ಈ ನಮ್ಮ ಭರತಖಂಡದಲ್ಲಿ ಇರಬೇಕಾದುದು ಅತ್ಯವಶ್ಯಕವಾಗಿರುತ್ತದೆ ಸರಕಾರದ ಎಲ್ಲಾ ಇಲಾಖೆಗಳವರು ಇಂತಹ ಮಹನೀಯರುಗಳನ್ನೇ ಹುಡುಕುತ್ತಲಿದ್ದಾರೆ ಇಂಥವರು ಸಿಕ್ಕುವುದು ಸುಲಭಸಾಧ್ಯವಲ್ಲ ಸ್ತ್ರೀಪುರುಷರುಗಳೆಲ್ಲರೂ ಯೇಸು ಕ್ರಿಸ್ತನ ನಿಜಭಕ್ತರಾದರೆ, ಅವರು ಸತ್ಯಸಂಧರೂ ತ್ರಿಕರಣಶುದ್ಧರೂ ಆಗುವರು

ಕ್ರೈಸ್ತರೆಂದು ಹೇಳಿಕೊಳ್ಳುವವರಲ್ಲಿ ಕೆಲವರು ಯೇಸು ಕ್ರಿಸ್ತನ ಬೋಧನೆಯನ್ನೂ ಮಾದರಿಯನ್ನೂ ಅನುಸರಿಸಿ ಜೀವಿಸುವುದಿಲ್ಲ ಎಂಬುದು ಸತ್ಯವಾಗಿರುತ್ತದೆ ದೇಶಾಭಿಮಾನಿಗಳೆಲ್ಲರೂ ಆತನ ಗುಣಾತಿಶಯಗಳನ್ನು ಕುರಿತು ಓದಿ ಪರಿಶೀಲನೆಮಾಡಿ ಲೋಕದಲ್ಲಿ ಅತ್ಯುತ್ತಮನಾದ ಗುರುವಾಗಿರುವ ಆತನಿಂದ ನಮ್ಮ ದೇಶೀಯರಿಗೆ ಲಭ್ಯವಾಗತಕ್ಕ ಭಾಗ್ಯಗಳೇನೆಂದು ಕಂಡುಕೊಳ್ಳಬೇಕಾಗಿರುತ್ತದೆ ಯೇಸು ಕ್ರಿಸ್ತನ ಜೀವಚರಿತ್ರೆಯನ್ನು ಚೆನ್ನಾಗಿ ಓದಿ, ಆತನ ಶಿಷ್ಯರಾಗುವ ಪ್ರತಿಯೊಬ್ಬರೂ ಸತ್ಯಸಂಧರೂ ಪರಿಶುದ್ಧರೂ ಆಗಿ ಆ ಮೂಲಕವಾಗಿ ತಮ್ಮ ದೇಶೀಯರನ್ನು ಉತ್ತಮಸ್ಥಿತಿಗೆ ತರುವರು

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರೂ ಅರಮನೆಯ ರಾಣಿವಾಸದವರೂ ಮುಂದಿನ ವಾರ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡುವವರಾಗಿರುವಂತೆ ಕೇಳುತ್ತೇವೆ

ಶಿವಮೊಗ್ಗಾ ಡಿವಿಜನ್ ಫಾರೆಸ್ಟ್ ಸೂಪರಿಂಟೆಂಡೆಂಟರಾದ ಮಿ|| ಸಿ ಬಿ ಶೀನಿವಾಸರವರು ಮೊನ್ನೆ ಸೋಮವಾರ ಬೆಳಿಗ್ಗೆ ಹರಿಹರದಲ್ಲಿ ಕಾಲವಾದರೆಂದು ವರ್ತಮಾನ ಬಂದಿದೆ

ಬೆಂಗಳೂರಿಗೆ ಬಂದಿರುವ ಕಪೂರ್ಥಲ ಸಂಸ್ಥಾನದ ಮಹಾರಾಜರವರನ್ನು ಸತ್ಕರಿಸುವುದಕ್ಕಾಗಿ ಅರಮನೆಯ ಮರಹಮ್ಮತ್ ಬಕ್ಷೀರಾದ ಮ, ಎಚ್ ಲಿಂಗರಾಜೆ ಅರಸಿನವರು ಬೆಂಗಳೂರಿಗೆ ಕಳುಹಲ್ಪಟ್ಟಿದಾರೆ

ಬೆಂಗಳೂರು ಸಿಟಿಯಲ್ಲಿ ಸುಂದರಮ್ಮ, ಲಕ್ಷ್ಮಮ್ಮ ಎಂಬವರ ಮನೆಗಳಿಗೆ ಕಳ್ಳರು ಬಿದ್ದು ಸುಮಾರು 2,000 ರೂಪಾಯಿನ ಚಿನ್ನ ಬೆಳ್ಳಿ ನಗಗಳನ್ನು ಅಪಹರಿಸಿರುತ್ತಾರೆಂದು ಪೋಲೀಸಿಗೆ ತಿಳಿದು ಪತ್ತೆ ತರದೂದು ನಡೆಯುತ್ತಿದೆ

ಅರಮನೆ ಜೋಕರ್‌ಖಾನ್ ಮಹಲ್ ಇಲಾಖೆಯ ಮ|| ಬಸವಲಿಂಗಯ್ಯನವರ ಕುಮಾರರಾದ ಬ್ಯಾರಿಸ್ಟರ್ ಮಿ|| ಎಂ ಬಸವಯ್ಯನವರು ಕಳೆದ ವಾರ ಬೆಂಗಳೂರಿಗೆ ಬಂದು ಅಡ್ವೊಕೇಟರಾಗಿ ದಾಖಲಾಗಿರುತ್ತಾರೆಂದು ತಿಳಿದುಬಂದಿದೆ

ರಾಜಧಾನಿಯಲ್ಲಿ ಕಳೆದ ವಾರ 4-5 ದಿನಗಳ ವರೆಗೆ ಮೋಡ ಕವಿದು ಜಡಿಮಳೆ ಸುರಿಯಿತು ಒಂದೆರಡು ದಿನ ಆಕಾಶ ಹೊಳುವಾಗಿ ಕಂಡರೂ ಮಳೆ ಬರುವ ಸೂಚನೆ ಇನ್ನೂ ಇದ್ದೇ ಇದೆ ಹವಾ ಥಂಡಿಯಾಗಿಯೂ ಆರೋಗ್ಯಜನಕವಾಗಿಯೂ ಇರುವುದು

ಬೆಂಗಳೂರು ಸಿಟಿ ಹೆಲ್ತ್ ಆಫೀಸರು ಮಿ|| ಎ ಕೆ ಪಾಣಿಯವರನ್ನು ಮೈಸೂರಿಗೆ ವರ್ಗಮಾಡಿದರೆ ಅಲ್ಲೇ ಇಟ್ಟಿರಬೇಕೆಂದು ಅಲ್ಲಿನ ಮ್ಯುನಿಸಿಪಲ್ ಕೌನ್ಸಿಲರುಗಳು ತೀರ್ಮಾನಮಾಡಿ, ತಮ್ಮ ಅಭಿಮತವನ್ನು ಪ್ರೆಸಿಡೆಂಟರವರ ಮೂಲಕ ಗವರ್ನಮೆಂಟಿಗೆ ತಿಳಿಸಿರುತ್ತಾರೆ

ಕೋಲಾರ್ ಚಿನ್ನದಗಣಿಗಳ ಹೆಲ್ತ್ ಆಫೀಸರಾಗಿರುವ ಡಾಕ್ಟರ್ ಮರ್ಫೀರವರು ಬೊಂಬಾಯಿ ಅಧಿಪತ್ಯದ ಡೆಪ್ಯುಟಿ ಸ್ಯಾನಿಟರಿ ಕಮಿಷನರೆಂಬ 600 ರಿಂದ 1,000 ರೂಪಾಯಿಗೆ ಬಡ್ತಿ ಆಗುವ ಅಧಿಕಾರವನ್ನು ಒಪ್ಪಿಕೊಂಡು, ಇಷ್ಟರಲ್ಲೇ ಹೊರಟುಹೋಗುವವರಾಗಿದಾರೆ

ಭಾರಿ ಸಾಹುಕಾರರೂ ವರ್ತಕರೂ ಆದ ಮಿ|| ಹಾಜಿ ಇಸ್ಮೈಲ್ ಸೇಟರವರೂ, ಮಿ|| ಟಾಂ ಸ್ಕಾಟ್‌ರವರೂ ಸೇರಿ ಜಕಮಾರ್ ಎಂಬ ಜೂಜಿನ ಕುದುರೆಯನ್ನು 21,000 ರೂಪಾಯಿಗೆ ಕೊಂಡುಕೊಂಡಿದಾರೆ ಈ ಕುದುರೆಯು ಈಗ ಆಸ್ಟ್ರೇಲಿಯಾದಿಂದ ಜಹಜಿನ ಮೇಲೆ ಬರುತ್ತಿದೆ

ಬೆಂಗಳೂರು ವೀರಶೈವ ವಿದ್ಯಾವರ್ಧಕ ಸಂಘದವರು ಮೈಸೂರು ಪ್ರಜಾಪ್ರತಿನಿಧಿಸಭೆಗೆ ಒಬ್ಬ ಪ್ರತಿನಿಧಿಯನ್ನು ಚುನಾಯಿಸಿ ಕಳುಹಿಸಬಹುದೆಂದು ಸರ್ಕಾರದವರು ರಿಯಾಯತಿ ತೋರಿಸಿದ್ದರಿಂದ ಆ ಸಂಘದವರು ಅಡ್ವೊಕೇಟ್ ಮಿ|| ಎಚ್ ಕೆ ವೀರಬಸವಯ್ಯನವರನ್ನು ಚುನಾಯಿಸಿರುತ್ತಾರೆ

ನಂಜನಗೂಡು ತಾಲ್ಲೂಕು ಕಾರ್ಯದ ಹೊಲೆಯರಬೋಗಿ ಕೊಲೆ ಮೊಕದ್ದಮೆಯು ಚೀಫ್ ಕೋರ್ಟಿನಲ್ಲಿ ವಿಚಾರಣೆ ನಡೆದು ರುಜುವಾತು ಬರುವುದಿಲ್ಲವೆಂದು ಕಳೆದ ಗುರುವಾರ ವಜಾ ಆಯಿತು ಈ ಮೊಕದ್ದಮೆಯಲ್ಲಿ ಅಮಲ್ದಾರರಾಗಲಿ ಪಟೇಲನಾಗಲಿ ಅಪಸಾಕ್ಷಿ ನುಡಿದರೆಂದು ಹೇಳಲು ಕಾರಣವಾಗಲಿ ಉದ್ದೇಶವಾಗಲಿ ಕಂಡುಬರುವುದಿಲ್ಲವೆಂಬುದಾಗಿ ಜಡ್ಜಿಯವರು ಬರೆದಿದಾರೆ

ಕಳೆದ ವಾರ ಸಂಸ್ಥಾನದ ಕಂಟ್ರೋಲರವರಾದ ಮಿ|| ಜಿ ಎಸ್ ಚಕ್ರವರ್ತಿಯವರು ರಾಜಧಾನಿಗೆ ಬಂದು ಎರಡು ದಿನ ಇದ್ದು ಅರಮನೆಯ ಕಂಟ್ರೋಲರವರ ಮತ್ತು ಇನ್ನು ಕೆಲವು ಆಫೀಸುಗಳ ಸಿಬ್ಬಂದಿ ಮೊದಲಾದವುಗಳನ್ನು ತನಿಖೆ ಮಾಡಿಕೊಂಡು ಹೋದರು ಅರಮನೆ ಇಲಾಖೆಗಳ ಸಿಬ್ಬಂದಿಯ ವಿಚಾರದಲ್ಲಿ ಪುನರ್ವಿಮರ್ಶೆ ನಡೆಯಬಹುದೇನೋ ಎಂದು ಕೆಲವರು ಚಿಂತಿಸುತ್ತಿರುವಂತೆ ಕೇಳುತ್ತೇವೆ

ಬೆಂಗಳೂರು ಸಿಟಿಯಲ್ಲಿರುವ ಮ|| ಎ ಚಿದಂಬರ ಸಾಹುಜಿಯವರು ತಮ್ಮ ಮೊಮ್ಮಗನ ವಿವಾಹ ನಡೆದ ಸಂತೋಷಾರ್ಥವಾಗಿ ಕಳೆದ ಭಾನುವಾರ ಸಾಯಂಕಾಲ ನೂತನ ದಂಪತಿಗಳ ಆರತಕ್ಷತೆಯನ್ನು ನಡಿಸಿದರು ದಿವಾನ್‌ರವರೂ, ಮಾಜಿ ದಿವಾನ್ ಮ|| ವಿ ಪಿ ಮಾಧವರಾಯರೂ, ಅಧಿಕಾರಿಗಳೂ, ಮ್ಯುನಿಸಿಪಲ್ ಕೌನ್ಸಿಲರುಗಳೂ, ವರ್ತಕಮಂಡಲಿಯ ಮುಖಂಡರೂ ಅವರ ಮನೆಗೆ ಹೋಗಿದ್ದು, ಸತ್ಕಾರಹೊಂದಿ ಸಂತೋಷಪಟ್ಟು ಬಂದರು

ಒಬ್ಬ ಬಾತ್ಮಿದಾರರಿಂದ—ಕಳೆದ ತಾ 15 ನೇ ಮಂಗಳವಾರ ಬೆಂಗಳೂರು ಜನೋಪಕಾರಿ ದೊಡ್ಡಣ್ಣಶೆಟ್ಟರವರ ಹಾಲಿನಲ್ಲಿ ಕಾಂಚೀಪುರದಿಂದ ಬಂದಿರುವ ಬೆಳ್ಳಿ ನಾಗಸ್ವರದ ಸುಬ್ರಹ್ಮಣ್ಯ ಮುದಲಿಯಾರ್ರ ಕಚೇರಿ ನಡೆದು ಅವರಿಗೆ ಬಹುಮಾನಾರ್ಥವಾಗಿ ಒಂದು ಚಿನ್ನದ ಮೆಡಲನ್ನು ಬೆಂಗಳೂರು ಮಾರ್ಕೆಟ್ಟು ಬಳಿಯ ವರ್ತಕಮಂಡಲಿಯವರು ಅರ್ಪಿಸಿದರು ಕಚೇರಿ ಅದನಂತರ ಗ್ರಂದಿಗೆ ಅಂಗಡಿ ಮ|| ಶಿವರುದ್ರಪ್ಪನವರು ಸದರಿ ಮುದಲಿಯಾರ್ರ ವಿದ್ಯಾಪಾಂಡಿತ್ಯವನ್ನು ಕುರಿತು ಒಂದು ಚಿಕ್ಕ ಉಪನ್ಯಾಸಮಾಡಿ ಮೆಡಲನ್ನು ಅವರಿಗೆ ಒಪ್ಪಿಸಿದರು

ಕನ್ನಂಬಾಡಿ ತಲಾವಿನ ವಿಚಾರದಲ್ಲಿ ಮೈಸೂರು ಸರ್ಕಾರಕ್ಕೂ ಮದರಾಸ್ ಗವರ್ನಮೆಂಟಿಗೂ ಏನೋ ಜಿಜ್ಞಾಸವುಂಟಾಗಿರುವುದರಿಂದ ಇದನ್ನು ತನಿಖೆಯಿಂದ ಇತ್ಯರ್ಥಮಾಡಬೇಕೆಂದು ಇಂಡಿಯಾ ಗವರ್ನಮೆಂಟಿನವರ ಕಡೆಯಿಂದ ಇಬ್ಬರು ಪಂಚಾಯತರು ನೀಲಗಿರಿಗೆ ಬಂದು ಇರುವುದಾಗಿ ಕೇಳುತ್ತೇವೆ ಈ ತಲಾವಿನ ಕಾಮಗಾರಿ ಪ್ರಾರಂಭವಾಗಿ ಲಕ್ಷಾಂತರ ರೂಪಾಯಿ ಖರ್ಚಾದ ಮೇಲೆ ಈಗ ಜಿಜ್ಞಾಸ ಹುಟ್ಟಲು ಕಾರಣವೇನಾಯಿತೋ ತಿಳಿಯಲಾರದೆ ಪ್ರಜೆಗಳು ಕಳವಳಪಡಲು ಅವಕಾಶವಾಗಿದೆ ಸರ್ಕಾರದವರು ಇದರ ಪೂರ್ವೋತ್ತರವನ್ನು ಸಮಗ್ರವಾಗಿ ಪ್ರಕಟಮಾಡುವರೆಂದು ನಿರೀಕ್ಷಿಸಬಹುದು

ಕೊಡಗು ನಾಪೋಕ್ಲು ಗ್ರಾಮದ ಚೆರವಲಂಡ ಅಯ್ಯಣ್ಣನವರ ಮಗ ಸುಮಾರು 23 ವಯಸ್ಸಿನ ಸಿಯಣ್ಣನೆಂಬುವನು ಏನೋ ಕಾಯಿಲೆ ಇದ್ದು ಚಿಕಿತ್ಸೆಗಾಗಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಹೋಗಬೇಕೆಂಬ ಕುತೂಹಲದಿಂದ ಕಳೆದ ವಾರ ರಾಜಧಾನಿಗೆ ಬಂದು ಇಲ್ಲಿ ಕೊಡಗಿನ ವಿದ್ಯಾರ್ಥಿಗಳು ಸೇರಿ ಮಾಡಿಕೊಂಡಿರುವ ಬಿಡಾರದಲ್ಲಿ ಇಳುಕೊಂಡಿದ್ದು, ಕಳೆದ ಆದಿತ್ಯವಾರ ರಾತ್ರಿ 8 ಗಂಟೆಗೆ ಊಟಮಾಡಿ ರೈಲಿಗೆ ಹೋಗಬೇಕೆಂದು ಆ ಬಿಡಾರದ ಮೇಲಂತಸ್ಥಿನಿಂದ ಇಳಿದು ಬರುತ್ತಿರುವಾಗ್ಗೆ ಅಕಸ್ಮಾತ್ತಾಗಿ ಮೃತಪಟ್ಟನು ಮರುದಿನ ಬೆಳಿಗ್ಗೆ ರಾಜಧಾನಿಯಲ್ಲಿ ಓದುವುದಕ್ಕಾಗಿ ಬಂದಿರುವ ಸುಮಾರು 35 ಮಂದಿ ಕೊಡಗು ವಿದ್ಯಾರ್ಥಿಗಳೇ ಸೇರಿಕೊಂಡು ಅವರ ಪದ್ಧತಿಯಂತೆ ಶವವನ್ನು ಸ್ಮಶಾನಕ್ಕೆ ಸಾಗಿಸಿ ದಫನ್‌ಮಾಡಿ ಬಂದರು ಪರಸ್ಥಳದಲ್ಲಿ ಬಂದು ಗತಿಸಿದ ಸಿಯಣ್ಣನಿಗೆ ತಂದೆತಾಯಿಗಳು ಇರುವುದಾಗಿಯೂ, ಆತನು ಸುಮಾರು 3 ತಿಂಗಳ ಹಿಂದೆ ಹುಣಸೂರಿನಲ್ಲಿ ಪೋಸ್ಟ್ ಮಾಸ್ಟರಾಗಿದ್ದನೆಂದೂ ಕೇಳುತ್ತೇವೆ.

ಕಳೆದ ವರುಷ ರಾಜಧಾನಿಯಲ್ಲಿ ಪ್ರಾರಂಭಿಸಲ್ಪಟ್ಟ ಪ್ರಜಾಪ್ರತಿನಿಧಿ ಮಂದಿರದ ಜಮಾಖರ್ಚು ಮುಂತಾದದ್ದನ್ನು ತಿಳಿಸುವ ರಿಪೋರ್ಟೂ, ಚಾಲ್ತಿ ಸಾಲಿನ ಪ್ರತಿನಿಧಿ ಮಂದಿರದ ನಿಬಂಧನೆಗಳೂ ಸೆಕ್ರೆಟರಿ ಮ|| ಕರಣೀಕ ಕೃಷ್ಣಮೂರ್ತಿರಾಯರಿಂದ ರಚಿಸಲ್ಪಟ್ಟು ನಮ್ಮಲ್ಲಿಗೆ ಒಂದು ಪ್ರತಿ ತಲಪಿರುತ್ತದೆ ಈ ಮಂದಿರದಲ್ಲಿ ಕಳೆದ ವರುಷ ಸೇರಿದ್ದ ಮೆಂಬರುಗಳಿಗೆ ಬಹಳ ಅನುಕೂಲವಾಗಿ ಎಲ್ಲಾ ಏರ್ಪಾಡುಗಳನ್ನೂ ಮಾಡಿದ್ದರು ಒಟ್ಟು 561 ಚಿಲ್ಲರೆ ರೂಪಾಯಿ ಖರ್ಚಾದದ್ದರ ಪೈಕಿ ಮೆಂಬರುಗಳಿಂದ 386 ಚಿಲ್ಲರೆ ಮಾತ್ರ ಪಾವತಿ ಆಗಿರುವುದು ಸೆಕ್ರೆಟರಿಯವರಿಗೆ ಕಳೆದ ವರುಷ ತುಂಬಾ ದೇಹಶ್ರಮವೂ, ದ್ರವ್ಯನಷ್ಟವೂ ಆಗಿದೆ ಎನ್ನುವುದನ್ನು ಮೆಂಬರುಗಳು ತಿಳಿದಿರುತ್ತಾರೆ ಚಾಲ್ತಿ ಸಾಲಿನಲ್ಲಿ ಪ್ರತಿನಿಧಿಗಳು ಈ ಮಂದಿರದಲ್ಲಿ ಇಳಿದು ಅದರ ಸೌಕರ್ಯಗಳನ್ನು ಅನುಭೋಗಿಸುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ ಇಂಥಾ ಮಂದಿರವು ಇರಬೇಕಾದದ್ದೂ, ಸಂಸ್ಥಾನಾಮುಖಿಯಿಂದ ದೇಶಸೇವೆಗಾಗಿ ಬರತಕ್ಕ ಮೆಂಬರುಗಳೆಲ್ಲಾ ಒಂದೇ ಕಡೆ ಕಲೆತು ಪರಸ್ಪರ ಆಲೋಚನೆಮಾಡಿ ಸಭೆಯ ಉದ್ದೇಶವನ್ನು ಸಾರ್ಥಕಪಡಿಸಬೇಕಾದದ್ದೂ ಅಪೇಕ್ಷಣೀಯವಾಗಿದೆ. ಮೆಂಬರುಗಳು ಮ|| ಕೃಷ್ಣಮೂರ್ತಿರಾಯರ ಸಾಹಸವನ್ನೂ ಉದ್ದೇಶವನ್ನೂ ಸಾರ್ಥಕಪಡಿಸುವವರಾಗಲೆಂದು ಹಾರೈಸುತ್ತೇವೆ

ಕಳೆದ ಗುರುವಾರ ಬೆಳಗಿನ ಝಾಮದಲ್ಲಿ ಗತಿಸಿದ ಎರಡನೇ ಮಹಾರಾಜಕುಮಾರಿಯವರ ಸುಮಾರು 14 ವಯಸ್ಸಿನ ಮೂರನೇ ಹೆಣ್ಣು ಮಗಳು ಅರಮನೆಯಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಈಕೆಗೆ ಕೆಲವು ಕಾಲದಿಂದ ಕ್ಷಯರೋಗಪ್ರಾಪ್ತವಾಗಿದ್ದು ಗಟ್ಟಿಗರಾದ ಬಹು ಮಂದಿ ವೈದ್ಯರಿಂದ ಔಷಧ ಚಿಕಿತ್ಸಾದಿಗಳನ್ನು ಮಾಡಿಸಿದಾಗ್ಯೂ ಸಾಧ್ಯವಾಗದೆಹೋಯಿತು ಅನಿಷ್ಟಪರಿಹಾರಾರ್ಥವಾಗಿ ಅನೇಕವಾದ ಪೂಜೆ ಪುನಸ್ಕಾರಗಳೂ ಅಭಿಷೇಕಗಳೂ ಸಂತರ್ಪಣೆಗಳೂ ಅರಮನೆಯಿಂದ ಬಹು ಧಾರಾಳವಾಗಿ ನಡಿಸಲ್ಪಡುತ್ತಿದ್ದವು ಆ ದಿನ ಬೆಳಿಗ್ಗೆ ಸುಮಾರು 11 ಘಂಟೆಗೆ ಅರಮನೆಯ ಮರ್ಯಾದೆಗಳೊಡನೆ ಶವವನ್ನು ಮೆರವಣಿಗೆಯಲ್ಲಿ ಸಾಗಿಸಿಕೊಂಡು ಹೋಗಿ ದಹನ ಕಾರ್ಯಗಳು ಜರುಗಿಸಲ್ಪಟ್ಟವು ರಾಜಬಂಧುಗಳೂ ಅಧಿಕಾರಿಗಳೂ ಪುರಜನರೂ ಮೆರವಣಿಗೆಯಲ್ಲಿ ಹಾಜರಾಗಿದ್ದು ವಿಶೇಷವಾಗಿ ಸಂತಾಪಪಟ್ಟರು ದಹನಕಾಲಕ್ಕೆ ಸ್ವಲ್ಪ ಮುಂಚಿತವಾಗಿ ಬೆಂಗಳೂರಿನಿಂದ ಕರ್ನಲ್ ದೇಶರಾಜೆ ಅರಸಿನವರೂ, ಸರ್ದಾರ್ ಕಾಂತರಾಜೆ ಅರಸಿನವರೂ, ಸರ್ದಾರ್ ಲಕ್ಷ್ಮೀಕಾಂತರಾಜೆ ಅರಸಿನವರೂ ಮೋಟಾರುಗಳಲ್ಲಿ ದಯಮಾಡಿದರು ಮೂರನೆಯ ದಿನ ಹಾಲುತುಪ್ಪವೆಂಬ ಕರ್ಮವು ಜರುಗಿತು ಈ ವಿಯೋಗದಿಂದ ಮಹಾಮಾತೃಶ್ರೀಯವರಿಗೂ, ಮಹಾರಾಜರವರಿಗೂ, ರಾಣಿವಾಸದವರಿಗೂ ಪ್ರಾಪ್ತವಾದ ಮಹದ್ವ್ಯಸನವನ್ನು ದೇವರು ನಿವಾರಣೆ ಮಾಡಿ ಸಮಾಧಾನವನ್ನು ದಯಪಾಲಿಸಲೆಂದು ಸಕಲ ಪ್ರಜೆಗಳ ಕೂಡ ನಾವೂ ಸಂತಾಪಪಟ್ಟು ಪ್ರಾರ್ಥಿಸುತ್ತೇವೆ

ಮೈಸೂರು ಗೆಜೆಟ್ ಸಂಗ್ರಹ.

ಮಾಗಡಿ ತಾಲ್ಲೂಕು ತಾವರೆಕೆರೆಯಲ್ಲಿ ಪ್ಲೇಗ್ ಉಪದ್ರವಿಲ್ಲವೆಂದು ಪ್ರಕಟಮಾಡಿದೆ

ಕೊಡಗು ವೀರಾಜಪೇಟೆಯಲ್ಲಿ ಪ್ಲೇಗ್ ಉಪದ್ರ ಕಾಣಿಸಿಕೊಂಡಿದೆ ಎಂದು ತಿಳಿಯತಕ್ಕದ್ದು

ಮುಂದೆ ಹೇಳುವ ಯೂನಿಯನ್ ಪಂಚಾಯತಿಗಳನ್ನು ರದ್ದುಮಾಡಿದೆ — ಯಡತೊರೆ ತಾಲ್ಲೂಕು ಸಾಲಿಗ್ರಾಮ, ಶ್ರೀರಂಗಪಟ್ಟಣದ ತಾಲ್ಲೂಕು ಗಮನಹಳ್ಳಿ, ಕಿರಂಗೂರು, ಕೆನ್ನಾಳು

ಚಿಕ್ಕಬಳ್ಳಾಪುರದ ತಾಲ್ಲೂಕು ನಂದಿ ಗ್ರಾಮವನ್ನು ಯೂನಿಯನ್ ಪಂಚಾಯತಿ ಮಾಡಿದೆ

ಮಿ|| ಪಟ್ಟಾಭಿ ಸುಬ್ಬಾಪಂಡಿತರನ್ನು ದೇವರಾಯಸಮುದ್ರಂ ಯೂನಿಯನ್ ಮೆಂಬರಾಗಿಯೂ, ಮ್ಯುನಿಸಿಪಲ್ ಮೆಂಬರ್ ಮಿ|| ಕಾರೆ ರಾಮಯ್ಯನವರನ್ನು ಬಾಗೇಪಲ್ಲಿ ತಾಲ್ಲೂಕು ಬೋರ್ಡ್ ಮೆಂಬರಾಗಿಯೂ, ಮಿ|| ಎಂ ಎನ್ ಶಿವಲಿಂಗಪ್ಪನವರನ್ನು ಕಡೂರು ತಾ|| ಬೋರ್ಡ್ ಮೆಂಬರಾಗಿಯೂ ನೇಮಿಸಿದೆ

ಮಂಜರಾಬಾದ್ ಅಮಲ್ದಾರ್ ಮಿ|| ಎನ್ ಗೋಪಾಲಕೃಷ್ಣಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ —ಹಾಸನದ ಡಿಸ್ಟ್ರಿಕ್ಟ್ ಶಿರಸ್ತೆದಾರ್ ಮಿ|| ಬಿ ಎಂ ವೆಂಕಟೇಶಯ್ಯನವರು ಮಂಜರಾಬಾದ್ ತಾಲ್ಲೂಕಿನ ಅಮಲ್ದಾರ್ ಮತ್ತು 2ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು

ಹಾಸನ್ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಆಗಿದ್ದ ಮಿ|| ಸಿ ಆರ್ ನಾರಾಯಣಸ್ವಾಮಿ ಮುದಲಿಯಾರ್ರಿಗೆ 1912ನೇ ಜೂನ್ ತಾ 1 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು —ಮೈಸೂರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿರುವ ಇವರಿಗೆ ಆಗಸ್ಟ್ ತಾ|| 28 ರಿಂದ ಹದಿನೈದು ದಿನಗಳ ಸಂಬಳವಿಲ್ಲದ ರಜಾ ಕೊಟ್ಟಿದೆ

ಮೈಸೂರು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರಾದ ಮಿ|| ಬಿ ಕೃಷ್ಣರಾಯರಿಗೆ ಜೂಲೈ ತಾ 15 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ —ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಮಿ|| ಸಿ ರಾಜಾರಾಮರಾಯರು ಅವರ ಕೆಲಸದ ಛಾರ್ಜನ್ನೂ ವಹಿಸಿರತಕ್ಕದ್ದು

ಸ್ಪೆಷಲ್ ಡ್ಯೂಟಿಗೆ ನೇಮಕವಾಗಿರುವ ಸೀನಿಯರ್ ಅ|| ಕಮಿಷನರ್ ಮಿ|| ಕೆ ಮತ್ತಾನ್‌ರವರು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದಾರೆ —ಮಿ|| ಕೆ ಶ್ರೀನಿವಾಸರಾಯರು ಜೂಲೈ ತಾ 24 ರಿಂದ ಕೆಲಸದಿಂದ ನಿವೃತ್ತರಾಗುವರು

ಮುಂದೆ ಹೇಳುವ ಅಮಲ್ದಾರರುಗಳ ವರ್ಗಾವರ್ಗಿ ಹುಕುಂ ಮಾಡಿದೆ— ಮಿ||ಸಿ ನಾರಾಯಣರಾಯರನ್ನು ಚೆನ್ನರಾಯಪಟ್ಟಣದಿಂದ ಚಿತ್ರದುರ್ಗ ತಾಲ್ಲೂಕಿಗೆ, ಮಿ|| ಜಿ ವೆಂಕಟರಾಯರನ್ನು ಚಿತ್ರದುರ್ಗದಿಂದ ಚೆನ್ನರಾಯಪಟ್ಟಣದ ತಾಲ್ಲೂಕಿಗೆ

ಹೆಲ್ತ್ ಇಲಾಖೆಯಲ್ಲಿ ಮುಂದೆ ಹೇಳುವ ಅಧಿಕಾರಿಗಳ ವರ್ಗಾವರ್ಗೀ ಹುಕುಂ ಮಾಡಿದೆ —ಹೆಲ್ತ್ ಆಫಿಸರ್ ಮಿ|| ಎ ಕೆ ಪಾಣಿಯವರನ್ನು ಬೆಂಗಳೂರು ಸಿಟಿಯಿಂದ ಮೈಸೂರು ಸಿಟಿಗೆ, ಮಿ|| ವಿ ಎಲ್ ಮಾಂಕರವರನ್ನು, ಮೈಸೂರಿನಿಂದ ಕೋಲಾರದ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರಾಗಿ, ಮಿ|| ಆರ್ ಸುಬ್ಬರಾಯರನ್ನು ಕಡೂರಿನಿಂದ ಬೆಂಗಳೂರು ಸಿಟಿ ಹೆಲ್ತ್ ಆಫೀಸರಾಗಿ, ಮಿ|| ಎಂ ಜಿ ಸ್ಯಾಮ್ಯುಯಲ್‌ರವರನ್ನು ಕೋಲಾರದಿಂದ ಕಡೂರು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರಾಗಿ

ಶಿವಮೊಗ್ಗಾ ತಾಲ್ಲೂಕು ಅಮಲ್ದಾರ್ ಮಿ|| ಎಂ ಎಸ್ ಹಯಗ್ರೀವರಾಯರಿಗೆ ಆಗಸ್ಟ್ ತಾ 1 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ —ಡಿಸ್ಟ್ರಿಕ್ಟ್ ಆಫೀಸ್ ಜುಡಿಷಲ್ ಹೆಡ್ ಮುನ್ಷಿ ಮಿ|| ಎಸ್ ನಾರಾಯಣರಾಯರು ಆ ಕಾಲದಲ್ಲಿ ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು

ತಾಲ್ಲೂಕು ವರ್ತಮಾನ.

ನಂಜನಗೂಡು —ಸಾಧಾರಣವಾಗಿ 8 ದಿವಸಗಳಿಂದ ಮೋಡವಾಗುತ್ತಲೇ ಇದೆ ಸ್ವಲ್ಪಮಟ್ಟಿಗೆ ಪ್ರವಾಹವು ಬಂದಿರುತ್ತೆ ಧಾರಣೆವಾಸಿಗಳು ಥಡಾವಾಗಿರುವವು ಹವಾ ಅನುಕೂಲವಾದ ಸ್ಥಿತಿಯಲ್ಲಿರುತ್ತೆ —ಕಳೆದ ತಾ 9 ನೇ ಬುಧವಾರ ಇಲ್ಲಿನ ಸಬ್ ಡಿವಿಜನ್ ಆಫೀಸರವರು ಎಕನಾಮಿಕ್ ಕಾನ್ಫರೆನ್ಸು ಮೀಟಿಂಗು ನಡಿಸಿದರು ಇದಕ್ಕಾಗಿ ಈ ಡಿವಿಜನ್ ಅಮಲ್ದಾರರೂ ಮೆಂಬರುಗಳೂ ದಯಮಾಡಿಸಿ, ಜನಗಳ ಉಪಯೋಗಕ್ಕಾಗಿ ಅಲ್ಲಲ್ಲಿ ನೈಟ್ ಸ್ಕೂಲುಗಳು ಮತ್ತು ಇಂಡಸ್ಟ್ರಿಯಲ್ ಸ್ಕೂಲುಗಳು ವಗೈರೆ ಇಡಿಸಬೇಕೆಂದೂ, ಜನಗಳ ಸೌಕರ್ಯಕ್ಕಾಗಿ ಆಗಬೇಕಾದ ಕಟ್ಟಡಗಳು ವಗೈರೆ ತಯಾರಾಗತಕ್ಕ ವಿಚಾರವನ್ನೂ ಕುರಿತು ಪ್ರಸ್ತಾಪ ಮಾಡಿದರು —ಇಲ್ಲಿನ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಕಲ್ಯಾಣೋತ್ಸವವೂ, ಪ್ರತಿನಿತ್ಯವೂ ಮೂರು ಸಾವಿರ ಜನಕ್ಕೆ ಕಡಮೆ ಇಲ್ಲದೆ ಸಂತರ್ಪಣೆಯೂ ನಡೆದವು ಇಲ್ಲಿನ ಅಮಲ್ದಾರ್ ಮ|| ಭೀಮರಾಯರು ಈ ತಾಲ್ಲೂಕಿಗೆ ಬಂದು ಬಹಳ ಸ್ವಲ್ಪ ದಿವಸಗಳಾದಾಗ್ಯೂ ತಾಲ್ಲೂಕಿನ ಮತ್ತೂ ದೇವಸ್ಥಾನದ ನೌಕರರಿಗೆ ಸರಿಯಾದ ಏರ್ಪಾಡುಮಾಡಿ ತಾವು ಸಹ ತುಂಬಾ ಮೆಹನತ್ತು ವಹಿಸಿ ಎಲ್ಲಾ ಕಾರ್ಯಗಳನ್ನೂ ಬಹಳ ವಿಹಿತರಣೆಯಾಗಿ ನಡಿಸಿದ್ದು ತುಂಬಾ ಸ್ತೋತ್ರಾರ್ಹವಾಗಿದೆ ಮತ್ತು ಈ ಉತ್ಸವದ ಮಧ್ಯೆ ವೇದಾಂತ ಮೊದಲಾದ ಪರೀಕ್ಷೆಗಳು ನಡೆದು ಉತ್ತೀರ್ಣರಾದವರಿಗೆ ಅವರವರ ಯೋಗ್ಯತಾನುಸಾರ ಬಹುಮಾನ ಕೊಡಲ್ಪಟ್ಟಿತು —ತಾ 11 ನೇ ಶುಕ್ರವಾರ ಈ ಊರು ಹೊಳೆಗೆ ಸ್ನಾನಕ್ಕೆ ಹೋಗಿದ್ದ ಒಬ್ಬ ಪರಸ್ಥಳದ ಬ್ರಾಹ್ಮಣನು ಹೊಳೆಯಲ್ಲಿ ಬಿದ್ದು ಸತ್ತನು ಅವನ ಶವವು ಭಾನುವಾರ ಸಾಯಂಕಾಲ ಸಿಕ್ಕಿತು.—ಇಲ್ಲಿನ ಪೊಲೀಸ್ ಇನ್‌ಸ್ಪೆಕ್ಟರಿಗೆ ಕೋಲಾರದ ಡಿಸ್ಟ್ರಿಕ್ಟು ಶ್ರೀನಿವಾಸಪುರದ ತಾಲ್ಲೂಕಿಗೂ, ಜಮೇದಾರರಿಗೆ ಮೈಸೂರು ಸಿಟಿಗೂ ವರ್ಗವಾಗಿ, ಹೊಸಬರು ಬಂದು ಛಾರ್ಜು ವಹಿಸಿ ಬಹಳ ಮೆಹನತ್ತಿನಿಂದಲೂ ಮುತುವರ್ಜಿಯಾಗಿಯೂ ಕೆಲಸ ಮಾಡುತ್ತಾ ಇದಾರೆ ಇನ್ನು ಮೇಲಾದರೂ ಕುಂಟರ ಹಾವಳಿ ಮತ್ತು ಲಂಚರುಷವತ್ತುಗಳು ಕಡಮೆಯಾಗಿ ಜನಗಳಿಗೆ ಕ್ಷೇಮವಾದೀತೆಂದು ಹಾರೈಸಲ್ಪಟ್ಟಿದೆ

ಬೆಲೆ ಸುಲಭ ಗುಣ ಖಾತರಿ. ಫಲ ಅಧಿಕ

ಯೂಕಲಿಪ್ಟಿಸ್ ಆಯಿಲ್.

ಜಾಗ್ರತೆಯಾಗಿ ಈ ಔಷಧವನ್ನು ಪರೀಕ್ಷಿಸಿ ಇಷ್ಟವುಳ್ಳವರು ತೆಗೆದುಕೊಳ್ಳಬಹುದು ಈ ನಾಲ್ಕು ವಿಷಯಗಳನ್ನು ತಕ್ಷಣವೇ ಪರೀಕ್ಷೆಮಾಡಿ ನೋಡತಕ್ಕವು ತಲೆನೋವು, ಕಣ್ಣು ಉರಿ, ಹೊಟ್ಟೆನೋವು, ಹಲ್ಲುನೋವು

ಬೆಲೆ—1 ಬಾಟ್ಲಿಗೆ 8 ಆಣೆ ವಿ. ಪಿ. ಛಾರ್ಜು ಬೇರೆ

[1u-8] ವಿಳಾಸ —ಕೆ. ಶ್ರೀನಿವಾಸರಾವ್, ಹರಿಹರ ಪೋಸ್ಟ್

ನೋಟೀಸ್.

151 I

ಗೋಕಾಕ್ ಮಿಲ್‌ಸಿನಲ್ಲಿ ತಯಾರಾಗುವ ನಂಬರ್‌ವಾರ್ ಹಸನು ನೂಲು ವಿಕರಿಮಾಡಲು ನಮ್ಮನ್ನು ದಕ್ಷಿಣ ಇಂಡಿಯಾ ದೇಶದ ಸೋಲ್ ಏಜಂಟರನ್ನಾಗಿ ನೇಮಕ ಮಾಡಿರುವುದರಿಂದ ದರ ಮುಂತಾಗಿ ತಿಳಿಯಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು—

ಎಂ ಎಸ್ ನಾರಾಯಣ ಕಂಪನಿ,

ಅವೆನ್ಯೂ ರೋಡ್, ಬೆಂಗಳೂರು ಸಿಟಿ

ಗೃಹಕೃತ್ಯದ ನೋಟೀಸು

ಯಡತೊರೆಯಲ್ಲಿರುವ ವೆಂಡರ್ ಸುಬ್ರಾಯರ ಮಗ ಸುಬ್ರಾಮಯ್ಯ ಪವತಿ ಹೆಂಡತಿ ಮೀನಾಕ್ಷಮ್ಮನ ಮೈನರ್ ಗಾರ್ಡಿಯನ್ ತಂದೆ ಮಹದೇವಪುರದ ವೆಂಕಟರಮಣಯ್ಯನು ತಿಳಿಯಪಡಿಸುವದೇನಂದರೆ—ಪವತಿ ಸುಬ್ರಾಮಯ್ಯನಿಗೆ ಮೈಸೂರು ಸಿಟಿ ಚಾಮರಾಜ ಮೊಹಲ್ಲಾ ಸೋನಾರ ಬೀದಿಯಲ್ಲಿ 58 ನೇ ನಂ ಮಹಡಿ ಮನೆ ಒಂದೂ, ಯಡತೊರೆ ತಾ|| ಮೂಡ್ಲುಕೊಪ್ಪಲು ಜೋಡಿ ಚಾಮಲಾಪುರ, ಕೆಪ್ಪಡಿ ಹಂತ, ಈ ಗ್ರಾಮಗಳಲ್ಲಿ ತರಿ, ಖುಷ್ಕಿ ಜಮೀನುಗಳೂ, ಯಡತೊರೆ ಕಸಬಾ ಎಕ್ಸ್‌ಟೆಂಷನ್‌ನಲ್ಲೂ ಯಡತೊರೆ ಊರೊಳಗೂ ಇರುವ ಮನೆ ನಿವೇಶನಗಳೂ ಇರುತ್ತವೆ ಇವುಗಳನ್ನು ನಾನು ವಿನಹ ಮತ್ಯಾರಾದರೂ ಯಾವ ವಿಧವಾಗಿ ಪರಾಧೀನ ಮಾಡಿದರೂ ಊರ್ಜಿತವಾಗತಕ್ಕದ್ದಲ್ಲ ಸದರಿ ಸುಬ್ರಾಮಯ್ಯನಿಗೆ ಬರತಕ್ಕ ಸಾಲದ ಮೊಬಲಗನ್ನೂ ಮತ್ತು ಮೇಲ್ಕಂಡ ಜಮೀನುಗಳ ಸಾಗುವಳಿದಾರರು ಗುತ್ತಿಗೆಯನ್ನೂ ಸಹ ನನಗೆ ವಿನಹಾ ಮತ್ಯಾರಿಗೂ ಯಾವ ವಿಧವಾಗಿಯೂ ಕೊಡಕೂಡದೆಂದು ಇದರಿಂದ ಎಚ್ಚರಿಸಿದೇನೆ [153 1]

ಯಡತೊರೆ, 21 7 1913 ವೆಂಕಟರಮಣಯ್ಯ

ವೃತ್ತಾಂತ ಪತ್ರಿಕೆ.

ಶಕ ೧೮೧೩ ನೇ ಇಸವಿ ಜುಲೈ ತಾ ೨೪ ನೇ ಗುರುವಾರ

ಮೈಸೂರು ಸಂಸ್ಥಾನದ ಮಲೆನಾಡು ಭಾಗಗಳು

ಮೈಸೂರು ಗವರ್ನಮೆಂಟಿನವರು ಮಲೆನಾಡು ಸೀಮೆಯಲ್ಲಿರುವ ಪ್ರಜೆಗಳ ಸ್ಥಿತಿಗತಿಯನ್ನು ವಿಚಾರಿಸಿ ತಿಳಿದುಕೊಳ್ಳಬೇಕೆಂದು ಕುತೂಹಲಪಟ್ಟು ಮಿ|| ಮತ್ತಾರ್‌ರವರನ್ನು ಆ ಕೆಲಸಕ್ಕಾಗಿ ನೇಮಕಮಾಡಿದಾರೆಂದು ತಿಳಿಯುತ್ತೇವೆ ಶಿವಮೊಗ್ಗಾ ಮತ್ತೂ ಕಡೂರು ಡಿಸ್ಟ್ರಿಕ್ಟುಗಳಲ್ಲಿ ಬಹು ಭಾಗವೆಲ್ಲಾ ಬೆಟ್ಟಗುಡ್ಡಗಳಿರುವ ಸೀಮೆಯಾಗಿದೆ ಅಲ್ಲಿ ಮಳೆ ಸುರಿಯುವುದು ಬಹಳ ವಿಶೇಷ, ಆ ಪ್ರಾಂತ್ಯಗಳು ಸಾಮಾನ್ಯವಾಗಿ ಅನಾರೋಗ್ಯಕರವಾದುವುಗಳೆಂದು ಎಲ್ಲರೂ ತಿಳಿದುಕೊಂಡಿದಾರೆ. ಆದರೆ ಭೂಗುಣವು ಬಹಳ ರಸವತ್ತಾದದ್ದು, ಕಾಪಿ, ಅಡಿಕೆ, ಏಲಕ್ಕಿ ಮುಂತಾದವು ಹೇರಳವಾಗಿ ಬೆಳೆಯುತ್ತವೆ, ಇದಲ್ಲದೆ ಭತ್ತ ಮೊದಲಾದ ಧಾನ್ಯಗಳೂ ಹುಲುಸಾಗಿ ಬೆಳೆಯುವವು ಆದಕಾರಣ ಆ ಪ್ರದೇಶಗಳಲ್ಲಿ ಕ್ಷಾಮದ ರೋದನವು ಕೇಳಿಬರುವುದು ಬಹಳ ಅಪರೂಪ ಇಷ್ಟೆಲ್ಲಾ ಅನುಕೂಲಗಳಿದ್ದಾಗ್ಯೂ ಈ ಸಲ ಕೂಡಿಸಿದ ಪ್ರಜಾಗಣತಿಯಲ್ಲಿ ಆ ಡಿಸ್ಟ್ರಿಕ್ಟುಗಳ ಪ್ರಜೆಗಳು ಬಹಳ ಮಟ್ಟಿಗೆ ಕಡಿಮೆಯಾಗಿರುತ್ತಾರೆಂದು ಗೊತ್ತಾಗುವುದು. ಆದಕಾರಣ ಗವರ್ನಮೆಂಟಿನವರು ಅದಕ್ಕೆ ಕಾರಣಗಳನ್ನು ತಿಳಿದುಕೊಳ್ಳಬೇಕೆಂದು ಕುತೂಹಲಪಡುತ್ತಿರುವುದು ಸಹಜವಾಗಿದೆ

ಇದು ಬಹು ದೊಡ್ಡ ವಿಷಯ. ಇಂಥಾದ್ದನ್ನು ತನಿಖೆಯಿಂದ ಗೊತ್ತುಮಾಡುವ ಭಾಗದಲ್ಲಿ ಮಿ|| ಮತ್ತಾರ್‌ರವರಿಗೆ ಅಂಥಾ ವಿಶೇಷವಾದ ಪರಿಶ್ರಮವಿರುವುದೇ ಎಂದು ಸಂಶಯಪಡುತ್ತೇವೆ ಈ ವಿಶೇಷವಾದ ಕಾರ್ಯವು ಒಬ್ಬಿಬ್ಬರಿಂದ ಸಾಧ್ಯವಾಗತಕ್ಕದ್ದೆಂದು ಹೇಳಲಾಗದು ಪ್ರಜೆಗಳು ಕ್ಷಯವಾಗುತ್ತಿರುವುದಕ್ಕೆ ಇರಬಹುದಾದ ಕಾರ್ಯ ಕಾರಣಗಳನ್ನೆಲ್ಲಾ ಸಮಗ್ರವಾಗಿ ತನಿಖೆಮಾಡಿ ಗೊತ್ತುಮಾಡಲು ಹಲವರು ಬೇಕಾದೀತೆಂದು ನಮಗೆ ತೋರುತ್ತದೆ ಈ ಮಲೆನಾಡು ಪ್ರದೇಶವನ್ನೆಲ್ಲಾ ಸುತ್ತಿ ಚೆನ್ನಾಗಿ ಅನುಭವಮಾಡಿಕೊಂಡಿರುವ ಒಬ್ಬ ವೈದ್ಯನಿರಬೇಕು, ಆ ವೆರಡು ಡಿಸ್ಟ್ರಿಕ್ಟುಗಳನ್ನೂ ಪರಿಪೂರ್ಣವಾಗಿ ಬಲ್ಲಂಥಾ ಒಬ್ಬ ರೆವಿನ್ಯೂ ಅಧಿಕಾರಿ ಇರಬೇಕು, ಇವರ ಜೊತೆಗೆ ಸಾಧ್ಯವಾದರೆ ಆಯಾ ಡಿಸ್ಟ್ರಿಕ್ಟಿನ ಸ್ಥಿತಿಗತಿ ವಿದ್ಯಮಾನಗಳನ್ನು ಉಚಿತವಾಗಿ ತಿಳಿದಿರುವಂಥಾ ಮುಖಂಡನಾದ ಒಬ್ಬ ಪ್ರಜೆಯೂ ಸೇರಬೇಕು. ಇವರೆಲ್ಲಾ ಏಕೀಭವಿಸಿ ಮಲೆನಾಡಿನ ಮುಖ್ಯ ಪ್ರದೇಶಗಳಿಗೆಲ್ಲಾ ಹೋಗಿ ಅಲ್ಲಲ್ಲಿರುವ ಪ್ರಜೆಗಳ ಸ್ಥಿತಿಗತಿಯನ್ನೂ, ಋತುಧರ್ಮಗಳನ್ನೂ, ಭೂಗುಣವನ್ನೂ ತನಿಖೆಯಿಂದ ಗೊತ್ತುಮಾಡಬೇಕಾಗಿರುತ್ತದೆ. ಹ್ಯಾಗೂ ಇಂಥಾ ವಿಶೇಷಕಾರ್ಯವು ಸಾರ್ಥಕವಾಗಿ ನೆರವೇರಿ, ಪ್ರಜೆಗಳಿಗೂ ಪ್ರಜಾಪಾಲಕರಿಗೂ ಶ್ರೇಯಸ್ಸುಂಟಾಗಬೇಕಾದರೆ ಈ ವಿಚಾರಣೆಯು ಕೂಲಂಕಷವಾಗಿಯೂ, ಪರಿಪೂರ್ಣವಾಗಿಯೂ ನೆರವೇರಬೇಕಾಗಿದೆ.

ಮಲೆನಾಡಿನ ಪ್ರಜೆಗಳು ಅನುಭವಿಸುತ್ತಿರುವ ಕಷ್ಟನಷ್ಟಗಳನ್ನು ಕುರಿತು ಆ ಪ್ರಾಂತ್ಯದ ನಮ್ಮ ವಾಚಕರೂ ಬಾತ್ಮಿದಾರರೂ ಅನೇಕವೇಳೆ ಈ ಪತ್ರಿಕೆಯಲ್ಲಿ ವಿವರಿಸುತ್ತಾ ಬಂದಿದಾರೆ ಈ ವಿಚಾರವಾದ ಎರಡು ಬಾತ್ಮಿಗಳನ್ನು ಈ ವಾರವೂ ಪ್ರಕಟಿಸಿರುವವು ಈಗ ಮಿ|| ಮತ್ತಾರ್‌ರವರು ತನಿಖೆಮಾಡಲು ಹೊರಟಿರುವುದರಿಂದ ನಮ್ಮ ಬಾತ್ಮಿದಾರರೂ ಇತರರೂ ಪ್ರಜಾಕ್ಷಯಕ್ಕೆ ಕಾರಣಗಳೆಂದು ತಮಗೆ ಕಂಡುಬಂದಿರುವ ವಿಚಾರಗಳನ್ನೆಲ್ಲಾ ಈ ಅಧಿಕಾರಿಯಲ್ಲಿ ಹೇಳಿಕೊಂಡಲ್ಲಿ ಅವರು ಆದರಪೂರ್ವಕವಾಗಿ ಅಂಗೀಕರಿಸತಕ್ಕವರೆಂದೂ ಪ್ರೀತಿಯಿಂದ ವಿಮರ್ಶೆಮಾಡಬಲ್ಲರೆಂದೂ ನಂಬುತ್ತೇವೆ.

ವಿದ್ಯೆ ಇಲ್ಲದಿರುವುದೇ ಈ ಪ್ರಜಾ ಕ್ಷಯಕ್ಕೆ ವಿಶೇಷವಾದ ಕಾರಣವೆಂದು ಹೇಳುತ್ತಾರೆ ಇದು ನಿರಾಧಾರವಾದ ಕಾರಣವೆಂದು ಹೇಳಲಾಗದು ಆ ಪ್ರಾಂತ್ಯದ ಕೆಲವು ಪ್ರಜೆಗಳು ವಿದ್ಯೆಯ ಫಲ ಪ್ರಯೋಜನಗಳನ್ನು ಕಂಡು ವಿದ್ಯಾಶಾಲೆಗಳನ್ನು ಇಟ್ಟುಕೊಡಬೇಕೆಂದು ವೆಸ್ಲಿಯನ್ ಮಿಷನ್ ಸಂಘದವರನ್ನು ಕೇಳಿಕೊಳ್ಳುತ್ತಿರುವರು ಆ ಸಂಘದವರು ಅವರ ಕೋರಿಕೆಯನ್ನು ಕೆಲವು ಮಟ್ಟಿಗೆ ನೆರವೇರಿಸಿರುತ್ತಾರೆಂದೂ, ಪ್ರಜೆಗಳು ಅವರಿಗೆ ವಿಶೇಷ ಸಹಾಯ ಮಾಡಿರುತ್ತಾರೆಂದೂ ತಿಳಿದು ಬರುತ್ತದೆ ಆದರೆ ಗವರ್ನಮೆಂಟಿನವರು ಅದಕ್ಕೆ ಸಹಾಯಮಾಡುವ ಭಾಗದಲ್ಲಿ ಅಷ್ಟೇನೂ ಉತ್ಸಾಹವುಳ್ಳವರಾಗಿರುವಂತೆ ಕಾಣಲಿಲ್ಲ ಅವರು ಅಂಥಾ ಪಾಠಶಾಲೆಗಳಿಗೆ ಗಣ್ಯವಾದಷ್ಟು ಸಹಾಯದ್ರವ್ಯವನ್ನು ಸ್ಯಾಂಕ್ಷನ್ ಮಾಡುತ್ತಾ, ಪ್ರಜೆಗಳ ಪ್ರಯತ್ನವನ್ನು ಪ್ರೋತ್ಸಾಹಪಡಿಸಬೇಕಾದದ್ದು ಅವಶ್ಯವೂ ಧರ್ಮವೂ ಆಗಿರುತ್ತದೆ ಗವರ್ನಮೆಂಟಿನವರ ಈ ರೀತಿಯಾದ ವರ್ತನದಿಂದ ಅವರು ಯಥಾರ್ಥವಾಗಿಯೂ ಪ್ರಜಾ ರಂಜಕರೆಂಬುದನ್ನು ಕಾರ್ಯತಃ ಪ್ರಕಟಮಾಡಿದಂತಾಗುವುದು

ಮಲೆನಾಡಿನ ಋತುಲಕ್ಷಣಗಳು ಅನಾರೋಗ್ಯಜನಕವಾದವುಗಳೆಂದು ಹೇಳಲಾಗಿದೆ ಆದರೂ ಜ್ವರಾದಿ ಸಾಮಾನ್ಯ ರೋಗಗಳನ್ನು ಬಹುಮಟ್ಟಿಗೆ ನಿವಾರಣೆ ಮಾಡಬಹುದೆಂದೂ, ಪ್ರಜೆಗಳ ಸಂಕಟವನ್ನು ಪರಿಹರಿಸಬಹುದೆಂದೂ ನಮಗೆ ತೋರುತ್ತದೆ. ಇದಕ್ಕೆ ಗವರ್ನಮೆಂಟಿನವರು ಪ್ರಜಾಹಿತಚಿಂತಕರಾದ ವೈದ್ಯರನ್ನೂ, ಸೂಲಗಿತ್ತಿಯರನ್ನೂ ಹೆಚ್ಚಾಗಿ ನೇಮಕಮಾಡತಕ್ಕದ್ದೂ ಬೇಕು, ಇಲ್ಲವೇ ಇಂಥಾ ಏರ್ಪಾಡನ್ನು ಇತರರು ಮಾಡಿದರೆ ಅವರಿಗೆ ಹೆಚ್ಚಾದ ದ್ರವ್ಯವನ್ನು ಒದಗಿಸುತ್ತಾ ಸಹಾಯಮಾಡಬೇಕು ಆ ಪ್ರಾಂತ್ಯದಲ್ಲಿ ಪ್ರಜೆಗಳ ರೋಗಚಿಕಿತ್ಸಾರ್ಥವಾಗಿ ಈಗ ಒಂದು ಏರ್ಪಾಡು ನಡೆದು ಜಾರಿಯಲ್ಲಿರುತ್ತದೆ ಆದರೆ ಅದಕ್ಕೆ ಸಹಾಯ ಮಾಡುವ ಭಾಗದಲ್ಲಿ ಗವರ್ನಮೆಂಟಿನವರು ತಕ್ಕ ಮಟ್ಟಿಗೆ ಕುತೂಹಲವನ್ನು ಪ್ರಕಾಶಪಡಿಸಿರುವುದಿಲ್ಲ ಮತ್ತು ಒಂದಾನೊಂದು ಸಮಯದಲ್ಲಿ ಪ್ರಜೆಗಳು ಪ್ರತಿಫಲವನ್ನು ಕೊಟ್ಟಾದರೂ ರೋಗಚಿಕಿತ್ಸೆ ಮಾಡಿಸಿಕೊಳ್ಳಲು ಸಿದ್ಧರಾಗಿದ್ದದ್ದನ್ನು ಕೂಡ ಅಡ್ಡಿಮಾಡಲುಳ್ಳವರಾಗಿದಾರೆಂಬ ಭಾವವು ಹೊರಪಟ್ಟಿತು. ನಮ್ಮ ಪಾಲಕರು ಕನಿಕರವನ್ನು ಇನ್ನೂ ಹೆಚ್ಚಾಗಿ ಪ್ರಕಾಶಪಡಿಸಬೇಕಾಗಿದೆ, ಪ್ರಜೆಗಳ ನರಳಾಟವನ್ನು ವಾಸಿಮಾಡುವ ವಿಷಯದಲ್ಲಿ ಸಾಹಸಪಡತಕ್ಕವರಿಗೆ ಅವರು ಕಾರ್ಯತಃ ಸಹಾಯ ಮಾಡುವವರಾಗಬೇಕು

ಮದ್ಯಪಾನವು ಹೆಚ್ಚುತ್ತಿರುವುದೂ ಪ್ರಜಾ ಕ್ಷೀಣತೆಗೆ ಕಾರಣವೆಂದು ಸೂಚಿಸಲಾಗಿದೆ ಸಾಮಾನ್ಯವಾಗಿ ಕುಡುಕುತನದ ಜೊತೆಯಲ್ಲೇ ಸೋಮಾರಿತನವೂ ಇರುವುದು ಇವುಗಳಿಗೆ ಉತ್ತೇಜನ ಕೊಟ್ಟ ಪಕ್ಷದಲ್ಲಿ ಪ್ರಜೆಗಳು ನಾಶವಾಗುವುದೇ ಖಂಡಿತ ಆದಕಾರಣ ಗವರ್ನಮೆಂಟಿನವರು ಶೇಂದಿ, ಸಾರಾಯಿ ಮೊದಲಾದ ಮದ್ಯಗಳ ಮಾರಾಟದ ದುಕಾನುಗಳನ್ನು ಕ್ರಮೇಣ ಕಡಿಮೆ ಮಾಡುತ್ತಾ ಬರಬೇಕಾಗಿದೆ.

ಆದರೆ ಪ್ರಜೆಗಳ ಕರ್ತವ್ಯವೇನೂ ಇಲ್ಲವೇ ಎಂದು ಕೇಳಬಹುದು ಅವರು ಸ್ವತಃ ಉದ್ಯೋಗಿಗಳಾದ ಹೊರತು ಅವರಿಗೆ ಯಥಾರ್ಥವಾದ ಶ್ರೇಯಸ್ಸುಂಟಾಗುವುದಿಲ್ಲ. ಮಲೆನಾಡಿನಲ್ಲಿರತಕ್ಕ ಕಷ್ಟಸಂಕಟಗಳೇನೆಂಬುವುದು ಕೆಲವರಿಗೆ ತಿಳಿದಿದೆ, ಅವರು ಅವುಗಳ ಪರಿಹಾರಕ್ಕಾಗಿ ಶ್ರಮಪಡುತ್ತಿದಾರೆ ಇಂಥಾ ಪರಹಿತಚಿಂತಕರೆಲ್ಲಾ ಏಕೀಭವಿಸಿ, ಮಲೆನಾಡು ಪ್ರಾಂತ್ಯದಲ್ಲಿ ಸಂಚಾರಮಾಡುತ್ತಾ, ಪ್ರಜೆಗಳಿಗೆ ವಿದ್ಯೆ ಕಲಿಯಬೇಕೆಂದು ಪ್ರೋತ್ಸಾಹಪಡಿಸಿ, ಒಳ್ಳೆಯ ವೈದ್ಯರಿಂದ ಚಿಕಿತ್ಸೆಮಾಡಿಸಿಕೊಳ್ಳುವಂತೆ ವಿವೇಕವನ್ನು ಕಲಿಸಿ, ಚಟುವಟಿಕೆಯಾಗಿಯೂ ದುರಭ್ಯಾಸಗಳಿಲ್ಲದೆಯೂ ಸತ್ಯಪ್ರಿಯರಾಗಿಯೂ ಬಾಳುವಂತೆ ಪ್ರೋತ್ಸಾಹಪಡಿಸುತ್ತಾ ಬರಬೇಕು ಪದ್ಯ ಅಂದಾ ಒಳ್ಳೇ ನಡೆನುಡಿಯುಳ್ಳ ಪುರುಷರೂ ಸ್ತ್ರೀಯರೂ ದೊರೆಯುವುದು ಅಪರೂಪವಾಗಿದೆ ದೇವರ ಭಯವಿದ್ದ ಹೊರತು ಜನರು ಇಂದವರಾಗುವುದಿಲ್ಲ ಪ್ರಜೆಗಳಲ್ಲಿ ದೇವರು ತಂದೆಯೆಂದೂ, ತಾವು ಆತನ ಮಕ್ಕಳೆಂದೂ ನಂಬಿ ವರ್ತಿಸುವಂತೆ ಭಯಭಕ್ತಿಗಳುಂಟಾಗಬೇಕು ಆಗ್ಗೆ ನಾಗರಿಕವೂ ಸಂಪತ್ತೂ ದೊರೆತು ಸಂಸ್ಥಾನವು ಅಭಿವೃದ್ಧಿಗೆ ಬರುವುದು

ಬಾಲ್ಕನ್ ಸಂಸ್ಥಾನಗಳ ವಿದ್ಯಮಾನಗಳು.

ಬಾಲ್ಕನ್ ಪ್ರಾಂತ್ಯದಿಂದ ಕಳೆದ ವಾರ ಬಂದಿರುವ ಸಮಾಚಾರಗಳು ಸಂಕುಚಿತವಾಗಿಯೂ, ಪರಸ್ಪರ ಅಸಮಂಜಸವಾಗಿಯೂ ಇದ್ದಾಗ್ಯೂ ಕೆಲವು ವಿದ್ಯಮಾನಗಳು ಯಥಾರ್ಥವಾದವುಗಳೆಂದು ಕಂಡುಬರುವವು ರೊಮೇನಿಯಾ ಸಂಸ್ಥಾನದವರು ಈ ಹೋರಾಟಗಳಲ್ಲೂ ಕದನಾಟಗಳಲ್ಲೂ ಯಾವ ಪಕ್ಷವನ್ನೂ ವಹಿಸದೆ ತಟಸ್ಥರಾಗಿದ್ದರು. ಈಗ ಅವರೂ ಸರ್ವಿಯಾ, ಗ್ರೀಸ್ ಮತ್ತು ಮಾಂಟಿನೀಗ್ರೋರವರ ಕೂಡ ಸೇರಿಕೊಂಡು ಬಲ್ಗೇರಿಯಾರವರ ಮೇಲೆ ಹೋರಾಡಲಾರಂಭಿಸಿದಾರೆ ಸರ್ವಿಯಾದವರೂ ಗ್ರೀಸಿನವರೂ ಕಡೆಯ ತನಕ ಆಯುಧಪಾಣಿಗಳಾಗಿದ್ದೇ ನೋಡಬೇಕೆಂದು ನಿಶ್ಚಯಿಸಿಕೊಂಡಿರುವಂತೆ ಕಾಣುವುದು ಅವರು ಬಲ್ಗೇರಿಯಾದವರನ್ನು ಗದ್ದು ಅವರ ರಾಜಧಾನಿಯಾದ ಸೋಫಿಯಾ ನಗರವನ್ನು ಆಕ್ರಮಿಸಿಕೊಂಡು ಆ ಪಟ್ಟಣದಲ್ಲಿ ನಿಂತೇ ಬಲ್ಗೇರಿಯಾದವರ ಕೂಡ ಕರಾರು ಮಾಡಿಕೊಳ್ಳುವವೆಂದು ಹೇಳುತ್ತಿದಾರೆ ರಷ್ಯಾ ಚಕ್ರವರ್ತಿಯವರಾದರೋ ಹ್ಯಾಗಾದರೂ ಈ ಸಂಸ್ಥಾನಗಳವರ ಹೋರಾಟವನ್ನು ನಿಲ್ಲಿಸಿ, ಅವರವರಿಗೆ ಸಮಾಧಾನವನ್ನುಂಟುಮಾಡಬೇಕೆಂದು ಸಾಹಸ ಪಡುತ್ತಲೇ ಇರುವರು. ಇದುವರೆಗೆ ನಡೆದ ಕದನಾಟಗಳಲ್ಲಿ ಬಲ್ಗೇರಿಯಾದವರಿಗೆ ತುಂಬಾ ಅಪಜಯವಾಗಿರುತ್ತದೆ ಅವರ ಸೈನಿಕರಲ್ಲಿ ಬಹು ಭಾಗದವರು ನಾಶಹೊಂದಿದರು, ಇಲ್ಲವೇ ಗಾಯಪಟ್ಟರು ಈಗ ಅವರಿಗೆ ಪ್ರಾಪ್ತವಾಗಿರುವ ಅಪಜಯ ಮತ್ತೂ ಕಷ್ಟನಷ್ಟಗಳನ್ನು ನೋಡಿ ಪರರಾಜ್ಯಗಳವರು ಅಷ್ಟೇನೂ ಕನಿಕರ ಪಡುವವರಾಗಿಲ್ಲ ಯಾಕೆಂದರೆ ಬಲ್ಗೇರಿಯಾದವರು ಈ ವಿಪತ್ತುಗಳನ್ನೆಲ್ಲಾ ತಮಗೆ ತಾವೇ ತಂದುಕೊಂಡಿರುತ್ತಾರೆ

ಅವರ ಹೋರಾಟ ಕದನಾಟಗಳಲ್ಲಿ ಟರ್ಕಿಯವರು ಪ್ರಯೋಜನ ಹೊಂದಬೇಕೆಂದು ತಲೆಹಾಕಿದರು ಆ ಸಂಸ್ಥಾನಗಳಿಗೂ ಟರ್ಕಿಯವರಿಗೂ ಯುದ್ಧ ನಡೆದು ಕೊನೆಗೆ ಲಂಡನ್ ಪಟ್ಟಣದ ಕರಾರಿನ ಪ್ರಕಾರ ಟರ್ಕಿಯವರ ಸರಹದ್ದು ನಿಷ್ಕರ್ಷೆಯಾಗಿತ್ತು. ಈಗ ಟರ್ಕಿಯವರು ಆ ಸರಹದ್ದನ್ನು ದಾಟಿ ತಮ್ಮ ಸೈನ್ಯವನ್ನು ಮುಂದು ಮುಂದಕ್ಕೆ ನಡೆಸಿಕೊಂಡು ಹೋಗಿ ಯುದ್ಧವೂ ಹೋರಾಟವೂ ಸ್ವಲ್ಪ ಮಾತ್ರವೂ ಇಲ್ಲದೇ ಆಡ್ರಿಯಾನೋಪಲ್ ಪಟ್ಟಣವನ್ನು ಪ್ರವೇಶಿಸಿ ಸ್ವಾಧೀನಪಡಿಸಿಕೊಂಡಿದಾರೆಂದು ಒಂದು ತಂತೀವರ್ತಮಾನವು ಹೇಳುತ್ತಿದೆ ಇದು ಎಷ್ಟು ಮಟ್ಟಿಗೆ ನಿಜವೋ ಮುಂದೆ ಗೊತ್ತಾಗಬೇಕು ಇದು ನಿಜವಾದ ಪಕ್ಷದಲ್ಲಿ ಪರರಾಜ್ಯಗಳವರು ಇದನ್ನು ಒಪ್ಪಿಕೊಳ್ಳುವರೇ ಎಂದು ಸಂಶಯಪಡುತ್ತೇವೆ ಆದರೆ ಟರ್ಕಿಯವರು ಯುದ್ಧದಲ್ಲಿ ಕಳೆದುಕೊಂಡ ಪ್ರದೇಶಗಳನ್ನು ಪುನಹ ಆಕ್ರಮಿಸಿಕೊಂಡರೆ ಅದು ಸರಿಯಲ್ಲವೆಂದು ಅಡ್ಡಿಮಾಡುವುದಾಗಲಿ ಅದನ್ನು ಅವರು ಬಿಟ್ಟುಕೊಡಬೇಕೆಂದು ಹೇಳುವುದಾಗಲಿ ಸಹಜವಾಗಿ ಕಾಣುವುದಿಲ್ಲ ಸಂದರ್ಭವಿದ್ದಾಗ ಪುನಹ ಗಳಿಸಿಕೊಳ್ಳುವುದಕ್ಕೆ ಟರ್ಕಿಯವರಿಗೆ ಅವಕಾಶಕೊಡಬೇಕಾದದ್ದು ಸರಿಯಾಗಿದೆಯೆಂದು ತೋರುತ್ತದೆ ಆದರೂ ಟರ್ಕಿಯವರ ಈ ರೀತಿಯಾದ ವರ್ತನವು ಅವರು ಲಂಡನ್ ಪಟ್ಟಣದಲ್ಲಿ ಒಪ್ಪಿಕೊಂಡು ರುಜುಮಾಡಿರುವ ಕರಾರಿಗೆ ವಿರೋಧವಾಗಿರುವುದು

ಯೇಸುಕ್ರಿಸ್ತನು ಯಾರು?

ನಮ್ಮ ಮೈಸೂರು ಸಂಸ್ಥಾನದಲ್ಲಿರುವ ಸಾವಿರಾರು ಮಂದಿ ಯೇಸುಕ್ರಿಸ್ತನ ವಿಷಯವಾಗಿ ಕೇಳಿ, ಆತನು ಯಾರೆಂಬುದರ ವಿಷಯ ಸ್ವಲ್ಪ ಹೆಚ್ಚು ಕಡಿಮೆ ಸ್ಪಷ್ಟವಾದ ತಿಳುವಳಿಕೆಯನ್ನು ಹೊಂದಿಕೊಂಡಿರುತ್ತಾರೆ ಯೇಸುಕ್ರಿಸ್ತನು ಯಾರು ಎಂಬೀ ಪ್ರಶ್ನೆಗೆ ಸಾಧಾರಣವಾಗಿ ಕೊಡಲ್ಪಡುವ ಒಂದು ಉತ್ತರವೇನೆಂದರೆ—ಆತನು ದೇವರ ಮಗನಾಗಿದ್ದಾನೆ ಎಂಬುವುದೇ ಅನೇಕರು ಇಂತಹ ಉತ್ತರವನ್ನು ಕೇಳಿ ಈ ಮಾತಿನ ವಿಷಯ ಪೂರ್ಣ ತಪ್ಪಾದ ಅಭಿಪ್ರಾಯವನ್ನು ಮಾಡಿಕೊಂಡಿರುತ್ತಾರೆ ದೇವರಿಗೆ ಒಬ್ಬ ಪತ್ನಿಯು ಇರುತ್ತಾಳೆ, ಲೋಕದಲ್ಲಿ ಮನುಷ್ಯರೊಳಗೆ ಎಂದುತ್ತವಿರುವ ಪ್ರಕಾರ ದೇವರಿಗೂ ಬಂಧುಗಳು ಇರುತ್ತಾರೆ ಎಂಬುದು ಕ್ರೈಸ್ತರ ನಂಬಿಕೆಯಾಗಿದೆ ಎಂದು ಅವರು ಭಾವಿಸಿಕೊಂಡಿರುವರು ಈ ಅಭಿಪ್ರಾಯವು ಸಂಪೂರ್ಣವಾಗಿ ತಪ್ಪಾಗಿರುತ್ತದೆ

ಸತ್ಯವೇದವನ್ನು ಪರಿಶೀಲನೆಮಾಡಿ ನೋಡುವ ಯಾರಾದರು ಅದರಲ್ಲಿ ಇಂತಹ ಬೋಧನೆಯು ಇರುವುದೇ ಇಲ್ಲವೆಂಬುದನ್ನು ಸುಲಭವಾಗಿ ಕಂಡುಕೊಳ್ಳುವರು ದೇವರು ಒಬ್ಬನೇ ಎಂದು ಕ್ರೈಸ್ತರು ನಂಬಿರುತ್ತಾರೆ ಒಬ್ಬ ಮನುಷ್ಯನಲ್ಲಿ ದೇಹ, ಮನಸ್ಸು, ಆತ್ಮ ಎಂಬೀ ಮೂರು ಅಂಶಗಳು ಹೇಗೆ ಒಂದಾಗಿ ಕೂಡಿರುತ್ತವೋ ಹಾಗೆಯೇ ಒಬ್ಬನೇ ಆಗಿರುವ ದೇವರಲ್ಲಿ ಮೂರು ಅಂಶಗಳು ಇರುತ್ತವೆಂಬುದನ್ನು ಸಹ ನಂಬುತ್ತಾರೆ ಮನುಷ್ಯನಲ್ಲಿರುವ ಮೂರು ಅಂಶಗಳನ್ನು ದೇಹ, ಮನಸ್ಸು, ಆತ್ಮ ಎಂಬ ಹೆಸರುಗಳಿಂದ ಕರೆಯುವ ಪ್ರಕಾರ ದೇವತ್ವದಲ್ಲಿರುವ ಮೂರು ಅಂಶಗಳನ್ನು ತಂದೆ, ಮಗ, ಪವಿತ್ರಾತ್ಮನು ಎಂಬ ಹೆಸರುಗಳಿಂದ ಕರೆಯುವುದು ಕ್ರೈಸ್ತರಲ್ಲಿ ರೂಢಿಯಾಗಿರುತ್ತದೆ ಕ್ರೈಸ್ತರು ತಂದೆ, ಮಗ ಎಂದು ಹೇಳುವದರಿಂದ ಅವರು ದೇವರಿಗೆ ಒಬ್ಬ ಹೆಂಡತಿಯು ಇರಬೇಕೆಂದು ನಂಬುತ್ತಾರೆಂದು ಅಭಿಪ್ರಾಯಮಾಡಿಕೊಳ್ಳುವುದು ಶುದ್ಧ ತಪ್ಪು ಹೀಗೆ ನಂಬುವಂಥ ಕ್ರೈಸ್ತನು ಒಬ್ಬನಾದರೂ ಇರುವುದೇ ಇಲ್ಲ ಪ್ರತಿಯೊಬ್ಬ ಕ್ರೈಸ್ತನೂ ಇದನ್ನು ಸಂಪೂರ್ಣವಾಗಿ ವಿರೋಧಿಸುವವನಾಗಿರುತ್ತಾನೆ

ಹೀಗಿದ್ದ ಪಕ್ಷದಲ್ಲಿ ತಂದೆ, ಮಗ ಎಂಬೀ ಹೆಸರುಗಳನ್ನು ಕ್ರೈಸ್ತರು ಉಪಯೋಗಿಸುತ್ತಾ ಇರುವುದಕ್ಕೆ ಕಾರಣವೇನು? ಎಂದು ಯಾರಾದರು ಕೇಳಬಹುದು ಇದಕ್ಕೆ ಉತ್ತರವೇನೆಂದರೆ—ದೇವರಲ್ಲಿರುವ ಅಂತರ್ಯದ, ಐಕ್ಯವಾದ, ಪ್ರೀತಿಯುಳ್ಳ ಸಂಬಂಧಗಳನ್ನು ಈ ಮಾತುಗಳು ವ್ಯಕ್ತಪಡಿಸುತ್ತವೆ ಎಂಬುದೇ ತಂದೆ, ಮಗ ಎಂಬೀ ಮಾತುಗಳು ಇವರಿಬ್ಬರಿಗೂ ಅತ್ಯಂತ ಹತ್ತಿರದ ಸಂಬಂಧವೂ ಪರಿಪೂರ್ಣವಾದ ಐಕ್ಯವೂ ಅಪಾರವಾದ ಪ್ರೇಮಾತಿಶಯವೂ ಇರುತ್ತವೆ ಎಂಬೀ ಭಾವನೆಯನ್ನು ನಮ್ಮ ಮನಸ್ಸಿಗೆ ತರುತ್ತವೆ ಈ ಅರ್ಥದಲ್ಲಿಯೇ ಈ ಮಾತುಗಳು ಉಪಯೋಗಿಸಲ್ಪಟ್ಟಿರುತ್ತವೆ ಕ್ರೈಸ್ತರು ಯೇಸು ಕ್ರಿಸ್ತನು ದೇವರ ಮಗನಾಗಿದ್ದಾನೆಂದು ಹೇಳುವಾಗ, ಆತನು ದೇವರಾಗಿದ್ದಾನೆ ಎಂಬುದೂ ಒಬ್ಬನೇ ಆಗಿರುವ ದೇವರಲ್ಲಿ ಮೂರು ಅಂಶಗಳು ಇದ್ದಾಗ್ಯೂ ಪೂರ್ಣ ಅನ್ಯೋನ್ಯತೆಯೂ ಐಕ್ಯವೂ ಇದೆ ಎಂಬುದೂ ಅವರ ಅಭಿಪ್ರಾಯವಾಗಿರುತ್ತದೆ ದೇವರಿಗೆ ಹೆಂಡತಿಯು ಇದ್ದಾಳೆಂಬ ಭಾವನೆಯು ತಿಳುವಳಿಕೆಯುಳ್ಳ ಕ್ರೈಸ್ತನ ಮನಸ್ಸಿಗೆ ಎಂದಿಗೂ ಬರುವುದೂ ಇಲ್ಲ. ಹಾಗೆ ಬರುವುದಕ್ಕೆ ಯಾವ ಕಾರಣವೂ ಇರುವುದಿಲ್ಲ

ದೇವರು ತನ್ನನ್ನು ಯೇಸು ಕ್ರಿಸ್ತನ ಮೂಲಕವಾಗಿ ಮಾನವರಿಗೆ ಅತ್ಯುತ್ತಮವಾದ ರೀತಿಯಲ್ಲಿ ಪ್ರಕಟಪಡಿಸಿಕೊಂಡಿರುತ್ತಾನೆ ಈ ಲೋಕದಲ್ಲಿ ಜೀವಿಸಿದವರಲ್ಲಿ ಯೇಸು ಕ್ರಿಸ್ತನೊಬ್ಬನೇ ಪರಿಪೂರ್ಣವಾದ ಮನುಷ್ಯನಾಗಿದ್ದಾನೆ ಮನುಷ್ಯನು ದೇವರ ಸಂಗಡ ಪೂರ್ಣ ಅನ್ಯೋನ್ಯತೆಯನ್ನು ಪಡೆದು ಜೀವಿಸಿದರೆ, ಅವನು ಎಂಥವನಾಗಬಹುದೆಂಬುದನ್ನು ಆತನು ನಮಗೆ ಪ್ರಕಾಶಪಡಿಸಿರುತ್ತಾನೆ ಯೇಸು ಕ್ರಿಸ್ತನು ನಾವು ದೇವರ ಬಳಿಗೆ ಹೋಗತಕ್ಕ ದಾರಿಯನ್ನು ನಮಗೆ ತೋರಿಸುತ್ತಾನೆ ಆತನ ಮೂಲಕವಾಗಿ ಮನುಷ್ಯನು ಪಾಪಕ್ಷಮೆಯನ್ನೂ ದೇವರೊಂದಿಗೆ ಅನ್ಯೋನ್ಯತೆಯನ್ನೂ ದೇವರು ತನ್ನ ತಂದೆಯಾಗಿದ್ದಾನೆಂಬ ಮನೋಹರವಾದ ಮತ್ತು ದೃಢವಾದ ನಂಬಿಕೆಯನ್ನೂ ದೇವರ ಆಜ್ಞೆಗಳನ್ನು ಶಿರಸಾವಹಿಸಿ ಕೈಕೊಂಡು ತ್ರಿಕರಣಶುದ್ಧನಾಗಿ ಜೀವಿಸಬೇಕೆಂಬ ಅಪೇಕ್ಷೆಯನ್ನೂ ಹಾಗೆ ಮಾಡುವುದಕ್ಕೆ ಶಕ್ತಿಯನ್ನೂ ಹೊಂದಿಕೊಳ್ಳಬಲ್ಲನು

ಅನೇಕರು ಕ್ರೈಸ್ತರನ್ನು ನಿರಾಕರಿಸುತ್ತಾರೆ ಕ್ರಿಸ್ತನ ವಿಷಯವಾಗಿ ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯು ಅವರಲ್ಲಿ ಇರುವುದಿಲ್ಲ ಇಂಥವರು ತಾವು ಈ ಲೋಕದಲ್ಲಿ ಪೊಂದಬಹುದಾದ ಅತ್ಯುತ್ತಮವಾದ ಭಾಗ್ಯವನ್ನು ಕಳೆದುಕೊಳ್ಳುವವರಾಗಿರುತ್ತಾರೆ ಯೇಸು ಕ್ರಿಸ್ತನೊಬ್ಬನೇ ತನ್ನ ಶಿಷ್ಯಮಂಡಲಿಯವರಿಗೆ ದೇವರ ವಿಷಯ ಸಹಜವಾದ ತಿಳುವಳಿಕೆಯನ್ನು ಕೊಟ್ಟು, ಅವರು ದೇವರು ತಮ್ಮ ತಂದೆಯಾಗಿದ್ದಾನೆಂದು ತಿಳಿದುಕೊಳ್ಳುವಂತೆ ಮಾಡುವ ನಿಜವಾದ ಗುರುವಾಗಿದ್ದಾನೆ ಆತನು ದುಃಖದಲ್ಲಿರುವವರಿಗೆ ಆದರಣೆಯನ್ನೂ ಬಲಹೀನರಿಗೆ ಬಲವನ್ನೂ ಶೋಧನೆಗಳನ್ನು ಜಯಿಸಿ ಪವಿತ್ರರಾಗಿ ಜೀವಿಸುವುದಕ್ಕೆ ಶಕ್ತಿಯನ್ನೂ ಕೊಡ ದಯಪಾಲಿಸುವನು ತ್ರಿಕರಣ ಶುದ್ಧರಾಗಿ ಜೀವಿಸತಕ್ಕಂಥ ಸ್ತ್ರೀಪುರುಷರುಗಳು ಈ ನಮ್ಮ ಭರತಖಂಡದಲ್ಲಿ ಇರಬೇಕಾದುದು ಅತ್ಯವಶ್ಯಕವಾಗಿರುತ್ತವೆ ಸರಕಾರದ ಎಲ್ಲಾ ಇಲಾಖೆಗಳವರು ಇಂತಹ ಮಹನೀಯರುಗಳನ್ನೇ ಹುಡುಕುತ್ತಲಿದ್ದಾರೆ ಇಂಥವರು ಸಿಕ್ಕುವುದು ಸುಲಭಸಾಧ್ಯವಲ್ಲ ಸ್ತ್ರೀಪುರುಷರುಗಳೆಲ್ಲರೂ ಯೇಸು ಕ್ರಿಸ್ತನ ನಿಜಭಕ್ತರಾದರೆ, ಅವರು ಸತ್ಯಸಂಧರೂ ತ್ರಿಕರಣಶುದ್ಧರೂ ಆಗುವರು

ಕ್ರೈಸ್ತರೆಂದು ಹೇಳಿಕೊಳ್ಳುವವರಲ್ಲಿ ಕೆಲವರು ಯೇಸು ಕ್ರಿಸ್ತನ ಬೋಧನೆಯನ್ನೂ ಮಾದರಿಯನ್ನೂ ಅನುಸರಿಸಿ ಜೀವಿಸುವುದಿಲ್ಲ ಎಂಬುದು ಸತ್ಯವಾಗಿರುತ್ತದೆ ದೇಶಾಭಿಮಾನಿಗಳೆಲ್ಲರೂ ಆತನ ಗುಣಾತಿಶಯಗಳನ್ನು ಕುರಿತು ಓದಿ ಪರಿಶೀಲನೆಮಾಡಿ ಲೋಕದಲ್ಲಿ ಅತ್ಯುತ್ತಮನಾದ ಗುರುವಾಗಿರುವ ಆತನಿಂದ ನಮ್ಮ ದೇಶೀಯರಿಗೆ ಸಿಕ್ಕತಕ್ಕ ಭಾಗ್ಯಗಳೇನೆಂದು ಕಂಡುಕೊಳ್ಳಬೇಕಾಗಿರುತ್ತದೆ ಯೇಸು ಕ್ರಿಸ್ತನ ಜೀವಚರಿತ್ರೆಯನ್ನು ಚೆನ್ನಾಗಿ ಓದಿ, ಆತನ ಶಿಷ್ಯರಾಗುವ ಪ್ರತಿಯೊಬ್ಬರೂ ಸತ್ಯಸಂಧರೂ ಪರಿಶುದ್ಧರೂ ಆಗಿ ಆ ಮೂಲಕವಾಗಿ ತಮ್ಮ ದೇಶೀಯರನ್ನು ಉತ್ತಮಸ್ಥಿತಿಗೆ ತರುವರು

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರೂ ಅರಮನೆಯ ರಾಣಿವಾಸದವರೂ ಮುಂದಿನ ವಾರ ರಾಜಧಾನಿಯಿಂದ ಬೆಂಗಳೂರಿಗೆ ದಯಮಾಡುವವರಾಗಿರುವಂತೆ ಕೇಳುತ್ತೇವೆ

* * *

ಶಿವಮೊಗ್ಗ ಡಿವಿಜನ್ ಪೋಸ್ಟ್ ಸೂಪರಿಂಟೆಂಡೆಂಟರಾದ ಮಿ|| ಸಿ ಬಿ ಕೇಶವರು ಮೊನ್ನೆ ಸೋಮವಾರ ಬೆಳಿಗ್ಗೆ ಹರಿಹರದಲ್ಲಿ ಕಾಲವಾದರೆಂದು ವರ್ತಮಾನ ಬಂದಿದೆ

* * *

ಬೆಂಗಳೂರಿಗೆ ಬಂದಿರುವ ಕಪೂರ್ಥಲ ಸಂಸ್ಥಾನದ ಮಹಾರಾಜರವರನ್ನು ಸತ್ಕರಿಸುವುದಕ್ಕಾಗಿ ಅರಮನೆಯ ಮರಹಮ್ಮತ್ ಭಕ್ಷೀರಾದ ಮ|| ಎಚ್ ಲಿಂಗರಾಜೆ ಅರಸಿನವರು ಬೆಂಗಳೂರಿಗೆ ಕಳುಹಲ್ಪಟ್ಟಿದಾರೆ

* * *

ಬೆಂಗಳೂರು ಸಿಟಿಯಲ್ಲಿ ಸುಂದರಮ್ಮ, ಲಕ್ಷ್ಮಮ್ಮ ಎಂಬವರ ಮನೆಗಳಿಗೆ ಕಳ್ಳರು ಬಿದ್ದು ಸುಮಾರು 2,000 ರೂಪಾಯಿನ ಚಿನ್ನ ಬೆಳ್ಳಿ ನಗಗಳನ್ನು ಅಪಹರಿಸಿರುತ್ತಾರೆಂದು ಪೋಲೀಸಿಗೆ ತಿಳಿದು ಪತ್ತೆಕರಡೂದು ನಡೆಯುತ್ತಿದೆ

* * *

ಅರಮನೆ ಲೋಕರಂಜನ್ ಮಹಲ್ ಇಲಾಖೆಯ ಮ|| ಬಸವಲಿಂಗಯ್ಯನವರ ಕುಮಾರರಾದ ಬ್ಯಾರಿಸ್ಟರ್ ಮಿ|| ಎಂ ಬಸವಯ್ಯನವರು ಕಳೆದ ವಾರ ಬೆಂಗಳೂರಿಗೆ ಬಂದು ಅಡ್ವೊಕೇಟರಾಗಿ ದಾಖಲಾಗಿರುತ್ತಾರೆಂದು ತಿಳಿದುಬಂದಿದೆ

* * *

ರಾಜಧಾನಿಯಲ್ಲಿ ಕಳೆದ ವಾರ 4 5 ದಿನಗಳ ವರೆಗೆ ಮೋಡ ಕವಿದು ಜಡಿಮಳೆ ಸುರಿಯಿತು ಒಂದೆರಡು ದಿನ ಆಕಾಶ ಹೊಳೆವಾಗಿ ಕಂಡರೂ ಮಳೆ ಬರುವ ಸೂಚನೆ ಇನ್ನೂ ಇದ್ದೇ ಇದೆ ಹವಾ ಥಂಡಿಯಾಗಿಯೂ ಆರೋಗ್ಯಜನಕವಾಗಿಯೂ ಇರುವುದು

* * *

ಬೆಂಗಳೂರು ಸಿಟಿ ಹೆಲ್ತ್ ಆಫೀಸರು ಮಿ|| ಎ ಕೆ ಪಾಣಿಯವರನ್ನು ಮೈಸೂರಿಗೆ ವರ್ಗಮಾಡದೆ ಅಲ್ಲೇ ಇಟ್ಟಿರಬೇಕೆಂದು ಅಲ್ಲಿನ ಮ್ಯುನಿಸಿಪಲ್ ಕೌನ್ಸಿಲರುಗಳು ತೀರ್ಮಾನಮಾಡಿ, ತಮ್ಮ ಅಭಿಮತವನ್ನು ಪ್ರೆಸಿಡೆಂಟರವರ ಮೂಲಕ ಗವರ್ನಮೆಂಟಿಗೆ ತಿಳಿಸಿರುತ್ತಾರೆ

* * *

ಕೋಲಾರ್ ಚಿನ್ನದಗಣಿಗಳ ಹೆಲ್ತ್ ಆಫೀಸರಾಗಿರುವ ಡಾಕ್ಟರ್ ಮುರ್ಚಿಸನ್ ರವರು ಬೊಂಬಾಯಿ ಆಧಿಪತ್ಯದ ಡೆಪ್ಟಿ ಸ್ಯಾನಿಟರಿ ಕಮಿಷನರೆಂಬ 600 ರಿಂದ 1,000 ರೂಪಾಯಿಗೆ ಬಡ್ತಿ ಆಗುವ ಅಧಿಕಾರವನ್ನು ಒಪ್ಪಿಕೊಂಡು, ಇಷ್ಟರಲ್ಲೇ ಹೊರಟುಹೋಗುವವರಾಗಿದಾರೆ

* * *

ಭಾರಿ ಸಾಹುಕಾರರೂ ವರ್ತಕರೂ ಆದ ಮಿ|| ಹಾಜಿ ಇಸ್ಮೈಲ್ ಸೇಟರವರೂ, ಮಿ|| ಟಾಂ ಸ್ಕಾಟ್‌ರವರೂ ಸೇರಿ ಜಕಮಾರ್ ಎಂಬ ಜೂಜಿನ ಕುದುರೆಯನ್ನು 21,000 ರೂಪಾಯಿಗೆ ಕೊಂಡುಕೊಂಡಿದಾರೆ ಈ ಕುದುರೆಯು ಈಗ ಆಸ್ಟ್ರೇಲಿಯಾದಿಂದ ಹಡಗಿನ ಮೇಲೆ ಬರುತ್ತಿದೆ

* * *

ಬೆಂಗಳೂರು ವೀರಶೈವ ವಿದ್ಯಾವರ್ಧಕ ಸಂಘದವರು ಮೈಸೂರು ಪ್ರಜಾಪ್ರತಿನಿಧಿಸಭೆಗೆ ಒಬ್ಬ ಪ್ರತಿನಿಧಿಯನ್ನು ಚುನಾಯಿಸಿ ಕಳುಹಿಸಬಹುದೆಂದು ಸರ್ಕಾರದವರು ರಿಯಾಯತಿ ತೋರಿಸಿದ್ದರಿಂದ ಆ ಸಂಘದವರು ಅಡ್ವೊಕೇಟ್ ಮಿ|| ಎಚ್ ಕೆ. ವೀರಬಸವಯ್ಯನವರನ್ನು ಚುನಾಯಿಸಿರುತ್ತಾರೆ

ನಂಜನಗೂಡು ತಾಲ್ಲೂಕು ಕಾರ್ಯದ ಹೊಲೆಯರಹೋಗಿ ಕೊಲೆ ಮೊಕದ್ದಮೆಯು ಚೀಫ್ ಕೋರ್ಟಿನಲ್ಲಿ ವಿಚಾರಣೆ ನಡೆದು ರುಜುವಾತು ಬರುವುದಿಲ್ಲವೆಂದು ಕಳೆದ ಗುರುವಾರ ವಜಾ ಆಯಿತು ಈ ಮೊಕದ್ದಮೆಯಲ್ಲಿ ಅಮಲ್ದಾರರಾಗಲಿ ಪಟೇಲನಾಗಲಿ ಅಪಸಾಕ್ಷಿ ನುಡಿದರೆಂದು ಹೇಳಲು ಕಾರಣವಾಗಲಿ ಉದ್ದೇಶವಾಗಲಿ ಕಂಡುಬರುವುದಿಲ್ಲವೆಂಬುದಾಗಿ ಜಡ್ಜಿಯವರು ಬರೆದಿದಾರೆ

* * *

ಕಳೆದ ವಾರ ಸಂಸ್ಥಾನದ ಕಂಟ್ರೋಲರವರಾದ ಮಿ|| ಜಿ ಎಸ್ ಚಕ್ರವರ್ತಿಯವರು ರಾಜಧಾನಿಗೆ ಬಂದು ಎರಡು ದಿನ ಇದ್ದು ಅರಮನೆಯ ಕಂಟ್ರೋಲರವರ ಮತ್ತು ಇನ್ನು ಕೆಲವು ಆಫೀಸುಗಳ ಸಿಬ್ಬಂದಿ ಮೊದಲಾದವುಗಳನ್ನು ತನಿಖೆ ಮಾಡಿಕೊಂಡು ಹೋದರು ಅರಮನೆ ಇಲಾಖೆಗಳ ಸಿಬ್ಬಂದಿಯ ವಿಚಾರದಲ್ಲಿ ಪುನರ್ವಿಮರ್ಶೆ ನಡೆಯಬಹುದೇನೋ ಎಂದು ಕೆಲವರು ಚಿಂತಿಸುತ್ತಿರುವಂತೆ ಕೇಳುತ್ತೇವೆ

* * *

ಬೆಂಗಳೂರು ಸಿಟಿಯಲ್ಲಿರುವ ಮ|| ಎ ಚಿದಂಬರ ಸಾಹುಕಾರರು ತಮ್ಮ ಮೊಮ್ಮಗನ ವಿವಾಹ ನಡೆದ ಸಂತೋಷಾರ್ಥವಾಗಿ ಕಳೆದ ಭಾನುವಾರ ಸಾಯಂಕಾಲ ನೂತನ ದಂಪತಿಗಳ ಆರತಕ್ಷತೆಯನ್ನು ನಡಿಸಿದರು ದಿವಾನ್‌ರವರೂ, ಮಾಜಿ ದಿವಾನ್ ಮ|| ವಿ ಪಿ ಮಾಧವರಾಯರೂ, ಅಧಿಕಾರಿಗಳೂ, ಮ್ಯುನಿಸಿಪಲ್ ಕೌನ್ಸಿಲರುಗಳೂ, ವರ್ತಕಮಂಡಲಿಯ ಮುಖಂಡರೂ ಅವರ ಮನೆಗೆ ಹೋಗಿದ್ದು, ಸತ್ಕಾರಹೊಂದಿ ಸಂತೋಷಪಟ್ಟು ಬಂದರು

* * *

ಒಬ್ಬ ಬಾತ್ಮಿದಾರರಿಂದ—ಕಳೆದ ತಾ 16 ನೇ ಮಂಗಳವಾರ ಬೆಂಗಳೂರು ಜನೋಪಕಾರಿ ದೊಡ್ಡಣ್ಣಶೆಟ್ಟರವರ ಹಾಲಿನಲ್ಲಿ ಕಾಂಚೀಪುರದಿಂದ ಬಂದಿರುವ ಬೆಳ್ಳಿ ನಾಗಸ್ವರದ ಸುಬ್ರಹ್ಮಣ್ಯ ಮುದಲಿಯಾರ್ರ ಕಚೇರಿ ನಡೆದು ಅವರಿಗೆ ಬಹುಮಾನಾರ್ಥವಾಗಿ ಒಂದು ಚಿನ್ನದ ಪದಕವನ್ನು ಬೆಂಗಳೂರು ಮಾರ್ಕೆಟ್ಟು ಬಳಿಯ ವರ್ತಕಮಂಡಲಿಯವರು ಅರ್ಪಿಸಿದರು ಕಚೇರಿ ಆದನಂತರ ಗ್ರಂಧಿಗೆ ಅಂಗಡಿ ಮ|| ಶಿವರುದ್ರಪ್ಪನವರು ಸದರಿ ಮುದಲಿಯಾರ್ರ ವಿದ್ಯಾಪಾಂಡಿತ್ಯವನ್ನು ಕುರಿತು ಒಂದು ಚಿಕ್ಕ ಉಪನ್ಯಾಸಮಾಡಿ ಪದಕವನ್ನು ಅವರಿಗೆ ಒಪ್ಪಿಸಿದರು

* * *

ಕನ್ನಂಬಾಡಿ ತಲಾವಿನ ವಿಚಾರದಲ್ಲಿ ಮೈಸೂರು ಸರ್ಕಾರಕ್ಕೂ ಮದರಾಸ್ ಗವರ್ನಮೆಂಟಿಗೂ ಏನೋ ಜಿಜ್ಞಾಸವುಂಟಾಗಿರುವುದರಿಂದ ಇದನ್ನು ತನಿಖೆಯಿಂದ ಇತ್ಯರ್ಥಮಾಡಬೇಕೆಂದು ಇಂಡಿಯಾ ಗವರ್ನಮೆಂಟಿನವರ ಕಡೆಯಿಂದ ಇಬ್ಬರು ಪಂಚಾಯತರು ನೀಲಗಿರಿಗೆ ಬಂದು ಇರುವುದಾಗಿ ಕೇಳುತ್ತೇವೆ ಈ ತಲಾವಿನ ಕಾಮಗಾರಿ ಪ್ರಾರಂಭವಾಗಿ ಲಕ್ಷಾಂತರ ರೂಪಾಯಿ ಖರ್ಚಾದ ಮೇಲೆ ಈಗ ಜಿಜ್ಞಾಸ ಹುಟ್ಟಲು ಕಾರಣವೇನಾಯಿತೋ ತಿಳಿಯಲಾರದೆ ಪ್ರಜೆಗಳು ಕಳವಳಪಡಲು ಅವಕಾಶವಾಗಿದೆ ಸರ್ಕಾರದವರು ಇದರ ಪೂರ್ವೋತ್ತರವನ್ನು ಸಮಗ್ರವಾಗಿ ಪ್ರಕಟಮಾಡುವರೆಂದು ನಿರೀಕ್ಷಿಸಬಹುದು

* * *

ಕೊಡಗು ನಾಪೊಕ್ಲು ಗ್ರಾಮದ ಚರನಲಂಡ ಅಯ್ಯಣ್ಣನವರ ಮಗ ಸುಮಾರು 23 ವಯಸ್ಸಿನ ನಿಯಣ್ಣನೆಂಬುವನು ಏನೋ ಕಾಯಿಲೆ ಇದ್ದು ಚಿಕಿತ್ಸೆಗಾಗಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಹೋಗಬೇಕೆಂಬ ಕುತೂಹಲದಿಂದ ಕಳೆದ ವಾರ ರಾಜಧಾನಿಗೆ ಬಂದು ಇಲ್ಲಿ ಕೊಡಗಿನ ವಿದ್ಯಾರ್ಥಿಗಳು ಸೇರಿ ಮಾಡಿಕೊಂಡಿರುವ ಬಿಡಾರದಲ್ಲಿ ಇಳುಕೊಂಡಿದ್ದು, ಕಳೆದ ಆದಿತ್ಯವಾರ ರಾತ್ರಿ 8 ಗಂಟೆಗೆ ಊಟಮಾಡಿ ರೈಲಿಗೆ ಹೋಗಬೇಕೆಂದು ಆ ಬಿಡಾರದ ಮೇಲಂತಸ್ತಿನಿಂದ ಇಳಿದು ಬರುತ್ತಿರುವಾಗ್ಗೆ ಅಕಸ್ಮಾತ್ತಾಗಿ ಮೃತಪಟ್ಟನು ಮರುದಿನ ಬೆಳಿಗ್ಗೆ ರಾಜಧಾನಿಯಲ್ಲಿ ಓದುವುದಕ್ಕಾಗಿ ಬಂದಿರುವ ಸುಮಾರು 35 ಮಂದಿ ಕೊಡಗು ವಿದ್ಯಾರ್ಥಿಗಳೇ ಸೇರಿಕೊಂಡು ಅವರ ಪದ್ಧತಿಯಂತೆ ಶವವನ್ನು ಸ್ಮಶಾನಕ್ಕೆ ಸಾಗಿಸಿ ದಫನ್ ಮಾಡಿ ಬಂದರು ಪರಸ್ಥಳದಲ್ಲಿ ಬಂದು ಗತಿಸಿದ ನಿಯಣ್ಣನಿಗೆ ತಂದೆತಾಯಿಗಳು ಇರುವುದಾಗಿಯೂ, ಆತನು ಸುಮಾರು 3 ತಿಂಗಳ ಹಿಂದೆ ಹುಣಸೂರಿನಲ್ಲಿ ಪೋಸ್ಟ್ ಮಾಸ್ಟರಾಗಿದ್ದನೆಂದೂ ಕೇಳುತ್ತೇವೆ

* * *

ಕಳೆದ ವರುಷ ರಾಜಧಾನಿಯಲ್ಲಿ ಪ್ರಾರಂಭಿಸಲ್ಪಟ್ಟ ಪ್ರಜಾಪ್ರತಿನಿಧಿ ಮಂದಿರದ ಜಮಾಖರ್ಚು ಮುಂತಾದವನ್ನು ತಿಳಿಸುವ ರಿಪೋರ್ಟೂ, ಚಾಲ್ತಿ ಸಾಲಿನ ಪ್ರತಿನಿಧಿ ಮಂದಿರದ ನಿಬಂಧನೆಗಳೂ ಸೆಕ್ರೆಟರಿ ಮ|| ಕರಣೀಕ ಕೃಷ್ಣಮೂರ್ತಿರಾಯರಿಂದ ರಚಿಸಲ್ಪಟ್ಟು ನಮ್ಮಲ್ಲಿಗೆ ಒಂದು ಪ್ರತಿ ತಲಪಿರುತ್ತದೆ ಈ ಮಂದಿರದಲ್ಲಿ ಕಳೆದ ವರುಷ ಸೇರಿದ್ದ ಮೆಂಬರುಗಳಿಗೆ ಬಹಳ ಅನುಕೂಲವಾಗಿ ಎಲ್ಲಾ ಏರ್ಪಾಡುಗಳನ್ನೂ ಮಾಡಿದ್ದರು ಒಟ್ಟು ೬61 ಚಿಲ್ಲರೆ ರೂಪಾಯಿ ಖರ್ಚಾದದ್ದರ ಪೈಕಿ ಮೆಂಬರುಗಳಿಂದ 386 ಚಿಲ್ಲರೆ ಮಾತ್ರ ಪಾವತಿ ಆಗಿರುವುದು ಸೆಕ್ರೆಟರಿಯವರಿಗೆ ಕಳೆದ ವರುಷ ತುಂಬಾ ದೇಹಶ್ರಮವೂ, ದ್ರವ್ಯನಷ್ಟವೂ ಆಗಿದೆ ಎನ್ನುವುದನ್ನು ಮೆಂಬರುಗಳು ತಿಳಿದಿರುತ್ತಾರೆ ಚಾಲ್ತಿ ಸಾಲಿನಲ್ಲಿ ಪ್ರತಿನಿಧಿಗಳು ಈ ಮಂದಿರದಲ್ಲಿ ಇಳಿದು ಅದರ ಸೌಕರ್ಯಗಳನ್ನು ಅನುಭೋಗಿಸುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ ಇಂಥಾ ಮಂದಿರವು ಇರಬೇಕಾದದ್ದೂ, ಸಂಸ್ಥಾನಾಮಳೆಯಿಂದ ದೇಶಸೇವೆಗಾಗಿ ಬರತಕ್ಕ ಮೆಂಬರುಗಳೆಲ್ಲಾ ಒಂದೇ ಕಡೆ ಕಲೆತು ಪರಸ್ಪರ ಆಲೋಚನೆಮಾಡಿ ಸಭೆಯ ಉದ್ದೇಶವನ್ನು ಸಾರ್ಥಕಪಡಿಸಬೇಕಾದದ್ದೂ ಅಪೇಕ್ಷಣೀಯವಾಗಿದೆ ಮೆಂಬರುಗಳು ಮ|| ಕೃಷ್ಣಮೂರ್ತಿರಾಯರ ಸಾಹಸವನ್ನೂ ಉದ್ದೇಶವನ್ನೂ ಸಾರ್ಥಕಪಡಿಸುವವರಾಗಲೆಂದು ಹಾರೈಸುತ್ತೇವೆ

* * *

ಕಳೆದ ಗುರುವಾರ ಬೆಳಗಿನ ಝಾಮದಲ್ಲಿ ಗತಿಸಿದ ಎರಡನೇ ಮಹಾರಾಜಕುಮಾರ್ತಿಯವರ ಸುಮಾರು 14 ವಯಸ್ಸಿನ ಮೂರನೇ ಹೆಣ್ಣು ಮಗಳು ಅರಮನೆಯಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಆಕೆಗೆ ಕೆಲವು ಕಾಲದಿಂದ ಕ್ಷಯರೋಗಪ್ರಾಪ್ತವಾಗಿದ್ದು ಗಟ್ಟಿಗರಾದ ಬಹು ಮಂದಿ ವೈದ್ಯರಿಂದ ಔಷಧ ಚಿಕಿತ್ಸಾದಿಗಳನ್ನು ಮಾಡಿಸಿದಾಗ್ಯೂ ಸಾಧ್ಯವಾಗದೆಹೋಯಿತು ಅನಿಷ್ಟಪರಿಹಾರಾರ್ಥವಾಗಿ ಅನೇಕವಾದ ಪೂಜೆ ಪುನಸ್ಕಾರಗಳೂ ಅಭಿಷೇಕಗಳೂ ಸಂತರ್ಪಣೆಗಳೂ ಅರಮನೆಯಿಂದ ಬಹು ಧಾರಾಳವಾಗಿ ನಡಿಸಲ್ಪಡುತ್ತಿದ್ದವು ಆ ದಿನ ಬೆಳಿಗ್ಗೆ ಸುಮಾರು 11 ಘಂಟೆಗೆ ಅರಮನೆಯ ಮರ್ಯಾದೆಗಳೊಡನೆ ಶವವನ್ನು ಮೆರವಣಿಗೆಯಲ್ಲಿ ಸಾಗಿಸಿಕೊಂಡು ಹೋಗಿ ದಹನ ಕಾರ್ಯಗಳು ಜರುಗಿಸಲ್ಪಟ್ಟವು ರಾಜಬಂಧುಗಳೂ ಅಧಿಕಾರಿಗಳೂ ಪುರಜನರೂ ಮೆರವಣಿಗೆಯಲ್ಲಿ ಹಾಜರಾಗಿದ್ದು ವಿಶೇಷವಾಗಿ ಸಂತಾಪಪಟ್ಟರು ದಹನಕಾಲಕ್ಕೆ ಸ್ವಲ್ಪ ಮುಂಚಿತವಾಗಿ ಬೆಂಗಳೂರಿನಿಂದ ಕರ್ನಲ್ ದೇಶರಾಜೆ ಅರಸಿನವರೂ, ಸರ್ದಾರ್ ಕಾಂತರಾಜೆ ಅರಸಿನವರೂ, ಸರ್ದಾರ್ ಲಕ್ಷ್ಮೀಕಾಂತರಾಜೆ ಅರಸಿನವರೂ ಮೋಟಾರುಗಳಲ್ಲಿ ದಯಮಾಡಿದರು ಮೂರನೆಯ ದಿನ ಹಾಲುತುಪ್ಪವೆಂಬ ಕರ್ಮವು ಜರುಗಿತು ಈ ವಿಯೋಗದಿಂದ ಮಹಾಮಾತೃಶ್ರೀಯವರಿಗೂ, ಮಹಾರಾಜರವರಿಗೂ, ರಾಣಿವಾಸದವರಿಗೂ ಪ್ರಾಪ್ತವಾದ ಮಹದ್ವ್ಯಸನವನ್ನು ದೇವರು ನಿವಾರಣೆ ಮಾಡಿ ಸಮಾಧಾನವನ್ನು ದಯಪಾಲಿಸಲೆಂದು ಸಕಲ ಪ್ರಜೆಗಳ ಕೂಡ ನಾವೂ ಸಂತಾಪಪಟ್ಟು ಪ್ರಾರ್ಥಿಸುತ್ತೇವೆ

ಮೈಸೂರು ಗೆಜೆಟ್ ಸಂಗ್ರಹ

ಮಾಗಡಿ ತಾಲ್ಲೂಕು ತಾವರೆಕೆರೆಯಲ್ಲಿ ಪ್ಲೇಗ್ ಉಪದ್ರವಿಲ್ಲವೆಂದು ಪ್ರಕಟಮಾಡಿದೆ

ಕೊಡಗು ವೀರಾಜಪೇಟೆಯಲ್ಲಿ ಪ್ಲೇಗ್ ಉಪದ್ರ ಕಾಣಿಸಿಕೊಂಡಿದೆ ಎಂದು ತಿಳಿಯತಕ್ಕದ್ದು

ಮುಂದೆ ಹೇಳುವ ಯೂನಿಯನ್ ಪಂಚಾಯತಿಗಳನ್ನು ರದ್ದುಮಾಡಿದೆ — ಯಡತೊರೆ ತಾಲ್ಲೂಕು ಸೀಗವಾಳು , ಶ್ರೀರಂಗಪಟ್ಟಣದ ತಾಲ್ಲೂಕು ಗಮನಹಳ್ಳಿ, ಕಿರಂಗೂರು, ಕೆನ್ನಾಳು

ಚಿಕ್ಕಬಳ್ಳಾಪುರದ ತಾಲ್ಲೂಕು ನಂದಿ ಗ್ರಾಮವನ್ನು ಯೂನಿಯನ್ ಪಂಚಾಯತಿ ಮಾಡಿದೆ

ಮಿ|| ಪಟ್ಟಾಭಿ ಸುಬ್ಬಾಪಂಡಿತರನ್ನು ದೇವರಾಯಸಮುದ್ರಂ ಯೂನಿಯನ್ ಮೆಂಬರಾಗಿಯೂ, ಮ್ಯುನಿಸಿಪಲ್ ಮೆಂಬರ್ ಮಿ ಕಾರೆ ರಾಮಯ್ಯನವರನ್ನು ಬಾಗೇಪಲ್ಲಿ ತಾಲ್ಲೂಕು ಬೋರ್ಡ್ ಮೆಂಬರಾಗಿಯೂ, ಮಿ|| ಎಂ ಎನ್ ಶಿವಲಿಂಗಪ್ಪನವರನ್ನು ಕಡೂರು ತಾ|| ಬೋರ್ಡ್ ಮೆಂಬರಾಗಿಯೂ ನೇಮಿಸಿದೆ

ಮಂಜರಾಬಾದ್ ಅಮಲ್ದಾರ್ ಮಿ|| ಎನ್ ಗೋಪಾಲಕೃಷ್ಣಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳು ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ —ಹಾಸನದ ಡಿಸ್ಟ್ರಿಕ್ಟ್ ಶಿರಸ್ತೆದಾರ್ ಮಿ|| ಬಿ ಎಂ ವೆಂಕಟೇಶಯ್ಯನವರು ಮಂಜರಾಬಾದ್ ತಾಲ್ಲೂಕಿನ ಅಮಲ್ದಾರ್ ಮತ್ತು 2ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೋಡತಕ್ಕದ್ದು

ಹಾಸನ್ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ್ ಆಗಿದ್ದ ಮಿ|| ಸಿ ಆರ್ ನಾರಾಯಣಸ್ವಾಮಿ ಮುದಲಿಯಾರ್ರಿಗೆ 1912ನೇ ಜೂನ್ ತಾ 1 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು —ಮೈಸೂರು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಾಗಿರುವ ಇವರಿಗೆ ಆಗಸ್ಟ್ ತಾ|| 28 ರಿಂದ ಹದಿನೈದು ದಿನಗಳ ಸಂಬಳವಿಲ್ಲದ ರಜಾ ಕೊಟ್ಟಿದೆ

ಮೈಸೂರು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರಾದ ಮಿ|| ಬಿ ಕೃಷ್ಣರಾಯರಿಗೆ ಜೂಲೈ ತಾ 15 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿದೆ —ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಮಿ|| ಸಿ ರಾಜಾರಾಮರಾಯರು ಅವರ ಕೆಲಸದ ಛಾರ್ಜನ್ನೂ ವಹಿಸಿರತಕ್ಕದ್ದು

ಸ್ಪೆಷಲ್ ಡ್ಯೂಟಿಗೆ ನೇಮಕವಾಗಿರುವ ಸೀನಿಯರ್ ಅ|| ಕಮಿಷನರ್ ಮಿ|| ಕೆ ಮತ್ತಾನ್‌ರವರು ಶಿವಮೊಗ್ಗ ಡಿಸ್ಟ್ರಿಕ್ಟಿನ ಡೆಪ್ಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದಾರೆ —ಮಿ|| ಕೆ ಶ್ರೀನಿವಾಸರಾಯರು ಜೂಲೈ ತಾ 24 ರಿಂದ ಕೆಲಸದಿಂದ ನಿವೃತ್ತರಾಗುವರು

ಮುಂದೆ ಹೇಳುವ ಅಮಲ್ದಾರರುಗಳ ವರ್ಗಾವರ್ಗಿ ಹುಕುಂ ಮಾಡಿದೆ— ಮಿ||ಸಿ ನಾರಾಯಣರಾಯರನ್ನು ಚನ್ನರಾಯಪಟ್ಟಣದಿಂದ ಚಿತ್ರದುರ್ಗ ತಾಲ್ಲೂಕಿಗೆ, ಮಿ|| ಜಿ ವೆಂಕಟರಾಯರನ್ನು ಚಿತ್ರದುರ್ಗದಿಂದ ಚನ್ನರಾಯಪಟ್ಟಣದ ತಾಲ್ಲೂಕಿಗೆ

ಹೆಲ್ತ್ ಇಲಾಖೆಯಲ್ಲಿ ಮುಂದೆ ಹೇಳುವ ಅಧಿಕಾರಿಗಳ ವರ್ಗಾವರ್ಗಿ ಹುಕುಂ ಮಾಡಿದೆ —ಹೆಲ್ತ್ ಆಫೀಸರ್ ಮಿ|| ಎ. ಕೆ ಪಾಣಿಯವರನ್ನು ಬೆಂಗಳೂರು ಸಿಟಿಯಿಂದ ಮೈಸೂರು ಸಿಟಿಗೆ, ಮಿ|| ವಿ ಎಲ್ ಮಾಂಕರವರನ್ನು ಮೈಸೂರಿನಿಂದ ಕೋಲಾರದ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರಾಗಿ, ಮಿ|| ಆರ್ ಸುಬ್ಬರಾಯರನ್ನು ಕಡೂರಿನಿಂದ ಬೆಂಗಳೂರು ಸಿಟಿ ಹೆಲ್ತ್ ಆಫೀಸರಾಗಿ, ಮಿ|| ಎಂ ಜಿ ಸ್ಯಾಮ್ಯುಯಲ್‌ರವರನ್ನು ಕೋಲಾರದಿಂದ ಕಡೂರು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರಾಗಿ

ಶಿವಮೊಗ್ಗ ತಾಲ್ಲೂಕು ಅಮಲ್ದಾರ್ ಮಿ|| ಎಂ ಎಸ್ ಹಯಗ್ರೀವರಾಯರಿಗೆ ಆಗಸ್ಟ್ ತಾ 1 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ —ಡಿಸ್ಟ್ರಿಕ್ಟ್ ಆಫೀಸ್ ಜುಡಿಷಲ್ ಹೆಡ್ ಮುನ್ಷಿ ಮಿ|| ಎಸ್ ನಾರಾಯಣರಾಯರು ಆ ಕಾಲದಲ್ಲಿ ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು

ತಾಲ್ಲೂಕು ವರ್ತಮಾನ.

ನಂಜನಗೂಡು —ಸಾಧಾರಣವಾಗಿ 8 ದಿವಸಗಳಿಂದ ಮೋಡವಾಡುತ್ತಲೇ ಇದೆ ಸ್ವಲ್ಪಮಟ್ಟಿಗೆ ಪ್ರವಾಹವು ಬಂದಿರುತ್ತೆ ಧಾರಣೆವಾಸಿಗಳು ಭಡಾವಾಗಿರುವವು ಹವಾ ಅನುಕೂಲವಾದ ಸ್ಥಿತಿಯಲ್ಲಿರುತ್ತೆ —ಕಳೆದ ತಾ 9 ನೇ ಬುಧವಾರ ಇಲ್ಲಿನ ಸಬ್ ಡಿವಿಜನ್ ಆಫೀಸರವರು ಎಕನಾಮಿಕ್ ಕಾನ್ಫರೆನ್ಸು ಮೀಟಿಂಗು ನಡಿಸಿದರು ಇದಕ್ಕಾಗಿ ಈ ಡಿವಿಜನ್ ಅಮಲ್ದಾರರೂ ಮೆಂಬರುಗಳೂ ದಯಮಾಡಿಸಿ, ಜನಗಳ ಉಪಯೋಗಕ್ಕಾಗಿ ಅಲ್ಲಲ್ಲಿ ನೈಟ್ ಸ್ಕೂಲುಗಳು ಮತ್ತು ಇಂಡಸ್ಟ್ರಿಯಲ್ ಸ್ಕೂಲುಗಳು ವಗೈರೆ ಇಡಿಸಬೇಕೆಂದೂ, ಜನಗಳ ಸೌಕರ್ಯಕ್ಕಾಗಿ ಆಗಬೇಕಾದ ಕಟ್ಟಡಗಳು ವಗೈರೆ ತಯಾರಾಗತಕ್ಕ ವಿಚಾರವನ್ನೂ ಕುರಿತು ಪ್ರಸ್ತಾಪ ಮಾಡಿದರು —ಇಲ್ಲಿನ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದಲ್ಲಿ ಕಲ್ಯಾಣೋತ್ಸವವೂ, ಪ್ರತಿನಿತ್ಯವೂ ಮೂರು ಸಾವಿರ ಜನಕ್ಕೆ ಕಡಮೆ ಇಲ್ಲದೆ ಸಂತರ್ಪಣೆಯೂ ನಡೆದವು ಇಲ್ಲಿನ ಅಮಲ್ದಾರ್ ಮ|| ಭೀಮರಾಯರು ಈ ತಾಲ್ಲೂಕಿಗೆ ಬಂದು ಬಹಳ ಸ್ವಲ್ಪ ದಿವಸಗಳಾದಾಗ್ಯೂ ತಾಲ್ಲೂಕಿನ ಮತ್ತು ದೇವಸ್ಥಾನದ ನೌಕರರಿಗೆ ಸರಿಯಾದ ಏರ್ಪಾಡುಮಾಡಿ ತಾವು ಸಹ ತುಂಬಾ ಮೆಹನತ್ತು ವಹಿಸಿ ಎಲ್ಲಾ ಕಾರ್ಯಗಳನ್ನೂ ಬಹಳ ವಿಹಿತರಣೆಯಾಗಿ ನಡಿಸಿದ್ದು ತುಂಬಾ ಸ್ತೋತ್ರಾರ್ಹವಾಗಿದೆ ಮತ್ತು ಈ ಉತ್ಸವದ ಮಧ್ಯೆ ವೇದಾಂತ ಮೊದಲಾದ ಪರೀಕ್ಷೆಗಳು ನಡೆದು ಉತ್ತೀರ್ಣರಾದವರಿಗೆ ಅವರವರ ಯೋಗ್ಯತಾನುಸಾರ ಬಹುಮಾನ ಕೊಡಲ್ಪಟ್ಟಿತು —ತಾ 11 ನೇ ಶುಕ್ರವಾರ ಈ ಊರು ಹೊಳೆಗೆ ಸ್ನಾನಕ್ಕೆ ಹೋಗಿದ್ದ ಒಬ್ಬ ಪರಸ್ಥಳದ ಬ್ರಾಹ್ಮಣನು ಹೊಳೆಯಲ್ಲಿ ಬಿದ್ದು ಸತ್ತನು ಅವನ ಶವವು ಭಾನುವಾರ ಸಾಯಂಕಾಲ ಸಿಕ್ಕಿತು —ಇಲ್ಲಿನ ಪೋಲೀಸ್ ಇನ್‌ಸ್ಪೆಕ್ಟರಿಗೆ ಕೋಲಾರದ ಡಿಸ್ಟ್ರಿಕ್ಟು ಶ್ರೀನಿವಾಸಪುರದ ತಾಲ್ಲೂಕಿಗೂ, ಜಮೇದಾರರಿಗೆ ಮೈಸೂರು ಸಿಟಿಗೂ ವರ್ಗವಾಗಿ, ಹೊಸಬರು ಬಂದು ಛಾರ್ಜು ವಹಿಸಿ ಬಹಳ ಮೆಹನತ್ತಿನಿಂದಲೂ ಮುತುವರ್ಜಿಯಾಗಿಯೂ ಕೆಲಸ ಮಾಡುತ್ತಾ ಇದಾರೆ ಇನ್ನು ಮೇಲಾದರೂ ತುಂಟರ ಹಾವಳಿ ಮತ್ತು ಲಂಚರುಷವತ್ತುಗಳು ಕಡಮೆಯಾಗಿ ಜನಗಳಿಗೆ ಕ್ಷೇಮವಾದೀತೆಂದು ಹಾರೈಸಲ್ಪಟ್ಟಿದೆ.

ಮಲೆನಾಡಿನ ಪ್ರಜೆಗಳ ಕ್ಷೋಭೆಗೆ ಕಾರಣ.

ಅಯ್ಯಾ,—ಇದೇ ಮಾಹೆ ತಾ|| 10 ನೇ ವೃತ್ತಾಂತ ಪತ್ರಿಕೆಯ ಒಳದೇಶದ ವೃತ್ತಾಂತದಲ್ಲಿ ಮಲೆನಾಡಿನ ಪ್ರಜೆಗಳ ಕ್ಷೋಭೆಗೆ ಕಾರಣವನ್ನು ವಿಚಾರಿಸುವುದಕ್ಕೆ ಸರಕಾರದವರು ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿರುವುದಾಗಿ ಪ್ರಕಟಿಸಿರುತ್ತೀರಿ. ಆದರೆ ಈ ಮೊಬಲಗು ಪ್ರಜೆಗಳ ಆರೋಗ್ಯ ಮತ್ತು ಅಭಿವೃದ್ಧಿಗಾಗಿಯೋ, ಅಥವಾ ಬರೀ ವಿಚಾರಿಸುವುದಕ್ಕಾಗಿಯೋ ಗೊತ್ತಾಗಲಿಲ್ಲ. ಇದಕ್ಕಾಗಿ ನಮ್ಮಗಳ ಒಡೆಯರಾದ ಶ್ರೀಮನ್ ಮಹಾರಾಜರವರು ಇವರ ಮಂತ್ರಿವರ್ಯರು ಚಿಂತಿಸುತ್ತಿರುವುದಕ್ಕಾಗಿ ಈ ಮಲೆನಾಡಿನ ಪ್ರಜೆಗಳೆಲ್ಲಾ ಕೃತಜ್ಞತೆಯುಳ್ಳವರಾಗಿ ವಂದಿಸುತ್ತಿರುವರಲ್ಲದೆ ಬಹಳವಾಗಿ ಕೊಂಡಾಡುತ್ತಿರುವರು. ಆದರೆ ಮೇಲ್ಕಂಡ ಸ್ಯಾಂಕ್ಷನ್ ಹಣವು ಪ್ರಜೆಗಳ ಸೌಕರ್ಯಕ್ಕಾಗಿಯೇ ವಿನಿಯೋಗಿಸುವುದಾದ ಪಕ್ಷದಲ್ಲಿ ಅದು ಬಹಳ ಉತ್ಕೃಷ್ಟವಾದದ್ದೆಂದೇ ಹೇಳಬೇಕಾಗಿದೆ. ಅಲ್ಲದೆ ವಿಚಾರಿಸತಕ್ಕಬಗ್ಗೆ ಖರ್ಚುಮಾಡುವ ಪಕ್ಷದಲ್ಲಿ ಅದು ಬಹಳ ದುಬಾರಿ ಮತ್ತು ಅನಾವಶ್ಯವೆಂದು ಚಿಂತಿಸಬೇಕಾಗಿದೆ.

ಈ ಮಲೆನಾಡಿನಲ್ಲಿ ಹೆಚ್ಚು ಪ್ರಜೆ ಲಯವಾಗುತ್ತಿರುವುದಕ್ಕೆ ಕಾರಣವೇನೆಂದರೆ, ಹೆಚ್ಚುಮಂದಿ ವಿದ್ಯೆ ಇಲ್ಲದವರಾದಕಾರಣ ತಮ್ಮ ಆರೋಗ್ಯವನ್ನು ಅಂತು ನಡೆಸಿಕೊಳ್ಳುವುದಕ್ಕೆ ತಿಳಿಯದವರಾಗಿ ಇರುತ್ತಾರೆ ಇವಲ್ಲದೆ ಈ ಮಲೆನಾಡಿನಲ್ಲಿ ಮಳೆ ಛಳಿ ಭಾಳ ವಿಶೇಷ ಈ ಪ್ರದೇಶದಲ್ಲಿ ರೈತಪ್ರಜೆಗಳೇ ಹೆಚ್ಚು ಮಂದಿ ಈ ಜನಗಳೆಲ್ಲಾ ಕಾಡು ಗುಡ್ಡ ಬೆಟ್ಟಗಳ ಕೆಳಭಾಗದ ತಗ್ಗು ಪ್ರದೇಶವಾದ ಅನಾರೋಗ್ಯ ಸ್ಥಳದಲ್ಲಿ ವಾಸಮಾಡತಕ್ಕವರಾಗಿ ಇರುತ್ತಾರೆ. ಜಿರಾಯಿತಿ ಕೆಲಸವೆಲ್ಲಾ ಮಳೆಗಾಲದಲ್ಲೇ ಆಗಬೇಕಾದದ್ದು ಹೆಚ್ಚಾಗಿರುತ್ತೆ ಅಂಥ ಮಳೆಯಿಂದಲೂ, ಕೆಳಗಡೆ ನೀರು ಕೆಸರಿನಿಂದಲೂ, ಚಳಿ ಛಳಿಯಿಂದಲೂ ನಿಶ್ಚಯ ಹಗಲೆಲ್ಲಾ ಕಷ್ಟಪಟ್ಟು ಕೆಲಸ ಮಾಡಬೇಕು ಇಷ್ಟು ಕಷ್ಟಪಟ್ಟು ಮನೆಗೆ ಹೋದರೆ ವಾಸಕ್ಕೆ ಆರೋಗ್ಯವಾದ ಮನೆಗಳಿಲ್ಲದೆ ಅನಾರೋಗ್ಯವಾದ, ಜೀರ್ಣವಾದ ಮತ್ತೂ ಥಂಡಿಯಾದ ಮನೆಗಳಲ್ಲಿಯೋ, ಜೋಪಡಿಗಳಲ್ಲಿಯೋ ವಾಸ ಮಾಡಬೇಕು ಇಂಥಾ ಕನಿಕರವಾದ ಕಷ್ಟದಿಂದಲೂ ಮತ್ತು ಕನಿಷ್ಠವಾದ ಆಹಾರ, ಹವಾ, ಅನಾರೋಗ್ಯವಾದ ವಾಸ ಇವುಗಳಿಂದಲೂ ನಾನಾ ತರವಾದ ಬಾಧೆಗಳು ಉಂಟಾಗುವುವು ಈ ರೀತಿ ಬಾಧೆ ಉಂಟಾದರೆ ಔಷಧ ಉಪಚಾರಗಳಂತು ಇಲ್ಲವೇ ಇಲ್ಲ. ವಿದ್ಯಾಹೀನರಾದ ಮೂಢಜನಗಳು ಗಾಡಿಗರು, ಗಣಮಕ್ಕಳು, ಜೋಯಿಸರು, ನಿಮಿತ್ತನೋಟಗಾರರು, ಕ್ಷುದ್ರ ದೇವತೆಗಳು ಇವರುಗಳ ಬಲೆಗೆ ಸಿಕ್ಕಿಬಿದ್ದು ಮರಣಕ್ಕೆ ತುತ್ತಾಗುವರು.

ಈ ಕಾಡುಪ್ರದೇಶಗಳಲ್ಲಿನ ಪ್ರಜೆಗಳಿಗೆ ಪಟ್ಟಣವಾಸದಲ್ಲಿ ಇರತಕ್ಕ ಪ್ರಜೆಗಳಿಗೆ ಇರತಕ್ಕ ವಿದ್ಯೆ, ಆರೋಗ್ಯ, ಔಷಧ ಮುಂತಾದ ಸಹಾಯಗಳು ಇವರುಗಳಿಗೆ ಇಲ್ಲದಿದ್ದಾಗ್ಯೂ ಕಟ್ಟಿಗೆ, ನಾಟಾ ಮುಂತಾದ ಕಾಡಿನ ಸಹಾಯದಿಂದ ಸ್ವಲ್ಪಮಟ್ಟಿಗೆ ಯಾವ ತೊಂದರೆಯೂ ಇಲ್ಲದೆ ಸಾಧಾರಣಕ್ಕೆ ಜೀವಿಸುತ್ತಿದ್ದರು ಈ ಮಲೆನಾಡಿನಲ್ಲಿ ಬೆಂಕಿ ಸಹಾಯ ಹೆಚ್ಚಾಗಿ ಬೇಕೆಂಬುವದು ಮನೆಗಳು ಆಗಾಗ್ಗೆ ಥಂಡಿಯಿಂದಲೂ, ವರ್ಷದಿಂದಲೂ ಶಿಥಿಲವಾಗುವುದರಿಂದ ನಾಟಾ ಸಹಾಯ ಹೆಚ್ಚಾಗಿ ಬೇಕೆಂಬುವದು ಸಕಲರಿಗೂ ತಿಳಿದ ವಿಷಯವಾಗಿದೆ ಇಂಥಾದ್ದರಲ್ಲಿ ಈಗಲಾದರೋ ಫಾರೆಸ್ಟು ಇಲಾಖೆಯವರು ಬರಬರುತ್ತಾ ಇದ್ದ ಕಾಡನ್ನೆಲ್ಲಾ ಆಕ್ರಮಿಸಿಕೊಳ್ಳುತ್ತಾ ಬಂದು ಕಟ್ಟಿಗೆ, ನಾಟಾಗಳಿಗೆ ಕೊಡತಕ್ಕ ತೊಂದರೆಗಳಿಂದ ನಾನಾ ವಿಧಗಳಲ್ಲಿ ರೈತರು ದಂಡ ತೆತ್ತು ಸಾಲಮಾಡಿಯೋ, ಕೆಲಸಕಾರ್ಯಗಳನ್ನು ಹಾಳುಮಾಡಿಕೊಂಡೋ ಕಷ್ಟನಷ್ಟಕ್ಕೆ ಗುರಿಯಾಗುವದರಿಂದ ಸಾಕಾಗಿ ಬೇಸತ್ತು ಈ ರೈತಾಪಿ ಕಸುಬೇ ಬೇಡಪ್ಪಾ ಎಂದು ಅನೇಕರು ಗೋಳಾಡುತ್ತಾ ಅನಾರೋಗ್ಯವಾದ ಜೋಪಡಿಗಳಲ್ಲಿಯೋ, ಜೀರ್ಣವಾದ ಮನೆಗಳಲ್ಲಿಯೋ ವಾಸಮಾಡುತ್ತಾ ನಾನಾ ವಿಧಗಳಲ್ಲಿ ಮೃಗಗಳಂತೆ ಜೀವಿಸುತ್ತಿರುವರು.

ಅದರೊಳಗೂ ಹೆಂಗಸರ ಜೀವನವಂತೂ ಬಹಳ ಕಷ್ಟಕರವಾದದ್ದು ಗರ್ಭಿಣಿ ಸ್ತ್ರೀಯರು, ಬಾಣಂತಿಯರು, ಕೂಸುಗಳೂ ಬದುಕುವದೇ ಕಷ್ಟ ಮರಣ ಹೊಂದುವದೇ ಹೆಚ್ಚು ಸಂಖ್ಯೆ ಗರ್ಭಿಣಿಯಾದವರು, ಬಾಣಂತಿಯರಾದ ಸ್ವಲ್ಪ ದಿವಸಗಳಲ್ಲಿಯೇ ರೈತಾಪಿ ಕೆಲಸಕಾರ್ಯಗಳನ್ನು ಮಾಡದೆ ಹೋದರೆ ನಿರ್ವಾಹವೇ ಇಲ್ಲ ಇವರುಗಳು ಕ್ರಮವರಿತು ನಡೆದುಕೊಳ್ಳುವದು ಮತ್ತು ಉಪಚಾರ ಹೊಂದಲು ಅಶಕ್ತರಾಗಿರುತ್ತಾರೆ ಅವರಿಗೆ ಯಾವ ಅವಕಾಶವೂ ಇಲ್ಲದೆ ಮರಣಕ್ಕೆ ತುತ್ತಾಗುತ್ತಾರೆ. ಒಂದು ಮನೆಯಲ್ಲಿ ನಾಲ್ಕುಜನ ಗಂಡಸರು ಇದ್ದರೆ ಮೂರು ಜನಕ್ಕೆ ಒಬ್ಬೊಬ್ಬರಿಗ ಎರಡುಜನ ಮೂರುಜನ ಹೆಂಡರು ಆಗಿರುತ್ತಾರೆ ಇದರಂತೆ ಪ್ರತಿ ಮನೆಯಲ್ಲಿಯೂ ಉಂಟು ಇದನ್ನ ತನಿಖೆಮಾಡಿ ನೋಡಿದರೆ ಗೊತ್ತಾಗುವದು.

ಈ ರೀತಿಯಾಗಿ ನಾನಾ ವಿಧಗಳಲ್ಲಿ ಕಷ ತರದಿಂದಲೂ, ವ್ಯಥೆಯಿಂದಲೂ ಕೂಡಿದ ರೈತರು ನಾನಾ ವಿಧಗಳಲ್ಲಿ ಕಂದಾಯ ಕೌಳಗೆಗಳನ್ನು ತೆತ್ತು ಸಹಾಯ ಸಂಪತ್ತುಗಳನ್ನು ಒದಗಿಸಿಕೊಟ್ಟಾಗ್ಯೂ ಈ ಕಷ್ಟ ಜೀವಿಗಳಮೇಲೆ ಕನಿಕರವಿಟ್ಟು ಸುಖದುಃಖಗಳನ್ನು ವಿಚಾರಿಸುತ್ತಾ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡುವ ಮತ್ತು ಪ್ರಜೆಗಳ ಸುಖವೇ ತಮ್ಮಗಳ ಸುಖ, ಪ್ರಜೆಗಳ ಕಷ್ಟವೇ ತಮ್ಮ ಕಷ್ಟ, ಪ್ರಜೆಗಳು ಸೌಖ್ಯವಾಗಿದ್ದಲ್ಲಿ ರಾಜ್ಯವು ಅಭಿವೃದ್ಧಿಗೆ ಬರುವುದು ತಮಗೂ ಸುಖವುಂಟಾಗುವುದೆಂದು ಭಾವಿಸತಕ್ಕ ಸರಕಾರ ನೌಕರರ ಸಂಖ್ಯೆ ಕಡಮೆಯಾಗುತ್ತಾ ಬಂದಿದೆ. ತಮ್ಮ ಜೇಬುಗಳನ್ನು ತುಂಬುವುದರಿಂದಲೂ, ಹೆಚ್ಚೆಚ್ಚು ಸಂಬಳವನ್ನು ಪಡೆದು ಸುಖಪಡಬೇಕೆಂಬ ಸ್ವಪ್ರಯೋಜನಾಪೇಕ್ಷೆಯುಳ್ಳ ನೌಕರರ ಸಂಖ್ಯೆ ಹೆಚ್ಚುತ್ತಾ ಬಂದಿದೆ ಇಂಥಾ ಕನಿಷ್ಠಾವಸ್ಥೆಗೆ ಗುರಿಯಾಗಿರುವಲ್ಲಿ ಪ್ರಜೆಗಳು ಹೆಚ್ಚೆಚ್ಚು ಲಯವಾಗುತ್ತಿರುವುದೇನು ಆಶ್ಚರ್ಯ?

ಇದನ್ನೆಲ್ಲಾ ಘನವಾದ ಸರಕಾರದವರು ವಿಮರ್ಶಾಲೋಚನೆಗೆ ತಂದು ಅಲ್ಲಲ್ಲಿ ಡಿಸ್ಪೆನ್ಸರಿ ಸ್ಥಾಪಿಸುವುದರಿಂದಲೂ, ಸೂಲಗಿತ್ತಿಯರನ್ನು ಹೆಚ್ಚಿಸುವುದರಿಂದಲೂ, ಸ್ಕೂಲುಗಳನ್ನು ಹೆಚ್ಚಿಸಿ ಆರೋಗ್ಯಶಾಸ್ತ್ರವನ್ನು ಬೋಧಿಸುವುದರಿಂದಲೂ, ಆರೋಗ್ಯಕರವಾದ ಮನೆಗಳನ್ನು ಕಟ್ಟಿಕೊಳ್ಳಲು ತೊಂದರೆಯಿಲ್ಲದೆ ಧಾರಾಳವಾಗಿ ನಾಟಾ ಕಟ್ಟಿಗೆ ಮುಂತಾದ ಸಹಾಯವನ್ನು ಕೊಡುವುದರಿಂದಲೂ ಆರೋಗ್ಯ ಮುಂತಾದ ಸುಖಗಳನ್ನು ಹೊಂದುವುದರಿಂದ ಪ್ರಜಾಕ್ಷೇಮವು ತಪ್ಪದೆ ಅಭಿವೃದ್ಧಿಗೆ ಬರುವುದರಲ್ಲಿ ಸಂದೇಹವಿಲ್ಲ ಮತ್ತು ನಮ್ಮ ಘನವನ್ನು ಹೊಂದಿದ ದಿವಾನ್ ಸಾಹೇಬರವರ ಪ್ರಜಾಹಿತಚಿಂತನೆಯ ಮೇಲುಪಂಕ್ತಿಯನ್ನು ಎಲ್ಲಾ ನೌಕರರೂ ಅನುಸರಿಸುವದರಲ್ಲಿ ಎಲ್ಲಾ ಕೊರತೆಗಳೂ ನೀಗಿ ಸುಖಸಂಪತ್ತುಗಳು ಉಂಟಾಗುವುದರಲ್ಲಿ ಸಂದೇಹವಿಲ್ಲ.

ಈ ರೀತಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ಸರಕಾರದವರ ಅವಗಾಹನೆಗೆ ತಂದು ಮಲೆನಾಡಿನ ಪ್ರಜೆಗಳ ಕಷ್ಟಗಳು ನಿವಾರಣೆಯಾಗಿ ಸುಖಸಂತೋಷಗಳು ಉಂಟಾಗುವಂತೆ ದೇವರು ಸಹಾಯರಾಗಲೆಂದು ಪ್ರಾರ್ಥಿಸುವ

ಮುಡಗಟ್ಟೆ. ಟಿ. ತಮ್ಮಯ್ಯಗೌಡ, ಪ್ಲಾಂಟರ್ ಮತ್ತು ರೈತ

ಅರಸಿಕೆರೆ ಮಂಗಳೂರು ರೈಲ್ವೆ ವಿಷಯ

ಇತ್ತಲಾಗಿ ವೃತ್ತಾಂತ ಪತ್ರಿಕೆಯ ಸಂಚಿಕೆಯೊಂದರಲ್ಲಿ ಪ್ರಕಟವಾದಂತೆ ಅರಸಿಕೆರೆ ಮಂಗಳೂರು ರೈಲ್ವೆಯು ಸದ್ಯದಲ್ಲಿ ಆಗುವ ಹಾಗಿಲ್ಲ ಎಂಬದಾಗಿ ಕಾಣುತ್ತಿತ್ತು. ಆದರೆ ಈ ರೈಲ್ವೆಯಿಂದ ಮೈಸೂರು ಪ್ರಾವಿನ್ಸಿನ ಪಶ್ಚಿಮ ಘಟ್ಟಗಳ ಪ್ರದೇಶಕ್ಕೆ ಅಷ್ಟೊಂದು ಪ್ರಯೋಜನವಾಗುವಂತೆ ಕಂಡುಬರುವುದಿಲ್ಲ. ಶಿವಮೊಗ್ಗಾ ಡಿಸ್ಟ್ರಿಕ್ಟಿನ ಶಿವಮೊಗ್ಗಾ, ಸಾಗರ, ನಗರ ತಾಲ್ಲೂಕುಗಳು ವಿಸ್ತೀರ್ಣದಲ್ಲಿ ದೊಡ್ಡವಾಗಿಯೂ ಅಲ್ಲಿ ಹೆಚ್ಚಾಗಿ ಉತ್ಪತ್ತಿಯಾಗುವ ಗಂಧ, ಅಡಿಕೆ, ಮೆಣಸು, ಯಾಲಕ್ಕಿ, ಭತ್ತ, ರಾಗಿ, ಬೆಲ್ಲ, ಇತರ ಆಹಾರ ಸಾಮಗ್ರಿಗಳು ಪಶ್ಚಿಮ ಕರಾವಳಿಗೆ ಬಹು ಪ್ರಯಾಸದಿಂದ ಬಂದರುಗಳಿಗೆ ಸಾಗಲಿಕ್ಕೆ ಹೆಚ್ಚಿನ ಖರ್ಚು ಬಿದ್ದು ಒಂದೊಂದು ಸಲ ಜಿನಸುಗಳ ಕ್ರಯಕ್ಕಿಂತ ಬಾಡಿಗೆಯು ದರವೇ ವಿಪರೀತವಾಗುತ್ತದೆಂಬದು ಎಲ್ಲರಿಗೂ ತಿಳಿದ ಸಂಗತಿಯೇ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಹಲವು ಭಾಗಗಳಲ್ಲಿ ಸಿಕ್ಕದ ವ ಇನ್ನೂ ಸುತ್ತಮುತ್ತಲಿನ ಅನೇಕ ಪ್ರದೇಶಗಳಲ್ಲಿ ಸಿಕ್ಕಬಹುವಾದ ಗಣಿಗಳ ಉತ್ಪತ್ತಿಯು ಬಹು ದೂರ ರೈಲ್ವೆಯಿಂದ ಸಾಗಬೇಕಾದ ಕಾರಣ ಅದಕ್ಕೂ ಹಾಗೆಯೇ ಹೆಚ್ಚು ಬಾಡಿಗೆ ಬೀಳಬಹುದು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಪಶ್ಚಿಮಘಟ್ಟದ (ಸಾಗರ, ನಗರ ತಾಲ್ಲೂಕುಗಳ) ಇಕ್ಕೆಡೆಯಲ್ಲೂ ವ್ಯವಸಾಯಕ್ಕೆ ಅನುಕೂಲಮಾಡಿಕೊಳ್ಳುವಂಥ ಸಾವಿರಗಟ್ಲೆ ಎಕರೆ ಜಮೀನುಗಳು ಸೌಕರ್ಯವಿಲ್ಲದ ದೆಸೆಯಿಂದ ಹಾಳುಬಿದ್ದಿವೆ ಮೈಸೂರು ಪ್ರಾವಿನ್ಸಿಗೆ ಭೂಷಣಪ್ರಾಯವಾದ, ಪ್ರಪಂಚದಲ್ಲೆಲ್ಲಾ ವಿಖ್ಯಾತಿಗೊಂಡ ಗೆರಸಪ್ಪೆಯ (ಜೋಗು) ನದೀ ಪ್ರಪಾತವನ್ನು ನೋಡಲಿಚ್ಛಿಸಿ ಬಹು ದೂರದೇಶಗಳಿಂದ ಬರುವವರಿಗೆ ಸುಲಭವಾಗಿ ಅದನ್ನು ನೋಡಲಿಕ್ಕೆ ಅದರ ಬಳಿಯಲ್ಲಿ ರೈಲ್ವೆ ಇಲ್ಲದ್ದರಿಂದ ಅದೊಂದು ಕೊರತೆಯೇ ಸದರಿ ಜೋಗು ಇರುವಲ್ಲಿಗೆ ರೈಲ್ವೆ ಇರುವುದಾದರೆ ಅದೊಂದು ಏತದ್ದೇಶೀಯ ವ ಆರೋಪ್ಯ ಶ್ರೀಮಂತ ಜನರ ಸದಾಕಾಲದ ವಿಹಾರಸ್ಥಳವಾಗಿ ಮೆರೆಯುತ್ತಿದ್ದದ್ದಲ್ಲದೆ ಅದರ ನೆರೆತರೆಯೆಲ್ಲಾ ಎಷ್ಟೋ ಜನರ ವಸ್ತಿಗಳಿಂದ ಶೋಭಿಸುತ್ತಲಿತ್ತು. ಇದೇ ಪಶ್ಚಿಮ ಘಟ್ಟಗಳಲ್ಲಿ ಅತ್ಯಂತ ರಮಣೀಯವಾಗಿದ್ದು ಕಡು ಕಾಲದಲ್ಲಿ ಶೀತಲವಾದ ವಾತಾವರಣದಿಂದ ಪಶ್ಚಿಮ ಸಮುದ್ರದ ಹವೆಯು ನೇರವಾಗಿ ಬಂದು ಆರೋಗ್ಯಪ್ರಕಾರವಾದ ಕೊಡಚಾದ್ರಿ ಪರ್ವತ ಶಿಖರದಲ್ಲಿ ಮಾಥೇರಾನ್, ಕೊಡೈಕೆನಲ್ ಮುಂತಾದ ವಿಹಾರಸ್ಥಾನಗಳಿಗೆ ಸಮಾನವಾದ ಪ್ರದೇಶವಿದೆ. ಮೈಸೂರು ಪ್ರಾವಿನ್ಸಿಗೆ ಇದನ್ನು ಸೆನಿಟೇರಿಯಂ ಆಗಿ ಮಾಡಿಕೊಳ್ಳಬಹುದು ಇಂತಹ ಹಲವು ವಿಧದ ಸಂಪತ್ತುಳ್ಳ ಪ್ರದೇಶದ ಅಲ್ಲಲ್ಲಿರುವ ಸೌಲಭ್ಯಗಳ ಸದುಪಯೋಗಮಾಡಿಕೊಳ್ಳಲು ರೈಲ್ವೆ ಇಲ್ಲದಿರುವ ಅನಾನುಕೂಲತೆಯು ಇಂಥ ಸುಧಾರಣೆಯ ಕಾಲದಲ್ಲಿ ಅತಿ ಸಂಕೋಚ ಪಡುವಂಥ ಸಂಗತಿಯಾಗಿದೆ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತನಕ ಸೌತ್ ಇಂಡಿಯನ್ ರೈಲ್ವೆಯು ಆಗಿರುವುದು ಅಲ್ಲಿಂದ ಅರಸಿಕೆರೆ ವರೆಗೆ ಆಗಬಹುದೆಂಬ ರೈಲ್ವೆಯಿಂದ ಮೈಸೂರು ಪ್ರಾವಿನ್ಸಿಗೆ ಅತಿ ಸಮೀಪವಾದ ಅಚ್ಚ ಕನ್ನಡಭಾಷೆಯ ಕುಂದಾಪುರ ತಾಲ್ಲೂಕು ಕಾರ್ಕಳ ಉಡಿಪಿ ತಾಲ್ಲೂಕುಗಳ ಕೆಲವಂಶದ ಪ್ರಾಂತ್ಯದಲ್ಲಿರುವವರಿಗೂ, ವಿಶೇಷತಃ ಪಶ್ಚಿಮ ಕರಾವಳಿಯ ಜನರಿಗೂ, ಉತ್ತರ ಕನ್ನಡ ಜಿಲ್ಲೆಯ ಜನರಿಗೂ ಎಷ್ಟು ಮಾತ್ರವೂ ಪ್ರಯೋಜನವಾಗುವಂತಿಲ್ಲ ರತ್ನಗಿರಿ ಜಿಲ್ಲೆಯ ಪಶ್ಚಿಮ ಕರಾವಳಿಗಿರುವಂತೆ ಸದಾಕಾಲ ನಡೆಯುವ ಸ್ಟೀಮರುಗಳ ಅನುಕೂಲತೆಯೂ ಈ ಕರಾವಳಿಯ ಪ್ರದೇಶಕ್ಕಿಲ್ಲ ಮಳೆಗಾಲದ 4-5 ತಿಂಗಳು ಮಂಗಳೂರಿಂದ ಗೋವೆ ಪ್ರಾಂತ್ಯದ ವರೆಗಿನ ಕರಾವಳಿಯ ಜನರ ತಿರುಗಾಟಕ್ಕೂ ವ್ಯಾಪಾರ ಉದ್ಯಮಗಳಿಗೂ ಇದೊಂದು ಮಹಾ ಪ್ರಯಾಸವಾಗಿರುವದು ಯಾವ ಕಾಲದಲ್ಲಿ ನಿವಾರಣೆಯಾದೀತೋ ಏನೋ ತಿಳಿಯದು ಪ್ರಕೃತ ಅದು ನಮ್ಮ ಕಲ್ಪನೆಯ ಹೊರಗಿನ ಮಾತು ಲಗತ್ತು ಇರುವ ರೈಲ್ವೆ ಕಂಪನಿಗಳವರ್‍ಯಾರೂ ಇಂಥ ಯೋಚನೆಗೆ ಲಕ್ಷ್ಯಕೊಡದಿದ್ದ ಪಕ್ಷಕ್ಕೆ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಡಿಸ್ಟ್ರಿಕ್ಟ್ ಬೋರ್ಡಿನವರಾದರೂ ಸರ್ಕಾರದ ಸಹಾಯದಿಂದ ಈ ಪಶ್ಚಿಮ ಕರಾವಳಿಯ ಜನರಿಗೆ ಸುಗಮವಾಗುವಂಥ ರೈಲ್ವೆಯನ್ನು ಮಾಡಿಸಿದರೆ ಇಂಡಿಯದ ಪೂರ್ವ ಮತ್ತು ಪಶ್ಚಿಮ ಸಮುದ್ರಗಳ ತೀರದ ಮೇರೆಯಲ್ಲೆಲ್ಲಾ ರೈಲ್ವೆಯು ಪೂರ್ತಿಯಾದಂತಾಗುತ್ತದೆ.

ಈ ವಿಚಾರಗಳನ್ನು ಯಾವದಾದರೂ ರೈಲ್ವೆ ಕಂಪನಿಯವರು ಗಮನಕ್ಕೆ ತಾರದಿದ್ದಲ್ಲಿ ಪ್ರಜೆಗಳಾದರೂ ಸರಕಾರಕ್ಕೆ ಅರಿಕೆ ಮಾಡಿಕೊಳ್ಳುವಂತಾಗಿದೆ ಮೈಸೂರು ಸರಕಾರದ ಸಂಪದಭಿವೃದ್ಧಿ ಸಮಾಜದವರು ಸಂಸ್ಥಾನದ ಅಭಿವೃದ್ಧಿಯನ್ನುಂಟುಮಾಡಲಿಕ್ಕೆ ಪ್ರಯತ್ನ ಪಡುವರಾದಕಾರಣ ಅವರು ಇವರ ಸೂಕ್ಷ್ಮ ವಿಚಾರಗಳಿಂದ ಆಲೋಚನೆಗೆ ತೆಗೆದುಕೊಂಡು ಮೈಸೂರು ಸ್ಟೇಟ್ ರೈಲ್ವೆಯ ಮೂಲಕ ಅರಸೀಕೆರೆಯ 3-4 ಸ್ಟೇಷನುಗಳ ಉತ್ತರಕ್ಕೆ ಬೀರೂರು ಜಂಕ್ಷನ್ನಿನಿಂದ ಶಿವಮೊಗ್ಗವರೆಗೆ ಬಂದ ರೈಲ್ವೇಯನ್ನೇ ಮುಂದರಿಸಿ ಸಾಗರ ಮಾರ್ಗವಾಗಿ ಜೋಗಿನ ಬಳಿಯಿಂದ ಉತ್ತರ ಕನ್ನಡಾ ಜಿಲ್ಲಾ ಹೊನ್ನಾವರ ಬಂದರದಿಂದ ಗೆರಸಪ್ಪೆಗೆ ಮುಟ್ಟುವ ನದೀ ಬುಡದ ಬಂದರು ಸ್ಥಳದಲ್ಲಿ ಟರ್ಮಿನಸ್ ಯಾನೆ ಅಖೈರಾಗುವ ಸ್ಟೇಷನನ್ನು ಇಟ್ಟು ನಡೆಯಿಸಿದರೆ ಪ್ರಥಮತಃ ವಿವರಿಸಿದ ತೊಂದರೆಗಳೆಲ್ಲ ಕಳೆದು ಮೈಸೂರು ಪ್ರಾವಿನ್ಸಿನ ಪಶ್ಚಿಮ ಘಟ್ಟಗಳ ಪ್ರದೇಶದ ವ್ಯವಸಾಯ ವ್ಯಾಪಾರ ಕೈಗಾರಿಕೆಗಳಿಗೆ ಉತ್ತೇಜನವಾಗಿ ಅವು ಸರಿಯಾಗಿ ಚೇತರಿಸಿಕೊಂಡು ಸಂಸ್ಥಾನಕ್ಕೆ ಧಾರಾಳವಾದ ಉತ್ಪತ್ತಿಯಾಗುವದರಲ್ಲಿ ಲೇಶಮಾತ್ರವೂ ಸಂದೇಹವಿಲ್ಲ

ಇದೇ ಸಮಯ ಈ ವಿಚಾರಗಳನ್ನು ಮೈಸೂರು ಸಂಪದಭಿವೃದ್ಧಿ ಸಮಾಜದವರು ದಕ್ಷಿಣ ವ ಉತ್ತರ ಕನ್ನಡ ಜಿಲ್ಲೆಗಳ ಡಿಸ್ಟ್ರಿಕ್ಟ್ ಬೋರ್ಡಿನವರನ್ನು ಕೇಳಿ ಉಭಯ ರೈಲ್ವೆಗಳೂ ಕೂಡುವಂತೆ ಮಾಡಬಹುದು. ದಕ್ಷಿಣ ಕನ್ನಡ ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡಿನವರು ಮಂಗಳೂರಿನಿಂದ ಜಿಲ್ಲೆಯ ಸರಹದ್ದಿನವರೆಗೆ ರೈಲ್ವೆ ಮುಟ್ಟಿಸುವುದಾದರೆ ಇದೇ ಜಿಲ್ಲೆಯ ರೈತರೂ, ಮುಖ್ಯವಾಗಿ ರೈಲ್ವೆ ಹಾದುಹೋಗುವ ತಾಲ್ಲೂಕುಗಳಲ್ಲಿರುವ ರೈತರೂ ಶಕ್ತ್ಯಾನುಸಾರವಾದ ರೈಲ್ವೆ ಸ್ಟೇಷನನ್ನು ಕೊಡಲಿಕ್ಕೆ ಸಂತೋಷದಿಂದ ಒಪ್ಪಬಹುದು ಇದರಂತೆ ಉತ್ತರ ಕನ್ನಡ ಜಿಲ್ಲೆಯವರೂ ಅನುಸರಿಸಿದರೆ ಕಡೇ ಪಕ್ಷ ದಕ್ಷಿಣದವರ ಗಡಿಯಿಂದ ಮುಂದಕ್ಕೆ ಕೊಂಡುಹೋಗುವರು ಪ್ರಕೃತ ಮೈಸೂರಿನ ಸ್ಟೇಟ್ ರೈಲ್ವೆಯನ್ನೂ, ಕರಾವಳಿ ರೈಲ್ವೆಯನ್ನೂ ಹೊಗೆ ಹಡಗುಗಳ ಬಂದರವಾದ ಕುಮುಟೆಯಲ್ಲಿಯೂ (ಹೊನ್ನಾವರದಲ್ಲಿ) ಒಟ್ಟುಗೂಡುವಂತೆ ಮಾಡಿದರೆ ವಿಶೇಷ ಪ್ರಯೋಜನವಾದೀತು ಈ ರೈಲ್ವೆ ಮೂಲಕ ಗೋಕರ್ಣ, ಕೊಲ್ಲೂರು ಮುಂತಾದ ಯಾತ್ರಾಸ್ಥಳಗಳಿಗೆ ದಕ್ಷಿಣದೇಶ ವ ಮಲಬಾರಿನಿಂದ ಪ್ರಯಾಸಪಟ್ಟು ಬರುವ ಯಾತ್ರಸ್ಥರಿಗೂ, ಸದರೀ ಜಿಲ್ಲೆಗಳಲ್ಲಿನ ಜನರ ವ್ಯಾಪಾರ ಕೈಗಾರಿಕೆಗಳಿಗೂ ಸೌಕರ್ಯವಾಗುತ್ತದೆ. ಮೈಸೂರು ಸರಕಾರದವರು ಮುಂದಾಗಿ ಈ ಕಾರ್ಯಕ್ಕೆ ಕೈಹಾಕಿದರೆ ಉಭಯ ಕನ್ನಡ ಜಿಲ್ಲೆಗಳವರೂ ನೆರವಾಗಿ ಪ್ರಜೆಗಳ ಭಾಗ್ಯೋದಯವಾಯಿತೆಂದೇ ಹೇಳಲಾಗುವುದು ಸುಧಾರಣೆಯ ಅನುಸರಣೆಯಾದ ಆ ಕಾಲವೇ ಸುಕಾಲವು

ಈ ಮೈಸೂರು ಸ್ಟೇಟ್ ರೈಲ್ವೆಯಿಂದಾಗಬಹುದಾದ ಮಹತ್ಪ್ರಯೋಜನಗಳನ್ನು ವಿವರಿಸಲಿಕ್ಕೆ ಸ್ಥಳಸಂಕೋಚವಾದೀತೆಂಬುದರ ಪ್ರಕೃತ ಮುಗಿಸಿರುವೆನು.

ಬಿಜೂರ ಶ್ರೀನಿವಾಸರಾವ್

ಬಾತ್ಮಿದಾರರಿಗೆ ನೋಟೀಸ್.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು. ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು. ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಒಬ್ಬ ರಿಟೈರ್ಡ್ ಆಫೀಸರ್.—ಪಂಗಡಗಳಲ್ಲಿ ಅಸೂಯೆಯನ್ನು ಹುಟ್ಟಿಸಬಹುದಾದ ನಿಮ್ಮ ಬಾತ್ಮಿಯನ್ನು ಪ್ರಕಟಿಸಲಾರೆವು.

"ಸರ್ವಜನ ಕ್ಷೇಮಾಭಿಲಾಷಿ" ಮತ್ತು "ಸರ್ವಜನ ಹಿತೈಷಿ"—ಈ ಬಾತ್ಮಿಗಳಲ್ಲಿ ಸಹಜವಾದ ವಿಚಾರಗಳೇನೂ ಕಂಡುಬರುವುದಿಲ್ಲ.

ಯೆ. ದಾಸೇಗೌಡ, ಪಾಲಹಳ್ಳಿ.—ನಿಜವಲ್ಲವೆಂದು ನೀವು ತಿಳಿಸುವುದಕ್ಕಾಗಿ ಬನೆದಿರುವ ಬಾತ್ಮಿಯನ್ನು ಪ್ರಕಟಿಸಿದರೆ ಆ ಸುಳ್ಳು ಸುದ್ದಿಯು ಇನ್ನೂ ಹರಡುವುದಕ್ಕೆ ಅವಕಾಶವಾಗುತ್ತದೆ ನಿಮ್ಮ ಬಾತ್ಮಿಯನ್ನು ಒಕ್ಕಲಿಗರ ಪತ್ರಿಕೆಯಲ್ಲಿ ಪ್ರಕಟಮಾಡಿದರೆ ಸಾಕಾಗಿದೆ

—ಎಡಿ.]

ಕರೆಸ್ಪಾಂಡೆನ್ಸ್.

ಲೋವರ್ ಸೆಕೆಂಡರಿ ಟೆಕ್ಸ್ಟುಗಳು

ಅಯ್ಯಾ,

ನಮ್ಮ ವಿದ್ಯಾಭ್ಯಾಸದ ಇಲಾಖೆಯವರು ಪ್ರತಿವರ್ಷವೂ ಲೋವರ್ ಸೆಕೆಂಡರಿ ಪರೀಕ್ಷೆಗೆ ನಿಯಮಿಸುತ್ತಿರುವ ಟೆಕ್ಸ್ಟ್ ಬುಕ್ಕಿನ ವಿಷಯವಾಗಿ ಎಂದಿನಂತೆ 1915 ನೇ ವರ್ಷದ ಪಿ. ಸಿ. ಪರೀಕ್ಷೆಯ ತೆಲುಗು, ಉರುದು, ಫಾರಸಿ ಭಾಷೆಗಳಿಗೆ ಮಾತ್ರವೇ ಆಯಾ ಗ್ರಂಥಭಾಗಗಳನ್ನು ತಿಳಿಸಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳಿಗೆ ಮಾತ್ರ "ನಿಯಮಿಸಲ್ಪಟ್ಟಿರುವಂಥಾ ಭಾಗಗಳು ಇಲಾಖೆಯವರಿಂದ ಮುದ್ರಿಸಲ್ಪಡುವವು" ಎಂದು ಪ್ರಕಟಿಸಿದ್ದಾರೆ ಇತರ ಭಾಷೆಗಳಿಗೆ ಕೊಟ್ಟಿರುವ ಸೌಕರ್ಯವನ್ನೇ ಕನ್ನಡ ಸಂಸ್ಕೃತಗಳಿಗೂ ಏತಕ್ಕೆ ದಯಪಾಲಿಸಬಾರದೋ ತಿಳಿಯುವುದಿಲ್ಲ ಈಗಲಾದರೂ ಆ ಗ್ರಂಥಭಾಗಗಳನ್ನು ತಿಳಿಸುವುದಾಗಲಿ, ಅಥವಾ ತಾವೇ ಅವನ್ನೆಲ್ಲಾ ಈಗಲೇ ಮುದ್ರಿಸಿ ಪ್ರಕಟಿಸುವುದಾಗಲಿ ಜಾಗ್ರತೆಮಾಡಿದರೆ ವಿದ್ಯಾರ್ಥಿಗಳಿಗೆ ತುಂಬಾ ಉಪಕಾರವಾದೀತು.

ವಿದ್ಯಾರ್ಥಿಗಳ ಹಿತಚಿಂತಕ

ಪ್ರಜಾಪ್ರತಿನಿಧಿಸಭೆಯ ಮೆಂಬರುಗಳಿಗೆ ಒಂದು ಸಲಹೆ

ಅಯ್ಯಾ,

ತಮ್ಮ ಜೂಲೈ ಮಾಹೆ 10ನೇ ತಾ ವೃತ್ತಾಂತ ಪತ್ರಿಕೆಯ 5ನೇ ಪುಟದಲ್ಲಿ ಪಂಜಾಬ್ ಅಧಿಪತ್ಯಕ್ಕೆ ಸೇರಿದ ಫರಿದ್‌ಕೋಟ್ ಎಂಬ ಸಿಕ್ಕರ ದೇಶೀಯ ಸಂಸ್ಥಾನದ ಗ್ರಾಮಾಂತರಗಳಲ್ಲಿ ಪ್ರಜೆಗಳನ್ನು ಸದ್ಗುಣಿಗಳಾಗಿಯೂ, ಸಚ್ಚರಿತ್ರರನ್ನಾಗಿಯೂ ಮಾಡುವದಕ್ಕೆ ಸರ್ದಾರ್ ಬಹದೂರ್ ಸರ್ದಾರ್ ದಯಾಳ್ ಸಿಂಗ್ ಮಾನವರವರು ಪ್ರತಿ ಒಂದು ಗ್ರಾಮದಲ್ಲಿರುವ ಪ್ರಜೆಗಳನ್ನೂ ಮೂರು ಪಂಗಡಗಳಾಗಿ ವಿಂಗಡಿಸಿ ಪಟ್ಟಿ ಬರೆದುಕೊಳ್ಳುವಂತೆ ಏರ್ಪಾಡು ಮಾಡಿದಾರೆಂದೂ, 2-3ನೇ ದರ್ಜೆಯವರು 1ನೇ ದರ್ಜೆಯವರಾಗಲು ಪ್ರಯತ್ನ ಪಡುತ್ತಾರೆಂದೂ, ಇದರಿಂದ ಬಹಳ ಪ್ರಯೋಜನ ಕಂಡುಬಂದಿದೆ ಎಂದೂ ಬರೆದಿರುವದನ್ನು ನೋಡಿ ಹರ್ಷಿಸುತ್ತೇನೆ ನಮ್ಮ ದೇಶದಲ್ಲಿಯೂ ನೋಡಿದರೆ 13 ಮನೆಗಳುಳ್ಳ ಒಂದು ಚಿಕ್ಕ ಹಳ್ಳಿಯಲ್ಲಿ 6 ಪಾರ್ಟಿಗಳೂ, ಒಬ್ಬೊಬ್ಬರಿಗೆ ದ್ವೇಷಾಸೂಯೆಯೂ, ವಿಶೇಷವಾಗಿ ಧನ, ಮಾನಹಾನಿಗಳನ್ನು ಅನುಭವಿಸುತ್ತ ತಪ್ಪು ಕೆಲಸಗಳಲ್ಲಿ ಪ್ರವೇಶಿಸಿ ಆ ಕೆಲಸದಲ್ಲಿ ಜಯಶೀಲರಾದರೆ ತಾವೇ ಪ್ರವೀಣರೆಂದು ಹೆಸಗುಕೊಳ್ಳುತ್ತಿರುವುದೂ ವಾಚಕ ಮಹಾಶಯರು ಅರಿತಿರಬಹುದು. ಸದ್ಯ ಫರಿದ್‌ಕೋಟ್ ಸಂಸ್ಥಾನದಲ್ಲಿ ಈಗ ಜಾರಿಯಲ್ಲಿ ತಂದಿರುವ ಕಾನೂನನ್ನು ನಮ್ಮ ಘನವನ್ನು ಹೊಂದಿದ ಮೈಸೂರು ಸರ್ಕಾರದವರೂ ಜಾರಿಯಲ್ಲಿ ತರುವಂತೆ ಮಾಡಲು ಮಹನೀಯರುಗಳಾದ ಪ್ರಜಾಪ್ರತಿನಿಧಿ ಸಭೆಗೆ ದಯಮಾಡಿಸುವ ಮೆಂಬರುಗಳ್ಯಾರಾದರೂ ಈ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸಿ ಬಲಾತ್ಕಾರ ವಿದ್ಯಾಭ್ಯಾಸವಾದ ರೂಲ್ಸಿನ ಜೊತೆಗೆ ಇದನ್ನೂ ಜಾರಿಯಲ್ಲಿ ತರುವಂತೆ ಕೇಳಿಕೊಳ್ಳಬಹುದೆಂದು ಅಪೇಕ್ಷಿಸುವ

ದೇಶಾಭಿಮಾನಿ.

ನೋಡಿದ್ದೀರಾ?

ಅಯ್ಯಾ,

ಈ ನಮ್ಮ ಮಲೆನಾಡಿನಲ್ಲಿ ಪ್ರಜೆಗಳು ಕ್ಷೀಣಗತಿಯನ್ನು ಹೊಂದುತ್ತಿರುವದನ್ನು ವಾಚಕರು ತಿಳಿದಿರತಕ್ಕ ವಿಷಯವಾಗಿರುತ್ತದೆ ಇದಕ್ಕೆ ಮುಖ್ಯಕಾರಣ ಕುಡಕತನ ಮತ್ತು ಬಾಲ್ಯ ವಿವಾಹವು ಎಂಬ ಸಂಗತಿಯನ್ನು ನಾನೊಂದು ಸಲ ಹೇಳಬೇಕಾದದ್ದಿಲ್ಲ. ಇದಕ್ಕೆ ದೃಷ್ಟಾಂತ ಈ ತೀರ್ಥಹಳ್ಳಿ ತಾಲ್ಲೂಕು ಪ್ರಾಂತ್ಯವು ಸಾರಾಯಿ ಅಂಗಡಿಗಳ ತವರುಮನೆಯಾಗಿರುತ್ತದೆ. ಇದರಲ್ಲೂ ಕಳೆದ ಸಾಲಿನಲ್ಲಿ ಎರಡುನೂರು ಗ್ಯಾಲನ್ ವಿಕರಿಯಾಗುತ್ತಿರುವ ಸಾರಾಯಿ ಅಂಗಡಿಯಲ್ಲಿ ಈ ಸಾಲಿನಲ್ಲಿ ಐದುನೂರು ಗ್ಯಾಲನ್‌ಗಿಂತ ಜಾಸ್ತಿಯಾಗಿ ವಿಕರಿಯಾಗಿರುತ್ತದೆ ಈ

ಬಗ್ಗೆ ನಮ್ಮ ದಯಾಳುಗಳಾದ ಮೈಸೂರು ಮಹಾರಾಜಾ ಸರ್ಕಾರದವರು ಈ ಬಾಬಿನ ಕಂಟ್ರಾಕ್ಟನ್ನು ಬಹಳ ಮಟ್ಟಿಗೆ ಕಡಮೆಮಾಡಿಸಿದರೆ ದೇಶೋಪಕಾರವಾಗುವದರಲ್ಲಿ ಯಾವ ಸಂದೇಹವೂ ಇರುವದಿಲ್ಲ ಹಾಗೂ ನಮ್ಮ ಸರ್ಕಾರದವರು ಈ ವರೆಗೆ ನಮ್ಮಗಳ ಏಳಿಗೆಗೆ ತಕ್ಕಂತೆ ಮಾಡುತ್ತಿರುವ ಚಿರಕಾಲ ಸ್ಮರಣೀಯವಾದ ವಿದ್ಯಾಭ್ಯಾಸವೇ ಮೊದಲಾದ ವಿಷಯಕ್ಕೆ ತುಂಬಾ ಕೃತಜ್ಞರಾಗಿರುತ್ತೇವೆ ಮತ್ತು ನಮ್ಮಗಳಿಗೆ ಬರತಕ್ಕ ಅಕಾಲಮರಣದ ಖಾಯಿಲೆಗಳ ಬಗ್ಗೆ ಸರ್ಕಾರದವರು ಆಗಲೇ ಯೋಚಿಸುತ್ತಿರುವ ವಿಷಯಕ್ಕೆ ಮತ್ತೂ ಪಶ್ಚಾದ ಹೆಗ್ಗಳಪಡುತ್ತೇವೆ ಶಿವಾಯಿ ಇದಕ್ಕೆ ತಕ್ಕಂತೆ ನಮ್ಮ ವೆಸ್ಲಿಯನ್ ಮಿಷನ್ ರಾಜಿಯವರು ಸಹ ಮಲೆನಾಡಿನ ಮೇಲೆ ಇಟ್ಟಿರುವ ಪ್ರೀತಿಯೂ ನೆನಸತಕ್ಕದ್ದಾಗಿರುತ್ತದೆ ಇಂಥಾದ್ದರಲ್ಲಿ ನಮ್ಮಲ್ಲಿ ಕೆಲವರು ಸೀಕಡ ಎಷ್ಟತ್ತೈದರಷ್ಟು ಜನರು ಕುಡಿಕತನದಿಂದ ದಿನ್ನಾಂತರದ ಪಾಪಿಗಳಾಗಿರುತ್ತಾರೆ ಶಿವಾಯಿ ಈ ಬಗ್ಗೆ ತಕ್ಕಂತೆ ಕಳೆದ ಜೂಲೈ ತಾ ೩ನೇ ವೃತ್ತಾಂತ ಪತ್ರಿಕೆಯ ೩ನೇ ಪುಟದಲ್ಲಿ "ಪಾಪದ ಸಂಬಳ ಮರಣ" ಎಂದು ಪತ್ರಿಕಾಕರ್ತರು ಪ್ರಕಟಿಸಿರುವ ಲೇಖನವನ್ನು ಚೆನ್ನಾಗಿ ಓದಿ ಅರ್ಥಮಾಡಿಕೊಂಡರೆ ತಿಳಿಯಲಾಗುತ್ತದೆ ಎಂಬ ವಿಷಯಕ್ಕೆ ಈ ಮೂಲಕ ಪ್ರಾರ್ಥಿಸುವ

ಗೌಡರಲ್ಲಿ ಒಬ್ಬ

ಭಂಡಾರದ್ರೋಹ, ರಾಜದ್ರೋಹ

ಅಯ್ಯಾ,

ಭಂಡಾರದ್ರೋಹ ರಾಜದ್ರೋಹವೆಂಬ ಪದದಲ್ಲಿ ಪಬ್ಲಿಕ್ ಸರ್ವೆಂಟ್ ಎಂಬ ನೌಕರನು ಗೌರ್ನಮೆಂಟ್ ಟ್ರೆಜರಿಗೆ ಜಮಾ ಆಗತಕ್ಕ ಹಣವನ್ನು ಜಮಾ ಮಾಡಿಸದೆ ತಾನೇ ಅದನ್ನು ತಿಂದು ಹಾಕತಕ್ಕದ್ದು ಎಂತ ಅರ್ಥವಾಗುತ್ತೆ ಈ ಪದವನ್ನು ವಿವರಿಸಿದರೆ ಇದರಲ್ಲಿ ಶ್ಯಾನುಭೋಗ ಪಟೇಲರು ರೈತರಿಂದ ವಸೂಲಾಗತಕ್ಕ ಕಂದಾಯದ ಹಣ ತಿಂದು ಹಾಕತಕ್ಕದು, ರೈತರಿಂದ ಅಕ್ರಮವಾಗಿ ಹಣಾ ವಸೂಲ್‌ಮಾಡಿ ಅದನ್ನು ತಿಂದು ಹಾಕತಕ್ಕದ್ದು, ಜಮೀನು ಭಟಾವಣೆ, ಈ ಮುಂತಾದ ಅಪ್ರಮಾಣಿಕವಾದ ಕೃತ್ಯಗಳೆಲ್ಲಾ ಅದರಲ್ಲಿ ಸೇರಿ ಇವೆ ಈ ಅಕ್ರಮ ಕೃತ್ಯಗಳನ್ನು ನಡಿಸತಕ್ಕವರು ಪಬ್ಲಿಕ್ ಸರ್ವೆಂಟ್ ಎಂದರೆ ಸರ್ಕಾರದ ನೌಕರರೇ ಆಗಿರುತ್ತಾರೆ ಇಂಡಿಯನ್ ಪೆನಲ್ ಕೋಡಿನಲ್ಲಿ ಇಂಥಾ ಕೃತ್ಯಗಳು ಕೇವಲ ರಾಜಕೀಯಕ್ಕೆ ಅಪಾಯಕರವಾದ್ದೆಂತಲೂ, ಇವುಗಳನ್ನು ನಡಿಸತಕ್ಕವರಿಗೆ ಹೆಚ್ಚು ಶಿಕ್ಷೆ ವಿಧಿಸಬೇಕೆಂತಲೂ ನಮೂದಿದೆ ಡಿಪಾರ್ಟ್‌ಮೆಂಟಲ್ ನಡವಳಿಕೆ ಯೋಚಿಸಿದರೆ ಇಂಥಾ ಕೃತ್ಯ ನಡಿಸಿದವನು ವಂಶಪಾರಂಪರ್ಯವಾಗಿ ನೌಕರಿ ಹಕ್ಕನ್ನು ಹೊಂದಿರತಕ್ಕವನಾಗಿದ್ದರೆ ಅವನಿಗೆ ಆ ಹಕ್ಕು ವಂಶಪಾರಂಪರ್ಯವಾಗಿ ತಪ್ಪಿಸತಕ್ಕದ್ದೂ, ಪೆನ್ಷನ್ ಪಡೆಯತಕ್ಕವನಾಗಿದ್ದರೆ ಅವನ ಸರ್ವೀಸನ್ನು ಕಳೆಯತಕ್ಕದ್ದಲ್ಲದೆ ಅವನ ಕೆಟ್ಟ ನಡತೆಯು ಪಲ ಆ ವಂಶದವರಿಗೂ ವ್ಯಾಪಿಸುವಂತೆ ರಿಕಾರ್ಡು ಮಾಡತಕ್ಕದ್ದೂ, ಇವು ನಡವಳಿಕೆಯಲ್ಲಿ ಇವೆ

ಈ ನಮ್ಮ ಮೈಸೂರು ದೇಶದಲ್ಲಿ ಇಂಗ್ಲೀಷರನು ಗೌರ್ನಮೆಂಟ್ ಆಡಳಿತ ನಡಿಸುತ್ತಿದ್ದ ಕಾಲದಲ್ಲಿ ಇಂಡಿಯನ್ ಪೆನಲ್ ಕೋಡ್ ೧೦೯ ನೇ ಸೆಕ್ಷನ್ ಪ್ರಕಾರ ಬರತಕ್ಕ ಕೇಸುಗಳು ಪ್ರಾಯಶಃ ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆ ನಡೆದು ಅಪರಾಧಿಗಳಿಗೆ ಹೆಚ್ಚು ಶಿಕ್ಷೆಕೊಡುತ್ತಿದ್ದರೇ ಹೊರತು ಅಂಥಾ ಕೇಸುಗಳನ್ನು ವ್ಯಾಜಸ್ಟ್ರೇಟರ ಇತ್ಯರ್ಥಕ್ಕೆ ಬಿಡುತ್ತಿರಲಿಲ್ಲ ಮತ್ತೂ ಆ ಕಾಲದಲ್ಲಿ ಪಬ್ಲಿಕ್ ಸರ್ವೀಸಿನಲ್ಲಿರತಕ್ಕ ನೌಕರರು ನಿಜವಾಗಿ ನಡೆದ ತಪ್ಪಿತವನ್ನು ಮುಚ್ಚತಕ್ಕದ್ದಾಗಲೀ, ಸುಳ್ಳು ಕೇಸುಗಳನ್ನು ವಿಚಾರಣೆ ಮಾಡತಕ್ಕದ್ದಾಗಲಿ ಹೊರಪಟ್ಟರೆ ಅಂಥಾವರ ಕೃತ್ಯಗಳನ್ನು ಮೇಲಿನಂತೆಯೇ ಎಣಿಸಿ ಸಂಬಂಧಪಟ್ಟವರನ್ನು ಕ್ರಿಮಿನಲ್ ಆಗಿಯೂ, ಡಿಪಾರ್ಟ್‌ಮೆಂಟಲ್ ಆಗಿಯೂ ಶಿಕ್ಷಿಸುತ್ತಿದ್ದರು ಅದೇ ಪದ್ಧತಿಯೇ ನಮ್ಮ ದೇಶದಲ್ಲಿ ೧೮೯೫ ನೇ ಇಸವಿಯ ವರಿವಿಗೂ ಕ್ರಮವಾಗಿ ನಡೆಯುತ್ತಿದ್ದು, ಅದರಿಂದೀಚೆಗೆ ಆ ಕಟ್ಟು ಸಡಿಲವಾಗುತ್ತಾ ಬಂದಿದೆ

ಈಚೆಗೆ ಕೆಲವು ದಿವಸಗಳಿಂದ ಪ್ರಯತ್ನವಿಲ್ಲದೇನೇ ಭಂಡಾರದ್ರೋಹದ ಕೃತ್ಯಗಳು ತಾನಾಗಿಯೇ ಹೊರಪಡುತ್ತಲೂ, ಅದನ್ನು ನಡಿಸಿದವರಿಗೆ ಅಲ್ಪ ಶಿಕ್ಷೆಗಳಾಗುತ್ತಲೂ ಬರುತ್ತಾ ಇವೆ ಉದ್ದೇಶ್ಯವಾಗಿ ಗೌರ್ನಮೆಂಟಿನವರು ಈ ವಿಷಯ ತನಿಖೆಮಾಡುತ್ತಾ ಬಂದರೆ ಇಂಥಾ ತಪ್ಪಿತಗಳು ಎಷ್ಟು ಹೊರಪಟ್ಟಾವೋ ಗೊತ್ತಿಲ್ಲ

ದೇಶದಲ್ಲಿ ಮೇಲಿನಂಥಾ ತಪ್ಪಿತಗಳು ನಡೆಯದಂತೆ ಬಂದೋಬಸ್ತು ಮಾಡಲಿಕ್ಕಾಗಿಯೇ ಏರ್ಪಟ್ಟಿರತಕ್ಕ ಗೌರ್ನಮೆಂಟ್ ನೌಕರರೇ ಸರ್ಕಾರದ ಹಣ, ಪ್ರಜೆಗಳ ಹಣ, ಇವುಗಳನ್ನು ಅಪ್ರಮಾಣಿಕತೆಯಿಂದ ಅಪಹರಿಸಲಿಕ್ಕೆ ಆರಂಭಿಸಿದರೆ ಪ್ರಜೆಗಳ ಸ್ಥಿತಿ ಹೇಳತಕ್ಕದಾಗಿಯೇ ಇಲ್ಲ ದುಷ್ಟರನ್ನು ಶಿಕ್ಷಿಸದೆ ಉದಾಸೀನವಾಗಿರತಕ್ಕದ್ದೂ, ಅಕ್ರಮಗಳನ್ನು ಹೊರಪಡಿಸದೆ ಮುಚ್ಚತಕ್ಕದ್ದೂ ಸಹಾ ದೇಶಕ್ಕೆ ಅಪಾಯಕರವಾದದ್ದಾಗಿ ಇದೆ ಗೌರ್ನಮೆಂಟಿನವರು ತಮ್ಮ ಆಡಳಿತವನ್ನು ಸತ್ಯವಾಗಿಯೂ, ಪ್ರಜಾಕ್ಕೆ ಹಿತಕರವಾದದ್ದಾಗಿಯೂ, ದರ್ಪವಾಗಿಯೂ ಇಟ್ಟುಕೊಳ್ಳಬೇಕಾದರೆ ಪ್ರಥಮತಃ ಮನ್ಯಾಧಿಕಾರಿಗಳನ್ನು ಸ್ವಲ್ಪವೂ ದಾಕ್ಷಿಣ್ಯವಿಲ್ಲದೆ ಶಿಕ್ಷಿಸಿ ಅದರಿಂದ ದೇಶದಲ್ಲಿ ನಿಜತ್ವವೂ, ಗೌರ್ನಮೆಂಟ್ ದರ್ಪವೂ ಸಹ ಸ್ಥಾಪಿಸುತ್ತಾ ಬರಬೇಕೇ ಹೊರತು ಇಂಥಾ ಕಠಿ ತಸ್ಕರ ವಿಷಯದಲ್ಲಿ "ಪಾಪ ಬಡವ ಕೆಡುತ್ತಾನೆ" ಎಂಬದಾಗಿ ಕನಿಕರ ತೋರಿಸತಕ್ಕದ್ದಾಗಲೀ, ಅಥವಾ ಅವನಿಂದ ಹಣ ಭರ್ತಿಮಾಡಿಸಿಕೊಳ್ಳತಕ್ಕದ್ದಾಗಲೀ ಯಾ ಅವನ ತಪ್ಪಿತ ಹೊರಪಡದಂತೆ ಮುಚ್ಚತಕ್ಕದಾಗಲೀ, ಈ ರೀತಿ ನಡೆಯುತ್ತಾ ಬಂದರೆ ಆ ಗೌರ್ನಮೆಂಟು ಎಂದಿಗೂ ಸುಖವಾಗಿರುವುದಿಲ್ಲ ದೇಶದಲ್ಲಿನ ಪ್ರಜಾಕ್ಕೆ ನೀತಿ, ಸತ್ಯ ಇವುಗಳನ್ನು ತಮ್ಮ ಸತ್ಯವಾದ ನಡವಳಿಕೆಗಳಿಂದಲೇ ತೋರಿಸಿ ಕೊಟ್ಟು, ಅವರಲ್ಲಿ ಅಕೃತ್ಯಗಳು ನಡೆಯದಂತೆ ತಡೆಯುವುದಕ್ಕಾಗಿ ಏರ್ಪಟ್ಟಿರತಕ್ಕ ಗೌರ್ನಮೆಂಟ್ ನೌಕರರೇ ಭಂಡಾರದ್ರೋಹ ಮಾಡಲಿಕ್ಕೆ ಆರಂಭಿಸಿದರೆ ಅವರಿಂದ ಪ್ರಜೆಗಳ ಸಮಾಧಾನ ಉಂಟಾಗಲು ಎಂದಿಗೂ ಸಾಧ್ಯವಾಗುವುದಿಲ್ಲ ಈ ಲೋಪಗಳನ್ನು ಗೌರ್ನಮೆಂಟಿನವರು ನೋಡಿ ಸರಿಪಡಿಸುತ್ತಾರೆಂದು ನಂಬಿದೇನೆ

ಒಬ್ಬ ರಿಟೈರ್ಡ್ ಆಫೀಸರ್

ಚಿತ್ರದುರ್ಗದ ವಿದ್ಯಮಾನಗಳು

ಅಯ್ಯಾ,

ಕಳೆದ ತಾ ೧೬ ನೇ ಬುಧವಾರ ಈ ಟೌನ್‌ನಲ್ಲಿರುವ ಸಾಹುಕಾರ್ ಕಾಡಪ್ಪನವರ ಮನೆಗೆ ಜಪ್ತಿಗೆ ಮ್ಯುನಿಸಿಪಾಲಿಟಿ ಸ್ಯಾನಿಟರಿ ಇನ್‌ಸ್ಪೆಕ್ಟರು, ಗೌಡ, ಶ್ಯಾನುಭೋಗರು ಮತ್ತು ದಫೇದಾರರು ಸಹ ಹೋಗಿದ್ದರಂತೆ ಗೌರ್ನಮೆಂಟಿಗೆ ಸುಮಾರು ಸಾವಿರ ರೂಪಾಯಿ ವರಿವಿಗೆ ಕಂದಾಯ ಕೊಡುತ್ತಾ, ಸುಮಾರು ಲಕ್ಷ ರೂಪಾಯಿ ವರಿವಿಗೆ ಆಸ್ತಿ ಬಾಳತಕ್ಕವರಿಗೆ ಜಪ್ತಿ ಅಂದರೇನು? ವಿಚಾರಿಸಿದಲ್ಲಿ, ಮೇಲ್ಕಂಡ ಸಾಹುಕಾರರು ಮ್ಯುನಿಸಿಪಾಲಿಟಿಯ ರಸ್ತೆ ಸರಹದ್ದಿನಲ್ಲಿ ತಮಗೆ ಸಂಬಂಧಪಟ್ಟ ಕಲ್ಲುಗಳನ್ನು ಹಾಕಿಸಿದ್ದರೆಂತಲೂ, ಅವುಗಳನ್ನು ತೆಗೆಸಲು ನೋಟೀಸು ವಗೈರೆ ಕೊಟ್ಟರೂ ತೆಗೆಸಲಿಲ್ಲವಾಗಿಯೂ, ಆ ಕಲ್ಲುಗಳನ್ನು ಸರ್ಕಾರದಿಂದ ಕೂಲಿ ಕೊಟ್ಟು ತೆಗೆಸಿದರೆಂತಲೂ, ಆ ಕೂಲಿ 7 ರೂಪಾಯಿ ಆಯಿತೆಂತಲೂ, ಆ 7 ರೂಪಾಯಿಗೆ ಜಪ್ತಿ ಹಂದಿರುತ್ತಾರೆಂದೂ ತಿಳಿಯಬಂತು ಮೇಲ್ಕಂಡ ನೌಕರರು ಆ ದಿನ ಸಾಹುಕಾರರ ಅಪ್ಪಣೆಯಿಲ್ಲದೆ ಮನೆಯೊಳಕ್ಕೆ ಪ್ರವೇಶಿಸಿದರೆಂತಲೂ, ಆಗ ಸಾಹುಕಾರರು ಕಾನೂನಿಗೆ ವಿರೋಧವಾಗಿ ಪ್ರವೇಶಿಸಕೂಡದೆಂದೂ, ಪಂಚಾಯಿತರನ್ನು ಬರಮಾಡಿಕೊಂಡು ಆರ್ಡರ್ ಜಾರೀ ಮಾಡಿಕೊಳ್ಳಬಹುದೆಂದೂ ತಿಳಿಸಿದರಂತೆ ಮತ್ತೊಬ್ಬ ಸಾಹುಕಾರರಿಂದ ಮೊಬಲಗು ಸ್ಯಾನಿಟರಿ ಇನ್‌ಸ್ಪೆಕ್ಟರಿಗೆ ಪಾವತಿ ಮಾಡಲ್ಪಟ್ಟಿತಂತೆ ಸ್ಯಾನಿಟರಿ ಇನ್‌ಸ್ಪೆಕ್ಟರು ಬಹು ಜನಗಳ ಹಿತಚಿಂತನೆಗೆ ಕಾರಣರಾದಂಥವರು ಮತ್ತು ಟೌನ್ನಿನ ಯಾವ ಭಾಗದಲ್ಲಿ ಏನು ಪ್ರಜೆಗಳಿಗೆ ಅನಾನುಕೂಲವಿರುತ್ತೋ ಅದನ್ನು ಸರಿಪಡಿಸಿಕೊಡತಕ್ಕವರು ಇವರು ಜನಾನುರಾಗಿಗಳಾಗದೆ ಪ್ರಜಾಕಂಟಕರಾದರೆ ಪ್ರಜೆಗಳಿಗೆ ಯಾವ ಸುಖ ತೋರೀತು? ಸ್ಯಾನಿಟರಿ ಇನ್‌ಸ್ಪೆಕ್ಟರು ಸಾಹುಕಾರರ ಮೇಲೆ ತೆಗೆದುಕೊಂಡು ಹೋದ ಜಪ್ತಿಯು ಅಸೂಯೆಯಲ್ಲವೇ ಎಂದು ತೋರಬಹುದು ಅಕಸ್ಮಾತ್ ಜಪ್ತಿಗೆ ಆರ್ಡರ್ ಆಗಿದ್ದರೂ ಅವರ ಮನೆ ಹೊರಗಡೆ ಇರತಕ್ಕ ಭಂಡಿಗಳನ್ನೂ, ನೂರಾರು ಮೂಟೆ ದವಸಗಳ ಪೈಕಿ ಯಾವುದಾದರೂ ಒಂದನ್ನು ಜಪ್ತಿ ಮಾಡಿದ್ದರೂ ಸರ್ಕಾರದ ಹಣವು ಬರುತ್ತಿತ್ತು ಇದೆಲ್ಲಾ ಯೋಚಿಸಿದ್ದಲ್ಲಿ ಸಾಹುಕಾರರ ಮೇಲೆ ಮಾಡಿರತಕ್ಕದ್ದು ಅಸೂಯೆ ಎಂದು ಸ್ಪಷ್ಟಪಡುವುದಿಲ್ಲವೇ? ಜನಾನುರಾಗಿಗಳಾಗದೆ ಇರುವ ಗೌರ್ನಮೆಂಟ್ ನೌಕರರಿಂದ ಜನಗಳಿಗೆ ತೊಂದರೆ ಒಂದೇ ಅಲ್ಲದೆ ಸರ್ಕಾರಕ್ಕೂ ವಿಶೇಷ ತೊಂದರೆಯಲ್ಲವೇ ಸರ್ಕಾರದವರು ಜನಾನುರಾಗಿಗಳಾದ ಆಫೀಸರುಗಳನ್ನು ಇಂಥ ಕೆಲಸಗಳಿಗೆ ನೇಮಿಸಿದಲ್ಲಿ ಪ್ರಜೆಗಳು ಸುಖಿಗಳಾದಾರೆಂದು ಪೂರ್ಣ ನಂಬಲ್ಪಟ್ಟಿರುತ್ತೆ ಮೇಲ್ಕಂಡ ಸಾಹುಕಾರರಾದರೋ ಧರ್ಮ ಪರೋಪಕಾರಗಳಲ್ಲಿ ತಮ್ಮ ಕೈಲಾದಮಟ್ಟಿಗೆ ಸಹಾಯ ಮಾಡತಕ್ಕವರಾಗಿರುವುದೂ ಅಲ್ಲದೆ ಪ್ರತಿ ವರುಷವೂ ಪರೀಕ್ಷೆಗೆ ಬರತಕ್ಕ ಬಾಲಕರಿಗೆ ಅವರ ಪರೀಕ್ಷೆಯು ಮುಗಿಯುವ ವರಿವಿಗೂ ಸುಖಭೋಜನ ವಗೈರೆ ಮಾಡಿಸುತ್ತಾರೆ ಇದರಿಂದ ಇವರ ಧಾರಾಳ ಹೃದಯ ತೋರಬಹುದಲ್ಲವೇ? ಇವರಲ್ಲಿ ಸುಗುಣಗಳು ಎಷ್ಟಿದ್ದಾಗ್ಯೂ ಮರೆಮಾಚಿ ದುರ್ಗುಣಗಳನ್ನು ಗೌರ್ನಮೆಂಟಿಗೆ ತೋರಿಸಿರುವುದರಿಂದ ಗೌರ್ನಮೆಂಟಿನವರು ಇವರ ವಿಷಯದಲ್ಲಿ ಕೆಲವುಭಾಗ ದುರಭಿಪ್ರಾಯಪಟ್ಟಿರಬೇಕೆ ಬಹುದು, ಇವರನ್ನು ಯಾವ ಮೆಂಬರಾಗಿಯಾಗಲಿ ಚುನಾಯಿಸಲಿಕ್ಕೆ ಅವಕಾಶಕೊಡದೆ ಇರುವುದರಿಂದ ತಿಳಿಯಬಹುದಲ್ಲವೇ? ಗೌರ್ನಮೆಂಟಿನವರು ಪಕ್ಷಾ ನ್ಯಾಯವಿಚಾರ ಮಾಡಿದ್ದಲ್ಲಿ ಅವರವರ ತಪ್ಪು ಹೊರಪಟ್ಟು ನ್ಯಾಯಾನ್ಯಾಯ ಗೊತ್ತಾಗುತ್ತಿತ್ತು ಇಂಥಾ ಅನ್ಯಾಯಗಳು ಇನ್ನೂ ಅನೇಕ ನಡೆದಲ್ಲಿಟ್ಟು ಗೌರ್ನಮೆಂಟಿನವರಿಗೂ ಸಹ ತಿಳಿಯದೆ ಎಷ್ಟು ಅಡಗಿರುತ್ತವೆಯೋ? ಶ್ರೀಮನ್ ಮಹಾರಾಜ ರಾಜಾಸಾಹೇಬ್ ಸರಕಾರದವರು ಇಂಥವುಗಳನ್ನು ಸರಿಪಡಿಸದೆಹೋದರೆ ತಮ್ಮ ಪ್ರಜೆಗಳ ಏಳಿಗೆಗೆ ಕುಂದಕವು ಉಂಟಾಗುವುದಲ್ಲದೆ ಕಾಲಕ್ರಮೇಣ ಅನಾಯಕತ್ವವು ಸಹ ಸಂಭವಿಸಬಹುದು ನಮ್ಮ ಘನವನ್ನು ಹೊಂದಿದ ಮಹಾರಾಜ ಸರ್ಕಾರದವರು ಇಂಥ ಕೊರತೆಗಳನ್ನು ಸರಿಪಡಿಸಿ ಪ್ರಜೆಗಳಿಗೆ ಹೆಚ್ಚಿನ ಸೌಕರ್ಯಗಳುಂಟುಮಾಡುತ್ತಾರೆಂದು ನಂಬುತ್ತೇನೆ

ಈ ಟವನ್ನಿಗೆ ಒಬ್ಬಾನೊಬ್ಬ ಗೋಸಾಯಿಯು ಬಂದು ಇಲ್ಲಿ ಇರತಕ್ಕ ಒಬ ವೈದ್ಯರ ಆಶ್ರಯದಲ್ಲಿರುತ್ತಾನೆ ಈತನು ತಾನು ಹಾವುಕಡಿದು ಸತ್ತವರನ್ನು ಬದುಕಿಸುವುದಾಗಿಯೂ, ಸತ್ತುಹೋದ ಹೆಣಗಳನ್ನು ಕಿತ್ತು ಬದುಕಿಸುವಂತೆಯೂ ಹೇಳುತ್ತಾ ಕೆಲವು ವೈದ್ಯಗಳನ್ನು ಸಹ ಮಾಡುತ್ತಾ ಇರುತ್ತಾನೆ ಇವನಲ್ಲಿಗೆ ಜನರು ತಂಡೋಪತಂಡವಾಗಿ ಹೋಗಿಬರುತ್ತಾರೆ ಗೋಸಾಯಿಯು ಇಲ್ಲಿ ಸರ್ಪಕಚ್ಚಿದ ಇಬ್ಬರನ್ನು ತನ್ನ ಮಂತ್ರಶಕ್ತಿಯಿಂದ ವಿಷವನ್ನು ಇಳಿಸಿದನಂತೆ ಈ ವರ್ತಮಾನವು ಎಲ್ಲಾ ಕಡೆಗೂ ಹರಡಿತು ಈ ಮಂತ್ರಪರೀಕ್ಷಾರ್ಥವಾಗಿ ಒಂದು ಸತ್ತ ಹೆಣವು ಸಹ ಚನ್ನಗಿರಿಯಿಂದ ಇಲ್ಲಿಗೆ ಸುಮಾರು 40 ಮೈಲಿ ಫಾಸಲೆಯಿಂದ ಗೋಸಾಯಿ ಇದ್ದ ಸ್ಥಳಕ್ಕೆ ತರಲ್ಪಟಿತು ಇದನ್ನು ನೋಡಲು ಬಹು ಜನಗಳು ಸೇರಿದರು ಗೋಸಾಯಿಯು ಒಂದು ಗುಲಾಬಿ ಹೂವನ್ನು ತರಿಸಿ ಸತ್ತ ಹೆಣದ ಮೂಗಿನ ಹತ್ತಿರ ಹಿಡಿದನು ಸತ್ತ ಶವವು ಮೂಸಿನೋಡಲಿಲ್ಲದೆ ಹೊಟ್ಟೆ ಊದಿಹೋಗಿರುತ್ತೆ, ಆಗುವುದಿಲ್ಲವೆಂದು ಹೇಳಿಬಿಟ್ಟನು ಆಹಾ ಪರಾತ್ಪರವಸ್ತುವಾದ ಭಗವಂತನು ಪ್ರಾಣವನ್ನು ಕೊಡಲಿಕ್ಕೂ ಪ್ರಾಣವನ್ನು ಕಳೆಯಲಿಕ್ಕೂ ಸರ್ವಸಾಮರ್ಥ್ಯವುಳ್ಳವನೆಂಬುದು ಪ್ರಪಂಚದ ಜನಗಳಿಗೆ ಇನ್ನೂ ಗೊತ್ತಿಲ್ಲವಲ್ಲಾ! ಈ ರೀತಿ ಪರಸ್ಥಳದವರನ್ನು ಜನರು ನಂಬುವುದನ್ನು ನೋಡಿದರೆ ಇನ್ನೂ ಎಷ್ಟೋ ಮೌಢ್ಯವು ನೆಲಗೊಂಡಿರುವಂತೆ ತೋರುತ್ತಿರುವುದಲ್ಲವೇ? ಇದೆಲ್ಲಾ ನಾಶವಾಗಬೇಕಾದರೆ ವಿದ್ಯೆಯೇ ಮುಖ್ಯ ಕಾರಣವಾಗಿರುತ್ತೆ

ನ್ಯಾಯವಾದಿ

ತಾಲ್ಲೋಕು ವರ್ತಮಾನಗಳು

ಚನ್ನರಾಯಪಟ್ಟಣ — ಈ ಊರಿನಲ್ಲಿ ಕಲರಾ ವ್ಯಾಧಿಯು ಈಗ್ಗೆ ಸುಮಾರು ಒಂದು ತಿಂಗಳಿಂದ ಇಲ್ಲ ಇಲ್ಲಿಗೆ ಸುಮಾರು 6 7 ಮೈಲಿಯಲ್ಲಿರುವ ಕಬ್ಬಾಳದಲ್ಲಿ ಪ್ರಾರಂಭವಾಗಿದೆ — ಬೆಂಗಳೂರು ಸಿಟಿಯಲ್ಲಿ ಗಂಧದ ವ್ಯಾಪಾರ ಮಾಡುವ ಕುರುಬರ ಮ|| ಎಂ ನಾಗಪ್ಪನವರ ಮಕ್ಕಳು ಎಂ ಎನ್ ಲಿಂಗಪ್ಪನವರು ತಮ್ಮ ಮತವಿಷಯವಾಗಿ ಸಾಹಸಪಡುತ್ತಿರುವ ಮೆಹನತ್ತಿಗಾಗಿ ಅವರಿಗೆ ಕುಣಿಗಲ್ ತಾಲ್ಲೂಕಿನ ಕುರುಬರ ಮಹಾ ಜನಗಳು ಸೇರಿ ಭಂಗಾರದ ಪದಕವಲ್ಲಿ ಕುಲಚಿಂತಾಮಣಿ ಎಂದು ಕೆತ್ತಿಸಿರುವ ಮೆಡಲನ್ನು ಕೊಟ್ಟಿದಾರೆ

ಬೌರಿಂಗ್‌ಪೇಟೆ ತಾ|| ವೇತಮಂಗಲ — ಈ ಊರಿನ ಆರೋಗ್ಯ ವಿಚಾರವು ತೃಪ್ತಿಕರವಾಗಿದೆ ಮಳೆಯು ಚೆನ್ನಾಗಿ ನಡೆಯುತ್ತಿರುವದರಿಂದ ರೈತಾಪಿ ಜನಗಳು ಬಹು ಸಂತೋಷದಿಂದ ತಮ್ಮ ಜಮೀನುಗಳನ್ನು ಸಾಗುವಳಿ ಮಾಡಿಕೊಳ್ಳುತ್ತಾ ಇದಾರೆ — ಕಳೆದ ತಾ 19 ನೇ ಶನಿವಾರ ಮಧ್ಯಾಹ್ನ 1½ ಘಂಟೆಯಲ್ಲಿ ಇಲ್ಲಿನ ಪೊಂಪಿಂಗ್ ಸ್ಟೇಷನ್‌ನಲ್ಲಿ ಫಯರ್‌ಮ್ಯಾನ್ ಕೆಲಸ ಮಾಡುತ್ತಾ ಇದ್ದ ಹೊಲೆಯರ ಗೊಲ್ಲಹಳ್ಳಿ ಗುರುವ ಉರುಫ್ ಯೆಲ್ಲಗ ಎಂಬ ಯೌವನಸ್ಥನು ಇಲ್ಲಿನ ದೊಡ್ಡ ಕೆರೆಯ ದಕ್ಷಿಣ ಭಾಗದಲ್ಲಿ ಆಕಸ್ಮಿಕವಾಗಿ ನೀರಿನಲ್ಲಿ ಬಿದ್ದು ಸತ್ತುಹೋದ ಸಂಗತಿ ಇಲ್ಲಿನ ಪೋಲೀಸ್ ಸ್ಟೇಷನ್‌ಗೆ ರಿಪೋರ್ಟು ಆದ ಕೂಡ್ಲೆ ಜಮೇದಾರ್ರು ಬಂದು ಇಲ್ಲಿನ ಪೊಂಪಿಂಗ್ ಸ್ಟೇಷನ್ ಸೂಪರಿಂಟ್ ಸಾಹೇಬರಾದ ಮಿ|| ಯೆ ಜೋಸಫ್ ಸಾಹೇಬರವರ ಸ್ವಂತ ಕೈಗಳಿಂದ ಮಾಡಿದ ಕೆಲವಿಂದ ಹೆಣವನ್ನು ಬೇಗ ಎತ್ತಿಸಿ ಪರೀಕ್ಷಿಸುವಲ್ಲಿ ಪ್ರಾಣ ಹೋಗಿದ್ದದ್ದನ್ನು ಡಾಕ್ಟರು ತಿಳಿದು, ಪಂಚಾಯಿತರ ಮೂಲಕ ಮಹಜರು ಮಾಡಿಸಿ ಅನುಮಾನ ಏನೂ ಇಲ್ಲದ್ದರಿಂದ ಶವವನ್ನು ದಫನ್ ಮಾಡಲಿಕ್ಕೆ ಸ್ವಂತ ಜನರಿಗೆ ಒಪ್ಪಿಸಿದರು ಮೃತನ ಚಟುವಟಿಕೆಯನ್ನೂ ಮತ್ತು ಗುಣವನ್ನೂ ನೋಡಿದ ಅನೇಕರು ಈತನಿಗಾಗಿ ಕಣ್ಣೀರು ಬಿಟ್ಟರು ಮತ್ತು ಈತನಿಗೆ ಇನ್ನೂ ವಿವಾಹವಾಗಿರಲಿಲ್ಲವಾದ್ದರಿಂದ ಈತನ ಮರಣದ ದುಃಖ ವಿಶೇಷವಾಗಿದೆ

ಬೆಂಗಳೂರು ತಾ|| ಯಲಹಂಕ — ಇಲ್ಲಿ 10 12 ದಿನಗಳಿಂದ ಮೋಡ ಕವಿದುಕೊಂಡು ಸೂರ್ಯರಶ್ಮಿ ಇಲ್ಲದೇನೂ, ಮತ್ತು ಆಗಾಗ್ಗೆ ತುಂತುರುಹನಿ ಬೀಳುತ್ತಲೂ ಇರುವುದರಿಂದ ಇಲ್ಲಿನ ಹವಾ ಬಹಳಮಟ್ಟಿಗೆ ಕೆಟ್ಟು ರೋಗಾದಿಗಳಿಗೆ ಅವಕಾಶವಾಗಿದೆ ಇಲ್ಲಿ ಈಗ ಬಹಳ ಜನರಿಗೆ ಕಣ್ಣುನೋವು ಪ್ರಾಪ್ತವಾಗಿ ಇಲ್ಲಿ ಆಸ್ಪತ್ರೆಗೆ ದಿನಕ್ಕೆ 50 60 ಜನ ರೋಗಿಗಳು ಹೋಗುವುದಾಗಿ ಕಾಣುತ್ತೆ — ಇಲ್ಲಿಗೆ ಎಲ್ಲಿಂದಲೋ ಹೊಸದಾಗಿ ಗಾಂಜಾ ಮಾರುವುದಕ್ಕಾಗಿ ಕಂಟ್ರಾಕ್ಟು ತೆಗೆದುಕೊಂಡು ಬಂದಿರುವ ಸಯ್ಯದ್ ಫಕೀರ್ ಎನ್ನುವ ದೊಡ್ಡ ಮನುಷ್ಯರು ತಮ್ಮ ದೇವರ ಹೆಸರಿನಮೇಲೆ ಇದೇ ತಿಂಗಳು 16 ನೇ ತಾ ಬುಧವಾರ ಇಲ್ಲಿನ ತಮ್ಮ ಸ್ವಜಾತಿಯವರಿಗೆ ಸುಮಾರು 300-400 ಜನ ಮುಸಲ್ಮಾನರಿಗೆ ಅನ್ನವನ್ನು ಹಾಕಿದರು ಅಲ್ಲದೆ ಇತರ ಜಾತಿಯ ಬಡವರಿಗೆಲ್ಲಾ ವಸ್ತ್ರದಾನವನ್ನೂ, ಬಾಲಕ ಬಾಲಕಿಯರಿಗೆ ಹಣ್ಣು ಮಿಠಾಯಿಯನ್ನೂ ಹಂಚಿದರು ಈ ದೊಡ್ಡ ಮನುಷ್ಯರು ಈ ಊರಿಗೆ ಬಂದಮೇಲೆ ಇಂಥಾ ಧರ್ಮಕಾರ್ಯಗಳನ್ನು ಬಹಳವಾಗಿ ಮಾಡಿರುತ್ತಾರೆ ಈ ಮಹನೀಯರು ಈ ಊರಿನ ಹಿಂದೂ ಮಹಮದೀಯರಿಗೆಲ್ಲಾ ಮೇಲುಪಜ್ಞೆಯಾಗಿದಾರೆ — ಈ ಊರು ಹೂವಾಡಿಗರ ಸರಸಮ್ಮನೆಂಬವಳ ಮನೆಯಲ್ಲಿ ೪ ವರ್ಷದ ಮಗುವಿಗೆ ಕಟ್ಟಿದ ಸುಮಾರು 100-120 ರೂಪಾಯಿ ಬಾಳುವ ಭಂಗಾರದ ಅಡ್ಡಿಕೆಯನ್ನು ಮೊನ್ನೆ 15 ನೇ ತಾ ಮಂಗಳವಾರ ಪ್ರಾತಃಕಾಲ ಯಾರೋ ದುಷ್ಟರು ಕತ್ತರಿಸಿಕೊಂಡು, ಸುಣ್ಣಕಲ್ಲು ಲಿಂಗಪ್ಪನವರ ಮನೆ ಹಿಂದೆ ಹಳ್ಳದಲ್ಲಿ ಹಾಕಿದ್ದರು ಇದನ್ನು ಇಲ್ಲಿನ ಪೋಲೀಸ್ ಆಫೀಸರು ಬಹಳ ಮುತುವರ್ಜಿ ವಹಿಸಿ ಮಾಲು ಇದ್ದ ಸ್ಥಳವನ್ನು ಹೇಗೋ ಪತ್ತೆಮಾಡಿದರು ಆಸಾಮಿಯನ್ನೂ ಪತ್ತೆಮಾಡುವ ತರದೂದಿನಲ್ಲಿರುತ್ತಾರೆ — ಯಲಹಂಕದಲ್ಲಿ ಬಹಳ ದಿವಸದಿಂದಲೂ ವಾಸವಾಗಿರುವ ಕುದೂರು ಸೀತಾರಾಮಯ್ಯನವರ ಕುಮಾರ್ರು ಮಂಡಿ ವರ್ತಕರಾದ ವೆಂಕಟಾದ್ರಿಶೆಟ್ಟರವರು 1913 ನೇ ಇಸವಿ ಮೇ ತಾ 28 ರಲ್ಲಿ ನಂಜನಗೂಡಿನಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ತಮ್ಮ ಹೆಸರಿನ ಮೇಲೆ ಸರ್ವದಾ ಪೂಜಾದಿ ಉತ್ಸವಗಳು ನಡೆಯುವುದಕ್ಕಾಗಿ 360 ರೂಪಾಯನ್ನು ಧರ್ಮಾರ್ಥವಾಗಿ ಕೊಟ್ಟಿರುತ್ತಾರೆ — ಇದನ್ನು ಮೂಲಧನವಾಗಿ ಇಟ್ಟುಕೊಂಡು ಇದರಿಂದ ಬರುವ ಉತ್ಪತ್ತಿಯನ್ನು ದೇವಸ್ಥಾನದಲ್ಲಿ ಉತ್ಸವಾದಿಗಳಿಗೆ ಉಪಯೋಗಿಸಿಕೊಳ್ಳುವಂತೆ ತಿಳಿಸಿದಾರೆ

ಮಧುಗಿರಿ — ಇಲ್ಲಿ ಒಂದೆರಡು ವಾರಗಳಿಂದ ಸೋನೆ ಮಳೆ ಪ್ರಾರಂಭವಾಗಿ ರೈತರಿಗೆ ಬೇಸಾಯಮಾಡುವುದಕ್ಕೆ ಅವಕಾಶವಿಲ್ಲದಂತಾಗಿರುತ್ತೆ ಈ ಸಾಲಿನ ಮಳೆಗಾಲದ ಫಸಲಿಗೆ ಕೆರೆಗೆ ನೀರು ಬರಲಿಲ್ಲ 5 6 ಸಾಲುಗಳಿಂದಲೂ ಗದ್ದೆ ಫಸಲು ಇಲ್ಲದೆ ರೈತಾಪಿ ಜನಗಳು ಕೇವಲ ಹೀನಸ್ಥಿತಿಯಲ್ಲಿರುತ್ತಾರೆ ಜಲಾಧಾರವಾಗಿರುವ ಚೋಳೇನಹಳ್ಳಿ ಕೆರೆ ಕಾಮಗಾರಿ ವಿಷಯದಲ್ಲಿ ನೀರಿನ ವಸತಿ ಮಾಡಿಕೊಡಬೇಕೆಂದು ಕೇಳಿಕೊಂಡ ಬಾಬು ಸರ್ಕಾರಕ್ಕೆ ಅನೇಕ ಅರ್ಜಿಗಳನ್ನು ರೈತರು ಬರೆದುಕೊಂಡಾಗ್ಯೂ ಅವರ ಚಿತ್ತಕ್ಕೆ ಇದುವರೆಗೂ ಒಲಿಲಿಲ್ಲ — ಹೊಸದಾಗಿ ಈ ಡಿಸ್ಟ್ರಿಕ್ಟಿಗೆ ಬಂದಿರುವ ಡೆಪ್ಯುಟಿ ಕಮಿಷನರವರು ಈ ಸ್ಥಳವನ್ನು ಖುದ್ದು ಪರಾಂಬರಿಸಿ ಹಿಂದಿನ ಸ್ಥಿತಿಗೂ ಈಗಿನ ಸ್ಥಿತಿಗೂ ಇರುವ ವ್ಯತ್ಯಾಸವನ್ನು ನೋಡಿ ಬಹಳ ವಿಷಾದಪಟ್ಟು ರೈತಾಪಿ ಜನರಿಗೆ ತಕ್ಕ ಅನುಕೂಲತೆಗಳನ್ನು ಮಾಡಿಕೊಡುವುದಾಗಿ ಅಭಯವನ್ನಿತ್ತು ತೆರಳಿದರು — ಈ ಕೆರೆ ಕೆಳಗಿರತಕ್ಕ ಗ್ರಾಮಗಳ ರೈತರು ಕೆಲವು ವರ್ಷಗಳಿಂದ ಅನೇಕ ಕಷ್ಟಗಳಿಗೆ ಗುರಿಯಾಗಿರೋಣದರಿಂದ ಸರ್ಕಾರದವರು ಈ ಸಾಲಿಗಾದರೂ ಅವರಿಗೆ ಅನುಕೂಲಗಳನ್ನು ಮಾಡಿಕೊಟ್ಟಾರೆಂದು ಹಾರೈಸುತ್ತಾರೆ — ಕಳೆದ ಜೂನ್ ತಾ 17 ರಲ್ಲಿ ಮಿಷನ್ ಸ್ಕೂಲುಗಳ ಸೂ|| ಪ್ರನ ಎಚ್ ಎಚ್ ಸ್ಮಿತು ದೊರೆಯವರು ಪತ್ನಿ ಸಮೇತ ಇಲ್ಲಿಗೆ ದಯಮಾಡಿ ಸ್ಕೂಲ್ ಅಭಿವೃದ್ಧಿ ಸ್ಥಿತಿಯನ್ನು ಪರಾಂಬರಿಸಿ ಬಡಚೌಡನ ಹಳ್ಳಿ ಮಾರ್ಗವಾಗಿ ತಮ್ಮ ಹೆಡ್ ಕ್ವಾರ್ಟರಿಗೆ ದಯಮಾಡಿದರು ಇದೇ ಜೂಲೈ ಮಾಹೆಯಲ್ಲಿ ಸರ್ಕಲ್ ಇನ್‌ಸ್ಪೆಕ್ಟರವರು ಇನ್‌ಸ್ಪೆಕ್ಷನ್‌ಗೆ ದಯಮಾಡಿ ಎಲ್ಲಾ ಸ್ಕೂಲುಗಳನ್ನೂ ಇನ್‌ಸ್ಪೆಕ್ಷನ್ ಮಾಡಿಕೊಂಡು ವಾಪಸು ತೆರಳಿದರು ಇಲ್ಲಿನ ಅ|| ಸರ್ಜನ್‌ರವರು ಪ್ರಜೆಗಳ ವಿಷಯದಲ್ಲಿ ಕೇವಲ ಆದರಪೂರ್ವಕವಾಗಿ ರೋಗಿಗಳಿಗೆ ತಕ್ಕ ಔಷಧಗಳನ್ನು ಕೊಡುತ್ತಿರುವುದಲ್ಲದೆ ಇತರ ಗ್ರಾಮಗಳಿಗೂ ಹೋಗಿ ಅಲ್ಲಿನ ಜನಗಳ ಕ್ಷೇಮಚಿಂತನೆಯನ್ನು ಮಾಡುತ್ತಿರುವುದು ಸಂತೋಷಕರವಾಗಿದೆ

ತೀರ್ಥಹಳ್ಳಿ — ತೀರ್ಥಹಳ್ಳಿ ತಾಲ್ಲೋಕ್ ಪ್ರಾಂತ್ಯ ಮಳೆ ಪ್ರಾರಂಭವಾಗಿ ಒಂದು ತಿಂಗಳ ಮೇಲಾದರೂ ಭೂವ್ಯವಸಾಯಕ್ಕೆ ಸಾಕಾದಷ್ಟು ಮಳೆ ಬಾರದೆ ಕರಡುಮರಡು ಭೂಮಿಯ ವ್ಯವಸಾಯಗಾರರು ಮಳೆಯನ್ನೇ ಎದುರುನೋಡುತ್ತಿದಾರೆ ಪ್ರತಿವರ್ಷವೂ ಆದರೆ ಪುನರ್ವಸು ಮಳೆಯು ಸಾಕಾದಷ್ಟು ವ್ಯವಸಾಯಕ್ಕೆ ಅನುಕೂಲವಾಗುತ್ತಿತ್ತು ಈ ಮುಂಗಾರು ಮಳೆಯೇ ಈ ರೀತಿ ಇರುವಾಗ್ಗೆ ಹಿಂಗಾರು ಮಳೆ ಸುರಿದರೂ ವ್ಯವಸಾಯದ ಆಯಾಂ ಕಾಲ ಮಿಂಚಿದ ಮೇಲೆ ಮಳೆ ಬಂದರೂ ನಮ್ಮ ಮಲೆನಾಡು ಪ್ರಾಂತ್ಯ ಉಪಯೋಗವಿಲ್ಲವೆಂಬದಾಗಿ ಈಗಾಗಲೇ ಕಳವಳಪಡುತ್ತಿದಾರೆ ಆಗಾಗ್ಗೆ ಸ್ವಲ್ಪಸ್ವಲ್ಪ ತುಂತುರು ಹನಿಗಳು ಬೀಳುವದರಿಂದ ಶೀತಮಾತ್ರ ಹೆಚ್ಚಿರುವ ಕಾರಣ ಪ್ರತಿ ಕುಟುಂಬದಲ್ಲಿಯೂ ಚಳಿ, ಜ್ವರ, ಕೆಮ್ಮು, ಭೇದಿ, ಈ ವಿಧವಾದ ಕಾಯಿಲೆಯಲ್ಲಿ ನರಳುತ್ತಿದಾರೆ ದಿನಸಿ ಧಾರಣೆಗಳಂತೂ ಕ್ಷಾಮಕಾಲವನ್ನೇ ಎದುರುನೋಡುತ್ತವೆ ಈ ತಾಲ್ಲೋಕ್ ಗಡಿಗೆ ಸಮೀಪ, ನಗರದ ತಾಲ್ಲೋಕ್ ಮಾಗಲು ಮತ್ತು ಸುಳುಗೋಡು ಎಂಬಲ್ಲಿ ದನಗಳಿಗೆ ದೊಡ್ಡರೋಗ ತಗಲಿ ಸಾಯುತ್ತಿರುವದಾಗಿಯೂ, ಆ ರಾಸುಗಳ ಚರ್ಮಗಳನ್ನು ಅಲ್ಲಿಯ ಮಾದಾರುಗಳ ಹಳ್ಳಿಯಲ್ಲಿ ವಾಸವಾಗಿರುವ ಮಾಪಿಳ್ಳೆ ಮುಸಲ್ಮಾನ್ ಮಂಡಿಯ ವ್ಯಾಪಾರಗಾರರಿಗೆ ಮಾರುತ್ತಿರುವುದಾಗಿಯೂ ಕೇಳುತ್ತೇನೆ ಹೀಗೆ ಅವರು ಅಂಟುರೋಗದ ಚರ್ಮವನ್ನು ಎಕರಿ ಮಾಡುವುದರಿಂದ ಆ ಎಲ್ಲಾ ಪ್ರಾಂತ್ಯದಲ್ಲಿಯೂ ರೋಗ ಹರಡಬಹುದಾಗಿ ಜನಗಳು ಗೊಣಗುಟ್ಟುತ್ತಿದಾರೆ. ಆದಪ್ರಯುಕ್ತ ಸರ್ಕಾರದವರು ಖಾಯಿಲೆ ಜಾನುವಾರು ಚರ್ಮವನ್ನು ಸುಲಿಯದಂತೆ ಆಯಾ ಸ್ಥಳದ ಮಾದಾರುಗಳಿಗೆ ನಿರ್ಬಂಧವನ್ನು ಕಳ್ಪಿಸಿ ಅಂಥಾ ಜಾನು

ವಾರುಗಳನ್ನು ಹುಗಿಸುವಂತೆ ಅಪ್ಪಣೆ ಮಾಡಿಸಿ ನಾಯಿ, ನರಿ ಇತರ ಕಡೆಗಳಿಗೆ ಹರಡದಂತೆ ಪ್ರಜಾಪಾಲಕರಾದ ಗೌರ್ನಮೆಂಟಿನವರು ಯಾವುದಾದರೊಂದು ಕೊಲಸನ್ನು ಜಾಂಗೆ ತಂದು ಅನುದಿನವೂ ನಮ್ಮನ್ನು ಕಾಪಾಡುತ್ತಿರುವ ಮೂಗು ಪ್ರಾಣಿಗಳ ಈ ವಿಧವಾದ ಕ್ಷೋಭೆಯನ್ನು ತಪ್ಪಿಸಿ ಪ್ರಜೆಗಳ ಕಷ್ಟ ನಷ್ಟ ಮನೋ ದುಃಖವನ್ನು ನಿವಾರಣೆ ಮಾಡಿಕೊಡಬೇಕಾಗಿ ಬೇಡುತ್ತೇನೆ.

ಮದ್ದಗಿರಿ ತಾ|| ಬಡಗೌಡನಹಳ್ಳಿ.—ಈ ಗ್ರಾಮದಲ್ಲಿ ಸುಮಾರು 30 ವರುಷಗಳಿಂದಲೂ ಮಿಷನ್ ಸಂಘದವರು ಒಂದು ಸ್ಕೂಲನ್ನು ಸ್ಥಾಪಿಸಿ ಅನೇಕ ಜನರಿಗೆ ವಿದ್ಯಾ ದಾನಮಾಡುತ್ತಾ ಬರುತ್ತದಾರೆ. ಇದರಿಂದ ಇಲ್ಲಿನ ಅನೇಕ ಹುಡುಗರು ವಿದ್ಯಾಜ್ಞಾನವನ್ನು ಹೊಂದಿಕೊಂಡಿರುತ್ತಾರೆ. ಈ ಗ್ರಾಮಕ್ಕೆ ಸುಮಾರು ಒಂದು ಫರ್ಲಾಂಗ್ ದೂರದಲ್ಲಿರುವ ನಿಟ್ಟೂರಹಳ್ಳಿ ಎಂಬ ಮಜರಾ ಗ್ರಾಮದಲ್ಲಿ ಕೆಲವು ವರುಷಗಳ ಕೆಳಗೆ ಸರ್ಕಾರಿ ಸ್ಕೂಲು ಸ್ಥಾಪನೆಯಾಗಿತ್ತು. ಆದರೆ ಕೆಲವು ಕಾಲದ ನಂತರ ಹುಡುಗರು ಕ್ರಮವಾಗಿ ಬರಲಿಲ್ಲವೆಂಬ ಆಗಿನ ಮಾಸ್ತರ ರಿಪೋರ್ಟು ಪ್ರಕಾರ ಸದರಿ ಸ್ಕೂಲು ಮುಚ್ಚಲ್ಪಟ್ಟಿತು ಅಲ್ಲಿಂದ ಈಚೆಗೆ ಸದರಿ ನಿಟ್ರಹಳ್ಳಿಗ್ರಾಮದ ಕೆಲವು ಹುಡುಗರು ಸಮೀಪದ ಗ್ರಾಮದಲ್ಲಿರುವ ಮಿಷನ್ ಸ್ಕೂಲಿಗೆ ಆಗಾಗ್ಗೆ ಬಂದು ಓದುತ್ತಾ ಇದಾರೆ. ಈಗ ಪುನಃ ಸರ್ಕಾರದವರು ಸದರಿ ನಿಟ್ರಹಳ್ಳಿ ಗ್ರಾಮದಲ್ಲಿ ಸ್ಕೂಲನ್ನು ಏರ್ಪಡಿಸುತ್ತಾರೆಂದು ವರ್ತಮಾನ ಕೇಳುತ್ತೇವೆ ಇದಕ್ಕೆ ಪ್ರತಿಯಾಗಿ ದಯಾಳು ಸರ್ಕಾರದವರು ದೂರಭಾಸಲೆ ಇರುವ ಸರ್ಕಾರಿ ರಸ್ತೆ ಪಕ್ಕದಲ್ಲಿರುವ ಮೂರು ನಾಲ್ಕು ಗ್ರಾಮಗಳ ಹುಡುಗರೂ ಬರುವುದಕ್ಕೆ ಅನುಕೂಲವಾಗಿರುವ ಚನ್ನಸಾಗರವೆಂಬ ಗ್ರಾಮದಲ್ಲಿ ಸ್ಕೂಲನ್ನು ಸ್ಥಾಪಿಸಿದರೆ ಅವರ ವಿದ್ಯಾಪ್ರೋತ್ಸಾಹದ ಉದ್ದೇಶವು ಸಫಲವಾದೀತು —ಈಚೆಗೆ ಈ ಪ್ರಾಂತ್ಯ ವಿಶೇಷ ಮಳೆಗಳಾಗಿ ರೈತರು ಬೀಜ ಪೇರಾವು ಮಾಡುತ್ತಲಿದಾರೆ ಕೆರೆಗಳು ತುಂಬಲಿಲ್ಲ. ಅಮಲ್ದಾರ್ರವರು ಮತ್ತು ಡಾಕ್ಟರು ಸಹ ಆಗಾಗ್ಗೆ ಈ ಪ್ರಾಂತ್ಯಗಳ ಕಡೆ ಸರ್ಕೀಟು ಮಾಡುತ್ತಿರುವುದು ಪ್ರಜಾ ಸಮೂಹಕ್ಕೆ ಸಂತೋಷಪ್ರದವಾಗಿದೆ.

ಚಿತ್ರದುರ್ಗ—ಈಗ ಎಂಟು ದಿವಸದಿಂದ ಮೋಡ ಮುಚ್ಚಿಕೊಂಡು ಆಗಾಗ್ಗೆ ಝುಡಿಮಳೆ ಬರುತ್ತಲೇ ಇದೆ ಛಳಿ ಬಹಳ ಜಾಸ್ತಿ ಶೀತ ಸಂಬಂಧವಾದ ಜ್ವರಾದಿಗಳು ಆರಂಭವಾಗಿವೆ. ದಿನಸಿ ಧಾರಣೆ ಕ್ಷಾಮಕಾಲಕ್ಕಿಂತಲೂ ತುಟ್ಟಿಯಾಗಿಯೇ ಇದೆ ಮ್ಯುನಿಸಿಪಾಲಿಟಿಯ ವಿತರಣೆ ಹೇಳತಕ್ಕದ್ದಾಗಿಯೇ ಇಲ್ಲ. ಊರಲ್ಲೆಲ್ಲಾ ಜನಗಳು ಸಿಕ್ಕಿದ ಕಡೆ ಹೇಸಿಕೆ ಮಾಡುತ್ತಲಿದಾರೆ. ಅದರ ವಾಸನೆ ಸಹಿಸತಕ್ಕದ್ದೇ ಕಷ್ಟವಾಗಿದೆ. ರಾತ್ರಿ ಕಾಲಗಳಲ್ಲಿ ತೊಂಡು ದನಗಳೂ, ಕತ್ತೆಗಳೂ ರಸ್ತೆಗಳಲ್ಲೆಲ್ಲಾ ಮಲಗಿರತಕ್ಕದ್ದಲ್ಲದೆ ಮನೆ ಅಂಗಳಗಳಿಗೂ ನುಗ್ಗಿ ತೊಂದರೆ ಮಾಡುವವು —ಮ್ಯುನಿಸಿಪಾಲಿಟಿಯವರೂ, ರೆವಿನ್ಯೂ ಇಲಾಖೆಯವರೂ ಸೇರಿ ಸಾಹುಕಾರ್ ಮೆ|| ಕಾಡಪ್ಪನವರ ನೋಟಿ ತಂದಿದ್ದ ನಾಲ್ಕಾರು ಕೇಸುಗಳಲ್ಲಿ ಸಾಹುಕಾರರಿಗೆ ಜುಲ್ಮಾನೆ ಆಯಿತು ಈಗ ಅವರು ಚೀಫ್ ಕೋರ್ಟಿಗೆ ಅಪೀಲ್ ಮಾಡಿಕೊಂಡಿದಾರೆ ಡೆಪ್ಟಿ ಕಮಿಷನರ್ ಸಾಹೇಬರವರು ಹೆಡ್‌ಕ್ವಾರ್ಟರಿನಲ್ಲೇ ಇದ್ದು ಲೋಕಲ್ ಫಂಡ್ ಕಮಿಟಿ, ಯಕನಾಮಿಕ್ ಕಾನ್ಫರೆನ್ಸ್ ಕಮಿಟಿ ಮೀಟಿಂಗುಗಳು ನಡೆದವು ಮೈಸೂರು ಬ್ಯಾಂಕಿಗೆ ಸೇರು ಜಮಾಯಿಸಲು ಬಂದಿದ್ದ ಮೆ|| ಎಂ ಚೆಂಗಯ್ಯಶೆಟ್ಟರವರು ವಾಪಸು ತೆರಳಿದರು ಅ|| ಕಮಿಷನರ್ ಮೆ| ಭೀಮರಾಯರು ಮೊನ್ನೇ ದಿನ ಇಲ್ಲಿಗೆ ಬಂದು ಡಿಸ್ಟ್ರಿಕ್ಟು ಟ್ರೆಜರಿ ಛಾರ್ಜು ವಹಿಸಿದರು.—ಈ ಮಧ್ಯೆ ನಂಜನಗೂಡು ಶ್ರೀರಾಘವೇಂದ್ರಸ್ವಾಮಿಗಳವರು ಇಲ್ಲಿಗೆ ದಯಮಾಡಿ ಒಂದು ವಾರ ಹೆಡ್ ಮಾಸ್ಟರ ಬಂಗ್ಲೆಯಲ್ಲಿ ಮೊಕ್ಕಾಂಮಾಡಿ ಪೂಜೆ, ಸಂತರ್ಪಣೆ, ಉಪನ್ಯಾಸಗಳನ್ನು ನಡಿಸಿ ಶಿಥಿಲವಾಗಿರತಕ್ಕ ಅವರ ಮಠ ಹೊಸದಾಗಿ ಕಟ್ಟಲಿಕ್ಕೂ ವೇದಪಾಠಶಾಲಾ ನಡೆಯಲಿಕ್ಕೂ ಏರ್ಪಾಡು ಮಾಡಿದರು ಅವರು ತೆರಳಿದ ನಂತರ ಭೀಮನಕಟ್ಟೆ ಸ್ವಾಮಿಗಳು ಬಂದಿದ್ದರು —ಟ್ರೆಜರಿ ಅ|| ಕಮಿಷನರ್ ಮ ಬಿ ಭೀಮರಾಯರು ಟವನ್ ವೈಸ್ ಪ್ರೆಸಿಡೆಂಟರವರು. ಇವರು ದೊಡ್ಡ ವಂಶೀಯರು ಮತ್ತು ಸಾಧುಗುಣವುಳ್ಳವರು. ಇವರು ದರ್ಪದಿಂದ ಮ್ಯುನಿಸಿಪಾಲಿಟಿಯ ಅನೇಕ ಕುಂದುಕಗಳನ್ನು ಪರಿಹರಿಸಿ ನೌಕರನಾನೇರಿಂದ ಕೆಲಸ ತಗೆದುಕೊಂಡು ಪ್ರಜೆಗಳಿಗೆ ಸುಖವನ್ನೀಯುತ್ತಾರೆಂದು ನಂಬಲ್ಪಟ್ಟಿದೆ —ಹೊಸ ಪೋಲೀಸ್ ಸೂಪರಿನ್‌ಟೆಂಡೆಂಟ್ ಸಾಹೇಬರು ಇನ್ನೂ ಬರಲಿಲ್ಲ ಇವರು ಜಾಗ್ರತೆ ಬಂದಾರೆಂದು ನಿರೀಕ್ಷಿಸಲ್ಪಟ್ಟಿರುತ್ತೆ.—ಸಂತೇಪೇಟೆ ಹೊರಭಾಗದಲ್ಲಿನ ಜಾಗಗಳು ಮನೆ ಕಟ್ಟಲಿಕ್ಕೆ ಕೊಡುತ್ತಾರೆಂದು ಅನೇಕರು ವಿಚಾರಿಸಿದ್ದರಲ್ಲಿ ಕೊಡುವದಿಲ್ಲವೆಂದು ಸ್ಯಾನಿಟರಿ ಇನ್‌ಸ್ಪೆಕ್ಟರು ಜವಾಬು ಹೇಳಿದರಂತೆ ಇದರ ನಿಶ್ಚಿತಾರ್ಥವನ್ನು ಟೌಂಟಾಂ ಮೂಲಕ ಪ್ರಜೆಗಳ ಸೌಕರ್ಯಕ್ಕಾಗಿ ಪ್ರಸಿದ್ಧಪಡಿಸಿದಲ್ಲಿ ಉತ್ತಮವೆಂದು ನಂಬುತ್ತೇನೆ ಟವನ್‌ನಲ್ಲಿ ದೊಡ್ಡಪೇಟೆ ವಿನಹ ಅಲ್ಲಲ್ಲಿನ ಗಲ್ಲಿಗಳು ಕೊಳಕಾಗಿಯೂ ಕಲ್ಲುಕೊಳ್ಳಗಳುಳ್ಳದ್ದಾಗಿಯೂ ಇರುತ್ತೆ ಇವುಗಳನ್ನು ಸರಿಪಡಿಸುತ್ತಾರೆಂದು ನಿರೀಕ್ಷಿಸಿದ್ದರೂ ರಿಪೇರಿಯಾಗದೆ ಹುಡುಗರೂ ವೃದ್ಧರೂ ಕತ್ತಲು ಕಾಲಗಳಲ್ಲಿ ಕೈಕಾಲುಗಳನ್ನು ಮುರಿದುಕೊಳ್ಳುತ್ತಿರುವರು. ಹೊಸ ವೈಸ್ ಪ್ರೆಸಿಡೆಂಟರವರು ಇವುಗಳನ್ನು ಸರಿಪಡಿಸುತ್ತಾರೆಂದು ನಂಬುತ್ತೇನೆ —ಈಗ ಕೆಲವು ದಿವಸಗಳ ಕೆಳಗೆ ಚಿತ್ರದುರ್ಗದ ಪೇಟೆ ಬ್ರಾಂಚು ಸ್ಕೂಲು ಕೇವಲ ಹೀನಸ್ಥಿತಿಯಲ್ಲಿತ್ತು ಈಗ ಬಾಲಕರ ಸಂಖ್ಯೆ ಹೆಚ್ಚಿ ಸ್ಕೂಲು ತುಂಬಾ ಅಭಿವೃದ್ಧಿಸ್ಥಿತಿಯಲ್ಲಿರುವುದಕ್ಕೆ ಹೊಸ ಹೆಡ್ ಮಾಸ್ಟರು ಎಸ್ ಶ್ರೀನಿವಾಸಾಚಾರ್‍ರು ತುಂಬಾ ಮುತುವರ್ಜಿಯಿಂದ ಕೆಲಸ ಮಾಡುವುದೇ ಕಾರಣವಾಗಿರುತ್ತದೆ ಮತ್ತು ಇವರು ನೈಟ್ ಸ್ಕೂಲನ್ನು ಪ್ರಾರಂಭಿಸಿರುವುದು ಇಲ್ಲಿನ ಪೇಟೆ ಸುತ್ತು ಕರುವಿನ ಕಟ್ಟೆಯಲ್ಲಿರತಕ್ಕ ವರ್ತಕರು, ಕಸಬುದಾರರು ಮತ್ತು ಕೂಲಿಯವರು, ಈ ಜನಗಳ ವಿದ್ಯಾಭಿವೃದ್ಧಿಗೆ ತುಂಬಾ ಅನುಕೂಲವಾಗಿದೆ ಇವರೇ ಖಾಯಂ ಆಗಿರತಕ್ಕ ಭಾಗದಲ್ಲಿ ಸ್ಕೂಲು ತುಂಬಾ ಅಭಿವೃದ್ಧಿಗೆ ಬರುವದರಲ್ಲಿ ಏನೂ ಸಂದೇಹವಿಲ್ಲ ಈ ಸ್ಕೂಲಿಗೆ ಹೊಸದಾಗಿ ಬಂದಿರತಕ್ಕ ಅ|| ಮಾಸ್ಟರ್ ಜನಾರ್ದನಯ್ಯಂಗಾರ್‍ರು ಕಷ್ಟಪಟ್ಟು ಕೆಲಸಮಾಡುತ್ತದಾರೆಂದು ತಿಳಿಯಬರುತ್ತೆ.

ಆಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ.

ಮೇಲ್ಕಂಡ ವಿಮೇ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್‌ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭರವಸೆಯ ಠೇವಣಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[109-8] ಎಸ್ ರಘುನಾಥರ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು!

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ.

SCOTT'S EMULSION 3-30

(ಸ್ಕಾಟ್ಸ್ ಇಮಲ್‌ಷನ್)

ಎಂಬ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ.

ಕೈಯಿಂದ ಮುಟ್ಟದೆ ತಯಾರಿಸಿದ್ದು

ಎಲ್ಲಾ ಔಷಧ ಮಾರಾಟಗಾರರಲ್ಲಿ ದೊರಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಗೃಹಕೃತ್ಯದ ನೋಟೀಸ್.

ಚಿತ್ರದುರ್ಗ ಡಿಸ್ಟ್ರಿಕ್ಟು ಹೊಸದುರ್ಗ ತಾಲ್ಲೋಕು ಬೂದಿಹಾಲ್ ಕಸಬಾ ವಾಸಿ ಫವತಿ ನರಸಿಂಗಪ್ಪನ ದತ್ತುಮಗ ಕೃಷ್ಣಸಿಂಗನು ಸರ್ವರಿಗೂ ಪ್ರಕಟಪಡಿಸುವದೇನೆಂದರೆ. ನಮ್ಮ ಅಣ್ಣ ರಾಂಸಿಂಗರ ಖಾತೆಯಲ್ಲಿರುವ ಖಾನೇಷುಮಾರಿ ನಂ. 211 ನೇ ಮನೆ ದಳದಲ್ಲಿ ನಾನು ನನ್ನ ಭಾವಮೈದ ಚೂಡಾ ರಾಂಸಿಂಗರೂ ಸಹ ಪಾತಲಾಗೋಡಿನಿಂದ ಕಟ್ಟಿ ವಾಸವಾಗಿರುವ ಮನೆಯನ್ನು ಅಣ್ಣನೋ ಇತರರೋ ಪರಭಾರೆಮಾಡುವದಾಗಿ ವದಂತಿ ತಿಳಿಯುವದರಿಂದ ಯಾರಾದರೂ ನಮ್ಮ ರುಜುವಿಲ್ಲದೆ ಕ್ರಯ ದಾನ ಆಧಾರ ಭೋಗ್ಯ ಸಾಲ ಸಮ್ಮಂಧದಿಂದ ಮೇಲ್ಕಂಡ ಮನೆಯನ್ನು ಹೊಂದಿದರೆ ನಮ್ಮ ನಷ್ಟ ಪ್ರತಿಫಲಕ್ಕೆಲ್ಲಾ ಗುರಿಯಾಗುವದಲ್ಲದೆ ಈ ನೋಟೀಸಿನ ಖರ್ಚಿಗೂ ಸಹ ಬಾಧ್ಯರಾಗಬೇಕಾಗುತ್ತದೆಂದು ಪ್ರಕಟಪಡಿಸಿರುತ್ತೇನೆ.

[147-1] ತಾ 7-6-1913. ಕೃಷ್ಣಸಿಂಗ್, ಬುಕ್ ಸೆಲರ್, ಬೂದಿಹಾಲ್.

ಕೈ ಗಡಿಯಾರಗಳು.

ಕ್ರಯ ರೂ. 1 15 0. ಹೊಸ ನಮೂನೆ ಬೆಲೆ ಸುಲಭ.

ನವಂಬರ್ ಅಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ.



ಈ ಕೈ ಗಡಿಯಾರವು ಇದುವರೆಗೆ ನಾವು ಕಳುಹಿಸುತ್ತಲಿದ್ದಂತೆಯದಲ್ಲ ಬಹಳ ಭದ್ರವಾದ ಯಂತ್ರಗಳಿಂದ ಬಹು ಕಾಲದವರೆಗೆ ನಡೆಯುವಹಾಗೆ ತಯಾರಿಸಲ್ಪಟ್ಟಿರುತ್ತೆ ಇಷ್ಟು ಸಲ್ಪ ಕ್ರಯಕ್ಕೆ ಈ ಗಡಿಯಾರವು ಯಾರಲ್ಲೂ ದೊರೆಯಲಾರದು ಈ ಕೈ ಗಡಿಯಾರವು ಭಾಗ್ಯವಂತರು ಸಹ ಉಪಯೋಗಿಸುವುದಕ್ಕೆ ಲಾಯಖಾದದು ಗಡಿಯಾರದ ಸಂಗಡ 1 ಉತ್ತಮವಾದ ಪೆಟ್ಟಿಗೆ, 1 ಸ್ಪ್ರಿಂಗ್, 1 ಕನ್ನಡಿ ಮತ್ತು 5 ವರುಷಗಳ ಗ್ಯಾರಂಟಿ ಪತ್ರ ಸಹಾ ಕಳುಹಿಸುತ್ತೇವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ.—ಲಯನ್ ಅಂಡ್ ಕೋ,

[119 1] ನಂ. 16 ರಡ್ಡಿರಾಮನ ಬೀದಿ, ಮದರಾಸು.

ಬೋಧಕರ ಸಹಾಯವಿಲ್ಲದೆ ಹಾರಮೋನಿಯಂ ಕಲಿಯುವ ಪುಸ್ತಕ.

ಕ್ರಯ 0 8 0

ಇದು ಪ್ರಖ್ಯಾತಿಯನ್ನು ಪಡೆದ ಪಂಡಿತ ಮಿತ್ರದಾಸ್‌ರವರಿಂದ ಪಂಡಿತರಿಗೂ ಮತ್ತು ಪಾಮರರಿಗೂ ಉಪಯೋಗವಾಗುವ ಉದ್ದಿಶ್ಯ ಈ ನೂತನ ಗ್ರಂಥವನ್ನು ಪ್ರಚುರಿಸಲ್ಪಟ್ಟಿರುತ್ತೆ ಇದರಲ್ಲಿ 40 ಪಾರಸೀಹಾಡುಗಳು ಮತ್ತು ಹಾರಮೋನಿಯಂ ನುಡಿಸುವ ವಿಧಾನ, ಆರೋಹಣ ಅವರೋಹಣಗಳು, ಮತ್ತು ಸೌಖ್ಯ ಗುಣಗಳು ಮೊದಲಾದವುಗಳು ವಿರಳವಾಗಿ ತಿಳುಹಿಸಲ್ಪಟ್ಟಿರುತ್ತೆ ಸ್ವಲ್ಪ ಇಂಗ್ಲೀಷು ಭಾಷಾ ಪರಿಶ್ರಮವಿರುವವರೆಲ್ಲರೂ ಈ ಗ್ರಂಥದ ಸಹಾಯದಿಂದ ಬೋಧಕರ ಸಹಾಯವಿಲ್ಲದೆ ಬಹು ಸುಲಭವಾಗಿ ಹಾರಮೋನಿಯಂ ನುಡಿಸುವದನ್ನೂ ಅನ್ಯದೇಶಭಾಷೆಯಾದ ಪಾರಸೀ ಹಾಡುಗಳನ್ನೂ ಬಹು ಸುಲಭವಾಗಿ ಕಲಿತುಕೊಳ್ಳಬಹುದು ಈ ಪುಸ್ತಕ ಸ್ವಲ್ಪವೇ ಇರುವದರಿಂದ ಜಾಗ್ರತೆ ದರಖಾಸ್ತು ಕಳುಹಿಸಿ [119-1]

ನಮ್ಮ ವಿಳಾಸ —ಲಯನ್ ಅಂಡ್ ಕೋ,

ನಂ. 16 ರಡ್ಡಿರಾಮನ ಬೀದಿ, ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ದೇಹಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು; ಗಾಬರಿ ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು; ಮರಳು, ನಿತ್ರಾಣ, ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವು ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ದೇಹಕ್ಕೆ ಆರೋಗ್ಯವನ್ನುಂಟುಮಾಡುವುವು [112-46]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ. ೨—೦—೦, ಅಥವಾ ೬ ಬುದ್ದಿಗಳಿಗೆ ರೂ ೧೦—೮—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುತ್ತದೆ. ಅಥವಾ ಡೋನ್ಸ್, ಪಿ ಓ. ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

Mellin's Food

ಮೆಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ವಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಗಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs. OAKES & Company, Mount Road, Madras.

[1-38] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H. Gulliford, Proprietor and Manager, Wesleyan Mission Press, Mysore. 24/7/1913.

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೧೩ ನೇ ಇಸವಿ ಜೂಲೈ ತಾರೀಖು ೩೧ ನೇ ಗುರುವಾರ. ಸಂಚಿಕೆ ೯

NOTICE

Enquiries for Superior Yarns of various counts produced at the Gokak Mills, should be sent to the undersigned, who are appointed Sole Agents for Southern India

Apply M S NARAYAN & Co,
[151 2] Avenue Road Bangalore City

ಶಬ್ದಾದರ್ಶದ ನೋಟೀಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕಪ್ರಾಂತದಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ 3 ಆಣೆ ಅರಕ್ಕೊಂದು ಉಚಿತ

[187 32] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಮರೆಯ ಬ್ಯಾಡಿರಿ ಮರೆಯ ಬ್ಯಾಡಿರಿ

ದರ್ಬಾರ್ ಸಾಬೂನು

ಏಜಂಟುಗಳು ಬೇಕಾಗಿದೆ!

ಒಳ್ಳೇ ಕಮಿಷನ್ ದೊರೆಯುವದು.

ಅಪಾಯವಿಲ್ಲದ ರೋಮಸಂಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು

ಉರಿ, ಸಕೆ ಮುಂತಾದ ಬಾಧೆಗಳಿಲ್ಲವು ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು ಮರೆಯಬ್ಯಾಡಿರಿ

3 ಸಬ್ಬುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ 14 ಆಣೆ

3 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1 10-0

ಅಂಚೇ ಹಾಸಲು 4 ಆಣೆ

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ [154 1]

ವಿಳಾಸ —ಪಿ ಕೆ ಎಸ್ ಪಾಣಿ ಕಂಪನಿ,

3, ಇರುಳಪ್ಪನ್ ವೀದಿ, ಮದರಾಸು

ನಮೂನೆ ಮುಫತ್ತು

ಕೇಶಕುಸುಮಾಕರ ತೈಲವು.



ಬಾಧೆಯಿಲ್ಲದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸಮಾಡುವದರಲ್ಲಿಯೂ, ಬಟ್ಟೆ ತಲೆಯಲ್ಲಿ ಕೇಶವನ್ನು ಬೆಳೆಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ, ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುಡ್ಡಿ ತೈಲ ಕ್ರಯ 10 ಆಣೆ ಮೂರು ಬುಡ್ಡಿಗಳ ತೈಲ ಕ್ರಯ ರೂ 1 13 ಆ ಆರು ಬುಡ್ಡಿಗಳ ತೈಲ ಕ್ರಯ ರೂ 3-4 ಆ ಡಜನ್ ಬುಡ್ಡಿಗಳ ಕ್ರಯ ರೂ 6

ವಿ. ಪಿ ಅಂಚೇ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋಷಧಾಲಯ

[82 11] ಔಷಧಾಲಯ, 177 ಚೀನಾ ಬಜಾರ್ ರೋಡ್, ಮದ್ರಾಸು

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮಾ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭರವಸೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹವಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು.

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತಾರೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[10 9] ಎಸ್ ಕಟ್ಬರ್ಟ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ —1 ಪಿನಲ್‌ಕೋಡು, 2 ದೊಡ್ಡೀ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್ 4 ಆಯುಧಗಳ ರೆಗ್ಯುಲೇಷನ್, 5 ದಹ್ಯವಸ್ತುಗಳ ರೆಗ್ಯುಲೇಷನ್ 6 ಪೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ

ಪ್ರತಿ ಪೆನಲ್ ಸೆಕ್ಷನ್‌ಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ? ಯಾ ಕೂಡದೆ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟ್ಟಬೇಕೇ? ಜಾಮೀನ್ ತೆಗೆದುಕೊಳ್ಳಬಹುದೆ? ಯಾ ಕೂಡದೆ? ರಾಜಿಯಾಗಬಹುದೆ? ಯಾ ಕೂಡದೆ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ದೊರೆಯುವವಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 22-5 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 2 0-0 ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ವೇಮಾರೆಡ್ಡಿ,

ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್,

[103-10] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್

ಬೆಂಗಳೂರು–ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ, ಲಿಮಿಟೆಡ್

ಷೇರುದಾರರಿಗೆ ನೋಟೀಸು.

ಮೇಲ್ಕಂಡ ರೈಲ್ವೆ ಕಂಪನಿಯ ಷೇರುದಾರರಿಗೆ ಈ ನೋಟೀಸಿನ ಮೂಲಕ ತಿಳಿಯಪಡಿಸುವುದೇನೆಂದರೆ—

ಷೇರು ಒಂದಕ್ಕೆ 1913 ನೇ ಜೂಲೈ ತಾ 13 ರ ತನಕ ಐದು ರೂಪಾಯಿ ವರೆಗೆ ಪಾವತಿ ಮಾಡಲ್ಪಟ್ಟಿರುವ ಎಲ್ಲಾ ಷೇರುಗಳೂ ಕಂಪನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ 35 ನೇ ಆರ್ಟಿಕಲ್ ಷರತ್ತಿನ ಪ್ರಕಾರ ಕಂಪನಿಗೆ ಸೇರಿಸಿಕೊಳ್ಳಲ್ಪಡತಕ್ಕದ್ದೆಂದು 1913 ನೇ ಜೂಲೈ ತಾ 13 ರಲ್ಲಿ ನಡೆದ ಮೀಟಿಂಗಿನ ತೀರ್ಮಾನವನ್ನು ಅನುಸರಿಸಿ ಮುಟ್ಟುಗೋಲು ಹಿಡಿಯಲಾಗಿದೆ

1913 ನೇ ಜೂಲೈ 13 ನೇ ತಾರೀಖು ವರೆಗೆ ಷೇರು ಒಂದಕ್ಕೆ ಐದು ರೂಪಾಯಿಯೂ, ಅದಕ್ಕಿಂತ ಹೆಚ್ಚಾದ ಮತ್ತೂ ಹತ್ತು ರೂಪಾಯಿ ಒಳಗೂ ಪಾವತಿ ಮಾಡಿರುವಂಥಾ ಷೇರುದಾರರಿಗೆಲ್ಲಾ ಎರಡು ತಿಂಗಳ ವಾಯಿದೆ ಅಂದರೆ 1913 ನೇ ಸೆಪ್ಟಂಬರ್ ತಾ 10 ರ ವರೆಗೆ ವಾಯಿದೆ ಕೊಡಲ್ಪಟ್ಟಿದೆ ಆ ತಾರೀಖು ಗತಿಸಿದ ಮೇಲೂ ಯಾರಯಾರ ಷೇರುಗಳು ಬಾಕಿಯಲ್ಲಿ ಇರುತ್ತವೆಯೋ ಅಂಥಾ ಷೇರುಗಳನ್ನೆಲ್ಲಾ ಕಂಪನಿಗೆ ಮುಟ್ಟುಗೋಲಾಗಿ ಸೇರಿಸಿಕೊಳ್ಳಲ್ಪಡುತ್ತೆಂದು ಈ ಮೂಲಕ ತಿಳಿಸಿದೆ [103-1]

ಕೆ ಪಿ ಪುಟ್ಟಣ್ಣ ಚೆಟ್ಟಿ,

ಬೆಂಗಳೂರು ಛೇರ್‌ಮನ್,

ತಾ 10 ನೇ ಜೂಲೈ 1913 ಬಿ ಸಿ ಎಲ್ ರೈಲ್ವೆ ಕಂಪನಿ

ಶರಿಕ್ಷಿಸಿ ನೋಡದ ಅಗ್ಗದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲೂ ಬಿಕರಿಯಾಗುತ್ತಿವೆ ನಿಮ್ಮ ಕಷ್ಟಾರ್ಜಿತವನ್ನು ಅವಕ್ಕೆ ಹಾಕಿ ಕಳೆದುಕೊಳ್ಳಬೇಡಿ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)



ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತು ಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳೆಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಕಚಕಿಸುವವು, ನಿಬಿಡವಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ ಸುಂಡಿನ ಹೊಟ್ಟನ್ನು ಅಣಗಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳೆಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ

ಇದರ ಬೆಲೆ 1 ಸೀಸೆಗೆ ರೂ 1 0-0 ಅಂಚೆಯ ವೆಚ್ಚ 0-4-0 ಬೇರೆ ಕರಬೇಕು

3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0 7-0

ನಮೂನೆಯು ಬೇಕೆಂದರೆ ಒಂದು ಆಣೆಯ ಚೀಟನ್ನು ಕಳುಹಿಸಿರಿ

ಮೈಸೂರು ಎಗ್ಜಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರೆಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ|| ಡಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ" ವಿರುದುನಗರ್ ಕೆ ವಿ ಎಸ್ ಹೈಸ್ಕೂಲ್ ಹೆಡ್ ಮಾಸ್ಟರ್ ಮಿ|| ಎಂ ಸುಬ್ರಹ್ಮಣ್ಯಯ್ಯಯವರು ಬರೆಯುವದು—"ನಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ಪರೀಕ್ಷೆಮಾಡಿದೇನೆ ಅದು ಕೂದಲನ್ನು ಹುಟ್ಟಿಸಿ ಅಂದವಾಗಿಯೂ, ಕೋಮಲವಾಗಿಯೂ, ಸೊಂಪಾಗಿಯೂ ಬೆಳೆಸುವುದೆಂದು ಖಂಡಿತವಾಗಿ ಹೇಳಬಲ್ಲೆನು ದಯವಿಟ್ಟು ಇನ್ನು ಮೂರು ಬಾಟ್ಲಿ ಎಣ್ಣೆ ಕಳಿಸಿಕೊಡಿ" ಪಿನೆಹಾ ಡಿಪ್ಟಿ ಕಂಟ್ರೋಲರ್ ಆಫೀಸ್ ಮಿ|| ಗೋಪಾಲರಾವ್ ಜೋಷಿಯವರು ಬರೆಯುವದು—"ದಯವಿಟ್ಟು ನಮ್ಮ ಕಾಮಿನಿಯಾ ಎಣ್ಣೆ ಆರು ಬಾಟ್ಲಿ ಕಳಿಸಿಕೊಡಿ ಒಂದು ತಿಂಗಳ ಹಿಂದೆ ನೀವು ಕಳಿಸಿದ ಬಾಟ್ಲುಗಳು ಮುಗಿದುಹೋಯಿತು ಇದೇ ಉತ್ತಮೋತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳಬಲ್ಲೆನು" ಆದಕಾರಣ ನೀವು ಒಂದು ಸಲ ತರಿಸಿ ಪರೀಕ್ಷೆ ಮಾಡಿ

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಸಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನಿಮ್ಮ ಸ್ಥಳದ ಸಾಪುಕೀಪರಲ್ಲಿ ಅದು ಇಲ್ಲದಿದ್ದರೆ ಅವನ ಹೆಸರು ವಿಳಾಸದ ಸಮೇತ ನಮಗೆ ತಿಳಿಸಿ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ಏಜೆಂಟ್, ದಿ ಉರ್ಲ್ ಮಾರ್ಟ್, ಮಂಗಳೂರು

ನಮ್ಮ ವಿಳಾಸ — [8-39]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಮೂರು ಸಿದ್ಧೌಷಧಗಳು.

ವಕ್ತ್ರಾನಂದಕರೀಮಾತ್ರೆ ಮುಂತಾದ ಪರಿಮಳದ್ರವ್ಯಗಳಿಂದ ತಯಾರಿಸಿದೆ ಒಂದನ್ನು ತಾಂಬೂಲದೊಡನೆ ಅಥವಾ ಬರಿ ಬಾಯಿಗೆ ಸೇವಿಸಿದರೆ ದುರ್ಗಂಧ ಹೋಗಿ ಸುವಾಸನೆಯಾಗುತ್ತೆ ರಕ್ತವನ್ನು ಶುದ್ಧಿಮಾಡುತ್ತೆ ಕರಳು, ಗಂಟಲು, ಬಾಯಿ, ಇವುಗಳು ಹುಣ್ಣಾದರೆ ಅರ್ಧ ತೋಲಾ ಬಾದಾಮಿ ಎಣ್ಣೆಯಲ್ಲಿ ಒಂದು ಮಾತ್ರೆ ತೇದು ಮಲಗುವ ಸಮಯದಲ್ಲಿ ತೆಗೆದುಕೊಂಡರೆ ಗುಣವಾಗುವದು 200 ಮಾತ್ರೆ ಶೀಸಾ 1 ಕ್ಕೆ 4 ಆಣಾ ಇಸಬು, ಬಜ, ತುರಿ ಇವುಗಳಿಗೆ ವಾಮ ಹ ರಿಣೀ ಪೌಡರ್ ತೋಲಾ 1 ಕ್ಕೆ 2 ಆಣೆ ಬಾಣಂತಿಯರು ಮಕ್ಕಳ ಶೀತ ನೆಗಡಿ ಇವುಗಳಿಗೆ ಉಪಯೋಗಿಸತಕ್ಕ ಕಸ್ತೂರಿಮಾತ್ರೆ 25 ಮಾತ್ರೆಗೆ 8 ಆಣೆ ಬಾಣಂತಿಯರು ಉಪಯೋಗಿಸತಕ್ಕ ಖಂಡಾದ್ರಕವೆಂಬ ಆರೋಗ್ಯದ ಲೇಹ್ಯ 12 ತೋಲಾ ಡಬ್ಬಿಗೆ 6 ಆಣಾ ಅಪೇಕ್ಷಿಸುವರು ತಮ್ಮ ವಿಳಾಸ ವಿಶದವಾಗಿ ಬರೆಯಬೇಕು ಅಂಚೆ ಹಾಸಲು ಪ್ರತ್ಯೇಕ, ತಪ್ಪಿಕೊಳ್ಳತಕ್ಕವರು ನಮಿಸತಕ್ಕದ್ದು 1 ಡಜನ್ನಿಗೆ 1 ಶೀಸಾ ಡಿಸ್ಕೌಂಟು ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಮೊದಲು ಸ್ವಲ್ಪ ತರಿಸಿ ನೋಡಿ ನಂತರವಾದರೂ ತರಿಸಿಕೊಳ್ಳಿ [131 5]

ನಮ್ಮ ವಿಳಾಸ —ಶೇಷಭಟ್ಟರು,

ನೇಟಿವ್ ಪಂಡಿತ್, ಪೂರ್ಣಯ್ಯನವರ ಬೀದಿ, ಶ್ರೀರಂಗಪಟ್ಟಣ

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



131

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿ ಭೇದಿ ಉಪದ್ರ ಕೀಲುಗಳ ನೋವು, ಹೊಟ್ಟೆಯ ನಾನಾ ತರದ ರೋಗಗಳು— ಈ ರೋಗಗಳನ್ನೆಲ್ಲಾ ಪರಿಹಾರಮಾಡುತ್ತವೆ ಈ ಸರ್ವಕಾರ್ಯಯುಕ್ತವಾದ ಔಷಧವು ಜನರನ್ನು ಬಹು ಕಾಲದವರೆಗೂ ನೋವಿನ ಬಾಧೆಯನ್ನೂ ನಿವಾರಣೆ ಮಾಡಿರುವದು ಪ್ರಪಂಚದಲ್ಲಿ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ— ಒಂದು ಡೋಸು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ಗುಣಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಇದರಲ್ಲಿ ಅಫೀಮು ಮುಂತಾದ್ದಿಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಈಗತಾನೆ ಬಂದಿರುತ್ತೆ ಸಂತೋಷಕರವಾದ ವಾರ್ತೆ

ರೈಲ್ವೆ ರೆಗ್ಯುಲೇಟರ್ ವಾಚ್

ಸುಂದರವಾದ ವಾಚು ಸರಪಣಿ ಸಮೇತ ಕ್ರಯ ರೂ 3

ಇದು ಪ್ರಸಿದ್ಧವಾದ ಮತ್ತು ಮಜಬೂತಾದ ಲೀವರ್ ಕೆಲಸದಿಂದಲೂ ನಾಜೂಕಾದ ಯಂತ್ರ ಸಾಮಾಗ್ರಿಗಳಿಂದಲೂ ತಯಾರಾಗಿ ಬಂದಿರುತ್ತೆ ಇದು ಮಾತ್ರವಲ್ಲದೆ ಇದರ ಮೇಲೆ ಹಲವು ತರದ ಚಿತ್ರ ಕೆತ್ತಿರುವ ವಾಚ್ ಶ್ರೇಷ್ಠವಾದದ್ದು ಸರಿಯಾದ ಕಾಲವನ್ನು ತೋರಿಸತಕ್ಕದ್ದು ಮತ್ತು ದೀರ್ಘಕಾಲ ಬಾಳಿಕೆ ಬರುವಂಥಾದ್ದು ಸರ್ವಜನರಿಗೂ ಬೇಕಾದ ವಿಷಯವೇ ಸರಿ ಈ ವಾಚ್ ವಿಶೇಷವಾಗಿ ಹೆಚ್ಚು ವರ್ಷಗಳು ನಡೆಯುವದು ಯಾಕೆ ಎಂದರೆ ಇದರ ಭಾಗಗಳು ಸೇರಿದಂತೆ ಒಳಗೆ ಗ್ಲಾಸ್ ಮೊದಲಾದವು ಕಸ್ಟಡಿ ಮುಚ್ಚಳ ಇಂದ ಮುಚ್ಚಿರುತ್ತೆ ಇದರ ಮುಂಭಾಗದಲ್ಲಿ ಇಂಡಿಯನ್ ಮಾರ್ಕ್ ಇರುತ್ತೆ ಈ ಪ್ರಕಟನೆಯಲ್ಲಿ ಕಾಣಿಸಿರುವ ವಾಚ್ ಮಧ್ಯದಲ್ಲಿ ನೋಡಿ ಅದೇ ನಾಜೂಕಾದ ಹಾರ್ಟಿಗ ಗುರುತು ಇದೆ



ಕ್ಲಿಕ್ ಕವರು ಮುಚ್ಚಳ ರೈಲ್ವೆ ರೆಗ್ಯುಲೇಟರ್ ಲೀವರ್ ವಾಚುಗಳು ರೂ 1-12 0, ರೂ 1 13 0 ಬೆಲೆಯಲ್ಲಿಯೂ, ಟಾಸ್ಕೋಪ್ ವಾಚ್ ಮುಂತಾದವುಗಳು ರೂ 1-12 0, ರೂ 1 13 0 ಯಲ್ಲಿಯೂ ನಮ್ಮಲ್ಲಿ ದೊರೆಯುತ್ತೆ ಆದರೆ ಅವು ಈ ವಾಚಿನಷ್ಟು ನಾಜೂಕಾದದ್ದು ಅಲ್ಲ ಆದ್ದರಿಂದ ತೆಗೆಯುವವರೆಲ್ಲಾ ಇದನ್ನು ತೆಗೆದು ಸಂತೋಷಪಡಬೇಕಾಗಿ ಕೋರುತ್ತೇವೆ [77 15]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

ಟಿ ಆರ ವೆಂಕಟರಮಣ ಅಂಡ್ ಕಂಪನಿ,

ನಂ 7, ಕೋಪ್ ವೆಂಕಟಾ ಕೃಯರ್ ಲೇನ್, ಮದರಾಸು

ಪ್ರತಾಪಕಂಠೀರವ ಚರಿತ್ರೆ.

(1) ಧರ್ಮಸ್ಥಾಪನೆಗೆ ವ್ಯವಸಾಯ ಉಂಟಾಗುವುದರಿಂದ ಇವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ ಎಂಬ ನೀತಿ (2) ಸ್ತ್ರೀಧರ್ಮ ಬುದ್ಧಿಕೌಶಲ್ಯ, ಯುಕ್ತಿ ಸಾಹಸ ಚಾತುರ್ಯ (3) ಪ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು (4) ವನ, ಸರಸ್ಸು, ಆರಣ್ಯವಾದಿ ವರ್ಣನೆಗಳು, (5) ಮನುಷ್ಯಯತ್ನಕ್ಕೆ ವಿನಾ ದೈವಕ್ಕೆ ಇಂಗದ ಅನುಭವಕ್ಕೆ ತಕ್ಕ ವಿಷಯಗಳು (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭ ಶೈಲಿ, (7) ಸರಸತೆಯಿಂದ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ ಕ್ರಯ —1 ರೂಪಾಯಿ ಟಪಾಲು ಹಾಸಲು ಪ್ರತ್ಯೇಕ

[11 21] ನಮ್ಮ ವಿಳಾಸ —ಮೈಸೂರು ಕೇಸರಿ ಕಂಪನಿ, ಬೆಂಗಳೂರು ಸಿಟಿ

ಡೋಂಗರೆ

ಇವರ ಬಾಲಾಮೃತ್.

[150 ?]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದುದರಿಂದ ಮಕ್ಕಳು ಬಹಳ ಸಂತೋಷದಿಂದ ತೆಗೆದುಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ಥಿಗಳು ಕಟ್ಟಿಯಂತೆ ಇರೋಣ ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ದೂರ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ ಟಪಾಲ್ ಖರ್ಚ್ ೭ ಆಣೆ

ಕೆ ಟಿ. ಡೋಂಗರೆ ಮತ್ತು ಕಂಪನಿ. ಗಿರಗಾಂವ, ಮುಂಬಾಯಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 31

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ! ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಶುದ್ಧವಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ; ೧ ರೂ ೬ ಆ , ೧ ರೂ ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧—೮, ರೂ ೧—೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕೈಚೀಲ ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಸಮಸ್ತ ವಿಧವಾದ ನೋವೂ ಇರಿತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು ನಾನಾ ವಿಧವಾದ ನೋವು ಮುಂತಾದ ಕಾಯಿಲೆಗಳಿಗೆ ಶೀಘ್ರವಾಗಿ ಗುಣ ಮಾಡುತ್ತೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಖರ್ಚಾಗುತ್ತಲಿವೆ ಡಾಕ್ಟರುಗಳೂ ವೈದ್ಯ ಮಾಡತಕ್ಕವರೂ ಯಥೇಚ್ಛವಾಗಿ ಶಿಫಾರಸು ಮಾಡುತ್ತಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ದೊರೆಯುವದು

ದಳಕಟ್ಟು ಔಷಧ ಡಬ್ಬಿಗೆ ೬ ಆಣೆ, 12 ಕುಪ್ಪಿಗೆ ರೂ 3-8 0 ಸಣ್ಣ ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ 1—2—0 ವಿ ಪಿ ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ [42—23]

ವಿಳಾಸ —ಅಮೃತಾಂಜನ ಡಿಪೋ, ೧೮ ಫ್ರೆಯರ್ ರೋಡ್, ಫೋರ್ಟ್, ಬೊಂಬಾಯಿ

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರ ಸಮ್ಮತವಾದ ಧರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯ ನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (6) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1 8 0, ಟಪ್ಪಾಲು ಹಾಸಲು 4 ಆಣೆ

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಕಥಾರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ 4 , ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127-6]

ನಮ್ಮ ವಿಳಾಸ —ಎಸ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೆ ನೋವು, ಸಂದುಗಳ ನೋವು, ಮೈ ಕಾಲು ಹೊತ್ತಿಕ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲು ನೋವು, ಕೆಮ್ಮಲು, ಸೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಸಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಹುಡುಕೂತಿ, ಮಕ್ಕಳ ಎಳಪು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ, 3 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 13 ಕುಪ್ಪಿವರೆಗೆ ಪೋಸ್ಟೇಜು 4 ಆಣೆ [136 18]



ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಪಿತ್ತ, ಅಜೀರ್ಣದ ಭೇದಿ ... ... ಗಳೂ ಆಪಾಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ... ಮೂತ್ರವು ಕಟ್ಟಿದೆ ಕೋಟು ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ... ಮನೆಯಲ್ಲಿ ಇಟ್ಟುಕೊಂಡಿದ್ದರೆ ಒಂದೇ ಒಂದು ಬುದ್ದು ... ವೈದ್ಯೋಪಚಾರ ಸಹಾಯವನ್ನು ಅಪೇಕ್ಷಿಸದ ಕಾಲದವನ್ನು ಬೇಗನೆ ಗುಣಪಡಿಸುವ ಅಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುತ್ತದೆ ಬೆಲೆ ರೂ. 1, ಟಪಾಲ್ ಖರ್ಚು ಬೇರೆ,

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ   ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, **ಮೈಸೂರು**

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

11—7—1913 ರಿಂದ 18—7—1913 ರ ವರೆಗೆ

ಸ್ಥಳ	ಪ್ಲೇಗ್ ಹಿಡಿದದ್ದು	ಪ್ಲೇಗ್ ಸತ್ತದ್ದು	ಕಾಲರಾ ಹಿಡಿದದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	3	2
ಮೈಸೂರು ,,	0	0	1	1
ಬೆಂಗಳೂರು ಡಿಸ್ಟ್ರಿಕ್ಟ್	7	5	64	34
ಮೈಸೂರು ,,	23	14	24	12
ಕೋಲಾರ್ ,,	0	0	16	24
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟ್	41	28	37	25
ಹಾಸನ್ ,,	0	0	15	7
ಚಿತ್ರದುರ್ಗ ,,	0	8	19	10
ಕಡೂರ್ ,,	[illegible]	0	30	28
ಶಿವಮೊಗ್ಗಾ ,,	19	6	0	0
ಜುಮ್ಲಾ	90	59	199	118

ಶಾಲಿವಾಹನ ಶಕ ವರುಷಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನ ಗ್ರೀಷ್ಮ ಋತೌ ಆಷಾಢ ಬಹುಳ ಚತುರ್ದಶಿ ಶುಕ್ರವಾರದಿಂದ ಶ್ರಾವಣ ಶುದ್ಧ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1914 ನೇ ಆಗಸ್ಟ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವ್ಯವಹಾರ ಮಾಸ ತೇದಿ
1	ಶುಕ್ರ *	ಚತುರ್ದಶಿ	36 12	ಪು.	34 45	17
2	ಶನಿ ‡	ಅಮಾವಾಸ್ಯೆ	31 2	ಪುಷ್ಯ	33-2	18
3	ಭಾನು ,,	ಪ್ರಥಮ	26 31	ಆಶ್ಲೇಷ	29-26	19
4	ಸೋಮ §	ಬಿದಿಗೆ	20 43	ಮಖಾ	24 30	20
5	ಮಂಗಳ †	ತದಿಗೆ	14-37	ಪುಬ್ಬಾ	20 23	21
6	ಬುಧ ,,	ಚೌತಿ	8-11	ಉತ್ತರಾ	16-8	22
7	ಗುರು	ಪಂಚಮಿ	2-11	ಹಸ್ತ	11-0	23

* ಅಧಿಶುಕ್ರವಾರ ‡ ಭೀಮನಮಾವಾಸ್ಯೆ, ಜ್ಯೋತಿಸ್ತಂಭ ವ್ರತ, ಪವಿತ್ರೋತ್ಸವ, ಶ್ರೀರಂಗದಲ್ಲಿ ಉತ್ಸವಾರಂಭ, ಮಳೆ ನಕ್ಷತ್ರ— ಆಶ್ಲೇಷ 1 ನೇ ಪಾದ ,, ಪ್ರಥಮಾ ತಿಥಿ, ಚಂದ್ರೋದಯ, ರಂಜಾನ್ ಚಂದು 1. § ತಿಥಿದ್ವಯ. † ಚತುರ್ಥೀ ತಿಥಿ, ಸಂಕಷ್ಟಹರ ವ್ರತ, ಮಂಗಳಗೌರೀ ವ್ರತ ,, ಗರುಡಪಂಚಮಿ, ಚಿತ್ರಸೇನ ವ್ರತ, ಮಳೆ ನಕ್ಷತ್ರ—ಆಶ್ಲೇಷ 2 ನೇ ಪಾದ. ವಜ್ರಯೋಗ

ಕುಂತಳಾನಂದ ತೈಲವು.

147 18

ಹಿಂದುಸ್ಥಾನದ ಬೇರೆ ಬೇರೆ ಪ್ರದೇಶಗಳಲ್ಲಿ ಮಾರಿ ... ... ಎಂಟು ಸರ್ಟಿಫಿಕೇಟುಗಳನ್ನು ಪಡೆದಿದೆ ಮುಖ್ಯವಾದ ಎಲ್ಲಾ ... ಪತ್ರಿಕೆಗಳೂ ಅನೇಕಾನೇಕ ದೇಶದ ಮಹಾನರು ಇದರ ಉತ್ತಮೋತ್ತಮ ಗುಣಗಳನ್ನು ... ಈ ತೈಲದ ಕೇಶವನ್ನು ಬಹಳವಾಗಿಯೂ ತ್ವರೆಯಾಗಿ ... ... ಗೊಳಿಸುತ್ತದೆ ... ... ವಲ್ಲ ಇದಕ್ಕೆ ಸಮಾನವಾದದು ... ... ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ... ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಪಿ ಎಮ್ ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

ಶುದ್ಧವಾದ ಹತ್ತಿಯ ತುಪ್ಪವು

"ಇನ್ನೆಲ್ಲಿಯೂ ದೊರೆಯುತ್ತೆಂಬ ಆಶೆಯೇ ಇಲ್ಲ!"

(ಬಿ) ಎನ್. ಶಿ ... ಅಯ್ಯಂಗಾರ್ಯರು, ಫಸ್ಟ್ ಗ್ರೇಡ್ ಅಕೌಂಟೆಂಟರು, ಕಂಟ್ರೋಲರ ಆಫೀಸು ಎಂಟ್ ... ಬೆಂಗಳೂರು — ಆರು ತಿಂಗಳಿಂದ ... ... ತುಪ್ಪವು ತೆಗೆದುಕೊಳ್ಳುತ್ತಿದ್ದೇವೆ ವಿಶ್ವಸಿಸ್ಥವ ಶುದ್ಧವಾಗಿದೆ ಗುಣವು ಪ್ರಕಟನೆಮಾಡಿರುವಂತೆಯೇ ಇದೆ ಈ ಪಟ್ಟಣದಲ್ಲಿ ಇನ್ನೆಲ್ಲಿಯೂ ಶುದ್ಧವಾದ ಹತ್ತಿಯ ತುಪ್ಪ ದೊರೆಯುವ ಆಶೆಯೇ ಇಲ್ಲವೆಂದು ತೋರುತ್ತೆ —21-6 1913

ಎಚ್ಚರಿಕೆ !—ಹತ್ತಿಯ ತುಪ್ಪವು ರೂಢಿಗೆ ಬಂದದ್ದಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ... ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮ ಎಣ್ಣೆ, ಇವುಗಳನ್ನು ಕೊಂಡು ನಮ್ಮ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿದೆ

ನಮ್ಮ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವ ... ...

... ಕೋಆಪರೇಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್,

[110 ...] ..., ಕಿಲಾರಿ ರೋಡ್, ಬೆಂಗಳೂರು ಸಿಟಿ

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

101 10

... ನೋವಿದ್ದರೆ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ಕೀಲು, ಅರತತಿ, ತಲೆನೋವು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾತೆನ್ನುವುದು, ಕೆಮ್ಮುಗಳು ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಎಳುಕು, ಚೇಳು ಕಡಿದ ಬಾಧೆ ... ಎಲ್ಲಾ ತರದ ನೋವನ್ನು ನಾವು ... ... ಸಂತೋಷವಾಗಿ ... ಮಾಡುತ್ತೇನೆಂದು ... ... ರುವ ವೈದ್ಯನ ಅಂಗಡಿಗೆ ಹೋಗು ಕ್ಲಿಮೆಂಟರ ವಾಲ್ಟನ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಮುಕ್ತಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಅತ್ಯುತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

... ಕ್ಲಿಮೆಂಟರ ವಾಲ್ಟನ್ ಬಾಂ ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ... (1) ಎಸ್ ಪೀಟರ್ಸ್, 37 ವಡಮಾಲಿಪಿಳ್ಳೆ ಬೀದಿ, ಪೂಂಗಮಲ್ಲಿ, ವೇಪೇರಿ, ಮದರಾಸ್, (2) ಜೆ ಎಸ್. ಕನ್ನಯ್ಯ ಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಕ್ಷೇತ್ರಗಣಿತದ ಸೂತ್ರಗಳು.

ಹೊಸದಾಗಿ ತೆಗೆದುಕೊಂಡಿರುವ ಪ್ರೈಮರಿ ಪರೀಕ್ಷೆಗೆ ಅತ್ಯವಶ್ಯಕವಾಗಿ ಬೇಕಾಗಿರುವುದು ಪರೀಕ್ಷೆಗಳಲ್ಲಿ ಬಹುಮುಖ್ಯ ಸಹಾಯ ಮಾಡುವುದು ಬೆಲೆ 1 ಆಣೆ ಮಾತ್ರ 5 ಕ್ಕೆ 1 ಉಚಿತ

ವಿಳಾಸ —... ಶಿವಣ್ಣಪ್ಪ, ಹೆಡ್ ಮಾಸ್ಟರ್, ...

[110 1] ಸ್ಕೂಲ್, ಮಳಿಯೂರು (ತುಮಕೂರು ಡಿ)

ರಾಸ್ಕೋಫ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2-8-0 ಮಾತ್ರ 5 ವರುಷಗಳ ಗ್ಯಾರೆಂಟಿ

... ... 1 ಕ್ಕೆ 1 ...

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾಗಿಲ್ಪಟ್ಟಿದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಟಲೆ ಗಡಿಯಾರಗಳು ಖರ್ಚಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಮಿತ್ರರೂ ಗಡಿಯಾರ ಕೊಳ್ಳ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪನಿ,

[12..] ಪೋಸ್ಟ್ ಬಾಕ್ಸ್, ನಂ 167, ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ

... ಬಹುಮಾನ ಸಮೇತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.



ಈ ಸಣ್ಣೆಯಲ್ಲಿ ಕಂಡ ರಿಸ್ಟ ವಾಚ್ ಕೇಲಿಸ್ ಲಿವರ್ ... ... ಕಂಪನ್ ... ಬಹು ಬಲಿಷ್ಠವಾದ 3 ವರುಷಗಳ ಗ್ಯಾರಂಟಿಯುಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ ... 0 0 ಇದನ್ನು ಸೆಪ್ಟಂಬರ್ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 10 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಬೆಲೆಬಾಳುವ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ಧನಲಕ್ಷ್ಮಿ ಅಂಡ್ ಕಂಪೆನಿ,

[12.. ..] ಸಾಹುಕಾರ್ ಪೇಟೆ ಪೋಸ್ಟು, ಮದರಾಸು

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶಗಳು ಮಲಿನ್ಯಾಂಶವನ್ನು ಬಿಡಿಸುತ್ತ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುವುದಾದರೂ ... ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ... ಮೂತ್ರಕೋಶವು ಆ ಕಾರ್ಯವನ್ನು ಮಾಡಲು ... ... ಶರೀರಕ್ಕೆ ರೋಗವುಂಟಾಗುವುದು

... ... ಅಥವಾ ವ್ಯಾಧಿಗೆ ... ... ಬೆನ್ನು ... ... ಮೂತ್ರವು ಸ್ವಲ್ಪವಾಗಿಯೋ ... ... ಬರುವುದು, ಬಡವೆ ಬಾಯಾರಿಕೆ, ... ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣು ಮೊಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು, ಮರವು; ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶದ ಕ್ಷಯಿಸಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ... ... ರೋಗಗಳು, ಇವೆಲ್ಲಾ ಉಂಟಾಗುವುವು

... ... ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರಾಂಗವನ್ನೂ ... ... ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [112 47]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



... ...
... ...
... ...

ಪೇಟೇ ಧಾರಣೆ

ದಿನಸು		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ.	೧೬-೮-೦	೧೭-೮-೦
ಕಂಬೂತಿ ಅಕ್ಕಿ ಅವಲ್		೧೬-೧೨-೦	೧೭-೮-೦
,, ,, ದುಯಂ		೧೬-೦-೦	೧೭-೦-೦
ಜಾಪತ್ರಾಣಿ ಅಕ್ಕಿ		೧೬-೮-೦	೧೭-೪-೦
ಸಣ್ಣಕ್ಕಿ ಅವಲ್		೧೮ ೦ ೦	೧೮-೮-೦
,, ದುಯಂ		೧೭ ೦-೦	೧೭-೮-೦
ಮೂಗರ ಬೇಳೆ ಅವಲ್ ಪಲ್ಲಾ ೧ಕ್ಕೆ		೧೫ ೪-೦	೧೫-೮-೦
,, ದುಯಂ ,,		೧೪-೮-೦	೧೩-೮-೦
ಹೈಕ ರಾಗಿ ಪಲ್ಲಾ ೧ಕ್ಕೆ		೭-೦-೦	೫ ೦ ೦
ಕಾಡ್ರಾಗಿ ,,		೬-೪-೦	೪-೧೨-೦
ಜೋಳ ,,		೭ ೮ ೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ		೧೦-೮-೦	೧೪-೧೨-೦
ಬಿಳೇ ಅವರೆ ,,		೧೫-೦-೦	೧೧-೦-೦
ಹೆಸರು ,,		೧೨-೦-೦	೧೪-೦-೦
ಉದ್ದು ,,		೧೪ ೮ ೦	೧೬-೦-೦
ಕಡಲೆ ,,		೧೧-೦-೦	೧೨-೦-೦
ಎಳ್ಳು ಸೇರು ೧೨೭ಕ್ಕೆ		೨೪-೦ ೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ		೭-೩-೦	೭-೦-೦
ಪರಳು ೧೨೭ ಸೇರಿಗೆ		೧೯-೦-೦	೧೪ ೬-೦
ಹೊಗೆಸೊಪ್ಪು ಮಣ ೧ಕ್ಕೆ		೨-_-೦	೪-೮-೦
ಮೆಣಸಿನಕಾಯಿ ,		೪-೦ ೦	೪-೪ ೦
,, ದುಯಂ		೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೪-೮-೦	ಮಣ ೫ ೮ -
ಒಳ್ಳೆಣ್ಣೆ ಮಣ ೧ಕ್ಕೆ		೬-೦-೦	೬-...
ಹರಳೆಣ್ಣೆ ,, ,,		೫ ೪-೦	೬-೦-...
ಕೊತ್ತಂಬರಿ ಪಲ್ಲಾ ೧ಕ್ಕೆ		೫ ೬ ೦	೫ ೬-
ಉಪ್ಪು ,, ,,		೬-೧೦ ೦	೬-೦-
ಹುರಸೇ ಹಣ್ಣು ಮಣ ೧ಕ್ಕೆ		೧ ೧೨-೦	೧ ೪-
,, ಹಳೇದು ,,		೧ ೯-೦	೦ ೧೪
ತುಪ್ಪ ಮಣ ೧ಕ್ಕೆ		೨೧ ೦-೦	೧೯-...
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೧೧ ...	೫ ೦
ತೆಂಗಿನಕಾಯಿ ೧೦೦ಕ್ಕೆ		_ ೬-೦	[illegible]
ಅರಸಿನ ಮಣ ೧ಕ್ಕೆ		೧-೬-೦	೧-೦
... ಮಣ ೧ಕ್ಕೆ		೧-೧೨-೦	೧ ೮
ಚಕ್ಕೆ (ನಂ) ಕೆಂಪು		೧೪-_-೦	೧೫ ೦
,, ,, ಸಾಮ		೧೫ ೧೪	[illegible]
,, ,, ಗಟ್ಟಿ ತೊಲ ೧ಕ್ಕೆ		೨೪-೭-೦	೨೪
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		[illegible]	೬೧-೪

ವೃತ್ತಾಂತ ಪತ್ರಿಕೆ.

ಸನ್ ೧೯೧೩ ನೇ ಇಸವಿ ಜುಲೈ ತಾ ೩೧ ನೇ ಗುರುವಾರ

ಶ್ರೀಮದ್ಯುವರಾಜರವರ ವಿದೇಶಸಂಚಾರವು.

ಶ್ರೀಮದ್ಯುವರಾಜರವರ ಕೂಡ ಇರುವ ಒಬ್ಬ ದೊಡ್ಡ ಮನುಷ್ಯರು ಪ್ರಭುಗಳ ವಿದೇಶ ಸಂಚಾರ ವೃತ್ತಾಂತವನ್ನು ಕಳುಹಿಸಿಕೊಟ್ಟಿದ್ದಾರೆ ಇನ್ನೊಂದು ಕಡೆ ಅದನ್ನು ವಿಸ್ತಾರವಾಗಿ ಪ್ರಕಟಮಾಡಿರುತ್ತೇವೆ. ನಮ್ಮ ಸಾವಿರಾರು ವಾಚಕರು ಆ ವೃತ್ತಾಂತವನ್ನು ಬಹು ಸಂಭ್ರಮದಿಂದ ಓದಿ ಆನಂದಪಟ್ಟಾರೆನ್ನುವುದಕ್ಕೆ ಸಂಶಯವಿಲ್ಲ ಶ್ರೀಮದ್ಯುವರಾಜರವರ ಮೇಲೆ ನಮ್ಮ ಪ್ರಜೆಗಳಿಗೆ ತುಂಬಾ ಪ್ರೀತಿಯಿರುವುದು, ಅವರ ಯೋಗಕ್ಷೇಮ ವೃತ್ತಾಂತವನ್ನು ತಿಳಿಯಲು ಎಲ್ಲರೂ ಕುತೂಹಲವುಳ್ಳವರಾಗಿದ್ದಾರೆ ಯುವರಾಜರವರು ಪರಿವಾರ ಸಮೇತ ದಯಮಾಡಿ ಪರಾಂಬರಿಸಿದ ಸ್ಥಳಗಳನ್ನೂ, ಲಂಡನ್ ಪಟ್ಟಣದಲ್ಲಿ ಅವರಿಗಾಗಿ ನಡೆಯುತ್ತಿರುವ ಆತಿಥ್ಯ ಸನ್ಮಾನ ಸತ್ಕಾರಾದಿಗಳನ್ನೂ ನಮ್ಮ ಬಾತ್ಮಿದಾರರು ಪರಿಷ್ಕಾರವಾಗಿ ವಿವರಿಸಿ ಬರೆದಿರುತ್ತಾರೆ

ಅವರು ಮಾರ್ಸೇಲ್ಸ್ ಪಟ್ಟಣದಲ್ಲಿ ಜಹಜು ಇಳಿದು ಆ ನೇತ್ರಾನಂದಕರವಾದ ನಗರದಲ್ಲಿರುವ ಉತ್ಸಾಹಕರವಾದ ಸ್ಥಳಗಳನ್ನು ಪರಾಂಬರಿಸಿಕೊಂಡು, ಅಲ್ಲಿಂದ ಫ್ರಾನ್ಸಿನ ಆಹ್ಲಾದಕರವಾದ ದಕ್ಷಿಣ ಸಮುದ್ರ ತೀರದಲ್ಲಿ ಸಂಚಾರಮಾಡಿ—ಈ ಭಾಗವು ನಮ್ಮ ಬಾತ್ಮಿದಾರರು ಚೆನ್ನಾಗಿ ವಿವರಿಸಿರುವಂತೆ ನಿಜವಾಗಿಯೂ ಸೌಂದರ್ಯಸಹಿತವಾದ ಉದ್ಯಾನವೇ ಸರಿ—ಅಲ್ಲಿಂದ ಕ್ಯಾನ್ ಮತ್ತು ಮಾಂಟಿ ಕಾರ್ಲೋಗಳಿಗೆ ದಯಮಾಡಿ ಅಲ್ಲಲ್ಲಿ ನೋಡತಕ್ಕ ಭಾಗಗಳನ್ನು ಪರಾಂಬರಿಸಿ ಮುಂದೆ ಚಿತ್ತೈಸಿ ಇಟಲಿಯನ್ನು ತಲಪಿದರು.

ಯುವರಾಜರವರು ಇಟಲೀ ರಾಜಧಾನಿಯಾದ ರೋಮ್ ನಗರದಲ್ಲಿ ಗೊತ್ತುಮಾಡಿದ್ದದ್ದಕ್ಕಿಂತಲೂ ಹೆಚ್ಚು ದಿನ ಇರಬೇಕಾಯಿತೆಂದು ನಮ್ಮ ಬಾತ್ಮಿದಾರರು ಹೇಳುವುದನ್ನು ನೋಡಿ ನಾವು ಆಶ್ಚರ್ಯಪಡಲಾರೆವು ಯಾಕಂದರೆ ರೋಮ್ ನಗರದಲ್ಲಿ ಚರಿತ್ರಾರ್ಹವೂ ಪರಮಾಶ್ಚರ್ಯಕರವೂ ಆದ ಪ್ರಾಚೀನ ಕಟ್ಟಡಗಳೂ ಇತರ ಸಂಗತಿಗಳೂ ಹೇರಳವಾಗಿದ್ದು, ಆ ಪಟ್ಟಣವನ್ನು ಪ್ರಖ್ಯಾತವಾಗಿ ಮಾಡಿರುತ್ತವೆ ಅನೇಕ ಶತಮಾನಗಳಾಗಿರುವ ಜೀರ್ಣ ಕಟ್ಟಡಗಳುಳ್ಳ ಫೋರಂ ಎಂಬುದರ ನಡುವೆ ಸಂಚಾರಮಾಡಿದ್ದು ನಮ್ಮ ಮನಸ್ಸಿನ ದೃಷ್ಟಿಯ ಎದುರಿಗೆ ಇದ್ದಂತೆ ಕಾಣುತ್ತದೆ ಸ್ವಲ್ಪ ದೂರದಲ್ಲಿ ಕಲೋಸಿಯಂ ಎಂಬ ಅಗಾಧವಾದ ಕಟ್ಟಡವಿರುತ್ತೆ ಈ ಕಟ್ಟಡದಲ್ಲಿ ಮೈಸೂರು ಪಟ್ಟಣದ ಸಮಸ್ತ ಪ್ರಜೆಗಳಿಗಿಂತಲೂ ಹೆಚ್ಚಾಗಿ ಅಂದರೆ 80,000 ಜನರು ಏಕಕಾಲದಲ್ಲಿ ಕುಳಿತುಕೊಳ್ಳಲು ಸಾಧ್ಯವಾಗುವಷ್ಟು ವಿಸ್ತಾರವಾಗಿರುತ್ತದೆ ಪ್ರಾಚೀನಕಾಲದಲ್ಲಿ ರೋಮ್‌ನಗರದ ಪ್ರಜೆಗಳು ವಿಹಾರಕ್ಕಾಗಿ ಈ ಕಟ್ಟಡದಲ್ಲಿ ಸೇರುತ್ತಿದ್ದರು. ಅಲ್ಲಿಂದ ಮುಂದಕ್ಕೆ ಹೋದರೆ ಪಾಲಟೈನ್ ಗುಡ್ಡದ ಬಳಿಯಣ ಪ್ರದೇಶದಲ್ಲಿ ಸೀಜರ್ ಎಂಬ ಪುರಾತನ ಚಕ್ರವರ್ತಿಗಳ ಜೀರ್ಣವಾದ ಅರಮನೆಗಳನ್ನು ನೋಡುತ್ತೇವೆ ಇನ್ನೊಂದು ಕಡೆಯಲ್ಲಿ ಅಗಾಧವಾದ ಸೇಂಟ್ ಪೀಟರ್ ಎಂಬ ದೇವಾಲಯವೇ ಮೊದಲಾದ ಹಲವು ದಿವ್ಯ ಕಟ್ಟಡಗಳನ್ನು ನೋಡಿ ಆನಂದಪಡಬಹುದು ಲೋಕದ ನಗರಗಳಿಗೆಲ್ಲಾ ಮಾತೃಪ್ರಾಯವಾದ ಈ ರೋಮ್ ಪಟ್ಟಣದ ಪೂರ್ವಚರಿತ್ರೆಯು ಅತಿ ದೀರ್ಘವೂ ಮಹಾ ಉತ್ಸಾಹಯುಕ್ತವೂ ಸುವಿಶೇಷವೂ ಆಗಿರುತ್ತದೆ ಇನ್ಯಾವ ಪಟ್ಟಣದ ಪೂರ್ವವೃತ್ತಾಂತವೂ ಅದಕ್ಕೆ ಸರಿಹೋಲಲಾರದು ಆ ಮಹಾ ಪಟ್ಟಣದ ಪ್ರತಿ ಒಂದು ಭಾಗದಲ್ಲೂ ಉತ್ಸಾಹಪೂರಿತವಾದ ವಿಚಾರಗಳು ತುಂಬಿರುತ್ತವೆ

ಇಟಲಿಯ ಉತ್ತರ ಭಾಗದಲ್ಲಿರುವ ಸರೋವರಗಳನ್ನೂ ಸ್ವಿಟ್ಸರ್‌ಲೆಂಡ್ ಸೀಮೆಯನ್ನೂ ಯುವರಾಜರವರು ಪರಾಂಬರಿಸಿ ಆನಂದಪಟ್ಟರೆಂಬ ಮಾತು ಸಹಜವಾಗಿರುತ್ತದೆ ಆ ಸುತ್ತುಮುತ್ತಿನಲ್ಲಿರುವಂಥಾ ಸೌಂದರ್ಯಯುಕ್ತವಾದ ಮತ್ತೂ ಆಹ್ಲಾದಕರವಾದ ನೋಟವು ಪ್ರಪಂಚದ ಇನ್ಯಾವ ಕಡೆಯಲ್ಲೂ ಇರಲಾರದೆಂದು ಹೇಳಬಹುದು ಎತ್ತರವಾದ ಪರ್ವತ ಪಙ್ತಿಗಳ ನಡುವೆ ಮನೋಹರವಾದ ಕಣಿವೆಗಳೂ, ಈ ಕಣಿವೆಗಳ ಒಡಲಲ್ಲಿ ಅತ್ಯಂತ ಸುಂದರವಾದ ಕೆಲವು ಸರೋವರಗಳೂ ಇದ್ದು, ನೋಟಕರಿಗೆ ಮಹದಾನಂದವನ್ನುಂಟುಮಾಡುವವು ಹಿಮಸಹಿತವಾದ ಶಿಖರಗಳನ್ನುಳ್ಳ ಪರ್ವತಶ್ರೇಣಿಯಿಂದ ಆವರಿಸಲ್ಪಟ್ಟಂಥಾ ಲೂಸರ್ನ್ ನಗರವೂ ಅದರಲ್ಲಿನ ದಿವ್ಯವಾದ ಸರೋವರವೂ ಪ್ರತಿ ಒಬ್ಬ ಆಗಂತುಕನಿಗೂ ಪರಮಾಶ್ಚರ್ಯಕರವಾಗಿರುವವು ಇಂಥಾ ಜಗದ್ವಿಖ್ಯಾತವೂ ಅಮೋಘವೂ ಆದ ನೋಟಪ್ರದೇಶವನ್ನು ನಮ್ಮ ಯುವರಾಜರವರು ಪರಾಂಬರಿಸಿ ಆನಂದಪಟ್ಟರೆಂದು ತಿಳಿದು ಸಂತೋಷಪಡುತ್ತೇವೆ

ಯುವರಾಜರವರ ದೃಷ್ಟಿಪಥವು ಸೌಂದರ್ಯವಾದದ್ದನ್ನೂ ಚರಿತ್ರಾರ್ಹವಾದದ್ದನ್ನೂ ಮಾತ್ರವೇ ನೋಡಿ ದಣಿಯುವುದಾಗಿರಲಿಲ್ಲವೆಂದೂ, ಅವರು ಆ ಪ್ರಾಂತ್ಯದಲ್ಲಿನ ಕಸಬುಗಳ ಮತ್ತೂ ವ್ಯವಸಾಯದ ನವೀನ ವಿಧ್ಯಮಾನಗಳನ್ನೂ ಬಹು ಸೂಕ್ಷ್ಮವಾಗಿ ಪರೀಕ್ಷಿಸಿ ಗ್ರಹಿಸಿಕೊಳ್ಳುತ್ತಾ ಬಂದಿದ್ದಾರೆಂದೂ ಆನಂದಪಡುತ್ತೇವೆ ಅಲ್ಲಿ ಅವರ ದೃಷ್ಟಿಯನ್ನೂ ಮನಸ್ಸನ್ನೂ ಸೆಳೆಯುವಂಥಾ ವಿಧ್ಯಮಾನಗಳು ಅನೇಕವಾಗಿವೆ ಎನ್ನುವುದಕ್ಕೆ ಸಂಶಯವಿಲ್ಲ ಅವುಗಳನ್ನು ಅವರು ಪರಾಂಬರಿಸೋಣದರಿಂದ ನಮ್ಮ ಸೀಮೆಯಲ್ಲಿ ನಮ್ಮ ಜನರನ್ನು ಶ್ರೇಯಸ್ಸಿಗೆ ತರಲು ಸಹಕಾರಿಗಳಾದಾವು. ಪಾಶ್ಚಾತ್ಯ ರಾಜ್ಯಗಳಲ್ಲಿ ಅವರು ಪರಾಂಬರಿಸುವ ಅಭಿವೃದ್ಧಿ ಕಾರ್ಯಗಳು ಇದ್ದಕ್ಕಿದ್ದ ಹಾಗೇ ಅಕಸ್ಮಾತ್ತಾಗಿ ರೂಪಕ್ಕೆ ಬಂದವುಗಳಲ್ಲ. ನಮ್ಮ ಸೀಮೆಯನ್ನು ಉತ್ತಮೋತ್ತಮವಾದ ಪ್ರಥಮ ಸ್ಥಾನಕ್ಕೆ ತಂದಿಡುವುದು ನೆನಸಿಕೊಂಡೊಡನೆಯೇ ಸಾಧ್ಯವಾಗುವುದೇ? ಶ್ರೀಮದ್ಯುವರಾಜರವರು ಆ ಸೀಮೆಗಳಲ್ಲಿ ಸಮಸ್ತ ವಿಷಯಗಳನ್ನೂ ಪರಾಂಬರಿಸಿ ದಯಮಾಡಿದ ಬಳಿಕ ನಮ್ಮ ದೇಶದಲ್ಲಿ ಪ್ರಜೆಗಳು ಅಭಿವೃದ್ಧಿಗೆ ಬರುವುದಕ್ಕೆ ಪಡುವ ಸಾಹಸ ಪ್ರಯತ್ನಗಳಿಗೆ ತುಂಬಾ ಪ್ರೋತ್ಸಾಹಕರಾಗಿ ನಿಲ್ಲುತ್ತಾರೆಂದು ಧೈರ್ಯವಾಗಿ ಹೇಳಬಲ್ಲೆವು.

ಲಂಡನ್ ಪಟ್ಟಣದಲ್ಲಿ ಯುವರಾಜರವರಿಗೆ ನಡೆದ ಆತಿಥ್ಯವೂ ಸನ್ಮಾನವೂ ತುಂಬಾ ಪ್ರೀತಿಯುಕ್ತವಾಗಿದ್ದವು. ನಾವು ನಿರೀಕ್ಷಿಸಿದ್ದಂತೆಯೇ ದಯಾಪೂರಿತರಾದ ಚಕ್ರವರ್ತಿ ಸಾರ್ವಭೌಮರವರು ಅವರಿಗೆ ಭೇಟಿಯನ್ನು ದಯಪಾಲಿಸಿದರೆಂದು ತಿಳಿದು ತುಂಬಾ ಸಂತೋಷಪಡುತ್ತೇವೆ ಲಾರ್ಡ್ ಕರ್ಸನ್ ಪ್ರಭುವಿಗೆ ಹಿಂದುಸ್ಥಾನದ ಮೇಲೆ ಸಾಮಾನ್ಯವಾಗಿ ತುಂಬಾ ಪ್ರೀತಿ ಇರುವುದು ಅದರಲ್ಲೂ ಅವರ ಆಳ್ವಿಕೆಯ ಕಾಲದಲ್ಲಿ ಅವರು ಸಂಚಾರಮಾಡಿದ ಸ್ಥಳಗಳನ್ನೂ ಸಂಧಿಸಿದ ದೊಡ್ಡಮನುಷ್ಯರನ್ನೂ ಮರೆಯತಕ್ಕವರಲ್ಲ ಅವರು ವೈಸ್‌ರಾಯ್ ಪದವಿಯಲ್ಲಿದ್ದಾಗ್ಗೆ ಮೈಸೂರು ಸಂಸ್ಥಾನಕ್ಕೆ ಎರಡಾವರ್ತಿ ಭೇಟಿ ಕೊಟ್ಟಿರುತ್ತಾರಾದಕಾರಣ ಅವರಿಗೆ ಈ ಸಂಸ್ಥಾನದ ವಿಷಯದಲ್ಲೂ ರಾಜಮನೆತನದ ಮೇಲೂ ವಿಶೇಷವಾದ ಪ್ರೀತಿಯುಂಟೆನ್ನುವುದಕ್ಕೆ ಸಂಶಯವಿಲ್ಲ ನಮ್ಮ ಯುವರಾಜರವರು ದಯಮಾಡಿದ್ದಾಗಲೇ ಫ್ರೆಂಚ್ ಪ್ರಜಾಪ್ರಭುತ್ವದ ಪ್ರೆಸಿಡೆಂಟರವರು ಲಂಡನ್ ಪಟ್ಟಣಕ್ಕೆ ಹೋಗಿದ್ದದ್ದೂ ಅವರಿಗೆ ಅಲ್ಲಿ ನಡೆದ ಸತ್ಕಾರಗಳೂ ಎಷ್ಟು ಆಹ್ಲಾದಕರವಾಗಿದ್ದವೋ, ಪ್ರಜಾ ಪ್ರೀತಿಯನ್ನು ಸಂಪಾದಿಸಿಕೊಂಡಿರುವ ಆ ಪ್ರಭುವನ್ನು ಲಂಡನ್ ಪುರಜನರು ಎಷ್ಟು ಉತ್ಸಾಹದಿಂದಲೂ ಆಟ್ಟಹಾಸವಾಗಿಯೂ ಎದುರುಗೊಂಡರೋ ಎಲ್ಲವನ್ನೂ ಅವರು ಪರಾಂಬರಿಸಿದ್ದು ನಮಗೆ ಸಂತೋಷಪ್ರದವಾಗಿದೆ

ಈ ದೇಶಾಟನವು ನಮ್ಮ ಯುವರಾಜರವರಿಗೆ ತುಂಬಾ ಮನೋಜ್ಞವಾಗಿಯೂ ಆನಂದಪ್ರದವಾಗಿಯೂ ಬೆಳೆಯುತ್ತಿದೆ ಎಂದು ಸಂತೋಷಪಡುವೆವು ಅವರು ಇನ್ನುಮುಂದೆ ಪ್ರಯಾಣ ಮಾಡುವ ಸ್ಥಳಗಳ ಮತ್ತೂ ನೋಡುವ ವಿಧ್ಯಮಾನಗಳ ವೃತ್ತಾಂತವನ್ನು ವಾಚಕರಿಗೆ ತಿಳಿಸಬಹುದೆಂದು ನಿರೀಕ್ಷಿಸುತ್ತೇವೆ ಅವರೂ ಅವರ ಸಂಗಡ ಹೋಗಿರತಕ್ಕವರೂ ಆರೋಗ್ಯದಿಂದಲೂ ಸುಖವಾಗಿಯೂ ಇದ್ದು ವಾಪಸು ಸ್ವದೇಶಕ್ಕೆ ಬರುವಂತಾಗಲೆಂದೂ, ಅವರ ಸಾಮರ್ಥ್ಯವೂ ಬುದ್ಧಿಕುಶಲತೆಯೂ ಬಲಗೊಂಡು ನಮ್ಮ ಪ್ರಜೆಗಳ ಶ್ರೇಯಸ್ಸಿಗೆ ಒದಗುವಂತಾಗಲೆಂದೂ ಮನಃಪೂರ್ವಕವಾಗಿ ಹಾರೈಸುವೆವು.

ಬಾಲ್ಕನ್ ಸಂಸ್ಥಾನಗಳ ವಿಧ್ಯಮಾನಗಳು.

ಕಳೆದ ವಾರವೂ ಗ್ರೀಕರೂ ಸರ್ವಿಯದವರೂ ಸೇರಿ ಬಲ್ಗೇರಿಯದವರ ಮೇಲೆ ಯುದ್ಧಗಳನ್ನು ನಡಿಸಿದಂತೆಯೂ, ಬಲ್ಗೇರಿಯದವರು ಸೋತು ಇನ್ನೂ ಹಿಮ್ಮೆಟ್ಟಿಹೋಗಿರುವಂತೆಯೂ ಗೊತ್ತಾಗುತ್ತದೆ ಅವರವರಿಗೆ ಸಮಾಧಾನವನ್ನುಂಟುಮಾಡಿ ಈ ಕಡಿದಾಟಗಳನ್ನು ಕೊನೆಮುಟ್ಟಿಸಬೇಕೆಂಬ ಪ್ರಯತ್ನಗಳೂ ಜರುಗುತ್ತಿರುವವು. ಗ್ರೀಕರೂ ಸರ್ವಿಯದವರೂ ನುಗ್ಗಿಹೋಗಿ ಬಲ್ಗೇರಿಯಾ ರಾಜಧಾನಿಯಾದ ಸೋಫಿಯಾ ನಗರವನ್ನು ಆಕ್ರಮಿಸಿಕೊಳ್ಳಬೇಕೆಂದು ನಿಶ್ಚಯಿಸಿಕೊಂಡಿದ್ದಾಗ್ಯೂ ಇಷ್ಟರಲ್ಲೇ ಕರಾರು ನಡೆದು ಯುದ್ಧಕಾರ್ಯಗಳು ನಿಲ್ಲಬಹುದೆಂದು ಕಾಣುತ್ತದೆ ರೂಮೇಲಿಯಾದವರು ತಮ್ಮ ಸೈನ್ಯಗಳನ್ನು ಮುಂದಕ್ಕೆ ನುಗ್ಗಿಹೋಗುವಂತೆ ಕಳುಹಿಸಿರುವುದಿಲ್ಲ ಬಹುಶಾ ಇವರು ಬಲ್ಗೇರಿಯದವರನ್ನು ಕಷ್ಟಕ್ಕೆ ಗುರಿಮಾಡಬೇಕೆಂದು ಆತುರಪಡುತ್ತಿರುವಂತೆ ಕಾಣುವುದಿಲ್ಲ

ಈಗ ಬಾಲ್ಕನ್ ರಾಜ್ಯಗಳಿಗೆ ಪರಸ್ಪರ ಉಂಟಾಗಿರುವ ಕಲಹಗಳ ದೆಸೆಯಿಂದ ಟರ್ಕಿಯವರಿಗೆ ಅಲ್ಪಸ್ವಲ್ಪ ಪ್ರಯೋಜನವಾಗುವುದರಲ್ಲಿ ಸಂಶಯ ಕಾಣುವುದಿಲ್ಲ ಟರ್ಕಿಯವರು ಲಂಡನ್ ಪಟ್ಟಣದಲ್ಲಿ ಒಪ್ಪಿ ರುಜುಮಾಡಿರುವ ಸಮಾಧಾನದ ಕರಾರನ್ನು ತಿರಸ್ಕಾರಮಾಡಿ ಆ ಕರಾರಿನಂತೆ ವಿಧಿಸಲ್ಪಟ್ಟಿರುವ ತಮ್ಮ ಎಲ್ಲೆಕಟ್ಟನ್ನು ಮೀರಿ ಮುಂದಕ್ಕೆ ಹೋಗಿ ಆಡ್ರಿಯಾನೋಪಲ್ ಪಟ್ಟಣವನ್ನು ಮತ್ತೆ ಸ್ವಾಧೀನಪಡಿಸಿಕೊಂಡಿದ್ದಾರೆ ಈಗ ಈ ರೀತಿಯಾಗಿ ಟರ್ಕಿಯವರು ಸಂಪಾದಿಸಿಕೊಂಡಿರುವ ಪ್ರದೇಶವನ್ನು ಪರರಾಜ್ಯಗಳವರು ತಪ್ಪಿಸಿ ಬಿಡಿಸಿಕೊಳ್ಳುವುದು ಹ್ಯಾಗೆ ಸಾಧ್ಯವೋ ಊಹಿಸಿ ಹೇಳುವುದು ಕಷ್ಟವಾಗಿದೆ ಪರರಾಜ್ಯಗಳವರು ತಮ್ಮ ಪರಾಕ್ರಮವನ್ನು ತೋರ್ಪಡಿಸಿ ಈ ಬಾಲ್ಕನ್ ರಾಜ್ಯಗಳವರಲ್ಲಿ ಭೀತಿಯನ್ನುಂಟುಮಾಡಿ ಅವರವರ ವ್ಯಾಜ್ಯಗಳನ್ನು ಇತ್ಯರ್ಥಮಾಡಬೇಕು, ಹಾಗಿಲ್ಲದಿದ್ದರೆ ಕಡೆಯತನಕ ಕಡಿದಾಡಿಕೊಳ್ಳಲಿ ಎಂದು ಬಿಟ್ಟುಬಿಡಬೇಕು ಈ ರೀತಿ ಕಡಿದಾಟಗಳು ನಡೆಯುತ್ತಾ ಬಂದಿರುವುದು ಯೂರೋಪ್ಪಿಗೇನೇ ಅಪವಾದವನ್ನುಂಟುಮಾಡಿದೆ ಪರರಾಜ್ಯಗಳವರು ಬಲಾತ್ಕಾರಮಾಡಿಯಾದರೂ ಈ ಬೇರೆ ಬೇರೆ ಜನಾಂಗಗಳ ಮನಸ್ತಾಪಗಳು ಕಡಿದಾಟಗಳಿಲ್ಲದೆ ವ್ಯವಸ್ಥೆಯಾಗುವಂತೆ ಮಾಡುವುದು ಬಹಳ ಆಗತ್ಯವಾಗಿದೆ

ಎರಡು ಪ್ರಶ್ನೆಗಳು

ಲಂಡನ್ ಪಟ್ಟಣದ ಒಂದು ಆಫೀಸಿನಲ್ಲಿ ಲೌಕಿಕೋದ್ಯೋಗದಿಂದ ಜೀವನಮಾಡುತ್ತಿದ್ದ ಮಗನು, ದೂರವಾದ ಇನ್ನೊಂದು ಊರಿನಲ್ಲಿ ಪಾದ್ರಿಯಾಗಿ ಬೋಧಕೋದ್ಯೋಗದಲ್ಲಿದ್ದ ತಂದೆಗೆ ಒಂದು ಪತ್ರವನ್ನು ಬರೆದನು ಅದರ ಸಾರಾಂಶವೇನಂದರೆ,—

ನನ್ನ ಪ್ರಿಯ ತಂದೆಯವರೇ,

ನಮಗೆ ಮೊದಲೇ ಅರಿಕೆಮಾಡಿಕೊಂಡಿದ್ದ ಮೇರೆಗೆ ನಾನು ನಿಮ್ಮನ್ನು ಒಂದೆರಡು ಪ್ರಶ್ನೆಗಳನ್ನು ಕೇಳಿ ತಕ್ಕ ಉತ್ತರಗಳನ್ನು ಪಡೆಯಬೇಕೆಂದಿದ್ದೇನೆ ಆ ಪ್ರಶ್ನೆಗಳು ಯಾವವೆಂದರೆ,—

(1) ಕ್ರಿಸ್ತನು ಸಾಧಾರಣವಾದ ಒಬ್ಬ ಮನುಷ್ಯನಾಗಿದ್ದರೆ ಆತನನ್ನು ದೇವರೆಂದು ಭಾವಿಸಿ ಪೂಜಿಸುವದು ನ್ಯಾಯವೋ?

(2) ಅಥವಾ ಆತನು ದೇವರೇ ಆಗಿದ್ದರೆ ಮನುಷ್ಯರಲ್ಲಿಲ್ಲದ ವಿಶೇಷವಾದ ಗುಣಲಕ್ಷಣಗಳು ಆತನಲ್ಲಿ ಸ್ವಾಭಾವಿಕವಾಗಿ ಇದ್ದೇ ಇರಬೇಕು ದೇವರಲ್ಲಿ ಅಮಾನುಷವಾದ ಗುಣಲಕ್ಷಣಗಳು ಇರುವದು ಸಹಜ ದೇವರಾಗಿದ್ದ ಆತನು ಇಂತಹ ವಿಶೇಷವಾದ ಗುಣಲಕ್ಷಣಗಳಿಂದೊಡಗೂಡಿ ಅತಿ ಪರಿಶುದ್ಧವಾದ ನಡತೆಯಿಂದ ಒಪ್ಪುತ್ತಿದ್ದದ್ದು ಆಶ್ಚರ್ಯವಲ್ಲ ಹೀಗಿರುವಲ್ಲಿ ದೇವರಾಗಿದ್ದ ಆತನನ್ನು ಸರ್ವಸಂಪೂರ್ಣವಾದ ನಡತೆಯುಳ್ಳ ಮನುಷ್ಯನೆಂದು ನಮ್ಮಂತಹ ಪಾಪಿ ಮನುಷ್ಯರಿಗೆ ಮೇಲ್ಪಂಕ್ತಿಯಾಗಿ ಹಿಡಿಯತಕ್ಕದ್ದು ಸರಿಯೋ? ಸರ್ವಸಂಪೂರ್ಣವಾದ ಗುಣಲಕ್ಷಣಗಳಿಂದೊಪ್ಪುವ ಮನುಷ್ಯನು ಈ ವರೆಗೂ ಇಹಲೋಕದಲ್ಲಿ ಉತ್ಪತ್ತಿಯಾಗಿದ್ದ ಹಾಗೆ ನನ್ನ ಅಲ್ಪ ಬುದ್ಧಿಗೆ ತೋರುವದಿಲ್ಲ ಕ್ರಿಸ್ತನೊಬ್ಬನೇ ಅಂಥವನಾಗಿದ್ದನೆಂದು ಭಾವಿಸುತ್ತೇನೆ ಹಾಗಾದರೆ ಆತನು ದೇವರೇ ಆಗಿರಬೇಕು ಇಂಥಾತನನ್ನು ನಮ್ಮ ಹಾಗೆ ಸಕಲ ದುಷ್ಪ್ರೇರಣೆಗಳಿಗೂ ಆತನು ಗುರಿಯಾದನು, ಆದರೂ ಆತನು ಪಾಪವನ್ನು ಮಾಡಲೇ ಇಲ್ಲವೆಂತ ಮನುಷ್ಯಮಾತ್ರದವರಾದ ನಮಗೆ ಮೇಲ್ಪಂಕ್ತಿಯಾಗಿ ಹಿಡಿಯುವದು ಧರ್ಮವಾಗಿ ಕಾಣಿಸುವದಿಲ್ಲ

ಈ ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಸಾವಧಾನವಾಗಿ ಬರೆದು ನನ್ನ ಅನುಮಾನವನ್ನು ನಿವರ್ತಿಮಾಡಬೇಕೆಂದು ಬೇಡುತ್ತೇನೆ

ಇತಿ ನಿಮ್ಮ ವಿಧೇಯ ಕುಮಾರ

(ಈ ಪ್ರಶ್ನೆಗಳು ಸರ್ವಸಾಧಾರಣವಾಗಿ ವಿಚಾರಪರರಾದ ಸಕಲರಲ್ಲಿಯೂ ಹುಟ್ಟುವವು ನಮ್ಮ ವಾಚಕರಲ್ಲನೇಕರು ಈ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳೇನೆಂದು ತಿಳಿಯಲಪೇಕ್ಷಿಸುವರು ಆ ಪಾದ್ರಿಯವರು ತಮ್ಮ ಕುಮಾರನಿಗೆ ಬರೆದು ಕಳುಹಿಸಿದ ಉತ್ತರಗಳನ್ನು ನಮ್ಮ ವಾಚಕರ ಅವಗಾಹನೆಗಾಗಿ ಇಲ್ಲಿ ಕನ್ನಡಿಸಿದ್ದೇವೆ)

ನನ್ನ ಪ್ರಿಯ ಕುಮಾರನಿಗೆ,

(1) ಕ್ರಿಸ್ತನು ಸಾಧಾರಣವಾದ ಒಬ್ಬ ಮನುಷ್ಯನಾಗಿದ್ದರೆ ಆತನನ್ನು ದೇವರೆಂದು ಪೂಜಿಸುವದು ಸರಿಯೋ ಎಂಬ ನಿನ್ನ ಮೊದಲನೇ ಪ್ರಶ್ನೆಗೆ ಉತ್ತರ ಕ್ರಿಸ್ತನು ಸಕಲ ವಿಷಯಗಳಲ್ಲಿಯೂ ಸರ್ವಸಂಪೂರ್ಣವಾದ ಗುಣಲಕ್ಷಣಗಳುಳ್ಳ ಮನುಷ್ಯನಾಗಿದ್ದದ್ದು ನಿಜ ಆದರೆ ಆತನು ಮನುಷ್ಯಜಾತಿಯಲ್ಲಿ ಅಸಮಾನನು ಆತನಿಗೆ ಸರಿಸಮಾನವಾದ ಗುಣಲಕ್ಷಣಗಳುಳ್ಳವನು ಮನುಷ್ಯರಲ್ಲಿ ಇನ್ಯಾರೂ ಇರಲಿಲ್ಲ ಆತನು—ಅಂಧಕಾರದಿಂದ ಆಚ್ಛಾದಿತವಾಗಿರುವ ಲೋಕಕ್ಕೆ ನಾನೇ ಬೆಳಕು, ನಾನೇ ಜೀವದಾಯಕವಾದ ಆತ್ಮೀಯಾಹಾರ, ನಾನೇ ಜೀವಕೊಡುವ ಜಲ, ನಾನೂ ತಂದೆಯಾದ ದೇವರೂ ಒಂದೇ ಎಂದು ಪದೇಪದೇ ಹೇಳುತ್ತಿದ್ದನು ಯಾವನಾದರೂ ಒಬ್ಬ ಸಾಧಾರಣವಾದ ಮನುಷ್ಯನು—ನಾನು ಇಂತಹ ಗುಣಲಕ್ಷಣಗಳುಳ್ಳವನಾಗಿದ್ದೇನೆಂದು ಹೇಳಿಕೊಂಡರೆ ಅವನನ್ನು ಹುಚ್ಚ ಅಥವಾ ಡಾಂಭಿಕನೆಂದು ನಾವು ಅವನನ್ನು ತಿರಸ್ಕರಿಸುವೆವಲ್ಲವೇ? ಆದರೆ ಕ್ರಿಸ್ತನು ಇಂತಹ ಅಸಾಧಾರಣವಾದವನೇಯೆಂದು ಚರಿತ್ರೆಯು ಸಾಕ್ಷಿನುಡಿಯುತ್ತದೆ ಮತ್ತು ಆತನು ಪಾಪರಹಿತನು, ನಿಷ್ಕಳಂಕನು ಆತನ ಶಿಷ್ಯನಾಗುವದರಿಂದ ಸದ್ಭಕ್ತನಾಗಿ ದೇವರ ಕಟ್ಟಳೆಗಳನ್ನು ಕೈಕೊಂಡು ನಡಿಯುವದಕ್ಕೆ ಅದ್ವಿತೀಯವಾದ ಸಹಾಯವೂ ಪ್ರೇರಣೆಯೂ ದೊರಕುತ್ತವೆಂದು ಲಕ್ಷಾಂತರ ಜನಗಳು ಅನುಭವದಿಂದ ಸಾಕ್ಷಿನುಡಿಯುತ್ತಿರುವರು ಆತನೊಬ್ಬನೇ ವಿಮೋಚಕನು ಜೀವದಾಯಕನು ಆತನು ಸಾಧಾರಣವಾದ ಮನುಷ್ಯನಲ್ಲ

(2) ಕ್ರಿಸ್ತನು ದೇವರಾಗಿದ್ದರೆ ಆತನು ಸರ್ವಸಂಪೂರ್ಣವಾದ ಮನುಷ್ಯನಾಗಿರುವನು ಹೇಗೆ? ಎಂಬ ನಿನ್ನ ಎರಡನೇ ಪ್ರಶ್ನೆಗೆ ಉತ್ತರ ಸರ್ವಸಂಪೂರ್ಣವಾದ ಸದ್ಗುಣಗಳಿಂದೊಪ್ಪುವ ನರಮನುಷ್ಯನು ಈ ವರೆಗೂ ಇಹಲೋಕದಲ್ಲಿ ಉತ್ಪತ್ತಿಯಾಗಿದ್ದಿಲ್ಲವೆಂದು ನೀನೇ ಹೇಳಿರುವದು ನಿನ್ನ ಈ ಪ್ರಶ್ನೆಗೆ ಸೂಕ್ತವಾದ ಉತ್ತರವಾಗಿದೆ ಆತನು ಸರ್ವಸಂಪೂರ್ಣನಾದ ಮತ್ತು ನಿಷ್ಕಳಂಕನಾದ ಮನುಷ್ಯನಾಗಿದ್ದದ್ದೇ ಆತನನ್ನು ದೇವರೆಂದು ಭಾವಿಸುವದಕ್ಕೆ ಕಾರಣವಾಗಿದೆ ದೇವರು ಸರ್ವಜ್ಞನು, ಸರ್ವಶಕ್ತನು ಆದರೆ ಆತನು ಮನುಷ್ಯನಾಗಿ ನರಾವತಾರವೆತ್ತಿದಾಗ ಆತನ ಸರ್ವಜ್ಞತ್ವವೂ ಸರ್ವಶಕ್ತಿಯೂ ಮನುಷ್ಯತ್ವದ ಸ್ಥಿತಿಗೆ ತಕ್ಕಹಾಗೆ ಪರಿಮಿತಿಯನ್ನು ಹೊಂದಿ ಸಂಕುಚಿತವಾದವು ದೇವರು ಅಪರಿಮಿತನು ಆದರೆ ಆತನು ನರಾವತಾರವನ್ನು ಎತ್ತಿದಾಗ ಪರಿಮಿತಸ್ಥಿತಿಯಲ್ಲಿ ಈ ಲೋಕದಲ್ಲಿದ್ದನು ಮನುಷ್ಯರು ದೇವರನ್ನು ತಿಳುಕೊಳ್ಳಬೇಕಾದರೆ ಆತನು ಪರಿಮಿತ ಸ್ಥಿತಿಯಲ್ಲಿ ತನ್ನನ್ನು ಪ್ರಕಟಿಸಬೇಕಲ್ಲವೇ? ಮನುಷ್ಯನು ಮಿತವಾದ ಬುದ್ಧಿಯುಳ್ಳವರು ಅವರ ತಿಳುವಿಕೆಯ ಅಳತೆಗೆ ಅಥವಾ ಪ್ರಮಾಣಕ್ಕೆ ತಕ್ಕ ಹಾಗೆ ದೇವರು ತನ್ನನ್ನು ತಗ್ಗಿಸಿಕೊಂಡು ನರಾವತಾರವೆತ್ತಿದನು ಆದರಿಂದ ಮನುಷ್ಯರು ಆತನನ್ನು ಗ್ರಹಿಸುವದು ಸಾಧ್ಯವಾಯಿತು

ಕ್ರಿಸ್ತನ ಮನುಷ್ಯತ್ವವು ಆತನ ದೇವತ್ವಕ್ಕೆ ಸಮಾನವಾದದ್ದು ಇವೆರಡು ಸ್ವಭಾವಗಳು ಆತನಲ್ಲಿ ಸರ್ವಸಂಪೂರ್ಣವಾಗಿ ನೆಲೆಯಾಗಿವೆ ಆತನು ನಿಜವಾಗಿಯೂ ಮನುಷ್ಯನಾಗಿದ್ದನು ದುಷ್ಪ್ರೇರಣೆಗಳು ಆತನಿಗೆ ಮೊದಲಿಂದ ಕಡೇವರೆಗೂ ನಿಜವಾಗಿ ಸಂಭವಿಸಿದವು ಆದರೂ ಆತನು ಅವುಗಳಿಗೆ ಒಪ್ಪಿ ಅಧೀನವಾಗಲಿಲ್ಲ ಆತನು ಇಂತಹ ದುಷ್ಪ್ರೇರಣೆಗಳಿಗೆ ಸೋತು ಹೋಗದೆ ಇದ್ದದ್ದು ಆತನು ಮನುಷ್ಯಸ್ವಭಾವವಿಲ್ಲದವನಾದದ್ದರಿಂದಲ್ಲ ಆದರೆ ದೇವರ ಸಂಗಡ ಅನ್ಯೋನ್ಯವನ್ನು ಎಡಬಿಡದೆ ಪಡೆಯುತ್ತಿದ್ದು ಆ ಬಲದಿಂದಲೇ ದುಷ್ಪ್ರೇರಣೆಗಳನ್ನು ಜೈಸಿದನು

ಚನ್ನಾಗಿ ಯೋಚಿಸಿದರೆ ಕ್ರಿಸ್ತನು ದೈವಮನುಷ್ಯನು ನಾವೂ ದೈವಮನುಷ್ಯನಾದ ಆತನಂತೆ ಆಗುವದು ಸಾಧ್ಯವಾಗಿದೆ ನಮ್ಮ ಶಿರೋಜ್ಞ್ರಾಯನಾಗಿರುವ ಕ್ರಿಸ್ತನ ನಿಷ್ಕಳಂಕವಾದ ಸ್ಥಿತಿಗೆ ಬೆಳೆದು ಅಭಿವೃದ್ಧಿಯನ್ನು ಹೊಂದಬೇಕು ಇದಕ್ಕಾಗಿ ನಾವು ಅತ್ಯಂತ ಪ್ರಯತ್ನವನ್ನು ಪಟ್ಟು ಸಾಧಿಸಿ ಸದಾ ಆ ಅಭ್ಯಾಸದಲ್ಲಿ ನಿರತರಾಗಿರಬೇಕು ದೇವರನ್ನು ಪ್ರಾರ್ಥಿಸುತ್ತಾ ಆತನ ಅನ್ಯೋನ್ಯದಲ್ಲಿ ನೆಲೆಯಾಗಿದ್ದುಕೊಂಡು ಆತನ ಸಹಾಯದಿಂದ ದುಷ್ಪ್ರೇರಣೆಗಳನ್ನು ಜೈಸಬೇಕು ಇದನ್ನು ನಾವು ಸಿದ್ಧಿಗೆ ತರುವದು ಕ್ರಿಸ್ತನ ಬಲದಿಂದಲೇ ಆಗುವದರಿಂದ ಆತನನ್ನು ನಾವು ಆಶ್ರಯಿಸಿದರೆ ಆತನು ತನ್ನ ಪರಿಶುದ್ಧಾತ್ಮನನ್ನು ನಮಗೆ ಸಹಾಯವಾಗಿ ಕಳುಹಿಸಿ ನಮ್ಮನ್ನು ಕ್ರಮೇಣ ಈ ಕಾರ್ಯದಲ್ಲಿ ಸಿದ್ಧಿಗೆ ತರುವನು.

ಇತಿ ನಿನ್ನ ಪ್ರಿಯ ತಂದೆ

ಒಳದೇಶದ ವೃತ್ತಾಂತಗಳು.

ಚನ್ನಗಿರಿ ತಾಲ್ಲೂಕಿಗೆ ಸೇರಿದ ಮಾರೇನಹಳ್ಳಿ ಎಂಬ ಗ್ರಾಮದ ಹೆಸರನ್ನು ಸರ್ಕಾರದವರು ಗುರುಪುರವೆಂದು ಬದಲಾಯಿಸಿರುತ್ತಾರೆ.

* * *

ಕಳೆದ ವಾರವೂ ರಾಜಧಾನಿಯಲ್ಲಿ ಮೋಡ ಹಾಕಿಕೊಂಡು ಬಿರುಸಾದ ಶೀತ ಗಾಳಿ ಬೀಸುತ್ತಾ, ಆಗಾಗ್ಗೆ ತುಂತುರುಮಳೆ ಸುರಿಯುತ್ತಾ ಬಂದಿದೆ.

* * *

ದಿವಾನ್ ಮಿ|| ಎಂ. ವಿಶ್ವೇಶ್ವರಯ್ಯನವರು ಕಳೆದ ಭಾನುವಾರ ಬೆಂಗಳೂರಿನಿಂದ ಶಿವಗಂಗೆಗೆ ದಯಮಾಡಿದ್ದು ಆ ಸಾಯಂಕಾಲವೇ ವಾಪಸು ಬಂದರೆಂದು ತಿಳಿದುಬಂದಿದೆ.

* * *

ಬೆಂಗಳೂರು ದಂಡಿನಲ್ಲಿ ದಿನಸಿಗಳ ಧಾರಣೆವಾಸಿಯನ್ನು ಇಳಿಸುವುದಕ್ಕೋಸ್ಕರ ಅಕ್ಟ್ರಾಯಿ ಸುಂಕಗಳನ್ನೆಲ್ಲಾ ವಜಾ ಮಾಡಿಬಿಡಬೇಕೆಂದು ಮ್ಯುನಿಸಿಪಲ್ ಮೆಂಬರುಗಳು ಯೋಚಿಸುತ್ತಿದ್ದಾರೆ.

* * *

ವೈಸ್‌ರಾಯ್ ಪ್ರಭುಗಳ ಭೇಟಿಗಾಗಿ ಸಿಂಲಾಪಟ್ಟಣಕ್ಕೆ ದಯಮಾಡಿದ್ದ ನಮ್ಮ ಬ್ರಿಟಿಷ್ ರೆಸಿಡೆಂಟರವರು ತಮ್ಮ ಅಸಿಸ್ಟೆಂಟರ ಕೂಡ ಕಳೆದ ಶನಿವಾರ ವಾಪಸು ಬೆಂಗಳೂರಿಗೆ ಬಂದಿರುತ್ತಾರೆ.

* * *

ಬೆಂಗಳೂರು ದಂಡಿನಲ್ಲಿ 14 ವರುಷದ ಒಬ್ಬ ಹುಡುಗನು ಮಳ್ಳಿಗೆ ಒಡವೆಯನ್ನು ಕಳವು ಮಾಡುತ್ತಿದ್ದನು. ಅವನಿಗೆ ಮ್ಯಾಜಿಸ್ಟ್ರೇಟರು ಕಳೆದ ವಾರ ಒಂಭತ್ತು ತಿಂಗಳ ಕಠಿಣ ಸಜಾ ವಿಧಿಸಿರುತ್ತಾರೆ.

* * *

ಬೆಂಗಳೂರು ಕುದುರೆ ಜೂಜಿನ ರಸ್ತೆಯಲ್ಲಿ ಮಹಮದೀಯರಿಬ್ಬರು ಜೂಜಾಡುತ್ತಿದ್ದರು ಪೋಲೀಸಿನವರು ಅವರನ್ನು ಹಿಡಿದು ಅವರ ಮೇಲೆ ಮೊಕದ್ದಮೆ ತಂದದ್ದರಲ್ಲಿ ಮ್ಯಾಜಿಸ್ಟ್ರೇಟರು ಅವರಿಬ್ಬರಿಗೂ ತಲಾ 10 ರೂಪಾಯಿ ಜುಲ್ಮಾನೆ ಹಾಕಿದರು.

* * *

ಕಳೆದ ಜೂನ್ ತಾ 10 ನೇ ರಾತ್ರಿ ನಂಜನಗೂಡು ಟೌನ್ ಗಣೇಶಾಚಾರ್ಯರೆಂಬುವರ ಮನೆಯಲ್ಲಿ ಕಳುವಾದ ಸುಮಾರು ಆರು ಸಾವಿರ ರೂಪಾಯಿನ ಮಾಲುಗಳ ಪಟ್ಟಿಯನ್ನು ಪೋಲೀಸ್ ಇಲಾಖೆಯವರು ಪ್ರಕಟಮಾಡಿ, ಪತ್ತೆ ತರಿಸದು ನಡಿಸುತ್ತಿದ್ದಾರೆ.

* * *

ಬೆಂಗಳೂರಿನ ಸಮೀಪದಲ್ಲಿರುವ ಆಡುಗೋಡಿ ಗ್ರಾಮದಲ್ಲಿ ಒಂಭತ್ತು ಜನಗೆ ವಾಂತಿಭೇದಿ ಉಪದ್ರ ತಗಲಿ ಏಳು ಮಂದಿ ಕಾಲವಾದರೆಂದೂ, ಡಾಕ್ಟರ್ ಮುತ್ತುಸಾಮಿದಾಸ್‌ರವರು ಹೋಗಿ ಚಿಕಿತ್ಸೆ ಮುಂತಾಗದ್ದನ್ನು ಮಾಡಿ ಬಂದ ಮೇಲೆ ರೋಗವು ಶಮನವಾಯಿತೆಂದೂ ಪ್ರಕಟವಾಗಿದೆ.

* * *

ಮ್ಯುನಿಸಿಪಾಲಿಟಿಯವರು ಪ್ರಜೆಗಳಿಗೆ ಬಿಕರಿಮಾಡುವ ಜಮೀನು, ನಿವೇಶನ ಮುಂತಾದ ಸ್ಥಿರಸ್ವತ್ತುಗಳ ಬೆಲೆಯು 200 ರೂಪಾಯಿನೊಳಗಿದ್ದರೆ ಅಂಥಾ ವಿಕ್ರಯವನ್ನು ಆಯಾ ಡೆಪ್ಟಿ ಕಮಿಷನರುಗಳೇ ಸ್ಯಾಂಕ್ಷನ್ ಮಾಡುವಂತೆ ಸರ್ಕಾರದವರು ಕಾನೂನ್ ಬದಲಾವಣೆ ಮಾಡಿರುತ್ತಾರೆ.

* * *

ಬೆಂಗಳೂರು ಸಿಟಿ ಹೊಸ ತರಗಿನ ಪೇಟೆಯಲ್ಲಿ ಶಿವಣ್ಣನೆಂಬೊಬ್ಬ ವರ್ತಕನು ಕೆಟ್ಟ ತುಪ್ಪವನ್ನು ಪ್ರಜೆಗಳಿಗೆ ಬಿಕರಿಮಾಡುತ್ತಿದ್ದನೆಂದು ಮೊಕದ್ದಮೆ ಬಂದು ಸ್ಪೆಷಲ್ ಮ್ಯಾಜಿಸ್ಟ್ರೇಟರು ಆ ವರ್ತಕನಿಗೆ 40 ರೂಪಾಯಿ ಜುಲ್ಮಾನೆ ಇಲ್ಲವೇ ಆರು ವಾರಗಳ ಸಾದಾ ಸಜ ಎಂಬ ಶಿಕ್ಷೆಯನ್ನು ವಿಧಿಸಿರುತ್ತಾರೆ

* * *

ಜಂಜೀರಾ ಸಂಸ್ಥಾನದ ನವಾಬ್ ರಾಣೀ ಸಾಹೆಬಾಯವರು ಪರಿವಾರ ಸಮೇತ ಕಳೆದ ವಾರ ರಾಜಧಾನಿಗೆ ಬಂದು ಇಲ್ಲಿನ ಖಾಸಾ ಬಂಗಲೆಯಲ್ಲಿ ಇಳುಕೊಂಡು ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸುತ್ತಿದ್ದಾರೆ. ಅವರು ನಿನ್ನೆ ಮಹಾರಾಣೀರವರ ಕಾಲೇಜನ್ನು ನೋಡಿಕೊಂಡು ಬರುವವರಾಗಿದ್ದರು.

* * *

ದಾವಣಗೆರೆ ರೈಲ್ವೆ ಸ್ಟೇಷನ್ ಸೇತುವೆ ಬಳಿ ಜಾಫರನೆಂಬ ಒಬ್ಬ ಮಹಮ್ಮದೀಯ ಹುಡುಗನು ತನ್ನ ಸಹಪಾಟಿಯಾದ ಒಬ್ಬ ಹಿಂದೂ ಬಾಲಕನಿಗೆ ಮರಣಕರವಾದ ಗಾಯಮಾಡಿ ಭಂಗಾರದ ಆಭರಣವನ್ನು ಕಿತ್ತುಕೊಂಡ ಮೊಕದ್ದಮೆಯಲ್ಲಿ ಬೆಂಗಳೂರು ದಂಡಿನ ಮ್ಯಾಜಿಸ್ಟ್ರೇಟರು ಆ ಹುಡುಗನಿಗೆ ಏಳು ವರುಷ ಕಠಿಣಸಜಾ ವಿಧಿಸಿರುತ್ತಾರೆ.

* * *

ರಾಜಧಾನಿಯಲ್ಲಿ ಕೆಲವು ಮಹನೀಯರು ಬಡ ಪ್ರಜೆಗಳ ಹಿತವನ್ನು ಬಯಸಿ ಆಸ್ಪತ್ರೆ ಕಟ್ಟಡಗಳನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಡುತ್ತಿದ್ದಾರೆ ಆ ಕಟ್ಟಡಗಳ ಪಕ್ಕದಲ್ಲೇ ಆಯಾ ವೈದ್ಯರು ಸಂಸಾರಸಮೇತ ವಾಸಮಾಡುವಂತೆ ಮನೆಗಳು ಕಟ್ಟಿ ಅವರು ಸರ್ವದಾ ಅಲ್ಲೇ ಸಿಕ್ಕುವಹಾಗೆ ಆ ಮಹನೀಯರೋ ಅಥವಾ ಮ್ಯುನಿಸಿಪಾಲಿಟಿಯವರೋ ಇಲ್ಲವೇ ಸರ್ಕಾರದವರೋ ಅವಕಾಶಮಾಡಿಕೊಟ್ಟ ಪಕ್ಷದಲ್ಲಿ ರೋಗಿಗಳಿಗೆ ಚ್ಯುತಿ ಇಲ್ಲದಂಥಾ ಉಪಕಾರವಾದೀತು ಎಂದು ಸೂಚಿಸುತ್ತೇವೆ

* * *

ಕಳೆದ ಗುರುವಾರ ರಾತ್ರಿ ರಾಜಧಾನಿಯ ಗಗೇಶ್ವರಿ ಚೌಕದಲ್ಲಿ ವಾಸಮಾಡುವ ಗೋಪಾಲಯ್ಯಂಗಾರ್‍ರ ಮನೆಗೆ ಸುಬ್ಬ ಉರುಫ್ ನಂಜುಂಡನೆಂಬೊಬ್ಬ ಕೇಡಿಯು ಕಳವುಮಾಡುವುದಕ್ಕಾಗಿ ಒಳಗೆ ನುಗ್ಗಿದಾಗ ಮನೆಯವರು ಓಡಿಸಿಕೊಂಡು ಹೋಗುವಲ್ಲಿ ಅವನು ಸಿಕ್ಕದೆ ಓಡಿ ಹೋಗುತ್ತಿದ್ದುದನ್ನು ಡಿಟೆಕ್ಟಿವ್ ಪೋಲೀಸ್ ಸಾರ್ಜೆಂಟ್ ವಾಸಪ್ಪನು ಬೆನ್ನುಹತ್ತಿ ಹಿಡಿದು ಪೋಲೀಸಿಗೆ ಹಾಜರುಮಾಡಿದ್ದರ ಮೇಲೆ ತಾ 29 ರಲ್ಲಿ ಆ ಕೇಡಿಗೆ 19 ತಿಂಗಳ ಕಠಿಣಸಜವೂ 1 ತಿಂಗಳು ಗಂಜಿ ಹೌಸ್ ಸಜವೂ ಸಹ ಸಿಟಿ ಮ್ಯಾಜಿಸ್ಟ್ರೇಟರವರು ವಿಧಿಸಿದರು.

ಕಳೆದ ಏಪ್ರೆಲ್ ತಿಂಗಳಲ್ಲಿ ಮಾಗಡಿಯಲ್ಲಿ ನಡೆದ ತಿರುಮಲೆ ರಥೋತ್ಸವದ ಜಾತ್ರೆಕಾಲದಲ್ಲಿ ಸಾವಿರಾರು ಪ್ರಜೆಗಳೂ ಗೋಕಾಯಿಗಳೂ ಅಲ್ಲಿ ಸೇರಿದ್ದರೆಂದೂ, ಸ್ಥಳೀಯ ರೆವಿನ್ಯೂ ಅಧಿಕಾರಿಗಳು ಸ್ಯಾನಿಟರಿ ಏರ್ಪಾಡು ಮಾಡದೇನೂ ಒಳ್ಳೆ ಕುಡಿಯುವ ನೀರಿನ ವಸತಿಯನ್ನು ಕಲ್ಪಿಸದೇನೂ ಅಲಕ್ಷ್ಯಮಾಡಿದರೆಂದೂ, ಅಂಟುಜಾಡ್ಯಗಳೇನಾದರೂ ಪ್ರಾಪ್ತವಾಗಿದ್ದರೆ ಬಹಳ ಜನರು ಕಷ್ಟನಷ್ಟಗಳಿಗೆ ಗುರಿಯಾಗುತ್ತಿದ್ದರೆಂದೂ ಸ್ಯಾನಿಟರಿ ಕಮಿಷನರವರು ಬರೆದದ್ದರ ಮೇಲೆ ಗವರ್ನ್‌ಮೆಂಟಿನವರು ಇನ್ನು ಮುಂದೆ ಸಂಸ್ಥಾನದಲ್ಲಿ ನಡೆಯುವ ಜಾತ್ರೆಗಳಲ್ಲಿ, ಗೋಕಾಯಿಗಳ ಪ್ರದರ್ಶನಗಳಲ್ಲೂ ರೆವಿನ್ಯೂ ಅಧಿಕಾರಿಗಳು ಪ್ರಜೆಗಳ ಆರೋಗ್ಯವನ್ನು ಕಾಪಾಡುವ ಭಾಗದಲ್ಲಿ ಯಾವ ಏರ್ಪಾಡು ಮಾಡಿರುವರೆಂಬದನ್ನು ವಿವರವಾಗಿ ತಿಳಿಸಬೇಕೆಂದು ಹುಕುಂ ಕೊಟ್ಟಿದ್ದಾರೆ

ಶ್ರೀಮದ್ಯುವರಾಜರವರ ವಿದೇಶಸಂಚಾರವು.

[ಎಂ. ಎನ್. ಬಿ. ಯವರಿಂದ ಬರೆದು ಬಂದದ್ದು.]

ಯುವರಾಜರು ಬೊಂಬಾಯಿ ಪಟ್ಟಣವನ್ನು ತಾರೀಖು 22 ನೇ ಮಾರ್ಚಿಯಲ್ಲಿ ಬಿಟ್ಟು, ಮಾರ್‌ಸೇಲ್ಸ್ ಪಟ್ಟಣವನ್ನು 6 ನೇ ಏಪ್ರಿಲ್‌ನಲ್ಲಿ ತಲಪಿದರು. ಸವಾರಿ ಇದ್ದ ಜಹಜಿನಲ್ಲಿ ಅನೇಕ ಮಂದಿ ಪ್ರಯಾಣಸ್ಥರಿದ್ದರು ಇಂಡಿಯಾ ದೇಶದ ದೊಡ್ಡ ಮನುಷ್ಯರುಗಳು ಸುಮಾರು ಇಪ್ಪತ್ತು ಮಂದಿಯಷ್ಟು ಇದ್ದರು. ಪೋರ್ಟ್ ಸೇಡ್ ವರೆಗೆ ಸಮುದ್ರವು ಬಹಳ ನಿಶ್ಚಂಚಲವಾಗಿತ್ತು ಅನಂತರ ಮಾರ್‌ಸೇಲ್ಸ್ ತಲಪುವ ವರೆಗೆ ಮೂರು ದಿನಗಳು ಅಲೆಗಳು ಕೊಂಚ ರಭಸವಾಗಿ ಸಮುದ್ರವು ಅಲ್ಲೋಲಕಲ್ಲೋಲವಾಗಿತ್ತು. ಮಾರ್‌ಸೇಲ್ಸ್ ಪಟ್ಟಣದಲ್ಲಿ ಅವರು ಮೂರು ದಿನಗಳಿದ್ದು, ಅಲ್ಲಿನ ಮುಖ್ಯ ಸ್ಥಳಗಳನ್ನೂ ಮತ್ತು ಫ್ರೆಂಚ್ ಚರಿತ್ರೆಗೆ ಸಂಬಂಧಪಟ್ಟ ಅನೇಕ ಜಾಗಗಳನ್ನೂ ನೋಡಿಕೊಂಡು, 7 ನೇ ತಾರೀಖು ಮುಂದಕ್ಕೆ ಪ್ರಯಾಣವನ್ನು ಬೆಳಸಿದರು.

ಕ್ಯಾನ್ ಎಂಬ ಪಟ್ಟಣವು ಮಾರ್‌ಸೇಲ್ಸ್‌ನಿಂದ ಸುಮಾರು 175 ಮೈಲಿಯಾಗುತ್ತದೆ. ಈ ಪ್ರಯಾಣವನ್ನು ಮೋಟಾರ್ ಗಾಡಿಯಲ್ಲಿ ಬೆಳಸಿದರು. ಸುತ್ತಲೂ ಇರುವ ವ್ಯವಸಾಯವಾದ ಜಮೀನುಗಳನ್ನೂ, ಹಣ್ಣಿನ ಮತ್ತು ಹೂವಿನ ತೋಟಗಳನ್ನೂ ನಿದಾನವಾಗಿ ನೋಡಬೇಕೆಂಬ ಉದ್ದೇಶದಿಂದಲೇ ಮೋಟಾರಿನಲ್ಲಿ ದಯಮಾಡಿದ್ದು ಕ್ಯಾನ್ ಪಟ್ಟಣವು ಅತಿ ರಮ್ಯವಾದ ಸ್ಥಳ. ಗತಿಸಿದ ಎಡ್ವರ್ಡ್ ಸಾರ್ವಭೌಮರವರಿಗೆ ಈ ಪಟ್ಟಣದ ಮೇಲೆ ಬಹಳ ವಿಶ್ವಾಸವಿತ್ತು ಇವರ ಜ್ಞಾಪಕಾರ್ಥವಾಗಿ ಇವರ ಪ್ರತಿಮೆ ಒಂದನ್ನು ಇಲ್ಲಿಟ್ಟಿದ್ದಾರೆ.

ಯೂರೋಪಿನ ದೊಡ್ಡ ಮನುಷ್ಯರುಗಳೆಲ್ಲಾ ರಿವೀರ ಎಂಬ ಪ್ರಾಂತ್ಯಕ್ಕೆ ಸಾಧಾರಣವಾಗಿ ಛಳಿಗಾಲದಲ್ಲಿ ಬರುತ್ತಾರೆ; ಎಂದರೆ, ನವಂಬರು ತಿಂಗಳಿಂದ ಮೇ ತಿಂಗಳ ವರೆಗೆ ಇಲ್ಲಿಗೆ ಬರುತ್ತಾರೆ. ಈ ಪ್ರಾಂತ್ಯದ ಕೆಲವು ಭಾಗವು ಇಟಲಿಯಲ್ಲೂ, ಕೆಲವು ಭಾಗ ಫ್ರಾನ್ಸ್‌ನಲ್ಲೂ ಇದೆ. ಸಮುದ್ರ ತೀರದಿಂದಲೂ ಮತ್ತು ಪರ್ವತಭರಿತವಾಗಿಯೂ ಇರುವುದರಿಂದ ಈ ಪ್ರಾಂತ್ಯವು ರಮ್ಯವಾಗಿರುವುದಲ್ಲದೆ ಬಹಳ ಆರೋಗ್ಯಕರವಾಗಿಯೂ ಇದೆ. ಮತ್ತು ಯೂರೋಪಿನ ದೊಡ್ಡ ಪಟ್ಟಣಗಳ ಗಲಾಟೆ ಮುಂತಾದದ್ದು ಇಲ್ಲದೆ ಋಷ್ಯಾಶ್ರಮದ ಹಾಗಿದೆ ಕ್ಯಾನ್ ಪಟ್ಟಣದ ಹತ್ತಿರ ಇರುವ ಗ್ರಾಸ್ ಪಟ್ಟಣಕ್ಕೆ ಸವಾರಿ ದಯಮಾಡಿಸಿ ಪ್ರಸಿದ್ಧವಾದ ಫ್ರೆಂಚ್ ಅತ್ತರ್ ಕಾರ್ಖಾನೆಯನ್ನು ನಿದಾನವಾಗಿ ಪರಾಂಬರಿಸಿದರು ಮುಂದಕ್ಕೆ ಮಾಂಟಿ ಕಾರ್ಲೋ ಪಟ್ಟಣಕ್ಕೆ ದಯಮಾಡಿಸಿದರು. ಕ್ಯಾನ್ ಮತ್ತು ಮಾಂಟಿ ಕಾರ್ಲೊ ಇವೆರಡು ರಿವೀರ ಪ್ರಾಂತ್ಯದಲ್ಲಿರುವವು. ಮಾಂಟಿ ಕಾರ್ಲೋ ಮೊನಾಕೊ ಎಂಬ ಚಿಕ್ಕ ರಾಜ್ಯದಲ್ಲಿದೆ ಈ ದೇಶದ ದೊರೆ ಸಮುದ್ರಕ್ಕೆ ಸಂಬಂಧಪಟ್ಟ ಸಮಸ್ತ ವಿಷಯಗಳನ್ನೂ ಬಹಳ ಚೆನ್ನಾಗಿ ಓದಿ ವ್ಯಾಸಂಗಮಾಡಿದ್ದಾರೆ. ನೀರಿಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳನ್ನೂ ತಿಳಿಸುವ ಒಂದು ದೊಡ್ಡ ಪ್ರದರ್ಶನ ಶಾಲೆಯನ್ನು ಇವರ ಊರಿನಲ್ಲಿ ದೊರೆಯೇ ಸ್ವಂತವಾಗಿ ಕಟ್ಟಿಸಿದ್ದಾರೆ. ಇದನ್ನು ಯುವರಾಜರವರು ಪರಾಂಬರಿಸಿದರು. ಈ ಪಟ್ಟಣದಲ್ಲಿ ಫರಮಾಯಿಸಿಯಾದ ಮಣ್ಣಿನ ಸಾಮಾನನ್ನು ತಯಾರು ಮಾಡುವ ಚಿಕ್ಕ ಚಿಕ್ಕ ಕಾರ್ಖಾನೆಗಳಿವೆ. ಇವರ ಪೈಕಿ ಒಂದನ್ನು ಪರಾಂಬರಿಸಿದರು.

ಮಾಂಟಿ ಕಾರ್ಲೋ ಪಟ್ಟಣದಿಂದ ಇಟಲಿಯಲ್ಲಿರುವ ಜಿನೋವಾ ಪಟ್ಟಣಕ್ಕೆ ಯುವರಾಜರವರು ದಯಮಾಡಿಸಿ ಅಲ್ಲಿಂದ ಮುಂದೆ ರೋಮ್ ಪಟ್ಟಣಕ್ಕೆ ಚಿತ್ತೈಸಿದರು ರೋಮ್‌ನಲ್ಲಿ ನೋಡಬೇಕಾದ ಅಂಶಗಳು ಬೇಕಾದಷ್ಟಿದ್ದವು ಮೊದಲು ಇಲ್ಲಿ ಮೂರು ದಿನಗಳು ನಿಲ್ಲಬೇಕೆಂದಿದ್ದದ್ದು, ಒಂದು ವಾರಕ್ಕೆ ಹೆಚ್ಚಿಸಲ್ಪಟ್ಟಿತು. ರೋಮ್‌ನಲ್ಲಿ ಕ್ರಿಸ್ತಶಕೆಗೆ ಎಷ್ಟೋ ವರುಷಗಳ ಪೂರ್ವದಲ್ಲಿ ಇದ್ದ ರೋಮ್ ಜನರ ನಾಗರೀಕತೆಯು ಲೋಕಪ್ರಸಿದ್ಧವಾಗಿಯೇ ಇದೆ. ರೋಮನ್ ಚಕ್ರವರ್ತಿಗಳು ವಾಸಮಾಡುತ್ತಿದ್ದ ಅರಮನೆಯೇ ಮುಂತಾದ ರೋಮನ್ ಜನಗಳ ನಾಗರೀಕತೆಯನ್ನು ತೋರಿಸುವ ಕಟ್ಟಡಗಳನ್ನೂ ಮತ್ತೂ ಪದಾರ್ಥಗಳನ್ನೂ ಬಹಳ ಸಾವಕಾಶದಿಂದ ಪರಾಂಬರಿಸಿದರು. ಈ ಊರಿನಲ್ಲಿ ಪ್ರಸಿದ್ಧವಾದ ಮ್ಯಾಡಮ್ ಮಾಂಟೆಸೊರಿಯವರ ಪಾಠಶಾಲೆಗೆ ದಯಮಾಡಿಸಿ, ಅಲ್ಲಿ ಆಟದ ಬಾಲ್ಯಪಾಠಕ್ರಮಗಳನ್ನೆಲ್ಲಾ ಪರಾಂಬರಿಸಿದರು.

ರೋಮ್ ಆದನಂತರ ಫ್ಲಾರೆನ್ಸು ಮತ್ತು ವೆನಿಸ್ ಪಟ್ಟಣಗಳಿಗೆ ದಯಮಾಡಿಸಿದ್ದರು. ಫ್ಲಾರೆನ್ಸ್ ಪಟ್ಟಣದ ಕಲ್ಲುಕೆಲಸವೂ, ವೆನಿಸ್ ಪಟ್ಟಣದ ಗಾಜಿನ ಕೆಲಸವೂ ನೂರಾರು ವರುಷಗಳಿಂದ ಜಗತ್ಪ್ರಸಿದ್ಧವಾಗಿದೆ. ಯುವರಾಜರು ಈ ಎರಡು ಕಾರ್ಖಾನೆಗಳಿಗೂ ದಯಮಾಡಿಸಿ, ಸಾಮಾನುಗಳನ್ನು ಮಾಡುವ ವಿಧಾನಗಳನ್ನೆಲ್ಲಾ ಪರಾಂಬರಿಸಿದರು.

ಮುಂದಕ್ಕೆ ಕೊಂಚ ಭಾಗ ಇಟಲಿಯಲ್ಲೂ, ಕೊಂಚ ಭಾಗ ಸ್ವಿಟ್ಸರ್‌ಲ್ಯಾಂಡಿನಲ್ಲೂ ಇರುವ ಲೇಕ್ ಡಿಸ್ಟ್ರಿಕ್ಟಿಗೆ ದಯಮಾಡಿಸಿದರು ಇಟಲಿಯ ಉತ್ತರ ಭಾಗದಲ್ಲೂ ಮತ್ತು ಸ್ವಿಟ್ಸರ್‌ಲ್ಯಾಂಡಿನಲ್ಲೂ ಅನೇಕ ಸರೋವರಗಳಿವೆ. ಈ ಸರೋವರಗಳ ಅಂಚಿನಲ್ಲಿರುವ ಪಟ್ಟಣಗಳು ದೇವಲೋಕದ ಪಟ್ಟಣಗಳೋ ಎನ್ನುವಷ್ಟು ರಮ್ಯವಾಗಿವೆ. ಇಂಥಾ ಪಟ್ಟಣಗಳಲ್ಲಿ ಲೂಸರ್ನ್ ಪಟ್ಟಣ ಒಂದು. ಈ ಪಟ್ಟಣದ ಸುತ್ತಲೂ ಹಿಮದಿಂದ ತುಂಬಿದ ಆಲ್ಪ್ಸ್ ಪರ್ವತಗಳಿವೆ. ಇವುಗಳಲ್ಲಿ ರಿಜ್ಜಿ ಎಂಬ ಮುಖ್ಯ ಶಿಖರಕ್ಕೆ ಯುವರಾಜರು ದಯಮಾಡಿಸಿದ್ದರು. ಲೂಸರ್ನ್ ಪಟ್ಟಣದಲ್ಲಿ ಒಂದು ವಾರ ಇದ್ದು, ಅನಂತರ ಪ್ಯಾರಿಸ್ ಪಟ್ಟಣಕ್ಕೆ ದಯಮಾಡಿಸಿದರು ಈ ಪಟ್ಟಣದಲ್ಲಿ ಅನೇಕ ಹೊಸಹೊಸವಾದ ಸಾಮಾನುಗಳನ್ನು ಪರಾಂಬರಿಸಿದರು. ವಿದ್ಯುಚ್ಛಕ್ತಿ ಸಹಾಯದಿಂದ ಮನುಷ್ಯನ ಕೈಸಹಾಯವಿಲ್ಲದೆ ಪಸುವಿನ ಹಾಲು ಕರೆಯುವ ಯಂತ್ರವನ್ನು ಪರಾಂಬರಿಸಿ, ಒಂದನ್ನು ಒಪ್ಪಿಸಿಕೊಂಡರು ಈ ದೇಶದಲ್ಲಿ ಕುದುರೆಗಳನ್ನು ಸಾಕಿ ಬೆಳೆಸುವ ಒಂದು ಸ್ಟಡ್ ಫಾರಂ ಎಂಬ ಜಾಗವನ್ನು ಪರಾಂಭರಿಸಿದರು.

ಲಂಡನ್ ಪಟ್ಟಣಕ್ಕೆ 22 ನೇ ಮೇ ತಾರೀಖಿಗೆ ದಯಮಾಡಿಸಿದರು. ನಮ್ಮ ಪತ್ರಿಕೆಯಲ್ಲಿ ಕೋಲಾರದ ಚಿನ್ನದ ಕಂಪನಿಯವರು ಯುವರಾಜರಿಗೆ ಔತಣವನ್ನು ಮಾಡಿಸಿದ್ದನ್ನು ತಿಳಿಸಿಯೇ ಇದೇವೆ. ಯುವರಾಜರು ಚಕ್ರವರ್ತಿಯವರನ್ನು ಮತ್ತು ಚಕ್ರವರ್ತಿನಿಯವರನ್ನೂ ಭೇಟಿ ಮಾಡಿದರು. ಫ್ರೆಂಚ್ ಪ್ರೆಸಿಡೆಂಟರು ಇಲ್ಲಿಗೆ ಬಂದಿದ್ದಾಗ್ಗೆ ನಡೆದ ಸ್ಟೇಟ್ ಬಾಲಿಗೆ ಯುವರಾಜರವರೂ ಕರೆಯಲ್ಪಟ್ಟಿದ್ದರು.

ಇಲ್ಲಿ ಮೈಸೂರಿಗೆ ಬಂದಿದ್ದ ಯೂರೋಪಿಯನ್ ದೊಡ್ಡಮನುಷ್ಯರುಗಳು ಅನೇಕ ಮಂದಿ ಇದ್ದಾರೆ. ಇವರುಗಳು ಯುವರಾಜರನ್ನು ಭೇಟಿ ಮಾಡುತ್ತಾ ಇದ್ದಾರೆ. ಇವರುಗಳ ಪೈಕಿ ಎಷ್ಟೋ ಮಂದಿ ಸವಾರಿಯನ್ನು ಅವರುಗಳ ಮನೆಗೆ ಔತಣಕ್ಕೆ ಕರೆದಿದ್ದರು. ಮಿ|| ಮಾಂಟೇಗ್‌ಯವರು ಯುವರಾಜರಿಗೆ ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭಾಮನೆಯಲ್ಲಿ ಒಂದು ಔತಣವನ್ನು ಕೊಟ್ಟರು. ಅಗ್ಗೆ ಮಿ|| ಆಸ್ಕಿತ್ ಮೊದಲಾದ ಅನೇಕ ಪಾರ್ಲಿಮೆಂಟಿನ ಮೆಂಬರುಗಳು ಕರೆಯಲ್ಪಟ್ಟಿದ್ದರು. ಲಾರ್ಡ್ ಕರ್ಜನ್‌ರವರು ತಮ್ಮ ಮನೆಯಲ್ಲಿ ಸವಾರಿಗೆ ಔತಣವನ್ನು ಮಾಡಿಸಿ, ಮೈಸೂರಿನ ವಿಷಯವಾಗಿ ಬಹಳ ಹೊತ್ತು ಮಾತನಾಡಿದರು.

ಸದ್ಯಕ್ಕೆ ಈ ತಿಂಗಳ ಕೊನೆಯವರೆಗೆ ಇಲ್ಲೇ ಇರುವದೆಂದು ಗೊತ್ತಾಗಿದೆ. ಆಗಸ್ಟ್ ತಿಂಗಳಲ್ಲಿ ಬಹುಶಃ ಇಂಗ್ಲಾಂಡಿನ ಮುಖ್ಯವಾದ ಕಸಬು ಮತ್ತು ವ್ಯಾಪಾರಸ್ಥಳಗಳನ್ನು ಪರಾಂಬರಿಸುವುದಕ್ಕೆ ಒಂದು ತಿಂಗಳು ಸಂಚರಿಸಬಹುದು. ಸೆಪ್ಟಂಬರ್ 5 ನೇ ತಾರೀಖು ಮಾರ್ಸೇಲ್ಸಿನಿಂದ ಹೊರಟು, 19 ನೇ ತಾರೀಖು ಬೊಂಬಾಯಿ ಪಟ್ಟಣಕ್ಕೆ ತಲಪುವುದೆಂದು ಸದ್ಯಕ್ಕೆ ಗೊತ್ತಾಗಿದೆ. ಅದುವರೆಗೆ ನಡೆಯುವ ಮುಖ್ಯ ಸಂಗತಿಗಳನ್ನು ತಮಗೆ ಆಗಿಂದಾಗ್ಗೆ ತಿಳಿಸುತ್ತೇನೆ.

ಈ ತಿಂಗಳು 15 ನೇ ತಾರೀಖು ಯುವರಾಜರು ರಿಟ್ಸ್ ಹೋಟೇಲಿನಲ್ಲಿ ಒಂದು ಅಟ್ ಹೋಮನ್ನು ಇಲ್ಲಿನ ದೊಡ್ಡಮನುಷ್ಯರುಗಳಿಗೆಲ್ಲಾ ಕೊಡುವರು.

ಜೂಲೈ ತಿಂಗಳ 2 ನೇ ತಾರೀಖಿನಲ್ಲಿ ಲಂಡನ್ ಪಟ್ಟಣದ ಹೋಟೆಲ್ ಮೆಟ್ರೊಪೋಲ್ ಬಂಗಲೆಯ ವೈಟ್‌ಹಾಲ್ ರೂಮ್ ಎಂಬ ಭಾಗದಲ್ಲಿ ಮೈಸೂರು ಡಿನ್ನರ್ ಎಂಬ ಔತನ ಜರುಗಿದ ವೃತ್ತಾಂತವು ಕಳೆದ ಸೋಮವಾರ ತಲಪಿದ ಸೀಮೆ ಟಪ್ಪಾಲಿನ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ ಬ್ರಿಗ್ ಮ್ಯಾಕೆಟ್‌ರವರು ಆ ಔತನದಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರಮುಖರಾದ ಗಣ್ಯ ಸರದಾರರು ಹಾಜರಾಗಿದ್ದರು. ಯುವರಾಜರವರಿಗೆ ದೇಹಾಲಸ್ಯವಾಗಿದ್ದು ಈ ಔತನದಲ್ಲಿ ಹಾಜರಾಗಿರಲು ಅವಕಾಶವಾಗದೆ ಹೋಯಿತೆಂದೂ, ಈ ವಿಚಾರವು ಸಾಮಾಜಿಕರಿಗೆಲ್ಲಾ ವ್ಯಸನವನ್ನುಂಟುಮಾಡಿತೆಂದೂ ಅವರೆಲ್ಲಾ ಮೈಸೂರು ಮಹಾರಾಜರವರ ಮತ್ತೂ ಯುವರಾಜರವರ ಆಯುರಾರೋಗ್ಯಾದಿಗಳನ್ನು ಬಯಸಿ ಕೂಟವನ್ನು ಮುಕ್ತಾಯಕ್ಕೆ ತಂದರೆಂದೂ ಗೊತ್ತಾಗುತ್ತದೆ—ಎಡಿ.]

ಮೈಸೂರು ಗೆಜೆಟ್ ಸಂಗ್ರಹ.

ಮಿ|| ಶಿವಲಿಂಗ ಶೆಟ್ಟರನ್ನು ಚಿಕ್ಕನಾಯಕನಹಳ್ಳಿ ತಾಲ್ಲೂಕ್ ಬೋರ್ಡ್ ಮೆಂಬರಾಗಿ ನೇಮಕಮಾಡಿದೆ.

ಬೌರಿಂಗ್‌ಪೇಟೆ ತಾಲ್ಲೂಕಿಗೆ ಸೇರಿದ 21 ಗ್ರಾಮಗಳಲ್ಲಿ ದೊಂದುರಾಸುಗಳಿಗೆ ಮುಂದೆ ಹೇಳುವ ದರಗಳಂತೆ ಪೌಂಡು ಛಾರ್ಜು ವಸೂಲಾಗತಕ್ಕದ್ದು:— ಆನೆಗೆ 4 ರೂಪಾಯಿ, ಒಂಟೆ ಅಥವಾ ಎಮ್ಮೆಕೋಣಕ್ಕೆ 1 ರೂಪಾಯಿ; ಕುದುರೆ, ಹಸು, ಎತ್ತು ಮುಂತಾದ್ದಕ್ಕೆ 8 ಆಣೆ, ಕರ, ಕತ್ತೆ, ಹಂದಿಗೆ 4 ಆಣೆ, ಆಡು, ಕುರಿ ಮುಂತಾದ್ದಕ್ಕೆ 2 ಆಣೆ.

ಹೊಸದುರ್ಗ ತಾಲ್ಲೂಕ್ ಅಮಲ್ದಾರ್ ಮಿ|| ಜಿ. ನಾರಾಯಣರಾಯರಿಗೆ ರೆವಿನ್ಯೂ ಕಮಿಷನರವರು ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೂ ಹದಿನೈದು ದಿನಗಳಿಗೆ ಜಾಸ್ತಿಮಾಡಿದೆ.

ಡೆಪ್ಟಿ ಕಮಿಷನರ್ ಮಿ|| ಕೆ ಚಾಂಡಿಯವರು ರಜದಿಂದ ಬಂದು ಜೂನ್ ತಾ. 5 ರಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಇರುವ ರಜವನ್ನು ರದ್ದುಮಾಡಿದೆ.

ಗವರ್ನ್‌ಮೆಂಟ್ ಸೆಕ್ರಿಟರಿ ಮಿ|| ಕೆ. ಆರ್. ಶ್ರೀನಿವಾಸಯ್ಯಂಗಾರ್‍ರು ರಜದಿಂದ ಬಂದು ಜೂಲೈ ತಾ. 17 ರಲ್ಲಿ ಕೆಲಸದ ಛಾರ್ಜನ್ನು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದುಮಾಡಿದೆ.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕೆಲಸಮಾಡುವ ಪ್ರೊಬೇಷನರ್ ಮ|| ಅಬ್ದುಲ್ ಅಜಿಸ್‌ಖಾನ್‌ರವರಿಗೆ 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವ [illegible]

ನೀರಿನ ಸರಬರಾಯಿ ಮತ್ತು ಸ್ಯೂಯೇರ್ ಡಿವೀಜನ್ ಅ|| ಇಂಜಿನಿಯರ್ ಮಿ|| ಎಂ. ಎ. ಶ್ರೀನಿವಾಸಾಚಾರ್ಯರಿಗೆ ಮೇ ತಾ 26 ರಿಂದ ಹತ್ತು ದಿವಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಪಬ್ಲಿಕ್ ವರ್ಕ್ಸ್ ಸೆಕ್ರಿಟರಿ ಆಫೀಸಿನ ಸ್ಪೆಷಲ್ ಅಸಿಸ್ಟೆಂಟರಾದ ಮಿ|| ಎಂ. ಜಿ ರಂಗಯ್ಯನವರಿಗೆ ಜೂನ್ ತಾ. 7 ರಿಂದ ಹನ್ನೊಂದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಗವರ್ನ್‌ಮೆಂಟಿನ ಚೀಫ್ ಇಲೆಕ್ಟ್ರಿಕಲ್ ಇಂಜನಿಯರ್ ಮಿ|| ಸಿ. ಎಫ್. ಬೇಮ್ಸ್‌ರವರಿಗೆ ಕೊಟ್ಟಿದ್ದ ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾಗಿ ರದ್ದುಮಾಡಿದೆ

ಶಿವಮೊಗ್ಗೆಯಿಂದ ಕುಂಸಿ ವರೆಗಿರುವ ಟ್ರಾಂವೇ ರಸ್ತೆಯನ್ನು ಸಿರಿಗೆರೆ ಪಕ್ಕದಿಂದ ಕಲ್ಲುಕೊಪ್ಪದ ಮೇಲೆ ಶಂಕರಗುಡ್ಡದ ತನಕ ಬದಾವಣೆ ಮಾಡಲು ಸರ್ಕಾರದವರು ಆ ಕಂಪನಿಯವರಿಗೆ ಸರ್ವೆಮುಂತಾದ್ದು ಮಾಡುವ ಅಧಿಕಾರವನ್ನು ವಹಿಸಿರುತ್ತಾರೆ

ಹುಣಸೂರು ತಾಲ್ಲೂಕು ಸಬ್ ಪ್ರೊಡಂ ಅಮಲ್ದಾರ್ ಮಿ|| ಆರ್ ಎ ನರಸಿಂಹಯ್ಯಂಗಾರ್‍ರು ರಜದಿಂದ ಬಂದು ಜೂನ್ ತಾ 11 ರಲ್ಲಿ ಕೆಲಸದ-ಛಾರ್ಜು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದ ರಜವನ್ನು ರದ್ದುಮಾಡಿದೆ.

ಪಾವಗಡ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮಿ|| ಬಿ. ಮೊಹರಿಂಗ್ಟೋಫ್‌ಯವರು ರಜದಿಂದ ವಾಪಸು ಬಂದು ಏಪ್ರೆಲ್ ತಾ. 28 ರಲ್ಲಿ ಕೆಲಸದ ಛಾರ್ಜು ವಹಿಸಿಕೊಂಡದ್ದರಿಂದ ಅವರು ಉಪಯೋಗಿಸಿಕೊಳ್ಳದೆ ಉಳಿದ ರಜವನ್ನು ರದ್ದುಮಾಡಿದೆ.

ಗುಬ್ಬಿ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮಿ|| ಟಿ. ಸ್ವಾಮಿನಾಥಶಾಸ್ತ್ರಿಯವರಿಗೆ ಜೂನ್ ತಾ. 8 ರಿಂದ ಎಂಟು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಶಿರಸ್ತೆದಾರ್‍ರು ಆಗ ತಾಲ್ಲೂಕ್ ಛಾರ್ಜನ್ನು ವಹಿಸಿದ್ದರು.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಮೀಟಿಂಗು.

ಕಳೆದ ಶನಿವಾರ ಬೆಳಗ್ಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಲರುಗಳು ಸೇರಿ ತಿಂಗಳು ಕಟ್ಲೆಯ ಮೀಟಿಂಗನ್ನು ನಡಿಸಿ ತೀರ್ಮಾನಮಾಡಿರುವ ವಿಚಾರಗಳೇನೆಂದರೆ,—

ಚಾಮರಾಜಪೇಟೆಯಲ್ಲಿ ಮ॥ ಬುಳ್ಳಪ್ಪನವರು ತಮ್ಮ ಮನೆಯ ದಕ್ಷಿಣ ಪಾರ್ಶ್ವದಲ್ಲಿರುವ 125 × 330 ಅಡಿ ವಿಸ್ತಾರವಾದ ಖಾಲಿ ಮ್ಯುನಿಸಿಪಲ್ ಪ್ರದೇಶವನ್ನು ತಮಗೆ ವಹಿಸಿಕೊಟ್ಟರೆ ಅಲ್ಲಿ ಹಾಸ್ಟಲಾಗೋಡಿಸಿ ಪ್ರಜೆಗಳ ವಿಹಾರಕ್ಕಾಗಿ ಉದ್ಯಾನವನವನ್ನು ಬೆಳೆಸಿ ಪ್ರತಿ ತಿಂಗಳಲ್ಲೂ ಸಿಬ್ಬಂದಿ ಇಟ್ಟು ಅದನ್ನು ಒಳ್ಳೇ ಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕೆ 300 ರೂಪಾಯಿ ಖರ್ಚು ಮಾಡುತ್ತಾ ಬರುವುದಾಗಿ ತಿಳಿಸಿದ್ದರು ಈ ವಿಚಾರವು ಸ್ವಲ್ಪ ಹೊತ್ತು ಚರ್ಚೆ ನಡೆದು ಮೆಂಬರುಗಳು ಮ॥ ಬುಳ್ಳಪ್ಪನವರ ಅಭಿಮತವನ್ನು ಕ್ರಮವಾಗಿ ಬರಹ ಮೂಲಕ ತರಿಸಿಕೊಂಡು ಚರ್ಚೆಮಾಡಬೇಕೆಂದು ತೀರ್ಮಾನಮಾಡಿದರು

ಅಡ್ವೊಕೇಟ್ ಮ॥ ಸಿ ವಿ ನರಸಿಂಹಯ್ಯಂಗಾರ್ರವರು ಕೆಲವು ಮೊಕದ್ದಮೆಗಳನ್ನು ಮ್ಯುನಿಸಿಪಾಲಿಟಿಯ ತರಫ್ ನಡಿಸಿರುವುದಕ್ಕಾಗಿ ತಮಗೆ ಮ್ಯುನಿಸಿಪಾಲಿಟಿಯಿಂದ ರೂ 430 ಫೀಜು ಬರಬೇಕೆಂದು ತಿಳಿಸಿ ಕೇಳಿದ್ದರು ಮೆಂಬರುಗಳು ಅಷ್ಟು ಹೆಚ್ಚು ಹಣ ಕೊಡಲು ಅನುಕೂಲವಿಲ್ಲವೆಂದೂ, 250 ರೂಪಾಯಿ ಮಾತ್ರ ಕೊಡಬಹುದೆಂದೂ, ಅದನ್ನು ಅಂಗೀಕರಿಸುವಂತೆ ಅಡ್ವೊಕೇಟರಿಗೆ ಬರೆದು ತಿಳಿಸಬೇಕೆಂದೂ ಒಪ್ಪಿರುತ್ತಾರೆ

ಕಬ್ಬಿನ ಬೀಜ ಮತ್ತೂ ಅದರ ವ್ಯವಸಾಯ.

ಬಿತ್ತನೆಗೆ ಬೀಜವನ್ನು ಚುನಾಯಿಸುವಾಗ ಪ್ರತಿ ಕಬ್ಬನ್ನೂ ಪರೀಕ್ಷಿಸಿ ನೋಡಿ ರೋಗದ ಚಿಹ್ನೆಯು ಸ್ವಲ್ಪವೂ ಇಲ್ಲದಿರುವವುಗಳನ್ನೇ ಆರಿಸಿಟುಕೊಳ್ಳುತ್ತಾರೆ ಇದರಿಂದ ಸಾಟಿ ಕೆಲಸವು ಸಲ ಕ್ರಮವಾಗುವುದು ಆದರೆ ಮುಖ್ಯರು ಸುಲಭವಾಗಿ ಬೆಳೆಯುವ ನಂಬಿಕೆಯುಂಟು ಕಬ್ಬಿನ ವ್ಯವಸಾಯಗಾರರು ಗಮನಿಸಬೇಕಾದ ಮುಖ್ಯವಾದ ವಿಷಯಗಳಾವುವೆಂದರೆ—

(1) ಬಿತ್ತುವ ಪ್ರದೇಶದಲ್ಲಿರುವ ಮತ್ತೂ ಬೇರು ಎಂದು ರೋಗಗಳು ಇಲ್ಲದಿರುವ ಜನಿನಾನುಗಳನ್ನೇ ಕಬ್ಬಿನ ಬೆಳೆಗಾಗಿ ಚುನಾಯಿಸುವುದು (2) ಆಳವಾಗಿ ಉಳುವುದು ಇದರಿಂದ ಬೇರುಗಳು ಚೆನ್ನಾಗಿ ಹಬ್ಬಿ ಪೈರುಗಳು ಭದ್ರವಾಗಿ ನಿಲ್ಲುವುದು ಮಾತ್ರವಲ್ಲದೆ ಸಸ್ಯಾಹಾರಗಳು ಬೇರಿಗೆ ಸುಲಭವಾಗಿ ಒದಗುವವು (3) ರೋಗವಿಲ್ಲದ ಕಬ್ಬಿನಿಂದಲೇ ಬಿತ್ತನೆಗೆ ಕಬ್ಬನ್ನು ಕತ್ತರಿಸಿಕೊಳ್ಳಬೇಕು ರೋಗವಿಲ್ಲದ ಕಬ್ಬು ಗಳಿರುವ ಗದ್ದೆಯ ಮಧ್ಯೆ ಒಂದು ಭಾಗದಲ್ಲಿ ಸುಲಭವಾಗಿ ರೋಗಕ್ಕೆ ಗುರಿಯಾಗತಕ್ಕ ಪಟಾಪಟಿ ಮೊದಲಾದ ಜಾತಿಯ ಸ್ವಲ್ಪ ಕಬ್ಬನ್ನು ನೆಡುವುದು ಬಹಳ ಕೆಟ್ಟ ಪದ್ಧತಿ ಬಿತ್ತನೆಗಾಗಿ ಕೆಲವರು ಹೀಗೆ ಮಾಡುವುದುಂಟು ಆದರೆ ಇದು ಶುದ್ಧ ಅವಿವೇಕದ ಕೆಲಸ ಇದರಿಂದ ರೋಗವು ಹಬ್ಬಲು ಅನುಕೂಲವಾಗುತ್ತದೆ ಪಟಾಪಟಿ ಕಬ್ಬು ಒಳ್ಳೇ ಜಾತಿಗೆ ಸೇರಿದ್ದೇನೋ ಹೌದು ಆದರೆ ಈಚೆಗೆ ಅದು ಬಹಳವಾಗಿ ರೋಗಕ್ಕೆ ಗುರಿಯಾಗಿರುವದರಿಂದ ಅದರ ವ್ಯವಸಾಯವು ಕಡಿಮೆಯಾಗುತ್ತಿದೆ (4) ಕಬ್ಬನ್ನು ಸಾಲಾಗಿ ನೆಟ್ಟು ಗುಂಡಿಗಳನ್ನು ಸಾಧ್ಯವಾದಷ್ಟೂ ಆಳವಾಗಿ ತೋಡಬೇಕು (5) ದುರ್ದೈವದಿಂದ ಒಂದು ಗುಳಿಯಲ್ಲಿ ರೋಗವು ತಲೆದೋರಿದೊಡನೆಯೇ ಅಲ್ಲಿನ ಕಬ್ಬನ್ನೆಲ್ಲಾ ಕತ್ತರಿಸಿ ಸುಟ್ಟುಬಿಡಬೇಕು

ಕಾಡೇನಹಳ್ಳಿಯ ಪರಸ್ಪರ ಸಹಾಯಕ ಕಂಪೆನಿ

ಸನ್ 1911 ನೇ ಇಸವಿ ಜೂನ್ ತಿಂಗಳಲ್ಲಿ ಕಾಡೇನಹಳ್ಳಿಯ ಪ್ರಜೆಗಳಿಗೆ ಶುದ್ಧವಾದ ಹಾಲನ್ನು ಸರಬರಾಜು ಮಾಡುವುದಕೋಸ್ಕರ ಒಂದು ಪರಸ್ಪರ ಸಹಾಯಸಂಘವು ಸ್ಥಾಪಿಸಲ್ಪಟ್ಟಿತು ಈ ಸಂಘಕ್ಕೆ ಹಾಲುಮಾರುವವರೇ ಮೆಂಬರುಗಳಾಗಿರುತ್ತಾರೆ ಮೂಲಧನಕ್ಕೆ ಬ್ಯಾಂಕಿನಿಂದ ಸಾಲವಾಗಿ ತಂದಿರುವ 100 ರೂಪಾಯಿ ಹೊರತು ಮತ್ತೆ ಯಾವುದೂ ಸಾಲವಾಗಿ ತಂದಿಲ್ಲ ಸಿಕ್ಕಗಟ್ಟಲೆ ಮಾರಾಟದಿಂದ ಬರುವ ಹಣವೇ ಆಯಾ ದಿನದ ಕೆಲಸಗಳಿಗೆ ಸಾಕಾಗಿ, ಮೇಲೆ ನಫೆಯೂ ದೊರೆಯುತ್ತದೆ ಲೆಕ್ಕಾಚಾರವನ್ನು ನೋಡಿಕೊಳ್ಳಲು ಒಬ್ಬ ಮ್ಯಾನೇಜರು ಇರುತ್ತಾನೆ

ಸಂಘದವರು ಹಾಲುಮಾರುವವರ ಹತ್ತಿರ ರೂಪಾಯಿಗೆ ಹತ್ತು ಸೇರಿನಂತೆ ಹಾಲನ್ನು ಕೊಳ್ಳುವರು ಯಾವ ಜನಗಳ ಹಾಲನ್ನು ಸಂಘದವರು ಕೊಳ್ಳುವರೋ ಅವುಗಳ ಪೋಷಣೆಯು ಸಂಘದ ಮ್ಯಾನೇಜರ ಮೇಲ್ವಿಚಾರಣೆಗೆ ಒಳಪಟ್ಟಿರುತ್ತದೆ ಹಾಲುಕರೆಯುವಾಗ ಮ್ಯಾನೇಜರಾಗಲಿ ಅಥವಾ ಸಂಘದ ಇತರ ನೌಕರರು ಎದುರಿಗೆ ಇರುತ್ತಾರೆ ಹಾಲನ್ನೆಲ್ಲಾ ದೊಡ್ಡ ತಂಬಿಗೆ ಅಥವಾ ದಬ್ಬಾಗಳಲ್ಲಿ ಕೂಡಿಸಿ ಮ್ಯಾನೇಜರು ಬೀಗಹಾಕಿ ಗಾಡಿಯಲ್ಲಿಟ್ಟು ಮಾರಾಟಕ್ಕೆ ಕಳುಹಿಸುತ್ತಾನೆ ಹಾಲುತುಂಬಿರುವ ದಬ್ಬಾಗಳಿಗೆ ನಲ್ಲಿಗಳಿರುತ್ತವೆ ಮಾರುವುದಕ್ಕೆ ತೆಗೆದುಕೊಂಡುಹೋಗುವ ಸೇವಕರು ನಲ್ಲಿಯನ್ನು ತಿರುಗಿಸಿ ಹಾಲನ್ನು ಈಚೆಗೆ ತೆಗೆದುಕೊಡಬಹುದೇ ಹೊರತು ನೀರು ಬೆರಸುವುದಕ್ಕೆ ಅವಕಾಶವಿಲ್ಲ ಮುಖ್ಯವಾದ ಸ್ಥಳಗಳಲ್ಲಿ ಒಂದೊಂದರಂತೆ ಕಾಡೇನಹಳ್ಳಿಯಲ್ಲಿ ಒಟ್ಟು ಐದು ಅಂಗಡಿಗಳನ್ನಿಟ್ಟಿರುವರು ನಿತ್ಯವೂ ಈ ಅಂಗಡಿಗಳಿಗೆ ಮ್ಯಾನೇಜರು ಹಾಲನ್ನು ಕಳುಹಿಸಿಕೊಡುತ್ತಾನೆ ಅಲ್ಲಿ ಜನಗಳು ರೂಪಾಯಿಗೆ ಎಂಟು ಸೇರಿನಂತೆ ಕೊಳ್ಳಬಹುದು ಅಲ್ಲದೆ ಮ್ಯಾನೇಜರು ಆಗಿಂದಾಗ್ಗೆ ಮೇಲ್ವಿಚಾರಣೆಗೆ ಹೋಗಿ ಪರೀಕ್ಷಿಸಿ ಮಾಡುವುದಲ್ಲದೆ ಜನಗಳು ಸ್ವಲ್ಪ ಆಳವುಕೊಡುವವರ ಮೇಲೆ ಫಿರ್ಯಾದನ್ನು ಹೇಳಿದರೆ ಅದನ್ನು ವಿಚಾರಣೆಮಾಡಿ ತಕ್ಕ ಬಂದೋಬಸ್ತು ಮಾಡುವನು ಮುಖ್ಯವಾಗಿ ಶುದ್ಧವಾದ ಹಾಲು ಸರಬರಾಜಾಗುವುದಕ್ಕೆ ಮಾಡಬಹುದಾದ ಕೆಲಸವೆಲ್ಲಾ ಮಾಡಲ್ಪಡುತ್ತಿದೆ ಈ ಸಂಘದಿಂದ ಸರಬರಾಜು ಮಾಡಲ್ಪಡುವ ಹಾಲಿಗೆ ವಿಶೇಷ ಗಿರಾಕಿ ಇರುವುದೆನ್ನುವುದಕ್ಕೆ ಈ ಸಂಘದ ಅಂಗಡಿಗಳಲ್ಲಿ, ರೈಲ್ವೇ ಸ್ಟೇಷನ್ನಿನ ಮೂಲಕ ತರಗತಿಯವರಿಗೆ ಟಿಕೇಟುಗಳನ್ನು ಕೊಡತಕ್ಕ ಸ್ಥಳಗಳಲ್ಲಿ ಇರುವಷ್ಟು ಜನಗಳ ಗುಂಪೇ ಇರುವುದೇ ದೃಷ್ಟಾಂತವಾಗಿದೆ

ಈ ಸಂಘವು ಸ್ಥಾಪಿಸಲ್ಪಟ್ಟ ಪ್ರಾರಂಭದಲ್ಲಿ ಕೆಲವು ಹಾಲು ಮಾರುವವರು ಮತ್ತೂ ಇತರರು ಇದಕ್ಕೆ ಬಹಳ ತೊಂದರೆಯನ್ನುಂಟುಮಾಡಿದರು ಕೆಲವರು ಹಾಲುಮಾರುವವರು ಹೋರಿಗಳನ್ನು ತೆಗೆದುಕೊಂಡು ಹೋಗಿ ಈ ಸಂಘದವರ ಮೇಲೆ ಬಿಡು ಹೊಡೆದರು ಆದರೆ ಸಲ ಕಾಲದಲ್ಲಿ ಸಂಘದಿಂದ ಪ್ರಜೆಗಳಿಗೆ ದೊರತಕ್ಕ ಪ್ರಯೋಜನವು ವ್ಯಕ್ತವಾಗಿ ಅದರ ಮೇಲೆ ಪ್ರಜಾನುರಾಗವು ಹೆಚ್ಚುತ್ತಾ ಬಂತು

ಈ ಸಂಘದ ಮ್ಯಾನೇಜರು ತಮ್ಮ ಅನುಭವದಿಂದ ತಿಳಿಸತಕ್ಕದೇನೆಂದರೆ—ಈ ಕೆಲಸದಿಂದ ವಿಶೇಷ ಲಾಭವೇನೂ ದೊರೆಯುವುದಿಲ್ಲ ಆದರೆ ಖರ್ಚು ಕಳೆದು ಸ್ವಲ್ಪಮಟ್ಟಿಗೆ ಆದಾಯವೇನೋ ಬರುತ್ತದೆ ಕೆಲವು ವೇಳೆ ಸಲ್ಪ ಹಾಲು ವಿಕ್ರಯವಾಗದೆ ಉಳಿಯುತ್ತದೆ ಅಂಥಾ ಸಂದರ್ಭದಲ್ಲಿ ಹಾಲಿನಿಂದ ಬೆಣ್ಣೆಯನ್ನು ತೆಗೆದುಬಿಡುವರು ಆದರೆ ಬೆಣ್ಣೆಯನ್ನು ಮಾರುವುದು ಹಾಲು ಮಾರುವಷ್ಟು ಲಾಭಕರವಾಗಿಲ್ಲ ಖರ್ಚಾಗದೆ ಉಳಿದ ಹಾಲನ್ನು ಮಿಠಾಯಿ ಮಾಡುವವರಿಗೆ ಅಗ್ಗವಾಗಿ ಮಾರಲು ಪಟ್ಟ ಪ್ರಯತ್ನವು ಸಾರ್ಥಕವಾಗಲಿಲ್ಲ

ಈ ಸಂಘದವರಲ್ಲಿ 100 ದನಗಳಿವೆ ಈ ಪೈಕಿ 10 ದನಗಳು ಕರೆಯುವುದಿಲ್ಲ ಪ್ರಾಯಶಃ ಯೆಮ್ಮೆಗಳೇ ಹೆಚ್ಚು

ನಮ್ಮಗಳ ಆರೋಗ್ಯಕ್ಕೆ ನಾವು ಸೇವಿಸತಕ್ಕ ಹಾಲು ಶುದ್ಧವಾಗಿರಬೇಕೆಂಬುವುದು ಎಲ್ಲರಿಗೂ ತಿಳಿದಿದೆ ಆದ್ದರಿಂದ ಪ್ರತಿ ಗ್ರಾಮದಲ್ಲೂ, ಮುಖ್ಯವಾಗಿ ದೊಡ್ಡ ದೊಡ್ಡ ಪಟ್ಟಣಗಳಲ್ಲೂ ಕೆಲವು ಮುಖ್ಯಸ್ಥರಾದವರು ಕೂಡಿ ಅಂಥಾ ಸಂಘಗಳನ್ನು ಸ್ಥಾಪಿಸಿ ನಿರ್ಮಲವಾದ ಹಾಲಿನ ಸರಬರಾಜಿಗೆ ತಕ್ಕ ಏರ್ಪಾಡುಗಳನ್ನು ಮಾಡಬೇಕು ಇದೇ ರೀತಿಯಲ್ಲಿ ತುಪ್ಪದ ಸರಬರಾಜಿಗೂ ಸಂಘಗಳನ್ನು ಸ್ಥಾಪಿಸುವುದು ಜನಗಳ ಶ್ರೇಯಸ್ಸಿಗೆ ಕಾರಣವಾಗಿದೆ

ರಾಜಧಾನಿಯ ಮುನಿಸಿಪಲ್ ಮೀಟಿಂಗು

ಕಳೆದ ಸೋಮವಾರ ಬೆಳಗ್ಗೆ ಮೈಸೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಲರುಗಳು ಟೌನ್ ಹಾಲ್ ಎಂಬಲ್ಲಿ ಸೇರಿ ತಿಂಗಳು ಕಟ್ಲೆಯ ಮುನಿಸಿಪಲ್ ಮೀಟಿಂಗು ನಡಿಸಿ ಗೊತ್ತುಮಾಡಿದ ವಿಷಯಗಳೇನೆಂದರೆ—ಮುನಿಸಿಪಲ್ ಇಂಜನಿಯರ್ ಕೆಲಸಕ್ಕೆ ಮಿ ಇ ರಾಮಸ್ವಾಮಿಯವರೆಂಬುವರ ಪಿಎಸಿಯವರನ್ನು ಪ್ರೆಸಿಡೆಂಟರವರು ನೇಮಿಸಿರುವಂತೆ ಮಾಸಿಯಾನಾ 100 + 30 ರೂಪಾಯಿ ಸಂಬಳದ ಮೇಲೆ ಕೆಲಸ ನೇಮಕಮಾಡಿಕೊಳ್ಳಬೇಕೆಂದು ಮೆಂಬರುಗಳು ಒಪ್ಪಿದರು —ಪ್ರಜೆಗಳು ತಮ್ಮ ಮನೆಗಳಲ್ಲಿ ಉಪಯೋಗಕ್ಕೋಸ್ಕರ ಕಟ್ಟಡ ಕಟ್ಟುವ ವಿಚಾರದಲ್ಲಿ ಮುನಿಸಿಪಾಲಿಟಿಯಲ್ಲಿ ಕಟ್ಟಿಕೊಳ್ಳುವಂತೆ ಮಾಡುವುದಕ್ಕಾಗಿ 1 ಕಡಿಮೆ ಬೆಲೆಯುಳ್ಳ ಪ್ಲಾನುಗಳನ್ನು ತಯಾರಿಸಿ ಜನಗಳ ಸಮ್ಮತಿಗಾಗಿ ಟ್ರಸ್ಟ್ ಬೋರ್ಡ್ ಇಂಜಿನಿಯರವರು ತಯಾರುಮಾಡಿದ್ದರು ಮೆಂಬರುಗಳು ಅವುಗಳನ್ನು ಪರೀಕ್ಷಿಸಿನೋಡಿ ಅವುಗಳ ಪೈಕಿ 16 ರೂಪಾಯಿ ಮಾತ್ರ ಖರ್ಚಾಗುವಂಥಾ ಪ್ಲಾನನ್ನು ಒಪ್ಪಿಕೊಂಡು, ಅದನ್ನು ಮನೆಗಳ ಮಾಲೀಕರುಗಳಿಗೆ ತೋರಿಸಿ ಅದರಂತೆ ಪ್ರಜೆಗಳೆಲ್ಲರೂ ಒಂದೇ ನಮೂನೆಯ ಪಾಯಿಖಾನೆಗಳನ್ನು ಕಟ್ಟಿಕೊಳ್ಳುವ ರೀತಿ ಏರ್ಪಾಡುಮಾಡಬೇಕೆಂದೂ ಆ ರೀತಿ ಕಟ್ಟಿಸಲು ಶಕ್ತಿಯಿಲ್ಲದವರ ಮನೆಗಳಿಗೆ ಮುನಿಸಿಪಾಲಿಟಿಯವರೇ ಕಟ್ಟಿಸಿಕೊಟ್ಟು ಆ ಸಾಮಾನಿನ ಖರ್ಚನ್ನು ಮನೆಯವರಿಂದ ಕಂತುವಾರಾಗಿ ವಸೂಲ್ಮಾಡಿಕೊಳ್ಳಬೇಕೆಂದೂ ಒಪ್ಪಿ ತೀರ್ಮಾನಮಾಡಿದಾರೆ

ಚಾಮರಾಜಪೇಟೆ ಬಜಾರ್ ಲೈನಿನಲ್ಲಿ ಮನೆಗಳ ಹಿಂಭಾಗದಲ್ಲಿರುವ 15 ಅಡಿ ಖಾಲಿ ಜಾಗವನ್ನು ಆಯಾ ಮನೆಗಳವರಿಗೆ 3 ಆಣೆ ದರದ ಪ್ರಕಾರ ಕ್ರಯಕ್ಕೆ ಕೊಟ್ಟು ಅವರು ಆ ಖಾಲಿ ಜಾಗಕ್ಕೆ ಆವರಣದ ಗೋಡೆಗಳನ್ನು ಹಾಕಿಕೊಂಡು ಖಾಲಿ ಬಿಟ್ಟುಕೊಂಡಿರುವಂತೆ ಗೊತ್ತಾಗಿ ತೀರ್ಮಾನವಾಗಿದ್ದನ್ನು ಮೆಂಬರುಗಳು ಮತ್ತೆ ಒಪ್ಪಿಕೊಂಡಿರುತ್ತಾರೆ —ಉಡಿಯಾಡಿನಲ್ಲಿರುವ ಲಕ್ಷ್ಮೀಪುರಂ ಸ್ಕೂಲ್ ಕಟ್ಟಡವನ್ನು ಬಿಡುಗಡೆಮಾಡಿ ಕಟ್ಟುವುದಕ್ಕೆ ಪ್ಲಾನ್ ಅಂದಾಜುಪಟ್ಟಿ ಆಗಬೇಕೆಂದೂ ಕೃಷ್ಣರಾಜಮೊಹಲ್ಲಾ ಎಂದುಗಾರ್ಲ್ಸ್ ಸ್ಕೂಲ್ ಬಿಲ್ಡಿಂಗ್ ಬಾಡಿಗೆ ರೂಪಾಯಿ ಸಂಬಳ ಬದ್ಧಿಮಾಡಬೇಕೆಂದೂ ಮ್ಯುನಿಸಿಪಲ್ ಗ್ರಾಂಟ್ ಪಡೆಯುವ ಪಾಠಶಾಲೆ ಕಟ್ಟಡಗಳು ಆರೋಗ್ಯಕರವಾಗಿರುವವೋ ಎಂಬ ಅಂಶವನ್ನು ಹೆಲ್ತ್ ಆಫೀಸರು ತನಿಖೆಮಾಡಿ ರಿಪೋರ್ಟ್ ಮಾಡಬೇಕೆಂದೂ, ದೊಡ್ಡ ಹೊಲಗೇರಿಯಲ್ಲಿರುವ ಸ್ವಂತವಾದ ಸ್ಕೂಲನ್ನು ಮುನಿಸಿಪಲ್ ಸ್ಕೂಲಾಗಿ ಮಾಡುವ ವಿಷಯದಲ್ಲಿ ಮ್ಯಾನೇಜಿಂಗ್ ಕಮಿಟಿಯವರ ಅಭಿಪ್ರಾಯವನ್ನು ಕೇಳಬೇಕೆಂದೂ ತೀರ್ಮಾನವಾಗಿರುತ್ತದೆ

ರಾಜಧಾನಿಯಲ್ಲಿ ಪ್ಲೇಗು ಮರಿ ವಿಜೆಯನ್ನು ಹರಡಲು ಮ್ಯುನಿಸಿಪಾಲಿಟಿಯಿಂದ ಸಾಲ್ ಒಂದಕ್ಕೆ 10,000 ರೂಪಾಯಿಗಳ ಖರ್ಚಾಗುತ್ತಿರುವುದು ಸಾಲದೆಂದೂ, ಇದಕ್ಕೆ ಸರ್ಕಾರದಿಂದ ವರುಷಕ್ಕೆ 14 ಸಾವಿರ ರೂಪಾಯಿನಂತೆ ಗ್ರಾಂಟ್ ಮಾಡಿಕೊಡಬೇಕೆಂದು ಕೇಳಿಕೊಳ್ಳತಕ್ಕದ್ದೆಂದೂ ತೀರ್ಮಾನವಾಯಿತು —ಮ್ಯುನಿಸಿಪಾಲಿಟಿಯ ಸಿಬ್ಬಂದಿಯನ್ನು ಪುನರ್ವಿಮರ್ಶೆಮಾಡಿ, ಸರ್ಕಾರದವರು ಅಪೇಕ್ಷಿಸಿರುವ ರೀತಿಯಲ್ಲಿ ವಿಂಗಡಿಸಿ ಕೆಲಸಗಳನ್ನು ಹಂಚಿ ಸಂಬಳಗಳನ್ನು ಗೊತ್ತುಮಾಡುವುದಕೋಸ್ಕರ ಆರು ಮಂದಿ ಮೆಂಬರುಗಳುಳ್ಳ ಒಂದು ಕಮಿಟಿಯು ನೇಮಕವಾಯಿತು —ಹೊಸದಾಗಿ ಪಟ್ಟಣದೊಳಕ್ಕೆ ಬಿಕರಿಗಾಗಿ ತರುವ ಪದಾರ್ಥಗಳ ಮೇಲೆ ಸುಂಕ ಗೊತ್ತು ಮಾಡಿರುವ ಕಟ್ಟೆಗಳಲ್ಲಿ ಸುಂಕವನ್ನು ವಸೂಲುಮಾಡಿ ಬಿಡಬೇಕೆಂದೂ ಕತ್ತೆಗಳನ್ನು ಬೀದಿಗಳಲ್ಲಿ ಬಿಡದೆ ಆಗಸರು ಕಟ್ಟಿಹಾಕಬೇಕೆಂಬ ವಿಷಯದಲ್ಲಿ ತಯಾರಾಗಿದ್ದ ಬೈಲಾವನ್ನು ಸರ್ಕಾರದ ಸ್ಯಾಂಕ್ಷನ್ ಪಡೆದು ಜಾರಿಗೆ ತರಬೇಕೆಂದೂ, ಮನೆ ಕಟ್ಟುವುದಕ್ಕೆ ಲೈಸೆನ್ಸು ಕೊಡುವ ಕಮಿಟಿಯವರ ಸಹಾಯಕ್ಕೆ ಹೆಲ್ತ್ ಆಫೀಸರು ಒಬ್ಬ ಸ್ಯಾನಿಟರಿ ಇನ್ಸ್‌ಪೆಕ್ಟರನ್ನು ಕೆಲಸಕ್ಕೆ ನೇಮಿಸಬೇಕೆಂದೂ, ಮ ಚಾಮರಾಜಪೇಟೆ ರಸ್ತೆಗೆ 720 ರೂಪಾಯಿ ಗ್ರಾಂಟು ಕೊಡಬೇಕೆಂದೂ ಬಾಕಿಯಾಗಿರುವ ಹಾಲ್ ತೆರಿಗೆ ಮುನಿಸಿಪಾಲಿಟಿಯವರು ವಸೂಲು ಮಾಡಿಕೊಳ್ಳಬೇಕೆಂದೂ ಸಾಕಷ್ಟು ಹಣ ಕೊಡಬಹುದೆಂದೂ ಮೆಂಬರುಗಳು ಒಪ್ಪಿ ತೀರ್ಮಾನಮಾಡಿರುತ್ತಾರೆ

ವೈಸರಾಯ್ ಪ್ರಭುಗಳು ಡಿಸೆಂಬರ್ ತಿಂಗಳಲ್ಲಿ ರಾಜಧಾನಿಗೆ ಚಿತ್ತೈಸುವವರಾಗಿರೋದರಿಂದ ಆ ಕಾಲಕ್ಕೆ ಪಟ್ಟಣದ ರಸ್ತೆಗಳನ್ನೂ ಮುನಿಸಿಪಲ್ ಕಟ್ಟಡಗಳನ್ನೂ ಉದ್ಯಾನವನಗಳನ್ನೂ ದುರಸ್ತುಮಾಡಿ ನೀಟಾಗಿ ದಕ್ಷವಾಗಿ ಮಾಡಬೇಕೆಂದು ಸರ್ಕಾರದವರು ಪ್ರೆಸಿಡೆಂಟರಿಗೆ ಆಜ್ಞೆಮಾಡಿದ್ದಾರೆ ಇದಕ್ಕಾಗಿ ಅಂದಾಜು ಪಟ್ಟಿಗಳನ್ನು ತಯಾರಿಸುವ ಮೆಂಬರುಗಳಿಗೆ ಒಪ್ಪಿಸಿದೆ ಇವರ ಸಲಹೆ ಪ್ರಕಾರ ಪರಿಷ್ಕಾರ ಕೆಲಸಗಳಿಗೆ 6118 ರೂಪಾಯಿ, ಕಟ್ಟಡಗಳಿಗೆ ಬಣ್ಣ ಹಚ್ಚುವುದಕ್ಕೂ ಸಿವಿಲ್ ಇಂಜಿನಿಯರ ಅವರ ದರಬಾರು 1000 ರೂಪಾಯಿ ಒಂದು ಗುಂಪಿನಂತೆ ಅಂದಾಜಾಗಿ ಆ ರೀತಿ ಮುನಿಸಿಪಲ್ ಫಂಡಿನಿಂದ 6100 ರೂಪಾಯಿ ಸರ್ಕಾರದಿಂದ ಕೊಡಲು ಮೆಂಬರುಗಳು ಒಪ್ಪಿದ್ದರಿಂದ ಪ್ರೆಸಿಡೆಂಟರು ಉಳಿದ 12,000 ರೂಪಾಯನ್ನು ಸರ್ಕಾರದಿಂದ ಕೊಡಿಸಬೇಕೆಂದು ಗೌರ್ನಮೆಂಟಿಗೆ ಬರೆದು ಇರುತ್ತಾರೆ

ಕೋಆಪರೇಟಿವ್ ಸೊಸೈಟಿ

ಹುಣಸೂರು ಸೊಸೈಟಿಯ ಜನರಲ್ ಮೀಟಿಂಗು

ಇದೇ ಮಾಹೆ 23 ನೇ ತ ಹುಣಸೂರು ಕೋಆಪರೇಟಿವ್ ಸೊಸೈಟಿಯ ವಾರ್ಷಿಕೋತ್ಸವವು ತಾಲ್ಲೋಕ್ ಕಚೇರಿಯಲ್ಲಿ ಬಹು ವಿಜೃಂಭಣೆಯಾಗಿ ನೆರವೇರಿತು ಇದರ ಸಂತೋಷಕ್ಕೆ ಅನೇಕ ಮಹನೀಯರುಗಳಿಗೆ ಆಹ್ವಾನಪತ್ರಿಕೆಗಳನ್ನು ಈ ಸೊಸೈಟಿಯ ಕಮಿಟಿ ಮೆಂಬರು ಸೆಕ್ರೆಟರಿಯವರ ಮುಖಾಂತರ ಕಳುಹಿಸಿಕೊಟ್ಟರು ಅನೇಕರು ತಮ್ಮ ಬರುವಿಕೆಗಿರುವ ಅನಾನುಕೂಲಗಳನ್ನು ಲಿಖಿತ ಮೂಲಕ ನಿವೇದಿಸಿ, ಅದರ ಶ್ರೇಯೋಭಿವೃದ್ಧಿಯನ್ನು ಬಯಸುವವರಾಗಿ ಜವಾಬು ಕೊಟ್ಟಿದ್ದರು ನಮ್ಮ ಮೈಸೂರು ಡಿಸ್ಟ್ರಿಕ್ಟ್ ಕಮಿಷನರ್ ರಾದ ಮ॥ ಸುಬ್ರಹ್ಮಣ್ಯ ಅಯ್ಯರವರು ನೀಡಿರುವ ಆ ಧಾರ್ಮಿಕ ಸಂತೋಷಕರ ವಾದ ಕರೆಯೋಲೆಯು ... ನೆರವೇರಿಸುವ ... ತಿಳಿಸುವ ಕಾಗದವನ್ನು ... ಸೊಸೈಟಿಯ ಮುಂದಾಗಲಿ ... ಸೊಸೈಟಿಯ ಸೆಕ್ರೆಟರಿ ಮ ಎಂ ಚಿತಂಬರರಾಯರೂ, ಸೊಸೈಟಿಯ ಮೆಂಬರುಗಳೂ ... ಆದರ ಸುಯೋಗವನ್ನು ಎಲ್ಲರೂ ಮುನಿಸಿಪಲ್ ಬಂಗ್ಲೆಗೆ ಕಾಗದಗಳನ್ನು ... ಅವರ ಸಹಕಾರಿ ಕೆಲಸಗಳನ್ನು ... ಮಧ್ಯಾಹ್ನ ... ಗಂಟೆಯ ... ಸಭೆಯವರ ಕೇಂದ್ರ ... ಸಭಾಸದರೂ ... ಕಾರ್ಯಗಳಾದ ಮೇಲೆ ... ಹಸ್ತಾಕ್ಷರ ... ಮತ್ತು ... ಅಧ್ಯಕ್ಷರಾದ ... ಕಳೆದ ವರ್ಷದ ಲೆಕ್ಕಗಳನ್ನು ... ಉದಯದಲ್ಲಿ ... ಕುಶಲವಚನಗಳನ್ನು ... ಪೀಠಿಕೆ ... ಮಾತ್ರವಲ್ಲದೆ ಮ್ಯಾನೇಜರ್ ಮತ್ತು ಜೇಯವರ ... ಮಾಜಿ ಸದಸ್ಯರುಗಳ ದಲೂ, ಸೊಸೈಟಿಯ ಪ್ರಮುಖರೂ, ಕಮಿಟಿಯ ಮೆಂಬರುಗಳೂ, ಷೇರ್ ಹೋಲ್ಡರುಗಳೂ, ಮ್ಯುನಿಸಿಪಲ್ ಕೌನ್ಸಲರುಗಳೂ, ಊರ ... ಪತ್ರಕರ್ತರೂ ಊರಿನ ಇತರ ದೊಡ್ಡಮನುಷ್ಯರುಗಳು ... ಸೆಕ್ರೆಟರಿಗಳಾದ ಮ ಚಿತಂಬರರಾಯರು ವಾರ್ಷಿಕ ರಿಪೋರ್ಟನ್ನು ಬಹು ಸ್ಪಷ್ಟವಾಗಿಯೂ ಸಾಂಗೋಪಾಂಗವಾಗಿಯೂ ಓದಿದರು ಅನುಭವ ... ಪ್ರೆಸಿಡೆಂಟರಾದ ... ಸಂಬಂಧಪಟ್ಟ ಕಮಿಷನರ ... ಸುಪ್ರಸಿದ್ಧ ... ಮೆಚ್ಚಿ ... ಆಗಮನದ ಸಂತೋಷವನ್ನು ... ಸೊಸೈಟಿಯು ಅಭಿವೃದ್ಧಿಸ್ಥಿತಿಯಲ್ಲಿರುವುದನ್ನು ಕುರಿತು ಹೊಗಳಿದರು ಮತ್ತು ಇನ್ನೂ ಕೆಲವು ಉತ್ತಮವಾದ ಹೊಸ ಸಲಹೆಗಳನ್ನು ದಯಪಾಲಿಸಿದರು ಎರಡು ವರುಷ ... ಷೇರುಗಳ ... ಜೂನ್ ಆಖೈರಿಗೆ 1,107 ಷೇರುಗಳ ಮೇಲೆ ... ಷೇರುಗಳ ... ಪ್ರೆಸಿಡೆಂಟರ ಮತ್ತು ಸೆಕ್ರೆಟರಿಯವರ ಕಾರ್ಯನಿರ್ವಹಣ ... ಈ ವರುಷದಲ್ಲಿ ಸೊಸೈಟಿಯು ಅಭಿವೃದ್ಧಿಯನ್ನು ಹೊಂದಿರುವುದು ... ಶೇಕಡಾ 12 ರೂಪಾಯಿಯಂತೆ ಬಡ್ಡಿಯು ಉತ್ಪತ್ತಿಯಾಗಿರುವುದನ್ನು ನೋಡಿದರೆ ಎಷ್ಟು ... ಮುಖ್ಯವಾದ ... ಸೊಸೈಟಿಯ ಕಾರ್ಯಗಳು ಜರುಗಿದ ... ಯಾರಾದರೂ ಹೇಳಬಹುದಲ್ಲವೇ ... ಮಧ್ಯಮಧ್ಯೆ ... ಸಂತೋಷವನ್ನು ... ಪ್ರಕಾಶಿಸುತ್ತಿದ್ದರು ಕಡೆಯಲ್ಲಿ ಎಲ್ಲರಿಗೂ ಹೂವು, ಗಂಧ ತಾಂಬೂಲಗಳನ್ನು ಕೊಟ್ಟರು ಕಮಿಟಿ ಮೆಂಬರುಗಳಿಗೆಲ್ಲಾ ಫಲಾಹಾರದ ... ಏರ್ಪಾಡಾಯಿತು ಆದ್ದರಿಂದಲೂ ಉತ್ಕೃಷ್ಟವಾದ ಟಿಪನ್ ಪಾರ್ಟಿಯನ್ನು ಏರ್ಪಡಿಸಿದ್ದರು ತರುವಾಯ ಆ ದಿವಸ ... ಜಯಘೋಷ ಮಾಡುತ್ತಾ ಉಪಸಂಹಾರವಾಯಿತು

ತಾ 1 ನೇ ಬುಧವಾರ ಅನುಭವ ... ಆದ ಕ್ಷಣವಾಗಿದ್ದು ಕೂಡಲು ಒಂದು ಜನರಲ್ ಮೀಟಿಂಗ್ ನಡೆಯಿಸಿದರು ಆ ದಿನ ಉಪಯುಕ್ತವಾದ ನಾನಾ ಸಂಗತಿಗಳು ಚರ್ಚೆಯಾದವು ಹೊಸ ಮೆಂಬರುಗಳನ್ನೂ ಕಾರ್ಯನಿರ್ವಾಹಕರನ್ನೂ ಹೊಸದಾಗಿ ಎಲೆಕ್ಷನ್ ಮಾಡಿದರು ಅದರಲ್ಲಿ ಮೊದಲನೆ ಅಮಲ್ದಾರ್ ಮ॥ ಆರ್ ನರಸಿಂಹಯ್ಯಂಗಾರ್ ಬಿ ಎ, ಬಿ ಎಲ್ ಯವರನ್ನೇ ಪುನಃ ಪ್ರೆಸಿಡೆಂಟರಾಗಿಯೂ, ಮ ನಂಜುಂಡಾರಾಧ್ಯರ ಆ। ಇಂಜಿನೀಯರನ್ನು ವೈಸ್ ಪ್ರೆಸಿಡೆಂಟರಾಗಿಯೂ ಮೊದಲಿನ ಸೆಕ್ರೆಟರಿಯಾದ ಮ ಎಂ ಚಿತಂಬರರಾವ್ ರೆಂಬ್ ... ಯವರನ್ನು ಸೆಕ್ರೆಟರಿ ... ಎನ್ ಲಕ್ಷ್ಮೀಕಾಂ ... ಯವರನ್ನೂ ಎಚ್ ... ರಾಯರನ್ನೂ ಎಚ್ ಪಿ ಹನುಮಂತಶೆಟ್ಟಿಯವರನ್ನೂ, ಎಚ್ ಆರ್ ತಿಂಗಳಮುದಲಿಯಾರ್‌ರವರನ್ನೂ, ಸರಾಫ್ ಮುನಿಸ್ವಾಮಿಶೆಟ್ಟಿಯವರನ್ನೂ ಮದಗಿರಿ ನಂಜಪ್ಪಶೆಟ್ಟಿಯವರನ್ನೂ, ರಾಮಶೆಟ್ಟಿಯವರನ್ನೂ ಅಪ್ಪಯ್ಯರಾವ್ ಅವರ ಪಟೇಲ್ ಗುಲಾಂ ಇಬ್ರಾಹಿಂ ಸಾಹೇಬರನ್ನೂ, ಹೊಸಕೋಟೆ ವೆಂಕಟಯ್ಯನವರನ್ನೂ, ಪಟೇಲ್ ವೆಂಕಟೇಗೌಡರನ್ನೂ, ಸಾಸ್ ... ಮುಸ್ಸಂಬರನ್ನೂ ಕಮಿಟಿಯ ಮೆಂಬರುಗಳಾಗಿಯೂ ಚುನಾವಣೆ ಮಾಡಿದರು ಮೆಂಬರುಗಳ ... ಸರ್ಕಾರದ ಆಫೀಸರುಗಳು ಒಬ್ಬ ತಮ್ಮ ... ಕಮಿಟಿ ... ಚುನಾಯಿಸಲ್ಪಟ್ಟರು ... ಸರ್ಕಾರದ ... ರನ್ನು ... ಚುನಾಯಿಸಿದ್ದರೆ ಚೆನ್ನಾಗಿರುತ್ತಿತ್ತು ... ಯಾವ ಗ್ರಾಮ ಅಭಿವೃದ್ಧಿ ... ಯಲ್ಲಿರುವ ... ಸೆಕ್ರೆಟರಿಯವರೂ ... ಸರ್ವ ಪ್ರಜೆಗಳೂ ತಕ್ಕಷ್ಟು ಪರಿಶ್ರಮಪಡಬೇಕು ಮ ಎಂ ಚಿತಂಬರರಾಯರ ಕಾರ್ಯಸಾಮರ್ಥ್ಯಕ್ಕಾಗಿ ಒಂದು ಥ

ರಸ [illegible] ಪ್ರತಿ [illegible] ಕಾಣುವಂತೆ ಕವಿಯಿಟಿಯಲ್ಲಿ [illegible] ಬಹುದು ಆದಕ್ಕೆ ಅವರು [illegible] ಎಲ್ಲರೂ ಹೇಳಬಹುದು

ಮ್ಯಾಡಿಸನ್ [illegible] ತಾ 28 ನೇ ಸೋಮವಾರ [illegible] ಮ್ಯೂಸಿಯಂ [illegible] ದಾನದಲ್ಲಿ ಬಹು ವ್ಯಯ ಮತ್ತು ಶ್ರಮಗಳನ್ನು ವಹಿಸಿ ತಮ್ಮ [illegible], ಸ್ಕೂಲ್ ಹುಡುಗರ, ಟವನಿನ ಸರ್ವ ಪ್ರಜೆಗಳ ಪ್ರೋತ್ಸಾಹಕ್ಕಾಗಿ ಒಂದು ಕವಿಯಿ ಕೂಟ [illegible] ಆಟದ ಸೂದರಾದ ವಿನೋದ ಸಂದರ್ಭಗಳನ್ನು ಏರ್ಪಾಡು ಮಾಡಿರುವರು ಅವರ ಶ್ರಮವೂ, ಪ್ರಯತ್ನವೂ ಸಾರ್ಥಕವಾಗಿ ಅವರಿಗೆ ಪ್ರೋತ್ಸಾಹವನ್ನುಂಟುಮಾಡಲಿಕ್ಕಾಗಿ ಟವನಿನ ಸಮಸ್ತ ಪ್ರಜೆಗಳೂ ಆಟದ [illegible] ಸೇರಬೇಕು ಆಗ [illegible] ಮುಖಂಡರ [illegible] ವಿವಿಧ ಬಹುಮಾನಗಳನ್ನು ಕೊಡುವರು

ಬಾತ್ಮಿದಾರರಿಗೆ ನೋಟೀಸ್

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಹೆಸರು ವಿಳಾಸವಿಲ್ಲದೆ ಬರತಕ್ಕ [illegible]ಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು [illegible]ಗಳಿಗೆ ನಾವು ಜಾಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲ [illegible] ಅಂಶವನ್ನು ಸಕಲರೂ ತಿಳಿಯತಕ್ಕದ್ದು

[illegible]

[illegible]

ಅಯ್ಯಾ,

[illegible] ಗರ್ಭಕ್ಕೆ ಕೆಡ [illegible] ಈ [illegible]

ಸಂತೇಗೌಡ, [illegible] ಮಂಡ್ಯ [illegible]

[ಮ [illegible] ರೋಗ [illegible] — ಎಡಿ]

ಅನಾಥಸ್ತ್ರೀ

ಸ್ವಾಮಿ,

[illegible] ಕೆಲವರು ಉದ್ಯುಕ್ತರಾಗಿ [illegible] ಹೂಣಿಸಬೇಕೆಂದು ಕೆಲವರು ಉದ್ಯುಕ್ತಪಟ್ಟಾಗ ಮೂರು ಜನ ಸರ್ಕಾರಿ ನೌಕರರೂ ಮಠದ ಬ್ರ॥ ಕೃಷ್ಣಶಾಸ್ತ್ರಿಗಳೂ ಸಹ ಶವವನ್ನು ಸಾಗಿಸಿ ದಹನಮಾಡಿದರು ಈ ರೀತಿ ಶವವನ್ನು 21 ಘಂಟೆಗಳ ಕಾಲ ಮನೆಗಳ ಮಧ್ಯೆ ಇಟ್ಟುಕೊಂಡು ನಿಶ್ಚಿಂತೆಯಾಗಿದ್ದ [illegible] ಮನಸ್ಥಿತಿಯೇನೋ ವಾಚಕ ಮಹಾಶಯರೇ ಊಹಿಸಬೇಕು

ಪ್ರತ್ಯಕ್ಷದರ್ಶಿ

ತುರ್ಕಿಯವರ ತಪ್ಪಿಲ್ಲ

ಸ್ವಾಮಿ,

ತಮ್ಮ 31 ನೇ ತಾ ಪತ್ರಿಕೆ 4 ನೇ ಪುಟದಲ್ಲಿ ನಮೂದಿರುವ ಬಾಲ್ಕನ್ ಯುದ್ಧದ ಅಭಿಪ್ರಾಯವು ತಿಳಿಯಲಾಯ್ತು ಅದರಲ್ಲಿ ತುರ್ಕಿಯರು ಲಂಡನ್ ಪಟ್ಟಣದಲ್ಲಿ ಮಾಡಿದ ಕರಾರಿಗೆ ವಿರೋಧವಾಗಿ ನಡೆದಿರುತ್ತಾರೆಂದು ಸಾಫ್ ಪ್ರಕಟವಾಗಿದೆ ಇದು ಅವರ ತಪ್ಪು ಎಂದು ಎಣಿಸೋಣ ಆದರೆ ಈಗ್ಗೆ 50 ವರುಷದ [illegible] ಯೂರೋಪ್ ಖಂಡದಲ್ಲಿ ಒಬ್ಬರಿಗೊಬ್ಬರಿಗೆ ಕರಾರಾದದ್ದು ಯಾರಿಗೂ [illegible] ನಡೆದದ್ದಕ್ಕೆ ವಿರೋಧವಾದದ್ದು ಯಾರಿಂದ? [illegible] ನಡೆಯತಕ್ಕ ವ್ಯಾಜದಲ್ಲಿ ಲಂಡನ್ ಪಟ್ಟಣದಲ್ಲಿ ಯಾತಕ್ಕಾಗಿ [illegible] ನಡೆಯಿತು? ಪ್ರಜೆಗಳ ಅನುಕೂಲಕ್ಕೋ? ಅನಾನುಕೂಲಕ್ಕೋ? [illegible] ಪಕ್ಷದಲ್ಲಿ ಅವರಲ್ಲಿಯೇ ವ್ಯಾಜ್ಯವಾಗಲು ಯಾವ ಕರಾರು [illegible] ಅಲ್ಲದೆ ತುರ್ಕಿಯರು ಇಟಲಿಯರ ಮೇಲೆ ಹೋರಾಡಿ ಸಾಕಾದ ಸಮಯವನ್ನು ನೋಡಿ ನಾಲ್ಕು ರಾಜ್ಯದವರು ಕೂಡಿ ಕದನವಾಡಿದ್ದು ಯಾವ ರಾಜಧರ್ಮ? ಈ ದೋಷಗಳೆಲ್ಲಾ ಬಿಟ್ಟು ತುರ್ಕಿಯರು ಮಾಡಿದ ಕರಾರಿಗೆ ವಿರೋಧವಾಗಿ ನಡೆದಿರುತ್ತಾರೆಂದು ಪ್ರಕಟಿಸಿರುತ್ತೀರಿ ಆದ್ದರಿಂದ ನಮ್ಮ ಪತ್ರಿಕೆಯು [illegible] ಪ್ರಕಟವಾಗುವಂತೆ ತೋರುತ್ತೆ ಈಗ ನಡೆದ ಕರಾರಿಗೆ [illegible] ಸಹ ಆಗಿರಲಿಲ್ಲ ಇಷ್ಟರಲ್ಲಿಯೇ ಈ ರೀತಿಯಾಗಿ ತುರ್ಕಿ ನಮ್ಮ ಪತ್ರಿಕೆ ಹೊರಿಸುತ್ತಾ ಇದೆ ಈ ವಿಚಾರವನ್ನೆಲ್ಲಾ ನಿಮ್ಮಗಳ ಆಲೋಚನೆಗೆ ತಂದು ಧರ್ಮ ಅಧರ್ಮವನ್ನು ಮತ್ತೊಂದು ಪತ್ರಿಕೆಯಲ್ಲಿ ಪ್ರಕಟಿಸಿರೆಂದು ಕೇಳುವ

[illegible], ಮಂಡ್ಯ

[ಟರ್ಕಿಯವರಿಗೂ ಬಾಲ್ಕನ್ ರಾಜ್ಯಗಳವರಿಗೂ ಕರಾರು ನಡೆದು ಲಂಡನ್ [illegible]ಗಳಲ್ಲಿ ರುಜುಮಾಡಲ್ಪಟ್ಟಿತು ಕರಾರಿನ ಕಲಮುಗಳೇನೋ ಇನ್ನೂ ಬಿಡಲಿಲ್ಲ ಆದರೂ ಟರ್ಕಿಯವರ ಮತ್ತು ಬಾಲ್ಕನ್ ರಾಜ್ಯಗಳ ಎಲ್ಲೆಕಟ್ಟುಗಳನ್ನು ಗೊತ್ತುಮಾಡಿದರು ಆದಕಾರಣ ಈಗ ಟರ್ಕಿಯವರು ಆಡ್ರಿಯಾನೋಪಲನ್ನು ಪ್ರವೇಶಿಸಿದ್ದರಿಂದ ಈ ಕರಾರನ್ನು ಮೀರಿ ಅದಕ್ಕೆ ವಿರೋಧವಾಗಿ ನಡೆದಿರಾರೆನ್ನುವುದಕ್ಕೆ ಸಂಶಯವಿಲ್ಲ ಟರ್ಕಿಯವರಿಗೆ ಪ್ರಾಪ್ತವಾಗಿರುವ ಕಷ್ಟನಷ್ಟಗಳನ್ನು ನೋಡಿ ನಾವು ವ್ಯಸನಪಡುತ್ತೇವೆ ಆದರೂ ಅವರು ಒಪ್ಪಿ ರುಜುಹಾಕಿರುವ ಕರಾರನ್ನು ಅವರೇ ತಿರಸ್ಕಾರಮಾಡಿದ್ದರಿಂದ ಅವರಿಗೆ ನಿಜವಾಗಿಯೂ ಪ್ರಯೋಜನವಾದೀತೇ ಎಂದು ಸಂಶಯಪಡುವೆವು — ಎಡಿ]

ಒಂದು ಸಲಹೆ

ಅಯ್ಯಾ,

ಸ್ಕೂಲ್ ಮಾಸ್ಟರಲ್ಲನೇಕರು 10 12 ರೂಪಾಯಿ ಸಂಬಳದಲ್ಲಿರುವರು ಇವರ ಮಕ್ಕಳಿಗೆ ಕನ್ನಡ ವಿದ್ಯಾಭ್ಯಾಸವೇನೋ ಸಲೀಸಾಗಿ ನಡೆಯುತ್ತೆ ಇಂಗ್ಲೀಷಿಗೆ ಸೇರಿಸಿದರೆ ಸ್ಕೂಲ್ ಫೀಜನ್ನು ಕೊಡಬೇಕು ನಾಲ್ಕಾರು ಮಕ್ಕಳುಳ್ಳವರು ಸ್ಕೂಲ್ ಫೀಜನ್ನು ಕೊಡುವುದೆಲ್ಲಿ ಜೀವನ ಮಾಡುವುದೆಲ್ಲಿ? ಈ ಕೊರತೆಗೋಸ್ಕರವಾಗಿ ಅವರ ಮಕ್ಕಳಲ್ಲನೇಕರಿಗೆ ಇಂಗ್ಲೀಷ್ ವಿದ್ಯಾಭ್ಯಾಸಕ್ಕವಕಾಶವಿಲ್ಲದಿವೆ ಸ್ಕೂಲಿನಲ್ಲಿ ಫ್ರೀಗೆ ಅವಕಾಶವುಂಟು ಮಾಡಿದರೆ ಮಾಸ್ತರುಗಳ ಹುಡುಗರಿಗೆ ಫ್ರೀ [illegible] ಕೊಡುತ್ತಾರೆಂದು ಜನಗಳು [illegible] ಸರ್ಕಾರಿನ ಕೆಲಸವನ್ನೇ ನಂಬಿಕೊಂಡಿರುವ ಈ ಮಾಸ್ಟರ ಮಕ್ಕಳು ಮುಂದೆ ಜೀವನಕ್ಕೆ ಮಾರ್ಗ ಕಾಣದೆ ಕೊಂದರೆಪಡಬೇಕಾಗಿದೆ ಸದ್ಯಕ್ಕಲೂ ಇದಲ್ಲದೆ ಇತರ ಇಲಾಖೆಯವರಿಗಾದರೆ ಯಾವ ವಿಧದಲ್ಲಾದರೂ ವರಮಾನವಿರುತ್ತದೆ ಈ ಇಲಾಖೆಯಲ್ಲಿ [illegible] ಹೊರತು ಮೇಲೆ ಒಂದು ಕುರುಡುಕಾಸಾಗಲಿ ಸಿಕ್ಕುವಂತಿಲ್ಲ ಈಗ ಅರಿಕೆ ಮಾಡಿಕೊಳ್ಳುವುದೇನೆಂದರೆ—ಮೈಸೂರು ಸಂಸ್ಥಾನದಲ್ಲಿ ಯಾವ ವಿದ್ಯಾಶಾಲೆಯಲ್ಲೇ ಆಗಲಿ ಸ್ಕೂಲ್ ಮಾಸ್ಟರ (ಶಿಕ್ಷಕರೊಂದಿಗೆ, ವಿದ್ಯಾ ಇಲಾಖೆಯಲ್ಲಿರುವವರ) ಮಕ್ಕಳು ಸ್ಕೂಲ್ ಫೀ ಇಲ್ಲದ ವಿದ್ಯಾಭ್ಯಾಸ ಮಾಡಬಹುದು ಎಂದು ಮಾಡಿದರೆ ಅನೇಕರಿಗೆ ತುಂಬಾ ಉಪಕಾರಮಾಡಿದಂತಾಗುವುದು ಇದರಿಂದ ಇವರ ಹುಡುಗರಲ್ಲಿ [illegible] ವಿದ್ಯಾಭ್ಯಾಸಮಾಡಿ ಮುಂದೆ [illegible] ಚೆನ್ನಾಗಿ [illegible] ಇತರ ಯಾವ ಮಾರ್ಗವಿಲ್ಲದವರ ಜೀವನೋಪಾಯವನ್ನು ಪಡುತಿಕೊ [illegible] ಸಮರ್ಥರಾಗುವರು ಈ ಅಂಶವು ಆಳುಪ್ರಾಯಪಡುವ ಯಾರಾದರೂ [illegible] ಮುಂದಿನ [illegible] ಸಭೆಯಲ್ಲಿ ಚರ್ಚೆಗೆ ತಂದು ಎಲ್ಲಾ ಮೇಲಧಿಕಾರಿಗಳೂ [illegible] ಇವರ [illegible]ಗಳನ್ನು ಅನುಗ್ರಹವಾಗಿ ವಿಮರ್ಶಿಸಿ ಇಷ್ಟಾರ್ಥ [illegible] ಪ್ರಾರ್ಥಿಸುತ್ತೇನೆ

[illegible]

[illegible] ಕೋರ್ಟು

ಸ್ವಾಮಿ,

[illegible] ಕೆಲಸವಲ್ಲ ಈ ಕೋರ್ಟಿನ [illegible] 10 ವರ್ಷಗಳಾಗಿರಬಹುದು ಇವರ ಅಣ್ಣಂದಿರು [illegible] ನಿರ್ವಹಮಾಡಿಕೊಂಡು ಹೋಗುತ್ತಿರುವುದರಿಂದಲೇ ಅವರು ಈ ಕೋರ್ಟುಕೆಲಸದಲ್ಲಿ ನಿರತರಾಗಿರುವುದಕ್ಕೆ ಅವಕಾಶವಾಗಿರುತ್ತೆ ಇವರು ರೆವಿನ್ಯೂ, ಪೋಲೀಸ್, ಸ್ಕೂಲು, ಪೋಸ್ಟಲ್, ಇಂಜನಿಯರ್, ಈ ಇಲಾಖೆಯಲ್ಲಿಂತಹ ನೌಕರರ ಮೇಲೆಲ್ಲಾ ತಕರಾರು ಅರ್ಜಿಯನ್ನು ಬರೆದು ಇರುತ್ತಾರೆ ಕೆಲವು ಅರ್ಜಿಗಳು ವಿಚಾರಣೆಯಾಗಿ ಅರ್ಜಿ ಅಂಶಗಳು ಸುಳ್ಳು, ಈ ತಕರಾರ ನೌಕರರಿಗೆ ಕೆಟ್ಟ ಹೆಸರು ತರಿಸಲು ಈ ರೀತಿ ಅರ್ಜಿ ಬರೆಯುತ್ತಾನೆಂದು ತಿರಸ್ಕರಿಸಿರುತ್ತಾರೆಯೇ ಹೊರತು ಕ್ರಮವಾದ ವಿಚಾರಣೆಮಾಡಿ ತಕರಾರು ಅರ್ಜಿ ಬರೆದ ಈತನಿಗೆ ಬಂದೋಬಸ್ತು ಮಾಡದೆ ಇರುವುದೇ ಈತ ಪುನಃಪುನಃ ಅರ್ಜಿ ಬರೆಯಲು ಕಾರಣವಾಗಿರುತ್ತೆ ಯಾವ ಇಲಾಖೆಯವರೂ ಗಮನಕ್ಕೆ ತಾರದಿದ್ದಕ್ಕಾಗಿ ನಾನು ವಿಷಾದಿಸುತ್ತೇನೆ ಇತಃಪರ ಈತನಿಂದ ಬರತಕ್ಕ ಯಾವ ಅರ್ಜಿಯನ್ನೂ ಯಾವ ಇಲಾಖೆಯವರೂ ಸ್ವೀಕರಿಸಕೂಡದೆಂಬುದಾಗಿಯೂ, ಒಂದು ವೇಳೆ ಅರ್ಜಿ ಬಂದ ಪಕ್ಷದಲ್ಲಿ ಕ್ರಮವಾದ ವಿಚಾರಣೆಯಿಂದ ಮುಂದೆ ಅರ್ಜಿ ಬರೆಯದಂತೆ ಬಂದೋಬಸ್ತು ಮಾಡಿಸ್ಯಾರೆಂದು ನಂಬಿದ್ದೇನೆ

ತಾ 8 7 1913, ಸೂರ್ಯನಾರಣಪ್ಪ,

ಅರಸೀಕೆರೆ ತಾ॥ ಜಾವಗಲ್ ತಂಗಡಿಚಿಕ್ಕ ಕಂಟ್ರಾಕ್ಟುದಾರ್

ತಾಲ್ಲೋಕು ವರ್ತಮಾನಗಳು

ತಿಪಟೂರು —ಬಿತ್ತನೆ ಕೆಲಸ ತೀರಿತು ಒಂದು ವಾರದಿಂದ ಮಳೆ ಇಲ್ಲ ಗಾಳಿ ಮಾತ್ರ ವಿಶೇಷ ಸ್ವಲ್ಪ ಸ್ವಲ್ಪ ಮಳೆ ಆವಶ್ಯಕ —ಕಳೆದ ವಾರ ಮ॥ ಸಿಂಗ್ರಿ ನಂಜಪ್ಪನವರ ದೇವಸ್ಥಾನಕ್ಕೆ ಕಳ್ಳರು ನುಗ್ಗಿ ಬೆಲೆಬಾಳುವ ವಸ್ತುಗಳನ್ನು ಕಳವು ಮಾಡಿಕೊಂಡು ಹೋಗಿರುವರೆಂದು ಗೊತ್ತಾಗುತ್ತೆ ಪೋಲೀಸ್ ಗಸ್ತಿನ ಫಲ ಹೀಗಾಗಿದೆ —ಪರೇಲ್ ವಗೈರೆ ವಿವಿಧ ಜೂಜಾಟಗಳು ದಿನ ದಿನಕ್ಕೆ ಈ ಊರಿನಲ್ಲಿ ವೃದ್ಧಿಹೊಂದುತ್ತಾ ಇರುವವು ಸಣ್ಣ ಹುಡುಗರು ಸಹ ಈ ಆಟಗಳನ್ನು ಕಲಿತು ಕೆಡುವವರಾಗಿ ಇದ್ದಾಗ್ಯೂ ಸ್ಥಳೀಯ ಅಧಿಕಾರಿಗಳು ಪೋಲೀಸ್ ಸಿಬ್ಬಂದಿಯ ಸಹಾಯದಿಂದ ಯಾಕೆ ಜಾಗ್ರತೆ [illegible] ತಿಳಿಯುವದು ಕಷ್ಟ ಬಹು ಕಾಲದಿಂದಲೂ ಈ ಜೂಜಾಟಗಳು ನಡೆಯುತ್ತಾ ಬಂದಿದ್ದಾಗ್ಯೂ ಇವರನ್ನು ಕಂಡು ಹಿಡಿಸಿದ್ದಾಗಲಿ, ಬಿಡಿಸಿದ್ದಾಗಲಿ ಈ ವರೆಗೂ ಇಲ್ಲ ಇದರ ಗುಟ್ಟು ನಾಗಿರಬಹುದೋ —ಸಂತೆಯಲ್ಲಿ ಸುಂಕ ಎತ್ತುವ ಪದ್ಧತಿ ಇನ್ನೂ ನಿಂತಿಲ್ಲ ಸರ್ಕಾರಿ ನೌಕರರಲ್ಲಿ ಕೆಲವರು ಎತ್ತುವದನ್ನು ಅವರ ಆಫೀಸರು ಕಂಡು ಬಂದೋಬಸ್ತು ಮಾಡುವದರಿಂದ ರೈತರಿಗೂ ತಮ್ಮ ಗೌರವಕ್ಕೂ ಪ್ರಯೋಜನವಾಗುವದು —ಟವನ್ನಲ್ಲಿ ನೀರಿನ ತೊಂದರೆ ಪ್ರಾರಂಭವಾಗಿದೆ ಭಾವಿಯನ್ನು ತೋಡುವ ಯಂತ್ರದ ಕೆಲಸ ತಿರುಗಿ ಪ್ರಾರಂಭವಾಗಿ ನಡೆಯುತ್ತಿದೆ ಯಾವಾಗ ಸರಕಾರದವರು ನೀರನ್ನು ಕಾಣಿಸುವರೋ ಎಂದು ಪ್ರಜೆಗಳು ಹಂಬಲಿಸುತ್ತಿರುವರು

ಎಡೇಹಳ್ಳಿ —ಈ ತಾಲ್ಲೋಕು ಪ್ರಾಂತ್ಯ ಮಳೆಗೆ ಪ್ರಸಿದ್ಧವಾಗಿ ಒಂದೂವರೆ ತಿಂಗಳಾಗುತ್ತಾ ಬಂತು ಈ ವರುಷದ ವ್ಯವಸಾಯಸ್ಥಿತಿ ನೋಡಿದರೆ ಮುಂದೆ ರೂಪಾಯಿಗೆ 5 6 ಸೇರು ಅಕ್ಕಿ ಆಗುತ್ತೆಂತ ತೋರುತ್ತೆ ಪ್ರತಿ ವರುಷವೂ ಪುನರ್ವಸು, ಪುಷ್ಯದ ಮಳೆ ಆಖೈರ್ ಒಳಗೆ ಜಮೀನ್ ವ್ಯವಸಾಯದ ಕೆಲಸವೆಂದರೆ ಸಸಿ ನೆಡತಕ್ಕ ಕೆಲಸ ಪೂರೈಸುತ್ತಾ ಇತ್ತು ಈ ವರುಷವಾದರೋ ಇನ್ನೂ ಜಮೀನಿಗೆ ಬೀಜಹಾಕುತ್ತಾ ಇದಾರೆ ಪೂರ್ವಿಕರು ಪುನರ್ವಸು, ಪುಷ್ಯದ ಮಳೆಗಳು ಈ ಪ್ರಾಂತಕ್ಕೆ ಬಹಳ ಮುಖ್ಯವಾದದ್ದೆಂತಲೂ, ಅಣ್ಣ ತಮ್ಮಂದಿರೆಂತಲೂ, ಅಣ್ಣ ಹುಸಿದರೂ ತಮ್ಮ ಹುಸಿಯನೆಂತಲೂ ಹೇಳುತ್ತಾ ಇದ್ದರು ನಮ್ಮ ಕಾಲಕ್ಕೆ ಅದು ಸುಳ್ಳಾಯಿತು ಇಲ್ಲಿನ ಈ ವರ್ಷದ ಮಳೆ ಸ್ಥಿತಿ ಬೈಲ್‌ಸೀಮೆಯಂತೆ ಬರುತ್ತಾ ಇದೆ ಒಂದು ದಿವಸ ಬಂದರೆ ಮೂರು ದಿವಸ ಇಲ್ಲ ಮೊದಲು ಈ ಆಷಾಢಮಾಸದಲ್ಲಿ ಮಳೆ ಜಾಸ್ತಿಯಾದ್ದರಿಂದ ದನಗಳನ್ನು ಹೊರಗೆ ಬಿಡುತ್ತಾ ಇರಲಿಲ್ಲವಂತೆ ಪ್ರತಿ ಮನೆಯಲ್ಲಿಯೂ ಅಗ್ಗಿಷ್ಟಿಕೆಯಲ್ಲಿ ಬೆಂಕಿ ಇಟ್ಟುಕೊಂಡಿರುತ್ತಾ ಇದ್ದರಂತೆ ಈಗಲಾದರೋ ಈ ಆಷಾಢದಲ್ಲಿ ಹಗಲು ಬಿಸಿಲೂ ರಾತ್ರಿ ಬೆಳದಿಂಗಳೂ ಚೆನ್ನಾಗಿ ಬರುತ್ತಾ ಇದೆ ಹೀಗೇನೇ ಕಾಡು ಬೈಲಾಗುತ್ತಾ ಬಂದಹಾಗೆಲ್ಲಾ ಮಳೆ ವಿಚಾರದಲ್ಲಿ ಮಟ್ಟಿಗೆ ಇದು ಬೈಲ್‌ಸೀಮೆಯಾಗಬಹುದಾಗಿ ಕಾಣುತ್ತೆ ಅನುಭವಶಾಲಿಗಳಾದ ಹಿಂದಿನವರು ಈ ಪ್ರಾಂತ್ಯ ಕಾಡನ್ನು ಕ್ಲಿಯರ್ ಮಾಡುತ್ತಾ ಬಂದಹಾಗಾಯಿತು ಮಳೆ ಕಡಮೆಯಾಗುತ್ತಾ ಬರುತ್ತಲಿದೆ ಎಂತ ಹೇಳುತ್ತಾರೆ ಈ ಮಾತು ನಿಜ್ಜವೆಂತ ಕಾಣುತ್ತೆ ಯಾಕೆಂದರೆ ಬೈಲ್‌ಸೀಮೆಯಲ್ಲಿ ಮರಗಳು ಕಡಮೆ, ಮಳೆಯೂ ಕಡಮೆ, ಮಲ್ನಾಡಿನಲ್ಲಿ ಮರಗಳೂ, ಜಾಸ್ತಿ, ಮಳೆಯೂ ಜಾಸ್ತಿ ಈಚೀಚೆಗೆ ಮರ ಕಡಮೆ ಆದಹಾಗೆಲ್ಲಾ ಮಳೆ ಕಡಮೆಯಾಗುತ್ತಲೇ ಬಂದಿರುವದು —ಮಲ್ನಾಡು ಪದ್ಧತಿಯಂತೆ ಜಡಿಮಳೆ ಬರುತ್ತಾ ಇದ್ದಿದ್ದರೆ ಜನಗಳು ಆರೋಗ್ಯವಾಗಿರುತ್ತಾ ಇದ್ದರು ಆ ರೀತಿ ಬಾರದೆ ಕೆಲವು ದಿವಸ ಮಳೆಯೂ, ಕೆಲವು ದಿವಸ ಬಿಸಿಲೂ ಬರುತ್ತಾ ಇಂದದ್ದರಿಂದ ಜನಗಳಿಗೆ ಕಾಯಿಲೆ ಬರುವುದಕ್ಕೆ ಅವಕಾಶವಾಯ್ತು ಈ ಕಾರಣದಿಂದ ಅಲ್ಲಲ್ಲಿ ಜನಗಳಿಗೆ ಛಳಿ ಜ್ವರ, ನ್ಯೂಮೋನಿಯಾ ಕಾಯಿಲೆಗಳು ಪ್ರಾರಂಭವಾಗಿ ನಾಲ್ಕಾರು ಜನಗಳು ಮೃತಪಟ್ಟರು ಅದರಿಂದ ಜನಗಳಿಗೆ [illegible] ಅಂದರೆ ತಲೀಕತೆ [illegible] ಕೊಪ್ಪ ಈ ಪ್ರಾಂತ್ಯ ಕಾಲರಾ ಗಲಾಟೆ ಇದ್ದದ್ದರಿಂದ ಕಾಲರಾ ಎಂತ ಒಂದು ವಿಧವಾದ ಭೀತಿ ಉಂಟಾಯ್ತು ಈ ಕಾಲದಲ್ಲಿ ಇಲ್ಲಿನ ಆಸ್ಪತ್ರೆ ಅ॥ ಸರ್ಜನ್ [illegible] ಅವರು ಬಹಳ ಮುತುವರ್ಜಿಯಿಂದ ರೋಗಿಗಳ ಮನೆಗಳಿಗೆ ಹೋಗಿ ಸರಿಯಾದ ಔಷಧಿಗಳನ್ನು ಕೊಟ್ಟು ಒಳ್ಳೇ ಆರೈಕೆ ನಡಿಸಲು [illegible] ಪ್ರತಿದಿವಸವೂ ಟವನ್ ಮೇಲೆ 2 3 ಸಾರಿ ಬರುತ್ತಾ ರೋಗಿಗಳನ್ನು ಚೆನ್ನಾಗಿ ವಿಚಾರಮಾಡುತ್ತಾ ಇರುವುದರಿಂದ ಈಚೆಗೆ ಆ ವಿಷಯದ ಗಲಾಟೆಯೂ ಕಮ್ಮಿಯಾಗುತ್ತಾ ಬಂದಿರುತ್ತೆ —ಈ ಟವನ್ ಬಹಳ ಚಿಕ್ಕದು, ಮ್ಯುನಿಸಿಪಲ್ ಉತ್ಪನ್ನ ಬಹಳ ಕೊಂಚ ಆದ್ದರಿಂದ ದೊಡ್ಡ ರೋಡಿಗೆ ಮಾತ್ರ 1 6 ದೀಪಗಳು ಸ್ಯಾಂಕ್ಷನ್ ಆಗಿರುತ್ತೆ ಆ ದೀಪಗಳಾದರೋ ಮನೆಗಳಲ್ಲಿ ಹೊತ್ತತಕ್ಕ [illegible] ಕಂಟ್ರಾಕ್ಟುದಾರನಿಗೆ [illegible] ಪ್ರಜೆಗಳ [illegible] ಆ ದೀಪಗಳಿಗೆ ಕೆಂಪು ಎಣ್ಣೆ ಹಾಕುತ್ತಾನೆ ದೀಪ [illegible] 10 ನಿಮಿಷಗಳಲ್ಲಿ ಗ್ಲಾಸಿಗೆ ಹೊಗೆ ಹಿಡಿದು ಕಪ್ಪಾಗುತ್ತೆ ಪ್ರತಿ [illegible] ಅನುಕೂಲವಾಗಿದ್ದರೂ ದೀಪ ಹೊತ್ತಿದಂತೆ ಆಯ್ತು ಅಡ್ಡಗಲ್ಲಿಗಳಿಗೆ ದಿ [illegible] ಇಲ್ಲ ಅಡ್ಡಗಲ್ಲಿಗಳ [illegible] ಈ ವಿಚಾರಗಳಲ್ಲಿ ಮುನಿಸಿಪಾಲಿಟಿಯವರನ್ನು ಕೇಳಿದರೆ ಉತ್ತರ ಇಲ್ಲ, ನಾವೇ ಸುಮ್ಮನಾಗುವದು [illegible] ಹೇಳುತ್ತಾರೆ ಯಾವ ಕಾಲಕ್ಕೆ ಉತ್ಪತ್ತಿ ಹೆಚ್ಚಾಗುತ್ತೋ ಅಡ್ಡಗಲ್ಲಿಗಳಿಗೆ ದೀಪವೂ, ರಸ್ತೆ ರಿಪೇರಿಯೂ ಆಗುತ್ತೋ ಗೊತ್ತಿಲ್ಲ —ಟವನ್ ಎ ವಿ ಸ್ಕೂಲ್ ಬಹಳ ಹೀನಸ್ಥಿತಿಯಲ್ಲಿರುತ್ತೆ ಮೊದಲು ಈ ಊರ ಸ್ಕೂಲು ಡಿಸ್ಟ್ರಿಕ್ಟಿಗೇನೇ ಉತ್ತಮ ಸ್ಥಿತಿ ಸ್ಕೂಲಾಗಿತ್ತು 10 ಹುಡುಗರು ಪರೀಕ್ಷೆಗೆ ಹೋದರೆ 8 9 ಜನ ಪ್ಯಾಸಾಗುತ್ತಿದ್ದರು ಈಚೆಗೆ 10 ಹುಡುಗರಿಗೆ 1 2 ಜನ ಪ್ಯಾಸಾಗುತ್ತಾರೆ ಸ್ಕೂಲ್ ಮಾಸ್ಟರುಗಳು ಅಭಿಮಾನಶಾಲಿಗಳಾದ ಸ್ಥಳವಂದಿಗರೇ ಆಗಿದ್ದೂ ಹೀನಸ್ಥಿತಿಗೆ ಬರುತ್ತಲಿರುವದು ಯಾತಕೋ ತಿಳಿಯುವದಿಲ್ಲ

ವಿದೇಶದ ವೃತ್ತಾಂತಗಳು

ಅಮೇರಿಕಕ್ಕೆ ಸೇರಿದ ಓಹಿಯೋ ಡಿಸ್ಟ್ರಿಕ್ಟಿನಲ್ಲಿ ಒಂದು ಗಣಿಯಲ್ಲಿ ಬೆಂಕಿಯ ಅನಾಹುತ ಸಂಭವಿಸಿ 10 ಮಂದಿ ಕೂಲಿಯವರು ಮೃತಪಟ್ಟರು

ನಾರುಹುಣ್ಣಿನ ಪೂರ್ವೋತ್ತರವನ್ನೂ ಅದಕ್ಕೆ ಪರಿಹಾರವನ್ನೂ ಕಂಡುಹಿಡಿಯುವಂಥಾ ವೈದ್ಯಮಂಡಲಿಯವರ ಫಂಡಿಗೆ ಮಿ॥ ಎಡ್ವರ್ಟೀಟ್ ಎಂಬ ಪುಣ್ಯಾತ್ಮನು ಒಂದೂವರೆ ಲಕ್ಷ ರೂಪಾಯಿ ಧರ್ಮಮಾಡಿರುತ್ತಾನೆ.

ಹಂಗೆರಿ ಸೀಮೆಗೆ ಸೇರಿದ ಪ್ರೆಸ್‌ಬರ್ಗ್ ಪಟ್ಟಣದಲ್ಲಿ ಬೆಂಕಿ ಬಿದ್ದು ಆರು ಬೀದಿಗಳು ಸುಟ್ಟುಹೋಗಿ ಸುಮಾರು ಎಂಟು ಸಾವಿರ ಪ್ರಜೆಗಳು ಮನೆಮಠ ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ಕಷ್ಟಪಡುತ್ತಿದಾರೆ.

ಚೀನಾ ಸೈನಿಕರು ಷಕ್‌ಚೌಟಿಂಗ್ ಎಂಬ ಸ್ಥಳಕ್ಕೆ ನುಗ್ಗಿ ರೈತರು ಬೆಳೆ ಮಾಡಿದ್ದ ಅಫೀಮಿನ ಗಿಡಗಳನ್ನೆಲ್ಲಾ ಕಿತ್ತುಹಾಕಿದರು ರೈತರೂ ಪ್ರಜೆಗಳೂ ಒಂದು ದೇವಸ್ಥಾನದೊಳಕ್ಕೆ ಹೋಗಿ ಮುಂದಿನ ಕಾರ್ಯಕ್ರಮವನ್ನು ಯೋಚಿಸುತ್ತಿದ್ದರು ಸೈನಿಕರು ಆ ದೇವಸ್ಥಾನಕ್ಕೆ ಬೆಂಕಿಹಾಕಿ ಸುಟ್ಟು 67 ಜನರನ್ನು ಕೊಂದುಬಿಟ್ಟರು

ಪಂಜಾಬ್ ಲೆಫ್ಟಿನೆಂಟ್ ಗವರ್ನರಾಗಿದ್ದು ಕೆಲಸಬಿಟ್ಟು ಸೀಮೆಗೆ ಹೋಗುತ್ತಿದ್ದ ಸರ್ ಲೂಯಿ ಡೇನ್‍ರವರನ್ನು ಫ್ರಾನ್ಸಿನಲ್ಲಿ ಕೊಂದುಹಾಕುವ ಏರ್ಪಾಡು ನಡೆದಿದೆ ಎಂಬುದನ್ನು ಅವರು ಹ್ಯಾಗೋ ತಿಳಿದು ಫ್ರಾನ್ಸಿನಲ್ಲಿ ಇಳಿಯದೆ ಜಹಜಿನ ಮೇಲೆಯೇ ಲಿವರ್‌ಪೂಲ್ ಪಟ್ಟಣಕ್ಕೆ ಹೋಗಿ ತಲಪಿದರು

ಅಮೇರಿಕಕ್ಕೆ ಸೇರಿದ ನ್ಯೂ ಯಾರ್ಕ್ ಮಹಾನಗರದ ಬಿಂಗ್‍ಹ್ಯಾಂಟನ್ ಎಂಬ ಮೊಹಲ್ಲೆಯಲ್ಲಿ ಕಳೆದ ಮಂಗಳವಾರ ಒಂದು ಕಾರ್ಖಾನೆಯೊಳಗೆ ಬೆಂಕಿ ಬಿದ್ದು ಅನಾಹುತವಾಯಿತು ಅದರೊಳಗೆ ಕೆಲಸಮಾಡುತ್ತಿದ್ದ 125 ಮಂದಿ ಬಾಲಕಿಯರ ಪೈಕಿ 50 60 ಮಂದಿ ಬೆಂಕಿಯಲ್ಲಿ ಸಿಕ್ಕಿ ಸುಟ್ಟುಹೋದರೆಂದೂ, ಅನೇಕರಿಗೆ ಸುಟ್ಟ ಗಾಯಗಳಾದವೆಂದೂ, ಇವರಲ್ಲಿ ಸುಮಾರು ಹನ್ನೆರಡು ಮಂದಿ ಬದುಕುವಹಾಗಿಲ್ಲವೆಂದೂ ತಂತೀವರ್ತಮಾನ ಬಂದಿದೆ

ಲಂಡನ್ ಪಟ್ಟಣದಲ್ಲಿರುವ ಆರ್ಥರ್ ನ್ಯೂಟನ್ ಎಂಬೊಬ್ಬ ಪ್ರಸಿದ್ಧ ವಕೀಲನು ವಿಯನ್ನಾ ನಗರದ ಒಬ್ಬ ಪಂಡಿತನಿಗೆ 3,45,000 ರೂಪಾಯಿಗೆ ಮೋಸಮಾಡಿರುತ್ತಾನೆಂದು ಕಳೆದ ಮೇ ತಿಂಗಳಲ್ಲಿ ಮೊಕದ್ದಮೆ ಬಂದು ರುಜುವಾತಾಗದೆಹೋಯಿತು ಈಚೆಗೆ ಅದೇ ವಕೀಲನು ಆಸ್ಟ್ರಿಯಾ ರಾಜ್ಯದ ಇನ್ನೊಬ್ಬ ಐಶ್ವರ್ಯವಂತನನ್ನು ಮೋಸಪಡಿಸಿ 2,02,500 ರೂಪಾಯಿ ತೆಗೆದುಕೊಂಡನೆಂದು ಮೊಕದ್ದಮೆ ಆಗಿ ದರ್ಯಾಫ್ತಿಯಲ್ಲಿ ಅಪರಾಧ ರುಜುವಾತಾದ್ದರಿಂದ ಆ ವಕೀಲನಿಗೆ ಮೂರು ವರುಷ ಕಠಿಣಸಜಾ ವಿಧಿಸಿರುತ್ತಾರೆ

ಜರ್ಮನ್ ವೈದ್ಯರಲ್ಲಿ ಪ್ರಖ್ಯಾತಿಪಡೆದ ಫ್ರೆಡ್ರಿಕ್ ಫ್ರೈಡ್‌ಮನ್ ಎಂಬಾತನು ಕ್ಷಯವ್ಯಾಧ್ಯವನ್ನು ಶಿಡುಬಾಹಾಕಿ ವಾಸಿಮಾಡುವ ಉಪಾಯವನ್ನು ಕಂಡುಹಿಡಿದಿರುತ್ತಾನೆಂದು ಹೇಳುವರು ಈತನು ತಾನು ಕಂಡುಹಿಡಿದಿರುವ ಚಿಕಿತ್ಸೆಯನ್ನು ಗುಟ್ಟಾಗಿ ಇಟ್ಟುಕೊಂಡಿದ್ದು, ಅದನ್ನು ಅಮೇರಿಕದ ಒಂದು ಕಂಪೆನಿಗೆ 57,75,000 ರೂಪಾಯಿಗೆ ಬಿಕರಿಮಾಡಿದನು ಆ ಕಂಪನಿಯವರು ಈಗ ಅಮೇರಿಕದ ಮುಖ್ಯ ನಗರಗಳಲ್ಲಿ ಕ್ಷಯರೋಗಿಗಳ ಚಿಕಿತ್ಸೆಗಾಗಿ ಅನೇಕ ಆಸ್ಪತ್ರೆಗಳನ್ನು ಕಟ್ಟಲಾರಂಭಿಸಿರುವುದಾಗಿಯೂ, ಆದರೆ ನ್ಯೂ ಯಾರ್ಕ್ ಪಟ್ಟಣದ ಹೆಲ್ತ್ ಇಲಾಖೆಯವರು ಈ ಚಿಕಿತ್ಸೆಯ ವಿಧಾನವನ್ನು ತಿಳಿಯದೆ ಅಂಥಾ ಆಸ್ಪತ್ರೆಗಳಿಗೆ ಸ್ಥಳ ಕೊಡಕೂಡದೆಂದು ಅಡ್ಡಿಹಾಕಿರುವುದಾಗಿಯೂ ತಿಳಿದುಬರುತ್ತದೆ ಅತ್ತಲಾಗಿ ಎಟ್ನಾ ನ್ಯಾಷನಲ್ ಬ್ಯಾಂಕಿನವರು ಆ ವೈದ್ಯನಿಗೆ 100 ಮಂದಿ ಕ್ಷಯರೋಗಪೀಡಿತರನ್ನು ವಾಸಿಮಾಡುವುದಕ್ಕೆ 30 ಲಕ್ಷ ರೂಪಾಯಿ ಕೊಡುವುದಾಗಿ ಮಾತುಕೊಟ್ಟು ಅಮೇರಿಕದಿಂದ ಆತನನ್ನು ಕಳೆದ ತಿಂಗಳಲ್ಲಿ ಕರಸಿಕೊಂಡಿದಾರೆಂದು ಪ್ರಕಟವಾಗಿದೆ

ಇಂಡಿಯಾ ದೇಶದ ವೃತ್ತಾಂತಗಳು.

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಮದಾರಿಪುರದಲ್ಲಿ ಕೆಲವು ಸ್ಕೂಲ್ ವಿದ್ಯಾರ್ಥಿಗಳಾದ ಬಂಗಾಳಿ ಹುಡುಗರು ಒಂದು ಮನೆಗೆ ನುಗ್ಗಿ ಲೂಟಿ ಮಾಡಿದರೆಂದು ಪೋಲೀಸಿನವರು ಹತ್ತಾರು ಮಂದಿ ಹುಡುಗರನ್ನು ದಸ್ತಗಿರಿ ಮಾಡಿದಾರೆ

ಉದಯಪುರ ಸಂಸ್ಥಾನದ ಮಹಾರಾಣಾರವರು ಕಳೆದ ವಾರ ಹರಿದ್ವಾರಕ್ಕೆ ದಯಮಾಡಿ, ಅಲ್ಲಿರುವ ಗುರುಕುಲವೆಂಬ ವಿದ್ಯಾಶಾಲೆಯನ್ನು ಪರಾಂಬರಿಸಿ ಸಂತೋಷಪಟ್ಟು, ಅದರ ಮೂಲಧನಕ್ಕಾಗಿ 15,000 ರೂಪಾಯಿ ಧರ್ಮಕೊಟ್ಟು ಬಂದರು

ಬಂಗಾಳಾ ಆಧಿಪತ್ಯಕ್ಕೆ ಸೇರಿದ ಓಂಡಾಲ್ ಸಾಂಥಿಯಾ ರೈಲೆ ಅನಾಹುತದಲ್ಲಿ ಸಿಕ್ಕಿ ನಷ್ಟಪಟ್ಟವರೂ, ಬಂಧು ಬಳಗಗಳನ್ನು ಕಳೆದುಕೊಂಡವರೂ ಈಗ ರೈಲ್ವೆ ಕಂಪನಿಯವರ ಮೇಲೆ 50,000 ರೂಪಾಯಿ ಪಾವಿಜಿಗೆ ದಾವಾ ಮಾಡಿರುತ್ತಾರೆ

ಬೊಂಬಾಯಿನಲ್ಲಿರುವ ಸಿ ಮಹಮದ್ ಹುಸೇನ್ ಎಂಬ ವೈದ್ಯರನ್ನು ಟರ್ಕಿ ಸರ್ಕಾರದವರು ತಮ್ಮ ಸೈನ್ಯದಲ್ಲಿ ಡಾಕ್ಟರ್ ಕೆಲಸಕ್ಕೆ ನೇಮಕ ಮಾಡಿಕೊಂಡು, ಅಲ್ಲಿಗೆ ಬರಬೇಕೆಂದು ಕಳೆದ ವಾರ ತಂತೀವರ್ತಮಾನ ಕೊಟ್ಟು ಕಳಿಸಿಕೊಂಡಿದಾರೆ

ಕೊತ್ತಾಯಂ ಹಿರಿಯ ರಾಜರಾದ ಮಿ॥ ವೀರವರ್ಮರಾಜರವರು ಒಬ್ಬ ಮಾಪಿಳ್ಳೆಗೆ ಅಧಾರಪತ್ರ ಬರೆದುಕೊಟ್ಟ ಸಂದರ್ಭದಲ್ಲಿ ಅವನಿಗೆ ಮೋಸಮಾಡಿದರೆಂದು ರುಜುವಾತಾದ್ದರಿಂದ ತಲಚೇರಿ ಮ್ಯಾಜಿಸ್ಟ್ರೇಟರು ಕಳೆದ ಬುಧವಾರ ಅವರಿಗೆ 50 ರೂಪಾಯಿ ಜುಲ್ಮಾನೆ ವಿಧಿಸಿದರು

ಮಧ್ಯಪ್ರಾಂತ್ಯಗಳಿಗೆ ಸೇರಿದ ನಂದಗಾಂವ್ ಸಂಸ್ಥಾನದಲ್ಲಿ ಕಳೆದ ವಾರ ಮಹಾರಾಜರವರಿಗೆ ಪಟ್ಟಾಭಿಷೇಕವಾಯಿತು ಮಹಾರಾಜರವರು ತಮಗೆ ರಾಜ್ಯಾಭಿಷೇಕವಾದ ಸಂತೋಷಕ್ಕಾಗಿ ತಾವು ವಿದ್ಯೆ ಕಲಿತ ರಾಯಪುರದ ರಾಜಕುಮಾರ್ ವಿದ್ಯಾಶಾಲೆಯ ಫಂಡಿಗೆ ಐದು ಲಕ್ಷ ರೂಪಾಯಿ ಬಹುಮಾನವನ್ನು ಕಳುಹಿಸಿರುತ್ತಾರೆ

ಬ್ರಿಟಿಸ್ ಇಂಡಿಯಾದಲ್ಲಿ ಪ್ರಜಾಪಾಲನೆಯನ್ನು ಮಾಡುವಂಥಾ ಇಂಗ್ಲಿಷ್ ಅಧಿಕಾರಿಗಳು ದೇಶೀಯ ಪ್ರಜೆಗಳ ಮನೆಗಳಿಗೆ ಶುಭಕಾರ್ಯಗಳಲ್ಲಿ ಕರೆಸಲ್ಪಟ್ಟಾಗಲೂ, ಇನ್ಯಾವ ಸಂದರ್ಭಗಳಲ್ಲೂ ಅಂಥಾ ಪ್ರಜೆಗಳಿಂದ ಯಾವ ವಿಧವಾದ ಉಡುಗೆರೆಯನ್ನೂ ಬಹುಮಾನವನ್ನೂ ಅಂಗೀಕರಿಸಲೇ ಕೂಡದೆಂದು ಇಂಡಿಯಾ ಗವರ್ನ್‍ಮೆಂಟಿನವರು ಖಂಡಿತವಾದ ಅಪ್ಪಣೆಯನ್ನು ಕೊಟ್ಟು, ಎಲ್ಲಾ ಆಧಿಪತ್ಯಗಳ ಅಧಿಕಾರಿಗಳಿಗೂ ಪ್ರಜೆಗಳಿಗೂ ತಿಳಿಯಪಡಿಸಿರುತ್ತಾರೆ

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಪೋರಿಬಂದರಿನಲ್ಲಿ ಹಿಂದುಗಳ ಮೆರವಣಿಗೆ ನಡೆಯುವಾಗ್ಗೆ ಮಸೀತಿಯ ಮುಂದೆ ತಾಳಮೇಳಗಳೊಡನೆ ಹೋಗಕೂಡದೆಂದು ಮುಸಲ್ಮಾನ್ ಜನರು ಅಡ್ಡಿ ಮಾಡಿದಾಗ ಹಿಂದೂ ಮಹಮದೀಯರಿಗೆ ಜಗಳ ಕಾದಾಟಗಳು ಸಂಭವಿಸಿ ಹಿಂದುಗಳು ಮಸೀದಿಗಳನ್ನು ಹಾಳುಮಾಡಿ ಕೆಲವು ಮಳಿಗೆಗಳನ್ನು ಸೂರೆಪಡಿಸಿ ಕೊಳ್ಳೆಹೊಡೆದರೆಂದೂ, ಅದಕ್ಕೆ ತಕ್ಕ ಪರಿಹಾರ ಮಾಡಬೇಕೆಂದೂ ಅಲ್ಲಿನ ಮುಸಲ್ಮಾನ್ ಪ್ರಜೆಗಳು ಬೊಂಬಾಯಿ ಗವರ್ನರವರಿಗೆ ಮನವಿಮಾಡಿಕೊಂಡಿದಾರೆ

ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್ ಪ್ರಭುಗಳು ನೊವೆಂಬರ್ ತಿಂಗಳಲ್ಲಿ ಮಧುರೆ, ತಿರುಚನಾಪಲ್ಲಿ, ತಂಜಾವೂರು ಪಟ್ಟಣಗಳಲ್ಲಿ ಸಂಚಾರ ಮಾಡಿಕೊಂಡು ಆ ತಿಂಗಳು 24 ನೇ ತಾ ಮದರಾಸನ್ನು ತಲಪಿ ಅಲ್ಲಿ ಎರಡು ದಿನ ಗವರ್ನರವರ ಮತ್ತೂ ಪುರಜನರ ಆತಿಥ್ಯಗಳನ್ನು ಸ್ವೀಕರಿಸಿ, ಅಲ್ಲಿ ತಯಾರಾಗಿರುವ ಹೊಸ ಮ್ಯುನಿಸಿಪಲ್ ಆಫಿಸ್ ಕಟ್ಟಡವನ್ನು ಪ್ರತಿಷ್ಠೆ ಮಾಡುವವರಾಗಿದಾರೆ ತರುವಾಯ ವರುಷಾಂತ್ಯದಲ್ಲಿ ರಾಮೇಶ್ವರಕ್ಕೆ ದಯಮಾಡಿ ಹಿಂದುಸ್ಥಾನದಿಂದ ಸಿಲೋನ್ ದ್ವೀಪಕ್ಕೆ ಹೋಗಿ ಬರುವಂಥಾ ರೈಲ್ ಮಾರ್ಗವನ್ನು ಪ್ರತಿಷ್ಠೆ ಮಾಡುತ್ತಾರೆ ಇದಕ್ಕೋಸ್ಕರ ಅಲ್ಲಿ ರೈಲ್ವೆ ಕಾಮಗಾರಿಗಳು ಬಹಳ ಆತುರವಾಗಿ ನಡೆಯುತ್ತಿರುವವು

ಬಿಕ್ಯಾನಿರ್ ಸಂಸ್ಥಾನದ ಸರ್ಕಾರದವರು ಹಿಸ್ಸಾರ್ ಬ್ರ್ಯಾಂಚ್ ರೈಲ್ವೆಯನ್ನು ರಾಜಘಡ ಸ್ಟೇಷನ್ನಿಂದ ದೆಹಲಿ ವರೆಗೆ ಬಡಾವಣೆ ಮಾಡುವ ವಿಷಯದಲ್ಲೂ ಬಿಕ್ಯಾನಿರ್‌ನಿಂದ ಜೈಸಲ್‌ಮೀರ್‌ಪಟ್ಟಣವನ್ನು ಹಾಸಿ ಸಿಂಧು ಹೈದರಾಬಾದಿಗೆ ಅಂಟಿಸುವ ವಿಷಯದಲ್ಲೂ ಇಂಡಿಯಾ ಗವರ್ನ್‍ಮೆಂಟಿನವರ ಅನುಮತಿಯನ್ನು ಕೇಳಿದಾರೆ ಈ ವಿಚಾರವನ್ನು ಚರ್ಚಿಸಿ ಗೊತ್ತುಮಾಡುವುದಕ್ಕೋಸ್ಕರ ಬಿಕ್ಯಾನಿರ್ ಮಹಾರಾಜರವರೂ, ಜೈಸಲ್‌ಮೀರ್ ಮಹರವಾಳ್‍ರವರೂ, ರಾಜಪುಟಾನಾ ಸಂಸ್ಥಾನಗಳ ಏಜಂಟ್ ಸರ್ ಎಲ್ಲಿಯಟ್ ಕಾಲ್ವಿನ್‍ರವರೂ, ರೆಸಿಡೆಂಟ್ ಲೆಫ್ಟಿನೆಂಟ್ ಕರ್ನಲ್ ವಿಂಡ್ಹಾಂರವರೂ, ಸರ್ ಟಿ ಆರ್ ವಿನ್ನ್‍ರವರೂ, ಬಿಕ್ಯಾನಿರ್ ಮತ್ತು ಜೈಸಲ್‌ಮೀರ್ ಸಂಸ್ಥಾನಗಳ ಮುಖ್ಯಾಧಿಕಾರಿಗಳೂ ಈ ತಿಂಗಳು ತಾ 28 ನೇ ಸೋಮವಾರ ಆಜ್ಮೀರನಗರದಲ್ಲಿ ಕೂಡಿ ಸಭೆಯನ್ನು ನಡಿಸುವವರಾಗಿದಾರೆ

ಕಾಶೀ ಪಟ್ಟಣದಲ್ಲಿ ಸ್ಥಾಪಿಸಬೇಕೆಂದು ಪ್ರಯತ್ನ ನಡೆದಿರುವ ಹಿಂದೂ ಯೂನಿವರ್ಸಿಟಿ (ಸರ್ವವಿದ್ಯಾನಿಲಯದ) ಫಂಡಿಗೆ 80 ಲಕ್ಷ ರೂಪಾಯಿ ತನಕ ವಾಗ್ದಾನವಾಗಿದ್ದರೂ ಇದುವರೆಗೆ 37,47,000 ರೂಪಾಯಿ ಮಾತ್ರ ವಸೂಲಾಗಿರುತ್ತದೆ 50 ಲಕ್ಷ ರೂಪಾಯಿ ಕೂಡಿದ ಒಡನೆಯೇ ವಿದ್ಯಾನಿಲಯವನ್ನು ಪ್ರಾರಂಭಿಸುವ ಯೋಚನೆ ಮಾಡುವುದಾಗಿ ಇಂಡಿಯಾ ಗವರ್ನ್‍ಮೆಂಟಿನವರು ಅಪ್ಪಣೆ ಕೊಟ್ಟಿದಾರೆ ಆ ಫಂಡಿನ ಕಮಿಟಿ ಮೆಂಬರುಗಳಾದ ದರ್ಭಾಂಗ ಮಹಾರಾಜರವರೂ, ಪಂಡಿತ ಸುಂದರಲಾಲ್‍ರವರೇ ಮೊದಲಾದವರೆಲ್ಲಾ ಕಳೆದ ವಾರ ಕಾಶೀ ಪಟ್ಟಣದಲ್ಲಿ ಸಂಚಾರಮಾಡಿ ವಿದ್ಯಾನಿಲಯವನ್ನು ಕಟ್ಟಬೇಕಾದದ್ದಕ್ಕೆ ಕೆಲವು ನಿವೇಶನಗಳನ್ನು ನೋಡಿ ಬಂದರು ಸೆಂಟ್ರಲ್ ಹಿಂದೂ ಕಾಲೇಜಿನ ಕಮಿಟಿ ಮೆಂಬರ ಕೆಲಸಕ್ಕೆ ಮಿಸೆಸ್ ಬೆಸೆಂಟ್ ಎಂಬಾಕೆಯು ರಾಜೀ[…] ಕೊಟ್ಟದ್ದನ್ನು ಕಮಿಟಿಯವರು ಅಂಗೀಕರಿಸಿಕೊಂಡಿದಾರೆ

ಬೊಂಬಾಯಿ ಪಟ್ಟಣದ ಪರೇಲ್ ಎಂಬ ಭಾಗದಲ್ಲಿ ಲೇಟ್ ಚಕ್ರ[…] ಎಡ್ವರ್ಡ್ ಸಾರ್ವಭೌಮರವರ ಹೆಸರಿನ ಮೇಲೆ ಒಂದು ಭಾರೀ ಆಸ್ಪತ್ರೆಯ[…] ಕಟ್ಟುವಂತೆ ಏರ್ಪಾಡಾಗಿದೆ ಲೇಟ್ ಚಕ್ರವರ್ತಿಯವರ ಹೆಸರನ್ನು ಶಾಶ್ವ[…] ಸುವ ಉದ್ದೇಶಕ್ಕಾಗಿ ಬೊಂಬಾಯಿ ಆಧಿಪತ್ಯದಲ್ಲಿ ಇದುವರೆಗೆ ಏಳು ಲಕ್ಷ ರೂ[…] ಯಿ ಕೂಡಿರುವುದು ಇದಲ್ಲದೆ ಇದಕ್ಕಾಗಿ ಗವರ್ನ್‍ಮೆಂಟಿನವರು ಐದು [..] ರೂಪಾಯಿ ಬೆಲೆಯಾಗುವ ವಿಸ್ತಾರವಾದ ನಿವೇಶನವನ್ನು ಕಮಿಟಿಯವರಿಗೆ [..] ಪಾಲಿಸಿದಾರೆ 250 ರೋಗಿಗಳು ಆಸ್ಪತ್ರೆಯಲ್ಲಿದ್ದುಕೊಂಡು ಚಿಕಿತ್ಸೆ ಹೊಂ[…] ವಷ್ಟು ಭಾರಿಯಾದ ಕಟ್ಟಡವನ್ನು ಕಟ್ಟುವುದಕ್ಕೆ 21 ಲಕ್ಷ ರೂಪಾಯಿ [..] ದೀತೆಂದು ಅಂದಾಜು ಆಗಿದೆ ಈ ಕಟ್ಟಡವನ್ನು ಮ್ಯುನಿಸಿಪಾಲಿಟಿಯವರೇ [..] ಸಿಕೊಟ್ಟು ಅದಕ್ಕೆ ಬೇಕಾಗುವ ಸಲಕರಣೆಗಳನ್ನೆಲ್ಲಾ ಒದಗಿಸಿ ಆಸ್ಪತ್ರೆಯ[…] ಶಾಶ್ವತವಾಗಿ ನಡಿಸಿಕೊಂಡು ಬರುವಂತೆ ಒಪ್ಪುವುದಾದರೆ ಮೇಲ್ಕಂಡ [..] ಮೊಬಲಗನ್ನೂ ನಿವೇಶನವನ್ನೂ ಕೊಟ್ಟುಬಿಡುವುದಾಗಿ ಆ ಫಂಡಿನವರು [..] ದಾರೆ ಮ್ಯುನಿಸಿಪಲ್ ಕಮಿಷನರುಗಳು ಈ ವಿಚಾರವನ್ನು ಈ ದಿನ ನಡೆಯ[…] ಮೀಟಿಂಗಿನಲ್ಲಿ ಚರ್ಚೆಗೆ ಇಟ್ಟುಕೊಂಡಿರುವದಾಗಿ ಪ್ರಕಟವಾಗಿದೆ

ಶ್ಯಾನುಭೋಗರಿಗೆ

ಮುಖ್ಯವಾಗಿ ಬೇಕಾಗಿರುವ ಚಾರನಮೂನೆ ಲೆಕ್ಕದ ಫಾರಂಗಳು ಉತ್ತ[…] ಕಾಗದದಲ್ಲಿ ಪ್ರಿಂಟುಮಾಡಿ ಬಿಕರಿಗೆ ಸಿದ್ಧವಾಗಿದೆ [143-3]

ಎಸ್. ಆರ್ ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರ್ ಸಿ[…]

ಮೇಲಾದ ಹೊಸ ಪುಸ್ತಕಗಳು.

156

ಉತ್ತಮ—ಬಹು ಸ್ವಾರಸ್ಯವಾದ ಕಥೆ ಈಗತಾನೆ ಅಚ್ಚಾಗಿದೆ [..] ಜಪಾನ್ ಸಾಮ್ರಾಜ್ಯ—ಅದ್ಭುತವಾದ ಸೂರ್ಯೋದಯ ರಾಜ್ಯದ ವಿ[…] ಸುಂದರವಾದ ಒಂದು ಪಟವೂ ಇದೆ, ಕೀರ್ತಿಕೆ ಹೆಚ್ಚುತ್ತದ 6 ಆಣೆ ಉನ್ನ[…] ಮನೋಹರವಾದ ಬಂಗಾಳಿ ನಾವಲ್ 2½ ಆಣೆ ಕಿಂಡರ್‌ಗಾರ್ಟನ್ [..] ಗಳು—ವಿನೋದಕರವಾದ ಕಥೆಗಳಿಂದಲೇ ಅನೇಕ ವಿಷಯಗಳು ತಿಳಿಯು[…] 10 ಆಣೆ ಬೋಧನಕ್ರಮ ಸಂಗ್ರಹ—ಪ್ರತಿ ಸ್ಕೂಲ್ ಮಾಸ್ಟ[…] ಬೇಕಾದದ್ದು 1½ ಆಣೆ ಲೋ. ಸೆ. ಪರೀಕ್ಷೆಯಲ್ಲಿ ಉತ್ತರ [..] ಯುವ ವಿಧಾನ 1 ಆಣೆ ಅನೇಕ ಎಗ್ಸಾಮಿನರುಗಳು ಒಪ್ಪಿದಾರೆ

ವಿಳಾಸ —ಜಿ ಕೃಷ್ಣಶಾಸ್ತ್ರಿ, ಅ॥ ಮಾ॥ ನಾರ್ಮಲ್ ಸ್ಕೂಲ್, ಮೈಸೂ[…]

ಗೃಹಕೃತ್ಯದ ನೋಟೀಸು

ಹುಣಸೂರು ತಾಲ್ಲೂಕು ಬೆಲ್ಕುಂದದ ಹೋಬಳಿ ಭೋಗನ ಹಳ್ಳಿಯ[…] ರುವ ನಮ್ಮ ಪಿತರಾರ್ಜಿತ ಸ್ಥಿರಸ್ವತ್ತುಗಳ ಪೈಕಿ ಕೆಲವು ಸ್ಥಿರಸ್ವತ್ತುಗ[…] ನನ್ನ ಚಿಕ್ಕಮ್ಮಂದಿರಾದ 1 ನೇ ಪುಂಗಮ್ಮ, 2 ನೇ ವೆಂಕಟಮ್ಮ ಇವರುಗಳ [..] ಮಾನದ ಕಿನಕ ಈ ಫಸಲಿನಿಂದ ಜೀವಿಸಲು ನಾನು ಮತ್ತು ನಮ್ಮ ಜ್ಞಾ[…] ಬಿಟ್ಟುಕೊಟ್ಟು, ಅವರು ಹತ್ತಾರು ವರುಷಗಳಿಂದಲೂ ಅನುಭವಿಸುತ್ತಿರುವ[…] ಈಗ ಅವರು ಆ ಸ್ವತ್ತುಗಳನ್ನು ನನಗೂ ಮತ್ತು ನಮ್ಮ ಜ್ಞಾತಿಗಳಿಗೂ [..] ಪಡಿಸಬೇಕೆಂಬ ದುಷ್ಟರ ದುಷ್ಪ್ರೇರಣೆಯಿಂದ ಕ್ರಯ ಭೋಗ್ಯ ಆಧಾರ [..] ನಡಿಸಲು ಪ್ರಯತ್ನಿಸಿರುವದಾಗಿ ತಿಳಿದುಬರುತ್ತೆ ಆ ಸ್ವತ್ತುಗಳನ್ನು ನಮ್ಮ[…] ಅನುಮತಿ ಇಲ್ಲದೆ ಆ ಹೆಂಗಸರಿಂದ ಪಡೆಯುವವರು ಹಣವನ್ನು ಕಳೆದುಕೊ[…] ವದಲ್ಲದೆ ನಮ್ಮ ಎಲ್ಲಾ ನಷ್ಟಗಳಿಗೂ ಗುರಿಯಾಗುತ್ತಾರೆಂದು ಈ ಮೂ[…] ಎಚ್ಚರಿಸಿದೇವೆ [155 1] ಹುಣಸೂರು ತಾ॥ ಭೋಗನಹಳ್ಳಿ[…]

ಶಾನುಭೋಗ ಶ್ರೀವೈಷ್ಣವವೆಂಕಟರಾಮಾನುಜಯ್ಯ ವಗೈರೆ[…]

ಔಷಧಿ ತೆಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 2.31

(ಸ್ಕಾಟ್ಸ್ ಇಮಲ್ಷನ್)

ಘಟ್ಟಿ ಶರೀರವುಳ್ಳವರ್ಯಾರೂ ಪ್ಲೇಗ್, ಮಹಾಮಾರಿರೋಗ, ವಾಂತಿ[…] ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ, ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತ[…]

Always get the Emulsion with this mark—the Fishman—the mark of the "Scott" process!

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಅಸ್ವಸ್ಥವನ್ನು ದೂರ ಹೋಗಲಾಡಿ[…] ಶರೀರದಲ್ಲಿರುವ ಬಲಹೀನ ಭಾಗಗಳ[…] ಬಲತ್ರಾಣಗೊಳಿಸಿ, ಸಂಪೂರ್ಣ ಸೌ[…]ನ್ನು ಉಂಟುಮಾಡುತ್ತವೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರ[…] ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿ[…]

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂ[…]

Mellin's Food

ಮೆಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‍ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ವಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ Messrs OAKES & Company, Mount Road, Madras.

[4-3?] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. H. G[…] Proprietor and Manager, Wesleyan Mission P[…] Mysore. 31/7/1913.

REGISTERED
M. 30

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು

ಸಂಪುಟ ೨೨ ಮೈಸೂರು—೧೯೧೩ನೇ ಇಸವಿ ಆಗಸ್ಟ್ ತಾರೀಖು ೭ನೇ ಗುರುವಾರ. ಸಂಚಿಕೆ ೧೦

ಪರೀಕ್ಷಿಸಿ ನೋಡದ ಅಗ್ಗದ ಕೀಳು ಎಣ್ಣೆಗಳು ಈಗ ಎಲ್ಲೆಲ್ಲಿಯೂ ಕರೆಯಿಸುತ್ತಿವೆ. ನಮ್ಮ ಕಣ್ಣಾವರ್ತವನ್ನು ಅವಕ್ಕೆ ದಾಟಿ ಕರೆಯಿರಿ.

"ಕಾಮಿನಿಯಾ ತೈಲವು."

(ರಿಜಿಸ್ಟ್ರರ್ಡ್)



ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಹಚ್ಚುವುದರಿಂದ ಕೂದಲು ಉದುರಿ ಹೋಗುವುದಲ್ಲದೆ ತಲೆನೋವು ಮುಂತಾದ ರೋಗಗಳು ಉಂಟಾಗುವವು. ಕಾಮಿನಿಯಾ ತೈಲವು ತಲೆಯಲ್ಲಿ ಹೊಟ್ಟು, ತುರಿಕೆ, ಸೀಳುವಿಕೆ ಮುಂತಾದವುಗಳನ್ನು ಹೋಗಲಾಡಿಸಿ ಕೂದಲನ್ನು ನುಣುಪಾಗಿಯೂ ದಟ್ಟವಾಗಿಯೂ ಬೆಳೆಸುತ್ತದೆ. ಇದರ ಸುವಾಸನೆಯು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಉಂಟುಮಾಡುತ್ತದೆ. ಕೇಶರಾಶಿಯನ್ನು ನಿವಿಡವಾಗಿಯೂ ಸುಂದರವಾಗಿಯೂ ಬೆಳೆಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಔಷಧಿ ಇನ್ನೊಂದಿಲ್ಲ. ಇದನ್ನು ಸ್ತ್ರೀ ಪುರುಷರೆಲ್ಲರೂ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ.

ಇದರ ಬೆಲೆ 1 ಬಾಟಲಿಗೆ ರೂ 1 0 0 ಅಂಚೆಯ ವೆಚ್ಚ 0 1 0 ಬೇರೆ.

3 ಬಾಟಲಿಗಳಿಗೆ ರೂ 2 10 ಅಂಚೆಯ ವೆಚ್ಚ 0 7 0

ಮಾದರಿಯನ್ನು ಉಚಿತವಾಗಿ ಒಂದು ಆಣೆಯ ಸ್ಟಾಂಪ್ ಕಳುಹಿಸಿದರೆ ಕಳುಹಿಸುತ್ತೇವೆ.

ಮೈಸೂರು ಎಗ್ಸಿಬಿಷನ್‌ನಲ್ಲಿ ಈ ಎಣ್ಣೆಗೆ ಬೆಳ್ಳಿಯ ಮೆಡಲೂ, ಅಲ್ಲಹಾಬಾದ್ ಎಗ್ಸಿಬಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು.

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಸುಳ್ಳು ಮಾಡದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ. ಮುನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ। ಡಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ. ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ. ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ." ಪಿರುಮುಪಟ್ಟಿ ಕೆ ವಿ ಎಸ್ ಹೈಸ್ಕೂಲ್ ಹೆಡ್ ಮಾಸ್ಟರ್ ಮಿ। ಎಂ ಸುಬ್ರಹ್ಮಣ್ಯಪಿಳ್ಳೆಯವರು ಬರೆಯುವದು—"ನಮ್ಮ ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ ಪರೀಕ್ಷೆ ಮಾಡಿದೆನು. ಅದು ಕೂದಲನ್ನು ಹುಟ್ಟಿಸಿ ಅಂದವಾಗಿಯೂ, ಕೋಮಲವಾಗಿಯೂ, ನುಣುಪಾಗಿಯೂ ಬೆಳೆಸುತ್ತದೆ ... ದಯವಿಟ್ಟು ಇನ್ನು ಮೂರು ಬಾಟ್ಲಿ ಎಣ್ಣೆ ಕಳುಹಿಸಿರಿ." ಸೌತ್ ಇಂಡಿಯ ಕಂಟ್ರೋಲರ್ ಆಫೀಸ್ ಮಿ। ಗೋಪಾಲರಾವ್ ಜೋಷಿಯವರು ಬರೆಯುವದು—"ದಯವಿಟ್ಟು ನಿಮ್ಮ ಕಾಮಿನಿಯಾ ಎಣ್ಣೆ ಆರು ಬಾಟ್ಲಿ ಕಳುಹಿಸಿಕೊಡಿ. ಒಂದು ತಿಂಗಳ ಹಿಂದೆ ನೀವು ಕಳುಹಿಸಿದ ಬಾಟ್ಲಿಗಳು ಮುಗಿದುಹೋಯಿತು. ಇದು ಉತ್ತಮೋತ್ತಮವಾದ ಎಣ್ಣೆ ಎಂದು ಧಾರಾಳವಾಗಿಯೂ ಸಂತೋಷದಿಂದಲೂ ಹೇಳಬಲ್ಲೆನು." ಆದಕಾರಣ ನೀವೂ ಒಂದು ಸಲ ತರಿಸಿ ಪರೀಕ್ಷೆ ಮಾಡಿ.

ಎಚ್ಚರಿಕೆ— ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯ ಎಣ್ಣೆ ಸಿಕ್ಕುತ್ತೆ. ನಿಮ್ಮ ಸ್ಥಳದ ಷಾಪುಗಳಲ್ಲಿ ಅದು ಇಲ್ಲದಿದ್ದರೆ ಅವನ ಹೆಸರು ವಿಳಾಸದ ಸಮೇತ ನಮಗೆ ತಿಳಿಸಿ. ನೀವು ಕೊಳ್ಳುವಾಗ್ಗೆ ಮೋಸಗಾರರಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಬಿಕರಿಮಾಡುತ್ತಾರೆನ್ನುವದನ್ನು ಮರೆಯಬೇಡಿ. "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವವರು ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ. ಬರುವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ.

ಎಲ್ಲಾ ಸ್ಥಳಗಳಲ್ಲಿಯೂ ಏಜಂಟರು ಬೇಕು.

ಏಜೆಂಟ್, ಡಿ ಅಬ್ದುಲ್ ಮಾಹೀನ್, ಮಂಗಳೂರು

ನಮ್ಮ ವಿಳಾಸ — [8-30]

ಆಂಗ್ಲೋ-ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾ ಮಸ್‌ಜಿದ್, ಬೊಂಬಾಯಿ.

ಪ್ರತಾಪಕಂಠೀರವ ಚರಿತ್ರೆ.

(1) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ, (2) ಸ್ತ್ರೀಧರ್ಮ ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ ಚಾತುರ್ಯ, (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು (4) ವನ, ಸರಸ್ಸು, ಆರಾಮಾದಿ ವರ್ಣನೆಗಳು (5) ಮನುಷ್ಯಯತ್ನಕ್ಕೆ ಮೀರದ ಈಗಿನ ಅನುಭವಕ್ಕೆ ತಕ್ಕ ವಿಷಯಗಳು (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭ ಶೈಲಿ, (7) ಸರಳವಾದ ಒಂದರಿಂದೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ. ಕ್ರಯ —1 ರೂಪಾಯಿ; ಟಪಾಲ್ ಹಾಸಲು ಬೇರೆ

[16 21] ನಮ್ಮ ವಿಳಾಸ —ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ

ಶಾಸ್ತ್ರೀಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಂ ಮುಯಹರ ಕಸ್ತೂರಿ ಮಾತ್ರೆ—ಈ ಮಾತ್ರೆಗಳನ್ನು ಹಸಿದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಶ್ರೇಷ್ಠ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂಧುಗಳ ನೋವು, ಮೈ ಕಾಲು ಹೊಡತ (ಭಾರ), ಮೈ ನಡುಕ, ಶೀತಕಗಳ ಬಾಧ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಗ್ರಹಣಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಚಮತ್ಕಾರ ಮಂತ್ರವಾಗಿ ಗುಣಪಡಿಸುತ್ತವೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿ ಕೊಡದೆ ನರಗಳ ಹವಾ ಬದಲುವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತು ದೋಷ, ಮಕ್ಕಳ ಎಳಪು, ಜ್ವರ, ನಚ್ಚುಜ್ವರ, ಕ್ಷಯ ರೋಗಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—220 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಕೊಡ್ಡು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 1 ಆಣೆ [136-40]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಇದು ಸಂಜೀವನವಾಗಿದೆ. ಕೈಮಾರಿಂದು ತೋರಿಂದಾಗಲೂ ಆಶ್ಚರ್ಯಕರವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸಿದ, ಮೂತ್ರವು ಕಟ್ಟಿದ ಕೊಟ್ಟ ಮಾಪಲಸ ವೇಳೆಯಲ್ಲಿ, ಗುಣವು ತೋರುತ್ತದೆ. ಸಮಯದಲ್ಲಿ ಬೇಟಾಡಬೇಡಿ. ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ವಿಷಭೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವದು. ಬೆಲೆ ರೂ 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

THE MYSORE GOVERNMENT SECURITY

LIFE AND MARRIAGE ASSURANCE COMPANY, LIMITED.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES REGULATION No. III OF 1895)

CAUTION —Before you go in for a Provident Life or Marriage Policy, please ask for a copy of our Company's prospectus which will explain to you the mode of working of the present day provident companies working in India and enables you to select a good institution where your hard earned money will be safe.

SPECIAL AND ATTRACTIVE FEATURES OF THE COMPANY

1. ABSOLUTE SECURITY

The Company has got a capital of one lakh ... invested in the **Mysore Government** ... proved securities. The policy holders ... guaranteed, and the **capital** and **reserve** funds of the Company are liable to the same.

2 MARRIAGE SCHEME

A policy holder can subscribe from Re. 1 to Rs 6 every month. **Double the premiums paid** to the Company will be paid to the married **on the marriage day** as maximum bonus.

3 LIFE SCHEME

A policy holder can subscribe from As 8 to **Rs 2** per month. Both males and **females**, of ages from 18 to 50 are insured **without medical examination**. The maximum bonus will be paid to **the policy-holders themselves** on surviving **15 years** or to their nominees in case of their earlier death.

WANTED.

Energetic and honest **Chief Agents** for every Presidency in India and Taluk Agents in each and every taluk of **the Mysore Province** on commission to represent the Company.

For further particulars and prospectuses, please apply **with one anna stamp** and your previous experience in the line to,—

Mr. M. L. NAGANNAH,

Managing Agent,

MYSORE.

[161 1]

ನೋಟೀಸ್.

151-3

ಗೋಕಾಕ್ ಮಿಲ್ ಸಿನಲ್ಲಿ ತಯಾರಾಗುವ ನಂಬರ್‌ವಾರ್ ಹಸನು ನೂಲು ಬಿಕರಿಮಾಡಲು ನಮ್ಮನ್ನು ದಕ್ಷಿಣ ಇಂಡಿಯಾ ದೇಶದ ಸೋಲ್ ಏಜಂಟರನ್ನಾಗಿ ನೌಕರರು ಮಾಡಿರುವುದರಿಂದ ದರ ಮುಂತಾಗಿ ತಿಳಿಯಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು—

ಎಂ. ಎಸ್. ನಾರಾಯಣ ಕಂಪೆನಿ,
ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಕೈಗಡಿಯಾರಗಳು.

ಕ್ರಯ ರೂ 1-15-0. ಹೊಸ ನಮೂನೆ. ಬೆಲೆ ಸುಲಭ.
ನವಂಬರ್ ಆಖೈರ್ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ.



ಈ ಕೈ ಗಡಿಯಾರವು ಇದುವರೆಗೆ ನಾವು ಕಳುಹಿಸುತ್ತಲಿದ್ದಂತಹುದಲ್ಲ. ಬಹಳ ಭದ್ರವಾದ ಯಂತ್ರಗಳಿಂದ ಬಹು ಕಾಲದವರೆಗೆ ನಡೆಯುವ ಹಾಗೆ ತಯಾರಿಸಲ್ಪಟ್ಟಿರುತ್ತೆ. ಇಷ್ಟು ಸ್ವಲ್ಪ ಕ್ರಯಕ್ಕೆ ಈ ಗಡಿಯಾರವು ಯಾರಲ್ಲೂ ದೊರೆಯಲಾರದು. ಈ ಕೈ ಗಡಿಯಾರವು ಭಾಗ್ಯವಂತರು ಸದಾ ಉಪಯೋಗಿಸುವುದಕ್ಕೆ ಲಾಯಖಾದದ್ದು. ಗಡಿಯಾರದ ಸಂಗಡ 1 ಉತ್ತಮವಾದ ಪೆಟ್ಟಿಗೆ, 1 ಸ್ಪ್ರಿಂಗ್, 1 ಕನ್ನಡಿ ಮತ್ತು 5 ವರುಷಗಳ ಗ್ಯಾರಂಟಿ ಪತ್ರ ಸದಾ ಕಳುಹಿಸುತ್ತೇವೆ. ಟಪಾಲ್ ಖರ್ಚು ಅಲಾಯಿದ.

ನಮ್ಮ ವಿಳಾಸ:—ಲಹರಿ ಅಂಡ್ ಕೋ,
[149 2] ನಂ. 16 ರಙ್ಗರಾಮನ ಬೀದಿ, ಮದರಾಸು.

ನಮೂನೆ ಮುಫತ್ತು.

ಕೇಶಕುಸುಮಾಕರ ತೈಲವು.

ಸಾಟಿಯಿಲ್ಲದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸಮಾಡುವದರಲ್ಲಿಯೂ, ಬಟ್ಟತಲೆಯಲ್ಲಿ ಕೇಶವನ್ನು ಬೆಳಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ, ಮಿದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ, ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ. ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುಡ್ಡಿ ತೈಲ ಕ್ರಯ 10 ಆಣೆ ಮೂರು ಬುಡ್ಡಿಗಳ ತೈಲ ಕ್ರಯ ರೂ. 1-12 ಆ. ಆರು ಬುಡ್ಡಿಗಳ ತೈಲ ಕ್ರಯ ರೂ. 3-4 ಆ ಡಜನ್ ಬುಡ್ಡಿಗಳ ಕ್ರಯ ರೂ 6.

ವಿ. ಪಿ ಅಂಚೇ ಹಾಸಲು ಪ್ರತ್ಯೇಕ
ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ
[92-15] ಔಷಧಾಲಯ, 177 ಚೀನಾ ಬಜಾರ್ ರೋಡ್, ಮದ್ರಾಸು.

15 ಬಹುಮಾನ ದೊಡಗೂಡಿದ ಗಡಿಯಾರವು.

ಕೆಳಗೆ ಕಾಣಿಸಿರುವ ಗಡಿಯಾರದ ಬೆಲೆ 7 ರೂಪಾಯಿಗಳು. ಇದು ಬರುವ ಡಿಸೆಂಬರ್ ಆಖೈರುವರೆಗೆ 3-15-0 ಗೆ 15 ಬಹುಮಾನಗಳೊಡನೆ ಬಿಕರಿ ಮಾಡಲ್ಪಡುತ್ತೆ.



ಇದು ಒಳ್ಳೆಯ ಸಾಮಾನುಗಳಿಂದ ತಯಾರಿಸಲ್ಪಟ್ಟಿರುವುದರಿಂದ 30 ವರುಷಗಳ ವರೆಗೆ ಕೆಡದೆ ನಡೆಯುತ್ತೆ. ಇದೊಂದು ಹೊಸ ನಮೂನೆಯಾಗಿರುತ್ತೆ. ಇದು ಒಳ್ಳೇ ಚೆನ್ನಾಗಿ ಹದ ಕೊಟ್ಟ ಉಕ್ಕಿನ ಮುಚ್ಚಳವನ್ನು ಹೊಂದಿರುವುದರಿಂದ ಧೂಳು ಸೇರಲು ಅವಕಾಶವಿಲ್ಲ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಸುಲಭವಾಗಿ ಸರಿಮಾಡಲು ಅನುಕೂಲವಾಗಿರುತ್ತೆ. ಇದಕ್ಕೆ ಬಹಳವಾಗಿ ಆರ್ಡರುಗಳು ಬರುತ್ತಿರುವುದರಿಂದ ಜಾಗ್ರತೆ ಮಾಡಿರಿ ವಿಳಂಬಮಾಡಿದರೆ ದೊರಕಲಾರದು ಇದನ್ನು ತರಿಸಿಕೊಳ್ಳತಕ್ಕವರಿಗೆ ಈ ಕೆಳಗೆ ಕಾಣಿಸಿರುವ 15 ಸಾಮಾನುಗಳು ಉಚಿತವಾಗಿ ಕೊಡಲ್ಪಡುವವು. ಇವು ಹೆಚ್ಚಾದ ಬೆಲೆಯುಳ್ಳವು.—

1 ಮೈಸೂರು ದೇಶದವರು ಉಪಯೋಗಿಸುವ ಮಾದರಿಯಾಗಿರುವ ಕೈ ಕಪ್ಪ, ಇದಕ್ಕೆ ಬಂಗಾರದ ಗಿಲ್ಟು ಕೊಡಲ್ಪಟ್ಟಿರುತ್ತೆ. ಬೆಲೆ 1 ರೂ 2 ಎಲೆಕ್ಟ್ರಿಕ್ ಬಂಗಾರದ ರೇಖಿನ ನ್ಯಾಮಂತಿಗೆ ಹುವ್ವು ಬೆಲೆ 12 ಆಣೆ. 3 ಬಂಗಾರದ ಗಿಲ್ಟಿನ ಗಡಿಯಾರದ ಸರಪಣಿ ಕ್ರಯ 1 ರೂ 4 ಇಮಿಟೇಷನ್ ವಜ್ರದ ಷರಟು ಗುಂಡಿ ಬೆಲೆ 8 ಆಣೆ 5 ಒಂದು ಹಸನಾದ ಕತ್ತರಿ ಬೆಲೆ 4 ಆಣೆ. 6 ಜರ್ಮನ್ ಬೆಳ್ಳಿಯ ಕುಂಕುಮಭರಣಿ ಬೆಲೆ 8 ಆಣೆ 7 ಬಂಗಾರದ ಗಿಲ್ಟಿನ ತಲೆಯಿನ ಜಡೆ ಹುವ್ವು ಬೆಲೆ 6 ಆಣೆ. 8 ಜರ್ಮನ್ ಬೆಳ್ಳಿಯ ಸಾದಿನ ಚಿಪ್ಪು ಬೆಲೆ 1 ಆಣೆ 9 ಅಂದವಾದ ಸೂಜಿಚೀಲ ಬೆಲೆ 4 ಆಣೆ. 10 ಜರ್ಮನ್ ಬೆಳ್ಳಿಯ ಕಣ್ಣುಕಪ್ಪಿನ ಭರಣಿ ಬೆಲೆ 3 ಆಣೆ. 11 ಒಂದು ಸೀಲ್ ಉಂಗುರ ಬೆಲೆ 8 ಆಣೆ 12 ಜರ್ಮನ್ ಬೆಳ್ಳಿಯ ಪುಡಿ ಡಬ್ಬಿ ಬೆಲೆ 8 ಆಣೆ. 13 ಹೆಂಗಸರ ನಗಗಳನ್ನಿಡಲು ಅನುಕೂಲವಾಗಿರುವ ಕೈ ಪೆಟ್ಟಿಗೆ ಬೆಲೆ 10 ಆಣೆ 14 ಜರ್ಮನ್ ಬೆಳ್ಳಿಯ ಹಾಲಿನ ಒಳಲೆ ಬೆಲೆ 6 ಆಣೆ 15 ಒಳ್ಳೇ ಬೆಳ್ಳಿಯಿಂದ ತಯಾರಿಸಿ ಬಲವಾದ ಚಿನ್ನದ ಗಿಲ್ಟಿನ ಮೂಗು ಬೊಟ್ಟು ಬೆಲೆ 8 ಆಣೆ. ವಿಳಾಸ— [157-1]

ಜೆ. ಎ. ಪಾಲ್ ಅಂಡ್ ಕೋ, ನುಂಗಂಬಾಕಂ, ಮದ್ರಾಸ್.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

1-32



ಚಿಕ್ಕೆಲುಬಿನ ನೋವು, ಸಕ್ಕಗಳಲ್ಲಿ ಆಗುವ ನೋವು, ಸಂದಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕರುಳು ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಸಂದಗಳು ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ಪ್ರೈಹತ್ತದೆ ಇರುವುದು—ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ಶರಹಾ ನಿ ಬಿಸಿ ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಮಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಇಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವದು. ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ.

ಸಮಸ್ತ ವಿಧವಾದ ನೋವೂ ಇರಿತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಪಸ್ಸಿನ ಸಳಿತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ.

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ಬಿಕರಿಯಾಗುತ್ತಲಿವೆ. ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ಬಿಕರಿಯಾಗುವದು.

ಮೂಲಕಟ್ಟು ಔಷಧ ಡಬ್ಬಿಗೆ ೬ ಆಣೆ; 12 ಕುಪ್ಪಿಗೆ ರೂ. 3-8-0. ಹಲ್ಲುಪುಡಿ ಡಬ್ಬಿಗೆ 2 ಆಣೆ; 12 ಕುಪ್ಪಿಗೆ ರೂ 1-2-0. ವಿ. ಪಿ. ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ. [12-21]

ವಿಳಾಸ:—ಅಮೃತಾಂಜನ ಡಿಪೋ, ೧೯ ಫ್ರೆಯರ್ ರೋಡ್, ಫೋರ್ಟ್, ಬೊಂಬಾಯಿ.

ಡೋಂಗರೆ ಇವರ ಬಾಲಾಮೃತ.

[150-3]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದದ್ದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತು ೧೦ ಆಣೆ, ಟಪಾಲ್ ಖರ್ಚು 3 ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ.

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು. ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು. ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ. ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿವೆ ಕ್ರಯ 3 ಆಣೆ. ಅರಕ್ಕೊಂದು ಉಚಿತ

[187-31] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಅಮೇರಿಕಾ ದೇಶದ ಇಮಿಟೇಷನ್ ವಜ್ರದ ಆಭರಣಗಳು.

ಕಿವಿಮ್ಮಲು ಜೊತೆ 1ಕ್ಕೆ ರೂ. 1-10-0. ಹತ್ತಕಡಕು ಜೊತೆ 1ಕ್ಕೆ ರೂ. 1-6-0 ಕುರುಟುಬಾವಲಿ ಜೊತೆ 1ಕ್ಕೆ ರೂ 1-12-0



ಮೂಗುಬಟ್ಟು 1ಕ್ಕೆ 5 ಆಣೆ. ಬೇಸರಿ 1 ಕ್ಕೆ 10 ಆಣೆ. ಬುಲಾಕು 1ಕ್ಕೆ ರೂ. 1-0-0. ಎಲೆಕ್ಟ್ರೋ ಬಂಗಾರದ ಸೀಲುಂಗುರ 1ಕ್ಕೆ ರೂ. 1 0 0.

ಇದು ಪ್ರಖ್ಯಾತಿಯನ್ನು ಪಡೆದ ಮಾರ್ಕ್ಯಾಟ್ ಹೆಸರುಳ್ಳದ್ದು. ಎಷ್ಟು ವರ್ಷಗಳಾದರೂ ಕೆಡುವದಿಲ್ಲ. ಭಾಗ್ಯವಂತರೂ ಸಹ ಉಪಯೋಗಿಸಲು ಲಾಯಖಾದದ್ದು. ರಾತ್ರಿಯಲ್ಲಿ ಬೆಂಕಿಯಂತೆ ಪ್ರಕಾಶಿಸುತ್ತೆ. ಇದು ಪ್ರಸ್ತಪ್ರಯೋಜನಗಳಿಗೂ ಹಬ್ಬ ಹರಿದಿವಸಗಳಿಗೂ ಬಹಳ ಉಪಯೋಗವಾದದ್ದು. [159-1]

ವಿಳಾಸ—ಎ. ಮುನಸಾಮಿನಾಯುಡು, ಜೂಯಲ್ ಮರ್ಚೆಂಟ್ಸ್, ನಂ. 3 ಆರ್ಮುಗಂಚೆಟ್ಟಿ ಸ್ಟ್ರೀಟ್, ತಿರುವಳ್ಳಿಕೇಣಿ, ಮದರಾಸ್.

ಬಹಳ ಮೇಲಾದ ಅಚ್ಚ ಕರೀ ಬಣ್ಣದ ಮಧುರೆ ಚುಂಗಡಿ ಅಂಚಿನ ಸೀರೆಗಳು.

ಆವಲ್ ರಖಂ ಕ್ರಯ ರೂ. 2-6-0.

ಇದರಿಂದ ವರ್ತಕರಿಗೂ, ಭಾಗ್ಯವಂತರಿಗೂ, ಬಡವರಿಗೂ ತಿಳಿಸುವುದೇನೆಂದರೆ—ನಮ್ಮಲ್ಲಿನ ಕರಿಯ ಬಣ್ಣದ ಮಧುರೆ ಚುಂಗಡಿ ಸೀರೆಗಳು ಉಡುವುದಕ್ಕೆ ಧಮಾಶಿಯಾಗಿಯೂ, ನೋಡುವುದಕ್ಕೆ ನಯವಾಗಿಯೂ, ಸರ್ವರಿಗೂ ಲಾಯಖಾಗಿಯೂ, ಕೊಳ್ಳಲು ಬೆಲೆ ಬಹಳ ಸುಲಭವಾಗಿಯೂ ತಯಾರಿಸಿದೆ. ಎಷ್ಟಾವರ್ತಿ ಒಗೆದು ಉಟ್ಟರೂ ಬಣ್ಣವು ಸ್ವಲ್ಪವೂ ಬದಲಾಯಿಸುವುದಿಲ್ಲ. ಇದರ ಸೆರಗುಗಳು ಬಹು ಘನವಾಗಿವೆ. ಸೀರೆಯ ಉದ್ದವು ಧಾರಾಳವಾಗಿ 18 ಮೊಳವಿದೆ. ಪರೀಕ್ಷಾರ್ಥ ಒಂದನ್ನು ತರಿಸಿದಲ್ಲಿ ನಮ್ಮ ನೆರೆಹೊರೆಯವರು ಅನೇಕ ಸೀರೆಗಳಿಗೆ ಬರೆಯುವರು.

ಪದಕಸಹಿತವಾದ ನಾಲ್ಕು ಎಳೆ ಮುತ್ತಿನ ಕಂಠಿ

ಈ ನಕ್ಷೆಯಲ್ಲಿ ತೋರಿಸಿರುವ ಹಾರವು ಮಕ್ಕಳೂ ದೊಡ್ಡವರೂ ಧರಿಸಿರುವದಕ್ಕೆ ಯೋಗ್ಯವಾದದ್ದು. ಪ್ರಸಿದ್ಧಿಯಾದ ಚಿನ್ನಮಿಶ್ರದ ಮಧುರೆ ಒತ್ತಾಲೆ ಕಂಠಿಯಲ್ಲಿ ಒಳ್ಳೆಯ ಮುತ್ತಿನಂತಹ ಗಟ್ಟಿ ಮುತ್ತನ್ನು ಅಸಲ್ ಮುತ್ತಿನಹಾರ ತಯಾರಿಸತಕ್ಕವರಿಂದ ಸುತ್ತಿಸಿ ಕೊರಳಿಗೆ ಭೂಷಣವೂ ಅಲಂಕಾರವೂ ಆದ ಈ ಮಾಲೆಯನ್ನು ತಯಾರಿಸಿರುತ್ತೇವೆ ಯಾವ ಆಭರಣವಿಲ್ಲದಿದ್ದರೂ ಈ ಹಾರವನ್ನು ಧರಿಸುವುದರಿಂದ ಹೆಂಗಸರ ಸೌಂದರ್ಯವು ಮತ್ತಷ್ಟು ಹೆಚ್ಚುತ್ತದೆ. ಇದಕ್ಕೆ ನೀರೂ ಬೆವರೂ ತಗಲಿದಾಗ್ಯೂ ಕೆಡದೆ ಎಷ್ಟು ವರ್ಷಗಳಾದರೂ ಉಪಯೋಗಿಸುವುದಕ್ಕೆ ಯೋಗ್ಯವಾಗಿರುವ ಈ ಆಭರಣವನ್ನು



ಎಲ್ಲರೂ ಪರೀಕ್ಷೆ ಬಗ್ಗೆ ತರಿಸಿ ನೋಡಿ. [158-1]

ಪದಕಸಹಿತವಾದ ಹಾರ 1 ಕ್ಕೆ ರೂ. 1-7-0 ಪದಕವಿಲ್ಲದ ಹಾರ 1 ಕ್ಕೆ 11 ಆ.

ವಿಳಾಸ—ಬಿ. ಶೇಖಾ ಅಂಡ್ ಬ್ರದರ್ಸ್,
ನುಂಗಂಬಾಕಂ, ಸೆಂಟ್ ಥಾಮಸ್ ಮೌಂಟ್ ಪೋಸ್ಟ್,
ಮದರಾಸ್.

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೩೬೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯನಾಶ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (5) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1 8 0, ಟಪ್ಪಾಲು ಹಾಸಲು 4 ಆಣೆ

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಭಾವರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ 4 ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127-7]

ನಮ್ಮ ವಿಳಾಸ — ಎಸ್. ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ —1 ಪಿನಲ್‌ಕೋಡು, 2 ದೊಡ್ಡಿ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ದಸ್ತಾವೇಜುಗಳ ರೆಗ್ಯುಲೇಷನ್, 6 ಪೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಧೂಮ್ರಪಾನ ಮಾಡದಿರುವಂತೆ ರೆಗ್ಯುಲೇಷನ್, 8 ಬಾಲ್ಯವಿವಾಹಗಳ ರೆಗ್ಯುಲೇಷನ್ 9 ರೈಲ್ವೆ ರೆಗುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ

ಪ್ರತಿ ಎಸಲ್ ಸೆಕ್ಷನಿಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ ? ಯಾ ಕೂಡದೆ ? ಮೊದಲು ಸಮನ್ ಹುಟ್ಟಿಸಬೇಕೋ ? ಯಾ ವಾರಂಟು ಹುಟ್ಟಿಸಬೇಕೋ ಜಾಮೀನ್ ತೆಗೆದುಕೊಳ್ಳಬಹುದೆ ? ಯಾ ಕೂಡದೆ ? ರಾಜಿಯಾಗಬಹುದೆ ಯಾ ಕೂಡದೆ ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ಬೇಕಾದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 22-6 1911 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 2 0 0 ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ವೇಮಾರೆಡ್ಡಿ,
ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್,
[103-11] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 32

ಒಳ್ಳೇ ಟೋಪಿಗಳು ಯಾವುವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇ ಬಾಳಿಕೆಯ, ಒನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚೆನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳುಪು, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ. ೬ ಆ ೧ ರೂ. ೪ ಆ

ಚುಕ್ಕೆಯುಳ್ಳ ಟೋಪಿಗಳು ರೂ ೧—೮, ರೂ ೧—೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ

ಕೂಸುಗಳ ಟೋಪಿ, ಪೂರಾ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಗೃಹಕೃತ್ಯದ ನೋಟೀಸು

ಹಾಸನದು ತಾಲ್ಲೂಕು ಬಿಲ್ಲಂದದ ಹೋಬಳಿ ಸೋಗನ ಹಳ್ಳಿಯಲ್ಲಿರುವ ನಮ್ಮ ಪಿತರಾರ್ಜಿತ ಸ್ಥಿರಸ್ವತ್ತುಗಳ ಪೈಕಿ ಕೆಲವು ಸ್ಥಿರಸ್ವತ್ತುಗಳನ್ನು ನನ್ನ ಚಿಕ್ಕಮ್ಮಂದಿರಾದ 1 ನೇ ಪುಟ್ಟಮ್ಮ, 2 ನೇ ವೆಂಕಟಮ್ಮ ಇವರುಗಳ ಜೀವನಾರ್ಥ ತನಕ ಈ ಫಸಲಿನಿಂದ ಜೀವಿಸಲು ನಾನು ಮತ್ತು ನಮ್ಮ ಜ್ಞಾತಿಗಳು ಬಿಟ್ಟುಕೊಟ್ಟು, ಅವರು ಹತ್ತಾರು ವರುಷಗಳಿಂದಲೂ ಅನುಭವಿಸುತ್ತಿರುವರು ಈಗ ಅವರು ಆ ಸ್ವತ್ತುಗಳನ್ನು ನನಗೂ ಮತ್ತು ನಮ್ಮ ಜ್ಞಾತಿಗಳಿಗೂ ತಿಳಿಸದೆ ದುಸ್ತರ ದುಷ್ಪ್ರೇರಣೆಯಿಂದ ಕ್ರಯ ಭೋಗ್ಯ ಆಧಾರ ವಗೈರೆ ನಡಿಸಲು ಪ್ರಯತ್ನಿಸುತ್ತಾರೆಂದು ತಿಳಿದುಬರುತ್ತೆ ಆ ಸ್ವತ್ತುಗಳನ್ನು ನಮ್ಮಗಳ ಅನುಮತಿ ಇಲ್ಲದೆ ಆ ಹೆಂಗಸರಿಂದ ಪಡೆಯುವವರು ಹಣವನ್ನು ಕಳೆದುಕೊಳ್ಳುವದಲ್ಲದೆ ನಮ್ಮ ಎಲ್ಲಾ ನಷ್ಟಗಳಿಗೂ ಗುರಿಯಾಗುತ್ತಾರೆಂದು ಈ ಮೂಲಕ ಎಚ್ಚರಿಸಿದೇವೆ [155 2] ಹಾಸನದು ತಾ|| ಸೋಗನಹಳ್ಳಿ

ಶಾನುಭೋಗ ಶ್ರೀವೈಷ್ಣವ ವೆಂಕಟರಾಮಾನುಜಯ್ಯ ವಗೈರೇರು

ಮೂರು ಸಿದ್ಧೌಷಧಗಳು.

ವಶ್ಯಾಸಂದರೀವಾತ್ರೆ ಮೂಲಿಕೆ ಪರಿಮಳದ್ರವ್ಯಗಳಿಂದ ತಯಾರಿಸಿದೆ ಒಂದನ್ನು ತಾಂಬೂಲದೊಡನೆ ಅಥವಾ ಬರೀ ಬಾಯಿಗೆ ಸೇವಿಸಿದರೆ ದುರ್ಗಂಧ ಹೋಗಿ ಸುವಾಸನೆಯಾಗುತ್ತೆ ರಕ್ತವನ್ನು ಶುದ್ಧಿಮಾಡುತ್ತೆ ಕರಳು, ನಂಟಲು, ಬಾಯಿ, ಇವುಗಳು ಹುಣ್ಣಾದರೆ ಅರ್ಧ ತೋಲಾ ಬಾದಾಮಿ ಎಣ್ಣೆಯಲ್ಲಿ ಒಂದು ವಾತ್ರೆ ತೇದು ಮಲಗುವ ಸಮಯದಲ್ಲಿ ತೆಗೆದುಕೊಂಡರೆ ಗುಣವಾಗುವದು 200 ಮಾತ್ರೆ, ಶೀಸಾ 1 ಕ್ಕೆ 1 ಆಣಾ ಇಸಬು, ಖಜ್ಜಿ, ತುರಿ ಇವುಗಳಿಗೆ ಪಾಮಹರೀ ಪೌಡರ್ ತೋಲಾ 1 ಕ್ಕೆ 2 ಆಣೆ ಬಾಲಾಂತಿಯರು ಮಕ್ಕಳ ಶೀತ ನೆಗಡಿ ಇವುಗಳಿಗೆ ಉಪಯೋಗಿಸತಕ್ಕ ಕಸ್ತೂರಿಮಾತ್ರೆ 25 ಮಾತ್ರೆಗೆ 8 ಆಣೆ ಬಾಲಾಂತಿಯರು ಉಪಯೋಗಿಸತಕ್ಕ ಬಿಂದಾದ್ರಾಕ್ಷವೆಂಬ ಆರೋಗ್ಯದ ಲೇಹ್ಯ 12 ತೋಲಾ ಡಬ್ಬಿಗೆ 6 ಆಣಾ ಅಪೇಕ್ಷಿಸುವರು ತಮ್ಮ ವಿಳಾಸವಿವರವಾಗಿ ಬರೆಯಬೇಕು ಅಂಚೆ ಹಾಸಲು ಬೇರೆ, ತರಿಸಿಕೊಳ್ಳತಕ್ಕವರು ವಹಿಸತಕ್ಕದ್ದು 1 ಡಜನ್‌ಗೆ 1 ಶೀಸಾ ಡಿಸ್ಕೌಂಟು ವ್ಯಾಪಾರಸ್ಥರಿಗೆ ಒಳ್ಳೆ ಕಮೀಷನ್ ಮುಂಚೆ ಸ್ವಲ್ಪ ತರಿಸಿ ನೋಡಿ ನಂತರವಾದರೂ ತರಿಸಿಕೊಳ್ಳಿ [131 6]

ನಮ್ಮ ವಿಳಾಸ —ಶೇಷಭಟ್ಟರು,

ನೇಟಿವ್ ಪಂಡಿತ್, ಪೂರ್ಣಯ್ಯನವರ ಬೀದಿ, ಶ್ರೀರಂಗಪಟ್ಟಣ

ಬೆಂಗಳೂರು-ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ, ಲಿಮಿಟೆಡ್

ಷೇರುದಾರರಿಗೆ ನೋಟೀಸು.

ಮೇಲ್ಕಂಡ ರೈಲ್ವೆ ಕಂಪನಿಯ ಷೇರುದಾರರಿಗೆ ಈ ನೋಟೀಸಿನ ಮೂಲಕ ತಿಳಿಯಪಡಿಸುವದೇನೆಂದರೆ—

ಷೇರು ಒಂದಕ್ಕೆ 1913 ನೇ ಜೂಲೈ ತಾ 13 ರ ತನಕ ಐದು ರೂಪಾಯಿ ವರೆಗೆ ಪಾವತಿ ಮಾಡಲ್ಪಟ್ಟಿರುವ ಎಲ್ಲಾ ಷೇರುಗಳನ್ನೂ ಕಂಪನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ 16 ನೇ ಆರ್ಟಿಕಲ್ ಷರತ್ತಿನ ಪ್ರಕಾರ ಕಂಪನಿಗೆ ಸೇರಿಸಿಕೊಳ್ಳತಕ್ಕದ್ದೆಂದು 1913 ನೇ ಜೂಲೈ ತಾ 11 ರಲ್ಲಿ ನಡೆದ ಮೀಟಿಂಗಿನ ತೀರ್ಮಾನವನ್ನು ಅನುಸರಿಸಿ ಮುಟ್ಟುಗೋಲು ಹಿಡಿಯಲಾಗಿದೆ

1913 ನೇ ಜೂಲೈ 13 ನೇ ತಾರೀಖು ವರೆಗೆ ಷೇರು ಒಂದಕ್ಕೆ ಐದು ರೂಪಾಯಿಯೂ, ಅದಕ್ಕಿಂತ ಹೆಚ್ಚಾದ ಮತ್ತೂ ಹತ್ತು ರೂಪಾಯಿ ಒಳಗೂ ಪಾವತಿ ಮಾಡಿರುವಂಥಾ ಷೇರುದಾರರುಗಳಲ್ಲಾ ಎರಡು ತಿಂಗಳ ವಾಯಿದೆ ಅಂದರೆ 1913 ನೇ ಸೆಪ್ಟಂಬರ್ ತಾ 13 ರ ವರೆಗೆ ವಾಯಿದೆ ಕೊಡಲ್ಪಟ್ಟಿದೆ ಆ ತಾರೀಖು ಗತಿಸಿದ ಮೇಲೂ ಯಾರಯಾರ ಷೇರುಗಳು ಬಾಕಿಯಲ್ಲಿ ಇರುತ್ತವೆಯೋ ಅಂಥಾ ಷೇರುಗಳನ್ನೆಲ್ಲಾ ಕಂಪನಿಗೆ ಮುಟ್ಟುಗೋಲಾಗಿ ಸೇರಿಸಿಕೊಳ್ಳಲ್ಪಡುತ್ತೆಂದು ಈ ಮೂಲಕ ತಿಳಿಸಿದೆ [133-2]

ಕೆ ಪಿ ಪುಟ್ಟಣ್ಣ ಚೆಟ್ಟಿ,

ಬೆಂಗಳೂರು ಛೇರ್‌ಮನ್,

ತಾ 15 ನೇ ಜೂಲೈ 1913 ಬಿ. ಸಿ ಎಲ್. ರೈಲ್ವೆ ಕಂಪನಿ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

18—7—1913 ರಿಂದ 25—7—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	1	1
ಬೆಂಗಳೂರು ಡಿಸ್ಟ್ರಿಕ್ಟು	3	3	19	21
ಮೈಸೂರು ,,	17	14	11	7
ಕೋಲಾರ್ ,,	0	0	21	12
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	11	9	4	4
ಹಾಸನ ,,	4	3	9	5
ಚಿತ್ರದುರ್ಗ ,,	0	0	5	5
ಕಡೂರ್ ,,	9	8	38	25
ಶಿವಮೊಗ್ಗ ,,	12	7	0	0
ಜುಮ್ಲಾ	56	44	138	78

ಶಾಲಿವಾಹನ ಶಕೆ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ವರ್ಷಋತು ಶ್ರಾವಣ ಶುದ್ಧ ಸಪ್ತಮಿ ಶುಕ್ರವಾರದಿಂದ ಶ್ರಾವಣ ಶುದ್ಧ ತ್ರಯೋದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಆಗಸ್ಟ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕರ್ಕಾಟಕಮಾಸ ತೇದಿ
8	ಶುಕ್ರ *	ಸಪ್ತಮಿ	51 0	ಚಿತ್ತ	8 28	24
9	ಶನಿ ‡	ಅಷ್ಟಮಿ	46 32	ಸ್ವಾತಿ	5-22	25
10	ಭಾನು ,,	ನವಮಿ	43 50	ವಿಶಾಖ	3-3	26
11	ಸೋಮ	ದಶಮಿ	40 16	ಅನುರಾಧ	1-38	27
12	ಮಂಗಳ †	ಏಕಾದಶಿ	38 47	ಜ್ಯೇಷ್ಠ	1 14	28
13	ಬುಧ	ದ್ವಾದಶಿ	38 39	ಮೂಲ	2-1	29
14	ಗುರು §	ತ್ರಯೋದಶಿ	39 42	ಪೂರ್ವಾಷಾಢ	3-56	30

* ಆದಿಶುಕ್ರವಾರ ‡ ಶ್ರಾವಣಶನಿವಾರ, ಮಳೆ ನಕ್ಷತ್ರ—ಆಶ್ಲೇಷ 3 ನೇ ಪಾದ ,, ಪಾಕಾಭಾವ, ಮೃತ್ಯುಯೋಗ † ಸರ್ವತ್ರ ಏಕಾದಶಿ, ಮಂಗಳಗೌರೀ ವ್ರತ, ಮಳೆ ನಕ್ಷತ್ರ—ಆಶ್ಲೇಷ 4 ನೇ ಪಾದ § ಪ್ರದೋಷ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೬ ೮-೦	೧೭ ೮-೦
ಕೆಂಬೂತಿ ಅಕ್ಕಿ ಅವಲ್	೧೬ ೧೨-೦	೧೭ ೮-೦
,, ,, ದುಯ್ಯಂ	೧೬ ೦-೦	೧೭-೦-೦
ಜೀರಿಗೆಸಣ್ಣ ಅಕ್ಕಿ	೧೬-೮ ೦	೧೭-೪ ೦
ಸಣ್ಣಕ್ಕಿ ಅವಲ್	೧೮-೦ ೦	೧೮-೮-೦
,, ದುಯ್ಯಂ	೧೭ ೦ ೦	೧೭-೮-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೧೫ ೪-೦	೧೩ ೮-೦
,, ದುಯ್ಯಂ ,,	೧೪ ೮ ೦	೧೨ ೮-೦
ಹೈಕ್ ರಾಗಿ ಪಲ್ಲಾ ೧ಕ್ಕೆ	೬-೧೦ ೦	೫ ೦-೦
ಕಾರ್‌ರಾಗಿ ,,	೬ ೪-೦	೪ ೧೨ ೦
ಜೋಳ ,,	೬-೮-೦	೭-೪ ೦
ಹಲಸಂದೆ ಪಲ್ಲಾ ೧ಕ್ಕೆ	೧೧-೦ ೦	೧೩ ೧೨-೦
ಬಿಳೀ ಅವರೆ ,,	೧೨-೧೨ ೦	೧೧-೦-೦
ಹೆಸರು ,,	೧೨-೦ ೦	೧೪-೦-೦
ಉದ್ದು ,,	೧೪ ೮-೦	೧೬-೦ ೦
ಕಡಲೆ ,,	೧೧-೮ ೦	೧೨ ೦ ೦
ಎಳ್ಳು ಸೇರು ೧೨೭ಕ್ಕೆ	೨೪ ೦ ೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೭-೨-೦	೩ ೦-೦
ಹರಳು ೧೨೭ ಸೇರಿಗೆ	೧೩-೦-೦	೧೪ ೦-೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೩ ೮ ೦
ಮೆಣಸಿನಕಾಯಿ ,,	೪-೦ ೦	೩ ೪-೦
,, ದುಯ್ಯಂ	೩ ೦ ೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೪-೮-೦	ಮಣ ೫ ೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೧೦-೦	೬-೬-೦
ಹರಳೆಣ್ಣೆ ,, ,,	೫ ೪-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫-೪ ೦	೫-೪ ೦
ಉಪ್ಪು ,, ,,	೭ ೦-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧-೧೨-೦	೧ ೪-೦
,, ಹಳೇದು ,,	೧-೯-೦	೦ ೧೪-೦
ತುಪ್ಪ ಮಣ ೧ಕ್ಕೆ	೨೧ ೮-೦	೧೯-೦-೦
ಸೀಮೆಹಿಟ್ಟು ಪೆಟ್ಟಿ ೧ಕ್ಕೆ	೫-೧೧-೦	೫ ೦-೦
ತೆಂಗಿನಕಾಯಿ ೧೦೦ಕ್ಕೆ	೭-೪ ೦	೬-೦-೦
ಅಡಕೇಕಾಯಿ ಮಣ ೧ಕ್ಕೆ	೧-೬-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೧ ೧೨ ೦	೧-೮-೦
ಚಿನ್ನ (ಪೌನ್) ಕೆಂಪು	೧೫-೮-೦	೧೫-೮-೦
,, ,, ಪಸಿಮೆ	೧೫-೧೪-೬	೧೫ ೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦ ೦	೮೧-೩-೦

ಕನ್ನಡ ಇಂಡಿಯನ್ ಪೀನಲ್‌ಕೋಡ್

ಇಂಡಿಯಾ ಗೌರ್ನರ್ ಜನರಲ್‌ರವರಿಂದ ಮುಂಜೂರಾದ ಈ ಆಕ್ಟನ್ನು ಮೈಸೂರ್, ಬೊಂಬಾಯಿ, ಮದ್ರಾಸ್, ಅಲಹಾಬಾದ್ ಮುಂತಾದ ಅನೇಕ ಜಡ್ಜಿಗಳ ಅಭಿಪ್ರಾಯಗಳ ಟಿಪ್ಪಣಿ ಸಹಿತ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟಗಳಿಂದ ಬಿಡುಗಡೆಯಾಗಿರುವರು ಇದು ಮುಖ್ಯವಾಗಿ ಪೋಲೀಸ್, ಮ್ಯಾಜಿಸ್ಟ್ರೇಟರು, ಅಧಿಕಾರಿಗಳಲ್ಲಿಯೂ, ಲಾಯರುಗಳಲ್ಲಿಯೂ, ವಕೀಲ್ ಕ್ಯಾಂಡಿಡೇಟುಗಳಲ್ಲಿಯೂ, ಇತರ ಮುಖ್ಯ ಜನಗಳಲ್ಲಿಯೂ ಇರಬೇಕಾದದ್ದು ಅತ್ಯಂತ ಅವಶ್ಯಕವಾದದ್ದು ಕ್ರಯ ಗ್ಲೇಜ್ ರೂ 3-8-0 ರಫ್ ರೂ 2-0-0 ಟಪ್ಪಾಲ್ ಛಾರ್ಜ್ 0 4-0

ವಿಳಾಸ —ಬಿ. ನರಸಿಂಗರಾವ್, ಎಡಿಟರ್, (ಲಾ) ಗೆಜೆಟ್,

[160–1] ಚಿಕ್ಕಪೇಟೆ, ಬೆಂಗಳೂರು ಸಿಟಿ

ಶುದ್ಧವಾದ ಹತ್ತಿಯ ತುಪ್ಪವು

"ಇನ್ನೆಲ್ಲಿಯೂ ದೊರೆಯುತ್ತೆಂಬ ಆಶೆಯೇ ಇಲ್ಲ!"

(ಕೆ) ಎಸ್ ಶ್ರೀನಿವಾಸ ಅಯ್ಯಂಗಾರ್ಯರವರು, ಫಸ್ಟ್ ಗ್ರೇಡ್ ಅಕೌಂಟೆಂಟರು, ಕಂಟ್ರೋಲರ ಆಫೀಸು ಸಿವಿಲ್ ಬ್ರಾಂಚು, ಬೆಂಗಳೂರು —"ಆರು ತಿಂಗಳಿಂದ ಬಿ. ಜಿ ಕೌಶಿಕರ ಮಳಿಗೆಯಲ್ಲಿ ಹತ್ತಿಯ ತುಪ್ಪವನ್ನು ತೆಗೆದುಕೊಳ್ಳುತ್ತಿದ್ದೇನೆ ಮಿಶ್ರವಿಲ್ಲದೆ ಶುದ್ಧವಾಗಿದೆ ಗುಣವೂ ಪ್ರಕಟನೆಮಾಡಿರುವಂತೆಯೇ ಇದೆ ಈ ಪಟ್ಟಣದಲ್ಲಿ ಇನ್ನೆಲ್ಲಿಯೂ ಶುದ್ಧವಾದ ಹತ್ತಿಯ ತುಪ್ಪ ದೊರೆಯುವ ಆಶೆಯೇ ಇಲ್ಲವೆಂದು ತೋರುತ್ತೆ "—21 6 1913

ಎಚ್ಚರಿಕೆ !—ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತೆಗೆದುಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

[110–10] 159, ಕಿಲಾರಿ ರೋಡ್, ಬೆಂಗಳೂರು ಸಿಟಿ

ವೃತ್ತಾಂತ ಪತ್ರಿಕೆ.

—— o ——

ಸನ್ ೧೯೧೩ ನೇ ಇಸವಿ ಆಗಸ್ಟ್, ತಾ ೭ ನೇ ಗುರುವಾರ

ಮೈಸೂರು ಪ್ರಜಾಪ್ರತಿನಿಧಿ ಸಭೆಯು

ಈ ವರುಷ ಅಕ್ಟೋಬರ್ ತಿಂಗಳ ಮಧ್ಯೆ ರಾಜಧಾನಿಯಲ್ಲಿ ನಡೆಯಬೇಕಾಗಿರುವ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಗೆ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕ್ ಬೋರ್ಡುಗಳಿಂದಲೂ ಮ್ಯುನಿಸಿಪಾಲಿಟಿಗಳಿಂದಲೂ ಇತರ ಸಂಘಗಳಿಂದಲೂ ಇದುವರೆಗೆ ಆಗಲೇ ಮೆಂಬರುಗಳನ್ನು ಚುನಾವಣೆ ಮಾಡಿರುತ್ತಾರೆ ಈ ಮೆಂಬರುಗಳು ಸರ್ಕಾರದವರಿಗೆ ಸಭೆಯಲ್ಲಿ ಯಾವ ವಿಚಾರಗಳನ್ನು ಅರಿಕೆ ಮಾಡೋಣವೆಂದು ಈಗ ಆಲೋಚಿಸುತ್ತಿರಬಹುದು ಹಾಗೂ ಇದಾರೆ ಸಭೆಗೆ ಸೂಚಿಸಲ್ಪಡುವ ವಿಷಯಗಳು ಬಹಳವಾಗಿರೋಣದರಿಂದ ಸಭೆಯಲ್ಲಿ ಯಾವ ವಿಷಯಗಳನ್ನೂ ಸಂಪೂರ್ಣವಾಗಿಯೂ ಸರ್ವಸಮರ್ಪಕವಾಗಿಯೂ ಚರ್ಚಿಸಿ ತೀರ್ಮಾನ ಮಾಡುವುದು ಅಸಾಧ್ಯವಾಗಿದೆ ಚರ್ಚೆಗೆ ಬರುವ ವಿಷಯಗಳಲ್ಲಿ ಅನೇಕ ಸಂಗತಿಗಳು ಅಷ್ಟೇನೂ ವಿಶೇಷವಾಗಿಯೂ ಪ್ರಾಮುಖ್ಯವಾಗಿಯೂ ಇರುವುದಿಲ್ಲವಾದಕಾರಣ ಅವುಗಳನ್ನು ಇಂಥಾ ಮಹಾ ಸಭೆಯಲ್ಲಿ ಚರ್ಚೆಗೆ ಬರಬೇಕಾದದ್ದಲ್ಲವೆಂದು ಏರ್ಪಡಿಸಿಬಿಟ್ಟರೆ ಎಷ್ಟೋ ಒಳ್ಳೇದು ಕೆಲವು ಮೆಂಬರುಗಳಿಗೆ ನಮ್ಮ ಸೀಮೆಯ ಸ್ಥಿತಿಗತಿಯನ್ನು ವೃದ್ಧಿಪಡಿಸತಕ್ಕ ಮತ್ತೂ ಪ್ರಜೆಗಳ ಕುಂದುಕೊರತೆಗಳನ್ನು ನಿವಾರಣೆಮಾಡತಕ್ಕ ಅಂಶಗಳನ್ನು ಸೂಚಿಸುವುದರ ಮೇಲಿನ ಅಭಿಲಾಷೆ ಇರುವುದಕ್ಕಿಂತಲೂ ಸಾಧ್ಯವಾಗುವಷ್ಟು ಹೆಚ್ಚು ವಿಷಯಗಳನ್ನು ಸೂಚಿಸುವುದರಲ್ಲಿ ವಿಶೇಷ ಕುತೂಹಲವಿರುವಂತೆ ಕಾಣುತ್ತದೆ ಪ್ರತಿನಿಧಿ ಸಭೆಯ ಸಮಯವನ್ನೆಲ್ಲಾ ನಾಲ್ಕಾರು ಮುಖ್ಯ ಬಾಬುಗಳ ಚರ್ಚೆಗೆ ವಿನಿಯೋಗ ಮಾಡುವಂತಾದರೆ ಆ ಬಾಬುಗಳ ಸಾಧಕಬಾಧಕಗಳೆಲ್ಲಾ ಚೆನ್ನಾಗಿಯೂ ತೃಪ್ತಿಕರವಾಗಿಯೂ ಗೊತ್ತಾಗುವವು

ಮೆಂಬರುಗಳಲ್ಲಿ ಬಹು ಮಂದಿ ತಾವು ಸೂಚಿಸುವ ವಿಷಯಗಳ ಪೂರ್ವಾಪರಗಳನ್ನೂ, ಸಾಧಕಬಾಧಕಗಳನ್ನೂ ತಮ್ಮಲ್ಲಿ ತಾವೇ ಚೆನ್ನಾಗಿ ಪರಿಶ್ರಮಮಾಡಿಕೊಂಡು ಬರುವುದಿಲ್ಲ ಹಾಗೆ ಪರಿಶ್ರಮಮಾಡಿಕೊಂಡು ಬಂದ ಪಕ್ಷದಲ್ಲಿ ತಾವು ಸೂಚಿಸುವ ಏರ್ಪಾಡು ಸದ್ಯ ಸಾಧ್ಯವಾಗಲಾರದೆಂದು ಅವರಿಗೇ ಗೊತ್ತಾಗುತ್ತದೆ, ಇಲ್ಲವೇ, ಅಂಥಾ ಏರ್ಪಾಡಿನಿಂದ ಅವರು ನಿರೀಕ್ಷಿಸುವಷ್ಟು ಫಲವಾಗುವುದಿಲ್ಲವೆಂದು ಅವರಿಗೇ ಗೊತ್ತಾಗುವುದು ಪ್ರಜೆಗಳ ಗುಣ ನಡತೆ ಯೋಗ್ಯತೆ ಸಾಮರ್ಥ್ಯಗಳನ್ನು ಅಭಿವೃದ್ಧಿಗೆ ತರುವಂಥಾ ಪ್ರಾಮುಖ್ಯವಾದ ವಿಚಾರಗಳು ಮೆಂಬರುಗಳ ಮತ್ತೂ ಸಭೆಯ ಚರ್ಚೆಗೂ ಪರ್ಯಾಲೋಚನೆಗೂ ಬಂದದ್ದನ್ನು ಕಾಣಲಿಲ್ಲ ಇಂಥಾ ಭಾಗಗಳನ್ನು ಕುರಿತು ಮೆಂಬರುಗಳು ಚೆನ್ನಾಗಿ ತಿಳಿದುಕೊಳ್ಳುತ್ತಾ ಬಂದ ಪಕ್ಷದಲ್ಲಿ ಬೇರೆ ಬಾಬುಗಳಿಗಿಂತಲೂ ಕಾರ್ಯಾಂಶಗಳು ಜಾಗ್ರತೆಗೆ ಗೋಚರವಾಗುವುವು

ನಮ್ಮ ಸೀಮೆಯಲ್ಲಿ ಯಾವಾಗಲೂ ಬಂದು ಬಾಬನ್ನು ಪ್ರಧಾನವಾಗಿ ಇದ್ದೀತೆನ್ನುವುದಕ್ಕೆ ಸಂಶಯವಿಲ್ಲ ವ್ಯವಸಾಯವನ್ನು ಅಭಿವೃದ್ಧಿಗೆ ತರಬೇಕೆಂಬುವುದೇ ಆ ವಿಷಯವು ನಮ್ಮ ಜನರು ಜಿರಾಯತಿನಿಂದಲೂ ಬಿಮಾನ ಉತ್ಪತ್ತಿಯಿಂದಲೂ ಜೀವನ ಮಾಡತಕ್ಕವರಾಗಿದ್ದಾರೆ ಈ ಉತ್ಪತ್ತಿಯನ್ನು ಇನ್ನು ವರ್ಚೆ ಮಾಡಿದರೆ ಈಗ್ಗಿಂತ ಎರಡರಷ್ಟು ಹೆಚ್ಚಾಗುವಂತೆ ಮಾಡಿಕೊಳ್ಳಬಹುದು ಅಕ್ಕಿಯೂ ರಾಗಿಯೂ ಅವಶ್ಯವಾದಷ್ಟು ಬೆಳೆಯುವುದಿಲ್ಲವಾದದ್ದರಿಂದ ಅವುಗಳ ಧಾರಣ ಹೆಚ್ಚುತ್ತಿರುವುದು ಹೆಚ್ಚು ಬೆಳೆಯಾಗುವಂತೆ ವ್ಯವಸಾಯ ಮಾಡಿದರೆ ಧಾರಣೆ ಕಡಮೆಯಾಗಿ ಬಡಬಗ್ಗರು ನೆಮ್ಮದಿಯಾಗಿ ಜೀವನ ಮಾಡಲು ಅನುಮಾನವಿಲ್ಲ ಈ ಸಭೆಯವರು ಈ ಮುಖ್ಯ ವಿಷಯವನ್ನು ಎರಡು ದಿನ ಏಕಪ್ರಕಾರವಾಗಿ ಚರ್ಚೆಮಾಡುವುದರಲ್ಲಿ ತಮ್ಮ ವಿವೇಕವನ್ನೂ ಬುದ್ಧಿಕುಶಲತೆಯನ್ನೂ ಪ್ರಯೋಗಿಸಿದ ಪಕ್ಷದಲ್ಲಿ ಸ್ವಲ್ಪ ಮಟ್ಟಿಗಾದರೂ ಪ್ರಯೋಜನವಾದೀತು. ಅದರ ಪಕ್ಷ ಪರಪಕ್ಷಗಳೆಲ್ಲಾ ಜಿಜ್ಞಾಸೆಕ್ಕೆ ಬಂದು ಫಲದಾಯಕವಾಗುವುದು. ರೈತರು ಜಮೀನನ್ನು ಚೆನ್ನಾಗಿ ಉತ್ತು ಹುಲುಸಾದ ಬೆಳೆಮಾಡುವ ಭಾಗದಲ್ಲಿ ಇಲ್ಲೊಬ್ಬರು ಅಲ್ಲೊಬ್ಬರು ತಮ್ಮ ಕೈಲಾಗುವಷ್ಟು ಪ್ರಯತ್ನವ ಮಾಡುತ್ತಿದ್ದಾರೆ. ಇದೊಂದೂ ಕ್ರಮಕ್ಕೆ ಬಂದಿಲ್ಲ ವೃತ್ತಿ ಕುಲದವರೆಲ್ಲಾ ಸರ್ವೇ ಸಾಮಾನ್ಯವಾಗಿ ನೂರಾರು ವರುಷಗಳ ಹಿಂದೆ ತಮ್ಮ ತಾತ ಅಜ್ಜಂದಿರ ಪದ್ಧತಿಗಳನ್ನೇ ರೂಢಿಯಲ್ಲಿಟ್ಟುಕೊಂಡು ಈಗಲೂ ಅದೇ ರೀತಿಯಲ್ಲಿ ಜಮೀನನ್ನು ಉಳುವರು, ಗೊಬ್ಬರ ಹೂಡುವರು, ಬಿತ್ತುವರು, ಕೊಯಿಲು ಮಾಡುವರು, ಇದೆಲ್ಲಾ ಬದಲಾವಣೆಯಾದಲ್ಲದೆ ಶ್ರೇಯಸ್ಸುಂಟಾಗುವುದಿಲ್ಲ ಪ್ರತಿನಿಧಿಗಳು ಈ ಬದಲಾವಣೆಯಾಗುವುದಕ್ಕೆ ಮಾರ್ಗವನ್ನೂ ಉಪಾಯವನ್ನೂ ಸರ್ಕಾರದವರಿಗೂ ವೃತ್ತಿ ಪ್ರಜೆಗಳಿಗೂ ತೋರಿಸಿಕೊಡಬಲ್ಲರೇ ಎಂದು ಕೇಳುತ್ತೇವೆ

ಸರ್ಕಾರದವರು ಇಗಿಂದಾಗ್ಗೆ ಮುಕುವರ್ಜಿಯಾಗಿ ಹೇಳುತ್ತಾ ಬಂದಿರುವ ಪ್ರಕಾರ ಮೈಸೂರುದಲ್ಲಿರುವಂಥಾ ಪ್ರಜೆಗಳನ್ನಿಟ್ಟುಕೊಂಡು ಸೀಮೆಯನ್ನು ಜಪಾನ್ ಸ್ಥಿತಿಗೆ ತರುವದು ಅಸಾಧ್ಯವಾಗಿರುತ್ತದೆ ಪ್ರಜೆಗಳನ್ನು ಮೊದಲು ವಿದ್ಯಾವಂತರನ್ನಾಗಿ ಮಾಡಬೇಕು ಇವರೆ ವಿದ್ಯೆಯನ್ನು ಹರಡತಕ್ಕ ಭಾಗದಲ್ಲಿ ಸರ್ವಸಮ್ಮತವಾದ ಏರ್ಪಾಡುಗಳು ಮಾಡಲ್ಪಟ್ಟಿರುವವೇ? ಪ್ರಜೆಗಳನ್ನು ವಿದ್ಯಾವಂತರನ್ನಾಗಿ ಮಾಡುವ ರೀತಿಯಾಗಲಿ, ಕ್ರಮವಾಗಲಿ, ಅದಕ್ಕೆಲ್ಲಾ ಎಷ್ಟು ಹಣ ಬೇಕಾಗುವುದೆಂಬುದಾಗಲಿ ಯಾರಿಗಾದರೂ ನಿರ್ದಿಷ್ಟವಾಗಿರುವುದೇ? ಪ್ರಜೆಗಳಿಗೆ ವಿದ್ಯೆಯಿಂದಾಗುವ ಪರಿಣಾಮವೆಂಥಾದ್ದೆಂದು ಯಾರೊಬ್ಬರಿಗಾದರೂ ತಿಳಿದಿರುವುದೇ? ರೈತನು ನೇಗಿಲನ್ನು ಬಿಸಾಡಿ ಲೇಕಣಿಯನ್ನು ಹಿಡಿಯಬೇಕೆಂದು ಅಪೇಕ್ಷಿಸುತ್ತಾನೆಯೋ? ಕೂಲಿ ಮಾಡುವವನು ಸ್ಕೂಲ್ ಮಾಸ್ತರಾಗಲು ಕುತೂಹಲಪಡುವನೋ? ಇದರಿಂದ ಗ್ರಾಮಾಂತರದ ಪ್ರಜೆಗಳಿಗೂ, ಸಾಮಾನ್ಯವಾಗಿ ವ್ಯವಸಾಯದವರಿಗೂ ಯಾವ ಪ್ರಯೋಜನವಾಗಬಹುದು? ಇದನ್ನೆಲ್ಲಾ ಬಲ್ಲವರು ನಮ್ಮಲ್ಲಿ ಯಾರಿದ್ದಾರೆ?

ಈಗ ನಡೆಯುತ್ತಿರುವ ಕಾರ್ಯಗಳಿಂದ ಪ್ರಜಾಪಿತಾಂತರ ಅಭಿಮತವು ಹೇಗೆ ಕಾಣುತ್ತಿದೆ ಎಂದರೆ, ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವನಿಗೆ ಸ್ಕೂಲ್ ಮಾಸ್ತರ್ ಆಗಲು ಯೋಗ್ಯತೆ ಬಂದುಹೋಯಿತು, ಅವನನ್ನು ಒಂದು ಸ್ಕೂಲಿಗೆ ನೇಮಿಸಿಬಿಡಬಹುದು ಕಲಸದ ಬಟುವಟಿಕೆಯೂ ಬೇರೇನೂ ಈ ರೀತಿಯಾಗಿ ಪರಿಣಮಿಸಿದೆ ಇದರ ಪರಿಣಾಮ ಏನಾಗುವುದೆಂದರೆ ಒಬ್ಬ ವಿದ್ಯಾವಂತರೂ, ಉತ್ಕೃಷ್ಟ ಅನುಭವಸಂಪನ್ನರೂ ಮುಟ್ಟಿ ಹುಟ್ಟುವರು ಇಂಥವರಿಂದ ಅವರಿಗಾಗಲಿ, ಸಂಸ್ಥಾನಕ್ಕಾಗಲಿ ಯಾವ ಹಿತವೂ ಆಗುವುದಿಲ್ಲ ಈ ಸೀಮೆಯೊಳಗಿರುವ ನೂರಾರು ಸ್ಕೂಲುಗಳು ಈಗ 'ಪ್ರಯೋಜಕವಾದ ಸ್ಥಿತಿಯಲ್ಲಿರುತ್ತವೆ ಇಂಥವುಗಳನ್ನೇ ಇನ್ನೂ ಹೆಚ್ಚು ಮಾಡಿ ಹರಡುವುದರಲ್ಲಿ ಪ್ರಯೋಜನವೇನು?' ಗಂಡು ಹೆಣ್ಣು ಮಕ್ಕಳನ್ನು ತರಬೇತು ಮಾಡುವಂಥಾ ಶಕ್ತರೂ ಸಮರ್ಥರೂ ಆದ ಉಪಾಧ್ಯಾಯರೂ ಉಪಾಧ್ಯಾಯಿನಿಯರೂ ಮೊದಲು ನಮಗೆ ಸಿದ್ಧವಾಗಬೇಕು ಒಳಿಕ ನಾವು ಪ್ರಜೆಗಳನ್ನು ಅಭಿವೃದ್ಧಿಗೆ ತರಲು ಸಾಹಸಪಟ್ಟರೆ ಅದು ಸಾರ್ಥಕವಾಗುವುದು

ಪ್ರಜಾಪ್ರತಿನಿಧಿ ಸಭೆಯವರು ಇವೆರಡು ವಿಷಯಗಳನ್ನು—ವ್ಯವಸಾಯ ಮತ್ತೂ ವಿದ್ಯಾಭಿವೃದ್ಧಿ—ವಿವೇಕ ಪೂರ್ವಕವಾಗಿಯೂ ಏಕಾಗ್ರವಾಗಿಯೂ ಚರ್ಚಿಸಿ ಗೊತ್ತುಮಾಡುವುದಾದರೆ ಎಲ್ಲರಿಗೂ ಚೆನ್ನಾಗಿ ತಿಳಿದೇ ಇದೆ ಎಂದು ಬಹುಶಾ ಹೇಳಬಹುದಾಗಿರುವ ಇವೆರಡು ಮುಖ್ಯ ವಿಷಯಗಳೂ ಅಷ್ಟು ಸುಲಭವೂ ಸಾಮಾನ್ಯವೂ ಆದ ವಿಷಯಗಳಲ್ಲವೆಂದು ಚಿತ್ರವಾದೀತು ಇವೆರಡು ವಿಷಯಗಳು ಮೊದಲು ಇತ್ಯರ್ಥವಾದ ಹೊರತು, ಉಳಿದ ಅನೇಕ ವಿಚಾರಗಳು ಕಾಲಕ್ರಮದಲ್ಲಿ ತಮ್ಮಷ್ಟಕ್ಕೆ ತಾವೇ ಸರಿಹೋಗುವವು

ಬಾಲ್ಕನ್ ಸಂಸ್ಥಾನಗಳ ಎಧ್ಯಮಾನಗಳು.

ಈ ವಾರ ಬಂದಿರುವ ತಂತೀ ವರ್ತಮಾನಗಳಿಂದ ಕೆಲವು ದಿನಗಳ ವಾಯಿದೆಯುಳ್ಳ ಒಂದು ಕರಾರು ನಡೆದು, ಬಲ್ಗೇರಿಯದವರ ಮೇಲೆ ಗ್ರೀಕರು ಸರ್ವಿಯದವರು ಯುದ್ಧಕಾರ್ಯಗಳನ್ನು ನಿಲ್ಲಿಸಿರುವಂತೆ ಗೊತ್ತಾಗುತ್ತದೆ ಇಷ್ಟರಲ್ಲೇ ಸಂಧಾನದ ತಹನಾಮೆ ನಡೆದು ಆ ನಾಲ್ಕು ಸಂಸ್ಥಾನಗಳವರಿಗೂ ಆ ಪ್ರಾಂತ್ಯವನ್ನು ಹಂಚಿಕೊಡುವ ರೆ ಮಾಡುತ್ತಾರೆ ಅವರವರ ಹದ್ದುಬಸ್ತುಗಳ ವಿಷಯದಲ್ಲಿ ಈಗ ಚರ್ಚೆಯಾಗುತ್ತಿದೆ ಆದರೆ ಟರ್ಕಿಯವರು ಆಕ್ರಮಿಸಿರುವ ಪ್ರದೇಶದಲ್ಲಿ ಬಲ್ಗೇರಿಯದವರಿಗೆ ಯಾವ ಭಾಗವನ್ನು ಬಿಟ್ಟುಕೊಡಬೇಕೆಂಬುವುದೇ ಮುಖ್ಯ ವಿಚಾರವಾಗಿದೆ

ಟರ್ಕಿಯವರು ಆಡ್ರಿಯನೋಪಲ್ ಪಟ್ಟಣವನ್ನು ತಮ್ಮ ಸ್ವಾಧೀನ ಮಾಡಿಕೊಂಡರು ಇದು ಈ ಲಂಡನ್ ಪಟ್ಟಣದಲ್ಲಿ ನಡೆದ ಕರಾರಿನಂತೆ ಬೇರೆ ಮಾಡಿಕೊಂಡಿರುವ ಎಲ್ಲೆಕಟ್ಟು ಬದಲಾವಣೆಯಾದೀತೆಂದು ಕಾಣುತ್ತದೆ ಆದರೆ ಆ ಸೀಮೆಯನ್ನು ಆಕ್ರಮಿಸಿಕೊಂಡು ಹೋದ ಮುಸಲ್ಮಾನರು ... ಬಿಡುವುದು ಎಷ್ಟರಮಟ್ಟಿಗೆ ಆದರೆ ಇದರಲ್ಲಿ ಆವರ ಸಹಾಯವೂ ಇಲ್ಲ ಬಲ್ಗೇರಿಯದವರು ಗ್ರೀಕ್ ಮತ್ತು ಸರ್ವಿಯದವರ ಮೇಲೆ ಬಿದ್ದಿರುವ ಸಮಯದಲ್ಲಿ ಆಡ್ರಿಯನೋಪಲ್‌ನಿಂದ ತಮ್ಮ ಸೈನ್ಯಗಳನ್ನೆಲ್ಲಾ ತೆಗೆದುಕೊಂಡಿದ್ದರು ಶತ್ರುಗಳೇ ಇಲ್ಲದಿದ್ದಾಗ ಟರ್ಕಿಯವರು ಯುದ್ಧವೇನೂ ಮಾಡದೆ ಹೋಗಿ ಅದನ್ನು ಸ್ವಾಧೀನಪಡಿಸಿಕೊಂಡರು ಆ ಸಂಸ್ಥಾನಗಳವರಲ್ಲಿ ಐಕಮತ್ಯವಿಲ್ಲದೆ ಪರಸ್ಪರ ಯುದ್ಧಗಳು ಸಂಪ್ರಾಪ್ತವಾದದ್ದರಿಂದಲೇ ಟರ್ಕಿಯವರಿಗೆ ಆಡ್ರಿಯನೋಪಲ್ ಸಿಕ್ಕಿತು

ಸರಿಯಾದ ತಹನಾಮೆ ನಡೆಯಲು ಇನ್ನೂ ಕೆಲವು ವಾರಗಳ ತನಕ ವಾಗ್ವಾದಗಳೂ ಹೋರಾಟಗಳೂ ಜರುಗಬಹುದು ಈಗ ಆ ಸಂಸ್ಥಾನಗಳಿಗೆ ಬಂದಿರುವ ಆಪಯಶಸ್ಸೇ ಸಾಕಾಗಿದೆ ಇನ್ನಾದರೂ ಕರಾರು ಮಾಡಿಕೊಂಡು ಅವರೆಲ್ಲಾ ಸಮಾಧಾನದಿಂದಿದ್ದಾರೆಂದು ನಿರೀಕ್ಷಿಸುತ್ತೇವೆ

ಧರ್ಮ ಪ್ರಮಾಣ

ಪ್ರಮಾಣವೆಂದರೇನು? ಪ್ರಮಾಣವೆಂಬ ಮಾತನ್ನು ನಾನಾ ಅರ್ಥಗಳಲ್ಲಿ ಪ್ರಯೋಗಿಸುತ್ತೇವೆ ಒಂದು ವಸ್ತುವಿನ ಪ್ರಮಾಣವೆಷ್ಟು? ಎಂದು ಹೇಳುವಾಗ ಆ ವಸ್ತುವಿನ ಗಾತ್ರ ಅಥವಾ ಅದರ ಉದ್ದ ಅಗಲ ಎತ್ತರವೆಷ್ಟು ಎಂತ ಕೇಳುತ್ತೇವೆ ಒಂದು ಪೆಟ್ಟಿಗೆ, ಮನೆ ಅಥವಾ ಒಂದು ತೊಲೆ ಇವುಗಳ ಪ್ರಮಾಣವೆಂದರೆ ಅವುಗಳ ಉದ್ದ, ಅಗಲ, ಎತ್ತರ ಎಷ್ಟೆಂದು ತಿಳಿಯುವದೇ ಅಲ್ಲವೇ? ಪ್ರಮಾಣವೆಂಬ ಮಾತಿಗೆ ಇನ್ನೊಂದರ್ಥವುಂಟು ನ್ಯಾಯಸ್ಥಾನಗಳಲ್ಲಿ ನ್ಯಾಯಾಧಿಪತಿಯು ಒಂದು ವ್ಯಾಜ್ಯವನ್ನು ವಿಚಾರಿಸುವದಕ್ಕೆ ಆರಂಭಿಸುವಾಗ ಕಕ್ಷಿದಾರರನ್ನೂ ಸಾಕ್ಷಿದಾರರನ್ನೂ ಪ್ರಮಾಣಮಾಡಿರೆಂತ ಹೇಳುತ್ತಾನೆ ಅವರು ತಾವು ನಿಜವೆಂದು ನಂಬುವ ತಮ್ಮ ಮತಗ್ರಂಥವನ್ನು ಸೂಚಿಸಿ—ನಮ್ಮ ಭಕ್ತಿಗೂ ನಂಬಿಕೆಗೂ ಆಧಾರವಾಗಿರುವ ಈ ಗ್ರಂಥವು ಹೇಗೆ ಸತ್ಯವಾಗಿದೆಯೋ ಹಾಗೆಯೇ ನಾವು ಈ ವ್ಯಾಜ್ಯದಲ್ಲಿ ಹೇಳುವ ಮಾತುಗಳು ಸತ್ಯವಾಗಿವೆ ನಡೆದದ್ದನ್ನು ನಡೆದ ಹಾಗೆ ನುಡಿಯುತ್ತೇವೆ ಕಂಡದ್ದನ್ನು ಕಂಡ ಹಾಗೆ ಹೇಳುತ್ತೇವೆ ಎಂದು ಪ್ರಮಾಣಮಾಡುತ್ತಾರೆ

ಧರ್ಮಪ್ರಮಾಣವೆಂದರೆ ಧರ್ಮವಾಗಿ ನಮ್ಮ ಕರ್ತವ್ಯಗಳನ್ನು ನೆರವೇರಿಸುವದಕ್ಕೆ ನಾವು ಅನುಸರಿಸುವ ಸೂತ್ರವೆಂದರ್ಥ ನಮೂನೆಯಿಲ್ಲದೆ ಯಾವ ಕೆಲಸವನ್ನು ಸರಿಯಾಗಿ ನೆರವೇರಿಸುವದಕ್ಕಾಗುವದಿಲ್ಲ ಬಾಲಕನು ಬರವಣಿಗೆ ಕಲಿಯುವದಕ್ಕೆ ಮೇಲ್ಪಂಕ್ತಿಯು ಬೇಕು ಬಡಗಿಯು ಮೇಜನ್ನು ಮಾಡುವದಕ್ಕೆ ನಮೂನೆಯು ಬೇಕು ಮನೆ ಕಟ್ಟುವವನಿಗೆ ನಕ್ಷೆಯು ಅಗತ್ಯವಾಗಿದೆ ನಮೂನೆಯೂ ನಕ್ಷೆಯೂ ಇಲ್ಲದ ಯಾರಾದರೂ ಕೆಲಸಗಳನ್ನು ಆರಂಭಿಸಿದರೆ ಹೇಗೆ ಆರಂಭಿಸಬೇಕು? ಮತ್ತು ಆರಂಭಿಸಿದ್ದನ್ನು ಹೇಗೆ ಮುಂದರಿಸಬೇಕು? ಹೇಗೆ ಮುಗಿಸಬೇಕೆಂಬದು ಗೊತ್ತಾಗದೆ ಹಿಡಿದ ಕಾರ್ಯವು ಸಿದ್ಧಿಗೆ ಬರಲಾರದು ಬರವಣಿಗೆ ಕಲಿಯುವದಕ್ಕೂ ಮೇಜು ಮುಂತಾದ ಸಾಮಾನುಗಳನ್ನು ಮಾಡುವದಕ್ಕೂ ಮನೆ ಕಟ್ಟುವದಕ್ಕೂ ನಮೂನೆ ನಕ್ಷೆಗಳಿರಬೇಕಾದದು ಅಗತ್ಯವಾಗಿರಲಾಗಿ ನಾವು ಹೇಗೆ ನಡಕೊಳ್ಳಬೇಕೆಂಬ ವಿಷಯಕ್ಕೆ ತಕ್ಕ ಸೂತ್ರವಿಲ್ಲದೆ ಸರಿಯಾದ ನಡತೆಯನ್ನು ನಡೆದು ನಮ್ಮ ಧರ್ಮವನ್ನು ಪೂರೈಸಲಿಕ್ಕೆ ಹೇಗೆ ತಾನೇ ಸಾಧ್ಯವಾಗುವದು?

ಒಂದು ರಾಜ್ಯದಲ್ಲಿ ಪ್ರಜೆಗಳು ಕೈಕೊಂಡು ನಡೆಯಬೇಕಾದ ಕಟ್ಟಳೆ ಕಾನೂನುಗಳನ್ನು ಅರಸನು ನಿರ್ಣಯಿಸುತ್ತಾನೆ ಅವುಗಳನ್ನು ಕೈಕೊಂಡು ನಡೆಯುವ ಪ್ರಜೆಗಳನ್ನು ಅರಸನು ರಕ್ಷಿಸುತ್ತಾನೆ ಅವುಗಳನ್ನು ಉಲ್ಲಂಘನೆ ಮಾಡುವವರನ್ನು ದಂಡಿಸುತ್ತಾನೆ ಆದರೆ ರಾಜಕೀಯವಾದ ಕಟ್ಟಳೆಗಳು ನಮ್ಮ ಸಾಂಸರ್ಗಿಕ ನಡತೆಗೆ ಸಾಲವು, ಮನಸ್ಸಾಕ್ಷಿಗೆ ಆತ್ಮತೃಪ್ತಿಯನ್ನುಂಟುಮಾಡಲಾರವು ಆದ್ದರಿಂದ ನೀತಿಯ ನಡತೆಗೆ ತಕ್ಕ ಪ್ರಮಾಣವನ್ನು ನಮ್ಮ ಮುಂದೆ ಹಿಡಿದು ತೋರಿಸುತ್ತ ಸನ್ಮಾರ್ಗಾವಲಂಬನೆಗೆ ತಕ್ಕ ಉಪದೇಶವನ್ನು ಬೋಧಿಸುತ್ತಾ ಇರುವ ಪ್ರಮಾಣಗಳು ಅಥವಾ ನಡತೆಯ ಸೂತ್ರಗಳು ಎಲ್ಲರಿಗೂ ಒಪ್ಪಿಬಟ್ಟ ವ್ಯಕ್ತಿ ಪುರುಷರಿಗೂ ಅಗತ್ಯವಾಗಿ ಬೇಕು

ಪೂರ್ವದ ಚರಿತ್ರೆಗಳನ್ನು ಓದಿನೋಡಿದರೆ ಪ್ರತಿಯೊಂದು ಜನಾಂಗದವರು ತಮ್ಮ ನಡತೆಯನ್ನು ಕ್ರಮಗೊಳಿಸುವ ಸೂತ್ರಗಳನ್ನು ಅಥವಾ ಧರ್ಮಪ್ರಮಾಣವನ್ನು ಪಡೆದು ಅವುಗಳನ್ನು ಅನುಸರಿಸುತ್ತಿದ್ದರು ಆ ಪ್ರಮಾಣವನ್ನು ಅತ್ಯಂತ ಪ್ರಾಚೀನ ಕಾಲದಲ್ಲಿ ತಮ್ಮ ತಮ್ಮ ಋಷಿಯರು ದಿವ್ಯ ಪ್ರೇರಣೆ ಹೊಂದಿ ಬರೆದರೆಂದೂ ದೇವರು ಆ ಋಷಿಯರು ಬರೆದ ಧರ್ಮಪ್ರಮಾಣವನ್ನು ತನ್ನ ಚಿತ್ತಕ್ಕನುಸಾರವಾಗಿದೆಯೆಂದು ಒಪ್ಪಿದನೆಂತಲೂ ಸಂಪ್ರದಾಯವಾಗಿ ನಂಬಿಕೆಯುಂಟು ಸಾಮಾನ್ಯವಾಗಿ ಜನಗಳು ಅವು ದೇವರು ನುಡಿದ ವಚನಗಳೇ ಎಂದು ಸನ್ಮಾನಿಸಿ ಕೈಕೊಳ್ಳುತ್ತಾರೆ

ಆದರೆ ಮನುಷ್ಯರು ಬುದ್ಧಿ, ನಾಗರಿಕತೆ, ನಡತೆಗಳಲ್ಲಿ ಅಭಿವೃದ್ಧಿಯಾದ ಹಾಗೆಲ್ಲಾ ಧರ್ಮವಿಷಯವು ಅವರವರ ಬುದ್ಧಿಗೆ ತಕ್ಕ ಹಾಗೆ ಬದಲಾಯಿಸಲ್ಪಡಬೇಕು ಓದ್ಯ ಕಲಿಯುವದಕ್ಕೆ ಈಗ ತಾನೇ ಆರಂಭಿಸಿದ ಹುಡುಗನಿಗೆ ಮೊದಲನೇ ಪುಸ್ತಕವು ಅವನ ವಿದ್ಯೆಕ್ಕೆ ಪ್ರಮಾಣವಾಗಿರುವದು ಆದರೆ ಗೊತ್ತಾದ ಕಾಲದಲ್ಲಿ ಅವನು ಅದನ್ನು ಕಲಿಯಬೇಕು ಒಂದು ವರುಷದೊಳಗಾಗಿಯೋ ಆರು ತಿಂಗಳಲ್ಲಿಯೋ ಅವನು ಆ ಪ್ರಮಾಣವನ್ನು ಮುಟ್ಟುತ್ತಾನೆ ಆಗ ಆ ಪ್ರಮಾಣದ ಅಳತೆಯು ಅಥವಾ ಮಿತಿಯು ಅವನಿಗೆ ಸಾಲದಾಗಿರುವದರಿಂದ ಅದಕ್ಕಿಂತ ಮೇಲಾದ ಎರಡನೇ ಪುಸ್ತಕವೆಂಬ ಇನ್ನೊಂದು ಪ್ರಮಾಣವನ್ನು ಅವನ ಮುಂದೆ ಇಟ್ಟು ಅದನ್ನು ಅವನು ಅಭ್ಯಾಸಮಾಡಬೇಕು ಆ ಮೇಲೆ ಮೂರನೇ ಪುಸ್ತಕ ಹೀಗೆಯೇ ಕಡೇವರೆಗೂ

ಮನುಷ್ಯನು ಧರ್ಮಾಚರಣೆಯನ್ನು ಕಲಿಯಬೇಕೆಂಬದು ದೇವರ ಅಪೇಕ್ಷೆ ಆ ಧರ್ಮಾಚರಣೆಗೆ ಪ್ರಮಾಣವ್ಯಾವುದು? ಕೈಕೊಳ್ಳಬೇಕಾದ ಸೂತ್ರಗಳು ಯಾವವು? ದೇವರು ನಮ್ಮ ಧರ್ಮಾಚರಣೆಗೆ ಮೇಲ್ಪಂಕ್ತಿ ಆತನ ಚಿತ್ತವೇ ನಮ್ಮ ನಡತೆಗೆ ಉತ್ತಮೋತ್ತಮವಾದ ಸೂತ್ರ ಆದರೆ ದೇವರನ್ನು ಅನುಸರಿಸಿ ಆತನ ಚಿತ್ತವನ್ನು ಕೈಕೊಂಡು ನಡೆಸುವದು ಒಂದು ದೊಡ್ಡ ವಿದ್ಯೆ ಅದೇ ಎಲ್ಲಾ ವಿದ್ಯೆಗಳಿಗಿಂತ ಶ್ರೇಷ್ಠತಮವಾದ ವಿದ್ಯೆ ಆದರೆ ಆ ವಿದ್ಯೆದಲ್ಲಿ ಪಾರಂಗತೆಯನ್ನು ಹೊಂದುವದು ಸುಲಭಸಾಧ್ಯವಲ್ಲ ಆದುದರಿಂದ ದೇವರು ಸರ್ವ ಸಂಪೂರ್ಣವಾದ ತನ್ನನ್ನು ತನ್ನ ಚಿತ್ತವನ್ನು ಒಂದೇ ಸಾರಿ ಸಂಪೂರ್ಣವಾಗಿ ಲೋಕಕ್ಕೆ ಪ್ರಕಟಿಸಿ ಅಲ್ಪಜ್ಞರಾದ ನಮ್ಮ ಮನಸ್ಸನ್ನು ಗಲಿಬಿಲಿಮಾಡಿ ಕಕ್ಕಾವಿಕ್ಕಿಗೊಳಿಸದೆ ನಿಧಾನವಾಗಿ ಕ್ರಮೇಣ ಬಾಲಕರಿಗೆ ಬುದ್ಧಿವಂತನಾದ ಉಪಾಧ್ಯಾಯನು ವಿದ್ಯೆಯನ್ನು ಅರುಹುವ ಪ್ರಕಾರವಾಗಿ ನಮಗೆ ಕಾಲಕಾಲಕ್ಕೆ ತಕ್ಕ ಹಾಗೆ ಬೋಧಿಸಿದನು

ಮೊದಲು ಕ್ರಿಸ್ತನು ಈ ಲೋಕದಲ್ಲಿ ಹುಟ್ಟಿದಾಗ ಬಹು ಪೂರ್ವ ಕಾಲದಿಂದ ಆತನ ಜನಾಂಗದವರಾದ ಯೆಹೂದ್ಯರಲ್ಲಿ ವಾಡಿಕೆಯಾಗಿದ್ದ ಒಂದು ಧರ್ಮಪ್ರಮಾಣವು ಆಚರಣೆಯಲ್ಲಿದ್ದಿತು ಅದರಲ್ಲಿ ಕೆಲವನ್ನು ಉದಾಹರಿಸುತ್ತೇವೆ ಏನಂದರೆ—ಕಣ್ಣಿಗೆ ಪ್ರತಿಯಾಗಿ ಕಣ್ಣನ್ನು ಹಲ್ಲಿಗೆ ಪ್ರತಿಯಾಗಿ ಹಲ್ಲನ್ನು ತೆಗೆದು ಎಂಬುವದೊಂದು ಕಟ್ಟಳೆ ಅಂದರೆ ಯಾರಾದರೂ ಒಬ್ಬನು ಇನ್ನೊಬ್ಬನ ಕಣ್ಣನ್ನಾಗಲಿ ಹಲ್ಲನ್ನಾಗಲಿ ಕಿತ್ತು ಅಥವಾ ಮುರಿದದ್ದೇ ಆದರೆ ನ್ಯಾಯಾಧಿಪತಿಯು ಹಾಗೆ ಅವನ ಕಣ್ಣನ್ನು ಕಿತ್ತಿಸುವನು ಅಥವಾ ಮುರಿದ ಹಲ್ಲಿಗೆ ಪ್ರತಿಯಾಗಿ ಅವನದೊಂದನ್ನು ಮುರಿಸುವನು ಕ್ರಿಸ್ತನು ಈ ಕಟ್ಟಳೆಯನ್ನು ಬದಲಾಯಿಸಿ—ಕೇಡಿಗೆ ಮನುಷ್ಯನಿಗೆ ಕೇಡುಮಾಡಿ ಮುಯ್ಯಿಗೆ ಮುಯ್ಯಿ ತೀರಿಸಬೇಡ ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನೂ ಒಡ್ಡು ಎಂದು ಬೋಧಿಸಿದನು ಮತ್ತು ಹಿಂದಿನ ಕಟ್ಟಳೆಯು—ನಿನ್ನ ನೆರೆಯವನನ್ನು ಪ್ರೀತಿಸಿ ನಿನ್ನ ವೈರಿಯನ್ನು ಹಗೆಮಾಡಬೇಕು ಎಂದು ಇದ್ದಿತು ಕ್ರಿಸ್ತನಾದರೋ—ನಿಮ್ಮ ವೈರಿಗಳನ್ನು ಪ್ರೀತಿಸಿರಿ ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ಪ್ರಾರ್ಥನೆಮಾಡಿರಿ ಹೀಗೆ ಮಾಡಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯಾದ ದೇವರಿಗೆ ನೀವು ಮಕ್ಕಳಾಗಿರುವಿರಿ ಮಕ್ಕಳು ತಂದೆ

ಯ ಮೇಲ್ಪಂಕ್ತಿಯನ್ನು ನೋಡಿ ನಡೆಯಬೇಕಲ್ಲವೇ? ನಮ್ಮ ತಂದೆಯಾದ ದೇವರು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ ನೀತಿವಂತರಿಗೂ ಅನೀತಿವಂತರಿಗೂ ತನ್ನ ಮಳೆಯನ್ನು ಕೊಡುತ್ತಾನೆ ಎಂದು ದೇವರನ್ನೇ ನಮಗೆ ಮೇಲ್ಪಂಕ್ತಿ ಮಾಡಿದನು

ಕಾನ್ಪುರದ ಮಸೀತಿಯ ದೊಂಬಿ

ಹತ್ತಾರು ಜನರು ಮೃತಪಟ್ಟರು, ಅನೇಕರಿಗೆ ಗಾಯಗಳಾದವು

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಕಾನ್ಪುರದಲ್ಲಿ ಸರ್ಕಾರದವರು ಮುಸಲ್ಮಾನರ ಮಚ್ಛಿಬಜಾರ್ ಮಸೀತಿಯ ಪೂರ್ವಪಾರ್ಶ್ವದ ಒಂದು ಮೂಲೆ ಗೋಡೆಯನ್ನು ಸರ್ಕಾರಿ ರಸ್ತೆಗಾಗಿ ಒಡೆಸಿಹಾಕಿದರು ಇದು ಹಿಂದುಸ್ಥಾನದ ಹಲವು ಪ್ರಾಂತ್ಯಗಳಲ್ಲಿರುವಂಥಾ ಮಹಮ್ಮದೀಯರಿಗೆ ಅಸಮಾಧಾನವನ್ನುಂಟುಮಾಡಿತು ಎಲ್ಲಾ ಪ್ರಾಂತ್ಯಗಳಲ್ಲೂ ಮಹಮ್ಮದೀಯರು ಸಭೆಗಳನ್ನು ನಡಿಸಿ ಆ ಗೋಡೆಯನ್ನು ಮತ್ತೆ ಮೊದಲಿದ್ದಂತೆಯೇ ಹಾಕಿಸಿಕೊಡಬೇಕೆಂದು ಗವರ್ನ್‌ಮೆಂಟಿಗೆ ಬರೆದುಕೊಳ್ಳುತ್ತಾ ಬಂದಿದಾರೆ

ಈ ಮಧ್ಯೆ ಕಳೆದ ಭಾನುವಾರ ಬೆಳಗ್ಗೆ ಕಾನ್ಪುರದ ಮಹಮ್ಮದೀಯರು ಸುಮಾರು 100-500 ಜನರು ಅಲ್ಲಿನ ಈದ್ಗಾದಲ್ಲಿ ಬಯಲು ತಳಿಯಲ್ಲಿ ಸೇರಿ, ಮಸೀತಿಯನ್ನು ಕೆಡವಿದ ವಿಚಾರವನ್ನು ಚರ್ಚೆಮಾಡಿದರು ವ್ಯಸನಸೂಚಕವಾಗಿ ಕರಿಯ ಬಾವುಟಗಳನ್ನು ಹಿಡಿಸಿದರು ಬಳಿಕ ಅವರೂ ಇತರ ಮಹಮ್ಮದೀಯರೂ ಅಲ್ಲಿಂದ ಮಸೀತಿಯ ಬಳಿಗೆ ಬಂದು ಅಲ್ಲಿ ಕೆಡವಿದ್ದ ಇಟ್ಟಿಗೆಗಳನ್ನು ಮತ್ತೆ ಗೋಡೆ ಹಾಕಬೇಕೆಂದು ಕೂಡಿಸಿದರು ಪೋಲೀಸಿನವರು ಅವರನ್ನು ಅಡ್ಡಮಾಡಿದಾಗ ಅವರು ಇಟ್ಟಿಗೆ ಮತ್ತು ಕಲ್ಲುಗಳಿಂದ ಅವರನ್ನು ಹೊಡೆದರು ಈ ವರ್ತಮಾನ ತಿಳಿದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಮಿ|| ಟೈಲರವರೂ, ಪೋಲೀಸ್ ಸೂಪರಿಂಟೆಂಡೆಂಟರೂ ಪೋಲೀಸಿನವರನ್ನೂ ಸವಾರರನ್ನೂ ಅಲ್ಲಿಗೆ ಕರೆದುಕೊಂಡು ಹೋದರು ಮಹಮ್ಮದೀಯರಿಗೂ ಅವರಿಗೂ ಹೋರಾಟವಾಯಿತು ಸರ್ಕಾರದವರು ದೊಂಬಿಯನ್ನು ತಪ್ಪಿಸುವುದಕ್ಕೆ ಗುಂಡು ಹಾಕಿ ಹೊಡೆಯುವಂತೆ ಪೋಲೀಸಿಗೆ ಅಪ್ಪಣೆ ಕೊಟ್ಟರು ಇದರಿಂದ ದೊಂಬಿಯು ಚದರಲಿಲ್ಲ ಬಳಿಕ ಸಣ್ಣ ಗೋಲಿಗಳನ್ನು ಹಾಕಿ ಗುಂಡುಹೊಡೆಯಬೇಕಾಯಿತು ಕೆಲವು ಹೊತ್ತಿನ ಗುಂಡುಗಳ ಹಾರಾಟದಲ್ಲಿ ಹಲವರು ಸತ್ತರು, ಅನೇಕರಿಗೆ ಗಾಯಗಳಾದವು ಬಳಿಕ ಗಲಭೆಯೆಲ್ಲಾ ಶಮನವಾಯಿತು

ಇದುವರೆಗೆ ನೋಡಿರುವದರಲ್ಲಿ ಈ ದೊಂಬಿ ಕಲಹದ ದೆಸೆಯಿಂದ ಪ್ರಜೆಗಳ ಪೈಕಿ 18 ಜನರು ಮೃತಪಟ್ಟಿದಾರೆ, 27 ಜನರಿಗೆ ಗಾಯಗಳಾಗಿವೆ ಪೋಲೀಸಿನವರಲ್ಲಿ ಒಬ್ಬನು ಮೃತಪಟ್ಟನು, 24 ಮಂದಿಗೆ ಘೋರ ಗಾಯಗಳಾಗಿವೆ ಅಧಿಕಾರಿಗಳಿಗೂ ಅಲ್ಪಸ್ವಲ್ಪ ಗಾಯಗಳಾದವು ಇದುವರೆಗೆ ಸರ್ಕಾರದವರು 171 ಜನರನ್ನು ದಸ್ತಗಿರಿ ಮಾಡಿದ್ದರ ಪೈಕಿ ಹುಡುಗರಾಗಿದ್ದ 40 ಮಂದಿಯನ್ನು ಬಿಟ್ಟುಬಿಟ್ಟರು ಮುಸಲ್ಮಾನರಲ್ಲಿ ಮುಖಂಡರಾಗಿದ್ದ ಹತ್ತಾರು ಮಂದಿ ಮೌಲ್ವಿ ಮುಂತಾದವರನ್ನೂ ಹಿಡಿದು ಲಾಕಪ್ಪಿನಲ್ಲಿ ಹಾಕಿದಾರೆ

ಆಗ್ರಾ ಕಡೆ ಸರ್ಕೀಟು ಹೋಗುತ್ತಿದ್ದ ಲೆಫ್ಟಿನೆಂಟ್ ಗವರ್ನರವರು ಮರುದಿನ ಅಲ್ಲಿಗೆ ಹೋಗಿ ಆ ಸ್ಥಳವನ್ನು ಪರಾಂಬರಿಸಿ, ಆಸ್ಪತ್ರೆಗೆ ಹೋಗಿ ಗಾಯಪಟ್ಟು ಚಿಕಿತ್ಸೆಹೊಂದುತ್ತಿದ್ದ ಎರಡು ಪಕ್ಷದ ರೋಗಿಗಳನ್ನೂ ಕಂಡು ಪ್ರೀತಿಯಿಂದ ಮಾತನಾಡಿಸಿ, ಅಲ್ಲಿಂದ ಬಂದೀಖಾನೆಗೆ ಹೋಗಿ ದಸ್ತಗಿರಿ ಮಾಡಲ್ಪಟ್ಟವರನ್ನೆಲ್ಲಾ ನೋಡಿಕೊಂಡು ಬಂದರು ತರುವಾಯ ಅವರು ಮಹಮ್ಮದೀಯ ಮುಖಂಡರಿಗೆ ಭೇಟಿಯನ್ನು ಕೊಟ್ಟು ಸಮಾಧಾನಪಡಿಸಿದರು

ಒಳನಾಡ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ಅರಮನೆಯ ರಾಣೀವಾಸದವರ ಸಮೇತ ನೆನ್ನೆ ಬೆಂಗಳೂರಿಗೆ ದಯಮಾಡುವಂತೆ ಏರ್ಪಾಟಾಗಿತ್ತು

ಮೈಸೂರಿನಿಂದ ಹಾಸನಕ್ಕೆ ಸುಮಾರು 70 ಮೈಲಿ ರೈಲ್ ರಸ್ತೆಯನ್ನು ಮಾಡಿಸುವುದಕ್ಕೆ 50 ಲಕ್ಷ ರೂಪಾಯಿ ಖರ್ಚು ಪಟ್ಟಿ ತಯಾರಾಗಿ ಕಾಮಗಾರಿ ಪ್ರಾರಂಭವಾಗಲು ಸರ್ಕಾರದವರ ಸ್ಯಾಂಕ್ಷನ್ ನಿರೀಕ್ಷಿಸಲ್ಪಟ್ಟಿದೆ ಎಂದು ತಿಳಿದು ಬರುತ್ತದೆ

ಚೀಣಾ ರಾಜ್ಯಕ್ಕೆ ಸೇರಿದ ಷಾಂಘಾಯಿ ಮತ್ತು ಹ್ಯಾಂಕೋ ಪಟ್ಟಣಗಳಲ್ಲಿ ನೌಕರಿಗಳು ಸಿಕ್ಕುವವೆಂಬ ಭರವಸೆ ಇಲ್ಲವೆಂದೂ, ನಮ್ಮ ಸೀಮೆಯ ಪ್ರಜೆಗಳ್ಯಾರೂ ಅಲ್ಲಿಗೆ ಹೋಗಿ ಕಷ್ಟನಷ್ಟಗಳಿಗೆ ಗುರಿಯಾಗಬಾರದೆಂದೂ ಪ್ರಕಟಮಾಡಬೇಕೆಂದು ಗವರ್ನ್‌ಮೆಂಟಿನವರು ತಿಳಿಸುತ್ತಾರೆ

ಪಂಜಾಬ್ ಆಧಿಪತ್ಯಕ್ಕೆ ಸೇರಿದ ಕಪೂರ್ಥಲವೆಂಬ ದೇಶೀಯ ಸಂಸ್ಥಾನದ ಯುವರಾಜರವರು ಪತ್ನಿ ಪರಿವಾರ ಸಮೇತ ಕಳೆದ ವಾರ ರಾಜಧಾನಿಗೆ ದಯಮಾಡಿ ಅರಮನೆ ಖಾಸಾ ಬಂಗಲೆಯಲ್ಲಿ ಇದ್ದುಕೊಂಡು ನಮ್ಮ ಮಹಾರಾಜರವರ ಆತಿಥ್ಯ ಸತ್ಕಾರಗಳನ್ನು ಸ್ವೀಕರಿಸಿ ತೆರಳಿದರು

ರಾಜಧಾನಿಯ [illegible] ಮಾರ್ಕೆಟ್ [illegible] ಸಾಲವನ್ನು (ವಿಲ್) [illegible] ಅವರ ಮಕ್ಕಳಿಗೂ ಇತರರಿಗೂ ಸಜಾ ಮತ್ತು ಜುಲ್ಮಾನೆ ಶಿಕ್ಷೆಯಾಗಿದ್ದನ್ನು ಚೀಫ್ ಕೋರ್ಟ್ ಜಡ್ಜಿಯವರು ರದ್ದುಮಾಡಿ ಅವರನ್ನೆಲ್ಲಾ ಖುಲಾಸ್ ಮಾಡಿಬಿಟ್ಟರು

ಒಬ್ಬ ವಾತ್ಮಾದಾರರಿಂದ- ನಾಳೆ ರವಿವಾರ ಸಾಯಂಕಾಲ 6 ಘಂಟೆಗೆ ಬೆಂಗಳೂರು ವಸ್ಲಿಯನ್ ಲಿಟರರಿ ಸಂಘದ ಬಾಲಕರು ತಮ್ಮ ಸಂಘದ ಎರಡನೇ ವರುಷೋತ್ಸವವನ್ನು ಪೈಕ್ರಾಫ್ಟ್ ಹಾಲಿನಲ್ಲಿ ನಡಿಸುವರು ಮೈಸೂರು ಗವರ್ನ್‌ಮೆಂಟು ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್‌ರಾದ ಮಿ|| ಪಿ ಎಸ್ ಅಚ್ಯುತರಾಯರು ಅಗ್ರಾಸನವನ್ನು ವಹಿಸುವರು

ಕಳೆದ ವರುಷ ಮಾರ್ಚಿ ತಿಂಗಳಲ್ಲಿ ಬೆಂಗಳೂರು ಸಿಟಿ ಪೋಸ್ಟ್ ಆಫೀಸಿನ ಗುಮಾಸ್ತೆ ಸೀತಾರಾಮಶೆಟ್ಟಿಯು 100 ರೂಪಾಯಿ ಬಾಬತು 19 ಕರೆನ್ಸಿ ನೋಟುಗಳನ್ನು ಅಪಹರಿಸಿದನೆಂದು ಮೊಕದ್ದಮೆ ಆಗಿ ಇದುವರೆಗೆ ವಿಚಾರಣೆಯಲ್ಲಿದ್ದು ಕಳೆದ ಬುಧವಾರ ಅಲ್ಲಿನ ಸಿಟಿ ಮ್ಯಾಜಿಸ್ಟ್ರೇಟರು ಅವನಿಗೆ ಎರಡು ವರುಷ ಕಠಿಣ ಸಜವನ್ನೂ 1,000 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ

ರಾಜಧಾನಿಯ ಹೆಲ್ತ್ ಆಫೀಸರ್ ಮಿ|| ಸಿ ಎಲ್ ಮಾಂಕರರವರಿಗೆ ವರ್ಗವಾದ ನಿಮಿತ್ತ ಮ್ಯುನಿಸಿಪಲ್ ಕಮಿಷನರ್‌ರ ಇಲಾಖೆಯವರು ಕಳೆದ ಭಾನುವಾರ ಸತ್ಕಾರಮಾಡಿ ಅವರಲ್ಲಿ ತಮಗಿರುವ ಭಕ್ತಿ ಅನುರಾಗಗಳನ್ನು ಪ್ರಕಟಪಡಿಸಿದರು ಮಿ|| ಮಾಂಕರರವರು ಬಹು ಸತ್ಯರಾಗಿಯೂ, ಪ್ರಜಾಕ್ಷೇಮಾಭಿಲಾಷಿಗಳಾಗಿಯೂ, [illegible]ರಾಗಿಯೂ ತಮ್ಮ ಕಾರ್ಯಗಳನ್ನು ನಡಿಸುತ್ತಿದ್ದರು

ಕಣ್ಣಾನಾಲದ ಜಂಗೆ ರೋಗವು ರಾಜಧಾನಿಯಲ್ಲಿ [illegible] ಪ್ರಾರಂಭವಾದಾರಭ್ಯ ಆರು ವಾರಗಳಲ್ಲಿ ಮೂರು ಮಂದಿ ಕಾಲವಾದರು ಈಗ

ಸಾಕ್ಷಿಗಳ ಕೈಫಿಯತ್ತುಗಳೆಲ್ಲಾ ಪೂರೈಸಿ, ಮೊನ್ನೆ ಸೋಮವಾರದಿಂದ ಅಪರಾಧಿಗಳ ತರಫಿನ ಲಾಯರುಗಳ ಪೈಕಿ ಅಡ್ವೊಕೇಟ್ ಮಿ|| ಎ ರಾಮಣ್ಣನವರು ಆರ್ಗ್ಯುಮೆಂಟ್ ಮಾಡುತ್ತಿದಾರೆ ಈ ಆರ್ಗ್ಯುಮೆಂಟುಗಳು ಈ ವಾರವೆಲ್ಲಾ ನಡೆಯುವವು

ಮೈಸೂರು ಗವರ್ನ್‌ಮೆಂಟಿನಿಂದ ಸ್ಯಾಂಕ್ಷನ್ ಆದ ಪಂಚಮರ ಬೋರ್ಡಿಂಗ್ ಸ್ಕೂಲನ್ನು ಮೊನ್ನೆ ಸೋಮವಾರ ಬೆಳಗ್ಗೆ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ ಮಿ|| ಎಂ ರಾಮರಾಯರವರು ರಾಜಧಾನಿಯ ನಜರಬಾದಿನಲ್ಲಿರುವ ಬಲರಾಂಸಿಂಗರ ಕಟ್ಟಡದಲ್ಲಿ ಪ್ರಾರಂಭಮಾಡಿದರು ಈಗ ಈ ಸ್ಕೂಲಿನಲ್ಲಿ 20 ಮಂದಿ ದಾಖಲಾಗಿ ವಿದ್ಯೆ ಕಲಿಯುತ್ತಿರುವರು ಇಷ್ಟರಲ್ಲೇ ಇನ್ನೂ 10 ಮಂದಿ ಡಿಸ್ಟ್ರಿಕ್ಟುಗಳಿಂದ ಬರುವುದರಲ್ಲಿದಾರೆ

ಹಿಂದಿನ ಬುಧವಾರ ಸಾಯಂಕಾಲ ಕೃಷ್ಣರಾಜಪೇಟೆ ತಾಲ್ಲೂಕು ಗೊಂದಿಹಳ್ಳಿಯ ಬಳಿ ಹೇಮಾವತೀ ನದಿಯನ್ನು ದಾಟುವಾಗ್ಗೆ ಒಂದು ದೋಣಿಯು ಪ್ರವಾಹದಲ್ಲಿ ಮಗುಚಿಕೊಂಡಿತೆಂದೂ, ಅದರಲ್ಲಿ ಕುಳಿತಿದ್ದ 20 ಮಂದಿಯ ಪೈಕಿ 6-6 ಮಂದಿಯ ವಿನಾ ಉಳಿದವರೆಲ್ಲಾ ನದಿಯ ಪಾಲಾದರೆಂದೂ, ವಿಚಾರಣೆಗಾಗಿ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಆಫೀಸರೂ, ಪೋಲೀಸ್ ಸೂಪರಿಂಟೆಂಡೆಂಟೂ ಅಲ್ಲಿಗೆ ಹೋಗಿರುವುದಾಗಿಯೂ ವರ್ತಮಾನವಿದೆ

ಮೈಸೂರು ಬ್ಯಾಂಕಿನವರು ಬ್ಯಾಂಕಿನ ಮ್ಯಾನೇಜರ್ ಕೆಲಸಕ್ಕೆ ಮಿ|| ಡಬ್ಲಿಯು ಸಿ. ರಾಸ್ ಎಂಬುವರನ್ನು ನೇಮಕಮಾಡಿದಾರೆ ಇವರು ಡಿಲ್ಲಿ ಮತ್ತು ಲಂಡನ್ ಬ್ಯಾಂಕುಗಳ ಶಾಖೆಗಳಲ್ಲಿ ಕೆಲಸಮಾಡಿ 28 ವರುಷಗಳ ಅನುಭವ ಪಡೆದಿರುತ್ತಾರೆಂದೂ, ಇವರ ಸಹೋದರರು ಕಾಕಿನಾಡದಲ್ಲಿ ಮದರಾಸ್ ಬ್ಯಾಂಕಿನ ಏಜಂಟರಾಗಿದಾರೆಂದೂ ತಿಳಿಯುವುದು ಅವರು ನಾಳೆ ಜಹಜು ಹತ್ತಿ ಸೀಮೆಯಿಂದ ಮೂರು ವಾರದೊಳಗೆ ಬೆಂಗಳೂರನ್ನು ತಲಪುವರು

ಹರಿಹರದ ಮ|| ಬಾಳಪ್ಪನವರು 100 ಎಕರೆ ಜಮೀನಿಗೆ ನೀರು ಹಾಯಿಸಿಕೊಂಡು ವ್ಯವಸಾಯಮಾಡುವಂಥಾ ನೀರು ಎತ್ತುವ ಯಂತ್ರಗಳನ್ನು ಮಿ|| ಬಾಟರ್‌ಟನ್‌ರವರ ಬೋಧನೆ ಮೇರೆ 12,500 ರೂಪಾಯಿ ಮುಟ್ಟಿಸಿ ತರಿಸಿ ಅವರು ಹೇಳಿದಂತೆ ಇಡಿಸಿರುತ್ತಾರೆ ನಮ್ಮ ಸೀಮೆಯಲ್ಲಿ ವ್ಯವಸಾಯಕ್ಕೆ ಇಷ್ಟು ಭಾರಿಯಾದ ಯಂತ್ರಸಾಧನವನ್ನು ಇಟ್ಟುಕೊಂಡದ್ದು ಇದೇ ಪ್ರಥಮವಾದದ್ದರಿಂದ ನಮ್ಮ ದಿವಾನ್‌ರವರೇ ಖುದ್ದು ಅಲ್ಲಿಗೆ ದಯಮಾಡಿ ಮುಂದಿನ ಸೋಮವಾರ ಅದನ್ನು ಪ್ರಾರಂಭಮಾಡಿ ಬರುತ್ತಾರೆಂದು ಪ್ರಕಟವಾಗಿದೆ

ಕನ್ನಂಬಾಡಿ ತಲಾವಿನ ಕಾಮಗಾರಿ ವಿಚಾರದಲ್ಲಿ ಪಂಚಾಯತರು ನೀಲಗಿರಿಯಲ್ಲಿ ಚರ್ಚೆಗಳನ್ನು ತೀರಿಸಿಕೊಂಡು, ಬೆಂಗಳೂರಿಗೆ ಬಂದು ಅಲ್ಲಿಯೂ ಸೇರಿ ಆಲೋಚನೆ ಮಾಡಿದರು ಮೊದಲನೇ ಭಾಗದ ಕಾಮಗಾರಿಯನ್ನು ಮೈಸೂರು ಸರ್ಕಾರದವರು ಮುಂದರಿಸಿ ಮಾಡಿಸಿಕೊಳ್ಳುವ ಭಾಗದಲ್ಲಿ ಮದರಾಸ್ ಸರ್ಕಾರದವರ ಆಕ್ಷೇಪಣೆ ಇಲ್ಲವೆಂದೂ ಎರಡನೇ ಭಾಗದ ಕಾಮಗಾರಿ ವಿಷಯದಲ್ಲಿ ಈಗ ಚರ್ಚೆಯುಂಟಾಗಿದೆ ಎಂದೂ ಕೇಳುತ್ತೇವೆ ಈ ವಿಚಾರದಲ್ಲಿ ವ್ಯವಸ್ಥೆಯಾಗುವ ಅಂಶವನ್ನು ನಮ್ಮ ಸರ್ಕಾರದವರು ಪ್ರಕಟಮಾಡುವರೆಂದು ಪ್ರಜೆಗಳು ಹಾರೈಸುತ್ತಾರೆ

ಒಬ್ಬ ವಾತ್ಮಾದಾರರಿಂದ — ರಾಜಧಾನಿಯ ರಘುಪತಿರಾಯರ 11 ವರುಷದ ಕಮಲಮ್ಮನೆಂಬ ಬಾಲಕಿಯು ರಾಜಧಾನಿಗೆ ಬಂದು ಪಿಟೀಲು ಬಾರಿಸುವುದರಲ್ಲಿ ತನ್ನ ಪಾಂಡಿತ್ಯವನ್ನು ಪ್ರಕಾಶಪಡಿಸಿದ್ದರಿಂದ ಶ್ರೀಮನ್ ಮಹಾರಾಜರವರು ಮೆಚ್ಚಿ ಸಂತೋಷಪಟ್ಟು ಆ ಬಾಲಕಿಗೆ ಕಳೆದ ವಾರ 3,000 ರೂಪಾಯಿ ಬಹುಮಾನ ದಯಪಾಲಿಸಿದರು ಮೈಸೂರಿನಲ್ಲಿ [illegible] ಆಸ್ಥಾನ ಸಂಗೀತ ವಿದ್ವಾಂಸರು ಕಲಿಯಲಪೇಕ್ಷಿಸುವಂಥಾ ಗಂಡು ಹೆಣ್ಣು ಮಕ್ಕಳನ್ನು ಶ್ರದ್ಧೆಯಿಂದಲೂ ಪ್ರೀತಿಪೂರ್ವಕವಾಗಿಯೂ ತರಬೇತು ಮಾಡುವಂತೆ ಹಿರಿದಾದ ಏರ್ಪಾಟನ್ನು ಮಾಡಿದರೆ ಈ ಮನೋಹರವಾದ ವಿದ್ಯೆಯು ವಿಶೇಷ ಪ್ರಾಶಸ್ತ್ಯಕ್ಕೆ ಬಂದು ಹರಡಲು ಬಹಳ ಸಹಾಯವಾದೀತು

ಮೈಸೂರು ಗೆಜೆಟ್ ಸಂಗ್ರಹ

ಮುಂದೆ ಹೇಳುವವರನ್ನು ಮೈಸೂರು ನ್ಯಾಯವಿಧಾಯಕ ಸಭೆಯ ಮೆಂಬರುಗಳಾಗಿ ನೇಮಕಮಾಡಿದೆ— ಮಿ ಗರ್ಭದ ಸಿ ಶ್ರೀಕಂಠೇಶ್ವರ ಅಯ್ಯರವರು, ಎಂ ರಾಮರಾಯರು, ಸಿ ಎಸ್ ದೊರೆಸ್ವಾಮಿ ಅಯ್ಯರವರು, ಸಿ ಶ್ರೀನಿವಾಸ ಅಯ್ಯಂಗಾರರು, ಎ ರಂಗಸ್ವಾಮಿ ಅಯ್ಯಂಗಾರ್ರು, ಸಯ್ಯದ್ ಅಮೀರ್ ಹಸನ್‌ರವರು

ಅ|| ಸರ್ಜನ್ ಮಿಸ್ ಎ ಜೆ [illegible]ಯವರನ್ನು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಿಂದ ಮೈಸೂರು ಮಹಾರಾಣಿಯವರ ಆಸ್ಪತ್ರೆಗೆ ವರ್ಗಮಾಡಿದೆ

ಕಾವೇರಿ ತಲಾವ್ ಡಿವಿಜನ್ ಮಿ|| ವೈ ಅರಸ್ ನಾರಾಯಣರಾಯರನ್ನು ಅವರು ಆ ಕೆಲಸಕ್ಕೆ ದಾಖಲಾದ ಲಾಗಾಯಿತು 1ನೇ ಕ್ಲಾಸ್ ಎಗ್ಜಿಕ್ಯುಟಿವ್ ಇಂಜನಿಯರಾಗಿ ನೇಮಕಮಾಡಿದೆ

ಹಾಸನ್ ತಾಲ್ಲೂಕ್ ಅಮಲ್ದಾರ್ ಮಿ|| ಪಿ ಎಸ್ ರಾಜಗೋಪಾಲಾಚಾರ್ರು ಉಪಯೋಗಿಸಿಕೊಳ್ಳುತ್ತಿರುವ ರಜವನ್ನು ರದ್ದುಮಾಡಿದೆ

ಇಂಡಿಯಾ ದೇಶದ ವೃತ್ತಾಂತಗಳು

ರಾಜಾಸರ್ ಸುರೇಂದ್ರಮೋಹನ ಠಾಗೋರ್ ಸಿ ಐ ಇ ಯವರಿಗೆ ಆಸ್ಟ್ರಿಯಾ ದೇಶದ ಚಕ್ರವರ್ತಿಯವರು ತಮ್ಮ ಫೋಟೋವನ್ನು ತಮ್ಮ ರುಜು ಸಮೇತ ಬಹುಮಾನವಾಗಿ ಕಳುಹಿಸಿಕೊಟ್ಟಿದಾರೆ

ಪುದುಚೇರಿಗೂ ಕಡಲೂರಿಗೂ ದಿನವೂ ಮೂರು ಸಲ ಮೋಟಾರ್‌ಗಾಡಿಗಳು ಹೋಗಿ ಬರುವಂತೆ ಒಂದು ಟಪ್ಪಾಲಿಗೆ ಸಹ [illegible] ಏರ್ಪಾಟು ಮಾಡಿದಾರೆ. ಒಂದೊಂದು ಗಾಡಿಯಲ್ಲಿ 30 ಮಂದಿ ಪ್ರಯಾಣ ಮಾಡಬಹುದು

ನೆಲ್ಲೂರು ಜಿಲ್ಲಾ ಕಲೆಕ್ಟರಾದ ದಿವಾನ್ ಬಹದೂರ್ ಆರ್ ರಾಮಚಂದ್ರರಾಯರು ರಜಾ ಪಡೆದುಕೊಂಡು ಉತ್ತರ ಹಿಂದುಸ್ಥಾನದಲ್ಲಿ ಸಂಚಾರಮಾಡಿಕೊಂಡು ಬರಲು ಪ್ರಯಾಣಮಾಡಿರುತ್ತಾರೆ ಇವರ ಕುಮಾರ್ತೆಯನ್ನು ಯಳಂದೂರು ಜಹಗೀರುದಾರರ ಸಹೋದರರಿಗೆ ಕೊಟ್ಟು ಮದುವೆಯಾಗಿದೆ

ಎಕ್ಕರಲ್ಲಿ ದರೋಡೆಗಾರರೆಂದು ಪ್ರಸಿದ್ಧರಾಗಿ ಬಹುಕಾಲದಿಂದ ಪಂಜಾಬ್ ಆಧಿಪತ್ಯಕ್ಕೆ ಸೇರಿದ [illegible] ಡಿಸ್ಟ್ರಿಕ್ಟಿನಲ್ಲಿ ಪ್ರಜೆಗಳಿಗೆ ಗಾಬರಿಯನ್ನುಂಟುಮಾಡುತ್ತಿದ್ದ ನಾರಾಯಣಸಿಂಗ್ [illegible] ಮೂರು ಮಂದಿ ಕಳ್ಳರನ್ನು ಪೋಲೀಸಿನವರು [illegible] ಬಹಳ ಸಾಹಸಪಟ್ಟು ಹಿಡಿದರು ಅವರುಗಳನ್ನು ಹಿಡಿದು [illegible] ಕೊಳಗಳನ್ನು ಹಾಕುವುದಕ್ಕೆ ಸಹಸ್ರ ಜನರು [illegible] ಎಂದು ತಿಳಿದು ಬರುತ್ತದೆ

ಕಳೆದ ವಾರ ಪಂಜಾಬ್ ಲೆಫ್ಟಿನೆಂಟ್ ಗವರ್ನರವರು ಮೋಟಾರ್ ಗಾಡಿಯಲ್ಲಿ ಸಿಂಲಾ ಪಟ್ಟಣದಿಂದ ಕಾಲ್ಕಾ ಮಾರ್ಗವಾಗಿ ಬರುತ್ತಿದ್ದಾಗ್ಗೆ ಪಾಟಿಯಾಲಾ ಸಂಸ್ಥಾನದ ಮಹಾ ಚೀಫ್ ಇಂಜನಿಯರು ಕುಳಿತು ಹೋಗುತ್ತಿದ್ದ ಮೋಟಾರ್ ಗಾಡಿಯು ಅದಕ್ಕೆ ಬಡಿದು ಎರಡು ಗಾಡಿಗಳೂ ಮುರಿದುಹೋದುವು. ಅಪಾಯ ಯಾರಿಗೂ ಆಗಲಿಲ್ಲ

ಕರಾಚಿ ಪಟ್ಟಣದಲ್ಲಿ ಕಳೆದ ವಾರ ಮೂರು ದಿನ ಬಹಳ ಬಿರುಸಾಗಿ ಮಳೆ ಸುರಿಯಿತು ಜಹಜಿನ ಮೇಲೆ ಸೀಮೆಗೆ ಸಾಗಿಸುವುದಕ್ಕೋಸ್ಕರ ಸಮುದ್ರತೀರದಲ್ಲಿ ರಾಶಿ ರಾಶಿಯಾಗಿ ಸುರಿದುಕೊಂಡಿದ್ದ ಧಾನ್ಯಗಳೆಲ್ಲಾ ಕೊಚ್ಚಿ ಹೋದವು ವರ್ತಕರಿಗೆ ಲಕ್ಷಾಂತರ ರೂಪಾಯಿ ನಷ್ಟವಾಗಿರಬೇಕೆಂದು ಹೇಳುವರು ಕಳೆದ ವರುಷವೂ ಮಳೆಯದೆಸೆಯಿಂದ ನಾಲ್ಕು ಲಕ್ಷ ರೂಪಾಯಿನ ಧಾನ್ಯ ಹಾಳಾದಂತೆ ತಿಳಿಯುವುದು.

ಕುಂಭಕೋಣದ "ಯಥಾರ್ಥವಚನಿ" ಎಂಬ ತಮಿಳು ವರ್ತಮಾನ ಪತ್ರಿಕೆಯಲ್ಲಿ ಮಯೂರನಾದಂಪಿಳ್ಳೆ ಎಂಬಾತನ ವಿಷಯದಲ್ಲಿ ಅವಮಾನಕರವಾದ ವಾಕ್ಯಯನ್ನು ಪ್ರಕಟಿಸಿದರೆಂದು ಮೊಕದ್ದಮೆ ಹುಟ್ಟಿ ಆ ಪತ್ರಿಕೆಯ ಎಡಿಟರಾದ ಗೋವಿಂದಸ್ವಾಮಿಪಿಳ್ಳೆಯವರಿಗೆ ಮ್ಯಾಜಿಸ್ಟ್ರೇಟರು ಮೂರು ತಿಂಗಳ ಸಾದಾ ಸಜವನ್ನು ವಿಧಿಸಿದರು ಅದರ ಮೇಲೆ ಎಡಿಟರು ತಂಜಾವೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿ ಅಪೀಲ್ ಮಾಡಿಕೊಂಡಿದಾರೆ

ಕಲ್ಕತ್ತಾ ಪಟ್ಟಣದ ಒಂದು ದೊಡ್ಡ ಚೌಕದಲ್ಲಿ ಇರುವಂಥಾ ವೈಟವೇ ಲೇಡ್‌ಲಾ ಎಂಬ ಇಂಗ್ಲಿಷ್ ಕಂಪನಿಯ ಷಾಪಿನಲ್ಲಿ ಸುಮಾರು 400 ರೂಪಾಯಿನ ಗಡಿಯಾರಗಳು ಕಳೆದ ವಾರ ಕಳುವಾಗಿರುವುದು ಪೋಲೀಸಿನವರಿಗೇ ವಿಸ್ಮಯವನ್ನುಂಟುಮಾಡಿದೆ ಹೊರಬಾಗಿಲಿಗೆ ಹಾಕಿದ್ದ ಬೀಗಗಳು ಹಾಕಿದಹಾಗೇ ಭದ್ರವಾಗಿದ್ದವು, ಜ್ಯೋತಿಗಳಂಥಾ ದೀಪಗಳು ಅಂಗಡಿಯ ಮುಂದೆ ಉರಿಯುತ್ತಿದ್ದವು, ಪೋಲೀಸ್ ಗಸ್ತು ಬಹಳ ಚೆನ್ನಾಗಿತ್ತು ಪತ್ತೆ ತರದೂದು ನಡೆಯುತ್ತಿದೆ.

ತಲಚೇರಿ ತಾಲ್ಲೂಕ್ ಬೋರ್ಡಿಗೆ ಸೇರಿದ ಸಮಸ್ತ ಗ್ರಾಮಗಳಲ್ಲೂ ಜಮೀನ್ ಕಂದಾಯದ ಮೇಲೆ ರೂಪಾಯಿಗೆ ಒಂದೂವರೆ ಆಣೆ ದರದಂತೆ ಒಂದು ವರಿಯನ್ನು ವಸೂಲ್ಮಾಡಿ, ಉತ್ಪತ್ತಿಯಾಗುವ ಸುಮಾರು 16,000 ರೂಪಾಯನ್ನು ಆ ತಾಲ್ಲೂಕ್ ಬೋರ್ಡಿನ ಗ್ರಾಮಗಳೊಳಗೆ ಹೊಸ ರಸ್ತೆಗಳು, ಆಸ್ಪತ್ರೆಗಳು, ಮುಂತಾದವುಗಳನ್ನು ಮಾಡಿಸ ಕಾಪಾಡಿಕೊಂಡು ಬರಬೇಕೆಂದು ತಾಲ್ಲೂಕ್ ಬೋರ್ಡಿನವರು ಶಿಫಾರಸು ಮಾಡಿದ್ದದ್ದನ್ನು ಮದರಾಸ್ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ.

ಬೊಂಬಾಯಿ ಆಧಿಪತ್ಯದೊಳಗೆ ಸಮಸ್ತ ಸರ್ಕಾರಿ ಮತ್ತು ಮ್ಯುನಿಸಿಪಲ್ ಸ್ಕೂಲುಗಳಿಗೂ ಮಕ್ಕಳು ಓದುವುದಕ್ಕೆ ಸೇರಿಕೊಳ್ಳುವುದಕ್ಕೆ ಮುಂಚಿತವಾಗಿಯೂ, ಸೇರಿದ ಕೆಲವು ದಿನಗಳಾದ ಮೇಲೂ ಪ್ರತಿ ಒಬ್ಬ ವಿದ್ಯಾರ್ಥಿಯ ಆರೋಗ್ಯಸ್ಥಿತಿಯನ್ನು ಸರ್ಕಾರಿ ವೈದ್ಯರು ನೋಡಿ ರಿಪೋರ್ಟು ಬರೆಯುವಂತೆ ಏರ್ಪಾಡಾಗಬೇಕೆಂದು ಲಾಲೂಭಾಯಿ ಸಮಾಲ್‌ದಾಸ್‌ರವರು ಬೊಂಬಾಯಿ ಗವರ್ನರವರ ಮಂತ್ರಾಲೋಚನಾ ಸಭೆಯಲ್ಲಿ ಸೂಚಿಸಿದ್ದನ್ನು ಗವರ್ನ್‌ಮೆಂಟಿನವರು ಒಪ್ಪಿಕೊಂಡಿರುತ್ತಾರೆ

ಪಾಲಿಟಾನಾ ಸಂಸ್ಥಾನದ ರಾಜಧಾನಿಯಲ್ಲಿ ಮಳೆ ಸಂಭವಿಸಿ ಪ್ರವಾಹಗಳ ದೆಸೆಯಿಂದ ಅನೇಕ ಭಾಗಗಳು ಕೊಚ್ಚಿಹೋಗಿ ಪ್ರಜೆಗಳು ಲಯವಾದದ್ದು. ಕಷ್ಟನಷ್ಟಗಳಿಗೆ ಗುರಿಯಾದ ಪ್ರಜೆಗಳಿಗೆ ಸಹಾಯ ಮಾಡುವುದಕ್ಕೋಸ್ಕರ ಒಂದು ರಿಲೀಫ್ ಫಂಡು ಏರ್ಪಾಡಾಯಿತು ಈ ಫಂಡಿಗೆ 31,545 ರೂಪಾಯಿ ಚಂದಾ ವಸೂಲಾಗಿರುತ್ತದೆ ಈ ಜಲಪ್ರಳಯದಲ್ಲಿ ಅನೇಕರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಕಮಿಟಿಯವರು ತೀರ್ಮಾನಮಾಡಿರುವರು ಸುಮಾರು 2,000 ಮನೆಗಳು ಕೊಚ್ಚಿಹೋಗಿರುವಂತೆ ತಿಳಿಯುವುದರಿಂದ ಈ ಕಾರ್ಯಕ್ಕೆ ನಾಲ್ಕು ಲಕ್ಷ ರೂಪಾಯಿದರೂ ಬೇಕಾಗುವುದೆಂದು ಅಂದಾಜಾಗಿದೆ

ಈಜಿಪ್ಟ್ ರಾಜ್ಯದಿಂದ ಮಕ್ಕಾ ಮದೀನಾ ಎಂಬ ಮಹಮ್ಮದೀಯ ಯಾತ್ರಾಸ್ಥಾನಗಳಿಗೆ ಹೋಗಬೇಕೆಂಬ ಮುಸಲ್ಮಾನರ ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕಾಗಿ ಈಜಿಪ್ಟ್ ಸರ್ಕಾರದವರು ಪ್ರತಿ ಒಂದು ಜಹಜಿನಲ್ಲೂ ಒಬ್ಬೊಬ್ಬ ಸರ್ಕಾರಿ ಅಧಿಕಾರಿಯನ್ನು ಯಾತ್ರಿಕರ ಕೂಡ ಕಳುಹಿಸಿಕೊಡುವಂತೆ ಏರ್ಪಾಡು ಮಾಡಿದಾರೆ ಈ ಅಧಿಕಾರಿಯನ್ನು ಜಹಜಿನ ಮಾಲೀಕರು ಛಾರ್ಜಿಲ್ಲದೆ ಕರೆದುಕೊಂಡು ಹೋಗುವರು. ಈ ಅಧಿಕಾರಿಯು ಸೂಯಸ್, ಜೆಡ್ಡಾ, ಯಂಬೊ, ಟಾರ್ ಎಂಬೀ ಸ್ಥಳಗಳಲ್ಲಿ ಜಹಜು ತಂಗುವಾಗ್ಗೆ ಯಾತ್ರಿಕರಿಗೆ ಬೇಕಾದ ಸೌಕರ್ಯಗಳೆಲ್ಲಾ ದೊರಕುವಂತೆ ಮಾಡಿಕೊಡುವರು ಅಲ್ಲಲ್ಲಿ ಬರುವ ಆಕ್ಷೇಪಣೆಗಳನ್ನೂ ದೋಷಗಳನ್ನೂ ಆ ಅಧಿಕಾರಿಯು ವಿಚಾರಿಸಿ ಕ್ರಮಪಡಿಸುವಂತೆ ಸರ್ಕಾರದವರು ಏರ್ಪಾಡು ಮಾಡಿರುವುದು ಆ ಪ್ರಾಂತ್ಯದ ಮಹಮ್ಮದೀಯರಿಗೆ ಸಂತೋಷವನ್ನುಂಟುಮಾಡಿದೆ

ಮೊರಾದಾಬಾದ್ ಡಿಸ್ಟ್ರಿಕ್ಟಿಗೆ ಸೇರಿದ ಬಾರೇಟೂ ಎಂಬ ಗ್ರಾಮದಲ್ಲಿ ದೀನ್ ಮಹಮ್ಮದ್ ಬಕ್ಷ್ ಎಂಬ ಮಹಮ್ಮದೀಯನು ಮಕ್ಕೆಗೆ ಯಾತ್ರೆ ಹೋಗಬೇಕೆಂದು ತನ್ನ ಜಮೀನನ್ನು, ಧಾನ್ಯ, ಗೋಕಾಯಿ ಮುಂತಾದದ್ದನ್ನೆಲ್ಲಾ ಮಾರಿಹಾಕಿ ಹಣಕೂಡಿಸಿಕೊಂಡು ಹೆಂಡತಿ, ಮಗುವಿನ ಸಮೇತ ಊರು ಬಿಟ್ಟು ಹೊರಟನು ಪೀರ್‌ಸಾಹೆಬ್ ಹಸನ್ ಅಲಿ ಎಂಬುವನು ಅವನ ಬಳಿಗೆ ಹೋಗಿ ಅವನಿಗೆ ನಂಬಿಗೆ ಹುಟ್ಟಿಸಿ ಬೊಂಬಾಯಿಗೆ ಕರೆದುಕೊಂಡು ಹೋದನು ಅವನ ಸಹಪಾಠಿಯಾದ ರಹಮತ್‌ಉಲ್ಲಾ ಎಂಬುವನು ಬೊಂಬಾಯಿಯಿಂದ ಪೂನಾಕ್ಕೆ ಕರೆದು ತಂದನು ಇಲ್ಲಿಂದ ವಾಪಸು ಬೊಂಬಾಯಿಗೆ ಹೋಗುವಷ್ಟರೊಳಗೆ ಪೀರ್‌ಸಾಹೆಬ್ ಎಂಬುವನು ದೀನ್ ಮಹಮ್ಮದನ ಹೆಂಡತಿ ಬಳಿ ಇದ್ದ 2,300 ಚಿಲ್ಲರೆ ರೂಪಾಯನ್ನು ಅಪಹರಿಸಿಬಿಟ್ಟನು ಅವನ ಹೆಂಡತಿ ಆಸ್ಪತ್ರೆಯಲ್ಲಿ ಸತ್ತುಹೋದಳು ಈ ರೀತಿ ಮಕ್ಕೆಗೆ ಹೋಗುವುದಕ್ಕೆ ಮನೆಮಾರನ್ನೆಲ್ಲಾ ಮಾರಿದ ದೀನ್ ಮಹಮ್ಮದನು ಹಣವನ್ನೂ ಹೆಂಡತಿಯನ್ನೂ ಕಳೆದುಕೊಂಡು ಪೋಲೀಸಿಗೆ ತಿಳಿಸಿದಾಗ ಅವರು ಆ ಮೋಸಗಾರರಿಬ್ಬರನ್ನೂ ಹಿಡಿದು ದರ್ಯಾಫ್ತಿಗೆ ಗುರಿಮಾಡಿದಾರೆ

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಬುಡಾವನ್ ಡಿಸ್ಟ್ರಿಕ್ಟಿನ ಒಂದು ಹಳ್ಳಿಯೊಳಗೆ ಅಹೀರ್ ಜಾತಿಯ ಕೆಲವು ತುಂಟರನ್ನು ದಸ್ತಗಿರಿ ಮಾಡುವುದಕ್ಕಾಗಿ ಕೆಲವು ಪೋಲೀಸಿನವರು ಹೋದರು ಅಹೀರರ ಮುನಾವತ್‌ಬೀವಿ ಎಂಬ ಒಬ್ಬ ಹೆಂಗಸು ಹತ್ತಾರು ಜನ ಅಹೀರರನ್ನು ಜೊತೆ ಮಾಡಿಕೊಂಡು ಹೋಗಿ ಆ ಪೋಲೀಸಿನವರ ಮೇಲೆ [illegible] ಅವರು ದಸ್ತಗಿರಿ ಮಾಡಿದ್ದವರನ್ನು ಬಿಡಿಸಿಕೊಂಡರು ಈ ಕದನದಲ್ಲಿ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರಿಗೂ, ಒಬ್ಬ ಕಾನ್‌ಸ್ಟೆಬಲಿಗೂ, ಇನ್ನೊಬ್ಬನಿಗೂ ಘೋರಾ ಏಟು ಬಿದ್ದು ಸತ್ತುಹೋದರು ಸರ್ಕಾರದವರು ಆ ಹೆಂಗಸನ್ನೂ 11 ಮಂದಿ ಅಹೀರರನ್ನೂ ದಸ್ತಗಿರಿಮಾಡಿ ಮೊಕದ್ದಮೆ ತಂದರು ಬುಡಾವನ್ ಜಿಲ್ಲೆಯ ಸೆಷನ್ಸ್ ಜಡ್ಜರು ಆ ಹೆಂಗಸಿಗೂ, ಇನ್ನಿಬ್ಬರಿಗೂ ಮರಣದಂಡನೆಯನ್ನೂ, ಉಳಿದ ಒಂಭತ್ತು ಮಂದಿಗೂ ಜೀವಾಂತ್ಯದ ಬಂದೀಖಾನೆ ಶಿಕ್ಷೆಯನ್ನೂ ವಿಧಿಸಿದರು ಅದರ ಮೇಲೆ ಆ ಅಪರಾಧಿಗಳೆಲ್ಲಾ ಅಲ್ಲಹಾಬಾದ್ ಹೈಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡದ್ದಕ್ಕೆ ಜಡ್ಜಿಗಳು ಕೆಳಕೋರ್ಟಿನ ತೀರ್ಮಾನವನ್ನೇ ಕಳೆದ ಗುರುವಾರ ಖಾಯಂಮಾಡಿಬಿಟ್ಟರು

1913 ನೇ ದಸರಾ ಮೀಟಿಂಗು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರಾದ ಮ॥ ಅಂಬಳೆ ಅಣ್ಣಯ್ಯ ಪಂಡಿತರವರು ಮುಂದೆ ಹೇಳುವ ಸಂಸ್ಥಾನಾವಳಿ ಅನ್ವಯಿಸುವಂಥಾ ವಿಷಯಗಳನ್ನು ಈ ವರುಷದ ಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ತರುವುದಾಗಿ ಸರ್ಕಾರಕ್ಕೆ ಅರಿಕೆಮಾಡಿಕೊಂಡಿದ್ದಾರೆ. ಅವು ಯಾವವೆಂದರೆ—

(1) ಪ್ರೈಮರಿ ಸ್ಕೂಲ್ ಮಾಸ್ಟರುಗಳಿಗೆ ಮಾಹೆಯಾನಾ 15 ರೂಪಾಯಿ ಸಂಬಳಕ್ಕೆ ಕಡಮೆ ಇಲ್ಲದಂತೆಯೂ, ಹಗಲು ರಾತ್ರಿ ಕಷ್ಟಪಟ್ಟು ಕೆಲಸಮಾಡುವ ಪೋಲೀಸ್ ಜವಾನರಿಗೆ 10 ರೂಪಾಯಿ ಸಂಬಳಕ್ಕೆ ಕಡಮೆ ಇಲ್ಲದಂತೆಯೂ, ರೆವಿನ್ಯೂ ಇಲಾಖೆಯ ಜವಾನರಿಗೆ 8 ರೂಪಾಯಿಗೆ ಕಮ್ಮಿ ಇಲ್ಲದಂತೆಯೂ ಏರ್ಪಾಡುಮಾಡಿಕೊಟ್ಟರೆ ಪ್ರಜೆಗಳಿಗೆ ಇರತಕ್ಕ ತೊಂದರೆ ಕಡಮೆಯಾದೀತು. ಮತ್ತೂ ಆಯಾ ಜನಗಳು ತಮ್ಮ ತಮ್ಮ ನೌಕರಿಗಳನ್ನು ಶ್ರದ್ಧೆಯಿಂದ ಮಾಡುವುದಕ್ಕೆ ಅವಕಾಶವಾಗುತ್ತದೆ

(2) ಪ್ರತಿ ತಾಲ್ಲೂಕಿನಲ್ಲೂ ಇರತಕ್ಕ ಸಬ್ ರಿಜಿಸ್ಟ್ರಾರುಗಳನ್ನು ಶಿರಸ್ತೇದಾರರಂತೆ ಅಮಲ್ದಾರರ ತಾಬೆಯಲ್ಲಿಟ್ಟರೆ ಸಬ್ ರಿಜಿಸ್ಟ್ರಾರುಗಳು ಕಾಲಕ್ಕೆ ಸರಿಯಾಗಿ ಕಚೇರಿಗೆ ಹೋಗಿ ರಿಜಿಸ್ಟರು ಮಾಡುವುದಕ್ಕೆ ಅವಕಾಶವಾಗುವುದಲ್ಲದೆ ಇತರ ತೊಂದರೆಗಳು ಸಹ ಕಡಮೆಯಾಗುತ್ತೆ

(3) ಹೆಣ್ಣು ಮಕ್ಕಳ ಬಾಲ್ಯವಿವಾಹದ ವಿಷಯದಲ್ಲಿ ಸರ್ಕಾರದವರು ಮಾಡಿ ಜಾರಿಗೆ ತಂದಿರುವ ಕಾನೂನಿನಲ್ಲಿ ಎಂಟು ವರುಷ ಎಂಬುವದನ್ನು ಹತ್ತು ವರುಷ ಎಂಬದಾಗಿ ತಿದ್ದುಪಾಟು ಮಾಡಬೇಕು.

(4) ಹದಿನಾರು ವರುಷಕ್ಕೆ ಮುಂಚೆ ವಿವಾಹವಾದ ಗಂಡು ಹುಡುಗರನ್ನು ಸಂಸ್ಥಾನದ ಸ್ಕೂಲುಗಳಲ್ಲಿ ಮೆಟ್ರಿಕ್ಯುಲೇಷನ್ ಕ್ಲಾಸಿಗೆ ಸೇರಿಸಿಕೊಳ್ಳಕೂಡದೆಂದೂ ; ಇಪ್ಪತ್ತು ಅಥವಾ ಹದಿನೆಂಟು ವರುಷಗಳಿಗೆ ಮುಂಚೆ ವಿವಾಹವಾದ ಗಂಡು ಹುಡುಗರನ್ನು ಎಫ್ ಎ, ಬಿ ಎ ತರಗತಿಗಳಿಗೆ ಸೇರಿಸಿಕೊಳ್ಳಕೂಡದೆಂದೂ ಅಪ್ಪಣೆಮಾಡಿದರೆ ಪ್ರಜಾ ಆರೋಗ್ಯಕ್ಕೆ ಹಿತಕರವಾಗುತ್ತದೆ.

(5) ಮಿಲಿಟರಿ ಮತ್ತು ರೆವಿನ್ಯೂ ಆಫೀಸರುಗಳ ಸರ್ವೀಸಿಗೋಸ್ಕರ ಕೊತ್ವಾಲರು ಬಲಾತ್ಕಾರ ಮಾಡಿ ರೈತರ ಗಾಡಿಗಳನ್ನು ಹಿಡಿದು ಮೈಲಿಗೆ 1½ ಆಣೆಯಂತೆ ಬಾಡಿಗೆ ಕೊಡುತ್ತಾರೆ. ಇದು ಸಾಕಾಗುವದಿಲ್ಲ ದನಗಳ ಮೇವಿಯೂ ಹುಲ್ಲು ಹುರಳಿ ವಗೈರೆಗಳ ಕ್ರಯವೂ ಬಹಳ ಜಾಸ್ತಿಯಾಗಿರುವುದರಿಂದ ಮೈಲಿ 1 ಕ್ಕೆ 2 ಆಣೆ ಮೇರೆ ಬಾಡಿಗೆ ಕೊಡುವಂತೆ ಅಪ್ಪಣೆ ಆಗಬೇಕು.

ಮಲೆನಾಡು ಪ್ರಜಾಕ್ಷೋಭೆಯು.

ಮೈಸೂರು ಗವರ್ನ್‌ಮೆಂಟಿನವರ ಸಲಹೆಗಳು

ಕಳೆದ ಜೂಲೈ ತಾ. 15 ರಲ್ಲಿ ಚಿಕ್ಕಮಗಳೂರು ನರಸಿಂಹರಾಜಒಡೆಯರ್ ಟೌನ್ ಹಾಲ್ ಬಂಗಲೆಯಲ್ಲಿ ಕಡೂರು ಡೆಪ್ಯುಟಿ ಕಮಿಷನರಾದ ಮಿ॥ ಕೆ ಕೃಷ್ಣಅಯ್ಯರವರು ಒಂದು ಸಭೆಯನ್ನು ನಡಿಸಿದರು ಶಿವಮೊಗ್ಗೆ, ಕಡೂರು, ಹಾಸನ, ಎಂಬೀ ಮಲೆನಾಡು ಡಿಸ್ಟ್ರಿಕ್ಟುಗಳಲ್ಲಿ ಸಂಚಾರಮಾಡಿ ಪ್ರಜಾ ಲಯಕ್ಕೆ ಕಾರಣಗಳನ್ನು ಕಂಡುಹಿಡಿದು ಪರಿಹಾರಗಳನ್ನು ಕಲ್ಪಿಸುವ ಭಾಗದಲ್ಲಿ ಪ್ರಜೆಗಳ ಅಭಿಮತವೇನೆಂಬುವುದನ್ನು ತಿಳಿಯುವುದಕ್ಕೋಸ್ಕರ ಸರ್ಕಾರದಿಂದ ನೇಮಕವಾಗಿದ್ದ ಸ್ಪೆಷಲ್ ಆಫೀಸರ್ ಮಿ॥ ಕೆ. ಮತ್ತಾರ್ಕರವರು ಆ ಸಭೆಯಲ್ಲಿ ಹಾಜರಾಗಿದ್ದರು. ಪ್ರಜೆಗಳ ಮುಖಂಡರು ವಿಶೇಷವಾಗಿ ಹೋಗಿರಲಿಲ್ಲ. ಚಿಕ್ಕಮಗಳೂರಿನಲ್ಲಿರುವ ಕೆಲವು ಪುರಜನರೂ, 3-4 ಮಂದಿ ದೇಶೀಯ ಪ್ಲಾಂಟರುಗಳೂ, ಸರ್ಕಾರಿ ನೌಕರರೂ ಸಭೆಗೆ ಹೋಗಿದ್ದರು. ಆ ಪ್ಲಾಂಟರುಗಳು ವಿನಹಾ ಮಲೆನಾಡಿನ ಪ್ರಜಾ ಮುಖಂಡರ್‍ಯಾರೂ ಹಾಜರಾಗಿರಲಿಲ್ಲ.

ಸಭೆಯು ಪ್ರಾರಂಭವಾದ ಮೇಲೆ ಅಲ್ಲಿ ಸೇರಿದ್ದವರು ಈ ವಿಚಾರವನ್ನು ಕುರಿತು ಸ್ವಲ್ಪ ಹೊತ್ತು ಚರ್ಚೆಮಾಡಿದರು. ಈಚೆಗೆ ಪ್ರಜೆಗಳು ಲಯವಾಗುವುದನ್ನು ತಡೆಯುವುದಕ್ಕೆ ಸರ್ಕಾರದವರು ಮಾಡಬೇಕೆಂದು ಉದ್ದೇಶಪಟ್ಟಿರುವ ಏರ್ಪಾಡುಗಳನ್ನು ಮಿ॥ ಮತ್ತಾರ್ಕರವರು ಸಭಿಕರಿಗೆ ತಿಳಿಸಿ, ಆ ಏರ್ಪಾಡುಗಳ ವಿಷಯದಲ್ಲಿ ಪ್ರಜೆಗಳ ಅಭಿಮತವೇನೆಂಬದನ್ನು ತಿಳಿಸಬೇಕೆಂದು ಕೇಳಿರುತ್ತಾರೆ ಸರ್ಕಾರದವರು ಮಾಡಬೇಕೆಂದಿರುವ ಏರ್ಪಾಡುಗಳ್ಯಾವವೆಂದರೆ—(1) ಸಾಮಾನ್ಯವಾಗಿ ಗ್ರಾಮಾಂತರಗಳ ಆರೋಗ್ಯವಿಚಾರವನ್ನು (ಸ್ಯಾನಿಟೇಷನ್) ಕ್ರಮಪಡಿಸುವುದು, ಜನರು ಉಪಯೋಗಿಸುವ ನೀರನ್ನೂ ಅದರ ಆಸರೆಗಳನ್ನೂ ಸರಿಯಾದ ಸ್ಥಿತಿಯಲ್ಲಿಟ್ಟು ಕಾಪಾಡುವುದು. (2) ಪ್ರತಿ ತಾಲ್ಲೂಕಿಗೂ ಕೆಲವು ಕೂಲಿ ಜನರನ್ನು ಖಾಯಮಾಗಿ ನೇಮಕಮಾಡಿ, ಗ್ರಾಮಗಳ ಸುತ್ತ್ತಾ ಬೆಳೆದು ಹಬ್ಬಿಕೊಂಡು ಬಳುತ್ತಿರುವ ಜಂಗಲ್‌ಗಿಡ ಬಳ್ಳಿ ಮುಂತಾದವುಗಳನ್ನು ಕಡಿಸುವುದು, ಹಳ್ಳಕೊಳ್ಳಗಳನ್ನೂ ಗುಂಡಿಗಳನ್ನೂ ನೀರು ನಿಂತು ಕೊಳೆಯದಂತೆ ಮುಚ್ಚಿಸುವುದು ; ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರುಗಳು ಈ ಭಾಗಗಳನ್ನು ಮೇಲ್ವಿಚಾರಣೆ ಇಟ್ಟು ಮಾಡಿಸುವುದು (3) ಆಸ್ಪತ್ರೆಗಳ ಸಂಖ್ಯೆಯನ್ನು ಹೆಚ್ಚು ಮಾಡುವುದು ; ಗ್ರಾಮಾಂತರಗಳ ಮೇಲೂ ಸಂತೆ ಮೊದಲಾದ ಸ್ಥಳಗಳಿಗೂ ಸಂಚಾರಮಾಡಿಕೊಂಡು ರೋಗಿಗಳಿಗೆ ಚಿಕಿತ್ಸೆ ಮಾಡುವಂಥಾ ಸರ್ಕಾರಿ ಡಾಕ್ಟರುಗಳನ್ನು ಹೆಚ್ಚಾಗಿ ನೇಮಕಮಾಡುವುದು (4) ಹೆರಿಗೆ ಮಾಡುವುದರಲ್ಲಿ ಇನ್ನೂ ಚೆನ್ನಾಗಿ ಪರಿಶ್ರಮವುಳ್ಳಂಥಾ ಸೂಲಗಿತ್ತಿಯರನ್ನು ಹೇರಳವಾಗಿ ನೇಮಕಮಾಡಿದುವುದು (5) ದೇವೀ ತಿದುಬು ಹಾಕಿಸಿಕೊಳ್ಳುವ ಭಾಗದಲ್ಲಿ ಪ್ರಜೆಗಳಿಗೆ ತಿಳುವಳಿಕೆ ಕೊಟ್ಟು, ತಿದುಬು ಹಾಕುವವರ ಸಿಬ್ಬಂದಿಯನ್ನು ಚಟುವಟಿಕೆಯಾಗಿ ಕೆಲಸ ಮಾಡುವಂತೆ ಕ್ರಮಪಡಿಸಿ, ತಿದುಬು ಹಾಕಿಸುವುದು (6) ಪರಸ್ಥಳಗಳಿಂದ ಹೊಸ ಸಂಸಾರಗಳು ಬಂದು ಗ್ರಾಮಾಂತರಗಳಲ್ಲಿ ನಿಲ್ಲುವಂತೆ ಪ್ರೋತ್ಸಾಹಗಳನ್ನು ಕಲ್ಪಿಸಿಕೊಡುವುದು.

ಈ ರೀತಿಯಾದ ಏರ್ಪಾಡುಗಳನ್ನು ಮಾಡುವುದು ಸಾರ್ಥಕವಾದೀತೇ ಎಂದು ಸರ್ಕಾರದವರು ಸೂಚಿಸಿರುತ್ತಾರೆ. ಮಲೆನಾಡಿನ ಸ್ಥಿತಿಗತಿಯನ್ನು ಚೆನ್ನಾಗಿ ಬಲ್ಲಂಥಾ ಮಲೆನಾಡು ಡಿಸ್ಟ್ರಿಕ್ಟುಗಳ ಪ್ರಜಾ ಮುಖಂಡರು ಈ ವಿಚಾರಗಳಲ್ಲಿ ತಮ್ಮ ಅಭಿಮತವನ್ನು ತಿಳಿಸಬಹುದಾಗಿದೆ.

ಬಾತ್ಮಿದಾರರಿಗೆ ನೋಟೀಸ್.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು. ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗ ಕೊಡಲಾರೆವು ಅವಕಾಶ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ; ಇಂಥವುಗಳಿಗೆ ನಾವು ಜಾಗ ಕೊಡಲಾರೆವು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ರಾಮಚಂದ್ರಯ್ಯ—ನಿಮ್ಮ ಸಂಪೂರ್ಣ ವಿಳಾಸವನ್ನು ತಿಳಿಸಿದಲ್ಲಿ ನಿಮ್ಮ ಬಾತ್ಮಿಯನ್ನು ಆ ಕಂಪನಿಯ ಮ್ಯಾನೇಜರಿಗೆ ಕಳುಹಿಸಿ ಅವರೇ ನಿಮ್ಮ ಆಕ್ಷೇಪಣೆಗಳಿಗೆ ಸಮಾಧಾನವನ್ನು ತಿಳಿಸುವಂತೆ ಮಾಡಬಹುದು

ನ್ಯಾಯವಾದಿ, ಚಿತ್ರದುರ್ಗ—ನೀವು ವಿಷಯಗಳನ್ನು ಬಹಳವಾಗಿ ಲಂಬಿಸಿ ಬರೆಯುತ್ತೀರಿ, ಸಂಕ್ಷೇಪಮಾಡಿ ಬರೆದರೆ ಪ್ರಕಟಿಸಬಹುದು.

ಪ್ರತ್ಯಕ್ಷದರ್ಶಿ, ತಿರುಮಕೂಡ್ಲು, ವಿದ್ಯಾರ್ಥಿ, ತಿಪಟೂರು—ಈ ಬಾತ್ಮಿಗಳನ್ನು ಪ್ರಕಟಿಸಲಾರೆವು

ಹುಣಸೂರು ತಾಲ್ಲೂಕು ಬೆಟ್ಟದಪುರದಲ್ಲಿರುವ ಪುರಾತನಕಾಲದ ಭಾರೀ ದೇವಸ್ಥಾನಗಳು ಶಿಥಿಲವಾಗುತ್ತಿವೆ ಎಂದೂ, ಸರ್ಕಾರಿ ಅಧಿಕಾರಿಗಳು ಸಂಚಾರ ಹೋದರೂ ಇದುವರೆಗೆ ಅವುಗಳ ವಿಷಯದಲ್ಲಿ ಸ್ವಲ್ಪವೂ ಗಮನಕೊಡದೆ ಇರುತ್ತಾರೆಂದೂ, ದೇವಸ್ಥಾನಗಳ ಬಾಗಿಲು ತೆರೆದದ್ದೂ ಪೂಜಾದಿಗಳು ನಡೆದದ್ದೂ ಬಹುಕಾಲವಾಯಿತಾದರೂ ನೌಕರಮಾನೇಜುಗಳು ಇದಾರೆಯೋ ಇಲ್ಲವೋ ತಿಳಿಯಲಿಲ್ಲವೆಂದೂ, ಇಂಥಾ ಅವ್ಯವಸ್ಥೆಯನ್ನು ಕಾಣಿಸಿ "ಮೇಲ್ಪಟ್ಟ ಆಫೀಸರುಗಳಿಗೆ ಅನೇಕ ವೇಳೆ ಅರ್ಜಿ ಗುಜರಾಯಿಸಿಕೊಂಡಿದ್ದರೂ ಒಂದಕ್ಕೂ ಜವಾಬು ಇಲ್ಲ" ವೆಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ ಸ್ಥಳದ ಮುಖಂಡರು ಏಕೀಭವಿಸಿ ಇಂಥಾ ಅವ್ಯವಸ್ಥೆಗಳನ್ನು ಕುರಿತು ಮುಜರಾಯಿ ಸೂಪರಿಂಟೆಂಡೆಂಟರಿಗೂ, ದಿವಾನರವರಿಗೂ ಬರೆದುಕೊಂಡಲ್ಲಿ ಅವರು ತನಿಖೆಮಾಡಿ ಕ್ರಮಪಡಿಸುತ್ತಾರೆಂದು ಸೂಚಿಸುತ್ತೇವೆ.—ಎಡಿ.]

ಕರೆಸ್ಪಾಂಡೆನ್ಸ್.

ರೆವಿನ್ಯೂ ಕೋರ್ಟಿನ ತಾಮಸ ಕಾರ್ಯ.

ಅಯ್ಯಾ,

ಬಾಗೇಪಲ್ಲಿ ತಾಲ್ಲೂಕು ಪಾತಪಾಳ್ಯದ ಹೋಬಳಿ ಪಾತಕೋಟೆ ಗ್ರಾಮದಲ್ಲಿರುವ ಶ್ಯಾನುಭೋಗ ಆದಿಸುಬ್ಬಯ್ಯನವರಿಗೂ ಟಿಂಕಾಯಮಾಕುಲಪಲ್ಲಿ ರಾಮಣ್ಣನವರಿಗೂ ಶ್ಯಾನುಭೋಗದ ಭಾಗ ವಿಚಾರದಲ್ಲಿ ವ್ಯಾಜ್ಯ ಸುಮಾರು 4-5 ವರುಷಗಳಿಂದ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಕೋರ್ಟಿನಲ್ಲಿ ಚರ್ಚೆಯಾಗುತ್ತಾ ಇದೆ. 5 ಮಂದಿ ಆಫೀಸರುಗಳು ಈ ವಿಷಯವನ್ನು ಚರ್ಚಿಸಿ ಇತ್ಯರ್ಥಮಾಡದೆ ವರ್ಗವಾಗಿಹೋದರು ತಿಂಗಳಿಗೆ ಒಂದು ಅಥವಾ ಎರಡು ಹಿಯರಿಂಗುಗಳಿಗೆ 36 ಮೈಲುಗಳ ಫಾಸಲೆಯಲ್ಲಿರುವ ಸಬ್ ಡಿವಿಜನ್ ಕೋರ್ಟಿಗೆ ವಾದಿ ಪ್ರತಿವಾದಿಗಳು ಹೋಗಿ ಬರುವದಕ್ಕೆ ಎರಡು ಕಕ್ಷಿಗಳಿಗೆ ಎಷ್ಟು ಖರ್ಚಾಗಿರಬಹುದೋ ನೋಡಿರಿ. ವಾದಿ ಪ್ರತಿವಾದಿಗಳ ಸಾಕ್ಷಿಗಳನ್ನು ಮತ್ತು 3-4 ದಿನಕ್ಕೆ ಬೇಕಾದ ಆಹಾರ ಪದಾರ್ಥಗಳನ್ನೂ ಮೂರು ಗಾಡಿಗಳ ಮೇಲೆ ತುಂಬಿಸಿಕೊಂಡು ರೋದಾಗ್ಯೂ ದಯಾಳು ಪ್ರಭುಗಳಾದ ನ್ಯಾಯಾಧಿಪತಿಗಳಿಗೆ ದಯವಿಲ್ಲದೆಹೋಯಿತು ಇಷ್ಟು ಬರೀ ಧನನಷ್ಟ ದೇಹಕಷ್ಟಗಳನ್ನು ಹೊಂದಿದವರಿಗೆ ಈಗ ಬರುವ ಸಾಹೇಬರು ಶೀಘ್ರತೆಯಾಗಿ ಇತ್ಯರ್ಥಮಾಡುವರೆಂದು ನಿರೀಕ್ಷಿಸುವವರಾಗಿದ್ದಾರೆ

ದೇಶಾಭಿಮಾನಿ.

ಒಂದು ಸ್ಕೂಲಿನ ವಿಚಾರವು

ಅಯ್ಯಾ,

ನಾನು ಹಿಂದಿನ ವೃತ್ತಾಂತ ಪತ್ರಿಕೆಯಲ್ಲಿ ಸಿಟ್ರಿಹಳ್ಳಿ ಗ್ರಾಮದ ಸ್ಕೂಲ್ ವಿಚಾರವನ್ನು ಓದಿದೆನು. ನಾನು ಕಂಡಹಾಗೆ ಬಹಳ ವರುಷಗಳ ಹಿಂದೆ ಸದರಿ ಸ್ಕೂಲ್ ಹೀನಸ್ಥಿತಿಯಿಂದ ಬಿದ್ದುಹೋಯಿತು. ಈಗಲಾದರೂ ಆ ಸ್ಕೂಲಿಗೆ ತಕ್ಕಷ್ಟು ಬಾಲಕರು ಇಲ್ಲ. ಒಂದು ವೇಳೆ ಆ ಗ್ರಾಮದ ಕೆಲವು ಮುಖಂಡರ ಸೀಮಾತುಗಳಿಗೆ ಮೇಲಿನ ಅಧಿಕಾರಿಗಳು ಕಿವಿಗೊಟ್ಟು ಸ್ಕೂಲ್ ಸ್ಥಾಪಿಸುವ ಆಶೆಯನ್ನು ತೋರಿಸಿ ಕೊಂಚ ಹಣವನ್ನು ಟ್ರೆಜರಿಯಲ್ಲಿ ಡಿಪಾಜಟ್ಟು ಇಡುವ ಹಾಗೆ ಏರ್ಪಾಡು ಮಾಡಿದಾರೆಂದು ತಿಳಿಯುತ್ತೆ. ಅಲ್ಲಿ ಸ್ಕೂಲನ್ನು ಸ್ಥಾಪಿಸುವುದರಿಂದ ಹೆಚ್ಚಿನ ಪ್ರಯೋಜನವೇನೂ ಆಗಲಾರದು. ಯಾಕೆಂದರೆ ಕಲಿಯಲು ಅಪೇಕ್ಷಿಸುವ ಹುಡುಗರು ಬಹಳ ಸಮೀಪದಲ್ಲಿರುವ ಮಿಷನ್ ಸ್ಕೂಲಿಗೆ ಹೋಗಿ ಓದುವುದರಲ್ಲಿ ಯಾವ ತೊಂದರೆಯೂ ಇರುವುದಿಲ್ಲ ಈಗ ಓದುತ್ತಲೂ ಇದಾರೆ. ಸಿಟ್ರಿಹಳ್ಳಿ ಗ್ರಾಮಸ್ಥರಿಗೆ ಇಂಥಾ ಅನನುಕೂಲವಿದ್ದಾಗ್ಯೂ ಅದೇ ಗ್ರಾಮದಲ್ಲಿ ಸ್ಕೂಲ್ ಸ್ಥಾಪಿಸುವುದರ ಉದ್ದೇಶವೇನೋ ಗೊತ್ತಾಗಲಿಲ್ಲ. ಅಲ್ಲಿಗೆ ಬದಲಾಗಿ ಸ್ಕೂಲ್ ಇಲ್ಲದಂಥಾ ಅನೇಕ ಗ್ರಾಮಗಳ ಹುಡುಗರು ಬರಬಹುದಾದ ಚಿನ್ನಸಾಗರ ಎಂಬ ಗ್ರಾಮದಲ್ಲಿ ಸ್ಥಾಪಿಸುವುದರಿಂದ ವಿನಿಯೋಗಮಾಡುವ ಹಣ ಸಾರ್ಥಕ ಹೊಂದಿ ಸರ್ಕಾರಕ್ಕೂ ಹೆಚ್ಚಿನ ಕೀರ್ತಿ ಬರುವುದು

ಗ್ರಾಮವಾಸಿ.

ಶ್ರೀರಂಗಪಟ್ಟಣದ ಪೋಲೀಸು ವಿಚಾರ

ಅಯ್ಯಾ,

ಕಳೆದ ತಿಂಗಳು ಮ॥ ಪಂಡಿತ ಪುಟ್ಟಣ್ಣನವರ ಮನೆಯಲ್ಲಿಯು, ಮ॥ ಕಾಫಿಸ್ತು ಸುಬ್ರಾಯರವರ ಮನೆಯಲ್ಲಿಯು, ಮ॥ ಮರಗಣ್ಣನವರ ಲಿಂಗಯ್ಯನವರ ಮನೆಯಲ್ಲಿಯು, ದೇವಸ್ಥಾನದ ಪಾಧ್ಯಾರ ಮನೆಯಲ್ಲಿಯೂ ಆದ ಕಳವು ಕೇಸುಗಳು ಈ ವರೆಗೂ ಪತ್ತೆ ಆಗಲಿಲ್ಲ. ಈಗಿರುವ ಪೋಲೀಸಿನವರು ಅಧಿಕಾರಿಗಳ ಮನೆಗಳನ್ನು ಕಾಯುವದಕ್ಕೆ ಸಾಕಾಗುವದಿಲ್ಲ. ಆಸ್ಪತ್ರೆಯ ಬಳಿ ಒಬ್ಬ ಕಾನ್‌ಸ್ಟೇಬಲನ್ನು ಕಾವಲಿಗೆ ಇಟ್ಟಿರುತ್ತಾರೆ. ಇನ್ಸ್‌ಪೆಕ್ಟರವರ ಮನೆಯಲ್ಲಿ ಮೂವರು ಕಾನ್‌ಸ್ಟೇಬಲ್‌ಗಳು ಇರುತ್ತಾರೆಂದು ವದಂತಿ ಇರುತ್ತದೆ ನಾಲಾ ಓವರ್‌ಸಿಯರರಿಂದ ಮೆ॥ ಧರ್ಮರಾಯರ ಮಗುವಿನ ತೋಳಿನಲ್ಲಿ ಹಾಕಿದ್ದ ಸುಮಾರು 200 ರೂಪಾಯಿ ಬೆಲೆ ಬಾಳುವ ಬಂಗಾರದ ನಾಗಮುರಿಯನ್ನು ಮೊನ್ನೆಯ ದಿವಸ ಯಾರೋ ಅಪಹರಿಸಿರುತ್ತಾರೆ. ಪೋಲೀಸಿನವರು ಗೌರವಸ್ಥರಗೋಜಿಗೆ ಹೋಗದೆ ಕಳ್ಳತನದ ಪತ್ತೆ ಹರಮಾಡಿಸಲಿದ್ದರೆ ಪ್ರಜೆಗಳಿಗೆ ಕ್ಷೇಮವೂ ಇಲಾಖೆಗೆ ಗೌರವವೂ ಉಂಟಾದೀತು. ಪೋಲೀಸು ಇನ್ಸ್‌ಪೆಕ್ಟರ್ ಮ॥ ಕೃಷ್ಣನವರು ಈ ಊರಿಗೆ ಬಂದ ಹೊಸದರಲ್ಲಿ ಊರಿನ ಕಳ್ಳತನಗಳನ್ನು ನಿಲ್ಲಿಸುವರೆಂಬ ಭರವಸೆ ಇತ್ತು ಆದರೆ ಈಗಿನ ವಿದ್ಯಮಾನಗಳನ್ನು ನೋಡುವಲ್ಲಿ ಆ ಭರವಸೆಯು ನಿರಾಧಾರವಾದದ್ದೆಂದು ತೋರುತ್ತದೆ. ಹೆಚ್ಚು ವಿಚಾರವು ಮುಂದಿನ ಬೇಟಿನಲ್ಲಿ ತಿಳಿಸುತ್ತೇನೆ.

ಗೂಢಚಾರ

ಬಡ ನೌಕರರ ಗೋಳಾಟ.

ಅಯ್ಯಾ,

ಆಗಾಗ್ಗೆ "ರಿಟ್ರೆಂಚ್‌ಮೆಂಟ್ ಕಮಿಟಿ" ಎಂಬುದು ಹಲಿದೋರಿ ಅನೇಕ ಬಡ ನೌಕರರನ್ನು ಕೊನೆಗಾಣಿಸುತ್ತಿರುವುದನ್ನು ನೋಡಿದರೆ ಇದು ಭಯಂಕರವಾದ ಪ್ಲೇಗುರೋಗಕ್ಕಿಂತಲೂ ಅಧಿಕವಾಗಿಯೇ ಇದೆ ಎಂದು ಹೇಳಬೇಕಾಗಿದೆ ಈ ವರುಷದಲ್ಲಿಯೂ ಕೂಡ ಮೇಲ್ಕಂಡ ಕಮಿಟಿಯು ಬಹಳ ಬಡ ನೌಕರರನ್ನು ದೂರಮಾಡಬೇಕೆಂಬುದನ್ನೇ ಮುಖ್ಯವಾಗಿಟ್ಟುಕೊಂಡು, ಅವರ ಜೀವನೋಪಾಯಗಳಿಗೆ ದೊಡ್ಡ ಕಲ್ಲನ್ನು ಹಾಕುತ್ತಿರುವಂತೆ ತೋರುತ್ತಿರುವುದು. ಮುಖ್ಯವಾಗಿ ಬಡ ನೌಕರರಿಗೆ ಆಧಾರಭೂತವಾಗಿ ಕಾಪಾಡುತ್ತಿದ್ದ "ಶ್ರೀಚಾಮರಾಜೇಂದ್ರ ವಾಟರ್ ವರ್ಕ್ಸ್" ಎಂಬ ಇಲಾಖೆಯು ಇದುವರೆಗೂ ಇಂಥಾ ತೊಂದರೆಗೆ ಸಿಕ್ಕದೆ ಆಳಿದ ಮಹಾಸ್ವಾಮಿಯವರ ಯಶಸ್ಸನ್ನು ದಿಗಂತವಿಶ್ರಾಂತ ಪಡಿಸುತ್ತಲೂ, ಅವರ ತನೂಭವರಾದ ಈಗಿನ ಮಹಾಸ್ವಾಮಿಯವರ ಶ್ರೇಯಸ್ಸನ್ನು ಪ್ರಾರ್ಥನೆಯನ್ನು ಮಾಡುತ್ತಲೂ ಇದ್ದು, ಅದ್ಯಾಪಿ ಭದ್ರವಿಲ್ಲದೆ ತನ್ನ ಸ್ಥಿರತ್ವವನ್ನಪೇಕ್ಷಿಸುತ್ತಿದ್ದುದು ಅಕಸ್ಮಾತ್ ರಿಟ್ರೆಂಚ್‌ಮೆಂಟ್ ಕಮಿಟಿಗೆ ತುತ್ತಾಗುವಂತೆ ತೋರಿಬರುತ್ತಿದೆ ಅನೇಕ ಬಡ ನೌಕರರು ಹತ್ತೆಂಟು ವರುಷಗಳು ಕೆಲಸಮಾಡಿ, ತಮ್ಮ ಕಾಲಯಾಪನಗಳನ್ನೆಲ್ಲಾ ಇದರಲ್ಲೇ ತೀರಿಸುತ್ತಲೂ, ಅನೇಕ ಯುವಕರು ಈಗಿನ ವಿಧಿನಿಯಮಾನುಸಾರವಾಗಿ ತಕ್ಕ ವಯಸ್ಸಿನಲ್ಲಿ ನೌಕರಿಗೆ ಸೇರದಿದ್ದರೆ ಮುಂದೆ ಜೀವನವು ಬಹು ಪ್ರಯಾಸವೆಂದು ತಿಳಿದು ಹೆಚ್ಚು ವಿದ್ಯಾಭ್ಯಾಸಕ್ಕೆ ಮಾರ್ಗವಿಲ್ಲದೆ ಜೀವನೋಪಾಯಕ್ಕೋ ಕೂಲಿಗೂ ತಕ್ಕಷ್ಟು ವಿದ್ಯಾಭ್ಯಾಸಮಾಡಿ ನೌಕರಿಗೆ ಸೇರಿಕೊಂಡು ಜೀವನಮಾಡುತ್ತಲೂ ಇದಾರೆ. ಅತಿ ದಯಾಳುಗಳಾಗಿಯೂ, ನಿಷ್ಪಕ್ಷಪಾತಿಗಳಾಗಿಯೂ, ಬಡಜನ ಪೋಷಕರಾಗಿಯೂ ಇರುವ ಘನ ಹೊಂದಿದ ಚೀಫ್ ಇಂಜನಿಯರ್ ಪದವಿಯನ್ನಲಂಕರಿಸುತ್ತಿರುವ ಮ॥ ಕಫೂರ ಶ್ರೀನಿವಾಸರಾಯರವರ ಮಂಜೂರಾತಿಯನ್ನು ಇದು ಅಪೇಕ್ಷಿಸುತ್ತಿರುವುದರಿಂದ ಅವರಾದರೂ ಈ ಬಡ ನೌಕರರ ಗೋಳಾಟವನ್ನು ದಿವ್ಯ ಚಿತ್ತದಲ್ಲಿ ತಂದು ಸದ್ಯಕ್ಕೆ ಈ ಹೆದರಿಕೆಯನ್ನು ಶಮನಮಾಡಿ ಬಡವರನ್ನುದ್ಧಾರಮಾಡುವರೆಂದು ನಿರೀಕ್ಷಿಸಲ್ಪಟ್ಟಿದೆ. ಅಲ್ಲದೆ ಘನವನ್ನು ಹೊಂದಿದ ಉದಾರಹೃದಯರಾದ ಈಗಿನ ಮಂತ್ರಿವರ್ಯರ ಆಳ್ವಿಕೆಯಲ್ಲಿ ಬಡ ನೌಕರರುಗಳಿಗೆ ತೊಂದರೆ ಪ್ರಾಪ್ತವಾಗಲಾರದೆಂದು ಪ್ರಜೆಗಳು ನಿಶ್ಚಯಿಸಿರುವುದು ಎಂದಿಗೂ ಭಗ್ನವಾಗಲಾರದು. ಮರೆಹೊಕ್ಕವರನ್ನು ಕೈಬಿಡುವಂತಹ ಕೆಲಸವನ್ನು ಯಾರುತಾನೇ ಮಾಡಬಲ್ಲರು?

ಪ್ರಜಾಹಿತೈಷಿ.

ಹುಣಸೂರು ಕೋಆಪರೇಟಿವ್ ಸೊಸೈಟಿಯ ಒಂದು ತೀರ್ಮಾನ.

ಅಯ್ಯಾ,

ಕಳೆದ ವಾರ ನಡೆದ ಹುಣಸೂರು ಕೋಆಪರೇಟಿವ್ ಸೊಸೈಟಿಯ ವಾರ್ಷಿಕೋತ್ಸವದ ಜನರಲ್ ಮೀಟಿಂಗಿನಲ್ಲಿ ಒಂದು ಅಪೂರ್ವವೂ, ಅಸಾಯಕರವೂ ಆದ ತೀರ್ಮಾನವನ್ನು ಮಾಡಿದಾರೆ ಇನ್ನುಮೇಲೆ ಸೆಕ್ರೆಟರಿಯವರೇ ಭರ್ತಿಯಾಗಿರುವ ನೇರು ಮೊಬಲಗಿನಲ್ಲಿ ಮೆಂಬರುಗಳಿಗೆ ಶೇಕಡಾ 90 ರೂಪಾಯಿ ತನಕ ಕಮಿಟಿ ಮೆಂಬರುಗಳ ಒಪ್ಪಿಗೆ ಕೇಳದೆ ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಸಾಲ ಕೊಡಬಹುದೆಂದು ತೀರ್ಮಾನಮಾಡಿದರು. ಇಷ್ಟು ಬೇಗ ಅಂದರೆ ಸೊಸೈಟಿಯನ್ನು ಪ್ರಾರಂಭಿಸಿರುವ ಒಂದು ಸಂವತ್ಸರದಲ್ಲೇ ಇಂಥದು ಅಧಿಕಾರವು ಸೆಕ್ರೆಟರಿಯವರಿಗಿರಬೇಕೆಂಬದಾಗಿ ತೀರ್ಮಾನಮಾಡಿರುವುದಕ್ಕೆ ಆಶ್ಚರ್ಯಪಡಬೇಕಾಗಿದೆ. ಇದಕ್ಕೆ ವಿಷ್ಕಂಭಕರೂ ಕಾರ್ಯಕಾರ್ಯ ಆಲೋಚನಾಪರರಾದವರು ಹೀಗೆ ಸಮ್ಮತಿ ಪಾಕಿದರೋ ತಿಳಿಯದು ಆದರಲ್ಲಿ ಕೆಲವು ಮೆಂಬರುಗಳು ಅಷ್ಟು ದೀರ್ಘಾಲೋಚನಾಪರರಲ್ಲ ಇಂತಹ ತೀರ್ಮಾನವನ್ನು ಯಾವ ಊರಿನ ಸೊಸೈಟಿಯಲ್ಲೂ ಮಾಡಿರುವ ವರ್ತಮಾನವೇ ಇಲ್ಲ. ಮತ್ತು ಅಷ್ಟರ ಅಧಿಕಾರವು ಸೆಕ್ರೆಟರಿಯವರಿಗಿರಬೇಕೆಂದು ಎಲ್ಲಿಯೂ ಮೆಂಬರುಗಳು ಕೇಳಿಕೊಂಡದ್ದೂ ತೋರುವುದಿಲ್ಲ. ಯಾಕೆಂದರೆ ಅದು ಅನಾವಶ್ಯಕವಾದದ್ದು. ನಮ್ಮ ಸ್ಥಳದ ಸೆಕ್ರೆಟರಿಯವರು ಶಕ್ತರೂ ಯೋಗ್ಯರೂ ಆಗಿರುವರೆಂಬಂಶವನ್ನು ಎಲ್ಲರೂ ಅನುಮೋದಿಸತಕ್ಕದ್ದೇ. ಆದರೆ ಇಷ್ಟು ಜವಾಬ್ದಾರಿಯನ್ನು ಮೆಂಬರುಗಳು ಅವರಿಗೆ ವಹಿಸಿದ್ದು ಸಹಜವಾಗಿ ಕಾಣುವದಿಲ್ಲ. ಅದನ್ನು ನಿರ್ವಹಿಸುವದು ಉತ್ತರೋತ್ತರ ಕಷ್ಟಸಾಧ್ಯವಾಗಿ ಪರಿಣಮಿಸೀತು.

ಒಂದು ವೇಳೆ ಪ್ರಬಲರಾದ ಕೆಲವು ಮೆಂಬರುಗಳು 200-300 ರೂಪಾಯಿ ಸಾಲವನ್ನು ಸುಲಭ ಬಡ್ಡಿಗೆ ಸೊಸೈಟಿಯಲ್ಲಿ ಪಡೆದು, ಸಣ್ಣ ಸಣ್ಣ ಸಾಲಗಳನ್ನು ಗರೀಬರಾದವರಿಗೆ ಕೊಟ್ಟು ದುಬಾರಿ ಬಡ್ಡಿ ಸಂಪಾದನೆಮಾಡಬಹುದು ಇನ್ನೂ ಕೆಲವು ಸಂದರ್ಭಗಳಲ್ಲಿ ಸೊಸೈಟಿಯ ಹಣ ವಾಪಸ್ ಬರುವುದು ನಾವಕಾಶವಾಗಿ ಸೊಸೈಟಿಯಲ್ಲಿ ಸಾಲಾ ತೆಗೆದುಕೊಳ್ಳದೆ ಅಪರೂಪವಾಗಿ ಕೇಳುವವರಿಗೆ ಅನನುಕೂಲವಾಗಬಹುದು ಅಂದರೆ ನೂರಾರು ಜನಗಳ ಹಣವನ್ನು ಒಬ್ಬ ಸೆಕ್ರೆಟರಿಯವರೇ ಸ್ವಂತ ಖಾತರಿಯ ಮೇಲೆ ಶೇಕಡಾ 90 ರಂತೆ ಸ್ವತಂತ್ರಿಸಿ ಕೊಡಬಹುದೆಂಬುವ ತೀರ್ಮಾನವನ್ನು ಮೆಂಬರುಗಳು ವಿವೇಚಿಸದೆ ಮಾಡಬಾರದಾಗಿತ್ತು ಆದರೆ ಇದು ಸೊಸೈಟಿಯಲ್ಲಿ ಇನ್ನೂ ಇತ್ಯರ್ಥವಾಗಿಲ್ಲ ಈ ಸಲಹೆಯನ್ನು ಸೊಸೈಟಿಗಳ ರಿಜಿಸ್ಟ್ರಾರ್ರ ವಿಚಾರಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಅವರು ತುಂಬಾ ಅನುಭವದಾರರಾಗಿರುವುದರಿಂದ ಈ ತೀರ್ಮಾನಕ್ಕೆ ಸಮ್ಮತಿಸದೆ ಅದನ್ನು ರದ್ದುಮಾಡಿದರೂ ಮಾಡಬಹುದು ರದ್ದುಮಾಡಿದರೆ ಉತ್ತಮವಾದೀತು ಇದರ ಫಲಿತಾಂಶ ಮುಂದೆ ನೋಡಬೇಕು. ಕಮಿಟಿಯೇ ಇದಕ್ಕೆ ತಕ್ಕ ಸಾಧನವೆಂದು ವಿಧಾಯಕವಾಗಿರುವಲ್ಲಿ ಇದರ ಕಾರ್ಯಗಳ್ಯಾವತ್ತನ್ನೂ ಒಬ್ಬಿಬ್ಬರು ಅಧಿಕಾರಿಗಳು ಮಾತ್ರವಲ್ಲ ಪ್ರತಿಯೊಬ್ಬರೂ ನೆರವೇರಿಸಲಿಕ್ಕೆ ತಕ್ಕಹ ಕೆಲಸಗಳಿರಬೇಕು. ಅವರಿಗೆ ಈ ವಿಷಯವನ್ನು ಕಲಿಸಬೇಕು. ಈ ಭಾರವೂ ಅವರ ಮೇಲೂ ಇಡಬೇಕು. ಆದುದರಿಂದ ಈ ಭಾಗವು ಎಲ್ಲಾ ಸೊಸೈಟಿ ಅಧಿಕಾರಿಗಳೂ ಮೆಂಬರುಗಳೂ ಪರ್ಯಾಲೋಚಿಸತಕ್ಕದ್ದಾಗಿರುತ್ತದೆ.

ಪುರವಾಸಿ.

ಮಲೆನಾಡಿನ ಪ್ರಜಾಕ್ಷೀಣತೆ

ಅಯ್ಯಾ,

ತೀರ್ಥಹಳ್ಳಿಯಲ್ಲಿ ತಾ 1 ರಿಂದ ಸಾಧಾರಣ ಮಳೆ ಪ್ರಾರಂಭವಾಗಿದೆ ಈ ಸಂವತ್ಸರದಲ್ಲಿ ಸಕಾಲಕ್ಕೆ ಮಳೆ ಬಾರದಕಾರಣ ಭತ್ತದ ಪಸಲು ಚೆನ್ನಾಗಿಲ್ಲ ಟವನ್ನಿಗೆ 2 ಮೈಲಿ ಫಾಸಲೆ ಬಾಳಿಕೆಪುರವೆಂಬ ಗ್ರಾಮದಲ್ಲಿ ಕೆಮ್ಮುಜ್ವರದಿಂದ 3 ಜನ ಸತ್ತರು ಟವನ್ನಿಗೆ ಬಂದಲ್ಲಿ ಕಷ್ಟವೆಂದು ಜನಗಳು ಯೋಚಿಸುತ್ತಿರುವರು ಸಂದಿಗೊಂದಿ ರಸ್ತೆಗಳಲ್ಲಿ ಕಚರ ಬಿದ್ದು ನಾತ ಬಡಿಯುವ ದುರವಸ್ಥೆಯನ್ನು ನೋಡುವದಕ್ಕೆ ಕೂಡದು

ಮಲೆನಾಡು ಪ್ರಜಾಸಂಖ್ಯೆ ಕ್ಷೀಣತೆಗಾಗಿ ನಮ್ಮ ಗೌರ್ನಮೆಂಟಿನವರು ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿರುವದೂ, ಅದಕ್ಕಾಗಿ ಶ್ರಮಪಡುತ್ತಿರುವದೂ ಶ್ಲಾಘ್ಯವಾದದ್ದಾಗಿದೆ ಕ್ಷೀಣತೆಯನ್ನು ತಡೆಯುವದಕ್ಕೆ ಇಷ್ಟೇ ಹಣವಾಗಲಿ, ಒಬ್ಬರಿಬ್ಬರಿಂದಾಗಲಿ ಆಗುತ್ತೆಂದು ಹೇಳುವದಕ್ಕಾಗದು (1) ಜನನಮರಣ ಲೆಕ್ಕದಿಂದ ಗಂಡಸರು ಹೆಂಗಸರು ಮಕ್ಕಳ ಸಂಖ್ಯೆಯನ್ನು ಬೇರೆಬೇರಾಯ್ತು ನಿರ್ಧರಿಸಬೇಕು (2) ಫಾಲ್ಗುಣ ಚೈತ್ರ ವೈಶಾಖ ಜ್ಯೇಷ್ಟ ಒಂದು, ಆಷಾಢ ಶ್ರಾವಣ ಭಾದ್ರಪದ ಆಶ್ವೀಜ ಒಂದು, ಕಾರ್ತೀಕ ಮಾರ್ಗಶಿರ ಪುಷ್ಯ ಒಂದು ಈ ಮೂರು ಕಾಲದಲ್ಲಿ ಮರಣ ಸಂಖ್ಯೆ ಹೆಚ್ಚುವದು ಯಾವ ಕಾಲವೆಂದು ತಿಳಿಯಬೇಕು (3) ದೊಡ್ಡ ಅಧಿಕಾರಿಗಳು ತೀರ್ಥಹಳ್ಳಿವರೆಗೆ ಬಂದು ಹೋಗುವದರಿಂದ ಪ್ರಯೋಜನವಿಲ್ಲ ಜೂಲೈ 1 ರಿಂದ ಆಗಸ್ಟು 15 ರವರೆಗೆ ಹಳ್ಳಿಗಾಡಿನಲ್ಲಿ ವಸತಿಮಾಡಿಕೊಂಡು ರೈತರ ಮತ್ತು ಗೋಕಾಯಿಗಳ ಕಷ್ಟಸುಖಗಳನ್ನು ಕಣ್ಣಾರ ನೋಡಿ ಘಾರೆಸ್ಟು ಬಾಬಿನ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು (4) ಬ್ರಾಹ್ಮಣೇತರರು ಬಾಣಂತಿಯರನ್ನು ಹ್ಯಾಗೆ ಪೋಷಿಸುವರು ಈಗಿನ ಮತ್ತು ಹಿಂದಿನ ಅನುಪಾನ ವ್ಯತ್ಯಾಸವೇನು ಎಂಬುವದನ್ನು ತಿಳಿಯಬೇಕು (5) ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರ ಮರಣ ಸಂಖ್ಯೆ ವಿಂಗಡಿಸುವದು ಉತ್ತಮಪಕ್ಷ (4) ಮತ್ತು (೨)ನೇ ಕಲಮುಗಳಿಂದ ಕಾರಣ ಊಹಿಸುವದಕ್ಕೆ ಅವಕಾಶ ಸಿಕ್ಕಬಹುದು (6) ಅನೇಕರು ಕೆರೆಗಳ ನೀರನ್ನು ಕುಡಿಯುವರು, ಭಾವಿಗಳಿಗೆ ಮಸಿಮಾಡಿರುವರು, ಹೊಂಡದ ನೀರು ಕುಡಿಯುವರು, ಇದನ್ನೆಲ್ಲಾ ತಪ್ಪಿಸಬೇಕು (7) ಆರೋಗ್ಯವಾದ ಮನೆಗಳಲಿ ವಾಸ ಮಾಡುವಂತಾಗಬೇಕು ವಿದ್ಯಾಭಿವೃದ್ಧಿಯಿಂದ ಅಳುವಳಿಕೆಗೆ ಅವಕಾಶಮಾಡಬೇಕು (8) ದುಡಿದು, ದಣಿದು, ಬೇಸತ್ತ ರೈತರಿಗೆ ವಿಹಾರಾರ್ಥವಾಗಿ ಮೊದಲಿನಂತೆ ಕೆಲವು ದಿನ ಶಿಕಾರಿ ಮಾಡುವದಕ್ಕೆ ಅವಕಾಶಬೇಕು (9) ಸೈತದ ಉಪಯೋಗಕ್ಕೆ ಮೊದಲಿನಂತೆ ಬಗನೆ ಬೇಯಿಯನ್ನು ಬಿಟ್ಟು ಕೊಟ್ಟು ಸರಾಬು ದುಕಾನ್ ಕಮ್ಮಿ ಮಾಡಬೇಕು ಈ ಬಗ್ಗೆ ಪತ್ರಿಕಾ ಕರ್ತರು ಆಕ್ಷೇಪಿಸಬಹುದು ಇಲ್ಲಿನ ಹವಾಕ್ಕೆ ಬಗನೆ ಕೇದಿಯು ಆರೋಗ್ಯ ಕೊಡತಕ್ಕದ್ದಾಗಿದೆ ಸರಾಪಿನಂತೆ ಅದು ಆಯಸ್ಸು ಕಮ್ಮಿ ಮಾಡತಕ್ಕದ್ದಲ್ಲ (10) ಈ ಶೀತೋಷ್ಣ ಪ್ರದೇಶದಲ್ಲಿ ಈಟಿಗ ಜನರು ಚಾಸ್ಟಿಕ್, ಏಗ್ಯು ಮಿಕ್ಸರುಗಳನ್ನು ಹೆಚ್ಚಾಗಿ ಉಪಯೋಗ ಮಾಡುವರು, ಮತ್ತು ಆಸ್ಪತ್ರೆಗಳಲ್ಲಿ ಕೊಡುವರು ಇದನ್ನು ವಿಮರ್ಶಿಸಬೇಕು

ಕೆಸವಾರೆ ತಮ್ಮಾಸಿ ಸ್ವಾಪ್ಪಶೆಟ್ಟಿ

[ಈ ವಿಚಾರದಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ಸಭೆಯ ವೃತ್ತಾಂತವನ್ನು ಇನ್ನೊಂದು ಕಡೆ ಪ್ರಕಟಿಸಲಾಗಿದೆ ಅದರಿಂದ ಮಲೆನಾಡಿನ ಪ್ರಜೆಗಳು ಸರ್ಕಾರದವರ ಅಭಿಮತವನ್ನು ತಿಳಿದು ಆ ಸಲಹೆಗಳ ಸಾಧಕಬಾಧಕಗಳನ್ನು ಸರ್ಕಾರದ ಅಧಿಕಾರಿಗಳಿಗೆ ಅರಿಕೆ ಮಾಡಬಹುದಾಗಿದೆ —ಎಡಿ]

ಚಿಕ್ಕಮಗಳೂರು ನೀರಿನ ಸರಬರಾಯಿ

ಅಯ್ಯಾ,

ಚಿಕ್ಕಮಗಳೂರು ಟವನ್ ಹಿರೇಮಗಳೂರು ದಾಖಲೆ ಎಂಟು ಗ್ರಾಮಗಳು ಬಿಂಟರಮಕ್ಕಿ, ಬಸವನಹಳ್ಳಿ, ಕೆಂಪನಹಳ್ಳಿ, ರಾಮನಹಳ್ಳಿ, ಬಾಳೆ ಹಳ್ಳಿ, ಉಪ್ಪಳ್ಳಿ ವಗೈರೆ ಗ್ರಾಮಾಂತರಗಳಲ್ಲಿ ಇರುವ ಜನಗಳ ಪಾನಕ್ಕೂ ಜಮೀನುಗಳ ವ್ಯವಸಾಯಕ್ಕೂ ನೀರಿನ ವಸತಿ ಸಾಲದೆ ಬಹು ತೊಂದರೆ ಪಡುತ್ತಿರುವದನ್ನು ಕುರಿತು ಈ ಹಿಂದೆ ಸರ್ಕಾರಕ್ಕೆ ಅನೇಕಾವರ್ತಿ ಅರ್ಜಿ ಅರಿಕೆಮಾಡಿಕೊಂಡಿದ್ದಾಗ್ಯೂ ಸರಕಾರದವರು ಸಾಲಿಯಾನಾ 20 30 ಸಾವಿರ ರೂಪಾಯಿ ಕಂದಾಯ ಕೊಡುತ್ತಿರುವ ಬಡ ರೈತರ ಅಹವಾಲನ್ನು ಮನಸ್ಸಿಗೆ ತಂದುಕೊಂಡು ಪ್ರಜಾ ಕ್ಷೇಮಕ್ಕೆ ಅನುಕೂಲವಾದ ಏರ್ಪಾಡನ್ನು ಮಾಡದೆ ಇರುವದು ಬಹಳ ವಿಷಾದಕರವಾಗಿದೆ

ಚಿಕ್ಕಮಗಳೂರು ಟವನಿಗೂ ಆಸಪಾಸ್ ಗ್ರಾಮಗಳ ಜಮೀನುಗಳಿಗೂ ನಿತ್ಯದಲ್ಲೂ ನೀರು ಸರಬರಾಯಿ ಮಾಡುತ್ತಿದ್ದ ರಾಮನಹಳ್ಳಿ ಎಕೆ ಇರುವ ಹಳೇ ಗೌರಿಕಾಲುವೆಗೆ ನೀರು ಹೆಚ್ಚಾಗಿ ಬರುವಂತೆಯೂ ಬಂದ ನೀರು ಪೋಲಾಗದ ಹಾಗೆಯೂ ತಕ್ಕ ಏರ್ಪಾಡನ್ನು ಈವರಿವಿಗೆ ಯಾವ ಆಫೀಸರೂ ಮಾಡಿಸಿಕೊಡಲಿಲ್ಲ ಈ ಕಾಲವೆ ನೀರು ಹುಟ್ಟುವ ಹಿರೇಕೊಳಯ್ಯನಗಿರಿಯಿಂದ ಇಲ್ಲಿಯವರಿಗೆ ಕಾಮಗಾರಿ ಮಾಡಿಸಿದರೆ 10 12 ಸಾವಿರ ರೂಪಾಯಿಗಿಂತಲೂ ಹೆಚ್ಚಾದ ಖರ್ಚಾಗಲಾರದೆಂಬುವದು ಸರ್ವರಿಗೂ ಗೊತ್ತು ಇಷ್ಟಾಗ್ಯೂ ಸ್ವಾರ್ಥಪರರಾದ ಕೆಲವು ಮಹನೀಯರು ಸೇರಿಕೊಂಡು ಸ್ವಪ್ರಯೋಜನವನ್ನೇ ಬಯಸಿ ಚಿಕ್ಕಮಗಳೂರು ಟವನ್ನಿಗೆ ಕುಡಿಯುವ ನೀರು ಸರಬರಾಯಿ ಮಾಡುತ್ತೇವೆಂದು ಹೇಳಿ, ಕಾರಂಜಿಕೆರೆ, ನಲ್ಲಿ, ಫಿಲ್ಟರ್ ಬೆಡ್ ಮುಂತಾದವುಗಳಿಗೆ ಸುಮಾರು ಒಂದು ಲಕ್ಷ ರೂಪಾಯನ್ನು ಸರಕಾರದವರಿಂದ ಖರ್ಚುಮಾಡಿಸಿದರು ಜಮೀನುಗಳ ಸಾಗುವಳಿಗಾಗಿ ಅಲ್ಲಂಪುರದ ಬಳಿಯಿಂದ ಹೊಸದಾಗಿ ತೆಗಿಸಿದ ನಾಲೆಗೆ ಸುಮಾರು ೨೦ ಸಾವಿರ ರೂಪಾಯಿ ಖರ್ಚುಮಾಡಿಸಿದರು ಆದರೇನು? ಚಿಕ್ಕಮಗಳೂರು ಟವನಿನ ನಲ್ಲಿಯಲ್ಲಂತೂ ಆರೇ ತಿಂಗಳು, ಅದೂ ಮಳೆಗಾಲದಲ್ಲಿ ನೀರು ಬರುವದೇ ಹೊರತು ಬೇಸಿಗೆ ಕಾಲದಲ್ಲಿ ಸುತರಾಂ ಬರುವದಿಲ್ಲವೆಂಬುವದು ಇಲ್ಲಿನ ಪ್ರಜೆಗಳ ಅನುಭವಕ್ಕೆ ವೇದ್ಯವಾಗಿದೆ ಅಗ್ಗೆ ಅಂದರೆ ನೀರಿಗೆ ಕೊಂದರೆ ಬಂದ ಕಾಲದಲ್ಲಿ ದೊಡ್ಡವರ ಪೋಷಣೆಗಾಗಿ ಇಟ್ಟುಕೊಂಡಿರುವ ಮೇಲ್ಕಂಡ ಹಳೇ ಗೌರಿಕಾಲುವೆಯ ನೀರನ್ನೇ ಉಪಯೋಗಿಸದೆ ಇದ್ದರೆ ಗತಿ ಇಲ್ಲ ಕಾರಂಜಿಕೆರೆ, ನಲ್ಲಿ, ಕಾಲುವೆ ಮುಂತಾದವುಗಳ ರಿಪೇರಿಯು ಪ್ರತಿ ನಿತ್ಯದಲ್ಲೂ ತಪ್ಪುವದೇ ಇಲ್ಲ ಇದು ಶುದ್ಧ ಅನಾವಶ್ಯಕವೂ, ಸರಕಾರಕ್ಕೆ ನಷ್ಟವೂ, ಬಡವರಿಗೆ ಕಿರುಕುಳವೂ, ದೊಡ್ಡವರಿಗೆ ಪ್ರಯೋಜನವೂ ಆಗಿದೆ ಎಂಬುವದನ್ನು ಪ್ರಾಜ್ಞರೆಲ್ಲಾ ಒಪ್ಪತಕ್ಕ ಸಂಗತಿಯಾಗಿದೆ

ಆದಕಾರಣದಿಂದ ದಯಾಳು ಸರಕಾರದವರು ಈ ಭಾಗಗಳನ್ನೆಲ್ಲಾ ವಿಮರ್ಶೆ ಮಾಡಿ ಬಡಬಗ್ಗರು ಬದುಕುವ ಹಾಗೂ, ಸರಕಾರದವರಿಗೆ ಲಾಭಕರವಾಗುವ ಹಾಗೂ ತಕ್ಕ ಏರ್ಪಾಡನ್ನು ಮಾಡಬೇಕೆಂಬುವದೇ ಇಲ್ಲಿನ ಪ್ರಜೆಗಳ ಪ್ರಾರ್ಥನೆಯಾಗಿದೆ ಬೇಸಿಗೆ ಮಳೆಗಾಲಗಳಲ್ಲಿಯೂ ಈ ಟವನ್ನಿಗೆ ನೀರಿನ ಅಭಾವವಿಲ್ಲದಂತೆ ಹಾಗೆಯೂ ಸರಕಾರಕ್ಕೆ ಹೆಚ್ಚಾದ ಫಾಯಿದೆಯುಂಟಾಗುವಂತೆಯೂ ಮಾಡಬೇಕಾದರೆ ನಮ್ಮ ದಿವಾನ್ ಮ|| ರಾ|| ವಿಶ್ವೇಶ್ವರಯ್ಯನವರು ಇಲ್ಲಿಗೆ ದಯಮಾಡಿಸಿ ಬೇಗೆದಹಳ್ಳಿ ಕೆಳಗೆ ಹಳೇಗೌರಿ ಕಾಲುವೆಯನ್ನು ಕಟ್ಟಿಸಿ ಹೊಳೆ ಬಳಿ ನತ್ತದಲ್ಲೂ ಹಳ್ಳಕ್ಕೆ ಬೀಳುತ್ತಿರುವ ನಾಲೆಗೆ ಸಮೀಪದಲ್ಲಿ ಕಲ್ಲು ಏರಿಸನಮಕ್ಕೆ ಒಂದು ಕೆರೆಯನ್ನು ಕಟ್ಟಿಸಿ, ಪಶ್ಚಿಮಕ್ಕೂ ಪೂರ್ವಕ್ಕೂ ಎರಡು ತೂಬುಗಳನ್ನು ಇಡಿಸಿಕೊಟ್ಟಲ್ಲಿ ಈ ಪ್ರಾಂತ್ಯದ ನೀರಿನ ವಸತಿಯು ಸ್ಥಿರಪಟ್ಟು ನಮ್ಮ ದಿವಾನರವರ ಹೆಸರು ಚಿರಸ್ಮರಣೀಯವಾಗುವದಲ್ಲದೆ ನಮ್ಮ ಮಹಾರಾಜರವರ ಸರಕಾರಕ್ಕೂ ಪ್ರಜಾಸೌಖ್ಯಕ್ಕೂ ತುಂಬಾ ಅನುಕೂಲವಾಗಿ ಇನ್ನೂ ಹೆಚ್ಚಾದ ಜಮೀನು ಸಾಗುವಳಿಗೆ ಬಂದು ಪುರೋವೃದ್ಧಿಯಾಗುವದಕ್ಕೆ ಯಾವ ಸಂಶಯವೂ ಇಲ್ಲ ಚಿಕ್ಕಮಗಳೂರು ಟವನ್ ವಾಟರ್ ಸಪ್ಲೈ ಬಗ್ಗೆ ಹಾಲಿ ಸ್ಯಾಂಕ್ಷನ್ ಆಗಿರುವ 40 ಸಾವಿರ ರೂಪಾಯಿಗಳು ಕೂಡ ಮೇಲ್ಕಂಡ ಕಾಮಗಾರಿಗೆ ಬೇಕಾಗಲಾರದು ಈ ರೀತಿ ಸುಲಭ ಖರ್ಚಿನಿಂದ ಹೆಚ್ಚಾಗಿ ಪ್ರಯೋಜನ ಕೊಡುವ ಈ ಕೆರೆಯನ್ನು ಜಾಗ್ರತೆಯಾಗಿ ಕಟ್ಟಿಸಿಕೊಡುವದರಲ್ಲಿ ಪ್ರಜಾಹಿತೈಷಿಗಳಾದ ನಮ್ಮ ದಿವಾನ್ ಸಾಹೇಬರು ಮುಂದಾಳಾಗಿರುವರೆಂದು ನಂಬಿ ಚಿಕ್ಕಮಗಳೂರಿನ ಪ್ರಜೆಗಳು ಅವರನ್ನು ಪ್ರಾರ್ಥಿಸುವವರಾಗಿದಾರೆ

ಪ್ರಜಾ ಹಿತಚಿಂತಕ

ತಾಲ್ಲೋಕು ವರ್ತಮಾನಗಳು

ಬಾಗೇಪಲ್ಲಿ ತಾ|| ಪಾತಪಾಳ್ಯ —ಇಲ್ಲಿ ಇದುವರಿವಿಗೂ ಕಾಲಕಾಲಕ್ಕೆ ಸರಿಯಾಗಿ ಮಳೆ ಆಗಿ ಈಗ ಮಾತ್ರ ಮಳೆ ಇಲ್ಲದೆ ಬಿತ್ತುವ ಮತ್ತು ಬಿತ್ತಿದ ಪೈರುಗಳಿಗೆ ಅನನುಕೂಲವಾಗಿರುತ್ತೆ ಧಾರಣೆವಾಸಿಗಳು ವಾರವಾರಕ್ಕೆ ಬರಗಾಲವನ್ನು ಜ್ಞಾಪಕಕ್ಕೆ ತರುವಂತಿವೆ ನಮ್ಮ ಮೂರು ಕೆರೆಗಳಲ್ಲಿರುವ ನೀರು ದನಕರುಗಳಿಗೆ ಕುಡಿಯುವದಕ್ಕೆ ಒಂದು ತಿಂಗಳು ಮಾತ್ರ ಸಾಕಾಗಬಹುದಾಗಿದೆ — ಈ ಗ್ರಾಮಕ್ಕೆ ಸುಮಾರು 10 12 ಮೈಲಿ ಫಾಸಲೆಯಲ್ಲಿ ಅಂದರೆ ಕುಂಪಣಿ ಸೀಮೆಯಲ್ಲಿ ಕಾಲರಾ ಎಂಬ ಸಾಂಕ್ರಾಮಿಕ ಉಪದ್ರವ ಇರುತ್ತದೆಂದು ಜನರು ಬಹಳ ಗಾಬರಿಯಾಗಿದಾರೆ

ಶಿವಮೊಗ್ಗ ತಾ ಪಿಂಕಿಪುರ —ಇಲ್ಲಿ ಮಳೆಯು ಸಮೃದ್ಧಿಯಾಗಿ, ಎಲ್ಲಿ ನೋಡಿದರೂ ಜಲವೂ ಪಚ್ಚೆಪೈರುಗಳೂ ಕಂಗೊಳಿಸುತ್ತಾ, ಮನಸ್ಸಿಗೆ ಹರ್ಷವನ್ನು ಉಂಟುಮಾಡಿದೆ ಆರೋಗ್ಯಸ್ಥಿತಿಯು ಚೆನ್ನಾಗಿದೆ ಭದ್ರಾನದಿಯಲ್ಲಿ ಪೂರ್ಣ ಪ್ರವಾಹ ಬಂದು ಇದೆ —ಇಲ್ಲಿನ ಹಿಂದೂಸ್ಥಾನಿ ಸ್ಕೂಲ್ ಮುಚ್ಚಿ ತಿಂಗಳ ಮೇಲಾಯಿತು ಯಾವ ಕಾರಣವೋ ತಿಳಿಯದು ಹಿಂದೆ ಇದ್ದ ಹೆಡ್ ಮಾಸ್ಟರು ಪಂಡಿತಪರೀಕ್ಷೆಗಾಗಿ ಮೈಸೂರಿಗೆ ಹೋದರು ಅವರ ಕಾಲದಲ್ಲಿ ಸ್ಕೂಲು ತುಂಬಾ ಅಭಿವೃದ್ಧಿಸ್ಥಿತಿಯಲ್ಲಿತ್ತು ನಮ್ಮ ಡೆಪ್ಯುಟಿ ಇನ್ಸ್ಪೆಕ್ಟರವರು ಸ್ಕೂಲ್ ವಿಷಯದಲ್ಲಿ ಜಾಗ್ರತೆ ಗಮನಕೊಟ್ಟು ಬೇರೆ ಯಾರನ್ನಾದರೂ ಕಳುಹಿಸಿಕೊಡುವರೆಂದು ನಂಬಿರುತ್ತೇವೆ

ತರೀಕೆರೆ —ಈ ಊರಿನಲ್ಲಿ ಜೂನ್ ತಿಂಗಳು 29ನೆ ಸೋಮವಾರ ರಾತ್ರಿ ಸರಾಫ್ ಅಂಗಡಿ ಇಟ್ಟುಕೊಂಡು ವ್ಯಾಪಾರಮಾಡುತ್ತಿದ್ದ ಆದಿಸಾಪಯ್ಯ ಶೆಟ್ಟರನ್ನು ಯಾರೋ ದುರಾತ್ಮರು ರಾತ್ರಿ ಮಲಗಿರುವಾಗ್ಗೆ ಬಾಯಿಮೇಲೆ ಕಡಿದದ್ದರಿಂದ ಅವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದು, ಜುಲೈ ತಿಂಗಳು ೨೯ನೇ ಮಧ್ಯಾಹ್ನ ವಿಕ್ಟೋರಿಯಾ ಆಸ್ಪತ್ರೆಯಲ್ಲಿಯೇ ಕಾಲವಾದರು ಅವರನ್ನು ಕತ್ತರಿಸಿದ ದಿನವೇ ಮಚ್ಚು ದೊರೆತು ಅದನ್ನು ಪೋಲೀಸಿನವರು ಮಹಜರು ನಡೆಸಿದ್ದರು ಮಚ್ಚು ಹೊಸದಾಗಿದ್ದರೂ ಅದನ್ನು ಯಾರು ತಯಾರಿಸಿದರೆಂದು ವಿಚಾರಣೆಗೆ ಬರದೆ, ಆ ದುರಾತ್ಮರ ಮಾಹಿತಿ ಇದೆ ಸರ್ಕಾರದವರು ಇಂಥಾ ಕ್ರೂರಿಗಳನ್ನು ಶೀಘ್ರದಲ್ಲಿ ಶಿಕ್ಷಿಸದೆ ಬಿಟ್ಟಲ್ಲಿ ಅವರು ಇನ್ನೂ ಹೆಚ್ಚಿಕೊಂಡಾರು

ಬೆಂಗಳೂರು ಸಿಟಿ —ಕಳೆದ 2 3 ವಾರಗಳಿಂದ ಮಳೆ ಇಲ್ಲದೆ ಮೋಡಗಳಾಡುತ್ತಾ ಗಾಳಿ ಜಾಸ್ತಿಯಾಗಿದೆ ಹವಾ ಆರೋಗ್ಯವಾಗಿದೆ ದಿನಸುಗಳ ಬೆಲೆಯಾದರೋ ಕ್ಷಾಮಕಾಲವನ್ನು ಸೂಚಿಸುತ್ತದೆ ಕೊಂಡು ತಿನ್ನತಕ್ಕವರು ಬಹಳ ಕಷ್ಟಸ್ಥಿತಿಯಲ್ಲಿದಾರೆ ಅಕ್ಕಿ ರೂಪಾಯಿಗೆ ೫¼ ಸೇರು, ರಾಗಿ 13 14 ಸೇರು, ಹುಪ್ಪ ಮಣ 20 21 ರೂಪಾಯಿ, ಈ ರೀತಿ ಎಲ್ಲಾ ದಿನಸುಗಳೂ ತುಟ್ಟಿಯಾಗಿ ಮಾರುವವು ಸುಭಿಕ್ಷದಲ್ಲಿ ಸೇರಿದ ಈಗಿನ ದುರ್ಭಿಕ್ಷವನ್ನೂ ಒದಗಿದ ಸಂಕಟವನ್ನೂ ನೋಡಿ ವೃದ್ಧರು ಆಶ್ಚರ್ಯಪಡುತ್ತಿದಾರೆ ಈ ಕಷ್ಟವನ್ನು ಗೌರ್ನಮೆಂಟಿನವರು ನೋಡಿ ಪ್ರಜಾಕ್ಕೆ ಅನುಕೂಲಮಾಡಿಕೊಟ್ಟಾರಾಗಿ ಬಡ ಪ್ರಜೆಗಳು ಹಾರೈಸುತ್ತಾರೆ —ಈ ಊರಲ್ಲಿ ಪ್ಲೇಗು ೬ ೭ ವರ್ಷಗಳಿಂದ ಬೀಳುವದರಲ್ಲಿದೆ ಜಾಗ್ರತೆ ಬಿದ್ದರೆ ಅನುಕೂಲವಾದೀತು ಇಲ್ಲಿ ಪ್ಲೇಗು ಬೀಳುವದರಿಂದ ಈಗಾಗಲೇ ಮನೆಗಳ ಬೆಲೆಯು ಜಾಸ್ತಿಯಾಗುತ್ತಾ ಬಂದಿದೆ ಮನೆಗಳ ಬೆಲೆಯು ಜಾಸ್ತಿಯಾದಾಗ್ಯೂ ಮನೆಗಳು ಸಿಕ್ಕುವದೇ ಇಲ್ಲ ಅನೇಕರು ಮನೆಗಳಿಲ್ಲದೆ ತೊಂದರೆಪಡುತ್ತಿದಾರೆ ಈ ವಿಚಾರದಲ್ಲಿ ಸರ್ಕಾರದವರು ಬಡ ಪ್ರಜೆಗಳಿಗೆ ಪ್ರೋತ್ಸಾಹಮಾಡ್ಯಾರೆಂದು ಹಾರೈಸುತ್ತಾರೆ ಇಲ್ಲಿ ಪ್ಲೇಗಿನ ಗಲಾಟೆ 5 6 ತಿಂಗಳಿಂದ ಏನೂ ಇಲ್ಲ

ಶಿಕಾರಿಪುರ —ಮೂರು ನಾಲ್ಕು ವಾರಗಳಿಂದ ಹಿಡಿದ ಮಳೆ ಬಿಟ್ಟೇ ಇಲ್ಲ ಗಾಳಿಯೂ ಥಂಡಿಯೂ ಜಾಸ್ತಿ ಈಗ ಹೊಸ ಅಮಲ್ದಾರರು ಬಂದು ಇರುವರಲ್ಲದೆ ಪುರ ಪಾಕೀಜಾ ವಿಚಾರಕ್ಕೆ ಗಮನಕೊಡುತ್ತಾ ಇರುವದು ಸಂತೋಷಕರವಾಗಿರುತ್ತೆ —ಈಗಿನ ವರೆಗೂ ಅಳಿಯೂರಲ್ಲಿ ಇದ್ದ ಪೋಸ್ಟ್ ಆಫೀಸು ಪೇಟೆಗೆ ಹೋದದ್ದು ಎಲ್ಲಾ ಭಾಗಗಳಿಗೂ ಅನುಕೂಲವಾಗಿದೆ —ಇಲ್ಲಿನ ಸಾ|| ಸಂಗನಬಸಪ್ಪನವರು ಒಂದು ದಿವ್ಯವಾದ ಭವನವನ್ನು ಕಟ್ಟಿಸಿ ಮೊನ್ನೆ ತಾ 1ನೇ ಶುಕ್ರವಾರ ಸಾಯಂಕಾಲ ನೂತನ ಭವನದ ಪ್ರತಿಷ್ಠಾ ಸಭೆಯು ಸೇರಿಸಲ್ಪಟ್ಟಿತು ಅಮಲ್ದಾರರೂ ಪೊ|| ಇನ್ಸ್ಪೆಕ್ಟರೂ, ಇತರ ಅಧಿಕಾರಿಗಳೂ ವರ್ತಕ ಮಂಡಲಿಯವರೂ ಸೇರಿದ್ದರು ಸರಸ್ಥಳದಿಂದ ಬಂದು ಇರುವ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳು ಸಂಸ್ಕೃತ ಭಾಷೆಯಲ್ಲಿ ಹೇಳಿದ ಸ್ತೋತ್ರಪಾಠವು ಸ್ವಾರಸ್ಯವಾಗಿತ್ತು ಸಂಗೀತವೂ, ಫೋನೋಗ್ರಾಫ್ ಗಾನವೂ ನಡೆಸಲ್ಪಟ್ಟಿತು ಅನಂತರ ದೊಡ್ಡ ಮನುಷ್ಯರಿಗೆ ಫಲ ತಾಂಬೂಲಗಳೂ, ಬ್ರಾಹ್ಮಣರಿಗೂ ಲಿಂಗಾಯತ ಜಂಗಮರಿಗೂ ಯೋಗ್ಯತಾನುಸಾರ ದಕ್ಷಿಣೆಗಳೂ ಧಾರಾಳವಾಗಿ ಕೊಡಲ್ಪಟ್ಟವು ಎಲ್ಲರಿಗೂ ಫಲಾಹಾರವಾಗಲು ಸಭೆಯು ಮುಕ್ತಾಯವಾಯಿತು

ಹುಣಸೂರು —ಹುಣಸೂರು ವಾರ್ಷಿಕ ಪಂದ್ಯದ ವಿನೋದಗಳು ಕಳೆದ ತಿಂಗಳ ೨೯ನೇ ತಾ ಸರ್ಕಾರಿ ಕ್ಯಾಂಪ್ ಮೈದಾನದಲ್ಲಿ ಬಹು ವಿಜೃಂಭಣೆಯಿಂದ ನಡೆದವು ಇದರ ಸಲುವಾಗಿ ಮಡಿಕೇರಿ ಎಸ್ಟೇಟುಗಳ, ಹುಣಸೂರಿನ ಯೂರೋಪಿಯನ್ ದೊಡ್ಡ ಮನುಷ್ಯರೂ, ಸರ್ಕಾರಿ ಮತ್ತು ಖಾಸಗೀ ದೊಡ್ಡ ಮನುಷ್ಯರುಗಳೂ ಹಾಜರಿದ್ದು ಪರಾಂಬರಿಸಿ ಆನಂದಪಟ್ಟರು ಹಗ್ಗ ಎಳೆಯುವ ಪಂದ್ಯದಲ್ಲಿ 32 ಜನರನ್ನು ಒಂದು ಕಡೆಯೂ ಒಂದು ಆನೆಯನ್ನು ಮತ್ತೊಂದು ಕಡೆಯೂ ಬಿಟ್ಟು ಎಳೆಯಿಸಿದರು ಇದು ಬಹು ವಿನೋದಕರವಾಗಿತ್ತು ಆನೆಯು ಕೇವಲ ಚಿಕ್ಕ ವಯಸ್ಸಿನದಾಗಿದ್ದು ಎಳೆಯಲಾರದೆ ಹೋಯಿತು ಆ ಬಳಿಕ 16 ಜನರನ್ನು ಒಂದು ಕಡೆ ಆನೆಯನ್ನು ಇನ್ನೊಂದು ಕಡೆ ಬಿಟ್ಟು ಎಳೆಸಿದಾಗ ಲಕ್ಷ್ಯವಿಲ್ಲದೆ ಆನೆಯು ಎಳೆದುಹಾಕಿ ಜಯಹೊಂದಿತು ಇಂಗ್ಲಿಷ್ ಮತ್ತು ದೇಶೀಯ ದೊಡ್ಡ ಮನುಷ್ಯರುಗಳಿಗೆ ಟೀ ಪಾರ್ಟಿಗಳಾದುವು ತರುವಾಯ ಗೆದ್ದವರಿಗೆಲ್ಲಾ ಸರ್ ವಾರ್ನ್ ದೊರೆಯವರ ದೊರೆಸಾನಿಯವರು ಇನಾಮುಗಳನ್ನು ಕೊಟ್ಟರು ಅಂತ್ಯದಲ್ಲಿ ಚಕ್ರವರ್ತಿ ಸಾರ್ವಭೌಮರಿಗೂ, ಶ್ರೀಮನ್ ಮಹಾರಾಜರವರಿಗೂ ಕ್ಷೇಮವನ್ನು ಬಯಸುತ್ತಾ ತೆರಳಿದರು

ಆನೇಕಲ್ಲು —ಈ ಪ್ರಾಂತ್ಯ ರೈತರು ಹೊಲಗಳನ್ನು ಬಿತ್ತುವ ಕೆಲಸದಲ್ಲಿ ಆಸಕ್ತರಾಗಿದಾರೆ ಆದರೆ ಮಳೆಯೇ ಇಲ್ಲದೆ ಜನಗಳು ತುಂಬಾ ಭಯಭ್ರಾಂತರಾಗಿರುವರು ಸದ್ಯಕ್ಕೆ ಟವನ್ನಲ್ಲಿ ಯಾವ ವಿಧವಾದ ಕಾಯಿಲೆಗಳೂ ಇಲ್ಲದೆ ಸುಭಿಕ್ಷವಾಗಿರುವುದು ಸಂತೋಷಪ್ರದವಾಗಿದೆ —ಸುಮಾರು 30-35 ವರುಷಗಳ ಕೆಳಗೆ ಈ ದೇಶದಲ್ಲಿ ಲಕ್ಷಾಂತರ ಪ್ರಜೆಗಳನ್ನು ಕೊಂದ ಭಯಂಕರವಾದ ಕಾಲರಾ ಜಾಡ್ಯವು ಪ್ರಕೃತ ಈ ತಾಲ್ಲೂಕಿನ ಅತ್ತಿಬೆಲೆ ಮತ್ತು ಹಾರಗದ್ದೆ ಎಂಬ ಎರಡು ಹೋಬಳಿ ಜಾಗಾಗಳಲ್ಲಿ ಆಕಸ್ಮಾತ್ ತಲೆ ಹಾಕಿ ಸುಮಾರು 60 ಜನಗಳ ವರೆಗೆ ತೀರಿಹೋಗಿರುತ್ತಾರೆ ಈಗ ಈ ಉಭಯ ಸ್ಥಳಗಳಲ್ಲಿಯೂ ಈ ಜಾಡ್ಯವು ಸ್ವಲ್ಪ ಹಿಂತೆಗೆದಿದೆ ಆ ರೀತಿ ಪ್ರಜೆಗಳು ಕ್ಷಾಮಭಯದಿಂದಲೂ, ರೋಗಭಯದಿಂದಲೂ ತಪಿಸುತ್ತಿರುವ ಸಮಯದಲ್ಲಿ ದಯಾಳುಗಳಾದ ತಾಲ್ಲೂಕ್ ಅಮಲ್ದಾರರವರೂ, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರವರೂ ಅಂಥಾ ಸ್ಥಳಗಳಿಗೆ ಹೋಗಿ ಪ್ರಜೆಗಳಿಗೆ ಧೈರ್ಯ ಹೇಳಿ ತಕ್ಕ ಚಿಕಿತ್ಸೆಮಾಡಿಸಿ ಪ್ರಜೆಗಳು ತಾವ ಗಿಯೇ ತಕ್ಕ ಚಿಕಿತ್ಸೆಮಾಡಿಕೊಳ್ಳುವಂತೆ ಲಲಿತವಾದ ಉಪನ್ಯಾಸಗಳನ್ನು ಮಾಡಿದ್ದು ಸ್ತೋತ್ರಾರ್ಹವಾಗಿದೆ ಮೆ|| ಮುತ್ತುಸ್ವಾಮಿದಾಸ್‌ರವರು ತಮ್ಮ ಕಾಬೇದಾರರಿಗೂ ತುಂಬಾ ಪ್ರೋತ್ಸಾಹಕೊಡುವುದರಲ್ಲಿ ಆಸಕ್ತರಾಗಿದಾರೆ ಕಳೆದ ಮೇ ತಿಂಗಳಲ್ಲಿ ಈ ತಾಲ್ಲೂಕಿನ ವ್ಯಾಕ್ಸಿನೇಟರ್ ಪುಟ್ಟಯ್ಯಶೆಟ್ಟಿ ಎಂಬುವರು ಮುತುವರ್ಜಿಯಿಂದ ಕೆಲಸ ಮಾಡಿದ್ದಕ್ಕಾಗಿ ಗೌರ್ನಮೆಂಟಿನಿಂದ ಹತ್ತು ರೂಪಾಯಿ ಬಹುಮಾನ ಕೊಡಿಸಿರುತ್ತಾರೆ —ಹೊಸೂರಿಂದ ಬೆಂಗಳೂರಿಗೆ ರೈಲ್ವೆ ಲೈನ್ ಆಗುವ ವಿಚಾರ ಕಳೆದ 2-3 ವರ್ಷಗಳ ಲಾಗಾಯ್ತು ಚರ್ಚೆಯಲ್ಲಿದ್ದು ಈ ಆನೇಕಲ್ ಟವನ್ ಮೇಲೆ ಹಾಕುವ ಹಾಗೆ ಸರ್ವೇಮಾಡಿದ್ದದ್ದನ್ನು ಹಾಲಿ ಇಂಜನಿಯರ್ ಸಾಹೇಬರು ಟವನ್‌ಗೆ 3 3½ ಮೈಲಿ ದೂರದಲಿ ಸರ್ವೆಮಾಡುವಂತೆ ಅನುಮತಿಕೊಟ್ಟಿರುವುದಾಗಿ ಕೇಳುತ್ತೇವೆ ದಯಾಳುಗಳಾದ ಸರ್ಕಾರದವರು ಮೊದಲು ಮಾಡಿದ್ದ ಸರ್ವೆಯಂತೆ ಟವನ್ ಬಳಿ ರೈಲ್ ಹಾಕಿಸುವುದರಿಂದ ಪ್ರಜಾಸೌಕರ್ಯವೂ ಸರ್ಕಾರಕ್ಕೆ ಹೆಚ್ಚಾದ ಉತ್ಪತ್ತಿಯೂ ಆಗುವುದರಲ್ಲಿ ಸಂಶಯವಿಲ್ಲ ಅಲ್ಲದೆ ಈಗಿನ ಅಂದಾಜಾ ಲೈನಿನ ಮುಕ್ಕಾಲು ಪಾಲು ಜಮೀನುಗಳು ಬಹಳ ಫಲವತ್ತಾದವುಗಳಾಗಿಯೂ, ತುಂಬಾ ಬೆಲೆಯುಳ್ಳವುಗಳಾಗಿಯೂ ಇರುತ್ತವೆ ಮತ್ತು ಈ ಟವನ್‌ಗೆ ದಕ್ಷಿಣ ಸರಹದ್ದು ಕುಂಪಣಿ ಗ್ರಾಮಗಳಿಂದ ವಿಶೇಷವಾಗಿ ನಡೆಯಬಹುದಾದ ಆಮದು ರಫ್ತುಗಳಿಗೆ ಬಹಳ ಕುಂದಕವಾಗುತ್ತೆ ಈ ಭಾಗದಲ್ಲಿ ಪ್ರಜಾಹಿತೈಷಿಗಳಾದ ಪ್ರಭುಗಳು ದಯವಿಟ್ಟು ಈ ಟವನ್ನನ್ನು ಅಭಿವೃದ್ಧಿಗೆ ತರುವರೆಂದು ನಂಬಿ ಹಾರೈಸುತ್ತೇವೆ

ಪುಷ್ಪಗಿರಿ ತಾ|| ಬಡಗೌಡನಹಳ್ಳಿ —ಈ ಕಡೆ ರೈತರು ಹೊಲಗಳನ್ನು ಬಿತ್ತಿದ ಹದಿನೈದು ದಿನಗಳ ವರೆಗೂ ಮಳೆ ಬಾರದೆ ಪೈರುಗಳೆಲ್ಲಾ ಬಾಡಿಹೋಗಿದ್ದವು ಮೊನ್ನೆವಾನೇ ಕೊಂಚ ಮಳೆಯಾಗಿ ಪೈರುಗಳಿಗೆ ಜೀವ ಬಂದಂತೆ ಆಯ್ತು ಇಂಥಾದ್ದರಲ್ಲಿ ಈ ಪ್ರಾಂತ್ಯದ ಮಾರೀ ಕೋಣಗಳ ದಾವಳಿ ಹೆಚ್ಚಾಗಿದೆ 7-8 ಕೋಣಗಳು ಗುಂಪುಕಟ್ಟಿಕೊಂಡು ಸಿಕ್ಕಿದ ಹೊಲಗಳನ್ನೆಲ್ಲಾ ಮೇಯ್ದು ಮದಿಸಿದ ಆನೆಗಳಂತೆ ತಿರುಗುತ್ತವೆ ಇವುಗಳ ಕಾಟವನ್ನು ಸಹಿಸಲಾರದೆ ಮಾರಮ್ಮನ ಭಕ್ತರಾದ ರೈತರು ಈ ಹಾಳು ಕೋಣಗಳಿಗೆ ಕಾಲ ಬರಲಿಲ್ಲವೇ ಎಂದು ಚಿಂತೆ ಪಡುತ್ತಿದಾರೆ ಈ ಕೋಣಗಳು ಮಾರಿಗಳಿಗೆ ಬೆಳೆಯುತ್ತವೋ, ಮಾದಿಗರಿಗೆ ಬೆಳೆಯುತ್ತವೋ ಎಂಬುದನ್ನು ಯೋಚಿಸಿ ಧೈರ್ಯದಿಂದಿರುವುದು ಒಳ್ಳೇದು ಸದರಿ ಕೋಣಗಳನ್ನು ಸರ್ಕಾರಿ ದೊಡ್ಡಿಗೆ ಕೊಡಿದರೆ ದೊಡ್ಡಿಯ ಅಧಿಕಾರಿಯು ಒಪ್ಪುವುದಿಲ್ಲ ಅಥವಾ ಒಪ್ಪಿದರೂ 1 2 ದಿನಗಳ ಮೇಲೆ ಬಿಟ್ಟುಬಿಡುತ್ತಾನಂತೆ ಪುನಃ ಅವುಗಳು ಗ್ರಾಮಾಂತರಗಳ ಮೇಲೆ ದಾಂಧಲೆ ಮಾಡುವುದು ತಪ್ಪುವುದೆ ಇಲ್ಲ ಮೊನ್ನೆ ದಿನ ನಿಟ್ಟೂರಹಳ್ಳಿ ಮಾದಿಗರ ನಾಗ ಎಂಬುವನು ತನ್ನ ಬಡಕಲು ಕೋಣಗಳನ್ನು ನೇಗಲಿಗೆ ಕಟ್ಟಿ ಹೊಲವನ್ನು ಉಳುತ್ತಿರುವಾಗ ಸದರಿ ಕೊಬ್ಬಿದ ಕೋಣಗಳು ಓಡಿಬಂದು ಈ ಬಡಕಲು ಕೋಣಗಳನ್ನು ಮುತ್ತಿಗೆಹಾಕಿ ಚೆನ್ನಾಗಿ ತಿವಿದು ಗಾಯಮಾಡಿರುವುದರಿಂದ ಕೆಳಗೆ ಬಿದ್ದ ಬಡಕಲ ಕೋಣಗಳ ಪೈಕಿ ಒಂದು ಇನ್ನೂ ಮೇಲಕ್ಕೆ ಏಳಲೇ ಇಲ್ಲ ಆದ್ದರಿಂದ ಈ ಒಳ್ಳೇ ಆರಂಭದ ಕಾಲದಲ್ಲಿ ಸದರಿ ಯಜಮಾನನು ಸಹ ಮೂಲೆಗೆ ಕುಳಿತುಕೊಳ್ಳಬೇಕಾಗಿದೆ ನಷ್ಟಪಟ್ಟ ಮಾದಿಗರವನು ಗ್ರಾಮಾಧಿಕಾರಿಗಳಿಗೆ ಹೇಳಿಕೊಳ್ಳಲು—ನಾನೇನು ಮಾಡಲಿ ಮಾರಮ್ಮನಿಗೆ ಹೇಳಿಕೋ ಎಂದು ಉತ್ತರ ಕೊಟ್ಟರಂತೆ ಆಗ ನಾಗನು ಬೇಗ ಹೋಗಿ ಎರಡು ಕೋಳಿಗಳನ್ನು ತೆಗೆದುಕೊಂಡು ಮಾರಮ್ಮನಿಗೆ ಹರಕೆ ಇಟ್ಟು ಒಂದನ್ನು ಆಗಲೇ ಕೊಯ್ದು ತಿಂದು, ಇನ್ನೊಂದನ್ನು ಇಟ್ಟುಕೊಂಡಿದಾನೆ ಬ ಕೋಣವು ಎದ್ದೇ ಇದೆ ಯಾವಾಗ ಏಳುತ್ತೋ ತಿಳಿಯದು ಹರಕೆ ಕೋಣಗಳನ್ನು ಬಿಟ್ಟಿರುವ ಮಾಲೀಕರಿಗೆ ಅವುಗಳನ್ನು ಕಟ್ಟಿಹಾಕಿ ಎಂದು ಹೇಳಿದರೆ ಅವರು ತಮ್ಮದಲ್ಲವೆಂದು ಹೇಳುತ್ತಾರೆ ಮೊನ್ನೆಯ ದಿನ ಒಂದು ಕೋಣ ಎಲ್ಲಿಯೋ ತಪ್ಪಿಸಿಕೊಂಡುಹೋಗಿದೆ ಕ್ಯಾತವಾರ ಗ್ರಾಮದಲ್ಲಿ ಮಾರೀಜಾತ್ರೆ ನಡೆಯುತ್ತಿದೆ ಅಲ್ಲಿ ಏನಾದರೂ ಇದರ ಹಬ್ಬ ಮಾಡಿಯಾರು ಎಂ ರಾತ್ರಿಯೆಲ್ಲಾ ಕೆಲವು ಮಾದಿಗರು ಹುಡುಕುತ್ತಿದ್ದರು ಆದ್ದರಿಂದ ಎಲ್ಲರಿಗಿ ಹೆಚ್ಚಿನ ಹಕ್ಕು ಮಾದಿಗರಿಗಿದೆ ಎಂದು ಕಾಣುತ್ತದೆ ಅಂತೂ ಯಾವ ರೀತಿಯಲ್ಲಾದರೂ ರೈತರೇ ಮೊದಲಾದವರಿಗೆ ಸರ್ಕಾರದವರು ಸದರಿ ರಾಕ್ಷಸಗಳಿಂದ ತೊಂದರೆಯಾಗದ ರೀತಿ ಏರ್ಪಡಿಸಿಕೊಟ್ಟಾರೆಂದು ಹಾರೈಸುತ್ತೇನೆ ಈ ವಿಷಯವಾಗಿ ಸರ್ಕಾರದಲ್ಲಿ ಏನಾದರೂ ಕಾನೂನುಗಳಿದ್ದಲ್ಲಿ ತಿಳಿಸಬೇಕಾಗಿ ವಿಜ್ಞಾ

ಕೊಳ್ಳುತ್ತೇವೆ. [ಅವನ್ನು ಜೊತ್ತಿಗೆ ಹಿಡಿದುಕೊಡಬೇಕು. ದೊಡ್ಡಿಯ ಅಧಿಕಾರಿ ಅವನ್ನು ಚೌಂಡು ಛಾರ್ಜು ತೆಗೆದುಕೊಳ್ಳದೆ ಬಿಡಕೂಡದು. ಹಾಗೇನಾದರೂ ಬಿಟ್ಟರೆ ಅಮಲ್ದಾರರಿಗೆ ಅರ್ಜಿ ಕೊಟ್ಟಲ್ಲಿ ಅವರು ಅಂಥವರಿಗೆ ದಂಡವನ್ನು ಹಾಕಿಸುತ್ತಾರೆ.—ಎಡಿ]

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ.

ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ.

SCOTT'S EMULSION 2-32
(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ.

ಇದಕ್ಕೆ ಸಮಾನವಾದದ್ದು ಮತ್ತ್ಯಾವದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವವು.

ಕೈಯಿಂದ ಮುಟ್ಟದೇನೇ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಮೀನುಮನುಷ್ಯ ಇರುವ ಈ ಔಷಧದ ಗುರುತು.

ಈಗತಾನೆ ಬಂದಿರುತ್ತೆ! ಸಂತೋಷಕರವಾದ ವಾಚ್!!

ರೈಲ್ವೆ ರೆಗ್ಯುಲೇಟರ್ ವಾಚ್

ಸುಂದರವಾದ ವಾಚು ಸರಪಣಿ ಸಮೇತ ಕ್ರಯ ರೂ. 3

ಇದು ಪ್ರಸಿದ್ಧವಾದ ಮತ್ತು ಮಜಬೂತಾದ ಲೀವರ್ ಕೆಲಸದಿಂದಲೂ ಶ್ರೇಷ್ಠವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಖಾತ್ರಿಯಾದ ಪಾಲು. ತಲೆಯಲ್ಲಿ ಬೀಗವುಳ್ಳದ್ದು. ಚಕ್ರದಮೇಲೆ ಕೆಂಪು ಕೆತ್ತಿರುತ್ತೆ. ಕೆಂಪು ಕೆತ್ತಿರುವ ವಾಚ್ ಶ್ರೇಷ್ಠವಾದದ್ದು. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಮತ್ತು ದೀರ್ಘಕಾಲ ಬಾಳಿಕೆ ಬರುವಂಥಾದ್ದು ಸರ್ವಜನರಿಗೂ ತಿಳಿದ ವಿಷಯವೇ ಸರಿ. ಈ ವಾಚ್ ವಿಷಯವಾಗಿ ಹೆಚ್ಚು ಮಾತುಗಳು ಬರೆಯುವದು ಯಾಕೆ. ಮಣ್ಣು ಧೂಳು ಸೇರದಂತೆ ಒಳಗೆ ಗ್ಲಾಸ್ ಡೋಮ್ (ಅಂದರೆ ಕನ್ನಡಿ ಮುಚ್ಚಳ) ನಿಂದ ಮುಚ್ಚಿರುತ್ತೆ. ಇದರ ಮುಂಭಾಗದಲ್ಲಿ ಇಂಜನ್ ಮಾರ್ಕ್ ಇರುತ್ತೆ. ಈ ಪ್ರಕಟನೆಯಲ್ಲಿ ಕಾಣಿಸಿರುವ ವಾಚ್ ಮಧ್ಯದಲ್ಲಿ ನೋಡಿ. ಅದೇ ನಾಣ್ಯವಾದ ಈ ವಾಚ್‌ಗೆ ಗುರುತು ಇದಕ್ಕಿಂತಲೂ ಕಮ್ಮಿ ಬೆಲೆಯುಳ್ಳ ರೈಲ್ವೆ ರೆಗ್ಯುಲೇಟರ್ ಲೀವರ್ ವಾಚ್‌ಗಳು ರೂ 1-12-0, ರೂ 1-13-0 ಯಲ್ಲಿಯೂ, ರಾಸ್ಕೋಪ್ ವಾಚ್ ಮುಂತಾದವುಗಳು ರೂ. 1-12-0, ರೂ. 1-13-0 ಯಲ್ಲಿಯೂ ನಮ್ಮಲ್ಲಿ ದೊರೆಯುತ್ತೆ. ಆದರೆ ಅವು ಈ ವಾಚಿನಷ್ಟು ನಾಣ್ಯವಾದದ್ದು ಅಲ್ಲ. ಆದ್ದರಿಂದ ತೆಗೆಯುವವರೆಲ್ಲಾ ಇದನ್ನು ತೆಗೆದು ಸಂತೋಷಪಡಬೇಕಾಗಿ ಕೋರುತ್ತೇವೆ. [77-16]



ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—
ಪಿ. ಆರ್ ವೆಂಕಟರಮಣ ಅಂಡ್ ಕಂಪೆನಿ,
ನಂ. 7, ಕೋಪ ವೆಂಕಟಾಚಲಯ್ಯರ್ ಬೀದಿ, ಮದರಾಸು.

ಕುಂತಲಕೇಸಂದ ತೈಲವು.

147-46

[illegible] ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ [illegible] ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ [illegible] ಇದರ ಉತ್ತಮೋತ್ತಮ ಗುಣಗಳನ್ನು ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ. 10 ಆಣೆ ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ —ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್

ಬೋಧಕರ ಸಹಾಯವಿಲ್ಲದೆ ಹಾರ್ಮೋನಿಯಂ ಕಲಿಯುವ ಪುಸ್ತಕ.

ಕ್ರಯ 0-8-0

ಇದು ಪ್ರಖ್ಯಾತಿಯನ್ನು ಪಡೆದ ಪಂಡಿತ ಮಿತ್ರದಾಸರವರಿಂದ ಪಂಡಿತರಿಗೂ ಮತ್ತು ಸಾಮಾನ್ಯರಿಗೂ ಉಪಯೋಗವಾಗುವ ಉದ್ದೇಶ್ಯ ಈ ನೂತನ ಗ್ರಂಥವನ್ನು ಪ್ರಚುರಿಸಲ್ಪಟ್ಟಿರುತ್ತೆ. ಇದರಲ್ಲಿ 10 ಪಾಠಗಳಿಗಾಗಿ ಸ್ವರಗಳೂ ಮತ್ತು ಹಾರ್ಮೋನಿಯಂ ನುಡಿಸುವ ವಿಧಾನ, ಆರೋಹಣ ಅವರೋಹಣಗಳು, ಮತ್ತು ಸೌಖ್ಯಗುರ್ತು ಮೊದಲಾದವುಗಳು ವಿವರವಾಗಿ ಎಳಹಿಸಲ್ಪಟ್ಟಿರುತ್ತೆ. ಸ್ವಲ್ಪ ಅಂಗ್ಲೇಯ ಬಾಷಾ ಪರಿಜ್ಞಾನವಿರುವವರೆಲ್ಲರೂ ಈ ಗ್ರಂಥದ ಸಹಾಯದಿಂದ ಬೋಧಕರ ಸಹಾಯವಿಲ್ಲದೆ ಬಹು ಸುಲಭವಾಗಿ ಹಾರ್ಮೋನಿಯಂ ನುಡಿಸುವವನ್ನು ಅನ್ಯದೇಶ ಭಾಷೆಯಾದ ಫಾರಸೀ ಪಾಠಗಳನ್ನೂ ಬಹು ಸುಲಭವಾಗಿ ಕಲಿತುಕೊಳ್ಳಬಹುದು. ಈ ಪುಸ್ತಕ ಸ್ವಲ್ಪವೇ ಇರುವುದರಿಂದ ಜಾಗ್ರತೆ ಪಡೆದುಕೊಳ್ಳಿರಿ.

ನಮ್ಮ ವಿಳಾಸ —ಎಮ್. ಆರ್. ಅಂಡ್ ಕೋ,
[119-2] ನಂ 16 ರಂಗ ರಾಮನ ಬೀದಿ, ಮದರಾಸು.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

104 11

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆಸ್ಸುವುದು, ಕೆಮ್ಮುಗಳು, ಶೀತನೆಗಡಿ, ಸ್ನಾಯುರೋಗ, ಪಕ್ಕ, ಬೆನ್ನು ನೋವು, ಚೇಳು ಕಡಿದ ಬಾಧೆ ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟ್‌ನ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ [illegible] ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 1 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು (1) ಎಸ್. ಪೀಟರ್ಸ್, 37 ವರದಮುತ್ತಿಯಪ್ಪನ್ ಬೀದಿ, ಪುಸೈವಾಕ್ಕಂ, ಪೋಸ್ಟ್ ಮದರಾಸ್, (2) ಜಿ ಎಸ್ ಕೆನ್ನ್ಯುಕಿಟ್ಟರು, ಜನರಲ್ ಮರ್ಚಂಟ್, ಕುಮುಟೂರು.

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು

ಮೇಲ್ಕಂಡ ವಿಮಾ ಸಂಸ್ಥೆಯ [illegible] 1912 ನೇ ಇಸವಿಯಲ್ಲಿ ಬಂದ "ಇಂಡಿಯನ್ ಲೈಫ್ ಅಷೂರೆನ್ಸ್ ಕಂಪನೀಸ್ ಆಕ್ಟ್" ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಧರ್ಮಾ [illegible] ಜೀವಜಾತ ಮೊಬಲಗು ಸರ್ಕಾರ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ [illegible] ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ. [illegible] ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹವಾದಲ್ಪಟ್ಟು ವಿಮೇ [illegible] ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುತ್ತದೆ.

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[100-10] ಎಸ್ ಕಪ್ಟ್ರಾನ್, ಬ್ರಾಂಚ್ ಸೆಕ್ರೆಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಸ್ಟರ್ ಗಡಿಯಾರ.

ಇವರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2 1-0 ಮಾತ್ರ 5 ವರುಷಗಳ ಗ್ಯಾರೆಂಟಿ.

ಟಪಾಲು ಖರ್ಚು ಪ್ರತ್ಯೇಕ. 1 ಕ್ಕೆ 4 ಆಣೆ



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾಗಿದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ಕೆಲಸ ನಡೆಯುತ್ತದೆ. ಸಾವಿರಗಟ್ಟಲೆ ಜನಗಳು [illegible] ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ ಬೇಕಾದವರು ಬರೆದು ತರಿಸಿಕೊಳ್ಳಿ.

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,
[120-7] ಪೋಸ್ಟ್ ಬಾಕ್ಸ್, ನಂ 167, ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ.

೧. ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.

ಈ ಸಣ್ಣದಾದ ಕೈಗಡಿಯಾರ ವಾಚ್ ಕೇಸ್ ಲಿವರ್ ಚಕ್ರ [illegible] ಬಹು ಬಲಿಷ್ಠವಾದ [illegible] ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ. ಟಪಾಲು ಖರ್ಚು ಸಹಿತ ಕ್ರಯ ರೂ 5-0-0. ಅಕ್ಟೋಬರ್ ಸಪ್ಟಂಬರ್ ಅಪೇಕ್ಷೆಯುಳ್ಳವರು ತರಿಸಿಕೊಳ್ಳುವವರಿಗೆ 1 ನೆ ಬಹುಮಾನವಾಗಿ ಬೆಲೆ ಕಡಿಮೆಯಾಗಿ ಒಂದು ಮೇಲಾದ ಟೈಂಪೀಸು ಒಂದನ್ನು ಉಚಿತವಾಗಿ ಕೊಡಲ್ಪಡುತ್ತೆ.

ವಿಳಾಸ —ಧನಲಕ್ಷ್ಮಿ ಅಂಡ್ ಕಂಪೆನಿ,
[120 7] ರಾಮುಕಾರ್ ಪೇಟೆ ಪೋಸ್ಟು, ಮದರಾಸು

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲದಿರುವುದಕ್ಕೆ ಕಾರಣ ಏನೆಂದರೆ, ನಿನಗೆ ಯಾವ ನೋವು ಉಂಟಾಗಿರಲಿ— ನಿನಗೆ ದಿನಕ್ಕೆ [illegible] ಸರಿಯಾದ ಮಲಪ್ರವೃತ್ತಿಯಾಗುತ್ತದೆಯೋ ಎಂದು ನಿನ್ನನ್ನೇ ನೀನು ಕೇಳಿಕೊ. ಹಾಗೆ ಆಗದಿದ್ದರೆ ದೋನರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ. ಮಾರನೇ ದಿನ ಬೆಳಗ್ಗೆ ಸುಲಭವಾಗಿ ಕಾಲ ಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು. ಮಲಬಂಧನೆ ಬಹಳ ಅಪಾಯಕರ ಏಕೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳಿಗೆ ಉಂಟಾಗುವುದೆಂಬುದನ್ನು ಇವರಿಂದ ತಿಳಿಯಬಹುದು [illegible]—ಪಿತ್ತಕೋಶ [illegible], ಗಾಬರಿ, ಆಲಸ್ಯ, ಎದೆಯು [illegible], ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆನೋವು, ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವು ನಾಶವಾಗಿ ಹೋಗುವುದು.



(೧೨ ಆಣೆ ಬುಡ್ಡಿ ಪರಿಮಾಣ)

ದೋನರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು. ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದೊಳಗಿರುವ ಮಲವನ್ನು ಕಷ್ಟವಿಲ್ಲದೆ ಪಾಲುವನ್ನೂ ಸುಲಭವಾಗಿಯಿಂದ ಹೊರಡಿಸಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ರೋಗನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [42-48]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೪ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುವು, ಅಥವಾ ದೋನ್, ಪಿ. ಓ ಬಾಕ್ಸ್ ೫೦, ಬೊಂಬಾಯಿ—ಇವರಲ್ಲಿ ದೊರೆಯುತ್ತವೆ.

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕರವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕ್ಕಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs. OAKES & Company, Mount Road, Madras.

[4-40] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. H. Gulliford Proprietor and Manager, Wesleyan Mission Press Mysore. 7/8/1913.

REGISTERED
M. 30

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—೧೯೧೩ನೇ ಇಸವಿ ಆಗಸ್ಟ್ ತಾರೀಖು ೧೪ನೇ ಗುರುವಾರ. ಸಂಚಿಕೆ ೧೧

ಉತ್ತಮವಾದ ಶೈಲಿ ಸರಳವಾದ ಮಾತುಗಳು !!

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕಮಹಾಶಯರುಗಳೇ —ಮಾನ್ಯತೆಯು ಬೇಕಾದರೆ, ವಾಗ್ವೈಚಿರಿಯೊಕಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಷ್ಟವಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ವಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹ ಶಕ್ತಿಯಲ್ಲಾಶೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿ ಕಥೆಗಳನ್ನು ಓದಿರಿ ೩೬೦ ಪುಟಗಳಿಂದ ಕೂಡಿದ ೭೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ ಬೆಲೆ ರೂ ೧ ೪-೦ ಮಾತ್ರ ಈಗಲೇ ಬರೆಯಿರಿ [167-1]

ವಿಳಾಸ:—ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ಕು ಡಿಪ್ಪೋ, ಚಿಕ್ಕ ಪೇಟೆ, ಬೆಂಗಳೂರು ಸಿಟಿ.

ಇದೊಂದು ಹೊಸ ನಮೂನೆ ವಾಚ್ ! ಈಗತಾನೇ ಸೀಮೆಯಿಂದ ಬಂದಿದೆ!!

ನಿಮ್ಮ ಹಣವನ್ನು ಅಲ್ಪಕ್ರಯದ ವಾಚ್‌ಗಳಿಗೆ ಹಾಕಿ ಕಳೆದುಕೊಳ್ಳಬೇಡಿ.

ಬೆಲೆ ಸುಲಭ ! ಗುಣ ವಿಶೇಷ ! ಜಾಗ್ರತೆ ಆರ್ಡರು ಕೊಡಿ !!!

(1) ಘಂಟೆ, ನಿಮಿಷ, ವಾರ, ತಾರೀಖು, ತಿಂಗಳೂ ಸಹ ತೋರಿಸತಕ್ಕ ವಾಚ್ 1 ಕ್ಕೆ ರೂ 5 12 0 ಇಷ್ಟು ಸಲಕರಣೆಗಳುಳ್ಳ ವಾಚ್ ಇಷ್ಟು ಕಡಮೆ ಬೆಲೆಗೆ ಈ ವರೆಗೂ ಯಾರೂ ಕೊಟ್ಟಿಲ್ಲ (2) ಘಂಟೆ, ನಿಮಿಷ, ಸೆಕೆಂಡ್ ತೋರಿಸಿ, ಅಲಾರ , ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್ 1 ಕ್ಕೆ ರೂ 3-4 0 (3) ಗ್ಯಾರಂಟಿಯಾದ ನಿಕ್ಕಲ್ ವಾಚ್ ಸರಪಣಿ 1 ಕ್ಕೆ 12 ಆಣೆ (4) ಜಂಟಲ್‌ಮೆನ್ ಲಿವರ್ ಪ್ರೆಸ್ ವಾಚೆಂಬ ನಿಕ್ಕಲ್ ಕೇಸಿನ ಗ್ಯಾರಂಟಿಯಾದ ವಾಚ್ 1 ಕ್ಕೆ ರೂ 8 12 0 (5) ಅಚ್ಚ ಬೆಳ್ಳಿ ಕೊರಳಸರದ ಹಾಕುವ ಸರಪಣಿ 1 ಕ್ಕೆ ರೂ 1 1-0 (6) ರಬ್ಬರ್ 6 ಪಿಚ್ಚರ್‌ಗಳಿರುವ ರಬ್ಬರ್ ಮೊಹರುಗಳಿಗೆ ಕ್ರಯ ರೂ 1 0 0 ಇದನ್ನು ನಿಮ್ಮ ಇಷ್ಟ ಬಂದಕಡೆ ನೀವೇ ಮುದ್ರಿಸಿಕೊಳ್ಳಬಹುದು ಮೇಲ್ಕಂಡ 6 ಪಿಚ್ಚರ್‌ಗಳನ್ನು ತರಿಸಿಕೊಳ್ಳುವವರಿಗೆ ಸಹ ಸದಾ ತಾಯಿ ಇರುವ ಮೆತ್ತೆ (ಸೆಲ್ಫಿಂಕ್ ಪ್ಯಾಡ್), ರಬ್ಬರ್ ಸ್ಟಾಂಪ್‌ಗಳನ್ನಿಡುವ ಸುಂದರವಾದ ಪೆಟ್ಟಿ, ಇವೆರಡು ಬಹುಮಾನ ಕೊಡುವದಲ್ಲದೆ ಪ್ಯಾಕಿಂಗ್ ಪೋಸ್ಟೇಜು ಸಹ ಮಾಫಿ ಮಾಡಿದೆ ಒಂದೇ ಸಾರಿ 6 ಪೆಟ್ಟಿ ತರಿಸಿಕೊಳ್ಳುವವರಿಗೆ 1 ಪೆಟ್ಟಿ ಇನಾಂ ಅಂದರೆ ಬಹುಮಾನಸಹಿತ 7 ಪೆಟ್ಟಿಗೆ 6 ರೂಪಾಯಿ ಮಾತ್ರ, ಪೋಸ್ಟೇಜು ಮಾಫಿ

ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
[166 1] ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

THE MYSORE GOVERNMENT SECURITY
LIFE AND MARRIAGE ASSURANCE COMPANY, LIMITED.
HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No III OF 1895)

CAUTION —Before you go in for a Provident Life or Marriage Policy, please ask for a copy of our Company's prospectus which will explain to you the mode of working of the present day provident companies working in India and enables you to select a good institution where your hard earned money will be safe

SPECIAL AND ATTRACTIVE FEATURES OF THE COMPANY

1 ABSOLUTE SECURITY

The Company has got a capital of **one lakh** and its funds are invested in the **Mysore Government** and other approved securities The policy holders moneys are **guaranteed** and the **capital** and **reserve funds** of the Company are liable to the same

2 MARRIAGE SCHEME

A policy holder can subscribe from Re 1 to **Rs 6** every month **Double the premiums paid** to the Company will be paid to the married **on the marriage day** as maximum bonus

3 LIFE SCHEME

A policy holder can subscribe from As 8 to **Rs 2** per month Both males and **females**, of ages from 18 to **60** are insured **without medical examination** The maximum bonus will be paid to **the policy-holders themselves** on surviving **15 years** or to their nominees in case of their earlier death

WANTED.

Energetic and honest **Chief Agents** for every Presidency in India and Taluk Agents in each and every taluk of **the Mysore Province** on commission to represent the Company

For further particulars and prospectuses please apply **with one anna stamp** and your previous experience in the line to,—

Mr. M. L. NAGANNAH,
Managing Agent,
MYSORE.

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತುಹೋಗುತ್ತೆ ಆದಕಾರಣ ಸಪೋಕತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿಕೊಡುತ್ತ, ಪ್ರಾಣಕೊಡುತ್ತ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಬೆಳಚಕಿಸುವವು ನಿಬಿಡವಾದ ನೀಲುಇವ್ವದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತ ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತ ಸುಂಡಿನ ಹೊಟ್ಟನ್ನು ಅಳಿಸುತ್ತ ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಕಾಪಾಡುವ ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ. ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0-7-0

ನಮೂನೆಯು ಬೇಕೆಂದರೆ ಒಂದು ಆಣೆಯ ಚೀಟನ್ನು ಕಳುಹಿಸಿರಿ
ಮೈಸೂರು ಎಗ್ಸಿಭಿಷನ್ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಸಿಭಿಷನ್ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ಮನ್ನಾರ್‌ಗುಡಿ ಮಿರ್ಜಾ ಸೆಕ್ರೆಟರಿ ಮಿ| ಡಿ ಸಾಲಿಯುರ್‌ರವರು ಬರೆಯುವದು—"ದಯಮಾಡಿ ಇನ್ನು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ.—ಹೊಸದಾಗಿ ಇಟ್ಟಿರುವ ಪಾತ್ರೆಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಥಾಯಿತುಕಳೊಸ್ಕರ ಬಿಕರಿಮಾಡುತ್ತಾರೆನ್ನುವದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು. ಅಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕೆಪಿಟೋಲಬಾಮ್"—ಮಳೆ ಮತ್ತು ಚಳಿಯ ಥಂಡಿ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಲಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ನೋಯುವುದು, ಸಂಧುವಾತ, ಮಸ್ತಕಶೂಲಿ, ಹೆಚ್ಚಾಗಿ ಮೆಹನತ್ತು ಪಟ್ಟದ್ದರಿಂದ ಕ್ಷೀಣವಾಗುವದು, ಸೊಂಟನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ ಬಾಟ್ಲಿ 1ಕ್ಕೆ ಕ್ರಯ 0 8 0 ಟಿ ಖ ಪ್ರತ್ಯೇಕ.

ಒಡಮುನ್ನ ಮಲೇರಿಯ ಪಿಲ್ಸ —ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮುನ್ನ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿದೆ ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ ಇದು ದೇಶದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ. ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ ದಿನಕ್ಕೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1-0 0 3 ಬಾಟ್ಲಿಗಳಿಗೆ ರೂ 2-8-0 ವಿ ಪಿ ಖರ್ಚು ಪ್ರತ್ಯೇಕ

ಏಜೆಂಟ್, ದಿ ಉಲ್ಫ್ ಮಾರ್ಟ್, ಮಂಗಳೂರು

ಮೇಲೆಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ — [8-31]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸೀದ್, ಬೊಂಬಾಯಿ.

ಮೂರು ಸಿದ್ಧೌಷಧಗಳು.

ವಕ್ತ್ರಾನಂದಕರೀವಮಾತ್ರೆ, ಮೂಲಿಕೆ ಪರಿಮಳದ್ರವ್ಯಗಳಿಂದ ತಯಾರಿಸಿದ ಒಂದನ್ನು ತಾಂಬೂಲದೊಡನೆ ಅಥವಾ ಬರೀ ಬಾಯಿಗೆ ಸೇವಿಸಿದರೆ ದುರ್ಗಂಧ ಹೋಗಿ ಸುವಾಸನೆಯಾಗುತ್ತೆ, ರಕ್ತವನ್ನು ಶುದ್ಧಿಮಾಡುತ್ತೆ. ತರಳು, ಗಂಟಲು, ಬಾಯಿ, ಇವುಗಳು ಹುಣ್ಣಾದರೆ ಅರ್ಧ ತೋಲಾ ಬಾದಾಮಿ ಎಣ್ಣೆಯಲ್ಲಿ ಒಂದು ಮಾತ್ರೆ ತೇದು ಮಲಗುವ ಸಮಯದಲ್ಲಿ ತೆಗೆದುಕೊಂಡರೆ ಗುಣವಾಗುವದು. 200 ಮಾತ್ರೆ ಶೀಸಾ 1 ಕ್ಕೆ 4 ಆಣಾ. ಇಸಬು, ಖಜ್ಜಿ, ತುರಿ ಇವುಗಳಿಗೆ ವಾಮ ಹರಿಣೀ ಪೌಡರ್ ತೋಲಾ 1 ಕ್ಕೆ 2 ಆಣೆ. ಬಾಣಂತಿಯರು ಮಕ್ಕಳ ಶೀತ ಕೆಮ್ಮು ಇವುಗಳಿಗೆ ಉಪಯೋಗಿಸತಕ್ಕ ಕಸ್ತೂರಿಮಾತ್ರೆ 25 ಮಾತ್ರೆಗೆ 8 ಆಣೆ. ಬಾಣಂತಿಯರು ಉಪಯೋಗಿಸತಕ್ಕ ಖಂಡಾದ್ರಕವೆಂಬ ಆರೋಗ್ಯದ ಲೇಹ್ಯ 12 ತೋಲಾ ಡಬ್ಬಿಗೆ 6 ಆಣಾ. ಅಪೇಕ್ಷಿಸುವರು ತಮ್ಮ ವಿಳಾಸ ವಿಶದವಾಗಿ ಬರೆಯಬೇಕು. ಅಂಚೆ ಹಾಸಲು ಬೇರೆ, ತರಿಸಿಕೊಳ್ಳತಕ್ಕವರು ವಹಿಸತಕ್ಕದ್ದು. 1 ಡಜನ್‌ಗೆ 1 ಶೀಸಾ ಡಿಸ್ಕೌಂಟು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್. ಮುಂಚೆ ಸ್ವಲ್ಪ ತರಿಸಿ ನೋಡಿ ನಂತರವಾದರೂ ತರಿಸಿಕೊಳ್ಳಿ. [131-7]

ನಮ್ಮ ವಿಳಾಸ :—ಶೇಷಭಟ್ಟರು,
ನೇಟಿವ್ ಪಂಡಿತ್, ಪೂರ್ಣಯ್ಯನವರ ಬೀದಿ, ಶ್ರೀರಂಗಪಟ್ಟಣ.

ಬೆಂಗಳೂರು-ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ,
ಲಿಮಿಟೆಡ್.

ಷೇರುದಾರರಿಗೆ ನೋಟೀಸು.

ಮೇಲ್ಕಂಡ ರೈಲ್ವೆ ಕಂಪನಿಯ ಷೇರುದಾರರಿಗೆ ಈ ನೋಟೀಸಿನ ಮೂಲಕ ತಿಳಿಯಪಡಿಸುವುದೇನೆಂದರೆ—

ಷೇರು ಒಂದಕ್ಕೆ 1913 ನೇ ಜೂಲೈ ತಾ. 13 ರ ತನಕ ಐದು ರೂಪಾಯಿ ವರೆಗೆ ಪಾವತಿ ಮಾಡಲ್ಪಟ್ಟಿರುವ ಎಲ್ಲಾ ಷೇರು ಮೊಬಲಗುಗಳನ್ನೂ ಕಂಪನಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ 38 ನೇ ಆರ್ಟಿಕಲ್ ಷರತ್ತಿನ ಪ್ರಕಾರ ಕಂಪನಿಗೆ ಸೇರಿಸಿಕೊಳ್ಳಲ್ಪಡತಕ್ಕದ್ದೆಂದು 1913 ನೇ ಜೂಲೈ ತಾ. 13 ರಲ್ಲಿ ನಡೆದ ಮೀಟಿಂಗಿನ ತೀರ್ಮಾನವನ್ನು ಅನುಸರಿಸಿ ಮುಟ್ಟುಗೋಲು ಹಿಡಿಯಲಾಗಿದೆ.

1913 ನೇ ಜೂಲೈ 13 ನೇ ತಾರೀಖು ವರೆಗೆ ಷೇರು ಒಂದಕ್ಕೆ ಐದು ರೂಪಾಯಿಯೂ, ಅದಕ್ಕಿಂತ ಜಾಸ್ತಿಯಾದ ಮತ್ತು ಹತ್ತು ರೂಪಾಯಿ ಒಳಗೂ ಪಾವತಿ ಮಾಡಿರುವಂಥಾ ಷೇರುದಾರರಿಗೆಲ್ಲಾ ಎರಡು ತಿಂಗಳ ವಾಯಿದೆ ಅಂದರೆ 1913 ನೇ ಸೆಪ್ಟಂಬರ್ ತಾ. 15 ರ ವರೆಗೆ ವಾಯಿದೆ ಕೊಡಲ್ಪಟ್ಟಿದೆ. ಈ ತಾರೀಖು ಗತಿಸಿದ ಮೇಲೂ ಯಾರಯಾರ ಷೇರುಗಳು ಬಾಕಿಯಲ್ಲಿ ಇರುತ್ತವೆಯೋ ಅಂಥಾ ಷೇರುಗಳನ್ನೆಲ್ಲಾ ಕಂಪನಿಗೆ ಮುಟ್ಟುಗೋಲಾಗಿ ಸೇರಿಸಿಕೊಳ್ಳಲ್ಪಡುತ್ತೆಂದು ಈ ಮೂಲಕ ತಿಳಿಸಿದೆ. [159-3]

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಬೆಂಗಳೂರು ಛೇರ್ಮನ್,
ತಾ. 15 ನೇ ಜೂಲೈ 1913. ಬಿ. ಸಿ. ಎಲ್. ರೈಲ್ವೆ ಕಂಪನಿ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?
ಹಾಸನದ ಟೋಪಿ ಅಲ್ಲವೋ?
ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-33

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳುಪು, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ., ೧ ರೂ. ೬ ಆ.; ೧ ರೂ. ೪ ಆ.

ಚುಕ್ಕಿಯುಳ್ಳ ಟೋಪಿಗಳು ರೂ. ೧-೮; ರೂ. ೧-೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ. ೨.

ದಾರದ ಟೋಪಿಗಳು ೧ ರೂ. ೧೨ ಆ.; ೧ ರೂ. ೮ ಆ., ೧ ರೂ. ೬ ಆ.

ಮುಸುಕಿನ ಟೋಪಿಗಳು ೧ ರೂ. ೮ ಆ., ೧ ರೂ. ೬ ಆ.

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ.—

ಮ್ಯಾನೇಜರ್, ಹಾಸನದ ಟೋಪಿ ಕಾರಖಾನೆ, ಹಾಸನ.

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು.

1-33



ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಿನಲ್ಲಿ ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದನಾಗುವುದು.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಶಾಶ್ವತವಾಗಿ ನಿವಾರಣೆಮಾಡುತ್ತದೆ. ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ, ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ.

ಪ್ರತಾಪಕಂಠೀರವ ಚರಿತ್ರೆ.

(1) "ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ" ಎಂಬ ನೀತಿ; (2) ಸ್ತ್ರೀಧರ್ಮ, ಸ್ತ್ರೀಬುದ್ಧಿಕೌಶಲ್ಯ, ಸ್ತ್ರೀಯುಕ್ತಿ-ಸಾಹಸ-ಚಾತುರ್ಯ, (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು, (4) ವನ, ಸರಸ್ಸು, ಆರಾಮ ವರ್ಣನೆಗಳು, (5) ಮನುಷ್ಯಯತ್ನಕ್ಕೆ ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು, (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭ ಶೈಲಿ; (7) ಸರಪಣಿಯಂತೆ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ. ಕ್ರಯ —1 ರೂಪಾಯಿ, ಟಪಾಲ್ ಹಾಸಲು ಬೇರೆ.

[16-25] ನಮ್ಮ ವಿಳಾಸ.—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಡೋಂಗರೆ ಇವರ ಬಾಲಾಮೃತ.

[150-

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಗುಣವಂತಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೨ ಆಣೆ, ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು:



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಜೋತೆತ (ಭಾರ), ಮೈ ನಡುಕ, ಶೀತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಜಾಗ್ರತೆಯಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹುತುಪೂತಿ, ಮಕ್ಕಳ ಎಳವು, ಜ್ವರ, ನಟ್ಟುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ. [136-50]

೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮಾರಿಕೆಂದು ತೋರಿ ಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರ ಮೂತ್ರವು ಕಟ್ಟಿದ ಕೂಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿ ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ :—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್—ಅಜ್ಮೀರ್. ಬ್ರಾಂಚಾಫೀಸ್—ಬೆಂಗಳೂರು ಸಿಟಿ.

ಮೇಲ್ಕಂಡ ವಿಮೆ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್‌ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭರವಸೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿನ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ. ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು.

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[109-11] ಎಸ್. ಕಟ್ಟೂರ್, ಬ್ರಾಂಚ್ ಸೆಕ್ರಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ.

ಹಾಸನದ ಷಾಪ್ ಮೊಹಿಯುದ್ದೀನ್ ಸಾಹೇಬರ ಅಂಗಡಿಯಲ್ಲಿ

ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ ಬಹಾದುರ್‌ಯವರ ಸರಕಾರದವರು ಹೊಸದಾಗಿ ಜಾರಿಯಲ್ಲಿ ತಂದಿರುವ ಅಳತೆಮಾಡುವ ಸೇರುಗಳು ಮತ್ತು ತೂಕಮಾಡುವ ಬಟ್ಟುಗಳು ಮಾರಲ್ಪಡುತ್ತವೆ. ಬೇಗನೆ ಕೊಂಡುಕೊಳ್ಳಿ. [165-]

ವಿಳಾಸ :—ಷಾಪ್ ಮೊಹಿಯುದ್ದೀನ್ ಸಾಹೇಬರ ಅಂಗಡಿ, ಹಾಸನ.

NOTICE

Enquiries for Superior Yarns of vari[ous] counts, produced at the Gokak Mills, sho[uld] be sent to the undersigned, who are appoi[nt]ed Sole Agents for Southern India.

Apply M. S. NARAVAN & Co.,
[151-4] Avenue Road, Bangalore C

ಸಮಸ್ತ ವಿಧವಾದ ನೋವೂ ಇಂತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಬೆನ್ನಿನ ಸೆಳೆತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ಬಿಕರಿಯಾಗುತ್ತಲಿವೆ ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ಬಿಕರಿಯಾಗುವದು

ತುಳಕಡ್ಡಿ ಔಷಧ ಡಬ್ಬಿಗೆ 6 ಆಣೆ, 12 ಕುಪ್ಪಿಗೆ ರೂ 3 8-0 ಹಲ್ಲುಪುಡಿ ಡಬ್ಬಿಗೆ 2 ಆಣೆ 12 ಕುಪ್ಪಿಗೆ ರೂ 1-2 0 ವಿ ಪಿ. ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ [42-20]

ವಿಳಾಸ —ಅಮೃತಾಂಜನ ಡಿಪೋ, ೧೯ ಫ್ರೆಯರ್ ರೋಡ್, ಫೋರ್ಟ್, ಬೊಂಬಾಯಿ

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಧರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯ ನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (೫) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವಸಹಿತ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವ ಕಾರಣ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ. ಇದರ ಕ್ರಯ ಪ್ರತಿ 1 ಕ್ಕೆ 1 8 0, ಟಪ್ಪಾಲು ಹಾಸಲು 4 ಆಣೆ

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಕಥಾರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ 4 ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127-8]

ನಮ್ಮ ವಿಳಾಸ —ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ

ಗೃಹಕೃತ್ಯದ ನೋಟೀಸು

ಮಾಲೂರು ತಾಲ್ಲೂಕು ಲಕ್ಕೂರಿನಲ್ಲಿರುವ ಅಗ್ರಹಾರದ ಮಲ್ಲಯ್ಯನ ಮಗ ದೊಡ್ಡ ಮುನಿಯಪ್ಪ ತಿಳಿಯಪಡಿಸುವುದೇನೆಂದರೆ—ನಮ್ಮ ತಂದೆ ಮಲ್ಲಯ್ಯನಿಗೆ ದೊಡ್ಡ ಮುನಿಯಪ್ಪ, ಚಿಕ್ಕ ಮುನಿಯಪ್ಪ ಎಂಬ ಇಬ್ಬರು ಮಕ್ಕಳು ಚಿಕ್ಕ ಮುನಿಯಪ್ಪನೆಂಬುವನು ಕುಷ್ಠರೋಗದಿಂದ ಮೃತನಾದನು ಈಚೆಗೆ ಮಲ್ಲಯ್ಯನೂ ಮೃತನಾದನು ನಮ್ಮಗಳಿಗೆ ಪಿತ್ರಾರ್ಜಿತವಾದ ಆಸ್ತಿಯನ್ನು ಮೇಲ್ಕಂಡ ಚಿಕ್ಕ ಮುನಿಯಪ್ಪನ ಹೆಂಡತಿ ರಾಮಕ್ಕನೆಂಬುವಳೂ, ಸದರಿ ಚಿಕ್ಕ ಮುನಿಯಪ್ಪ ಸಾಕಿದ್ದ ಕುರುಡನಾದ ಮುನಿಯಪ್ಪನೂ ಸಹಾ ಸದರಿ ರಾಮಕ್ಕನ ತಂದೆ ವಗೈರೆಯ ದುರೋಧನೆಯಿಂದ ನಮಗೆ ಮೋಸಮಾಡಬೇಕೆಂದು ಪಿತ್ರಾರ್ಜಿತ ಆಸ್ತಿಯನ್ನು ಪರಾಧೀನ ಮಾಡಬೇಕೆಂದು ಉದ್ಯುಕ್ತರಾಗಿರುವಂತೆ ತಿಳಿಯಬರುತ್ತೆ ಸಬ್ ರಿಜಿಸ್ಟರ್ ಆಫೀಸಿನಲ್ಲಿ ಪರಾಧೀನ ಮಾಡಕೂಡದೆ ವ್ಯವಹಾರಕವಾಗಿದೆ ಮೇಲ್ಕಂಡವರುಗಳಿಂದ ನಮ್ಮ ಪಿತ್ರಾರ್ಜಿತವಾದ ಸ್ವತ್ತು ಯಾವದಾದರೂ ಯಾರಾದರೂ ವಿಕ್ರಯವೇ ಮೊದಲಾದ ಪರಾಧೀನ ಮಾಡಿಕೊಂಡಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲವೆಂದೂ, ನಮ್ಮ ಎಲ್ಲಾ ನಷ್ಟಕ್ಕೂ ಗುರಿಯಾಗಬೇಕಾದೀತೆಂದೂ ಈ ಮೂಲಕ ಎಚ್ಚರಿಸಿರುತ್ತೆ ನಮ್ಮ ತಾಯಿ ನಂಜಮ್ಮನೂ ಸಹಾ ಹಾಜರಿರುತ್ತಾಳೆ

[163 1] ದೊಡ್ಡ ಮುನಿಯಪ್ಪನ ರುಜು

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಖ್ ಸಮೇತ

ರೂ 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ

ಟಪಾಲು ಛಾರ್ಜು ಪ್ರತ್ಯೇಕ 1 ಕ್ಕೆ 1 ಆಣೆ

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರುಮಾಡಲ್ಪಟ್ಟದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರಮಾಡಿದಾಗ್ಯೂ ನಿಲ್ಲದೆ ನಡೆಯುತ್ತದೆ ಸಾವಿರಗಟ್ಟಲೆ ಗಡಿಯಾರಗಳು ಖರ್ಚಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ ಕೂಡಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,

[129-8] ಪೋಸ್ಟ್ ಬಾಕ್ಸ್, ನಂ 167 ಮದರಾಸು

ಮುಖ್ಯವಾಗಿ ಗಮಿನಿಸಿ ಓದಿರಿ

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 5 0 0 ಇದನ್ನು ಸೆಪ್ಟಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ಧನಲಕ್ಷ್ಮಿ ಅಂಡ್ ಕಂಪೆನಿ,

[129 8] ಸಾಹುಕಾರ್ ಪೇಟೆ ಪೋಸ್ಟು, ಮದರಾಸು

ನಮೂನೆ ಮುಫತ್ತು
ಕೇಶಕುಸುಮಾಕರ ತೈಲವು.

ಸಾಟಿಯಿಲ್ಲದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸಮಾಡುವದರಲ್ಲಿಯೂ, ಬಕ್ಕತಲೆಯಲ್ಲಿ ಕೇಶವನ್ನು ಬೆಳೆಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ, ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ, ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುದ್ದಿ ತೈಲ ಕ್ರಯ 10 ಆಣೆ ಮೂರು ಬುದ್ದಿಗಳ ತೈಲ ಕ್ರಯ ರೂ 1 12 ಆ ಆರು ಬುದ್ದಿಗಳ ತೈಲ ಕ್ರಯ ರೂ 3-4 ಆ ಡಜನ್ ಬುದ್ದಿಗಳ ಕ್ರಯ ರೂ 6

ವಿ ಪಿ ಅಂಚೆ ಹಾಸಲು ಪ್ರತ್ಯೇಕ

ರಾಜವೈದ್ಯ, ನಾರಾಯಣಜೀ ಕೇಶವಜೀ, ಆಯುರ್ವೇದೋದಯ

[82 16] ಔಷಧಾಲಯ, 177 ಚೀನಾ ಬಜಾರ್ ರೋಡ್, ಮದ್ರಾಸು

ಇಂಥಾ ಸಮಯ ಕಳೆಯಬೇಡಿ ಹಣಕ್ಕೆ ಖಾತರಿಯಾದ ಮಾಲು

ಮಕ್ಕಳಿಗೆ ಬಹಳ ಸುಂದರ ಉಡುಪು

ನಾಜೂಕಾದ, ಸೊಗಸಾದ, ಆಹ್ಲಾದಕರವಾದ ಬಹು ಮೇಲಾದ ಜಪಾನ್ ರೇಷ್ಮೆಯಿಂದ ತಯಾರಿಸಿ ಎಲ್ಲಾ ವಯಸ್ಸಿನ ಮಕ್ಕಳಿಗೂ ಯೋಗ್ಯವಾಗಿರುವ ನಿಲುವಂಗಿ ಅಂಚುಗಳು ಬಹು ಸುಂದರವಾದ ಸೂಜಿ ಕೆಲಸ ಮಾಡಿದ ಯಂತ್ರಾಯ್ಡರಿ ಮಾಡಿದೆ ಈ ಮನೋಹರವಾದ ನಿಲುವಂಗಿ ಹಾಕಿಕೊಂಡ ನಿಮ್ಮ ಮಕ್ಕಳು ಬಹಳ ಸುಂದರವಾಗಿ ಕಾಣುವರು ಈ ನಿಲುವಂಗಿಗಳನ್ನು ಹಸರು ರೋಜಾ, ನೀಲಿ, ಹಳದಿ ಮೊದಲಾದ ಬಣ್ಣಗಳಲ್ಲಿ ದೊರಕುವವು ನಿಮಗೆ ಒಂದಾದರೂ ಬೇಕೇ ಬೇಕು [161-1]

ಸೈಜು	12 16	16-18	19-21	22-25	26 30
ಕ್ರಯ	1-6 0	1-10-0	1-14-0	2-12 0	3-12-0

ನಮ್ಮ ವಿಳಾಸ —ದಿ ಓರಿಯಂಟಲ್ ಪಾಪ್ಯುಲರ್ ಏಜನ್ಸಿ,

ಧಾರಾವಿ, ಬೊಂಬಾಯಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

26—7—1913 ರಿಂದ 1—8—1913 ರ ವರೆಗೆ

ಸ್ಥಳ	ಪ್ಲೇಗ್ ಬಂದಿದ್ದು	ಪ್ಲೇಗ್ ಸತ್ತದ್ದು	ಕಾಲರಾ ಬಂದಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	21	19	5	6
ಮೈಸೂರು ,,	16	9	8	5
ಕೋಲಾರ್ ,,	1	1	6	3
ಕೋಲಾರ್ ಚಿನ್ನದ ಗಣಿಗಳು	1	0	0	0
ತುಂಕೂರು ಡಿಸ್ಟ್ರಿಕ್ಟು	20	15	5	5
ಹಾಸನ ,,	5	3	9	3
ಚಿತ್ರದುರ್ಗ ,,	0	0	5	2
ಕಡೂರ್ ,,	12	7	44	39
ಶಿವಮೊಗ್ಗಾ ,,	18	8	8	6
ಜುಮ್ಲಾ ..	94	62	90	69

* ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ವರ್ಷಋತು ಶ್ರಾವಣ ಶುದ್ಧ ಚತುರ್ದಶಿ ಶುಕ್ರವಾರದಿಂದ ಶ್ರಾವಣ ಬಹುಳ ಚೌತಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಆಗಸ್ಟ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶೇಕಾಸಿಂಹ ತೇದಿ
15	ಶುಕ್ರ	ಚತುರ್ದಶಿ	42 5	ಉತ್ತರಾಷಾ	7-22	31
16	ಶನಿ ‡	ಪೌರ್ಣಮಿ	15-32	ಶ್ರವಣ	11-49	1
17	ಭಾನು	ಪಾಡ್ಯಮಿ	49 59	ಧನಿಷ್ಟ	17-14	2
18	ಸೋಮ	ಬಿದಿಗೆ	54 57	ಶತಭಿಷ	23 23	3
19	ಮಂಗಳ †	ತದಿಗೆ	60 0	ಪೂಭಾ	29-55	4
20	ಬುಧ *	ತದಿಗೆ	0 17	ಉತ್ತ್ರಭಾ	36 28	5
21	ಗುರು	ಚೌತಿ	೩-2	ರೇವತಿ	42-37	6

‡ ಶ್ರಾವಣಶನಿವಾರ, ಋಗ್ಯಜುರುಪಾಕರ್ಮ, ಹಯಗ್ರೀವ ಜಯಂತಿ, ವಿಷ್ಣುಪದಪುಣ್ಯಕಾಲ, ಮಳೆ ನಕ್ಷತ್ರ—ಮಖ 1 ನೇ ಪಾದ ಗಾಯತ್ರೀ ಜಪ † ಮಂಗಳಗೌರೀ ವ್ರತ, ಮಳೆ ನಕ್ಷತ್ರ—ಮಖ 2 ನೇ ಪಾದ * ಸಂಕಷ್ಟಹರ ಚತುರ್ಥಿ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೬ ೮ ೦	೧೭-೪-೦
ಕೆಂಬೂತಿ ಅಕ್ಕಿ ಅವಲ್	೧೬ ೧೨ ೦	೧೭ ೪-೦
,, ,, ದುಯಂ	೧೬ ೦ ೦	೧೭-೦-೦
ಜಾವ್ರಾಣಿ ಅಕ್ಕಿ	೧೬-೮ ೦	೧೭-೪-೦
ಸಣ್ಣಕ್ಕಿ ಅವಲ್	೨೮ ೦ ೦	೧೮-೮-೦
,, ದುಯಂ	೧೭ ೦ ೦	೧೭-೮-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೨೫ ೪ ೦	೧೩-೮-೦
,, ದುಯಂ ,,	೧೪ ೮-೦	೧೨-೮-೦
ಹುರ್ಳಿ ರಾಗಿ ಪಲ್ಲಾ ೧ಕ್ಕೆ	೭ ೧೪ ೦	೫ ೦-೦
ಕಾರ್ರಾಗಿ ,,	೬ ೮ ೦	೪-೧೨ ೦
ಜೋಳ ,,	೭ ೮ ೦	೭ ೪-೦
ಹುಲಸಂದೆ ಪಲ್ಲಾ ೧ಕ್ಕೆ	೧೧ ೦ ೦	೧೩-೧೨-೦
ಬೇಳೆ ಅವರೆ ,,	೧೨-೧೨ ೦	೧೧ ೦-೦
ಹೆಸರು ,,	೨೨ ೦ ೦	೧೪ ೦ ೦
ಉದ್ದು ,,	೧೪ ೮ ೦	೧೬-೦-೦
ಕಡಲೆ ,,	೧೧ ೮ ೦	೧೨-೦-೦
ಎಳ್ಳು ಸೇರು ೧೨೭ಕ್ಕೆ	೨೪ ೦ ೦	೨೪ ೦-೦
ಹುರುಳಿ ಪಲ್ಲಾ ೧ಕ್ಕೆ	೭ ೦ ೦	೭-೦-೦
ಹರಳು ೧೨೭ ಸೇರಿಗೆ	೧೩ ೦ ೦	೧೪ ೦-೦
ಸೀಗೇಕಾಯಿ ಮಣ ೧ಕ್ಕೆ	೨ ೪ ೦	೩-೮-೦
ಮೆಣಸಿನಕಾಯಿ ,,	೪ ೦ ೦	೩-೪ ೦
,, ದುಯಂ	೩ ೦ ೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫ ೦ ೦	ಮಣ ೫ ೮-೦
ಒಳ್ಳೆಣ್ಣೆ ಮಣ ೧ಕ್ಕೆ	೬ ೧೨ ೦	೬-೬-೦
ಹರಳೆಣ್ಣೆ ,, ,,	೫ ೪ ೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫ ೦ ೦	೫ ೪-೦
ಉಪ್ಪು ,, ,,	೭ ೦ ೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧ ೧೨ ೦	೧-೪-೦
,, ಹಳೇದು ,,	೧ ೯ ೦	೦ ೧೪ ೦
ತುಪ್ಪ ಮಣ ೧ಕ್ಕೆ	೨೧ ೮ ೦	೧೯-೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫ ೧೧ ೦	೫ ೦ ೦
ತೆಂಗಿನಕಾಯಿ ೧೦೦ಕ್ಕೆ	೬ ೪ ೦	೬-೦-೦
ಅಡಕೇಕಾಯಿ ಮಣ ೧ಕ್ಕೆ	೧-೬ ೦	೧ ೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೧ ೧೨ ೦	೧-೮-೦
ಚಿನ್ನ (ಪೌನ್) ಕೆಂಪು	೧೫ ೮-೦	೧೫-೮-೦
,, ,, ಪಸಿಮೆ	೧೫ ೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩ ೦	೨೪-೦ ೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧ ೦ ೦	೮೧-೩-೦

ಕ್ರಯ 3 ಆಣೆ. ಕನ್ನಡ ಟೆಕ್ಸ್ಟಿನ ಪ್ರಶ್ನೋತ್ತರ 5 ಕ್ಕೆ 1 ಹೆಚ್ಚು

ಎಗ್ಸಾಮಿನರ್ ಮಾಸ ಪುಸ್ತಕಕ್ಕೆ ಆಗಸ್ಟ್ ಆಖೈರಿನೊಳಗೆ ಚಂದಾದಾರರಾಗತಕ್ಕವರಿಗೆ ಮೇಲ್ಕಂಡ ಪ್ರಶ್ನೋತ್ತರವಾಗಲೀ, ಟೆಕ್ಸ್ಟ ನೋಟ್ಸಾಗಲೀ ಬಹುಮಾನ. ಚಂದಾ ರೂ 1 4 0 ಟೆಕ್ಸ್ಟ ನೋಟ್ಸ್ 4 ಆಣೆ

ಸಿ ಪುಟ್ಟಯ್ಯ, ಮ್ಯಾನೇಜರ್, ಎಗ್ಸಾಮಿನರ್ ಆಫೀಸ್, ಚಿಕ್ಕಬಳ್ಳಾಪುರ

ಕನ್ನಡ ಇಂಡಿಯನ್ ಪೀನಲ್‌ಕೋಡ್.

ಇಂಡಿಯಾ ಗೌರ್ನರ್ ಜನರಲ್‌ರವರಿಂದ ಮಂಜೂರಾದ ಈ ಆಕ್ಟನ್ನು ಮೈಸೂರ್, ಬೊಂಬೈ, ಮದ್ರಾಸ್, ಅಲಹಾಬಾದ್ ಮುಂತಾದ ಅನೇಕ ಜಡ್ಜಿಗಳ ಅಭಿಪ್ರಾಯಗಳ ಟಿಪ್ಪಣಿ ಸಹಿತ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟಗಳಿಂದ ಬಿಡುಗಡೆಯಾಗಿರುವರು ಇದು ಮುಖ್ಯವಾಗಿ ಪೋಲೀಸ್, ಮ್ಯಾಜಿಸ್ಟ್ರೇಟರು, ಅಧಿಕಾರಿಗಳಲ್ಲಿಯೂ, ಲಾಯರುಗಳಲ್ಲಿಯೂ, ಪಟೇಲ್ ಶ್ಯಾನುಭೋಗರುಗಳಲ್ಲಿಯೂ, ಇತರ ಬಿಸಿನೆಸ್ ಜನಗಳಲ್ಲಿಯೂ ಇರಬೇಕಾದದ್ದು ಅತ್ಯಂತ ಅವಶ್ಯಕವಾದದ್ದು ಕ್ರಯ ಗ್ಲೇಜ್ ರೂ 3-8-0 ರಫ್ ರೂ 2-0 0. ಟಪ್ಪಾಲ್ ಛಾರ್ಜು 0-4 0

ವಿಳಾಸ —ಬಿ ನರಸಿಂಗರಾವ್, ಎಡಿಟರ್, (ಲಾ) ಗೆಜೆಟ್,

[160-2] ಚಿಕ್ಕಪೇಟೆ, ಬೆಂಗಳೂರು ಸಿಟಿ.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

104 12

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಆರಶಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತಸೆಗಡಿ, ಶ್ವಾಸರೋಗ, ಪಚ್ಚು, ಉಳಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲ ಕೊಡಿ ಎಂದು ಕೇಳು ಅವನು ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು (1) ಎಸ್ ಪೀಟರ್ಸ್, 37 ವಣಮಲೆಪಿಳ್ಳೆ ಬೀದಿ, ಪುರಿಸವಾಕಂ, ವೇಪೇರಿ, ಮದರಾಸ್, (2) ಜಿ ಎಸ್ ಕೆನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ವೃತ್ತಾಂತ ಪತ್ರಿಕೆ.

—o—

ಸನ್ ೧೯೧೩ ನೇ ಇಸವಿ ಆಗಸ್ಟ್, ತಾ ೧೪ ನೇ ಗುರುವಾರ

ಮೈಸೂರು ಗವರ್ನಮೆಂಟಿನ ಬಜೆಟ್ಟು

ಈ ವಾರ ಮೈಸೂರು ಗವರ್ನಮೆಂಟಿನವರು ಸರ್ಕಾರಿ ಗಜೆಟ್ಟಿನ ಕೂಡ ಪ್ರಕಟಿಸಿರುವ ಸಂಸ್ಥಾನದ ಆದಾಯವ್ಯಯಗಳ ಅಂದಾಜಾಪಟ್ಟಿಗಳು ಬಹಳ ಸ್ವಾರಸ್ಯವಾಗಿರುತ್ತವೆ ಖಜಾನಾ ಛಕ್ಷಿಯವರಾದ ಮ|| ಚಕ್ರವರ್ತಿಯವರು ಪ್ರಥಮ ಭಾಗದಲ್ಲಿ ಬಹು ವಿಶೇಷವಾದ ವಿಚಾರಗಳನ್ನು ಕುರಿತು ಪ್ರಸ್ತಾಪ ಮಾಡಿರುವರು ಸಂಸ್ಥಾನದ ಜಮಾ ಮತ್ತು ಖರ್ಚು ಬಾಬುಗಳು ಬಹಳವಾಗಿ ಹೆಚ್ಚಾಗುತ್ತಿರುವವೆಂದು ಮುಂದೆ ಹೇಳುವ ಲೆಕ್ಕಗಳಿಂದ ಗೊತ್ತಾಗುತ್ತದೆ

	ನಿಷ್ಕೃಕ 1911 12	ಅಂದಾಜಾ 1912 13	ಶೋಧನೀಯ 1912 13
ಹುಟ್ಟುವಳಿ	2,50,89,894	2,44,60,000	2,73,92,000
ಖರ್ಚು	2,32,01,282	2,78,06,000	2 48,68 000
ಲಾಭ	18,88,612		24,24,000
ನಷ್ಟ		33,46,000	

ಚಾಲ್ತಿ ಅಂದರೆ 1913-14 ನೇ ಸಾಲಿನಲ್ಲಿ 2,57,17,000 ರೂಪಾಯಿ ಹುಟ್ಟುವಳಿಯೂ, 3,13,55,000 ಖರ್ಚು, ಅಂದರೆ ಹುಟ್ಟುವಳಿಗಿಂತ ಖರ್ಚು 56,38,000 ರೂಪಾಯಿ ಹೆಚ್ಚಾದೀತೆಂದು ಅಂದಾಜಾ ಪಟ್ಟಿಗಳನ್ನು ತಯಾರುಮಾಡಿರುತ್ತಾರೆ

ಮೇಲ್ಕಂಡ ಲೆಕ್ಕಗಳನ್ನು ನೋಡುವಲ್ಲಿ 1912-13ನೇ ಸಾಲಿನ ಹುಟ್ಟುವಳಿ ಖರ್ಚಿನ ಮೊದಲನೇ ಅಂದಾಜಾವಿಗೂ ಎರಡನೇ ಅಂದಾಜಾವಿಗೂ ಬಹಳ ವಿಶೇಷವಾದ ವ್ಯತ್ಯಾಸ ಕಂಡು ಬರುತ್ತದೆ ಮೊದಲು ಆ ಸಾಲಿನಲ್ಲಿ 2,44,60,000 ರೂಪಾಯಿ ಉತ್ಪತ್ತಿಯಾದೀತೆಂದು ನಿರೀಕ್ಷಿಸಿದ್ದರು, ಈಗ ಅದಕ್ಕಿಂತ 28,12,000 ರೂಪಾಯಿ ಜಾಸ್ತಿ ಹುಟ್ಟುವಳಿಯಾಗಬಹುದೆಂದು ಕಂಡುಬಂದಿದೆ. ಖರ್ಚುಬಾಬಿನಲ್ಲಾದರೋ 2,78,06,000 ರೂಪಾಯಿ ವ್ಯಯವಾಗಿ, ಇನ್ನೂ ಖರ್ಚಿಗೆ 33,46,000 ರೂಪಾಯಿ ಸಾಲದೆ ಹೋದೀತೆಂದು ಊಹಿಸಿದ್ದರು ಆದರೆ ಬೇರೆ ಬೇರೆ ಇಲಾಖೆಗಳಿಗೆ ಹಂಚಿಕೊಟ್ಟಿದ್ದ ಹಣಗಳನ್ನು ಆಯಾ ಇಲಾಖೆಯವರು ಖರ್ಚು ಮಾಡಲಾರದೆ ಹೋದರಾದಕಾರಣ ಹುಟ್ಟುವಳಿಯು ನಿರೀಕ್ಷಿಸಲ್ಪಟ್ಟಿದ್ದಕ್ಕಿಂತಲೂ ತುಂಬಾ ಹೆಚ್ಚಿ, ಖರ್ಚುಬಾಬು ಬಹಳ ಕಡಮೆಯಾಗಿರುತ್ತದೆ ಅಂದರೆ 1912 13 ನೇ ಸಾಲಿನ ಅಖೈರ್ ಲೆಕ್ಕಗಳು ಪೂರೈಸಿದಾಗ ಖರ್ಚು 2,48,68,000 ರೂಪಾಯಿ ಮಾತ್ರ ಆಗಿ ಇದರಲ್ಲೂ 24,24,000 ರೂಪಾಯಿತನಕ ಉಳಿಯುವಂತೆ ಕಾಣುವುದು.

ಸುಮಾರಾಗಿ ಎಲ್ಲಾ ಬಾಬುಗಳಲ್ಲೂ-ಅಂದರೆ, ಜಮೀನ್ ಕಂದಾಯ, ಫಾರೆಸ್ಟು, ಎಕ್ಸೈಸ್, ತೆರಿಗೆಗಳು, ಸ್ಟಾಂಪು, ರೆಜಿಸ್ಟ್ರೇಷನ್ ಬಾಬುಗಳಲ್ಲಿ—ಹುಟ್ಟುವಳಿಯು ಅಂದಾಜಾಕ್ಕಿಂತ ಹೆಚ್ಚಿರುತ್ತದೆ ಫಾರೆಸ್ಟು ಬಾಬಿನ ಹುಟ್ಟುವಳಿಯೇ ಬಹಳ ಹೆಚ್ಚಾಯಿತು ಒಟ್ಟಿನಲ್ಲಿ 14,67,000 ರೂಪಾಯಿ ಹೆಚ್ಚಲು ಗಂಧದ ವಿಕರಿಯು ತುಂಬಾ ಜಾಸ್ತಿಯಾದದ್ದೇ ಕಾರಣವಾಗಿದೆ ಎಕ್ಸೈಸ್ ಇಲಾಖೆಯಲ್ಲೂ ಅಂದಾಜಿಗಿಂತ 4,52,000 ರೂಪಾಯಿ ಹೆಚ್ಚು ಉತ್ಪತ್ತಿಯಾಯಿತು. ಇದನ್ನು ನೋಡಿ ಪ್ರಜೆಗಳಲ್ಲಿ ಹೆಂಡ ಸರಾಬುಗಳ ಪಾನವು ಹೆಚ್ಚುತ್ತಾ ಬಂದಿದೆಯಲ್ಲಾ ಎಂದು ದುಃಖಪಡುತ್ತೇವೆ

ಖರ್ಚುಬಾಬಿನ ಕಡೆ ತಿರುಗಿಸಿ ನೋಡಿದರೆ ವಿದ್ಯಾಭ್ಯಾಸದ ಇಲಾಖೆಗೆ ಸ್ಯಾಂಕ್ಷನ್ ಮಾಡಿದ್ದ ಹಣದಲ್ಲಿ 1,61,000 ರೂಪಾಯಿ ಖರ್ಚಾಗದೆ ಉಳಿದುಹೋಯಿತು ಇಲಾಖೆಯವರು ಹೊಸ ಸ್ಕೂಲುಗಳನ್ನೂ ಕಟ್ಟಡಗಳನ್ನೂ ಸಾಲಾದ್ಯಂತಸೋಗಾಗಿ ಬೇಗನೆ ಸಿದ್ಧಪಡಿಸಿ ಪ್ರಾರಂಭಮಾಡದೆ ಹೋದರು ಮರಮತ್ ಯಾನೆ ಇಂಜನಿಯರ್ ಇಲಾಖೆಯಲ್ಲೂ ಕಾಮಗಾರಿಗಳು ಚಟುವಟಿಕೆಯಿಂದ ನಡೆಯದೆ ಹೋದದ್ದರಿಂದಲೂ, ಕೆಲವನ್ನು ಪ್ರಾರಂಭಿಸದೆ ಹೋದದ್ದರಿಂದಲೂ ಆ ಇಲಾಖೆಗೆ ಸ್ಯಾಂಕ್ಷನ್ ಮಾಡಿಕೊಟ್ಟಿದ್ದ ಹಣದ ಪೈಕಿ 27,95,000 ರೂಪಾಯಿ ವಿನಿಯೋಗವಾಗದೆ ನಿಂತಿತು ರೈಲ್ವೆ ಬಾಬಿನಲ್ಲಿ ಒಂಭತ್ತು ಲಕ್ಷಕ್ಕಿಂತಲೂ ಹೆಚ್ಚಾಗಿಯೂ, ಬೆಂಗಳೂರು ಟ್ರಾಂವೇ ಕಾಮಗಾರಿಯ ಬಾಬತಿನಲ್ಲಿ ಆರೂವರೆ ಲಕ್ಷವೂ, ಕಾವೇರಿ ವಿದ್ಯುತ್ತಿನ ಉತ್ಪತ್ತಿಯ ಕಾಮಗಾರಿ ಬಾಬಿನಲ್ಲಿ ಎರಡು ಲಕ್ಷ ರೂಪಾಯಿ ವರೆಗೂ ಖರ್ಚಾಗಲಿಲ್ಲ

ಗವರ್ನಮೆಂಟಿನವರ ಸ್ಥಾನದಿಂದ ನೋಡಿದರೆ ಕಳೆದ ಸಾಲು ತುಂಬಾ ಅನುಕೂಲವಾಗಿದ್ದಿತು ಹಾಗೆಂದರೆ, ಹುಟ್ಟುವಳಿಯು ನಿರೀಕ್ಷಿಸಿದ್ದದ್ದಕ್ಕಿಂತಲೂ ಹೆಚ್ಚಾಗಿಯೂ, ಖರ್ಚು ಕಡಮೆಯಾಗಿಯೂ ಜಗಿರುತ್ತದೆ

ಆದರೇನು ? ಗವರ್ನಮೆಂಟಿನವರು ಹಣವನ್ನು ಖರ್ಚು ಮಾಡುವುದರಲ್ಲಿ ಕುತೂಹಲವುಳ್ಳವರಾಗಿದಾರೆಂದು ಸ್ಪಷ್ಟವಾಗಿ ಗೊತ್ತಾಗುವುದು ಈಗ ಪ್ರಾರಂಭಮಾಡಿರುವ ಕಾಮಗಾರಿ ಮುಂತಾದವುಗಳನ್ನು ಮುಂದರಿಸುವುದಲ್ಲದೆ ನೂತನ ಕೆಲಸಗಳನ್ನೂ ಪ್ರಾರಂಭಿಸುವವರಾಗಿದಾರೆ ಚಾಲ್ತಿ ಸಾಲಿನಲ್ಲಿ ಕನ್ನಂಬಾಡಿ ಕಟ್ಟೆಯ ಕಾಮಗಾರಿಗೆ 30,10,000, ಕಾವೇರಿ ವಿದ್ಯುಚ್ಛಕ್ತಿಯ ಹೆಚ್ಚು ಉತ್ಪತ್ತಿಗೆ 13,05,000, ಬೆಂಗಳೂರು ಟ್ರಾಂವೇಗಾಗಿ 6,65,000, ರೈಲ್ವೆ ವಿಸ್ತಾರಣೆಗೆ 15 ಲಕ್ಷ, ಅಂತೂ 65,10,000 ರೂಪಾಯನ್ನು ಕೊಡುವುದಾಗಿ ತೋರಿಸಿರುವರು ಇದಲ್ಲದೆ ವಿದ್ಯಾಭ್ಯಾಸಕ್ಕೆ ಹೆಚ್ಚಾಗಿ 1,32,000 ರೂಪಾಯಿಯೂ, ಕಸುಬು ಮತ್ತು ವ್ಯಾಪಾರಾಭಿವೃದ್ಧಿಯ ಇಲಾಖೆಗೆ 90,000 ರೂಪಾಯಿಯೂ, ಸಂಪದಭಿವೃದ್ಧಿ ಸಮಾಜದ ಕಾರ್ಯಗಳಿಗೆ 1,22,000 ರೂಪಾಯಿಯೂ ವಿನಿಯೋಗಿಸುವವರಾಗಿದಾರೆ ಅಂತೂ ಮೈಸೂರು ಸಂಸ್ಥಾನದಲ್ಲಿ ಹಿಂದೆ ಯಾವ ಸಾಲಿನಲ್ಲೂ ಮೂರು ಕೋಟಿ ರೂಪಾಯಿ ಖರ್ಚಿಗೆ ತೆಗದಿಟ್ಟದ್ದಿಲ್ಲ ಚಾಲ್ತಿ ಸಾಲಿನಲ್ಲಿ ಅಷ್ಟು ಹಣವನ್ನು ಖರ್ಚಿಗೆ ಒದಗಿಸುತ್ತೇವೆಂದು ಕಾಣಿಸಿರುವುದು ಸಂತೋಷಪ್ರದವೇ ಸರಿ, ಆದರೆ ಇಷ್ಟು ಅಪಾರವಾದ ಹಣವನ್ನೂ ವಿವೇಕದಿಂದಲೂ ಸಾರ್ಥಕವಾಗಿಯೂ ಈ ಸಾಲಿನಲ್ಲಿ ಖರ್ಚು ಮಾಡುವುದಕ್ಕೆ ಸಂಸ್ಥಾನದಲ್ಲಿ ಕಾರೇಗಾರರು ಮೊದಲಾದವರು ದೊರಕುವರೇ ಎಂದು ಸಂದೇಹಪಡುತ್ತೇವೆ ಸಾಮಾನ್ಯವಾಗಿ ಬೇಕಾದಷ್ಟು ಹಣ ಕೈಯಲ್ಲಿದ್ದರೆ ಅದರಲ್ಲಿ ಬಹು ಭಾಗವೆಲ್ಲಾ ವ್ಯರ್ಥವಾಗಿ ಖರ್ಚಾಗುವುದುಂಟು ಆದಕಾರಣ ಗವರ್ನಮೆಂಟಿನವರು ಎಲ್ಲಾ ಬಾಬುಗಳಲ್ಲೂ ಮಿತವ್ಯಯವನ್ನು ಕಾಪಾಡಿಕೊಂಡುಬರುವ ಭಾಗದಲ್ಲಿ ತುಂಬಾ ಮುತುವರ್ಜಿ ವಹಿಸುತ್ತಾರೆಂದು ನಂಬಿ ನಿರೀಕ್ಷಿಸುವೆವು

ರೈಲ್ವೆ ಬಾಬಿನಲ್ಲಿ ನಮಗೆ ತಿಳಿದು ಬಂದಿರುವಂತೆ ಸರ್ಕಾರದವರು ಚಾಲ್ತಿ ಸಾಲಿನಲ್ಲಿ ಕಾಮಗಾರಿಯನ್ನು ಪ್ರಾರಂಭಿಸಿ ಯಡತೊರೆ, ಹೊಳೆನರಸಿಪುರ, ಹಾಸನದ ಮೇಲೆ ಅರಸೀಕೆರೆಗೆ ರೈಲು ಹಾಕುವವರಾಗಿದಾರೆ ನಮ್ಮ ಸೀಮೆಯು ಇಷ್ಟು ಅಭಿವೃದ್ಧಿಸ್ಥಿತಿಯಲ್ಲಿರುವುದೂ, ಹಲವು ಪ್ರಜೋಪಕಾರಕ ಕಾರ್ಯಗಳಿಗೆ ಇಷ್ಟು ಹೆಚ್ಚಾಗಿ ಹಣ ಒದಗಿರುವುದೂ ಸಂತೋಷಪ್ರದವಾಗಿದೆ ಸರ್ಕಾರದವರು ಈ ಹಣಗಳನ್ನೆಲ್ಲಾ ವಿವೇಕದಿಂದ ಖರ್ಚುಮಾಡುವರೆಂದೂ, ಅದರ ಮೂಲಕ ನಮ್ಮ ಸಂಸ್ಥಾನದ ಏಳಿಗೆಗೂ ಪ್ರಜೆಗಳ ನೆಮ್ಮದಿ ಸುಖ ಸಂತೋಷಗಳಿಗೂ ತುಂಬಾ ಸಹಾಯವಾದೀತೆಂದೂ ನಂಬಿ ಹಾರೈಸುತ್ತೇವ.

ಗಂಧದ ಮರ

ಮೈಸೂರು ಸೀಮೆಯು ವಿಚಿತ್ರವಾದ ಗಂಧದ ಮರದ ಸಾಮಾನುಗಳನ್ನು ತಯಾರಿಸುವದರಲ್ಲಿ ವಿಶೇಷವಾದ ಪ್ರಖ್ಯಾತಿಯನ್ನು ಹೊಂದಿದೆ ಇಲ್ಲಿ ಒಂದು ಗಂಧದ ಕೋಠಿಯುಂಟು ಆ ಕೋಠಿಗೆ ದಿನ ಒಂದಕ್ಕೆ ಅನೇಕ ಗಾಡಿಗಳ ಮೇಲೆ ಬೇರೆಬೇರೆ ಕಾಡುಗಳಿಂದ ಗಂಧದ ಮರಗಳನ್ನು ಹೇರಿಕೊಂಡು ಬರುತ್ತಾರೆ ಆದರೆ ಜಂಗಲಿನಿಂದ ಬರುವ ಮರವೆಲ್ಲಾ ಸಾಮಾನುಗಳನ್ನು ಮಾಡುವ ಕೆಲಸಕ್ಕೆ ಬರುವದಿಲ್ಲ ಸಾಮಾನುಗಳನ್ನು ಮಾಡುವದಕ್ಕೆ ಪ್ರಯೋಗಿಸಲ್ಪಡುವ ಮರವು ಮೊದಲು ಚನ್ನಾಗಿ ಬೆಳೆದು ಬಹಳ ಕಾಲದವರಿವೆಗೂ ಬಲಿಯಬೇಕು ಎಳೇ ಮರವು ಯಾವ ಪ್ರಯೋಜನಕ್ಕೂ ಬರುವದಿಲ್ಲ ಆದರೆ ಚನ್ನಾಗಿ ಬಲಿತ ಮರದ ಮಧ್ಯಭಾಗದಲ್ಲಿ ಒಳ್ಳೇ ಚೇಗು ಇರುತ್ತದೆ ಆದ್ದರಿಂದ ಬಲಿತ ಮರದ ತುಂಡನ್ನು ಚನ್ನಾಗಿ ಕೆತ್ತಿ ಮೇಲಿರುವ ಬಿಳುಪಾದ ಭಾಗವನ್ನೆಲ್ಲಾ ತೆಗೆದುಹಾಕುವದರಿಂದ ಒಳಗಡೆ ಬಹು ಭದ್ರವಾಗಿಯೂ ಬಲವಾಗಿಯೂ ಇರುವ ಚೇಗು ಸಿಕ್ಕುತ್ತದೆ ಇದೇ ಬಹಳ ಬೆಲೆಯುಳ್ಳ ಸಾಮಾನುಗಳನ್ನು ಮಾಡುವದಕ್ಕೆ ಪ್ರಯೋಗಿಸಲ್ಪಡುತ್ತದೆ ಈ ಚೇಗು ಬಹು ಸುವಾಸನೆಯುಳ್ಳದ್ದು ಮತ್ತು ಬಹು ಭದ್ರವಾಗಿಯೂ ವಿಷಕರವಾಗಿಯೂ ಇರುವದರಿಂದ ಗೆದ್ದಲು ಮುಂತಾದ ಯಾವ ಪ್ರಾಣಿಗಳೂ ಅದರ ಹತ್ತಿರ ಸುಳಿಯುವದಿಲ್ಲ ಅಂಥಾ ಒಂದು ತುಂಡಿನಲ್ಲಿ ಮಾಡಿದ ಗಂಧದಪೆಟ್ಟಿಗೆ, ವಿಗ್ರಹ ಮುಂತಾದ ಸಾಮಾನುಗಳಿಗೆ ಅಧಿಕ ಕ್ರಯವು ನಿರ್ಣಯಿಸಲ್ಪಡುತ್ತದೆ ಒಂದೊಂದು ಸಾರಿ ಆ ಸಾಮಾನಿನ ತುಂಡಿಗೆ ಸಂಬಂಧಿಸಿದ ರುಪಾಯಿಗಳ ಬೆಲೆಯೂ ಕೆಲವು ಸಂದರ್ಭಗಳಲ್ಲಿ ಅದಕ್ಕಿಂತ ಹೆಚ್ಚಾಗಿಯೂ ಬೆಲೆ ಬರುವುದುಂಟು ಚೇಗಿನ ಮೇಲ್ಭಾಗದಲ್ಲಿರುವ ಬಿಳೀ ಮರವೆಲ್ಲಾ ಕೆತ್ತಿಹಾಕಿ ಅವನ್ನೆಲ್ಲಾ ಮಣ ಒಂದಕ್ಕೆ ಎಂಟು, ಒಂಭತ್ತು ರೂಪಾಯಿಗೆ ಮಾರಿಬಿಡುತ್ತಾರೆ ಅದು ಯಾವ ಕೆಲಸಕ್ಕೂ ಬರುವದಿಲ್ಲವಾದ್ದರಿಂದ ಒಲೆಪಾಲಾಗುತ್ತದೆ

ಸೊಗಸಾದದ್ದನ್ನೂ ಬೆಲೆಯುಳ್ಳದನ್ನೂ ಪ್ರಯೋಜನಕಾರಿಯಾಗಿರುವದನ್ನೂ ಮಾನ್ಯಮಾಡುವದೂ ವ್ಯರ್ಥವಾದುದನ್ನೂ ಅಪ್ರಯೋಜಕವಾದುದನ್ನೂ ತಿರಸ್ಕರಿಸುವದೂ ಸ್ವಭಾವಿಕವಾಗಿದೆ ಇದಕ್ಕೆ ಕಾರಣವನ್ನು ವಿಚಾರಿಸುವದು ಅಗತ್ಯವಿಲ್ಲ. ಯಾಕಂದರೆ ಕಾರಣವು ಪರಿಷ್ಕಾರವಾಗಿ ಎಲ್ಲರಿಗೂ ತಿಳಿದೇ ಇದೆ ಆದರೆ ನಮ್ಮ ನಡತೆಗೂ ನಮ್ಮ ಬಾಳಿಗೂ ತಕ್ಕ ಬುದ್ಧಿ ಪಾಠವನ್ನು ಅನವರತವೂ ನಮ್ಮ ಮುಂದೆ ಎತ್ತಿ ಹಿಡಿದು, ನಮ್ಮನ್ನು ಎಚ್ಚರಿಸಿ, ಜ್ಞಾಪಿಸುವದಾಗಿರಲಿ ಎಂದು ದೇವರು ಈ ಕ್ರಮವನ್ನು ಸ್ಥಾಪಿಸಿದ್ದಾನೆಂದು ಕಾಣಬರುತ್ತದೆ ರೈತರು ಹೊಲದಲ್ಲಿ ಪೈರನ್ನು ಉಳಿಸಿ ಅದಕ್ಕೆ ಬಾಧಕವಾದ ಕಳೆಯನ್ನು ಕಿತ್ತುಹಾಕುತ್ತಾನೆ, ಕಣದಲ್ಲಿ ತೆನೆಯ ರಾಸಿಯನ್ನು ಬಡಿದು ಹೊಟ್ಟನ್ನೆಲ್ಲಾ ಗಾಳಿಗೆ ತೂರಿ ದವಸವನ್ನೆಲ್ಲಾ ಕಣಜದಲ್ಲಿ ಭದ್ರಪಡಿಸುತ್ತಾನೆ ಕಬ್ಬನ್ನು ಗಾಣಕ್ಕೆ ಕೊಟ್ಟು ರಸವನ್ನು ಜೋಪಾನಪಡಿಸಿ ಸಿಪ್ಪೆಯನ್ನು ಬೆಂಕಿಗೆ ಹಾಕುತ್ತಾನೆ ಮನೆಯಲ್ಲಿ ಗೃಹಿಣಿಯು ಸಿಪ್ಪೆಯನ್ನು ಸುಲಿದು ಆಚೆಗೆ ಬಿಸಾಡಿ ಕಾಳನ್ನು ಪದಾರ್ಥಕ್ಕೆ ಪಕ್ವ ಮಾಡುತ್ತಾಳೆ ಇವನ್ನೆಲ್ಲಾ ವಿಚಾರಿಸಿ ನೋಡಲಾಗಿ ನಾವೆಲ್ಲರೂ ಒಂದು ವಿಧವಾಗಿ ಅಲ್ಲದಿದ್ದರೆ ಇನ್ನೊಂದು ವಿಧವಾಗಿ, ಅಂತೂ ಯಾವದಾದರೂ ಒಂದು ವಿಧದಿಂದ ನಮ್ಮ ಸುತ್ತಮುತ್ತಲೂ ಇರುವ ಪದಾರ್ಥಗಳನ್ನು ಒಳ್ಳೆಯವುಗಳೂ ಕೆಟ್ಟವುಗಳೂ, ಪ್ರಯೋಜನಕಾರಿಗಳೂ ಪ್ರಯೋಜನವಿಲ್ಲದವುಗಳೂ, ಬೆಲೆಯುಳ್ಳವುಗಳೂ ಬೆಲೆಯಿಲ್ಲದವುಗಳೂ ಎಂತ ವಿಭಾಗಿಸಿ ಒಳ್ಳೆಯವಾಗಿಯೂ ಪ್ರಯೋಜನಕಾರಿಯಾಗಿಯೂ ಇರುವವುಗಳನ್ನು ಸ್ವೀಕರಿಸಿ ಕೆಟ್ಟವಾಗಿಯೂ ನಿಷ್ಪ್ರಯೋಜನವಾಗಿಯೂ ಇರುವ ವಸ್ತುಗಳನ್ನು ಹಾನಿಕರಗಳೆಂದು ತಿರಸ್ಕರಿಸುತ್ತೇವೆ ಚನ್ನಾಗಿ ಯೋಚಿಸಿ ನೋಡಿದರೆ ನಮಗೆ ಪ್ರಯೋಜನವಾಗಿಯೂ ಹಿತಕರವಾಗಿಯೂ ಇರುವ ಪದಾರ್ಥಗಳನ್ನು ಹುಡುಕಿ ದೊರಕಿಸಿಕೊಳ್ಳುವದರಲ್ಲಿಯೂ ಕೆಟ್ಟವಾಗಿಯೂ ಅಹಿತವಾಗಿಯೂ ಇರುವವುಗಳನ್ನು ತೊರೆದು ಬಿಡುವದರಲ್ಲಿಯೂ ನಮ್ಮ ಜೀವಿತ ಕಾಲವೆಲ್ಲಾ ವೆಚ್ಚವಾಗಿ ಹೋಗುತ್ತದೆ ಕಟ್ಟಕಡೆಗೆ ನಮ್ಮ ಜೀವಾಂತ್ಯಕಾಲದಲ್ಲಿ ನಾವು ಪ್ರಯೋಜನಕರವಾದವುಗಳೂ ಬಹು ಬೆಲೆಯುಳ್ಳವುಗಳೂ ಎಂದು ಭಾವಿಸಿ ಕೂಡಿಸಿಟ್ಟವುಗಳನ್ನೂ ತ್ಯಜಿಸಿಬಿಟ್ಟು ಹೊರಟೆ ಹೋಗಬೇಕು ಆಗ ಪದಾರ್ಥಗಳ ಗುಣದೋಷಗಳನ್ನು ಭೇದಿಸಿ ತಿಳಿಯುವದು ಸಾಯುವವನಿಗೆ ಪ್ರಯೋಜನದಲ್ಲ

ಹೀಗಿರುವಲ್ಲಿ ಇಹಲೋಕದ ಪದಾರ್ಥಗಳ ಗುಣದೋಷಗಳನ್ನು ಭೇದಿಸಿ ತಿಳಿಯುವ ಕೆಲಸವನ್ನು ನಮ್ಮ ಆಯುಷ್ಕಾಲವೆಲ್ಲವೂ ದೇವರು ನಮಗೆ ನೇಮಿಸಿರುವದೇತಕ್ಕೆ ? ಸಾಯುವವನು ತಾನು ಪ್ರಯಾಸಪಟ್ಟು ದೊರಕಿಸಿಕೊಂಡಿರುವ ಒಳ್ಳೇ ಪದಾರ್ಥಗಳನ್ನು ಗಂಟುಕಟ್ಟಿಕೊಂಡು ತನ್ನ ಸಂಗಡ ತೆಗೆದುಕೊಂಡು ಹೋಗುವದಿಲ್ಲವೆಂಬುವದು ವ್ಯಕ್ತವಾಗಿದೆ ಆದರೂ ಒಳ್ಳೇ ಪದಾರ್ಥಗಳನ್ನೂ ಕೆಟ್ಟ ಪದಾರ್ಥಗಳನ್ನೂ ವಿಂಗಡಿಸುವ ಕೆಲಸದಲ್ಲಿ ನಮ್ಮ ಆಯುಷ್ಕಾಲದ ಮುಖ್ಯಭಾಗವು ಕಳೆದುಹೋಗುತ್ತದೆ ಇದೇಕೆ ?

ನಮ್ಮ ನಮ್ಮ ಗುಣದೋಷಗಳನ್ನು ಭೇದಿಸಿ ತಿಳಿದು ದೋಷಗಳನ್ನು ವಿಸರ್ಜಿಸುವದಕ್ಕೂ ಗುಣಗಳನ್ನು ವೃದ್ಧಿಗೊಳಿಸಿಕೊಳ್ಳುವದಕ್ಕೂ ನಮಗೆ ಕಲಿಸುವದಕ್ಕೆ ಇದು ಒಂದು ಯತ್ನವಾಗಿಯೂ ಸಾಮ್ಯವಾಗಿಯೂ ಸಾಧನವಾಗಿಯೂ ಇದೆ ಪದಾರ್ಥಗಳ ಗುಣದೋಷಗಳನ್ನೂ ನಮ್ಮ ಸಹೋದರರಾದ ಇತರರ ಗುಣದೋಷಗಳನ್ನೂ ಬಹು ಜಾಣತನದಿಂದ ಪರೀಕ್ಷಿಸಿ ತಿಳಿಯುವುದರಲ್ಲಿ ನಿರತರಾಗಿರುವ ನಾವು ನಮ್ಮ ಗುಣದೋಷಗಳಾವವು ಎಂತ ತಿಳಿಯಬೇಡವೇ ? ತನ್ನನ್ನು ತಾನು ತಿಳಿದವನು ಧನ್ಯನು ಸ್ವಹಿತದಲ್ಲಿಯೇ ಕಾಂಕ್ಷೆಯುಳ್ಳವರು ಸಹ ತಮ್ಮನ್ನು ತಾವು ತಿಳಿಯುವದು ಅತ್ಯಗತ್ಯವಾಗಿದೆ ಮತ್ತು ತನ್ನನ್ನು ಪರೀಕ್ಷಿಸಿಕೊಂಡು ದೋಷಗಳನ್ನು ವರ್ಜಿಸಿ ಗುಣಗಳನ್ನು ವರ್ಧಮಾನಕ್ಕೆ ತರುವದೇ ಇತರ ಪದಾರ್ಥಗಳ ಮತ್ತು ಮನುಷ್ಯರ ಗುಣದೋಷಗಳನ್ನು ತಿಳಿಯುವದಕ್ಕಿಂತ ಹೆಚ್ಚಿನ ಕಾರ್ಯವಾಗಿದೆ ಯಾಕಂದರೆ ಪದಾರ್ಥಗಳ ಗುಣದೋಷಗಳನ್ನೂ ಇತರ ಮನುಷ್ಯರ ಗುಣದೋಷಗಳನ್ನೂ ಪರೀಕ್ಷಿಸುವದಕ್ಕೆ ಬುದ್ಧಿಯನ್ನು ಕೊಟ್ಟಿರುವ ದೇವರು ನಮ್ಮನ್ನು ನಾವು ಪರೀಕ್ಷಿಸಿಕೊಳ್ಳುವ ಕರ್ತವ್ಯವನ್ನು ತಿರಸ್ಕರಿಸಿದರೆ ನಮ್ಮನ್ನು ಆತನು ಸುಮ್ಮನೆ ಬಿಡುವನೇ ? ಆತನು ತಾನೇ ಸಕಲರನ್ನು ಪರೀಕ್ಷಿಸಿ ಅವರವರ ಗುಣದೋಷಗಳಿಗೆ ತಕ್ಕ ಪ್ರತಿಫಲವನ್ನು ಕೊಡುವ ಕಾಲವನ್ನು ನಿಷ್ಕರ್ಷಿಸಿದ್ದಾನೆ ಆತನು ದೇವದೂತರೊಂದಿಗೆ ತನ್ನ ಮಹಿಮೆಯ ಸಿಂಹಾಸನದಲ್ಲಿ ಕೂತುಕೊಂಡು ಎಲ್ಲಾ ದೇಶಗಳ ಜನರನ್ನು ತನ್ನ ಮುಂದೆ ಕೂಡಿಸಿ ಆತನ ರಾಜ್ಯದೊಳಗಿಂದ ಎಲ್ಲಾ ಕಂಟಕರನ್ನೂ ಅನ್ಯಾಯಮಾಡುವವರನ್ನೂ ಕೆಟ್ಟವರನ್ನ ಬೇರೆಮಾಡಿ ಬೆಂಕಿಕೊಂಡದಲ್ಲಿ ಹಾಕಿಸುವನು ಅಲ್ಲಿ ಗೋಳಾಟವೂ ಕಟಕಟನೆ ಹಲ್ಲುಕಡಿಯೋಣವೂ ಅವರ ಪಾಲಿಗೆ ಬರುವದು ಆಗ ನೀತಿವಂತರು ತಮ್ಮ ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು ಆತನು ಕಣದಲ್ಲಿರುವ ರಾಶಿಯ ಮುಂದೆ ನಿಂತು ಮೊರವನ್ನು ತುಂಬಿ ತುಂಬಿ ತೂರುವನು ಮತ್ತು ಗೋಧಿಯನ್ನು ತನ್ನ ಕಣಜದಲ್ಲಿ ತುಂಬಿಸಿಕೊಂಡು ಕೇಡದ ಹೊಟ್ಟನ್ನು ಆರದ ಬೆಂಕಿಯಿಂದ ಸುಟ್ಟುಬಿಡುವನು

ಬುಕಾರಸ್ಟಿನಲ್ಲಿ ಕರಾರು ನಡೆಯಿತು

ಕಳೆದ ಭಾನುವಾರ ರೊಮೇನಿಯಾ ರಾಜ್ಯದ ರಾಜಧಾನಿಯಾದ ಬುಕಾರಸ್ಟಿನಲ್ಲಿ ಕರಾರು ನಡೆದು, ಕಲಹಮಾಡುತ್ತಿದ್ದ ಬಲ್ಗೇರಿಯಾ, ಗ್ರೀಸ್, ಸರ್ವಿಯ, ಮಾಂಟಿನೀಗ್ರೊ, ರೊಮೇನಿಯಾ ರಾಜ್ಯಗಳ ಪ್ರತಿನಿಧಿಗಳು ಸಮ್ಮತಿ ರುಜುವನ್ನು ಹಾಕಿ, ಇದರ ಸಂತೋಷಾರ್ಥವಾಗಿ ಭಾರಿ ಔತಣದಲ್ಲಿ ಎಲ್ಲರೂ ಸೇರಿ ಭೋಜನ ಮಾಡಿದರೆಂದು ತಿಳಿಸಲು ಆನಂದಪಡುತ್ತೇವೆ ಈ ಕರಾರು ಶಾಶ್ವತವಾಗಿ ನಡೆದು ಬಂದೀತೆಂದು ನಿರೀಕ್ಷಿಸುವೆವು ಆದರೂ ಇದರಲ್ಲಿ ನಮಗೆ ಸ್ವಲ್ಪ ಸಂಶಯ ಬಾಧಿಸುತ್ತಿದೆ ಸದ್ಯದಲ್ಲಿ ಯುದ್ಧವೇನೋ ನಡೆಯಲಾರದು ಯಾಕೆಂದರೆ ಆ ರಾಜ್ಯಗಳವರೆಲ್ಲಾ ಅಪಾರವಾದ ದ್ರವ್ಯವನ್ನು ಮಾತ್ರವೇ ಅಲ್ಲ, ಅನೇಕಾನೇಕ ಯುದ್ಧಭಟರನ್ನೂ ಕಳೆದುಕೊಂಡಿದಾರೆ ಕೆಲವು ಕಾಲದ ತನಕ ಸಮಾಧಾನವು ಇದ್ದೇ ತೀರಬೇಕಾಗಿದೆ ಈ ತಹನಾಮೆಯ ನಿಬಂಧನೆಗಳನ್ನು ನೋಡುವಲ್ಲಿ ಮತ್ತೆ ಯುದ್ಧ ಪ್ರಾಪ್ತವಾಗಲೇ ಬೇಕೆಂದು ತೋರುತ್ತದೆ

ಟರ್ಕಿಯವರು ಮತ್ತೆ ಆದ್ರಿಯನೋಪಲನ್ನು ಆಕ್ರಮಿಸಿಕೊಂಡಿರುವುದೇ ಈಗ ದೊಡ್ಡ ಹೋರಾಟದ ವಿಷಯವಾಗಿದೆ ಪರರಾಜ್ಯಗಳವರಾದರೋ ಟರ್ಕಿಯವರು ಲಂಡನ್ ಪಟ್ಟಣದಲ್ಲಿ ಒಪ್ಪಿ ರುಜು ಮಾಡಿರುವ ಕರಾರಿನಂತೆ ನಡೆದುಕೊಳ್ಳಬೇಕೆಂದು ಹೇಳುವರು ಆ ರೀತಿ ಟರ್ಕಿಯವರು ನಡೆಯದೆ ಹೋದರೆ ಅನೇಕ ಕಷ್ಟ ವಿಚಾರಗಳಿಗೆ ಅವರು ಸಮಾಧಾನ ಹೇಳಬೇಕಾಗುತ್ತದೆ ಯುದ್ಧ ಮಾಡಿ ಗೆದ್ದ ಆದ್ರಿಯನೋಪಲು ತಮ್ಮದಾಗಿರಬೇಕೆಂಬುವುದನ್ನು ಬಲ್ಗೇರಿಯದವರು ಎಂದಿಗೂ ಮರೆಯತಕ್ಕವರಲ್ಲ ಅದು ನ್ಯಾಯವಾಗಿ ತಮಗೆ ಬರಬೇಕೆಂದೇ ಹೋರಾಡುತ್ತಾ, ಸಮಯವನ್ನು ಕಾಯುತ್ತಾ ಬಂದಾರು. ಆದಕಾರಣ ಮತ್ತೆ ಯುದ್ಧಕಾರ್ಯಗಳು ಪ್ರಾಪ್ತವಾಗದಂತೆ ಶಾಶ್ವತವಾದ ತಹನಾಮೆ ನಡೆದೀತೆಂದು ನಂಬಿ ನಿರೀಕ್ಷಿಸುತ್ತೇವೆ

ಚೀನಾ ರಾಜ್ಯದಲ್ಲಿ ಗಲಭೆಗಳು.

ಕಳೆದ ವರುಷ ಚೀನಾರಾಜ್ಯದಲ್ಲಿ ಪ್ರಾರಂಭವಾದ ಪ್ರಜಾಪ್ರಭುತ್ವದ ಗವರ್ನ್‌ಮೆಂಟಿನವರು ಈಚೆಗೆ ಅಲ್ಲಿ ನಡೆಯುತ್ತಾ ಬಂದಿರುವ ಗಲಭೆಗಳನ್ನು ನೋಡಲಾಗಿ ಆ ಚಕ್ರಾಧಿಪತ್ಯವನ್ನು ಪರಿಪಾಲನೆ ಮಾಡುವುದು ಅವರಿಗೆ ಸುಲಭಸಾಧ್ಯವಾಗಿಲ್ಲವೆಂದು ಗೊತ್ತಾಗುತ್ತದೆ ಆ ರಾಜ್ಯದಲ್ಲಿ ಉತ್ತರ ಭಾಗದವರಿಗೂ ದಕ್ಷಿಣಭಾಗದವರಿಗೂ ಏಕಮತ್ಯವಿಲ್ಲದೆ, ದಕ್ಷಿಣ ಪ್ರಾಂತ್ಯದ ಕೆಲವು ಅಧಿಪತ್ಯಗಳಲ್ಲಿ ದಂಗೆಗಳು ಹುಟ್ಟಿರುವವು ಸರ್ಕಾರದ ಸೈನ್ಯಗಳಿಗೂ ದಂಗೆ ಎದ್ದಿರುವವರಿಗೂ ಕಾದಾಟಗಳಾಗಿ ಅನೇಕ ಪ್ರಾಣ ನಷ್ಟವಾಗಿದೆ ವಿರೋಧಪಕ್ಷದವರನ್ನು ದರ್ಪದಿಂದ ಅಡಗಿಸಲು ಗವರ್ನ್‌ಮೆಂಟಿಗೆ ಸಾಮರ್ಥ್ಯ ಸಾಲದೆಂದು ಕಾಣುವುದು ಹ್ಯಾಗೂ ಈ ಪ್ರಜಾಪ್ರಭುತ್ವವು ದರ್ಪದಿಂದ ಪ್ರಜಾ ನೆಮ್ಮದಿಯನ್ನು ಕಾಪಾಡಿ, ರಾಜ್ಯವನ್ನು ಪರಿಪಾಲನೆ ಮಾಡುತ್ತಾ ಬರುವುದಕ್ಕೆ ಇನ್ನೂ ಕೆಲವುಕಾಲ ಹಿಡಿದೀತೆನ್ನುವುದಕ್ಕೆ ಸಂಶಯವಿಲ್ಲ.

ಕಾನ್‌ಪುರದ ಮಸೀತಿ ದಂಗೆಯು.

ಕಾನ್‌ಪುರದ ಮಸೀತಿ ವಿಚಾರವಾಗಿ ನಡೆದ ದೊಂಬಿ ಕಲಹದಲ್ಲಿ ಸರ್ಕಾರದವರು 171 ಜನರನ್ನು ದಸ್ತಗಿರಿಮಾಡಿ, ಆ ಸಾಯಂಕಾಲವೇ ಆ ಪೈಕಿ ಇದ್ದ 40 ಮಂದಿ ಹುಡುಗರನ್ನು ಬಿಟ್ಟುಬಿಟ್ಟರು ಈಚೆಗೆ 6 ನೇ ತಾ ನಲ್ಲಿ 27 ಜನರನ್ನು ಖುಲಾಸ್‌ಮಾಡಿ, 104 ಜನರನ್ನು ಬಂದಿಖಾನೆಯಲ್ಲಿ ಇಟ್ಟುಕೊಂಡಿದ್ದಾರೆ. ನೆನ್ನೆ ಈ ಮೊಕದ್ದಮೆಯ ವಿಚಾರಣೆ ಪ್ರಾರಂಭವಾಗುವುದಾಗಿತ್ತು ಡೆಪ್ಟಿ ಸೂಪರಿಂಟೆಂಡೆಂಟರಾದ ಖಾನ್ ಬಹದೂರ್ ಹಬಿಬುಲ್ಲಾರವರನ್ನು ಪತ್ತೆ ತನಿಖೆಗೆ ನೇಮಿಸಿದಾರೆ ಈಗ ದಸ್ತಗಿರಿ ಆಗಿರುವವರಲ್ಲಿ ಮೌಲಾನಾ ಅಬ್ದುಲ್ ಖಾದರ್, ಆಜಾದ್ ಸುಭಾನ್ ಹಾಫೀಸ್ ಅಹಮದುಲ್ಲಾ, ಹಾಫೀಸ್ ಅಬು ಸಯ್ಯದ್ ಖಾನ್, ಮಹಮದ್ ಯಾಸಿನ್ ಮುಂತಾದ ಮುಖಂಡರೆಲ್ಲಾ ಸೇರಿದಾರೆ

ಮಹಮದೀಯರ ಪರವಾಗಿ ಹೋರಾಡುವುದಕ್ಕೂ, ನಡೆದ ವಿಷಯಗಳನ್ನು ಸರಿಯಾಗಿ ತಿಳಿದು ಮುಂದಿನ ಕಾರ್ಯಗಳನ್ನು ನಡಿಸುವುದಕ್ಕೂ ಇತರ ಕಡೆಗಳಿಂದ ಮುಸಲ್ಮಾನ್ ದೊಡ್ಡ ಮನುಷ್ಯರು ಕಾನ್‌ಪುರಕ್ಕೆ ಹೋಗುತ್ತಿದ್ದಾರೆ ಇವರೆಲ್ಲಾ ಸರ್ಕಾರದವರ ಅಪ್ಪಣೆಯನ್ನು ಪಡೆದು ದೊಂಬಿ ಕಲಹದಲ್ಲಿ ಗಾಯಪಟ್ಟು ಆಸ್ಪತ್ರೆಯಲ್ಲಿರುವ ರೋಗಿಗಳನ್ನೂ, ಬಂದೀಖಾನೆಯಲ್ಲಿ ದಸ್ತಗಿರಿಮಾಡಲ್ಪಟ್ಟಿರುವವರನ್ನೂ ನೋಡಿಕೊಂಡು ಬಂದರು ಪ್ರಾಣಕಳೆದುಕೊಂಡವರ ಮತ್ತು ಗಾಯಪಟ್ಟಿರುವವರ ಸಂಸಾರ ಮಕ್ಕಳ ಜೀವನಕ್ಕಾಗಿಯೂ, ಅಪರಾಧಿಗಳ ಪರವು ಮೊಕದ್ದಮೆ ನಡಿಸುವುದಕ್ಕಾಗಿಯೂ ಒಂದು ಧರ್ಮ ಫಂಡನ್ನು ಪ್ರಾರಂಭಿಸಿದಾರೆ ಈ ಫಂಡಿಗೆ ಒಂದು ಲಕ್ಷ ರೂಪಾಯಿಗಿಂತ ಹೆಚ್ಚಾಗಿ ಕೊಡಿಸಲ್ಪಡುವುವೆಂದು ಹೇಳುವರು

ಒಳದೇಶದ ವೃತ್ತಾಂತಗಳು.

ಜೂಜುಕೋರರ ಗುಂಪನ್ನು ಹಿಡಿದು ಶಿಕ್ಷೆಗೆ ಗುರಿಮಾಡಿದ ಕೆಲವು ಬೆಂಗಳೂರು ಸಿಟಿ ಪೊಲೀಸಿನವರ ಸಾಹಸವನ್ನು ಮೆಚ್ಚಿ ಸರ್ಕಾರದವರು ಅವರಿಗೆಲ್ಲಾ ಬಹುಮಾನ ಕೊಡುವಂತೆ ಸ್ಯಾಂಕ್ಷನ್ ಮಾಡಿದಾರೆ

* * *

ಕಾನಕಾನಹಳ್ಳಿ ತಾಲ್ಲೂಕಿಗೆ ಸೇರಿದ ಮಾವತ್ತೂರು ಕೆರೆಯ ಕಾಮಗಾರಿ ಯಾಗುತ್ತಿರುವ ನಿಮಿತ್ತ ಆ ಬಳಿ ಹಂಗಾಮಿಯಾಗಿ ಒಂದು ಪೊಲೀಸ್ ಠಾಣೆಯನ್ನು ಸರ್ಕಾರದವರು ಕಲ್ಪಿಸಬೇಕೆಂದು ಸ್ಯಾಂಕ್ಷನ್ ಮಾಡಿದಾರೆ ಅಲ್ಲಿಗೆ ಒಬ್ಬ ದಫೇದಾರನೂ, ನಾಲ್ವರು ಪ್ಯಾದೆಗಳೂ ನೇಮಕವಾಗುವರು

* * *

ಮೈಸೂರಿಗೂ ಮಡಿಕೇರಿಗೂ ಅಂಚೆಯನ್ನು ಸಾಗಿಸುವ ಕಂಟ್ರಾಕ್ಟು ಇದುವರೆಗೆ ಸಿ ನಾಗಲಿಂಗಯ್ಯನವರು ವಹಿಸಿಕೊಂಡು ನಡಿಸುತ್ತಿದ್ದರು. ಈ ತಿಂಗಳ ಪ್ರಾರಂಭದಿಂದ ಅಂಚೆ ಇಲಾಖೆಯವರು ಈ ಕಂಟ್ರಾಕ್ಟನ್ನು ಕೆಲಸೂರಿನ ಛಾರಿ ಸಾಹುಕಾರರಾದ ಮ॥ ರಂಗಯ್ಯಗೌಡರಿಗೆ ವಹಿಸಿರುತ್ತಾರೆ

* * *

ಬೆಂಗಳೂರು ದಂಡಿನಲ್ಲಿ ಸಣ್ಣ ಪುಟ್ಟ ಕಳುವುಗಳನ್ನು ಮಾಡುತ್ತಾ 10-12 ಸಲ ಬಂದೀಖಾನೆ ಅನುಭವಿಸಿದ ಸಾಬ್‌ಜಾನ್, ಬಾಬ್‌ಜಿ ಎಂಬಿಬ್ಬರು ಮತ್ತೆ ಕಳುವಿನಲ್ಲಿ ಸಿಕ್ಕಿ ಬಿದ್ದರು. ಮ್ಯಾಜಿಸ್ಟ್ರೇಟರು ಮೊದಲನೆಯವನಿಗೆ ಐದೂವರೆ ವರುಷವೂ, ಎರಡನೆಯವನಿಗೆ ಮೂರು ವರುಷವೂ ಕಠಿಣ ಸಜಾ ವಿಧಿಸಿರುತ್ತಾರೆ

* * *

ಸರ್ಕಾರದವರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜಿಗಳಾದ ಮ॥ ಟಿ ಪರಮಶಿವಯ್ಯರವರನ್ನು ಬೆಂಗಳೂರಿಂದ ಶಿವಮೊಗ್ಗೆಗೂ, ಮಿ॥ ಆರ್ ಬಿ ನೈಮರವರನ್ನು ಮೈಸೂರಿಂದ ಬೆಂಗಳೂರಿಗೂ, ಸ್ಪೆಷಲ್ ಸೆಷನ್ಸ್ ಜಡ್ಜರಾದ ಮಿ॥ ಮಿರ್ ಹುಂಜಾ ಹುಸೇನ್‌ರವರನ್ನು ಮೈಸೂರಿಗೂ ವರ್ಗಮಾಡಿದಾರೆ ಕನ್ನಾಗಾಲದ ದಂಗೆ ಮೊಕದ್ದಮೆ ಪೂರೈಸಿದ ಬಳಿಕ ಈ ಹುಕುಮು ಜಾರಿಗೆ ಬರತಕ್ಕದ್ದಾಗಿದೆ

* * *

ಹುಬ್ಬಳ್ಳಿ ಪೊಲೀಸಿನವರು ಶ್ವೇತಕುಷ್ಠ ರೋಗಪೀಡಿತನಾದ ಒಬ್ಬ ಮನುಷ್ಯನನ್ನು ಅದು ಅಂಟು ಜಾಡ್ಯವೆಂದು ದಸ್ತಗಿರಿ ಮಾಡಿದ್ದರು ಆ ಮನುಷ್ಯನು ತಪ್ಪಿಸಿಕೊಂಡು ಹೋದನು ಇವನನ್ನು ಬೆಂಗಳೂರು ಸಿಟಿ ಪೊಲೀಸಿನವರು ಹಿಡಿದು ಸೆಂಟ್ರಲ್ ಜೈಲಿನಲ್ಲಿ ಒಂದು ಪ್ರತ್ಯೇಕವಾದ ಕೊಟಡಿಯಲ್ಲಿ ಇಟ್ಟಿದ್ದರು ಅವನು ಬೆಳಗಿನಝಾಮದಲ್ಲಿ ಕೊಟಡಿಯ ಕಿಟಕಿ ಕಂಬಿಗಳನ್ನು ಕಿತ್ತುಹಾಕಿ ತಲೆತಪ್ಪಿಸಿಕೊಂಡು ಹೋಗಿರುತ್ತಾನೆ

* * *

ಬೆಂಗಳೂರಿನಿಂದ ಮಾಗಡಿಯ ಮೇಲೆ ಕುಣಿಗಲಿಗೆ ಮೋಟರ್ ಗಾಡಿಗಳ ಟಪಾಲನ್ನು ಇರಿಸಬೇಕೆಂದು ಇತ್ಯರ್ಥವಾಗಿದೆ ಮೋಟರ್ ಗಾಡಿಗಳನ್ನು ಕೊಂಡು ತರಿಸುವುದೇ ಮುಂತಾದದ್ದಕ್ಕೆ ಬೇಕಾಗಿರುವ 50,000 ರೂಪಾಯನ್ನು ಸೇವಿಂಗ್ಸ್ ಬ್ಯಾಂಕ್ ಬಡ್ಡಿಗೆ ಸಾಲ ಕೊಡಬೇಕೆಂದೂ, ಈ ಹಣವನ್ನು 20 ವರುಷಗಳಲ್ಲಿ ಕೊಟ್ಟು ತೀರಿಸುತ್ತೇವೆಂದೂ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರು ಸರ್ಕಾರದವರನ್ನು ಕೇಳಿದಾರೆ

* * *

ವೈಸ್‌ರಾಯಿ ಪ್ರಭುಗಳು ಅಕ್ಟೋಬರ್ ಎರಡನೇ ವಾರದಲ್ಲಿ ಸಿಂಲಾ ಪಟ್ಟಣದಿಂದ ಸಂಚಾರ ಹೊರಟು ಕಪೂರ್ಥಲ, ಬೀಕ್ಯಾನಿರ್, ಎಟ್ಮೀರ, ಹೈದರಾಬಾದ್, ಬಿಜಾಪುರಾ, ಗೆರಸೊಪ್ಪ, ಮೈಸೂರು, ಬೆಂಗಳೂರು, ಕೋಲಾರ್ ಚಿನ್ನದ ಗಣಿಗಳು, ಮಧುರೆ, ತಿರುಚನಾಪಲ್ಲಿ, ತಂಜಾವೂರು, ಮದರಾಸ್, ಕಟ್ಟ್ಯಾಕ್, ಗಯೆ, ಬಂಕಿಪುರ, ಭರತಪುರಗಳಿಗೆ ದಯಮಾಡಿ, ಡಿಸೆಂಬರ್ ಮೊದಲನೇ ವಾರದಲ್ಲಿ ದೇಹಲಿ ಪಟ್ಟಣವನ್ನು ತಲುಪುವವರಾಗಿದಾರೆ

* * *

ಕಳೆದ ಭಾನುವಾರ ಮಧ್ಯಾಹ್ನ ಮಂಡ್ಯದ ತಾಲ್ಲೂಕು ಕೊಮ್ಮೆರಹಳ್ಳಿಯ ಹುಂಜಮರ ಪರಸ್ಪರ ಸಹಾಯ ಸಂಘದ ಮೊದಲನೇ ವಾರ್ಷಿಕೋತ್ಸವವು ಮ॥ ಎಂ. ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಾಗಿ ಜರುಗಿತು —ತಾ. 3 ನೇ ಭಾನುವಾರ ಹೊಳೆನರಸಿಪುರಕ್ಕೆ ರೆಜಿಸ್ಟ್ರಾರ್‌ರವರು ಹೋಗಿ ಅಲ್ಲಿನ ಕೋಆಪರೇಟಿವ್ ಸಂಘದ ವಾರ್ಷಿಕ ಕೂಟವನ್ನು ನಡಿಸಿ, ಅಲ್ಲಿ ಆ ಸಂಘಕ್ಕಾಗಿ ಪ್ರತ್ಯೇಕವಾದ ಕಟ್ಟಡವನ್ನು ಕಟ್ಟುವುದಕ್ಕೆ ಅಸ್ತಿಭಾರವನ್ನು ಹಾಕಿ ಬಂದರು.

* * *

ದೇವನಹಳ್ಳಿ ತಾಲ್ಲೂಕು ಮಾರನಹಳ್ಳಿ ಜೋಡಿದಾರ್ ಮ॥ ಚೆನ್ನಬಸವ ವಡೇರೂ, ಇನ್ನಿಬ್ಬರೂ ಕಳೆದ ಶುಕ್ರವಾರ ಸಾಯಂಕಾಲ ಬೆಂಗಳೂರಿನಲ್ಲಿ ಕುದುರೆ ಗಾಡಿಯಲ್ಲಿ ಕೂತು ಹೋಗುತ್ತಿದ್ದಾಗ ಕುದುರೆ ಬೆದರಿ ಮ॥ ವಡೇರೂ ಇನ್ನೊಬ್ಬರೂ ಗಾಡಿಯಿಂದ ಬಿದ್ದು ಗಾಯಪಟ್ಟರು. ಡೆಪ್ಟಿ ಕಮಿಷನರ್ ಮಿ॥ ಚಾಂಡಿಯವರು ಅವರನ್ನು ಮೋಟರ್ ಗಾಡಿಯಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಮಾಡಿಸಿದರು ಮ॥ ವಡೇರಿಗೆ ಜ್ಞಾನವೇ ಬರದೆ ಕಾಲವಾದರು. ಅವರ ಸಹೋದರರು ಮೋಟರಿನಲ್ಲಿ ಬಂದು ಶವವನ್ನು ಸಾಗಿಸಿದರು. 12 ಗ್ರಾಮಗಳ ಜೋಡಿದಾರರಾಗಿ ಪರೋಪಕಾರಿಗಳಾಗಿದ್ದ ಮ॥ ವಡೇರವರಿಗೆ ಇಂಥಾ ಆಕಸ್ಮಿಕವಾದ ಅಂತ್ಯವು ಪ್ರಾಪ್ತವಾದದ್ದು ವಿಷಾದವನ್ನುಂಟುಮಾಡಿದೆ

ಮೈಸೂರು ಗೆಜೆಟ್ ಸಂಗ್ರಹ.

ಮ॥ ಮರಿಯಪ್ಪಶೆಟ್ಟರನ್ನೂ ಮ॥ ಬಡಿಗೆ ತಿಮ್ಮರಾಯಪ್ಪನವರನ್ನೂ ಮಡಿಗೇನಹಳ್ಳಿ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಿದೆ

ಮ॥ ಪ್ಲೀಡರ್ ಸಿ ಸೀತಾರಾಮರಾಯರನ್ನು ಯಲಹಳ್ಳಿ ಮ್ಯುನಿಸಿಪಲ್ ಬೋರ್ಡ್ ಮೆಂಬರಾಗಿ ನೇಮಿಸಿದೆ

ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಮಿ॥ ಎಲ್. ಪಿ. ಮಾಸ್ಕರನ್ ಹಾಸ್‌ಯವರಿಗೆ ಕೊಟ್ಟಿದ್ದ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾದ್ದರಿಂದ ರದ್ದುಮಾಡಿದೆ.

ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ ಮಿ॥ ವೈ. ಸೀತಾರಾಮಯ್ಯನವರಿಗೆ ಕೊಟ್ಟಿದ್ದ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾದ್ದರಿಂದ ರದ್ದುಮಾಡಿದೆ

ಚೀಫ್ ಕೋರ್ಟ್ ಡೆಪ್ಟಿ ರೆಜಿಸ್ಟ್ರಾರ್ ಮಿ॥ ಬಿ ಬಸವಾರಾಧ್ಯರವರಿಗೆ ಜೂಲೈ ತಾ 23 ರಿಂದ ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ ಸರ್ಜನ್ ಮಿಸ್ ಅಯುಚಮ್ಮಾಳ್‌ರವರಿಗೆ ಆಗಸ್ಟ್ ತಾ 7 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮೈಸೂರು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಮಿ॥ ಬಿ. ಕೃಷ್ಣರಾಯರಿಗೆ ಕೊಟ್ಟಿದ್ದ ಪ್ರಿವಿಲೆಜ್ ರಜವನ್ನು ಅವರು ಉಪಯೋಗಿಸಿಕೊಳ್ಳಲಿಲ್ಲವಾದ್ದರಿಂದ ರದ್ದುಮಾಡಿದೆ

ಪೊಲೀಸ್ ಇನ್ಸ್‌ಪೆಕ್ಟರ್ ಮಿ॥ ಜಿ ಶಾಂತವೀರಪ್ಪನವರನ್ನು ಸಿಕಾರಿಪುರ ತಾಲ್ಲೂಕು ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ

ಶಿವಮೊಗ್ಗಾ ಡೆಪ್ಟಿ ಕಮಿಷನರ ಆಫೀಸ್ ಜುಡಿಷಲ್ ಹೆಡ್ ಮುನ್ಷಿ ಮ॥ ಎಸ್ ನಾರಾಯಣರಾಯರನ್ನು ಶಿವಮೊಗ್ಗಾ ತಾಲ್ಲೂಕಿನ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ.

ಮೈಸೂರು ಇನ್‌ಫೆಂಟ್ರಿ 2 ನೇ ಬೆಟಾಲಿಯನ್ ಶೇಕ್ ಹೈದರ್‌ಸಾಬರನ್ನು 1 ನೇ ಗ್ರೇಡ್ ಜಮಾದಾರಿಗೂ, ಅಬ್ದುಲ್ ಅಜಿಜ್ ಸಾಬರನ್ನು 2 ನೇ ಗ್ರೇಡ್ ಜಮಾದಾರಿಗೂ ಬಡ್ತಿಮಾಡಿದೆ.

ಕಾವೇರಿ ಕಲಾವಿಗಾಗಿ ಜಮೀನುಗಳನ್ನು ಸಿರಿವಿಮಾಡುವ ಕೆಲಸಕ್ಕೆ ಮಿ॥ ಸಿ ಬಿ ರಾಮರಾಯರನ್ನು ಕೃಷ್ಣರಾಜಪೇಟೆ ತಾಲ್ಲೂಕ್ ಅಮಲ್ದಾರ್ರ ಸಹಾಯಕನ್ನೂ, ಮಿ॥ ಎಸ್ ಶ್ರೀನಿವಾಸಮೂರ್ತಿಯವರನ್ನು ಯಡತೊರೆ ಅಮಲ್ದಾರ್ರ ಸಹಾಯಕನ್ನೂ ನೇಮಿಸಿ ವರ್ಗಮಾಡಿದೆ

ಪ್ರೊಬೇಷನರ್ ಮಿ॥ ಅಬ್ದುಲ್ ಅಜೀಜ್‌ಖಾನ್‌ರವರನ್ನು ಫ್ರೆಂಚ್‌ರಾಕ್ಸ್ ಡೆಪ್ಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿದೆ.

ಮಿ॥ ಕೆ. ಮುತ್ತಣ್ಣರವರನ್ನು ಜೂಲೈ ತಾ ೨೪ ರಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಮತ್ತು ಖಜಾನೆಯ ಛಾರ್ಜನ್ನು ವಹಿಸಿಕೊಂಡಿದಾರೆ.

ಮಿ॥ ಸಿ ಕೃಷ್ಣರಾಯರನ್ನು ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್ ಬೋರ್ಡಿನ ಸೆಕ್ರೆಟರಿಯಾಗಿ ನೇಮಿಸಿದೆ

ಜಮಾದಾರ್ ಮಹಮದ್ ಇಸಾಕ್‌ರವರನ್ನು ಡಿವಿಜನ್ ಕಮ್ಯಾಂಡರಾಗಿಯೂ, ಗುಲಾಂಮುರ್ತುಜಾ ಬೇಗ್‌ರವರನ್ನು ಕ್ವಾರ್ಟರ್ ಮಾಸ್ಟರ್ ಜಮಾದಾರರಾಗಿಯೂ ಒಂದು ವರುಷ ಬದಲಿ ನೋಡುವಂತೆ ಬಡ್ತಿಮಾಡಿದೆ

ಗಣಿಗಳ ಇಲಾಖಾ ಅಸಿಸ್ಟೆಂಟ್ ಮಿ॥ ಸಿ. ಆ ಸೂರ್ಯನಾರಾಯಣರಾಯರಿಗೆ ಜೂಲೈ ತಾ 9 ರಿಂದ ಒಂದು ತಿಂಗಳು ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ.

ಚೀಫ್ ಇಂಜಿನಿಯರ್ ಮಿ. ಕಪೂರ್ ಶ್ರೀನಿವಾಸರಾಯರನ್ನು ಕಾವೇರಿ ಕಲಾವಿನ ಪಂಚಾಯತಿ ಕಾರ್ಯಕ್ಕೆ ನೇಮಕಮಾಡಿದೆ ಮಿ॥ ಕೆ ಕೃಷ್ಣಯ್ಯಂಗಾರ್ರು ಚೀಫ್ ಇಂಜಿನಿಯರಾಗಿ ಬದಲಿ ನೋಡತಕ್ಕದ್ದು ಮಿ॥ ಎಂ. ಜಿ. ರಂಗಯ್ಯನವರನ್ನು ಸ್ಪೆಷಲ್ ಡ್ಯೂಟಿಗೆ ನೇಮಕಮಾಡಿದೆ.

ತಾಲ್ಲೋಕು ವರ್ತಮಾನಗಳು.

ಯಡತೊರೆ ತಾ॥ ಮಿರ್ಲೆ —ಹವಾ ಚೆನ್ನಾಗಿದೆ ಕರಿ ಜಮೀನಿನ ನಾಟಿ ಕೆಲಸ ನಡೆಯುತ್ತಲಿದೆ ಚಾಮರಾಜ ನಾಲಾ ಒಡೆದದ್ದರಿಂದ ಉತ್ತ ಗದ್ದೆಗಳೂ ಮತ್ತು ನಾಟಿ ಹಾಕಿರುವ ಪೈರುಗಳೆಲ್ಲಾ ಒಣಗುತ್ತಲಿತ್ತು ಈಗ ಕೊಂಚಮಟ್ಟಿಗೆ ನಾಲಾ ದುರಸ್ತು ಆಗಿ ನೀರು ಬರಲು ಉಪಕ್ರಮವಾಗಿದೆ. ನಾಲಾ ಅಧಿಕಾರಿಗಳು ಬೇಸಗೆಕಾಲದಲ್ಲಿ ಎಲ್ಲೆಲ್ಲಿ ಮಳೆ ವಗೈರೆ ಬೀಳುತ್ತೋ, ಎಲ್ಲೆಲ್ಲಿ ನಾಲಾ ಬಂದಿರಿ ಆಗಿರುತ್ತೋ ಅಜಮಾಯಿಷಿ ಮಾಡಿ ಮೊದಲು ಕಾಮಗಾರಿ ಮುಗಿಸಿ ಉಳಿದಕಡೆ ನಂತರ ಕೆಲಸಮಾಡಿಸಿದ್ದರೆ ಆದರೆ ಇಂಥಾ ತೊಂದರೆಗೆ ಆವಕಾಶವಾಗುವದಿಲ್ಲ. ಕಳೆದ ಸಾಲು ಇದೇ ರೀತಿ ಆಗಿತ್ತು —ಈ ಗ್ರಾಮದ ಯೂನಿಯನ್ ಜಮಾಬಂದಿಯನ್ನು ಈ ವಾರ ಅಮಲ್ದಾರ್ರು ಮಾಡಿದರು.—ಧಾರಣೆವಾಸಿಗಳು ದಿನೇ ದಿನೇ ಹೆಚ್ಚುತ್ತಲಿವೆಯೇ ವಿನಹ ಕಮ್ಮಿ ಆಗುವ ಸ್ಥಿತಿಯಲ್ಲಿಲ್ಲ.

ಮದ್ದಗಿರಿ.—ಇಲ್ಲಿ 2-3 ವಾರಗಳಿಂದ ಮೋಡ ಕಟ್ಟುತ್ತಾ ಇದೆಯೇ ಹೊರ್ತು ಮಳೆ ಸುತರಾಂ ಇಲ್ಲ. ಗಾಳಿ ವಿಶೇಷವಾಗಿದೆ ಭಾವಿಗಳಲ್ಲಿ ನೀರು ಮಟ್ಟಾಟವಾಗಿರುತ್ತೆ. ಮುಸ್ಕಿಫಸಲಿಗೆ ಹರ್ಕೆ ಹೊಡೆಯಲು ಮಾರ್ಗವಿಲ್ಲವೆ ಪೈರೆಲ್ಲಾ ಒಣಗುತ್ತಿದೆ ಕೆಲವು ಸ್ಥಳಗಳಲ್ಲಿ ಬಿಸಿಲು ಗಾಳಿ ಹೊಡೆತದಿಂದ ಶೀಡೆ ಪ್ರಾರಂಭವಾಗಿ ಫಸಲು ಹಾಳಾಗುತ್ತಾ ಇದೆ ಕರಿ ಫಸಲು ಇಟ್ಟು ಇಲ್ಲಿ ಮೂರು ವರುಷವಾಯಿತು. ರೈತರು ಕಂದಾಯ ತೆರುವುದೇ ಆಯಿತು ಈ ವರುಷವೂ ಕೆರೆಗೆ ನೀರಿಲ್ಲ. ಚಿಕ್ಕಲೇನ ಹಳ್ಳಿ ಕಲಾವಿನ ವಿಚಾರ ಸರ್ಕಾರದವರ ನೋಟಕ್ಕೆ ಮಾತ್ರ ಬಂತೇ ಹೊರತು ರೈತರಿಗೆ ಸೌಕರ್ಯವನ್ನು ಮಾಡಿಕೊಡಲಿಲ್ಲ. ಕಳೆದ ವಾರ ಡೆಪ್ಟಿ ಕಮಿಷನರು ದಯಮಾಡಿದ್ದಾಗ ರೈತರೆಲ್ಲಾ ಸೇರಿ ಅರ್ಜಿ ಕೊಟ್ಟರು ಇದುವರೆಗೆ ಎಷ್ಟೋ ಅರ್ಜಿಗಳು ಕೊಟ್ಟಿರುವರು. ಎಂಥ ಅನುಕೂಲವಾದೀತೋ ತಿಳಿಯಲಿಲ್ಲ.—ಡಿಸ್ಟ್ರಿಕ್ಟ್ ಸರ್ಜನ್ ಸಾಹೇಬರು ಬಂದು ಆಸ್ಪತ್ರೆ ಕೆಲಸವನ್ನು ನೋಡಿಕೊಂಡು, ಸಬ್ ಡಿವಿಜನ್ ಆಫೀಸರೂ, ಸಬ್ ಅ॥ ಸರ್ಜನ್‌ರೂ, ಅಮಲ್ದಾರ್ರೂ ಸೇರಿ ಕೆಲವು ಗ್ರಾಮಗಳಿಗೆ ಹೋಗಿ ಜನಗಳಿಗೆ ಇನಾಕ್ಯುಲೇಷನ್ ಮಾಡಿದ್ದಲ್ಲದೆ ಇತರ ಅನುಕೂಲಗಳನ್ನು ಕಲ್ಪಿಸಿಕೊಟ್ಟು ಬಂದರು ಈಗ ಕೆಲವು ಕಡೆ ಪ್ಲೇಗ್ ಉಪದ್ರವಿರೋಣದರಿಂದ ಇಲ್ಲಿನ ಡಾಕ್ಟರು ಪ್ರತಿನಿತ್ಯವೂ ಗ್ರಾಮಾಂತರ ಹೋಗಿ ಇನಾಕ್ಯುಲೇಷನ್ ಮಾಡುವದಲ್ಲದೆ ತಕ್ಕ ಚಿಕಿತ್ಸೆ ಉಪಚಾರಗಳನ್ನು ಮಾಡುತ್ತಿದ್ದಾರೆ.

ದೇವನಹಳ್ಳಿ —ಸುಮಾರು ಒಂದು ತಿಂಗಳಿಂದ ಗಾಳಿಯೂ, ಮೋಡಾಹಂಬರವೂ ಬಹಳವಾಗಿ, ಪೈರುಗಳು ಬಾಡಿಹೋಗಿ, ಪ್ರಜೆಗಳಲ್ಲಿ ತುಂಬಾ ಕಳವಳವನ್ನುಂಟುಮಾಡಿತ್ತು ಆದರೆ ಈಚೆಗೆ ಬಿದ್ದ ಮಳೆಯಿಂದ ರೈತರೆಲ್ಲಾ ಸಂತೋಷಚಿತ್ತರಾಗಿ ವ್ಯವಸಾಯ ಕೆಲಸಗಳಲ್ಲಿ ನಿರತರಾಗಿದಾರೆ ಧಾರಣೆವಾಸಿಗಳು ಮಾತ್ರ ದುರ್ಭಿಕ್ಷವನ್ನೇ ಸೂಚಿಸುತ್ತಲಿವೆ ಆದರೆ ಇಲ್ಲಿ ನಡೆಯುತ್ತಿರುವ ರೈಲ್ವೆ ಕಾಮಗಾರಿಯಿಂದ ಬಡಕೂಲಿಗಳಿಗೆ ತುಂಬಾ ಆಶ್ರಯವಾಗಿದೆ.—ಕಮ್ಮಿ ತೂಕದ ಬಟ್ಟುಗಳನ್ನು ಇಟ್ಟುಕೊಂಡಿದ್ದ ಕೆಲವರನ್ನು ಹಿಡಿದು ಪೊಲೀಸಿನವರು ಜುಲ್ಮಾನೆ ಮಾಡಿಸಿದ್ದರಮೇಲೆ ಹೊಸತೂಕದ ಬಟ್ಟುಗಳು ಮತ್ತು ಅಳತೆಸೇರುಗಳು ಜಾರಿಗೆ ಬರುತ್ತಲಿವೆ ಆದರೆ ಮುಖ್ಯವಾಗಿ ಪೇಟೆವರ್ತಕರಲ್ಲಿ ಈ ರೂಲು ಜಾರಿಗೆ ಬಾರದೆ ಅವರು ಹಳೇ ತೂಕದ ಬಟ್ಟುಗಳು ಮತ್ತು ಸೇರುಗಳನ್ನೇ ಇಟ್ಟುಕೊಂಡಿದಾರೆ. ಈ ವಿಷಯವಾಗಿ ಪೊಲೀಸಿನವರು ಜಾಗ್ರತೆ ನಿಗಾ ಕೊಡುವರೆಂದು ನಂಬುತ್ತೇನೆ —ಮ್ಯುನಿಸಿಪಲ್ ಲಾಂದ್ರಗಳಲ್ಲಿ ಅನೇಕ ಒಡೆದು ಹೋಗಿ ಹಚ್ಚಿದ ದೀಪಗಳೆಲ್ಲಾ ಗಾಳಿಯಿಂದ ನಂದಿ ಹೋಗುತ್ತಲಿವೆ ಇದರಿಂದ ರಾತ್ರಿಹೊತ್ತು ತಿರುಗಾಡುವವರಿಗೆ ಮಳೆಗಾಲವಾದ್ದರಿಂದ ತೊಂದರೆಗಳುಂಟಾಗುತ್ತೆಂದು ಹೇಳಬೇಕಾಗಿಲ್ಲ. ಊರಿನ ಪಾಕೀಜಾ ಕೊಂಚಮಟ್ಟಿಗೆ ಚೆನ್ನಾಗಿದೆ. ಸುತ್ತಲೂ ಹಳ್ಳಿಗಳಲ್ಲಿ ಪ್ಲೇಗು ಉಪದ್ರವು ಪ್ರಾರಂಭವಾಗುತ್ತಿರುವುದರಿಂದ ಟವನಿನ ಆರೋಗ್ಯವನ್ನು ಕಾಪಾಡತಕ್ಕ ವಿಷಯದಲ್ಲಿ ಸ್ಯಾನಿಟರಿ ಡಿಪಾರ್ಟ್‌ಮೆಂಟಿನವರು ತುಂಬಾ ಜಾಗರೂಕರಾಗಿರುವರೆಂದು ನಿರೀಕ್ಷಿಸುತ್ತೇನೆ

ಫ್ರೆಂಚ್‌ರಾಕ್ಸ್ —ಹವಾ ತಕ್ಕಮಟ್ಟಿಗೆ ಆರೋಗ್ಯವಾಗಿದೆ ಧಾರಣೆವಾಸಿಗಳಂತೂ ಕ್ಷಾಮಕಾಲವನ್ನು ಸೂಚಿಸುತ್ತವೆ ಬಡವರ ಕಷ್ಟ ಹೇಳತೀರದು. ಮಳೆ ಸಂಪೂರ್ಣವಾಗಿ ನಿಂತುಹೋಗಿ ರಾಗಿ ಜೋಳದ ಪೈರು ಅಲ್ಲಲ್ಲಿ ಕೆಟ್ಟು ಹೋಯಿತೆಂದು ಹೇಳುತ್ತಾರೆ.—ಸಂತೆಯಲ್ಲಿ ಮೊಂಡರ ಹಾವಳಿ ಕೆಲವು ಕಾಲದಿಂದಲೂ ಹೆಚ್ಚಾಗುತ್ತಿದೆ ಬಡರೈತರು ದೂರದ ಹಳ್ಳಿಪಳ್ಳಿಯಿಂದ ಮಾರುವದಕ್ಕೆ ತರತಕ್ಕ ಸಾಮಾನುಗಳನ್ನು ಮೊಂಡರಿಗೆ ಕೊಟ್ಟು ಹೋಗಬೇಕಾಗಿದೆಯೇ ಹೊರ್ತು ಅದನ್ನು ಬಿಕರಿ ಮಾಡಿ ನಾಲ್ಕು ಆಣೆ ರಾಗಿ ತೆಗೆದುಕೊಂಡು ಹೋಗಲು ಮಾರ್ಗವಿಲ್ಲ ಸರ್ಕಾರದವರು ಜಾಗ್ರತೆಯಾಗಿ ಇವರ ಹಾವಳಿಯನ್ನು ತಪ್ಪಿಸದೆ ಹೋದರೆ ಮುಂದೆ ಹಳ್ಳಿಪಳ್ಳಿ ಜನಗಳು ಸಂತೆಗೆ ವ್ಯಾಪಾರಕ್ಕೆ ಬರಲು ತುಂಬಾ ಭಯಪಡುತ್ತಾರೆ —ನಮ್ಮ ಊರಿನ ಸಕಲ ಜನಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದ ಡೆಪ್ಟಿ ಅಮಲ್ದಾರ್ ಮಿ॥ ಸಿ ಬಿ. ರಾಮರಾಯರಿಗೆ ಕೃಷ್ಣರಾಜಪೇಟೆಗೆ ವರ್ಗವಾಯಿತೆಂದು ಕೇಳುತ್ತೇವೆ ಇವರು ಇಲ್ಲಿಗೆ ಬಂದು ಇನ್ನೂ ಆರು ತಿಂಗಳಾಗಲಿಲ್ಲವಾದಾಗ್ಯೂ, ಹಿಂದೆ ಇದ್ದ ನ್ಯೂನತೆಗಳನ್ನೆಲ್ಲಾ ಕ್ರಮಪ್ರಕಾರ ಹೋಗಲಾಡಿಸಿ ಪುರೋಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಶ್ರದ್ಧೆಯಿಂದ ಮಾಡುತ್ತಾ ಬಂದರು. ಇಂಥವರನ್ನು ಇಷ್ಟು ಜಾಗ್ರತೆ ಇಲ್ಲಿಂದ ವರ್ಗಮಾಡಿದ್ದು ಪ್ರಜೆಗಳಿಗೆ ವ್ಯಸನಕರವಾಗಿದೆ --ದಯಾಳುಗಳಾದ ನಮ್ಮ ಸಬ್ ಡಿವಿಜನ್ ಸಾಹೇಬರವರು ಕೋರ್ಟಿನ ಕೆಲಸಗಳನ್ನು ತೃಪ್ತಿಕರವಾಗಿ ನಡಿಸುತ್ತಾ ದುಷ್ಟರಿಗೆ ಶಿಕ್ಷೆಯನ್ನೂ ಶಿಷ್ಟರಿಗೆ ಪರಿಪಾಲನೆಯನ್ನೂ ಮಾಡಿಕೊಂಡು ಬರುತ್ತಿರುವದು ಸಂತೋಷಕರವಾಗಿದೆ ಇವರ ಕಾಲದಲ್ಲಿ ಈ ಊರಿನಲ್ಲೂ, ಸುತ್ತುಮುತ್ತಲಿನ ಗ್ರಾಮಗಳಲ್ಲೂ ಹಳೇ ಹೆಬ್ಬುಲಿಗಳಂತಿದ್ದ ದುಷ್ಟರಿಗೆಲ್ಲಾ ಶಿಕ್ಷೆಯನ್ನು ವಿಧಿಸಿ ಬಹಳ ಮಟ್ಟಿಗೆ ಪುಂಡುತನಗಳನ್ನು ಅಡಗಿಸಿಬಿಟ್ಟರು ಇನ್ನು ಸ್ವಲ್ಪ ಕಾಲದೊಳಗಾಗಿ ದುಷ್ಟರ ಹಾವಳಿ ಸಂಪೂರ್ಣವಾಗಿ ನಿಂತು ಹೋಗುವುದೆಂದು ನಂಬಿದೇವೆ —ಕಳೆದ 10 ನೇ ತಾ ಭಾನುವಾರ ಇಲ್ಲಿ ಒಂದು ರೀಡಿಂಗ್ ರೂಮು ಹೊಸದಾಗಿ ಸ್ಥಾಪನೆಯಾಯಿತು ಆಗ್ಗೆ ನಮ್ಮ ಸಬ್ ಡಿವಿಜನ್ ಸಾಹೇಬರು ದೊಡ್ಡಮನುಷ್ಯರ ಮಧ್ಯೆ ಹಾಜರಾಗಿದ್ದು ಕಾಲೋಚಿತವಾದ ಕೆಲವು ಮಾತುಗಳನ್ನಾಡಿ ರೀಡಿಂಗ್ ರೂಮನ್ನು ಪ್ರಾರಂಭ ಮಾಡಿ, ತಾವೇ ಅದಕ್ಕೆ ಪ್ರೆಸಿಡೆಂಟರಾಗಿರಲು ಒಪ್ಪಿಕೊಂಡಿದಾರೆ ಇಲ್ಲಿ ಯಾರೂ ಪ್ರಯತ್ನಿಸದೇ ಇದ್ದ ಈ ವಿಶೇಷವಾದ ಕಾರ್ಯವು ವೃದ್ಧಿಸ್ಥಿತಿಗೆ ಬರಲೆಂದು ಹಾರೈಸುತ್ತೇವೆ —ಇಲ್ಲಿರುವ ಶ್ರೀರಾಮಮಂದಿರವು ತುಂಬಾ ವಿಜೃಂಭಣೆಯಿಂದ ನಡೆಯುತ್ತಾ ಇರುವದು ಮ॥ ಶಿವರಾಮಯ್ಯನವರು ಇದು ಇನ್ನೂ ವೃದ್ಧಿಯಾಗಲೆಂದು ಸಾಹಸಪಡುತ್ತಾ ಇದಾರೆ

ನಂಜನಗೂಡು —ಈ ಪ್ರಾಂತ್ಯ 7-8 ದಿನಗಳಿಂದ ಮೋಡ ಮಾತ್ರ ಹಾಕುತ್ತ ಮಳೆ ಬರಲಿಲ್ಲ. ಜೋಳದ ಫಸಲು ಕೆಲವು ಕಡೆ ಚೆನ್ನಾಗಿದೆ ಹೈನ್ ರಾಗಿ ಪೇರಾವು ಮಾಡಿದಾರೆ ಮಳೆ ಬರದೆ ಇರುವುದರಿಂದ ಪೈರು ಚೆನ್ನಾಗಿ ಬಂದಿಲ್ಲವೆಂದು ರೈತರು ಹೇಳುತ್ತಾರೆ —ಈ ಟವನ್ ಕೆಲವು ಚರಂಡಿಗಳಲ್ಲಿ ನೀರು ಸಲೀಸು ಹೋಗುವದಕ್ಕೆ ಮಾರ್ಗವಿಲ್ಲದೆ ದುರ್ಗಂಧವುಂಟಾಗಿದೆ ಪ್ಲೇಗ್ ಸೋಂಕು ಪ್ರಾಪ್ತವಾಗಿ ಅಲ್ಲಲ್ಲೇ ಇಲಿಗಳು ಸಾಯುವದಾಗಿಯೂ, 1 2 ಪ್ಲೇಗ್ ಕೇಸುಗಳು ಉಂಟಾದಂತೆಯೂ ಹೇಳುತ್ತಾರೆ. ಹಿಂದೆ ಕಾಲರಾ ದೆಸೆಯಿಂದ ಜನಗಳಿಗೆ ಉಂಟಾದ ದುಃಖವು ಇನ್ನೂ ಮರವೆಗೆ ಬಂದಿಲ್ಲ. ಆಗಲೇ ಪ್ಲೇಗ್ ತಲೆದೋರಿರುವದರಿಂದ ವ್ಯಥೆ ಎಷ್ಟೆಂದು ಹೇಳೋಣ ?—ಈ ಟವನ್‌ನಲ್ಲಿ ಕಳ್ಳರ ಕಾಟ ಬಹು ಹೆಚ್ಚಾಗಿರುತ್ತೆ ಈಗ್ಗೆ 3-4 ದಿನಗಳ ಹಿಂದೆ ಒಂದು ರಾತ್ರಿ ಮೂರು ಕಡೆ ಕನ್ನಾ ಹಾಕಿ 2 ಕಡೆ ಇದ್ದದ್ದನ್ನೆಲ್ಲ ಹೊ[illegible]ದು ಕಡೆ ಏನೂ ಸಿಕ್ಕದೆ ಹೋಗಿ ಆ ಮನೆಯಲ್ಲಿದ್ದ ಅನ್ನ ಸಾರು ವಗೈರೆ ಪದಾರ್ಥಗಳನ್ನು ಹಿತ್ತಲುಕಡೆ ತಂದು ತಿಂದು ಹೋಗಿರುತ್ತಾರೆ ಹಿಂದೆ ಹೀಗೆ ದಿನ ಒಂದಕ್ಕೆ 4-5 ಕಡೆ ಕನ್ನಾ ಬೀಳುತ್ತಿತ್ತು ಆಗ ಡೆಪ್ಟಿ ಕಮಿಷನರಾಗಿದ್ದ ಮ॥ ಕಾಂತರಾಜೆ ಅರಸಿನವರು ದಯಮಾಡಿ ಕೆಲವು ಪೊಲೀಸಿನವರನ್ನು ಬೇರೆ ತಾಲ್ಲೋಕಿಗೆ ವರ್ಗಾಯಿಸಿದ್ದರು. ಆಗ ವರ್ಗಪಟ್ಟ ಕೆಲವರು ಪುನಃ ಬಂದಿರೋಣದರಿಂದಲೋ, ಬೀಟು ವಗೈರೆ ಸರಿಯಾಗಿ ನಡೆಯದೆ ಇರೋಣದರಿಂದಲೋ ಮತ್ತೆ ಕಳ್ಳತನಕ್ಕೆ ಅವಕಾಶವಾಗಿರುತ್ತೆ. ರಾಜಬೀದಿಯಲ್ಲಿ ಅಡ್ವೋಕೇಟ್ ಮ॥ ವೆಂಕಟರಾಮಯ್ಯನವರ ಮನೆಯಲ್ಲೂ, ಮ॥ ಗಣೇಶಾಚಾರ್ರ ಮನೆಯಲ್ಲೂ ಕಳವಾದ ಮಾಲುಗಳು ಏನೂ ಪತ್ತೆ ಆಗಲಿಲ್ಲ. ಪೊಲೀಸ್ ಇನ್ಸ್‌ಪೆಕ್ಟರವರು ಬಹಳ ದಿವಸಗಳಿಂದ ಇರುವ ಮತ್ತು ಸ್ಥಳವಂದಿಗರಾದ ಕಾನ್ಸ್‌ಟೇಬಲ್‌ಗಳನ್ನು ಇತರ ತಾಲ್ಲೋಕಿಗೆ ವರ್ಗಾಯಿಸಿ ಹೊಸಬರನ್ನು ಕರಸಿಕೊಂಡು ಬೀಟ್ ವಗೈರೆ ನೇಮಿಸಿ ಇನ್ಸ್‌ಪೆಕ್ಷನ್ ಮಾಡುತ್ತಾ ಬಂದರೆ ಜನಗಳಿಗೆ ತುಂಬಾ ಉಪಕಾರವಾದೀತು —ಇಲ್ಲಿನ ಮುನ್ಸಿಫ್ ಕೋರ್ಟಿನಲ್ಲಿ ನಾಜರ್ ಇಲಾಖೆಯ ಕೆಲಸ ಸಮರ್ಪಕವಾಗಿ ನಡೆಯುವದಿಲ್ಲವೆಂದೂ, ಕಕ್ಷಿಗಾರರಿಗೆ ತುಂಬಾ ಕಷ್ಟಕ್ಕೆ ಕಾರಣವಾಗಿರುತ್ತೆಂದು ಒಬ್ಬ ಸಮನ್ ಜವಾನನು 2 ಮೊಕದ್ದಮೆಗಳಲ್ಲಿ ಸಾಕ್ಷಿಗಳು ಅಕ್ಷರಸ್ಥರಾಗಿದ್ದರೂ ಅಲ್ಲಿಗೆ ಹೋಗಿ ಸಮನ್ ಜಾರಿಮಾಡದೆ ಅವರುಗಳ ಹೆಬ್ಬೆಟ್ಟಿನ ಗುರ್ತು ಹಾಕಿ ಭತ್ಯವನ್ನು ತಿಂದು ಹಾಕಿದ್ದಾನೆಂದೂ ಒಂದು ನಂಬರಿನಲ್ಲಿ ಕೋರ್ಟಿಗೆ ವಾದಿಯಾದವನು ಅರ್ಜಿ ಹಾಕಿ ವಿಚಾರಣೆ ನಡೆಯುತ್ತಾ ಇದೆ ತಾಲ್ಲೂಕು ಟ್ರೆಜರಿಯಲ್ಲಿ ಕೆಲವು ದರಗಳ ಕೋರ್ಟು ಫೀಜು ಸ್ಟ್ಯಾಂಪುಗಳು 10-12 ದಿನಗಳಿಂದ ಇಲ್ಲದೆ ಕಕ್ಷಿಗಾರರು ದಾವಾ ವಗೈರೆ ದಾಖಲ್ ಮಾಡುವದಕ್ಕೆ ಅವಕಾಶವಿಲ್ಲದೆ ತೊಂದರೆಗೆ ಕಾರಣವಾಗಿದೆ ಈ ವಿಷಯದಲ್ಲಿ ಟ್ರೆಜರಿ ಆಫೀಸರು ಆಗ್ಗಾಗ್ಗೆ ಇನ್ಸ್‌ಪೆಕ್ಷನ್ ಮಾಡಿ ಇಂಥಾ ತೊಂದರೆಯನ್ನು ತಪ್ಪಿಸಬೇಕಾಗಿದೆ

ಒಬ್ಬ ಧರ್ಮಾತ್ಮನ ಮರಣ

ಬೇಲೂರಲ್ಲಿ ಅನಾಥ ಬಾಲಕರನ್ನು ಪೋಷಿಸಿ, ವಿದ್ಯಾವಂತರನ್ನಾಗಿ ಮಾಡಲು ಶ್ರೀಮಂಜುನಾಥ ಅನಾಥಾಲಯವನ್ನು ಸ್ಥಾಪಿಸಿರುವ ವೈಶ್ಯರ ಸಾಹುಕಾರ್ ಮ|| ಖರೀದಿ ಗೋವಿಂದಪ್ಪನವರು 1 2 ತಿಂಗಳಿಂದ ಖಾಯಿಲೆ ಇದ್ದು ಕಳೆದ ಜೂಲೈ 16 ನೇ ತಾ ಬೆಳಗ್ಗೆ ಕಾಲಗತಿಯನ್ನು ಹೊಂದಿದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇನೆ ಈ ಊರಲ್ಲಿ ಸ್ಥಾಪಿಸಲ್ಪಟ್ಟಿದ್ದ ವಾಚಕಮಂದಿರದಿಂದ ಸಾವಾಜಿಕರು ಸೇರಿ ಸದ್ವ್ಯಾಸಂಗದಿಂದ ಕಾಲಕ್ಷೇಪ ಕಳೆಯಬೇಕೆಂಬ ಅಭಿಲಾಷೆಯಿಂದ ಉಪಾಸನಾ ಸಮಾಜವೆಂಬ ಭಜನೆಕೂಟವನ್ನು ಸ್ಥಾಪಿಸಿದರು ಇದರ ಮೂಲಕ ಧರ್ಮೋಪದೇಶಗರಾಗಿದ್ದುದರಿಂದ ಈ ಸಾಮಾಜಿಕರ ಪೈಕಿ ಮ|| ನಾಗೇಶಪ್ಪನವರು ತಮ್ಮ ತಂದೆ ಮ|| ಗೋವಿಂದಪ್ಪನವರೊಡನೆ ಆಲೋಚಿಸಿ ಬಹುಕಾಲ ಧರ್ಮ ನಡೆಯುತ್ತಿರುವಂತೆ 1909 ನೇ ಫೆಬ್ರವರಿ ತಿಂಗಳಲ್ಲಿ ಉಳಿದ ಸಾಮಾಜಿಕರ ಅಭಿಪ್ರಾಯಾನುಸಾರವಾಗಿ ಶ್ರೀಮಂಜುನಾಥ ಅನಾಥಾಲಯವನ್ನು ಸ್ಥಾಪಿಸಿ, 20,000 ರೂಪಾಯಿ ಮೂಲಧನವಿಡಬೇಕೆಂಬ ಅಭಿಪ್ರಾಯವಿಟ್ಟು ಪ್ರಕೃತ 10,000 ರೂಪಾಯಿ ಮೂಲಧನವಾಗಿ ಸರ್ಕಾರದವರಲ್ಲಿಟ್ಟು ಆಲಯಕ್ಕೆ ಬೇಕಾದ ಅನುಕೂಲಗಳನ್ನೆಲ್ಲಾ ಕಲ್ಪಿಸಿ ಸ್ವಲ್ಪ ದಿನಗಳಲ್ಲೇ ಅಕಾಲಮರಣಕ್ಕೊಳಗಾದರು ಸ್ಥಾಪಕರಿಗೆ ಇದರಿಂದ ಮರಣಾವಧಿ ಪುತ್ರಶೋಕವುಂಟಾಯಿತು ಇದಾದಮೇಲೆ ಡೆಪ್ಯುಟಿ ಕಮಿಷನರ್ ಮ|| ಶ್ರೀನಿವಾಸಯ್ಯಂಗಾರ್ರು ದಯಮಾಡಿ ಮ|| ಗೋವಿಂದಪ್ಪನವರಿಗೆ ಸಮಾಧಾನ ಹೇಳಿ ಉದ್ದೇಶಕಾರ್ಯ ಪೂರ್ತಿ ನೆರವೇರಿಸಬೇಕೆಂಬ ಅಭಿಪ್ರಾಯವನ್ನು ಸೂಚಿಸಿ ತೆರಳಿದರು ಅನಂತರ ಸ್ಥಾಪಕರು ಹಿಂದಿನ ಉದ್ದೇಶದಂತೆ ಪುನಃ 10,000 ರೂಪಾಯನ್ನು ಸರ್ಕಾರದವರಲ್ಲಿ ಅರ್ಪಿಸಿದರು ಈ ಮಧ್ಯಕಾಲದಲ್ಲಿ ಇವರಿಗೆ ಪತ್ನಿ ವಿಯೋಗವುಂಟಾಯಿತು ತಮ್ಮ ಸ್ವಂತ ಖರ್ಚಿನಿಂದ ಅನುಕೂಲವಾದ ಕಟ್ಟಡವನ್ನು ಕಟ್ಟಿಸಿ ಆಲಯದ ಸ್ಥಾಪನೆಗೆ ಕಾರಣಭೂತವಾದ ಉಪಾಸನಾ ಸಮಾಜಕ್ಕಾಗಿ ಒಂದು ಕೊಠಡಿಯನ್ನು ಅರ್ಪಿಸಿದ ಮೇರೆಗೆ ಸಮಾಜದವರು ಅಲ್ಲಿಯೇ ಭಜನಾದಿಗಳನ್ನು ಜರುಗಿಸಲು ಏರ್ಪಡಿಸಿಕೊಂಡು, ಡೆಪ್ಯುಟಿ ಕಮಿಷನರ್ ಮ|| ಸುಬ್ರಹ್ಮಣ್ಯ ಅಯ್ಯರವರಿಂದ 25-11 1912 ರಲ್ಲಿ ಆಲಯದ ಪುನಃಪ್ರಾರಂಭೋತ್ಸವವನ್ನು ನೆರವೇರಿಸಿದರು ಆಲಯವು ಮೊದಲಿನಂತೆ ಕ್ರಮವಾಗಿ ನಡೆಯಲು ಏರ್ಪಡಿಸಿದರು ಈ ಧರ್ಮಕಾರ್ಯಕ್ಕಾಗಿ ಮ|| ಗೋವಿಂದಪ್ಪನವರಿಗೆ ಇಂಡಿಯಾ ಸರ್ಕಾರದವರು ಕಾರೊನೇಷನ್ ಮೆಡಲನ್ನು ಕೊಟ್ಟರು ಸ್ಥಾಪಕರು ವೃದ್ಧರಾದುದರಿಂದ ತಮ್ಮ ವೈವಾಟನ್ನು ಅವರ ಕಡೆಯ ಮ|| ಬೇಲೂರು ಕೇಶವರಾಯ ಶೆಟ್ಟರಿಗೆ ವಹಿಸಿದ ಮೇರೆಗೆ ಅವರು ಅವರ ಕಾರ್ಯಗಳನ್ನು ಶ್ರದ್ಧೆಯಿಂದ ನಿರ್ವಹಿಸುತ್ತಿರುವರು ಇನ್ನೂ ಹೆಚ್ಚು ಕೀರ್ತಿಹೊಂದಬಹುದಾಗಿದ್ದ ಮ|| ಗೋವಿಂದಪ್ಪನವರು ತಮ್ಮ 69 ನೆಯ ವಯಸ್ಸಿನಲ್ಲಿ ಕಾಲವಾದರು ಇವರು ಗತಿಸಿದರೂ ಇವರು ಮಾಡಿರುವ ಧರ್ಮವು ಶಾಶ್ವತವಾಗಿ ನಡೆಯುತ್ತಿರುವುದರಿಂದ ಕೀರ್ತಿಗೆ ಲೋಪವಿಲ್ಲ ಇವರ ಕರ್ಮಾಂತರವನ್ನು ವಿತರಣೆಯಿಂದ ನೆರವೇರಿಸಿದ ಇವರ ವೈವಾಟುದಾರರ ಶ್ರದ್ಧೆಯು ಶ್ಲಾಘನೀಯವಾಗಿದೆ ಇವರ ಮೂಲಕ ಕೀರ್ತಿಶೇಷರಾದ ಮ|| ಗೋವಿಂದಪ್ಪನವರ ಮೊಮ್ಮಗನಾದ ಸಣ್ಣ ವಯಸ್ಸಿನ ರಾಮನಾಥಶೆಟ್ಟಿಯೂ ಅಭಿವೃದ್ಧಿಗೆ ಬಂದು ತನ್ನ ಹಿರಿಯರಂತೆ ಕೀರ್ತಿಯುತನಾಗಲು ಬೆಳವಣಿಗೆ ಹೊಂದುವನೆಂದು ಪ್ರಾರ್ಥಿಸುತ್ತೇನೆ

ಧರ್ಮಾಭಿಲಾಷಿ

ಚಿತ್ರದುರ್ಗದ ಡಿಸ್ಟ್ರಿಕ್ಟು ಉಪಾಧ್ಯಾಯರ ಸಂಘವು

ಆಗಸ್ಟ್ ತಿಂಗಳ ಮೀಟಿಂಗು

ಸಂಘದ ಮೆಂಬರುಗಳು 3 ನೇ ತಾ ಭಾನುವಾರ ಎ ವಿ ಸ್ಕೂಲ್ ಹಾಲಿನಲ್ಲಿ ತಿಂಗಳುಗಟ್ಟಿ ಮೀಟಿಂಗನ್ನು ನಡಿಸಿದರು ಈ ಸಾರಿ 35 ಜನ ಉಪಾಧ್ಯಾಯರುಗಳು ಹಾಜರಾಗಿದ್ದರು ಶುಭಸೂಚನೆ ಮುಂದೆಯೂ ಉತ್ಸಾಹದಿಂದ ಸೇರುತ್ತಾರೆಂದು ನಂಬಿದೆ ಸಂಘದ ಕಾರ್ಯಗಳು ಪ್ರೋತ್ಸಾಹದಿಂದಲೂ, ಭರವಸೆಯಿಂದಲೂ ನಡೆಯುವವು ಪ್ರೆಸಿಡೆಂಟರಾದ ಡೆಪ್ಯುಟಿ ಇನ್ಸ್ಪೆಕ್ಟರು ಮ|| ತಿರುಮಲಾಚಾರ್ಯರ ಅನುಮತಿ ಪಡೆದು ಸೆಕ್ರೆಟರಿಯವರು ಹಿಂದಿನ ತಿಂಗಳ ಮುಖ್ಯಾಂಶಗಳನ್ನು ಓದಿಹೇಳಿ ರೆಕಾರ್ಡುಮಾಡಿದರು ತರಪೇತಾದ ಟೀಚರು ಮ|| ಮಲ್ಲಾಜಟ್ಟಪ್ಪನವರು ಉಕ್ತಲೇಖನದ ಪಾಠವನ್ನು ಕ್ರಮವಾದ ತರಗತಿಯನ್ನಿಟ್ಟುಕೊಂಡು ಬೋಧಿಸಿದರು ತರುವಾಯ ಮೆಂಬರುಗಳು ಲೋಪಾಂಶಗಳನ್ನು ವಿವರಿಸಿಹೇಳಿ ಮುಂದಕ್ಕೆ ನಡಿಸುವ ಕ್ರಮವನ್ನು ಗೊತ್ತುಮಾಡಿದರು — ಇಲಾಖಾ ಪಾಠಗಳ ಮತ್ತು ಕೆಲಸದ ವಿಚಾರವಾಗಿ ನ್ಯೂನತೆಗಳನ್ನು ಚರ್ಚಿಸಿ ಡಿಸ್ಟ್ರಿಕ್ಟು ಎಡ್ಯುಕೇಷನ್ ಕಾನ್ಫರೆನ್ಸ್ ಸೆಕ್ರೆಟರಿಯವರಿಗೆ ಕಳುಹಿಸಬೇಕೆಂದು ತೀರ್ಮಾನಮಾಡಿದರು ಆ ಕೆಲವಂಶಗಳನ್ನು ಸಂಕ್ಷೇಪವಾಗಿ ತಿಳಿಸಿದೆ —(1) ಹೋಬಳಿಗಳ ಸ್ಕೂಲುಗಳಲ್ಲಿ ಯಾವದಾದರೂ ಒಂದು ಕೈಗಾರಿಕೆಯನ್ನಿಡಬೇಕಾದ ಅಂಶ, (2) ಪಾಠಪುಸ್ತಕಗಳ ಬದಲಾವಣೆ, (3) ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಕನ್ನಡ ಲೋವರ್ ಸೆಕೆಂಡರಿಯನ್ನಿಟ್ಟು ಕೊಡಬೇಕಾದದು, (4) ಉಪಾಧ್ಯಾಯ ಸಂಘಗಳಿಗೆ ಹಳ್ಳಿಗಳಿಂದ ಬರತಕ್ಕ ಮಾಸ್ತರುಗಳಿಗೆ 6 ಆಣೆಯಂತೆ ಅಲೋಯನ್ಸು ಕೊಡಿಸಬೇಕು, (5) ಒಬ್ಬ ಟೀಚರು ಇರುವ ಕಡೆ 3 ತರಗತಿಗಳಿಗಿಂತಲೂ ಹೆಚ್ಚಾಗಿಟ್ಟುಕೊಳ್ಳುವುದು ತೊಂದರೆ ಮತ್ತು ಹೋಬಳಿ ಸ್ಕೂಲುಗಳಿಗೆ ನಿಷ್ಕರ್ಷೆಯಾದ ರಜಾಕಾಲ (ಸುಗ್ಗಿಕಾಲ), (6) ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರುಗಳಲ್ಲಿ ಸ್ಕೂಲುಗಳಿಗೆ ಡಾಕ್ಟರವರ ಸಹಾಯ, (7) ಉಪಾಧ್ಯಾಯರುಗಳ ಸಂಬಳದ ವಿಚಾರ, (8) ಕನ್ನಡ ಲೋವರ್ ಸೆಕೆಂಡರಿ ತರಗತಿಗೆ ಐಚ್ಛಿಕಾಂಶವಾಗಿ ಕ್ರಿಮಿನಲ್ ರೇವಿನ್ಯೂ ರೂಲ್ಸು ಮತ್ತು ಜಮಾಖರ್ಚು ಲೆಕ್ಕಗಳ ಸ್ವಲ್ಪ ಭಾಗವನ್ನು ಇಟ್ಟುಕೊಡಬೇಕೆಂಬುವುದು ಇವೇ ಮೊದಲಾದ ಹನ್ನೆರಡು ಅಂಶಗಳನ್ನು ಚರ್ಚಿಸಿದರು —ನೀತಿಬೋಧೆಯ ಉಪನ್ಯಾಸಕ್ಕೆ ಈ ಸಾರಿ ಅವಕಾಶವಾಗಲಿಲ್ಲ ಮುಂದಿನ ಸಲ ಅವಕಾಶಕೊಡುವುದಾಗಿ ತಿಳಿಸಿದರು —ಮುಂದಿನ ಮೀಟಿಂಗಿನಲ್ಲಿ ಗಣಿತಪಾಠದ ಸ್ಥಾನರೀತ್ಯಾ ಅಂಕಿಗಳನ್ನಿಡುವ ಕ್ರಮವನ್ನು ಬಿ ತರಗತಿಗೆ ಬೋಧಿಸಬೇಕೆಂದು ಗೊತ್ತಾಯಿತು — ಮುಂದಿನ ತಿಂಗಳ ಮೀಟಿಂಗು ಸೆಪ್ಟಂಬರ್ ತಾ 7 ನೇ ಭಾನುವಾರ ನಡೆಯುವುದಾಗಿ ಗೊತ್ತಾಗಿದೆ

ಬೀರಾ ಬಿಸ್ಸಪ್ಪ, ಸಂಘದ ಸೆಕ್ರೆಟರಿ

ಮುಳವಳ್ಳಿಯಲ್ಲಿ ದೊಂಬಿ ಕಲಹ

ಎಂಟು ಹತ್ತು ಜನರು ಗಾಯಪಟ್ಟರು

ಇದೇ ತಿಂಗಳು 8 ನೇ ತಾರೀಖು ಶುಕ್ರವಾರ ಮಧ್ಯಾಹ್ನ ಸುಮಾರು 2 ಗಂಟೆಯಲ್ಲಿ ಸಂತೆಯಲ್ಲಿ ಇದೇ ಊರಿನ ಪೇಟೆ ಮುಸಲ್ಮಾನರಿಗೂ ಬೆಸ್ತರಿಗೂ ದೊಂಬಿಕಲಹವಾಯಿತು ಬೆಸ್ತರಕಡೆ 3 4 ಜನರಿಗೆ ಘೋರಾ ಘಾಯಗಳಾಗಿವೆ ಮುಸಲ್ಮಾನರ ಕಡೆ 6 7 ಮಂದಿಗೆ ಘೋರಾ ಘಾಯಗಳಾಗಿವೆ ಇವರೆಲ್ಲರೂ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಲಿದ್ದಾರೆ ದೊಂಬಿಗೆ ಕಾರಣ ಸುಮಾರು ಒಂದು ವರುಷದ ಹಿಂದೆ ಒಬ್ಬ ಮುಸಲ್ಮಾನರವನು ತನ್ನ ಗದ್ದೆಗೆ ನೀರು ಕಟ್ಟುವ ನಿಮಿತ್ತ ತನ್ನ ಗದ್ದೆಯ ಒತ್ತಿನಲ್ಲಿದ್ದ ಒಬ್ಬ ಬೆಸ್ತರವನನ್ನು ಚೆನ್ನಾಗಿ ಹೊಡೆದನು ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಯಾಗಿ ಇಬ್ಬರಿಗೂ ಜುಲ್ಮಾನೆ ವಿಧಿಸಲ್ಪಟ್ಟಿತು ಈ ಕಾರಣಕ್ಕಾಗಿ ಆ ಸಮಯದಲ್ಲಿಯೇ ಮುಸಲ್ಮಾನರಿಗೂ ಬೆಸ್ತರಿಗೂ ಇದರ ನಿಮಿತ್ತ ದೊಡ್ಡ ಕಲಹವಾಗುವದೆಂದು ತಿಳಿದು 2 3 ಸಂತೆಗಳಲ್ಲೂ ಪೋಲೀಸು ಬಂದೋಬಸ್ತನ್ನಿಟ್ಟು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದರು ತರುವಾಯ ಈ ಹಗೆಯು ಅಷ್ಟಕ್ಕೇ ನಿಂತುಹೋಯಿತೆಂದು ಎಲ್ಲರೂ ತಿಳಿದುಕೊಂಡಿದ್ದರು ಆದರೆ ಮೊನ್ನೆ ಶುಕ್ರವಾರ 8 ನೇ ತಾರೀಖಿನ ಸಂತೆಯಲ್ಲಿ ಒಬ್ಬ ಮುಸಲ್ಮಾನರವನ್ನು ಕಾಯಿಪಲ್ಯ ಮಾರುತ್ತಿದ್ದ ಒಬ್ಬ ಬೆಸ್ತರವಳು ಹಾಸಿಕೊಂಡಿದ್ದ ಚಾಪೆಯನ್ನು ದಾಟಿದನೆಂದು ಆ ಬೆಸ್ತರವಳಿಗೂ ಮುಸಲ್ಮಾನನಿಗೂ ವಾಗ್ವಾದ ಉಂಟಾಗಿ ಅಲ್ಲಿದ್ದ ಒಬ್ಬಿಬ್ಬರು ಬೆಸ್ತರಿಗೂ ಆ ಮುಸಲ್ಮಾನನಿಗೂ ಹೊಡೆದಾಟವಾಯಿತು ಇದನ್ನು ಕಂಡು ಮತ್ತೊಂದು ಮೂಲೆಯಲ್ಲಿ ವ್ಯಾಪಾರ ಮಾಡುತ್ತಿದ್ದ ಆ ಮುಸಲ್ಮಾನನ ಸಹೋದರರು ಅವನ ಸಹಾಯಕ್ಕೆ ಓಡಿದರು ಆಗ ಆ ಬೆಸ್ತರು ಒಂದು ಫರ್ಲಾಂಗ್ ದೂರದಲ್ಲಿದ್ದ ಊರಿನೊಳಕ್ಕೆ ಹೋಗಿ ದೊಣ್ಣೆಗಳ ಸಹಿತವಾದ 70 80 ಮಂದಿಯನ್ನು ಸೇರಿಸಿಕೊಂಡು ಬಂದರು ಇವರನ್ನು ಕಂಡು ಸಂತೆಯಲ್ಲಿ ವ್ಯಾಪಾರಮಾಡುತ್ತಿದ್ದ ಜನರೆಲ್ಲಾ ತಮ್ಮ ತಮ್ಮ ಸಾಮಾನುಗಳನ್ನು ಹೊತ್ತುಕೊಂಡು ಪಲಾಯನ ಮಾಡಿದರು ಸ್ವಲ್ಪ ಹೊತ್ತಿನಲ್ಲಿಯೇ ಆ ಗುಂಪಿನ ಬೆಸ್ತರು ಬಂದು ಸಿಕ್ಕಿದ ಮುಸಲ್ಮಾನರನ್ನು ದೊಣ್ಣೆಗಳಿಂದ ಹೊಡೆದರು ಕಲ್ಲುಗಳ ಮಳೆಗರೆಯಿತು ಕೆಲವರಿಗೆ ಕಲ್ಲಿನ ಏಟುಗಳು ಬಿದ್ದು ಘೋರಾ ಜಖಂ ಆಗಿದೆ ಮುಸಲ್ಮಾನರ ಕಡೆ 15 20 ಮಂದಿಯ ವರೆಗೂ ಇದ್ದರು ಇವರೆಲ್ಲಾ ವ್ಯಾಪಾರಾರ್ಥವಾಗಿ ಬಂದು ಸಂತೆಯಲ್ಲಿ ಮಾರುತ್ತಿದ್ದವರೇ ಅವರಲ್ಲಿ ಕೆಲವರ ಸಾಮಾನು ಲೂಟಿಯಾಯಿತು ತಮ್ಮ ಸಾಮಾನನ್ನು ಬಿಟ್ಟು ಹೋಗಲಾರದೆ ಅಲ್ಲಿಯೇ ಸಾಮಾನನ್ನು ಕೂಡಿಸಿಕೊಳ್ಳುತ್ತಿದ್ದವರಲ್ಲಿ ಕೆಲವರಿಗೆ ತಲೆಯ ಮೇಲೆ ಘೋರಾ ಏಟುಗಳು ಬಿದ್ದಿವೆ ಕೆಲವರು ಸಮೀಪದಲ್ಲಿದ್ದ ಕೋಟೆಯೊಳಕ್ಕೆ ಓಡಿಹೋದರು ಕೆಲವರು ನೀರುವಿಯ ಕೆಳಗೆ ಬಿದ್ದುಕೊಂಡಾಗ್ಯೂ ಅಲ್ಲಿಯೂ ಕಷ್ಟಕ್ಕೆ ಗುರಿಯಾದರು ರೊಟ್ಟಿಕಟ್ಟೆಯಿಂದ ವ್ಯಾಪಾರಕ್ಕಾಗಿ ಬಂದಿದ್ದ ಒಬ್ಬ ಮುಸಲ್ಮಾನರವನಿಗೆ ಘೋರಾ ಏಟು ಬಿದ್ದಿದೆ ಅವನು ಇಲ್ಲಿನ ಮುಸಾಫರಖಾನೆಯಲ್ಲಿರುತ್ತಾನೆ ಅಮಲ್ದಾರ್ರವರೂ ಡಾಕ್ಟರವರೂ ಪರಾಮರಿಸುತ್ತಾ ಇದ್ದಾರೆ ಚನ್ನಪಟ್ಟಣದಿಂದ ಕಬ್ಬಿಣದ ವ್ಯಾಪಾರ ಮಾಡುವದಕ್ಕಾಗಿ ಬಂದಿದ್ದ ಒಬ್ಬ ಮುಸಲ್ಮಾನರವನು ಬಹಳ ಪೆಟ್ಟು ತಿಂದಿದ್ದಾನೆ ಈ ದೊಂಬಿಯ ನೋಟವು ಬಹಳ ಭಯಂಕರವಾಗಿತ್ತು ಆ ವೇಳೆಗೆ ಸರಿಯಾಗಿ ಅಮಲ್ದಾರ್ರವರೂ, ಪೋಲೀಸ್ ಇನ್ಸ್ಪೆಕ್ಟರವರೂ, ಜಮೇದಾರರೂ ಹಾಜರಿರಲಿಲ್ಲ ಅಮಲ್ದಾರ್ರವರು ಶಿರುಗಾವಲು ಹೋಬಳಿ ಮಿಕ್ಕೆರೆಯ ಒಂದು ಖೂನಿ ಕೇಸ್ ತನಿಖೆ ಬಗ್ಗೆ ಹೋಗಿದ್ದರು ಪೋ|| ಇನ್ಸ್ಪೆಕ್ಟರವರು ಒಂದು ಕೇಸ್ ವಿಚಾರ ಮೈಸೂರಿಗೆ ಹೋಗಿದ್ದರು ಜಮೇದಾರರು ಕನ್ನಾಕಳುವಿನ ತನಿಖೆ ಬಗ್ಗೆ ಮಣಿಗೆರೆಗೆ ಹೋಗಿದ್ದರು ಹಾಜರಿದ್ದ ಪೋಲೀಸ್ ಸಿಬ್ಬಂದಿಯು ದೊಂಬಿಯನ್ನು ಅಡಗಿಸುವಷ್ಟು ಸಮರ್ಥವಾಗಿರಲಿಲ್ಲ ಕಲಹವಲ್ಲಿ ನುಗ್ಗಿ ಬಿಡಿಸುವದಕ್ಕೆ ಪ್ರಯತ್ನಪಟ್ಟ ಪೋಲೀಸಿನವರಲ್ಲಿ ರಾಮಣ್ಣ ಮತ್ತು ಹುಚ್ಚ ಎಂಬವರಿಗೆ ತಲೆಯ ಮೇಲೆ ಏಟುಗಳು ಬಿದ್ದಿವೆ ಕಲಹವು ನಡೆಯುತ್ತಿದ್ದಾಗಲೇ ಡ್ರಿಲ್ ಹವಾಲ್ದಾರ್ ವೇಲಾಯುದಂ ಎಂಬುವರು 5 ಮೈಲು ದೂರದಲ್ಲಿದ್ದ ಜಮೇದಾರರಿಗೂ, ಒಬ ಕಾನ್ಸ್ಟೇಬಲು ಅಮಲ್ದಾರರಿಗೂ ಸಮಾಚಾರ ತಿಳಿಸಿದರು ಒಡನೆ ಅಮಲ್ದಾರರವರೂ, ಜಮೇದಾರರವರೂ ಹೊರಟುಬಂದರು ಅಷ್ಟರಲ್ಲಿ ಕಲಹವು ಅಡಗಿಹೋಗಿತ್ತು ಕೆಲವರನ್ನು ದಸ್ತಗಿರಿಮಾಡಿ ಜಾಮೀನಿನ ಮೇಲೆ ಬಿಟ್ಟಿರುತ್ತಾರೆ ಅನೇಕರು ಊರನ್ನು ಬಿಟ್ಟು ಬೇರೆ ಬೇರೆ ಕಡೆಗಳಿಗೆ ಹೊರಟು ಹೋಗಿದ್ದಾರೆ ಸರ್ಕಾರದವರು ಈ ವಿಚಾರವನ್ನು ನ್ಯಾಯದಿಂದಲೂ ನೀತಿಯಿಂದಲೂ ತನಿಖೆಮಾಡಿ ತಕ್ಕ ಬಂದೋಬಸ್ತು ಮಾಡುವದರಮೂಲಕ ಇನ್ನು ಮುಂದೆ ಇಂತಾ ಕಲಹಕ್ಕೆ ಆಸ್ಪದವಾಗದಂತೆ ಮಾಡುವರೆಂದು ನಂಬುತ್ತೇನೆ

ಪ್ರತ್ಯಕ್ಷದರ್ಶಿ

ಮೈಸೂರು ಸರ್ಕಾರದ ವ್ಯವಸಾಯದ ಇಲಾಖೆಯವರಿಂದ ಬರೆಯಲ್ಪಟ್ಟ ಸಂಗತಿಗಳು

[ವ್ಯವಸಾಯದ ವಿಚಾರವಾಗಿ ತಿಳಿಯಬೇಕಾದ ಸಂಗತಿಗಳ ಮತ್ತು ವ್ಯವಸಾಯಾಭಿವೃದ್ಧಿಗೆ ಬೇಕಾಗುವ ಸಹಾಯದ ವಿಷಯವಾಗಿ ಬರೆಯುವ ಕಾಗದಗಳನ್ನು ಬೆಂಗಳೂರಲ್ಲಿರುವ ವ್ಯವಸಾಯದ ಇಲಾಖಾ ಡೈರೆಕ್ಟರವರಿಗೆ ಬರೆಯಬೇಕು]

ಮೈಸೂರು ಸೀಮೆಯ ವ್ಯವಸಾಯದ ಇಲಾಖಾ.

1 ಮೈಸೂರು ಸೀಮೆಯ ವ್ಯವಸಾಯಾಭಿವೃದ್ಧಿಗೋಸ್ಕರವಾಗಿಯೇ ಸರ್ಕಾರದವರು ಈ ಇಲಾಖೆಯನ್ನು ಏರ್ಪಡಿಸಿರುವರು ಕೃಷಿಯಿಂದಲೇ ಜೀವನ ಮಾಡುವವರ ನಂಬಿಕೆಯೂ ಸಹಾಯವೂ ಇಲಾಖೆಗೆ ಹೆಚ್ಚಾಗಿ ದೊರೆತದ್ದಾಗೆಲ್ಲಾ ಅದರಿಂದ ಜನಗಳಿಗೆ ಆಗುವ ಉಪಯೋಗವೂ ಹೆಚ್ಚುವುದು ಇಲಾಖೆಯ ಕೆಲಸವನ್ನು ಐದು ವಿಧವಾಗಿ ವಿಂಗಡಿಸಬಹುದು ಈ ದೇಶದ ಯಾವ ಯಾವ ಭಾಗದಲ್ಲಿ ಯಾವ ಯಾವ ಬೆಳೆಗಳು ಆಗುತ್ತಾ ಇವೆ ? ಆ ಬೆಳೆಗಳಿಗೆ ಮಾಡುತ್ತಿರುವ ವ್ಯವಸಾಯ, ಹಾಕುತ್ತಿರುವ ಗೊಬ್ಬರ, ಅದನ್ನು ಕಟಾವುಮಾಡಿ ಬಡಿಯುವ ಕ್ರಮ, ಯಾವ ಯಾವ ಬೆಳೆಯು ಎಕರೆಗೆ ಎಷ್ಟೆಷ್ಟು ಬರುತ್ತದೆ ? ಎಂಬ ಸಂಗತಿಗಳನ್ನು ಇಲಾಖೆಯ ನೌಕರರು ಸುತ್ತಿ ನೋಡಿ ತಿಳಿದುಕೊಳ್ಳುವದೇ ಇಲಾಖೆಯ ಮೊದಲನೇ ಕೆಲಸವು ಇದೂ ಅಲ್ಲದೆ ಯಾವ ಯಾವ ಡಿಸ್ಟ್ರಿಕ್ಟಿನಲ್ಲಿ ಪೈರುಗಳಿಗೆ ಯಾವ ರೋಗಗಳು ಹತ್ತುತ್ತವೆ ? ಯಾವ ಹುಳುಗಳು ಬೀಳುತ್ತವೆ ? ಮತ್ತು ಆ ರೋಗಗಳಿಂದಲೂ, ಹುಳುಗಳಿಂದಲೂ ಪೈರು ನಾಶವಾಗದಂತೆ ಕಾಪಾಡಿಕೊಳ್ಳುವದಕ್ಕೆ ರೈತರು ಯಾವ ಚಿಕಿತ್ಸೆಯನ್ನು ಮಾಡುತ್ತಾ ಇದ್ದಾರೆ ಎಂಬ ಸಂಗತಿಗಳನ್ನು ವಿಚಾರಿಸಿ ತಿಳಿದುಕೊಳ್ಳಬೇಕು

2 ಹಾಲಿ ಬೆಳೆಯುತ್ತಿರುವ ನಾನಾ ಜಾತಿಯ ಬೆಳೆಗಳಲ್ಲಿಯೂ, ಅವುಗಳಿಗೆ ಮಾಡುತ್ತಿರುವ ವ್ಯವಸಾಯ ಮುಂತಾದ ಕ್ರಮಗಳಲ್ಲಿಯೂ, ರೋಗ ಮತ್ತು ಹುಳುಗಳ ನಿವಾರಣೆಗಾಗಿ ಈಗ ಆಚರಣೆಯಲ್ಲಿರುವ ಚಿಕಿತ್ಸೆಗಳಲ್ಲಿಯೂ ಯಾವ ವಿಧವಾಗಿ ಬದಲಾವಣೆ ಮಾಡಿದರೆ ಜಾಸ್ತಿ ಫಸಲು ಬರುವದೆಂಬ ಸಂಗತಿಯನ್ನು ಅಜಮಾಯಿಷಿಗಳನ್ನು ನಡೆಯಿಸಿ ಗೊತ್ತುಮಾಡುವದೇ ಎರಡನೆಯ ಕೆಲಸವು ಪರೀಕ್ಷಾ ಕ್ಷೇತ್ರಗಳಲ್ಲಿಯೂ, ಬೇಕಾದ ಸೌಕರ್ಯಗಳನ್ನು ಕಲ್ಪಿಸಿಕೊಂಡಿರುವ ಶೋಧನಾಲಯಗಳಲ್ಲಿಯೂ ಅಂಥಾ ಅಜಮಾಯಿಷಿಗಳನ್ನು ನಡೆಯಿಸುವದಕ್ಕಾಗುವದೇ ಹೊರತು ಸಿಕ್ಕಿದ ಕಡೆಗಳಲ್ಲೆಲ್ಲಾ ಮಾಡುವದಕ್ಕಾಗುವದಿಲ್ಲ

3 ಅಜಮಾಯಿಷಿಗಳನ್ನು ನಡೆಯಿಸಿ ಅವುಗಳಿಂದ ಸರಿಯಾದ ಫಲಿತಾಂಶಗಳು ಬಂದಮೇಲೆ ಅವುಗಳನ್ನು ರೈತರ ತಿಳುವಳಿಕೆಗೆ ತರುವದೇ ಮೂರನೇ ಕೆಲಸವು ವಿಷಯ ಪತ್ರಿಕೆಗಳನ್ನೂ ಸರ್ಕ್ಯುಲರುಗಳನ್ನೂ ಬರೆದು ಪ್ರಚುರಪಡಿಸುವದರಿಂದಲೂ, ಇಲಾಖೆಯವರು ಗ್ರಾಮಾಂತರಗಳಿಗೆ ಹೋಗಿ ಉಪನ್ಯಾಸಗಳನ್ನು ಕೊಡುವದರಿಂದಲೂ, ರೈತರ ಜಮೀನಿನಲ್ಲಿಯೇ ಹೊಸರೀತಿಯಲ್ಲಿ ಕೆಲಸವನ್ನು ನಡೆಯಿಸಿ ತೋರಿಸಿಕೊಡುವದರಿಂದಲೂ ಇಲಾಖೆಯಲ್ಲಿ ನಡೆಯಿಸಿದ ಅಜಮಾಯಿಷಿಗಳ ಫಲಿತಾಂಶಗಳು ರೈತರಿಗೆ ತಿಳಿಯುವಂತೆ ಆಗುತ್ತದೆ ರೈತರ ಜಮೀನಿನಲ್ಲೇ ಕೆಲಸವನ್ನು ಮಾಡಿ ಫಲಿತಾಂಶಗಳನ್ನು ತೋರಿಸಿಕೊಡುವದೇ ಬಹಳ ಮುಖ್ಯವಾದ ರೀತಿಯು ಹೀಗೆ ಗ್ರಾಮಾಂತರಗಳಲ್ಲಿ ರೈತರ ಜಮೀನಿನಲ್ಲೇ ಕೆಲಸಮಾಡಿ ತೋರಿಸುವ ವಿಷಯಗಳೇನೆಂದರೆ —(1) ವಾಡಿಕೆಯಾಗಿ ಅವರು ಮಾಡುತ್ತಿರುವ ವ್ಯವಸಾಯಕ್ಕೂ ಹೊಸರೀತಿಯ ವ್ಯವಸಾಯಕ್ಕೂ ಇರುವ ತಾರತಮ್ಯಗಳು , (2) ಅವರು ಉಪಯೋಗಿಸುತ್ತಿರುವ ಮುಟ್ಟುಗಳಿಗೆ ಬದಲಾಗಿ ಹೊಸ ನಮೂನೆಯ ನೇಗಿಲು ಮೊದಲಾದ ಮುಟ್ಟುಗಳನ್ನು ಉಪಯೋಗಿಸುವದರಿಂದಾಗುವ ಅನುಕೂಲಗಳು , (3) ಕೆಲಸಮಾಡಿ ತೋರಿಸುವ ಕಡೆಯಲ್ಲಿ ಮಾತ್ರ ಗೊತ್ತಿಲ್ಲದೆಯೂ ಜಾರಿಯಲ್ಲಿ ಇಲ್ಲದೆಯೂ ಇರುವ ಹೊಸರೀತಿಯ ವ್ಯವಸಾಯ ಕ್ರಮಗಳು ಈ ಕೆಲಸಗಳನ್ನೆಲ್ಲಾ ರೈತರಿರುವ ಕಡೆಯಲ್ಲಿ ಅವರವರ ಜಮೀನಿನಲ್ಲೇ ಕೂಡಿದ ಮಟ್ಟಿಗೂ ತೋರಿಸುವದಲ್ಲದೆ ಅವರಿಗೆ ಇರುವ ಅನುಕೂಲಗಳಲ್ಲೇ ಎಷ್ಟರಮಟ್ಟಿಗೆ ಕೆಲಸಮಾಡುವದಕ್ಕೆ ಸಾಧ್ಯವೆಂಬುವದನ್ನು ತೋರಿಸಿಕೊಡುತ್ತ

4 ವ್ಯವಸಾಯಸಂಬಂಧವಾದ ಸಾಮಾನ್ಯವಿದ್ಯಾಭ್ಯಾಸವನ್ನು ಆಚರಣೆಯಲ್ಲಿ ತರುವದೇ ಇಲಾಖೆಯ ನಾಲ್ಕನೇ ಕೆಲಸವು ಈ ವಿದ್ಯಾಭ್ಯಾಸದಿಂದ ಜಮೀನುದಾರರಿಗೂ ರೈತರಿಗೂ ಯಾವ ವ್ಯವಸಾಯದ ಕೆಲಸವನ್ನು ಯಾತಕ್ಕಾಗಿ ಮಾಡಬೇಕೆಂಬುವದು ಗೊತ್ತಾಗುವದಲ್ಲದೆ ಹೊಸ ಕ್ರಮಗಳನ್ನು ಬುದ್ಧಿವಂತಿಕೆಯಿಂದಲೂ ಬಹಳ ಅನುಕೂಲವಾಗುವ ತೆಯೂ ಆಚರಣೆಗೆ ತರುವದಕ್ಕೆ ಸಾಧ್ಯವಾಗುವದು

5 ಈ ದೇಶದಲ್ಲಿರುವವರು ಯಾರೇ ಆಗಲಿ ವ್ಯವಸಾಯದ ಸಂಬಂಧವಾಗಿ ತಿಳಿಯಲಪೇಕ್ಷಿಸುವ ಸಂಗತಿಗಳನ್ನೆಲ್ಲಾ ಅವರ ಕೆಲಸಕ್ಕೆ ಅನುಕೂಲವಾಗುವ ರೀತಿಯಲ್ಲಿ ತಿಳಿಸುವದು ಕೂಡ ಇಲಾಖೆಗೆ ಸೇರಿದ ಕೆಲಸವಾಗಿರುತ್ತ ಕಾಗದ ಪತ್ರಗಳ ಮುಖಾಂತರವಾಗಿಯೂ, ಅವರ ಕಡೆಯಲ್ಲಿ ಕೇಳುವವರ ಸ್ಥಳಕ್ಕೇ ಇಲಾಖೆಯವರು ಯಾರಾದರೂ ಹೋಗಿ ಸಂಗತಿಗಳನ್ನು ತಿಳಿಸುವದರಿಂದಲೂ ಈ ವಿಧವಾದ ಕೆಲಸವು ಜರುಗುತ್ತದೆ ಕಾಗದ ಮುಖಾಂತರವಾಗಿ ತಿಳಿಸಬಹುದಾದ ಸಂಗತಿಗಳನ್ನು ಪ್ರತ್ಯಕ್ಷವಾಗಿ ತೋರಿಸಿಕೊಡುವದರಿಂದ ಇನ್ನೂ ಚೆನ್ನಾಗಿ ತಿಳಿಸಬಹುದಾದ್ದರಿಂದ ಸಾಧ್ಯವಾದಮಟ್ಟಿಗೂ ಈ ರೀತಿಯಲ್ಲೇ ಸಂಗತಿಗಳು ತಿಳಿಸಲ್ಪಡುತ್ತವೆ

6 ಹೀಗೆ ವ್ಯವಸಾಯಕ್ಕೆ ಸಂಬಂಧಪಟ್ಟ ಮೇಲೆ ಹೇಳುವ ಐದು ವಿಧವಾದ ಕೆಲಸಗಳೂ ವ್ಯವಸಾಯದ ಇಲಾಖೆಯಲ್ಲಿ ನಡೆಯುತ್ತಾ ಇವೆ ಈ ಕೆಲಸಗಳಿಗೆಲ್ಲಾ ಬೇಕಾದ ಸಿಬ್ಬಂದಿಯು ಇದುವರೆವಿಗೂ ಸ್ವಲ್ಪವಾಗಿಯೇ ಇತ್ತು ಈಚೆಗೆ ಹೆಚ್ಚು ಅನುಕೂಲಗಳನ್ನು ಸರ್ಕಾರದವರು ಮಾಡಿರುತ್ತಾರಾದರೂ ಇಲಾಖೆಯ ಕೆಲಸವನ್ನು ಸಂಸ್ಥಾಪಿಸುವುದಾಗಿ ನಡೆಯಿಸುವದಕ್ಕೆ ಬೇಕಾಗುವ ಜನಗಳನ್ನು ಹೊಂದಿಸಿಕೊಂಡು, ತರಪೇತು ಮಾಡುವದಕ್ಕೆ ಸ್ವಲ್ಪ ಕಾಲ ಹಿಡಿಯುವದು

7 ಮೈಸೂರು ಸೀಮೆಗೆ ವ್ಯವಸಾಯದ ಇಲಾಖೆಯ ಆವಶ್ಯಕತೆಯೂ, ಪ್ರಾಮುಖ್ಯತೆಯೂ ಎಲ್ಲರಿಗೂ ಸ್ಪಷ್ಟವಾಗಿಯೇ ಇರಬಹುದು ಈ ದೇಶದಲ್ಲಿರುವ 58,06,193 ಪ್ರಜೆಗಳಲ್ಲಿ 42,15 644 ಜನಗಳು ಕೃಷಿಯಿಂದಲೇ ಜೀವನ ಮಾಡುತ್ತಾರೆಂಬ ಸಂಗತಿಯೂ, ಕೆಲಸ ಮಾಡುವದಕ್ಕೆ ಸಮರ್ಥರಾದ 14,18,416 ಜನ ಗಂಡಸರಲ್ಲಿ 10,01,581 ಜನಗಳು ವ್ಯವಸಾಯದ ಕೆಲಸವನ್ನೇ ಮಾಡುತ್ತಾರೆಂಬ ಸಂಗತಿಯೂ 1911 ನೇ ಇಸವಿಯ ಖಾನೇಷುಮಾರಿಯಿಂದ ಗೊತ್ತಾಗುತ್ತದೆ ಅಂದರೆ ಕೇವಲ ಕೃಷಿಯಿಂದಲೇ ಜೀವನ ಮಾಡಬೇಕಾದ ಜನಗಳು ಶೇಕಡ 73 ರಷ್ಟಿರುವರು

8 ರೈತಾಬಿಜನಗಳ ನಂಬಿಕೆಯೂ ಸಹಾಯವೂ ವ್ಯವಸಾಯದ ಇಲಾಖೆಗೆ ದೊರೆತಷ್ಟೂ ದೇಶದ ವ್ಯವಸಾಯಾಭಿವೃದ್ಧಿಗೆ ಅನುಕೂಲವಾಗುವದೆಂಬ ಸಂಗತಿಯನ್ನು ಹಿಂದೆಯೇ ತಿಳಿಸಿದೆ ವ್ಯವಸಾಯದ ಇಲಾಖೆಯ ಕೆಲಸವನ್ನೂ, ವ್ಯವಸಾಯದ ಅಭಿವೃದ್ಧಿಯ ಸಂಗತಿಗಳನ್ನೂ, ಜನಗಳ ಗಮನಕ್ಕೆ ಸಾಧ್ಯವಾದ ಮಟ್ಟಿಗೂ ತರುವದಕ್ಕಾಗಿ ಆ ಸಂಗತಿಗಳ ವಿಷಯವಾಗಿಯೂ, ಇಲಾಖೆಯಲ್ಲಿ ನಡಿಸಿರುವ ಅಜಮಾಯಿಷಿಗಳ ಫಲಿತಾಂಶಗಳ ವಿಷಯವೂ, ವ್ಯವಸಾಯಾಭಿವೃದ್ಧಿಗೆ ಸಂಬಂಧಪಟ್ಟ ಸಾಮಾನ್ಯಸಂಗತಿಗಳ ವಿಷಯವಾಗಿಯೂ ಬರೆದು ಪ್ರತಿ ವಾರದಲ್ಲಿಯೂ "ವೃತ್ತಾಂತ ಪತ್ರಿಕೆ" - ಒಕ್ಕಲಿಗರ ಪತ್ರಿಕೆ" ಗಳಲ್ಲಿ ಪ್ರಚುರಪಡಿಸಬೇಕೆಂದು ಗೊತ್ತುಮಾಡಿರುತ್ತೆ ಆ ಪತ್ರಿಕೆಗಳಲ್ಲಿ ಈ ಅಂಶಗಳು ಅಚ್ಚಾಗುವ ಭಾಗಗಳು ವ್ಯವಸಾಯದ ಇಲಾಖೆಯವರ ಖುದ್ದು ಉಸ್ತುವಾರಿಯಲ್ಲೇ ಇರುವವು ವ್ಯವಸಾಯದ ನಡವಳಿಕೆಗೆ ಮುಖ್ಯವಾದವುಗಳಲ್ಲಿ ಯಾವುವನ್ನು ಆಚರಿಸಿದರೆ ಹೆಚ್ಚು ಅನುಕೂಲವುಂಟೆಂದು ಖಂಡಿತವಾಗಿ ತಿಳಿದಿರುವ ಸಂಗತಿಗಳನ್ನೂ ಬರೆದು ಪತ್ರಿಕೆಗಳಲ್ಲಿ ಪ್ರಚುರಪಡಿಸುತ್ತೆ ಆ ವಿಷಯಗಳನ್ನು ಆಚರಣೆಗೆ ತರಬಹುದಾದ ಕಾಲದಲ್ಲೇ ಅವುಗಳ ವಿಷಯವಾಗಿ ಬರೆದು ಪತ್ರಿಕೆಯಲ್ಲಿ ಹಾಕುವದಕ್ಕೆ ಸಾಧ್ಯವಾದ ಮಟ್ಟಿಗೂ ಪ್ರಯತ್ನವು ನಡೆಯುವದು ರೈತರ ಜಮೀನುಗಳಲ್ಲೇ ಕೆಲಸವನ್ನು ನಡೆಯಿಸಿ ಅವುಗಳ ಫಲಿತಾಂಶಗಳ ವಿಷಯವಾಗಿ ರೈತರಿಂದಲೇ ಎಂದಿರುವ ರಿಪೋರ್ಟುಗಳನ್ನೂ ಪತ್ರಿಕೆಯಲ್ಲಿ ಹಾಕುವದೊಂದು ವಿಶೇಷ ಸಂಗತಿಯು ಆವಶ್ಯಕವಿದ್ದಲ್ಲಿ ಬರೆದ ಸಂಗತಿಗಳು ಜನಗಳಿಗೆ ಸುಲಭವಾಗಿ ತಿಳಿಯುವಂತೆ ಅನುಕೂಲವಾದ ಚಿತ್ರಗಳೂ ಪತ್ರಿಕೆಯಲ್ಲಿ ಹಾಕಲ್ಪಡುವವು

9 ವ್ಯವಸಾಯಕ್ಕೆ ಸಂಬಂಧಪಟ್ಟ ಸಂಗತಿಗಳನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳವರೆಲ್ಲರೂ ಯಾವ ಅಭ್ಯಂತರವೂ ಇಲ್ಲದೆ ವ್ಯವಸಾಯದ ಇಲಾಖೆಗೆ ಬರೆಯಬಹುದು ಆ ವಿಷಯವಾಗಿ ಸಾಧ್ಯವಾದಷ್ಟು ಸಂಗತಿಗಳನ್ನು ಕಾಗದಗಳ ಮುಖಾಂತರವಾಗಿಯೇ ಕೇಳಿದವರಿಗೆ ತಿಳಿಸುವದಲ್ಲದೆ ಅವುಗಳ ಆಚರಣೆಯನ್ನು ತಮ್ಮ ಜಮೀನಿನಲ್ಲೇ ತೋರಿಸಿಕೊಡುವದಕ್ಕೂ ಸಾಧ್ಯವಾದ ಮಟ್ಟಿಗೂ ಇಲಾಖೆಯ ಜನಗಳೇ ಬರುವರು ಕಾಗದಗಳನ್ನೆಲ್ಲಾ ಬೆಂಗಳೂರಿನಲ್ಲಿರುವ ಮೈಸೂರು ದೇಶದ ವ್ಯವಸಾಯ ಇಲಾಖಾ ಡೈರೆಕ್ಟರವರಿಗೆ ಬರೆಯಬೇಕು

ಬಾತ್ಮೀದಾರರಿಗೆ ನೋಟೀಸ್.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕೊಡೆವು. ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಗಾ ಕೊಡಲಾರೆವು. ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಗಾ ಕೊಡಲಾರೆವು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

- ಗರ್ಭಿಣಿ ಪಶುವಿಗೆ ಹನ್ನೆರಡು ರೂಪಾಯಿ ತೂಕ ಸುಣ್ಣ ತೆಗೆದ ನೀರುಳ್ಳಿರಸ, ಎರಡು ರೂಪಾಯಿ ತೂಕ ಜೇನುತುಪ್ಪ ಕೂಡಿಸಿ ಬೆಳಿಗ್ಗೆ ಸಾಯಂಕಾಲ ಎರಡು ಹೊತ್ತಿನ ಪ್ರಕಾರ ಕುಡಿಸಿದರೆ ಕೆಮ್ಮಲು ಗುಣವಾಗಬಹುದು" ಎಂದು ಮ|| ತಿಂಥಹಳ್ಳಿಯ ಕಾಳಪ್ಪಶೆಟ್ಟರು ತಿಳಿಸುತ್ತಾರೆ

ಒತ್ತೆಸಿ, ನಂಜನಗೂಡು—ಮೊಗುಮ್ಮಾದ ಆಕ್ಷೇಪಣೆಯುಳ್ಳ ಈ ಬಾತ್ಮಿಯನ್ನು ಪ್ರಕಟಿಸಲಾರೆವು ತಕ್ಕ ರುಜುವಾತು ಸಮೇತ ಹೆಸರು ಮುಂತಾದ ಸಂಗತಿಗಳನ್ನು ಕಾಣಿಸಿ ಬರೆಯುವುದು ಉತ್ತಮ

ನಂಕೆರೆ ಸ್ಕೂಲಿನ ಸ್ಥಿತಿ—ಇಲಾಖೆಯ ಅಧಿಕಾರಿಗಳಿಗೆ ತಿಳಿಸಿ ಸರಿಯಾದ ಕಾರಣಗಳನ್ನು ತೋರಿಸಿದರೆ ತನಿಖೆಯಿಂದ ಕ್ರಮಪಡಿಸುತ್ತಾರೆ.

ಕಡೂರು ತಾಲ್ಲೂಕು ಯರದಕೆರೆಗ್ರಾಮದಲ್ಲಿ ಪ್ರಜೆಗಳು ಸೀರಿಗಾಗಿ ಬಹಳ ಶ್ರಮಪಡುತ್ತಿದ್ದಾರೆ ಹಸು, ಸೈರುಗಳಿಗೆ ಒಂದು ತೊಟ್ಟು ನೀರು ಹಿಡಿದು ತಿಂದು ಹಾಕುತ್ತವೆ ಎಂದೂ ಒಬ್ಬ ಬಾತ್ಮೀದಾರರು ಬರೆಯುತ್ತಾರೆ ಬೆಂಗಳೂರು ಪವ ಸಾಯಿದ ಇಲಾಖಾ ಪ್ಲೆಷರ್ ರು ಈ ಪತ್ರಿಕೆಯ ಇನ್ನೊಂದುಕಡೆ ಪ್ರಕಟವಾಗಿರುವುದನ್ನು ನೋಡಿ ಅವರಿಗೆ ಬರೆದುಕೊಳ್ಳತಕ್ಕದ್ದು.

ಹಾಸನದ ತಾಲ್ಲೂಕು ಗೋರೂರು—ಈ ಬಾತ್ಮಿಯಲ್ಲಿ ವರ್ತಮಾನಗಳೇನೂ ಕಂಡುಬರುವುದಿಲ್ಲ

ಯಡತೊರೆಯಲ್ಲಿ ಆಗಂತುಕರಿಗೆ ಸರ್ಕಾರ ಧರ್ಮಛತ್ರದೊಳಗೆ ತಿಂಗಳಲ್ಲಿ 8-10 ದಿನ ಅನ್ನದಾನ ನಡೆಯುವುದಿಲ್ಲವೆಂದೂ, ಮುಜರಾಯಿ ಅಧಿಕಾರಿಗಳು ಊರು ಬಿಟ್ಟು ದೂರದಲ್ಲಿರೋಣದರಿಂದ ಛತ್ರದ ಪಾಡುಪಾಟುಗಳು ಅವ್ಯವಸ್ಥೆಯಾಗಿರುವುದನ್ನು ಅವರ ಗಮನಕ್ಕೆ ತರುವುದೂ ಕಷ್ಟವಾಗಿದೆ ಎಂದೂ, ಟೌನ್‌ನಲ್ಲಿ ರಾತ್ರಿಹೊತ್ತು ಮ್ಯುನಿಸಿಪಲ್ ದೀಪಗಳು ಕ್ರಮವಾಗಿ ಉರಿಯುವುದಿಲ್ಲವೆಂದೂ "ಅನುಭವಶಾಲಿ" ಎಂಬ ಬಾತ್ಮೀದಾರರು ಬರೆಯುತ್ತಾರೆ

ಆನಂದೂರು ಕಾಡಪ್ಪಗೌಡರು—ನಿಮ್ಮ ಬಾತ್ಮಿಯಲ್ಲಿ ಕಂಡ ಅಭಿಪ್ರಾಯಗಳನ್ನು ಹಲವು ಸಾರಿ ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುವೆವು ನೀವು ಹೊಸ ಅಭಿಪ್ರಾಯವೇನೂ ಬರೆದಿಲ್ಲ

ಒಬ್ಬ ರಿಟೈರ್ಡ್ ಆಫೀಸರ್—ಸಂಗತಿಯನ್ನು ನೀವು ಯಾವ ಪತ್ರಿಕೆಯಲ್ಲಿ ಓದಿದಿರೋ ಅದೇ ಪತ್ರಿಕೆಗೆ ನಿಮ್ಮ ಅಭಿಪ್ರಾಯವನ್ನು ಆಕ್ಷೇಪಣೆಗಳನ್ನು ಬರೆದು ತಿಳಿಸುವುದು ಉಚಿತವಾಗಿದೆ. —ಎಡಿ]

ಕರೆಸ್ಪಾಂಡೆನ್ಸ್.

ಚಿಂತಾಮಣಿ ಲೈಟ್ ರೈಲ್ವೆ ಕಂಪನಿಯು

ಅಯ್ಯಾ,

ತಾ 31 ನೇ ತಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪನಿ ನೋಟೀಸು ನೋಡಿಕೊಂಡೆನು ಈ ರೈಲ್ವೆ ಏರ್ಪಾಡು ಆಗುತ್ತದೆ ಬಹಳ ದಿವಸಗಳ ಕೆಳಗೇನೇ ಪ್ರಕಟವಾಗಿ ನಮ್ಮ ದೇಶದಲ್ಲಿ ಅನೇಕರು ಈ ಕಂಪೆನಿ ಷೇರುಗಳನ್ನು ತೆಗೆದುಕೊಂಡರು ಬಡವರಾದ ನಮ್ಮಗಳಿಗೆ ಅನುಕೂಲವಾಗುತ್ತೆಂದು ಯೋಚಿಸಿ ಜಾಗ್ರತೆ ಜಾರಿಗೆ ಬರಬಹುದೆಂದು ಷೇರಿ ಎಷ್ಟೋ ದಿನಗಳಾಯಿತು ಈಚೆಗೆ ಈ ಪ್ರಸ್ತಾಪವೇ ನಿಂತುಹೋಗಿ ಪುನಃ ಜಾರಿಗೆ ಬಂದಿರುತ್ತೆ ಷೇರುದಾರರು ಹಣವನ್ನು ಭರ್ತಿಮಾಡಬೇಕೆಂದು ವಗೈರೆ 1-2 ತಿಂಗಳ ಕೆಳಗೆ ಪ್ರಕಟಿಸಿದಂತೆ ತೋರುತ್ತೆ ಈಗ ಬಂದಿರುವ ನೋಟೀಸಿನಲ್ಲಿ ಕೆಲವು ಷೇರುದಾರ್ರುಗಳು ವಾಯಿದೆ ಪ್ರಕಾರ ಹಣ ಕೊಡದೆಹೋದದ್ದರಿಂದ ಅವರ ಷೇರುಗಳನ್ನು ಕಳೆದುಕೊಂಡಂತೆಯೂ, ಬಾಕಿಯವರು ಮುಂದಿನ ವಾಯಿದೆಯಲ್ಲಿ ಹಣ ಕೊಡದೆಹೋದರೆ ಅವರೂ ಷೇರುಗಳನ್ನು ಕಳೆದುಕೊಳ್ಳುತ್ತಾರೆಂದೂ ಸ್ಪಷ್ಟವಾಗಿ ಕಾಣಬರುತ್ತದೆ

ಈ ಕಂಪನಿಗೆ ಸೇರುವ ಷೇರುದಾರರಲ್ಲಿ ಕೆಲವರು ತಕ್ಕಮಟ್ಟಿಗೆ ಉಪಪತ್ತಿಯುಳ್ಳವರಾಗಿಯೂ, ಮತ್ತೆ ಕೆಲವರು ರಿಕ್ತರಾಗಿಯೂ, ಜುಜುಬಿ ವೇತನದಿಂದ ಜೀವಿಸತಕ್ಕ ಬಡನೌಕರರಾಗಿಯೂ ಇರಬಹುದು ಇಂಥವರಲ್ಲಿ ನಾನೊಬ್ಬನಾಗಿರುತ್ತೇನೆ ಈಗಿನ ಕಾಲಸ್ಥಿತಿ ನೋಡಿದರೆ ಮಾರಾಟವಾಗುತ್ತಿರುವ ಧಾರಣೆ ಜಬಾಬಿನಿಂದ ಗುಜರಾನ್ ಮಾಡುವುದೇ ಕಷ್ಟವೆಂದು ಹೇಳಬೇಕಾಗಿಲ್ಲ ಸಂಸಾರವನ್ನು ನಡಿಸಿ ಅಲ್ಪ ಸ್ವಲ್ಪ ಹಣವನ್ನು 3-4 ತಿಂಗಳು ಕೂಡಿಟ್ಟು, ಮೊದಲು ಕೊಟ್ಟ ಹಣ ಹೋಗುತ್ತೆಂಬುವುದನ್ನು ಆಲೋಚಿಸಿ ಷೇರು ಮೊಬಲಗನ್ನು ಭರ್ತಿ ಮಾಡಬೇಕಾದ ಸಂಕಟವಾಗಿದೆ ಇಂಥವರಿಗೆ ಏಕದಂ 2-3 ತಿಂಗಳ ವಾಯಿದೆ ಕೊಟ್ಟ ಮಾತ್ರಕ್ಕೇ ಪೂರಾ ಹಣ ಭರ್ತಿಮಾಡುವದು ಸಾಧ್ಯವಲ್ಲ ಬಡವರ ತಾಪತ್ರಯ ಎಷ್ಟರಮಟ್ಟಿಗೆ ಇರುತ್ತೆಂಬುವುದನ್ನು ತತ್ಕಾಲಿ ಸರ್ಕಾರದ ವೇತನ ಒಂದನ್ನೇ ನಂಬಿ ಜೀವಿಸುತ್ತಿರುವ ಬಡನೌಕರರ ಪಾಡನ್ನು ನಮ್ಮ ಈ ಕಂಪನಿ ಚೇರ್ಮನ್‌ರವರು ಆದಿಯಿಂದಲೂ ತಿಳಿದವರಾಗಿರುತ್ತಾರೆ. ದಯಾಳುಗಳಾದ ನಮ್ಮ ಚೇರ್ಮನ್‌ರವರು ಕೃಪೆಯಿಟ್ಟು ಮೇಲಿನ ಅನಿವಾರ್ಯಗಳನ್ನೆಲ್ಲಾ ಚಿತ್ತಕ್ಕೆ ತಂದುಕೊಂಡು ಇನ್ನೂ ದೀರ್ಘಕಾಲದ ವಾಯಿದೆ ಕೊಟ್ಟು ಸ್ವಲ್ಪ ಸ್ವಲ್ಪವಾಗಿ ಷೇರುದಾರರಿಂದ ಹಣ ಬರಮಾಡಿಕೊಂಡು ಅವರವರ ಷೇರುಗಳ ಹಕ್ಕನ್ನು ಊರ್ಜಿತಪಡಿಸಬೇಕಾಗಿ ಪ್ರಾರ್ಥಿಸುತ್ತೇನೆ. ಈ ಕಂಪನಿಯ ಕೆಲಸ ಪ್ರಾರಂಭವಾಗಿರುತ್ತೆಂದು ಈಗೀಗ ಪ್ರಚಾರವಾಗುತ್ತಿದ್ದಾಗ್ಯೂ ಬಹಳ ದಿವಸಗಳಿಂದ ಈ ಸಮಾಚಾರವೇ ನಿಂತುಹೋಗಿದ್ದ ಕಾರಣವನ್ನು ಆಲೋಚಿಸಿ ಅನುಮಾನಿಸಿ ಇದ್ದವರೆಲ್ಲರೂ ಷೇರು ಮೊಬಲಗನ್ನು ಜಮಾಮಾಡುವುದರಲ್ಲಿ ಉದ್ಯುಕ್ತಪಟ್ಟಿರಾರೆಂದು ಹೇಳುವುದಕ್ಕೆ ಸಂದೇಹವಿಲ್ಲ ಇನ್ನು ಕೆಲವು ಕಾಲ ವಾಯಿದೆ ಜಾಸ್ತಿಮಾಡುತ್ತಾರೆಂದು ನಂಬುವ

ಮೊಳಕಾಲ್ಮುರು. ಎಕ್. ರಂಗರಾವ್, ಶೇರ್ದಾರ

ಒಂದು ಗೋಮಾಳದ ವಿಚಾರ

ಅಯ್ಯಾ,

ಮಂಡ್ಯದ ತಾಲ್ಲೂಕು ಕಸಬಹೋಬಳಿ ಹೊಸೂರುಗ್ರಾಮದಲ್ಲಿ ಸುಮಾರು 400-500 ಜನಸಂಖ್ಯೆಯೂ, ಸುಮಾರು 2,000 ಜಾನುವಾರ ಸಂಖ್ಯೆಯೂ ಇದೆ ಈ ಗ್ರಾಮಕ್ಕೆ ಕೆರೆಯಿಂದಲಾಗಲಿ, ನಾಲೆಯಿಂದಲಾಗಲಿ ತರೀಜಮೀನು ಮತ್ತು ಬಾಗಾಯ್ತುಜಮೀನುಗಳು ಇಲ್ಲ. ಮೇಲ್ಕಂಡ ಜನಸಂಖ್ಯೆ ಎಲ್ಲಾ ಮುಖ್ಯವ್ಯವಸಾಯದಿಂದಲೂ, ದನ ಎಮ್ಮೆ ಆಡು ಕುರಿ ಮೊದಲಾದ ಜಾನುವಾರುಗಳ ಪೋಷಣೆಯಿಂದಲೂ ಜೀವಿಸಬೇಕಾಗಿರುತ್ತೆ. ಈ ಗ್ರಾಮದ ಖುಷ್ಕಿ ಜಮೀನುಗಳು ಅಷ್ಟೇನೂ ಫಲವತ್ತಾದವುಗಳಲ್ಲ. 4-5 ಜನಗಳುಳ್ಳ ಒಂದು ಕುಟುಂಬವು ಜೀವಿಸಬೇಕಾದರೆ 20-30 ಎಕರೆ ಜಮೀನು ವ್ಯವಸಾಯಮಾಡಿದರೂ ಸಾಲದೆ, ಅನೇಕ ಜನಗಳು ಜೀವನಕ್ಕಿಲ್ಲದೆ ಅಲೆಯುತ್ತಾರೆ. ಹೀಗಿರುವಲ್ಲಿ ಈ ಗ್ರಾಮಕ್ಕೆ ಇದ್ದ ಅಲ್ಪಸ್ವಲ್ಪ ಎಂದರೆ 300-350 ಎಕರೆ ಗೋಮಾಳದ ಜಮೀನನ್ನು ಫಾರೆಸ್ಟಿಗೆ ತಗೆದುಕೊಳ್ಳುವುದಾಗಿ ಫಾರೆಸ್ಟು ಇಲಾಖೆಯವರು ಈಗ್ಗೆ ಸುಮಾರು ಒಂದು ವರ್ಷದಲ್ಲಿ ಇಸ್ತಿಹಾರು ಪ್ರಕಟಿಸಿದರು. ಅದನ್ನು ನೋಡಿ ಈ ಗ್ರಾಮದ ಬಡ ಪ್ರಜೆಗಳು ಈ ಗ್ರಾಮಕ್ಕಿರುವ ಅಲ್ಪಸ್ವಲ್ಪ ಗೋಮಾಳವನ್ನು ಫಾರೆಸ್ಟಿಗೆ ಸೇರಿಸಿಕೊಳ್ಳದೆ ಬಿಟ್ಟುಕೊಡಬೇಕೆಂದು ಫಾರೆಸ್ಟು ಇಲಾಖೆಗೂ, ರೆವಿನ್ಯೂ ಇಲಾಖೆಗೂ, ತಾಲ್ಲೂಕಿಗೂ, ಡಿಸ್ಟ್ರಿಕ್ಟಿಗೂ ಅನೇಕ ಅರ್ಜಿಗಳನ್ನು ಬರೆದುಕೊಂಡರು ಒಂದಕ್ಕೂ ಯಾವ ಹುಕ್ಕುಂ ಕೂಡ ಆಜ್ಞೆಯಾಗಲಿಲ್ಲ ಈಗ್ಗೆ ಸುಮಾರು 6-7 ತಿಂಗಳಲ್ಲಿ ಫಾರೆಸ್ಟು ಸೆಟ್ಲ್‌ಮೆಂಟ್ ಆಫೀಸರು ಈ ಗ್ರಾಮಕ್ಕೆ ಬಂದು ಸದರಿ ಗೋಮಾಳವನ್ನು ಪರಾಂಬರಿಸಿ, ಶಿವತಳ್ಳಿಹೊಕ್ಕಾಂ ಜಮಾಬಂದಿಕಾಲದಲ್ಲಿ ಈ ಗ್ರಾಮದ ರೈತರನ್ನು ಕರಸಿಕೊಂಡು ತನಿಖೆಯಿಂದ ಈ ಗ್ರಾಮದ ಗೋಮಾಳದಲ್ಲಿ ಸ್ವಲ್ಪಭಾಗವನ್ನು ಮಾತ್ರ ಫಾರೆಸ್ಟಿಗೆ ತೆಗೆದುಕೊಂಡು ಉಳಿದ ಭಾಗವನ್ನು ಗೋಮಾಳಕ್ಕೆ ಬಿಟ್ಟಿರುತ್ತೇವೆಂದು ಹೇಳಿ ಈ ಗ್ರಾಮದ ನಕ್ಷೆಯ ಮೇಲೆ ಗೆರೆ ಎಳೆದು ಫಾರೆಸ್ಟಿಗೆ ತೆಗೆದುಕೊಂಡಿರುವ ಭಾಗವನ್ನೂ, ಬಿಟ್ಟಿರುವ ಭಾಗವನ್ನೂ ತೋರಿಸುತ್ತಾರೆ.

ಈಚೆಗೆ ಗೋಮಾಳ ಸ್ವಲ್ಪವನ್ನೂ ಬಿಡದೆ ಫಾರೆಸ್ಟಿಗೆ ಸೇರಿಸಿಕೊಳ್ಳುವುದಾಗಿ ವರ್ತಮಾನ ಕೇಳುತ್ತೇವೆ. ಹಾಗೇನಾದರೂ ಎಲ್ಲವನ್ನೂ ಫಾರೆಸ್ಟಿಗೆ ಸೇರಿಸಿಕೊಳ್ಳುವುದಾದರೆ ಮೇಲ್ಕಂಡ ಜಾನುವಾರುಗಳು ಜನ ಸಂಖ್ಯೆಯೂ ಈ ಗ್ರಾಮದಲ್ಲಿ ವಾಸಮಾಡಲು ಯತ್ನವಿಲ್ಲ ಈ ವಿಷಯ ತನಿಖೆಗೋಸ್ಕರ ಈ ಗ್ರಾಮದ ರೈತರುಗಳು ತಾ 31-7-13ನೇ ದಿವಸ ಕೋರ್ಟಿಗೆ ಹಾಜರಾಗುವಂತೆ ಡೆಪ್ಯುಟಿ ಕಮಿಷನರ್‌ರವರು ನೋಟೀಸು ಅಪ್ಪಣೆಕೊಡಿಸಿದ್ದರು. ಆ ದಿವಸ ನಾವುಗಳು ಕೋರ್ಟಿಗೆ ಹಾಜರಾಗಿ ಕಾದುಕೊಂಡಿದ್ದೆವು. ಮುಂದಿನ ತಿಂಗಳಿಗೆ ಮುಂದೆ ಹೋಯಿತು ಅಪ್ಪಣೆಯಾಯ್ತು ದಯಾಳುಗಳಾದ ಡೆಪ್ಯುಟಿ ಕಮಿಷನರ್ ಮಹಾರಾಜಾ ಸರ್ಕಾರದವರು ಗರೀಬ ರೈತರುಗಳಾದ ನಮ್ಮಗಳ ಮೇಲೆ ಕರುಣವಿಟ್ಟು ಫಾರೆಸ್ಟು ಸೆಟ್ಲ್‌ಮೆಂಟ್ ಆಫೀಸರವರು ಈ ಗ್ರಾಮದ ನಕ್ಷೆಯ ಮೇಲೆ ಗೆರೆ ಎಳೆದಿರುವಂತೆಯೇ ಪಾಲುಮಾಡಿ ಉಳಿದ ಭಾಗವನ್ನು ನಮ್ಮಗಳಿಗೆ ಗೋಮಾಳ ಬಿಡಿಸಿ ಕೊಡಬೇಕೆಂಬದಾಗಿ ಪ್ರಾರ್ಥಿಸುತ್ತೇವೆ

ಸಿದ್ದೇಗೌಡ ಮುಂತಾದ ಗ್ರಾಮಸ್ತರು

ಒಂದು ಕೆರೆಯ ಕಾಮಗಾರಿ ವಿಚಾರ.

ಅಯ್ಯಾ,

ಕಾನಕಾನಹಳ್ಳಿ ತಾಲ್ಲೂಕು ದೊಡ್ಡ ಮರಳವಾಡಿಗ್ರಾಮದ ಉತ್ತರಭಾಗದಲ್ಲಿರುವ ಹಿರಿಕೆರೆ ಎಂಬುವುದಕ್ಕೆ ಕಾಮಗಾರಿಗೋಸ್ಕರ ಈಗ್ಗೆ ಎರಡು ವರ್ಷದಲ್ಲಿ 1,150 ರೂಪಾಯನ್ನು ಸರ್ಕಾರದವರು ಮಂಜೂರುಮಾಡಿ ಈ ಪೈಕಿ 950 ರೂಪಾಯಿ ಜಮೀನ್‌ದಾರರು ಕೊಡುವಂತೆಯೂ ಬಾಕಿ ಮೊಬಲಗಿಗೆ ಸರ್ಕಾರದಿಂದ ಕೆಲಸ ಮಾಡಿಸುವುದಾಗಿಯೂ ನಾವು ಜಮೀನು ಆದದ್ದನ್ನು ಬಾಜು ಚಿಕ್ಕ ಮರಳವಾಡಿ ಗ್ರಾಮದ ಪಟೇಲ್ ಶೆಟ್ಟಿ ರಂಗಣ್ಣನೆಂಬಾತನಿಗೆ ರೆವಿನ್ಯೂ ಇಲಾಖೆ ಮಾರ್ಫತ್ತು ತಾಲ್ಲೂಕು ಅಮಲ್ದಾರ್ರು ಕಂಟ್ರಾಕ್ಟು ಕೊಟ್ಟು ಕೆಲಸಮಾಡಿಸುತ್ತಾ ಇದ್ದದ್ದು ಸರಿಯಾಗಿ ನಡೆಯದೇ ಇದ್ದ ಕಾರಣ ನಾವುಗಳು ಚೀಫ್ ಇಂಜನಿಯರ್ ಸಾಹೇಬರಿಗೆ ಅರ್ಜಿ ಜಾಹೀರ್ ಮಾಡಿಕೊಂಡದ್ದರಮೇಲೆ ಡೆಪ್ಯುಟಿ ಅ|| ಕಮಿಷನರ್‌ರವರು ಕೆರೆಬಳಿ ದಯಮಾಡಿ ಅಜಮಾಯಿಷಿಮಾಡಲು ಟ್ಯಾಂಕ್ ಇನ್ಸ್‌ಪೆಕ್ಟರನ್ನು ಮೆಜರ್‌ಮೆಂಟು ಬುಕ್ಕುಗಳನ್ನು ಕೆಳಲಾಗಿ ಡಿಸ್ಟ್ರಿಕ್ಟಿಗೆ ಕಳುಹಿಸುವಂತೆ ಹೇಳಿದರು. ಅನಂತರ ಡಿಸ್ಟ್ರಿಕ್ಟ್ ಓವರ್ಸಿಯರವರೂ ಬಂದು ಅಜಮಾಯಿಷಿ ಮಾಡಿದನಂತರ ಈಗ ಆಗಿರುವದು ಜಾಸ್ತಿ ಬಾಕಿ ಕೆಲಸವನ್ನು ಮಾಡಿಸಿಕೊಡುವುದಾಗಿ ಅಪ್ಪಣೆ ಮಾಡಿದರು ಅನಂತರ 1913 ನೇ ಫೆಬ್ರವರಿ ತಿಂಗಳಲ್ಲಿ ಡಿಸ್ಟ್ರಿಕ್ಟ್ ಓವರ್ಸಿಯರು, ಅಮಲ್ದಾರ್ರು ಮತ್ತು ಟ್ಯಾಂಕ್ ಇನ್ಸ್‌ಪೆಕ್ಟರು ಸಹ ಬಂದುನೋಡಿ ಬಾಕಿ ಇರುವ 600 ರೂಪಾಯಿ ಕೆಲಸವನ್ನು ಸರಿಯಾಗಿ ಮಾಡಿಸಿಕೊಡುತ್ತೇವೆಂದು ಹೇಳಿ ಹೋದರು ಅನಂತರ 1913 ನೇ ಮೇ ತಿಂಗಳಲ್ಲಿ ಚೀಫ್ ಇಂಜನಿಯರವರಿಂದ ಪೂರ್ತಿ ಕೆಲಸವಾಗಿರುವುದಾಗಿ ವಗೈರೆ ನಮೂದಿಸಿ ನಮ್ಮಗಳಿಗೆ ಬಂದ ಇಂಡಾರಸಿನಮೇಲೆ ಅನುಮಾನವುಂಟಾಗಿ ಅದೇ ಮಾಹೆಯಲ್ಲಿ ರೆವಿನ್ಯೂ ಕಮಿಷನರವರಿಗೂ ಚೀಫ್ ಇಂಜನಿಯರವರಿಗೂ ನಮ್ಮಗಳ ಅಹವಾಲನ್ನೆಲ್ಲಾ ಕುರಿತು ಇಂಜನಿಯರ್ ಇಲಾಖೆಯಮೂಲಕ ಅಜಮಾಯಿಷಿ ಮಾಡಬೇಕೆಂದು ಅರಿಕೆ ಮಾಡಿಕೊಂಡದರಮೇಲೆ ಕಾನಕಾನಹಳ್ಳಿ ತಾಲ್ಲೂಕು ಸಬ್ ಓವರ್ಸಿಯರು, ಚನ್ನಪಟ್ಟಣದಲ್ಲಿರುವ ಇಂಜನಿಯರ್ ಇಲಾಖೆ ಡಿವಿಜನ್ ಆಫೀಸರು, ಬೆಂಗಳೂರು ಎಗ್ಸಿಕ್ಯುಟಿವ್ ಇಂಜನಿಯರವರು, ಇವರುಗಳೆಲ್ಲರೂ ಒಂದೊಂದುವ್ಯಕ್ತಿ ಬಂದು ಅಜಮಾಯಿಷಿಮಾಡಿ ಸುಮಾರು ನಾಲ್ಕು ನೂರು ರೂಪಾಯಿಗಿಂತ ಜಾಸ್ತಿ ಕೆಲಸ ನಡೆಯಲಿಲ್ಲವೆಂದು ಹೇಳಿ ಹೋದರು 1913 ನೇ ಫೆಬ್ರವರಿ ವರಗೆ ಯಾವುದೂ ಇತ್ಯರ್ಥವಾಗದೆಹೋದದ್ದರಿಂದ ಚೀಫ್ ಇಂಜನಿಯರವರಿಗೂ ಹಜರತ್ ದಿವಾನ್ ಸಾಹೇಬರವರಿಗೂ, ಸೂಪರಿಂಟೆಂಡೆಂಟರವರಿಗೂ ಅರ್ಜಿ ಜಾಹೀರ್ ಮಾಡಿಕೊಂಡಿದ್ದರ ಮೇಲೆ ಇನ್ನೂ ವಿಚಾರ ಮಾಡುತ್ತಿರುವಂತೆ ಒಂದು ಇಂಡಾರಸು ಅಪ್ಪಣೆಯಾಗಿರುತ್ತೆ ಪುನಃ ತಗಾದೆ ಅರ್ಜಿಗಳನ್ನು ಸಹ ಜಾಹಿರ್ ಮಾಡಿಕೊಂಡಿರುತ್ತೇವೆ ಇದುವರಿವಿಗೂ ಯಾವುದೂ ವ್ಯವಸ್ಥೆ ಆಗಿರುವುದಿಲ್ಲ ಆದರೂ ಸರ್ಕಾರದವರು ಬಡರೈತರಾದ ನಮ್ಮಗಳಿಗೆ ನೋಟೀಸು ವಗೈರೆ ಕ್ರಮನಡಿಸಿ ಬಡವರ ಹಣಮಾತ್ರ ವಸೂಲುಮಾಡಿ ನಮ್ಮ ಕೆಲಸವೂ ಪೂರ್ತಿಮಾಡಿಸದೆ ಇರುವುದು ನಮ್ಮಗಳಿಗೆ ನಷ್ಟವಾಗಿದೆ ಘನವುಳ್ಳ ಸರ್ಕಾರದವರು ರಿಕಾರ್ಡುಗಳನ್ನೆಲ್ಲಾ ಪರಾಂಬರಿಸಿ ಕೂಡಲೇ ಇತ್ಯಾರ್ಥಪಡಿಸಿ ನಮ್ಮಗಳ ಕಷ್ಟವನ್ನು ಪರಿಹರಿಸುವರೆಂದು ನಂಬಿದೇವೆ

ಯಂ ಯನ್. ಕೃಷ್ಣಪ್ಪ ವಗೈರೆರು

ತಾಲ್ಲೋಕು ವರ್ತಮಾನಗಳು.

ಹಾಸನ—ಇಲ್ಲಿನ ಮ್ಯುನಿಸಿಪಲ್ ಮೆಂಬರ್ ಮತ್ತು ಕಂಟ್ರಾಕ್ಟರಾದ ಮ ಬ ಆಳಸಿಂಗ್ರಾಚಾರ್ಯರ ಮನೆಗೆ ಹಾಲು ಕೊಡುವವನು ಹಾಲಿಗೆ ಮರ್ಕಿನ ಹಿಟ್ಟೆಂದು ಅಂಗಡಿಯಲ್ಲಿ ಮಾರುವ ಗೋಧೀಹಿಟ್ಟು ಬೆರಸಿದ್ದನೆಂದು ಅವನನ್ನು ಹಿಡಿದು ಪೋಲೀಸಿಗೆ ಒಪ್ಪಿಸಿದಾರೆ. ಪೋಲೀಸಿನವರೂ, ಸ್ಥಳವಾಸಿಗಳೂ ಏಕಮತ್ಯದಿಂದ ಮೋಸಗಾರನನ್ನು ಹಿಡಿದು ಮ್ಯಾಜಿಸ್ಟ್ರೇಟರಲ್ಲಿ ಶಿಕ್ಷೆಮಾಡಿಸಿದರೆ ಅಂಥಾ ಕೃತ್ಯಗಳು ತಪ್ಪುವವು.—ಆಗಾಗ್ಗೆ ಸೋನೆ ಮಳೆ ಬಲವಾಗಿ ಹಿಡಿಯುತ್ತಲೂ, ಮಧ್ಯಮಧ್ಯ 4-6 ದಿನ ಜೋಳುವಾಗಿ ಬಿಸಿಲು ಬರುತ್ತಲೂ ಇರುವುದರಿಂದ ಪ್ರಜಾ ಆರೋಗ್ಯಕ್ಕೆ ಹಿತವೂ, ಪೈರುಗಳಿಗೆ ಅನುಕೂಲವೂ ಆಗಿದೆ ಕೆರೆಕಟ್ಟೆಗಳಿಗೆಲ್ಲಾ ನೀರು ತುಂಬಿದೆ.—ಈ ಊರಿನ ಚೆನ್ನಪಟ್ಟಣದ ಕೆರೆಗೆ ಹೋಗುವ ದಾರಿಯಲ್ಲಿ ಒಂದೆರಡು ಪ್ಲೇಗ್ ಕೇಸುಗಳಾದಂತೆಯೂ, ಅಲ್ಲಲ್ಲಿ ಇಲಿಗಳು ಸಾಯುತ್ತಿರುವುದಾಗಿಯೂ ಹೇಳುತ್ತಾರೆ ಮ್ಯುನಿಸಿಪಾಲಿಟಿಯವರು ಈ ಸಮಯದಲ್ಲಿ ಬಹು ಎಚ್ಚರಿಕೆಯಿಂದ ಚಟುವಟಿಕೆಯಾಗಿ ತಮ್ಮ ಕರ್ತವ್ಯವನ್ನು ನಿರವೇರಿಸಬೇಕಾಗಿದೆ—ಈ ತಾಲ್ಲೂಕು ಬಹಳ ದೊಡ್ಡದಾಗಿ ಆರು ಸಬ್ ತಾಲ್ಲೂಕು ಇದಕ್ಕೇ ಒಳಪಟ್ಟಿದ್ದು ಎಲ್ಲಾ ಶಾನುಭೋಗರುಗಳೂ ಲೆಕ್ಕ ಸಮಜಾಯಿಷಿಗೋಸ್ಕರ ಇಲ್ಲಿಗೇ ಪ್ರತಿ ವರ್ಷವೂ ಬರಬೇಕಾಗಿದೆ ಇವರಿಗೆ ಇಳುಕೊಳ್ಳುವುದಕ್ಕೆ ಸ್ಥಳವಿಲ್ಲದೆ ಬಹಳ ವೊಂದರೆಪಡುವರು. ಛತ್ರಗಳಲ್ಲಿ ಸ್ಥಳವಿಲ್ಲ. ಎರಡು ಛತ್ರಗಳಲ್ಲೂ ಪ್ರತಿನಿತ್ಯವೂ ಪ್ರಯಾಣಿಕರೇ ತುಂಬಿರುತ್ತಾರೆ ಆದುದರಿಂದ ಮ್ಯುನಿಸಿಪಾಲಿಟಿಯವರಾಗಲಿ, ಸರ್ಕಾರದವರಾಗಲಿ, ಉದಾರಿಗಳಾದ ಸಾಹುಕಾರರಾಗಲಿ ತಾಲ್ಲೂಕು ಕಚೇರಿಗೆ ಸಮೀಪದಲ್ಲಿ ಒಂದು ಛತ್ರವನ್ನು ಕಟ್ಟಿಸಿದರೆ ಬಹಳ ಉಪಕಾರವಾದೀತು. ಮುನ್ಸಿಫ್ ಕೋರ್ಟಿನ ಬಳಿ ಕಕ್ಷಿಗಾರರಿಗೂ, ಸಾಕ್ಷಿಗಾರರಿಗೂ ಅನುಕೂಲವಾಗುವಂತೆ ಒಂದು ಕಟ್ಟಡವನ್ನು ಕಟ್ಟಿಸಲು ಸ್ಯಾಂಕ್ಷನ್ ಆಗಿದೆ.

ದೊಡ್ಡಬಳ್ಳಾಪುರ—ಕಳೆದ 26 ನೇ ತಾ. ಶನಿವಾರ ರಾತ್ರಿ ಸುಮಾರು 7 ಘಂಟೆಯಲ್ಲಿ ಈ ಊರು ಮುಸಾಫರ ಬಂಗ್ಲೆಗೆ ಅತಿ ಸಮೀಪದಲ್ಲಿ ಚಿಕ್ಕಬಳ್ಳಾಪುರದಿಂದ ಲಾಯರ್ ಮ|| ರಾಮಕೃಷ್ಣಯ್ಯನವರ ಝಟ್ಕಾ ಗಾಡಿ ಬರುವಾಗ್ಗೆ ಇಬ್ಬರು ಕಳ್ಳರು ಗಾಡಿಹೊಡೆಯುವ ಮುಸಲ್ಮಾನನನ್ನು ಪ್ರಹರಿಸಲು ಅವನು ಪರಾರಿಯಾಗಿ ಬಂಗ್ಲೆ ಮೇಟಿಗೆ ವರ್ತಮಾನಕೊಟ್ಟನು. ಅಷ್ಟರಲ್ಲಿ ಕಳ್ಳರು ಲಾಯರು ಕುಳಿತಿದ್ದ ಗಾಡಿಯನ್ನು ವಾಪಸು ಚಿಕ್ಕಬಳ್ಳಾಪುರದ ಕಡೆ ತಿರುಗಿಸಲು ಲಾಯರು ಫಕ್ಕನೆ ಗಾಡಿಯಿಂದ ಧುಮುಕಿ ಚಿಕ್ಕಬಳ್ಳಾಪುರದ ಕಡೆ ವಾಪಸು ಓಡಿಹೋಗುತ್ತಿರಲು, ತಿಮ್ಮಸಂದ್ರದ ಕಡೆ ಮತ್ತಿಬ್ಬರು ಬರುವಾಗ್ಗೆ ಲಾಯರು ಅವರು ಕಳ್ಳರೆಂತ ತಿಳಿಯದೆ ತಮ್ಮ ಕಷ್ಟವನ್ನು ಅವರಿಗೆ ತಿಳುಹಿಸಲು ಅವರೂ ಈ ಲಾಯರನ್ನು ಚೆನ್ನಾಗಿ ಹೊಡೆದು ಅವರಲ್ಲಿದ್ದ ಹಣವನ್ನೆಲ್ಲಾ ಕಿತ್ತುಕೊಂಡರು ಈ ಲಾಯರು ಈಗ ದೊಡ್ಡಬಳ್ಳಾಪುರದಲ್ಲಿಯೇ ಇರುತ್ತಾರೆ ಇವರಿಗೂ ಝಟ್ಕಾ ಗಾಡಿಯವನಿಗೂ ರಕ್ತ ಸುರಿಯುವಂಥ ಏಟುಗಳು ಬಿದ್ದಿವೆ. ಮೊದಲಿನ ಇಬ್ಬರು ಕಳ್ಳರು ಲಾಯರನ್ನು ಬಿಟ್ಟು ಝಟ್ಕಾಹೊಡೆಯುವವನ ಬೆನ್ನುಹತ್ತಿದರು. ತರುವಾಯ ಈ ಝಟ್ಕಾದವನು ವೆಂಕಟರಾಮಯ್ಯನವರಿಗೆ ವರ್ತಮಾನ ಕೊಡಲು ಅನೇಕ ಮಂದಿಯೊಡನೆ ತಂದೆಯಾದ ಮ|| ವೆಂಕಟರಾಮಯ್ಯನವರು ಪಿಂಡಕೂರ್ ತಿಮ್ಮಸಹಳ್ಳಿವರೆಗೂ ಹೋಗಿ ತಮ್ಮ ಕುಮಾರನನ್ನು ಮನೆಗೆ ಕರೆದುಕೊಂಡು ಬಂದರು.—ಕಳೆದ ತಿಂಗಳಲ್ಲಿ ಈ ತಾಲ್ಲೂಕಿನಲ್ಲಿ ಎರಡು ಮೂರು ಆಕಸ್ಮಿಕ ಮರಣಗಳಾಗಿವೆ ಎಂದೂ, ಅವುಗಳಲ್ಲಿ ಅಯ್ಯನಹಳ್ಳಿ ಮರಣವು ಒಬ್ಬ ಒಕ್ಕಲಿಗನು ಮಾದಿಗನನ್ನು ಕೊಲೆಮಾಡಿದ್ದೆಂತಲೂ ಕೇಳಲಾಗಿದೆ.—ಕಳೆದ 30 ನೇ ತಾ ಕೋಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರ್ರವರು ಈ ಊರಿಗೆ ದಯಮಾಡಿ, ಸಾಯಂಕಾಲ ಮೀಟಿಂಗ್ ನಡಿಸಲು ಊರಿನ ಮುಖ್ಯಸ್ಥರೆಲ್ಲ ಜಮಾಯಿಸಿದ್ದರು ಮ, ಎಂ ಎ. ನಾರಣಯ್ಯಂಗಾರ್ರವರು ಈ ವರೆಗೆ ನಡೆದಿರುವ ಈ ಊರಿನ ಕೋಆಪರೇಟಿವ್ ಸಂಘವನ್ನು ಪರೀಕ್ಷಿಸಿ ಸಂತೋಷಪಟ್ಟು ಪ್ರೋತ್ಸಾಹ ಕೊಡುವಂತೆ ಅಮಲ್ದಾರ್ರವರಿಗೆ ತಿಳಿಸಿ ಹಾಸನಕ್ಕೆ ದಯಮಾಡಿದರು.—ಕಾಲಸ್ಥಿತಿ ಚೆನ್ನಾಗಿಲ್ಲ. ಅನೇಕರಿಗೆ ವಿಷಮಶೀತಜ್ವರಾದಿ ವ್ಯಾಧಿಗಳು ಪ್ರಾಪ್ತವಾಗಿ ಕೆಲವು ಮರಣಗಳಾಗಿವೆ.

ಮಂಡ್ಯ—ಜೋಳದ ಪೈರು ತಕ್ಕಮಟ್ಟಿಗೆ ಕೊಯ್ಲಿಗೆ ಅನುಕೂಲವಾಗಿದೆ. ರಾಗಿ ಮೊದಲಾದ ಬಿತ್ತನೆಗಳಿಗೆ ಮಳೆಯ ಆವಶ್ಯಕತೆಯು ಅಧಿಕವಾಗಿ ಉಂಟು.—ದೊಡ್ಡ ಬಳ್ಳಾಪುರದಿಂದ ಇಲ್ಲಿಗೆ ವರ್ಗವಾಗಿ ಬಂದಿರುವ ಅಮಲ್ದಾರ್ ಮ|| ಕೃಷ್ಣ ಅರಸಿನವರು ಕಳೆದ ತಿಂಗಳು ಛಾರ್ಜನ್ನು ವಹಿಸಿಕೊಂಡರು. ಅವರು ಬಂದ ತರುಣದಲ್ಲಿಯೇ ಪ್ರಜೆಗಳಿಗೆ ಕೆಲವು ಅನುಕೂಲಗಳನ್ನು ಮಾಡಿದ್ದು ತುಂಬಾ ಸಂತೋಷವಾಯ್ತು. ಮೊದಲು ಕಟ್ಟುತ್ತಿದ್ದ ಸಂತೆಯ ಸ್ಥಳವನ್ನು ತಪ್ಪಿಸಿ ಮೋಟರ್ ಗಾಡಿಗಳ ಅಪಾಯಕ್ಕೆ ಒಳಗಾಗದ ಹಾಗೆ ಏರ್ಪಡಿಸಿದ್ದರಲ್ಲೂ, ಮ್ಯುನಿಸಿಪಾಲಿಟಿ ಚೌಕ್ಕಟವೂ, ಲಾಂದ್ರಗಳ ಬೆಳಕೂ ಕ್ರಮಪಡಿಸಿದ್ದರಲ್ಲೂ ಪ್ರಜೆಗಳ ಮೇಲನ್ನು ಕೋರಿದ ಮೇರೆಗೆ ಸಂತೆಯಲ್ಲಿ ನಡೆಯುವ ಮೋಸ, ಅನ್ಯಾಯ, ಅಳತೆ ತೂಕದ ಬಟ್ಟು ಈ ಮುಂತಾದವುಗಳನ್ನೂ ಸಹ ಕ್ರಮಪಡಿಸಿ ಕೀರ್ತಿಶೇಷರಾಗುವಂತೆ ಸೂಚಿಸುತ್ತೇವೆ ಇದರಿಂದ ಅನೇಕ ಬಡಬಗ್ಗರನ್ನು ಉದ್ಧಾರಮಾಡಿದಂತಾಗುವುದು. ರಾಗಿ ರೂಪಾಯಿಗೆ 13-15 ಸೇರೂ, ಅಕ್ಕಿ 6½ ಸೇರೂ ಕಳೆದ ಸಂತೆಯಲ್ಲಿ ಮಾರಾಟವಾಯ್ತು.—ಕಳೆದ ವಾರದ ಮಧ್ಯೆ ಎರಡು ಮೂರು ಮನೆಗಳಿಗೆ ಕಳ್ಳರು ಪ್ರವೇಶಿಸಿ ಕನ್ನಾ ಹಾಕುತ್ತಿದ್ದು ಪಕ್ಕದ ಮನೆಯ ಪೋಲೀಸ್ ಇನ್ಸ್‌ಪೆಕ್ಟರ ಆಳುಗಳು ಬರುವಷ್ಟರೊಳಗೆ ಪರಾರಿಯಾದರು ಹಾಗೂ ಅರ್ಧ ಫರ್ಲಾಂಗ್ ದೂರದಲ್ಲಿದ್ದ ಒಂದು ಮನೆಗೆ ನುಗ್ಗಿ ಸ್ವಲ್ಪ ಹಣವನ್ನೂ ಕೆಲವು ಪದಾರ್ಥಗಳನ್ನೂ ದೋಚಿಕೊಂಡು ಹೋದರು. ಈಚೆಗೆ ರಾತ್ರಿ ಬೀಟಗೋಸ್ಕರ ಕೆಲವು ಕ್ಯಲಾಂತ್ರಗಳನ್ನು ಕೊಟ್ಟು ರಾತ್ರಿಯೆಲ್ಲಾ ಶಬ್ದಮಾಡಿಕೊಂಡು ತಿರುಗುವ ಹಾಗೆ ಏರ್ಪಡಿಸಿದ್ದರಲ್ಲಿ ಕಳ್ಳರು ಬಹು ಬೇಗನೆ ಎಚ್ಚತ್ತುಕೊಂಡು ಪಲಾಯನವಾಗುವುದಕ್ಕೆ ಅವಕಾಶವಾಯ್ತು ಪದೇ ಪದೇ ಇಂಥಾ ಭಯೋತ್ಪಾತಗಳು ಸಂಭವಿಸುತ್ತಲೇ ಇರುತ್ತವೆ—ಮಳೆ ಬಂದಾಗ ತುಂಬಾ ಕೊಚ್ಚೆ ಕೆಸರೂ ನಿಲ್ಲುತ್ತಿದ್ದ ಪೈನಡ ಕೇರಿ ರಸ್ತೆಯನ್ನೂ, ಹೊಸಹಳ್ಳಿ ರಸ್ತೆಯನ್ನೂ, ಕೆಲವು ಚರಂಡಿಗಳನ್ನೂ ದುರಸ್ತುಮಾಡುವದಕ್ಕೆ ಸಾ|| ಅನಂತರಾಜಯ್ಯನವರು ಕಂಟ್ರಾಕ್ಟು ವಹಿಸಿ ಮಾಡಿದ ಮೆಹನತ್ತಿಗೆ ಮೇಲ್ಪಟ್ಟ ಅಧಿಕಾರಿಗಳಿಂದ ಒಳ್ಳೇ ಸಿಫಾರಸ್ಸನ್ನು ಹೊಂದಿದ್ದು ಅನೇಕರಿಗೆ ತುಂಬಾ ಸಂತೋಷವನ್ನುಂಟುಮಾಡಿತು—ನಮ್ಮ ಡಾ|| ಗುಂಡಪ್ಪನವರು ಜನಗಳಲ್ಲಿ ತುಂಬಾ ವಿಶ್ವಾಸವುಳ್ಳವರಾಗಿ ಕಾಯಿಲೆಯವರ ಮನೆಗಳಿಗೆ ಹೋಗಿ ಪ್ರೀತಿಯಿಂದ ಔಷಧೋಪಚಾರ ನಡಿಸುತ್ತಿರುವದು ಸ್ತೋತ್ರಾರ್ಹವಾಗಿದೆ.

ಚಿಕ್ಕಬಳ್ಳಾಪುರ—ಈ ಕಡೆ ಮಳೆ ಇಲ್ಲದೆ ಪೈರುಗಳು ಒಣಗುವ ಹೊತ್ತು ಬಂತು ರಂಗಧಾಮನಕೆರೆ ನೀರು ವಿಶೇಷ ತರಿ ಜಮೀನುಗಳಿಗೆ ಹರಿಯಬೇಕಾಗಿರುವದರಿಂದ ತರಿ ಫಸಲು ಪೂರ್ತಿಯಾಗುವ ವರೆಗೂ ನೀರು ಸಾಲದೆ ಒಣಗಿಹೋಗುತ್ತೆ ನೀರು ವಿಶೇಷ ಹಿಡಿಯಲಾರದು. ಈ ಕೆರೆಗೆ ನೀರು ಬರುವ ಆಸರೆ ಕಮ್ಮಿ. ಮೇಲ್ಗಡೆ ಕಟ್ಟು ಕಾಲ್ವೆ ಶಿಥಿಲವಾಗಿರುವದೇ ಕಾರಣ ಈ ಕೆರೆ ಕೆಳಗಿನ ತರಿ ಜಮೀನುಗಳಿಗೆ ಕಂದಾಯ ವಜಾಮಾಡಿ ಖುಷ್ಕಿ ರೇಟು ಮಾಡಿದರೆ ಬಹಳ ಅನುಕೂಲ. ಇಲ್ಲವಾದರೆ ವೃಥಾ ಕಂದಾಯ ಕಟ್ಟಬೇಕಾಗಿದೆ ಈ ವಿಷಯದಲ್ಲಿ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರು ಈ ಕಡೆ ಸವಾರಿ ಚಿತ್ತೈಸಿದಾಗ ಪರಾಂಬರಿಸಿ ಈ ಬಡ ರೈತರ ಅಹವಾಲ್ ಚಿತ್ತಕ್ಕೆ ತಂದು ತರಿ ರೇಟು ತಪ್ಪಿಸಿ ಖುಷ್ಕಿ ರೇಟು ಹಾಕಿಸುವರೆಂದು ನಂಬಿದೇವೆ.—ಇಲ್ಲಿನ ಹೈ ಸ್ಕೂಲಿನಲ್ಲಿ ಹಿಸ್ಟರಿ ಟೀಚರಿಗೆ ವರ್ಗವಾಗಿ ಸುಮಾರು ನಾಲ್ಕು ತಿಂಗಳಾಯಿತು. ತಹಲ್ ವರವಿಗೂ ಬೇರೆಯವರು ಬರಲಿಲ್ಲ ಹಾಲಿ ಇರುವ ಟೀಚರಾದರೋ ಚೆನ್ನಾಗಿ ಪಾಠ ಹೇಳುವದಿಲ್ಲವೆಂದು ಹುಡುಗರು ಅಂದುಕೊಳ್ಳುತ್ತಾರೆ. ಅಲ್ಲದೆ ಲೈಬ್ರೇರಿ ಪುಸ್ತಕಗಳು ಸಹ ಸರಿಯಾಗಿ ಕೊಡುವದಿಲ್ಲವೆಂದು ಹೇಳುತ್ತಾರೆ. ಮೆ|| ಕೃಷ್ಣಸಾಮಯ್ಯರವರು ಇದ್ದ ಕಾಲದಲ್ಲಿ ಈ ಸ್ಕೂಲು ಬಹಳ ಅಭಿವೃದ್ಧಿ ಸ್ಥಿತಿಯಲ್ಲಿತ್ತು. ಈಗ ಹೀನಸ್ಥಿತಿಗೆ ಬರುವದರಲ್ಲಿದೆ ಘನತೊಂದಿದ ನಮ್ಮ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರು ಸ್ವಲ್ಪ ನಿಗಾ ಇಟ್ಟು ಈ ಸ್ಕೂಲಿನ ಸ್ಥಿತಿಯನ್ನು ಪರಾಂಬರಿಸಿ ವಿದ್ಯಾವಂತರಾದ ಮಾಸ್ಟರುಗಳನ್ನು ಇಲ್ಲಿಗೆ ದಯಪಾಲಿಸಬೇಕಾಗಿ ಬೇಡುತ್ತೇವೆ—ಕಾರೊನೇಷನ್ ಆದ ಕಾಲದಲ್ಲಿ ಈ ಟೌನ್ ಮ್ಯುನಿಸಿಪಲ್ ಮೆಂಬರುಗಳು, ಅಮಲ್ದಾರ್ರವರು ಪರ್ತಕರಿಂದ ಚಂದಾ ವಸೂಲ್ಮಾಡಿ ಆರು ಪೆಟ್ರೋಲಿಯಂ ದೀಪಗಳು ತರಿಸಿ, ಮೂರು ದೀಪಗಳು ಮಾತ್ರ ಹಾಕಿ ಬಾಕಿ ಇರುವ ಮೂರನ್ನು ಹಾಕದೆ ಇರುವದು ಬಹಳ ವ್ಯಸನಕರವಾಗಿದೆ. ಈಗಲೂ ನಮ್ಮ ಮ್ಯುನಿಸಿಪಲ್ ಮೆಂಬರುಗಳಾಗಲಿ, ಅಮಲ್ದಾರ್ರಾಗಲಿ ಬಾಕಿ ಇರುವ ಮೂರು ದೀಪಗಳನ್ನು ಹಾಕಿಸಿಕೊಟ್ಟಾರೆಂದು ನಂಬಿದೇವೆ.—ಈ ಊರಿನ ನಾಕೀಜಾ ವಿಷಯದಲ್ಲಿ ಟೌನ್ ಸ್ಯಾನಿಟರಿ ಇನ್ಸ್‌ಪೆಕ್ಟರವರು ಸ್ವಲ್ಪ ನಿಗಾ ಇಟ್ಟು ಕೆಲಸಮಾಡಿಸುವದು ಅವಶ್ಯವಾಗಿದೆ—ಈ ಊರಿನ ತಾಲ್ಲೂಕ್ ಕಛೇರಿಯಲ್ಲಿ ಇನ್ನೂ ಹಳಬರಾದ ನೌಕರರು ಇರುತ್ತಾರೆ ಇವರನ್ನು ಜಾಗ್ರತೆಯಾಗಿ ವರ್ಗಾಯಿಸಿದರೆ ಅನುಕೂಲ.—ಬೆಂಗಳೂರಿಂದ ಇಲ್ಲಿಗೆ ಮೋಟರ್ ಇರುತ್ತಾ ಇರುವದು ಜನಗಳಿಗೆ ಬಹಳ ಅನುಕೂಲ ಛಾರ್ಜ್ ಮಾತ್ರ ಜಾಸ್ತಿ. ಇದನ್ನು ಸ್ವಲ್ಪ ಕಡಮೆ ಮಾಡಿ ಎರಡು ಗಾಡಿ ಬಿಡುವ ಹಾಗೆ ಏರ್ಪಾಟು ಮಾಡಿದರೆ ಬಡ ಕುರುರೆಗಳ ಕಷ್ಟ ತಪ್ಪೀತು.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳವಂತೆ ಕೇಳದೆ ಸಿಟ್ಟಿಗೆ ಏಳವಸುವಂಥವರಾಗಿದ್ದು ಆಹಾರದಚಿ ಕಡಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೆ

2 33

SCOTT'S EMULSION
(ಸ್ಕಾಟ್ಸ್ ಇಮಲ್ಷನ್)

ಎಂಬ ಜೀವನಾ ಔಷಧವನ್ನು ಕೊಡಬೇಕು

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವದು

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖ ಚಿಹ್ನ ತೋರಿಸುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ವರ್ತಕರಲ್ಲಿ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್,

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಗೃಹಕೃತ್ಯದ ನೋಟೀಸು

ಹರಿಹರದ ವಾಸಿ ಹಡಗೀ ಭೀಮಪ್ಪನ ಮಗ ಬಸಪ್ಪನು ಈ ಮೂಲಕ ತಿಳಿಸುವದೇನಂದರೆ—ಹರಿಹರದ ಕಸಬಾ ದಕ್ಷಿಣಭಾಗದ ಬಾನೇಕುವಾರಿ ನಂಬರು (1) 278ನೇ ಪೈಕಿ (2) 301ನೇ ಬಿ ಮನೆಗಳು ನನ್ನ ಚಿಕ್ಕಪ್ಪನಾದ ಮೃತಹೊಂದಿದ ಪ್ಪನ ಹೆಸರಿನಲ್ಲಿರುತ್ತವೆ ಸದರಿ ಚಿಕ್ಕಪ್ಪ ಮತ್ತು ನನ್ನ ತಂದೆ ಅವಿಭಕ್ತ ಕುಟುಂಬಿಗಳು ಸದರಿ ಚಿಕ್ಕಪ್ಪಗೆ ಹುಟ್ಟಿಕೊಂಡ ದಾಸಪ್ಪನೆಂಬ ಸುಮಾರು 30 ವರುಷದ ಮಗನಿರುತ್ತಾನೆ ಈ ಮನೆಗಳನ್ನು ಪರಭಾರೆಮಾಡಲು ಪ್ರಯತ್ನಪಟ್ಟಿರುವದಾಗಿ ಕೇಳುತ್ತೇನೆ ನನ್ನ ರುಜುವಿಲ್ಲದೆ ಯಾವ ಆಧಾರ ಕ್ರಯ ಬೋಗ್ಯ ಯಾರಾದರೂ ತೆಗೆದುಕೊಂಡರೆ ನನ್ನ ನಷ್ಟಕ್ಕೆಲ್ಲಾ ಗುರಿಯಾಗುವರೆಂದು ಇದರಿಂದ ಖಂಡಿತ ಎಚ್ಚರಿಸಿರುತ್ತೇನೆ [168-1] ಹಡಗಿ ಬಸಪ್ಪನ ರುಜು

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ 3 ಆಣೆ ಅಂಚೆಖರ್ಚು ಉಚಿತ

[187-35] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಗೃಹಕೃತ್ಯದ ನೋಟೀಸು

ಚಿಕ್ಕಬಳ್ಳಾಪುರದ ತಾಲ್ಲೂಕು ಕಸಬಾ ಕಂದವಾರದಲ್ಲಿರುವ ಪೇಟೆ ಜರಬಂಡೇ ಹೋಬಳಿಶೆಟ್ಟಪ್ಪನವರ ಹೆಂಡತಿ ಗೌರಮ್ಮನು ತಿಳಿಯಪಡಿಸುವದೇನಂದರೆ—ಡಿಟೋ ಹೋಬಳಿಶೆಟ್ಟಪ್ಪನವರಿಗೆ ನಮ್ಮ ಯಜಮಾನರು ಏಕ ಪುತ್ರರಾಗಿದ್ದು ಮೃತರಾದಕಾರಣ ನನ್ನ ಮಾವ ಹೋಬಳಿಶೆಟ್ಟಪ್ಪನವರು ನನಗೆ ಜೀವನಾಂಶ ಕೊಡದೆ ಮೋಸಮಾಡಬೇಕೆಂಬ ಉದ್ದೇಶದಿಂದ ಇರತಕ್ಕ ಸ್ಥಿರ ಚರ ಸ್ವತ್ತುಗಳನ್ನು ಕ್ರಯಮಾಡಬೇಕೆಂದು ಪ್ರಯತ್ನಪಟ್ಟಿರುವದಾಗಿ ಕೇಳಬರುತ್ತೆ ಆ ಸ್ಥಿರಸ್ವತ್ತುಗಳ್ಯಾವವೆಂದರೆ— ಡಿಟೋ ಕಂದವಾರಗ್ರಾಮಕ್ಕೆ ಸೇರಿದ ಎರಡು ಹೊಲಗಳು, ಖಾಲಿ ಅವರು ವಾಸಮಾಡುವ ಒಂದು ಮನೆ, ಆ ಮನೆಯ ಪಕ್ಕದ ಖಾಲೀ ಜಮೀನು, ತಿನ್ನತಳ್ಳಿ ಗ್ರಾಮಕ್ಕೆ ಸೇರಿದ ಒಂದು ಹೊಲ, ಈ ಸ್ವತ್ತುಗಳಲ್ಲಿ ನನಗೆ ಹಕ್ಕು ಇರುವದರಿಂದ ನನ್ನ ಅನುಮತಿಯಿಲ್ಲದೆ ಯಾರೇ ಆಗಲಿ ಕ್ರಯ ಭೋಗ್ಯ ದಾನ ವಗೈರೆ ತೆಗೆದುಕೊಂಡಲ್ಲಿ ಅದು ಊರ್ಜಿತವಾಗಲಾರದು, ಮತ್ತು ನನ್ನ ನಷ್ಟಗಳಿಗೆಲ್ಲಾ ಗುರಿಯಾಗುವರೆಂದು ಈ ಮೂಲಕ ಎಚ್ಚರಿಸಿದೇನೆ

ದೊಡ್ಡಬಳ್ಳಾಪುರ [161-1] ಗೌರಮ್ಮನ ರುಜು

ಕುಂತಲಾನಂದ ತೈಲವು

147 47

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೆಡಲು ಎರಡನೆ ದರ್ಜೆಗಳನ್ನು ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸುವರು ಈ ತೈಲವು ಕೂದಲನ್ನು ದಟ್ಟವಾಗಿಯೂ ಕೃಷ್ಣವಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ಹೊಸ್ತ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ—ಬಿ. ಎಮ್. ನಾಥ ಮತ್ತು ಕಂಪೆನಿ,
ಪೊಟರಿ, ಮದರಾಸ್

ಶುದ್ಧವಾದ ಹತ್ತಿಯ ತುಪ್ಪವು

"ಮೂಲವ್ಯಾಧಿಯೂ ಮಲಬದ್ಧತೆಯೂ ತಗ್ಗಿತು!"

(7) "ಕೌಶಿಕರು ಮಾರುವದು ನಿಜವಾದ ಮತ್ತು ಶುದ್ಧವಾದ ಹತ್ತಿಯ ತುಪ್ಪ ಇದರಲ್ಲಿ ಮಾಡಿದ ಪದಾರ್ಥಗಳು ಸುಲಭವಾಗಿ ಜೀರ್ಣಿಸಿ ಮಲಪ್ರವರ್ತಕವಾಗಿ ಆಗುತ್ತದೆ ಮಲಬದ್ಧತೆಯಿಂದ ಪೀಡಿತರಾಗಿರುವವರಿಗೆ ಬಹಳ ಗುಣಕಾರಿ ಮೂಲವ್ಯಾಧಿಯುಳ್ಳವರು ಸದಾ ಉಪಯೋಗಿಸಬೇಕು ನೋವು ಕಡಮೆಯಾಗಿ ಕರುಳು ಶುದ್ಧವಾಗಿಯೂ ಸಮವಾಗಿಯೂ ಆಗುವದು ಇದನ್ನು ಜನರು ಉಪಯೋಗಿಸಬೇಕೆಂದು ಹೇಳುವದು ನನ್ನ ಅನುಭವದಿಂದಲೇ ಹೊರತು ಬೇರೆ ಇಲ್ಲ"—ನಾರಾಯಣಸ್ವಾಮಿರಾವ್ ಮಲ್ಲಂಕರ್, ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನ ರೈಟರು, ಬೆಂಗಳೂರು ಸಿಟಿ, 22 6 1913

ಎಚ್ಚರಿಕೆ—ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಆದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವದೂ ಬಲವಾಗುತ್ತಿವೆ

ನಮ್ಮ ಕಂಪನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
[110-11] 159, ಕಿಲಾರಿ ರೋಡ್, ಬೆಂಗಳೂರು ಸಿಟಿ

ಮರೆಯಬೇಡಿರಿ · ಮರೆಯಬೇಡಿರಿ

ದರ್ಬಾರ್ ಸಾಬೂನು

ಏಜಂಟುಗಳು ಬೇಕಾಗಿದೆ!
ಒಳ್ಳೇ ಕಮಿಷನ್ ದೊರೆಯುವದು.

ಅಪಾಯವಿಲ್ಲದ ರೋಮನಾಶಕ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು

ಬಾರಿ, ನೆತ್ತಿ ಮುಂತಾದ ಜಾಗಗಳ ಕ್ಷೌರ ಬೇಕಾದ ಉಪಯೋಗಿಸಿದರೆ ಗೊತ್ತಾಗುವದು ಮರೆಯಬೇಡಿರಿ

1 ಸಾಬೂನು ಇರುವ ಪೆಟ್ಟಿಗೆ ಒಂದಕ್ಕೆ ಕ್ರಯ 14 ಆಣೆ

2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1-10-0

ಅಂಚೆ ಹಾಸಲು 4 ಆಣೆ

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ [151-2]

ವಿಳಾಸ—ಪಿ. ಕೆ. ಎನ್. ನಾಥ್ ಕಂಪನಿ,
1, ಇರುಳಪ್ಪನ್ ಬೀದಿ, ಮದರಾಸು

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ.)

ಈ ಪುಸ್ತಕದಲ್ಲಿ—1 ಪೀನಲ್‌ಕೋಡು, 2 ಪೊಲೀಸ್ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ಪಶುಪಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್ 7 ಜೂಜು ಮತ್ತು ಕೋಳಿಪಂದ್ಯದ ರೆಗ್ಯುಲೇಷನ್, 8 ಬಾಲ ವಿವಾಹಗಳ ರೆಗ್ಯುಲೇಷನ್, 9 ಕೈಸ್ತ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್ 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪುಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿದೆ

ಪ್ರತಿ ಪೋಲೀಸ್ ಸರ್ಕಲ್‌ಗೂ ... ರಿಗೆ ... ಮೊದಲು ... ಯಾವ ಕಾಯಿದೆ ... ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ಹೊರೆಯುವದಕ್ಕಾಗಿ ವಿಷಯ ಸೂಚಿಕೆ ಏರ್ಪಡಿಸಲಾಗಿದೆ 22-5 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 2 0 0 ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ವೇಮಾರೆಡ್ಡಿ,
ಕಂಟ್ರಾಕ್ಟರ್ ಮತ್ತು ಶ್ರೀ ಪ್ಲೀಡರ್,
[103-12] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್

ಈಗತಾನೆ ಬಂದಿರುತ್ತೆ! · ಸಂತೋಷಕರವಾದ ವಾಚ್!!

ರೈಲ್ವೆ ರೆಗ್ಯುಲೇಟರ್ ವಾಚ್

ಸುಂದರವಾದ ವಾಚು ಸರಪಣಿ ಸಮೇತ ಕ್ರಯ ರೂ 3

ಇದು ಪ್ರಸಿದ್ಧವಾದ ಮತ್ತು ಮಜಬೂತಾದ ಲೀವರ್ ಕೆಲಸದಿಂದಲೂ ... ವಾಗಿ ಬಂದಿರುತ್ತೆ



... ತಲೆಯಲ್ಲಿ ... ಚಕ್ರದಮೇಲೆ ಕೆಂಪು ... ಸರಿಯಾದ ಕಾಲವನ್ನು ತೋರಿಸತಕ್ಕದ್ದು ... ಈ ವಾಚ್ ... ಧೂಳು ಸೇರದಂತೆ ಒಳಗೆ ಗ್ಲಾಸ್ ... ಕನ್ನಡಿ ಮುಚ್ಚಳದಿಂದ ಮುಚ್ಚಿರುತ್ತೆ. ಇದರ ಮುಂಭಾಗದಲ್ಲಿ ಇಂಜನ್ ... ಈ ಪ್ರಕಟನೆಯಲ್ಲಿ ಕಾಣಿಸಿರುವ ವಾಚ್ ಮಧ್ಯದಲ್ಲಿ ನೋಡಿ ಅದೇ ... ಈ ವಾಚ್‌ಗೆ ಗುರುತು ಇದೆ ... ರೈಲ್ವೆ ರೆಗ್ಯುಲೇಟರ್ ಲೀವರ್ ವಾಚ್‌ಗಳು ರೂ 1-12-0, ರೂ 1-14-0 ... ವಾಚ್ ಮುಂತಾದವುಗಳು ರೂ 1 12-0, ರೂ 1-13-0 ಯಲ್ಲಿಯೂ ನಮ್ಮಲ್ಲಿ ದೊರೆಯುತ್ತೆ ಆದರೆ ಅವು ಈ ವಾಚಿನಷ್ಟು ... ಅಲ್ಲ ಆದ್ದರಿಂದ ತೆಗೆಯುವದರಲ್ಲಾ ಇದನ್ನು ತೆಗೆದು ಸಂತೋಷಪಡಬೇಕಾಗಿ ಕೋರುತ್ತೇವೆ [77-17]

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

... ವೆಂಕಟರಮಣ ಅಂಡ್ ಕಂಪನಿ,
ನಂ 7, ... ಮುದ್ದುಮಾರ್ ಬೀದಿ, ಮದರಾಸು.

ಸ್ವಸ್ಥವಾಗುವದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ— ಬೆನ್ನಿನಲ್ಲಿ ಛಳುಕು ... ಇರುವದು ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವದು ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವದು ತಲೆನೋವು, ಗಾಬರಿ ಕಣ್ಣುಮಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು ಮುಂತಾದವು, ಇವೇ ಮೊದಲಾದವು ಅಲಕ್ಷ್ಯಮಾಡಿದರೆ ಮೂತ್ರಾಶ್ಮರಿ, ವಾಯು, ಮೈಬಾವು, ಉದಕಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವದು ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವವು [142 49]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವವು



ರೂ. ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವವು ಅಥವಾ ಫೋಸ್ಟ್, ... ಬಾಕ್ಸ್ ೩೦, ಬೊಂಬಾಯಿ—ಇವರಲ್ಲಿ ದೊರೆಯುವವು

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ವಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕ್ಕಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ.

Messrs OAKES & Company, Mount Road, Madras.

[4-41] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H Gulliford, Proprietor and Manager Wesleyan Mission Press, Mysore. 14/8/1913

೩೦

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—೧೯೧೨ ನೇ ಇಸವಿ ಅಗಸ್ಟ್ ತಾರೀಖು ೨೯ ನೇ ಗುರುವಾರ. ಸಂಚಿಕೆ ೧೨

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟ್ರರ್ಡ್)

ಅಗ್ಗವಾಗಿ ಸಿಕ್ಕುವ ತೈಲು ಎಣ್ಣೆಯನ್ನು ತಲೆಗೆ ಹಾಕುವದರಿಂದ ... ಕೂದಲು ಸತ್ತು ಹೋಗುತ್ತೆ ... ಪ್ರಖ್ಯಾತವಾಗಿರುವ ಕಾಮಿನಿಯಾ ತೈಲ ... ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ... ಸತ್ತ ಮತ್ತು ನಾಯುವ ಕೂದಲನ್ನು ... ಕೂದಲು ಇದರಿಂದ ... ನಯವಾಗಿ, ಚಕಚಕಿಸುವ ... ಕೂಡಿ ಆಗಾಗೆ ಹರಿದು ಬಿದ್ದು ಹೋಗದೆ ದಟ್ಟವಾಗಿ ಬೆಳೆಯುವದು ಕೂದಲಿಗೆ ಹೊಳಪು ಕೊಡುತ್ತೆ ... ಬುರುಡೆಯನ್ನು ಶುದ್ಧ ಮಾಡುತ್ತೆ ... ಹೊಟ್ಟನ್ನು ... ಉತ್ತಮೋತ್ತಮವಾದ ಸುಗಂಧವುಳ್ಳ ... ಕೂದಲಿಗೆ ... ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ... ಕೂದಲನ್ನು ... ಬಲಪಡಿಸಿ, ನರೆಕೂದಲನ್ನು ಕಪ್ಪು ಛಾಯೆಗೆ ತರುಗಿಸಿ ... ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ... ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ... ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರು ಉಪಯೋಗಿಸಲು ಅರ್ಹವಾಗಿದೆ ... ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-4 0 ... 3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

... ಬೇಕೆಂಬವರಿಗೆ ಒಂದು ಅಧಾರಕೆಯ ಚೀಟನ್ನು ಕಳುಹಿಸಿ ... ಈ ಎಣ್ಣೆಗೆ ... ಯೋಗ್ಯತಾ ಪತ್ರಿಕೆಯೂ ... ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಡದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರಗಳನ್ನು ಬರೆಯುತ್ತಿದ್ದಾರೆ ... ಕಾಮಿನಿಯಾ ತೈಲವನ್ನು ... ನನ್ನ ಮನೆಯ ... ನಮ್ಮ ಮನೆ ... ವಿಶೇಷವಾಗಿ ಆನಂದಪಟ್ಟು ... ಕೊಳ್ಳುತ್ತಾರೆ

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ... ಕಾಮಿನಿಯಾ ... ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ... "ಇದು ಅಗ್ಗ, ಇದು ಒಳ್ಳೇದು" ಎಂದು ... ಯಾವಾಗಲೂ ಯಥಾರ್ಥವಾದ ಕಾಮಿನಿಯಾ ... ನೋಡಿ ಕೊಂಡುಕೊಳ್ಳಿ

"ಕೆಪಿಟೋಲ್‌ಬಾಮ್" ... ಉತ್ತಮ ... ಕ್ಕಿಂತ ಗುಣಕಾರಿಯಾಗಿದೆ ... 1 ಕ್ಕೆ ಕ್ರಯ 0 8 0 ...

ಒಡಮುನ್ಸಿಮಲೇರಿಯ ಪಿಲ್ಸು ... ಜ್ವರ, ... ಮತ್ತು ... ಗುಳಿಗೆಗಳನ್ನು ... ಈ ಗುಳಿಗೆಗಳನ್ನು ತೆಕ್ಕೊಳ್ಳಲು ... ದಿನಕ್ಕೆ 1 ಸಲ ... ತಕ್ಕೊಳ್ಳತಕ್ಕದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1 0 0 3 ಬಾಟ್ಲಿಗಳಿಗೆ ರೂ 2 8 0 ... ಪ್ರತ್ಯೇಕ

ಏಜೆಂಟ್, ದಿ ... ಮಂಗಳೂರು

ಮೇಲೆಕಂಡ ಎಲ್ಲಾ ... ಸಿಕ್ಕುವ ಪತ್ತೆ — [8 32]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸೀದ್, ಬೊಂಬಾಯಿ. [101 4]

ಪ್ರತಾಪಕಂಠೀರವ ಚರಿತ್ರೆ.

(1) ... ಎಂಬ ನೀತಿ, (2) ... (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು, (4) ... (5) ... (6) ... (7) ... ಕ್ರಯ —1 ರೂಪಾಯಿ, ಟಪಾಲ್ ಹಾಸಲು ಬೇರೆ

[10—20] ನಮ್ಮ ವಿಳಾಸ —ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೪೧೦ ಪುಟಗಳು)

... ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ... ಧರ್ಮ, ಕರ್ಮ, ... ಲೌಕಿಕ ವ್ಯವಹಾರ ... ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ... ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ... ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ... ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ... ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (5) ಅಲ್ಲಲ್ಲಿ ಕಥಾ ... ಚಿತ್ರಗಳನ್ನು ಇಟ್ಟಿರುವದರಿಂದ ಓದುವವರಿಗೂ ... ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1 8 0 ಟಪ್ಪಾಲು ಹಾಸಲು 4 ಆಣೆ

(೪೬ ಸಂಧಿಗಳು) ## ಸಟೀಕಾ ತಾತ್ಪರ್ಯ ಜೈಮಿನಿ ಭಾರತವು (೯೩೦ ಪುಟಗಳು)

... ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ... ಸಂಪೂರ್ಣ 34 ಸಂಧಿಗಳ ಪ್ರತಿಪದ ಟೀಕಾ, ... ತಾತ್ಪರ್ಯ, ಸಂಧಿ ಸಮಾಸಗಳು, ಛಂದೋ ವರ್ಣನೆ, ಶ್ಲೇಷಾರ್ಥ ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಳವಾಗಿ ... ರಚಿಸಿದೆ.

ಇದರ ಕ್ರಯ ಪ್ರತಿ 1 ಕ್ಕೆ ರೂ 4 ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127 9]

ನಮ್ಮ ವಿಳಾಸ— ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ

THE MYSORE GOVERNMENT SECURITY

LIFE AND MARRIAGE ASSURANCE COMPANY, LIMITED.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES REGULATION No III OF 1895)

CAUTION Before you go in for a Provident Life or Marriage Policy please ask for a copy of our Company's prospectus which will explain to you the mode of working of the present day provident companies working in India and enables you to select a good institution where your hard earned money will be safe

SPECIAL AND ATTRACTIVE FEATURES OF THE COMPANY

1 ABSOLUTE SECURITY

The Company has got a capital of **one lakh** and its funds are invested in the **Mysore Government** and other securities The policy holders moneys are **guaranteed** and the **capital** and **reserve funds** of the Company are liable to the same

2 MARRIAGE SCHEME.

A policy holder can subscribe from Re 1 to **Rs 6** every month **Double the premiums paid** to the Company will be paid to the married **on the marriage day** as maximum bonus

3 LIFE SCHEME

A policy holder can subscribe from As 8 to **Rs 2** per month Both males and **females** of ages from 18 to **60** are insured **without medical examination.** The maximum bonus will be paid to **the policy-holders themselves** on surviving **15 years** or to their nominees in case of their earlier death

WANTED.

Energetic and honest **Chief Agents** for every Presidency in India and Taluk Agents in each and every taluk of **the Mysore Province** on commission to represent the Company

For further particulars and prospectuses please apply **with one anna stamp** and your previous experience in the line to —

Mr. M. L. NAGANNAH,

Managing Agent,

MYSORE.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೆ ೪ವಂತ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION 2 33

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವುದು

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖ ಚಿಹ್ನೆ ತೋರಿಸುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರುವವರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್,

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಗೃಹಕೃತ್ಯದ ನೋಟೀಸು

ಹರಿಹರದ ವಾಸಿ ಹಣಗೀ ಭೀಮಪ್ಪನ ಮಗ ಬಸಪ್ಪನು ಈ ಮೂಲಕ ತಿಳಿಸುವದೇನಂದರೆ—ಹರಿಹರದ ಕಸಬಾ ದಕ್ಷಿಣಭಾಗದ ಖಾನೇಶುಮಾರಿ ನಂಬರು (1) 278ನೇ ಪೈಕಿ (2) 301ನೇ ಬಿ ಮನೆಗಳು ನನ್ನ ಚಿಕ್ಕಪ್ಪನಾದ ಮೈಲಹಾಳ ಗಿಸಿದ್ದಪ್ಪನ ಹೆಸರಿನಲ್ಲಿರುತ್ತವೆ ಸದರಿ ಚಿಕ್ಕಪ್ಪ ಮತ್ತು ನನ್ನ ತಂದೆ ಅವಿಭಕ್ತ ಕುಟುಂಬಿಗಳು ಸದರಿ ಚಿಕ್ಕಪ್ಪಗೆ ಹುಟ್ಟಿಕುರುಡ ದಾಸಪ್ಪನೆಂಬ ಸುಮಾರು 30 ವರುಷದ ಮಗನಿರುತ್ತಾನೆ ಈ ಮನೆಗಳನ್ನು ಪರಭಾರೆಮಾಡಲು ಪ್ರಯತ್ನ ಪಟ್ಟಿರುವದಾಗಿ ಕೇಳುತ್ತೇನೆ ನನ್ನ ರುಜುವಿಲ್ಲದೆ ದಾನ ಆಧಾರ ಕ್ರಯ ಭೋಗ್ಯಕ್ಕೆ ಯಾರಾದರೂ ತೆಗೆದುಕೊಂಡರೆ ನನ್ನ ನಷ್ಟಕ್ಕೆಲ್ಲಾ ಗುರಿಯಾಗುವರೆಂದು ಇದರಿಂದ ಖಂಡಿತ ಎಚ್ಚರಿಸಿರುತ್ತೇನೆ [168 1] ಹಣಗಿ ಬಸಪ್ಪನ ರುಜು

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ ! ಕನ್ನಡಕ್ಕೆ ಸುಲಭವಾದ ದಾರಿ !

ಮೈಸೂರು ಲೋವರ್ ಸೆಕೆಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ 3 ಆಣೆ ಅರಕಿನ್ಯೊಂದು ಉಚಿತ

[187 35] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಗೃಹಕೃತ್ಯದ ನೋಟೀಸು

ಚಿಕ್ಕಬಳ್ಳಾಪುರದ ತಾಲ್ಲೂಕು ಕಸಬಾ ಕಂದವಾರದಲ್ಲಿರುವ ದೇವಾಂಗದ ಜರಬಂಡಳ್ಳಿ ಹೋಬಳಕಟ್ಟಪ್ಪನವರ ಸೊಸೆ ಗೌರಮ್ಮನು ತಿಳಿಯಪಡಿಸುವದೇನಂದರೆ—ಡಿಟೋ ಹೋಬಳಕಟ್ಟಪ್ಪನವರಿಗೆ ನಮ್ಮ ಯಜಮಾನರು ಏಕ ಪುತ್ರರಾಗಿದ್ದು ಮೃತರಾದಕಾರಣ ನನ್ನ ಮಾವ ಹೋಬಳಕಟ್ಟಪ್ಪನವರು ನನಗೆ ಜೀವನಾಂಶ ಕೊಡದೆ ಮೋಸಮಾಡಬೇಕೆಂಬ ಉದ್ದೇಶದಿಂದ ಇರತಕ್ಕ ಸ್ಥಿರ ಚರ ಸ್ವತ್ತುಗಳನ್ನು ಕ್ರಯಮಾಡಬೇಕೆಂದು ಪ್ರಯತ್ನಪಟ್ಟಿರುವದಾಗಿ ಕಂಡುಬರುತ್ತೆ ಆ ಸ್ಥಿರಸ್ವತ್ತುಗಳ್ಯಾವವೆಂದರೆ—ಡಿಟೋ ಕಂದವಾರಗ್ರಾಮಕ್ಕೆ ಸೇರಿದ ಎರಡು ಹೊಲಗಳು, ಹಾಲಿ ಅವರು ವಾಸಮಾಡುವ ಒಂದು ಮನೆ, ಆ ಮನೆಯ ಪಕ್ಕದ ಖಾಲೀ ಜಮೀನು, ತಿರ್ನಹಳ್ಳಿ ಗ್ರಾಮಕ್ಕೆ ಸೇರಿದ ಒಂದು ಹೊಲ, ಈ ಸ್ವತ್ತುಗಳಲ್ಲಿ ನನಗೆ ಹಕ್ಕು ಇರುವದರಿಂದ ನನ್ನ ಅನುಮತಿಯಿಲ್ಲದೆ ಯಾರೇ ಆಗಲಿ ಕ್ರಯ ಭೋಗ್ಯ ದಾನ ವಗೈರೆ ತೆಗೆದುಕೊಂಡಲ್ಲಿ ಅದು ಊರ್ಜಿತವಾಗಲಾರದು ಮತ್ತು ನನ್ನ ನಷ್ಟಗಳಿಗೆಲ್ಲಾ ಗುರಿಯಾಗುವರೆಂದು ಈ ಮೂಲಕ ಎಚ್ಚರಿಸಿದೇನೆ

ದೊಡ್ಡಬಳ್ಳಾಪುರ [163 1] ಗೌರಮ್ಮನ ರುಜು

ಕುಂತಲಾನಂದ ತೈಲವು

147 47

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನು ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ ಎಸ್ ನಾಥ ಮತ್ತು ಕಂಪನಿ,
ವೇಪೇರಿ, ಮದರಾಸ್

ಮರೆಯ ಬ್ಯಾಡಿರಿ ಮರೆಯ ಬ್ಯಾಡಿರಿ

ದರ್ಬಾರ್ ಸಾಬೂನು

ಎಜಂಟುಗಳು ಬೇಕಾಗಿದೆ ?

ಒಳ್ಳೇ ಕಮಿಷನ್ ದೊರೆಯುವದು.

ಅಪಾಯವಿಲ್ಲದ ರೋಮಸಂಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚಿ ದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು

ಉರಿ, ಸೆಕೆ ಮುಂತಾದ ಬಾಧೆಗಳಿಲ್ಲವು ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು ಮರೆಯಬ್ಯಾಡಿರಿ

3 ಸಬ್ಬುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ 14 ಆಣೆ

2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1 10-0

ಅಂಚೇ ಹಾಸಲು 4 ಆಣೆ

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ [154 2]

ವಿಳಾಸ —ವಿ ಪಿ ಎಸ್ ವಾಣಿ ಕಂಪನಿ,
4, ಇರುಳಪ್ಪನ್ ಬೀದಿ, ಮದರಾಸು

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ —1 ಪಿನಲ್‌ಕೋಡು, 2 ದೊಡ್ಡೀ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ದಕ್ಕವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್ 7 ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್ 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪುಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ

ಪ್ರತಿ ಪೆನಲ್ ಸೆಕ್ಷನ್‌ಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದ ಹಿಡಿಯಬಹುದೆ ? ಯಾ ಕೂಡದೆ ? ಮೊದಲು ಸಮನ್ ಹುಟ್ಟಬೇಕೇ ? ಯಾ ವಾರಂಟು ಹುಟ್ಟಬೇಕೇ ? ಜಾಮಿನ್ ತೆಗೆದುಕೊಳ್ಳಬಹುದೆ ? ಯಾ ಕೂಡದೆ ? ರಾಜಿಯಾಗಬಹುದೆ ? ಯಾ ಕೂಡದೆ ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 24-6 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 2 0 0 ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ಪೇಮಾರೆಡ್ಡಿ,
ಕಂಟ್ರಾಕ್ಟರ್ ಮತ್ತು ಕ್ರಿಮಿನಲ್ ಪ್ಲೀಡರ್,
[103–12] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್

ಶುದ್ಧವಾದ ಹತ್ತಿಯ ತುಪ್ಪವು

"ಮೂಲವ್ಯಾಧಿಯೂ ಮಲಬದ್ಧತೆಯೂ ತಗ್ಗಿತು!"

(7) "ಕೌಶಿಕರು ಮಾರುವುದು ನಿಜವಾದ ಮತ್ತು ಶುದ್ಧವಾದ ಹತ್ತಿಯ ತುಪ್ಪ ಇದರಲ್ಲಿ ಮಾಡಿದ ಪದಾರ್ಥಗಳು ಸುಲಭವಾಗಿ ಜೀರ್ಣಿಸಿ ಕಾಲಪ್ರವರ್ತಿ ಸರಾಗವಾಗಿ ಆಗುತ್ತದೆ ಮಲಬದ್ಧತೆಯಿಂದ ಪೀಡಿತರಾಗಿರುವವರಿಗೆ ಬಹಳ ಗುಣಕಾರಿ ಮೂಲವ್ಯಾಧಿಯಿರುವವರು ಪದೇಪದೇ ಉಪಯೋಗಿಸಬೇಕು ನೋವು ಸಹ್ಯವಾಗಿ ಕರುಳು ಶುದ್ಧವಾಗಿಯೂ ನಯವಾಗಿಯೂ ಆಗುವುದು ಇದನ್ನು ಜನರು ಉಪಯೋಗಿಸಬೇಕೆಂದು ಹೇಳುವದು ನನ್ನ ಅನುಭವದಿಂದಲೇ ಹೊರತು ಬೇರೆ ಇಲ್ಲ "—ನಾರಾಯಣಸ್ವಾಮಿರಾವ್ ಮಲ್ಲಂಕರ್, ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟ್ ರೈಟರು, ಬೆಂಗಳೂರು ಸಿಟಿ, 22 6 1913

ಎಚ್ಚರಿಕೆ :—ಹತ್ತಿಯ ತುಪ್ಪವು ರೂಢಿಗೆ ಬಂದದಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪನಿಯ ಏಜಂಟರಿಂದಾಗಲಿ ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
[110–11] 109, ಕಿಲಾರಿ ರೋಡ್, ಬೆಂಗಳೂರು ಸಿಟಿ

ಈಗತಾನೆ ಬಂದಿರುತ್ತೆ! ಸಂತೋಷಕರವಾದ ವಾಚ್ !!

ರೈಲ್ವೆ ರೆಗ್ಯುಲೇಟರ್ ವಾಚ್

ಸುಂದರವಾದ ವಾಚ ಸರಪಣಿ ಸಮೇತ ಕ್ರಯ ರೂ 3

ಇದು ಪ್ರಸಿದ್ಧವಾದ ಮತ್ತು ಮಜಬೂತಾದ ಲೀವರ್ ಕೆಲಸದಿಂದಲೂ ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ ಖಾತ್ರಿಯಾದ ಮಾಲು ತಲೆಯಲ್ಲಿ ಬೀಗವುಳ್ಳದ್ದು ಚಕ್ರದಮೇಲೆ ಕೆಂಪು ಕೆತ್ತಿರುತ್ತೆ ಕೆಂಪು ಕೆತ್ತಿರುವ ವಾಚ್ ಶ್ರೇಷ್ಠವಾದದ್ದು ಸರಿಯಾದ ಕಾಲವನ್ನು ತೋರಿಸತಕ್ಕದ್ದು ಮತ್ತು ದೀರ್ಘಕಾಲ ಬಾಳಿಕೆ ಬರುವಂಥಾದ್ದು ಸರ್ವಜನರಿಗೂ ತಿಳಿದ ವಿಷಯವೇ ಸರಿ ಈ ವಾಚ್ ವಿಷಯವಾಗಿ ಹೆಚ್ಚು ಮಾತುಗಳು ಬರೆಯುವದು ಯಾಕೆ ? ಮಣ್ಣು ಧೂಳು ಸೇರದಂತೆ ಒಳಗೆ ಗ್ಲಾಸ್ ಡೋಮ್ (ಅಂದರೆ ಕನ್ನಡಿ ಮುಚ್ಚಳ) ದಿಂದ ಮುಚ್ಚಿರುತ್ತೆ ಇದರ ಮುಂಭಾಗದಲ್ಲಿ ಇಂಜಿನ್ ಮಾರ್ಕ್ ಇರುತ್ತೆ ಈ ಪ್ರಕಟನೆಯಲ್ಲಿ ಕಾಣಿಸಿರುವ ವಾಚ್ ಮಧ್ಯದಲ್ಲಿ ನೋಡಿ ಅದೇ ನಾಜೂಕಾದ ಈ ವಾಚ್‌ಗೆ ಗುರುತು ಇದಕ್ಕಿಂತಲೂ ಕಮ್ಮಿ ಬೆಲೆಯುಳ್ಳ ರೈಲ್ವೆ ರೆಗ್ಯುಲೇಟರ್ ಲೀವರ್ ವಾಚ್‌ಗಳು ರೂ 1 12 0, ರೂ 1 14 0 ಯಲ್ಲಿಯೂ ರಾಸ್ಕೋಪ್ ವಾಚ್ ಮುಂತಾದವುಗಳು ರೂ 1 12 0, ರೂ 1 13 0 ಯಲ್ಲಿಯೂ ನಮ್ಮಲ್ಲಿ ದೊರೆಯುತ್ತೆ ಆದರೆ ಅವು ಈ ವಾಚಿನಷ್ಟು ನಾಜೂಕಾದದ್ದು ಅಲ್ಲ ಆದ್ದರಿಂದ ತಗೆಯುವವರೆಲ್ಲಾ ಇದನ್ನು ತೆಗೆದು ಸಂತೋಷಪಡಬೇಕಾಗಿ ಕೋರುತ್ತೇವೆ [77 17]



ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

ಬಿ ಆರ್ ವೆಂಕಟರಮಣ ಅಂಡ್ ಕಂಪನಿ,
ನಂ 7, ಕೋಪಾ ವೆಂಕಟಾಚಲೈಯರ್ ಬೀದಿ, ಮದರಾಸು.

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲ ವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು ಎದ್ದೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುವಾಗಿಯೋ ಇಳಿಯುವುದು ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ ಕಣ್ಣುಮೊಬ್ಬು ತಲೆ ತಿರುಗುವಿಕೆ ಮೈನೋವು ಕೀಲುನೋವು, ಮುಂತಾದ ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [142 49]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಓ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

Mellin's Food

ಮೆಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ವಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ Messrs OAKES & Company, Mount Road, Madras.

[4-41] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H GULLIFORD, Proprietor and Manager Wesleyan Mission Press, Mysore 14/8/1913

M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು

ಸಂಪುಟ ೨೭. ಮೈಸೂರು—ಸೆ ೧೯೧೩ ನೇ ಇಸವಿ ಆಗಸ್ಟ್ ತಾರೀಖು ೨೧ ನೇ ಗುರುವಾರ. ಸಂಚಿಕೆ ೧೨

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ. ಕೂದಲು ಸತ್ತು ಹೋಗುತ್ತೆ. ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ. ಇದು ತಲೆಬಿಗಿ ಪುಷ್ಟಿ ಕೊಡುತ್ತೆ, ಪ್ರಾಣ ಕೊಡುತ್ತೆ, ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿ ಬೆಳೆಸುತ್ತೆ. ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಳಚಳಿಸುವ ನವಿರಾದ ಗೊಂಚಲಿನಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದು ಹೋಗದೆ ದಟ್ಟವಾಗಿ ಬೆಳೆಯುವವು. ಕೂದಲಿಗೆ ಹೊಳಪು ಕೊಡುತ್ತೆ, ಹೊಟ್ಟು ಬುರುಡೆಯನ್ನು ಶುದ್ಧ ಮಾಡುತ್ತೆ, ಸುಂಡಿನ ಹೊಟ್ಟನ್ನು ಅಡಗಿಸುತ್ತೆ. ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ. ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು. ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿದ್ದೆ. ಇದರ ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ 2-10-0 ಅಂಚೆಯ ವೆಚ್ಚ 0-7-0

ಮಾದರಿಯು ಬೇಕೆಂದವರು ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ

ಮೈಸೂರು ಎಗ್ಜಿಭಿಷನ್ ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್ ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು.

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ. ಮನ್ನಾರ್‌ಗುಡಿ ಡಿಸ್ಟ್ರಿಕ್ಟ್ ಸಕ್ರಿಟರಿ ಮಿ ಟಿ ರಾಮಸ್ವಾಮಿ ರವರು ಬರೆಯುವದು— "ದಯವಿಟ್ಟು ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ. ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ. ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ."

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಸಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ. ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಗಿರಾಯಿಕರಿಗೆ ಕೊಡುತ್ತಾರೆಂಬುದನ್ನು ಮರೆಯಬೇಡಿ. "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು. ಅಂಥಾ ಮೋಸಕ್ಕೆ ನೀವು ಸಿಕ್ಕಬೇಡಿ. ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ.

"ಕೆಪಿಟೋಲ್ ಬಾಮ್"—ಮಳೆ ಮತ್ತು ಚಳಿಯ ಘಾಡಿ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಲ್ ಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ. ಕೈಕಾಲು ನೋಯುವದು, ಗಂಟುವಾತ, ಮಸ್ತಕಶೂಲೆ, ಬಿಸಿಲಿನ ... ಸೊಂಟನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ. ಬಾಟ್ಲಿ 1ಕ್ಕೆ ಕ್ರಯ 0-8-0 ಟ ಖ ಪ್ರತ್ಯೇಕ.

ಒಡಮನ್ಸ ಮಲೇರಿಯ ಪಿಲ್ಸ. ಶೀತಜ್ವರ, ಛಳಿಯಿಂದ ಬರುವ ಜ್ವರ, ಅಜೀರ್ಣಜ್ವರ, ಮತ್ತು ಒಂದೇ ಸಮನೆ ಬರುತ್ತಿರುವ ಜ್ವರ ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯಸ್" ಗುಳಿಗೆಗಳು ರಾಮಬಾಣವಾಗಿವೆ. ಜ್ವರದಲ್ಲಿ ಜ್ವರಬಿಟ್ಟರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ. ಇದು ದೇಹದಲ್ಲಿನ ಉಷ್ಣವು ಗುಣದ ಸಾಕ್ಷಿಯೂತವಾಗಿದೆ. ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ. ದಫಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದು.

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1-0-0 3 ಬಾಟ್ಲಿಗಳಿಗೆ ರೂ 2-8-0 ವಿ. ಪಿ ಖರ್ಚು ಪ್ರತ್ಯೇಕ

ಏಜೆಂಟ್, ಪಿ. ಉಲ್ಕ್ ಮಾರ್ಟ್ಸ, ಮಂಗಳೂರು

ಮೇಲೆಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ.— [9-12]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸೀಜಿದ್, ಬೊಂಬಾಯಿ. [161-1]

ಪ್ರತಾಪಕಂಠೀರವ ಚರಿತ್ರೆ.

(1) ... ಧರ್ಮಿಷ್ಠರಿಗೆ ದೈವಸಹಾಯ ಉಂಟಾಗುವುದರಿಂದ ಅವರ ಯತ್ನಗಳಿಗೆ ತೊಂದರೆ ಬಂದರೂ ತೊಲಗಿಹೋಗುತ್ತವೆ ಎಂಬ ನೀತಿ ; (2) ಸ್ತ್ರೀಧರ್ಮ ... ಬುದ್ಧಿಕೌಶಲ್ಯ, ಸ್ತ್ರೀಯುಕ್ತಿ—ಸಾಹಸ ಚಾತುರ್ಯ, (3) ಚಿತ್ರವಿಚಿತ್ರವಾಗಿ ಚಮತ್ಕಾರದಿಂದ ಕೂಡಿದ ಕಥಾಸಂದರ್ಭಗಳು ; (4) ವನ, ಸರಸ್ಸು, ಆರಾಮಾದಿ ವರ್ಣನೆಗಳು, (5) ... ಮೀರದೆ ಈಗಿನ ಅನುಭವಕ್ಕೆ ತಕ್ಕ ವಿಷಯಗಳು (6) ಎಲ್ಲರೂ ಓದಿ ತಿಳಿದುಕೊಳ್ಳುವಂಥಾ ಸುಲಭ ಶೈಲಿ ; (7) ಸರಸೋಕ್ತಿಯಿಂದ ಒಂದಕ್ಕೊಂದು ಜೋಡಿಸಲ್ಪಟ್ಟು ಮನಸ್ಸನ್ನು ಎಳೆಯುವಂಥಾ ಕಥಾಭಾಗಗಳು ಕೂಡಿವೆ. ಕ್ರಯ —1 ರೂಪಾಯಿ, ಟಪಾಲ್ ಹಾಸಲು ಬೇರೆ.

[16-26] ನಮ್ಮ ವಿಳಾಸ —ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೨ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ, ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಪುನಸ್ಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಬೇಧವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (5) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು. ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ. ಇದರ ಕ್ರಯ ಪ್ರತಿ 1 ಕ್ಕೆ 1-8-0, ಟಪ್ಪಾಲು ಹಾಸಲು 4 ಆಣೆ.

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಕಥಾರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ.

ಇದರ ಕ್ರಯ ಪ್ರತಿ 1 ಕ್ಕೆ ರೂ 4, ಟಪಾಲು ಹಾಸಲು 10 ಆಣೆ. ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು. [127-9]

ನಮ್ಮ ವಿಳಾಸ —ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಸ್ ಪಬ್ಲಿಷರ್ಸ, ಬೆಂಗಳೂರು ಸಿಟಿ.

THE MYSORE GOVERNMENT SECURITY

LIFE AND MARRIAGE ASSURANCE COMPANY, LIMITED.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No. III OF 1895)

CAUTION: Before you go in for a Provident Life or Marriage Policy, please ask for a copy of our Company's prospectus which will explain to you the mode of working of the present day provident companies working in India and enables you to select a good institution where your hard earned money will be safe

SPECIAL AND ATTRACTIVE FEATURES OF THE COMPANY

1. ABSOLUTE SECURITY.

The Company has got a capital of **one lakh** and its funds are invested in the **Mysore Government** and other ... The policy holders' moneys are **guaranteed**, and the **capital** and **reserve funds** of the Company are liable to the same

2 MARRIAGE SCHEME.

A policy holder can subscribe from Re 1 to Rs 6 every month. **Double the premiums paid to** the Company ... to the married **on the marriage day** as maximum bonus.

3. LIFE SCHEME.

A policy holder can subscribe from As 8 to **Rs. 2** per month. Both males and **females**, of ages from 18 to 60 are insured **without medical examination.** The maximum bonus will be paid to **the policy-holders themselves** on surviving **15 years** or to their nominees in case of their earlier death

WANTED.

Energetic and honest **Chief Agents** for every Presidency in India and Taluk Agents in each and every taluk of **the Mysore Province** on commission to represent the Company.

For further particulars and prospectuses, please apply **with one anna stamp** and your previous experience in the line to —

Mr. M. L. NAGANNAH,
Managing Agent,
MYSORE.

ಕುಂತಲಾನಂದ ತೈಲವು

147-48

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಚಿನ್ನದ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ

ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ಕೃಷ್ಣವಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನು ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ:—ಪಿ ಎಮ್ ನಾಥ ಮತ್ತು ಕಂಪೆನಿ, ವೇಪೇರಿ, ಮದರಾಸ್

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.

1 34



ಕೆಲ ಹೊಟ್ಟೆನೋವು, ಬೇಧಿಯಾಗುತ್ತಿರುವುದು, ಆಮಶಂಕೆ, ವಾಂತಿಭೇದಿ ಉಪದ್ರವ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ರೋಗಗಳು ಈ ರೋಗಗಳೆಲ್ಲವನ್ನೂ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವುದನ್ನು ಮತ್ತು ರೋಗಗಳ ಬಾಧೆಯನ್ನು ನಿವಾರಣೆ ಮಾಡಿರುವುದನ್ನು ಪ್ರಪಂಚದಲ್ಲಿ ಇನ್ಯಾವ ಔಷಧವೂ ಮಾಡಿರುವುದಿಲ್ಲ ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನು ನಿಲ್ಲಿಸಿಬಿಡುತ್ತದೆ ಎಂದಿಗಾದರೂ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ವಿಕರಿಯಾಗುತ್ತಿದೆ ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಇಂಥಾ ಸಮಯ ಕಳೆಯಬೇಡಿ ಹೊಸಕ್ಕೆ ಬಂದಿರುವ ಮಾಲು

ಮಕ್ಕಳಿಗೆ ಬಹಳ ಸುಂದರ ಉಡುಪು

ನಾಜೂಕಾದ, ಸೊಗಸಾದ, ಅಪ್ಪಟ ದಕ್ಷರವಾದ ಬಹು ನೂತನ ಮಾದರಿ ದೇಶದಿಂದ ತರಿಸಿದ್ದು ಎಲ್ಲಾ ಮಕ್ಕಳಿಗೆ ಬೇಕಾದ ಅಳತೆಯಲ್ಲಿ ಅಂಚುಗಳು ಬಹು ಸುಂದರವಾದ ಕಸೂತಿ ಕೆಲಸ ಮಾಡಿದ ಉಡುಪುಗಳು ಮಾರಾಟಕ್ಕೆ ಇವೆ ಈ ಮನೋಹರವಾದ ನಿಲುವಂಗಿ ಹಾಕಿಕೊಂಡ ನಿಮ್ಮ ಮಕ್ಕಳು ಬಹಳ ಸುಂದರವಾಗಿ ಕಾಣುವರು

ನಿಲುವಂಗಿಗಳನ್ನು ಹಸರು, ಗುಲಾಬಿ, ನೀಲಿ, ಹಳದಿ ಮೊದಲಾದ ಬಣ್ಣಗಳಲ್ಲಿ ದೊರಕುವವು ಎಲ್ಲರಿಗೆ ಒಂದುದರಲ್ಲಿ ಬೇಕೋ ಹೇಳು [144 2]

ಸೈಜು	12–15	16–18	19 21	22 25	26–30
ಕ್ರಯ	1–6–0	1–10–0	1 14–0	2 12–0	3 12 0

ನಮ್ಮ ವಿಳಾಸ —ದಿ ಬಾಂಬೇ ಪಾಪ್ಯುಲರ್ ಏಜನ್ಸಿ ಧಾರಾವಿ, ಬೊಂಬಾಯಿ

ಸರಳವಾದ ಮಾತುಗಳು !!

ಉತ್ತಮವಾದ ಶೈಲಿ !

ಸಚಿತ್ರ ವಿದ್ಯಾಮಂಜರಿ ಕಥೆಗಳು

ಪಾಠಕಮಹಾಶಯರುಗಳೇ ... ಮಾಡ್ಗಕ್ಷಾನುಯೋಗ್ಯವಾದ, ಲೋಕನೀತಿಯನ್ನು ತಿಳಿಯಲಿಚ್ಛೆಪಟ್ಟರೆ, ನೀತಿಯ ಉಪದೇಶವು, ... ಜ್ಞಾನಾರ್ಜನೆಯಶಕ್ತಿಯನ್ನು ಹೆಚ್ಚಿಸುವುದರ, ಉತ್ಸಾಹ ಶಕ್ತಿಯಲ್ಲಾಕೆ ಯಿದ್ದರ ದಯಬಿಟ್ಟು ಈ ವಿದ್ಯಾಮಂಜರಿ ಕಥೆಗಳನ್ನು ... ಚಿತ್ರಗಳಿಂದ ಕೂಡಿದ ಚಿತ್ರಕಥೆಗಳಿಂದ ಸೊಗಸಾದ ರೀತಿಯಿಂದ ಪುಸ್ತಕವಾಗಿದೆ ಬೆಲೆ ರೂ ೧ ... ಮಾತ್ರ ಅಂಚೆ ವೆಚ್ಚ [167—]

ವಿಳಾಸ:—ಎಂ. ಆರ್ ವೆಂಕಟಾಚಲಂ ಶೆಟ್ಟಿ, ಬುಕ್ಕು ಡಿಪ್ರೋ, ಚಿಕ್ಕಪೇಟೆ. ಬೆಂಗಳೂರು ಸಿಟಿ.

ಸಮಸ್ತ ವಿಧವಾದ ನೋವೂ ಶೀತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಶ್ವಾಸ ನೆಗಡಿ, ಕೀಲುನೋವು, ಶೈತ್ಯ, ಈ ಮೊದಲಾದ ಸಕಲ ತರದ ಬಾಧೆಗಳನ್ನು ವಾಸಿಮಾಡುತ್ತದೆ ಪ್ರತಿಯೊಂದು ಬಲ್ಲವರು ... ಎಲ್ಲರಿಗೆ ಒಂದರಂತೆ ಉಪಯೋಗುತ್ತಿವೆ ಡಾಕ್ಟರುಗಳು ... ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ವಿಕರಿಯಾಗುವುದು ಬೆಲೆ ಒಂದು ಸೀಸೆಗೆ ... ಆಣೆ 12 ಕುಪ್ಪಿಗೆ ರೂ 3–8 0 ಹಲ್ಲುಪುಡಿ ಡಬ್ಬಿಗೆ 3 ಆಣೆ, 12 ಕುಪ್ಪಿಗೆ ರೂ 1 2 0 ... ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ [12–21]

ವಿಳಾಸ —ಅಮೃತಾಂಜನ ಡಿಪ್ರೋ, ೧೯ ಫ್ರೈಯರ್ ರೋಡ್, ಫೋರ್ಟ್, ಬೊಂಬಾಯಿ

ಅಸಲ್ ಸವರ್ನ್ ಭಂಗಾರದ ನಗಗಳು

ಈ ನಗಗಳನ್ನು ಈಗತಾನೇ ಪಾಶ್ಚಾತ್ಯ ಪ್ರಪಂಚದ ಮಹಾ ದೇಶದ ಅಗಸಾಲೆಯಿಂದ ನೂತನ ಸಮೂನೆಯಲ್ಲಿ ಸೊಗಸಾಗಿ ಸ್ವಂತ ಮುತು ವರ್ಜಿಯಿಂದ ತಯಾರಾಗಿರುತ್ತವೆ ಸವರನ್ ಬಂಗಾರಕ್ಕೂ ಮತ್ತು ಪಕ್ಕಾ ರಂಗಕ್ಕೂ ನಾವು ಗ್ಯಾರಂಟಿ ಕೊಡುತ್ತೇವೆ ಹಣ ಕಿಲ್ಲದ ಪಕ್ಷದಲ್ಲಿ ಹಣವನ್ನು ವಾಪಸ್‌ಮಾಡಲ್ಪಡುತ್ತೆ ಬಹು ಸುಂದರವಾದ ಸಮೂನೆ ಸಹಾ ತರಿಸಿಕೊಂಡು ಉಪಯೋಗಿಸುವಂತೆ ಸಾಧ್ಯವಾದ ಮಟ್ಟಿಗೆ ಬಹು ಸುಲಭ ಕ್ರಯವನ್ನು ನಮೂದಿಸಿರುತ್ತೇವೆ ಪ್ರತಿ ಒಬ್ಬರು ತರಿಸಿಕೊಂಡು ಉಪಯೋಗಿಸಿ ಸಂತೋಷ ಪಡಬೇಕಾಗಿ ಪ್ರಾರ್ಥನೆ [77 16]

ಅರ್ಧಚಂದ್ರ 1 ಕ್ಕೆ ರೂಪಾಯಿ	1 0 0
ನಂ 1 ಮೂಗುಬೊಟ್ಟು 1 ಕ್ಕೆ ರೂಪಾಯಿ	7 0 0
,, 2 ಮೂಗುಬೊಟ್ಟು 1 ಕ್ಕೆ ,,	1 0 0
,, 3 ಮೂಗುಬೊಟ್ಟು 1 ಕ್ಕೆ ,,	5 0 0
ಬುಲಾಕು 1 ಕ್ಕೆ 12 ರಿಂ ಆರಂಭ ...	3 0 0

ವರೆಗೂ ಇರುತ್ತೆ ಇದು ಅಲ್ಲದೆ ಇಮಿಟೇಷನ್ ಕೆಂಪುಗಳಿಂದಲೂ ಒಳ್ಳೆ ಕೆಂಪುಗಳಿಂದಲೂ ತಯಾರಾಗಿ ಕಳುಹಿಸಲ್ಪಡುವದು ಮತ್ತು ಬೆಳ್ಳಿ ಭಂಗಾರದ ನಗಗಳು ಸಹ ತಯಾರಾಗಿ ಕಳುಹಿಸಲ್ಪಡುತ್ತೆ ಬೇಕಾದವರು ಬರೆದವರ ಜವಾಬು ಬರೆಯುತ್ತೇವೆ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

ವಿಳಾಸ:—ಪಿ ಆರ್ ವೆಂಕಟರಮಣ ಅಂಡ್ ಕಂಪನಿ, ನಂ 7, ಕೋಪ ವೆಂಕಟಾಚಲ್ಲಿಯರ್ ಬೀದಿ, ಮದರಾಸು

ಕನ್ನಡ ಇಂಡಿಯನ್ ಪಂಚಾಂಗವು

ಇಂಡಿಯಾ ಗವರ್ನರ್ ಜನರಲ್‌ರವರಿಂದ ಮುಂಜೂರಾದ ಈ ಆಕಾಶದ ಮೈಸೂರ್, ಬೊಂಬಾಯಿ, ಮದ್ರಾಸ್, ಅಲಹಾಬಾದ್ ಮುಂತಾದ ಅನೇಕ ಪಟ್ಟಣಗಳ ಅಭಿಪ್ರಾಯಗಳ ಪ್ರಕಾರ ಡಿಕ್ಕ ಮುದ್ರಣವಾಗಿ ತಯಾರಿಸಿದೆ ಈ ಪ್ರಕಟದ ಸಹಾಯದಿಂದ ಅನೇಕರು ಕೆಲ್ಸಗಳಿಂದ ವಿಮುಕ್ತರಾಗಿದ್ದಾರೆ ಇದು ಮುಖ್ಯವಾಗಿ ಪೋಲೀಸ್, ವ್ಯಾಪಾರಿಗಳು, ... ಉದ್ಯೋಗಸ್ಥರಿಗೂ, ಪಟೇಲ್ ಶ್ಯಾನುಭೋಗರುಗಳಲ್ಲಿಯೂ, ಇದರ ಜೊತೆ ಉಪಯೋಗಿಸಲ್ಪಡುತ್ತದೆ ಅರ್ಥವಾಗುವ ಕ್ರಯ ಗ್ಲೇಜ್ ರೂ 2 8-0 ರಫ್ ರೂ 3-0 0 ಟಪ್ಪಾಲ್ ಛಾರ್ಜು 0 1 0

ವಿಳಾಸ —ಬಿ ನರಸಿಂಗರಾವ್, ಎಡಿಟರ್, (ಡಾ) ಗೆಜೇಟ್ ಚಿಕ್ಕಪೇಟೆ, ಬೆಂಗಳೂರು ಸಿಟಿ [160 1]

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 31

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ದೇಶಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರಕ್ಕಾ ಬೀಳಾದದ್ದು ಅದೇ ಹಾಸನದ ಟೋಪಿಗಳಿಂದು ಎಲ್ಲರೂ ಕೇಂದುಕೊಳ್ಳುತ್ತ ತೋರಿಸಿಕೊಳ್ಳುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ರವೆಲ್ಲಾ ಇಟ್ಟಿಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇವಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿಚೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ; ೧ ರೂ ೬ ಆ, ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧—೮, ರೂ ೧—೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕಡುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿಕಟ್ಟು, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಶುದ್ಧವಾದ ಹತ್ತಿಯ ತುಪ್ಪವು

"ಮಿದುಳಿಗೆ ತಂಪು ಕಣ್ಣಿಗೆ ಅರಗಲ ಕೂಳೆಗಳನ್ನು ವಾಸಿಮಾಡಿತು:"

(೪) ಎಮ್ ಪಿ ಅಳಸಿಂಗ್ರಾಚಾರ್ಯರು ಮಂತ್ರಗಾರರು ಮತ್ತು ಭಾವಜ್ಞಾನಿ — ನಿಮ್ಮ ಹತ್ತಿಯ ತುಪ್ಪವನ್ನು ನನ್ನದೆ ಉಪಯೋಗಿಸುತ್ತಿದೇನೆ ಮಿದುಳಿಗೆ ಬಹಳ ತಂಪು ಕಣ್ಣಿನ ಉರಿಯನ್ನು ಗುಣವಾಡಿ, ಸುಖನಿದ್ರೆಯನ್ನು ಗಾಢನಿದ್ರೆಯನ್ನೂ ಕೊಡುತ್ತದೆ ಅರತಲೆ ನೋವನ್ನು ವಾಸಿಮಾಡುತ್ತದೆ ಈ ಕಾರಣಗಳಿಂದ ಇದನ್ನು ಸರ್ವರೂ ಉಪಯೋಗಿಸಬೇಕೆಂದು ಹೇಳುತ್ತೇನೆ"

31-6 1914

ಎಚ್ಚರಿಕೆ :—ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕದರೆಕಾಯಿ ಎಣ್ಣೆ, ಕುಸುಮ ಎಣ್ಣೆ, ಇವುಗಳನ್ನು ಕೊಬ್ಬನ್ನು ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ [110 12]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, 159, ಕಿಲಾರಿ ರೋಡ್, (ಕುಂಜೀಗರಹಳ್ಳಿ), ಬೆಂಗಳೂರು ಸಿಟಿ

ನಮೂನೆ ಮುಫತ್ತು

ಕೇಶಕುಸುಮಾಕರ ತೈಲವು.

ಸಾಟಿಯಿಲ್ಲದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿಮಾಡುವುದಲ್ಲದೆ, ಬುದ್ಧಿಯನ್ನು ವಿಕಾಸಪಡಿಸುವುದಲ್ಲದೆಯೂ, ಬೆಟ್ಟದಂತೆ ಯಲ್ಲಿ ಕೇಶವನ್ನು ಬೆಳೆಸುವದಲ್ಲದೆಯೂ, ಮೂಳೆಯನ್ನು ಬಲಪಡಿಸುವದಲ್ಲದೆಯೂ, ಉದ್ದವಾಗಿ ಬೆಳೆಯುವಂತೆ ಮಾಡುವುದಲ್ಲದೆಯೂ, ಮೆದುಳಿಗೆ ತಂಪನ್ನುಂಟುಮಾಡುವುದಲ್ಲದೆಯೂ, ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುಡ್ಡಿ ತೈಲ ಕ್ರಯ 10 ಆಣೆ ಮೂರು ಬುಡ್ಡಿಗಳ ತೈಲ ಕ್ರಯ ರೂ 1 12 ಆ ಆರು ಬುಡ್ಡಿಗಳ ತೈಲ ಕ್ರಯ ರೂ 3-4 ಆ ಡಜನ್ ಬುಡ್ಡಿಗಳ ಕ್ರಯ ರೂ 6

ವಿ ಪಿ ಅಂಚೆ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜಿ ಕೇಶವಜೀ, ಆಯುರ್ವೇದೀಯ ಔಷಧಾಲಯ, 177 ಚೈನಾ ಬಜಾರ್ ರೋಡ್, ಮದ್ರಾಸು [82 17]

ಡೋಂಗರೆ

ಇವರ ಬಾಲಾಮೃತ.

[150-5]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದದರಿಂದ ಹುಡುಗರು ಬಹಳ ಆನಂದದಿಂದ ತಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಸ್ವಲ್ಪವೂ ಇಲ್ಲದಂತಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆ ರೋಗ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ಹವಾ ಬದಲುವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಸುಸ್ತು?, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ. 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 10 ವ 12 ಕುಪ್ಪಿ ... ಪೋಸ್ಟೇಜು 1 ಆಣೆ. [136-51]

೨. ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಬೇದಿಗಳಿಗೆ ಈ ... ಸಂಜೀವನವಾಗಿದೆ. ಕೈಬಿಟ್ಟಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ... ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ ಮೂತ್ರವು ಕಟ್ಟಿದ್ದರೆ ಕೊಟ್ಟ ಕೂಡಲೇ ಹೊರಡಿಸುತ್ತೆ, ಗುಣವು ತೋರುತ್ತದೆ. ... ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿದ್ದರೆ ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧೌಷಧ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಇದೊಂದು ಹೊಸ ನಮೂನೆ ವಾಚ್! ಈಗತಾನೇ ಸೀಮೆಯಿಂದ ಬಂದಿದೆ!!

ನಿಮ್ಮ ಹಣವನ್ನು ಅಲ್ಪಕ್ರಯದ ವಾಚ್‌ಗಳಿಗೆ ಹಾಕಿ ಕಳೆದುಕೊಳ್ಳಬೇಡಿ.

ಬೆಲೆ ಸುಲಭ! ಗುಣ ವಿಶೇಷ! ಜಾಗ್ರತೆ ಆರ್ಡರು ಕೊಡಿ!!!

(1) ಘಂಟೆ, ನಿಮಿಷ, ವಾರ, ತಾರೀಖು, ತಿಂಗಳೂ ಸಹ ತೋರಿಸತಕ್ಕ ವಾಚ್ 1 ಕ್ಕೆ ರೂ 5-12-0. ಇಷ್ಟು ಸಲಕರಣೆಗಳಿರತಕ್ಕ ವಾಚ್ ಇಷ್ಟು ಕಡಮೆ ಬೆಲೆಗೆ ಈ ವರೆಗೂ ಯಾರೂ ಕೊಟ್ಟಿಲ್ಲ. (2) ಘಂಟೆ, ನಿಮಿಷ, ಸೆಕೆಂಡ್ ತೋರಿಸಿ, ಅಲಾರಂ, ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್ 1 ಕ್ಕೆ ರೂ 3-4-0. (3) ಗ್ಯಾರಂಟಿಯಾದ ನಿಕ್ಕಲ್ ವಾಚ್ ಸರಪಣಿ 1 ಕ್ಕೆ 12 ಆಣೆ. (4) ಜಂಟಲ್‌ಮೆನ್ ಲಿವರ್ ಫ್ರೀ ... ನಿಕ್ಕಲ್ ಕೇಸಿನ ಗ್ಯಾರಂಟಿಯಾದ ವಾಚ್ 1 ಕ್ಕೆ ರೂ 8-12-0. (5) ಅಚ್ಚ ಬೆಳ್ಳಿ ಕೊರಳಸರದ ಹಾಕುವ ಸರಪಣಿ 1 ಕ್ಕೆ ರೂ 1-1-0. (6) ... 6 ಲೆಟರ್‌ಗಳಿರುವ ರಬ್ಬರ್ ಮೊಹರುಗಳಿಗೆ ಕ್ರಯ ರೂ 1-0-0. ಇದನ್ನು ನಿಮ್ಮ ಇಷ್ಟ ಬಂದಕಡೆ ನೀವೇ ಮುದ್ರಿಸಿಕೊಳ್ಳಬಹುದು. ಮೇಲ್ಕಂಡ 6 ಲೆಟರ್‌ಗಳನ್ನು ತರಿಸಿಕೊಳ್ಳುವವರಿಗೆ ಸರ್ವದಾ ಶಾಯಿ ಇರುವ ಮೆತ್ತೆ (ಸೆಲ್ಫಿಂಕ್ ಪ್ಯಾಡ್), ರಬ್ಬರ್ ಸ್ಟಾಂಪ್‌ಗಳನ್ನಿಡುವ ಸುಂದರವಾದ ಪೆಟ್ಟಿ, ಇವೆರಡು ಬಹುಮಾನ ಕೊಡುವದಲ್ಲದೆ ಪ್ಯಾಕಿಂಗ್ ಪೋಸ್ಟೇಜು ಸಹ ಮಾಫಿ ಮಾಡಿದೆ. ಒಂದೇ ಸಾರಿ 6 ಪೆಟ್ಟಿ ತರಿಸಿಕೊಳ್ಳುವವರಿಗೆ 1 ಪೆಟ್ಟಿ ಇನಾಮು. ಅಂದರೆ ಬಹುಮಾನಸಹಿತ 7 ಪೆಟ್ಟಿಗೆ 6 ರೂಪಾಯಿ ಮಾತ್ರ, ಪೋಸ್ಟೇಜು ಮಾಫಿ.

ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

[166-2]

ಹಾಸನದ ಷಾಪ್ ಮೊಹಿಯುದ್ದೀನ್ ಸಾಹೇಬರ ಅಂಗಡಿಯಲ್ಲಿ

ಮೈಸೂರು ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರ್‌ಯವರ ಸರಕಾರದವರು ಹೊಸದಾಗಿ ಜಾರಿಯಲ್ಲಿ ತಂದಿರುವ ಅಳತೆಮಾಡುವ ಸೇರುಗಳು ಮತ್ತು ತೂಕಮಾಡುವ ಬಟ್ಟುಗಳು ರಮಾರಾಟವಾಗುತ್ತವೆ. ಬೇಗನೆ ಕೊಂಡುಕೊಳ್ಳಿ. [11-2]

ವಿಳಾಸ:—ಷಾಪ್ ಮೊಹಿಯುದ್ದೀನ್ ಸಾಹೇಬರ ಅಂಗಡಿ, ಹಾಸನ.

ಮೂರು ಸಿದ್ಧೌಷಧಗಳು.

ವಕ್ತ್ರಾನಂದಕರೀಮಾತ್ರೆ. ಮೂಲಿಕೆ ಪರಿಮಳದ್ರವ್ಯಗಳಿಂದ ತಯಾರಿಸಿದೆ. ಇಂದನ್ನು ತಾಂಬೂಲದೊಡನೆ ಅಥವಾ ಬರೀ ಬಾಯಿಗೆ ಸೇವಿಸಿದರೆ ದುರ್ಗಂಧ ಹೋಗಿ ಸುವಾಸನೆಯಾಗುತ್ತೆ. ರಕ್ತವನ್ನು ಶುದ್ಧಿಮಾಡುತ್ತೆ. ಕೆರಳು, ಗಂಟಲು, ಬಾಯಿ, ಇವುಗಳು ಹುಣ್ಣಾದರೆ ಅರ್ಧ ತೋಲಾ ಬಾದಾಮಿ ಎಣ್ಣೆಯಲ್ಲಿ ಒಂದು ಮಾತ್ರೆ ತೇಯ್ದು ಮಲಗುವ ಸಮಯದಲ್ಲಿ ತೆಗೆದುಕೊಂಡರೆ ಗುಣವಾಗುವದು. 200 ಮಾತ್ರೆ ಶೀಸಾ 1 ಕ್ಕೆ 4 ಆಣಾ. ಇಸಬು, ಹುಳುಕಡ್ಡಿ, ತುರಿ ಇವುಗಳಿಗೆ ಹಾಮ... ರಿಣೀ ಪೌಡರ್ ತೋಲಾ 1 ಕ್ಕೆ 2 ಆಣೆ. ಬಾಣಂತಿಯರು ಮಕ್ಕಳ ಶೀತ ನೆಗಡಿ ಇವುಗಳಿಗೆ ಉಪಯೋಗಿಸತಕ್ಕ ಕಸ್ತೂರಿಮಾತ್ರೆ 25 ಮಾತ್ರೆಗೆ 8 ಆಣೆ. ಬಾಣಂತಿಯರು ಉಪಯೋಗಿಸತಕ್ಕ ಖಂಡಾಪ್ರೇಕ(?) ಆರೋಗ್ಯ ಲೇಹ್ಯ 12 ತೋಲಾ ಡಬ್ಬಿಗೆ 6 ಆಣಾ. ಅಪೇಕ್ಷಿಸುವರು ತಮ್ಮ ವಿಳಾಸ ವಿಶದವಾಗಿ ಬರೆಯಬೇಕು. ಅಂಚೆ ಹಾಸಲು ಬೇರೆ. ತರಿಸಿಕೊಳ್ಳತಕ್ಕವರು ಮುಂತಕ್ಕದ್ದು 1 ಡಜನ್‌ಗೆ 1 ಶೀಸಾ ಡಿಸ್ಕೌಂಟು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್. ಮುಂಚೆ ಸ್ವಲ್ಪ ತರಿಸಿ ನೋಡಿ ಸಂತರವಾದರೂ ತರಿಸಿಕೊಳ್ಳಿ. [111-9]

ನಮ್ಮ ವಿಳಾಸ:—ಶೇಷಭಟ್ಟರು,
ನೇಟಿವ್ ಪಂಡಿತ್, ಪೂರ್ಣಯ್ಯನವರ ಬೀದಿ, ಶ್ರೀರಂಗಪಟ್ಟಣ.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇವರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ
ರೂ. 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ
ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 1 ಆಣೆ

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರುಮಾಡಲ್ಪಟ್ಟದ್ದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ಸಲ್ಲದೇ ನಡೆಯುತ್ತದೆ. ಸಾವಿರಗಟ್ಟಲೆ ಗಡಿಯಾರಗಳು ವಿಕ್ರಯವಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಚಿತ್ರಿಯಾದ ಗಡಿಯಾರ ಕೂಡಲೆ ಬರೆದು ತರಿಸಿಕೊಳ್ಳಿ.

ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ,
ಪೋಸ್ಟ್ ಬಾಕ್ಸ್, ನಂ 167, ಮದರಾಸು.

[1239]

ಮುಖ್ಯವಾಗಿ ಗಮನಿಸಿ ಓದಿರಿ

೧ ... ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕ್ಲೀಸ್ ಲಿವರ್ ... ಕಂಪೆನ್‌ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠ ... 6 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ... ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 1-0-0. ಇದನ್ನು ಸೆಪ್ಟಂಬರ್ ಆಖೈರಿನೊಳಗಾಗಿ ತರಿಸಿಕೊಳ್ಳುವವರಿಗೆ 10 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ:—ಧನಲಕ್ಷ್ಮಿ ಅಂಡ್ ಕಂಪೆನಿ,
ನಾಯುಕಾರ್ ಪೇಟೆ ಪೋಸ್ಟ್, ಮದರಾಸು.

[1211]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

1—8—1913 ರಿಂದ 8—8—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	1	1	1	1
ಮೈಸೂರು ,,	20	12	11	5
ಕೋಲಾರ್ ,,	0	2	0	1
ಕೋಲಾರ್ ಚಿನ್ನದ ಗಣಿಗಳು	0	1	0	0
ತುಮಕೂರು ಡಿಸ್ಟ್ರಿಕ್ಟು	1	2	7	8
ಹಾಸನ ,,	13	5	46	28
ಚಿತ್ರದುರ್ಗ ,,	0	0	10	6
ಕಡೂರ್ ,,	18	11	2	1
ಶಿವಮೊಗ್ಗ ,,	11	6	0	0
ಜುಮ್ಲಾ	67	40	77	40

ಶಾಲಿವಾಹನ ಶಕ ವರುಷಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೇ ವರ್ಷಋತು ಶ್ರಾವಣ ಬಹುಳ ಪಂಚಮಿ ಶುಕ್ರವಾರದಿಂದ ಶ್ರಾವಣ ಬಹುಳ ಏಕಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಆಗಸ್ಟ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸಿಂಹ ಮಾಸ ದಿನ
22	ಶುಕ್ರ *	ಪಂಚಮಿ	9-20	ಅಶ್ವಿನಿ	48-6	7
23	ಶನಿ ‡	ಷಷ್ಠಿ	12-31	ಭರಣಿ	51-37	8
24	ಭಾನು ,	ಸಪ್ತಮಿ	14-11	ಕೃತ್ತಿಕೆ	55-10	9
25	ಸೋಮ §	ಅಷ್ಟಮಿ	15-32	ರೋಹಿಣಿ	56-51	10
26	ಮಂಗಳ †	ನವಮಿ	15-4	ಮೃಗಶಿರ	57-21	11
27	ಬುಧ	ದಶಮಿ	13-47	ಆರಿದ್ರಾ	56-41	12
28	ಗುರು	ಏಕಾದಶಿ	10-10	ಪುನರ್ವಸು	54-48	13

* ವ್ರತ. ‡ ಶ್ರಾವಣಶನಿವಾರ, ಶ್ರೀ ಪ್ರಸನ್ನ ಕೃಷ್ಣಸ್ವಾಮಿ ರಥ, ಮಳೆ ನಕ್ಷತ್ರ—ಮೃಗಶಿರ 3 ನೇ ಪಾದ. , ಜಪಪಲವ್ರತಂ, ಮನ್ನಾರ್ ಸಂಪ್ರದಾಯಕ್ಕೆ ಶ್ರೀ ಕೃಷ್ಣಜಯಂತಿ. § ಕನ್ಯಾಯನಂ, ತೊಳಪ್ಪರ್ ಸಂಪ್ರದಾಯಕ್ಕೆ ಶ್ರೀ ಕೃಷ್ಣಜಯಂತಿ. † ಮಂಗಳಗೌರೀ ವ್ರತ, ಮಳೆ ನಕ್ಷತ್ರ—ಮೃಗಶಿರ 4 ನೇ ಪಾದ. ಸರ್ವತ್ರ ಏಕಾದಶಿ.

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಬಿಳಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೬-೪-೦	೧೭-೮-೦
ಕೆಂಬೂತಿ ಅಕ್ಕಿ ಅವಲ್	೧೬-೮-೦	೧೭-೮-೦
,, ,, ದುಯಂ	೧೬-೦-೦	೧೭-೦-೦
ಜಾಪತ್ರಣಿ ಅಕ್ಕಿ	೧೬-೮-೦	೧೭-೪-೦
ಸಣ್ಣಕ್ಕಿ ಅವಲ್	೨೮-೦-೦	೧೮-೮-೦
,, ದುಯಂ	೧೭-೦-೦	೧೬-೮-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೨೫-೪-೦	೧೩-೮-೦
,, ದುಯಂ ,,	೧೪-೮-೦	೧೩-೮-೦
ಹ್ವೈಟ್ ರಾಗಿ ಪಲ್ಲಾ ೧ಕ್ಕೆ	೬-೧೪-೦	೫-೦-೦
ಕಾರ್‍ರಾಗಿ ,,	೬-೮-೦	೪-೧೨-೦
ಜೋಳ ,,	೬-೮-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ	೧೧-೦-೦	೧೨-೧೨-೦
ಬಳೀ ಅವರೆ ,,	೧೨-೪-೦	೧೧-೦-೦
ಹೆಸರು ,,	೧೩-೦-೦	೧೪-೦-೦
ಉದ್ದು ,,	೧೪-೮-೦	೧೬-೦-೦
ಕಡಲೆ ,,	೧೧-೮-೦	೧೨-೦-೦
ಎಳ್ಳು ಸೇರು ೧೨೭ಕ್ಕೆ	೨೩-೦-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೭-೦-೦	೭-೦-೦
ಹರಳು ೧೨೭ ಸೇರಿಗೆ	೧೩-೦-೦	೧೪-೦-೦
ಸೀಗೇಕಾಯಿ ಮೂಟೆ ೧ಕ್ಕೆ	೨-೪-೦	೩-೮-೦
ಮೆಣಸಿನಕಾಯಿ ,,	೪-೦-೦	೩-೪-೦
,, ದುಯಂ	೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫-೦-೦	ಮೂಟೆ ೫-೮-೦
ಒಳ್ಳೆಣ್ಣೆ ಮಣ ೧ಕ್ಕೆ	೬-೧೪-೦	೬-೬-೦
ಹರಳೆಣ್ಣೆ ,, ,,	೫-೪-೦	೬-೦-೦
ಕಡಲೇಕಾಯಿ ಎಣ್ಣೆ	೬-೪-೦	೬-೦-೦
ಕೊಬ್ಬರಿ ಪಲ್ಲಾ ೧ಕ್ಕೆ	೫-೦-೦	೫-೪-೦
ಉಪ್ಪು ,, ,,	೭-೦-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧-೧೨-೦	೧-೪-೦
ತುಪ್ಪ ಮಣ ೧ಕ್ಕೆ	೨೧-೦-೦	೧೯-೦-೦
ಸೀಮೆಎಣ್ಣೆ ಪೆಟ್ಟಿ ೧ಕ್ಕೆ	೫-೧೧-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೬-೪-೦	೬-೦-೦
ಆಲೂಗೆಡ್ಡೆ ಮಣ ೧ಕ್ಕೆ	೧-೬-೦	೧-೦-೦
ಆಂಬೈಟಿ? ಮಣ ೧ಕ್ಕೆ	೧-೧೨-೦	೧-೮-೦
ಚಿನ್ನ (ಪವನ್) ಕೆಂಪು	೧೫-೮-೦	೧೫-೮-೦
,, ,, ಪಸಿಮೆ	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦-೦	೮೧-೩-೦

ಗೃಹಕೃತ್ಯದ ನೋಟೀಸು

ಹರಿಹರದ ವಾಸಿ ಹಣಗೀ ಭೀಮಪ್ಪನ ಮಗ ಬಸಪ್ಪನು ಈ ಮೂಲಕ ತಿಳಿಸುವದೇನಂದರೆ—ಹರಿಹರದ ಕಸಬಾ ದಕ್ಷಿಣಬಾಗದ ಖಾನೇಷುಮಾರಿ ನಂಬರು (1) 278ನೇ ಪೈಕಿ (2) 301ನೇ ಟಿ ಮನೆಗಳು ನನ್ನ ಚಿಕ್ಕಪ್ಪನಾದ ಮೃತಹಣಗಿ ಸಿದ್ದಪ್ಪನ ಹೆಸರಿನಲ್ಲಿರುತ್ತವೆ ಸದರಿ ಚಿಕ್ಕಪ್ಪ ಮತ್ತು ನನ್ನ ತಂದೆ ಅವಿಭಕ್ತ ಕುಟುಂಬಿಗಳು ಸದರಿ ಚಿಕ್ಕಪ್ಪಗೆ ಹುಟ್ಟುಕುರುಡ ದಾಸಪ್ಪನೆಂಬ ಸುಮಾರು 30 ವರುಷದ ಮಗನಿರುತ್ತಾನೆ ಈ ಮನೆಗಳನ್ನು ಪರಭಾರೆಮಾಡಲು ಪ್ರಯತ್ನಪಟ್ಟಿರುವದಾಗಿ ಕೇಳುತ್ತೇನೆ ನನ್ನ ರುಜುವಿಲ್ಲದೆ ದಾನ ಆಧಾರ ಕ್ರಯ ಭೋಗ್ಯಕ್ಕೆ ಯಾರಾದರೂ ತೆಗೆದುಕೊಂಡರೆ ನನ್ನ ನಷ್ಟಕ್ಕೆಲ್ಲಾ ಗುರಿಯಾಗುವರೆಂದು ಇದರಿಂದ ಖಂಡಿತ ಎಚ್ಚರಿಸಿರುತ್ತೇನೆ [168-2] ಹಣಗಿ ಬಸಪ್ಪನ ರುಜು

ನೋಟೀಸ್.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್

ಆಫೀಸಿನಿಂದಾ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಘನವನ್ನು ಹೊಂದಿದ ಮೈಸೂರು ಮಹಾರಾಜರವರ ಸವಾರಿ 1913 ನೇ ಇಸವಿ ನವಂಬರ್ ಮಾಹೆಯಲ್ಲಿ ಈ ಸಿಟೀಗೆ ದಯಮಾಡುವ ಸಂದರ್ಭವಿರುವದರಿಂದ ಆ ಕಾಲದಲ್ಲಿ ಡೆಕರೇಷನ್ ಅಲಂಕಾರಕ್ಕೂ ಮತ್ತು ಚಪ್ಪರದ ಕೆಲಸಕ್ಕೂ ಸಹ ಈ ಕೆಳಗೆ ನಮೂದು ಮಾಡಿರುವ ನಮೂನೆ ಬಾಬತು ಅಡಿಕೆ ಮರಗಳು ಬೇಕಾಗಿರುವದರಿಂದ ಅವುಗಳನ್ನು ಸರಬರಾಯಿ ಮಾಡಲು ಇಷ್ಟಪಡುವವರು ದರ ಮರ 1 ಕ್ಕೆ ಯಾವ ರೀತಿಯಾಗಿ ಬರಬೇಕೆಂಬ ಕೊಟೇಷನ್ ಅನ್ನು ಬರುವ ಸೆಪ್ಟಂಬರ್ 1 ನೇ ತಾರೀಖು ಮಧ್ಯಾಹ್ನ 2 ಘಂಟೆಯೊಳಗಾಗಿ ಟೆಂಡರ್ ಕೊಡಬಹುದು

ಡಿಟೋ ಟೆಂಡರನ್ನು ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟ್ ಸಾಹೇಬರವರ ಹೆಸರಿಗೆ ಅಡ್ರೆಸ್ ಮಾಡಿ ಸೀಲು ಮಾಡಿ ಕೊಡತಕ್ಕದ್ದು. ಸುಮಾರು ಒಂದು ಸಾವಿರ (1,000) ಅಡಿಕೆ ಮರಗಳು ಬೇಕಾಗಬಹುದು ಡಿಟೋ ಅಡಿಕೆ ಮರಗಳು ಮಳುಕು ಇಲ್ಲದ ಚನ್ನಾಗಿರಬೇಕು ಅವುಗಳ ಉದ್ದ ಕೊಂಡೆ ಜಾತಾ 50 ಅಡಿ ಮತ್ತು 40 ಅಡಿಗೆ ಕಡಮೆ ಇರಕೂಡದು ಮತ್ತು ಮರದ ಮಧ್ಯದಲ್ಲಿ ಅಡ್ಡಗಲ ಅರ್ಧ ಅಡಿ ಇರಬೇಕು

ಮೇಲ್ಕಂಡ ಮರಗಳಿಗಿಂತ ಜಾಸ್ತಿ ಮರಗಳು ಬೇಕಾದರೂ ಸರಬರಾಯಿ ಮಾಡಬೇಕಾಗುತ್ತೆ ಇನ್ನು ಏನಾದರೂ ಹೆಚ್ಚು ತಿಳುವಳಿಕೆ ತಿಳಿದುಕೊಳ್ಳಬೇಕಾದಲ್ಲಿ ಕ್ಲೀನ್ ಮುನಿಸಿಪಲ್ಲಿ ತಿಳಿದುಕೊಳ್ಳಬಹುದು [170-1]

ತಾ 11-8-1913, ಟಿ ಹನುಮಂತರಾವ್,

ಮೈಸೂರು ವೈಸ್ ಪ್ರೆಸಿಡೆಂಟ್

ವೃತ್ತಾಂತ ಪತ್ರಿಕೆ

ಸನ್ ೧೯೧೩ ನೇ ಇಸವಿ ಆಗಸ್ಟ್, ತಾ ೨೧ ನೇ ಗುರುವಾರ

ವ್ಯವಸಾಯವನ್ನು ಅಭಿವೃದ್ಧಿಪಡಿಸುವದು.

ಸಾಗುವಳಿ ಜಮೀನಿಗೆ ನೀರು ಹಾಯಿಸುವುದಕ್ಕೆ ಹರಿಹರದಲ್ಲಿ ಒಂದು ಯಂತ್ರ ಸ್ಥಾಪನೆಯ ಆರಂಭೋತ್ಸವ ನಡೆದ ವೃತ್ತಾಂತಕ್ಕೆ ಈ ವಾರ ನಮ್ಮ ಪತ್ರಿಕೆಯಲ್ಲಿ ವಿಶೇಷವಾದ ಭಾಗವನ್ನು ವಿನಿಯೋಗಿಸಿರುತ್ತೇವೆ ಮ|| ಭೀಮಪ್ಪನವರು ಪ್ರಾರಂಭ ಮಾಡಿರುವ ಕಾರ್ಯವು ಅನೇಕಾನೇಕರಿಗೆ ಒಳ್ಳೆಯ ಮಾರ್ಗದರ್ಶಕವಾಗಿರುತ್ತದೆ ಯಾಕಂದರೆ ಒಂದೊಂದು ತೆನೆಯು ಬೆಳೆ ಬೆಳೆಯುವ ಸ್ಥಾನದಲ್ಲಿ ಎರಡೆರಡು ತೆನೆಗಳು ಬೆಳೆಯುವಂತೆ ಮಾಡತಕ್ಕವರು ಯಥಾರ್ಥವಾದ ದೇಶೋದ್ಧಾರಕರೆನಿಸುತ್ತಾರೆನ್ನುವದಕ್ಕೆ ಸಂಶಯವಿಲ್ಲ ಜಮೀನಿಗೆ ನೀರು ಹಾಯಿಸುವುದಕ್ಕೆ ಇಂಥಾ ಕಾರ್ಯವನ್ನು ಕೈಗೊಂಡು ಪ್ರಾರಂಭಿಸಿರುವ ಮ|| ಭೀಮಪ್ಪನವರ ಸಾಹಸಕಾರ್ಯವು ಬಹು ವಿಶೇಷವಾಗಿ ಫಲಕಾರಿಯಾದೀತೆಂದು ಹಾರೈಸುತ್ತೇವೆ

ದಿವಾನ್‌ರವರಿಗೆ ಈ ಕಾರ್ಯವು ವಿಶೇಷವಾದದ್ದೆಂದು ತೋರಿ ಅವರೇ ದಯಮಾಡಿ ಇದರ ಪ್ರಾರಂಭೋತ್ಸವವನ್ನು ನೆರವೇರಿಸಿ ಬಂದದ್ದು ನಮಗೆ ಸಂತೋಷವನ್ನುಂಟುಮಾಡಿದೆ. ಅವರ ಭಾಷಣವು ಇತರ ಸಂದರ್ಭಗಳಲ್ಲಿ ಅವರು ಮಾಡಿರುವ ಭಾಷಣಗಳಂತೆಯೇ ಪ್ರಜೆಗಳಿಗೆ ಉಪಯುಕ್ತವೂ ಪ್ರಯೋಜನಕಾರಿಯೂ ಆದ ಒಳ್ಳೇ ಹಿತೋಕ್ತಿಗಳಿಂದ ಕೂಡಿದ್ದಾಗಿರುವುದು ಅವರು ಮ|| ಭೀಮಪ್ಪನವರಿಗೆ ಈ ಭಾಗದಲ್ಲಿ ಅವಶ್ಯವಾದ ತಿಳುವಳಿಕೆಯನ್ನು ಹೇಳಿಕೊಟ್ಟು ಸಹಾಯ ಮಾಡುವುದಕ್ಕೋಸ್ಕರ ಸರ್ಕಾರದ ಅಧಿಕಾರಿಗಳನ್ನು ಕಳುಹಿಸಿಕೊಟ್ಟದ್ದನ್ನು ನೋಡಿ ಸಂತೋಷಪಟ್ಟು ಇನ್ನು ಮುಂದಕ್ಕೂ ಹೀಗೆಯೇ ಗವರ್ನಮೆಂಟಿನವರಿಗೂ ಪ್ರಜೆಗಳಿಗೂ ಅನ್ಯೋನ್ಯ ಪ್ರೀತಿ ವಿಶ್ವಾಸಗಳು ಬೆಳೆಯುತ್ತಾ ಬರಲೆಂದು ಹಾರೈಸುತ್ತೇವೆ ಪರಸ್ಪರ ಸಹಾಯ ಸಂಬಂಧ ವಿಚಾರವು ಈಗೀಗ ಬಹುಮಟ್ಟಿಗೆ ಚರ್ಚೆಯಾಗುತ್ತಲೂ, ಕಾರ್ಯತಃ ರೂಢಿಸಲ್ಪಡುತ್ತಲೂ ಬಂದಿದೆ ಪ್ರಜೆಗಳೂ ಪ್ರಭುಪಾಲಕರೂ ಪರಸ್ಪರ ಹಿತಚಿಂತಕರಾಗಿಯೂ ಸಹಾಯಕರಾಗಿಯೂ ಇರುವುದಾದರೆ ಅದಕ್ಕಿಂತ ಮೇಲಾದ ಅನ್ಯೋನ್ಯವು ಮತ್ತೊಂದಿರಲಾರದು ಯಾಕಂದರೆ ಅವರಿಬ್ಬರ ಮಧ್ಯದಲ್ಲೂ ವಿರೋಧಗಳಾಗಲಿ ಭಿನ್ನಾಭಿಪ್ರಾಯಗಳಾಗಲಿ ಉಂಟಾದ ಪಕ್ಷದಲ್ಲಿ ದೇಶದೊಳಗೆ ಯಥಾರ್ಥವಾದ ಶ್ರೇಯಸ್ಸೂ ಅಭಿವೃದ್ಧಿಯೂ ಎಂದಿಗೂ ನೆಲೆಗೊಳ್ಳುವದಿಲ್ಲ ದಿವಾನ್‌ರವರು ಪ್ರಜೆಗಳ ವಿಷಯದಲ್ಲಿ ಪ್ರೀತಿಪೂರ್ವಕವಾದ ಚಿತ್ತವೃತ್ತಿಯನ್ನು ಪ್ರಕಾಶಪಡಿಸಿರುತ್ತಾರೆ ಹಾಗೆಯೇ ಪಟೇಲ್ ಶ್ಯಾನುಭೋಗರುಗಳಿಂದ ಹಿಡಿದು ಮೇಲ್ಪಟ್ಟ ಅಧಿಕಾರಿಗಳ ವರೆಗೂ ಪ್ರಜೆಗಳನ್ನು ಕಷ್ಟ ನಷ್ಟ ಹಿಂಸೆಗಳಿಗೆ ಗುರಿಮಾಡದೆ ಪ್ರೀತಿ ಪೂರ್ವಕವಾಗಿ ಅವರಿಗೆ ಸಹಾಯ ಮಾಡುತ್ತಾ ಬರುವುದರಲ್ಲಿ ಎಲ್ಲರೂ ದಿವಾನ್‌ರವರ ಮೇಲ್ಪಂಕ್ತಿಯನ್ನು ಅನುಸರಿಸುವರೆಂದು ನಂಬಿ ನಿರೀಕ್ಷಿಸುತ್ತೇವೆ

ದಿವಾನ್‌ರವರು ವ್ಯವಸಾಯವೇ ಮೊದಲಾದ ಉದ್ಯೋಗಗಳನ್ನು ಪ್ರಜೆಗಳಲ್ಲಿ ಚನ್ನಾಗಿ ಹರಡಬೇಕೆಂದು ಪ್ರಸ್ತಾಪಮಾಡುವ ಸಂದರ್ಭದಲ್ಲಿ "ವೃತ್ತಾಂತ ಪತ್ರಿಕೆ"ಯ ಹೆಸರನ್ನು ಗೌರವದಿಂದ ಹೇಳಿ, ಈ ಪತ್ರಿಕೆಯ ಮೂಲಕವೂ ಇಂಥಾ ತಿಳುವಳಿಕೆಯನ್ನು ಪ್ರಜೆಗಳಿಗೆ ಉಂಟುಮಾಡಬಹುದಾಗಿದೆ ಎಂದು ಅಪ್ಪಣೆ ಕೊಡಿಸಿದರು ಈ ಪತ್ರಿಕೆಯು ಪ್ರಾರಂಭವಾದಾರಭ್ಯ ಇಲ್ಲಿಗೆ ಸುಮಾರು ಮೂವತ್ತು ವರುಷಗಳಿಂದಲೂ ಪ್ರಜೆಗಳನ್ನು ತಿಳುವಳಿಕಸ್ಥರನ್ನಾಗಿಯೂ ನಾಗರಿಕರನ್ನಾಗಿಯೂ ಮಾಡಬೇಕೆಂಬುವುದು ಇದರ ಮುಖ್ಯ ಉದ್ದೇಶವಾಗಿರುತ್ತದೆ. ದಿವಾನ್‌ರವರು ಈ ಪತ್ರಿಕೆಯ ಹಳೇ ಸಂಚಿಕೆಗಳನ್ನು ತಿರುಗಿಸಿ ನೋಡಿದಲ್ಲಿ ಅವರು ಈ ಪತ್ರಿಕೆಯ ಹೆಸರು ಹೇಳಿ ಇದೂ ಸಹಾಯಕವಾಗಬೇಕೆಂದು ತಿಳಿಸಬೇಕಾದ ಅವಶ್ಯಕತೆಯೇ ಇಲ್ಲವೆಂಬುವದು ಸವಿಸ್ತಾರವಾಗಿ ಅವರಿಗೆ ಗೊತ್ತಾಗುತ್ತಿತ್ತು ಹಾಗಾಯಿತೆಂದರೆ ನಾವು ವ್ಯವಸಾಯ, ಗೋಕಾಯಿಗಳ ಪಾಲನೆ, ಈ ಮೊದಲಾದ ಬಹು ಉಪಯುಕ್ತಗಳಾದ ವಿಷಯಗಳನ್ನು ನಮ್ಮ ದೇಶದ ವೃತ್ತಾಂತ ತನ್ನ ಜಮೀನು ಹೂಲ ಗದ್ದೆಗಳನ್ನು ಒಪ್ಪವಾಗಿ ಇಟ್ಟುಕೊಳ್ಳಲೆಂದು ಪ್ರಕಟಿಸುತ್ತಾ ಬಂದಿರುತ್ತೇವೆ ಕೆಳದ ವಾರವು ಸರ್ಕಾರದ ವ್ಯವಸಾಯ ಇಲಾಖೆಯಿಂದ ಬಂದ ಒಂದು ನೋಟೀಸ್ [illegible] ವನ್ನು ಪ್ರಕಟಮಾಡಿದೇವೆ ಮತ್ತು ನಾವು ಯಾವಾಗಲೂ ನಮ್ಮ ಸಂಸ್ಥಾನದ ಶ್ರೇಯಸ್ಸನ್ನೇ ನಮ್ಮ ಮುಖ್ಯ ಉದ್ದೇಶವಾಗಿಟ್ಟುಕೊಂಡಿರುವವು

ಸಂಸ್ಥಾನವು ಯಥಾರ್ಥವಾದ ಶ್ರೇಯಸ್ಸನ್ನು ಹೊಂದಬೇಕಾದಲ್ಲಿ ಬರೀ ಹಣವನ್ನು ಆಧಾರವಾಗಿ ಎಣಿಸಿ ಮಾಡುವುದರಿಂದಲೂ, ವಿದ್ಯೆಯನ್ನು ಹರಡುವದರಿಂದಲೂ ಅದು ಸಾಧ್ಯವಾಗುವದಿಲ್ಲ, ಇವುಗಳ ಜೊತೆಗೆ ಇನ್ನು ಕೆಲವು ಸಾಹಸ ಪ್ರಯತ್ನಗಳು ನಡೆಯಬೇಕೆಂದೂ ಈ ಸಂದರ್ಭದಲ್ಲಿ ನಾವು ಸೂಚಿಸಬೇಕಾಗಿದೆ ಪ್ರಜೆಗಳು ಸಭ್ಯರಾಗಬೇಕಾದದ್ದು ಮಾತ್ರವೇ ಸಾಲದು, ಅವರು ಸತ್ಯವಂತರಾಗಿಯೂ ಯೋಗ್ಯರಾಗಿಯೂ, ನಂಬಿಗಸ್ತರಾಗಿಯೂ, ಸುಶೀಲರಿಂದ ಕೂಡಿದವರಾಗಿಯೂ ಇರಬೇಕು ಇದಕ್ಕೆ ಪ್ರಜಾಪಾಲಕರಾದ ಗವರ್ನಮೆಂಟಿನವರು ಮಾಡಬೇಕಾದದ್ದೇನೆಂದು ಕೇಳುವುದಾದರೆ ಅವರು ಪ್ರಜೆಗಳ ವಿಷಯದಲ್ಲಿ ಮಾತ್ರವೇ ಅಲ್ಲ, ತಮ್ಮ ಸ್ವಂತ ಆಚಾರದ ವಿಷಯದಲ್ಲೂ ನಿರ್ಮಲರಾಗಿಯೂ, ನಿಷ್ಪಕ್ಷಪಾತರಾಗಿಯೂ, ಸತ್ಯಧರ್ಮಗಳಿಂದಲೂ ನಡೆದುಕೊಳ್ಳುತ್ತಾ ಬರಬೇಕು ಗವರ್ನಮೆಂಟಿನವರು ಅಧಿಕಾರಿಗಳನ್ನೂ, ನೌಕರರುಗಳನ್ನೂ ಯೋಗ್ಯರನ್ನೂ ಸೇವಕರಾಗಿರುವವರನ್ನೂ ಅಂಗೀಕಾರ ಮಾಡಿ ನಿಷ್ಪಕ್ಷಪಾತದಿಂದ ವ್ಯವಹರಿಸಿ, ನಾವು ಸತ್ಯಧರ್ಮಗಳಿಗೆ ಅನುಸಾರವಾಗಿ ನಡೆಯುತ್ತಾ ಬರುವುದನ್ನು ಕಾರ್ಯತಃ ತೋರಿಸಿ ಪ್ರಜೆಗಳಲ್ಲಿ ಭರವಸೆಯನ್ನುಂಟುಮಾಡಲು ಸರ್ಕಾರದವರ ಈ ರೀತಿಯಾದ ವರ್ತನವು ಸಂಸ್ಥಾನದ ಶ್ರೇಯೋಭಿವೃದ್ಧಿಗೆ ತುಂಬಾ ಸಹಾಯವಾದೀತೆಂದು ಧಾರಾಳವಾಗಿ ಹೇಳುತ್ತೇವೆ

ಅಗ್ರಗಾಮಿ

ಒಂದು ಸೈನ್ಯವು ಶತ್ರು ಸೈನ್ಯದ ಮೇಲೆ ಯುದ್ಧಕ್ಕೆ ಹೊರಡುವಾಗ ಆ ಸೈನ್ಯದವರ ಮುಂದುಗಡೆ "ಸಪರ್ಸಯರು" ಗಳು ಎಂಬ ಸಿಪಾಯಿಗಳು ತಮ್ಮ ಹಿಂದೆ ಬರುವ ದಂಡಿನವರಿಗೆ ಮಾರ್ಗವನ್ನು ಸಮನಾಡಿಕೊಂಡು ಮುಂದಾಗಿ ಹೋಗುವ ಕ್ರಮವುಂಟು ಶತ್ರು ಸೈನ್ಯದವರು ಪಾಳೆಯವನ್ನು ಬಿಟ್ಟಿರುವ ಸ್ಥಳವು ದೂರವಾಗಿ ಆ ಸ್ಥಳವನ್ನು ಸುಲಭವಾಗಿ ಸೇರುವದಕ್ಕಾಗದ ಹಾಗೆ ಮಧ್ಯೆ ಮಧ್ಯೆ ದೊಡ್ಡ ದೊಡ್ಡ ಕಾಡುಗಳೂ ಹಳ್ಳಕೊಳ್ಳಗಳೂ ಕೆಲವು ಕಡೆ ಎತ್ತರವಾದ ಗುಡ್ಡಗಳೂ ದಿನ್ನೆಗಳೂ ಇರುವದುಂಟು ಸಪರ್ಸಯರು ಎಂಬ ಸಿಪಾಯಿಗಳು ಅಗ್ರಗಾಮಿಗಳಾಗಿ ಅಂದರೆ ಸೈನ್ಯ ಹೊರಡುವದಕ್ಕಿಂತ ಮುಂದಾಗಿ ಹೊರಟು ಸೈನ್ಯ ಬರಬೇಕಾದ ದಾರಿಯಲ್ಲಿ ಅಡ್ಡಲಾಗಿ ಸಿಕ್ಕುವ ಕಾಡುಗಳನ್ನು ಕಡಿದು ಗುಡ್ಡ ದಿನ್ನೆಗಳನ್ನು ತಗ್ಗಿಸಿ ಹಳ್ಳ ಕೊಳ್ಳಗಳನ್ನು ತುಂಬಿ ಮಾರ್ಗವನ್ನು ಸರಾಗ ಮಾಡುವರು

ಇಂಡಿಯಾ ದೇಶಕ್ಕೆ ನೈರುತ್ಯ ದಿಕ್ಕಿನಲ್ಲಿ ಆಫ್ರಿಕಾ ಖಂಡವೆಂಬ ಒಂದು ದೊಡ್ಡ ಭೂಭಾಗವಿದೆ ಇದು ಬಹು ದೊಡ್ಡ ಕಾಡುಗಳಿಂದಲೂ ನದಿಗಳಿಂದಲೂ ಮಹಾ ಸರೋವರಗಳಿಂದಲೂ ಗುಡ್ಡಗಳಿಂದಲೂ ಮಹಾ ಮಲೆನಾಡು ಎನ್ನಿಸಿಕೊಂಡಿದೆ ಈ ಖಂಡದ ಅನೇಕ ಭಾಗಗಳು ಇದುವರೆಗೂ ನಿರ್ಜನಪ್ರದೇಶಗಳಾಗಿರುವವು ಯಾಕೆಂದರೆ ಈ ಗೊಂಡಾರಣ್ಯಗಳಲ್ಲಿ ಹವಾ ಬಹಳವಾಗಿ ಕೆಟ್ಟು ವಿಷಮಶೀತಜ್ವರ ಮುಂತಾದ ಕೆಟ್ಟ ವ್ಯಾಧಿಗಳ್ಯ ಮನುಷ್ಯರಿಗೆ ಮಾತ್ರ ಸ್ಥಾನವಾಗಿದೆ ಆನೆ, ಚಿರತೆ, ಸಿಂಹ ಮೊದಲಾದ ಕಾಡುಮೃಗಗಳು ಅರಣ್ಯದಲ್ಲಿ ಸಬಿಜವಾಗಿರುವವು ಹೆಬ್ಬಾವು, ನಾಗರಹಾವು ಮುಂತಾದ ಕ್ರಿಮಿಗಳಂತೆ ಅಸಂಖ್ಯಾತಗಳಾಗಿ ಹರಿದಾಡುತ್ತಿರುವವು ದಾರಿಯಂತೂ ಮೊದಲೇ ಇಲ್ಲ ನಿರ್ಜನಪ್ರದೇಶ ಈ ಕಾಡು ಪ್ರದೇಶಗಳಲ್ಲಿ ಎಲ್ಲೋ ಒಂದೊಂದು ಕಡೆ ಕೆಲಕೆಲವು ಜನಗಳಿದ್ದರೂ ಅವರೆಲ್ಲರೂ ಅನಾಗರಿಕರಾದ ಪರಟರು ಕಾಡುಮೃಗಗಳಂತೆ ಕ್ರೂರಸ್ವಭಾವಗಳೂ ಕೆಲವು ಕಡೆ ನರಮಾಂಸಭಕ್ಷಕರೂ ಆಗಿದ್ದರು ಯಾರಾದರೂ ಆಫ್ರಿಕಾ ಖಂಡದಲ್ಲಿ ಕಾಡುಗಳನ್ನು ನುಗ್ಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಿ ಸೇರುವುದೆಂದರೆ ಅಸಾಧ್ಯಪ್ರಕರಣವೆಂತ ಎಲ್ಲರೂ ನಿಶ್ಚಯಿಸಿದ್ದರು

ಆದರೆ ಈಗ ಸುಮಾರು ಅರವತ್ತು ವರುಷಗಳಿಗೆ ಪೂರ್ವದಲ್ಲಿ ಡಾಕ್ಟರ್ ಡೇವಿಡ್ ಲಿವಿಂಗ್‌ಸ್ಟನ್ ಎಂಬ ಪಾದ್ರಿಯು ಇಂಗ್ಲೆಂಡ್ ದೇಶದಿಂದ ಆಫ್ರಿಕಾ ಖಂಡವನ್ನು ಹೊಕ್ಕು ಆ ಪ್ರದೇಶಗಳನ್ನೆಲ್ಲಾ ಸಾಧ್ಯವಾದ ಮಟ್ಟಿಗೆ ಸಂಚರಿಸಿ ಬೇರೆ ಬೇರೆ ಪ್ರದೇಶಗಳನ್ನು ಕಂಡುಹಿಡಿಯುವನೆಂದು ಮತ್ತು ಅಲ್ಲಲ್ಲಿರುವ ಕಾಡು ಜನಗಳನ್ನು ಕಂಡು ಅವರಿಗೆ ವಿದ್ಯೆ, ಬುದ್ಧಿ, ನಾಗರಿಕತೆಗಳನ್ನು ಕಲಿಸಿ ಅವರನ್ನು ನಾಗರಿಕರನ್ನಾಗಿ ಮಾಡಬೇಕೆಂದು [illegible] ಮತ್ತು ಅವನು ಹಿಡಿದ ಕೆಲಸದಲ್ಲಿ ತತ್ಪರನಾಗಿದ್ದದರಿಂದ ಅನೇಕ ಕಷ್ಟ, ರೋಗ, ಹಸಿವೆ, ಕಾಡುಮೃಗಗಳ ಕಾಟಗಳು ಅಸಂಖ್ಯಾತವಾಗಿ ಬಂದೊದಗಿದ್ದರೂ ಅವನು ಹಿಮ್ಮೆಟ್ಟದೆ ದೃಢಚಿತ್ತದಿಂದ ಮುಂದೆ ಮುಂದೆ ನಡೆದು ಕಾಡಿನಲ್ಲಿ ಮಾರ್ಗಗಳನ್ನು ಕಂಡು ಅನೇಕ ನದಿಗಳನ್ನು ದಾಟಿ, ಬೆಟ್ಟಗಳನ್ನು ಹತ್ತಿ ಅಲ್ಲಲ್ಲಿರುವ ಕಿರಾತಕರನ್ನು ಬಹು ಪ್ರೀತಿಯಿಂದ ಕಂಡು ಅವರಿಗೆ ವಿದ್ಯೆಯನ್ನೂ, ನೀತಿಯನ್ನೂ ನಿಜದೇವರ ಭಕ್ತಿಯನ್ನೂ ಕಲಿಸಿದನು ತನ್ನ ಜೀವಾಂತ್ಯದವರೆಗೂ ಇದೇ ಕೆಲಸವನ್ನು ಮುಂದರಿಸುತ್ತಲಿದ್ದು ಕಟ್ಟ ಕಡೆಗೆ ಅದೇ ಕೆಲಸದಲ್ಲಿ ಸತ್ತುಹೋದನು. ಇಂತಹ ಮಹನೀಯನು ಅಜ್ಞಾನಾಂಧಕಾರದಿಂದ ಆಚ್ಛಾದಿತವಾದ ಸತ್ಯವೆಂಬ ಬೆಳಕಿನಿಂದಲೂ ಭಕ್ತಿಯೆಂಬ ಜೀವದಿಂದಲೂ ಉದ್ದೀಪನಮಾಡುವದರಲ್ಲಿ ಸಪರ್ಸಯರ್ ಅಥವಾ ಅಗ್ರಗಾಮಿಯೆಂತ ಸಂದೇಹವಿಲ್ಲದೆ ಹೇಳಬಹುದಲ್ಲವೇ! ಹೌದು ಆತನ ಜನ್ಮ ದೇಶವಾದ ಬ್ರಿಟನ್ ರಾಜ್ಯದವರು ಆತನನ್ನು ಈ ಘನಮಾರ್ಗದಿಂದ ಸನ್ಮಾನಿಸಿ ಆತನ ಶತಮಾನೋತ್ಸವವನ್ನು ಈಗ ಕೆಲವು ತಿಂಗಳುಗಳಿಗೆ ಮುಂಚಿತವಾಗಿ ವಿಜೃಂಭಣೆಯಿಂದ ಜರಿಸಿದರು ಈಗಲಾದರೂ ಆ ಅಗ್ರಗಾಮಿಯಾದ ಲಿವಿಂಗ್‌ಸ್ಟನ್ ಪಂಡಿತನು ತೋರಿಸಿದ ಮಾರ್ಗವನ್ನವಲಂಬಿಸಿ ನೂರಾರು ಪಾದ್ರಿಗಳು ಆ ದೇಶವನ್ನು ಆಸಕ್ತಿಯಿಂದ ಹೊಕ್ಕು ಆ ದೇಶದ ಜನಗಳನ್ನು ನಾಗರಿಕತೆ, ನೀತಿ, ಸತ್ಯ, ನಿಜದೇವರ ಭಕ್ತಿ ಪರಾಯಣರನ್ನಾಗಿ ಮಾಡುತ್ತಿದ್ದಾರೆ ಡೇವಿಡ್ ಲಿವಿಂಗ್‌ಸ್ಟನ್ ಮಹಾಶಯನು ಪರೋಪಕಾರಿಗಳಲ್ಲಿ ಅಗ್ರಗಾಮಿಯೆಂದೂ ಅಗ್ರಗಣ್ಯನೆಂದೂ ಪ್ರಖ್ಯಾತಿಯನ್ನು ಪಡೆದನು ಡೇವಿಡ್ ಲಿವಿಂಗ್‌ಸ್ಟನ್ ಎಂಬ ಪಂಡಿತನು ಬಾಲ್ಯದಲ್ಲಿ ಬಡವರಾದ ತಂದೆತಾಯಿಗಳ ಜೊತೆಯಲ್ಲಿ ಕಾಡುಮೃಗಗಳಂತೆ ಬದುಕುತ್ತಿದ್ದ ಆ ಕಾಡು ಜನಗಳನ್ನು ಅಜ್ಞಾನದಿಂದಲೂ ಮೃಗಸ್ವಭಾವದಿಂದಲೂ ಬಿಡಿಸಿ ಅವರನ್ನು ರಕ್ಷಿಸಬೇಕೆಂಬ ಅಭಿಲಾಷೆಯು ಹೇಗೆ ಅಂಕುರಿಸಿತು ಲಿವಿಂಗ್‌ಸ್ಟನನು ಮೊದಲು ಬಡ ಹುಡುಗನಾಗಿದ್ದದ್ದರಿಂದ ಅನ್ನ ವಸ್ತ್ರಗಳನ್ನು ಸಂಪಾದಿಸಿಕೊಳ್ಳುವದಕ್ಕೋಸ್ಕರ ಅರಳೆ ಬಟ್ಟೆ ನೇಯ್ಯುವ ಒಂದು ಕಾರ್ಖಾನೆಯಲ್ಲಿ ಕೂಲಿಯಾಳಾಗಿ ಪ್ರವೇಶಿಸಿತು ಆದರೆ ಅವನು ವಿದ್ಯಾರ್ಥಿಯಾಗಿದ್ದ ದರಿಂದ ಅಲ್ಲಿಯೂ ಪುಸ್ತಕವನ್ನು ಬಿಡದೆ ಅರಳೆ ಹಿಂಜುತ್ತಿರುವಾಗಲೂ ತನ್ನ ಮುಂದೆ ಪುಸ್ತಕವನ್ನಿಟ್ಟುಕೊಂಡು ಕಲಿಯುವ ಅಭ್ಯಾಸವನ್ನು ಮಾಡಿದನು ಕೆಲವು ವೇಳೆ ಹೊಟ್ಟೆಬಟ್ಟೆ ಕೆಲವು ಕಾಲ ಸರಿಯಾದ ಬಟ್ಟೆ ಬರೆಗಳಿಲ್ಲದಿದ್ದರೂ ಕೂಲಿಮಾಡಿದ ದುಡ್ಡನ್ನು ಮಿಗಿಸಿ ಪಾಠಪ್ರವಚನಕ್ಕೆ ಬೇಕಾದ ಪುಸ್ತಕಗಳನ್ನು ಕೊಂಡುಕೊಂಡನು ಇಷ್ಟು ಪ್ರಯಾಸಪಟ್ಟು ಅಸಾಧಾರಣವಾದ ರೀತಿಯಲ್ಲಿ ಲ್ಯಾಟಿನ್, ಗ್ರೀಕು ಮುಂತಾದ ಕಷ್ಟಕರವಾದ ಭಾಷೆಗಳಲ್ಲಿ ಪಾರಂಗತನಾಗಿ "ಡಾಕ್ಟರ್" ಅಂದರೆ ಪಂಡಿತೋತ್ತಮನೆಂಬ ಬಿರುದನ್ನು ಪಡೆದನು ಇಷ್ಟು ಕಷ್ಟಪಟ್ಟು ಸಂಪಾದಿಸಿದ ವಿದ್ಯೆಯ ಫಲವಾದ ಒಳ್ಳೇ ಸಂಬಳ, ಕೀರ್ತಿ, ಸ್ವದೇಶದಲ್ಲಿ ಲಭ್ಯವಾದ ಸುಖಸಂಪತ್ತನ್ನೆಲ್ಲಾ ಬಿಟ್ಟು ಕಾಡುಜನಗಳ ಸಂರಕ್ಷಣಾರ್ಥವಾಗಿ ಕಷ್ಟ, ರೋಗ, ದಾರಿದ್ರ್ಯ, ವಿಪತ್ತುಗಳನ್ನು ಅನುಭವಿಸುವದಕ್ಕೆ ಒಪ್ಪಿಕೊಂಡನು ಇಂತಹ ಸ್ವಾರ್ಥತ್ಯಾಗವನ್ನುಮಾಡಿ ಪರೋಪಕಾರದಲ್ಲಿ ನಿರತನಾಗುವದಕ್ಕೆ ಲಿವಿಂಗ್‌ಸ್ಟನ್ ಪಂಡಿತನನ್ನು ಪ್ರೇರೇಪಿಸಿ ಒಪ್ಪಿಕೊಳ್ಳುವನಾಗೆ ಮಾಡಿದವರಾರು?

ಲಿವಿಂಗ್‌ಸ್ಟನ್ ಮಹಾ ಪಂಡಿತನು ಯೇಸು ಕ್ರಿಸ್ತನ ಶಿಷ್ಯನು ಮತ್ತು ಯಾರು ಯೇಸು ಕ್ರಿಸ್ತನ ನಿಜ ಶಿಷ್ಯರಾಗಿರುತ್ತಾರೋ ಅವರೆಲ್ಲರೂ ಪರರ ಪ್ರಯೋಜನಕ್ಕಾಗಿಯೂ ಪರರ ಹಿತಕ್ಕಾಗಿಯೂ ಆತ್ಮನಿವೇದನ, ಆತ್ಮಾರ್ಪಣೆಗಳನ್ನು ಮಾಡಿ ತಮ್ಮ ಐಶ್ವರ್ಯ, ಸುಖ, ಕೀರ್ತಿ, ಪ್ರಾಣಗಳನ್ನು ಪರರ ಸಲುವಾಗಿ ತ್ಯಾಗಮಾಡುವದಕ್ಕೆ ಸಿದ್ಧರಾಗಿರುತ್ತಾರೆ ಲಿವಿಂಗ್‌ಸ್ಟನ್ ಪಂಡಿತನು ತಾನು ಆಫ್ರಿಕಾ ಖಂಡಕ್ಕೆ ಮಾತ್ರವಲ್ಲ ತನ್ನ ಗುರುವಾದ ಕ್ರಿಸ್ತನು ತನಗೆ ಅನುಗ್ರಹಿಸಿರುವ ರಕ್ಷಣಾಮಾರ್ಗವನ್ನು ಅರಿಯದೆ ಸಕಲ ದೇಶಾಂತರಗಳಿಗೂ ಹೋಗಿ ಅವರಿಗೆ ಸತ್ಯಸುವಾರ್ತೆಯನ್ನು ಉಪದೇಶಿಸಿ ಅವರನ್ನು ಕಿರಾತಕ ವೃತ್ತಿಯಿಂದ ಬಿಡಿಸಿ ಸಾಧು ಸಜ್ಜನರನ್ನಾಗಿ ಮಾಡಿದಾತನು.

ಕ್ರಿಸ್ತನ ಶಿಷ್ಯರನ್ನು ಇಂತಹ ಸತ್ಕಾರ್ಯಗಳಲ್ಲಿ ಪ್ರೇರಣೆಮಾಡುವದು ಕ್ರಿಸ್ತನ ನಡತೆಯಲ್ಲಿ ಏನಿದೆ? ಕೇಳಿರಿ ಈತನು ಅನಾದಿಯಿಂದಲೇ ದೇವರ ಏಕಸ್ವರೂಪ ದೇವರಿಂದಾದ ದೇವರು, ಪರಂಜ್ಯೋತಿಯಿಂದಾದ ಪರಂಜ್ಯೋತಿಯೂ ಸಾಕ್ಷಾತ್ ದೇವರೂ ಆಗಿದ್ದಾನೆ ಈತನ ಮೂಲಕ ಸಮಸ್ತವೂ ಉಂಟಾಯಿತು ಈತನು ಮನುಷ್ಯರಾದ ನಮಗೆ ಹಿತವನ್ನು ಬಯಸಿ ನಮ್ಮ ರಕ್ಷಣಾರ್ಥವಾಗಿ ಪರಲೋಕದಿಂದಿಳಿದು ಪರಿಶುದ್ಧಾತ್ಮನಿಂದ ಮರಿಯಳೆಂಬ ಕನ್ಯೆಯಲ್ಲಿ ಅವತರಿಸಿ ಮನುಷ್ಯನಾದನು ಆಫ್ರಿಕಾ ಖಂಡವು ಮಹಾ ಕಾಡಾಗಿ ಸಿಂಹ ಶಾರ್ದೂಲ, ಕರಡಿ, ವಿಷಭುಜಗಗಳಾದ ಹಾವುಗಳಿಂದ ತುಂಬಿದ್ದು ಕಾಡುನಿವಾಸಿಗಳಾದ ಕಿರಾತಕರಿಗೆ ಮಾತ್ರ ವಸತಿಯಾಗಿತ್ತು ಹಾಗೆಯೇ ನರಲೋಕವು ದೇವರನ್ನೂ ಆತನ ಪ್ರೀತಿಯನ್ನೂ ಅರಿಯದೆ ದೇವರನ್ನು ತಂದೆಯೆಂಬದಾಗಿ ಭಾವಿಸಿ ಪ್ರೀತಿಸಿ ವಿಧೇಯರಾಗಿರುವ ಮಕ್ಕಳಿಲ್ಲದ ಇತ್ತು ಕ್ರಿಸ್ತನು ಲೋಕದವರ ದುರವಸ್ಥೆಯನ್ನು ನೋಡಿ ಸಹಿಸಲಾರದೆ ಪರಲೋಕದಲ್ಲಿ ತನಗಿದ್ದ ಸಕಲ ವೈಭವವನ್ನು ಬಿಟ್ಟು ಮನುಷ್ಯರಿಗೆ ದೇವರ ಪ್ರೀತಿಯನ್ನು ಕುರಿತು ತಿಳಿಯಪಡಿಸಿ ದೇವರ ಕಡೆಗೂ ಸತ್ಯಕಡೆ ನಮ್ಮನ್ನು ಒಲಿಸುವದಕ್ಕಾಗಿ ಅವತಾರವೆತ್ತಿಕೊಂಡು ಬಂದನು ಕ್ರಿಸ್ತನು ಮಾಡಿದ ಈ ಅಸಮಾನವಾದ ಮಹೋಪಕಾರವೇ ಡೇವಿಡ್ ಲಿವಿಂಗ್‌ಸ್ಟನ್ ಪಂಡಿತನನ್ನೂ ಅತನಂತಹ ಸಾವಿರಾರು ಮಂದಿಯನ್ನೂ ಪರೋಪಕಾರದ ಕೆಲಸಗಳಲ್ಲಿ ಪ್ರಾಣತ್ಯಾಗಮಾಡುವದಕ್ಕೂ ಪ್ರೇರೇಪಿಸುತ್ತಲಿದೆ

ಒಳದೇಶದ ವೃತ್ತಾಂತಗಳು.

ಮೊನ್ನೆ ಮಂಗಳವಾರ ರಾತ್ರಿ ರಾಜಧಾನಿಯಲ್ಲಿ ಒಂದು ಹದ ಮಳೆ ಆಗಿ ನೆನ್ನೆಯೂ ಮೋಡ ಕವಿದುಕೊಂಡು ಜಡಿ ಹಿಡಿದಿತ್ತು

∴

ಮಿ| ಎ ಕೆ ಸಾನೆಯವರು ಕಳೆದ ಶುಕ್ರವಾರ ಬೆಂಗಳೂರು ಸಿಟಿ ಹೆಲ್ತ್ ಆಫೀಸಿನ ಚಾರ್ಜನ್ನು ಕೊಟ್ಟು ಇರುತ್ತಾರೆ ಮರುದಿನ ಮಿ|| ಆರ್ ಸುಬ್ಬರಾಯರು ಬೆಂಗಳೂರಿಗೆ ಬಂದು ಹೆಲ್ತ್ ಆಫೀಸ್ ಕೆಲಸವನ್ನು ವಹಿಸಿಕೊಂಡರು

∴

ಬೆಂಗಳೂರು ವೆಸ್ಲಿಯನ್ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದ ಮಿ| ಬೇಲೂರು ಶ್ರೀನಿವಾಸಯ್ಯಂಗಾರ್, ಬಿ ಎ, ಬಿ ಎಲ್ ರವರು ಕಳೆದ ವಾರ ಅಡ್ವೊಕೇಟರಾಗಿ, ವಕಾಲತ್ತು ನಡಿಸಲು ಪ್ರಾರಂಭಿಸಿರುತ್ತಾರೆಂದು ತಿಳಿದು ಬಂದಿದೆ

∴

ನೆನ್ನೆ ಮಧ್ಯಾಹ್ನ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗು ಜರುಗುವುದಾಗಿತ್ತು ಈ ದಿನ ಡಿಸ್ಟ್ರಿಕ್ಟಿನ ಪ್ರಜಾಪ್ರತಿನಿಧಿಗಳ ಪ್ರಥಮ ಕೂಟವು ನಡೆದು, ಮಹಾಸಭೆಗೆ ಕಳುಹಿಸತಕ್ಕ ವಿಷಯಗಳನ್ನು ಗೊತ್ತುಮಾಡುವವರಾಗಿದ್ದಾರೆ

∴

ಹುಣಸೂರು ತಾಲ್ಲೂಕು ಹನಗೋಡು ಹೋಬಳಿ ಮರಂಚಿ ಗ್ರಾಮದಲ್ಲಿ ಗುರುಪ್ಪನ ಕೆರೆ ಕೆಳಗಿರುವ ತರಿ ಜಮೀನನ್ನು ಕ್ರಯ ವ್ಯವಸಾಯಕ್ಕೆ ಕೊಟ್ಟು ಅಭಿವೃದ್ಧಿಮಾಡಬೇಕೆಂದು ಸರ್ಕಾರದವರು ತೀರ್ಮಾನಮಾಡಿ ಬೇಕಾದವರು ದರಖಾಸ್ತುಗಳನ್ನು ಅಮಲ್ದಾರರಿಗೆ ಕೊಡಬಹುದೆಂದು ತಿಳಿಸಿದಾರೆ

∴

ಶ್ರೀಮದ್ಯುವರಾಜರವರು ವಿಶೇಷ ಸಂಚಾರವನ್ನು ಪೂರೈಸಿಕೊಂಡು ವಾಪಸು ದಯಮಾಡಿದ ಮೇಲೆ ಅವರನ್ನು ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ರಾಜಭಕ್ತಿಯಿಂದ ಸತ್ಕರಿಸಿ ಅವರಿಗೆ ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸುವ

ದಕ್ಕೆ 1,000 ರೂಪಾಯಿ ಬಿಡುಗಡೆಮಾಡಬೇಕೆಂದು ಕಳೆದ ವಾರ ತೀರ್ಮಾನ ಮಾಡಿಕೊಂಡಿದಾರೆ

ಕಳೆದ ವಾರ ರಾಜಧಾನಿಯ ಪ್ರಜಾ ಪ್ರಮುಖರೂ ಅಧಿಕಾರಿಗಳೂ ಟೌನ್ ಹಾಲಿನಲ್ಲಿ ಒಂದು ಮಹಾ ಸಭೆಯನ್ನು ನಡಿಸಿ, ಶ್ರೀಮದ್ಯುವರಾಜರವರು ಸೀಮೆಯಿಂದ ಬಂದ ಮೇಲೆ ಅವರಿಗೆ ಅಡ್ರಸ್ ಒಪ್ಪಿಸಿ, ವಿಜೃಂಭಣೆಯಾದ ಯಂಟರ್‌ಟೇನ್‌ಮೆಂಟ್ ನಡಿಸಿ, ಪ್ರಜೆಗಳ ರಾಜಭಕ್ತಿ ಪ್ರೀತಿಯನ್ನು ಪ್ರಕಾಶ ಪಡಿಸಬೇಕೆಂದು ತೀರ್ಮಾನ ಮಾಡಿರುತ್ತಾರೆ.

ಬೆಂಗಳೂರಲ್ಲಿ ಮೊದಲು ಕರಿಸಿದ್ದೇಶ್ವರ ಮಠದಲ್ಲಿಟ್ಟಿದ್ದ ಶ್ರೀಮದ್ವೀರಶೈವ ಧರ್ಮ ಸಂಸ್ಕೃತ ಪಾಠಶಾಲೆಯನ್ನು ಈಗ ಚಿಕ್ಕಪೇಟೆ ಮುಕುಂದನ ಮಠದಲ್ಲಿ ಸ್ಥಾಪಿಸಿರುವದಾಗಿಯೂ, ಈ ಪಾಠಶಾಲೆಯಲ್ಲಿ ಕನ್ನಡ, ಸಂಸ್ಕೃತ, ವೇದಾಂತ, ಸಿದ್ಧಾಂತ, ಜ್ಯೋತಿಷ, ಲಿಂಗಧಾರಣೆ, ಉಪನಯನ, ವಿವಾಹ, ಅಂತೇಷ್ಟಿ ಕ್ರಮ, ಇತ್ಯಾದಿ ಕರ್ಮಾನುಷ್ಠಾನಗಳು ವೇ|| ನಂ ಶಿವಕ್ಕಶಾಸ್ತ್ರಿಗಳಿಂದ ಕ್ರಮವಾಗಿ ಹೇಳಿಕೊಡಲ್ಪಡುವದಾಗಿಯೂ, ಹಾಗೆ ಅಲ್ಲಿಗೆ ಬಂತಕ್ಕ ವಿದ್ಯಾರ್ಥಿಗಳು ತಮ್ಮ ಊಟದ ಮನೆಗಳನ್ನು ತಾವೇ ಗೊತ್ತುಮಾಡಿಕೊಳ್ಳಬೇಕೆಂಬದಾಗಿಯೂ, ಅಥವಾ ಭಿಕ್ಷಾನ್ನ ಬೇಡುವದಕ್ಕೆ ಸಿದ್ಧರಾಗಿರಬೇಕೆಂಬದಾಗಿಯೂ ಸದರಿ ಪಾಠಶಾಲೆಯ ಪೋಷಕರಾದ ಶ್ರೀ ಚನ್ನಬಸವಸ್ವಾಮಿಗಳು ತಿಳಿಸಿರುತ್ತಾರೆ

ಶ್ರೀಮದ್ಯುವರಾಜರವರ ಸಮಾಚಾರವನ್ನು ಕುರಿತು ಮೊನ್ನೆ ಬಂದ ಲಂಡನ್ ಟೈಂಸ್ ಪತ್ರಿಕೆಯು ತಿಳಿಸುವುದೇನೆಂದರೆ—ಜೂಲೈ ಅಂತ್ಯ ಭಾಗದಲ್ಲಿ ಯುವರಾಜರವರು ಪಾರ್ಲಿಮೆಂಟ್ ಮೆಂಬರಾದ ಸರ್ ಜಾರ್ಜ್ ರ್ಯಾಂಡಲ್ಸ್‌ರವರ ಸಂಗಡ ಕಂಬರ್ಲೆಂಡಿಗೆ ಹೋಗಿ ಅಲ್ಲಿರುವ ಕಬ್ಬಿಣದ ಮತ್ತು ಉಕ್ಕಿನ ಭಾರೀ ಕಾರ್ಖಾನೆಯನ್ನು ಪರಾಂಬರಿಸಿ ಬಂದರು. ಅವರು ಕೆಸ್ವಿಕ್ಕಿನಲ್ಲಿ ಅತ್ಯಂತ ರಮಣೀಯವಾದ ಬ್ರಿಸ್ಕೊಹಿಲ್ ಎಂಬ ಬಂಗಲೆಯಲ್ಲಿ ಸರ್ ಜಾರ್ಜ್ ರ್ಯಾಂಡಲ್ಸ್‌ರವರ ಅತಿಥಿಗಳಾಗಿದ್ದರು. ಸರ್ ಜಾರ್ಜ್ ರ್ಯಾಂಡಲ್ಸ್‌ರವರು ಕೆಲವು ವರುಷಗಳ ಹಿಂದೆ ಬಂದು ಮೈಸೂರು ಸೀಮೆಯನ್ನು ನೋಡಿಕೊಂಡು ಹೋಗಿ, ಈಗ ಶಿವಮೊಗ್ಗೆಯ ಬಳಿ ಇರುವ ಮ್ಯಾಂಗನೀಸ್ ಗಣಿ ಕಂಪನಿಗೆ ಸಂಬಂಧಪಟ್ಟವರಾಗಿದಾರೆ.

ವೈಸ್‌ರಾಯಿ ಪ್ರಭುಗಳಿಗಾಗಿ ಮೈಸೂರು ಗವರ್ನ್‌ಮೆಂಟಿನವರು ಹೆಗ್ಗದ ದೇವನಕೋಟೆಗೂ ಗುಂಡ್ಲುಪೇಟೆಗೂ ಸಮೀಪ ಹಿರಾಪುರದಲ್ಲಿ ದಿವ್ಯವಾದ ಕೆಡ್ಡಾ ಕ್ಯಾಂಪನ್ನು ಸಿದ್ಧಪಡಿಸುತ್ತಿದಾರೆ. ಅಲ್ಲಿ ತನಕ ತಂತಿಗಳನ್ನು ಹಾಕಿ ಕಳೆದ ವಾರದಿಂದ ಆ ಕ್ಯಾಂಪಿನಲ್ಲಿ ಒಂದು ಟೆಲಿಗ್ರಾಂ ಆಫೀಸೂ, ಪೋಸ್ಟ್ ಆಫೀಸೂ ಖಾಸಾಗಿ ಕೆಲಸ ನಡೆಯುತ್ತಿವೆ. ಸೀನಿಯರ್ ಸರ್ಜನ್‌ರವರೂ, ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರೂ ಆಗಾಗ್ಗೆ ಅಲ್ಲಿಗೆ ಹೋಗಿ ತಮ್ಮ ಇಲಾಖಾ ಸಿಬ್ಬಂದಿಯನ್ನಿಟ್ಟು ಕ್ರಮಪಡಿಸುತ್ತಿದಾರೆ. ರಾಜಧಾನಿಯಿಂದ ಆ ಕ್ಯಾಂಪಿನ ತನಕ ಉದ್ದಕ್ಕೂ ರಸ್ತೆಯಲ್ಲಿ ವಿದ್ಯುಚ್ಛಕ್ತಿಯ ದೀಪಗಳನ್ನು ಇಡಿಸುವದಕ್ಕೆ ಏರ್ಪಾಡಾಗಿದೆ. ಹೆಗ್ಗದೇವನಕೋಟೆ ರೇಂಜಿನ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್ ಮಿ. ಪಿ. ಮುತ್ತುರಾಮುಲು ನಾಯುಡುಯವರು ಸಾಹಸಪಟ್ಟು ಆಗಲೇ ಮೂರು ಮಂದೆಗಳ ಆನೆಗಳನ್ನು ಜಂಗಲುಗಳಲ್ಲಿ ತಡೆದುಕೊಂಡಿದಾರೆಂದೂ, ಮೂರು ಮಂದೆಗಳಲ್ಲಿ ಸುಮಾರು 100 ಆನೆಗಳ ತನಕ ಇರಬಹುದೆಂದೂ ತಿಳಿಯೋಣದೆ. ಇಂದ ಈ ಸಲದ ಕೆಡ್ಡಾ ವಿನೋದಗಳು ವೈಸ್‌ರಾಯಿ ಪ್ರಭುಗಳಿಗೆ ಉತ್ಸಾಹಕರವಾಗಿ ನಡೆಯಲು ಅನುಮಾನ ಕಾಣುವುದಿಲ್ಲ. ಈ ಏರ್ಪಾಡುಗಳ ವಿಶದಿಕೆಯನ್ನೆಲ್ಲಾ ನೋಡಿಕೊಂಡುಹೋಗಲು ವೈಸ್‌ರಾಯಿಯವರ ಕಡೆಯಿಂದ ಮಿ|| ಹಾಲಿಡೇ ಎಂಬ ಅಧಿಕಾರಿಯು ಕಳೆದ ವಾರ ಬೆಂಗಳೂರಿಗೂ ಮೈಸೂರಿಗೂ ಬಂದಿದ್ದರು.

ಮೈಸೂರು ಗೆಜೆಟ್ ಸಂಗ್ರಹ.

ತರೀಕೆರೆ ತಾಲ್ಲೂಕು ಅಮಲ್ದಾರ್ ಮಿ. ಪಿ. ಸುಬ್ಬರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಕಾಯಿಲೆ ರಜಾ ಕೊಟ್ಟಿದೆ —ಕಡೂರು ತಾಲ್ಲೂಕು ಶಿರಸ್ತೇದಾರ್ ಮ, ಎಂ ನಾರಾಯಣರಾಯರು ತರೀಕೆರೆ ತಾಲ್ಲೂಕಿನ ಅಮಲ್ದಾರ್ ಮತ್ತು ೫ನೇ ಕ್ಲಾಸ್ ಮ್ಯಾಜಿಸ್ಟ್ರೇಟಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಚಿರಿಯೂರು ಆಕ್ಟಿಂಗ್ ಅಮಲ್ದಾರ್ ಮಿ|| ಜ ರಾಂತವೀರಪ್ಪನವರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ರದ್ದುಮಾಡಿದೆ

ರೆವಿನ್ಯೂ ಸರ್ವೆ ಇಲಾಖಾ ಅ। ಕಮಿಷನರ್ ಮಿ|| ಸಿ ರಾಜಗೋಪಾಲಾಚಾರ್ಲು ರವರಿಗೆ ಅಗಸ್ಟ್ ತಾ 15 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಹದಿನಾಲ್ಕು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ತುಮಕೂರು ಡಿಸ್ಟ್ರಿಕ್ಟ್ ಖಜಾನಾ ಆಫೀಸರ್ ಮಿ|| ಬಿ ಟಿ ಕೇಶವಯ್ಯಂಗಾರ್ರನ್ನು ಅ। ಕಮಿಷನರ್ ದರ್ಜೆಯಲ್ಲಿ ಮೇ ತಾ 21 ರಿಂದ ೩ನೇ ಕ್ಲಾಸಿಗೆ ಬಡ್ತಿಮಾಡಿದೆ

ಮುಂದೆ ಹೇಳುವ ಡಿಸ್ಟ್ರಿಕ್ಟ್ ಮತ್ತೂ ಸೆಷನ್ಸ್ ಜಡ್ಜರ ವರ್ಗಾವಣೆ ಹುಕುಂ ಮಾಡಿದೆ —ಮಿ|| ಟಿ ಪರಮಶಿವ ಅಯ್ಯರವರನ್ನು ಬೆಂಗಳೂರಿನಿಂದ ಶಿವಮೊಗ್ಗೆಗೆ, ಮಿ|| ಆರ್ ಬಿ ಕೃಷ್ಣಮೂರ್ತಿಯವರನ್ನು ಮೈಸೂರಿನಿಂದ ಬೆಂಗಳೂರಿಗೆ, ಮಿ|| ಮಿರ್ಜಾ ಹಂಜಾ ಹುಸೇನ್ ರವರನ್ನು ಶಿವಮೊಗ್ಗೆಯಿಂದ ಮೈಸೂರಿಗೆ (ಕನ್ನಡಿಗರ ಬಂಗಿ ಮೊಕದ್ದಮೆ ಪೂರೈಸಿದ ಬಳಿಕ).

ಪಂಚಮರನ್ನು ಉದ್ಧರಿಸುವ ಏರ್ಪಾಡು.

ಕುಲೀಸ್‌ಪೇಟೆಯಲ್ಲಿ ನಡೆದ ಸಭೆ

ಕಳೆದ 10 ನೇ ತಾ ಭಾನುವಾರ ಕುಲೀಸ್‌ಪೇಟೆ ವೆಸ್ಲಿಯನ್ ಮಿಷನ್ ಇಂಗ್ಲಿಷ್ ಸ್ಕೂಲ್ ಕಟ್ಟಡದಲ್ಲಿ ನಡೆದ ಮೀಟಿಂಗಿನ ಪ್ರೊಸೀಡಿಂಗ್ಸ್ ವಿವರವೇನೆಂದರೆ —ಈ ಊರಲ್ಲಿ ವಾಸವಾಗಿರುವ ಪಂಚಮರ ಅಭಿವೃದ್ಧಿಯನ್ನು ಉದ್ದೇಶಿಸಿ ಯಾವುದಾದರೂ ಒಂದು ಕೈಗಾರಿಕೆ ಕೆಲಸವನ್ನು ಆ ಜನಗಳ ಹುಡುಗರಿಗೆ ಕಲಿಸಲು ತೀರ್ಮಾನಿಸಿ ಹಾಲಿ ಇದೇ ಊರಲ್ಲಿ ದೈವವಶಾತ್ ನೆಯಿಗೆ ಕೆಲಸದಲ್ಲಿ ಪ್ರವೀಣರಾಗಿ ಕ್ಷಿಪ್ರದಲ್ಲಿ ಒಂದು ಮಗ್ಗವನ್ನು ಏರ್ಪಡಿಸುವದರಲ್ಲಿರುವ ಮಿ|| ಕುಲ್ ಸಾಹೇಬರ ವಿದ್ಯೆಯ ಫಲಿತಾಂಶವನ್ನು ನಾವುಗಳು ಉಪಯೋಗಿಸಿಕೊಂಡು ಕೆಲವು ಪಂಚಮ ಹುಡುಗರನ್ನು ಆ ಮಗ್ಗಕ್ಕೆ ಸೇರಿಸಿ ನೆಯಿಗೆ ಕೆಲಸವನ್ನು ಕಲಿಸಲು ಏರ್ಪಾಡು ಮಾಡಬೇಕೆಂದೂ, ಇದಕ್ಕಾಗಿ ಆಗಬೇಕಾದ ಪ್ರಥಮ ದ್ರವ್ಯಕ್ಕಾಗಿ ಚಂದಾ ಎತ್ತಿ ಸಾಧ್ಯವಾದಷ್ಟು ವಸೂಲಿಯಿಂದ ಸದರಿ ಜನಗಳಿಗೆ ಕುಮ್ಮಕ್ಕು ಕೊಟ್ಟು ಸದರಿ ಏರ್ಪಾಡನ್ನು ಪ್ರಾರಂಭಿಸಬೇಕೆಂದೂ ಮ|| ಸಂತಾನಯ್ಯಂಗಾರ್ರು ಪ್ರಪೋಸ್ ಮಾಡಿದರು. ಇದನ್ನು ಮಿ|| ಪೀರ್ ಬೇಗ್ ಸಾಹೇಬರು ಅನುಮೋದಿಸಿದರು. ಹಾಜರಿದ್ದವರೆಲ್ಲರೂ ಒಪ್ಪಿ ಅದರಂತೆ ಆಗಬಹುದೆಂದು ತೀರ್ಮಾನಿಸಿದರು. (೨) ಮೀಟಿಂಗ್ ಕಾಲದಲ್ಲಿಯೇ ಪ್ರಚುರಪಡಿಸಿದ ಚಂದಾ ಪಟ್ಟಿಯಲ್ಲಿ ಅವರವರು ದಯವಿಟ್ಟು ಹಾಕಿರುವ ಮೊಬಲಗು ಮತ್ತು ಮುಂದೆ ಈ ಸತ್ಕೆಲಸಕ್ಕೆ ಜನಗಳು ಕೊಡಬಹುದಾದ ಮೊಬಲಗನ್ನು ವಸೂಲ್ ಮಾಡಲು ಒಂದು ಕಮಿಟಿಯನ್ನು ಏರ್ಪಡಿಸಬೇಕೆಂದೂ, ಅದಕ್ಕೆ ಮ|| ಮುನುಸ್ವಾಮಿ ಮೊದಲಿಯಾರ್ರು, ಮ|| ಸಂತಾನಯ್ಯಂಗಾರ್ರು ಮತ್ತು ಮಿ|| ಪೀರ್ ಬೇಗ್ ಸಾಹೇಬರು ಇವರುಗಳನ್ನು ಮೆಂಬರುಗಳಾಗಿ ಇರಬೇಕೆಂದು ನ್ನೂ, ಮಿ|| ಕುಲ್ ಸಾಹೇಬರು ಪ್ರಪೋಜ್ ಮಾಡಿದ್ದನ್ನು ಮಿ|| ಸಯದ್ ಪೀರ್ ಬೇಗ್ ಸಾಹೇಬರು ಅನುಮೋದಿಸಿದರು. ಅದರಂತೆ ಹಾಜರಿದ್ದ ಜನಗಳು ಒಪ್ಪಿ ತೀರ್ಮಾನಮಾಡಿದರು. ಮೇಲ್ಕಂಡ ಮೆಂಬರುಗಳಿಗೆ ಈ ಮುಂದಕ್ಕೆ ಆಗಬೇಕಾದ ಕರಡೂಪು ಮಾಡುವದಕ್ಕೆ ಅಧಿಕಾರ ಸಹ ಕೊಟ್ಟು ತೀರ್ಮಾನಮಾಡಿರುವದೂ ಅಲ್ಲದೆ ಮೇಲ್ಕಂಡ ಮೆಂಬರುಗಳು ಟ್ರೆಜರರ್ ಮತ್ತು ಜಾಯಿಂಟ್ ಟ್ರೆಜರರ್‌ಗಳಾಗಿ ಸಹ ಗೊತ್ತುಮಾಡಲಾಯಿತು. ಮೇಲ್ಕಂಡ ಮೀಟಿಂಗಿಗೆ ಅಮಲ್ದಾರರೂ, ಪೋಲೀಸ್ ಇನ್ಸ್‌ಪೆಕ್ಟರರೂ, ಪೋಸ್ಟ್ ಮಾಸ್ಟರರೂ ಇನ್ನೂ ಕೆಲವು ದೊಡ್ಡ ಮನುಷ್ಯರು ವರ್ತಕರೂ ಬಂದಿದ್ದರು. ಪಂಚಮಾ ಸ್ಕೂಲ್‌ಮಾಸ್ಟರ್ ಮ| ಜಿ ಮನೋವರಾಜು ಅಗ್ರಾಸನಾಧಿಪತಿಯಾಗಿದ್ದರು. ಮಿ|| ಕುಲ್ ಸಾಹೇಬರೂ, ಮ|| ಸಂತಾನಯ್ಯಂಗಾರ್ರೂ ಉಪನ್ಯಾಸಮಾಡಿದರು.

ಬಾತ್ಮಿದಾರ್

ಬೆಂಗಳೂರು ವೆಸ್ಲಿಯನ್ ಲಿಟರರೀ ಸಂಘವು.

ಕಳೆದ 9 ನೇ ತಾ ಶನಿವಾರ ಸಾಯಂಕಾಲ ಬೆಂಗಳೂರು ವೆಸ್ಲಿಯನ್ ಲಿಟರರೀ ಸಂಘದ ಬಾಲಕರು ಬಹಳ ವಿಜೃಂಭಣೆಯಿಂದ ತಮ್ಮ ಸಂಘದ ಎರಡನೇ ವಾರ್ಷಿಕೋತ್ಸವವನ್ನು ನೆರವೇರಿಸಿದರು. ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್‌ರವರು, ಅ|| ಕಮಿಷನರುಗಳು, ಕೆಲವು ಅಡ್ವೋಕೇಟರು, ಇತರ ಪಾಠಶಾಲೆಗಳ ಉಪಾಧ್ಯಾಯರು, ಬಾಲಕರುಗಳಿಂದ ಹೈ ಸ್ಕೂಲ್ ಮಂದಿರವು ತುಂಬಿರುವಲ್ಲಿ ಗೌರ್ನಮೆಂಟ್ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರ್ ರಾದ ಡಾಕ್ಟರ್ ಪಿ ಎಸ್ ಅಚ್ಯುತರಾಯರವರು ಅಗ್ರಾಸನವನ್ನು ವಹಿಸಿದರು. ಈ ಸಂಘದ ಪ್ರೆಸಿಡೆಂಟರಾದ ರೆವ್ ಫುಲ್ಲರ್ ಸಾಹೇಬರು ಹಾಜರಾಗಿದ್ದರು. ಪ್ರೋಗ್ರಾಮಿನಂತೆ ಗೊತ್ತಾದ ವಿಷಯಗಳೂ ಬಾಲಕರಿಂದ ಬಹಳ ವಿನೋದವಾಗಿ ನಡೆಸಲ್ಪಟ್ಟವು. ಸಂಘದ ಸೆಕ್ರೆಟರಿಯಾದ ಮ|| ಭುಜಂಗರಾಯರಿಂದ ಎರಡನೇ ವರುಷದ ರಿಪೋರ್ಟು ಓದಲ್ಪಟ್ಟಿತು. ಸದರೀ ರಿಪೋರ್ಟು ಬಹಳ ಶ್ಲಾಘನೀಯವಾಗಿತ್ತು. ರಿಪೋರ್ಟಿನಲ್ಲಿ ಕಂಡ ಕೆಲವು ಮುಖ್ಯ ಅಂಶಗಳಾವವೆಂದರೆ —ಮೈಸೂರು ಗೌರ್ನಮೆಂಟ್ ಕಂಟ್ರೋಲರವರ ಅಸಿಸ್ಟೆಂಟರಾದ ಮ|| ಎಸ್ ಭಕ್ತವತ್ಸಲಂ ರವರೂ, ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮ|| ಟಿ ಬೊಕ್ಕಣ್ಣನವರೂ, ಅ|| ಕಮಿಷನರ್ ರಾದ ಮ, ಬಿ ರಾಮಣ್ಣನವರೂ ಸಹ ಈ ಸಂಘದ ಸಂರಕ್ಷಕರಾಗಿರುತ್ತಾರೆ. ರೆವ್ ಫುಲ್ಲರ್ ಸಾಹೇಬರು ಸೀಮೆಗೆ ಹೋಗಿರುವ ಕಾಲದಲ್ಲಿ ಅವರಿಗೆ ಬದಲು ರೆವ್ ಡಬ್ಲ್ಯು ಪರ್ಸ್ಕಿನ್ ಸಾಹೇಬರೇ ಪ್ರೆಸಿಡೆಂಟರಾಗಿದ್ದುಕೊಂಡು, ಬಾಲಕರಿಗೆ ಪ್ರೋತ್ಸಾಹಮಾಡುತ್ತಿದ್ದರು. ಕಳೆದ ವರುಷದ ಉತ್ಪತ್ತಿ ರೂ 93-0-10 ಪೈ, ಖರ್ಚು ರೂ 60-11-6 ಪೈ, ಜಾತಾ ಉಳಿದಿರುವದು ರೂ 31-8-1 ಪೈ. ಈ ಸಂಘದ ಬಾಲಕರು ಕಳೆದ ವರುಷ ಮಾರ್ಚಿ 22 ನೇ ತಾ ಶೇಕ್ಸ್‌ಪಿಯರ್ ಮಹಾಕವಿಯಿಂದ ರಚಿತವಾದ ಆಟಗಳ ಪೈಕಿ ಇಂಗ್ಲೀಷಿನಲ್ಲಿ ಆರು ಸೀನುಗಳನ್ನೂ, ಕನ್ನಡದಲ್ಲಿ ಒಂದು ಸೀನನ್ನೂ ಆಡಿ ನೋಟಕರಿಗೆ ಮನೋರಂಜನೆಯನ್ನುಂಟುಮಾಡಿದರು. ಈ ಹೈ ಸ್ಕೂಲಿನಲ್ಲಿ ಮೊದಲು ವಿದ್ಯಾಭ್ಯಾಸಂಗಮಾಡಿ ಈಗ ಮದ್ರಾಸ್ ಮೆಡಿಕಲ್ ಕಾಲೇಜಿನಲ್ಲಿ ಡಾಕ್ಟರ್ ಪರೀಕ್ಷೆಗೆ ಓದುತ್ತಿರುವ ಮ|| ಎಂ ಶಂಕರರಾಯರು ಈ ಸಂಘದ ಪುಸ್ತಕ ಭಂಡಾರಕ್ಕಾಗಿ ಐವತ್ತು ಪುಸ್ತಕಗಳನ್ನು ಕೊಟ್ಟಿರುತ್ತಾರೆ. ಇವಲ್ಲದೆ ಸಂಘದ ಸೆಕ್ರೆಟರಿ ಮತ್ತು ನಾಯಕರು ಸಾಹಸಪಟ್ಟು ಇನ್ನೂ 150 ಪುಸ್ತಕಗಳನ್ನು ಸಂಗ್ರಹ ಮಾಡಿದಾರೆ. ಸಂಘದ ಪ್ರೆಸಿಡೆಂಟರು ತಮ್ಮ ಭಾಷಣಮಾಡುವಾಗ್ಗೆ ಇಂಡಿಯಾ ದೇಶದಲ್ಲಿ ಬಾಲಕರು ಅನೇಕ ಸಂಘಗಳನ್ನೂ, ಫುಟ್‌ಬಾಲ್ ಕ್ಲಬ್ಬುಗಳನ್ನೂ ಮಾಡಿಕೊಂಡು ತಾವು ಓದುವ ಶಾಲೆಗಳನ್ನು ಮರೆತು, ಪ್ರತ್ಯೇಕವಾಗಿ ನಡೆಸುಕೊಳ್ಳುತ್ತಾರೆಂದೂ, ಈ ರೀತಿ ಬೇರೆ ಬೇರೆಯಾಗಿ ಸ್ಥಾಪಿಸಿಕೊಳ್ಳುವ ಸಂಘಗಳೇ ಮುಂತಾದವು ಶಾಶ್ವತವಾಗಿ ನಿಲ್ಲುವದು ಅಪರೂಪವೆಂದೂ, ಬಾಲಕರು ಈ ದಿನ ನಡಿಸಿದ ಕೂಟವು ಬಾಲಕರಿಗೆ ಧೈರ್ಯ ಮತ್ತು ಇತರ ವಿಧವಾದ ಪ್ರಯೋಜನವನ್ನು ಉಂಟುಮಾಡುವದೆಂದೂ ತಿಳಿಸಿದರು. ಡಾಕ್ಟರ್ ಅಚ್ಯುತರಾಯರು ತಮ್ಮ ಭಾಷಣದಲ್ಲಿ ಬಾಲಕರು ಈ ದಿನ ನಡಿಸಿದ ಕೂಟವು ಬಹಳ ಆನಂದವನ್ನುಂಟುಮಾಡಿತೆಂದೂ, ಬಾಲಕರು ತಮ್ಮ ಪೋಷಕರಾದ ತಂದೆ ತಾಯಿಗಳಿಗೂ, ಗುರುಗಳಿಗೂ, ತಮ್ಮನ್ನಾಳುವ ದೊರೆಗೂ ಕೃತಜ್ಞರಾಗಿರಬೇಕೆಂದೂ ತಿಳಿಸಿದರು ಮತ್ತು ಬಹಳ ಸಂತೋಷದಿಂದ ತಾವೂ ಸಹ ಈ ಸಂಘಕ್ಕೆ ಪೋಷಕರಾಗಿರುತ್ತೇವೆಂದು ಹದಿನೈದು ರೂಪಾಯಿ ಕೊಡುವಂತೆ ಹೇಳಿದರು. ಒಬ್ಬ ಯೂರೋಪಿಯನ್ ಬಾಲಕನು ಮಾಡಿದ ಪಾಟುಗಳು ಬಹಳ ಶ್ಲಾಘನೀಯವಾಗಿದ್ದವು. ಈ ಸಂಘದ ಸೆಕ್ರೆಟರಿಯು ಇನ್ನೂ ಬಾಲ್ಯವಯಸ್ಸಿನವರಾದರೂ ಇವರ ಚಟುವಟಿಕೆಯೂ, ಬುದ್ಧಿಕುಶಲತೆಯೂ ಸಂತೋಷಪ್ರದವಾಗಿವೆ

ಸಭಿಕರಲ್ಲೊಬ್ಬ.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಕರೆಸ್ಪಾಂಡೆನ್ಸ್

ಆಸ್ಪತ್ರೆ ಬೇಕು

ಆಯ್ಯಾ,

ನಮ್ಮ ದಯಾಳುಗಳಾದ ಮೈಸೂರು ಸರ್ಕಾರದವರು ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಒಂದು ಸರ್ಕಾರಿ ಆಸ್ಪತ್ರೆಯೂ, ತೀರ್ಥಹಳ್ಳಿಯಿಂದ 9 ಮೈಲ್ ಫಾಸಲೆ ಇರುವ ಮೇಗ್ರವಳ್ಳಿಯಲ್ಲಿ ಒಂದು ಆಸ್ಪತ್ರೆಯೂ, ಅಲ್ಲಿಂದ 9 ಮೈಲ್ ಫಾಸಲೆ ಇರುವ ಆಗುಂಬೆಯಲ್ಲಿ ಒಂದು ಆಸ್ಪತ್ರೆಯೂ, ತೀರ್ಥಹಳ್ಳಿಯಿಂದ 18 ಮೈಲ್ ಫಾಸಲೆ ಇರುವ ಮಂಡಗದ್ದೆಯಲ್ಲಿ ಒಂದು ಆಸ್ಪತ್ರೆಯೂ ಇಡಿಸಿರುತ್ತಾರೆ. ಈ ಮಧ್ಯ ಒಂಭತ್ತು ಮೈಲ್ ಉಳ್ಳ ಮಾಳೂರೆಂಬ ಕಸಬದಲ್ಲಿ ಆಸ್ಪತ್ರೆ ಇಡಿಸದೆ ಇರುವದು ಅನೇಕ ಬಡಬಗ್ಗರಿಗೆ ತುಂಬಾ ಅನನುಕೂಲವಾಗಿರುತ್ತೆ. ದಯಾಳು ಸರ್ಕಾರದವರು ಮಂಡಗದ್ದೆಯಲ್ಲಿ ಹಾಲಿ ಇರತಕ್ಕ ಸರ್ಕಾರಿ ಆಸ್ಪತ್ರೆಯನ್ನು ತೀರ್ಥಹಳ್ಳಿಗೂ, ಮಂಡಗದ್ದೆ ಮಧ್ಯಸ್ಥವಾಗಿರುವ ಮಾಳೂರೆಂಬ ಕಸಬಕ್ಕೆ ವರ್ಗಾಯಿಸಿ ಇಡಿಸಿಕೊಟ್ಟರೆ ಅನೇಕ ರೋಗಿಗಳಿಗೆ ತುಂಬಾ ಅನುಕೂಲವಾಗುತ್ತೆ. ಹಾಗೂ ಮಂಡಗದ್ದೆಯಲ್ಲಿ ಮಿಷನ್ ಆಸ್ಪತ್ರೆ ಒಂದು, ಸರ್ಕಾರಿ ಆಸ್ಪತ್ರೆ ಒಂದು, ಈ ಎರಡು ಆಸ್ಪತ್ರೆ ಇರುವದರಿಂದ ಜನಗಳಿಗೇನೂ ಹೆಚ್ಚಾದ ಸೌಲಭ್ಯ ದೊರೆಯುವದಿಲ್ಲ. ಮತ್ತು ಈ ಹಿಂದೆ ಮಂಡಗದ್ದೆ ಸರ್ಕಾರಿ ಆಸ್ಪತ್ರೆಯೊಂದನ್ನು ತೂದೂರುಕಟ್ಟೆಗೆ ವರ್ಗಾಯಿಸಿಕೊಡಲು ಅರ್ಜಿ ಬರೆದುಕೊಂಡಂತೆ ಕೇಳುತ್ತೇವೆ. ತೂದೂರು ಗ್ರಾಮ ಎಷ್ಟು ಕುಗ್ರಾಮವಾಗಿರುತ್ತೆ. ಮಾಳೂರು ಕಸಬಾದಲ್ಲಿ ಸರ್ಕಾರಿ ಕಟ್ಟಡಗಳು, ಬಂಗ್ಲೆ, ಛತ್ರ, ಮುಸಾಫರಖಾನೆ, ಸ್ಕೂಲ್, ಪೋಸ್ಟಾಫೀಸು, ಎಕ್ಸೈಜು ಆಫೀಸು, ಫಾರೆಸ್ಟು ಆಫೀಸು, ಇವೆಲ್ಲಾ ಇರುವದಲ್ಲದೆ ಜನಗಳ ಸಮೂಹವೂ, ಪ್ರಯಾಣಿಕರ ಪಂಕ್ತಿಗಳೂ ಸಹ ಇರುವವು. ಆದ್ದರಿಂದ ನಮ್ಮನ್ನು ಕಾಪಾಡತಕ್ಕ ದಯಾಳು ಸರ್ಕಾರದವರು ಮೇಲ್ಕಂಡ ಮಾಳೂರಿಗೇನೇ ಮಂಡಗದ್ದೆಯಲ್ಲಿರುವ ಸರ್ಕಾರಿ ಆಸ್ಪತ್ರೆಯೊಂದನ್ನು ವರ್ಗಾಯಿಸಿ ಕೊಟ್ಟಾರೆಂದು ತುಂಬಾ ಹಾರೈಸುತ್ತೇನೆ. ಈ ಬಗ್ಗೆ ತಕ್ಕ ಸಲಹೆಯನ್ನು ನಮ್ಮ ಡೆಪ್ಯುಟಿ ಕಮಿಷನರ್‌ರವರು ದಿವ್ಯ ಚಿತ್ತಕ್ಕೆ ತಂದು ಬಡ ರೈತರನ್ನು ಕಾಪಾಡ್ಯಾರಾಗಿ ನಿರೀಕ್ಷಿಸುವ

ದೇಶಾಭಿಮಾನಿ

ನೆಲಗಡಲೆ ಬೆಳೆಯುವುದರ ಪರಿಣಾಮ

ಆಯ್ಯಾ,

ಪಾವಗಡ ತಾಲ್ಲೂಕಿನಲ್ಲಿ ಯಾವಾಗಲೂ ರಾಗಿ, ನವಣೆ, ಜೋಳ, ಸಜ್ಜೆ, ತೊಗರಿ, ಅವರೆ ಮುಂತಾದ ಧಾನ್ಯಗಳ್ಯಾವತ್ತೂ ವಿಶೇಷವಾಗಿ ಬೆಳೆಯುತ್ತಾ ಇದ್ದವು. ಅಂಥಾದ್ದು ಈಗ ಸುಮಾರು 2-3 ವರ್ಷಗಳ ಲಾಗಾಯತು ತಪ್ಪಿ ಪ್ರತಿ ಒಬ್ಬ ರೈತನೂ ಈ ಧಾನ್ಯಗಳು ಫಸಲಿಡುವದು ಮನ್ನಾಮಾಡಿ ಕಡಲೆಕಾಯನ್ನು ಯಾವತ್ತು ಜಮೀನಿಗೂ (ಖುಷ್ಕಿ) ಬೆಳೆ ಇಡುವದರಿಂದ ಮೇಲ್ಕಂಡ ಧವಸಗಳು ಸುತರಾಂ ಬೆಳೆಯುವದೇ ಇಲ್ಲ. ಇದರಿಂದ ಧಾನ್ಯದ ಧಾರಣೆಗಳು ಏರಾಯಿತು. ಬಡಬಗ್ಗರು ಬದುಕುವದು ತುಂಬಾ ಕಷ್ಟವಾಗಿದೆ. ಈ ಕಡಲೆಕಾಯನ್ನು ಒಕ್ಕುವ ಕಾಲದಲ್ಲಿ ಬಡ ಜನಗಳು ಕೂಲಿಗಾಗಿ ಹೋಗಿ ಹಗಲೆಲ್ಲಾ ಕಡಲೆಕಾಯಿ ತಿನ್ನುವದಲ್ಲದೆ ಸಾಯಂಕಾಲ ಪ್ರತಿ ಕೂಲಿಯವರಿಗೂ ರೈತನು ಕೂಲಿಗಾಗಿ ಕೊಡುವ ಕಡಲೆಕಾಯನ್ನು ತಂದು ಮನೆಯಲ್ಲಿ ಮಕ್ಕಳು ಮರಿಗಳಿಗೂ ಸಹ ಕೊಡುತ್ತಾರೆ. ಕೆಲವರು ಹೊಟ್ಟೆಗಿಲ್ಲದೆ ರಾತ್ರಿ ಕಾಲದಲ್ಲಿ ಬರೀ ಕಡಲೆಕಾಯನ್ನೇ ತಿಂದು ಮಲಗುತ್ತಾರೆ. ಇದರಿಂದ ಕಲರಾ, ಜ್ವರಾ ಮೊದಲಾದ ಕಾಯಿಲೆಗಳು ಹುಟ್ಟಿ ಅನೇಕ ಜನರು ನರಳಾಡುತ್ತಾ ಇದಾರೆ. ಮತ್ತೆ ಕೆಲವರು ಮೃತಪಟ್ಟರು. ಕಾಡಿನಲ್ಲಿರುವ ನರಿಗಳು ಕಡಲೆಕಾಯಿ ತಿಂದು ಪಿತ್ಥಾಧಿಕವಾಗಿ ಅಲ್ಲಲ್ಲೇ ಸುತ್ತಾಡಿ ಅನೇಕ ಸತ್ತವು. ನರಿಗಳು ಈಚೆಗೆ ಈ ಕಾಯನ್ನು ತಿನ್ನುವದನ್ನೇ ಬಿಟ್ಟಿರುತ್ತವೆ. ಇದರ ಎಣ್ಣೆಯನ್ನು ವರ್ತಕರು ತುಪ್ಪ ಮತ್ತು ಇತರ ಎಣ್ಣೆಗಳಿಗೆ ಬೆರಸಿ ಮಾರುವದರಿಂದ ಪ್ರಜೆಗಳು ಇದನ್ನು ತಿಂದು ಅನೇಕ ಕಾಯಿಲೆಗಳಿಗೆ ಒಳಪಟ್ಟಿರುತ್ತಾರೆ. ಪ್ರತಿ ರೈತನೂ ತನಗೆ ಇರುವ ಎಲ್ಲಾ ಖುಷ್ಕಿ ಜಮೀನಿಗೂ ಇದನ್ನೇ ಫಸಲಿಡುತ್ತಾ ಬಂದರೆ ಕೂಲಿನಾಲಿಯಿಂದ ಜೀವನಮಾಡುತ್ತಿದ್ದ ಬಡವರೆಲ್ಲರೂ ಕಷ್ಟಗಳಿಗೊಳಪಟ್ಟು ಸಾಯಬೇಕಾಗಿದೆ. ಇದನ್ನೆಲ್ಲಾ ತಿಳಿದು ಬ್ರಿಟಿಷ್ ಗವರ್ನ್‌ಮೆಂಟಿನವರು ಅವರ ಸೀಮೆಯಲ್ಲಿ ಕಡಲೆಕಾಯಿ ಫಸಲನ್ನು ಇಡಕೂಡದೆಂದೂ, ಹಾಗೆ ಇಡಬೇಕಾದ ಪಕ್ಷದಲ್ಲಿ ಸರ್ಕಾರದಿಂದ ಲೈಸನ್ಸು ಪಡೆದು ಕಂದಾಯ ಜಾಸ್ತಿಯಾಗಿ ಕೊಟ್ಟು ಕಡಲೆಕಾಯಿ ವ್ಯವಸಾಯ ಮಾಡಬೇಕೆಂದೂ ಕಾನೂನನ್ನು ಏರ್ಪಡಿಸಿರುತ್ತಾರೆಂತ ವರ್ತಮಾನ ಕೇಳುತ್ತೇವೆ. ಇದೇ ರೀತಿಯಾಗಿ ದಯಾಳುಗಳಾದ ನಮ್ಮ ಸರ್ಕಾರದವರೂ ಈ ನಷ್ಟ ಕಷ್ಟಗಳನ್ನು ನಿವಾರಣೆಮಾಡಿ ಪ್ರಜೆಗಳಿಗೆ ಸುಖವನ್ನುಂಟುಮಾಡುತ್ತಾರೆಂದು ನಂಬಿರುತ್ತೇವೆ.

ಪ್ರಜಾಹಿತೈಷಿ.

ಮಲೆನಾಡಿನ ಕಷ್ಟಗಳು

ಆಯ್ಯಾ,

ಈ ಮಲೆನಾಡಿನ ಪ್ರಜೆಗಳು ಈಚೆಗೆ ಹೆಚ್ಚಾಗಿ ಮರಣಹೊಂದುವ ಕಾರಣ ತಿಳಿಯಬೇಕೆಂದು ನಮ್ಮನ್ನಾಳುವ ಪ್ರಭುತ್ವದವರು ಪ್ರಯತ್ನಿಸುತ್ತಲಿದಾರೆ. ಇದು ಬಹು ವಂದನಾರ್ಹವಾದ ಸಂಗತಿಯಾಗಿದೆ. ಈ ಪ್ರಜಾ ಲಯಕ್ಕೆ ಕಾರಣಭೂತವಾದ ವಿಷಯಗಳು ತೋರಬರುವದನ್ನು ಸರಕಾರದವರು ಗಣನೆಗೆ ತಕ್ಕೊಳ್ಳಬೇಕಾಗಿದೆ. ಈ ಉಷ್ಣ ಪ್ರದೇಶಗಳಲ್ಲಿ ಸರಾಯಿ, ಬ್ರಾಂದಿ ಮುಂತಾದ್ದನ್ನು ಈಚೆಗೆ ಜನರು ಸ್ವೇಚ್ಛೆಯಾಗಿ ಸೇವನೆ ಮಾಡುತ್ತಾ ಬಂದಿರುವುದರಿಂದಲೂ, ಬೀಡಿ ಚುಟ್ಟಾ ಕುಡಿಯುವದರಿಂದಲೂ ಅನೇಕ ವಿಧಗಳಾದ ಕಾಹಿಲೆಗಳು ಸಂಭವಿಸುವವು. ಇಂಥವರಲ್ಲಿ ಮಕ್ಕಳಾಗುವದರಿಂದ ದುರ್ಬಲ ಉತ್ಪತ್ತಿಯಲ್ಲಿ ಜನಿಸಿದ ಮಕ್ಕಳು ಎಷ್ಟು ಬಲಿಷ್ಠರಾಗಬಹುದು ? ಈ ರೋಗಜನ್ಯ ದುರ್ಬಲದವರು ಎಷ್ಟು ಕಾಲ ಬದುಕ್ಯಾರು ? ಈ ಪಾನಾದಿಗಳಿಗೆ ನಿರ್ಬಂಧವನ್ನು ಸರಕಾರದವರು ಮಾಡತಕ್ಕದ್ದಾಗಿದೆ

ದಿವಾನ್ ಸಾಹೇಬರವರು ತೀರ್ಥಹಳ್ಳಿ ಮೊಕ್ಕಾಂಗೆ ದಯಮಾಡಿಸಿದಾಗ ಇಲ್ಲಿನ ಪ್ರಜೆಗಳಿಗೆ ಉಂಟಾದ ಫಾರೆಸ್ಟು ಬಾಬಿನ ತೊಂದರೆಯನ್ನು ನಿವಾರಣೆ ಮಾಡಿಕೊಡಬೇಕಾಗಿ ಅರ್ಜಿ ಮೂಲಕ ಹೇಳಿಕೊಂಡಿದ್ದೆವು. ಈ ವರಿವಿಗೂ ಸದರಿ ತೊಂದರೆ ಪರಿಹರಿಸಿ ಹುಕುಂ ದಯಪಾಲಿಸಲಿಲ್ಲ. ಆದರೆ ಇವರು ಮಹತ್ತಾದ ಕಾರ್ಯಗಳಲ್ಲಿ ಪ್ರವರ್ತಕರಾಗಿರುವದರಿಂದ ಬಡಪ್ರಜೆಗಳ ಅಹವಾಲು ಗಮನಕ್ಕೆ ಬಂದಿದೆಯೋ ಇಲ್ಲವೋ ತಿಳಿಯದು. ಇನ್ನಾದರೂ ನಮ್ಮಗಳ ಕಷ್ಟಗಳನ್ನು ಜಾಗ್ರತೆ ಪರಿಹರಿಸಿಕೊಟ್ಟಾರಾಗಿ ನಂಬಿದೇವೆ

ಈ ಪ್ರಾಂತ್ಯ ಸಕಾಲಗಳಲ್ಲಿ ಮಳೆ ಇಲ್ಲದೆ ಪೈರುಗಳ ಅಭಿವೃದ್ಧಿಯೇ ಕೆಟ್ಟುಹೋಗುತ್ತಾ ಇದೆ. ಒಟ್ಟು ಲೆಕ್ಕಕ್ಕೇನೋ ಮಳೆ ಬಂದಂತೆ ಲೆಕ್ಕಿಸಿದರೂ ಕಾಲಕಾಲಗಳಲ್ಲಿ ಸರಿಯಾಗಿ ಬರುವದಿಲ್ಲ. ಅದೇ ರೀತಿ ಬಹು ವರುಷಗಳಿಂದಲೂ ಋತುಧರ್ಮಗಳು ಸರಿಯಾಗಿ ನಡಿಸದೆ ಇರುವದರಿಂದ ಜಮೀನುಗಳಲ್ಲಿ ಸರಿಯಾದ ಫಸಲೇ ಆಗುವದಿಲ್ಲ. ಆದ್ದರಿಂದ ಸರಕಾರದವರು ದೇಶಕಾಲವನ್ನು ಅನುಸರಿಸಿ ಕಂದಾಯಗಳನ್ನು ಕಮ್ಮಿ ಹಾಕಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ. ಧಾರಣೆವಾಸಿ ಇದೆಯೆಂತ ಯೋಚಿಸಬಹುದು. ಆದರೆ ಕೂಲಿಯವರಿಗೆ ಮೊದಲಿನ ನಾಲ್ಕು ಪಾಲು ಜಾಸ್ತಿ ಕೂಲಿಕೊಡಬೇಕು. ರೈತರು ಕೊಳ್ಳುವ ಜಿನಸಿ ಮುಂತಾದ ಆಹಾರ ಸಾಮಾನುಗಳ ಕ್ರಯವೂ ಹಿಂದೆಗಿಂತ ಎರಡುಮೂರು ಪಾಲು ಜಾಸ್ತಿಯಾಗಿದೆ. ಈ ಲೆಕ್ಕ ನೋಡಿದರೆ ಮತ್ತೂ ಕಷ್ಟನಷ್ಟ ಕಾಣುತ್ತದೆ.

ಮಲೆನಾಡಿನ ರೈತರು ಜಮೀನಿನ ವ್ಯವಸಾಯ ಮಾಡಬೇಕಾದರೆ ಆಯಾ ಜಮೀನುಗಳ ತಲೆಕಟ್ಟಿನಲ್ಲಿ ವಾಸಮಾಡಿದ ವಿನಹ ಆಗುವದಿಲ್ಲ. ಹಂಗಾಂ ಕಾಲಗಳಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಯಲ್ಲಿ ವ್ಯವಸಾಯ ಮಾಡಲು ಹೋದ ರೈತರು ಆ ಸ್ಥಳಗಳಲ್ಲಿ ವಾಸಕ್ಕೂ ಜಾನವಾರುಗಳಿಗೂ ಸ್ಥಳಗಳನ್ನು ಮಾಡಿಕೊಳ್ಳದೆ ವ್ಯವಸಾಯ ಪ್ರಾರಂಭಿಸುವದಕ್ಕೆ ಆಗುವದಿಲ್ಲ. ಈ ಬಗ್ಗೆ ಭಾವಣೆಗಳನ್ನು ಹಾಕಿಕೊಳ್ಳಲು ಸರಕಾರಕ್ಕೆ ದರಖಾಸ್ತುಕೊಟ್ಟು ಕ್ರಿಯನಡೆದು ಸ್ಥಳ ಸಿಕ್ಕಬೇಕಾದರೆ ಚಾಲ್ತಿಸಾಲಿನಲ್ಲಿ ಹ್ಯಾಗೂ ಸಿಕ್ಕುವದಿಲ್ಲ. ನಂತರ ಬೇಕಾಗುವ ವ್ಯವಧಾನವನ್ನು ತೀಸಲು ಸಾಧ್ಯವಿಲ್ಲ. ಆದ್ದರಿಂದ ರೈತರು ವ್ಯವಸಾಯದ ಬಗ್ಗೆ ವಸತಿಗೆ ತಕ್ಕ ಭಾವಣೆಗಳನ್ನು ಹಾಕಿಕೊಳ್ಳಬೇಕು. ಬಾಕಿ ಸ್ಥಳದಂತೆ ಸುಧಾರಿಸಿ ಮಾಡಲು ಈ ಸ್ಥಳದ ಮಳೆ ಮುಂತಾದ ಕಾರಣಗಳಿಂದ ಯತ್ನವಿಲ್ಲ. ಈ ರೀತಿ ಮಾಡಿಕೊಂಡು ಜಮೀನು ವ್ಯವಸಾಯ ಮಾಡುವಲ್ಲಿ ಇಂಥಾ ಸ್ಥಳ ಸರಕಾರದ್ದು, ಇದರಲ್ಲಿ ಮನೆ ಕಟ್ಟಿದ್ದು ತಪ್ಪು ಎಂತ ರಿಕಾರ್ಡುಮಾಡಿ ಮನೆಯನ್ನು ಕೀಳಿಸುವರು, ಅಥವಾ ಹೊರಲಾರದ ದಂಡವನ್ನು ಹಾಕಿ ವಸೂಲು ಮಾಡುತ್ತಾರೆ. ಇದರಿಂದ ರೈತರಿಗೆ ಬಹಳ ತೊಂದರೆಗೆ ಕಾರಣವಾಗಿದೆ. ಆದಕಾರಣ ವ್ಯವಸಾಯಗಾರರು ಜರೂರಿಯತಿಗಾಗಿ ಈ ರೀತಿ ಮಾಡಿಕೊಳ್ಳುವ ವಾಸದ ಮನೆ ಜಾನವಾರ್ ಕೊಟ್ಟಿಗೆಗಳ ಬಗ್ಗೆ ಸರಕಾರದವರು ಸ್ಥಳಕ್ಕೂ ಸಾಟೂಕ್ಕೂ ರೈತರಿಗೆ ಸ್ವತಂತ್ರ್ಯ ಮಾಡಿಕೊಳ್ಳುವ ರಿಯಾಯ್ತಿ ತೋರಿಸಬೇಕು. ಈ ರೀತಿ ಮಾಡದಿದ್ದರೆ ರೈತರು ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿ ಹೀನಸ್ಥಿತಿಗೆ ಬಂದು ವ್ಯಥೆಪಡುತ್ತಲೇ ಜೀವಮಾನವನ್ನು ಕಳೆಯಬೇಕಾಗುತ್ತದೆ.

ಈ ತಾಲ್ಲೋಕಿನಲ್ಲಿ ಅಗ್ರಹಾರ ಮಠದೇವರು ಎಂತ ಬಾಕಿ ಇದ್ದು ಸರಕಾರಕ್ಕೆ ಸಾವಿರ ರೂಪಾಯಿಗಳ ಮೇಲೆ ಕಂದಾಯ ಕೊಡತಕ್ಕವುಗಳು ಅನೇಕ ಇರುತ್ತವೆ. ಹೀಗಿದ್ದಾಗ್ಯೂ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರಾಗಿ ಒಂದೊಂದು ಅಗ್ರಹಾರಕ್ಕೆ ಒಬ್ಬೊಬ್ಬರಂತೆಯೂ ಮಠಗಳಿಗೆ ಒಬ್ಬರಂತೆಯೂ ಚುನಾವಣೆ ಮಾಡಿರುವದು ನ್ಯಾಯವಲ್ಲ. ಮುಂದಾದರೂ ಸರಕಾರದವರು ಆ ರೀತಿ ನಡಿಸಿಕೊಡಬೇಕು.

ಈ ಮೇಲ್ಕಂಡ ಐದು ಕಲಂಗಳನ್ನು ನಮ್ಮ ತಾಲ್ಲೋಕ್ ಮತ್ತು ಡಿಸ್ಟ್ರಿಕ್ಟ್ ಮೆಂಬರುಗಳು ಜನರಲ್ ಸಭೆಗಾಗಿ ಇಟ್ಟುಕೊಂಡು ಸಭೆಯಲ್ಲಿ ಚರ್ಚಿಸ್ಯಾರೆಂತ ನಂಬಿದೇನೆ.

ನ್ಯಾಯದರ್ಶಿ.

ದಿವಾನ್‌ರವರ ಸರ್ಕೀಟು

ದಾವಣಗೆರೆ

1913ನೇಯ ಇಸವಿ ಆಗಸ್ಟ್ 11ನೇಯ ತಾರೀಖಿನಲ್ಲಿ ಹರಿಹರದ ಬಳಿ ತುಂಗಭದ್ರಾ ನದಿಯ ತೀರದಲ್ಲಿ ನೀರನ್ನು ಎತ್ತುವುದಕ್ಕಾಗಿ ಏರ್ಪಡಿಸಿದ ಯಂತ್ರ ಸ್ಥಾಪನೆಯ ಆರಂಭೋತ್ಸವ ಕಾಲದಲ್ಲಿ ಶ್ರೀಮಾನ್ ದಿವಾನ್ ಸಾಹೇಬರವರು ಅಪ್ಪಣೆಕೊಡಿಸಿದ ಉಪನ್ಯಾಸ—

ಮಹಾಶಯರೇ,—ಮ|| ಭೀಮಪ್ಪನವರು ಏರ್ಪಡಿಸಿರುವ ಸ್ವಾರಸ್ಯವಾದ ಈ ಜಲಯಂತ್ರ ಸ್ಥಾಪನೆಯ ಸಾಹಸಕಾರ್ಯವನ್ನು ಶ್ರೀಮನ್ ಮಹಾರಾಜಾ ಸಾಹೇಬ್ ಬಹಾದುರವರ ಸರ್ಕಾರದವರು ಮೆಚ್ಚುತ್ತಾರೆಂಬುದನ್ನು ತಮ್ಮಗಳಿಗೆಲ್ಲಾ ತಿಳಿಯಪಡಿಸುವುದಕ್ಕಾಗಿ ನಮ್ಮ ಮಿತ್ರರಾದ ಮಿ|| ಚಾಟರ್‌ಟನ್ ಸಾಹೇಬರವರ ಅಪೇಕ್ಷೆಯಂತೆ ಈ ದಿನ ನಾವು ಇಲ್ಲಿಗೆ ಬಂದಿದ್ದೇವೆ. ತುಂಗಭದ್ರಾ ನದಿಯು ನಮ್ಮ ಮಲೆನಾಡು ಸೀಮೆಯಲ್ಲಿ ಉದ್ಭವಿಸಿ ಬೇಸಗೆ ಕಾಲದಲ್ಲಿಯೂ ಸಹಾ ಯಥೇಷ್ಟವಾಗಿ ನೀರುಳ್ಳದ್ದಾಗಿರುತ್ತದೆ. ಈ ನೀರನ್ನು ನೀರಾವರಿ ಜಮೀನುಗಳಿಗೆ ಉಪಯೋಗಿಸುವುದರಿಂದ ತುಂಬಾ ಪ್ರಯೋಜನವುಂಟು. ಬೇಸಾಯಕ್ಕೆ ಅನುಕೂಲಿಸುವಂತೆ ಭದ್ರಾನದಿಯಿಂದ ನಾಲೆಗಳನ್ನು ಏರ್ಪಡಿಸುವ ಬಗ್ಗೆ ಒಂದು ಅಂದಾಜು ತಯಾರ್ ಮಾಡಲ್ಪಟ್ಟಿತು. ಆದರೆ ಅದನ್ನು ಜಾರಿಯಲ್ಲಿ ತರುವುದಕ್ಕೆ ಹಣ ಒದಗಿಸಲು ಇನ್ನೂ ಕೆಲವು ಕಾಲಬೇಕು. ಅಷ್ಟರೊಳಗಾಗಿ ಈ ಪ್ರಾಂತ್ಯದಲ್ಲಿ ಉತ್ತಮ ತರಹೆಯ ಬೇಸಾಯಕ್ಕಾಗಿ ಈ ನದಿಯ ನೀರನ್ನು ಉಪಯೋಗಿಸಿಕೊಳ್ಳತಕ್ಕ ಬಗ್ಗೆ ಮಾಡುವ ಪ್ರತಿ ಪ್ರಯತ್ನವನ್ನು, ಅದರಲ್ಲಿಯೂ ವಿಶೇಷವಾಗಿ ಈ ರೀತಿಯಲ್ಲಿ ಖಾಸಗೀ ಜನಗಳು ಮಾಡುವ ಪ್ರಯತ್ನವನ್ನು ನಾವು ಎಷ್ಟು ಶ್ಲಾಘಿಸಿದರೂ ಕಡಮೆಯೆ.—ಸುಮಾರು 70 ಎಕರೆ ಜಮೀನನ್ನು ನೀರಾವರಿಗೆ ತರಬೇಕೆಂಬುದೇ ಈ ಜಲಯಂತ್ರ ಸ್ಥಾಪನೆಯ ಉದ್ದೇಶವಾಗಿರುವುದೆನ್ನುವುದು ಈಗತಾನೇ ತಿಳಿಸಲ್ಪಟ್ಟ ವಿಧ್ಯಮಾನಗಳಿಂದ ನಮಗೆಲ್ಲರಿಗೂ ವೇದ್ಯವಾಗಿರುತ್ತದೆ. ಈ ಕಾರ್ಯ ಕರ್ತೃಗಳಾದ ಮ|| ಭೀಮಪ್ಪನವರು ಮಿ|| ಚಾಟರ್‌ಟನ್ ಸಾಹೇಬರವರಿಂದ ಮೊದಲು ನಮೂನೆಗಳನ್ನೂ ಅಂದಾಜುಗಳನ್ನೂ ಪಡೆದುಕೊಂಡು ಬಳಿಕ ಈ ಯಂತ್ರವನ್ನು ತರಿಸಿದರು. ಆದರೆ ಇದನ್ನು ಸ್ಥಾಪಿಸುವುದರಲ್ಲಿ ಕೆಲವು ಕಷ್ಟಗಳು ಕಂಡುಬರಲಾಗಿ ಅವರು ಮಿ|| ಚಾಟರ್‌ಟನ್ ಸಾಹೇಬರವರಿಂದಲೂ, ಅವರ ಕೈಕೆಳಗಿನ ಆಫೀಸರುಗಳಿಂದಲೂ ಸಹಾಯವನ್ನು ಪಡೆದುಕೊಂಡು ಯಂತ್ರವನ್ನು ಸ್ಥಾಪಿಸುವುದು ಸಾಧ್ಯವಾಯಿತು.—ಮಿ|| ಚಾಟರ್‌ಟನ್ ಸಾಹೇಬರವರಿಗೆ ಈ ವಿಷಯದಲ್ಲಿ ಇರುವ ಅನುಭವವೂ ಕುಶಲತೆಯೂ ಅಸಾಧಾರಣವಾದವೆನ್ನುವುದು ನಮ್ಮಲ್ಲಿ ಅನೇಕರಿಗೆ ತಿಳಿದೇ ಇರುತ್ತೆ. ಜಲಯಂತ್ರಗಳ ವಿಷಯದಲ್ಲಿ ಅವರಿಗೆ ತಿಳಿಯದೇ ಇರತಕ್ಕ ಅಂಶವು ಪ್ರಾಯಶಃ ತಿಳಿದುಕೊಳ್ಳಲು ಅರ್ಹವಾದದ್ದಾಗಿಯೇ ಇರಲಾರದು. ಇವರು ಮದರಾಸ್ ಆಧಿಪತ್ಯದಲ್ಲಿ ಅನೇಕ ಜಲಯಂತ್ರಗಳನ್ನು ಸ್ಥಾಪಿಸಿರುತ್ತಾರೆ. ಅಲ್ಲದೆ ಈ ವಿಷಯದಲ್ಲಿ ಇವರಿಗಿಂತ ಹೆಚ್ಚು ಪಾಂಡಿತ್ಯವುಳ್ಳವರು ಇಂಡಿಯಾ ದೇಶದಲ್ಲಿ ಬೇರೆ ಯಾರೂ ಇಲ್ಲವೆಂದು ಹೇಳಬಹುದು.—ಮಿ|| ಚಾಟರ್‌ಟನ್ ಸಾಹೇಬರವರೂ, ತಮ್ಮ ಅಸಿಸ್ಟೆಂಟರಾದ ಮ|| ಸೀತಾರಾಮಾಚಾರ್ಯರೂ ಈ ಯಂತ್ರ ಸ್ಥಾಪನೆಯ ವಿಷಯದಲ್ಲಿ ನಡಿಸಿರುವ ಕೆಲಸವನ್ನು ಕುರಿತು ಶ್ಲಾಘಿಸಿರುವುದನ್ನು ಕೇಳಿ ನಾವು ತುಂಬಾ ಸಂತೋಷಿಸುತ್ತೇವೆ.

ಯಂತ್ರಗಳನ್ನು ನಡಿಸುವದಕ್ಕೆ ಬೇಕಾಗುವ ಶಕ್ತಿ

ಈ ತರ ಯಂತ್ರವು ಎಣ್ಣೆಯ ಎಂಜಿನ್ ಮೂಲಕ ನಡಿಸಲ್ಪಡುತ್ತದೆ. ಪ್ರಕೃತದಲ್ಲಿ ಚಿಕ್ಕ ಚಿಕ್ಕ ಯಂತ್ರಗಳ ಸ್ಥಾಪನೆಗೆ ಎಣ್ಣೆಯೇ ಮುಖ್ಯವಾದ ಸಾಧಕವಾಗಿರುತ್ತದೆ. ಆದರೆ ಯಂತ್ರಗಳನ್ನು ನಡಿಸುವದಕ್ಕಾಗಿ ಅನ್ಯದೇಶಗಳಿಂದ ಬರಬೇಕಾಗುವ ಸಾಮಗ್ರಿಯನ್ನೇ ನಂಬಿಕೊಂಡಿರುವದನ್ನು ಸಾಧ್ಯವಾದ ಮಟ್ಟಿಗೂ ತಪ್ಪಿಸಬೇಕು. ಏಕೆಂದರೆ, ಅನ್ಯದೇಶಗಳಲ್ಲಿ ಇವರಿ ಸಾಮಗ್ರಿಗಳಿಗೆ ಧಾರಣೆಯು ಹೆಚ್ಚಿದ ಹಾಗೆಲ್ಲಾ ನಾವು ಮಾಡುವ ಯಂತ್ರಸ್ಥಾಪನೆಗಳಿಂದ ಪಡೆಯಬಹುದಾದ ಲಾಭವು ಕಡಮೆಯಾಗುತ್ತಾ ಬರುವುದು. ಸಣ್ಣ ಸಣ್ಣ ಜಲಯಂತ್ರಗಳನ್ನು ಹವೆಯ ಎಂಜಿನ್ ಮೂಲಕ ನಡಿಸುವುದಕ್ಕೆ ಸಹಾ ಖರ್ಚು ದುಬಾರೀ ಬೀಳುತ್ತದೆ. ಆದುದರಿಂದ ಬೆಂಗಳೂರಿನಲ್ಲಿರುವ ಟ್ಯಾನರಿ ಎಂಬ ಚರ್ಮದ ಕಾರ್ಖಾನೆಯಲ್ಲಿ ಉಪಯೋಗಿಸುತ್ತಿರುವಂಥ ಸಕ್ಷನ್ ಗ್ಯಾಸ್ ಎಂಜಿನ್‌ಗಳನ್ನು ಉಪಯೋಗಿಸುವದೇ ದುಬಾರೀ ಖರ್ಚನ್ನು ತಪ್ಪಿಸುವದಕ್ಕೆ ಒಂದು ಉಪಾಯವಾಗಿರುತ್ತದೆ. ನಮ್ಮ ಸೀಮೆಯ ಭಾರೀ ಮಲೆನಾಡು ಜಂಗಲುಗಳಲ್ಲಿ ಯಥೇಚ್ಛವಾಗಿ ದೊರೆಯುವ ಸೌದೆಯಿಂದ ನಮಗೆ ಬೇಕಾದಷ್ಟು ಇದ್ದಿಲನ್ನು ತಯಾರ್ ಮಾಡಿ ಒದಗಿಸಲು ಕೆಲವು ಕಾಲದಲ್ಲಿಯೇ ಸಾಧ್ಯವಾಗಬಹುದು. ಸುಲಭವಾದ ಬೆಲೆಗೆ ನಮಗೆ ಇದ್ದಿಲು ದೊರೆಯಬೇಕಾದರೆ ಇದ್ದಿಲನ್ನು ವಿಶೇಷ ಹೆಚ್ಚಾಗಿ ತಯಾರ್ ಮಾಡಿಸುತ್ತಾ ಬರಬೇಕು ಮತ್ತು ಅದನ್ನು ಬೇಕಾದ ಕಡೆಗೆ ಸುಲಭವಾಗಿಯೂ ಹೆಚ್ಚು ಖರ್ಚಿಲ್ಲದೆಯೂ ಸಾಗಿಸುವುದಕ್ಕೆ ತಕ್ಕ ಅನುಕೂಲ್ಯಗಳನ್ನು ಕಲ್ಪಿಸಬೇಕು. ಈ ವಿಷಯವು ನಮ್ಮ ಸೀಮೆಯ ಕೈಗಾರಿಕೆ ಮತ್ತು ವ್ಯಾಪಾರಗಳ ಡೈರೆಕ್ಟರವರ ಪರ್ಯಾಲೋಚನೆಯಲ್ಲಿರುತ್ತದೆ.—ಸ್ವಂತ ಜಮೀನುಗಳ ಸಾಗುವಳಿ ಬಗ್ಗೆ ನೀರನ್ನು ಎತ್ತುವುದಕ್ಕಾಗಿ ನಮ್ಮ ಸೀಮೆಯಲ್ಲಿರತಕ್ಕ ಜಲಪಾತಗಳಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಿ ಅದನ್ನು ತಂತಿಯ ಮೂಲಕ ದೂರ ಫಾಸಲೆಯಲ್ಲಿರತಕ್ಕ ಯಂತ್ರಗಳನ್ನು ನಡಿಸುವುದಕ್ಕಾಗಿ ಉಪಯೋಗಪಡಿಸಿಕೊಳ್ಳಬಹುದು. ಕಾವೇರೀ ಜಲಪಾತದ ಶಕ್ತಿಯನ್ನು ಗಣಿಯ ಕೆಲಸಗಳಿಗೂ, ದೀಪಗಳಿಗೂ, ಕಾರ್ಖಾನೆಗಳಿಗೂ, ಮಗ್ಗ ಮುಂತಾದವುಗಳಿಗೂ ನಾವು ಈಗ ಉಪಯೋಗಿಸುತ್ತಲೇ ಇರುತ್ತೇವೆ. ಈ ಶಕ್ತಿಯನ್ನು ವ್ಯವಸಾಯದ ಬಾಬುಗಳಿಗೂ, ನೀರನ್ನು ಎತ್ತುವ ಕೆಲಸಕ್ಕೂ, ಗರಗಸದ ಯಂತ್ರಗಳಿಗೂ, ಕಬ್ಬಿನ ಆಲೆಗಳಿಗೂ, ಭತ್ತವನ್ನು ಕುಟ್ಟುವುದಕ್ಕೂ, ಹತ್ತಿಯಿಂದ ಬೀಜವನ್ನು ಬಿಡಿಸುವುದಕ್ಕೂ, ಎಣ್ಣೆಯನ್ನು ತೆಗೆಯುವುದಕ್ಕೂ ಸಹಾ ಉಪಯೋಗಿಸಿಕೊಳ್ಳಬಹುದು. ವಿದ್ಯುಚ್ಛಕ್ತಿಯ ಸಹಾಯದಿಂದ ಭೂಮಿಯನ್ನು ಉಳಬಹುದು, ನೀರನ್ನು ಹಾಯಿಸಬಹುದು ಮತ್ತು ಅಡಿಗೆಯನ್ನು ಸಹಾ ಮಾಡಬಹುದು.—ಈ ನಮ್ಮ ರಮಣೀಯವಾದ ಸಂಸ್ಥಾನದಲ್ಲಿ ಅನೇಕ ಜಲಪಾತಗಳು ಇರುತ್ತವೆಯಷ್ಟೆ. ಇವುಗಳಿಂದ ಬರುವ ನೀರನ್ನು ತಡೆದು ನಿಲ್ಲಿಸಿಕೊಂಡು ವಿದ್ಯುಚ್ಛಕ್ತಿಯನ್ನು ಉತ್ಪನ್ನಮಾಡಿದ್ದೇ ಆದರೆ ಅದನ್ನು ನೂರಾರು ವಿಧಗಳಲ್ಲಿ ನಮ್ಮ ರೈತರ ಉಪಯೋಗಕ್ಕೆ ಒದಗಿಸಿಕೊಡಬಹುದು.—ಈ ವಿಚಾರದಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟಿನ ಮಹಾಜನಗಳಿಗೆ ಒಂದು ವಿಷಯವನ್ನು ಸೂಚಿಸಬೇಕಾಗಿದೆ. ಏನೆಂದರೆ, ಈಗ ವಾಣೀವಿಲಾಸ ಜಲಾಶಯದಲ್ಲಿ ಕೆಲವು ಮಟ್ಟಿಗೆ ಶಕ್ತಿಯು ಉಪಯೋಗಿಸಲ್ಪಡದೇ ಇರುತ್ತದೆ. ಆ ಪ್ರಾಂತ್ಯದವರು ಈ ಶಕ್ತಿಯನ್ನು ಸಾಕಾದಷ್ಟು ಉಪಯೋಗಪಡಿಸಿಕೊಳ್ಳುವವರಾಗಿ ಇರುವುದೇ ಆದರೆ ಸರ್ಕಾರದವರು ಅಲ್ಲಿ ಶಕ್ತಿಯನ್ನು ಉತ್ಪನ್ನಮಾಡುವ ಪ್ರಯತ್ನವನ್ನು ನಡಿಸಲು ಸಿದ್ಧವಾಗಿಯೇ ಇರುವರು.

ಕೆರೆಗಳ ಕೆಳಗೆ ಗನ್ನಾ ಸಾಗುವಳಿಯ ಬಡಾವಣೆ

ನಮ್ಮ ಸಂಸ್ಥಾನದಲ್ಲಿರುವ ಕೆರೆಗಳು ಮುಖ್ಯವಾಗಿ ಭತ್ತಾ ಬೆಳಸುವದಕ್ಕೆ ಉಪಯುಕ್ತವಾಗಿವೆ ಎನ್ನುವ ವಿಷಯವೂ ಮತ್ತು ಪೈರು ಕಟಾವಾದ ಬಳಿಕ ನಾಲ್ಕು ತಿಂಗಳಿಂದ ಎಂಟು ತಿಂಗಳೊಳಗಾಗಿ ಒಣಗಿ ಹೋಗುತ್ತವೆ ಎನ್ನುವ ವಿಷಯವೂ ತಮಗೆಲ್ಲಾ ತಿಳಿದ ಸಂಗತಿಯೇ ಆಗಿದೆ. ಪ್ರತಿ ಒಂದು ದೊಡ್ಡ ಕೆರೆಯ ಏರಿಯ ಕೆಳಗೂ ಅಪಾರವಾಗಿ ಜೌಗುಪ್ರದೇಶವು ಇರುತ್ತದೆ. ಇದರಲ್ಲಿನ ನೀರನ್ನು ಉಪಯೋಗಿಸಿಕೊಂಡಲ್ಲಿ ಆಯಾ ಕೆರೆಯ ಆಸರೆಯನ್ನು ನಂಬಿರುವ ಕಬ್ಬು, ಇಸ್ಪಲಿನೀರಳೆ, ಅಥವಾ ಬಾಗಾಯತು ಬೆಳೆಗಳಿಗೆ ಬೇಸಗೆಯ ಕಾಲದಲ್ಲಿ ನೀರಿನ ಕಷ್ಟವನ್ನು ಹೋಗಲಾಡಿಸಿಕೊಳ್ಳಬಹುದು.—ಒಂದು ಎಕರೆ ಜಮೀನಿನಲ್ಲಿ 40-50 ರೂಪಾಯಿ ಬೆಲೆಯಾಗಬಹುದಾದ ಫಲವನ್ನು ಬೆಳೆಯಬಹುದು. ಆದರೆ ನಮ್ಮ ಮೇಲ್ವಿಚಾರಣೆಗೆ ಒಳಪಟ್ಟಿದ್ದ ಕೆಲವು ನಾಲೆಗಳ ಕೆಳಗೆ ಕಬ್ಬನ್ನು ಬೆಳಸಲಾಗಿ ಒಂದು ಸಾವಿರ ರೂಪಾಯಿಗಿಂತ ಜಾಸ್ತಿ ಒಂದು ಎಕರೆಗೆ ಹುಟುವಳಿಯಾಗಿರುವುದು ನಮ್ಮ ಸ್ವಂತ ಗೋಚರಕ್ಕೆ ಬಂದಿರುತ್ತದೆ. ಆದಾಗ್ಯೂ, ಭತ್ತ ಇದೊಂದನ್ನು ಮಾತ್ರವೇ ಬೆಳೆಯುವುದರಿಂದ ಆಸ್ತಿವಂತರಾಗುವೆನೆಂದು ಯಾವ ರೈತರಾಗಲೀ ನಿರೀಕ್ಷಿಸಿ ಪ್ರಯೋಜನವಿಲ್ಲ. ಮೈಸೂರು ಸಂಸ್ಥಾನದ ರೈತರಲ್ಲಿ ಅನೇಕರಿಗೆ ಹೆಚ್ಚು ಖರ್ಚುಗಳಿಗೆ ಬೇಕಾದ ಹಣ [illegible] ಕಬ್ಬಿನ ಬೆಳೆ ಇಟ್ಟುಕೊಳ್ಳುವದರಿಂದ ದೊರೆಯುವುದು. ಅವರುಗಳು ನದೀ ಬೆಳಗೆ ನೀರನ್ನು ಎತ್ತುವುದಕ್ಕಾಗಿ ಪೂರ್ವಕಾಲದ ಏತ ಅಥವಾ ಎತ್ತಿನ ಕಪಿಲೆಗಳನ್ನು ವಿಶೇಷ ಶ್ರಮದಿಂದ ಉಪಯೋಗಿಸುವರು. ಅನೇಕ ಕೆರೆಗಳ ಕೆಳಗೆ ವಿಶೇಷವಾಗಿ ಸ್ವಲ್ಪ ಜಲವಿದೆ. ಮತ್ತು ಬೆಲ್ಲಕ್ಕೆ ಯಾವಾಗಲೂ ಒಳ್ಳೆಯ ಗಿರಾಕಿ ಇರುವುದರಿಂದ ಭಾರೀ ರೈತರುಗಳು ಒಬ್ಬೊಬ್ಬರೆ ಆಗಿಯೂ, ಸಣ್ಣ ಸಣ್ಣ ರೈತರುಗಳು ಏಕೀಭವಿಸಿಯೂ ಸಾಹಸಪರರಾಗಿ ಮುಂದಕ್ಕೆ ನಿಂತು ಶಕ್ತಿಯ ಸಹಾಯದಿಂದ ಕೆಲಸ ಮಾಡುವ ಯಂತ್ರಗಳ ಮೂಲಕ ನೀರು ಹಾಯಿಸಿ ಕಬ್ಬನ್ನು ಬೆಳೆದ ಪಕ್ಷದಲ್ಲಿ ಎಷ್ಟೋ ಲಾಭವುಂಟಾದೀತು.

ರೈತಾಬೀ ಜನಗಳಿಗೆ ತಿಳುವಳಿಕೆ

ನಮ್ಮ ರೈತರು ಕಷ್ಟಪಡತಕ್ಕವರಾಗಿ ಸಾಧು ಸ್ವಭಾವದವರಾಗಿದ್ದಾಗ್ಯೂ ಏನೂ ಅರಿಯದವರಾಗಿರುತ್ತಾರೆ. ಇದು ಅವರ ತಪ್ಪಲ್ಲ. ಅವರ ದುರದೃಷ್ಟವೇ ಸರಿ. ಇದಕ್ಕಾಗಿ ಅವರನ್ನು ತಿರಸ್ಕಾರಭಾವದಿಂದ ಉಪೇಕ್ಷೆಮಾಡದೇ ದಯಾಪೂರ್ವಕವಾಗಿ ವಿದ್ಯಾ ಸೌಲಭ್ಯಗಳನ್ನು ಕಲ್ಪಿಸಿ ಅವರನ್ನು ಏಳಿಗೆಗೆ ತರಬೇಕಾದುದು ನಮ್ಮ ಕರ್ತವ್ಯವಾಗಿದೆ. ಅವರು ತಮಗೆ ಉಂಟಾಗುವ ಸಮಸ್ತ ಕಷ್ಟಗಳಿಗೂ ಸರ್ಕಾರಕ್ಕೆ ದೊಡ್ಡ ದೊಡ್ಡ ಅರ್ಜಿಗಳನ್ನು ಹಾಕಿಕೊಂಡು ಪರಿಹಾರವನ್ನು ಹುಡುಕುವುದಕ್ಕೆ ಬದಲಾಗಿ ತಮ್ಮಲ್ಲೇ ವಿಶ್ವಾಸವನ್ನು ಇಟ್ಟುಕೊಂಡು ತಮ್ಮ ಅಭಿವೃದ್ಧಿಗೆ ಬೇಕಾದ ಪ್ರಯತ್ನಗಳನ್ನು ಮಾಡುತ್ತಾ ಬಂದಲ್ಲಿ ತಮಗೂ ರೈತಾಬಿ ಜನದವರೆಲ್ಲರಿಗೂ ಗೌರವವು ಬರುತ್ತದೆ ಎಂಬ ಅಂಶವನ್ನು ಅವರ ಮನಸ್ಸಿಗೆ ಬರುವಂತೆ ಚೆನ್ನಾಗಿ ಬೋಧಿಸುವುದು ಅಗತ್ಯವಾಗಿದೆ. ಇತರರ ಸಹಾಯವನ್ನು ನಂಬಿಕೊಂಡಿರುವುದರಿಂದ ಉಂಟಾಗುವ ಪ್ರಯೋಜನಕ್ಕಿಂತಲೂ ಸ್ವಪ್ರಯತ್ನದಿಂದ ರೈತರಿಗೆ ಹೆಚ್ಚು ಲಾಭವುಂಟು.—ಪ್ರಪಂಚದ ಇತರ ಭಾಗದ ಜನರು ಪದ್ಧತಿಗಳ ರೀತ್ಯಾ ಕೆಲಸಮಾಡುವುದನ್ನು ಬಿಟ್ಟು ತಮ್ಮ ಪುರೋಭಿವೃದ್ಧಿಗಾಗಿ ನವೀನ ಮಾರ್ಗಗಳನ್ನು ಸಾಧ್ಯವಾದ ಹಾಗೆಲ್ಲಾ ಉಪಯೋಗಿಸುತ್ತಾ ಬರುವುದು ಅವಶ್ಯಕವೆಂದು ರೈತರಿಗೆ ಬೋಧಿಸಬೇಕು. ಹೀಗೆ ಮಾಡಬೇಕಾದರೆ ರೈತಾಬಿ ಜನಗಳಲ್ಲಿ ವಿದ್ಯಾಭ್ಯಾಸವನ್ನು ಹೆಚ್ಚು ಹೆಚ್ಚಾಗಿ ಹರಡುವುದು ಅವಶ್ಯಕ. ಶ್ರೀಮನ್ ಮಹಾರಾಜಾ ಸಾಹೇಬರವರು ಇಂಡಿಯಾ ಸರ್ಕಾರದವರ ಮಾರ್ಗವನ್ನು ಅನುಸರಿಸಿ ವ್ಯವಸಾಯ ಮತ್ತು ಕೈಗಾರಿಕೆಯ ಶಿಕ್ಷಣವನ್ನೂ ಸಾಮಾನ್ಯ ವಿದ್ಯಾಭ್ಯಾಸವನ್ನೂ ವೃದ್ಧಿಪಡಿಸಲು ಸಕಲ ಶ್ರಮಗಳನ್ನೂ ಮಾಡುತ್ತಿದ್ದಾರೆ. ಒಕ್ಕಲಿಗರ ಪತ್ರಿಕೆ, ಸಾಧ್ವಿ, ವೃತ್ತಾಂತ ಪತ್ರಿಕೆ, ಈ ಮೊದಲಾದ ವರ್ತಮಾನ ಪತ್ರಿಕೆಗಳಲ್ಲಿ ಸಂಸ್ಥಾನದಲ್ಲಿ ವ್ಯವಸಾಯ ಕಾರ್ಯಗಳು ಅಭಿವೃದ್ಧಿಯಾಗುವುದಕ್ಕೆ ಸಹಾಯಕವಾಗುವ ಸಂಗತಿಗಳನ್ನೆಲ್ಲ ಪ್ರಕಟಿಸುವುದರ ಮೂಲಕ ರೈತಾಬಿ ಜನಗಳಿಗೆ ಎಷ್ಟೋ ಸಹಾಯ ಮಾಡಬಹುದು. ಈ ಪತ್ರಿಕೆಗಳಲ್ಲಿಯೂ ಇತರ ಪತ್ರಿಕೆಗಳಲ್ಲಿಯೂ ಸಂಸ್ಥಾನದ ಎಲ್ಲಾ ಭಾಗಗಳಲ್ಲಿನ ರೈತರು ತಮ್ಮ ಜಮೀನಿನ ಆಬಾದಿಗೂ ಮತ್ತು ಕುಟುಂಬದ ಪುರೋಭಿವೃದ್ಧಿಗೂ ಸಂಬಂಧಪಟ್ಟ ವಿಷಯಗಳನ್ನು ಕುರಿತು ಚರ್ಚೆ ನಡಿಸುವುದರಿಂದ ವಿಶೇಷ ಪ್ರಯೋಜನವನ್ನು ಪಡೆಯಬಹುದು.

ಪರಸ್ಪರ ಸಹಾಯ ಪದ್ಧತಿ ಕಟ್ಟುಪಾಡು

ರೈತರು ವಿದ್ಯೆಯನ್ನು ಅಭ್ಯಾಸಮಾಡುವುದು ಮಾತ್ರವೇ ಅಲ್ಲದೆ ಒಬ್ಬರಿಗೊಬ್ಬರು ಅನ್ಯೋನ್ಯವಾಗಿ ಸೇರಿ ಕೆಲಸಗಳನ್ನು ಮಾಡುವ ಅಭ್ಯಾಸ ಮಾಡಬೇಕು. ಮಲೆನಾಡಿನ ಕೆಲವು ಗ್ರಾಮಗಳಲ್ಲಿ ಕಕ್ಷಿ ವ್ಯಾಜ್ಯಗಳೂ, ದೀರ್ಘಕಾಲ ದ್ವೇಷಗಳೂ ವಂಶಪಾರಂಪರ್ಯದಿಂದ ಬಂದಿರುತ್ತವೆ. ಇವುಗಳನ್ನು ಪರಿಹರಿಸಿ ರೈತರು ತಮ್ಮ ನೆರೆಹೊರೆಯವರೊಡನೆ ಏಕೀಭವಿಸಿ ಕೆಲಸಮಾಡುವುದನ್ನು ಕಲಿಯಬೇಕು. ಜನರು ಪುರೋಭಿವೃದ್ಧಿಗೆ ಬರಬೇಕಾದರೆ ಐಕಮತ್ಯದಿಂದ ಒಬ್ಬರಿಗೊಬ್ಬರು ಸಹಾಯಕರಾಗಿ ಕೆಲಸಮಾಡುತ್ತಾ ಒಬ್ಬರನ್ನೊಬ್ಬರು ಎಲ್ಲರೂ ಜ್ಞಾಪಕದಲ್ಲಿಡಬೇಕು. ತಮ್ಮ ನೆರೆಯವರೊಡನೆ ಜಗಳವಾಡುವುದರಿಂದ ತಮ್ಮ ಮತ್ತು ನೆರೆಯವರ ಶಕ್ತಿಯೂ, ದ್ರವ್ಯವೂ ನಷ್ಟವಾಗುವುದಲ್ಲದೆ ಅನೇಕ ವೇಳೆ ಉಭಯತ್ರರ ಜೀವನಾಧಾರವೂ ಸಹ ಕೆಡುತ್ತದೆ.—ಬಿತ್ತನೆಯ ಕಾಳುಗಳನ್ನೂ, ವ್ಯವಸಾಯದ ಮುಟ್ಟುಗಳನ್ನೂ, ಯಂತ್ರಗಳನ್ನೂ, ಗೊಬ್ಬರವನ್ನೂ ಖರೀದಿಗೆ ಪಡೆಯುವುದಕ್ಕೂ, ವ್ಯವಸಾಯದ ಉತ್ಪನ್ನಗಳನ್ನು ಗಿರಾಕಿ ಇರುವ ಸ್ಥಳಗಳಲ್ಲಿ ವಿಕ್ರಯಮಾಡುವುದಕ್ಕೂ, ಇನ್ನೂ ಇಂಥಾ ಇತರ ಕೆಲಸಗಳಿಗೂ ಪರಸ್ಪರ ಸಹಾಯಕ ಸಂಘಗಳು ಇರಬೇಕು. ಇತರ ದೇಶಗಳಲ್ಲಿ ಪರಸ್ಪರ ಸಹಾಯಕ ಸಂಘಗಳು ಎಷ್ಟರ ಮಟ್ಟಿಗೆ ಉತ್ತಮ ಸ್ಥಿತಿಗೆ ಬಂದಿರುವುವೆಂದರೆ—ವಿಹಾರಾರ್ಥವಾಗಿ ಹೊರಡುವ ಕೂಟಗಳನ್ನು ಕೂಡಾ ಅನ್ಯೋನ್ಯ ಸಹಾಯದಿಂದ ನಡಿಸುತ್ತಾರೆ. ಮತ್ತು ವ್ಯವಸಾಯದ ಬಾಬಿನಲ್ಲಿ ನವೀನ ವಿಧಾನಗಳನ್ನು ಕಲಿಯುವುದಕ್ಕೋಸ್ಕರ ಮುಖ್ಯವಾದ ಸ್ಥಳಗಳಿಗೆ ಅನೇಕ ಮಂದಿ ಬೇಸಾಯಗಾರರು ಹೋಗುವುದಕ್ಕೆ ಅನುಕೂಲವಾಗುವಂತೆ ಸ್ಪೆಷಲ್ ಗಾಡಿಗಳನ್ನು ಸಹ ಆಗಾಗ್ಗೆ ವಿಶೇಷವಾಗಿ ಬಿಡುತ್ತಿರುತ್ತಾರೆ. ರೈತರು ಸಾಹುಕಾರರ(?) ಒಗ್ಗಟ್ಟಾಗಿ ಸೇರಿ ಸಹಾಯ ಮಾಡಿಕೊಳ್ಳುತ್ತಾ ಬಂದರೆ ಎಷ್ಟು ಮಟ್ಟಿಗೆ ಪ್ರಯೋಜನವಾಗುತ್ತೆಂಬುದನ್ನು ಅವರುಗಳಿಗೆ ತಿಳಿಸಿಕೊಟ್ಟ ಪಕ್ಷದಲ್ಲಿ ಅವರುಗಳು ಪ್ರತಿಯೊಂದು ವಿಷಯಕ್ಕೂ ಸರ್ಕಾರಕ್ಕೆ ಅರ್ಜಿ ಹಾಕಿಕೊಳ್ಳುವುದನ್ನು ಬಿಟ್ಟು, ಮನೋಧೈರ್ಯವನ್ನು ಅವಲಂಬಿಸಿ ಸ್ವಪ್ರಯತ್ನದಿಂದ ಕೆಲಸ ನಡಿಸಿಕೊಳ್ಳುತ್ತಾ ಬರುವರು ಮತ್ತು ದುರ್ಭಿಕ್ಷ ಅಥವಾ ಕ್ಷಾಮಕಾಲದಲ್ಲಿ ಸರ್ಕಾರದವರಿಗೆ ಅವರ ವಿಷಯದಲ್ಲಿ ಉಂಟಾಗುವ ಆತಂಕವೂ ಸಹ ತಪ್ಪುತ್ತದೆ.—ನಮ್ಮ ಸಂಸ್ಥಾನದ ವಿಸ್ತೀರ್ಣವನ್ನು ಗಣನೆಗೆ ತೆಗೆದುಕೊಂಡರೆ ಇಲ್ಲಿರತಕ್ಕಷ್ಟು ಕೆರೆಗಳು ಇಂಡಿಯಾ ದೇಶದಲ್ಲೂ ಪ್ರಾಯಶಃ ಪ್ರಪಂಚದ ಯಾವ ಭಾಗದಲ್ಲೂ ಸಹ ಇರುವುದಿಲ್ಲ. ಸಣ್ಣ ಸಣ್ಣ ಕೆರೆಗಳ ಮತ್ತು ನಾಲೆಗಳ ರಿಪೇರಿಯನ್ನು ಕೂಡ ಶ್ರೀಮನ್ ಮಹಾರಾಜಾ ಸರ್ಕಾರದವರೇ ಮಾಡಿಸಿಕೊಡಬೇಕೆಂದು ಅನೇಕ ರೈತರು ಅಪೇಕ್ಷಿಸುತ್ತಾರೆ. ನಮ್ಮ ಪೂರ್ವಿಕರು ಈ ರೀತಿ ನಿರೀಕ್ಷಿಸಿಕೊಂಡು ಸುಮ್ಮನೆ ಇದ್ದು ತಾವೇ ಕಷ್ಟಪಟ್ಟು ಅನೇಕರು ಒಟ್ಟಿಗೆ ಸೇರಿಕೊಂಡು ಸ್ವಪ್ರಯತ್ನದಿಂದ ಕೆರೆಗಳನ್ನು ಕಟ್ಟದೇ ಇದ್ದ ಪಕ್ಷದಲ್ಲಿ ಈ ಸಂಸ್ಥಾನದಲ್ಲಿ ಇಷ್ಟು ಕೆರೆಗಳು ಇರುತ್ತಿದ್ದುವೆ?—ನಮ್ಮ ಗ್ರಾಮಾಂತರ ನಿವಾಸಿಗಳಲ್ಲಿ ಪರಸ್ಪರ ಸಹಾಯದ ತತ್ವವು ಹರಡುತ್ತ ಬಂದ ಹಾಗೆಲ್ಲ ಅವರುಗಳ ಸಂಪಾದಕ ಶಕ್ತಿಯೂ ಹೆಚ್ಚುತ್ತಾ ಬರುವುದು. ಪರಸ್ಪರ ಸಹಾಯಕ ಸಂಘಗಳ ಪುರೋಭಿವೃದ್ಧಿಗಾಗಿ ಮಾಡಬೇಕಾದ ಕೆಲಸಗಳು ಇನ್ನೂ ಅಪರಿಮಿತವಾಗಿರುವುವು. ಆದರೂ ಆ ಸಂಘಗಳು ಉತ್ಸಾಹಶೀಲರಾದ ನಮ್ಮ ರಿಜಿಸ್ಟ್ರಾರವರ ಪರಿಶ್ರಮದಿಂದ ಈಗಲೇ ತಕ್ಕಮಟ್ಟಿಗೆ ಅಭಿವೃದ್ಧಿಗೆ ಬಂದಿರುತ್ತವೆ ಎಂಬ ಅಂಶವನ್ನು ತಮ್ಮಗಳಿಗೆ ತಿಳಿಸಲು ಸಂತೋಷಿಸುತ್ತೇವೆ. ರೈತಾಬಿ ಜನಗಳಲ್ಲಿ ಯಾರಾಗಲೀ ತಕ್ಕಮಟ್ಟಿಗೆ ವಿದ್ಯಾವಂತರಾಗಿ ತಮ್ಮ ವ್ಯವಸಾಯದ ವೃತ್ತಿಯನ್ನು ಬುದ್ಧಿಕುಶಲತೆಯಿಂದ ನಡಿಸುತ್ತಾ ವ್ಯಾಪಾರ ಮುಂತಾದದ್ದನ್ನು ಪರಾಸೆಯಾಗಿ(?) ಮಾಡುತ್ತಾ ಬಂದದ್ದೇ ಆದರೆ ಅಂಥಾವರು ನಮ್ಮ ಸಮಾಜದಲ್ಲಿಯೂ ಸರ್ಕಾರದಲ್ಲಿಯೂ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಶ್ರೇಷ್ಠ ವೃತ್ತಿಗಳನ್ನು ಅವಲಂಬಿಸಿರುವವರು ಎಷ್ಟರಮಟ್ಟಿನ ಗೌರವವನ್ನು ಪಡೆಯುವರೋ ಅಷ್ಟರ ಮಟ್ಟಿನ ಗೌರವವನ್ನು ಪಡೆಯುವ ಅವಕಾಶವುಳ್ಳವರಾಗಿರಬೇಕೆನ್ನುವುದೇ ನಮ್ಮ ಉದ್ದೇಶವೂ ಕೋರಿಕೆಯೂ ಆಗಿರುತ್ತದೆ.

ವಿಷಯ ವಿಚಾರಮಾಡಬೇಕೆಂಬ ಆಸಕ್ತಿಯನ್ನು ಪ್ರೋತ್ಸಾಹಿಸುವುದು

ಪ್ರಜೆಗಳ ಪುರೋಭಿವೃದ್ಧಿಗೆ ಮತ್ತೊಂದು ಪ್ರತಿಬಂಧಕವೇನೆಂದರೆ, ಪೂರ್ವಪದ್ಧತಿಗೆ ಸ್ವಲ್ಪವೂ ತಪ್ಪಿ ನಡೆಯಕೂಡದೆಂಬ ಅಭಿಮಾನ, ನವೀನ ಮಾರ್ಗವನ್ನು ಅನುಸರಿಸುವ ವಿಷಯದಲ್ಲಿ ಉಪೇಕ್ಷೆ, ಅದೃಷ್ಟವಿದ್ದಂತಾಗಲಿ ಎಂಬ ನಂಬಿಕೆ—ಇವುಗಳಿಂದಾಗುವ ಕೆಡಕುಗಳನ್ನು ರೈತರಿಗೆ ಎಷ್ಟು ಬೇಗ ತಿಳಿಯಪಡಿಸಿದರೆ ಅಷ್ಟು ಬೇಗ ಅವರು ಹೆಚ್ಚು ಚಟುವಟಿಕೆಯನ್ನು ತೋರ್ಪಡಿಸುವರು. ಇದರಿಂದ ಅವರಿಗೂ ದೇಶಕ್ಕೂ ಸಹ ಕ್ಷೇಮವುಂಟಾಗುವುದು. ಪ್ರತಿಕ್ಷಣದಲ್ಲಿಯೂ ಬದಲಾವಣೆಗಳು ನಡೆಯುತ್ತಿರುವ ಈ ಪ್ರಪಂಚದಲ್ಲಿ ದಿನೇ ದಿನೇ ಪದಾರ್ಥಗಳ ಬೆಲೆಗಳು ಹೆಚ್ಚುತ್ತಾ ಒಬ್ಬರನ್ನೊಬ್ಬರು ಮೀರಬೇಕೆಂಬ ಪೈಪೋಟಿಯು ಹೆಚ್ಚಾಗಿ ಇರುವಲ್ಲಿ ರೈತರು ಮಾತ್ರ ಸುಮ್ಮನೆ ಕೂಡಲಾಗಲಿ, ಇದ್ದಂತೆಯೇ ಇರಲಾಗಲಿ ಆಗುವುದಿಲ್ಲ.—ಪೂರ್ವಪದ್ಧತಿಗೆ ಸ್ವಲ್ಪವೂ ತಪ್ಪಿ ನಡೆಯಬಾರದೆಂಬ ಅಭಿಮಾನವನ್ನಿಟ್ಟುಕೊಳ್ಳುವುದರಿಂದ ಜನಗಳಿಗೆ ಪ್ರಾಪ್ತವಾಗುವ ನಷ್ಟಗಳಿಗೆ ಮೈಸೂರಲ್ಲಿ ನಡೆಯುವ ರೇಷ್ಮೆ ಕೈಗಾರಿಕೆಯ ಸ್ಥಿತಿಯನ್ನು ಉದಾಹರಣೆಯಾಗಿ ಹೇಳಬಹುದು. ಇಲ್ಲಿ ರೇಷ್ಮೆ ಹುಳುವಿನ ಗೂಡುಗಳ ಸರಬರಾಯಿಯು ಸಮರ್ಪಕವಾಗಿಲ್ಲ. ಏಕೆಂದರೆ ರೋಗಕ್ಕೆ ಒಳಗಾದ ಮೊಟ್ಟೆಗಳನ್ನು ಉಪಯೋಗಿಸುತ್ತಾರೆ. ಕೆಲವು ತಿಂಗಳ ಕೆಳಗೆ ಒಬ್ಬ ಯೂರೋಪಿಯನ್ ದೊಡ್ಡ ಮನುಷ್ಯರು ನಮ್ಮನ್ನು ನೋಡುವುದಕ್ಕೆ ದಯಮಾಡಿಸಿದ್ದಾಗ, ಮೈಸೂರಿನಲ್ಲಿ ನಡೆಯುವ ರೇಷ್ಮೆ ಕೈಗಾರಿಕೆಯ ಸದ್ಯಸ್ಥಿತಿಯ ವಿಷಯದಲ್ಲಿ ಅವರಿಗಿರುವ ಅಭಿಪ್ರಾಯವನ್ನು ತಿಳಿಸಬೇಕೆಂದು ಅವರನ್ನು ಕೇಳಿದೆವು. ಅದಕ್ಕೆ ಅವರು ಸಮ್ಮತಿಸಿ ಇಲ್ಲಿಯ ವಿಧ್ಯಮಾನಗಳನ್ನೆಲ್ಲ ಪರಿಶೀಲಿಸಿ ನೋಡಿ ರೇಷ್ಮೆ ವ್ಯವಸಾಯದ ವಿಷಯದಲ್ಲಿ ಯಾವ ವಿಧವಾದ ಅಭಿವೃದ್ಧಿಯನ್ನು ಹೊಂದಬೇಕಾದರೂ ರೈತರಿಗೆ ಉತ್ತಮ ವಿಧಗಳನ್ನು ಕಲಿಸತಕ್ಕದ್ದು ಒಂದೇ ಉಪಾಯವೆಂದು ನಮಗೆ ತಿಳಿಸಿದರು. ಅವರು ಬರೆದಿರುವುದೇನೆಂದರೆ—"ಈ ಜನಗಳು (ಎಂದರೆ ಮೈಸೂರು ದೇಶದ ರೈತರು) ರೇಷ್ಮೆ ವ್ಯವಸಾಯದ ವಿಷಯದಲ್ಲಿ ಆರೋಗ್ಯ ತತ್ವಗಳನ್ನು ಸ್ವಲ್ಪವೂ ಅನುಸರಿಸದೆಯೇ ಪರಂಪರೆಯಿಂದ ಉಂಟಾದ ರೋಗಗಳ [illegible] ನಷ್ಟಹೊಂದಿದ್ದರೂ ಪ್ರತಿ ವರುಷದಲ್ಲಿಯೂ ತಮ್ಮ ಅದೃಷ್ಟವನ್ನೇ ಪರೀಕ್ಷೆಮಾಡುತ್ತಾ ಇದ್ದುಕೊಂಡು ಈ ದುಃಖಕ್ಕೆ ತಮ್ಮ ಅಜ್ಞಾನವೇ ಕಾರಣವೆಂದು ತಿಳಿದುಕೊಳ್ಳುವುದಕ್ಕೆ ಬದಲಾಗಿ ದೈವೇಚ್ಛೆಯೇ ಕಾರಣವೆಂದು ಹೇಳಿಕೊಳ್ಳುತ್ತಾ ಸುಮ್ಮನೇ ಇದ್ದುಬಿಡುವರು."—ಇನ್ನೂ ಅವರು ಬರೆದಿರುವವುಗಳಲ್ಲಿ ಮುಖ್ಯವಾದ ಅಂಶವು ಏನೆಂದರೆ—"ರೇಷ್ಮೆಯ ವಿಷಯದಲ್ಲಿ ರೈತರು [illegible] ನೋಡಿಕೊಳ್ಳುವುದರಿಂದಲೂ, ಗೂಡುಗಳನ್ನು ಸಮರ್ಪಕವಾಗಿ ಕಾಪಾಡುವುದರಿಂದಲೂ ಉಂಟಾಗುವ ಫಲವನ್ನು ಅವರು ವಿಶೇಷವಾಗಿ ಗಮನಿಸುವುದೇ ಇಲ್ಲ."—ಹಳ್ಳಿಗಾಡಿನ ರೈತರು ಎಲ್ಲಕ್ಕೂ ಅದೃಷ್ಟವೇ ಕಾರಣವೆಂದುಕೊಂಡು ಸ್ವಪ್ರಯತ್ನಶೀಲರಾಗದೆ ನಿರುತ್ಸಾಹಿಗಳಾಗಿರುವುದೇ ಅವರು ಜಾಗ್ರತೆ ಪುರೋಭಿವೃದ್ಧಿಗೆ ಬರುವುದಕ್ಕೆ ದೊಡ್ಡ ಪ್ರತಿಬಂಧಕವಾಗಿರುತ್ತದೆ. ಆದಕಾರಣ ಅವರು ವಿದ್ಯಾವಂತರಾಗಿ ಸ್ವಪ್ರಯತ್ನಶೀಲರಾಗುವಂತೆ ಮಾಡುವ ವಿಷಯದಲ್ಲಿ ನಾವು ಸಹಾಯಪಡಬೇಕು. ರೈತರು ವಿಚಾರಪರರಾಗಿ ಯೋಚನೆಮಾಡುವ ಅಭ್ಯಾಸವನ್ನು ಕಲಿತಪಕ್ಷದಲ್ಲಿ ಹೊಸಹೊಸ ಉಪಾಯಗಳನ್ನು ಗ್ರಹಿಸುವುದರಲ್ಲಿಯೂ, ನವೀನಮಾರ್ಗಗಳನ್ನು ಅವಲಂಬಿಸುವುದರಲ್ಲಿಯೂ ಅವರಿಗೆ ಉತ್ಸಾಹವುಂಟಾಗುವುದು ಮತ್ತು ಶೀಘ್ರವಾಗಿ ಬದಲಾಯಿಸುತ್ತಿರುವ ಈ ಕಾಲದ ಸ್ಥಿತಿಗತಿಗಳಿಗೆ ಅನುಗುಣವಾಗಿ ತಮ್ಮ ವೃತ್ತಿಯನ್ನು ಬದಲಾಯಿಸಿಕೊಳ್ಳುವ ಶಕ್ತಿಸಾಮರ್ಥ್ಯಗಳು ಕ್ರಮೇಣ ಅವರಿಗೆ ಲಭಿಸುತ್ತಾ ಬರುವುವು.

ಪರಿಸಮಾಪ್ತಿ

ಈ ಯಂತ್ರಸ್ಥಾಪನೆಯು ಅಷ್ಟೇನೂ ಭಾರಿಯಾದುದಲ್ಲ. ಇದರ ಮೇಲ್ವಿಚಾರಣೆಯನ್ನು ಸರಿಯಾಗಿ ನಡಿಸಿದ್ದೇ ಆದರೆ ಇದು ಲಾಭಕರವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ. ಇದೊಂದು ಹೊಸ ಪ್ರಯತ್ನವಾದುದರಿಂದ ಇದನ್ನು ಶುಭ ಸೂಚನೆಯಾಗಿ ಭಾವಿಸಬೇಕು. ಪೂರ್ವದಿಂದ ನಡೆದುಬಂದ ವ್ಯವಸಾಯ ಮಾರ್ಗವನ್ನು ಬಿಟ್ಟು ನವೀನ ಮಾರ್ಗವನ್ನು ಅವಲಂಬಿಸಿದುದಕ್ಕೆ ಇದೂ ಒಂದು ನಿದರ್ಶನವಾಗಿರುತ್ತದೆ. ಇದರಿಂದ ನಮ್ಮಲ್ಲಿರತಕ್ಕ ಭಾರೀ ರೈತರಿಗೆ ಹೊಸ ಯಂತ್ರ ಮತ್ತು ಹೊಸ ಮಾರ್ಗಗಳಿಂದ ಎಷ್ಟು ಪ್ರಯೋಜನವಾಗುವುದೆಂಬ ಅಂಶವು ಚೆನ್ನಾಗಿ ಗೊತ್ತಾಗುವುದು. ಇಷ್ಟೇ ಅಲ್ಲದೆ ಹೊಸಹೊಸ ಮಾರ್ಗಗಳನ್ನು ಪ್ರಾರಂಭಿಸುವುದಕ್ಕೂ, ಹಿಡಿದ ಪ್ರಯತ್ನವನ್ನು ಬಿಡದೆ ಕೊನೆಗಾಣಿಸುವುದಕ್ಕೂ, ಸಾಹಸ ಕಾರ್ಯಗಳನ್ನು ಕೈಕೊಳ್ಳುವುದಕ್ಕೂ ಇದೊಂದು ಉದಾಹರಣೆಯಾಗಿರುತ್ತದೆ. ಆದುದರಿಂದ ಇದಕ್ಕಾಗಿ ಕಾರ್ಯಕರ್ತರಾಗಿರುವ ಮ|| ಭೀಮಪ್ಪನವರು ಇದರ ಮುಖಾಂತರ(?) ಸಹಾ ಸರ್ವ ಪ್ರಾಶಸ್ತ್ಯವಾದ ಕಾರ್ಯವನ್ನು ನಡಿಸಿದರೆಂದು ಹೇಳುವುದಕ್ಕೆ ಏನೇನೂ ಸಂಶಯವಿಲ್ಲ.—ಇಂಥಾ ಸಾಹಸಕಾರ್ಯಗಳನ್ನು ಪರಮಾದರದಿಂದ ನಿರೀಕ್ಷಿಸುತ್ತಿರುವ ನಮ್ಮ ಶ್ರೀಮನ್ ಮಹಾರಾಜಾ ಸಾಹೇಬ್ ಬಹಾದುರವರು ಮಹಾರಾಜಶ್ರೀ ಭೀಮಪ್ಪನವರು ಕೈಗೊಂಡಿರುವ ಈ ಪ್ರಯತ್ನವು ಸಂಪೂರ್ಣ ಫಲಕಾರಿಯಾಗಬೇಕೆಂತಲೂ ಇವರ ಮೇಲ್ಪಂಕ್ತಿಯನ್ನು ಇನ್ನೂ ಅನೇಕರು ಅನುಸರಿಸಿ ಇಂಥಾ ಕಾರ್ಯಗಳನ್ನು ಹೆಚ್ಚು ಹೆಚ್ಚಾಗಿ ನಡಿಸುತ್ತಾ ಬರಬೇಕೆಂತಲೂ ತಮ್ಮ ಅಪೇಕ್ಷೆಯಾಗಿರುವುದೆಂಬುದನ್ನು ತಮಗಳೆಲ್ಲರಿಗೂ ಈ ಶುಭ ಸಮಯದಲ್ಲಿ ತಿಳಿಸಬೇಕೆಂದು ನಮಗೆ ಅಪ್ಪಣೆಯಿತ್ತಿರುತ್ತಾರೆ.—ಮಹಾಶಯರೇ, ಈ ಯಂತ್ರವು ಈಗ ಸ್ಥಾಪನೆಮಾಡಲ್ಪಟ್ಟಿದೆ ಎಂದು ಸರ್ವರಿಗೂ ತಿಳಿಯಲಿ. ಇದರಿಂದ ಈ ಕಾರ್ಯಕರ್ತರಾದ ಮಹಾರಾಜಶ್ರೀ ಭೀಮಪ್ಪನವರಿಗೆ ವಿಶೇಷ ಪ್ರಯೋಜನವು ಲಭಿಸಲೆಂತಲೂ, ಇದು ಈ ಪ್ರಾಂತ್ಯದ ಜನಗಳಿಗೆ ಸ್ವಪ್ರಯತ್ನದಿಂದ ಸಾಹಸ ಕಾರ್ಯಗಳನ್ನು ನಡಿಸುವ ವಿಷಯದಲ್ಲಿ ಪ್ರೇರಣೆಯನ್ನು ಹುಟ್ಟಿಸಲಿ ಎಂಬುವದೂ ನಮ್ಮ ಮನಃಪೂರ್ವಕವಾದ ಅಭಿಲಾಷೆಯಾಗಿರುತ್ತದೆ.

1913ನೇಯ ಇಸವಿ ಆಗಸ್ಟ್ 12ನೇಯ ತಾರೀಖಿನಲ್ಲಿ ದಾವಣಗೆರೆಯ ನಿವಾಸಿಗಳು ಒಪ್ಪಿಸಿದ ವಿಜ್ಞಾಪನ ಪತ್ರಿಕೆಗೆ ದಿವಾನ್ ಸಾಹೇಬರವರು ಅಪ್ಪಣೆಕೊಡಿಸಿದ ಉತ್ತರ—

ಮಹಾಶಯರೇ,—ದಾವಣಗೆರೆಯ ಮುಖ್ಯ ನಿವಾಸಿಗಳಾದ ತಮಗಳ ಸಮಾಗಮವು ದೊರೆತದ್ದಕ್ಕಾಗಿ ನಮಗೆ ಬಹಳ ಸಂತೋಷವಾಯಿತು. ತಮಗಳು ನಮ್ಮನ್ನು ವಿಶೇಷ ಆದರಪೂರ್ವಕವಾಗಿ ಬರಮಾಡಿಕೊಂಡು ವಿಜ್ಞಾಪನಾ ಪತ್ರಿಕೆಯನ್ನು ಒಪ್ಪಿಸಿದುದಕ್ಕಾಗಿ ತುಂಬಾ ಕೃತಜ್ಞರಾಗಿರುತ್ತೇವೆ.—ತಮ್ಮ ವಿಜ್ಞಾಪನಾ ಪತ್ರಿಕೆಯಲ್ಲಿ ಸೂಚಿಸಿರುವಂತೆ ದಾವಣಗೆರೆಯು ನಮಗೆ ಹೊಸ ಸ್ಥಳವಲ್ಲ. ಇಲ್ಲಿಗೆ ನಾವು ಮೊದಲೇ ಒಂದು ಸಾರಿ ಬಂದಿದ್ದೆವು. ಎರಡನೆಯ ಸಾರಿ ಪುನಃ ಈ ಊರಿಗೆ ಬಂದು ಉತ್ಸಾಹಶೀಲರಾದ ಇಲ್ಲಿನ ನಿವಾಸಿಗಳೊಡನೆ ಕಲೆತು ಮಾತನಾಡಿ ಪರಸ್ಪರ ಅಭಿಪ್ರಾಯಗಳನ್ನು ತಿಳಿದುಕೊಳ್ಳಬೇಕೆಂದು ನಮಗೆ ಕೆಲವು ಕಾಲದಿಂದಲೂ ಇದ್ದ ಮನೋರಥವು ಇಂದಿಗೆ ಸಾರ್ಥಕವಾದುದಕ್ಕಾಗಿ ವಿಶೇಷ ಸಂತೋಷಪಡುತ್ತೇವೆ. ಇಲ್ಲಿನ ಪ್ರಜೆಗಳಿಗೆ ಆಗಬೇಕಾದ ಸೌಕರ್ಯಗಳು ಯಾವುವು? ನೀರು ಸರಬರಾಯಿಯ ವಿಷಯದಲ್ಲಿ ಯಾವ ಏರ್ಪಾಡುಗಳು ಆಗಬೇಕು? ಈ ಪುರದ ಅಭಿವೃದ್ಧಿಗೆ ಆಗಬೇಕಾದ ಇತರ ಅನುಕೂಲತೆಗಳೇನು? ಮುಖ್ಯವಾಗಿ ಇಲ್ಲಿನ ವ್ಯಾಪಾರವನ್ನೂ, ಕೈಗಾರಿಕೆಗಳನ್ನೂ ಅಭಿವೃದ್ಧಿಗೆ ತರಲು ಏನುಮಾಡಬೇಕು?—ಎಂಬ ವಿಷಯಗಳನ್ನೆಲ್ಲ ಪರಿಶೋಧಿಸಬೇಕೆಂಬ ಉದ್ದೇಶದಿಂದ ನಾವು ಇಲ್ಲಿಗೆ ಬಂದಿದ್ದೇವೆ. ಈ ಸಂಸ್ಥಾನದ [illegible] ಮೇಲ್ವಿಚಾರಣೆಗೆ ಜವಾಬ್ದಾರರಾಗಿಯೂ, ಸಂಪದಭ್ಯುದಯ ಸಮಾಜದ ಕೈಗಾರಿಕೆ ಮತ್ತು ವ್ಯಾಪಾರದ ಕಮಿಟಿಯ ಅಧ್ಯಕ್ಷರಾಗಿಯೂ ಇರುವ ನಮ್ಮ ಸೀಮೆಯ ಚೀಫ್ ಇಂಜಿನಿಯರಾದ ಮಿ|| [illegible]ರವರೂ, ಕೈಗಾರಿಕೆ ಮತ್ತು ವ್ಯಾಪಾರದ ಡೈರೆಕ್ಟರವರಾದ ಮಿ|| [illegible] ಸಾಹೇಬರವರೂ, ಸಂಪದಭ್ಯುದಯ ಸಮಾಜದ ಸೆಕ್ರೆಟರಿಯವರಾದ ಮ|| [illegible] ಬಾಲಸುಂದರಂ ಅಯ್ಯರವರೂ ನಮ್ಮೊಡನೆ ದಯಮಾಡಿಸಿರುವುದರಿಂದ ತಮ್ಮಗಳಿಗೆ ಆಗಬೇಕಾದ ಏರ್ಪಾಡುಗಳನ್ನು ಕುರಿತು ಚರ್ಚಿಸುವುದಕ್ಕೂ, ಸಾಧ್ಯವಾದರೆ ಕಾರ್ಯಾರಂಭ ಮಾಡುವದಕ್ಕೆ ಸಾಧಕವಾಗುವಂಥ ತೀರ್ಮಾನಗಳನ್ನು ನಿರ್ಣಯಿಸುವುದಕ್ಕೂ

ವಿಶೇಷ ಪ್ರಯೋಜನವಾದಂತೆ ಆಯಿತು ತಮ್ಮ ಊರಿನ ಬಡಾವಣೆಗೂ, ವ್ಯಾಪಾರದ ಅಭಿವೃದ್ಧಿಗೂ ಮಾಡಬೇಕಾದ ಏರ್ಪಾಡುಗಳನ್ನು ಕುರಿತು ಈಗತಾನೇ ನಾವುಗಳು ಪೂರ್ಣವಾಗಿ ನಡಿಸಿದ ಸಭಾ ಸಮಯದಲ್ಲಿ ವಿವರವಾಗಿ ಚರ್ಚಿಸಿರುತ್ತೇವೆ ತಮ್ಮ ಪುರೋಭಿವೃದ್ಧಿಗಾಗಿ ಸಹಾಯವನ್ನು ಮಾಡುವ ವಿಷಯದಲ್ಲಿ ಸರ್ಕಾರದವರು ವಿಶೇಷ ಶ್ರದ್ಧೆಯುಳ್ಳವರಾಗಿದಾರೆನ್ನುವುದನ್ನು ತಾವು ಸಂಪೂರ್ಣವಾಗಿ ನಂಬಬಹುದು

ತಮ್ಮ ಊರಿಗೆ ಅವಶ್ಯಕವಾಗಿ ಬೇಕಾದ ಕೆಲವು ಸೌಕರ್ಯಗಳನ್ನು ಕುರಿತು ತಾವುಗಳು ಪ್ರಸ್ತಾಪಿಸಿರುತ್ತೀರಿ ಅವುಗಳಿಗೆ ಈಗಲೇ ನಾವು ಖಚಿತ್ ತೀರ್ಮಾನವನ್ನು ಹೇಳಬೇಕೆಂದು ತಾವು ಬಹುಶಃ ನಿರೀಕ್ಷಿಸಲಾರಿರಿ ಅವುಗಳನ್ನು ನಾವೆಲ್ಲರೂ ಸೇರಿ ಈಗ ವಿವರವಾಗಿ ಚರ್ಚಿಸಿದ್ದಾಯಿತು ಸದರಿ ಸಂಗತಿಗಳನ್ನು ಸಾಧ್ಯವಾಗುವ ಮಟ್ಟಿಗೆ ನೆರವೇರಿಸಿಕೊಡುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಲ್ಲಿ ಪ್ರತ್ಯೇಕವಾಗಿ ಪರ್ಯಾಲೋಚಿಸಲಾಗುತ್ತೆ —ತಮ್ಮ ಊರು ಹತ್ತಿಯ ವ್ಯಾಪಾರಕ್ಕೆ ಮೊದಲಿಂದಲೂ ಪ್ರಸಿದ್ಧಿಯಾಗಿರುತ್ತದೆ ಮತ್ತು ಇಲ್ಲಿನ ನಿವಾಸಿಗಳು ವ್ಯಾಪಾರ ಮುಂತಾದವುಗಳಲ್ಲಿ ಬಹುಪಟುತ್ವವುಳ್ಳವರಾಗಿಯೇ ಇರುತ್ತಾರೆ ಹತ್ತಿಯು ತಮ್ಮ ಊರಿನ ಸಮೀಪದಲ್ಲಿಯೇ ವಿಶೇಷವಾಗಿ ದೊರೆಯುತ್ತದೆ ಮತ್ತು ರೈಲಿನ ಅನುಕೂಲವೂ ಸಹ ಸಮರ್ಪಕವಾಗಿರುತ್ತದೆ ಇಷ್ಟೆಲ್ಲ ಅನುಕೂಲವಿದ್ದು ತಾವೆಲ್ಲರೂ ವ್ಯಾಪಾರದಲ್ಲಿ ಅನುಭವಸ್ಥರಾಗಿದ್ದರೂ ಕೂಡ ಈವರೆಗೆ ತಾವುಗಳು ಯಾವ ನೂತನ ಪ್ರಯತ್ನವನ್ನೂ ಮಾಡಿರುವುದಿಲ್ಲ ನೂಲಿನ ಕಾರ್ಖಾನೆಯನ್ನು ಇಲ್ಲಿ ಸ್ಥಾಪಿಸುವ ವಿಷಯದಲ್ಲಿ ಶ್ರದ್ಧಾಪೂರ್ವಕವಾದ ಪ್ರಯತ್ನವನ್ನು ಮಾಡಿರುವಂತೆ ತಿಳಿಯ ಬರುವುದಿಲ್ಲ ಮತ್ತು ಹತ್ತಿಯ ಬೀಜದಿಂದ ಬೆಲೆಯಾಗುವ ಎಣ್ಣೆಯನ್ನು ತೆಗೆಯಬಹುದೆಂತಲೂ, ಸದರಿ ಬೀಜಕ್ಕಿಂತ ಅದರ ಹಿಂಡಿಯು ದನಗಳಿಗೆ ಒಳ್ಳೆಯ ಆಹಾರವಾಗಿರುವುದೆಂತಲೂ ತಮಗೆಲ್ಲ ತಿಳಿದಿದ್ದರೂ ಕೂಡ ಆ ಬೀಜವನ್ನೇ ವಿಶೇಷವಾಗಿ ಪರದೇಶಗಳಿಗೆ ರಫ್ತು ಮಾಡುತ್ತಾ ಇರುತ್ತೀರಿ ತಮ್ಮ ಪೈಕಿ ಐಶ್ವರ್ಯವಂತರಾಗಿಯೂ, ಉತ್ಸಾಹಶೀಲರಾಗಿಯೂ ಇರುವ ದೊಡ್ಡ ಮನುಷ್ಯರುಗಳು ತಮಗಿರುವ ಸೌಲಭ್ಯಗಳನ್ನು ಯಾವ ರೀತಿ ಉಪಯೋಗಪಡಿಸಿಕೊಳ್ಳಬೇಕೆಂಬ ವಿಚಾರದಲ್ಲಿ ಚೆನ್ನಾಗಿ ಆಲೋಚನೆ ಮಾಡಬೇಕು —ಈ ಸಂಸ್ಥಾನದ ವ್ಯಾಪಾರವನ್ನೂ, ಕೈಗಾರಿಕೆಗಳನ್ನೂ ಅಭಿವೃದ್ಧಿಗೊಳಿಸುವ ವಿಷಯದಲ್ಲಿ ಸಾಧ್ಯವಾಗುವ ಎಲ್ಲ ಸಹಾಯಗಳನ್ನೂ ಕಲ್ಪಿಸಿಕೊಡಬೇಕೆಂಬುದೇ ಶ್ರೀಮನ್ ಮಹಾರಾಜಾ ಸರ್ಕಾರದವರ ಸ್ಥಿರವಾದ ಉದ್ದೇಶವಾಗಿರುತ್ತದೆ ಕೈಗಾರಿಕೆಗೆ ಸಂಬಂಧಪಟ್ಟ ವಿಷಯಗಳಲ್ಲಿ ಯೋಗ್ಯವಾದ ತಿಳುವಳಿಕೆಯನ್ನು ಕೊಟ್ಟು ಪ್ರಜೆಗಳಿಗೆ ಸಹಾಯಮಾಡುವುದಕ್ಕಾಗಿ ಪ್ರತ್ಯೇಕವಾದ ಒಂದು ಇಲಾಖೆಯನ್ನು ಏರ್ಪಡಿಸಿರುತ್ತದೆ ಈ ಇಲಾಖೆಯ ಅಧ್ಯಕ್ಷಸ್ಥಾನಕ್ಕೆ ಇತರ ದೇಶಗಳಲ್ಲಿ ಹೆಸರುವಾಸಿಯನ್ನು ಪಡೆದಿರುವ ಅಧಿಕಾರಿಗಳು ದೊರೆತಿರುವುದು ನಮ್ಮಗಳ ಪುಣ್ಯೋದಯವೇ ಸರಿ ಸರ್ಕಾರದ ಸಹಾಯವನ್ನು ಪಡೆದು ನೂತನವಾಗಿ ಸ್ಥಾಪಿತವಾಗಿರುವ ಮೈಸೂರು ಬ್ಯಾಂಕಿನಲ್ಲಿ ಸದ್ಯದಲ್ಲಿಯೇ ಕೆಲಸವು ಆರಂಭವಾಗುತ್ತದೆ ಆಗ ತಾವುಗಳು ಬ್ಯಾಂಕಿನಲ್ಲಿ ವ್ಯವಹಾರಗಳನ್ನು ನಡಸಲು ಅನುಕೂಲಗಳು ಉಂಟಾಗುತ್ತವೆ

ಈ ಸಂದರ್ಭದಲ್ಲಿ ತಮ್ಮೆಲ್ಲರಿಗೂ ಒಂದು ಮುಖ್ಯವಾದ ವಿಷಯವನ್ನು ತಿಳಿಯಪಡಿಸಲು ಸಂತೋಷಿಸುತ್ತೇವೆ ಅದೇನೆಂದರೆ, ಯಾರಾದರೂ ಒಂದು ಕೈಗಾರಿಕೆ ಅಥವಾ ವ್ಯಾಪಾರವನ್ನು ನಡಿಸಲು ನಿಜವಾಗಿಯೂ ಕುತೂಹಲವುಳ್ಳ ಜನರಿಗೆ ಯಂತ್ರಗಳನ್ನು ಕೊಳ್ಳುವುದಕ್ಕಾದರೆ ತಲಾ 10 ಸಾವಿರ ರೂಪಾಯಿಯ ವರೆಗೂ, ಬಂಡವಾಳಕ್ಕೆ ಅವರೆ ಸಾವಿರ ರೂಪಾಯಿಯ ವರೆಗೂ ತಕಾವಿಯ ಸಾಲಗಳನ್ನು ಕೊಡಬಹುದೆಂಬ ಬಗ್ಗೆ ನಿಬಂಧನೆಗಳು ಏರ್ಪಡಿಸಲ್ಪಟ್ಟು ಕೆಲವು ದಿವಸಗಳಲ್ಲಿಯೇ ಜಾರಿಗೆ ಬರುತ್ತವೆ ಎನ್ನುವುದನ್ನು ತಮ್ಮಗಳಿಗೆ ಈ ಸಮಯದಲ್ಲಿ ತಿಳಿಯಪಡಿಸಬಹುದೆಂದು ಶ್ರೀಮನ್ ಮಹಾರಾಜಾ ಸಾಹೇಬ್ ಬಹಾದುರವರು ಸ್ನೇಹದ ಪಾತ್ರ ತಂತಿಯ ಮೂಲಕ ನಮಗೆ ಅಪ್ಪಣೆ ದಯಪಾಲಿಸಿರುತ್ತಾರೆ

ಈ ರಿಯಾಯಿತಿಗಳನ್ನು ಕಲ್ಪಿಸಿದ್ದರಿಂದ ಈ ಸಂಸ್ಥಾನದಲ್ಲೆಲ್ಲ ಕೈಗಾರಿಕೆ ಮತ್ತು ವ್ಯಾಪಾರಗಳನ್ನು ಅಭಿವೃದ್ಧಿಗೆ ತರಲು ಸ್ವಲ್ಪ ಮಟ್ಟಿಗಾದರೂ ಪ್ರೋತ್ಸಾಹ ಕೊಟ್ಟಂತೆ ಆಯಿತೆಂದು ನಾವು ಮನಃಪೂರ್ವಕವಾಗಿ ಭಾವಿಸುತ್ತೇವೆ ಅವರ ಫಲಾಫಲಗಳನ್ನು ಯೋಚಿಸದೆ ಬರೀ ಆಡಂಬರದಿಂದ ಪ್ರಯತ್ನಿಸಲ್ಪಡುವ ಕೆಲಸಗಳಿಗೆ ಸರ್ಕಾರದವರು ದ್ರವ್ಯಸಹಾಯ ಮಾಡುವ ಅಭಿಪ್ರಾಯವುಳ್ಳವರಾಗಿಲ್ಲವೆನ್ನುವುದನ್ನು ಸರ್ವರೂ ಮುಖ್ಯವಾಗಿ ಜ್ಞಾಪಕದಲ್ಲಿಡಬೇಕು ಚೆನ್ನಾಗಿ ಪರ್ಯಾಲೋಚಿಸಲ್ಪಟ್ಟು ಎಂದರೆ ಸಫಲಕಾರಿಯಾಗ ಬಹುದೆಂದು ತೋರುವ ಕೆಲಸಗಳಿಗೆ ಸರ್ಕಾರದವರು ನ್ಯಾಯವಾದ ಎಲ್ಲ ಸಹಾಯವನ್ನೂ ಮಾಡಲು ಸಿದ್ಧರಾಗಿರುವರು ಆದಕಾರಣ ತಾವುಗಳು ಸರ್ಕಾರದಿಂದ ಸಹಾಯವನ್ನು ಅಪೇಕ್ಷಿಸುವುದಕ್ಕೆ ಮುಂಚೆ ಎಲ್ಲ ವಿಷಯಗಳನ್ನೂ ಸಂಪೂರ್ಣವಾಗಿ ಪರಿಶೋಧಿಸಿ ಮಾಡಿ ಅನಂತರ ಬೇಕಾದ ಸಹಾಯವನ್ನು ಅಪೇಕ್ಷಿಸಬೇಕೆಂಬುವುದನ್ನು ಚೆನ್ನಾಗಿ ಗ್ರಹಿಸಿಕೊಳ್ಳಬೇಕು

ಮಹಾಶಯರೆ, ತಾವು ನಮಗೆ ತೋರ್ಪಡಿಸಿರುವ ಆದರಾತಿಶಯಕ್ಕಾಗಿ ಪುನಃ ತಮ್ಮನ್ನು ವಂದಿಸುತ್ತೇವೆ ವಿಸ್ತೀರ್ಣದಲ್ಲಿಯೂ ಜನಸಂಖ್ಯೆಯಲ್ಲಿಯೂ ತಮ್ಮ ಊರು ಅಭಿವೃದ್ಧಿಗೆ ಬರಲಿ ಎನ್ನುವುದೂ, ತಮ್ಮ ವ್ಯಾಪಾರವು ಅತಿಶಯವಾಗಿ ವೃದ್ಧಿಗೆ ಬರಲಿ ಎನ್ನುವುದೂ, ತಮಗೆ ಸ್ವಾಭಾವಿಕವಾಗಿ ಲಭಿಸಿರುವ ಅನುಕೂಲಗಳಿಗೆ ತಕ್ಕಂತೆ ಕೈಗಾರಿಕೆ ಮುಂತಾದವುಗಳು ಇಲ್ಲಿ ಅತ್ಯಂತ ಉನ್ನತ ಸ್ಥಿತಿಗೆ ಬರಲಿ ಎನ್ನುವುದೂ—ನಮ್ಮ ಅಭಿಲಾಷೆಯಾಗಿರುತ್ತದೆ

ಟೌನ್ ಹಾಲ್ ಮಂದಿರದಲ್ಲಿ ನಡೆದ ಕೂಟವು

ದಿವಾನ್ ಎಂ॥ ವಿಶ್ವೇಶ್ವರಯ್ಯನವರು ತಾ 12 ನೇ ಮಂಗಳವಾರ ದಾವಣಗೆರೆಯ ಪುರ ಪ್ರಮುಖರನ್ನು ಅಲ್ಲಿನ ಟೌನ್ ಹಾಲ್ ಬಂಗಲೆಯಲ್ಲಿ ಸಂಧಿಸಿ ಅವರುಗಳ ಮುಖೇನ ಪ್ರಜೆಗಳ ಕಷ್ಟ ಸುಖಗಳನ್ನು ತಿಳಿದು ಅವರಿಗೆ ಉತ್ತರಗಳನ್ನು ದಯಪಾಲಿಸಿದ ವೃತ್ತಾಂತವೇನೆಂದರೆ—

ಪ್ರಜೆಗಳ ವಿಜ್ಞಾಪನೆ—ಮಹಾಸ್ವಾಮಿ, ಈ ಊರಿನ ಸ್ಕೂಲುಗಳಲ್ಲಿ ವಿದ್ಯಾರ್ಥಿಗಳಿಗೆ ತಕ್ಕಷ್ಟು ಜನರು ಉಪಾಧ್ಯಾಯರಿಲ್ಲದ್ದರಿಂದಲೂ ಮತ್ತು ವಿದ್ಯಾರ್ಥಿಗಳಿಗೆ ಸಾಕಾಗುವಷ್ಟು ಸ್ಥಳವಿಲ್ಲದ್ದರಿಂದಲೂ ವಿದ್ಯಾಭಿವೃದ್ಧಿಗೆ ತೊಂದರೆಯಾಗಿದೆ ಆದುದರಿಂದ ಸಾಕಾದಷ್ಟು ಜನ ಉಪಾಧ್ಯಾಯರನ್ನೂ ಮತ್ತು ಕಟ್ಟಡಗಳನ್ನೂ ಕಲ್ಪಿಸಿಕೊಡಬೇಕಲ್ಲದೆ ಈಗಿರುವ ಆಂಗ್ಲೋ ವರ್ನಾಕ್ಯುಲರ್ ಸ್ಕೂಲನ್ನು ಹೈಸ್ಕೂಲನ್ನಾಗಿ ಮಾಡಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ —ದಿವಾನ್‌ರವರ ಉತ್ತರ—ಅ॥ ಕಮಿಷನರ್ ಸಾಹೇಬರೂ ಅನುಭವಸ್ಥರೂ ನೀವುಗಳೂ ಸೇರಿಕೊಂಡು ಈ ಕೊರತೆಗಳನ್ನೆಲ್ಲಾ ವಿದ್ಯಾಶಾಖೆಯ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರಿಗೆ ವಿಜ್ಞಾಪಿಸಿಕೊಳ್ಳತಕ್ಕದ್ದು ನಾವು ಸಹ ಈ ವಿಷಯವನ್ನು ತಿಳಿಸಲಾಗುತ್ತೆ

ಪ್ರಶ್ನೆ—ತುಂಗಭದ್ರಾ ನದಿಯಿಂದ ಈ ಗ್ರಾಮಕ್ಕೆ ನೀರನ್ನೊದಗಿಸುವ ವಿಚಾರದಲ್ಲಿ ಈ ಮ್ಯುನಿಸಿಪಾಲಿಟಿಯವರು ಅವಶ್ಯಕವಾಗಿ ನಡೆಯಬೇಕಾದ ಕಿಸ್ತೆ ವಸೂಲಾದ ಎಲ್ಲಾ ಹಣಗಳನ್ನು ಗಲ್ಲಿಸಿಟ್ಟು ಜಮಾಯಿಸಿರುವ 90 ಸಾವಿರ ರೂಪಾಯಿಗಳನ್ನು ಸರ್ಕಾರದವರ ವಶಕ್ಕೆ ತೆಗೆದುಕೊಂಡು ಹೆಚ್ಚು ಬೇಕಾಗುವ ಹಣವನ್ನು ಸರ್ಕಾರದವರೇ ಸಹಾಯಮಾಡಿ ಈ ಮಹತ್ಕಾರ್ಯವನ್ನು ನೆರವೇರಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ ಉತ್ತರ ಹೆಚ್ಚು ಬೇಕಾಗುವ ಹಣವನ್ನು ಸರ್ಕಾರದವರೇ ಕೊಡಲು ಈಗಿನ ಕಾಲಕ್ಕೆ ಸಾಧ್ಯವಿಲ್ಲದ್ದರಿಂದ 40 ಸಾವಿರ ರೂಪಾಯಿಗಳನ್ನು ಮಾತ್ರ ಸ್ಯಾಂಕ್ಷನ್ ಮಾಡಲಾಗುತ್ತೆ ಬಾಕಿ ಹಣವನ್ನು ನೀವು ಕ್ಷಿಪ್ರದಲ್ಲಿಯೇ ಜಮಾಯಿಸಿ ಈ ಕಾರ್ಯವನ್ನು ನೆರವೇರಿಸತಕ್ಕದ್ದು

ಪ್ರಶ್ನೆ—ಈ ಊರಿನ ರೈಲ್ವೆ ಸ್ಟೇಷನ್ ಪ್ಲಾಟ್‌ಫಾರಂಗಳು ಎತ್ತರದ ಸ್ಥಳಗಳು, ಗೂಡ್ಸ್ ಷೆಡ್ ಕಟ್ಟಡಗಳು ಬಹಳ ಚಿಕ್ಕದಾಗಿರುವುದರಿಂದ ವ್ಯಾಸಂಜರುಗಳಿಗೂ, ವರ್ತಕರಿಗೂ, ಅನೇಕ ಲಕ್ಷ ರೂಪಾಯಿ ಬೆಲೆಬಾಳುವ ಸಾಮಾನುಗಳು ಬೈಲಿನಲ್ಲಿ ಬಿದ್ದು ಹಾಳಾಗಿ ನಷ್ಟವಾಗುತ್ತಿರುವುದರಿಂದ ಈ ಕೊರತೆಗಳನ್ನೆಲ್ಲಾ ನಿವಾರಿಸಿ ಮಾಡುವ ಏರ್ಪಾಟು ಮಾಡಿಸಿಕೊಡಬೇಕೆಂದು ಬೇಡಿಕೊಳ್ಳುತ್ತೇವೆ ಉತ್ತರ—ಈ ವಿಷಯಗಳೆಲ್ಲಾ ಅಡಕವಾಗಿರುವಂತೆ ಒಂದು ಅರ್ಜಿಯನ್ನು ಲಾಯರ್ ಮೂಲಕ ತಯಾರುಮಾಡಿಸಿ ರೈಲ್ವೆ ಇಲಾಖೆಯವರಿಗೆ ಕಳುಹಿಸತಕ್ಕದ್ದು

ಪ್ರಶ್ನೆ—ಈ ಊರಿನ ಮ್ಯುನಿಸಿಪಾಲಿಟಿಯವರು ಪರಸ್ಥಳಗಳಿಂದ ಬರುವ ಜವಳಿಯ ಮೋರೆ ಒಂದಕ್ಕೆ 2 ರೂಪಾಯಿನ ಪ್ರಕಾರ ಆಕ್ಟ್ರಾಯಿ ವಸೂಲ್ಮಾಡುವುದರಿಂದ ವರ್ತಕರುಗಳು ಈ ಆಕ್ಟ್ರಾಯಿಯನ್ನು ವಜಾಮಾಡಿಸಿ ವ್ಯಾಪಾರಾಭಿವೃದ್ಧಿಯಾಗಲು ಅನುಕೂಲಪಡಿಸಿಕೊಡಬೇಕೆಂದು ಬೇಡಿಕೊಳ್ಳುತ್ತೇವೆ ಉತ್ತರ—ಪೂರ್ತಿಯಾಗಿ ವಜಾ ಮಾಡಲು ಸರ್ಕಾರಕ್ಕೆ ನಷ್ಟವಾಗುತ್ತಾದದ್ದರಿಂದ ರೂಪಾಯಿ 2 ರೂಪಾಯಿನಲ್ಲಿ 7 ಆಣೆಗಳು ವಜಾಮಾಡಲಾಗುತ್ತೆ

ಈ ರೀತಿ ಉತ್ತರಗಳನ್ನು ದಯಪಾಲಿಸಿ ಪುರ ಜನರನ್ನು ಸಂತೋಷಪಡಿಸಿ ಅವರಿಂದ ಬೀಳ್ಕೊಂಡು ತೆರಳಿದರು.

ಪ್ರೇಕ್ಷಕ.

ಕೋಆಪರೇಟಿವ್ ಸೊಸೈಟಿ ಕೂಟಗಳು.

ಮೈಸೂರು ಸಿಟಿ ಕೋಆಪರೇಟಿವ್ ಬ್ಯಾಂಕು

ರಾಜಧಾನಿಯಲ್ಲಿ ಕಳೆದ 1910ನೇ ನವಂಬರ್ ತಾ 9ರಲ್ಲಿ ರೆಜಿಸ್ಟರಾಗಿ ಅದೇ ಡಿಸಂಬರ್ ತಾ 2ರಿಂದ ಲೇವಾದೇವಿ ನಡೆಯುತ್ತಿರುವ ಮೇಲ್ಕಂಡ ಬ್ಯಾಂಕಿನ ಎರಡನೇ ವರುಷದ ಜನರಲ್ ಮೀಟಿಂಗು ಹಿಂದಿನ ವಾರ ಜರುಗಿತು ಈಗ ಈ ಬ್ಯಾಂಕಿನಲ್ಲಿ ಷೇರು ಪಡೆದಿರುವ 390 ಮೆಂಬರುಗಳ ಪೈಕಿ 387 ಮಂದಿ ಗಂಡಸರು, 3 ಮಂದಿ ಹೆಂಗಸರು ಬ್ಯಾಂಕಿನ ಮೂಲಧನ 50,000 ರೂಪಾಯಿ 10 ರೂಪಾಯಿನ 3,471 ಷೇರುಗಳು ವಿಕರಿ ಆಗಿ 25,243¼ ರೂಪಾಯಿ ಕೂಡಿದೆ ಇದಲ್ಲದೆ 10,000 ರೂಪಾಯಿ ತನಕ ಡಿಪಾಜಿಟ್ಟು ಹಿಡಿಯಬಹುದೆಂದು ಸ್ಯಾಂಕ್ಷನ್ ಆಗಿರುವುದರಿಂದ ಬ್ಯಾಂಕಿನವರು ಫಿಕ್ಸಡ್ ಮತ್ತು ಕರೆಂಟ್ ಡಿಪಾಜಿಟ್ಟುಗಳನ್ನು ಹಿಡಿಯುತ್ತಾ ಬರುತ್ತಿದ್ದಾರೆ ಕಳೆದ ವರುಷ ಲೇವಾದೇವಿಯಲ್ಲಿ ಬ್ಯಾಂಕಿಗೆ ರೂ 1,130-11-4 ಪೈ ಲಾಭ ಉತ್ಪತ್ತಿಯಾಗಿ ಸಿಬ್ಬಂದಿ ಮುಂತಾದದಕ್ಕೆ ರೂ 401 1 2 ಪೈ ಖರ್ಚಾಗಿರುವುದು ಉಳಿದ ಮೊಬಲಗಿನಲ್ಲಿ ಆಡಿಟರಿಗೂ, ಪ್ರೆಸಿಡೆಂಟರಿಗೂ, ಸೆಕ್ರೆಟರಿಗಳಿಗೂ, ಸಿಬ್ಬಂದಿಯವರಿಗೂ ಬಹುಮಾನವಾಗಿ ರೂ 164 15-5 ಪೈ ಕೊಟ್ಟು, ಬಾಕಿ ಹಣದಲ್ಲಿ ರೂ 588 11-5 ಪೈ ರಿಜರ್ವ್ ಫಂಡಿಗೆ ಜಮಾಯಿಸಿಟ್ಟು, ಷೇರುದಾರರಿಗೆ ಶೇಕಡಾ ವಾರ್ಷಿಕ 10 ಆಣೆಯಂತೆ ಬಡ್ಡಿ ಹಂಚಬೇಕೆಂದು ತೀರ್ಮಾನವಾಯಿತು ಈ ಬ್ಯಾಂಕಿನ ಲೇವಾದೇವಿಯು ಷೇರುದಾರರಿಗೂ ಪ್ರಜೆಗಳಿಗೂ ಹಿತಕರವಾಗಿದ್ದು, ಅದರ ಕಾರ್ಯಗಳು ದಿನಕ್ರಮೇಣ ಅಭಿವೃದ್ಧಿಗೆ ಬರುತ್ತಿರುವುದೆಂದು ವಾರ್ಷಿಕ ರಿಪೋರ್ಟಿನಿಂದ ತಿಳಿದು ಬರುತ್ತದೆ ಮೀರಿ ಬಡ್ಡಿಯನ್ನು ತೆತ್ತು ನಷ್ಟಪಡುತ್ತಿರುವ ಬಡ ವರ್ತಕರು ಈ ಬ್ಯಾಂಕಿನಲ್ಲಿ ಷೇರು ಪಡೆದು ಮೆಂಬರಾಗಿ ಅಲ್ಪ ಬಡ್ಡಿಗೆ ಸಾಲಗಳನ್ನು ತೆಗೆದುಕೊಂಡು ತಮ್ಮ ವ್ಯಾಪಾರವನ್ನು ಅಭಿವೃದ್ಧಿ ಮಾಡಿಕೊಳ್ಳುವುದರ ಮೂಲಕ ಸುಖಿಗಳಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ

ಹೊಳೆನರಸೀಪುರದ ಕೋಆಪರೇಟಿವ್ ಸಂಘ

ಈ ಊರಿನಲ್ಲಿ ಲೇವಾದೇವಿ ವಿಚಾರದಲ್ಲಿ ಅನುಭವಿಸುತ್ತಿದ್ದ ಪ್ರಜೆಗಳ ತೊಂದರೆಯ ಪರಿಹಾರಾರ್ಥವಾಗಿ ಅಮಲ್ದಾರ್ ಮ॥ ಆರ್ ತಿರುನಾರಣಯ್ಯಂಗಾರ್ರವರು ಜನರಿಗೆ ಪ್ರೋತ್ಸಾಹಪಡಿಸಿ ಹೊಳೆನರಸೀಪುರದ ಶ್ರೀ ಲಕ್ಷ್ಮೀನರಸಿಂಹ ಕೋಆಪರೇಟಿವ್ ಸೊಸೈಟಿ ಎಂಬ ಲೇವಾದೇವಿ ಬ್ಯಾಂಕನ್ನು 1912 ನೇ ಜೂಲೈ ಗುರ್ರೆ ತಾರೀಖಿನಲ್ಲಿ ಸ್ಥಾಪಿಸಿದರು ಅದು ಅವರ ಪ್ರೋತ್ಸಾಹದಿಂದ ಅಭಿವೃದ್ಧಿ ಹೊಂದಿ ಮೊದಲನೇ ವರ್ಷದ ಜನರಲ್ ಮೀಟಿಂಗು ಕಸಬಾ ಎ ವಿ ಸ್ಕೂಲ್ ಕಟ್ಟಡದಲ್ಲಿ ತಾ 3ನೇ ಭಾನುವಾರ ಜರುಗಿತು ಇದಕ್ಕಾಗಿ ಕೋಆಪರೇಟಿವ್ ಸೊಸೈಟೀಸ್ ರಿಜಿಸ್ಟ್ರಾರ್ ಮ॥ ಎಂ ಎ ನಾರಾಯಣಯ್ಯಂಗಾರ್ರವರು ದಯಮಾಡಿ ಅಗ್ರಾಸನಾಧಿಪತ್ಯವನ್ನು ವಹಿಸಿದರು

ಸೊಸೈಟಿಯ ವಾರ್ಷಿಕ ರಿಪೋರ್ಟನ್ನು ಮ॥ ಪುಟ್ಟೇರಾಯರು ಓದಿ ತಿಳಿಸಿದರು ಇದರ ಸಾರಾಂಶವೇನೆಂದರೆ—ಈ ಊರಿನ ಎಲ್ಲಾ ಜನಾಂಗದವರೂ ಸೇರಿ 215 ಜನ ಮೆಂಬರುಗಳಿಂದ ಪಡೆದಿರುವ 6,795 ರೂಪಾಯಿ ಷೇರು ಧನವನ್ನೂ, 7,071 ರೂಪಾಯಿ ಡಿಪಾಜಿಟನ್ನೂ, ಚಿಲ್ಲರೆ ಬಾಬಿನಲ್ಲಿ 263 ರೂಪಾಯಿಗಳನ್ನೂ ಶೇಖರಮಾಡಿಕೊಂಡು, 387 ಪತ್ರಗಳ ಮೂಲಕ 16,780 ರೂಪಾಯಿಗಳ ಲೇವಾದೇವಿ 4,277 ರೂಪಾಯಿ ವಾಪಸು ವಸೂಲ್ಮಾಡಿಕೊಂಡು, 8,503 ರೂಪಾಯನ್ನು ಮೆಂಬರುಗಳ ಮೇಲೆ ಸಾಲವಾಗಿ ಬಿಟ್ಟು, ಈ ಲೇವಾದೇವಿಯ ಮೂಲಕ 107 ರೂಪಾಯಿ ನಫೆ ಸಂಪಾದಿಸಿರುವುದೂ, ಈ ಪೈಕಿ ಸೊಸೈಟಿಯ ಆಡಳಿತ ನಡಿಸಲು ಆದ ಖರ್ಚು ಜಾತಿ 205 ರೂಪಾಯಿ ನಫೆ ಕಂಡಿರುವುದಾಗಿಯೂ ತಿಳಿಸಿದರು ಇದನ್ನು ತಪ್ಪಲಾಗಿ ಕೇಳಿ ಜನಗಳೂ, ಅಗ್ರಾಸನಾಧಿಪರುಗಳೂ ಬಹಳ ಆನಂದ ಹೊಂದಿದರು ತರುವಾಯ ಸೊಸೈಟಿ ವಿಚಾರವಾಗಿ ಕೆಲವು ಬದಲಾವಣೆಯ ಚರ್ಚೆಗಳು ನಡೆದು ಅಲ್ಪಕಾಲದಲ್ಲಿ ಇಷ್ಟು ಅಭಿವೃದ್ಧಿಗೆ ಬರಲು ಕಾರಣಭೂತರಾದ ಸೆಕ್ರೆಟರಿ ಮ॥ ವೆಂಕೋಬರಾಯರಿಗೆ ಸೊಸೈಟಿಯವರ ಕೃತಜ್ಞತಾ ಪೂರ್ವಕವಾದ ವಂದನವನ್ನು ಕೊಡಬೇಕೆಂತಲೂ, ಸೊಸೈಟಿಯ ಮುತ್ಸದ್ದಿ ಮ॥ ನರಸಿಂಹಮೂರ್ತಾಚಾರ್ರಿಗೆ ಅವರ ಮೆಹನತ್ತಿಗಾಗಿ 50 ರೂಪಾಯಿ ಬಹುಮಾನಕೊಡಬೇಕೆಂತಲೂ, ಜವಾನ್ ಗುಣ್ಯೆ ಲಿಂಗಾಯ್ತು ಅವರಿಗೆ ತಲಾ ಬಡ್ತಿ ಮಾಡಬೇಕೆಂತಲೂ ತೀರ್ಮಾನವಾಯಿತು ಸೆಕ್ರೆಟರಿ ಮ॥ ಯಂ ವೆಂಕೋಬರಾಯರು ತಮಗೆ ಬಹುಮಾನ ಕೊಡಬೇಕೆಂದಿರುವ ಮೊಬಲಗನ್ನು ಸೊಸೈಟಿ ಕಟ್ಟಡಕ್ಕೆ ಉಪಯೋಗಿಸಬೇಕೆಂದು ಹೇಳಿದ್ದರ ಮೇರೆ ಸೊಸೈಟಿಯವರ ಕೃತಜ್ಞತೆಯ ಜ್ಞಾಪಕಾರ್ಥವಾಗಿ ಅವರಿಗೆ ಒಂದು ಉಂಗುರವನ್ನು ಒಪ್ಪಿಸಬೇಕೆಂದು ಇತ್ಯರ್ಥವಾಯಿತು ನಂತರ ಸೊಸೈಟಿಯ ಪುರೋಭಿವೃದ್ಧಿಗೆ ಆವಶ್ಯಕವಾಗಿ ಟೌನ್ ಹಾಲ್ ಆವರಣದಲ್ಲಿ ಒಂದು ಕಟ್ಟಡವನ್ನು ಕಟ್ಟಬೇಕೆಂತಲೂ, ಇದಕ್ಕೆ ಸೆಕ್ರೆಟರಿಯವರು ಬಿಟ್ಟ ಬಹುಮಾನ ದ್ರವ್ಯವೊಂದಿಗೆ ರಿಸರ್ವ್ ಫಂಡಿನ ಧನವನ್ನೂ, ರಿಸರ್ವ್ ನಿಧಿಗೆ ಸೇರಬೇಕಾದ ಮೊಬಲಗನ್ನೂ ರೆಜಿಸ್ಟ್ರಾರ್‌ರವರು ಒಪ್ಪಿದರೆ ಉಪಯೋಗಿಸಿಕೊಳ್ಳಬೇಕೆಂತಲೂ ಸಭಿಕರೆಲ್ಲರೂ ಅನುಮೋದಿಸಿದರು ಮತ್ತು ಈಗ ಮಂಜೂರಾಗಬೇಕಾಗಿರುವ ನಫಾ ಬಾಬತು 157 ರೂಪಾಯನ್ನು ಇದಕ್ಕೆ ಉಪಯೋಗಿಸಬಹುದೆಂದು ಒಪ್ಪಲಾಯಿತು ಅಗ್ರಾಸನಾಧಿಪತಿಗಳು ಸೊಸೈಟಿಯ ಅಭಿವೃದ್ಧಿ ಸ್ಥಿತಿಯನ್ನು ಕೊಂಡಾಡಿ ಇದೇ ರೀತಿ ಪ್ರಜೆಗಳು ಪರಸ್ಪರ ಸಹಾಯ ಬುದ್ಧಿಯುಳ್ಳವರಾಗಿ ಬಾಳಬೇಕೆಂದು ನೈಮನಸ್ಸಿಲ್ಲದೆ ಸೊಸೈಟಿಯನ್ನು ಇನ್ನೂ ಉತ್ತಮವಾದ ಸ್ಥಿತಿಗೆ ತರುತ್ತಾರೆಂದು ಹಾರೈಸಿ ಉಪದೇಶ ಮಾಡಿದರು ಅಗ್ರಾಸನಾಧಿಪತ್ಯವನ್ನು ವಹಿಸಿ ಕಾರ್ಯನಿರ್ವಾಹ ಮಾಡಿ ಸೊಸೈಟಿಯ ಪುರೋಭಿವೃದ್ಧಿಗೆ ಅನೇಕಾನೇಕ ಸಲಹೆಗಳನ್ನು ಕೊಟ್ಟ ಮ॥ ನಾರಾಯಣಯ್ಯಂಗಾರ್ರಿಗೆ ಸಭಿಕರ ಪರವಾಗಿ ಮ॥ ಪ್ಲೀಡರ್ ವೆಂಕಟರಾಮಯ್ಯನವರೂ, ಮ॥ ಪ್ಲೀಡರ್ ರಾಮಣ್ಣನವರೂ ವಂದನೆಯನ್ನು ಸಮರ್ಪಿಸಿದ್ದಲ್ಲದೆ ಇಷ್ಟು ಅಭಿವೃದ್ಧಿಗೆ ಕಾರಣಭೂತರಾದ ಅಮಲ್ದಾರ್ ಮ॥ ತಿರುನಾರಣಯ್ಯಂಗಾರ್ರಿಗೂ, ಸ್ನೇಹಶೀಲತೆಯಿಂದಲೂ, ನಿಷ್ಪಕ್ಷಪಾತತೆಯಿಂದಲೂ ಉದಾರ ಮನಸ್ಸಿನಿಂದಲೂ ಕಾರ್ಯನಿರ್ವಾಹ ಮಾಡಿದ ಸೆಕ್ರೆಟರಿ ಮ॥ ವೆಂಕೋಬರಾಯರಿಗೂ ಸಭಿಕರಪರವಾಗಿ ವಂದನೆಯನ್ನು ಸಮರ್ಪಿಸಿದರು ಕಡೆಯಲ್ಲಿ ವಾದ್ಯ ವೈಭವಗಳೊಡನೆ ಸಭೆಯು ಮುಕ್ತಾಯವಾಯಿತು

ಆ ದಿನ ಸಾಯಂಕಾಲ 6 ಘಂಟೆಗೆ ತೋರಣಾದಿಗಳಿಂದ ಅಲಂಕೃತವಾದ ಸೊಸೈಟಿಯ ಕಟ್ಟಡವನ್ನು ಕಟ್ಟಬೇಕೆಂದಿದ್ದ ಟೌನ್ ಹಾಲ್ ಕಾಂಪೌಂಡಿನಲ್ಲಿ ಪ್ರಜೆಗಳೆಲ್ಲರೂ ಸೇರಿ ರಿಜಿಸ್ಟ್ರಾರ್ ಸಾಹೇಬರನ್ನು ವಾದ್ಯ ವೈಭವಗಳೊಡನೆ ಕರೆತಂದು ಬಂದು ಸೊಸೈಟಿಯ ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಬೇಕೆಂದು ಪ್ರಾರ್ಥಿಸಿದ್ದರ ಮೇಲೆ ಆಯುಧ ಪೂಜಾದಿಗಳು ವಿಧಿಪೂರ್ವಕವಾಗಿ ನಡೆದ ತರುವಾಯ ವಾದ್ಯಗಳು ಘೋಷಿಸುತ್ತಿರಲು ಮ॥ ಎಂ ಎ ನಾರಾಯಣಯ್ಯಂಗಾರ್ರವರು ಬೆಳ್ಳಿಯ ಕರಣೆಯನ್ನು ಕೈಗೊಂಡು ಅಸ್ತಿಭಾರ ಸ್ಥಾಪನೆಯನ್ನು ಮಾಡಿದರು. ಆಗ ಅಲ್ಲಿ ಸೇರಿದ್ದ ಪ್ರಜೆಗಳೆಲ್ಲಾ ಪ್ರಜಾಹಿತಾರ್ಥವಾಗಿ ಅನೇಕ ದ್ರವ್ಯವ್ಯಯವನ್ನು ಮಾಡುತ್ತಾ ಇಂಥಾ ಸೊಸೈಟಿಗಳನ್ನು ಅಭಿವೃದ್ಧಿಗೆ ತರುತ್ತಿರುವ ನಮ್ಮ ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರನ್ನೂ, ನಮ್ಮ ಸ್ವಾಮಿಯ ಜಾರ್ಜ್ ಚಕ್ರವರ್ತಿ ಸಾರ್ವಭೌಮರವರನ್ನೂ ಕುಟುಂಬಸಮೇತ ಸಮೇತವಾಗಿ ಶ್ರೀ ಭಗವಂತನು ಆಯುರಾರೋಗ್ಯಾದಿಗಳನ್ನು ಕೊಟ್ಟು ಕಾಪಾಡಬೇಕೆಂದು ಪ್ರಾರ್ಥಿಸುತ್ತಾ, ಸಮೀಪದಲ್ಲಿರುವ ಮುಸಾಫರ್‌ಖಾನೆಗೆ ವಾದ್ಯಗಳೊಡನೆ ರಿಜಿಸ್ಟ್ರಾರ್ ಸಾಹೇಬರವರನ್ನು ಕರೆದುಕೊಂಡು ಹೋಗಿ ಅಲ್ಲಿ ಸಿದ್ಧವಾಗಿದ್ದ ಫಲಾಹಾರವನ್ನು ಆತಿಥ್ಯರೂಪವಾಗಿ ಸರ್ವರಿಗೂ ಸಮರ್ಪಿಸಿದರು.

ಬಾತ್ಮೀದಾರ್

ಮಂಡ್ಯ ತಾ॥ ಕೊಮೇರಹಳ್ಳಿ ಪಂಚಮರ ಪರಸ್ಪರ ಸಹಾಯಕ ಸಂಘ.

ಈ ಸಂಘದ ಪ್ರಥಮ ವಾರ್ಷಿಕೋತ್ಸವವು ಇದೇ ಆಗಸ್ಟ್ ತಾ 10 ರಲ್ಲಿ ಮೈಸೂರು ಮರಿಮಲ್ಲಪ್ಪನವರ ಹೈಸ್ಕೂಲ್ ಹೆಡ್ ಮಾಸ್ಟರ್ ಮ॥ ಎಂ ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು ವಾರ್ಷಿಕೋತ್ಸವಕ್ಕಾಗಿ ದಯಮಾಡಿಸಿದ್ದಂಥ ಮಹನೀಯರುಗಳಿಗೋಸ್ಕರ ವಿಶಾಲವಾದ ಮೈದಾನದಲ್ಲಿ ಏರ್ಪಡಿಸಲ್ಪಟ್ಟಿದ್ದ ಡೇರಾದಲ್ಲಿ ಸಭೆಯು ಸೇರಿತು ಡೇರವನ್ನೆಲ್ಲಾ ಪ್ರೇಕ್ಷಕರ ಕಣ್ಮನಗಳನ್ನು ಸೆಳೆಯುವ ರೀತಿ ತಳಿರು ತೋರಣಾದಿಗಳಿಂದ ಅಲಂಕರಿಸಿದ್ದರು ಬ್ಯಾಂಡ್ ವಾದ್ಯಘೋಷವು ಬಹು ಚೆನ್ನಾಗಿ ಆಗುತ್ತಿತ್ತು ವಾರ್ಷಿಕೋತ್ಸವಕ್ಕೆ ಅಧ್ಯಕ್ಷರಲ್ಲದೆ ಬಹು ಮಂದಿ ದೊಡ್ಡ ಮನುಷ್ಯರೂ ಅಧಿಕಾರಿಗಳೂ ದಯಮಾಡಿದ್ದರು ಮತ್ತು 2,000 ಜನಗಳ ಮೇಲೆಯೇ ಪಂಚಮರು ಗ್ರಾಮಾಂತರಗಳಿಂದ ದಯಮಾಡಿಸಿದ್ದರು ಸಭೆ ಸೇರಲಿಕ್ಕೆ ಏರ್ಪಟ್ಟಿದ್ದ ಡೇರಾ ಸಹ ಸಾಲದೆ ಮೈದಾನವೆಲ್ಲಾ ಜನಗಳ ಸಂದಣಿಯು ಕಂಗೊಳಿಸುತ್ತಿತ್ತು ಈ ಸಂದರ್ಭದಲ್ಲಿ ಗಲಾಟೆಗೆ ಅವಕಾಶವಿಲ್ಲದಂತೆ ಪೋಲೀಸ್ ಬಂದೋಬಸ್ತು ಸಮರ್ಪಕವಾಗಿತ್ತು ಮೊದಲೇ ನಿಶ್ಚಯವಾಗಿದ್ದಂತೆ ಹಾರುವ ಲಾಳಿ ಮಗ್ಗಗಳಲ್ಲಿ ನೆಯಿಗೆ ಪೋಟಾಪೋಟಿಯು ನಡೆದು ಗೊತ್ತಾಗಿದ್ದ ಇಬ್ಬರು ಹುಡುಗರು ಒಬ್ಬರಿಗೊಬ್ಬರು ಸೋಲದೆ ಚೆನ್ನಾಗಿ ಕೆಲಸಮಾಡಿ ತೋರಿಸಿದರು ಇಲ್ಲಿನ ಜನಗಳೆಲ್ಲಾ ಹೊಸ ತರದ ಕೆಲಸಗಳನ್ನು ಕಲಿಯುವುದರಲ್ಲಿ ಸೆಟ್ಟ ಮನಸ್ಸುಳ್ಳವರಾಗಿರುತ್ತಾರೆ ಹೊರಗಿನ ಜನಗಳೆಲ್ಲಾ ಹಾರುವ ಲಾಳಿ ಮಗ್ಗಗಳನ್ನು ನೋಡಿ ತಾವೂ ಸಹ ಕಲಿತುಕೊಳ್ಳಬೇಕೆಂಬದಾಗಿ ಅಂದುಕೊಳ್ಳುತ್ತಿದ್ದರು ಸಮಾಜದ ಆನರರಿ ಸೆಕ್ರೆಟರಿಯವರಾದ ಮ॥ ಎಚ್ ಕೆ ಪುಟ್ಟಣ್ಣನವರು ಸಂಘದ ವಾರ್ಷಿಕ ರಿಪೋರ್ಟನ್ನು ಓದಿದರು ಅದರಲ್ಲಿ ಕಂಡ ಅಂಶಗಳೆಲ್ಲಾ ಜನಗಳಿಗೆ ಬಹು ಆಶ್ಚರ್ಯವನ್ನುಂಟುಮಾಡಿದವು ಒಂದು ವರ್ಷದಲ್ಲಿ ಸೆಕ್ರೆಟರಿಯವರ ರಿಪೋರ್ಟಿನಲ್ಲಿ ಕಂಡ ಅಭಿವೃದ್ಧಿಯು ಬಹು ಸಂತೋಷವನ್ನುಂಟುಮಾಡಿತು —ಬಳಿಕ ಪರಸ್ಪರ ಸಹಾಯಕ ಸಂಘದ ಪ್ರಯೋಜನಗಳನ್ನು ಕುರಿತು ಮಂಡ್ಯದ ಮ॥ ಜಿ ವಿ ನಂಜಪ್ಪಶೆಟ್ಟರವರು ಬಹು ಸ್ವಾರಸ್ಯವಾದ ಉಪನ್ಯಾಸಮಾಡಿದರು ಈ ಶೆಟ್ಟರು ಈ ಸಂಘಕ್ಕೆ ಅಮೂಲ್ಯವಾದ ಸಲಹೆಗಳನ್ನು ಕೊಟ್ಟು ಸಹಾಯಮಾಡಿಯೂ ಮಾಡುತ್ತಲೂ ಇರುತ್ತಾರೆ ಅನಂತರ ಅಮಲ್ದಾರ್ ಮ॥ ಕೃಷ್ಣೇಅರಸಿನವರೂ, ರಂಗಮ್ಮನವರೂ ಸ್ವಾರಸ್ಯಕರವಾದ ಉಪನ್ಯಾಸಮಾಡಿದರು. ಸಮಾಜದ ಮೆಂಬರುಗಳು ಕಳೆದ ವರ್ಷದಲ್ಲಿದ್ದ ಮ್ಯಾನೇಜಿಂಗ್ ಕಮಿಟಿ ಮೆಂಬರುಗಳೇ ಮುಂದಿನ ಸಾಲಿನಲ್ಲೂ ಕಮಿಟಿ ಮೆಂಬರುಗಳಾಗಿರತಕ್ಕದ್ದೆಂದು ತೀರ್ಮಾನಮಾಡಿದರು ಅನಂತರ ಪ್ರೆಸಿಡೆಂಟರವರು ಉತ್ತಮರೆಂದು ಖ್ಯಾತಿಯನ್ನು ಪಡೆದುಕೊಳ್ಳಬೇಕೆಂದಿರುವವರೆಲ್ಲಾ ಉತ್ತಮ ಗುಣಗಳನ್ನುಂಟುಮಾಡಿಕೊಳ್ಳಬೇಕೆ ಹೊರತು ಜಾತಿಮಾತ್ರಕ್ಕೆ ಉತ್ತಮರೆಂದರೆ ಅದು ಅನ್ವಯಿಸುವುದಿಲ್ಲ ಎಂಬೀ ರೀತಿಯಾಗಿ ಸ್ವಾರಸ್ಯವಾದ ಭಾಷಣವನ್ನು ಕೊಟ್ಟರು ಕೊನೆಯಲ್ಲಿ ರಂಗಮ್ಮನವರಿಂದ ದೇವರ ಪ್ರಾರ್ಥನೆಯೂ, ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನಾ ರೂಪವಾದ ಹಾಡುಗಾರಿಕೆಯೂ ಬೆಳೆದು, ಸಭಿಕರಿಗೆ ಹೂವು, ತಾಂಬೂಲ ವಿನಿಯೋಗದಿಂದ ಮುಕ್ತಾಯವಾಯಿತು ಅನಂತರ ಸಂಘದ ಮೆಂಬರುಗಳೂ, ಸಭೆಗೆ ದಯಮಾಡಿದ್ದ ದೊಡ್ಡ ಮನುಷ್ಯರುಗಳೂ ಸೇರಿ ಫೋಟೋ ತೆಗಿಸಿಕೊಂಡರು ಸಭೆಗೆ ದಯಮಾಡಿಸಿದ್ದ ದೊಡ್ಡ ಮನುಷ್ಯರುಗಳನ್ನೆಲ್ಲಾ ತುಂಬಾ ಆದರಣೆಯಿಂದ ಸತ್ಕರಿಸಿದರು ಈ ಸಂಘದ ಮೆಂಬರುಗಳೆಲ್ಲರೂ ಈ ವಾರ್ಷಿಕೋತ್ಸವವನ್ನು ಒಂದು ದೊಡ್ಡ ಹಬ್ಬದಂತೆ ಭಾವಿಸಿ, ಆ ದಿವಸ ಹೊರಗಿನಿಂದ ಬಂದಿದ್ದ ತಮ್ಮ ಜನಗಳಿಗೆಲ್ಲಾ ಪ್ರತಿ ಮೆಂಬರೂ ಮೆಂಬರಲ್ಲದವರೂ ಸಹ 10-20 ಜನಗಳಿಗೆ ಕಡಮೆ ಇಲ್ಲದಂತೆ ಭೋಜನಮಾಡಿಸಿದರು ಒಂದೇ ದಿವಸ ಇಷ್ಟು ಮಂದಿ ಅತಿಥಿಗಳನ್ನು ತೃಪ್ತಿಪಡಿಸಿದ್ದು ಆಶ್ಚರ್ಯಕರವಾಗಿದೆ

ವಾರ್ಷಿಕ ರಿಪೋರ್ಟಿನ ಮುಖ್ಯಾಂಶಗಳು—ಈ ಸೊಸೈಟಿಯು 1912 ನೇ ಜೂಲೈ ತಾ 23 ರಲ್ಲಿ ರೆಜಿಸ್ಟರಾಗಿ ಆಗಸ್ಟ್ ತಾ 4 ರಲ್ಲಿ ಕಾರ್ಯಗಳು ಆರಂಭಿಸಿದವು ಆರಂಭದಲ್ಲಿ ಈ ಸಮಾಜಕ್ಕೆ 35 ಜನ ಮೆಂಬರುಗಳಾದರು. ಇವರ ಪೈಕಿ 3 ಜನ ಸ್ತ್ರೀಯರು ಈಗ 43 ಜನ ಮೆಂಬರುಗಳಿರುತ್ತಾರೆ ಸೆಕ್ರೆಟರಿ ಹೊರತು ಉಳಿದವರೆಲ್ಲಾ ಪಂಚಮರು ಈ ಸೊಸೈಟಿಯು 5,000 ರೂಪಾಯಿಗೆ ರೆಜಿಸ್ಟರಾಗಿ, ಹತ್ತು ರೂಪಾಯಿನ 500 ಷೇರುಗಳ ಪೈಕಿ 408 ಷೇರುಗಳು ವಿಕರಿ ಆಗಿ ಷೇರ್ ಮೊಬಲಗು ರೂ 1,193 3-6 ಪೈ ವಸೂಲಾಗಿ, 23,040 ರೂಪಾಯಿ ಜಮಾಖರ್ಚು ನಡೆದು, ಈ ಸಾಲಿನಲ್ಲಿ ನಿವ್ವಳ ನಫೆಯು ಶೇಕಡ ರೂ 11 8 0 ಯಂತೆ ಗಿಟ್ಟಿರುತ್ತದೆ ಸೊಸೈಟಿಯ ಲೆಕ್ಕ ಪತ್ರಗಳು ಯಾವದೊಂದು ದೂಷಣೆಯಿಲ್ಲದೆ ಮಂಡ್ಯದ ಮ॥ ಜಿ ವಿ ನಂಜಪ್ಪಶೆಟ್ಟರವರಿಂದ ಆಡಿಟ್ ಮಾಡಲ್ಪಟ್ಟದ್ದಕ್ಕಾಗಿ ಸೊಸೈಟಿಯ ಪರವಾಗಿ ವಂದಿಸಲಾಗಿದೆ ಮೊದಲು ಇದು ಸಾಲಕೊಡತಕ್ಕ ಸೊಸೈಟಿಯಾಗಿ ಆರಂಭಿಸಿ ದಿನಕ್ರಮೇಣ ಸಾಲಕೊಡತಕ್ಕದ್ದನ್ನು ಕಡಮೆಮಾಡಿ ಮೆಂಬರುಗಳ ಕಸಬಿಗೆ ಅವಶ್ಯವಾದ ಕೈಗಾರಿಕೆ ಕಚ್ಚಾ ಸಾಮಾನು ಸೊಸೈಟಿಯಿಂದ ಕೊಳ್ಳಲ್ಪಟ್ಟು ಮೆಂಬರುಗಳಿಗೆ ಮುಂಗಡವಾಗಿ ಕೊಡಲಾರಂಭಿಸಿತು ಇದರಿಂದ ಹಣವೂ, ಇವರು ತಯಾರ್ಮಾಡಿದ ಜವಳಿಯೂ ಜಮಾ ಒಡಿಯಲ್ಪಟ್ಟು ಸದರಿ ಜವಳಿಯು ಮಾರಾಟವಾಗುತ್ತಲಿದೆ ಇದಕ್ಕೆ ಸಿಬ್ಬಂದಿ ಬಹಳ ಕಡಮೆ ಹಣ ವಸೂಲಿ ಕ್ರಮ ಮೆಂಬರುಗಳಿಂದಲೇ ನಡೆಯುವುದು. ಈಗತಾನೇ ಒಬ್ಬ ಗುಮಾಸ್ತೆ ನೇಮಕವಾದದ್ದು. ಈ ಸಂಘಕ್ಕೆ ರೆಜಿಸ್ಟ್ರಾರ್‌ರವರಾದ ಮ॥ ಎಂ ಎ ನಾರಾಯಣಯ್ಯಂಗಾರ್ರವರ ದಿವ್ಯದೃಷ್ಟಿಯು ತಾಕಿ ಇನ್ನೂ ಊರ್ಜಿತಸ್ಥಿತಿಗೆ ಬರಲು ಅವಕಾಶ ಲಭಿಸಿತು ಮೊದಲು 250 ರೂಪಾಯಿನ ಸಾಲ 2 ವರ್ಷಕಾಲ ಬಡ್ಡಿಯಿಲ್ಲದೆ ಶ್ರೀಮನ್ ಮಹಾರಾಜರವರ ಫಂಡಿನಿಂದ ದೊರೆಯಿತು ಈಗ ಮಿ॥ ಚಾಟರ್ಟನ್‌ರವರಿಂದ 1,000 ರೂಪಾಯಿನ ಸಾಲ ಮಂಜೂರಾಗಿದೆ ಅಲ್ಲದೆ ಕಸಬನ್ನು ತಿಳಿಸುವುದಕ್ಕೂ, ಹಾರುವ ಲಾಳಿಮಗ್ಗಗಳನ್ನು ಪ್ರಚುರಪಡಿಸುವುದಕ್ಕೂ ಒಬ್ಬರನ್ನು ನೇಮಿಸಿದಾರೆ. ಇವರು ತುಂಬಾ ಶ್ರದ್ಧೆಯನ್ನು ವಹಿಸಿ ಹಾರುವ ಲಾಳಿ ಮಗ್ಗಗಳ ಪ್ರಯೋಜನವನ್ನು ತೋರಿಸಿಕೊಡುತ್ತಿದಾರೆ ಇವುಗಳಿಂದ ನಿಯಮಿತ ಕಾಲದಲ್ಲಿ ಎರಡರಷ್ಟು ಪ್ರಯೋಜನವಾಗುತ್ತಿದೆ ಈ ಹೊಸ ತರಹಾ ಮಗ್ಗದಲ್ಲಿ ಆಸಕ್ತಿಯು ಹೆಚ್ಚಿ ಹಾರುವ ಲಾಳಿ ಮಗ್ಗಗಳು ಬೇಕೆಂದು ಮೆಂಬರುಗಳು ತುಂಬಾ ಅಪೇಕ್ಷಿಸುತ್ತಲಿರುವರು ಹಾಲಿ ಇರುವ 3 ಹಾರುವ ಲಾಳಿ ಮಗ್ಗಗಳಲ್ಲಿ ಜನಗಳನ್ನು ತರಬಿಯತ್ತು ಮಾಡಿಸುತ್ತಲಿದೆ ಇವನ್ನು ಈ ತಾಲ್ಲೂಕಿನ ಗ್ರಾಮಾಂತರಗಳಿಂದ ಕಸಬಿನ ಜನಗಳು ದಿನವೂ 60 70 ಜನಗಳ ವರಿಗೆ ಬಂದು ನೋಡಿಕೊಂಡು ಹೋಗುತ್ತಲೂ, ತಾವೂ ಕಲಿತುಕೊಳ್ಳಲು ಅವಕಾಶ ಕಲ್ಪಿಸಿಕೊಡಬೇಕೆಂದು ಹೇಳುತ್ತಲೂ ಇದಾರೆ — ಈ

ಕೂಸ್ಸಟಿಯು ಆರಂಭವಾಗುವುದಕ್ಕೆ ಮುಂಚೆ ಈ ಜನರು ತಮ್ಮ ಕಸಬಿಗೆ ಸಾಕಾ ದಷ್ಟು ಬಂಡವಾಳವಿಲ್ಲದೆ ವರ್ತಕರಲ್ಲಿ ಸಿಕ್ಕಿ ಸಾಲಗಾರರಾಗಿ ಅವರು ಹೇಳಿದ ನಷೆಯನ್ನು ಕೊಟ್ಟು ಹಾಗೂ ಸುಖವಿಲ್ಲದೆ ಜೀವಿಸುತ್ತಿದ್ದರು ಈಗಿದು ಸಾಧ್ಯ ವಾದಷ್ಟು ಕಡಮೆಯಾಗುತ್ತದೆ ಇಷ್ಟೇ ಅಲ್ಲ ಕಸಬಿನ ನವೀನಮಾರ್ಗಗಳ ಅಚರ ಣೆಯು ಆರಂಭಿಸಲ್ಪಟ್ಟುದೂ ಆಚಾರವ್ಯವಹಾರಗಳು ಸುಧಾರಿಸಲ್ಪಡುತ್ತಲಿವೆ ವಂಶಾನುಗತವಾಗಿ ಬಂದ ಮದ್ಯಪಾನ ಮತ್ತು ಗೋಮಾಂಸಭಕ್ಷಣವು ಇವು ಕೈಕಿ ಅರ್ಧ ಜನಗಳಲ್ಲಿ ತಪ್ಪಿರುತ್ತದೆ ಇತರರೂ ಬಿಡುವುದರಲ್ಲಿದಾರೆ —ಇಂತಹ ಮಹತ್ ಪ್ರಯೋಜನವನ್ನು ಕಲ್ಪಿಸಿರತಕ್ಕ ಶ್ರೀಮನ್ ಮಹಾರಾಜರವರ ಸರ್ಕಾ ರಕ್ಕೂ, ಸಂಘಕ್ಕೆ ಸಹಾಯಕರಾಗಿರುವ ಅಧಿಕಾರಿಗಳಿಗೂ, ಈ ಶುಭದಿವಸದ ಕಾರ್ಯವನ್ನು ಸಾಂಗವಾಗಿ ನೆರವೇರಿಸಲು ಅಧ್ಯಕ್ಷತೆಯನ್ನು ವಹಿಸಿದ ಮ॥ ಎಂ ವೆಂಕಟಕೃಷ್ಣಯ್ಯನವರಿಗೂ ಸಮಾಜದಪರವಾಗಿ ವಂದನೆಯನ್ನು ಅರ್ಪಿಸಿದೆ

ಮಕ್ಕಳ ಹಿತಕಾರಿ

ಎಂದು

SCOTT'S EMULSION 3-34

(ಸ್ಕಾಟ್ಸ್ ಇಮಲ್ಷನ್)

ಎಂಟೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಕೈಸೋಕದೆ ತಯಾರಾದದ್ದು

ಎಲ್ಲಾ ಔಷದ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತವೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ —1 ಪಿನಲ್‌ಕೋಡು, 2 ದೊಡ್ಡೀ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ವಿಷವಸ್ತುಗಳ ರೆಗ್ಯುಲೇಷನ್, 6 ಟೇಪಿಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ

ಪ್ರತಿ ಪೆನಲ್ ಸೆಕ್ಷನ್‌ಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೇ? ಯಾ ಕೂಡದೇ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟ್ಟಬೇಕೇ? ಜಾಮೀನ್ ತೆಗೆದುಕೊಳ್ಳಬಹುದೇ? ಯಾ ಕೂಡದೇ? ರಾಜಿಯಾಗಬಹುದೇ? ಯಾ ಕೂಡದೇ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 22 5-1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 2 0-0 ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ವೇಮಾರೆಡ್ಡಿ,

ಕಂಟ್ರಾಕ್ಟರ್ ಮತ್ತು ಕ್ರಿ॥ ಪ್ಲೀಡರ್,

[101-13] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರದ್ವಾರ ವಿಷವನ್ನು ಪ್ರತಿ ದಿನ ಶೋಧಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕೆಲಸವನ್ನು ಮಾಡಲಾರದೆ ಹೋದರೆ ಪ್ರಾಣಕ್ಕೆ ಅಪಾಯ ಉಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು ಬಿಡದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಹಳ ಬಾಯಾರಿಕೆ ಬಳಲಿಕೆ, ಎದೆ ಕಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು ಕೀಲುನೋವು ಮರವು ನಿಶ್ರಾಣ ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು ಮಧುಮೇಹ, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುವಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲ ವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [142-30]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಸುವುವು



ರೂ ೨—೦—೦, ಅಥವಾ ೬ ಬುತ್ತಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಓ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಬಹಳ ಮೇಲಾದ ಅಚ್ಚ ಕರೀ ಬಣ್ಣದ ಮಧುರೆ ಚೌಂಸದಿ ಅಂಚಿನ ಸೀರೆಗಳು.

ಅವಲ್ ರಕಂ ಕ್ರಯ ರೂ 2 6 0

ಇದರಿಂದ ವರ್ತಕರಿಗೂ, ಜಾಗ ನಂತರಿಗೂ, ಬಡವರಿಗೂ ತಿಳಿಸುವುದೇನೆಂದರೆ—ನಮ್ಮಲ್ಲಿನ ಕರಿಯ ಬಣ್ಣದ ಮಧುರೆ ಚೌಂಸದಿ ಸೀರೆಗಳು ಉಡುವುದಕ್ಕೆ ಧಡೂತಿಯಾಗಿಯೂ, ನೋಡ ಫುದಕ್ಕೆ ನಯವಾಗಿಯೂ, ಸರ್ವರಿಗೂ ರಾಮಿಯಾಗಿಯೂ, ಕೊಳ್ಳಲು ಬಹಳ ಸುಲಭವಾಗಿಯೂ ಇರುವುದರಿಂದ ಎಷ್ಟು ವರ್ಷ ಉಟ್ಟರೂ ಬಣ್ಣವು ಸ್ವಲ್ಪವೂ ಬದಲಾಯಿಸುವುದಿಲ್ಲ ಇವರ ಸೆರಗುಗಳು ಬಹು ಘನವಾಗಿವೆ ಸೀರೆಯು ಉದ್ದವು ಧಾರಾಳವಾಗಿ 18 ಮೊಳವಿದೆ ಸ್ಯಾಂಪಲ್ ಒಂದನ್ನು ತರಿಸಿದಲ್ಲಿ ನಮ್ಮ ನಡತೆ ಗೊತ್ತಾಗುವದು ಅನೇಕ ಸೀರೆಗಳಿಗೆ ಬರೆಯುವರು

ಪದಕಸಹಿತವಾದ ನಾಲ್ಕು ಎಳೆ ಮುತ್ತಿನ ಕಂಠಿ

ಈ ನಕ್ಷೆಯಲ್ಲಿ ತೋರಿಸಿರುವ ಹಾರವು ಮುತ್ತಿನ ದೊಡ್ಡವರ ಧರಿಸಿರುವದಕ್ಕೆ ಯೋಗ್ಯವಾದದ್ದು ಪ್ರಸಿದ್ಧಿಯಾದ ಚೆನ್ನಮಿಶ್ರದ ಮಧುರೆ ಚಿತ್ರಾಳಿ ಕಂಬಿಯಲ್ಲಿ ಒಳ್ಳೆಯ ಮುತ್ತಿನಂತಹ ಗಟ್ಟಿ ಮುತ್ತನ್ನು ಅಸಲ್ ಮುತ್ತಿನ ಮಾದರಿ ತಯಾರಿಸತಕ್ಕವರಿಂದ ಸುತ್ತಿಸಿ ಕೊರಳಿಗೆ ಶೋಭೆಯೂ ಅಲಂಕಾರವೂ ಆದ ಈ ವಸ್ತುವನ್ನು ತಯಾರಿಸುತ್ತೇವೆ ಯಾವ ಭಯವಿಲ್ಲದೆ ರೂ ಈ ಹಾರವನ್ನು ಧರಿಸುವುದರಿಂದ ಹೆಂಗಸರ ಸೌಂದರ್ಯವು ಮತ್ತಷ್ಟು ಹೆಚ್ಚುತ್ತದೆ ಇದಕ್ಕೆ ನಿಜ ಚಿನ್ನದ ತಗಡಿನಾಗಿ ಕೆಡದೆ ಎಷ್ಟು ವರ್ಷಗಳಾದರೂ ಉಪಯೋಗಿಸುವುದಕ್ಕೆ ಯೋಗ್ಯವಾಗಿರುವ ಈ ಆಭರಣವನ್ನು



ಎಲ್ಲರೂ ಪರೀಕ್ಷೆ ಎಗ್ಗೆ ತರಿಸಿ ನೋಡಿ [1-8 2]

ಪದಕಸಹಿತವಾದ ಹಾರ 1 ಕ್ಕೆ ರೂ 1 7 0 ಪದಕವಿಲ್ಲದ ಹಾರ 1 ಕ್ಕೆ 11 ಆ

ವಿಳಾಸ —ಬಿ ರೇಷಾ ಓಂಡ್ ಬ್ರದರ್ಸ್,

ನುಂಗಂಬಾಕಂ, ಸೆಂಟ್ ಥಾಮಸ್ ಮೌಂಟ್ ಪೋಸ್ಟ್,

ಮದರಾಸ್

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಿರಿ! ಕನ್ನಡಕ್ಕೆ ಸುಲಭವಾದ ದಾರಿ!

ಮೈಸೂರು ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ 3 ಆಣೆ ಅರಕ್ಕೊಂದು ಉಚಿತ.

[187 10] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮಾ ಸಂಘದ ಆವರ್ತಗಳು 1913 ನೇ ಜನವರಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಅಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿನನುಸಾರವಾಗಿ ಭರವಸೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಸಾವಿನ ಮುಂಚಿನ ಬೇಗ ಆಗಲಿ, ಅಥವಾ ವಿಮಾ ಸಂಘದ ಸ್ಥಿರತ್ವದ ವಿಚಾರದಲ್ಲಿ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹವಾದಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತವೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[109 12] ಎಸ್ ಕಟ್ಬರ್ಟ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

101 13

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗೂರೆನ್ನುವುದು, ಕೆಮ್ಮುಗಳು, ಶೀತನೆಗಡಿ ಪ್ಲಾಸ್ಟರ್, ಪಟ್ಟು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿಯುತ್ತೇನೆ ಸಮೀಪದಲ್ಲಿರುವ ವೈದ್ಯರ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅವನ್ನು ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸು ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯಿಂದ ನೋವನ್ನು ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದ್ದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು (1) ಎಸ್ ಪೀಟರ್ಸ್, 37 ತಂಬುಚೆಟ್ಟಿ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಟಿ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

---

15 ಬಹುಮಾನ ಹೊಂದಿರುವ ಗಡಿಯಾರವು.

ಕೆಳಗೆ ಕಾಣಿಸಿರುವ ಗಡಿಯಾರದ ಬೆಲೆ 7 ರೂಪಾಯಿಗಳು ಇದು ಬರುವ ಡಿಸೆಂಬರ್ ಆಖೈರುವರೆಗೆ 1 1 0 ರ 15 ಬಹುಮಾನಗಳ ಜತೆ ಬಿಕರಿ ಮಾಡಲ್ಪಡುತ್ತೆ ಇದು ಒಳ್ಳೆಯ ಸಾಮಾನುಗಳಿಂದ ತಯಾರಿಸಲ್ಪಟ್ಟಿರುವುದರಿಂದ 10 ವರುಷಗಳ ವರೆಗೆ ಕೆಡದೆ ನಡೆಯುತ್ತೆ ಇದೊಂದು ಹೊಸ ಮಾದರಿಯಾಗಿರುತ್ತೆ ಇದು ಒಳ್ಳೇ

[illegible]

1 ಮೈಸೂರು ದೇಶದವರು ಉಪಯೋಗಿಸುವ ಮಾದರಿಯಾಗಿರುವ ಕೆಂಪು ಇದಕ್ಕೆ ಬಂಗಾರದ ಗಿಲ್ಟು ಕೊಡಲ್ಪಟ್ಟಿರುತ್ತೆ ಬೆಲೆ 1 ರೂ 2 ಎಲೆಕ್ಟ್ರಿಕ್ ಬಂಗಾರದ [illegible] ಬೆಲೆ 12 ಆಣೆ 3 ಬಂಗಾರದ ಗಿಲ್ಟಿನ ಗಡಿಯಾರದ ಸರಪಣಿ ಕ್ರಯ 1 ರೂ 4 [illegible] ವಜ್ರದ ಪದಕ ಗುಂಡಿ ಬೆಲೆ 8 ಆಣೆ 5 ಒಂದು ಹಸುರಾದ ಕತ್ತರಿ ಬೆಲೆ 4 ಆಣೆ 6 ಜರ್ಮನ್ ಬೆಳ್ಳಿಯ ಕುಂಕುಮಭರಣಿ ಬೆಲೆ 5 ಆಣೆ 7 ಬಂಗಾರದ ಗಿಲ್ಟಿನ ತಿರುಪಿನ ಜತೆ [illegible] 8 ಜರ್ಮನ್ ಬೆಳ್ಳಿಯ [illegible] 9 ಅಂದವಾದ [illegible] ಬೆಲೆ 4 ಆಣೆ 10 ಜರ್ಮನ್ ಬೆಳ್ಳಿಯ ಕಡ್ಡಿಪೆಟ್ಟಿಗೆ ಭರಣಿ ಬೆಲೆ 3 ಆಣೆ 11 ಒಂದು ಸೀಲ್ ಉಂಗುರ ಬೆಲೆ 8 ಆಣೆ 12 ಜರ್ಮನ್ ಬೆಳ್ಳಿಯ ಪುಡಿ ಡಬ್ಬಿ ಬೆಲೆ 9 ಆಣೆ 13 ಹೆಂಗಸರ ನಗಗಳನ್ನಿಡಲು ಅನುಕೂಲವಾಗಿರುವ ಕೈ ಪೆಟ್ಟಿಗೆ ಬೆಲೆ 10 ಆಣೆ 14 ಜರ್ಮನ್ ಬೆಳ್ಳಿಯ ಪಾಲಿಶ್ ಬಳೆ ಬೆಲೆ 6 ಆಣೆ 15 ಒಳ್ಳೇ ಬೆಳ್ಳಿಯಿಂದ ತಯಾರಿಸಿ ಬಲವಾದ ಚಿನ್ನ ಗಿಲ್ಟಿನ ಮೂಗು ಬೊಟ್ಟು ಬೆಲೆ 9 ಆಣೆ ವಿಳಾಸ— [157 2]

ಜಿ ಎ ಪಾಲ್ ಅಂಡ್ ಕೋ, ನುಂಗಂಬಾಕಂ, ಮದ್ರಾಸ್

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದವರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕ್ಕಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs OAKES & Company, Mount Road, Madras

[4-42] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H Gulliford Proprietor and Manager, Wesleyan Mission Press Mysore 21/8/1913

ವೃತ್ತಾಂತ ಪತ್ರಿಕೆ

REGISTERED M. 30

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—೧೯೧೩ ನೇ ಇಸವಿ ಆಗಸ್ಟ್ ತಾರೀಖು ೨೮ ನೇ ಗುರುವಾರ. ಸಂಚಿಕೆ ೧೩

ಸಮಸ್ತ ವಿಧವಾದ ನೋವೂ ಈಗಿಂತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ

ಅಮೃತಾಂಜನವು ತಲೆನೋವು, ವಾಯುನೋವು, ಬೆನ್ನಿನ ಸೆಳೆತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ವಿಕರಿಯಾಗುತ್ತಲಿವೆ ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ವಿಕರಿಯಾಗುವದು

ಮುಳಕಡ್ಡಿ ಔಷಧ ಡಬ್ಬಿಗೆ ೬ ಆಣೆ, 12 ಕುಪ್ಪಿಗೆ ರೂ 3-8-0 ಹಲ್ಲುಪುಡಿ ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ 1-2-0 ವಿ. ಪಿ. ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ [42 27]

ವಿಳಾಸ —ಅಮೃತಾಂಜನ ಡಿಪೋ, ೧೦೯ ಫ್ರಿಯರ್ ರೋಡ್, ಫೋರ್ಟ್, ಬೊಂಬಾಯಿ

ಜಗತ್ಪ್ರಸಿದ್ಧ "ಕಾಮಿನಿಯಾ ತೈಲವು."

(ರಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತುಹೋಗುತ್ತೆ ಆದಕಾರಣ ಸ್ವೋತ್ಕೃಷ್ಟವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ ಸತ್ತು ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಫುಲವಾಗಿ, ನಯವಾಗಿ, ಚಳಚಳಿಸುವವು, ನಿಬಿಡವಾದ ನೀಲವರ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ ಹುಂಡಿನ ಹೊಟ್ಟನ್ನು ಅಡಗಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-5-0 ಬೇರೆ ತಗಲುವದು

3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ

ಮೈಸೂರು ಎಗ್ಜಿಭಿಷನ್ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ ಮನ್ನಾರ್‌ಗುಡಿ ಮುನ್ಸಿಪಲ್ ಸೆಕ್ರೆಟರಿ ಮಿ॥ ವಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಫಾಯತುಕೋಸ್ಕರ ವಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು. ಅಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕೆಫಿಟೋಬಾಮ್"—ಮಳೆ ಮತ್ತು ಚಳಿಯ ಥಂಡಿ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಫಿಟೋಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ನೋಯುವುದು, ಸಂಧುವಾತ, ಮಸ್ತಕಶೂಲೆ, ಬೆಚ್ಚಾಗಿ ಮೆತುನತ್ತು ನಟ್ಟಿದ್ದರಿಂದ ಕ್ಷೀಣವಾಗುವದು, ಸೊಂಟನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ ಬಾಟ್ಲಿ 1ಕ್ಕೆ ಕ್ರಯ 0 8 0 ಟಪಾಲು ಪ್ರತ್ಯೇಕ

ಒಡಮನ್ಸ ಮಲೇರಿಯ ಪಿಲ್ಸ—ಶೀತಜ್ವರ, ಥಂಡಿಯಿಂದ ಬರುವ ಜ್ವರ ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆ ಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿವೆ ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ ಇದು ದೇಹದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ ದಫೆಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದ್ದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1 0 0 3 ಬಾಟ್ಲಿಗಳಿಗೆ ರೂ 2 8-0 ವಿ ಪಿ ಖರ್ಚು ಪ್ರತ್ಯೇಕ

ಏಜೆಂಟ್, ದಿ ಉಲನ್ ಮಾರ್ಟ್, ಮಂಗಳೂರು

ಮೇಲ್ಕಂಡ ಎಲ್ಲಾ ಔಷಧಗಳು ಸಿಕ್ಕುವ ಸ್ಥಳ — [8-33]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೩೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೋಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ಸನ್ಮಾರ್ಗಪ್ರವರ್ತನೆ, ದುರ್ಬುದ್ಧಿ ಚಾಂಚಲ್ಯ ನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ಸಮಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರಭರಿತವಾಗಿ ಸುಲಭಶೈಲಿಯಿಂದ ಬರೆಯಿಸಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಓದುವವರಿಗೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1ಕ್ಕೆ 1 8-0, ಟಪಾಲು ಹಾಸಲು 4 ಆಣೆ

(೧೮ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ ರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಭಾವಾರ್ಥವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1ಕ್ಕೆ ರೂ 1 ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127 10]

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

THE MYSORE GOVERNMENT SECURITY

LIFE AND MARRIAGE ASSURANCE COMPANY, LIMITED.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No III OF 1895)

CAUTION —Before you go in for a Provident Life or Marriage Policy, please ask for a copy of Company's prospectus which will explain to you the mode of working of the present day provident [com]panies working in India and enables you to select a good institution where your hard earned money will [be s]afe

SPECIAL AND ATTRACTIVE FEATURES OF THE COMPANY

1 ABSOLUTE SECURITY

The Company has got a capital of **one lakh** and its funds are invested in the **Mysore Government** [and] other approved securities The policy holder's moneys are guaranteed, and the **capital** and **reserve** [fun]**ds** of the Company are liable to the same

2 MARRIAGE SCHEME.

A policy holder can subscribe from Re 1 to **Rs 6** every month **Double the premiums paid** to Company will be paid to the married **on the marriage day** as maximum bonus

3. LIFE SCHEME

A policy holder can subscribe from As 8 to **Rs 2** per month Both males and **females** of ages [from] 18 to **60** are insured **without medical examination** The maximum bonus will be paid to **the policy-[hold]ers themselves** on surviving **15 years** or to their nominees in case of their earlier death

WANTED

Energetic and honest **Chief Agents** for every Presidency in India and Taluk Agents in each and [ever]y taluk of **the Mysore Province** on commission to represent the Company

For further particulars and prospectuses please apply **with one anna stamp** and your previous [expe]rience in the line to —

Mr. M. L NAGANNAH,
Managing Agent,
MYSORE.

ಅಜ್ಮೇರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೇರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೆ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭರವಸೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೆದಾರರು ಪಾವತಿಮಾಡುವ ಮೊಬಲಗಿನ ಆಗಲೀ, ಅಥವಾ ವಿಮೆ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂಶಯವೂ ಇರುವುದಿಲ್ಲ. ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೆದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು.

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[101 18] ಎಸ್. ಕಟ್ಟಿಯರ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ —1 ಪಿನಲ್ ಕೋಡು, 2 ಪೊಲೀಸ್ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ವಿಷವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ಶಿಕ್ಷೆಗಳೂ ಮತ್ತು ರಿಕ್ಷಣೆಯೂ ವಿವರಿಸಲಾಗಿವೆ.

ಪ್ರತಿ ಪಿನಲ್ ಸೆಕ್ಷನ್‌ಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ ? ಯಾ ಕೂಡದೆ ? ಮೊದಲು ಸಮನ್ಸ್ ಹುಟ್ಟಬೇಕೇ ? ಯಾ ವಾರಂಟು ಹುಟ್ಟಬೇಕೆ ? ಜಾಮೀನ್ ತೆಗೆದುಕೊಳ್ಳಬಹುದೆ ? ಯಾ ಕೂಡದೆ ? ರಾಜಿಯಾಗಬಹುದೆ ? ಯಾ ಕೂಡದೆ ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ. ಬೇಕಾದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ. 22-5 1911 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ. ಕ್ರಯ ರೂಪಾಯಿ 2 0 0 ಟಪಾಲ್ ಹಾಸಲು 3 ಆಣೆ.

ವಿಳಾಸ:—ಎಲ್. ವೇಮಾರೆಡ್ಡಿ,

ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್,

[103-16] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

104 14

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರತಲೆ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು. ಅವರು ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯೋಜಿತ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ. ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು —(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುಸೈವಾಕಂ, ವೇಪೇರಿ, ಮದರಾಸ್, (2) ಜಿ. ಎಸ್. ಕೆನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಹೊಸದಾದ ಹರ್ಸ್ ಹತ್ತಿಯ ತುಪ್ಪವು.

ಈಗತಾನೇ ಮೈಸೂರು ಸೀಮೆಗೆ ಪ್ರವೇಶ !

ಇದನ್ನೇ ತೆಗೆಯಬೇಕೆಂದು ಗಿರಾಕಿಗಳ ಉದ್ದೇಶ !!

ಇದನ್ನೇ ಪ್ರಚುರಪಡಿಸಬೇಕೆಂದು ನಮ್ಮ ಆವೇಶ !!!

ಒಂದು ಸಾರಿ ತರಿಸಿ ಉಪಯೋಗಿಸಿದಲ್ಲಿ ಇದರ ಅನುಭವವೂ, ಗುಣವೂ ನಿಮಗೆ ತಿಳಿಯಲು ಸಂದೇಹವಿಲ್ಲ. ಅನಂತರ ಯಾವಾಗಲೂ ಇದನ್ನೇ ಅಪೇಕ್ಷಿಸುವಿರೆಂದು ಖಂಡಿತವಾಗಿಯೂ ಭರವಸೆ ಕೊಡುವೆವು. ಮೈಸೂರು ಸೀಮೆಯ ಎಂಟು ಡಿಸ್ಟ್ರಿಕ್ಟುಗಳಿಗೂ ಸೋಲು ಏಜೆಂಟರುಗಳು ಬೇಕಾಗಿವೆ. ವ್ಯಾಪಾರಸ್ಥರು ಅರ್ಜಿಗಳನ್ನು ಈ ಕೆಳಗಿನ ವಿಳಾಸಕ್ಕೆ ತಾ 31 8 1913 ರೊಳಗೆ ಹಾಕಿಕೊಳ್ಳತಕ್ಕದ್ದು. ಈ ತುಪ್ಪವನ್ನು ಬೊಂಬಾಯಿ ಸರ್ಕಾರದ ಅಗ್ರಿಕಲ್ಚರಲ್ ಕೆಮಿಸ್ಟ್ ಹೆರಾಲ್ಡ್ ಹಟ್ ಮ್ಯಾನ್‌ರವರು ರಸಾಯನ ಶಾಸ್ತ್ರರೀತ್ಯಾ ಪರಿಶೋಧಿಸಿ, ಈ ಹತ್ತಿಯ ತುಪ್ಪವು ಇಂಡಿಯಾ ದೇಶದಲ್ಲಿ ತಯಾರಿಸಿರುವವರಲ್ಲಿ ಪ್ರಾಮುಖ್ಯತೆಯನ್ನು ಹೊಂದಿದೆ. ಇದರಲ್ಲಿ ಏನೂ ಕಲ್ಮಷ ಇರುವದಿಲ್ಲ. ಶುದ್ಧವಾಗಿದೆ. ಬಹಳ ಮನೋಹರವಾದ ಆಹಾರ. ಅಮೇರಿಕಾ ದೇಶದಲ್ಲಿ ತಯಾರಿಸುವಂತೆಯೂ ಅಥವಾ ಇಂಗ್ಲಿಷರು ತಯಾರಿಸುವಂತೆಯೂ ಈ ತುಪ್ಪವು ಇದೆ ಎಂದು ಹೇಳಿದಾರೆ. ಒಳ್ಳೆಯ ಹತ್ತಿಕಾಳಿನ ಹಿಂಡಿಯೂ ಸಹ ನಮ್ಮಲ್ಲಿ ದೊರೆಯುತ್ತೆ.

ವಿಳಾಸ —ಆರ್. ಕೆ. ಯಳಂದೂರು ಮತ್ತು ಕಂಪನಿ,

[171-1] ಸೋಲ್ ಏಜೆಂಟ್ಸ್, ದಾವಣಗೆರೆ

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.



1 35

ಚಿನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, [illegible] ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಕಲೆಯುವ ಬಾಧೆ, ಖಂಡಗಳು [illegible]ಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ. ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೈಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ವಿಕ್ರಯಿಯಾಗುವುದು. ಚಿಕ್ಕ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಡೋಂಗರೆ ಇವರ ಬಾಲಾಮೃತ.

[150 6]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು. ಅತಿ ಮಧುರ (ಸವಿ) ಇದ್ದದ್ದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ಥಿಗಳು ಕಚ್ಚಿಯಂತೆ ಇರೋಣ, ಪಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೬ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಪವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆ ನೋವು, ಸಂದುಗಳ ನೋವು, ಮೈ ಕಾಲು ಜೋಡಿತ (ಭಾರ), ಮೈ ನಡುಕ, [illegible]ತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಸನ್ನಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನಾಡಿಗಳ ಹವಾ ಚಲನೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತಗದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ, ಸಜ್ಜುಜ್ವರ, ಕೃಶತೆಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ — 220 ಮಾತ್ರೆಗಳ ಕುಪ್ಪಿಗೆ 1 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ. [136 52]

೨ ಮೈಷ್ಯಾಸರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ಮೈಷ್ಯಾಸರಾಸವವು ಸಂಜೀವನವಾಗಿದೆ. ಕೆ ಮಾರಿಕೆಂದು ತೋರಿಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರ ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ ! ಒಂದೇ ಒಂದು ಬುಡ್ಡಿ ನಿಮ್ಮಲ್ಲಿರಲಿ ! ಔಷಧೋಪಚಾರದ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ 1. ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ರಾಸ್‌ಕೋಫ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 4 ಆಣೆ

ಈ ಗಡಿಯಾರವು ಒಳ್ಳೆಯ ಸಾಮಾನುಗಳಿಂದ ತಯಾರಿಸಲ್ಪಟ್ಟಿದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ವಿಕ್ರಯಿಸಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ ಕೂಡಲೆ ಬರೆದು ತರಿಸಿಕೊಳ್ಳಿ.

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,

[129 10] ಪೋಸ್ಟ್ ಬಾಕ್ಸ್ ನಂ 167, ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲೀವರ್ ಚಿಕ್ಕ ಸೈಜು ಕಂಪೆನ್ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರೆಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ. ಟಪಾಲು ಖರ್ಚು ಸಹಿತ ಕ್ರಯ ರೂ ೨ 0 0. ಇದನು ಸೆಪ್ಟಂಬರ್ ಆಖೈರಿನೊಳಗಾಗಿ ತರಿಸಿಕೊಳ್ಳುವವರಿಗೆ 10 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮವಾಗಿ ಕೊಡಲ್ಪಡುತ್ತೆ.

ವಿಳಾಸ —ಧನಲಕ್ಷ್ಮಿ ಅಂಡ್ ಕಂಪೆನಿ,

[129 10] ನಾತುಕಾರ್ ಪೇಟೆ ಪೋಸ್ಟು, ಮದರಾಸು

ಬಹುಮತಿ ಗಡಿಯಾರ.

1 ಸಾಮಾನುಗಳು ಬಹುಮತಿ ಸಹಿತ ರೂ 3 16-0

ಇದರಲ್ಲಿ ನಮೂದಿಸಿ ಇರುವ 7 0 0 ರೂಪಾಯಿನ ಗಡಿಯಾರವನ್ನು ಡಿಸೆಂಬರ್ ಆಖೈರ್ ಒಳಗೆ ತರಿಸಿಕೊಳ್ಳುವವರಿಗೆ 1 1 ರಿಂದ 19 ಬಹುಮಾನಗಳು ಉಚಿತವಾಗಿ ಕೊಡುತ್ತೇವೆ. ಉತ್ತರ ಮ[illegible]

ಸ ಟೈಮ್ ದರ್ಪಣ ಸಾಮಾನ್ಯ ಪ್ರಮಾಣ ಸಂ[illegible] ಪರಿವರ್ತನ ಉಳ್ಳ ಗಡಿಯಾರವು 30 ವರುಷವರಿಗೆ ಚೆನ್ನಾಗಿ ನಡೆಯುತ್ತೆ. ಇದನ್ನು ತರಿಸಿಕೊಳ್ಳುವರಿಗೆ ಕೊಡುವ ಬಹುಮಾನಗಳ ವಿವರ—1 [illegible] ಕಾಂತಿ ಕನ್ನಡಕ, 2 ಚಿನ್ನದ ರವಕೆ ಕಣ, 3 [illegible] ಪೆನ್‌ನೈಫ್ ಕತ್ತಿ, 4 ಹವಳದ ಸರ, 5 ತಲೆಗೆ [illegible] ಸರು ಇರುವ ಬ್ರೂಚು, 6 ಹಾ[illegible]ಲು, 7 ಬ್ಲೂ ಬ್ಲಾಕ್ ರಾಯಿಫೋಟ್ಸ್, 8 [illegible] ಇಂಕ್ ಪಾಟ್ಸ್, 9 ವಾಕಿಂಗ್ ಸ್ಟಿಕ್ ಸಿಲ್ಕ್, 10 ಭಂಗಾರದ ಗಿಲೀಟಿನ [illegible] 11 [illegible] 12 ಎಲೆಕ್ಟ್ರಿಕ್ ಭಂಗಾರದ ಪ್ರಾಮಂತಿಗೆ ಹೂವ ಇಮಿಟೇಷನ್ ಪೈಪ್ ವ ಸರಟು ಗುಂಡಿ 14 ಜರ್ಮನ್ ಬೆಳ್ಳಿ [illegible] ವಸ್ತೆ, 15 ಡಿಟೋ [illegible]ದಿನ ಚಿಪ್ಪು, 16 ಡಿಟೋ ಕಣ್ಣುಕಪ್ಪಿನ ಭರಣಿ, 17 [illegible] ನಸ್ಯದ ಡಬ್ಬಿ 18 ಡಿಟೋ ಹಾಲಿನ ಬಿಲ್ಲೆ, 19 ಇಮಿಟೇಷನ್ ವೈ[illegible] ಮುಣಗಬಟ್ಟು —

[173 1]

ಈ ಕೆಳಗಿನ ಸಾಮಾನುಗಳು ಸಹ ನಮ್ಮಲ್ಲಿ ದೊರೆಯು[illegible]

ಪದಕ ಸಹಿತ ನಾಲ್ಕು ಎಳೆಯ ಇಮಿಟೇಷನ್ ಮುತ್ತಿನ ಕಂಠಿ	1 4 0
ಪದಕವಿಲ್ಲದ್ದು	0-18-0
ಮದುವೆ ಚಿನ್ನದ ಎರಡು 1 ಕ್ಕೆ	2 4 0

ರೈಲ್ವೆ ರೆಗ್ಯುಲೇಟರ್ ಗಡಿಯಾರ 1 15 0, ರಾಸ್ಕೋಫ್ ಗಡಿಯಾರ 1[illegible] ಕೈಯಲ್ಲಿ ಕಟ್ಟುವ ಜೇಬಿ ಗಡಿಯಾರ 1 14 0 ಕೈಯಲ್ಲಿ ಕಟ್ಟುವ ಚಿಕ್ಕ[illegible] ಯಾರ ರೂ 1 0-0, ಟೈಂಪೀಸು 2 12 0, ಜರ್ಮನ್ ಬೆಳ್ಳಿ 1 10 0, ಎಲೆಕ್ಟ್ರಿಕ್ ದೀಪ ದೊಡ್ಡದು 2 14 0, ಚಿಕ್ಕದು 2-4-0

ನಮ್ಮ ವಿಳಾಸ—ಏಕಾಂಬರಂ ಕಂಪನಿ,

ಸೆಕೆಂಡ್ ಲೈನ್ ಬೀಚು, ಮದರಾ[illegible]

ಉತ್ತಮವಾದ ಶೈಲಿ ! ಸರಳವಾದ ಮಾತುಗಳು !!

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕಮಹಾಶಯರುಗಳೇ —ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆ ಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹ ಶಕ್ತಿಯಲ್ಲಾಶೆಯಿದ್ದರೆ ದಯಮಾಡಿ ಈ ವಿದ್ಯಾಮಂಜರಿ ಕಥೆಗಳನ್ನು ಓದಿರಿ ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ ಬೆಲೆ ರೂ ೧ ೪-೦ ಮಾತ್ರ ಈಗಲೇ ಬರೆಯಿರಿ [107-1]

ವಿಳಾಸ:- ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ಕು ಡಿಪ್ಪೋ, ಚಿಕ್ಕ ಪೇಟೆ, ಬೆಂಗಳೂರು ಸಿಟಿ.

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಿರಿ ! ಕನ್ನಡಕ್ಕೆ ಸುಲಭವಾದ ದಾರಿ !

ಮೈಸೂರು ಲೋವರ್ ಸೆಕಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ ೪ ಆಣೆ ಅಂಚೆಕ್ಕುಂದು ಉಚಿತ

[187 47] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ನಮೂನೆ ಮುಫತ್ತು
ಕೇಶಕುಸುಮಾಕರ ತೈಲವು.

ನಾಟಿಯುಳ್ಳದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ ಬುದ್ಧಿಯನ್ನು ವಿಕಾಸಮಾಡುವದರಲ್ಲಿಯೂ, ಬಚ್ಚತಲೆಯಲ್ಲಿ ಕೇಶವನ್ನು ಬೆಳೆಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉಷ್ಣವಾಗಿ ಬಿಡಿಯುವಂತೆ ಮಾಡುವದರಲ್ಲಿಯೂ, ಮಿದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ, ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುಡ್ಡಿ ತೈಲ ಕ್ರಯ 10 ಆಣೆ ಮೂರು ಬುಡ್ಡಿಗಳ ತೈಲ ಕ್ರಯ ರೂ 1 12 ಆ ಆರು ಬುಡ್ಡಿಗಳ ತೈಲ ಕ್ರಯ ರೂ 3-4 ಆ ಡಜನ್ ಬುಡ್ಡಿಗಳ ಕ್ರಯ ರೂ 6

ವಿ ಪಿ ಅಂಚೇ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ

[63 18] ಔಷಧಾಲಯ, 177 ಚೀನಾ ಬಜಾರ್ ರೋಡ್, ಮದ್ರಾಸು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 75

ಒಳ್ಳೇ ಟೋಪಿಗಳು ಯಾವುವು ? ಯಾಕೆ ? ಸಂದೇಹವೇನು ?

ಹಾಸನದ ಟೋಪಿಗಳ ಸಮಾನ ಉಂಟೇ ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದಷ್ಟು ಆದ್ರೆ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳು ಕಾರವಿಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಶುದ್ಧವಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅದೇ ಕಾರಣವಾಗಿ ಬಹಳ ಕಾಲ್ಯಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ ಚನ್ನಾಗಿ ಹೆಣೆದ ಬಹಳ ಬಾಳಿಕೆಯುಳ್ಳ ಟೋಪಿಗಳು ಬೇಕಾದರೆ ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವು ಚನ್ನಾಗಿಲ್ಲ ಅದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೨ ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ

ಕೂಸುಗಳ ಟೋಪಿ, ಪೂರಾ ಮೋಜೋಡು ಅರ್ಧ ಮೋಜೋಡು, ಕಸ್ತೂರಿ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಮೇಲಾದ ಹೊಸ ಪುಸ್ತಕಗಳು.

156 2

ಉತ್ತಮ—ಬಹು ಸಾರಸ್ಯವಾದ ಕಥೆ ಈಗಷ್ಟೆ ಅಚ್ಚಾಗಿದೆ 4 ಆಣೆ **ಜಪಾನ್ ಸಾಮ್ರಾಜ್ಯ**—ಅದು ತನಾದ ಸೂರ್ಯೋದಯ ರಾಜ್ಯದ ವಿಷಯ, ಸುಂದರವಾದ ಒಂದು ಪಠಪು ಇದೆ, ತಿಳಿವಳಿಕೆ ಹೆಚ್ಚುತ್ತದೆ 6 ಆಣೆ **ಉನ್ನತಿ** ಮನೋಹರವಾದ ಬಂಗಾಳಿ ನಾವಲ್ 21 ಆಣೆ **ಕಿಂಡರ್‌ಗಾರ್ಟನ್ ಕಥೆಗಳು**—ವಿನೋದಕರವಾದ ಕಥೆಗಳಿಂದಲೇ ಅನೇಕ ವಿಷಯಗಳು ತಿಳಿಯುವವು 10 ಆಣೆ **ಬೋಧನಕ್ರಮ ಸಂಗ್ರಹ**—ಪ್ರತಿ ಸ್ಕೂಲ್ ಮಾಸ್ಟರಿಗೂ ಬೇಕಾದದ್ದು 11 ಆಣೆ **ಲೋ ಸೆ ಪರೀಕ್ಷೆಯಲ್ಲಿ ಉತ್ತರ ಬರೆಯುವ ವಿಧಾನ** 1 ಆಣೆ ಅನೇಕ ಎಜುಕೇಷನಲ್ ಮಿನಿಸ್ಟರುಗಳು ಒಪ್ಪಿದಾರೆ

ಸಿಕ್ಕುವ ಸ್ಥಳ —ಶಿ ಕೃಷ್ಣರಾವ್, ಅ|| ಮಾ|| ನಾರ್ಮಲ್ ಸ್ಕೂಲ್, ಮೈಸೂರು

ಬೋಧಕರ ಸಹಾಯವಿಲ್ಲದ ಹಾರ್ಮೋನಿಯಂ ಕಲಿಸುವ ಪುಸ್ತಕ.

ಕ್ರಯ 0-8 0

ಇದು ಸಂಗೀತ ಶಾಸ್ತ್ರದಲ್ಲಿ ಪಡೆದ ಪಂಡಿತ ಮಿತ್ರದಾಸರವರಿಂದ ಪಂಡಿತರಿಗೂ ಮತ್ತು ಸಂಗೀತಾಭ್ಯಾಸಿಗಳಾಗುವ ಉದ್ದೇಶ್ಯ ಈ ನೂತನ ಗ್ರಂಥವನ್ನು ಪ್ರಚುರಿಸಲ್ಪಟ್ಟಿರುತ್ತೆ ಇದರಲ್ಲಿ 10 ಸಾರಸ್ವತಾಭ್ಯಾಸಗಳು ಮತ್ತು ಹಾರ್ಮೋನಿಯಂ ನುಡಿಸುವ ವಿಧಾನ, ಆರೋಹಣ ಅವರೋಹಣಗಳು, ಮತ್ತು ಸಪ್ತ ಸ್ವರ ಮೊದಲಾದವುಗಳು ವಿರಳವಾಗಿ ತಿಳಿಸಲ್ಪಟ್ಟಿರುತ್ತೆ ಸ್ವಲ್ಪ ಇಂಗ್ಲೀಷು ಭಾಷಾ ಪರಿಜ್ಞಾನವಿರುವವರೇ ಆದರೂ

ಈ ಗ್ರಂಥದ ಸಹಾಯದಿಂದ ಬೋಧಕರ ಸಹಾಯವಿಲ್ಲದೆ ಬಹು ಸುಲಭವಾಗಿ ಹಾರ್ಮೋನಿಯಂ ನುಡಿಸುವದನ್ನೂ ಅನ್ಯದೇಶ ಬಾಜಿದಾರರ ಧರಣಿ ವಾದ್ಯಗಳನ್ನೂ ಬಹು ಸುಲಭವಾಗಿ ಕಲಿತುಕೊಳ್ಳಬಹುದು ಈ ಪುಸ್ತಕ ಸ್ವಲ್ಪವೇ ಇರುವದರಿಂದ ಜಾಗ್ರತೆ ವರಮಾನ ಕಳುಹಿಸಿ

ನಮ್ಮ ವಿಳಾಸ —ಬಸನಿ ಅಂಡ್ ಕೋ,

[119 3] ನಂ 16 ರಥ್ತಿ ರಾಮುನ ಬೀದಿ, ಮದರಾಸು

ಕುಂತಳಾನಂದ ತೈಲವು.

147 49

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ

ಬಹಳ ಶೀತಲವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಅವಶ್ಯಕವಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್

ಇಂಥಾ ಸಮಯ ಕಳೆಯಬೇಡಿ ಶಕ್ತಿ ಮಾತರಿಯಾದ ಮಾಲು

ಮಕ್ಕಳಿಗೆ ಬಹಳ ಸುಂದರ ಉಡುಪು.

ನಾಜೂಕಾದ, ಸೊಗಸಾದ, ಆಹ್ಲಾದಕರವಾದ ಬಹು ಮೇಲಾದ ಒಪಾರ್ ರೇಷ್ಮೆಯಿಂದ ತಯಾರಿಸಿ ಎಲ್ಲಾ ವಯಸ್ಸಿನ ಮಕ್ಕಳಿಗೂ ಯೋಗ್ಯವಾಗಿರುವ ನಿಲುವಂಗಿ ಅಂಚುಗಳು ಬಹು ಸುಂದರವಾದ ಸೂಜಿ ಕೆಲಸ ಮಾಡಿದ ಎಂಬ್ರಾಯ್ಡರಿ ಮಾಡಿದೆ ಈ ಮನೋಹರವಾದ ನಿಲುವಂಗಿ ಹಾಕಿಕೊಂಡ ನಿಮ್ಮ ಮಕ್ಕಳು ಬಹಳ ಸುಂದರವಾಗಿ ಕಾಣುವರು ಈ ನಿಲುವಂಗಿಗಳನ್ನು ರೇಶಮು, ರೋಜಾ, ನೀಲಿ, ಹಳದಿ ಮೊದಲಾದ ಬಣ್ಣಗಳಲ್ಲಿ ದೊರಕುವವು ನಿಮಗೆ ಒಂದಾದರೂ ಬೇಕೇ ಬೇಕು [165 3]

ಸೈಜು	12-15	16 18	19 21	22 25	26-30
ಕ್ರಯ	1 6-0	1 10 0	1 14-0	2-12-0	3-12 0

ನಮ್ಮ ವಿಳಾಸ —ದಿ ಬಾಂಬೆ ಮ್ಯಾನುಫ್ಯಾಕ್ಚರ್ ಏಜನ್ಸಿ,
ಧಾರಾವಿ, ಬೊಂಬಾಯಿ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

9—8—1913 ರಿಂದ 15—8—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ಹಿಡಿದದ್ದು	ಸತ್ತದ್ದು	ಹಿಡಿದದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	11	11	11	7
ಮೈಸೂರು ,,	21	16	5	4
ಕೋಲಾರ್ ,,	2	3	8	1
ಕೋಲಾರ್ ಚಿನ್ನದ ಗಣಿಗಳು	0	0	0	0
ತುಮಕೂರು ಡಿಸ್ಟ್ರಿಕ್ಟು	9	5	3	2
ಹಾಸನ ,,	22	8	8	7
ಚಿತ್ರದುರ್ಗ ,,	0	0	2	2
ಕಡೂರ್ ,,	25	16	0	0
ಶಿವಮೊಗ್ಗ ,,	27	19	0	0
ಜುಮ್ಲಾ	117	78	37	25

ಶಾಲಿವಾಹನ ಶಕ ವರುಷಗಳು 1835 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೇ ವರ್ಷಋತು ಶ್ರಾವಣ ಬಹುಳ ದ್ವಾದಶಿ ಶುಕ್ರವಾರದಿಂದ ಭಾದ್ರಪದ ಶುದ್ಧ ಚೌತಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಆಗಸ್ಟ್, ಮತ್ತು ಸೆಪ್ಟಂಬರ್

ತಾ	ವಾರ		ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸಿಂಹ ಮಾಸ ತೇದಿ
29	ಶುಕ್ರ	•	ದ್ವಾದಶಿ	6 49	ಪುಷ್ಯ	51 20	14
30	ಶನಿ	‡	ತ್ರಯೋದಶಿ	2 9	ಆಶ್ಲೇಷ	55 7	16
31	ಭಾನು	,,	ಅಮಾವಾಸ್ಯೆ	1 21	ಮಖಾ	44 48	16
1	ಸೋಮ		ಪಾಡ್ಯಮಿ	15 13	ಪುಬ್ಬಾ	40 59	17
2	ಮಂಗಳ	†	ಬಿದಿಗೆ	38 21	ಉತ್ತರಾ	36 20	18
3	ಬುಧ	§	ತದಿಗೆ	12 50	ಹಸ್ತ	33-15	19
4	ಗುರು		ಚೌತಿ	27 9	ಚಿತ್ತ	28 27	20

• ಪ್ರದೋಷ ‡ ಶ್ರಾವಣಶನಿವಾರ, ಮಾಸಶಿವರಾತ್ರಿ, ಮಳೆ ನಕ್ಷತ್ರ—ಪುಬ್ಬಾ 1 ನೇ ಪಾದ ,, ಸರ್ವತ್ರ ಅಮಾವಾಸ್ಯಾ † ಕಲ್ಕ್ಯಜಯಂತಿ, ಚಂದ್ರೋದಯ, ಸವ್ವಾಲ್ ಚಂದು 1, ಮಳೆ ನಕ್ಷತ್ರ—ಪುಬ್ಬಾ 3 ನೇ ಪಾದ § ಸ್ವರ್ಣಗೌರೀ ವ್ರತ, ಸಾಮಶ್ರವಣಾದಿ, ಸಾಮಗೋಪಾಕರ್ಮ, ಪತ್ನಿಯೋಗ ವೃಷ್ಟಿ, ಚತುರ್ಥೀ ತಿಥಿ, ಸಿದ್ಧಿವಿನಾಯಕವ್ರತ

ಪೇಟೇ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೬ ೦-೦	೧೭ ೮-೦
ಕೆಂಬತ್ತಿ ಅಕ್ಕಿ ಅವಲ್		೧೬ ೫-೦	೧೭ ೮-೦
,, ,, ದುಯಂ		೧೬-೦ ೦	೧೭-೦-೦
ಜಾಸ್ತ್ರಾಣಿ ಅಕ್ಕಿ		೧೬-೮ ೦	೧೭ ೪-೦
ಸಣ್ಣಕ್ಕಿ ಅವಲ್		೨೮-೦-೦	೧೮ ೮-೦
,, ದುಯಂ		೧೭ ೦-೦	೧೭ ೮-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ		೨೫-೪-೦	೧೩-೮-೦
,, ದುಯಂ ,,		೧೪-೮-೦	೧೨-೮-೦
ಹೈಕ ರಾಗಿ ಪಲ್ಲಾ ೧ಕ್ಕೆ		೬-೮-೦	೫-೦-೦
ಕಾರ್ ರಾಗಿ ,,		೬-೦-೦	೪ ೧೨ ೦
ಜೋಳ ,,		೬ ೮ ೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ		೧೧ ೦-೦	೧೩-೧೨-೦
ಅವರೆ ,,		೧೨ ೪ ೦	೧೧-೦-೦
ಹೆಸರು ,,		೨೨-೦ ೦	೧೪-೦-೦
ಉದ್ದು ,,		೧೪ ೮ ೦	೧೬-೦-೦
ಕಡಲೆ ,,		೧೧-೮-೦	೧೨-೦-೦
ಎಳ್ಳು ಸೇರು ೧೨೭ಕ್ಕೆ		೨೩ ೦ ೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ		೭ ೦ ೦	೭-೦-೦
ಹರಳು ೧೨೭ ಸೇರಿಗೆ		೧೩ ೦ ೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ		೨ ೪ ೦	೩-೮-೦
ಮೆಣಸಿನಕಾಯಿ ,,		೪ ೦ ೦	೩-೪-೦
,, ದುಯಂ		೩ ೦ ೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೫ ೦ ೦	ಮಣ ೫ ೮-೦
ಒಳ್ಳೆಣ್ಣೆ ಮಣ ೧ಕ್ಕೆ		೭ ೦ ೦	೬-೬-೦
ಹರಳೆಣ್ಣೆ ,, ,,		೫ ೪-೦	೬ ೦-೦
ಕಡಲೇಕಾಯಿ ಎಣ್ಣೆ		೬ ೪ ೦	೬-೦ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೪ ೮-೦	೫ ೪-೦
ಉಪ್ಪು ,, ,,		೬ ೮-೦	೬ ೦-೦
ಹುಣಸೇ ಹಣ್ಣು ಮಣ ೧ಕ್ಕೆ		೧ ೧೨ ೦	೧-೪-೦
ತುಪ್ಪ ಮಣ ೧ಕ್ಕೆ		೨೧ ೮ ೦	೧೯-೦ ೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫ ೧೧-೦	೫-೦-೦
ತೆಂಗಿನಕಾಯಿ ೧೦೦ಕ್ಕೆ		೬-೬-೦	೬-೦ ೦
ಅಳಲೇಕಾಯಿ ಮಣ ೧ಕ್ಕೆ		೧-೬-೦	೧ ೦-೦
ಅಂಟ್ವಾಳದಕಾಯಿ ಮಣ ೧ಕ್ಕೆ		೧ ೧೨ ೦	೧ ೮-೦
ಚಿನ್ನ (ಪೌನ್) ಕೆಂಪು		೧೫ ೮ ೦	೧೫-೮-೦
,, ,, ಪಸಿಮೆ		೧೫ ೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ		೨೪ ೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧-೦-೦	೮೧ ೩-೦

READY

An Intermediate Arts Course finished private tutor. For further particulars apply to X, C/o the Manager, *Vrittanta Patrike*, Mysore (172 1)

ಹಾಸನದ ಷೇಕ್ ಮೊಹಿದೀನ್ ಸಾಹೇಬರ ಮಕ್ಕಳು ಅಬ್ದುಲ್ ರಜಾಕರವರ ಅಂಗಡಿಯಲ್ಲಿ

ಮೈಸೂರು ಶ್ರೀಮನ್ಮಹಾರಾಜಾ ಸಾಹೇಬ್ ಬಹಾದುರ್ ಯವರ ಸರಕಾರದವರು ಹೊಸದಾಗಿ ಜಾರಿಯಲ್ಲಿ ತಂದಿರುವ ಅಳತೆಮಾಡುವ ಸೇರುಗಳು ಮತ್ತು ತೂಕಮಾಡುವ ಬಟ್ಟುಗಳು ಮಾರಲ್ಪಡುತ್ತವೆ ಬೇಗನೆ ಕೊಂಡುಕೊಳ್ಳಿ [16-1]

ವಿಳಾಸ —ಷೇಕ್ ಮೊಹಿದೀನ್ ಸಾಹೇಬರ ಅಂಗಡಿ, ಹಾಸನ

ಕನ್ನಡ

ಇಂಡಿಯನ್ ಪೆನಲ್ ಕೋಡ್.

160 1

ಇಂಡಿಯಾ ಗೌರ್ನರ್ ಜನರಲ್‌ರವರಿಂದ ಮುಂಜೂರಾದ ಈ ಆಕ್ಟನ್ನು ಮೈಸೂರ್, ಬೊಂಬೈ, ಮದ್ರಾಸ್, ಅಲಹಾಬಾದ್ ಮುಂತಾದ ಅನೇಕ ಜಡ್ಜಿಗಳ ಅಭಿಪ್ರಾಯಗಳ ಟಿಪ್ಪಣಿ ಸಹಿತ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟಗಳಿಂದ ಬಿಡುಗಡೆಯಾಗಿರುವರು ಇದು ಮುಖ್ಯವಾಗಿ ಪೋಲೀಸ್, ಮ್ಯಾಜಿಸ್ಟ್ರೇಟರು, ಅಧಿಕಾರಿಗಳಲ್ಲಿಯೂ, ಲಾಯರುಗಳಲ್ಲಿಯೂ ಪಟೇಲ್ ಶ್ಯಾನುಭೋಗರುಗಳಲ್ಲಿಯೂ, ಇತರ ಮುಖ್ಯ ಜನಗಳಲ್ಲಿಯೂ ಇರಬೇಕಾದದ್ದು ಅತ್ಯಂತ ಅವಶ್ಯಕವಾದದ್ದು ಕ್ರಯ ಗ್ಲೇಜ್ ರೂ 2-8-0 ರಫ್ ರೂ 2-0-0 ಟಪ್ಪಾಲ್ ಛಾರ್ಜು 0-4-0

ವಿಳಾಸ:—ಬಿ ನರಸಿಂಗರಾವ್, ಎಡಿಟರ್, (ಲಾ) ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮೂರು ಸಿದ್ಧೌಷಧಗಳು.

ದಶನಾನಂದಕರೀಮಾತ್ರೆ ಮೂಲಿಕೆ ಪರಿಮಳದ್ರವ್ಯಗಳಿಂದ ತಯಾರಿಸಿದೆ ಒಂದನ್ನು ತಾಂಬೂಲದೊಡನೆ ಅಥವಾ ಬರೀ ಬಾಯಿಗೆ ಹಾಕಿಸಿದರೆ ದುರ್ಗಂಧ ಹೋಗಿ ಸುವಾಸನೆಯಾಗುತ್ತೆ ರಕ್ತವನ್ನು ಶುದ್ಧಿಮಾಡುತ್ತ ಕರಳು, ಗಂಟಲು, ಬಾಯಿ, ಇವುಗಳು ಹುಣ್ಣಾದರೆ ಅರ್ಧ ತೊಲಾ ಬಾದಾಮಿ ಎಣ್ಣೆಯಲ್ಲಿ ಒಂದು ಮಾತ್ರೆ ತೇದು ಮಲಗುವ ಸಮಯದಲ್ಲಿ ತೆಗೆದುಕೊಂಡರೆ ಗುಣವಾಗುವುದು 200 ಮಾತ್ರೆ, ಸೀಸಾ 1 ಕ್ಕೆ 1 ಆಣೆ ಇಸಬು, ಖಜ್ಜಿ, ತುರಿ ಇವುಗಳಿಗೆ ಹಾಮಹರಿಣೀ ಪೌಡರ್ ತೊಲಾ 1 ಕ್ಕೆ 2 ಆಣೆ ಬಾಣಂತಿಯರು ಮಕ್ಕಳ ಶೀತ ನೆಗಡಿ ಇವುಗಳಿಗೆ ಉಪಯೋಗಿಸತಕ್ಕ ಕಸ್ತೂರಿಮಾತ್ರೆ 20 ಮಾತ್ರೆಗೆ 8 ಆಣೆ ಬಾಣಂತಿಯರು ಉಪಯೋಗಿಸತಕ್ಕ ಪಿಂಪಾದ್ರೇಕವೆಂಬ ಆರೋಗ್ಯದ ಲೇಹ್ಯ 12 ತೊಲಾ ಡಬ್ಬಿಗೆ 6 ಆಣೆ ಅಪೇಕ್ಷಿಸುವರು ತಮ್ಮ ವಿಳಾಸ ವಿಶದವಾಗಿ ಬರೆಯಬೇಕು ಅಂಚೆ ಹಾಸಲು ಬೇರೆ, ತರಿಸಿಕೊಳ್ಳತಕ್ಕವರು ವರ್ತಕರಾದ್ದು 1 ಡಜನ್‌ಗೆ 1 ಸೀಸಾ ಡಿಸ್ಕೌಂಟು ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಮುಂಚೆ ಸ್ವಲ್ಪ ತರಿಸಿ ನೋಡಿ ನಂತರವಾದರೂ ತರಿಸಿಕೊಳ್ಳಿ [141 ?]

ನಮ್ಮ ವಿಳಾಸ —ಶೇಷಭಟ್ಟರು,

ನೇಟಿವ್ ಪಂಡಿತ್, ಪೂರ್ಣಯ್ಯನವರ ಬೀದಿ, ಶ್ರೀರಂಗಪಟ್ಟಣ.

ವೃತ್ತಾಂತ ಪತ್ರಿಕೆ.

—— o ——

ಸನ್ ೧೯೧೩ ನೇ ಇಸವಿ ಆಗಸ್ಟ್, ತಾ ೨೮ ನೇ ಗುರುವಾರ

ಮೈಸೂರು ಸಂಸ್ಥಾನದ ಮರಾಮತ್ ಇಲಾಖೆಯ ಕಾಮಗಾರಿಗಳು

ಎರಡು ವಾರಗಳ ಹಿಂದೆ ನಾವು ಮೈಸೂರು ಗವರ್ನಮೆಂಟಿನವರು ಪ್ರಕಟಿಸಿದ ಚಾಲ್ತಿ ಸಾಲಿನ ಜಮಾ ಖರ್ಚು ಅಂದಾಜು ಪಟ್ಟಿಗಳನ್ನು ಕುರಿತು ಸ್ವಲ್ಪಮಟ್ಟಿಗೆ ಪ್ರಸ್ತಾಪಮಾಡಿದೆವು ಈ ಸಂಸ್ಥಾನದಲ್ಲಿ ಅನೇಕ ಇಲಾಖೆಗಳಿರುವವು ಪ್ರತಿ ಒಂದು ಇಲಾಖೆಯ ಕಾರ್ಯಗಳನ್ನೂ ಗವರ್ನಮೆಂಟಿನವರು ವಿಶೇಷ ಜಾಗರೂಕತೆಯಿಂದ ಮೇಲ್ವಿಚಾರಣೆ ಇಟ್ಟು ನೋಡಿಕೊಳ್ಳುತ್ತಾ ಬರಬೇಕಾಗಿದೆ ಸರ್ಕಾರದವರು ಚಾಲ್ತಿ ಸಾಲಿನಲ್ಲಿ ಸಂಸ್ಥಾನಾಮಳೆ ವ್ಯವಸಾಯವನ್ನು ಕ್ರಮಪಡಿಸಿ ಉತ್ತಮಸ್ಥಿತಿಗೆ ತರುವುದಕ್ಕೂ, ಪ್ರಜೆಗಳಿಗೆ ಒಳ್ಳೆಯ ಕುಡಿಯುವ ನೀರನ್ನು ಒದಗಿಸುವುದಕ್ಕೂ ಹಣ ಖರ್ಚುಮಾಡುವುದಾಗಿ ಬಜೆಟ್ಟಿನಲ್ಲಿ ಕಾಣಿಸಿರುವುದನ್ನು ನೋಡಿ ನಾವು ತುಂಬಾ ಸಂತೋಷಪಡುತ್ತೇವೆ

ಗವರ್ನಮೆಂಟಿನವರು ಹೊಸ ಕೆರೆಗಳನ್ನು ಕಟ್ಟುವುದಕ್ಕೂ, ತರೀ ವ್ಯವಸಾಯವನ್ನು ಹೆಚ್ಚುಮಾಡುವುದಕ್ಕೂ ಬಹಳ ಹಣವನ್ನು ಕೊಡುವುದಾಗಿ ಹೇಳಿದಾರೆ ಇದು ಅವಶ್ಯವೂ ವಿವೇಕಪೂರ್ವಕವೂ ಆದ ಏರ್ಪಾಡೆನ್ನುವುದಕ್ಕೆ ಸಂಶಯವಿಲ್ಲ ಇದರಿಂದ ಸಂಸ್ಥಾನದಲ್ಲಿ ಭತ್ತ, ಕಬ್ಬು ಮೊದಲಾದ ತರೀ ಫಸಲನ್ನು ಹೆಚ್ಚಾಗಿ ಬೆಳೆಯುವುದಕ್ಕೆ ಅವಕಾಶವಾಗುತ್ತದೆ ಸರ್ಕಾರದವರು ಸೂಚಿಸಿರುವ ಮುಖ್ಯವಾದ ಭಾರಿ ಕಾಮಗಾರಿಗಳ್ಯಾವುವೆಂದರೆ—ಕಾರ್ಕಾನಹಳ್ಳಿ, ತಾಲ್ಲೂಕಿಗೆ ಸೇರಿದ ಮರಳವಾಡಿ ಹೊಳೆಗೆ ಅಡ್ಡಕಟ್ಟೆಹಾಕಿ ಕೆರೆಯನ್ನು ಕಟ್ಟಿಸುವುದಕ್ಕೆ 60,000 ರೂಪಾಯಿ, ಕುಣಿಗಲ್ ಪೇಟೆ ಸಬ್ ತಾಲ್ಲೂಕು ಮೋಳ್ಳಪನಹಳ್ಳಿ ಕೆರೆ ಕಾಮಗಾರಿಗೆ 10,000 ರೂಪಾಯಿ, ಬಂಗಾರಪೇಟೆ ತಾಲ್ಲೂಕಿನಲ್ಲಿ ಹರಿಯುವ ಮಾರ್ಕಂಡೇಯ ಹೊಳೆಗೆ ಅಡ್ಡಕಟ್ಟೆ ಕಟ್ಟಿ ಕೆರೆಯನ್ನು ನಿರ್ಮಾಣಮಾಡುವುದಕ್ಕೆ 17,000 ರೂಪಾಯಿ ಮದ್ದಗಿರಿ ತಾಲ್ಲೂಕಿನಲ್ಲಿರುವ ತಂಲಡಿ ಗ್ರಾಮದಲ್ಲಿ ಹೊಸ ಕೆರೆಯನ್ನು ಕಟ್ಟುವುದಕ್ಕೆ 5,000 ರೂಪಾಯಿ, ಕುಣಿಗಲ್ ತಾಲ್ಲೂಕಿಗೆ ಸೇರಿದ ನಿಡಸಾಲೆಯಲ್ಲಿ ಹೊಸದಾಗಿ ಒಂದು ಕೆರೆಯನ್ನು ಕಟ್ಟುವುದಕ್ಕೆ ?,000 ರೂಪಾಯಿ, ದೇಮಗಿರಿ ನಾಲೆಯನ್ನು ದುರಸ್ತುಮಾಡಿ ಬಿಡಾವಣೆಮಾಡುವುದಕ್ಕೆ 10,000, ಹೊಸ ಮಂತ್ರಿ ಆಣೆಯನ್ನು ಸರಿಮಾಡುವುದಕ್ಕೆ 8,000 ರೂಪಾಯಿ ಮಂದಗಿರಿ ನಾಲಾ ಬಿಡಾವಣೆಗೆ 10,000 ರೂಪಾಯಿ, ಹುಣಸೂರು ಪಟ್ಟಣದ ಹೊಳೆಯ ಬಳಿ ಒಂದು ಹೊಸ ಕೆರೆಯನ್ನು ಕಟ್ಟುವುದಕ್ಕೆ 25,000 ರೂಪಾಯಿ, ಹುಣಸೂರು ತಾಲ್ಲೂಕು ಮುಳ್ಳೂರು ಕೆರೆಯ ಕಾಮಗಾರಿಗೆ 5,000 ರೂಪಾಯಿ, ನಾಗಮಂಗಲದ ತಾಲ್ಲೂಕು ಮಂಚಪಟ್ಟಣ ದೊಡ್ಡಕೆರೆ ಕಾಮಗಾರಿಗೆ 4,000 ರೂಪಾಯಿ, ಹೊಳೆನರಸೀಪುರದ ಬಳಿ ಇರುವ ಶ್ರೀರಾಮದೇವರ ಆಣೆಕಟ್ಟಿನ ದಕ್ಷಿಣ ನಾಲೆಯನ್ನು ದುರಸ್ತುಮಾಡಿ ಬಿಡಾವಣೆ ಮಾಡುವುದಕ್ಕೆ 10,000 ರೂಪಾಯಿ, ಹೊಸನಗರ ತಾಲ್ಲೂಕು ಸೌಳಂಗಿಯಲ್ಲಿ ಒಂದು ಹೊಸ ಕೆರೆಯ ಕಾಮಗಾರಿಗೆ 5,000 ರೂಪಾಯಿ, ಸೊರಬ ತಾಲ್ಲೂಕು ಕುಪ್ಪತೂರು ಕೆರೆ ತೂಬನ್ನು ಎತ್ತುವ ಕಾಮಗಾರಿಗೆ 1,000 ರೂಪಾಯಿ, ತರೀಕೆರೆ ಕಣಿವೆಯಲ್ಲಿರುವ ಕೆರೆಗಳಿಗೆ ನಾಗಣ್ಣನ ಆಣೆಕಟ್ಟೆಯಿಂದ ನೀರುಹಾಯಿಸುವುದಕ್ಕೆ 10,000 ರೂಪಾಯಿ ಮೈಸೂರು ವಾಣೀವಿಲಾಸ ವಾಟರ್ ವರ್ಕ್ಸನ್ನು ಅಭಿವೃದ್ಧಿಮಾಡುವುದಕ್ಕೆ 75,000 ರೂಪಾಯಿ ಬೆಂಗಳೂರು ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಆಲಯವನ್ನು ವಿಸ್ತರಿಸುವುದಕ್ಕೆ 1,000 ರೂಪಾಯಿ ಮೈಸೂರಿನಲ್ಲಿ ಜನರಲ್ ಆಸ್ಪತ್ರೆಯ ಕಟ್ಟಡಗಳಿಗೆ 75,000 ರೂಪಾಯಿ ಮೈಸೂರು ಹೊಸ ಅರಮನೆ ಕಾಮಗಾರಿಗೆ 1,00,000 ರೂಪಾಯಿ, ತಾಳಗುಪ್ಪದಿಂದ ಆರಗೋಡು ರಸ್ತೆಯ ಜಂಕ್ಷನ್ ಮೈಸೂರು ಎಲ್ಲಕಟ್ಟೆವರೆಗೆ ತನಕ ಕುದುರೆಸವಾರಿಮಾಡಿಕೊಂಡುಹೋಗುವಂತೆ ಸಣ್ಣ ರಸ್ತೆಯನ್ನು ಕಲ್ಪಿಸುವುದಕ್ಕೆ 1,000 ರೂಪಾಯಿ, ತಾಳಗುಪ್ಪ-ಆರಗೋಡು ಜಂಕ್ಷನ್ ರಸ್ತೆಯನ್ನು ಅಗಲಮಾಡುವುದಕ್ಕೆ 7,000 ರೂಪಾಯಿ ಈ ಪ್ರಕಾರ ಚಾಲ್ತಿ ಸಾಲಿನಲ್ಲಿ ಹಣ ಖರ್ಚುಮಾಡಿ ಕಾಮಗಾರಿ ನಡಿಸುವವರಾಗಿದಾರೆ

ಮೇಲ್ಕಂಡ ಸಂಗತಿಗಳನ್ನು ನೋಡುವಲ್ಲಿ ಗವರ್ನಮೆಂಟಿನವರು ಸಂಸ್ಥಾನದ ಎಲ್ಲಾ ಭಾಗಗಳ ವಿಷಯದಲ್ಲೂ ಗಮನ ಕೊಡುತ್ತಿರುವಂತೆ ಗೊತ್ತಾಗುತ್ತದೆ ಅನೇಕ ವೇಳೆ ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿ ಹಣವಿಲ್ಲ ನಾಲದೆ ಅನೇಕ ಪ್ರಯೋಜಕಾರಕ ಕಾಮಗಾರಿಗಳು ನಿಂತು ಹೋಗಿರುವುದು ಗವರ್ನಮೆಂಟಿನವರು ಪ್ರತಿ ವರುಷವೂ ರಾಜಭಂಡಾರದಿಂದ ಕೆಲವು ಹಣವನ್ನು ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಕೊಟ್ಟು ಅಂಥಾ ಕಾಮಗಾರಿಗಳನ್ನು ಮಾಡಿಸುವುದಾಗಲಿ, ಇಲ್ಲವೇ ತಾವೇ ಅಂಥಾ ಕೆಲಸಗಳನ್ನು ವಹಿಸಿಕೊಂಡು ನಡೆಸುತ್ತಾ ಬರುವುದಾಗಲಿ ಆದಪಕ್ಷದಲ್ಲಿ ಅನೇಕ ಊರುಗಳೂ ಗ್ರಾಮಗಳೂ ಬೇಗ ಬೇಗನೆ ತುಂಬಾ ಅಭಿವೃದ್ಧಿಗೆ ಬರುವುದರಲ್ಲಿ ಸಂಶಯವಿಲ್ಲ ಅನೇಕ ಗ್ರಾಮಗಳಿಗೆ ಹೋಗಿ ಬರಲು ಸರಾಗವಾದ ರಸ್ತೆಗಳಿಲ್ಲ ಹಲವು ಗ್ರಾಮಗಳ ಪ್ರಜೆಗಳು ತಾವೇ ಸ್ವಂತ ರಸ್ತೆಗಳನ್ನು ಮಾಡಿಸಿಕೊಳ್ಳಲು ನಿರ್ಧನಿಕರಾಗಿಯೂ, ಸಹಾಯಹೀನರಾಗಿಯೂ ಇರುತ್ತಾರೆ ಆದಕಾರಣ ನಮ್ಮ ಗವರ್ನಮೆಂಟಿನವರು ಗ್ರಾಮಾಂತರಗಳಲ್ಲಿರುವ ಪ್ರಜೆಗಳ ವಿಷಯದಲ್ಲಿ ವಿಶೇಷವಾದ ಕನಿಕರವನ್ನು ಪ್ರಕಾಶಪಡಿಸಿ ಅವರುಗಳಿಗೆ ಒಳ್ಳೆಯ ಕುಡಿಯುವ ನೀರನ್ನು ಒದಗಿಸುತ್ತಾರೆಂದೂ, ಅವರ ಗ್ರಾಮಗಳಿಗೆ ರಸ್ತೆಗಳನ್ನು ಹಾಕಿಸಿಕೊಡುತ್ತಾರೆಂದೂ, ಗ್ರಾಮಗಳಲ್ಲಿ ಆರೋಗ್ಯಾಭಿವೃದ್ಧಿಯ ಕಾರ್ಯಗಳನ್ನು ಮಾಡಿಸಿಕೊಡುತ್ತಾರೆಂದೂ ನಂಬಿ ನಿರೀಕ್ಷಿಸುತ್ತೇವೆ

ದೇವರ ಚಿತ್ತವು ನೆರವೇರಲಿ

ಯಾವದಾದರು ಒಂದು ವಸ್ತುವನ್ನು ಹಿಡಿದು ನಾವು ಎತ್ತಬೇಕಾದರೆ ಆ ವಸ್ತುವಿನ ಮಧ್ಯಭಾಗವನ್ನು ಹಿಡಿದು ಎತ್ತಿದರೆ ಆ ವಸ್ತುವೆಲ್ಲವೂ ಅದರ ಸಂಗಡಲೇ ಎದ್ದು ಬರುವದು ಹೇಗಂದರೆ, ಒಂದು ಚಕ್ರವಿದೆ ಅದಕ್ಕೆ ಹನ್ನೆರಡು ಅರೆಕಾಲುಗಳೂ ಮಂಡಲಾಕಾರವಾಗಿ ಜೋಡಣೆಯಾಗಿರುವ ಮರದ ತುಂಡುಗಳೂ ಅದರ ಸುತ್ತಲೂ ಕಟ್ಟಿಇದ ಪಟ್ಟಿಯೂ—ಇವೇ ಮುಂತಾದ ಅನೇಕ ಭಾಗಗಳಿರುತ್ತವೆ ಆದರೆ ಆ ಚಕ್ರದ ಮಧ್ಯಭಾಗವನ್ನು ಎತ್ತಿದರೆ ಅದರ ಬೇರೆ ಬೇರೆ ಭಾಗಗಳೂ ತಾವಾಗಿಯೆ ಅದರ ಸಂಗಡ ಎದ್ದುಬರುವವು ಒಂದು ಹಣ್ಣನ್ನು ತೊಟ್ಟು ಹಿಡಿದು ಎತ್ತಿದರೆ ಆ ಹಣ್ಣಿನ ಸಕಲ ಭಾಗಗಳೂ ತಾವಾಗಿಯೆ ಆ ತೊಟ್ಟಿನ ಕೂಡ ಎದ್ದುಬರುವವು ದೇವರೇ! ನಿನ್ನ ಚಿತ್ತವೇ ನೆರವೇರಲಿಯೆಂಬ ಪ್ರಾರ್ಥನೆಯು ನಾವು ದೇವರಿಗೆ ಮಾಡುವ ಸಕಲ ವಿಜ್ಞಾಪನೆಗಳನ್ನು ಒಳಗೊಂಡಿರುತ್ತದೆ ನಾವು ದೇವರನ್ನು ಪ್ರಾರ್ಥಿಸುವಾಗ ಆತನಿಂದ ನಾವು ಬೇಡಬೇಕಾದು ದೇನು? ಐಶ್ವರ್ಯ ಸುಖ, ಅಧಿಕಾರ, ಕೀರ್ತಿ ಇವೇ ಮುಂತಾದ ವರಗಳು ನಮಗೆ ಲಭ್ಯವಾದರೆ ನಮ್ಮ ಮನೋರಥವು ಸಿದ್ಧಿಸಿತೆಂದು ಭಾವಿಸಬಹುದೋ? ಮೇಲೆ ಹೇಳಿದ ಐಶ್ವರ್ಯವೇ ಮೊದಲಾದ ವರಗಳು ನಮಗೆ ಎಷ್ಟು ಸಂತೋಷಕ್ಕೆ ಕಾರಣಗಳಾಗಿರುವವೋ ಅದಕ್ಕಿಂತ ಹೆಚ್ಚು ದುಃಖಕ್ಕೂ ಕಷ್ಟಕಡಗೆ ನಾಶನಕ್ಕೂ ಕಾರಣಗಳಾಗುವದುಂಟು. ನಮ್ಮ ಅಲ್ಪಜ್ಞತೆಯಿಂದ ನಾವು ಬೇಡುವದನ್ನು ಮಾತ್ರ ದೇವರು ನಮಗೆ ಕೊಡುವದಾದರೆ ನಮ್ಮ ಜೀವನಕ್ಕೆ ಬೇಕಾದ ಅನೇಕ ಮಹಾ ವರಗಳು ನಮಗೆ ಇಲ್ಲದೆ ಹೋದಾವು ಆದ್ದರಿಂದ ನಾವು ದೇವರನ್ನು ತಂದೆಯೆಂದು ನಂಬಿ ಆತನ ಬಳಿಗೆ ಬಂದು—ನಿನ್ನ ಪ್ರೀತಿಯೂ ದಯವೂ ನನ್ನ ಮೇಲೆ ಇರಲಿ, ಸಾಕಲ ವಿಷಯಗಳಲ್ಲಿ ನಿನ್ನ ಚಿತ್ತವೇ ನೆರವೇರಲಿ ಎಂದು ಮನಃಪೂರ್ವಕವಾಗಿ ಆತನ ಚಿತ್ತಕ್ಕೆ ನಮ್ಮನ್ನು ಒಪ್ಪಿಸಿಬಿಡಬೇಕಾದದ್ದು ನಮ್ಮ ಕರ್ತವ್ಯವಾಗಿದೆ ನಮಗೆ ಯಾವದು ಹಾನಿಯನ್ನುಂಟುಮಾಡದೆ ನಮ್ಮ ಹಿತವನ್ನೇ ಎಸಗುವದೋ ಸರ್ವಜ್ಞನಾದ ಆತನೊಬ್ಬನಿಗೆ ಮಾತ್ರ ತಿಳಿಯುವದು ಮತ್ತು ಆತನು ನಮ್ಮ ತಂದೆಯೇ ಆಗಿರುವದರಿಂದ ನಮ್ಮ ಅವಶ್ಯಕತೆಗೆ ಬೇಕಾದವುಗಳನ್ನು ತಿಳಿದು ತನ್ನ ಸರ್ವಶಕ್ತಿಯಿಂದ ನಮಗೆ ಬೇಕಾದಷ್ಟು ಕೊಡುವನು

ಆದರೆ ಈ ಪ್ರಾರ್ಥನೆಯು ನಮಗೆ ಬೇಕಾದ ಇಹಲೋಕದ ವಸ್ತುಗಳನ್ನು ಬೇಡುವದಕ್ಕೆ ಮಾತ್ರವಲ್ಲ ನಾವು ಈ ಲೋಕದಲ್ಲಿ ನಡೆಯತಕ್ಕ ನಡತೆಯನ್ನೂ ಆಡಬೇಕಾದ ಮಾತುಗಳನ್ನೂ ಯೋಚನೆಗಳನ್ನೂ ನಿರ್ಣಯಿಸತಕ್ಕದ್ದಾಗಿದೆ "ತಂದೆಯೇ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ" ಎಂದು ಪ್ರಾರ್ಥಿಸಿರಿ ಎಂಬದಾಗಿ ಕ್ರಿಸ್ತನು ತನ್ನ ಶಿಷ್ಯರಿಗೆ ಬೋಧಿಸಿದನು ಆದ್ದರಿಂದ ದೇವರು ನಮಗೆ ದಯಪಾಲಿಸುವ ವರಗಳು ನಮ್ಮ ಮನೋಭಿಲಾಷೆಯ ಪ್ರಕಾರವಾಗಿ ನಮಗೆ ಪ್ರಾಪ್ತವಾಗಿ ನಮ್ಮನ್ನು ಕೆಡಿಸದೆ ಆತನ ದಿವ್ಯಜ್ಞಾನ, ಶಕ್ತಿ, ಪ್ರೀತಿಗಳಿಗನುಗುಣವಾಗಿ ನಮಗೆ ದೊರಕಬೇಕೆಂದು ಈ ಪ್ರಾರ್ಥನೆಯಲ್ಲಿ ನಾವು ಬೇಡುವದಲ್ಲದೆ, ನಮ್ಮ ಮನಸ್ಸಿನಲ್ಲಿ ಹುಟ್ಟುವ ಯೋಚನೆ, ಬಾಯಿಯಿಂದಾಡುವ ಮಾತು ಕ್ರಿಯೆಗಳಿಂದಾಗುವ ನಡತೆ ಇವು ಸಹ ಆತನ ಚಿತ್ತಾನುಸಾರವಾಗಿ ಇರುವಂತೆ ನಾವು ಆತನನ್ನು ಬೇಡಬೇಕು ಮತ್ತು ತದನುಸಾರವಾಗಿ ನಮ್ಮ ನಡತೆಯನ್ನು ಕ್ರಮಪಡಿಸಿಕೊಳ್ಳುವದಕ್ಕೆ ಯತ್ನಿಸಬೇಕು

ಈ ಪ್ರಾರ್ಥನೆಯಲ್ಲಿ ನಮ್ಮ ನಡತೆಗೆ ತಕ್ಕದಾದ ಯಾವದೋ ಒಂದು ಮೇಲ್ಪಂಕ್ತಿಯಾದ ಅಥವಾ ನಮೂನೆಯಾದ ನಡತೆಯನ್ನು ನೋಡಿ ಆ ಮೇಲ್ಪಂಕ್ತಿ ಅಥವಾ ನಮೂನೆಯ ಪ್ರಕಾರವಾಗಿ ಅಂದರೆ ಅದನ್ನು ಅನುಸರಿಸಿದ್ದು ಅಥವಾ ಹೋಲುವದಾಗಿ ನಮ್ಮ ನಡತೆಯೂ ಇರಲಿಯೆಂದು ಅಪೇಕ್ಷಿಸಿ ಬೇಡುತ್ತೇವೆ ಆ ನಮೂನೆ ಯಾವದು? "ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ" ನಮ್ಮ ನಡತೆಯೂ ನಿನ್ನ ಚಿತ್ತವನ್ನು ನೆರವೇರಿಸಲಿ ದೇವರ ಚಿತ್ತವು ಪರಲೋಕದಲ್ಲಿ ಹ್ಯಾಗೆ ನೆರವೇರುತ್ತದೆ?

ಯಥಾರಾಜಾ ತಥಾಪ್ರಜಾ ಯಥಾದೇವ ತಥಾಭಕ್ತ ದೇವರು ಹ್ಯಾಗೆ ನಡೆಯುತ್ತಾನೆ ಹಾಗೆಯೇ ಪರಲೋಕದಲ್ಲಿ ಆತನ ಪ್ರಜೆಗಳು ನಡೆಯುತ್ತಾರೆ ಪರಲೋಕದಲ್ಲಿ ಆತನ ಪ್ರಜೆಗಳು ಯಾರೋ ಅವರು ಎಂಥವರೋ ನಮಗೆ ಚೆನ್ನಾಗಿ ಗೊತ್ತಿಲ್ಲ ಯೇಸು ಕ್ರಿಸ್ತನಿಗೆ ಪರಲೋಕದ ಪ್ರಜೆಗಳು ಹ್ಯಾಗಿರುತ್ತಾರೆ ಅವರು ಎಂಥವರು? ಎಂತ ತಿಳಿದಿತ್ತು ಅವರೆಲ್ಲರೂ ಪರಲೋಕದ ರಾಜನೂ ದೇವರೂ ಆಗಿರುವ ಆತನನ್ನು ಅನುಸರಿಸಿ, ನಡೆಯುತ್ತಾರೆಯೆಂತ ಆತನು ತಿಳಿದಿದ್ದನು ಆತನು ಭೂಲೋಕಕ್ಕೆ ಮುಂಚೆ ಅಲ್ಲಿದ್ದು ಇಲ್ಲಿಗೆ ಬಂದನು ಮತ್ತು ಪರಲೋಕದಲ್ಲಿರುವವರ ನಡತೆಯು ಹೇಗೆ ದೇವರ ಚಿತ್ತಾನುಸಾರವಾಗಿಯೇ ಯಾವಾಗಲೂ ಇರುತ್ತದೆಂದು ತನ್ನ ನಡತೆಯಿಂದ ಭೂಲೋಕದವರಿಗೆ ತೋರಿಸುವ ನಿಮಿತ್ತ ಈ ಭೂಲೋಕಕ್ಕೆ ಪರಲೋಕವನ್ನು ಬಿಟ್ಟುಬಂದನು

ಹಾಗಾದರೆ ಯೇಸು ಕ್ರಿಸ್ತನ ನಡತೆ ಈ ಲೋಕದಲ್ಲಿ ಹ್ಯಾಗಿತ್ತೋ ಹಾಗೆ ಪರಲೋಕದವರ ನಡತೆಯು ಇರುವದರಿಂದ ಅವರ ನಡತೆಯು ದೇವರ ಚಿತ್ತವನ್ನು ನೆರವೇರಿಸುತ್ತದೆ ಪರಲೋಕದಲ್ಲಿರುವವರ ನಡತೆ ಹ್ಯಾಗಿದೆಯೋ ಅದು ದೇವರ ಚಿತ್ತವನ್ನು ಹ್ಯಾಗೆ ನೆರವೇರಿಸುವದಾಗಿದೆಯೋ ನಮಗೆ ತಿಳಿಯದಲ್ಲಾ ನಮಗೆ ಯಾರಾದರೂ ಅದನ್ನು ತಿಳಿಸಿದರೆ ಚೆನ್ನಾಗಿರುವದೆಂತ ಇನ್ನು ಮುಂದೆ ಯಾರೂ ಹೇಳಕೂಡದು ಯಾಕಂದರೆ ಯೇಸು ಸ್ವಾಮಿಯು ಪರಲೋಕದಿಂದ ಬಂದು ಈ ಲೋಕದಲ್ಲಿ ನಡೆದ ನಡತೆಯು ಆತನ ಚರಿತ್ರೆಯಲ್ಲಿ ಬರದಿದೆ

ಆತನು ಹ್ಯಾಗೆ ನಡೆದನು? ಸುವಾರ್ತೆಯೆಂಬ ಆತನ ಚರಿತ್ರೆಯನ್ನು ದೊರಕಿಸಿಕೊಂಡು ಓದಿನೋಡಿರಿ ದೇವರ ಸಂಗಡ ಯಾವಾಗಲೂ ಅನ್ಯೋನ್ಯನಾಗಿದ್ದು ದೇವರಿಂದ ತಾನು ನಡೆಯಬೇಕಾದ ನಡತೆಯನ್ನೂ ಹೇಳಬೇಕಾದ ಮಾತುಗಳನ್ನೂ ಕೇಳಿ ತಿಳಿದು ಹಾಗೆಯೇ ನಡೆದು ಮಾತನಾಡುತ್ತಿದ್ದನು ಆತನು ಹೇಳಿದ್ದು ಕೇಳಿರಿ—ನನ್ನಷ್ಟಕ್ಕೆ ನಾನೇ ಏನೂ ಮಾಡಲಾರೆನು ತಂದೆ ಹೇಳಿದಂತೆ ಕೇಳಿ ನಡೆಯುತ್ತೇನೆ ನನ್ನ ಚಿತ್ತ ನೆರವೇರಬೇಕೆಂದು ನಾನು ಅಪೇಕ್ಷಿಸದೆ ನನ್ನನ್ನು ಕಳುಹಿಸಿಕೊಟ್ಟವನ ಚಿತ್ತವೇ ನೆರವೇರಬೇಕೆಂದು ನಡೆಯುತ್ತೇನೆ ನಾನು ನೆರವೇರಿಸುವದಕ್ಕೆ ತಂದೆ ನನಗೆ ಕೊಟ್ಟಿರುವ ಕೆಲಸಗಳುಂಟು ಆ ಕೆಲಸಗಳೇ ತಂದೆಯು ನನ್ನನ್ನು ಕಳುಹಿಸಿಕೊಟ್ಟನೆಂದು ಸಾಕ್ಷಿಯಾಗಿವೆ ನಾನು ಹೇಳುವ ಬೋಧನೆಯು ನನ್ನದಲ್ಲ, ನನ್ನನ್ನು ಕಳುಹಿಸಿಕೊಟ್ಟವನದು ಆತನ ಚಿತ್ತದಂತೆ ನಡೆಯುವದಕ್ಕೆ ಯಾರಿಗೆ ಮನಸ್ಸಿದೆಯೋ ಅವನಿಗೆ ಈ ಬೋಧನೆಯು ದೇವರಿಂದ ಬಂದದ್ದೋ ನಾನೇ ಕಲ್ಪಿಸಿ ಹೇಳಿದ್ದೋ ಗೊತ್ತಾಗುವದೆಂದು ಆತನು ತನ್ನನ್ನೂ ತನ್ನ ಬೋಧನೆಯನ್ನೂ ವಿರೋಧಿಸಲಿಕ್ಕೆ ಬಂದವರಿಗೆ ಹೇಳಿದನು

ಒಳದೇಶದ ವೃತ್ತಾಂತಗಳು

ಕಳೆದ ವಾರ 2-3 ದಿನ ರಾಜಧಾನಿಯಲ್ಲಿ ಒಳ್ಳೇ ಮಳೆಯಾದವು ಇನ್ನೂ ಮಳೆ ಸುರಿಯುವ ಸೂಚನೆ ಇದ್ದೇ ಇದೆ

ಸುಮಾರು ೨೦ ಅಡಿ ಇದ್ದ ಒಂದು ಭಾರಿ ನಾಗರಹಾವನ್ನು ಮೊನ್ನೆ ಬೆಳಿಗ್ಗೆ ರಾಜಧಾನಿಯ ನಾರ್ಮಲ್ ಸ್ಕೂಲ್ ಮೈದಾನದಲ್ಲಿ ಬಹಳ ಸಾಹಸಪಟ್ಟು ಕೊಂದುಹಾಕಿದರು

ವೈರ್‌ರಹಿತ ಪ್ರಭುಗಳನ್ನು ಸತ್ಕಾರಮಾಡುವ ಕಾರ್ಯಗಳಿಗಾಗಿ ಮೈಸೂರು ಗವರ್ನಮೆಂಟಿನವರು ಎರಡೂವರೆ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿರುವಂತೆ ಪ್ರಕಟವಾಗಿದೆ

ರಾಜಧಾನಿಯ ಶಿವರಾಮಪೇಟೆಯಲ್ಲಿರುವ ಒಬ್ಬ ಸ್ವೀಟ್ಸ್ ವರ್ತಕನು ಕೊಬ್ಬು ಬೆರಕೆಯಾದ ತುಪ್ಪವನ್ನು ಬಳಕೆಗಾಗಿ ತರಿಸಿಟ್ಟುಕೊಂಡಿದ್ದನೆಂದು ಜಿಲ್ಲಾ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ದಾಖಲಾಗಿದೆ

ಖಾಸಿಂಗ್ ರಾಣಾ ಸಾಹೇಬರವರು ತಮ್ಮ ಪರಿವಾರ ಸಮೇತ ಕಳೆದ ವಾರ ರಾಜಧಾನಿಗೆ ಬಂದು 2-3 ದಿನ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ಇಲ್ಲಿನ ಅರಮನೆ ಮುಂತಾದ ಭಾಗಗಳನ್ನೆಲ್ಲಾ ನೋಡಿಕೊಂಡುಹೋದರು

ರೆಜಿಸ್ಟ್ರೇಷನ್ ಆಫೀಸಿನಲ್ಲಿ ಪುಸ್ತಕಗಳಿಂದ ಪತ್ರದ ನಕಲುಗಳನ್ನು ಎತ್ತಿ ಬರೆದುಕೊಳ್ಳುವಂಥ ಕಕ್ಷಿಗಾರರು ಅಂಥಾ ಪತ್ರಗಳನ್ನು ವಿಳರಿಮಾಡಿದ ಸ್ಟಾಂಪ್ ವೆಂಡರುಗಳ ಹೆಸರುಗಳನ್ನೂ ಬರೆದುಕೊಳ್ಳುವುದು ಒಳ್ಳೇದೆಂದು ಸರ್ಕಾರದವರು ಸರ್ಕ್ಯುಲರ್ ಹುಕುಂ ಕೊಟ್ಟಿರುತ್ತಾರೆ

ಹೊಸೂರು ಧರ್ಮಪುರಿ ರೈಲ್ ರಸ್ತೆಯನ್ನು ಹಾಕುವ ಸಂಬಂಧದಲ್ಲಿ ಹೊಸೂರಿನಿಂದ ಮೈಸೂರು ಎಲ್ಲೆಕಟ್ಟಿನ ತನಕ ರೈಲ್ ರಸ್ತೆ ಹಾಕುವುದಕ್ಕೆ ಪುನಹ ಸರ್ವೇಕಾರ್ಯಗಳನ್ನು ಮೈಸೂರು ಸರ್ಕಾರದವರು ಮಾಡಿಸಬೇಕೆಂದು ಇಂಡಿಯಾ ಗವರ್ನಮೆಂಟಿನವರು ಸ್ಯಾಂಕ್ಷನ್ ಮಾಡಿದಾರೆ

ಮಿ॥ ಎ ಕೋದಂಡಪಾಣಿಯವರು ರಾಜಧಾನಿಗೆ ಬಂದು ಕಳೆದ ಶುಕ್ರವಾರ ಇಲ್ಲಿನ ಹೆಲ್ತ್ ಆಫೀಸಿನ ಕೆಲಸದ ಛಾರ್ಜನ್ನು ವಹಿಸಿಕೊಂಡಿದ್ದಾರೆ ಮ್ಯುನಿಸಿಪಲ್ ಕೌನ್ಸಲರುಗಳು ಜಾರಿಗೆ ತರಬಹುದಾದ ಪ್ರಜಾ ಹಿತಕರವಾದ ಬೈಲಾಗಳು ಇವರ ಕಾಲದಲ್ಲಿ ಸಾರ್ಥಕವಾಗಿಯೂ, ಚಟುವಟಿಕೆಯಿಂದಲೂ ನಡೆಸಲ್ಪಡುವವೆಂದು ನಿರೀಕ್ಷಿಸುತ್ತೇವೆ

ಶ್ರೀಮನ್ಮಹಾರಾಜರವರು ಈ ಸಲ ಗೌರಿ ಗಣೇಶ ಹಬ್ಬಗಳನ್ನು ಬೆಂಗಳೂರಿನಲ್ಲೇ ಇದ್ದು ನೆರವೇರಿಸುತ್ತಾರೆ ಅದಕ್ಕಾಗಿ ಅರಮನೆಯಿಂದ ಸಾಮಗ್ರಿಗಳೂ ಮರ್ಯಾದೆಗಳೂ ಈ ವಾರ ಬೆಂಗಳೂರಿಗೆ ಕಳುಹಲ್ಪಡುವವು ಮೂರನೇ ಮಹಾರಾಜ ಕುಮಾರ್ತಿಯವರು ಈ ವಾರ ವಾಪಸು ಬೆಂಗಳೂರಿಂದ ದಯಮಾಡಿ ತಮ್ಮ ನೂತನ ಭವನದಲ್ಲಿ ಮೇಲ್ಕಂಡ ಹಬ್ಬಗಳನ್ನು ನಡಿಸುವವರಾಗಿದಾರೆ.

ನವಂಬರ್ ತಿಂಗಳಲ್ಲಿ ದಯಮಾಡುವ ವೈಸ್‌ರಾಯ್ ಪ್ರಭುಗಳಿಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್‌ನವರು ಚಿನ್ನದ ಚಿತ್ರಕೆಲಸಮಾಡಿದ ಕೈಪೆಟ್ಟಿಗೆಯಲ್ಲಿ ವಿಜ್ಞಾಪನಾ ಪತ್ರಿಕೆಯನ್ನು ಇಟ್ಟು ಒಪ್ಪಿಸಬೇಕೆಂದೂ, ಕೈಪೆಟ್ಟಿಗೆಗೆ 600 ರೂಪಾಯಿ ವಿನಿಯೋಗಿಸಬಹುದೆಂದೂ, ಸಾಗರದಿಂದ ಗಂಧದಮರದ ಕೈಪೆಟ್ಟಿಗೆ ತರಿಸಲಾಗದಿದ್ದರೆ ಬೆಂಗಳೂರು ಬಾರ್ಟನ್ ಕಂಪನಿಯಿಂದ ಒಂದನ್ನು ಕೊಂಡು ತರಿಸಬೇಕೆಂದೂ ಕಳೆದ ವಾರ ಇತ್ಯರ್ಥಮಾಡಿದಾರೆ

ಬೆಂಗಳೂರು ಡೆಪ್ಯುಟಿ ಕಮಿಷನರ್ ರಾಗಿದ್ದ ಮ॥ ಬಿ ಟಿ. ಕುಮಾರಸ್ವಾಮಿ ನಾಯಕರವರಿಗೆ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು ಸರ್ಕಾರದ ಡೇರೆಯನ್ನು ತಂದುಹಾಕಿ ಅದರಲ್ಲಿ ದಿವ್ಯವಾದ ಔತಣೋತ್ಸವವನ್ನು ಮಾಡಿದ ಮೇಲೆ ಆ ಡೇರೆಗೆ ಹ್ಯಾಗೋ ಬೆಂಕಿಬಿದ್ದು ಸುಟ್ಟುಹೋಯಿತು ಸರ್ಕಾರದವರು ಉರಿದುಹೋದ ಡೇರೆಯ ಬಾಬ್ತಿ ಅಂದರೆ 210 ರೂಪಾಯನ್ನು ಔತಣ ಮಾಡಿದವರಿಂದ ವಸೂಲ್ ಮಾಡಬೇಕೆಂದು ಡೆಪ್ಯುಟಿ ಕಮಿಷನರವರಿಗೆ ಹುಕುಂ ಕೊಟ್ಟಿದಾರೆ

ಬೆಂಗಳೂರು ಸಿಟಿಯಲ್ಲಿ ಕೃಷ್ಣದೇವನಾಯಕರೆಂಬವರು ಸುಳ್ಳು ಕಂಪನಿಯನ್ನಿಟ್ಟು ಜನರಿಂದ ಚಂದಾ ತರಿಸಿಕೊಂಡು ಮೋಸಮಾಡಿದರೆಂದು ದಸ್ತಗಿರಿ ಮಾಡಲ್ಪಟ್ಟು, ವಿಚಾರಣೆಗೆ ಗುರಿಯಾಗಿ ಜೈಲಿನಲ್ಲಿರುತ್ತಾರೆ ಬಗ್ಗೆ ಗುಡಿಯಲ್ಲಿದ್ದ ಅವರ ಪತ್ನಿಯು ಮನೆಗೆ ಬೀಗಹಾಕಿಕೊಂಡು ತನ್ನ ಪತಿಯನ್ನು ನೋಡಿ ಬರುವುದಕ್ಕಾಗಿ ಮಧ್ಯಾಹ್ನ 1 ಗಂಟೆಗೆ ಜೈಲಿಗೆ ಹೋಗಿದ್ದು 6 ಗಂಟೆಗೆ ವಾಪಸು ಬರುವಷ್ಟರಲ್ಲೇ ಆಕೆಯ ಮನೆಗೆ ಕಳ್ಳರು ಬಿದ್ದು ಸುಮಾರು 1,400 ರೂಪಾಯಿನ ನಗನಾಣ್ಯಗಳನ್ನು ಅಪಹರಿಸಿದರೆಂದೂ, ಪೋಲೀಸಿನವರು ಪತ್ತೆ ಹಚ್ಚುತ್ತಾರೆಂದೂ ತಿಳಿಯುತ್ತದೆ

ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್‌ನಲ್ಲಿ ಕೆಲವು ವಾರಗಳ ಹಿಂದ ವರ್ತಕರಿಗೆ ಬರಬೇಕಾದ ಜವಳಿ ಮೂಟೆಗಳಲ್ಲಿ 100 ಸರಕುಗಳನ್ನು ಅಪಹರಿಸಿದರೆಂದು ಇಬ್ಬರು ಗಾಡಿಯವರ ಮೇಲೂ, ಇಬ್ಬರು ಪೋಲೀಸಿನವರ ಮೇಲೂ, ಮೊಕದ್ದಮೆ ಬಂದು ವಿಚಾರಣೆಯಲ್ಲಿತ್ತು ಪಂಡಿತ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಕಳೆದ ಬುಧವಾರ ಮುನಿಸಾಮಿ, ವೆಂಕಟರಮಣ ಎಂಬ ಗಾಡಿಯವರಿಗೂ, ಅಪ್ಪಯ್ಯ ಎಂಬ ಪೋಲೀಸನವನಿಗೂ ತಲಾ ಐದು ವರುಷ ಕಠಿಣ ಸಜವನ್ನೂ 100 ರೂಪಾಯಿ ಜುಲ್ಮಾನೆಯನ್ನೂ, ಹೆಡ್ ಕಾನ್ಸ್ಟೆಬಲ್ ಭವಾನಿಸಿಂಗ್‌ಗೆ 6 ತಿಂಗಳ ಕಠಿಣ ಸಜವನ್ನೂ 50 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿರುತ್ತಾರೆ

ಬೆಂಗಳೂರು ಸಿಟಿಯ ಪೇಟೆಯ ವರ್ತಕರ ಸಂಘದವರು ತಿಂಗಳಿಗೊಂದಾವರ್ತಿ ಕಡೆಯ ಭಾನುವಾರ ಮಧ್ಯಾಹ್ನ ವ್ಯಾಪಾರವನ್ನು ನಿಲ್ಲಿಸಿ ತಮ್ಮ ಅಂಗಡಿಗಳನ್ನೂ ಮಳಿಗೆಗಳನ್ನೂ ಕೋಠಿಗಳನ್ನೂ ಮುಚ್ಚಿಬಿಟ್ಟು ವಿರಾಮವಾಗಿ ಜ್ಞಾನಾರ್ಜನೆ, ಸೋಟ ನೋಡುವುದು, ಸತ್ಕಾರ್ಯಮಾಡುವುದು, ಈ ಮುಂತಾದ ಕಾರ್ಯಗಳಲ್ಲಿ ಆಸಕ್ತರಾಗಬೇಕೆಂದು ತೀರ್ಮಾನ ಮಾಡಿಕೊಂಡಿದ್ದಾರೆ ಈ ಸಂಘಕ್ಕೆ ಸೇರಿದ ವರ್ತಕರು ಆ ರೀತಿ ಮುಂದಿನ ಭಾನುವಾರ ತಮ್ಮ ಅಂಗಡಿ ಮುಂಗಟ್ಟುಗಳನ್ನು ಮುಚ್ಚಬಿಡುವರು ಇತರ ಎಲ್ಲಾ ಅಂಗಡಿಗಳವರೂ ಅದೇ ರೀತಿ ವಿರಾಮ ಹೊಂದುವದು ಆವಶ್ಯವೆಂದು ಸಂಘದ ಸೆಕ್ರೆಟರಿಯವರು ನಿರೀಕ್ಷಿಸಿ ಪ್ರಕಟಮಾಡಿದಾರೆ

ಕೆಲ್ಸಾಗಾಲದ ದಂಗೆ ಮೊಕದ್ದಮೆಯ ಸಾಕ್ಷಿ ದರ್ಯಾಪ್ತಿಯೆಲ್ಲಾ ಪೂರೈಸಿತು ಪುಟ್ಟಸುಬ್ಬೇಗೌಡರೇ ಮೊದಲಾದ ಸುಮಾರು 110 ಮಂದಿ ಅಪರಾಧಿಗಳ ಪಕ್ಷವನ್ನು ವಹಿಸಿದ ಅಡ್ವೊಕೇಟ್ ಮ॥ ಎ ರಾಮಣ್ಣನವರು 12 ದಿನ ಆರ್ಗ್ಯುಮೆಂಟ್ ನಡಿಸಿದರು ಬಳಿಕ ಅಡ್ವೊಕೇಟ್ ಮ॥ ಕೆ ಚಂದ್ರಶೇಖರಯ್ಯನವರು ಕಾಶೀಪಟ್ಟಣದವರೇ ಮೊದಲುಗೊಂಡು ಸುಮಾರು 15 ಮಂದಿ ಅಪರಾಧಿಗಳ ತರಫು ಎರಡು ದಿನ ಆರ್ಗ್ಯುಮೆಂಟ್ ಮಾಡಿದರು ಇಬ್ಬರು ಅಪರಾಧಿಗಳ ಪರವಾಗಿ ಅಡ್ವೊಕೇಟ್ ಮ॥ ರಾಮಚಂದ್ರಯ್ಯನವರು ವಾದಿಸಿದರು ಮೊನ್ನೆ ಸರ್ಕಾರದಿಂದ ಪಬ್ಲಿಕ್ ಪ್ರಾಸಿಕ್ಯೂಟರ್ ಮ॥ ಅಡ್ವೊಕೇಟ್ ಎಂ ಸಿ ರಂಗಯ್ಯಂಗಾರ್ರು ಸರ್ಕಾರಿ ತರಫಿನ ಸಾಕ್ಷ್ಯವನ್ನು ವಿವರಿಸಿ ಅಪರಾಧಿಗಳ ಮೇಲೆ ಯಾವ ತರದ ರುಜುವಾತು ಬಂದಿದೆ ಎಂಬದನ್ನು ಕುರಿತು ನೆನ್ನೆ ತನಕ ಆರ್ಗ್ಯುಮೆಂಟ್ ನಡಿಸಿದರು ಈ ಮೊಕದ್ದಮೆಯು ಇತ್ಯರ್ಥವಾಗಲು ಇನ್ನೂ ಎರಡು ವಾರವಾದರೂ ಹಿಡಿಯಬೇಕೆಂದು ಕಾಣುತ್ತದೆ

ಮೈಸೂರು ಗಜೆಟ್ ಸಂಗ್ರಹ.

ಚಳ್ಳಕೆರೆ ತಾಲ್ಲೂಕು ನಾಯಕನ ಹಟ್ಟಿ ಯೂನಿಯನ್ ಪಂಚಾಯತಿಗೆ ಮ್ಯಾ ರಾ ಕೃಷ್ಣಪ್ಪನವರನ್ನೂ, ಮ॥ ಪ ಸಿದ್ಧಯ್ಯನವರನ್ನೂ ಮೆಂಬರುಗಳಾಗಿ ನೇಮಿಸಿದೆ

ಯಡತೊರೆ ತಾಲ್ಲೂಕು ತಿಪ್ಪೂರು ಯೂನಿಯನ್ ಪಂಚಾಯತಿಗೆ ಜಮೀನ್‌ದಾರ್ ಮ॥ ಸುಬ್ಬರಾಯರನ್ನು ಮೆಂಬರಾಗಿ ನೇಮಕಮಾಡಿದೆ

ಗಾಡಿಗಳಿಗೆ ಸಂಬಂಧಪಟ್ಟ ಕಾನೂನನ್ನು ಹುಣಸೂರು ಮತ್ತೂ ಪೆರಿಯಾಪಟ್ಟದ ಮ್ಯುನಿಸಿಪಾಲಿಟಿಗಳಲ್ಲಿ ಜಾರಿಗೆ ತಂದಿದೆ

ಜಮೀನ್‌ದಾರ್ ಮಿ॥ ಉಮ್ಮರ್ ಸಾಹೇಬರನ್ನು ಕುಣಿಗಲ ಮ್ಯುನಿಸಿಪಲ್ ಬೋರ್ಡ್‌ಗೆ ಮೆಂಬರಾಗಿ ನೇಮಕಮಾಡಿದೆ

ಸಕಲೇಶಪುರದ ಸಬ್ ಡಿವಿಜನ್ ಅ॥ ಕಮಿಷನರ್ ಮಿ॥ ಎಂ ಸದಾಶಿವರಾಯರಿಗೆ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ

ಮಿ॥ ಟಿ ಜ ರಾಮ ಅಯ್ಯರವರನ್ನು ಮೇ ತಾ 17 ರಿಂದ ಅ॥ ಕಮಿಷನರಾಗಿ ಖಾಯಂ ಮಾಡಿದೆ

ಮುಂದೆ ಹೇಳುವ ಸಬ್ ರೆಜಿಸ್ಟ್ರಾರುಗಳ ವರ್ಗಾವರ್ಗಿ ಹುಕುಂ ಮಾಡಿದೆ —ಮ॥ ಗಳಾದ ಕೆ ದೊರಸಾಮಿ ಅಯ್ಯಂಗಾರ್ರು ಚಿತ್ರದುರ್ಗದಿಂದ ಹಾಸನಕ್ಕೆ, ಎಂ ಚಕ್ರಪಾಣಿರಾಯರು ಹಾಸನದಿಂದ ಬೆಂಗಳೂರು, ಎಂ ಶ್ರೀನಿವಾಸರಾಯರು ಬೆಂಗಳೂರಿನಿಂದ ನೆಲಮಂಗಲಕ್ಕೆ, ಎ ನರಸಿಂಗರಾಯರು ನೆಲಮಂಗಲದಿಂದ ತೀರ್ಥಹಳ್ಳಿಗೆ, ಕೆ ರಾಮಕೃಷ್ಣಯ್ಯನವರು ತೀರ್ಥಹಳ್ಳಿಯಿಂದ ದೇವನಹಳ್ಳಿ, ಎಂ ರಾಘವೇಂದ್ರರಾಯರು ದೇವನಹಳ್ಳಿಯಿಂದ ಕೋಲಾರ, ಸಿ ಶ್ರೀನಿವಾಸರಾಯರು ಕೋಲಾರದಿಂದ ಚಿತ್ರದುರ್ಗ, ಬಿ ಟಿ ರಾಮಸ್ವಾಮಿ ಅಯ್ಯಂಗಾರ್ರು ದೊಡ್ಡ ಬಳ್ಳಾಪುರದಿಂದ ಹುಣಸೂರಿಗೆ, ಎನ್ ಲಕ್ಷ್ಮೀಕಾಂತ ಅಯ್ಯಂಗಾರ್ರು ಹುಣಸೂರಿನಿಂದ ದೊಡ್ಡಬಳ್ಳಾಪುರ, ಎಂ ಟಿ ಸಂಪತ್ಕುಮಾರಾಚಾರ್ರು ಚನ್ನರಾಯಪಟ್ಟಣದಿಂದ ಕಾನ್ಕಾನಹಳ್ಳಿ, ಸಿ ಕೃಷ್ಣಮೂರ್ತಿಶಾಸ್ತ್ರಿಗಳು ಕಾನ್ಕಾನಹಳ್ಳಿಯಿಂದ ಚನ್ನರಾಯಪಟ್ಟಣಕ್ಕೆ

ಸಂಪದಭಿವೃದ್ಧಿ ಸಮಾಜದ ವಿದ್ಯಾಶಾಖೆಯ ಸೆಕ್ರೆಟರಿಯಾದ ಮ॥ ಸಿ ಕೃಷ್ಣರಾಯರನ್ನು ವಿದ್ಯಾ ಇಲಾಖೆಯ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್‌ರಾಗಿಯೂ ನೇಮಕಮಾಡಿದೆ

ಹಾಸನ ಡಿಸ್ಟ್ರಿಕ್ಟ್ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮಿ॥ ಕೆ ಎನ್. ವೀರಭದ್ರಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ —ಹಾಸನದ ಸಂಸ್ಕೃತ ಸ್ಕೂಲುಗಳ ಅ॥ ಡೆಪ್ಯುಟಿ ಇನ್ಸ್‌ಪೆಕ್ಟರ್ ಮ॥ ಎಸ್ ಟಿ ರಾಘವಾಚಾರ್ರು ಅವರ ಕೆಲಸದ ಛಾರ್ಜನ್ನೂ ವಹಿಸತಕ್ಕದ್ದು

ಮಿ॥ ಎ ಪಾರ್ಕ್‌ಯವರು ರಜದ ಮೇಲಿರುವಾಗ್ಗೆ ಶ್ರೀ ಕೆ ಡಿ ರುಕ್ಮಿಣಮ್ಮನವರು ಮಹಾರಾಣಿ ಕಾಲೇಜಿನ ಲೇಡಿ ಸೂಪರಿನ್‌ಟೆಂಡೆಂಟರಾಗಿ ಬದಲಿ ನೇಮಿಸಲ್ಪಟ್ಟಿದಾರೆ

ಹಂಗಾಮಿ ಓವರ್ಸಿಯರಾದ ಮಿ॥ ಎನ್ ಕೃಷ್ಣಯ್ಯಂಗಾರ್ರನ್ನು ಆಗಸ್ಟು 6 ರಿಂದ 3 ನೇ ಕ್ಲಾಸ್ ಹಂಗಾಮಿ ಸಬ್ ಅ॥ ಇಂಜನಿಯರಾಗಿ ನೇಮಕ ಮಾಡಿದೆ

ಶಿವಮೊಗ್ಗಾ ತಾಲ್ಲೂಕು ಅಮಲ್ದಾರ್ ಮ॥ ಎಂ. ಎಸ್ ಹಯಗ್ರೀವರಾಯರಿಗೆ ಏಳು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು

ಹುಲಿ ಶಿಕಾರಿ ಮಾಡುವವರು ಬೇಕು.

ತೀರ್ಥಹಳ್ಳಿ ತಾಲ್ಲೂಕು ಆಗುಂಬೆಯ ಊರು ಸಮೀಪದ ಜಂಗ್ಲಿ ಒಂದು ಹಿಂಡಿನಲ್ಲಿ ಮೂರು, ಇನ್ನೊಂದು ಹಿಂಡಿನಲ್ಲಿ ಎರಡು ಹುಲಿಗಳು ಬಂದು ವಾಸ ಮಾಡಿಕೊಂಡು ಈಗ ಒಂದು ತಿಂಗಳಿಂದಲೂ ಈ ಊರಿನ ಜಾನುವಾರು ಅಡವಿಗೆ ಮೇಯಲಿಕ್ಕೆ ಹೋದವುಗಳನ್ನು 19 ಎಮ್ಮೆಗಳೂ, 9 ಆಕಳೂ ಈ ರೀತಿ 28 ಜಾನುವಾರುಗಳನ್ನು ಹುಲಿಗಳು ಹಿಡಿದು ತಿಂದಿರುತ್ತವೆ ಈ ದುಷ್ಟ ಮೃಗಗಳು ಈಗಲೂ ಊರು ಸಮೀಪದಲ್ಲಿ ಹೊಂಚುಹಾಕಿಕೊಂಡು ತಿರುಗುವದನ್ನು ಅನೇಕರು ಕಂಡಿರುವದಾಗಿ ಹೇಳುತ್ತಾರೆ ಆದರೆ ಇಲ್ಲಿ ಬಂದೂಕು ಸಂಖ್ಯೆಯೇನೋ ವಿಶೇಷವಾಗಿದ್ದರೂನೂ ಹುಲಿಗಳ ಶಿಕಾರಿ ಮಾಡುವವರಲ್ಲಿ ಯಾರಿಗೂ ಧೈರ್ಯವಿಲ್ಲವೆಂದು ತಿಳಿಯುತ್ತೇನೆ ಹ್ಯಾಗೆಂದರೆ ಬಂದೂಕು ಇರುವ ಜನರ ಜಾನುವಾರುಗಳು ಸಹ ಹುಲಿಗೆ ತುತ್ತಾಗಿರುವವು ಮತ್ತು ಜಾನುವಾರು ಕಳಕೊಂಡ ಇತರರು ಇರುವಲ್ಲಿ ಶಿಕಾರಿಮಾಡಿ ಹುಲಿಗಳನ್ನು ಕೊಲ್ಲಬಾರದೇ ಎಂದು ಹೇಳಿದರೂನೂ ಅವರ ಮನಸ್ಸಿಗೆ ಬರುವದಿಲ್ಲ ಆದರಿಂದ ಸರ್ಕಾರದವರಾದರೂ ಯಾರಿಗಾದರೂ ನಾಲ್ಕು ಜನ ಶಿಕಾರಿದಾರರನ್ನು ಚುನಾಯಿಸಿ ಕಳುಹಿಸಿ ಇವುಗಳನ್ನು ಕೊಲ್ಲಿಸಿ ಈಊರು ವಾಸಿಗಳಿಗೆ ದುಷ್ಟಮೃಗಗಳ ಬಾಧೆಯನ್ನು ತಪ್ಪಿಸುವರೆಂದು ನಂಬಿದೇನೆ ಮತ್ತು ಈ ಹುಲಿಗಳಿಗೆ ಆಹಾರ ಸಿಕ್ಕುವದು ನಿಂತಿ ಆದಲ್ಲಿ ಊರು ಹತ್ತರಕ್ಕೆ ಬರುವದೂ ಉಂಟು ಈಗ 15 ದಿವಸದ ಕೆಳಗೆ ಪೋಸ್ಟ್ ಆಫೀಸಿನ ಹಿಂದುಗಡೆ ಬೈಲಿನಲ್ಲಿ ಮೇಯುತ್ತಾ ಇದ್ದ ಮೇಕೆ ಮಂದೆಗೆ ಹುಲಿ ಬಂದು ಬಿದ್ದಾಗ ಇವುಗಳ ಕಾವಲಿನವನು ಬಹಳ ಬೊಬ್ಬೆ ಮಾಡಿದನು ಊರವರು ಸಹ ಕೂಗಿಕೊಳ್ಳುತ್ತಾ ಹೋದರು ಇಷ್ಟು ಗಲಾಟೆಮಾಡಿದಾಗ್ಯೂ ಆ ಹುಲಿ ಒಂದು ಮೇಕೆಯನ್ನು ತೆಗೆದುಕೊಂಡೇ ಹೋಯಿತು ಇದೇ ರೀತಿ ಅಲ್ಲಲ್ಲಿ ಬೈಲಿನಲ್ಲಿ ಈ ಹುಲಿಗಳು ತಿರುಗುವಾಗ ಮನುಷ್ಯರನ್ನು ಕಂಡರೂನೂ ನಿರ್ಭಯವಾಗಿ ಹೊಂಚುಹಾಕಿಕೊಂಡು ಇರುಗುತ್ತಲೇ ಇರುತ್ತವೆ ಇವುಗಳು ವಿಶೇಷ ಆಹಾರ ತಿಂದು ಕೊಬ್ಬಿರುವದರಿಂದ ಮನುಷ್ಯರನ್ನು ಕಂಡಲ್ಲಿ ಅಂಜುವದಿಲ್ಲ ಈಗ ಹೋದ ಜಾನುವಾರುಗಳಲ್ಲಿ ಬಡವರದೇ ಹೆಚ್ಚು ಇವರು ಜಾನುವಾರುಗಳನ್ನು ಕೊಂಡುತರಲು ಮಾಡಿದ ಸಾಲವನ್ನು ಇನ್ನೂ ಕಾಲು ಪಾಲು ಸಹ ತೀರಿಸಲಿಲ್ಲ ಇನ್ನು ಮುಂದೆ ಕೂಡ ಈ ಹುಲಿಗಳು ಯಾವಾಗ ಏನು ಮಾಡುವವೋ ಎಂದು ಕಳವಳಿಸುವರು

ಒಬ್ಬ ರೈತ

ಪರಸ್ಪರಸಹಾಯಕ ಸಂಘವು.

ಆನೆಕಲ್ ತಾಲ್ಲೂಕು ಕಾಚನಾಯಕನಹಳ್ಳಿ

ಇಲ್ಲಿನ ಶ್ರೀಬಸವೇಶ್ವರಸ್ವಾಮಿ ಕೋಆಪರೇಟಿವ್ ಸೊಸೈಟಿಯ ಪ್ರಥಮ ವಾರ್ಷಿಕ ಜನರಲ್ ಮೀಟಿಂಗು ಇದೇ ಅಗಸ್ಟ್ 6 ನೇ ತಾ ಬುಧವಾರ ದಿವಿ 3 ಗಂಟೆಯಲ್ಲಿ ಶ್ರೀಬಸವೇಶ್ವರಸ್ವಾಮಿ ದೇವಾಲಯದ ಮುಂಭಾಗದಲ್ಲಿ ಅಂದವಾಗಿ ರಚಿಸಲ್ಪಟ್ಟಿದ್ದ ವಿಶಾಲವಾದ ಚಪ್ಪರದಲ್ಲಿ ನಡಿಸಲ್ಪಟ್ಟಿತು ಈ ಮೀಟಿಂಗಿಗಾಗಿ ಮೈಸೂರು ಗೌರ್ನಮೆಂಟ್ ಕೋ॥ ಸೊಸೈಟಿಗಳ ಅ॥ ರೆಜಿಸ್ಟ್ರಾರ್ ಮ॥ ಆರ್ ರಂಗರಾಯರವರೂ, ಇನ್ಸ್‌ಪೆಕ್ಟರ್ ಮ॥ ಎಸ್ ವೆಂಕಟಸುಬ್ಬಯ್ಯನವರೂ, ಆನರರಿ ಆರ್ಗನೈಜರ್ ಮ॥ ಟಿ ವೆಂಕಟರಾಮಯ್ಯನವರೂ ದಯಮಾಡಿದ್ದರು ಅಲ್ಲದೆ ಸಂಘದ ಮೆಂಬರುಗಳೂ, ಇತರ ದೊಡ್ಡಮನುಷ್ಯರೂ ಹಾಜರಿದ್ದರು ಸಭಿಕರ ಪ್ರಾರ್ಥನೆಯಂತೆ ಅ॥ ರೆಜಿಸ್ಟ್ರಾರ್ ಮ॥ ಆರ್ ರಂಗರಾಯರವರು ಅಗ್ರಾಸನವನ್ನಲಂಕರಿಸಿದರು ಸಂಘದ ಸೆಕ್ರೆಟರಿಯವರಾದ ಮ॥ ರಾಮಯ್ಯನವರು ಸೊಸೈಟಿಯು ಸ್ಥಾಪಿತವಾದ 1912 ನೇ ಜೂನ್ ಲಾಗಾಯತು 1913 ನೇ ಜೂನ್ ಆಖೈರುವರೆಗೆ ನಡೆದಿರತಕ್ಕ ಮೊದಲನೇ ವರ್ಷದ ಆಡಳಿತದ ರಿಪೋರ್ಟು ಮತ್ತೂ ಜಮಾ ಖರ್ಚು, ಲಾಭ ನಷ್ಟ ವಗೈರೆ ಪಟ್ಟಿಗಳನ್ನು ಮೆಂಬರುಗಳ ತಿಳುವಳಿಕೆ ಬಗ್ಗೆ ಓದಿಹೇಳಿದ್ದೂ ಅಲ್ಲದೆ ಸೊಸೈಟಿಯು ಸ್ಥಾಪನೆಯಾದ ಮೇಲೆ ನಡೆದ ಮೊದಲನೇ ಛಸ್ತಾಹ ಜನರಲ್ ಮೀಟಿಂಗಿನಲ್ಲಿ ರೆಜಿಸ್ಟ್ರಾರ್ ಸಾಹೇಬರವರು ದಯಮಾಡಿಸಿ ಇಲ್ಲಿನ ಜನಗಳಿಗೆ ತಕ್ಕ ತಿಳುವಳಿಕೆಯನ್ನೂ ಪ್ರೋತ್ಸಾಹವನ್ನೂ ಉಂಟುಮಾಡಿದ್ದರಿಂದ ಈ ಸಂಘವು ಇಷ್ಟು ಉತ್ತಮಸ್ಥಿತಿಗೆ ಬರಲು ಅವಕಾಶವಾಯಿತೆಂದೂ, ಈಗ ರಾಯರವರು ಮೆಂಬರುಗಳ ಕೋರಿಕೆಯಂತೆ ಇಲ್ಲಿಗೆ ದಯಮಾಡಿಸಿ ಅಗ್ರಾಸನವನ್ನಲಂಕರಿಸಿ ಪರಸ್ಪರ ಸಹಾಯವೆಂಬುವದರ ತತ್ವಾರ್ಥವನ್ನು ಸಭಿಕರಿಗೆ ಸ್ಪಷ್ಟವಾಗಿ ತಿಳಿಯುವಂತೆ ಮಾಡಿದ್ದು ಸಂಘದವರ ಪುಣ್ಯೋದಯವೆಂದೂ ಇದಕ್ಕಾಗಿ ಮೆಂಬರುಗಳೆಲ್ಲಾ ಕೇವಲ ಕೃತಜ್ಞರಾಗಿರುತ್ತಾರೆಂದೂ ತಿಳಿಸಿದರು ತರುವಾಯ ಆವಶ್ಯಕವಾದ ವಿಷಯಗಳೆಲ್ಲಾ ಚೆನ್ನಾಗಿ ಚರ್ಚಿಸಲ್ಪಟ್ಟು ತೀರ್ಮಾನವಾದ ಬಳಿಕ ಸಭಾಧ್ಯಕ್ಷರು ಈ ಸೊಸೈಟಿಯು ಆಡಳಿತವು ಚೆನ್ನಾಗಿ ನಡೆದು ಮೆಂಬರುಗಳೆಲ್ಲರೂ ಪರಸ್ಪರ ಏಕೀಭವಿಸಿ ಕೆಲಸಮಾಡುವುದಕ್ಕಾಗಿ ತುಂಬಾ ಸಂತೋಷಪಡುತ್ತೇವೆಂದು ಅಪ್ಪಣೆ ಕೊಡಿಸಿದರು ಬಳಿಕ ಪ್ರೆಸಿಡೆಂಟರಾದ ಮ॥ ವೆಂಕಟಪ್ಪಯ್ಯನವರು ಸಭಿಕರ ಪರವಾಗಿ ಅಗ್ರಾಸನಾಧಿಪರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಿದರು ಬಸವೇಶ್ವರಸ್ವಾಮಿಗೆ ಮಂಗಳಾರತಿ ನಡೆದು ಸಕಲರಿಗೂ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟು ಸಭೆಯು ಬರಖಾಸ್ತುಮಾಡಲಾಯಿತು

ಅನ್ಯೋನ್ಯಾಭಿಲಾಷಿ

ಕೋಲಾರ್ ಚಿನ್ನದ ಗಣಿಗಳು.

ಭಯಂಕರವಾದ ಪ್ರಾಣನಷ್ಟ

ಕೋಲಾರ್ ಚಿನ್ನದ ಗಣಿಗಳ ಪೈಕಿ ಮೈಸೂರು ಗಣಿಯ ಎಡ್ಗರ್ ಷಾಫ್ಟ್ ಎಂಬ ಗಣಿಯಲ್ಲಿ ಕಳೆದ ತಾ 21 ನೇ ಗುರುವಾರ ಬೆಳಿಗ್ಗೆ 7 ಗಂಟೆ ಸಮಯದಲ್ಲಿ ಬಹು ಭಯಂಕರವೂ ಮಹಾದುಃಖಕರವೂ ಆದ ಅನಾಹುತ ಸಂಭವಿಸಿತು. ಆಗ ಆರು ಮಂದಿ ಇಟಲಿ ದೇಶಸ್ಥರೂ, ಇಬ್ಬರು ಚಟ್ಟೀಗಾರರೂ, ಮೂವತ್ತನಾಲ್ಕು ಮಂದಿ ದೇಶೀಯ ಕೂಲಿ ಆಳುಗಳೂ ಎಲ್ಲಾ ಒಂದು ತೊಟ್ಟಿನಲ್ಲಿ ಕುಳಿತು ಪದ್ಧತಿಯ ಪ್ರಕಾರ ಆ ಗಣಿಯೊಳಕ್ಕೆ ಕೆಲಸಕ್ಕಾಗಿ ಇಳಿಯುತ್ತಿದ್ದರು ಅವರನ್ನು ತೊಟ್ಟಿನಲ್ಲಿ ಇಳಿಸುತ್ತಿದ್ದ ಗಣಿಯ ಬಾಯಿಯಲ್ಲಿರುವ ಯಂತ್ರದಲ್ಲಿ ಯಾವುದೋ ಒಂದು ಮೊಳೆಯು ಅಕಸ್ಮಾತ್ತಾಗಿ ಕಳಚಿಕೊಂಡದ್ದರಿಂದ ಚಕ್ರವು ತಡೆಯಿಲ್ಲದೆ ಅತ್ಯಂತ ವೇಗವಾಗಿ ಸುತ್ತಲಾರಂಭಿಸಿದ್ದರಿಂದ ಸರಪಣಿಯು ಬಹು ಬೇಗನೆ ಕಳಚುತ್ತಾ ಆ ತೊಟ್ಟನ್ನು 3,000 ಅಡಿ ಆಳವಿರುವ ಗಣಿಯ ತಳಕ್ಕೆ ಧೊಪ್ಪನೆ ಎತ್ತಿಹಾಕಿತು ಆಗ ಸಂಭವಿಸಿದ ವಿಪತ್ತನ್ನು ಏನೆಂದು ಹೇಳೋಣ ! ಆ ತೊಟ್ಟಿನಲ್ಲಿದ್ದವರೆಲ್ಲಾ ತತ್‌ಕ್ಷಣದಲ್ಲೇ ಮೃತಪಟ್ಟರು ಅದನ್ನು ತಪ್ಪಿಸಲು ಏನು ಮಾಡುವುದೂ ಸಾಧ್ಯವಾಗಲಿಲ್ಲ ಸಾಧ್ಯವಾದಮಟ್ಟಿಗೂ ಶವಗಳನ್ನು ಮೇಲಕ್ಕೆ ಸಾಗಿಸುವುದೇ ಬಹಳ ಶ್ರಮವಾಯಿತು ಮಣ್ಣು ಕಲ್ಲು ಮುಂತಾದದ್ದು ಶವಗಳ ಮೇಲ್ಭಾಗದಲ್ಲಿ ರಾಶಿಯಾಗಿ ಬಿದ್ದುಬಿಟ್ಟಿತ್ತು

ಈ ದುಃಖಕರವಾದ ವರ್ತಮಾನವು ತಿಳಿದ ಕೂಡಲೇ ಗಣಿಗಳ ಅಧಿಕಾರಿಗಳೂ, ಡೆಪ್ಯುಟಿ ಕಮಿಷನರೇ ಮೊದಲಾದ ಸರ್ಕಾರಿ ಅಧಿಕಾರಿಗಳೂ ಅಲ್ಲಿಗೆ ಹೋಗಿ ಆ ರಾತ್ರಿ 11-12 ಗಂಟೆಯ ತನಕ ಬಹಳ ಸಹಾಸಪಟ್ಟು ಶವಗಳನ್ನೆಲ್ಲಾ ಗಣಿಯೊಳಗಿನಿಂದ ಮೇಲಕ್ಕೆ ಸಾಗಿಸಿದರು ಶುಕ್ರವಾರ ಬೆಳಿಗ್ಗೆ ಶವಗಳನ್ನು ಪದ್ಧತಿಯ ಪ್ರಕಾರ ದಫನ್ ಮಾಡಿಸಿದರು. ಶವಗಳು ಅಧಿಕ ವಿಕಾರವಾಗಿ ಹೋಗಿದ್ದದ್ದರಿಂದ ಅವುಗಳ ಗುರುತು ಹಿಡಿಯುವುದೇ ಅಸಾಧ್ಯವಾಯಿತು. ಈ ಅನಾಹುತದ ದುಃಖವು ಗಣಿಯ ಪ್ರಾಂತ್ಯದಲ್ಲೆಲ್ಲಾ ಹರಡಿಕೊಂಡು ಮರುಕವನ್ನುಂಟುಮಾಡಿದೆ.

ಇನ್ನೊಂದು ಅಪಘಾತ

ಕಳೆದ ತಾ 20ನೇ ಬುಧವಾರ ರಾತ್ರಿ ಛಾಂಪಿಯನ್ ರೀಫ್ ಗಣಿಯ ಕಾರ್ಮೈಕಲ್ ಷ್ಯಾಫ್ಟ್ ಎಂಬ ಗಣಿಯೊಳಗೆ ಅನಿರೀಕ್ಷ್ಯವಾದ ಗಾಳಿಯ ಒಡೆತವೆಂಬ ಅನಾಹುತ ಸಂಭವಿಸಿತು ಗಣಿಯೊಳಗೆ ಕೆಲಸ ಮಾಡುತ್ತಿದ್ದ ಕೂಲಿಗಳ ಪೈಕಿ ಮೂರುಮಂದಿ ತತ್‌ಕ್ಷಣ ಮೃತರಾದರು, ಎಂಟು ಜನರಿಗೆ ಭಯಂಕರವಾದ ನಾನಾ ಗಾಯಗಳು ಸಂಭವಿಸಿ, ಈ ಪೈಕಿ ನೂರು ಜನರು ಈಚೆಗೆ ಸತ್ತುಹೋದರು

ಒಬ್ಬ ಬಾತ್ಮಿದಾರರು ಬರೆಯುವುದು—ಕೋಲಾರ್ ಗೋಲ್ಡ್ ಫೀಲ್ಡ್ ಮಾರಿಕುಪ್ಪಂ ಕ್ಯಾಂಪಿನಲ್ಲಿ ಗುರುವಾರ ಎಡ್ಗರ್ ಷಾಫ್ಟಿನಲ್ಲಿ ಕೇಜ್ ಎಳೆಯುವದಕ್ಕೆ ಹಾಕಿರುವ ಆರು ಅಂಗುಲದ ಅಗಲ 1½ ಅಂಗುಲ ದಪ್ಪ ಇರುವ ಕಬ್ಬಿಣದ ಹಗ್ಗಕ್ಕೆ ಹಾಕಿರುವ ತುದಿಯ ಉಕ್ಕಿನ ಮೊಳೆಯು ಒಡೆದು ತುಂಡಾಗಿ ಒಂದು ಕೇಜಿನಲ್ಲಿದ್ದ 50 ಜನಗಳು ಮತ್ತು ಕೇಜು ಗಣಿಯಲ್ಲಿ ಬಿದ್ದುಕೊಂಡು ಕೇಜಿನಲ್ಲಿದ್ದ 50 ಜನಗಳೂ, ಗಣಿ ಕೆಳಗೆ ಇದ್ದ 5 ಜನಗಳೂ ಮೃತಪಟ್ಟರು ಈ ಕೇಜಿನ ಮೊಳೆ ಒಡೆದುಹೋದ ತತ್‌ಕ್ಷಣ ಒಬ್ಬ ಇಂಗ್ಲಿಷ್ ಡ್ರೈವರು ಬ್ರೇಕನ್ನು ಹಾಕಿ ನಿಲ್ಲಿಸುವದಕ್ಕೆ ಹೋಗಲು ಒಂದು ಕೇಜುಮಾತ್ರ ನಿಂತುಹೋಯಿತು ಮತ್ತೊಂದು ಕೇಜು ನಿಲ್ಲಲಿಲ್ಲ ಹಗ್ಗ ಇರತಕ್ಕ ಡ್ರಮ್‌ಗೆ ಇವನು ಬ್ರೇಕು ಹಾಕಿದಾಗ ಅದರಲ್ಲಿ ಬೆಂಕಿಯಂತೆ ಕಿಡಿಗಳು ಹಾರಿದವು ಇದು ಬಹಳ ಆಶ್ಚರ್ಯವಾಗಿದೆ

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಮಾರಿ, ಮಸಣಿ, ದೇವಮ್ಮ, ದುರ್ಗಮ್ಮ, ಕಾಳಿ ಮುಂತಾದ ದೇವತೆಗಳ ಜಾತ್ರೆಗಳಲ್ಲೂ ನವರಾತ್ರಿಯಲ್ಲೂ ಕುರಿ ಕೋಣ ಮುಂತಾದ ಮೂಗು ಪ್ರಾಣಿಗಳನ್ನು ಬಲಿಯಾಗಿ ಕೊಲ್ಲುವುದು ಪ್ರಾಣಿಹಿಂಸೆಯಾದ ಕಾರಣ ಈ ಕ್ರೂರ ಹಿಂಸೆಯು ಹೀನವಾದ ಮೌಢ್ಯಾಚಾರವಾಗಿಯೂ, ಇಂಥಾ ನವನಾಗರಿಕ ಕಾಲದಲ್ಲಿ ದಯಾಪರರಾದ ಮನುಷ್ಯರ್ಯಾರೂ ಆಚರಿಸಬಾರದಾಗಿಯೂ ಇರುವುದರಿಂದ ಅಂಥಾದ್ದಕ್ಕೆ ಸಾಮಾನ್ಯವಾಗಿ ಎಲ್ಲಾ ಜನರೂ, ವಿಶೇಷವಾಗಿ ಜೈನ ಮತದವರೂ ಯಾವ ರೀತಿಯಲ್ಲೂ ಸಹಾಯಕರಾಗಕೂಡದೆಂದು ಶ್ರೀಲಕ್ಷ್ಮೀಸೇನಭಟ್ಟಾರಕ ಪಟ್ಟಾಚಾರ್ಯಸ್ವಾಮಿ ಮಠದ ಕಂವೀರಸ್ವಾಮಿಗಳು ಒಂದು ಆಜ್ಞಾಪತ್ರಿಕೆಯನ್ನು ಪ್ರಕಟಿಸಿ ನಮ್ಮಲ್ಲಿಗೆ ಒಂದು ಪ್ರತಿಯನ್ನು ಕಳುಹಿಸಿರುತ್ತಾರೆ

ಕೆ ಶ್ರೀನಿವಾಸರಾವ್, ಕಾನ್ಕಾನಹಳ್ಳಿ, ನಿಷ್ಪಕ್ಷಪಾತಿ, ಶ್ರೀರಂಗಪಟ್ಟಣ, ದೇಶಹಿತೈಷಿ, ತಿಮ್ಮಲಾಪುರ, ಎಚ್ ಎ, ಬಡಗೌಡನಹಳ್ಳಿ, ಮೈಸೂರು ವಿ. ದಾಸಪ್ಪ ದೇಶಾಭಿಮಾನಿ, ಬೆಳಗೂಡು —ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ

ಸತ್ಯವಾದಿ, ಚಿತ್ರದುರ್ಗ—ನೀವು ವಿಷಯಗಳನ್ನು ಬಹಳವಾಗಿ ಲಂಬಿಸಿ ಬರೆಯುತ್ತೀರಿ ಸಂಕ್ಷೇಪವಾಗಿಯೂ ಸ್ಫುಟವಾಗಿಯೂ ಬರೆದರೆ ಒಳ್ಳೇದು

ಕೆ ವೆಂಕಟಸುಬ್ಬಶೆಟ್ಟಿ, ಪಟ್ಲಗೆರೆ ಕಡೂರು ತಾ —ಇವರು “ವಿಕಟ ಪ್ರತಾಪ” ಮಾಸಪತ್ರಿಕೆಗೆ ಚಂದಾ ಕಟ್ಟಿದರೂ ಅವರಿಗೆ 19 ತಿಂಗಳ ಸಂಚಿಕೆಗಳು ಬರಲಿಲ್ಲವೆಂದೂ, ಸಂಪಾದಕರಿಗೆ ಕಾಗದಗಳನ್ನು ಬರೆದರೆ ಜವಾಬೇ ಬರಲಿಲ್ಲವೆಂದೂ ಆಕ್ಷೇಪಣೆಮಾಡಿ ನಮಗೆ ಬರೆದಿರುತ್ತಾರೆ

—ಎಡಿ.]

ಕರೆಸ್‌ಪಾಂಡೆನ್ಸ್.

ಕನ್ನಡದ ಅಟ್ಲಾಸ್ ಬೇಕು.

ಅಯ್ಯಾ,

ವಿಲೇಜ್ ಎಲಿಮೆಂಟರಿ ಸ್ಕೂಲ್ 3-4-5 ನೇ ತರಗತಿಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೂ, ಕನ್ನಡ ಲೋಯರ್ ಸೆಕೆಂಡರಿ ವಿದ್ಯಾರ್ಥಿಗಳಿಗೂ ಭೂವಿವರಣೆ ತಿಳುವಳಿಕೆ ಬಗ್ಗೆ ಮ್ಯಾಪುಗಳೇ ಮುಖ್ಯ ಆಧಾರ ಗೌರ್ನಮೆಂಟು ಸ್ಕೂಲ್ ಆದಾಗ್ಯೂ ಮ್ಯಾಪುಗಳು ಯಾವವಾದರೂ ಒಂದೆರಡು ಮಾತ್ರ ಕೊಟ್ಟಿರುತ್ತಾರೆ ಎಲ್ಲಾ ಮ್ಯಾಪುಗಳೂ ಪ್ರತಿ ಒಂದು ಸ್ಕೂಲಿಗೂ ಸಪ್ಲೈ ಆಗುವದೆ ಕಷ್ಟ ಬಡ್ಜೆಟ್ಟು ಇಲ್ಲವಾಗಿ ಹೇಳುತ್ತಾರೆ ಹಾಗೂ ಕೈಯಿಂದ ದುಡ್ಡು ಕೊಟ್ಟು ತರಿಸಿಕೊಳ್ಳುವ ಎಂದರೆ ಗೌರ್ನಮೆಂಟ್ ಡಿಪೋನಲ್ಲಿ ಹಾಜರಿಲ್ಲವಾಗಿ ತಿಳಿಸುತ್ತಾರೆ. ಹೀಗಾಗಿ ಅನೇಕ ವಿದ್ಯಾರ್ಥಿಗಳು ತೊಂದರೆಪಡುತ್ತಿರುವದನ್ನು ನೋಡಿಯೂ, ಕೇಳಿಯೂ ಇದೇನೆ. ಈಗ ಕನ್ನಡ ಲೋ ಸೆ ಪರೀಕ್ಷೆಗೆ ಹೆಚ್ಚಾಗಿ ಪ್ರಶ್ನೆಗಳು ಬರತಕ್ಕದ್ದು ಫಿಸಿಕಲ್ ವಿಷಯವೇ ಇದಕ್ಕೆ ಕನ್ನಡ ಅಟ್ಲಾಸನ್ನಾದರೂ ಉಪಯೋಗಿಸದಿದ್ದರೆ ಏನೂ ತಿಳುವಳಿಕೆ ಆಗುವದಿಲ್ಲ ಈ ಕಾರಣಗಳಿಂದ ಕನ್ನಡ ಅಟ್ಲಾಸ್ ತಯಾರಾಗಿ ಬಿಕರಿಗೆ ಸಿಕ್ಕುವದಾದರೆ ಅದರ ಸರಿಯಾದ ಅಡ್ರೆಸ್ಸನ್ನು ತಿಳಿಸಿದಲ್ಲಿ ವಿದ್ಯಾರ್ಥಿಗಳ ವಿದ್ಯಾಪ್ರೋತ್ಸಾಹಕ್ಕೆ ತುಂಬಾ ಸಹಾಯವಾದೀತು ಇಂಗ್ಲಿಷ್ ಅಟ್ಲಾಸ್ ಆದರೆ ಕನ್ನಡ ವಿದ್ಯಾರ್ಥಿಗಳಿಗೆ ಪ್ರಯೋಜನವಿಲ್ಲ

ಯನ್ ವೆಂಕಟೇಶರಾವ್, ನೊಣಬೂರು, ತೀರ್ಥಹಳ್ಳಿ ತಾಲ್ಲೂಕು

ಮೈಸೂರು ಡಿಸ್ಟ್ರಿಕ್ಟ್ ಫಂಡ್ ಬೋರ್ಡಿನ ಮೀಟಿಂಗು.

ಕಳೆದ 20 ನೇ ತಾ. ಬುಧವಾರ ಮಧ್ಯಾಹ್ನ 3 ಗಂಟೆಗೆ ಮೈಸೂರು ಡಿಸ್ಟ್ರಿಕ್ಟ್ ಫಂಡ್ ಬೋರ್ಡಿನ ಸರ್ಕಾರಿ ಮತ್ತು ಸಾಹುಕಾರಿ ಮೆಂಬರುಗಳು ರಾಜಧಾನಿಯ ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದಲ್ಲಿ ಡೆಪ್ಯುಟಿ ಕಮಿಷನರ್ ಮಿ॥ ಎ ಸುಬ್ರಹ್ಮಣ್ಯ ಅಯ್ಯರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೀಟಿಂಗು ನಡಿಸಿದರು. ಮೆಂಬರುಗಳು ಇತ್ಯರ್ಥಮಾಡಿದ ವಿಷಯಗಳ್ಯಾವವೆಂದರೆ—

ಈ ಸಲ ಪ್ರತಿನಿಧಿ ಸಭೆಗೆ ಮ॥ ನಾಗಮಂಗಲದ ಗುಂಡಪ್ಪನವರೂ, ಮೈಸೂರು ಅಡ್ವೊಕೇಟ್ ಮ॥ ಸಿ. ನರಸಿಂಹಯ್ಯನವರೂ ಮೆಂಬರುಗಳಾಗಿ ಹೋಗತಕ್ಕದ್ದೆಂದು ಬೋರ್ಡಿನವರು ಚುನಾಯಿಸಿದರು.—ಮಳವಳ್ಳಿಯಿಂದ ಬೊಪ್ಪಗೌಡನಪುರಕ್ಕೆ ಸದ್ರಿ ರಸ್ತೆ ಹಾಕುವ ವಿಷಯ ಮುಲ್ತವಿ ಮಾಡತಕ್ಕದ್ದೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ.—ಹಂಪಾಪುರದಿಂದ ರಾಮನಾಥಪುರದ ವರೆಗೆ ರಸ್ತೆಯನ್ನು ದುರಸ್ತುಮಾಡುವುದಕ್ಕೆ ಅಂದಾಜು ಪಟ್ಟಿ ತಯಾರಾಗಬೇಕೆಂದು ಗೊತ್ತಾಯಿತು.—ಮಜರೆ ಗ್ರಾಮಗಳನ್ನು ಸೇರಿಸದೆ ಈಗಿರುವ ರೂಲಿನಂತೆ ಒಂದು ಗ್ರಾಮದಲ್ಲಿ ಪ್ರಜಾಸಂಖ್ಯೆ ಇದ್ದ ಪಕ್ಷದಲ್ಲಿ ಯೂನಿಯನ್ ಮಾಡಬಹುದೆಂದು ಮೆಂಬರುಗಳು ಇತ್ಯರ್ಥಮಾಡಿದರು.—ಗ್ರಾಮಾಂತರಗಳ ಆರೋಗ್ಯಾಭಿವೃದ್ಧಿ ಕಾರ್ಯಗಳಿಗೆ ವಿಶೇಷ ದ್ರವ್ಯವನ್ನು ಒದಗಿಸಲು ಅನುಕೂಲವಿಲ್ಲವೆಂದೂ, ಸಾಧ್ಯವಾಗುವಷ್ಟು ಹಣವನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಈಗ ಕೊಡುತ್ತಾ ಬಂದಿವೆ ಎಂದೂ ಬೋರ್ಡಿನಲ್ಲಿ ತೀರ್ಮಾನವಾಯಿತು.—ಹಳ್ಳಿಗಾಡುಗಳಲ್ಲಿ ರೋಗಿಗಳಿಗೆ ಔಷಧಾದಿ ಚಿಕಿತ್ಸೆಯನ್ನು ಒದಗಿಸುವುದಕ್ಕೆ ಆದೇ ಪಕ್ಷ ಪ್ರತಿ ಒಂದು ಹೋಬಳಿಗೂ ಒಂದು ಕರ್ನಾಟಕ ವೈದ್ಯಶಾಲೆಯನ್ನು ಇಡಿಸಿಕೊಡಬೇಕೆಂಬ ವಿಷಯದಲ್ಲಿ ಡಿಸ್ಟ್ರಿಕ್ಟ್ ಫಂಡಿನಲ್ಲಿ ಹಣ ಮೊದಲಿದ ಹಾಗೆಲ್ಲಾ ಮಾಡುತ್ತಾ ಬಂದಿದೆ ಎಂದೂ, ಅದಕ್ಕಿಂತ ಹೆಚ್ಚಾಗಿ ಮಾಡಲು ಈಗ ಸಾಧ್ಯವಿಲ್ಲವೆಂದೂ ತೀರ್ಮಾನವಾಯಿತು.—ಡಿಸ್ಟ್ರಿಕ್ಟ್ ಫಂಡಿನಿಂದ ನಡೆಯುವ ಕಾಮಗಾರಿಗಳನ್ನು ನೋಡಿಕೊಳ್ಳುವುದಕ್ಕೆ ಪ್ರತ್ಯೇಕವಾಗಿ ಒಬ್ಬ ಅ॥ ಇಂಜನಿಯರನ್ನು ನೇಮಕ ಮಾಡಿಕೊಳ್ಳುವುದು ಅನುಕೂಲವೇ ಮತ್ತು ಸಾಧ್ಯವೇ ಎಂಬದನ್ನು ಚರ್ಚಿಸಿ ಗೊತ್ತುಮಾಡುವುದಕ್ಕೆ ಒಂದು ಸಬ್ ಕಮಿಟಿ ನೇಮಕವಾಯಿತು.—ಬಸ್ತರ ಗಾಡಿಗಳಲ್ಲಿ ದೊಡ್ಡ ಗಾಡಿಗಳಷ್ಟು ಬೋಜಾ ಹಾಕುವುದಿಲ್ಲವಾದ್ದರಿಂದ ಅವಕ್ಕೆ ಈಗಿರುವ ಟೋಲ್ ಗೇಟ್ ಛಾರ್ಜನ್ನು ಕಾಲು ಪಾಲು ವಜಾಮಾಡಿ, ಮುಕ್ಕಾಲು ದರವನ್ನು ಮಾತ್ರ ವಸೂಲ್ಮಾಡಬೇಕೆಂದು ತೀರ್ಮಾನವಾಯಿತು.—ಸಿಂಗಮಾಳು, ಗಾಮನಹಳ್ಳಿ, ಕಿರಂಗೂರು, ಕೆನ್ನಾಳು ಗ್ರಾಮಗಳಲ್ಲಿ ಯೂನಿಯನ್ ಪಂಚಾಯಿತಿಯನ್ನು ವಜಾಮಾಡಬೇಕೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದಾರೆ.—ನಾಗಮಂಗಲದ ತಾಲ್ಲೂಕು ದೊಡ್ಡಯಗಟ ಗ್ರಾಮದಲ್ಲಿ ಸೇದುವ ಬಾವಿಗೆ ಪ್ರತಿಯಾಗಿ 1,032 ರೂಪಾಯಿ ಮುಟ್ಟಿನ ಒಂದು ಕೊಳವನ್ನು ಕಟ್ಟಿಸಬಹುದೆಂದು ಹುಕುಂ ಆಗಿದೆ.

ಮೈಸೂರಿನಿಂದ ತಲಕಾಡು ಶಿವಸಮುದ್ರದ ರಸ್ತೆಯನ್ನು ಒಳ್ಳೇ ಸ್ಥಿತಿಯಲ್ಲಿಡುವುದಕ್ಕೆ ವರುಷಕ್ಕೆ 2,000 ರೂಪಾಯಿನಂತೆ ಮೂರು ವರುಷ ಡಿಸ್ಟ್ರಿಕ್ಟ್ ಫಂಡಿನಿಂದ ಕೊಡಬಹುದೆಂದು ಇತ್ಯರ್ಥವಾಯಿತು. ಮೈಸೂರಿನ ಸುತ್ತಲೂ 10 ಮೈಲಿ ಫಾಸಲೆ ತನಕ ಇರತಕ್ಕ ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳನ್ನು ಒಳ್ಳೇ ಸ್ಥಿತಿಯಲ್ಲಿಡುವುದಕ್ಕೆ 50 ಸಾವಿರ ರೂಪಾಯಿ ಬೇಕಾಗುವುದೆಂದು ಚೀಫ್ ಇಂಜನಿಯರವರು ಕೇಳಿದ್ದರು. ಇಷ್ಟು ಹಣವನ್ನು ಒದಗಿಸಲು ಡಿಸ್ಟ್ರಿಕ್ಟ್ ಬೋರ್ಡಿಗೆ ಚೈತನ್ಯವಿಲ್ಲವೆಂದು ತಿಳಿಸುವಂತೆ ಮೆಂಬರುಗಳು ಇತ್ಯರ್ಥಮಾಡಿದರು.—ಶ್ರೀರಂಗಪಟ್ಟಣದ ತಾಲ್ಲೂಕು ಬೆಳಗುಳದಲ್ಲಿ ಕೊಳಾಯಿಗಳನ್ನು ಬೇಗನೆ ದುರಸ್ತುಮಾಡಿಸಬೇಕೆಂದು ಗೊತ್ತಾಯಿತು.—ಮೈಸೂರು ಮಿಷನ್ ಆಸ್ಪತ್ರೆಯಲ್ಲಿ ದಿಕ್ಕಿಲ್ಲದ ರೋಗಿಗಳನ್ನು ಆರೈಕೆಮಾಡುವುದಕ್ಕೆ ಈಗ ಡಿಸ್ಟ್ರಿಕ್ಟ್ ಬೋರ್ಡಿನಿಂದ ಕೊಡುವ 900 ರೂಪಾಯನ್ನು 1,200 ರೂಪಾಯಿಗೆ ಹೆಚ್ಚಿಸಿ ಕೊಡಬೇಕೆಂದು ಸೀನಿಯರ್ ಸರ್ಜನ್‌ರವರು ಕೇಳಿದ್ದರು. ಹೀಗೆ ಹೆಚ್ಚು ಹಣವನ್ನು ಕೇಳಲು ಅವಶ್ಯಕತೆ ಏನೆಂದು ತಿಳಿಸುವಂತೆ ಮೆಂಬರುಗಳು ಅಪೇಕ್ಷಿಸಿರುತ್ತಾರೆ.—ರಾಜಧಾನಿಯಲ್ಲಿರುವ ಸರ್ಕಾರಿ ಹಿಂದೂ ಯುನಾನಿ ವೈದ್ಯಶಾಲೆಯ ಪಂಡಿತರಿಗೂ ಹಕೀಮರಿಗೂ ಸಂಬಳವನ್ನು ಜಾಸ್ತಿಮಾಡಬಹುದೆಂದೂ, ಕೃಷ್ಣರಾಜಪೇಟೆಯಲ್ಲಿ ಒಂದು ಡೆಡ್ ಹೌಸನ್ನು ಕಟ್ಟಿಸುವುದಕ್ಕೆ 512 ರೂಪಾಯಿ ಖರ್ಚು ಮಾಡಬಹುದೆಂದೂ, ನಂಜನಗೂಡು ತಾಲ್ಲೂಕು ಕೋಣನೂರಿನಲ್ಲಿ ರವಿವಾರ ಸಂತೆ ಕಟ್ಟುವಂತೆ ಏರ್ಪಾಡುಮಾಡಬೇಕೆಂದೂ, ಮುರೀ ಮಂಚನಾಯಕನಕಟ್ಟೆಯಲ್ಲಿ ಹಂಗಾಮಿ ಬಾವಿಗಳನ್ನು ತೆಗಿಸಿದ್ದಕ್ಕೆ 31 ರೂಪಾಯಿ ಕೊಡತಕ್ಕದ್ದೆಂದೂ, ಯಡತೊರೆ ತಾಲ್ಲೂಕು ಕೆಸ್ತೂರು ಕೆರೆಯನ್ನು ದುರಸ್ತುಮಾಡಿಸಿದ್ದಕ್ಕೆ 83 ರೂಪಾಯಿ ಕೊಡಬಹುದೆಂದೂ, ಚುಂಚನಕಟ್ಟೆ ಜಾತ್ರೆಕಾಲದಲ್ಲಿ ಆರೋಗ್ಯ ವಸತಿಗಳನ್ನು ಕಲ್ಪಿಸುವುದಕ್ಕೆ ಜಾತ್ರೆ ಹುಟ್ಟುವಳಿಯಿಂದ ಹಣ ಖರ್ಚು ಮಾಡಬೇಕಲ್ಲದೆ ಡಿಸ್ಟ್ರಿಕ್ಟ್ ಫಂಡಿನಿಂದ ದ್ರವ್ಯಸಹಾಯ ಮಾಡಲಾಗದೆಂದೂ, ಮಾದಾಪುರ ಕಲಿಯೂರು ಟೋಲ್ ಗೇಟನ್ನು ಚಾಲ್ತಿ ಸಾಲಿನಲ್ಲೂ ಅಮಾನಿಯಾಗಿ ನಡಿಸಬೇಕೆಂದೂ ಇತ್ಯರ್ಥವಾಯಿತು.

ಮಳವಳ್ಳಿಯ ಮುಸಾಫರ್ ಖಾನೆಯನ್ನು 680 ರೂಪಾಯಿ ಮುಟ್ಟಿನಲ್ಲಿ ರಿಪೇರಿ ಮಾಡಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದಾರೆ.—ಬೆಂಗಳೂರಿನ ಮ॥ ಬಿ. ಸುಬ್ಬರಾಯರು ಮೈಸೂರಿನಿಂದ ಕೊಳ್ಳೇಗಾಲದ ವರೆಗೆ ಟ್ರಾಂವೇ ಗಾಡಿಗಳನ್ನು ಇಟ್ಟು ನಡಿಸುವ ಕಂಪನಿ ಏರ್ಪಾಡು ಮಾಡುತ್ತೇವೆಂದೂ, ಅದಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನವರು ಮುಂದೆ ಹೇಳುವ ರಿಯಾಯಿತಿಗಳನ್ನು ತೋರಿಸಬೇಕೆಂದೂ ಕೇಳಿದರು.—(1) ಅದಕ್ಕೆ ಬೇಕಾಗುವ ಜಮೀನನ್ನು ಮುಫತ್ತಾಗಿ ಕೊಡಬೇಕು, (2) ಡಿಸ್ಟ್ರಿಕ್ಟ್ ಬೋರ್ಡಿನವರು ಕಂಪಾಣಿಯ ಮೂಲ ರೂಪಾಯಿಗೆ ಮೂರು ಕಾಸಿನಂತೆ ವರಿ ಎತ್ತಿ ಕಂಪನಿಗೆ ಗ್ರ್ಯಾಂಟು ಕೊಡಬೇಕು, (3) ಆ ರಸ್ತೆಗೆ ಈಗ ವರುಷಾ ವರುಷ ಡಿಸ್ಟ್ರಿಕ್ಟ್ ಬೋರ್ಡಿನವರು ಕೊಡುವ ಹಣವನ್ನು ಕಂಪನಿಗೆ ಕೊಡುತ್ತಾ ಬಂದರೆ ಕಂಪನಿಯವರೇ ಆ ರಸ್ತೆಯನ್ನು ಒಳ್ಳೇ ಸ್ಥಿತಿಯಲ್ಲಿಟ್ಟುಕೊಳ್ಳುವರು. ಈ ನಾಲ್ವತ್ತು ಮೈಲಿ ರಸ್ತೆಗೂ, ಟ್ರಾಂಗಾಡಿ ಮುಂತಾದವುಗಳಿಗೂ, ಸ್ಟೇಷನ್ ಮೊದಲಾದ ಕಟ್ಟಡಗಳಿಗೂ ಮೈಲಿ ಒಂದಕ್ಕೆ ಸುಮಾರು 9,000 ರೂಪಾಯಿನಂತೆ ಕಂಪನಿಯವರು ಖರ್ಚು ಮಾಡಬೇಕಾಗುವುದೆಂದು ಮ॥ ಸುಬ್ಬರಾಯರು ಅಂದಾಜು ಪಟ್ಟಿಗಳನ್ನು ತಯಾರ್ಮಾಡಿ ಕಳುಹಿಸಿದ್ದರು. ಮೆಂಬರುಗಳು ಈ ವಿಚಾರದಲ್ಲಿ ಇನ್ನೂ ಹೆಚ್ಚು ಸಂಗತಿಗಳನ್ನು ಅವರಿಂದ ತಿಳಿದು ಇತ್ಯರ್ಥ ಮಾಡೋಣವೆಂದು ಗೊತ್ತುಮಾಡಿದ್ದಾರೆ.

ಮುಂದಿನ ಮೀಟಿಂಗು ಬರುವ ನವಂಬರ್ ತಾ 20 ನೇ ರವಿವಾರ ನಡೆಯುವಂತೆ ನಿಶ್ಚಯವಾಗಿದೆ.

ಮೈಸೂರು ಸರ್ಕಾರದ ವ್ಯವಸಾಯದ ಇಲಾಖೆಯವರಿಂದ ಬರೆಯಲ್ಪಟ್ಟ ವಿಷಯಗಳು.

[ವ್ಯವಸಾಯದ ವಿಚಾರವಾಗಿ ತಿಳಿಯಬೇಕಾದ ಸಂಗತಿಗಳ ಮತ್ತು ವ್ಯವಸಾಯಾಭಿವೃದ್ಧಿಗೆ ಬೇಕಾಗುವ ಸಹಾಯದ ವಿಷಯವಾಗಿ ಬರೆಯುವ ಕಾಗದಗಳನ್ನು ಬೆಂಗಳೂರಲ್ಲಿರುವ ವ್ಯವಸಾಯದ ಇಲಾಖಾ ಡೈರೆಕ್ಟರವರಿಗೆ ಬರೆಯಬೇಕು.]

ಕ್ಯಾಂಬೋಡಿಯಾ ಹತ್ತಿ.

ಕ್ಯಾಂಬೋಡಿಯಾ ಹತ್ತಿಯ ವ್ಯವಸಾಯಕ್ಕೂ, ಅದರ ವ್ಯವಸಾಯವನ್ನು ಮೈಸೂರು ದೇಶದಲ್ಲಿ ಪ್ರಚಾರಪಡಿಸುವುದಕ್ಕೂ ವ್ಯವಸಾಯದ ಇಲಾಖೆಯವರು ಮಾಡುತ್ತಿರುವ ಪ್ರಯತ್ನಗಳನ್ನು ಕಳೆದ ವರುಷ ಅನೇಕಾವರ್ತಿ ರೈತರ ಗಮನಕ್ಕೆ ತಂದಿರುವುದು ಸರಿಯಷ್ಟೆ. ಈ ವಿಷಯವಾಗಿ ಹೊಸದಾಗಿ ಪ್ರಚುರಪಡಿಸಿರುವ ಸರ್ಕ್ಯುಲರಿನಲ್ಲಿ (9 ನೇ ನಂ. ಸರ್ಕ್ಯುಲರ್) ವ್ಯವಸಾಯದ ಇಲಾಖೆಯವರು ಹೋದ ವರುಷ ನಡಿಸಿದ ಕೆಲಸದ ರೀತಿಯನ್ನು ವಿವರಿಸಿ ಈ ಸಾಲಿನಲ್ಲಿ ಮಾಡ ಉದ್ದೇಶಿಸಿರುವ ಕೆಲಸದ ರೀತಿಯನ್ನು ಸೂಚಿಸಿ ನಮ್ಮ ಸೀಮೆಯಲ್ಲಿ ಉತ್ಸಾಹಪೂರಿತರಾದ ರೈತರೆಲ್ಲರ ಸಹಾಯವನ್ನು ಅಪೇಕ್ಷಿಸಿರುತ್ತಾರೆ.—ಈ ರಿಪೋರ್ಟುಗಳು ಮತ್ತು ಸರ್ಕ್ಯುಲರುಗಳು ರೈತರಲ್ಲಿ ವಿಶೇಷವಾದ ಉತ್ಸಾಹವನ್ನು ಉಂಟುಮಾಡಿರುವದೆಂಬುವದು ಸೀಮೆಯ ಅನೇಕ ಭಾಗಗಳಲ್ಲಿರುವ ರೈತರುಗಳು ಕ್ಯಾಂಬೋಡಿಯಾ ಹತ್ತಿಯ ವ್ಯವಸಾಯದ ವಿಶೇಷ ಸಂಗತಿಗಳನ್ನು ತಮಗೆ ತಿಳಿಸಬೇಕೆಂತಲೂ, ಒಳ್ಳೇ ಬೀಜವನ್ನು ಕಳಿಸಿಕೊಡಬೇಕೆಂತಲೂ ಅನೇಕ ಕಾಗದಗಳನ್ನು ಬರೆದಿರುವದರಿಂದ ಕಾಣುತ್ತೆ. ಇವರೆಲ್ಲರಿಗೂ ಕಾಗದಗಳ ಮೂಲಕವೂ, ಸಾಧ್ಯವಾದ ಕಡೆಗಳಲ್ಲಿ ಮೌಖಿಕ ಮಾತನಾಡುವುದರ ಮೂಲಕವೂ ಬೇರೆ ಬೇರೆ ಸೂಕ್ತವಾದ ಜವಾಬುಗಳು ಕೊಡಲ್ಪಟ್ಟಿವೆ. ಹತ್ತಿ ಬೆಳೆಯಲ್ಲಿ ಆಸಕ್ತಿಯುಳ್ಳ ರೈತರೆಲ್ಲರಿಗೂ ಸಾಧ್ಯವಾದ ಮಟ್ಟಿಗೂ ಈ ವಿಷಯಗಳನ್ನು ತಿಳಿಸಬೇಕೆಂಬುವದೇ ವ್ಯವಸಾಯದ ಇಲಾಖೆಯವರ ಮುಖ್ಯೋದ್ದೇಶವಾದುದರಿಂದ ಮುಂದೆ ವಿವರಿಸಿರುವ ವಿಷಯಗಳು ಪ್ರಚುರಿಸಲ್ಪಟ್ಟಿವೆ.

ಕ್ಯಾಂಬೋಡಿಯಾ ಹತ್ತಿಯು ಅಮೇರಿಕಾ ದೇಶದ "ಅಪ್‌ಲ್ಯಾಂಡ್" ಹತ್ತಿಯನ್ನು ಬಹಳ ಮಟ್ಟಿಗೆ ಹೋಲುತ್ತದೆ. ಆದುದರಿಂದ ಈಗ ನಮ್ಮ ಸೀಮೆಯ ಕೆಲವು ಕಡೆಗಳಲ್ಲಿ ದೊಡ್ಡಹತ್ತಿ, ನಾಡಹತ್ತಿ, ಧಾರವಾಡ್, ಅಮೇರಿಕನ್ ಹತ್ತಿ ಎಂಬ ಹೆಸರನ್ನು ಕೊಟ್ಟು ಬೆಳೆಯುತ್ತಿರುವ ಹತ್ತಿಯನ್ನು ಹೋಲುತ್ತದೆ. ಈ ಹೆಸರುಗಳೆಲ್ಲವೂ ಅಮೇರಿಕಾ ದೇಶದಿಂದ ತರಿಸಿ ಈಗ ವಿಶೇಷವಾಗಿ ದಕ್ಷಿಣ ಮಹಾರಾಷ್ಟ್ರದಲ್ಲಿ ಬೆಳೆಯುತ್ತಿರುವ "ಅಮೇರಿಕನ್ ಅಪ್‌ಲ್ಯಾಂಡ್" ಹತ್ತಿಯ ಹೆಸರುಗಳು. ಈ ಹತ್ತಿಯನ್ನು ಸುಮಾರು ಹತ್ತು ವರುಷಗಳ ಹಿಂದೆ ಮದರಾಸ್ ಆಧಿಪತ್ಯದ ವ್ಯವಸಾಯ ಇಲಾಖೆಯ ಒಬ್ಬ ಆಫೀಸರು ಬಹುಶಃ ಫ್ರೆಂಚ್ ಇಂಡೋ ಚೈನಾದಿಂದ ತಂದಿರಬಹುದು. ಕಳೆದ ಮೂರು ವರುಷಗಳ ವರೆಗೆ ಇದರ ಬೆಳೆಗೆ ಅನುಕೂಲವಾದ ಸಂದರ್ಭಗಳಾವುವೆಂಬುದೇ ತಿಳಿದಿರಲಿಲ್ಲ. ಆದರೆ ಈ ವಿಷಯಗಳು ತಿಳಿದಂದಿನಿಂದ ಈ ಹತ್ತಿಯ ವ್ಯವಸಾಯವು ಬಹಳ ಆಶ್ಚರ್ಯವನ್ನುಂಟುಮಾಡುವಷ್ಟು ವೇಗವಾಗಿ ಪ್ರಚುರವಾಗುತ್ತಾ ಬಂದು, ಈಗ ಮದರಾಸ್ ಆಧಿಪತ್ಯದ ದಕ್ಷಿಣ ಜಿಲ್ಲೆಗಳಲ್ಲಿ ವಾಸಿಸುವ ಬಾವಿಗಳ ಆಧಾರವಿರುವ ಬಾಗಾಯಿತು ಜಮೀನುಗಳಲ್ಲಿ ಇದನ್ನು ವಿಶೇಷವಾಗಿ ಹಾಕುತ್ತಾರೆ. ನೀರು ಸಾಲದೆ ಇರುವ ತರೀ ಭೂಮಿಗಳಲ್ಲಿ ಇದನ್ನು ಭತ್ತಕ್ಕೆ ಬದಲಾಗಿ ಹಾಕುತ್ತಾರೆ. ಕೆಲವು ಕಡೆ ಬೇಸಗೆಯಲ್ಲಿ ಒಂದೆರಡು ಸಲ ಮಾತ್ರ ನೀರು ಹಾಕುವುದಕ್ಕಾಗುವಂತೆ ಕಚ್ಚಾ ಬಾವಿಗಳಿರುವ ಖುಷ್ಕಿ ಭೂಮಿಗಳಲ್ಲಿಯೂ ಇದನ್ನು ಬೆಳೆಯುವರು. ಬಾವಿಯ ಆಧಾರದಲ್ಲಿರುವ ಭೂಮಿಗಳಲ್ಲಿ ಆಹಾರೋಪಯುಕ್ತವಾದ ಧಾನ್ಯಗಳಿಗೆ ಬದಲಾಗಿ ಇದನ್ನು ಬಹಳ ವಿಶೇಷವಾಗಿ ಬೆಳೆಯುತ್ತಿರುವುದರಿಂದ ಆಹಾರೋಪಯುಕ್ತವಾದ ಧಾನ್ಯಗಳ ಬೆಳೆಯೇ ಬಹಳ ಕಡಮೆಯಾಗುವದೆಂದು ಭಯವಾಗಿದೆ. ಸಾಧಾರಣವಾಗಿ ಹೊಸ ಪದ್ಧತಿಗಳನ್ನು ಅನುಸರಿಸುವುದರಲ್ಲಿ ಆಸಕ್ತಿ ಇಲ್ಲದ ನಮ್ಮ ದೇಶದಲ್ಲಿಯೂ ಈ ಹೊಸ ಬೆಳೆಯು ಇಷ್ಟು ಜಾಗ್ರತೆಯಾಗಿ ಹರಡಿರುವುದು ನಿಜವಾಗಿಯೂ ಬಹಳ ಆಶ್ಚರ್ಯವಾಗಿದೆ. ಹೀಗೆ ಇದರ ವ್ಯವಸಾಯದ ಪ್ರಾಬಲ್ಯಕ್ಕೆ ಕಾರಣಗಳನ್ನು ತಿಳಿದುಕೊಳ್ಳುವದರಿಂದ ನಮ್ಮ ರೈತರಿಗೆ ಬಹಳ ಅನುಕೂಲವಾಗಬಹುದು. ಅದಕ್ಕೆ ನೀರು ಕಟ್ಟಿ ಈಗ ಬಾಗಾಯಿತು ಜಮೀನಿನಲ್ಲಿ ಬೆಳೆಯುತ್ತಿರುವ ಸಂದರ್ಭದಲ್ಲಿ ಅದು ರೈತರಿಗೆ ಬಹಳ ಫಾಯಿದೆಯಾದ ಬೆಳೆಯಾಗಿದೆ. ಸಾಧಾರಣವಾಗಿ ಎಕರೆಗೆ 30-40 ಮಣ ಹತ್ತಿ ಸಿಕ್ಕುವುದು; ಅಂದರೆ, ಈಗಿನ ರೇಟಿ ಧಾರಣೆಯ ಪ್ರಕಾರ ಎಕರೆಗೆ 100-110 ರೂಪಾಯಿ ಹುಟ್ಟುವಳಿಯಾಗುತ್ತೆ. ಕೆಲವು ಸಂದರ್ಭಗಳಲ್ಲಿ ಎಕರೆಗೆ 80 ಮಣ ಹತ್ತಿಯೂ ಬೆಳೆದಿದೆ. ಅಂಥಾ ಸಂದರ್ಭಗಳಲ್ಲಿ ಎಕರೆಗೆ 250 ರೂಪಾಯಿ ತನಕ ಗಿಟ್ಟುವುದು. ಈ ಬೆಳೆಗೆ ವಿಶೇಷ ಹೆಚ್ಚು ನೀರು ಬೇಕಾಗಿರುವುದಿಲ್ಲ. ಏಕೆಂದರೆ ಹಿಂಗಾರು ಮಳೆಯ ಕೊನೆಯಲ್ಲಿ ಇದನ್ನು ಬಿತ್ತಿ, ಮುಂದಿನ ಬೇಸಗೆಯಲ್ಲಿ ಒಂದೆರಡು ಸಲ ನೀರು ಕಟ್ಟಿದರೆ ಸಾಕು. ನೀರು ಸಾಲದ ಕಾರಣದಿಂದ ಬೇರುಗಳನ್ನು ಭೂಮಿಯೊಳಕ್ಕೆ ಆಳವಾಗಿ ಬಿಡದೇ ಇರುವ ಧಾನ್ಯಗಳನ್ನು ಬೆಳೆಯುವದಕ್ಕೆ ಅನುಕೂಲವಿಲ್ಲದಿರುವ ಕಡೆ ಇದನ್ನು ಧಾರಾಳವಾಗಿ ಬೆಳೆಯಬಹುದು. ಬಿತ್ತನೆ ಮಾಡಿದ 5 ತಿಂಗಳಿಗೆ ಫಲವು ಕೈಗೆ ಬರುವುದು. ಮೊದಲನೇ ಕೊಯಿಲಾದ 6 ವಾರಗಳ ಬಳಿಕ ಬರುವ ಎರಡನೇ ಫಲವನ್ನು ತೆಗೆದುಕೊಂಡರೂ ಮುಂಗಾರು ಮಳೆ ಬರುವ ಕಾಲಕ್ಕೆ ಬೇರೇ ಬೆಳೆ ಇಡಲು ಅನುಕೂಲವಾಗುವ ಹಾಗೆ ಹತ್ತಿಯ ಗಿಡಗಳನ್ನು ಕಿತ್ತು ಹಾಕಬಹುದು. ಬೀಜದ ಖರೀದಿಯೂ ವ್ಯವಸಾಯದ ಖರ್ಚೂ ಬಹಳ ಸ್ವಲ್ಪ. ಚೆನ್ನಾಗಿ ಗೊಬ್ಬರ ಹಾಕಿದ ಬಾಗಾಯಿತು ಜಮೀನುಗಳಲ್ಲಿ ಈ ಹತ್ತೀ ಬೆಳೆ ಬಹಳ ಹುಲುಸಾಗುವುದಾದರೂ ಸಾಧಾರಣವಾಗಿ ಜೌಗಿಲ್ಲದ ಎಲ್ಲಾ ವಿಧವಾದ ಭೂಮಿಗಳಲ್ಲೂ ಇದನ್ನು ಬೆಳೆಯಬಹುದು. ಈ ಕಾರಣಗಳಿಂದ ಈ ಹತ್ತಿಯ ವ್ಯವಸಾಯವು ಇಷ್ಟು ಜಾಗ್ರತೆಯಾಗಿ ಹೆಚ್ಚಿ ಮದರಾಸ್ ಆಧಿಪತ್ಯದಲ್ಲಿ ಇಷ್ಟು ವಿಶೇಷವಾಗಿ ಹರಡಿಕೊಂಡಿರುವುದೇನೂ ಆಶ್ಚರ್ಯವಲ್ಲ.

ಮೈಸೂರು ಸೀಮೆಯಲ್ಲಿ ಹತ್ತಿಯನ್ನು ಬೆಳೆಯುವ ರೈತರಿಗೆ ಈ ಹತ್ತಿಯೇನೂ ಹೊಸದಾಗಿ ಕಾಣಬರುವುದಿಲ್ಲ. ಮೇಲೆ ಹೇಳಿರುವಂತೆ ಇದು ನೋಡುವುದಕ್ಕೆ ನಮ್ಮ ಸೀಮೆಯ ಅನೇಕ ಪ್ರದೇಶಗಳಲ್ಲಿ ವಿಶೇಷ ಬೆಳೆಯುತ್ತಿರುವ ದೊಡ್ಡ ಹತ್ತಿಯಂತೆಯೇ ಇರುವುದು. ದೊಡ್ಡಹತ್ತಿಯಂತೆಯೇ ಈ ಗಿಡಗಳಲ್ಲೂ ರೆಂಬೆಗಳು ಹೊರಟು ಗುಂಪಾಗಿ ಪೊದೆಯಂತೆ ಇರುವವು. ಇದರ ಬುಡವೂ, ಕೊಂಬೆ ರೆಂಬೆಗಳೂ ಕೆಂಪುಬಣ್ಣವಾಗಿರುವವು. ದೊಡ್ಡ ಹತ್ತಿಯಂತೆಯೇ ಇದರ ಹೂವುಗಳು ಸ್ವಲ್ಪ ಹಳದೀ ಛಾಯೆಯಾಗಿ ಮಚ್ಚೆಯಿಲ್ಲದೆ ಇರುವವು. ಬೆಳೆದು ಸಲಕ್ಕೆ ಬರುವುದಕ್ಕೆ ದೊಡ್ಡ ಹತ್ತಿಯು ಎಷ್ಟು ಕಾಲ ತೆಗೆದುಕೊಳ್ಳುವುದೋ ಇದೂ ಅಷ್ಟೇ ಕಾಲ ತೆಗೆದುಕೊಳ್ಳುವುದು. ಗಿಡವನ್ನು ವರ್ಷ ವರ್ಷವೂ ಹಾಕಬೇಕಾಗಿರುವುದರಿಂದ ಬೀಜ ಬಿತ್ತಿದ ಏಳು ತಿಂಗಳಲ್ಲಿ ಸಲವು ಕೈ ಸೇರಿ ಹೊಲವು ಬೇರೆ ಪಸಲಿಗೆ ಸಿದ್ಧವಾದೀತು. ಆದರೆ ದೊಡ್ಡಹತ್ತಿಗಿಂತ ಇದರ ಗಿಡಗಳು ಬಹಳ ಸೊಂಪಾಗಿಯೂ, ಎಲೆ ಮತ್ತು ಕಾಯಿಗಳು ಬಹಳ ದೊಡ್ಡವಾಗಿಯೂ ಇರುವವು. ದೊಡ್ಡನತ್ತಿಯೇ ಮೊದಲಾದ ಇತರ ಜಾತಿಯ ಹತ್ತಿಗಳಿಗಿಂತ ಕ್ಯಾಂಬೋಡಿಯಾ ಹತ್ತಿಯು ಮತ್ತೊಂದು ವಿಧದಲ್ಲಿ ಉತ್ಕೃಷ್ಟವಾಗಿದೆ. ಕ್ಯಾಂಬೋಡಿಯಾ ಹತ್ತಿಯಲ್ಲಿ ದೊಡ್ಡಹತ್ತಿಗಿಂತಲೂ ಅರಳೆಯು ಹೆಚ್ಚಾಗಿರುತ್ತದೆ. ಹ್ಯಾಗಂದರೆ ಕ್ಯಾಂಬೋಡಿಯಾ ಹತ್ತಿಯಿಂದ ಮಣ ಒಂದಕ್ಕೆ ಸರಾಸರಿ 18 ಸೇರು ಅರಳೆ ಇಳಿದಿರುತ್ತದೆ. ಬೂರ್ಬೋ ಹತ್ತಿಯಿಂದ ಮಣಕ್ಕೆ 16 ಸೇರು ಇಳಿಯುವುದು. ದೊಡ್ಡ ಹತ್ತಿಯಿಂದ 14 ಸೇರೂ, ಸಣ್ಣ ಹತ್ತಿಯಿಂದ 12 ಸೇರೂ ಮಾತ್ರ ಇಳಿಯುವವು. ಈ ಕಾರಣದಿಂದಲೇ ಅಜಮಾಯಿಷಿಮಾಡಿ ನೋಡಿ ಕ್ಯಾಂಬೋಡಿಯಾ ಹತ್ತಿಯು ಬೆಳೆಯಬಹುದೆಂದು ಕಂಡುಬಂದ ಭೂಮಿಗಳಲ್ಲಿ ದೊಡ್ಡ ಹತ್ತಿಗೆ ಬದಲಾಗಿ ಕ್ಯಾಂಬೋಡಿಯಾ ಹತ್ತಿಯನ್ನು ಬೆಳೆಯುವುದರಿಂದ ರೈತರಿಗೆ ಬಹಳ ಫಾಯಿದೆ ಉಂಟು. ಕ್ಯಾಂಬೋಡಿಯಾ ಹತ್ತಿಯನ್ನು ಬೆಳೆದರೆ ಮಣಕ್ಕೆ ಸರಾಸರಿ 4 ಸೇರು ಅರಳೆ ಜಾಸ್ತಿಯಾಗಿ—ಅಂದರೆ 12 ಆಣೆಯಿಂದ 1 ರೂಪಾಯಿ ತನಕ—ಹೆಚ್ಚಾಗಿ ಫಾಯಿದೆ ಉಂಟು. ಸಾಧಾರಣವಾಗಿ ಎಕರೆ 1 ಕ್ಕೆ 40 ಮಣ ಹತ್ತಿ ಆಗುವುದೆಂದು ಇಟ್ಟುಕೊಂಡರೂ ಕ್ಯಾಂಬೋಡಿಯಾ ಹತ್ತಿಯನ್ನು ಬೆಳೆಯುವುದರಿಂದ ಎಕರೆಗೆ 30 ರಿಂದ 40 ರೂಪಾಯಿ ವರೆಗೆ ಹೆಚ್ಚು ಫಾಯಿದೆ ಆಗುತ್ತೆ. ಆದುದರಿಂದ ಕ್ಯಾಂಬೋಡಿಯಾ ಹತ್ತಿಯ ವ್ಯವಸಾಯವು ವೃದ್ಧಿಯಾಗಲು ಅರ್ಹವಾದದ್ದೆನ್ನುವುದಕ್ಕೆ ಸಂದೇಹವಿಲ್ಲ.

ಈಗ ನಮ್ಮ ಸೀಮೆಯಲ್ಲಿ ಹತ್ತಿಯನ್ನು ಬೆಳೆಯುವ ಪ್ರದೇಶಗಳಲ್ಲಿ ಮಾತ್ರವಲ್ಲದೆ ಮೈದಾನ್ ಡಿಸ್ಟ್ರಿಕ್ಟ್ ಗಳಲ್ಲಿ (ಅಂದರೆ—ಮೈಸೂರು, ಬೆಂಗಳೂರು, ಕೋಲಾರ, ತುಮಕೂರು ಡಿಸ್ಟ್ರಿಕ್ಟುಗಳಲ್ಲಿ) ಇದರ ವ್ಯವಸಾಯವನ್ನು ಪ್ರಾರಂಭಿಸಿ ವೃದ್ಧಿಪಡಿಸಬೇಕೆಂದು ವ್ಯವಸಾಯದ ಇಲಾಖೆಯವರ ಮುಖ್ಯ ಉದ್ದೇಶವೆಂಬುವುದು ರೈತರ ಗಮನಕ್ಕೆ ಬರಬೇಕಾಗಿದೆ. ಈ ಡಿಸ್ಟ್ರಿಕ್ಟುಗಳ ಭೂಗುಣವೇ ಮೊದಲಾಗಿ ಈ ಬೆಳೆಗೆ ಬೇಕಾಗಿರುವ ಅನುಕೂಲಗಳನ್ನೆಲ್ಲಾ ಪರೀಕ್ಷಿಸಿ ನೋಡುವಲ್ಲಿ ಈ ಡಿಸ್ಟ್ರಿಕ್ಟುಗಳಲ್ಲೆಲ್ಲಾ ಈ ಉತ್ಕೃಷ್ಟವಾದ ಬೆಳೆಯನ್ನು ರೂಢಿಗೆ ತರಬಹುದೆಂದು ತೋರುತ್ತದೆ. ಯಾವುದಾದರೊಂದು ಪ್ರದೇಶದಲ್ಲಿ ಇದುವರೆಗೆ ಹತ್ತಿಯನ್ನು ಬೆಳೆಯದೇ ಇರುವ ಸಂಗತಿಯು ಮುಂದೆ ಕ್ಯಾಂಬೋಡಿಯಾ ಹತ್ತಿಯನ್ನು ಹಾಕತೊಡಗುವದಕ್ಕೆ ಅಭ್ಯಂತರವಾಗಲಾರದು. ಏಕೆಂದರೆ ಮದರಾಸ್ ಆಧಿಪತ್ಯದಲ್ಲಿ ಹಿಂದೆ ಎಂದೂ ಹತ್ತಿಯನ್ನು ಬೆಳೆಯಬಹುದೆಂದು ಊಹಿಸದಿದ್ದ ಅನೇಕ ಪ್ರದೇಶಗಳಲ್ಲಿ ಕೂಡ ಇದರ ವ್ಯವಸಾಯವು ಪ್ರಬಲಕ್ಕೆ ಬಂದು, ಅರಳೆಯನ್ನು ತೆಗೆಯುವ ಅನೇಕ ಕಾರ್ಖಾನೆಗಳು ಕೂಡ ಸ್ಥಾಪಿಸಲ್ಪಟ್ಟಿವೆ. ಆದುದರಿಂದ ನಮ್ಮ ಸೀಮೆಯಲ್ಲಿ ಅನೇಕ ವ್ಯವಸಾಯ ಸಂಘಗಳ ಮುಖಾಂತರವಾದ ರೈತರೂ ಕ್ಯಾಂಬೋಡಿಯಾ ಹತ್ತಿಯ ವ್ಯವಸಾಯವನ್ನು ಆಚರಣೆಗೆ ತರಬೇಕೆಂಬುವದೇ ವ್ಯವಸಾಯದ ಇಲಾಖೆಯವರ ತಾತ್ಪರ್ಯವಾಗಿದೆ.

ಕ್ಯಾಂಬೋಡಿಯಾ ಹತ್ತಿಯ ಬೀಜವು ಬೆಂಗಳೂರಿನಲ್ಲಿರುವ ವ್ಯವಸಾಯದ ಇಲಾಖೆಯಲ್ಲಿ ಮಣಕ್ಕೆ (30 ಪೌಂಡಿಗೆ) ಒಂದು ರೂಪಾಯಿನಂತೆ ದೊರೆಯುವದು.

[ಸಶೇಷ]

ತಾಲ್ಲೋಕು ವರ್ತಮಾನಗಳು.

ಜಗಲೂರು ತಾ. ಬಿಸ್ತುವಳ್ಳಿ.—ಈ ಗ್ರಾಮವು ಯೂನಿಯನ್ ಆಗಿ ಸುಮಾರು 5-6 ವರುಷಗಳಾಗುತ್ತಾ ಬಂತು. ಮೊದಲು ಲಾಂದ್ರಾ, ಕಕ್ಕಸು ಮಾಡಿಸಬೇಕೆಂತ ಸರ್ಕಾರದವರ ಅಪ್ಪಣೆಯಾಗಿತ್ತು. ಈ ವರೆಗೂ ಅದು ಆಗಲಿಲ್ಲ. ಏನು ಕಾರಣವೋ ತಿಳಿಯದು. ಲಾಂದ್ರ ವಗೈರೆ ಇಲ್ಲವಾದ್ದರಿಂದ ನಸ್ಸಿಗೂ ಜನಗಳ ಸಂಚಾರಕ್ಕೂ ಅನನುಕೂಲವಾಗಿರುತ್ತೆ. ಈ ಊರಿಂದ ಭರಮಸಾಗರಕ್ಕೆ ರಸ್ತೆ ಆಗಲು ಹಿಂದೆಯೇ ಅಂದಾಜು ಆಗಿತ್ತು. ಇಲ್ಲಿ ದಿನವಹಿ ದಾವಣಗೆರೆಗೆ 30-40 ಗಾಡಿಗಳ ವರೆಗೂ ಸಂಚರಿಸುತ್ತವೆ. ಆದ್ದರಿಂದ ರಸ್ತೆ ಇಲ್ಲದ್ದು ಬಹಳ ಕಷ್ಟಕರವಾಗಿದೆ. ಈ ವಿಷಯವಾಗಿ ನಮ್ಮ ಗ್ರಾಮದ ಮೆಂಬರುಗಳು ಚರ್ಚಿಸಿದಾಗ್ಯೂ ಸರ್ಕಾರದವರು ಚಿತ್ತಕ್ಕೆ ತರಲಿಲ್ಲ. ಈಗಲಾದರೂ ಮಾಡಿಸಿಕೊಡುವರೆಂದು ನಂಬಿದ್ದೇವೆ.

ಬೆಂಗಳೂರು ತಾ॥ ಯಲಹಂಕ. ಇಲ್ಲಿ 4-5 ಹದ ಮಳೆಯಾಗಿ ಈಚೆಗೆ ಮಳೆ ಇಲ್ಲದೆ ಬೇಸಗೆಯ ಬಿಸಿಲು ಕಾಯುತ್ತಿರುವದರಿಂದ ಭೂಮಿಯಲ್ಲಿಟ್ಟ ಪೈರೆಲ್ಲವೂ ಒಣಗುತ್ತಾ ಇದೆ.—ಇಲ್ಲಿನ ರೈಲ್ವೆ ಸ್ಟೇಷನ್‌ನಲ್ಲಿ 2½ ವರುಷದಿಂದ ಜನಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿ ಕೆಲಸ ಮಾಡುತ್ತಿದ್ದ ಅ॥ ಸ್ಟೇಷನ್ ಮಾಸ್ಟರ್ ಮ॥ ದಾಸಪ್ಪಯ್ಯನವರನ್ನು ಬೇರೆ ಸ್ಥಳಕ್ಕೆ ವರ್ಗಾಯಿಸಿದ್ದು ಜನರಿಗೆಲ್ಲಾ ಬಹಳ ಚಿಂತೆಯಾಗಿದೆ. ಇಂಥಾ ನಾತಿಕರು ಇನ್ನು ಈ ಊರಿಗೆ ಬರುವುದಿಲ್ಲವೇನೋ ಎಂದು ಜನರು ಸಂಶಯಪಡುತ್ತಿದ್ದಾರೆ.—ಇಲ್ಲಿಗೆ ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಹಾಕುವುದಕ್ಕಾಗಿ ಬಂದಿರುವ ಓವರ್‌ಸೀಯರುಗಳು ಬಹಳ ಮುತುವರ್ಜಿ ವಹಿಸಿ ಕೆಲಸವನ್ನು ಬಹಳ ನಾಜೂಕಾಗಿಯೂ, ತುಂಬಾ ಜಾಗ್ರತೆಯಾಗಿಯೂ ಮಾಡುತ್ತಿರುವುದು ನೋಡಿದರೆ ಈ ಕೆಲಸವು ಬಹಳ ಜಾಗ್ರತೆ ಮುಗಿದು ಜನರ ಸಂಚಾರಕ್ಕೆ ಸುರಕ್ಷಿತವಾಗಬಹುದೆಂದು ಹಾರೈಸುತ್ತಾರೆ.

ಹಾಸನ – ಕೆಲವು ದಿನಗಳಿಂದ ಮಳೆ ನಿಂತುಹೋಗಿ ಬಿಸಿಲು ಕಾಯುತ್ತಿದೆ. ಎರಡು ವಾರಗಳ ಹಿಂದೆ ಮುನಿಸಿಪಾಲಿಟಿಯಲ್ಲಿ ಒಂದೆರಡು ಪ್ಲೇಗ್ ಕೇಸುಗಳು ಆಗಿದ್ದರೂ ಈಚೆಗೆ ಅದರ ಸೋಂಕೇನೂ ಕಾಣದೆ ಇದ್ದು, ಈಗ ಎಲ್ಲೆಲ್ಲಿಯೂ ಇಲಿಗಳು ಸಾಯುವುದು ಹೆಚ್ಚುತ್ತಲಿದೆ. ದೇವಾಂಗದವರ ಬೀದಿಯಲ್ಲಿ ಪ್ಲೇಗಿನಿಂದ ಇದುವರೆಗೆ 2-3 ಮರಣಗಳಾದಂತೆ ವರ್ತಮಾನವಿದೆ.—ಕಾತನಹಳ್ಳಿಯಲ್ಲಿ ಇಬ್ಬರು ಜಗಳವಾಡುತ್ತಿದ್ದು, ಒಬ್ಬನು ಇನ್ನೊಬ್ಬನ ಮನೆಯ ಎಮ್ಮೆಗೆ ವಿಷವಾಕಿ ಕೊಂದುಹಾಕಿದನಂತೆ. ಆ ಸತ್ತ ಎಮ್ಮೆಯನ್ನು ಇಲ್ಲಿಗೆ ಡಾಕ್ಟರ ಪರೀಕ್ಷೆಗಾಗಿ ತಂದಿದ್ದರು.—ಸಾಲೇನಹಳ್ಳಿಯಲ್ಲಿ ತಿಂಗಳಿಂದಲೂ ಕಾಲರಾ ರೋಗ ಪ್ರಬಲವಾಗಿ ಅನೇಕ ಜನರು ತೀರಿಹೋದರು. ಈ ಸಂಗತಿಯು ಇಲ್ಲಿನ ಮಿಷನ್ ಆಸ್ಪತ್ರೆಯ ಲೇಡಿ ಡಾಕ್ಟರವರಿಗೆ ತಿಳಿದು ಅವರು ಆ ಗ್ರಾಮಕ್ಕೆ ಹೋಗಿ ಅಲ್ಲಿ ರೋಗಪೀಡಿತರಿಗೆ ಚಿಕಿತ್ಸೆ ಮಾಡಿ ಇತರರಿಗೆ ಜಾಗರೂಕರಾಗಿರಬೇಕೆಂದು ತಿಳುವಳಿಕೆ ಹೇಳಿ ಬಂದರು. ಈಚೆಗೆ ಅಲ್ಲಿ ರೋಗವು ಕಡಮೆಯಾಗುತ್ತಾ ಬಂದಿದೆ. ಈ ಲೇಡಿ ಡಾಕ್ಟರವರು ಕೆಲವು ಸಂತೆಗಳಿಗೆ ಸಹ ಹೋಗಿ ರೋಗಿಗಳನ್ನು ವಿಚಾರಿಸಿ ಔಷಧೋಪಚಾರವಮಾಡಿ ಬರುತ್ತಿದ್ದಾರೆ.

ತುಂಗನೂರು.—ಈ ಪ್ರಾಂತ್ಯ ಕೆಲವು ದಿನಗಳ ಹಿಂದೆ ಸೋನೆಮಳೆ ಸುಮಾರಾಗಿ ಆಗುತ್ತಿದ್ದಿತು. ಈಚೆಗೆ ಮಳೆ ಅಭಾವವಾಗಿದೆ. ರಾಗಿ ಬೆಳೆಗೆ ಇನ್ನೂ 2-3 ಹದ ಮಳೆ ಬೇಕೆಂದು ನಿರೀಕ್ಷಿಸುತ್ತಿರುವರು.—ಕಳೆದ ವಾರ ನಮ್ಮ ಅಮಲ್ದಾರ್ ಮೆ|| ಪಿ ಆರ್ ನರಸಿಂಹಯ್ಯಂಗಾರ್ಯರು ಸರ್ಕಾರಿ ಕೆಲಸದ ಮೇಲೆ ಸರ್ಕೀಟು ಹೋಗಿಬಂದು, ಇನುವಾರ ಬೆಳಗ್ಗೆ ಕರಿಮುದ್ದನಹಳ್ಳಿ ಕಡೆ ನಡೆದಿರುವ ಖೂನಿ ಮೊಕದ್ದಮೆ ತನಿಖೆಗಾಗಿ ಹೋಗಿದ್ದರು.—ಇಲ್ಲಿದ್ದ ಶಿರಸ್ತೆದಾರ್ ಮೆ|| ಕೆ ನಾಗೇಶರಾಯಸ್ತ್ರಗಳು ಮಳವಳ್ಳಿಗೆ ವರ್ಗಪಟ್ಟು ಹೋದರು. ಈ ಊರಲ್ಲಿ ಕಳೆದ 1½ ವರುಷದಿಂದ ಸಬ್ ರೆಜಿಸ್ಟ್ರಾರಾಗಿದ್ದ ಮೆ|| ಎಸ್ ಲಕ್ಷ್ಮೀಕಾಂತಯ್ಯಂಗಾರ್ಯರವರು ತಮ್ಮ ಕುಟುಂಬದ ಅನಾರೋಗ್ಯದ ದೆಸೆಯಿಂದ ವರ್ಗಪಟ್ಟು ದೊಡ್ಡಬಳ್ಳಾಪುರಕ್ಕೆ ತೆರಳುವರು. ಇವರು ಇಲ್ಲಿದ್ದಷ್ಟು ಕಾಲ ನಿಸ್ಪೃಹರಾಗಿ, ಜನಾನುರಾಗಿಗಳಾಗಿ, ಚಟುವಟಿಕೆಯಾಗಿ, ಬಡವರಿಗೆ ಆಧಾರಿಗಳಾಗಿ, ಶಕ್ತರಾಗಿ ತಮ್ಮ ಕರ್ತವ್ಯವನ್ನು ನೆರವೇರಿಸುತ್ತಿದ್ದರು. ಇವರು ಇಲ್ಲಿನ ಕೋಆಪರೇಟಿವ್ ಸೊಸೈಟಿಯ ಸ್ಥಾಪನೆಗೆ ಸಹಾಯಮಾಡಿದವರ ಪೈಕಿ ಒಬ್ಬರಾಗಿದ್ದರು. ಇವರಿಗೆ ವರ್ಗವಾದದ್ದು ಜನರಿಗೆ ಖೇದವನ್ನುಂಟುಮಾಡಿದೆ.

ಬೇಲೂರು ತಾ|| ಬೆಟ್ಟಾಳು.—ಈ ಗ್ರಾಮವು ಬೇಲೂರು ಮತ್ತು ಹಳೇಬೀಡಿಗೆ ಮಧ್ಯೆ ರಸ್ತೆ ಬಾಜು ಗ್ರಾಮ. 150 ಮನೆಗಳಿವೆ. ಇಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಿಲ್ಲದೆ ತುಂಬಾ ತೊಂದರೆಯಾಗಿದ್ದದ್ದನ್ನು ನಮ್ಮ ಅಮಲ್ದಾರ್ರವರು ಪರಾಂಬರಿಸಿ ಡೆ|| ಇನ್ಸ್‌ಪೆಕ್ಟರವರಿಗೆ ಶಿಫಾರಸು ಮಾಡಿದ್ದರ ಮೇಲೆ ಅವರು ಮುಂದು ಪರಾಂಬರಿಸಿ ಕಳೆದ ಏಪ್ರಿಲ್‌ನಿಂದ ನಮ್ಮ ಗ್ರಾಮದಲ್ಲಿ ಸ್ಕೂಲನ್ನು ಸ್ಥಾಪನೆಮಾಡಿ ಮಾಸ್ಟರನ್ನು ಕಳುಹಿಸಿಕೊಟ್ಟರು. ಈ ಗ್ರಾಮಕ್ಕೆ 1-2 ಮೈಲಿ ಫಾಸಲೆಯಲ್ಲಿ 5 ಗ್ರಾಮಗಳಿವೆ. ಆ ಗ್ರಾಮಗಳ ಮಕ್ಕಳೆಲ್ಲರೂ ಈ ಸ್ಕೂಲಿಗೆ ಓದಲು ಬರುತ್ತಾ ಇದಾರೆ. ಈಗ ರಿಜಿಸ್ಟರಿನಲ್ಲಿರುವ 60 ಮಂದಿ ಬಾಲಕರಿಗೆ ಬೋಧಿಸಲು ಒಬ್ಬ ಉಪಾಧ್ಯಾಯರಿಂದ ಸಾಧ್ಯವಿಲ್ಲವೆಂಬ ಪ್ರಾರ್ಥನೆ ಮೇರೆ ಹಂಗಾಮಿಯಾಗಿ ಕೆಲಸ ಮಾಡುತ್ತಿರುವಂತೆ ಇಲ್ಲಿಗೆ ಒಬ್ಬ ಮಾಸ್ಟರನ್ನೂ ಸ್ಕೂಲಿಗೆ ಕೆಲವು ಸಾಮಾನುಗಳನ್ನೂ ಕಳುಹಿಸಿದಾರೆ. ಈ ಮಾಸ್ಟರನ್ನು ಇಲ್ಲಿ ಖಾಯಂ ಮಾಡಿ ಸ್ಕೂಲಿಗೆ ಬೇಕಾದ ಇತರ ಸಾಮಾನುಗಳನ್ನು ದಯಪಾಲಿಸುತ್ತಾರೆಂದು ನಂಬಿರುತ್ತೇವೆ.—ಇದು ದೊಡ್ಡ ಗ್ರಾಮ. ಕುಡಿಯುವ ನೀರಿಗೆ ಈಗ ಇರುವ ಬಾವಿಯು ದೂರವಾಗಿರುವುದರಿಂದ ಊರೊಳಗೆ ಎಲ್ಲರಿಗೂ ಅನುಕೂಲಿಸುವಂತೆ ಸರ್ಕಾರದವರು ಒಂದು ಬಾವಿಯನ್ನು ತೆಗೆಸಿಕೊಟ್ಟು ಸಹಾಯ ಮಾಡಾರೆಂದು ನಿರೀಕ್ಷಿಸುವೆವು.

ರಾಯಚೂರು ತಾ|| ಆಲಂಪುರ.—ಈ ತಿಂಗಳು ತಾ 10 ನೇ ಭಾನುವಾರ ಉಸ್ಮಾನಿಯಾ ರೀಡಿಂಗ್‌ರೂಮಿನ ವಾರ್ಷಿಕ ಸಮಾರಂಭದೊಡನೆ ನಮ್ಮ ಘನವೆತ್ತ ಶ್ರೀಮನ್ನಿಜಾಮ ಸರಕಾರದವರಾದ ಮಿರ್ ಉಸ್ಮಾನಲಿ ಖಾನ್ ಬಹಾದೂರ್, ಜಿ ಸಿ ಎಸ್ ಆಯಿ, ಇವರು ಸಿಂಹಾಸನಾರೂಢರಾದ ಸುದಿನವಾದ ಪ್ರಯುಕ್ತ ಆ ದಿನದ ಉತ್ಸವವು ನೆರವೇರಿಸುವದಕ್ಕಾಗಿ ಶ್ರೀಮತ್ ಕುಮಾರಸ್ವಾಮಿ ಶಾಸ್ತ್ರಿ ಪ್ರೌಢಸರಸ್ವತಿ ಬಾಲ ಬ್ರಹ್ಮಚಾರಿಗಳವರನ್ನು ಸಭಾಧ್ಯಕ್ಷರಾಗಿ ನೇಮಿಸಿ ಕಾರ್ಯಕ್ರಮ ನಡಿಸಲಾಯಿತು. ಮೊದಲು ರೂಮಿನ ಸೆಕ್ರೆಟರಿ ಆರ್ ಎನ್ ಪಂತ್‌ಗೆ ಇವರು ಆಯವ್ಯಯದ ವಾರ್ಷಿಕ ರಿಪೋರ್ಟ್ ಓದಿದ ತರುವಾಯ ಸ್ಕೂಲು ಬೋಯಿಜರಲ್ಲಿ ಹಲವರು ವರ್ತಮಾನಾವಲೋಕನದಿಂದ ಗುಣ ಲಾಭ, ಪಠನಾಸ್ಪದ ಆವಶ್ಯಕತೆ ಮುಂತಾದ ವಿಷಯಗಳಲ್ಲಿ ಉಪನ್ಯಾಸಿಸಿದ ತರುವಾಯ ಇತರ ವಿದ್ಯಾರ್ಥಿಗಳು ಗದ್ಯ ಪದ್ಯಗಳಲ್ಲಿ ನಿಜಾಮ ಸರಕಾರದವರ ಆಯುರಾರೋಗ್ಯದ ಬಗ್ಗೆ ಜಗದ್ರಕ್ಷಕನನ್ನು ಸ್ತವಿಸಿದ ನಂತರ ಶ್ರೀ ಪ್ರೌಢಸರಸ್ವತಿಯವರು ಹಿರಿದಿಂದೆಷ್ಟು ಸಂಕ್ಷೇಪರೀತಿಯಿಂದ ಸಭಿಕರಿಗೆ ಉಪದೇಶಿಸಿ ಉತ್ಸಾಹದಾಯಕರಾದ ಅವರನ್ನು ವಿದ್ಯಾರ್ಥಿಗಳಿಂದ ಸತ್ಕರಿಸಿದರು. ಆ ಮೇಲೆ ಬಂದ ಸಭಾಜನರಿಗೆ ತಾಂಬೂಲ ಪುಷ್ಪದಾಮ ಪರಿಮಳಗಳಿಂದ ಆದರಿಸಿ ಜಯಘೋಷದೊಡನೆ ಸಭೆ ವಿಸರ್ಜಿಸಲ್ಪಟ್ಟಿತು.

ದೊಡ್ಡಬಳ್ಳಾಪುರ.—ಡೆಪ್ಯುಟಿ ಕಮಿಷನರ್ ಜೆ ಕೆ ಬಾಂಡಿ ಸಾಹೇಬರವರು ಕಳೆದ ವಾರ ಈ ಊರಿಗೆ ದಯಮಾಡಿ ಆ ದಿನವೂ, ಮಾರಣೆ ದಿನವೂ ಈ ಊರಿನ ಮುಖ್ಯಸ್ಥರೆಲ್ಲರನ್ನೂ ಮಾತ್ರವೇ ಅಲ್ಲದೆ ಸಾಧಾರಣ ಪ್ರಜೆಗಳನ್ನೂ ಅತ್ಯಾದರದಿಂದ ಕಂಡು ಪ್ರತಿ ಒಬ್ಬರ ಕಷ್ಟ ಕೊರತೆಗಳನ್ನೂ ಬಹು ಪ್ರೀತಿಪೂರ್ವಕವಾಗಿ ಕೇಳುತ್ತಾ ಊರೆಲ್ಲಾ ಸಂಚರಿಸಿದರು. ಇವರು ಕಾಲು ನಡೆಯಾಗಿ ಸಾಧಾರಣ ಒಬ್ಬ ಮನುಷ್ಯನಂತೆ ಅಟ್ಟಹಾಸ ಮುಂತಾದದ್ದೇನೂ ಇಲ್ಲದೆ 10 ಘಂಟೆ ತನಕ ಈ ವರೆಗೂ ಯಾವ ಡೆಪ್ಯುಟಿ ಕಮಿಷನರವರೂ ನೋಡದೆ ಇದ್ದ ಪ್ರದೇಶಗಳನ್ನೆಲ್ಲಾ ಸಂಚರಿಸಿದರು.—ಈ ಊರಲ್ಲಿ ಮ|| ಆಲಂಪಲ್ಲಿ ವೆಂಕಟನಾರಾಯಣ ಶೆಟ್ಟರವರು ತನ್ನ ಹೆಸರಿನ ಮೇಲೆ ಈ ದೊಡ್ಡಬಳ್ಳಾಪುರ ಟೌನ್ ನೀರಿನ ಸರಬರಾಯಿಗೋಸ್ಕರ ಐದು ಸಾವಿರ ರೂಪಾಯಿ ಧರ್ಮಾರ್ಥವಾಗಿ ಕೊಡುವಂತೆ ವಾಗ್ದಾನ ಮಾಡಿರುತ್ತಾರೆಂತ ತಿಳಿಯಲಾಗಿದೆ.—ಈ ಡೆಪ್ಯುಟಿ ಕಮಿಷನರವರ ಕಾಲದಲ್ಲಿ ಈ ಊರಿಗೆ ಅನೇಕ ಮೇಲುಗಳು ಪ್ರಾಪ್ತವಾಗುವದಲ್ಲದೆ ಈ ವರೆಗೂ ಬಿತುಕೊಂಡಿರುವ ಲಂಚ ರುಸುವತ್ತುಗಳು ಇವರ ದೃಷ್ಟಿಗೆ ಬೀಳದೆ ಇರಲಾರವೆಂತ ತೋರುತ್ತೆ. ಮ್ಯುನಿಸಿಪಾಲಿಟಿಯಲ್ಲಿರುವ ಅಕ್ರಮಗಳನ್ನು ನಮ್ಮ ಹೊಸ ಅಮಲ್ದಾರ್ರವರು ಬಹಳ ಮುತುವರ್ಜಿಯಿಂದ ಕ್ರಮಪಡಿಸುವಂತೆ ಕಾಣುತ್ತದೆ.—ಮಳೆ ಇಲ್ಲ. ಬೆಳೆ ಕೆಡುತ್ತಿದೆ. ಧಾರಣೆ ಏರುತ್ತಿದೆ. ಅಂಗಡಿಗಳಲ್ಲಿ ಕೆಲವು ಕಮ್ಮಿ ಅಳತೆ ತೂಕವಿದೆ. ಪೋಲೀಸಿನವರ ದೃಷ್ಟಿ ಬೀಳಬೇಕಾಗಿದೆ.

ಚನ್ನಪಟ್ಟಣ.—ಮಳೆ ಇಲ್ಲದೆ ಪೈರುಪಚ್ಚೆಗಳು ಒಣಗುವ ಗತಿಗೆ ಬಂತು. ಅವರೊಳಗೂ ಧಾರಣೆಮಾತ್ರವು ದಿನೇ ದಿನೇ ಹೆಚ್ಚಾಗುತ್ತಿದೆ. ವ್ಯಾಪಾರಿಗಳು ದಯಾಳುಗಳೆನಿಸಿಕೊಳ್ಳುವುದಕ್ಕೆ ಇದು ತಕ್ಕ ಸಮಯ. ಈ ಊರು ಪಟ್ಟಣವಾಗಿಯೂ, ವ್ಯಾಪಾರ ಸ್ಥಳವಾಗಿಯೂ ಇದ್ದಾಗ್ಯೂ ಹೊಸ ಸೇರು ತೂಕದ ಬಟ್ಟುಗಳು ಚಲಾವಣೆಗೆ ಬಾರದಿರುವದು ಆಶ್ಚರ್ಯವಾಗಿದೆ. 12 ಸಾವಿರ ಪ್ರಜಾಸಂಖ್ಯೆಯುಳ್ಳ ಈ ಊರಲ್ಲಿ 41 ದೀಪಗಳು ಮಾತ್ರ ಇವೆ. ಅದರಲ್ಲೂ 10 ದೀಪಗಳು ಮಾತ್ರ ರಾತ್ರಿ 12 ಅಥವಾ 2 ಗಂಟೆವರೆಗೆ ಉರಿಯುವವು. ಸ್ಪಿರಿಟಿನಿಂದ ಉರಿಸಲ್ಪಡುವ [illegible] ದೀಪಗಳು ಗೌರವಕ್ಕಾಗಿ ನಿಲ್ಲಿಸಲ್ಪಟ್ಟು ಕತ್ತಲನ್ನೇ ಬೀರುತ್ತಿದ್ದುದರಿಂದ ಈಗ ಆ ದೀಪಗಳೊಳಗೆ ಸೀಮೆ ಎಣ್ಣೆ ದೀಪಗಳನ್ನೇ ಇರಿಸಿ ಉರಿಸುತ್ತಿದಾರೆ. ಸ್ಯಾನಿಟೇಷನ್ ತಕ್ಕಮಟ್ಟಿಗಿದೆ. ಆದಾಗ್ಯೂ ದಕ್ಷಿಣ ದಿಕ್ಕಿನಲ್ಲಿರುವ ಕೆರೆಯನ್ನು ಡೆಪ್ಯುಟಿ ಕಮಿಷನರ್ರ ಹುಕುಂ ಕೊಟ್ಟಿದ್ದಾಗ್ಯೂ ಇನ್ನೂ ಮುಚ್ಚಿಸಲಿಲ್ಲ.—ಈ ಊರಲ್ಲಿ ಜೂಜಾಟವು ಪ್ರಬಲ ಸ್ಥಿತಿಯಲ್ಲಿದೆ ಎಂದು ತೋರುತ್ತೆ. ದೇವರಹೊಸಹಳ್ಳಿ ಜಾತ್ರೆಯಲ್ಲಿ ಇದು ಪ್ರಕಟಕ್ಕೆ ಬರಬಹುದಿತ್ತು. ಆದರೆ ಪೋಲೀಸಿನವರ್‍ಯಾರೂ ಬಂದಿರಲಿಲ್ಲ.—ವೆಂಕನಾಯ್ಕನ ಹೊಸಹಳ್ಳಿ ಎಂಬಲ್ಲಿ ಒಬ್ಬನಿಗೆ ನಾಗರಹಾವು ಕಚ್ಚಿತು. ಅಮಲ್ದಾರ್ರ ಜವಾನ ನರಸೋಜಿ ಎಂಬಾತನು ಬೇವಿನ ಸೊಪ್ಪನ್ನು ಕಡಿದ ಸ್ಥಳಕ್ಕೆ ಬಡಿಯುತ್ತಾ ಮಂತ್ರ ಹಾಕಿ 8-10 ನಿಮಿಷಗಳಲ್ಲಿ ವಾಸಿಮಾಡಿದನು. ಅವನು ನಗುತ್ತಾ ತನ್ನೂರಿಗೆ ಹೋದನು.—ಥಿಯೊಸಾಫಿಕಲ್ ಸೊಸೈಟಿಯ ಒಬ್ಬ ಉಪದೇಶಕರು ಇಲ್ಲಿಗೆ ಬಂದು ಜನರು ಲೋಕಹಿತಾರ್ಥವಾಗಿ ಕೆಲಸಮಾಡುತ್ತಾ ಇರಬೇಕೆಂದೂ, ಸದ್ಗುಣ ಸದಾಚಾರಸಂಪನ್ನರಾಗಿರಬೇಕೆಂದೂ ಉಪನ್ಯಾಸ ಮೂಲಕವೂ ಹರಿಕಥೆಯ ಮೂಲಕವೂ ತಿಳಿಸಿದರು.

ಶಿಕಾರಿಪುರ.—ಹಿಂದಿನ ಗುರುವಾರ ಮ|| ಜಿ ಶಾಂತವೀರಪ್ಪನವರು ಮ|| ಎಸ್ ನಾರಾಯಣರಾಯರಿಂದ ಈ ತಾಲ್ಲೂಕು ಅಮಲ್ದಾರಿ ಛಾರ್ಜು ಪಡೆದುಕೊಂಡರು.—ಈಗ 15 ದಿನಗಳಿಂದ ಮಳೆ ಇಲ್ಲದೆ ಪೈರುಗಳೆಲ್ಲಾ ಒಣಗುತ್ತಲಿವೆ. ಆಹಾರ ಜಿನಸಿಗಳು ಬಹಳ ದುಬಾರಿ ಆಗಿದೆ. ಇದರಲ್ಲೂ ಈ ಟವುನಿನ ವ್ಯಾಪಾರಸ್ಥರಲ್ಲಿ ಸರಿಯಾದ ತೂಕ, ಅಳತೆ ಸಾಧನಗಳು ಇಲ್ಲದೆ ಬಹಳ ತೊಂದರೆ ಆಗಿದೆ. ಮ್ಯುನಿಸಿಪಲ್ ಕೌನ್ಸಿಲ್‌ನವರು ಸರ್ಕಾರದ ಮೊಹರು ಹಾಕಿದ ಕೆಲವು ಅಳತೆ ಸಾಧನಗಳನ್ನು ತರಿಸಿ ವ್ಯಾಪಾರಸ್ಥರಿಗೆ ಒದಗಿಸಿದರೆ ಅನುಕೂಲ. ಆದರೆ ಅವರು ವ್ಯಾಪಾರಸ್ಥರೇ ಆಗಿರುತ್ತಾರೆ.—ಮ|| ಅಮಲ್ದಾರ್ ಶಾಂತವೀರಪ್ಪನವರು ಬಂದು ಊರೊಳಗೆ ಕಟ್ಟಿಸಿದ್ದ ಸಂತೆಯನ್ನು ನೋಡಿದರು. ಈಗ 15 ದಿನದ ಹಿಂದೆ ಕ್ಯಾಂಪಿನಲ್ಲಿ ಪುನಃ ಒಂದು ಪ್ಲೇಗುಕೇಸು ಆಯಿತು. ಈ ಕಾರಣದಿಂದಲೂ, ಕೇವಲ ಇಕ್ಕಟ್ಟಾದ ಪ್ರದೇಶದಲ್ಲಿ ಬಹು ಜನರು ಊರೊಳಗೆ ಸೇರುವದು ಅನಾರೋಗ್ಯಕರವೆಂದು ಅಮಲ್ದಾರ್ರವರು ಯೋಚಿಸಿ ಸಂತೆಯಲ್ಲಿ ಪರಸ್ಥಳದಿಂದ ಬಂದಿರತಕ್ಕ ವ್ಯಾಪಾರಸ್ಥರನ್ನೂ, ಇಲ್ಲಿಯ ಕೆಲವು ಅಕ್ಕಿ ಮೊದಲಾದ ವ್ಯಾಪಾರಸ್ಥರನ್ನೂ ಸಂತೆ ಯಾವ ಸ್ಥಳದಲ್ಲಿ ನಡಿಸಿದರೆ ಅನುಕೂಲವೆಂದು ಕೇಳಲು, ಆಸ್ಪತ್ರೆ ಬೈಲಿನಲ್ಲಿ ಮಾಮೂಲಿನಂತೆ ನಡಿಸುವದು ಸರ್ವರಿಗೂ ಅನುಕೂಲವೆಂದು ಹೇಳಿದರು. ಪೇಟೆ ವರ್ತಕ ಮೆಂಬರುಗಳ ಮನೆ ಬಾಗಿಲಿಗೆ ಹೋಗಿ ನಮ್ಮ ಅಮಲ್ದಾರ್ರವರು ಊರೊಳಗೆ ಸಂತೆ ನಡೆಯುವದರಿಂದ ಉಂಟಾಗುವ ಕಷ್ಟಗಳನ್ನೆಲ್ಲಾ ತಿಳಿದರು. ಇವರು ಸಾರ್ವಜನ ಹಿತಕರವಾಗಿ ಮಾಡಿದ ಬೋಧನೆಯು ಕ್ಷೇಮಕರವಾಗಿತ್ತು. ಆದರೂ ಸ್ವಪ್ರಯೋಜನವನ್ನರಿಯುವ ವರ್ತಕರಿಗೆ ನಮ್ಮ ಅಮಲ್ದಾರ್ರವರ ಹೇಳಿಕೆಯು ಹಿತಕರವಾಗಿ ಕಾಣಲಿಲ್ಲ. ಆದಾಗ್ಯೂ ನಮ್ಮ ಅಮಲ್ದಾರ್ರವರು ಸರ್ವ ಜನೋಪಕಾರವಾದ ಈ ಸಂತೆಯನ್ನು ಆಸ್ಪತ್ರೆ ಮೈದಾನಿನಲ್ಲಿ ನಡಿಸುವ ಏರ್ಪಾಡುಮಾಡಿಯಾರೆಂದು ನಂಬಿದೇವೆ.

ಮಳವಳ್ಳಿ.—ಈ ಊರಿನಲ್ಲಿ ಮಳೆ ಇಲ್ಲ. ಬಿಸಿಲು ಕಾಯುತ್ತಿದೆ. ಅನೇಕ ಹೊಲಗಳನ್ನು ಇನ್ನೂ ಬಿತ್ತಿ ಇಲ್ಲ. ಬಿತ್ತಿದ್ದ ಹೊಲಗಳಲ್ಲಿ ಪೈರು ಸುಟ್ಟು ಹೋಯಿತು. ಕೆರೆ ಕಟ್ಟೆಗಳಲ್ಲಿ ನೀರು ಬತ್ತಿಹೋಗಿ ಜನ ಜಾನುವಾರುಗಳಿಗೆ ಕುಡಿಯುವ ನೀರಿಗೆ ದುರ್ಭಿಕ್ಷವಾಗಿದೆ. ಮನೆ ಭಾವಿಗಳಲ್ಲೂ ನೀರು ಬತ್ತಿಹೋಗುತ್ತಾ ಇವೆ. ಧಾರಣೆವಾಸಿಗಳು ಏರುತ್ತಾ ಇವೆ. ಮ್ಯುನಿಸಿಪಲ್ ಲಾಂದ್ರಗಳಲ್ಲಿ ರಾತ್ರಿ ವೇಳೆ ಬೆಳಕು ಬೀಳುವುದಿಲ್ಲ. ಇವನ್ನು ನಮ್ಮ ಅಮಲ್ದಾರ್ರವರು ಕ್ರಮಪಡಿಸಿದರೆ ರಾತ್ರಿ ಕಾಲ ತಿರುಗಾಡುವ ಜನಗಳಿಗೆ ಸಹಾಯವಾದೀತು.—ಕಳೆದ ಬುಧವಾರ ಇಲ್ಲಿನ ರೆವ್. ಟಿ ಫೇಸೆಂಟ್ ಸಾಹೇಬರು ಗ|| ಗರಲ್ಸ್ ಸ್ಕೂಲಿಗೆ ಬಂದು ಬಾಲಕಿಯರ ಮತ್ತು ಮಾಸ್ಟರುಗಳ ಫೋಟೋ ತೆಗೆದರು. ಮಧ್ಯಾಹ್ನ ಈ ಸ್ಕೂಲಿನಲ್ಲಿ ಬಾಲಕಿಯರೆಲ್ಲಾ ಸೇರಿ ಸರಸ್ವತಿ ಪೂಜೆಯನ್ನು ವಿಜೃಂಭಣೆಯಿಂದ ಮಾಡಿದರು. ಆಗ್ಗೆ ಊರಿನ ಮುಖಂಡರುಗಳೆಲ್ಲಾ ಕರೆಯಲ್ಪಟ್ಟು, ಅವರು ಬಾಲಕಿಯರ ಗಾನ ವಿನೋದಗಳನ್ನು ನೋಡಿ ಸಂತೋಷಪಟ್ಟರು. ಈಗಿನ ಹೆಡ್ ಮಿಸ್ಟ್ರೆಸ್‌ರವರು ಮುತುವರ್ಜಿ ವಹಿಸಿ ಕೆಲಸಮಾಡುತ್ತಿರುವುದರಿಂದ ಸ್ಕೂಲು ಬಹಳ ಅಭಿವೃದ್ಧಿಸ್ಥಿತಿಗೆ ಬರುತ್ತಿದೆ.—ಪುರವಾಸಿಗಳೆಲ್ಲರೂ ಸೇರಿ ಬಹಳ ದಿವಸಗಳಿಂದಲೂ ಮಾಡಿಸುತ್ತಿದ್ದ ಕೆರೆ ಬಳಿಯ ಹೂವಿನ ತೋಟವನ್ನು ಈಗ್ಗೆ ವರುಷದಿಂದ ಹಾಳುಗೆಡವಿರುತ್ತಾರೆ. ಮತ್ತು ಇದರಲ್ಲಿ ಪಾಪಾಸುಕಳ್ಳಿ ಬೆಳೆಯುವದು. ಇದೇ ಊರಿನಲ್ಲಿ ಟೌನ್ ಹಾಲೆಂಬ ಕಟ್ಟಡ ಕಟ್ಟಿಸಿ ಹೆಸರುಗೊಂಡಿರುವ ದಯಾಳುಗಳಾದ ನಮ್ಮ ಅಮಲ್ದಾರ್ರವರು ಈ ವಿಷಯವನ್ನು ತಮ್ಮ ಚಿತ್ತಕ್ಕೆ ತಂದು ಮ್ಯುನಿಸಿಪಾಲಿಟಿಯಿಂದ ಈ ತೋಟವನ್ನು ಮಾಡಿಸುವರೆಂದು ಹಾರೈಸುತ್ತೇವೆ.—ಈ ಊರಿನಲ್ಲಿ ನಡೆದ ದೊಂಬಿ ಮೊಕದ್ದಮೆಯಲ್ಲಿ ಸರ್ಕಾರದವರು ಕಠಿಣವಾದ ಕ್ರಮವನ್ನು ಇನ್ನೂ ಯಾಕೆ ತೆಗೆದುಕೊಳ್ಳಲಿಲ್ಲವೋ ಗೊತ್ತಾಗಲಿಲ್ಲ. ದಂಗೆಕೋರರನ್ನು ಢೀಲಿ ಬಿಡುವುದರಿಂದ ಸಭ್ಯ ಪ್ರಜೆಗಳಿಗೆ ಕಂಟಕವಾದೀತೆಂದು ಹೇಳುತ್ತಿದಾರೆ.

ಕಡೂರು.—ಈಗ 5-6 ದಿವಸದಿಂದ ಮೋಡ ಕಟ್ಟಿಕೊಂಡಿದೆ. ಮಳೆ ಮಾತ್ರ ಇಲ್ಲ. ರಾಗಿಯ ಪೈರು ಒಣಗುತ್ತಾ ಇದೆ. ಅಕ್ಕಿ 5½ 6 ಸೇರು, ರಾಗಿ ಜೋಳ 14-15 ಸೇರು ಮಾರಾಟ ಇದೆ. ಬಡಜನಗಳ ಜೀವನಕ್ಕೆ ಬಹಳ ತೊಂದರೆ ಆಗಿದೆ.—ಈ ಟವನ್ನಲ್ಲಿ ರಾತ್ರಿ ಹೊತ್ತು ಪೋಲೀಸ್ ಗಸ್ತು ತಿರುಗುವ ಪದ್ಧತಿ ಇಲ್ಲ. ಹಗಲು ಹೊತ್ತು ಸ್ಟೇಷನ್ನಿನಲ್ಲಿ ಕಾನಸ್ಟೇಬಲ್‌ಗಳು ತುಂಬಿಕೊಂಡಿರುತ್ತಾರೆ. ಇದು ಕ್ರಮಪಡಬೇಕಾಗಿದೆ.—ಸರ್ಕಾರಿ ಅನ್ನಛತ್ರದಲ್ಲಿ ಪರಸ್ಥಳದವರಿಗೆ ಸರಿಯಾಗಿ ಸದಾವರ್ತಿ ಸಿಕ್ಕುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಗ್ರಾಮದ ಪಟೇಲರಿಗೆ ಈ ಛಾರ್ಜು ವಹಿಸಿರುತ್ತಾರೆ. ಅವರು ಹಳ್ಳಿ ಸರ್ಕಾರಿ ಕೆಲಸ ಕಾರ್ಯಗಳಿಗೆ ಹೋಗಿ ಮಧ್ಯಾಹ್ನ 1-2 ಗಂಟೆಗೆ ಬರುತ್ತಾರೆ. ಪರಸ್ಥಳದವರು ಇವರ ಮನೆ ಬಾಗಿಲು ಕಾದು ಸಾಕಾಗಿ ಹಾಗೆಯೇ ಹೋಗುವರು. ಇದರಿಂದ ತಿಂಗಳಿಗೆ 15-20 ರೂಪಾಯಿ ಛತ್ರದಿಂದ ಸರ್ಕಾರಕ್ಕೆ ಉಳಿಯುತ್ತಿದೆ. ಈ ತೊಂದರೆಯನ್ನು ತಪ್ಪಿಸಿಕೊಡಬೇಕಾಗಿದೆ.—ಸ್ಕೂಲ್ ಒಳ್ಳೇ ಅಭಿವೃದ್ಧಿ ಸ್ಥಿತಿಯಲ್ಲಿದೆ. ಸುಮಾರು 190 ಹುಡುಗರು ಓದುತ್ತಾರೆ. ಈಗ ಇರುವ ಹೆಡ್ ಮಾಸ್ಟರು ಬಹಳ ಮುತುವರ್ಜಿಯಿಂದ ಕೆಲಸಗಳನ್ನು ಮಾಡುತ್ತಾರೆ.—ಯಗಟಿ ಬಿದರೆ ಹೋಬಳಿ ಸಣ್ಣ ಸಣ್ಣ ಗ್ರಾಮಗಳಲ್ಲಿ ಕಾಲರಾ ರೋಗದಿಂದ 400 ಜನರವರೆಗೆ ಮೃತಪಟ್ಟರು. ಈಗ 15 ದಿವಸದಿಂದ ರೋಗದ ಉಪದ್ರ ನಿಂತು ಇತ್ತು. ಪುನಃ ಆಸಂದಿ ಎಂಬ ಗ್ರಾಮದಲ್ಲಿ ಕಾಲರಾ ತಲೆದೋರಿ 5 ಜನರು ಮೃತಪಟ್ಟರು. ಇಂಥಾ ಕಾಲಗಳಲ್ಲಿ ಯಗಟಿಯಲ್ಲಿರುವ ಪೋಲೀಸ್ ಒಮೇದಾರ್ ಅಪ್ಪಾರಾಯರು ಜಾತಿವಾರು 8-9 ಭಾವಿಗಳು ತೋಡಿಸಿ ಆ ನೀರನ್ನು ಆಯಾ ಜಾತಿಯವರು ಕುಡಿಯುವಂತೆ ಏರ್ಪಾಡುಮಾಡಿಸಿದ್ದಲ್ಲದೆ ಸ್ವಂತ ಬಾಬತಿನಿಂದ ಔಷಧ ತರಿಸಿ ರೋಗಿಗಳಿಗೆ ಕುಡಿಸಿ ಅಕ್ಕರೆಯಿಂದ ಸಾಮಾನು ತರಿಸಿ ಎಲ್ಲರಿಗೂ ಹಂಚಿ ಮಹದುಪಕಾರ ಮಾಡಿದರು.—ಇವರು ಯಗಟಿಯಲ್ಲಿ ಕೋಆಪರೇಟಿವ್ ಸೊಸೈಟಿ ಏರ್ಪಡಿಸಿ ಅದಕ್ಕೆ ಪ್ರೆಸಿಡೆಂಟರಾಗಿ ಸ್ವಲ್ಪ ಕಾಲದಲ್ಲೇ 2,000 ರೂಪಾಯಿ ವರೆಗೆ ಷೇರುಗಳು ಜಮಾಯಿಸಿ ಬಡಬಗ್ಗರಿಗೆ ಸಾಲಗಳು ಕೊಡಿಸುತ್ತಾ ಇದಾರೆ. ಇವರೇ ಇನ್ನೂ ಕೆಲವು ಕಾಲ ಇಲ್ಲಿದ್ದರೆ ಈ ಸೊಸೈಟಿ ಉತ್ತಮಸ್ಥಿತಿಗೆ ಬರಬಹುದು.—ಯಗಟಿ ಹನುಮಂತರಾಯ ದೇವರ ಹೆಸರಿನಿಂದ ಕೇರು ಕಟ್ಟಲು 1,000 ರೂಪಾಯಿ ವರೆಗೆ ಭಕ್ತಾದಿಗಳಿಂದ 8 10 ವರ್ಷದಿಂದಲೂ ಜಮಾಯಿಸಿದ್ದು 2-3 ಜನರು ಅಪಹಾರಮಾಡಿದರೆಂದು ವರ್ತಮಾನ ಬಂದು ಶೇಕ್ದಾರ್ ಮ|| ರಂಗಯ್ಯಂಗಾರ್ಯರು ವಿಚಾರಿಸುತ್ತಾ ಇದಾರೆ. ಅಮಲ್ದಾರ್ರವರು ವಿಚಾರಿಸಿ ಕ್ರಮಪಡಿಸಿ ಕೀರ್ತಿ ಹೊಂದಬೇಕಾಗಿದೆ.

ಚಿತ್ರದುರ್ಗ.—ಮಳೆ ರುದ್ಧಾಂಗವಾಗಿ ನಿಂತುಹೋಗಿ ಬಿಸಿಲು ಬಹಳ ಜಾಸ್ತಿಯಾಗಿ ವಿಶೇಷ ಗಾಳಿ ಬೀಸುತ್ತಾ ಇರುವದರಿಂದ ಈಗ ಬೆಳೆಯುತ್ತಿರುವ ಫಸಲುಗಳು ಒಣಗುತ್ತಾ ಇವೆ. ಚಳಿಜ್ವರಗಳು ಊರಲ್ಲೆಲ್ಲಾ ಹಬ್ಬಿಕೊಂಡಿವೆ. ಮ್ಯುನಿಸಿಪಾಲಿಟಿ ಏರ್ಪಾಡು ಚೆನ್ನಾಗಿಲ್ಲ. ಜನಗಳಿಂದ ಕಂದಾಯ ವಸೂಲ್ಮಾಡಿ ಝಾಡಮಾಲಿಗಳಿಂದ ದೊಡ್ಡ ದೊಡ್ಡ ಬೀದಿಗಳನ್ನು ಗುಡಿಸಿಸುವದು ಅವರ ಕರ್ತವ್ಯವೆಂದು ಭಾವನೆಯಾಗಿದೆ. ಪ್ರಜೆಗಳ ಅನಾರೋಗ್ಯಕರವಾದ ಹಲವು ಕೃತ್ಯಗಳನ್ನು ನಿಲ್ಲಿಸಲಿಕ್ಕೆ ಅವರು ಸ್ವಲ್ಪವೂ ಪ್ರಯತ್ನಪಡುವದಿಲ್ಲ. ಇದರಿಂದ ಪ್ಲೇಗ್, ಕಾಲರಾ ಎಲ್ಲಿ ಹುಟ್ಟೀತೋ ಎಂಬ ಭೀತಿ ಉಂಟು. ಮನುಷ್ಯನ ಆಹಾರದ ದಿನಸಿನ ಧಾರಣೆ ಕ್ಷಾಮಕಾಲಕ್ಕಿಂತಲೂ ತುಟ್ಟಿಯಾಗಿದೆ. ಆದರೆ ನಿಜವಾದ ಕ್ಷಾಮ ಸ್ವಲ್ಪ ಕಾಲವೇ ಇರತಕ್ಕದ್ದು. ಆ ಕಾಲಗಳಲ್ಲಿ ಗೌರ್ನಮೆಂಟಿನವರ ಸಹಾಯ ಪ್ರಜೆಗಳಿಗೆ ಇದ್ದೇ ಇರುತ್ತಾದ್ದರಿಂದ ಆ ಕ್ಷಾಮ ಹ್ಯಾಗಾದರೂ ಕಳೆಯಬಹುದು. ಈಗ್ಗೆ 3 ವರ್ಷದಿಂದ ಉಂಟಾಗಿರತಕ್ಕ ಸುಭಿಕ್ಷದಲ್ಲಿನ ಕ್ಷಾಮದಲ್ಲಿ ಕೊಂಡು ತಿನ್ನತಕ್ಕವರೂ, ಬಡವರೂ ನೆಲಹತ್ತಿಬಿಟ್ಟರು. ಈ ಕ್ಷಾಮ ಕಳೆಯತಕ್ಕದ್ದು ಬಹಳ ಕಷ್ಟವಾಗಿ ಇದೆ.—ಇಲ್ಲಿಂದ ವರ್ಗಪಟ್ಟ ಪೋಲೀಸ್ ಸೂ|| ಮೈ ಪಿ ಕೃಷ್ಣಮೂರ್ತಿಯವರು ಮ|| ಸಿ ಮಾಚಯ್ಯನವರಿಗೆ ಛಾರ್ಜು ಕೊಟ್ಟು ತೆರಳಿದರು. ಇಲ್ಲಿಂದ ಚನ್ನರಾಯಪಟ್ಟಣಕ್ಕೆ ವರ್ಗಪಟ್ಟ ಅಮಲ್ದಾರ್ ಮೆ|| ಜಿ ವೆಂಕಟರಾಯರವರು ಇನ್ನೂ ಇಲ್ಲೇ ಇದಾರೆ.—ಮೆ|| ಜಿ ವೆಂಕಟರಾಯರವರನ್ನು ಹೆಚ್ಚು ಜವಾಬ್ದಾರಿ, ಅಧಿಕಾರ ಸಹ ಇರತಕ್ಕ ಅಮಲ್ದಾರಿ ಕೆಲಸದಲ್ಲಿ ಇಡುವದಕ್ಕಿಂತಲೂ ಇನ್ನೂ ಹೆಚ್ಚು ಸಂಬಳಕೊಟ್ಟು ಸೆಕ್ರೆಟೇರಿಯಟ್ಟಿನಲ್ಲಿ ಇಟ್ಟರೆ ಉತ್ತಮವಂತೆ ತೋರುತ್ತಿದೆ. ಗೌರ್ನಮೆಂಟಿನವರು ಸ್ಥಳಿಕರಾದ ಅಧಿಕಾರಿಗಳನ್ನೂ, ಅವರ ಅಧಿಕಾರ ಸರಹದ್ದಿನಲ್ಲಿ ಅವರಿಗೆ ಬಂಧುತ್ವ, ಇತರೇ ಸಂಬಂಧ ಇರತಕ್ಕವರನ್ನೂ ಇಡದೆ ಆಗಾಗ್ಗೆ ವರ್ಗಾಯಿಸತಕ್ಕದ್ದೂ, ಅನುಭವವಿಲ್ಲದ ದೊಡ್ಡ ವಿದ್ಯಾವಂತರಾದ ಚಿಕ್ಕವಯಸ್ಸಿನವರನ್ನು ಹೆಚ್ಚು ಅಧಿಕಾರವುಳ್ಳ ದೊಡ್ಡ ದೊಡ್ಡ ಕೆಲಸಗಳಿಗೆ ನೇಮಿಸದೇ ಇರತಕ್ಕದ್ದೂ. ಈ ರೀತಿ ಮಾಡಿದರೆ ದೇಶಕ್ಕೆ ಸುಖವಾದೀತು.

ಶಿಕಾರಿಪುರ ತಾ|| ಕಪ್ಪನಹಳ್ಳಿ.—ಈಗ 15-20 ದಿನಗಳಿಂದ ಮಳೆ ಸುತರಾಂ ಇಲ್ಲ. ಬೇಸಗೆಯಂತೆ ಬಿಸಿಲು ಸುರಿಯುತ್ತದೆ. ಭತ್ತದ ಪೈರು ಮತ್ತೈರೆಗಳಿಗೆ ಈಗ ಮಳೆ ಬೇಕೇ ಬೇಕು.—ಗ್ರಾಮ ಪಾಕೀಜಾ ಚೆನ್ನಾಗಿಲ್ಲ. ಚರಂಡಿಗಳು ಇಲ್ಲದಿದ್ದರಿಂದ ಊರಲ್ಲಿ ಸಲೀಸಾಗಿ ಹರಿಯುವ ನೀರಿಗೆ ಆಟಂಕವಾಗಿ ಅಲ್ಲಲ್ಲಿ ನೀರು ನಿಂತು ಕಸಕಡ್ಡಿಯೊಡನೆ ಕೂಡಿ ಕೊಳೆತು ದುರ್ವಾಸನೆಯೂ, ಕೆಸರೂ ತುಂಬಿದೆ. ಓಣಿಗಳಲ್ಲಿ ಕೆಸರೂ, ಜಲಮಲ ವಿಸರ್ಜನೆಯೂ, ಗೊಬ್ಬರ ಗೋಡುಗಳೂ, ದಟ್ಟವಾಗಿ ಬೆಳೆದ ಮುಳ್ಳುಹರಳಿ ಗಿಡಗಳೂ ತುಂಬಿವೆ. 200 ಮನೆಗಳೂ, 800 ಪ್ರಜಾಸಂಖ್ಯೆ ಇರಬಹುದಾದ ಈ ದೊಡ್ಡ ಗ್ರಾಮಕ್ಕೆ ಗ್ರಾಮ ಪಾಕೀಜಾ ವಿಷಯದಲ್ಲಿ ಪಟೇಲರು ಹೆಚ್ಚಾಗಿ ನಿಗಾಕೊಟ್ಟು ಮೇಲ್ಕಂಡ ಗಲೀಜನ್ನೆಲ್ಲಾ ತೆಗಿಸಬೇಕಾಗಿದೆ.—ಈ ಊರ ಒಡ್ಡರ ದುರ್ಗನೆಂಬುವನು 6-7 ವರ್ಷದ ತನ್ನ ಮಗನನ್ನೂ, 1 ನಾಯನ್ನೂ ಬಹು ಪ್ರೀತಿಯಿಂದ ಸಾಕುತ್ತಿದ್ದನು. ಆ ನಾಯಿಗಾದರೋ ಯಜಮಾನನ ಮೇಲೂ, ಅವನ ಮಗನ ಮೇಲೂ ಬಹು ಪ್ರೇಮ. ಹೀಗಿರುವಲ್ಲಿ ಈಗ 15-20 ದಿನಗಳ ಮುಂಚೆ ಅಕಸ್ಮಾತ್ ನಾಯಿ ಸ್ನೇಹಿತನಾದ ಯಜಮಾನನ ಮಗನು ಮೃತಪಟ್ಟನು. ಅವನ ತಾಯಿತಂದೆಗಳು ರೋಧಿಸಲಿಕ್ಕೆ ಪ್ರಾರಂಭಿಸಿದರು. ನಾಯಿಯು ಮೃತನ ಶರೀರವನ್ನು ಮೂಸಿ ನೋಡುತ್ತಾ, ಆ ಕ್ಷಣಕ್ಕೆ ಬಿದ್ದು ಹೊರಳಾಡುತ್ತಾ, ತಾನೂ ರೋಧಿಸುತ್ತಿದೆ ಎಂಬಂತೆ ಮುಖವನ್ನೂ ಕಿವಿಗಳನ್ನೂ ಜೋಲುಬಿಡಿಸಿ ಮೌನವಾಗಿದ್ದು, ಯಜಮಾನನು ರೋಧಿಸುವುದನ್ನು ಕಂಡು ಮೇಲಕ್ಕೆ ಎದ್ದು ಅತನು ಹೊದ್ದ ಪಂಚೆಯಲ್ಲಿ ತನ್ನ ಮುಖವನ್ನು ಇಟ್ಟು ಕಣ್ಣೀರನ್ನು ಒರಸುತ್ತಾ, ತಾನು ಕೆಲಹೊತ್ತು ಮೌನವಾಗಿ ಕುಳಿತುಕೊಳ್ಳುತ್ತಾ ಇದ್ದದ್ದನ್ನು ಕಂಡು ಅಲ್ಲಿದ್ದವರೆಲ್ಲಾ ಬೆರಗಾದರು. ಆ ಮೇಲೆ ಶವವನ್ನು ಸ್ಮಶಾನಕ್ಕೆ ಹೊಯ್ದು ಹೂಳಿದರು. ತಾನೂ ಶವದ ಸಂಗಡ ಹೋಗಿ ಯಜಮಾನನ ದುಃಖಕ್ಕೆ ತಾನೂ ಭಾಗಿಯೆಂಬಂತೆ ಮನೆಗೆ ಬಂದು ಆ ಲಾಗಾಯ್ತು ಇದುವರೆಗೂ ಬೆಳಗ್ಗೆ ಸಾಯಂಕಾಲ ಎರಡು ಹೊತ್ತು ಶವವನ್ನು ಹೂಳಿದ ಸ್ಥಳಕ್ಕೆ ಹೋಗಿ ಗುಡ್ಡೆಯನ್ನು ಎರಡು ಮೂರಾವರ್ತಿ ಸುತ್ತಿ ಕೆಲಹೊತ್ತು ಅಲ್ಲೇ ಇದ್ದು ಬರುವಾಗ್ಗೆ ಒಂದು ವಿಧವಾಗಿ ಕೂಗಿ ಮನೆಗೆ ಬರುತ್ತದೆ. ಪ್ರತಿ ದಿನವೂ ಈ ಕೆಲಸವನ್ನು ತೀರಿಸಿಕೊಂಡು ಅನ್ನ ತಿನ್ನುವುದೇ ಹೊರತು ಅಲ್ಲಿಯ ವರೆವಿಗೂ ಆಹಾರವನ್ನು ಮುಟ್ಟುವುದಿಲ್ಲ. ಈ ಮೂಗ ಪ್ರಾಣಿಯಲ್ಲಿ ಇಷ್ಟರ ಮಟ್ಟಿನ ಸ್ವಾಮಿಭಕ್ತಿ ಇರುವದನ್ನು ಕಂಡು ಈ ಹಳ್ಳಿಯವರೆಲ್ಲಾ ಬೆರಗಾಗಿದಾರೆ.

ಚಿತ್ರದುರ್ಗ ತಾ|| ಮಾಯಕೊಂಡ.—ಇಲ್ಲಿ ಮಳೆ ಇಲ್ಲದೆ ಪೈರುಗಳು ಒಣಗುತ್ತಾ ಇವೆ. ಈಗ 4-6 ದಿವಸಗಳಿಂದ ಮೋಡವೂ ಸಹ ಕಾಣುವದಿಲ್ಲ. ಧಾರಣೆಯು ರಾಗಿ ಜೋಳ ಸಹಾ ಬಹಳ ತುಟ್ಟಿಯಾಗಿದೆ. ಅಕ್ಕಿ ಮಾತ್ರ 5½-6 ಸೇರು ಇದೆ.—ಇಲ್ಲಿನ ಮ|| ತಳವಾರ್ ಹನುಮಂತಪ್ಪನವರು ಕಟ್ಟಿಸಿರತಕ್ಕ ಗರ್ಲ್ಸ್ ಸ್ಕೂಲು ತಯಾರಾಗಿರುತ್ತೆ. ಅದನ್ನು ಈ ವಾರ ಸ್ಥಾಪನೆಮಾಡುತ್ತಾರೆ. ಇವರು ಬಹಳ ಉದಾರಗುಣದಿಂದ ಬಾಲಕಿಯರಿಗೆಲ್ಲಾ ಪುಸ್ತಕಗಳು, ಸ್ಲೇಟು, ಕಾಗದಗಳು ಮತ್ತು ಅನಾಥ ಬಾಲಕಿಯರಿಗೆಲ್ಲಾ ವಸ್ತ್ರಗಳು, ಉಡುಪುಗಳು ಸಹಾ ಹಂಚುತ್ತಾರೆ.—ಇಲ್ಲಿ ರೈಲ್ವೆ ಸ್ಟೇಷನ್ ಮಾಸ್ಟರು ಮ|| ಗೋಪಾಲರಾಯರಿಗೆ ವರ್ಗವಾಯಿತೆಂದು ಬಹಳ ಜನಗಳು ವ್ಯಸನಪಡುತ್ತಾರೆ. ಇವರು ದಯಾಳುಗಳು, ಸತ್ಯಸಂಧರು, ಬಹಳ ಮರ್ಯಾದೆಯುಳ್ಳವರು, ಬಡವರಿಗೆ ಒಳ್ಳೆ ನಡತೆಯುಳ್ಳವರು. ಇವರು ಇನ್ನೂ ಕೆಲವು ಕಾಲ ಇಲ್ಲೇ ಇದ್ದಾರೆಂದು ಬಹಳ ಸಂತೋಷದಿಂದ ಇದ್ದೆವು. ಇವರು ಇಲ್ಲಿಗೆ ಬಂದ 1 ವರುಷದಿಂದ ಜನಗಳಿಗೆ ತಪ್ಪೇ ಕೊಡುತ್ತಿರಲಿಲ್ಲ. ಇನ್ನುಮುಂದೆ ಎಂಥವರು ಬರುತ್ತಾರೋ ಗೊತ್ತಿಲ್ಲ.—ಇಲ್ಲಿ ಯೂನಿಯನ್ ಆಗಿ ಸುಮಾರು 6 ವರುಷವಾಗುತ್ತಾ ಬಂತು. ಲಾಂದ್ರ ಕಂಭಗಳು ಇನ್ನೂ ಇಲ್ಲ. ಇದು 3,000 ಪ್ರಜೆಗಳು ಇರತಕ್ಕ ಊರು. ರಾತ್ರಿ ಕಾಲಗಳಲ್ಲಿ ಸಂಚರಿಸುವದು ಕಷ್ಟವಾಗಿದೆ. ನಾಯಿಗಳ ಹಾವಳಿ ಜಾಸ್ತಿ.

ಯಾಗಿರುತ್ತೆ ನಮ್ಮ ಅಮಲ್ದಾರ್ರವರು ಜಾಗ್ರತೆಯಿಂದ ಇದನ್ನು ಸರಿಪಡಿಸಿ ಪ್ರಜೆಗಳಿಗೆ ಸುಖವನ್ನುಂಟುಮಾಡುತ್ತಾರೆಂದು ನಂಬಿರುತ್ತೇವೆ — ಇಲ್ಲಿ ಇಸ್ಪೀಟ್ ಹೆಡ್ ಬುರುಸು ಆದಕಕ್ಕವರ ಸಂಖ್ಯೆ ಜಾಸ್ತಿಯಾಗಿರುತ್ತೆ ಊರಲ್ಲಿ ಎಲ್ಲಿ ನೋಡಿದರೂ ಜೂಜುಗಾರರ ಗುಂಪೇ ಇರುತ್ತೆ ಇವರನ್ನು ನಮ್ಮ ಅಮಲ್ದಾರ್ರವರು ಬಂದೋಬಸ್ತು ಮಾಡಿಯಾರೆಂದು ನಂಬಿರುತ್ತೇವೆ — ಊರಲ್ಲಿ ಅಲ್ಲಲ್ಲಿ ಕಳ್ಳತನಗಳು ಜಾಸ್ತಿಯಾಗಿವೆ 11-12 ದಿವಸದ ಮುಂದೆ ಇಲ್ಲಿನ ಗುಜರ್ ಸಿಂಗಪ್ಪನವರ ಮನೆಗೆ ಕಳ್ಳರು ಕನ್ನಾಹಾಕಿ ಕಳುವುಮಾಡಿಕೊಂಡು ಹೋಗಿರುವದು ಇನ್ನೂ ಪತ್ತೆ ಆಗಿಲ್ಲ ನಮ್ಮ ಪೋಲೀಸ್ ಇನ್ಸ್‌ಪೆಕ್ಟರವರು ಪತ್ತೆ ತರದೂ ದಿನಲ್ಲಿದಾರೆಂದು ಕೇಳಿರುತ್ತೇವೆ — ಈ ಊರಲ್ಲಿ ಸ್ಕೂಲು ಇಲ್ಲ ಕೂಲಿ ಮಠ ಇರುತ್ತಾ, ಸ್ಕೂಲು ಕಟ್ಟಿಸಬೇಕೆಂದು ಹಣ ಎತ್ತಿರುತ್ತಾರೆ ಇದುವರೆಗೂ ಸ್ಕೂಲು ತಯಾರಾಗಲಿಲ್ಲ ನಮ್ಮ ಅಮಲ್ದಾರ್ರವರು ಜಾಗ್ರತೆಯಿಂದ ಕಟ್ಟಿಸಿಕೊಟ್ಟು ಪ್ರಜೆಗಳ ಬಾಲಕರಿಗೆ ವಿದ್ಯಾವ್ಯಾಸಂಗಮಾಡಿಸುತ್ತಾರೆಂದು ನಿರೀಕ್ಷಿಸುತ್ತೇನೆ — ಇಲ್ಲಿನ ಕೆರೆಯು ಎಲ್ಲಾ ಭಾಗದಲ್ಲೂ ದುರಸ್ತಾಗಿದೆ ತೂಬು ಮಟ್ಟಿಗೆ ಇನ್ನೂ ತಯಾರಾಗಿಲ್ಲ ಮಳೆಗಾಲ ಪೂರೈಸುತ್ತಾ ಬಂತು ಇನ್ನಾದರೂ ಜಾಗ್ರತೆಮಾಡಿಸಬೇಕಾಗಿ ಪ್ರಾರ್ಥನೆ — ಭಾವಿಗೆ ಕಲ್ಲು ಕಟ್ಟಿಸಿದವಿಲ್ಲ ಸೇದುವದು ಪ್ರಯಾಸ ಮತ್ತೂ ಅಪಾಯಕರವಾಗಿದೆ ಒಂದು ಅಡ್ಡಮರವನ್ನು ಮಾತ್ರ ಹಾಕಿರುತ್ತಾರೆ ತಾ 16 ನೇ ಶನಿವಾರ ಒಬ್ಬ ಹೆಂಗಸು ಆ ಮರದ ಮೇಲೆ ನಿಂತು ನೀರು ಸೇದುತ್ತಾ ಕೊಡವನ್ನು ಎಳೆಯಲಾರದೆ ಕಾಲುಜಾರಿ ಬಿದ್ದು ಮೃತಪಟ್ಟಳು ನಮ್ಮ ಅಮಲ್ದಾರ್ರವರು ಇಂಥಾ ಅಕಾಲಮರಣಗಳನ್ನು ಮುಂದಾದರೂ ತಪ್ಪಿಸುವಂತೆ ಭಾವಿಗೆ ರಾಟೆಯನ್ನು ಜಾಗ್ರತೆಯಿಂದ ಹಾಕಿಸಿಕೊಟ್ಟು ಕಾಪಾಡುವರೆಂದು ಸೂಚಿಸುತ್ತೇನೆ

ಹೊಸಕೋಟೆ — ಸುಮಾರು ಒಂದೂವರೆ ತಿಂಗಳಿಂದ ಇಲ್ಲ ಮಳೆ ಇಲ್ಲ ಆಗಿಂದಾಗ್ಗೆ ಮೋಡವಾಡುತ್ತಾ ಮಳೆ ಬಾರದೆ ಪೈರುಗಳೆಲ್ಲಾ ಬಾಡಿಹೋಗಿ, ಜನಗಳಲ್ಲಿ ಬಹಳ ವ್ಯಾಕುಲವನ್ನುಂಟುಮಾಡಿತು ಆದರೆ ತಾ ೨. ನೇ ಗುರುವಾರ ಮಧ್ಯಾಹ್ನ ಸಲ್ಪ ಮಳೆ ಬಂದದರಿಂದ ರೈತರಲ್ಲಿದ್ದ ಭೀತಿಯು ತಪ್ಪಿದ್ದಲ್ಲದೆ ಬಾಡಿಹೋಗಿದ್ದ ಪೈರುಗಳಿಗೆ ಸಲ್ಪ ಜೀವ ಬಂದಹಾಗಾಯಿತು ಈಗ ಸುಮಾರು ಎರಡು ತಿಂಗಳಿಂದ ರೈತರು ಛತ್ರದ ಕಟ್ಟಾವಿನ ಕೆಲಸದಲ್ಲಿದಾರೆ ಈ ಪ್ರಾಂತ್ಯ ಈ ಸಲ ನೆಲ್ಲಿನ ಬೆಳೆಯು ತೃಪ್ತಿಕರವಾಗಿದೆ ಆದರೆ ಧಾರಣೆವಾಸಿ ಮಾತ್ರ ತಗ್ಗಲಿಲ್ಲ ಕ್ಷಾಮಕಾಲದ ರೀತಿಯಲ್ಲಿಯೇ ಎಲ್ಲಾ ಪದಾರ್ಥಗಳೂ ಕ್ರಿಯವಾಗಿವೆ ಬಡವರ ಪಾಡು ಹೇಳತೀರದು ದಯಾಳುಗಳಾದ ಸರ್ಕಾರದವರು ಈ ಕಾಲದಲ್ಲಿ ಕಮ್ಮಿ ತಲಬಿನ ನೌಕರರಿಗೆ ಸಹಾಯ ಮಾಡುವರಾದರೆ ಬಹಳ ಯಶಸ್ಸುಂಟಾಗುವದು — ಈ ಊರಿನ ಸುತ್ತುಮುತ್ತಲೂ ಸುಮಾರು 8 10 12 ಮೈಲಿ ದೂರದಲ್ಲಿ ಸಂತೆಗಳು ಆಗುವದರಿಂದ ಇಲ್ಲಿನ ವರ್ತಕರಿಗೆ ವ್ಯಾಪಾರವು ಚೆನ್ನಾಗಿ ನಡೆಯುವದಿಲ್ಲವೆಂದೂ, ವ್ಯಾಪಾರಕ್ಕೆ ಪ್ರೋತ್ಸಾಹವಿಲ್ಲವೆಂದೂ ಚಿಂತಾಕ್ರಾಂತರಾಗಿದಾರೆ ಕೆಲವರು ಈ ಊರನ್ನು ಬಿಟ್ಟು ವ್ಯಾಪಾರ ಚೆನ್ನಾಗಿ ನಡೆಯುವ ಊರುಗಳಿಗೆ ಹೋಗಬೇಕೆಂದು ಹೇಳುವರು — ಸುಮಾರು 2 3 ತಿಂಗಳಿಂದ ಈ ಊರಿನ ಸುತ್ತುಮುತ್ತು ಇರುವ ಗ್ರಾಮಗಳಲ್ಲಿ ಅಲ್ಲಲ್ಲೇ ಪ್ಲೇಗ್ ಕಾಯಿಲೆಗಳು ಆಗುತ್ತಿವೆ ಇಲ್ಲಿ ಒಂದು ತಿಂಗಳಿಂದ ಅಲ್ಲಲ್ಲೇ ಮನೆಗಳಲ್ಲಿ ಇಲಿಗಳು ಬೀಳುತ್ತಾ ಇದ್ದವು ಇದುವರೆವಿಗೂ ಒಬ್ಬರಿಗೂ ಪ್ಲೇಗ್ ಖಾಯಿಲೆ ಆಗಲಿಲ್ಲ — ತಾಲ್ಲೋಕು ಕಚೇರಿ ಎದುರಿಗಿರುವ ಒಂದು ಮ್ಯುನಿಸಿಪಲ್ ತೋಟವು ಬಹಳ ಹೀನಸ್ಥಿತಿಯಲ್ಲಿತ್ತು ಅದನ್ನು ಅಭಿವೃದ್ಧಿ ಸ್ಥಿತಿಗೆ ತರಬೇಕೆಂದು ನಮ್ಮ ಅಮಲ್ದಾರ್ ಮ|| ಸೋಮೇಶ್ವರ ಅಯ್ಯರವರು ಬಹಳ ಮುತುವರ್ಜಿಯಿಂದ ತೋಟದ ಪಕ್ಕದಲ್ಲಿರುವ ರೀಡಿಂಗ್ ರೂಮನ್ನು ಸೇರಿಸಿಕೊಂಡು ಸುತ್ತಲೂ ಗೋಡೆಹಾಕಿಸುತ್ತಿದಾರೆ ಹೂವಿನ ಗಿಡಗಳನ್ನು ಇಡಿಸಿ ಅಲಂಕಾರವಾಗಿಯೂ ವಿನೋದಕರವಾಗಿಯೂ ಇರುವ ಹಾಗೆ ಮಾಡುವದಲ್ಲದೆ ಪರಸ್ಥಳದವರಿಗೆ ಒಂದೆರಡು ಕೊಠಡಿಗಳು ಅನುಕೂಲವಾಗುವಂತೆ ಬಹಳ ಪ್ರಯಾಸದಿಂದ ಮಾಡಿಸುತ್ತಾ ಇದಾರೆ ಕುಮುಕೂರಿಗೆ ವರ್ಗಾಪಟ್ಟ ಡೆಪ್ಯುಟಿ ಕಮೀಷನರ್ ಮ|| ಕುಮಾರಸ್ವಾಮಿನಾಯಕರವರು ಈ ಊರಿನವರ ಮನವಿಯನ್ನು ಅಂಗೀಕರಿಸಿ ಬಂದು ಮ್ಯುನಿಸಿಪಲ್ ಕೋಟದ ಹೆಬ್ಬಾಗಿಲಿಯ ಅಸ್ತಿಭಾರದ ಕಲ್ಲನ್ನು ನಾಟಿ, ನಾನಾತರದ ಪುಷ್ಪ ಲತೆ ತೋರಣ ಬಾವುಟಾಗಳಿಂದ ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟ ಚಪ್ಪರದೊಳಗೆ ನುಗ್ಗಿ ನಾನಾತರದ ವರಗಳಿಂದ ಅಲಂಕರಿಸಲ್ಪಟ್ಟ ರೀಡಿಂಗ್ ರೂಮಿಗೆ ಬಂದು ಶ್ರೇಷ್ಠವಾದ ಆಸನದಲ್ಲಿ ಹೊಸ ಡೆಪ್ಯುಟಿ ಕಮೀಷನರ್ ಮ|| ಚಾಂಡಿಸಾಹೇಬರ ಜೊತೆಯಲ್ಲಿ ಕುಳಿತುಕೊಂಡರು ಮ್ಯುನಿಸಿಪಲ್ ಮೆಂಬರುಗಳು, ಸ್ಕೂಲ್ ಮಾಸ್ಟರುಗಳೇ ಮುಂತಾದವರು ತಮ್ಮ ಭಿನ್ನಹಗಳನ್ನು ಓದಿದ ನಂತರ ಹಾರಾ ತುರಾಯಿಗಳನ್ನು ಅವರಿಗೆ ಒಪ್ಪಿಸಿ ಅಲ್ಲಿ ಸೇರಿದ್ದ ಜನರಿಗೆಲ್ಲಾ ಪುಷ್ಪ ತಾಂಬೂಲಾದಿಗಳನ್ನು ಹಂಚಿ ಕೂಟವನ್ನು ಮುಕ್ತಾಯ ಮಾಡಿದ್ದಲ್ಲದೆ ಎಲ್ಲರನ್ನೂ ಹಣ್ಣುಹಂಪಲು ಪಲಹಾರಾದಿಗಳಿಂದ ತೃಪ್ತಿಪಡಿಸಿದರು ಅನಂತರ ಫೋಟೋ ತೆಗೆಯಲ್ಪಟ್ಟು ಅವರು ಮೋಟರ್ ಗಾಡಿಯಲ್ಲಿ ಕುಳಿತು ಬೆಂಗಳೂರಿಗೆ ಹೊರಟುಹೋದರು

---

೫೯ ೧೮೭೪ ರಿಂದ ೧೯೧೩ ವರೆಗೆ

ಕಾಲದ ಪರೀಕ್ಷೆ

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೆ ವನಾ ಔಷಧಿಯನ್ನು ಸಾಕ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಆಕ್ರಮಗಳು, ನಾನಾ ತರದ ಕೆಮ್ಮಲು

ಸಕಲವಿಧ ಶೈತ್ಯಗಳು ಮಾಂಸಖಂಡಗಳ ಕ್ಷೀಣತೆ

ಆಹಾರದಲ್ಲಿ ಅರುಚಿ

Always get the Emulsion with this mark—the Fishman—the mark of the "Scott" process!

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊ ಮುಕಿಳ್ಳಿ

ಇದಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕೈಸೋಕದೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್ ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ನಿನಗೆ ಸ್ವಸ್ಥವಿಲ್ಲವೋ ?

ನಿನಗೆ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ— ನಿನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೋ ಎಂದು ನಿನ್ನನ್ನು ನೀನೇ ಕೇಳಿಕೋ ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವದಕ್ಕೆ ಮುಂಚೆ ನುಂಗಿಬಿಡು ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಸ್ವಸ್ಥವಾಗುವದು

(೧೨ ಆಣೆ ಬುಡ್ಡಿ ಸರಿಯಾ)

ಮಲಬಂಧವೆ ಒಬ್ಬರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವದು ಮಲಬಂಧದಿಂದ ರೋಗಗಳೇಕೆ ಉಂಟಾಗುವವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ — ಪಿತ್ತಕೋಶದ ರೋಗ, ಪಿತ್ತ ಪಿತ್ತಜ್ವರ ಅಜೀರ್ಣ ಅಗ್ನಿಮಾಂದ್ಯ ಗಾಬರಿ ಅಶಕ್ತಿ ಎದೆಯು ತಲ್ಲಣಿಸುವದು ತಲೆತಿರುಗುವದು, ತಲೆನೋವು ಹೊಟ್ಟೆಯುಬ್ಬರ ಮುಳಿತೇಗಿನ ಹೊಟ್ಟೆನೋವು ಹೆಂಗಸರ ವ್ಯಾಧಿಗಳು ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವದು

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಶವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇನೆನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವವು [13 51]

ಬೆಲೆ ४ ಆಣೆ, ८ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ४ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು, ಅಥವಾ ಡೋನ್, ಪಿ ಒ ಬಾಕ್ಸ್ ೨೦ ಬೊಂಬಾಯಿ—ಇವರಲ್ಲಿ ದೊರೆಯುವುದು

ಇನಾಮು ! ಇನಾಮು !! ಇನಾಮು !!!

ಒಂದು ಧಂವನಾದ ಬೆಳ್ಳಿ ಗಡಿಯಾರವು.

ಒಂದು ರೂಪಾಯಿ ಮನಿ ಆರ್ಡರ್ ಕಳುಹಿ ಸರಿಯಾಗಿ ಕಾಲವನ್ನು ತೋರಿಸತಕ್ಕದ್ದಾಗಿಯೂ ಬಹು ಬೆಲೆಯುಳ್ಳದ್ದಾಗಿಯೂ ಅಸಲ್ ಬೆಳ್ಳಿ ಘಡಿಯಾರದ ೭ ದಾಂಬಿಕೆ ಸಹಿತ ೯ ಕ್ಯಾರೆಟ್ ಚಿನ್ನದ ಮುಲಾಮು ಸರಪಣಿ ೨ ಸಂಗಡಲೇ ಸೇರಿಸಿ ಕಳಿಸಲ್ಪಡುತ್ತೆ ಈ ಪ್ರಕಾರ ಕೊಡುವದಕ್ಕೆ ಕಾರಣವೇನೆಂದರೆ ನಮ್ಮ ಕಂಪನಿಯ ಹೆಸರು ಪ್ರಖ್ಯಾತಮಾಡುವದಕ್ಕೆ, ಬೇರೇನೂ ಅಲ್ಲ ಸ್ವಲ್ಪ ಕಾಲದವರಿಗೆ ಮಾತ್ರ ಈ ಪ್ರಕಾರ ಕೊಡಲ್ಪಡುತ್ತೆ

ಘಡಿಯಾರ ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ನಡೆಯತಕ್ಕದ್ದು ಇದಕ್ಕೆ ಎರಡು ವರುಷ ಗ್ಯಾರಂಟಿ ಪತ್ರವನ್ನು ಸಹಿತ ಕಳಿಸಲ್ಪಡುವದು ಮಣಿ ಆರ್ಡರು ಇಲ್ಲದ ಆರ್ಡರುಗಳನ್ನು ಗಮನಿಸಲಾರೆವು [175 1]

ನಮ್ಮ ವಿಳಾಸ—ರಾಯಲ್ ವಾಚ್ ಕಂಪನಿ,
ಪಾರಕ್ ಟವನ್, ಮದರಾಸು

ಶುದ್ಧವಾದ ಹತ್ತಿಯ ತುಪ್ಪವು.

"ಮಿದುಳಿಗೆ ತಂಪು ಕಣ್ಣುರಿ, ಅರತಲೆ ಶೂಲೆಗಳನ್ನು ವಾಸಿಮಾಡಿತು !"

(ಶ್ರೀ) ಎಮ್ ಪಿ ಅಹೋಬಿಲಾಚಾರ್ಯರು, ಮಂತ್ರಗಾರರು ಮತ್ತು ಭಾಷ್ಯಕಾರರು — ನಿಮ್ಮ ಹತ್ತಿಯ ತುಪ್ಪವನ್ನು ತಪ್ಪದೆ ಉಪಯೋಗಿಸುತ್ತಿದ್ದೇನೆ ಮಿದುಳಿಗೆ ಬಹಳ ತಂಪು ಕಣ್ಣಿನ ಉರಿಯನ್ನು ಗುಣಮಾಡಿ, ಸುಖನಿದ್ರೆಯನ್ನೂ ಗಾಢನಿದ್ರೆಯನ್ನೂ ಕೊಡುತ್ತದೆ ಅರತಲೆ ನೋವನ್ನೂ ವಾಸಿಮಾಡುತ್ತದೆ ಈ ಕಾರಣಗಳಿಂದ ಇದನ್ನು ಸರ್ವರೂ ಉಪಯೋಗಿಸಬೇಕೆಂದು ಹೇಳುತ್ತೇನೆ " 21 6-1911

ಎಚ್ಚರಿಕೆ !—ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪೆನಿಯು ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವದು ಮೋಸಹೋಗಲು ಅವಕಾಶವಿಲ್ಲ [110 11]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
10೪, ಕಿಲಾರಿ ರೋಡ್ (ಕುಂಬಾರಪೇಟೆ), ಬೆಂಗಳೂರು ಸಿಟಿ

ಅಸಲ್ ಸವರನ್ ಬಂಗಾರದ ನಗಗಳು

ಈ ನಗಗಳನ್ನು ಈಗತಾನೇ ನಾವು ಸಪುರಾದ ಮತ್ತು ಪ್ರಸಿದ್ಧಿ ಹೊಂದಿದ ಅಗಸಾಲೆಯರಿಂದ ನೂತನ ನಮೂನೆಯಲ್ಲಿ ನೇತ್ರಾನಂದಕರವಾಗಿ ಸ್ವಂತ ಮುತುವರ್ಜಿಯಿಂದ ತಯಾರುಮಾಡಿಸಿರುತ್ತೇವೆ ಸವರನ್ ಬಂಗಾರಕ್ಕು ಮತ್ತು ಕುಸುರಿಗಳಿಗು ನಾವು ಗ್ಯಾರಂಟಿ ಕೊಡುತ್ತೇವೆ ಹಾಗಿಲ್ಲದ ಪಕ್ಷದಲ್ಲಿ ಹಣವನ್ನು ವಾಪಸ್ ಮಾಡಲ್ಪಡುತ್ತೆ ಬಹು ಸುಂದರವಾದ ನಮೂನೆ, ಸರ್ವರು ತರಿಸಿಕೊಂಡು ಉಪಯೋಗಿಸುವಂತೆ ಸಾಧ್ಯವಾದ ಮಟ್ಟಿಗೂ ಬಹು ಸುಲಭ ಕ್ರಯವನ್ನು ನಮೂದಿಸಿರುತ್ತೇವೆ ಪ್ರತಿ ಒಬ್ಬರು ತೆಗೆದುಕೊಂಡು ಉಪಯೋಗಿಸಿ ಸಂತೋಷಪಡಬೇಕಾಗಿ ಪ್ರಾರ್ಥನೆ [17 19]

ಅರ್ಧಚಂದ್ರ 1 ಕ್ಕೆ ರೂಪಾಯಿ	6 0 0
ನಂ 1 ಮೂಗುಬೊಟ್ಟು 1 ಕ್ಕೆ ರೂಪಾಯಿ	6 0 0
„ 2 ಮೂಗುಬೊಟ್ಟು 1 ಕ್ಕೆ „	6 0 0
„ 3 ಮೂಗುಬೊಟ್ಟು 1 ಕ್ಕೆ	5 0 0
ಬುಲಾಕು 1 ಕ್ಕೆ 1 ರೂ ಲಾಗಾಯಿತು	3 0 0

ವರೆಗೂ ಇರುತ್ತೆ ಇದು ಅಲ್ಲದೆ ಇಮಿಟೇಷನ್ ಕೆಂಪುಗಳಿಂದಲೂ, ಒಳ್ಳೆ ಕೆಂಪುಗಳಿಂದಲೂ ತಯಾರುಮಾಡಿ ಕಳುಹಿಸಲ್ಪಡುವದು ಮತ್ತು ಬೆಳ್ಳಿ ಬಂಗಾರದ ನಗಗಳು ಸಹ ತಯಾರುಮಾಡಿ ಕಳುಹಿಸಲ್ಪಡುತ್ತೆ ಬೇಕಾದವರು ಬರಸಿದರೆ ಜವಾಬು ಬರೆಯುತ್ತೇವೆ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

ವಿಳಾಸ — ಬಿ ಆರ್ ವೆಂಕಟರಮಣ ಅಂಡ್ ಕಂಪನಿ,
ನಂ 7 ಕೂಪ್ ವೆಂಕಟಾಚಲಯ್ಯರ್ ವೀಧಿ, ಮದರಾಸು

ರೈಲ್ವೆ ರೆಗ್ಯುಲೇಟರ್ ಲೀವರ್ ವಾಚ್

ಇದರ ಕ್ರಯ ರೂಪಾಯಿ 4-4 0 ಸಕೆಂಡು ಮುಳ್ಳು ಇರುವ ವಾಚ್ 3 8-0 ಈ ಗಡಿಯಾರವು ನೋಡುವುದಕ್ಕೆ ಬಹಳ ಸುಂದರವಾಗಿಯೂ, ಗಂಭೀರವಾಗಿಯೂ ಇದೆ ಬಹಳ ದಿನ ಬಾಳಿಕೆ ಬರುವುದಕ್ಕೋಸ್ಕರ ಗಟ್ಟಿಯಾದ ಸಾಮಾನುಗಳಿಂದ ತಯಾರುಮಾಡಲ್ಪಟ್ಟಿದೆ ಇದು ಕಾಲೇಜಿನಲ್ಲಿ ಓದುವವರಿಗೂ, ರೈಲ್ವೆ ನೌಕರರುಗಳಿಗೂ, ವರ್ತಕರುಗಳಿಗೂ ಮತ್ತು ಯಾರಿಗೂ ಅತ್ಯಾವಶ್ಯಕವಾದದ್ದು 3 ವರುಷ ಗ್ಯಾರಂಟಿ ಕೊಡುತ್ತೇವೆ ಪ್ರತಿಯೊಬ್ಬರಿಗೆ ಒಂದು ಗಡಿಯಾರವನ್ನು ಕೊಡಲಾಗುವುದು



ಸಿಲ್ವರ್ ಕ್ಯಾಟರ್ ರೂ 1 1 0

ಒಡಕದೇ ಬಾಕ್ಸದ ಮುಂಡಸಿ ಸೀರೆ ರೂ 2-12 0 ಕೆಂಪು 3 6 0 ಜರತಾರಿ ಮನೆ ಸಾಸರ್ ಎಣ್ಣೆ ರೂ 1 0 0 ಎಲೆಕ್ಟ್ರಿಕ್ ಟಾರ್ಚ್ ದೀಪ ಒಕ್ಕದು ರೂ 2-8 0 ದೊಡ್ಡದು 3 0 0 ಈ ದೀಪಗಳನ್ನು ಎಂಥಾ ಗಾಳಿಯಲ್ಲಿಯೂ ಹಿಡಿದುಕೊಂಡು ಹೋಗಬಹುದು ಅಂಥ ಪ್ರಕಾಶವಾಗಿರುತ್ತದೆ ಜೇಬಿನಲ್ಲಿ ಇಟ್ಟುಕೊಂಡು ಬೇಕಾದಾಗ ಗುಂಡಿಯನ್ನು ಒತ್ತಿದರೆ ದೀಪವು ಉರಿಯುತ್ತೆ ಎಣ್ಣೆ ಹಾಕಬೇಕಾದದಿಲ್ಲ ಜರ್ಮನ್ ಶಾಲ ಮಾತ್ರೆ 1 ನಾರೆಯುಳ್ಳ ಕಪ್ಪಿನ ಪೆಟ್ಟಿ ರೂ 1 0 0 10 ಮಾತ್ರೆಯುಳ್ಳ ಪೆಟ್ಟಿ ರೂ 0-8 0 [171 1]

ನಮ್ಮ ವಿಳಾಸ — ಎಸ್ ಆರ್ ಕೃಷ್ಣ ಅಂಡ್ ಕಂಪನಿ,
18, ಇರುಪಳಪ್ಪನ ವೀದಿ, ಜಿ ಟಿ, ಮದರಾಸು

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳಲ್ಲೆಲ್ಲಾ ವ್ಯಾಪಾರಸ್ಥರಲ್ಲೂ ವಿಕ್ರಯವಾಗುತ್ತಲಿವೆ

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕ್ಕಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ

Messrs OAKES & Company, Mount Road, Madras.

[4-41] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H Gulliford, Proprietor and Manager Wesleyan Mission Press, Mysore 28/8/1913

REGISTERED
M. 30

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—೧೯೧೩ ನೇ ಇಸವಿ ಸೆಪ್ಟಂಬರ್ ತಾರೀಖು ೪ ನೇ ಗುರುವಾರ. ಸಂಚಿಕೆ ೧೪

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತು ಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ, ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಕಚಕಿಸುವವು ನಿಜವಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ, ತಲೆ ಬುರುಡೆಯನ್ನು ಶುದ್ಧಮಾಡುತ್ತೆ ಸುಂಡಿನ ಹೊಟ್ಟನ್ನು ಅಡಗಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ಬೇರು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ದಟ್ಟವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು

3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಟಿಕೆಟನ್ನು ಕಳುಹಿಸಿರಿ

ಮೈಸೂರು ಎಗ್ಜಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂಬು ತಿಳಿಯಬಹುದು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಜದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ ಮನ್ನಾರ್‌ಗುಡಿ ಡಿಸ್ಟ್ರಿಕ್ಟ್ ಸೆಕ್ರೆಟರಿ ಮಿ| ಡಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಒಬ್ಬರಂತೆ ಮೆಚ್ಚಿಕೊಂಡಿದ್ದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ— ಮೋಸವಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಫಾಯತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ ಇದು ಒಳ್ಳೆಯದು" ಎಂದು ಹೇಳಿ ಮೋಸಮಾಡುವವರ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕೆಪಿಟೋಲಬಾಮ್"—ಮಳೆ ಮತ್ತು ಚಳಿಯ ಥಂಡಿ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಲಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ನೋವು, ಸಂಧುವಾತ ಮಸ್ತಕಶೂಲೆ ಜೆಟ್ಟಾಗಿ ಮೆಹನತ್ತು ಪಟ್ಟದ್ದರಿಂದ ಕ್ಷೀಣವಾಗುವದು, ಸೊಂಟನೋವು ಎದೆಯುನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ ಬಾಟ್ಲಿ 1ಕ್ಕೆ ಕ್ರಯ 0 8 0 ಟಪಾಲು ಪ್ರತ್ಯೇಕ

ಒಡಮನ್ಸ ಮಲೇರಿಯ ಪಿಲ್ಸ—ಶೀತಜ್ವರ ಥಂಡಿಯಿಂದ ಬರುವ ಜ್ವರ, ಉಷ್ಣಜ್ವರ ಮತ್ತು ಒಂದೇ ಸಮನೆ ಬಿಡದೆಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯಸ್" ಗುಳಿಗೆಗಳು ರಾಮಬಾಣವಾಗಿದೆ ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ ಇದು ದೇಶದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ ವಯಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1 0 0 3 ಬಾಟ್ಲಿಗಳಿಗೆ ರೂ 2 9 0 ವಿ ಪಿ ಖರ್ಚು ಪ್ರತ್ಯೇಕ

ಏಜೆಂಟ್, ಡಿ ಉಲ್ಡ್ ಮಾರ್ಟ್, ಮಂಗಳೂರು

ಮೇಲೆಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ — [8 31]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಉತ್ತಮವಾದ ಶೈಲಿ ! ಸರಳವಾದ ಮಾತುಗಳು !

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕಮಹಾಶಯರುಗಳೇ —ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೋಕ್ಷವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹ ಶಕ್ತಿಯುಳ್ಳವರಾಗಿಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿ ಕಥೆಗಳನ್ನು ಓದಿರಿ ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡು ಪುಸ್ತಕವಾಗಿದೆ ಬೆಲೆ ರೂ ೧-೪-೦ ಮಾತ್ರ ಈಗಲೇ ಬರೆಯಿರಿ [167–4]

ವಿಳಾಸ:—ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ಕು ಡಿಪ್ಪೋ, ಚಿಕ್ಕ ಪೇಟೆ, ಬೆಂಗಳೂರು ಸಿಟಿ

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯ ನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (೦) ಅಲ್ಲಲ್ಲಿ ಕಥಾಸಂದರ್ಭಾನುಸಾರ ಛಾಯಾಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1 8-0 ಟಪಾಲು ಹಾಸಲು 4 ಆಣೆ

(೩೬ ಸಂಧಿಗಳು) **ಸಟೀಕಾ ತಾತ್ಪರ್ಯ ಜೈಮಿನೀ ಭಾರತವು.** (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಸಂಪೂರ್ಣ ೩೬ ಸಂಧಿಗೂ ಪ್ರತಿಪದ ಟೀಕಾ, ಕಥಾರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಳವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ 4 ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127 11]

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

THE MYSORE GOVERNMENT SECURITY

LIFE AND MARRIAGE ASSURANCE COMPANY, LIMITED.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No III OF 1895)

CAUTION —Before you go in for a Provident Life or Marriage Policy please ask for a copy of our Company's prospectus which will explain to you the mode of working of the present day provident companies working in India and enables you to select a good institution where your hard earned money will be safe

SPECIAL AND ATTRACTIVE FEATURES OF THE COMPANY

1. ABSOLUTE SECURITY

The Company has got a capital of **one lakh** and its funds are invested in the Mysore **Government** and other approved securities The policy holder's money are **guaranteed**, and the capital and **reserve funds** of the Company are liable to the same

2 MARRIAGE SCHEME

A policy holder can subscribe from Re. 1 to Rs 6 every month **Double the premiums paid to** the Company will be paid to the married **on the marriage day** as maximum bonus.

3. LIFE SCHEME

A policy holder can subscribe from As 8 to Rs 2 per month Both males and females of ages from 18 to 60 are insured **without medical examination** The maximum bonus will be paid to the **policy-holders themselves** on surviving **15 years** or to their nominees in case of their earlier death

WANTED.

Energetic and honest **Chief Agents** for every Presidency in India and Taluk Agents in each and every taluk of **the Mysore Province** on commission to represent the Company

For further particulars and prospectuses please apply **with one anna stamp and your previous** experience in the line to —

Mr. M. L. NAGANNAH,
Managing Agent,
MYSORE.

[161 5]

ಕನ್ನಡ

ಇಂಡಿಯನ್ ಪೆನಲ್ ಕೋಡ್.

160 ೮

ಇಂಡಿಯಾ ಗೌನರ್ ಜನರಲ್‌ರವರಿಂದ ಮುಂಜೂರಾದ ಈ ಆಕ್ಟನ್ನು ಮೈಸೂರ್, ಬೊಂಬೈ, ಮದ್ರಾಸ್, ಅಲಹಾಬಾದ್ ಮುಂತಾದ ಅನೇಕ ಜಡ್ಜಿಗಳ ಅಭಿಪ್ರಾಯಗಳ ಟಿಪ್ಪಣಿ ಸಹಿತ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟಗಳಿಂದ ಬಿಡುಗಡೆಯಾಗಿರುವರು ಇದು ಮುಖ್ಯವಾಗಿ ಪೋಲೀಸ್, ಮ್ಯಾಜಿಸ್ಟ್ರೇಟರು, ಅಧಿಕಾರಿಗಳಲ್ಲಿಯೂ, ಲಾಯರುಗಳಲ್ಲಿಯೂ, ಪಟೇಲ್ ಶ್ಯಾನುಭೋಗರುಗಳಲ್ಲಿಯೂ, ಇತರ ಮುಖ್ ಜನಗಳಲ್ಲಿಯೂ ಇರಬೇಕಾದದ್ದು ಅತ್ಯಂತ ಆವಶ್ಯಕವಾದದ್ದು ಕ್ರಯ ಗ್ಲೇಜ್ ರೂ 2 8 0 ರಫ್ ರೂ 2-0-0 ಟಪ್ಪಾಲ್ ಛಾರ್ಜು 0 1 0

ವಿಳಾಸ:—ಬಿ ನರಸಿಂಗರಾವ್, ಎಡಿಟರ್,
(ಲಾ) ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡುಹಿಡಿದ ಕೆಮ್ಮಿನ ಔಷಧವು

1 36



ಶೀತದ ಕೆಮ್ಮು, ಗಂಟಲು ಗಾತೆನ್ನುವುದು, ಹುಟಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾದಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾದೆ

ಆ ಕೆಮ್ಮನ್ನು ಅಲಕ್ಷ್ಯಮಾಡಿದರೆ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಶೀಘ್ರವಾಗಿ ನಿವಾರಣೆಮಾಡುತ್ತದೆ ಉಬ್ಬಸ ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ಇಲ್ಲಿಸಿಬಿಡುತ್ತದೆ ಎದೆ ಒಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲಲ್ಲೂ ವಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಮೂರು ಸಿದ್ಧೌಷಧಗಳು.

ವಸ್ತ್ರಾನಂದಕರೀಮಾತ್ರೆ, ಮೂಲಿಕೆ ಪರಿಮಳದ್ರವ್ಯಗಳಿಂದ ತಯಾರಿಸಿದೆ ಒಂದನ್ನು ತಾಂಬೂಲದೊಡನೆ ಅಥವಾ ಬರೀ ಬಾಯಿಗೆ ಸೇವಿಸಿದರೆ ದುರ್ಗಂಧ ಹೋಗಿ ಸುವಾಸನೆಯಾಗುತ್ತೆ, ರಕ್ತವನ್ನು ಶುದ್ಧಿಮಾಡುತ್ತೆ ಕರಳು, ಗಂಟಲು, ಬಾಯಿ, ಇವುಗಳು ಹುಣ್ಣಾದರೆ ಅರ್ಧ ತೋಲಾ ಬಾದಾಮಿ ಎಣ್ಣೆಯಲ್ಲಿ ಒಂದು ಮಾತ್ರೆ ತೇದು ಮಲಗುವ ಸಮಯದಲ್ಲಿ ತೆಗೆದುಕೊಂಡರೆ ಗುಣವಾಗುವದು 200 ಮಾತ್ರೆ ಶೀಸಾ 1 ಕ್ಕೆ 1 ಆಣಾ ಇಸಬು, ಹುಜ್ಜಿ, ತುರಿ ಇವುಗಳಿಗೆ ಪಾದು ಹರಿಣೀ ಪೌಡರ್ ತೋಲಾ 1 ಕ್ಕೆ 2 ಆಣೆ ಬಾಣಂತಿಯರು ಮಕ್ಕಳ ಶೀತ ನೆಗಡಿ ಇವುಗಳಿಗೆ ಉಪಯೋಗಿಸತಕ್ಕ ಕಸ್ತೂರಿಮಾತ್ರೆ 20 ಮಾತ್ರೆಗೆ 8 ಆಣೆ ಬಾಣಂತಿಯರು ಉಪಯೋಗಿಸತಕ್ಕ ಖಂಡಾದ್ರಕವೆಂಬ ಆರೋಗ್ಯದ ಲೇಹ್ಯ 12 ತೋಲಾ ಡಬ್ಬಿಗೆ 6 ಆಣಾ ಅಪೇಕ್ಷಿಸುವರು ತಮ್ಮ ವಿಳಾಸ ವಿಶದವಾಗಿ ಬರೆಯಬೇಕು ಅಂಚೆ ಹಾಸಲು ಬೇರೆ, ತರಿಸಿಕೊಳ್ಳತಕ್ಕವರು ವಹಿಸತಕ್ಕದ್ದು 1 ಡಜನ್‌ಗೆ 1 ಶೀಸಾ ಡಿಸ್ಕೌಂಟು ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಮುಂಚೆ ಸ್ವಲ್ಪ ತರಿಸಿ ನೋಡಿ ನಂತರವಾದರೂ ತರಿಸಿಕೊಳ್ಳಿ [131 10]

ನಮ್ಮ ವಿಳಾಸ —ಶೇಷಭಟ್ಟರು,
ನೇಟಿವ್ ಪಂಡಿತ್, ಪೂರ್ಣಯ್ಯನವರ ಬೀದಿ, ಶ್ರೀರಂಗಪಟ್ಟಣ

ಸಮಸ್ತ ವಿಧವಾದ ನೋವೂ ಉರಿತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಜನ್ನಿನ ಸೆಳೆತ, ಕೀಲುನೋವು, ಕೈತ್ಯ, ಈ ಮೊದಲಾದ ಅನೇಕ ತರದ ಬಾದೆಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ವಿಕರಿಯಾಗುತ್ತಲಿವೆ ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ವಿಕರಿಯಾಗುವದು

ಹುಳುಕಟ್ಟಿ ಔಷದ ಡಬ್ಬಿಗೆ (ಆಣೆ, 12 ಕುಪ್ಪಿಗೆ ರೂ 3-9-0 ಹಲ್ಲುಪುಡಿ ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ 1-2-0 ವಿ ಪಿ ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ [42-28]

ವಿಳಾಸ —ಅಮೃತಾಂಜನ ಡಿಪೋ, ೧೯ ಫ್ರೇಯರ್ ರೋಡ್, ಫೋರ್ಟ್, ಬೊಂಬಾಯಿ

ಶುದ್ಧವಾದ ಹತ್ತಿಯ ತುಪ್ಪವು.

"ಮಿದುಳಿಗೆ ತಂಪು ಕಣ್ಣುರಿ, ಅರತಲೆ ಶೂಲೆಗಳನ್ನು ವಾಸಿಮಾಡಿತು!"

(ಶ್ರೀ) ಎಮ್ ಪಿ ಆಳಸಿಂಗ್ರಾಚಾರ್ಯರು, ಮಂತ್ರಗಾರರು ಮತ್ತು ಭಾವಜ್ಞಾನಿ —"ನಮ್ಮ ಹತ್ತಿಯ ತುಪ್ಪವನ್ನು ತಪ್ಪದೆ ಉಪಯೋಗಿಸುತ್ತೇನೆ ಮಿದುಳಿಗೆ ಬಹಳ ತಂಪು ಕಣ್ಣಿನ ಉರಿಯನ್ನು ಗುಣಮಾಡಿ, ಸುಖನಿದ್ರೆಯನ್ನೂ ಗಾಢನಿದ್ರೆಯನ್ನೂ ಕೊಡುತ್ತದೆ ಅರತಲೆ ನೋವನ್ನೂ ವಾಸಿಮಾಡುತ್ತದೆ ಈ ಕಾರಣಗಳಿಂದ ಇದನ್ನು ಸರ್ವರೂ ಉಪಯೋಗಿಸಬೇಕೆಂದು ಹೇಳುತ್ತೇನೆ"

21 6 1913

ಎಚ್ಚರಿಕೆ!—ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ [110 14]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
159, ಕಿಲಾರಿ ರೋಡ್, (ಕುಂಚಿಗರಪೇಟೆ), ಬೆಂಗಳೂರು ಸಿಟಿ

ಡೋಂಗರೆ ಇವರ ಬಾಲಾಮೃತ್.

[150 7]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತು ೧೦ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ.

ಅಸಲ್ ಸವರನ್ ಭಂಗಾರದ ನಗಗಳು

ಈ ನಗಗಳನ್ನು ಈಗತಾನೇ ನಾವು ನಿಪುಣರಾದ ಮತ್ತು ಪ್ರಸಿದ್ಧಿ ಹೊಂದಿದ ಅಗಸಾಲೆಯರಿಂದ ನೂತನ ನಮೂನೆಯಲ್ಲಿ ನೇತ್ರಾನಂದಕರವಾಗಿ ಸ್ವಂತ ಮುತುವರ್ಜಿಯಿಂದ ತಯಾರ್ಮಾಡಿಸಿರುತ್ತೇವೆ ಸವರನ್ ಭಂಗಾರಕ್ಕೂ ಮತ್ತು ಪುಷ್ಯರಾಗಕ್ಕೂ ನಾವು ಗ್ಯಾರಂಟಿ ಕೊಡುತ್ತೇವೆ ಹಾಗಿಲ್ಲದ ಪಕ್ಷದಲ್ಲಿ ಹಣವನ್ನು ವಾಪಸ್‌ಮಾಡಲ್ಪಡುತ್ತೆ. ಬಹು ಸುಂದರವಾದ ನಮೂನೆ, ಸರಾಫರು ತರಿಸಿಕೊಂಡು ಉಪಯೋಗಿಸುವಂತೆ ಸಾಧ್ಯವಾದ ಮಟ್ಟಿಗೂ ಬಹು ಸುಲಭ ಕ್ರಯವನ್ನು ನಮೂದಿಸಿರುತ್ತೇವೆ ಪ್ರತಿ ಒಬ್ಬರು ತೆಗೆದುಕೊಂಡು ಉಪಯೋಗಿಸಿ ಸಂತೋಷಪಡಬೇಕಾಗಿ ಪ್ರಾರ್ಥನೆ [77 20]

ಅರ್ಧಚಂದ್ರ 1 ಕ್ಕೆ ರೂಪಾಯಿ	6 0 0
ನಂ 1 ಮೂಗುಬೊಟ್ಟು 1 ಕ್ಕೆ ರೂಪಾಯಿ	7 0 0
,, 2 ಮೂಗುಬೊಟ್ಟು 1 ಕ್ಕೆ ,,	6-0 0
,, 3 ಮೂಗುಬೊಟ್ಟು 1 ಕ್ಕೆ ,,	5-0 0
ಬುಲಾಕು 1 ಕ್ಕೆ 12 ರೂ ಲಾಗಾಯತು	25-0-0

ವರಿಗೂ ಇರುತ್ತೆ ಇದು ಅಲ್ಲದೆ ಇಮಿಟೇಷನ್ ಕೆಂಪುಗಳಿಂದಲೂ, ಒಳ್ಳೆ ಕೆಂಪುಗಳಿಂದಲೂ ತಯಾರ್ಮಾಡಿ ಕಳುಹಿಸಲ್ಪಡುವದು ಮತ್ತು ಬೆಳ್ಳಿ ಭಂಗಾರದ ನಗಗಳು ಸಹ ತಯಾರ್ಮಾಡಿ ಕಳುಹಿಸಲ್ಪಡುತ್ತೆ ಬೇಕಾದವರು ಬರಸಿದರೆ ಜವಾಬು ಬರೆಯುತ್ತೇವೆ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

ವಿಳಾಸ—ಬಿ ಆರ್ ವೆಂಕಟರಮಣ ಅಂಡ್ ಕಂಪನಿ,
ನಂ 7 ಕೋಪ್ ವೆಂಕಟಾಚಲೈಯರ್ ಬೀದಿ, ಮದರಾಸು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 36

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?
ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗೆ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಶುದ್ಧವಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು ಜರತಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ , ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಶಬ್ದಾದರ್ಶದ ನೋಟ್ಸ್

ವಿದ್ಯಾರ್ಥಿಗಳು ಗಮನಿಸಲಿ! ಕನ್ನಡಕ್ಕೆ ಸುಲಭವಾದ ದಾರಿ

ಮೈಸೂರು ಲೋವರ್ ಸೆಕಂಡರೀ ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾದುದು ಈ ಪುಸ್ತಕವೊಂದರಿಂದಲೇ ತರಗತಿಗೆ ಉಪಯುಕ್ತವಾದ ಕನ್ನಡ ವ್ಯಾಕರಣವನ್ನು ಸಂಪೂರ್ಣವಾಗಿ ಗ್ರಹಿಸಬಹುದು ವಿಷಯಗಳೆಲ್ಲ ಅತಿ ಸುಲಭವಾಗಿ ವಿವರಿಸಲ್ಪಟ್ಟಿವೆ ಇದುವರೆಗೂ ಸ್ಕೂಲುಗಳಲ್ಲಿ ಕೆಲಸ ಮಾಡಿ ಅನುಭವಸ್ಥರಾದ ಕನ್ನಡ ಪಂಡಿತರಿಂದ ವಿದ್ಯಾರ್ಥಿಗಳಿಗೋಸ್ಕರ ಸುಲಭಶೈಲಿಯಲ್ಲಿ ಬರೆಯಲ್ಪಟ್ಟಿದೆ ಕ್ರಯ 3 ಆಣೆ ಅಂಚೆಕೂಲಿ ಉಚಿತ

[187 19] ನಮ್ಮ ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ನಮೂನೆ ಮುಫತ್ತು

ಕೇಶಕುಸುಮಾಕರ ತೈಲವು.

ಸಾಟಿಯಿಲ್ಲದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿ ಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸಮಾಡುವದರಲ್ಲಿಯೂ, ಬಟ್ಟತಲೆಯಲ್ಲಿ ಕೇಶವನ್ನು ಬೆಳೆಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ, ಮಿದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುಡ್ಡಿ ತೈಲ ಕ್ರಯ 10 ಆಣೆ ಮೂರು ಬುಡ್ಡಿಗಳ ತೈಲ ಕ್ರಯ ರೂ 1 12 ಆ ಆರು ಬುಡ್ಡಿಗಳ ತೈಲ ಕ್ರಯ ರೂ 3-4 ಆ ಡಜನ್ ಬುಡ್ಡಿಗಳ ಕ್ರಯ ರೂ 6

ವಿ ಪಿ ಅಂಚೇ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ
[82 11] ಔಷಧಾಲಯ, 177 ಚೀನಾ ಬಜಾರ್ ರೋಡ್, ಮದ್ರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತವಾ ತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡ, ಸಶ್ಯಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಟ್ಟುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ [170 1]

೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಕಾಲು ಸೆಳೆತ ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘುವ ವೈದ್ಯಶಾಲಾ, ಮೈಸೂರು.

ಕುಂತಳಾನಂದ ತೈಲವು.

147 50

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಲವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 3 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ.—ವಿ ಎಮ್ ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ —1 ಪಿನಲ್‌ಕೋಡು, 2 ದೊಡ್ಡೀ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ವಷ್ಯವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ ವಿವಾಹಗಳ ರೆಗ್ಯುಲೇಷನ್, 9 ಕೃಷಿ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ

ಪ್ರತಿ ಪೆನಲ್ ಸೆಕ್ಷನ್‌ಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ ? ಯಾ ಕೂಡದೆ ? ಮೊದಲು ಸಮನ್ಸ್ ಹುಟ್ಟಬೇಕೇ ? ಯಾ ವಾರಂಟು ಹುಟ್ಟಬೇಕೇ ? ಜಾಮೀನ್ ತೆಗೆದುಕೊಳ್ಳಬಹುದೆ ? ಯಾ ಕೂಡದೆ ? ರಾಜಿಯಾಗಬಹುದೆ ? ಯಾ ಕೂಡದೆ ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ದೊರಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 22-5 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 2 0 0 ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ಪೇಮಾರೆಡ್ಡಿ,
ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್,
[103-1] ಮಾಲೂರು —ಕೋಲಾರ್ ಡಿಸ್ಟ್ರಿಕ್ಟ್.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

1011

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವನೆಂದು ಹೇಳು ವಾಯು, ಕೀಲು, ಅರತಲೆ ತಲೆನೋವುಗಳು ಯಾವ ಕಾರಣದಿಂದ ಹುಟ್ಟಿನ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸು ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ತತಮುತಿಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್. (2) ಟಿ ಎಸ್ ಕೆನ್ನಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೆ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಧರವಸೆಯ ಠೇವಣಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೆದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೆ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೆದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುತ್ತವೆ

ಏಜೆಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[109 11] ಎಸ್. ಕಬ್ಬೂರ್, ಬ್ರಾಂಚ್ ಸಕ್ರಿಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ಇಂಥಾ ಸಮಯ ಕಳೆಯಬೇಡಿ ! ಹಣಕ್ಕೆ ಖಾತರಿಯಾದ ಮಾಲು !

ಮಕ್ಕಳಿಗೆ ಬಹಳ ಸುಂದರ ಉಡುಪು

ನಾಜೂಕಾದ, ಸೊಗಸಾದ, ಆಹ್ಲಾದಕರವಾದ ಬಹು ಮೇಲಾದ ಜಪಾನ್ ರೇಷ್ಮೆಯಿಂದ ತಯಾರಿಸಿ ಎಲ್ಲಾ ವಯಸ್ಸಿನ ಮಕ್ಕಳಿಗೂ ಯೋಗ್ಯವಾಗಿರುವ ನಿಲುವಂಗಿ ಅಂಚುಗಳು ಬಹು ಸುಂದರವಾದ ಸೂಜಿ ಕೆಲಸ ಮಾಡಿಸಿ ಯಂಬ್ರಾಯ್ಡರಿ ಮಾಡಿದೆ ಈ ಮನೋಹರವಾದ ನಿಲುವಂಗಿ ಹಾಕಿಕೊಂಡ ನಿಮ್ಮ ಮಕ್ಕಳು ಬಹಳ ಸುಂದರವಾಗಿ ಕಾಣುವರು ಈ ನಿಲುವಂಗಿಗಳನ್ನು ಹಸಿರು, ರೋಜಾ, ನೀಲಿ ಹಳದಿ ಮೊದಲಾದ ಬಣ್ಣಗಳಲ್ಲಿ ದೊರಕುವವು ನಿಮಗೆ ಒಂದಾದರೂ ಬೇಕೇ ಬೇಕು [164 1]

ಸೈಜು	12 15	16 18	19 21	22 25	26–30
ಕ್ರಯ	1 6–0	1–10–0	1 14 0	2 12–0	3–12–0

ನಮ್ಮ ವಿಳಾಸ —ದಿ ಬಾಂಬೇ ಪಾಪ್ಯುಲರ್ ಏಜನ್ಸಿ,
ದಾದಾವಿ, ಬೊಂಬಾಯಿ

ಹೊಸದಾದ ಹಸಿ ಹತ್ತಿಯ ತುಪ್ಪವು.

ಹೊಸತಾಗಿ ಮೈಸೂರು ಸೀಮೆಗೆ ಪ್ರವೇಶ !

ಇದನ್ನೇ ತೆಗೆಯಬೇಕೆಂದು ಗಿರಾಕಿಗಳ ಉದ್ದೇಶ !!

ಇದನ್ನೇ ಪ್ರಚುರಪಡಿಸಬೇಕೆಂದು ನಮ್ಮ ಆವೇಶ!!!

ಒಂದು ಸಾರಿ ತರಿಸಿ ಉಪಯೋಗಿಸಿದಲ್ಲಿ ಇದರ ಅನುಭವವೂ, ಗುಣವೂ ನಿಮಗೆ ತಿಳಿಯಲು ಸಂದೇಹವಿಲ್ಲ ಅನಂತರ ಯಾವಾಗಲೂ ಇದನ್ನೇ ಅಪೇಕ್ಷಿಸುವಿರೆಂದು ಖಂಡಿತವಾಗಿಯೂ ಭರವಸೆ ಕೊಡುವೆವು ಮೈಸೂರು ಸೀಮೆಯ ಎಂಟು ಡಿಸ್ಟ್ರಿಕ್ಟುಗಳಿಗೂ ಸೋಲು ಏಜೆಂಟರುಗಳು ಬೇಕಾಗಿವೆ ವ್ಯಾಪಾರಸ್ಥರು ಅರ್ಜಿಗಳನ್ನು ಈ ಕೆಳಗಿನ ವಿಳಾಸಕ್ಕೆ ತಾ 31 9 1913 ರೊಳಗೆ ಹಾಕಿಕೊಳ್ಳತಕ್ಕದ್ದು ಈ ತುಪ್ಪವನ್ನು ಬೊಂಬಾಯಿ ಸರ್ಕಾರದ ಅಗ್ರಿಕಲ್ಚರಲ್ ಕೆಮಿಸ್ಟ್ ಮಿಸ್ಟರ್ ಹೆಚ್ ಮ್ಯಾನ್ ರವರು ರಸಾಯನ ಶಾಸ್ತ್ರರೀತ್ಯಾ ಪರಿಶೋಧಿಸಿ ಈ ಹತ್ತಿಯ ತುಪ್ಪವು ಇಂಡಿಯಾ ದೇಶದಲ್ಲಿ ತಯಾರಿಸಿರುವದರಲ್ಲಿ ಪ್ರಥಮತೆಯನ್ನು ಹೊಂದಿದೆ ಇದರಲ್ಲಿ ಏನೂ ಕಲ್ಮಷ ಇರುವದಿಲ್ಲ ಶುದ್ಧವಾಗಿದೆ ಬಹಳ ಮನೋಹರವಾದ ಆಹಾರ ಅಮೇರಿಕಾ ದೇಶದಲ್ಲಿ ತಯಾರಾಗುವಂತೆಯೂ ಅಥವಾ ಇಂಗ್ಲೆಂಡಿನಲ್ಲಿ ತಯಾರಾಗುವಂತೆಯೂ ಈ ತುಪ್ಪವು ಇದೆ ಎಂದು ಹೇಳಿದಾರೆ ಒಳ್ಳೆಯ ಪತ್ರಿಕಾಲೇಖನ ಉಂಟಿಯೂ ಸಹ ನಮ್ಮಲ್ಲಿ ದೊರೆಯುತ್ತೆ

ವಿಳಾಸ —ಆರ್ ಕೆ ಯಳಂದೂರು ಮತ್ತು ಕಂಪನಿ,
[171 2] ಸೋಲ್ ಏಜೆಂಟ್ಸ್, ದಾವಣಗೆರೆ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

1—8—1913 ರಿಂದ 22—8—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	14	11	1	1
ಮೈಸೂರು ,,	67	46	3	2
ಕೋಲಾರ್ ,,	7	6	14	9
ಕೋಲಾರ್ ಚಿನ್ನದ ಗಣಿಗಳು	1	0	1	0
ತುಂಕೂರು ಡಿಸ್ಟ್ರಿಕ್ಟು	24	17	4	2
ಹಾಸನ ,,	16	15	13	9
ಚಿತ್ರದುರ್ಗ ,,	8	2	3	1
ಕಡೂರ್ ,,	51	30	3	3
ಶಿವಮೊಗ್ಗಾ ,,	25	23	0	0
ಜುಮ್ಲಾ	211	150	42	27

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ವರ್ಷಋತು ಭಾದ್ರಪದ ಶುದ್ಧ ಪಂಚಮಿ ಶುಕ್ರವಾರದಿಂದ ಭಾದ್ರಪದ ಶುದ್ಧ ಏಕಾದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಸೆಪ್ಟಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸಿಂಹ ಮಾಸ ತೇದಿ
5	ಶುಕ್ರ *	ಪಂಚಮಿ	21 58	ಸ್ವಾತಿ	25 13	21
6	ಶನಿ ‡	ಷಷ್ಠಿ	17 0	ವಿಶಾಖ	22-11	22
7	ಭಾನು ,,	ಸಪ್ತಮಿ	13 57	ಅನುರಾಧ	21 0	23
8	ಸೋಮ	ಅಷ್ಟಮಿ	11-23	ಜ್ಯೇಷ್ಠ	20 20	24
9	ಮಂಗಳ †	ನವಮಿ	9 58	ಮೂಲ	20 18	25
10	ಬುಧ	ದಶಮಿ	9-40	ಪೂಷಾ	22 35	26
11	ಗುರು §	ಏಕಾದಶಿ	10-54	ಉತ್ತಷಾ	25-37	27

* ತಿಥಿದ್ವಯಂ, ಋಷಿಪಂಚಮಿ ‡ ಸಪ್ತಮೀತಿಥಿ, ಮಳೆ ನಕ್ಷತ್ರ—ಪುಬ್ಬಾ 3 ನೇ ಪಾದ , ದೂರ್ವಾಷ್ಟಮಿ, ಮೃತ್ಯುಯೋಗ † ನಂದನವಮಿ, ಮಳೆ ನಕ್ಷತ್ರ—ಪುಬ್ಬಾ 1 ನೇ ಪಾದ § ಸರ್ವತ್ರ ಏಕಾದಶಿ, ವಾಮನಜಯಂತಿ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೫ ೮-೦	೧೭-೮-೦
ಕೆಂಬೂತಿ ಅಕ್ಕಿ ಅವಲ್	೧೬ ೪ ೦	೧೭ ೮-೦
,, ,, ದುಯಂ	೧೫ ೧೨ ೦	೧೭ ೦-೦
ಜಾವಾಣಿ ಅಕ್ಕಿ	೧೬-೦-೦	೧೭-೪-೦
ಸಣ್ಣಕ್ಕಿ ಅವಲ್	೧೭-೮-೧	೧೮ ೮-೦
,, ದುಯಂ	೧೬-೧೨ ೦	೧೭-೮-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೧೪ ೧೨-೦	೧೩-೮-೦
,, ದುಯಂ ,,	೧೪-೦ ೦	೧೨ ೮-೦
ತ್ನೈಕ್ ರಾಗಿ ಪಲ್ಲಾ ೧ಕ್ಕೆ	೬ ೮-೦	೫-೨ ೯
ಕಾರ್‍ರಾಗಿ ,,	೬ ೦-೦	೪-೧೨-೦
ಜೋಳ ,,	೬-೮-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ	೧೧ ೦-೦	೧೩-೧೨-೦
ಬಿಳೀ ಅವರೆ ,,	೧೨-೪-೦	೧೧-೦-೦
ಹೆಸರು ,,	೧೨ ೦-೦	೧೪-೦-೦
ಉದ್ದು ,,	೧೪-೮ ೦	೧೬-೦-೦
ಕಡಲೆ ,,	೧೧ ೮-೦	೧೨-೦ ೦
ಎಳ್ಳು ಸೇರು ೧೨೭ಕ್ಕೆ	೨೨ ೦ ೦	೨೪-೦ ೦
ಹುರುಳಿ ಪಲ್ಲಾ ೧ಕ್ಕೆ	೭-೦ ೦	೭ ೦ ೦
ಹರಳು ೧೨೭ ಸೇರಿಗೆ	೧೩ ೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೨-೪ ೦	೩ ೮-೦
ಮೆಣಸಿನಕಾಯಿ ,,	೪ ೦-೦	೩ ೪-೦
,, ದುಯಂ	೩-೦-೦	೧ ೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫ ೨ ೦	ಮಣ ೩ ೮-೦
ಒಳ್ಳೆಣ್ಣೆ ಮಣ ೧ಕ್ಕೆ	೭ ೦ ೦	೬-೬-೦
ಹರಳೆಣ್ಣೆ ,, ,,	೫ ೪-೦	೬-೦-೦
ಕಡಲೇಕಾಯಿ ಎಣ್ಣೆ	೬ ೬-೦	೬-೦-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೪ ೨ ೦	೫-೪-೦
ಉಪ್ಪು ,, ,,	೬ ೨-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧ ೧೨-೦	೧ ೪-೦
ತುಪ್ಪ ಮಣ ೧ಕ್ಕೆ	೨೧ ೮ ೦	೧೯-೦-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫ ೧೧ ೦	೫ ೦-೦
ತೆಂಗಿನಕಾಯಿ ೧೦೦ಕ್ಕೆ	೬ ೪ ೦	೬-೦-೦
ಅರಲೇಕಾಯಿ ಮಣ ೧ಕ್ಕೆ	೧ ೬ ೦	೧-೨-೦
ಅಂಟ್ವಾಳದಕಾಯಿ ಮಣ ೧ಕ್ಕೆ	೧-೧೨-೦	೧ ೮-೦
ಚಿನ್ನ (ಪೌನ್) ಕೆಂಪು	೧೫-೮-೦	೧೫ ೮-೦
,, ,, ಪಸಿಮೆ	೧೫ ೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦-೦	೮೧-೩-೦

ಪ್ರಕಟಣೆ.

ವೃದ್ಧಾಪ್ಯ ಕಾಲದಲ್ಲೂ ಅಕಸ್ಮಾತ್ ಮರಣದಿಂದಲೂ ಸಂಭವಿಸುವ ಕಷ್ಟ ನಷ್ಟಗಳನ್ನು ಪರಿಹರಿಸಿಕೊಳ್ಳಬೇಕಾದರೆ ಕನ್ನಡಾ ಸನ್ ಲೈಫ್ ಅಷೂರೆನ್ಸ್ ಕಂಪೆನಿಯಲ್ಲಿ ಇನ್ಷೂರ್ ಮಾಡಿರಿ.

ಇದು 1866 ರಲ್ಲಿ ಸ್ಥಾಪಿಸಲ್ಪಟ್ಟಿತು.

ಹಿಂದೂ ದೇಶದ ಶಾಖೆ—ಬ್ರಿಟಿಷ್ ರಾಜ್ಯ ಮತ್ತು ಸಿಂಹಳ ದ್ವೀಪ.

ಪ್ರಧಾನ ಕಾರ್ಯಸ್ಥಾನ—ಕನ್ನಡಾ ಬಿಲ್ಡಿಂಗ್ ಬೊಂಬಾಯಿ.

ಇದರ ಶಾಖೆಗಳು—ಕಲ್ಕತ್ತಾ, ಲಾಹೋರ್, ಡೆಲ್ಲಿ, ರಂಗೂನ್ ಮತ್ತು ಕೊಲಂಬೋ ಮೊದಲಾದ ಸ್ಥಳಗಳು

ಮೊತ್ತ ದ್ರವ್ಯ	15	ಕೋಟಿ	ಚಿಲ್ಲರೆ	ರೂಪಾಯಿ.
ಚಾಲ್ತಿಯಲ್ಲಿರುವ ವಿಮೆ ಪತ್ರ	66	,,	,,	,,
ಲಾಭ 1912 ನೆಯ ವರುಷದವರೆಗೆ	4	,,	,,	,,
ಇದುವರೆಗೆ ವಿಮೆ ಪತ್ರಕ್ಕೆ ಕೊಟ್ಟ ಹಣ	10	,,	,,	,,

ಇದು ಬಹಳ ಲಾಭಕರವಾದ ಮತ್ತು ಧಾರಾಳವಾದ ಏರ್ಪಾಡುಗಳಿಂದೊಡಗೂಡಿದ ದ್ವೈಭಾಷಿಯಾದ ಲೈಫ್ ಅಷೂರೆನ್ಸ್ ಕಂಪೆನಿ.

ಇದರ ವಿಮೆ ಪತ್ರಗಳು ಯಾವ ಕಾರಣದಿಂದಲೇ ಆಗಲಿ ತಾನಾಗಿಯೇ ರದ್ದು ಆಗದೆ ಫಾಯಿದೆಯನ್ನುಂಟುಮಾಡುತ್ತೆ.

ಏಜಂಟರುಗಳು ಬೇಕಾಗಿದೆ.

ಪರಿಚಯಸ್ಥರಾಗಿಯೂ ಮತ್ತು ಚಟುವಟಿಕೆ ಉಳ್ಳವರಾಗಿಯೂ ಇರುವ ಏಜಂಟರುಗಳು ಮೈಸೂರು ದೇಶದಲ್ಲೂ, ತಿರುವಾಂಕೂರು, ಕೊಚ್ಚಿನ್, ಮೊದಲಾದ ಸಂಸ್ಥಾನಗಳಲ್ಲೂ ಬೇಕಾಗಿದೆ

ಏಜಂಟರುಗಳಿಗೆ ಧಾರಾಳವಾದ ಏರ್ಪಾಡುಗಳು ಮಾಡಲ್ಪಡುತ್ತೆ ಏಜನ್ಸಿ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

[177–1] ಸಿ ಆದಿಶೇಷಯ್ಯ,
ಲೋಕಲ್ ಸೆಕ್ರೆಟರಿ, ಮದರಾಸು ಬ್ರಾಂಚು,
18 ಸೆಕೆಂಡ್ ಲೈನ್ ಬೀಚು, ಮದರಾಸು.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೩ ನೇ ಇಸವಿ ಸೆಪ್ಟಂಬರ್, ತಾ ೪ ನೇ ಗುರುವಾರ.

ಲೋಕದ ಗಲಭೆ.

ಲೋಕದ ಎಲ್ಲಾ ಕಡೆಗಳಲ್ಲಿಯೂ ಜನಗಳಲ್ಲಿ ಸ್ವಲ್ಪ ಹೆಚ್ಚು ಕಡಮೆ ಕಲಹಗಳು ಇದ್ದೇ ಇರುತ್ತವೆ. ಆದರೆ ಈ ಎಲ್ಲಾ ತೊಂದರೆಗಳಿಂದ ದೇಶವು ನೆಮ್ಮದಿಯನ್ನು ಹೊಂದಿ ಪ್ರವರ್ಧಮಾನಕ್ಕೆ ಬರುವುದು.

ಬಾಲ್ಕನ್ ದೇಶವು ಈಗ ನೆಮ್ಮದಿಯ ಸುಖವನ್ನು ಅನುಭವಿಸುತ್ತಲಿದೆ. ಇದು ಈ ವರೆಗೂ ನಡೆದ ಯುದ್ಧಗಳಿಂದ ಬಂದಿರುವ ಪ್ರತಿಫಲವಾಗಿರುತ್ತದೆ. ತುರ್ಕಿಯರು ತಮ್ಮ ದೇಶದಲ್ಲಿ ಒಂದು ದೊಡ್ಡ ಭಾಗವನ್ನು ಕಳೆದುಕೊಂಡಿರುತ್ತಾರೆ. ಇದರಲ್ಲಿ ಬಲ್ಗೇರಿಯರಿಗೂ ಗ್ರೀಸ್‌ನವರಿಗೂ ಸರ್ವಿಯಾದವರಿಗೂ ಮೂಂಟೆನೀಗ್ರೊದವರಿಗೂ ಒಂದೊಂದು ಭಾಗವು ಸೇರಿರುತ್ತದೆ ಇದು ಮಾತ್ರವಲ್ಲದೆ ಅಲ್ಬೇನಿಯವೆಂಬ ಒಂದು ಹೊಸ ರಾಜ್ಯವು ಏರ್ಪಾಡಾಗಿರುತ್ತದೆ. ಲಂಡನ್ ಪಟ್ಟಣದಲ್ಲಿ ನಡೆದ ಕರಾರಿನಿಂದ ತುರ್ಕಿಗೂ ಬಲ್ಗೇರಿಯಕ್ಕೂ ಮಧ್ಯ ಮೇರೆಯನ್ನು ಗೊತ್ತುಮಾಡಿದ್ದರು. ಆದರೆ ಬಾಲ್ಕನ್ ಅನ್ಯೋನ್ಯ ರಾಜ್ಯಗಳಿಗ ನಡೆದ ಯುದ್ಧದಲ್ಲಿ ತುರ್ಕಿಯರು ಏಡ್ರಿಯನೋಪಲ್‌ಗ ಹಿಂಮೆಟ್ಟಿ ಹೋಗಿ, ಈ ವರೆಗೂ ಅಲ್ಲೇ ಇರುತ್ತಾರೆ ಬೇರೆ ರಾಜ್ಯಗಳವರು ತುರ್ಕಿಯರಿಗೆ—ನೀವು ಲಂಡನ್ ಪಟ್ಟಣದಲ್ಲಿ ರುಜು ಹಾಕಿ ಮಾಡಿದ ಕರಾರನ್ನು ಕೈಕೊಳ್ಳಬೇಕೆಂದು ಹೇಳಿರುತ್ತಾರೆ. ಆದರೆ ತುರ್ಕಿಯರು ಈ ವಿಷಯವನ್ನು ಬಲ್ಗೇರಿಯರಲ್ಲಿ ಇತ್ಯರ್ಥಮಾಡಿಕೊಳ್ಳುವುದಕ್ಕೆ ಬಿಡಲ್ಪಡುವಂತೆ ತೋರುತ್ತದೆ. ಈಗ ಯುದ್ಧ ನಡೆಯುವಂತೆ ತೋರುವುದಿಲ್ಲ. ಏಕೆಂದರೆ ಎಲ್ಲಾ ಕಡೆಗಳವರೂ ಯುದ್ಧ ಮಾಡಿ ಮಾಡಿ ಸಾಕಾಗಿರುತ್ತಾರೆ. ಮತ್ತು ಯುದ್ಧಕ್ಕೆ ಬೇಕಾದಷ್ಟು ದ್ರವ್ಯವು ಸಹ ಅವರಲ್ಲಿ ಇರುವುದಿಲ್ಲ. ಈ ಸಮಾಧಾನವು ಎಷ್ಟು ಕಾಲದ ವರೆಗೂ ಇರುವುದೋ ಹೇಳುವುದಕ್ಕಾಗುವುದಿಲ್ಲ.

ಚೀನಾ ಸಾಂಮ್ರಾಜ್ಯದ ದಕ್ಷಿಣ ಸೀಮೆಗಳಲ್ಲಿ ತಲೆದೋರಿದ್ದ ದಂಗೆಯನ್ನು ಅಲ್ಲಿನ ಸರಕಾರದವರು ಅಣಗಿಸಿಬಿಟ್ಟಿರುವಂತೆ ತೋರುತ್ತದೆ. ಯುದ್ಧವು ಕೊನೆಗಂಡಿರುವುದಿಲ್ಲ. ದಂಗೇಕೋರರಲ್ಲಿ ಪ್ರಮುಖರು ಜಪಾನಿಗೆ ಓಡಿ ಹೋಗಿರುವುದರಿಂದ ಸ್ವಲ್ಪ ಅನುಮಾನವು ತೋರುವುದು. ಆದರೆ ಆ ನೆಮ್ಮದಿಯ ಸುಖವು ತಿರಿಗಿ ಪ್ರಾಪ್ತವಾಗುವುದು. ಚೀನಾ ಸಾಂಮ್ರಾಜ್ಯವು ಪ್ರವರ್ಧಮಾನಕ್ಕೆ ಬರಬೇಕಾದರೆ, ಆ ರಾಜ್ಯದಲ್ಲಿ ಸಮಾಧಾನವು ಇರತಕ್ಕದ್ದು. ಚೀನಾದವರು ತಮ್ಮ ಗವರ್ನಮೆಂಟನ್ನೂ ವಿದ್ಯಾಭ್ಯಾಸವನ್ನೂ ಇತರ ಸಾಮಾನ್ಯ ವಿಷಯಗಳನ್ನೂ ಉತ್ತಮ ಸ್ಥಿತಿಗ ತರಬೇಕೆಂಬ ಅಪೇಕ್ಷೆಯುಳ್ಳವರಾಗಿರುತ್ತಾರೆ ಎಂಬುವುದಕ್ಕ ಅನೇಕಾನೇಕ ಗುರುತುಗಳು ಇರುತ್ತವ ಅಲ್ಲಿನ ಗವರ್ನಮೆಂಟ್ ಅಧರ್ಮವನ್ನು ಅಣಗಿಸಿಬಿಟ್ಟು, ಎಲ್ಲರೂ ಪ್ರವರ್ಧಮಾನಕ್ಕೆ ಬರುವ ದಾರಿಯನ್ನು ತೋರಿಸಿಕೊಡುವಷ್ಟು ಸಾಮರ್ಥ್ಯವುಳ್ಳದಾಗುವುದೆಂದು ನಂಬಿರುತ್ತೇವೆ.

ಮೆಕ್ಸಿಕೊ ರಾಜ್ಯದವರಲ್ಲಿಯೂ ತೊಂದರೆಗಳು ಪ್ರಾಪ್ತವಾಗಿರುತ್ತವೆ. ಮತ್ತು ಸಂಯುಕ್ತ ರಾಜ್ಯಗಳು ಕ್ರಮವನ್ನೂ ಸಮಾಧಾನವನ್ನೂ ನೆಲೆಗೊಳಿಸಬೇಕೆಂದು ಪ್ರಯತ್ನಪಡುತ್ತಿರುವುವು. ಸಂಯುಕ್ತ ರಾಜ್ಯಗಳ ಸಂಪರ್ಕವು ತಮಗೆ ಹಾನಿಕರವೆಂದು ಮೆಕ್ಸಿಕೊದವರು ಭಾವಿಸುತ್ತಿರುವರು. ಆದರೆ ಈ ಎರಡು ಜನಾಂಗಗಳವರೂ ಯುದ್ಧವಿಲ್ಲದೆ ತಮ್ಮ ಕಷ್ಟಗಳನ್ನು ನಿವಾರಣೆಮಾಡಿಕೊಳ್ಳಬಹುದೆಂದು ಈಚೆಗೆ ಬಂದಿರುವ ತಂತಿವರ್ತಮಾನಗಳಿಂದ ತಿಳಿದುಬರುತ್ತದೆ.

ಸಮಾಧಾನವು ಎಲ್ಲಾ ಕಡೆಗಳಲ್ಲಿಯೂ ವ್ಯಾಪಿಸುವುದೆಂದೂ ಜನಗಳು ಒಬ್ಬರನ್ನೊಬ್ಬರು ವಿರೋಧಿಸಿ, ಯುದ್ಧ ಮಾಡುವುದಕ್ಕೆ ಬದಲಾಗಿ ಒಬ್ಬರನ್ನೊಬ್ಬರು ಪ್ರೀತಿಸುವುದನ್ನು ಕಲಿತುಕೊಳ್ಳುವರೆಂದೂ ನಂಬುತ್ತೇವೆ.

ಹುಂಜವು.

ಇಬ್ಬರು ಕಳ್ಳರು ದವಸವನ್ನು ಕದಿಯುವದಕ್ಕಾಗಿ ಒಂದು ಏಣಿಯನ್ನು ಹಾಕಿಕೊಂಡು ಒಬ್ಬ ಕೊಟ್ಟಣದವನ ಮನೆಯ ಕಿಟಕಿಯಿಂದ ಒಳಕ್ಕೆ ಹೋಗಿ ಆ ಕೊಟ್ಟಣದವನ ಹಾಸಿಗೆ ಇರುವ ಸ್ಥಳವನ್ನು ಹುಡುಕಿಕೊಂಡುಹೋಗುತ್ತಿರುವಾಗ ಅಲ್ಲಿದ್ದ ಒಂದು ಹುಂಜವು ಬಹಳ ಘಟ್ಟಿಯಾಗಿಯೂ ಕಠಿನವಾಗಿಯೂ ಕೂಗಿತು ಚಿಕ್ಕವನು—ಈ ಹುಂಜವು ಬಹಳ ಭಯಂಕರವಾಗಿ ಕೂಗುತ್ತದೆ; ನನಗೆ ಭಯವಾಗುತ್ತದೆ; ಹಿಂದಕ್ಕೆ ಹೋಗೋಣ ನಡೆ ಅಂದನು. ಆಗ ದೊಡ್ಡವನು—ಹೇಡಿಯೇ, ಯಾವನಾದರೂ ಬಂದರೆ ಅವನನ್ನು ತಿವಿದು ಕೊಂದರೆ ಆಗ ಆ ಹುಂಜವು ಎಷ್ಟು ಕೂಗಿದರೆ ನಮಗೇನು ಅಂದನು ಕಡೆಗೆ ಇಬ್ಬರೂ ಸೇರಿ ಆ ಕೊಟ್ಟಣದವನನ್ನು ಕೊಂದು ಅವನ ಆಸ್ತಿಯನ್ನೆಲ್ಲವನ್ನೂ ದೋಚಿಕೊಂಡು ಹೋದರು ಮೂರು ವರುಷಗಳ ವರೆಗೂ ಇದು ಹೊರಗೆ ಬರಲೇ ಇಲ್ಲ ಒಂದು ದಿವಸ ಆ ಕೊಲೆಗೇಡಿಗಳು ಒಂದು ಸಣ್ಣ ಛತ್ರದಲ್ಲಿ ಬಂದು, ಆ ರಾತ್ರೆ ತಂಗಿದರು. ಘಡಿಯಾರದಲ್ಲಿ ಹನ್ನೆರಡು ಗಂಟೆ ಹೊಡೆಯಿತು. ಆಗ ಒಂದು ಹುಂಜವು ಘಟ್ಟಿಯಾಗಿ ಕೂಗಿದ್ದರಿಂದ ಅವರಿಗೆ ಎಚ್ಚರವಾಯಿತು ಆಗ ಅವರಲ್ಲೊಬ್ಬನು—ಆ ಹಾಳಾದ ಹುಂಜ ಮಾತ್ರ ನನ್ನ ಕೈಗೆ ಸಿಕ್ಕಿದರೆ ಅದರ ಕುತ್ತಿಗೆಯನ್ನು ಅವಚಿ ಕೊಂದುಬಿಡುವೆನು; ಆ ಕೊಟ್ಟಣದ ಮನೆಯಲ್ಲಿ ನಾವು ಕೊಲೆಯನ್ನು ನಡಿಸಿದಾರಭ್ಯ ಹುಂಜನ ಕೂಗನ್ನು ಕೇಳಿದರೆ ಎದೆ ತಲ್ಲಣಿಸುತ್ತದೆ ಅಂದನು. ಮತ್ತೊಬ್ಬನು ಅದನ್ನು ಕೇಳಿ—ಹೌದು, ನನಗೂ ಹಾಗೆಯೇ ಸರಿ; ಆ ನಿರ್ಭಾಗ್ಯನಾದ ಕೊಟ್ಟಣದವನನ್ನು ನಾವು ಕೊಲ್ಲಬಾರದಾಗಿತ್ತು, ಹುಂಜಗಳು ಕೂಗಿದಾಗಲೆಲ್ಲಾ ನನ್ನ ಎದೆಯನ್ನು ತಿವಿದಂತೆಯಾಗುತ್ತೆ ಅಂದನು ಪುನಃ ಇಬ್ಬರಿಗೂ ನಿದ್ರೆ ಬಂತು ಆದರೆ ಹೊತ್ತು ಹುಟ್ಟುವಾಗ್ಯೆ, ಇಬ್ಬರು ಪೋಲೀಸಿನವರು ಬಂದು ಅವರನ್ನು ಹಿಡಿದುಕೊಂಡರು. ಆ ಛತ್ರದವನು ಮಲಗಿದ್ದ ಚಿಕ್ಕ ಮನೆಯು ಮತ್ತು ಇವರು ಮಲಗಿದ್ದ ಚಿಕ್ಕ ಮನೆಯ ಮಧ್ಯದಲ್ಲಿ ಒಂದು ತಡಿಕೇ ಗೋಡೆ ಮಾತ್ರ ಇದ್ದದ್ದರಿಂದ ಇವರು ಆಡಿದ ಮಾತುಗಳು ಅವನಿಗೆ ಕೇಳಿ ಅವನು ಪೋಲೀಸಿನವರನ್ನು ಕರೆತಂದನು ಆ ಇಬ್ಬರನ್ನೂ ಗಲ್ಲಿಗೆ ಹಾಕುವದಕ್ಕೆ ಕರೆದುಕೊಂಡು ಹೋಗುತ್ತಿದ್ದಾಗ ದಾರಿಯಲ್ಲಿ ಜನರು ಅವರನ್ನು ಕುರಿತು—ನೋಡಿದಿರಾ, ಇವರ ಕೃತ್ಯವು ಒಂದು ಹುಂಜದ ಕೂಗಿನಿಂದ ಹೊರಪಟ್ಟಿತು; ಆ ಕೊಟ್ಟಣದವನ ಮನೆಯಲ್ಲಿದ್ದ ಆ ಹುಂಜವು ಇವರನ್ನು ತನ್ನ ಕೂಗಿನಿಂದ ಭಯಪಡಿಸಿದಾಗಲೇ ಇವರು ಎಚ್ಚರಗೊಂಡು ಇದ್ದಿದ್ದರೆ, ಇವರಿಗೆ ಈ ಕಷ್ಟವು ಪ್ರಾಪ್ತವಾಗುತ್ತಲೇ ಇರಲಿಲ್ಲ ಅಂದುಕೊಂಡರು.

ರಾತ್ರಿ ಕಾಲಗಳಲ್ಲಿ ಕೂಗುತ್ತಿರುವ ಹುಂಜಗಳು ಮನುಷ್ಯರು ಪಾಪವೆಂಬ ಹಿಂಡೆಯ ಮೇಲೆ ಬಿದ್ದು ತಲೆಯನ್ನು ಒಡೆದುಕೊಳ್ಳದಂತೆ ಎಚ್ಚರಿಸುತ್ತವೆ

ಸಿಡಿಮದ್ದಿನ ರಿಪೋರ್ಟು.

ಡೈನಾಮೈಟ್ ಮುಂತಾದ ಸಿಡಿಮದ್ದಿನ ಚೀಫ್ ಇನ್ಸ್‌ಪೆಕ್ಟರವರಾದ ಡಾಕ್ಟರ್ ಸ್ಮಿತ್‌ರವರು ಬರೆದಿರುವ ರಿಪೋರ್ಟಿನಿಂದ—ಮುಖ್ಯವಾಗಿ ಕೋಲಾರದ ಚಿನ್ನದ ಗಣಿಗಳ ಉಪಯೋಗಕ್ಕಾಗಿ ಡೈನಾಮೈಟ್ ಮುಂತಾದ ಸಿಡಿಮದ್ದು ಬಹುವಾಗಿ ನಮ್ಮ ಸೀಮೆಗೆ ಆಮದಾಗುತ್ತಾ ಇವೆ ಎಂದು ಕಂಡುಬರುತ್ತವೆ ಈ ಅಪಾಯಕರವಾದ ಪದಾರ್ಥಗಳನ್ನು ತುಂಬಾ ಜಾಗರೂಕತೆಯಿಂದ ಉಪಯೋಗಿಸಬೇಕು. ಕೋಲಾರದ ಚಿನ್ನದ ಗಣಿಗಳಲ್ಲಿ ಮಾತ್ರ ಅನಾಹುತಗಳು ಆಗಾಗ್ಗೆ ನಡೆಯುತ್ತಲೇ ಇರುತ್ತವೆ. ಅಲ್ಲಿ 17 ಅನಾಹುತಗಳು ನಡೆದು, 15 ಜನರೂ ಮೃತಪಟ್ಟ ಹಾಗೂ ಬೇರೆ 19 ಜನರಿಗೆ ಗಾಯಗಳಾಗಿರುವ ಹಾಗೂ ತಿಳಿದುಬರುತ್ತದೆ ಮೂರು ಮಂದಿಯನ್ನು ಹಿಡಿದು ಮೂರರಿಂದ ಆರು ವಾರಗಳ ವರೆಗೂ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರ ಸವಾರಿಯು 6 ನೇಯ ತಾರೀಖಿಗೆ ಬೆಂಗಳೂರಿಂದ ನೀಲಗಿರಿಗೆ ಚಿತ್ತೈಸುವುದಾಗಿ ತಿಳಿದು ಬರುತ್ತದೆ

* * *

ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ರವರಾದ ಮೆ|| ಸಿ. ಟ್ರೀಕಂಡೇಸ್ಸ್ ಕ್ವೈಯರ್‌ರವರು ಕಳೆದ ಶನಿವಾರ ರಾಜಧಾನಿಗೆ ದಯಮಾಡಿಸಿದ್ದರು.

* * *

ಕಳೆದ ವಾರ ರಾಜಧಾನಿಯಲ್ಲಿ ಒಂದು ಎಮ್ಮೆಯು ಬೆದರಿ ದೊಡ್ಡಪೇಟೆ ಸಂತೇಪೇಟೆಗಳಲ್ಲಿ ನುಗ್ಗಿ ಮೂರು ಮಂದಿಯನ್ನು ಕೆಡವಿ ಗಾಯಮಾಡಿತು.

* * *

ಇದೇ ತಿಂಗಳು 15 ನೆಯ ತಾ. ಸೋಮವಾರ ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ಮೈಸೂರು ನ್ಯಾಯವಿಧಾಯಕ ಸಭೆಯ ಒಂದು ಮೀಟಿಂಗ್ ಬೆಂಗಳೂರಲ್ಲಿ ನಡೆಯುವುದಾಗಿ ತಿಳಿದು ಬರುತ್ತದೆ.

* * *

ರೆಸಿಡೆಂಟರಾದ ಆನರಬ್ ಕರ್ನಲ್ ಸರ್ ಹ್ಯುಡಾಲಿ ಕೆ.ಸಿ.ಐ.ಇ., ಸಿ ಎಸ್.ಐ ರವರು ಈಗನ ಏರ್ಪಾಡಿನ ಪ್ರಕಾರ ಮುಂದಿನ ಸೋಮವಾರ ನೀಲಗಿರಿಗೆ ಪ್ರಯಾಣ ಬೆಳೆಸುವವರಾಗಿರುತ್ತಾರೆ.

* * *

ಕೋಲಾರ, ಹಾಸನ, ಚಿತ್ರದುರ್ಗ, ಡಿಸ್ಟ್ರಿಕ್ಟುಗಳಲ್ಲಿ ಕಾಲರಾ ಉಪದ್ರವು ತಲೆದೋರಿರುವ ಹಾಗೂ ಒಂದು ವಾರದಲ್ಲಿ 42 ಜನರಿಗೆ ತಗಲಿ ಅವರಲ್ಲಿ 27 ಜನರು ಮೃತಪಟ್ಟ ಹಾಗೂ ಗೊತ್ತಾಗುತ್ತದೆ.

ಕೆಲವು ತಿಂಗಳುಗಳಿಂದ ನಡೆಯುತ್ತಾ ಬಂದಿರುವ ಕಣ್ಣೇಗಾಲದ ದಂಗೆ ಮೊಕದ್ದಮೆಯ ವಿಚಾರವು ಕೊನೆಗಾಣುತ್ತಾ ಬಂದಿದೆ. ಇದೇ ತಿಂಗಳು 10 ನೆಯ ತಾರೀಖಿಗೆ ಜಡ್ಜಮೆಂಟ್ ಹೇಳುವುದಾಗಿ ತಿಳಿದುಬರುತ್ತದೆ.

* * *

ರಿಟೈರ್ಡ್ ಅ|| ಕ|| ಮೆ|| ಟಿ. ಹೇಮಹನುಮಂತಯ್ಯನವರೂ ಪಾದ್ರಿಗಳಾದ ಮೆ|| ಹೆಚ್. ಜೆಚ್. ನ್ಯೂಹಾಮ್‌ರವರೂ ತುಮಕೂರು ಡಿಸ್ಟ್ರಿಕ್ಟ್ ಸಂಪದಭಿವೃದ್ಧಿ ಸಮಾಜದ ಕಮಿಟಿ ಮೆಂಬರುಗಳಾಗಿ ಚುನಾಯಿಸಲ್ಪಟ್ಟಿರುತ್ತಾರೆ.

* * *

ಬರುವ ಡಿಸೆಂಬರ್ ತಿಂಗಳ ಮೊದಲನೆಯ ವಾರದಲ್ಲಿ ಬೆಂಗಳೂರಿನಲ್ಲಿ ಕುಸ್ತಿ ಮೇಲಾಟವು ನಡೆಯುವುದು. ಅದರಲ್ಲಿ ಗೆದ್ದವನಿಗೆ ನಮ್ಮ ಶ್ರೀಮನ್ ಮಹಾರಾಜರವರು 500 ರೂ. ಬೆಲೆಯುಳ್ಳ ಒಂದು ಬೆಳ್ಳಿಯ ಬಟ್ಟಲನ್ನೂ ಹಣವನ್ನೂ ಬಹುಮಾನವಾಗಿ ಕೊಡುವರು.

* * *

ಶ್ರೀರಂಗಪಟ್ಟಣದಲ್ಲಿ ಪ್ರಜಾನುರಾಗವನ್ನು ಸಂಪಾದಿಸಿಕೊಂಡಿದ್ದ ಡಾಕ್ಟರ್ ಬಿ ಎಸ್. ನಾಗಭೂಷಣಂರವರು ವರ್ಗವಾದುದಕ್ಕಾಗಿ ಅಲ್ಲಿನವರು ಕಳೆದ ಭಾನುವಾರ ದರಿಯಾದೌಲತ್ ಬಾಗಿನಲ್ಲಿ ಒಂದು ಸಂತೋಷ ಕೂಟವನ್ನು ನಡಿಸಿ ಅವರಲ್ಲಿ ತಮಗಿದ್ದ ಪ್ರೀತಿಯನ್ನು ಪ್ರಕಾಶಪಡಿಸಿದರು.

* * *

ಸಾಗರದಲ್ಲಿರುವ ಲಾಯರುಗಳು ಕಾರಣಾಂತರದಿಂದ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಯಾವ ಹೊಸ ಕೇಸುಗಳ ವಿಚಾರವಾಗಿಯಾದರೂ ಹೋಗಕೂಡದೆಂತಲೂ ಇದಕ್ಕೆ ತಪ್ಪಿದವರು ಜನರಲ್ ಫಂಡಿಗೆ 50 ರೂಪಾಯಿ ದಂಡ ಕೊಡಬೇಕೆಂತಲೂ ತಮ್ಮಲ್ಲಿ ಮಾತಾಡಿಕೊಂಡಿರುವಂತೆ ತಿಳಿದುಬರುತ್ತದೆ.

* * *

ಮೈಸೂರು ಸೀಮೆಯ ಮೂರನೆಯ ಕೋಆಪರೇಟಿವ್ ಕಾನ್‌ಫರೆನ್ಸ್ ರಾಜಧಾನಿಯ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಬರುವ ಅಕ್ಟೋಬರ್ ತಾ 4, 5, 6 ರಲ್ಲಿ ನಡೆಯುವುದಾಗಿಯೂ, ಮೆ|| ಕೆ. ಪಿ, ಪುಟ್ಟಣ್ಣಚೆಟ್ಟಿ, ರಾಜಸಭಾಭೂಷಣ ದಿವಾನ್ ಬಹದ್ದೂರ್‌ರವರು ಆ ಮಹಾಸಭೆಯಲ್ಲಿ ಅಗ್ರಾಸನವನ್ನು ಅಲಂಕರಿಸುವುದಾಗಿಯೂ ಸಾಧ್ಯವಾದ ಮಟ್ಟಿಗೆ ಅಲ್ಲಿನ ಕಾರ್ಯಗಳನ್ನು ಕನ್ನಡ ಭಾಷೆಯಲ್ಲಿ ನಡಿಸುವುದಾಗಿಯೂ ತಿಳಿದುಬರುತ್ತದೆ.

* * *

ಬೆಂಗಳೂರು ಕೊರಚರ ಪಾಳ್ಯದಲ್ಲಿ ಕಳೆದ ಭಾನುವಾರ ಮುನಿಮುತ್ತಿ ಎಂಬ 6 ವರುಷದ ಒಬ್ಬ ಹುಡುಗಿಯು ತಾಯಿಯು ನೀರಿಗೆ ಹೋಗಿರುವ ಸಮಯದಲ್ಲಿ ಒಲೆಯ ಹತ್ತಿರ ಹೋದುದರಿಂದ ಅವಳು ಹಾಕಿಕೊಂಡಿದ್ದ ಅಂಗಿಗೆ ಹೇಗೋ ಬೆಂಕಿ ತಗಲಿ ತಾಯಿಯು ಹಿಂದಿರಿಗಿ ಬರುವಷ್ಟರಲ್ಲಿ ಮೈಯೆಲ್ಲಾ ಬಹಳ ಸುಟ್ಟು ಹೋಗಿತ್ತು. ಕೂಡಲೇ ಆಸ್ಪತ್ರೆಗೆ ತೆಗೆದುಕೊಂಡು ಹೋದರೂ ಪ್ರಯೋಜನವಾಗದೆ ಮಾರಣೆಯದಿನ ಮೃತಪಟ್ಟಳು.

* * *

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯ ಕೋಟೆಯಲ್ಲಿ ಜನಗಳು ಗೋವುಗಳ ಮೆರವಣಿಗೆಯನ್ನು ನೋಡುವುದಕ್ಕೆ ಹೋಗಿದ್ದಾಗ ಒಂದು ಗಾಡಿಗೆ ಕಟ್ಟಿದ್ದ ಎತ್ತುಗಳು ಬೆದರಿ, ಎಷ್ಟು ಪ್ರಯತ್ನಪಟ್ಟರೂ ಹತೋಟಿಗೆ ಬಾರದೆ, ಜನಗಳ ಮೇಲೆ ನುಗ್ಗಿಬಿಟ್ಟವು ಇದರಿಂದ ಮೂವರು ಮೃತಪಟ್ಟ ಹಾಗೂ ಇನ್ನೂ ಅನೇಕರಿಗೆ ಗಾಯಗಳಾಗಿರುವ ಹಾಗೂ ತಿಳಿದುಬಂದಿದೆ ಮೃತಪಟ್ಟವರಲ್ಲಿ ಇಲ್ಲಿನ ಟಪಾಲು ಆಫೀಸಿನ ಪಾಲುಂಜಿಯವರ ಸುಮಾರು 7-8 ವರುಷದ ಮಗನು ಒಬ್ಬನಾಗಿದ್ದನು.

ಮೈಸೂರು ಗೆಜೆಟ್ ಸಂಗ್ರಹ.

ಬೆಂಗಳೂರು ಡಿಸ್ಟ್ರಿಕ್ಟ್ ಅ|| ಸರ್ಜನ್ ಮತ್ತು ಡಿ|| ಸ್ಯಾನಿಟರಿ ಆಫೀಸರವರಾದ ಮೆ|| ಪಿ. ಮುತ್ತುಸಾಮಿರಾವ್ ಎಲ್ ಎಂ ಎಸ್ ರವರಿಗೆ ಸೆಪ್ಟೆಂಬರ್ 5 ರ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ಹತ್ತು ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿರುತ್ತದೆ.

ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ರೆವಿನ್ಯು ಪ್ರೊಬೇಷನರ್ ಮೆ|| ಜ ಮಲ್ಲಿಕಾರ್ಜುನಯ್ಯ ಬಿ ಎ. ರವರನ್ನು ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರನ್ನಾಗಿ ನಿಯಾಮಕಮಾಡಿದೆ.

ಹುಣಸೂರು ತಾಲ್ಲೂಕು ಅಮಲ್ದಾರ್ ಮೆ|| ಹೆಚ್. ವಿ ರಾಮಸ್ವಾಮಿ ಎಂ. ಎ, ಬಿ. ಎಲ್ ರವರು ಮೂರನೇ ಕ್ಲಾಸಿನಿಂದ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟರನ್ನಾಗಿ ನಿಯಾಮಕಮಾಡಿದೆ.

ಚನ್ನಪಟ್ಟಣದ ಅಮಲ್ದಾರ್ ಮೆ|| ಬಿ. ಆರ್ ನಾರಾಯಣಸಾಮಿ ಮುದಲಿಯಾರ್ ರವರನ್ನು ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರನ್ನಾಗಿ ನಿಯಾಮಕಮಾಡಿದೆ.

ರಾಜಧಾನಿಯ ಪೋಲೀಸ್ ಅ|| ಸೂಪರಿಂಟೆಂಡೆಂಟರಾದ ಮೆ|| ಮಹಮದ್ ಜಾಫರ್ ಮೆಕ್ರಿಯವರನ್ನು ಇನ್ನೊಂದು ಹುಕುಂ ಕೊಡುವ ವರೆಗೂ ಮೈಸೂರು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರ ಕೈಕೆಳಗೆ ಸ್ಪೆಷಲ್ ಡ್ಯೂಟಿಯ ಮೇಲೆ ನಿಯಾಮಕಮಾಡಿದೆ.

ಮುಂದೆ ನಡೆಯುವುದಕ್ಕಿರುವ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳನ್ನಾಗಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ಮೆ|| ಅಡ್ವೊಕೇಟ್ ಸಿ. ನರಸಿಂಹಯ್ಯ, ಬಿ ಎ., ಬಿ ಎಲ್. ಮತ್ತು ಮೆ|| ಕಾಸುಭೋಗ ದೇವಾಲಾಪುರದ ಗುಂಡಪ್ಪ ಇವರನ್ನೂ ಕೋಲಾರ್ ಡಿಸ್ಟ್ರಿಕ್ಟ್ ಬೋರ್ಡಿನವರ ಮೆ|| ಸಿ ನಾರಾಯಣಸ್ವಾಮಿ ಚೆಟ್ಟಿ ಮತ್ತು ಮೆ|| ಹೆಚ್. ಕೃಷ್ಣಾಚಾರ್ ಇವರನ್ನೂ ಕಡೂರು ಡಿಸ್ಟ್ರಿಕ್ಟ್ ಬೋರ್ಡಿನವರು ಮೆ|| ಜಹಗೀರ್ದಾರ್ ಎಂ. ಗುರುರಾಯರು ಮತ್ತು ಮೆ|| ಹೆಚ್ ಕೃಷ್ಣರಾಯರು ಇವರನ್ನೂ ನಗರದ ಸಭೆಯವರು ಮೆ|| ಅಡ್ವೊಕೇಟ್ ಕೆ ಶಂಕರನಾರಾಯಣರಾಯರು ಎಂ.ಎ, ಬಿ.ಎಲ್ ರವರನ್ನೂ ಚುನಾಯಿಸಿಕೊಂಡಿರುತ್ತಾರೆ.

ದಿವಾನ್‌ರವರು ಬೆಂಗಳೂರಲ್ಲಿರುವಾಗ ಸರಕಾರಿ ರಜಾ ದಿನಗಳನ್ನು ಬಿಟ್ಟು ಬೇರೆ ದಿನಗಳಲ್ಲಿ ವಿಶೇಷವಾದ ಕೆಲಸ ಇಲ್ಲದಿದ್ದರೆ, ಗುರುವಾರಗಳಲ್ಲಿ ಮಧ್ಯಾಹ್ನ 3½-5 ರ ವರೆಗೆ ಪಬ್ಲಿಕ್ ಆಫೀಸಿನ ಸಭಾ ಮಂದಿರದಲ್ಲಿಯೂ ಶುಕ್ರವಾರ ಹೊತ್ತಾರೆ 8-10 ರ ವರೆಗೆ ಸ್ವಂತ ಬಂಗಲೆಯಲ್ಲಿಯೂ ಅವರ ಭೇಟಿ ತೆಗೆದುಕೊಳ್ಳ ಬೇಕೆಂದಿರುವವರನ್ನು ಆದರ ಪೂರ್ವಕವಾಗಿ ಸ್ವೀಕರಿಸುವರು ಮತ್ತು

ಅವರು ಸರ್ಕೀಟಿನಲ್ಲಿರುವಾಗ ಬೇರೆ ನೋಟಿಸ್ ಕೊಡದ ಪಕ್ಷದಲ್ಲಿ ಸಾಯಂಕಾಲ 4-5 ರ ವರೆಗೆ ಅವರನ್ನು ನೋಡಬೇಕೆಂದು ಬರುವವರಿಗೆ ಭೇಟಿ ಕೊಡುವರು

ಮೈಸೂರು ಡಿಸ್ಟ್ರಿಕ್ಟ್ ಸ್ಕೂಲ್ ಡೆ|| ಇನ್‌ಸ್ಪೆಕ್ಟರಾದ ಮೆ|| ಎಂ ರಾಮಸ್ವಾಮಯ್ಯನವರು ಮೈಸೂರು ವಿದ್ಯಾಭ್ಯಾಸ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ರವರ ಅಸಿಸ್ಟೆಂಟರಾಗಿ ನೇಮಕವಾಗಿರುವುದರಿಂದ ಅವರ ಕೆಲಸಕ್ಕೆ ಇನ್ನೊಂದು ಹುಕುಂ ಕೊಡುವ ವರೆಗೂ ಮೈಸೂರು ಡಿಸ್ಟ್ರಿಕ್ಟ್ 2 ನೇ ರೇಂಜ್ ಸ್ಕೂಲ್ ಅ| ಡೆ| ಇನ್‌ಸ್ಪೆಕ್ಟರಾದ ಮೆ|| ಎಂ ನಾರಾಯಣರಾಯರನ್ನು ನೇಮಕಮಾಡಿ ರುತ್ತಾರೆ

ಬೆಂಗಳೂರು ಸರ್ಕಲ್ ಸ್ಕೂಲುಗಳ ಇನ್‌ಸ್ಪೆಕ್ಟರ್ ಕೆಲಸವನ್ನು ಬದಲಿ ನೋಡುತ್ತಿದ್ದ ಮೆ|| ಬಿ ದಾಸಪ್ಪನವರಿಗೆ ಸೆಪ್ಟೆಂಬರ್ 1 ರ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಕು ಲಾಗಾಯಿತು ಒಂದು ತಿಂಗಳು ನಾಲ್ಕು ದಿನಗಳ ರಜಾ ಕೊಡಲ್ಪಟ್ಟಿರುತ್ತದೆ. ಇವರ ಗೈರ್‌ಹಾಜರಿ ಕಾಲದಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಸ್ಕೂಲ್ ಡೆ|| ಇನ್‌ಸ್ಪೆಕ್ಟರವರು ತಮ್ಮ ಕೆಲಸದ ಜೊತೆಯಲ್ಲಿ ಸರ್ಕಲ್ ಇನ್‌ಸ್ಪೆಕ್ಟರ ಕೆಲಸದ ಚಾರ್ಜನ್ನು ವಹಿಸಿರುವರು

ನಿಯೋಗ ವಿಧಿಯ ವಿಚಾರ

ಈ ಹೆಸರಿನ ಪುಸ್ತಕವನ್ನ ವಿದ್ವಾಂಸರೂ ಲೋಕಾನುಭವಿಗಳೂ ಆದ ರಿಟೈರ್ಡ್ ಹೈಸ್ಕೂಲ್ ಹೆಡ್ ಮಾಸ್ಟರ್ ಮಿ|| ಆರ್ ರಘುನಾಥರಾವ್ ಬಿ ಎ ಯವರು ರಚಿಸಿ ಇವುಗಳನ್ನ ದೇಶದಲ್ಲೆಲ್ಲಾ ಪ್ರಸಿದ್ಧಿಪಡಿಸಿರುವುದಲ್ಲದೆ ಆ ಪೈಕಿ ಒಂದು ಪುಸ್ತಕವನ್ನ ನಮ್ಮಲ್ಲಿಗೆ ಕಳುಹಿಸಿಕೊಟ್ಟಿರು ಅದನ್ನ ವಂದನಾಪೂರ್ವಕ ಅಂಗೀಕರಿಸಿ ಈ ಪುಸ್ತಕವನ್ನ ಆದ್ಯಂತವಾಗಿ ಓದಿದೆ

ಮೆ|| ಆರ್ ರಘುನಾಥರಾವ್ ಬಿ ಎ ಯವರು ಹಿಂದೂ ಮತಕ್ಕೇನೇ ಆಧಾರವಾದ ವೇದ, ಅದರಿಂದೀಚೆಗೆ ಕಾಲಾನುಗುಣ್ಯವಾಗಿ ಹುಟ್ಟಿರತಕ್ಕ ಸ್ಮೃತಿಗಳು, ಧರ್ಮಶಾಸ್ತ್ರಗಳು, ಮುಂತಾದ ಗ್ರಂಥಗಳನ್ನ ಪರಿಶೋಧಿಸಿ ಅವುಗಳಲ್ಲಿ ಮುಖ್ಯವಾದ ಆಧಾರಗಳನ್ನ ಸಂಗ್ರಹಿಸಿ ಈ ಪುಸ್ತಕವನ್ನ ಬರೆದಿದಾರೆ ಇದರಲ್ಲಿ ಮುಖ್ಯ ತಾತ್ಪರ್ಯ ವಿಧವೆಗಳ ವಿವಾಹ ನಡೆಯಬೇಕೆಂಬುವದು ಅಗಲ್ಲೂ ವಿಧವೆಯನ್ನು, ವಿಧುರನೇ ವಿವಾಹ ಮಾಡಿಕೊಳ್ಳಬೇಕೆಂಬುವದು ಆಗಿಯಿದೆ

ನಮ್ಮಲ್ಲಿ ವಿಧವೆಗಳ ಅಂತರಂಗಿಕವಾದ ನಡವಳಿಕೆಯಿಂದ ದೇಶದಲ್ಲಿ ಭ್ರೂಣಹತ್ಯಾದಿಗಳು ನಡೆದು ಅವರ ಸಂಕಟ ನಿಷ್ಪಕ್ಷಪಾತಿಗಳಾದ ವಿದ್ಯಾವಂತರಿಗೆ ವಿಶೇಷವಾದ ವ್ಯಥೆಯನ್ನ ಉಂಟುಮಾಡಿಯಿದೆ ಈ ಕಾರಣದಿಂದಲೇ ದೇಶೋದ್ಧಾರಕರಾದ ಮೆ ವಿ ಪಿ ಮಾಧವರಾವ್ ಬಿ ಎ, ಸಿ ಐ ಇ ಪ್ರಭೃತಿ ದೊಡ್ಡ ಮನುಷ್ಯರು ಮೆ|| ಆರ್ ರಘುನಾಥರಾವ್ ಬಿ ಎ ಯವರಿಂದ ರಚಿಸಲ್ಪಟ್ಟಿರತಕ್ಕ "ಸ್ತ್ರೀಸಂಸ್ಕಾರ ಪ್ರಕಾಶಿಕಾ", ನಿಯೋಗ ವಿಧಿಯ ವಿಚಾರ ಎಂಬ ಈ ಪುಸ್ತಕಗಳಲ್ಲಿ ನಮೂದಿರುವಂತೆ ದೇಶದಲ್ಲಿ ನಡವಳಿಕೆ ತಂದು ನಾವು ಸತ್ಯಮಾರ್ಗದಲ್ಲಿ ನಡೆಯುವಂತೆ ಏರ್ಪಾಡುಮಾಡಲು ಅನೇಕ ದಿವಸಗಳಿಂದ ವಿದ್ಯಾವಂತರ ಸಂಘಗಳನ್ನ ಸೇರಿಸಿ, ಶಾಸ್ತ್ರವಿಚಾರಗಳನ್ನ ಮಾಡುತ್ತಿದ್ದಾರೆ

ನಮ್ಮ ಹಿಂದೂ ಮತಗಳ ಪದ್ಧತಿ ಅವುಗಳ ಆಚಾರ ಈ ವಿಷಯಗಳಲ್ಲಿ ಹುಟ್ಟಿರತಕ್ಕ ಅಪರಿಮಿತವಾದ ಗ್ರಂಥಗಳನ್ನ ಶೋಧಿಸಲಿಕ್ಕೆ ಆರಂಭಿಸಿದರೆ ಒಬ್ಬ ಮನುಷ್ಯನು ತನ್ನ ಆಯುಃಪರಿಮಿತ ಕಾಲವೆಲ್ಲಾ ಈ ಕೆಲಸ ಮಾಡಿದರೂ ತನ್ನ ಉದ್ದೇಶದ ಅಂತ್ಯ ಹೊಂದುವ ಹಾಗೆ ಇಲ್ಲ ಅಂಥಾದರಿಂದ ಈಗ ದೇಶದಲ್ಲಿ ಪ್ರಬಲಿಸಿ ಇರತಕ್ಕ ಬಾಲ್ಯ ವಿವಾಹಗಳೂ, ಬಾಲವಿಧವೆಯರ ಸಂಕಟ ದೇಶಕ್ಕೇನೇ ಸುತ್ತಿಕೊಂಡಿರತಕ್ಕ ಭ್ರೂಣಹತ್ಯಾದಿ ದೋಷಗಳು, ಇವುಗಳನ್ನ ನಿಲ್ಲಿಸಿ ಮೆ| ಆರ್ ರಘುನಾಥರಾವ್ ಬಿ ಎ ಯವರು ರಚಿಸಿರತಕ್ಕ ಗ್ರಂಥಗಳಂತೆ ಮುಂದಲ ನಡವಳಿಕೆ ಇಟ್ಟುಕೊಳ್ಳಲು ಎಂದಿಗೂ ಅವಕಾಶವಾಗಲಿಕ್ಕಿಲ್ಲ ಈ ಅನಾನುಕೂಲಗಳನ್ನ ಯೋಚಿಸಿಯೇ ಮೆ| ಆರ್ ರಘುನಾಥರಾವ್‌ರವರು ಅವಶ್ಯಕವಾದ ಗ್ರಂಥಗಳಲ್ಲಿನ ನಿಜತ್ವವನ್ನು ಕ್ರೋಢೀಕರಿಸಿ ಈ ಸಣ್ಣ ಪುಸ್ತಕವನ್ನು ಬರೆದಿದ್ದಾರೆ ನನ್ನ ಹಿಂದೂ ಸಹೋದರರೆಲ್ಲಾ ಈ ಸಣ್ಣ ಪುಸ್ತಕವನ್ನು ಓದಿ ಇವರಂತೆ ನಡೆಯಲಿಕ್ಕೆ ಆರಂಭಿಸಿ ದೇಶಕ್ಕೂ ಸತ್ಯಕ್ಕೂ ದೇವರಿಗೂ ನಾವು ಹಿತರಾಗಿ ಬಾಳುವಂತೆ ಮಾಡಲು ಪ್ರಾರ್ಥಿಸುತ್ತೇನೆ

ಪ್ರೌಢವಿವಾಹ ವಿಧವಾ ವಿವಾಹ ಇವು ಪೂರ್ವದಲ್ಲಿ ನಮ್ಮ ನಡವಳಿಕೆಯಲ್ಲಿದ್ದು ಈ ಮಧ್ಯ ಸಂಭವಿಸಿದ ಅನಾಯಕತ್ವದಿಂದ ಹಿಂದಿನ ನಮ್ಮ ಸತ್ಯವಾದ ನಡವಳಿಕೆ ಬದಲಾಯಿಸಿ ನಿಂದ್ಯ ಮತ್ತು ದೇಶಕ್ಕೆ ಕೇಡು ಇವುಗಳಿಗೆ ಆಕರವಾದ ಈಗಿನ ಪದ್ಧತಿ ಚಾರಿಯಲ್ಲಿ ತಂದದ್ದಾಗಿರುತ್ತದೆಂದು ನಮ್ಮ ಪ್ರಾಚೀನ ಗ್ರಂಥಗಳು ತೋರಿಸುತ್ತಿರುವುದಲ್ಲದೆ ವಿದ್ಯಾವಂತರಾದ ದೊಡ್ಡ ಮನುಷ್ಯರನ್ನೂ ಮೇಲೆ ಹೇಳಿರತಕ್ಕ ನಡವಳಿಕೆ ಸತ್ಯವಾದುದ್ದೆಂತ ಘಂಟಾ ಘೋಷವಾಗಿ ದೇಶದಲ್ಲೆಲ್ಲಾ ಸಾರುತ್ತಲಿದ್ದಾರೆ

ಮೆ| ಆರ್ ರಘುನಾಥರಾಯರವರು ಸಾಧಿಸುತ್ತಿರತಕ್ಕ ಪ್ರೌಢಾವಿವಾಹ ವಿಧವಾವಿವಾಹ ಇವುಗಳು ಸತ್ಯವಾದದ್ದೆಂತ ನಾವು ಒಪ್ಪತಕ್ಕ ಗ್ರಂಥಾಧಾರಗಳಿದ್ದಾಗ್ಯೂ ಈಗಿನ ದುಷ್ಟಪದ್ಧತಿಯನ್ನ ನಿಲ್ಲಿಸಿ ನಿಜತ್ವ ಸ್ಥಾಪಿಸಲಿಕ್ಕೆ ನಮ್ಮವರಲ್ಲಿ ಒಬ್ಬರೂ ಧೈರ್ಯವಾಗಿ ನಿಲ್ಲುವದಿಲ್ಲ ಉತ್ತಮವಾದ ನಡುವಳಿಕೆಯನ್ನು ಧೈರ್ಯವಾಗಿ ಚಾರೀಲಿ ತಂದರೆ ದೇಶಕ್ಕೆ ಸುಬವಾದೀತೆ ಹೊರ್ತು ಗ್ರಂಥಗಳ ಶೋಧನೆಯಿಂದಲೂ ಬಹಿರಂಗವುಪನ್ಯಾಸಗಳಿಂದಲೂ ಯಾವ ತಪ್ಪು ನಡವಳಿಕೆಯೂ ಉತ್ತಮ ಸ್ಥಿತಿಗೆ ಬರುವುದಿಲ್ಲ ಇಷ್ಟೇ ನನ್ನ ತಾತ್ಪರ್ಯವಾಗಿದೆ

ಒಬ್ಬ ರಿಟೈರ್ಡ್ ಆಫೀಸರು

ದೇಶೋನ್ನತಿಗೆ ಕಾರಣ

ಯಾವ ದೇಶವು ಉನ್ನತಸ್ಥಿತಿಗೆ ಬರಬೇಕಾದರೂ ವಿದ್ಯೆಯು ಅತ್ಯಾವಶ್ಯಕವಾಗಿರಬೇಕು ಇದಕ್ಕೆ ಪಾಶ್ಚಾತ್ಯ ರಾಜ್ಯಗಳೇ ದೃಷ್ಟಾಂತವಾಗಿವೆ ಎಂದು ಧಾರಾಳವಾಗಿ ಹೇಳಬಹುದು ಹಾಗೆ ನಮ್ಮ ದೇಶವು ಅಭಿವೃದ್ಧಿಯನ್ನೈದಬೇಕಾದ ಸಂದರ್ಭಗಳಲ್ಲಿ ಮೊದಲು ನಮ್ಮ ದೇಶದ ಪ್ರಜೆಗಳು ವಿದ್ಯಾವಂತರಾಗಬೇಕು ಆದರೆ ಇದಕ್ಕಾಗಿ ಅನೇಕ ಸ್ಕೂಲುಗಳನ್ನೂ ಉಪಾಧ್ಯಾಯರನ್ನೂ ಸಿದ್ಧಪಡಿಸಬೇಕಾಗಿದೆ ಈಗ ಹೊಸದಾಗಿ ಸ್ಕೂಲ್‌ಗಳನ್ನೂ ಉಪಾಧ್ಯಾಯರನ್ನೂ ಸಿದ್ಧಪಡಿಸುವುದಕ್ಕಿಂತ ಕೆಲವು ಏರ್ಪಾಡುಗಳನ್ನು ಮಾಡುವದು ಪರಮಾವಶ್ಯಕವೆಂದು ತೋರುವುದು ಸಾಮಾನ್ಯವಾಗಿ ಸಂಸ್ಥಾನದ ಎಲ್ಲಾ ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿಯೂ ವಿದ್ಯೆಯು ಸಾಕಾದ ಮಟ್ಟಿಗೆ ತೃಪ್ತಿಕರವಾಗಿಯೇ ನಡೆಯಬಹುದು ಆದರೆ ಎಲ್ಲಾ ಗ್ರಾಮಗಳಲ್ಲಿಯೂ ಈ ರೀತಿ ನಡೆಯುತ್ತದೆಂದು ಹೇಳಲು ಸಂಶಯವಾಗುತ್ತೆ ಅಲ್ಲದೆ ಅನೇಕ ಗ್ರಾಮಪಾಠಶಾಲೆಗಳಿದ್ದಾಗ್ಯೂ ಪ್ರತಿ ಗ್ರಾಮಕ್ಕೂ ಒಂದೊಂದು ಪಾಠಶಾಲೆಯಂತಿಲ್ಲ ಆ ರೀತಿ ಸ್ಥಾಪಿಸುವದೂ ಕಷ್ಟ ಬಹಳ ಹಣವೂ ವೆಚ್ಚವಾಗಬೇಕು ಆದರೂ ಪ್ರಯೋಜನ ಕಡಮೆ ಪ್ರಾಯಶಃ ಈಗ ಸ್ಕೂಲುಗಳಿರುವ ಎಲ್ಲಾ ಗ್ರಾಮಗಳಲ್ಲಿಯೂ ಸರಿಯಾದ ಕಟ್ಟಡಗಳಿರಲಾರವು ಒಂದು ವೇಳೆ ಇದ್ದರೂ ಸರಿಯಾದ ವಿಚಕ್ಷಣೆಯಲ್ಲಿರದೆ, ಗ್ರಾಮಸ್ಥರ ಅಧೀನಕ್ಕೋ ಪಟೇಲ್ ಶ್ಯಾನುಭೋಗರ ಅಧೀನಕ್ಕೋ ಒಳಪಟ್ಟಿರಬಹುದು ಇಂಥವುಗಳಿಂದ ಕೆಲಸಗಳು ಸರಿಯಾಗಿ ನಡೆಯಲಾರವು ಸರ್ಕಾರದವರ ದೇಶೋನ್ನತಿಯ ಪ್ರಯತ್ನಕ್ಕೆ ಈ ವಿಷಯಗಳು ಅವಶ್ಯಕವಾದವುಗಳೆಂದು ತೋರುತ್ತವೆ

ಸ್ಕೂಲಿರುವಂಥಾ ಒಂದೊಂದು ಗ್ರಾಮಕ್ಕೂ ಅದರ ಸುತ್ತಮುತ್ತಣ ಕೆಲವು ಗ್ರಾಮಗಳನ್ನು ಸೇರಿಸಿ, ಆ ಪ್ರಾಂತ್ಯಕ್ಕೆ ಸೇರಿದವರೆಲ್ಲರೂ ಆ ಗ್ರಾಮದ ಪಾಠಶಾಲೆಯಲ್ಲಿಯೇ ಓದುವಂತೆ ಕ್ಲುಪ್ತಮಾಡುವುದು (2) ಸ್ಕೂಲ್ ಕಟ್ಟಡಗಳನ್ನು ಗ್ರಾಮಸ್ಥರ ಅಧೀನ ತಪ್ಪಿಸಿ ಖರ್ಚು ಸರ್ಕಾರಿ ಕಟ್ಟಣವನ್ನು ಕಟ್ಟಿಸಿ ಕೊಡುವುದು (3) ಉಪಾಧ್ಯಾಯರ ಸಂಬಳವನ್ನು 10 15 ಕ್ಕೆ ಹೆಚ್ಚಿಸುವುದು (4) ಸಂಸ್ಥಾನದ ಎಲ್ಲಾ ಕಡೆಗಳಲ್ಲೂ ಏರ್ಪಡಿಸಿರುವ ಸ್ಕೂಲ್ ಕಮಿಟಿ ಮೆಂಬರುಗಳ ಅಧೀನಕ್ಕೆ ಉಪಾಧ್ಯಾಯರನ್ನು ಕೊಡದೆ ಈ ಕಮಿಟಿಗಳು ಉಪಾಧ್ಯಾಯರ ಅಧೀನಕ್ಕೂ ಸಹಾಯಕ್ಕೂ ಎಂದು ಎಲ್ಲಾ ಕಮಿಟಿ ಮೆಂಬರುಗಳಿಗೂ ತಿಳಿಯಪಡಿಸುವುದು (5) ಮುಖಂಡ ಗ್ರಾಮ ಪಾಠಶಾಲೆಗಳಲ್ಲಿ ನಿಯಮಿತವಾಗಿರುವ 7 ರಿಂದ 10 1 ರಿಂದ 5 ಈ ಕಾಲವನ್ನು 12 ರಿಂದ 5 ಕ್ಕೆ ಬದಲಾಯಿಸುವದು (6) ಉಪಾಧ್ಯಾಯರನ್ನು ತಮ್ಮ ಪ್ರಾಂತ್ಯಕ್ಕೆ ಸೇರಿದ ಗ್ರಾಮಗಳಿಗೆ ಆಗಾಗ್ಯೆ ಸ್ಕೂಲ್ ಕೆಲಸಕ್ಕೆ ಕುಂದಕವಾಗದಂತೆ ಹೋಗಿ ಜನಗಳಿಗೆ ತಕ್ಕ ಬುದ್ಧಿವಾದವನ್ನು ಹೇಳುವುದು (7) ಈ ರೀತಿಯಾಗಿ ಬಂದ ಉಪಾಧ್ಯಾಯರಿಗೆ ಆಯಾ ಪ್ರಾಂತ್ಯಕ್ಕೆ ಸೇರಿದ ಗ್ರಾಮಗಳ ಪಟೇಲ್ ಶ್ಯಾನುಭೋಗರು ತಕ್ಕ ಸಹಾಯ ಮಾಡುವುದು (8) ಮುಖಂಡ ಗ್ರಾಮಗಳಲ್ಲಿ ಉಪಾಧ್ಯಾಯರ ಸ್ವಾಧೀನದಲ್ಲಿರುವಂತೆ ಗ್ರಾಮಸ್ಥರಿಗೆ ಉಪಯೋಗವಾಗುವ ನ್ಯಾಯ ಸಂಬಂಧವಾದ ಗ್ರಂಥಗಳ ಲೈಬ್ರರಿಯೊಂದನ್ನು ಸಂಸ್ಥಾಪನೆ ಮಾಡುವುದು ಮತ್ತು ಮೈಸೂರ ಗೆಜೆಟನ್ನು ಹಂಚುವದು (9) ಉಪಾಧ್ಯಾಯರು ಆಗಾಗ ರಾತ್ರಿಹೊತ್ತು ಹುಡುಗರು ವ್ಯಾಸಂಗ ಮಾಡುವುದನ್ನೂ ಇಲ್ಲದುದನ್ನೂ ತಿಳಿದು ಸರಿಪಡಿಸಲು ಗ್ರಾಮಸಂಚಾರಮಾಡುವುದು (10) ಅಧೀನ ಗ್ರಾಮಗಳ ಪಟೇಲ್ ಶ್ಯಾನುಭೋಗರು 3 ತಿಂಗಳಿಗೊಂದುಸಾರಿ ತಮ್ಮ ತಮ್ಮ ಗ್ರಾಮಗಳಲ್ಲಿ ಸ್ಕೂಲಿಗೆ ಸೇರಲು ತಕ್ಕ ವಯಸ್ಸುಳ್ಳ ಬಾಲಕರ ಪಟ್ಟಿಯನ್ನು ತಯಾರಿಸಿ ಆಯಾ ಉಪಾಧ್ಯಾಯರಿಗೆ ರವಾನಿಸುವುದು (11) ಗ್ರಾಮ ನೌಕರರಲ್ಲಿ ಒಬ್ಬನನ್ನು ಸ್ಕೂಲ್ ಕೆಲಸಕ್ಕಾಗಿ ಉಪಾಧ್ಯಾಯರ ಸ್ವಾಧೀನಕ್ಕೆ ಕೊಡುವುದು (12) ಗ್ರಾಮೋಪಾಧ್ಯಾಯರು ಸ್ಕೂಲಿಗೆ ಸಂಬಂಧಪಟ್ಟ ಇತರ ವಿಷಯಗಳಲ್ಲಿ ಸಂದರ್ಭಾನುಸಾರ ತಾವು ಸ್ಕೂಲಿನಲ್ಲಿ ಮಾಡಿದ ಮತ್ತು ಮಾಡುವ ಏರ್ಪಾಡುಗಳನ್ನು ಅವುಗಳ ಉಪಯೋಗಗಳನ್ನು ಗ್ರಾಮಸ್ಥರಿಗೆ ತಿಳಿಸುವುದಲ್ಲದೆ ಅವರ ಒಪ್ಪಿತದೊಡನೆ ರೇಂಜ್ ಆಫೀಸರಿಗೆ ತಿಳಿಸಿ ಸರ್ಕಾರದವರ ಅನುಮತಿಯಂತೆ ನಡೆಯುವುದು

ಈ ಮೇಲ್ಕಂಡ ವಿಷಯಗಳನ್ನು ಸರ್ಕಾರದವರು ಪರ್ಯಾಲೋಚಿಸಿ ಏರ್ಪಡಿಸಿದಲ್ಲಿ ಹೆಚ್ಚು ಸ್ಕೂಲ್‌ಗಳನ್ನು ಏರ್ಪಡಿಸುವುದಕ್ಕಿಂತಲೂ ಬಲಾತ್ಕಾರ ವಿದ್ಯಾಭ್ಯಾಸದ ಕಾನೂನನ್ನು ಜಾರಿಗೆ ತರುವುದಕ್ಕಿಂತಲೂ ಮೇಲಾದೀತೆಂದು ಊಹಿಸಬಹುದಾಗಿದೆ

ಮೇಲ್ಕಂಡಂತೆ ಮಾಡಿದ ಪಕ್ಷದಲ್ಲಿ (1) ಉಪಾಧ್ಯಾಯರಿಗೆ ಉಪಾಧ್ಯಾಯರಲ್ಲಿ ಅಸೂಯಾದಿ ದ್ವೇಷಗಳುಂಟಾಗದೆ ಕೆಲಸದಲ್ಲಿ ಕೇವಲ ಉತ್ಸಾಹಿಗಳಾಗುವರು (2) ಇದರಿಂದ ಗ್ರಾಮಸ್ಥರು ಅಥವಾ ಪಟೇಲ್ ಶ್ಯಾನುಭೋಗರು ಸ್ಕೂಲ್ ಮನೆಯನ್ನು ಮಧ್ಯ ಮಧ್ಯೆ ತಮ್ಮ ನೆಂಟರಿಷ್ಟರಿಗಾಗಲಿ ಜಮಾಬಂದಿ ಆಫೀಸರಿಗಾಗಲಿ ಬಿಡಿಸಿಕೊಡುವುದೇ ವಗೈರೆ ತೊಂದರೆಗಳು ತಪ್ಪುವವು (3) ಗ್ರಾಮಸ್ಥರನ್ನು ಆಶ್ರಯಿಸುವುದು, ಯಾಚನೆಮಾಡುವುದು ಇತ್ಯಾದಿ ಉಪಾಧ್ಯಾಯರ ತೊಂದರೆಗಳು ತಪ್ಪುವವು (4) ಪ್ರಬಲರಾದ ಪಟೇಲರಾಗಲಿ ಶ್ಯಾನುಭೋಗರಾಗಲಿ ತಮ್ಮ ತಮ್ಮ ಲೆಕ್ಕಪತ್ರಗಳನ್ನು ಬರೆಯುವುದಕ್ಕೆ ಕರೆಯುವ ವಾಡಿಕೆ ತಪ್ಪುವುದು ಉಪಾಧ್ಯಾಯರಿಗೆ ತಕ್ಕಷ್ಟು ಗೌರವವುಂಟಾಗಿ ಸ್ಕೂಲಿನ ಕೆಲಸವು ಸಲೀಸಾಗಿ ನಡೆಯುವುದು (5) ಇದರಿಂದ ರೈತಾಬಿ ಜನಗಳ ಮಕ್ಕಳು ಸ್ಕೂಲಿಗೆ ಸರಿಯಾಗಿ ಬರಲು ದಾರಿಯಾಗುತ್ತೆ ಅವರ ಕೆಲಸಗಳೇನಿದ್ದರೂ 10 11 ಗಂಟೆಯೊಳಗಾಗಿ ತೀರಿಸಿಕೊಂಡು ಧಾರಾಳವಾಗಿ ಸ್ಕೂಲಿಗೆ ಬರಬಹುದು ಮತ್ತು ಬೇರೆ ಬೇರೆ ಹಳ್ಳಿಗಳಿಂದ ಬರತಕ್ಕ ಚಿಕ್ಕ ಚಿಕ್ಕ ಹುಡುಗರೂ ಸಹ ಹೊತ್ತು ವಿಾರದಂತೆಯೂ ನಿರ್ಭಯರಾಗಿಯೂ ಬರಬಹುದು ದೊಡ್ಡ ದೊಡ್ಡ ತರಗತಿಗಳವರಿಗಂತೂ ಬಹಳ ಅನುಕೂಲ (6) ಇದರಿಂದ ಗ್ರಾಮದ ರೈತಾಬಿ ಜನಗಳು ತಿಳುವಳಿಕೆಯನ್ನು ಪಡೆಯುವುದಲ್ಲದೆ ವಿದ್ಯೆಯ ಅವಶ್ಯಕತೆಯು ತೋರುವುದು (7) ಇದರಿಂದ ಗ್ರಾಮಗಳಲ್ಲಿರುವ ಬಾಲಕರುಗಳ ಪೋಷಕರು ಉಪಾಧ್ಯಾಯರಿಗೆ ದೊರೆತು ಅವರ ಬೋಧನೆಗೆ ಒಳಗಾಗಬಹುದು (8) ಇದರಿಂದ ವಿದ್ಯೆಯೂ ಮತ್ತು ಉಪಾಧ್ಯಾಯರ ಅವಶ್ಯಕತೆಯೂ ನಾಗರಿಕತೆಯೂ ರಾಜಭಕ್ತಿಯೂ ಉಂಟಾಗುವುದಲ್ಲದೆ ಕೊಂಚಮಟ್ಟಿಗೆ ವ್ಯವಹಾರಗಳೂ ನಿಲ್ಲಬಹುದು (9) ಇದರಿಂದ ವಿದ್ಯಾರ್ಥಿಗಳಿಗೆ ಉಪಾಧ್ಯಾಯರ ಭಯವುಂಟಾಗಿ ವಿದ್ಯಾವಂತರಾಗಬಹುದು (10) ಸ್ಕೂಲಿಗೆ ಬಾಲಕರು ಕಮ್ಮಿಯಾಗದೆ ಸಮೃದ್ಧಿಯಾಗಿ ದೊರೆಯುವರು (11) ಸ್ಕೂಲ್ ಪಂಕಾ, ಟಪಾಲ್ ವಗೈರೆ ಸ್ಕೂಲ್ ಕೆಲಸಗಳಿಗೆ ಅನುಕೂಲ (12) ಗ್ರಾಮಸ್ಥರ ಇಷ್ಟಾನುಸಾರ ವಿದ್ಯೆ ನಡೆದಂತಾಗುವುದು ಇವುಗಳಲ್ಲದೆ ಸಂಸ್ಥಾನದ ಪ್ರತಿಯೊಂದು ಡಿಸ್ಟ್ರಿಕ್ಟ್‌ಯ ಅವಶ್ಯವಾದ ಇತರ ಕಡೆಗಳಲ್ಲಿಯೂ ಉಪಾಧ್ಯಾಯ ಸಂಘಗಳನ್ನು ಏರ್ಪಡಿಸಿ, ಕೇವಲ ಅನುಪಯೋಗವಾದ ವಿಷಯಗಳನ್ನು ಹೊರತು ಬಾಲಕರಿಗೂ ಉಪಾಧ್ಯಾಯರಿಗೂ ಅತ್ಯನುಕೂಲವಾದ ಯಾವ ಯಾವ ಪಾಠಗಳನ್ನು ಯಾವ ಯಾವ ತರಗತಿಗೆ ಯಾವ ಯಾವ ರೀತಿ ಬೋಧಿಸಬೇಕು ಎಂಬ ಮುಖ್ಯಾಂಶಗಳನ್ನು ತಿಳಿಸುವ ಉತ್ತಮ ತರಗತಿಯ ಜರ್ನಲ್ ಒಂದನ್ನು ಏರ್ಪಡಿಸಿ ತಿಂಗಳು ತಿಂಗಳಿಗೂ ಉಪಾಧ್ಯಾಯರಿಗೆಲ್ಲಾ ಹಂಚುವುದು ಇದರಿಂದ ಉಪಾಧ್ಯಾಯರಿಗೆ ಅತ್ಯಂತ ಸಹಾಯವೂ ಸಂಶಯ ನಿವೃತ್ತಿಯೂ ಆಗುವುದು

ಈ ರೀತಿಯಾದ ಏರ್ಪಾಡುಗಳನ್ನು ಮಾಡುವುದರಿಂದ ಗ್ರಾಮದಲ್ಲಿ ಉಪಾಧ್ಯಾಯರಿಗೆ ಗೌರವವುಂಟಾಗಿ ವಿದ್ಯಾಭಿವೃದ್ಧಿಯಾಗುತ್ತಾ ಬಂದ ಹಾಗೆಲ್ಲಾ ಜನಗಳಲ್ಲಿ ನಾಗರಿಕತೆಯು ಹೆಚ್ಚಿ ದೇಶೋನ್ನತಿಯ ಪ್ರಯತ್ನವು ಸುಪ್ರಯತ್ನವಾಗುವುದರಲ್ಲಿ ಸಂಶಯವಿರಲಾರದು ಮುಖ್ಯವಾಗಿ ಉಪಾಧ್ಯಾಯರಿಗೆ ಗೌರವವನ್ನೂ ಸ್ವಲ್ಪಮಟ್ಟಿಗೆ ಸ್ವತಂತ್ರವನ್ನೂ ಕಲ್ಪಿಸದ ಹೊರತು ವಿದ್ಯೆಯು ಉನ್ನತ ಸ್ಥಿತಿಗೆ ಬರಲಾರದು ಇದಕ್ಕೆ ನಮ್ಮ ಪಾಶ್ಚಾತ್ಯ ರಾಜ್ಯಗಳೇ ಸಾಕಾದಷ್ಟು ದೃಷ್ಟಾಂತಗಳಾಗಿವೆ

ಕರ್ನಾಟಕ ಭಾಷಾಭಿಮಾನಿ.

ತಾಲ್ಲೂಕು ವರ್ತಮಾನಗಳು.

ಚಿಕ್ಕಬಳ್ಳಾಪುರ ತಾಲ್ಲೂಕ್ ನಂದಿ —ಮಳೆಯಿಲ್ಲದೆ ಪೈರುಗಳೆಲ್ಲಾ ಒಣಗುತ್ತಾ ಇವೆ ರೈತರೆಲ್ಲರು ಮಳೆಗಾಗಿ ಆಕಾಶದ ಕಡೆ ನೋಡುತ್ತಾ ನಿಷ್ಫಲಮನೋರಥರಾಗುತ್ತಿರುವರು ದಿನಸುಗಳ ಧಾರಣೆ ದಿನೇ ದಿನೇ ಹೆಚ್ಚುತ್ತಾಯಿದೆ ಬಡ ಜನಗಳ ಕಷ್ಟವು ಹೇಳಲಾಗದು — ಈ ತಿಂಗಳು 17 ನೇ ತಾ|| ನಮ್ಮ ತಾಲ್ಲೂಕ್ ಹೊಸ ಅಮಲ್ದಾರರಾದ ಮ|| ಎಸ್ ಎನ್ ಶ್ರೀನರಸಿಂಹಶಾಸ್ತ್ರಿಗಳವರು ಈ ಗ್ರಾಮಕ್ಕೆ ದಯಮಾಡಿಸಿ ಎರಡು ದಿನ ಮೊಕ್ಕಾಂ ಮಾಡಿದ್ದರು. ನೂತನವಾಗಿ ಕಟ್ಟಲ್ಪಡುತ್ತಿರುವ ಪಾಠಶಾಲೆಯ ಕಟ್ಟಡವನ್ನು ನೋಡಿಕೊಂಡು, ಕನ್ನಡ ಮತ್ತು ಹಿಂದುಸ್ಥಾನಿ ಸ್ಕೂಲುಗಳನ್ನು ಪರಾಂಬರಿಸಿ ವಿಜಿಟರ್ಸ್ ಬರೆದು, ಅಲ್ಲಿಂದ ಪೋಲೀಸು ಸ್ಟೇಷನ್ ಇನ್‌ಸ್ಪೆಕ್ಷನ್ ಮಾಡಿಕೊಂಡು, ಶಾರದಾವಿಲಾಸ ಧರ್ಮವಾಚಕ ಮಂದಿರಕ್ಕೆ ದಯಮಾಡಿಸಿ, ಭಾಂಡಾಗಾರದೊಳಗಿನ ಕೆಲವು ಗ್ರಂಥಗಳನ್ನು ವೀಕ್ಷಿಸಿ, ಮಂದಿರಕ್ಕೆ ಬರುವ ಪತ್ರಿಕೆಗಳನ್ನು ಕೇಳಿ ಸಂತೋಷಪಟ್ಟರು ಇದೇ ಕಟ್ಟಡದಲ್ಲಿರುವ ಕೋ ಆಪರೇಟಿವ್ ಸೊಸೈಟಿಯ ಲೆಕ್ಕ ಪತ್ರಗಳನ್ನು ಪರಾಂಬರಿಸಿ, ಕೋ ಆಪರೇಟಿವ್ ಸೊಸೈಟಿಯ ವಿಷಯವಾಗಿ ಹಿತಬೋಧನೆಯನ್ನು ಮಾಡಿದರು ಮಧ್ಯಾಹ್ನ ಗ್ರಾಮಸ್ಥರನ್ನು ಸೇರಿಸಿ ಈ ನಂದಿ ಗ್ರಾಮ ಯೂನಿಯನ್ ಪಂಚಾಯಿತಿಯಾಗಿ ಗೌರ್ನಮೆಂಟಿನಿಂದ ಬಂದಿರುವ ಆರ್ಡರನ್ನು ಎಲ್ಲರಿಗೂ ತಿಳಿಯಿಸಿ, ಯೂನಿಯನ್‌ನಿಂದ ಉಂಟಾಗಬಹುದಾದ ಪ್ರಯೋಜನಗಳನ್ನು ಬೋಧಿಸಿ, ಇದಕ್ಕಾಗಿ ಗ್ರಾಮಸ್ಥರಲ್ಲಿ ಓಟ್ಸ್ ಹಾಕಿ ಆರು ಜನರನ್ನು ಪಂಚಾಯಿತಿ ಮೆಂಬರುಗಳಾಗಿ ಚುನಾಯಿಸಿದರು—ಈ ಗ್ರಾಮದ ಕನ್ನಡ ಪಾಠಶಾಲೆಯು ತುಂಬಾ ಹೀನಸ್ಥಿತಿಗೆ ಬಂದಿರುತ್ತದೆ ದಯಾಳುಗಳಾದ ನಮ್ಮ ಅಸಿಸ್ಟೆಂಟು ಡೆಪ್ಯುಟಿ ಇನ್‌ಸ್ಪೆಕ್ಟರವರು ಈ ಸ್ಕೂಲಿನ ವಿಷಯ ಗಮನವಿಡುವಂತೆ ಬೇಡುತ್ತಿರುವೆನು

ಹೊಸಕೋಟೆ —ಡಾಕ್ಟರ್ ಮುತ್ತುಸಾಮಿದಾಸ್‌ಯವರು ಸೆಪ್ಟೆಂಬರ್ 22 ಕ್ಕೆ ಇಲ್ಲಿಗೆ ಬಂದು ಕೆಲವು ಜನಗಳನ್ನು ಕರಸಿಕೊಂಡು ರೀಡಿಂಗ್ ರೂಮ್‌ನಲ್ಲಿ ಪ್ಲೇಗಿನ ಸೋಂಕು ಇನಾಕ್ಯುಲೇಷನ್ ಮತ್ತು ಮತ್ತು ಚಿಕಿತ್ಸಾಕ್ರಮಗಳನ್ನು ಕುರಿತು ಸ್ಪಷ್ಟವಾಗಿ ಉಪನ್ಯಾಸಮಾಡಿದರು ಅದಕ್ಕೆ ಕಚೇರಿ ಜನಗಳೇ ಮುಂತಾದವರು ಇನಾಕ್ಯುಲೇಷನ್ ಹಾಕಿಸಿಕೊಳ್ಳುವದು ಉತ್ತಮವೆಂದು ಒಪ್ಪಿಕೊಂಡರು ಮೆ|| ಮುತ್ತುಸಾಮಿದಾಸ್‌ಯವರು ಇನಾಕ್ಯುಲೇಷನ್ ಸಾಮಾನುಗಳನ್ನು ತರುವದಕ್ಕೆ ಬೆಂಗಳೂರಿಗೆ ಹೋಗಿ ಪುನಃ 27 ಕ್ಕೆ ಇಲ್ಲಿಗೆ ಬಂದರು ಅದೇ ದಿನ ರಿಜಿಸ್ಟ್ರಾರ್ ಆಫೀಸಿನಲ್ಲಿ ಎರಡು ಇಲಿಗಳು ಸತ್ತು ಬಿದ್ದಿದ್ದನ್ನು ಕಂಡು ಕಚೇರಿಯನ್ನೆಲ್ಲಾ ಡಿಸಿನ್ಫೆಕ್ಷನ್ ಮಾಡಿಸಿದರು ಮಾರಣೆ ದಿನ ಬೆಳಗ್ಗೆ ಬೂದುಗೆರೆಯಲ್ಲಿ ಕಾಲರಾ ಇದೆ ಎಂದು ಸಮಾಚಾರ ಕೇಳಿದ ಕೂಡಲೇ ಅಲ್ಲಿಗೆ ಹೊರಟುಹೋದರು ಇವರು ಅಲ್ಲಿಗೆ ಹೋಗುವುದಕ್ಕಿಂತ ಮುಂಚಿತವಾಗಿ ತಿರುಪತಿಯಿಂದ ಬಂದಿದ್ದವನು ಒಬ್ಬನು ಮತ್ತು ಅದೇ ಗ್ರಾಮಕ್ಕೆ ಸೇರಿದ ಇಬ್ಬರು ಸತ್ತಿದ್ದದ್ದನ್ನು ಕಂಡು ಆ ಗ್ರಾಮದ ಮುಖಂಡರನ್ನು ಮತ್ತು ಪಟೇಲರೇ ಮುಂತಾದವರನ್ನು ಕರಸಿ ಗ್ರಾಮದ ಪಾಕೀಜಾ ಮತ್ತು ಕಾಲರಾ ಚಿಕಿತ್ಸಾಕ್ರಮಗಳನ್ನು ತೋರಿಸಿಕೊಟ್ಟು ಪುನಃ ಮಧ್ಯಾಹ್ನ ಇಲ್ಲಿಗೆ ಬಂದು ಹುಡುಗರೂ ದೊಡ್ಡವರೂ ಸೇರಿ ಅರವತ್ತು ಜನಗಳಿಗೆ ಇನಾಕ್ಯುಲೇಷನ್ ಮಾಡಿದರು ಮಾರಣೆ ದಿನ 14 ಜನಗಳು ಹಾಕಿಸಿಕೊಂಡರು ಈ ಊರಿನಲ್ಲಿ ಅಲ್ಲಲ್ಲೆ ಇನ್ನೂ ಇಲಿಗಳು ಬೀಳುತ್ತಿವೆ ಆದರೆ ಜನಗಳು ಇನಾಕ್ಯುಲೇಷನ್ ಹಾಕಿಸಿಕೊಳ್ಳುವದಕ್ಕೆ ಮುಂದಕ್ಕೆ ಬರುವದಿಲ್ಲ ಹಿಂದೆಗೆಯುತ್ತಾ ಇದ್ದಾರೆ ಯಾರೂ ಹಾಕಿಸಿಕೊಳ್ಳದಿದ್ದರೆ ನಾನು ಹೊರಟು ಹೋಗುತ್ತೇನೆಂದು ಹೇಳಿ 30 ನೇ ಶನಿವಾರ ವಿಶ್ರಾಂತಿಗೆ ಹೊರಟು ಹೋದರು —ಇಲ್ಲಿ 7 8 ದಿನಗಳ ಹಿಂದೆ ಸ್ವಲ್ಪ ಮಳೆ ಬಂದದ್ದು ತಿರಿಗಿ ಬರಲಿಲ್ಲ ಪೈರುಗಳೆಲ್ಲಾ ಹೀನಸ್ಥಿತಿಯಲ್ಲಿವೆ ಕೆರೆ ಕುಂಟೆಗಳಲ್ಲಿ ನೀರು ಕಡಿಮೆಯಾಗುತ್ತಾ ಬಂತು ಈಗಲೋ ಆಗಲೋ ಮಳೆ ಬರುವ ಹಾಗೆ ಮೋಡವಾಗುವದು ಮಾತ್ರ ತಪ್ಪಲಿಲ್ಲ ಊರಿನ ಪಾಕೀಜಾ ವಿಷಯ ಅಮಲ್ದಾರರು ಮತ್ತು ಸ್ಯಾನಿಟರಿ ಇನ್‌ಸ್ಪೆಕ್ಟರವರು ಬಹಳ ನಿಗಾ ಕೊಡುವದು ಮಾತ್ರವೇ ಅಲ್ಲದೆ ಆಗಿಂದಾಗ್ಯೆ ಟವನ್ ಇನ್‌ಸ್ಪೆಕ್ಷನ್ ಮಾಡುತ್ತಾ ಇದ್ದಾರೆ ಇಂಥಾ ಕಾಲದಲ್ಲಿ ಈ ತರವಾದ ಪ್ರಯಾಸ ತೆಗೆದುಕೊಂಡು ಜನಗಳ ಆರೋಗ್ಯ ಭಾಗ್ಯವನ್ನು ಕೋರುವದು ಸ್ತೋತ್ರಾರ್ಹವಾಗಿದೆ

ಹಾಸನ —ಕಾಲಸ್ಥಿತಿಯು ಬದಲಾವಣೆಯಾದಂತಿದೆ ಮಳೆಗಾಲದ ಕುರುಹುಗಳು ಕಡಿಮೆಯಾಗಿ, ಶರದೃತುವಿನ ಪ್ರವೇಶವಾಗುತ್ತಲಿದೆ ಆದರೆ ಈಗಲೇ ಶರದೃತುವು ತಲೆದೋರಕೂಡದು, "ಶ್ರಾವಣ ಭಾದ್ರಪದ ವರ್ಷಋತು" ಎಂಬ ಪೌರಾಣಿಕ ಸಿದ್ಧಾಂತದಂತೆ ಮಳೆಯ ಅವಧಿಯು ಭಾದ್ರಪದ ಬಹುಳ ಅಮಾವಾಸ್ಯೆಯ ವರೆಗೂ ಇರುವುದರಿಂದ ಆದ್ದ ಮಳೆಯು ಆಗಾಗ್ಗೆ ಬರುತ್ತಿದ್ದರೆ, ಬೆಳೆಯುತ್ತಲಿರುವ ಪೈರುಗಳು ಕೈಗೆ ಬರುವುದಕ್ಕೂ ಕೆರೆಕಟ್ಟೆಗಳು ತುಂಬಿ ಜಲಸಮೃದ್ಧಿಯಾಗುವುದಕ್ಕೂ ಅವಕಾಶವಾಗುವುದು ಈ ವಿಷಯದಲ್ಲಿ ಭಗವದನುಗ್ರಹವಾಗಬೇಕು ಪ್ಲೇಗ್ ವ್ಯಾಧಿಯು ಈ ಟವನಿನಲ್ಲೆಲ್ಲಾ ಹರಡಿಕೊಳ್ಳುತ್ತಲಿದೆ ಈ ಊರಿನಲ್ಲೆಲ್ಲಾ ಪ್ರಸಿದ್ಧ ವರ್ತಕರೂ ಮ್ಯುನಿಸಿಪಲ್ ಮೆಂಬರೂ ಆಗಿದ್ದ ಚನ್ನಕೇಶವಶೆಟ್ಟರು ಪ್ಲೇಗ್ ರೋಗದಿಂದಲೇ ಕಾಲಾಧೀನರಾದರು ಮಹಮ್ಮದೀಯರಲ್ಲಿಯೂ ಹಿಂದುಗಳಲ್ಲಿಯೂ ಇದುವರೆಗೆ ಒಟ್ಟು 15 ಮಂದಿ ಈ ರೋಗಕ್ಕೆ ತುತ್ತಾದರೆಂದು ತಿಳಿದುಬಂದಿದೆ ಇನ್ನೂ ಕೆಲವು ಮಂದಿ ಈ ರೋಗದಲ್ಲಿ ನರಳುತ್ತಿದ್ದಾರೆ ನಿವಾಸಿಗಳೆಲ್ಲರೂ ಹೊರ ಮೈದಾನಗಳಲ್ಲಿ ಗುಡಿಸಿಲುಗಳನ್ನು ಕಟ್ಟುತ್ತಿದ್ದಾರೆ ಡೆಪ್ಯುಟಿಕಮಿಷನರವರು ವಾಯಂ ಷಡ್ಡುಗಳಿಗೋಸ್ಕರ ಒಂದೊಂದು ಡಿಪಾರ್ಟ್‌ಮೆಂಟಿನವರಿಗೆ ಒಂದೊಂದು ಪ್ರದೇಶದಂತೆ ಹೊರ ಪ್ರದೇಶದ ಮೈದಾನಗಳಲ್ಲಿ ಸ್ಥಳಗಳನ್ನು ವಿಂಗಡಿಸಿ ಕೊಟ್ಟಿದ್ದಾರೆ ಜನಾಭಿಮಾನಿಯಾಗಿದ್ದ ಮ್ಯುನಿಸಿಪಲ್ ಓವರ್ಸೀಯರವರ ಪತ್ನಿಯೂ ಮಗುವೂ ತಾಯಿಯೂ ನಾಲ್ಕು ದಿನಗಳೊಳಗಾಗಿ ಪ್ಲೇಗ್ ರೋಗಕ್ಕೆ ಬಲಿಯಾದರು ಈಗ ಅವರೂ ಅದೇ ರೋಗದಲ್ಲಿ ನರಳುತ್ತಿದ್ದಾರೆ ಡಾಕ್ಟರ್ ಆಶೀರ್ವಾದಂ ಯವರು ಕಳೆದ ವಾರದಲ್ಲಿ ಎರಡು ದಿನ ಇಲ್ಲಿನ ರಕ್ಷಣೆಪುರದ ಪ್ರಾಂತ್ಯದವರಿಗೂ ಮಿಷನ್ ಅನಾಥಾಲಯದ ಬಾಲಕಿಯರಿಗೂ ಇನಾಕ್ಯುಲೇಷನ್ ಮಾಡಿದರು ಇಲ್ಲಿನ ನಿವಾಸಿಗಳೆಲ್ಲರೂ ತಮ್ಮ ತಮ್ಮ ಸಮೀಪದಲ್ಲಿ ಸೋಂಕು ವ್ಯಾಪಿಸುವುದರೊಳಗಾಗಿಯೇ ಡಾಕ್ಟರವರಿಗೆ ತಿಳಿಸಿ, ಇನಾಕ್ಯುಲೇಷನ್ ಮಾಡಿಸಿಕೊಂಡರೆ, ಎಷ್ಟೋ ಮೇಲಾದೀತು ಜನಗಳು ಈ ವಿಷಯದಲ್ಲಿ ಭಯಪಡದೆ ಒಪ್ಪಿಕೊಳ್ಳುವುದೇ ಉತ್ತಮ ಮಾರ್ಗವು ಬಹು ಬೇಗನೆ ಈ ದುಷ್ಟ ರಾಕ್ಷಸವ್ಯಾಧಿಯನ್ನು ದೂರಕ್ಕೆ ತೊಲಗಿಸಿಬಿಟ್ಟು ಸಕಲರೂ ಸುಖಿಗಳಾಗಿರಬಹುದು ಇದಾದಮೇಲೆ ಇಲ ಸತ್ತ ಮನೆಗಳಲ್ಲಿಯೇ ವಾಸಮಾಡುತ್ತಿದ್ದರೂ ಆರು ತಿಂಗಳು ಕಾಲ ನಿರ್ಭಯವಾಗಿರಬಹುದೆನ್ನುತ್ತಾರೆ

ಮೈಸೂರು ಸರ್ಕಾರದ ವ್ಯವಸಾಯದ ಇಲಾಖೆಯವರಿಂದ ಬರೆಯಲ್ಪಟ್ಟ ವಿಷಯಗಳು.

[ವ್ಯವಸಾಯದ ವಿಚಾರವಾಗಿ ತಿಳಿಯಬೇಕಾದ ಸಂಗತಿಗಳ ಮತ್ತು ವ್ಯವಸಾಯಾಭಿವೃದ್ಧಿಗೆ ಬೇಕಾಗುವ ಸಹಾಯದ ವಿಷಯವಾಗಿ ಬರೆಯುವ ಕಾಗದಗಳನ್ನು ಬೆಂಗಳೂರಲ್ಲಿರುವ ವ್ಯವಸಾಯದ ಇಲಾಖಾ ಡೈರೆಕ್ಟರವರಿಗೆ ಬರೆಯಬೇಕು]

ಕ್ಯಾಂಬೋಡಿಯಾ ಹತ್ತಿ—ವ್ಯವಸಾಯದ ಕ್ರಮ

ಕ್ಯಾಂಬೋಡಿಯಾ ಹತ್ತಿಯನ್ನು ನೀರಾವರಿ ಸ್ಥಳಗಳಲ್ಲಿ ಬೆಳೆಯುವುದು ಒಳ್ಳೆಯದು ಖುಷ್ಕಿ ಜಮೀನುಗಳಲ್ಲಿ ಬೆಳೆಯಾಗುವ ನಂಬಿಕೆಯಿಲ್ಲ ಒಂದು ವೇಳೆ ಆದರೂ ಚೆನ್ನಾಗಿ ಆಗುವದಿಲ್ಲ ಬೊಂಬಾಯಿ ಆಧಿಪತ್ಯದ ಧಾರ್ವಾಡಾ ಜಲ್ಲೆ ಮುಂತಾದ ಕೆಲವು ಕಡೆಗಳಲ್ಲಿ ವಿಶೇಷವಾಗಿ ಖುಷ್ಕಿ ಪೈರಾಗಿ ಕ್ಯಾಂಬೋಡಿಯ ಹತ್ತಿಯನ್ನು ಬೆಳೆಯಲು ಪ್ರಯತ್ನಪಟ್ಟಿರುವರು ಅವರ ಫಲಿತಾಂಶವು ಅಷ್ಟೇನೂ ಸಮಾಧಾನಕರವಾಗಿಲ್ಲ ಆದರೆ ಮದ್ರಾಸು ಆಧಿಪತ್ಯದಲ್ಲಿ ಅದನ್ನು ನೀರಾವರಿ ಜಮೀನುಗಳಲ್ಲಿ ಬೆಳೆಯುತ್ತಿರುವುದರಿಂದ ಮೇಲೆ ಹೇಳಿರುವಂತೆ ಫಸಲು ಬಹಳ ಚೆನ್ನಾಗಿ ಬರುತ್ತಾ ಇದೆ—ಸಾಧಾರಣವಾಗಿ ಜವುಗಿಲ್ಲದೆ ಇರುವ ಎಲ್ಲಾ ವಿಧವಾದ ಭೂಮಿಗಳಲ್ಲಿಯೂ ಈ ಬೆಳೆಯು ಚೆನ್ನಾಗಿ ಆಗುವುದು ವಿಶೇಷವಾಗಿ ಜೇಡಿಯು ಇಲ್ಲದೆ ಉಳುವುದಕ್ಕೆ ಸುಲಭವಾಗಿರುವ ಜಮೀನುಗಳೂ ಬಾಗಾಯಿತು ಕೆಂಪು ಮತ್ತು ಎರೆಯ ಜಮೀನುಗಳೂ ಈ ಬೆಳೆಗೆ ಅನುಕೂಲವಾಗಿಯೇ ಇರುವವು ಸುಣ್ಣಕಲ್ಲುಗಳು (ಕಂಕರು) ವಿಶೇಷವಾಗಿರುವ ಎರೆ ಭೂಮಿಯಲ್ಲಿ ಬಹಳ ಒಳ್ಳೇ ಫಸಲು ಬಂದಿವೆ ಗೊಬ್ಬರ ಹಾಕುವುದರಿಂದ ಫಸಲು ಬಹಳವಾಗಿ ಹೆಚ್ಚುವುದು ಬಾಗಾಯಿತು ಜಮೀನುಗಳಲ್ಲಿ ಇಡುವ ಇತರ ಬೆಳೆಗಳಿಗೆ ಹ್ಯಾಗೋ ಇದಕ್ಕೂ ಹಾಗೆಯೇ ಗೊಬ್ಬರವನ್ನು ಹಾಕಬಹುದು—ಇತರ ಬೆಳೆಗಳಿಗೆ ಮಾಡುವಂತೆಯೇ ಇದಕ್ಕೂ ಬಿತ್ತನೆಮಾಡುವದಕ್ಕೆ ಮುಂಚೆ ನೆಲವನ್ನು ಚೆನ್ನಾಗಿ ಉತ್ತು ಹಲಿವೆ ಹೊಡೆದು ಹಸನುಮಾಡಬೇಕು ಕಳೆಯನ್ನು ಮಾತ್ರ ಬಹಳ ಚೆನ್ನಾಗಿ ತೆಗೆಯಬೇಕು ಯಾಕೆಂದರೆ ಕಳೆಯಿಂದ ಹತ್ತಿಯ ಬೆಳೆಯು ಕೆಡುವದಲ್ಲದೆ ಕಳೆಯೇನೂ ಇಲ್ಲದೆ ಚೊಕ್ಕಟವಾಗಿದ್ದ ಹಾಗೆಲ್ಲಾ ಫಸಲು ಜಾಸ್ತಿಯಾಗಿ ಬರುವುದು—ಬಿತ್ತನೆಮಾಡುವದಕ್ಕೆ ಅನೇಕ ಸ್ಥಳಗಳಲ್ಲಿ ಸೆಪ್ಟೆಂಬರು ತಿಂಗಳು ಸರಿಯಾದ ಕಾಲವಾಗಿರುವುದು ಆದರೆ ನಮ್ಮ ಸೀಮೆಯ ಬೇರೆ ಬೇರೆ ಭಾಗಗಳಲ್ಲಿ ಮಳೆಯು ಬೇರೆ ಬೇರೆ ಕಾಲಗಳಲ್ಲಿ ಹೆಚ್ಚಾಗಿ ಬೀಳುವುದರಿಂದ ಕ್ಯಾಂಬೋಡಿಯ ಹತ್ತಿಯನ್ನು ಹೇರಳವಾಗಿ ಬೆಳೆಯಬೇಕೆಂದು ಅಪೇಕ್ಷಿಸುವವರು (ಕಾಲು ಎಕರೆ ಅಥವಾ ಅರ್ಧ ಎಕರೆ ಜಮೀನಿಗೆ) ಮುಂಗಾರು ಮಳೆಯು ಪ್ರಾರಂಭವಾಗುತ್ತಲೇ ಸ್ವಲ್ಪ ಬೀಜವನ್ನು ಬಿತ್ತಿ ಪುನಹ ಸೆಪ್ಟೆಂಬರು ತಿಂಗಳಲ್ಲಿ ಮಳೆಯು ಮುಗಿಯುವಾಗ ಮತ್ತೊಂದು ಕಾಲು ಎಕರೆ ಅಥವಾ ಅರ್ಧ ಎಕರೆಗೆ ಇನ್ನೂ ಸ್ವಲ್ಪ ಬೀಜವನ್ನು ಬಿತ್ತಿ ಯಾವುದರಿಂದ ಒಳ್ಳೆಯ ಫಸಲು ಬರುವುದೆಂದು ಪರೀಕ್ಷಿಸಿ ನೋಡಿ ಬಿತ್ತನೆಮಾಡುವುದಕ್ಕೆ ಸಕಾಲವಾವುದೆಂಬುದನ್ನು ಗೊತ್ತುಮಾಡಬೇಕು ಸಡ್ಡೆಯ ಮೂಲಕವಾಗಿ ಬಿತ್ತಿದರೆ ಎಕರೆ ಒಂದಕ್ಕೆ 7 ಪೌಂಡು ಬೀಜವು ಬೇಕಾಗುವುದು ಹಾಗಿಲ್ಲದೆ ಕೈಯಿಂದಲೇ ಬೀಜವನ್ನು ಚೆಲ್ಲಿದರೆ 7 ಪೌಂಡುಗಳಿಗಿಂತ ಸ್ವಲ್ಪ ಕಡಿಮೆಯಾಗುವುದು ಮೂರು ಮೂರಡಿಗಳಿಗೆ ಒಂದೊಂದು ಗಿಡವಿರುವಂತೆ ಬೀಜವನ್ನು ಚೆಲ್ಲಬೇಕು ಸಡ್ಡೆಯಿಂದ ಬಿತ್ತಿದರೂ ಸಸಿಗಳಾದಮೇಲೆ ಮೇಲೆ ಹೇಳಿರುವಂತೆ ಮೂರು ಮೂರಡಿಗಳಿಗೆ ಒಂದೊಂದು ಗಿಡ ಮಾತ್ರ ಇರುವಂತೆ ನೋಡಿ ಹೆಚ್ಚಾದವುಗಳನ್ನು ಕಿತ್ತುಹಾಕಬೇಕು ಹೀಗೆ ಮಾಡುವುದರಿಂದ ಗಿಡಗಳ ಒಳ್ಳೆಯ ಬೆಳವಣಿಗೆಗೆ ಬೇಕಾದಷ್ಟು ಸ್ಥಳವು ಸಿಕ್ಕುವುದಲ್ಲದೆ ಹೊಲದಲ್ಲಿ ಉದ್ದುದ್ದವಾಗಿಯೂ ಅಡ್ಡಡ್ಡಲಾಗಿಯೂ ಕುಂಟೆಯನ್ನು ಹೊಡೆಯುವದಕ್ಕೆ ಅನುಕೂಲವಾಗಿರುವುದು ಸಾಧಾರಣವಾಗಿ ಹತ್ತಿಯನ್ನು ಬೆಳೆಯುವ ಕಡೆಗಳಲ್ಲಾ ಈಗ ಮಾಡುತ್ತಿರುವ ಹಾಗೆ ಎಡೆಸನಿ ಕಳೆಯನ್ನು ಕಿತ್ತುಹಾಕಬೇಕು—ಗಿಡಗಳು ಸಾಧಾರಣವಾಗಿ ಸೊಂಪಾಗಿ ಬೆಳೆದು ಐದಾರು ಅಡಿಗಳ ಎತ್ತರದ ವರವಿಗೂ ಹೋಗುವವು ಗಿಡಗಳಲ್ಲಿ ರೆಂಬೆಗಳೂ ಹೇರಳವಾಗಿ ಬಿಡುವವು ಗಿಡಗಳು ನಾಲ್ಕಡಿ ಎತ್ತರಕ್ಕೆ ಬಂದಾಗ ತಲೆಯನ್ನು ಚಿಗುಟಿದರೆ ರೆಂಬೆಗಳು ಹೆಚ್ಚಾಗಿ ಬರುವುವು ಕಾಯಿಗಳೆಲ್ಲವೂ ಈ ರೆಂಬೆಗಳಲ್ಲಿಯೇ ಬಿಡುವುದರಿಂದ ಗಿಡಗಳಲ್ಲಿ ರೆಂಬೆಗಳು ಹೆಚ್ಚಾಗಿ ಬಿಡುವಂತೆ ಮಾಡುವದು ಬಹಳ ಅವಶ್ಯಕವಾಗಿದೆ ಆದರೆ ಗಿಡವು ಬಹಳ ಗಿಡ್ಡಾಗುವಂತೆ ತಲೆಯನ್ನು ಚಿಗುಟದಂತೆ ಹುಷಾರಾಗಿರಬೇಕು ಏತಕ್ಕೆಂದರೆ ಹಾಗೆ ತಗ್ಗಾಗಿ ಒಡೆದು ಹರಡಿಕೊಂಡಿರುವ ಕೊಂಬೆಗಳಲ್ಲಿ ಕಾಯಿಗಳು ಹೆಚ್ಚಾಗಿ ರೆಂಬೆಗಳು ಕಾಯಿಗಳ ಭಾರವನ್ನು ತಡೆಯಲಾರದೆ ಮುರಿದುಹೋಗುವವು ಇದೂ ಅಲ್ಲದೆ ಕಾಯಿಗಳು ನೆಲಕ್ಕೆ ಬಹಳ ಸಮೀಪದಲ್ಲಿ ಬಿಟ್ಟರೆ ಹತ್ತಿಯು ಮಣ್ಣು ತಗಲಿ ಕೊಳೆಯಾಗುವುದು

ಕಾಯಿಗಳು ಒಡೆದ ಕೆಲವು ದಿವಸಗಳಲ್ಲಿಯೇ ಹತ್ತಿಯನ್ನು ಬಿಡಿಸಿಕೊಳ್ಳಬೇಕು ಇದು ಬಹಳ ಸುಲಭ ಒಡೆದ ಕಾಯಿಗಳಿಂದ ಹತ್ತಿಯನ್ನು ಸ್ವಲ್ಪ ಎಳೆದರೆ ಸುಲಭವಾಗಿ ಬರುವುದು ಕಾಯಿಗಳು ಒಡೆದು ಹತ್ತಿಬಿಡಿಸುವುದಕ್ಕೆ ಸಿದ್ಧವಾಗಿರುವಾಗ ಕಾಯಿಗಳನ್ನು ಹಾಗೆಯೆ ಗಿಡದ ಮೇಲೆ ಬಿಟ್ಟಿದ್ದರೆ ಸ್ವಲ್ಪ ಗಾಳಿಬಂದು ರೆಂಬೆಗಳು ಅಲ್ಲಾಡಿದರೂ ಹತ್ತಿಯು ಕೆಳಕ್ಕೆ ಬಿದ್ದು ಮಣ್ಣಿನಿಂದ ಕೊಳೆಯಾಗುವುದು ಈಗ ಸಾಧಾರಣವಾಗಿ ವಾಡಿಕೆಯಾಗಿರುವಂತೆ ಎಲ್ಲಾ ಗಿಡಗಳಲ್ಲಿಯೂ ಕಾಯಿಗಳು ಹೆಚ್ಚಾಗಿ ಒಡೆದು ಹತ್ತಿಯು ಬಿಡಿಸುವುದಕ್ಕೆ ಸಿದ್ಧವಾಗುವವರೆಗೂ ಮೊದಲು ಮೊದಲು ಒಡೆದ ಕಾಯಿಗಳನ್ನೂ ಹಾಗೆಯೇ ಬಿಟ್ಟಿರುವುದು ಕ್ಯಾಂಬೋಡಿಯಾ ಹತ್ತಿಗೆ ಅನುಕೂಲವಾದದ್ದಲ್ಲ ಕಾಯಿಗಳು ಒಡೆಯುವದಕ್ಕೆ ಪ್ರಾರಂಭವಾದ ಮೇಲೆ ಎಲ್ಲಾ ಕಾಯಿಗಳೂ ಒಡೆಯುವುದಕ್ಕೆ ಕಾಯದೆ ಆಗಾಗ್ಗೆ ಮೂರು ನಾಲ್ಕು ಸಾರಿ ಹತ್ತಿಯನ್ನು ಬಿಡಿಸಿಕೊಳ್ಳುವುದು ಒಳ್ಳೆಯದು ಇದೂ ಅಲ್ಲದೆ ಈಗ ವಾಡಿಕೆಯಾಗಿರುವಂತೆ ಬಿಡಿಸಿದ ಹತ್ತಿಯಲ್ಲಿ ಒಳ್ಳೆಯದನ್ನೂ ಕೊಳೆಯಾಗಿರುವುದನ್ನೂ ಹುಳ ತಿಂದು ಕೆಟ್ಟುಹೋಗಿರುವುದನ್ನೂ ಬೇರೆ ಬೇರೆ ಇಡದೆ ಎಲ್ಲವನ್ನೂ ಜಮಾಯಿಸುವದರಿಂದ ಹತ್ತಿಯ ಬೆಲೆಯು ಬಹಳ ಕಮ್ಮಿಯಾಗುವುದು ಕ್ಯಾಂಬೋಡಿಯಾ ಹತ್ತಿಯಾಗಲಿ ಬೇರೆ ಯಾವ ವಿಧವಾದ ಹತ್ತಿಯಾಗಲಿ ಸರಿಯೆ ಹತ್ತಿಯನ್ನು ಬಿಡಿಸುವದಕ್ಕಾಗಿ ಹೊಲಕ್ಕೆ ಹೋಗುವಾಗ ಎರಡು ಮೂರು ಚೀಲಗಳನ್ನು ತೆಗೆದುಕೊಂಡು ಹೋಗಿ ಒಳ್ಳೆಯದನ್ನೆಲ್ಲಾ ಒಂದರಲ್ಲಿಯೂ ಸ್ವಲ್ಪ ಕೆಟ್ಟುಹೋಗಿರುವದನ್ನೆಲ್ಲಾ ಇನ್ನೊಂದು ಚೀಲದಲ್ಲಿಯೂ ಹಾಕಬೇಕು ಇಲ್ಲವಾದರೆ ಅಮೇರಿಕಾ ದೇಶದ ಕೆಲವು ಭಾಗಗಳಲ್ಲಿ ಮಾಡುವಂತೆ ಒಂದು ದೊಡ್ಡ ಚೀಲದ ಒಂದು ಪಕ್ಕಕ್ಕೆ ಚಿಕ್ಕ ಕಿಸಾಯಿಯನ್ನು (pocket) ಹೊಲಿದು ಒಳ್ಳೆಯದನ್ನೆಲ್ಲಾ ಚೀಲದಲ್ಲಿಯೂ ಕೆಟ್ಟಿರುವುದನ್ನೆಲ್ಲಾ ಕಿಸಾಯಿಯಲ್ಲಿಯೂ ಹಾಕಬಹುದು ಮೊದಲನೆಯ ಫಸಲು ಬಂದನಂತರ ಗಿಡಗಳಿಗೆ ಒಂದು ಸಲ ನೀರನ್ನು ಕಟ್ಟಿದರೆ ಅಲ್ಲಿಂದ ಎರಡು ತಿಂಗಳುಗಳಲ್ಲಿ ಎರಡನೆಯ ಫಸಲು ಸಿದ್ಧವಾಗುವುದು ಆದರೆ ಹತ್ತಿಯು ಮೊದಲನೆಯ ಸಲದಷ್ಟು ಉತ್ಕೃಷ್ಟವಾಗಿರುವದಿಲ್ಲ—ಬೆಳೆದ ಹತ್ತಿಯನ್ನು ಮಾರಿ ಹೆಚ್ಚಾದ ಲಾಭವನ್ನು ಪಡೆಯಬೇಕಾದರೆ ಅದನ್ನು ಶುಭ್ರವಾಗಿಟ್ಟಿರುವದಲ್ಲದೆ ಇತರ ಜಾತಿಗೆ ಸೇರಿದ ಹತ್ತಿ ಜೊತೆಗೆ ಮಿಶ್ರವಿಲ್ಲದೆಯೂ ಇಟ್ಟಿರಬೇಕು ಹೀಗೆ ಶುಭ್ರವಾಗಿಯೂ ಮಿಶ್ರವಿಲ್ಲದೆಯೂ ಇಲ್ಲದ ಪಕ್ಷದಲ್ಲಿ ನಮ್ಮ ಸೀಮೆಯ ಹತ್ತಿಯ ಹೆಸರುವಾಸಿಯು ಕೆಟ್ಟುಹೋಗುವುದಲ್ಲದೆ ವ್ಯವಸಾಯಗಾರರಿಗೆ ಇದರಿಂದ ಬರಬಹುದಾದ ಲಾಭವೂ ಕಮ್ಮಿಯಾಗುವುದು

ಹೋದ ಸಾಲಿನಲ್ಲಿ ಮಾಡಿದಂತೆಯೇ ಈ ಸಾಲಿನಲ್ಲಿಯೂ ವ್ಯವಸಾಯದ ಇಲಾಖೆಯವರು ನಮ್ಮ ಸೀಮೆಯಲ್ಲಿ ಬೆಳೆಯುವ ಕ್ಯಾಂಬೋಡಿಯಾ ಹತ್ತಿಗೆ ಸಾಧ್ಯವಾದಮಟ್ಟಿಗೂ ಹೆಚ್ಚಾದ ಬೆಲೆಯು ಬರುವ ಪ್ರಯತ್ನವನ್ನು ಮಾಡುವರು ಕ್ಯಾಂಬೋಡಿಯ ಹತ್ತಿಯ ವ್ಯವಸಾಯವು ಒಳ್ಳೇ ಅಭಿವೃದ್ಧಿಸ್ಥಿತಿಗೆ ಬಂದರೆ ಅದನ್ನು ತಕ್ಕ ಬೆಲೆಗೆ ಮಾರುವುದಕ್ಕಾಗಿ ಸರಿಯಾದ ಏರ್ಪಾಟುಗಳನ್ನು ಇಲಾಖೆಯವರು ಮಾಡಬೇಕೆಂದಿರುವರು

ಮಲೆನಾಡಿನ ಪ್ರಜಾಲಯದ ವಿಚಾರವು

ಅಯ್ಯಾ,—ಮಲೆನಾಡು ಪ್ರದೇಶಗಳಲ್ಲಿ ಪ್ರಜಾಲಯವಾಗುವುದಕ್ಕೆ ಅನೇಕರು ಅನೇಕ ಕಾರಣಗಳನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾರೆ ನುಚಿನಾಡಾದ ನಮ್ಮ ಈ ಮಂಜ್ರಾಬಾದು ತಾಲ್ಲೋಕಿನಲ್ಲಿ ಪ್ರಜಾಲಯಕ್ಕೆ ಕಾರಣಗಳೆಂದು ನನಗೆ ಕಂಡುಬರುವ ಈ ಕೆಳಗಿನ ವಿಷಯಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವುದರ ಮೂಲಕ ನಮ್ಮ ಪ್ರಜಾ ಸಹೋದರರ ಮತ್ತು ಘನವುಳ್ಳ ಸರ್ಕಾರದವರ ಸ್ಮೃತಿಪಥಕ್ಕೆ ತಂದು ಪ್ರಜಾನುಕೂಲ ಕಲ್ಪನೆಯಲ್ಲಿ ಭಾಗಿಗಳಾಗಬೇಕೆಂದು ಪ್ರಾರ್ಥಿಸುತ್ತೇನೆ

(1) ಲಾಂಟಾನದ ಹಬ್ಬುವಿಕೆ—ಈ ಸೀಮೆಯ ದೊಡ್ಡ ದೊಡ್ಡ ಮರಗಾಡುಗಳಲ್ಲಿ ಮಳೆ ಮತ್ತು ಗಾಳಿ ಕಾಲಗಳಲ್ಲಿ ಸೊಳ್ಳೆಗಳು ನಿಲ್ಲಲಾರವು ಈ ಲಾಂಟಾನ ಪೊದೆಗಳಲ್ಲಿ ಎಂತಹ ಮಳೆಗಾಲದಲ್ಲಾದರೂ ಈ ಸೊಳ್ಳೆಗಳು ನಾಶವಾಗದೆ ಅಭಿವೃದ್ಧಿಯಾಗುತ್ತಲೇ ಇರುವುದರಿಂದ ಈ ಸೀಮೆಯು ಮಲೇರಿಯಾ ಜ್ವರಕ್ಕೆ ತೌರುಮನೆಯಾಗಿದೆ (2) ಬಾವಿಗಳು—ಈ ಸೀಮೆಯ ಹಳ್ಳಿಯಲ್ಲಿ ಕುಡಿಯುವ ನೀರಿನ ಬಾವಿಗಳು ಸಾಮಾನ್ಯವಾಗಿ ಗದ್ದೆಗಳಲ್ಲಿ ತೋಡಲ್ಪಟ್ಟಿರುತ್ತವೆ ಈ ಬಾವಿಗಳು ಸಾಮಾನ್ಯವಾಗಿ ಸುತ್ತುಮುತ್ತಿನ ಪ್ರದೇಶಗಳಿಗಿಂತ ತಗ್ಗಾಗಿರುವ ಸ್ಥಳದಲ್ಲಿರುತ್ತವೆ ಮಳೆ ಬಂದರೆ ಸುತ್ತುಮುತ್ತಿನ ಕೊಳೆತ ಎಲೆಗಳೂ ಗದ್ದೆಗಳ ಗೊಬ್ಬರ ಮಿಶ್ರಿತವಾದ ನೀರೂ ಬಾವಿಗಳೊಳಕ್ಕೆ ಹರಿದು ಬರುತ್ತವೆ ಇಂತಹ ನೀರನ್ನು ಕುಡಿಯುವುದೂ ಒಂದು ಕಾರಣವೆಂದು ಹೇಳಬಹುದು (3) ಆಹಾರಾದಿಗಳಲ್ಲಿ ವಿವೇಚನೆ ಇಲ್ಲದಿರುವುದು—ಇಲ್ಲಿಯ ಕೂಲಿ ಜನಗಳಿಗೆ ಸಾಮಾನ್ಯವಾಗಿ ವರ್ಷಕ್ಕೆ 6, 7 ತಿಂಗಳುಗಳ ಕಾಲ ಕೂಲಿ ಸಿಕ್ಕುತ್ತದೆ ಉಳಿದ ಕಾಲಗಳಲ್ಲಿ ಇವರು ಹೊಟ್ಟೆಗಿಲ್ಲದೆ ಹಲಸಿನಕಾಯಿ ಮೊದಲಾದವುಗಳನ್ನು ತಿಂದು ಅಜೀರ್ಣ ಮೊದಲಾದ ರೋಗಗಳಿಗೆ ಗುರಿಯಾಗಿ ಅನೇಕರು ಮೃತ್ಯುವಿಗೆ ತುತ್ತಾಗುತ್ತಾರೆ (4) ಸ್ಯಾನಿಟೇಷನ್ ವಿಷಯದಲ್ಲಿ ಅಸಡ್ಡೆ—ದೊಡ್ಡ ಊರುಗಳಿಗಿಂತಲೂ ಹಳ್ಳಿಗಳಲ್ಲಿ ಮನೆಗಳನ್ನು ದೂರ ದೂರವಾಗಿಯೂ, ಆರೋಗ್ಯ ಸೂತ್ರಕ್ಕನುಸಾರವಾಗಿಯೂ ಮನೆಗಳನ್ನು ಕಟ್ಟಿಕೊಳ್ಳಲು ಅನುಕೂಲವಿದ್ದರೂ ಇವರು ತಮ್ಮ ಗದ್ದೆಗಳಿಗೆ ಹತ್ತಿರವಾಗಿರಬೇಕೆಂದು ಗುದ್ದೆಗಳ ತಪ್ಪಲಿನಲ್ಲಿ ತಗ್ಗು ಪ್ರದೇಶದಲ್ಲಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಮತ್ತು ಮನೆಯ ಹತ್ತಿರ ನೀರು ನಿಂತು ಕೊಳೆಯುವುದಕ್ಕೆ ಅವಕಾಶ ಕೊಡುವುದಲ್ಲದೆ, ಮನೆಯ ಹತ್ತಿರದಲ್ಲೂ ಕೆಲವು ವೇಳೆ ಮನೆಯ ಒಂದು ಭಾಗದಲ್ಲಿಯೇ ಕೊಟ್ಟಿಗೆಗಳನ್ನು ಮಾಡಿಕೊಂಡಿರುತ್ತಾರೆ ಇವುಗಳಿಂದ ಅಲ್ಲಿ ತಡೆಯಲು ಅಸದಳವಾದಷ್ಟು ದುರ್ಗಂಧವೂ ಮತ್ತು ಸಂಖ್ಯಾತೀತವಾದಷ್ಟು ಸೊಳ್ಳೆಗಳೂ ಉತ್ಪತ್ತಿಯಾಗುತ್ತವೆ ಈ ತಪ್ಪು ಅನುಕೂಲಸ್ಥರಿಂದ ಬಡವರವರೆಗೂ ಸರ್ವಸಾಮಾನ್ಯವಾಗಿದೆ (5) ಮಳೆಗಾಲವು ಕಮ್ಮಿಯಾದದ್ದು—ಇದೂ ಒಂದು ಕಾರಣವೆನ್ನುವುದಕ್ಕೆ ಸಂದೇಹವಿಲ್ಲ ಹೇಗೆಂದರೆ, ಈಗಲೂ ವಿಶೇಷ ಮಳೆಯಾಗತಕ್ಕ ಜೂನ್, ಜೂಲೈ ತಿಂಗಳುಗಳಲ್ಲಿ ಖಾಯಿಲೆಯವರ ಸಂಖ್ಯೆ ಬಹಳ ಕಮ್ಮಿ ಇಂತಹ ಮಳೆಗಳಲ್ಲಿ ಜನಗಳು ತಮ್ಮ ಆರಂಭದ ಕೆಲಸವನ್ನು ನೆನೆಯುತ್ತಲೇ ಮಾಡುತ್ತಿದ್ದಾಗ್ಯೂ ಮುಖದಲ್ಲಿ ರೋಗದ ಚಿಹ್ನೆಯು ಕಾಣಿಸದೆ ಯಾವಾಗಲೂ ಉಲ್ಲಾಸದಿಂದ ಕೂಡಿರುತ್ತದೆ ಮಳೆಯು ಕಮ್ಮಿಯಾಗುತ್ತಾ ಬಂದ ಹಾಗೆಲ್ಲಾ ರೋಗಗಳು ಹೆಚ್ಚುತ್ತ ಬರುತ್ತವೆ—ಹೀಗೆ ಜನಗಳ ಆರೋಗ್ಯಕ್ಕೆ ಕಾರಣಭೂತವಾದ ಮಳೆಯು ಕಮ್ಮಿಯಾಗಲು ಇಲ್ಲಿನ ಕಾಡುಗಳು ನಿರ್ಮೂಲವಾದದ್ದಲ್ಲದೆ ಬೇರೆ ಕಾರಣವೆಂದು ಹೇಳಬೇಕಾದ್ದಿಲ್ಲ (6) ಆಸ್ಪತ್ರೆಗಳಲ್ಲಿ ಜನಗಳಿಗೆ ನಂಬಿಕೆ ಇಲ್ಲದೆ ಇರುವುದು—ಈ ವಿಷಯದಲ್ಲಿ ಎಷ್ಟು ಹೇಳಿದರೂ ಸ್ವಲ್ಪವಾಗಿದೆ ಇಲ್ಲಿ ಅನೇಕ ಜನಗಳು—"ಆಸ್ಪತ್ರೆಯಲ್ಲಿ ಔಷಧಿಯನ್ನು ತೆಗೆದುಕೊಳ್ಳುತ್ತಿರುವ ಕಾಲದಲ್ಲಿ ಸ್ವಲ್ಪ ಗುಣಮುಖವಾದರೆ ಸರಿ ಇಲ್ಲವಾದರೆ ವಿಷವನ್ನು ಹಾಕಿ ಕೊಂದುಬಿಡುತ್ತಾರೆಂತ" ಹೇಳುತ್ತಿರುವುದನ್ನು ಕೇಳಿದೇನೆ ಇಂತಹ ಇವರ ಊಹೆಗೆ ಕಾರಣವೇನೆಂದು ಕೇಳಿದರೆ, ಆಸ್ಪತ್ರೆಯಲ್ಲಿ ಪುಗಸಟ್ಟೆ ಔಷಧಿಯನ್ನು ಏಕೆ ಕೊಡುತ್ತಾರೆಂದು ಕೇಳುತ್ತಾರೆ ಇದಲ್ಲವೆ ಊಹಾಶಕ್ತಿ ಇದಕ್ಕೆ ಇವರ ಮೌಢ್ಯವೇ ಕಾರಣವೆಂದು ಹೇಳಬೇಕಾಗಿಲ್ಲ ಇಂತಹ ಜನಗಳಿಗೆ ತಮಗೂ ಸರ್ಕಾರಕ್ಕೂ ಇರುವ ಸಂಬಂಧವೇನೆ ಬುದೇ ಗೊತ್ತಿಲ್ಲ ಕೆಂಪಾಯಿಲೆಗಳ ಮೂಲಕ ತಮ್ಮಲ್ಲಿರುವ ಹಣವನ್ನು ಸುಲಿದುಕೊಳ್ಳುವುದಾದೇ ಸರ್ಕಾರದವರ ಉದ್ಯೋಗವೆಂತ ತಿಳಿದುಕೊಂಡಿರುತ್ತಾರೆ ಇಂತಹ ಮೂಢ ಜನಗಳಿರುವ ಸ್ಥಳಗಳಿಗೆ ಉಪದೇಶವೇ ಮುಖ್ಯವಾಗಿರುವ ಪ್ರಜಾ ಹಿತಕರವಾದ ಅಧಿಕಾರಿಗಳು ಕಳುಹಿಸಲ್ಪಟ್ಟರೆ ಜನಗಳ ಇಂತಹ ಕೆಟ್ಟ ನಂಬಿಕೆಯು ಅಭಿವೃದ್ಧಿಯಾದೀತೆಂಬ ಹೆದರಿಕೆಯಾಗುತ್ತದೆ ಆದರೆ ತಾವು ಪ್ರಜಾನುಕೂಲಕ್ಕೋಸ್ಕರ ಕಳುಹಿಸಲ್ಪಟ್ಟಿರುವವೆಂಬದಾಗಿ ಕಾಯಾ, ವಾಚಾ, ಮನಸಾ ತಿಳಿದುಕೊಂಡು ಅದರಂತೆಯೇ ಪ್ರಜೆಗಳಿಗೆ ತಿಳಿಸುತ್ತಲೂ, ವಾಡಿಕೆ ತೋರಿಸುತ್ತಲೂ ಇರುವಂತಹ ಒಳ್ಳೆಯ ಅಧಿಕಾರಿಗಳು ಬಂದಲ್ಲಿ ಇವರ ಮೌಢ್ಯವು ಶೀಘ್ರದಲ್ಲಿಯೇ ಕಮ್ಮಿಯಾಗಲು ಸಂದೇಹವಿಲ್ಲ ಮೇಲೆ ಕಂಡಂತೆ ಆಸ್ಪತ್ರೆಗಳಲ್ಲಿ ಅಪನಂಬಿಕೆಯುಳ್ಳ ಜನಗಳು ವೈದ್ಯರ ಮಾತುಗಳಿಂದ ನಂಬಿ, ಸರಿಯಾದ ಚಿಕಿತ್ಸೆ ಮಾಡದೆಹೋಗುವುದೂ ಒಂದು ಕಾರಣ (7) ಮಾದಕ ಪದಾರ್ಥಗಳ ಸೇವನೆ—ಈ ವಿಷಯದಲ್ಲಿ ಅನೇಕರು ಅನೇಕವೇಳೆ ತಮ್ಮ ಪತ್ರಿಕೆಗಳಲ್ಲಿ ಬರೆದಿರುತ್ತಾರಾಗಿ ಇಲ್ಲಿ ವಿಶೇಷ ಬರೆಯಬೇಕಾದ್ದಿಲ್ಲ. ಆದರೆ ಇಲ್ಲಿ ಬಗನಿ ಸೇಂದಿಯನ್ನು ಸೇವಿಸತಕ್ಕ ಜನಗಳು ವಿಶೇಷವಾಗಿರುವ ಗ್ರಾಮಗಳಲ್ಲಿ ನೋಡಿದರೆ ಜನಸಂಖ್ಯೆಯು ಮೊದಲಿನಂತೆಯು ಕೆಲವು ಕಡೆ ಹೆಚ್ಚಾಗಿಯೂ ಇರುವುದಲ್ಲದೆ ಜನಗಳು ಆರೋಗ್ಯದೃಢಕಾಯರಾಗಿರುತ್ತಾರೆ ಇದಕ್ಕೆ ಇದೇ ಕಾರಣವೋ ಅಥವಾ ಮತ್ತಾವ ಕಾರಣವಿರಬಹುದೋ ಹೇಳಲು ನನಗೆ ಸಾಧ್ಯವಿಲ್ಲ—ಆದರೆ ಜನಗಳು ಸಾಮಾನ್ಯವಾಗಿ ಈ ಸೇಂದಿಯನ್ನು ಉಪಯೋಗಿಸುವುದು ಕಮ್ಮಿ ಹೊರಗಿನಿಂದ ಬರುವ ಈ ಸಂಬಂಧದ ಪದಾರ್ಥಗಳ ಮಾರಾಟವೇ ಹೆಚ್ಚಾಗಿರುವುದರಿಂದ ಇದೂ ಒಂದು ಕಾರಣವೆಂದು ಹೇಳಬಹುದು (8) ಉಡಿಗೆ ತೊಡಿಗೆಗಳಲ್ಲಿ ಉಂಟಾದ ಮಾರ್ಪಾಟುಗಳು—ಪೂರ್ವದಲ್ಲಿ ಇಲ್ಲಿ ಸಾಮಾನ್ಯವಾಗಿ ಜನಗಳು ಕಂಬಳಿಯನ್ನು ಕಟ್ಟುತ್ತಾ, ತಲೆಗೆ ದೊಡ್ಡ ದೊಡ್ಡ ರುಮಾಲುಗಳನ್ನು ಇಡುತ್ತಿದ್ದರು ರುಮಾಲುಗಳೊಳಗೆ ಕಂಬಳಿ ಟೋಪಿಗಳನ್ನು ಹಾಕಿಕೊಳ್ಳುತ್ತಿದ್ದರು ಇದರಿಂದ ದೇಹದ ಮುಖ್ಯ ಭಾಗಗಳಾದ ತಲೆ ಮತ್ತು ಎದೆಗಳಿಗೆ ಹೊರಗಿನ ಶೀತ ವ್ಯಾಪನೆಯಾಗುತ್ತಿರಲಿಲ್ಲ ಅಲ್ಲದೆ ಹೊರಗೆ ಎಂತಹ ಮಳೆ ಚಳಿಗಳಲ್ಲಾದರೂ ಕೆಲಸಮಾಡಲು ಅನುಕೂಲಿಸುತ್ತಿತ್ತು ಈಗಲಾದರೋ ಕಾಯ ಕಷ್ಟವನ್ನು ವಿಶೇಷವಾಗಿ ಮಾಡದೆ ಇರುವ ನವನಾಗರಿಕರಂತೆ ತೋರ್ಪಡಿಸಿಕೊಳ್ಳಬೇಕೆಂಬದಾಗಿ ಪೂರ್ವದ ಉಡಿಗೆಗಳನ್ನೆಲ್ಲಾ ಬಿಟ್ಟುಬಿಟ್ಟಿರುವುದೂ ಒಂದು ಕಾರಣವೆಂದು ಹೇಳಬಹುದು (9) ಸುತ್ತಮುತ್ತಲೂ ಕಾಫಿ ತೋಟಗಳು ವಿಶೇಷವಾಗಿರುವ ಊರುಗಳಲ್ಲಿ ಕೂಲಿಮಾಡುವ ಜನಗಳ (ಹೊಲೆಯರ) ಸಂಖ್ಯೆಯು ವಿಶೇಷ ಕಮ್ಮಿಯಾಗಿರುತ್ತದೆ ಅಲ್ಲದೆ ಪೂರ್ವದಲ್ಲಿ ದೊಡ್ಡ ಹೊಲಗೇರಿಗಳಿದ್ದ ಅನೇಕ ಇಂತಹ ಊರುಗಳಲ್ಲಿ ಹೊಲಗೇರಿಗಳೇ ಹಾಳಾಗಿಹೋಗಿವೆ ವಿಶೇಷವಾಗಿ ಕಾಫಿ ತೋಟಗಳಿಲ್ಲದೆ ಇರತಕ್ಕ ಸ್ಥಳಗಳಲ್ಲಿ ಹೊಲಗೇರಿಗಳು ಪೂರ್ವದಲ್ಲಿದ್ದಂತೆಯೇ ಜನಭರಿತವಾಗಿಯೇ ಇವೆ ಇದನ್ನು ನೋಡಿದರೆ ಕೆಲವು ಕಾಲದವರೆಗೆ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದರೆ ರೋಗಕ್ಕೆ ಗುರಿಯಾಗಬಹುದೆಂಬ ಸಂಶಯ ಉಂಟಾಗುತ್ತದೆ ಆದರೆ ಇದನ್ನು ದೊಡ್ಡ ದೊಡ್ಡ ಡಾಕ್ಟರುಗಳು ನಿಶ್ಚಯಿಸಬಹುದೇ ವಿನಹ ನನಗೆ ಸಾಧ್ಯವಾದ ವಿಷಯವಲ್ಲ (10) ಕೀಳ ಜಾತಿಯವರಲ್ಲಿ ಅಂದರೆ ಶೇಷವಾಗಿ (ಹೊಲೆಯರಲ್ಲಿ) ಹೆಚ್ಚು ಮರಣ ಇದಕ್ಕೆ ಅನೇಕ ಕಾರಣಗಳುಂಟು ಆದರೆ ಇವರು ಕೆಟ್ಟ ರೋಗಗಳಿಂದ ಸತ್ತ ದನಗಳನ್ನು ಆಹಾರವಾಗಿ ಉಪಯೋಗಿಸುತ್ತಾರೆ ಇದರಿಂದ ಆ ರೋಗಗಳು ಇವರಿಗೆ ಹತ್ತಿ ಮರಣಹೊಂದುವುದು ಒಂದು ಪ್ರಬಲವಾದ ಕಾರಣವಾಗಿದೆ (11) ಸಣ್ಣ ಮಕ್ಕಳ ಮರಣ—ಇದಕ್ಕೆ ಮಾತಾಪಿತೃಗಳ ಅಸಡ್ಡೆಯೇ ಕಾರಣ ಇದು ಪ್ರತಿಯೊಂದು ಸಂಸಾರದಲ್ಲೂ ಇರತಕ್ಕ ಸರ್ವಸಾಮಾನ್ಯವಾದ ವಿಷಯವಾಗಿದೆ

ಈ ಇಷ್ಟು ವಿಷಯಗಳೂ ಮೇಲೆ ಕಂಡ ಪ್ರಜಾಲಯಕ್ಕೆ ಕಾರಣವಾಗಿವೆಯೆಂತ ಕಾಣುತ್ತದೆ ಇದಕ್ಕೆ ನಮ್ಮ ಸರ್ಕಾರದವರು ಈ ಕೆಳಗಿನ ಅನುಕೂಲಗಳನ್ನು ಕಲ್ಪಿಸಿಕೊಟ್ಟಲ್ಲಿ ಬಹುಮಟ್ಟಿಗೆ ಅನುಕೂಲವಾಗಬಹುದೆಂತ ಕಾಣುತ್ತದೆ—(1) ಲಾಂಟಾನವನ್ನು ನಿರ್ಮೂಲಮಾಡುವದು (2) ಕಾಡುಗಳನ್ನು ನಾಶಮಾಡದ ಹಾಗೆ ನೋಡಿಕೊಳ್ಳುವುದು (3) ಸ್ಯಾನಿಟರಿ ಇನ್ಸ್‌ಪೆಕ್ಟರ್‌ಗಳನ್ನು ಈ ರೀತಿ ನೇಮಿಸುವುದಕ್ಕೆ ಬದಲಾಗಿ ಪೂರ್ವದಲ್ಲಿ ಆಸ್ಪಟಲ್ ಅಸಿಸ್ಟೆಂಟ್‌ಗಳೆಂಬದಾಗಿ ಕರೆಯಲ್ಪಡುತ್ತಿದ್ದಂತಹ ವೈದ್ಯರುಗಳನ್ನು ನೇಮಿಸಿ ಅವರಿಗೆ ಸಾಧಾರಣವಾದ ಔಷಧಿ ಸಾಮಗ್ರಿಗಳನ್ನೂ ನೀರಿನಲ್ಲಿರುವ ಕ್ರಿಮಿಗಳನ್ನು ತೋರಿಸಲು ಅನುಕೂಲವಾದಂತಹ ಯಂತ್ರಗಳನ್ನೂ ಕೊಡಬೇಕು ಅವರು ಈ ಔಷಧಿಗಳನ್ನೂ ಯಂತ್ರಗಳನ್ನೂ ತೆಗೆದುಕೊಂಡು ಗ್ರಾಮಾಂತರ ಸಂಚಾರಮಾಡುತ್ತಾ ಅಲ್ಲಿರುವ ರೋಗಿಗಳಿಗೆ ಔಷಧಿಯನ್ನು ಕೊಟ್ಟು ಅವರಿಗೆ ಬುದ್ಧಿವಾದಗಳನ್ನು ಹೇಳುತ್ತಲೂ ಈ ಯಂತ್ರದ ಸಹಾಯದಿಂದ ಜನಗಳಿಗೆ ಮನೆಯ ಹತ್ತಿರದಲ್ಲಿರುವ ಕೊಳಚೆಯಲ್ಲೂ ಇರಬಹುದಾದ ಮತ್ತು ಉತ್ಪತ್ತಿಯಾಗಬಹುದಾದ ಕ್ರಿಮಿ ವಗೈರೆ ವಿಷಜಂತುಗಳನ್ನು ತೋರಿಸಿ ಅವುಗಳ ವಿಷಯವಾಗಿ ಉಪನ್ಯಾಸ ಮಾಡುತ್ತಲೂ ಊರಿನ ಸ್ಯಾನಿಟೇಷನ್ ವಿಚಾರದಲ್ಲಿ ಬುದ್ಧಿವಾದಗಳನ್ನು ಹೇಳುತ್ತಲೂ ನೇರದಂತೆ ನಡೆದುಕೊಳ್ಳದವರನ್ನು ಕ್ರಮವಾದ ರೀತಿಯಲ್ಲಿ ಶಿಕ್ಷೆಗೆ ಗುರಿಪಡಿಸುತ್ತಲೂ ಇರುವಂತೆ ಮಾಡಬೇಕು (4) ಈಗಿನ ಹೊಸ ರೂಲ್ಸಿನಂತೆ ಅಮಲ್ದಾರರು ತಿಂಗಳಲ್ಲಿ 10 ದಿನಗಳು ಗ್ರಾಮಾಂತರ ಸಂಚಾರಮಾಡುವ ಕಾಲದಲ್ಲಿ ಮೇಲ್ಕಂಡ ಸ್ಯಾನಿಟರಿ ಇನ್ಸ್‌ಪೆಕ್ಟರ ಕೆಲಸವನ್ನು ಮೇಲ್ತನಿಖೆಮಾಡುತ್ತಾ ಅವರ ಕೆಲಸದಲ್ಲಿ ಜನಗಳಿಗೆ ಪ್ರಬೋಧಮಾಡುತ್ತ ಸಹಾಯಮಾಡುತ್ತಿರಬೇಕಲ್ಲದೆ ಹಿಂದುಗಡೆ ಜಮೀನುಗಳಲ್ಲಿರುವ ಲಾಂಟಾನವನ್ನು ನಿರ್ಮೂಲಮಾಡಿಸುವುದಕ್ಕೆ ಖಂಡಿತವಾದ ಏರ್ಪಾಟು ಮಾಡಬೇಕು (5) ಸೂಲಗಿತ್ತಿಯರ ಸಂಖ್ಯೆಯನ್ನು ಹೆಚ್ಚಿಸಿ ಅವರಿಗೆ ಗ್ರಾಮಾಂತರ ಸಂಚರಿಸುತ್ತಾ ಗ್ರಾಮಾಂತರಗಳಲ್ಲಿ ಆಗಬಹುದಾದ ಹೆರಿಗೆಗಳಿಗೆ ಹೋಗುತ್ತಿರಬೇಕು (6) ಹಳ್ಳಿಗಳಲ್ಲಿ ಬಾವಿಗಳನ್ನು ಸರಿಯಾದ ಸ್ಥಳದಲ್ಲಿ ತೆಗೆಯಿಸಿ ಅವುಗಳನ್ನು ಸರಿಯಾಗಿ ಇಟ್ಟುಕೊಂಡಿರುವಂತೆ ನೋಡಿಕೊಳ್ಳುತ್ತಿರಬೇಕು (7) ಇವರಲ್ಲಿರುವ ಮೌಢ್ಯವನ್ನು ಕಮ್ಮಿಮಾಡಲು ಸಾಧ್ಯವಾದಷ್ಟುಮಟ್ಟಿಗೆ ವಿದ್ಯಾಪ್ರಚಾರ ಮಾಡಬೇಕು ಈ ಏರ್ಪಾಟುಗಳನ್ನು ಮಾಡಿದರೆ ತಕ್ಕಮಟ್ಟಿಗೆ ಇಲ್ಲಿನ ಸ್ಥಿತಿಯು ಉತ್ತಮ ಸ್ಥಿತಿಯನ್ನು ಹೊಂದುವುದರಲ್ಲಿ ಸಂದೇಹವಿಲ್ಲ

ಎಸ್ ಕಾಳಪ್ಪ

ಖಾತ್ರಿದಾರರಿಗೆ ನೋಟೀಸ್

ಪ್ರಚುರಪಡಿಸುವುದಕ್ಕೆ ಬರತಕ್ಕ ಖಾತ್ರಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಖಾತ್ರಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸ ಕಡಮೆ ಖಾತ್ರಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಹೆಸರು ವಿಳಾಸವಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ಎಡಾ ಕೊಡಲಾರೆವು ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಖಾತ್ರಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಎಡಾ ಕೊಡಲಾರೆವು

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ಅರಿಯತಕ್ಕದ್ದು

ಕರೆಸ್‌ಪಾಂಡೆನ್ಸ್

ಒಬ್ಬ ಶೇರ್ದಾರರ ನಡವಳಿಕೆ

ಅಯ್ಯಾ,

ಮೈಸೂರು ಸೀಮೆಯಲ್ಲಿ ದಾವಣಗೆರೆ ತಾಲ್ಲೂಕು ಹವಡಿ ನುತ್ತು ಈ ಸಮ್ಮತಿಗೆ ಸೇರಿದ ಎಲ್ಲಾ ಹಳ್ಳಿಗಳೂ ಸಹ ಮಹಾ ಹುಂಡು ಪ್ರತಿ ಗ್ರಾಮಗಳ

ಲ್ಲಾ ಮೂರು ಪಾರ್ಟಿಗಳಿಗೆ ಕಡಮೆ ಇರುವದಿಲ್ಲ. ಈವರಿವಿಗೂ ನಮ್ಮ ಸಮ್ಮತಿಗೆ ಎಷ್ಟೋ ಶೇಕ್ದಾರರು ಬಂದರು. ಆದರೆ ಎಲ್ಲರೂ ಪಾರ್ಟಿಗಳಿಗೆ ಒಳಪಟ್ಟು ಪಕ್ಷಪಾತಮಾಡುತ್ತಿದ್ದರು. ಆದರೆ ಹಾಲಿ ಬಂದಿರುವ ರಂಗಯ್ಯ ಎಂಬವರು ಚಿಕ್ಕ ವಯಸ್ಸಿನವರಾಗಿಯೂ, ಕೇವಲ ಬುದ್ಧಿವಂತರಾಗಿಯೂ, ಚಮತ್ಕಾರಿಗಳಾಗಿಯೂ ಇರುತ್ತಾರೆ. ಇವರು ಬಂದು ಆರು ತಿಂಗಳಾದವು ಈವರಿವಿಗೂ ಯಾವ ಪಾರ್ಟಿಗೂ ಒಳಗಾಗದೆ ಬಡವರನ್ನೂ ಸಾಹುಕಾರರನ್ನೂ ಭೇದವಿಲ್ಲದೆ ಒಂದೇ ಸಮನಾಗಿ ಪ್ರೀತಿಸುತ್ತಾ, ಬಡವರ ಕೆಲಸವನ್ನು ಶೀಘ್ರ ಮಾಡುವ ಯಾವ ತೊಂದರೆಯನ್ನೂ ಕೊಡದೆ ಬಹು ಮುತವರ್ಜಿಯಿಂದ ಮಾಡಿಕೊಡುತ್ತಿದ್ದಾರೆ ಈ ಗ್ರಾಮಗಳಲ್ಲಿ ರೈತರು ಮಾಡುವದೆಲ್ಲಾ ತಪ್ಪೆ. ಅದನ್ನೆಲ್ಲಾ ಕಂಡು ಒಡೆದು ಬುದ್ಧಿವಾದ ಹೇಳಿ ಪಾರ್ಟಿಗಳಿದ್ದ ಊರಿನಲ್ಲಿ ರಾಜಿಮಾಡಿಸುತ್ತಾ ಇರುತ್ತಾರೆ ಈವರಿವಿಗೂ ಪಾರ್ಟಿಗಳನ್ನು ರಾಜಿಮಾಡಿಸಿದವರು ಯಾರೂ ಇರಲಿಲ್ಲ. ನಮ್ಮ ತಾಲೂಕು ಅಮಲ್ದಾರರೂ ಸಹ ಮೇಲ್ಕಂಡಂತೆಯೇ ನಮಗೆ ಬಹಳ ಸಹಾಯಮಾಡುತ್ತಾರೆ. ಈ ಶೇಕ್ದಾರರು ಇನ್ನು ಕೆಲವು ಕಾಲ ಇಲ್ಲೀ ಖಾಯಮಾಗಿದ್ದರೆ ನಮ್ಮ ಪ್ರಾಂತ್ಯ ಇರುವ ಪಾರ್ಟಿಗಳೆಲ್ಲಾ ಕಡಮೆಯಾಗಿ ಗ್ರಾಮ ಸೌಖ್ಯವಾಗುವುದರಲ್ಲಿ ಸ್ವಲ್ಪವೂ ಸಂದೇಹವಿರುವುದಿಲ್ಲ.

ಕುಕ್ಕವಾಡ ಬಸಲಿಂಗಪ್ಪ.

ಹಾಸನದ ಸಿವಿಲ್ ಆಸ್ಪತ್ರೆಯು.

ಅಯ್ಯಾ,

ಈ ಆಸ್ಪತ್ರೆಯು ಇಂತಹ ಆಸ್ಪತ್ರೆಯನ್ನೇ ಉಳ್ಳ ಇತರ ಡಿಸ್ಟ್ರಿಕ್ಟುಗಳ ವಿವಿಧ ವ್ಯಾಧಿಗ್ರಸ್ತರನ್ನೂ ವ್ರಣಪೀಡಿತರನ್ನೂ ಇಲ್ಲಿಗೇ ಬರಮಾಡಿಕೊಳ್ಳುತ್ತಲಿದೆ ಇದರಿಂದ ಇಲ್ಲಿರುವ ಡಾಕ್ಟರ್ ಆಶೀರ್ವಾದಯ್ಯನವರ ಔಷದೋಪಚಾರ, ಶಸ್ತ್ರಚಿಕಿತ್ಸಾದಿಗಳ ಚಾಕಚಕ್ಯತೆ ಹಸ್ತಕೌಸಲ್ಯಗಳನ್ನು ವರ್ಣಿಸಬೇಕಾದುದೇ ಇಲ್ಲವಷ್ಟೆ. ಆಸ್ಪತ್ರೆಯ ಆವರಣದಲ್ಲಿರುವ ವಾರ್ಡುಗಳೇ ಸಾಲವು ಎಂಬುದು ಇಲ್ಲಿನ ಆಸುದಾಗದ ವಿಶೇಷತೆಯನ್ನು ಇನ್ನೂ ವಿಶದಪಡಿಸುತ್ತಲಿದೆ. ಆದರೆ ಒಂದು ಕೊರತೆಯುಂಟು. ಅದೇನಂದರೆ—ಈ ಆಸ್ಪತ್ರೆಯ ಮುಂಬಾಗದಲ್ಲಿ ಒಂದು ಚಿಕ್ಕ ಹೊಂಡವೋ ಎನ್ನುವಂತೆ ಸದಾ ಕಾಲದಲ್ಲಿಯೂ ನೀರು ನಿಂತಿರುತ್ತವೆ. ಇದರಲ್ಲಿ ಜನರೂ ಪಶ್ವಾದಿಗಳೂ ಶೇಸಿಗೆಕಾರ್ಯಗಳನ್ನು ಮಾಡುತ್ತಿರುವುದರಿಂದ ದುರ್ವಾಸನೆಯಾಗಿ ಸೊಳ್ಳೆಗಳ ಉತ್ಪತ್ತಿಗೂ ತನ್ಮೂಲಕ ಅನಾರೋಗ್ಯಾಭಿವೃದ್ಧಿಗೂ ಅವಕಾಶವುಂಟಾಗಿವೆ ವಾರ್ಡುಗಳಲ್ಲಿ ಮಲಗಿರುವ ರೋಗಿಗಳಿಗೆ ರಾತ್ರಿ ಕಾಲದಲ್ಲಿ ಸೊಳ್ಳೆಗಳ ಕಾಟ ಬಹಳ ಆದುದರಿಂದ ನಮ್ಮ ಜನಾನುರಾಗಿಗಳಾದ ಡೆಪ್ಯುಟೀಕಮಿಷನರವರೂ ಡಾಕ್ಟರವರೂ ಈ ವಿಷಯವನ್ನು ಗಮನಿಸಿ, ಆ ಹೊಂಡವನ್ನು ಮುಚ್ಚಿಸುವುದಾಗಲಿ, ಅದನ್ನು ಚೆನ್ನಾಗಿ ತೋಡಿಸಿ ಒಂದು ಕಲ್ಯಾಣಿಯಂತೆ ಸುತ್ತಲೂ ಚೌಕವಾಗಿ ಕಲ್ಲುಕಟ್ಟಿಸಿ, ತಂತೀಬೇಲಿ, ಗೇಟ್ ಸಹ ಇಡಿಸಿ, ಒಂದು ಉದ್ಯಾನವನ್ನು ನಿರ್ಮಿಸುವುದಾಗಲಿ, ಮಾಡಿಸಿದರೆ, ಊರಿಗೆ ಅಲಂಕಾರವೂ, ಆ ಪ್ರಾಂತ್ಯದಲ್ಲಿ ವಾಸಿಸುವ ಜನರಿಗೂ ಆ ಸಮೀಪದಲ್ಲಿಯೇ ಇರುವ ಛತ್ರದಲ್ಲಿ ಬಂದಿಳಿಯುವ ಪರಸ್ಥಳ ಪ್ರಯಾಣಿಕರಿಗೂ ಬಹು ವಿಧ ಪ್ರಯೋಜನವೂ ಆಗಿದ್ದೀತೆನ್ನುವುದರಲ್ಲಿ ಸಂಶಯವಿಲ್ಲ ಇದೇಸಲಹೆಯನ್ನು ಇಲ್ಲಿನ ಮ್ಯುನಿಸಿಪಲ್ ಮೆಂಬರುಗಳೂ ತಿಂಗಳು ಗಟ್ಟಳೆಯ ಮೀಟಿಂಗ್‌ನಲ್ಲಿ ಪ್ರಶಂಸಿಸಿ, ಸಫಲಗೊಳಿಸಿಯಾರೆಂದು ನಿರೀಕ್ಷಿಸುತ್ತೇನೆ. ಅದೇ ಪ್ರಾಂತದಲ್ಲಿ ವಾರಕ್ಕೊಂದಾವರ್ತಿ ಇಲ್ಲಿನ ಮಂಗಳವಾರ ಸಂತೆಯೂ ನಡೆಯುತ್ತಿರುವುದರಿಂದ ಆ ಸಂತೇ ಜನರಿಗೂ ಕುಡಿಯುವ ಒಳ್ಳೇ ನೀರನ್ನು ಒದಗಿಸಿಕೊಟ್ಟಂತಾಗುವುದು ದುರ್ವಾಸನೆ, ಕಲ್ಮಷ, ಮತ್ತು ಅನಾರೋಗ್ಯತೆಗಳು ತೊಲಗಿ ಹೋಗುತ್ತವೆ ಪ್ರಜಾಹಿತಚಿಂತಕ.

ಚಿತ್ರದುರ್ಗದ ವಿದ್ಯಮಾನಗಳು.

ಅಯ್ಯಾ,

ಎ ವಿ ಸ್ಕೂಲ್ ಮುಂಭಾಗದ ಕೋಟೆಗೆ ಲಗತ್ತು ಇದ್ದ 1 ಅಂಕಣ ಕಲ್ಲು ಮಂಟಪಕ್ಕೆ ಶ್ರೀ ಮದುತ್ಸವಾಂಬ ದೇವರ ದೇವಸ್ಥಾನದ ಒಳಭಾಗದ 3 ಅಂಕಣ ಬಿದ್ದು ಹೋಗಿರುತ್ತೆ. ಅದರ ರಿಪೇರಿ ಬಗ್ಗೆ ಬೇಕಾಗಿ ಒಂದು ದರಖಾಸ್ತು ರಾಘವೇಂದ್ರಸ್ವಾಮಿ ಮಠದ ಮುಂಭಾಗದಲ್ಲಿ ಮಂಟಪ ತಯಾರಿಸಲುಬೇಕೆಂದು ಮತ್ತೊಂದು ದರಖಾಸ್ತು ರಾಮದೇವರಿಗೆ ಬೇಕಾಗಿ ಇನ್ನೊಂದು ದರಖಾಸ್ತು ಬಂದಿರುವಂತೆ ಕೇಳುತ್ತೇನೆ. ಇದರ ಪೈಕಿ ಹೊಸದಾಗಿ ಕಟ್ಟಿರುವುದಕ್ಕಿಂತ ಲಕ್ಷಾಂತರ ರೂಪಾಯಿ ಮುಟ್ಟಿಸಿ ಕಟ್ಟಿಸಿದ ದೇವಸ್ಥಾನವು ಶಿಥಿಲವಾಗುತ್ತಿರ್ವದಕ್ಕೆ 1 ಅಂಕಣ ಉಪಯೋಗಿಸಿ ಜೀರ್ಣೋದ್ಧಾರ ಮಾಡಿಸುವುದು ಉತ್ತಮವಾಗಿರುತ್ತೆ ಇದಕ್ಕೆ ಸರ್ಕಾರದವರು ಪೂರ್ಣ ನಿಗಾಕೊಟ್ಟಾರೆಂದು ನಂಬುತ್ತೇನೆ

ಬೆಟ್ಟದ ಮೇಲೆ ಇದ್ದ ಶ್ರೀ ಗುರಿಪಾಲದೇವರ ದೇವಸ್ಥಾನದ ಮಧ್ಯರಂಗದ ದೊಡ್ಡ ಅಡ್ಡತೊಲೆಯು ಅಕಸ್ಮಾತು ಸಿಡಿದುಹೋಯಿತು. ಆ ದೇವಸ್ಥಾನವು ಇಲ್ಲಿ ಆಳಿದ ಪಾಳ್ಯಗಾರರ ಕಾಲದಲ್ಲಿ ಕಟ್ಟಿಸಲ್ಪಟ್ಟದ್ದು. ಅದರ ಮುಂಭಾಗದಲ್ಲಿ ಬಿದ್ದಿದ್ದ ದೊಡ್ಡ ತೊಲೆಯನ್ನು ಮೇಲ್ಕಂಡ ಕೆಲಸಕ್ಕೆ ಉಪಯೋಗಿಸಲು ಈಗ ಹಾಲಿ ಇರತಕ್ಕ ಪಾಳ್ಯಗಾರರ ಅಭಿಪ್ರಾಯಪಡೆದು ಸರ್ಕಾರದವರು ಸಿಡಿದ ತೊಲೆಗೆ ಘೋಟಕೊಟ್ಟು ದೇವಸ್ಥಾನ ಜೀರ್ಣೋದ್ಧಾರಮಾಡಿಯತ್ತಾರೆ ಪಾಳ್ಯಗಾರರು ತಮ್ಮ ಹಿರಿಯರ ಗುರುತನ್ನು ಸರ್ಕಾರದವರಿಗೆ ಸಹಾಯಮಾಡಿ ನಿಲ್ಲಿಸಿಕೊಂಡರು ಇದಲ್ಲವೇ ದೊಡ್ಡ ವಂಶೀಯರ ಗುಣ !

ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಆಫೀಸು ಕ್ಲಾರಕ್ ರಾಮರಾಯರ ಮನೆಯಲ್ಲಿ ಇಲ್ಲಿನ ರಾಮಾಚಾರಿ ಎಂಬಾತನು ಕಳ್ಳತನಮಾಡಿದನೆಂದು ತಪ್ಪಿತಕ್ಕೆ ಗುರಿಯಾಗಿ ವಿಚಾರಣೆ ನಡೆಯುತ್ತಿರುವದು ಮಾಲು ಒಬ್ಬ ಅಕ್ಕಸಾಲಿಗರವನಾದ ಪುಟ್ಟಪ್ಪನ ಮನೆಯಲ್ಲಿ ಸಿಕ್ಕಿರುತ್ತೆ. ಹಿಂದೆ ಇಲ್ಲಿ ಕೆಲವು ದಿವಸಗಳ ಕೆಳಗೆ ಅಗಸರ ಹರಿಹರದ ಕೆಂಚನೆಂಬವನು ಬಟ್ಟೆಗಳನ್ನು ಕದ್ದು ಮಾಲು ಪತ್ತೆಯಾದರೂ ಹ್ಯಾಗೋ ಅವನಿಗೆ ಖುಲಾಸೆಯಾಯಿತು ಈ ಕೇಸು ಅದರಂತೆ ಆಗುವ ಪಕ್ಷ ಕಳ್ಳರು ಹೆಚ್ಚುವದಲ್ಲದೆ ಸರ್ಕಾರದ ದರ್ಪ ಕಮ್ಮಿಯಾಗುವದರಲ್ಲಿ ಯಾವ ಸಂದೇಹವೂ ಇಲ್ಲವೇ ಇಲ್ಲ. ಈಗ ಇಲ್ಲಿಗೆ ದಯಮಾಡಿಸಿರುವ ಪೊಲೀಸ್ ಸೂಪರಿಂಟೆಂಡೆಂಟ್ ಸಾಹೇಬರು ಕಳೆದ ಕೇಸನ್ನು ಪುನಹ ಫೈಲಿಗೆ ತೆಗೆದುಕೊಂಡು ಸರಿಯಾಗಿ ವಿಚಾರಣೆ ಮಾಡಿಸಿದರೆ ಉತ್ತಮವೆಂದು ನಂಬುವದಲ್ಲದೆ ಪೊಲೀಸಿಗೇನೆ ಕೀರ್ತಿಯುಂಟಾಗುವದರಲ್ಲಿ ಸಂದೇಹವಿಲ್ಲ. ಸತ್ಯವಾದಿ.

ವಿಲೇಜ್ ಪೋಸ್ಟ್ ಮ್ಯಾಸ್ಟರ್‌ಗಳ ಅಶ್ರದ್ಧೆ

ಅಯ್ಯಾ,

ಹಳ್ಳಿಗಳಿಗೆ ಹೋಗಿ ಕಾಗದಗಳನ್ನು ಪಾವತಿ ಮಾಡತಕ್ಕ ಪೋಸ್ಟ್ ಮ್ಯಾಸ್ಟರ್‌ಗಳು ಕಷ್ಟಪಟ್ಟು ತಿರುಗಲಾರದೆ ಕಂಡವರ ಕೈಯಲ್ಲಿಯೂ ಮತ್ತು ವಿಳಾಸದಾರರಿಗೆ ಆಗದೆ ಇರತಕ್ಕವರ ಕೈಯಲ್ಲಿಯೂ ಕೊಟ್ಟುಬಿಡುವರು. ಇಂಥಾ ಕಾಗದಗಳು ಸಕಾಲಕ್ಕೆ ವಿಳಾಸದಾರರಿಗೆ ದೊರೆಯುವುದಿಲ್ಲ. ಹೀಗೆ ಮಾಡುವುದು ಜನಗಳಿಗೆ ತುಂಬಾ ತೊಂದರೆಯಾಗಿದೆ. ಮಣಿಯಾರ್ಡರ್ ಹಣ ಬಂದರೆ ಮಾತ್ರ ಪೋಸ್ಟ್ ಮ್ಯಾಸ್ಟರ್‌ಗಳೇ ಖುದ್ದು ಬಂದು ಹಣ ಪಾವತಿಕೊಂಡು 1-2 ಜನಗಳ ಸಾಕ್ಷಿ ತೆಗೆದುಕೊಂಡು ಹೋಗುತ್ತಾರೆ. ಕಾಗದಗಳು ಮತ್ತು ಬುಕ್ ಪೋಸ್ಟುಗಳು ಬಂದರೆ ಬಹಳ ಅಶ್ರದ್ಧೆಮಾಡಿ ಸಕಾಲಕ್ಕೆ ಪಾವತಿಮಾಡುವುದಿಲ್ಲ. ಆದರೆ ಕಾಗದಗಳು ಮಾತ್ರ ಮಣಿಯಾರ್ಡರ್ ಮತ್ತು ಭಾಂಗಿ ಇವುಗಳಗಿಂತ ಕಮ್ಮಿ ಎಂತ ಭಾವಿಸಿ ಅಶ್ರದ್ಧೆ ಮಾಡಬಹುದು. ಆದರೆ ಮಣಿಯಾರ್ಡರ್‌ಗಳು ಹಣವಂತರಿಗೆ ಮಾತ್ರ ಬರುತ್ತವೇ ಹೊರತು ಬಡವರಿಗೆ ವಿಶೇಷವಾಗಿ ಬರಲಾರದು. ಬಡಜನಗಳಿಗೆ ಕ್ಷೇಮಸಮಾಚಾರ ಕಾಗದಗಳು ಮಾತ್ರ ಬರುತ್ತವೆ. ಅಂಥಾ ಕಾಗದಗಳನ್ನು ಪೋಸ್ಟ್ ಮ್ಯಾಸ್ಟರ್‌ಗಳು ಅಶ್ರದ್ಧೆ ಮಾಡಿದರೆ ಆ ಬಡ ಜನಗಳ ಕಷ್ಟ ಹೇಳಲು ಅಸಾಧ್ಯವಾಗಿರುತ್ತೆ. ಪೋಸ್ಟ್ ಮ್ಯಾಸ್ಟರ್‌ಗಳು ಗ್ರಾಮಗಳಿಗೆ ಸವಾರಿ ಮಾಡಿಸುವದೇ ಅಪರೂಪ ಒಂದು ವೇಳೆ ಅಕಸ್ಮಾತಾಗಿ ದಯಮಾಡಿಸಿದರೆ ತಂಡೋಪತಂಡವಾಗಿ ಜನಗಳು ಬಂದು ನನಗೆ ಏನಾದರೂ ಕಾಗದ ಬಂದಿದೆಯೇ ಎಂಬದಾಗಿ ಬಹಳ ವಿಧೇಯರಾಗಿ ಕೇಳಿಕೊಳ್ಳುತ್ತಾರೆ. ನಿಮಗೇನೂ ಕಾಗದ ಇಲ್ಲ ಎಂದು ಪೋಸ್ಟ್ ಮ್ಯಾಸ್ಟರ್ ಹೇಳಿದರೆ ನೋಡಿ ನೋಡಿ ಕಾಗದಗಳಲ್ಲಿ ಮರೆತುಗಿರುತು ಇರಬಹುದು ಎಂಬದಾಗಿ ಕೇಳಿದರೆ ಆಗ ಆ ಕಾಗದಗಳಲ್ಲಿ ಪೋಸ್ಟ್ ಮ್ಯಾಸ್ಟರ್‌ಗಳು ನೋಡುವಲ್ಲಿ ಕನಿಷ್ಟಪಕ್ಷ ಒಂದು ಕಾಗದವಾದರೂ ಸಿಕ್ಕುತ್ತೆ. ಇಂಥಾ ಬಡ ಜನರಿಗೆ ಈ ರೀತಿ ಅನಾದರಣೆಯಿಂದ ಕಾಗದಗಳನ್ನು ತಲಪಿಸದೆ ಇರುವುದು ವಿಲೇಜ್ ಪೋಸ್ಟ್ ಮ್ಯಾಸ್ಟರವರ ದೊಡ್ಡ ತಪ್ಪಲ್ಲವೇ ? ಒಂದು ಗ್ರಾಮಕ್ಕೆ 3-4-5 ಕಾಗದಗಳು ಬೇರೆ ಬೇರೆಯವರ ಹೆಸರಿಗೆ ಬಂದಿದ್ದರೆ ಎಲ್ಲಾ ಕಾಗದಗಳನ್ನು ಆ ಗ್ರಾಮದ ಮುಖ್ಯಸ್ಥರಿಗೆ ಕೊಟ್ಟು ಹೊರಟು ಹೋಗುತ್ತಾರೆ. ಹೀಗೆ ಮಾಡಿದರೆ ವಿಳಾಸ ದಾರನಿಗೇನೇ ಕಾಗದಗಳು ತಲಪುತ್ತವೆ ಎಂಬ ಭರವಸೆ ಹೇಳಲಾಗುವುದಿಲ್ಲ. ಒಂದು ವೇಳೆ ವಿಳಾಸದಾರನು ಊರಲ್ಲಿ ಹಾಜರಿಲ್ಲದಿದ್ದರೆ, ಆ ವಿಳಾಸದಾರನ ತಂದೆಗಾಗಲಿ ಮತ್ತು ಆತನ ಹೆಂಡತಿಗಾಗಲಿ ಪಾವತಿಮಾಡುವುದು ಉತ್ತಮವಾಗಿರುತ್ತೆ. ಗ್ರಾಮದಲ್ಲಿ ಪುಣ್ಯವಂತರಾಗಿರತಕ್ಕವರೆ ಆ ಗ್ರಾಮಕ್ಕೆ ಮುಖ್ಯಸ್ಥರೆಂದು ಭಾವಿಸಿ ಅವರ ವಶಕ್ಕೆ ಕಾಗದಗಳನ್ನು ಪಾವತಿಮಾಡಿದರೆ ಆದರಿಂದ ಬಡ ಜನಗಳಿಗೆ ಎಷ್ಟು ಕಷ್ಟ ನಷ್ಟಗಳು ಉಂಟಾಗುವುದೆಂಬುದನ್ನು ಯೋಚನೆಮಾಡತಕ್ಕದ್ದು ವಿಳಾಸದಾರನಿಗೆ ಸರಿಯಾಗಿ ಪಾವತಿ ಆಗಬೇಕಾದರೆ, ವಿಳಾಸದಾರನ ಹೆಸರೆಲ್ಲಾ ಬುಕ್ಕಿನಲ್ಲಿ ದಾಖಲ್ ಮಾಡಿಕೊಳ್ಳುವ ಹಾಗೆ ಪೋಸ್ಟ್ ಮಾಸ್ಟರವರು ಹುಕುಂಮಾಡಿ ಪಾವತಿಯಾದದ್ದಕ್ಕೆ ಸರಿಯಾದ ರುಜು ಪಡಾಂಬರಿಸಿದರೆ, ಸಂಕಟ ಬಡ ಜನಗಳಿಗೆ ತುಂಬಾ ಸಹಾಯಮಾಡಿದಂತೆ ಆಗುತ್ತದೆ.

ಜನಹಿತೈಷಿ.

ಶಿವಮೊಗ್ಗೆಯ ವಿದ್ಯಮಾನಗಳು.

ಅಯ್ಯ,

ಈ ಟವರ್‌ನಲ್ಲಿ ಅಲ್ಲಲ್ಲಿ ಪ್ಲೇಗು ಉಪದ್ರವೂ ಮಶೀರಿಯ ಉಪದ್ರವೂ ಇರುತ್ತೆ. ಆದರೆ ಮಾರ್ಕೆಟ್ ಬಳಿ ಇರತಕ್ಕ ಮ್ಯಾದರ ಬೀದಿ, ಕುಚಲಕ್ಕಿಯವರ ಬೀದಿಯಲ್ಲಿ ಮಾತ್ರ ಹೆಚ್ಚಾಗಿರುವದನ್ನು ನೋಡಿದರೆ ಸದರಿ ಮಾರ್ಕೆಟ್ಟಿನ ಬಳಿ ಇರತಕ್ಕ ಕಕ್ಕಸದ ಮನೆ, ಅಲ್ಲಿಯೇ ಪಾಯಖಾನೆ ಗಾಡಿ ಬರತಕ್ಕದ್ದು, ಕಸಾಬರ ವೃತ್ತಿಯ ಮನೆ ಬಳಿ ದುರ್ವಾಸನೆ, ಮತ್ತು ಜನರ ಹಿತ್ತಲಿನ ಕೊಳಕು ಇವುಗಳಿಂದ ಉಂಟಾಗಿದೆ ಎಂದು ಸಂದೇಹವಿಲ್ಲದೆ ಹೇಳಬಹುದಾಗಿರುತ್ತೆ. ಸರ್ಕಾರದವರು ಶೀಘ್ರವಾಗಿ ಈ ದುರ್ವಾಸನೆಯನ್ನು ಹೋಗಲಾಡಿಸಲು ಪ್ರಯತ್ನಪಟ್ಟರೆ ಆ ಬೀದಿಯವರಿಗೆ ಕ್ಷೇಮವಾಗಬಹುದೆಂದು ನಂಬುತ್ತೇನೆ. ಮತ್ತು ಈ ಟವರ್‌ನಲ್ಲಿ ಕೊಡ ನದೀವಡ, ಅನೇಕರ ಹಿತ್ತಲು ಪಾಳುಸ್ಥಳಗಳು, ಹಾಳು ನೆಲಗಟ್ಟುಗಳು ಇವುಗಳ ಮೇಲೂ, ಊರಿನ ಮಧ್ಯ ಇರತಕ್ಕ ಕುಂಬಾರಗುಂಡಿ ಎಂಬ ಜಾಗದಲ್ಲೂ ವಿಶೇಷ ಗಿಡಗಳು ಬೆಳೆದು ಆ ಸ್ಥಳವೆಲ್ಲಾ ಕಾಡಿನೋಪಾದಿಯಲ್ಲಿರುತ್ತೆ ಸರ್ಕಾರದವರು ಇವನ್ನು ಶುಚಿಮಾಡುವ ಏರ್ಪಾಡುಮಾಡಿದರೆ ಪ್ಲೇಗಿನ ಗಲಾಟೆಯು ಕಡಮೆಯಾಗಬಹುದು. ಕಾಡುಗಿಡಗಳನ್ನು ಕೀಳಿಸುವ ವಿಷಯದಲ್ಲಿ ದೊಡ್ಡವಾಗಿ ಬೀಜ ಸುರಿದನಂತರ ಕೀಳಿಸುವ ಏರ್ಪಾಡನ್ನು ತಪ್ಪಿಸಿ ಎಳೇದಾಗಿರುವಾಗಲೇ ಕೀಳಿಸುತ್ತಾ 1-3 ಸಾರಿ ಪ್ರಯತ್ನಪಟ್ಟರೆ ವರ್ಷ ವರ್ಷ ಕೀಳಿಸುವ ತೊಂದರೆ ತಪ್ಪುತ್ತೆ ಹೊಸ ಡೆಪ್ಟಿ ಕಮಿಷನರ್‌ರವರು ಪ್ರತಿನಿತ್ಯವೂ ಬೆಳಗಿನ ಹೊತ್ತು ಟವರ್‌ನಲ್ಲಿ ಬಂದು ಪರಾಂಬರಿಸುತ್ತಾ ಇದ್ದಾರೆ ತಕ್ಕ ಏರ್ಪಾಡು ಮಾಡುತ್ತಾರಾಗಿ ನಂಬುತ್ತೇನೆ ಮತ್ತು ಊರಿನವರಿಗೆಲ್ಲಾ ಪ್ರೋತ್ಸಾಹಪಡಿಸಿ ಪ್ಲೇಗಿನ ಇನಾಕ್ಯುಲೇಷನ್, ಮಕ್ಕಳಿಗೆ ವ್ಯಾಕ್ಸಿನೇಷನ್ ಹಾಕಿಸುತ್ತಾ ಇದ್ದಾರೆ. ಡಿಸ್ಟ್ರಿಕ್ಟ್ ಆಫೀಸಿನವರೆಲ್ಲ ಇನಾಕ್ಯುಲೇಷನ್ ಮಾಡಿಸಿಕೊಂಡರೆಂದು ವರ್ತಮಾನ ತಿಳಿಯಬಂತು ಸ್ಕೂಲಿನ ಹುಡುಗರಿಗೂ ಪ್ಲೇಗ್ ಔಷಧಿ ಹಾಕಿರುತ್ತಾರೆ.

ದುರ್ಗಿಗುಡಿ ಬಡಾವಣೆಯಲ್ಲಿ ಸರ್ಕಾರದವರು ವಿಶೇಷ ಹಣ ಖರ್ಚುಮಾಡಿ ದೊಡ್ಡ ದೊಡ್ಡ ರಸ್ತೆ ಚರಂಡಿ ಮೊದಲಾದವುಗಳನ್ನೆಲ್ಲಾ ಮಾಡಿಸಿ, ಮನೆ ಕಟ್ಟಿಕೊಳ್ಳತಕ್ಕವರಿಗೆ ಅನುಕೂಲವಾದ ಮನೆವಳವನ್ನು ಗುರ್ತಿಸಿಕೊಟ್ಟು ಕಟ್ಟಡಗಳನ್ನು ಕಟ್ಟಿಕೊಳ್ಳಲಿಕ್ಕೆ ಪ್ರೋತ್ಸಾಹಪಡಿಸಿದ್ದರ ಮೇರೆ ಸ್ವಂತ ಮನೆಗಳಿಲ್ಲದ ಅನೇಕರು ಸಾಲ ವಗೈರೆ ಮಾಡಿ ಸ್ಥಳಗಳನ್ನು ಸರಕಾರದಿಂದ ಕ್ರಯಕ್ಕೆ ಪಡೆದು ನೆಲಗಟ್ಟು ವಗೈರೆ ಮಾಡಿಕೊಂಡು ಸರಕಾರದಿಂದ ಕೊಡಿಸೋಣಾಗುತ್ತೆಂದು ಪ್ರಕಟ ಮಾಡಿದ ನಾಟಾ ವಗೈರೆ ಬರದ ಕೂಡಲೆ ಬಾಕಿ ಕೆಲಸ ಮಾಡಿಕೊಂಡು ಶುದ್ಧವಾದ ಗಾಳಿಯಿಂದ ತುಂಬಿರುವ ನಿರ್ಮಲವಾದ ಜಾಗದಲ್ಲಿ ವಾಸಮಾಡಬೇಕೆಂದಿರುವಷ್ಟರಲ್ಲಿ ಈಚಗೆ ಆ ಸ್ಥಳವನ್ನು ಕೇಳುವವರೇ ಇಲ್ಲದೆ ಅಲ್ಲಲ್ಲಿ ಕಾಡುಗಿಡ ವಗೈರೆ ಬೆಳೆದು ವಿಶಾಲವಾದ ರಸ್ತೆಗಳೆಲ್ಲಾ ಕೆಡಲು ಆರಂಭವಾಗಿರುತ್ತೆ ಇನ್ನು ಮುಂದೆ ಆ ಸ್ಥಳದ ವಿಷಯ ಸರಕಾರದವರು ಅಷ್ಟು ಮುತುವರ್ಜಿ ವಹಿಸುವುದಿಲ್ಲವೆಂದು ಕೆಲವರು ಹೇಳುತ್ತಾರೆ. ಇಷ್ಟು ಹಣ ಖರ್ಚುಮಾಡಿ ಸುಮ್ಮನೆ ಬಿಟ್ಟುಬಿಡುತ್ತಾರೆಂಬ ಮಾತು ಎಷ್ಟರ ಮಟ್ಟಿಗೆ ನಿಜವೋ ತಿಳಿಯದು ಅದಕ್ಕೆ ತಕ್ಕಹಾಗೆ ನಾಟಾ ವಗೈರೆಗಳಿಗೆ ಅರ್ಜಿ ಬರೆದುಕೊಂಡವರಿಗೆ ಈ ವರಿಗೂ ಕೊಟ್ಟಿಲ್ಲ. ಸರಕಾರದವರು ಈ ರೀತಿ ಮಾಡಿದರೆ ಇದಕ್ಕಾಗಿ ಸಾಲಮಾಡಿಕೊಂಡಿರುವ ಬಡವರು ಈ ದುರ್ಭಿಕ್ಷಕ್ಕೆ ಸಮಾನವಾದ ಕಷ್ಟಕಾಲದಲ್ಲಿ ಇನ್ನೂ ವ್ಯಥೆಪಡಲು ಕಾರಣವಾಗುತ್ತೆ ಆದ್ದರಿಂದ ಸರಕಾರದ ಮಹಾ ಪ್ರಭುಗಳು ಈ ರೀತಿ ಮಾಡದೆ ತಮ್ಮ ಅಪ್ಪಣೆ ಮೇರೆ ಮರ ವಗೈರೆ ಕೊಡಿಸಿ ಮನೆಗಳನ್ನು ಕಟ್ಟಿಕೊಳ್ಳಲು ಪ್ರೋತ್ಸಾಹಪಡಿಸಿದರೆ ನಿವೇಶನಗಳನ್ನು ಕ್ರಯಕ್ಕೆ ಪಡೆದಿರುವ ಅನೇಕರು ಮನೆಗಳನ್ನು ಕಟ್ಟಿಸಿಕೊಳ್ಳುತ್ತಾರೆ. ಅನೇಕರಿಗೆ ಕಿಷ್ಕಿಂದ ಸ್ಥಳದಲ್ಲಿ ವಾಸಮಾಡುವದು ತಪ್ಪಿ ನಿರ್ಮಲವಾದ ಸ್ಥಳದಲ್ಲಿ ವಾಸಮಾಡಿಕೊಂಡಿರಲು ಅನುಕೂಲವಾಗುತ್ತೆ. ಸರಕಾರದವರು ಪ್ರಯತ್ನಪಟ್ಟರೆ ದೊಡ್ಡ ವಿಷಯವಲ್ಲವೆಂದು ತೋರುತ್ತೆ.

ಈ ಟವರ್‌ನಲ್ಲಿ ವರ್ತಕರಿಗೆ ಸರಕಾರದಿಂದ ಹೊಸದಾಗಿ ಕೊಡಿಸಿರುವ ಮುದ್ರೆಯ ಸೇರುಗಳಲ್ಲಿ ಸರಿಯಾಗಿರುವ ಕೆಲವು, 4 ಆಣೆ ತೂಕ 8 ಆಣೆ ತೂಕ ಕಮ್ಮಿಯಾಗಿರುವ ಕೆಲವು, ಹೀಗೆ ಒಂದೊಂದಕ್ಕೆ ವ್ಯತ್ಯಾಸವಾಗಿರುತ್ತವೆ. ಇಲ್ಲಿಗೆ ಕೊಳ್ಳುವಾಗ ಕೆಲವರು ಕಡಿಮೆಯಾದದ್ದನ್ನೇ ಪರೀಕ್ಷಿಸಿ ತೆಗೆದುಕೊಂಡಿರುತ್ತಾರೆ. ದೊಡ್ಡ ಅಂದರೆ ಸರಿಯಾದ ಸೇರುಗಳನ್ನು ಹೊಂದಿರುವವರು ಅಳೆಯುವಾಗ ತಮಗೆ ನಷ್ಟವಾಗುತ್ತೆಂಬ ಚಿಂತೆಯಿಂದ ತಕ್ಕ ಪ್ರಯತ್ನವನ್ನ ಹುಡುಕುತ್ತಿದಾರೆ. ಅಂದರೆ ಉಜ್ಜುವದೋ ಹಿಸಕುವದೋ ಹ್ಯಾಗೋ ಮಾಡಬೇಕೆಂದಿರುತ್ತಾರೆಂದು ತಿಳಿಯಬರುತ್ತೆ. ಆದ್ದರಿಂದ ಸರಕಾರದವರು ಈ ವಿಷಯ ಹೆಚ್ಚು ನಿಗಾ ಇಟ್ಟು ನವಧಾನ್ಯಗಳನ್ನೂ ಸೇರಿಸಿ ಅಳತೆಮಾಡಿಸಿದರೆ ಸರಿಯಾಗುತ್ತೆ. ಪರರನ್ನ ತನ್ನಂತೆ ಕಾಣುವ ಆಸಕ್ತಿಯಿಂದ ಕೆಲಸಮಾಡುವಂಥವರನ್ನ ನೇಮಿಸಿದರೆ ಸೇರುಗಳೆಲ್ಲಾ ಕ್ರಮಪಡುತ್ತವೆ. . ಈಗ ಕೊಟ್ಟಿರುವ ಸತುವಿನ ತಗಡಿನ ಸೇರುಗಳು ಉಪ್ಪುತಿಂದು ತುಕ್ಕು ಹಿಡಿದು ನೆಗ್ಗಿ ಕಮ್ಮಿಯಾಗುತ್ತವೆಂದು ತೋರುತ್ತೆ. ಸಕಲರಿಗೂ ಮತ್ತೂ ತೊಂದರೆಯೇ. ಆದ್ದರಿಂದ ಕಂಚಿನ ಸೇರು ಇಲ್ಲವೇ ಹಿತ್ತಾಳೆಯ ಸೇರುಗಳನ್ನ ಎರಕಮಾಡಿಸಿ, ಅಥವಾ ದಪ್ಪ ತಗಡಿನಿಂದ ಮಾಡಿಸಿ ಕೊಡಲು ಏರ್ಪಾಡುಮಾಡಿದರೆ ಬಹಳ ದಿವಸ ಬಾಳಿಕೆಬರುತ್ತವೆ. ಕಂಚಿನ ಸೇರುಗಳಾದರೆ ಕಮ್ಮಿಮಾಡಲು ಆಗುವದೇ ಇಲ್ಲವೆಂದು ತೋರುತ್ತೆ. ಹೀಗೆ ಮಾಡಿದನಂತರ ವರ್ಷ ಇಲ್ಲವೇ 2 ವರ್ಷಕ್ಕೆ ಒಂದು ಸಾರಿ ಸೇರುಗಳನ್ನೆಲ್ಲಾ ತರಿಸಿ ಪುನಃ ಅಳತೆ ನೋಡಿಕೊಡುವ ಏರ್ಪಾಡು ಇಟ್ಟರೆ ಬಡಪ್ರಜೆಗಳಿಗೆಲ್ಲಾ ಬಹಳ ಉಪಕಾರವಾದಂತೆ ಆಗುತ್ತೆ.

ಪ್ರಜಾಭಿಮಾನಿ

ತಾಲ್ಲೋಕು ವರ್ತಮಾನಗಳು.

ದೊಡ್ಡಬಳ್ಳಾಪುರ.—ಈ ಪ್ರಾಂತ್ಯದಲ್ಲಿ ಮಳೆ ಇಲ್ಲದೆ ರಾಗಿ ಪೈರುಗಳೆಲ್ಲಾ ಕೆಡುತ್ತಿವೆ, ದೇವರು ಸಾಕಾದಷ್ಟು ಮಳೆಯನ್ನು ದಯಪಾಲಿಸಬೇಕಾಗಿ ಪ್ರಾರ್ಥನೆ —ವಿಕಾಶಿಪುರದಲ್ಲಿ ಒಬ್ಬ ಒಕ್ಕಲಿಗನು ಅಕಸ್ಮಾತ್ ಮರಣವಾದನೆಂತ ಪಟೇಲ್ ತಿಮ್ಮೇಗೌಡರು ತಿಳಿಸುತ್ತಾರೆ. ಶವವು ವೈದ್ಯರ ಅಜಮಾಯಿಷಿಗೆ ಬಂದಿತು. ಕಾರಣ ತಿಳಿಯದು —ರಿಟೈರ್ಡ್ ಸಬ್ ಜಡ್ಜ್ ರಾಮಚಂದ್ರ ರಾವ್, ಬಿ ಎ., ಬಿ.ಎಲ್. ಯವರು ಬುಧವಾರ ರಾತ್ರಿ ಇಲ್ಲಿನ ಥಿಯೋಸೊಫಿಕಲ್ ಹಾಲಿನಲ್ಲಿ ಮನಸ್ಸನ್ನು ಪಾಪಕೃತ್ಯಗಳಿಂದ ಹ್ಯಾಗೆ ತಪ್ಪಿಸಿ ದೇವರ ಕೆಲಸದಲ್ಲಿ ಸ್ಥಿರಪಡಿಸಬೇಕೆಂತ ಬಹು ಚೆನ್ನಾಗಿ ಉಪನ್ಯಾಸಮಾಡಿದರು.—ಮುನಿಸಿಪಾಲಿಟಿ ಲಾಂದ್ರಗಳ ಬೆಳಕು ಅಲ್ಲಲ್ಲಿ ಚೆನ್ನಾಗಿಲ್ಲ. ಒಳ್ಳೇ ಕೆರೋಸಿನ್ ಎಣ್ಣೆ ಉಪಯೋಗಿಸಿದರೆ ವಾಸಿ. ಅಮಲ್ದಾರ್ರವರು ದಯವಿಟ್ಟು ಕತ್ತಲೆ ಕಾಲದಲ್ಲಿ ಲಾಂದ್ರದ ಬೆಳಕುಗಳ ವಿಷಯ ಮುತುವರ್ಜಿ ವಹಿಸಿದರೆ ಅನೇಕರಿಗೆ ಉಪಕಾರವಾಗುತ್ತೆ.—ದೇವಾಂಗದ ಜನರಲ್ಲಿ 18 ವರ್ಷಗಳಿಂದಲೂ ಅವರ ದೇವಸ್ಥಾನ ವಿಷಯದಲ್ಲಿದ್ದ ವ್ಯಾಜ್ಯವನ್ನೂ, ವಿರೋಧವನ್ನೂ ಮ|| ಬೆಂಗಳೂರ್ ಡಿ. ಆದೆಪ್ಪನವರು ಕಳೆದ ವಾರ ಪೂರ್ಣವಾಗಿ ಪರಿಹರಿಸಿ ಅನ್ಯೋನ್ಯವನ್ನು ಉಂಟುಮಾಡಿದ್ದು ಅತ್ಯಂತ ಶ್ಲಾಘನೀಯವಾಗಿದೆ.

ದೇವನಹಳ್ಳಿ.—ಸುಮಾರು 2 ತಿಂಗಳಿಂದಲು ಮಳೆಯಿಲ್ಲ ಮೋಡಾಡಂಬರಗಳು ಮಾತ್ರ ವಿಶೇಷವಾಗಿವೆ ಪೈರು ಪಚ್ಚೆಗಳೆಲ್ಲ ಬಾಡಿ ಹೋಗುತ್ತಲಿವೆ. ಕೆರೆಗಳಲ್ಲಿ ನೀರಿಲ್ಲದೆ ಇರುವುದರಿಂದ ಛತ್ತದ ಬೆಳೆಗಳನ್ನೂ ಇಡಲಿಲ್ಲ. ಧಾರಣೆ ವಾಸಿಗಳು ದಿನೇ ದಿನೇ ಹೆಚ್ಚಿಹೋಗುತ್ತಲಿವೆ. ಬಡಬಗ್ಗರ ಜೀವನಗಳು ನಡೆಯುವದು ತುಂಬಾ ಕಷ್ಟವಾಗಿದೆ. ಊರಿನಲ್ಲಿ ಛಳಿ ಜ್ವರ ಹರಡಿಕೊಂಡು, ಅದರಲ್ಲೂ ಮಕ್ಕಳು ಆನಸಂಕೆ, ಕೆಮ್ಮಲು ಮೊದಲಾದುವುಗಳಿಂದ ಪೀಡಿತರಾಗಿ ತುಂಬಾ ಬಾಧೆಪಡುತ್ತಲಿರುವರು. ಸಂತೆಯಲ್ಲಿಯೂ ಊರಿನಲ್ಲಿಯೂ ಎಣ್ಣೆಯಿಂದ ತಯಾರಿಸಿದ ತಿಂಡಿಯನ್ನು ಮಾರುತ್ತಲಿರುವರು. ಇಂಥ ಪದಾರ್ಥಗಳನ್ನು ಮಕ್ಕಳು ಕೊಂಡು ತಿನ್ನುವುದೇ ಈ ರೀತಿಯಾದ ಮಕ್ಕಳ ಅನಾರೋಗ್ಯಕ್ಕೆ ಕಾರಣವಾಗಿರುತ್ತದೆ ಅನೇಕ ಜನರು ಕೆರೆಯ ನೀರನ್ನೇ ಉಪಯೋಗಿಸುತ್ತಲಿರುವರು ಮಳೆ ಇಲ್ಲದೆ ನೀರೆಲ್ಲ ಬತ್ತಿಹೋಗುತ್ತಲಿದೆ. ಇಂಥ ಸಮಯದಲ್ಲಿಯೂ ಕೆರೆಯಲ್ಲಿ ಯಾವಾಗಲೂ 15-20 ಜಾನುವಾರುಗಳು ಮೇಯುತ್ತಲಿರುವುವು ಇದನ್ನು ನಾನು ಖುದ್ದು ನೋಡಿರುವೆನು. ಇದರಿಂದ ನೀರೆಲ್ಲ ಕೆಟ್ಟುಹೋಗುತ್ತಿರುವುದು. ಇಂಥಾ ನೀರನ್ನು ಬಳಸುತ್ತಿರುವದರಿಂದ ಕಾಲರಾ ಪ್ರಾಪ್ತವಾಗುವುದರಲ್ಲಿ ಸಂಶಯವೇನಿದೆ ಸ್ಯಾನಿಟೇಷನ್ ಡಿಪಾರ್ಟ್‌ಮೆಂಟಿನವರು ಈ ವಿಷಯಗಳಲ್ಲಿ ಕೊಂಚವೂ ಗಮನ ಕೊಟ್ಟಂತೆ ಕಾಣುವುದಿಲ್ಲ.

ಆಗುಂಬೆ.—ಈ ಊರ ಸುತ್ತಮುತ್ತಲು ಕೊಳೆ ಉಪದ್ರವು ಈ ವರ್ಷ ಅತಿ ಹೆಚ್ಚಾಗಿ ಕೆಲವು ತೋಟಗಳಲ್ಲಿ ಅಂದರೆ ಮಳೆ ನಕ್ಷತ್ರದಲ್ಲೇ ಹರಡಿಕೊಂಡಿದ್ದಕ್ಕೆ ಆವಾಗ್ಗೆ ಕಟ್ಟದೆ ಕೊಟ್ಟೆಗಳೆಲ್ಲಾ ಮಳೆ ಗಾಳಿಗಳಿಂದ ಕೆಲವು ಕೆಳಕ್ಕೆ ಬಿದ್ದು, ಕೆಲವು ಕೊಳೆತುಹೋಗಿರುವದು. ಹೀಗೆಲ್ಲಾ ನಷ್ಟಪಟ್ಟಿರುವ ಗೊನೆಗಳಿಗೆ ಈವಾಗ ರೋಗವು ತಗಲಿಕೊಂಡು ಕಾಯಿಗಳು ಕೆಳಕ್ಕೆ ಬೀಳುತ್ತಿವೆ ತಗಲಿದ ಗೊನೆಗಳಿಗೆ ಪುನಹ ಕಟ್ಟಲಿಕ್ಕೆ ಕಟ್ಟತಕ್ಕ ಹಾಳೆಗಳೆಲ್ಲಾ ಮೊದಲೇ ಖರ್ಚಾಗಿರುವದು ಛತ್ತದ ಪೈರಾದರೋ ಈ ಮೊದಲು ನಟ್ಟ ಪ್ರಾಯಕ್ಕೆ ಮಳೆ ಜಾಸ್ತಿಯಾದ್ದರಿಂದ ನೀರಿನ ಪ್ರವಾಹದಿಂದ ನಟ್ಟ ಗದ್ದೆಗಳೆಲ್ಲಾ ಕೆಲವು ಭಾಗ ಕೊಚ್ಚಿಕೊಂಡು ಗದ್ದೆಗಳನ್ನೆಲ್ಲಾ ಈ ರೀತಿ ನಷ್ಟ ಪಡಿಸಿರುತ್ತೆ. ಹೋದ ವರುಷ ಫಸಲಿಗೆ ಚೆನ್ನಾಗಿ ಕ್ರಯವಾಗಿರುವದು ಗೊತ್ತೇ ಇರುವದು. ಈ ವರ್ಷ ಬೆಳೆಯುವ ಫಸಲನ್ನು ನೋಡಿದರೆ ಮುಂದಿನ ಜಮಾಬಂದಿಗೆ ಭರ್ತಿಯಾಗಿ ತೋರುವದು. ಕೊಳೆ ರೋಗವು ಗೊನೆಗಳಿಗೆ ತಗಲದ ಹಾಗೆ ಚಿಕಿತ್ಸೆ ನಡಿಸತಕ್ಕವರಿಂದ ಔಷಧಿ ಇಡಲಿಕ್ಕೆ ಈ ಊರು ಮಳೆ ಗಾಳಿಗಳಿಗೆ ಕೇಂದ್ರವು ಆಗಿರುವದರಿಂದ ಮತ್ತೂ ಹೆಚ್ಚಾಗಿ ಬರತಕ್ಕ ಸ್ಥಳಗಳಿಗೆ 2-3 ದಫೆ ಔಷಧಿ ಹಾಕಬೇಕಾಗಿರುವದರಿಂದ ತಕ್ಕ ಹದಗಾಲವು ದೊರೆಯುವದು ಕಷ್ಟ ಮಳೆ ಜಾಸ್ತಿ ಇರುವಾಗ ಇಟ್ಟ ಔಷಧಿಗಳು ನೀರಿನಲ್ಲಿ ಕೊಚ್ಚಿಕೊಂಡು ಹೋಗುವದೆಂದು ಇದಕ್ಕೆ ಹೆಚ್ಚಾಗಿ ಜನಗಳು ಖಾಯಿಷ್ ಪಡುವವರಾಗಿಲ್ಲ. ಈಗ್ಗೆ ಎಂಟು ಹತ್ತು ವರ್ಷಗಳಿಂದ ರೋಗವು ಬಾರದೆ ಇರುವ ಸ್ಥಳಗಳಿಗೆ ಈ ವರ್ಷ ಪೂರಾ ಹರಡಿಕೊಂಡು ಬಹಳ ನಷ್ಟವನ್ನುಂಟು ಮಾಡಿರುವದು —ಈ ಊರು ಸುತ್ತಮುತ್ತ ಕಾಡುಗಳಲ್ಲಿ ಹುಲಿಯ ಬಾಧೆಯು ಜಾಸ್ತಿಯಾಗಿ ನಾಲ್ವತ್ತು ಐವತ್ತು ಜಾನುವಾರುಗಳನ್ನು ನಷ್ಟಪಡಿಸಿರುತ್ತೆ.

ಮಧ್ಧಗಿರಿ ತಾ॥ ಕಲಿದೇವಪುರ—ಇಲ್ಲಿ 15 30 ದಿನಗಳಿಂದ ಮೋಡ ಕಟ್ಟುತ್ತಾ ಗಾಳಿ ಬಲವಾಗಿದೆಯೇ ಹೊರತು ಮಳೆ ಸುತರಾಂ ಇಲ್ಲವೆ ಇಲ್ಲ ಈಕಡೆ ಕುಷ್ಕಿ ಬೆಳೆಗಳೆಲ್ಲಾ ಒಣಗುತ್ತಾ ಬಂದಿರುತ್ತವೆ ಈಗ ಒಂದು ಹದ ಮಳೆ ಬಂದರೆ ತಕ್ಕ ಮಟ್ಟಿಗೆ ಬೆಳೆ ಆಗುತ್ತದೆ. ಇಲ್ಲಿ ಅಕ್ಕಿ ರೂಪಾಯಿ 1 ಕ್ಕೆ 5½-6 ಸೇರು ರಾಗಿ ರೂ 1 ಕ್ಕೆ 12-13 ಸೇರುಗಳು ಹೀಗೆ ಧಾರಣೆಗಳು ಆಗಿರುತ್ತವೆ ಇಂಥಾದ್ದರಲ್ಲಿ ಬಡವರ ಸ್ಥಿತಿಯು ಅಸಾಧ್ಯದಾಗಿರುತ್ತದೆ ಈ ಗ್ರಾಮಕ್ಕೆ ಸರಕಾರಿ ಸ್ಕೂಲಿಲ್ಲದ್ದರಿಂದ ಪ್ರಜೆಗಳಿಗೆ ತುಂಬಾ ತೊಂದರೆಯಾಗಿರುತ್ತದೆ ಕಳೆದ ತಿಂಗಳಲ್ಲಿ ಮಧ್ಧಗಿರಿ ತಾಲ್ಲೂಕು ಅಮಲ್ದಾರ್ರವರ ಸವಾರಿ ಇಲ್ಲಿಗೆ ದಯಮಾಡಿಸಿತು ಆಗ ಇಲ್ಲಿನ ಗ್ರಾಮಸಾರಶಾಲೆಯನ್ನು ಪರಾಂಬರಿಸಿ ಈ ಗ್ರಾಮಕ್ಕೆ ಸ್ಕೂಲು ಕೊಡಬೇಕೆಂದೂ ಮತ್ತು ಅಲ್ಲಿನ ಉಪಾಧ್ಯಾಯರನ್ನೇ ನೇಮಕಮಾಡಬೇಕೆಂದೂ ವಿಜ್ಞಾಪಿಸಲಾಯಿತು ಸರಕಾರದವರು ದಯವಿಟ್ಟು ಈ ಗ್ರಾಮಕ್ಕೆ ಸ್ಕೂಲು ಕೊಟ್ಟಲ್ಲಿ ಈ ಗ್ರಾಮದ ಪ್ರಜೆಗಳಿಗೆ ತುಂಬಾ ಸಹಾಯಮಾಡಿದಂತಾಗುತ್ತದೆ—ಈ ಗ್ರಾಮಕ್ಕೆ ಅತಿ ಸಮೀಪವಾಗಿರುವ ಕಾಲಗಾನಹಳ್ಳಿ ಎಂಬ ಗ್ರಾಮದಲ್ಲಿ ಈಗ್ಗೆ ಸುಮಾರು 2 ತಿಂಗಳಿಂದ ದಿನ 1 ಕ್ಕೆ 6-7 ಕೇಸುಗಳ ಮೇರೆಗೆ ಕಾಲರಾ ವ್ಯಾಧಿಯಿಂದ ಮೃತಪಟ್ಟಿರುತ್ತಾರೆ ಈಗ ಸುಮಾರು 70 ಜನಗಳ ವರಿವಿಗೂ ಕಾಲವಾಗಿರುತ್ತಾರೆ ಇನ್ನೂ ಶಮನವಾಗಲಿಲ್ಲ. ಈ ಕಲಿದೇವಪುರದ ಗ್ರಾಮದ ಪಟೇಲ್ ಹನುಮೇಗೌಡರೂ ಶ್ಯಾ॥ ಸಂಜೀವಪ್ಪನವರೂ ಮುತುವರ್ಜಿ ವಹಿಸಿ ಮುಹನತ್ತಿನಿಂದ ಕೆಲಸಮಾಡುತ್ತಾ ಇದ್ದಾರೆ ಪಟೇಲರೂ ಮತ್ತು ಗ್ರಾಮಸ್ಥರೂ ಮುತುವರ್ಜಿ ವಹಿಸಿದರೆ ಸರ್ಕಾರಿ ಸ್ಕೂಲು ಆಗುವುದರಲ್ಲಿ ಸಂಶಯವೇನೂ ಇರುವುದಿಲ್ಲ

ಹಾಸನದ ಷರೀಫ್ ಮೊಹಿದೀನ್ ಸಾಹೇಬರ ಮಕ್ಕಳು ಅಬ್ದುಲ್ ರಜಾಕರವರ ಅಂಗಡಿಯಲ್ಲಿ

ಮೈಸೂರು ಶ್ರೀಮನ್ ಮಹಾರಾಜಾ ಸಾಹೆಬ್ ಬಹಾದುರ್ ಯವರ ಸರಕಾರದವರು ಹೊಸದಾಗಿ ಜಾರಿಯಲ್ಲಿ ತಂದಿರುವ ಅಳತೆಮಾಡುವ ಸೇರುಗಳು ಮತ್ತು ತೂಕಮಾಡುವ ಬಟ್ಟುಗಳು ಮಾರಲ್ಪಡುತ್ತವೆ. ಬೇಗನೆ ಕೊಂಡುಕೊಳ್ಳಿ. [160-4]

ವಿಳಾಸ —ಷರೀಫ್ ಮೊಹಿದೀನ್ ಸಾಹೇಬರ ಅಂಗಡಿ, ಹಾಸನ

ಅಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ನಿಮ್ಮ ಅಪಾಯದ ಕುರುಹು !

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ ಅವನ್ನು ಬೇಗನೆ ಬಲಪಡಿಸತಕ್ಕದ್ದು ಬಹು ಅವಶ್ಯಕ.

SCOTT'S EMULSION 2-26

(ಸ್ಕಾಟ್ಸ್ ಇಮಲ್ಷನ್)

ಎಂಬೀ ಔಷದವು ಈ ಕುರುಹುಗಳನ್ನು ಹೋಗಲಾಡಿಸುವದು

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ.

ಕೈಯಿಂದ ಮುಟ್ಟದೆ ತಯಾರಿಸಿದ್ದಲ್ಲ.

ಎಲ್ಲಾ ಔಷಧ ವ್ಯಾಪಾರಿಗಾರರಲ್ಲೂ ದೊರಕುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ಎದ್ದೆಯುಳ್ಳವ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ದಾಯಾರಿಕೆ, ಬೇಳಿ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು, ಮರವು, ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [142-52]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೪—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು ಅಥವಾ ಡೋನ್ಸ್, ೩ ೬ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು

ಬಹುಮತಿ ಗಡಿಯಾರ.

19 ಸಾಮಾನುಗಳು ಬಹುಮತಿ ಸಹಿತ ರೂ 3-15-0

ಇದರಲ್ಲಿ ನಮೂದಿಸಿ ಇರುವ 7 0 0 ರೂಪಾಯಿನ ಗಡಿಯಾರವನ್ನು ಬರುವ ಡಿಸೆಂಬರ್ ಆಖೈರ್ ಒಳಗೆ ತರಿಸಿಕೊಳ್ಳುವವರಿಗೆ 3 15 0 ಗೆ 19 ಬಹುಮಾನಗಳು ಉಚಿತವಾಗಿ ಕೊಡುತ್ತೇವೆ ಉತ್ತರ ಮುಖ ಸ್ಪಟಿಕ ದರ್ಪಣ ಸಾಮಾನ್ಯ ಪ್ರಮಾಣ ಸಂಕೋಚಿತ ಪರಿವರ್ತನ ಉಳ್ಳ ಗಡಿಯಾರವು 30 ವರುಷಗಳವರೆಗೆ ಚೆನ್ನಾಗಿ ನಡೆಯುತ್ತ ಇದನ್ನು ತರಿಸಿಕೊಳ್ಳುವರಿಗೆ ಕೊಡುವ ಬಹುಮಾನಗಳ ವಿವರ—1 ಚಂದ್ರಕಾಂತಿ ಕನ್ನಡಕ, 2 ಚುನ್ನಡಿ ರವಕೆ ಕಣ, 3 ವ್ಯಾಚಕ್ ಪೇನಾ ಕತ್ತಿ, 4 ಪನಳದ ಸರ, 5 ತಲೆಗೆ ಹೆಂಗಸರು ಇಡುವ ಬ್ರೋಚು, 6 ಹಣದ ಚೀಲ, 7 ಬ್ಲೂಬ್ಲಾಕ್ ಶಾಯಿಪೊಟ್ಟ, 8 ರೆಡ್ ಇಂಕ್ ಪೊಟ್ಟ, 9 ಮಾರ್ಕಿಂಗ್ ಇಂಕಿ ಶೀಷೆ, 10 ಭಂಗಾರದ ಗಿಲೀಟಿನ ಕೈಕಪ್ಪು 11 ಗಡಿಯಾರ ಸರಪಣಿ 12 ಎಲೆಕ್ಟ್ರಿಕ್ ಭಂಗಾರದ ಡೈಮಂಡಿಗೆ ಹೂವು, 13 ಇಮಿಟೇಷನ್ ಡೈಮಂಡ್ ಷರಟು ಗುಂಡಿ, 14 ಜರ್ಮನ್ ಬೆಳ್ಳಿ ಕುಂಕುಮ ಭರಣಿ, 15 ಡಿಟ್ಟೋ ಸಾದಿನ ಬಿಪ್ಪು, 16 ಡಿಟ್ಟೋ ಕಣ್ಣುಕಪ್ಪಿನ ಭರಣಿ 17 ಡಿಟ್ಟೋ ನಶ್ಯದ ಡಬ್ಬಿ 18 ಡಿಟ್ಟೋ ಹಾಲಿನ ಒಳಲೆ, 19 ಇಮಿಟೇಷನ್ ಡೈಮಂಡ್ ಮೂಗುಬಟ್ಟು — [173-2]

ಈ ಕೆಳಗಿನ ಸಾಮಾನುಗಳು ಸಹ ನಮ್ಮಲ್ಲಿ ದೊರೆಯುತ್ತೆ

ಪದಕ ಸಹಿತ ನಾಲ್ಕು ಎಳೆಯ ಇಮಿಟೇಷನ್ ಮುತ್ತಿನ ಕಂಠಿ	1 4 0
ಪದಕವಿಲ್ಲದ್ದು	0-10-0
ಮಧುರೆ ಚುನ್ನಡಿ ಸೀರೆ 1 ಕ್ಕೆ	2- 1 0

ರೈಲ್ವೇ ರೆಗ್ಯುಲೇಟರ್ ಗಡಿಯಾರ 1 15-0, ರಾಸ್ಕೋಪು ಗಡಿಯಾರ 1 12-0 ಕೈಯಲ್ಲಿ ಕಟ್ಟುವ ಬೆಳ್ಳಿ ಗಡಿಯಾರ 3-14 0, ಕೈಯಲ್ಲಿ ಕಟ್ಟುವ ಚಿನ್ನದ ಗಡಿಯಾರ ರೂ 15-0-0, ಬ್ರಿ॥ ಟೈಂಪೀಸು 2-12-0, ಜರ್ಮನ್ ಜೇಬುದೀಪ 1-10-0, ಎಲೆಕ್ಟ್ರಿಕ್ ದೀಪ ದೊಡ್ಡದು 3-14-0, ಚಿಕ್ಕದು 2-1 0

ನಮ್ಮ ವಿಳಾಸ—ಏಕಾಂಬರಂ ಕಂಪನಿ,
ಸೆಕೆಂಡ್ ಲೈನ್ ಬೀಚು, ಮದರಾಸು

ಗೃಹಕೃತ್ಯದ ನೋಟೀಸ್.

ಮೈಸೂರು ತಾಲ್ಲೂಕು ಕದಕೊಳದ ಹೋಬಳಿ ಶ್ಯಾನುಭೋಗ ನಂಜಪ್ಪನ ಮಗ ದ್ಯಾವಣ್ಣನು ತಿಳಿಸುವದೇನೆಂದರೆ—ನಂಜನಗೂಡು ತಾಲ್ಲೂಕು ಚಿಕ್ಕಯ್ಯನ ಛತ್ರದ ಹೋಬಳಿ ಏಚಗಳ್ಳಿ ಗ್ರಾಮದಲ್ಲಿ ಬಸ್ತಿ ದೇವಸ್ಥಾನಕ್ಕೆ ಹೋಗುವ ರಸ್ತೆಗೆ ಪೂರ್ವಭಾಗದಲ್ಲಿರುವ ಪಂಜಪಿರ್ನ್ ಬಾಗತಗಳ್ಳಿ ಶಿವಲಿಂಗಯ್ಯನಿಂದ ನಮ್ಮ ಸ್ವಾನಂದ ತ್ರೀಕಂಠಯನ ಹೆಸರಿಗೆ ಕ್ರಯವಾಗಿ ನಾವುಗಳು ಅಂದರೆ ನಮ್ಮ ಅಣ್ಣ ಫವತಿಯಾಗಿ ಆತನ ಮಗ ರಾಮಚಂದ್ರಯ್ಯನು, ನಾನು, ನನ್ನ ತಮ್ಮ ನಾಗಪ್ಪ ಇವರಿಗೆ ಸಹ ಈ ತರೀ ಜಮೀನ್ ಹಿಸ್ಸೆ ಆಗಿವೆ ಈ ಹಿಸ್ಸೆಗೆ ರಾಮಚಂದ್ರಯ್ಯನು ಪವತಿ ಈ ರಾಮಚಂದ್ರಯ್ಯನ ತಾಯಿ ನಾಗಮ್ಮನು ಜೀವನಾಂಶಕ್ಕೆ ಮಾತ್ರಕ್ಕೆ ಹಕ್ಕುದಾರಳಾಗಿದ್ದುಕೊಂಡು ಮೇಲ್ಕಂಡ ಸ್ವತ್ತನ್ನು ಕ್ರಯ ಭೋಗ್ಯ ಆಧಾರ ಮುಂತಾದ್ದನ್ನು ಇತರರ ದುರ್ಬೋಧನೆಯಿಂದ ಮಾಡುವದಾಗಿ ಕೇಳುತ್ತೇನೆ. ನಮ್ಮಗಳ ಸಮ್ಮತಿ ಇಲ್ಲದೆ ಹಾಗೆ ಮಾಡಿಕೊಂಡದ್ದಾದರೆ ಅದು ಊರ್ಜಿತವಾಗುವದಿಲ್ಲ ನಮ್ಮಗಳ ಎಲ್ಲಾ ನಷ್ಟಕ್ಕೂ ಗುರಿಯಾಗುತ್ತೀರೆಂದು ಇದರಿಂದ ಎಚ್ಚರಿಸಿದೇನೆ [176 1] ದ್ಯಾವಣ್ಣನ ರುಜು

ಬೋಧಕರ ಸಹಾಯವಿಲ್ಲದೆ ಹಾರಮೋನಿಯಂ ಕಲಿಯುವ ಪುಸ್ತಕ.

ಕ್ರಯ 0-8-0

ಇದು ಪ್ರಖ್ಯಾತಿಯನ್ನು ಪಡೆದ ಪಂಡಿತ ಮಿತ್ರದಾಸ್‌ರವರಿಂದ ಪಂಡಿತರಿಗು ಮತ್ತು ಪಾಮರರಿಗೂ ಉಪಯೋಗವಾಗುವ ಉದ್ದಿಶ್ಯ ಈ ನೂತನ ಗ್ರಂಥವನ್ನು ಪ್ರಚುರಿಸಲ್ಪಟ್ಟಿರುತ್ತೆ ಇದರಲ್ಲಿ ಈ ಪಾರಸೀಹಾಡುಗಳು ಮತ್ತು ಹಾರಮೋನಿಯಂ ನುಡಿಸುವ ವಿಧಾನ, ಆರೋಹಣ ಅವರೋಹಣಗಳು, ಮತ್ತು ಸೌಖ್ಯ ಗುರ್ತು ಮೊದಲಾದವುಗಳು ವಿರಳವಾಗಿ ತಿಳುಹಿಸಲ್ಪಟ್ಟಿರುತ್ತೆ ಸ್ವಲ್ಪ ಆಂಗ್ಲೇಯ ಭಾಷಾ ಪರಿಶ್ರಮವಿರುವವರೆಲ್ಲರೂ ಈ ಗ್ರಂಥದ ಸಹಾಯದಿಂದ ಬೋಧಕರ ಸಹಾಯವಿಲ್ಲದೆ ಬಹು ಸುಲಭವಾಗಿ ಹಾರಮೋನಿಯಂ ನುಡಿಸುವದನ್ನೂ ಅನ್ಯದೇಶ ಭಾಷೆಯೂದ ಫಾರಸೀ ಹಾಡುಗಳನ್ನೂ ಬಹು ಸುಲಭವಾಗಿ ಕಲಿತುಕೊಳ್ಳಬಹುದು ಈ ಪುಸ್ತಕ ಸ್ವಲ್ಪವೇ ಇರುವದರಿಂದ ಜಾಗ್ರತೆ ದರಖಾಸ್ತು ಕಳುಹಿಸಿ.

ನಮ್ಮ ವಿಳಾಸ —ಲಸಿ ಅಂಡ್ ಕೋ,
[140-4] ನಂ. 16 ರಡ್ಡಿ ರಾಮನ ಬೀದಿ, ಮದರಾಸು.

ಅಮೆರಿಕಾ ದೇಶದ ಇಮಿಟೇಷನ್ ವಜ್ರದ ಆಭರಣಗಳು.

ಇವು ಪ್ರಖ್ಯಾತಿಯನ್ನು ಪಡೆದ ಮರ್ಕಾಟ್ ಹೆಸರುಳ್ಳದ್ದು ಎಷ್ಟು ವರ್ಷಗಳಾದರೂ ಕೆಡುವದಿಲ್ಲ ಭಾಗ್ಯವಂತರೂ ಸಹ ಉಪಯೋಗಿಸಲು ಲಾಯಖಾದದ್ದು ರಾತ್ರಿಯಲ್ಲಿ ಬೆಂಕಿಯಂತೆ ಪ್ರಕಾಶಿಸುತ್ತದೆ ಮಂಗಳ ಮುಹೂರ್ತಗಳಲ್ಲಿ ಬಹಳ ಉಪಯೋಗವಾದದ್ದು ಕಮ್ಮಲು ಜೊತೆ 1 ಕ್ಕೆ 1-10 0, ಹತ್ತಕಡಳು ಜೊತೆ 1 ಕ್ಕೆ 1 6-0 ಕುರುಟುಬಾವಲಿ ಜೊತೆ 1 ಕ್ಕೆ 1-12-0, ಮೂಗುಬಟ್ಟು 1 ಕ್ಕೆ 5 ಆ.; ಬೇಸರಿ 1 ಕ್ಕೆ 10 ಆ , ಬುಲಾಕು 1 ಕ್ಕೆ 1 0 0, ಚಿನ್ನದ ಗಿಲ್ಟು ಸಾಮಾನುಗಳು ಪೇಟೋವಾರಿ ಕೆಲಸ ಪಚ್ಚೆಕಲ್ಲಿನ ಜಡೆಬಿಲ್ಲೆ ದೊಡ್ಡ ರಂಮು 1 ಕ್ಕೆ 1-8-0, ಚಿಕ್ಕ ರಂಮು 1 ಕ್ಕೆ 1-0 0, ಗಟ್ಟಿ ಕಟ್ಟದ ಜಡೆಕುಚ್ಚು 1 ಕ್ಕೆ 2-0-0, ಚಿನ್ನದ ಗಿಲ್ಟು ಗೆಜೆ ಡಾಬು 1 ನಂಬರು 4-0 0, 2 ನಂ 3 0 0 ಜರ್ಮನ್ ಸಿಲ್ವರ್ ಗೆಜೆ ಡಾಬು 1 ನಂ 1 8 0, 2 ನಂ 2-8 0, ಚಂದ್ರಹಾರ 5 ಎಳೆಯುಳ್ಳದು 1-0 0, 4 ಎಳೆಯುಳ್ಳದ್ದು 3-0 0, 3 ಎಳೆಯುಳ್ಳದು 2 8-0, ಇವು ಅಲ್ಲದೆ ಎಲೆಕ್ಟ್ರಿಕ್ ಚಿನ್ನದ ಗಿಲ್ಟು ಹಾಕಲ್ಪಟ್ಟ ಎಲ್ಲಾ ತರದ ಆಭರಣಗಳು ಸಿಕ್ಕುತ್ತವೆ ಇಮಿಟೇಷನ್ ನಾಲ್ಕು ಎಳೆ ಮುತ್ತಿನ ಕಂಠಿ ಪದಕ ಸಹಿತ 1-4-0, ಪದಕವಿಲ್ಲದ ಹಾರ 1 ಕ್ಕೆ 10 ಆ [178 1]



ವಿಳಾಸ.—ಎ ಮುನಿಸಾಮಿನಾಯುಡು,
ಜ್ಯೂಯಲ್ ಮರ್ಚೆಂಟ್, ನಂ 1,
ಆರುಮುಗಂಚೆಟ್ಟಿ ಸ್ಟ್ರೀಟ್ ತಿರುವಲ್ಲಿಕ್ಕೇಣಿ, ಮದರಾಸ್

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಸ್ಟರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 4 ಆಣೆ



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾದದ್ದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸ ಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ ಕೊಡ್ಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,
[129-11] ಪೋಸ್ಟ್ ಬಾಕ್ಸ್, ನಂ 167, ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೇಸ್ ಲಿವರ್ ಚಿಕ್ಕ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸು ಬಹು ಬಲವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 5 0-0 ಇದನ್ನು ಸೆಪ್ಟೆಂಬರ್ ಆಖೈರೊಳಗೆ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ಧನಲಕ್ಷ್ಮಿ ಅಂಡ್ ಕಂಪೆನಿ,
[129-11] ಸಾಹುಕಾರ್ ಪೇಟೆ ಪೋಸ್ಟು, ಮದರಾಸು

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs. OAKES & Company, Mount Road, Madras,

[4-44] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. H. Gulliford, Proprietor and Manager, Wesleyan Mission Press, Mysore 1/9/1918.

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸರ್ ೧೯೧೩ ನೇ ಇಸವಿ ಸೆಪ್ಟೆಂಬರ್ ತಾರೀಖು ೧೧ ನೇ ಗುರುವಾರ. ಸಂಚಿಕೆ ೧೫

ಹೊಸ ಕಾದಂಬರಿಗಳು.

ಕುಮುದಿನಿ—ಬಂಗಾಳಿಯಿಂದ ಕನ್ನಡಿಸಲ್ಪಟ್ಟ ಪ್ರೇಮಾಂಕುರ ಕಥೆ ಯುಕ್ತಿಯುಕ್ತವಾದದ್ದು 6 ಆಣೆ ನಿಬರ್ಗ್ಯಚಾಣಿಕ್ಯ—ಇದೂ ಮೇಲಿನ ಕಥೆಯಂತೆಯೇ ಮನೋಹರವಾದದ್ದು ಪೇಷ್ವೆ ವಿಷಯಾಸಕ್ತಿ ನಡೆವಳಿಕೆಗಳು ಹೃದಯಂಗಮವಾಗಿ ವರ್ಣಿಸಲ್ಪಟ್ಟಿವೆ 6 ಆಣೆ ಸಂತಾಪಕ—ಈಗಿನ ನಾಟಕಗಳಲ್ಲಿ ಪ್ರಸಿದ್ಧವಾದ "ಸರುಪಮಾ" ಎಂಬ ನಾಟಕದ ಕಥಾರೂಪವಾದ ಗ್ರಂಥ ಇದನ್ನೋದುವುದಕ್ಕೆ ಕುಳಿತರೆ ಮುಗಿಸುವವರೆಗೂ ಬಿಡಲು ಮನಸ್ಸಾಗುವುದಿಲ್ಲ 8 ಆಣೆ [187 10]

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

"ವೃತ್ತಾಂತಪತ್ರಿಕೆ" ಏಜಂಟರಿಗೆ ನೋಟೀಸ್.

ವೃತ್ತಾಂತ ಪತ್ರಿಕೆಯ 1913-14 ನೇ ವರುಷದ ಒಂದನೇ ಕ್ವಾರ್ಟರು ಕಳೆದ ಆಗಸ್ಟ್ ತಿಂಗಳಿಗೆ ಪೂರೈಸಿದೆ ಏಜಂಟರು ಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಮುಗಿಸಿ, "ಬಿ" ಫಾರಂಗಳಿಗೆ ಎತ್ತಿ ಬರೆದು, ತಮ್ಮ ತಮ್ಮ ಸೂಪರ್ವೈಸರುಗಳಿಗೆ ಒಂದು ಪ್ರತಿಯನ್ನೂ ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃತಪಡಿಸಿದೆ

ಮ್ಯಾನೇಜರ್, ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು

ಕನ್ನಡ
ಇಂಡಿಯನ್ ಪೆನಲ್ ಕೋಡ್.

160 6

ಇಂಡಿಯಾ ಗೌರ್ನರ್ ಜನರಲ್‌ರವರಿಂದ ಮುಂಜೂರಾದ ಈ ಆಕ್ಟನ್ನು ಮೈಸೂರ್, ಬೊಂಬಾಯಿ, ಮದ್ರಾಸ್, ಅಲಹಾಬಾದ್ ಮುಂತಾದ ಅನೇಕ ಹೈಕೋರ್ಟುಗಳ ಅಭಿಪ್ರಾಯಗಳ ಟಿಪ್ಪಣಿ ಸಹಿತ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟಗಳಿಂದ ಬಿಡುಗಡೆಯಾಗಿರುವರು ಇದು ಮುಖ್ಯವಾಗಿ ಪೋಲೀಸ್, ಮ್ಯಾಜಿಸ್ಟ್ರೇಟರು ಅಧಿಕಾರಿಗಳಲ್ಲಿಯೂ, ಲಾಯರುಗಳಲ್ಲಿಯೂ, ಪಟೇಲ್ ಶ್ಯಾನುಭೋಗರುಗಳಲ್ಲಿಯೂ, ಇತರ ಮುಖ್ಯ ಜನಗಳಲ್ಲಿಯೂ ಇರಬೇಕಾದದ್ದು ಅತ್ಯಂತ ಅವಶ್ಯಕವಾದದ್ದು ಕ್ರಯ ಗ್ಲೇಜ್ ರೂ 2 8-0 ರಫ್ ರೂ 2 0 0 ಟಪ್ಪಾಲ್ ಚಾರ್ಜು 0 1 0

ವಿಳಾಸ:-ಬಿ ನರಸಿಂಗರಾವ್, ಎಡಿಟರ್,
(ಲಾ) ಗಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 4 ಆಣೆ



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರ್ಮಾಡಲ್ಪಟ್ಟದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ತಪ್ಪದೇ ನಡೆಯುತ್ತದೆ ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ ಕೊಳ್ಳೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,

[129 12] ಪೋಸ್ಟ್ ಬಾಕ್ಸ್, ನಂ 167, ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೇಸ್ ಲಿವರ್ ಚಿಕ್ಕ ಸೈಜು ಕಂಪೆನ್ಸೇಷನ್ ಬ್ಯಾಲೆನ್ಸು ಬಹು ಬಲಿಷ್ಟವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 5 0-0 ಇದನ್ನು ಸೆಪ್ಟಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡಬೇಕಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ಧನಲಕ್ಷ್ಮಿ ಅಂಡ್ ಕಂಪೆನಿ,

[128-12] ಸಾಹುಕಾರ್ ಪೇಟೆ ಪೋಸ್ಟು, ಮದರಾಸು

ನಮೂನೆ ಮುಫತ್ತು

ಕೇಶಕುಸುಮಾಕರ ತೈಲವು.

ನಾಟಿಯುಳ್ಳ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿ ಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸಮಾಡುವದರಲ್ಲಿಯೂ, ಒಟ್ಟು ತಲೆಯಲ್ಲಿ ಕೇಶವನ್ನು ಬೆಳೆಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ, ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುಡ್ಡಿ ತೈಲ ಕ್ರಯ 10 ಆಣೆ ಮೂರು ಬುಡ್ಡಿಗಳ ತೈಲ ಕ್ರಯ ರೂ 1-12 ಆ ಆರು ಬುಡ್ಡಿಗಳ ತೈಲ ಕ್ರಯ ರೂ 3-4 ಆ ಡಜನ್ ಬುಡ್ಡಿಗಳ ಕ್ರಯ ರೂ 6

ವಿ ಪಿ ಅಂಚೆ ಹಾಸಲು ಪ್ರತ್ಯೇಕ.

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ

[83 20] ಔಷಧಾಲಯ, 177 ಚೈನಾ ಬಜಾರ್ ರೋಡ್, ಮದ್ರಾಸು

ಅಸಲ್ ಸವರನ್ ಭಂಗಾರದ ನಗಗಳು

ಈ ನಗಗಳನ್ನು ಅಗಶಾಲೆ ನಾವು ನಿಪುಣರಾದ ಮತ್ತು ಪ್ರಸಿದ್ಧಿ ಹೊಂದಿದ ಅಗಸಾಲೆಯವರಿಂದ ನೂತನ ನಮೂನೆಯಲ್ಲಿ ನೇತ್ರಾನಂದಕರವಾಗಿ ಸ್ವಂತ ಮುತುವರ್ಜಿಯಿಂದ ತಯಾರ್ಮಾಡಿಸುತ್ತೇವೆ ಸವರನ್ ಭಂಗಾರಕ್ಕೂ ಮತ್ತು ಪುಷ್ಯರಾಗಕ್ಕೂ ನಾವು ಗ್ಯಾರಂಟಿ ಕೊಡುತ್ತೇವೆ ಹಾಗಿಲ್ಲದ ಪಕ್ಷದಲ್ಲಿ ಹಣವನ್ನು ವಾಪಸ್ ಮಾಡಲ್ಪಡುತ್ತೆ. ಬಹು ಸುಂದರವಾದ ನಮೂನೆ, ಸಜ್ಜನರು ತರಿಸಿಕೊಂಡು ಉಪಯೋಗಿಸುವಂತೆ ಸಾಧ್ಯವಾದ ಮಟ್ಟಿಗೂ ಬಹು ಸುಲಭ ಕ್ರಯವನ್ನು ನಮೂದಿಸಿರುತ್ತೇವೆ ಪ್ರತಿ ಒಬ್ಬರು ತೆಗೆದುಕೊಂಡು ಉಪಯೋಗಿಸಿ ಸಂತೋಷಪಡಬೇಕಾಗಿ ಪ್ರಾರ್ಥನೆ [77 21]

ಅರ್ಧಚಂದ್ರ 1 ಕ್ಕೆ ರೂಪಾಯಿ	6 0 0
ನಂ 1 ಮೂಗುಬೊಟ್ಟು 1 ಕ್ಕೆ ರೂಪಾಯಿ	7 0 0
,, 2 ಮೂಗುಬೊಟ್ಟು 1 ಕ್ಕೆ ,,	6-0 0
, 3 ಮೂಗುಬೊಟ್ಟು 1 ಕ್ಕೆ ,,	5-0 0
ಬುಲಾಕು 1 ಕ್ಕೆ 12 ರೂ ಲಾಗಾಯತು	25 0 0

ವರೆಗೂ ಇರುತ್ತೆ ಇದು ಅಲ್ಲದೆ ಇಮಿಟೇಷನ್ ಕೆಂಪುಗಳಿಂದಲೂ, ಒಳ್ಳೆ ಕೆಂಪುಗಳಿಂದಲೂ ತಯಾರ್ಮಾಡಿ ಕಳುಹಿಸಲ್ಪಡುವದು ಮತ್ತು ಬೆಳ್ಳಿ ಭಂಗಾರದ ನಗಗಳು ಸಹ ತಯಾರ್ಮಾಡಿ ಕಳುಹಿಸಲ್ಪಡುತ್ತೆ ಬೇಕಾದವರು ಬರೆದರೆ ಜವಾಬು ಬರೆಯುತ್ತೇವೆ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

ವಿಳಾಸ—ಪಿ ಆರ್ ವೆಂಕಟರಮಣ ಅಂಡ್ ಕಂಪನಿ,

ನಂ 7, ಕೋಪ ವೆಂಕಟಾಚಲ್ಯೆಯರ ಬೀದಿ, ಮದರಾಸು

ಶುದ್ಧವಾದ ಹತ್ತಿಯ ತುಪ್ಪವು.

"ಮಿದುಳಿಗೆ ತಂಪು ಕಣ್ಣಿಗೆ ಕಾಂತಿ, ಅರತಲೆ ಶೂಲೆಗಳನ್ನು ನಾಶಮಾಡಿತು!"

(ಶ್ರೀ) ಎಸ್ ಪಿ ಅಳಸಿಂಗ್ರಾಚಾರ್ಯರು, ಮಂತ್ರಗಾರರು ಮತ್ತು ಭಾವಜ್ಞಾನಿ —"ನಿಮ್ಮ ಹತ್ತಿಯ ತುಪ್ಪವನ್ನು ತಪ್ಪದೆ ಉಪಯೋಗಿಸುತ್ತಿದೇನೆ ಮಿದುಳಿಗೆ ಬಹಳ ತಂಪು ಕಣ್ಣಿನ ಉರಿಯನ್ನು ಗುಣಮಾಡಿ, ಸುಖನಿದ್ರೆಯನ್ನೂ ಗಾಢನಿದ್ರೆಯನ್ನೂ ಕೊಡುತ್ತದೆ ಅರತಲೆ ನೋವನ್ನು ನಾಶಮಾಡುತ್ತದೆ ಈ ಕಾರಣಗಳಿಂದ ಇದನ್ನು ಸರ್ವರೂ ಉಪಯೋಗಿಸಬೇಕೆಂದು ಹೇಳುತ್ತೇನೆ" 21 6 1913

ಎಚ್ಚರಿಕೆ '—ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ. [110-15]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

150, ತಿಲಾರಿ ರೋಡ್, (ಕುಂಬಾರಪೇಟೆ), ಬೆಂಗಳೂರು ಸಿಟಿ.

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತು ಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣ ಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಕಚಕಿಸುವವು, ನಿಬಿಡವಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದು ಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ ಹುಂಡಿನ ಹೊಟ್ಟನ್ನು ಅಡಗಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ ಇದರ ಬೆಲೆ 1 ಸೀಸೆಗೆ ರೂ 1 0-0 ಅಂಚೆಯ ವೆಚ್ಚ 0 4-0 ಬೇರೆ ತರಬೇಕು

3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಮೈಸೂರು ಎಗ್ಸಿಬಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಸಿಬಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ಮನ್ನಾರ್‌ಗುಡಿ ಮಿಷನ್ ಸೆಕ್ರಿಟರಿ ಮಿ|| ಡಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಪಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕೆಫಾಯತುಕೊಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕೆಪಿಟೋಬಾಮ್"—ಮಳೆ ಮತ್ತು ಚಳಿಯ ಥಂಡಿ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ನೋಯುವುದು, ಸಂಧುವಾತ, ಮಸ್ತಕಶೂಲೆ, ಪೆಟ್ಟಾಗಿ ಮೈಹಸ್ತ ಪಟ್ಟದ್ದರಿಂದ ಕ್ಷೀಣವಾಗುವದು, ಸೊಂಟನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ ಬಾಟ್ಲಿ 1ಕ್ಕೆ ಕ್ರಯ 0 8 0 ಟ ಪಿ ಪ್ರತ್ಯೇಕ

ಒಡಮನ್ಸಮಲೇರಿಯ ಪಿಲ್ಸ —ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅ ಜ ರ ಮತ್ತು ಒಂದೇ ಸಮನೆ ಬಿಡದೆ ಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿವೆ ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ ಇದು ದೇಶದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ ದಫೆಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದ್ದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1-0-0 3 ಬಾಟ್ಲಿಗಳಿಗೆ ರೂ 2 8-0 ವಿ ಪಿ ಖರ್ಚು ಪ್ರತ್ಯೇಕ

ಏಜೆಂಟ್, ದಿ ಉಲ್‌ನ್ ಮಾರ್ಟ್, ಮಂಗಳೂರು

ಮೇಲೆಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ — [8-35]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೇ ಸಂಘದ ಆದೇಶಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್‌ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭದ್ರತೆಯ ಜೀವನಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[109-1೦] ಎನ್ ಕಟ್ಟೂರ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್ ಬೆಂಗಳೂರು ಸಿಟಿ

ಕುಂತಳಾನಂದ ತೈಲವು

147 ೨1

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ನೀಗಗೊಳಿಸುತ್ತದೆ ಸದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ

ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಪಿ ಎಮ್ ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ —1 ಪಿನಲ್‌ಕೋಡು, 2 ದೊಡ್ಡಿ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ವಿಷವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್ 7 ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ ವಿವಾಹಗಳ ರೆಗ್ಯುಲೇಷನ್, 9 ಕೃಷಿ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ

ಪ್ರತಿ ಪಿನಲ್ ಸೆಕ್ಷನ್‌ಗೂ —ವಿಚಾರಣೆಯಾಗತಕ್ಕ ಕೋರ್ಟು ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ? ಯಾ ಕೂಡದೆ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟ್ಟಬೇಕೇ? ಜಾಮೀನ್ ತೆಗೆದುಕೊಳ್ಳಬಹುದೆ? ಯಾ ಕೂಡದೆ? ರಾಜಿಯಾಗಬಹುದೆ? ಯಾ ಕೂಡದೆ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 22 5 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 2 0 0 ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ವೇಮಾರೆಡ್ಡಿ,

ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್,

[103 1?] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್

ಹೊಸದಾದ ಹರ್ಸ ಹತ್ತಿಯ ತುಪ್ಪವು.

ಈಗತಾನೇ ಮೈಸೂರು ಸೀಮೆಗೆ ಪ್ರವೇಶ!

ಇದನ್ನೇ ತೆಗೆಯಬೇಕೆಂದು ಗಿರಾಕಿಗಳ ಉದ್ದೇಶ!!

ಇದನ್ನೇ ಪ್ರಚುರಪಡಿಸಬೇಕೆಂದು ನಮ್ಮ ಆವೇಶ!!!

ಒಂದು ಸಾರಿ ತರಿಸಿ ಉಪಯೋಗಿಸಿದಲ್ಲಿ ಇದರ ಅನುಭವವೂ, ಗುಣವೂ ನಿಮಗೆ ತಿಳಿಯಲು ಸಂದೇಹವಿಲ್ಲ ಅನಂತರ ಯಾವಾಗಲೂ ಇದನ್ನೇ ಅಪೇಕ್ಷಿಸುವಿರೆಂದು ಖಂಡಿತವಾಗಿಯೂ ಭರವಸೆ ಕೊಡುವೆವು ಮೈಸೂರು ಸೀಮೆಯ ಎಂಟು ಡಿಸ್ಟ್ರಿಕ್ಟುಗಳಿಗೂ ಸೋಲು ಏಜೆಂಟರುಗಳು ಬೇಕಾಗಿದೆ ವ್ಯಾಪಾರಸ್ಥರೇ ಅರ್ಜಿಗಳನ್ನು ಈ ಕೆಳಗಿನ ವಿಳಾಸಕ್ಕೆ ತಾ 31 9 1913 ರೊಳಗೆ ಹಾಕಿಕೊಳ್ಳತಕ್ಕದ್ದು ಈ ತುಪ್ಪವನ್ನು ಬೊಂಬಾಯಿ ಸರ್ಕಾರದ ಅಗ್ರಿಕಲ್ಚರಲ್ ಕೆಮಿಸ್ಟ್ ಹೆರಾಲ್ಡ್ ಹಚ್ ಮ್ಯಾನ್‌ರವರು ರಸಾಯನ ಶಾಸ್ತ್ರರೀತ್ಯಾ ಪರಿಶೋಧಿಸಿ, ಈ ಹತ್ತಿಯ ತುಪ್ಪವು ಇಂಡಿಯಾ ದೇಶದಲ್ಲಿ ತಯಾರಿಸಿರುವದರಲ್ಲಿ ಪ್ರಾಮುಖ್ಯತೆಯನ್ನು ಹೊಂದಿದೆ ಇದರಲ್ಲಿ ಏನೂ ಕಲ್ಮಷ ಇರುವದಿಲ್ಲ ಶುದ್ಧವಾಗಿದೆ ಬಹಳ ಮಡಿ ಹರವಾದ ಆಹಾರ ಅಮೇರಿಕಾ ದೇಶದಲ್ಲಿ ತಯಾರಿಸಿರುವಂತೆಯೂ ಅಥವಾ ಇಂಗ್ಲಿಷರು ತಯಾರಿಸಿರುವಂತೆಯೂ ಈ ತುಪ್ಪವು ಇದೆ ಎಂದು ಹೇಳಿದಾರೆ ಒಳ್ಳೆಯ ಹತ್ತಿಕಾಳಿನ ಹಿಂಡಿಯೂ ಸಹ ನಮ್ಮಲ್ಲಿ ದೊರೆಯುತ್ತ

ವಿಳಾಸ —ಆರ್ ಕೆ ಯಳಂದೂರು ಮತ್ತು ಕಂಪನಿ,

[171 3] ಸೋಲ್ ಏಜಂಟ್ಸ್, ದಾವಣಗೆರೆ

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೈನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು

1 37

ಕೆಳ ಹೊಟ್ಟೆಯ ನೋವು ಎರೆ ಬೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲಿಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಉತ್ತಮವಾದ ಶೈಲಿ! ಸರಳವಾದ ಮಾತುಗಳು!!

ವಿಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕಮಹಾಶಯರುಗಳೇ!—ಸೂಕ್ಷ್ಮತೆಯು ಬೇಕಾದರೆ, ಪಾತ್ರ್ಯಪರಿಪೋಷ್ಯವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆಪಟ್ಟರೆ ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರ ಜಾಣತನವನ್ನಪೇಕ್ಷಿಸಿದರೆ, ಉತ್ಸಾಹ ಶಕ್ತಿಯಲ್ಲಾಶೆಯಿದ್ದರ ದಯವಿಟ್ಟು ಈ ವಿದ್ಯಾಮಂಜರಿ ಕಥೆಗಳನ್ನು ಓದಿ ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ ಬೆಲೆ ರೂ ೧-೪-೦ ಮಾತ್ರ ಈಗಲೇ ಬರೆಯಿರಿ [167-5]

ವಿಳಾಸ.—ಎಂ. ಆರ್ ವೆಂಕಟಾಚಲಂ ಶೆಟ್ಟಿ, ಬುಕ್ಕು ಡಿಪ್ಪೋ, ಚಿಕ್ಕ ಪೇಟೆ, ಬೆಂಗಳೂರು ಸಿಟಿ

ಸಮಸ್ತ ವಿಧವಾದ ನೋವೂ ಇರಿತವೂ ನಿಮಗೆ ವಾಸಿಯಾಗಬೇಕೋ!

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಬೆನ್ನಿನ ಸೆಳೆತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ನಾಶಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ಬಿಕರಿಯಾಗುತ್ತಲಿವೆ ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ವಿಕ್ರಯಿಯಾಗುವದು

ಹುಳಕಡ್ಡಿ ಔಷಧ ಡಬ್ಬಿಗೆ ೬ ಆಣೆ, 12 ಕುಪ್ಪಿಗೆ ರೂ 1 8-0 ಹಲ್ಲುಪುಡಿ ಡಬ್ಬಿಗೆ 3 ಆಣೆ, 12 ಕುಪ್ಪಿಗೆ ರೂ 1-2-0 ವಿ ಪಿ ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ [42-23]

ವಿಳಾಸ —ಅಮೃತಾಂಜನ ಡಿಪ್ಪೋ, ೧೯ ಫ್ರೇಯರ್ ರೋಡ್, ಫೋರ್ಟ್, ಬೊಂಬಾಯಿ

ಡೋಂಗರೆ ಇವರ ಬಾಲಾಮೃತ.

[150 8

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದದ್ದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋದು, ಹೊಟ್ಟೆಯು ದೊಡ್ಡದಾಗಿರೋದು, ಅಸ್ಥಿಗಳು ಕಡ್ಡಿಯಂತೆ ಇರೋದು, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತು ೧೦ ಆಣೆ, ಟಪಾಲ್ ಖರ್ಚು ೪ ಆಣೆ

ಕೆ ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು ನೆಗಡಿ, ನಿಶ್ಶಕ್ತಿ, ಅತಿಸಾರ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಸುಖಪ್ರಸೂತಿ, ಮಕ್ಕಳ ಎಳವು ಜ್ವರ, ಸನ್ನಿಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳ ಕುಪ್ಪಿಗೆ 1 ಆಣೆ 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ [179 2]



೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮಾರಿತೆಂದು ತಕ್ಷಣಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರ ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿ ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1 ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವ ಹಾಗೆ ವೇದಶಾಸ್ತ್ರಸಮ್ಮತವಾದ ಧರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (5) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವ ದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1 8 0 ಟಪ್ಪಾಲು ಹಾಸಲು 4 ಆಣೆ

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಕಥಾರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ 4 ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127 12]

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ

THE MYSORE GOVERNMENT SECURITY

LIFE AND MARRIAGE ASSURANCE COMPANY, LIMITED.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES REGULATION No III OF 1895)

CAUTION —Before you go in for a Provident Life or Marriage Policy please ask for a copy of our Company's prospectus which will explain to you the mode of working of the present day provident companies working in India and enables you to select a good institution where your hard earned money will be safe

SPECIAL AND ATTRACTIVE FEATURES OF THE COMPANY

1 ABSOLUTE SECURITY

The Company has got a capital of **one lakh** and its funds are invested in the **Mysore Government** and other approved securities The policy holder's moneys are **guaranteed**, and the **capital** and **reserve funds** of the Company are liable to the same

2 MARRIAGE SCHEME

A policy holder can subscribe from Re 1 to **Rs 6** every month **Double the premiums paid** to the Company will be paid to the married ***on the marriage day*** as maximum bonus.

3 LIFE SCHEME

A policy holder can subscribe from As 8 to **Rs 2** per month Both males and **females** of ages from 18 to **60** are insured **without medical examination** The maximum bonus will be paid to **the policy-holders themselves** on surviving **15 years** or to their nominees in case of their earlier death

WANTED

Energetic and Honest **Chief Agents** for every Presidency in India and Taluk Agents in each and every taluk of **the Mysore Province** on commission to represent the Company

For further particulars and prospectuses please apply **with one anna stamp** and your previous experience in the line to —

Mr M L NAGANNAH,
Managing Agent,
MYSORE.

[161 6]

ಬಹುಮತಿ ಗಡಿಯಾರ.

19 ಸಾಮಾನುಗಳು ಬಹುಮತಿ ಸಹಿತ ರೂ 3 15 0

ಇದರಲ್ಲಿ ನಮೂದಿಸಿ ಇರುವ 7 0 0 ರೂಪಾಯಿನ ಗಡಿಯಾರವನ್ನು ಬರುವ ಡಿಸೆಂಬರ್ ಆಖರ್ ಒಳಗೆ ತರಿಸಿಕೊಳ್ಳುವವರಿಗೆ 3 15 0 ಗೆ 1 ಬಹುಮಾನ



ಗಳು ಉಚಿತವಾಗಿ ಕೊಡುತ್ತೇವೆ ಉತ್ತರ ಮುಖಿ ಸ್ಫಟಿಕ ದರ್ಪಣ ಸಾಮಾನ್ಯ ಪ್ರವಾಸ ಕುಚ ಪರಿವರ್ತನ ಉಳ್ಳ ಗಡಿಯಾರವು 30 ವರುಷಗಳ ವರಿಗೆ ಚೆನ್ನಾಗಿ ನಡೆಯುತ್ತೆ ಇದನ್ನು ತರಿಸಿಕೊಳ್ಳುವರಿಗೆ ಕೊಡುವ ಬಹುಮಾನಗಳ ವಿವರ—1 ಚಂದ್ರಕಾಂತಿ ಕನ್ನಡಕ, 2 ಚಿನ್ನದ ರವಕೆ ಕಣ, 3 ವ್ಯಾಜರ್ ಪೇನಾ ಕತ್ತಿ, 4 ಹವಳದ ಸರ, 5 ತಲೆಗೆ ಹೆಂಗಸರು ಇಡುವ ಬ್ರೂಚು, 6 ಹಣದ ಚೀಲ, 7 ಬ್ಲೂಬ್ಲಾಕ್ ಸಾಯಿಪೆಟ್ಟಿ 8 ವೆಡ್ ಜಂಕ್ ಪೆಟ್ಟಿ, 9 ವಾಕಿಂಗ್ ಸ್ಟಿಕ್, 10 ಬಂಗಾರದ ಗಿಲೀಟಿನ ಕೈಕಪ್ಪು 11 ಗಡಿಯಾರ ಸರಪಳಿ 12 ಎಲೆಕ್ಟ್ರಿಕ್ ಬಂಗಾರದ ಶ್ಯಾಮಂತಿಗೆ ಹೂವು 13 ಇಮಿಟೇಷನ್ ಡೈಮಂಡ್ ಷರಟು ಗುಂಡಿ, 14 ಜರ್ಮನ್ ಬೆಳ್ಳಿ ಕುಂಕುಮ ಭರಣಿ 15 ಡಿಟೋ ಸಾದಿನ ಚಿಪ್ಪು, 16 ಡಿಟೋ ಕಣ್ಣುಕಪ್ಪಿನ ಭರಣಿ 17 ಡಿಟೋ ನಶ್ಯದ ಡಬ್ಬಿ 18 ಡಿಟೋ ಹಾಲಿನ ಬಟ್ಟಲಿ 19 ಇಮಿಟೇಷನ್ ಡೈಮಂಡ್ ಮೂಗುಬಟ್ಟು — [173 3]

ಈ ಕೆಳಗಿನ ಸಾಮಾನುಗಳು ಸಹ ನಮ್ಮಲ್ಲಿ ದೊರೆಯುತ್ತೆ

ಪದಕ ಸಹಿತ ನಾಲ್ಕು ಎಳೆಯ ಇಮಿಟೇಷನ್ ಮುತ್ತಿನ ಕಂಠಿ	1 4 0
ಪದಕವಿಲ್ಲದ್ದು	0 10 0
ಮದುವೆ ಚಿನ್ನದ ಸೀರೆ 1 ಕ್ಕೆ	2 4 0

ರೈಲ್ವೇ ರೆಗುಲೇಟರ್ ಗಡಿಯಾರ 1 15 0 ರಾಸ್ಕೋಪು ಗಡಿಯಾರ 1 12 0 ಕೈಯಲ್ಲಿ ಕಟ್ಟುವ ಬೆಳ್ಳಿ ಗಡಿಯಾರ 3 14 0 ಕೈಯಲ್ಲಿ ಕಟ್ಟುವ ಚಿನ್ನದ ಗಡಿಯಾರ ರೂ 15 0 0, ಬ್ರಿಟ್ಟ್ಪೀಸು 2 12 0 ಜರ್ಮನ್ ಟೇಬಲ್‍ಪೀಸು 1 10 0, ಎಲೆಕ್ಟ್ರಿಕ್ ದೀಪ ದೊಡ್ಡದು 2 14 0, ಚಿಕ್ಕದು 2 4 0

ನಮ್ಮ ವಿಳಾಸ—ಏಕಾಂಬರಂ ಕಂಪನಿ,
ಸೆಕೆಂಡ್ ಲೈನ್ ಬೀಚು, ಮದರಾಸು

ಅಲಭ್ಯಲಾಭ ಅಮೂಲ್ಯಸಮಯ

ವಿಜಯದಶಮಿಯವರೆಗೆ ಮಾತ್ರ!!

ವಿದ್ಯಾ, ಮತ, ನೀತಿ, ಪ್ರಕೃತಿ, ಸ್ತ್ರೀಶಿಕ್ಷಾದಿ ವಿಷಯಗಳನ್ನೊಳಕೊಂಡು ತಿಂಗಳಿಗೆ ಡೆಮ್ಮಿ ೮ ರ ೩೨ ಪುಟಗಳುಳ್ಳ ಸುಂದರ ಮುದ್ರಣದೊಡನೆ ಪ್ರಕಟವಾಗುತ್ತಿರುವ

ಮಧುರವಾಣೀ

ಎಂಬ ಉತ್ತಮ ವರ್ಗದ ಅತ್ಯುತ್ತಮ ಕರ್ನಾಟಕ ಮಾಸ ಪತ್ರಿಕೆಯ ವಾರ್ಷಿಕ ಚಂದಾ ರೂ 1 8 0 ವಿಜಯದಶಮಿಯೊಳಗಾಗಿ ಆರ್ಡರ್ ಕಳುಹಿಸುವವರಿಗೆ ಮಾತ್ರ ಬಹುಮಾನ ಪುಸ್ತಕದೊಡನೆ ಚಂದಾ ರೂ 1 1 0 [180 1]

ವಿಳಾಸ —ಹನುಮಾನ್ ಕಂಪೆನಿ, ಮೈಸೂರು

ಮೂರು ಸಿದ್ಧೌಷಧಗಳು.

ಪಚ್ಚಾ ಸಂಪಕರೀಮಾತ್ರೆ ಮೂಲಿಕೆ ಪರಿಮಳದ್ರವ್ಯಗಳಿಂದ ತಯಾರಿಸಿದೆ ಒಂದನ್ನು ತಾಂಬೂಲದೊಡನೆ ಅಥವಾ ಬರೀ ಬಾಯಿಗೆ ಸೇವಿಸಿದರೆ ದುರ್ಗಂಧ ಹೋಗಿ ಸುವಾಸನೆಯಾಗುತ್ತೆ ರಕ್ತವನ್ನು ಶುದ್ಧಿಮಾಡುತ್ತೆ ಕೆರಳು, ಗಂಟಲು, ಬಾಯಿ, ಇವುಗಳು ಹುಂಡಾದರೆ ಅರ್ಧ ತೊಲಾ ಬಾದಾಮಿ ಎಣ್ಣೆಯಲ್ಲಿ ಒಂದು ಮಾತ್ರೆ ತೇದು ಮಲಗುವ ಸಮಯದಲ್ಲಿ ತೆಗೆದುಕೊಂಡರೆ ಗುಣವಾಗುವದು 200 ಮಾತ್ರೆ ಶೀಸಾ 1 ಕ್ಕೆ 4 ಆಣಾ ಇಸಬು, ಹಿಜ್ಜಿ, ತುರಿ ಇವುಗಳಿಗೆ ಪಾಮಹರಿಣೀ ಪೌಡರ್ ತೋಲಾ 1 ಕ್ಕೆ 2 ಆಣೆ ಬಾಣಂತಿಯರು ಮಕ್ಕಳ ಶೀತ ನೆಗಡಿ ಇವುಗಳಿಗೆ ಉಪಯೋಗಿಸತಕ್ಕ ಕಸ್ತೂರಿಮಾತ್ರೆ 25 ಮಾತ್ರೆಗೆ 8 ಆಣೆ ಬಾಣಂತಿಯರು ಉಪಯೋಗಿಸತಕ್ಕ ಖಂಡಾದ್ರಕವೆಂಬ ಆರೋಗ್ಯದ ಲೇಹ್ಯ 12 ತೋಲಾ ಡಬ್ಬಿಗೆ 6 ಆಣಾ ಅಪೇಕ್ಷಿಸುವರು ತಮ್ಮ ವಿಳಾಸ ವಿವರವಾಗಿ ಬರೆಯಬೇಕು ಅಂಚೆ ಹಾಸಲು ಹಿಂತೆ ತರಿಸಿಕೊಳ್ಳತಕ್ಕವರು ಕೊಡತಕ್ಕದ್ದು 1 ಡಜನ್‍ಗೆ 1 ರೂಪಾಯಿ ಡಿಸ್ಕೌಂಟು ವ್ಯಾಪಾರಸ್ಥರಿಗೆ ಒಳ್ಳೆ ಕಮೀಷನ್ ಮುಂಚೆ ಸ್ವಲ್ಪ ತರಿಸಿ ನೋಡಿ ನಂತರವಾದರೂ ತರಿಸಿಕೊಳ್ಳಿ [131 11]

ನಮ್ಮ ವಿಳಾಸ —ಶೇಷಭಟ್ಟರು,
ನೇಟಿವ್ ಪಂಡಿತ್, ಪೂರ್ಣಯ್ಯನವರ ಬೀದಿ, ಶ್ರೀರಂಗಪಟ್ಟಣ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

22—8—1913 ರಿಂದ 29—8—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು ಪಟ್ಟಣ	1	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	24	15	0	0
ಮೈಸೂರು ,	47	31	8	3
ಕೋಲಾರ್ ,,	7	7	5	4
ಕೋಲಾರ್ ಚಿನ್ನದ ಗಣಿಗಳು	0	1	1	0
ತುಂಕೂರು ಡಿಸ್ಟ್ರಿಕ್ಟು	6	5	6	4
ಹಾಸನ ,	10	17	7	4
ಚಿತ್ರದುರ್ಗ ,	14	12	1	1
ಕಡೂರ್ ,	38	39	1	1
ಶಿವಮೊಗ್ಗ ,	24	8	0	0
ಜುಮ್ಲಾ	190	135	23	17

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ವರ್ಷಋತು ಭಾದ್ರಪದ ಶುದ್ಧ ದ್ವಾದಶಿ ಶುಕ್ರವಾರದಿಂದ ಭಾದ್ರಪದ ಬಹುಳ ಬಿದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಸೆಪ್ಟಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸಿಂಹ ಕನ್ಯ ತೇದಿ
12	ಶುಕ್ರ *	ದ್ವಾದಶಿ	13 17	ಶ್ರವಣ	29 41	28
13	ಶನಿ ‡	ತ್ರಯೋದಶಿ	16-46	ಧನಿಷ್ಠ	34-53	29
14	ಭಾನು	ಚತುರ್ದಶಿ	20 37	ಶತಭಿಷ	40 59	30
15	ಸೋಮ	ಪೌರ್ಣಮಿ	26 12	ಪೂಭಾ	47 30	31
16	ಮಂಗಳ †	ಪಾಡ್ಯಮಿ	31 25	ಉತ್ತಭಾ	54 6	1
17	ಬುಧ ,,	ಬಿದಿಗೆ	36 24	ರೇವತಿ	60 0	2
18	ಗುರು §	ತದಿಗೆ	40 19	ರೇವತಿ	0 13	3

* ಪ್ರದೋಷ ಪರಿವರ್ತನದ್ವಾದಶಿ ಶ್ರವಣದ್ವಾದಶಿ ‡ ಚತುರ್ದಶೀ ತಿಥಿ, ಮಳೆ ನಕ್ಷತ್ರ—ಉತ್ತರ 1 ನೇ ಪಾದ ಪೂರ್ಣತಿಥಿ, ಅನಂತಪದ್ಮನಾಭವ್ರತ, ಉಮಾಮಹೇಶ್ವರವ್ರತಂ ಪೂರ್ಣಿಮಾ ತಿಥಿ, ಚಂದ್ರಗ್ರಹಣ (ಸ್ಪರ್ಶಕಾಲ ಮಧ್ಯಾಹ್ನ ಘಂಟೆ 3 52 ಮೋಕ್ಷಕಾಲ ರಾತ್ರಿ ಘಂಟೆ 7 30 ದಿವಾಭೋಜನಾಭಾವ) † ಅಪರಪಕ್ಷಾರಂಭ, ಮಹಾಲಯಪುಣ್ಯಕಾಲ, ಮಳೆ ನಕ್ಷತ್ರ—ಉತ್ತರ 2 ನೇ ಪಾದ ,, ಪ್ರೋಷ್ಠಪದಿ ಶ್ರೀಯಾ ಭಾನುದ್ವಿತೀಯಾ § ಬೃಹದ್ಗೌರೀ ವ್ರತ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೫ ೬ ೦	೧೭ ೦ ೦
ಕೆಂಬೂತಿ ಅಕ್ಕಿ ಅವಲ್	೧೬ ೪ ೦	೧೭ ೮ ೦
,, ,, ಮಧ್ಯಮ	೧೫ ೧೨ ೦	೧೭ ೦ ೦
ಜಾಪ್ರಾಣಿ ಅಕ್ಕಿ	೧೬ ೦ ೦	೧೬ ೮ ೦
ಸಣ್ಣಕ್ಕಿ ಅವಲ್	೧೭ ೬ ೦	೧೭ ೮ ೦
,, ಮಧ್ಯಮ	೧೬ ೧೨ ೦	೧೬ ೧೨ ೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೧೪ ೧೨ ೦	೧೬ ೪ ೦
,, ಮಧ್ಯಮ ,,	೧೪ ೦ ೦	೧೪ ೦ ೦
ಹೈಕ್ ರಾಗಿ ಪಲ್ಲಾ ೧ಕ್ಕೆ	೭ ೦ ೦	೫ ೧೦ ೦
ಕಾರ್‍ರಾಗಿ ,,	೬ ೨ ೦	೪ ೧೨ ೦
ಜೋಳ ,,	೬ ೬ ೦	೭ ೪ ೦
ಕಲಸಂದೆ ಪಲ್ಲಾ ೧ಕ್ಕೆ	೧೦ ೦ ೦	೧೪ ೦ ೦
ಬಿಳೀ ಅವರೆ ,,	೧೨ ೪ ೦	೧೨ ೦ ೦
ಹೆಸರು ,,	೧೨ ೦ ೦	೧೪ ೦ ೦
ಉದ್ದು ,,	೧೪ ೬ ೦	೧೬ ೮ ೦
ಕಡಲೆ ,,	೧೧ ೮ ೦	೧೩ ೦ ೦
ಎಳ್ಳು ಸೇರು ೧೨೭ಕ್ಕೆ	೨೨ ೦ ೦	೨೪ ೦ ೦
ಹುರುಳಿ ಪಲ್ಲಾ ೧ಕ್ಕೆ	೭ ೩ ೦	೭ ೧೦ ೦
ಹರಳು ೧೨೭ ಸೇರಿಗೆ	೧೨ ೦ ೦	೧೪ ೦ ೦
ಶೀಗೇಕಾಯಿ ಮೂ ೧ಕ್ಕೆ	೨ ೪ ೦	೩ ೬ ೦
ಮೆಣಸಿನಕಾಯಿ ,	೪ ೦ ೦	೩ ೪ ೦
,, ಮಧ್ಯಮ	೩ ೦ ೦	೧ ೮ ೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫ ೦ ೦	ಮಣ ೬ ೪ ೦
ಒಳ್ಳೆಣ್ಣೆ ಮಣ ೧ಕ್ಕೆ	೭ ೨ ೦	೬ ೮ ೦
ಹರಳೆಣ್ಣೆ ,, ,,	೫ ೪ ೦	೬ ೦ ೦
ಕವಡೇಕಾಯಿ ಎಣ್ಣೆ	೬ ೮ ೦	೬ ೪ ೦
ಕೊತ್ತುಂಬರಿ ಪಲ್ಲಾ ೧ಕ್ಕೆ	೪ ೬ ೦	೭ ೪ ೦
ಉಪ್ಪು ,, ,,	೬ ೬ ೦	೬ ೦ ೦
ಹುಣಸೇ ಹಣ್ಣು ಮಣ ೧ಕ್ಕೆ	೧ ೧೨ ೦	೧ ೪ ೦
ತುಪ್ಪ ಮಣ ೧ಕ್ಕೆ	೨೩ ೮ ೦	೨೨ ೮ ೦
ಸೀಮೆಎಣ್ಣೆ ಪೆಟ್ಟಿ ೧ಕ್ಕೆ	೫ ೧೧ ೦	೫ ೦ ೦
ತೆಂಗಿನಕಾಯಿ ೧೦೦ಕ್ಕೆ	೬ ೪ ೦	೬ ೪ ೦
ಅಡಕೇಕಾಯಿ ಮೂ ೧ಕ್ಕೆ	೧ ೬ ೦	೧ ೦ ೦
ಅಂಟ್ವಾಳಕಾಯಿ ಮಣ ೧ಕ್ಕೆ	೧ ೧೨ ೦	೧ ೮ ೦
ಚಿನ್ನ (ಪೌನ್) ಕೆಂಪು	೧೫ ೮ ೦	೧೫ ೮ ೦
,, , ಪಸಿಮೆ	೧೫ ೧೪ ೬	೧೫ ೧೪ ೬
,, ,, ಗಟ್ಟಿ ತೊಲ ೧ಕ್ಕೆ	೨೪ ೩ ೦	೨೪ ೦ ೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧ ೦ ೦	೮೧ ೩ ೦

The National Insurance & Banking Co., Limited.

NOTICE

It is hereby notified for the guidance and information of our Policy-holders, Share-holders and Agents and all concerned that Mr. M. L. Nagannah's services as Chief Agent of this Company have been dispensed with. All premiums and new proposals for Life Insurance should be sent direct to the Head Office and all Agents should communicate direct with the Head Office until the appointment of another Chief Agent. Any one making any payment to Mr. M. L. Nagannah hereafter will do so on his own risk. [182 1]

Amritsar,
4-9-1913

P. L. RAJPAL, B.A.,
Chief Manager.

ವೃತ್ತಾಂತ ಪತ್ರಿಕೆ.

——:o:——

ಸನ್ ೧೯೧೩ ನೇ ಇಸವಿ ಸೆಪ್ಟಂಬರ್, ತಾ. ೧೧ ನೇ ಗುರುವಾರ.

ಮೈಸೂರು ಸಂಸ್ಥಾನದಲ್ಲಿ ವ್ಯವಸಾಯವನ್ನೂ ಕಸಬುಗಳನ್ನೂ ಅಭಿವೃದ್ಧಿಮಾಡುವುದು.

ನಮ್ಮ ಗವರ್ನ್‌ಮೆಂಟಿನವರು ನಮ್ಮ ಸಂಸ್ಥಾನದಲ್ಲಿ ವ್ಯವಸಾಯವನ್ನು ಅಭಿವೃದ್ಧಿಮಾಡಬೇಕೆಂದೂ, ಕೈಗಾರಿಕೆಗಳನ್ನು ಹೆಚ್ಚುಮಾಡಬೇಕೆಂದೂ ವಿಶೇಷ ಕುತೂಹಲವುಳ್ಳವರಾಗಿ ಈ ಕುತೂಹಲವನ್ನು ಹಲವು ಮಾರ್ಗಗಳಲ್ಲಿ ಪ್ರಕಾಶಪಡಿಸುತ್ತಾ ಬಂದಿದಾರೆ. ಇದನ್ನು ನೋಡಿ ನಾವು ಸಂತೋಷಪಟ್ಟು ಸರ್ಕಾರದವರಿಗೆ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಿ, ಅವರ ಈ ಸಾಹಸ ಪ್ರಯತ್ನಗಳು ವಿಶೇಷ ಫಲದಾಯಕವಾಗುವವೆಂದು ನಂಬಿ ನಿರೀಕ್ಷಿಸುತ್ತೇವೆ.

ಸಂಸ್ಥಾನದ ಗುಪ್ತಧನವನ್ನು ಅಭಿವೃದ್ಧಿಮಾಡುವ ಭಾಗದಲ್ಲಿ ನಮ್ಮ ಗವರ್ನ್‌ಮೆಂಟಿನವರು ಈಗ ಕಳೆದ ೧ ನೇ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಒಂದು ಹೊಸ ಇಸ್ತಿಹಾರ್ನಾಮೆಯನ್ನು ಪ್ರಕಟಿಸಿದ್ದಾರೆ. ಆ ಇಸ್ತಿಹಾರಿನ ಮುಖ್ಯಾಂಶಗಳೇನೆಂದರೆ—ವ್ಯವಸಾಯಾಭಿವೃದ್ಧಿಗಾಗಲಿ, ಕಸಬುಗಳಿಗೋಸ್ಕರವಾಗಲಿ; ವ್ಯವಸಾಯಕ್ಕಾಗಿಯೋ ಕಸಬುಗಳ ಕಾರ್ಖಾನೆಗಳಿಗಾಗಿಯೋ ಬಾವಿಗಳನ್ನು ತೋಡುವುದು, ಕೆರೆ ಕಟ್ಟುವುದು, ಕಾರ್ಖಾನೆಗಳನ್ನೋ ಉಗ್ರಾಣಗಳನ್ನೋ ಕಟ್ಟುವುದು, ಇವುಗಳಿಗಾಗಲಿ; ಕಸಬುಗಳಿಗಾಗಿ ಪದಾರ್ಥಗಳನ್ನು ಕೊಂಡು ತರಿಸಿಕೊಳ್ಳುವುದಕ್ಕಾಗಲಿ, ಅಥವಾ ಮೇಲ್ಕಂಡ ಕಾರ್ಯಗಳಿಗೆ ಮೂಲಧನವನ್ನು ಒದಗಿಸಿಕೊಳ್ಳುವುದಕ್ಕಾಗಲಿ ಗವರ್ನ್‌ಮೆಂಟಿನವರು ಪ್ರಜೆಗಳಿಗೆ ಸಾಲ ಒದಗಿಸುತ್ತೇವೆಂದು ತಿಳಿಸಿದಾರೆ. ಈ ಸಾಲಗಳನ್ನು 10,000 ರೂಪಾಯಿ ತನಕ ಬೇಕಾದರೂ ಕೊಡುವುದಾಗಿಯೂ, ಅದಕ್ಕೆ ಶೇಕಡಾ ವರುಷಕ್ಕೆ 6¼ ರೂಪಾಯಿನಂತೆ ಬಡ್ಡಿ ಕೊಡತಕ್ಕದ್ದೆಂತಲೂ, ಈ ಸಾಲವು ವ್ಯವಸಾಯ ಕಾರ್ಯಗಳಿಗಾಗಿ ತೆಗೆದುಕೊಂಡ ಪಕ್ಷದಲ್ಲಿ ಅದನ್ನು ಏಳು ವರುಷಗಳ ವಾಯಿದೆಯೊಳಗೂ, ಕಸಬುಗಳ ಅಭಿವೃದ್ಧಿಗಾಗಿ ತೆಗೆದುಕೊಂಡ ಪಕ್ಷದಲ್ಲಿ ಐದು ವರುಷಗಳ ವಾಯಿದೆಯೊಳಗೂ ಕಂತು ಪ್ರಕಾರ ಸರ್ಕಾರಕ್ಕೆ ಕೊಟ್ಟು ತೀರಿಸಬೇಕೆಂತಲೂ ವಿಧಾಯಕಮಾಡಿರುತ್ತಾರೆ. ಇನ್ನೇ ಈ ಹೊಸ ಏರ್ಪಾಡಿನ ಮುಖ್ಯಾಂಶಗಳು. ಈ ಪ್ರಕಾರ ಪ್ರಜೆಗಳಿಗೆ ಸಹಾಯಮಾಡುವುದರ ಮೂಲಕ ಸಂಸ್ಥಾನದ ಶ್ರೇಯಸ್ಸನ್ನು ವೃದ್ಧಿಪಡಿಸಬೇಕೆಂದು ನಮ್ಮ ಸರ್ಕಾರದವರು ಕುತೂಹಲಪಡುತ್ತಿರುವುದನ್ನು ನೋಡಿ ನಾವು ಬಹಳ ಸಂತೋಷಪಟ್ಟು ಅವರನ್ನು ವಂದಿಸುತ್ತೇವೆ.

ಈ ಸಂದರ್ಭದಲ್ಲಿ ನಮಗೊಂದು ಸಂಶಯವುಂಟಾಗಿದೆ. ಗವರ್ನ್‌ಮೆಂಟಿನವರು ಈ ಇಸ್ತಿಹಾರನ್ನು ಪ್ರಕಟಿಸುವುದಕ್ಕಿಂತ ಮೊದಲು ಸಂಸ್ಥಾನದೊಳಗಿನ ಪ್ರಜೆಗಳಲ್ಲಿ ಗಣ್ಯರಾದವರಿಗೂ, ಸರ್ಕಾರಿ ಇಲಾಖಾ ಅಧಿಕಾರಿಗಳಿಗೂ ತೋರಿಸಿ ಅದರ ಸಾಧಕ ಬಾಧಕಗಳನ್ನು ಕುರಿತು ಅವರ ಕೂಡ ಪರ್ಯಾಲೋಚನೆಮಾಡಿದಾರೆಯೋ ಇಲ್ಲವೋ ನಮಗೆ ಗೊತ್ತಾಗುವುದಿಲ್ಲ. ಆದರೆ ಗವರ್ನ್‌ಮೆಂಟಿನವರ ಇಂಥಾ ಶ್ರೇಷ್ಠವಾದ ಉದ್ದೇಶವು ಫಲದಾಯಕವಾಗಿ ನೆರವೇರಬೇಕೆಂಬ ಅಭಿಲಾಷೆಯುಳ್ಳವರಾಗಿ ಈ ವಿಷಯದಲ್ಲಿ ನಮಗೆ ತೋರುವ ಕೆಲವು ಸಂಗತಿಗಳನ್ನು ಸೂಚಿಸುತ್ತೇವೆ.

ಈಚೆಗೆ ಗವರ್ನ್‌ಮೆಂಟಿನವರು ಮೈಸೂರು ಬ್ಯಾಂಕು ಎಂಬೊಂದು ನಿಧಿಯನ್ನು ಪ್ರಾರಂಭಿಸುವುದಕ್ಕೆ ಏರ್ಪಾಡುಗಳನ್ನು ಮಾಡಿ, ಅದರ ಲೇವಾದೇವಿಗಾಗಿ ಸರ್ಕಾರದ ಹಣವನ್ನು ಹೆಚ್ಚಾಗಿ ಮೂಲಧನಕ್ಕೆ ಒದಗಿಸಿರುತ್ತಾರೆ. ಈ ಬ್ಯಾಂಕು ಸಾಹುಕಾರಿ ಮತ್ತು ಸರ್ಕಾರಿಯಾಗಿರೋಣದರಿಂದ ಮೇಲ್ಕಂಡ ಇಸ್ತಿಹಾರಿನಲ್ಲಿ ಗರ್ಭಿತವಾದ ಲೇವಾದೇವಿಯನ್ನು ಬಹಳಮಟ್ಟಿಗೆ ಈ ಬ್ಯಾಂಕೇ ನಡಿಸಬೇಕಾದದ್ದು ಸಹಜವೆಂದೂ ನ್ಯಾಯವೆಂದೂ ಕಾಣುತ್ತದೆ. ಈ ಸಂಸ್ಥಾನದ ವ್ಯಾಪಾರವನ್ನೂ ವ್ಯವಸಾಯವನ್ನೂ ಅಭಿವೃದ್ಧಿಮಾಡುವುದಕ್ಕಾಗಿಯೇ ಈ ಬ್ಯಾಂಕು ಪ್ರಾರಂಭವಾಗಿರುವುದು. ಈಗ ಈ ಬ್ಯಾಂಕಿನಲ್ಲಿ ಲೇವಾದೇವಿ ಪ್ರಾರಂಭವಾಗುವುದಕ್ಕಿಂತ ಮೊದಲೇ ಗವರ್ನ್‌ಮೆಂಟಿನವರು ಅದರ ಮೇಲೆ ಪೈಪೋಟಿಮಾಡಲು ಹೊರಟಿರುತ್ತಾರೆ. ಹೀಗೆ ಪೈಪೋಟಿಗೆ ನಿಲ್ಲಬೇಕೆಂಬುವುದು ಅವರ ಅಭಿಮತವಲ್ಲವಾದರೂ ನಮಗೆ ಆ ರೀತಿ ಕಾಣುವುದು. ಇದನ್ನು ನೋಡಿ ಆ ಬ್ಯಾಂಕಿನ ಡೈರೆಕ್ಟರುಗಳು ಗವರ್ನ್‌ಮೆಂಟಿನವರನ್ನು ಕುರಿತು—"ಬ್ಯಾಂಕನ್ನು ಪ್ರಾರಂಭಿಸುವುದಕ್ಕೆ ನಮಗೆ ನೀವು ಖಜಾನೆಯಿಂದ ಮೂಲಧನವನ್ನು ದಯಪಾಲಿಸಿ, ಈಗ ನಾವು ನಡಿಸಬಹುದಾದ ಲೇವಾದೇವಿಯು ನಮಗೆ ತಪ್ಪಿಹೋಗುವಂತೆ ಮಾಡುತ್ತೀರಿ. ವ್ಯಾಪಾರವನ್ನೂ ಕಸಬುಗಳನ್ನೂ ಅಭಿವೃದ್ಧಿಗೆ ತರಬೇಕೆಂಬುವುದೇ ನಮ್ಮ ಬ್ಯಾಂಕಿನ ಉದ್ದೇಶವಾಗಿರುವಲ್ಲಿ ನೀವು ನಮ್ಮ ಕೂಡ ಪೋಟಾಪೋಟಿಗೆ ನಿಂತುಕೊಳ್ಳದೆ ನಮಗೆ ಸಹಾಯಕರಾಗಬೇಕಾಗಿದೆ" ಎಂಬೀ ರೀತಿ ಹೇಳುವ ಪಕ್ಷಕ್ಕೆ, ಅದು ಅಷ್ಟು ಅನ್ಯಾಯವೆಂದು ಕಾಣುವುದಿಲ್ಲ. ಹ್ಯಾಗೂ ಮೈಸೂರು ಗವರ್ನ್‌ಮೆಂಟಿನ ಕಸಬುಗಳ ಇಲಾಖೆಗೂ ಮೈಸೂರು ಬ್ಯಾಂಕಿಗೂ ಪರಸ್ಪರ ಪೈಪೋಟಿಗಳು ಹುಟ್ಟುವುದು ಸಹಜವೂ ಕ್ಷೇಮವೂ ಅಲ್ಲ.

ಇದಲ್ಲದೆ ಇನ್ನೊಂದು ವಿಷಯ ನಮಗೆ ತೋರುತ್ತಿದೆ. ಯಾವುದಾದರೊಂದು ಕಸಬನ್ನು ಸರಿಯಾಗಿ ಪ್ರಾರಂಭಿಸುವುದಕ್ಕೆ 10,000 ರೂಪಾಯಿ ಸಾಕಾಗಲಾರದು; ಇದರ ಹತ್ತರಷ್ಟಾದರೂ ಬೇಕಾದೀತು. ಇದಲ್ಲದೆ ಕಸಬುದಾರಿಯ ಏರ್ಪಾಡುಗಳಲ್ಲಿ ಮೊದಲನೇ ವರುಷ ಸಾಮಾನ್ಯವಾಗಿ ವಿಶೇಷ ಲಾಭ ಹುಟ್ಟುವಳಿ ಆಗುವುದಿಲ್ಲವೆಂದು ಎಲ್ಲರಿಗೂ ತಿಳಿದೇ ಇದೆ. ಆದಕಾರಣ ಮೊದಲನೇ ವರುಷದ ಅಂತ್ಯದಲ್ಲೇ ಐದನೇ ಒಂದು ಭಾಗದ ಸಾಲವನ್ನು ಸರ್ಕಾರಕ್ಕೆ ಕಂತು ಕಟ್ಟುವುದಾದರೆ ಆ ಕಸಬು ಕ್ಷಯಿಸಿಹೋಗುವುದು. ಈ ಸಾಲಗಳ ವಿಷಯದಲ್ಲಿ ರಚಿಸಲ್ಪಟ್ಟಿರುವ ನಿಬಂಧನೆಗಳು ಇನ್ನೂ ಸ್ವಲ್ಪ ಧಾರಾಳವಾಗಿರಬೇಕೆಂದು ನಮಗೆ ತೋರುತ್ತದೆ. ಇಲ್ಲವಾದರೆ ಅಭಿವೃದ್ಧಿಗೆ ಬರಬಹುದಾದ ಕಾರ್ಯಗಳೂ ಕೂಡ ಈ ನಿರ್ಬಂಧಗಳಿಂದ ತಲೆ ಎತ್ತದಂತಾಗುವವು.

ಹ್ಯಾಗೂ ಗವರ್ನ್‌ಮೆಂಟಿನವರ ಈ ಉದಾರವಾದ ಏರ್ಪಾಡಿನಿಂದ ಜಮೀನ್‌ದಾರರೂ ಕಸಬುದಾರರೂ ಪ್ರಯೋಜನ ಹೊಂದುವವರಾಗಲೆಂದೂ, ಪ್ರಜೆಗಳ ಶ್ರೇಯಸ್ಸಿಗೂ ಏಳ್ಗೆಗೂ ಯಥಾರ್ಥವಾಗಿಯೂ ಸಹಾಯವಾಗುವಂತೆ ಗವರ್ನ್‌ಮೆಂಟಿನವರು ಈ ನಿಬಂಧನೆಗಳನ್ನು ಬದಲಾವಣೆಮಾಡುತ್ತಾರೆಂದೂ ನಂಬಿ ನಿರೀಕ್ಷಿಸುತ್ತೇವೆ.

ಉಪವಾಸದ ಪ್ರಾರ್ಥನೆ.

ಪ್ರಾರ್ಥನೆ ಮಾಡಬೇಕೆಂಬ ಅಭಿಲಾಷೆಯು ಮೊಟ್ಟಮೊದಲು ಜನಗಳಲ್ಲಿ ಹೇಗೆ ಅಂಕುರಿಸಿತು? ತಮಗೆ ಸಂಭವಿಸಿದ ಕೊರತೆಗಳನ್ನೂ ಪ್ರಾಪ್ತಿಸಿದ ಆಪತ್ತುಗಳನ್ನೂ ಅನುಭವಿಸಲಾರದೆ ಅವುಗಳನ್ನು ಪರಿಹಾರಮಾಡುವವನ್ಯಾರನ್ನೂ ತಮ್ಮ ಸುತ್ತುಮುತ್ತಲೂ ಇದ್ದವರಲ್ಲಿ ಕಾಣದೆ ಅದೃಶ್ಯವಾದ ಯಾವದೋ ಒಂದು ಶಕ್ತಿಯು ಇರುವದೆಂದೂ ಆ ಶಕ್ತಿಯನ್ನು ಮರೆಹೊಕ್ಕರೆ ತಮ್ಮ ಬೇನೆಯು ಹಗುರವಾಗುವದೆಂದೂ ಭಾವಿಸಿದರು. ಬಿರುಗಾಳಿ, ಪ್ರಳಯ, ಸಾಂಕ್ರಾಮಿಕರೋಗ, ಕ್ಷಾಮವೇ ಮುಂತಾದ ಉಪದ್ರಗಳು ಮೊದಲಿನಿಂದ ಜನಗಳನ್ನು ಆಗಾಗ್ಗೆ ಬಾಧಿಸುತ್ತಲಿದೆ. ಮನೆ, ಮಕ್ಕಳು, ಆಸ್ತಿ, ಆರೋಗ್ಯ, ಮಳೆ, ಮುಂತಾದ ವರಗಳು ಎಲ್ಲರಿಗೂ ಮೊದಲಿನಿಂದ ಬೇಕಾಗಿಯೇ ಇದ್ದವು. ಉಪದ್ರಗಳ ಕಾಟವನ್ನು ತಪ್ಪಿಸಿಕೊಳ್ಳುವದಕ್ಕೂ ಅವಶ್ಯವಾದ ಮೇಲುಗಳನ್ನು ಪಡೆಯುವುದಕ್ಕೂ ಜನಗಳು ಅದೃಶ್ಯನಾಗಿರುವ ದೇವರು ಶಕ್ತನಾಗಿದ್ದಾನೆಂದು ನಂಬಿ ಆತನಿಗೆ ಪ್ರಾರ್ಥಿಸಿದರು. ಮೊದಲು ಈ ನಿಜ ದೇವರು ಯಾರೆಂದು ತಿಳಿಯದೆ, ಅನೇಕ ದೆವ್ವಗಳು ತಮ್ಮನ್ನು ಪೀಡಿಸುತ್ತವೆಂತ ಊಹಿಸಿ ಅವುಗಳಿಗೆ ಅರ್ಪಣೆಗಳನ್ನು ಸಲ್ಲಿಸಿ ಅವುಗಳನ್ನು ತೃಪ್ತಿಪಡಿಸುವದರಿಂದ ತಮ್ಮನ್ನು ಕಾಡದೆ ಬಿಡುವವೆಂದು ಭಾವಿಸಿದರು. ಅನಂತರ ಬೇರೆ ವಿಧವಾಗಿ ಯೋಚಿಸಿ—ತಮ್ಮನ್ನು ಕಾಡುವ ದೆವ್ವ ಪಿಶಾಚಿಗಳಲ್ಲದೆ ಅವುಗಳಿಗಿಂತ ಉತ್ತಮ ಸ್ವಭಾವವುಳ್ಳ ದೇವರುಗಳು ಇವೆಯೆಂದು ಅವರನ್ನು ಆಶ್ರಯಿಸುವದರಿಂದ ಕೆಟ್ಟ ದೆವ್ವಗಳ ಕಾಟವೇ ತಪ್ಪುವದೆಂದೂ ಭಾವಿಸಿ ಆ ದೇವತೆಗಳನ್ನು ಓಲೈಸಿದರು.

ಪೂರ್ವಿಕರಾದ ನಮ್ಮ ಪಿತೃಗಳನ್ನು ಬಿಟ್ಟು ಪ್ರಕೃತದಲ್ಲಿ ನಮ್ಮ ಸ್ಥಿತಿಯನ್ನು ಸ್ವಲ್ಪ ಯೋಚಿಸೋಣ. ನಾವಂತೂ ಅವರಷ್ಟು ಅನಾಗರಿಕರಲ್ಲ. ನಾವು ಅವರ ಹಾಗೆ ಬೆತ್ತಲೆಯಾಗಿ ತಿರುಗದೆ ಒಳ್ಳೊಳ್ಳೇ ಉಡುವಸ್ತ್ರಗಳನ್ನು ಹೊದಿಯುತ್ತೇವೆ. ಗೆಡ್ಡೆ ಗೆಣಸುಗಳನ್ನು ತಿಂದು ಬೆಟ್ಟದ ತೊಪ್ಪಲುಗಳಲ್ಲಿಯೂ ಗುಹೆಗಳಲ್ಲಿಯೂ ವಾಸಿಸದೆ ಸೊಗಸಾದ ಮನೆಗಳನ್ನೂ ಉಪ್ಪರಿಗೆಗಳನ್ನೂ ಕಟ್ಟಿ ಅವುಗಳಲ್ಲಿ ವಾಸಿಸುತ್ತಾ ರುಚಿಕರವಾದ ಭಕ್ಷ್ಯಗಳನ್ನು ಮಾಡಿ ಸವಿಯುತ್ತೇವೆ. ನಮಗೆ ಏದ್ದು ಬರುತ್ತದೆ ದೆವ್ವಗಳ ಕಾಟವನ್ನು ನಾವು ನಂಬುವದಿಲ್ಲ. ರೋಗಗಳು ಬರುವದಕ್ಕೆ ದೆವ್ವಗಳ ಕಾಟ ಕಾರಣವಲ್ಲ. ಬೇರೆ ಬೇರೆ ಸೂಕ್ಷ್ಮ ಜಂತುಗಳು ನಮ್ಮ ಜಠರವನ್ನು ಸೇರಿ ರಕ್ತಗತವಾಗುವದರಿಂದ, ಪ್ಲೇಗ್, ವಾಂತಿಭೇದಿ, ವಿಷಜ್ವರ ಮುಂತಾದವುಗಳು ಪ್ರಾಪ್ತಿಸುತ್ತವೆ. ವೈದ್ಯರು ಇವನ್ನೆಲ್ಲಾ ಕಂಡುಹಿಡಿದು ಅವುಗಳಿಗೆ ತಕ್ಕ ಪ್ರತಿಬಂಧನಗಳನ್ನು ಕಲ್ಪಿಸುತ್ತಾರೆ. ನಾವು ದೇವರನ್ನು ಪ್ರಾರ್ಥಿಸಬೇಕೋ? ಪ್ರಾರ್ಥಿಸುವದು ಅಗತ್ಯವಾದರೆ ಯಾವ ವಿಷಯಗಳಿಗಾಗಿ ನಾವು ದೇವರನ್ನು ಪ್ರಾರ್ಥಿಸಬೇಕು.

ನಮ್ಮ ಪೂರ್ವಿಕರನ್ನು ಕಾಡುತ್ತಿದ್ದ ರೋಗಗಳು ನಮ್ಮನ್ನೂ ಕೂಡ ಬಾಧಿಸುತ್ತಿರುವವು. ನಮಗೆ ಲಭ್ಯವಾಗಿರುವ ನಾಗರಿಕತೆ, ವಿದ್ಯೆ ಮುಂತಾದವುಗಳು ನಮ್ಮನ್ನು ರೋಗದಿಂದ ಸಂಪೂರ್ಣವಾಗಿ ಬಿಡುಗಡೆ ಮಾಡಿಲ್ಲ. ಮನೆ, ಮಕ್ಕಳು, ಆಸ್ತಿ, ಆರೋಗ್ಯ ಮಳೆ ಬೆಳೆಗಳು ನಮಗೆ ಈಗಲೂ ಬೇಕೇಬೇಕು. ಕ್ಷಾಮ, ಸಾಂಕ್ರಾಮಿಕರೋಗಗಳು, ಪ್ರಳಯ ಮುಂತಾದವುಗಳು ನಮ್ಮನ್ನು ಕಾಡುತ್ತಿರುವದು ತಪ್ಪಲಿಲ್ಲ. ಈ ಕಷ್ಟಗಳು ಇರುತ್ತವೆ. ಮತ್ತು ಅವರ ಹಾಗೆ ಮರಣಾಧೀನರಾಗಿದ್ದೇವೆ. ಮರಣಕ್ಕೆ ಭಯಪಡದವರಾರು? ಇವು ನಮ್ಮನ್ನು ಕಾಡುತ್ತಿರುವವರೆಗೂ ನಾವು ದೇವರನ್ನು ಬೇಡಬೇಕಾಗಿದೆ. ಆದರೆ ನಾವು ದೇವರನ್ನು ಪ್ರಾರ್ಥಿಸುವದರಿಂದ ನಮ್ಮ ರೋಗಗಳು ಪರಿಹಾರವಾಗುತ್ತವೋ? ನಮಗೆ ಬೇಕೆಂದು ಭಾವಿಸುವ ಸಕಲವೂ ನಮಗೆ ದೊರಕುತ್ತವೆಯೋ? ಅನೇಕ ವೇಳೆ ಯಾವ ಚಿಕಿತ್ಸೆಗೂ ಮಣಿಯದ ರೋಗೋಪದ್ರಗಳು ದೇವರನ್ನು ಪ್ರಾರ್ಥಿಸುವದರಿಂದ ಪರಿಹಾರವಾಗಿರುವದುಂಟು. ಬೇರೆ ವಿಧವಾಗಿ ಲಭ್ಯವಾಗದಿದ್ದ ಅನೇಕ ವರಗಳು ಪ್ರಾರ್ಥನೆಯಿಂದ ನಮಗೆ ದೊರೆತಿರುತ್ತವೆ. ಆದರೆ ರೋಗನಿವಾರಣೆಯಾಗಲಿ ಅಥವಾ ಆಗದಿರಲಿ, ವರಗಳು ಪ್ರಾರ್ಥನೆಯಿಂದ ಲಭ್ಯವಾಗಲಿ ಆಗದೆ ಹೋಗಲಿ ಅದು ಮುಖ್ಯವಾದುದಲ್ಲ. ದೇವರು ನಮ್ಮ ಪಕ್ಷದವನಾಗಿರುವದು ನಮಗೆ ಪ್ರಾಮುಖ್ಯವಾದುದು. ಆತನ ದಯವೂ ಪ್ರೀತಿಯೂ ನಮಗೆ ಸಿಕ್ಕಿದಾದರೆ ನಮಗೆ ಸಾಕು. ಆತನು ನಮ್ಮ ಶಕ್ತಿಗೆ ಮೀರಿದ ಉಪದ್ರಗಳು ನಮ್ಮನ್ನು ಕಾಡದಂತೆ ನೋಡಿಕೊಳ್ಳುವನು. ಮತ್ತು ಉಪದ್ರಗಳು ನಮ್ಮನ್ನು ಕಾಡುತ್ತಿರುವಾಗಲೇ ನಮ್ಮ ಬಳಿಯಲ್ಲಿ ಆತನು ಇದ್ದು ನಮಗೆ ಧೈರ್ಯವನ್ನೂ ಮನಶ್ಶಾಂತಿಯನ್ನೂ ತಾಳಿಮೆಯನ್ನು ಅನುಗ್ರಹಿಸಿ ರೋಗಾದಿ ಉಪದ್ರಗಳು ಸಹ ನಮಗೆ ಮೇಲನ್ನೇ ಉಂಟುಮಾಡತಕ್ಕ ಬುದ್ಧಿಯನ್ನು ಕಲಿಸುವಂತೆ ಮಾಡುವನು. ಅವುಗಳಿಂದ ನಾಶನವಾಗುವ ಆಸ್ತಿಪಾಸ್ತಿಗಳು ಅನಿತ್ಯವಾದವುಗಳೆಂದೂ ದೇವರೇ ನಮ್ಮ ಸಂಪತ್ತೂ ನಮ್ಮ ಕಟ್ಟಕಡೆಯ ಗತಿಯೂ ಆಗಿದ್ದಾನೆಂದು ತಿಳಿಯುವೆವು.

ರೋಗಾದಿ ಉಪದ್ರಗಳಿಗಿಂತಲೂ ಕ್ಷಾಮಮಹಾಮಾರಿಗಳಿಗಿಂತಲೂ ಮರಣಕ್ಕಿಂತಲೂ ದೊಡ್ಡ ಶತ್ರುವು ಯಾವದಾದರೂ ಇದೆಯೋ? ಹೌದು. ಪಾಪವೇ ನಮ್ಮನ್ನು ಕೆಡಿಸಿ ನಮ್ಮ ದೇಹಾತ್ಮಗಳನ್ನು ನಾಶಮಾಡುವ ನಮ್ಮ ಶತ್ರು. ಕಣ್ಣು ಕೈ ಕಾಲು ಮುಂತಾದ ಅಂಗಗಳನ್ನು ಕಳಕೊಳ್ಳುವದಕ್ಕಿಂತ ಪಾಪಮಾಡುವದು ಅಥವಾ ಇತರರನ್ನು ಪಾಪಕ್ಕೆ ಪ್ರೇರಿಸುವದು ನನಗೆ ನಷ್ಟಕರವಾದದ್ದೆಂದು ಕ್ರಿಸ್ತನು ಬೋಧಿಸಿದನು. ಮತ್ತು ತನ್ನ ನಡತೆಯಲ್ಲಿ ತೋರಿಸಿದನು. ಪಾಪಮಾಡಿ ಹೊಟ್ಟೆ ತುಂಬಿಸಿಕೊಳ್ಳುವದಕ್ಕಿಂತ ಉಪವಾಸಮಾಡುವದು ಉತ್ತಮವೆಂದು ನಿರ್ಣಯಿಸಿ ಉಪವಾಸವಾಗಿದ್ದನು. ಪಾಪಮಾಡಿದರೆ ಅಧಿಕಾರವೂ ದ್ರವ್ಯವೂ ಸಿಕ್ಕುತ್ತದೆ, ಆದರೆ ಅದು ನನಗೆ ಬೇಡ. ಪಾಪಮಾಡಿದರೆ ತನ್ನನ್ನು ದೇವರು ಕಳುಹಿಸಿಕೊಟ್ಟ ಕ್ರಿಸ್ತನೆಯೆಂದು ಜನಗಳು ತನ್ನನ್ನು ನಂಬುವರೆಂದು ತಿಳಿದರೂ ಪಾಪಮಾಡಲಿಲ್ಲ. ಪಾಪಮಾಡುವದಕ್ಕಿಂತ ಏನು ಪ್ರಾಪ್ತಿಸಿದರೂ ಕ್ರೂರವಾದ ಮರಣವೇ ಬಂದರೂ ಅನುಭವಿಸುವೆನೆಂತ ನಿರ್ಣಯಿಸಿಕೊಂಡನು. ಆದ್ದರಿಂದ ಆತನಿಗೆ ದೇವರು ಸಹಾಯಕನಾಗಿ ಸದಾ ಇರುತ್ತಿದ್ದನು. ಮತ್ತು ಪಾಪದಿಂದ ಸಂಪೂರ್ಣವಾಗಿ ಆತನನ್ನು ತಪ್ಪಿಸಿ ಕಾಪಾಡಿದನು. ದೇವರ ಪ್ರಾರ್ಥನೆಯಲ್ಲಿ ಕ್ರಿಸ್ತನು ಸದಾ ನಿರತನಾಗಿದ್ದದ್ದರಿಂದಲೇ ಆತನ ಸಹಾಯವನ್ನು ಪ್ರತಿಕ್ಷಣವೂ ಪಡೆಯುತ್ತಿದ್ದನು. ದೇವರು ನಮ್ಮನ್ನು ಬೇರೆ ಯಾವ ಥವಾದ ಕೇಡಿಗೆ ತಪ್ಪಿಸದೆ ಹೋದರೂ ಪಾಪದಿಂದ ನಮ್ಮನ್ನು ಬಿಡಿಸಿ ರಕ್ಷಿಸಿದರೆ ಅದೇ ಸಾಕು. ಅದೇ ನಮಗೆ ಶಾಶ್ವತಪದವಿ. ಕ್ರಿಸ್ತನು ಪ್ರಾರ್ಥನೆಯಿಂದ ರಕ್ಷಿತನಾಗಿರುವಲ್ಲಿ ಪ್ರಾರ್ಥನೆ ಮಾಡದೆ ರಕ್ಷಣೆ ಪಡೆಯುವದಕ್ಕಾದೀತೆ? ಪ್ರಾರ್ಥನೆಯು ಭಕ್ತಿಗೆ ಮೂಲ, ಪ್ರಾರ್ಥನೆಯೇ ಆತ್ಮಕ್ಕೆ ಕ್ಷೇಮ. ಪ್ರಾರ್ಥನೆ ಮಾಡುವದು ಕಷ್ಟಕರವಾಗಿಯೂ ತೊಂದರೆಯಾಗಿಯೂ ಹೊತ್ತು ಕಳೆಯುವದಾಗಿಯೂ ಇದೆಯೆಂದು ಯಾವನಾದರೂ ಭಾವಿಸಿ ಅಲಕ್ಷ್ಯಮಾಡಿದರೆ ದೇವರನ್ನು ತಿರಸ್ಕರಿಸಿ ಕೆಟ್ಟುಹೋಗುವ ಅಪಾಯಕ್ಕೆ ಅವನು ಸಿಕ್ಕಿದ್ದಾನೆಂದು ತಿಳಿಯಬೇಕಾಗಿದೆ.

ಒಳದೇಶದ ವೃತ್ತಾಂತಗಳು.

ತರೀಕೆರೆಯಿಂದ ಯಡೆಹಳ್ಳಿಗೆ ಟ್ರಾಂವೇ ರಸ್ತೆಯನ್ನು ಮಾಡಿಸಬೇಕೆಂದು ಸರ್ಕಾರದವರು ನಿಷ್ಕರ್ಷೆಮಾಡಿ, ಅದಕ್ಕಾಗಿ ಸರ್ವೆ ಮುಂತಾದ ಕಾರ್ಯಗಳನ್ನು ನಡಿಸುವ ಬಗ್ಗೆ ಇಂಜನಿಯರವರಿಗೆ ಅಧಿಕಾರವನ್ನು ವಹಿಸಿದಾರೆ.

*

ಮೈಸೂರು ಸೆಷನ್ಸ್ ಜಡ್ಜಿ ಮಿ॥ ಆರ್. ಬಿ. ಪ್ರಮರವರು ಬೆಂಗಳೂರಿಗೆ ವರ್ಗವಾಗಿರುವ ನಿಮಿತ್ತ ರಾಜಧಾನಿಯ ಲಾಯರ್ ಸಂಘದವರು ಅವರಿಗೆ ನಾಡಿದ್ದು ದೊಡ್ಡ ಔತನವನ್ನು ಮಾಡಬೇಕೆಂದು ವಿಶೇಷವಾದ ಏರ್ಪಾಡುಗಳನ್ನು ಮಾಡುತ್ತಿದಾರೆ.

*

ಮೈಸೂರು ಆಯುರ್ವೇದ ವಿದ್ಯಾಶಾಲೆಯಲ್ಲಿ ಓದಿ ತೇರ್ಗಡೆ ಹೊಂದಿ ಮುಖ್ಯ ಪಂಡಿತರಿಂದ ಸರ್ಟಿಫಿಕೇಟು ಪಡೆದಿರತಕ್ಕವರನ್ನು ವೈದ್ಯಶಾಲೆಗಳಲ್ಲಿ ಪಂಡಿತ ಕೆಲಸಕ್ಕೆ ನೇಮಕ ಮಾಡಿಕೊಳ್ಳಬಹುದೆಂದು ನಮ್ಮ ಸರ್ಕಾರದವರು ಹುಕುಂ ಕೊಟ್ಟಿದಾರೆ.

*

ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಕಾಡುಗಳಿಂದ ಫಾರೆಸ್ಟ್ ಇಲಾಖೆಯವರು ರೈತ ಪ್ರಜೆಗಳಿಗೆ ಅವರ ವ್ಯವಸಾಯ ಕೆಲಸಗಳಿಗೋಸ್ಕರ ಕಗ್ಗಲಿ, ತಡಸಲ, ದಿಂಡಿಗ ಎಂಬೀ ಮೂರು ಜಾತಿಯ ಮರಗಳನ್ನು ಕೊಡತಕ್ಕದ್ದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ.

*

ಕ್ಯಾಪ್ಟನ್ ಬ್ಯಾರಿಸನ್ ಎಂಬೊಬ್ಬ ಸಾಹೇಬನು ಸುಮಾರು ಎರಡು ತಿಂಗಳಿಂದ ರಾಜಧಾನಿಯ ರೈಲ್ವೆ ಸ್ಟೇಷನ್ ಬಳಿ ಇರುವ ಎಂಪೈರ್ ಹೋಟೇಲಿನಲ್ಲಿದ್ದನು. ಈತನು ಬೊಂಬಾಯಿನಲ್ಲಿ ಮೋಸಮಾಡಿರುತ್ತಾನೆಂದು ಕಳೆದ ವಾರ ವಾರಂಟು ಬಂದದ್ದರಿಂದ ಪೋಲೀಸಿನವರು ಆತನನ್ನು ಹಿಡಿದು ಅಲ್ಲಿಗೆ ಕಳುಹಿಸಿದಾರೆ.

*

ಮೈಸೂರು ವಕೀಲರ ಸಂಘದಿಂದ ಒಬ್ಬ ಮೆಂಬರನ್ನು ಚುನಾಯಿಸಿ ಪ್ರಜಾಪ್ರತಿನಿಧಿ ಸಭೆಗೆ ಕಳುಹಿಸಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದರಿಂದ ವಕೀಲರಲ್ಲಿ ಮುಖ್ಯರಾದವರೆಲ್ಲಾ ಕಳೆದ ವಾರ ಸಭೆ ಸೇರಿ ಅಡ್ವೊಕೇಟ್ ಮ॥ ಎಚ್. ನರಸಿಂಗರಾಯರನ್ನು ತಮ್ಮ ಪ್ರತಿನಿಧಿಯಾಗಿ ಚುನಾವಣೆಮಾಡಿರುತ್ತಾರೆ.

*

ಬೆಂಗಳೂರು ಬಿಷಪ್ ಕಾಟನ್ಸ್ ಸ್ಕೂಲಿನ ಕೆಲವು ವಿದ್ಯಾರ್ಥಿಗಳು ಹಿಂದಿನ ವಾರ ರಾಜಧಾನಿಗೆ ಬಂದು ಕ್ರಿಕೆಟ್ ಪಂದ್ಯವನ್ನು ಆಡಿ, ಇಲ್ಲಿಂದ ನಂಜನಗೂಡಿಗೆ ಹೋಗಿದ್ದಾಗ ಅವರ ಪೈಕಿ ಜಾರ್ಜ್ ಎಂಬ ವಿದ್ಯಾರ್ಥಿಯು ಹೊಳೆಯಲ್ಲಿ ಆಯತಪ್ಪಿ ಬಿದ್ದು ಮೃತಪಟ್ಟದ್ದರಿಂದ ಶವವನ್ನು ಬೆಂಗಳೂರಿಗೆ ಸಾಗಿಸಿ ದಫನ್ ಮಾಡಿದರು.

*

ಕೊಳ್ಳೇಗಾಲದ ದಂಗೆ ಮೊಕದ್ದಮೆಯು ಮುಕ್ತಾಯವಾಗಿ, ಸೆಷನ್ಸ್ ಜಡ್ಜರವರು ನಾಳೆಯ ದಿನ ತೀರ್ಮಾನ ಹೇಳುವವರಾಗಿದಾರೆಂದು ಕೇಳುತ್ತೇವೆ. ಈ ಮೊಕದ್ದಮೆಗಾಗಿ ಚುನಾಯಿಸಲ್ಪಟ್ಟಿದ್ದ ಏಳು ಮಂದಿ ಅಸೆಸರುಗಳಿಗೂ ಸರ್ಕಾರದವರು ತಲಾ 200 ರೂಪಾಯಿನಂತೆ ರುಸುಂ ಪಾವತಿಯಾಗತಕ್ಕದ್ದೆಂದು ಸ್ಯಾಂಕ್ಷನ್ ಮಾಡಿರುತ್ತಾರೆ.

*

ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನವರು ದಸರಾ ಉತ್ಸವ ಕಾಲದಲ್ಲಿ ಟೆನ್ನಿಸ್ ಎಂಬ ಚೆಂಡಾಟದ ಪಂದ್ಯವನ್ನು ನಡಿಸುವವರಾಗಿದಾರೆ. ಈ ಪಂದ್ಯದಲ್ಲಿ ಗೆಲ್ಲುವವರಿಗೆ ಬಹುಮಾನಕೊಡಲು ಮ್ಯುನಿಸಿಪಲ್ ಕೌನ್ಸಿಲರ್ ಮ॥ ಎನ್. ಶ್ರೀಕಂಠಯ್ಯನವರು ದಿವ್ಯವಾದ ಬೆಳ್ಳಿಯ ಒಟ್ಟನ್ನು ಉಚಿತವಾಗಿ ಕೊಡುವಂತೆ ಒಪ್ಪಿರುತ್ತಾರೆ. ಈ ಪಂದ್ಯಗಳು ಮುಂದಿನ ತಿಂಗಳು 1 ನೇ ತಾ. ಶನಿವಾರದಿಂದ ಪ್ರಾರಂಭವಾಗುವವು.

*

ಶ್ರೀಮನ್ ಮಹಾರಾಜರವರು ಕಳೆದ ಶುಕ್ರವಾರ ಸಾಯಂಕಾಲ 1 ಗಂಟೆಗೆ ಬೆಂಗಳೂರಿನಿಂದ ಮೋಟಾರಿನಲ್ಲಿ ರಾಜಧಾನಿಗೆ ದಯಮಾಡಿ ಎರಡು ದಿನ ಇಲ್ಲಿದ್ದು ಭಾನುವಾರ ಮಧ್ಯಾಹ್ನ 12 ಗಂಟೆಗೆ ಇಲ್ಲಿಂದ ಮೋಟಾರಿನಲ್ಲಿ ನೀಲಗಿರಿಗೆ ಚಿತ್ತೈಸಿದರು. ಅವರು ಈ ವಾರವೆಲ್ಲಾ ಅಲ್ಲಿದ್ದು 16 ನೇ ತಾ. ಮಂಗಳವಾರದ ಹೊತ್ತಿಗೆ ಬೆಂಗಳೂರಿಗೆ ದಯಮಾಡಿ, ಲೇಟ್ ಮಹಾರಾಜರವರ ಯಡೆಕಟ್ಟೆಯನ್ನು ಬೆಳಸುವರೆಂದು ಕೇಳುತ್ತೇವೆ.

*

ಅರಮನೆಯ ಆಸ್ಥಾನ ಮಹಾ ವಿದ್ವಾಂಸರಾದ ಕವಿತಿಲಕ ಅಯ್ಯಾಶಾಸ್ತ್ರಿಗಳ ಹಿರಿಯ ಕುಮಾರರಾದ ಮ॥ ಎಸ್. ಗರಳಪುರಿಯವರೂ, ಮೈಸೂರು ಡೆಪ್ಯುಟಿ ಕಮಿಷನರಾದ ಮ॥ ಎ. ಸುಬ್ರಹ್ಮಣ್ಯ ಅಯ್ಯರವರ ಅಳಿಯಂದಿರಾದ ಮ॥ ಎ. ವಿ. ವಿಶ್ವನಾಥಯ್ಯನವರೂ, ವ್ಯವಸಾಯದ ಇಲಾಖಾ ಅ। ಕಮಿಷನರಾದ ಮ॥

ಬಿ ನರಸಿಂಹಯ್ಯಂಗಾರರು ಪ್ರೌಢವಿದ್ಯಾಭ್ಯಾಸಕ್ಕಾಗಿ ಕಳೆದ ವಾರ ಬೊಂಬಾಯಿನಲ್ಲಿ ಹಡಗುಹತ್ತಿ ಇಂಗ್ಲೆಂಡಿಗೆ ಪ್ರಯಾಣಮಾಡಿರುತ್ತಾರೆ ಬಂಗಳೂರು ಒಕ್ಕಲಿಗರ ಪತ್ರಿಕೆಯ ಎಡಿಟರಾಗಿದ್ದ ಮ।। ಕೆ ಎಚ್ ರಾಮಯ್ಯನವರೂ ಈ ವಾರ ಅದೇ ಉದ್ದಿಶ್ಯ ವಿಲಾಯತಿಗೆ ಪ್ರಯಾಣಮಾಡುವರು

•
• •

ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಹೋಬಳಿ ಕಬ್ಬಳ್ಳಿ ಗ್ರಾಮದಲ್ಲಿರುವ ಮ।। ಪಟೇಲ್ ಸಿದ್ದಲಿಂಗಪ್ಪನವರು ಸುಮಾರು 5,000 ರೂಪಾಯಿ ಮುಟ್ಟಿಸಿ ಒಂದು ದೊಡ್ಡ ಸ್ಕೂಲನ್ನೂ, ಮಾಸ್ಟರ ಮನೆಯನ್ನೂ, ಒಂದು ಭಾವಿಯನ್ನೂ ಉಚಿತವಾಗಿ ಕಟ್ಟಿಸಿದರು ಕಳೆದ ಭಾನುವಾರ ಡೆಪ್ಟಿ ಕಮಿಷನರ್ ಮಿ।। ಎ ಸುಬ್ರಹ್ಮಣ್ಯ ಅಯ್ಯರವರು ಬಹು ಸಂತೋಷದಿಂದ ಅದನ್ನು ಪ್ರತಿಷ್ಠೆಮಾಡಿ ಪಟೇಲರ ಪರೋಪಕಾರ ಕಾರ್ಯವನ್ನು ಕೊಂಡಾಡಿದರು ವಿದ್ಯಾ ಇಲಾಖೆಯ ಮೆ।। ಗಳಾದ ಸಿ ಕೃಷ್ಣರಾಯರು, ಲಕ್ಷ್ಮೀನರಸಿಂಹಯ್ಯನವರು, ವೆಂಕಟರಾಮಯ್ಯನವರು ಅಲ್ಲದೆ ಆ ಪ್ರಾಂತ್ಯದ ರೈತಪ್ರಜೆಗಳು ಆ ಸಂತೋಷ ಕೂಟದಲ್ಲಿ ಹಾಜರಾಗಿದ್ದರು ಕಡೆಯಲ್ಲಿ ಎಲ್ಲರೂ ಕುಳಿತು ಫೋಟೋ ತೆಗಿಸಿಕೊಂಡರು

•
• •

ಗತಿಸಿದ ದಿವಾನ್ ಸರ್ ಕೆ ಶೇಷಾದ್ರಿ ಅಯ್ಯರ್, ಕೆ ಸಿ ಎಸ್ ಐ ರವರ ಜ್ಞಾಪಕಾರ್ಥವಾಗಿ ಅವರ ಇಷ್ಟಮಿತ್ರರೇ ಮೊದಲಾದವರೆಲ್ಲಾ ಚಂದಾ ಹಾಕಿ ಬೆಂಗಳೂರಿನಲ್ಲಿ ಸರ್ ಶೇಷಾದ್ರಿ ಅಯ್ಯರ್ ಮೆಮೋರಿಯಲ್ ಹಾಲ್ ಎಂಬ ಬಂಗಲೆಯನ್ನು ಕಟ್ಟಿಸಿದ್ದಲ್ಲದೆ ಅವರ ಭಾವಪ್ರತಿಮೆಯನ್ನು ಸೀಮೆಯಿಂದ ಮಿ।। ಡಬ್ಲ್ಯು ಆರ್ ಕಾಲ್ಟನ್ ಎಂಬ ಶಿಲ್ಪಿಗಾರನಿಂದ ತಯಾರುಮಾಡಿಸಿ ತರಿಸಿ ಸುಮಾರು ನಾಲ್ಕು ವರುಷಗಳಾಗಿದ್ದರೂ ಅದನ್ನು ಇದುವರೆಗೆ ಸರಿಯಾದ ಪೀಠದ ಮೇಲೆ ನಿಲ್ಲಿಸಿ ಪ್ರತಿಷ್ಠೆಮಾಡಿರಲಿಲ್ಲ ಈಗ ಅದರ ಪ್ರತಿಷ್ಠೆಗೆ ಒಳ್ಳೆಯ ಸಮಯ ಒದಗಿರುವುದು ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್ ಪ್ರಭುಗಳು ಮೈಸೂರು ಸಂಸ್ಥಾನಕ್ಕೆ ದಯಮಾಡಿದಾಗ ಅಂದರೆ ಮುಂದಿನ ನೊವೆಂಬರ್ ತಾ 30 ರಲ್ಲಿ ಆ ಪ್ರತಿಮೆಯನ್ನು ಅವರ ಕೈಯಿಂದ ಪ್ರತಿಷ್ಠೆಮಾಡಿಸುವಂತೆ ನಿಷ್ಕರ್ಷೆಯಾಗಿದೆ ಈ ಶಾಶ್ವತಕಾರ್ಯವನ್ನು ಆರಂಭಮಾಡಿದವರು ಆಗಿನ ವೈಸ್‌ರಾಯಿ ಲಾರ್ಡ್ ಕರ್ಜನ್ ಪ್ರಭುಗಳು, ಈಗ ಅದು ನೆರವೇರಿ ಅದನ್ನು ಪ್ರತಿಷ್ಠೆಮಾಡತಕ್ಕ ಕಾರ್ಯವನ್ನು ವೈಸ್‌ರಾಯಿ ಲಾರ್ಡ್ ಹಾರ್ಡಿಂಗ್‌ರವರು ವಹಿಸಿಕೊಂಡಿರುತ್ತಾರೆ

ಮೈಸೂರು ಗೆಜೆಟ್ ಸಂಗ್ರಹ

ಶಿವನೊಗ್ಗ ತಾಲ್ಲೂಕು ಚಿಂಕೆಪುರದ ಹೋಬಳಿಯಲ್ಲಿ ನೇರಲಕೆರೆ ಎಂಬ ಹೆಸರುಳ್ಳ ಎರಡು ಗ್ರಾಮಗಳಿವೆ ಉತ್ತರಕ್ಕೆ ಬಸಲಿಕಟ್ಟೆ ಮತ್ತು ಬೆಳಗೆರೆ, ಪೂರ್ವಕ್ಕೆ ದೊಡ್ಡೇರಿ ಮತ್ತು ಬಿಸಲಮನೆ, ದಕ್ಷಿಣಕ್ಕೆ ದೇವರಹಳ್ಳಿ ಮತ್ತು ಬಿಸಲಮನೆ ಪಶ್ಚಿಮಕ್ಕೆ ಕೊಮಾರನಹಳ್ಳಿ, ಈ ಮಧ್ಯೆ ಇರುವ ಗ್ರಾಮವನ್ನು ಇನ್ನು ಮುಂದೆ ಗುಡ್ಡದ ನೇರಲಕೆರೆ ಎಂದು ಕರೆಯತಕ್ಕದ್ದು

ಮುಂದೆ ಹೇಳುವ ಅಮಲ್ದಾರರ ವರ್ಗಾವರ್ಗಿ ಹುಕುಂ ಮಾಡಿದೆ—ಮಿ. ಪಿ ಸುಬ್ಬರಾಯರು ತರೀಕೆರೆಯಿಂದ ಶ್ರೀನಿವಾಸಪುರಕ್ಕೆ (ಕಾಯಿಲೆ ರಜದಿಂದ ಬಂದ ಮೇಲೆ), ಮಿ ಸಿ ಲಕ್ಷ್ಮಣರಾಯರು ಶ್ರೀನಿವಾಸಪುರದಿಂದ ತರೀಕೆರೆಗೆ, ಮಿ।। ಸಿ ವಿ ಕೃಷ್ಣಸ್ವಾಮಿರಾಯರು ಗೋರಿಬಿದನೂರಿಗೆ (ರಜಾ ಪೂರೈಸಿದ ಮೇಲೆ) ಮಿ।। ವಿ ಗೋಪಾಲರಾಯರು ಗೋರಿಬಿದನೂರಿನಿಂದ ಪಾವಗಡಕ್ಕೆ

ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಆಫೀಸರ್ ಮಿ ಎಂ ಜಿ ಕೃಷ್ಣಸ್ವಾಮಿರಾಯರಿಗೆ ಸಾಕ್ಷಿಗಳ ಠೇವಣಿಯನ್ನು ಸ್ವಹಸ್ತ ಇಂಗ್ಲಿಷಿನಲ್ಲಿ ಬರೆದುಕೊಳ್ಳುವ ಅಧಿಕಾರ ವಹಿಸಿದೆ

ಮುಂದೆ ಹೇಳುವವರನ್ನು 2ನೇ ಕ್ಲಾಸ್ ಸಬ್ ಅ ಇನ್‌ಸ್ಪೆಕ್ಟರಾಗಿ ನೇಮಕಮಾಡಿದೆ—ಮಿ, ಗಳಾದ ಕೆ ಆರ್ ವೆಂಕಟಸುಬ್ಬಾಚಾರ್ರು ವಾಟರ್ ಸಪ್ಲೈ ಮತ್ತು ಸ್ಯಾನಿಟರಿ ಇಲಾಖೆಗೆ, ವೈ ರಾಮಸ್ವಾಮಿಯವರು ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಎಂ ನರಸಿಂಹಯ್ಯನವರು ಕಾವೇರಿ ನಾಲೆಗೆ, ಕೆ ವೆಂಕಟರಾಮಯ್ಯನವರು ಬೆಂಗಳೂರು ಡಿವಿಜನ್‌ಗೆ

ನಮ್ಮ ಶ್ರೀಮದ್ಯುವರಾಜರವರು

ಗ್ಲಾಸ್ಗೊ ಪಟ್ಟಣದಲ್ಲಿ ಅವರಿಗೆ ನಡೆದ ಔತಣವು

ಈ ವಾರ ಸೀಮೆಯಿಂದ ಬಂದಿರುವ ವರ್ತಮಾನ ಪತ್ರಿಕೆಗಳಲ್ಲಿ ನಮ್ಮ ಶ್ರೀಮದ್ಯುವರಾಜರ ದೇಶಾಟನೆಯ ವೃತ್ತಾಂತವು ಸ್ವಲ್ಪ ಮಟ್ಟಿಗೆ ಪ್ರಕಟವಾಗಿದೆ ಅದರ ಮುಖ್ಯಾಂಶಗಳನ್ನು ಇಲ್ಲಿ ತಿಳಿಸುವೆವು

ಮೈಸೂರಿನ ಶ್ರೀಮದ್ಯುವರಾಜರವರು ಹಿಂದುಸ್ಥಾನದ ಇತರ ನಾಲ್ಕಾರು ದೇಶೀಯ ರಾಜರುಗಳೊಡನೆ ಪೋರ್ಟ್ಸ್‌ಮತ್ ಎಂಬ ತೀರಪಟ್ಟಣಕ್ಕೆ ಹೋಗಿ ಸಮುದ್ರದೊಳಗಡೆಯೇ ಸಂಚಾರ ಮಾಡುವಂಥಾ ಸಬ್‌ಮರೀನ್ ಎಂಬ ಹಡಗನ್ನು ಪರಾಂಬರಿಸಿದರು ನಾವೆಯ ಅಧಿಪತಿಯು ಅವರಿಗೆ ಆ ಹಡಗನ್ನು ತೋರಿಸಿ ಅದರ ಸಮಸ್ತ ಭಾಗಗಳನ್ನೂ ವಿವರಿಸಿದನು ಇಂಥಾ ವಿಚಿತ್ರವಾದ ಹಡಗನ್ನು ಅವರು ನೋಡಿದ್ದು ಅದೇ ಮೊದಲಾದದ್ದರಿಂದ ಅವರೆಲ್ಲಾ ಅದರ ರಚನೆಯನ್ನು ಕೇಳಿ ತಿಳಿದು ವಿಸ್ಮಯ ಹೊಂದಿದರು

ಶ್ರೀಮದ್ಯುವರಾಜರವರು ಓಬಾನ್ ಎಂಬ ಸ್ಥಳದಿಂದ ಹೊರಟು ಆಗಸ್ಟ್ ತಾ 20 ನೇ ಬುಧವಾರ ಸಾಯಂಕಾಲ ಸ್ಕಾಟ್‌ಲೆಂಡಿನಲ್ಲೆಲ್ಲಾ ಅತ್ಯಂತ ದೊಡ್ಡದಾದ ಗ್ಲಾಸ್ಗೊ ಪಟ್ಟಣವನ್ನು ತಲಪಿದರು ಕೈಗಾರಿಕೆಗಳಿಗೂ, ಕಾರ್ಖಾನೆಗಳಿಗೂ, ವ್ಯಾಪಾರಕ್ಕೂ, ಹಡಗುಗಳು ತಯಾರಾಗುವ ಕಾರ್ಖಾನೆಗಳಿಗೂ ಈ ಮಹಾನಗರವು ಬಹಳ ಪ್ರಖ್ಯಾತಿ ಹೊಂದಿದೆ ಯುವರಾಜರು ಆ ಸಾಯಂಕಾಲ ಆ ಮಹಾನಗರದೊಳಗೂ ಹೊರಪಾರ್ಶ್ವದಲ್ಲೂ ಸಂಚಾರಮಾಡಿ ವಿಶೇಷಾಂಶಗಳನ್ನೆಲ್ಲಾ ತಿಳಿದುಕೊಂಡರು ಮರುದಿನ ಬೆಳಿಗ್ಗೆ ಲಾರ್ಡ್ ಪ್ರೊವೋಸ್ಟರಾದ ಜೇಲಿ ಪ್ಯಾಕ್‌ಸ್ಟನ್ ರವರೂ, ಜೇಲಿ ಕರ್ಜ್ ತಿಂಡಾಲರವರೂ ಸೆಂಟ್ರಲ್ ಹೊಟೇಲಿಗೆ ಹೋಗಿ ಯುವರಾಜರವರಿಗೆ ಸುಸ್ವಾಗತವನ್ನು ಬಯಸಿ ಅವರನ್ನೂ ಇನ್ನು ಕೆಲವು ಸಾಹೇಬರನ್ನೂ ಸಂಗಡ ಕರೆದುಕೊಂಡು ಮೋಟಾರಿನಲ್ಲಿ ಕ್ಲೈಡ್ ನದಿಯ ಬಳಿಗೆ ಹೋಗಿ ಅಲ್ಲಿ ಎಲ್ಲರೂ ಕಾಮೆಟ್ ಎಂಬ ಹಡಗನ್ನು ಹತ್ತಿ ಮುಂದಕ್ಕೆ ಹೋಗಿ ಹಡಗುಗಳು ತಂಗುವ ಬಂದರನ್ನೂ ಹೊಸದಾಗಿ ತಯಾರಾಗಿದ್ದ ಅಕ್ವಿಟೇನಿಯಾ ಎಂಬ ಹಡಗನ್ನೂ ತೋರಿಸಿದರು ಅಲ್ಲಿಂದ ಯುವರಾಜರು ಅವರ ಕೂಡ ಮುಂದಕ್ಕೆ ನದಿಯಲ್ಲಿ ಹೋಗಿ ಷೀಲ್ಡ್‌ಹಾಲ್ ಎಂಬಲ್ಲಿ ಮ್ಯುನಿಸಿಪಲ್ ಸ್ಯೂಯೇಜ್ ವರ್ಕ್ಸ್ (ಪಟ್ಟಣದ ರೊಚ್ಚನ್ನು ಕೂಡಿಸುವ ಭಾಗ) ವನ್ನು ಅವಲೋಕಿಸಿಮಾಡಿ, ಅಲ್ಲಿಂದ ಫೇರ್‌ಫೀಲ್ಡ್ ಕಂಪನಿಯವರ ಹಡಗುಗಳ ಕಾರ್ಖಾನೆಗೆ ಬಂದರು ಅಲ್ಲಿ ಆ ಕಾರ್ಖಾನೆಯ ಯಜಮಾನರುಗಳು ಅವರನ್ನು ಎದುರುಗೊಂಡು ಅವರಿಗೆ ಸುಸ್ವಾಗತವನ್ನು ಬಯಸಿ ಆ ಕಾರ್ಖಾನೆಯ ಎಲ್ಲಾ ಭಾಗಗಳನ್ನೂ ಕಾಣಿಸಿದ್ದಲ್ಲದೆ ಅಲ್ಲಿ ಅವರಿಗೆ ಫಲಾಹಾರವನ್ನು ಒಪ್ಪಿಸಿದರು ಬಳಿಕ ಅವರೆಲ್ಲಾ ಕಾಮೆಟ್ ಎಂಬ ದೋಣಿಯಲ್ಲಿ ಕುಳಿತು ನದಿಯ ಮೇಲೆ ಹೋಗಿ ಬ್ರೂಮಿಲಾ ಎಂಬಲ್ಲಿ ದಡವನ್ನು ಸೇರಿ, ಅಲ್ಲಿ ಕಾದಿದ್ದ ಮೋಟಾರ್ ಗಾಡಿಗಳನ್ನು ಹತ್ತಿ ಹೊರಟು ಪಿಂಕ್‌ಸ್ಟನ್, ಪೋರ್ಟ್ ಡಂಡಾಸ್ ಎಂಬಲ್ಲಿಗೆ ಹೋಗಿ ಮ್ಯುನಿಸಿಪಾಲಿಟಿಯ ವಿದ್ಯುಚ್ಛಕ್ತಿ ಕಾರ್ಖಾನೆಗಳನ್ನು ನೋಡಿಕೊಂಡು, ಅಲ್ಲಿಂದ ಹೊರಟು ಕೆಲ್ವಿನ್‌ಗ್ರೂವ್ ಪಾರ್ಕ್ ಎಂಬ ಉದ್ಯಾನವನವನ್ನು ಪ್ರವೇಶಿಸಿ ಅದರಲ್ಲಿರುವ ಮ್ಯುನಿಸಿಪಲ್ ಆರ್ಟ್ ಗ್ಯಾಲರಿ (ಚಿತ್ರಶಾಲೆ) ಯನ್ನು ಪರಾಂಬರಿಸಿದರು

ಆ ದಿನ ಸಾಯಂಕಾಲ ಯುವರಾಜರವರಿಗೆ ಮ್ಯಾಜಿಸ್ಟ್ರೇಟುಗಳು ಸಿಟಿ ಚೇಂಬರಿನ ಸಾರ್ಟ್‌ವುಡ್ ಸೇಲೂನ್ ಎಂಬ ಭವನದಲ್ಲಿ ದಿವ್ಯವಾದ ಔತಣವನ್ನು ಮಾಡಿದರು ಶ್ರೀಮದ್ಯುವರಾಜರವರು, ಸರ್ದಾರ್ ಬಾಳರಾಜೆಅರಸಿನವರು, ಮ।। ಪಿ ರಾಘವೇಂದ್ರರಾಯರು, ಮೆ।। ಮಹಮದ್ ಉಸ್ಮಾನ್ ರವರು ಅಲ್ಲದೆ ಬೇರೆ 26 ಮಂದಿ ಸಾಹೇಬ್ ಜನಗಳು ಕುಳಿತು ಭೋಜನಮಾಡಿದರು ಕಡೆಯಲ್ಲಿ ಓರ್‌ಮೆನ್ ರಾದ ಜೇಲಿ ಪ್ಯಾಕ್‌ಸ್ಟನ್ ರವರು ಯುವರಾಜರವರ ಆಯುರಾರೋಗ್ಯಾದಿಗಳನ್ನು ಬಯಸಿ ಉಪನ್ಯಾಸಮಾಡಿ, ಯುವರಾಜರವರು ಗ್ಲಾಸ್ಗೊ ಪಟ್ಟಣವನ್ನು ಪರಾಂಬರಿಸಿ ಸಂತೋಷಪಟ್ಟಿದ್ದನ್ನೂ, ಮೈಸೂರು ಸಂಸ್ಥಾನವು ಬಹು ಪುರಾತನ ಸೀಮೆ ಎಂದೂ, ಅದರ ಅರಸರು ಬ್ರಿಟಿಷ್ ರಾಜ್ಯಭಾರದ ವಿಷಯದಲ್ಲಿ ಅತ್ಯಂತ ಭಕ್ತಿಪ್ರೀತಿಗಳನ್ನು ಪಡೆದಿರುತ್ತಾರೆಂದೂ, ಮೈಸೂರಿನಲ್ಲೂ ನೀರಾವರಿ ಕಾಮಗಾರಿಗಳೂ, ವಿದ್ಯುಚ್ಛಕ್ತಿಯ ಏರ್ಪಾಡೂ, ಚಿನ್ನದಗಣಿಗಳೂ ಒಳ್ಳೇ ಹೆಸರುವಾಸಿಯಾಗಿರುತ್ತವೆಂದೂ, ಮಹಾರಾಜರೂ ಯುವರಾಜರೂ ವಿವೇಕಶಾಲಿಗಳಾಗಿಯೂ ಪ್ರಾಜ್ಞರಾಗಿಯೂ ಇರುತ್ತಾರೆಂದೂ, ಬಹು ಸಮರ್ಥರಾದ ಮಂತ್ರಿಗಳೇ ಅವರಿಗೆ ದೊರಕಿ ಪ್ರಯೋಜನಯುಕ್ತವಾದ ಕಾಮಗಾರಿಗಳೂ, ಆಸ್ಪತ್ರೆಗಳೂ, ಶಾಸ್ತ್ರಶೋಧನಾಗಾರಗಳೂ ಹೇರಳವಾಗಿಯೂ ಉತ್ಕೃಷ್ಟವಾಗಿಯೂ ರಚಿಸಲ್ಪಟ್ಟಿವೆ ಎಂದೂ, ಇಂಥಾ ಸಂಸ್ಥಾನದ ಯುವರಾಜರವರಿಗೆ ಸಭಿಕರೆಲ್ಲಾ ಸುಸ್ವಾಗತವನ್ನು ಬಯಸಿ ಸನ್ಮಾನಮಾಡುವುದು ಅಪರಿಮಿತವಾದ ಸಂತೋಷಕಾರ್ಯವೆಂದೂ ಹೇಳಿದರು

ಶ್ರೀಮದ್ಯುವರಾಜರವರು ಈ ರೀತಿ ಪುರಪ್ರಮುಖರಿಂದ ಸತ್ಕಾರ ಸನ್ಮಾನಗಳನ್ನು ಹೊಂದಿದ್ದಕ್ಕಾಗಿ ಅವರನ್ನು ಬಹು ಸಂತೋಷದಿಂದ ದುನಃಪೂರ್ವಕವಾಗಿ ವಂದಿಸಿ ಪ್ರತ್ಯುತ್ತರವಾಗಿ ಹೇಳಿದ ಮುಖ್ಯಾಭಿಪ್ರಾಯಗಳೇನೆಂದರೆ— ಈ ದಿನ ಬೆಳಿಗ್ಗೆ ನಿಮ್ಮ ಪಟ್ಟಣದ ಸ್ವಾರಸ್ಯವಾದ ಭಾಗಗಳನ್ನೆಲ್ಲಾ ನೋಡಿ ವಿಶೇಷ ಸಂತೋಷಪಟ್ಟಿನಲ್ಲದೆ ಅನೇಕ ವಿಷಯಗಳನ್ನು ತಿಳಿದುಕೊಂಡೆನು ಈ ಪಟ್ಟಣವು ಕಾರ್ಖಾನೆಗಳೇ ಮೊದಲಾದ ವಿಶೇಷತೆಗಳಿಂದ ತುಂಬಿ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ತುಂಬಾ ಪ್ರಖ್ಯಾತಿಗೆ ಬಂದಿರುವುದೇನೂ ಆಶ್ಚರ್ಯವಲ್ಲ ನಾವೆಲ್ಲಾ ಈ ದಿನ ಚಕ್ರಾಧಿಪತ್ಯದ ಸಹೋದರಪ್ರಜೆಗಳಾಗಿ ಇಲ್ಲಿ ಸೇರಿರುವೆವು ಜೇಲಿ ಪ್ಯಾಕ್‌ಸ್ಟನ್ ರವರು ಮೈಸೂರು ಸಂಸ್ಥಾನದ ಪ್ರಜಾಪಾಲನೆಯನ್ನು ಕುರಿತು ಸಭಿಕರಿಗೆ ಸ್ತುತಿಸಿ ತಿಳಿಸಿದ್ದಕ್ಕಾಗಿ ಅವರನ್ನು ಆದರದಿಂದ ವಂದಿಸುವೆನು ಮೈಸೂರಿನಲ್ಲಿ ನಾವು ನಮ್ಮ ಸ್ಥಿತಿಗೆ ತಕ್ಕಂತೆ ಅಭಿವೃದ್ಧಿ ಹೊಂದಲು ಸಾಹಸಪಡುತ್ತಿರುವೆವು ಅದಕ್ಕೆಲ್ಲಾ ನಮಗೆ ಬ್ರಿಟಿಷ್ ಗವರ್ನ್‌ಮೆಂಟಿನವರೇ ಮೇಲುಪಂಕ್ತಿಯಾಗಿದ್ದಾರೆ ಇಂಗ್ಲಿಷ್ ಪ್ರಜೆಗಳು ಹಿಂದುಸ್ಥಾನದಲ್ಲಿರುವುದು ಆ ರಾಷ್ಟ್ರದ ಶ್ರೇಯಸ್ಸಿಗಲ್ಲದೆ ಮತ್ತೆ ಬೇರೆ ಅಲ್ಲವೆಂಬುವುದನ್ನು ವಿವೇಕಿಗಳಾದ ಹಿಂದುಸ್ಥಾನದವರೆಲ್ಲಾ ಒಪ್ಪಿಕೊಳ್ಳುವರು ಅವರಿಗೆ ಸ್ವತಂತ್ರಿಸಿ ಕೆಲಸಮಾಡಲು ಅವಕಾಶ ಕೊಟ್ಟಪಕ್ಷದಲ್ಲಿ ಅವರು ಹಿಂದುಸ್ಥಾನವನ್ನೂ ಬ್ರಿಟಿಷ್ ಚಕ್ರಾಧಿಪತ್ಯದ ಇತರ ವಿಭಾಗಗಳಂತೆಯೇ ಅಭಿವೃದ್ಧಿಗೆ ತರತಕ್ಕವರಾಗಿದ್ದಾರೆ ಹಿಂದುಸ್ಥಾನದವರಿಗೂ ಇಂಗ್ಲಿಷರಿಗೂ ಪರಸ್ಪರವಾದ ಪ್ರೀತಿವಿಶ್ವಾಸಗಳೂ, ಒಳ್ಳೆಯ ಇಂಗಿತಗಳೂ ಉಂಟಾದ ಪಕ್ಷದಲ್ಲಿ ಅವರು ಒಂದಾಗಿ ಪರಸ್ಪರವಾದ ಶ್ರೇಯೋಭಿವೃದ್ಧಿಯಲ್ಲಿ ಪಾಲುಗಾರರಾಗುತ್ತಾರೆ ಈ ದಿನ ನಾವು ಸೇರಿರುವ ಕೂಟದಂಥಾ ಕೂಟಗಳಿಂದ ಆ ಪಾಲುಗಾರಿಕೆಯು ಸ್ಥಿರಪಡುವುದು

ಈ ಪ್ರಕಾರ ಯುವರಾಜರವರು ಭಾಷಣಮಾಡಿದ್ದನ್ನು ಕೇಳಿ ಸಭಿಕರೆಲ್ಲಾ ಅವರನ್ನು ಕೊಂಡಾಡಿ, ಆ ಸಂತೋಷಕೂಟವನ್ನು ಮುಕ್ತಾಯಮಾಡಿದರು

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ವಾಸ್ತವದಾರ್, ಶ್ರವಣಬೆಳ್ಗೊಳ, ಸತ್ಯವಾದಿ, ಚಿತ್ರದುರ್ಗ, ಎನ್ ಆರ್ ರೆಡ್ಡಿ, ಹೊಸಲಿಗ್ರಾಮ, ಪತ್ರಿಕಾಭಿಮಾನಿ, ಬೆಂಗಳೂರು, ನರಸಿಂಹಯ್ಯ, ಮತಿಘಟ್ಟ ಯಥಾರ್ಥವಾದಿ, ಮಂಚೇನಹಳ್ಳಿ —ಈ ಬಾತ್ಮಿಗಳಲ್ಲಿ ವಿಶೇಷವಾದ ವರ್ತಮಾನಗಳೇನೂ ಕಾಣಲಿಲ್ಲ

ಮತಾಭಿಮಾನಿ, ಕವಲೇದುರ್ಗ, ಬಹಜನಗಳ ಕ್ಷೇಮಚಿಂತಕ, ಸೊಣಬೂರು —ಈ ಬಾತ್ಮಿಗಳನ್ನು ಪ್ರಕಟಿಸೋಣದರಿಂದ ವೃಥಾ ಪಂಗಡಗಳಲ್ಲಿ ಮನಸ್ತಾಪಗಳು ಹೆಚ್ಚಲೂ, ವಾದಗಳು ಹುಟ್ಟಲೂ ಆಸ್ಪದವಾಗುವುವೆಂದು ಊಹಿಸುತ್ತೇವೆ

ತೀರ್ಥಹಳ್ಳಿ ತಾಲ್ಲೂಕು ಮಳೂರು ಗ್ರಾಮದಲ್ಲಿ ಆಸ್ಪತ್ರೆ ಇಡಬೇಕೆಂಬ ವಿಷಯ ಹಿಂದೆಯೇ ಪ್ರಕಟಿಸಿದ್ದಾಗಿದೆ ಅದನ್ನೇ ಮತ್ತೆ ಪ್ರಕಟಿಸಬೇಕಾದ ಅಗತ್ಯ ಕಾಣುವುದಿಲ್ಲ ಸ್ಥಳದ ಪ್ರಜಾ ಮುಖಂಡರು ಸೇರಿ ಸರ್ಕಾರಕ್ಕೆ ಅರಿಕೆಮಾಡಿಕೊಂಡರೆ ಅನುಕೂಲವಾದೀತು

ದಿವಾನ್ ಮಿ।। ಎಂ ವಿಶ್ವೇಶ್ವರಯ್ಯನವರು ಕಳೆದ ತಿಂಗಳ ತಾ 11 ರಲ್ಲಿ ಹರಿಹರಕ್ಕೆ ದಯಮಾಡಿದ ಸಂದರ್ಭದಲ್ಲಿ ನಾಗಲಹಳ್ಳಿಕ್ಕೆ ಅಡ್ಡಗಟ್ಟಿ ಹಾಕಿ ಕೆರೆ ಕಟ್ಟಿಸಬೇಕೆಂಬುದನ್ನು ಅವರು ಖುದ್ದಾಗಿ ಹೋಗಿ ಪರಾಂಬರಿಸಿ ಆ ಕಾಮಗಾರಿ ಮಾಡಿಸುವುದು ಸಾಧ್ಯವಲ್ಲವೆಂದು ಅಪ್ಪಣೆ ಕೊಡಿಸಿದರೆಂದೂ, ಈ ತೀರ್ಮಾನದಿಂದ ನಾಲ್ಕಾರು ಗ್ರಾಮಸ್ಥರಿಗೆ ಉಂಟಾದ ಸಂತೋಷವನ್ನು ಪ್ರಕಾಶಪಡಿಸುವುದಕ್ಕಾಗಿ ಮುಖಂಡರೆಲ್ಲಾ ಸೇರಿ ದ್ರವ್ಯವನ್ನು ಕೂಡಿಸಿ ಸುತ್ತುಮುತ್ತಿನ ಸುಮಾರು ಮೂರು ನಾಲ್ಕು ಸಾವಿರ ಗ್ರಾಮಸ್ಥರಿಗೆ ಕಳೆದ ತಿಂಗಳ ತಾ 26 ನೇ ಮಂಗಳವಾರ ವಿವಿಧವಾದ ಭಕ್ಷ್ಯ ಭೋಜ್ಯಾದಿಗಳಿಂದ ಕೂಡಿದ ಸಮಾರಾಧನೆಯನ್ನು ಮಾಡಿಸಿ ಸಂತೋಷಪಡಿಸಿದರೆಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ

—ಎಡಿ]

ಕರೆಸ್‌ಪಾಂಡೆನ್ಸ್

ಪ್ರಜಾಪ್ರತಿನಿಧಿಗಳಿಗೆ ಒಂದು ಸೂಚನೆ

ಅಯ್ಯಾ,

ಪಟೇಲರುಗಳಲ್ಲಿ ಅನೇಕರಿಗೆ ಓದು ಬರಹ ಬಾರದೆ ಇರುವುದೂ, ಒಂದು ಪಕ್ಷ ಓದು ಬರಹ ಬಂದರೂ ಕಂದಾಯ ರೆವಿನ್ಯೂ, ಪೋಲೀಸ್, ದೊಡ್ಡಿಯ ಆಕ್ಟು ಮೊದಲಾದ ಖಾನೂನಿನ ವಿಷಯಗಳೂ, ತಾವು ಮಾಡಬೇಕಾದ ಕರ್ತವ್ಯಗಳೂ ತಿಳಿಯದಿರುವುದರಿಂದ ರೈತಾಪಿ ಜನಗಳೂ ತಾವೂ ಕಷ್ಟ ನಷ್ಟಗಳನ್ನನುಭವಿಸುವುದು ಅನೇಕರು ಕಂಡೂ ಕೇಳಿಯೂ ಇರಬಹುದು ವಿದ್ಯಾಭ್ಯಾಸದ ಇಲಾಖೆಯಲ್ಲಿ ಮಾಸ್ಟರುಗಳ ಕೆಲಸಕ್ಕೆ ಅನುಕೂಲವಾದ ಪುಸ್ತಕಗಳನ್ನು ಸರ್ಕಾರಿಯಾಗಿ ಕೊಟ್ಟಿರುವಂತೆ ಸದರಿ ಪಟೇಲರಿಗೂ ಸಹ ಅವರವರು ಮಾಡಬೇಕಾದ ಕರ್ತವ್ಯಗಳನ್ನು ತಿಳಿಸುವ ಮತ್ತೂ ಕೆಲವು ಕಾನೂನ್ ಪುಸ್ತಕಗಳನ್ನು ಸರ್ಕಾರಿಯಾಗಿ ಕೊಡುವಂತೆ ಮುಂದೆ ಕೂಡುವ ಪ್ರಜಾ ಪ್ರತಿನಿಧಿಸಭೆಯಲ್ಲಿ ಚರ್ಚಿಸಬೇಕಾಗಿ ಸಭೆಯ ಮೆಂಬರುಗಳಿಗೆ ಅರಿಕೆ ಮಾಡಿಕೊಳ್ಳುತ್ತೇನೆ

ಬದಿರುಕೆರೆ ಕೆ ಎಂ ಚನ್ನಬಸವಯ್ಯ

ಹೊಲಿಗೆಯ ಯಂತ್ರಗಳು

ಅಯ್ಯಾ,

ಕೊಳ್ಳೇಗಾಲವು 11 ಸಾವಿರ ಪ್ರಜಾ ಸಂಖ್ಯೆಯುಳ್ಳದ್ದಾಗಿದೆ ರೇಷ್ಮೆ ಮೊದಲಾದ ಅನೇಕತರಹಾ ಜವಳಿ ಅಂಗಡಿಗಳು ಹೇರಳವಾಗಿವೆ ಸುಮಾರು 150 ಹೊಲಿಗೆಯ ಮಿಷನ್‌ಗಳಿರುತ್ತವೆ ಸಿಂಗರ್ ಕಂಪನಿಯ ಹೊಲಿಗೆ ಯಂತ್ರಗಳು ಈಗ್ಗೆ 20 ವರ್ಷಗಳ ಕೆಳಗೆ ಬರುತ್ತಿದ್ದ ಹೊಲಿಗೆಯ ಯಂತ್ರಗಳ ಮಾದ್ರಿ ಈಗ ಬರುತ್ತಾ ಇಲ್ಲ ಕೆಂಪು ತೀರುವಷ್ಟರೊಳಗಾಗಿಯೇ ಯಂತ್ರಗಳು ಬಹು ಬೇಗ ಸವೆದು ಹೋಗುತ್ತಾ ಇವೆ ಹೊಲಿಗೆಯ ಯಂತ್ರಗಳು ಈ ರೀತಿ ಬೇಗನೇ ಕೆಟ್ಟು ಹೋಗುವದರಿಂದ ಬಡವರಾದ ನಾವುಗಳು ಯಾವ ರೀತಿ ಕಂತನ್ನು ಕಟ್ಟಿ ಜೀವಿಸಬೇಕು ? ಇದಕ್ಕೆ ದೃಷ್ಟಾಂತವೇನಂದರೆ—(1) ಈಗ್ಗೆ 15 20 ವರ್ಷಗಳ ಕೆಳಗೆ ಮೇಲ್ಕಂಡ ಕಂಪನಿಯಲ್ಲಿ ಖರೀದಿಗೆ ತೆಗೆದ ಪಿಟೀಲ್ ಮಾರ್ಕ್ ಯಂತ್ರಗಳಲ್ಲಿ ಮೇಲ್ಕಂಡ ವ್ಯತ್ಯಾಸವೇನೂ ಇಲ್ಲದೆ ಕೆಲಸಮಾಡುವದಕ್ಕೆ ತುಂಬಾ ಚೆನ್ನಾಗಿದೆ ಇದಕ್ಕೆ ಕಾರಣಗಳನ್ನು ಮಹನೀಯರೆಲ್ಲಾ ಯೋಚಿಸಬೇಕು (2) ಈಗ ಕಂತು ವಸೂಲು ಮಾಡುವದಕ್ಕೆ ಸಿಂಗರ್ ಕಂಪನಿಯಿಂದ ಮೇನೇಜರು ಮತ್ತು ಬೇರೆಯವರು ಬಂದರೆ ಜನಗಳ ಅನುಕೂಲ ಅನನುಕೂಲಗಳನ್ನು ನೋಡುವದೇ ಇಲ್ಲ, ಮಿಷನ್ ವಗೈರೆ ರಿಪೇರಿಗಳನ್ನು ಮಾಡುವದಕ್ಕೂ, ರಿಪೇರಿಗೆ ತಕ್ಕ ಸಾಮಾನುಗಳನ್ನು ಹಾಕುವದಕ್ಕೂ ಉದಾಸೀನಮಾಡಿ, ಜಾಗ್ರತ ಬೇರೆ ಸ್ಥಳಕ್ಕೆ ತೆರಳುವದನ್ನೇ ಎದುರು ನೋಡುತ್ತಾರೆ ಈ ಊರಲ್ಲಾದರೋ ಮಿಷನ್‌ಗಳಿಗೆ ಸಂಬಂಧಪಟ್ಟ ಸಾಮಾನುಗಳು ದೊರಕುವದೇ ಇಲ್ಲ, ರಿಪೇರಿ ಮಾಡುವವರು ಮೊದಲೇ ಇಲ್ಲ ಮತ್ತು ಹೊಸ ಹೊಲಿಗೆ ಯಂತ್ರಗಳನ್ನು ತಮ್ಮ ಕೂಡ ತರುವದೂ ಇಲ್ಲ. ಅಡ್ವಾನ್ಸು ಕೊಟ್ಟಾಗ್ಯೂ ಹೊಲಿಗೆ ಯಂತ್ರಗಳನ್ನು ತಲಪಿಸುವದೇ ಇಲ್ಲ

ಈ ರೀತಿಯಾದ ಅನನುಕೂಲಗಳಿಂದ ಅನುಕೂಲಸ್ಥರು ಬೇರೆ ಕಂಪನಿಯಿಂದ ಹೊಲಿಗೆ ಯಂತ್ರಗಳನ್ನು ತರಿಸುತ್ತಲಿದ್ದಾರೆ ಈ ವಿಧವಾದ ಪುಕಾರಿಗೆ ಕಂಪನಿಯ ಮೇಲ್ಪಟ್ಟ ಆಫೀಸರುಗಳು ಆಸ್ಪದಕೊಡದೆ ಸರಿಯಾದ ಜಾಗ್ರತೆ ಕೊಡುವರೆಂದು ನಂಬುತ್ತೇನೆ

ಕೆ ಎಸ್ ಜಾತ್ಯಯರ್, ಟೈಲರ್, ಕೊಳ್ಳೇಗಾಲ

ತಾಲ್ಲೋಕು ವರ್ತಮಾನಗಳು

ಕುಣಿಗಲ್ ತಾ।। ಅಮೃತೂರು —ಈಗ್ಗೆ ಒಂದು ತಿಂಗಳಿಂದ ಕಾಲಾನುಗುಣ್ಯವಾದ ಮಳೆಯೇ ಇಲ್ಲದೆ ಇರುವುದರಿಂದ ಸೌಮ್ಯವಾಗಿ ಬಂದಿದ್ದಂಥಾ ಪೈರು ಪಚ್ಚೆಗಳು ನಾಶವಾಗಿ ಮುಂದೆ ದೊಡ್ಡ ಕ್ಷಾಮವು ತಲೆ ಹಾಕಲು ಸೂಚಿಸುವಂತಿದೆ ಕೆರೆಗಳೆರಡೂ ತುಂಬಿರುತ್ತೆ ಈ ವರ್ಷ ಭತ್ತದ ಬೆಳೆಯೇನೋ ಬಹಳ ಚೆನ್ನಾಗಿ ಆಗುವದರಲ್ಲಿ ಸಂದೇಹವಿಲ್ಲ ಇಲ್ಲಿ ಯೂನಿಯನ್ ಆಗಿ 4-5 ವರ್ಷಗಳಾಯ್ತು ಸುಮಾರು 5-6 ಸಾವಿರ ಜನಗಳು ವಾಸಿಸುತ್ತಾರೆ ದೊಡ್ಡಗ್ರಾಮ, ಬ್ರಾಹ್ಮಣ ಶ್ರೇಣಿಯಲ್ಲಿ ಸುಮಾರು 40 50 ಮನೆಗಳಿವೆ ರಾತ್ರಿ ಕಾಲದಲ್ಲಿ ಮನೆಬಿಟ್ಟು ಹೊರಗೆ ಬರಲು ಆಗುವದೇ ಇಲ್ಲ 10 ಲಾಂದ್ರ ಕಂಬಗಳನ್ನು ಸ್ಯಾಂಕ್ಷನ್ ಮಾಡಿದಲ್ಲಿ ಬಹಳ ಅನುಕೂಲವಾಗುತ್ತೆ ಇಲ್ಲಿ ಸ್ಯಾನಿಟೇಷನ್ ಸ್ವಲ್ಪವೂ ಚೆನ್ನಾಗಿಲ್ಲ ಈ ವಿಷಯದಲ್ಲಿ ಕುಣಿಗಲ್ ತಾ।। ಅಮಲ್ದಾರ್ರು ನಿಗಾ ಕೊಡಬೇಕಾಗಿರುತ್ತೆ ಲಾಂದ್ರಗಳನ್ನು ಇಡಿಸತಕ್ಕದ್ದು ಮತ್ತು ಬೀದಿಗಳಲ್ಲಿ ಚರಂಡಿಯನ್ನು ಹೊಡಸಿ ಮಳೆಗಾಲದಲ್ಲಿ ಬೀದಿಯ ನೀರನ್ನು ಮನೆಯೊಳಗೆ ಓಡದಂತೆ ತಪ್ಪಿಸುವದಲ್ಲದೆ ಈ ಊರಿನಲ್ಲಿ ರತಕ್ಕ ಪೇಟೆಯಲ್ಲಿ ಹೋಗುವಾಗ ದಾರಿಯಲ್ಲಿ ಬಚ್ಚಲು ನೀರನ್ನು ತುಳಿದುಕೊಂಡು ಅಸಹ್ಯಪಡುತ್ತಿದ್ದೇವೆ

ಗೋರಿಬಿದನೂರು ತಾ।। ರಮಾಪುರ —ಇಲ್ಲಿ ಒಂದು ತಿಂಗಳಿಂದಲೂ ಮಳೆ ಇಲ್ಲ ಜನಗಳು ಮೋಡವನ್ನೇ ಎದುರುನೋಡುತ್ತಿದ್ದಾರೆ ಮಳೆಯೇ ಜೀವನಾಧಾರವಾಗಿರುವ ಇಲ್ಲಿನ ಜನಗಳ ಪಾಡು ಹೇಳತೀರದು ಜೀವರಾಶಿಗಳಿಗೆ ಕುಡಿಯುವುದಕ್ಕೆ ಕೆರೆಯಲ್ಲಿ ಒಂದು ತೊಟ್ಟು ನೀರೂ ಇಲ್ಲ ಧಾರಣೆವಾಸಿಗಳು ಏರುತ್ತಲಿವೆ ಕೂಲಿ ನಾಲಿ ಮಾಡುವವರ ಕಷ್ಟವು ವರ್ಣಿಸಲು ಅಶಕ್ಯವಾಗಿದೆ ಪುನಹ ಬರ ಬರಬಹುದೆಂದು ಜನಗಳು ಎಲ್ಲೆಲ್ಲಿಯೂ ಭಯಪಡುತ್ತಿದ್ದಾರೆ — ಇಲ್ಲಿ ಸ್ಕೂಲ್ ಮಾಸ್ಟರಾಗಿದ್ದ ಮ।। ವೈ ಸುಬ್ಬಯ್ಯನವರು ನಾರ್ಮಲ್ ಸ್ಕೂಲಿಗೆ ಹೋದರು ಇವರು ಇಲ್ಲಿದ್ದ ಕೊಂಚಕಾಲದಲ್ಲಿ ಹುಡುಗರ ಸಂಖ್ಯೆಯನ್ನು 25 ರಿಂದ 60 ರ ವರೆಗೂ ಹೆಚ್ಚಿಸಿ ವಿದ್ಯೆಯನ್ನು ಬಹಳ ಮುತುವರ್ಜಿಯಿಂದ ಹೇಳುತ್ತಿದ್ದರು ಇವರು ಪುನಹ ಇಲ್ಲಿಗೆ ಬರಲೆಂದು ಪ್ರಾರ್ಥಿಸುತ್ತೇವೆ ಇವರ ನಂತರ ಈಗ ಬಂದಿರುವ ಮ।। ನಂಜುಂಡಯ್ಯನವರೂ ಕೂಡ ಒಳ್ಳೇ ಹೆಸರನ್ನು ಪಡೆಯುತ್ತಾರೆಂದು ನಂಬುತ್ತೇವೆ ವಿದ್ಯಾಭಿವೃದ್ಧಿಯು ಚೆನ್ನಾಗಿ ನಡೆಯುತ್ತಿದ್ದಾಗ್ಯೂ ಅನೇಕ ಶ್ರೀಮಂತರನ್ನೊಳಗೊಂಡಿರುವ ಊರಿನಲ್ಲಿ ಸ್ಕೂಲ್ ಕಟ್ಟಡವಾಗದೇ ಇರುವುದು ಆಶ್ಚರ್ಯವಾಗುತ್ತದೆ ಸ್ಥಳದ ಮಹಾಶಯರು ಬೇಗನೇ ಕಟ್ಟಡವನ್ನು ಕಟ್ಟಿಸಿಕೊಡುವರೆಂದು ನಂಬುತ್ತೇವೆ

ಶಿಕಾರಿಪುರ.—ಈ ವಾರ ಸ್ವಲ್ಪ ಮಳೆ ಬಂದೂ ಪೈರಿಗೆ ಹದವಾಗಲಿಲ್ಲ. ಭತ್ತ ರಾಗಿ ಫಸಲು ಒಣಗುತ್ತಲಿದೆ ಜಿನಸಿ ಧಾರಣೆ ಬಹಳ ದುಬಾರಿಯಾಗಿದೆ ಬೆಳ್ಳ ರೂಪಾಯಿಗೆ ಎರಡು ಸೇರು ಕೊಡುತ್ತಾರೆ —ಈಗ ಎರಡು ವಾರದ ಹಿಂದೆ ಸಂತೆ ವಿಷಯದಲ್ಲಿ ಮಾಮೂಲು ಸ್ಥಳವಾದ ಆಸ್ಪತ್ರೆ ಮೈದಾನಿನಲ್ಲಿ ನಡೆಸುವುದು ಉತ್ತಮವೆಂತ ಅಮಲ್ದಾರ್ರವರು ಖಂಡಿತವಾದ ಅಭಿಪ್ರಾಯವುಳ್ಳವರಾಗಿದ್ದರು ಇದನ್ನು ತಿಳಿದ ಅನೇಕ ಸ್ಥಳ ಪರಸ್ಥಳದ ವ್ಯಾಪಾರಸ್ಥರು ಸಂತೋಷ ಭರಿತರಾಗಿದ್ದರು ಆದರೆ ಸಂತೆ ಮಾತ್ರ ಊರಲ್ಲೇ ಈಗ 2 ವಾರ ನಡೆಯಿತು ಅಮಲ್ದಾರ್ರವರು ಕಾರಣವಿಲ್ಲದೆ ತಟಸ್ಥರಾಗಿರಲಿಕ್ಕಿಲ್ಲ ಈ ವಾರ ಒಬ್ಬರ ಮನೆಯಲ್ಲಿ ದುರ್ವಾಸನೆಯಾದ್ದರಿಂದ ಮನೆ ಬಿಟ್ಟಿದ್ದಂತೆ ತಿಳಿಯಿತು ಇದರ ಪಕ್ಕದ ಮನೆಯಲ್ಲಿ ಗಂಟಲು ನೋವಿನಿಂದ ಒಬ್ಬನು ಸತ್ತಿರುವನು ಇದೆಲ್ಲಾ ನೋಡಿದರೆ ಪ್ಲೇಗಿನ ಅನುಮಾನವು ತಪ್ಪಿಲ್ಲ ಆದ್ದರಿಂದ ಸಂತೆಯನ್ನು ಮೈದಾನಿನಲ್ಲಿ ನಡಿಸುವದು ಕ್ಷೇಮಕರವಾಗಿರುತ್ತೆ —ಈಗ 6 7 ವರುಷಗಳಿಂದ ಎ ವಿ ಸ್ಕೂಲು ಹೆಡ್ ಮಾಸ್ಟರಾಗಿದ್ದ ಮ।। ಎಂ ಶ್ರೀನಿವಾಸರಾಯರು ಸೊರಬಕ್ಕೆ ವರ್ಗವಾಗಿ ಹೋದರು ಇವರು ಕನ್ನಡ ಭಾಷಾಪರಿಚಯವುಳ್ಳವರಾಗಿದ್ದರು ಇನ್ನು ಮುಂದಾದರೂ ಇಂಗ್ಲೀಷು ಗ್ರಾಜುಯೇಟ್ ಹೆಡ್ ಮಾಸ್ಟರನ್ನು ಇಲ್ಲಿ ಇಟ್ಟರೆ ಇಂಗ್ಲೀಷು ಮತ್ತು ಕನ್ನಡ ಕ್ಲಾಸಿನ ವಿದ್ಯಾರ್ಥಿಗಳು ತುಂಬಾ ವಿದ್ಯಾವಂತರಾಗಬಹುದು ಈಗ ಬಂದಿರುವ ಹೆಡ್ ಮಾಸ್ಟರು ಕನ್ನಡಪಾಠವನ್ನಾದರೂ ತುಂಬಾ ಉತ್ಸಾಹದಿಂದ ಹೇಳತಕ್ಕವರೆಂದು ಕೇಳುತ್ತೇನೆ

ದೇವನಹಳ್ಳಿ —ಮಳೆ ಸುತರಾಂ ಇಲ್ಲ ಬೆಳೆಗಳೆಲ್ಲಾ ಒಣಗಿಹೋಗುತ್ತಾ ಇವೆ ದನಕರುಗಳಿಗೆ ಮೇವು ಸಿಕ್ಕುವುದೇ ಕಷ್ಟವಾಗಿದೆ ಧಾರಣೆವಾಸಿಗಳ ವಿಷಯವಂತೂ ಹೇಳತೀರದು, ರೂಪಾಯಿಗೆ 13 14 ಸೇರು ರಾಗಿ ಮಾರುತ್ತಿದೆ —ಊರಿನಲ್ಲಿ ಕಳ್ಳರ ಕಾಟ ಹೆಚ್ಚಾಗುತ್ತಲಿದೆ ಪ್ರತಿ ದಿನ ರಾತ್ರಿಯೂ 2 3 ಮನೆಗಳಲ್ಲಿ ಕಳ್ಳರ ಗಲಭೆಯುಂಟು ಪೋಲೀಸಿನವರ ನಿಗಾ ತುಂಬಾ ಕಡಮೆಯಾಗಿರುತ್ತದೆ ರಾತ್ರಿಹೊತ್ತು ಪೋಲೀಸಿನವರ ಸುಳುವೇ ಕಂಡುಬರುವುದಿಲ್ಲ ನಮ್ಮ ಪೋಲೀಸ್ ಇನ್‌ಸ್ಪೆಕ್ಟರವರು ಈ ವಿಷಯದಲ್ಲಿ ತುಂಬಾ ಮುತುವರ್ಜಿ ವಹಿಸಬೇಕಾಗಿರುತ್ತದೆ —ಮ್ಯುನಿಸಿಪಲ್ ಲಾಂದ್ರಗಳು ಕೆಲವು ಮಾತ್ರ ಉರಿಯುವವು ಇನ್ನು ಕೆಲವು ಹತ್ತಿಸಿದ ಕೊಂಚಹೊತ್ತಿನಲ್ಲಿ ನಂದಿಹೋಗುತ್ತವೆ ಬರ್ನರುಗಳು ತುಂಬಾ ಹಳೆಯವಾಗಿ ಕೆಟ್ಟುಹೋಗಿರುವದೇ ಹೀಗಾಗಲು ಕಾರಣವೆಂದು ತಿಳಿಯುತ್ತೇನೆ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟರವರು ಇವುಗಳನ್ನು ಜಾಗ್ರತೆ ಸರಿಪಡಿಸಿ ಕೊಡುವರೆಂದು ನಂಬುತ್ತೇನೆ —ಸಂಸ್ಥಾನದ ಸರ್ಕಾರಿ ಸ್ಕೂಲುಗಳಿಗೆ ಸಂತೆ ದಿನ ಮಧ್ಯಾಹ್ನವೂ, ಭಾನುವಾರ ಅಥವಾ ಶನಿವಾರ ಮಧ್ಯಾಹ್ನವೂ ಮತ್ತು ಭಾನುವಾರವೂ ಅಂತು ವಾರಕ್ಕೆ ಒಂದೂವರೆ ದಿನ ರಜಾ ಕೊಡುವಂತೆ ರೂಲಸು ಇವೆ ಇಲ್ಲಿನ ಹಿಂದುಸ್ಥಾನಿ ಸ್ಕೂಲೂ ಮಿಷನ್ ಸ್ಕೂಲೂ ಆ ರೀತಿ ನಡೆಯುವವು ಆದರೆ ಗವರ್ನ್‌ಮೆಂಟ್ ಎ ವಿ ಸ್ಕೂಲಿಗೆ ಮಾತ್ರ ಸಂತೆ ದಿನ ಮಧ್ಯಾಹ್ನವೂ, ಶನಿವಾರ ಮಧ್ಯಾಹ್ನವೂ, ಭಾನುವಾರವೂ ಅಂತು ವಾರಕ್ಕೆ ಎರಡು ದಿನ ರಜಾ ಬಿಡುತ್ತಾರೆ ಈ ರೀತಿ ಒಬ್ಬೊಬ್ಬರಿಗೆ ಒಂದೊಂದು ವಿಧವಾದ ಸರ್ಕ್ಯುಲರ್ ಕೊಟ್ಟಿರುವುದು ಯಾಕೋ ತಿಳಿಯದು ವಿದ್ಯಾ ಇಲಾಖೆಯವರು ಇದನ್ನು ಕ್ರಮಪಡಿಸುವರೆಂದು ನಿರೀಕ್ಷಿಸುತ್ತೇನೆ

ಹಳ್ಳಿಗಾಡಿನ ಅವ್ಯವಸ್ಥೆಗಳು

ಸಾಧಾರಣವಾಗಿ ಎಲ್ಲಾ ದೇಶಗಳಲ್ಲಿಯೂ ಪಟ್ಟಣಗಳಿಗಿಂತ ಹಳ್ಳಿಗಾಡುಗಳ ಸಂಖ್ಯೆಯೇ ಹೆಚ್ಚಾಗಿದೆ ಅದರಲ್ಲೂ ನಮ್ಮ ಮೈಸೂರು ದೇಶದಲ್ಲಿ 8 ಡಿಸ್ಟ್ರಿಕ್ಟುಗಳೂ, 69 ತಾಲ್ಲೂಕುಗಳೂ, ಇವಕ್ಕೆ 20 ರಷ್ಟಕ್ಕಿಂತ ಹೆಚ್ಚಾಗಿಯೇ ಹಳ್ಳಿಗಳೂ ಇರುತ್ತವೆ ಇವುಗಳಲ್ಲಿ ದೊಡ್ಡ ದೊಡ್ಡ ತಾಲ್ಲೂಕುಗಳೇ ವಿದ್ಯಾಭ್ಯಾಸ, ಆರೋಗ್ಯ, ವ್ಯವಸಾಯ ಮುಂತಾದ ವಿಚಾರಗಳಲ್ಲಿ ಹೀನಸ್ಥಿತಿಯಲ್ಲಿರುವಾಗ ಬಡಗ್ರಾಮಗಳನ್ನೂ, ಅಧಿಕವಾದ ಬಡಜನಗಳ ವಿದ್ಯಾಹೀನಸ್ಥಿತಿಯನ್ನೂ ಹೇಳಬೇಕಾಗಿಯೇ ಇಲ್ಲ ಸರಿಯಾದ ವಿದ್ಯಾಶಿಕ್ಷಣವಿಲ್ಲದ್ದರಿಂದ ಅವರುಗಳಿಗೆ ಉಂಟಾಗುವ ಕಷ್ಟನಷ್ಟಗಳನ್ನೂ, ಅವರುಗಳ ಪೂರ್ವದ ನಾಗರಿಕತೆಯನ್ನೂ ಸ್ವಲ್ಪಮಟ್ಟಿಗೆ ತಿಳಿಸುತ್ತೇನೆ

ಗ್ರಾಮದಲ್ಲಿರುವ ಬಡ ಜನರು ಅಲ್ಪ ಸ್ವಲ್ಪ ಭೂಮಿಯನ್ನಿಟ್ಟುಕೊಂಡು ವ್ಯವಸಾಯಮಾಡಿ ಸಾಲದ್ದಕ್ಕೆ ಕಷ್ಟಪಟ್ಟು ಕೂಲಿಮಾಡಿ ಜೀವಿಸುವ ಒಂದು ಜಾತಿ ಒರಟು ಜನರಾಗಿದ್ದಾರೆ ಒರಟರೆಂದರೆ ಕೆಲವರಿಗೆ ಕೋಪ ಬರಬಹುದು ಇವರಿಗೆ ವಿದ್ಯೆ ಇಲ್ಲದ್ದರಿಂದ ಹೀಗೆ ಹೇಳಬೇಕಾಯಿತು ಜನರಿಗಾಗಿ ಘನವಾದ ಸರ್ಕಾರದವರು ಅಲ್ಲಲ್ಲಿ ಸ್ಕೂಲುಗಳನ್ನು ಏರ್ಪಡಿಸಿ, ಕಳ್ಳರಿಂದ ಕದಿಯುವದಕ್ಕೆ ಅಸಾಧ್ಯವಾಗಿಯೂ, ಅಣ್ಣತಮ್ಮಂದಿರಿಗೆ ಭಾಗವಿಲ್ಲದ್ದಾಗಿಯೂ, ಹೋದ ಕಡೆಯಲ್ಲಿ ಬಂಧುಜನಗಳಂತೆ ಆದರಿಸುವದಾಗಿಯೂ ಇರುವ "ವಿದ್ಯಾಧನ" ವನ್ನು ಕೊಟ್ಟು ಕಾಪಾಡಬೇಕೆಂದು ಲಕ್ಷಾಂತರ ರೂಪಾಯಿ ಖರ್ಚುಮಾಡುತ್ತಿರುವದು ಸರ್ವರಿಗೂ ತಿಳಿದೇ ಇದೆ ಆದರೆ ಹಳ್ಳಿಗಾಡಿನವರು ಇದರ ಪ್ರಯೋಜನವನ್ನು ಹೊಂದದೆ ಇರುವದಕ್ಕಾಗಿ ಬಹಳವಾಗಿ ವಿಷಾದಿಸಬೇಕು ಹಳ್ಳಿಗಾಡಿನ ರೈತರು ತಮ್ಮ ಮಕ್ಕಳನ್ನು ಸ್ಕೂಲಿಗೆ ಕಳುಹಿಸಿದರೆ ಅವರು ಅಲ್ಲಿ ಕೆಟ್ಟುಹೋಗುವರೆಂತಲೂ, ಅದರಿಂದ ತಮಗೇನೂ ಪ್ರಯೋಜನವಿಲ್ಲವೆಂತಲೂ ಊಹಿಸಿ ಸ್ಕೂಲಿಗೆ ಕಳುಹಿಸದೆ ತಮ್ಮ ಗ್ರಾಮಗಳಲ್ಲೇ ಒಂದೊಂದು ಕೂಲೀ ಮಠವನ್ನು ಏರ್ಪಡಿಸಿಕೊಂಡು ಅದರಲ್ಲಿ ಜೈಮಿನಿ, ಭಾರತ ಮುಂತಾದ ಪುರಾಣಗಳನ್ನು ಮಕ್ಕಳಿಗೆ ಬಾಯಿಪಾಠಮಾಡಿಸಿ ಕೇಳಿ ಸಂತುಷ್ಟರಾಗುತ್ತಾರೆ ರಾತ್ರಿಕಾಲಗಳಲ್ಲಿ ಕೇಳಿ ಆಟಗಳನ್ನು ಕಲಿಯಬೇಕೆಂತಲೂ, ಅದಕ್ಕಾಗಿ ಪ್ರತಿ ಒಬ್ಬನೂ ಒಬ್ಬ ಹುಡುಗನನ್ನು ರಾತ್ರಿ ಕಳುಹಿಸಬೇಕೆಂತಲೂ ತೀರ್ಮಾನಮಾಡಿಕೊಂಡು ದಮಟೆ, ಮೃದಂಗ, ತಾಳ ಮುಂತಾದ ಪೀಪೀ ವಾದ್ಯಗಳನ್ನು ಬಾರಿಸುತ್ತಾ, ರಾಕ್ಷಸರಂತೆ ಘಟ್ಟಿಯಾಗಿ ಹೋ ಎಂದು ಕೂಗಿಕೊಳ್ಳುತ್ತಾ ತಾವೇ ರಾತ್ರಿ ಎರಡು ಘಂಟೆ ವರೆಗೆ ನಿದ್ದೆ ಕೆಡುವದಲ್ಲದೆ ಸಮೀಪದ ಗ್ರಾಮದವರಿಗೂ ನಿದ್ದೆ ಕೆಡಿಸುವದೇ ಮುಂತಾದ ಹಿಂಸಕರವಾದ ಕಾರ್ಯಗಳಲ್ಲಿ ನಿಪುಣರಾಗಿರುತ್ತಾರೆ ಇದಕ್ಕೆ ದೃಷ್ಟಾಂತರವಾಗಿ ನನಗೆ ಚೆನ್ನಾಗಿ ತಿಳಿದಿರುವ ಒಂದು ಹಳ್ಳಿಯ ಅವಸ್ಥೆಯನ್ನು ಇಲ್ಲಿ ತಿಳಿಸುತ್ತೇನೆ

ಚಾಮರಾಜನಗರದ ತಾಲ್ಲೂಕು ವೆಂಕಟಯ್ಯನ ಛತ್ರದಲ್ಲಿ ಸರ್ಕಾರಿ ಸ್ಕೂಲೊಂದಿದೆ ಇದಕ್ಕೆ ಹೊಸೂರು, ಅಂಕನಶೆಟ್ಟಿಪುರ, ಬಸವಾಪುರ ಎಂಬ ಮೂರು ಗ್ರಾಮಗಳು ಸೇರಿವೆ ಈ ಮೂರು ಗ್ರಾಮಗಳಲ್ಲಿಯೂ ಇಲ್ಲಿನ ಸ್ಕೂಲಿನ ಮೆಂಬರುಗಳಿರುತ್ತಾರೆ ಈ ಮೆಂಬರುಗಳ ಒಂದು ಮಗುವಾದರೂ ಸ್ಕೂಲಿಗೆ ಬರುವುದಿಲ್ಲ ಸ್ಕೂಲಿನಲ್ಲಿ ಸರಾಸರಿ 15 20 ಹುಡುಗರಿದ್ದಾರೆ ಈ ಮೂರು ಗ್ರಾಮಗಳಲ್ಲಿ ಸ್ಕೂಲಿಗೆ ಬರತಕ್ಕ ಹುಡುಗರು 150 ರ ವರೆಗಿದ್ದಾರೆ ಸದರೀ ಗ್ರಾಮದವರು ಸ್ಕೂಲಿಗೆ ತಮ್ಮ ಹುಡುಗರನ್ನು ಕಳುಹಿಸದೆ ಕೂಲಿ ಮಠಗಳನ್ನು ಏರ್ಪಡಿಸಿಕೊಂಡು ಅಲ್ಲಿ ಜೈಮಿನಿ, ಭಾರತ ಮುಂತಾದವುಗಳನ್ನು ಬಾಯಿಪಾಠವಾಗಿ ಕಲಿಸಿ, ಕೈಯಲ್ಲಿ ಅಲಂಕಾರಕ್ಕಾಗಿ ಒಂದು ಪುಸ್ತಕವನ್ನು ಕೊಟ್ಟು, ಮೊದಲಿಂದ ಕೊನೆಯವರೆಗೂ ಅವರೆಳೆಯುವ ರಾಗವನ್ನು ಕೇಳಿ ಸಂತೋಷಚಿತ್ತರಾಗುತ್ತಾರೆ ಇಂಥಾ ಅಜ್ಞಾನಿಗಳನ್ನು ಒರಟರೆಂತ ಯಾಕೆ ಕರೆಯಬಾರದು? ಈ ಗ್ರಾಮದಲ್ಲಿ ಕೆಲವು ಬ್ರಾಹ್ಮಣರಿರುವದರಿಂದ ಆಫೀಸರು ಇನ್‌ಸ್ಪೆಕ್ಷನ್‌ಗೆ ಬಂದಾಗ ಯಾರಾದರೂ ಮೆಂಬರಲ್ಲದ ಒಬ್ಬಿಬ್ಬರು ಹೋಗಿ—ಸ್ವಾಮಿ, ಈ ಮಾಸ್ಟರು ಸರಿಯಾಗಿ ಪಾಠ ಹೇಳುವದಿಲ್ಲ ಬೇರೆ ಮಾಸ್ಟರನ್ನು ಕೊಡಬೇಕು ಎಂದು ಜಗಳವಾಡುವದರಲ್ಲಿ ನಿಪುಣರೇ ಹೊರತು ಯಾವ ರೀತಿಯಲ್ಲಿ ಆ ಮಾಸ್ಟರಿಂದ ಸರಿಯಾಗಿ ಕೆಲಸ ತೆಗೆದುಕೊಳ್ಳಬೇಕೋ ತಮ್ಮ ಹುಡುಗರನ್ನೂ ಇತರರನ್ನೂ ಹ್ಯಾಗೆ ಮುಂದಕ್ಕೆ ತರಬೇಕೋ ಅವರ ಯೋಚನೆಯೇ ಇಲ್ಲ ನಿಷ್ಪ್ರಯೋಜಕವಾಗಿ ಹಳ್ಳಿ ಶೂದ್ರರು ಕಷ್ಟಪಟ್ಟು ಸಂಪಾದಿಸುವ ಅಲ್ಪಸ್ವಲ್ಪ ದ್ರವ್ಯವು ಅಧಿಕಾರಿಗಳಿಗೆ ದಂಡ ತೆರುವುದಕ್ಕೂ ಕೋರ್ಟು ಕಚೇರಿಗಳಲ್ಲಿ ವ್ಯಾಜ್ಯವಾಡುವುದಕ್ಕೂ ಸಾಲದು ಅವರಿಗೆ ಸರಿಯಾದ ವಿದ್ಯೆಯಿದ್ದರೆ ಇಷ್ಟರಮಟ್ಟಿಗೆ ಆಗಲಾರದು ಸರ್ಕಾರದವರಲ್ಲಿ ನಿಜಭಯವಾಗಿಯೂ ಪ್ರಜೆಗಳಿಗೆ ವಿದ್ಯೆ ಕಲಿಸಬೇಕೆಂಬ ಇಷ್ಟವಿದ್ದರೆ ನೆನ್ನೆ ವಾರದ ತಮ್ಮ ಪತ್ರಿಕೆಯಲ್ಲಿ ಕರ್ನಾಟಕ ಭಾಷಾಭಿಮಾನಿ ಯಿಂದ ಬರೆಯಲ್ಪಟ್ಟ "ದೇಶೋನ್ನತಿಯ ಕಾರಣ" ವನ್ನು ಅವರ ಘನವಾದ ಅವಗಾಹನೆಗೆ ತಂದುಕೊಂಡು ಅದರಂತೆ ನಡಿಸಿದರೆ ಬಲಾತ್ಕಾರ ವಿದ್ಯಾಭ್ಯಾಸಕ್ಕಿಂತಲೂ ಒಳ್ಳೆಯದೆಂದು ಕಾಣುತ್ತದೆ

ವಿದ್ಯಾ ವಿಚಾರವು ಹೀಗಾಯಿತು ಇನ್ನು ಆರೋಗ್ಯವಿಚಾರವನ್ನು ನೋಡೋಣ ಈ ಊರಿನ ಮಧ್ಯದಲ್ಲಿರುವ ಕೊಳದಲ್ಲಿ ಬೀದಿಯಲ್ಲಿ ಹಾಕಿದ ಎಂಜಲೆಲೆಗಳು ಗಾಳಿಗೆ ಕೊಳದಲ್ಲಿ ಬಿದ್ದು ಕೊಳೆಯುವುದು, (2) ಪಾತ್ರೆ ತೊಳೆಯುವುದು, (3) ಸುತ್ತು ಮುತ್ತಿನ ಗ್ರಾಮದವರೆಲ್ಲರೂ ಸೀರೆ ಒಗೆಯುವುದು, (4) ಎಮ್ಮೆಗಳು ಸದಾ ನೀರಿನಲ್ಲಿ ಬಿದ್ದಿರುವುದು, ಈ ಮುಂತಾದ್ದರಿಂದ ನೀರು ಕೆಟ್ಟು ದುರ್ಗಂಧಮಯವಾಗಿ ಬೀದಿಯಲ್ಲಿ ಸಂಚರಿಸುವುದೇ ಕಷ್ಟವಾಗಿದೆ ಹೀಗೆ ಎಲ್ಲಾ ಹಳ್ಳಿಗಳಲ್ಲಿಯೂ ಇರಲಾರದು ಇಲ್ಲಿ ಅನೇಕ ಪಾಳು ಭೂಮಿಗಳೂ, ಮೋಟು ಗೋಡೆಗಳೂ ಇದ್ದು ಜನಗಳ ಮಲಮೂತ್ರಾದಿಗಳಿಗೆ ಆಶ್ರಯವಾಗಿರುವುದಲ್ಲದೆ ಪಾಪಾಸುಕಳ್ಳಿ, ಎಸಳೆ, ಎಕ್ಕದ ಗಿಡ ಮುಂತಾದ್ದನ್ನು ಬೆಳೆಯಿಸಿ, ಹಾವು ಚೇಳು ಮುಂತಾದ ದುಷ್ಟಜಂತುಗಳನ್ನು ಸಾಕುತ್ತಾ, ಅಲ್ಲಿ ಹುಟ್ಟುವ ವಿಷಕರವಾದ ಹವಾದಿಂದ ಜನರಿಗೆ ಮೊದಲು ಜ್ವರ ಎಂದು ಸ್ಥಿರವಾದ ವಾಯುಹಿಡಿದು ಮಲಗಿದ ಸ್ಥಳವನ್ನು ಬಿಟ್ಟೇಳಲಾರದಂತೆ ಮಾಡತಕ್ಕ ಒಂದು ಬಗೆಯ ನೂತನ ಜಾಡ್ಯವನ್ನು ಈಗಲೇ 10 12 ಜನಗಳ ಮೇಲೆ ಅನುಭವಿಸುತ್ತಿದ್ದಾರೆ ಇಷ್ಟಾದರೂ ಇಲ್ಲಿನ ಜನರಿಗೆ ಬುದ್ಧಿ ಬರಲಿಲ್ಲ ಇಷ್ಟೇ ಅಲ್ಲ ಇಲ್ಲಿಯ ಜನರು ತಮ್ಮ ಪಾಳು ನಿವೇಶನಗಳನ್ನು ಮನೆಯಿಲ್ಲದೆ ತಾಪಡುವ ಜನರು ಕಟ್ಟಿಕೊಳ್ಳುತ್ತೇವೆಂದರೂ, ಖರೀದಿಗೂ ಕೊಡದೆ ಇರುವದನ್ನು ನೋಡಿದರೆ ಹುಲ್ಲಿನಲ್ಲಿ ಮಲಗಿರುವ ನಾಯಿ ಆ ಹುಲ್ಲು ತನಗೆ ಪ್ರಯೋಜನವಿಲ್ಲದಿದ್ದಾಗ್ಯೂ ಹುಲ್ಲು ತಿನ್ನುವದಕ್ಕೆ ಬಂದ ಹಸುವನ್ನು ಓಡಿಸಿತು ಎಂಬ ಗಾದೆಯು ಜ್ಞಾಪಕಕ್ಕೆ ಬರುತ್ತಿದೆ ಇದೆಂಥಾ ಅಸೂಯೆಯೋ ತಿಳಿಯದು

ಮುಖ್ಯವಾಗಿ ಹಳ್ಳಿಗಾಡಿನ ಜನರು ಕೇವಲ ರಾಗ ಶೋಭಿತವಾದ ಜೈಮಿನಿ ಮೊದಲಾದ ಪುರಾಣಗಳನ್ನು ಅರ್ಥವಿಲ್ಲದೆ ತಮ್ಮ ಮಕ್ಕಳಿಗೆ ಬಾಯಿಪಾಠಮಾಡಿಸಿ, ಅವರ ಎಳೆಯ ಬುದ್ಧಿಯನ್ನು ಕ್ರಮಪಡಿಸುವದನ್ನೂ, ಹಾಗೆ ಬಾಯಿಪಾಠ ಹೇಳಿಕೊಟ್ಟ ಉಪಾಧ್ಯಾಯರಿಗೆ ಕೊಡತಕ್ಕ ಮಿರಾಸು ಕೊಡುವದನ್ನೂ ತಪ್ಪಿಸಿ, ತಮ್ಮ ಊರಿಗೆ ಸಮೀಪದಲ್ಲಿರುವ ಸರ್ಕಾರಿ ಸ್ಕೂಲುಗಳಿಗೆ ಹುಡುಗರನ್ನು ಕಳುಹಿಸಿ, ಅವರಿಗೆ ಧ್ಯರ್ಯ, ವ್ಯವಹಾರ ಜ್ಞಾನಗಳನ್ನು ಕಲಿಸಿ ಶ್ರೇಯಸ್ಸನ್ನುಂಟುಮಾಡಬೇಕೆಂಬುವುದೇ ಸರ್ಕಾರದವರ ಮುಖ್ಯಾಭಿಪ್ರಾಯವೆಂದು ಬಿನ್ನೈಸುತ್ತೇನೆ ಪ್ರಜೆಗಳ ಮಕ್ಕಳಿಗಾಗಿ ಲಕ್ಷಾಂತರ ರೂಪಾಯಿ ಖರ್ಚುಮಾಡಿ ವಿದ್ಯಾಶಾಲೆಗಳನ್ನು ಸರ್ಕಾರದವರು ಸ್ಥಾಪಿಸಿದ್ದಾರೆಂದು ತಿಳಿದು, ಅವರು ತಮ್ಮ ಮಕ್ಕಳನ್ನು ಸರ್ಕಾರಿ ಸ್ಕೂಲುಗಳಿಗೆ ಕಳುಹಿಸಿ ಜ್ಞಾನವನ್ನು ಪಡೆಯುವವರಾಗಲಿ ಮತ್ತು ಗ್ರಾಮಗಳನ್ನು ಚೊಕ್ಕಟವಾಗಿಟ್ಟುಕೊಂಡು ರೋಗಕ್ಕೆ ಆಸ್ಪದವಿಲ್ಲದಂತೆ ಸುಖವಾಗಿ ಬಾಳಲಿ ಎಂಬುವದೇ ನನ್ನ ಅಭಿಮತ

ವಿದ್ಯಾಭಿಮಾನಿ

ಕೋಆಪರೇಟಿವ್ ಸೊಸೈಟಿಗಳು

ಕಡೂರು

ಸೊಸೈಟಿಗಳ ಇನ್‌ಸ್ಪೆಕ್ಟರವರು ಕಳೆದ ತಿಂಗಳಲ್ಲಿ ದಯಮಾಡಿ ಲೆಕ್ಕ ಪತ್ರಗಳನ್ನು ತನಿಖೆಮಾಡಿದಾಗ್ಗೆ ಆಗ್ಗೆ ಸೆಕ್ರಿಟರಿಯವರಾಗಿದ್ದ ಶಿರಸ್ತೇದಾರ್ ಮ|| ನಾರಾಯಣರಾಯರು ತಮ್ಮ ಕೆಲಸದೊಂದಿಗೆ ಈ ಕೆಲಸವನ್ನು ನಡಿಸಲು ಅನನುಕೂಲವಾಗಿರುತ್ತೆಂದು ಹೇಳಿದ ಮೇಲೆ ಕಮಿಟಿ ಮೆಂಬರು ಮುಂತಾದವರು ಈ ಭಾರಕ್ಕೆ ಮ|| ಶೇಕದಾರ್ ಚನ್ನಪ್ಪಯ್ಯನವರನ್ನು ಗೊತ್ತುಮಾಡಿದರು ಆ ಲಾಗಾಯ್ತು ಇವರು ಜನಗಳಿಗೆ ಪ್ರೋತ್ಸಾಹಿಸಿ ಒಂದು ತಿಂಗಳಲ್ಲಿಯೇ 500 ಷೇರುದಾರರನ್ನು ಸೇರಿಸಿ ಮೊಬಲಗು ವಸೂಲ್‌ಮಾಡಿ ಲೇವಾದೇವಿ ಚಾಲ್ತಿ ನಡಿಸುತ್ತಿರುವದು ಶ್ಲಾಘನೀಯವಾಗಿದೆ ಈ ವರೆಗೆ ಸುಮಾರು 600 ಷೇರುಗಳು ಸೇರಿದೆ ಇನ್ನೂ ಇತರರು ಸೇರುತ್ತಲೇ ಇದ್ದಾರೆ ಮುಖ್ಯವಾಗಿ ಹಿಂದೆ ಬಿದ್ದು ಹೋಗಿದ್ದ ಈ ಸೊಸೈಟಿಯು ಅಭಿವೃದ್ಧಿಗೆ ಬರುವಂತೆ ಕಮಿಟಿ ಮೆಂಬರುಗಳು ಸಹ ಜನಗಳಿಗೆ ಪ್ರೋತ್ಸಾಹಿಸಿ ಉನ್ನತ ಸ್ಥಿತಿಗೆ ತರುತ್ತಾರಾಗಿ ನಂಬಿದೆ

ಈ ಸೊಸೈಟಿಯ ಜನರಲ್ ಮೀಟಿಂಗು ತಾ 28 ರಲ್ಲಿ ಮ|| ತಂಗ್ಲಿ ಶೇಷಯ್ಯಂಗಾರ್ರ ಛತ್ರದಲ್ಲಿ ವಿಳಿಗ್ಗೆ ನಡಿಯಿತು ಇದಕ್ಕೆ ಕಮಿಟಿ ಮೆಂಬರುಗಳೂ, ಷೇರುದಾರರುಗಳೂ 30 40 ಜನದ ವರೆಗೂ ಸೇರಿದ್ದರು ವೈಸ್ ಪ್ರೆಸಿಡೆಂಟರು ಹಾಜರಿದ್ದರು ಹಾಜರಿದ್ದ ಮೆಂಬರುಗಳ ಪೈಕಿ ಮ|| ಪರ್‌ಷದ್ ಶಿರಸ್ತಾರ್ರವರನ್ನು ಅಗ್ರಾಸನಾಧಿಪತಿಗಳಾಗಲು ಎಲ್ಲರೂ ಅಭಿಪ್ರಾಯಪಟ್ಟರು ಸೊಸೈಟಿಯ ಜಮಾ ಖರ್ಚು, ಇನ್ನೂ ಆಗಬೇಕಾದ ತಿದ್ದುಪಾಟು ಮುಂತಾದ ವಿಚಾರ ಚರ್ಚೆ ನಡೆದು, ಈ ಸಲ ಕಾನ್‌ಫರೆನ್ಸಿಗೆ ಈ ಸೊಸೈಟಿಯಿಂದ ಮ ವಕೀಲ್ ಕೊಪ್ಪಾರಯ್ಯನವರನ್ನೂ, ಮ ರಾ ಅನಂತಬೋಯಿಸರನ್ನೂ ಚುನಾಯಿಸಲಾಯಿತು ಈ ಸೊಸೈಟಿ ಆಫೀಸಿಗೆ ಸರಿಯಾದ ಮನೆ ಇಲ್ಲದ್ದರಿಂದ ಮ|| ಕಂಟ್ರಾಕ್ಟುದಾರ್ ಮಧುರೆ ಮುದಲಿಯಾರ್ರವರು ದೇವಸ್ಥಾನಕ್ಕಾಗಿ ಕಟ್ಟಿಸುತ್ತಿರುವ ಮಳಿಗೆ ಪೈಕಿ ಒಂದನ್ನು ಬಾಡಿಗೆ ಇಲ್ಲದೆ ಕೊಡುವಂತೆ ಒಪ್ಪಿಕೊಂಡಿರುತ್ತಾರೆ ಇವರಂತೆ ಇತರರೂ ಪರಹಿತಕ್ಕಾಗಿ ಕೈಲಾದಮಟ್ಟಿಗೂ ಸಹಾಯಮಾಡಿ ಈ ಸಂಘವು ಪುರೋವೃದ್ಧಿ ಹೊಂದುವಂತೆ ಮಾಡುತ್ತಾರಾಗಿ ನಂಬುವ

ಒಬ ಮೆಂಬರು

ಹೊಳೆನರಸೀಪುರದ ತಾ ಟೋಡಿಹರಿಹರಪುರ

ಈ ಊರಿನ ಶ್ರೀಮದಾದಿಕೃಷ್ಣಸ್ವಾಮಿ ಕೋಆಪರೇಟಿವ್ ಸೊಸೈಟಿಯು ತಾ 28 7 1912 ರಲ್ಲಿ ಪ್ರಾರಂಭವಾಯಿತು 5 ರೂಪಾಯಿ ವಾಬ್ತು 1,000 ಷೇರುಗಳು ಮೂಲಧನ 5,000 ರೂಪಾಯಿ ಮಾತ್ರ ಈ ವರಿವಿಗೆ 76 ಜನ ಮೆಂಬರುಗಳು ಸೇರಿರುತ್ತಾರೆ 121 ಷೇರುಗಳು ಭರ್ತಿ ಆಗಿರುತ್ತೆ 1 105 8-0 ರೂಪಾಯಿ ಷೇರು ಮೊಬಲಗು ವಸೂಲಾಗಿರುತ್ತೆ ಡಿಪಾಜಿಟ್ ಮೊಬಲಗು ರೂ 1,216 8-0 ಬಂದಿರುತ್ತೆ ಮೆಂಬರುಗಳಿಗೆ 4,221 9 0 ರೂಪಾಯಿ ಸಾಲ ಕೊಟ್ಟಿರುತ್ತೆ 1912 13 ನೇ ಸಾಲಿನಲ್ಲಿ ರೂ 170 9 ಪೈ ನಫೆ ಉತ್ಪತ್ತಿ ಆಗಿರುತ್ತೆ ನೌಕರರಿಗೆ ಯಾವ ವಿಧವಾದ ರುಸುಮೂ ಇಲ್ಲ ಈ ಸೊಸೈಟಿಯ ಸಾಲಾಖೈರು ಜನರಲ್ ಮೀಟಿಂಗು ತಾ 20 9 1913 ರಲ್ಲಿ ನಡೆಯಿತು ಮೆಂಬರುಗಳಿಗೆ ಷೇರು ಮೊಬಲಗಿನ ಮೇಲೆ ಶೇಕಡ 12 ಆಣೆಯಂತೆ ನಫೆ ಹಂಚಲ್ಪಟ್ಟಿರುತ್ತೆ ರಿಜರ್ವ್ ಫಂಡಿಗೆ 100 ರೂಪಾಯಿ ತೆಗೆದಿರುತ್ತೆ ಬೆಂಗಳೂರು ಸೆಂಟ್ರಲ್ ಬ್ಯಾಂಕಿಗೆ ಕಳುಹಿಸುವದರಲ್ಲಿದೆ ಈ ಸೊಸೈಟಿಯ ಅಭಿವೃದ್ಧಿಸ್ಥಿತಿಗೆ ಮೂಲ ಕರ್ತರಾದ ನಮ್ಮ ತಾಲ್ಲೂಕು ಅಮಲ್ದಾರ್ ಮ|| ಆರ್ ತಿರುನಾರಾಯಣ ಅಯ್ಯಂಗಾರ್ಯರವರ ಪ್ರೋತ್ಸಾಹವೂ ಇವರ ಮೇಲೆ ಇರತಕ್ಕ ವಿಶ್ವಾಸವೂ ಈ ಸಂಘವನ್ನು ಇಂಥಾ ಹಳ್ಳಿಯಲ್ಲಿ ಅದರಲ್ಲೂ ಈ ಜೋಡಿಗ್ರಾಮದಲ್ಲಿ ಇಷ್ಟರ ಮಟ್ಟಿಗೆ ಏಳಿಗೆಗೆ ತಂದಿರುತ್ತೆ ಇದರಿಂದ ಈ ಹಳ್ಳಿಯಲ್ಲಿರತಕ್ಕ ಅನೇಕ ರೈತಾಪಿ ಜನಗಳಿಗೆ ಅನುಕೂಲವಾಗಿರುತ್ತೆ

ಆನೇಕಲ್ ತಾ ಹುಸ್ಕೂರು

ಈ ಗ್ರಾಮದ ಅನ್ಯೋನ್ಯ ಸಹಾಯಕ ಸಂಘದ ವಾರ್ಷಿಕ ಮೀಟಿಂಗನ್ನು ಕಳೆದ 13 ನೇ ತಾ ಬುಧವಾರ ಶ್ರೀಮದೂರಮ್ಮನ ದೇವಸ್ಥಾನದ ಮುಂಭಾಗದಲ್ಲಿ ತಳಿರು ತೋರಣಾದಿಗಳಿಂದ ಅಲಂಕೃತವಾದ ಚಪ್ಪರದಲ್ಲಿ ಅನೇಕ ದೊಡ್ಡ ಮನುಷ್ಯರೂ, ಸೊಸೈಟಿಯ ಮೆಂಬರುಗಳೂ ಸೇರಿ ನಡಿಸಿದರು ಆ ದಿನ ಬೆಳಿಗ್ಗೆ ಮೈಸೂರು ಸೀಮೆಯ ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರು ಚೆಟ್ಟಿಕೋಡಿ ಮೋಟಾರಿನಿಂದ ದಯಮಾಡಿಸುವಾಗ್ಗೆ ಈ ಗ್ರಾಮದ ಪ್ರಮುಖರಾಗ ವಸಂತಯ್ಯಂಗಾರ್, ರೆಡ್ಡಪ್ಪನವರು, ಬ್ಯಾಂಕು ಏಜೆಂಟರು ಮುಂತಾಗಿ ಅನೇಕ ಜನ ದೊಡ್ಡಮನುಷ್ಯರು ಬ್ಯಾಂಡು ವಾದ್ಯದಿಂದ ಅವರನ್ನು ಎದುರುಗೊಂಡು ಮಹಾಸಭೆಯಿಂದ ಮೀಟಿಂಗಿಗೆ ದಯಮಾಡಿಸಿದ ಕೂಡಲೆ ಬ್ಯಾಂಕು ಪ್ರೆಸಿಡೆಂಟರ ಪ್ರಾರ್ಥನೆಯಂತೆ ಅಗ್ರಾಸನಾಧಿಪತ್ಯವನ್ನು ವಹಿಸಿದರು ಮೀಟಿಂಗು ಪ್ರಾರಂಭವಾದ ಕೂಡಲೆ ಏಜಂಟರು ವೆಂಕಟರಂಗಯ್ಯಂಗಾರ್ರು ಸೊಸೈಟಿ ರಿಪೋರ್ಟನ್ನು ಓದಿದರು ಅದರ ಮುಖ್ಯ ಅಭಿಪ್ರಾಯವೇನಂದರೆ—ಈ ವರುಷ 135 ಜನ ಮೆಂಬರುಗಳು ಇದ್ದಾರೆ ಇವರ ಬಾಬತು ಷೇರ್ ಮೊಬಲಗು ವಸೂಲ್ ಬಂದದ್ದು 1,500 ರೂಪಾಯಿ ಸೆಂಟ್ರಲ್ ಬ್ಯಾಂಕಿನಿಂದ 8,000 ರೂಪಾಯಿ ಸಾಲ ತಂದು 135 ಜನಕ್ಕೆ ಸಾಲ ಕೊಟ್ಟಿದೆ ಈ ವರುಷ ಖರ್ಚು ಜಾತಾ 240 ರೂ ನಫೆ ಬಂದು ಇರುತ್ತೆ ಈ ಪೈಕಿ ರಿಜರ್ವ್ ಜಾತಾ ಉಳಿಯುವ ಮೊಬಲಗು ಷೇರ್‌ದಾರರಿಗೆ ಹಂಚತಕ್ಕದ್ದೆಂದು ವಗೈರೆ ರಿಪೋರ್ಟು ಓದಿದ ನಂತರ ಬ್ಯಾಂಕಿನ ಬಡ್ಡಿ ದರಾವನ್ನು 14 ಆಣೆಯಿಂದ 12 ಆಣೆಗೆ ಇಳಿಸಿದರು ಇನ್ನೂ ಇತರ ವಿಷಯಗಳು ಚರ್ಚಿಸಲ್ಪಟ್ಟವು

ಅನಂತರ ಬಲಗೈ ಜನಗಳ ಮೈಸೂರಾಂಬಾ ಸೊಸೈಟಿಯ ಮೀಟಿಂಗಿಗೆ ಪ್ರಾರಂಭವಾಯಿತು ಆ ಸೊಸೈಟಿಯ ರಿಪೋರ್ಟು ಓದಿದರು ಅದರ ಮುಖ್ಯ ವಿಷಯವೇನಂದರೆ—ಈ ಗ್ರಾಮದಲ್ಲಿ ದಿನ 1 ಕ್ಕೆ ರೂಪಾಯಿ 1 ಕಾಸಿನಂತೆ ಬಡ್ಡಿ ಕೊಟ್ಟು ಲವಾದೇವಿಯವರಲ್ಲಿ ಬಲಗೈ ಜಾತಿಯವರೂ ಕೂಲಿಯವರೂ ಲೇವಾದೇವಿ ಮಾಡುತ್ತಾ ಇದ್ದವರು ಬಹಳ ಹೀನಸ್ಥಿತಿಗೆ ಬಂದು ತಿನ್ನುವದಕ್ಕೆ ಮಾರ್ಗವಿಲ್ಲದ ಕಷ್ಟಪಡುತ್ತಾ ಇದ್ದದ್ದನ್ನು ರೆಜಿಸ್ಟ್ರಾರ್ ಸಾಹೇಬರವರು ಪರಾಂಬರಿಸಿ ಈ ಲಬ್ಬೆಯವರ ಬಾವಳಿ ತಪ್ಪಿಸಲು ಮೈಸೂರಾಂಬಾ ಎಂಬ ಹೆಸರಿನಿಂದ ಸೊಸೈಟಿ ಸ್ಥಾಪನೆಮಾಡಿ ಈ ಲಬ್ಬೆಯವರ ಮೊಬಲಗು ಸೊಸೈಟಿಯಿಂದ ಮೆಂಬರುಗಳಿಗೆ ಕೊಡಲು ಶ್ರೀಮನ್ ಮಹಾರಾಜರವರ ಫಂಡಿನಿಂದ 150 ರೂಪಾಯಿ ಸಾಲ ಕೊಡಿಸಿ ಇವರ ಬಾವಳಿ ತಪ್ಪಿಸಿದರು ಸದರಿ ಬಲಗೈ ಜಾತಿಯವರೂ, ಇತರ ಕೂಲಿಯವರೂ ಈ ಸೊಸೈಟಿಗೆ ಮೆಂಬರಾಗಿ ಸೇರಿ ದಿನ 1 ಕ್ಕೆ 6 ಪೈನಂತೆ ಬ್ಯಾಂಕಿಗೆ ಷೇರ್ ಕೊಡುವ ನಿಬಂಧನೆಮಾಡಿ ಮೆಂಬರಾಗಿ ಸೇರಿಕೊಂಡರು ಲಬ್ಬೆಯವರ ಸಾಲ ಫೈಸಲ್‌ಮಾಡಿ ಅವರನ್ನು ಗ್ರಾಮ ಬಿಟ್ಟು ಹೊರಡಿಸಿದರು ಈಗ ಈ ಸೊಸೈಟಿಯಲ್ಲಿ 120 ಜನ ಮೆಂಬರುಗಳು ಇರುತ್ತಾರೆ ಇವರಿಂದ 150 ರೂಪಾಯಿ ಷೇರ್ ವಸೂಲು ಬಂದು ಇರುತ್ತೆ ಇದಲ್ಲದೆ ಹೊಸದಾಗಿ ಮೆಂಬರು ಸೇರಿದ್ದರಿಂದ ಪುನಃ ಸೆಂಟ್ರಲ್ ಬ್ಯಾಂಕಿನಿಂದ 300 ರೂಪಾಯಿ ಸಾಲ ತಂದು ಮೆಂಬರುಗಳಿಗೆ ಕೊಟ್ಟು ಲೇವಾದೇವಿ ನಡೆಯುತ್ತಾ ಇದೆ ಪ್ರತಿ ಒಬ್ಬ ಮೆಂಬರೂ ಅವರವರ ಬಾಬ್ತು ಷೇರು ಮೊಬಲಗು 8 10 ರೂಪಾಯಿ ಜಮಾಯಿಸಿರುತ್ತೆ ಮುಂದೆಯೂ ಅಭಿವೃದ್ಧಿಗೆ ಬರುತ್ತೆ ಎಂದು ಓದಿದ ನಂತರ ರೆಜಿಸ್ಟ್ರಾರ್ ಸಾಹೇಬರವರು ಈ ಮೆಂಬರುಗಳಿಗೆ ಮಿತವ್ಯಯದ ವಿಷಯವಾಗಿ ಅನೇಕ ಬುದ್ಧಿವಾದಗಳನ್ನು ಹೇಳಿದರು ನಂತರ ಪ್ರೆಸಿಡೆಂಟರಾದ ಮ|| ವೆಂಕಟಾಚಲಯ್ಯಂಗಾರ್ರು ಹಜರತ್ ರೆಜಿಸ್ಟ್ರಾರ್ ಸ್ವಾಮಿಯವರು ದೇಹಶ್ರಮದಿಂದ ಇಲ್ಲಿಗೆ ದಯಮಾಡಿಸಿ ನಮ್ಮಗಳಿಗೆ ಬುದ್ಧಿವಾದವನ್ನು ಕೊಟ್ಟದ್ದಕ್ಕೆ ಭಗವಂತನು ಅವರಿಗೂ, ನಮ್ಮನ್ನು ಆಳುವ ಮಹಾರಾಜಾ ಕೃಷ್ಣರಾಜ ಒಡೆಯರ್ ಬಹದ್ದೂರ್ ಯವರಿಗೂ ಆಯುರಾರೋಗ್ಯವನ್ನು ಇತ್ತು ಕಾಪಾಡಲಿ ಎಂತ ಹೇಳಿ ಸಭೆ ಬರಖಾಸ್ತು ಆಯಿತು ಅನಂತರ ಅಲ್ಲಿ ಸೇರಿದ್ದ ಮಹಾಜನಗಳಿಗೆ ಗಂಧ ಪುಷ್ಪ ತಾಂಬೂಲ ಹಂಚಲ್ಪಟ್ಟು ನಂತರ ಸಾಹೇಬರು ಹೆಬಕೋಡಿಗೆ ದಯಮಾಡಿಸಿದರು

ಮೈಸೂರು ಸರ್ಕಾರದ ವ್ಯವಸಾಯದ ಇಲಾಖೆಯವರಿಂದ ಒದೆಯಲ್ಪಟ್ಟ ವಿಷಯಗಳು

[ವ್ಯವಸಾಯದ ವಿಚಾರವಾಗಿ ತಿಳಿಯಬೇಕಾದ ಸಂಗತಿಗಳ ಮತ್ತು ವ್ಯವಸಾಯಾಭಿವೃದ್ಧಿಗೆ ಬೇಕಾಗುವ ಸಹಾಯದ ವಿಷಯವಾಗಿ ಬರೆಯುವ ಕಾಗದಗಳನ್ನು ಬೆಂಗಳೂರಲ್ಲಿರುವ ವ್ಯವಸಾಯದ ಇಲಾಖಾ ಡೈರೆಕ್ಟರವರಿಗೆ ಬರೆಯಬೇಕು]

ದನಗಳ ಗೊಬ್ಬರವನ್ನು ಕಾಪಾಡುವ ವಿಧಾನ

ಪ್ರಾಣಿಗಳಿಗೆ ಹೇಗೋ ಸಸಿಗಳಿಗೂ ಹಾಗೆಯೇ ಆಹಾರವು ಬೇಕು ಆದರೆ ಸಸಿಗಳಿಗೆ ಬೇಕಾದ ಆಹಾರದ ವಿಧ ಮಾತ್ರ ಬೇರೆ ಭೂಮಿಯೇ ಸಸ್ಯಾಹಾರದ ಉಗ್ರಾಣ ಇತರ ಉಗ್ರಾಣಗಳಂತೆಯೇ ಈ ಉಗ್ರಾಣದಿಂದಲೂ ಪದಾರ್ಥಗಳನ್ನು ತೆಗೆದು ಬಳಸಿಕೊಂಡಹಾಗೆಲ್ಲಾ ಬೇರೆ ಪದಾರ್ಥಗಳನ್ನು ಉಗ್ರಾಣಕ್ಕೆ ತಂದುಹಾಕಿ ಸೇರಿಸದೆ ಇದ್ದರೆ ಸ್ವಲ್ಪ ಕಾಲದಲ್ಲಿಯೇ ಉಗ್ರಾಣವು ಬರಿದಾಗುವದು ಸಸ್ಯಾಹಾರಾಂಶಗಳನ್ನು ಭೂಮಿಗೆ ಹಿಂದಕ್ಕೆ ಕೊಡುವ ಪದಾರ್ಥಗಳೇ ಗೊಬ್ಬರಗಳೆನಿಸುವವು

ನಾರಜನಕ ರಂಜಕಾಮ್ಲ (Phosphoric acid) ಸುಣ್ಣ ಮತ್ತು ಪೊಟಾಷ್ (Potash) ಎಂಬ ಸಸ್ಯಾಹಾರಾಂಶಗಳನ್ನು ಗೊಬ್ಬರದ ರೂಪವಾಗಿ ಭೂಮಿಗೆ ಬೇಕಾದಾಗ ಒದಗಿಸುತ್ತಿರಬೇಕು ರೈತನು ಉಪಯೋಗಿಸುತ್ತಿರುವ ಗೊಬ್ಬರಗಳಲ್ಲೆಲ್ಲಾ ಈ ಆಹಾರಾಂಶಗಳು ಸಮನಾಗಿ ಇರುವುದಿಲ್ಲ ಸಾಧಾರಣವಾದ ಜಮೀನುಗಳಲ್ಲಿ ಯಾವ ಯಾವ ಸಸ್ಯಾಹಾರಾಂಶಗಳು ಕಡಮೆಯಾಗಿರುವುವೋ ಅವುಗಳೆಲ್ಲವನ್ನೂ ಉಂಟಾಗಿರುವ ಗೊಬ್ಬರಗಳನ್ನು ಮಾತ್ರ ರೈತರು ವಿಶೇಷವಾಗಿ ಉಪಯೋಗಿಸುವರು

ರೈತರು ಸಾಧಾರಣವಾಗಿ ಉಪಯೋಗಿಸುವ ಕೊಟ್ಟಿಗೆ ಗೊಬ್ಬರವು ದನಗಳ ಸಗಣಿ ಗಂಜಳ ಮತ್ತು ದನಗಳ ಕೆಳಕ್ಕೆ ಹಾಕುವ ಕಡ್ಡಿ ಸೊಪ್ಪು ಮುಂತಾದವುಗಳನ್ನು ಒಳಗೊಂಡಿರುವುದು ದನಗಳ ವಯಸ್ಸು ಮತ್ತು ಅವುಗಳ ಆಹಾರ ಇವುಗಳ ವ್ಯತ್ಯಾಸ ಇದ್ದ ಹಾಗೆಲ್ಲಾ ಅವುಗಳ ಮಲಮೂತ್ರಾದಿಗಳಲ್ಲಿರುವ ಸಸ್ಯಾಹಾರಾಂಶಗಳೂ ವ್ಯತ್ಯಾಸವಾಗುವವು ಒಳ್ಳೇ ಮೇವುಳ್ಳ ದನಗಳಾದರೆ ಅವುಗಳ ಸಗಣಿಯಲ್ಲಿರುವಷ್ಟು ಸಸ್ಯಾಹಾರಾಂಶಗಳೇ ಗಂಜಳದಲ್ಲಿಯೂ ಇರುವುವು ಆದ್ದರಿಂದ ದನಗಳ ಗಂಜಳವನ್ನು ಕೂಡಿಡದೇ ಇದ್ದರೆ ಗೊಬ್ಬರ ಸೇರಿಸಿದ ಬಹುಪಾದ ಸಸ್ಯಾಹಾರಾಂಶದಲ್ಲಿ ಅರ್ಧ ಭಾಗವೇ ನಷ್ಟವಾಗುವುದು

ಮನೆಗಳ ಹಿತ್ತಲಲ್ಲಿ ಗೊಬ್ಬರವನ್ನು ಕೂಡಿಡುವುದರಲ್ಲಿ ಎರಡು ವಿಧಗಳಿವೆ ದನದ ಕೊಟ್ಟಿಗೆಗಳನ್ನು ನಿತ್ಯವೂ ಗುಡಿಸಿ ಆ ಕಸವನ್ನೆಲ್ಲಾ ಒಂದು ರಾಶಿಯಾಗಿಯೋ ಅಥವಾ ಒಂದು ಗುಣಿಯಲ್ಲಿಯೋ ಸೇರಿಸಿಡುವುದು ಒಂದು ಕೊಟ್ಟಿಗೆಗಳನ್ನು ನಿತ್ಯವೂ ಗುಡಿಸದೆ ಕೆಲವು ದಿನಗಳ ವರೆಗೂ ಕಸವು ಕೊಟ್ಟಿಗೆಗಳಲ್ಲಿಯೇ ಸೇರುವಂತೆ ಬಿಟ್ಟಿರುವುದು ಎರಡನೆಯ ವಿಧ ದನಗಳ ಕೆಳಕ್ಕೆ ಕಡ್ಡಿ ಸೊಪ್ಪುಗಳನ್ನಾಗಲಿ ಹುಲ್ಲನ್ನಾಗಲಿ ಉಪಯೋಗಿಸುವ ಪದ್ಧತಿಯು ನಮ್ಮ ಸೀಮೆಯಲ್ಲಿ ವಿಶೇಷವಾಗಿಲ್ಲ ಆದ್ದರಿಂದ ದನಗಳ ಗಂಜಳವೆಲ್ಲವೂ ಬಹಳಮಟ್ಟಿಗೆ ನಷ್ಟವಾಗಿಹೋಗುವುದು ಮೇಲೆ ಹೇಳಿರುವಂತೆ ಸಗಣಿಯಲ್ಲಿ ಎಷ್ಟು ಸಸ್ಯಾಹಾರಾಂಶಗಳಿರುವವೋ ಗಂಜಳದಲ್ಲಿಯೂ ಅಷ್ಟೇ ಸಸ್ಯಾಹಾರಾಂಶಗಳಿರುವವು ಗಂಜಳವು ನಷ್ಟವಾಗದೇ ಇರಬೇಕಾದರೆ ದನಗಳನ್ನು ಕಟ್ಟುವ ಕೊಟ್ಟಿಗೆಯಲ್ಲಿ ನೆಲಕ್ಕೆ ಕಲ್ಲುಗಳನ್ನು ಹಾಸುವುದರಿಂದ ಆಗಲಿ ಅಥವಾ ಬೇರೆ ಯಾವ ವಿಧವಾಗಿ ಆಗಲಿ ನೆಲದಲ್ಲಿ ನೀರು ಇಂಗದ ಹಾಗೆ ಮಾಡಿ ಅಲ್ಲಿ ಬಿದ್ದ ಗಂಜಳವೆಲ್ಲವೂ ಒಂದು ಕಡಾಯಿಯಲ್ಲಿ ಆಗಲಿ ಒಂದು ಗಾರೆಯ ಗುಂಡಿಯಲ್ಲಿಯಾಗಲಿ ಸೇರುವಂತೆ ಮಾಡಬೇಕು ಇಲ್ಲವಾದರೆ ದನಗಳು ಹೊಯ್ಯುವ ಗಂಜಳವನ್ನೆಲ್ಲಾ ಹೀರುವಷ್ಟು ಸೋಜು ಹುಲ್ಲನ್ನು ದನಗಳ ಕೆಳಕ್ಕೆ ಯಾವಾಗಲೂ ಹಾಕಿರಬೇಕು

ಇದಕ್ಕಾಗಿ ಹುಲ್ಲಿಗೆ ಬದಲಾಗಿ ಒಣಗಿದ ಎಲೆಗಳನ್ನಾಗಲಿ ಒಣಗಿದ ಮಣ್ಣನ್ನಾಗಲಿ ಉಪಯೋಗಿಸಬಹುದು ಆದರೆ ಮಲನಾಡು ಪ್ರಾಂತ್ಯದಲ್ಲಿ ಮಾಡುವಂತೆ ಹಸಿಸೊಪ್ಪನ್ನು ಉಪಯೋಗಿಸುವದರಿಂದ ದನಗಳಿಗೆ ಸ್ವಲ್ಪ ಸೌಕರ್ಯವನ್ನುಂಟುಮಾಡಿದರೂ ಗಂಜಳವನ್ನು ಸರಿಯಾಗಿ ಹೀರುವುದಿಲ್ಲ ಮಲನಾಡಿನ ಅನೇಕ ಬೆಟ್ಟಗಳ ಮೇಲೆ ಸೊಂಪಾಗಿ ಬೆಳೆಯುತ್ತಿರುವ ಹುಲ್ಲನ್ನು ಕೆಲವು ಕಾಲಗಳಲ್ಲಿ ದನಗಳ ಕೆಳಕ್ಕೆ ಹಾಕುವದಕ್ಕಾಗಿ ಉಪಯೋಗಿಸುವದುಂಟು ಆದರೆ ಈಗ ಮಾಡುವಂತೆ ಈ ಹುಲ್ಲಿಗೆಲ್ಲಾ ಬೇಸಗೆಯಲ್ಲಿ ಬೆಂಕಿ ಹಚ್ಚಿ ಸುಟ್ಟುಬಿಡದೆ ಮಳೆಗಾಲಕ್ಕಾಗಿ ಒಣಗಿದ ಮೇವನ್ನು ದಾಸ್ತಾನ ಮಾಡಿಟ್ಟುಕೊಳ್ಳುವಂತೆಯೇ ಒಣ ಹುಲ್ಲನ್ನು ಕೂಡ ಇಟ್ಟುಕೊಂಡಿದ್ದು ಹಸಿಸೊಪ್ಪಿಗೆ ಬದಲಾಗಿ ಈ ಒಣ ಹುಲ್ಲನ್ನು ದನಗಳ ಕೆಳಕ್ಕೆ ಹಾಕಿದರೆ ರೈತರಿಗೆ ಬಹಳ ಫಾಯಿದೆಯಾಗುವದು ಈ ಒಣ ಹುಲ್ಲು ಗಂಜಳವನ್ನು ಹೀರುವುದಲ್ಲದೆ ತನ್ನಲ್ಲಿರುವ ಸಸ್ಯಾಹಾರಾಂಶಗಳನ್ನು ಗೊಬ್ಬರಕ್ಕೆ ಸೇರಿಸುವುದು

ಗೊಬ್ಬರವು ಸಾರವತ್ತಾಗಿ ಇರಬೇಕೆಂದರೆ ಈಗ ನಮ್ಮ ರೈತರು ಅದರ ವಿಷಯದಲ್ಲಿ ತೋರಿಸುವುದಕ್ಕಿಂತ ಹೆಚ್ಚು ಮುತುವರ್ಜಿಯನ್ನು ತೋರಿಸಬೇಕು ಮಳೆಯ ನೀರು ಒಳಕ್ಕೆ ಇಳಿಯುವುದರಿಂದಲೂ, ಗೊಬ್ಬರವು ಒಣಗೀ ಹುಳಿಹಿಡಿಯುವುದರಿಂದಲೂ ಸಸ್ಯಾಹಾರಾಂಶಗಳು ನಷ್ಟವಾಗುವುದನ್ನು ಸಾಧ್ಯವಾದ ಮಟ್ಟಿಗೂ ಕಡಮೆಯಾಗುವಂತೆ ಮಾಡಬೇಕು ನೀರಿನಲ್ಲಿ ಸುಲಭವಾಗಿ ಕರಗಿಹೋಗುವ ಸಸ್ಯಾಹಾರಗಳು ವಿಶೇಷವಾಗಿ ಇಲ್ಲದ ಗೊಬ್ಬರವು ನೀರು ಇಳಿಯುವುದರಿಂದ ನಷ್ಟ ಹೊಂದುವುದಿಲ್ಲ ಆದರೆ ನೀರಿನಲ್ಲಿ ಕರಗುವ ಸಸ್ಯಾಹಾರಗಳುಳ್ಳ ಗೊಬ್ಬರವು ಒಳಕ್ಕೆ ನೀರು ಇಳಿಯುವುದರಿಂದ ವಿಶೇಷವಾಗಿ ನಷ್ಟವಾಗುವುದು ಇದೂ ಅಲ್ಲದೆ ದನಗಳ ಕೆಳಕ್ಕೆ ಹಾಕಿದ್ದ ಒಣ ಹುಲ್ಲು ಮುಂತಾದ ಪದಾರ್ಥಗಳನ್ನೊಳಗೊಂಡಿರುವ ಗೊಬ್ಬರದಲ್ಲಿ ನೀರು ಇಳಿಯುವುದರಿಂದಾಗುವ ನಷ್ಟಕ್ಕಿಂತಲೂ ಹುಳಿ ಹಿಡಿಯುವುದರಿಂದಾಗುವ ನಷ್ಟವು ಹೆಚ್ಚಾಗಿರುವುದು

ಹುಳಿಹಿಡಿಯುವಿಕೆಯು ಒಂದು ಬಗೆಯಾದ ಸೂಕ್ಷ್ಮ ಕ್ರಿಮಿಗಳಿಂದುಂಟಾಗುವ ಕಾರ್ಯ ಗೊಬ್ಬರದಲ್ಲಿ ಕಾವು ಬರುವ ಹಾಗೆ ಮಾಡಿ ಸಸ್ಯಾಹಾರಾಂಶಗಳನ್ನು ನಷ್ಟಪಡಿಸುವ ಈ ಸೂಕ್ಷ್ಮ ಕ್ರಿಮಿಗಳು ಹುಟ್ಟಬೇಕಾದರೆ ಅವಕ್ಕೆ ಗಾಳಿಯು ಅವಶ್ಯಕ ಆದ್ದರಿಂದ ಗೊಬ್ಬರದ ಕುಪ್ಪೆಯ ಒಳಭಾಗಕ್ಕೆ ಗಾಳಿಯು ಹೋಗದ ಹಾಗೆ ಮಾಡುವುದರಿಂದ ಹುಳಿಹಿಡಿಯುವುದನ್ನು ಕಡಮೆಮಾಡಬಹುದು ಕುಪ್ಪೆಯ ಒಳಗೆಲ್ಲಾ ಗಾಳಿಯಾಡದೆ ಇರುವುದಕ್ಕಾಗಿ ಗೊಬ್ಬರವನ್ನು ಒತ್ತಾಗಿ ಸೇರಿಸಿಟ್ಟಿರಬೇಕು ಇಲ್ಲವಾದರೆ ತೇವವಾಗಿಯಾದರೂ ಇಡಬೇಕು ಏಕೆಂದರೆ ಗೊಬ್ಬರದ ಕುಪ್ಪೆಯನ್ನು ತೇವಮಾಡುವುದರಿಂದ ಕುಪ್ಪೆಯ ಒಳ ರಂಧ್ರಗಳಲ್ಲೆಲ್ಲಾ ಗಾಳಿಗೆ ಬದಲಾಗಿ ನೀರು ತುಂಬಿಕೊಳ್ಳುವುದು ಗೊಬ್ಬರವನ್ನು ಕೊಟ್ಟಿಗೆಯಲ್ಲಿಯೇ ಬಿಟ್ಟಿರುವುದರಿಂದ ಅದನ್ನು ದನಗಳು ಚೆನ್ನಾಗಿ ತುಳಿದು ಒಳರಂಧ್ರಗಳನ್ನು ಬಹಳವಾಗಿ ಕಡಮೆಮಾಡುವುದಲ್ಲದೆ ಆ ರಂಧ್ರಗಳಲ್ಲಿ ಗಂಜಳವು ತುಂಬಿ ಗಾಳಿಯು ಹೆಚ್ಚಾಗಿ ಪ್ರವೇಶಿಸದಂತೆ ಮಾಡಿ ಹುಳಿ ಹಿಡಿಯುವುದನ್ನು ಬಹಳ ಮಟ್ಟಿಗೆ ಕಮ್ಮಿಮಾಡುವುದು ಹಾಗೆ ಗೊಬ್ಬರವನ್ನು ಕೊಟ್ಟಿಗೆಯಲ್ಲಿಯೇ ಬಿಡದೆ ಗಂಜಳವನ್ನು ಹೀರುವದಕ್ಕಾಗಿ ದನಗಳ ಕೆಳಕ್ಕೆ ಸಾಕಾದಷ್ಟು ಒಣಸೊಪ್ಪನ್ನಾಗಲಿ ಒಣಹುಲ್ಲನ್ನಾಗಲಿ ಉಪಯೋಗಿಸಿ ಕೊಟ್ಟಿಗೆಯನ್ನು ನಿತ್ಯವೂ ಗುಡಿಸಿ ಗೊಬ್ಬರವನ್ನು ಬೇರೆ ಗುಪ್ಪೆ ಹಾಕುವ ಕಡೆಗಳಲ್ಲಿ ಗೊಬ್ಬರವು ಒತ್ತಾಗಿ ಇಲ್ಲದಿರುವದೆ

ರಿಂದ ಒಳರಂಧ್ರಗಳು ಹೆಚ್ಚಾಗಿರುವವು. ಗಾಳಿಯು ಧಾರಾಳವಾಗಿ ಒಳಕ್ಕೆ ಹೋಗುವುದು. ಗೊಬ್ಬರವು ಹೆಚ್ಚಾಗಿ ಹುಳಿ ಹಿಡಿದು ಸಾರಜನಕವು ಹೆಚ್ಚಾಗಿ ನಷ್ಟವಾಗುವುದು. ಸೆಕೆಯು ಹೆಚ್ಚಿದ ಹಾಗೆಲ್ಲಾ ಹುಳಿ ಹಿಡಿಯುವುದರಿಂದಾಗುವ ನಷ್ಟವೂ ಹೆಚ್ಚುವುದು. ಮೇಲೆ ಹೇಳಿರುವಂತೆ ಗೊಬ್ಬರವು ಎರಡು ವಿಧವಾಗಿ ನಷ್ಟವಾಗಬಹುದು. ಮಳೆಯ ನೀರು ಒಳಕ್ಕೆ ಇಳಿದು ಸಸ್ಯಾಹಾರಾಂಶಗಳು ನೀರಿನಲ್ಲಿ ಕರಗಿ ನಷ್ಟವಾಗಬಹುದು. ಇಲ್ಲವೇ ಗೊಬ್ಬರವು ಹೆಚ್ಚಾಗಿ ಹುಳಿಯುವುದರಿಂದ ನಷ್ಟವಾಗಬಹುದು. ಗೊಬ್ಬರದ ರಾಶಿಯನ್ನು ಒತ್ತಾಗಿ ಹಾಕದೆ ಮಳೆಯ ನೀರು ರಾಶಿಯ ಮೇಲೆ ಬೀಳದಂತೆ ಇಟ್ಟಿದ್ದರೆ ಮೇಲೆ ಹೇಳಿರುವ ಮೊದಲನೆಯ ವಿಧದಲ್ಲಿ ನಷ್ಟವಾಗದಿದ್ದರೂ ಎರಡನೆಯ ವಿಧದಲ್ಲಿ (ಹುಳಿ ಹಿಡಿಯುವುದರಿಂದ) ಹೆಚ್ಚಾಗಿ ನಷ್ಟವಾಗುವುದು. ಆದ್ದರಿಂದ ಈ ಎರಡು ವಿಧವಾದ ನಷ್ಟಗಳನ್ನೂ ಕಡಮೆಮಾಡಬೇಕಾದರೆ ಮಳೆಯ ನೀರು ಬೀಳದಂತೆಯೂ ಹುಳಿ ಹಿಡಿಯದಂತೆಯೂ ಇರುವ ಹಾಗೆ ಗೊಬ್ಬರವನ್ನು ಗುಡಿಸಲುಗಳಲ್ಲಿ ಒತ್ತಾಗಿರುವ ಹಾಗೆ ಕುಪ್ಪೆ ಹಾಕಿರಬೇಕು. ಕುಪ್ಪೆ ಹಾಕುವದಕ್ಕೆ ಮೊದಲು ಗೊಬ್ಬರವನ್ನು ದನಗಳು ಚೆನ್ನಾಗಿ ತುಳಿದಿದ್ದರೆ ಗೊಬ್ಬರದಲ್ಲಿನ ಒಳರಂಧ್ರಗಳು ಬಹಳ ಚಿಕ್ಕವಾಗಿ ಒಳಗೆ ಗಾಳಿಯಾಡುವುದಕ್ಕೆ ಅವಕಾಶವಿರುವುದಿಲ್ಲ.

ಬೇರೆ ಬೇರೆ ಜಾತಿಯ ಗೊಬ್ಬರಗಳಲ್ಲಿ ಹುಳಿ ಹಿಡಿಯುವುದೂ ಕೆಚ್ಚು ಕಡಮೆಯಾಗುವುದಲ್ಲದೆ ಹುಳಿ ಹಿಡಿಯುವ ವಿಧವೂ ಬೇರೆ ಬೇರೆಯಾಗಿಯೇ ಇರುವುದು. ಗೊಬ್ಬರದಲ್ಲಿ ಸಾರಜನಕವು ನೀರಿನಲ್ಲಿ ಕರಗುವ ಪದಾರ್ಥಗಳ ರೂಪವಾಗಿರುವ ಹಾಗೆಲ್ಲಾ ಹುಳಿಹಿಡಿಯುವುದೂ ಜಾಸ್ತಿ. ಆದ್ದರಿಂದ ಸಾರಜನಕವು ಹೆಚ್ಚಾಗಿರುವ ಗಂಜಳವು ಬಹಳ ಜಾಸ್ತಿ ಕೆಟ್ಟು ಹೋಗುವುದು.

ಹುಳಿ ಹಿಡಿಯುವುದರಿಂದ ಗೊಬ್ಬರವು ಬಹಳ ಬೇಗನೆ ಗಾತ್ರದಲ್ಲಿ ಕಮ್ಮಿಯಾಗುವುದು. ಅದರಲ್ಲಿರುವ ಪದಾರ್ಥಗಳು ಇಂಗಾಲಾಮ್ಲವೇ ಮೊದಲಾದ ಗಾಳಿಗಳಾಗಿಯೂ ನೀರಾಗಿಯೂ ಬದಲಾಯಿಸುವುದು. ಒಂದೊಂದು ವೇಳೆ ಗೊಬ್ಬರದಲ್ಲಿರುವ ಮುಖ್ಯವಾದ ಸಸ್ಯಾಹಾರಾಂಶಗಳಲ್ಲೊಂದಾದ ಸಾರಜನಕವು ಸಾರಜನಕವಾಗಿಯೇ ಆಗಲಿ ಅಮೋನಿಯಾ ಎಂಬ ಮತ್ತೊಂದು ವಾಯುವಿನ ರೂಪವಾಗಿಯೇ ಆಗಲಿ ಹೊರಟುಹೋಗಬಹುದು. ಗೊಬ್ಬರದಲ್ಲಿರುವ ಮತ್ತು ಕೆಲವು ಪದಾರ್ಥಗಳು ಕ್ರಮೇಣ ಬದಲಾಯಿಸಿ ಗೊಬ್ಬರದ ಕುಪ್ಪೆಯಿಂದ ಕೆಲವು ವೇಳೆ ಸ್ರವಿಸುವ ಕಪ್ಪು ನೀರಿನಲ್ಲಿ ಕರಗಿಹೋಗಬಹುದು. ಮತ್ತು ಫಾಸ್ಫೇಟ್, ರಂಜಕಾಮ್ಲ ಮುಂತಾದ ಪದಾರ್ಥಗಳು ನೀರಿನಲ್ಲಿ ಕರಗುವ ಹಾಗೆ ಆಗುವವು. ಗೊಬ್ಬರವು ಹುಳಿ ಹಿಡಿಯುವಾಗ ಸ್ವಲ್ಪ ಹುಷಾರಿನಿಂದ ನೋಡಿಕೊಂಡರೆ ಅದರಲ್ಲಿರುವ ಸಸ್ಯಾಹಾರಾಂಶಗಳು ಸುಲಭವಾಗಿ ಸಸಿಗಳಿಂದ ತೆಗೆದುಕೊಳ್ಳಲ್ಪಡುವ ಹಾಗೆ ಆಗುವವು. ಹಾಗಿಲ್ಲದೆ ಮಿತಿಮೀರಿ ಹುಳಿ ಹಿಡಿಯಲು ಅವಕಾಶಕೊಟ್ಟರೆ ಗೊಬ್ಬರದ ಗುಣವೇ ಬಹಳವಾಗಿ ಕಡಮೆಯಾಗುವುದು.

ಈ ಸೀಮೆಯಲ್ಲಿ ಸಾಧಾರಣವಾಗಿ ಗೊಬ್ಬರವನ್ನು ಎರಡು ವಿಧಗಳಲ್ಲಿ ಕೂಡಿಸುವ ಪದ್ಧತಿ ಇರುವೆಯೆಂದು ಮೇಲೆಯೇ ಹೇಳಿದೆ. ಕೆಲವು ಕಡೆ ಗೊಬ್ಬರವನ್ನು ಗುಣಿಗಳಲ್ಲಿಯೋ ಅಥವಾ ನೆಲದ ಮೇಲೆಯೋ ಕುಪ್ಪೆಹಾಕುವರು. ಕೆಲವು ಕಡೆ ಗೊಬ್ಬರವನ್ನು ದನಗಳ ಕೊಟ್ಟಿಗೆಯಲ್ಲಿಯೇ ಅನೇಕ ದಿನಗಳವರೆಗೂ ಬಿಟ್ಟಿರುವರು. ಇವುಗಳಲ್ಲಿ ಯಾವುದು ಬಹಳ ಪ್ರಯೋಜನಕಾರಿ ಎಂಬುವರ ವಿಷಯವಾಗಿ ಕೆಲವು ಅಜಮಾಯಿಷಿಗಳು ಮಾಡಲ್ಪಟ್ಟಿವೆ. ಬೆಂಗಳೂರು ಡಿಸ್ಟ್ರಿಕ್ಟಿನ ಅನೇಕ ಹಳ್ಳಿಗಳಲ್ಲಿ ಉಪಯೋಗಿಸುತ್ತಿರುವ ದನದ ಗೊಬ್ಬರಗಳನ್ನು ವ್ಯವಸಾಯದ ಇಲಾಖೆಗೆ ಸೇರಿದ ಕಾರ್ಯಾಲಯಗಳಲ್ಲಿ ರಸಾಯನ ಶಾಸ್ತ್ರರೀತ್ಯಾ ಅಜಮಾಯಿಷಿ ಮಾಡುತ್ತಿರುತ್ತಾರೆ. ಈ ಅಜಮಾಯಿಷಿಗಳ ಫಲಿತಾಂಶಗಳ ವಿಷಯವಾಗಿ ಬೇರೆ ಒಂದು ಪತ್ರಿಕೆಯು ಪ್ರಚುರಿಸಲ್ಪಡುವುದು.

ತಾಲ್ಲೂಕು ವರ್ತಮಾನಗಳು.

ಅರಸೀಕೆರೆ ತಾ ದೊಡ್ಡಮೇಟಿಕುರಿಕೆ.—ಈ ತಾಲ್ಲೂಕು ದಸರಾ ಮೆಂಬರಾಗಿಯೂ, ಈ ಊರು ಪರಸ್ಪರ ಸಹಾಯ ಸಂಘದ ಸೆಕ್ರೆಟರಿಯಾಗಿಯೂ ಇರುವ ಮ॥ ಯಂ ಎಚ್ ಹರಿಯಣ್ಣನವರು ಈ ಊರು ಸ್ಕೂಲಿನಲ್ಲಿ ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗೆ ಪುಸ್ತಕಗಳನ್ನು ಬಹುಮಾನ ಕೊಡಿಸಿದರು.—ಇಲ್ಲಿ ಸಿಡುಬಿನ ಹಾವಳಿ ಜಾಸ್ತಿಯಾದ್ದರ ಮೇಲೆ ಇವರು ಡಿ॥ ಸ್ಯಾನಿಟರಿ ಆಫೀಸರವರಿಗೆ ಬರೆದು ವ್ಯಾಕ್ಸಿನೇಟರನ್ನು ಬರಮಾಡಿಕೊಂಡು ಒಂದೇ ದಿವಸ 30 ಜನ ಬಾಲಕ ಬಾಲಕಿಯರಿಗೆ ಸಿಡುಬು ಹಾಕಿಸಿದರು. ಕೂಡಲೆ ಸಿಡುಬು ಏಳುವುದೇ ನಿಂತುಹೋಯಿತು. ಮ॥ ಹರಿಯಣ್ಣನವರು ಯಾವಾಗಲೂ ಈ ಪ್ರಾಂತ್ಯದಲ್ಲಿ ವಿದ್ಯಾ ಪ್ರೋತ್ಸಾಹ, ಗ್ರಾಮಾಭಿವೃದ್ಧಿ, ಸೊಸೈಟಿಗಳ ಏರ್ಪಾಡು, ಇವುಗಳಿಗೆ ಮುಖ್ಯವಾಗಿ ಗಮನಕೊಟ್ಟಿದಾರೆ.

ದಾವಣಗೆರೆ.—ಈ ಊರಿನ ವೀರಶೈವ ಜನರು ಪದ್ಧತಿ ಪ್ರಕಾರ ಶ್ರಾವಣ ಮಾಸದಲ್ಲಿ ಒಂದು ತಿಂಗಳ ವರೆವಿಗೂ ಸಾಯಂಕಾಲ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರುಗಳವರ ಶಾಖೆ ಇಲ್ಲಿನ ವಿರಕ್ತ ಮಠದಲ್ಲಿ ವೀರಶೈವಮತ ಧರ್ಮದ ಉಪನ್ಯಾಸಗಳು ಶ್ರೀಮನ್ಮೃತ್ಯುಂಜಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಿಂದ ನಡೆಯುತ್ತಾ ಬಂದು ಈ ತಿಂಗಳು ತಾ 1 ನೇ ಸೋಮವಾರ ಮುಕ್ತಾಯವಾಗುವಾಗ್ಗೆ ಈ ದಿನ್ನ ಈ ಮಠದಲ್ಲಿ ಸಾವಿರಾರು ವೀರಶೈವ ಜನಗಳಿಗೆ ಸುಭೋಜನವನ್ನು ಮಾಡಿಸಿದರು. ಮತ್ತೂ ನೂರಾರು ಬಡ ಜನಗಳಿಗೂ ಮರು ದಿವಸ ಅನ್ನವನ್ನು ಹಾಕಿದರು. ಅಲ್ಲದೆ ಇಲ್ಲಿನ ಬ್ರಹ್ಮಲಿಂಗಪ್ಪನವರ ಮಠದಲ್ಲಿ ಶ್ರಾವಣಮಾಸದ ಕೊನೆಯ ದಿವಸದಲ್ಲಿ ಸುಮಾರು 300 ವೀರಶೈವ ಜನಗಳಿಗೆ ಕಲ್ಲೇಶಿ ಸಾಲಿ ವೀರಪ್ಪಯ್ಯನವರು ಸಂತರ್ಪಣೆಮಾಡಿಸಿದರು.—ಈ ತಾಲ್ಲೂಕು ಗ್ರಾಮಾಂತರಗಳಲ್ಲಿ ಮಳೆ ಇಲ್ಲದ್ದರಿಂದ ಪೈರುಗಳು ಬಿಸಲಿನ ತಾಪವನ್ನು ತಾಳಲಾರದೆ ಬಾಡಿಹೋಗುತ್ತಾ ಇವೆ. ಹುಬ್ಬೆ ಮಳೆ 4 ನೇ ಪಾದದಿಂದ ಆಗುತ್ತೆ ಎಂತಲೂ, ಉತ್ತರೆ ಮಳೆ ಚೆನ್ನಾಗಿ ಬರುತ್ತದೆಂತಲೂ ಜೋಯಿಸರು ಹೇಳುತ್ತಾರೆ. ಶೀಘ್ರದಲ್ಲೇ ಮಳೆ ಸುರಿದು ಪ್ರಜೆಗಳಾದ ನಮ್ಮಗಳಿಗೆ ಸುಖವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಚಿಕ್ಕನಾಯಕನಹಳ್ಳಿ.—ಮಳೆ ಇಲ್ಲದೆ ಬೆಳೆಗಳೆಲ್ಲಾ ಒಣಗಿಹೋಗುತ್ತಿವೆ. ಜನಗಳೆಲ್ಲರೂ ಅಂತರಿಕ್ಷವನ್ನೇ ನೋಡುತ್ತಿದಾರೆ. ಅಕ್ಕಿ ರೂಪಾಯಿಗೆ 5½-6 ಸೇರು, ರಾಗಿ 15-16 ಸೇರು ಮಾರುತ್ತಿದಾರೆ. ಈ ದುರ್ಭಿಕ್ಷಕಾಲದಲ್ಲಿ ಬಡಬಗ್ಗರು ಜೀವನಮಾಡುವದೇ ಕಷ್ಟವಾಗಿದೆ.—ಅಮಲ್ದಾರ್ ಮೆ॥ ಎಚ್ ಗೋಪಾಲಯ್ಯಂಗಾರ್ರು ಇಲ್ಲಿಗೆ ವರ್ಗವಾಗಿ ಬಂದಲಾಗಾಯ್ತು ಮ್ಯುನಿಸಿಪಲ್ ಕೆಲಸಗಳು ಸರಿಯಾಗಿ ನಡೆಯುವವು.—ನೆನ್ನೆ ತಾ 7 ನೇ ಭಾನುವಾರ ಚಿಕ್ಕನಾಯ್ಕನಹಳ್ಳಿ ಕೋಆಪರೇಟಿವ್ ಸೊಸೈಟಿಯ ಮೂರನೇ ವಾರ್ಷಿಕ ಮೀಟಿಂಗು ನಡೆಯಿತು. ಅದರ ವಿವರ್ಣೆಯನ್ನು ಇಲ್ಲಿ ಬರೆಯುವದು ಅಸಾಧ್ಯ. ಆದರೆ ಈ ದಫೆ ಸದರಿ ಸಾಲಿಯಲ್ಲಿ ಕೋಆಪರೇಟಿವ್ ಕಾನ್ಫರೆನ್ಸಿಗೆ ಯಾರನ್ನು ಪ್ರತಿನಿಧಿಯಾಗಿ ಚುನಾಯಿಸಬೇಕೆಂಬ ವಿಚಾರವೇ ಕಡೆಯದು. ಮೆಂಬರುಗಳು ಮ॥ ಹನುಮಂತೇಗೌಡರನ್ನು ಪ್ರತಿನಿಧಿಯಾಗಿ ಚುನಾಯಿಸಿರುತ್ತಾರೆ. ದೊಡ್ಡ ಮನುಷ್ಯರು ತಮ್ಮ ಸ್ವಂತ ಖರ್ಚಿನಿಂದ ಹೋಗಬೇಕೆಂತಲೂ, ಸಹಾಯವಿಲ್ಲದವರನ್ನು ಸೊಸೈಟಿಯ ಪರವಾಗಿ ಚುನಾಯಿಸಬೇಕೆಂತಲೂ ಸರ್ಕ್ಯುಲರ್ ಹುಕುಂ ಕೊಡಲಾಗಿದೆ ಎಂಬದಾಗಿ ಕೇಳಿದ್ದೆನು. ಆದರೆ ದೊಡ್ಡ ಮನುಷ್ಯರೂ, ವರ್ತಕರೂ, ಜಮೀನ್ದಾರರೂ ಮತ್ತು ಪಟೇಲರೂ ಆದ ಮ॥ ಹನುಮಂತೇಗೌಡರು ಇತರರಿಗೆ ಸಹಾಯ ಮಾಡುವ ಶಕ್ತಿಯುಳ್ಳವರಾಗಿದ್ದು ಇವರನ್ನು ಸೊಸೈಟಿಯ ಖರ್ಚಿನಿಂದ ಕಳುಹಿಸಬೇಕೆಂದು ಹೇಳುವುದು ನ್ಯಾಯವಲ್ಲ.

ಶಿಕಾರಿಪುರ.—ಒಂದು ತಿಂಗಳಿಂದಲೂ ಈ ಪ್ರಾಂತ್ಯ ಸಾಕಾದಷ್ಟು ಮಳೆ ಬಾರದೆ ಇರುವದರಿಂದ ಫಸಲುಗಳು ಸರಿಯಾಗಿ ಆಗಲಾರವೆಂತಲೂ, ಕೆಲವು ಕಡೆ ಪೈರು ಒಣಗುತ್ತಾ ಇವೆ ಎಂತಲೂ ರೈತಾಬಿಗಳು ಕಳವಳಿಸುತ್ತಾರೆ.—ಈ ಊರಿನಲ್ಲಿ ಇನ್ನೂ ಪ್ಲೇಗಿನ ಸೋಂಕು ನಿಶ್ಶೇಷವಾಗಿ ಹೋಗದೆ ಆಗಾಗ್ಗೆ ಒಂದೆರಡು ಕೇಸುಗಳಾಗುತ್ತಲೇ ಇರುತ್ತೆ. ಕಳೆದ ವಾರ ನಡುಪೇಟೆಯ ಕೆಲವು ಕಬ್ಬಿಣದ ಕೆಲಸಮಾಡುವ ಮುಸಲ್ಮಾನರ ಮೂರು ಮನೆಗಳಲ್ಲಿ ಇಲಿಗಳು ಸತ್ತದ್ದರಿಂದ ಅವರು ಮನೆಬಿಡುವ ಹಾಗೂ, ಚಿಪ್ಪಿಗರ ಪೈಕಿ ಒಬ್ಬ ಹುಡುಗನು ಅದೇ ರೋಗದಿಂದ ಸತ್ತನೆಂತಲೂ ಅನುಮಾನ ಉಂಟಾಗಿದೆ.—ಕಳೆದ ತಾ. 3ನೇ ಬುಧವಾರ ನಮ್ಮ ಅಮಲ್ದಾರ್ ಮೆ॥ ಜಿ. ಶಾಂತವೀರಪ್ಪನವರು ಇಲ್ಲಿ ಒಂದು ರೀಡಿಂಗ್ ರೂಂ ಎಂಬ ವಾಚಕ ಮಂದಿರವನ್ನು ಸ್ಥಾಪಿಸಿದರು. ಅದಕ್ಕೆ ಅಮಲ್ದಾರ್ರವರು ಪ್ರೆಸಿಡೆಂಟರಾಗಿಯೂ, ಶಿರಸ್ತೇದಾರರು ಸೆಕ್ರೆಟರಿಯಾಗಿಯೂ, ಮೆ॥ ರಮಣಿಚನ್ನವೀರಪ್ಪನವರು ಟ್ರೆಜರರಾಗಿಯೂ ನೇಮಕವಾದರು. ಈ ವಾಚಕಮಂದಿರವು ಇಲ್ಲಿನ ಸಕಲರಿಗೂ ಪ್ರಯೋಜನಕಾರಿಯಾಗಿ ಚಿರಕಾಲ ನಡೆಯಲೆಂದು ಕೋರುತ್ತೇವೆ.—ಈ ಊರಿನ ಆರೋಗ್ಯ ವಿಚಾರಗಳೇನೂ ತೃಪ್ತಿಕರವಾಗಿಲ್ಲ. ಊರಿನ ಎಲ್ಲಾ ಭಾಗದಲ್ಲೂ ಕಾಡುಗಿಡಗಳ ವನವೇ ತುಂಬಿದೆ. ಜನರು ಸಮೀಪದಲ್ಲೇ ಹೇಸಿಕೆ ಮಾಡುವ ವಾಡಿಕೆ ಬಹಳ. ಸದ್ಯಕ್ಕೆ ಗಬ್ಬಾರು ಅಗಳಿನಲ್ಲಿ ದುಷ್ಟಮೃಗಗಳು ತಿರುಗಾಡುತ್ತಾ ಇದ್ದು, ಮೊನ್ನೆ ಒಂದು ಜಾನುವಾರನ್ನು ಹಿಡಿದಂತೆ ತಿಳಿದುಬರುತ್ತದೆ. ಸರ್ಕಾರದವರು ಸದರಿ ಕಂದಕದ ಪೊದೆಗಳನ್ನು ಕತ್ತರಿಸಿ ಬೈಲುಮಾಡಿಸಿದರೆ ಕ್ಷೇಮವಾದೀತು.

ಕೋಲಾರ.—ಬೌರಿಂಗ್ ಪೇಟೆಯಿಂದ ಈ ಊರಿಗೆ ತಯಾರಾಗುತ್ತಿರುವ ರೈಲ್ವೆ ರಸ್ತೆಯು ಬಹಳ ಮಟ್ಟಿಗೆ ಪೂರೈಸುತ್ತಾ ಬಂದಿದೆ. ಕೆಲವುಕಡೆ ಅಲ್ಪಸ್ವಲ್ಪ ಮಣ್ಣಿನ ಕೆಲಸವೂ ಕೆಲವು ಸೇತುವೆಗಳೂ ಪೂರೈಸುವದು ಬಾಕಿಯಾಗಿದೆ. ಪೋರ್ಟರ್ ಲೈನೂ, ಸ್ಟೇಷನ್ ಮಾಸ್ಟರ ಕ್ವಾರ್ಟರೂ, ಬುಕಿಂಗ್ ಆಫೀಸೂ ತಯಾರಾಗಿವೆ. ಜನಗಳು ರೈಲನ್ನು ಎಂದಿಗೆ ಕಂಡೇವು ಎಂದು ಎದುರು ನೋಡುತ್ತಾ ಇದಾರೆ. ಗೌರ್ನಮೆಂಟು ಗರ್ಲ್ಸ್ ಸ್ಕೂಲ್ ಕಟ್ಟಡವು ಊರಿನ ಮಧ್ಯರಂಗದಲ್ಲಿ ಬಹಳ ಉತ್ತಮ ತರದಲ್ಲಿ ತಯಾರಾಗುತ್ತಾ ಇದೆ. ಹಿಂದೆ ಈ ಊರಿನಲ್ಲಿದ್ದು ಈ ಊರಿನ ಪುರೋಭಿವೃದ್ಧಿಯನ್ನು ಬಹಳ ಏಳಿಗೆಯ ಸ್ಥಿತಿಗೆ ತಂದ ಈಗ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ಲಾಗಿರುವ ಮೆ॥ ಶ್ರೀಕಂಠೇಶ್ವರ ಅಯ್ಯರವರಿಗೆ ಈ ಕಟ್ಟಡದ ಕೀರ್ತಿಯು ಸಲ್ಲತಕ್ಕದಾಗಿದೆ. ಅವರು ಈ ಕಟ್ಟಡವನ್ನು ಮಾತ್ರವಲ್ಲದೆ ಊರಿನ ಅನೇಕ ಭಾಗಗಳನ್ನು ಬಹಳ ಉತ್ತಮಸ್ಥಿತಿಗೆ ತಂದವರಾಗಿರುತ್ತಾರೆ. ಈಗ ಈ ಗರ್ಲ್ಸ್ ಸ್ಕೂಲು ಬಹಳ ವಿದ್ಯಾರ್ಥಿಗಳನ್ನು ಪಡೆದು ಇಂಥಾ ವಿಶಾಲವಾದ ಒಂದು ಕಟ್ಟಡವು ಅವಶ್ಯಕವಾಗಿದೆ. ಈ ಸ್ಕೂಲಿನಲ್ಲಿರುವ ಹಲವು ಉಪಾಧ್ಯಾಯಿನಿಯರಲ್ಲಿ ಅನ್ಯೋನ್ಯವೂ ಐಕಮತ್ಯವೂ ಇಲ್ಲವೆಂದು ವರ್ತಮಾನ ಸಂಸಾರಗಳಲ್ಲಿರುವ ಮಕ್ಕಳೂ ಪಾಠಶಾಲೆಗಳಲ್ಲಿರುವ ವಿದ್ಯಾರ್ಥಿಗಳೂ ತಂದೆ ತಾಯಿಗಳ ಮತ್ತು ಉಪಾಧ್ಯಾಯರ ನಡತೆಗಳನ್ನು ಕಲಿಯುವವರಲ್ಲಿ ಬಹಳ ಆಸ್ಪದವುಂಟು.—ಮಳೆ ಈ ಪ್ರಾಂತ್ಯದಲ್ಲಿ ಕಡಮೆಯಾಗಿ ದುರ್ಭಿಕ್ಷ ಸುಭಿಕ್ಷ ಎಂಬ ತ್ರಾಸು ಸಮತೂಕದಲ್ಲಿದೆ. ಉತ್ತರೋತ್ತರ ಯಾವದು ಕೆಳಗಾಗುವದೋ, ಯಾವದು ಮೇಲೆಯಾಗುವದೋ ನೋಡಬೇಕು.

ಚಿತ್ರದುರ್ಗ.—ಗಾಳಿ ವಿಶೇಷ, ಬಿಸಿಲೂ ಜಾಸ್ತಿ, ಪೈರುಗಳೆಲ್ಲಾ ಒಣಗಿತು. ಮಳೆಗಾಲವಾದ ಈ ಋತುವಿನಲ್ಲಿ ಇಂಥಾ ಗಾಳಿ, ಬಿಸಿಲು ಇದ್ದದ್ದು ಹಿಂದೆ ಯಾವಾಗಲೂ ನೋಡಿರಲಿಲ್ಲ. ರೈತರೂ, ಪ್ರಜೆಗಳೂ ಮುಂದೆ ಸಂಭವಿಸಬಹುದಾದ ಕಷ್ಟಕಾಲಕ್ಕಾಗಿ ಈಗಿನಿಂದಲೂ ಗಾಬರಿಪಡುತ್ತಲಿದಾರೆ. ಈಗಾಗಲೇ ಅಲ್ಲಲ್ಲಿ ಕಾಲರಾ, ಸಿಡುಬು, ಚಳಿಜ್ವರ, ಕಣ್ಣುನೋವು, ಈ ವ್ಯಾಧಿಗಳು ಆರಂಭವಾಗಿವೆ.—ಈ ಡಿಸ್ಟ್ರಿಕ್ಟಿನ ಪೋಲೀಸ್ ಇಲಾಖೆಯ ನೌಕರರು ತಮ್ಮ ಜವಾಬ್ದಾರಿಯ ನಿಜಸ್ಥಿತಿಯನ್ನು ಈಗೀಗ ಜ್ಞಾಪಕಮಾಡಿಕೊಳ್ಳುತ್ತಿದಾರೆ. ಹೊಸದಾಗಿ ಬಂತಿರತಕ್ಕ ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ಸಿ. ಮಾಚಯ್ಯನವರು ಛಾರ್ಜ್ ವಹಿಸಿದಲಾಗಾಯ್ತು ಕ್ರಿಮಿನಲ್ ಗ್ಯಾಂಗುಗಳಿರತಕ್ಕ ಸ್ಥಳ, ಅವುಗಳ ನಡವಳಿಕೆ, ತಾಬೇದಾರರು ಮಾಡಿರತಕ್ಕ ಕೆಲಸ, ಅವರ ಸ್ಥಿತಿ, ಇವುಗಳನ್ನು ಅನುಭವ ಮಾಡಿಕೊಳ್ಳುವದರಲ್ಲಿಯೇ ಇದಾರೆ.—ಈ ತಾಲ್ಲೂಕಿಗೆ ವರ್ಗವಾಗಿರತಕ್ಕ ಅಮಲ್ದಾರ್ ಮೆ॥ ನಾರಾಯಣರಾಯರು ವರ್ಗದ ಹುಕುಂ ಬಂದು 3 ತಿಂಗಳಾದಾಗ್ಯೂ ಇನ್ನೂ ಇಲ್ಲಿಗೆ ಬರಲಿಲ್ಲ. ಅವರಿಗೆ ದಸರ ಎಗ್ಸಿಬಿಷನ್ ಸೆಕ್ರೆಟರಿ ಕೆಲಸವಾಯಿತೆಂದು ವರ್ತಮಾನವಿದೆ.—ಈ ಟವನ್ನಲ್ಲಿ ಪ್ರಜೆಗಳು ಮನೆಗಳನ್ನು ಕಟ್ಟಬೇಕಾದರೆ ಮ್ಯುನಿಸಿಪಾಲಿಟಿಯವರು ಕೊಡುತ್ತಿರತಕ್ಕ ಲೈಸೆನ್ಸೂ, ಅದರ ನಡವಳಿಕೆ ಇವುಗಳಿಂದ ಪ್ರಜೆಗಳಲ್ಲಿ ಪರಸ್ಪರ ದ್ವೇಷಗಳು ಹೆಚ್ಚುತ್ತಾ ಇವೆ. ಈ ನಡವಳಿಕೆಯನ್ನು ಕ್ರಮಪಡಿಸಿದರೆ ಪ್ರಜೆಗಳಿಗೆ ಕ್ಷೇಮವಾದೀತು.—ಈ ಊರಿನ ಸುತ್ತಲೂ ಅನಾದಿಕಾಲದಿಂದ ಕೋಟೆ ಪೈಕಿ ಈಶಾನ್ಯಭಾಗದ ಕೋಟೆಯನ್ನು ಕೆಡವಿ ನೆಲಸಮಮಾಡಿದರು. ಇದರಿಂದ ಟವನಿನ ಅಲಂಕಾರವೇ ಕೆಟ್ಟುಹೋಯಿತೆಂದು ಜನರು ಆಡಿಕೊಳ್ಳುತ್ತಿದಾರೆ.

ಚನ್ನರಾಯಪಟ್ಟಣ.—ಈಚೆಗೆ ಇಲ್ಲಿ ಒಂದು ತಿಂಗಳಿಂದ ಸುತರಾಂ ಮಳೆ ಇಲ್ಲದೆ ಪೈರುಗಳೆಲ್ಲಾ ಬಾಡಿ ಹೋಗುವ ಸ್ಥಿತಿಯಲ್ಲಿವೆ. ರೈತಾಪಿಜನರೆಲ್ಲರೂ ವ್ಯಸನ ಪಡುತ್ತಾ ಆಕಾಶವನ್ನು ನೋಡುತ್ತಿದಾರೆ. ಸಂತೆಯಲ್ಲಿ ಪ್ರತಿ ಧಾರಣೆ ವಾಸಿ ಬಹಳ ತುಟ್ಟಿಯಾಗಿ ಮಾರಾಟವಾಗುತ್ತಲಿದೆ. ಕಳೆದ ಒಂದು ವರ್ಷದಿಂದ ಇಲ್ಲಿ ಅಮಲ್ದಾರ್ರಾಗಿದ್ದ ಮೆ॥ ಸಿ ನಾರಾಯಣರಾಯರಿಗೆ ಚಿತ್ರದುರ್ಗಕ್ಕೆ ವರ್ಗವಾದ್ದರಿಂದ ತಾಲ್ಲೂಕು ಅಧಿಕಾರಿಗಳೆಲ್ಲರೂ ಇಲ್ಲಿನ ಡಾಕ್ಟರ್ ಮುಂತಾದವರೂ ತಮಗೆ ಅವರಲ್ಲಿದ್ದ ಪ್ರೀತಿ ವಿಶ್ವಾಸಗಳನ್ನು ತೋರಿಸುವದಕ್ಕೆ ಎರಡು ವಾರಗಳ ಕೆಳಗೆ ಒಂದು ಟೀ ಪಾರ್ಟಿ ಏರ್ಪಡಿಸಿ, ಅವರ ಮನಸ್ಸನ್ನು ಸಂತೋಷಪಡಿಸಿದರು. ಹಾಲಿ ಬಂದಿರತಕ್ಕ ಅಮಲ್ದಾರ್ ಮೆ॥ ಸುಂದರರಾಜಯ್ಯಂಗಾರ್ರು ಈಗಲೇ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿ ಸರ್ಕಾರಿ ಕೆಲಸವನ್ನು ಬಹಳ ಚಟುವಟಿಕೆಯಿಂದ ನಡಿಸುತ್ತಲಿದಾರೆ.—ಕಳೆದ ಮೂರು ವರ್ಷಗಳಿಂದ ಇಲ್ಲಿನ ಡಿ. ಪಿ. ಡಬ್ಲ್ಯು ಸಬ್ ಡಿವಿಜನ್ ಆಫೀಸರಾದ ಮೆ॥ ಸಿ ಅನಂತರಾಮಯ್ಯಂಗಾರ್ರು ಕಳೆದ ತಿಂಗಳ ಅಂತ್ಯದಲ್ಲಿ ಪೆನ್ಷನ್ ಪಡೆದು ರಿಟೈರಾದ್ದರಿಂದ ಆ ಇಲಾಖಾ ಅಧಿಕಾರಿಗಳೆಲ್ಲರೂ ಮತ್ತು ಕಂಟ್ರಾಕ್ಟುದಾರರೂ ಸೇರಿ ಇಲ್ಲಿನ ಟ್ರಾವಲರ್ಸ್ ಬಂಗ್ಲೆಯಲ್ಲಿ ತಾ 1 ನೇ ಸೋಮವಾರ ಬೆಳಗ್ಗೆ ಫೋಟೋ ತೆಗಿಸಿದ್ದಲ್ಲದೆ ಸಾಯಂಕಾಲ ತಮ್ಮ ಪ್ರೀತಿ ವಿಶ್ವಾಸಗಳನ್ನು ತೋರ್ಪಡಿಸಿ ಅವರಿಗೆ ಟೀ ಪಾರ್ಟಿಯನ್ನು ನಡಿಸಿ ಬಹಳವಾಗಿ ಸಂತೋಷಪಡಿಸಿದರು. ಆ ಸಮಯದಲ್ಲಿ ನಮ್ಮ ಅಮಲ್ದಾರ್ರು ಅಗ್ರಾಸನವನ್ನು ವಹಿಸಿದ್ದರು. ಸಬ್ ಓವರ್‌ಸಿಯರ್ ಮ॥ ರಂಗಪ್ಪನವರು ತಮ್ಮ ಆಫೀಸರು ತಮ್ಮ ಕಾಲದಲ್ಲಿ ಮಾಡಿದ ಪರೋಪಕಾರ ಕಾರ್ಯಗಳನ್ನೆಲ್ಲಾ ವಿವರಿಸಿದರು. ಕಡೆಯಲ್ಲಿ ನಮ್ಮ ಅಮಲ್ದಾರ್ರವರು ಆಫೀಸರ ಗುಣಕಥನವನ್ನು ಮಾಡಿ ಶ್ಲಾಘಿಸಿದ ಬಳಿಕ ಆಫೀಸರು ಎಲ್ಲರನ್ನೂ ಒಂದೆರಡು ಮಾತುಗಳಿಂದ ವಂದಿಸಿ ಸಂತೋಷಪಡಿಸಿದರು. ಸದ್ಯಕ್ಕೆ ಅವರಿಗೆ ಬದಲಾಗಿ ಮ॥ ರಂಗಪ್ಪನವರು ಛಾರ್ಜ್ ವಹಿಸಿ ಕೆಲಸ ನಡಿಸುತ್ತಾ ಇದಾರೆ.

ಚನ್ನಪಟ್ಟಣ.—ನೀರಿನ ಕೊರತೆ ಅಪಾರವಾಗಿದೆ. ನೀರಿಗೆ ಬರ ಬಂದಿದೆ ಎಂದು ಹೇಳಿದರೆ ಸಾಕು. ಈ ಊರಿಗಿರುವ ಕೆರೆಗೆ ಕುಡಿಯುವದಕ್ಕೆ ನೀರು ಬಿಡುವದೇ ಸರೀ ಬೇಸಾಯವು. ಕೆರೆಗೆ ನೀರು ಬರುವ ಆಸೆ ಕಡಮೆ. ಈಗಿರುವ ಕೊಂಚ ನೀರೂ ಸತ್ತ ಬೆಳೆದು ಕೊಳೆತು ನಾರುತ್ತಿದೆ.—ನಾಯಕಾರ್ ಮೆ॥ ಮಸ್ತಾನ್ ಮಿಯಾ ಸಾಹೇಬರೂ, ಒಕ್ಕಲಿಗರ ಮ॥ ದಾಸಪ್ಪನವರೂ ಸ್ವಂತ ಲಾಗೋಡಿನಿಂದ ಹೊಸ ಕಾರಂಜಿಗಳನ್ನು ಕಟ್ಟಿಸಿದ್ದಾಗ್ಯೂ, ನೀರಿಲ್ಲದ್ದರಿಂದ ಅವರ ಈ ಜನೋಪಕಾರವು ಮರೆತು ಹೋಗುವಂತಿದೆ. ಬಳಗೊಳಕ್ಕೆ ಮೈಸೂರಿಗೂ 9 ಮೈಲಿಗಳು ಇಷ್ಟು ದೂರ ನೀರನ್ನು ನಲ್ಲಿಗಳ ಮೂಲಕ ಸಾಗಿಸಿ ಮೈಸೂರಿನವರಿಗೆ ನೀರಿನ ಬರವನ್ನು ಹರಿಸುವದು ಸುಲಭಸಾಧ್ಯವಾಗಿರುವಲ್ಲಿ ಚನ್ನಪಟ್ಟಣಕ್ಕೆ 7 ಮೈಲಿ ದೂರದಲ್ಲಿರುವ ಅರ್ಕಾವತಿ ನದಿಯಿಂದ ಯಂತ್ರಗಳ ಮೂಲಕ ನೀರನ್ನು ಒದಗಿಸುವದು ಮತ್ತಷ್ಟು ಸುಲಭ ಸಾಧ್ಯವಾಗಿರುವದು. ದಯಾಳು ಸರ್ಕಾರದವರು ಇದನ್ನು ಪರ್ಯಾಲೋಚಿಸುವರೆಂದು ನಂಬಿದೇನೆ.—ಉತ್ತರ ದಿಕ್ಕಿನಲ್ಲಿ ರೈಲ್ ರಸ್ತೆಗೂ ಊರಿಗೂ ಮಧ್ಯೆ ಕಸಕುಪ್ಪೆಗಳೂ, ಹಳ್ಳ ದಿಣ್ಣೆಗಳೂ, ಗಿಡಗೆಂಟೆಗಳೂ ಬೆಳೆದು ಅನಾರೋಗ್ಯಕ್ಕೆ ಆಸ್ಪದವಾಗಿದೆ.—ಆಗಸ್ಟು ತಾ 29 ರಲ್ಲಿ ಚಿಕ್ಕಮಳೂರು ಕೆಂಪೇಗೌಡರ ಮನೆಯಲ್ಲೂ, ಚನ್ನಪಟ್ಟದಲ್ಲಿ ಪೋಸ್ಟ್ ಮೆನ್ ನರಸಿಂಹಯ್ಯನವರ ಮನೆಯಲ್ಲೂ ಕಳ್ಳರು ಹೊಗಬಿದ್ದು ಸುಮಾರು 1,000 ರೂಪಾಯಿನ ನಗನಾಣ್ಯಗಳನ್ನು ದೋಚಿಕೊಂಡು ಹೋಗಿದಾರೆ. ಪೋಲೀಸಿನವರ ನಿಗಾವಣೆ ಕಡಮೆ ಎಂದು ಇದರಿಂದ ಕಂಡುಬರುತ್ತದೆ. ಮಿ॥ ನಟರಾಜುಲುಯವರು ಪೋಲೀಸ್ ಇನ್ಸ್‌ಪೆಕ್ಟರಾಗಿದ್ದಾಗ ಗುಮಾನಿ ಆಸಾಮಿಗಳು ರಾತ್ರಿ ಕಾಲದಲ್ಲಿ ಪೋಲೀಸ್ ಸ್ಟೇಷನ್ನಲ್ಲಿ ಮಲಗಿಕೊಳ್ಳುವ ಏರ್ಪಾಡುಮಾಡಿದ್ದರು. ಈಗಲೂ ಅಂಥವರನ್ನು ಕಂಡು ಹಿಡಿದು ಹೀಗೆ ಮಾಡಿದರೆ ಪ್ರಜಾ ಕಂಟಕವು ಕಮ್ಮಿಯಾಗುವದರಲ್ಲಿ ಸಂದೇಹವಿಲ್ಲ. ಮೇಲ್ಪಟ್ಟ ಅಧಿಕಾರಿಗಳು ತನಿಖೆಯಿಂದ ಕ್ರಮಪಡಿಸುವರೆಂದು ಪ್ರಜೆಗಳು ನಿರೀಕ್ಷಿಸುತ್ತಲಿದಾರೆ.—ಜನಾನಾ ಮಿಷನ್ ಸ್ತ್ರೀ ಬೋಧಕಿಯರೊಬ್ಬರು ಇಲ್ಲಿಗೆ ಬಂದು ಎಲೇ ಕೇರಿಯಲ್ಲೂ, ಮಂಗಳವಾರ ಪೇಟೆಯಲ್ಲೂ ಛಾಯಾಚಿತ್ರ ಪ್ರದರ್ಶನದ ಮೂಲಕ ನೀತಿಬೋಧೆ ಮಾಡಿದರು.

ತುಮಕೂರು.—ಈಗ್ಗೆ 1-2 ತಿಂಗಳಿಂದ ಮಳೆ ಇಲ್ಲದೆ ಬೇಸಗೆಯಂತೆ ಬಿಸಿಲು ಕಾಯುತ್ತಿರುವುದರಿಂದ ಇದ್ದ ಅಲ್ಪ ಸ್ವಲ್ಪ ಬೆಳೆಯೂ ನಾಶವಾಗುತ್ತಾ ಬರುತ್ತಿವೆ. ರೈತರು ಅನೇಕಸಾರಿ ಬಿತ್ತಿ ಬಿತ್ತಿ ಧಾನ್ಯಗಳನ್ನು ಕಳೆದು ಕೊಂಡರು. ನೀರಿನ ಕಷ್ಟವಂತೂ ಹೇಳುವುದಕ್ಕೆ ಸಾಧ್ಯವಿಲ್ಲ. ಆಹಾರ, ನೀರು ಎರಡೂ ಇಲ್ಲದೆ ಜನರೂ ಜಾನುವಾರುಗಳೂ ಕಳವಳ ಪಡಬೇಕಾಗಿದೆ. ಇಲ್ಲಿಗೆ ನಲ್ಲಿಗಳನ್ನು ತರುವ ವಿಷಯದಲ್ಲಿ ನಮ್ಮ ದಿವಾನ್ ಸಾಹೇಬರು ಬಹಳ ಆಸಕ್ತಿಯನ್ನು ವಹಿಸಿರುತ್ತಾರೆಂದು ತುಂಬಾ ಗಲಭೆಯುಂಟಾಗಿತ್ತು. ಆದರೆ ಈಗ ಅದರ ಹೆಸರೇ ಇಲ್ಲದೆ ಸ್ತಬ್ಧವಾಗಿದೆ.—ಈ ಊರಿನ ಮಾಂಸದ ಮತ್ತು ಕೋಳಿಯ ಬಿಕರಿ ಸ್ಥಳಗಳು ಟೌನಿನ ಮಧ್ಯ ಪ್ರದೇಶದಲ್ಲಿರುವುದರಿಂದ ಜನರಿಗೆ ಆರೋಗ್ಯಕ್ಕೆ ಕುಂದಕವಾಗಿರುತ್ತೆ. ಈ ಸ್ಥಳದ ಮೂಲಕ ಅನೇಕರು ದೇವಸ್ಥಾನಗಳಿಗೂ, ಕೆರೆಯ ನೀರಿಗೂ ಹೋಗಿ ಬರತಕ್ಕದ್ದಾಗಿರುತ್ತೆ. ಸಾಯಂಕಾಲದ ವೇಳೆ ಮದ್ಯಪಾಯಿಗಳು ಮನಸ್ವಿಯಾಗಿ ಮಾತನಾಡುತ್ತಾ, ಹೆಂಗಸರು ಮಕ್ಕಳಿಗೆ ನಾಚಿಕೆಯನ್ನುಂಟುಮಾಡುವರು.—ಈ ಊರಲ್ಲಿ ಬೈಸಿಕಲ್ ಅಂಗಡಿಗಳು ಹೆಚ್ಚಾಗಿ, ಯಾರು ಕೇಳಿದಾಗ್ಯೂ ಗಂಟೆಗೆ 2 ಆಣೆ ಬಾಡಿಗೆಯಂತೆ ಕೊಡುತ್ತಿರುವರು. ಈ ಜನರು ಸ್ವೇಚ್ಛೆಯಾಗಿ ಸವಾರಿಮಾಡುತ್ತಾ, ದಾರಿಯಲ್ಲಿ ಹೋಗಿ ಬರತಕ್ಕವರನ್ನು ಲಕ್ಷಿಸದೆ ಅನೇಕ ವೇಳೆ ಪ್ರಾಣಾಪಾಯಕ್ಕೆ ಗುರಿಯಾಗುತ್ತಿರುವರು. ಇವೆಲ್ಲಾ ಜನಗಳ ನೆಮ್ಮದಿಗೆ ಭಂಗವನ್ನುಂಟುಮಾಡತಕ್ಕ ಕಾರ್ಯಗಳಾಗಿರುತ್ತವೆ. ಆದ್ದರಿಂದ ಸದರಿ ಮಾರ್ಕೆಟನ್ನು ಬೇರೆ ಒಂದು ಅಧುಕ್ತ ಮೂಲೆಗೆ ವರ್ಗಾಯಿಸುವುದರಿಂದಲೂ, ಚೆನ್ನಾಗಿ ಬೈಸಿಕಲ್ ಸವಾರಿಮಾಡಲು ಬಂದ ಹೊರ್ತು ಕೈಗಳು ವಗೈರೆ ಬಿಡದೆ ಕ್ರಮವಾಗಿ ಸವಾರಿಮಾಡುವಂತೆ ನೋಡಿಕೊಳ್ಳಲು ಪೋಲೀಸಿನವರು ನಿಗಾ ಕೊಡುವುದರ ಮೂಲಕವೂ ಜನರಿಗೆ ಕ್ಷೇಮವನ್ನುಂಟುಮಾಡಬೇಕಾಗಿದೆ.—ಇಲ್ಲಿನ ಮುನ್ಸಿಫ್ ಕೋರ್ಟಿನಲ್ಲಿ ಮೊಕದ್ದಮೆಗಳು ಜಾಸ್ತಿ ಫೈಸಲಾಗದೆ ಇರುವುದರಿಂದ ಸ್ಥಳ ಪರಸ್ಥಳದ ಕಕ್ಷಿಗಾರರು ಬೇಸತ್ತು ಬೆಂಡಾಗಿ ಕೊರಗುತ್ತಿರುವರು. ಮೈಸೂರು ಗವರ್ನ್‌ಮೆಂಟಿನವರು ಕಣ್ಣು ತೆರೆದು ಮತ್ತೊಂದು ಕೋರ್ಟನ್ನಾದರೂ ಸ್ಥಾಪಿಸಿಕೊಟ್ಟು ಪ್ರಜೆಗಳ ಕೊರತೆಯನ್ನು ನೀಗಿಸಬಾರದೇ ಎಂದು ಕಕ್ಷಿಗಾರರು ಅಂಗಲಾಚುವರು.—ಸಿಟಿ ಪೋಸ್ಟ್ ಆಫೀಸಿನಲ್ಲಿ ಟಿಲಿಗ್ರಾಂ ವಗೈರೆ ಎಲ್ಲಾ ಶಾಖೆಗಳಿದ್ದಾಗ್ಯೂ ಒಬ್ಬ ಉದ್ಯೋಗಸ್ಥರನ್ನು ನೇಮಿಸಿ, ಮತ್ತೊಂದು ಅಧುಕ್ತ ಮೂಲೆಯಲ್ಲಿರುವುದಕ್ಕೆ ಹೆಚ್ಚು ಸಿಬ್ಬಂದಿಯನ್ನು ಕೊಟ್ಟಿರುವುದು ತುಂಬಾ ಶೋಚನೀಯವಾಗಿದೆ. ಸಿಟಿ ಪೋಸ್ಟ್ ಆಫೀಸಿನಲ್ಲಿರತಕ್ಕ ಉದ್ಯೋಗಿಯು ಬಹಳ ದಯಾಳುವೂ, ಚಟುವಟಿಕೆಯುಳ್ಳವನೂ ಆದಾಗ್ಯೂ, ಏನು ಪ್ರಯೋಜನ? ನಾಲ್ಕು ಮಂದಿ ಮಾಡುವ ಕೆಲಸವನ್ನು ಒಬ್ಬನು ಮಾಡಲು ಸಾಧ್ಯವೇ?—ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮೆ॥ ಎಚ್. ವೆಂಕಟರಮಣಯ್ಯನವರು ಬೆಂಗಳೂರಿಗೆ ವರ್ಗವಾಗುವರೆಂದು ವದಂತಿ ಇದೆ.—ಇಲ್ಲಿನ ಮಂಡಿ ವರ್ತಕರು ಮತ್ತು ಇತರೆಯವರು ಎರಡು ದಿನ ಮಹದಾರಾಧನೆಮಾಡಿ ಸಾವಿರಾರು ಮಂದಿ ಬಡಬಗ್ಗರಿಗೆ ಅನ್ನದಾನಮಾಡಿದರು.—ಈಗ ಲೈಟ್ ಇನ್ಸ್‌ಪೆಕ್ಟರೆಂದು ನೇಮಕವಾಗಿರುವ ಮೆ॥ ನಾರಣಾಚಾರ್ಯರು ತುಂಬಾ ಆಸಕ್ತಿಯಿಂದ ಕೆಲಸ ಮಾಡುತ್ತಿರುವುದರಿಂದ ದೀಪಗಳ ಗಲಾಟೆಯೇನೂ ಇರುವುದಿಲ್ಲ.—ವೆಂಕಟಸುಬ್ಬರಾವ್ ಅಂಡ್ ಕಂಪನಿ ವಗೈರೆ ಸ್ಥಳಗಳಲ್ಲಿ ಕಳವುಮಾಡಿದ್ದ ಈ ಊರಿನ ಒಬ್ಬ ನಾಶಸ್ಥನು ಬೆಂಗಳೂರು ಸಿಟಿ ಇನ್ಸ್‌ಪೆಕ್ಟರವರ ಕೈಗೆ ಸಿಕ್ಕಿಬಿದ್ದಿರುವುದಾಗಿ ಕೇಳುತ್ತೇನೆ.

ತರೀಕೆರೆ.—ಕೆಲವು ದಿನಗಳಿಂದ ಮಳೆ ಇಲ್ಲದೆ ಪೈರು ಕೆಟ್ಟುಹೋಗುತ್ತಾ, ಒಣಗುತ್ತಾ ಇರುವದರಿಂದ ರೈತರು ತುಂಬಾ ಗಾಬರಿಯೊಂದುತ್ತಿದಾರೆ. ಧಾರಣೆ ವಾಸಿಯು ಏರುತ್ತಾ ಇದೆ.—ಕೆಲವು ಸಂತೆಗಳಲ್ಲಿ ಹೊಸ ಸೇರುಗಳು ಬಿಕರಿಯಾಗುತ್ತಾ ಇವೆ. ಈ ಊರಿನಲ್ಲಿಯೂ ಹೊಸ ಸೇರುಗಳೂ, ತೂಕದ ಬೊಟ್ಟುಗಳೂ ಬಿಕರಿಯಾದರೆ ಪ್ರಜೆಗಳಿಗೆ ತುಂಬಾ ಅನುಕೂಲವಾಗುತ್ತೆ.—ಶಿವಮೊಗ್ಗಾ ಟವನ್ ಪಾಕೀಜಾ ನಡೆಯುವ ಮೇರೆ ಈ ಊರಿನಲ್ಲಿ ಹಿತ್ತಲುಗಳಲ್ಲೂ, ಖಾಲಿ ಸ್ಥಳಗಳಲ್ಲೂ ಇರುವ ಕಟರಾವನ್ನೂ, ಗಿಡಗಳನ್ನೂ ತೆಗಿಸಿದರೆ ಊರು ತುಂಬಾ ಆರೋಗ್ಯವಾಗುವದರಲ್ಲಿ ಸಂದೇಹವಿಲ್ಲ.—ಈ ಊರಿಗೆ 4-5 ಮೈಲಿ ದೂರದಲ್ಲಿ ಪ್ಲೇಗ್ ಇದೆ. ಅಲ್ಲಿಗೆ ವೈದ್ಯರವರು ಹೋಗಿ ತುಂಬಾ ಮೆಹನತ್ತಿನಿಂದ ಇನಾಕ್ಯುಲೇಷನ್ ಮಾಡಿದ್ದಲ್ಲದೆ ಔಷಧವನ್ನೂ ಕಳುಹಿಸುತ್ತಾ ಇದಾರೆ. ಉಪದ್ರವು ಅಷ್ಟಕ್ಕೇ ಶಮನವಾದರೆ ಸಾಕು.—ಕಳೆದ ಡಿಸೆಂಬರಿನಲ್ಲಿ ಪೋಸ್ಟ್ ಜವಾನನು ಒಂದು ಅಂಗಡಿಯಲ್ಲಿ ಸ್ವಲ್ಪ ಹೊತ್ತು ಕುಳಿತಿದ್ದು ಎದ್ದು ಹೋಗುವಾಗ್ಗೆ ಒಂದು ವಿ. ಪಿ. ಪಾರ್ಸಲನ್ನು ಮರೆತು ಹೋಗಿರುವಲ್ಲಿ ಸದರಿ ಅಂಗಡಿಯವರು ಅದನ್ನು ಅಪಹರಿಸಿದರು. ವಿಚಾರಿಸಿ ನೋಡಿ ಸಿಕ್ಕದೆಹೋದದ್ದರಿಂದ ತಾನು ಇಂಥಾ ಅಚಾತುರ್ಯ ಮಾಡಿದೆನಲ್ಲಾ ಎಂದು ಮನಸ್ಸಿನ ಮೇಲೆ ದೃಷ್ಟಿಯಿಟ್ಟು ಭಾವಿಗೆ ಬಿದ್ದು ಪ್ರಾಣ ಕಳೆದುಕೊಂಡನು. ಈಗ ಮಾಲನ್ನು ಅಪಹರಿಸಿದ ಆಸಾಮಿಗಳು ಅದನ್ನು ಶಿವಮೊಗ್ಗೆಯ ಕಡೆ ಮಾರಲು ಪ್ರಯತ್ನಪಟ್ಟಾಗ ಕಷ್ಟವಾಗಿ, ಅರಸೀಕೆರೆಯ ಕಡೆ ಮಾರಾಟಮಾಡಿ ಕಡೆಗೆ ಸಿಕ್ಕಿಬಿದ್ದು ಈಗ ಕೇಸ್ ನಡೆಯುತ್ತಾ ಇದೆ.—ಈ ಸಾರಿ ಮಹಮದೀಯರ ರಂಜಾನ್ ಹಬ್ಬವು ಸಂತೋಷವಾಗಿಯೂ, ಆಟ್ಟಹಾಸದಿಂದಲೂ ನಡೆದರೂ, ಅಸಮಾಧಾನವೇ. ಹ್ಯಾಗೆಂದರೆ ಲಾಗಾಯ್ತಿನಿಂದಲೂ ಹಾಜಿ ಸಯ್ಯದ್ ಅಬ್ದುಲ್ ರಹೂಫ್ ರವರೇ ಖಾಜಿಯವರಾಗಿದ್ದರು. ಈಚೆಗೆ ಸುಮಾರು 20 ಮನೆಯ 40 ಜನರು ಹೊಸದಾಗಿ ಖಾಜಿಯವರನ್ನು ನೇಮಿಸಿಕೊಂಡು, ಸುಮಾರು 300 ಮನೆಯ 2,000 ಜನರ ಮೇಲೆ ದ್ವೇಷ ಬೆಳಸಿ ಈ ಹಬ್ಬದಲ್ಲಿ ಲಾಗಾಯ್ತಿನಿಂದ ನಮಾಜು ಮಾಡುತ್ತಿದ್ದ ಈದ್ಗಾದಲ್ಲಿ ತಾವು ನಮಾಜು ಮಾಡುವಾಗ್ಗೆ ಇತರ ಗುಂಪಿನವರು ಅಡ್ಡಿ ಮಾಡದಂತೆ ತಾಲ್ಲೂಕು ಅಮಲ್ದಾರ್ರಲ್ಲಿ ಅರ್ಜಿಕೊಟ್ಟಿದ್ದರು. ಅಂತರ್ಯ ಹೊರಪಡಲಿಲ್ಲವೆಂದೋ ಏನೋ ಅವರ ಇಷ್ಟದಂತೆ ಹುಕುಂ ಜಾರಿಯಾಯಿತು. ಇದನ್ನು ತಿಳಿದ ಇನ್ನೊಂದು ಗುಂಪಿನವರು ಡೆಪ್ಯುಟಿ ಕಮಿಷನರ್ ಸಾಹೇಬರಿಗೂ, ದಿವಾನ್ ಸಾಹೇಬರಿಗೂ ತಂತಿ ಮುಟ್ಟಿಸಿದ್ದರಿಂದ ಡೆಪ್ಯುಟಿ ಕಮಿಷನರ್ ಸಾಹೇಬರು ದಯಮಾಡಿ ಎರಡು ಗುಂಪಿನವರನ್ನೂ ವಿಚಾರಿಸಿ ಲಾಗಾಯ್ತಿನಿಂದ ಖಾಜಿಯು ಯಾರೋ ಅವರು ಮಾಮೂಲ್ ಸ್ಥಳಕ್ಕೆ ಹೋಗಬೇಕು; ಹೊಸ ಖಾಜಿಯವರೂ ಅವರ

ಹಿಂಬಾಲಕರೂ ಮಾಮೂಲ್ ಖಾಜಯವು ಹಿಂದೆ ಹೋಗಬೇಕು ಎಂಬದಾಗಿ ಅಪ್ಪಣೆ ಕೊಡಿಸಿದರು ತರುವಾಯ ಮಾಮೂಲ್ ಮೇರೆ ಹಬ್ಬದ ಕಾರ್ಯವು ನಡೆಯಿತು ಸರ್ಕಾರದವರು ಹೀಗೆ ದರ್ಪದಿಂದ ಕ್ರಮ ಜರುಗಿಸಿದ್ದಕ್ಕೆ ತಂತಿ ಮೂಲಕ ಕೃತಜ್ಞತೆಯನ್ನು ತೋರಿಸಿದಾರೆ—ಇಲ್ಲದ್ದ ಅನುಲ್ಲಾರ್ರಿಗೆ ವರ್ಗವಾಯಿತು ಈ ಸಂಗತಿಯು ಅನೇಕರಲ್ಲಿ ವ್ಯಥೆಗೂ, ದುಃಖಕ್ಕೂ ಕಾರಣವಾಗಿವೆ ಇವರು ಹ್ಯಾಗೆ ಪ್ರಜೆಗಳಲ್ಲಿ ಪ್ರವರ್ತಿಸಿದರೆಂಬದನ್ನು ಜನರಲ್ಲಿರುವ ದುಃಖವೇ ತೋರ್ಪಡಿಸುತ್ತದೆ ಸರ್ಕಾರಿ ನೌಕರಮಾನೇರುಗಳೆಲ್ಲಾ ಪ್ರಜಾಹಿತಕ್ಕೆ ತಮ್ಮ ವಿದ್ಯೆ, ಬಲ, ಕಾಲಗಳನ್ನು ಕಳೆಯುವದಾದರೆ ರಾಜ್ಯವೂ ಪ್ರಜೆಗಳೂ ಸೇರಿ, ತಾಯಿಮಕ್ಕಳಂತೆ ಸರಸಸಲ್ಲಾಪ, ಭಕ್ತಿವೈರಾಗ್ಯದಲ್ಲಿರುವದಕ್ಕೆ ಅಡ್ಡಿಯೇನದೆ ?

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 2 37

(ಸ್ಕಾಟ್ಸ್ ಇಮಲ್ ಷನ್)

ಘಟ್ಟಿ ಶರೀರವುಳ್ಳವರ್‍ಯಾರೂ ಪ್ಲೇಗ್, ಮಹಾಮಾರಿರೋಗ ವಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಹಿಡಿಯುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪ್ರಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತದ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನ,

ಲಂಡನ್, ಇಂಗ್ಲೆಂಡ್,

Always get the Emulsion with this mark—the Fishman—the mark of the "Scott" process!

ಈ ವಿಾನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ನಿಕ್ಕಲ್ ಬೆಳ್ಳಿ ಲೇಡಿ ವಾಚ್

ಕ್ರಯ ರೂ 2-15-0 ಕ್ರಯ ರೂ 2-15-0

ಇದು ನೋಡುವದಕ್ಕೆ ಬಹಳ ಚಿಕ್ಕದಾಗಿಯೂ, ಅಲಂಕಾರವಾಗಿಯೂ ಸರಿಯಾದ ಕಾಲವನ್ನು ತೋರಿಸುವದಾಗಿಯೂ ಇವೆ ಈ ಗಡಿಯಾರಕ್ಕೆ ಅದನ್ನು



Rs. 2-15-0

ಅಂದವಾದ ಚರ್ಮದಿಂದ ಏಗಿಸಲ್ಪಟ್ಟು ಕೈಗೆ ತಿನ್ನದ ಆಭರಣದಂತೆ ಇಟ್ಟುಕೊಳ್ಳಲು ಅನುಕೂಲವಾಗಿರುತ್ತವೆ ಇದನ್ನು ಕೈಯಲ್ಲಿ ದರಿಸಿಕೊಂಡು ನಾದು ಕಚೇರಿಗಳಿಗೆ ಸ್ನೇಹಿತರ ಜೊತೆಯಲ್ಲಿ ಉಲ್ಲಾಸವಾಗಿ ಹೋಗುವಾಗಲು, ವಿಸಿಟಿಂಗ್ ಮುಂತಾದ ಸ್ಥಳಗಳಿಗೆ ಹೋಗುವವಕ್ಕೆ ಬಹಳ ಉಪಯೋಗವಾದದ್ದು ಅನೇಕ ದೊಡ್ಡ ಮನುಷ್ಯರುಗಳು ಮತ್ತು ದೊಡ್ಡ ಮನುಷ್ಯರ ಹೆಂಗಸರುಗಳು ಇದನ್ನು ಕೈಯಲ್ಲಿ ಧರಿಸಿಕೊಳ್ಳುತ್ತಲಿರುವರು

ಗೋಡೆಗೆ ಹಾಕುವ ಎಂಟು ದಿನ ಗಡಿಯಾರ 7-14 0 ಮನೋಹರವಾದ ಪಿಟೀಲುಗಳು 9 0 0 ದೂರದೃಷ್ಟಿಯ ಭೂತಕನ್ನಡಿ 1 8 0 ಸ್ವಾರಪೂಟ ಹಾರ್ಮೋನಿಯಂ 37 0 0 ಸುಂದರವಾದ ಟೇಬಲ್ ಗಡಿಯಾರ 4-4 0, ಎಂಟು ದಿನಗಳ ಬೆಳ್ಳಿ ಗಡಿಯಾರ 9 8 0 14 ಕ್ಯಾರೆಟ್ಟು ಭಂಗಾರದ ಲೇಡಿ ಗಡಿಯಾರ—ಇನಾಂ ಸ್ವದೇಶಿ ಕಾಲುಸವರಾ 11 12 0 [181 1]

ವಿಳಾಸ —ಶತ್ತಿ ಅಂಡ್ ಕೋ,

ನಂ 11 ಜನರಲ್ ಮುತ್ಯಾಲುದಲಿ ವೀದಿ

ಸಾಹುಕಾರ್ ಪೇಟ, ಮದ್ರಾಸ್

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು ಬಿಡದೆ ಬಾಯಾರಿಕೆ ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು ಮುರವು, ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [181 1]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು

ರೂ ೨—೦—೦, ಅಥವಾ ೬ ಬುದ್ದಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ೬ ೬ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರ ಬೇಗ ಬರೆದು ತರಿಸಿಕೊಳ್ಳಿ

3 37

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಅ ೧ ರೂ ೬ ಅ ೧ ರೂ ೪ ಅ

ಚುಕ್ಕೆಯುಳ್ಳ ಟೋಪಿಗಳು ರೂ ೧ ೮ ರೂ. ೧—೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಅ ೧ ರೂ ೮ ಅ ೧ ರೂ ೬ ಅ

ಮುಸುಕಿನ ಟೋಪಿಗಳು ೧ ರೂ ೮ ಅ ೧ ರೂ ೬ ಅ

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಒಳ್ಳೇ ಸಮಯವಾಗಿದೆ—ಬೇಗ ತರಿಸಿಕೊಳ್ಳಿರಿ

ತರಕಾರಿ ಬೀಜಗಳು 10 ಪ್ಯಾಕೆಟ್ಟು ರೂ 1 20 ಪ್ಯಾಕೆಟ್ಟು ರೂ 3½ 12 ಪ್ಯಾಕೆಟ್ಟು ರೂ 2 ಹೂವಿನ ಬೀಜಗಳು 10 ಪ್ಯಾಕೆಟ್ಟು ರೂ 5, 20 ಪ್ಯಾಕೆಟ್ಟು ರೂ 3 12 ಪ್ಯಾಕೆಟ್ಟು ರೂ 2 ಗುಲಾಬಿ (ರೋಜಾ) ಗಿಡಗಳು 100 ಕ್ಕೆ ರೂ 10 ರಿಂದ 25 ವರೆಗೆ ಡಜನ್ ರೂ 1 ರಿಂದ ರೂ 3 ಕಟ್ಟದ ಮಾವಿನ ಗಿಡಗಳು ಡಜನ್ 1 ಕ್ಕೆ ರೂ 10 100 ಕ್ಕೆ ರೂ 70 ರಿಂದ 75, ಕಟ್ಟದ ಸೀಬೆ, ನಿಂಬೆ, ಕಿತ್ತಳೆ, ದಾಳಿಂಬ, ಚಕೋತ್ರೆ ಡಜನ್ ರೂ 1 ರಿಂದ 6 ಇನ್ನೂ ಬೇಕಾದ ಅನೇಕ ತರವಾ ಗಿಡಗಳು, ಬೀಜಗಳು ಹುಲ್ಲು, ಹೂವು, ತರಕಾರಿ ವಗೈರೆ ಕ್ಯಾಟಲಾಗ್ (ಕ್ರಯಪಟ್ಟಿ) ತರಿಸಿಕೊಳ್ಳಿರಿ [126 1]

ಬಿ ಎಲ್ ಬೈಯ್ಯಾ ಬ್ರದರ್ಸ್, 62 ಲಾಲ್‌ಬಾಗ್ ರೋಡ್, ಬೆಂಗಳೂರು ಸಿಟಿ

ಗೃಹಕೃತ್ಯದ ನೋಟೀಸ್

ಹೊಳಲ್ಕೆರೆಯಲ್ಲಿರುವ ಪ್ರಭುದೇವರ ಬಸಪ್ಪನು ಮತ್ತು ಈತನ ಮಕ್ಕಳು ಸಹ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ—ಬೀರೂರಲ್ಲಿರುವ ಪ್ರಭುದೇವರ ಹಳೆಮನೆ ಚನ್ನವೀರಪ್ಪನು ನಮಗೆ ಸಮಾನ ದಾಯಾದಿಯಾಗಬೇಕು ಈತನು ಘವತಿಯಾಗಿ 7 8 ವರ್ಷವಾಯಿತು ಈತನಿಗೆ ಗಂಡುಮಕ್ಕಳು ಇರುವದಿಲ್ಲ ಹೆಣ್ಣುಮಕ್ಕಳು ಇರುವುದಿಲ್ಲ ಈತನ ತಾಯಿ ಮತ್ತು ಸಂತತಿ ಮಾತ್ರ ಇದಾರೆ ಈತನ ಹೆಂಡತಿ ಗಂಗಮ್ಮನು ನಮ್ಮಗಳಿಗೆ ಮೋಸಮಾಡಲು ನಿಷ್ಕಾರಣವಾಗಿ ಕುಟುಂಬದ ಸ್ವತ್ತುಗಳನ್ನು ಕ್ರಯಮಾಡುವ ಪ್ರಯತ್ನದಲಿ ಬಾಳೆಂದು ತಿಳಿಯಬರುತ್ತೆ ಆದ್ದರಿಂದ ಉತ್ತರ ವಾರಸುದಾರರಾದ ನಮ್ಮಗಳ ಅನುಮತಿ ವಿನಾಯಿ ಸದರಿ ಚನ್ನವೀರಪ್ಪನ ಸ್ವತ್ತುಗಳನ್ನು ಯಾರು ಕ್ರಯ ದಾನ ಭೋಗ್ಯಾದಿಗಳ ಮೂಲಕ ತೆಗದುಕೊಂಡರೂ ಅವರಿಗೆ ಸದರಿ ಪರಬಾರೆಯು ಊರ್ಜಿತವಾಗತಕ್ಕದ್ದಲ್ಲ ತಿಳಿಯುವದು [181 1]

ಪ್ರಭುದೇವರ ಬಸಪ್ಪನವರ ಮಗ ಪಾಲಯ್ಯ, ಹೊಳಲ್ಕೆರೆ

ರಬ್ಬರ್ ಸ್ಟಾಂಪು.

ಕ್ರಯ ರೂ 1 12-0

ಯಾವ ಬಾಷೆ, ಯಾವ ತರಹ ಭಾಷೆ ಜಿನಸಲ್ಲಾದರೂ ಸರಿ ಇದು ವರೆಗೆ ವಿಕ್ರಯಿಸುತ್ತಿದ್ದ 1 8 0ಯ ರಬ್ಬರ್ ಸ್ಟಾಂಪನ್ನು ಡಿಸೆಂಬರ್ ಒಳಗಾಗಿ ತರಿಸಿಕೊಳ್ಳುವವರಿಗೆ 1 ಶಾಯಿ ಪ್ಯಾಡ್, 1 ಪೆಟ್ಟಿಗೆ 1 ಬ್ರಷ್, 2 ಪ್ಯಾಡು ಸಹಿತ ರೂ 1 12 0ಗೆ ತಯಾರಿಸಿ ಕಳುಹಿಸುತ್ತೇವೆ ನಮಗೆ ಏಜಂಟರು ಬೇಕು ತಿಂಗಳಿಗೆ

100 ರೂಪಾಯಿ ಸಂಬಳ ಕೊಡುತ್ತೇವೆ ಬೇಕಾದವರು ಬರೆದು ಏಜನ್ಸಿಯನ್ನು ಪಡೆಯಬಹುದು

ವಿಳಾಸ —ಮ್ಯಾನೇಜರ್, ರಬ್ಬರ್ ಸ್ಟಾಂಪು ಡಿಪ್ಪೋ,

[180-1] 18 ಸಕೆಂಡ್ ಲೈನ್ ಬೀಚ್, ಮದರಾಸು

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

104 16

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರತಲೆ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಟ್ಲು ಗಾಡೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾ ಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯೇ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ವಡಮುಲಪಿಳ್ಳೆ ಬೀದಿ ಪುರ್ಸವಾಕಂ, ವೇಪೇರಿ, ಮದರಾಸ್ (2) ಟಿ ಎಸ್ ಕನ್ನಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

ಮರೆಯಬಾಡಿರಿ ಮರೆಯಬ್ಯಾಡಿರಿ

ದರ್ಬಾರ್ ಸಾಬೂನು

ಏಜಂಟರುಗಳು ಬೇಕಾಗಿದೆ

ಒಳ್ಳೇ ಕಮಿಷನ್ ದೊರೆಯುವದು.

ಅಪಾಯವಿಲ್ಲದೇ ಕ್ಷೌರಮಾಡಿಸಲು ಸಹಾಯಕಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿ ವರೆ 6 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು

ಉರಿ, ಸೆಕೆ ಮುಂತಾದ ಬಾಧೆಗಳಿಲ್ಲದೆ ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು ಮರೆಯಬ್ಯಾಡಿರಿ

3 ಸಬ್ಬುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ 14 ಆಣೆ

2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1 10 0

ಅಂಚೆ ಹಾಸಲು 4 ಆಣೆ

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ [164 3]

ವಿಳಾಸ—ವಿ ಪಿ ಎಸ್ ಸಾಬೂನ್ ಕಂಪನಿ,

1, ಇರುಳಪ್ಪನ್ ವೀದಿ, ಮದರಾಸು

Mellin's Food

ಮೆಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರು ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕರವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಉಚಿತವಾಗಿ ಸಂಚಿಕೆಯಿಂದ ಕಳುಹಿಸಿಕೊಡುತ್ತಾರೆ Messrs OAKES & Company, Mount Road, Madras.

[4-13] **ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.**

Printed and Published by the Rev H Gulliford Proprietor and Manager, Wesleyan Mission Press Mysore 11/9/1913

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—೧೯೧೩ ನೇ ಇಸವಿ ಸೆಪ್ಟಂಬರ್ ತಾರೀಖು ೧೮ ನೇ ಗುರುವಾರ. ಸಂಚಿಕೆ ೧೬

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ. ಕೂದಲು ಸತ್ತು ಹೋಗುತ್ತೆ. ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ" ವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣಕೊಡುತ್ತೆ. ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ. ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಕಚಕಿಸುವದು, ಬಿದುವಾದ ನೀಲಬಣ್ಣದಿಂದ ಕೂಡಿ, ಅಗಾಗ್ಗೆ ಹರಿದು ಬಿದ್ದು ಹೋಗದೆ ದಟ್ಟವಾಗಿ ಬೆಳೆಯುವದು. ಕೂದಲಿಗೆ ಹೊಳಪುಕೊಡುತ್ತೆ. ಬುರುಡೆಯನ್ನು ಶುದ್ಧವಾಡುತ್ತೆ. ಸುಂಡಿಸ ಹೊಟ್ಟನ್ನು ಅಡಗಿಸುತ್ತೆ. ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ. ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಬಾಯಿಗೆ ತಿರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು. ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ.

ಇದರ ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-1-0 ಜೊತೆ ಸೇರಬೇಕು

3 ಸೀಸೆಗಳಿಗೆ ರೂ 2-10-0 ಅಂಚೆಯ ವೆಚ್ಚ 0-7-0

ನಮೂನೆಯು ಬೇಕಾದರೆ ಒಂದು ಆಣೆಯ ಟಿಕೆಟನ್ನು ಕಳುಹಿಸಿರಿ.

ಮೈಸೂರು ಎಗ್ಜಿಬಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಬಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು.

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ. ಮನ್ನಾರ್‌ಗುಡಿ ಮಿಸ್ಟರ್ ಸೆಕ್ರೆಟರಿ ಪಿ. ಎಸ್. ಸ್ವಾಮಿನಾಥ ಅಯ್ಯರವರು ಬರೆಯುವದು— "ದಯಮಾಡಿ ಆರು ಬಾಟ್ಲು ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ. ನನ್ನ ಮನೆಯವರೆಲ್ಲಾ ಅದನ್ನು ಒಂದೇಸಮನಾಗಿ ಮೆಚ್ಚಿಕೊಂಡಿದ್ದಾರೆ. ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದದಿಂದ ಹಚ್ಚಿಕೊಳ್ಳುತ್ತಾರೆ."

ಎಚ್ಚರಿಕೆ— ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಫಾಯಿತುಕೊಡುತ್ತೇವೆಂದು ಬಲವಂತಮಾಡುತ್ತಾರೆ ಅಂಥವರನ್ನು ನಂಬಬೇಡಿ. "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು. ಅಂಥಾ ಮೋಸಕ್ಕೆ ನೀವು ಸಿಕ್ಕಬೇಡಿ. ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ.

"ಕೆಪಿಟೋಲ್ಬಾಮ್"— ಮಳೆ ಮತ್ತು ಚಳಿಯ ಗಾಳಿ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ರೋಗವಿಕಾರಕ್ಕೆ, "ಕೆಪಿಟೋಲ್ಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ. ಕೈಕಾಲು ನೋವು, ಸಂಧುವಾತ, ನುಸ್ತಿಕರೋಗ, ಹೆಚ್ಚಾಗಿ ಮೆದುಳಿಗೆ ಬಳಲಿಕೆಯಾಗುವದು, ಸೊಂಟನೋವು, ಎದೆಯನೋವು ಇವುಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ. ಬಾಟ್ಲು 1ಕ್ಕೆ ಕ್ರಯ 0-8-0 ಟ. ಖ. ಪ್ರತ್ಯೇಕ.

ಒಡಮಸ್ಸಮಲೇರಿಯ ಪಿಲ್ಸ ಶೀತಜ್ವರ, ಹಂದಿಯಿಂದ ಬರುವ ಜ್ವರ, ಅತಿಜ್ವರ, ಮತ್ತು ಒಂದೇ ಸಮನೆ ಬಿಡದೆ ಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮಸ್ಸ ಮಲೇರಿಯಸ್" ಗುಳಿಗೆಗಳು ರಾಮಬಾಣವಾಗಿವೆ. ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ. ಇದು ದೇಹದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ. ಬೇರೆ ಗುಳಿಗೆಗಳನ್ನು ತಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ. ದಿನಕ್ಕೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕೊಳ್ಳತಕ್ಕದ್ದು.

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1-0-0 3 ಬಾಟ್ಲಗಳಿಗೆ ರೂ. 2-8-0 ವಿ. ಪಿ. ಖರ್ಚು ಪ್ರತ್ಯೇಕ.

ಏಜೆಂಟ್, ಡಿ. ಉಲ್ಲ್ ಮಾರ್ಟಿನ್, ಮಂಗಳೂರು

ಮೇಲಿಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ :— [8-36]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸೀದ್, ಬೊಂಬಾಯಿ.

ಹೊಸ ಕಾದಂಬರಿಗಳು.

ಕುಮುದಿನಿ ಬಂಗಾಳಿಯಿಂದ ಕನ್ನಡಿಸಲ್ಪಟ್ಟ ಸ್ವಾರಸ್ಯವಾದ ಕಥೆಯುಕ್ತ ಪುಸ್ತಕ—ಬೆಲೆ 6 ಆಣೆ. ನಿಬಾರ್ಗ್ಯಚಾಣಕ್ಯ—ಇದೂ ಕೂಡ ನವ ಕಥೆಯುಳ್ಳ ಮನೋಹರವಾದದ್ದು. ವೇಶ್ಯಾದಿ ವಿಷಯಾಸಕ್ತರ ನಡವಳಿಕೆಗಳು ಹೃದಯಂಗಮವಾಗಿ ವರ್ಣಿಸಲ್ಪಟ್ಟಿವೆ. 6 ಆಣೆ. ಸಂತಾಪಕ—ಈಗ ಈ ನಾಟಕಗಳಲ್ಲಿ ಪ್ರಸಿದ್ಧವಾದ "ಸಿರುಪಮಾ" ಎಂಬ ನಾಟಕದ ಕಥಾರೂಪವಾದ ಗ್ರಂಥ. ಇದನ್ನೋದುವದಕ್ಕೆ ಕುತೂಹಲ ಹುಟ್ಟಿಸುವದರಿಂದ ಬಿಡಲು ಮನಸ್ಸಾಗುವದಿಲ್ಲ. 4 ಆಣೆ. [187-10]

ಹಿಂದೂ ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಒಳ್ಳೇ ಸಮಯವಾಗಿದೆ—ಬೇಗ ತರಿಸಿಕೊಳ್ಳಿರಿ.

ತರಕಾರಿ ಬೀಜಗಳು 10 ಪ್ಯಾಕೆಟ್ಟು ರೂ. 6; 20 ಪ್ಯಾಕೆಟ್ಟು ರೂ. 3½; 12 ಪ್ಯಾಕೆಟ್ಟು ರೂ. 2. ಹೂವಿನ ಬೀಜಗಳು 40 ಪ್ಯಾಕೆಟ್ಟು ರೂ. 5; 20 ಪ್ಯಾಕೆಟ್ಟು ರೂ 3, 12 ಪ್ಯಾಕೆಟ್ಟು ರೂ. 2. ಗುಲಾಬಿ (ರೋಜಾ) ಗಿಡಗಳು 100 ಕ್ಕೆ ರೂ 15 ರಿಂದ 25 ವರೆಗೆ, ಡಜನ್ ರೂ 3 ರಿಂದ ರೂ 5. ಕಟ್ಟದ ಮಾವಿನ ಗಿಡಗಳು ಡಜನ್ 1 ಕ್ಕೆ ರೂ. 10 100 ಕ್ಕೆ ರೂ 70 ರಿಂದ 75 ಕಟ್ಟದ ಸೀಬೆ, ನಿಂಬೆ, ಕಿತ್ತಳೆ, ದಾಳಿಂಬೆ, ಚಕೋತ್ರ ಡಜನ್ ರೂ. 4 ರಿಂದ 6 ಇನ್ನೂ ಬೇಕಾದ ಅನೇಕ ತರಹಾ ಗಿಡಗಳು, ಬೀಜಗಳು, ಹಣ್ಣು, ಹೂವು, ತರಕಾರಿ ವಗೈರೆ ಕ್ಯಾಟಲಾಗ್ (ಕ್ರಯಪಟ್ಟಿ) ತರಿಸಿಕೊಳ್ಳಿರಿ. [125-2]

ಬಿ ಎಲ್ ಬೈಯಣ್ಣ ಬ್ರದರ್ಸ್, 62 ಲಾಲ್‌ಬಾಗ್ ರೋಡ್, ಬೆಂಗಳೂರು ಸಿಟಿ.

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೪೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ, ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು. (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯ ನಿವಾರಣೆ ಮುಂತಾದದ್ದನ್ನು ತಿಳಿಸುವದು. (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು. (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು. (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಿಷ್ಠ ಚಿತ್ರಗಳನ್ನು ಇಟ್ಟಿರುವದರಿಂದ ಓದುಬಾರದವರಿಗೂ ಮನೋರಂಜಕವಾಗಿರುವದು. ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ. ಇದರ ಕ್ರಯ ಪ್ರತಿ 1 ಕ್ಕೆ 1-8-0, ಟಪ್ಪಾಲು ಹಾಸಲು 4 ಆಣೆ.

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗಳೂ ಪ್ರತಿಪದ ಟೀಕಾ, ಕಥಾರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ.

ಇದರ ಕ್ರಯ ಪ್ರತಿ 1 ಕ್ಕೆ ರೂ. 4; ಟಪಾಲು ಹಾಸಲು 10 ಆಣೆ. ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು. [127-13]

ನಮ್ಮ ವಿಳಾಸ—ಎಮ್. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕ ಪಬ್ಲಿಷರ್ಸ್, ಬೆಂಗಳೂರು ಸಿಟಿ.

THE MYSORE GOVERNMENT SECURITY

LIFE AND MARRIAGE ASSURANCE COMPANY, LIMITED.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No. III OF 1895)

CAUTION:—Before you go in for a Provident Life or Marriage Policy, please ask for a copy of our Company's prospectus which will explain to you the mode of working of the present day provident companies working in India and enables you to select a good institution where your hard-earned money will be safe

SPECIAL AND ATTRACTIVE FEATURES OF THE COMPANY

1. ABSOLUTE SECURITY.

The Company has got a capital of **one lakh** and its funds are invested in the **Mysore Government** and other approved securities. The policy holder's moneys are **guaranteed**, and the **capital** and **reserve funds** of the Company are liable to the same.

2. MARRIAGE SCHEME.

A policy-holder can subscribe from Re. 1 to **Rs 6** every month. **Double the premiums paid** to the Company will be paid to the married **on the marriage day** as maximum bonus.

3. LIFE SCHEME.

A policy holder can subscribe from As 8 to **Rs. 2** per month. Both males and **females**, of ages from 18 to **60** are insured **without medical examination**. The maximum bonus will be paid to **the policy-holders themselves** on surviving **15 years** or to their nominees in case of their earlier death.

WANTED.

Energetic and honest **Chief Agents** for every Presidency in India and Taluk-Agents in each and every taluk of **the Mysore Province** on commission to represent the Company.

For further particulars and prospectuses, please apply **with one anna stamp** and your previous experience in the line to,—

Mr. M. L. NAGANNAH,
Managing Agent,
MYSORE.

[161-7]

ಗೃಹಕೃತ್ಯದ ನೋಟೀಸ್

ಹೊಳಲ್ಕೆರೆಯಲ್ಲಿರುವ ಪ್ರಭುದೇವರ ಬಸಪ್ಪನು ಮತ್ತು ಈತನ ಮಕ್ಕಳು ಸಹ ಸಮಸ್ತರಿಗೂ ತಿಳಿಯಪಡಿಸುವುದೇನಂದರೆ—ಬೀರೂರಲ್ಲಿರುವ ಪ್ರಭುದೇವರ ಹಳೆಮನೆ ಚನ್ನವೀರಪ್ಪನು ನಮಗೆ ಸಮೀಪ ದಾಯಾದಿಯಾಗಬೇಕು ಈತನು ಧವತಿಯಾಗಿ 7 8 ವರ್ಷವಾಯಿತು ಈತನಿಗೆ ಗಂಡುಮಕ್ಕಳು ಇರುವದಿಲ್ಲ ಹೆಣ್ಣುಮಕ್ಕಳು ಇರುವುದಿಲ್ಲ ಈತನ ತಾಯಿ ಮತ್ತು ಹೆಂಡತಿ ಮಾತ್ರ ಇದಾರೆ ಈತನ ಹೆಂಡತಿ ಗಂಗಮ್ಮನು ನಮ್ಮಗಳಿಗೆ ಮೋಸಮಾಡಲು ನಿಸ್ಕಾರಣವಾಗಿ ಕುಟುಂಬದ ಸ್ವತ್ತುಗಳನ್ನು ಕ್ರಯಮಾಡುವ ಪ್ರಯತ್ನದಲ್ಲಿದಾಳೆಂದು ತಿಳಿಯುಬರುತ್ತೆ ಆದ್ದರಿಂದ ಉತ್ತರ ವಾರಸುದಾರರಾದ ನಮ್ಮಗಳ ಅನುಮತಿ ಶಿವಾಯಿ ಧವತಿ ಚನ್ನವೀರಪ್ಪನ ಸ್ವತ್ತುಗಳನ್ನು ಯಾರು ಕ್ರಯ ದಾನ ಭೋಗ್ಯಾದಿಗಳ ಮೂಲಕ ತೆಗೆದುಕೊಂಡರೂ ಅವರಿಗೆ ಸದರಿ ಪರಭಾರೆಯು ಊರ್ಜಿತವಾಗತಕ್ಕದ್ದಲ್ಲ ತಿಳಿಯುವದು [181 -]

ಪ್ರಭುದೇವರ ಬಸಪ್ಪನವರ ಮಗ ಹಾಲಯ್ಯ, ಹೊಳಲ್ಕೆರೆ

ಶುದ್ಧವಾದ ಹತ್ತಿಯ ತುಪ್ಪವು.

"ಬಹಳ ರುಚಿ, ಆರೋಗ್ಯ, ಎಲ್ಲಕ್ಕಿಂತ ಪುಷ್ಟಿಕಾರಿ"

(ಡಿ) ಎಸ್ ಅಪ್ಪ, I C I ಇಂಜಿನಿಯರು,—ನಿಮ್ಮಿಂದ ತರಿಸಿಕೊಂಡ ಹತ್ತಿಯ ತುಪ್ಪವನ್ನು ಉಪಯೋಗಿಸಿದೇನೆ ಅದು ಸೇವನೆಗೆ ಬಹಳ ರುಚಿಯಾಗಿಯೂ ಬಹಳ ಆರೋಗ್ಯಕರವಾಗಿಯೂ ಇದೆ ಇದಕ್ಕೆ ಸಮಾನವಾದ ಪುಷ್ಟಿಕಾರಿ ವಸ್ತುವೇ ಇಲ್ಲ ಬೆಂಗಳೂರು 29 13

ಎಚ್ಚರಿಕೆ!

ಹತ್ತಿಯ ತುಪ್ಪವು ರೂಢಿಗೆ ಬಂದದಾಗೆಲ್ಲಾ ಅವರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ ಇವುಗಳನ್ನೂ ಕೊಟ್ಟನ್ನು ಹತ್ತಿಯ ತುಪ್ಪವೆಂದು ಅನೇಕರು ಮಾರುವುದೂ ಏಳಾಗುತ್ತಿದೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸ ಹೋಗಲು ಅವಕಾಶವಿಲ್ಲ [110 16]

ಇಂಡಿಯನ್ ಕಾಟನ್‌ವರ್ಟಿವಾ ಸ್ಪ್ಲಾನ್ ಕಂಪೆನಿ, ಲಿಮಿಟೆಡ್, 153, ಕಿಲಾರಿ ರೋಡ್, (ರಾಮರಾವ್ ಪೇಟೆ) ಬೆಂಗಳೂರು ಸಿಟಿ

ಅಸಲ್ ಸುವರ್ಣ ಭಂಗಾರದ ನಗಗಳು

ಈ ನಗಗಳನ್ನು ಈಗತಾನೇ ನಾವು ನವೀನವಾದ ಯುಕ್ತಿ ಪ್ರಕಾರ ನೂತನವಾಗಿ ತಯಾರುಮಾಡುತ್ತೇವೆ ಸುವರ್ಣ ನಗಗಳು ಮತ್ತು ಪುಷ್ಪರಾಗಕ್ಕೆ ನಾವು ಗ್ಯಾರಂಟಿ ಕೊಡುತ್ತೇವೆ ಹಾಗಿಲ್ಲದ ಪಕ್ಷದಲ್ಲಿ ಹಣವನ್ನು ವಾಪಸ್‌ಮಾಡುತ್ತೇವೆ ಬಹು ಸುಂದರವಾದ ನಮೂನೆ, ಸರಿಯಾದ ದರಗಳಿಂದ ಉಪಯೋಗಿಸುವಂತೆ ಗ್ರಾಹಕರ ಮಟ್ಟಿಗೆ ಬಹು ಸುಲಭ ಕ್ರಯವನ್ನು ನಮೂದಿಸುತ್ತೇವೆ ಪ್ರತಿ ಒಬ್ಬರು ಇದನ್ನು ಉಪಯೋಗಿಸಿ ಸಂತೋಷ ಪಡಬೇಕೆಂದು ಪ್ರಾರ್ಥನೆ [17 -2]

ಅರ್ಧಡಜನ್ 1 ಕ್ಕೆ ರೂಪಾಯಿ		6 0 0
ನಂ 1 ಮೂಗುಬೊಟ್ಟು 1 ಕ್ಕೆ ರೂಪಾಯಿ		7 0 0
2 ಮೂಗುಬೊಟ್ಟು 1 ಕ್ಕೆ	,,	6 0 0
3 ಮೂಗುಬೊಟ್ಟು 1 ಕ್ಕೆ	,,	5 0 0
ಬುಲಾಕು 1 ಕ್ಕೆ 1-ರಿಂದ ಆಗಾಯಿತು		20 0 0

ವರಿಗೂ ಇರುತ್ತೆ ಇದು ಅಲ್ಲದೆ ಇಮಿಟೇಷನ್ ಕೆಂಪುಗಳಿಂದಲೂ, ಬಿಳಿ ಕೆಂಪುಗಳಿಂದಲೂ ತಯಾರಾದ ಕಳುಹಿಸಲ್ಪಡುವದು ಮತ್ತು ಬಿಳಿ ಭಂಗಾರದ ನಗಗಳು ಸಹ ತಯಾರಾಗಿ ಕಳುಹಿಸಲ್ಪಡುತ್ತೆ ಬೇಕಾದವರು ಬರೆದರೆ ಜವಾಬು ಬರೆಯುತ್ತೇವೆ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

ವಿಳಾಸ— ಬಿ ಆರ್ ವೆಂಕಟರಮಣ ಅಂಡ್ ಕಂಪೆನಿ,

ನಂ 7, ಕೋವಾ ವೆಂಕಟಾಚಲೈಯರ ವೀದಿ, ಮದರಾಸು

ನಮೂನೆ ಮುಫತ್ತು

ಕೇಶಕುಸುಮಾಕರ ತೈಲವು.

ಸಾಟಿಯಿಲ್ಲದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿ ಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸಮಾಡುವದರಲ್ಲಿಯೂ, ಬಟ್ಟತಲೆಯಲ್ಲಿ ಕೇಶವನ್ನು ಬೆಳೆಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ, ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾದದ್ದು

ಒಂದು ಬುದ್ದಿ ತೈಲ ಕ್ರಯ 10 ಆಣೆ ಮೂರು ಬುದ್ದಿಗಳ ತೈಲ ಕ್ರಯ ರೂ 1 12 ಆ ಆರು ಬುದ್ದಿಗಳ ತೈಲ ಕ್ರಯ ರೂ 3-4 ಆ ಡಜನ್ ಬುದ್ದಿಗಳ ಕ್ರಯ ರೂ 6

ವಿ ಪಿ ಅಂಚೆ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋಷಧಾಲಯ, 177 ಚೀನಾ ಬಜಾರ್ ರೋಡ್, ಮದ್ರಾಸು [82 21]

CHAMBERLAIN'S PAIN BALM.

ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.



1 38

ಚನ್ನೆಬುಬೇ ನೋವು ಪಕ್ಕೆಗಳಲ್ಲಿ ಆಗುವ ನೋವು ಮಿಂಡಗಳಲ್ಲಿ ಹುಟ್ಟುವ ನೋವು ತಲೆನೋವು ಜಜ್ಜಾದ ಕಡೆಯ ನೋವು ವಾಯುನೋವು- ಇವು ಸ್ವಲ್ಪ ಸುಲಭವಾಗಿ ವಾಸಿಮಾಡುವಂಥಾ ಔಷಧ ಮಾಯುನೋವೆಂದರೇನು?

ಕಾಲುಗಳಲ್ಲಿ ಮತ್ತು ಕಟ್ಟುಗಳಲ್ಲಿ ಊತವಾಗುವುದು, ಉರಿಯೊತ್ತುವುದು, ಕಠಿಣವಾಗಿ ನೆಡೆಯುವ ಬಾಧೆ, ಮಿಂಡಗಳಲ್ಲಿ ಇಳಿಯುವುದು ವಿಶ್ರಾಂತಿ ಕೊಡದೆ ಇರುವುದು, ನಿದ್ದೆಹತ್ತದೆ ಇರುವುದು— ಇವೇ ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುವೋ ಆಗ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಬಿಸಿಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಆದರೆ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಆದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುರೋಗ ಹುಟ್ಟದೇ ತಪ್ಪುಹಾಕಿಬಿಡುವುದು

ಇದ ವನಸ್ಪತಿಗಳಿಂದಲೇ ತಯಾರಾದ ಔಷದ

ಕೈಯಿಂದ ಮುಟ್ಟಿದ್ದರೂ ಅಲ್ಲ

ಇದು ಎಲ್ಲಿಲ್ಲೂ ಬಿಕರಿಯಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ

ಉತ್ತಮವಾದ ಶೈಲಿ! ಸರಳವಾದ ಮಾತುಗಳು!!

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕಮಹಾಶಯರುಗಳೇ—ಮಾನ್ಸ ತಯು ಬೇಕಾದರೆ, ವಾಗ್ವೈಖರಿಯೂ ಇಷ್ಟವಿದ್ದರೆ, ಲೋಕನೀತಿಯನ್ನು ತಿಳಿಯಬೇಕೆಂಬ ಇಷ್ಟವಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಪ್ರತೀತಿಯನ್ನು ಕೋರಿದರೆ, ಜಾಣತನವನ್ನ ಕಲಿಸಿದರೆ, ಉತ್ಸಾಹ ಶಕ್ತಿಯಲ್ಲಾಕಿ ಇದ್ದರೆ ದಯವಿಟ್ಟು ಈ ವಿದ್ಯಾಮಂಜರಿ ಕಥೆಗಳನ್ನು ಓದಿ ೩೬೦ ಪುಟಗಳಿಂದ ಕೂಡಿದ ೬೩ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ ಬೆಲೆ ರೂ ೧ ೪ ೦ ಮಾತ್ರ ತಗಲೇ ಬರೆಯಿರಿ [107 6]

ವಿಳಾಸ:—ಎಂ ಆರ್. ವೆಂಕಟಾಚಲಂ ಶೆಟ್ಟಿ, ಬುಕ್ಕು ಡಿಪ್ಪೋ, ಚಿಕ್ಕ ಪೇಟೆ, ಬೆಂಗಳೂರು ಸಿಟಿ.

ಡೋಂಗರೆ ಇವರ ಬಾಲಾಮೃತ.

[150 9]

ಸರ್ವ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದದರಿಂದ ಹುಡುಗರು ಬಹಳ ಆನಂದದಿಂದ ತೆಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ ಹೊಟ್ಟೆಯು ದೊಡ್ಡದಾಗಿರೋಣ, ಎಲುವುಗಳು ಕಡ್ಡಿಯಂತೆ ಇರೋಣ, ಹಳದಿ ಕಣ್ಣು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೨ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪೆನಿ, ಗಿರಗಾಂವ, ಮುಂಬಾಯಿ.

ರಬ್ಬರ್ ಸ್ಟ್ಯಾಂಪು

ಕ್ರಯ ರೂ 1 12-0

ಯಾವ ಭಾಷೆ, ಯಾವ ತರಹ ಯಾವ ಸೈಜಿನವಾದರೂ ಸರಿ ಇದು ವರೆಗೆ ವಿಕ್ರಯಿಸಲ್ಪಟ್ಟ 38 ಸಾವಿರ ರಬ್ಬರ್ ಸ್ಟಾಂಪುಗಳನ್ನು ಡಿಸೆಂಬರ್ ಒಳಗಾಗಿ ಖರೀದಿಸಿಕೊಳ್ಳುವವರಿಗೆ 1 ಹಾಯಿ ಸೀಸಾ, 1 ಪೆಟ್ಟಿಗೆ, 1 ಬ್ರಷ್, 2 ಪ್ಯಾಡು ಸಹಿತ ರೂ 1 1- ಗೆ ತಯಾರಿಸಿ ಕಳಿಸುತ್ತೇವೆ ನಮಗೆ ಏಜಂಟರು ಬೇಕು ತಿಂಗಳಿಗೆ 100 ರೂಪಾಯಿ ಸಂಬಳ ಕೊಡುತ್ತೇವೆ ಬೇಕಾದವರು ಬರೆದು ಏರ್ಪಾಡನ್ನು ಪಡೆಯಬಹುದು

ವಿಳಾಸ —ಮ್ಯಾನೇಜರ್, ರಬ್ಬರ್ ಸ್ಟ್ಯಾಂಪು ಡಿಪ್ಪೋ, 18, ಸೆಕೆಂಡ್ ಲೈನ್ ಬೀಚ್ ಮದರಾಸು [180 2]

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

10 17

ಎಂಥಾ ರೋಗದಿಂದ ಬಾಧೆಪಡುತ್ತಾರೆಂದು ಹೇಳು ವಾಯು, ಕೀಲು, ಆರತಿ ತಲೆನೋವುಗಳು ಯಾವ ಕಾರಣದಿಂದ ಹುಟ್ಟಿದ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು ಗಂಟ್ಲು ಗಾರಿನ್ನುವುದು, ಕೆಮ್ಮುಗಳು, ಶೀತಪಿತ್ತ ಜ್ವಾಸರೋಗ ಹುಣ್ಣು ಉಳುಕು, ಥಳುಕು ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನು ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ಹೇಳಿಕೊ ಸಹಾಯದಲ್ಲಿರುವ ವಸ್ತು ಅಂಗ್ಲಿ ಮೆಡಿಸಿನ್ ಕೈಮೆಂಟಿನ ಪ್ಯಾಕೆಟ್ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರಿಯವಾಗಿ ಹಣವನ್ನು ಕೊಟ್ಟರೆ ತಕ್ಷಣ ಅದನ್ನೇ ಕೊಡುವೆ ಎಂದು ಕೇಳಿ ತೆಗೆದುಕೊ ಈ ಮೈಂಟಿಮೆಂಟನ್ನು ವಾಸಿಮಾಡುವ ಔಷಧವು 12 ಆಣೆ ಎಲ್ಲವುದರಲ್ಲಿ ಸಮಸ್ತ ವಿಧದ ನೋವುಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ ನೀವುಗಳೂ ಹೊಂದಬೇಕಾಗಿ ಕೋರುತ್ತೇವೆ

"ಕೈಮೆಂಟಿನ ಪ್ಯಾಕೆಟ್ ಬಾಟ್ಲಿ" ಎಂಬ ಹೆಸರನ್ನು ಮರೆಯಬೇಡಿ ಇದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಘಾತಾದಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎನ್ ಪೀಟರ್ಸ್, 37 ವಡಮಲಿಪ್ಪಿಳ್ಳಿ ಕೋವಿ ಪುಸ್ತವಾಕಂ, ವೇಪೇರಿ, ಮದರಾಸ್ (2) ಜಿ ಎಸ್ ಕೆನ್ನಯ್ಯಶೆಟ್ಟಿಯರು, ಜನರಲ್ ಏಜಂಟ್, ತುಮಕೂರು

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 38

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಸ್ಥಳಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದವು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಪೆಟ್ಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಬುದ್ಧಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಯುಳ್ಳ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ; ೧ ರೂ ೬ ಆ ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ ೧-೩

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ ೧ ರೂ ೬ ಆ

ಕೊಬ್ಬರಿ ಟೋಪಿ, ಫುಲ್ ಮೇಜೋಡು, ಅರ್ಧ ಮೇಜೋಡು, ಕತ್ತರಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ಸಮಸ್ತ ವಿಧವಾದ ನೋವೂ ಉರಿತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಚನ್ನಿನ ಸಳಿತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ.

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ಬಿಕರಿಯಾಗುತ್ತಲಿವೆ. ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ಬಿಕರಿಯಾಗುವದು.

ಹುಳುಕಡ್ಡಿ ಔಷದ ಡಬ್ಬಿಗೆ ೬ ಆಣೆ, 12 ಕುಪ್ಪಿಗೆ ರೂ 3-8-0 ಹಲ್ಲುಪುಡಿ ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ 1-4-0 ವಿ ಪಿ ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ [12-30]

ವಿಳಾಸ —ಅಮೃತಾಂಜನ ಡಿಪೋ, ೧೯ ಫ್ರಿಯರ್ ರೋಡ್, ಫೋರ್ಟ್, ಬೊಂಬಾಯಿ.

ಪ್ರಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ರೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕ್ಷಯ ಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ವೀರ್ಯವರ್ಧಕವಾಗಿದೆ —220 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 13 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ [179-3]



೨ ವೈಶ್ವಾನರಾಸವ (ಕಾಲರಾ ಔಷದ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಬಿಟ್ಟಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಟಾದವೆಂದು ಒಂದೇ ಒಂದು ಬಾಟ್ಲಿಯು ನಿಮ್ಮಲ್ಲಿರಲಿ. ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷದದೊಡನೆ ಇರುವದು. ಬೆಲೆ ರೂ 1, ಟಪಾಲ್ ಛಾರ್ಜು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಕುಂತಳಾನಂದ ತೈಲವು

147 52

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಬೆಳ್ಳಿಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ಶೀಘ್ರವಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ. ದ್ರಾವಕಗಳನ್ನು ಪರಿಶೋಧಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆತ್ಮ ಬಲ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ. ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ

ಅಗ್ಗದ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 4 ಆಣೆ



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರುಮಾಡಲ್ಪಟ್ಟಿದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರವಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಇದರಲ್ಲಿ ಗಡಿಯಾರಗಳು ಟೆಸ್ಟಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ ಕೂಡಲೆ ಬರೆದು ತರಿಸಿಕೊಳ್ಳಿ.

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,
[129-13] ಪೋಸ್ಟ್ ಬಾಕ್ಸ್, ನಂ 167, ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ.

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೇಸಿಸ್ ಲಿವರ್ ಚಿಕ್ಕ ಸೈಜು ಕಂಪೆನ್ಸೇಷನ್ ಬ್ಯಾಲೆನ್ಸು ಬಹು ಬಲಿಷ್ಟವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ. ಟಪಾಲು ಖರ್ಚು ಸಹಿತ ಕ್ರಯ ರೂ 5-0-0. ಇದನ್ನು ಸೆಪ್ಟಂಬರ್ ಆಖೈರಿನೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡಬೇಕಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ —ಧನಲಕ್ಷ್ಮಿ ಅಂಡ್ ಕಂಪೆನಿ,
[129-13] ಸಾಹುಕಾರ್ ಪೇಟೆ ಪೋಸ್ಟು, ಮದರಾಸು

"ವೃತ್ತಾಂತಪತ್ರಿಕೆ" ಏಜಂಟರಿಗೆ ನೋಟೀಸ್.

ವೃತ್ತಾಂತ ಪತ್ರಿಕೆಯ 1910-11 ನೇ ವರುಷದ ಒಂದನೇ ಕ್ವಾರ್ಟರು ಕಳೆದ ಆಗಸ್ಟ್ ತಿಂಗಳಿಗೆ ಪೂರೈಸಿದ. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಸೈರುಮಾಡಿ, "ಬಿ" ಫಾರಂಗಳಿಗೆ ಎತ್ತಿ ಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೋರಲ್ಪಡಿಸಿದೆ.

ಮ್ಯಾನೇಜರ್, ವೃತ್ತಾಂತ ಪತ್ರಿಕೆ 'ಆಫೀಸ್', ಮೈಸೂರು

ಸುಂದರವಾದ ನಾಲ್ಕು ಎಳೆ ಮುತ್ತಿನ ಹಾರ.

ಪದಕ ಸಹಿತ ಹಾರ 1 ಕ್ಕೆ 1 7 0 ಪದಕವಿಲ್ಲದೆ ಹಾರ 1 ಕ್ಕೆ 0 11-0



ಈ ನಕ್ಷೆಯಲ್ಲಿ ತೋರಿಸಿರುವ ಹಾರವು ಮಕ್ಕಳೂ ದೊಡ್ಡವರೂ ಧರಿಸುವುದಕ್ಕೆ ಯೋಗ್ಯವಾದದ್ದು. ಪ್ರಸಿದ್ಧಿಯಾದ ಚಿನ್ನ ಮಿಸ್ತ್ರದ ಮದರಾಸ್ ಹಿತ್ತಾಳೆ ಕಂಪೆನಿಯಲ್ಲಿ ಒಳ್ಳೆಯ ಮುತ್ತಿನಂತಹ ಗಟ್ಟಿಮುತ್ತನ್ನು ಅಸಲ್ ಮುತ್ತಿನ ಹಾರ ತಯಾರಿಸತಕ್ಕವರಿಂದ ಸುತ್ತಿ ಕೊರಳಿಗೆ ಭೂಷಣವೂ ಅಲಂಕಾರವೂ ಆದ ಈ ಮಾಲೆಯನ್ನು ತಯಾರಿಸುತ್ತೇವೆ.

ಮಿರಾಂಡಿರಂ ಕಂಪೆನಿ, ಸೆಕೆಂಡ್ ಲೈನ್ ಬೀಚು, ಮದರಾಸು

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ – 1 ಪೀನಲ್‌ಕೋಡು, 2 ದೊಡ್ಡೀ ಆಕ್ಟ್, 3 ಎಕ್ಸೈಸು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ಪಶ್ಯವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಹುಕ್ಕಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ.

ಪ್ರತಿ ಪೀನಲ್ ಸೆಕ್ಷನ್‌ಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ? ಯಾ ಕೂಡದೆ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟ್ಟಬೇಕೇ? ಜಾಮೀನ್ ತೆಗೆದುಕೊಳ್ಳಬಹುದೆ? ಯಾ ಕೂಡದೆ? ರಾಜಿಯಾಗಬಹುದೆ? ಯಾ ಕೂಡದೆ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ. ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ. 23-5 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ. ಕ್ರಯ ರೂಪಾಯಿ 2 0-0 ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ವೇಮಾರೆಡ್ಡಿ,
ಕಂಟ್ರಾಕ್ಟರ್ ಮತ್ತು ಕ್ರಿ॥ ಪ್ಲೀಡರ್,
[103-17] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

29—8—1913 ರಿಂದ 5—9—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	1	1	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್	6	5	0	0
ಮೈಸೂರು ,,	17	19	0	0
ಕೋಲಾರ್ ,,	0	0	4	4
ಕೋಲಾರ್ ಚಿನ್ನದ ಗಣಿಗಳು	1	0	0	0
ತುಮಕೂರು ಡಿಸ್ಟ್ರಿಕ್ಟ್	5	1	2	3
ಹಾಸನ ,,	19	12	2	0
ಚಿತ್ರದುರ್ಗ ,,	4	3	51	21
ಕಡೂರ್ ,,	21	17	0	0
ಶಿವಮೊಗ್ಗ ,,	10	4	0	0
ಜುಮ್ಲಾ	114	62	59	28

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ವರ್ಷ ಋತು ಭಾದ್ರಪದ ಬಹುಳ ಚೌತಿ ಶುಕ್ರವಾರದಿಂದ ಭಾದ್ರಪದ ಬಹುಳ ದಶಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಸೆಪ್ಟಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕನ್ಯಮಾಸ ತೇದಿ
19	ಶುಕ್ರ *	ಚೌತಿ	44-13	ಅಶ್ವಿನಿ	5-35	4
20	ಶನಿ ‡	ಪಂಚಮಿ	16 20	ಭರಣಿ	9 59	5
21	ಭಾನು	ಷಷ್ಠಿ	47-30	ಕೃತ್ತಿಕೆ	13-13	6
22	ಸೋಮ	ಸಪ್ತಮಿ	47-10	ರೋಹಿಣಿ	15-10	7
23	ಮಂಗಳ †	ಅಷ್ಟಮಿ	45-32	ಮೃಗಶಿರ	15 55	8
24	ಬುಧ ,,	ನವಮಿ	43-49	ಆರಿದ್ರಾ	15-27	9
25	ಗುರು §	ದಶಮಿ	31 0	ಪುನರ್ವಸು	13-56	10

* ಮಹಾಭರಣಿ, ದೇವಮಹಾಲಯ, ಮಳೆ ನಕ್ಷತ್ರ—ಉತ್ತರ 3ನೇ ಪಾದ
‡ ಚಲುವಾಜಮ್ಮಣ್ಣಿಯವರ 3 ನೇ ಕುಮಾರ್ತಿ ವರ್ಧಂತಿ
† ಮಧ್ಯಾಷ್ಟಮಿ, ಮಳೆ ನಕ್ಷತ್ರ—ಉತ್ತರ 1 ನೇ ಪಾದ
, ಅವಿಧವಾನವಮಿ, ವರದರಾಜವ್ರತಂ
§ ತುಲಾಯನಂ

ಪೇಟೇ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೬ ೮-೦	೧೭ ೦-೦
ಕೆಂಬೂತಿ ಅಕ್ಕಿ ಅವಲ್	೧೬ ೮-೦	೧೭ ೮-೦
,, ,, ಮಧ್ಯಂ	೧೬ ೦-೦	೧೭-೦-೦
ಜಾಪ್ರಾಣಿ ಅಕ್ಕಿ	೧೬-೦-೦	೧೬-೮-೦
ಸಣ್ಣಕ್ಕಿ ಅವಲ್	೨೮-೦-೦	೧೭ ೮-೦
,, ಮಧ್ಯಂ	೧೭-೦-೦	೧೬ ೧೨-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೨೫ ೦-೦	೧೬ ೪-೦
,, ಮಧ್ಯಂ ,,	೧೪-೦ ೦	೧೪ ೦-೦
ಫೈನ್ ರಾಗಿ ಪಲ್ಲಾ ೧ಕ್ಕೆ	೭-೦ ೦	೫-೧೦-೦
ಕಾರ್ರಾಗಿ ,,	೬ ೪ ೦	೪-೧೨-೦
ಜೋಳ ,,	೭ ೦-೦	೭-೪-೦
ಹುಲಸಂದೆ ಪಲ್ಲಾ ೧ಕ್ಕೆ	೧೧-೦-೦	೧೪-೦-೦
ಬಿಳೀ ಅವರೆ ,,	೧೨ ೬-೦	೧೨-೦-೦
ಹೆಸರು ,,	೨೨ ೦-೦	೧೪-೦-೦
ಉದ್ದು ,,	೧೪-೮-೦	೧೬-೮-೦
ಕಡಲೆ ,,	೧೧-೮-೦	೧೩-೦-೦
ಎಳ್ಳು ಸೇರು ೧೨೭ಕ್ಕೆ	೨೩-೦ ೦	೨೪ ೦-೦
ಹುರುಳಿ ಪಲ್ಲಾ ೧ಕ್ಕೆ	೭-೬-೦	೭-೧೦-೦
ಹರಳು ೧೨೭ ಸೇರಿಗೆ	೧೨-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೩-೬-೦
ಮೆಣಸಿನಕಾಯಿ ,,	೪-೦-೦	೩-೪-೦
,, ಮಧ್ಯಂ	೩-೦-೦	೧ ೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೭-೦-೦	ಮಣ ೬-೪-೦
ಒಳ್ಳೆಣ್ಣೆ ಮಣ ೧ಕ್ಕೆ	೭-೨-೦	೬-೯-೦
ಹರಳೆಣ್ಣೆ ,, ,,	೫ ೪-೦	೬-೦-೦
ಕಡಲೇಕಾಯಿ ಎಣ್ಣೆ	೬-೮-೦	೬-೪-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೪ ೧೨-೦	೬-೪-೦
ಉಪ್ಪು ,, ,,	೬-೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧-೧೨ ೦	೧-೪-೦
ತುಪ್ಪ ಮಣ ೧ಕ್ಕೆ	೨೪-೦-೦	೨೨ ೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೧೧-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೬-೪-೦	೬-೪-೦
ಅಳಲೇಕಾಯಿ ಮಣ ೧ಕ್ಕೆ	೧ ೬-೦	೧-೦-೦
ಅಂಟ್ವಾಳಕಾಯಿ ಮಣ ೧ಕ್ಕೆ	೧-೧೨ ೦	೧-೮-೦
ಚಿನ್ನ (ಪೌನ್) ಕೆಂಪು	೧೫ ೬-೦	೧೫-೮-೦
,, ,, ಪಸಿಮೆ	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦-೦	೮೧-೩-೦

ಗೃಹಕೃತ್ಯದ ನೋಟೀಸು.

ಮೈಸೂರು ನಜರುಬಾದ್ ಮೊಹಲ್ಲಾದಲ್ಲಿರುವ ಜಟ್ಟಿಗಳ ಲಚ್ಚಮ್ಮನು ತಿಳಿಯಪಡಿಸುವದೇನೆಂದರೆ—ಅದೇ ಮೊಹಲ್ಲೆಯಲ್ಲಿ ಹಾಲಿ ನನ್ನ ಮಗ ಚೆನ್ನಾಜೆಟ್ಟಿಯು ವಾಸಮಾಡುತ್ತಿರುವ ಮನೆಯೂ, ಯಡತೊರೆ ತಾಲ್ಲೂಕು ಮಿರ್ಲೆ ಗ್ರಾಮದಲ್ಲಿರುವ ಒಂದು ಖಂಡಿ ತರೀ ಜಮೀನೂ ನನ್ನ ಸ್ವಂತ ಆಸ್ತಿಗಳಾಗಿವೆ ನನ್ನ ಸ್ವಂತವಾದ ಇತರ ಆಸ್ತಿಗಳನ್ನು ಈ ನನ್ನ ಮಗನು ಹಾಳುಮಾಡಿ, ಈಗ ಇವೆರಡನ್ನೂ ನನಗೆ ಮೋಸಮಾಡಿ ಪರಾಧೀನಮಾಡುವವನಾಗಿದಾನೆಂದು ಕೇಳುತ್ತೇನೆ ಈ ಮನೆಯ ಮೇಲಾಗಲಿ, ಗದ್ದೆಯ ಮೇಲಾಗಲಿ ಅವನಿಗೆ ಯಾವ ವಿಧವಾದ ಹಕ್ಕೂ ಬಾಧ್ಯತೆಯೂ ಇರುವದಿಲ್ಲ ನನ್ನ ಸಮ್ಮತಿ ಇಲ್ಲದೆ ಯಾರೂ ಅವನಿಂದ ಇಟೊ ಸ್ವತ್ತುಗಳನ್ನು ಯಾವ ರೀತಿ ಪರಾಧೀನಮಾಡಿಕೊಂಡಾಗ್ಯೂ ಅದು ಊರ್ಜಿತವಾಗದೆ ನನ್ನ ಎಲ್ಲಾ ನಷ್ಟಗಳಿಗೂ ಗುರಿಯಾಗುತ್ತಾರೆಂದು ಈ ಮೂಲಕ ಎಚ್ಚರಿಸಿರುತ್ತೇನೆ. [181-11]

ತಾ. 16-9-1913. ಜಟ್ಟಿಗಳ ಲಚ್ಚಮ್ಮನ ರುಜು

The National Insurance & Banking Co., Limited

NOTICE

It is hereby notified for the guidance and information of our Policy-holders, Share-holders and Agents and all concerned that Mr. M. L. Nagannah's services as Chief Agent of this Company have been dispensed with. All premiums and new proposals for Life Insurance should be sent direct to the Head Office and all Agents should communicate direct with the Head Office until the appointment of another Chief Agent. Any one making any payment to Mr M. L. Nagannah hereafter will do so on his own risk. [182-2]

Amritsar,
4-9-1913.

P. L. RAJPAL, B.A.,
Chief Manager.

ಕನ್ನಡ
ಇಂಡಿಯನ್ ಪೆನಲ್ ಕೋಡ್.

160-7

ಇಂಡಿಯಾ ಗೌರ್ನರ್ ಜನರಲ್‌ರವರಿಂದ ಮುಂಜೂರಾದ ಈ ಆಕ್ಟನ್ನು ಮೈಸೂರ್, ಬೊಂಬೈ, ಮದ್ರಾಸ್, ಅಲಹಾಬಾದ್ ಮುಂತಾದ ಅನೇಕ ಜಡ್ಜಿಗಳ ಅಭಿಪ್ರಾಯಗಳ ಟಿಪ್ಪಣಿ ಸಹಿತ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟಗಳಿಂದ ಬಿಡುಗಡೆಯಾಗಿರುವರು ಇದು ಮುಖ್ಯವಾಗಿ ಪೋಲೀಸ್, ಮ್ಯಾಜಿಸ್ಟ್ರೇಟರು, ಅಧಿಕಾರಿಗಳಲ್ಲಿಯೂ, ಲಾಯರುಗಳಲ್ಲಿಯೂ, ಪಟೇಲ್ ಶ್ಯಾನುಭೋಗರುಗಳಲ್ಲಿಯೂ, ಇತರ ಬಿಜಿನೆಸ್ ಜನಗಳಲ್ಲಿಯೂ ಇರಬೇಕಾದದ್ದು ಅತ್ಯಂತ ಅವಶ್ಯಕವಾದದ್ದು. ಕ್ರಯ ಗ್ಲೇಜ್ ರೂ 2-8-0. ರಫ್ ರೂ. 2-0-0. ಟಪಾಲ್ ಚಾರ್ಜು 0-1-0.

ವಿಳಾಸ:—ಬಿ. ನರಸಿಂಗರಾವ್. ಎಡಿಟರ್, (ಲಾ) ಗೆಜೆಟ್, ಚಿಕ್ಕಪೇಟೆ. ಬೆಂಗಳೂರು ಸಿಟಿ.

ಮೂರು ಸಿದ್ಧೌಷಧಗಳು.

ವಶ್ಯಾನಂದಕಂಠಮಾತ್ರೆ ಮೂಲಿಕೆ ಪರಿಮಳದ್ರವ್ಯಗಳಿಂದ ತಯಾರಿಸಿದ. ಒಂದನ್ನು ತಾಂಬೂಲದೊಡನೆ ಅಥವಾ ಬರೀ ಬಾಯಿಗೆ ಸೇವಿಸಿದರೆ ದುರ್ಗಂಧ ಹೋಗಿ ಸುವಾಸನೆಯಾಗುತ್ತೆ. ರಕ್ತವನ್ನು ಶುದ್ಧಿಮಾಡುತ್ತೆ ಕರಳು, ಗಂಟಲು, ಬಾಯಿ, ಇವುಗಳು ಹುಣ್ಣಾದರೆ ಅರ್ಧ ತೋಲಾ ಬಾದಾಮಿ ಎಣ್ಣೆಯಲ್ಲಿ ಒಂದು ಮಾತ್ರೆ ತೇದು ಮಲಗುವ ಸಮಯದಲ್ಲಿ ತಿನ್ನುಕೊಂಡರೆ ಗುಣವಾಗುವದು 200 ಮಾತ್ರೆ, ಶೀಸಾ 1 ಕ್ಕೆ 1 ಆಣಾ. ಇಸಬು, ಬಿಜ್ಜಿ, ತುರಿ ಇವುಗಳಿಗೆ ಪಾಮಹರಿಣೀ ಪೌಡರ್ ತೋಲಾ 1 ಕ್ಕೆ 2 ಆಣೆ. ಬಾಣಂತಿಯರು ಮಕ್ಕಳ ಶೀತ ನೆಗಡಿ ಇವುಗಳಿಗೆ ಉಪಯೋಗಿಸತಕ್ಕ ಕಸ್ತೂರಿಮಾತ್ರೆ 25 ಮಾತ್ರೆಗೆ 8 ಆಣೆ. ಬಾಣಂತಿಯರು ಉಪಯೋಗಿಸತಕ್ಕ ಪಿಂಡಾರ್ಪ್ರಕವೆಂಬ ಆರೋಗ್ಯದ ಲೇಹ್ಯ 12 ತೋಲಾ ಡಬ್ಬಿಗೆ 6 ಆಣಾ. ಅಪೇಕ್ಷಿಸುವರು ತಮ್ಮ ವಿಳಾಸ ವಿಶದವಾಗಿ ಬರೆಯಬೇಕು ಅಂಚೆ ಹಾಸಲು ಬೇರೆ, ತರಿಸಿಕೊಳ್ಳತಕ್ಕವರು ವಹಿಸತಕ್ಕದ್ದು. 1 ಡಜನ್‌ಗೆ 1 ಶೀಸಾ ಡಿಸ್ಕೌಂಟು. ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್. ಮುಂಚೆ ಸ್ವಲ್ಪ ತರಿಸಿ ನೋಡಿ ನಂತರವಾದರೂ ತರಿಸಿಕೊಳ್ಳಿ [131-12]

ನಮ್ಮ ವಿಳಾಸ —ಶೇಷಭಟ್ಟರು,
ನೇಟಿವ್ ಪಂಡಿತ್, ಪೂರ್ಣಯ್ಯನವರ ಬೀದಿ, ಶ್ರೀರಂಗಪಟ್ಟಣ.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೩ ನೇ ಇಸವಿ ಸೆಪ್ಟಂಬರ್, ತಾ. ೧೮ನೇ ಗುರುವಾರ.

ವಿದ್ಯಾ ವಿಷಯವಾದ ಸಂಘಗಳು.

ವಿದ್ಯಾಭ್ಯಾಸದ ವಿಷಯದಲ್ಲಿ ವಿದ್ಯಾ ಬೋಧಕರು ಮಾತ್ರವೇ ಅಲ್ಲ, ಇತರರೂ ಉತ್ಸಾಹಶೀಲರಾಗಿರುವುದನ್ನು ನೋಡಿ ನಾವು ತುಂಬಾ ಸಂತೋಷಪಡುತ್ತೇವೆ. ಈಚೆಗೆ ಬೆಂಗಳೂರಿನಲ್ಲೂ ಮೈಸೂರಿನಲ್ಲೂ ಎರಡು ಸಂಘಗಳು ಏರ್ಪಾಟಾಗಿರುವವು. ವಿದ್ಯಾಭ್ಯಾಸದ ಅಂಗಗಳನ್ನೆಲ್ಲಾ ಕ್ರಮಕ್ಕೆ ತಂದಿಟ್ಟು ಅಭಿವೃದ್ಧಿ ಮಾಡಬೇಕೆಂಬುವುದೇ ಈ ಸಂಘಗಳ ಉದ್ದೇಶವಾಗಿರುತ್ತದೆ.

ಆಕ್ಷೇಪಣೆಗಳೂ, ಸಲಹೆಗಳೂ, ಸಹಾಯವೂ ಇಲ್ಲದೆ ಹೋದರೆ ಸಂಸ್ಥಾನದ ಯಾವುದೊಂದು ಖಾತೆ ಆಗಲಿ, ಇಲಾಖೆಯೇ ಆಗಲಿ, ಸರ್ವಸಮ್ಮತವಾಗಿಯೂ ಶ್ರೇಯಸ್ಕರವಾಗಿಯೂ ಬೆಳವಣಿಗೆ ಹೊಂದುವುದಿಲ್ಲ. ಅನೇಕ ವೇಳೆ ಇಲಾಖೆಯ ಮುಖ್ಯಾಧಿಕಾರಿಗಳಿಗೆ ಕಾರ್ಯವಿಶೇಷತೆಯ ದೆಸೆಯಿಂದ ತಮ್ಮ ಕೈಕೆಳಗಣ ನೌಕರಮಾಸ್ತರುಗಳು ಯಾವ ರೀತಿ ಕೆಲಸಮಾಡುತ್ತಿರುವರೆಂದಾಗಲಿ ಪ್ರಜೆಗಳಿಗೆ ಇಲಾಖೆಯ ಕಾರುಬಾರುಗಳ ವಿಷಯದಲ್ಲಿ ಯಾವ ರೀತಿಯಾದ ಅಭಿಪ್ರಾಯಪಡುತ್ತಿರುತ್ತಾರೆಂದಾಗಲಿ ಗೋಚರಕ್ಕೆ ಬರುವುದಿಲ್ಲ ಈ ವಿಚಾರಗಳನ್ನು ತಿಳಿದುಕೊಳ್ಳಲು ಅಧಿಕಾರಿಗಳಿಗೆ ಸ್ವತಃ ಅವಕಾಶವಾಗದಿದ್ದರೂ ಇತರರಾದರೂ ಅವರಿಗೆ ತಿಳಿಯಪಡಿಸಬೇಕು. ಇಂಥಾ ಕಾರ್ಯಕ್ಕೆ ಇಲಾಖೆಯ ನೌಕರರೂ, ಪ್ರಜೆಗಳಲ್ಲಿ ಗಣ್ಯರಾದವರೂ ಸೇರಿ ಸಂಘಗಳನ್ನು ಮಾಡಿಕೊಂಡರೆ ಗವರ್ನಮೆಂಟಿನವರಿಗೆ ಇದರಿಂದ ತುಂಬಾ ಸಹಾಯವಾಗದೇ ಇರುವುದಕ್ಕೆ ಸಂಶಯವಿಲ್ಲ.

ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ಕ್ರಮಗಳೆಲ್ಲಾ ಸಾಧುವಾಗಿವೆ ಎಂದೂ, ತೃಪ್ತಿಕರವಾಗಿವೆ ಎಂದೂ ಹೇಳಬಹುದುದಿಲ್ಲ. ಇದಕ್ಕೆ ಈಚೆಗೆ ನಡೆದ ಕೆಲವು ಪರೀಕ್ಷೆಗಳ ಫಲಿತಾಂಶಗಳನ್ನು ದೃಷ್ಟಾಂತವಾಗಿ ಹೇಳಬಹುದು ಅದನ್ನು ಕ್ರಮಪಡಿಸುವ ಭಾಗದಲ್ಲಿ ಗವರ್ನಮೆಂಟಿನವರು ಅಷ್ಟೇನೂ ಆತುರಪಡುತ್ತಿರುವಂತೆ ಕಾಣುವುದಿಲ್ಲ ಗವರ್ನಮೆಂಟಿನವರು ಸರಿಯಾದ ಕ್ರಮಗಳನ್ನು ರೂಢಿಸದೆಹೋದರೆ ವಿದ್ಯಾಭಿವೃದ್ಧಿಯ ವಿಷಯದಲ್ಲಿ ಉತ್ಸಾಹಶಾಲಿಗಳಾದ ಪ್ರಜೆಗಳೂ ವಿದ್ಯಾಬೋಧಕರೂ ಏಕೀಭವಿಸಿ ಅಂಥಾ ಕ್ರಮಗಳನ್ನು ಯೋಚಿಸಿ ಗೊತ್ತುಮಾಡಿ ಗವರ್ನಮೆಂಟಿಗೆ ಅರಿಕೆ ಮಾಡಿಕೊಳ್ಳಬೇಕಾಗಿದೆ ಈಗ ಏರ್ಪಾಡಾಗಿರುವ ಮೇಲ್ಕಂಡ ಎರಡು ಸಂಘಗಳ ಉದ್ದೇಶವು ಗವರ್ನಮೆಂಟಿನವರಿಗೆ ಸಹಾಯಮಾಡಿ ವಿದ್ಯೆಯನ್ನು ಅಭಿವೃದ್ಧಿಮಾಡಬೇಕೆಂಬುವುದಾಗಿಯೇ ಹೊರತು ಅಂಥಾ ಕ್ರಮಗಳಲ್ಲಿ ತಪ್ಪು ಕಂಡುಹಿಡಿದು ಆಕ್ಷೇಪಣೆಮಾಡಬೇಕೆಂಬುವುದಲ್ಲ.

ಇದಕ್ಕೆಲ್ಲಾ ಬಾಲಕರ ಶಿಕ್ಷಣಶಾಸ್ತ್ರಮವೇ ಮೂಲವಾಗಿರುತ್ತದೆ; ಈ ಶಿಕ್ಷಣವು ತೃಪ್ತಿಕರವಾಗಿರುವುದಿಲ್ಲ. ಶಿಕ್ಷಣ ಕ್ರಮಗಳಲ್ಲಿ ತರಬೇತಾಗದ [illegible] ಉಪಾಧ್ಯಾಯರಾಗಿ ಸಿಲ್ಲಬೇಕಾಗಿರೋಣದರಿಂದ ಬಾಲಶಿಕ್ಷಣವು ಫಲಪ್ರದವಾಗಿಲ್ಲ. ಗವರ್ನಮೆಂಟಿನವರು ಉಪಾಧ್ಯಾಯರನ್ನು ತರಬೇತುಮಾಡುವ ಭಾಗದಲ್ಲಿ ವಿಶೇಷ ಪ್ರಯತ್ನವನ್ನು ವಹಿಸಿ ಅದಕ್ಕಾಗಿ ಹೆಚ್ಚು ದ್ರವ್ಯವನ್ನು ವಿನಿಯೋಗಿಸಬೇಕಾಗಿದೆ ಸ್ಕೂಲುಗಳ ಮೇಲೆ ಈಗ ಇಟ್ಟಿರುವ ತನಿಖೆಯು ಸಾಲದು, ಇನ್ಸ್‌ಪೆಕ್ಟರುಗಳು ಅತಿಮುಖ್ಯವಾದ ಶಾಲೆಶಾಲೆಗಳನ್ನು ಆಗಾಗ ನೋಡಿ ತನಿಖೆ ಮಾಡಬೇಕಾಗಿರುವುದರಿಂದ ಅವರ ಕರ್ತವ್ಯವು ಅಷ್ಟೇನೂ ಸಾರ್ಥಕವಾಗಿಲ್ಲ.

ಈಗ ಏರ್ಪಾಡಾಗಿರುವ ಹೊಸ ಸಂಘಗಳೂ ಈ ವಿಚಾರಗಳನ್ನೆಲ್ಲಾ ಕುರಿತು ಚರ್ಚಿಸಿ ಹಿತಕರವಾದ ಮತ್ತು ಶ್ರೇಯಸ್ಕರವಾದ ಸಲಹೆಗಳನ್ನು ಸೂಚಿಸಿ ಗವರ್ನಮೆಂಟಿನವರ ಗಮನಕ್ಕೆ ತಂದಾರೆಂದೂ, ಈ ಸಂಘಗಳು ಅರಿಕೆಮಾಡಿಕೊಳ್ಳುವ ವಿಚಾರಗಳನ್ನು ಗವರ್ನಮೆಂಟಿನವರು ಸಾವಧಾನದಿಂದಲೂ, ಪ್ರೀತಿ ಪೂರ್ವಕವಾಗಿಯೂ ಅಂಗೀಕಾರ ಮಾಡುತ್ತಾರೆಂದೂ ನಂಬಿ ನಿರೀಕ್ಷಿಸುತ್ತೇವೆ

ಒಂದು ಕನಸು.

ಗುಣಾಢ್ಯನಾಗಿಯೂ ಸಂಭಾವಿತನಾಗಿಯೂ ಇದ್ದ ಒಬ್ಬ ಗೃಹಸ್ಥನು ತಾನು ವಾಸಮಾಡುತ್ತಿದ್ದ ಊರಿನವರಿಂದ ಒಳ್ಳೆಯವನೂ ಮಾನ್ಯನೂ ಅನ್ನಿಸಿಕೊಂಡು ಬದುಕುತ್ತಿದ್ದನು ತನ್ನ ಸದ್ಗುಣಗಳನ್ನು ನೆನೆಸಿ ಹಿಗ್ಗುವ ಸ್ವಭಾವವು ದಿನವು ಅವನಲ್ಲಿ ಆಗಾಗ್ಯೆ ತಲೆದೋರುತ್ತಿತ್ತು ಇದಕ್ಕೆ ಸರಿಯಾಗಿ ಊರಿನ ಜನಗಳು ತನ್ನನ್ನು ಸನ್ಮಾನಿಸುವದನ್ನೂ ದಯಾವಂತನು, ಉಪಕಾರಿ ಎಂದು ಹೊಗಳುವದನ್ನೂ ಸರಸ್ಪರ ಕೇಳಿ—ನಾನು ಬಹಳ ಒಳ್ಳೆಯವನೆಂತ ನಾನು ಭಾವಿಸುವದು ನ್ಯಾಯವಾಗಿದೆ ನನ್ನಲ್ಲಿ ನನಗೇನೂ ತಪ್ಪು ದೋಷಗಳು ತೋರುವದಿಲ್ಲ ಇದಕ್ಕೆ ಸರಿಯಾಗಿ ಜನಗಳ ಸಾಕ್ಷಿಯೂ ನಾನು ಒಳ್ಳೆಯವನು ಎಂತ ಹೊಗಳುತ್ತಿವೆ ನಾನು ನಿರಾಧಾರವಾಗಿ ನನ್ನನ್ನು ಹೊಗಳಿಕೊಳ್ಳುವದಿಲ್ಲ ನಾನು ಸದ್ಗುಣಿಯಾಗಿಲ್ಲದಿದ್ದರೆ ಜನಗಳು ನನ್ನನ್ನು ಹೊಗಳುವರೇ? ನಾನು ಇಂಥಾವನಾಗಿರಲಾಗಿ ನಾನು ಸತ್ತರೂ ನನಗೆ ಪರಂಧಾಮ ಪದವಿಯು ತಪ್ಪದೇ ಸಿಕ್ಕುವದು. ಯಾವ ದುಃಖಬಾಧೆಯೂ ನನ್ನನ್ನು ಕಾಡುವದಿಲ್ಲ ಮಾಡಬೇಕಾದ್ದ ಸಕಲವನ್ನೂ ಮಾಡಿಬಿಟ್ಟಿದ್ದೇನೆ ನೀತಿವಂತನೆನ್ನಿಸಿಕೊಂಡು ಯೇಸುಸ್ವಾಮಿಯನ್ನು ಪಡೆದಿದ್ದೇನೆ. ದೇವರು ನೀತಿವಂತರಿಗೆ ದಯಪಾಲಿಸುವ ಸದ್ಗತಿಯು ನನಗೆ ನ್ಯಾಯವಾಗಿ ದೊರಕುವದು ಎಂದು ನಿಶ್ಚಿಂತನಾಗಿದ್ದನು. ಹೀಗೆ ಬಹುಕಾಲ ಗತಿಸಿಹೋದನಂತರ ಅವನಿಗೆ ಮುಪ್ಪಿನ ಕಾಲ ಸಂಭವಿಸಿ ಅಸ್ವಸ್ಥನಾದನು ಅವನು ಹೀಗೆ ರೋಗದಿಂದ ನರಳುತ್ತ ಹಾಸಿಗೆಯ ಮೇಲೆ ಬಿದ್ದುಕೊಂಡಿರುವಾಗ ಅವನಿಗೆ ಸ್ವಲ್ಪ ನಿದ್ದೆ ಬಂದಹಾಗಾಗಿ ಆ ನಿದ್ದೆಯಲ್ಲಿ ಒಂದು ಕನಸು ಕಂಡನು ಆ ಕನಸಿನಲ್ಲಿ ಅವನಿಗೆ ತೋರಿಬಂದದ್ದೇನೆಂದರೆ—ಅವನು ರೋಗವಾಸಿಯಾಗದೆ ಅದರಲ್ಲಿ ಸತ್ತುಹೋದನು. ಆಗಲವನು ಚಿಂತೆಯಿಲ್ಲ. ನನ್ನ ಪಾಲಿಗೆ ಈ ಲೋಕದ ಸಂಪದವು ಮುಗಿದರೂ ಪರಲೋಕದಲ್ಲಿ ಸುಖವನ್ನನುಭವಿಸುವೆನೆಂದುಕೊಂಡು ಪರಲೋಕದ ಬಾಗಿಲ ಹತ್ತಿರ ಬಂದು ಅದರ ಮಹಿಮೆಯನ್ನೂ ಅದರಲ್ಲಿ ವಾಸಿಸುವ ಪರಿಶುದ್ಧವಂತರ ಭಾಗ್ಯವನ್ನೂ ಆನಂದವನ್ನೂ ನೋಡಿ ಅತ್ಯಂತ ಹರ್ಷಿತನಾಗಿ ಒಳಕ್ಕೆ ಪ್ರವೇಶಮಾಡುವದಕ್ಕೆ ಸನ್ನದ್ಧನಾಗಲು ದ್ವಾರಪಾಲಕರಾದ ದೂತರು ಅವನನ್ನು ತಡೆದು ಹೆಬ್ಬಾಗಿಲ ಮೇಲೆ ಮುದ್ರಿಸಿದ ಲಿಪಿಯನ್ನು ಓದಬೇಕೆಂದು ಆಜ್ಞಾಪಿಸಿದರು ಆಗಲವನು ತಲೆಯೆತ್ತಿ ಆ ಲಿಪಿಯನ್ನು ಓದಿದನು. ಅಲ್ಲಿ ಬರೆದಿದ್ದುದೇನೆಂದರೆ—ಋಣಮುಕ್ತರು ಈ ಬಾಗಿಲಲ್ಲಿ ಪ್ರವೇಶಿಸಿ ಪರಂಧಾಮ ಪದವಿಯನ್ನು ಹೊಂದುವರು ಎಂಬುವದೇ ಆ ಗೃಹಸ್ಥನು ಇದನ್ನು ಓದಿಕೊಂಡು—ನಾನು ಯಾರಿಗೂ ಋಣಸ್ಥನಲ್ಲ. ನಾನು ಐಶ್ವರ್ಯವಂತನೂ ನೀತಿವಂತನೂ ಒಳ್ಳೆಯವನೂ ಎಂತ ಈ ವರೆಗೂ ಸಕಲರಿಂದಲೂ ಹೆಸರನ್ನು ಪಡೆದಿದ್ದೇನೆ. ಬೇಕಾದರೆ ನಾನಿದ್ದ ಊರಿನವರನ್ನೂ ವಿಚಾರಿಸಬಹುದು ಎಂತ ದ್ವಾರಪಾಲಕರಾದ ಆ ದೂತರಿಗೆ ಹೇಳುತ್ತಿರಲಾಗಿ ಅವನ ಪಕ್ಕದಲ್ಲಿ ಒಂದು ಗುಂಪಿನ ಜನಗಳು ಕಾಣಿಸಿಕೊಂಡು ಅವನೆದುರಿಗೆ ಬಂದು ನಿಂತರು ಅವರಲ್ಲಿ ಅನೇಕರು ಬಡವರು ಕೆಲವರು ರೋಗಿಗಳು ಕೆಲವರು ಅಂಗಹೀನರಾದ ಕುರುಡರು ಕುಂಟರು. ಅವರಲ್ಲಿ ಒಬ್ಬನು ನೆಟ್ಟಗೆ ಆ ಗೃಹಸ್ಥನ ಮುಂದೆ ಸಮೀಪವಾಗಿ ಬಂದು ನಿಂತು—ಇಪ್ಪತ್ತು ವರುಷಗಳ ಕೆಳಗೆ ನಾನು ಪ್ರಯಾಣಮಾಡುತ್ತ ಕಳ್ಳರ ಕೈಗೆ ಸಿಕ್ಕಿಬಿದ್ದು ಪೆಟ್ಟುತಿಂದು ಇದ್ದಬದ್ದದ್ದನ್ನೆಲ್ಲಾ ಸುಲಿಗೊಟ್ಟು ತೊಳಲಿ ಬಳಲಿ ದಾರಿಯ ಮಗ್ಗುಲಲ್ಲಿ ಬಿದ್ದುಕೊಂಡಿದ್ದೆ. ಈ ಸಂಭಾವಿತನು ಕುದುರೆ ಕಟ್ಟಿದ ರಥದ ಮೇಲೆ ಹತ್ತಿಕೊಂಡು ಅಟ್ಟಹಾಸದಿಂದ ಸೇವಕರನ್ನೊಡಗೂಡಿ ಹೋಗುತ್ತಿದ್ದನು. ನಾನು ಕೈಗಳನ್ನೆತ್ತಿ ನನ್ನನ್ನು ಕಾಪಾಡಬೇಕೆಂತ ಬಹು ದೀನಸ್ವರದಿಂದ ಬೇಡಿದ್ದನ್ನು ಕೇಳಿದರೂ ಈತನು ಕುದುರೆಗಳನ್ನು ಚಬುಕಿನಿಂದ ಹೊಡೆದು ಓಡಿಸುತ್ತಾ ನಿಷ್ಕರುಣಿಯಾಗಿ ನನ್ನನ್ನು ಅಲ್ಲೇ ಸಾವಿನ ಪಾಲುಮಾಡಿ ಹೋಗಿಬಿಟ್ಟನೆಂತ ಹೇಳಿದನು. ಇನ್ನೊಬ್ಬನು ಬಂದು—ಈ ಗೃಹಸ್ಥನಿಗೆ ನಾನು ಇಪ್ಪತ್ತೈದು ರೂಪಾಯಿಗಳು ಕೊಡಬೇಕಾಗಿದ್ದೆನು ಅವನು ಹಣಕ್ಕೆ ವರಾತ ಮಾಡಲು ನನಗೆ ಏನೂ ಗತಿಯಿಲ್ಲದೆ—ದಮ್ಮಯ್ಯ, ಕೆಲವು ಕಾಲ ತಡಿಯಿರಿ ಎಂದು ಬೇಡಿದೆನು. ಈತನು ಕೇಳದೆ ಅಸ್ವಸ್ಥಳಾಗಿದ್ದ ನನ್ನ ಹೆಂಡತಿಗೂ ಚಿಕ್ಕ ಕೂಸಿಗೂ ಊರಾಗಿದ್ದ ಒಂದೇ ಆಕಳನ್ನು ಮಾರಿ ಹಣ ಕೊಡಬೇಕೆಂತ ಬಲಾತ್ಕಾರಮಾಡಿದನು ಆ ಆಕಳಿಗೆ ನಲವತ್ತು ರೂಪಾಯಿ ಕ್ರಯ ಕೊಡಲು ಬಂದಿತ್ತು ನಾನು ಅದನ್ನು ಮಕ್ಕಳ ಸಂಸಾರದ ಸಲುವಾಗಿ ಮಾರದೆ ಇದ್ದೆನು ಈ ಮಹಾರಾಯನು ಅದನ್ನು ನಾನು ಕೊಡಬೇಕಾಗಿದ್ದ ಇಪ್ಪತ್ತೈದು ರೂಪಾಯಿಗಳಿಗೆ ಕಟ್ಟಿಕೊಂಡನು ಮಗುವೂ ಹೆಂಡತಿಯೂ ಪೋಷಣೆಯಿಲ್ಲದೆ ಸತ್ತರು ಅಂದನು.

ಹೀಗೆ ಆ ಗುಂಪಿನವರಲ್ಲಿ ಪ್ರತಿಯೊಬ್ಬನೂ ಬಂದು ಆ ಗೃಹಸ್ಥನು ಮಾಡಿದ ಅನ್ಯಾಯವನ್ನು ಹೇಳುವದನ್ನು ಕೇಳಿ ಅವನು ಗಾಬರಿಯಿಂದ ಕೂಗುತ್ತ ಎಚ್ಚರನಾಗಿ—ದೇವರು ನನ್ನ ನಾಸ್ತಿತಿಯನ್ನು ನನಗೆ ತಿಳಿಸಿದನೆಂದು ತನ್ನ ಪಾಪಗಳನ್ನು ಕುರಿತು ಪಶ್ಚಾತ್ತಾಪಪಟ್ಟು ದೇವರ ಕರುಣೆಯನ್ನು ಬೇಡಿದನು

ದೇವರ ಕುಮಾರನಾದ ಯೇಸು ಕ್ರಿಸ್ತನು ತನ್ನ ಮಹಿಮೆಯಿಂದ ಎಲ್ಲಾ ದೇವದೂತರೊಂದಿಗೆ ಕೂಡಿಬಂದು ತನ್ನ ಮಹಿಮೆಯ ಸಿಂಹಾಸನದಲ್ಲಿ ಕೂತುಕೊಳ್ಳುವನು. ಮತ್ತು ಎಲ್ಲಾ ದೇಶದ ಜನಗಳನ್ನು ದೂತರು ಆತನ ಮುಂದೆ ಕರತಂದು ಬಿಡುವರು ಆಗ ಆತನು ಅವರನ್ನು ಎರಡು ಗುಂಪುಮಾಡಿ ಕೆಟ್ಟವರನ್ನು ಎಡಗಡೆಯಲ್ಲಿಯೂ ಒಳ್ಳೆಯವರನ್ನು ತನ್ನ ಬಲಪಾರ್ಶ್ವದಲ್ಲಿಯೂ ನಿಲ್ಲಿಸಿ ಬಲಗಡೆಯಲ್ಲಿ ನಿಂತವರಿಗೆ ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ಥ್ಯವಾಗಿ ತಕ್ಕೊಳ್ಳಿರಿ. ಯಾಕಂದರೆ ನಾನು ಹಸಿವಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ ಬಾಯಾರಿದ್ದೆನು, ಕುಡಿಯುವದಕ್ಕೆ ಕೊಟ್ಟಿರಿ. ಪರದೇಶಿಯಾಗಿದ್ದೆನು, ಬಟ್ಟೆ ಇಲ್ಲದೆ ರೋಗದಲ್ಲಿ ನರಳುತ್ತಿದ್ದೆನು, ನನ್ನನ್ನು ಸೇರಿಸಿಕೊಂಡು ಆರೈಕೆಮಾಡಿದಿರಿ ಅನ್ನುವನು ಅವರು ಸ್ವಾಮಿ, ನಾವು ನಿನ್ನನ್ನು ಕಾಣಲೇ ಇಲ್ಲ ನಾವು ಇದನ್ನು ನಿನಗೆ ಮಾಡಿದ್ದು ಯಾವಾಗ? ಎಂದು ಕೇಳಲು, ಸ್ವಾಮಿಯು—ನೀವು ಈ ಕೇವಲ ಅಲ್ಪನಾದವನಿಗೆ ಮಾಡಿದ್ದು ನನಗೆ ಮಾಡಿದವರಾಗಿದ್ದೀರಿ ಅನ್ನುವನು. ಕೆಟ್ಟವರನ್ನು ಆತನು ಕೇವಲ ಕೊರತೆಯಲ್ಲಿ ಬಿದ್ದ ಒಬ್ಬನಿಗೆ ಸಹಾಯಮಾಡದೆ ಹೋದಕಾರಣ ನನಗೆ ನೀವು ಸಹಾಯಮಾಡಲಿಲ್ಲವೆಂತ ಅವರನ್ನು ನಿತ್ಯ ಶಿಕ್ಷೆಗೆ ಕಳುಹಿಸಿ ದಂಡಿಸುವನು.

ಶ್ರೀಮನ್ಮಹಾರಾಜರವರ ಸಂಚಾರವು.

ಶ್ರೀಮನ್ಮಹಾರಾಜರವರು ಸುಮಾರು ಎರಡುವರೆ ತಿಂಗಳು ಲಂಡನ್ ಪಟ್ಟಣದಲ್ಲಿದ್ದು ಮುಂದಕ್ಕೆ ದಯಮಾಡಿಸಿದ್ದು

ತಮಗೆ ನಾವು ಹಿಂದೆ ತಿಳಿಸಿದ ಹಾಗೆ ಪ್ರಭುಗಳು ಲಂಡನ್‌ಗೆ ೨೨ ನೇ ಮೇ ತಾರೀಖಿಗೆ ಬಂದು, ಆಗಸ್ಟು 13 ನೇ ತಾರೀಖಿನ ವರೆಗೆ ಇಲ್ಲಿದ್ದು, ಮುಂದಕ್ಕೆ ದಯಮಾಡಿಸಿದರು ಪ್ರಪಂಚದಲ್ಲಿರುವ ಸಮಸ್ತ ಪಟ್ಟಣಗಳಿಗಿಂತಲೂ ಎಷ್ಟೋ ದೊಡ್ಡದಾಗಿ, 70 ಲಕ್ಷ ಪ್ರಜೆಗಳಿರುವ ಈ ಪಟ್ಟಣದಲ್ಲಿ ಇದ್ದಷ್ಟು ದಿನಗಳು ಅಷ್ಟು ನಿಮಿಷಗಳ ಹಾಗೆ ಕಳೆದು ಹೋದವು ಇಲ್ಲಿ ನೋಡಿ ಜ್ಞಾನ ಸಂಪಾದಿಸಿಕೊಳ್ಳುವ ಅಂಶಗಳು ಸಮಸ್ತವಾಗಿವೆ ಯುವರಾಜರು “ಹೌಸ್ ಆಫ್ ಕಾಮನ್ಸ್” ಮತ್ತು “ಹೌಸ್ ಆಫ್ ಲಾರ್ಡ್ಸ್” (The House of Common and the House of Lords) ಇವೆರಡು ಸಭೆಗಳು ಒಂದೊಂದು ದಿವಸ ಹೋಗಿ ಅಲ್ಲಿ ನಡೆಯುವ ರಾಜ್ಯಭಾರ ವಿಷಯವಾದ ಚರ್ಚೆಗಳನ್ನೆಲ್ಲಾ ಕೇಳಿದರು.

ಜೂನ್ 6 ನೇ ತಾರೀಖಿನದಿನ ಕೇಂಬ್ರಿಡ್ಜ್ (Cambridge) ಗೆ ದಯಮಾಡಿದರು “ಕೇಂಬ್ರಿಡ್ಜ್ ಯೂನಿವರ್ಸಿಟಿ” (Cambridge University) ಬಹಳ ಪುರಾತನವಾದದ್ದು ಇಲ್ಲಿರುವ ಪಾಠಶಾಲೆಗಳು ಬಾಲ ಪಾಠಶಾಲೆಗಳಲ್ಲಿ “ಎಂಟ್ರೆನ್ಸು” ಪರೀಕ್ಷೆ (Entrance Examination) ಯನ್ನು ಇತರ ಬಾಲ ಪಾಠಶಾಲೆಗಳಲ್ಲಿ ಮಾಡಿಕೊಂಡು ಇಲ್ಲಿನ ಕಾಲೇಜುಗಳಿಗೆ ಸೇರಬೇಕು ಕೇಂಬ್ರಿಡ್ಜ್ ನಲ್ಲಿ ಅನೇಕ ಕಾಲೇಜುಗಳಿರುವವು ಪ್ರತಿಯೊಂದು ಕಾಲೇಜಿಗೂ ಅದಕ್ಕೆ ಸೇರಿದ ವಿದ್ಯಾರ್ಥಿಗಳ ನಿಲಯ Students' Hostels ಗಳಿರುವವು ಯುವರಾಜರು ಸೆಂಟ್ ಜಾನ್ಸ್ ಕಾಲೇಜಿಗೆ St John's College) ದಯಮಾಡಿಸಿ, ಅದನ್ನು ಮತ್ತು ಅದಕ್ಕೆ ಸಂಬಂಧಪಟ್ಟ ವಿದ್ಯಾರ್ಥಿಗಳ ನಿಲಯವನ್ನು ಪರಿಶೋಧಿಸಿದರು ಈ ಕಾಲೇಜಿಗೆ ವಿಶೇಷವಾಗಿ ನಮ್ಮ ದೇಶದಲ್ಲಿ ವಿದ್ಯಾರ್ಥಿಗಳು ಹೋಗುವುದು. ಪ್ರಭುಗಳು “ಟ್ರಿನಿಟಿ ಕಾಲೇಜನ್ನೂ” Trinity College) ನೋಡಿದರು

ವರುಷಕ್ಕೆ ಒಂದಾವರ್ತಿ ಕೇಂಬ್ರಿಡ್ಜ್ ನಲ್ಲಿ ಮೇ ವೀಕು (May Week ಎಂದು ಪಾಠಶಾಲೆಗಳು ರಜಕ್ಕೋಸ್ಕರ ಮುಚ್ಚುವುದಕ್ಕೆ ಪೂರ್ವ ಬಹಳ ವಿನೋದವಾಗಿ ಆಟ ಪಾಟಗಳಾಗುತ್ತವೆ. ಆಗ ದೋಣಿಸರತ್ತು ಮುಂತಾದದ್ದು ಆಗುತ್ತದೆ ಪ್ರಭುಗಳು ದಯಮಾಡಿಸಿದ್ದಾಗ ಈ ವಿನೋದಗಳು ಇನ್ನೂ ಆಗುತ್ತಿದ್ದವು ಇದನ್ನು ನೋಡಿಕೊಂಡು ಸೆಂಟ್ ಜಾನ್ಸ್ ಕಾಲೇಜಿನ “ಡಿಬೇಟಿಂಗ್ ಸೊಸೈಟಿ”ಗೆ ದಯಮಾಡಿ ಅಲ್ಲಿ ನಡೆಯುತ್ತಿದ್ದ ಚರ್ಚೆಯನ್ನು ಸ್ವಲ್ಪ ಹೊತ್ತು ಕೇಳಿಕೊಂಡು ಪುನಃ ಲಂಡನ್‌ಗೆ ಅದೇ ರಾತ್ರಿ ಬಂದುಬಿಟ್ಟರು

ಇನ್ನು ಕೆಲವು ದಿವಸವಾದನಂತರ “ಹ್ಯಾರೊ” (Harrow) ಗೆ ದಯಮಾಡಿಸಿದ್ದರು. ಇಲ್ಲಿನ ಬಾಲ ಪಾಠಶಾಲೆಗಳು (ಎಂದರೆ “ಎಂಟ್ರೆನ್ಸ್” ಪರೀಕ್ಷೆಯ ವರೆಗಿರುವ ತರಗತಿಗಳು) ಬಹಳ ಕಾಲದಿಂದ ಪ್ರಖ್ಯಾತವಾದುವು ಇಲ್ಲಿಯೂ ಕೂಡ ಪಾಠಶಾಲೆಗಳಲ್ಲಿ ಓದುವ ಬಾಲಕರುಗಳು ಶಾಲೆಗಳಿಗೆ ಸಂಬಂಧಪಟ್ಟ ವಿದ್ಯಾರ್ಥಿಗಳ ನಿಲಯಗಳಲ್ಲೇ ವಾಸಮಾಡಬೇಕು ಸವಾರಿ ದಯಮಾಡಿಸಿದ್ದಾಗ ಪಾಠಶಾಲೆಗಳ ತರಗತಿಗಳಲ್ಲಿ ಪಾಠಗಳು ನಡೆಯುತ್ತಿದ್ದವು — ಲಂಡನ್‌ನಲ್ಲೇ ಇರುವ “ಸೇಂಟ್ ಪಾಲ್ಸ್ ಸ್ಕೂಲ್” ಗೆ (St. Paul's School) ಪ್ರಭುಗಳು ಹೋಗಿದ್ದರು ಇದೊಂದು ರೀತಿಯಾದ ಬಾಲ ಪಾಠಶಾಲೆ ಇಲ್ಲಿ ಓದತಕ್ಕ ಹುಡುಗರಿಗೆ ಶಾಲೆಗೆ ಸೇರಿದ ವಿದ್ಯಾರ್ಥಿ ನಿಲಯಗಳಿಲ್ಲ. ಬಾಲಕರು ಅವರವರ ಸ್ವಂತ ಮನೆಗಳಲ್ಲಿಯೇ ವಾಸಮಾಡುತ್ತಾರೆ

ಜೂನ್ ತಿಂಗಳ ಅಂತ್ಯಭಾಗದಲ್ಲಿ ಇಂಗ್ಲಾಂಡ್ ದೊರೆಗಳ “ವಿಂಡ್ಸರ್ ಪಾರ್ಕ್‌ನಲ್ಲಿ (Windsor Park) ದೊರೆಗಳ ಸ್ವಕೀಯ “ಪರೇಡ್” ಆಯಿತು (King's Household Troops Parade at the Windsor Castle) ಆಗ ಯುವರಾಜರನ್ನು ಚಕ್ರವರ್ತಿಯವರು ಇದನ್ನು ನೋಡುವುದಕ್ಕೆ ಕರೆದಿದ್ದರು. ಯುವರಾಜರು ಇದನ್ನು ನೋಡಿಕೊಂಡು “ವಲಿಂಗ್‌ಟನ್” ಕಾಲೇಜಿಗೆ ದಯಮಾಡಿಸಿದರು ಇದೊಂದು ಪ್ರಸಿದ್ಧವಾದ ಬಾಲ ಪಾಠಶಾಲೆ. ಇಲ್ಲಿ ಸ್ವಲ್ಪ ಹಣವಂತರ ಮಕ್ಕಳುಗಳೇ ಹೋಗುವುದು ವಿದ್ಯಾರ್ಥಿಗಳು ಮುಂದಕ್ಕೆ ಸೈನ್ಯಕ್ಕೆ ಸೇರುವುದಕ್ಕೆ ಅನುಕೂಲವಾಗುವ ವಿದ್ಯೆಯನ್ನು ಹೇಳಿಕೊಡುವುದು ಈ ಕಾಲೇಜಿನ ಮುಖ್ಯ ಉದ್ದೇಶ. ಈ ಕಾಲೇಜಿನಲ್ಲಿ ಈಗ ಝೋದಪುರ್ ಮಹಾರಾಜರು ಓದುತ್ತಿದ್ದಾರೆ ಹುಡುಗರುಗಳಿಗೆಲ್ಲಾ ಶೈಲಾದ ಮಟ್ಟಿಗೆ ಚಿಕ್ಕ ವಯಸ್ಸಿನಿಂದಲೇ ಸೈನ್ಯಕ್ಕೆ ಯೋಗ್ಯವಾದ ತರಬೇತನ್ನು ಕೊಡಬೇಕೆಂದು “ಬೇಡನ್ ಪೌಲ್” (Baden Powell), “ಲಾರ್ಡ್ ರಾಬರ್ಟ್ಸ್” (Lord Roberts) ರವರೇ ಮೊದಲಾದ ಇಂಗ್ಲಾಂಡಿನ ದೊಡ್ಡ ದೊಡ್ಡ ಸರದಾರರುಗಳು “ಬಾಯ್ ಸ್ಕೌಟ್ಸ್ ಮೂವ್‌ಮೆಂಟ್” (Boy Scouts Movement) ಎಂಬುವುದನ್ನು ಸ್ಥಾಪಿಸಿದಾರೆ ಇದರಿಂದ ಬಾಲಕರುಗಳು ಶೂರರಾಗಿ ಸ್ವದೇಶವನ್ನು ಕಾಪಾಡಬೇಕೆಂಬ ವಾಂಛಲ್ಯ ಹುಟ್ಟುವುದಲ್ಲದೆ ಹುಡುಗರುಗಳಿಗೆ ದೇಹದಾರ್ಢ್ಯ, ಪರಸ್ಪರಸ್ನೇಹ ಮುಂತಾದ ಅನೇಕ ಪ್ರಯೋಜನಗಳುಂಟಾಗುತ್ತೆ.

ಬಾಪಂದರು ಲಂಡನ್ ಹತ್ತಿರವಿರುವ ಕ್ರಾನ್‌ಫರ್ಡ್ (Cranford) ಎಂಬ ಸ್ಥಳಕ್ಕೆ ಬತ್ತೀ, ಈ ಹುಡುಗರ ಸ್ಕೌಟರ ಪೈಕಿ ಒಂದನ್ನು ಮತ್ತು ಅವರ ಕವಾತನ್ನು ಪರಾಂಬರಿಸಿದರು

ಲಂಡನ್‌ನಿಂದ ಸ್ವಲ್ಪ ದೂರದಲ್ಲಿರುವ "ಡರ್ಹಂ" (Derham) ಎಂಬ ಊರಿನಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ ಒಂದು ದೊಡ್ಡ ವಸ್ತುಪ್ರದರ್ಶನವು (Agricultural Exhibition) ಜೂನ್ 26 ನೇ ತಾರೀಖಿನಲ್ಲಿ ನಡೆಯಿತು ಇಲ್ಲಿಗೆ ಯುವರಾಜರು ಹೋಗಿದ್ದರು

ಆಕಾಶ ವಿಮಾನವು ಇಪ್ಪತ್ತನೇ ಶತಮಾನದ ಆಶ್ಚರ್ಯ" ವೆಂದು ಪಾಶ್ಚಿಮಾತ್ಯರು ಹೇಳುವುದು ನಿಜವೇ ಸರಿ ನಮ್ಮ ವಾಚಕರುಗಳ ಪೈಕಿ ಎಷ್ಟೋ ಮಂದಿ ಎರಡು ವಿಮಾನಗಳು ಬೆಂಗಳೂರಿನಲ್ಲಿ ಕೆಲವು ವರುಷಗಳ ಹಿಂದೆ ಹಾರಿದ್ದನ್ನು ನೋಡಿರಬಹುದು ವಾಯುವನ್ನು ಯೂರೋಪಿಯನ್ನರು ಶಕ್ಯಮಟ್ಟಿಗೆ ಜಯಿಸಿದ್ದಾರೆ ಲಂಡನ್‌ನಿಂದ 5 ಅಥವಾ 6 ಮೈಲಿಗಳಲ್ಲಿರುವ ಹೆಂಡನ್ (Hendon) ಎಂಬ ಸ್ಥಳದಲ್ಲಿ ಈ ವಿಮಾನಗಳು ಪ್ರತಿ ದಿನವೂ ಹಾರುತ್ತವೆ "ಗ್ರೇಹಾಂ ವೈಟ್" (Graham White) ಎಂಬುವರು ಈ ವಿಮಾನಸ್ಥರ ಸಂಘಕ್ಕೆ ಅಧ್ಯಕ್ಷರು ಯುವರಾಜರು ಇಲ್ಲಿಗೆ ಹೋಗಿ ಈ ವಿಮಾನಗಳು ಹಾರುವುದನ್ನು ನೋಡಿದರು ಯುವರಾಜರ ಜೊತೆಯಲ್ಲಿದ್ದವರು ಒಬ್ಬರು ಈ ವಿಮಾನದಲ್ಲಿ ಸುರಕ್ಷಿತವಾಗಿ ಹಾರಿದರು ಗ್ರೇಹಾಂ ವೈಟ್‌ರವರು ಇಂಡಿಯಾ ದೇಶಕ್ಕೆ ಇಷ್ಟರಲ್ಲೇ ಬರಬೇಕೆಂದಿದ್ದಾರೆ ಮೈಸೂರಿಗೂ ಎಂದು ವಿಮಾನದಲ್ಲಿ ಹಾರಬೇಕೆಂದು ಯುವರಾಜರನ್ನು ಕೇಳಿಕೊಂಡಿದ್ದಾರೆ

ಶ್ರೀರಂಗಪಟ್ಟಣದ ಯುದ್ಧದಲ್ಲಿ "ಕರ್ನಲ್ ಹ್ಯಾರಿಸ್" (Colonel Harris) ಎಂಬುವರು ಬಹಳ ಸಾಹಸಪಟ್ಟದ್ದು ನಮ್ಮೂರಿನವರಿಗೆಲ್ಲಾ ಗೊತ್ತೇ ಇದೆ ಇವರ ಮರಿಮಕ್ಕಳು "ಲಾರ್ಡ್ ಹ್ಯಾರಿಸ್" ರವರು ಕೆಲವು ವರುಷಗಳ ಕೆಳಗೆ ಬೊಂಬಾಯಿ ಗೌರ್ನರ್ ಆಗಿದ್ದರು ಇವರು ಯುವರಾಜನ್ನು ಜೂಲೈ 12 ಮತ್ತು 13 ನೇ ತಾರೀಖಿನ ದಿನ "ಫಾವರ್‌ಷಂ" (Faversham) ನಲ್ಲಿರುವ ಅವರ ಮನೆಗೆ ಕರೆದಿದ್ದರು ಯುವರಾಜರು ಅಲ್ಲಿ ಎರಡು ದಿವಸ ಇದ್ದು ಪುನಃ ಲಂಡನ್‌ಗೆ ಬಂದುಬಿಟ್ಟರು ಫಾವರ್‌ಷಂ"ನಿಂದ "ಕ್ಯಾಂಟರ್‌ಬರಿ" (Canterbury) ಎಂಬ ಸ್ಥಳಕ್ಕೆ ಹೋಗಿ ಅಲ್ಲಿ ಬಹಳ ಪುರಾತನವಾದ ಕ್ರಿಶ್ಚಿಯನ್ ದೇವಾಲಯವನ್ನು ಪರಾಂಬರಿಸಿದರು

"ಹೆನ್ಲಿ" (Henley) ಎಂದು ಲಂಡನ್‌ನಿಂದ ಕೆಲವು ಮೈಲಿ ದೂರದಲ್ಲಿ ಥೇಮ್ಸ್ ನದಿಯ ಮೇಲಿರುವ ಪಟ್ಟಣದಲ್ಲಿ ಪ್ರತಿವರ್ಷವೂ ಪ್ರಸಿದ್ಧವಾದ ದೋಣಿಗಳ ಪರತ್ತು ನಡೆಯುತ್ತೆ (Henley Regatta) ಮದರಾಸು ಗೌರ್ನರ್ ಆಗಿದ್ದ ಲಾರ್ಡ್ ಆಮ್‌ಟಿಲ್ Lord Ampthill) ರವರು ಯುವರಾಜರನ್ನು ಅವರ ಅತಿಥಿಗಳಾಗಿ ಈ ಪರತ್ತನ್ನು ನೋಡುವುದಕ್ಕೆ ಬೆಳಿಯಿಸಿದ್ದರು ಇಲ್ಲಿನ ಸರ್ಕಾರದವರು ಯುದ್ಧದ ಹಡಗು (Battleships) ಗಳನ್ನು ರಿಪೇರಿ ಮಾಡುವುದಕ್ಕೆ ಪೋರ್ಟ್ಸ್‌ಮೌತ್ Portsmouth) ಎಂಬ ರೇವುಪಟ್ಟಣದಲ್ಲಿ ಒಂದು ದೊಡ್ಡ ಕಾರ್ಖಾನೆಯನ್ನು ಇಟ್ಟಿದ್ದಾರೆ ಇಲ್ಲಿಗೂ ಯುವರಾಜರವರು ಹೋಗಿದ್ದರು

ಜುಲೈ 29 ನೇ ತಾರೀಖಿನಲ್ಲಿ "ಮ್ಯಾಂಚೆಸ್ಟರ್" ಗೆ (Manchester) ದಯಮಾಡಿಸಿದರು ಇದು ಲೋಕಪ್ರಸಿದ್ಧವಾದ ಹತ್ತಿ ಕಾರ್ಖಾನೆಗಳ ಸ್ಥಳ ಈ ಕಾರ್ಖಾನೆಗಳನ್ನು ನೋಡಿಕೊಂಡು "ಕೆಸಿಕ್" (Keswick) ನಲ್ಲಿರುವ ಸರ್ ಜಾನ್ ರಾಂಡಲ್ಸ್ Sir John Randles) ರವರ ಮನೆಗೆ ದಯಮಾಡಿಸಿದರು ಸರ್ ಜಾನ್ ರ್ಯಾಂಡಲ್ಸ್‌ರವರು ಮ್ಯಾಂಚೆಸ್ಟರ್ ಪಟ್ಟಣದಿಂದ ಪಾರ್ಲಿಮೆಂಟಿಗೆ ಮೆಂಬರಾಗಿ ಚುನಾಯಿಸಲ್ಪಟ್ಟಿದ್ದಾರೆ ಇವರು ಅನೇಕ ಕಬ್ಬಿಣದ ಕಾರ್ಖಾನೆಗಳಿಗೆ ಅಧ್ಯಕ್ಷರು ಇವರ ಮನೆಯಲ್ಲಿ ಯುವರಾಜರು ಅತಿಥಿಗಳಾಗಿ ಎರಡುದಿವಸವಿದ್ದರು ಇವರ ಮನೆಯು ಇಂಗ್ಲಿಷ್ "ಲೇಕ್ ಡಿಸ್ಟ್ರಿಕ್ಟ್" ಎಂಬ ಪ್ರದೇಶದಲ್ಲಿದೆ ಇದಕ್ಕೆ ಸರಿಸಮಾನವಾದ ಇಟಲಿ ದೇಶದಲ್ಲಿರುವ ಪ್ರದೇಶದ ಹಾಗೆ ಈ ಪ್ರದೇಶವೂ ಬಹು ರಮ್ಯವಾಗಿದೆ

ಯುವರಾಜರು ಮುಂದಕ್ಕೆ "ವರ್ಕಿಂಟನ್" (Workington) ಎಂಬ ಉಕ್ಕಿನ ಕಾರ್ಖಾನೆಗಳಿರುವ ಪಟ್ಟಣಕ್ಕೆ ದಯಮಾಡಿಸಿದ್ದರು ಇಲ್ಲಿನ ಉಕ್ಕಿನ ಕಾರ್ಖಾನೆಗಳಲ್ಲಿ ನಮ್ಮ ಮೈಸೂರಿನಲ್ಲಿ ತೆಗೆದಂಥಾ "ಮ್ಯಾಂಗನೀಸ್" (Manganese) ಲೋಹವನ್ನು ಉಪಯೋಗಿಸುತ್ತಾರೆ

ಲಂಡನ್‌ಗೆ ಜುಲೈ 30 ನೇ ತಾರೀಖು ವಾಪಸು ಬಂದು ಆಗಸ್ಟು 13 ನೇ ತಾರೀಖಿನ ವರೆಗೆ ಅಲ್ಲಿದ್ದು ಅಲ್ಲಿಂದ ಮುಂದಕ್ಕೆ "ಸ್ಕಾಟ್ಲೆಂಡ್" ಮತ್ತು "ಐರ್ಲೆಂಡ್" ನಲ್ಲಿ ಪ್ರಯಾಣ ಮಾಡುವುದಕ್ಕೆ ಹೊರಟರು ಆಗಸ್ಟು 14 ಮತ್ತು 15 ನೇ ತಾರೀಖು "ಎಡಿನ್‌ಬರೊ" Edinburgh) ನಲ್ಲಿದ್ದರು ಇಲ್ಲಿ ಸ್ಕಾಚ ಚರಿತ್ರೆಗೆ ಸಂಬಂಧಪಟ್ಟ ಪುರಾತನ ಕಟ್ಟಡಗಳ ಮುಂತಾದ್ದನ್ನು ಪರಾಂಬರಿಸಿದರು ಫರ್ತ್ ಆಫ್ ಫೋರ್ತ್ (Firth of Forth) ಎಂಬ ಜಲಸಂಧಿಯ ಮೇಲೆ ಅದು ಅಗಲವಾದ ಎರಡು ಮೈಲಿ ದೂರವಿರುವ ಒಂದು ಸೇತುವೆ ಇದೆ ಅನಂತರ "ಇನ್ವರ್‌ನೆಸ್" ಮತ್ತು "ಓಬನ್" ಇವೆರಡು ಸ್ಥಳಗಳಲ್ಲೂ ಎರಡೆರಡು ದಿವಸಗಳಿದ್ದು "ಗ್ಲಾಸ್ಗೊ" (Glasgow) ಪಟ್ಟಣಕ್ಕೆ ದಯಮಾಡಿಸಿದರು "ಇನ್ವರ್‌ನೆಸ್ ಮತ್ತು ಓಬನ್" Inverness and Oban, ಇವೆರಡೂ ಬಹಳ ಮನೋಹರವಾದ "ಸ್ಕಾಚ್ ಲೇಕ್ ಡಿಸ್ಟ್ರಿಕ್ಟ್" ಎಂಬ ಪ್ರದೇಶದಲ್ಲಿವೆ ಇಲ್ಲಿರುವ ಸರೋವರಗಳಲ್ಲಿ ಚಿಕ್ಕ ಚಿಕ್ಕ ಹಡಗುಗಳಲ್ಲಿ ಹೋಗುವುದಕ್ಕೆ ಬಹಳ ಆನಂದಕರವಾಗಿರುತ್ತೆ ನಮ್ಮೂರಿನಲ್ಲಿ ಗೌರ್ನಮೆಂಟ್ ಕೆಲಸದಲ್ಲಿದ್ದ "ಕರ್ನಲ್ ಗ್ರ್ಯಾಂಟ್" (Colonel Grant) ಸಾಹೇಬರು "ಇನ್ವರ್‌ನೆಸ್" ನಿಂದ ಕೆಲವು ಮೈಲಿಗಳ ದೂರದಲ್ಲಿದ್ದಾರೆ ಇವರು "ಇನ್ವರ್‌ನೆಸ್" ಗೆ ಬಂದು ಯುವರಾಜರನ್ನು ಎದುರುಗೊಂಡು ಮಾರನೇ ದಿವಸ ಅವರನ್ನು ತಮ್ಮ ಮನೆಗೆ ಫಲಾಹಾರಕ್ಕೆ ಕರೆದಿದ್ದರು

ಆಗಸ್ಟು 20 ನೇ ತಾರೀಖು "ಗ್ಲಾಸ್ಗೊ" ಗೆ ಬಂದು, 23 ನೇ ತಾರೀಖಿನ ವರೆಗೆ ಅಲ್ಲಿಯೇ ಇದ್ದರು "ಗ್ಲಾಸ್ಗೋ" ಪಟ್ಟಣ ಇಂಗ್ಲಿಷ್ ರಾಜ್ಯದಲ್ಲಿ ಎರಡನೇ ದೊಡ್ಡ ಪಟ್ಟಣವಾಗಿದೆ ಇಂಡಿಯಾಕ್ಕೆ ಬರುವ ಯಂತ್ರಗಳೇ ಮೊದಲಾದ ದೊಡ್ಡ ಕಬ್ಬಿಣದ ಸಾಮಾನುಗಳಲ್ಲಿ ಶೇಕಡ 90 ರಷ್ಟು ಇಲ್ಲಿ ತಯಾರಾದದ್ದು ನಾವು ಅಲ್ಲಿದ್ದಾಗ್ಗೆ ಯಾವುದೋ ಒಂದು ನಮ್ಮ ದೇಶದ ಪಟ್ಟಣಕ್ಕೆ 80 ರೈಲಿನ ಎಂಜಿನ್ (Railway Engines) ಗಳನ್ನು ಒಂದು ಗ್ಲಾಸ್ಗೋ ಕಂಪನಿ ಮಾಡುವುದಕ್ಕೆ ತಂತೀವರ್ತಮಾನವು ಬಂತು ಇಂಗ್ಲಾಂಡಿನ ದೊಡ್ಡ ದೊಡ್ಡ ಹಡಗುಗಳೆಲ್ಲಾ ಇಲ್ಲೇ ತಯಾರಾಗುವುವು ಗ್ಲಾಸ್ಗೊ ಕಾರ್ಪೊರೇಷನ್ ನವರು ಯುವರಾಜರನ್ನು ಬಹಳ ಚೆನ್ನಾಗಿ ಸತ್ಕರಿಸಿದರು ಯುವರಾಜರಿಗೆ ಇವರುಗಳು ಒಂದು ಕಾರ್ಖಾನೆಗೆ ಕರೆದುಕೊಂಡು ಹೋಗಿ ಅಲ್ಲಿ ದೊಡ್ಡ ಹಡಗುಗಳನ್ನು ಕಟ್ಟುವುದನ್ನೆಲ್ಲಾ ತೋರಿಸಿದರು ಈ ಕಾರ್ಖಾನೆಯವರು ಆ ದಿನ ಬೆಳಿಗ್ಗೆ ಯುವರಾಜರಿಗೆ ಔತನವನ್ನು ಮಾಡಿದರು ಅನಂತರ ಯುವರಾಜರು ಈ ದೊಡ್ಡ ಪಟ್ಟಣದ ಕಶ್ಮಲಗಳನ್ನೆಲ್ಲಾ ನಾಶಮಾಡುವ ಅಲ್ಲಿನ "ಸೂಯೇಜ್ ವರ್ಕ್ಸ್" (Sewage Works) ಗಳನ್ನೆಲ್ಲಾ ಸಾವಕಾಶವಾಗಿ ನೋಡಿದರು ಆ ದಿನ ಸಾಯಂಕಾಲ ಅಲ್ಲಿನ ಟೌನ್‌ಹಾಲಿನಲ್ಲಿ ಕಾರ್ಪೊರೇಷನ್ ನವರು ಯುವರಾಜರಿಗೆ ಔತನವನ್ನು ಮಾಡಿ, ಪಟ್ಟಣದ ಮುಖ್ಯ ಮುಖ್ಯವಾದ ದೊಡ್ಡ ಮನುಷ್ಯರನ್ನೆಲ್ಲಾ ಕರೆದಿದ್ದರು ಆಗ ಅಲ್ಲಿ ಅಧ್ಯಕ್ಷ(Chairman)ರಾಗಿದ್ದವರು ಒಂದು ಉಪನ್ಯಾಸವನ್ನು ಮಾಡಿ, ಮೈಸೂರಿನ ರಾಜ್ಯಭಾರವನ್ನೆಲ್ಲಾ ಕೊಂಡಾಡಿ, ಯುವರಾಜರನ್ನು ಸತ್ಕರಿಸುವುದಕ್ಕೆ ತಮಗೆ ಬಹಳ ಸಂತೋಷವೆಂದು ಹೇಳಿದರು ಯುವರಾಜರೂ ಅದಕ್ಕೆ ತಕ್ಕ ಪ್ರತ್ಯುತ್ತರವನ್ನು ಕೊಟ್ಟು "ಈ ದಿನ ನೋಡಿದ ದೊಡ್ಡ ದೊಡ್ಡ ಕಾರ್ಖಾನೆಗಳು ಇಂಗ್ಲಿಷರ ಸಾಹಸ ಶಕ್ತಿಯನ್ನು ತೋರುತ್ತೆ ನಾವು ಈ ದೊಡ್ಡ ಚಕ್ರಾಧಿಪತ್ಯಕ್ಕೆ ಸೇರಿದೇವಲ್ಲ ಎಂದು ಜಂಭಪಡುತ್ತೇನೆ" ಎಂದರು ಈ ಉಪನ್ಯಾಸಗಳೆಲ್ಲಾ ಇಲ್ಲಿನ ಪತ್ರಿಕೆಗಳಲ್ಲಿ ಬಂದಿವೆ ತಾವು ಅವಕಾಶವಿದ್ದರೆ ಇವನ್ನು ಕನ್ನಡಕ್ಕೆ ತರ್ಜುಮೆಮಾಡಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತೀರೆಂದು ಕೋರುತ್ತೇನೆ [ಈ ಔತನದ ವೃತ್ತಾಂತವನ್ನೂ ಅಧ್ಯಕ್ಷರ ಮತ್ತೂ ಯುವರಾಜರವರ ಭಾಷಣಗಳನ್ನೂ ಕಳೆದ ವಾರ ನಮ್ಮ ಪತ್ರಿಕೆಯಲ್ಲಿ ವಾಚಕರು ಓದಿ ಸಂತೋಷಪಟ್ಟಿದ್ದಾರೆಂದು ನಂಬುತ್ತೇವೆ —ಎಡಿ]

ಮಾರನೇ ದಿನ ಎಂದರೆ 22 ನೇ ತಾರೀಖು "ಟ್ರಾಸಕ್ಸ್" (The Trossachs) ಎಂಬ ಬೆಟ್ಟ ಮತ್ತು ಸರೋವರಗಳಿರುವ ಪ್ರದೇಶಕ್ಕೆ ಹೋಗಿದ್ದರು ಸ್ಕಾಟ್ಲ್ಯಾಂಡಿನ ದೊಡ್ಡ ಕವಿಗಳೆಲ್ಲಾ ಈ ಪ್ರದೇಶವನ್ನು ಅತಿ ರಮ್ಯವಾಗಿ ವರ್ಣಿಸಿದ್ದಾರೆ ಆಗಸ್ಟು 23 ನೇ ತಾರೀಖು ಗ್ಲಾಸ್ಗೋವನ್ನು ಬಿಟ್ಟು ಯುವರಾಜರು ಐರ್ಲಾಂಡಿಗೆ (Ireland) ದಯಮಾಡಿಸಿದರು

ಇಲ್ಲಿ ಹತ್ತು ದಿನ ಸಂಚಾರಮಾಡುತ್ತಾರೆ ಡಬ್ಲಿನ್ (Dublin) ನಲ್ಲಿ ಐರ್ಲಾಂಡಿನ "ಲಾರ್ಡ್ ಲೆಫ್ಟಿನೆಂಟ್" (Lord Lieutenant) ರವರ ಮನೆಯಲ್ಲಿ ಅತಿಥಿಗಳಾಗಿ ನಾಲ್ಕು ದಿವಸ ಇರುತ್ತಾರೆ ಸೆಪ್ಟಂಬರು 12 ನೇ ತಾರೀಖು ಮಾರ್ಸೇಲ್ಸ್ (Marseilles) ಪಟ್ಟಣವನ್ನು "ಮಾಲ್ಡೇವಿಯ" (S S Moldavia) ಎಂಬ ಹಡಗಿನಲ್ಲಿ ಬಿಟ್ಟು ಅದೇ ತಿಂಗಳ 26 ನೇ ತಾರೀಖು ಬೊಂಬಾಯಿಗೆ ದಯಮಾಡುತ್ತಾರೆ [ಇದು ಈಚೆಗೆ ಬದಲಾವಣೆಯಾಗಿರುವಂತೆ ಕೇಳುತ್ತೇವೆ —ಎಡಿ]

ಲಂಡನ್, ಎಂ ಎನ್ ಬಾಲರಾಜೆ ಅರಸ್
26 8-1913

ಕಣ್ಣೇಗಾಲದ ದಂಗೆ ಮೊಕದ್ದಮೆಯು.

ಸ್ಪೆಷಲ್ ಸೆಷನ್ಸ್ ಜಡ್ಜರವರ ತೀರ್ಮಾನದ ಮುಖ್ಯಾಂಶಗಳು

ಕಳೆದ 1912 ನೇ ಇಸವಿ ನವಂಬರ್ ತಾ 6 ನೇ ಬುಧವಾರ ತಿರುಮಕೂಡ್ಲು ನರಸಿಪುರದ ತಾಲ್ಲೂಕಿಗೆ ಸೇರಿದ ಕಣ್ಣೇಗಾಲವೆಂಬ ಜೋಡಿಗ್ರಾಮದಲ್ಲಿ ಒಂದು ದಂಗೆ ನಡೆದು, ಇಬ್ಬರು ಕೊಲೆಯಾದರು ಒಬ್ಬನಿಗೆ ಘೋರಾ ಗಾಯವಾಯಿತು ಇನ್ನು ಕೆಲವರಿಗೆ ಸಣ್ಣ ಪುಟ್ಟ ಗಾಯಗಳಾದವು ಮನೆಗಳು ಲೂಟಿಯಾದವು, ಕೆಲವು ಮನೆಗಳು ಸುಟ್ಟು ಹೋದವು ಪೋಲೀಸಿನವರು ಪತ್ತೆ ತರದೇವು ನಡಿಸಿ, ಮೂಗೂರು ಮತ್ತು ಕಣ್ಣೇಗಾಲ ಗ್ರಾಮಗಳ 199 ಜನರನ್ನು ಈ ದೊಂಬಿ ಕಲಹಕ್ಕೆ ಸೇರಿದವರೆಂದು ಹಿಡಿದು, ಅವರ ಮೇಲೆ ವಾರಂಟು ಹುಟ್ಟಿಸಿದರು ಆ ಪೈಕಿ 9 ಮಂದಿ ವಾರಂಟಿಗೆ ಸಿಕ್ಕದೆ ತಪ್ಪಿಸಿಕೊಂಡರು 190 ಜನರನ್ನು ಸ್ಪೆಷಲ್ ಮ್ಯಾಜಿಸ್ಟ್ರೇಟ್ ಮೆ| ಎನ್ ಮಾಧವರಾಯರು 1912 ನೇ ಡಿಸೆಂಬರ್ ತಾ 19 ನೇ ಸೋಮವಾರದಿಂದ ರಾಜಧಾನಿಯಲ್ಲಿ ದರ್ಯಾಪ್ತಿಮಾಡಿ 1913 ನೇ ಫೆಬ್ರವರಿ ಮೂರನೇ ವಾರದಲ್ಲಿ ತೀರ್ಮಾನ ಹೇಳಿದರು ಅವರ ತೀರ್ಮಾನದಂತೆ ಏಳು ಮಂದಿ ಬಿಡುಗಡೆ ಹೊಂದಿದರು 183 ಮಂದಿಯನ್ನು ಸೆಷನ್ಸ್ ವಿಚಾರಣೆ ಗುರಿಮಾಡಿದರು

ಮೆ| ವಿಲಿಯಂ ಹಂಟರ್ ಹುಸೇನ್‌ರವರು ಸ್ಪೆಷಲ್ ಸೆಷನ್ಸ್ ಜಡ್ಜರಾಗಿಯೂ, ಮಂಗಳೂರಿನ ಎನ್ ಶ್ರೀಕಂಠಯ್ಯನವರು, ಎಂ ನಾರಾಯಣಸಾಮಿಯವರು ಎಂ ಬಿ ಮಾದಪ್ಪನವರು, ವೆಂಕಟರಾಜಪ್ಪನವರು ಚಿತ್ರರಾಜಪ್ಪನವರು, ಶಂಕರಶೆಟ್ಟರು ರಾಮರಾಯರು ಅಸೆಸರುಗಳಾಗಿಯೂ, ಅಡ್ವೊಕೇಟ್ ಮೆ| ಎಂ ಸಿ ರಂಗಯ್ಯಂಗಾರ್ರವರು ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರಾಗಿಯೂ ನೇಮಕವಾದರು ಈ ಸೆಷನ್ಸ್ ವಿಚಾರಣೆಯು ರಾಜಧಾನಿಯ ಊರನಗೆರೆ ಟ್ರಾವಲರ್ಸ್ ಬಂಗಲೆಯಲ್ಲಿ 1913 ನೇ ಮಾರ್ಚಿ ತಾ 10 ನೇ ಸೋಮವಾರದಿಂದ ಪ್ರಾರಂಭವಾಗಿ ಆಗಸ್ಟ್ ತಾ 31 ನೇ ಭಾನುವಾರ ಪೂರೈಸಿತು 183 ಅಪರಾಧಿಗಳ ಪೈಕಿ ಪುಟ್ಟಸುಬ್ಬೇಗೌಡ ಬಿನ್ ಸುಬ್ಬೇಗೌಡನೇ ಮೊದಲಾಗಿ ಸುಮಾರು 116 ಮಂದಿಯ ಪರವಾಗಿ ಅಡ್ವೊಕೇಟ್ ಮೆ| ಎ ರಾಮಣ್ಣನವರೂ, ಕಾಳೇಪತಯ್ಯ ಬಿನ್ ನಂಜುಂಡಯ್ಯನೇ ಮುಂತಾಗಿ ಸುಮಾರು 36 ಜನಗಳ ಪರವಾಗಿ ಅಡ್ವೊಕೇಟ್ ಮೆ| ಕೆ ಚಂದ್ರಶೇಖರಯ್ಯನವರೂ ಇಬ್ಬರ ಪರವಾಗಿ ಅಡ್ವೊಕೇಟ್ ಮೆ ರಾಮಚಂದ್ರಯ್ಯನವರೂ ಒಬ್ಬ ಅಪರಾಧಿಯ ಪರವಾಗಿ ಪ್ಲೀಡರ್ ಮೆ ಎಂ ಎಸ್ ಕೃಷ್ಣಸಾಮಿರಾಯರೂ ವಕಾಲತ್ತು ವಹಿಸಿ ಮೊಕದ್ದಮೆ ನಡಿಸಿದರು ಸೆಷನ್ಸ್ ಜಡ್ಜರು ಫಿರ್ಯಾದಿ ತರಫು 159 ಮಂದಿ ಸಾಕ್ಷಿಗಳನ್ನೂ, ಅಪರಾಧಿಗಳ ತರಫು 297 ಜನ ಸಾಕ್ಷಿಗಳನ್ನೂ, ಕೋರ್ಟು ತರಫಿನಲ್ಲಿ 3 ಮಂದಿ ಸಾಕ್ಷಿಗಳನ್ನೂ ವಿಚಾರಣೆಮಾಡಿದರು ಮೊಕದ್ದಮೆ ದರ್ಯಾಪ್ತಿಯಾಗುತ್ತಿರುವ ಕಾಲದಲ್ಲಿ 111 ನೇ ಅಪರಾಧಿ ಎಲ್ಲೆ ಬಿನ್ ಮಾಚ, 112 ನೇ ಮಾದ ಬಿನ್ ಗಂಡೆರಾಜ, 170 ನೇ ಮೂಗ, ಈ ಮೂರು ಮಂದಿಯೂ ಕಾಲವಾದರು ಅಪರಾಧಿಗಳ ತರಫಿನ ವಕೀಲರುಗಳ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರವರ ಆರ್ಗ್ಯುಮೆಂಟುಗಳೂ ಜಡ್ಜರವರ ಉಪನ್ಯಾಸವೂ ಸುಮಾರು 15 ದಿನ ಹಿಡಿಯಿತು ಮೊಕದ್ದಮೆಯ ವಿದ್ಯಮಾನಗಳನ್ನು ಪ್ರಾರಂಭದಿಂದಲೂ ಕೇಳುತ್ತಿದ್ದ ಅಸೆಸರುಗಳು ತಮ್ಮ ಅಭಿಮತವನ್ನು ಜಡ್ಜಿಯವರಿಗೆ ಅರಿಕೆಮಾಡಿದ ಮೇಲೆ ಜಡ್ಜಿಯವರು ಈ ತಿಂಗಳು 10 ನೇ ತಾ ಜಡ್ಜ್‌ಮೆಂಟ್ ಹೇಳುವುದಾಗಿ ಗೊತ್ತುಮಾಡಿ ಇಳಿದರು ಆ ದಿನ ಜಡ್ಜ್‌ಮೆಂಟು ಹೇಳಲಿಲ್ಲ ತಾ 13 ಕ್ಕೆ ಹಿಂದಗು ಇಟ್ಟರು ಆ ದಿನವೂ ಜಡ್ಜ್‌ಮೆಂಟ್ ಹೇಳಲಿಲ್ಲ ತಾ 15 ನೇ ಸೋಮವಾರ 11 ಗಂಟೆಗೆ ತೀರ್ಮಾನ ಹೇಳುವುದಾಗಿ ಗೊತ್ತುಮಾಡಿ, ಆ ದಿನ ಸಾಯಂಕಾಲ ಸುಮಾರು 5 ಗಂಟೆಗೆ ಕೋರ್ಟು ಪ್ರಾರಂಭಿಸಿದರು

ಈ ಮೊಕದ್ದಮೆಯಲ್ಲಿ ಆರು ಜನ ಸಾಕ್ಷಿಗಾರರು ಕೆಳ ಕೋರ್ಟಿನಲ್ಲಿ ಹೇಳಿ ಬರಸಿದ್ದ ಸಾಕ್ಷ್ಯವನ್ನು ಮರೆಸಿ ಅಪಸಾಕ್ಷಿ ನುಡಿದಿರುತ್ತಾರೆಂದೂ, ಇವರ ಮೇಲೆ ಅಪಸಾಕ್ಷಿ ನುಡಿದದ್ದಕ್ಕೆ ಕ್ರಿಮಿನಲ್ ಮೊಕದ್ದಮೆ ನಡಿಸಲು ಸ್ಯಾಂಕ್ಷನ್ ಕೊಡಬೇಕೆಂದೂ ಅವೇ ಸ್ಪೆಷಲ್ ಸೆಷನ್ಸ್ ಜಡ್ಜರವರನ್ನು ಪೋಲೀಸಿನವರು ಕೇಳಿದ್ದರು ಜಡ್ಜರು ತಾ 15 ರಲ್ಲಿ ಕೋರ್ಟು ಪ್ರಾರಂಭವಾದ ಕೂಡಲೆ ಈ ವಿಚಾರವನ್ನು ಇತ್ಯರ್ಥಮಾಡಿ, ಚಿಕ್ಕಸಿದ್ದ, ಲಿಂಗಯ್ಯನ ಮಗ ಬಸವ, ಕುನ್ನಶೆಟ್ಟಿ ಮಗ ಮಾದಶೆಟ್ಟಿ, ಮಾದನ ಮಗ ಮಾದ ಎಂಬೀ ನಾಲ್ಕು ಜನರ ವಿಷಯದಲ್ಲಿ ಪ್ರಾಸಿಕ್ಯೂಷನ್ ಸ್ಯಾಂಕ್ಷನ್ ಮಾಡಿದೆ ಎಂದೂ, ಮೋಸನಸಿದ್ದ (ಈಚೆಗೆ ಇವನು ಮೃತಪಟ್ಟನು), ಚಿಕ್ಕೀರ (ಇವನು 16 17 ವರುಷದ ಹುಡುಗ), ಇವರಿಬ್ಬರ ವಿಷಯದಲ್ಲಿ ಪ್ರಾಸಿಕ್ಯೂಷನ್ ಸ್ಯಾಂಕ್ಷನ್ ಮಾಡುವುದಿಲ್ಲವೆಂದೂ ಆರ್ಡರು ಬರೆದು ಓದಿದ್ದಲ್ಲದೆ ಮೊಕದ್ದಮೆಯ ಜಡ್ಜ್‌ಮೆಂಟಿನಲ್ಲಿ ಸ್ವಲ್ಪ ಭಾಗ ಓದುವಷ್ಟರಲ್ಲೇ ರಾತ್ರಿ 7 ಗಂಟೆಯಾದದ್ದರಿಂದ ಉಳಿದ ಭಾಗವನ್ನು ಮರುದಿನ (ತಾ 16 ನೇ ಮಂಗಳವಾರ) 12 ಘಂಟೆಗೆ ಓದುವುದಾಗಿ ಹೇಳಿ ಕೋರ್ಟು ಬರಖಾಸ್ತು ಮಾಡಿದರು

ಮಂಗಳವಾರ (ನೆನ್ನೆ) ಮಧ್ಯಾಹ್ನ ಸೆಷನ್ಸ್ ಜಡ್ಜರವರು ಸುಮಾರು 1 ಗಂಟೆಗೆ ಕೋರ್ಟು ಪ್ರಾರಂಭಿಸಿ, ಜಡ್ಜ್‌ಮೆಂಟಿನ ಉಳಿದಭಾಗವನ್ನೆಲ್ಲಾ ಓದಿ ಅಪರಾಧಿಗಳ ಪೈಕಿ 109 ಮಂದಿಯನ್ನು ಬಿಡುಗಡೆ ಮಾಡಿಸಿ ಉಳಿದವರಿಗೆ ಶಿಕ್ಷೆಗಳನ್ನು ವಿಧಿಸುವಾಗ್ಗೆ ರಾತ್ರಿ 7 ಘಂಟೆಯಾಯಿತು ಬಿಡುಗಡೆ ಹೊಂದಿದವರು ಯಾರೆಂದರೆ— ವೆಂಕಪ್ಪಯ್ಯನ ಪುಟ್ಟಸಾಮಯ್ಯ, ಅಚ್ಚಣ್ಣ ಉಪಾಧ್ಯಾಯರ ನರಸಿಂಹಉಪಾಧ್ಯಾಯ, ಮಹದೇವರಾಯರ ಶಂಕರರಾವ್, ಸುಬ್ಬೇಗೌಡನ ನಂಜಪ್ಪ, ಮಾದಶೆಟ್ಟಿ ನಂಜಶೆಟ್ಟಿ, ನಂಜಶೆಟ್ಟಿ ಪುಟ್ಟಮಾದಶೆಟ್ಟಿ ಯಾನೆ ಪುಟ್ಟಸಾಮಿ, ನಂಜಯ್ಯನ ಪುಟ್ಟಮಾದಯ್ಯ, ರಂಗನ ಲಕ್ಷ್ಮ, ಮುತ್ತನಂಜುಂಡ, ಮುದ್ದಮಲ್ಲನ ಮಾದ, ಎಡ್ಡಶೆಟ್ಟಿ ರಾಚಶೆಟ್ಟಿ, ಕುರಿಮಾದನ ಮಾದ, ಚನ್ನನ ದಾಸಯ್ಯಾನೆ ಎಕ್ಕರಂಗ, ಪುಟ್ಟಸಸಿದ್ದ, ಗುರುಸಿದ್ದನ ಚಿಕ್ಕಸಿದ್ದ, ರಂಗನ ದಾಸ, ಅಂಕನಬೆನ್ನ, ದೊಡ್ಡಮಾದನಮಾದ, ಈರನವರದ, ರಾಚಮಾದಮ್ಮನಬಸವ ಮಾದ, ಕಂಗಳ್ಳಿತಿಬ್ಬನಮಾದ, ಚಿಕ್ಕಬಸವೇಗೌಡನನಂಜ, ತಿಪ್ಪನಮಾದನಸಿದ್ದ, ಮರಿಗೌಡನಮಾದನನಿಂಗ, ಬನ್ನಹಳ್ಳಿ ಕೆಂಪಶೆಟ್ಟಿಕೆಂಪಶೆಟ್ಟಿ, ನಂಜನನಂಜ, ಚನ್ನಮಲ್ಲನನಂಜನಮಾದ, ಕಾತುಸಾಬಿಇಬ್ರಾಹಿಂಸಾಬ್, ಚಿನ್ನವೆಂಕಟನಕುನ್ನಯಾನೆ ವೆಂಕಟ, ಬಸವನಮರಿಯ, ಸಿದ್ದನರಾಚ, ಜೋಗಿಬಸವನನಿಂಗ, ನಿಂಗನಮನ್ನಾರಿನಿಂಗ, ಹಿಲ್ಲಹಳ್ಳಿ ಬಾಲನನಿಂಗ, ಮರಿಯನಬಸವನಚಿಕ್ಕನಂಜ, ಹೊಟ್ಟೆಮಾದನಸತ್ತಿಮಾದ, ಚನ್ನಮಲ್ಲನರಂಗ, ರಾಚನಮಾದ ಯಾನೆ ಕುಳ್ಳ, ತಮ್ಮಡಿನಿಂಗಯ್ಯನನಂಜುಂಡ, ನಂಜಪ್ಪನಪುಟ್ಟಮಾದ ಯಾನೆ ಬಸವ, ಸಂಗೀತದಶೆಟ್ಟಿದ್ಯಾವನಬಸವಯ್ಯ, ದ್ಯಾವರಗುಡ್ಡನಕೆಳ್ಳಮಾದ, ಸುಣ್ಣಮಾದನರಾಮ, ಲಿಂಗನಮರಿಸಿದ್ದ, ಸಣ್ಣಮಾದನಕುಳ್ಳನಂಜ, ನಾಯಿಸಿದ್ದನಸಿದ್ದ, ಮಂಚನಮಾದ, ಬಿಳಿಗಿರಿಮಾದ, ಶಂಭುಲಿಂಗನಮಾದನಸಿದ್ದ, ಸಿದ್ದನ ಉಮ್ಮತ್ತೂರ, ಕಡಂಗಿರಂಗನಬಿಳಗಿರಿ, ಬಸವನಮಲ್ಲ, ಪತ್ತಿರಂಗನರಂಗ, ಕುನ್ನನಬಸವ, ದಾಸನತವಸಾರ, ಬಸವನಕುಳ್ಳಮಾದ, ಯಳಬಸವನಮಾದನಸಿದ್ದ, ಗೆಂಡಗನಹೊನ್ನಗನ ಪುಟ್ಟಮಾದ, ಮನ್ನವಿನ್ನಮಾದನಅಂಕ, ಸಿದ್ದನಜೋಗ, ಮರಿರಂಗನಚಿಕ್ಕರಂಗ, ದಾಸನರಂಗ, ಸಿದ್ದನನಿಂಗ, ಮಾದಶೆಟ್ಟಿಯಮಲ್ಲಶೆಟ್ಟಿ, ಮಾದಶೆಟ್ಟಿಯರಂಗಶೆಟ್ಟಿ, ಸಿದ್ದಶೆಟ್ಟಿಯಮಾದಶೆಟ್ಟಿ, ಸಿದ್ದಶೆಟ್ಟಿಯಪುಟ್ಟಶೆಟ್ಟಿ, ಕೃಷ್ಣಶೆಟ್ಟಿಯನೀಲಶೆಟ್ಟಿ, ಗರ್ಮಾದಶೆಟ್ಟಿಯಸಿದ್ದಶೆಟ್ಟಿ, ಚೆಂದಶೆಟ್ಟಿಯಸಿದ್ದ, ಕೆಂಚನಪುಟ್ಟ, ನಿಂಗನಸಿದ್ದ, ಹೊಟ್ಟೆಮಲ್ಲನದೊಡ್ಡ, ಚಿಕ್ಕಮಾದನಮಾದ, ಚಿಕ್ಕನಮಾದನಮಾದ, ಮಂಚನಕೆಂಚ, ದೊಂಬನಮಾದ, ಮಲ್ಲನಕ್ಯಾತ, ತಿಬ್ಬ, ಕೆಂದಲವನಮಾದನಲಿಂಗ, ಮುಕ್ಕಿಮಾದನನಂಜ, ಸೀರೆಗಂಡನಚನ್ನಮಲ್ಲನಮಾದ, ಸಣ್ಣಗಿರಿನಂಜನಮಾದ, ಕನ್ನಹಳ್ಳಿಮಾದನಸಿದ್ದ, ಉಲ್ಕನದ್ಯಾವರಗುಡ್ಡನಗುರುಸಿದ್ದ, ಚನ್ನನಂಜನಬಸವ, ನಂಜನಮಲ್ಲ, ಕಾಯಿದಮಾದನಮಾದ, ನಂಜನಸಿದ್ದ, ಮುಸುಂಡಿನಂಜನಕುಳ್ಳಮಾದ, ಹಾರಕನಪುಟ್ಟನಮರಿಸಿದ್ದ, ಕನ್ನಾರಿಹೊಂಗನಹೊಂಗ ಯಾನೆ ದಾಸ, ಗಂಟೆಪೂಜಾರಿಯದೊಡ್ಡಮಾದ, ಗುರುಬಸವನನಂಚ, ಕೂಸನಹಲಗೂರ, ಕೆಂಚಮಲ್ಲನಸಿದ್ದ, ಬೀರಿಮಾದೇಗೌಡನಮಾದ, ಬಸವನಸಿದ್ದ, ಮುಕ್ಕಿಮಲ್ಲನಬಸವ ಯಾನೆ ಗೊರವ, ಜವರನಬಸವ, ಗದ್ದೆಮಾದನಮಾದ, ಅಲ್ಲಿಮಾದನಚೌಹಳ್ಳಿಕರಗ, ಚಿಕ್ಕರಂಗನರಾಚ, ರಾಮನಚಿಕ್ಕಹೈದ, ತಿಪ್ಪಾರನದೊಡ್ಡಪುಟ್ಟ, ಕೆರೆಹಟ್ಟಿಸಾವಕಯ್ಯ, ಮರಿನಂಜ

ಶಿಕ್ಷೆ ವಿಧಿಸಲ್ಪಟ್ಟವರು

ಮುಂದೆ ಹೇಳುವ 36 ಜನ ಅಪರಾಧಿಗಳಿಗೆ ತಲಾ ಆರು ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟಿದೆ —ರುದ್ರಯ್ಯನದ್ಯಾವ, ಬಿಳ್ಳಿಬಸವನಕೆಂಚಯ್ಯನಹೊನ್ನಯ್ಯ, ಕರಯ್ಯನಕಿರಿಮನೆಮಾದಪ್ಪ, ಕೆಂಚನಸೊತ್ತ, ಮುದ್ದಿದ್ಯಾವನಮಾದ, ದೇವಿತಿಮ್ಮನನಂಜ, ಕುಂದೂರಿನಮಾದ, ಸಿದ್ದಲಿಂಗನಮಾದ, ಸುಂಕನಮಾದನದ್ಯಾವರಗುಡ್ಡನಮಲ್ಲುತಿಬ್ಬ, ಮಾರಿಕಾಳನಪುಟ್ಟ, ಪಿನ್ನಾರಿಮಾದನಮಾದ, ಬೆಳ್ಳಳ್ಳಿ ಮಾದನಮಾದ ಯಾನೆ ಚಿನ್ನ, ಗುರುಬಸವನಮಾದ, ಪುಟ್ಟಪ್ಪನಮಲ್ಲಪ್ಪ, ಸಿದ್ದಿಸಿದ್ದ, ರಂಗಶೆಟ್ಟಿಯಮಾಸಶೆಟ್ಟಿ, ಮಲ್ಲಶೆಟ್ಟಿಯಮುಂಚಶೆಟ್ಟಿ, ಮಲ್ಲನಮಲ್ಲ, ಮುದ್ದಬಸವಣ್ಣನ ಬಸವಯ್ಯ, ನಂಜಯ್ಯನನಂಜುಂಡ, ದ್ಯಾವಯ್ಯನವೀರತ್ತಯ್ಯ, ಜವರನಸುಬ್ಬಣ್ಣನಾಗ ಜೋಗಿಮಾದನತವಸಾರ, ಕೆಂಚನಕಾಳನಬಸವ, ಕುರಿಮಾದನನಂಜ, ಅಂಕನಮಾದ ಬೊಮ್ಮಚಿಕ್ಕನಮಾದನಮಾದ, ಕೆಂಪನಂಜನಮಾದನಮಾದ, ಕಾಳಕುನ್ನನಮಾದ, ಮೈಕೊಂಡಮುಸಣನರಾಚ, ಮುದಲಿಸುಬ್ಬಣ್ಣನ ಕೆಂಜಗ ಯಾನೆ ಸುಬ್ಬಯ್ಯ, ನನ್ನಯ್ಯನಬೊಟ್ಟಿಅಯ್ಯ, ಹುಸೇನ್‌ಸಾಬಿಯಲಾಲು, ಮೆಲ್ಲಹಳ್ಳಿ ಸುಬ್ಬಯ್ಯ, ಕುಳ್ಳ

ಮುಂದೆ ಹೇಳುವ 16 ಜನ ಅಪರಾಧಿಗಳಿಗೆ ತಲಾ ಎರಡು ವರುಷ ಕಠಿಣ ಸಜಾ ವಿಧಿಸಲ್ಪಟ್ಟಿದೆ —ಬಿಳ್ಳಿಬಸವಯ್ಯನಕೆಂಚಯ್ಯ, ರಾಚಶೆಟ್ಟಿಯಸಂಟ್ರಾಳಶೆಟ್ಟಿ, ಮಾದಿಶೆಟ್ಟಿಯಪುಟ್ರಾಳಶೆಟ್ಟಿ, ನಿಜಶೆಟ್ಟಿಯಕರಿಯ, ರಾಚಶೆಟ್ಟಿಯಗೊಜ್ಜಿಸಿದ್ದರಂಗ, ಮಾದಶೆಟ್ಟಿಯಪುಟ್ಟಶೆಟ್ಟಿ, ಹುಸೇನ್‌ಸಾಬಿಯಕಾಸಿಂ, ಸೋಮುಹುಚನ್ನಚಿಕ್ಕನಕೆಂಬ, ಅರೆಮಲ್ಲನಮಾದ, ಸಿಲೇಮಾನ್‌ಸಾಬಿಯಮಸ್ತಾನ್, ಸುಲೇಮಾನ್‌ಸಾಬಿಯಬಾಬು, ತಿಬ್ಬನಪ್ಪೆರೋಜಸಿದ್ದ, ಕಾಳನಬಸವ, ಯಜಮಾನ್ ಮರಿಶೆಟ್ಟಿಯಲಿಂಗಶೆಟ್ಟಿ, ನರಸಿಂಹಯ್ಯನದ್ಯಾವಯಾನೆಚಿಕ್ಕವ, ಪುಟ್ಟಚಿಕ್ಕಪ್ಪಯ್ಯನನಾರಪ್ಪ

ಮುಂದೆ ಹೇಳುವ 20 ಜನ ಅಪರಾಧಿಗಳಿಗೆ ತಲಾ ಮೂರು ವರುಷ ಕಠಿಣ ಸಜಾ ವಿಧಿಸಲ್ಪಟ್ಟಿದೆ —ದೊಡ್ಡಪುಟ್ಟಶೆಟ್ಟಿಯದೊಡ್ಡಪ್ಪಯ್ಯ, ನಂಜುಂಡಯ್ಯನ ಕಪ್ಪಯ್ಯ, ಕಪೀಪತಯ್ಯನಸುಬ್ಬಯ್ಯ, ವೆಂಕಟರಾಮಯ್ಯನ ಭಾಸ್ಕರಯ್ಯ, ವೆಂಕಪಯ್ಯನವೆಂಕಟರಾಮಯ್ಯ, ದೊಡ್ಡಬುಂಡೇಕ್ಯಾತ ಯಾನೆ ಗೋಳಕ, ಚಿಕ್ಕಮಾದಗೊಳಕನಚಿಕ್ಕಬುಂಡೇಕ್ಯಾತ, ಬಸವಯ್ಯನಮರಸನರುದ್ರಮಾದಯ್ಯ, ಹೊನ್ನಶೆಟ್ಟಿಯಬಿಕ್ರನಿಂಗ, ಜಿ ಪುಟ್ಟಯ್ಯನನಂಜುಂಡಯ್ಯ, ಶರಸನಬಸವನಸಿದ್ದ, ರಂಗಶೆಟ್ಟಿಯರಂಗಶೆಟ್ಟಿ, ಮಲ್ಲಶೆಟ್ಟಿಯರಾಚಶೆಟ್ಟಿ, ಸಿದ್ದಮಲ್ಲನಗುರುಸಿದ್ದ, ಸುಬ್ಬಯ್ಯನವೈದ್ಯನಾಗಪ್ಪ, ನಾಗಯ್ಯನಕೋತಿಮಲ್ಲಯ್ಯ, ಮಾದಯ್ಯನದೇವರಾಜಬಸವಯ್ಯ, ಸಿದ್ದಯ್ಯನಕನಕಪ್ಪ, ಚೌಡಯ್ಯನಅನಂತಯ್ಯ, ಕಡೇಶೆಟ್ಟಿನಂಜುಂಡಯ್ಯ

106 ನೇ ಅಪರಾಧಿ ಪುಟ್ಟಸುಬ್ಬೇಗೌಡ ಬಿನ್ ಸುಬ್ಬೇಗೌಡನಿಗೆ ನಾಲ್ಕು ವರುಷ ಕಠಿಣಸಜವೂ, 105 ನೇ ಅಪರಾಧಿ ಕಾಳೇಪತಯ್ಯ ಬಿನ್ ನಂಜುಂಡಯ್ಯನಿಗೆ ಏಳು ವರುಷ ಕಠಿಣಸಜವೂ ವಿಧಿಸಲಾಯಿತು ಜಡ್ಜರು ಇವರಿಬ್ಬರನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಕರೆಸಿ ಎದುರಿಗೆ ನಿಲ್ಲಿಸಿಕೊಂಡು ಅವರನ್ನು ಕುರಿತು— ನೀವು ಗ್ರಾಮದಲ್ಲಿ ಮುಖಂಡರಾಗಿಯೂ ವರ್ಚಸ್ಸುಳ್ಳವರಾಗಿಯೂ ಇದ್ದುಕೊಂಡು ಗುಂಪುಗಳನ್ನು ಮಾಡುತ್ತಾ ವ್ಯಾಜ್ಯಗಳನ್ನು ಹುಡುಕುತ್ತಾ ಬಂದಿದ್ದೀರಿ ನೀವು ಈ ಮೊಕದ್ದಮೆಯಲ್ಲಿ ಒದಗಿಸಿರುವ ನಿಮ್ಮ ಪರವಾದ ಸಾಕ್ಷಿಗಳ ಕೈಫಿಯತ್ತನ್ನು ಬಹು ದಯೆಯಿಂದ ಪರ್ಯಾಲೋಚಿಸಿರುತ್ತೇನೆ ಆದರೂ ಗ್ರಾಮದ ನೆಮ್ಮದಿಗೋಸ್ಕರ ನೀವುಗಳು ಕೆಲವು ಕಾಲ ಹೊರಗೆ ಇರಬೇಕಾದದ್ದು ಅವಶ್ಯವೆಂದು ಕಂಡುಬರುವುದು ಆದಕಾರಣ ನಿಮಗೆ ಈ ರೀತಿ ಶಿಕ್ಷೆ ವಿಧಿಸುತ್ತೇನೆ ಎಂಬದಾಗಿ ಹೇಳಿಕಳುಹಿಸಿದರು

ಈ ಪ್ರಕಾರ ಶಿಕ್ಷೆಯನ್ನು ವಿಧಿಸಿದ ಮೇಲೆ ಸಜಾ ಅನುಭವಿಸಬೇಕಾಗಿರುವ ಅಪರಾಧಿಗಳಲ್ಲಿ ಹಲವು ಮಂದಿ ಕೋರ್ಟಿನಲ್ಲೇ ಜಡ್ಜಿಗಳ ಎದುರಿಗೆ ಗೋಳಾಡಲಾರಂಭಿಸಿದರು ಜಡ್ಜಿಯವರು ಕೋರ್ಟನ್ನು ಬರಖಾಸ್ತುಮಾಡಿ ಹೊರಟು ಹೋದರು

ಈ ಜಡ್ಜ್‌ಮೆಂಟಿನಲ್ಲಿ ಸೆಷನ್ಸ್ ಜಡ್ಜರವರು ಪೋಲೀಸಿನವರ ಮೆಹನತ್ತನ್ನು ಕೆಲವು ಭಾಗ ಮೆಚ್ಚಿ ಅವರ ಕರ್ತವ್ಯಲೋಪಗಳನ್ನು ಎತ್ತಿಹಾಕಿ ಆಕ್ಷೇಪಣೆ ಮಾಡಿದ್ದಾರೆ ತನಿಖೆ ಕ್ರಮವೇ ಮುಂತಾದದ್ದನ್ನು ನಡಿಸಿದ ಪೋಲೀಸಿನವರೂ ಅಮಲ್ದಾರರೂ ತೃಪ್ತಿಕರವಾಗಿ ಕಾರ್ಯಗಳನ್ನು ಮಾಡದೆ ತಪ್ಪಿರುತ್ತಾರೆಂದು ಕಾಣಿಸಿದೆ ಅಲ್ಲದೆ ಸಾಕ್ಷಿಯಾಗಿ ಬಂದಿದ್ದ ಮೆ| ಮೆಕ್ಲಾರೆನ್ ಸಾಹೇಬರು ಆ ದಿನ ಸ್ವಲ್ಪ ಸಾಹಸಪಟ್ಟಿದ್ದ ಪಕ್ಷದಲ್ಲಿ ಈ ದೊಂಬಿ ಕಲಹವು ನಡೆಯಲಾರದಾಗಿತ್ತೆಂದೂ, ಇವರು ಕೋರ್ಟಿನಲ್ಲಿ ಹೇಳಿದ ವಾಜಿಮ್ಮಲವು ಈ ಮೊಕದ್ದಮೆಯ ರುಜುವಾತಿಗೆ ತುಂಬಾ ಸಹಾಯವಾಯಿತೆಂದೂ ಜಡ್ಜ್‌ಮೆಂಟಿನಲ್ಲಿ ಬರೆದಿದ್ದಾರೆ

ಈ ಮೊಕದ್ದಮೆಯಲ್ಲಿ ಇದು ವರೆಗೆ ವಾರಂಟಿಗೆ ಸಿಕ್ಕದೆ ತಲೆತಪ್ಪಿಸಿಕೊಂಡಿರುವವರಾರೆಂದರೆ—ತಿಮ್ಮಯ್ಯನ ಮಗ ಗುಂಡಪ್ಪ, ಚಿಕ್ಕರುದ್ರಪ್ಪ, ಸುಬ್ಬೇಗೌಡನ ಮಗ ಅಂಬ್ಲಿಮಾದಯ್ಯ, ಪುಟ್ಟಸುಬ್ಬೇಗೌಡನ ಮಗ ಚಿಕ್ಕಪುಟ್ಟಸಾಮಿ, ದೊಡ್ಡಪುಟ್ಟಸುಬ್ಬಶೆಟ್ಟಿ ಮಗ ಚಿಕ್ಕಅಪ್ಪಯ್ಯ, ರಾಂಬಪ್ಪನ ಮಗ ಬಸಪ್ಪ, ಪುಟ್ಟಚಿಕ್ಕಪ್ಪಯ್ಯನ ಮಗ ನಾರಣಪ್ಪ, ಹುಸೇನ್ ಖಾನ್ ಮಗ ಅಬ್ದುಲ್‌ರಹಿಂ, ಕಾಡಮ್ಮನ ಮಾದಯ್ಯ ಈ ಪೈಕಿ ಚಿಕ್ಕಪುಟ್ಟಸಾಮಿ, ಚಿಕ್ಕಅಪ್ಪಯ್ಯ ಎಂಬಿಬ್ಬರು ಈಚೆಗೆ ಸಿಕ್ಕಿ, ನಂಜನಗೂಡು ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಪ್ರಥಮ ವಿಚಾರಣೆಗಾಗಿ ಕಳುಹಲ್ಪಟ್ಟಿದ್ದಾರೆ

ಚಿತ್ರದುರ್ಗ ಡಿಸ್ಟ್ರಿಕ್ಟು ಉಪಾಧ್ಯಾಯ ಸಂಘವು

ಸೆಪ್ಟೆಂಬರ್ ತಿಂಗಳ ಮೀಟಿಂಗ್

ಸೆಪ್ಟೆಂಬರ್ ತಾ 7 ನೇ ಭಾನುವಾರ ಮಧ್ಯಾಹ್ನ 4 ಘಂಟೆಗೆ ಮೀಟಿಂಗು ಸೇರಿತು ಸಭಾಮಂದಿರದ ಬಾಗಿಲು ಮಧ್ಯಾಹ್ನ 1 ಘಂಟೆ ತನಕ ತೆರೆಯದೆ ಬಹಳ ದೂರ ಫಾಸಲೆಯಿಂದ ಬಂದಿದ್ದ ಅನೇಕಜನ ಮೆಂಬರುಗಳು ವಿಶ್ರಾಂತಿ ಸ್ಥಳವಿಲ್ಲದೆ ಅಲೆದಾಡುವಂತಾಯಿತು ಈಗ 1 2 ಮೀಟಿಂಗುಗಳಿಂದಲೂ ಕೊಂದರೆಗೆ ಅವಕಾಶವಾಗಿದೆ ಮುಂದಕ್ಕೆ ಈ ರೀತಿ ಅವಕಾಶ ಕೊಡಲಾರರಾಗಿ ನಂಬಿದೆ

ಈ ಮೀಟಿಂಗಿಗೆ ಪ್ರೆಸಿಡೆಂಟರೂ, ವೈಸ್ ಪ್ರೆಸಿಡೆಂಟರುಗಳೂ ದಯಮಾಡಿ ಕಲು ಅನನುಕೂಲಗಳನ್ನು ತಿಳಿಸಿದರು ಸಭಿಕರಲ್ಲಿಯೇ ಅನುಭವಸ್ಥರಾಗಿಯೂ, ವಿದ್ಯಾವಂತರಾಗಿಯೂ ಇರುವ ಒಬ್ಬ ಉಪಾಧ್ಯಾಯರನ್ನು ಅಗ್ರಾಸನಾಧಿಪತಿಗಳನ್ನಾಗಿ ಮಾಡಿಕೊಂಡು ಕಾರ್ಯಗಳನ್ನು ನಡಿಸಲಾಯಿತು —ಈ ಸಭೆಯಲ್ಲಿ ಈ ವರಿವಿಗೂ ನಡೆಯುತ್ತಿರುವ ಕಾರ್ಯಗಳನ್ನು ಬದಲಾವಣೆಮಾಡಿ ಕೊಡಬೇಕೆಂದು ಅನೇಕ ಜನ ಮೆಂಬರುಗಳು ಅಭಿಪ್ರಾಯ ಪಟ್ಟರು ಸೆಕ್ರೆಟರಿಯವರು ಅದರ ಕಾರ್ಯಗಳನ್ನೂ, ಅದರಿಂದ ಈ ವರಿವಿಗೂ ಆಗಿರುವ ಪ್ರಯೋಜನಗಳನ್ನೂ ವಿವರಿಸಿ ಹೇಳಿದರು ಮುಂದಕ್ಕೆ ಇದಕ್ಕಿಂತ ಹೆಚ್ಚು ಪ್ರಯೋಜನಕ್ಕೆ ಅವಕಾಶವಿಲ್ಲವೆಂಬುದನ್ನು ಚರ್ಚಿಸಲಾಯಿತು ಆಗ ಹೈ ಸ್ಕೂಲು ಅ॥ ಮಾಸ್ಟರು ಮ॥ ಸಂಜೀವಯ್ಯ, ಬಿ ಎ ಯವರು ಈ ವಿಷಯದಲ್ಲಿ ಕೊಂಚ ಹೊತ್ತು ಸಂಭಾಷಣೆ ನಡಿಸಿದರು ಅದರ ಮುಖ್ಯಾಂಶವೇನಂದರೆ, ಉಪಾಧ್ಯಾಯರುಗಳು ಬೋಧನಾ ಕ್ರಮವನ್ನು ಕಲಿಯತಕ್ಕದ್ದೂ, ತಿದ್ದಿಕೊಳ್ಳತಕ್ಕದ್ದೂ ಸಹಜವೇ ಆದರೆ ಈಗ ಅವರು ಪಡೆದಿರತಕ್ಕ ಜ್ಞಾನಕ್ಕಿಂತಲೂ ಆಗಾಗ್ಗೆ ನಾನಾ ವಿಧವಾದ ಗ್ರಂಥಗಳನ್ನೂ, ಶಾಸ್ತ್ರಗಳನ್ನೂ ಅಭ್ಯಾಸಮಾಡುತ್ತಾ ಹೆಚ್ಚು ಹೆಚ್ಚಾದ ಅಂಶಗಳನ್ನು ತಿಳಿದುಕೊಳ್ಳುತ್ತಲೂ, ಆಗಾಗ್ಗೆ ಉಪನ್ಯಾಸಗಳ ಮೂಲಕ ಸಭೆಗಳಲ್ಲಿ ಹೇಳುತ್ತಲೂ ಬರುವ ಭಾಗದಲ್ಲಿ ವಿದ್ಯೆಯಲ್ಲಿ ಹೆಚ್ಚು ಯೋಗ್ಯತೆಯುಳ್ಳವರಾಗಿ, ಬೋಧನೆಗೆ ಸಹಾಯವಾಗುವದು ಇದಕ್ಕಾಗಿ ತಕ್ಕ ಸಲಕರಣೆಗಳನ್ನು ಒದಗಿಸಿ, ಮಾರ್ಗಮಾಡಿಕೊಡಬೇಕಾಗಿದೆ ಈ ವಿಷಯದಲ್ಲಿ ಅನೇಕರ ಅಭಿಪ್ರಾಯಗಳನ್ನು ತೆಗೆದುಕೊಂಡು ಚರ್ಚಿಸಲು ಮುಂದಿನ ಮೀಟಿಂಗಿಗೆ ಅವಕಾಶ ಕೊಟ್ಟಿರುತ್ತದೆ ಪ್ರಾಕ್ಟಿಕಲ್ ಕ್ಲಾಸು ನಡೆಯಲು ವ್ಯವಧಾನವಾಗಲಿಲ್ಲ ಆದ್ದರಿಂದ ನಿಲ್ಲಿಸಲಾಯಿತು —ಮುಂದಿನ ತಿಂಗಳ ಮೀಟಿಂಗಿನಲ್ಲಿ ನಡೆಯಬೇಕಾದ ಕಾರ್ಯಗಳೆಲ್ಲಾ ಗೊತ್ತುಮಾಡಲ್ಪಟ್ಟವು —ನೊವೆಂಬರ್ ಮಾಹೆ 2 ನೇ ತಾ ಭಾನುವಾರ ಮೀಟಿಂಗು ನಡೆಯತಕ್ಕದ್ದೆಂದು ಹೇಳಲಾಯಿತು

ವೀಣಾಬಿಷ್ಟಪ್ಪ, ಸಂಘದ ಸೆಕ್ರೆಟರಿ

ಬಹುಮಾನ ಸಭೆಯು

ಚಿತ್ರದುರ್ಗ ಹೈಸ್ಕೂಲು

ಕಳೆದ ತಾ 11 ನೇ ಗುರುವಾರ ಹೈಸ್ಕೂಲ್ ಕಟ್ಟಡವನ್ನು ಅನೇಕ ವಿಧವಾದ ತೋರಣಗಳಿಂದ ಅಲಂಕರಿಸಿದ್ದರು ಆ ದಿನ ಪ್ರಾತಃಕಾಲ 8 ಘಂಟೆಗೆ ಊರಿನ ವರ್ತಕರು, ಮ್ಯುನಿಸಿಪಲ್ ಲೋಕಲ್ ಮೆಂಬರುಗಳು ಅ॥ ಕಮಿಷನರುಗಳೂ, ಅಮಲ್ದಾರ್ರು, ಮತ್ತು ಸಾಹುಕಾರರು, ಲಾಯರುಗಳು, ಟೀಚರುಗಳೂ, ಎಲ್ಲಾ ನೌಕರರುಗಳು ಸಭಾ ಮಂದಿರದಲ್ಲಿ ಸೇರಿದ್ದರು ಆಗ ಜಿಮ್ನಾಸ್ಟಿಕ್ ಟೀಚರು ಸ್ಕೂಲ್ ಬಾಲಕರಿಂದ ನಾನಾ ವಿಧವಾದ ಮಾರ್ಚಿಂಗ್ ಡ್ರಿಲ್ ಮಾಡಿಸಿದರು ತರುವಾಯ ಡ್ರಿಲ್ ಇನ್ಸ್‌ಪೆಕ್ಟರ ಎದೆಯ ಮೇಲೆ ದೊಡ್ಡದೊಂದು ಬಂಡೆಯನ್ನಿಟ್ಟು ದೊಡ್ಡ ಚಮಟಿಗೆಗಳಿಂದ ಹೊಡೆದರು ಮತ್ತು ಒಂದು ಬಂಡಿಯಲ್ಲಿ ಸುಮಾರು 10 ಹುಡುಗರು ಕುಳಿತುಕೊಂಡು ಆ ಟೀಚರ ಎದೆಯ ಮೇಲೆ ಎಳೆದರು ಇದನ್ನು ನೋಡಿ ಎಲ್ಲರೂ ಬಹಳ ಆಶ್ಚರ್ಯವೂ ಆನಂದವೂ ಪಟ್ಟರು ಅನಂತರ ಡೆಪ್ಯುಟಿ ಕಮಿಷನರ್ ಮಾ॥ ತ್ಯಾಗರಾಜ ಅಯ್ಯರವರು ಅಗ್ರಾಸನಾಧಿಪತ್ಯವನ್ನು ವಹಿಸಿದರು ಸಭೆ ಪ್ರಾರಂಭವಾದ ಒಡನೆ ಇಬ್ಬರು ಹುಡುಗರು ಇಂಗ್ಲೀಷಿನಲ್ಲಿ ರೆಸಿಟೇಷನ್ ಹೇಳಿದರು, ಮತ್ತಿಬ್ಬರು ದೇವರ ಪ್ರಾರ್ಥನೆ, ಮಹಾರಾಜ ಶ್ರೀಯವರ ಪ್ರಾರ್ಥನೆ ಸಭಾಧ್ಯಕ್ಷರಿಗೆ ವಂದನೆಗಳನ್ನು ಮಾಡಿದರು ಒಬ್ಬ ಮಹಮ್ಮದೀಯ ಬಾಲಕನು ಗಾನಮಾಡಿದನು ಸಂಸ್ಕೃತದಲ್ಲಿ ಇಬ್ಬರು ಬಾಲಕರು ಸಂವಾದಗಳನ್ನು ನಡಿಸಿದರು ಬಳಿಕ ಹೆಡ್ ಮಾಸ್ಟರ್ ಮ॥ ಲಕ್ಷ್ಮೀಪತಯ್ಯನವರು ಸ್ಕೂಲ್ ರಿಪೋರ್ಟನ್ನು ಸಂಕ್ಷೇಪವಾಗಿ ಓದಿದರು ಅದರ ಸಾರಾಂಶವೇನಂದರೆ—ಕಳೆದ ವರ್ಷ 86 ಜನ ಹುಡುಗರಿದ್ದರು ಈ ವರ್ಷ 108 ಹುಡುಗರಿರುವರೆ ಮಹಮ್ಮದೀಯ ಮತ್ತು ಲಿಂಗಾಯಿತ ಹುಡುಗರ ಸಂಖ್ಯೆಯು ದಿನೇದಿನೇ ಹೆಚ್ಚುತ್ತಿದೆ ಕಳೆದ ವರ್ಷ 10 ಜನ ಹುಡುಗರು ಫೈನಲ್ ಪರೀಕ್ಷೆಗೆ ಹೋಗಿದ್ದು 9 ಜನ ಪ್ಯಾಸಾದದ್ದಲ್ಲದೆ ಕಾಲೇಜಿನಲ್ಲಿ ಓದಲು ಯೋಗ್ಯರಾಗಿರುತ್ತಾರೆ ಲೋವರ್ ಸೆಕೆಂಡರಿಗೆ 10 ಜನರನ್ನು ಕಳುಹಿಸಿದರು 11 ಜನ ಪ್ಯಾಸಾಗಿರುತ್ತಾರೆ

ಈಚೆಗೆ ಬಂದಿರುವ ಡ್ರಿಲ್ ಮಾಸ್ಟರಿಂದ ಸ್ಕೂಲಿನಲ್ಲಿ ಡ್ರಿಲ್, ಕ್ರಿಕೆಟ್, ಫುಟ್‌ಬಾಲ್, ಹಾಕಿ ಎಕ್ಸರ್‌ಸೈಜ್‌ಗಳೆಲ್ಲಾ ಕ್ರಮವಾಗಿ ನಡೆದು ಬಾಲಕರ ಕಾಯಪುಷ್ಟಿಗೆ ಹೆಚ್ಚು ಗಮನ ಕೊಡಲ್ಪಟ್ಟಿದೆ ಈಚೆಗೆ ಸರ್ಕಲ್ ಇನ್ಸ್‌ಪೆಕ್ಟರವರು ಸ್ಕೂಲನ್ನು ಪರೀಕ್ಷಿಸಿ ಬರೆದಿರುವ ಒಳ್ಳೇ ಅಭಿಪ್ರಾಯವನ್ನು ತಿಳಿಸಿದರು ನಮ್ಮ ಶ್ರೀಮದ್‌ಯುವರಾಜರವರು ಯೂರೋಪು ಮುಂತಾದ ಅನ್ಯ ದೇಶಗಳಲ್ಲಿ ಸಂಚರಿಸಿ ಜನಾಂಗದ ವಿದ್ಯಾಭಿವೃದ್ಧಿಗೆ ಏನೇನು ಮಾರ್ಗಗಳಿವೆಯೋ ಅವುಗಳನ್ನು ಸ್ವತಃ ನೋಡಿ ಬಂದು ಈ ದೇಶದಲ್ಲಿ ಪ್ರಚುರಪಡಿಸಿ, ನಮ್ಮ ಅಭಿವೃದ್ಧಿಯನ್ನು ಕೋರುವ ನಮ್ಮ ರಾಜವಂಶೀಯರಿಗೆ ದೇವರು ಆಯುರಾರೋಗ್ಯಗಳನ್ನು ಕೊಡಲೆಂದು ಪ್ರಾರ್ಥಿಸಿದರು ವಿದ್ಯಾ ಪ್ರೋತ್ಸಾಹಿಗಳಾದ ಕೆಲವು ಇಲ್ಲಿಯ ದೊಡ್ಡ ಮನುಷ್ಯರು ಪ್ರತಿ ವರ್ಷವೂ ಈ ಸ್ಕೂಲಿನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕ್ಕಾಗಿ ಬಹುಮಾನಗಳನ್ನು ಕೊಡುವರು ಆ ಮಹನೀಯರುಗಳು ಯಾರ್ಯಾರೆಂದರೆ ಮ॥ ಅಡ್ವೋಕೇಟ್ ಅನಂತಯ್ಯ ಶೆಟ್ಟರು ವಿದ್ಯಾರ್ಥಿಗಳ ಪುಸ್ತಕ ಭಂಡಾರಕ್ಕೆ ಪುಸ್ತಕಗಳನ್ನು ಕೊಡುವರು ಮ॥ ವರದಚಾರ್ರು, ಮ॥ ಸಾಹುಕಾರ್ ಕಾದಪ್ಪನವರೂ ಪರೀಕ್ಷೆಯಲ್ಲಿ ಪ್ಯಾಸಾದವರಿಗೆ ಬಂಗಾರದ ಮೆಡಲನ್ನು ಕೊಡುವದಾಗಿಯೂ, ಮ॥ ಅಡ್ವೋಕೇಟ್ ವೆಂಕಟಸಾಮಣ್ಣನವರು ತಮ್ಮ ತಂದೆಯವರ ಹೆಸರಿನ ಮೇಲೆ ಪ್ರತಿ ವರ್ಷವೂ ಎರಡು ಬಹುಮಾನ ಕೊಡುವದಾಗಿಯೂ, ಅನೇಕ ದೊಡ್ಡ ಮನುಷ್ಯರು ಪ್ರೋತ್ಸಾಹ ಕೊಡುವದಾಗಿಯೂ, ಒಪ್ಪಿರುವರೆಂದು ರಿಪೋರ್ಟನ್ನು ಓದಿ ಮುಗಿಸಿದ ನಂತರ ಅಗ್ರಾಸನಾಧಿಪತಿಗಳಾದ ಮ॥ ತ್ಯಾಗರಾಜಅಯ್ಯರವರು ಸ್ವಹಸ್ತ ಹುಡುಗರಿಗೆ ಬಹುಮಾನ ಪುಸ್ತಕಗಳನ್ನು ಹಂಚಿದ ತರುವಾಯ ಹೇಳಿದೇನೆಂದರೆ —ನಮ್ಮ ಹೆಡ್‌ಮಾಸ್ಟರ್ ಮ॥ ಲಕ್ಷ್ಮೀಪತಯ್ಯನವರ ಮತ್ತು ಅ॥ ಮಾಸ್ಟರುಗಳ ಕೈಕೆಳಗೆ ಈ ಸ್ಕೂಲು ಬಹಳ ಅಭಿವೃದ್ಧಿಯಾಗುತ್ತಿದೆ ಈಗ ಬಹುಮಾನಗಳನ್ನು ಹೊಂದಿದ ಹುಡುಗರು ಮುಂದೆ ಕಷ್ಟಪಟ್ಟು ಓದಿ ಮುಂದೆ ಬಹುಮಾನವನ್ನು ಸಂಪಾದಿಸುವರೆಂದು ನಂಬುತ್ತೇನೆ ಮತ್ತು ಮುಂದಿನ ವರ್ಷ ಈ ಸ್ಕೂಲು ಎಲ್ಲಾ ಭಾಗದಲ್ಲೂ ಬಹಳ ಮಟ್ಟಿಗೆ ಅಭಿವೃದ್ಧಿಯಾಗುವದೆನ್ನುವದರಲ್ಲಿ ಸಂದೇಹವಿಲ್ಲ ಈರೀತಿ ಮಾತನಾಡಿದ ನಂತರ ರಿಟೈರ್ಡ್ ಅಮಲ್ದಾರ್ ಮ॥ ಪಾವುಗಡದ ಭೀಮಸೇನರಾಯರು ಪ್ರಾಚೀನಕಾಲದ ಉಪಾಧ್ಯಾಯರುಗಳಂತೆ ಮ॥ ಲಕ್ಷ್ಮೀಪತಯ್ಯನವರೇ ಮೊದಲಾದವರು ಉತ್ಸಾಹಶೀಲರಾಗಿ ಕೆಲಸಮಾಡುತ್ತಿರುವದರಿಂದ ಈ ಸ್ಕೂಲು ಅಭಿವೃದ್ಧಿಗೆ ಬರಲು ಸಂದೇಹವಿಲ್ಲವೆಂದು ಹೇಳಿದರು ಅಲ್ಲಿಗೆ ಸಭೆಯು ಮುಕ್ತಾಯವಾಯಿತು

ತರುವಾಯ ಮಧ್ಯಾಹ್ನ 2 ಘಂಟೆಗೆ ವಿದ್ಯಾಭ್ಯಾಸದ ವಸ್ತುಪ್ರದರ್ಶನ ಶಾಲೆಯನ್ನು ತೆರೆದರು ಸ್ಲಾಯಿಡ್ ಮತ್ತು ಎಲ್ಲಾ ಸಬ್‌ಜೆಕ್ಟುಗಳಲ್ಲಿಯೂ ಉತ್ತಮವಾದ ವಸ್ತುಗಳನ್ನು ಪ್ರದರ್ಶಿಸಿದರು ಪ್ರತಿಯೊಂದರ ಹತ್ತಿರದಲ್ಲೂ ವಿದ್ಯಾರ್ಥಿಗಳಿದ್ದು ವಿವರಿಸಿದರು ಸಾಯಂಕಾಲ 6 ಘಂಟೆಯವರಿಗೂ ನೋಟಕರು ಬಂದು ನೋಡಿ ತೃಪ್ತಿಗೊಂಡರು ಅನೇಕರು ಹೊಸ ವಿಷಯಗಳನ್ನು ತಿಳಿದುಕೊಂಡರು

ರಾತ್ರಿ 8 ಘಂಟೆಗೆ ಇಂಗ್ಲೀಷ್ ಮತ್ತು ಪಾರ್ಸಿ ನಾಟಕಗಳನ್ನು ಹುಡುಗರು ಆಡಿದರು ಸೇರಿದ ಜನಗಳು ಆನಂದಭರಿತರಾಗಿ ಮನೆಗಳಿಗೆ ತೆರಳಿದರು

ಕೋಆಪರೇಟಿವ್ ಸೊಸೈಟಿ

ಹೊಸದುರ್ಗ ತಾಲ್ಲೂಕು ಬೆಲಗೂರು

ಈ ಗ್ರಾಮದಲ್ಲಿ ತಾ 12 7-1913 ರ ಲಾಗಾಯ್ತು ಶ್ರೀಪ್ರಸನ್ನರಾಮೇಶ್ವರ ಕೋಆಪರೇಟಿವ್ ಸೊಸೈಟಿ ಎಂಬ ಹೆಸರಿನ ಒಂದು ಸಂಘವು ಏರ್ಪಾಡಾಗಿರುತ್ತದೆ ಇಷ್ಟು ಕೊಂಚ ದಿನಗಳಲ್ಲಿ ಈ ಸಂಘಕ್ಕೆ 81 ಜನಗಳು ಸೇರಿ 715 ಷೇರುಗಳು ಖಚಾಗಿವೆ ಬಾಕಿ ಇನ್ನೂರ ಐವತ್ತೈದು ಷೇರುಗಳು ಮಾತ್ರ ಇರುತ್ತವೆ ಈ ಗ್ರಾಮದಲ್ಲಿ ಸೊಸೈಟಿಯಿಂದ ಉಂಟಾಗುವ ಪ್ರಯೋಜನವನ್ನು ಅರಿಯದೆ ಇದುವರಿವಿಗೂ ಬಿಟ್ಟು ಇದ್ದಾಗ್ಯೂ, ಅನೇಕರಿಗೆ ಇದರ ಅನುಕೂಲವು ಕಂಡು ಬಂದದ್ದರಿಂದ ಇಷ್ಟು ಜಾಗ್ರತೆಯಾಗಿ ಈ ಸಂಘವು ಅಭಿವೃದ್ಧಿ ಹೊಂದಿರುತ್ತದೆ ದುಬಾರಿ ಬಡ್ಡಿ ತೆರುತ್ತಿದ್ದ ಅನೇಕ ಜನ ರೈತರೂ, ವರ್ತಕರೂ ಈ ಸಂಘದಲ್ಲಿ ಸಾಲಗಳನ್ನು ಸುಲಭ ಬಡ್ಡಿಗೆ ಪಡೆದುಕೊಳ್ಳಲು ಅನುಕೂಲವುಂಟಾಗಿರುತ್ತದೆ ಈ ವರ್ಷ ದಸರಾ ಮಹೋತ್ಸವ ಕಾಲದಲ್ಲಿ ಅಂದರೆ ಅಕ್ಟೋಬರು 1 ನೇ ತಾರೀಖಿನಲ್ಲಿ ಮೈಸೂರಲ್ಲಿ ನಡೆಯುವ ಮೂರನೇ ಪ್ರಾವಿನ್ಸಿಯಲ್ ಕಾನ್ಫರೆನ್ಸು ಸಭೆಗೆ ಒಬ್ಬ ಪ್ರತಿನಿಧಿಯನ್ನೂ ವಿಜಿಟರುಗಳನ್ನೂ ಚುನಾಯಿಸಲು ರೆಜಿಸ್ಟ್ರಾರ್ ಸಾಹೇಬರವರ ಹುಕುಂ ಅನುಸರಿಸಿ ತಾ 30 ರಲ್ಲಿ ಬೆಲಗೂರು ಹೋಬಳಿ ಸ್ಕೂಲ್ ಕಟ್ಟಡದಲ್ಲಿ ಈ ಸಂಘದ ಮೆಂಬರುಗಳ ಸಭೆಯು ಸೇರಿ, ಈ ಸಂಘದ ಸೆಕ್ರೆಟರಿಯವರಾಗಿರುವ ಮ॥ ಕೆ ವೆಂಕಟರಾಯಶೆಟ್ರನ್ನು ಪ್ರತಿನಿಧಿಯನ್ನಾಗಿಯೂ, ಈ ಸಂಘದ ಪಂಚಾಯಿತದಾರ್ ಮತ್ತು ಅ॥ ಸೆಕ್ರೆಟರಿ ಆಗಿರುವ ಮ॥ ಬಿ ನರಸಿಂಹಯ್ಯನವರನ್ನೂ, ಈ ಸಂಘದ ಪ್ರೆಸಿಡೆಂಟ್ ಮ॥ ರಾ॥ ಶಿವಲಿಂಗಪ್ಪನವರನ್ನೂ, ಪಂಚಾಯಿತದಾರ್ ಮ॥ ಬಿ ಸುಬ್ಬಯ್ಯನವರನ್ನೂ ವಿಜಿಟರಾಗಿಯೂ ಹೋಗಬಹುದೆಂದು ಚುನಾಯಿಸಿರುತ್ತಾರೆ ಈ ಸಂಘದ ನ್ಯೂನತೆಗಳನ್ನು ಕುರಿತು ಮೇಲ್ಕಂಡ ಕಾನ್ಫರೆನ್ಸಿನಲ್ಲಿ ಅರಿಕೆಮಾಡಿ ಅಲ್ಲಿ ನಡೆಯುವ ಹೆಚ್ಚು ವಿಷಯಗಳನ್ನು ಈ ಸಂಘದವರಿಗೆಲ್ಲಾ ತಿಳಿಸಿ ಸಂಘವನ್ನು ಅಭಿವೃದ್ಧಿಮಾಡುವರೆಂದು ನಂಬಿದೆ ನಮ್ಮ ದೇಶದಲ್ಲಿ ಅನೇಕ ಗ್ರಾಮಾಂತರಗಳಲ್ಲಿ ಸೊಸೈಟಿಗಳು ಇಲ್ಲದೆ ದುಬಾರಿ ಬಡ್ಡಿ ತೆರುವ ಅನೇಕ ಸಾಲಗಾರರು ದುಬಾರಿ ಬಡ್ಡಿ ಇಟ್ಟು ಇರುವ ಇತರ ಸಾಹುಕಾರರುಗಳಲ್ಲಿ ಸಾಲಾ ಪಡೆದು ಕ್ರಮೇಣ ಇತ್ಯಾದಿ ಪದಾರ್ಥಗಳನ್ನು ಕಳೆದುಕೊಳ್ಳುವದಕ್ಕಿಂತ ನಮ್ಮನ್ನು ಆಳುವ ಶ್ರೀಮನ್ಮಹಾರಾಜ ರಾಜಾ ಸಾಹೇಬ್ ಒಡೆಯರವರು ಏರ್ಪಡಿಸಿರುವ ಕಾನೂನು ಮೇರೆಗೆ ಅಲ್ಲಲ್ಲಿ ಸೊಸೈಟಿಗಳನ್ನು ಏರ್ಪಾಡುಮಾಡಿಕೊಂಡು ರೈತರೂ, ವರ್ತಕರೂ ಅನುಕೂಲಹೊಂದಬೇಕೆಂದು ಕೋರುತ್ತೇನೆ

ಬೆಲಗೂರು ಗುರುಸಿದ್ಧಪ್ಪ

ಮೇಲುಕೋಟೆ ನೇಯಿಗೆ ಸೊಸೈಟಿ.

ಈ ಊರಿನ ನೇಯಿಗೆಯವರು ಅನುಭವಿಸುತ್ತಿದ್ದ ತೊಂದರೆಯು ಪರಿಹಾರಾರ್ಥವಾಗಿ ಮೇಲ್ಕಂಡ ಸೊಸೈಟಿಯು 1906 ನೇ ಸೆಪ್ಟೆಂಬರಿನಲ್ಲಿ ಸ್ಥಾಪಿಸಲ್ಪಟ್ಟಿತು ಈ ಸಂಘದ ಏಳನೆಯ ವರ್ಷದ ಜನರಲ್ ಮೀಟಿಂಗು ಸಂಘದ ಕಾರ್ಯಾಲಯದಲ್ಲಿ ತಾ 10 ನೇ ಬುಧವಾರ ಜರಗಿತು ಹಾಜರಿದ್ದ ಮೆಂಬರುಗಳ ಪೈಕಿ ಶ್ರೀಮದಿತ್ಯಾದಿ ಯಂ ಕೆ ತಿರುಮಲಾಚಾರ್ಯರು ಮೆಂಬರುಗಳ ಪ್ರಾರ್ಥನೆಯಂತೆ ಅಗ್ರಾಸನವನ್ನು ವಹಿಸಿದರು ಆಡಿಟರ್ ಮ॥ ಎಸ್ ರಾಮಯ್ಯಂಗಾರ್ರು ಆಡಿಟ್ ರಿಪೋರ್ಟನ್ನು ಓದಿದರು ಸೆಕ್ರೆಟರಿಯವರಿಂದ ವಾರ್ಷಿಕ ರಿಪೋರ್ಟು ಓದಲ್ಪಟ್ಟು ರಿಕಾರ್ಡು ಮಾಡಲಾಯಿತು ವಾರ್ಷಿಕ ರಿಪೋರ್ಟಿನ ಮುಖ್ಯಾಂಶಗಳು —ಈಗ 124 ಜನ ಮೆಂಬರುಗಳಿರುತ್ತಾರೆ ಷೇರು, ಪ್ರವೇಶಧನ, ಡಿಪಾಜಿಟ್ಟು ಸೇರಿ ಸಂಘದ ಬಂಡವಾಳವು ರೂ 9,376 5 5 ಪೈ ಆಗಿದೆ ಕಸಬುದಾರರ ಅನುಕೂಲಕ್ಕಾಗಿ ನೂಲು, ರೇಷ್ಮೆ, ಸಾಮಗ್ರಿಗಳು ರೂ 19,962 7-1 ಪೈ ಗಳಷ್ಟು ಕೊಳ್ಳಲ್ಪಟ್ಟು, ರೂ 20,662 12-1 ಪೈಗಳಷ್ಟು ಬಿಕರಿಯಾಗಿರುತ್ತವೆ ಮೆಂಬರುಗಳಿಗೆ ರೂ 18,119 8 9 ಪೈ ಬೆಲೆಬಾಳುವ ನೂಲು, ರೇಷ್ಮೆ ಅಡ್ವಾನ್ಸ್ ಸಾಲವಾಗಿ ಕೊಡಲ್ಪಟ್ಟು, ರೂ 18,264 11 0 ಪೈ ಜಮಾಹಿಂದಿರುತ್ತೆ ಮತ್ತು ಪ್ರಯೋಜನಕರವಾದ ಕೆಲಸಗಳಿಗಾಗಿ ಮೆಂಬರುಗಳಿಗೆ ರೂ 12,783 8 4 ಪೈ ಸಾಲ ಕೊಡಲ್ಪಟ್ಟು, ರೂ 11,635-10 10 ಪೈ ವಾಪಸ್ ಜಮಾ ಬಂದಿರುತ್ತೆ ಸಂಘಕ್ಕೆ ಕಳೆದ ವರುಷ ರೂ 1,834-0-10 ಪೈ ನಫಾ ಉತ್ಪತ್ತಿಯಾಗಿ, ಸಿಬ್ಬಂದಿ ಮುಂತಾದ್ದಕ್ಕೆ ರೂ 211 5 2 ಪೈ ಖರ್ಚಾಗಿರುವದು ಉಳಿದ ಮೊಬಲಗಿನಲ್ಲಿ ಆಡಿಟರ್ ಮತ್ತು ಸೆಕ್ರೆಟರಿಯವರ ರುಸುಂ ರೂ 227-2 6 ಪೈ ಕೊಟ್ಟು, ಬಾಕಿ ಹಣದಲ್ಲಿ ರೂ 348 14-3 ಪೈ ರಿಜರ್ವ್ ಫಂಡಿಗೆ ತೆಗೆದಿಟ್ಟು, ಬಾಕಿ ಉಳಿಯುವ ಮೊಬಲಗಿನಲ್ಲಿ ಷೇರುದಾರರಿಗೆ ಶೇಕಡಾ ಮಾಹೆಯಾನಾ 0 15 6 ಪೈ ಮೇರೆ ಒಡ್ಡಿ ಹಂಚತಕ್ಕದ್ದೆಂದು ತೀರ್ಮಾನಿಸಲಾಯಿತು ಇಷ್ಟು ಬಡ್ಡಿ ಮೈಸೂರು ದೇಶದ ಸೊಸೈಟಿಗಳಲ್ಲಿ ಎಲ್ಲಿಯೂ ಹಂಚಿಲ್ಲ ಕೈಗಾರಿಕೆಯೇ ಇದಕ್ಕೆ ಮೂಲ ಕಾರಣ ಈ ಸಂಘದ ರಿಜರ್ವ್ ಫಂಡಿನಲ್ಲಿ 2,141 7 5 ಪೈ ಇರುತ್ತೆ ಇದು ಅಭಿವೃದ್ಧಿಯನ್ನು ಸೂಚಿಸುವದು ಅಲ್ಲದೆ ಸಂಘದ ಮೆಂಬರುಗಳ ಆರೋಗ್ಯ, ವಿದ್ಯಾಭಿವೃದ್ಧಿ, ಮತ್ತು ನವೀನ ಕೈಗಾರಿಕೆ ಪ್ರೋತ್ಸಾಹಕ್ಕಾಗಿ ಹೊಸದಾಗಿ ಏರ್ಪಡಿಸತಕ್ಕ ಫಂಡಿನಲ್ಲಿ ಇದುವರಿವಿಗೆ ರೂ 151 4-0 ಜಮಾಯಿಸಿರುತ್ತೆ ತುಂಬಾ ಶ್ಲಾಘನೀಯವಾಗಿದೆ ಬಳಿಕ ಮ॥ ಎಸ್ ರಾಮಯ್ಯಂಗಾರ್ರು ಪರಸ್ಪರ ಸಹಾಯ ಸಂಘಗಳ ಪ್ರಯೋಜನವನ್ನು ಕುರಿತು ಸಾರಸ್ಯವಾಗಿ ಉಪನ್ಯಾಸಿಸಿದರು ಸಂಘದ ಅಭಿವೃದ್ಧಿಗೆ ಬೇಕಾದ ಕೆಲವು ವಿಷಯಗಳು ಚರ್ಚಿಸಲ್ಪಟ್ಟು ತೀರ್ಮಾನಿಸಲ್ಪಟ್ಟವು ಪ್ರೆಸಿಡೆಂಟ್ ಮ॥ ಸಿ ನಂಜುಂಡಶೆಟ್ಟರ ಮತ್ತು ಸೆಕ್ರೆಟರಿ ಮ॥ ಕೆ ವೆಂಕಟರಮಣಶೆಟ್ಟರ ದಕ್ಷತೆಯು ಪ್ರಶಂಸಿಸಲ್ಪಟ್ಟಿತು ನಂತರ ಪ್ರಜೋನ್ನತಿಯಲ್ಲಿ ಆಸಕ್ತರಾಗಿರುವ ನಮ್ಮ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರಿಗೂ, ಅವರ ಅನುಜರಾದ ಶ್ರೀಮದ್ಯುವರಾಜರವರೇ ಆದಿಯಾದ ಸಮಸ್ತ ರಾಜವರ್ಗದವರಿಗೂ ಶ್ರೇಯಃಪ್ರಾರ್ಥನೆಗಳು ಮಾಡಲ್ಪಟ್ಟು ಸಭೆಯು ಮುಕ್ತಾಯವಾಯಿತು

ಪ್ರತ್ಯಕ್ಷದರ್ಶಿ

ಬಾತ್ಮೀದಾರರಿಗೆ ನೋಟೀಸ್

ಪ್ರಚುರಪಡಿಸುವದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರವಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಪುನಃ ಹೇಳುತ್ತೇವೆ

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಕರೆಸ್‌ಪಾಂಡೆನ್ಸ್

ಆಕ್ಷೇಪಣೆಗೆ ಜವಾಬು

ಅಯ್ಯಾ,

ತಮ್ಮ 31 7-13ನೇ ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿಸಿರುವ "ಜಾವಗಲ್ ಅದಾಲತ್ ಕೋರ್ಟು" ಎಂಬವಿಚಾರದ ಮೇಲೆ ಪ್ರತ್ಯುತ್ತರ ತಾವು ಪ್ರಕಟಿಸಿರುವ ಸೂರ್ಯನಾರಾಯಣಪ್ಪ ತಂಗಡಿಚಕ್ಕೆ ಕಂಟ್ರಾಕ್ಟರ್ ಎಂಬುವರು ಈ ತಾಲ್ಲೂಕಿನಲ್ಲಿ ಆಗಲಿ, ಆಸ್‌ಪಾಸ್ ತಾಲ್ಲೂಕುಗಳಲ್ಲಿ ಆಗಲಿ ಯಾರೂ ಇಲ್ಲ ಆದುದರಿಂದ ಬೇರೆ ಯಾರೋ ಪ್ರಕಟಿಸಿ ತಮಗೆ ಆ ಹೆಸರು ಕೊಟ್ಟಿರಬಹುದಾಗಿ ತೋರುತ್ತೆ ಈ ಬಾತ್ಮಿಯನ್ನು ಕೊಡತಕ್ಕ ಮನುಷ್ಯರು ನಂಬಿಗಸ್ಥರಲ್ಲವೆಂಬುದು ಇದರಿಂದಲೇ ಸ್ಪಷ್ಟಪಡುತ್ತೆ ಅವರು ನಂಬಿಕೆಯುಳ್ಳವರೆ ಆಗಿದ್ದ ಪಕ್ಷದಲ್ಲಿ ತಮ್ಮ ನಿಜವಾದ ಹೆಸರನ್ನೇ ಪ್ರಕಟಿಸಬಹುದಾಗಿತ್ತು ಅಲ್ಲದೆ ಈತನು ಈ ವಿಷಯಗಳನ್ನು ತಮ್ಮ ಪತ್ರಿಕಾ ಮುಖೇನ ಪ್ರಸಿದ್ಧಪಡಿಸಿರುವುದರಿಂದಲೇ ಈತನು ಮಾಡಿರುವ ತಪ್ಪುಗಳು ನಿಶ್ಚಯವೆಂತಲೂ, ಗೌರ್ನಮೆಂಟಿಗೆ ದ್ರೋಹಿಯೆಂತಲೂ ತಾನೇ ಒಪ್ಪಿಕೊಂಡಂತಾಯಿತು ಹಾಗಿಲ್ಲದೆ ಇದ್ದಪಕ್ಷ ಶಂಕರಯ್ಯ ಯಾನೆ ಪುಟ್ಟಸಾಮಯ್ಯನ ಅರ್ಜಿಗಳನ್ನು ಮೇಲ್ಪಟ್ಟ ಅಧಿಕಾರಿಗಳು ಗಮನಕ್ಕೆ ತರಲಾರದೆಂತ ಪ್ರಕಟಪಡಿಸುತ್ತಿರಲಿಲ್ಲ ಇವರು ಸದರಿ ಬಾತ್ಮಿಯ ಮತ್ತೊಂದು ಕಡೆಯಲ್ಲಿ ಅರ್ಜಿಬರೆದ ಶಂಕರಯ್ಯನಿಗೆ ಸರ್ಕಾರದವರು ಶಿಕ್ಷೆಮಾಡಲಿಲ್ಲವೆಂದು ಸೂಚಿಸುತ್ತಾರೆ ಈ ಅರ್ಜಿಗಳು ಸುಳ್ಳಾದವುಗಳೆಂತ ಸರ್ಕಾರದವರಿಗೆ ತಿಳಿದಿದ್ದ ಪಕ್ಷದಲ್ಲಿ ಶಿಕ್ಷಿಸದೆ ಎಂದಿಗೂ ಬಿಡುತ್ತಿರಲಿಲ್ಲ ನಿಜವಾದುದರಿಂದಲೇ ಆದಕ್ಕೆ ಅವಕಾಶವಿಲ್ಲದಂತಾಯ್ತು ಇವರು ತಮ್ಮ ಪತ್ರಿಕೆಯಲ್ಲಿ ಕೋರ್ಟಿನಂತಲೂ ಪ್ರೆಸಿಡೆಂಟ್ ಎಂತಲೂ ಪ್ರಕಟಿಸಿರುತ್ತಾರೆ ಇಂಥಾ ಹುದ್ದೆಯನ್ನೂ, ಗೌರವವನ್ನೂ ಕೊಡುವ ಅಧಿಕಾರವನ್ನೂ ಈತ ವಹಿಸಿದಂತೆ ಕಾಣುತ್ತೆ ಹುದ್ದೆಯನ್ನು ಕೊಡುವ ಮತ್ತು ತೆಗೆಯುವ ಅಧಿಕಾರ ವಹಿಸಿದ ಇವರಿಗೆ ತಕ್ಕ ಬಂದೋಬಸ್ತು ಮಾಡಲು ಸರ್ಕಾರದವರು ಜಾಗ್ರತೆ ವಹಿಸಬೇಕೆಂದು ನಂಬಿ ಅರಿಕೆಮಾಡಿಕೊಂಡಿದ್ದೇನೆ

ಜಾವಗಲ್, ಜ ಶಂಕರಯ್ಯ, ಯಾನೆ ಪುಟ್ಟಸಾಮಯ್ಯ

ಕೆರೆಯ ವಿಷಯ

ಅಯ್ಯಾ,

ನಮ್ಮ ಗೌರ್ನಮೆಂಟಿನವರು ಈ ಸಾಲಿನಲ್ಲಿ ಪ್ರಜಾಹಿತಕ್ಕೋಸ್ಕರ ಅನೇಕ ಹೊಸ ಕೆರೆಗಳು, ಹಳೇ ಕೆರೆ ರಿಪೇರಿಗಳು, ಚಾನೆಲ್ಲುಗಳು, ಅಣೆಕಟ್ಟುಗಳು, ನಾಲೆ ಬಡಾವಣೆಗಳು ವಗೈರೆ ಕೆಲಸಗಳಿಗೆ ಬಹಳ ಭಾರಿ ಖರ್ಚುಗಳನ್ನಿಟ್ಟಿದಾರೆಂಬ ಅಂಶವನ್ನು ತಮ್ಮ ಪತ್ರಿಕಾ ಮುಖೇನ ತಿಳಿದುಕೊಂಡೆನು

ಈ ಅನುಕೂಲವನ್ನುಂಟುಮಾಡಬೇಕೆಂದಿರುವ ಸ್ಥಳಗಳಲ್ಲೆಲ್ಲಾ ತಮ್ಮ ದೃಷ್ಟಿಗೆ ಬೀಳತಕ್ಕದ್ದು ಬಹಳ ಸುಲಭ ಈ ಸ್ಥಳಗಳಿಗೆ ಬಿದ್ದ ದೃಷ್ಟಿಯು ಪ್ರಾಯಶಃ ಜುಜುಬೀ ವಸತಿಗಳಿಗೂ ಬಿದ್ದರೆ ಬಹಳ ಪ್ರಜೋಪಕಾರವಾದೀತು ಆ ರೀತಿ ಬೀಳದೆ ಇರುವದಕ್ಕೆ ಜುಜುಬೀ ಕರೇ ಕೆಳಗಣ ಬಡ ರೈತರ ದುರಾದೃಷ್ಟವೆಂದೇ ಊಹಿಸಬೇಕು

ಅನೇಕಾನೇಕ ಜುಜುಬೀ ಕೆರೆಗಳು ಅಂದರೆ ಮೇಜರ್‌ಮೆಂಟಿಗೆ ಸೇರದೆ ಇರತಕ್ಕ ಕೆರೆಗಳ ಆಶ್ರಯದಿಂದ ಜೀವನಾ ಮಾಡತಕ್ಕ ರೈತರುಗಳು ಆ ಕೆರೆಗಳ ಕಾಮಗಾರಿ ವಿಚಾರದಲ್ಲಿ ಎಷ್ಟೋ ಅರ್ಜಿ ಅನೇಕ ಆಫೀಸರುಗಳಿಗೆ ತಮ್ಮ ಕಷ್ಟಗಳನ್ನು ವಿಜ್ಞಾಪಿಸಿಕೊಂಡಾಗ್ಯೂ ಯಾವ ಫಲವನ್ನೂ ಕಾಣದೆ ಕೊರಗುತ್ತಿರುವರು ಇಂಥಾವರ ವಿಚಾರದಲ್ಲಿ ಗವರ್ನ್‌ಮೆಂಟಿನವರಿಗೆ ಗಮನ ಕೊಡ

ಇಂಥಾ ದುರದೃಷ್ಟದ ಕೆರೆಗಳ ಹೆಡ್ಡಿಗೆ ಜಮೆಯಾಗಿರುವ ಕೆರೆಗಳ ಪೈಕಿ ನಮ್ಮ ವಾಸಸ್ಥಾನವಾದ ಕೃಷ್ಣರಾಜಪೇಟೆ ತಾಲ್ಲೂಕ್ ನಾಗರಘಟ್ಟದ ಗ್ರಾಮದ ಕೆರೆ ಒಂದು

ಈ ಕೆರೆಯು ಸುಮಾರು 15-20 ವರ್ಷದಿಂದಾ ಒಡೆದುಬಿದ್ದು ಕೃಷಿಕರಿಗೆ ಶಿಕಸ್ತಾಗಿ ಯಾವ ಪೈರನ್ನೂ ಕಾಣದೇ ಕರಿ ಕಂದಾಯವನ್ನು ತೆತ್ತುಕೊಂಡು

... ಆಫೀಸರುಗಳಲ್ಲಿ ಕೇಳಿಕೊಂಡಾಗ್ಯೂ ಯಾವ ಪ್ರಯೋಜನವನ್ನೂ ..., ಅಯ್ಯರು ಭಾಗದಲ್ಲಿ ಇದೇ ಕೃಷ್ಣರಾಜಪೇಟೆ ಡಿವಿಜನ್ ಅ॥ ಕಮಿಷನರ ಮ॥ ಸುಬ್ರಹ್ಮಣ್ಯಯ್ಯರವರು ಪರಾಂಬರಿಸಿ ನಮ್ಮ ಕಷ್ಟವನ್ನು ನೋಡಲಾ... ಸುಮಾರು 6 7 ವರ್ಷದಲ್ಲಿ ತೂಬಿನ ಕೆಲಸ ಮಾಡಿಸಿ ಕೊಟ್ಟರು

... ಕಲ್ಲು ಮತ್ತು ಕೋಡಿ ಕಾಮಗಾರಿ ವಿಷಯದಲ್ಲಿ ರೈತರೆಲ್ಲಾ ಮುಚ್ಚ...ಗೋಸ್ಕರ ಡಿಪಾಜಟ್ಟು ಕಟ್ಟಿ ಕಾಮಗಾರಿ ಪೂರೈಸದ ಕೊಡ್ಲೆ ಮಾಡಿಸುವದಾಗಿ ಅಪ್ಪಣೆಕೊಡಿಸಿದರು ನಾವುಗಳು ಅದೇ ರೀತಿ 1901 ನೇ ಸಾಲಿ... ಡಿಪಾಜಟ್ಟು ಮೊಬಲಗು ಪಾವತಿಮಾಡಿದ್ದಲ್ಲದೆ ಕಾಮಗಾರಿ ಸಹಾ ... ಅನಂತರ ಅನೇಕ ಅರ್ಜಿಗಳು ಕೊಟ್ಟು ಬೇಡಿಕೊಂಡಾಗ್ಯೂ ಇದು ... ನಮ್ಮ ಗೋಳನ್ನು ಕೇಳಿ ಕನಿಕರಪಡುವ ಆಫೀಸರುಗಳು ನಮ್ಮ ಭಾಗಕ್ಕೆ ...ರು ಇಲ್ಲ

... ದೇಶದಲ್ಲಿ ಸಕಲ ಪ್ರದೇಶದ ರೈತರು ಸುಖವಾಗಿದ್ದರೆ ರಾಜ್ಯಕ್ಕೆ ಉಭ್ರಾಯ ...ಉಂಟಾಗುವುದರಲ್ಲಿ ಅಡ್ಡಿಯಿಲ್ಲ.

ಈಗಲೂ ಮೇಲ್ಪಟ್ಟ ಆಫೀಸರುಗಳು ಜುಜುಬೀ ಕಾರ್ಯಗಳೆಂದು ಜುಗುಪ್ಸೆ ... ಬಡ ರೈತರುಗಳಾದ ನಮ್ಮ ಮೇಲೆ ದಯವಿಟ್ಟು ಫತ್ತರ್ ಮತ್ತು ಕೋಡಿ ...ಮಗಾರಿ ಸಹಾ ಮಾಡಿಸಿಕೊಟ್ಟು ಆಚಂದ್ರಾರ್ಕ ಯಶೋಭಾಗಿಗಳಾಗ...ವನ್ನು ಪರಿಪಾಲಿಸುವರೆಂದು ನಂಬಿರುತ್ತೇನೆ

ಬಡ ರೈತ

ಹಾಸನದ ಇಂಡಸ್ಟ್ರಿಯಲ್ ಸ್ಕೂಲ್

...,

ಇಲ್ಲಿ ಗೌರ್ನಮೆಂಟ್ ಗ್ರ್ಯಾಂಟನ್ನು ಪಡೆಯುತ್ತಿರುವ ಮರಗೆಲಸದ ಇಂಡಸ್ಟ್ರಿಯಲ್ ಸ್ಕೂಲ್ ಒಂದಿದೆ ಇದು ಪೂರ್ವದಲ್ಲಿ ಹೈಸ್ಕೂಲ್ ಹೆಡ್ಮಾಸ್ಟರ ಅಧೀನದಲ್ಲಿದ್ದು ಬಹಳ ಅಭಿವೃದ್ಧಿಸ್ಥಿತಿಯಲ್ಲಿತ್ತೆಂದು ಬಹು ಜನರು ಹೇಳು...ರೆ ಈಗ್ಗೆ 4 5 ವರ್ಷಗಳಿಂದ ಈ ಸ್ಕೂಲ್ ಇಲ್ಲಿನ ಸೆಂಟ್ರಲ್ ಕೋಆಪರೇಟಿವ್ ಸೊಸೈಟಿಯ ಅಧೀನದಲ್ಲಿದೆ ಇದರ ಸೆಕ್ರೆಟರಿಯವರಾದ ಮಿಸ್ಟರ್ ...ನರಸಿಂಹಾಚಾರ್ಯರವರು ಮೇಲ್ ವಿಚಾರಣೆ ನೋಡಿಕೊಳ್ಳುತ್ತಿರುವರು ... ಈ ಸ್ಕೂಲ್ ಹೈಸ್ಕೂಲ್ ಕಟ್ಟಡಕ್ಕೆ ಸೇರಿದಂತಿರುವ ಒಂದು ಪಡಿನಲ್ಲಿದೆ ...ನ ಮೇಲ್ ಛಾವಣಿಯು ಹುಲ್ಲೆಲ್ಲಾ ಹಾರಿಹೋಗಿಬಿಟ್ಟಿರುವುದರಿಂದ ...ಗಾರರು ಬಿಸಿಲಿನಲ್ಲಿ ಒಣಗುತ್ತಲೂ ಮಳೆಯಲ್ಲಿ ನೆನೆಯುತ್ತಲೂ ಕೆಲಸ ...ಬೇಕಾಗಿದೆ ರಿಜಿಸ್ಟರಿನಲ್ಲಿ 25 ರ ವರೆಗೂ ವಿದ್ಯಾರ್ಥಿಗಳ ಹೆಸರಿದ್ದರೂ ... ಹಾಜರಿಯು 4 ಕ್ಕಿಂತ ಹೆಚ್ಚಾಗಿ ಕಾಣಲಿಲ್ಲ ವಿದ್ಯಾರ್ಥಿಗಳಿಗೆ ...ಯಾಗಿ ಸ್ಕಾಲರ್ಶಿಪ್ ಹಣವನ್ನು ಕೊಡದೆ ಇರುವುದೇ ಹಾಜರಿ ಅಷ್ಟು ...ಯಾಗಿರಲು ಕಾರಣವೆಂದು ತೋರ್ಪಡುತ್ತದೆ ಮಾಹೆಯಾನ ಬರುತ್ತಿರುವ ...ಮೆಂಟ್ ಗ್ರ್ಯಾಂಟ್ ನೂರು ರೂಪಾಯಿಗಳಲ್ಲಿ ಸುಮಾರು 70 80 ರೂಪಾಯಿ... ಮಾತ್ರವೇ ನಿಜವಾದ ಖರ್ಚಿರುವಂತೆ ತೋರುತ್ತದೆ ಸ್ಕೂಲ್ ...ಸ್ಪೆಕ್ಟರವರು ಇಲ್ಲಿಗೆ ಬಂದಾಗ ಈ ಸ್ಕೂಲ್ ಇರುವ ಸ್ಥಳವನ್ನೂ, ರಿಜಿಸ್ಟರ್ ...ರುವಂತೆ ವಿದ್ಯಾರ್ಥಿಗಳ ಹೆಸರುಗಳನ್ನೂ ತೆಗೆದು ಅವರವರು ಮಾಡಿರುವ ಕೆಲಸ... ಗ್ರ್ಯಾಂಟ್ ಹಣದ ವಿನಿಯೋಗದ ಲೆಕ್ಕವನ್ನೂ ಪರೀಕ್ಷಿಸಿದ್ದರೆ, ನಿಜಾಂಶವು ...ಗುತ್ತಿತ್ತು ಇಷ್ಟು ಮಾತ್ರವೇ ಅವರು ಮಾಡಿದ್ದ ಪಕ್ಷದಲ್ಲಿ ಇನ್ನು ...ದರೂ ಈ ಸ್ಕೂಲು ಜನರಲ್ಲಿ ಕಸಬನ್ನು ಅಭಿವೃದ್ಧಿಮಾಡುವುದಕ್ಕೆ ...ಯುತ್ತಿತ್ತೆನ್ನಬಹುದು ಈಗಲಾದರೂ ಮೇಲ್ಪಟ್ಟ ವಿಚಾರಣಾಧಿಕಾರಿಗಳು ... ಈ ಸಂಗತಿಯನ್ನು ಪರೀಕ್ಷಿಸಿ, ಜನೋಪಯೋಗಕಾರಿಯಾಗುವಂತೆ ..., ಸರ್ಕಾರದ ಗ್ರ್ಯಾಂಟ್ ಹಣವು ಸಾರ್ಥಕವಾಗಿ ಎಲ್ಲವರಿಗೆ ಉಪಕಾರ ...ಟಿಗೆ ಪ್ರೋತ್ಸಾಹವೂ ಉಂಟಾಗುವುದು ಈ ವಿಷಯದಲ್ಲಿ ಸರ್ಕಾರದ ...ಉತ್ಕರ್ಷವಾಗಿ ಲಕ್ಷ್ಯಕೊಡುವುದೇ ಉತ್ತಮವು ಅಥವಾ ಸೊಸೈಟಿಯೆಂಬ ...ದರೂ ಚೆನ್ನಾಗಿ ಲಕ್ಷ್ಯವಿಟ್ಟರೆ ಸರಿಯಾದೀತು

ಕರಕೌಶಲ ವಿದ್ಯಾಭಿಮಾನಿ

ಮುಜರಾಯಿ ಪ್ರಸ್ತಾಪ...

...,

ನಿಮ್ಮ ಜೂಲೈ ಮಾಹೆಯ ತಾ 21 ರಲ್ಲು ಪ್ರಕಟವಾದ ಪತ್ರಿಕೆಯಲ್ಲಿ ...ಡುಗಳ ಪ್ರಜೆಗಳ ಕ್ಷೇಮಕ್ಕೆ ಮಂಡಗದ್ದೆ ತಿಮ್ಮೇಗೌಡರವರು ಕೊಟ್ಟಿರುವ ... ಸಾಲದಾಗಿ ಇಲ್ಲ ಆ ವಿದ್ಯಾಹೀನರಾದ ಜನಗಳು ವಾಸಮಾಡುವ ... ಊರಿನಲ್ಲಿಯೂ ಜನಗಳು ಮೌಢ್ಯದಿಂದ ಸರ್ವಶಕ್ತನಾದ ದೇವರು ...ನು ಎಂಬುವನ್ನು ಬಿಟ್ಟು ಕ್ಷುದ್ರ ದೇವತೆಗಳಾದ ಭೂತ ಪಿಶಾಚಿ ಎಂಬ ... ಮುಂತಾದವುಗಳನ್ನು ನಂಬಿಕೊಂಡು ಅವುಗಳ ದೆಸೆಯಿಂದ ಒಬ್ಬರಿ...ರು ಕೇಡು ಹಾರೈಸಿ ಇದರ ಮೂಲಕ ಪ್ರಜೆಗಳು ಲಯವಾಗುತ್ತಿದ್ದಾರೆ ...ದ ಘನವಾದ ಸರಕಾರದವರು ಈ ಕ್ಷುದ್ರ ದೇವತೆಗಳನ್ನೆಲ್ಲಾ ನಾಶ... ಊರಿಗೆ ಒಂದೇ ದೇವರು ಎಂದು ಕಟ್ಟುಮಾಡಿ ಊರಿನ ಪ್ರತಿ ಒಬ್ಬರೂ ... ದೇವತೆಯನ್ನೇ ಪೂಜಿಸಬೇಕಾಗಿ ಕಟ್ಟುಮಾಡಿ ಆ ದೇವತೆಗೆ ಸರಕಾರ ...ರ್ವಮಾನ್ಯವನ್ನು ಬಿಟ್ಟುಕೊಡಬೇಕು ಅಲ್ಲದೆ ಊರಿನ ಪ್ರಜೆಗಳಲ್ಲಿ ... ಊರಿಗೆ ನೇಮಿಸಲ್ಪಟ್ಟ ದೇವತೆ ಒಂದು ಹೊರತಾಗಿ ಬಾಕಿ ದೇವತೆ ... ಪೂಜಿಸದಂತೆ ಸರಕಾರದಿಂದ ಕಟ್ಟುಮಾಡಿಸಬೇಕು

(೨) ಈ ಮಲೆನಾಡು ಪ್ರಜೆಗಳು ವಾಸಮಾಡುವ ಮನೆಗಳಿಗೆ ನಾಟಾ ವಗೈರೆ ...ಗಿ ಇರಬೇಕಾದ್ದರಿಂದ ಇದ್ದ ಕಾಡನ್ನೆಲ್ಲಾ ಸರ್ಕಾರದವರೇ ಆಕ್ರಮಿಸಿ...ಕೊಂಡಿದ್ದಾರೆ ಈ ಅನನುಕೂಲದ ದೆಸೆಯಿಂದ ನಾಟಾ ವಗೈರೆ ಸಿಕ್ಕು...ವುದು ದುರ್ಲಭವಾಗಿದೆ ಆದ್ದರಿಂದ ಸರಕಾರದವರು ಈ ಪ್ರಜೆಗಳಿಗೆ ...ಕಲ್ಪಿಸುವ ಉದ್ದೇಶ್ಯ ಯಾವ ಸ್ಥಳದಲ್ಲಿ ನಾಟಾಗಳನ್ನು ಬಯಸು... ಮುಫತ್ತಾಗಿ ಕೊಡಿಸಿಕೊಡಬೇಕು ನಾಟಾ ಲೈಸೆನ್ಸು ಕೊಡುವ ...ದಾರ್, ಶ್ಯಾನುಭೋಗರುಗಳಿಗೆ ಅಧಿಕಾರ ಕೊಡುವಂತೆ ಮಾಡಿಸಬೇಕು

(೩) ಮಲೆನಾಡು ತರಫಿನಲ್ಲಿ ಪ್ರತಿ 15 ಮೈಲಿಗೂ ಒಂದು ಸಂತೆ, ಹೆರಿಗೆ ...ಮಾಡಿಸುವದಕ್ಕೆ ಒಬ್ಬ ಸೂಲಗಿತ್ತಿ, ಒಂದು ಪೋಸ್ಟು ಆಫೀಸು, ಈ ...ಕೊಟ್ಟರೆ ಪ್ರಜೆಗಳಿಗೆ ತೊಂದರೆ ಕಡಿಮೆಯಾಗುವದರ ಮೂಲಕ ...ವೃದ್ಧಿ ಆಗುವದರಲ್ಲಿ ಏನೂ ಸಂದೇಹವಿಲ್ಲ

(೪) ಅಲ್ಲದೆ ಈ ಮಲೆನಾಡಿನಲ್ಲಿ ಹವ ಸದಾ ಥಂಡಿಯಾಗಿರುವದರಿಂದ ...ಪ್ರಜೆಗಳಿಗೆ ಬಹಳ ವಿಧದಲ್ಲಿ ಔಷಧದೋಪಾದಿಯಲ್ಲಿರುವ ಸರಾಬು ...ಸುವದಕ್ಕೆ ದುಕಾನುಗಳನ್ನು ಪ್ರತಿ 15 ಮೈಲಿಗೆ ಒಂದರಂತೆ ನೇಮಿಸಿ, ಈ ಪ್ರಜೆಗಳಿಗೆ ಸದಾ ಕಾಯಿಲೆಯನ್ನು ಉಂಟುಮಾಡುವ ಸೇಂದಿ ದುಕಾನನ್ನು ಕೂಡಿದಮಟ್ಟಿಗೂ ಕಡಮೆಮಾಡಿಸುತ್ತಾ ಬರಬೇಕು ಅಲ್ಲದೆ ಸರಾಬು ದುಕಾನುಗಳಲ್ಲಿ ಮಾರಾಟಮಾಡುವವರು ಉತ್ಪತ್ತಿ ಜಾಸ್ತಿಯಾಗುವದಕ್ಕಾಗಿ ಸರಾಬಿಗೆ ಸೀಗೆಪುಡಿ ನೀರೂ, ಕರ್ಪೂರದ ನೀರೂ ಸೇರಿಸದಂತೆ ಮಾಡಿಸಬೇಕು ಅಲ್ಲದೆ ವ್ಯಾಪಾರ ವೃದ್ಧಿ ಆಗುವದಕ್ಕೆ 20 ಮೈಲಿಗೆ ಒಂದು ಸ್ಥಳದಲ್ಲಿ ರಸ್ತೆಯನ್ನು ಸೇರಿಸಿಕೊಡಬೇಕು ಮತ್ತು ದೊಡ್ಡ ಆಫೀಸರುಗಳು ಈ ಮಲೆನಾಡು ತರಫು ರಸ್ತೆಗಳಲ್ಲಿ ಮಳೆಗಾಲವಾದ ಜೂನ್ ಲಾಗಾಯಿತು ನವಂಬರು ಆಖೈರು ವರಿಗೂ ತಿರಿಗಿ ನೋಡುವದೇ ಇಲ್ಲ ಈ ಕಾರಣದಿಂದ ಮಲನಾಡು ತರಫಿನ ಜನಗಳ ಕಷ್ಟ ನಷ್ಟಗಳು ಸರಕಾರದವರ ಚಿತ್ತಕ್ಕೆ ಬರುವದೇ ಇಲ್ಲ ಆದ್ದರಿಂದ ದೊಡ್ಡ ಆಫೀಸರುಗಳು ಮಳೆಗಾಲದಲ್ಲಿ ಒಂದು ದಫಾ ಆದರೂ ತಿರಿಗಿ ಸಂಚಾರಮಾಡಿದರೆ ಪ್ರಜೆಗಳ ಕಷ್ಟ ಗೊತ್ತಾಗುತ್ತೆ ಈ ರೀತಿ ಸರಕಾರದವರ ಅವಗಾಹನೆಗೆ ತರಲು ತಮ್ಮ ಪತ್ರಿಕೆಯಲ್ಲಿ ಪ್ರಕಟಮಾಡುವದರ ಮೂಲಕ ಈ ರೈತ ಪ್ರಜೆಗಳಿಗೆ ಕೂಡಿದಮಟ್ಟಿಗೂ ಸುಖ ಸಂಪತ್ತು ಉಂಟಾಗಿ ಪ್ರಜಾಭಿವೃದ್ಧಿ ಆದೀತೆಂದು ಹಾರೈಸುವ

ಎಚ್ ಅಣ್ಣೇಗೌಡ, ಸೀಗೆಕಾನ್ ಕಾಫಿ ಪ್ಲಾಂಟರ್ ಮತ್ತು ಪಟೇಲ್, ಮೇಲುಹುಲುವತ್ತಿ ಗ್ರಾಮ, ಜಾಗ್ರದ ಹೋಬಳಿ, ಚಿಕ್ಕಮಗಳೂರು ತಾಲ್ಲೂಕು

ತಾಲ್ಲೂಕು ವರ್ತಮಾನಗಳು

ಜಗಲೂರು ತಾ॥ ಬಿದರಕೆರೆ — ಈ ಗ್ರಾಮಕ್ಕೆ ಸಾಧಾರಣವಾಗಿ 7-8 ಪತ್ರಿಕೆಗಳೂ ಕಾಗದಗಳೂ ಬರುತ್ತವೆ ಆದ್ದರಿಂದ ಪೋಸ್ಟಾಫೀಸಿನವರು ಕಾಲಕ್ಕೆ ಸರಿಯಾಗಿ ಒದಗಿಸುವದಿಲ್ಲ ಇದನ್ನು ಪೋಸ್ಟಾಫೀಸಿನವರು ಸರಿಪಡಿಸಾರೆಂದು ನಂಬಿದ್ದೇನೆ — ಚಿಕ್ಕಜಾಜೂರಿಂದ ಚಿತ್ರದುರ್ಗಕ್ಕೆ ರೈಲ್ವೆ ಆಗಲು ಅಂದಾಜು ಚರಂಡಿ ವಗೈರೆ ನಡೆದಿತ್ತು ಈಚೆಗೆ ಇಷ್ಟುದಿವಸ ನಿಂತಿರುವದು ಯಾವ ಕಾರಣದಿಂದಲೋ ತಿಳಿಯದು ಈಗಲಾದರೂ ಘನವನ್ನೈದಿದ ಸರ್ಕಾರದವರು ರಸ್ತೆಯನ್ನು ಜಾಗ್ರತೆಮಾಡಿಸಿ ಚಿಕ್ಕಜಾಜೂರಿಂದ ರೈಲ್ವೆ ತಂದಾರೆಂದು ನಂಬಿದ್ದೇನೆ ರೈಲ್ವೆ ಇಲ್ಲದ್ದು ಜನಗಳಿಗೆ ತುಂಬಾ ಕಷ್ಟವಾಗಿದೆ ಆದ್ದರಿಂದ ಸರ್ಕಾರದವರು ಜಾಗ್ರತೆ ತಂದಾರೆಂದು ಹಾರೈಸುತ್ತೇನೆ

ಪಾವಗಡ ತಾಲ್ಲೂಕು ವೆಂಕಟಾಪುರ — ಈಗ 21 ತಿಂಗಳಿಂದಲೂ ಇಲ್ಲಿ ಸುತ್ತಮುತ್ತಲೂ ಮಳೆ ಇಲ್ಲದೆ ಜನಗಳಿಗೂ, ಗೋವುಗಳಿಗೂ ಬಹಳ ತೊಂದರೆಯಾಗಿದೆ ಧಾರಣೆವಾಸಿ ಹೆಚ್ಚಾಗಿಯೇ ಇದೆ — ಈ ಊರಲ್ಲಿ 12 ದಿನಗಳ ಕೆಳಗೆ ಮಾಲ ಸಂಜೀವನ ಹೆಂಡತಿಯು ಎರಡು ಗಂಡು ಮಕ್ಕಳನ್ನೂ ಒಂದು ಹೆಣ್ಣುಮಗುವನ್ನೂ 2 ಘಂಟೆಗಳೊಳಗಾಗಿ ಹೆತ್ತಿರುತ್ತಾಳೆ ಆ ಮಕ್ಕಳು ಇದುವರೆವಿಗೂ ಬದುಕಿವೆ ದೃಢವಾಗಿಯೂ ದಪ್ಪವಾಗಿಯೂ ಇವೆ ಇದು ಆಶ್ಚರ್ಯವಲ್ಲವೆ? — ಈ ತಿಂಗಳು 6 ನೇ ತಾರೀಖಿನಲ್ಲಿ ಮ॥ ಅಸಿಸ್ಟೆಂಟ್ ಸಾಹೇಬರವರು ಸ್ಪಿರಿಟಿನ ಮೋಟಾರ್ ದಯಮಾಡಿ ಸುತ್ತಲೂ ಚರಂಡಿಗಳನ್ನು ಪರೀಕ್ಷಿಸಿಕೊಂಡು ಹೊರಟು ಹೋದರು — ಅನೇಕ ವರ್ಷಗಳಿಂದಲೂ ಈ ಊರಲ್ಲಿ ಸ್ಕೂಲು ಇಲ್ಲದೆ ಹುಡುಗರು ಓದು ಬರಹವಿಲ್ಲದೆ ಕೆಟ್ಟು ಹೋಗುತ್ತಿದ್ದರು ಮೊದಲಿನಿಂದ ಕೂಲೀಮುರವಾಗಿದ್ದದ್ದನ್ನೇ ಈಗ 6 ತಿಂಗಳಿಂದಲೂ ಗೌರ್ನಮೆಂಟಿನವರು ಸರ್ಕಾರೀ ಸ್ಕೂಲು ಮಾಡಿ ಅದೇ ಉಪಾಧ್ಯಾಯರನ್ನೇ ಖಾಯಂ ಆಗಿ ಚುನಾಯಿಸಿರುತ್ತಾರೆ ಸ್ಕೂಲು ಕಟ್ಟಡವನ್ನು ಜಹಗೀರುದಾರ್ರು ಪಿ ವಿ ಕೃಷ್ಣಸ್ವಾಮಿ ಅಯ್ಯಂಗಾರ್ರು, ಬಿ ಎ ಯವರು ಈಗ ಕಟ್ಟಿಸುತ್ತಿದಾರೆ

ಕಡೂರು — ಈಚೆಗೆ ಎರಡು ತಿಂಗಳಿಂದಲೂ ಮಳೆಯಿಲ್ಲ ರಾಗಿ ವಗೈರೆ ಪಸಲೆಲ್ಲಾ ಒಣಗಿಹೋಗಿರುತ್ತೆ ಆಹಾರ ಪದಾರ್ಥಗಳ ಧಾರಣೆವಾಸಿಗಳು ಕ್ಷಾಮಗಾಲವನ್ನು ಅತಿಕ್ರಮಿಸುವಂತಿವೆ ಬಡವರ ಜೀವನವು ತುಂಬಾ ಕಷ್ಟಕರವಾಗಿರುವದನ್ನು ಭಗವಂತನು ಪರಿಹರಿಸಬೇಕಾಗಿದೆ — ಪ್ರಜಾಪ್ರತಿನಿಧಿ ಸಂಪದಭಿವೃದ್ಧಿ ಸಮಾಜದ ತಾಲ್ಲೂಕು ಕಮಿಟಿ ವಿಚಾರದಲ್ಲಿ ಬಂದಿದ್ದ ಹುಕುಮನ್ನು ಸರ್ವರಿಗೂ ತಿಳಿಸತಕ್ಕ ಬಗ್ಗೆ ನಮ್ಮ ಅಮಲ್ದಾರ್ರವರ ಆಹ್ವಾನ ಪತ್ರಿಕೆಯ ಮೂಲಕ ಗೌರ್ನಮೆಂಟ್ ಎ ವಿ ಸ್ಕೂಲಿನ ಸದ್ದರನ್ನು ಈ 7 ನೇ ತಾರೀಖು ಬೆಳಿಗ್ಗೆ ಬರಮಾಡಿಕೊಂಡು ಹುಕುಂ ಸಂಗತಿಯನ್ನು ತಿಳಿಯಪಡಿಸಿದರು — ಸರ್ಕಾರದವರು ಸಂಪದಭಿವೃದ್ಧಿ ಸಮಾಜವನ್ನು ಏರ್ಪಡಿಸಿರುವದರ ಅನುಕೂಲ ಇದರಿಂದ ರೈತರುಗಳಿಗೆ ಉಂಟಾಗುವ ಪ್ರಯೋಜನ ಮುಂತಾದ್ದರ ವಿಚಾರವನ್ನು ಕುರಿತು ಮ॥ ಆರ್ ಬಿ ಅನಂತಯ್ಯನವರು ಮಾಡಿದ ವಿಜ್ಞಾಪನೆಯು ಸರ್ವಸಮ್ಮತವಾಗಿ ಈ ಕಡೂರು ಟವನ್ನಲ್ಲಿ ಈ ಕಮಿಟಿಯು ಏರ್ಪಡಿಸುತ್ತದೆಂದು ನಿರ್ಧರಿಸಿ ರಿಪೋರ್ಟು ಮಾಡಲಾಯಿತು — ಹಿಂದುಳಿದಿರುವ ನಮ್ಮ ಸೀಮೆಯ ಪುರೋಭಿವೃದ್ಧಿ ವಿಚಾರದಲ್ಲಿ ಘನವಾದ ಸರ್ಕಾರದವರು ಮುಂದಕ್ಕೆ ತರಬೇಕಾಗಿ ಪಡುತ್ತಿರುವ ಶ್ರಮವನ್ನೂ ಧನವ್ಯಯವನ್ನೂ ನಮ್ಮ ಸೀಮೆಯ ಸಹೋದರರೂ ಏಕೀಭವಿಸಿ ಕೆಲತು ಕೆಲಸಮಾಡುವದರ ಮೂಲಕ ಸಾರ್ಥಕಪಡಿಸುವಂತೆ ಭಗವಂತನನ್ನು ಪ್ರಾರ್ಥಿಸುತ್ತಿರೋಣ

ದೇವನಹಳ್ಳಿ ತಾ॥ ವಡಿಗೇನಹಳ್ಳಿ — ಇಲ್ಲಿ ಈ ವರೆಗೂ ಮಳೆಯಾಗಲಿಲ್ಲ ಪೈರುಗಳೆಲ್ಲಾ ಒಣಗುತ್ತಿವೆ ಜನಗಳೆಲ್ಲರೂ ಗಾಬರಿಗೊಂಡಿರುವರು — ಐದು ಸಾವಿರದವರೆಗೂ ಪ್ರಜೆಗಳಿರುವ ಈ ಊರಿನಲ್ಲಿ ಒಬ್ಬ ಸೂಲಗಿತ್ತಿ ಇಲ್ಲದೆ ಬಹಳ ತೊಂದರೆಯಾಗಿದೆ ಹೆರಿಗೆಯಲ್ಲಿ ಏನಾದರೊಂದು ಅಪಾಯ ಒದಗಿದರೆ ಚಿಕ್ಕಬಳ್ಳಾಪುರಕ್ಕೋ, ದೇವನಹಳ್ಳಿಗೋ ಹೋಗಬೇಕಾಗಿದೆ ಇದರಿಂದ ಜನರ ಕಷ್ಟನಷ್ಟಗಳು ಹೇಳತೀರದಷ್ಟಾಗಿವೆ ಸರ್ಕಾರದವರು ದಯಮಾಡಿ ಈ ಕಷ್ಟವನ್ನು ಹೋಗಲಾಡಿಸಬೇಕಾಗಿದೆ — ಇಲ್ಲಿ ಪ್ರತಿಷ್ಠಿಸಲ್ಪಟ್ಟಿರುವ ದೇವಸ್ಥಾನದಲ್ಲಿ ಕೃಷ್ಣೋತ್ಸವವು, ಪೂಜೆ, ಭಜನೆ ಮುಂತಾದವುಗಳಿಂದಲೂ ನಡೆದವು ಬ್ರಂ ಶ್ರೀ ಲಕ್ಷ್ಮೀನಾರಣಪಂಡಿತರು, ರಾಮದಾಸಶಾಸ್ತ್ರಿಗಳು, ಲಕ್ಷ್ಮೀನೃಸಿಂಹ ಪಂಡಿತರು, ಶ್ರೀನಿವಾಸಾಚಾರ್ಯರೂ ದೈವಭಕ್ತಿ, ಸನ್ಮಾರ್ಗಿಗಳ ಲಕ್ಷಣ, ಪಾರ್ತಿಕಾನಂದಗಳ ವಿಷಯವಾಗಿ ಹೃದಯಂಗಮವಾದ ಉಪನ್ಯಾಸಗಳನ್ನು 4 ದಿನ ಮಾಡಿದರು ಇಲ್ಲಿನ ಸ್ಕೂಲ್ ಹೆಡ್ಮಾಸ್ಟರ್ ಮ॥ ಆರ್ ಶ್ರೀನಿವಾಸರಾಯರು ಈ ಉಪನ್ಯಾಸಗಳ ಸಾರಾಂಶವನ್ನು ತಿಳಿಸಿದರು ಸಭಿಕರು ಇಂತಹ ಉಪನ್ಯಾಸಗಳಿಂದ ಅತ್ಯಂತ ಪ್ರಯೋಜನವಿದೆ ಎಂದೂ, ಇದನ್ನು ಇಲ್ಲಿಗೆ ನಿಲ್ಲಿಸದೆ ಪ್ರತಿ ಭಾನುವಾರವೂ ಉತ್ತಮ ವಿಷಯಗಳನ್ನು ಕುರಿತು ಉಪನ್ಯಾಸಿಸಿ ಈ ಸಭೆಯನ್ನು ಶಾಶ್ವತಗೊಳಿಸಬೇಕೆಂದೂ ತೀರ್ಮಾನಿಸಿದರು ಸಂತರ್ಪಣೆಯು ತೃಪ್ತಿಕರವಾಗಿ ನೆರವೇರಿತು ಈ ಕೆಲಸಗಳನ್ನು ಮ॥ ಕಂಟ್ರಾಕ್ಟರ್ ಲಕ್ಷ್ಮೀನಾರಣಪ್ಪನವರು ಬಹು ಶ್ರದ್ಧೆಯಿಂದ ನಡೆಸಿದರಲ್ಲದೆ ಊರಿನ ಬ್ರಾಹ್ಮಣರೂ ವರ್ತಕರೂ ತುಂಬಾ ಪ್ರೋತ್ಸಾಹಗೊಳಿಸಿರುತ್ತಾರೆ

ಗೋರಿಬಿದನೂರು ತಾ॥ ಮಂಚೇನಹಳ್ಳಿ ಸಮ್ಮತು ಪುಷ್ಪರಹಳ್ಳಿ ಗ್ರಾಮ.— ಈ ಪ್ರಾಂತ್ಯ ಸುಮಾರು 1-2 ತಿಂಗಳ ಲಾಗಾಯ್ತು ಮಳೆ ಇಲ್ಲದೆ ಎಲ್ಲಿ ನೋಡಿದರೂ ರಾಗಿ ಅವರೆ ಜೋಳ ತೊಗರಿ ಈ ಬೆಳೆಗಳು ಸುತರಾಂ ಒಣಗಿಹೋಗಿರುತ್ತವೆ ಸಂತೆಗಳಲ್ಲಿ ದಿನಸಿಗಳ ಧಾರಣೆಯಂತು ಹೇಳತೀರದು ರಾಗಿ ರೂಪಾಯಿಗೆ 12 13 ಸೇರು ಅಕ್ಕಿ ರೂಪಾಯಿಗೆ 5½ 6 ಸೇರು ಈ ಪ್ರಕಾರ ಇರುತ್ತೆ ವರ್ತಕರು ಕಮ್ಮಿಸೇರು ಕಮ್ಮಿಬಟ್ಟುಗಳಿಂದ ಮಾರಾಟ ಮಾಡುವದು ಮಾತ್ರ ಈ ವರಿಗೂ ಬಿಟ್ಟಿರುವದಿಲ್ಲ. ಸಂತೆಗಳಲ್ಲಿ ಪಸಿಕೆ ಎತ್ತುವವರ ಕಾಟ ಹೇಳತೀರದು. ಪೋಲೀಸಿನವರ ನಿಗಾ ಯಾವಾಗ ಬೀಳುತ್ತೋ ತಿಳಿಯದು. ಈ ಗ್ರಾಮದಲ್ಲಿ ಸರ್ಕಾರಿ ಸ್ಕೂಲು ಇಲ್ಲದೆ ಹುಡುಗರು ವಿದ್ಯೆ ಇಲ್ಲದೆ ಕೆಡುವದಕ್ಕೆ ಕಾರಣವಾಗಿರುತ್ತೆ ಪಟೇಲ್ ಶ್ಯಾನುಭೋಗರು ಗೌರ್ನಮೆಂಟಿಗೆ ಬರೆದು ಯಾವಾಗ ಸ್ಕೂಲು ಮನೆ ಕಟ್ಟಿಸಿ ವಿದ್ಯೆಯಿಲ್ಲದೆ ಕೆಡುತ್ತಿರುವ ಹುಡುಗರನ್ನ ವಿದ್ಯಾವಂತರನ್ನಾಗಿ ಮಾಡಿ ಕೀರ್ತಿಗೆ ಭಾಗಿಗಳಾಗುತ್ತಾರೋ ತಿಳಿಯದು ಈ ಗ್ರಾಮದಲ್ಲಿ ನಾಲ್ಕೈದು ಭಾವಿಗಳಿದ್ದರೂ ಒಂದು ಭಾವಿಯಲ್ಲಿಯಾದರೂ ಒಂದು ತಂಬಿಗೆ ನೀರಿರುವದಿಲ್ಲ ಸರ್ಕಾರದಿಂದ ಮುಂಜೂರಾಗಿ ಕಟ್ಟಿಸಿರುವ ಭಾವಿಯಲ್ಲಿ ನೀರಿದ್ದರೂ ಕೂಡಾ ಗಾಲಿಗಳಿಲ್ಲದೆ ಸೇದುವದಕ್ಕೆ ಬಹಳ ಪ್ರಯಾಸವಾಗಿರುತ್ತೆ ಅಲ್ಲದೆ ಭಾವಿಯ ಸುತ್ತಲೂ ಕೆಸರಾಗಿ ಹೇಸಿಕೆಗೆ ಕಾರಣವಾಗಿದೆ ನಮ್ಮ ದಯಾಳುಗಳಾದ ಮೈಸೂರು ಸರ್ಕಾರದವರು ಭಾವಿಯ ಸುತ್ತಲೂ ಬಂಡೆಗಳು ಹಾಸಿಗೆ ಗಾಲಿಗಳು ಹಾಕಿಸಿಕೊಟ್ಟು ಬಡ ರೈತರ ಕಷ್ಟವನ್ನು ಹೋಗಲಾಡಿಸಿ ಕೀರ್ತಿಗೆ ಪಾತ್ರರಾಗಬೇಕೆಂಬದಾಗಿ ಅಡ್ಡಬಿದ್ದು ಬೇಡುತ್ತೇನೆ

ಗೋರೀಬಿದನೂರು ತಾಲ್ಲೂಕು ಹೊಸೂರು — ಇಲ್ಲಿ ಮೂರು ತಿಂಗಳಿಂದ ಮಳೆ ಇಲ್ಲ ಕುಡಿಯುವ ನೀರು ಸಿಕ್ಕುವುದೇ ದುರ್ಲಭವಾಗಿದೆ ರಾಗಿ ಜೋಳದ ಪೈರುಗಳೆಲ್ಲಾ ಕೆಟ್ಟುಹೋಗಿವೆ ಅದಕ್ಕೋಸ್ಕರವಾಗಿ ಹೊಲಗಳಲ್ಲಿ ದನಗಳನ್ನು ಬಿಟ್ಟು ಮೇಯಿಸುತ್ತಿದಾರೆ ಗದ್ದೆಯಂತೂ ಇಲ್ಲವೇ ಇಲ್ಲ ಧಾರಣೆವಾಸಿಗಳು ಏರುತ್ತಲಿವೆ ಈ ಊರಿಗೆ ಸುಮಾರು ಒಂದು ಮೈಲಿ ದೂರದಲ್ಲಿರುವ ಮುದ್ದುಗೆರೆ ಗ್ರಾಮದಲ್ಲಿ ಒಂದು ಕಳ್ಳತನ ಜರಗಿತು ಒಬ್ಬ ಬಂಡಿಯವನನ್ನು ಹೊಡೆದು ಕುರಿ ರೊಪ್ಪಕ್ಕೆ ನುಗ್ಗಿ ಕೆಲವು ಮಾಲುಗಳನ್ನೂ 4-5 ಕುರಿಗಳನ್ನೂ ಹೊತ್ತುಕೊಂಡು ಹೋದರು ಮತ್ತು ಕಾಡುಗಳಲ್ಲಿಯೂ ಬೆಟ್ಟಗುಡ್ಡಗಳಲ್ಲಿಯೂ ಕಳ್ಳಕಾಕರು ಸೇರಿಕೊಂಡು ರಾತ್ರಿ ಹೊತ್ತು ಗ್ರಾಮಗಳಿಗೆ ನುಗ್ಗಿ ಹಾವಳಿ ಮಾಡುತ್ತಿದಾರೆ ಈ ವಿಷಯದಲ್ಲಿ ತಾಲ್ಲೂಕು ಅಮಲ್ದಾರ್ರವರೂ ಪೋಲೀಸ್ ಇನ್ಸ್ಪೆಕ್ಟರವರೂ ಹೆಚ್ಚಾಗಿ ಗಮನ ಕೊಡಬೇಕಾಗಿ ಪ್ರಾರ್ಥಿಸುತ್ತೇನೆ ಇದೇ ತಿಂಗಳು 10 ನೇ ತಾರೀಖಿನಲ್ಲಿ ಈ ಊರಿನ ವಿ ಇ ಸ್ಕೂಲಿನಲ್ಲಿ ನಡೆದ ಗಣೇಶಪೂಜೆಯ ಸಮಯದಲ್ಲಿ ಒಂದು ಸಭೆ ಸೇರಿತು ಆಗ ಅ॥ ಹೆ॥ ಮಾ॥ ಮ॥ ಹೆಚ್. ನಂಜುಂಡಶಾಸ್ತ್ರಿಗಳವರು ವಿದ್ಯಾಭ್ಯಾಸದ ವಿಷಯವಾಗಿ ಹುಡುಗರ ಮನಸ್ಸನ್ನು ಆಕರ್ಷಿಸುವಂತೆ ಉಪನ್ಯಾಸವನ್ನು ಮಾಡಿದರು ಇವರು ಬಹಳ ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ ಅಧ್ಯಕ್ಷರಾದ ಎಕ್ಸೈಜ್ ಅ॥ ಇ॥ ಮ॥ ರಾಮರಾಯರವರು ಸಭಿಕರ ಮನಸ್ಸನ್ನು ರಂಜಿಸತಕ್ಕ ಕೆಲವು ಮಾತುಗಳನ್ನು ಆಡಿದರು ಶೇಕದಾರ್ ಮ॥ ರಾಘವೇಂದ್ರರಾಯರವರು ಕೂಡ ತಮ್ಮ ಅನುಭವಕ್ಕೆ ಬಂದ ಆನೇಕ ವಿಷಯಗಳನ್ನು ತಿಳಿಸಿದರು ಈ ಮೂವರೂ ವಿದ್ಯಾಭಿವೃದ್ಧಿಯ ವಿಷಯದಲ್ಲಿ ಬಹಳ ಪ್ರಯತ್ನವನ್ನು ಮಾಡುತ್ತಿದ್ದಾರೆ ಇವರಿಗೆ ದೇವರು ದೀರ್ಘಾಯುಸ್ಸನ್ನೂ ಆರೋಗ್ಯವನ್ನೂ ಕೊಡಲೆಂದು ನಾನು ಸರ್ವಶಕ್ತನಾದ ಭಗವಂತನನ್ನು ನಿರಂತರವೂ ಪ್ರಾರ್ಥಿಸುತ್ತೇನೆ

ಹುಣಸೂರು — ಇಲ್ಲಿ ಅನೇಕ ದಿನಗಳಿಂದ ಬರೀ ಮೋಡಾದ ಬರವೇ ಹೊರತು ಮಳೆಯೇ ಇಲ್ಲ ರಾಗಿ ಬಿತ್ತನೆ ಮೊದಲು ಬಿತ್ತಿದ್ದು ಕೂಡಿದಮಟ್ಟಿಗೂ ಚೆನ್ನಾಗಿ ಆಯಿತೆಂದು ಹೇಳಿದರೂ ಹಿಂದಣ ಬಿತ್ತನೆಗೆ ಮಳೆ ಸಾಲದೆ ಸಂಪೂರ್ಣ ಕೆಟ್ಟು ಹೋಯಿತು ಕಿರಾಣಿ ಮೊದಲಾದ ಬಿತ್ತನೆಗೆ ಮಳೆ ಸದ್ಯ ಅವಶ್ಯವೆಂದು ಕೆಲವರು ಹೇಳುತ್ತಾರೆ ಇನ್ನು ಕೆಲವರು ರಾಗಿಯ ಕೊಯ್ಲು ಕಾಲವಾದುದರಿಂದ ಮಳೆಯು ಸದ್ಯದಲ್ಲಿ ಪ್ರಕೃತವಿಲ್ಲವೆಂದೂ ಹೇಳುತ್ತಿರುವರು ಧಾರಣೆಯಂತೂ ತುಟ್ಟಿಯಾಗಿಯೇ ಇರುವುದು ಕೂಲಿನಾಲಿ ಮಾಡಿಕೊಂಡೋ ಜುಜುಬೀ ಸಂಬಳ ತಂದೋ ಜೀವಿಸುವವರ ಪಾಡು ಕೇವಲ ಅನುತಾಪಕರವಾಗಿರುವುದು ಮದ್ರಾಸ್ ಮುಂತಾದ ಬ್ರಿಟಿಷ್ ಆಧಿಪತ್ಯಗಳಲ್ಲಿ ಜುಜುಬೀ ನೌಕರರಿಗೆ ಬಡ್ತಿ, ಅಲೋಯೆನ್ಸ್ ಕೊಟ್ಟು ಉದ್ಧಾರಮಾಡುವ ರೀತಿಯಲ್ಲಿ ಮೈಸೂರು ಸೀಮೆಯ ಪೋಲೀಸು ಮೊದಲಾದ ಇಲಾಖೆಗಳ ವಿಷಯದಲ್ಲಿ ಮೈಸೂರು ಸರ್ಕಾರದವರು ಕರುಣವಿಟ್ಟು ಸ್ವಲ್ಪ ಬಡ್ತಿಯನ್ನೋ ಅಲೋಯನ್ಸನ್ನೋ ಕೊಟ್ಟು ಉದ್ಧಾರಮಾಡುವ ಯಾವದಾದರೂ ಒಳ್ಳೆ ಏರ್ಪಾಡು ಮಾಡುವುದು ತಕ್ಕದ್ದಾಗಿರುವುದು ಇಲ್ಲವಾದರೆ ಕಳ್ಳತನವೇ ಮೊದಲಾದ ದುಷ್ಟ ಕೆಲಸಗಳಿಗೆ ಹೊಟ್ಟೆಗೆ ಇಲ್ಲದವರು ಪ್ರವರ್ತಿಸಿ ಪ್ರಜಾಕಂಟಕರಾಗಿ ಬಾಳುವರೇನೋ ಎಂಬ ಶಂಕೆಗೆ ಆಸ್ಪದವಾಗುವುದು — ಇಲ್ಲಿಗೆ 4 ಮೈಲ್ ದೂರದಲ್ಲಿರುವ ಕಟ್ಟೆಮಳಲವಾಡಿ ಗ್ರಾಮದಲ್ಲಿ 3 ತಿಂಗಳ ಕೆಳಗೆ ಜವಳಿ ಕಳುವಾಗಿತ್ತು ಪತ್ತೆಯಾಗದೆ ಗುಮಾನಿಯಮೇಲಿದ್ದದ್ದು ಕಳೆದ ವಾರ ಕಳುವುಗಾರನು ಪತ್ತೆಯಾದನು ಮಾಲು ಪತ್ತೆಯಾಗಿ ವಿಚಾರಣೆನಡೆಯುತ್ತಾ ಇರುವುದು — ಕಳೆದ ತಿಂಗಳು 25 ನೇ ತಾ ಸೋಮವಾರದ ರಾತ್ರಿ ಇಲ್ಲಿನ ಟವನ್ ರಾತ್ರಿ ಹಗಲೂ ಜನರು ಸಂಚರಿಸುವ ಪಬ್ಲಿಕ್ ರೋಡಿನಲ್ಲಿರುವ ಹನುಮಂತರಾವ್ ಟೈಲರ್ ಅಂಗಡಿಯಲ್ಲಿ ಕತ್ತರಿಸದ ಮತ್ತು ಕತ್ತರಿಸಿದ್ದ ಸುಮಾರು 32 ರೂಪಾಯಿನ ಒಟ್ಟೆಗಳನ್ನು ಯಾರೋ ಕಳುವುಮಾಡಿರುವರು ಇನ್ನೂ ಪತ್ತೆ ಇಲ್ಲ ಪಕ್ಕದಲ್ಲಿಯೇ ಜವಳಿಯ ಇನ್ನೊಂದು ಅಂಗಡಿ ಇದ್ದೂ ಅಲ್ಲಿಗೆ ಕಳ್ಳರು ತಮ್ಮ ಭೇಟಿ ಕೊಡದಿದ್ದು ಪರಮಾಶ್ಚರ್ಯವಾಗಿದೆ ಇಂತಹ ಪಬ್ಲಿಕ್ ರೋಡಿನಲ್ಲೇ ಹೀಗೆ ಕನ್ನ ಕಳುವು ನಡೆದರೆ ಸಂದುಗೊಂದುಗಳ ಪಾಡು ಎಷ್ಟರಮಟ್ಟಿಗಿರುವದೋ ತಿಳಿಯದು ಇದರಿಂದ ಪೋಲೀಸ್ ಇನ್ಸ್ಪೆಕ್ಟರವರು ತಮ್ಮ ತಾಬೆಯಲ್ಲಿರುವ ಕಾನ್ಸ್ಟೇಬಲುಗಳು ತುಂಬಾ ನಿಗಾ ಇಟ್ಟು ಬೀಟ್ ಮಾಡುವ ಏರ್ಪಾಡು ಮಾಡಬೇಕು ಆ ಸ್ಟೇಷನ್ನಲ್ಲಿ ಕೆಲವು ವೇಳೆ ಇರುತ್ತಾರೆ, ಕೆಲವು ವೇಳೆ ಇರುವುದಿಲ್ಲ ಇನ್ಸ್ಪೆಕ್ಟರವರು ನಿಗಾ ಕೊಟ್ಟರೆ ಉಪಕಾರವಾಗುವದು

ಬೇಲೂರು — ಮಳೆ ಸುತರಾಂ ಇಲ್ಲ ರೈತರೆಲ್ಲಾ ಒಣಗಿರುವ ಪೈರುಗಳನ್ನು ನೋಡಿ ಹಾಹಾಕಾರಮಾಡುತ್ತಾ, ಆಕಾಶವನ್ನು ನೋಡಿ ಜಗದೀಶನು ಯಾವಾಗ ಮಳೆಯನ್ನು ಕೊಟ್ಟು ತಮ್ಮನ್ನು ಕಾಪಾಡುವನೋ ಎಂದು ಚಾತಕ ಪಕ್ಷಿಯಂತೆ ಮೇಘ ಮಂಡಲವನ್ನೇ ಎದುರುನೋಡುತ್ತಿರುವರು — ಈ ಊರು ಕೋಟೆ ಪೇಟೆಗಳ ಭಾಟಾ ಮಾರ್ಗ ವಿನಹಾ ಗಲ್ಲಿಗಳು ಮುನಿಸಿಪಲ್ ಸ್ವೀಪರುಗಳ ದೃಷ್ಟಿಗೂ ಬೀಳುವಂತಿಲ್ಲ ಅಲ್ಲೆಲ್ಲಾ ಮನಸ್ಸಿಗೆ ಬಂದ ಗಿಡಗಳು ಬೆಳೆದು ಅವುಗಳ ಮರೆಯಲ್ಲಿ ಜನಗಳು ಹೇಸಿಕೆ ವಗೈರೆ ಮಾಡಿ ಅಲ್ಲಿ ಸಂಚರಿಸುವವ

ರಿಗೂ ಅಲ್ಲಿ ವಾಸಿಸುವವರಿಗೂ ಅಸತ್ಯವನ್ನುಂಟುಮಾಡಿರುವುದು ಮುನಸಿಪಲ್ ಧೀಶಗಳ ವಿಷಯವಂತೂ ಕೇಳಲೇಬೇಕಾಗಿಲ್ಲ ಆಫೀಸರುಗಳ ಮನೆಗಳ ಮುಂದಿನದು ವಿನಹಾ ಬಿಕ್ಕವು ಹತ್ತಿಸಿದ ಒಂದೆರಡು ನಿಮಿಷಗಳು ಮಾತ್ರವಿದ್ದು ನಶಿಸಿಹೋಗುವವು —ಪೋಲೀಸಿನವರು ಗಸ್ತುಮಾಡುವುದು ಅಪರೂಪ ಪೇಟೆ ಕೋಟೆಗಳಲ್ಲಿರುವ ಗಣ್ಯರಾದವರು ಮುನಸಿಪಲ್ ಮೆಂಬರುಗಳಾಗಿಲ್ಲದೆ ಕೋಟೆಯ ಕೆಲವು ಮಂದಿ ಮಾತ್ರ ಮೆಂಬರುಗಳಾಗಿರುವುದರಿಂದಲೂ ಅವರ ಸಂದರ್ಶನವು ಪ್ರಜೆಗಳಿಗೆ ಲಭಿಸುವುದೇ ಕಷ್ಟಸಾಧ್ಯವಾಗಿರುವುದರಿಂದಲೂ ಮುನಸಿಪಾಲಿಟಿಯು ಹೀನಸ್ಥಿತಿಗೆ ಬರಲು ಕಾರಣವಾಗಿದೆ

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಜ್ಯವಾದದ್ದರಿಂದ ನಾನಾ ದೇಹಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸಣ್ಣಸಣ್ಣ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION 2-38

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷದದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ಔಷದವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಂಡುಬರುವವು

ಕೈಯಿಂದ ಮುಟ್ಟದೇನೇ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ಮೀನುಮನುಷ್ಯ ಇರುವ ಈ ಔಷಧದ ಗುರುತು

ಮರೆಯಬ್ಯಾಡಿರಿ ! ಮರೆಯ ಬ್ಯಾಡಿರಿ !!

ದರ್ಬಾರ್ ಸಾಬೂನು

ಏಜಂಟರುಗಳು ಬೇಕಾಗಿದೆ

ಒಳ್ಳೇ ಕಮಿಷನ್ ದೊರೆಯುವದು

ಅಪಾಯವಿಲ್ಲದ ರೋಮಸಂಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ನಾಶವಾಗುವದು

ಉರಿ, ನೆಕೆ ಮುಂತಾದ ಬಾಧೆಗಳಲ್ಲವು ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು ಮರೆಯಬ್ಯಾಡಿರಿ

3 ಸಬ್ಬುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ 11 ಆಣೆ

2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1 10 0

ಅಂಚೇ ಹಾಸಲು 4 ಆಣೆ

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ [151 1]

ವಿಳಾಸ—ವಿ ? ಎಸ್ ಪಾಣಿ ಕಂಪನಿ

1, ಅರುಳಪ್ಪನ್ ಬೀದಿ, ಮದರಾಸು

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ ? " ಎಂದು ನಿನ್ನನ್ನು ನೀನೇ ಕೇಳಿಕೋ



(೧೨ ಆಣೆ ಬುಡ್ಡಿ ಪರಿಯಾಣ)

ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ, ಪಿತ್ತ ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಬರಿ, ಅಶಕ್ತಿ, ಎದೆಯು ತಲ್ಲಣಿಸುವುದು, ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ ಹುಳಿತೇಗಿನ ಹೊಟ್ಟೆನೋವು; ಹೆಂಗಸರ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದವು ಗಂಡಸರಿಗಾಗಲಿ ಹೆಂಗಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಲವಾದ ವಾಯುವನ್ನೂ, ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ರೋಗನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [181 2]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯುವುವು, ಅಥವಾ ಡೋನ್, ಪಿ ಒ ಬಾಕ್ಸ್ ೨೦ ಬೊಂಬಾಯಿ—ಇವರಲ್ಲಿ ದೊರೆಯುವುದು

ಪ್ರಾಕೃತಿಕ ಭೂಗೋಳ.

ಮೊದಲನೇ ಮುದ್ರಣವು ಅತಿ ಶೀಘ್ರವಾಗಿ ಮುಗಿದುಹೋದ್ದರಿಂದ ಈಚೆಗೆ ಬಂದಿರುವ ಆರ್ಡರುಗಳಿಗೆ ಪ್ರತಿಗಳನ್ನು ಕಳುಹಿಸಲು ಅವಕಾಶವಾಗಲಿಲ್ಲ ಎರಡನೇ ಮುದ್ರಣದಲ್ಲಿ ಅನೇಕ ಹೆಚ್ಚು ವಿಷಯಗಳನ್ನು ಚನ್ನಾಗಿ ವಿವರಿಸಿ ಆರ್ಟ್ ಪೇಪರಿನಮೇಲೆ ಪ್ರಿಂಟುಮಾಡಿರುವ ಅನೇಕ ಹೊಸ ಚಿತ್ರಗಳನ್ನು ಸೇರಿಸಿರುವುದಲ್ಲದೆ 1 ಆಣೆ ಬೆಲೆ ಬಾಳುವ ಬಣ್ಣಹಾಕಿರುವ ಸುಂದರವಾದ ಒಂದು ಮೈಸೂರು ಮ್ಯಾಪನ್ನು ಸಹ ಸೇರಿಸಿರುತ್ತೆ 1 ನೆಯ ಭಾಗವು ಸೆಪ್ಟಂಬರ್ ತಿಂಗಳು 25 ರಲ್ಲಿ ವಿಕರಿಗೆ ಸಿದ್ಧವಾಗುವುದು ಈ ಪುಸ್ತಕವು ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೂ ಮತ್ತು ಸ್ಕೂಲಿನಲ್ಲಿ ಪಾಠಹೇಳುವುದಕ್ಕೂ ಬಹಳ ಸಹಕಾರಿಯಾಗಿರುತ್ತದೆ ಕೆಲವು ಪ್ರತಿಗಳು ಮಾತ್ರ ಪ್ರಿಂಟಾಗಿರುವುದರಿಂದ ಮೊದಲು ಬಂದ ಆರ್ಡರುಗಳಿಗೆ ಜಾಗ್ರತೆಯಲ್ಲಿ ಪ್ರತಿಗಳು ಕಳುಹಿಸಲ್ಪಡುವುವು ಕ್ರಯ 0 1 6

ಹೊಸ ಕನ್ನಡ 3 ಬಗೆಯ ಪುಸ್ತಕವೆಂಬ ಹೆಸರಿನಿಂದ 4 ನಂಬರು ಕಾಪಿ ಪುಸ್ತಕಗಳನ್ನೂ ಪ್ರಿಂಟುಮಾಡಿಸಿರುತ್ತೇನೆ ಇದರ ಮೇಲ್ಪಂಕ್ತಿಗಳು ಬಹು ಅಂದವಾದ ಬರವಣಿಗೆಯ ಅಕ್ಷರದಂತೆ ತಿದ್ದಿಕೊಟ್ಟಿರುವ ಮೊಗಲಾದವುಗಳವೆಯೇ ಹೊರತು ಪ್ರಿಂಟಿಂಗ್ ಅಕ್ಷರಗಳ ಹಾಗಿಲ್ಲ ಒಳ್ಳೇ ಕಾಗದದ ಮೇಲೆ ನೋಡುವುದಕ್ಕೆ ಬಹು ಅಂದವಾಗಿ ರೂಲುಗಳನ್ನು ಹಾಕಿ ಪ್ರಿಂಟಾಗಿರುತ್ತವೆ ಇವುಗಳು ವಿದ್ಯಾರ್ಥಿಗಳ ಕೈ ತಿದ್ದಲು ಬಹಳ ಸಹಾಯಕಾರಿಯಾದ ಕಾಪಿ ಪುಸ್ತಕಗಳೆಂದು ಎ ವಿ ಸಿ ಮೈಸೂರಿನ ಸ್ಕೂಲುಗಳಲ್ಲಿ ಉಪಯೋಗಿಸುತ್ತಿದಾರೆ ಕ್ರಯ 0 1-6

ಪ್ರಾಕೃತಿಕ ಭೂಗೋಳ ಮತ್ತು ಹೊಸಕನ್ನಡ ಕಾಪಿ ಪುಸ್ತಕಗಳನ್ನು ಪಡೆಯಲಿಚ್ಛಿಸುವ ಪುಸ್ತಕ ವ್ಯಾಪಾರಿಗಳೇ ಮೊದಲಾದ ಸರ್ವರೂ ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರಿಗೆ ಬರೆದು ತರಿಸಿಕೊಳ್ಳಬಹುದು

ಎಂ ಸಿ ಲಿಂಗಪ್ಪಯ್ಯ ಹೆಡ್ ಮಾಸ್ತರು ಇಟ್ಟಿಗೇಗೂಡು,

[190—1] ಎ ವಿ ಸ್ಕೂಲು, ಮೈಸೂರು

ಅಲಭ್ಯಲಾಭ ! ಅಮೂಲ್ಯಸಮಯ

ವಿಜಯದಶಮಿಯುವರೆಗೆ ಮಾತ್ರ !!

ವಿದ್ಯಾ, ಮತ, ನೀತಿ, ಪ್ರಕೃತಿ, ಶಾಸ್ತ್ರೀಯಾದಿ ವಿಷಯಗಳನ್ನೊಳಕೊಂಡು ತಿಂಗಳಿಗೆ ಡೆಮ್ಮಿ ೧ ರ 32 ಪುಟಗಳುಳ್ಳ ಸುಂದರ ಮುದ್ರಣದೊಡನೆ ಪ್ರಕಟವಾಗುತ್ತಿರುವ

ಮಧುರವಾಣಿ

ಎಂಬ ಉತ್ತಮ ವರ್ಗದ ಅತ್ಯುತ್ತಮ ಕರ್ನಾಟಕ ಮಾಸ ಪತ್ರಿಕೆಯ ವಾರ್ಷಿಕ ಚಂದಾ ರೂ 1 8 0 ವಿಜಯದಶಮಿಯೊಳಗಾಗಿ ಆರ್ಡರ್ ಕಳುಹಿಸುವವರಿಗೆ ಮಾತ್ರ, ಬಹುಮಾನ ಪುಸ್ತಕದೊಡನೆ ಚಂದಾ ರೂ 1 1-0 [180-3]

ವಿಳಾಸ —ಹನುಮಾನ್ ಕಂಪೆನಿ, ಮೈಸೂರು

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ.

ಮೇಲ್ಕಂಡ ವಿಮೇ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಠೇವಣಿಯು ಕೇವಲಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು.

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತವೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[100 16] ಎನ್ ಕಬೀರ್ ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ನಿಕ್ಕಲ್ ಬೆಳ್ಳಿ ಲೇಡಿ ವಾಚ್

ಕ್ರಯ ರೂ 2-10-0 ಕ್ರಯ ರೂ 2 15 0

ಇದು ನೋಡುವದಕ್ಕೆ ಬಹಳ ಚಿಕ್ಕದಾಗಿಯೂ, ಅಲಂಕಾರವಾಗಿಯೂ ಸರಿಯಾದ ಕಾಲವನ್ನು ತೋರಿಸುವದಾಗಿಯೂ ಇದೆ ಈ ಗಡಿಯಾರಕ್ಕೆ ಅದನ್ನು



ಅಂದವಾದ ಚರ್ಮದಿಂದ ಬಿಗಿಸಲ್ಪಟ್ಟು ಕೈಗೆ ಚಿನ್ನದ ಆಭರಣದಂತೆ ಇಟ್ಟುಕೊಳ್ಳಲು ಅನುಕೂಲವಾಗಿರುತ್ತದೆ ಇದನ್ನು ಕೈಯಲ್ಲಿ ಧರಿಸಿಕೊಂಡು ಬಾಡು ಕಟೀರಗಳಿಗೆ, ಸ್ನೇಹಿತರ ಜೊತೆಯಲ್ಲಿ ಉಲ್ಲಾಸವಾಗಿ ಹೋಗುವಾಗಲು, ವಿಸಿಟಿಂಗ್ ಮುಂತಾದ ಸ್ಥಳಗಳಿಗೆ ಹೋಗುವ ವಕ್ಕ ಬಹಳ ಉಪಯೋಗವಾದದ್ದು ಅನೇಕ ದೊಡ್ಡಮನುಷ್ಯರುಗಳು ಮತ್ತು ದೊಡ್ಡಮನುಷ್ಯರ ಹೆಂಗಸರುಗಳೂ ಇದನ್ನು ಕೈಯಲ್ಲಿ ಧರಿಸಿಕೊಳ್ಳುತ್ತಲಿರುವರು

ಗೋಡೆಗೆ ಹಾಕುವ ಎಂಟು ದಿನ ಗಡಿಯಾರ 7 12 0, ಮನೋಹರವಾದ ಪಿಟೀಲುಗಳು 9 0 0 ಮೂರಷ್ಟ್ಸಿಯ ಭೂತಕನ್ನಡಿ 3 8 0, ಇಂಗ್ಲೀಷ್ ಹಾರ್ಮೋನಿಯಂ 27 0-0 ಸುಂದರವಾದ ಟೇಬಲ್ ಗಡಿಯಾರ 1 0 ಎಂಟು ದಿನಗಳ ಬೆಳ್ಳಿ ಗಡಿಯಾರ 0 8 0 14 ಕ್ಯಾರೆಟು ಭಂಗಾರದ ಬಿಡಿ ಗಡಿಯಾರ— ಇನಾಂ ಸ್ವದೇಶಿ ಕಾಬೂಸವರಾ 19 12 0 [191 2]

ವಿಳಾಸ —ಪತ್ತಿ ಅಂಡ್ ಕೋ,

ನಂ 39, ಜನರಲ್ ಮುತ್ತಾಪೂದಲಿ ಬೀದಿ,

ಸಾಹುಕಾರಪೇಟೆ, ಮದ್ರಾಸ್

ಹೊಸದಾದ ಹರ್ಷ ಹತ್ತಿಯ ತುಪ್ಪವು.

ಈಗತಾನೇ ಮೈಸೂರು ಸೀಮೆಗೆ ಪ್ರವೇಶ !

ಇದನ್ನೇ ತೆಗೆಯಬೇಕೆಂದು ಗಿರಾಕಿಗಳ ಉದ್ದೇಶ !!

ಇದನ್ನೇ ಪ್ರಚುರಪಡಿಸಬೇಕೆಂದು ನಮ್ಮ ಆವೇಶ !!!

ಒಂದು ಸಾರಿ ತರಿಸಿ ಉಪಯೋಗಿಸಿದಲ್ಲಿ ಇದರ ಆನಂದವೂ, ಗುಣವೂ ನಿಮಗೆ ತಿಳಿಯಲು ಸಂದೇಹವಿಲ್ಲ ಅನಂತರ ಯಾವಾಗಲೂ ಇದನ್ನೇ ಅಪೇಕ್ಷಿಸುವಿರೆಂದು ಖಂಡಿತವಾಗಿಯೂ ಭರವಸೆ ಕೊಡುವೆವು ಮೈಸೂರು ಸೀಮೆಯ ಎಂಟು ಡಿಸ್ಟ್ರಿಕ್ಟುಗಳಿಗೂ ಸೋಲು ಏಜೆಂಟರುಗಳು ಬೇಕಾಗಿವೆ ವ್ಯಾಪಾರಸ್ಥರೇ ಆರ್ಡರುಗಳನ್ನು ಈ ಕೆಳಗಿನ ವಿಳಾಸಕ್ಕೆ ಹಾಕಿಕೊಳ್ಳತಕ್ಕದ್ದು ಈ ತುಪ್ಪವನ್ನು ಬೊಂಬಾಯಿ ಸರ್ಕಾರದ ಅಗ್ರಿಕಲ್ಚರಲ್ ಕೆಮಿಸ್ಟ್ ಹೆರಾಲ್ಡ್ ಹೆಚ್, ಮ್ಯಾನ್ ರವರು ರಸಾಯನ ಶಾಸ್ತ್ರರೀತ್ಯಾ ಪರಿಶೋಧಿಸಿ, ಈ ಹತ್ತಿಯ ತುಪ್ಪವೇ ಇಂಡಿಯಾ ದೇಶದಲ್ಲಿ ತಯಾರಿಸುವವರಲ್ಲಿ ಪ್ರಾಮುಖ್ಯತೆಯನ್ನು ಹೊಂದಿದೆ ಇದರಲ್ಲಿ ಏನೂ ಕಲ್ಮಷ ಇರುವದಿಲ್ಲ ಶುದ್ಧವಾಗಿದೆ ಬಹಳ ಮನೋಹರವಾದ ಆಹಾರ ಅಮೇರಿಕಾ ದೇಶದಲ್ಲಿ ತಯಾರಿಸುವಂತೆಯೂ ಅಥವಾ ಇಂಗ್ಲೆಂಡಿನಲ್ಲಿ ತಯಾರಿಸುವಂತೆಯೂ ಈ ತುಪ್ಪವು ಇದೆ ಎಂದು ಹೇಳಿದಾರೆ ಒಳ್ಳೆಯ ಹತ್ತಿಯ ಎಣ್ಣೆ ಹಿಂಡಿಯೂ ಸಹ ನಮ್ಮಲ್ಲಿ ದೊರೆಯುತ್ತೆ

ವಿಳಾಸ —ಆರ್ ಕೆ ಯಳಂದೂರು ಮತ್ತು ಕಂಪನಿ,

[171 1] ಸೋಲ್ ಏಜಂಟ್ಸ್, ದಾವಣಗೆರೆ

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ವಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕ್ಕಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs OAKES & Company, Mount Road, Madras.

[4-40] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H GULLIFORD Proprietor and Manager, Wesleyan Mission Press Mysore 18/9/1913

REGISTERED M. 30

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—ಸನ್ ೧೯೧೩ ನೇ ಇಸವಿ ಸೆಪ್ಟಂಬರ್ ತಾರೀಖು ೨೫ ನೇ ಗುರುವಾರ. ಸಂಚಿಕೆ ೧೭

ಹಿಂದುಸ್ಥಾನದಲ್ಲಿ ಬೆಳೆದ ಟೀ ಸೊಪ್ಪು

ಪ್ರಪಂಚಕ್ಕೆ ಅತ್ಯಂತ ಉತ್ಕೃಷ್ಟವಾದದ್ದು.

ಇಂಡಿಯಾ ಟೀಸೆಸ್ ಕಮಿಟಿಯವರ ಕೊಟಡಿಯನ್ನು

1913 ನೇ ದಸರಾ ಪ್ರದರ್ಶನಶಾಲೆಯಲ್ಲಿ ನೋಡಿ.

ಒಂದಾವರ್ತಿ ಬಂದು ನೋಡಿ; ಎಲ್ಲರಿಗೂ ಸುಖಾಗಮನವನ್ನು ಬಯಸುತ್ತೇವೆ.

ಖುದ್ದಾಗಿ ಬಂದು ಟೀ ಮಾಡುವುದನ್ನು ನೋಡಿ, ಅದರ ರುಚಿ ಹ್ಯಾಗಿದೆ ಕುಡಿಯಿರಿ.

ನೇತ್ರಾನಂದಕರವಾದ ಡಬ್ಬಿಗಳಲ್ಲೂ ಪೊಟ್ಟಣಗಳಲ್ಲೂ ಸ್ವಲ್ಪವೂ ಕೈಸೋಕದೆ ಯಂತ್ರಸಹಾಯದಿಂದಲೇ ತುಂಬಿಸಿ ಮಾರಿದ್ದಾಗಿ ಕೊಡುವವು.

ಲಿಪ್‌ಟನ್ನರ ಟೀ ವರ್ತಕರು

ಸ್ಪೆಷಲ್ ಅಪ್ಪಣೆಪಡೆದು

ಮಹಾರಾಜಾ ಚಕ್ರವರ್ತಿ ಸಾರ್ವಭೌಮರವರಿಗೂ ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್ ಪ್ರಭುಗಳಿಗೂ ಟೀ ಸೊಪ್ಪನ್ನು ಸರಬರಾಯಿ ಮಾಡತಕ್ಕವರಾಗಿದಾರೆ.

ಲಿಪ್‌ಟನ್ನರದೇ

ಪ್ರಪಂಚದಲ್ಲೆಲ್ಲಾ ಪ್ರಖ್ಯಾತವಾದ ಟೀಸೊಪ್ಪು.

[191-1]

ಕಲ್ಕತ್ತಾ.

THE MYSORE GOVERNMENT SECURITY
LIFE AND MARRIAGE ASSURANCE COMPANY, LIMITED.
HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No. III OF 1895)

CAUTION:—Before you go in for a Provident Life or Marriage Policy, please ask for a copy of the Company's prospectus which will explain to you the mode of working of the present day provident companies working in India and enables you to select a good institution where your hard earned money will be safe.

SPECIAL AND ATTRACTIVE FEATURES OF THE COMPANY

1. ABSOLUTE SECURITY.

The Company has got a capital of **one lakh** and its funds are invested in the **Mysore Government** and other approved securities. The policy-holder's moneys are **guaranteed**, and the **capital** and **reserve** funds of the Company are liable to the same.

2. MARRIAGE SCHEME.

A policy holder can subscribe from Re 1 to **Rs 6** every month. **Double the premiums paid** to the Company will be paid to the married **on the marriage day** as maximum bonus.

3. LIFE SCHEME.

A policy holder can subscribe from As 8 to **Rs. 2** per month. Both males and **females**, of ages from 18 to 60 are insured **without medical examination**. The maximum bonus will be paid to **the policy-holders themselves** on surviving **15 years** or to their nominees in case of their earlier death.

WANTED.

Energetic and honest **Chief Agents** for every Presidency in India and Taluk Agents in each and every taluk of **the Mysore Province** on commission to represent the Company.

For further particulars and prospectuses, please apply **with one anna stamp** and your previous experience in the line to,—

Mr. M. L. NAGANNAH,
Managing Agent,
MYSORE.

ಅಲಭ್ಯಲಾಭ! ಅಮೂಲ್ಯಸಮಯ!!

ವಿಜಯದಶಮಿಯವರೆಗೆ ಮಾತ್ರ!!

ವಿದ್ಯಾ, ಮತ, ನೀತಿ, ಪ್ರಕೃತಿ, ಶಾಸ್ತ್ರೇತ್ಯಾದಿ ವಿಷಯಗಳನ್ನೊಳಕೊಂಡು ತಿಂಗಳಿಗೆ ಡೆಮ್ಮಿ 8 ರ 32 ಪುಟಗಳುಳ್ಳ ಸುಂದರ ಮುದ್ರಣದೊಡನೆ ಪ್ರಕಟವಾಗುತ್ತಿರುವ

ಮಧುರವಾಣಿ

ಎಂಬ ಉತ್ತಮ ವರ್ಗದ ಅತ್ಯುತ್ತಮ ಕರ್ನಾಟಕ ಮಾಸ ಪತ್ರಿಕೆಯ ವಾರ್ಷಿಕ ಚಂದಾ ರೂ 1-8-0 ವಿಜಯದಶಮಿಯೊಳಗಾಗಿ ಆರ್ಡರ್ ಕಳುಹಿಸುವವರಿಗೆ ಮಾತ್ರ ಬಹುಮಾನ ಪುಸ್ತಕದೊಡನೆ ಚಂದಾ ರೂ 1-1-0 [180-3]

ವಿಳಾಸ.—ಹನುಮಾನ್ ಕಂಪೆನಿ, ಮೈಸೂರು.

ನನ್ನ ಪ್ರಿಯ ಸಹೋದರಿಯರುಗಳಿಗೆ.

ವಿವೇಕವತಿ ವಿನಯ ಪೂರ್ವಕ ವಿಜ್ಞಾಪನೆ.

ಈ ಮನೋಹರವಾದ ಆಭರಣವನ್ನು ಸ್ವಲ್ಪಕ್ರಯದಲ್ಲಿ ತಯಾರಿಸಿದ್ದೇನೆ. ಇವನ್ನು ತರಿಸಿ ನೋಡಿ ನನ್ನನ್ನು ಪ್ರೋತ್ಸಾಹಪಡಿಸಿರಿ

ರಂಗೂನು ಗೆಜ್ಜೆ ಅಡ್ಡಿಕೆ ಕ್ರಯ 0-6-0 ಆಣೆ



ಇದು ಅಪರಂಜೀ ಭಂಗಾರದಂತಹ ಯಮಿಟೇಷನ್ ಗೆಜ್ಜೆಯಿಂದ ಕರೀ ಬಣ್ಣದ ದಾರದಲ್ಲಿ ಗೆಜ್ಜೆಯನ್ನು ಪೋಣಿಸಿ ಸುಂದರವಾಗಿ ತಯಾರಿಸಲ್ಪಟ್ಟಿರುತ್ತೆ. ರಂಗು ಎಂದಿಗೂ ಕೆಡುವದಿಲ್ಲ. ಇದನ್ನು ಹೆಂಗಸರು ಹುಡುಗಿಯರು ಮಕ್ಕಳು ಎಲ್ಲರೂ ಕೊರಳಿಗೆ ಕಟ್ಟಿಕೊಳ್ಳುವದಕ್ಕೆ ಲಾಯಖಾದದ್ದು.

ತಾಕೀತು—ಇದರ ಕ್ರಯವನ್ನು ಮುಂದಾಗಿ ಮಣಿಯಾರ್ಡರ್ ಮಾಡಿದರೆ ಯಾವ ಖರ್ಚೂ ಇಲ್ಲದೆ ಟಪಾಲ್ ಮೇಲೆ ಕಳುಹಿಸುತ್ತೇವೆ. ವಿ. ಪಿ. ಯಾಗಿ ಕಳುಹಿಸಿದರೆ ವಿ. ಪಿ. ಖರ್ಚು ಕಳುಹಿಸುತ್ತೇವೆ.

ವಿಳಾಸ—ವಿವೇಕವತಿ, ನಂ. ೩ ಆರುಮುಗಚೆಟ್ಟಿ ಬೀದಿ, ತಿರುವಲ್ಲಿಕೇಣಿ, ಮದರಾಸು.

[193-1]

ಕನ್ನಡ
ಇಂಡಿಯನ್ ಪೆನಲ್ ಕೋಡ್.

160 8

ಇಂಡಿಯಾ ಗೌರ್ನರ್ ಜನರಲ್‌ರವರಿಂದ ಮುಂಜೂರಾದ ಈ ಆಕ್ಟನ್ನು ಮೈಸೂರ್, ಬೊಂಬಾಯಿ, ಮದ್ರಾಸ್, ಅಲಹಾಬಾದ್ ಮುಂತಾದ ಅನೇಕ ಜಡ್ಜಿಗಳ ಅಭಿಪ್ರಾಯಗಳ ಟಿಪ್ಪಣಿ ಸಹಿತ ಮುದ್ರಣವಾಗಿ ನೂರಾರೆಕ್ಕೆ ಸಿದ್ಧವಾಗಿದೆ ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟಗಳಿಂದ ಬಿಡುಗಡೆಯಾಗಿರುವರು ಇದು ಮುಖ್ಯವಾಗಿ ಪೋಲೀಸ್, ಮ್ಯಾಜಿಸ್ಟ್ರೇಟರು, ಅಧಿಕಾರಿಗಳಲ್ಲಿಯೂ, ಲಾಯರುಗಳಲ್ಲಿಯೂ, ಪಟೇಲ್ ಶ್ಯಾನುಭೋಗರುಗಳಲ್ಲಿಯೂ, ಇತರ ಖುಷ್ ಬಾಷ್ ಜನಗಳಲ್ಲಿಯೂ ಇರಬೇಕಾದದ್ದು ಅತ್ಯಂತ ಅವಶ್ಯಕವಾದದ್ದು ಕ್ರಯ ಗ್ಲೇಜ್ ರೂ 2 8 0 ರಫ್ ರೂ 2-0-0 ಟಪ್ಪಾಲ್ ಛಾರ್ಜು 0 1 0

ವಿಳಾಸ:—ಬಿ ನರಸಿಂಗರಾವ್, ಎಡಿಟರ್, (ಲಾ) ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕುಂತಲಾನಂದ ತೈಲವು.

192 1

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸನೆಯೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪೆನಿ, ವೇಪೇರಿ, ಮದರಾಸ್.

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ —1 ಪಿನಲ್‌ಕೋಡು, 2 ದೊಡ್ಡ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ದಕ್ಷವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್ 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿದೆ

ಪ್ರತಿ ಪೆನಲ್ ಸೆಕ್ಷನ್‌ಗಳ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೇ? ಯಾ ಕೂಡದೇ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟ್ಟಬೇಕೇ? ಜಾಮೀನ್ ತೆಗೆದುಕೊಳ್ಳಬಹುದೇ? ಯಾ ಕೂಡದೇ? ರಾಜಿಯಾಗಬಹುದೇ? ಯಾ ಕೂಡದೇ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 23 5 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 2 0 0 ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ವೇಮಾರೆಡ್ಡಿ,
ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್,
ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್
[103-18]

ನಿಕ್ಕಲ್ ಬೆಳ್ಳಿ ಲೇಡಿ ವಾಚ್

ಕ್ರಯ ರೂ 2-15-0 ಕ್ರಯ ರೂ 2-15-0

ಇದು ನೋಡುವದಕ್ಕೆ ಬಹಳ ಚಿಕ್ಕದಾಗಿಯೂ, ಅಲಂಕಾರವಾಗಿಯೂ ಸರಿಯಾದ ಕಾಲವನ್ನು ತೋರಿಸುವದಾಗಿಯೂ ಇದೆ ಈ ಗಡಿಯಾರಕ್ಕೆ ಅದನ್ನು ಅಂದವಾದ ಚರ್ಮದಿಂದ ಬಿಗಿಸಲ್ಪಟ್ಟು ಕೈಗೆ ಚಿನ್ನದ ಆಭರಣದಂತೆ ಇಟ್ಟುಕೊಳ್ಳಲು ಅನುಕೂಲವಾಗಿರುತ್ತದೆ ಇದನ್ನು ಕೈಯಲ್ಲಿ ಧರಿಸಿಕೊಂಡು ಹಾದು ಹತ್ತಿರಗಳಿಗೆ ಸ್ನೇಹಿತರ ಜೊತೆಯಲ್ಲಿ ಉಲ್ಲಾಸವಾಗಿ ಹೋಗುವಾಗಲು, ಮೀಟಿಂಗ್ ಮುಂತಾದ ಸ್ಥಳಗಳಿಗೆ ಹೋಗುವದಕ್ಕೆ ಬಹಳ ಉಪಯೋಗವಾದದ್ದು

Rs. 2-15-0

ಅನೇಕ ದೊಡ್ಡ ಮನುಷ್ಯರುಗಳು ಮತ್ತು ದೊಡ್ಡ ಮನುಷ್ಯರ ಹೆಂಗಸರುಗಳು ಇದನ್ನು ಕೈಯಲ್ಲಿ ಧರಿಸಿಕೊಳ್ಳುತ್ತಲಿರುವರು

ಗೋಡೆಗೆ ಹಾಕುವ ಎಂಟು ದಿನ ಗಡಿಯಾರ 7-12 0, ಮನೋಹರವಾದ ಪೀಟೀಲುಗಳು 9 0 0, ದೂರದೃಷ್ಟಿಯ ಭೂತಕನ್ನಡಿ 3 8 0, ಸ್ವಾರಪೂಟ ಹಾರ್ಮೋನಿಯಂ 27 0 0 ಸುಂದರವಾದ ಟೇಬಲ್ ಗಡಿಯಾರ 5-4 0 ಎಂಟು ದಿನಗಳ ಬೆಳ್ಳಿ ಗಡಿಯಾರ 9 8 0 14 ಕ್ಯಾರೆಟ್ಟು ಭಂಗಾರದ ಲೇಡಿ ಗಡಿಯಾರ—ಇನಾಂ ಸ್ವದೇಶಿ ಕಾಲುಸರಾ 19-12-0 [181 3]

ವಿಳಾಸ —ಪತ್ತಿ ಅಂಡ್ ಕೋ,
ನಂ 30, ಜನರಲ್ ಮುತ್ಯಾಮೊದಲಿ ಬೀದಿ,
ಸಾಹುಕಾರ್‌ಪೇಟೆ, ಮದ್ರಾಸ್.

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡುಹಿಡಿದ ಕೆಮ್ಮಿನ ಔಷಧವು

1 39



ಶೀತದ ಕೆಮ್ಮು, ಗಂಟಲು ಗೂರಲ್ಪುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಿನಲ್ಲು ಎದೆಯಲ್ಲು ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಹಾಪ್ರಾಯಯಾದ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಜಾಗ್ರತೆಯಾಗಿ ನಿವಾರಣೆಮಾಡುತ್ತದೆ ಉಸಿರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ
ಈ ಔಷಧವು ವಸ್ತುಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ವಿಕರಿಯಾಗುವುದು — ಸಣ್ಣ ಸೀಸೆಗೆ ೧ ರೂಪಾಯಿ — ದೊಡ್ಡ ಸೀಸೆಗೆ ೨ ರೂಪಾಯಿ

ಉತ್ತಮವಾದ ಶೈಲಿ । ಸರಳವಾದ ಮಾತುಗಳು ॥

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕಮಹಾಶಯರುಗಳೇ —ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಷ್ಟಪಟ್ಟರೆ, ನೀತಿಯು ಅವಶ್ಯವಿದ್ದರೆ, ದಮ್ ಸತ್ವಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನ ಪೇಕ್ಷಿಸಿದರೆ, ಉತ್ಸಾಹ ಶಕ್ತಿಯಲ್ಲಾಶೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿ ಕಥೆಗಳನ್ನು ಓದಿರಿ ೩೭೦ ಪುಟಗಳಿಂದ ಕೂಡಿದ ೭೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ ಬೆಲೆ ರೂ ೧-೮-೦ ಮಾತ್ರ ಈಗಲೇ ಬರೆಯಿರಿ [167-7]

ವಿಳಾಸ.—ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ಕು ಡಿಪೋ, ಚಿಕ್ಕ ಪೇಟೆ, ಬೆಂಗಳೂರು ಸಿಟಿ.

ಸಮಸ್ತ ವಿಧವಾದ ನೋವೂ ಶೀತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಚಳ್ಳಿನ ಸಳಿತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ವಿಕರಿಯಾಗುತ್ತಲಿವೆ ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷದ ಮಾರಾಟದ ಅಂಗಡಿಗಳಲ್ಲಿ ವಿಕರಿಯಾಗುವದು

ಪುಳಕಡ್ಡಿ ಔಷದ ಡಬ್ಬಿಗೆ 6 ಆಣೆ, 12 ಕುಪ್ಪಿಗೆ ರೂ 3-8-0. ಹಲ್ಲು ಪುಡಿ ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ 1-2-0 ವಿ ಪಿ ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ [12-31]

ವಿಳಾಸ —ಅಮೃತಾಂಜನ ಡಿಪೊ, ೧೯ ಫ್ರೆಯರ್ ರೋಡ್, ಫೋರ್ಟ್, ಬೊಂಬಾಯಿ

ಡೋಂಗರೆ ಇವರ ಬಾಲಾಮೃತ.

[150 10]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೨ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತದ ಬಾಧೆ ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ಸನ್ನಿ, ಬಿಕ್ಕಳಿಕೆ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಜಾಗ್ರತೆಯಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ನವಾ ಬದಲಾವಣೆಯನ್ನು ಸಂಪಾದಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ವೈದ್ಯನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ [179 1]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮೀರಿಕೊಂಡು ಹೋಗಿರುವಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಕೆ, ಮುಟ್ಟುವು ಕಟ್ಟಿದ ಕೂಡಲೆ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ದಿಯು ಇಟ್ಟುಕೊಂಡರೆ ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ. 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೪೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರವಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ ನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಸಂಯುತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು. (5) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1-8 0, ಟಪ್ಪಾಲು ಹಾಸಲು 4 ಆಣೆ

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿಮಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಸರಳವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ 4, ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127-14]

ನಮ್ಮ ವಿಳಾಸ—ಎಮ್ ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

6—9—1913 ರಿಂದ 12—9—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು.	ತಗಲಿದ್ದು.	ಸತ್ತದ್ದು.
ಬೆಂಗಳೂರು ಪಟ್ಟಣ	0	1	0	0
ಮೈಸೂರು ,,	1	0	0	0
ಬೆಂಗಳೂರು ಡಿಸ್ಟ್ರಿಕ್ಟು	14	8	2	1
ಮೈಸೂರು ,,	62	39	0	0
ಕೋಲಾರ್ ,,	15	7	0	0
ಕೋಲಾರ್ ಚಿನ್ನದ ಗಣಿಗಳು	1	0	0	0
ತುಂಕೂರು ಡಿಸ್ಟ್ರಿಕ್ಟು	5	4	7	3
ಹಾಸನ ,,	19	12	1	0
ಚಿತ್ರದುರ್ಗ ,,	0	0	37	20
ಕಡೂರ್ ,,	36	27	0	0
ಶಿವಮೊಗ್ಗ ,,	11	4	0	0
ಜುಮ್ಲಾ	164	102	47	24

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ವರ್ಷಋತು ಭಾದ್ರಪದ ಬಹುಳ ಏಕಾದಶಿ ಶುಕ್ರವಾರದಿಂದ ಶರದೃತೌ ಆಶ್ವೀಜ ಶುದ್ಧ ತದಿಗೆ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಸೆಪ್ಟಂಬರ್ ಮತ್ತು ಅಕ್ಟೋಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕನ್ಯಾ ಮಾಸ ತೇದಿ
26	ಶುಕ್ರ *	ಏಕಾದಶಿ	35-45	ಪುಷ್ಯ	11-32	11
27	ಶನಿ ‡	ದ್ವಾದಶಿ	29 3	ಆಶ್ಲೇಷ	8 20	12
28	ಭಾನು	ತ್ರಯೋದಶಿ	23 16	ಮಖಾ	5-38	13
29	ಸೋಮ §	ಚತುರ್ದಶಿ	17-18	ಹುಬ್ಬ	0-42	14
30	ಮಂಗಳ †	ಅಮಾವಾಸ್ಯೆ	11-13	ಹಸ್ತ	52-21	15
1	ಬುಧ ,,	ಪಾಡ್ಯಮಿ	5-11	ಉತ್ತರ	54-7	16
2	ಗುರು	ತದಿಗೆ	54 13	ಸ್ವಾತಿ	44 53	17

* ಸರ್ವತ್ರ ಏಕಾದಶಿ, ಗಜಗೌರೀ ವ್ರತ, ಮಳೆ ನಕ್ಷತ್ರ—ಹಸ್ತ 1 ನೇ ಪಾದ. ‡ ಶನಿಪ್ರದೋಷ. ತಿಥಿದ್ವಯಂ, ಮಾಸಶಿವರಾತ್ರಿ, ನೂತಶಿವರಾತ್ರಿ § ಸರ್ವತ್ರ ಮಹಾಲಯಾಮಾವಾಸ್ಯೆ. † ಮಳೆ ನಕ್ಷತ್ರ—ಹಸ್ತ 2 ನೇ ಪಾದ , ನವರಾತ್ರಾರಂಭ, ಜಯಲಕ್ಷ್ಮೀ ವ್ರತಂ, ಚಂದ್ರೋದಯ, ಜಿಲ್ಹಾಹ್ ಚಂದು 1

ಪೇಟೀ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲ ೧ಕ್ಕೆ ರೂ	೧೬-೦-೦	೧೭-೦-೦
ಕೆಂಬೂತಿ ಅಕ್ಕಿ ಅವಲ್	೧೬-೮-೦	೧೭-೮-೦
,, ,, ದುಯಂ	೧೬-೦-೦	೧೭-೦-೦
ಜಾವಾಣಿ ಅಕ್ಕಿ	೧೬-೦-೦	೧೬-೮-೦
ಸಣ್ಣಕ್ಕಿ ಅವಲ್	೨೮-೦-೦	೧೭-೮-೦
,, ದುಯಂ	೧೭-೦-೦	೧೬-೧೨-೦
ತೊಗರೀ ಬೇಳೆ ಅವಲ್ ಪಲ್ಲ ೧ಕ್ಕೆ	೨೫-೦-೦	೧೬-೪-೦
,, ದುಯಂ ,,	೧೪-೦-೦	೧೪-೦-೦
ಹೈಕ ರಾಗಿ ಪಲ್ಲ ೧ಕ್ಕೆ	೭-೪-೦	೫ ೧೦-೦
ಕಾರ್ರಾಗಿ ,,	೬ ೮ ೦	೪-೧೨-೦
ಜೋಳ ,,	೭-೪-೦	೭-೪-೦
ತಲಸಂದೆ ಪಲ್ಲ ೧ಕ್ಕೆ	೨೧-೦-೦	೧೪-೦-೦
ಬಳೀ ಅವರೆ ,,	೧೨ ೮-೦	೧೨-೦-೦
ಹೆಸರು ,,	೨೨ ೮-೦	೧೪-೦-೦
ಉದ್ದು ,,	೧೪-೮ ೦	೧೬-೮-೦
ಕಡಲೆ ,,	೧೨-೦-೦	೧೩-೦-೦
ಎಳ್ಳು ಸೇರು ೧೨೭ಕ್ಕೆ	೨೨ ೮ ೦	೨೪-೦-೦
ಹುರುಳಿ ಪಲ್ಲ ೧ಕ್ಕೆ	೭ ೬-೦	೭-೧೦-೦
ಹರಳು ೧೨೭ ಸೇರಿಗೆ	೧೨-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೩ ೬-೦
ಮೆಣಸಿನಕಾಯಿ ,,	೪-೦-೦	೩-೪-೦
,, ದುಯಂ	೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫-೦-೦	ಮಣ ೬-೪-೦
ಒಳ್ಳೆಣ್ಣೆ ಮಣ ೧ಕ್ಕೆ	೭-೨-೦	೬-೮-೦
ಹರಳೆಣ್ಣೆ ,, ,,	೫-೪-೦	೬-೦-೦
ಕಡಲೇಕಾಯಿ ಎಣ್ಣೆ	೬-೮-೦	೬-೪-೦
ಕೊತ್ತುಂಬರಿ ಪಲ್ಲ ೧ಕ್ಕೆ	೪-೧೨-೦	೬-೪-೦
ಉಪ್ಪು ,, ,,	೬-೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧-೧೨-೦	೧-೪-೦
ತುಪ್ಪ ಮಣ ೧ಕ್ಕೆ	೨೫-೦-೦	೨೨-೮-೦
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫ ೧೨ ೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೭-೪ ೦	೬-೪-೦
ಆಳಲೇಕಾಯಿ ಮಣ ೧ಕ್ಕೆ	೧-೬-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೧-೧೨-೦	೧-೮-೦
ಚಿನ್ನ (ಪೌನ್) ಕೆಂಪು	೧೫-೮-೦	೧೫-೮-೦
,, ,, ಪಸಿಮೆ	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦-೦	೮೧-೩-೦

ನಮೂನೆ ಮುಫತ್ತು.

ಕೇಶಕುಸುಮಾಕರ ತೈಲವು.

ಸಾಟಿಯಿಲ್ಲದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿ ಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸವಮಾಡುವದರಲ್ಲಿಯೂ, ಬಟ್ಟತಲೆಯಲ್ಲಿ ಕೇಶವನ್ನು ಬೆಳೆಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ, ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ, ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುಡ್ಡಿ ತೈಲ ಕ್ರಯ 10 ಆಣೆ ಮೂರು ಬುಡ್ಡಿಗಳ ತೈಲ ಕ್ರಯ ರೂ 1 12 ಆ ಆರು ಬುಡ್ಡಿಗಳ ತೈಲ ಕ್ರಯ ರೂ 3-4 ಆ ಡಜನ್ ಬುಡ್ಡಿಗಳ ಕ್ರಯ ರೂ 6

ವಿ. ಪಿ ಅಂಚೇ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ

[೩-೩೨] ಔಷಧಾಲಯ, 177 ಚೀನಾ ಬಜಾರ್ ರೋಡ್, ಮದ್ರಾಸು

THE PLACE FOR HASSAN CAPS IS HASSAN.

'ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

8 30

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳುವದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ಸೆಟ್ಟಿಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಜಾಗ್ರತೆಯಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಬಾಳಿಕೆಬರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವೂ ಚನ್ನಾಗಿಲ್ಲದವೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ; ೧ ರೂ ೬ ಆ, ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧—೮, ರೂ ೧—೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ಜರಿದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ., ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಮಕ್ಕಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಡುತ್ತೇವೆ ನಮ್ಮ ವಿಳಾಸ:—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮಾ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ - ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭದ್ರತೆಯ ಡಿಪಾಸಿಟ್ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮಾ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹವಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತವೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[100 17] ಎಸ್ ಕಬೀರ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ಅಸಲ್ ಸವರನ್ ಭಂಗಾರದ ನಗಗಳು

ಈ ನಗಗಳನ್ನು ಈಗಕಾಣೋ ನಾವು ನಿಪುಣರಾದ ಮತ್ತು ಪ್ರಸಿದ್ಧಿಹೊಂದಿದ ಅಗಸಾಲೆಯರಿಂದ ನೂತನ ನಮೂನೆಯಲ್ಲಿ ನೇತ್ರಾನಂದಕರವಾಗಿ ಸ್ವಂತ ಮುತುವರ್ಜಿಯಿಂದ ತಯಾರುಮಾಡಿಸಿರುತ್ತೇವೆ ಸವರನ್ ಭಂಗಾರಕ್ಕು ಮತ್ತು ಪುಷ್ಪರಾಗಕ್ಕು ನಾವು ಗ್ಯಾರಂಟಿ ಕೊಡುತ್ತೇವೆ ಪಾಸಿಲ್ಲದ ಪಕ್ಷದಲ್ಲಿ ಹಣವನ್ನು ವಾಪಸ್‌ಮಾಡಲ್ಪಡುತ್ತೆ. ಬಹು ಸುಂದರವಾದ ನಮೂನೆ, ಸರಾಫರು ತರಿಸಿಕೊಂಡು ಉಪಯೋಗಿಸುವಂತೆ ಸಾಧ್ಯವಾದ ಮಟ್ಟಿಗೂ ಬಹು ಸುಲಭ ಕ್ರಯವನ್ನು ನಮೂದಿಸಿರುತ್ತೇವೆ ಪ್ರತಿ ಒಬ್ಬರು ತೆಗೆದುಕೊಂಡು ಉಪಯೋಗಿಸಿ ಸಂತೋಷಪಡಬೇಕಾಗಿ ಪ್ರಾರ್ಥನೆ [77 23]

ಅರ್ಧಚಂದ್ರ 1 ಕ್ಕೆ ರೂಪಾಯಿ	6 0 0
ನಂ 1 ಮೂಗುಬೊಟ್ಟು 1 ಕ್ಕೆ ರೂಪಾಯಿ	7 0 0
,, 2 ಮೂಗುಬೊಟ್ಟು 1 ಕ್ಕೆ ,,	6 0-0
,, 3 ಮೂಗುಬೊಟ್ಟು 1 ಕ್ಕೆ ,,	5-0 0
ಬುಲಾಕು 1 ಕ್ಕೆ 12 ರೂ ಲಾಗಾಯತು	25-0-0

ವರಿಗೂ ಇರುತ್ತೆ ಇದು ಅಲ್ಲದೆ ಇಮಿಟೇಷನ್ ಕೆಂಪುಗಳಿಂದಲೂ, ಒಳ್ಳೆ ಕೆಂಪುಗಳಿಂದಲೂ ತಯಾರುಮಾಡಿ ಕಳುಹಿಸಲ್ಪಡುವದು ಮತ್ತು ಬೆಳ್ಳಿ ಭಂಗಾರದ ನಗಗಳು ಸಹ ತಯಾರುಮಾಡಿ ಕಳುಹಿಸಲ್ಪಡುತ್ತೆ ಬೇಕಾದವರು ಬರಸಿದರೆ ಜವಾಬು ಬರೆಯುತ್ತೇವೆ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

ವಿಳಾಸ—ಬಿ. ಆರ್ ವೆಂಕಟರಮಣ ಒಂಡ್ ಕಂಪನಿ,

ನಂ 7, ಕೋಪಾ ವೆಂಕಟಾಚಲೈಯರ್ ಬೀದಿ, ಮದರಾಸು

ಶುದ್ಧವಾದ ಹತ್ತಿಯ ತುಪ್ಪವು.

" ಬಹಳ ರುಚಿ, ಆರೋಗ್ಯ, ಎಲ್ಲಕ್ಕಿಂತ ಪುಷ್ಟಿಕಾರಿ "

(H) ಎಸ್ ಅಪ್ಪು, L. C E ಇಂಜನಿಯರು,—" ನಿಮ್ಮಿಂದ ತರಿಸಿಕೊಂಡ ಹತ್ತಿಯ ತುಪ್ಪವನ್ನು ಉಪಯೋಗಿಸಿದೇನೆ ಅದು ಸೇವನೆಗೆ ಬಹಳ ರುಚಿಯಾಗಿಯೂ ಬಹಳ ಆರೋಗ್ಯಕರವಾಗಿಯೂ ಇದೆ ಇದಕ್ಕೆ ಸಮಾನವಾದ ಪುಷ್ಟಿಕಾರಿ ವಸ್ತುವೇ ಇಲ್ಲ " ಬೆಂಗಳೂರು 2 9-13

ಎಚ್ಚರಿಕೆ!

ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ. [110 17]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

159, ಕಿಲಾರಿ ರೋಡ್, (ಕುಂಚಿಗರಪೇಟೆ), ಬೆಂಗಳೂರು ಸಿಟಿ.

KANNADA MIDWIFERY

Advice to a wife on the management of her health during pregnancy & confinement, & the care of her child. Price As 12

[188-1] Doctor Srinivasiyengar, Mysore

ಹೊಸ ಕಾದಂಬರಿಗಳು.

ಕುಮುದಿನಿ—ಬಂಗಾಳಿಯಿಂದ ಕನ್ನಡಿಸಲ್ಪಟ್ಟ ಪತ್ತೇದಾರಿಯ ಕಥೆ ಯುಕ್ತಿಯುಕ್ತವಾದದ್ದು 6 ಆಣೆ ನಿರ್ಭಾಗ್ಯಚಾಣಿಕ್ಯ—ಇದೂ ಮೇಲಿನ ಕಥೆಯಂತೆಯೇ ಮನೋಹರವಾದದ್ದು ವೇಶ್ಯಾದಿ ವಿಷಯಾಸಕ್ತರ ನಡವಳಿಕೆಗಳು ಹೃದಯಂಗಮವಾಗಿ ವರ್ಣಿಸಲ್ಪಟ್ಟಿದೆ 6 ಆಣೆ ಸಂತಾಪಕ—ಈಗ ನಾಟಕಗಳಲ್ಲಿ ಪ್ರಸಿದ್ಧವಾದ "ಶಿರುಪಮಾ" ಎಂಬ ನಾಟಕದ ಕಥಾರೂಪವಾದ ಗ್ರಂಥ ಇದನ್ನೋದುವುದಕ್ಕೆ ಕೊನೆವರೆ ಮುಗಿಸುವವರೆಗೂ ಬಿಡಲು ಮನಸ್ಸಾಗುವುದಿಲ್ಲ 4 ಆಣೆ [187 4]

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಒಳ್ಳೇ ಸಮಯವಾಗಿದೆ—ಬೇಗ ತರಿಸಿಕೊಳ್ಳಿರಿ

ತರಕಾರಿ ಬೀಜಗಳು 40 ಪ್ಯಾಕೆಟ್ಟು ರೂ 6, 20 ಪ್ಯಾಕೆಟ್ಟು ರೂ 3½, 12 ಪ್ಯಾಕೆಟ್ಟು ರೂ 2 ಹೂವಿನ ಬೀಜಗಳು 40 ಪ್ಯಾಕೆಟ್ಟು ರೂ 5, 20 ಪ್ಯಾಕೆಟ್ಟು ರೂ 3, 12 ಪ್ಯಾಕೆಟ್ಟು ರೂ 2 ಗುಲಾಬಿ (ರೋಜಾ) ಗಿಡಗಳು 100 ಕ್ಕೆ ರೂ 15 ರಿಂದ 25 ವರೆಗೆ, ಡಜನ್ ರೂ 3 ರಿಂದ ರೂ 5 ಕಟ್ಟಿದ ಮಾವಿನ ಗಿಡಗಳು ಡಜನ್ 1 ಕ್ಕೆ ರೂ 10 100 ಕ್ಕೆ ರೂ 70 ರಿಂದ 75 ಕಸಿ ಮಾಡಿದ ಸೀವು, ನಿಂಬೆ, ಕಿತ್ತಳೆ, ದಾಳಿಂಬ, ಚಕೋತ್ರ ಡಜನ್ ರೂ 4 ರಿಂದ 6 ಇನ್ನೂ ಬೇಕಾದ ಅನೇಕ ತರಹಾ ಗಿಡಗಳು, ಬೀಜಗಳು, ಹಣ್ಣು, ಹೂವು, ತರಕಾರಿ ವಗೈರೆ ಕ್ಯಾಟಲಾಗ್ (ಕ್ರಯಪಟ್ಟಿ) ತರಿಸಿಕೊಳ್ಳಿರಿ [125 3]

ಜಿ ಎಲ್ ಬೈಯಣ್ಣ ಬ್ರದರ್ಸ್, 62 ಲಾಲ್‌ಬಾಗ್ ರೋಡ್, ಬೆಂಗಳೂರು ಸಿಟಿ

ದಿ ಪೀಪಲ್ಸ್ ಬ್ಯಾಂಕ್, ಲಿಮಿಟೆಡ್, ತೀರ್ಥಹಳ್ಳಿ

ಮೈಸೂರು ಕಂಪನಿಗಳ 1895 ನೇ ಇಸವಿಯ III ನೇ ರೆಗ್ಯುಲೇಷನ್ನಿನ 50 ನೇ ಸೆಕ್ಷನ್ ಅನುಸರಿಸಿ ಈ ಬ್ಯಾಂಕಿನ 'ಮೆಂಬರುಗಳ ರಿಜಿಸ್ಟರು' ತಾ. 1-10-1913 ರಿಂದ 20-10-13 ರ ವರೆಗೆ ಯಾರೂ ನೋಡುವುದಕ್ಕೆ ಅವಕಾಶವಿಲ್ಲದಂತೆ ಮುಚ್ಚಲ್ಪಟ್ಟಿರುವುದೆಂದು ಈ ಬ್ಯಾಂಕಿನ ಮೆಂಬರುಗಳಿಗೂ ಮತ್ತು ಸಮಸ್ತ ಜನಗಳಿಗೂ ಇದರಿಂದ ತಿಳಿಯಪಡಿಸಿದೆ [189-1]

ತೀರ್ಥಹಳ್ಳಿ, ಎಮ್ ಎಸ್ ಬಸಪ್ಪ,

ತಾ 25 9-1913 ಮ್ಯಾನೇಜಿಂಗ್ ಡಿರೆಕ್ಟರು

ಗೃಹಕೃತ್ಯದ ನೋಟೀಸ್

ಹೊಳಲ್ಕೆರೆಯಲ್ಲಿರುವ ಪ್ರಭುದೇವರ ಬಸಪ್ಪನು ಮತ್ತು ಈತನ ಮಕ್ಕಳು ಸಹ ಸಮಸ್ತರಿಗೂ ತಿಳಿಯಪಡಿಸುವುದೇನಂದರೆ—ಬೀರೂರಲ್ಲಿರುವ ಪ್ರಭುದೇವರ ಹಳೆಮನೆ ಚನ್ನವೀರಪ್ಪನು ನಮಗೆ ಸಮೀಪ ದಾಯಾದಿಯಾಗಬೇಕು ಈತನು ಭವತಿಯಾಗಿ 7 8 ವರ್ಷವಾಯಿತು ಈತನಿಗೆ ಗಂಡುಮಕ್ಕಳು ಇರುವದಿಲ್ಲ ಹೆಣ್ಣುಮಕ್ಕಳು ಇರುವುದಿಲ್ಲ ಈತನ ತಾಯಿ ಮತ್ತು ಹೆಂಡತಿ ಮಾತ್ರ ಇದಾರೆ ಈತನ ಹೆಂಡತಿ ಗಂಗಮ್ಮನು ನಮ್ಮಗಳಿಗೆ ಮೋಸಮಾಡಲು ನಿಷ್ಕಾರಣವಾಗಿ ಕುಟುಂಬದ ಸ್ವತ್ತುಗಳನ್ನು ಕ್ರಯಮಾಡುವ ಪ್ರಯತ್ನದಲ್ಲಿ ದಾಳೆಂದು ತಿಳಿಯಬರುತ್ತೆ ಆದ್ದರಿಂದ ಉತ್ತರ ವಾರಸುದಾರರಾದ ನಮ್ಮಗಳ ಅನುಮತಿ ಶಿವಾಯಿ ಭವತಿ ಚನ್ನವೀರಪ್ಪನ ಸ್ವತ್ತುಗಳನ್ನು ಯಾರು ಕ್ರಯ ದಾನ ಭೋಗ್ಯಾದಿಗಳ ಮೂಲಕ ತೆಗೆದುಕೊಂಡರೂ ಅವರಿಗೆ ಸದರಿ ಪರಭಾರೆಯು ಊರ್ಜಿತವಾಗತಕ್ಕದ್ದಲ್ಲ ತಿಳಿಯುವದು [183 3]

ಪ್ರಭುದೇವರ ಬಸಪ್ಪನವರ ಮಗ ಹಾಲಯ್ಯ, ಹೊಳಲ್ಕೆರೆ

ಮೂರು ಸಿದ್ಧೌಷಧಗಳು.

ವಕ್ತ್ರಾನಂದಕರೀಮಾತ್ರೆ, ಮೂಲಿಕೆ ಪರಿಮಳದ್ರವ್ಯಗಳಿಂದ ತಯಾರಿಸಿದೆ ಒಂದನ್ನು ತಾಂಬೂಲದೊಡನೆ ಅಥವಾ ಬರೀ ಬಾಯಿಗೆ ಸೇವಿಸಿದರೆ ದುರ್ಗಂಧ ಹೋಗಿ ಸುವಾಸನೆಯಾಗುತ್ತೆ ರಕ್ತವನ್ನು ಶುದ್ಧಿಮಾಡುತ್ತೆ ಕರಳು, ಗಂಟಲು, ಬಾಯಿ, ಇವುಗಳು ಹುಣ್ಣಾದರೆ ಅರ್ಧ ತೋಲಾ ಬಾದಾಮಿ ಎಣ್ಣೆಯಲ್ಲಿ ಒಂದು ಮಾತ್ರೆ ತೇದು ಮಲಗುವ ಸಮಯದಲ್ಲಿ ತೆಗೆದುಕೊಂಡರೆ ಗುಣವಾಗುವದು 200 ಮಾತ್ರೆ ಶೀಸಾ 1 ಕ್ಕೆ 4 ಆಣಾ ಇಸಬು, ಖಜ್ಜಿ, ತುರಿ ಇವುಗಳಿಗೆ ಪಾಮಹಾರಿಣೀ ಪೌಡರ್ ತೋಲಾ 1 ಕ್ಕೆ 2 ಆಣೆ ಬಾಣಂತಿಯರು ಮಕ್ಕಳ ಶೀತನೆಗಡಿ ಇವುಗಳಿಗೆ ಉಪಯೋಗಿಸತಕ್ಕ ಕಸ್ತೂರಿಮಾತ್ರೆ 25 ಮಾತ್ರೆಗೆ 8 ಆಣೆ ಬಾಣಂತಿಯರು ಉಪಯೋಗಿಸತಕ್ಕ ಖಂಡಾದ್ರಕವೆಂಬ ಆರೋಗ್ಯದ ಲೇಹ್ಯ 12 ತೋಲಾ ಡಬ್ಬಿಗೆ 6 ಆಣಾ ಅಪೇಕ್ಷಿಸುವರು ತಮ್ಮ ವಿಳಾಸ ವಿಶದವಾಗಿ ಬರೆಯಬೇಕು ಅಂಚೆ ಹಾಸಲು ಬೇರೆ, ತರಿಸಿಕೊಳ್ಳತಕ್ಕವರು ವಹಿಸತಕ್ಕದ್ದು 1 ಡಜನ್‌ಗೆ 1 ಶೀಸಾ ಡಿಸ್ಕೌಂಟು ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಮುಂಚೆ ಸ್ವಲ್ಪ ತರಿಸಿ ನೋಡಿ ನಂತರವಾದರೂ ತರಿಸಿಕೊಳ್ಳಿ [131 13]

ನಮ್ಮ ವಿಳಾಸ —ಶೇಷಭಟ್ಟರು,

ನೇಟಿವ್ ಪಂಡಿತ್, ಪೂರ್ಣಯ್ಯನವರ ಬೀದಿ, ಶ್ರೀರಂಗಪಟ್ಟಣ

The National Insurance & Banking Co., Limited.

NOTICE

It is hereby notified for the guidance and information of our Policy-holders, Share-holders and Agents and all concerned that Mr M L Nagannah's services as Chief Agent of this Company have been dispensed with All premiums and new proposals for Life Insurance should be sent direct to the Head Office and all Agents should communicate direct with the Head Office until the appointment of another Chief Agent. Any one making any payment to Mr M L Nagannah hereafter will do so on his own risk [182-3]

Amritsar, P L RAJPAL, B A,

4-9-1913. Chief Manager.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

104 18

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ಕೀಲು, ಅರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟಿನ ಬಾಧೆ ಚಳಿಗಳು, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮು, ಗಳು ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಳ್ಳುವೆನು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯೊಂದಿಗೆ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡ ಇದರ ಕ್ರಯ ಬಾಟ್ಲಿಗೆ 13 ಆಣೆ ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ವಡಮಲಿಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಬಿ ಎಸ್ ಕೃಷ್ಣಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಭೂಸ್ಥಿತಿಯ ಹರಾಜು ಇಸ್ತಿಹಾರ್.

ಒಳ್ಳೇ ಸಮಯ! ಮಿಂಚಿ ಹೋದಮೇಲೆ ಚಿಂತಿಸಬೇಡಿ!

ಮಧ್ಯರಾಷ್ಟ್ರದ ಮಂಡಿಗಳು

ಬೆಂಗಳೂರು ಹೊಸ ತರಗುಪೇಟೆ 3 ನೇ ಬೀದಿಯಲ್ಲಿರುವ 18 ಮತ್ತು 19 ನೇ ನಂಬರು ಮಂಡಿಗಳನ್ನು ಮೂಲ ಕರ್ತರಾದ ಮ॥ ಗೋಪಾಲಸ್ವಾಮಯ್ಯರವರ ಇರಾದೆಯಂತೆ ಬೆಂಗಳೂರು ಸಿಟಿ ಜನರಲ್ ಆಕ್ಷನಿಯರ್ಸ್ ಮೆಸ್ಸರ್ಸ್ ಯಂ ಕಾರ್ನಿಕ್ ಅಂಡ್ ಕಂಪನಿಯವರು 1913 ನೇ ಸೆಪ್ಟಂಬರ್ 29 ನೇ ಭಾನುವಾರ ಬೆಳಗ್ಗೆ 8 ಘಂಟೆಗೆ ಸ್ವತ್ತಿನ ಬಳಿ ಬಹಿರಂಗವಾಗಿ ಹರಾಜು ಹಾಕುತ್ತಾರೆ. ಬೇಕಾದವರು ಭಿಡ ಸವಾಲು ಮಾಡಿ ಪಡೆಯಬಹುದು [190-1]

ಕಡಮೆ ವಿಷಯಗಳಿಗೆಲ್ಲಾ ಹ್ಯಾಂಡ್ ಬಿಲ್‌ಗಳನ್ನು ನೋಡಿ.

ಬೆಂಗಳೂರು ಸಿಟಿ, ಯಂ ಕಾರ್ನಿಕ್ ಅಂಡ್ ಕಂಪನಿ,

ತಾ. 20-9-13. ಆಕ್ಷನಿಯರ್ಸ್.

ಪ್ರಾಕೃತಿಕ ಭೂಗೋಳ.

ಮೊದಲನೇ ಮುದ್ರಣವು ಅತಿ ಶೀಘ್ರವಾಗಿ ಮುಗಿದುಹೋದ್ದರಿಂದ ಈಚೆಗೆ ಬಂದಿರುವ ಆರ್ಡರುಗಳಿಗೆ ಪ್ರತಿಗಳನ್ನು ಕಳುಹಿಸಲು ಅವಕಾಶವಾಗಲಿಲ್ಲ ಎರಡನೇ ಮುದ್ರಣದಲ್ಲಿ ಅನೇಕ ಹೆಚ್ಚು ವಿಷಯಗಳನ್ನು ಚನ್ನಾಗಿ ವಿವರಿಸಿ ಆರ್ಟ್ ಪೇಪರಿನಮೇಲೆ ಪ್ರಿಂಟುಮಾಡಿರುವ ಅನೇಕ ಹೊಸ ನಕ್ಷೆಗಳನ್ನು ಸೇರಿಸಿರುವುದಲ್ಲದೆ 1 ಆಣೆ ಬೆಲೆ ಬಾಳುವ ಬಣ್ಣಹಾಕಿರುವ ಸುಂದರವಾದ ಒಂದು ಮೈಸೂರು ಮ್ಯಾಪನ್ನು ಸಹ ಸೇರಿಸಿರುತ್ತೆ 1 ನೆಯ ಭಾಗವು ಸೆಪ್ಟಂಬರ್ ತಿಂಗಳು 25 ರಲ್ಲಿ ಬಿಕರಿಗೆ ಸಿದ್ಧವಾಗುವುದು ಈ ಪುಸ್ತಕವು ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೂ ಮತ್ತು ಸ್ಕೂಲಿನಲ್ಲಿ ಪಾಠಹೇಳುವುದಕ್ಕೂ ಬಹಳ ಸಹಕಾರಿಯಾಗಿರುತ್ತದೆ ಕೆಲವು ಪ್ರತಿಗಳು ಮಾತ್ರ ಪ್ರಿಂಟಾಗಿರುವುದರಿಂದ ಮೊದಲು ಬಂದ ಆರ್ಡರುಗಳಿಗೆ ಜಾಗ್ರತೆಯಲ್ಲಿ ಪ್ರತಿಗಳು ಕಳುಹಿಸಲ್ಪಡುವುವು ಕ್ರಯ 0 4 6

ಹೊಸ ಕನ್ನಡ ಲೇಖನದ ಪುಸ್ತಕವೆಂಬ ಹೆಸರಿನಿಂದ 1 ನಂಬರು ಕಾಪಿಪುಸ್ತಕಗಳನ್ನೂ ಪ್ರಿಂಟ್‌ಮಾಡಿಸಿರುತ್ತೇನೆ ಇದರ ಮೊಲ್ಪಟ್ಟಿಗಳು ಬಹು ಅಂದವಾದ ಬರವಣಿಗೆಯ ಅಕ್ಷರವಂತೆ ತಲೆಕಟ್ಟುಗಳೇ ಮೊದಲಾದವುಗಳವೆಯೇ ಹೊರತು ಪ್ರಿಂಟಿಂಗ್ ಅಕ್ಷರಗಳ ಹಾಗಿಲ್ಲ ಒಳ್ಳೇ ಕಾಗದದ ಮೇಲೆ ನೋಡುವುದಕ್ಕೆ ಬಹು ಅಂದವಾಗಿ ರೂಲುಗಳನ್ನು ಹಾಕಿ ಪ್ರಿಂಟಾಗಿರುತ್ತವೆ ಇವುಗಳು ವಿದ್ಯಾರ್ಥಿಗಳ ಕೈ ತಿದ್ದಲು ಬಹಳ ಸಹಕಾರಿಯಾದ ಕಾಪಿ ಪುಸ್ತಕಗಳೆಂದು ಭಾವಿಸಿ ಮೈಸೂರಿನ ಸ್ಕೂಲುಗಳಲ್ಲಿ ಉಪಯೋಗಿಸುತ್ತಿದಾರೆ ಕ್ರಯ 0-1 3

ಪ್ರಾಕೃತಿಕ ಭೂಗೋಳ ಮತ್ತು ಹೊಸಕನ್ನಡ ಲೇಖನ ಪುಸ್ತಕಗಳನ್ನು ಚಾಮುಂಡೇಶ್ವರಿ ಪುಸ್ತಕ ವ್ಯಾಪಾರಿಗಳೇ ಮೊದಲಾದ ಸರ್ವರೂ ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರಿಗೆ ಬರೆದು ತರಿಸಿಕೊಳ್ಳಬಹುದು

ಎಂ ಪಿ ಲಿಂಗಪ್ಪಯ್ಯ ಹೆಡ್ ಮಾಸ್ಟರು, ಇಟ್ಟಿಗೇಗೂಡು,

[186-2] ಎ ವಿ ಸ್ಕೂಲು, ಮೈಸೂರು

ವೃತ್ತಾಂತ ಪತ್ರಿಕೆ

—o—

ಸನ್ ೧೯೧೩ ನೇ ಇಸವಿ ಸೆಪ್ಟಂಬರ್, ತಾ ೨೫ ನೇ ಗುರುವಾರ

ಅನ್ಯದೇಶ ವಿಚಾರಗಳು.

ಟರ್ಕಿಯವರೂ ಬಲ್ಗೇರಿಯಾದವರೂ ಸೇರಿ ತಮ್ಮ ತಮ್ಮ ರಾಜ್ಯಗಳ ಹದ್ದುಬಸ್ತುಗಳನ್ನು ಗೊತ್ತುಮಾಡಿಕೊಳ್ಳುವ ವಿಷಯದಲ್ಲಿ ಚರ್ಚೆಗಳನ್ನು ನಡಿಸುತ್ತಿದಾರ ಇಷ್ಟರಲ್ಲೇ ಈ ವಿಚಾರವು ಇತ್ಯರ್ಥವಾಗುವಂತೆ ಕಾಣುತ್ತಿದೆ ಟರ್ಕಿಯವರು ಯುದ್ಧದಲ್ಲಿ ಸೋತು ಕಳೆದುಕೊಂಡಿದ್ದ ಪ್ರದೇಶಗಳ ಪೈಕಿ ಬಹಳ ಭಾಗವನ್ನು ಮತ್ತೆ ಸಂಪಾದಿಸಿಕೊಂಡರು ಇವುಗಳಲ್ಲಿ ಮುಖ್ಯವಾದವುಗಳ್ಯಾವವೆಂದರೆ ಅದ್ರಿಯಾನೋಪಲ್ ಪಟ್ಟಣವು ಟರ್ಕಿಯವರ ಆಳ್ವಿಕೆಗೆ ಬಂದಿದ, ಈ ಪಟ್ಟಣದಿಂದ ಹೊರಗಣ ಪಶ್ಚಿಮಕ್ಕೆ ಅವರ ಎಲ್ಲೆಕಟ್ಟು ನಿರ್ಧರವಾಯಿತು. ಮತ್ತು ರೈಲು ರಸ್ತೆಗಳು ಕೂಡುವ ಪ್ರಾಮುಖ್ಯವಾದ ಡೆಮೊಟಿಕಾ ನಗರವನ್ನು ವಾಪಸು ಟರ್ಕಿಯವರಿಗೆ ಕೊಟ್ಟುಬಿಟ್ಟರು. ಈಜಿಯನ್ ಸಮುದ್ರ ತೀರದಲ್ಲಿರುವ ಡೇಡಿಗಾಚ್ ಎಂಬ ಪಟ್ಟಣಕ್ಕೆ ಬಲ್ಗೇರಿಯದಿಂದ ಬರುವ ರೈಲು ಮಾರ್ಗಕ್ಕೆ ಈ ಡೆಮೊಟಿಕಾ ನಗರವು ಅಭಿಮುಖವಾಗಿರುತ್ತದೆ ಡೇಡಿಗಾಚ್ ನಗರವು ಬಲ್ಗೇರಿಯಾಕ್ಕೆ ಸೇರಿದೆಯಾದರೂ ಬಲ್ಗೇರಿಯಾದವರು ಅಲ್ಲಿಗೆ ಬರಬೇಕಾದರೆ ಮಧ್ಯೆ ಇರುವ ಟರ್ಕಿಯವರ ದೇಶವನ್ನು ಹಾಸಿ ಹೋಗಬೇಕು. ಅಂತು ಈಗ ನಿಷ್ಕರ್ಷೆಯಾಗಿರುವ ಈ ಎಲ್ಲೆಕಟ್ಟುಗಳೆಲ್ಲಾ ಶಾಶ್ವತವಾಗಿ ನಿಲ್ಲುವವೆಂದು ನಂಬಿ ನಿರೀಕ್ಷಿಸುತ್ತೇವೆ

ಬಲ್ಗೇರಿಯಾದವರು ಟರ್ಕಿಯವರ ಮೇಲೆ ಅನೇಕ ಕ್ರೂರಕೃತ್ಯಗಳನ್ನು ನಡಿಸಿದರೆಂದು ನಾನಾ ಬಗೆಯ ಕಥೆಗಳನ್ನು ಹುಟ್ಟಿಸಿ ಪ್ರಪಂಚಕ್ಕೆಲ್ಲಾ ಹರಡಿದರು, ಆದರೆ ಈಚೆಗೆ ತಿಳಿದುಬಂದಿರುವ ವರ್ತಮಾನಗಳಿಂದ ಆ ಕಥೆಗಳು ಬರೀ ಉತ್ಪ್ರೇಕ್ಷೆಗಳಂತಲೂ, ಬಲ್ಗೇರಿಯಾದವರ ಮೇಲೆ ಆಗ್ರಹವನ್ನು ಹುಟ್ಟಿಸಬೇಕೆಂಬ ಉದ್ದೇಶದಿಂದ ಹರಡಲ್ಪಟ್ಟವೆಂದೂ ಗೊತ್ತಾಗುತ್ತದೆ. ಇದುವರೆಗೂ ವೈರವೃತ್ತಿಯಿಂದ ಕಾದಾಡುತ್ತಿದ್ದ ಜನಾಂಗಗಳೆಲ್ಲಾ ಇನ್ನು ಮುಂದ ಸಮ್ಮತಿಯಾಗಿಯೂ, ಪರಸ್ಪರ ಹಿತಚಿಂತಕರಾಗಿಯೂ ವರ್ತಿಸುವರೆಂದು ನಂಬಿ ನಿರೀಕ್ಷಿಸುತ್ತೇವೆ

ಸಾಮಾನ್ಯ ಜನಗಳು ಮೊದಲಿನಂತೆ ತಮ್ಮ ತಮ್ಮ ಕಸುಬುಗಳನ್ನು ಅವಲಂಬಿಸಿಕೊಂಡು ನೆಮ್ಮದಿಯಾಗಿರಬೇಕಾದರೆ ಇನ್ನೂ ಕೆಲವು ಕಾಲ ಹಿಡಿಯುವುದು ಹೊಸದಾಗಿ ನಿರ್ಮಿತವಾಗಿರುವ ಅಲ್ಬೇನಿಯಾ ಎಂಬ ಆಧಿಪತ್ಯದಲ್ಲಿ ಇನ್ನೂ ಸ್ವಲ್ಪ ಗಲಭೆಯೂ ಹೊಡೆದಾಟಗಳೂ ಉಂಟು ಅಲ್ಲಿ ಈಸಾದ್ ಪಾಷಾ ಎಂಬ ಮುಖಂಡನು ತಾನೇ ಅಧಿಪತಿಯಾಗಬೇಕೆಂದು ಹೋರಾಡುತ್ತಿದಾನೆ ಆದರೆ ಈ ವಿಚಾರವನ್ನು ಪರರಾಜ್ಯಗಳವರು ತನಿಖೆಯಿಂದ ಇತ್ಯರ್ಥ ಮಾಡಬೇಕಾಗಿದೆ

* * * *

ಚೀನಾರಾಜ್ಯದಲ್ಲಿ ಚಕ್ರವರ್ತಿಯ ಪ್ರಭುತ್ವವು ತೊಲೆದು ಹೋಗಿ ಪ್ರಜಾ ಪ್ರತಿನಿಧಿ ಪ್ರಭುತ್ವವು ಸ್ಥಾಪನೆಯಾದಾರಭ್ಯ ಪ್ರಜಾ ಪಕ್ಷದವರಿಗೂ ದಂಗೇಕೋರರಿಗೂ ಅನೇಕ ಹೋರಾಟಗಳಾದವು ಇದು ಇನ್ನೂ ಸಂಪೂರ್ಣವಾಗಿ ನಿಂತು ಇಲ್ಲ ಆದರೂ ದಿನೇದಿನೇ ರಾಜ್ಯವು ಹದಕ್ಕೆ ಬರುತ್ತಿರುವಂತೆ ಕಾಣುವುದು ಈಗಿನ ಪ್ರಜಾ ಪ್ರಭುತ್ವದ ಪ್ರೆಸಿಡೆಂಟರು ದರ್ಪವಿಟ್ಟು ದಂಗೆಗಳನ್ನು ಅಡಗಿಸಿರುತ್ತಾರೆ ದಂಗೇಕೋರರ ಮುಖಂಡರು ತಲೆತಪ್ಪಿಸಿಕೊಂಡು ದೇಶಭ್ರಷ್ಟರಾಗಿ ಜಪಾನಿಗೆ ಹೋಗಿ ಸೇರಿಕೊಂಡರು ಆದಾಗ್ಯೂ ಚೀನಾ ಸಂಸ್ಥಾನವು ಒಡೆದು ಪ್ರತ್ಯೇಕ ಪ್ರತ್ಯೇಕವಾಗದೆ ಇದ್ದೀತೇ ಎಂಬ ಶಂಕೆಯುಂಟಾಗಿದೆ ಆ ಚಕ್ರಾಧಿಪತ್ಯದ ಈಗಿನ ಸ್ಥಿತಿಗತಿಯನ್ನು ನೋಡಲಾಗಿ ಉತ್ತರ ಭಾಗವೂ ದಕ್ಷಿಣ ಭಾಗವೂ ಒಂದಾಗಿರಲಾರದೆಂದು ಕಾಣುವುದು ಹೀಗೆ ವಿಭಾಗಗಳಾದ ಪಕ್ಷದಲ್ಲಿ ಚೀನಾರಾಜ್ಯವು ದುರ್ಬಲ ಹೊಂದಿ ಅದರ ಶ್ರೇಯೋಭಿವೃದ್ಧಿಗೆ ಅಡಚಣೆಯುಂಟಾದೀತು.

ನ್ಯಾನ್‌ಕಿನ್ ಪಟ್ಟಣದಲ್ಲಿದ್ದ ಕೆಲವು ಜಪಾನೀಯರನ್ನು ಚೀನೆಯವರು ಕಿರುಕುಳ ಪಡಿಸಿದರೆಂದು ಜಪಾನ್‌ನವರು ಚೀನೆಯವರ ಮೇಲೆ ಆಗ್ರಹಪಡುತ್ತಿದಾರೆ ಚೀನೆಯವರು ಕೆಲವು ಜಪಾನೀಯರನ್ನು ಕೊಂದುಹಾಕಿದರು ಇದರ ಪರಿಹಾರಕ್ಕಾಗಿ ಜಪಾನ್‌ನವರು ಚೀನೆಯವರಿಗೆ ಕೆಲವು ಕಠಿಣವಾದ ಪ್ರಶ್ನೆಗಳನ್ನು ಹಾಕಿರುವರು ಇದರಂತೆ ಚೀನೆಯವರು ನಡೆದುಕೊಳ್ಳುತ್ತಾರೆಂದು ನಿರೀಕ್ಷಿಸುವುದು ಕಷ್ಟವಾಗಿದೆ ಈ ವಿಚಾರವು ಹಾಗೇ ಇತ್ಯರ್ಥವಾದೀತೆಂದೂ, ಆ ಎರಡು ದೊಡ್ಡ ಜನಾಂಗಗಳಿಗೂ ಮನಸ್ತಾಪಗಳು ಹೆಚ್ಚಿ ಯುದ್ಧ ಪ್ರಮೇಯ ಉಂಟಾಗಲಾರದೆಂದೂ ನಿರೀಕ್ಷಿಸುತ್ತೇವೆ ಯಾಕಂದರೆ ಕಡಿದಾಟಗಳಿಂದ ಉಭಯ ರಾಜ್ಯಗಳವರೂ ದುರ್ಬಲರಾಗಿ ಅಭಿವೃದ್ಧಿ ಹೊಂದದಂತಾಗುತ್ತಾರೆ ಆವೆರಡು ರಾಜ್ಯಗಳಲ್ಲೂ ಶಾಶ್ವತವಾದ ರಾಜ್ಯಭಾರ ಕ್ರಮಗಳು ನೆಲೆಗೊಂಡು ವ್ಯಾಪಾರಾದಿಗಳು ಅಭಿವೃದ್ಧಿ ಹೊಂದುವುದಕ್ಕೆ ಅವರವರಿಗೆ ಒಂದು ಕಾಲಾವಧಿಯಾಗಬೇಕೆಂದು ನಮಗೆ ತೋರುವುದು

* * * *

ಅತ್ತಲಾಗಿ ಅಮೇರಿಕ ಖಂಡಕ್ಕೆ ಸೇರಿದ ಸಂಯುಕ್ತ ಸಂಸ್ಥಾನಗಳಿಗೂ ಮೆಕ್ಸಿಕೊ ರಾಜ್ಯಕ್ಕೂ ಇನ್ನೂ ಕಲವು ಮನಸ್ತಾಪಗಳು ಹರಿಯಲಿಲ್ಲ ಆದರೆ ಅವರು ಪರಸ್ಪರ ಯುದ್ಧಕ್ಕೆ ನಿಲ್ಲದ ತಮ್ಮ ಹೋರಾಟಗಳನ್ನು ಪಂಚಾಯತಿಯಲ್ಲಿ ವ್ಯವಸ್ಥೆ ಮಾಡಿಕೊಳ್ಳುತ್ತಾರೆಂಬ ಭರವಸೆಯುಂಟಾಗಿದೆ ಮೆಕ್ಸಿಕೊ ರಾಜ್ಯದಲ್ಲಿ ಇನ್ನೂ ಪ್ರಜಾ ನೆಮ್ಮದಿಯುಂಟಾಗಿಲ್ಲ, ರಾಜ್ಯವು ಹದಕ್ಕೆ ಬರಲಿಲ್ಲ ಅದನ್ನು ಹದಬಂದಿಯಲ್ಲಿಟ್ಟುಕೊಳ್ಳುವ ದರ್ಪವುಳ್ಳ ರಾಜ್ಯಭಾರವು ರೂಪಿಸಲ್ಪಟ್ಟರಾದೀತಲ್ಲಾ ಎಂದು ಹಾರೈಸುತ್ತೇವೆ

ಚಿತ್ತಶುದ್ಧಿ.

ಮನುಷ್ಯನು ದೇವರನ್ನು ತನ್ನ ಸ್ವಶಕ್ತಿಯಿಂದಲೂ ಬುದ್ಧಿಯಿಂದಲೂ ತಿಳುಕೊಳ್ಳಲಾರನು ಆದ್ದರಿಂದ ದೇವರು ತನ್ನನ್ನು ಮನುಷ್ಯನಿಗೆ ಪ್ರಕಟಿಸುವದು ಅಗತ್ಯವಾಗಿದೆ ಈ ವಿಷಯದಲ್ಲಿ ಬೇರೆ ಮತಗಳೂ ಒಪ್ಪುವದರಿಂದ ಅದನ್ನು ಚರ್ಚಿಸುವ ಅಗತ್ಯವಿಲ್ಲ ಮನಸ್ಸು ಮೊಬ್ಬಾಗಿರುವದರಿಂದ ಅದಕ್ಕೆ ಕವಿದಿರುವ ಕತ್ತಲನ್ನು ಪರಿಹರಿಸಿ ಸುಜ್ಞಾನವೆಂಬ ದೀವಟಿಗೆಯನ್ನು ಹಿಡಿದು ಅದಕ್ಕೆ ಬೆಳಕು ಬರುವಂತೆ ಮಾಡುವದು ದೇವರ ಕೆಲಸವಾಗಿದೆ ಕತ್ತಲನಲ್ಲಿ ಕೂತಿರುವವನಿಗೆ ದೀಪವನ್ನು ತಂದು ಹಿಡಿದರೆ ಅವನ ಸುತ್ತಲೂ ಬೆಳಕಾಗುವದೇನೋ ಸಹಜ ಆದರೆ ಕತ್ತಲ ಕೋಣೆಯಲ್ಲಿ ಬೆಳಕು ಬರುವಂತೆ ಮಾಡಿದರೂ ಅಲ್ಲಿ ಕೂತಿರುವವನು ಕಣ್ಣು ತೆರೆದು ಬೆಳಕನ್ನು ನೋಡುವದಕ್ಕೆ ಮನಸ್ಸಿಲ್ಲದೆ ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡಿದ್ದರೆ ದೀಪದ ಬೆಳಕಿನಿಂದ ಅವನಿಗೆ ಏನು ಪ್ರಯೋಜನವು ಲಭ್ಯವಾಗುವದೋ? ಇಲ್ಲವಷ್ಟೆ ಹಾಗೆಯೇ ದೇವರ ವಿಷಯವಾದ ತಿಳುವಳಿಕೆಯಿಲ್ಲದ ಈ ಲೋಕದಲ್ಲಿ ದೇವರು ತನ್ನ ಜ್ಞಾನವನ್ನು ಪ್ರಸರಿಸಮಾಡಿದರೂ ಮನುಷ್ಯನು ಅದಕ್ಕೆ ಬುದ್ಧಿಯಿಂದ ಮಾತ್ರ ಒಪ್ಪಿ ಹೃದಯಪೂರ್ತಿಯಿಂದ ಸ್ವೀಕರಿಸದೆ ಪೂರ್ಣಚಿತ್ತದಿಂದ ಅದನ್ನು ನಡತೆಯಲ್ಲಿ ಅಭ್ಯಾಸಿಸ

ಹೀಗಿರುವಾಗ ಆ ಜ್ಞಾನದಿಂದ ಅವನಿಗೆ ಪೂರ್ಣವಾದ ಪ್ರಯೋಜನವಾಗುವದೇ ಇಲ್ಲ ಅನುದಿನದ ನಡತೆಯಲ್ಲಿ ಅನುಸರಿಸಬೇಕಾದ ನೀತಿಸೂತ್ರಗಳು ಪಂಡಿತರಿಗೆ ಮಾತ್ರವಲ್ಲ ಪಾಮರರಿಗೂ ಗೋಚರವಾಗಿರುವವು ಅವುಗಳನ್ನು ಬುದ್ಧಿಯಿಂದ ಮಾತ್ರ ತಿಳಿದು ನಡತೆಯನ್ನು ಅವುಗಳಿಂದ ತಿದ್ದಿಕೊಳ್ಳದಿದ್ದರೆ ತಿಳಿದ ನೀತಿಬೋಧೆಯಿಂದ ಯಾರಿಗೆ ತಾನೇ ಏನು ಪ್ರಯೋಜನವಾಯಿತು ? ರೋಗ ಗ್ರಸ್ತನಾದವನಿಗೆ ಆಹಾರವು ರುಚಿಸುವದಿಲ್ಲ ಆಹಾರವೇನೋ ಒಳ್ಳೆಯದೇ ಸರಿ ರೋಗವಿಲ್ಲದವನಿಗೆ ಅದು ಹಿತಕರವಾಗಿ ಆರೋಗ್ಯವನ್ನೂ ಬಲವನ್ನೂ ಕೊಡುವದು ಆದರೆ ರೋಗವು ದೇಹದಲ್ಲಿ ವ್ಯಾಪಿಸಿರುವವರಿಗೆ ಅದರ ವಾಸನೆಯೇ ಸೇರದು ಬುದ್ಧಿಗೆ ಧರ್ಮಬೋಧೆಯು ಒಪ್ಪಿದರೂ ಪಾಪಿಯ ಹೃದಯವೂ ಚಿತ್ತವೂ ಅಸ್ವಸ್ಥವಾಗಿರುವದರಿಂದ ಆ ಬೋಧೆಯನ್ನು ನಡತೆಯಿಂದ ಸ್ವೀಕರಿಸುವದಿಲ್ಲ ಅದರಿಂದಲೇ ದುರ್ನೀತಿಯು ಲೋಕವನ್ನು ಕೆಡಿಸುತ್ತಲಿದೆ ತಿಳಿಯದೆ ಅಜ್ಞಾನದಿಂದ ಪಾಪಮಾಡುವವರಿಗಿಂತಲೂ ತಿಳಿದು ತಿಳಿದೂ ಪಾಪಮಾಡುವವರೇ ಹೆಚ್ಚು ಮತ್ತು ತಿಳಿಯದೆ ಅಜ್ಞಾನದೋಷದಿಂದ ನಡಿಸಿದ ಪಾಪಕ್ಕೆ ಮನ್ನಣೆಯುಂಟು ಆದರೆ ತಿಳಿದು ತಿಳಿದೂ ಮಾಡಿದ ದೋಷವು ಅಘೋರವಾದದ್ದು ಇದರಿಂದ ತಿಳಿದುಬರುವದೇನಂದರೆ—ಮನಸ್ಸು ದೇವರ ತಿಳುವಳಿಕೆಯಿಲ್ಲದೆ ಮೊಬ್ಬಾಗಿರುವದು ಮಾತ್ರವೇ ಅಲ್ಲ ದೇವರ ವಿಷಯವಾಗಿ ತಿಳುವಳಿಕೆ ಸಿಕ್ಕಿದರೂ ಪತಿತವಾದ ಮನಸ್ಸು ಆದನ್ನು ಅಂಗೀಕರಿಸುವದಿಲ್ಲ, ಅಂಗೀಕರಿಸುವದಕ್ಕೆ ಅದು ಒಪ್ಪುವದಿಲ್ಲ ಧರ್ಮಶಾಸ್ತ್ರವು ಪರಿಶುದ್ಧವಾದುದು, ನ್ಯಾಯವಾದುದು, ಹಿತವಾದುದು ಆದರೆ ನಾನು ಪಾಪಕ್ಕೆ ಮಾರಲ್ಪಟ್ಟು ಅದರ ವಶವರ್ತಿಯಾಗಿದ್ದೇನೆ ಒಳ್ಳೇ ಕೆಲಸವನ್ನು ನಡಿಸುವದು ಸರಿಯೆಂತ ನನಗೆ ಗೊತ್ತಾಯಿತು ಆದರೆ ಆದನ್ನು ನಡಿಸುವದು ನನ್ನಿಂದಾಗದು, ನನ್ನ ಬುದ್ಧಿಯು ಒಪ್ಪುವ ಒಳ್ಳೇದನ್ನು ಮಾಡದೆ, ಬುದ್ಧಿಯು ಒಪ್ಪದ ಕೆಟ್ಟದ್ದನ್ನೇ ಅಭ್ಯಾಸಿಸುತ್ತೇನೆ ಅಕಟಾ ಎಂತಹ ದುರವಸ್ಥೆಯಲ್ಲಿ ನಾನು ಬಿದ್ದಿದ್ದೇನೆ ? ನನ್ನನ್ನು ಈ ಸಂಕಟದಿಂದ ಬಿಡಿಸುವವರು ಯಾರೂ ಗತಿ ಇಲ್ಲವೋ ? ಎಂದು ಒಬ್ಬ ಭಕ್ತನು ನಿಟ್ಟುಸುರು ಬಿಟ್ಟು ಅತ್ತನು

ಹೀಗಿರುವದರಿಂದ ಮನುಷ್ಯನನ್ನು ದೇವರು ರಕ್ಷಿಸುವದಕ್ಕೆ ಎರಡು ಕೆಲಸಗಳನ್ನು ಮಾಡಬೇಕಾಯಿತು ಮೊದಲನೇದೇನಂದರೆ—ತನ್ನ ಸ್ವಭಾವವನ್ನೂ ಚಿತ್ತವನ್ನೂ ಮನುಷ್ಯನಿಗೆ ಪ್ರಕಟಿಸಬೇಕು ಕಲಿಯಬೇಕೆಂದು ಅಪೇಕ್ಷಿಸಿ ತನ್ನ ಬಳಿಗೆ ಬಂದ ಬಾಲಕರಿಗೆ ಬೋಧಕನು ವಿದ್ಯದ ರಹಸ್ಯವನ್ನು ಪ್ರಕಟಿಸಿ ಅಕ್ಷರಗಳನ್ನು ಚಿತ್ತ ಹೃದಯಂಗಮವಾಗಿ ಪಾಠ ಹೇಳುವದು ಸಾಕಾದ ಕೆಲಸವಾಗಿರುವದು ಪಾಠವನ್ನು ಕಲಿಯಬೊಲ್ಲದೆ ವಿದ್ಯವನ್ನೇ ಹಗೆಮಾಡುವ ಬಾಲಕರಿಗೆ ವಿದ್ಯವನ್ನು ಹೇಳುವದಕ್ಕೆ ಮುಂಚೆ ಅವರ ಮನಸ್ಸುಗಳನ್ನು ವಿದ್ಯಕ್ಕೆ ಒಲಿಸಿ ವಿದ್ಯವನ್ನು ಕಲಿಯಬೇಕೆಂಬ ಅಭಿಲಾಷೆಯು ಅವರಲ್ಲಿ ಅಂಕುರಿಸುವಂತೆ ಮಾಡಬೇಕಾದದು ಮೊದಲನೇ ಕೆಲಸವಲ್ಲವೆ ?

“ಮಕ್ಕಳನ್ನು ಸಾಕಿ ಬೆಳಸಿದೆನು ಆದರೆ ಅವರು ನನಗೆ ವಿರೋಧವಾಗಿ ದ್ರೋಹ ಮಾಡಿದ್ದಾರೆ ಎತ್ತು ತನ್ನ ಯಜಮಾನನನ್ನೂ ಕತ್ತೆಯು ಒಡೆಯನ ಕೊಟ್ಟಿಗೆಯನ್ನೂ ತಿಳಿಯುತ್ತವೆ ಆದರೆ ನಾನು ಸಾಕಿ ಸಲಹಿದ ಜನಗಳು ನನ್ನನ್ನು ತಿಳಿಯಬೊಲ್ಲದವರಾಗಿದ್ದಾರೆ” ಎಂದು ಮಾನವ ಜಾತಿಯನ್ನು ಕುರಿತು ದೇವರು ಹೇಳುತ್ತಾನೆಂದು ಒಬ್ಬ ಬೋಧಕನು ಹೇಳಿದ್ದು ನಿಜವಾಗಿದೆ ದ್ರೋಹಿಗಳಾಗಿ ಇರುವದಕ್ಕೆ ಒಪ್ಪದೆ ತಾವು ಮಾಡಿದ ದ್ರೋಹಕ್ಕಾಗಿ ಪಶ್ಚಾತ್ತಾಪಪಡುವ ಮಕ್ಕಳಿಗೆ ತಂದೆಯು ಮನ್ನಿಸುವನು ಆದರೆ ದ್ರೋಹವನ್ನೇ ಬಯಸುವದರಲ್ಲಿ ಹೆಚ್ಚಳಪಡುವ ಮಕ್ಕಳಿಗೆ ಮನ್ನಣೆಯನ್ನು ನೀಡುವದು ಪ್ರಯೋಜನವಿಲ್ಲ

ಆದ್ದರಿಂದ ದೇವರು ತನ್ನನ್ನು ಮನುಷ್ಯರಿಗೆ ಪ್ರಕಟಿಸಿಕೊಳ್ಳುವದಕ್ಕಿಂತ ಮುಂಚೆ ಅವರು ತಮ್ಮ ವಕ್ರಮಾರ್ಗದಲ್ಲಿ ಬೇಸರಪಟ್ಟು ತನ್ನ ಕಡೆಗೆ ತಿರುಗಿಕೊಂಡು ತಾನು ಬೋಧಿಸುವ ಮಾರ್ಗವನ್ನು ಅವರು ಹಿಡಿಯುವದಕ್ಕೆ ಕಾಂಕ್ಷಿಸಿಸುವ ಮನಸ್ಸನ್ನು ಅವರಲ್ಲಿ ಹುಟ್ಟಿಸಬೇಕು ಅವರ ಮೇಲೆ ಬಲಾತ್ಕಾರವನ್ನು ಪ್ರಯೋಗಿಸುವದರಿಂದ ಅವರು ಸೋಲಬಹುದು ಆದರೆ ಮನ ಒದಂಬಡುವದಿಲ್ಲ ತಂದೆಯ ಮನೆಯಲ್ಲಿ ವಿಧೇಯನಾಗಿರುವದಕ್ಕೆ ಮನಸ್ಸಿಲ್ಲದ ಮಗನನ್ನು ಮನೆಯಲ್ಲಿರಿಸಿಕೊಳ್ಳುವದಕ್ಕೆ ಎರಡು ಮಾರ್ಗಗಳುಂಟು ಮೊದಲನೇದು ಅವನನ್ನು ಆಳುಗಳ ಕೈಯಿಂದ ಹಿಡಿಸಿ ಮನೆಯಲ್ಲಿ ಕಟ್ಟಿಹಾಕುವದು ಇದು ನಿಷ್ಫಲವಾದಮಾರ್ಗ ಅಥವಾ ಮಗನನ್ನು ತನ್ನ ಕಡೆಗೆ ಒಲಿಸಿಕೊಳ್ಳುವದಕ್ಕೆ ತಕ್ಕ ಮಾರ್ಗವೆಂದು ಯಾರೂ ಒಪ್ಪಲಾರರು ಎರಡನೆಯ ಮಾರ್ಗವೇನಂದರೆ—ಅವನನ್ನು ಸದ್ಯಕ್ಕೆ ಅವನ ಇಷ್ಟದ ಪ್ರಕಾರ ಬಿಟ್ಟು ತಂದೆಯ ಮನೆಯನ್ನು ಬಿಟ್ಟದ್ದರಿಂದ ತನಗೆ ಸಂಭವಿಸುವ ಕೊರತೆಯನ್ನೂ ದುಃಖವನ್ನೂ ಕಷ್ಟವನ್ನೂ ಅನುಭವಿಸಿ ಅವನು “ನಿಸತ್ತು ತಂದೆಯು ತನ್ನನ್ನು ಪುನಹ ತನ್ನ ಮನೆಯಲ್ಲಿ ಸೇರಿಸಿಕೊಳ್ಳುವನೇ ? ನನ್ನ ಅಪರಾಧವನ್ನು ಮನ್ನಿಸುವನೇ ?” ಎಂದು ತಂದೆಯ ಆಶ್ರಯವನ್ನು ಹುಡುಕುವಂತೆ ಮನೆಯ ಕಡೆಗೆ ಬರುತ್ತಿರುವ ಮಗನನ್ನು ಮಗನ ಎದುರಿಗೆ ಹೋಗಿ ಅವನನ್ನು ಆಲಂಗಿಸಿಕೊಳ್ಳುವದು ಇದೇ ಮಗನನ್ನು ಒಲಿಸಿಕೊಳ್ಳುವದಕ್ಕೆ ತಕ್ಕ ಮಾರ್ಗ ಯೇಸು ಕ್ರಿಸ್ತನು ಪಾಪದ ಮಾರ್ಗವನ್ನು ಅದರ ನಷ್ಟವನ್ನೂ ಪ್ರಕಟಿಸಿ, ಅದನ್ನು ಬಿಟ್ಟು ಸನ್ಮಾರ್ಗಪ್ರವರ್ತಕರಾಗಬೇಕೆಂದು ಅಪೇಕ್ಷಿಸುವವರನ್ನು ಎದುರುಗೊಂಡು ಸ್ವೀಕರಿಸಿ, ತಂದೆಯ ಮನೆಗೆ ಸೇರಿಸುವ ರಕ್ಷಕನಾಗಿದ್ದಾನೆ

ಒಳದೇಶದ ವೃತ್ತಾಂತಗಳು

ಮೈಸೂರು ಗಾಯನಸಮಾಜದವರು ಮಹಾವೈದ್ಯನಾಥಯ್ಯರ ಶಿಷ್ಯರಾದ ಮ|| ಶಿವಶಂಕರಯ್ಯರನ್ನು ಮದರಾಸಿನಿಂದ ಕರಸಿ ನಾಳೆ ಭಾನುವಾರ ಅವರಿಂದ ಪಿಟೀಲ್ ಮತ್ತು ಹಾಡುಗಾರಿಕೆಯನ್ನು ಮಾಡಿಸುವರೆಂದು ಕೇಳುತ್ತೇವೆ

•

ದಿನವೂ ರಾಜಧಾನಿಯಲ್ಲಿ ಬೆಳಗಿನ ಝಾಮದ 5 ಗಂಟೆಗೆ ಲಾಗಾಯತಿ ನಿಂದಲೂ ಕೋಟೆ ಕೊತ್ತಲದಲ್ಲಿ ಹಾರಿಸುತ್ತಿದ್ದ ಗುಂಡನ್ನು ಈ ತಿಂಗಳ ಪ್ರಾರಂಭದಿಂದ ನಿಲ್ಲಿಸಿರುತ್ತಾರೆ ಇದಕ್ಕೆ ಕಾರಣವೇನೋ ಗೊತ್ತಾಗಲಿಲ್ಲ

•

ಈ ಸಲ ರಾಜಧಾನಿಯಲ್ಲಿ ಪ್ರಜಾ ಪ್ರತಿನಿಧಿಸಭೆಯು ಅಕ್ಟೋಬರ್ ತಾ. 11 ನೇ ಶನಿವಾರ ಪ್ರಾರಂಭವಾಗುತ್ತೆಂದೂ, ಅಡ್ರೆಸ್ಸುಗಳ ನಕಲುಗಳನ್ನು ಅದೇ 1 ನೇ ತಾ. ಬುಧವಾರದೊಳಗಾಗಿ ಸೆಕ್ರೆಟರಿಯವರಿಗೆ ತಲಪುವಂತೆ ಕಳುಹಿಸಬೇಕೆಂದೂ ಸರ್ಕಾರದವರು ತಿಳಿಸಿರುತ್ತಾರೆ.

2 ವರುಷ 9 ತಿಂಗಳು ಕಠಿಣ ಸಜಾ ಅನುಭವಿಸಬೇಕಾಗಿದ್ದ ಸಯ್ಯದ್ ಪೀರಾಕ್ ಎಂಬ ಖೈದಿಯು ಕಳೆದ ಶನಿವಾರ ಬೆಂಗಳೂರು ಸೆಂಟ್ರಲ್ ಜೈಲಿನಿಂದ ತಪ್ಪಿಸಿಕೊಂಡು ಹೋದನು ಇವನು ಈ ಶಿಕ್ಷೆಯಾಗುವುದಕ್ಕಿಂತ ಮುಂಚೆ ಪೊಲೀಸ್ ಸ್ಟೇಷನ್ ಲಾಕಪ್ಪಿನಿಂದಲೂ ತಪ್ಪಿಸಿಕೊಂಡು ಹೋಗಿದ್ದನು

•

ಮೊನ್ನೆ ಸೋಮವಾರ ಮಧ್ಯಾಹ್ನ 4 ಗಂಟೆಗೆ ಮಹಾ ಮಾತೃಶ್ರೀಯವರೂ ಅರಮನೆಯ ರಾಣೀವಾಸದವರೂ ಮೋಟರ್ ಗಾಡಿಗಳಲ್ಲಿ ಬೆಂಗಳೂರಿಂದ ರಾಜಧಾನಿಗೆ ದಯಮಾಡಿಸಿದರು ಗೌರವಾರ್ಥವಾದ ತೋಪುಗಳು ಹಾರಿಸಲ್ಪಟ್ಟವು ಶ್ರೀಮನ್ಮಹಾರಾಜರವರು ನೀಲಗಿರಿಯಿಂದ ನಾಳೆ ಶನಿವಾರ ರಾಜಧಾನಿಯನ್ನು ತಲಪುವವರಾಗಿದಾರೆಂದು ಕೇಳುತ್ತೇವೆ

•

ಕಳೆದ ಆಗಸ್ಟ್ 28 ನೇ ತಾರೀಖಿನ ನಮ್ಮ ಪತ್ರಿಕೆಯಲ್ಲಿ ಕ್ಯಾಂಬೋಡಿಯಾ ಹತ್ತಿಯ ಬಿತ್ತನೇ ಬೀಜವು ಮಣ (25 ಪೌಂಡುಕ)ಕ್ಕೆ ಒಂದು ರೂಪಾಯಿನಂತೆ ಸರ್ಕಾರದ ವ್ಯವಸಾಯ ಇಲಾಖೆಯ ಡಿಪೋದಲ್ಲಿ ಕ್ರಯಕ್ಕೆ ದೊರೆಯುವುದೆಂದು ಪ್ರಕಟವಾಗಿತ್ತು ಮಣಕ್ಕೆ ಒಂದೂವರೆ ರೂಪಾಯಿ ಕ್ರಯವೆಂದು ತಿದ್ದಬೇಕೆಂಬದಾಗಿ ವ್ಯವಸಾಯದ ಇಲಾಖಾ ಡೈರೆಕ್ಟರವರು ನಮಗೆ ಬರೆದು ತಿಳಿಸಿದಾರೆ

•

ಬೆಂಗಳೂರು ದಂಡು ಕ್ಲೀವ್‌ಲೆಂಡ್ ಟೌನ್ ವಾಸಸ್ಥರಾದ ಬ್ರಹ್ಮಸಮಾಜದ ಶ್ರೀಸ್ವಯಂಬ್ರಹ್ಮಾನಂದಸ್ವಾಮಿಯವರಿಗೆ ಕಾಯಿಲೆ ಪ್ರಾಪ್ತವಾಗಿ ಫ್ರೇಜರ್ ಟೌನ್ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದಾರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಬಹು ಕಾಲದಿಂದ ಊರೂರುಗಳಿಗೆ ಹೋಗಿ ಭಕ್ತಿ ನೀತಿ ಮೊದಲಾದ ವಿಚಾರಗಳನ್ನು ಕುರಿತು ಬೋಧನೆಮಾಡುತ್ತಾ ಪ್ರಜಾ ಹಿತೈಷಿಗಳಾಗಿದ್ದರು ಇವರಿಗೆ ಬೇಗನೆ ಆರೋಗ್ಯ ಉಂಟಾಗಲೆಂದು ಹಾರೈಸುತ್ತೇವೆ

•

ಕಳೆದ ವಾರ ರಾಜಧಾನಿಯಲ್ಲಿ 4-5 ದಿನ ಒಳ್ಳೇ ಮಳೆಗಳಾದವು ಇನ್ನೂ ವಿಶೇಷವಾಗಿ ಮಳೆ ಬರುವ ಸೂಚನೆಗಳು ಕಂಡು ಬರುತ್ತಿವೆ ದವಸ, ಹಾಲು ತುಪ್ಪ, ಸೌದೆ ಹುಲ್ಲು ಮುಂತಾದವುಗಳೆಲ್ಲಾ ಕ್ಷಾಮಕಾಲದಂತೆ ಬಹಳ ಪ್ರಿಯವಾಗಿರುತ್ತವೆ ವಿಶೇಷವಾಗಿ ಸರ್ಕಾರಿ ಕಾಮಗಾರಿಗಳು ನಡೆಯುತ್ತಿರೋದರಿಂದ ಬಡವರ ಜೀವನ ಜರುಗುವುದು ಆದರೆ ಮಧ್ಯವರ್ತಿಗಳಾದ ಪ್ರಜೆಗಳು ಸಂಸಾರವನ್ನು ನಡಿಸುವ ಭಂಗದಲ್ಲಿ ಚಿಂತೆಪಡುತ್ತಿದಾರೆ

•

ಬಳ್ಳಾರಿ ಜಿಲ್ಲಾ ಹುವ್ವಿನಹಡಗಲಿ ತಾಲ್ಲೂಕು ಮಾಗಳಗ್ರಾಮದ ಬೋರ್ಡು ಸ್ಕೂಲಿನಲ್ಲಿ ಹಿಂದಿನ ವಾರ ಪ್ರಜೆಗಳೆಲ್ಲಾ ಸೇರಿ ಒಂದು ಸಂತೋಷಸಭೆಯನ್ನು ನಡಿಸಿದರು ಆಗ ಹೆಡ್ ಮಾಸ್ಟರು ಮ|| ಗುರುಬಸವಯ್ಯನವರೂ, ಅ|| ಮಾಸ್ಟರು ಮ|| ಚನ್ನಪ್ಪನವರೂ ಸಭಿಕರಿಗೆ ವ್ಯವಸಾಯ, ವಿದ್ಯಾಭ್ಯಾಸ, ಇಂಗ್ಲಿಷ್ ರಾಜ್ಯಭಾರದ ಉಪಕಾರಗಳು, ಈ ಮೊದಲಾದ ವಿಚಾರಗಳನ್ನು ಕುರಿತು ಉಪನ್ಯಾಸಗಳನ್ನು ಮಾಡಿ ಸಂತೋಷಪಡಿಸಿದರೆಂದು ತಿಳಿಯುತ್ತದೆ

•

ಮೊನ್ನೆ ಸೋಮವಾರ ಬೆಳಿಗ್ಗೆ ದಿವಾನ್ ಮ|| ವಿಶ್ವೇಶ್ವರಯ್ಯನವರು ಬೆಂಗಳೂರಿನಿಂದ ರಾಜಧಾನಿಗೆ ದಯಮಾಡಿ, ಕೂಡಲೇ ಮೋಟರಿನಲ್ಲಿ ಕನ್ನಂಬಾಡಿಗೆ ಹೋಗಿ ಆ ತಲಾವಿನ ಕಾಮಗಾರಿಯನ್ನೆಲ್ಲಾ ಇನ್‌ಸ್ಪೆಕ್ಷನ್ ಮಾಡಿಕೊಂಡು ಬಂದು, ಮರುದಿನ ಬೆಳಿಗ್ಗೆ ಮೋಟರಿನಲ್ಲಿ ನೈಸ್‌ರಾಯಿಯವರ ಬಾರಾಪುರದ ಕೆಡ್ಡಾ ಕ್ಯಾಂಪಿಗೆ ಹೋಗಿ ಅಲ್ಲಿ ನಡೆಯುವ ಕಾರ್ಯಗಳನ್ನೆಲ್ಲಾ ಪರಾಂಬರಿಸಿ ಸಾಯಂಕಾಲ ವಾಪಸು ಬಂದು ಆ ರಾತ್ರಿಯೇ ಬೆಂಗಳೂರಿಗೆ ತೆರಳಿದರು ಅವರು ಮತ್ತೆ ಮುಂದಿನ ಭಾನುವಾರ ರಾಜಧಾನಿಗೆ ಬರುವರೆಂದು ಕೇಳುತ್ತೇವೆ

•

ದರ್ಬಾರ್ ಭಕ್ಷಿಯವರು ಪ್ರಕಟಮಾಡಿರುವ ಪ್ರಕಾರ ಈ ಸಲ ನವರಾತ್ರಿ ಮಹೋತ್ಸವವು ರಾಜಧಾನಿಯಲ್ಲಿ ಅಕ್ಟೋಬರ್ ತಾ 1 ನೇ ಬುಧವಾರ ಪ್ರಾರಂಭವಾಗಿ, ಶ್ರೀಮನ್ಮಹಾರಾಜರವರು ಆ ದಿನ ಬೆಳಿಗ್ಗೆ 8½ ಗಂಟೆಗೆ ಶುಭಲಗ್ನದಲ್ಲಿ ಸಿಂಹಾಸನಾರೋಹಣವನ್ನು ಮಾಡುವರು ಆ ದಿನವೂ ಬಳಿಕ ಆರು ದಿನಗಳೂ ಸಾಯಂಕಾಲಗಳಲ್ಲಿ ದರ್ಬಾರ್ ನಡೆಯುವುದು ತಾ 8 ನೇ ಬುಧವಾರ ಬೆಳಿಗ್ಗೆ ಆಯುಧಗಜಾಶ್ವಾದಿಗಳ ಪೂಜೆಯೂ, ಸಾಯಂಕಾಲ ಇಂಗ್ಲೀಷ್ ದರ್ಬಾರೂ ಜರುಗುವವು ತಾ 9 ನೇ ಗುರುವಾರ ವಿಜಯದಶಮಿಪ್ರಯುಕ್ತವಾದ ಮೆರವಣಿಗೆ ಬೆಳೆಯುತ್ತದೆ ತಾ 11, 12 ರಲ್ಲಿ ಸಾಯಂಕಾಲ ಅರಮನೆ ಅಂಬಾವಿಲಾಸದಲ್ಲಿ ದರ್ಬಾರ್ ನಡೆಯುವುದು

•

ಒಬ್ಬ ಬಾತ್ಮಿದಾರರಿಂದ—ಕುಣಿಗಲ್ ಸ್ಟಡ್ ಫಾರಂ ವೆಟರಿನೇರಿಯನ್ ಇನ್‌ಛಾರ್ಜ್ ಆಫೀಸರಾ ಮೆ|| ಜಿ ಎ ಡೇವಿಡ್ಸನ್ ಸಾಹೇಬರವರು ಕಳೆದ ತಾ 15 ನೇ ಸೋಮವಾರ ಬೆಳಿಗ್ಗೆ ಸುಮಾರು 5 ಘಂಟೆಯಲ್ಲಿ ಸ್ವಗೃಹದಲ್ಲಿ ಕಾಲವಾದರು ಇವರು ಈ ಕುಣಿಗಲಿಗೆ ಬಂದ ಸುಮಾರು 20 ವರ್ಷಗಳಿಂದಲೂ ಬಹಳ ಒಳ್ಳೆಯವರೂ, ಸ್ವಾಮಿಯ ಭಕ್ತರೂ, ಪರೋಪಕಾರಿಗಳೂ ಆಗಿದ್ದುಕೊಂಡು, ನಮ್ಮ ಮಹಾರಾಜರವರ ಸ್ಟಡ್ ಫಾರಮನ್ನು ಬಹಳ ಅಭಿವೃದ್ಧಿಸ್ಥಿಗೆ ತಂದಿರುತ್ತಾರೆ ಇವರು ಕುಣಿಗಲಿನಲ್ಲಿರತಕ್ಕ ಅನೇಕ ಬಡಜನಗಳಿಗೆ ಫಾರಂನಲ್ಲಿ ಅನೇಕ ಕೂಲಿ ಕೆಲಸಗಳನ್ನು ಏರ್ಪಾಡುಮಾಡಿಕೊಟ್ಟು ಕಷ್ಟಕಾಲಗಳಲ್ಲಿ ಉಪಕಾರಮಾಡಿರುತ್ತಾರೆ ಇವರ ಮರಣಕ್ಕಾಗಿ ಕುಣಿಗಲಿನ ನಿವಾಸಿಗಳು ಮಾತ್ರವಲ್ಲದೆ ಅಕ್ಕಪಕ್ಕ ಗ್ರಾಮಾಂತರಗಳವರೂ ಕುಂಬಾ ವಿಷಾದ ಪಡುತ್ತಲಿದಾರೆ

•

ರಾಜಧಾನಿಯಲ್ಲಿರುವ ಅಡ್ವೋಕೇಟ್ ಮತ್ತು ಇನಾಂದಾರರಾದ ಮ|| ಎ ರಾಮಣ್ಣನವರು ಈ ತಿಂಗಳು 12 ನೇ ತಾ ತಮಗೆ 50 ವರುಷ ತುಂಬಿದ ಸಂತೋಷಕ್ಕಾಗಿ ಆ ದಿನ ತಮ್ಮ ಬಂಗಲೆಯಲ್ಲಿ ಸುಮಾರು 500 ಬಡಜನರಿಗೆ ಭಕ್ಷ್ಯಗಳ ಸಹಿತವಾದ ಸುಭೋಜನವನ್ನು ಮಾಡಿಸಿ ದಕ್ಷಿಣೆಕೊಟ್ಟರು ತಮ್ಮ ನೆಂಟರಲ್ಲಿ ಮೂವರಿಗೆ ತಲಾ 100 ರೂಪಾಯಿನಂತೆಯೂ, ಎಚ್ ರಂಗಾಚಾರ್ ಎಂಬ ಶ್ರೀವೈಷ್ಣವ ವಿದ್ಯಾರ್ಥಿಗೆ ಬಿ ಎ ಪರೀಕ್ಷೆಗೆ ಫೀಜುಕಟ್ಟುವುದಕ್ಕೆ 51 ರೂಪಾಯನ್ನೂ ಉಚಿತವಾಗಿ ಕೊಟ್ಟದ್ದಲ್ಲದೆ ಮೂರು ಮಂದಿ ಬಡವಿಧವೆಯರಿಗೆ ಅವರ ಜೀವಮಾನವಿರುವತನಕ ತಿಂಗಳಿಗೆ ಇಷ್ಟೆಂದು ಅಕ್ಕಿಪಡಿ ಕೊಡಿಸುತ್ತಾ ಬರುವುದಾಗಿ ವಾಗ್ದಾನಮಾಡಿದರು ತಮ್ಮ ಇಬ್ಬರು ಗುಮಾಸ್ತರಿಗೂ ತಲಾ ಎರಡು ರೂಪಾಯಿನಂತೆ ಸಂಬಳವನ್ನು ಬಡ್ತಿಮಾಡಿದರು

•

ಕುರೀಸ್‌ಪೇಟೆಗೂ ಕಾನ್‌ಕಾನಹಳ್ಳಿಗೂ ಮಧ್ಯ ಮಾರ್ಗದಲ್ಲಿ ಕೆಲವು ಕಳ್ಳಕೊರಮರು ಎಲ್ಲಿಂದಲೋ ಕಳವು ಮಾಡಿಕೊಂಡು ಅಡ್ಡದಾರಿ ಬಿದ್ದು ಹೋಗುತ್ತಿದ್ದವರನ್ನು ಅವ್ವೇರ ಹಳ್ಳಿಯ ಕೆಲವರು ತಡೆದು ಅವರ ಬಳಿ ಇದ್ದ ಕಳವು ಮಾಲುಗಳನ್ನು ಕಿತ್ತುಕೊಂಡು ಓಡಿಸಿಬಿಟ್ಟರು ಈ ಎರಡನೇ ಕಳುವಿನ ಫಿರ್ಯಾದು ಗ್ರಾಮದಲ್ಲಿ ಹೆಚ್ಚಿ ಪೊಲೀಸ್ ಇನ್‌ಸ್ಪೆಕ್ಟರ್ ಮ|| ಎಂ ದೇವರಾಜ ಅರಸಿನವರಿಗೆ ತಿಳಿದಾಗ ಅವರು ಪತ್ತೆ ತರದೂದು ನಡಿಸಿದ್ದರಲ್ಲಿ ಭಾರೀ ಜಮೀನ್‌ದಾರರಾದ ಅವ್ವೇರಹಳ್ಳಿ ಪಟೇಲ್ ಚಿಕ್ಕಲಿಂಗೇಗೌಡ, ಸಬ್‌ಕೆರೆ ಪಟೇಲ್ ಮುದ್ದೇಗೌಡ, ಕಂದೂಸಾಬಿ ಮುಂತಾದ 5 6 ಜನಗಳ ಬಳಿಯಲ್ಲಿ ಸುಮಾರು 350 ರೂಪಾಯಿನ ಕಳುವು ನಗಗಳು ಸಿಕ್ಕಿದವು ಈ ಪೈಕಿ ಮಂಡ್ಯದ ತಾಲ್ಲೂಕಿಗೆ ಸೇರಿದ ನಡಗಟ್ಟದಲ್ಲಿ ಕಳುವಾದ 200 ರೂಪಾಯಿನ ಮಾಲುಗಳೂ, ಚನ್ನಪಟ್ಟಣದ ಪೋಸ್ಟ್ ಮ್ಯಾನಿನ ಬಾಬತು 150 ರೂಪಾಯಿನ ಮಾಲುಗಳೂ ಸಿಕ್ಕಿರುವುದಾಗಿಯೂ, ಪೊಲೀಸಿನವರು ಇನ್ನೂ ಪತ್ತೆತರದೂದು ನಡಿಸುತ್ತಿದಾರೆಂದೂ ಕೇಳುತ್ತೇವೆ

•

ಮೈಸೂರು ಸೆಷನ್ಸ್ ಜಡ್ಜರಾಗಿದ್ದ ಮಿ|| ಆರ್. ಬಿ ಪ್ಲಮರವರು ಕಳೆದ ವಾರ ಆ ಕೆಲಸದ ಛಾರ್ಜನ್ನು ಮಿ|| ಮಾರ್ ಹಂಜಾ ಹುಸೇನ್‌ರವರಿಗೆ ವಹಿಸಿ ಬೆಂಗಳೂರಿಗೆ ಪ್ರಯಾಣಮಾಡಿದರು ರಾಜಧಾನಿಯ ಲಾಯರ್ ಸಂಘದವರು ಮಿ|| ಪ್ಲಮರವರನ್ನೂ ಅವರ ಪತ್ನಿಯವರನ್ನೂ ಕರಸಿಕೊಂಡು ಅವರಿಗೆ ಬಹು ಸಂತೋಷಪ್ರದವಾದ ಟೀಪಾರ್ಟಿಯನ್ನು ಕೊಟ್ಟರು ಸುಮಾರು 40 ಮಂದಿ ಲಾಯರುಗಳೂ, ರಾಜಧಾನಿಯ ಮತ್ತು ನಂಜನಗೂಡು ಶ್ರೀರಂಗಪಟ್ಟಣಗಳ ಮುನ್‌ಸಿಫರುಗಳೂ, ರಾಜಧಾನಿಯ ಮ್ಯಾಜಿಸ್ಟ್ರೇಟರುಗಳೂ ಸೇರಿ ಆ ದಂಪತಿಗಳನ್ನು ಕೂಡಿಸಿಕೊಂಡು ಫೋಟೋ ತೆಗಿಸಿದರು ಪ್ರತ್ಯೇಕವಾಗಿ ಎಲ್ಲರೂ ಫಲಾಹಾರಗಳನ್ನು ಸೇವಿಸಿ, ಕೋರ್ಟ್ ಮಂದಿರದಲ್ಲಿ ಸೇರಿ ವೀಣಾಗಾನವನ್ನು ಕೇಳಿ ಆನಂದಪಟ್ಟರು ತರುವಾಯ ಲಾಯರ್ ಸಂಘದ ಪರವಾಗಿ ಅಡ್ವೋಕೇಟ್ ಮ|| ಎಚ್ ನರಸಿಂಹರಾಯರು ಮಿ|| ಪ್ಲಮರವರ ಗುಣಕಥನವನ್ನು ಮಾಡಿದರು ಅವರು ಸಮಯೋಚಿತವಾದ ಪ್ರತ್ಯುತ್ತರವನ್ನು ಹೇಳಿದ ಬಳಿಕ ಅವರಿಗೂ ಇತರರಿಗೂ ಗಂಧ ಪುಷ್ಪಗಳನ್ನು ಹಂಚಿ ಆ ಸಂತೋಷಕೂಟವನ್ನು ಮುಕ್ತಾಯಮಾಡಿದರು

•

ಮಾಗಡಿ ಜಮೀನ್‌ದಾರ್ ಮ|| ಕರಣೀಕ ಕೃಷ್ಣಮೂರ್ತಿರಾಯರ ಸಾಹಸ ಪ್ರಯತ್ನದಿಂದ ಸರ್ಕಾರದವರು ರಾಜಧಾನಿಯ ರೈಲ್ವೆ ಸ್ಟೇಷನ್ ಬಳಿ ಇರುವ ನಂಜರಾಜಬಹದ್ದರವರ ಧರ್ಮಸತ್ರದ ಎರಡು ಕಟ್ಟಡಗಳನ್ನೂ ಪ್ರಜಾಪ್ರತಿನಿಧಿಗಳ ಮಂದಿರಕ್ಕಾಗಿ ಬಿಟ್ಟುಕೊಟ್ಟು, ಹಾಸಿಗೆ ಕುರ್ಚಿ ಮೇಜು ಮುಂತಾದ ಸಾಮಾನುಗಳ ಸರಬರಾಯಿಗಾಗಿ ಅವರಿಗೆ 250 ರೂಪಾಯಿ ಸ್ಯಾಂಕ್ಷನ್ ಮಾಡಿದಾರೆ ಇದಲ್ಲದೆ ಮ|| ಕೃಷ್ಣಮೂರ್ತಿರಾಯರು ರೈಲ್ವೆ ಕಂಪನಿಯವರ ಕೂಡ ಕಾಗದ ಪತ್ರಗಳನ್ನು ನಡಿಸಿ ಅವರಿಂದ ಒಂದು ವಿಶೇಷವಾದ ರಿಯಾಯತಿಯನ್ನು ಸಂಪಾದಿಸಿಕೊಂಡಿದಾರೆ ಏನಂದರೆ ಮ|| ಕೃಷ್ಣಮೂರ್ತಿರಾಯರಿಂದ ಸರ್ಟಿಫಿಕೇಟು ಪಡೆದು ರೈಲ್ವೆ ಕಂಪನಿಯವರಿಗೆ ಬರೆಮುಕೊಳ್ಳುವ ಪ್ರಜಾಪ್ರತಿನಿಧಿಸಭೆಯ ಮೆಂಬರುಗಳು 1 ಅಥವಾ 2 ನೇ ತರಗತಿಯಲ್ಲಿ ಪ್ರಯಾಣಮಾಡಿದರೆ ಅವರಿಗೂ ಅವರ ಸಂಸಾರದವರಿಗೂ ರಾಜಧಾನಿಗೆ ಬಂದು ಹೋಗಲು ಒಂದೇ ಛಾರ್ಜು ಬೀಳುವುದು ಅವರ ಸೇವಕರಿಗೆ ಹೋಗಿಬರುವುದಕ್ಕೆ 3 ನೇ ಕ್ಲಾಸಿನಲ್ಲಿ 1½ ಛಾರ್ಜು ಬೀಳುವುದು ಈ ಟಿಕೆಟ್ಟುಗಳೆಲ್ಲಾ ಎಲ್ಲಾ ಸ್ಟೇಷನ್‌ಗಳಲ್ಲಿಯೂ ಸೆಪ್ಟಂಬರ್ ತಾ 20 ರಿಂದ ಅಕ್ಟೋಬರ್ ತಾ 9 ರ ವರೆಗೆ ಕೊಡುವಂತೆಯೂ, ಅವು ಅಕ್ಟೋಬರ್ ತಾ 31 ರ ವರೆಗೆ ಜಾರಿಯಲ್ಲಿರುವಂತೆಯೂ ನಿಷ್ಕರ್ಷೆ ಮಾಡಿದಾರೆ ಈ ಪ್ರತಿನಿಧಿಗಳ ಮಂದಿರವನ್ನು ರಾಜಧಾನಿಯಲ್ಲಿ ನೆಲೆಗೊಳಿಸಬೇಕೆಂದು ಮ|| ಕೃಷ್ಣಮೂರ್ತಿರಾಯರು ಎರಡು ವರುಷಗಳಿಂದ ಮಾಡುತ್ತಿರುವ ಸಾಹಸ ಪ್ರಯತ್ನಗಳು ಸ್ತೋತ್ರಾರ್ಹವಾಗಿವೆ

ನಯನಜ ಕ್ಷತ್ರಿಯಮತಸ್ಥರ ಎರಡನೆಯ ಸಭೆ

ಹಾಸನ ಡಿಸ್ಟ್ರಿಕ್ಟು ಅರಕಲಗೂಡು ತಾಲ್ಲೂಕು ಕೊಣನೂರು ಹೋಬಳಿ ಹಂಡರಂಗೀ ಗ್ರಾಮದಲ್ಲಿ ಕಳೆದ ಆಗಸ್ಟು ತಾ 27 ನೇ ಬುಧವಾರ ಅರಕಲಗೂಡು, ಹೊಳೇನರಸೀಪುರ, ಹಾಸನ, ಬೇಲೂರು, ಯಡತೊರೆ, ಹುಣಸೂರು, ಪಿರಿಯಾಪಟ್ಟಣ, ಕೊಡಗು, ತಿರುಮಕೂಡಲುನರಸೀಪುರ, ನಾಗಮಂಗಲ, ಮೂಡಗೆರೆ, ಈ ತಾಲ್ಲೂಕುಗಳ ನಯನಜ ಕ್ಷತ್ರಿಯ ಮಹಾಜನಗಳ ಸಭೆ ಸೇರಲ್ಪಟ್ಟಿತು ಈ ಸಭೆಗೆ ಶ್ರೀರಂಗಪುರೀ ಶ್ರೀಮನ್ ಜಗನ್ನಾಥಸ್ವಾಮಿಯವರ ಮಠದ ಸರ್ವಾಧಿಕಾರಿಗಳಾದ ಮ|| ಡಿ ಲಕ್ಷ್ಮೀನೃಸಿಂಹಪಂಡಿತರೂ ದಯಮಾಡಿಸಿದ್ದರು ಈ ಸಭೆಯಲ್ಲಿ ಸುಮಾರು ಎಂಟುನೂರು ಜನಗಳವರಿವಿಗೂ ಸೇರಿದ್ದರು ಹಂಡರಂಗೀ ಗ್ರಾಮದ ಹೋಬಳಿ ಯಜಮಾನರಾದ ಮ|| ದೊಡ್ಡರಂಗಪ್ಪನವರೂ, ಹಳೇಕೋಟೆ ಹೋಬಳಿ ಯಜಮಾನರಾದ ಮ|| ಮಾವಿನಕೆರೆ ತಿಮ್ಮಪ್ಪನವರೂ ಈ ಮಹಾಜನಗಳನ್ನು ಸತ್ಕರಿಸುವುದರಲ್ಲಿ ನಿರತರಾಗಿದ್ದರು ಗ್ರಾಮದ ಯಜಮಾನರು ಮ|| ಮರಿಯಪ್ಪನವರು ಈ ಸಭೆಯ ಕಾರ್ಯನಿರ್ವಾಹಕರಾಗಿದ್ದರು ಈ ಮಹಾಸಭೆಯಲ್ಲಿ ಸರ್ವರ ಪ್ರಾರ್ಥನೆಯಂತೆ ಶ್ರೀಮಠದ ಸರ್ವಾಧಿಕಾರಿಗಳಾದ ಮ|| ಡಿ ಲಕ್ಷ್ಮೀನೃಸಿಂಹಪಂಡಿತರು ಅಗ್ರಾಸನವನ್ನು ವಹಿಸಿದಾಗ ಸಭೆಯವರೆಲ್ಲರೂ ಅತ್ಯಂತ ಸಂತೋಷದಿಂದ ಕರತಾಡನಗಳನ್ನು ಮಾಡಿದರು ಆ ಕೂಡಲೆ ಮನೋಹರವಾದ ಬ್ಯಾಂಡ್ ವಾದ್ಯವು ಬಾರಿಸಲ್ಪಟ್ಟಿತು

ಆ ಸಮಯದಲ್ಲಿ ದೊಡ್ಡ ಗನ್ನೀನಾಟಕದ ಮ್ಯಾನೇಜರ್ ಮ|| ಕುಳ್ಳಯ್ಯನವರು ತಮ್ಮ ಮತದಲ್ಲಿರುವ ದುಷ್ಟವಾದ ನಡತೆಗಳನ್ನೂ, ಅವುಗಳಿಂದುಂಟಾಗಿರುವ ಕೊರತೆಗಳನ್ನೂ ಕುರಿತು ಸಭೆಯವರಿಗೆಲ್ಲಾ ತಿಳಿಯುವಂತೆ ವಿಹಿತವಾಗಿಯೇ ಉಪನ್ಯಾಸವನ್ನು ಹೇಳಿದರು ಅಷ್ಟರಲ್ಲಿ ಹೊಳೇನರಸೀಪುರದ ಮ|| ವಾಪಣ್ಣನವರು ಎದ್ದು ಶ್ರೀಮಠದ ಸರ್ವಾಧಿಕಾರಿಗಳನ್ನು ವಂದಿಸಿ ಉಪನ್ಯಾಸವನ್ನು ಮಾಡಿ ತನ್ಮೂಲಕ ಆ ಮತದವರಿಗೆಲ್ಲಾ ಬುದ್ಧಿವಾದಗಳನ್ನು ಅಪ್ಪಣೆ ಕೊಡಿಸಬೇಕೆಂದು ಕೇಳಿಕೊಂಡರು ಆ ಮನುವೆಯನ್ನು ಶ್ರೀಮಠದ ಸರ್ವಾಧಿಕಾರಿಗಳಾದ ಮ|| ಡಿ ಲಕ್ಷ್ಮೀನೃಸಿಂಹಪಂಡಿತರು ಅಂಗೀಕರಿಸಿ ಈ ನಯನಜ ಕ್ಷತ್ರಿಯ ಮತದವರ ಪುರೋಭಿವೃದ್ಧಿಗೆ ಅವಕಾಶಕೊಡುವ ಅನೇಕ ವಿಚಾರಗಳನ್ನು ಕುರಿತು ಉಪನ್ಯಾಸ ಮಾಡಿದರು ಈ ಉಪನ್ಯಾಸದ ಮುಖ್ಯ ಭಾಗಗಳೇನಂದರೆ—

ನಯನಜ ಕ್ಷತ್ರಿಯ ಮತದವರ ವಿದ್ಯಾಭಿವೃದ್ಧಿಯ ವಿಚಾರ, ಇವರಲ್ಲಿ ಅಂಟಿ ಬಂದಿರುವ ಕುಂದಕವಾದ ನಡತೆಗಳನ್ನು ತಪ್ಪಿಸಿಕೊಳ್ಳುವ ವಿಚಾರ, ಈ ಮತ ಸಂಬಂಧವಾದ ಶ್ರೀರಂಗಪುರಿ ಶ್ರೀಮನ್ ಜಗನ್ನಾಥಸ್ವಾಮಿವರ ಮಠವನ್ನು ಜೀರ್ಣೋದ್ಧಾರ ವಗೈರೆ ಮಾಡುವ ವಿಚಾರ, ಇವುಗಳಿಂದ ತುಂಬಲ್ಪಟ್ಟ ಉಪನ್ಯಾಸವಾಗಿತ್ತು ಇದು ಸರ್ವಜನಮನಾನಂದಕರವಾಗಿಯೂ, ನೀತಿಬೋಧಕವಾಗಿಯೂ, ಅವಿರೋಧವಾಗಿಯೂ ಇದ್ದಿತು

ಮತ್ತು ಈ ಮತದ ಪುರೋಭಿವೃದ್ಧಿಗಾಗಿ ಕೆಲವು ಏರ್ಪಾಡುಗಳಂ ಮಾಡಬೇಕೆಂದು ಚರ್ಚಿಸಿ ನಿರ್ಧರವಾದ ಸಂಗತಿಗಳಿಗೆಲ್ಲಾ ಸಭೆಯವರು ಒಪ್ಪಿ ಶ್ರೀಮಠದವರಲ್ಲಿ ಸಂತೋಷಸೂಚಕವಾದ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿದರು ಈ ಸಭೆಯಲ್ಲಿ ನಡೆದ ಉಪನ್ಯಾಸವನ್ನೂ, ಚರ್ಚೆ ನಿರ್ಧರಪಡಿಸಿದ ಅಂಶಗಳನ್ನೂ ನಯನಜ ಕ್ಷತ್ರಿಯ ಮತದವರ ಮತ್ತು ಗುಣಜ್ಞರ ಅವಗಾಹನೆಗಾಗಿ ಬೇರೆ ಪ್ರಿಂಟು ಮಾಡಿಸಿ ಪುಸ್ತಕಗಳನ್ನಾಗಿ ಮಾಡಿ ಪ್ರಚುರಪಡಿಸಿರುತ್ತೆ ಈ ಪ್ರಕಾರ ಮೂರು ದಿನಗಳು ಸಭೆ ಜರುಗಿಸಿ, ಸಭೆಯವರಿಗೆಲ್ಲರಿಗೂ ಮನನವಾಗುವಂತೆ ಉಪನ್ಯಾಸವಂ ಮಾಡಿ ಬುದ್ಧಿವಾದಗಳಂ ಅಪ್ಪಣೆಕೊಡಿಸಿದ್ದಲ್ಲದೆ ಈ ಮತದ ಪುರೋಭಿವೃದ್ಧಿಗೆ ತಕ್ಕ ಏರ್ಪಾಡುಗಳಂ ಕಲ್ಪಿಸಿಕೊಟ್ಟದ್ದಕ್ಕಾಗಿ ಶ್ರೀಮಠದ ಸರ್ವಾಧಿಕಾರಿಗಳಾದ ಮ|| ಡಿ ಲಕ್ಷ್ಮೀನೃಸಿಂಹಪಂಡಿತರಿಗೋಸ್ಕರ ಸಭಿಕರೆಲ್ಲಾ ವಂದನೆಗಳಂ ಸಮರ್ಪಿಸುತ್ತೇವೆಂದು ಸರ್ವರೂ ಆನಂದದಿಂದ ಕೈಚಪ್ಪಾಳೆಯಂ ತಟ್ಟಿದರು ಅನಂತರ ಸಭಾ ಬರಖಾಸ್ತಾಯಿತು

ಈ ಮಹಾ ಸಭೆಯು ಸೇರುವ ಹಾಗೆ ಏರ್ಪಾಡುಮಾಡಿ, ಸೇರಿದ ಸಭೆಯವರಿಗೆಲ್ಲಾ ಯಾವ ಕುಂದಕವೂ ಇಲ್ಲದಂತೆ ಭೋಜನ ತಾಂಬೂಲಾದಿಗಳಿಂದ ಸಂತೃಪ್ತಿ ಪಡಿಸಿ, ಸ್ವಮತದವರ ಉನ್ನತ ಸ್ಥಿತಿಯ ವಿಚಾರಗಳಂ ಕುರಿತು ಉಪನ್ಯಾಸ ವಗೈರೆ ಜರುಗುವಂತೆ ಅವಕಾಶವಂ ಕೊಟ್ಟ ಹಂಡರಂಗೀಗ್ರಾಮದ ಯಜಮಾನರು ಮ|| ದೊಡ್ಡರಂಗಪ್ಪನವರ ಮತ್ತು ಇವರ ತಮ್ಮಂದಿರಾದ ಮ|| ಚಿಕ್ಕರಂಗಪ್ಪನವರ ಔದಾರ್ಯಾದಿ ಗುಣಗಳನ್ನು ಸರ್ವದಾ ಜ್ಞಾಪಕದಲ್ಲಿಡತಕ್ಕದ್ದಾಗಿರುತ್ತೆ.

ಬಾತ್ಮಿದಾರ್.

ಮೈಸೂರು ರೇಷ್ಮೆ ವ್ಯವಸಾಯವು.

ಬೊಂಬಾಯಿನಲ್ಲಿರುವ ಇಟಲೀ ದೇಶಸ್ಥರಾದ ಸೀನಾರ್ ಗೋರಿಯೋ ಎಂಬುವರು ಮೈಸೂರು ದೇಶದ ರೇಷ್ಮೆ ವ್ಯವಸಾಯಕ್ರಮದಲ್ಲಿ ಕೆಳಗೆ ಕಂಡ ನ್ಯೂನತೆಗಳಿರುವವೆಂದು ಹೇಳುತ್ತಾರೆ:—(1) ಮೊಟ್ಟೆಗಳನ್ನು ತಯಾರಿಸುವ ವಿಷಯದಲ್ಲೂ ಮತ್ತು ಮೊಟ್ಟೆಗಳನ್ನು ಬಿಡಿಸುವವರಲ್ಲೂ ಸಾಕಾದಷ್ಟು ಮುತುವರ್ಜಿಯನ್ನು ವಹಿಸುವುದಿಲ್ಲ, (2) ರೇಷ್ಮೆ ಹುಳುಗಳನ್ನು ಇಡತಕ್ಕ ಕೊಠಡಿಗಳು ಅತಿ ಚಿಕ್ಕವುಗಳಾಗಿಯೂ, ಕತ್ತಲಾಗಿಯೂ, ಗಾಳಿಯ ಸಂಚಾರಕ್ಕೆ ಅವಕಾಶವಿಲ್ಲದೆ ಅತಿಕೊಳಕಾಗಿಯೂ ಇರುವವು, ಇದರಿಂದ ಇಲ್ಲಿ ಒಂದು ವರುಷದಲ್ಲಿ ತೆಗೆಯತಕ್ಕ ಆರು ಬೆಳೆಗೆ ಸಾಕಾದಷ್ಟು ಮೊಟ್ಟೆಗಳನ್ನು ಒದಗಿಸಲಾಗುವುದಿಲ್ಲ ಆದ್ದರಿಂದ ಹೊಸ ಕ್ರಮಗಳಿಗನುಸಾರವಾದ ಮನೆಗಳನ್ನು ಕಟ್ಟಿಸಿ, ಬೇಕಾಗುವಷ್ಟು ಮೊಟ್ಟೆಗಳನ್ನು ಇಲ್ಲಿಯೇ ಒದಗಿಸಿಕೊಳ್ಳಲು ಪ್ರಯತ್ನಪಡಬೇಕು, (3) ಹುಳುಗಳನ್ನು ಇಡತಕ್ಕ ತಟ್ಟೆಗಳು ತೊಳೆಯುವುದಕ್ಕಾಗದಂತಿರುವವಲ್ಲದೆ ಮೊಟ್ಟೆಗಳಲ್ಲಿ ಅವು ಹಿಡಿಯಬಹುದಾದ್ದಕ್ಕಿಂತಲೂ ಜಾಸ್ತಿ ಹುಳಗಳನ್ನಿಡುತ್ತಾರೆ, (4) ಬಲಿಯುವುದಕ್ಕೆ ಮೊದಲೇ ಗೂಡುಗಳನ್ನು ನೂಲುವ ತಟ್ಟೆಗಳಿಂದ ತೆಗೆದುಬಿಡುತ್ತಾರೆ ಇದರಿಂದ ಗೂಡುಗಳು ನುಜುಗಿಹೋಗುವವಲ್ಲದೆ ರೇಷ್ಮೆಯು ಸಹ ಕೆಟ್ಟು ಹೋಗುವುದು (5) ಗೂಡುಗಳನ್ನು ಬೇಯಿಸಬೇಕಾದರೆ ಅವುಗಳನ್ನು ಒಂದು ಬುಟ್ಟಿಯಲ್ಲಿ ಹಾಕಿ ಮುಚ್ಚಿ ರಾತ್ರಿಯೆಲ್ಲಾ ಬುಟ್ಟಿಯನ್ನು ಬೆಂಕಿಯ ಸೆಕೆಯಲ್ಲಿಡುತ್ತಾರೆಯೇ ಹೊರತು ಒಳಗಿರುವ ಹುಳುಗಳು ಸಾಯುವಂತೆ ಮಾಡುವುದಿಲ್ಲ (6) ನೂಲನ್ನು ತೆಗೆಯುವ ರಾಟೆಗಳು ಬಹಳ ಒರಟಾಗಿರುವುದರಿಂದ ಎಳೆಯು ಬಹಳವಾಗಿ ಕತ್ತರಿಸಿಹೋಗುವುದುಂಟು

ಪರಸ್ಪರ ಸಹಾಯಸಂಘಗಳ ಮೂರನೇ ಮಹಾಸಭೆಯು

ಮೈಸೂರು ಸೀಮೆಯ ಪರಸ್ಪರ ಸಹಾಯ ಸಂಘಗಳ ಮೂರನೇ ಸಭೆಯು ಅಕ್ಟೋಬರ್ 4,5 ಮತ್ತು 6 ನೇ ತಾರೀಖುಗಳಲ್ಲಿ ಮೈಸೂರಿನಲ್ಲಿ ರಂಗಾಚಾರ್ಯರ ಮೆಮೋರಿಯಲ್ ಹಾಲ್ ಯಾನೆ ಟೌನ್ ಹಾಲಿನಲ್ಲಿ ನಡೆಯುತ್ತದೆ ಮೈಸೂರು ಸಂಸ್ಥಾನದ ರಿಟೈರ್ಡ್ ಫಸ್ಟ್ ಕೌನ್ಸೆಲರ್ ರಾಜಸಭಾ ಭೂಷಣ ದಿವಾನ್ ಬಹದೂರ್ ಮ|| ಕೆ ಪಿ ಪುಟ್ಟಣ್ಣಶೆಟ್ಟರವರು ಅಗ್ರಾಸನಾಧಿಪತ್ಯವನ್ನು ವಹಿಸಲು ದಯಮಾಡಿ ಒಪ್ಪಿರುತ್ತಾರೆ ಸಾಧ್ಯವಾದ ಮಟ್ಟಿಗೂ ನಡವಳಿಕೆಗಳು ಕನ್ನಡದಲ್ಲಿಯೇ ನಡೆಸಲ್ಪಡುತ್ತವೆ ಸಭೆಗೆ ಸೊಸೈಟಿಗಳಿಂದ ಬರುವ ಪ್ರತಿನಿಧಿಗಳೂ ಮತ್ತು ಸಭೆಗೆ ದಯಮಾಡಿಸುವ ದೊಡ್ಡಮನುಷ್ಯರುಗಳೂ ಗೊತ್ತಾದ ವಿಷಯಗಳ ಮೈಕೆ ಯಾವುದನ್ನಾದರೂ ಕುರಿತು ಮಾತನಾಡಬಹುದು, ಮತ್ತು ಚರ್ಚೆಮಾಡಿ ತೀರ್ಮಾನಗಳನ್ನು ಮಾಡಬಹುದು, ಸಭೆಗೆ ಬರಲು ಅವಕಾಶವಿಲ್ಲದ ದೊಡ್ಡಮನುಷ್ಯರುಗಳು ಸೆಕ್ರೆಟರಿಯವರಿಂದ ಓದಲ್ಪಡಲು ಉಪನ್ಯಾಸಗಳನ್ನು ಕಳುಹಿಸಿಕೊಡಬಹುದು ಓದಬೇಕೆಂದಿರುವ ಉಪನ್ಯಾಸಗಳ ನಕಲುಗಳು ಸಭೆಯ ಸೆಕ್ರೆಟರಿಯವರಿಂದ ಅಕ್ಟೋಬರ್ ಮಾಹೆ 1 ನೇ ತಾ ವರಿವಿಗೂ ತೆಗೆದುಕೊಳ್ಳಲ್ಪಡುತ್ತವೆ ಸೆಪ್ಟೆಂಬರ್ 30 ನೇ ತಾರೀಖಿನೊಳಗಾಗಿ ದೊಡ್ಡಮನುಷ್ಯರುಗಳಿಂದ ತಲಪುವ ಇಂಗ್ಲಿಷ್ ಅಥವಾ ಉರ್ದು ಭಾಷೆಯ ಉಪನ್ಯಾಸಗಳು ಅವರು ಅಪೇಕ್ಷಿಸಿದಲ್ಲಿ ಕನ್ನಡಕ್ಕೆ ತರ್ಜುಮೆಮಾಡಲ್ಪಡುತ್ತವೆ ಸಂಘಗಳ ಪ್ರತಿನಿಧಿಗಳು ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಬೇಕೆಂದಿರುವ ವಿಷಯಗಳನ್ನು ವಿಷಯಂಗಿನ ಕಾಲಕ್ಕೆ ಆರು ಘಂಟೆಗಳ ಮುಂಚೆ ಕಾನ್ಫರೆನ್ಸಿನ ಸೆಕ್ರೆಟರಿಯವರಿಗೆ ತಿಳಿಸತಕ್ಕದ್ದು

ಕಾನ್ಫರೆನ್ಸಿಗೆ ದಯಮಾಡಿಸತಕ್ಕ ದೊಡ್ಡಮನುಷ್ಯರುಗಳ ಅನುಕೂಲಕ್ಕೋಸ್ಕರ ಮೈಸೂರಿನಲ್ಲಿ ಒಂದು ರಿಸೆಪ್ಷನ್ ಕಮಿಟಿಯು ಏರ್ಪಾಡು ಮಾಡಲ್ಪಟ್ಟಿರುತ್ತೆ ಊಟ, ಇಳಿದುಕೊಳ್ಳುವುದಕ್ಕೆ ಜಾಗ ಮತ್ತು ಇತರ ವಿಧವಾದ ಅನುಕೂಲಗಳನ್ನು ಕುರಿತು ಸದರಿ ಕಮಿಟಿಯ ಸೆಕ್ರೆಟರಿಯವರಿಗೆ ಅಕ್ಟೋಬರ್ ಮಾಹೆ 1 ನೇ ತಾರೀಖಿನ ವರೆಗೆ ಬರೆದುಕೊಳ್ಳಬಹುದು ಪ್ರತಿನಿಧಿಗಳು ಮತ್ತು ಇತರ ದೊಡ್ಡಮನುಷ್ಯರುಗಳು ಮುಂದಿನ ಮಾಹೆ ಅಂದರೆ ಅಕ್ಟೋಬರ್ 3 ನೇ ತಾರೀಖಿನ ದಿವಸ ಮೈಸೂರನ್ನು ತಲಪಬಹುದು ಮತ್ತು ತಮ್ಮ ಆಗಮನವನ್ನು ರಿಟೋ ಕಮಿಟಿ ಸೆಕ್ರೆಟರಿಯವರಿಗೆ ತಿಳಿಸತಕ್ಕದ್ದು ಸಭೆಗೆ ಸಂಬಂಧಪಟ್ಟ ಕಾಗದಗಳನ್ನು ಸಭೆಯ ಸೆಕ್ರೆಟರಿಯವರಾದ ಅ ರಿಜಿಸ್ಟ್ರಾರ್ ಮ|| ರಾ|| ರಂಗರಾಯರವರಿಗೆ ಬರೆದುಕೊಳ್ಳತಕ್ಕದ್ದು

ಸ್ಕೂಲ್ ಮನೆಯ ನೂತನ ಪ್ರವೇಶೋತ್ಸವ

ದಾವಣಗೆರೆ ತಾಲೂಕು ನೇರ್ಲಿಗೆ ಗ್ರಾಮದ ನೂತನ ಸ್ಕೂಲ್ ಕಟ್ಟಡದ ಪ್ರಾರಂಭಕೂಟವು ತಾ 1 ರಲ್ಲಿ ಜರುಗಿತು ಆ ದಿವಸ ಬೆಳಗ್ಗೆ ಪಾಠಶಾಲಾಸ್ಥಾಪನೆಯಾಯಿತು ಆಗ ಗ್ರಾಮದ ಮುಖಂಡರಾದ ಮ|| ಕೆಂಚಪ್ಪನವರೇ ಮುಂತಾದ ಪ್ರಮುಖರೆಲ್ಲಾ ಸಭೆಯನ್ನಲಂಕರಿಸಿದರು ಭಗವತ್ಪ್ರಾರ್ಥನೆಯೂ ಸಾರ್ವಭೌಮ ಚಕ್ರವರ್ತಿಗಳವರ ಮತ್ತೂ ಶ್ರೀಮತ್ ಮಹಾರಾಜರವರ ಶ್ರೇಯಃಪ್ರಾರ್ಥನೆಯೂ ಅತಿ ವಿಜೃಂಭಣೆಯಿಂದ ನಡೆಯಿತು ತರುವಾಯ ಮ|| ವೀರುದ್ರಪ್ಪಯ್ಯನವರು ಸಭೆಯನ್ನು ಕುರಿತು ಹೇಳಿದ್ದೇನಂದರೆ—ಈ ದಿವಸ ಭಗವತ್ಕೃಪೆಯಿಂದಲೂ, ಶ್ರೀಮತ್ ಮಹಾರಾಜಾ ಸರ್ಕಾರದವರ ನಿಷ್ಪಕ್ಷಪಾತವಾದ ಆಳ್ವಿಕೆಯ ಉದಾರಾಶ್ರಯದಿಂದಲೂ ನಮಗೆ ದೊರೆತ ಈ ಪಾಠಶಾಲೆಯ ದರ್ಶನೋಪಭೋಗಾನಂದಾತಿಶಯಕ್ಕಿಂತಲೂ ಇನ್ನೂ ಹೆಚ್ಚಿನ ಸಂತೋಷವು ಮತ್ತೆ ನಮಗೆ ಯಾವ ಕಾಲದಲ್ಲಿಯೂ ದೊರೆಯಲಿಕ್ಕಿಲ್ಲವೆಂದು ಕಡೋಕ್ತವಾಗಿ ಹೇಳುತ್ತೇನೆ ಈ ಸಮಯದಲ್ಲಿ ನಿಮಗೆ ಎಚ್ಚರಿಸಬೇಕಾದ ಅನೇಕ ಅಂಶಗಳಿದ್ದಾಗ್ಯೂ ಸದ್ಯದಲ್ಲಿ ಕೆಲವನ್ನು ಮಾತ್ರ ಸೂಚಿಸುತ್ತೇನೆ ಗ್ರಾಮಸ್ಥರಾದ ನಮ್ಮಗಳಿಗೂ ಸ್ಕೂಲ್ ಮಾಸ್ಟರಿಗೂ ಮುಖ್ಯವಾಗಿ ಅನ್ಯೋನ್ಯ ಭಾವವಿರಬೇಕು ಸ್ಕೂಲ್ ಮಾಸ್ಟರ ವಾಸಾದ್ಯನುಕೂಲಗಳಿಗೆ ತಕ್ಕ ನೆಲೆಯನ್ನು ಕೊಡತಕ್ಕದ್ದು ಸ್ಕೂಲ್ ಕಮಿಟಿ ಮೆಂಬರುಗಳು ಆಗಾಗ್ಗೆ ಸ್ಕೂಲಿಗೆ ಬಂದು ಬಾಲಕರ ಜವಾಬು ವಿಷಯದಲ್ಲಿ ಪರಾಂಬರಿಸತಕ್ಕದ್ದು ಮೆಂಬರುಗಳು ಪ್ರೋತ್ಸಾಹದಿಂದ ಬಾಲಕರನ್ನು ಜಮಾಯಿಸಿ ಕೊಡತಕ್ಕದ್ದು ಇವೇ ಮೊದಲಾದ ವಿಷಯಗಳಿಗೆ ಗಮನಕೊಟ್ಟು, ಗೌರ್ನಮೆಂಟಿನವರು ಕೃಪೆಯಿಟ್ಟು ನಮಗೆ ದಯಪಾಲಿಸಿರುವ ಈ ಪಾಠಶಾಲೆಯನ್ನು ಉತ್ತರೋತ್ತರ ಅಭಿವೃದ್ಧಿಗೊಳಿಸುತ್ತೀರೆಂದು ನಂಬುತ್ತೇನೆ ಮತ್ತು ಮ|| ಕೆಂಚಪ್ಪನವರು ಆರು ತಿಂಗಳಿಂದ ಹಣವೆಚ್ಚವನ್ನೂ ಶರೀರ ಶ್ರಮಾದಿಗಳನ್ನೂ ಲಕ್ಷ್ಯಕ್ಕೆ ತಾರದೆ ಈ ಹೊಸಕಟ್ಟಡದ ವಿಷಯದಲ್ಲಿಯೂ, ಸ್ಕೂಲ್ ಸ್ಥಾಪನೆಯ ಕಾರ್ಯದಲ್ಲೂ ಕಂಕಣಬದ್ಧರಾಗಿ ನಿಂತು, ಕೈಗೊಂಡ ಕಾರ್ಯವನ್ನು ಪೂರ್ತಿಗೊಳಿಸಿ ದ್ವಿಪಾದ ಪಶುಗಳಂತೆ ವಿದ್ಯಾವಿಹೀನರಾದ ಬಡ ಬಾಲಕರ ವಿದ್ಯಾಭಿವೃದ್ಧಿಗೆ ಅನುಕೂಲ ಮಾಡಿಕೊಟ್ಟರು ಈ ಮಹನೀಯರಿಗೂ, ಸದಾ ಪ್ರಜಾಕೋಟಿಯ ಕ್ಷೇಮಚಿಂತಕರೂ ಪುಣ್ಯದೇಹಿಗಳೂ ಸುಶೀಲ ಸೌಭಾಗ್ಯರೂ ಆದ ನಮ್ಮ ಶ್ರೀಮತ್ ಮಹಾರಾಜರವರಿಗೂ ಮಂಗಳವನ್ನೀಯಲೆಂದು ಹಾರೈಸುತ್ತೇನೆ

ಈ ಪ್ರಕಾರ ಅವರು ಉಪನ್ಯಾಸಮಾಡಿದ ನಂತರ ಬಾಲಕರಿಗೆಲ್ಲಾ ಫಲಾಹಾರಾದಿಗಳು ಹಂಚಲ್ಪಟ್ಟು ಸಭೆಯು ವಿಸರ್ಜನೆ ಹೊಂದಿತು ವಿದ್ಯಾಭಿಮಾನಿ

ಅರ್ಧ ಶತಮಾನೋತ್ಸವ.

ಶಿವಮೊಗ್ಗೆಯಲ್ಲಿ ವೆಸ್ಲಿಯನ್ ಮಿಷನ್ ಸಂಘವು ಸ್ಥಾಪಿತವಾಗಿ 50 ವರುಷವಾದ್ದರಿಂದ ಈ ಅರ್ಧ ಶತಮಾನದ ಜೂಬಿಲಿ ಉತ್ಸವವು ಇದೇ ಸೆಪ್ಟೆಂಬರ್ ತಾ 12, 13, 14 ರಲ್ಲಿ ನಡೆಯಿತು ಹ್ಯಾಗೆಂದರೆ ತಾ 12 ನೇ ಶುಕ್ರವಾರ ಬೆಳಗ್ಗೆ 8 ಘಂಟೆಗೆ ಕ್ರೈಸ್ತ ಬೋಧಕರೂ, ಸಭೆಯವರೂ, ಸ್ಕೂಲುಗಳ ಬಾಲಕ ಬಾಲಕಿಯರೂ ಮಿಷನ್ ಕಾಂಪೌಂಡಿನಲ್ಲಿ ಸೇರಿ ವಿಜೃಂಭಣೆಯಿಂದ ಮಿಷನ್ ಬಂಗ್ಲೆ ವರಿವಿಗೂ ಹೋಗಿ ಘನಹೊಂದಿದ ಚೇರ್ಮನ್ ದೊರೆಯವರನ್ನು ಅಲ್ಲಿ ವಂದನಾಪೂರ್ವಕವಾಗಿ ದರ್ಶಿಸಿ ಘನ ಎ ಇ ನೈಟಿಂಗೇಲ್ ದೊರೆಯವರನ್ನೂ ದೊರೆಸಾನಿಯಮ್ಮನವರನ್ನೂ ಮಿಸ್ ಕೇಂಬಲ್ ರವರನ್ನೂ ಸಂಧಿಸಿ ಅಲ್ಲಿಂದ ಸರ್ವರೂ ವಿಜೃಂಭಣೆಯಿಂದ ದೇವತಾ ಸ್ತೋತ್ರದ ಗಾನದೊಂದಿಗೆ ದೇವಸ್ಥಾನಕ್ಕೆ ಬಂದು ಸುಮಾರು 10½ ಘಂಟೆ ತನಕ ದೇವಾರಾಧನೆಯನ್ನು ನಡಿಸಿದರು ತಿರಿಗಿ ಸಾಯಂಕಾಲ 6½ ಘಂಟೆಗೆ ಪಕ್ಕದಲ್ಲಿದ್ದ ಗಂಡ ಮಕ್ಕಳ ಪಾಠಶಾಲೆಯಲ್ಲಿ ಘನ ಜ್ಞಾನಮಿತ್ರಯ್ಯನವರ ಉಪನ್ಯಾಸ ನಡೆದು, ಶಿವಮೊಗ್ಗಾಕ್ಕೆ 50 ವರುಷಗಳಿಂದ ಬಂದು ಕೆಲಸ ನಡಿಸಿದ ಪಾದ್ರಿಗಳ ವಿಷಯವನ್ನು ಕುರಿತ ಲೇಖನವು ಓದಲಾಯಿತು ಕೊನೆಗೆ ಛೇರ್ಮನ್ ರವರು ಉಪನ್ಯಾಸಮಾಡಿದರು

ತಾ 13 ನೇ ಶನಿವಾರ ಉಪಾಧ್ಯಾಯರ ಅನ್ಯೋನ್ಯಕೂಟವು ಪಾಠಶಾಲೆಯಲ್ಲಿ 4 ಘಂಟೆಗೆ ಪ್ರಾರಂಭವಾಯಿತು ಛೇರ್ಮನ್ ರವರಾದ ಘನ ಡಿ ಎ ರೀಸ್ ದೊರೆಯವರು ಅಗ್ರಾಸನವನ್ನು ವಹಿಸಿದ್ದರು ಪೇಟೆಯ ಬಾಲಿಕೆಯರು ಮೊದಲು ದೇವತಾ ಸ್ತೋತ್ರವನ್ನು ಹಾಡಿದರು ಅನಂತರ ಗಂಡುಮಕ್ಕಳ ಪಾಠಶಾಲೆಯ ಹೆಡ್ ಮಾಸ್ಟರು ಮ|| ಸಣ್ಣೆಯಪ್ಪನವರು 50 ವರುಷಗಳಿಂದ ಹಿಂದೂಬಾಲಕ ಬಾಲಕಿಯರಿಗೂ ಇತರರಿಗೂ ಮಿಷನ್ ಸಂಘದವರಿಂದ ಉಂಟಾಗಿರುವ ಉಪಕಾರಗಳನ್ನು ವಿವರಿಸಿ ಉಪನ್ಯಾಸಮಾಡಿದರು ಬಾಲಕರು ಸ್ತೋತ್ರಗೀತವನ್ನು ಹಾಡಿದನಂತರ ಹೆಣ್ಣುಮಕ್ಕಳ ಪಾಠಶಾಲೆಯ ಹೆಡ್ ಮಾಸ್ಟರು ಮ|| ಲಿಂಗಪ್ಪನವರ ನೀತಿ ಬೋಧೆಯಿಂದ ಜನರಲ್ಲಿ ಉಂಟಾಗಿರುವ ನಾಗರೀಕತೆಯ ವಿಷಯದಲ್ಲಿ ಉಪನ್ಯಾಸಮಾಡಿದರು ಕಡೆಯಲ್ಲಿ ಘನ ಛೇರ್ಮನ್ ದೊರೆಗಳವರು ಮಾಧುರ್ಯವೂ, ಅಮೂಲ್ಯವೂ ಆದ ಭಾಷಣ ಮಾಡಿ ಕೂಟವನ್ನು ಮುಕ್ತಾಯಮಾಡಿದರು ಆಗ ಸೇರಿದ್ದ ಸರ್ವರಿಗೂ ಗಂಧ, ಪುಷ್ಪ, ಫಲ, ತಾಂಬೂಲಾದಿಗಳನ್ನು ಹಂಚಿ ಸತ್ಕರಿಸಿದರು

ತಾ 14 ನೇ ಭಾನುವಾರ ದೇವಾಲಯದಲ್ಲಿ ಆರಾಧನೆ ನಡೆಯಿತು ಇದಕ್ಕೆ ಶಿವಮೊಗ್ಗಾ ಸರ್ಕೀಟಿನ ಕ್ರೈಸ್ತಸಭೆಯವರೂ, ಕೆಲವು ಉಪಾಧ್ಯಾಯರೂ ಅಭ್ಯಾಗತರಾಗಿ ಬಂದು ಸ್ಕೂಲ್ ಕಾಂಪೌಂಡಿನಲ್ಲಿ ಹಾಕಿದ್ದ ಡೇರಾಗಳಲ್ಲಿ ಸುಖವಾಗಿ ವಾಸಿಸಿಕೊಂಡು ತಾ 12, 13, 14 ರಲ್ಲಿ ನಡೆದ ದೇವಾರಾಧನೆಗಳನ್ನು ಸಾಂಗವಾಗಿಯೂ, ಆನಂದದೊಡನೆಯೂ ನೆರವೇರಿಸಿ, ತಾ 15 ನೇ ಸೋಮವಾರ ಸರ್ವರೂ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು

ಹತ್ತೀ ಬೀಜದ ಹಿಂಡಿ

ಈಚೆಗೆ ಇಂಡಿಯಾ ದೇಶದ ಅನೇಕ ಭಾಗಗಳಲ್ಲಿ ಹತ್ತಿ ಬೀಜದಿಂದ ಎಣ್ಣೆ ತೆಗೆಯುವ ಕೈಗಾರಿಕೆಯು ಬಹಳ ಅಭಿವೃದ್ಧಿಗೆ ಬರುತ್ತಿದೆ ಈ ಕೈಗಾರಿಕೆಯನ್ನು ಪ್ರಾರಂಭಿಸುವವರು ಅನುಸರಿಸುತ್ತಿದ್ದ ಕ್ರಮಗಳಲ್ಲಿ ಇದ್ದಂಥಾ ಕುಂದುಕೊರತೆಗಳೆಲ್ಲಾ ತಿದ್ದುಪಾಟುಮಾಡಲ್ಪಟ್ಟು ಕೈಗಾರಿಕೆಯು ಹೆಚ್ಚು ಹೊರಗಿನ ಸಹಾಯವಿಲ್ಲದೆ ಮುಂದಕ್ಕೂ ನಡೆಯುತ್ತದೆಂಬ ಭರವಸೆ ಉಂಟಾಗಿರುತ್ತದೆ ಆದರೆ ಈ ಕೈಗಾರಿಕೆಯು ಪೂರ್ಣವಾದ ಅಭಿವೃದ್ಧಿಗೆ ಒಂದು ಅಡಚಣೆಯು ಬಂದೊದಗಿರುತ್ತದೆ ಅದು ಯಾವುದೆಂದರೆ ವ್ಯವಸಾಯಗಾರರೂ, ದನಕರುಗಳನ್ನು ಸಾಕುವವರೂ ಹತ್ತಿಯ ಬೀಜದ ಹಿಂಡಿಯು ಬಹಳ ಶ್ರೇಷ್ಠವಾದ ಗೊಬ್ಬರವೆಂದೂ ದನಕರುಗಳ ಮೇವೆಂದೂ ತಿಳಿದುಕೊಂಡಿಲ್ಲ ಹತ್ತಿಯ ಬೀಜವನ್ನು ಗಾಣವಾಡಿ ತೆಗೆದ ತುಪ್ಪವನ್ನೇ ಸಿಹಿ ಪದಾರ್ಥಗಳನ್ನು ಹುರಿಯಲು ಜನಗಳು ಬಹಳವಾಗಿ ಕೊಳ್ಳುತ್ತಾರೆ ತುಪ್ಪದ ಖರೀದಿಯು ಏರುತ್ತಿರುವುದರಿಂದಲೂ, ತುಪ್ಪದೊಡನೆ ಸೆಲಗಡಲೆ ಎಣ್ಣೆ ಮತ್ತು ಹಲವು ಪ್ರಾಣಿಗಳ ಕೊಬ್ಬನ್ನು ಬೆರಸಿ ಮಾರುತ್ತಾರೆಂಬುವ ಪುಕಾರಿರುವುದರಿಂದಲೂ ಎಷ್ಟು ಹೆಚ್ಚಾಗಿ ಹತ್ತೀ ತುಪ್ಪವನ್ನು ತಯಾರಿಸಿದರೂ ಅದು ಬಹಳ ಸುಲಭವಾಗಿ ಮಾರಾಟವಾಗುವುದರಲ್ಲಿ ಅನುಮಾನವೇನೂ ಇಲ್ಲ ಆದರೆ ಹತ್ತಿಯ ಬೀಜದ ಹಿಂಡಿಯು ಮಾತ್ರ ಮಾರಾಟವಾಗುತ್ತಿಲ್ಲ ದನಕರುಗಳನ್ನು ಸಾಕುವವರು ಹತ್ತಿಯ ಬೀಜವನ್ನು ದನಗಳಿಗೆ ಮೇವಾಗಿ ಕೊಡುವುದರಿಂದ ಪ್ರಯೋಜನವುಂಟೇ ಹೊರತು ಎಣ್ಣೆಯನ್ನು ತೆಗೆದ ನಂತರ ಹಿಂಡಿಯನ್ನು ಮಾತ್ರ ಹಾಕುವುದರಿಂದ ಯಾವ ಪ್ರಯೋಜನವೂ ಇಲ್ಲವೆಂದು ತಿಳಿದುಕೊಂಡಿರುತ್ತಾರೆ ಇದು ಶುದ್ಧ ತಪ್ಪು ತಿಳುವಳಿಕೆಯೇ ಸರಿ ಯಾಕೆಂದರೆ ಹತ್ತಿಯ ಬೀಜದಲ್ಲಿ ದನವು ಜೀರ್ಣಿಸಿಕೊಳ್ಳಬಹುದಾದ್ದಕ್ಕಿಂತಲೂ ಜಾಸ್ತಿ ಎಣ್ಣೆಯು ಇರುವ ಕಾರಣ ಹೆಚ್ಚು ಎಣ್ಣೆಯು ವ್ಯರ್ಥವಾಗುವುದಲ್ಲದೆ ಇತರ ಆಹಾರ ಪದಾರ್ಥಗಳು ಸಹ ಸರಿಯಾಗಿ ಜೀರ್ಣವಾಗಲು ಅವಕಾಶವು ಕಡಮೆಯಾಗುವುದು ವಾಸ್ತವವಾಗಿ ದನಗಳಿಗೆ ಹತ್ತಿಯ ಬೀಜ ಮತ್ತು ಹತ್ತಿಯ ಹಿಂಡಿಗಳನ್ನು ತಿನ್ನಿಸಿ ಅಜಮಾಯಿಷಿಯಿಂದ ಮೇಲ್ಕಂಡ ವಿಷಯವು ಅನೇಕ ವೇಳೆ ನಿರ್ಧರಿಸಲ್ಪಟ್ಟಿರುತ್ತದೆ ಇಷ್ಟಾದರೂ ಈ ವಿಷಯದಲ್ಲಿ ರೈತರಿಗೆ ನಂಬಿಕೆಯಿಲ್ಲದಿರುವುದು ಬಹಳ ಆಶ್ಚರ್ಯವೇ ಸರಿ ರೈತರು ಹೇಳುವುದೇನಂದರೆ—"ದನಗಳು ಹತ್ತಿಯ ಬೀಜವನ್ನೇ ತಿನ್ನುವುದರಿಂದ ಬಹಳ ಪುಷ್ಟಿಯಾಗುತ್ತವೆ ಜನರು ಹತ್ತಿಯ ತುಪ್ಪವನ್ನು ತಿಂದು ಪುಷ್ಟರಾಗುತ್ತಾರೆ, ಆದರೆ ಬೀಜವನ್ನು ಗಾಣವಾಡಿ ಎಣ್ಣೆಯನ್ನು ತೆಗೆದ ಮೇಲೆ ಅದನ್ನು ದನಗಳಿಗೆ ತಿನ್ನಿಸಿದರೆ ಯಾವ ಪ್ರಯೋಜನವೂ ಇಲ್ಲ " ಹೀಗೆ ಹೇಳುವುದು ತಪ್ಪು ತಿಳುವಳಿಕೆಯೆಂದು ರೈತರಿಗೆ ತಿಳಿಸಬೇಕಾದದ್ದು ಆವಶ್ಯಕ —ಹತ್ತೀ ತುಪ್ಪವನ್ನು ತಯಾರುಮಾಡತಕ್ಕ ಕೆಲವು ಕಂಪನಿಯವರು ಉಪನ್ಯಾಸಗಳ ಮೂಲಕ ರೈತರಿಗೆ ಈ ವಿಷಯದಲ್ಲಿ ತಿಳುವಳಿಕೆಯನ್ನು ಕೊಡಲು ಪ್ರಯತ್ನಪಡುತ್ತಿದಾರೆ ಆದರೆ ಈ ಕೆಲಸಕ್ಕೆ ಆವಶ್ಯಕವಾದಷ್ಟು ತಿಳುವಳಿಕೆಯು ಅವರಿಗೆ ಇಲ್ಲದಿರುವ ಕಾರಣ ಬಹಳ ವಾತರಿಯಾದ ರಸಾಯನಶಾಸ್ತ್ರಜ್ಞರ ಅಜಮಾಯಿಷಿಗಳ ಫಲಿತಾಂಶವನ್ನು ಈ ಕೆಳಗೆ ತೋರುತ್ತವೆ —ಸಿಪ್ಪೆ ತೆಗೆದ ಹತ್ತೀ ಬೀಜದ ಹಿಂಡಿಯಲ್ಲಿ ಬರೀ ಹತ್ತಿಯ ಬೀಜಕಿಂತಲೂ ಶೇಕಡ ನಾಲ್ಕು ಪಾಲು ಜಾಸ್ತಿ ಪುಷ್ಟಿಯನ್ನು ಕೊಡತಕ್ಕ ಶಕ್ತಿಯಿರುವುದೆಂದು ಗೊತ್ತಾಗಿದೆ ಅಂದರೆ ಯಾವುದೋ ಒಂದು ಗೊತ್ತಾದ ತೂಕದವರೆಗೆ ಸಿಪ್ಪೆಯನ್ನು ತೆಗೆದ ಹತ್ತೀ ಬೀಜದ ಹಿಂಡಿಯನ್ನೂ, ಅಷ್ಟೇ ತೂಕದವರೆಗೆ ಹತ್ತಿಯ ಬೀಜವನ್ನೂ ಕೊಂಡು ದನಗಳಿಗೆ ತಿನ್ನಿಸಿದರೆ ಹಿಂಡಿಯು ಶೇಕಡ 15 ಪಾಲು ಹೆಚ್ಚು ಶಕ್ತಿಯನ್ನು ಕೊಡುವುದೆಂದಾಯಿತು

"ಹತ್ತಿಯ ಹಿಂಡಿಯು ಸೀಮೆ ಅಗಸೆ ಬೀಜದ ಹಿಂಡಿಗಿಂತಲೂ ಅಗ್ಗವಾಗಿ ಮಾರುತ್ತದೆ ಇದರೆ ಒಂದು ಟನ್ ತೂಕ ಹತ್ತಿ ಬೀಜದ ಹಿಂಡಿಯನ್ನು ಗೊಬ್ಬರವಾಗಿ ಹಾಕುವುದರಿಂದ ಹೊಂದಬಹುದಾದಷ್ಟೇ ಪ್ರಯೋಜನವನ್ನು ಹೊಂದಬೇಕಾದರೆ ಸುಮಾರು ಒಂದೇ ಕಾಲು ಮಣ ಸೀಮೆ ಅಗಸೆ ಬೀಜದ ಹಿಂಡಿಯನ್ನು ಹಾಕಬೇಕಾಗುವುದು ಮತ್ತು ಒಂದೂವರೆ ಟನ್ ಗೋಧಿಯಿಂದ ಹೊಂದಬಹುದಾದ ಪ್ರಯೋಜನವನ್ನು ಒಂದು ಟನ್ ಹತ್ತೀ ಹಿಂಡಿಯಿಂದ ಹೊಂದಬಹುದು ಆದ್ದರಿಂದ ಹತ್ತಿ ಬೀಜದ ಹಿಂಡಿಯು ಬಹಳ ಅಗ್ಗವಾದ ಮೇವಾಗಿದೆ ಅದರ ಖರೀದಿಯು ಕಡಮೆಯಾಗಿರಲು ಅದರ ನಿಜವಾದ ಬೆಲೆಯನ್ನು ಜನಗಳು ತಿಳಿದುಕೊಂಡಿಲ್ಲದಿರುವುದೇ ಕಾರಣ " ಎಂದು ಡಾಕ್ಟರ್ ಬರ್ನಾರ್ಡ್ ಡೈಯರ್ ಎಂಬವರು ಅಭಿಪ್ರಾಯಪಡುತ್ತಾರೆ

ಬಾತ್ಮಿದಾರರಿಗೆ ನೋಟೀಸ್

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಅದೇ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಬಲ್ಲಿ ಹೇಳುತ್ತೇವೆ

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಮೂಡಿಗೆರೆ ಸ್ಕೂಲುಗಳು—ಈ ವಿಷಯ ಇನ್ನೊಂದು ಒಳದೇಶದ ಪತ್ರಿಕೆಯಲ್ಲಿ ಪ್ರಕಟವಾಗಿದೆ

ಶಿವಕುಮಾರಸ್ವಾಮಿಗಳು ಬೆಂಗಳೂರು—ಕೇಸದಾರರಿಂದ ನಿಮಗುಂಟಾಗುತ್ತಿರುವ ಕಷ್ಟವನ್ನು ಕುರಿತು ಡೆಪ್ಯುಟಿ ಕಮಿಷನರ್ ರೇ ಮುಂತಾದ ಮೇಲ್ಪಟ್ಟ ಅಧಿಕಾರಿಗಳಿಗೆ ಬರೆದುಕೊಂಡರೆ ಅವರು ತನಿಖೆಯಿಂದ ಕ್ರಮಪಡಿಸುತ್ತಾರೆಂದು ನಿರೀಕ್ಷಿಸುತ್ತೇವೆ

ನಿಷ್ಪಕ್ಷಪಾತ ಪ್ರಯಾಣಿಕ, ಕಿಕ್ಕೇರಿ ನೀವು ಕೇಳಿ ಬರೆದಿರುವ ಸಂಭಾಷಣೆಯನ್ನು ನೀವು ಗ್ರಾಮಾಧಿಕಾರಿಯಾಗಿರೋಣದರಿಂದ ಮೊದಲು ಪೋಲೀಸಿಗೆ ತಿಳಿಸಿ ಪತ್ತೆ ಕ್ರಮ ನಡೆಯುವಂತೆ ಮಾಡಬೇಕು

ಪತ್ರಿಕಾ ಪ್ರಸಂಗ, ತತ್ತನೂರು—ಈ ಬಾತ್ಮಿಯನ್ನು ಪ್ರಕಟಿಸುವುದರಲ್ಲಿ ಯಾವ ಪ್ರಯೋಜನವೂ ಕಾಣುವುದಿಲ್ಲ

ಗೌರಿಬಿದನೂರು ತಾ|| ಹೊಸೂರು, ಮಂಡ್ಯ ತಾ|| ಮುತ್ತೆಗೆರೆ—ಈ ಬಾತ್ಮಿಗಳಲ್ಲಿ ವಿಶೇಷ ವರ್ತಮಾನಗಳೇನೂ ಇಲ್ಲ ಸಣ್ಣಪುಟ್ಟ ಸಂಗತಿಗಳನ್ನು ಬಹಳವಾಗಿ ಲಂಬಿಸಿ ಬರೆದಿರುತ್ತಾರೆ —ಎಡಿ]

ಕರೆಸ್ಪಾಂಡೆನ್ಸ್

ಸಿವಿಲ್ ಕೋರ್ಟಿನ ಸಮನ್ ಮತ್ತು ವಾರಂಟು

ಅಯ್ಯಾ,

ನಮ್ಮ ಮೈಸೂರು ಸೀಮೆಯ ಸಿವಿಲ್ ಕೋರ್ಟುಗಳಲ್ಲಿ ಸಮನ್ ಗಳಿಗೆ ಮೂರು ದಫಾ ವಾಯಿದೆ ಕೊಟ್ಟು ಇರುತ್ತಾರೆ ಜೈಲ್ ವಾರಂಟುಗಳಿಗಾದರೋ ವಾಯಿದೆಯೇ ಇಲ್ಲದ್ದರಿಂದ ವಾದಿಗಳು ಪ್ರತಿವಾದಿಗಳಿಗೆ ಪದೇಪದೇ ವಾರಂಟುಗಳು ಕಟ್ಟಿ ನಷ್ಟಪಡಲು ಅವಕಾಶವಾಗಿರುವಕಾರಣ ವಾರಂಟುಗಳನ್ನು ತೆಗೆದುಕೊಂಡು ಹೋಗುವ ನೌಕರನಾದರು ಪ್ರತಿವಾದಿಯಿಂದ ಅಲ್ಪಸ್ವಲ್ಪ ಪ್ರಾಪ್ತಿಯಿಂದ ಸುಳ್ಳು ಷರಾಗಳನ್ನು ಬರೆದುಬಿಡುವದಕ್ಕೆ ಅವಕಾಶವಿದೆ ನಮ್ಮ ಸರ್ಕಾರದವರು ಪರ್ಯಾಲೋಚಿಸಿ ವಾರಂಟು ಜಾರಿಮಾಡುವ ನೌಕರನಾರಿಗೆ ಒಂದು ವಾಯಿದೆ ಕೊಟ್ಟು ಆ ವಾಯಿದೆಯಲ್ಲಿ ಅಸಾಮಿಗಳನ್ನಾಗಲಿ, ಅಸಾಮಿಯಿಂದ ಬರಬೇಕಾದ ಮೊಬಲಗಾಗಲಿ ಕೋರ್ಟಿಗೆ ಹಾಜರುಪಡಿಸಬೇಕು ಇಲ್ಲವಾದರೆ ಇಂಥಾ ಶಿಕ್ಷೆಗೆ ಗುರಿಯಾಗಬೇಕು ಎಂದು ರೂಲಸುಮಾಡಿ ಜಾರೀಕೆ ತಂದರೆ ಪ್ರಜೆಗಳಿಗೆ ಕಷ್ಟನಷ್ಟಗಳು ತಪ್ಪುವವೆಂದು ಸೂಚಿಸುತ್ತೇನೆ

ಚನ್ನಪಟ್ಟಣ — ರಾಮಯ್ಯ

ಆಕ್ಷೇಪಣೆಗೆ ಸಮಾಧಾನ

ಅಯ್ಯಾ,

ಮೈಸೂರಲ್ಲಿ ನಡೆಯುವ ಕೋಆಪರೇಟಿವ್ ಸೊಸೈಟಿಯ ಕಾನ್ಫರೆನ್ಸಿಗೆ ಚಿಕ್ಕನಾಯಕನಹಳ್ಳಿಯಿಂದ ಮ|| ಹನುಮಂತೇಗೌಡರನ್ನು ಚುನಾಯಿಸಿರುವ ವಿಷಯದಲ್ಲಿ ತಮ್ಮ 11 ನೇ ತಾ ಪತ್ರಿಕೆಯಲ್ಲಿ ಅದು ನ್ಯಾಯವಲ್ಲವೆಂದು ಬಾತ್ಮಿದಾರರು ಸೂಚಿಸಿದಾರೆ ಚುನಾವಣೆಯ ಕಾಲದಲ್ಲಿ ಸಭೆಯಲ್ಲಿ ಹಾಜರಿದ್ದ ಬಹುಜನ ಮೆಂಬರುಗಳು ಸದರಿ ಹನುಮಂತೇಗೌಡರನ್ನು ಚುನಾಯಿಸಿದಾರೆ ಸೊಸೈಟಿ ಖರ್ಚಿನಿಂದ ಕಳುಹಿಸುವದು ನ್ಯಾಯವಲ್ಲವೆಂದು ನಮ್ಮದಾಗಿದೆ ಈಗ್ಗೆ ಎರಡು ವರುಷಗಳಿಂದಲೂ ಸೊಸೈಟಿ ಖರ್ಚಿನಿಂದಲೇ ಚುನಾವಣೆ ಮಾಡಿ ಅದರಂತೆ ಮ|| ಪೇಪರ್ ಸೆಕ್ರೆಟರಿ ಹನುಮಂತರಾಯರು ಪಗ್ಗೆರೇರು ಹೋಗಿ ಬರಲಿಲ್ಲವೇ ಆಗ ಸದರಿ ಬಾತ್ಮಿದಾರರು ಯಾತಕ್ಕೆ ಶಟಸ್ಥರಾಗಿದ್ದರೋ ತಿಳಿಯದು ಇಂಥಾ ಅಸೂಯೆಯುಳ್ಳ ಬಾತ್ಮಿಯಿಂದ ಪರಸ್ಪರ ಸಹಾಯಕ್ಕೆ ಬದಲಾಗಿ ಪರಸ್ಪರ ದ್ವೇಷಕ್ಕೆ ಕಾರಣವಾಗುವದು ಸರಿಯಲ್ಲ ಬಾತ್ಮಿದಾರರು ಸರಿಯಾದ ಕಾರಣಗಳನ್ನು ಪ್ರಕಟಿಸಿಗೆ ಕೊಟ್ಟು ಹಿತೈಷಿಗಳಾಗಲೆಂದು ಕೋರುತ್ತೇನೆ

ನಿಷ್ಪಕ್ಷಪಾತಿ

ಶಿವಮೊಗ್ಗೆಯಲ್ಲಿ ಅಳತೆ ಸೇರುಗಳು

ಅಯ್ಯಾ,

ಸೆಪ್ಟೆಂಬರ್ ತಾ 1 ರಲ್ಲಿ ಪ್ರಕಟಿಸಿದ ಅಳತೆಯ ಸೇರುಗಳ ವಿಷಯ ಯೋಚನೆ ಮಾಡುವಷ್ಟರಲ್ಲಿಯೇ ಇನ್ನೊಂದು ಕಷ್ಟಬಂತು ಏನಂದರೆ ಈ ಜಂಕ್ಷನ್ ನ ಸೇರುಗಳಲ್ಲದೆ ಪುನಃ ತಿಪಟೂರಿನಿಂದ ಹಿತ್ತಾಳೆ ಕಟ್ಟು ಹಾಕಿ ಮುದ್ರೆಯುಳ್ಳ ಕಬ್ಬಿಣದ ಸೇರುಗಳನ್ನು ತಂದಿರುತ್ತಾರೆ ಇವುಗಳಲ್ಲಿ 12 ಸೇರು ಧಾನ್ಯ ಅಳೆದು ಅದನ್ನೇ ಜಂಕ್ಷನ್ ನ ಸೇರಿನಲ್ಲಿ ಅಳೆದರೆ 12½ ಸೇರು ಆಗುತ್ತೆ ಕಾಲು ಸೊಲಿಗೆ, ಅರ್ಧ ಸೋಲಿಗೆ ಕಮ್ಮಿಯೆಂದು ಚಿಂತಿಸಿದರೆ ಈಗ ಇಂಥಾ ಅವಸ್ಥೆ ಬಂತು ಆದ್ದರಿಂದ ಸರ್ಕಾರದವರು ಈ ವಿಷಯವನ್ನು ಗಮನಕ್ಕೆ ತಂದುಕೊಂಡು ಈ ಕಬ್ಬಿಣದ ಸೇರುಗಳನ್ನು ಅಳತೆಯಲ್ಲಿ ಕಮ್ಮಿಯಾಗಿ ತಯಾರುಮಾಡತಕ್ಕವರಿಗೆ ಎಚ್ಚರಿಸಬೇಕು ಇಲ್ಲವಾದರೆ ವರ್ತಕರಲ್ಲಿ ಮನಸ್ತಾಪವೂ, ವಿರೋಧವೂ ಹುಟ್ಟುತ್ತೆ ಕೊಂಡು ತಿನ್ನುವ ಬಡ ಪ್ರಜೆಗಳಿಗೆ ಬಹಳ ನಷ್ಟವಾಗುತ್ತೆ. ಮತ್ತು ಹೀಗೆ ವರ್ತಕರು ಸರ್ಕಾರಕ್ಕೆ ವಿರೋಧವಾಗಿ ಕಮ್ಮಿ ಸೇರುಗಳನ್ನು ಮಾಡಿಸಿ ಇಲ್ಲವೇ ಕುಡುಕಿಟ್ಟುಕೊಂಡು ಬಡ ಪ್ರಜೆಗಳಿಗೆ ಮೋಸಪಡಿಸಿ ಅನ್ಯಾಯವಾಗಿ ಹಣಸಂಪಾದಿಸುವದಕ್ಕಿಂತ ನ್ಯಾಯವಾದ ಸೇರುಗಳನ್ನೇ ಇಟ್ಟು ಸರಿಯಾದ ಲಾಭದಿಂದ ಮಾಂದರೆ ಸೌಖ್ಯವೂ, ಘನವೂ, ಮಾನವೂ ಉಂಟಾದೀತು ಅನ್ಯಾಯ, ಮೋಸ ಮೊದಲಾದ್ದರಿಂದ ನೀತಿಗೆ ವಿರೋಧವೂ ಅಪಮಾನವೂ ಆದೀತು

ಶಿವಮೊಗ್ಗೆ — ನ್ಯಾಯವಾದಿ

ಜವಾಬಿಗೆ ಸಮಾಧಾನ

ಅಯ್ಯಾ,

ಜಾವಗಲ್ ಅದಾಲತ್ ಕೋರ್ಟು ಪ್ರಸಿಡೆಂಟ್ ಎಂಬ ಹುದ್ದೆಯನ್ನು ಸ್ವಯಂ ಹೊಂದಿ ಅವಮಾನ ಸಹಿಸಲಾರದೆ ಬಾತ್ಮಿಯ ಮೇಲೆ ವ್ಯಾಖ್ಯಾನ ಮಾಡಿರುವದು ಸರಿಯಷ್ಟೆ ನಾನು ಈಗ್ಗೆ 4 ತಿಂಗಳ ಹಿಂದೆ ಜಾವಗಲ್ ಸಂತೆಗೆ ಹೋಗಿದ್ದಾಗ ಕೆಲವು ನೌಕರರುಗಳಿಂದ ತಿಳಿಯಬಂದ ಕೆಲವು ಅಂಶಗಳನ್ನು ಪತ್ರಿಕೆಯಲ್ಲಿ ಪ್ರಸಿದ್ಧಪಡಿಸುತ್ತೇನೆ ತಾ 18 9-13 ನೇ "ವೃತ್ತಾಂತ ಪತ್ರಿಕೆ"ಯಲ್ಲಿ ಬಾತ್ಮಿ ಕೊಟ್ಟವರು ಹೆಸರು ಬದಲಾಯಿಸಿ ಕೊಟ್ಟಿದಾರೆಂದು ಸೂಚಿಸುತ್ತಾರೆ ನನ್ನ ಸ್ಥಳ ಅಕ್ಕಿಹೆಬ್ಬಾಳು ಈ ಬಾತ್ಮಿ ನಿರ್ದಯವಾದದ್ದೇ ಹೊರತು ಅದಾಲತ್ ಕೋರ್ಟು ಪ್ರಸಿಡೆಂಟ್ ಶಂಕರಯ್ಯನವರ ತರ್ಜೆ ಅರ್ಜಿಯಂತೆ ಹೆಸರು ವ್ಯತ್ಯಾಸವಾದ ಬಾತ್ಮಿಯಲ್ಲ ಗ್ರಾಮದ ನೌಕರರುಗಳು ಗೌರ್ನಮೆಂಟಿಗೆ ದ್ರೋಹಿಗಳೆಂದೂ ಶಂಕರಯ್ಯನವರ ಅರ್ಜಿ ಸುಳ್ಳಾಗಿದ್ದರೆ ಸರ್ಕಾರದವರು ತಮ್ಮನ್ನು ಶಿಕ್ಷಿಸದೆ ಬಿಡುತ್ತಿರಲಿಲ್ಲವೆಂದೂ ಸೂಚಿಸುತ್ತಾರೆ ನೌಕರರುಗಳು ಸರ್ಕಾರಕ್ಕೆ ದ್ರೋಹಿಗಳಾಗಿಯೂ, ಅರ್ಜಿ ಬರೆಯುವದರಿಂದ ತಮ್ಮನ್ನು ದೊಡ್ಡಮನುಷ್ಯ

...ಹೊಂದು ಹೇಗೆ ಎಂಬ ಅಹಂಕಾರವುಳ್ಳ ಶಂಕರಯ್ಯನವರ ಅರ್ಜಿಯಂತೆಯೂ ...ಸ್ಥರಾಗಿದ್ದರೆ ಈ ಪ್ರಸಿಡೆಂಟರ ಅಪ್ಪಣೆಯಿಲ್ಲದೆ ಶಿಕ್ಷೆಮಾಡುತ್ತಿದ್ದರು ...ದ್ವರಿಂದ ನೌಕರರು ತಪ್ಪಿತಸ್ಥರಲ್ಲವೆಂದು ವ್ಯಕ್ತವಾಗುತ್ತೆ ಇವರ ಬರವಣಿಗೆ ...ವತೀ ಖಾಸ್ ತರ್ಜೆ ಅರ್ಜಿ ಬರೆಯುವದುಂಟು ಎಂದು ಸಹ ವ್ಯಕ್ತಪಡುತ್ತೆ ...ರ್ನಮೆಂಟಿನವರೇನೂ ಇವರ ಅರ್ಜಿಯನ್ನು ಯಾವದಕ್ಕಿಂತಲೂ ಅತ್ಯುತ್ತಮವೆಂದು ...ರುತ್ತಾರೆ

ತಾ 20 3 13,
ಅಕ್ಕಿಹೆಬ್ಬಾಳು

ಸೂರ್ಯನಾರಣಪ್ಪ,
ಕಂಟ್ರಾಕ್ಟ್‌ದಾರ್

ಚಿಕ್ಕಜಾಜೂರು—ಚಿತ್ರದುರ್ಗ ರೈಲ್ವೆ

ಅಯ್ಯಾ,

ಚಿತ್ರದುರ್ಗದಂಥಾ ದೊಡ್ಡ ಪಟ್ಟಣಕ್ಕೆ ರೈಲು ಇಲ್ಲದೆ ಪಡುವ ವ್ಯಸನವನ್ನು ಎಷ್ಟು ಶ್ಯತಪಡಿಸಿಕೊಂಡರೂ ತೀರದು ಚಿಕ್ಕಜಾಜೂರಿಂದ ಚಿತ್ರದುರ್ಗಕ್ಕೆ 18 ಮೈಲು ಸರ್ವೆ ಸುದಾ ಆಗಿ ಈ ವರೆಗೆ ನಿರೀಕ್ಷಿಸಿದಾಗ್ಯೂ ಅದರ ಸಮಾಚಾರ ವೇ ಇಲ್ಲ ರೈಲು ಬಂದಹೊರ್ತು ಈ ದೊಡ್ಡ ಪಟ್ಟಣ ಅಭಿವೃದ್ಧಿಗೆ ಬರುವದಕ್ಕೆ ಅವಕಾಶವಿಲ್ಲ ಸೂರ್ಯಾದಿ ಸಾಹುಕಾರರ ಜವಳಿ ಮೂಟೆಗಳನ್ನು ಬಂಡಿಗಳ ಮೇಲೆ ತರಿಸುವದು ಬಹಳ ಕಷ್ಟವಾಗಿದೆ ಇದೂ ಅಲ್ಲದೆ ಹಿರಿಯೂರಿಂದ ಹತ್ತಿ ಬಂಡಿಯನ್ನು ಹೇರತಕ್ಕ ರೈತರು ಎದ್ದು ಗಾವುದ ಹೋಗಲಾರದೆ ಪಡುವ ವ್ಯಸನವನ್ನು ಎಷ್ಟು ಹೇಳಿದರೂ ತೀರದು ಮೊದಲು ರೂಪಾಯಿಗೆ ಒಂದಾಣೆಯಂತೆ ಕೊಡುವದಾಗಿ ಒಪ್ಪಿಕೊಂಡಿದ್ದರು ಜಾಗ್ರತೆ ಚಿತ್ರದುರ್ಗಕ್ಕೆ ರೈಲು ಬಂದರೆ ಸಾಕು, ರೂಪಾಯಿ ಒಂದಕ್ಕೆ ಎರಡಾಣೆಯಂತೆ ಆದರೂ ಕೊಟ್ಟೇವಲ್ಲಾ ಎಂಬದಾಗಿ ಎಲ್ಲರೂ ದುಃಖಪಡುತ್ತಾರೆ ಮೆಂಬರುಗಳಾದರೂ ಆಗಿಂದಾಗ್ಗೆ ಮೇಲಕ್ಕೆ ಅರಿಕೆ ಮಾಡಿಕೊಳ್ಳದೆ ಸುಮ್ಮನೆ ಇದ್ದಾರೆ ದಯಾಳುಗಳಾದ ಡೆಪ್ಟಿ ಕಮಿಷನರ್ ಮ|| ಬಾ ಡಿ ಸಾಹೇಬರು ಯಾವಾಗಲೂ ಇದರ ಕೋರಿಕೆಯುಳ್ಳವರಾಗಿದ್ದರು ದಸರಾ ಮೀಟಿಂಗಿಗೆ ದಯಮಾಡಿಸುವ ಮೆಂಬರುಗಳಾದರೂ ಇದರ ವಿಚಾರವನ್ನು ಅರಿಕೆ ಮಾಡಿಕೊಂಡಾರೋ, ರಾಜಾನ್ನವನ್ನು ಊಟಮಾಡಿ, ಶಾಲುಗಳನ್ನು ಹೊದ್ದುಕೊಂಡು ಬರುವರೋ ನೋಡಬೇಕು ದಯಾಳು ಮಂತ್ರಿಗಳಾದ ದಿವಾನ್ ಸಾಹೇಬರವರು ಈ ಚಿತ್ರದುರ್ಗಕ್ಕೆ ಜಾಗ್ರತೆ ರೈಲುಹಾಕಿಸಿ ಕಾಪಾಡಬೇಕಲ್ಲದೆ ಇನ್ಯಾರಿಗೆ ವ್ಯಸನಪಡಿಸಿಕೊಂಡರೂ ತೀರದು ಮುಖ್ಯವಾಗಿ ರೈಲು ಇಲ್ಲದೆ ವ್ಯಾಪಾರಗಳು ಅಭಿವೃದ್ಧಿಗೆ ಬರುವದಕ್ಕೆ ಮಾರ್ಗವಿಲ್ಲ

ಹೊಸದಾಗಿ ಪೋಲೀಸು ಸೂಪರಿಂಟೆಂಡೆಂಟ್ ಮ|| ಮಾಟಯ್ಯನವರು ಇಲ್ಲಿಗೆ ದಯಮಾಡಿಸಿದ ಬಳಿಕ ಜೂಜುಗಾರರ ಪುಂಡಾಟಗಳು ಅಡಗಿಹೋಗಿವೆ

ಚಿತ್ರದುರ್ಗದ ವರ್ತಕ

ಪ್ರಜಾ ಪ್ರತಿನಿಧಿಗಳಿಗೆ ಒಂದು ಸೂಚನೆ

ಅಯ್ಯಾ,

ಈಗ ಹಾಲಿ ಇರುವ ಕುಣಿಗಲ್ ಸಬ್ ತಾಲ್ಲೂಕನ್ನು ತೆಗೆದು ಆಯನೂರಿಗೆ ಮುಖ್ಯವಾಗಿ ಕೇಳುತ್ತೇನೆ ಅವರೆ ಮೇಲ್ಕಂಡ ಆಯನೂರು, ಕು ..., ಈ ಎರಡು ಸ್ಥಳಗಳಗಿಂತಲೂ ಹಾರನಹಳ್ಳಿ ಗ್ರಾಮವು ತುಂಬಾ ಮನೆಗಳ ಸಂಖ್ಯೆಯುಳ್ಳ ವರ್ತಕರೇ ಮೊದಲಾದ ಜನಸಮುದಾಯ, ಒಳ್ಳೇ ಹವ ಮತ್ತು ನಿರ್ಮಲವಾಗಿ ಎತ್ತರವಾದ ಸ್ಥಳ ನೀರಿನ ವಸತಿ ಇವೇ ಮೊದಲಾಗಿ ಕೂಡಿದ ಈ ಕು... ತಾಲ್ಲೂಕಿಗೇ ದೊಡ್ಡದಾಗಿದೆ ಅದರ ಪೂರ್ವದಲ್ಲಿ ಈ ಗ್ರಾಮವು ಶಿವಮೊಗ್ಗ ತಾಲ್ಲೂಕಿಗೆ ದೊಡ್ಡದಾಗಿತ್ತು ಈಗಲಾದರೋ ಈ ಕುಣಿಗಲ್ ತಾಲ್ಲೂಕಿಗೆ ದೊಡ್ಡದಾಗಿಯೂ, ಮಧ್ಯರಾಷ್ಟ್ರವಾಗಿಯೂ, ಹೊನ್ನಾಳಿಯಿಂದ ಆಯನೂರಿಗೂ, ಸಾಗರದಿಂದ ಸವಳಂಗಕ್ಕೂ ಹೋಗತಕ್ಕ ಹೈರೋಡು ಒಳಗಾಗಿಯೂ ಇದೆ ಆಯನೂರು ಈ ಹಾರನಹಳ್ಳಿಗೆ 2 ಮೈಲಿ ಫಾಸಲೆಯಾಗುತ್ತೆ ಈ ಎರಡು ಮೈಲಿನ ಮಧ್ಯೆ ಕಛೇರಿ ಕಟ್ಟಡಕ್ಕೂ ನೌಕರರಿಗೆ ಸಹ ಬಿಲ್ಡಿಂಗ್ ಮಾಡಿ ಕಟ್ಟಲು ಎತ್ತರವಾಗಿ ಒಳ್ಳೆ ಹವ ಮೈದಾನ ಪ್ರದೇಶ ಮತ್ತು ನೀರಿನ ವಸತಿಯು ಸಹ ಚೆನ್ನಾಗಿದೆ ಈ ಕುಣಿಗಲ್ ತಾಲ್ಲೂಕಿನಲ್ಲಿ ಈ ಹಾರನಹಳ್ಳಿಯಷ್ಟು ಗೌರ್ನಮೆಂಟಿನ ಉತ್ಪತ್ತಿ ಮತ್ತು ಖಾಯಿದೆ ಇನ್ಯಾವ ಗ್ರಾಮದಲ್ಲಿಯೂ ಇಲ್ಲ ಈ ಗ್ರಾಮಕ್ಕೆ ಯೂನಿಯನ್ ಸಹ ಆಗಿದೆ ಆಯನೂರಿನಲ್ಲಾದರೋ ಮೇಲ್ಕಂಡ ಎಲ್ಲಾ ವಿಷಯಗಳಲ್ಲಿಯೂ ಅಂದರೆ ಜನಸಂಖ್ಯೆ, ಮನೆ ಸಂಖ್ಯೆ, ಒಳ್ಳೇ ಹವ ನೀರಿನ ವಸತಿ ಮತ್ತು ಮೈದಾನ ಪ್ರದೇಶ ಇವೇ ಮೊದಲಾದ ಯಾವ ಅನುಕೂಲವೂ ಇಲ್ಲ ಆದರೆ ಇಲ್ಲಿ ಒಂದು ದೊಡ್ಡದಾದ ಸಂತೆಯಾಗುತ್ತಿರುವದಲ್ಲದೆ ಮತ್ತು ಶಿವಮೊಗ್ಗೆಯಿಂದ ಸಾಗರಕ್ಕೆ ಹೋಗತಕ್ಕ ಹೈರೋಡು ಇರುವುದರಿಂದಲೂ ಹೆಸರು ಮಾತ್ರ ದೊಡ್ಡದಾಗಿದೆಯೇ ವಿನಹ ತಾಲ್ಲೂಕು ಇಡಲು ಲಾಯಕ್ಕಾಗಿಲ್ಲ ಮೇಲ್ಕಂಡ ಮಧ್ಯರಾಷ್ಟ್ರವಾದ ಸ್ಥಳದಲ್ಲಿ ತಾಲ್ಲೂಕು ಕಛೇರಿಯನ್ನು ಸ್ಥಾಪಿತಮಾಡಿದಲ್ಲಿ ಈ ತಾಲ್ಲೂಕಿನ ಸರ್ವಪ್ರಜೆಗಳಿಗೂ ಸಮಾಧಾನವಿರುತ್ತೆ ಈ ಕಾರಣದಿಂದ ಈ ವಿಷಯವನ್ನು ಮುಂದೆ ಕೂಡುವ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಅವಶ್ಯ ಚರ್ಚಿಸಬೇಕಾಗಿ ಸಭೆಯ ಮೆಂಬರುಗಳಿಗೆ ವಿನಯಪೂರ್ವಕ ಅರಿಕೆ ಮಾಡಿಕೊಂಡಿರುತ್ತೇನೆ

ಹಾರನಹಳ್ಳಿಯ ಪ್ರಜೆ

ಶ್ರೀಮದ್ಯುವರಾಜರವರ ವಿದೇಶ ಸಂಚಾರವು

ಅಯ್ಯಾ,

ನಮ್ಮ ಮೈಸೂರು ದೇಶದ ಘನವನ್ನೆ ದಿವ ಶ್ರೀಮನ್ ಯುವರಾಜ ಪ್ರಭುಗಳಾದ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್ ಮಹಾಸ್ವಾಮಿಯವರು ತಮ್ಮ ರಾಜ್ಯವನ್ನು ಸುಸಮೃದ್ಧವನ್ನಾಗಿಯೂ, ನವನಾಗರಿಕತೆಯುಳ್ಳದ್ದಾಗಿಯೂ ಮಾಡಬೇಕೆಂಬ ಕುತೂಹಲದಿಂದ ಅಂತಹ ಕಾರ್ಯ ಕಾರಣಗಳಿಗೆ ಮುಖ್ಯಸ್ಥಾನವಾಗಿ ದಿಗಂತ ವಿಶ್ರಾಂತ ಕೀರ್ತಿಯನ್ನಡರಿರುವ ಆ ಆಂಗ್ಲೇಯ ರಾಜ್ಯಲಕ್ಷ್ಮಿಯು ಪಶ್ಚಿಮ ದಿಗ್ಭಾಗ ರಾಜ್ಯಗಳ ವೈಭವವನ್ನು ತಾವು ಸಾಕ್ಷಾತ್ತಾಗಿ ಸಂದರ್ಶನಮಾಡಿಕೊಂಡು ಬರಲು ಪ್ರಯಾಣಮಾಡಿ ಆರುತಿಂಗಳು ಸಮೀಪಿಸಿತಷ್ಟೆ ಶ್ರೀಮನ್ ಯುವರಾಜರವರು ಮಾರ್ಸೇಲ್ಸ್ ಪಟ್ಟಣದಲ್ಲಿ ಹಡಗನ್ನಿಳಿದು ಅಲ್ಲಿ ನೋಡಿ ತಿಳಿದುಕೊಳ್ಳಬೇಕಾದ ಅತಿಶಯಗಳನ್ನು ಬಿಡದೆ ಪರಾಂಬರಿಸಿ ಅಲ್ಲಿಂದ ಮುಂದಕ್ಕೆ ಧರ್ಯೋತ್ಸಾಹಗಳಿಂದ ಮೋಟಾರ್ ಗಾಡಿಯಲ್ಲಿ ಪ್ರಯಾಣಮಾಡುತ್ತಾ ದಾರಿಯಲ್ಲಿ ಆ ದೇಶದ ಜನರು ಮಾಡಿರುವ ವ್ಯವಸಾಯದ ಜಮೀನುಗಳನ್ನೂ, ರಮಣೀಯವಾದ ಹೂವಿನ ತೋಟಗಳನ್ನೂ ಪರಾಂಬರಿಸಿದರು, ಅಲ್ಲಿಂದ ಪುರಾತನವೂ, ಚರಿತ್ರಾರ್ಹವೂ ಆದ ರೋಮ್‌ನಗರದಲ್ಲಿ ಸ್ವಾಮಿಯು ಶ್ರೀತ್ಯೈಸಿ ನಿಯಮಿತ ದಿನಗಳಿಗಿಂತ ಅಧಿಕವಾಗಿ ಮೂರು ದಿನಗಳು ನಿಂತಿದ್ದು ಆ ಮಹಾ ಪಟ್ಟಣದ ಅತಿಶಯವಾದ ಸಂಗತಿಗಳನ್ನೆಲ್ಲಾ ಪರಾಂಬರಿಸಿ ಕೃತಾರ್ಥರಾದರಲ್ಲಾ ಅದಿ ... ಯಸ್ತೂ, ಬ್ರಿಟಿಷ್ ಸಾಮ್ರಾಜ್ಯದ ಮೂಲಸ್ಥಾನವೂ, ಆ ಚಿತ್ರವಿಚಿತ್ರ ಕಲಾಕೌಶಲ್ಯಾದಿ ಅನುಪಮ ಯಂತ್ರೋಪಕರಣಗಳಿಂದ ಬೆಳಗುತ್ತಿರುವ ಲಂಡನ್ ನಗರದಲ್ಲಿ ಅತ್ಯಂತ ಘನವನ್ನೆ ದಿದ ಭರತಖಂಡದ ಸಾರ್ವಭೌಮರಾದ ಶ್ರೀಮತ್ ಜಾರ್ಜ್ ಮಹಾ ಪ್ರಭುಗಳವರ ಬೇಟಿಯನ್ನು ಮಾಡಿಕೊಂಡು ಅವರಿಂದ ಆದರೋಪಚಾರಗಳನ್ನು ಮಾಡಿಸಿಕೊಂಡುದೂ ಲಾರ್ಡ್ ಕರ್ಜನ್ ಪ್ರಭೃತಿಗಳಿಂದ ಹೌಸ್ ಆಫ್ ಕಾಮನ್ಸ್ ಎಂಬ ಸಭಾ ಭವನದಲ್ಲಿ ಯಥೋಚಿತವಾದ ಸತ್ಕಾರೋಪಚಾರಗಳನ್ನು ಪಡೆದುಕೊಂಡು ತಕ್ಕ ಭಾಷಣಗಳಿಂದ ಎಲ್ಲರ ಹೃದಯಾನಂದಗೊಳಿಸಿದ ಧೀರ ವರರಾದ ಶ್ರೀಮನ್ ಯುವರಾಜರವರನ್ನು ಕೇಳಿಯಿರುತ್ತೇವೆ

ಈ ಮೇಲ್ಕಂಡ ವಾರ್ತಾತರಂಗಗಳನ್ನೋದಿದನಂತರ ಮತ್ತೆ ಯುವರಾಜರ ವೃತ್ತಾಂತಗಳು ನಾಲ್ಕು ವಾರಗಳ ವರೆಗೂ ಕಾಣದೆ ಬಹಳ ಹಂಬಲಿಸುತ್ತಿದ್ದೆವು ಸೆಪ್ಟಂಬರ್ 11 ನೇ ತಾ "ವೃತ್ತಾಂತ ಪತ್ರಿಕೆ"ಯಲ್ಲಿ ಗ್ಲಾಸ್ಗೋ ಪಟ್ಟಣದಲ್ಲಿ ನಡೆದ ಆದರೋಪಚಾರಗಳನ್ನೂ, ಸಂದರ್ಶಿಸಿದ ಅನೇಕ ಯುದ್ಧದ ಹಡಗುಗಳು, ಮೊದಲಾದ ಅತಿಶಯ ವಿಷಯಗಳನ್ನೂ ಓದಿ ಮಹತ್ತ ಸಂತೋಷವಾದುದು ಇಷ್ಟೊಂದು ಅಸದೃಶವೂ ಅಸಾಧಾರಣವೂ ಆದ ನವೀನಯಂತ್ರೋಪಕರಣಗಳನ್ನೂ ವ್ಯವಸಾಯ ನಾಗರಿಕತೆಯನ್ನೂ ಕಾರ್ಖಾನೆಗಳನ್ನೂ ವಾಣಿಜ್ಯಾದಿಗಳ ವಿಶೇಷಗಳನ್ನೂ ಘನವಾದ ರಾಜ್ಯಭಾರ ವಿಶೇಷಗಳ ಅನುಭವವನ್ನೂ ಹೊಂದಿಬರುವ ಯುವರಾಜರವರ ಸಂಗತಿಗಳನ್ನು ಪ್ರತಿ ವಾರವೂ ತಮ್ಮ ಪತ್ರಿಕೆಯಲ್ಲಿ ನೋಡಬೇಕೆಂಬ ಕೌತುಕವು ಬಹಳವಾಗಿರುವದರಿಂದ ಆ ಸಂಗತಿಗಳನ್ನೂ, ಸ್ವಾಮಿಯವರು ಹಿಂದಿರುಗಿ ಬರುವಾಗ ದಾರಿಯಲ್ಲಿನ ಎಲ್ಲಾ ವಿದ್ಯಮಾನಗಳನ್ನೂ ಸವಿಸ್ತರದೊಡನೆ ಪ್ರಕಟಿಸುತ್ತಾ ಬರಬೇಕು

ಇಷ್ಟೊಂದು ಕಷ್ಟಪಟ್ಟು ವಿದೇಶದ ಅನೇಕ ಅನುಭವವನ್ನು ಪಡೆದು ಮೈಸೂರು ದೇಶವನ್ನು ಎಲ್ಲಾ ಭಾಗಗಳಲ್ಲಿಯೂ ಅಭಿವೃದ್ಧಿಸ್ಥಿತಿಗೆ ತರಬೇಕೆಂದಿರುವ ಶ್ರೀಮನ್ ಯುವರಾಜ ಪ್ರಭುಗಳಿಗೆ ಜಗದೀಶ್ವರನು ದೀರ್ಘಾಯುರಾರೋಗ್ಯಭಾಗ್ಯವನ್ನೂ ಪರಿವಾರದವರಿಗೂ ಅಂತೆಯೇ ಆರೋಗ್ಯಾದಿ ವಿಶೇಷಗಳನ್ನೂ ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುವ

ತತ್ತನೂರು ಟಿ ಸುಬ್ಬರಾಯಪ್ಪ

ತಾಲ್ಲೋಕು ವರ್ತಮಾನಗಳು

ತರೀಕೆರೆ—ತಾ 19 ರಲ್ಲಿ ಒಂದು ಹದ ಒಳ್ಳೇ ಮಳೆ ಆಯಿತು ಫತ್ತದ ಪೈರು ಪ್ರಾಯಶಃ ಆಗುವದೇ ಇಲ್ಲವೆಂದು ಹೇಳುತ್ತಾರೆ ರಾಗಿ ಫಸಲು ಚೆನ್ನಾಗಿದೆ ಸುತ್ತುಮುತ್ತಲೂ ಸ್ವಲ್ಪ ಮಟ್ಟಿಗೆ ಮಳೆ ಆಗಿದೆ—ಕಾಡಿನ ಸಮೀಪದ ಗ್ರಾಮಗಳಲ್ಲಿ ಹುಲಿ, ತಿರುಕಗಳ ಕಾಟ ಹೆಚ್ಚಾಗಿದೆ ಗಿಡದಲ್ಲಿ ದನ, ಆಡುಗಳನ್ನು ಮೇಯಿಸುವಾಗ ಅವು ಮುಂದೆಗೆ ನುಗ್ಗುವದು ಸಾಲದೆ ರಾತ್ರಿಕಾಲಗಳಲ್ಲಿ ಮನೆಗಳಿಗೂ ನುಗಿ ನಷ್ಟಪಡಿಸುತ್ತವೆ ಇದನ್ನು ವಿಚಾರಿಸುವವರೇ ಇಲ್ಲ ತಕ್ಕ ಶಿಕಾರಿದಾರರೂ ಇಲ್ಲ ಲೈಸೆನ್ಸು ಸಿಕ್ಕುವದು ಬಹಳ ಕಷ್ಟ—ಕೆಲವು ದಿನಗಳ ಕೆಳಗೆ ಚಿಕ್ಕಕೆರೆಯಲ್ಲಿ ಒಂದು ಕಪ್ಪೆಯು ಸುಮಾರು 2½ ಅಡಿ ಉದ್ದವಿದ್ದ ಹಾವನ್ನು ನುಂಗಿ 2 ದಿನಕ್ಕಿಂತಲೂ ಹೆಚ್ಚಾಗಿ ಒಂದೇ ಸ್ಥಳದಲ್ಲಿ ಚಲಿಸದೆ ಇದ್ದು ನಂತರ ನೀರಿನೊಳಕ್ಕೆ ಹೋಯಿತು—ಇಲ್ಲಿಂದ ವರ್ಗವಾದ ಅಮಲ್ದಾರ್ ಸಾಹೇಬರಿಗೆ ಇಲ್ಲಿನ ಮಹಮದೀಯ ಜನರು ಸೇರಿ ತಮ್ಮ ಭಕ್ತಿ, ಪ್ರೀತಿಗಳನ್ನು ತೋರ್ಪಡಿಸಿದರು

ಕುಣಿಗಲ್ ತಾ|| ನಾಗಸಂದ್ರ—ಈ ಊರು 200 ಮನೆಗಳಿಂದ ಕೂಡಿದ್ದಾಗಿಯೂ, 30 ಮನೆ ಬ್ರಾಹ್ಮಣ್ಯವೂ, ಇನ್ನು ಇತರ ಜನಗಳನೇಕರಿಂದ ಕೂಡಿರುವ ದೊಡ್ಡ ಗ್ರಾಮ ಮಳೆ ಬಂದರೆ ಬೀದಿಗಳಲ್ಲೆಲ್ಲಾ ನೀರು ನಿಂತು ಕೊಚ್ಚೆಯಾಗಿ ದುರ್ವಾಸನೆ ಹುಟ್ಟುವುದಲ್ಲದೆ ತಿರುಗಾಡುವವರಿಗೆ ತುಂಬಾ ಅಸಹ್ಯವಾಗುತ್ತೆ ಇದಕ್ಕೆ ಕಾರಣ ರಸೆಯಿಲ್ಲದಿರುವುದೊಂದು ಲಾಂದ್ರದ ಕಂಭಗಳಿಲ್ಲ ರಾತ್ರಿ ಕಾಲಗಳಲ್ಲಿ ತುಂಬಾ ಕಷ್ಟ ಸರ್ಕಾರದವರು ಇವಕ್ಕೆಲ್ಲಾ ಅನುಕೂಲ ಮಾಡಿಕೊಡುವರೆಂದು ನಂಬಿದ್ದೇವೆ—ಈ ಊರಲ್ಲಿ ಗವರ್ನ್‌ಮೆಂಟು ಎ ಇ ಸ್ಕೂಲು ಇದೆ ಮೊದಲು ಬಾಲಕರ ವಿದ್ಯಾಭಿವೃದ್ಧಿಯು ಚೆನ್ನಾಗಿತ್ತು 60 ಹುಡುಗರ ವರೆಗೂ ಇದ್ದರು ಪರಸ್ಥಳದ ಹುಡುಗರಿಗೆ ಓದಲು ವಸದಲು ಬಹಳ ಅನುಕೂಲವಾಗಿತ್ತು ಈಗ ಬಹಳ ಹೀನಸ್ಥಿತಿಯಲ್ಲಿದೆ ವಿದ್ಯಾ ಇಲಾಖೆಯವರು ಕ್ರಮಕ್ಕೆ ತಂದಿಟ್ಟರೆ ಈ ಊರಿನ ಹುಡುಗರು ವಿದ್ಯಾವಂತರಾಗಬಹುದು—ಕುಡಿಯಲು ನೀರು ಯಾವಾಗಲೂ ಸಮೃದ್ಧಿಯಾಗಿ ಸಿಕ್ಕುತ್ತೆ ಊರಿಗೆ ಹತ್ತಿರವಾಗಿ ಕೆರೆಗಳಿವೆ ನೀರು ಧಂಡಿಯಾಗಿದೆ

ಹೊಸಕೋಟೆ ತಾ|| ತತ್ತನೂರು—ಹೊಲ ಗದ್ದೆಗಳು ಬಿತ್ತಿದಾರಭ್ಯ ಎರಡೂವರೆ ತಿಂಗಳಿಂದ ಮಳೆಯೇ ಬೀಳಲಿಲ್ಲ ತ್ರಾಣವಿಲ್ಲದೆ ಬಿತ್ತಿದ್ದ ಕೆಲವು ಹೊಲಗಳಲ್ಲಿ ಪೈರುಗಳು ಮೊಳೆಯುತ್ತ ಇಲ್ಲ ಪೈರಾಗಿದ್ದ ಅನೇಕ ಹೊಲ ಗದ್ದೆಗಳಿಗೆ ಮಳೆಯು ಸುತರಾಂ ಬೀಳದೆಹೋದ ಕಾರಣ ಒಣಗಿ ಬತ್ತಿಯಾಗಿ ಪೈರುಗಳು ಸುಟ್ಟೇ ಹೋದವು ಮಳೆ ಯಾವಾಗ ಬರುವದೋ ಹೇಳುವವರೇ ಇಲ್ಲ ಈಗ ಜನರಲ್ಲಿ ಗುರು ಧರ್ಮಗಳು ಎವರಾ ನಿಸದಂತೆ ವರ್ಷಋತುವರ್ಷವು ವರ್ಷಋತುವಿಗೆ ಬದಲಾಗಿ ವಸಂತಋತುವಾಗಿದೆ ಹಗಲುಹೊತ್ತು ಬಿಸಿಲು ಚೈತ್ರ ವೈಶಾಖ ಮಾಸಗಳಂತೆ ಹೊರಗೆ ತಲೆದೋರುವಷ್ಟು ತಾಪಕರವಾಗಿದೆ ದನಕರುಗಳ ಕಷ್ಟವಂತೂ ಹೇಳಲಾರದು ಹೊರಗೆ ಮೇವು ದೊರೆಯುವದೇ ಇಲ್ಲ ... ಚಂದ್ರನು ಎರುತ್ತಾನೆ ರಾತ್ರಿಯ ಹೊತ್ತು ಸ್ವಚ್ಛವಾದ ಬೆಳದಿಂಗಳು ನರ್ಮಲಾಕಾಶ, ಇವರ ಮೇಲೆ ಬಿಸಿಲಿನ ಝಳದಿಂದುಂಟಾದ ಸೆಕೆಯು ಪರಿಹಾರ ಫಲವಾಗಿ ಮೆಲ್ಲನೆ ಬೀಸುವ ಮಂದಮಾರುತ ಇಷ್ಟೊಂದು ಸೌಕರ್ಯದ ಆನಂದವು ಹೇಳಲಿಕ್ಕಾಗದು ದುರ್ಭಿಕ್ಷ ಲಕ್ಷಣಗಳೆಲ್ಲವೂ ಸರಿಯಾಗಿವೆ ಬಡಬಗ್ಗರೂ, ದನ ಕುರಿಗಳೂ ಹೊಟ್ಟೆಗಿಲ್ಲದೆ ಜೀವಿಸುವದು ಕಷ್ಟವಾಗಿದೆ ಕಾರಿ ಕಂದಾಯದಾರರಂತೂ ಈ ವರುಷ ಹೇಗೆ ಕಂದಾಯ ಕಟ್ಟಬೇಕೋ ಎಂದು ಕೊರಗುತ್ತಲಿದ್ದಾರೆ ದಯಾಳು ಪ್ರಭುಗಳಾದ ಸರ್ಕಾರದವರು ಜನರ ಇಂತಹ ಕಷ್ಟಗಳನ್ನು ಪರಿಹರಮಾಡಿಕೊಡಬೇಕಾಗಿದೆ

ಬೌರಿಂಗ್‌ಪೇಟೆ ತಾ|| ಬೇತಮಂಗಲ—ಆಗಾಗ್ಗೆ ಸಾಧಾರಣವಾದ ಮಳೆ ಆಗುತ್ತಾ ಇರುವದರಿಂದ ಬೆಳೆಗಳು ಸಹ ಬೆಳವಣಿಗೆಯಲ್ಲಿ ಸಾಧಾರಣವಾಗಿಯೇ ಇವೆ ರಾಗಿ ರೂಪಾಯಿಗೆ 12 13 ಸೇರೂ, ಅಕ್ಕಿ 7 ಸೇರೂ ಮಾರುತ್ತದೆ ಈ ಊರಿನಲ್ಲೂ ಇದರ ಸರಹದ್ದಿನಲ್ಲೂ ಕಳ್ಳಕಾಕರ ಭೀತಿಯು ಬಹು ಮಟ್ಟಿಗೆ ನಶಿಸಿ ಹೋಯಿತೆಂದು ಹೇಳಲು ಸಂತೋಷಿಸುತ್ತೇನೆ ಇದಕ್ಕೆ ಇಲ್ಲಿನ ಪೋಲೀಸ್ ಹುದ್ದೇದಾರರ ಸಾಹಸಕಾರ್ಯಗಳೇ ಕಾರಣವಾಗಿವೆ—ಇದೇ ಗ್ರಾಮಕ್ಕೆ ಸೇರಿದ ಜಕ್ಕಾರಸ್ ಕುಪ್ಪದ ಬಳಿಯಲ್ಲಿರುವ ಹಜಾಮರ ಭಾವಿಯಲ್ಲಿ ಪಂಚಮರ ಮುನಿಗಾ ಎಂಬ ಹುಡುಗನೂ, ಗಂಗಮ್ಮ ಗುರಮ್ಮ ಎಂಬ ಇಬ್ಬರು ಹೆಂಗಸರೂ ಆಕಸ್ಮಾತ್ತಾಗಿ ಬಿದ್ದು ಮೃತರಾದರು ಮತ್ತು ನಲ್ಲೂರು ಗ್ರಾಮದಲ್ಲಿರುವ ವಾರ ಉರುಫ್ ದಾಸಪ್ಪನ 20 ವರುಷದ ವೆಂಕಟಮ್ಮ ಉರುಫ್ ರಾಂತಮ್ಮನೆಂಬುವಳು ಹೊಟ್ಟೆನೋವು ತಡೆಯಲಾರದೆ ಭಾವಿಯಲ್ಲಿ ಬಿದ್ದು ಮೃತಳಾದಳು ಈ ಶವಗಳನ್ನು ಮೇಲೆ ಕಂಡ ಆಫೀಸರುಗಳು ಪಂಚಾಯತರ ಎದುರಿಗೆ ಮಹಜರು ಮಾಡಿಸಿ ಅನುಮಾನವೇನೂ ಕಂಡುಬರಲಿಲ್ಲವಾದ್ದರಿಂದ ಶವಗಳನ್ನು ದಫನ್ ಮಾಡಿಕೊಳ್ಳುವದಕ್ಕೆ ವಾರಸುದಾರರಿಗೆ ಒಪ್ಪಿಸಿದರು—ಇಲ್ಲಿನ ಸ್ಕೂಲ್ ಕಟ್ಟಡವು ತುಂಬಾ ಶಿಥಿಲವಾಗಿರುವುದರಿಂದ ಮಳೆಗಾಲದಲ್ಲಿ ಕೆಲಸ ನಡಿಸಲು ಉಪಾಧ್ಯಾಯರು ಕಷ್ಟಪಡುತ್ತಾರೆ ಸರ್ಕಾರದವರು ಹೊಸ ಕಟ್ಟಡಕ್ಕೆ ಹುಕುಂ ಮಾಡಿಸಿದರೆ ಬಹಳ ಅನುಕೂಲವಾಗುತ್ತದೆ

ಹೊಸದುರ್ಗ ತಾಲ್ಲೂಕು—ಹೊಸದುರ್ಗದಲ್ಲಿ ಮಳೆ ಇಲ್ಲದೆ ಎಷ್ಟೋ ದಿನಗಳಾಯ್ತು ಬಿಸಿಲು ಬೀಳುತ್ತಿದೆ ಪೈರೆಲ್ಲಾ ಹಾಳಾಯಿತು ಕೆಲವು ಕಡೆ ಜನರಿಗೂ, ಗೋಕಾಯಿಗಳಿಗೂ ಕುಡಿಯುವದಕ್ಕೆ ನೀರಿಲ್ಲ ಮುಂಗಾರು, ಹಿಂಗಾರು ಪೈರುಗಳು ಕೆಟ್ಟುಹೋದವು ದಿನಸಿ ಧಾರಣೆ ದುಬಾರಿಯಾಗುತ್ತಿದೆ ಕ್ಷಾಮವೆಂದು ಹೇಳಬೇಕಾದದ್ದೇ ಇಲ್ಲ ರೈತರು ಬಚ್ಚಿಟ್ಟುಕೊಂಡಿರುವ ದವಸವಾದರೂ ಬಿಚ್ಚಲಾರರು ಬಡವರ ಗತಿ ಹೇಳತೀರದು—ಇಲ್ಲಿ ಮುಸಲ್ಮಾನರ ಮಸೀತಿಯು ಹೀನಸ್ಥಿತಿಯಲ್ಲಿದೆ ಮ|| ಖಾಸಿಂ ಸಾಹೇಬರು ಗಮನಕೊಟ್ಟರೆ ಚೆನ್ನಾದೀತು—ಬೆಲಗೂರು ಗ್ರಾಮದಲ್ಲಿ ಸಿಡುಬಿನ ಹಾವಳಿಗೆ ಸಿಕ್ಕಿ ಕೆಲವು ಹುಡುಗರು ಮೃತರಾದರು ತಾ 9 ರಲ್ಲಿ ವ್ಯಾಕ್ಸಿನೇಟರು ಬಂದು ಜನರಿಗೆಲ್ಲಾ ಪ್ರೋತ್ಸಾಹಿಸಿ ತುಂಬಾ ಸಾಹಸಪಟ್ಟು ಸುಮಾರು 66 ಬಾಲಕರಿಗೆ ಸಿಡುಬನ್ನು ಹಾಕಿದರು—ಈ ಗ್ರಾಮದಲ್ಲಿ ಈಗ 3 ತಿಂಗಳ ಲಾಗಾಯ್ತು ಶ್ರೀಪ್ರಸನ್ನ ರಾಮೇಶ್ವರ ಕೋಆಪರೇಟಿವ್ ಸೊಸೈಟಿ ಏರ್ಪಾಡಾಗಿರುತ್ತೆ 1,000 ಷೇರುಗಳ ಪೈಕಿ ಆಗಲೇ 800 ಷೇರುಗಳು ಖರ್ಚಾಗಿ, ಸಾವಿರಾರು ರೂಪಾಯಿನ ಲೇವಾದೇವಿ ನಡೆದಿರುತ್ತದೆ ಈ ಸೊಸೈಟಿಯು ಈ ಕಷ್ಟಕಾಲದಲ್ಲಿ ಅದದ್ದು ಬಡವರಿಗೂ ಇತರರಿಗೂ ಎಷ್ಟೋ ಅನುಕೂಲವಾಯಿತು ಆದರೆ ಇಲ್ಲಿ ಇನ್ನು ಎರಡು ಸೊಸೈಟಿಗಳನ್ನು ಇಡಿಸಿಕೊಳ್ಳಬೇಕೆಂದು ಕೆಲವರು ಪ್ರಯತ್ನಪಡುತ್ತಿರುವರು ಈ ರೀತಿ 2 3 ಸೊಸೈಟಿಗಳಿಗಿಂತಲೂ ಈಗ ಏರ್ಪಾಡಾಗಿರುವ ಒಂದು ಸೊಸೈಟಿಗೇನೇ ತಕ್ಕ ಪ್ರೋತ್ಸಾಹಕೊಟ್ಟು ಎಲ್ಲರೂ ಸೇರಿ ಅಭಿವೃದ್ಧಿಗೆ ತಂದರೆ ಎಷ್ಟೋ ಪ್ರಯೋಜನ ಉಂಟಾದೀತು ಗ್ರಾಮಸ್ಥರೂ ಸರ್ಕಾರದವರೂ ಈ ವಿಷಯದಲ್ಲಿ ಪರ್ಯಾಲೋಚಿಸತಕ್ಕದ್ದಾಗಿದೆ

ಹರಿಹರ ತಾ|| ಮಲೆಬೆನ್ನೂರು—ಇಲ್ಲಿ ಮಳೆ ಇಲ್ಲದೆ ರೈತರು ಬಹಳ ವ್ಯಥೆಪಡುತ್ತಿದ್ದಾರೆ ನಮ್ಮ ದಿವಾನ್ ಸಾಹೇಬರವರು ಮೊನ್ನೆ ಹರಿಹರಕ್ಕೆ ಬಂದಾಗ್ಗೆ ತ್ಯಾಗಲೇ ಹಳ್ಳಕ್ಕೆ ಅಡ್ಡಗಟ್ಟೆಯನ್ನು ಹಾಕುವ ವಿಚಾರದಲ್ಲಿ ನೋಡಿಕೊಂಡು ಹೋದರೆಂದು ಕೇಳುತ್ತೇನೆ ಅದರಿಂದ ನಾಲ್ಕು ಐದು ಗ್ರಾಮಗಳಿಗೆ ಮಟ್ಟಿಗೆ ತಕ್ಕ ಅನುಕೂಲತೆ ಉಂಟಾಗುತ್ತೆ ಇದಕ್ಕಿಂತಲೂ ಅತ್ಯುತ್ತಮವಾಗಿ ಮತ್ತು ನಾಲ್ಕು ಐದು ತಾಲ್ಲೂಕುಗಳಲ್ಲಿನ ಅನೇಕ ಗ್ರಾಮಗಳಿಗೆ ಅನುಕೂಲವಾಗುವಂತಿರುವ ಇದೇ ತಾಲ್ಲೂಕು ಪೈಕಿ ಗೋವಿನಹಾಳು ಗ್ರಾಮದ ಹತ್ತಿರ ಹರಿಯುತ್ತಿರುವ ತುಂಗಭದ್ರಾನದಿಗೆ ಅಣೆಕಟ್ಟನ್ನು ಕಟ್ಟಿಸಿದರೆ ಒಂದುವೇಳೆ ದುರ್ದೈವದಿಂದ ಮಳೆ ಬಾರದಿದ್ದರೂ ಇದರಿಂದ ತುಂಬಾ ಅನುಕೂಲವಾಗುವುದು ಇದಕ್ಕೆ ಖರ್ಚು ಆಗತಕ್ಕದ್ದನ್ನು ಒಂದು ವರ್ಷದಲ್ಲಿ ಸರ್ಕಾರದವರು ಹೊಂದಬಹುದಾಗಿ ನನಗೆ ತೋರುತ್ತೆ ಇದನ್ನು ನಮ್ಮ ಘನಹೊಂದಿದ ಮಹಾರಾಜರವರು ಸಧ್ಯದಲ್ಲಿ ಕಟ್ಟಿಸುವರಾಗಿ ನಂಬಿರುತ್ತೇನೆ—ಈ ಮಲೆಬೆನ್ನೂರು ಗ್ರಾಮದಲ್ಲಿ ಯೂನಿಯನ್ ಇದ್ದೂ ಲಾಂದ್ರಗಳು ಎಣ್ಣೆಬತ್ತಿಗಳನ್ನು ಕಾಣುವಂತೆಯೇ ಇಲ್ಲ ಹತ್ತು ಹನ್ನೆರಡು ವರ್ಷಗಳಿಂದ ಯೂನಿಯನ್ ಹುಟ್ಟುವಳಿಯು ಯಾವ ಕೆಲಸಗಳಿಗಾಗಿ ವ್ರಯವಾಗುತ್ತೋ ತಿಳಿಯದು ಈಗ ನಾಲ್ಕು ವರ್ಷಗಳ ಕೆಳಗೆ ರಸ್ತೆಯು ಒಂದು ಭಾಗದಲ್ಲಿ ಕಲ್ಲು ಚರಂಡಿಯನ್ನು ಕಟ್ಟಿಸಿದರು ಈಗ ಅದೂ ಇಲ್ಲ ಹುಟ್ಟುವಳಿ ಆದಾಯವೆಲ್ಲಾ ತಕ್ಕ ವ್ರಯವಾಗುತ್ತೆಂತ ನಾನು ಹೇಳಲಾರೆನು ನಮ್ಮ ಅಮಲ್ದಾರರವರಿಗೆ ಈ ವಿಚಾರದಲ್ಲಿ ಅನೇಕ ಅರ್ಜಿಗಳನ್ನು ಕೊಟ್ಟದ್ದಲ್ಲದೆ ಮೀಟಿಂಗು ಮೊದಲಾದವುಗಳಲ್ಲಿ ಚರ್ಚೆಯನ್ನು ಸಹ ಮಾಡಿದಂತೆ ಮೆಂಬರುಗಳು ಹೇಳಿದರು ಇವೆಲ್ಲಾ ಮುಂದೆ ತಕ್ಕ ಏರ್ಪಾಡಿನಿಂದ ಸರಿಯಾಗಿ ನಡೆಯ ಬಹುದಾಗಿ ನಂಬಿರುತ್ತೇನೆ

ದೊಡ್ಡಬಳ್ಳಾಪುರ—ಈ ಊರಲ್ಲಿ ತೆಲಗು ಬಣಜಿಗರ ರಂಗಮ್ಮನೆಂಬವಳನ್ನು ಮೋಸದಿಂದ ಒಬ್ಬ ದೇವಾಂಗದ ಮುದ್ದಪ್ಪನೆಂಬುವನು ಈ ತಿಂಗಳು 12 ನೇ ತಾ ರಾತ್ರಿ ದತ್ತೂರಿಬೀಜದ ಪುಡಿಯನ್ನು ಊಟದಲ್ಲಿ ಸೇರಿಸಿ ಅವಳಿಗೆ ಕೊಟ್ಟು ತಿನ್ನಿಸಿ ಪ್ರಜ್ಞೆ ತಪ್ಪಿಸಿ ಅವಳ ಮೈಮೇಲಿದ್ದ ಆಭರಣಗಳನ್ನು ಅಪಹರಿಸಿಕೊಂಡು ಓಡಿಹೋದನು ಪೋಲೀಸ್ ಇನ್ಸ್‌ಪೆಕ್ಟರ್ ಹವೆಲ್‌ರವರು ಮೆಹನತ್ತಿನಿಂದ ಪತ್ತೆತರಮಾಡು ನಡಿಸಿ ಅವನನ್ನು ಅವನ ಸ್ಥಳವಾದ ಗೋರಿಬಿದನೂರು ತಾಲ್ಲೂಕು ಗೌಡಗೆರೆಯಲ್ಲಿ ಹಿಡಿದು ತಂದು ಲಾಕಪ್ಪಿನಲ್ಲಿ ಇಟ್ಟಿರುತ್ತಾರೆ ಕೆಲವು ಮಾಲುಗಳು ಪತ್ತೆಯಾಗಿವೆ ಆಸ್ಪತ್ರೆಯ ಡಾಕ್ಟರವರು ಕೂಡ್ಲೆ ತಕ್ಕ ಇಲಾಜು ಮಾಡಿದ್ದರಿಂದ ರಂಗಮ್ಮ ಬದುಕಿಕೊಂಡಳು—ಮಳೆ ಈ ಪ್ರಾಂತ್ಯ ಒಂದೂವರೆ ತಿಂಗಳಿಂದ ಸುರಿಯದೆ ಬಿಸಿಲಿನ ಧಗೆ ಅಧಿಕವಾಗಿ ರಾಗಿ ಪಸಲೆಲ್ಲಾ ಕೆಟ್ಟುಹೋಗಿವೆ ಕೆಲವು ಕೆರೆಗಳೂ ಬತ್ತಿವೆ ಈಗತಾನೇ ಮಳೆ ಬರುವಂತಿದೆ ರಾಗಿ 14 ಸೇರೂ, ಅಕ್ಕಿ 5 6 ಸೇರೂ ಮಾರುತ್ತೆ ತುಪ್ಪ ಸೇರು ಹತ್ತಾಣೆ—ಇಲ್ಲಿನ ಥಿಯೊಸಾಫಿಕಲ್ ಸಂಘದವರು ವರ್ಗವಾದ ಸಬ್ ರಿಜಿಸ್ಟ್ರಾರಿಗೆ ಒಂದು ಎಂಟರ್‌ಟೇನ್‌ಮೆಂಟನ್ನು ಕೊಟ್ಟರು ಮ|| ಆಲಂಪಲ್ಲಿ ವೆಂಕಟನಾರಾಯಣಶೆಟ್ಟರು ಮಿತ್ರಮಂಡಲಿಗೆ ಟೀಪಾರ್ಟಿ ಮಾಡಿಸಿ ಭಜನೆ, ಅಡ್ರೆಸ್, ಮಂಗಳವಾದ್ಯಗಳಿಂದ ಸಬ್ ರಿಜಿಸ್ಟ್ರಾರ್ ಮ|| ರಾಮಸ್ವಾಮಯ್ಯಂಗಾರ್ರನ್ನು ಸತ್ಕರಿಸಿದರು ಹೊಸ ಸಬ್ ರಿಜಿಸ್ಟ್ರಾರ್ ಮ|| ಲಕ್ಷ್ಮೀಕಾಂತಯ್ಯಂಗಾರ್ರು ಆಫೀಸನ್ನು ಎಲ್ಲಾ ವಿಷಯಗಳಲ್ಲೂ ಪ್ರಜೆಗಳಿಗೆ ಅನುಕೂಲಪಡಿಸುವಂತೆ ತಿಳಿಯಲಾಗಿದೆ—ಇಲ್ಲಿಗೆ 8 ಮೈಲು ದೂರವಾಗಿರುವ ತಿಪ್ಪೂರಿನಲ್ಲಿ ಪ್ಲೇಗ್ ಮರಣಗಳಾಗಿವೆ ಅಲ್ಲಿನ ಜನರನ್ನು ದೊಡ್ಡಬಳ್ಳಾಪುರದಲ್ಲಿ ವಾಸಿಸಲಿಕ್ಕೆ ಬಿಡುವುದು ಅಪಾಯಕರವಾಗಿದೆ ಕ್ಷಾಮದ ಕಷ್ಟವೇ ರೈತರಿಗೆ ಸಾಕಾಗಿರುವಲ್ಲಿ ಪ್ಲೇಗ್ ರೋಗದ ಸೋಂಕಿಗೆ ಅವಕಾಶಕೊಡುವುದು ತಕ್ಕದ್ದಲ್ಲ—ಈ ಊರಿನಲ್ಲಿರುವ ಸರಾಫ್ ನಂಜಪ್ಪನವರ ತಮ್ಮ ದೇವಪ್ಪನ ಹೆಂಡತಿ 8 ದಿನಗಳ ಕೆಳಗೆ ಬೆಂಗಳೂರು ಸಂಪಿಗೆ ಕೆರೆಯಲ್ಲಿ ಮೃತಪಟ್ಟಳಂತೆ ಈಕೆಯ ಪ್ರಾಯ ಸುಮಾರು 16 ಲಗ್ನವಾಗಿ ಮೂರು ತಿಂಗಳು ಮಾತ್ರ ಆಗಿತ್ತು—ಇಲ್ಲಿನ ಪೋಸ್ಟ್ ಸ್ಟ್ಯಾಂಪ್‌ಗಳಲ್ಲಿ ಕೆಲವರು ನಾರಕ್ಕೆರಡಾವರ್ತಿ ವಿಲೇಹ್ ಕಾಗದಗಳನ್ನು ಎಡವಾಡೆಮಾಡದೆ 3 ವಾರಗಳ ಮೇಲೆ ಕೊಟ್ಟಿರುವದಾಗಿ ಫಿರ್ಯಾದು ಬಂದಿದೆ ಮುಂದೆ ಇಂಥಾ ತೊಂದರೆಗೆ ಅವಕಾಶವಾಗದಂತೆ ಪೋಸ್ಟ್ ಮಾಸ್ಟರವರು ಮಾಡ್ತಾರೆಂದು ನಿರೀಕ್ಷಿಸಲಾಗಿದೆ—ಇಲ್ಲಿಗೆ ಕೆಲವು ಕಳ್ಳಕೊರಮರು ಬಂದಿರುತ್ತಾರೆ ಈ ಪೈಕಿ ಕೆಲವರು ಆಗಲೇ ಇಲ್ಲಿನ ಲಾಕಪ್ಪಿಗೆ ಸೇರಿರುವರು 8 10 12 ವರ್ಷದ ಹುಡುಗರು ಸಿಕ್ಕಿಬಿದ್ದು ಒಬ್ಬನಿಗೆ ಕಠಿಣ ಸಜಾ ಆಯಿತು ಈ ವಿಧವಾಗಿ ಚಿಕ್ಕ ಹುಡುಗರಿಗೆ ಸಜಾ ಶಿಕ್ಷೆಕೊಡದೆ ಅವರನ್ನು ಒಂದು ಅನಾಥಶಾಲೆಗೆ ಕಳುಹಿಸುವದರಿಂದ ಮುಂದೆ ಅವರು ಈ ವೃತ್ತಿಯನ್ನು ಬಿಡಲಿಕ್ಕೆ ಅನುಕೂಲವಾಗುವದು

ತಿಪಟೂರು—ತಾ 19 ನೇ ಶುಕ್ರವಾರ ಒಂದು ಹದ ಮಳೆಯಾದ್ದರಿಂದ ಉಳಿದ ಪೈರುಗಳು ಚೇತರಿಸಿಕೊಳ್ಳುವಂತಾಯಿತು ಕೆಲವು ವರ್ತಕ ಮಹಾಶಯರು ತೆಗಿಸಿರುವ ಭಾವಿಗಳಲ್ಲಿ ನೀರು ಸಮೃದ್ಧಿಯಾಗಿರೋದರಿಂದ ನೀರಿನ ತೊಂದರೆ ಹೆಚ್ಚಲಿಕ್ಕೆ ಮಾರ್ಗವಿಲ್ಲ ದೂರದಿಂದ ಹೊತ್ತುತರಬೇಕೆಂಬುವದೊಂದು ಕಷ್ಟ ಕೋಡಿಯ ಬಳಿ ಮ|| ದಸ್ತಗೀರ್ ಸಾಹೇಬರು ಒಂದು ಸೀನೀರು ಭಾವಿ ತೆಗಿಸುತ್ತಲಿದ್ದಾರೆ ಮುಕ್ಕಾಲುಭಾಗ ಎಲ್ಲಾ ಕೆಲಸವೂ ತೀರಿ 20 ಅಡಿ ನೀರು ಬಂದಿದೆ ಆದರೆ ಅದರ ಸಮೀಪದಲ್ಲಿ ಊರಿನ ಕಚರಾ ಜಮಾಯಿಸದಂತೆ ಮಾಡತಕ್ಕದ್ದು ಮ್ಯುನಿಸಿಪಾಲಿಟಿಯವರ ಕರ್ತವ್ಯವಾಗಿದೆ ಮ್ಯುನಿಸಿಪಲ್ ಲಾಂದ್ರಗಳ ಬೆಳಕು ತೃಪ್ತಿಕರವಾಗಿಲ್ಲ ಕೆಲವು ಕಂಭಗಳನ್ನು ಹಚ್ಚುವದೂ, ಕೆಲವನ್ನು ಹಚ್ಚದೆ ಬಿಡುವದೂ ಸಂಪ್ರದಾಯವೆಂದು ತೋರುತ್ತೆ ಮ್ಯುನಿಸಿಪಾಲಿಟಿಯವರು ಇದಕ್ಕೆ ಅವಶ್ಯ ಗಮನ ಕೊಡಬೇಕಾಗಿದೆ ರಾತ್ರಿ ಕಾಲದಲ್ಲಿ ದೀಪವಿಲ್ಲದೆ ಗಾಡಿಗಳನ್ನು ಟವನ್ನೊಳಗೆ ಹೊಡಕೊಂಡು ಹೋಗುವವರನ್ನು ತನಿಖೆ ಮಾಡುವವರೇ ಇಲ್ಲ ಒಬ್ಬರ ಮೇಲೆ ಗಾಡಿ ಹರಿದು ಜಖಂ ಆದನಂತರ ಸರಕಾರದವರು ತನಿಖೆ ಮಾಡಬಹುದೋ ಏನೋ ಟವನ್ನಲ್ಲಿ ಮನೆ ಮನೆಗೆ ಕಕ್ಕಸುಗಳು ಇಲ್ಲದಿರುವದರಿಂದ ಹೆಂಗಸರ ಗಂಡಸರ ಅಭಾಸಕರವಾದ ಸ್ಥಿತಿಯನ್ನು ನೋಡಲು ಅಸಹ್ಯವಾಗುತ್ತೆ ಇಂಥಾ ಅವಶ್ಯವಿಚಾರಗಳನ್ನು ಬಿಟ್ಟು ಭಾರಿ ಏರ್ಪಾಡುಗಳನ್ನು ಕುರಿತು ಯೋಚಿಸುತ್ತಿರುವ ಆ ಮ್ಯುನಿಸಿಪಾಲಿಟಿಯ ಪ್ರಜಾ ಹಿತಚಿಂತನೆಯು ಎಂಥಾದ್ದೋ ಊಹಿಸಲಾಗದು ಮ್ಯುನಿಸಿಪಲ್ ಕಮಿಷನರುಗಳಿಗೆ ಇತರರ ಚಿಂತೆಯಿಲ್ಲ ಒಬ್ಬರಿದ್ದವರು ಇಬ್ಬರು ಸ್ಯಾನಿಟರಿ ಇನ್ಸ್‌ಪೆಕ್ಟರುಗಳಾದರು ಈ ಪೈಕಿ ಒಬ್ಬರು ಟವನ್ನಿಗಂತೆ, ಮತ್ತೊಬ್ಬರು ತಾಲ್ಲೂಕಿಗಂತೆ ಟವನ್ ಪಾಕೀಜಾ ಎಷ್ಟರಮಟ್ಟಿಗೆ ಅಭಿವೃದ್ಧಿಹೊಂದುವದೋ ನೋಡಬೇಕು—ಕೋಆಪರೇಟಿವ್ ಸೊಸೈಟಿಯ ಮೂರನೇ ಜನರಲ್ ಮೀಟಿಂಗು ನಡೆಯಿತು ಆದಾಯ ವ್ಯಯಗಳು ಹಿಂದಿನ ವರುಷಗಳಿಗಿಂತಲೂ ತೃಪ್ತಿಕರವಾಗಿಯೂ, ಅಭಿವೃದ್ಧಿ ಸ್ಥಿತಿಯಲ್ಲಿಯೂ ನಡೆದವೆಂದು ತಿಳಿಯುತ್ತೆ ಇವರ ಸೆಕ್ರಿಟರಿ ಮತ್ತು ರೈಟರ ಮುತುವರ್ಜಿಯು ಶ್ಲಾಘನೀಯವಾಗಿದೆ—ಕಳೆದ ಗುರುವಾರ ಪಲ್ಲಾಗಟ್ಟಿಯವರ ಮಹಡಿಯ ಮೇಲೆ ಒಂದು ಮೀಟಿಂಗು ನಡೆ...

ಯಿತು ಬೆಂಗಳೂರಿಂದ ಮೈಸೂರ್ ಬ್ಯಾಂಕ್ ಏಜೆಂಟ್ ಮೆ|| ರೋಸ್ ಸಾಹೇಬರೂ, ಮ|| ಚೆಂಗಯ್ಯಚೆಟ್ಟಿಯವರೂ ದಯಮಾಡಿಸಿದ್ದರು ಅಮಲ್ದಾರ್ ಮ|| ಬಸವರಾಜೆ ಅರಸಿನವರೇ ಮುಂತಾದ ಹುದ್ದೆದಾರರೂ, ಸಾಹುಕಾರಿಗಳೂ, ವರ್ತಕ ಮಹನೀಯರೂ ಸಭೆಯಲ್ಲಿ ಹಾಜರಿದ್ದರು ಮೆ|| ಆರ್ ಡಬ್ಲ್ಯು ರೋಸ್ ಧೊರೆಯವರು ಸದರಿ ಬ್ಯಾಂಕಿನ ಉದ್ದೇಶವನ್ನು ಕುರಿತು ಇಂಗ್ಲಿಷಿನಲ್ಲಿ ಹೇಳಿದ್ದನ್ನು ಮ|| ಚೆಂಗಯ್ಯ ಚೆಟ್ಟಿಯವರು ಕನ್ನಡದಲ್ಲಿ ವಿವರಿಸಿದರು ಮೈಸೂರು ಬ್ಯಾಂಕಿನ ಡೈರೆಕ್ಟರುಗಳ ಪೈಕಿ ಈ ಊರಿನಿಂದ ಚುನಾಯಿಸಲ್ಪಟ್ಟಿರುವ ಸಾ|| ಮೆ|| ಶಿಂಗ್ರಿನಂಜಪ್ಪನವರೂ ಇತರರೂ ಬ್ಯಾಂಕಿನಿಂದ ಆಗಬಹುದಾದ ಸಾಧಕ ಬಾಧಕಗಳ ವಿಷಯ ಚರ್ಚಿಸುತ್ತಾ ಬಂದದ್ದರಿಂದ ವಿಷಯಗಳು ಮತ್ತೂ ಪರಿಷ್ಕಾರವಾಗಿ, ಬ್ಯಾಂಕಿನಿಂದ ವರ್ತಕ ಮಹನೀಯರಿಗೆ ಅಪಾರವಾದ ಪ್ರಯೋಜನವಾಗುವದೆಂಬ ಭರವಸೆ ಉಂಟಾಗುವಂತಾಯಿತು ಹುಂಡಿಯ ವಿಷಯದಲ್ಲೂ, ಸಾಲದೊರೆಯುವ ವಿಷಯದಲ್ಲೂ, ಮುಚ್ಚಿ ವಿಷಯದಲ್ಲೂ ಬ್ಯಾಂಕಿನಿಂದ ಸಾಕಾದಷ್ಟು ಪ್ರಯೋಜನ ಉಂಟೆಂದೂ, ಪೇರುದಾರರಿಗೆ ಆದಾಯ ಹೆಚ್ಚುವದೆಂದೂ ತಿಳುವಳಿಕೆಗೆ ಬಂದಂತಾಯಿತು ಆದ ಪ್ರಯುಕ್ತ ಈ ಘನತರವಾದ ಏರ್ಪಾಡನ್ನು ಮಾಡಿಕೊಟ್ಟ ನಮ್ಮ ಶ್ರೀಮನ್ ಮಹಾರಾಜರವರಿಗೂ ಅವರ ಸರಕಾರಕ್ಕೂ ವರ್ತಕ ಮಹನೀಯರೂ, ನಾವುಗಳೆಲ್ಲರೂ ತುಂಬಾ ಕೃತಜ್ಞತೆಯುಳ್ಳವರಾಗಿರುತ್ತೇವೆಂದು ವರ್ತಕ ಮಂಡಲಿಯ ಪರವಾಗಿ ಸ್ಥಳೀಯ ಉಪದೇಶಿಗಳು ಏಜಂಟರಿಗೆ ತಿಳಿಸಿದರು ಏಜಂಟರು ಪ್ರತಿಯಾಗಿ ವರ್ತಕರೆಲ್ಲಾ ಸಹಾಯಕರಾದರೆ ಬ್ಯಾಂಕಿನ ಕಾರ್ಯಗಳು ಸರಾಗವಾಗಿಯೂ ಫಲದಾಯಕವಾಗಿಯೂ ಜರುಗುವದರಲ್ಲಿ ಅಡ್ಡಿಯಿಲ್ಲವೆಂದು ತಿಳಿಸಿದರು

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರರುಚಿ ಕಡಮೆಯುಳ್ಳವರಾಗಿದ್ದಾರೆಂದು ಕಂಡ ಕೂಡಲೇ

SCOTT'S EMULSION 231

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧವನ್ನು ಕೊಡಬೇಕು

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವುದು

ಅದು ಸಂತೋಷವೂ ಆನಂದವೂ ಸದುವಾಗಿ ಆಹಾರದ ರುಚಿ ಹೊಂದಿ ಸುಖ ಚಿಹ್ನೆ ತೋರಿಸುವದು

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರುವವರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್,

ಈ ಮಾನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ರಬ್ಬರ್ ಸ್ಟಾಂಪು.

ಕ್ರಯ ರೂ. 1-12-0.

ಯಾವ ಭಾಷೆ, ಯಾವ ತರಹ, ಯಾವ ಸೈಜಿನಲ್ಲಾದರೂ ಸರಿ. ಇದು ವರೆಗೆ

ವಿಕ್ರಯಿಸುತ್ತಲಿದ್ದ 2 8-0ಯ ರಬ್ಬರ್ ಸ್ಟಾಂಪನ್ನು ಡಿಸೆಂಬರ್ ಒಳಗಾಗಿ ತರಿಸಿಕೊಳ್ಳುವವರಿಗೆ 1 ಶಾಯಿ ಸೀಸಾ, 1 ಪೆಟ್ಟಿಗೆ, 1 ಬ್ರಷ್, 2 ಪ್ಯಾಡು ಸಹಿತ ರೂ 1 12 0ಗೆ ತಯಾರಿಸಿ ಕಳುಹಿಸುತ್ತೇವೆ ನಮಗೆ ಏಜಂಟರು ಬೇಕು ತಿಂಗಳಿಗೆ 15-0-0 ರೂಪಾಯಿ ಸಂಬಳ ಕೊಡುತ್ತೇವೆ ಬೇಕಾದವರು ಬರೆದು ಏಜನ್ಸಿಯನ್ನು ಪಡೆಯಬಹುದು

ವಿಳಾಸ —ಮ್ಯಾನೇಜರ್, ರಬ್ಬರ್ ಸ್ಟಾಂಪು ಡಿಪೋ,

[191-1] 18, ಸೆಕೆಂಡ್ ಲೈನ್ ಬೀಚು, ಮದರಾಸು

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಡಿಸುತ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಗಿದ ಬಾಯಾರಿಕೆ, ಬರಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ, ಕಣ್ಣುಮೊಬ್ಬು ತಲೆ ತಿರುಗುವಿಕೆ, ಮೈನೋವು ಕೀಲುನೋವು, ಮರವು, ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸಂಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [181 3]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಓ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ

ಇವರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 1 ಆಣೆ

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾಗಲ್ಪಟ್ಟದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ ಕೂಡ್ಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ

[129-11] ಪೋಸ್ಟ್ ಬಾಕ್ಸ್, ನಂ 167, ಮದರಾಸು

ಮುಖ್ಯವಾಗಿ ಗಮಿಸಿಸಿ ಓದಿರಿ.

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕ್ಲೋಲಿಸ್ ಲಿವರ್ ಚಿಕ್ಕ ಸೈಜು ಕಂಪೆನ್‌ಸೇಷನ್ ಬ್ಯಾಲನ್ಸು ಬಹು ಬಲಿಷ್ಠವಾದ ೨ ವರುಷಗಳ ಗ್ಯಾರಂಟೀಯುಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 5 0 0 ಇದನ್ನು ಸೆಪ್ಟಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 10 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತ

ವಿಳಾಸ —ದನಲಕ್ಷ್ಮಿ ಅಂಡ್ ಕಂಪೆನಿ,

[129-11] ಸಾಹುಕಾರ್ ಪೇಟೆ ಪೋಸ್ಟು, ಮದರಾಸು

ಸುಂದರವಾದ ನಾಲ್ಕು ಎಳೆ ಮುತ್ತಿನ ಹಾರ.

ಪದಕ ಸಹಿತ ಹಾರ 1 ಕ್ಕೆ 1-7-0, ಪದಕವಿಲ್ಲದ ಹಾರ 1 ಕ್ಕೆ 0-11-0



ಈ ನಕ್ಷೆಯಲ್ಲಿ ತೋರಿಸಿರುವ ಹಾರವು ಮಕ್ಕಳೂ ದೊಡ್ಡವರೂ ಧರಿಸುವದಕ್ಕೆ ಯೋಗ್ಯವಾದದ್ದು ಪ್ರಸಿದ್ಧಿಯಾದ ಚನ್ನ ಮಿಶ್ರದ ಮಧುರೆ ಓತ್ತಾಳೆಕಂಟಿಯಲ್ಲಿ ಒಳ್ಳೆಯ ಮುತ್ತಿನಂತಿರು ಗಟ್ಟಿಮುತ್ತನ್ನು ಅಸಲ್ ಮುತ್ತಿನ ಹಾರ ತಯಾರಿಸತಕ್ಕವರಿಂದ ಸುತ್ತಿಸಿ ಕೊರಳಿಗೆ ಭೂಷಣವೂ ಅಲಂಕಾರವೂ ಆದ ಈ ಮಾಲೆಯನ್ನು ತಯಾರಿಸಿರುತ್ತೇವೆ [193 1]

ಏಕಾಂಬರಂ ಕಂಪನಿ, ಸೆಕೆಂಡ್ ಲೈನ್ ಬೀಚು, ಮದರಾಸು.

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತುಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿಕೊಡುತ್ತ, ಪ್ರಾಣಕೊಡುತ್ತ, ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತ ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಕಚಕಿಸುವವು, ನಿಬಿಡವಾದ ನೀಲವರ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತ ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತ ಸುಂಡಿನ ಹೊಟ್ಟನ್ನು ಅಣಗಿಸುತ್ತ ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-4 0 ಬೇರೆ ತರಬೇಕು

3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0 7 0

ಸಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ ಮೈಸೂರು ಎಗ್ಜಿಭಿಷನ್ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಜದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ| ಡಿ ಸಾಲೊಮನ್ ರವರು ಬರೆಯುವದು— "ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ ನಮ್ಮ ಮನೆ ಹೆಂಗಸರು ಅದನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಹಾವುಗಳೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಫಾಯತುಕೋಸ್ಕರ ವಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವವರು ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕೆಪಿಟೋಲ್‌ಬಾಮ್"—ಮಳೆ ಮತ್ತು ಚಳಿಯ ಥಂಡಿ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಲ್‌ಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ನೋಯುವುದು, ಸಂಧಿವಾತ, ಮಸ್ತಕಶೂಲೆ, ಯೆಡ್ಡಾಗಿ ಮೆಹನತ್ತುಪಟ್ಟದ್ದರಿಂದ ಕ್ಷೀಣವಾಗುವದು, ಸೊಂಟನೋವು ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ ಬಾಟ್ಲಿ 1ಕ್ಕೆ ಕ್ರಯ 0 8 0 ವಿ ಪಿ ಪ್ರತ್ಯೇಕ

ಒಡಮನ್ಸ ಮಲೇರಿಯ ಪಿಲ್ಸ —ಶೀತಜ್ವರ, ಥಂಡಿಯಿಂದ ಬರುವ ಜ್ವರ ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆ ಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯಸ್" ಗುಳಿಗೆಗಳು ರಾಮಬಾಣವಾಗಿವೆ ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ ಇದು ದೇಶದಲ್ಲಿನ ಉತ್ತಮ ಗುಣದ ಔಷಧವಾಗಿದೆ ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ ಪ್ರತಿಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1 0 0. 3 ಬಾಟ್ಲಿಗಳಿಗೆ ರೂ 2-8-0 ವಿ ಪಿ ಖರ್ಚು ಪ್ರತ್ಯೇಕ

ಏಜೆಂಟ್, ದಿ ಉಲನ್ ಮಾರ್ಟ್, ಮಂಗಳೂರು

ಮೇಲೆಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ — [8 37]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

Mellin's Food

ಮೆಲ್ಲಿನ್ಸ್ ಆಹಾರವು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಕೈಸೋಕದೆ ತಯಾರಾದದ್ದು.

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಸ್ತಕವನ್ನು ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs OAKES & Company, Mount Road, Madras.

[4-47] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the REV H GULLIFORD Proprietor and Manager, Wesleyan Mission Press Mysore 25/9/1913

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸೆ ೧೯೧೩ ನೇ ಇಸವಿ ಅಕ್ಟೋಬರ್ ತಾರೀಖು ೨ ನೇ ಗುರುವಾರ. ಸಂಚಿಕೆ ೧೮

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್ ಬೊಂಬಾಯಿ.

ಕಂಪನಿಯ ಫಂಡು ರೂ 1 25 00 000

ಕಂಪನಿಯಿಂದ ಪಾವತಿ ಆಗಿರುವದು „ 0 00 000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸ ವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರ್ಮು ಕಾಪಿಯನ್ನು ಕಳುಹಿಸುತ್ತಾರೆ ಪಿ ಎ ಎಸ ರೆಪಿ ಡಿ, ಚೀಫ್ ಏಜೆಂಟ್, ಬೆಂಗಳೂರು ಮಾ। ಎ ಎಸ್ ರಂಜಪ್ಪ ನವರು ಅಥವಾ ಮಾ। ವೆಂಕಟಪತಯ್ಯನವರು ಕಂಪನಿ ಏಜೆಂಟರು, ಮೈಸೂರು ಅಥವಾ

[101 1] ಪ್ರಿ ಟ್ ಸೆಕ್ರಟರಿ ಮದರಾಸ್

ಕುಂತಳಾನಂದ ತೈಲವು

1 ? ?

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಚಿನ್ನದ ಬಿಲ್ಲೆಗಳು ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ಶೀಘ್ರವಾಗಿಯೂ ಬೆಳೆಯಿಸಿ ತಲೆಯ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಲವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಅವಶ್ಯಕವಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 1 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ ಎಮ್ ನಾಥ ಮತ್ತು ಕಂಪೆನಿ,
ಪೇಟೆ, ಮದರಾಸ್

THE MYSORE GOVERNMENT SECURITY

LIFE AND MARRIAGE ASSURANCE COMPANY, LIMITED.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No III OF 1895)

CAUTION --Before you go in for a Provident Life or Marriage Policy, please ask for a copy of our Company's prospectus which will explain to you the mode of working of the present day provident companies working in India and enables you to select a good institution where your hard earned money will be safe

SPECIAL AND ATTRACTIVE FEATURES OF THE COMPANY

1 ABSOLUTE SECURITY

The Company has got a capital of **one lakh** and its funds are invested in the **Mysore Government** and other approved securities The policy holder's moneys are **guaranteed**, and the **capital** and **reserve funds** of the Company are liable to the same

2 MARRIAGE SCHEME

A policy holder can subscribe from Re 1 to **Rs 6** every month **Double the premiums paid** to the Company will be paid to the married **on the marriage day** as maximum bonus

3 LIFE SCHEME

A policy holder can subscribe from As 8 to **Rs 2** per month Both males and **females**, of ages from 15 to **60** are insured **without medical examination.** The maximum bonus will be paid to **the policy-holders themselves** on surviving **15 years** or to their nominees in case of their earlier death

WANTED.

Energetic and honest **Chief Agents** for every Presidency in India and Taluk Agents in each **and** every taluk of **the Mysore Province** on commission to represent the Company

For further particulars and prospectuses, please apply **with one anna stamp** and your **previous** experience in the line to

Mr. M. L NAGANNAH,
Managing Agent,
MYSORE.

[161 ?]

ಹಿಂದುಸ್ಥಾನದಲ್ಲಿ ಬೆಳೆದ ಟೀ ಸೊಪ್ಪು

ಪ್ರಪಂಚಕ್ಕೆ ಅತ್ಯಂತ ಉತ್ಕೃಷ್ಟವಾದದ್ದು.

ಇಂಡಿಯಾ ಟೀಸೆಸ್ ಕಮಿಟಿಯವರ ಕೊಟಡಿಯನ್ನು

1913 ನೇ ದಸರಾ ಪ್ರದರ್ಶನಶಾಲೆಯಲ್ಲಿ ನೋಡಿ.

ಒಂದಾವರ್ತಿ ಬಂದು ನೋಡಿ; ಎಲ್ಲರಿಗೂ ಸುಖಾಗಮನವನ್ನು ಬಯಸುತ್ತೇವೆ.

ಖುದ್ದಾಗಿ ಬಂದು ಟೀ ಮಾಡುವುದನ್ನು ನೋಡಿ, ಅದರ ರುಚಿ ಹ್ಯಾಗಿದೆ ಕುಡಿಯಿರಿ.

ನೇತ್ರಾನಂದಕರವಾದ ಡಬ್ಬಿಗಳಲ್ಲೂ ಪೊಟ್ಟಣಗಳಲ್ಲೂ ಸ್ವಲ್ಪವೂ ಕೈಸೋಕದೆ ಯಂತ್ರಸಹಾಯದಿಂದಲೇ ತುಂಬಿಸಿ ಮಾರಾಟಕ್ಕಾಗಿ ಕೊಡುವೆವು.

ಲಿಪ್ಟನ್ನರ ಟೀ ವರ್ತಕರು

ಸ್ಪೆಷಲ್ ಅಪ್ಪಣೆಪಡೆದು

ಮಹಾರಾಜಾ ಚಕ್ರವರ್ತಿ ಸಾರ್ವಭೌಮರವರಿಗೂ ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್ ಪ್ರಭುಗಳಿಗೂ ಟೀ ಸೊಪ್ಪನ್ನು ಸರಬರಾಯಿ ಮಾಡತಕ್ಕವರಾಗಿದ್ದಾರೆ.

ಲಿಪ್ಟನ್ನರದೇ

ಪ್ರಪಂಚದಲ್ಲೆಲ್ಲಾ, ಪ್ರಖ್ಯಾತವಾದ ಟೀಸೊಪ್ಪು.

[191 2]

ಕಲಕತ್ತಾ.

ಶುದ್ಧವಾದ ಹತ್ತಿಯ ತುಪ್ಪವು.

"ಬಹಳ ರುಚಿ, ಆರೋಗ್ಯ, ಎಲ್ಲಕ್ಕಿಂತ ಪುಷ್ಟಿಕಾರಿ"

(9) ಎಸ್ ಅಪ್ಪ, L. C. E. ಇಂಜನಿಯರು,—"ನಿಮ್ಮಿಂದ ತರಿಸಿಕೊಂಡ ಹತ್ತಿಯ ತುಪ್ಪವನ್ನು ಉಪಯೋಗಿಸಿದೇನೆ. ಅದು ಸೇವನೆಗೆ ಬಹಳ ರುಚಿಯಾಗಿಯೂ ಬಹಳ ಆರೋಗ್ಯಕರವಾಗಿಯೂ ಇದೆ. ಇದಕ್ಕೆ ಸಮಾನವಾದ ಪುಷ್ಟಿಕಾರಿ ವಸ್ತುವೇ ಇಲ್ಲ." ಬೆಂಗಳೂರು. 2 9 13

ಎಚ್ಚರಿಕೆ!

ಹತ್ತಿಯ ತುಪ್ಪವು ರೂಢಿಗೆ ಬಂದಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕೊಬ್ಬು ಮೆ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ.

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ. [110 18]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, 107, ...ಲಾರಿ ರೋಡ್, (ಕುಂಚಿಗರಪೇಟೆ), ಬೆಂಗಳೂರು ಸಿಟಿ.

ನಮೂನೆ ಮುಫತ್ತು.

ಕೇಶಕುಸುಮಾಕರ ತೈಲವು.

ಸಾಟಿಯಿಲ್ಲದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸಮಾಡುವವರಲ್ಲಿಯೂ, ಬಟ್ಟತಲೆಯಲ್ಲಿ ಕೇಶವನ್ನು ಬೆಳೆಸುವದರಲ್ಲಿಯೂ, ಮಿದುಳನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ ನೆತ್ತಿಗೆ ತಂಪನ್ನುಂಟುಮಾಡುವದರಲ್ಲಿಯೂ, ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ. ಇದರ ವಾಸನೆಯು ಬಹಳ ಮನೋಹರವಾಗಿದೆ.

ಒಂದು ಬುಡ್ಡಿ ತೈಲ ಕ್ರಯ 10 ಆಣೆ. ಮೂರು ಬುಡ್ಡಿಗಳ ತೈಲ ಕ್ರಯ ರೂ 1 13 ಆ. ಆರು ಬುಡ್ಡಿಗಳ ತೈಲ ಕ್ರಯ ರೂ 3-1 ಆ. ಡಜನ್ ಬುಡ್ಡಿಗಳ ಕ್ರಯ ರೂ 6.

ವಿ ಪಿ ಅಂಚೇ ಹಾಸಲು ಪ್ರತ್ಯೇಕ.

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ

[83-33] ಔಷಧಾಲಯ, 177 ಚೀನಾ ಬಜಾರ್ ರೋಡ್, ಮದ್ರಾಸು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3 40

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಳಕೆಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಶುದ್ಧಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ ೬ ಆ, ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧—೮, ರೂ ೧—೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ, ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



1 40

ಕೆಳ ಹೊಟ್ಟೆಯ ನೋವು, ಒಂದೇ ಸಮನೆ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ರೋಗಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ. ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬಹು ಕಾಲದವರೆಗೆ ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ನ್ಯಾಸಕರವಿಲ್ಲದ್ದು ಕಾಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ. ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ.

ಇದು ಪನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ.

ಇದು ಎಲ್ಲೆಲ್ಲೂ ಬಳಕೆಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಸಚಿತ್ರ ಪುಸ್ತಕದ ತಯಾರಿಕೆ 180 — ಟಪಾಲು ಹಾಸಲು 4 ಆಣೆ, — ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ 1-8-0

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕಮಹಾಶಯರುಗಳೇ —ನಾನಾ ದೇಶಗಳ ವೇಷಗಳ, ಪ್ರಾಣಿಗಳ ಪರಿಯೊಳಿಕ್ಕಬೇಕಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂದು ಅವೇಕ್ಷೆಯಿದ್ದರೆ, ಪರ್ಯಟನೆಗಳ ಸಂತೋಷವನ್ನು ಕೋರಿದರೆ, ಜಾಣತನವನ್ನು ಪರೀಕ್ಷಿಸಿದರೆ, ಉತ್ಸಾಹ ಶಕ್ತಿಯಲ್ಲಾಸಕ್ತಿಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿ ಕಥೆಗಳನ್ನು ... ಚಿತ್ರಗಳಿಂದ ಕೂಡಿದ ... ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧ ೪ ೦ ... ಟಪಾಲು ಹಾಸಲು ... ಕಗತೇ ... [167 5]

ವಿಳಾಸ:—ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ಕು ಡಿಪ್ಪೋ, ಚಿಕ್ಕ ಪೇಟೆ, ಬೆಂಗಳೂರು ಸಿಟಿ.

ಡೋಂಗರೆ ಇವರ ಬಾಲಾಮೃತ.

[150-11]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಎಲುಬುಗಳು ಕಡ್ಡಿಯಂತೆ ಇರೋಣ, ಹಳೇ ಜ್ವರ ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೨ ಆಣೆ, ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ.

ಸಮಸ್ತ ವಿಧವಾದ ನೋವೂ ಇಂತವೂ ನಿಮಗೆ ವಾಸಿಯಾಗಬೇಕೋ!

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಜನ್ನಿಸ ಸೆಳೆತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ.

ಪ್ರತಿ ತಿಂಗಳೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ವಿಕರಿಯಾಗುತ್ತಿವೆ. ಡಾಕ್ಟರುಗಳೂ ವೈದ್ಯಶಾಸ್ತ್ರಜ್ಞರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ವಿಕರಿಯಾಗುವದು.

ಮುಳೆಕಡ್ಡಿ ಔಷಧದ ಡಬ್ಬಿಗೆ ೬ ಆಣೆ, 12 ಕುಪ್ಪಿಗೆ ರೂ ೩ ೮—0. ಹಲ್ಲುಪುಡಿ ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ. 1—2—0. ವಿ ಪಿ ಮತ್ತು ಪ್ಯಾಕಿಂಗ್ ಛಾರ್ಜ ಪ್ರತ್ಯೇಕ. [42—12]

ವಿಳಾಸ —ಅಮೃತಾಂಜನ ಡಿಪ್ಪೋ, ೧೮ ಫ್ರೈಯರ್ ರೋಡ್, ಫೋರ್ಟ್, ಬೊಂಬಾಯಿ.

ವಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊರೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಅಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ವಾಯಿಲೆಗೂ ದಾರಿಕೊಡದೆ, ನರಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ, ನಿಟ್ಟುಜ್ವರ, ಕ್ಷಯಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ ೬ ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಪೆಟ್ಟು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 1 ಆಣೆ. [179-5]

೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸಿದ, ಮೂತ್ರವು ಕಟ್ಟಿದ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ.—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಯುಕ್ತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು. (5) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1 8-0, ಟಪಾಲು ಹಾಸಲು 4 ಆಣೆ

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಗದ್ಯರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ 4; ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಬೇಕಾದವರು ಬರೆದರೆ ಉಚಿತವಾಗಿ ಕಳುಹಿಸುವೆವು [127-15]

ನಮ್ಮ ವಿಳಾಸ—ಎಮ್. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

12—9—1913 ರಿಂದ 19—9—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು.	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	1	1	0	0
ಬೆಂಗಳೂರು ಡಿಸ್ಟ್ರಿಕ್ಟು	13	7	0	0
ಮೈಸೂರು ,,	33	25	0	0
ಕೋಲಾರ್ ,,	14	13	15	3
ಕೋಲಾರ್ ಚಿನ್ನದ ಗಣಿಗಳು	2	0	6	0
ತುಂಕೂರು ಡಿಸ್ಟ್ರಿಕ್ಟು	7	8	9	12
ಹಾಸನ ,,	18	12	0	0
ಚಿತ್ರದುರ್ಗ ,,	2	1	26	15
ಕಡೂರ್ ,,	31	20	10	6
ಶಿವಮೊಗ್ಗ ,,	28	15	0	0
ಜುಮ್ಲಾ	149	100	60	36

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೇ ಶರದೃತೌ ಅಶ್ವೀಜ ಶುದ್ಧ ಚೌತಿ ಶುಕ್ರವಾರದಿಂದ ದಶಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1913 ನೇ ಅಕ್ಟೋಬರ್.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ.	ಘಳಿಗೆ	ಕನ್ಯಾ ಮಾಸ ತೇದಿ
3	ಶುಕ್ರ *	ಚೌತಿ	49-44	ವಿಶಾಖ	42 9	18
4	ಶನಿ ‡	ಪಂಚಮಿ	46 8	ಅನುರಾಧ	40-11	19
5	ಭಾನು	ಷಷ್ಟಿ	43-15	ಜ್ಯೇಷ್ಠ	39-16	20
6	ಸೋಮ §	ಸಪ್ತಮಿ	42-21	ಮೂಲ	39-33	21
7	ಮಂಗಳ †	ಅಷ್ಟಮಿ	42-52	ಪೂಷಾ	40-56	22
8	ಬುಧ ,,	ನವಮಿ	43-19	ಉಷಾ	43 36	23
9	ಗುರು	ದಶಮಿ	45-53	ಶ್ರವಣ	47-27	24

* ಮಳೆ ನಕ್ಷತ್ರ—ಹಸ್ತ 3 ನೇ ಪಾದ ‡ ಉಪಾಂಗಲಲಿತಾ ವ್ರತಂ § ಕಾಳ ರಾತ್ರಿ, ಮಹಿಷಾಸುರ ಸಂಹಾರ, ಸರಸ್ವತೀ ಪೂಜಾ, ಮಳೆ ನಕ್ಷತ್ರ—ಹಸ್ತ 4 ನೇ ಪಾದ † ದುರ್ಗಾಷ್ಟಮಿ, ತಿರುಪತಿ ವೆಂಕಟಾಚಲಸ್ವಾಮಿ ರಥ ,, ಮಹಾ ನವಮಿ, ಆಯುಧ ಗಜಾಶ್ವಪೂಜಾ, ಹಯಗ್ರೀವ ಪೂಜಾ ವಿಜಯದಶಮಿ, ಶಮೀ ಪೂಜಾ, ವೆಂಕಟೇಶಜಯಂತಿ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೬-೦-೦	೧೭-೦-೦
ಕೆಂಬತ್ತಿ ಅಕ್ಕಿ ಅವಲ್	೧೬-೮-೦	೧೭-೮-೦
ಜಾಪತ್ರಾಣಿ ಅಕ್ಕಿ	೧೬-೦-೦	೧೬-೮-೦
ಸಣ್ಣಕ್ಕಿ ಅವಲ್	೧೯-೦-೦	೧೭-೮-೦
,, ದುಯಂ	೧೭-೦-೦	೧೬-೧೨-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೨೫-೦-೦	೧೬-೪-೦
,, ದುಯಂ ,,	೧೪-೦-೦	೧೪-೦-೦
ಹೈಬ್ರೀಡ್ ರಾಗಿ ಪಲ್ಲಾ ೧ಕ್ಕೆ	೭-೪-೦	೫-೧೦-೦
ಕಾಶ್ಯಾಗಿ ,,	೬ ೮-೦	೪-೧೨-೦
ಜೋಳ ,,	೭-೪-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ	೧೦-೦-೦	೧೪-೦-೦
ಬೇಳೇ ಅವರೆ ,,	೧೨-೮-೦	೧೨-೦-೦
ಹೆಸರು ,,	೧೨-೮-೦	೧೪-೦-೦
ಉದ್ದು ,,	೧೪-೮-೦	೧೬-೮-೦
ಕಡಲೆ ,,	೧೨-೦-೦	೧೩-೦-೦
ಎಳ್ಳು ಸೇರು ೧೨೦ಕ್ಕೆ	೨೨ ೮-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೭-೬-೦	೭-೧೦-೦
ಹರಳು ೧೨೭ ಸೇರಿಗೆ	೧೨-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೩-೬-೦
ಮೆಣಸಿನಕಾಯಿ ,,	೪-೦-೦	೩-೪-೦
,, ದುಯಂ	೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫-೦-೦	ಮಣ ೬ ೪-೦
ಒಳ್ಳೆಣ್ಣೆ ಮಣ ೧ಕ್ಕೆ	೭-೨-೦	೬-೮-೦
ಹರಳೆಣ್ಣೆ ,, ,,	೫-೪-೦	೬-೦-೦
ಕಡಲೇಕಾಯಿ ಎಣ್ಣೆ	೬-೮-೦	೬-೪-೦
ಕೊಬ್ಬರಿ ಪಲ್ಲಾ ೧ಕ್ಕೆ	೪-೧೨-೦	೬-೪-೦
ಉಪ್ಪು ,, ,,	೬-೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೧-೧೨-೦	೧-೪-೦
ತುಪ್ಪ ಧಾರಾಪುರದ್ದು ಮಣ ೧ಕ್ಕೆ	೨೨-೦-೦	೨೨-೮-೦
,, ಬೆಣ್ಣೆ ಕಾಸಿದ್ದು ,, ,,	೨೫ ೧೨-೦	
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೧೨-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೬-೪-೦	೬-೪-೦
ಅರಿಶಿನಕಾಯಿ ಮಣ ೧ಕ್ಕೆ	೧-೬-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೧ ೧೨-೦	೧-೮-೦
ಚಿನ್ನ (ಪೌನ್) ಕೆಂಪು	೧೫-೮-೦	೧೫-೮-೦
,, ,, ಪವನು	೧೫ ೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ ...	೮೧-೦-೦	೮೧-೩-೦

ಹೊಸ ಕಾದಂಬರಿಗಳು.

ಕುಮುದಿನಿ —ಬಂಗಾಳಿಯಿಂದ ಕನ್ನಡಿಸಲ್ಪಟ್ಟ ಪತ್ತೇದಾರಿಯ ಕತೆ ಯುಕ್ತಿಯುಕ್ತವಾದದ್ದು 6 ಆಣೆ ನಿರ್ಭಾಗ್ಯಚಾಣಕ್ಯ—ಇದೂ ಮೇಲಿನ ಕಥೆಯಂತೆಯೇ ಮನೋಹರವಾದದ್ದು ವೇಶ್ಯಾದಿ ವಿಷಯಾಸಕ್ತರ ಪಡೆವಳಿಕೆಗಳು ಹೃದಯಂಗಮವಾಗಿ ವರ್ಣಿಸಲ್ಪಟ್ಟಿವೆ 6 ಆಣೆ ಸಂತಾಪಕ—ಈಗಿನ ನಾಟಕಗಳಲ್ಲಿ ಪ್ರಸಿದ್ಧವಾದ "ನಿರುಪಮಾ" ಎಂಬ ನಾಟಕದ ಕಥಾರೂಪವಾದ ಗ್ರಂಥ ಇದನ್ನೋದುವುದಕ್ಕೆ ಕುಳಿತರೆ ಮುಗಿಸುವವರೆಗೂ ಬಿಡಲು ಮನಸ್ಸಾಗುವದಿಲ್ಲ 4 ಆಣೆ [167-12]

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

101 19

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ನೋವು, ಆರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಗಳು, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತಗಳು, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಡಬ್ಬಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯಶಸ್ವಿಯೋಪಚಾರ ಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವುಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಉಪಯೋಗಿಸಿದ್ದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಇದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು—(1) ಎಸ್ ಪೀಟರ್ಸ್, 37 ಮುರುಳಿಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಜೆ ಎಸ್ ಕೃಷ್ಣಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ರಾಸ್‌ಕೋಫ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 4 ಆಣೆ

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾದಲ್ಪಟ್ಟದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ ಕೊಡ್ಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,

[1?-15] ಪೋಸ್ಟು ಬಾಕ್ಸ್, ನಂ 167, ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ

೧. ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್ಸೇಷನ್ ಬ್ಯಾಲನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 6 0-0 ಇದನ್ನು ಸೆಪ್ಟಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ:—ಧನಲಕ್ಷ್ಮಿ ಅಂಡ್ ಕಂಪೆನಿ,

[1?-15] ಸಾಹುಕಾರ್ ಪೇಟೆ ಪೋಸ್ಟು, ಮದರಾಸು.

ಕನ್ನಡ ಇಂಡಿಯನ್ ಪೆನಲ್ ಕೋಡ್.

100-9

ಇಂಡಿಯಾ ಗೌರ್ನರ್ ಜನರಲ್‌ರವರಿಂದ ಮೊದಲಿನಿಂದ ಈ ಆಕ್ಟನ್ನು ಕ್ಯಾಲ್ಕತ್, ಬೊಂಬಾಯಿ, ಮದ್ರಾಸ್, ಅಲಹಾಬಾದ್ ಮುಂತಾದ ಅನೇಕ ಹೈಕೋರ್ಟುಗಳ ಅಭಿಪ್ರಾಯಗಳ ಟಿಪ್ಪಣಿ ಸಹಿತ ಮುದ್ರಣವಾಗಿ ಮಾರಾಟಕ್ಕೆ ಸಿದ್ಧವಾಗಿದೆ ಈ ಪುಸ್ತಕದ ಸಹಾಯದಿಂದ ಅನೇಕರು ಕಷ್ಟಗಳಿಂದ ಬಿಡುಗಡೆಯಾಗಿರುವರು ಇದು ಮುಖ್ಯವಾಗಿ ಪೋಲೀಸ್, ಮ್ಯಾಜಿಸ್ಟ್ರೇಟು, ಅಧಿಕಾರಿಗಳಲ್ಲಿಯೂ, ಲಾಯರುಗಳಲ್ಲಿಯೂ, ಪಟೇಲ್ ಶ್ಯಾನುಭೋಗರುಗಳಲ್ಲಿಯೂ, ಇತರ ಪುನಃ ಜನಗಳಲ್ಲಿಯೂ ಇರಬೇಕಾದದ್ದು ಅತ್ಯಂತ ಅವಶ್ಯಕವಾದದ್ದು ಕ್ರಯ ಗ್ಲೇಜ್ ರೂ 2 8-0 ರಫ್ ರೂ 2-0-0 ಟಪ್ಪಾಲ್ ಛಾರ್ಜು 0 4-0

ವಿಳಾಸ:—ಬಿ ನರಸಿಂಗರಾವ್, ಎಡಿಟರ್, (ಲಾ) ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ.)

ಈ ಪುಸ್ತಕದಲ್ಲಿ —1. ಪಿನಲ್‌ಕೋಡು, 2 ಪೋಲೀಸ್ ಆಕ್ಟ್, 3 ಎಕ್ಸೈಜು ರೆಗುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ಡಕ್ಯುಮೆಂಟುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿದೆ.

ಪ್ರತಿ ಪಿನಲ್ ಸೆಕ್ಷನ್ನಿಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ? ಯಾ ಕೂಡದೆ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟ್ಟಬೇಕೇ? ಜಾಮೀನ್ ತೆಗೆದುಕೊಳ್ಳಬಹುದೆ? ಯಾ ಕೂಡದೆ? ರಾಜಿಯಾಗಬಹುದೆ? ಯಾ ಕೂಡದೆ? ಎಂಬ ಸಂಗತಿಗಳೆಲ್ಲಾ ಇಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ದೊರೆಯುವಹಾಗೆ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 22-5-1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 2-0-0. ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ವೇಮಾರೆಡ್ಡಿ,

ಕಂಟ್ರಾಕ್ಟರ್ ಮತ್ತು ಕ್ರಿ॥ ಪ್ಲೀಡರ್,

[103-19] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್.

ಅಸಲ್ ಸವರನ್ ಭಂಗಾರದ ನಗಗಳು

ಈ ನಗಗಳನ್ನು ಈಗತಾನೇ ನಾವು ನಿಪುಣರಾದ ಮತ್ತು ಪ್ರಸಿದ್ಧಿ ಹೊಂದಿದ ಅಗಸಾಲೆಯಿಂದ ನೂತನ ನಮೂನೆಯಲ್ಲಿ ನೇತ್ರಾನಂದಕರವಾಗಿ ಸ್ವಂತ ಮುತುವರ್ಜಿಯಿಂದ ತಯಾರುಮಾಡಿಸಿರುತ್ತೇವೆ ಸವರನ್ ಭಂಗಾರಕ್ಕು ಮತ್ತು ಪುಷ್ಯರಾಗಕ್ಕು ನಾವು ಗ್ಯಾರಂಟಿ ಕೊಡುತ್ತೇವೆ ಹಾಗಿಲ್ಲದ ಪಕ್ಷದಲ್ಲಿ ಹಣವನ್ನು ವಾಪಸ್‌ಮಾಡಲ್ಪಡುತ್ತೆ. ಬಹು ಸುಂದರವಾದ ನಮೂನೆ, ಸರಾಫರು ತರಿಸಿಕೊಂಡು ಉಪಯೋಗಿಸುವಂತೆ ಸಾಧ್ಯವಾದ ಮಟ್ಟಿಗೂ ಬಹು ಸುಲಭ ಕ್ರಯವನ್ನು ನಮೂದಿಸಿರುತ್ತೇವೆ ಪ್ರತಿ ಒಬ್ಬರು ತೆಗೆದುಕೊಂಡು ಉಪಯೋಗಿಸಿ ಸಂತೋಷಪಡಬೇಕಾಗಿ ಪ್ರಾರ್ಥನೆ [77 24]

ಅರ್ಧಚಂದ್ರ 1 ಕ್ಕೆ ರೂಪಾಯಿ	6 0-0
ನಂ 1 ಮೂಗುಬೊಟ್ಟು 1 ಕ್ಕೆ ರೂಪಾಯಿ	7 0-0
,, 2 ಮೂಗುಬೊಟ್ಟು 1 ಕ್ಕೆ ,,	6 0-0
,, 3 ಮೂಗುಬೊಟ್ಟು 1 ಕ್ಕೆ ,,	5 0 0
ಬುಳಾಕು 1 ಕ್ಕೆ 12 ರೂ ಲಾಗಾಯಿತು	25-0-0

ವರೆಗೂ ಇರುತ್ತೆ ಇದು ಅಲ್ಲದೆ ಇಮಿಟೇಷನ್ ಕೆಂಪುಗಳಿಂದಲೂ, ಒಳ್ಳೆ ಕೆಂಪುಗಳಿಂದಲೂ ತಯಾರುಮಾಡಿ ಕಳುಹಿಸಲ್ಪಡುವದು ಮತ್ತು ಬೆಳ್ಳಿ ಭಂಗಾರದ ನಗಗಳು ಸಹ ತಯಾರುಮಾಡಿ ಕಳುಹಿಸಲ್ಪಡುತ್ತೆ. ಬೇಕಾದವರು ಬರೆದರೆ ಜವಾಬು ಬರೆಯುತ್ತೇವೆ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

ವಿಳಾಸ—ಜಿ. ಆರ್ ವೆಂಕಟರಮಣ ಅಂಡ್ ಕಂಪೆನಿ,

ನಂ 7, ಕೋಯಿಲ್ ವೆಂಕಟಾಚಲಮೈಯರ್ ಬೀದಿ, ಮದರಾಸು.

ಜ್ಞಾಪಕದಲ್ಲಿ ಇಡಿ

[197 1]

ಲೇವಾದೇವಿ ಮಾಡುವವರಿಗೂ, ಪತ್ರಗಳನ್ನು ಬರೆಯುವವರಿಗೂ ಅತ್ಯುಪಯುಕ್ತವಾದ 1 ರೂಪಾಯಿ ಬೆಲೆಯ „ ಲೇಖನ ಪ್ರಕಾಶಿಕಾ '' ಪುಸ್ತಕವು ಮೈಸೂರಿನಲ್ಲಿ ದಸರಾ ಎಗ್ಸಿಬಿಷನ್ ಹಾಲಿನ ಬಳಿ ಮಾರಲ್ಪಡುವುದು

ವಿಳಾಸ —ಕೆ. ಪುಟ್ಟಮರಿ ಮತ್ತು ಕಂಪೆನಿ, ಶಿವಮೊಗ್ಗ

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೇ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ „ಇಂಡಿಯನ್ ಲೈಫ್ ಅಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭದವಸೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[109 18] ಎಸ್ ಕಟ್ಬರ್ಟ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್ ಬೆಂಗಳೂರು ಸಿಟಿ

ಶ್ರೀಮದ್ವಾಲ್ಮೀಕಿ ರಾಮಾಯಣ

"ಸುನ್ದರಕಾಣ್ಡ" ಮಾಸಪತ್ರಿಕೆ

64 ದೊಡ್ಡ ಪುಟಗಳ ಸಂಚಿಕೆ 1 ಕ್ಕೆ ಐದೇ ಆಣೆ ಸುಮಾರು 14 ಸಂಚಿಕೆಗಳಾಗುತ್ತವೆ ಟೀಕು, ತಾತ್ಪರ್ಯ, ಮೂಲ ಇತ್ತಗಳಿಂದೊಡಗೂಡಿ, ಕಾಗದ, ಅಕ್ಷರ, ಅಚ್ಚು, ಸ್ವಾರಸ್ಯಗಳಿಂದ ಬಹು ಸುಂದರ ಪುಸ್ತಕವಾಗುವುದು ಚಂದಾ ಸೇರತಕ್ಕವರು ಮುಂಗಡ ಒಂದು ರೂ ಕೊಡಬೇಕು ಅವರಲ್ಲಿ ಕಡೆಯ ಮೂರು ಸಂಚಿಕೆಗಳಲ್ಲಿ ಉತ್ತಾರಮಾಡಿಕೊಡುವೆವು ಶ್ರೀ „ಶಾರದಾ" ಮಾಸಪತ್ರಿಕಾ ಸಂಪಾದಕರಾದ ವೇ॥ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಇದುವರೆಗೆ ಯಾರೂ ಪ್ರಕಾಶಪಡಿಸದ ರಹಸ್ಯಗಳನ್ನೆಲ್ಲ ಶ್ರೀಮ್ಪಷ್ಟವಾದ ರೀತಿಯಿಂದ ವಿವರಿಸಿ ಬರೆಯುತಲಿದಾರೆ 1 ಆಣೆ ಟಿಕೆಟ್ ಕಳುಹಿಸಿ ಮಾದರಿ ಸಂಚಿಕೆಯಲ್ಲಿ ನೋಡಬಹುದು

1 1 13 ರಲ್ಲಿ ಆರಂಭವಾಗಿ ಎಂಟು ಸಂಚಿಕೆಗಳು ಸಿದ್ಧವಾಗಿವೆ

ಶ್ರೀ „ಶಾರದಾ" ಮಾಸಪತ್ರಿಕೆ ಇದುವರೆಗೆ 11 ಪುಸ್ತಕಗಳು ಪೂರ್ತಿಯಾಗಿವೆ ವಾರ್ಷಿಕ ಚಂದಾ ರೂ 2 0 0 ರಘುಕುಲಚರಿತೆ ಪ್ರಿಂಟಾಗುತಲಿದೆ 1 ತಿಂಗಳಲ್ಲಿ ಪುಸ್ತಕವು ಪೂರ್ತಿಯಾಗುವುದು ಕ್ರಯ 4 ವಾಲ್ಯೂಂಗೆ ರೂ 2

ವಿಳಾಸ—ಬಿ ಸೀತಾರಾಮಶಾಸ್ತ್ರಿ (ಅಥವಾ)

ಡಿ ಲಕ್ಷ್ಮೀನರಸಿಂಹಶಾಸ್ತ್ರಿ, ಶ್ರೀ 'ಶಾರದಾ" ಆಫೀಸ್,

[195–1] ಬೆಂಗಳೂರು ಸಿಟಿ

ವೃತ್ತಾಂತ ಪತ್ರಿಕೆ

—— o ——

ಸನ್ ೧೯೧೩ ನೇ ಇಸವಿ ಅಕ್ಟೋಬರ್, ತಾ ೨ ನೇ ಗುರುವಾರ

ಕೋಆಪರೇಟಿವ್ ಸೊಸೈಟಿಗಳು

ಕೋಆಪರೇಟಿವ್ ಸೊಸೈಟಿಗಳು ಮೈಸೂರು ಸಂಸ್ಥಾನದಲ್ಲಿ ಮಾತ್ರವೇ ಅಲ್ಲ, ಬ್ರಿಟಿಷ್ ಇಂಡಿಯದ ಅಧಿಪತ್ಯಗಳಲ್ಲೂ ಪ್ರಾರಂಭವಾಗುತ್ತಲಿವೆ ಇದನ್ನು ನೋಡಿ ಸಂತೋಷಪಡಲು ಅನೇಕ ಕಾರಣಗಳುಂಟು ನಮ್ಮಲ್ಲಿ ಪ್ರಜೆಗಳು ಜಾತಿ, ಮತ, ಇವೇ ಮೊದಲಾದ ಹಲವು ವಿಧಗಳಲ್ಲಿ ಪ್ರತ್ಯೇಕಹೊಂದಿ ಇರುತ್ತಾರೆ ಇಂಥವರನ್ನು ಏಕೀಭವಿಸುವಂತೆ ಮಾಡುವ ಏರ್ಪಾಡು ಯಾವುದಾಗಿದ್ದರೂ ಶ್ರೇಯಸ್ಕರವಾಗಿರುತ್ತದೆ

ಯಥಾರ್ಥವಾದ ಪರಸ್ಪರ ಸಹಾಯವು ನೆಲೆಗೊಳ್ಳಬೇಕಾದರೆ ಜನರಲ್ಲಿ ಅನ್ಯೋನ್ಯಭರವಸೆಯೂ ನಂಬಿಕೆಯೂ ಇದ್ದೇ ತೀರಬೇಕು ಇದುವರೆಗೆ ನೋಡುತ್ತಾ ಬಂದಿರುವುದರಲ್ಲ ಈ ರೀತಿಯಾದ ವಿವೇಕವು ಸ್ವಲ್ಪಮಟ್ಟಿಗೆ ಹುಟ್ಟಿ ಇರುವಂತೆ ಕಾಣುತ್ತಿದೆಯಾದರೂ ಕೆಲವು ಸಂದರ್ಭಗಳಲ್ಲಿ ಅದು ಒಂದು ಜಾತಿಯವರಲ್ಲೇ ಅಡಗಿಹೋಗಿರುವುದು ಆದರೆ ಈ ಸಂಘಗಳ ನಡವಳಿಕೆಯಲ್ಲಿ ಅಂಥಾ ಸಂಕುಚಿತವಾದ ಜಾತ್ಯಭಿಮಾನವು ಕಂಡುಬರುವ ಪಕ್ಷದಲ್ಲಿ ಈ ಸಂಘಗಳ ಪ್ರಥಮ ಉದ್ದೇಶವೇ ಹಾಳಾಗುವುದು. ಕೆಲವು ಸಂದರ್ಭಗಳಲ್ಲಿ ಈ ಸಂಘಗಳ ವಾರ್ಷಿಕ ಕೂಟಗಳು ವಿನೋದಾರ್ಥವಾಗಿ ಸೇರುವ ಜನಸಂದಣಿಯಂತೆ ಪರಿಣಮಿಸಿರುತ್ತವೆ. ಸಾಮಾನ್ಯವಾಗಿ ಗಂಭೀರವಾದ ಕಾರ್ಯಗಳನ್ನು ಕುರಿತು ಚರ್ಚೆಮಾಡಿ ಇತ್ಯರ್ಥಪಡಿಸುವ ಕೂಟಗಳಲ್ಲಿ ವಾದ್ಯಗಳ ಆಡಂಬರಕ್ಕಾಗಲಿ, ಹಾರಾ ಪಾರ್ಕ್ ಸುಪಾರಿಗಳ ವಿನಿಯೋಗಕ್ಕಾಗಲಿ, ಅವಕಾಶವಿರುವುದಿಲ್ಲ, ಇರಲೂ ಕೂಡದು ಇವುಗಳಿಗೆ ಸ್ಥಳವೂ ಸಂದರ್ಭವೂ ಪ್ರತ್ಯೇಕವಾಗಿರುವಲ್ಲಿ ಅವನ್ನು ಹಣಕಾಸಿನ ವಿಚಾರವಾದ ಚರ್ಚೆಯ ಕೂಟಗಳಿಂದ ವರ್ಜಮಾಡಬಹುದಾಗಿದೆ

ಅನೇಕ ಸೊಸೈಟಿಗಳಲ್ಲಿ ಮೂಲಧನವು ಬಹಳ ಸ್ವಲ್ಪವಾಗಿರುತ್ತದೆ ಆದರೂ ದೃಢಮನಸ್ಸಿನಿಂದಲೂ ಕ್ರಮವಾಗಿಯೂ ರೂಢಿಸುತ್ತಾ ಬಂದಪಕ್ಷದಲ್ಲಿ ಆ ಮೂಲಧನವನ್ನೇ ವೃದ್ಧಿಮಾಡಿಕೊಳ್ಳಬಹುದು ನೂರಾರು ರೂಪಾಯಿಗಳನ್ನೇ ಮೂಲಧನವಾಗಿ ಉಳ್ಳ ಸೊಸೈಟಿಯನ್ನು ಅಲ್ಪವಾಗಿ ಕಾಣಬಾರದು ಆ ಹಣವನ್ನೇ ಸಹಜವಾದ ರೀತಿಯಲ್ಲಿ ತಿರುಗಿಸುತ್ತಾ ಬಂದರೆ ಮೂಲಧನವು ಹೆಚ್ಚಿ ಅದರ ಮೂಲಕ ಆ ಗ್ರಾಮಕ್ಕೆಲ್ಲಾ ಶ್ರೇಯಸ್ಸನ್ನು ತರುತ್ತದೆ ಈಗ ಈ ಸಂಘಗಳ ಹಣದಲ್ಲಿ ಬಹು ಭಾಗವನ್ನು ಸ್ವಂತ ಖರ್ಚಿಗೆ ಸಾಲ ಪಡೆದುಕೊಳ್ಳುವ ವಾಡಿಕೆಯೇ ಹೆಚ್ಚಾಗಿದೆಯಲ್ಲದೆ ಜಮೀನನ್ನಾಗಲಿ ದನಗಳನ್ನಾಗಲಿ ಅಭಿವೃದ್ಧಿಪಡಿಸಿಕೊಳ್ಳುವುದಕ್ಕೆ ಸಾಲ ತೆಗೆದುಕೊಳ್ಳುವುದು ಕಡಮೆಯಾಗಿದೆ ಈ ಭಾಗದಲ್ಲಿ ಪ್ರಜೆಗಳಿಗೆ ಇನ್ನೂ ವಿಶೇಷವಾಗಿ ತಿಳುವಳಿಕೆಯನ್ನುಂಟುಮಾಡಬೇಕಾಗಿದೆ ಈ ಸಂಘಗಳು ಬೆಳೆ ಹೆಚ್ಚುವ ವಿಧಾನಗಳನ್ನೂ, ಬೆಳೆಗೆ ಹಿಡಿಯುವ ಕ್ರಿಮಿಕೀಟಗಳನ್ನು ನಾಶಪಡಿಸುವ ಉಪಾಯಗಳನ್ನೂ, ಗೋಕಾಯಿಗಳ ಅಭಿವೃದ್ಧಿಯ ವಿಚಾರಗಳನ್ನೂ ರೈತಪ್ರಜೆಗಳಿಗೆ ದೃಷ್ಟಾಂತಗಳಮೂಲಕ ತಿಳಿಯಪಡಿಸುತ್ತಾ ಬಂದರೆ ಸರ್ಕಾರದ ವ್ಯವಸಾಯದ ಇಲಾಖೆಗೆ ಎಷ್ಟೋ ಸಹಾಯವಾದೀತು

ಪರಸ್ಪರಸಹಾಯ ಸಂಘಗಳ ಮೂರನೇ ವಾರ್ಷಿಕ ಸಭೆಯು ರಾಜಧಾನಿಯಲ್ಲಿ ನಾಳೆ ಸೋಮವಾರದಿಂದ ಪ್ರಾರಂಭವಾಗಿ ಮೂರು ದಿನಗಳು ನಡೆಯುವಂತೆ ಏರ್ಪಾಡಾಗಿದೆ ಮೈಸೂರು ಪಟ್ಟಣದಲ್ಲಿ ಈ ಮಹಾಸಭೆ ನಡೆಯುವ ವಿಷಯದಲ್ಲಿ ನಮಗೆ ತುಂಬಾ ಸಂತೋಷವಾಗಿದೆ ಈ ಸಭೆಯಲ್ಲಿ ನಡೆಯತಕ್ಕ ಚರ್ಚೆಗಳ ದೆಸೆಯಿಂದ ಪರಸ್ಪರಸಹಾಯ ಸಂಘಗಳ ಪ್ರಥಮ ಉದ್ದೇಶವು ಮೆಂಬರುಗಳಲ್ಲಿ ನೆಲೆಗೊಂಡು ವಿಶೇಷವಾಗಿ ಸಂಸ್ಥಾನಾಮುಖ ಬೆಳವಳಿಗೆ ಹೊಂದುವಂತಾಗಲೆಂದು ಕುತೂಹಲಪಟ್ಟು ನಿರೀಕ್ಷಿಸುತ್ತೇವೆ

ಶ್ರೀಮದ್ ಯುವರಾಜರವರು ದಯಮಾಡುವುದು

ಶ್ರೀಮದ್ ಯುವರಾಜರವರು ಯೂರೋಪ್ ಖಂಡದ ದೇಶಗಳಲ್ಲಿ ಪ್ರಖ್ಯಾತಿ ಹೊಂದಿದ ಭಾಗಗಳನ್ನು ಸಾಕ್ಷಾತ್ತಾಗಿ [illegible] ಬೇಕೆಂದು ಕಳೆದ ಮಾರ್ಚಿ ತಾ 19 ರಲ್ಲಿ ರಾಜಧಾನಿಯಾದ ಮೈಸೂರು ಪಟ್ಟಣದಿಂದ ಹೊರಟು ಬೊಂಬಾಯಿಗೆ ಹೋಗಿ ಅದೇ ತಾ 22 ರಲ್ಲಿ ಹಡಗು ಹತ್ತಿ ಪ್ರಯಾಣಮಾಡಿದರಷ್ಟೆ ಅವರು ಉದ್ದೇಶಪಟ್ಟ ರಾಜ್ಯಗಳನ್ನೂ ಪಟ್ಟಣಗಳನ್ನೂ ಅಲ್ಲಲ್ಲಿನ ವಿಶೇಷ ವಿದ್ಯಮಾನಗಳನ್ನೂ ಪರಾಂಬರಿಸಿ ಕೊಂಡು ಸ್ವದೇಶವನ್ನು ಕುರಿತು ಬಿತ್ತೈಸುತ್ತಿದಾರೆ ಯುವರಾಜರವರು ನಾಳೆ ದಿನ ಹಡಗಿನಲ್ಲಿ ಬೊಂಬಾಯಿ ಪಟ್ಟಣವನ್ನು ತಲುಪಿ, ಅದೇ ದಿನ ರೈಲು ಹತ್ತಿ ತಾ ೮ ನೇ ಭಾನುವಾರ ಬೆಳಿಗ್ಗೆ ಬೆಂಗಳೂರಿಗೆ ದಯಮಾಡಿ ಅರಮನೆಯಲ್ಲಿ ಆರೋಗಣೆ ಮುಂತಾದವನ್ನು ತೀರಿಸಿಕೊಂಡು ಪುರಜನರ ಆಡ್ರೆಸ್ಸನ್ನು ಸ್ವೀಕರಿಸಿ, ಮೋಟರಾ ಗಾಡಿಯಲ್ಲಿ ಹೊರಟು ಆ ದಿನ ಮಧ್ಯಾಹ್ನದ ಮೇಲೆ ಮಹಿಸೋರಿ ಮಂಟಪಕ್ಕೆ ಬಂದಿಳಿದು ಅರಮನೆಯ ಸಾರೋಟಿನಲ್ಲಿ ಕುಳಿತು ಮರ್ಯಾದೆಯೊಡನೆ ಮೆರವಣಿಗೆಯಲ್ಲಿ ರಾಜಧಾನಿಯನ್ನು ಪ್ರವೇಶಿಸಿ ಪುತ್ತುಪೇಟೆಯ ಮಾರ್ಗವಾಗಿ ಅರಮನೆಗೆ ಐತ್ತಸುವವರಾಗಿದ್ದಾರೆ ರಾಜಧಾನಿಯ ಪುರಪ್ರಮುಖರು ಟೌನ್ ಹಾಲ್ ಬಂಗಲೆಯ ಎದುರಿಗೆ ಹಾಕಿಸುವ ಚಪ್ಪರದಲ್ಲಿ ಇದ್ದು ಶ್ರೀಮದ್ ಯುವರಾಜರವರಿಗೆ ಸುಸ್ವಾಗತವನ್ನು ಬಯಸುವಂತೆ ಏರ್ಪಾಡಾಗಿದೆ

ದೇವರು ತನ್ನನ್ನು ಮನುಷ್ಯರಿಗೆ ಪ್ರಕಟಿಸಿದನೋ

ಈ ಭೂಮಂಡಲವು ಸೂರ್ಯನ ಸುತ್ತಲು ತಿರುಗುವ ನವಗ್ರಹಗಳಲ್ಲಿ ಒಂದಾಗಿದೆ ಈ ನವಗ್ರಹಗಳು ಲೋಕಾದಿಯಿಂದ ಈ ವರೆಗೂ ತಮ್ಮ ತಮ್ಮ ಪಥಗಳಲ್ಲಿ ಸೂರ್ಯನನ್ನು ಸಾವಿರಾರು ಸರ್ತಿ ಪ್ರದಕ್ಷಿಣಮಾಡಿರುತ್ತವೆ ಮತ್ತು ಲೋಕಾಂತ್ಯದ ವರೆಗೂ ಪ್ರಾಯಶಃ ಹಾಗೆಯೇ ಪ್ರದಕ್ಷಿಣಮಾಡುತ್ತಿರುವವು ಆದರೂ ಭೂಮಿಯೆಂಬ ಈ ಗ್ರಹವನ್ನು ಬಿಟ್ಟು ಇದರ ಅಚೆ ಈಚೆ ಇರುವ ಗ್ರಹಗಳಲ್ಲಿ ಏನು ನಡೆಯುತ್ತಲಿದೆಯೋ ಈ ಭೂಮಂಡಲದ ನಿವಾಸಿಗಳಲ್ಲಿ ಯಾರಿಗೂ ಗೊತ್ತಿಲ್ಲ ಮಂಗಳ ಮಾರ್ಸ್ ಅಥವಾ ಮಂಗಳವೆಂಬ ಗ್ರಹವು ಉಳಿದ ಎಲ್ಲಾ ಗ್ರಹಗಳಿಗಿಂತ ಭೂಮಿಗೆ ಸಮೀಪವಾಗಿದೆ ಆದರೂ ಅದರಲ್ಲಿ ಯಾರಾದರೂ ಜನಗಳು ಇದ್ದಾರೆಯೋ ಇಲ್ಲವೋ ಯಾರೂ ನಿಶ್ಚಯವಾಗಿ ಹೇಳಲಾರದಿರುವರು

ಹೀಗಿರುವಲ್ಲಿ ಈ ಗ್ರಹಗಳ ಪೈಕಿ ಯಾವದಾದರೂ ಒಂದು ಗ್ರಹದಲ್ಲಿ ವಾಸಮಾಡುತ್ತಿರುವ ಒಬ್ಬ ನಿವಾಸಿಯು ಈ ಭೂಲೋಕಕ್ಕೆ ಅಕಸ್ಮಾತ್ತಾಗಿ ಬಂದಿಳಿದನೆಂದು ಭಾವಿಸೋಣ ನಾವೆಲ್ಲರೂ ಅವನನ್ನು ಸುತ್ತುಗಟ್ಟಿ ಅತ್ಯಂತ ಆಶ್ಚರ್ಯದಿಂದಲೂ ಪ್ರೇಮೆಯಿಂದಲೂ ಪರೀಕ್ಷಿಸುವೆವಲ್ಲವೆ ? ಮತ್ತು ಅವನು ನಮ್ಮ ಭಾಷೆಯನ್ನು ತಿಳಿದು ಮಾತನಾಡುವವನಾಗಿದ್ದರೆ ನಾವು ಅವನನ್ನು ಎಷ್ಟು ವಿಷಯಗಳನ್ನು ಕುರಿತು ಪ್ರಶ್ನೆಮಾಡುವೆವು ಅವನು ವಾಸಮಾಡುವ ಗ್ರಹದಲ್ಲಿ ಎಂತಹ ಪ್ರಾಣಿಗಳು ಮತ್ತು ಮನುಷ್ಯರು ಇದ್ದಾರೆ ? ಅವರ ಊಟವೇನು ? ಅವರ ಉಡಿಗೆತೊಡಿಗೆಗಳು ಎಂಥವುಗಳು ? ಅವರ ಕೆಲಸಕಾರ್ಯಗಳೇನು ? ಅವರ ದೊರೆ ಯಾರು ? ರಾಜ್ಯಾಡಳಿತವು ಎಂಥಾದ್ದು ? ಅವನು ಇಲ್ಲಿಗೆ ಹೇಗೆ ಬಂದನು ? ಪುನಹ ಅಲ್ಲಿಗೆ ಹೋಗಲಿಕ್ಕೆ ಮನಸ್ಸು ಮಾಡಿದರೆ ಹೋಗುವದು ಹೇಗೆ ? ನಾವೂ ಅವನ ಸಂಗಡ ಬರುತ್ತೇವೆಂದು ಹೇಳಿದರೆ ನಮ್ಮನ್ನು ಕರೆದುಕೊಂಡು ಹೋಗುವದು ಅವನಿಗೆ ಸಾಧ್ಯವೋ ? ಇವೇ ಮೊದಲಾದ ಅನೇಕ ವಿಷಯಗಳನ್ನು ಅವನಿಂದ ತಿಳಿಯುವದಕ್ಕೆ ನಾವು ಕುತೂಹಲಪಡುವೆವಲ್ಲವೇ ?

ಅವನು ನಮ್ಮನ್ನು ಅಕ್ಕರೆಯಿಂದ ಸಮೀಪಕ್ಕೆ ಕರೆದು ಕೂಡ್ರಿಸಿಕೊಂಡು ನಾನು ಅಂಗಾರಕ ಗ್ರಹದಿಂದ ಬಂದವನು ಅಲ್ಲಿ ನಾವು ಭೋಜಿಸುವ ಊಟ, ಉಡಿಗೆತೊಡಿಗೆಗಳು ನಿಮ್ಮ ಊಟ ಉಡಿಗೆಗಳಿಗಿಂತ ಅತ್ಯಂತ ಉತ್ತಮವಾದವುಗಳು ನಮಗೆ ಅಲ್ಲಿ ದುಃಖ, ಕಷ್ಟ, ತೊಂದರೆ, ಜರೆ, ಮರಣಾದಿಗಳಿಲ್ಲ ನಿಮಗೂ ಅಲ್ಲಿಗೆ ಬರುವದಕ್ಕೆ ಮನಸ್ಸಿದ್ದರೆ ನಾನು ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿ, ಅವನು ಹೇಳುವ ಈ ಮಾತುಗಳು ನಿಜವೆಂದು ಅನುಮಾನವಿಲ್ಲದೆ ಸ್ಥಾಪಿಸುವದಕ್ಕೆ ತಕ್ಕ ದೃಷ್ಟಾಂತ್ರಗಳನ್ನು ತೋರಿಸಿದರೆ, ನಾವು ಅವನು ಹೇಳುವ ಮಾತುಗಳು ನಿಜವೋ ಅಲ್ಲವೋ ? ಪರೀಕ್ಷಿಸುವದಕ್ಕೆ ಒಪ್ಪುವೆವಲ್ಲವೇ ?

ಯೇಸು ಕ್ರಿಸ್ತನು—ನಾನು ಪರಲೋಕದಲ್ಲಿರುವ ದೇವರ ಕುಮಾರನು ಜೀವ ಕೊಡುವ ರೊಟ್ಟಿಯು ನಾನೇ ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ ನನ್ನ ತಂದೆಯ ಚಿತ್ತವೇನಂದರೆ—ಮಗನನ್ನು ನೋಡಿ ಆತನನ್ನು ನಂಬುವ ಪ್ರತಿಯೊಬ್ಬನಿಗೂ ನಿತ್ಯಜೀವವು ಸಿಕ್ಕಬೇಕು ಯಾವನಾದರು ತಂದೆಯಾದ ದೇವರನ್ನು ನೋಡಿದ್ದಾನೆಂದು ತಿಳಿಯಬೇಡಿರಿ ದೇವರ ಬಳಿಯಿಂದ ಬಂದವನಾದ ನಾನೊಬ್ಬನೇ ತಂದೆಯನ್ನು ತಿಳಿದಿದ್ದೇನೆ ಜೀವಸ್ವರೂಪನಾದ ತಂದೆಯು ನನ್ನನ್ನು ಕಳುಹಿಸಿಕೊಟ್ಟಿರಲಾಗಿ ನಾನು ತಂದೆಯಿಂದ್ಲ ಜೀವಿಸುತ್ತೇನೆ ಅದರಂತೆ ನನ್ನನ್ನು ತಿನ್ನುವವನು (ಅಂದರೆ ನನ್ನನ್ನು ನಂಬಿ ಆಶ್ರಯಿಸುವವನು) ನನ್ನಿಂದ ಜೀವಿಸುವನು ನಾನು ಹೇಳುವ ಬೋಧನೆಯು ನನ್ನದಲ್ಲ ನನ್ನನ್ನು ಕಳುಹಿಸಿಕೊಟ್ಟ ನನ್ನ ತಂದೆಯದು ಆತನ ಚಿತ್ತದಂತೆ ನಡೆಯುವದಕ್ಕೆ ಯಾರಿಗೆ ಮನಸ್ಸಿದೆಯೋ ಅವರಿಗೆ ಈ ಬೋಧನೆಯು ದೇವರಿಂದ ಬಂದದ್ದೋ ? ನಾನೇ ಕಲ್ಪಿಸಿ ಹೇಳಿದ್ದೋ ? ಗೊತ್ತಾಗುವದು ತಂದೆಯು ಪ್ರತಿಷ್ಠೆಮಾಡಿ ಲೋಕಕ್ಕೆ ಕಳುಹಿಸಿಕೊಟ್ಟವನಾದ ನಾನು ದೇವರ ಮಗನಾಗಿದ್ದೇನೆ ನಾನು ತಂದೆಯ ಕ್ರಿಯೆಗಳನ್ನು ಮಾಡದಿದ್ದರೆ ನನ್ನ ಮಾತನ್ನು ನಂಬಬೇಡಿರಿ ಮಾಡಿದರೆ ನನ್ನ ಮಾತನ್ನು ನಂಬಿರಿ ನಂಬಿದರೆ ತಂದೆ ನನ್ನಲ್ಲಿದ್ದಾನೆ ನಾನು ತಂದೆಯಲ್ಲಿದ್ದೇನೆ ಎಂದು ನೀವು ತಿಳುಕೊಂಡು ಮನನಮಾಡಿಕೊಳ್ಳಿರಿ ಎಂದು ಹೇಳಿದ್ದಾನೆ

ಮತ್ತು " ಆತನು ಮರಣದ ವಿಷಯದಲ್ಲಿಯೂ ಅದನ್ನು ಹೊಂದಿದವರ ಮುಂದಣ ಗತಿಯ ವಿಷಯದಲ್ಲಿಯೂ ಹೇಳಿರುವುದನು ಕೇಳಿರಿ—ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ ನನ್ನನ್ನು ನಂಬುವವನು ಸತ್ತರೂ ಬದುಕುವನು. ಮತ್ತು ಬದುಕುತ್ತಾ ನನ್ನನ್ನು ನಂಬುವವನು ಪ್ರತಿಯೊಬ್ಬನೂ ಎಂದಿಗೂ ಸಾಯುವದಿಲ್ಲವೆಂದು ಪರಿಷ್ಕಾರವಾಗಿ ನುಡಿದನು ಮತ್ತು ಆತನು ಈ ಲೋಕವನ್ನು ಬಿಟ್ಟು ಪರಲೋಕಕ್ಕೆ ಹೋಗುವಾಗ ಶಿಷ್ಯರು ವಿಯೋಗವನ್ನು ಸಹಿಸಲಾರದೆ ಹಂಬಲಿಸುತ್ತಿರುವಲ್ಲಿ ಆತನು ಅವರನ್ನು ಆದರಿಸಿ ಹೇಳಿದ್ದೇನಂದರೆ—ನಿಮ್ಮ ಹೃದಯವು ಕಳವಳಗೊಳ್ಳದೇ ಇರಲಿ ದೇವರನ್ನು ನಂಬಿರಿ ನನ್ನನ್ನೂ ನಂಬಿರಿ ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಇವೆ ನಿಮಗೆ ಅಲ್ಲಿ ಸ್ಥಳವನ್ನು ಸಿದ್ಧಮಾಡುವದಕ್ಕೆ ಹೋಗುತ್ತೇನೆ ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರೆದುಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು ನಾನಿರುವ ಸ್ಥಳದಲ್ಲಿ ನೀವು ಸಹ ಇರಬೇಕು ಎಂದು ಹೇಳಿ ಸಮಾಧಾನಪಡಿಸಿದನು

ಯೇಸು ಹೇಳಿರುವ ಈ ವಾಕ್ಯಗಳು ನಿಜವೋ ಅಲ್ಲವೋ ಪರೀಕ್ಷಿಸುವದು ವಾಚಕರ ಕರ್ತವ್ಯವಾಗಿದೆ ಅವರು ತಾತ್ಸಾರಮಾಡಿದರೆ ಪರಲೋಕದಿಂದ ನಮ್ಮನ್ನು ರಕ್ಷಿಸುವ ಸಲುವಾಗಿ ಬಂದ ದೇವರ ಕುಮಾರನನ್ನು ತಿರಸ್ಕರಿಸಿದ ಪಾಪಕ್ಕೆ ಗುರಿಯಾಗುವರು ಈ ಮಾತುಗಳನ್ನು ಪರೀಕ್ಷಿಸಿ ಯೇಸು ನಿಜವಾಗಿ ದೇವರ ಬಳಿಯಿಂದ ಈ ಭೂಲೋಕಕ್ಕೆ ಮನುಷ್ಯರ ಮೇಲಣ ಪ್ರೀತಿಯಿಂದ ಬಂದು ದೇವರನ್ನೂ ಪರಲೋಕವನ್ನೂ ನಮಗೆ ಲಭ್ಯಮಾಡುವವನೆಂದು ತಿಳಿದು ಅನುಭವಿಸುವವರಾಗಲಿ

ಒಳದೇಶದ ವೃತ್ತಾಂತಗಳು

ಪಸರು ಕೈಗಾರಿಕೆ ಮತ್ತು ವ್ಯವಸಾಯ ಪ್ರದರ್ಶನವನ್ನು ದಿವಾನ್ ಮಿ॥ ಎಂ ವಿಶ್ವೇಶ್ವರಯ್ಯನವರು ರಾಜಧಾನಿಯಲ್ಲಿ ನಾಳೆ ಮಧ್ಯಾಹ್ನ ಪ್ರಾರಂಭಮಾಡುತ್ತಾರೆ

*

ಬೆಂಗಳೂರು ಸಿಟಿಯಲ್ಲಿ ತೆರಿಗೆ 3 ರೂಪಾಯಿನಂತೆ ಸ್ಯಾನಿಟರಿ ಸೆಸ್ಸನ್ನು ಮನೆಗಳಿಗೆ ಹಾಕಬೇಕೆಂದು ಕಳೆದ ವಾರ ಮ್ಯುನಿಸಿಪಲ್ ಕೌನ್ಸಿಲರುಗಳು ಸಮ್ಮತಿಪಟ್ಟಿದಾರೆ

*

ಕಳೆದ ವಾರ ರಾಜಧಾನಿಯಲ್ಲಿ 4 5 ದಿನ ಒಳ್ಳೇ ಮಳೆಗಳಾಗಿ ಹವ ತಂಪಾಗಿಯೂ ಆಹ್ಲಾದಕರವಾಗಿಯೂ ಇದೆ ಇನ್ನೂ ಜಡಿ ಮಳೆ ಹಿಡಿಯುವ ಸೂಚನೆ ಕಾಣುತ್ತಿರುವುದು

*

ಬೌರಿಂಗ್‌ಪೇಟೆಯಿಂದ ಕೋಲಾರಕ್ಕೆ ಹಾಕುತ್ತಿರುವ ರೈಲ್ ರಸ್ತೆಯ ಕಾಮಗಾರಿಯೆಲ್ಲಾ ಪೂರೈಸುತ್ತಾ ಬಂದಿದೆ ಎಂದೂ, ನೊವೆಂಬರ್ ತಿಂಗಳ ಅಂತ್ಯಭಾಗದಲ್ಲಿ ಗಾಡಿಗಳ ಸಂಚಾರಕ್ಕೆ ಸಿದ್ಧವಾದೀತೆಂದೂ ತಿಳಿಯುತ್ತದೆ

*

ಇನಾಂದಾರರು ಜೋಡಿದಾರರು ತಮ್ಮ ಗ್ರಾಮಗಳ ರೈತರಿಂದ ತಮಗೆ ಕಂದಾಯಗಳು ಕಿಸ್ತು ಪ್ರಕಾರ ಪಾವತಿ ಆಗದಿದ್ದರೆ ಅವರು ಸರ್ಕಾರಿ ದರದಂತೆ ಬಡ್ಡಿ ಹಾಕಿ ವಸೂಲ್ ಮಾಡಬಹುದೆಂದು ಸರ್ಕಾರದವರು ರೂಲನ್ನು ಮಾಡಿದಾರೆ

*

ರಾಜಧಾನಿಯ ಇಲವಾಲ್ ರಸ್ತೆಯಲ್ಲಿರುವ ಅಡ್ವೊಕೇಟ್ ಮ॥ ಎ ರಾಮಣ್ಣನವರ ಮನೆಗೆ ಕಳೆದ ವಾರ ಕಳ್ಳರು ಬಿದ್ದು ದೇವರ ಮನೆಗೆ ಕನ್ನಾ ಹಾಕಿ ಸುಮಾರು 250 ರೂಪಾಯಿನ ಮಾಲುಗಳನ್ನು ಅಪಹರಿಸಿದರೆಂದು ತಿಳಿದು ಬರುತ್ತದೆ

*

ಬೆಂಗಳೂರಿನಿಂದ ಚಿಂತಾಮಣಿಗೆ ಹೋಗಿಬರುತ್ತಿರುವ ಮೋಟರ್ ಬಿಸ್ಸಾರ್ ಗಾಡಿಯನ್ನು ಆ ರಸ್ತೆ ತೃಪ್ತಿಕರವಾಗಿಲ್ಲದಿರೋಣದರಿಂದ ಸರಿಯಾಗಿ ದುರಸ್ತಾಗುವತನಕ ನಿಲ್ಲಿಸತಕ್ಕದ್ದೆಂದು ಆ ಕಂಪನಿಯವರಿಗೆ ಕೋಲಾರದ ಡೆಪ್ಯುಟಿ ಕಮಿಷನರವರು ತಿಳಿಸಿರುತ್ತಾರೆ

*

ಮೇಲ್ಪಟ್ಟ ರೆವಿನ್ಯೂ ಅಧಿಕಾರಿಗಳು ಗ್ರಾಮಾಧಿಕಾರಿಗಳಿಗೆ ಶಿಕ್ಷೆ ವಿಧಿಸುವುದಕ್ಕಿಂತ ಮೊದಲು ಅವರ ತಪ್ಪನ್ನು ಕ್ರಮವಾಗಿ ವಿಚಾರಣೆಮಾಡಬೇಕೆಂದು ರೂಲಿರುತ್ತಿದ್ದರೂ ಆ ರೀತಿ ಅನೇಕ ವೇಳೆ ಮಾಡದೆ ಇರುತ್ತಾರೆಂದು ರೆವಿನ್ಯೂ ಕಮಿಷನರವರು ಸರ್ಕ್ಯುಲರ್ ಕೊಟ್ಟಿದಾರೆ

*

ಮೈಸೂರು ನ್ಯಾಯವಿಧಾಯಕ ಸಭೆಗೆ ಪ್ರಜಾಪ್ರತಿನಿಧಿ ಸಭೆಯಿಂದ ಈ ವರುಷ ಇಬ್ಬರು ಮೆಂಬರುಗಳ ಚುನಾವಣೆ ನಡೆಯಬೇಕಾಗಿರೋಣದರಿಂದ ಚುನಾವಣೆಗೆ ನಿಲ್ಲತಕ್ಕ ಪ್ರತಿನಿಧಿಗಳು ವಿಜಯದಶಮಿಯೊಳಗಾಗಿ ಗವರ್ನ್‌ಮೆಂಟ್ ಸೆಕ್ರೆಟರಿಯವರಿಗೆ ಅರ್ಜಿ ಬರೆದುಕೊಳ್ಳತಕ್ಕದ್ದೆಂದು ಸರ್ಕಾರದವರು ತಿಳಿಸುತ್ತಾರೆ

*

ಬೆಂಗಳೂರು ಸಂಪಂಗಿ ಕೊಳದ ಪೂರ್ವಭಾಗದ ಕೊಚ್ಚೆ ನೆಲವನ್ನು ಮುಚ್ಚಿ ಆರೋಗ್ಯಸ್ಥಿತಿಗೆ ತರುವುದಕ್ಕೆ 12,000 ರೂಪಾಯಿ ಖರ್ಚಾಗುವುದು ಈ ಪೈಕಿ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯವರು 4,000 ರೂಪಾಯಿ ಕೊಡುವಂತೆಯೂ, ಉಳಿದ ಹಣವನ್ನು ದಂಡಿನ ಮ್ಯುನಿಸಿಪಾಲಿಟಿಯವರು ಮತ್ತೂ ಆ ಬಳಿಯ ಬಂಗಲೆಗಳ ಮಾಲೀಕರೂ ಕೊಡುವಂತೆಯೂ ಇತ್ಯರ್ಥವಾಗಿದೆ

*

ರಾಜಧಾನಿಯ ರೇಸ್ ಕೋರ್ಸಿನಲ್ಲಿ ಈ ತಿಂಗಳು 10 ಮತ್ತು 11 ನೇ ತಾ ಶುಕ್ರವಾರ ಶನಿವಾರಗಳ ದಿನ ಬೆಳಿಗ್ಗೆಯೂ ಮಧ್ಯಾಹ್ನವೂ ಜೀವರಾಶಿಗಳ ಪ್ರದರ್ಶನ ನಡೆದು ಶ್ರೀಮನ್ ಮಹಾರಾಜರವರು ಇನಾಮುಗಳನ್ನು ದಯಪಾಲಿಸುತ್ತಾರೆ ಪ್ರದರ್ಶನ ಮಾಡತಕ್ಕವರು ತಾ 6 ನೇ ಸೋಮವಾರದೊಳಗೆ ಸೆಕ್ರೆಟರಿ ಮ॥ ಎಂ ಪಿ ಸುಬ್ರಹ್ಮಣ್ಯರಾಜೆ ಅರಸಿನವರಿಗೆ ತಿಳಿಸಬಹುದು

*

ರಾಜಧಾನಿಯ ಟೌನ್ ಹಾಲ್ ಮಂದಿರದಲ್ಲಿ ಮೈಸೂರು ಸಂಸ್ಥಾನದ ಪರಸ್ಪರ ಸಹಾಯ ಸಂಘಗಳ ಮೂರನೇ ವಾರ್ಷಿಕ ಸಭೆಯು ತಾ 4 ನೇ ಶನಿವಾರಕ್ಕೆ ಬದಲಾಗಿ ತಾ 6 ನೇ ಸೋಮವಾರದಿಂದ ಪ್ರಾರಂಭವಾಗಿ ಮೂರು ದಿನ ನಡೆಯುವದೆಂದು ರೆಜಿಸ್ಟ್ರಾರ್ ಮಿ॥ ನಾರಾಯಣಯ್ಯಂಗಾರ‍್ರವರು ತಿಳಿಯಪಡಿಸುತ್ತಾರೆ

*

ಕೃಷ್ಣರಾಜಪೇಟೆ ತಾಲ್ಲೂಕು ಸರ್ವಮಾನ್ಯ ಮಡುವನಕೋಡಿ ಗ್ರಾಮದಲ್ಲಿ ಕಳೆದ ತಾ 20ನೇ ಶನಿವಾರ ಮುಖಂಡ ಪ್ರಜೆಗಳು ಸಭೆ ನಡಿಸಿ ಒಂದು ವಾಚಕಶಾಲೆಯನ್ನು ಪ್ರಾರಂಭಮಾಡಿದಾರೆಂದೂ, ಅದಕ್ಕೆ ಮ॥ ರಾಮಚಂದ್ರಯ್ಯನವರು ಪ್ರೆಸಿಡೆಂಟರಾಗಿಯೂ, ಮ॥ ಶ್ಯಾ. ಸುಬ್ಬರಾಯರೂ ಮ॥ ಎಂ ಎಸ್ ನಾರಣಪ್ಪನವರೂ ಸೆಕ್ರೆಟರಿಗಳಾಗಿಯೂ ಚುನಾಯಿಸಲ್ಪಟ್ಟಿದಾರೆಂದೂ ತಿಳಿಯುತ್ತದೆ

ರಾಜಧಾನಿಯ ಶ್ರೀರಾಮಪೇಟೆಯಲ್ಲಿರುವ ತೇಗು ಚಂಗಯ್ಯಶೆಟ್ಟಿ ಎಂಬ ವರ್ತಕನು ಕೊಬ್ಬು ಮತ್ತು ಎಣ್ಣೆ ಮಿಶ್ರವಾದ ತುಪ್ಪವನ್ನು ಮಾರಾಟಮಾಡಿದ ನೆಂದು ಮೊಕದ್ದಮೆ ಬಂದು ಜಾಯಿಂಟ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊನ್ನೆ ವಿಚಾರಣೆಯಾದ ದೆಯಾಗಳಿ, ಆಗ ಅಪರಾಧಿಗೆ 70 ರೂಪಾಯಿ ಜುಲ್ಮಾನೆ ವಿಧಿಸಿದ್ದಾರೆ

* * *

ಕಡೂರು ಡಿಸ್ಟ್ರಿಕ್ಟಿನ ಕಾಫಿ ಪ್ಲಾಂಟರ್ ಮಿ॥ ಡಬ್ಲಿಯು ಎಲ್ ಕ್ರಾಫರ್ಡ್ ಸಾಹೇಬರವರು ಖಾಂಡ್ಯದ ಹೋಬಳಿ ಜಿವರೆ ಗ್ರಾಮದಲ್ಲಿ ಸರ್ಕಾರದವರು ಒಂದು ಆಸ್ಪತ್ರೆಯನ್ನು ಇಟ್ಟು ಅದಕ್ಕೆ ಸಿಬ್ಬಂದಿ ಖರ್ಚನ್ನೂ ಔಷಧದ ಖರ್ಚನ್ನೂ ಸ್ಯಾಂಕ್ಷನ್ ಮಾಡಿದ ಪಕ್ಷದಲ್ಲಿ ತಾವು ಆಸ್ಪತ್ರೆಗೆ ಬೇಕಾಗುವ ಕಟ್ಟಡವನ್ನು ಉಚಿತವಾಗಿ ಬಿಟ್ಟುಕೊಡುವುದಲ್ಲದೆ ವೈದ್ಯರ ಸಂಬಳವನ್ನು ಐದು ವರುಷ ಕಾಲ ಪಾವತಿಮಾಡುತ್ತಾ ಬರುವುದಾಗಿ ಒಪ್ಪಿಕೊಂಡಿದ್ದಾರೆ

* * *

ಈ ಸಲ ಆನೆಗಳ ಖೆಡ್ಡಾ ಕಾರ್ಯಗಳು ನಡೆಯುವ ನಿಮಿತ್ತ ಮೈಸೂರು ಮಾನಂದವಾಡಿ ರಸ್ತೆಯ ಪೈಕಿ ಉದಬೂರು ಗ್ರಾಮದಿಂದ ಮಾಚಿಯೂರಿನ ವರೆಗೆ ಇರುವ ಮೈಲಿ ದೂರದ ರಸ್ತೆಯಲ್ಲಿ ಅಕ್ಟೋಬರ್ ತಾ 1 ರಿಂದ ನೊವೆಂಬರ್ ತಾ 15 ವರೆಗೆ ಸಾಯಂಕಾಲ 6 ಘಂಟೆಯ ಮೇಲೆ ಬೆಳಗಿನ 6 ಘಂಟೆಯ ತನಕ ಯಾವ ವಾಹನಗಳನ್ನೂ ಬಿಡುವುದಿಲ್ಲ, ಮತ್ತು ಕೊಲೆ ಗಾಡಿಗಳನ್ನು ಹಗಲಾಗಲಿ, ರಾತ್ರಿಯಾಗಲಿ ಆ ರಸ್ತೆಯಲ್ಲಿ ಬಿಡಲಾಗದೆಂದು ಸರ್ಕಾರದವರು ಪ್ರಕಟಿಸಿರುತ್ತಾರೆ

* * *

ಕಳೆದ ಗುರುವಾರ ರಾತ್ರಿಯೆಲ್ಲಾ ರಾಜಧಾನಿಯಲ್ಲಿ ವಿದ್ಯುಚ್ಛಕ್ತಿಯ ದೀಪವಿಲ್ಲದೆ ಕಗ್ಗತ್ತಲು ಕವಿದಿತ್ತು ಮೈಸೂರಿನಿಂದ ಸುಮಾರು 32 ಮೈಲಿ ದೂರದಲ್ಲಿ ಕಲ್ಯಾಣಿ ಹತ್ತಿರ ಸುಮಾರು ಮೂರು ಮೈಲಿ ದೂರದ ವರೆಗೆ ವಿದ್ಯುಚ್ಛಕ್ತಿಯ ತಂತಿಗಳು ಕಿತ್ತುಹೋಗಿ ಕೆಲವು ಕಡೆ ಇನ್ಸುಲೇಟರುಗಳೆಲ್ಲಾ ಸುಟ್ಟು ಹೋಗಿದ್ದದ್ದೇ ಅದಕ್ಕೆ ಕಾರಣವಾಯಿತು ಮರುದಿನ ಆ ಲೈನಿನ ಇನ್ಸ್‌ಪೆಕ್ಟರು ಮೊದಲಾದವರು ತುಂಬಾ ಶ್ರಮಪಟ್ಟು ಹೋಗಿದ್ದ ಭಾಗಗಳನ್ನೆಲ್ಲಾ ದುರಸ್ತು ಮಾಡಿ ಕ್ರಮಪಡಿಸಿದರು

* * *

ಮೈಸೂರಿನಲ್ಲಿ ಟೆನ್ನಿಸ್ ಎಂಬ ಚೆಂಡಾಟದಲ್ಲಿ ಹೆಸರುವಾಸಿಯನ್ನು ಪಡೆದಿರುವ ಮ್ಮ॥ ಯು ಡಿ ರಂಗರಾವ್ ಎಂಬ ವಿದ್ಯಾರ್ಥಿಯು ಕಳೆದ ವಾರ ಅರಸೀಕೆರೆಗೆ ಹೋಗಿ ಅಲ್ಲಿನ ದೊಡ್ಡ ಮನುಷ್ಯರು ನಡಿಸಿದ ಟೋರ್ನಮೆಂಟ್ ಎಂಬ ಪಂದ್ಯಕ್ಕೆ ಸೇರಿ ಟೆನ್ನಿಸ್ ಆಟದಲ್ಲಿ ತನ್ನ ಸಾಮರ್ಥ್ಯವನ್ನೂ ಚಮತ್ಕಾರವನ್ನು ಪ್ರಕಾಶಪಡಿಸಿ ಎದುರಾಳಿಯನ್ನು ಸೋಲಿಸಿ "ಚಾಲೆಂಜ್ ಕಪ್" ಎಂಬ ಬಿರುದಿನ ಬಟ್ಟಲನ್ನು ಬಹುಮಾನವಾಗಿ ಸಂಪಾದಿಸಿಕೊಂಡು ಬಂದಿರುತ್ತಾನೆಂದು ತಿಳಿಸಲು ಸಂತೋಷಪಡುತ್ತೇವೆ

* * *

ಮೈಸೂರಿನಿಂದ ಮಂಗಳೂರಿಗೆ 107 ಮೈಲಿ ರೈಲ್ ರಸ್ತೆ ಹಾಕಲು ಕೆಲಸ ವನ್ನು ಪ್ರಾರಂಭಿಸುವ ವಿಷಯದಲ್ಲಿ ಮೈಸೂರು ಸರ್ಕಾರದವರು ಇಂಡಿಯಾ ಗವರ್ನಮೆಂಟಿನವರ ಸ್ಯಾಂಕ್ಷನ್ ಬಗ್ಗೆ ಬರೆಯುವುದರಲ್ಲಿದ್ದಾರೆಂದು ಪ್ರಕಟವಾಗಿದೆ ಈ ಪೈಕಿ ಮೈಸೂರು ಸೀಮೆಯಲ್ಲಿ ಹಾಕುವ 17 ಮೈಲಿ ಕಾಮಗಾರಿಗೆ 18,35,000 ರೂಪಾಯಿ, ಬ್ರಿಟಿಷ್ ಸೀಮೆಯಲ್ಲಿ ಹಾಕುವ 90 ಮೈಲಿ ಕಾಮಗಾರಿಗೆ 37,62,000 ರೂಪಾಯಿಯೂ ಖರ್ಚಾಗುವುದೆಂದು ಅಂದಾಜು ಇಟ್ಟು ತಯಾರಾಗಿದ್ದರೂ ಅದಕ್ಕಿಂತ ಬಹಳ ಹಣ ಹಿಡಿಯುವುದೆಂದು ನಮ್ಮ ರೈಲ್ ಚೀಫ್ ಇಂಜಿನಿಯರವರು ಅಭಿಪ್ರಾಯಪಡುತ್ತಾರೆ

* * *

ಬರೋಡೆಯಿಂದ ಮಿಸ್ ತಾರಾ ಎಂಬೊಬ್ಬ ಸ್ತ್ರೀಯು ರಾಜಧಾನಿಗೆ ಬಂದಿದ್ದಾಳೆ ಈಕೆ ಸಾಹಸಯು ಸಾಮರ್ಥ್ಯದಿಂದ ಸ್ಯಾಂಡೋವಿನಂತೆ ಅನೇಕ ಸಾಹಸಕಾರ್ಯಗಳನ್ನು ಪ್ರದರ್ಶನಮಾಡುವವಳಾಗಿದ್ದಾಳೆ ಇದಲ್ಲದೆ ಬೊಂಬಾಯಿಯಲ್ಲಿ ಉತ್ತರ ದೇಶದಲ್ಲಿ ಸಂಗೀತವನ್ನು ಕಲಿತು ಹೆಸರುವಾಸಿಯನ್ನು ಪಡೆದಿರುವ ಮಿಸ್ ಚಂದ್ರಾ ಎಂಬ ಮಂಗಳೂರಿನ ಸ್ತ್ರೀಯು ಇತ್ತಲಲ್ಲೇ ರಾಜಧಾನಿಗೆ ಬರುವವಳಾಗಿದ್ದಾಳೆ, ಕಳೆದ ವಾರ ಮದರಾಸಿನಲ್ಲಿ ಈಕೆಯ ಸಂಗೀತದ ಕಛೇರಿಯು ವಿಕ್ಟೋರಿಯಾ ಹಾಲ್ ಎಂಬ ಮಂದಿರದಲ್ಲಿ ನಡೆದು ಸಭಿಕರಿಗೆಲ್ಲಾ ಆಹ್ಲಾದವನ್ನುಂಟುಮಾಡಿತೆಂದೂ ತಿಳಿದುಬಂದಿದೆ

* * *

ಮೈಸೂರು ಬ್ಯಾಂಕಿನ ಹೆಡ್ ಆಫೀಸನ್ನು ಬೆಂಗಳೂರು ಸಿಟಿ ಯಲಹಂಕದ ಬಾಗಿಲ ಬಳಿ ಇರುವ ಆಸ್ಪತ್ರೆ ಕಟ್ಟಡದಲ್ಲಿ ಮಾಡುತ್ತಾರೆ ಇದರ ಪ್ರಾರಂಭೋತ್ಸವವು ಅಲ್ಲಿ ಈ ದಿನ ನಡೆಯುವುದಾಗಿದೆ ಈ ಬ್ಯಾಂಕಿನ ಮೂಲ ಧನವು 20 ಲಕ್ಷ ರೂಪಾಯಿ ಈ ಪೈಕಿ 100 ರೂಪಾಯಿನ ಷೇರು ಒಂದಕ್ಕೆ 25 ರೂಪಾಯಿ ಲೆಕ್ಕ ಕಾಲು ಭಾಗದ ಹಣ 5 ಲಕ್ಷ ರೂಪಾಯನ್ನು ಷೇರುದಾರರು ಪಾವತಿಮಾಡಿದರೆ ಸರ್ಕಾರದವರು ಈ ಬ್ಯಾಂಕಿಗೆ ಎಡ್ಡಿ ಇಲ್ಲದೆ 21 ಲಕ್ಷ ರೂಪಾಯನ್ನೂ, ಸೇಕಡಾ 4 ಆಣೆಯ ಬಡ್ಡಿಗೆ 2½ ಲಕ್ಷ ರೂಪಾಯನ್ನೂ ಕೊಡುವರು ಬ್ಯಾಂಕಿನವರು ಈ 10 ಲಕ್ಷ ರೂಪಾಯನ್ನೂ, ಡಿಪಾಜಟ್ಟಾಗಿ ಬರುವ ಹಣವನ್ನೂ ಇಟ್ಟುಕೊಂಡು ವ್ಯಾಪಾರಾಭಿವೃದ್ಧಿಗೋಸ್ಕರ ವರ್ತಕರಿಗೆ ಸಾಲ ಕೊಡುವರು

* * *

ಮ॥ ಬಿ ರಾಮಸ್ವಾಮಿ ಅಯ್ಯರವರು ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರ ಹುಕುಂ ತಂದು ಕಳೆದ ವಾರ ಇಲ್ಲಿನ ಮಹಾರಾಣಿ ಕಾಲೇಜಿನಲ್ಲಿ ಉಪಾಧ್ಯಾಯರಾಗಿ ದಾಖಲಾಗಿರುತ್ತಾರೆ ಇವರಿಗೆ ಈಗ 50 ವರುಷದ ಮೇಲೆ ವಯಸ್ಸಾಗಿ, ಸುಮಾರು 7 8 ವರುಷಗಳ ಹಿಂದೆ ಈ ಸಂಸ್ಥಾನದ ಫಾರೆಸ್ಟ್ ಅ॥ ಕನ್ಸರ್ವೇಟರ್ ಕೆಲಸವಿದ್ದು 100 ರೂಪಾಯಿ ಪೆನ್ಷನ್ ಮೇಲೆ ವಿಶ್ರಾಂತಿಯಾಗಿತ್ತು ಇವರು ಇಚೆಗೆ ಉತ್ತರ ದೇಶದಲ್ಲಿ ಯಾವದೋ ಒಂದು ಸಂಸ್ಥಾನದ ನೌಕರಿಗೆ ಸೇರಿಕೊಂಡಿದ್ದರು ಈಗ ಇವರಿಗೆ ದೊರಕಿರುವ ಈ ಉಪಾಧ್ಯಾಯ ನೌಕರಿಗೋಸ್ಕರ 100 ರೂಪಾಯಿ ಸಂಬಳ ನಿಗದಿಯಾಗುವುದೆಂದು ತಿಳಿದು ಬರುತ್ತದೆ ಈ ನೌಕರಿಯು ಹಂಗಾಮಿಯಾಗಿರಬಹುದೆಂದು ಊಹಿಸುವೆವು

* * *

ಮೈಸೂರು ಬ್ಯಾಂಕಿನ ಏಜಂಟರಾದ ಮಿ॥ ರೋಸ್ ಸಾಹೇಬರೂ, ಡೈರೆಕ್ಟರಾದ ಮ॥ ಎಂ ಚೆಂಗಯ್ಯ ಶೆಟ್ಟರೂ ಕಳೆದ ವಾರ ರಾಜಧಾನಿಗೆ ಬಂದು ಇಲ್ಲಿನ ಪ್ರಮುಖ ವರ್ತಕರೇ ಮೊದಲಾದ ಷೇರುದಾರರನ್ನು ಟೌನ್ ಹಾಲಿಗೆ ಬರಮಾಡಿಕೊಂಡು ಆ ಬ್ಯಾಂಕಿನ ಉದ್ದೇಶ, ನಡವಳಿಕೆ ಮುಂತಾದದ್ದನ್ನೆಲ್ಲಾ ಅವರಿಗೆ ತಿಳಿಸಿದರು ಮ॥ ಪಂಡಿತರೂ, ಅಡ್ವೊಕೇಟ್ ಮ॥ ರಾಮಣ್ಣನವರೇ ಮುಂತಾದವರು ಸಭಿಕರ ಅಭಿಮತವನ್ನು ಏಜಂಟರಿಗೆ ತಿಳಿಸಿ, ಬ್ಯಾಂಕಿನ ಕಾರುಬಾರು ಬಹಳ ಕಟ್ಟುನಿಟ್ಟಾಗಿಯೂ, ವರ್ತಕರ ಹಿತಚಿಂತನೆಯಿಂದಲೂ ನಡೆದು ಅಭಿವೃದ್ಧಿಹೊಂದಿದ ಬಳಿಕ ಎಬ್ಬೂರು, ದಾವಣಗೆರೆ, ತುಮಕೂರು, ಮೈಸೂರು ಪಟ್ಟಣಗಳಲ್ಲಿ ಅವಶ್ಯ ಕಂಡುಬಂದ ಹಾಗೆ ಬ್ಯಾಂಕಿನ ಶಾಖೆಗಳನ್ನು ಸ್ಥಾಪಿಸುವಮಾಡಬೇಕೆಂದು ಸೂಚಿಸಿದರು

* * *

ಕೋಲಾರದ ಟವನ್ ಮ್ಯುನಿಸಿಪಾಲಿಟಿಗೆ ಪರ್ಸನ್ ಹೆಡ್ ಮಾಸ್ಟರ್ ಮ॥ ಮಲ್ಲಾರಿರಾಯರೂ, ತುಮಕೂರು ಟವನ್ ಮ್ಯುನಿಸಿಪಾಲಿಟಿಗೆ ಪರ್ಸನ್ ಕಮೀಷನರ್ ಮ॥ ಸಿ ಶೇಷಾದ್ರಿಅಯ್ಯಂಗಾರ್ಯರು ವೈಸ್ ಪ್ರೆಸಿಡೆಂಟರಾಗಿ ನೇಮಕವಾಗಿದ್ದಾರಷ್ಟೆ ಈಗ ಚಿಕ್ಕಮಗಳೂರು ಟವನ್ ಮ್ಯುನಿಸಿಪಾಲಿಟಿಗೆ ಕಾಫಿ ಪ್ಲಾಂಟರ್ ಮ॥ ಸಿ ವಾಸುದೇವರಾಯರು ವೈಸ್ ಪ್ರೆಸಿಡೆಂಟರಾಗಿ ನೇಮವಾದರು ಇಚೆಗೆ ರಾಜಧಾನಿಯಲ್ಲೂ ಒಬ್ಬ ಪ್ರಜಾಪಕ್ಷದ ಮೆಂಬರು ವೈಸ್ ಪ್ರೆಸಿಡೆಂಟಾಗಿ ನೇಮಕವಾಗಬೇಕೆಂಬ ವಿಷಯದಲ್ಲಿ ಆಲೋಚನೆಯುಂಟಾಗಿ ಬೆಳೆಯುತ್ತಿದೆ ಎಂದು ತಿಳಿದು ಬರುವುದು ಕೌನ್ಸಿಲರುಗಳು ಏಕವಾಕ್ಯತೆಯಿಂದ ತಮ್ಮ ಅಭಿಮತವನ್ನು ಅರಿಕೆಮಾಡಿಕೊಂಡಲ್ಲಿ ಗವರ್ನಮೆಂಟಿನವರು ಒಪ್ಪಿ ಸ್ಯಾಂಕ್ಷನ್ ಮಾಡಬಹುದೆಂದು ಊಹಿಸುತ್ತೇವೆ

ಮೈಸೂರು ಗೆಜೆಟ್ ಸಂಗ್ರಹ

ಗೋರಿಬಿದನೂರಿಗೆ ವರ್ಗಪಟ್ಟಿರುವ ಅಮಲ್ದಾರ್ ಮಿ॥ ಸಿ ವಿ ಕೃಷ್ಣಸ್ವಾಮಿ ರಾಯರಿಗೆ ಕೊಟ್ಟಿರುವ ಆರು ವಾರಗಳ ಪ್ರಿವಿಲೆಜ್ ರಜವನ್ನು ಇನ್ನೂ ಮೂರು ತಿಂಗಳು ಜಾಸ್ತಿ ಮಾಡಿದೆ

ಶ್ರೀರಂಗಪಟ್ಟಣದ ಮುನ್‌ಸಿಫ್ ಮಿ॥ ಎ ಶ್ರೀನಿವಾಸರಾಘವಾಚಾರ್ಯರನ್ನು ಜೂನ್ ತಾ 9 ರಿಂದ 1 ನೇ ಕ್ಲಾಸಿಗೆ ಬಡ್ತಿಮಾಡಿದೆ

ಮೈಸೂರು ಅ॥ ಕಮಿಷನರ್ ಮಿ॥ ಟಿ ಜಿ ರಾಮ ಅಯ್ಯರವರಿಗೆ 1 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ, ಮತ್ತು ಅವರು ದರ್ಯಾಫ್ತು ಮಾಡುವ ಸಾಕ್ಷಿಗಳ ಕೈಫಿಯತ್ತನ್ನು ಸ್ವಹಸ್ತ ಇಂಗ್ಲೀಷಿನಲ್ಲಿ ಬರೆದುಕೊಳ್ಳತಕ್ಕದ್ದು

ಮಿ॥ ವಿ ಮುತ್ತುಸಾಮಿದಾಸ್‌ರವರು ಪ್ರಿವಿಲೆಜ್ ರಜದ ಮೇಲಿರುವಾಗ್ಗೆ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಅ॥ ಸರ್ಜನ್ ಮಿ॥ ಎಸ್ ಕೆ ಹನುಮಂತರಾಯರು ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರಾಗಿರತಕ್ಕದ್ದು

ಬೆಂಗಳೂರು ಸಿಟಿ ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮಿ॥ ಬಿ ಎಸ್ ರಾಜಗೋಪಾಲರಾಯರನ್ನು ಜೂಲೈ ತಾ 1 ರಿಂದ 3 ನೇ ಕ್ಲಾಸ್ ಅ॥ ಕಮಿಷನರಾಗಿ ಬಡ್ತಿಮಾಡಿದೆ

ಮಿ॥ ಬಿ ದಾಸಪ್ಪನವರನ್ನು ಬೆಂಗಳೂರು ಸರ್ಕಲ್ ಇನ್ಸ್‌ಪೆಕ್ಟರಾಗಿ ನೇಮಕಮಾಡಿರುವುದರಿಂದ ಮುಂದೆ ಹೇಳುವ ಡೆಪ್ಯುಟಿ ಇನ್ಸ್‌ಪೆಕ್ಟರುಗಳ ವರ್ಗಾವರ್ಗಿ ಹುಕುಂ ಮಾಡಿದೆ—ಮಿ॥ ಕೆ ನಾರಾಯಣರಾಯರು ಬೆಂಗಳೂರಿನಿಂದ ಕಡೂರಿಗೆ, ಮಿ॥ ಎಸ್ ಗೋವಿಂದರಾಯರು ಕಡೂರಿನಿಂದ ತುಮಕೂರಿಗೆ, ಮಿ॥ ಎಚ್ ಎನ್ ವೆಂಕಟರಮಣಯ್ಯನವರು ತುಮಕೂರಿನಿಂದ ಬೆಂಗಳೂರಿಗೆ

ಸಬ್ ಅ॥ ಇಂಜನಿಯರುಗಳಾದ ಮಿ॥ ಬಿ ಕೃಷ್ಣಸ್ವಾಮಿಅಯ್ಯಂಗಾರ್ಯರನ್ನು ಕಾವೇರಿ ರಿಜರ್ವಾಯರಿನಿಂದ ಹಾಸನಕ್ಕೂ, ಮಿ॥ ಸಿ ವಿ ಕಾಶೀಪತಿಶಾಸ್ತ್ರಿಯವರನ್ನು ವಾಟರ್ ಸಪ್ಲೈ ಸ್ಕೀಮಿನಿಂದ ಮೈಸೂರು ಸಿಟಿ ಮ್ಯುನಿಸಿಪಾಲಿಟಿಗೂ ವರ್ಗಮಾಡಿದೆ

ಮಿ॥ ನಾರಾಯಣ ವಿ ಬಾಪಟ್ಯವರನ್ನು 2 ನೇ ಕ್ಲಾಸ್ ಸಬ್ ಅ॥ ಇಂಜನಿಯರಾಗಿ ನೇಮಿಸಿಕೊಂಡು ಕಾವೇರಿ ತಲಾವಿನ ಡಿವಿಜನ್‌ಗೆ ವರ್ಗಮಾಡಿದೆ

ಶಿವಮೊಗ್ಗೆಗೆ ವರ್ಗಪಟ್ಟಿರುವ ಸೆಷನ್ಸ್ ಜಡ್ಜ್ ಮಿ॥ ಪರಮಶಿವಅಯ್ಯರವರಿಗೆ ಒಂದು ವರುಷವೂ, ಹನ್ನೊಂದು ತಿಂಗಳೂ, ಇಪ್ಪತ್ತನಾಲ್ಕು ದಿವಗಳ ರಜಾ ಕೊಟ್ಟಿದೆ

ರೇಂಜರುಗಳಾದ ಮಿ॥ ಬಿ ವೇಣುಗೋಪಾಲಯ್ಯನವನ್ನೂ, ಕೆ ರೇವಣ್ಣನವರನ್ನೂ ಸಬ್ ಅ॥ ಕನ್ಸರ್ವೇಟರಾಗಿ ನೇಮಿಸಿದೆ

ಹಾಸನದ ಡೆಪ್ಯುಟಿ ಕಮಿಷನರವರ ಆಫೀಸ್ ಶಿರಸ್ತೆದಾರ್ ಮಿ॥ ಬಿ ಎಂ ವೆಂಕಟೇಶಯ್ಯನವರನ್ನು ಹಾಸನದ ತಾಲ್ಲೂಕ್ ಅಮಲ್ದಾರ್ ಮತ್ತು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ

ಮಿ॥ ಗಳಾದ ವಿ ಆರ್ ತ್ಯಾಗರಾಜಅಯ್ಯರವರನ್ನೂ, ಎ ಸುಬ್ರಹ್ಮಣ್ಯ ಅಯ್ಯರವರನ್ನೂ, ಕೆ ಕೃಷ್ಣಅಯ್ಯರವರನ್ನೂ, ಪಿ ಎಫ್ ಬೌರಿಂಗ್‌ಯವರನ್ನೂ 3 ನೇ ಕ್ಲಾಸ್ ಡೆಪ್ಯುಟಿ ಕಮಿಷನರಾಗಿ ಖಾಯಂ ಮಾಡಿ, ಈ ಪೈಕಿ ಒಂದನೇ ಎರಡನೇಯವರನ್ನು 2 ನೇ ಕ್ಲಾಸಿಗೆ ಬಡ್ತಿಮಾಡಿದೆ

ಮಿ॥ ಎಂ ಎನ್ ಕೃಷ್ಣರಾಯರನ್ನು ಡೆಪ್ಯುಟಿ ಕಂಟ್ರೋಲರಾಗಿ ನೇಮಕಮಾಡಿದೆ

ಮುಂದೆ ಹೇಳುವವರನ್ನು ಸೀನಿಯರ್ ಅ॥ ಕಮಿಷನರುಗಳನ್ನಾಗಿ ಬಡ್ತಿಮಾಡಿದೆ—ಮಿ॥ ಗಳಾದ ಎಲ್ ಕೃಷ್ಣರಾಯರು, ಪಿ ಜಿ ಡಿಸೋಜಾರವರು, ಬಿ ಚೊಕ್ಕಣ್ಣನವರು ಸಿ ರಾಜಗೋಪಾಲಾಚಾರ್ಯರವರು

ಅ॥ ಕಮಿಷನರ್ ಮಿ॥ ಡಿ ಶ್ರೀನಿವಾಸರಾಯರನ್ನು ಜೂಲೈ ತಾ 13 ರಿಂದ 3 ನೇ ಕ್ಲಾಸಿಗೆ ಬಡ್ತಿಮಾಡಿದೆ

ಸುಬೇದಾರ್ ಗುಲಾಬ್ ಸಿಂಗ್‌ರವರನ್ನು ಮೈಸೂರು ಇನ್‌ಫೆಂಟ್ರಿ 2 ನೇ ಬೆಟ್ಯಾಲಿಯನ್‌ನಲ್ಲಿ 1 ನೇ ಗ್ರೇಡಿಗೆ ಜನಲ್ ಗುಪ್ತೆಯಿಂದ ಬಡ್ತಿ ಮಾಡಿದೆ

ಎಗ್ಸಿಕ್ಯುಟಿವ್ ಇಂಜನಿಯರ್ ಮಿ॥ ಎಫ್ ಎ ಸ್ಕ್ವೀಲ್‌ರವರಿಗೆ ಇನ್ನೂ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಕಾವೇರಿ ತಲಾವ್ ಅ॥ ಇಂಜನಿಯರ್ ಮಿ॥ ಎಲ್ ಎ ಎಚ್ ವಿಂಕ್ಲರ್‌ಯವರಿಗೆ ಜೂನ್ ತಾ 10 ರಿಂದ ಮೂರು ತಿಂಗಳ ಕಾಯಿಲೆ ರಜಾ ಕೊಟ್ಟಿದೆ

ಮುಂದೆ ಹೇಳುವ ಮ್ಯುನಿಸಿಪಲ್ ಟವನುಗಳಲ್ಲಿ 1915 ನೇ ಜೂನ್ ಆಖೈರ್‌ವರೆಗೆ ಬಲಾತ್ಕರಿಸಿ ಬಿಡುಬು ಹಾಕುವ ಕಾನೂನನ್ನು ಜಾರಿಗೆ ತರಲಾಗಿದೆ—ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಆನೇಕಲ್ಲು, ಮಾಗಡಿ, ಚನ್ನಪಟ್ಟಣ, ದೊಡ್ಡಬಳ್ಳಾಪುರ, ನೆಲಮಂಗಲ, ಕಡೂರು ಡಿಸ್ಟ್ರಿಕ್ಟಿಗೆ ಸೇರಿದ ಚಿಕ್ಕಮಗಳೂರು, ಕಡೂರು, ಬೀರೂರು, ತರೀಕೆರೆ, ಕೊಪ್ಪ, ಮೂಡಿಗೆರೆ, ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಸೇರಿದ ಶಿವಮೊಗ್ಗೆ, ಕುಂಸಿ, ಚನ್ನಗಿರಿ, ಸಿಕಾರಿಪುರ, ಕಳ್ಳೂರು ಕಟ್ಟೆ, ತೀರ್ಥಹಳ್ಳಿ, ಚಿತ್ರದುರ್ಗದ ಡಿಸ್ಟ್ರಿಕ್ಟಿಗೆ ಸೇರಿದ ಹೊಸದುರ್ಗ, ಮೊಳಕಾಲ್ಮುರು, ಚಳ್ಳಕೆರೆ

ತೀರ್ಥಹಳ್ಳಿ ತಾಲ್ಲೂಕಿನಲ್ಲಿರುವ ಮುಳಬಾಗಲ ಮಠದ ಗುರುಗಳಾದ ಶ್ರೀ ಕೃಷ್ಣಾನಂದತೀರ್ಥ ಸ್ವಾಮಿಗಳವರು ಸಂಸ್ಥಾನದ ಸಿವಿಲ್ ಕೋರ್ಟುಗಳಿಗೆ ಸ್ವತಃ ಹಾಜರಾಗಬೇಕಾದದ್ದಿಲ್ಲವೆಂದು ವಿನಾಯತಿ ಮಾಡಿದೆ

ಚನ್ನಗಿರಿ ತಾಲೂಕು ಅಮಲ್ದಾರ್ ಮಿ॥ ಕೆ ನಾರಾಯಣ ಅಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಶಿವಮೊಗ್ಗಾ ಡೆಪ್ಯುಟಿ ಕಮಿಷನರವರ ಆಫೀಸ್ ಜುಡಿಷಲ್ ಹೆಡ್ ಮುನ್‌ಷಿ ಮ॥ ಎಸ್ ನಾರಾಯಣರಾಯರನ್ನು ಚನ್ನಗಿರಿ ತಾಲ್ಲೂಕ್ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ

ರೈಲ್ವೆ ಅ॥ ಎಗ್ಸಾಮಿನರ್ ಮಿ॥ ಎ ಅಪ್ಪಾವುಮುದಲಿಯಾರ್‌ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಮಿ॥ ಎನ್ ರಾಮಸ್ವಾಮಿ ಅಯ್ಯಂಗಾರ್ಯರು ಅವರ ಕೆಲಸದ ಛಾರ್ಜನ್ನು ವಹಿಸಿರತಕ್ಕದ್ದು

ಮೈಸೂರು ಡಿಸ್ಟ್ರಿಕ್ಟ್ ಖಜಾನೆ ಅ॥ ಕಮಿಷನರ್ ಮಿ॥ ವೈ ವಿ ಕೃಷ್ಣಮೂರ್ತಿಯವರಿಗೆ 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದೆ ಮತ್ತು ಅವರು ಛಡಿ ಸಜವನ್ನು ವಿಧಿಸತಕ್ಕ ಅಧಿಕಾರ ವಹಿಸಲ್ಪಟ್ಟಿದ್ದಾರೆ

ನವರಾತ್ರಿ ಉತ್ಸವಗಳು.

ಮೊದಲನೇ ದಿನದ ದರ್ಬಾರು

ಮೊನ್ನೆ ಬೆಳಗ್ಗೆ ರಾಜಧಾನಿಯಲ್ಲಿ ನವರಾತ್ರಿ ಉತ್ಸವಗಳು ಪ್ರಾರಂಭವಾದವು ಶ್ರೀಮನ್ ಮಹಾರಾಜರವರು ಅರಮನೆಯಲ್ಲಿ ಸ್ನಾನಾದಿಗಳನ್ನು ತೀರಿಸಿಕೊಂಡು ರಾಜಗುರುಗಳ ಪಾದಪೂಜೆಯನ್ನು ಮಾಡಿ ದಿವ್ಯವಾದ ಛಂಗಾರದ ಪೋಷಾಕನ್ನು ಧರಿಸಿಕೊಂಡು ಥಳಥಳಿಸುವ ರತ್ನಖಚಿತವಾದ ಅಮೂಲ್ಯಾಭರಣಗಳಿಂದ ಅಲಂಕೃತರಾಗಿ ಅರಮನೆ ಅಧಿಕಾರಿಗಳನ್ನು ಮುಂದೆ ಬಿಟ್ಟುಕೊಂಡು ಭಟರಾಜರುಗಳು ಸ್ತೋತ್ರಪಾಠಗಳನ್ನು ಹೇಳುತ್ತಿರುವಲ್ಲಿ ಚೋಪ್‌ದಾರರುಗಳಿಂದ ಹೊಗಳಿಸಿಕೊಳ್ಳುತ್ತಾ ಬೆಳಗ್ಗೆ ಸುಮಾರು 8½ ಗಂಟೆಗೆ ಸಜ್ಜೆಯೊಳಕ್ಕೆ ಚಿತ್ತೈಸಿದರು ಅವರ ಪಕ್ಕದಲ್ಲೇ ಸರ್ದಾರ್ ಗೋಪಾಲಕೃಷ್ಣ ಅರಸಿನವರು ಪಟ್ಟದ ಕತ್ತಿಯನ್ನು ಹಿಡಿದುಕೊಂಡು ಬಂದರು ಸರ್ದಾರ್ ಗೋಪಾಲರಾಜೆ ಅರಸಿನವರು ಮಹಾರಾಜರವರಿಗೆ ಹಸ್ತಲಾಘವವನ್ನು ಕೊಡುತ್ತಿದ್ದರು ಸಿಂಹಾಸನದ ಬಲಪಾರ್ಶ್ವದ ಅಂಚಿನಲ್ಲಿ ಮಹಾರಾಜರವರು ಛಂಗಾರದ ಪೀಠದ ಮೇಲೆ ಮಂಡಿಸಿ ರಾಜಪುರೋಹಿತರ ಮುಖೇನ ದಶ ದಾನಾದಿಗಳನ್ನು ಯಥಾವಿಧಿಯಾಗಿ ಪೂಜೆಮಾಡಿ ದಾನವನ್ನಿತ್ತು ಅಲ್ಲಿಂದ ಸಿಂಹಾಸನದ ಬಳಿಗೆ ಚಿತ್ತೈಸಿ ಅಲ್ಲಿ ಪೂಜಾದಿಗಳನ್ನು ವಿಧಿವತ್ತಾಗಿ ನೆರವೇರಿಸಿ ಪ್ರದಕ್ಷಿಣೆಬಂದು ಮೆಟ್ಟಿಲು ಹತ್ತಿ ಸಿಂಹಾಸನದಲ್ಲಿ ನಿಂತು ಕೆಳಭಾಗದ ರಂಗಸ್ಥಳದಲ್ಲಿ ಸಾಲುಕಟ್ಟಿ ನಿಂತಿದ್ದ ಚತುರಂಗ ಸೈನ್ಯದ ಜಯಧ್ವನಿಯ ಮತ್ತು ವಾದ್ಯಘೋಷದ ಮಧ್ಯೆ ಪ್ರತಿವಂದನೆಯನ್ನು ಮಾಡಿ ಕುಳಿತುಕೊಂಡಾಗ ಗೌರವಾರ್ಥವಾದ 21 ತೋಪುಗಳು ಹಾರುತ್ತಿದ್ದವು ಪಟ್ಟದ ಕತ್ತಿಯು ಸಿಂಹಾಸನದಲ್ಲಿ ಮಹಾಸ್ವಾಮಿಯವರ ಬಲಪಾರ್ಶ್ವದಲ್ಲಿ ಇಡಲಾಯಿತು

ದರ್ಬಾರ್ ಮಂದಿರದಲ್ಲಿ ವೈದಿಕಮಂಡಲಿಯವರೂ ಅರಸುಗಳೂ ಸಂಸ್ಥಾನದ ಮುಖ್ಯಾಧಿಕಾರಿಗಳೂ ರಾಜಧಾನಿಯಲ್ಲಿರುವ ಎಲ್ಲಾ ಕೋಮುಗಳ ಮತ್ತು ಕಸಬುಗಳ ಗಣ್ಯ ಪ್ರಜೆಗಳೂ ಮುಸಾಹೇಬರೂ ಇತರ ದೊಡ್ಡ ಮನುಷ್ಯರೂ ತಮ್ಮತಮ್ಮ ಸ್ಥಾನಗಳನ್ನರಿತು ನಿಂತು ಇದ್ದರು ವೈದಿಕಮಂಡಲಿಯವರು ಕ್ರಮವಾಗಿ ಸಿಂಹಾಸನದ ಬಳಿಗೆ ಬಂದು ಮಹಾರಾಜರವರಿಗೆ ಫಲವನ್ನು ಒಪ್ಪಿಸಿ ಆಶೀರ್ವಾದ ಪೂರ್ವಕವಾಗಿ ಮಂಗಳಾಕ್ಷತೆಗಳನ್ನು ಹಾಕಿದರು ತರುವಾಯ ರಾಜಪಿಂಡೆಯವರೂ ಲೌಕಿಕರೂ ಸಾಲುಸಾಲಾಗಿ ನಿಂತು ಮುಜರೆಮಾಡಿ ಒಬ್ಬೊಬ್ಬರಾಗಿ ಸಿಂಹಾಸನದ ಬಳಿಗೆಹೋಗಿ ನಜರನ್ನು ಒಪ್ಪಿಸಿದಾಗ ಮಹಾರಾಜರವರು ಅದನ್ನು ಕೈಯಿಂದ ಮುಟ್ಟಿದರು ಈ ಪ್ರಕಾರ ನಜರು ಮುಜರೆಗಳಾಗುತ್ತಿರುವಲ್ಲಿ ಕೆಳಗಡೆ ಸೈನ್ಯಗಳ ಕವಾತು ನಡೆಯುತ್ತಿತು ಪಟ್ಟದಾನೆ ಪಟ್ಟದ ಕುದುರೆಗಳು ಮರ್ಯಾದೆಗಳೊಡನೆ ಕೆಮ್ಮಣ್ಣುಮಟ್ಟಿಗೆ ಬಂದು ನಿಂತು ಮಹಾರಾಜರವರಿಗೆ ಮುಜರೆಮಾಡಿ ಮೆರವಣಿಗೆಯಲ್ಲಿ ಕೆರೆಯ ಬಳಿಗೆ ಹೋದವು ವಾದ್ಯಗಾರರು ದಿವ್ಯವಾದ ರಾಗವನ್ನೆತ್ತಿ ಮನೋಹರವಾಗಿ ನುಡಿಸುತ್ತಿದ್ದರು ಸಾವಿರಾರು ಪ್ರಜೆಗಳು ಮೈದಾನಿನ ಹೊರಪಾರ್ಶ್ವದಲ್ಲಿ ನಿಂತು ನೇತ್ರಾನಂದ ಹೊಂದುತ್ತಿದ್ದರು ಅನೇಕಾನೇಕ ಸ್ತ್ರೀಯರು ಮೈದಾನಿನ ಬಲಗಡೆ ಇರುವ ಅಂತಸ್ತುಗಳ ಮೇಲೆ ಸಾಲುಗಟ್ಟಿ ಕುಳಿತು ದರ್ಬಾರಿನ ವೈಭವವನ್ನು ನೋಡುತ್ತಿದ್ದರು ಸಿಪಾಯಿಗಳು ಸಾಲುಕಟ್ಟಿ ನಿಂತು ಮೂರು ವರಿಸೆ ಸುರುಟು ಗಳನ್ನು ಹಾರಿಸಿದ ಮೇಲೆ ಚತುರಂಗ ಸೈನ್ಯಗಳೂ ಬ್ಯಾಂಡ್ ವಾದ್ಯವನ್ನು ಹಿಂಬಾಲಿಸಿ ಮಹಾರಾಜರವರ ಮುಂದೆ ಸಾಲಾಗಿ ಹೋಗಿ ತಮ್ಮ ತಮ್ಮ ಸ್ಥಾನಗಳಲ್ಲಿ ನಿಂತುಕೊಂಡು "ಶ್ರೀಮನ್ ಮಹಾರಾಜ ಶ್ರೀಕೃಷ್ಣರಾಜ ಒಡೆಯರ್ ಬಹದೂರ್‌ಕಿ ಜೈ" ಎಂದು ಏಕವಾಕ್ಯತೆಯಿಂದ ಮೂರಾವರ್ತಿ ಜಯಧ್ವನಿಯನ್ನು ಮಾಡಿದರು

ಬಳಿಕ ಆನೆ ಕುದುರೆಗಳು ಕೆರೆಯಿಂದ ಮೆರವಣಿಗೆಯಲ್ಲಿ ವಾಪಸು ಬಂದು ಮೊದಲಿನಂತೆ ಮಹಾರಾಜರವರಿಗೆ ಮುಜರೆ ಮಾಡಿ ತೆರಳಿದವು ಅಷ್ಟರಲ್ಲಿ ದರ್ಬಾರ್ ಭಕ್ಷಿಯವರು ಮಹಾರಾಜರವರ ಅನುಜ್ಞೆಯನ್ನು ಪಡೆದು ತಮ್ಮ ಇಲಾಖೆಯವರ ಮೂಲಕ ದರ್ಬಾರಿಗಳಿಗೆಲ್ಲಾ ಚೋರ್‌ವಾರು ಹಾರಾ ಹಾಕಿಸಿ ಅಡಿಕೆಎಲೆಯನ್ನು ಕೊಡಿಸಿದರು ತರುವಾಯ ದರ್ಬಾರಿಗಳೆಲ್ಲಾ ಎದ್ದು ಸಾಲುಕಟ್ಟಿ ನಿಂತು ಮುಜರೆ ಮಾಡಿ ಅರಮನೆಯಿಂದ ತೆರಳಿದರು ಕಡೆಯಲ್ಲಿ ಮಹಾರಾಜರವರಿಗೆ ಸರ್ದಾರ್ ಕಾಂತರಾಜೇ ಅರಸಿನವರು ದರ್ಬಾರ್ ಭಕ್ಷಿಯವರ ಸಹಾಯದಿಂದ ಹಾರಾ ತುರಾಯಿ ಅತ್ತರ್ ಪಾನ್ ಮುಂತಾದುವುಗಳನ್ನು ಒಪ್ಪಿಸಿದರು ಕಡೆಯಲ್ಲಿ ಮಹಾರಾಜರವರು ದಿವಾನ್‌ರವರನ್ನು ಸಿಂಹಾಸನದ ಬಳಿಗೆ ಬರಮಾಡಿಕೊಂಡು ಅವರಿಗೆ ಹಾರಾ ಮುಟ್ಟಿ ಕೊರಳಿಗೆ ಹಾಕಿಸಿ, ವಾದ್ಯಗಳು ಸಲಾಂಬಾಜಾ ನುಡಿಸುತ್ತಿರುವಲ್ಲಿ ಬೆಳಗಿನ ದರ್ಬಾರನ್ನು ಮುಕ್ತಾಯ ಮಾಡಿದರು

ಹಾಸನದಲ್ಲಿ ಪ್ಲೇಗ್ ಉಪದ್ರವ

ಪ್ಲೇಗ್ ರೋಗದ ಹಾವಳಿಯು ಬಹು ಬಲವಾಗಿದೆ ದಿನ ದಿನಕ್ಕೂ ಹೆಚ್ಚುತ್ತಲೇ ಇದೆ ಇದುವರೆಗೆ ಒಟ್ಟು 30 ಮಂದಿಗಿಂತಲೂ ಹೆಚ್ಚಾಗಿಯೇ ತೀರಿಹೋದರೆಂದು ತಿಳಿದುಬಂದಿದೆ ಈ ಟವನಿನ ಎಲ್ಲಾ ಪ್ರಾಂತ್ಯದಲ್ಲಿಯೂ ಸೋಂಕು ವ್ಯಾಪಿಸುತ್ತಲೇ ಇದೆ ನಿವಾಸಿಗಳು ಗುಡಿಸಲುಗಳನ್ನು ಕಟ್ಟುವುದಕ್ಕೂ ಅವುಗಳಿಗೆ ವಾಸಹೋಗುವದಕ್ಕೂ ಈಗೀಗ ಆತುರರಾಗಿದ್ದಾರೆ ಈಗ ಪಡುತ್ತಲಿರುವ ಆತುರವನ್ನು ಅವರು ಎರಡು ವಾರಗಳ ಹಿಂದೆಯೇ ಪಟ್ಟು ಊರನ್ನು ಬಿಟ್ಟಿದ್ದರೆ ಚೆನ್ನಾಗಿತ್ತು ಈಗ ಗುಡಿಸಲುಗಳಲ್ಲಿರುವ ಆರೋಗ್ಯಸ್ಥರ ಜೊತೆಗೆ ಊರೊಳಗಿನ ಸೋಂಕುಳ್ಳ ಪ್ರಾಂತ್ಯದವರು ಗುಟ್ಟಾಗಿ ಹೋಗಿ ಸೇರಿಕೊಳ್ಳುತ್ತಲಿದ್ದಾರೆ ಪ್ಲೇಗ್ ರೋಗ ತಗಲಿದವರಲ್ಲಿ ಸುಮಾರು 19 ಮಂದಿಗೆ ಇಲ್ಲಿನ ಡಿಸ್ಟ್ರಿಕ್ಟ್ ಆಫೀಸಿನ ಹೆಡ್ ರೈಟರ್ ಮ॥ ಸಿ ಕೃಷ್ಣರಾಯರು ಮಾಡಿದ ಔಷಧ ಚಿಕಿತ್ಸಾದಿಗಳಿಂದ 15 ಮಂದಿ ವರೆಗೂ ಗುಣಹೊಂದಿದರು ಪ್ರಾರಂಭದಲ್ಲಿಯೇ ಇವರ ಔಷಧವನ್ನು ಪ್ರಯೋಗಿಸುತ್ತಾ ಬಂದರೆ ಖಂಡಿತವಾಗಿಯೂ ಗುಣವಾಗುವದೆಂದು ಇದುವರೆಗಿನ ಅನುಭವದಿಂದ ಕಂಡುಬಂದಿದೆ ಗುಡಿಸಲುಗಳನ್ನು ಕಟ್ಟುವುದಕ್ಕೆ ಸಾವಿರಾರು ಕುಟುಂಬದವರು ಆತುರರಾಗಿದ್ದಾರೆ ಆದರೆ ಸಾಮಾನುಗಳೇ ಇಲ್ಲ ಡೆಪ್ಯುಟಿ ಕಮಿಷನರವರು ಫಾರೆಸ್ಟು ಇಲಾಖೆಗೆ ಖಂಡಿತವಾದ ಅಪ್ಪಣೆಮಾಡಿರುವುದಾಗಿ ತಿಳಿದುಬಂದಿದೆ. ಆದರೂ ಮರ, ಬೊಂಬು, ಗಳ, ಇತ್ಯಾದಿ ಸಾಮಾನುಗಳು ಇನ್ನೂ ಸಾಕಾದಷ್ಟು ಬಂದಿಲ್ಲ ಒಂದೆರಡು ಗಾಡಿ ಸಾಮಾನು ಬರುವಷ್ಟರಲ್ಲೇ ದೊಡ್ಡ ದೊಡ್ಡವರು ಕಾದಿದ್ದು ತೆಗೆದುಕೊಂಡು ಹೋಗುವರೆಂತಲೂ, ಬಡಜನಗಳಿಗೆ ಸಿಕ್ಕಗೊಡಿಸುವದೇ ಇಲ್ಲವೆಂತಲೂ ಬಹುಮಂದಿ ಹೇಳುತ್ತಾರೆ ಮ್ಯುನಿಸಿಪಾಲಿಟಿಯಲ್ಲಿ ಬಡಜನರಿಗೆ ಅವರ ಆತುರಕ್ಕೆ ತಕ್ಕಹಾಗೆ ತತ್ಕ್ಷಣ ಸಾಲವಾಗಿ ಕೊಟ್ಟದ್ದು, ಸ್ವಲ್ಪ ನಿಧಾನವಾಗಿ ವಾಪಸು ತೆಗೆದುಕೊಳ್ಳುವದಕ್ಕೋಸ್ಕರ ಹಿಂದಿನ ಪ್ಲೇಗ್ ಕಾಲದಲ್ಲಿ ಸುಮಾರು 2,000 ಟಿನ್ ತಗಡುಗಳನ್ನು ತರಿಸಿಟ್ಟದ್ದಂತೆ ವರ್ತಮಾನವಿದೆ ಈಗ ಅವುಗಳನ್ನೆಲ್ಲಾ ಕೇವಲ ಬಡಜನರಿಗೆ ಕೊಟ್ಟಿದ್ದರೆ ಎಷ್ಟೋ ಉಪಕಾರವಾದೀತು ನಮ್ಮ ಡೆಪ್ಯುಟಿ ಕಮಿಷನರವರು ಇದಕ್ಕೆ ಅವಧಾನ ಕೊಡುವರೆಂದು ಬಡಜನರೆಲ್ಲರೂ ಪರೀಕ್ಷಿಸುತ್ತಾರೆ ಕೇವಲ ಬಡವರಾದವರಿಗೂ, ಹತ್ತು ರೂಪಾಯಿ ಅಥವಾ ಅದಕ್ಕಿಂತ ಕಮ್ಮಿ ಸಂಬಳದವರಿಗೂ ಗುಡಿಸಲಿನ ಸಾಮಾನುಗಳನ್ನು ಕ್ರಯವಿಲ್ಲದೆಯೇ ಕೊಡುವುದಾಗಿ ದಯವುಳ್ಳ ಅಪ್ಪಣೆಯಾಗಿರುವುದು ಎಷ್ಟೋ ಸಂತೋಷಕರವಾಗಿದೆ ಆದರೆ ಆ ಸಾಮಾನುಗಳೇ ಬೇಗನೆ ಬಾರದಿದ್ದರೆ ಪ್ರಯೋಜನವೇನು ? ಸಾಮಾನುಗಳನ್ನು ಬೇಗ ತರಿಸುವುದರ ಮೂಲಕವಾಗಲಿ, ಸರ್ಕಾರಿ ತಗಡುಗಳನ್ನು ಸಾಲಕೊಡುವುದರ ಮೂಲಕವಾಗಲಿ ಹೇಗಾದರೂ, ಕಷ್ಟದಲ್ಲಿ ನರಳುತ್ತಿರುವ ಬಡಜನರಿಗೆ ಬೇಗನೆ ಒದಗಿಸುತ್ತಾರೆಂದು ಹಾರೈಸುತ್ತೇನೆ ಜನರು ಪ್ಲೇಗ್ ಇನಾಕ್ಯುಲೇಷನ್‌ನಾದರೂ ಬೇಗನೆ ಮಾಡಿಸಿಕೊಳ್ಳುವುದು ಉತ್ತಮ ಪುರನಿವಾಸಿಗಳಲ್ಲಿ ಮುಖಂಡರು ಎಲ್ಲಾ ಹಂಗಡದವರಿಗೂ ಅದರ ಪ್ರಯೋಜನವನ್ನು ತಿಳಿಸಿ, ತಾವೂ ಅವರ ಎದುರಾಗಿ ಇನಾಕ್ಯುಲೇಷನ್ ಮಾಡಿಸಿಕೊಂಡು ಪ್ರೋತ್ಸಾಹಪಡಿಸಿದರೆ ಎಲ್ಲರಿಗೂ ಅನುಕೂಲವುಂಟು ಮತ್ತು ಇನಾಕ್ಯುಲೇಷನ್ ಮಾಡಿಸಿಕೊಳ್ಳುವ ಬಡಜನರಿಗೆ 2 3 ದಿನಗಳ ಮಟ್ಟಿಗೆ ಮ್ಯುನಿಸಿಪಾಲಿಟಿಯಿಂದಾಗಲಿ, ಧನಿಕರಾದ ಉದಾರಿಗಳಿಂದಾಗಲಿ ಭತ್ಯ ಕೊಡಿಸುವಂತೆ ಮುಖಂಡರು ಏರ್ಪಾಡುಮಾಡಿದರೆ ಬಹುಮಟ್ಟಿಗೆ ಉಪಕಾರವಾಗುವುದು

ಪ್ರೀತಿ

ಈ ಪ್ರಪಂಚದಲ್ಲಿ ಒಂದು ಪ್ರಾಣಿಗೂ, ಮತ್ತೊಂದಕ್ಕೂ ಯಾವ ಕಾರಣದಿಂದ ಅತ್ಯಂತವಾದ ಸಂಬಂಧ ಉಂಟಾಗುತ್ತೆ ಎಂದು ನಾವು ಯೋಚಿಸಿದರೆ ಅನೇಕ ದೊಡ್ಡ ಲೋಕೋಪಕಾರಿಗಳಾದ ಮಹನೀಯರುಗಳು ತಮ್ಮ ಉಪದೇಶವನ್ನು ಜನಗಳ ಮಧ್ಯೆ ಹರಡುತ್ತಿರುವ ಸಮಯದಲ್ಲಿ ಎರಡು ಅಕ್ಷರಗಳಿಂದ ಕೂಡಿರುವ ಪ್ರೀತಿಯೇ ಇದಕ್ಕೆ ಮುಖ್ಯಕಾರಣವಾಗಿದೆ ಎಂದು ಬೋಧಿಸಿರುವ ಮಾರ್ಗವು ನಮ್ಮ ಮನಸ್ಸಿಗೆ ಹೊಳೆಯುತ್ತದೆ. ಇಂಥಾ ಮಾರ್ಗವನ್ನು ಅನುಸರಿಸುವದು ನಮ್ಮ ಮುಖ್ಯ ಕರ್ತವ್ಯವಾಗಿದೆ

ಪ್ರೀತಿಯಲ್ಲಿ ಸ್ವಭಾವಿಕವಾದ ಪ್ರೀತಿ ಎಂತಲೂ, ಈ ಪ್ರಪಂಚದ ನಡವಳಿಕೆಗೆ ಅನುಸಾರವಾದ ಕಾರಣಾಂತರದಿಂದ ಉಂಟಾಗುವ ಪ್ರೀತಿ ಎಂತಲೂ ಎರಡು ವಿಧಗಳುಂಟು ಈ ಎರಡು ವಿಧವಾದ ಪ್ರೀತಿಯ ಲಕ್ಷಣವೂ ಎಂಥಾದ್ದು? ಅದು ಯಾವ ಕಾರಣದಿಂದ ಉಂಟಾಗುತ್ತೆ? ಎಂಬ ವಿಷಯವನ್ನು ನಮ್ಮ ಪೂರ್ವಿಕರು ಈ ಕೆಳಗಿನ ಶ್ಲೋಕಗಳಿಂದ ನಮಗೆ ತೋರಿಸುತ್ತಾರೆ

(1) ಸ್ವಭಾವಿಕವಾದ ಪ್ರೀತಿಯ ಲಕ್ಷಣ—"ವ್ಯತಿಷಜತಿ ಪದಾರ್ಥಾನಂತರಃ, ಕೋಪಿ ಹೇತುರ್ನಖಲು ಬಹಿರುಪಾಧೀನ್, ಪ್ರೀತಯಃ ಸಂಶ್ರಯಂತೇ"—ಅಂದರೆ, ಸ್ವಭಾವಿಕವಾದ ಪ್ರೀತಿಯು ನಮ್ಮ ಆತ್ಮದೊಳಗಿನ ಯಾವುದೋ ಒಂದು ಕಾರಣದಿಂದ ಉಂಟಾಗುತ್ತೆಯೇ ಹೊರತು ಇತರ ಬಹಿರಂಗವಾದ ಕಾರಣಗಳಿಂದ ಉಂಟಾಗುವುದಿಲ್ಲ ಸೂರ್ಯನಿಗೂ ಕಮಲಗಳಿಗೂ ಇರುವ ಪ್ರೀತಿಯೇ ಈ ಸ್ವಭಾವಿಕವಾದ ಪ್ರೀತಿಗೆ ಉದಾಹರಣೆಯಾಗಿದೆ (2) ಕಾರಣಾಂತರದಿಂದುಂಟಾಗುವ ಪ್ರೀತಿಯ ಲಕ್ಷಣ ಮತ್ತು ಅದರ ಉತ್ಪತ್ತಿಗೆ ಕಾರಣ—"ದದಾತಿ ಪ್ರತಿಗೃಹ್ಣಾತಿ ಗುಹ್ಯಮಾಖ್ಯಾತಿ ಪೃಚ್ಛತಿ। ಭುಂಕ್ತೇ ಭೋಜಯತೇ ಚೈವ ಷಡ್ವಿಧಂ ಪ್ರೀತಿಲಕ್ಷಣಂ"—ಅಂದರೆ, ಕೊಡುವುದು, ಸ್ವೀಕರಿಸುವುದು, ಗುಟ್ಟನ್ನು ಹೇಳುವುದು, ಕೇಳುವುದು, ಊಟಮಾಡುವುದು, ಮತ್ತು ಊಟಮಾಡಿಸುವುದು, ಈ ಆರು ವಿಧಗಳೇ ಕಾರಣಾಂತರ ಪ್ರೀತಿಗೆ ಮಾರ್ಗಗಳಾಗಿವೆ ಮತ್ತು "ತಾವತ್ಪ್ರೀತಿರ್ಭವೇಲ್ಲೋಕೇ ಯಾವದ್ದಾನಂ ಪ್ರದೀಯತೇ। ವತ್ಸಃ ಕ್ಷೀರಕ್ಷಯಂ ದೃಷ್ಟ್ವಾ ಪರಿತ್ಯಜತಿ ಮಾತರಂ"—ಅಂದರೆ, ಎಳೇ ಕರುವು ಹಾಲು ಕಡಮೆಯಾಗುತ್ತ ಬಂದ ಭಾವವನ್ನು ತಿಳಿದ ಕೂಡಲೇ ತಾಯಿಯನ್ನು ಯಾವ ರೀತಿಯಾಗಿ ಬಿಡುತ್ತದೆಯೋ ಹಾಗೆಯೇ ಈ ಲೋಕದಲ್ಲಿ ದಾನವೆಂಬುವುದು ಎಲ್ಲಿಯ ವರೆಗೆ ಇರುತ್ತದೆಯೋ ಅಲ್ಲಿಯ ವರೆಗೂ ಪ್ರೀತಿ ಇದ್ದೇ ಇರುವುದು

ಆದ್ದರಿಂದ ಪ್ರೀತಿಯನ್ನು ಸಂಪಾದಿಸಬೇಕೆಂಬ ಮನುಷ್ಯನು ಈ ಗುಣಗಳಿಂದ ಪರಿಪೂರ್ಣನಾಗಿರಬೇಕು ಅವನು ಸತ್ಯವಾದ ಧರ್ಮವನ್ನು ಪಾಲಿಸತಕ್ಕವನಾಗಿಯೂ, ಸತ್ಯವಾದಿಯಾಗಿಯೂ ಇರಬೇಕು ಯಾತಕ್ಕೆಂದರೆ ಸತ್ಯವಂತರಿಗೆ ತಮ್ಮವರು ಅಥವಾ ಬೇರೆಯವರು ಎನ್ನುವ ಬೇದವಿಲ್ಲ ಪ್ರೀತಿಯು ಎಲ್ಲೆಲ್ಲಿ ವ್ಯಾಪಿಸುತ್ತದೆಯೋ ಅಲ್ಲಿ ಒಗ್ಗಟ್ಟು ಮತ್ತು ಮಿತ್ರತ್ವವೂ ಉಂಟಾಗುತ್ತವೆ ಈ ಒಗ್ಗಟ್ಟು ಮತ್ತು ಮಿತ್ರತ್ವಗಳೇ ಸಕಲ ವಿಧವಾದ ಅಭಿವೃದ್ಧಿಗೂ ಮುಖ್ಯವಾದ ಸಾಧನಗಳಾಗಿವೆ ಈ ರೀತಿಯಾಗಿ ಪ್ರೀತಿಯಿಂದ ಅನೇಕ ಮಹತ್ಕಾರ್ಯಗಳು ಉಂಟಾಗುವುದರಿಂದ ಪ್ರತಿ ಒಬ್ಬನೂ ಮುಖ್ಯವಾಗಿ ವಿದ್ಯಾರ್ಥಿಗಳು ಈ ವಿಷಯವಾಗಿ ತಮ್ಮ ಅಮೂಲ್ಯವಾದ ಕಾಲದಲ್ಲಿ ಚೆನ್ನಾಗಿ ಗಮನಕೊಟ್ಟು ಕೈಲಾದ ಮಟ್ಟಿಗೂ ಈ ಸುಗುಣವನ್ನು ಹೊಂದಲು ಪ್ರಯತ್ನಿಸಬೇಕು

ವೈ ಚನ್ನಪ್ಪ

ಬಾಳೆಯ ನಾರು

[ಮೈಸೂರು ಸಂಪದಭಿವೃದ್ಧಿ ಸಮಾಜದ ವ್ಯಾಪಾರ ಮತ್ತು ಕಸಬುಗಳ ಶಾಖೆಯವರು ಬರೆದು ಕಳುಹಿಸಿದ್ದು]

ಎಲ್ಲಾ ಜಾತಿಯ ಬಾಳೇ ಗಿಡಗಳಿಂದಲೂ ನಾರು ತೆಗೆಯಬಹುದು, ಆದರೆ ಕೆಲವು ಬಗೆ ಗಿಡಗಳು ಮಿಕ್ಕವುಗಳಿಗಿಂತಲೂ ಬಹಳ ಉತ್ತಮತರದ ನಾರನ್ನು ಕೊಡುವವು ಬರೀ ನಾರಿಗೆ ಸಂಸ್ಥಾನದಲ್ಲಿಯೇ ಆಗಲಿ, ಹೊರಗಡೆಯೇ ಆಗಲಿ ಗಿರಾಕಿ ಇರುವುದಿಲ್ಲ ಆದಕಾರಣ ಹಣ್ಣು ಮತ್ತು ಎಲೆಗಳಿಗೋಸ್ಕರ ಗಿಡಗಳನ್ನು ಬೆಳಸಿ ಬೇರೆ ಯಾವ ಉಪಯೋಗಕ್ಕೂ ಬಾರದಿರುವ ದಿಂಡುಗಳಿಂದ ನಾರನ್ನು ತೆಗೆದು ರೈತರು ತಮ್ಮ ಸ್ವಂತಕ್ಕೆ ಹಗ್ಗಗಳನ್ನು ಮಾಡಿಕೊಳ್ಳುವುದರಿಂದ ಪ್ರಯೋಜನವಿರುವುದೇ ಹೊರತು ನಾರಿಗೋಸ್ಕರವೇ ಗಿಡಗಳನ್ನು ನಾಟುವುದರಿಂದ ಲಾಭವೇನೂ ಇರಲಾರದು ಬಾಳೇ ನಾರಿನಿಂದ ಬಟ್ಟೆಗಳನ್ನು ನೇಯಬಹುದಾಗಿದ್ದರೂ ಎಳೆಗಳು ಬಹಳ ಒರಟಾಗಿರುವುದರಿಂದ ನೇಯ್ಗೆಗೆ ನಯಬರವೆ ಬಟ್ಟೆಯು ಯಾವ ಕೆಲಸಕ್ಕೂ ಬರುವುದಿಲ್ಲ ಇದುವರೆಗೂ ನಾನು ನೋಡಿರುವ ಈ ನಾರಿನ ಬಟ್ಟೆಗಳೆಲ್ಲಾ ಹಾಸು ನೂಲಿನವಾಗಿಯೇ ಇದ್ದವು

ಬಾಳೇ ದಿಂಡುಗಳಿಂದ ನಾರು ತೆಗೆಯುವ ಒಂದು ಯಂತ್ರವು ಚನ್ನಪಟ್ಟಣದ ಇಂಡಸ್ಟ್ರಿಯಲ್ ಸ್ಕೂಲಿನಲ್ಲಿದೆ ಇದಕ್ಕೆ ಸುಮಾರು ಎಂಟು ಅಥವಾ ಹತ್ತು ರೂಪಾಯಿ ತಗಲಬಹುದು ಮದರಾಸು ವ್ಯವಸಾಯ ಇಲಾಖೆಯ 17 ನೇ ನಂಬರಿನ ವಿಷಯ ಪತ್ರಿಕೆಯಲ್ಲಿ 2 ನೆಯ ಸಂಚಿಕೆಯಲ್ಲಿ ಬಾಳೇ ನಾರು ಬಿಡಿಸುವ ಒಂದು ಸಾಧಾರಣ ಯಂತ್ರದ ವರ್ಣನೆಯನ್ನು ಕೊಟ್ಟಿರುತ್ತಾರೆ ಮತ್ತು ಈ ಸಂಚಿಕೆಯ ಒಂದು ಪ್ರತಿಯು ಈಗ ಎಕನಾಮಿಕ್ ಕಾನ್ಫರೆನ್ಸಿನ ಪುಸ್ತಕ ಭಂಡಾರದಲ್ಲಿದೆ

ಬಾಳೇ ನಾರಿನಿಂದ ಮಾಡಿದ ಸರಕು ಬಿಕರಿಯಾಗುವದೇ? ಮತ್ತು ಉತ್ತರೋತ್ತರ ಈ ಕೈಗಾರಿಕೆಯು ಅಭಿವೃದ್ಧಿಗೆ ಬರುವ ಸಂಭವವಿರುವುದೇ? ಎಂಬೀ ವಿಷಯದಲ್ಲಿ ಮಿ॥ ಕ್ರಂಬೀಗಲ್‌ರವರ ಅಭಿಪ್ರಾಯವೇನೆಂದರೆ —"ಬರೋಡಾ ಸಂಸ್ಥಾನದಲ್ಲಿ ಕೆಲವು ಬಹಳ ಸೊಗಸಾದ ಚಾಪೆಗಳನ್ನು ಮಾಡಿಸಿರುತ್ತೇನಾದಾಗ್ಯೂ ಮುಖ್ಯವಾಗಿ ಇದರಿಂದ ಮಾಡಿದ ಹಗ್ಗಗಳೇ ಜನರಂಜಕವಾಗುವವು ಆದರೆ ಇದನ್ನು ಒಂದು ಕಸಬನ್ನಾಗಿ ಇಟ್ಟುಕೊಂಡು ವ್ಯಾಪಾರ ರೀತಿಯಲ್ಲಿ ನಡಿಸಿಕೊಂಡು ಬರುವುದಕ್ಕೆ ಸಾಕಾಗುವಷ್ಟು ನಾರು ಸಿಕ್ಕದಿರುವುದೇ ಕಾರಣ ಇದೇ ತೊಂದರೆಯು ಅನೇಕ ದೇಶಗಳಲ್ಲುಂಟು ಆದುದರಿಂದ ಈ ನಾರನ್ನು ತೆಗೆಯುವುದರಿಂದ ಪ್ರಕೃತದಲ್ಲಿ ಮನೆಯ ಉಪ್ಪೇಶಗಳಿಗೆ ಮಾತ್ರವೇ ಪ್ರಯೋಜನವುಂಟಲ್ಲದೆ ವ್ಯಾಪಾರಕ್ಕಾಗಿ ಸಾಧ್ಯವಾಗುವಂತಿಲ್ಲ" ಮಿ॥ ಛಾಟರ್ಟನ್‌ರವರು ಹೇಳುವುದೇನೆಂದರೆ —ಬಾಳೇ ನಾರು ಹಗ್ಗಗಳನ್ನು ಮಾಡುವುದಕ್ಕೆ ಮಾತ್ರವೇ ಲಾಯಖಾಗಿರುವುದು ಮತ್ತು ಜನಗಳಿಗೆ ಈ ಹಗ್ಗಗಳಲ್ಲಿ ಹೆಚ್ಚು ಭ್ರಾಂತಿಯೂ ಹುಟ್ಟಬಹುದು ಈ ಅಂಶಕ್ಕೆ ಇದುವರೆಗೆ ಯಾರೂ ವಿಶೇಷ ಗಮನಕೊಟ್ಟಿರುವುದಿಲ್ಲವಾಗಿ ಬಾಳೇ ನಾರಿನ ಹಗ್ಗಗಳು ಎಲ್ಲೋ ಸ್ವಲ್ಪಮಟ್ಟಿಗೆ ತಯಾರಾಗುತ್ತಿವೆ ಊಟದ ಬಾಳೇ ಗಿಡಗಳಿಂದ ನಾರು ಸಿಕ್ಕುವುದು ಬಹಳ ಸ್ವಲ್ಪ, ಆದುದರಿಂದ ಸ್ವಲ್ಪ ನಾರು ಬೇಕಾದರೂ ಅನೇಕ ದಿಂಡುಗಳು ಅವಶ್ಯಕವಾಗಿರುವವು ಪ್ರತಿ ಒಂದು ತೋಟದಲ್ಲೂ ಒಂದೆರಡು ಯಂತ್ರಗಳನ್ನಿಟ್ಟುಕೊಂಡು ತೆಗೆದ ನಾರನ್ನೆಲ್ಲಾ ಜಮಾಯಿಸಿ ಹಗ್ಗ ಮಾಡುವುದಕ್ಕೆ ಕಾರ್ಖಾನೆಗೆ ಸಾಗಿಸುವುದು ಅನುಕೂಲವೇ ಹೊರತು ಬಾಳೇ ದಿಂಡುಗಳನ್ನೇ ಗಾಡಿಗಳ ಮೇಲೆ ಸಾಗಿಸುವುದು ಲಾಭಕರವಾಗಿರಲಾರದು ಈ ಹಗ್ಗಗಳು ಸಣಬು ಮತ್ತು ನೂಲಿನ ಹಗ್ಗಗಳು ಹೊರತು ಇತರ ಎಲ್ಲಾ ವಿಧದ ಹಗ್ಗಗಳಿಗಿಂತಲೂ ಉತ್ತಮವೆನಿಸಿಕೊಳ್ಳುವವು

ಮೈಸೂರು ಮ್ಯುನಿಸಿಪಲ್ ಮೀಟಿಂಗು

ಕಳೆದ ಶನಿವಾರ ಬೆಳಗ್ಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳುಕಟ್ಟಲೆಯ ಮ್ಯುನಿಸಿಪಲ್ ಮೀಟಿಂಗನ್ನು ನಡಿಸಿದರು. ಕಳೆದ ಆಗಸ್ಟ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ 11,600 ರೂಪಾಯಿ ಹುಟ್ಟುವಳಿಯೂ, 15,314 ರೂಪಾಯಿ ಖರ್ಚೂ ಆಯಿತೆಂದೂ, ಜನನ 100, ಮರಣ 152 ಎಂದೂ ತಿಳಿಯಿತು —ನಂಜನಗೂಡಿನಲ್ಲಿ ಪ್ಲೇಗ್ ಹುಟ್ಟಿ ಅಲ್ಲಿಂದ ರಾಜಧಾನಿಗೆ ಬರತಕ್ಕ ಜನವನ್ನು ರೈಲ್ವೆ ಸ್ಟೇಷನ್ನಲ್ಲಿ ವಿಚಾರಿಸಿ ಅವರ ಮೇಲೆ ನಿಗಾ ಇಟ್ಟಿರಬೇಕೆಂದು ಮ॥ ಪಂಡಿತರವರು ಸೂಚಿಸಿದರು ಹೆಲ್ತ್ ಆಫೀಸರವರು ಅಂಥಾ ಜನರು ರಾಜಧಾನಿಗೆ ಬಂದು ಕಾಯಿಲೆಯಾದರೆ ನೆರೆಹೊರೆಯವರು ಹೇಳಿಬಿಡುತ್ತಾರಾದ್ದರಿಂದ ಸ್ಟೇಷನ್ನಲ್ಲಿ ನಿಗಾ ಇಡಬೇಕಾದ ಆಗತ್ಯವಿಲ್ಲವೆಂದು ಹೇಳಿದರು — ಮ್ಯುನಿಸಿಪಲ್ ಲೆಕ್ಕಗಳೆಲ್ಲಾ ಸರಿಯಾಗಿವೆ ಎಂದೂ, ಅಕ್ಟ್ರಾಯಿ ಮತ್ತು ಮೊಹತರ್ಫಾ ವಸೂಲಾತಿಯು ಹೋದ ವರುಷಕ್ಕಿಂತ ಹೆಚ್ಚಾಗಿದೆ ಎಂದೂ ಆಡಿಟರುಗಳು ರಿಪೋರ್ಟು ಮಾಡಿದ್ದರು ಅಕ್ಟ್ರಾಯಿ ಇಲಾಖೆಯವರು ಬೆಳೆಯುಳ್ಳ ಜವಳಿಗೆ ಮುದ್ರೆ ಒತ್ತಿ ಕೆಡಿಸುತ್ತಲೂ, ಅಲ್ಪ ಕ್ರಯದ ಚೀಟಾ ಬಟ್ಟೆಗಳಿಗೆ ಮುದ್ರೆ ಒತ್ತದೆ ಬಿಟ್ಟುಬಿಡುತ್ತಲೂ ಬಂದಿರುವುದು ಸರಿಯಲ್ಲವೆಂದೂ, ಸುಂಕ ತೀರ್ವೆ ಆಗುವ ಜವಳಿಗೆಲ್ಲಾ ಮುದ್ರೆ ಒತ್ತುವುದನ್ನಾಗಲಿ, ಬಿಟ್ಟುಬಿಡುವುದನ್ನಾಗಲಿ ರೂಢಿಗೆ ತರುವುದು ಅವಶ್ಯವೆಂದೂ ಕೆಲವು ಮೆಂಬರುಗಳು ಸೂಚಿಸಿದರು ಈ ವಿಷಯವನ್ನು ಮ್ಯಾನೇಜಿಂಗ್ ಕಮಿಟಿಯವರು ಇತ್ಯರ್ಥ ಮಾಡಬಹುದೆಂದು ತೆಗೆದಿಡಲಾಯಿತು

ರೈಲ್ವೆಯವರಿಂದ ಎಲ್ಲಾ ತರದ ಮ್ಯುನಿಸಿಪಲ್ ತೆರಿಗೆಗಳನ್ನೂ ವಸೂಲ್ಮಾಡುವ ಭಾಗದಲ್ಲಿ ರೂಲಸು ಬದಲಾವಣೆಯಾಗಬೇಕೆಂದು ವೈಸ್ ಪ್ರೆಸಿಡೆಂಟರು ಸೂಚಿಸಿದರು ಬಾಡಿಗೆ ಗಾಡಿಗಳ ವಿಷಯದಲ್ಲಿ ಮ್ಯುನಿಸಿಪಲ್ ಕೌನ್ಸಿಲ್‌ನವರು ಮಾಡಿರುವ ಬೈಲಾಗಳಲ್ಲಿ ಕೆಲವು ಬದಲಾವಣೆಗಳನ್ನು ಸೂಚಿಸಿ ಗವರ್ನ್‌ಮೆಂಟ್ ಸೆಕ್ರೆಟರಿಯವರು ಬರೆದಿದ್ದರು ಪಟ್ಟಣದೊಳಗೆ ಮೋಟರ್ ಗಾಡಿಗಳ ವೇಗವನ್ನು ಗೊತ್ತುಮಾಡಿ ಮ್ಯುನಿಸಿಪಲ್ ಕೌನ್ಸಿಲ್‌ನವರು ಕೆಲವು ಬೈಲಾಗಳನ್ನು ಮಾಡಿದ್ದರು ಮೂರು ಬೈಲಾಗಳ ವಿಚಾರದಲ್ಲೂ ವೈಸ್ ಪ್ರೆಸಿಡೆಂಟರು ಮ ರಂಗಯ್ಯಂಗಾರ್ರು ಕೂಡ ಯೋಚಿಸಿ ತಿದ್ದಬೇಕೆಂದು ಮೆಂಬರುಗಳು ಗೊತ್ತುಮಾಡಿದರು —ಪೋಲಿ ದನಗಳ ಕಾಟ ರಾಜಧಾನಿಯಲ್ಲಿ ಹೆಚ್ಚಾಗಿರುವುದರಿಂದ ಬೆಂಗಳೂರಿನಂತೆ ಇಲ್ಲೂ ಅಂಥಾ ಪೋಲಿ ದನಗಳನ್ನು ಹಿಡಿದು ದೊಡ್ಡಿಗೆ ಕೊಡತಕ್ಕವರಿಗೆ ಮ್ಯುನಿಸಿಪಾಲಿಟಿಯಿಂದ ಇನಾಮು ಕೊಡುವ ರೂಲಸು ಜಾರಿಗೆ ತರಬೇಕೆಂದು ಸೂಚಿಸಲಾಯಿತು ಈ ಏರ್ಪಾಡು ಮಾಡಿದರೆ ಪ್ರಜೆಗಳಿಗೆ ಹಿಂಸೆ ಹೆಚ್ಚಾಗುವುದೆಂದು ಕೆಲವು ಮೆಂಬರುಗಳು ಸೂಚಿಸಿದರು ಪೋಲೀಸ್ ಕಾನೂನ್ನಲ್ಲಿ ಈ ಕಾಟವನ್ನು ಪೋಲೀಸಿನವರು ತಪ್ಪಿಸುವುದಕ್ಕೆ ಅವಕಾಶವಿರುವುದರಿಂದ ಆ ಇಲಾಖೆಗೆ ಬರೆದು ಶ್ರಮಪಡಿಸುವುದು ಉತ್ತಮವೆಂದು ತೀರ್ಮಾನ ಮಾಡಿದರು

ಕರ್ಸನ್ ಪಾರ್ಕಿನ ಮಧ್ಯೆ ಪ್ರತಿಮೆ ನಿಲ್ಲಿಸಿದ್ದ ಚೌಕದಲ್ಲಿ ನಾಲ್ಕು ಕಡೆಗೂ ಮುಕ್ಕೋಣಾಕಾರದ ಸ್ಥಳವನ್ನು ಕಲ್ಲುನೆಟ್ಟು ವಿಂಗಡಿಸುವುದಕ್ಕೂ, ಕೆರೆ ಏರಿಯ ಬಳಿ ಹೂವಿನ ಗಿಡಗಳನ್ನು ಹಾಕಿ ಸೊಗಸುಮಾಡುವದಕ್ಕೂ 3,200 ರೂಪಾಯಿ ಮ್ಯುನಿಸಿಪಾಲಿಟಿಯಿಂದ ಕೊಡಬೇಕೆಂದು ಇಂಜನಿಯರ್ ಇಲಾಖೆಯವರು ಕೇಳಿದ್ದರು ಅಷ್ಟು ಹಣ ಕೊಡಲು ಮ್ಯುನಿಸಿಪಾಲಿಟಿಗೆ ಚೈತನ್ಯವಿಲ್ಲವೆಂದು ತಿಳಿಸುವಂತೆ ಮೆಂಬರುಗಳು ಅಭಿಪ್ರಾಯಪಟ್ಟರು —ದೂಳಿ ಮುತ್ಸದ್ದಿಗಳಿಗೆ ತಿಂಗಳಿಗೆ ತಲಾ 1 ರೂಪಾಯಿಯಂತೆ ಅಲೋಯನ್ಸು ಕೊಡಲು ರೂಲಸು ಇಲ್ಲವೆಂದೂ, ಅವರಿಗೆ ಸಂಬಳ ಬಡ್ತಿಮಾಡುವುದಾಗಿದ್ದರೆ ಕೌನ್ಸಿಲ್ ತೀರ್ಮಾನವನ್ನು ತಿಳಿಸಬೇಕೆಂದೂ ಗವರ್ನ್‌ಮೆಂಟಿನವರು ಹುಕುಂ ಕಳುಹಿಸಿದ್ದರು ಮೆಂಬರುಗಳು ಅದನ್ನು ರಿಕಾರ್ಡುಮಾಡಿಕೊಂಡು ಬಡ್ತಿ ವಿಚಾರವನ್ನು ಮ್ಯಾನೇಜಿಂಗ್ ಕಮಿಟಿಯವರು ಚರ್ಚಿಸಿ ಗೊತ್ತುಮಾಡತಕ್ಕದ್ದೆಂದು ಅಭಿಪ್ರಾಯಪಟ್ಟರು —ರಾಜಧಾನಿಗೆ ನೀರನ್ನು ಒದಗಿಸುವುದಕ್ಕೆ ಸರ್ಕಾರದವರು ಹಂಗಾಮಿಯಾಗಿ ಯಂತ್ರಗಳನ್ನಿಡಿಸಿದ್ದ ಅದರ ಖರ್ಚನ್ನು ಮ್ಯುನಿಸಿಪಾಲಿಟಿಯವರು ವಹಿಸಬೇಕೆಂದು ಬರೆದಿದ್ದರು ಮ್ಯುನಿಸಿಪಾಲಿಟಿಯವರು ಆ ಹಣವನ್ನು ಮಾಫ್ ಮಾಡಿಕೊಡಬೇಕೆಂದು ಹಿಂದೆ ಬರೆದು ತಿಳಿಸಿದ್ದಕ್ಕೆ ಅದನ್ನು ವಜಾಮಾಡಲು ಆಗಲಾರದೆಂತಲೂ, ಆ ಹಣವನ್ನು ಕೊಟ್ಟೇ ತೀರಬೇಕೆಂತಲೂ ಮತ್ತೆ ಸರ್ಕಾರದವರು ಹುಕುಂ ಕೊಟ್ಟಿದ್ದಾರೆ ಮೆಂಬರುಗಳು ಆ ಹುಕುಮನ್ನು ರಿಕಾರ್ಡುಮಾಡಿಕೊಂಡರು —ಕಾರಂಜಿ ಕೆರೆಗೆ ನೀರು ಬರುವ ನಾಲೆಗಳನ್ನು ದುರಸ್ತುಮಾಡಿ ಒಳ್ಳೇ ಸ್ಥಿತಿಯಲ್ಲಿಟ್ಟುಕೊಳ್ಳುವುದಕ್ಕೆ ಸಾಲೀಯಾನಾ ತಗಲುವ 300 ರೂಪಾಯಿ ಖರ್ಚನ್ನು ಮ್ಯುನಿಸಿಪಾಲಿಟಿಗೆ ಹಾಕದೆ ಅರಮನೆಯವರು ವಹಿಸತಕ್ಕದ್ದೆಂದು ಗವರ್ನ್‌ಮೆಂಟಿನಿಂದ ಬಂದಿರುವ ಹುಕುಮನ್ನು ಮೆಂಬರುಗಳು ರಿಕಾರ್ಡುಮಾಡಿಕೊಂಡರು —ಮ್ಯುನಿಸಿಪಾಲಿಟಿಗೆ ಆ ಕಮಿಷನರ ದರ್ಜೆಯ ವೈಸ್ ಪ್ರೆಸಿಡೆಂಟರು ಆವಶ್ಯವೇ? ವೈಸ್ ಪ್ರೆಸಿಡೆಂಟರ ಜೊತೆಗೆ ಕಲೆಕ್ಟರ್ ಅಮಲ್ದಾರರು ಇರಬೇಕೇ? ಈ ಭಾಗದಲ್ಲಿ ಮ್ಯುನಿಸಿಪಲ್ ಕೌನ್ಸಿಲ್‌ನವರ ತೀರ್ಮಾನವನ್ನು ತಿಳಿಸಬೇಕು ಎಂದು ಗವರ್ನ್‌ಮೆಂಟಿನವರು ಪ್ರಶ್ನೆಮಾಡಿದ್ದಾರೆ ಮೆಂಬರುಗಳು ಈ ವಿಚಾರವನ್ನು ಪರಿಷ್ಕಾರವಾಗಿ ಚರ್ಚಿಸಿ ಗೊತ್ತುಮಾಡುವುದಕ್ಕೋಸ್ಕರ ಒಂದು ಕಮಿಟಿಯನ್ನು ಮಾಡಿಕೊಂಡರು —ಪ್ರೆಸಿಡೆಂಟರು ನೇರಾ ಗವರ್ನ್‌ಮೆಂಟಿನವರ ಕೂಡ ಕಾಗದ ಪತ್ರಗಳನ್ನು ನಡಿಸಕೂಡದೆಂದೂ, ಡೆಪ್ಯುಟಿ ಕಮಿಷನರ ಮೂಲಕ ಗವರ್ನ್‌ಮೆಂಟಿಗೆ ಎಲ್ಲಾ ವಿಚಾರಗಳನ್ನೂ ತಿಳಿಸಬೇಕೆಂದೂ ಗವರ್ನ್‌ಮೆಂಟಿನವರು ಹುಕುಂ ಕಳುಹಿಸಿದ್ದರು ಬೆಂಗಳೂರಿನಲ್ಲಿ ಹಾಗೆಯೇ ಮೈಸೂರಿನಲ್ಲೂ ಮ್ಯುನಿಸಿಪಲ್ ಪ್ರೆಸಿಡೆಂಟರು ನೇರಾ ಗವರ್ನ್‌ಮೆಂಟಿನವರ ಕೂಡ ಕಾಗದ ಪತ್ರಗಳನ್ನು ನಡಿಸಬೇಕೆಂದೂ, ಆವಶ್ಯವಿದ್ದರೆ ಅಂಥಾ ಕಾಗದ ಪತ್ರಗಳ ನಕಲುಗಳನ್ನು ಪ್ರೆಸಿಡೆಂಟರು ಡೆಪ್ಯುಟಿ ಕಮಿಷನರವರ ತಿಳುವಳಿಕೆ ಬಗ್ಗೆ ಕಳುಹಿಸಿಕೊಡಬಹುದೆಂದೂ ಮೆಂಬರುಗಳು ತೀರ್ಮಾನ ಮಾಡಿದರು

ದೇವರಾಜ ಮಾರ್ಕೆಟ್ಟಿನ ಪೂರ್ವ ಪಾರ್ಶ್ವದ (ಸಯಾಜಿರಾವ್ ರಸ್ತೆ ಕಡೆ) ಮಳಿಗೆಗಳ ಮುಂಭಾಗದಲ್ಲಿ ಒಂದೇ ಆಕೃತಿಯಾಗಿ ತಾರಸಿ ಕಟ್ಟಡವನ್ನು ಕಟ್ಟಿಸುವುದಕ್ಕೆ 7,100 ರೂಪಾಯಿ ಖರ್ಚುಮಾಡಬಹುದೆಂದು ಮೆಂಬರುಗಳು ಒಪ್ಪಿಕೊಂಡರು ತರುವಾಯ ಮ್ಯಾನೇಜಿಂಗ್ ಕಮಿಟಿ, ಹೆಲ್ತ್ ಕಮಿಟಿ, ಬಿಲ್ಡಿಂಗ್ ಕಮಿಟಿ, ಟೌನ್ ಹಾಲ್ ಕಮಿಟಿ ಸ್ಕೂಲ್‌ಗಳ ಕಮಿಟಿ, ಆಡಿಟರುಗಳು—ಇವರುಗಳ ಚುನಾವಣೆ ನಡೆಯಿತು ಅಕ್ಟ್ರಾಯಿ ಸುಂಕದ ದರಗಳನ್ನು ಏರ್ಪಡಿಸುವ ವಿಚಾರವನ್ನು ಮ್ಯಾನೇಜಿಂಗ್ ಕಮಿಟಿಗೆ ಒಪ್ಪಿಸಿದರು ...ಎ ಇನ್‌ಜನಿಯರ್ ಮಿ॥ ಸಿ ವಿ ಕಾಶಿಪತಿಸ್ವಾಮಿಯವರನ್ನು ಮ್ಯುನಿಸಿಪಲ್ ಇಂಜನಿಯರಾಗಿ ನೇಮಿಸಿ ವರ್ಗಮಾಡಿದೆ ಎಂಬ ಗವರ್ನ್‌ಮೆಂಟ್ ಹುಕುಮು ರಿಕಾರ್ಡುಮಾಡಲಾಯಿತು —ಸ್ಪೆನ್ಸರ್ ಕಂಪನಿಯ ಎದುರಿಗಿರುವ ಗಲ್ಲಿಯನ್ನು ಚದರ ಗಜಕ್ಕೆ ಒಂದು ರೂಪಾಯಿಯಂತೆ ಮ॥ ಸುಬ್ರಾಯಶೆಟ್ಟರಿಗೆ ಬಿಕರಿಮಾಡಬಹುದೆಂದೂ, ಅದರ ಪಕ್ಕದಲ್ಲಿರುವ ತುಳಸೀ ತೋಟವನ್ನೂ ಕರಾರುಬರಸಿಕೊಂಡು ಅವರಿಗೆ ವಹಿಸಬಹುದೆಂದೂ ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿದ್ದಾರೆ —ಡಿಸಿನ್‌ಫೆಕ್ಷನ್ ಮತ್ತು ಪ್ಲೇಗ್ ಆಸ್ಪತ್ರೆಯ ಸಿಬ್ಬಂದಿಯ ಮೂರು ತಿಂಗಳ ಸಂಬಳ ಸ್ಯಾಂಕ್ಷನ್ ಆಗಬೇಕೆಂದು ಹೆಲ್ತ್ ಆಫೀಸರವರು ಸೂಚಿಸಿದರು ಆ ಸಿಬ್ಬಂದಿಯನ್ನು ಇನ್ನೊಂದು ವರುಷ ಇಟ್ಟುಕೊಳ್ಳುವ ಭಾಗದಲ್ಲಿ ಗವರ್ನ್‌ಮೆಂಟಿಗೆ ಬರೆದು ಸ್ಯಾಂಕ್ಷನ್ ಪಡೆಯಬೇಕೆಂದು ಮೆಂಬರುಗಳು ಇತ್ಯರ್ಥಮಾಡಿದರು

ಬಾತ್ಮೀದಾರರಿಗೆ ನೋಟೀಸು

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮೀಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವುದು ಧರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಹೇಳುತ್ತೇವೆ

ಬಾತ್ಮೀದಾರರು ಮಾಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಹಿರಿಯೂರು, ಅರಸೀಕೆರೆ ತಾಲ್ಲೂಕು ಹಾರನಹಳ್ಳಿ, ಚಿಕ್ಕಬಳ್ಳಾಪುರ ತಾಲ್ಲೂಕು ನಂದಿ —ಈ ಬಾತ್ಮಿಗಳಲ್ಲಿ ಪ್ರಕಟನೆಗೆ ಅರ್ಹವಾದ ವರ್ತಮಾನಗಳೇನೂ ಕಂಡುಬರಲಿಲ್ಲ

ಎ ರಿಟೈರ್ಡ್ ಆಫೀಸರ್—ನಿಮ್ಮ ಬಾತ್ಮಿಯನ್ನು ಇಷ್ಟು ಬೇಗನೇ ಪ್ರಕಟಿಸಲಾಗದು

ಈ ವಾರ ನಮಗೆ ತಲಪಿರುವ ಹಲವು ಬಾತ್ಮಿಗಳನ್ನು ಸ್ಥಳಸಂಕೋಚದಿಂದ ಪ್ರಕಟಿಸಲಾಗಲಿಲ್ಲವೆಂದು ವಿಷಾದಿಸುತ್ತೇವೆ

—ಎಡಿ]

ಕರೆಸ್ಪಾಂಡೆನ್ಸ್.

ಯಗಟಿ ದೇವಸ್ಥಾನದ ಚಂದಾ—ಜವಾಬು

ಅಯ್ಯಾ,

ತಮ್ಮ ತಾ 29 ನೇ ಆಗಸ್ಟು ಪತ್ರಿಕೆಯಲ್ಲಿ ಕಡೂರು ತಾಲ್ಲೂಕು ವರ್ತಮಾನದಲ್ಲಿ ಯಗಟಿಯಲ್ಲಿರುವ ಹನುಮಂತ ದೇವರ ಹೆಸರಿನಿಂದ ದೇವು ಕಟ್ಟುವುದಕ್ಕೆಂತ 1,000 ರೂಪಾಯಿ ಭಕ್ತಾದಿಗಳಿಂದ 8 10 ವರುಷಗಳಿಂದಲೂ ಜಮಾಯಿಸಿದ್ದು 2-3 ಜನರು ಅಪಹಾರ ಮಾಡಿರುವರೆಂದು ವರ್ತಮಾನ ಬಂದಿರುತ್ತಂತ ಯಾರೋ ಬರೆದಿರುತ್ತಾರೆ ಇವರಿಗೆ ವರ್ತಮಾನ ಯಾರಿಂದ ತಿಳಿಯಿತೋ ಗೊತ್ತಾಗಲಿಲ್ಲ ಅದು ನ್ಯಾಯವಾಗಿದ್ದಲ್ಲಿ ಅಪಹಾರ ಮಾಡಿದವರ ಹೆಸರನ್ನು ಸಹ ತಿಳಿಸಬಹುದಾಗಿತ್ತು ಆ ರೀತಿ ಯಾಕೆ ಮಾಡಲಿಲ್ಲವೋ ಗೊತ್ತಿಲ್ಲ ಈಗಲೂ ಆ ಬಾತ್ಮೀದಾರರು ಅಂಥವರ ಹೆಸರನ್ನೂ, ವಸೂಲಾಗಿರುವ ಮೊಬಲಗಿನ ಕ್ರಮವಾದ ಲೆಕ್ಕವನ್ನೂ ಪ್ರಕಟಿಸಿದಲ್ಲಿ ತುಂಬಾ ಕೃತಜ್ಞನಾಗಿರುತ್ತೇನೆ

ಪ್ರತ್ಯಕ್ಷದರ್ಶಿ

ಪಟೇಲರಿಲ್ಲದ ಮಜರೆ ಗ್ರಾಮಗಳ ದುಃಸ್ಥಿತಿ

ಅಯ್ಯಾ,

ಇಲ್ಲಿ ನಾನು ಬರೆಯುವ ಸಂಗತಿಯನ್ನು ಮುಂದೆ ನಮ್ಮ ರಾಜಧಾನಿಯಲ್ಲಿ ನಡೆಯುವ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ತಂದು ಪ್ರಜಾ ಹಿತಕರವಾಗುವಂತೆ ನಮ್ಮ ದಯಾಳು ಸರ್ಕಾರದವರು ಮಾಡುತ್ತಾರೆಂಬ ಭರವಸೆ ನನಗೆ ಬಹಳ ಇದೆ ನಮ್ಮ ಸೀಮೆಯಲ್ಲಿ ಕೆಲವು ಗ್ರಾಮಗಳಿಗೆ ಹಳ್ಳಿಗಳನ್ನು ಮಜರೆಯಾಗಿ ಸೇರಿಸಿ ಇರುತ್ತಾರೆ ಈ ಮಜರೆ ಗ್ರಾಮಗಳಲ್ಲಿ ಪಟೇಲರಿಲ್ಲದೆ ಇರುವದು ಸರ್ವರಿಗೂ ಗೊತ್ತೇ ಇದೆ. ಇದರಿಂದ ಈ ಮಜರೆ ಗ್ರಾಮಗಳಲ್ಲಿ ವಾಸಮಾಡುವ ರೈತರಿಗೆ ಬಹಳ ತೊಂದರೆಗಳುಂಟು ಅದೇನಂದರೆ ಪಟೇಲರು ವಾಸವಾಗಿರುವ ಗ್ರಾಮಕ್ಕೂ, ಮಜರೆಯಾಗಿರುವ ಹಳ್ಳಿಗಳಿಗೂ ಸುಮಾರು 3-4 ಮೈಲ್ ದೂರ ಫಾಸಲೆಯಾಗುತ್ತೆ ಗ್ರಾಮಾಂತರಗಳಿಂದ ಪಟೇಲರು ಮಜರೆ ಹಳ್ಳಿಗಳಿಗೆ ಬಂದು ರೈತರ ಹಿತಚಿಂತನೆಗಳನ್ನು ತಿಳಿದುಕೊಳ್ಳುವದು ಕಷ್ಟ ಯಾಕಂದರೆ ಒಂದು ಗ್ರಾಮದ ಕೆಲಸ ಒಬ್ಬ ಪಟೇಲನಿಗೆ ಸಾಕಾಗುವಷ್ಟು ಇರುತ್ತೆ ಇನ್ನೊಂದು ಗ್ರಾಮವನ್ನು ಸರಿಯಾಗಿ ನೋಡುವದಕ್ಕೆ ಅವಕಾಶವಾಗುವದಿಲ್ಲವಾದ್ದರಿಂದ ಈ ಮಜರೆ ಗ್ರಾಮದ ವಾಸಿಗಳಿಗೆ ತೊಂದರೆಗಳು ತಪ್ಪುವದು ಹ್ಯಾಗೆ ಅಲ್ಲದೆ ಪಟೇಲರಿಲ್ಲದಿರುವದರಿಂದ ಈ ಗ್ರಾಮಗಳಿಗೆ ಆಗಾಗ್ಗೆ ಪೋಲೀಸಿನವರೇ ಬರುವದಿಲ್ಲ. ಈ ಪೋಲೀಸಿನವರ ಗುರುತೇ ಈ ಗ್ರಾಮಸ್ಥರಿಗೆ ತಿಳಿಯದು ಹೀಗಿರುವಲ್ಲಿ ಈ ರೈತರ ಗೋಳಾಟ ಇನ್ಯಾವ ಮೂಲಕದಿಂದ ಪರಿಹರಿಸಿಕೊಳ್ಳಬೇಕು? ಪಟೇಲನ ನಿಗಾ ಪೂರ್ಣವಾಗಿ ಇದ್ದೂ, ಪೋಲೀಸಿನವರು ರಾತ್ರಿ ಹಗಲೂ ಗಸ್ತು ಮಾಡುತ್ತಾ ಇದ್ದೂ, ತಳವಾರಿಯು ದಿನಚರಿಯಲ್ಲಿಯೂ ಮನೆ ಮನೆಗಳಿಗೆ ತಿರುಗಿ ರೈತರ ಹಿತಾಹಿತಗಳನ್ನು ತಿಳಿದುಕೊಳ್ಳುತ್ತಾ ಇದ್ದೂ ಕೂಡ ಅಂಥಾ ಗ್ರಾಮಗಳಲ್ಲೇ ವಾರಕ್ಕೆ 2 3 ಕಳುವುಗಳು ನಡೆಯುತ್ತಾ ಇವೆ ಯಾವ ನಿಗಾ ನೋಡುವವರೂ ಇಲ್ಲದೆ ಇರುವ ಈ ಮಜರೆ ಗ್ರಾಮಗಳಲ್ಲಿ ಅನೇಕ ದುಷ್ಕೃತ್ಯಗಳು ನಡೆಯಲು ಯಾವ ಸಂದೇಹವಿರುತ್ತೆ? ಅಲ್ಲದೆ ಇಂಥಾ ದುಷ್ಟರನ್ನು ಹಿಡಿದು ಶಿಕ್ಷಿಸುವ ಅಧಿಕಾರಿಗಳು ಇಲ್ಲದಿರುವದರಿಂದ ಇವರು ಪ್ರಬಲಿಸಿ ಈ ಗ್ರಾಮಗಳಲ್ಲಿ ಬಡ ಪ್ರಜೆಗಳು ಕೂಲಿನಾಲಿ ಮಾಡಿ ಕೂಡಿಸಿಕೊಂಡಿದ್ದ ಆಹಾರ ಪದಾರ್ಥಗಳೆಲ್ಲಾ ಅಪಹರಿಸಿಕೊಂಡು ಹೋಗುವರಲ್ಲಾ! ಅಯ್ಯೋ, ಇನ್ನು ಮುಂದೆ ಈ ರೈತರು ಜೀವಿಸುವದು ಹ್ಯಾಗೆ? ಈ ಮೇಲ್ಕಂಡ ಕಷ್ಟಗಳು ತಪ್ಪುವದಕ್ಕೋಸ್ಕರ ನಮ್ಮ ದಯಾಳು ಸರ್ಕಾರದವರು ಈ ಮಜರೆ ಗ್ರಾಮಗಳಿಗೆ ಒಬ್ಬ ಪಟೇಲನನ್ನು ನೇಮಿಸಿ, ಒಬ್ಬ ತಳವಾರಿಯನ್ನು ಕೊಟ್ಟು, ಆಗಾಗ್ಗೆ ಪೋಲೀಸಿನವರ ನಿಗಾ ಇರುವಂತೆ ಅಪ್ಪಣೆ ಕೊಡಿಸುತ್ತಾರೆಂದು ನಾನು ಪೂರಾ ನಂಬಿರುತ್ತೇನೆ

ಜಗಲೂರು ಗೊಂಚಿಗಾರು ತಿ. ಗುರಪ್ಪ

ವಿದ್ಯಾಭ್ಯಾಸದ ಅಭಿವೃದ್ಧಿಯ ಸಲಹೆಗಳು

ಅಯ್ಯಾ,

ಎಡ್ಯುಕೇಷನ್ ಕಾನ್ಫರೆನ್ಸ್ ಮೆಂಬರುಗಳಾಗಲಿ, ಅಥವಾ ದಸರಾ ರೆಪ್ರಜೆಂಟೆಟಿವ್ ಮೆಂಬರುಗಳಾಗಲಿ ಈ ಕೆಳಗಿನ ಸಲಹೆಗಳಿಗೆ ಗಮನಕೊಟ್ಟು ಸಭೆಯಲ್ಲಿ ಚರ್ಚಿಸಿ ಅನುಕೂಲಪಡಿಸಿಕೊಡುವ ಬಾಗದಲ್ಲಿ ಮಹದುಪಕಾರವೆಂದು ಎಣಿಸಿದೆ

(1) ಈ ಕ್ಷಾಮಕಾಲಗಳಲ್ಲಿ ಬಡ ಜನಗಳು ಸ್ಕೂಲ್ ಫೀಜನ್ನು ಕೊಡಲಾರದೆ ಬಹಳವಾಗಿ ಸಂಕಟಪಡುವರು ಆದ್ದರಿಂದ ಫ್ರೀಷಿಪ್ಪನ್ನು ಶೇಕಡಾ 20 ರಿಂದ 30 ಕ್ಕೆ ಹೆಚ್ಚಿಸಿಕೊಡಬೇಕು (2) ಉಪಾಧ್ಯಾಯರುಗಳಿಗೂ ಇತರರಿಗೂ ಅನುಕೂಲವಾಗುವಂತೆ ಪ್ರತಿ ಒಂದು ಸ್ಕೂಲಿನಲ್ಲಿಯೂ ಒಂದು ರೀಡಿಂಗ್ ರೂಮನ್ನು ಸ್ಥಾಪಿಸಿ ಅದಕ್ಕೆ ಗೌರ್ನಮೆಂಟಿನಿಂದ ತಕ್ಕ ಸಹಾಯವನ್ನು ಒದಗಿಸಿಕೊಡಬೇಕು. (3) ಅಲ್ಪ ಸಂಬಳಗಳುಳ್ಳ ಎ ವಿ ಸ್ಕೂಲ್ ಮಾಸ್ಟರುಗಳು ಪ್ರೈವೇಟ್ ಟ್ಯೂಷನ್‌ಗಳನ್ನಿಟ್ಟುಕೊಳ್ಳುವದರಿಂದ ಯಾರಿಗೂ ಅನನುಕೂಲವಿರಲಾರದು ಪ್ರೈವೇಟಾಗಿ ಪಾಠ ಹೇಳಿಸುವವರೂ ಕಡಮೆ, ಅಥವಾ ಒಬ್ಬಿಬ್ಬರು ಇದ್ದರೂ 1-2 ರೂಪಾಯಿ ಕೊಟ್ಟರೂ ಬಡ ಉಪಾಧ್ಯಾಯರುಗಳಿಗೆ ಹೊಟ್ಟೆ ತುಂಬ ಅನ್ನಕ್ಕೆ ಮಾರ್ಗವಾಗಲಾರದು ಇವರಿಗೆ ಬೇರೆ ವಿಧವಾದ ಉತ್ಪತ್ತಿ ಇರುವುದಿಲ್ಲ, ಸಂಬಳವೂ ಹೆಚ್ಚಾಗಿ ಸಿಕ್ಕುವುದಿಲ್ಲ ದಯಾಳು ಸರ್ಕಾರದವರು ಪ್ರೈವೇಟ್ ಪಾಠಗಳನ್ನಿಟ್ಟುಕೊಳ್ಳಕೂಡದೆಂದು ಮಾಡಿರುವ ರೂಲಸನ್ನು ವಜಾಮಾಡಿಸಿಕೊಡಬೇಕು (4) ಹೈಸ್ಕೂಲುಗಳಲ್ಲಿ ಸಂಸ್ಕೃತವನ್ನು ಬಲಾತ್ಕಾರವಾಗಿ ಓದಬೇಕೆಂದು ನಿಬಂಧನೆಮಾಡಿಕೊಡಬೇಕು (5) ಕನ್ನಡ ವಾಕ್ಯರಚನೆ ಪಾಠ ಹೇಳುವುದಕ್ಕೆ ಟೆಕ್ಸ್ಟ್ ಬುಕ್ಕುಗಳನ್ನು ಗೊತ್ತುಮಾಡಿಕೊಡಬೇಕು (6) ಸಾಮಾನ್ಯವಾಗಿ ಉಪಾಧ್ಯಾಯರುಗಳನ್ನು ಒಂದು ಡಿಸ್ಟ್ರಿಕ್ಟಿನಿಂದ ಇನ್ನೊಂದು ಡಿಸ್ಟ್ರಿಕ್ಟಿಗೂ, ಅಥವಾ ದೂರ ಫಾಸಲೆ ಸ್ಥಳಗಳಿಗೂ ವರ್ಗಮಾಡುವುದರಿಂದ ವ್ಯಥಾ ಶ್ರಮವಾಗುವುದು ಆಗಾಗ್ಗೆ ಉಪಾಧ್ಯಾಯರ ಬದಲಾವಣೆಗಳನ್ನು ಮಾಡುತ್ತಾ ಇರುವದರಿಂದ ವಿದ್ಯಾರ್ಥಿಗಳಿಗೆ ತೊಂದರೆಯೇ ವಿನಹ ಸರ್ಕಾರಕ್ಕೂ ಲಾಭವಿಲ್ಲ ವಿದ್ಯಾರ್ಥಿಗಳಿಗೂ, ಉಪಾಧ್ಯಾಯರುಗಳಿಗೂ ಪ್ರೀತಿ ವಿಶ್ವಾಸಗಳು ನೆಲೆಗೊಳ್ಳಲಾರವು ಬದಲಾವಣೆಯಲ್ಲಿ ಬಾಲಕರು ಸ್ವಲ್ಪ ಸ್ವತಂತ್ರ

ವಹಿಸಿ ಒಂದು ವೇಳೆ ಕೆಟ್ಟುಹೋಗುವುದಕ್ಕೆ ಅವಕಾಶವಾಗುವುದು ಸರ್ಕಾರದ ಎಲ್ಲಾ ಇಲಾಖೆಗಳಲ್ಲಿಯೂ ನೌಕರರಿಗೆ ಪ್ರಯಾಣಕಾಲಗಳಲ್ಲಿ ಮೈಲಿಗೆ 4 ಆಣೆ ಮತ್ತು 6 ಆಣೆ ವರೆಗಳಿವೆ. ವಿದ್ಯಾಭ್ಯಾಸದ ಇಲಾಖೆಯಲ್ಲಿ ಉಪಾಧ್ಯಾಯರಿಗೆ ಪ್ರಯಾಣದ ಖರ್ಚು ಮೈಲಿ 1 ಕ್ಕೆ 3 ಆಣೆಯಂತೆ ಕೊಡು ತ್ತಾರೆ. ಇದು ಬಹಳ ಕಡಮೆ. ಈ ಕ್ಷಾಮಕಾಲದಲ್ಲಿ ಬಾಡಿಗೆ ದರವು ಹೆಚ್ಚಾಗಿರುವುದರಿಂದ ಮೈಲಿಗೆ 5 ಆಣೆಯಂತಾದರೂ ಕೊಡಿಸಿಕೊಡಬೇಕು. (8) ಬೊಂಬಾಯಿ ಆಧಿಪತ್ಯದಲ್ಲಿ ಲೋಕಲ್ ಸ್ಕೂಲುಗಳಲ್ಲಿ ಉಪಾಧ್ಯಾಯರುಗಳಿಗೆ 30 40 ರೂಪಾಯಿ ತನಕ ಸಂಬಳಗಳಿವೆ. ನಮ್ಮ ದೇಶದಲ್ಲಿ ಈಗಿನ ಕಾಲದಲ್ಲಿ ಅವರಿಗೆ 10 ದಿವಸದ ಗಂಜಿಯೂ ಕೂಡ ಆಗುವಂತಿಲ್ಲ. ದಯಾಳು ಸರ್ಕಾರದವರು ಲೋಕಲ್ ಸ್ಕೂಲ್ ಉಪಾಧ್ಯಾಯರುಗಳಿಗೆ 15 ರೂಪಾಯಿಗೆ ಕಡಮೆಯಿಲ್ಲದಂತೆಯೂ, ಸರ್ವಿಸ್ ಮುಗಿಯುವುದರೊಳಗೆ 30 ರೂಪಾಯಿ ಸಂಬಳ ವಾಗುವಂತೆಯೂ ಮಾಡಿಕೊಡಬೇಕು. ಎ ವಿ ಸ್ಕೂಲುಗಳಲ್ಲಿರುವ ಉಪಾಧ್ಯಾಯರುಗಳಿಗೆ 20 ರೂಪಾಯಿಗೆ ಕಡಮೆ ಇಲ್ಲದಂತೆಯೂ, ಸರ್ವಿಸ್ ಮುಗಿಯುವುದರೊಳಗೆ 75 ರೂಪಾಯಿ ಆಗುವಂತೆಯೂ ಮಾಡಿಸಿಕೊಡುವ ಭಾಗದಲ್ಲಿ ಅವರು ಉತ್ಸಾಹದಿಂದ ಕೆಲಸಮಾಡುವುದಕ್ಕೆ ಅವಕಾಶವಾಗುವುದು. ಯೋಗ್ಯರಾದ ಉಪಾಧ್ಯಾಯರು ಈ ಸಂಬಳಗಳಿಗೆ ದೊರೆಯುವರು. (9) ಉಪಾಧ್ಯಾಯರುಗಳು ವಿದ್ಯಾವಂತರಾಗಿಯೂ ಯೋಗ್ಯರಾಗಿಯೂ ಇರುವದರಿಂದ ಅವರ ಗೌರವವನ್ನು ಹೆಚ್ಚಿಸಲು ಅವಕಾಶ ಕೊಡಬೇಕು. ಎ ವಿ ಸ್ಕೂಲ್ ಹೆಡ್ ಮಾಸ್ಟರುಗಳನ್ನು ಮ್ಯುನಿಸಿಪಲ್ ಮೆಂಬರಾಗಿ ನೇಮಿಸಬೇಕಾಗಿ ಕೇಳಿಕೊಂಡಿದೆ. (10) ಟೆಕ್ಸ್ಟ್ ಬುಕ್ಸ್ ಕಮಿಟಿಗೆ ಕೆಲಸಮಾಡಿ ಅನುಭವಸ್ಥರಾಗಿಯೂ ವಿದ್ಯಾವಂತರಾಗಿಯೂ ಇರುವ ಎ ವಿ ಸ್ಕೂಲ್ ಹೆಡ್ ಮಾಸ್ಟರುಗಳನ್ನು ಮೆಂಬರಾಗಿ ನೇಮಿಸಿಕೊಳ್ಳಬೇಕು. (11) ಉಪಾಧ್ಯಾಯರುಗಳು 20 25 ವರ್ಷ ಸರ್ವಿಸ್ ಮುಗಿಯುವುದರೊಳಗೆ ಶ್ವಾಸಕೋಶದ ರೋಗ, ಮೂಲವ್ಯಾಧಿ ಮೊದಲಾದ ರೋಗಗಳಿಗೆ ಗುರಿಯಾಗುವರು. ಕೆಲವರಿಗೆ ಹಲ್ಲು ಬಿದ್ದು ಅವರು ಬೋಧಿಸುವುದು ಬಾಲಕರಿಗೆ ತಿಳಿಯದಂತಾಗುವುದು. ಆರೈಕೆ ಮಾಡಿಕೊಳ್ಳಲು ಸಾಕಾದಷ್ಟು ಆದಾಯವಿಲ್ಲದೆ ಹೊಟ್ಟೆಗೆ ಸಾಲದೆ ಇರುತ್ತದೆ. ಕೇವಲ ಬಡವರಾಗಿ ತಮ್ಮ ಆಯುಸ್ಸನ್ನು ಕಡಮೆ ಮಾಡಿಕೊಳ್ಳುವರು. ನಮ್ಮ ದಯಾಳು ಸರ್ಕಾರದವರು ಉಪಾಧ್ಯಾಯರುಗಳ ಆಯುಸ್ಸು ಹೆಚ್ಚುವಂತೆ 20 ವರ್ಷ ಸರ್ವಿಸ್ ಆದ ಮೇಲೆ ಅವರು ಅಪೇಕ್ಷೆಪಟ್ಟರೆ ಅರ್ಧ ಪೆನ್ಷನ್ ಪಡೆದು ಆರೋಗ್ಯ ಕಾಪಾಡಿಕೊಳ್ಳುವಂತೆ ರೂಲಸ್ಸು ಮಾಡಿಕೊಡಬೇಕಾಗಿ ಕೇಳುವುದು. (12) ಕನ್ನಡ 2 ನೇ ತರಗತಿಯಲ್ಲಿ ಪ್ಯಾಸಾದ ಎಲ್ಲ ಇಂಗ್ಲೀಷ್ ಕ್ಲಾಸಿಗೆ ಸೇರಿಸಕೂಡದೆಂದು ನಿಬಂಧನೆ ಇದೆ. ಎರಡೂ ಜೊತೆಯಲ್ಲಿ ಓದಲು ಅನುಕೂಲವಾಗುವಂತೆ ಕನ್ನಡ 1ನೇ ತರಗತಿಯಲ್ಲಿ ಪ್ಯಾಸಾದ ಕೂಡಲೆ ಇಂಗ್ಲೀಷಿಗೆ ಸೇರಬಹುದೆಂದು ಸರ್ಕಾರದವರು ರೂಲ್ಸು ಮಾಡಿಕೊಟ್ಟರೆ ಬಹು ತರಗತಿ ಕೊಂಚ ಅನುಕೂಲವಾಗುವುದು.

ವಿದ್ಯಾಭಿಮಾನಿ

ತಾಲ್ಲೂಕು ವರ್ತಮಾನಗಳು

ಚಿಕ್ಕನಾಯಕನಹಳ್ಳಿ — ಮಳೆ ವಿಶೇಷ ಬೀಳಲಿಲ್ಲ. ಹೋಗಿಯದು ಪ್ರಾಯಶಃ 1 ಪಾಲು ಬೆಳೆಯಾಗತಕ್ಕದ್ದು ದುಸ್ತರವೆಂದು ತೋರುತ್ತೆ. ರಾಗಿ 13 14 ಸೇರು, ಅಕ್ಕಿ 7 ½ ಸೇರು ಮಾರಾಟವಿದೆ. ಇಲ್ಲಿ 41 ವರುಷಗಳಿಂದ ಸಬ್ ರಿಜಿಸ್ಟ್ರಾರಾಗಿ ಜನಗಳ ಪ್ರೀತಿ ಮಾನಗಳನ್ನು ಸಂಪಾದಿಸಿಕೊಂಡವರೆ ಮ॥ ಶಿಂಗ್ರಿ ಶ್ರೀನಿವಾಸಯ್ಯಂಗಾರ್ಯರವರನ್ನು ಬಿ ವರವಿಕೆ ವರ್ಗಾಯಿಸಿದ ಸಮಾಚಾರವು ಪ್ರತಿ ಕುಟುಂಬದಲ್ಲಿಯೂ ಪೈ ತ ಪ್ರಜೆಗಳಲ್ಲಿಯೂ ಕೇವಲ ವ್ಯಸನವನ್ನುಂಟುಮಾಡಿದ ಕಾರಣ 35 ನೇ ತಾ ಈ ಟವರ್ ಮಹನೀಯರೆಲ್ಲಾ ಕಸಬಾ ಪಟೇಲರ ಮನೆಯಲ್ಲಿ ಸೇರಿ ಮ॥ ಅಯ್ಯಂಗಾರ್ಯರವರನ್ನು ಕರಸಿಕೊಂಡು ಅವರ ಗುಣಕಥನ ಮಾಡಿ ಸುಪ್ರದಾನವನ್ನು ಬಹುಮಾನಿಸಿ ಕಳುಹಿಸಿಕೊಟ್ಟರು. ಹಾಲಿ ಬಂದಿರತಕ್ಕ ಸಬ್ ರಿಜಿಸ್ಟ್ರಾರು ಸಹ ಇವರಂತೆ ಪ್ರಜಾನುರಾಗವನ್ನು ಸಂಪಾದಿಸಲೆಂದು ಹಾರೈಸುವೆವು.

ತಿಪಟೂರು — ಒಂದು ವಾರದಿಂದ ಮಳೆ ವಿಶೇಷವಾಗಿ ಸುರಿಯುತ್ತಿದೆ. ಕೆರೆಕಟ್ಟೆಗಳು ತುಂಬಲು ಆರಂಭವಾಗಿದೆ. ಈ ಟವನ್ನಿಗೆ ಇರುವ 41 ಲಾಂದ್ರಾ ಕಂಬಗಳ ಪೈಕಿ 30 ರಲ್ಲಿ ಮಾತ್ರ ಬೆಳಕು ಬಿಡಗುಟ್ಟುವರು. ಉಳಿದವುಗಳಿಗೆ ಲಾಂದ್ರಗಳೇ ಇಲ್ಲವ ತ ಇರತಕ್ಕ ಲಾಂದ್ರಗಳಲ್ಲಿ ಕೆಲವು ಲಾಂದ್ರಾ ಶಿಥಿಲವಾಗಿವೆ. ಮ್ಯುನಿಸಿಪಾಲಿಟಿಯವರು ಜಾಗ್ರತೆಯಾಗಿ ಯೋಗ್ಯವಾದ ಲಾಂದ್ರಗಳನ್ನು ತರಿಸಿ ಕಂಟ್ರಾಕ್ಟರಿಂದ ತೃಪ್ತಿಕರವಾದ ಕೆಲಸ ನಡೆಯುವಂತೆ ಮಾಡ ಬೇಕಾಗಿದೆ — ಈ ಊರಿನ ರೈಲ್ವೆ ಸ್ಟೇಷನ್ ಮಾಸ್ಟರು ಮ॥ ಗರುಡಾಚಾರ್ರಿಗೆ ಧರ್ಮಾವರ ಸ್ಟೇಷನ್‌ಗೆ ವರ್ಗವಾಗಿದೆ. ಇದು ಈ ಊರಿನ ಸರ್ವ ಜನಗಳಿಗೂ ಬಹು ವ್ಯಸನವನ್ನುಂಟುಮಾಡುತ್ತಿದೆ. ಮುಂದೆ ಬರತಕ್ಕ ಸ್ಟೇಷನ್ ಮಾಸ್ಟರು ಇವರಂತೆ ಪ್ರಜಾನುರಾಗವನ್ನು ಸಂಪಾದಿಸಿಕೊಂಡಾರೆಂದು ನಿರೀಕ್ಷಿಸುವೆವು — ತೆಂಗಿನಕಾಯಿ ಮತ್ತು ಕೊಬರಿಯ ಧಾರಣೆ ಬಹಳ ಚಟಾವಾಗಿದೆ. ಕಾಯಿ 1,000 ಕ್ಕೆ 30 ರೂಪಾಯಿ. ಕೊಬರಿ 60 ರೂಪಾಯಿ.

ದೊಡ್ಡಬಳ್ಳಾಪುರ — ಈ ವಾರ ಸುರಿದ ಮಳೆಯಿಂದ ರಾಗಿ ಪಸಲು ಪುಷ್ಟಿಯಾಗುತ್ತಿದೆ. ಧಾರಣೆಗಳು ಕೊಂಚ ಮಾತ್ರ ಇಳಿತರವಾಗುವಂತಿದೆ — ತಮ್ಮನಹಳ್ಳಿ ಹನುಮನೆಂಬ ಒಬ್ಬ ಮಾದಿಗನು ತನ್ನ ಹೆಂಡತಿಯನ್ನು ಕೊಲೆಮಾಡಿದ ಕೇಸು. ಅವನನ್ನು ಈಗ ಲಾಕಪ್ಪಿನಲ್ಲಿ ಇಟ್ಟಿರುತ್ತಾರೆ — 1 ನೇ ಕೌನ್ಸಿಲರ್ ಮ॥ ಎಚ್ ವಿ ನಂಜುಂಡಯ್ಯನವರೂ, ಡೆಪ್ಟಿ ಕಮಿಷನರ್ ಮ॥ ಚಾಂಡಿ ಸಾಹೇಬರೂ ದಯಮಾಡಿ ಇಲಾಖಾ ಮೋಲ್ವಿಚಾರಣೆ ನಡೆಸುತ್ತಿರುವದಲ್ಲದೆ ಪ್ರಜೆಗಳ ಕಷ್ಟ ಕೊರತೆಗಳನ್ನು ಆದರದಿಂದ ವಿಚಾರಿಸುತ್ತಿದ್ದಾರೆ — ಸ್ಕೂಲುಗಳ ಡೆಪ್ಟಿ ಇನ್ಸ್‌ಪೆಕ್ಟರುಗಳಿಬ್ಬರೂ ಬಂದು ಸ್ಕೂಲುಗಳನ್ನು ಪರೀಕ್ಷಿಸುತ್ತಿರುವರು. ಈ ವರೆಗೆ ಹಿಂದೂಸ್ತಾನಿ ಬಾಯ್ಸ್ ಸ್ಕೂಲೂ, ಎ ವಿ ಸ್ಕೂಲುಗಳ ತರಗತಿಗಳೂ, ಬಾಲಕಿಯರ ಪಾಠಶಾಲೆಯೂ ಎಲ್ಲಾ ಒಂದೇ ಸ್ಥಳದಲ್ಲಿ ಅಂದರೆ ಹಳೇ ಕಚೇರಿಯಲ್ಲಿ ನಡೆಯುತ್ತಿತ್ತು. ಈ ಕಟ್ಟಡವು ಅಪಾಯವಾಗಿದೆ ಎಂಬುವ ಕಾರಣದಿಂದ ಸ್ಥಳಕ್ಕೆ ಗಂಡುಹೆಣ್ಣು ಮಕ್ಕಳನ್ನು ಬೇರೆ ಬೇರೆ ಮನೆಗಳಲ್ಲಿ ಸೇರಿಸಿರುತ್ತಾರೆ. ಈ ಮನೆಗಳು ಆರೋಗ್ಯಕ್ಕೂ, ಬೋಧನಾ ಕೆಲಸಕ್ಕೂ ತಕ್ಕವುಗಳಾಗಿಲ್ಲ. ಆದ್ದರಿಂದ ಹಳೇ ಕಚೇರಿ ಮೇಲ್ಛಾವಣಿಯನ್ನು ಶೀಘ್ರವಾಗಿ ರಿಪೇರಿಮಾಡಿಸಿ ಹಿಂದಿನಂತೆ ಈ ಮಕ್ಕಳನ್ನು ಈ ಭಾರಿ ಕಟ್ಟಡದಲ್ಲಿ ಸೇರಿಸುವದು ಆರೋಗ್ಯಕ್ಕೂ ಅನುಕೂಲವೂ ಎಂದು ಇಬ್ಬರು ಡೆಪ್ಟಿ ಇನ್ಸ್‌ಪೆಕ್ಟರುಗಳು ಅಭಿಪ್ರಾಯಪಟ್ಟು ದಸರಾ ರಜಾ ತೀರಿದ ಕೂಡಲೇ ಸ್ಕೂಲುಗಳನ್ನು ಮುಂಚಿನಂತೆ ಒಂದೇ ಕಡೆ ವರ್ಷಗಳ ತನಕ ನಡಿಸುವರೆಂದು ಕೇಳುತ್ತೇವೆ.

ಶ್ಯಾಮನಗೊಂಡ್ಲು — ಕಳೆದ ವಾರ ಇಲ್ಲಿ 3 4 ಒಳ್ಳೇ ಮಳೆಗಳಾದವು. ಕೆರೆಗಳು ಕೋಡಿ ಬಿದ್ದಿರುತ್ತವೆ. ರಾಗಿ ಫಸಲು ಚೆನ್ನಾಗಿರುತ್ತೆ. ರೋಗಾದಿಗಳೇನೂ ಇಲ್ಲ. ಹವ ಚೆನ್ನಾಗಿದೆ. ಧಾರಣೆಗಳು ಅಕ್ಕಿ 6 ಸೇರು, ರಾಗಿ 12 13 ಸೇರು ಇರುವವು. ಹೊಸ ಸೇರೂ ತೂಕದ ನೊಟ್ಟುಗಳೂ ಈ ವರೆಗೂ ಬರಲಿಲ್ಲ. ಕಾರಣವೇನೋ ಗೊತ್ತಿಲ್ಲ — ಮ್ಯುನಿಸಿಪಾಲಿಟಿಯು ಚೆನ್ನಾಗಿದೆ. ಚರಂಡಿಗಳು ಸರಿಯಾಗಿಲ್ಲದ್ದರಿಂದ ನೀರು ನಿಂತು ದುರ್ಗಂಧವಾಗುತ್ತದೆ — ದಿವಾನ್ ಸಾಹೇಬರವರು ದಯಮಾಡಿಸಿದ್ದಾಗ್ಗೆ ಕೋಟೆಯಲ್ಲಿರುವ ನೀರಿನ ತೊಂದರೆ ಯನ್ನು ಕೇಳಿ ನಲ್ಲಿಗಳನ್ನು ಏರ್ಪಡಿಸುತ್ತೇವೆಂದು ಅಪ್ಪಣೆ ಕೊಡಿಸಿದ್ದರು. ಆ ಕೆಲಸವು ಪೂರೈಸಿದೆ. ನಲ್ಲಿ ಯಾವಾಗ ಬರುತ್ತೋ ಎಂದು ಜನರು ಎದುರು ನೋಡುತ್ತಿದ್ದಾರೆ. ಸರ್ಕಾರದವರು ಜಾಗ್ರತೆ ಏರ್ಪಡಿಸುವರೆಂದು ನಂಬುತ್ತೇವೆ —

ಇಲ್ಲಿನ ಕೋಆಪರೇಟಿವ್ ಸೊಸೈಟಿ ಅಭಿವೃದ್ಧಿಯಲ್ಲಿದೆ. ಗ॥ ಎ ವಿ ಸ್ಕೂಲು ಮಿಷನ್ ಸ್ಕೂಲೂ ಬಹಳ ಉತ್ತಮ ಸ್ಥಿತಿಯಲ್ಲಿವೆ. ಸರ್ಕಲ್ ಇನ್ಸ್‌ಪೆಕ್ಟರವರು ತಾ 25 ರಲ್ಲಿ ದಯಮಾಡಿಸಿ ಸ್ಕೂಲುಗಳಲ್ಲಿ ನಡೆಯುವ ಪಾಠಕ್ರಮಗಳನ್ನೂ, ಮಕ್ಕಳು ತರಪೇತಾಗಿರುವುದನ್ನೂ ಮುದ್ದು ಪರಾಂಬರಿಸಿ ಸಂತೋಷದಿಂದ ತೆರಳಿದರು — ಇಲ್ಲಿರುವ ನೇಟಿವ್ ವೈದ್ಯರಾದ ಮ॥ ಟಿ ವೈ ಗೋವಿಂದಪ್ಪನವರಿಗೆ ವೈದ್ಯದಲ್ಲಿ ತುಂಬಾ ಪರಿಶ್ರಮವಿರುವದರಿಂದ ಸರ್ಕಾರದವರು ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ — ಈ ವರುಷ ದಸರಾ ದರ್ಬಾರಿಗೆ ಚುನಾಯಿಸಲ್ಪಟ್ಟಿರುವ ಮೆಂಬರುಗಳು ಪ್ರಜೆಗಳ ಕಷ್ಟಸುಖಗಳನ್ನು ಅರಿತವರಾಗಿಯೂ, ಯೋಗ್ಯರಾಗಿಯೂ ಇದ್ದರೆ ಒಳ್ಳೆಯದೆಂದು ನಂಬುತ್ತೇವೆ.

ಫ್ರೆಂಚ್‌ರಾಕ್ಸ್ — ಇಲ್ಲಿ 2 3 ದಿನ ಒಳ್ಳೇ ಮಳೆಯಾಯಿತು. ಕೆರೆಗೆ ಸ್ವಲ್ಪಮಟ್ಟಿಗೆ ನೀರು ಬಂದಿದೆ. ಇನ್ನೂ ಒಳ್ಳೇ ಮಳೆಗಳಾಗಿ ಕಾಲು ಭಾಗವಾದರೂ ಕೆರೆ ತುಂಬಿದರೆ ಈ ಸಾಗಿ ತರೀ ಫಸಲಾದೀತು. ಇಲ್ಲವಾದರೆ ರೈತರಿಗೆ ತುಂಬಾ ನಷ್ಟವಾಗುತ್ತೆ. ರಾಗಿಯ ಪೈರಂತೂ ಮುಕ್ಕಾಲು ಭಾಗವೆಲ್ಲಾ ಒಣಗಿಯೇ ಹೋಯಿತು. ಇನ್ನೂ ಉಳಿದಿದ್ದ ಸ್ವಲ್ಪ ಪೈರಿಗೆ ಮೊನ್ನೆ ಬಿದ್ದ ಮಳೆಯಿಂದ ಜೀವ ಬಂದಿದೆ — ಇಲ್ಲಿನ ಜನಗಳಿಗೆ ನೀರಿನ ವಿಷಯದಲ್ಲಿ ತುಂಬಾ ತೊಂದರೆಯಾಗಿದೆ. ಅಲ್ಲಲ್ಲಿ ಇರತಕ್ಕ ಕೆಲವು ಭಾವಿಗಳನ್ನು ದುರಸ್ತುಮಾಡಿಸಿಕೊಟ್ಟರೆ ಪ್ರಜೆಗಳಿಗೆ ಅನುಕೂಲ. ಮುಖ್ಯವಾಗಿ ಇಲ್ಲಿನ ಸಂತೇ ಮೈದಾನಿನಲ್ಲಿ ಒಂದು ಭಾವಿ ತೆಗಿಸಿದರೆ ಸಂತೆಗೆ ಬರತಕ್ಕ ಸಾವಿರಾರು ಜನಗಳಿಗೂ ದನಕರುಗಳಿಗೂ ಕುಡಿಯುವದಕ್ಕೆ ನೀರು ಸಿಕ್ಕಿದಂತಾಗುತ್ತೆ. ಕೆರೆಯಲ್ಲಿ ನೀರು ಇಲ್ಲದಿರುವಾಗ ಸಂತೆ ಜನಗಳ ಕಷ್ಟವನ್ನು ಹೇಳತೀರದು. ಮತ್ತು ಆ ಸ್ಥಳದಲ್ಲಿ ಒಂದು ಮ್ಯುನಿಸಿಪಲ್ ಲಾಂದ್ರಾ ಇಡಿಸಿದರೆ ರಾತ್ರಿ ಕಾಲದಲ್ಲಿ ಈ ರಸ್ತೆಯಲ್ಲಿ ತಿರುಗುವ ಜನಗಳಿಗೆ ಉಪಕಾರವಾಗುವದು. ಇದನ್ನು ಹಿಂದೆ ಕೆಲವು ಸಾರಿ ಸೂಚಿಸಿದ್ದಾಗ್ಯೂ ನಮ್ಮ ತಾಲ್ಲೂಕು ಅಧಿಕಾರಿಗಳಲ್ಲಿ ಯಾರೂ ಮನಸ್ಸಿಗೆ ತಂದುಕೊಳ್ಳಲಿಲ್ಲ. ಪ್ರಜಾನುರಾಗಿಗಳಾಗಿರುವ ನಮ್ಮ ಸಬ್ ಡಿವಿಜನ್ ಸಾಹೇಬರವರು ಈ ವಿಷಯದಲ್ಲಿ ಹುಕುಂ ಕೊಡಿಸುವರೆಂದು ನಂಬಿದೇವೆ — 3 ತಿಂಗಳ ಹಿಂದೆ ಇಲ್ಲಿನ ಪೋಲೀಸ್ ಸ್ಟೇಷನ್ ಲಾಕಪ್ಪಿನಿಂದ ತಪ್ಪಿಸಿಕೊಂಡು ಹೋಗಿದ್ದ ಖೈದಿಯು ಪುನಃ ಬೆಂಗಳೂರಿನಲ್ಲಿ ಸಿಕ್ಕಿದ್ದರಿಂದ ಅವನನ್ನು ಇಲ್ಲಿಗೆ ಹಿಡಿದುಕೊಂಡು ಬಂದರು. ನಮ್ಮ ಸಬ್ ಡಿವಿಜನ್ ಸಾಹೇಬರವರು ದಯಾರ್ದೃಷ್ಟಿಯಿಂದ ಅವನಿಗೆ 6 ತಿಂಗಳ ಸಜಾ ವಿಧಿಸಿದರು — ಇಂತೆಯೂ ಕಡಮೆ ಅಳತೆಯ ಸಿದ್ದೆ ಸೇರುಗಳೂ, ತೂಕದ ಬಟ್ಟುಗಳೂ ಪ್ರಬಲವಾಗುತ್ತಿವೆ. ಈ ದುರ್ಭಿಕ್ಷ ಕಾಲದಲ್ಲಿ ಜನಗಳು ಜೀವಿಸುವದೇ ಕಷ್ಟ. ಇಂತಾದ್ದರಲ್ಲಿ ಕಡಮೆ ತೂಕದ ದವಸ ಧಾನ್ಯಗಳನ್ನು ಬಡ ಜನಗಳು ಕೊಂಡು ತಿನ್ನುವ ಗತಿ ಬಂದಿದೆ. ಸರ್ಕಾರದ ಹುಕುಮಿನಂತೆ ಈಗ ತಯಾರಾಗಿರುವ ಹೊಸ ಸೇರುಗಳನ್ನೂ ತೂಕದ ಬಟ್ಟುಗಳನ್ನೂ ಎಲ್ಲಾ ವರ್ತಕರೂ ಕೊಂಡುಕೊಳ್ಳುವಂತೆ ಉಚಿತವಾದ ಹುಕುಂ ಕೊಡುವರೆಂದು ನಂಬಿದೇವೆ.

ಇಂಡಿಯಾ ದೇಶದ ವೃತ್ತಾಂತಗಳು.

ಸಿಂಧು ಪ್ರಾಂತ್ಯಕ್ಕೆ ಸೇರಿದ ಸಕ್ಕರ್ ಪಟ್ಟಣದಲ್ಲಿ ಹದಿನಾಲ್ಕು ವರುಷದ ಮುಸಲ್ಮಾನ [illegible] ಎಂಟು ವರುಷದ ಸ್ತ್ರೀ ಹುಡುಗಿಯನ್ನು ಅವಳ ಆಭರಣಗಳ ಸಲುವಾಗಿ ಕೊಂದುಬಿಟ್ಟನೆಂದು ದಸ್ತಗಿರಿ ಮಾಡಲ್ಪಟ್ಟು ಇರುತ್ತಾನೆ.

ಬರ್ಮಾ ಸಂಸ್ಥಾನಕ್ಕೆ ಸೇರಿದ ಥಾಟನ್ ಡಿಸ್ಟ್ರಿಕ್ಟಿನಲ್ಲಿ ಈ ವರುಷ ಪ್ರವಾಹಗಳ ದೆಸೆಯಿಂದ 50,000 ಎಕರೆಗಳಲ್ಲಿ ರೈತರು ಮಾಡಿದ್ದ ತರೀ ಪಸಲು ಕೊಚ್ಚಿಹೋಗಿ ನಷ್ಟವಾಯಿತು. ಈ ಪೈಕಿ ಮೂರು ಕಡೆಗಳಲ್ಲಿ ಮಾತ್ರ ಸುಮಾರು 20,000 ಎಕರೆ ಜಮೀನಿಗೆ ಮತ್ತೆ ನಾಟಿ ಹಾಕುತ್ತಿದ್ದಾರೆ.

ಕಲ್ಕತ್ತಾ ಪಟ್ಟಣದ ಮೈದಾನಿನಲ್ಲಿ ಹಾವಿಲ್ದಾರ್ ಕೆರೆಯ ಬಳಿ ಈಚೆಗೆ ಆರು ಕೊಲೆಗಳಾದವು. ಆ ಪೈಕಿ ಐದು ಕೊಲೆಗಳ ಪ್ರಕರಣದ ಕಾರಣವೇ ಗೊತ್ತಾಗಲಿಲ್ಲ. ಆದಕಾರಣ ಪೋಲೀಸ್ ಕಮಿಷನರವರು ಆ ಸ್ಥಳದಲ್ಲೇ ಖಾಯಮಾಗಿ ಒಬ್ಬ ಪೋಲೀಸಿನವನನ್ನು ಕಾವಲಿಡಬೇಕೆಂದು ತೀರ್ಮಾನಮಾಡಿದ್ದಾರೆ.

ರಾಜಪುಟಾನಾಕ್ಕೆ ಸೇರಿದ ಧೋಲ್‌ಪುರವೆಂಬ ಜಾಠ್ ಸಂಸ್ಥಾನದಲ್ಲಿ ಮಹಾರಾಜರವರು ವಯಸ್ಸಿನಲ್ಲಿ ವಿದ್ಯೆಯಲ್ಲಿ ಸಮರ್ಥರಾಗಿರೋದರಿಂದ ಸರ್ ಇಲಿಯಟ್ ಕಾಲ್ವಿನ್‌ರವರು ಆ ಸಂಸ್ಥಾನಕ್ಕೆ ಹೋಗಿ ಅವರಿಗೆ ರಾಜ್ಯಭಾರ ಕಾರ್ಯಗಳನ್ನು ಮುಂದಿನ ಗುರುವಾರ ವಹಿಸಿ ಬರುವಂತೆ ಗೊತ್ತಾಗಿದೆ.

ಚಕ್ರವರ್ತಿ ಸಾರ್ವಭೌಮರವರ ದೊಡ್ಡ ಮಹಾರಾಜ್ಞೀರವರ ಭಾಷಣಗಳಲ್ಲಿ ಮುಖ್ಯವಾದ ಭಾಗಗಳನ್ನು ತೆಗೆದುಕೊಂಡು ದೇಶಭಾಷೆಗಳಿಗೆ ತರ್ಜುಮೆ ಮಾಡಿ ಸರ್ಕಾರಿ ಛಾಪಖಾನೆಯಲ್ಲಿ ಅಚ್ಚುಹಾಕಿ ಪ್ರತಿಗಳನ್ನು ಪಾಠಶಾಲೆಗಳಿಗೂ, ಗ್ರಾಮನೌಕರರುಗಳಿಗೂ ಹಂಚಬೇಕೆಂದು ಮದರಾಸ್ ಗವರ್ನರವರು ಅಪ್ಪಣೆ ಕೊಟ್ಟಿದ್ದಾರೆ.

ಕತ್ತಿವಾಡದ ಸಂಸ್ಥಾನಗಳಲ್ಲಿ ಬ್ರಿಟಿಷ್ ರೆಸಿಡೆಂಟರಾಗಿದ್ದ ಕರ್ನಲ್ ಹಂಟರವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಕತ್ತಿವಾಡ ಸಂಸ್ಥಾನಗಳ ದೇಶೀಯ ರಾಜರು ಚಂದಾ ಹಾಕಿ 20,000 ರೂಪಾಯಿ ಕೂಡಿಸಿ, ಉಪಾಧ್ಯಾಯರನ್ನು ತರಪೇತುಮಾಡುವ ಪಾಠಶಾಲೆಗಳಲ್ಲಿ ಅನೇಕ ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡಲು ವಿನಿಯೋಗಿಸುವಂತೆ ತೀರ್ಮಾನಮಾಡಿರುತ್ತಾರೆ.

ಕಲ್ಕತ್ತಾ ಪಟ್ಟಣದಲ್ಲಿ ಷೇಕ್ ಮಾಹಮುದ್ ಎಂಬೊಬ್ಬ ಮಹಮದೀಯನಿಗೂ ಅವನ ಹೆಂಡತಿಗೂ ವಿರೋಧಹುಟ್ಟಿ ಅವಳು ಗಂಡನ ಮೇಲೆ ಮೊಕದ್ದಮೆ ಮಾಡಿದಳು. ಇದಕ್ಕಾಗಿ ಅವನು ತನ್ನ ಹೆಂಡತಿಯನ್ನು ಬೀದಿಯಲ್ಲಿ ಓಡಿಸಿಕೊಂಡುಹೋಗಿ ಕೊಂದುಹಾಕಿದನು. ಇವನು ಕೆಟ್ಟಕೃತ್ಯ ಮಾಡುತ್ತಿದ್ದನೆಂದೂ, ಈಗ ಪೋಲೀಸಿನವರ ವಶದಲ್ಲಿರುತ್ತಾನೆಂದೂ ತಿಳಿಯುವುದು.

ಹೈದರಾಬಾದ್ ನೈಜಾಮರವರು ನವಾಬ್ ವಲಿಯುದ್ದೀನ್ ಬಹದೂರ್‌ಯವರಿಗೆ ಸೈನ್ಯದ ಇಲಾಖಾ ಮಂತ್ರಿಯಾಗಿ ನೇಮಕಮಾಡಿರುತ್ತಾರೆ. ಅವರ ತಲಬು ತಿಂಗಳಿಗೆ 2,000 ರೂಪಾಯಿ. ಈ ಬಹದೂರ್‌ಯವರು ಚೀಫ್ ಮಂತ್ರಿಯವರಾದ ಸರ್ ಫಕಾರುಲ್ ಉಮ್ರಾಯವರ ಕುಮಾರರಾಗಿ ವಿದ್ಯಾದಿ ಸಾಮರ್ಥ್ಯರನ್ನು ಸಂಪಾದಿಸಿಕೊಂಡಿದ್ದಾರೆ.

ಕರಾಚಿ ಪಟ್ಟಣದ ಜೈಲ್‌ಖಾನೆಯಲ್ಲಿದ್ದ ಮೂರು ಮಂದಿಯನ್ನು ಅವರು ಯಾವುದೋ ಒಂದು ಅಪರಾಧ ಮಾಡಿದ್ದೇವೆಂದು ಒಪ್ಪಿಕೊಳ್ಳುವುದಕ್ಕೋಸ್ಕರ ಡೆಪ್ಟಿ ಜೈಲರೂ, ಜೈಲ್ ವಾರ್ಡರೂ, ಒಬ್ಬ ಪೋಲೀಸಿನವನೂ ಸೇರಿ ಕ್ರೂರತರವಾದ ಹಿಂಸೆ ಮಾಡಿರುತ್ತಾರೆಂದು ಕ್ರಿಮಿನಲ್ ಮೊಕದ್ದಮೆ ಹುಟ್ಟಿ ಸೆಷನ್ಸ್ ಜಡ್ಜರು ದರ್ಯಾಪ್ತಿಮಾಡುತ್ತಿದ್ದಾರೆ. ಆ ಮೂರು ಮಂದಿ ನೌಕರರ ಕಡೆ ಮೂವರು ಲಾಯರುಗಳೂ, ಸರ್ಕಾರದ ತರಫಿನಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರವರೂ ನಿಂತು ಈ ಮೊಕದ್ದಮೆಯನ್ನು ನಡಿಸುತ್ತಿರುವರು.

ಗಯಾ ಪಟ್ಟಣದಲ್ಲಿ ಸೆಯ್ಯದ್ ಬೇಲಾಘಾತ್ ಹುಸೇನ್ ಎಂಬೊಬ್ಬ ಬ್ಯಾರಿಸ್ಟರು ತನಗೆ ಮೂರು ಮಂದಿ ಸಂಬಳಗಾರರು ಬೇಕೆಂದೂ, ಪ್ರತಿ ಒಬ್ಬರೂ 500 ರೂಪಾಯಿ ಠೇವಣಿ ಕಟ್ಟಬೇಕೆಂದೂ ಪ್ರಕಟನೆಮಾಡಿ, ಅರ್ಜಿದಾರರಿಂದ ಹಣವನ್ನು ತೆಗೆದುಕೊಂಡು ವಾಪಸಮಾಡದೆ ಮೋಸಪಡಿಸಿದನೆಂದು ಮೊಕದ್ದಮೆ ಹುಟ್ಟಿ, ಸೆಷನ್ಸ್ ಜಡ್ಜರು ಆ ಬ್ಯಾರಿಸ್ಟರಿಗೆ ಎರಡು ವರುಷ ಕಠಿಣ ಸಜವನ್ನೂ 1,500 ರೂಪಾಯಿ ಜುಲ್ಮಾನೆಯನ್ನೂ ವಿಧಿಸಿದರು. ಈತನು ಕಲ್ಕತ್ತಾ ಹೈ ಕೋರ್ಟಿನಲ್ಲಿ ಅರ್ಜಿಹಾಕಿ ಜಾಮೀನಿನ ಮೇಲೆ ಬಿಡಿಸಿಕೊಂಡು ಅಪೀಲ್ ಮಾಡಿಕೊಂಡಿರುತ್ತಾನೆ.

ಕಲ್ಕತ್ತಾ ಪಟ್ಟಣದಲ್ಲಿರುವ ಒಂದು ಬ್ಯಾಂಕಿನವರು ಕಾನ್‌ಪುರದಲ್ಲಿರುವ ಬ್ಯಾಂಕಿಗೆ 50,000 ರೂಪಾಯಿನ ಕರೆನ್ಸಿ ನೋಟುಗಳ ಅರ್ಧ ಭಾಗಗಳನ್ನು ಇನ್ಸೂರು ಮಾಡಿ ಅಂಚೆಯ ಮೇಲೆ ಕಳುಹಿದರು. ಆ ಲಕ್ಕೋಟೆಯನ್ನು ಕಾನ್‌ಪುರದಲ್ಲಿ ಬಿಚ್ಚಿ ನೋಡಿದಾಗ ಅದರಲ್ಲಿ ಚಿಂದಿ ಕಾಗದಗಳಿದ್ದವು. ಕೆಲವು ದಿನಗಳ ಮೇಲೆ ಅದೇ ನೋಟುಗಳ ಉಳಿದ ಅರ್ಧ ಭಾಗಗಳನ್ನೂ ಹಾಗೆಯೇ ಅಂಚೆಯ ಮೂಲಕ ಇನ್ಸೂರು ಮಾಡಿ ಕಳುಹಿಸಿದಾಗ ಅದನ್ನೂ ಅದೇ ರೀತಿ ಅಪಹರಿಸಿದರು. ಈ ಕಳುವು ಎಲ್ಲಿ ಯಾರಿಂದ ಆಯಿತೆಂಬುವುದು ಇನ್ನೂ ಪತ್ತೆ ಆಗಲಿಲ್ಲ.

ಲಾಹೋರ್ ಪಟ್ಟಣದಲ್ಲಿ "ಜಮೀನ್‌ದಾರ್" ಎಂಬ ಪತ್ರಿಕೆಯ ಸಂಪಾದಕರು ಸರ್ಕಾರದಲ್ಲಿ 2,000 ರೂಪಾಯಿ ಠೇವಣಿ ಕಟ್ಟಿ ಪತ್ರಿಕೆಯನ್ನು ನಡಿಸುತ್ತಿದ್ದರು. ಈಚೆಗೆ ಆ ಪತ್ರಿಕೆಯಲ್ಲಿ ರಾಜದ್ರೋಹಕರವಾದ ಸಂಗತಿಗಳನ್ನು ಪ್ರಕಟಿಸಿ ಮಾಡಿದ್ದನ್ನು ನೋಡಿ ಗವರ್ನ್‌ಮೆಂಟಿನವರು ಆ ಠೇವಣಿ ಹಣವನ್ನು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಂಡುಬಿಟ್ಟರು. ಈಗ ಮತ್ತೆ ಆ ಪತ್ರಿಕೆಯ ಸಂಪಾದಕರು ಪತ್ರಿಕೆಯನ್ನು ನಡಿಸುವುದಕ್ಕೆ ಅಪ್ಪಣೆ ಕೊಡಬೇಕೆಂದು ಅರ್ಜಿ ಬರೆದುಕೊಂಡರು. ಡೆಪ್ಟಿ ಕಮಿಷನರವರು ಆ ಸಂಪಾದಕರನ್ನು ಕರಸಿ ಮತ್ತೆ ಜಾಮೀನಾಗಿ 10,000 ರೂಪಾಯಿ ಠೇವಣಿ ಕಟ್ಟಿದರೆ ಅಪ್ಪಣೆ ಕೊಡುತ್ತೇವೆಂದು ತಿಳಿಸಿದ್ದಾರೆ.

"ಪ್ರಜಾಬಂಧು" ಎಂಬ ಬಂಗಾಳಿ ಪತ್ರಿಕೆಯು ಕ್ಷಯರೋಗದ ವಿಷಯದಲ್ಲಿ ಬರೆಯುವುದೇನೆಂದರೆ—ಹಿಂದೂಸ್ಥಾನದ ವಿದ್ಯಾವಂತರಲ್ಲಿ ಈಚೆಗೆ ಕ್ಷಯರೋಗ ಹೆಚ್ಚುತ್ತಿದೆ ಎಂದು ಕೇಳಿ ದುಃಖಪಡಬೇಕಾಗಿದೆ. ಈ ರೋಗಪೀಡಿತರಿಗೆ ವೇದದಲ್ಲಿ ಹೇಳಿರುವ ಚಿಕಿತ್ಸೆಯು ಬಹಳ ಗುಣಕಾರಿಯಾದದ್ದೆಂದು ಇಲ್ಲಿನ ಒಂದು ಚಿಕಿತ್ಸಾಲಯದಲ್ಲಿ ನಿರ್ಧರಮಾಡಲ್ಪಟ್ಟಿದೆ. ಈ ಮರಣಕರವಾದ ರೋಗಕ್ಕೆ ಪರಿಹಾರವೇನೆಂದರೆ—ಕುಂಬಳಕಾಯಿನ ಒಂದು ಚೂರನ್ನು ತೆಗೆದುಕೊಂಡು, ಪಂಕೆಯಲ್ಲಿ ಚೆನ್ನಾಗಿ ಕಾಯಿಸಿ ಹಿಂಡಿ ರಸವನ್ನು ತೆಗೆದು ಆ ರಸವನ್ನು ಸುಮಾರಾಗಿ 2½ ರೂಪಾಯಿ ತೂಕದಷ್ಟು ಪ್ರತಿ ದಿನವೂ ಬೆಳಿಗ್ಗೆ ರೋಗಿಗೆ ಕುಡಿಸುತ್ತಾ ಬಂದರೆ ಒಂದು ತಿಂಗಳೊಳಗಾಗಿ ಗುಣ ಕಂಡುಬರುತ್ತದೆ.

ಇಂಡಿಯಾ ಗವರ್ನ್‌ಮೆಂಟಿನವರು ಟಿಬೆಟ್ ರಾಜ್ಯದ ಪ್ರಧಾನ ಗುರುವಾದ ದಳಾಯಿ ಲಾಮಾರವರಿಗೆ ಒಪ್ಪಿಸುವುದಕ್ಕಾಗಿ 16 ಅಮೂಲ್ಯ ವಸ್ತುಗಳನ್ನು ಇಂಗ್ಲಾಂಡಿನಲ್ಲಿ ತಯಾರುಮಾಡಿಸಿದ್ದಾರೆ. ಈ ಪದಾರ್ಥಗಳನ್ನು ಇಂಡಿಯಾ ಆಫೀಸಿನ ಅಧಿಕಾರಿಗಳು ನೋಡಿ ಸಂತೋಷಪಟ್ಟುಕೊಂಡರು. ಅವು ಇಷ್ಟರಲ್ಲೇ ಜಹಜಿನ ಮೇಲೆ ತರಲ್ಪಡುವವು. ಆ ಪೈಕಿ ಕೆಲವು ವಸ್ತುಗಳ್ಯಾವವೆಂದರೆ, ಭಂಗಾರದ ಕಟ್ಟುಹಾಕಿದ 5 ಅಡಿ ಪ್ರಮಾಣದ ಚಕ್ರವರ್ತಿ ದಂಪತಿಗಳ ಭಾವಚಿತ್ರ, ಇದಕ್ಕೆ ಅವರು ಸ್ವಹಸ್ತ ರುಜು ಮಾಡಿದ್ದಾರೆ. ಒಂದು ದಿವ್ಯವಾದ ಭಂಗಾರದ ಬಟ್ಟಲು, ಬಹಳ ನೇತ್ರಾನಂದಕರವಾಗಿ ಬೈಂಡುಕಟ್ಟಿದ ಲೋಕಚರಿತ್ರೆ, ಭಂಗಾರದ ಒಂದು ಜೊತೆ ಮೋಂಬತ್ತಿ ಕಂಭಗಳು, ಕುದುರೆಯ ಜೀನು, ಒಂದು ದೂರದರ್ಶಕ ಯಂತ್ರ, ಮೊದಲಾದವು.

ಹೋದ ವರುಷ ಜೂಲೈ ತಿಂಗಳಲ್ಲಿ ಜರ್ಮನಿಂದ ಬರ್ಮಾಕ್ಕೆ ಬಿಕರಿಗಾಗಿ 2,000 ಚಾಪೆಗಳು ಬಂದವು. ಅವುಗಳ ಮೇಲೆ ಮುಸಲ್ಮಾನರ ಮಸೀದಿಯ ಚಿತ್ರವೂ, ಕಲ್ಮಾ ಎಂಬ ಕೊರಾನ್ ವಾಕ್ಯವೂ ಬರೆದಿತ್ತು. ಬರ್ಮಾ ಪೋಲೀಸಿನವರು ಅದನ್ನು ನೋಡಿ ಅದು ಬಿಕರಿಗೆ ಬಂದರೆ ಮಹಮದೀಯರಲ್ಲಿ ಆಗ್ರಹ ಉಂಟಾಗಿ ಪ್ರಜಾ ನೆಮ್ಮದಿಗೆ ಭಂಗವಾದೀತೆಂದು ತಿಳಿದು ಆ ಚಾಪೆಗಳನ್ನೆಲ್ಲಾ ತಡೆಸಿಟ್ಟುಕೊಂಡರು. ಮ್ಯಾಜಿಸ್ಟ್ರೇಟರು ಮೊದಲು ಅದನ್ನು ಎರಡು ತಿಂಗಳ ತನಕ ಮಾರಕೂಡದೆಂದು ತಡೆಯ ನೋಟೀಸ್ ಕೊಟ್ಟರು. ಅದರ ಮೇಲೆ ಬರ್ಮಾ ಗವರ್ನ್‌ಮೆಂಟಿನವರು ಆ ವಾಯಿದೆಯನ್ನು ಡಿಸೆಂಬರ್ ಆಖೈರು ವರೆಗೂ ಹೆಚ್ಚಿಸಿ ಹುಕುಂ ಕೊಟ್ಟರು. ಈಗ ಬರ್ಮಾ ಆಧಿಪತ್ಯದ ಮುಸಲ್ಮಾನ್ ಸಂಘದವರು ಅಂಥಾ ಮಾರಿಕೆ ಪದಾರ್ಥಗಳ್ಯಾವನ್ನೂ ಹಿಂದುಸ್ಥಾನಕ್ಕೆ ಬಾರದಂತೆ ತಡೆಯನ್ನು ಕಲ್ಪಿಸಬೇಕೆಂದು ವೈಸ್‌ರಾಯಿ ಪ್ರಭುಗಳಿಗೆ ವಿಜ್ಞಾಪನೆ ಮಾಡಿಕೊಂಡಿದ್ದಾರೆ.

ಲಾಹೋರ್ ಪಟ್ಟಣದಲ್ಲಿ ಸುಮಾರು ಹನ್ನೆರಡು ವರುಷಗಳ ಕೆಳಗೆ ಪೀಪಲ್ಸ್ ಬ್ಯಾಂಕ್ ಎಂಬ ಒಂದು ಸ್ವದೇಶೀ ಬ್ಯಾಂಕು ಏರ್ಪಾಡಾಯಿತು. ಅದರ ಮೂಲಧನ 35 ಲಕ್ಷವೆಂದು ರೆಜಿಸ್ಟರಾಗಿದ್ದರೂ 22 ಲಕ್ಷ ರೂಪಾಯಿನ ಷೇರುಗಳನ್ನು ಜನಗಳು ಪಡೆದುಕೊಂಡು 12½ ಲಕ್ಷ ರೂಪಾಯಿ ಮಾತ್ರ ಪಾವತಿ ಮಾಡಿದ್ದರು. ಈ ಬ್ಯಾಂಕಿನ ಶಾಖೆಗಳು ಎಪ್ಪತ್ತು ಶಹರುಗಳಲ್ಲಿ ಏರ್ಪಾಡಾಗಿ ಲೇವಾದೇವಿ ನಡಿಸುತ್ತಾ ಬಹಳ ಪ್ರಾಶಸ್ತ್ಯಕ್ಕೆ ಬಂದಿದ್ದವು. ಈಗ ಅಕಸ್ಮಾತ್ತಾಗಿ ಈ ಬ್ಯಾಂಕು ದಿವಾಳಿಯಾಯಿತೆಂದು ತಂತೀವರ್ತಮಾನ ಬಂದಿದೆ. ಅದಕ್ಕೆ ಹಣ ಹಾಕಿದ್ದವರಿಗೂ ಲೇವಾದೇವಿ ಮಾಡುತ್ತಿದ್ದವರಿಗೂ ಅದು ದಿವಾಳಿಯಾದದ್ದರಿಂದ 20 ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿಯೇ ನಷ್ಟವಾಗಿದೆ ಎಂದು ಪ್ರಕಟವಾಗಿದೆ. ಅನೇಕ ಧರ್ಮ ಫಂಡುಗಳನ್ನು ಈ ಬ್ಯಾಂಕಿನಲ್ಲಿ ಡಿಪಾಜಿಟ್ಟು ಇಟ್ಟಿದ್ದರು. ಸ್ತ್ರೀದರ್ಪಣ ಎಂಬ ಪತ್ರಿಕೆಯ ಮೂಲಧನವೂ, ವಿದ್ಯಾವರ್ಧಕ ಹಣಗಳೂ ಮುಳುಗಿಹೋದವು. ಈ ಬ್ಯಾಂಕಿನಲ್ಲಿ ಈಗ ಸಿಕ್ಕಿರುವ ಆಸ್ತಿಯಿಂದ ಡಿಪಾಜಿಟ್‌ದಾರರಿಗೆ ಮಾತ್ರ 100 ಕ್ಕೆ 75 ರೂಪಾಯಿನಂತೆ ಹಣ ಸಿಕ್ಕಬಹುದೆಂದು ಹೇಳುತ್ತಾರೆ.

ವಿದೇಶದ ವೃತ್ತಾಂತಗಳು

ಗಾರ್‌ಪ್ರಿಸ್ ಎಂಬ ವಿಮಾನ ಸಂಚಾರಿಯು ಕಳೆದ ವಾರ ಟೌಲಾನ್ ಪಟ್ಟಣದಿಂದ ಟೂನಿಸ್ ಪಟ್ಟಣಕ್ಕೆ 500 ಮೈಲಿ ದೂರ ವಿಮಾನದಲ್ಲಿ ಹೋಗಿ 7 ಗಂಟೆ ಹೊತ್ತಿನಲ್ಲಿ ತಲಪಿದ್ದಾನೆ. ಇದು ಪರಮಾಶ್ಚರ್ಯವನ್ನುಂಟುಮಾಡಿತು.

ಮೆಕ್ಸಿಕೋ ರಾಜ್ಯದಲ್ಲಿ ದಂಗೆಕೋರರು ಸಾರ್ಟಿಲ್ಲೊ ಎಂಬ ಸ್ಥಳದಲ್ಲಿ ಡೈನಮೈಟು ಹಾರಿಸಿ ಒಂದು ರೈಲ್ ಗಾಡಿಯನ್ನು ಹಾರಿಸಿಬಿಟ್ಟರು. ಅದರಲ್ಲಿದ್ದ 10 ಮಂದಿ ಸರ್ಕಾರಿ ಸೈನಿಕರೂ, 10 ಮಂದಿ ಪ್ರಯಾಣಿಕರೂ ತತ್‌ಕ್ಷಣವೇ ಮೃತಿಹೊಂದಿದರು.

ಇಂಗ್ಲಾಂಡಿನಲ್ಲಿ ಸ್ತ್ರೀಯರಿಗೆ ಓಟಿನ ಅಧಿಕಾರವನ್ನು ಕೊಡಬೇಕೆಂದು ಹೋರಾಡುತ್ತಿರುವ ಸ್ತ್ರೀ ಸಂಘದವರ ಪೈಕಿ ಯಾರೋ ಕಳೆದ ವಾರ ಸೀಫೋರ್ಡ್

ಎಂಬಲ್ಲಿ ಹುಚ್ಚರಿಗಾಗಿ ಕಟ್ಟುತ್ತಿದ್ದ ಭಾರೀ ಕಟ್ಟಡಕ್ಕೆ ಬೆಂಕಿಹಾಕಿ ಬಹಳ ನಷ್ಟವನ್ನುಂಟುಮಾಡಿದರು

ಸರ್ ವಿಲ್ಲಿಯಂ ಲೀವರ್ ಎಂಬ ಪುಣ್ಯಾತ್ಮನು ಇಂಗ್ಲಾಂಡಿಗೆ ಸೇರಿದ ಬೋಲ್‌ಟನ್ ಪಟ್ಟಣದಲ್ಲಿ ಗಂಡು ಹೆಣ್ಣು ಮಕ್ಕಳಿಗಾಗಿ ಒಂದು ಪಾಠಶಾಲೆಯನ್ನು ಕಟ್ಟಿ ನಡಿಸುವುದಕ್ಕೆ ವರುಷ 1 ಕ್ಕೆ ಒಂದೂವರೆ ಲಕ್ಷ ರೂಪಾಯಿನಂತೆ ಉಚಿತವಾಗಿ ಕೊಡುತ್ತಾ ಬರುವೆನೆಂದು ತಿಳಿಸಿರುತ್ತಾನೆ

ಮಕ್ಕಳ ಹಿತಕಾರಿ

ಎಂದು

SCOTT'S EMULSION

(ಸ್ಕಾಟ್ಸ್ ಇಮಲ್ ಷನ್)

ಎಂಬ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

Always get the Emulsion with this mark—the Fisherman—the mark of the "Scott" process!

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಪ್ರಾಕೃತಿಕ ಭೂಗೋಳ.

ಮೊದಲನೇ ಮುದ್ರಣವು ಅತಿ ಶೀಘ್ರವಾಗಿ ಮುಗಿದುಹೋದ್ದರಿಂದ ಈಚೆಗೆ ಬಂದಿರುವ ಆರ್ಡರುಗಳಿಗೆ ಪ್ರತಿಗಳನ್ನು ಕಳುಹಿಸಲು ಅವಕಾಶವಾಗಲಿಲ್ಲ ಎರಡನೇ ಮುದ್ರಣದಲ್ಲಿ ಅನೇಕ ಹೆಚ್ಚು ವಿಷಯಗಳನ್ನು ಚನ್ನಾಗಿ ವಿವರಿಸಿ ಆರ್ಟ್ ಪೇಪರಿನಮೇಲೆ ಪ್ರಿಂಟುಮಾಡಿರುವ ಅನೇಕ ಹೊಸ ನಕ್ಷೆಗಳನ್ನು ಸೇರಿಸಿರುವುದಲ್ಲದೆ 1 ಅಡಿ ಚಿಲ್ಲರೆ ಬಾಳುವ ಬಣ್ಣಹಾಕಿರುವ ಸುಂದರವಾದ ಒಂದು ಮೈಸೂರು ಮ್ಯಾಪನ್ನು ಸಹ ಸೇರಿಸಿರುತ್ತೆ 1 ನೆಯ ಭಾಗವು ಸೆಪ್ಟಂಬರ್ ತಿಂಗಳು 25 ರಲ್ಲಿ ಬಿಕರಿಗೆ ಸಿದ್ಧವಾಗುವುದು ಈ ಪುಸ್ತಕವು ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೂ ಮತ್ತು ಸ್ಕೂಲಿನಲ್ಲಿ ಪಾಠಹೇಳುವುದಕ್ಕೂ ಬಹಳ ಸಹಕಾರಿಯಾಗಿರುತ್ತದೆ ಕೆಲವು ಪ್ರತಿಗಳು ಮಾತ್ರ ಪ್ರಿಂಟಾಗಿರುವುದರಿಂದ ಮೊದಲು ಬಂದ ಆರ್ಡರುಗಳಿಗೆ ಜಾಗ್ರತೆಯಲ್ಲಿ ಪ್ರತಿಗಳು ಕಳುಹಿಸಲ್ಪಡುವುವು ಕ್ರಯ 0 1 6

ಹೊಸ ಕನ್ನಡ ಲೇಖನದ ಪುಸ್ತಕವೆಂಬ ಹೆಸರಿನಿಂದ 1 ನಂಬರು ಕಾಪಿ ಪುಸ್ತಕಗಳನ್ನೂ ಪ್ರಿಂಟ್‌ಮಾಡಿಸಿರುತ್ತೇನೆ ಇದರ ಮೇಲ್ಪಙ್ತಿಗಳು ಬಹು ಅಂದವಾದ ಬರವಣಿಗೆಯ ಅಕ್ಷರದಂತೆ ತೆಲಿಕೊಟ್ಟುಗಳೇ ಮೊದಲಾದವುಗಳಿವೆಯೇ ಹೊರತು ಪ್ರಿಂಟಿಂಗ್ ಅಕ್ಷರಗಳ ಹಾಗಿಲ್ಲ ಒಳ್ಳೇ ಕಾಗದದ ಮೇಲೆ ನೋಡುವುದಕ್ಕೆ ಬಹು ಅಂದವಾಗಿ ರೂಲುಗಳನ್ನು ಹಾಕಿ ಪ್ರಿಂಟಾಗಿರುತ್ತವೆ ಇವುಗಳು ವಿದ್ಯಾರ್ಥಿಗಳ ಕೈ ತಿದ್ದಲು ಬಹಳ ಸಹಕಾರಿಯಾದ ಕಾಪಿ ಪುಸ್ತಕಗಳೆಂದು ಭಾವಿಸಿ ಮೈಸೂರಿನ ಸ್ಕೂಲುಗಳಲ್ಲಿ ಉಪಯೋಗಿಸುತ್ತಾರೆ ಕ್ರಯ 0 1 3

ಪ್ರಾಕೃತಿಕ ಭೂಗೋಳ ಮತ್ತು ಹೊಸಕನ್ನಡ ಲೇಖನ ಪುಸ್ತಕಗಳನ್ನು ಪಡೆಯಲಿಷ್ಟವುಳ್ಳ ಪುಸ್ತಕ ವ್ಯಾಪಾರಿಗಳೇ ಮೊದಲಾದ ಸರ್ವರೂ ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರಿಗೆ ಬರೆದು ತರಿಸಿಕೊಳ್ಳಬಹುದು

ಎಂ ಸಿ ಲಿಂಗಪ್ಪಯ್ಯ ಹೆಡ್ ಮಾಸ್ಟರು, ಇಟ್ಟಿಗೇಗೂಡು,
[186—1] ಎ ವಿ ಸ್ಕೂಲು, ಮೈಸೂರು

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು, ತಲೆನೋವು, ಗಾಬರಿ ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು, ನುರವು, ಸಿತ್ರಾಣ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾತ, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [181 4]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ರಬ್ಬರ್ ಸ್ಟಾಂಪು.

ಕ್ರಯ ರೂ 1—12—0

ಯಾವ ಭಾಷೆ, ಯಾವ ತರಹ, ಯಾವ ಡಿಜಸಲ್ಲಾದರೂ ಸರಿ ಇದು ವರೆಗೆ

ವಿಕ್ರಯಿಸುತ್ತಲಿದ್ದ 190ರ ರಬ್ಬರ್ ಸ್ಟಾಂಪನ್ನು ಡಿಸೆಂಬರ್ ಒಳಗಾಗಿ ತರಿಸಿಕೊಳ್ಳುವವರಿಗೆ 1 ಶಾಯಿ ಪ್ಯಾಡು, 1 ಪೆಟ್ಟಿಗೆ 1 ಬ್ರಷ್, 2 ಪ್ಯಾಡು ಸಹಿತ ರೂ 1 12 0 ಗೆ ತಯಾರಿಸಿ ಕಳುಹಿಸುತ್ತೇವೆ ನಮಗೆ ಏಜಂಟರು ಬೇಕು ತಿಂಗಳಿಗೆ 15 0 0 ರೂಪಾಯಿ ಸಂಬಳ ಕೊಡುತ್ತೇವೆ ಬೇಕಾದವರು ಬರೆದು ಏಜನ್ಸಿಯನ್ನು ಪಡೆಯಬಹುದು

ವಿಳಾಸ —ಮ್ಯಾನೇಜರ್, ರಬ್ಬರ್ ಸ್ಟಾಂಪು ಡಿಪೋ
[191—2] 19, ಸೆಕೆಂಡ್ ಲೈನ್ ಬೀಚು, ಮದರಾಸು

ನನ್ನ ಪ್ರಿಯ ಸಹೋದರಿಯರುಗಳಿಗೆ

ವಿವೇಕವತಿ ವಿನಯ ಪೂರ್ವಕ ವಿಜ್ಞಾಪನೆ

ಈ ಮನೋಹರವಾದ ಆಭರಣವನ್ನು ಸ್ವಲ್ಪ ಕ್ರಯದಲ್ಲಿ ತಯಾರಿಸಿದ್ದೇನೆ ಇದನ್ನು ತರಿಸಿ ನೋಡಿ ನನ್ನನ್ನು ಪ್ರೋತ್ಸಾಹಪಡಿಸಿರಿ

ರಂಗೂನು ಗೆಜ್ಜೆ ಅಡ್ಡಿಕೆ ಕ್ರಯ 0 6 0 ಆಣೆ



ಇದು ಅಪರಂಜೀ ಭಂಗಾರದಂತಹ ಯಿಮಿಟೇಷನ್ ಗೆಜೆಯಿಂದ ಕರೀ ಬಂಣದ ದಾರದಲ್ಲಿ ಗೆಜೆಯನ್ನು ಪೋಣಿಸಿ ಸುಂದರವಾಗಿ ತಯಾರಿಸಲ್ಪಟ್ಟಿರುತ್ತೆ ರಂಗು ಎಂದಿಗೂ ಕೆಡುವದಿಲ್ಲ ಇದನ್ನು ಹೆಂಗಸರು ಹುಡುಗಿಯರು ಮಕ್ಕಳು ಎಲ್ಲರೂ ಕೊರಳಿಗೆ ಕಟ್ಟಿಕೊಳ್ಳುವದಕ್ಕೆ ಲಾಯಖಾದದ್ದು

ತಾಜಾ ಕಲಂ—ಇದರ ಕ್ರಯವನ್ನು ಮುಂದಾಗಿ ಮನಿಯಾರ್ಡರ್ ಮಾಡಿದರೆ ಯಾವ ಖರ್ಚೂ ಇಲ್ಲದೆ ಬಾಂಗಿ ಮೇಲೆ ಕಳುಹಿಸುತ್ತೇವೆ ವಿ ಪಿಯಾಗಿ ಕಳುಹಿಸೆಂದರೆ ವಿ ಪಿ ಮಾಡಿ ಕಳುಹಿಸುತ್ತೇವೆ

ವಿಳಾಸ —ವಿವೇಕವತಿ, ನಂ 1 ಆರುಮುಗಚೆಟ್ಟಿ ಬೀದಿ,
[193—2] ತಿರುವಲ್ಲಿಕೇಣಿ, ಮದರಾಸು.

ಸುಂದರವಾದ ನಾಲ್ಕು ಎಳೆ ಮುತ್ತಿನ ಹಾರ

ಪದಕ ಸಹಿತ ಹಾರ 1 ಕ್ಕೆ 1 7 0, ಪದಕವಿಲ್ಲದೆ ಹಾರ 1
0—11—0



ಈ ನಕ್ಷೆಯಲ್ಲಿ ತೋರಿಸಿರುವ ಹಾರವು ಮಕ್ಕಳೂ ದೊಡ್ಡವರೂ ಧರಿಸುವದಕ್ಕೆ ಯೋಗ್ಯವಾದದ್ದು ಪ್ರಸಿದ್ಧಿಯಾದ ಚಿನ್ನ ಮಿಶ್ರದ ಮಧುರೆ ಹಿತ್ತಾಳೆಯಲ್ಲಿ ಒಳ್ಳೆಯ ಮುತ್ತಿನಂತಹ ಗಟ್ಟಿಮುತ್ತನ್ನು ಅಸಲ್ ಮುತ್ತಿನ ಹಾರ ತಯಾರಿಸತಕ್ಕವರಿಂದ ಸುತ್ತಿ ಕೊರಳಿಗೆ ಭೂಷಣವೂ ಅಲಂಕಾರವೂ ಆದ ಈ ಮಾಲೆಯನ್ನು ತಯಾರಿಸಿರುತ್ತೇವೆ [193 2]

ಏಕಾಂಬರಂ ಕಂಪನಿ, ಸೆಕೆಂಡ್ ಲೈನ್ ಬೀಚು, ಮದರಾಸು.

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಹಚ್ಚುವುದರಿಂದ ಹಚ್ಚಿದ ತಲೆನೋವು ಹುಟ್ಟುತ್ತದೆ ಕೂದಲು ನಶಿಸಿಹೋಗುತ್ತೆ ಆದಕಾರಣ ಶ್ರೇಷ್ಠವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ" ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ ನಯವಾಗಿ, ಚಕಚಕಿಸುವವು, ನಿಬಿಡವಾದ ನೀಲವರ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ ಸುಂಡಿನ ಹೊಟ್ಟನ್ನು ಆರಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ಬೆಳೆಸಿ, ಅವನ್ನು ಕಪ್ಪಾಗಿ ತಿರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0 4 0 ಬೇರೆ ತರಬೇಕು.

3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ

ಮೈಸೂರು ಎಗ್ಜಿಬಿಷನ್ ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಬಿಷನ್ ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ ಮಸ್ಕಾಟ್ ಗುಡಿ ಫಿಷರ್ ಸೆಕ್ರಿಟರಿ ಮಿ| ಡಿ ಸಾತೊಮರ್ ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ ನನ್ನ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ನಾವುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನೀವು ಕೊಳ್ಳಬಾರದು ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಫಾಯತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವವರು ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕೆಪಿಟೋಲಬಾಮ್"—ಮಳೆ ಮತ್ತು ಚಳಿಯ ಥಂಡಿ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಲಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ನೋಯುವುದು, ಸಂಧುವಾತ, ಮಸ್ತಕಶೂಲೆ, ಹೆಚ್ಚಾಗಿ ಮೆಹನತ್ತು ಪಟ್ಟದ್ದರಿಂದ ಕ್ಷೀಣವಾಗುವದು, ಸೊಂಟನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ ಬಾಟ್ಲಿ 1ಕ್ಕೆ ಕ್ರಯ 0 8 0 ವಿ ಪಿ ಪ್ರತ್ಯೇಕ

ಒಡಮನ್ಸ ಮಲೇರಿಯ ಪಿಲ್ಸ —ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅರ್ಧಜ್ವರ ಮತ್ತು ಒಂದೇ ಸಮನೆ ಬಿಡದೆಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯಸ್" ಗುಳಿಗೆಗಳು ರಾಮಬಾಣವಾಗಿದೆ ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ ಇದು ದೇಶದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ ಬೇರೆ ಗುಳಿಗೆಗಳನ್ನು ತಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ ದಫೆಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕೊಳ್ಳತಕ್ಕದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1-0 0, 3 ಬಾಟ್ಲಿಗಳಿಗೆ ರೂ 2 8-0 ವಿ ಪಿ ಖರ್ಚು ಪ್ರತ್ಯೇಕ

ಏಜೆಂಟ್, ದಿ ಉಲನ್ ಮಾರ್ಟ್, ಮಂಗಳೂರು

ಮೇಲೆಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ — [8 38]

ಆಂಗ್ಲೊ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

Mellin's Food

ಮೆಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಂತೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs. OAKES & Company, Mount Road, Madras.

[4—48] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H Gulliford, Proprietor and Manager, Wesleyan Mission Press, Mysore 2/10/1918

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—೧೯೧೩ ನೇ ಇಸವಿ ಅಕ್ಟೋಬರ್ ತಾರೀಖು ೯ ನೇ ಗುರುವಾರ. ಸಂಚಿಕೆ ೧೯

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತು ಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣ ಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳೆಸುತ್ತೆ ಕೂದಲು ಇದರಿಂದ ವಿಪುಲವಾಗಿ ನಯವಾಗಿ, ಚಕಚಕಿಸುವವು, ನಿವಿಡವಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ಹಂದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪು ಕೊಡುತ್ತೆ ... ಬುರುಡೆಯನ್ನು ಶುದ್ಧ ಮಾಡುತ್ತೆ ಹುಂಡಿನ ಹೊಟ್ಟನ್ನು ಅಡಗಿಸುತ್ತೆ ... ತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ... ಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ... ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ...ಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳೆಸುವದು ... ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ...ರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ ... ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-4 0 ಬೇರೆ ತರಬೇಕು

3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

...ಯು ಬೇಕಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ ... ಎಗ್ಝಿಬಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಝಿಬಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ... ಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ಮನ್ನಾರ್‌ಗುಡಿ ... ಸೆಕ್ರಿಟರಿ ... ರವರು ಬರೆಯುವದು—"ದಯಮಾಡಿ ... ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯ ... ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನಮ್ಮ ಮನೆ ಹೆಂಗಸರು ... ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಹಾವುಗಳಲ್ಲೆಲ್ಲಾ ಕಾಮಿನಿಯಾ ... ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ... ಬಿಕರಿಮಾಡುತ್ತಾರೆನ್ನುವುದನ್ನು ಮರೆಯ... "ಇದು ಅಗ್ಗ, ಇದು ಒಳ್ಳೆಯದು" ಎಂದು ಹೇಳಿ ಮೋಸಮಾಡುವರು ... ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ... ನೋಡಿ ಕೊಂಡುಕೊಳ್ಳಿ

"ಕೆಪಿಟೋಲಬಾಮ್"—ಮಳೆ ಮತ್ತು ಚಳಿಯ ಥಂಡಿ ಹವೆ ... ದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಲಬಾಮ್" ... ಈ ಮುಲಾಮು ರಾಮಬಾಣವಾಗಿದೆ ಕೈಕಾಲು ನೋಯುವುದು, ಸಂ... ಮಸ್ತಕಶೂಲೆ, ಹೆಚ್ಚಾಗಿ ಮೆಹನತ್ತು ಪಟ್ಟದ್ದರಿಂದ ಕ್ಷೀಣವಾಗುವದು, ... ಎದೆನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ... ಗುಣಕಾರಿಯಾಗಿದೆ ಬಾಟ್ಲಿ 1ಕ್ಕೆ ಕ್ರಯ 0 8 0 ಟಿ ಪಿ ಪ್ರತ್ಯೇಕ

...ಡಮನ್ಸ ಮಲೇರಿಯ ಪಿಲ್ಸ—ಶೀತಜ್ವರ, ಥಂಡಿಯಿಂದ ಬರು... ಜ್ವರ, ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆ ಬರುವ ಜ್ವರ, ಇವೆ ಮೊದ... ಮೇಲೆ ಈ "ಒಡಮನ್ಸ ಮಲೇರಿಯನ್" ಗುಳಿಗೆಗಳು ರಾಮಬಾಣ... ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ... ಇದು ದೇಹದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ ಬೇರೆ ...ಗಳನ್ನು ತೆಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ... ಮಾಡುತ್ತೇವೆ ದಫೆಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿ... ತಕ್ಕೊಳ್ಳತಕ್ಕದ್ದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1 0-0 3 ಬಾಟ್ಲಿಗಳಿಗೆ ರೂ. 2 8-0 ಟಿ. ಪಿ. ಖರ್ಚು ಪ್ರತ್ಯೇಕ

ಏಜೆಂಟ್, ದಿ ಉಲ್ಲನ್ ಮಾರ್ಟ್, ಮಂಗಳೂರು

...ಯಿಂದ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ:— [8-37]

ಆಂಗ್ಲೋ-ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ

ಕಂಪನಿಯ ಫಂಡು ರೂ 4,25,00,000

ಕಂಪನಿಯಿಂದ ಪಾವತಿ ಆಗಿರುವದು ,, 3,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ದಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವನ್ನು ಕಳುಹಿಸುತ್ತಾರೆ —ಮಿ| ಎಂ ಎಸ್ ರೆಡ್ಡಿ ಕೆ°, ಚೀಫ್ ಎ ಓ, ಬೆಂಗಳೂರು ಮ|| ಎಂ ಎಸ್ ನಂಜಪ್ಪನವರು ಅಥವಾ ಎ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು, ಅಥವಾ

[1512] ಬ್ರಾಂಚ್ ಸೆಕ್ರೆಟರಿ, ಮದರಾಸ್

ಕುಂತಳಾನಂದ ತೈಲವು

1923

ಹಿಂದುಸ್ಥಾನದ ಪೀತ ಬೇರೆ ಪ್ರದರ್ಶನಗಳಲ್ಲಿ ಮೂರು ಬರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 3 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ—ಬಿ ಎಮ್ ನಾಥ ಮತ್ತು ಕಂಪನಿ,

ವೇಪೇರಿ, ಮದರಾಸ್

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

9-41

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಪೇಟೆಗಳಿಗೆಲ್ಲಾ ತರಿಸಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಪೇಟೆಗಳಲ್ಲಿ ... ಬಿಕರಿಯಾಗುತ್ತಿರುವ ಟೋಪಿಗಳ ದಾರವ... ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಮುದ್ದಾಗಿ ನಾವೇ ನಿಂತು ಚೆನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚೆನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚೆನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚೆನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಅ, ೧ ರೂ ೬ ಅ ೧ ರೂ ೪ ಅ

ಚುಕ್ಕಿಯುಳ್ಳ ಟೋಪಿಗಳು ರೂ ೧-೮, ರೂ ೧-೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಅ ೧ ರೂ ೮ ಅ ೧ ರೂ. ೬ ಅ

ಮುಸುಕಿನ ಟೋಪಿಗಳು ೧ ರೂ ೮ ಅ ೧ ರೂ ೬ ಅ

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ—

ಮ್ಯಾನೇಜರ್ ಹಾಸನದ ಟೋಪಿ ಕಾರ್ಖಾನೆ, ಹಾಸನ.

THE MYSORE GOVERNMENT SECURITY

LIFE AND MARRIAGE ASSURANCE COMPANY, LIMITED.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES REGULATION No III OF 1895)

CAUTION —Before you go in for a Provident Life or Marriage Policy, please ask for a copy of our Company's prospectus which will explain to you the mode of working of the present day provident companies working in India and enables you to select a good institution where your hard earned money will be safe

SPECIAL AND ATTRACTIVE FEATURES OF THE COMPANY

1 ABSOLUTE SECURITY.

The Company has got a capital of one lakh and its funds are invested in the **Mysore Government** and other approved securities The policy holder's moneys are **guaranteed**, and the **capital** and **reserve funds** of the Company are liable to the same

2. MARRIAGE SCHEME

A policy holder can subscribe from Re 1 to Rs 3 every month **Double the premiums paid** to the Company will be paid to the married **on the marriage day** as maximum bonus.

3 LIFE SCHEME

A policy holder can subscribe from As 8 to **Rs. 2** per month Both males and **females**, of ages from 18 to **60** are insured **without medical examination.** The maximum bonus will be paid to **the policy-holders themselves** on surviving **18 years** or to their nominees in case of their earlier death

WANTED.

Energetic and honest **Chief Agents** for every Presidency in India and Taluk Agents in each and every taluk of **the Mysore Province** on commission to represent the Company

For further particulars and prospectuses, please apply **with one anna stamp** and your previous experience in the line to,—

Mr. M. L. NAGANNAH,
Managing Agent,
MYSORE.

[161 10]

ಆಜ್ಮೀರ್ ಜನರಲ್ ಅಷೂರೆನ್ಸ್ ಸೊ

ಹೆಡ್ಡಾಫೀಸ್—ಆಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೇ ಸಂಘದ ಆದಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭದ್ರತೆಯ ಠೇವಣಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಣಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[100 19] ಎಸ್ ಕಬ್ಬೂರ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್ ಬೆಂಗಳೂರು ಸಿಟಿ

ಶ್ರೀಮದ್ವಾಲ್ಮೀಕಿ ರಾಮಾಯಣ

"ಸುನ್ದರಕಾಣ್ಡ" ಮಾಸಪತ್ರಿಕೆ

14 ದೊಡ್ಡ ಪುಟಗಳ ಸಂಚಿಕೆ 1 ಕ್ಕೆ ಐದೇ ಆಣೆ ಸುಮಾರು 14 ಸಂಚಿಕೆಗಳಾಗುತ್ತವೆ ಟೀಕು, ತಾತ್ಪರ್ಯ, ಮೂಲ ಇವುಗಳಿಂದೊಡಗೂಡಿ, ಕಾಗದ, ಅಕ್ಷರ, ಅಚ್ಚು, ಸ್ವಾರಸ್ಯಗಳಿಂದ ಬಹು ಸುಂದರ ಪುಸ್ತಕವಾಗುವುದು ಚಂದಾ ಸೇರತಕ್ಕವರು ಮುಂಗಡ ಒಂದು ರೂ ಕೊಡಬೇಕು ಅದರಲ್ಲಿ ಕಡೆಯ ಮೂರು ಸಂಚಿಕೆಗಳಲ್ಲಿ ಉತ್ತರವಾಗಿಕೊಳ್ಳುವೆವು ಶ್ರೀ "ಶಾರದಾ" ಮಾಸಪತ್ರಿಕಾ ಸಂಪಾದಕರಾದ ವೇ|| ಮೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಇದುವರೆಗೆ ಯಾರೂ ಪ್ರಕಾಶಪಡಿಸದ ರಹಸ್ಯಗಳನ್ನೆಲ್ಲ ಶ್ರೀಸ್ಪಷ್ಟವಾದ ರೀತಿಯಿಂದ ವಿವರಿಸಿ ಬರೆಯುತಲಿದ್ದಾರೆ 1 ಆಣೆ ಟಿಕಟ್ ಕಳುಹಿ ಮಾದರಿ ಸಂಚಿಕೆಯಲ್ಲಿ ನೋಡಬಹುದು

1 1 13 ರಲ್ಲಿ ಆರಂಭವಾಗಿ ಎಂಟು ಸಂಚಿಕೆಗಳು ಸಿದ್ಧವಾಗಿವೆ

ಶ್ರೀ "ಶಾರದಾ" ಮಾಸಪತ್ರಿಕೆ ಇದುವರೆಗೆ 11 ಪುಸ್ತಕಗಳು ಪೂರ್ತಿಯಾಗಿವೆ ವಾರ್ಷಿಕ ಚಂದಾ ರೂ 2 0 0 ರಘುಕುಲಚರಿತೆ ಪ್ರಿಂಟಾಗುತಲಿದೆ 1 ತಿಂಗಳಲ್ಲಿ ಪುಸ್ತಕವು ಪೂರ್ತಿಯಾಗುವುದು ಕ್ರಯ 4 ವಾಲ್ಯೂಂಗೆ ರೂ 2

ವಿಳಾಸ—ಬಿ ಸೀತಾರಾಮಶಾಸ್ತ್ರಿ (ಅಥವಾ)

ಬಿ ಲಕ್ಷ್ಮೀನರಸಿಂಹಶಾಸ್ತ್ರಿ, ಶ್ರೀ ಶಾರದಾ ಆಫೀಸ್,

[195 2] ಬೆಂಗಳೂರು ಸಿಟಿ

ಅಸಲ್ ಸವರ್ನ್ ಭಂಗಾರದ ನಗಗಳು

ಈ ನಗಗಳನ್ನು ಈಗತಾನೇ ನಾವು ನಿಪುಣರಾದ ಮತ್ತು ಪ್ರಸಿದ್ಧಿ ಹೊಂದಿದ ಅಗಸಾಲೆಯರಿಂದ ನೂತನ ನಮೂನೆಯಲ್ಲಿ ನೇತ್ರಾನಂದಕರವಾಗಿ ಸ್ವಂತ ಮುತುವರ್ಜಿಯಿಂದ ತಯಾರ್ ಮಾಡಿಸಿರುತ್ತೇವೆ ಸವರನ್ ಭಂಗಾರಕ್ಕು ಮತ್ತು ಪುಷ್ಪರಾಗಕ್ಕು ನಾವು ಗ್ಯಾರಂಟಿ ಕೊಡುತ್ತೇವೆ ಹಾಗಿಲ್ಲದ ಪಕ್ಷದಲ್ಲಿ ಹಣವನ್ನು ವಾಪಸ್ ಮಾಡಲ್ಪಡುತ್ತೆ ಬಹು ಸುಂದರವಾದ ನಮೂನೆ, ಸರಾಸರು ತರಿಸಿಕೊಂಡು ಉಪಯೋಗಿಸುವಂತೆ ಸಾಧ್ಯವಾದ ಮಟ್ಟಿಗೂ ಬಹು ಸುಲಭ ಕ್ರಯವನ್ನು ನಮೂದಿಸಿರುತ್ತೇವೆ ಪ್ರತಿ ಒಬ್ಬರು ತೆಗೆದುಕೊಂಡು ಉಪಯೋಗಿಸಿ ಸಂತೋಷಪಡಬೇಕಾಗಿ ಪ್ರಾರ್ಥನೆ [77 26]

ಅರ್ಧಚಂದ್ರ 1 ಕ್ಕೆ ರೂಪಾಯಿ	6 0 0
ನಂ 1 ಮೂಗುಬೊಟ್ಟು 1 ಕ್ಕೆ ರೂಪಾಯಿ	7 0 0
,, 2 ಮೂಗುಬೊಟ್ಟು 1 ಕ್ಕೆ ,,	6 0 0
,, 3 ಮೂಗುಬೊಟ್ಟು 1 ಕ್ಕೆ ,,	5-0-0
ಬುಲಾಕು 1 ಕ್ಕೆ 12 ರೂ ಮೊದಲಾಯಿತು	25 0 0

ವರಿಗೂ ಇರುತ್ತೆ ಇದು ಅಲ್ಲದೆ ಇಮಿಟೇಷನ್ ಕೆಂಪುಗಳಿಂದಲೂ, ಒಳ್ಳೆ ಕೆಂಪುಗಳಿಂದಲೂ ತಯಾರ್ ಮಾಡಿ ಕಳುಹಿಸಲ್ಪಡುವದು ಮತ್ತು ಬೆಳ್ಳಿ ಭಂಗಾರದ ನಗಗಳು ಸಹ ತಯಾರ್ ಮಾಡಿ ಕಳುಹಿಸಲ್ಪಡುತ್ತೆ ಬೇಕಾದವರು ಬರಸಿದರೆ ಜವಾಬು ಬರೆಯುತ್ತೇವೆ ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

ವಿಳಾಸ—ಪಿ ಆರ್ ವೆಂಕಟರಮಣ ಅಂಡ್ ಕಂಪೆನಿ,

ನಂ 7, ಕೋಪ್ ವೆಂಕಟಾಚಲೈಯರ್ ವೀದಿ, ಮದರಾಸು

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ —1 ಪಿನಲ್ ಕೋಡು, 2 ಪೊಲೀಸ್ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ದಹ್ಯವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಬುಟ್ಟ್ಯಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ

ತ್ರಿಕ ಪೆನಲ್ ಸೆಕ್ಷನ್‌ಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ? ಯಾ ಕೂಡದೆ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟ್ಟಬೇಕೇ? ಜಾಮಿನ್ ತೆಗೆದುಕೊಳ್ಳಬಹುದೆ? ಯಾ ಕೂಡದೆ? ರಾಜಿಯಾಗಬಹುದೆ? ಯಾ ಕೂಡದೆ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 22-5 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 2 0 0. ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ವೇಮಾರೆಡ್ಡಿ,

ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್,

[103-20] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ

CHAMBERLAIN'S PAIN BALM.

ಚೇಂಬರ್ಲೆನ್ ಯವರು ಮಾಡಿದ ನೋವುಹರ ಔಷಧವು.



1.41

ಬೆನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳು ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ ಇವೆಲ್ಲಾ ನಮಗೆ ಯಾವಾಗ ಉಂಟಾಗುತ್ತವೋ ಆಗ್ಗೆ ನಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೆನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಸಚಿತ್ರ ಶುಕಸಪ್ತತಿ ಕಥೆ 1 8 0 ಟಪಾಲು ಹಾಸಲು 4 ಆಣೆ ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ 1-8-0

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕಮಹಾಶಯರುಗಳೇ —ಮಾನ್ಯತೆಯು ಬೇಕಾದರೆ, ಸಾಮರ್ಥ್ಯಬುದ್ಧಿಯೂಳಿಸ್ಸಬೇಕಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹ ಶಕ್ತಿಯಲ್ಲಾಸೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿ ಕಥೆಗಳನ್ನು ಓದಿರಿ ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡು ಪುಸ್ತಕವಾಗಿದೆ ಬೆಲೆ ರೂ ೧-೪ ೦ ಟಪಾಲು ಹಾಸಲು 3 ಆಣೆ ಈಗಲೇ ಬರೆಯಿರಿ [167-0]

ವಿಳಾಸ:—ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ಕು ಡಿಪೋ, ಚಿಕ್ಕ ಪೇಟೆ, ಬೆಂಗಳೂರು ಸಿಟಿ.

ನಮೂನೆ ಮುಫತ್ತು
ಕೇಶಕುಸುಮಾಕರ ತೈಲವು.

ಸಾಟಿಯಿಲ್ಲದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸಮಾಡುವದರಲ್ಲಿಯೂ, ಬಟ್ಟತಲೆಯಲ್ಲಿ ಕೇಶವನ್ನು ಬೆಳೆಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ ಮೆದುಳಿಗೆ ತಂಪನ್ನು ಉಂಟುಮಾಡುವದರಲ್ಲಿಯೂ ಪೂರ್ಣ ಪ್ರಸಿದ್ಧಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುಡ್ಡಿ ತೈಲ ಕ್ರಯ 10 ಆಣೆ ಮೂರು ಬುಡ್ಡಿಗಳ ತೈಲ ಕ್ರಯ ರೂ 1 12 ಆ ಆರು ಬುಡ್ಡಿಗಳ ತೈಲ ಕ್ರಯ ರೂ 3-4 ಆ ಡಜನ್ ಬುಡ್ಡಿಗಳ ಕ್ರಯ ರೂ 6

ವಿ ಪಿ ಅಂಚೆ ಹಾಸಲು ಪ್ರತ್ಯೇಕ

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ

[82 24] ಔಷಧಾಲಯ, 177 ಚೀನಾ ಬಜಾರ್ ರೋಡ್, ಮದ್ರಾಸು

ಅಮೆರಿಕಾ ದೇಶದ ಇಮಿಟೇಷನ್ ವಜ್ರದ ಆಭರಣಗಳು

ಕಮ್ಮಲು ಜೊತೆ 1ಕ್ಕೆ ರೂ 1 10 0 — ಹತ್ತಿಕಡಕು ಜೊತೆ 1ಕ್ಕೆ ರೂ 1 6 0 — ಕುಂಡಲಿವಾವಲಿ ಜೊತೆ 1ಕ್ಕೆ ರೂ 1 12 0



ಮೂಗುಬಟ್ಟು 1ಕ್ಕೆ 5 ಆಣೆ — ಬೇಸರಿ 1 ಕ್ಕೆ 10 ಆಣೆ — ಬುಲಾಕು 1 ಕ್ಕೆ ರೂ 1-0 0 — ಎಸೆಕ್‌ಟ್ರೋಂ ಭಂಗಾರದ ಸೀಲುಂಗುರ 1ಕ್ಕೆ ರೂ 1-0 0

ಇದು ಪ್ರಖ್ಯಾತಿಯನ್ನು ಪಡೆದ ಮಾರ್ಕೆಟ್ ಹೆಸರುಳ್ಳದ್ದು ಎಷ್ಟು ವರ್ಷಗಳಾದರೂ ಕೆಡುವದಿಲ್ಲ ಭಾಗ್ಯವಂತರೂ ಸಹ ಉಪಯೋಗಿಸಲು ಲಾಯಖಾದದ್ದು ರಾತ್ರಿಯಲ್ಲಿ ಚಂಕಿಯಂತೆ ಪ್ರಕಾಶಿಸುತ್ತೆ ಇದು ಪ್ರಸ್ತಪ್ರಯೋಜನಗಳಿಗೂ ಹಬ್ಬ ಹರಿದಿವಸಗಳಿಗೂ ಬಹಳ ಉಪಯೋಗವಾದದ್ದು [200 1]

ವಿಳಾಸ—ಎ ಮುನಿಸಾಮಿನಾಯುಡು, ಜೂಯಲ್ ಮರ್ಚೆಂಟ್ಸ್,

ನಂ 1 ಅಮರ್‌ಗಂಟೆಟ್ಟಿಸ್ಟ್ರೀಟ್, ತಿರುವಲ್ಲಿಕೇಣಿ, ಮದರಾಸ್

ದಬಾರಿಗೆ ರಿಸ್ಕರಲೇ ತಯಾರ್ ಮಾಡಿದ್.

ಈ ಸಮಯವನ್ನು ಕಳೆದುಕೊಳ್ಳಬೇಡಿ ಬಹಳ ಸಲ್ಪವೇ ಉಳಿದಿವೆ

ರೈಲ್ವೆ ರೆಗ್ಯುಲೇಟರ್

ಬಹಳ ಒಳ್ಳೇ ವಾಚು ಸರಪಣ ಉತ್ತರವಾಯಿ ಸಮೇತ ಕ್ರಯ ರೂ 2 4-0 ಐದು ವರುಷ ಜಾಮೀನ್ ಗಂಟಿಗೆ ಸರಿಯಾದ ಕಾಲ ತೋರಿಸುತ್ತದೆ ಟೂ



ಟಾದ ಉಪಯೋಗಕ್ಕೆ ತಡೆಯುತ್ತೆ ರದು ಕವಚಗಳಲ್ಲೂ ಮುಂದವಾದ ಕನ್ನಡಿ ಹಾಕಿದೆ ಇಷ್ಟು ಸುಲಭ ಕ್ರಯಕ್ಕೆ ಇಂಥಾ ಉತ್ಕೃಷ್ಟವಾದ ವಾಚ್ ಇಲ್ಲ ಎಲ್ಲಾ ಎಳಸುವುದಿಲ್ಲ ವೇಗ ಬರೆಯಿರಿ [205 1]

ವಿಳಾಸ ಪಿ ಎ ರಜಾಕ್ ಕಂಪನಿ, ಗವರ್ನಮೆಂಟ್

ಕಂಟ್ರಾಕ್ಟರ್ಸ್, ರತನ್ ಬಜಾರ್, ಮದರಾಸ್

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 4 ಆಣೆ



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರ್ ಮಾಡಲ್ಪಟ್ಟದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರವಾದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಲೆ ಗಡಿಯಾರಗಳು ಬಿಕರಿಯಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಚಿತ್ರದಲ್ಲಿ ಕಂಡ ಗಡಿಯಾರ ಕೂಡ್ಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,

[129 16] ಪೋಸ್ಟ್ ಬಾಕ್ಸ್, ನಂ 167, ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 6 0 0 ಇದನ್ನು ಸೆಪ್ಟಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ಧನಲಕ್ಷ್ಮಿ ಅಂಡ್ ಕಂಪೆನಿ,

[129 16] ಸಾಹುಕಾರ್ ಪೇಟೆ ಪೋಸ್ಟು, ಮದರಾಸು.

ಡೋಂಗರೆ ಇವರ ಬಾಲಾಮೃತ.

[150-12]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳೇ ಗುಣವುಳ್ಳದ್ದು ಅದು ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ತಿಗಳು ಕಡ್ಡಿಯಂತೆ ಇರೋಣ, ಹಳೇ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಾಗುತ್ತವೆ ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ.

ಸಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೈಕಶ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ [179 6]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ದಿಯು ಮನೆಯಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲದಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಹೊಸ ಕಾದಂಬರಿಗಳು.

ಕುಮುದಿನಿ—ಬಂಗಾಳಿಯಿಂದ ಕನ್ನಡಿಸಲ್ಪಟ್ಟ ಸತ್ತ್ವದಾಯಕ ಕಥೆ ಯುಕ್ತಿಯುಕ್ತವಾದದ್ದು 6 ಆಣೆ ನಿರ್ಭಾಗ್ಯ ಚಾಣಕ್ಯ—ಇದೂ ಮೇಲಿನಂತೆಯೇ ಮನೋಹರವಾದದ್ದು ವೇಶ್ಯಾದಿ ವಿಷಯಾಸಕ್ತರ ನಡೆವಳಿಕೆ ಹೃದಯಂಗಮವಾಗಿ ವರ್ಣಿಸಲ್ಪಟ್ಟಿದೆ 6 ಆಣೆ ಸಂತಾಪಕ—ಈಗ ನಾಟಕಗಳಲ್ಲಿ ಪ್ರಸಿದ್ಧವಾದ “ವಿರುಪಮಾ” ಎಂಬ ನಾಟಕದ ಕಥಾರೂಪದ ಗ್ರಂಥ ಇದನ್ನೋದುವುದಕ್ಕೆ ಕುಳಿತರೆ ಮುಗಿಸುವವರೆಗೂ ಬಿಡಲು ಮನಸ್ಸಾಗುವದಿಲ್ಲ 4 ಆಣೆ [187-13]

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಸುಂದರವಾದ ನಾಲ್ಕು ಎಳೆ ಮುತ್ತಿನ ಹಾರ

ಪದಕ ಸಹಿತ ಹಾರ 1 ಕ್ಕೆ 1-7-0, ಪದಕವಿಲ್ಲದೆ ಹಾರ 1 ಕ್ಕೆ 0-11-0



ಈ ನಕ್ಷೆಯಲ್ಲಿ ತೋರಿಸಿರುವ ಹಾರವು ಮಕ್ಕಳೂ ದೊಡ್ಡವರೂ ಧರಿಸುವುದಕ್ಕೆ ಯೋಗ್ಯವಾದದ್ದು ಪ್ರಸಿದ್ಧಿಯಾದ ಚಿನ್ನ ಮಿಶ್ರದ ಮಧುರೆ ಹಿತ್ತಾಳೆ ಕೆಂಬಿಯಲ್ಲಿ ಒಳ್ಳೆಯ ಮುತ್ತಿನಂತಹ ಗಟ್ಟಿಮುತ್ತನ್ನು ಅಸಲ್ ಮುತ್ತಿನ ಹಾರ ತಯಾರಿಕೆಯವರಿಂದ ಸುತ್ತಿಸಿ ಕೊರಳಿಗೆ ಭೂಷಣವೂ ಅಲಂಕಾರವೂ ಆದ ಈ ಮಾಲೆಯನ್ನು ತಯಾರಿಸಿರುತ್ತೇವೆ [193 3]

ವಿಕಾಂಬರಂ ಕಂಪೆನಿ, ಸಕೆಂಡ್ ಲೈನ್ ಬೀಚು, ಮದರಾಸು

ಶುದ್ಧವಾದ ಹತ್ತಿಯ ತುಪ್ಪವು.

“ಬಹಳ ರುಚಿ, ಆರೋಗ್ಯ, ಎಲ್ಲಕ್ಕಿಂತ ಪುಷ್ಟಿಕಾರಿ”

(ಡಿ) ಎಸ್ ಅಪ್ಪು, L. C. E. ಇಂಜನಿಯರು,—“ನಿಮ್ಮಿಂದ ತರಿಸಿಕೊಂಡ ಹತ್ತಿಯ ತುಪ್ಪವನ್ನು ಉಪಯೋಗಿಸಿದೇನೆ ಅದು ಸೇವನೆಗೆ ಬಹಳ ರುಚಿಯಾಗಿಯೂ ಬಹಳ ಆರೋಗ್ಯಕರವಾಗಿಯೂ ಇದೆ ಇದಕ್ಕೆ ಸಮಾನವಾದ ಪುಷ್ಟಿಕಾರಿ ವಸ್ತುವೇ ಇಲ್ಲ.” ಬೆಂಗಳೂರು 2 9 13

ಎಚ್ಚರಿಕೆ!

ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಬೆ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ [110 19]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, 169, ಕಿಲಾರಿ ರೋಡ್, (ಕುಂಚಿಗರಪೇಟೆ) ಬೆಂಗಳೂರು ಸಿಟಿ

ಒಡವೆಗಳೂ ಗಡಿಯಾರಗಳೂ.

ಈ ಚಂದ್ರಹಾರವು ನೋಡುವುದಕ್ಕೆ ಬಹಳ ಅಂದವಾಗಿರುತ್ತೆ ಇದನ್ನು ಒಳ್ಳೇ ತೇರುದಾರ ತಂಜಾವೂರಿನ ಕೆಲಸಗಾರರಿಂದ ತಯಾರಿಸುತ್ತೇವೆ ಇದಕ್ಕೆ ಎಂದೂ ಹೋಗದ ಹಾಗೆ ಬಂಗಾರದ ಗಿಲ್ಟುಕೊಡಲ್ಪಟ್ಟಿರುತ್ತೆ ಇದನ್ನು ಹೆಣಗಾರರೂ ಹಾಕಿಕೊಳ್ಳಬಹುದು ಒಳ್ಳೆಯ ಬಂಗಾರದಿಂದ ತಯಾರಿಸಿದಂತೆಯೇ ಬಹಳ ಪ್ರಕಾಶಮಾನವಾಗಿರುತ್ತೆ ಇದುವರೆಗೆ ಇದನ್ನು ಅನೇಕರು ತರಿಸಿಕೊಂಡಿರುತ್ತಾರೆ 5 ಸರಗಳುಳ್ಳದ್ದು ಬೆಲೆ ರೂ 4-8 0 4 ಸರಗಳುಳ್ಳದ್ದು ಬೆಲೆ ರೂ 4 0 0 3 ಸರಗಳುಳ್ಳದ್ದು ಬೆಲೆ ರೂ 3 8 0 ಸಾದ ಮೋಪಿನ ಬೆಲೆ ರೂ 0 12-0 ಕಲ್ಲುಗಳಿಂದ ತಯಾರಿಸಿದ ಮೋಪಿನ ಬೆಲೆ 1 0 0

ನಿಮಗೆ ಸಾದಾ ಮೋಪಿರಬೇಕೇ ಅಥವಾ ಕಲ್ಲುಗಳುಳ್ಳ ಮೋಪಿರಬೇಕೇ ಅಥವಾ ಮೋಪೇ ಅವಶ್ಯಕವಿಲ್ಲವೆ ಬರೆಯುವುದು [203 1]

ಪದಕ ಸಹಿತವಾದ ನಾಲ್ಕು ಎಳೆ ಮುತ್ತಿನ ಕಂಠಿಗೆ ರೂ 1 7 0, ಪದಕವಿಲ್ಲದ ಹಾರಕ್ಕೆ 0 11 0 ಆಣೆ ಜಂಟಲ್‌ಮನ್ ಲೀವರ್ ವಾಚು ಕ್ರಯ ರೂ 1 1ಂ ೧ ಲೇಡೀಸ್ ಸಿಲ್ವರ್ ವಾಚ್ ಕ್ರಯ ರೂ 3 8-0 ಶ್ರೀ ಸೀತಾರಾಘವ ಗಡಿಯಾರ ಸುಂದರವಾದ ಗಡಿಯಾರದ ಸರಪಣಿ ಸಮೇತ ಇದರ ಕ್ರಯ ರೂ 1 0 0 ಮಾತ್ರ 5 ವರುಷಗಳ ಗ್ಯಾರಂಟಿ

ಅಚ್ಚ ಕರಿಬಣ್ಣದ ಮೂರು ಚಿಕ್ಕೆಯ ಮಧುರೆ ಚುನ್ನಡಿ ಸೀರೆಗಳು — ಅವಲ್ ರಕಂ ಕ್ರಯ ರೂ 3 6 0 ದುಯಂ ರಕಂ ಕ್ರಯ ರೂ 2 1-0

ವಿಳಾಸ —ಬಿ ಶೇಷಾ ಅಂಡ್ ಬ್ರದರ್ಸ್,
ನಂದಂಬಾಕಂ, ಸೆಂಟ್ ಥಾಮಸ್ ಮೌಂಟ್ ಪೋಸ್ಟ್, ಮದರಾಸ್

ಪ್ರಾಕೃತಿಕ ಭೂಗೋಳ.

ಮೊದಲನೇ ಮುದ್ರಣವು ಅತಿ ಶೀಘ್ರವಾಗಿ ಮುಗಿದುಹೋದ್ದರಿಂದ ಈಚೆಗೆ ಬಂದಿರುವ ಆರ್ಡರುಗಳಿಗೆ ಪ್ರತಿಗಳನ್ನು ಕಳುಹಿಸಲು ಅವಕಾಶವಾಗಲಿಲ್ಲ ಎರಡನೇ ಮುದ್ರಣದಲ್ಲಿ ಅನೇಕ ಹೆಚ್ಚು ವಿಷಯಗಳನ್ನು ಚನ್ನಾಗಿ ವಿವರಿಸಿ ಆರ್ಟ್ ಪೇಪರಿನಮೇಲೆ ಪ್ರಿಂಟುಮಾಡಿರುವ ಅನೇಕ ಹೊಸ ನಕ್ಷೆಗಳನ್ನು ಸೇರಿಸಿರುವುದಲ್ಲದೆ 1 ಆಣೆ ಬೆಲೆ ಬಾಳುವ ಬಣ್ಣಹಾಕಿರುವ ಸುಂದರವಾದ ಒಂದು ಮೈಸೂರು ಮ್ಯಾಪನ್ನು ಸಹ ಸೇರಿಸಿರುತ್ತೆ 1 ನೆಯ ಭಾಗವು ಸೆಪ್ಟಂಬರ್ ತಿಂಗಳು 25 ರಲ್ಲಿ ಬಿಕರಿಗೆ ಸಿದ್ಧವಾಗುವುದು ಈ ಪುಸ್ತಕವು ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೂ ಮತ್ತು ಸ್ಕೂಲಿನಲ್ಲಿ ಪಾಠಹೇಳುವುದಕ್ಕೂ ಬಹಳ ಸಹಕಾರಿಯಾಗಿರುತ್ತದೆ ಕೆಲವು ಪ್ರತಿಗಳು ಮಾತ್ರ ಪ್ರಿಂಟಾಗಿರುವುದರಿಂದ ಮೊದಲು ಬಂದ ಆರ್ಡರುಗಳಿಗೆ ಜಾಗ್ರತೆಯಲ್ಲಿ ಪ್ರತಿಗಳು ಕಳುಹಿಸಲ್ಪಡುವುವು ಕ್ರಯ 0 4 6

ಹೊಸ ಕನ್ನಡ ಲೆಖನದ ಪುಸ್ತಕವೆಂಬ ಹೆಸರಿನಿಂದ 4 ನಂಬರು ಕಾಪಿಪುಸ್ತಕಗಳನ್ನೂ ಪ್ರಿಂಟ್‌ಮಾಡಿರುತ್ತೇನೆ ಇದರ ಮೇಲ್ಪಙ್ತಿಗಳು ಬಹು ಅಂದವಾದ ಬರವಣಿಗೆಯ ಅಕ್ಷರದಂತೆ ತಲೆಕೊಟ್ಟುಗಳೇ ಮೊದಲಾದವುಗಳಿವೆಯೇ ಹೊರತು ಪ್ರಿಂಟಿಂಗ್ ಅಕ್ಷರಗಳ ಹಾಗಿಲ್ಲ ಒಳ್ಳೇ ಕಾಗದದ ಮೇಲೆ ನೋಡುವುದಕ್ಕೆ ಬಹು ಅಂದವಾಗಿ ರೂಲುಗಳನ್ನು ಹಾಕಿ ಪ್ರಿಂಟಾಗಿರುತ್ತವೆ ಇವುಗಳು ವಿದ್ಯಾರ್ಥಿಗಳ ಕೈ ಬರವಣಿಗೆಗೆ ಬಹಳ ಸಹಕಾರಿಯಾದ ಕಾಪಿ ಪುಸ್ತಕಗಳೆಂದು ಭಾವಿಸಿ ಮೈಸೂರಿನ ಸ್ಕೂಲುಗಳಲ್ಲಿ ಉಪಯೋಗಿಸುತ್ತಿದ್ದಾರೆ ಕ್ರಯ 0 1 3

ಪ್ರಾಕೃತಿಕ ಭೂಗೋಳ ಮತ್ತು ಹೊಸಕನ್ನಡ ಲೇಖನ ಪುಸ್ತಕಗಳನ್ನು ಪಡೆಯಲಿಷ್ಟವುಳ್ಳ ಪುಸ್ತಕ ವ್ಯಾಪಾರಿಗಳೇ ಮೊದಲಾದ ಸರ್ವರೂ ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರಿಗೆ ಬರೆದು ತರಿಸಿಕೊಳ್ಳಬಹುದು.

ಎಂ ಸಿ ಲಿಂಗಪ್ಪಯ್ಯ ಹೆಡ್ ಮಾಸ್ಟರು, ಇಟ್ಟಿಗೆಗೂಡು,
[186—4] ಎ ವಿ ಸ್ಕೂಲು, ಮೈಸೂರು

ಗೃಹಕೃತ್ಯದ ನೋಟೀಸ್

ಬೇಲೂರು ತಾಲ್ಲೂಕು ಬಿಕ್ಕೋಡು ಹೋಬಳಿ ಹುಷ್ಕೂರಿನಲ್ಲಿರುವ ವೀರಶೈವ ಮತದ ಮರುಳುಸಿದ್ದಯ್ಯನವರ ಮಗ ಬಸವಯ್ಯನು ಇದರಿಂದ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ ನನ್ನ ವಂಶವೃಕ್ಷ—ಮೂಲಪುರುಷ ಚನ್ನಬಸವಯ್ಯ 1 ನೇ ಮಗ ಮರುಳುಸಿದ್ದಯ್ಯ, 1 ನೇ ಮರುಳುಸಿದ್ದಯ್ಯನ ಮಗ ಬಸವಯ್ಯ (ವಾರಸುದಾರ್) 3 ನೇ ಮಗ ಸೋಮಯ್ಯನ ಮಕ್ಕಳು ಮರುಳುಸಿದ್ದಯ್ಯ ಪೌತಿ ಮಕ್ಕಳಿಲ್ಲ ಹೆಂಡತಿ ನಂಜಮ್ಮ 2 ನೇ ಮಗ ಶಾಂತಯ್ಯ ಪೌತಿ ಮಕ್ಕಳಿಲ್ಲ ಹೆಂಡತಿ ನಂಜಮ್ಮ

ಈ ಮೇಲ್ಕಂಡ ಸಂಗತಿಗೆಲ್ಲಾ ಬಸವಯ್ಯನಾದ ನಾನು ವಾರಸುದಾರನಾಗಿರುವೆನು ಮೂಲಪುರುಷನ ಕಾಲದಿಂದ ಸಮಷ್ಟಿ ಕುಟುಂಬದಲ್ಲಿ ಸದರಿ ಬಿಕ್ಕೋಡಿನಲ್ಲಿ ಮೇಲ್ಕಂಡ ನಮ್ಮ ಅತ್ತಿಗೆಯರಿಗೆ ಜಂಟಿ ಖಾತೆಯಾಗಿ ನೆಪಕ್ಕೆ ಮಾತ್ರವಿದ್ದು ಮೊದಲಿನಿಂದಲೂ ಸದರಿ ಸ್ವತ್ತುಗಳ ಕಂದಾಯ ವಗೈರೆಯನ್ನು ನಾನೇ ಕೊಟ್ಟುಕೊಂಡು ಸ್ವಾಧೀನಾನುಭವವುಳ್ಳವನಾಗಿರುವೆನು ದುಷ್ಟರ ದುರಾಲೋಚನೆಗೆ ಒಳಗಾಗಿ ನನ್ನಮೇಲೆ ಕ್ರಿಮಿನಲ್ ಕೇಸುಮಾಡಿದ್ದು ರುಜುವಾತಾಗಿದೆ ಸ್ವತ್ತಿನ ವಿವರ ಸದರಿ ಬಿಕ್ಕೋಡಿನಲ್ಲಿ ನೆಪಕ್ಕೆ ಅವರ ಹೆಸರಿಗೆ ಜಂಟಿ ಖಾತೆ ಇದ್ದು ನನ್ನ ಸ್ವಾಧೀನಾನುಭವದಲ್ಲಿರುವ ಸರ್ವೆ ನಂಬರು 3 ನೇ ಎಕರೆ 3 ಗುಂಟೆ 27 ಆಕಾರ ರೂ 5 12-0 ಉಳ್ಳ ಕಾಫಿ ತೋಟ ಒಂದು, ಬಿಕ್ಕೋಡಿನಲ್ಲಿ ಸರ್ವೆ ನಂಬರು 60 ನೇ ಎಕರೆ 1 ಗುಂಟೆ 6 ಆಕಾರ 1¼ ರೂಪಾಯಿ ಉಳ್ಳ ಹೊಲ ಒಂದು, ಪೂರ್ವ ಪಶ್ಚಿಮ 9 ಗಜ ದಕ್ಷಿಣೋತ್ತರ 7 ಗಜ ಇದಕ್ಕೆ ಸೇರಿದ ಹಿತ್ತಲು ಉಳ್ಳ ವಾಸದ ಹುಲ್ಲುಮನೆ ಒಂದು ಪೂರ್ವ ಪಶ್ಚಿಮ 7 ಗಜ ದಕ್ಷಿಣೋತ್ತರ 5 ಗಜ ಉಳ್ಳ ತೊಟ್ಟಿಗೆ ಹಂಚಿನಮನೆ ಒಂದು ಈ ಮೇಲ್ಕಂಡ ನಾಲ್ಕು ಸ್ವತ್ತುಗಳನ್ನು ನನಗೂ ನನ್ನ ಅತ್ತಿಗೆ ಜಂಟಿದಾರಳಾದ ಶಾಂತಯ್ಯನವರ ಹೆಂಡತಿ ನಂಜಮ್ಮನಿಗೂ ಮೋಸ ಮಾಡಬೇಕೆಂಬ ದುರುದ್ದೇಶದಿಂದ ಸದರಿ ಮರುಳುಸಿದ್ದಯ್ಯನವರ ಹೆಂಡತಿ ನಮ್ಮ ಅತ್ತಿಗೆ ನಂಜಮ್ಮನು ಪರಭಾರೆ ಮಾಡಬೇಕೆಂಬ ದುರುದ್ದೇಶವುಳ್ಳವಳಾಗಿರುವಳು ಅವಳ ಮತ್ತು ಅವಳ ಪ್ರೋತ್ಸಾಹಕರ ದುರುದ್ದೇಶಕ್ಕೆ ವಶರಾಗಿ ಅವಳಿಂದ ಯಾರಾದರೂ ಸದರಿ ಸ್ವತ್ತುಗಳನ್ನು ಖರೀದಿ ಭೋಗ್ಯ ವಗೈರೆ ಮಾಡಿಸಿಕೊಂಡು ಹಣ ಕೊಟ್ಟಲ್ಲಿ ಸದರಿ ಹಣಕ್ಕೂ ಸದರಿ ನಮ್ಮ ಪಿತರಾರ್ಜಿತವಾದ ಸ್ವತ್ತಿಗೂ ಯಾವ ಭಾಗದಲ್ಲೂ ಸಮ್ಮಂಧವಿರುವುದಿಲ್ಲವೆಂದು ಅದರಿಂದುಂಟಾಗುವ ನನ್ನ ನಷ್ಟಕ್ಕೆಲ್ಲಾ ತಿಳಿಯದೆ ಯಾರಾದರೂ ಮಾಡಿಸಿಕೊಂಡರೆ ಜವಾಬ್ದಾರರಾಗಬೇಕಾಗುವುದೆಂದು ಈ ಮೂಲಕ ಸೂಚಿಸಿ ಎಚ್ಚರಿಸಿದೆ [196 1].

ಬಸವಯ್ಯನ ರುಜು

ನನ್ನ ಪ್ರಿಯ ಸಹೋದರಿಯರುಗಳಿಗೆ

ವಿವೇಕವತಿ ವಿನಯ ಪೂರ್ವಕ ವಿಜ್ಞಾಪನೆ

ಈ ಮನೋಹರವಾದ ಆಭರಣವನ್ನು ಸ್ವಲ್ಪಕ್ರಯದಲ್ಲಿ ತಯಾರಿಸಿದ್ದೇನೆ ಇದನ್ನು ತರಿಸಿ ನೋಡಿ ನನ್ನನ್ನು ಪ್ರೋತ್ಸಾಹಪಡಿಸಿರಿ

ಗಜ್ಜೆ ಅಡ್ಡಿಕೆ ಕ್ರಯ 0-6-0 ಆಣೆ



ಇದು ಅಪರಂಜಿ ಬಂಗಾರದಂತಹ ಯಿಮಿಟೇಷನ್ ಗೆಜ್ಜೆಯಿಂದ ಕರೀ ಬಣ್ಣದ ದಾರದಲ್ಲಿ ಗೆಜ್ಜೆಯನ್ನು ಪೋಣಿಸಿ ಸುಂದರವಾಗಿ ತಯಾರಿಸಲ್ಪಟ್ಟಿರುತ್ತೆ ರಂಗ ಎಂದಿಗೂ ಕೆಡುವದಿಲ್ಲ ಇದನ್ನು ಹೆಂಗಸರು ಹುಡುಗಿಯರು ಮಕ್ಕಳು ಎಲ್ಲರೂ ಕೊರಳಿಗೆ ಕಟ್ಟಿಕೊಳ್ಳುವದಕ್ಕೆ ಲಾಯಖಾದದ್ದು

ತಾಜಾ ಕಲಂ—ಇದರ ಕ್ರಯವನ್ನು ಮುಂದಾಗಿ ಮನಿಯಾರ್ಡರ್ ಮಾಡಿದರೆ ಯಾವ ಖರ್ಚೂ ಇಲ್ಲದೆ ಬಾಂಗಿ ಮೇಲೆ ಕಳುಹಿಸುತ್ತೇವೆ ವಿ ಪಿ ಯಾಗಿ ಕಳುಹಿಸೆಂದರೆ ವಿ ಪಿ ಮಾಡಿ ಕಳುಹಿಸುತ್ತೇವೆ

ತಂಜಾವೂರು ಹರಳಿನ ಗುಂಡು

ದೊಡ್ಡವರಿಗೆ ಜೊತೆ 1ಕ್ಕೆ 0 15 0 ಚಿಕ್ಕವರಿಗೆ ಜೊತೆ 1ಕ್ಕೆ 0 1 0
ಹುಡುಗಿಯರಿಗೆ ಜೊತೆ 1ಕ್ಕೆ 0 7 0 ಮಕ್ಕಳಿಗೆ ಜೊತೆ 1ಕ್ಕೆ 0-4-0

ಇದು ರಿಕನೆಕ್ ಸ್ಪ್ರಿಂಗ್ ಯನ್ನುವ ಸ್ವಚ್ಛ ಹವಳದಿಂದಲೂ ಮತ್ತು ಚಿನ್ನದ ರಂಗಿನಂತಹ ಹರಳಿನ ಗುಂಡಿನಿಂದಲೂ ತಯಾರಿಸಿರುತ್ತೆ ಇದರ ರಂಗು ಎಂದಿಗೂ ಹೋಗದು ಈಗತಾನೇ ಜರ್ಮನಿಯಿಂದ ಬಂದ ನೂತನ ಹವಳ ಪೂರ್ವದ ಕರ್ಪೂರ ಹವಳವಲ್ಲ ಬೆಂಕಿಗೆ ಸುಡದು ಸಾಚಾ ಹವಳಕ್ಕೆ ಸಮಾನವಾದದ್ದು ಪರೀಕ್ಷೆ ಬಗ್ಗೆ ಒಂದು ಹಿಡಿ ಹವಳವನ್ನು ಬಾಂಗಿಯ ಸಂಗಡ ಕಳುಹಿಸುತ್ತೇವೆ ಅದನ್ನು ಪರೀಕ್ಷಿಸಿ ನೋಡಿರಿ [193 3]

ವಿಳಾಸ —ವಿವೇಕವತಿ, ತಿರುವಲ್ಲಿಕೇಣಿ, ಮದರಾಸು

ಜಿಂತಾನ್.

ಜಿಂತಾನವೆನ್ನುವದು ಜಪಾನಿ ಮಾತ್ರೆಗಳು ಅದರ ಉಪಯೋಗಗಳು—ಶೀತ, ಕೆಮ್ಮು, ಮಂದ, ತಲೆನೋವು, ಅಜೀರ್ಣ ಭೇದಿಗಳು, ಅರುಚಿ, ಗಂಟಲು ಒಣಗುವದು, ಶೀತಭೇದಿ, ಮುಂತಾದ್ದಕ್ಕೆ ಒಳ್ಳೇದು

ಸಂಗೀತಗಾರರೂ, ಉಪನ್ಯಾಸಕರೂ ಇವನ್ನು ಉಪಯೋಗಿಸಿದರೆ ಗಂಟಲನಾಳಗಳು ಶುದ್ಧವಾಗುತ್ತವೆ ಮತ್ತು ಬಾಯಿನ ಎಲ್ಲಾ ತರದ ದುರ್ವಾಸನೆ ನಾಶವಾಗುವದು

ಕ್ರಯ—30 ಮಾತ್ರೆ ಉಳ್ಳ ಪೊಟ್ಟಣ 0 1-6, 65 ಮಾತ್ರೆಗೆ 0-3-0, 190 ಮಾತ್ರೆಗಳ ಡಬ್ಬಾ 8 ಆಣೆ 455 ಮಾತ್ರೆ ಉಳ್ಳ ಸುಂದರವಾದ ಕನ್ನಡಿ ಡಬ್ಬಕ್ಕೆ ರೂ 1 [199 1]

ನಮ್ಮಲ್ಲಿ ತಯಾರಾಗುವ ಹಿತ್ತಾಳೆ ಮೇಣದಬತ್ತಿ ಸ್ಟಾಂಡುಗಳು ಉತ್ತಮವಾದದ್ದೆಂದು ಎಲ್ಲೆಲ್ಲೂ ಪ್ರಸಿದ್ಧಿ ಹೊಂದಿದೆ ನಾವು ಬೊಂಬಾಯಿ ಬರೋಡ ದೇಶದ ಆಲೆಂಬಿಕ್ ವೈದ್ಯಶಾಲೆಗೂ, ಬೊಂಬಾಯಿ ಐಯೋಡಿಕ್ ವೈದ್ಯಶಾಲೆಗೂ, ಬೊಂಬಾಯಿ ಬಾಲಾಮೃತಕ್ಕೂ, ಕಲ್ಕತ್ತಾ ಸಿ ಕೆ ಸೇನ್ ಆಯುರ್ವೇದ ಔಷಧಶಾಲೆಗೂ ಸೋಲ್ ಏಜಂಟರು

ವಿಳಾಸ—ಎಸ್ ವೈದ್ಯ ಮತ್ತು ಕಂಪನಿ,
ಪಾರ್ಕ್ ಟವರ್, ಮದರಾಸ್.

"ವೃತ್ತಾಂತ ಪತ್ರಿಕೆ" ಏಜಂಟರಿಗೆ ನೋಟೀಸ್.

ವೃತ್ತಾಂತ ಪತ್ರಿಕೆಯ 1913 ನೇ ವರುಷದ ಒಂದನೇ ಕ್ವಾರ್ಟರು ಕಳೆದ ಆಗಸ್ಟ್ ತಿಂಗಳಿಗೆ ಪೂರೈಸಿದೆ. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ತೀರ್ಮಾನಮಾಡಿ, • ಬಿ • ಫಾರಂಗಳಿಗೆ ಎತ್ತಿಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಕೃತಪಡಿಸುವ

ಮ್ಯಾನೇಜರ್, "ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು.

The National Insurance and Banking Co., Ltd.,

AMRITSAR

WANTED

A competent Chief Agent for Mysore and Coorg Provinces on very liberal terms None need apply who have no practical experience in life insurance business. Cash security Rs 500 at least essential. The applicant should be a capable canvasser and organiser. The company has its own office buildings at Mysore in a suitable quarter. Apply at once to MR P. L. RAJPAL, B.A., Chief Manager, National Insurance and Banking Company, Ltd., Amritsar, mentioning two good references, past experience, present employment, age, nationality and any other necessary particulars. [201-1]

ಕನ್ನಡ ಲಾ ಪುಸ್ತಕಗಳು

[160 10]

ಗೌರ್ನರ್ ಜನರಲ್‌ರವರ ಹುಕುಂ ಪ್ರಕಾರ ಎಲ್ಲಾ ದೇಶಗಳಲ್ಲಿಯೂ ಜಾರಿಯಲ್ಲಿರುವ ಕನ್ನಡ ಇಂಡಿಯನ್ ಪೆನಲ್‌ಕೋಡು ಕ್ರಯ ರೂ 2-0-0, ವ್ಯವಹಾರನಿರ್ಣಯ ವಿಧಿ ಎಂಬ ಸಿವಲ್ ಪ್ರೊಸಿಜೂರ್ ಯಾನೆ 3 ಭಾಗಗಳುಳ್ಳದ್ದು ರೂ. 3 0 0, ವ್ಯವಹಾರ ಪರಿಹಾರವಿಧಿ ಎಂಬ ಸ್ಪೆಸಿಫಿಕ್ ರಿಲೀಫ್ ಆಕ್ಟು ರೂ 1-8-0, ಇಂಡಿಯನ್ ಲಾ ಆಫ್ ಕಂಟ್ರಾಕ್ಟ್ ರೂ 2-0-0, ಪ್ರಶ್ನೋತ್ತರ ಲೀಖ್ಯಬೋಧಿನಿ ಈ ಪುಸ್ತಕದಲ್ಲಿ ಸಿವಲ್ ಕ್ರಿಮಿನಲ್ ರೆವಿನ್ಯೂ ಮುಂತಾದ ವ್ಯವಹಾರ ವಿಧಿಗಳನ್ನು ಬೋಧಿಸುವದು ಕ್ರಯ ರೂ. 1-4-0, ತಾನಾಗಿ ಸ್ವತಃ ಇಂಗ್ಲೀಷ್ ಕಲಿಯುವದು ರೂ 1-8-0 ಇವುಗಳಲ್ಲಿ ಕೆಲವು ಮುದ್ರಣವಾಗುತ್ತಿದೆ ಇನ್ನೂ ಪುಸ್ತಕಗಳು ಅಪೇಕ್ಷಿಸುವವರು ನಮ್ಮ ಪುಸ್ತಕಗಳ ಕ್ಯಾಟಲಾಗಿಗೆ ಬರೆಯಿರಿ.

ವಿಳಾಸ—ಬಿ. ನರಸಿಂಗರಾವ್,
ಎಡಿಟರ್, "ಲಾ ಗೆಜೆಟ್" ಬೆಂಗಳೂರು.

ವೃತ್ತಾಂತ ಪತ್ರಿಕೆ.

—.o:—

ಸನ್ ೧೯೧೩ ನೇ ಇಸವಿ ಅಕ್ಟೋಬರ್, ತಾ ೯ ನೇ ಗುರುವಾರ.

ಶ್ರೀಮನ್ ಯುವರಾಜರವರು.

ಶ್ರೀಮನ್ ಯುವರಾಜರವರು ಪರಿವಾರ ಸಮೇತ ಯೂರೋಪಿಯನ್ ರಾಜ್ಯಗಳಲ್ಲೂ ಗ್ರೇಟ್ ಬ್ರಿಟನ್ ಸೀಮೆಯಲ್ಲೂ ದೀರ್ಘವಾದ ಮತ್ತು ಉತ್ಸಾಹಭರಿತವಾದ ಸಂಚಾರವನ್ನೆಲ್ಲಾ ಪೂರೈಸಿಕೊಂಡು ಹಿಂತಿರುಗಿ ಕಳೆದ ಶುಕ್ರವಾರ ಬೊಂಬಾಯಿ ಪಟ್ಟಣಕ್ಕೆ ಸೆಮ್ಮದಿಯಾಗಿ ದಯಮಾಡಿದರೆಂಬ ವರ್ತಮಾನವನ್ನು ಕೇಳಿ ಮೈಸೂರಿನವರೆಲ್ಲಾ ಬಹಳವಾಗಿ ಆನಂದಪಟ್ಟರು. ಯುವರಾಜರವರು ಕಳೆದ ಭಾನುವಾರ ಬೆಳಿಗ್ಗೆ ಸ್ವಲ್ಪ ಹೊತ್ತು ಬೆಂಗಳೂರಿನಲ್ಲಿ ತಂಗಿದ್ದ ಸಂದರ್ಭವನ್ನರಿತು ಬೆಂಗಳೂರು ಪ್ರಜೆಗಳು ಅಲ್ಲಿನ ಮ್ಯುನಿಸಿಪಲ್ ಕೌನ್ಸಿಲರುಗಳ ಮುಖೇನ ಅವರಿಗೆ ಮನಃಪೂರ್ವಕವಾದ ಸುಖಾಗಮನವನ್ನು ಬಯಸಿ ಅವರನ್ನು ಸತ್ಕರಿಸಿದರು, ಇತ್ತಲಾಗಿ ಅವರು ಅದೇ ದಿನ ಮಧ್ಯಾಹ್ನದ ಮೇಲೆ ರಾಜಧಾನಿಯಾದ ಮೈಸೂರು ಪಟ್ಟಣವನ್ನು ಪ್ರವೇಶಮಾಡಿದಾಗ ಪ್ರಜೆಗಳು ಸಾವಿರಗಟ್ಟಲೆ ರಸ್ತೆಯ ಉದ್ದಕ್ಕೂ ನಿಂತು ಅವರನ್ನು ನೋಡಿ ಆನಂದಪಟ್ಟರು.

ಯುವರಾಜರವರನ್ನು ಕಾಣಿಸಿಕೊಂಡು ಅರಮನೆಗೆ ಕರೆದು ತರುವುದಕ್ಕಾಗಿ ದಿವಾನರವರು ಬನ್ನೀಮಂಟಪಕ್ಕೆ ಹೋಗಿದ್ದರು. ಅಲ್ಲಿಂದ ಅವರೆಲ್ಲಾ ಅರಮನೆಯ ಖಾಸಾ ಮರ್ಯಾದೆಗಳ ಸಮೇತ ದೊಡ್ಡಪೇಟೆಯಲ್ಲಿ ಮೆರವಣಿಗೆಯಾಗಿ ಬಂದು ಪೋಸ್ಟ್ ಆಫೀಸಿನ ಎದುರಿಗೆ ಹಾಕಲ್ಪಟ್ಟಿದ್ದ ನೇತ್ರಾನಂದಕರವಾದ ಹಸಿರುವಾಣಿ ಚಪ್ಪರದಲ್ಲಿ ಸ್ವಲ್ಪ ಹೊತ್ತು ನಿಂತುಕೊಂಡರು. ಅಲ್ಲಿ ಅಡ್ರೆಸ್ಸನ್ನಿಡುವ ಕೈಪೆಟ್ಟಿಗೆಗಾಗಿ ಚಂದಾ ಹಾಕಿದ ಪುರಪ್ರಮುಖರೆಲ್ಲಾ ಸೇರಿದ್ದು ಶ್ರೀಮನ್ ಯುವರಾಜರವರಿಗೆ ಅಡ್ರೆಸ್ಸನ್ನು ಒಪ್ಪಿಸಿದರು. ಮೈಸೂರು ಪ್ರಜೆಗಳ ಆನಂದವು ಸಂಸ್ಥಾನದ ಎಲ್ಲಾ ಕಡೆಗಳಿಗೂ ವ್ಯಾಪನೆಯಾಯಿತು.

ಬೆಂಗಳೂರಿನಲ್ಲೂ ಮೈಸೂರಿನಲ್ಲೂ ಶ್ರೀಮನ್ ಯುವರಾಜರವರು ಅಡ್ರೆಸ್ಸುಗಳನ್ನು ಆದರದಿಂದ ಅಂಗೀಕರಿಸಿ ಸಂಕ್ಷೇಪವಾಗಿ ಪ್ರತ್ಯುತ್ತರಗಳನ್ನು ದಯಪಾಲಿಸಿದರು ಈ ಉತ್ತರಗಳನ್ನು ಓದಿನೋಡುವಲ್ಲಿ ಅವರು ಅನ್ಯಸ್ಥಳಗಳಲ್ಲಿ ಸಂಚರಿಸುತ್ತಲೂ, ಅನ್ಯಜನಾಂಗಗಳ ಕೂಡ ಬೆರೆಯುತ್ತಲೂ ಇರುವಲ್ಲಿ ಅವರ ಮನಸ್ಸೆಲ್ಲಾ ತಮ್ಮ ಸ್ವಕೀಯ ಪ್ರಜೆಗಳ ಹಿತಚಿಂತನೆಯಲ್ಲೇ ಮಗ್ನವಾಗಿತ್ತೆಂದು ಗೊತ್ತಾಗುತ್ತದೆ. ಘನವನ್ನೈದಿದ ಐದನೇ ಜಾರ್ಜ್ ಪ್ರಭುಗಳೂ, ಮೈಸೂರು ಸೀಮೆಯಲ್ಲಿ ನೌಕರಿ ಮಾಡಿ ಹೋಗಿರತಕ್ಕವರೂ ನಮ್ಮ ಯುವರಾಜರವರನ್ನು ವಿಶೇಷ ಆದರದಿಂದ ಕಂಡು ನಾನಾ ರೀತಿಯಲ್ಲಿ ಸತ್ಕಾರಮಾಡಿದರೆಂದು ಕೇಳಿ ನಾವು ಬಹಳ ಸಂತೋಷಪಡುತ್ತೇವೆ. ಅವರು ಅಲ್ಲಲ್ಲಿ ಪರಾಂಬರಿಸಿ ಒಂದಿರುವ ಸಂಗತಿಗಳೂ, ಅವರಿಗೆ ಅಲ್ಲಲ್ಲಿ ನಡೆದಿರುವ ಸತ್ಕಾರಾದಿಗಳೂ ಅವರ ಮನಸ್ಸನ್ನು ಯಾವಾಗಲೂ ಸಂತೋಷಪಡಿಸುತ್ತಲೂ, ಸಂತೃಪ್ತಿ ಸಮಾಧಾನಗಳನ್ನುಂಟುಮಾಡುತ್ತಲೂ ಇರುವವು.

ಶ್ರೀಮನ್ ಯುವರಾಜರವರು ರಾಜಧಾನಿಯನ್ನು ತಲಪಿದ ಮರುದಿವಸವೇ ಇಲ್ಲಿನ ಟೌನ್ ಹಾಲ್ ಬಂಗಲೆಗೆ ದಯಮಾಡಿ, ಮೈಸೂರು ಸೀಮೆಯ ಪರಸ್ಪರಸಹಾಯ ಸಂಘಗಳ ಮೂರನೇ ವರುಷದ ಮಹಾ ಸಭೆಯನ್ನು ಪ್ರಾರಂಭ ಮಾಡಿದ್ದು ನಮಗೆ ವಿಶೇಷವಾದ ಸಂತೋಷವನ್ನುಂಟುಮಾಡಿದೆ. ಬಹು ಮಂದಿ ಪ್ರತಿನಿಧಿಗಳೂ, ಪ್ರಜೆಗಳೂ, ಅಧಿಕಾರಿಗಳೂ ಉತ್ಸಾಹದಿಂದ ಕಾದಿದ್ದು ಯುವರಾಜರವರನ್ನು ಎದುರುಗೊಂಡು ಅವರಿಗೆ ಸುಖಾಗಮನವನ್ನು ಬಯಸಿ ಅಡ್ರೆಸ್ಸನ್ನು ಒಪ್ಪಿಸಿದರು ಬಳಿಕ ಪ್ರತಿನಿಧಿಗಳು ದಿವಾನ್ ಬಹದೂರ್ ರಾಜಸಭಾಭೂಷಣ ಕೆ. ಪಿ ಪುಟ್ಟಣ್ಣಶೆಟ್ಟರವರನ್ನು ಸಭೆಯ ಅಗ್ರಸ್ಥಾನವನ್ನಲಂಕರಿಸಿ ಸಭಾ ಕಾರ್ಯಗಳನ್ನು ಜರುಗಿಸಬೇಕೆಂದು ಪ್ರಾರ್ಥಿಸಿಕೊಂಡರು. ಇದರಿಂದ ಶ್ರೀಮನ್ ಯುವರಾಜರವರಿಗೆ ಪ್ರಜೆಗಳ ಕ್ಷೇಮಚಿಂತನೆಯು ವಿಶೇಷವಾಗಿ ಉಂಟೆಂಬುವುದೂ, ಈ ಪರಸ್ಪರಸಹಾಯ ಸಂಘಗಳನ್ನು ಮಾಡಿಕೊಳ್ಳುವುದರ ಮೂಲಕ ಪ್ರಜೆಗಳು ಒಬ್ಬರಿಗೊಬ್ಬರು ಬೆಂಬಲವಾಗಿ ನಿಂತು ಒದಗಿಸಿಕೊಳ್ಳುವ ದ್ರವ್ಯದಿಂದ ತಮ್ಮ ಗೋಕಾಯಿಗಳನ್ನೂ ಜಮೀನುಗಳನ್ನೂ ಮನೆಮಠಗಳನ್ನೂ ಕಸಬುಗಳನ್ನೂ ವೃದ್ಧಿಪಡಿಸಿಕೊಳ್ಳಬಹುದಾಗಿದೆ ಎಂಬುವುದೂ ಗೊತ್ತಾಗುತ್ತದೆ.

ಯುವರಾಜರವರು ಸ್ವತಃ ಅನೇಕ ವಿಚಾರಗಳನ್ನು ನೋಡಿಬಂದವರಾಗಿರೋಣದರಿಂದ ಐಹಿಕವಾದ ಸಂಪತ್ತಿನ ವಿಷಯದಲ್ಲಿ ಯೂರೋಪಿಯನ್ ರಾಜ್ಯಗಳಿಗಿಂತ ಹಿಂದುಸ್ಥಾನವು ಎಷ್ಟು ಮಟ್ಟಿಗೆ ಹಿಂದೆ ಬಿದ್ದಿದೆ ಎಂಬುವುದನ್ನು ಬಲ್ಲರು ಆದರೂ ನಮ್ಮ ಸೀಮೆಯು ಬೇಗನೆ ಬೆಳವಣಿಗೆಗೆ ಬಂದು ಪಾಶ್ಚಾತ್ಯ ಜನರುಗಳ ಸಂಪತ್ತನ್ನು ಮೀರಿಸುತ್ತದೆಂದು ಅವರು ವಿಶೇಷವಾಗಿ ನಂಬಿ ನಿರೀಕ್ಷಿಸುತ್ತಾರೆ. ಅವರ ಈ ಅಭಿಮತವನ್ನು ಅವರ ಭಾಷಣಗಳಿಂದ ತಿಳಿದು ಸಂತೋಷಪಡುವೆವು.

ಶ್ರೀಮನ್ ಯುವರಾಜರವರನ್ನು ಕರುಣಾಳುವಾದ ಶ್ರೀ ದೇವರು ಅವರ ಈ ದೇಶಾಟನೆಯಲ್ಲಿ ಆರೋಗ್ಯದಿಂದ ಕಾಪಾಡಿದ್ದಕ್ಕಾಗಿ ನಾವು ತುಂಬಾ ಕೃತಜ್ಞರಾಗಿದ್ದೇವೆ, ಮತ್ತು ಮೈಸೂರಿನ ಪ್ರಜೆಗಳು ಒಪ್ಪಿಸಿದ ಅಡ್ರೆಸ್ಸಿನಲ್ಲಿ ಹೇಳಿ ಇರುವಂತೆ ಯುವರಾಜರವರಿಗೆ ಜಗದೀಶ್ವರನು ದೀರ್ಘಾಯುಸ್ಸನ್ನೂ, ಸಂತೋಷ ಸುಖಸಂಪತ್ತುಗಳನ್ನೂ, ಸಾರ್ಥಕವೂ ಉಪಯುಕ್ತವೂ ಆದ ಜೀವಮಾನವನ್ನೂ ದಯಪಾಲಿಸಲೆಂದು ನಾವು ಕೇವಲ ಭಕ್ತಿಪೂರ್ವಕವಾಗಿ ನಿರಂತರವೂ ಪ್ರಾರ್ಥಿಸುತ್ತೇವೆ.

ನೂರು ವರುಷಗಳ ಚರಿತ್ರೆ.

ನಮ್ಮ ಮೈಸೂರು ಸೀಮೆಯಲ್ಲಿಯೂ ಲೋಕದ ಎಲ್ಲಾ ಕಡೆಗಳಲ್ಲಿಯೂ ಇರುವ ವೆಸ್ಲಿಯನ್ ಮಿಷನ್ ಸಂಘದವರು ವೆಸ್ಲಿಯನ್ ಮಿಷನರಿ ಸಮಾಜದ ನೂರನೆಯ ವಾರ್ಷಿಕೋತ್ಸವವನ್ನು ಉತ್ಸಾಹಪೂರ್ವಕವಾಗಿ ಆಚರಿಸುತ್ತಲಿದ್ದಾರೆ ಜಾನ್ ವೆಸ್ಲಿಯವರ ಜೀವಚರಿತ್ರೆಯು ಸ್ವಲ್ಪ ಹೆಚ್ಚು ಕಡಮೆ ಎಲ್ಲರಿಗೂ ತಿಳಿದೇ ಇರುತ್ತದೆ. ಹದಿನೆಂಟನೆಯ ಶತಮಾನದ ಅತ್ಯಂತ ಪ್ರಸಿದ್ಧರಾದ ಆಂಗ್ಲೇಯ ದೊಡ್ಡ ಮನುಷ್ಯರುಗಳಲ್ಲಿ ಅವರು ಒಬ್ಬರಾಗಿದ್ದರು. ಅವರು ಜನರ ಹೀನವಾದ ಸ್ಥಿತಿಯನ್ನು ಕಂಡು, ಜನಗಳು ದೇವರಿಗೆ ಭಯಪಟ್ಟು, ಆತನ ಮೇಲಣ ಪ್ರೀತಿಯಿಂದ ತಮ್ಮ ನೆರೆಯವರಿಗೆ ಸಲ್ಲಿಸಬೇಕಾದ ಧರ್ಮವನ್ನು ಕೈಕೊಳ್ಳುವ ವರೆಗೂ ಮಾನವರು ಉತ್ತಮ ಸ್ಥಿತಿಗೆ ಬರುವ ನಿರೀಕ್ಷೆಯು ಇರುವುದಿಲ್ಲ ಎಂಬುದನ್ನು ತಮ್ಮ ಸ್ವಂತ ಅನುಭವದಿಂದ ತಿಳಿದುಕೊಂಡರು ಜಾನ್ ವೆಸ್ಲಿಯವರು ದೇವರನ್ನು ಪ್ರೀತಿಸಿ, ಸೇವಿಸುವ ಮಾರ್ಗವನ್ನು ಯೇಸು ಕ್ರಿಸ್ತನಿಂದ ಕಲಿತುಕೊಂಡು, ತಮ್ಮ ಜೀವಮಾನವನ್ನೆಲ್ಲಾ ಜನಗಳ ಶ್ರೇಯೋಭಿವೃದ್ಧಿಗಾಗಿ ವಿನಿಯೋಗಿಸಿದರು. ಅವರು ಯಾವಾಗಲೂ ಇಂಗ್ಲಾಂಡ್, ಸ್ಕಾಟ್‌ಲಾಂಡ್, ಐರ್‌ಲಾಂಡ್ ದೇಶಗಳಲ್ಲಿ ಸಂಚಾರಮಾಡುತ್ತಾ ಪಟ್ಟಣಗಳ ಬೀದಿಗಳಲ್ಲಿಯೂ, ಮೈದಾನಗಳಲ್ಲಿಯೂ ಸಿಕ್ಕುವ ಜನಗಳಿಗೆ ಅವರು ತಮ್ಮ ದುರ್ಮಾರ್ಗಗಳನ್ನು ಬಿಟ್ಟುಬಿಟ್ಟು, ದೇವರ ಕಟ್ಟಳೆಗಳನ್ನು ಕೈಕೊಳ್ಳುವವರಾಗಬೇಕೆಂದು ಎಲ್ಲಾ ಕಡೆಗಳಲ್ಲಿಯೂ ಉಪದೇಶ ಮಾಡುವವರಾಗಿದ್ದರು ಗ್ರೇಟ್ ಬ್ರಿಟನ್ ಪಾರಮಾರ್ಥಿಕ ಮತ್ತು ಐಹಿಕ ವಿಷಯಗಳಲ್ಲಿ ಪ್ರವರ್ಧಮಾನಕ್ಕೆ ಬರುವುದಕ್ಕೆ ಇವರೂ ಇವರ ಸಹಾಯಕಾರಿಗಳೂ ಇವರುಗಳ ಹಿಂಬಾಲಕರುಗಳೂ ಮಾಡಿದ ಕೆಲಸಗಳು ಪ್ರಾಮುಖ್ಯವಾದ ಕಾರಣಗಳಾಗಿರುತ್ತವೆ

ವೆಸ್ಲಿಯವರ ಹಿಂಬಾಲಕರುಗಳಲ್ಲಿ ಕೆಲವರು ಯಾವದು ತಮ್ಮನ್ನು ನಿದ್ರಾವಸ್ಥೆಯಿಂದ ಎಚ್ಚರಿಸಿ, ತಮಗೆ ಸಹಾಯ ಕೊಟ್ಟಿತೋ ಅದು ಇತರ ಮಾನವರಿಗೂ ಕೂಡ ಪ್ರಯೋಜನಕಾರಿಯಾಗಿಯೇ ಇರುವುದು ಎಂಬುದನ್ನು ತಿಳಿದುಕೊಂಡರು ಆದಕಾರಣ ಅವರು ಲೋಕದ ಬೇರೆಬೇರೆ ಕಡೆಗಳಿಗೆ ಬೋಧಕರುಗಳನ್ನು ಕಳುಹಿಸಿಕೊಡುವುದಕ್ಕೆ ತಕ್ಕ ಏರ್ಪಾಡುಗಳನ್ನು ಕಲ್ಪಿಸಿದರು. ಈ ಕೆಲಸದಲ್ಲಿ ಅತ್ಯಂತ ಆಸಕ್ತರಾಗಿದ್ದವರ ಪೈಕಿ ಡಾಕ್ಟರ್ ಕೋಕ್ ಬೋಧಕರು ಒಬ್ಬರಾಗಿದ್ದರು. ಇವರು ಈ ಕೆಲಸಕ್ಕಾಗಿ ತಮ್ಮ ಸಮಸ್ತ ಆಸ್ತಿಯನ್ನು ಮಾತ್ರವಲ್ಲದೆ ತಮ್ಮನ್ನೇ ಕೊಟ್ಟುಬಿಟ್ಟರು. ಅವರು ಹಿಂದುದೇಶದ ವಿಷಯವಾಗಿ ಓದಿಯೂ ಕೇಳಿಯೂ ಬಹಳಮಟ್ಟಿಗೆ ತಿಳಿದುಕೊಂಡಿದ್ದರು. ಅವರು ಆಗ್ಗೆ ಅರವತ್ತಾರು ವರುಷದ ವೃದ್ಧರಾಗಿದ್ದಾಗ್ಯೂ ತಮ್ಮ ಜೊತೆಯಲ್ಲಿ ಬೇರೆ ಆರು ಮಂದಿಯನ್ನು ಕರೆದುಕೊಂಡು ಹಿಂದು ದೇಶದಲ್ಲಿಯೂ ಲಂಕಾ ದ್ವೀಪದಲ್ಲಿಯೂ ಮಿಷನ್ ಕೆಲಸವನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಹೊರಟು, ಸಮುದ್ರಯಾನ ಮಾಡುತ್ತಿರುವ ಕಾಲದಲ್ಲಿಯೇ ಅಂದರೆ 1814 ನೆಯ ಇಸವಿ ಮಾರ್ಚಿ ತಾ. 3 ರಲ್ಲಿ ದೈವಾಧೀನರಾದರು. ತರುವಾಯ ಅವರ ಜೊತೆಗಾರರು ಲಂಕಾದ್ವೀಪವನ್ನು ಸೇರಿದರು ಅವರಲ್ಲಿ ಒಬ್ಬರು ಕೆಲವುಕಾಲದ ತರುವಾಯ ಮದ್ರಾಸಿಗೆ ಬಂದು, ಹಿಂದು ದೇಶದಲ್ಲಿ ಮಿಷನ್ ಕೆಲಸವನ್ನು ಪ್ರಾರಂಭಮಾಡಿದರು.

ಈ ಕಾರ್ಯಭಾರವನ್ನು ಹೊತ್ತು ಮುಂದರಿಸುವುದಕ್ಕಾಗಿ 1813 ನೇ ಅಕ್ಟೋಬರ್ ತಾ. 6 ರಲ್ಲಿ ಲೀಡ್ಸ್ ಎಂಬ ಪಟ್ಟಣದಲ್ಲಿ ವೆಸ್ಲಿಯನ್ ಮಿಷನ್ ಸಮಾಜವು ಸ್ಥಾಪಿಸಲ್ಪಟ್ಟಿತು ಆದಕಾರಣ ಇದರ ನೂರನೆಯ ವಾರ್ಷಿಕೋತ್ಸವವು ಕಳೆದ ಸೋಮವಾರ ನಡೆಯಿತು ಈ ಶತಮಾನ ಮಹೋತ್ಸವವು ಇಂಗ್ಲಾಂಡಿನ ಎಲ್ಲಾ ಕಡೆಗಳಲ್ಲಿಯೂ ವೆಸ್ಲಿಯನ್ ಮಿಷನರಿ ಸಮಾಜವು ಲೋಕದ ಯಾವಯಾವ ಕಡೆಗಳಲ್ಲಿ ಕೆಲಸವನ್ನು ನಡಿಸುತ್ತಾ ಇದೆಯೋ ಆ ಎಲ್ಲಾ ಕಡೆಗಳಲ್ಲಿಯೂ ಆಚರಿಸಲ್ಪಟ್ಟಿತು

ಡಾಕ್ಟರ್ ಕೋಕ್‌ರವರ ಜೊತೆಯಲ್ಲಿ ಇಂಗ್ಲಾಂಡಿನಿಂದ ಹೊರಟ ಒಬ್ಬ ಬೋಧಕರು ಮದ್ರಾಸಿನಲ್ಲಿ ಮಿಷನ್ ಕೆಲಸವನ್ನು ಸ್ಥಾಪಿಸಿದರು. ಮದ್ರಾಸಿನಿಂದ ಇಬ್ಬರು ಬೋಧಕರುಗಳು ಬೆಂಗಳೂರಿಗೆ ಬಂದು, 1821 ರಲ್ಲಿ ಇಂಗ್ಲೀಷ್ ಸೈನಿಕರ ಮಧ್ಯದಲ್ಲಿಯೂ, ಅರವ ಜನಗಳ ಮಧ್ಯದಲ್ಲಿಯೂ ಕೆಲಸವನ್ನು ನಡಿಸುವುದಕ್ಕೆ ಪ್ರಾರಂಭಿಸಿದರು ಇದಾದ ಕೆಲವು ವರುಷಗಳ ತರುವಾಯ ಕನ್ನಡ ಜನಗಳ ಮಧ್ಯದಲ್ಲಿ ಕೆಲಸವು ಪ್ರಾರಂಭವಾಯಿತು ಥಾಮಸ್ ಹಾಡ್‌ಸನ್ ಬೋಧಕರು ಮೊಟ್ಟಮೊದಲು ಪಾಠಶಾಲೆಗಳನ್ನು ಏರ್ಪಡಿಸಿದರು. ಇವರ ಹೆಸರು ಈವರೆಗೆ ಈಗಲೂ ರೂಢಿಯಲ್ಲಿರುವುದು.

ವೆಸ್ಲಿಯನ್ ಮಿಷನರಿ ಸಮಾಜದರು ತಮ್ಮ ಕೆಲಸವನ್ನು ನಡಿಸುವುದಕ್ಕಾಗಿ ಆರಿಸಿಕೊಂಡ ಸ್ಥಳಗಳಲ್ಲಿ ಮೈಸೂರು ಸೀಮೆಯು ಒಂದಾಗಿರುತ್ತದೆ ಹಾಡ್‌ಸನ್ ಬೋಧಕರ ಕಾಲದಿಂದ ಈ ದಿನದ ವರೆಗೂ ಆ ಸಮಾಜದವರು ಇಲ್ಲಿನ ಕೆಲಸವನ್ನು ಮುಂದುಮುಂದಕ್ಕೆ ಸಾಗಿಸುವುದಕ್ಕಾಗಿ ಮಿಷನರಿಗಳನ್ನು ಕ್ರಮವಾಗಿ ಕಳುಹಿಸುತ್ತಲೇ ಬಂದಿದ್ದಾರೆ

ವೆಸ್ಲಿಯನ್ ಮಿಷನ್‌ನವರ ಕೆಲಸವು ಈ ಸೀಮೆಯಲ್ಲಿ ತುಂಬಾ ವಿಖ್ಯಾತವಾಗಿರುವವರಿಗೆ ತಿಳಿದಿರುತ್ತದೆ. ಏಕೆಂದರೆ ಇಂಗ್ಲಿಷ್ ವಿದ್ಯಾಭ್ಯಾಸ, ಸ್ತ್ರೀ ವಿದ್ಯಾಭ್ಯಾಸ, ಅಚ್ಚುಹಾಕುವ ವಿಧಾನ, ಇವುಗಳನ್ನು ಮೈಸೂರು ಸೀಮೆಗೆ ಮೊಟ್ಟಮೊದಲು ತಂದವರು ಇವರೇ ಆಗಿರುತ್ತಾರೆ ಬೆಂಗಳೂರು ಪೇಟೆ, ಮತ್ತು ದಂಡು, ಕ್ಲೋಸ್‌ಪೇಟೆ, ಚನ್ನಪಟ್ಟ, ಕೋಲಾರ್ ಚಿನ್ನದಗಣಿ, ತುಮಕೂರು, ಮದ್ದಗಿರಿ, ಗುಬ್ಬಿ, ಕುಣಿಗಲು, ತಿಪಟೂರು, ಶಿವಮೊಗ್ಗೆ, ತರೀಕೆರೆ, ಹೊನ್ನಾಳಿ, ಶಿಕಾರಿಪುರ, ಸೊರಬ, ದಾವಣಗೆರೆ, ಹರಿಹರ, ಚಿಕ್ಕಮಗಳೂರು, ಹಾಸನ, ಚನ್ನರಾಯಪಟ್ಟಣ, ಹೊಳೆನರಸೀಪುರ, ಬೇಲೂರು, ಮೈಸೂರು ರಾಜಧಾನಿ, ಫ್ರೆಂಚ್ ರಾಕ್ಸ್, ಮಂಡ್ಯ, ನಂಜನಗೂಡು, ಚಾಮರಾಜನಗರ, ಹುಣಸೂರು, ಇವೇ ಮುಂತಾದ ಅನೇಕ ಸ್ಥಳಗಳಲ್ಲಿ ಮಿಷನ್ ಸಂಘದವರು ವಿದ್ಯಾಭ್ಯಾಸದ ಕೆಲಸವನ್ನು ನಡಿಸುತ್ತಾ ಇದ್ದಾರೆ. ಮೈಸೂರು ಪಟ್ಟದಲ್ಲಿಯೂ, ಹಾಸನದಲ್ಲಿಯೂ, ಶಿವಮೊಗ್ಗೆಯ ಹತ್ತಿರವಿರುವ ಮಂಡಗದ್ದೆಯಲ್ಲಿಯೂ ಸ್ತ್ರೀಯರುಗಳಿಗಾಗಿಯೂ ಮಕ್ಕಳಿಗಾಗಿಯೂ ಆಸ್ಪತ್ರೆಗಳನ್ನು ಸ್ಥಾಪನೆಮಾಡಿರುತ್ತಾರೆ. ತುಮಕೂರಿನಲ್ಲಿಯೂ, ಹಾಸನದಲ್ಲಿಯೂ ಇರುವ ಅನಾಥಶಾಲೆಗಳವರಿಗಾಗಿ ಕೈಗಾರಿಕೆಯ ಸ್ಕೂಲುಗಳನ್ನು ಏರ್ಪಡಿಸಿರುತ್ತಾರೆ ಈ ಪತ್ರಿಕೆಯು ಮುದ್ರಿಸಲ್ಪಡುವ ಮುದ್ರಾಶಾಲೆಯನ್ನು ಮೈಸೂರು ಪಟ್ಟಣದಲ್ಲಿ ಏರಡಿಸಿದ್ದಾರೆ. ಇವೇ ಮುಂತಾದ ಅನೇಕ ಮಾರ್ಗಗಳಲ್ಲಿ ವೆಸ್ಲಿಯನ್ ಮಿಷನ್ ಸಂಘದವರು ಮೈಸೂರು ದೇಶೀಯರ ಪ್ರಯೋಜನಕ್ಕಾಗಿ ಕೆಲಸಮಾಡುತ್ತಾ ಬರುತ್ತಾರೆ. ಈ ಮಿಷನ್‌ನಿಂದ ಸಾವಿರಾರು ಮಂದಿ ವಿದ್ಯವನ್ನೂ ಬೇರೆ ವಿಧವಾದ ಪ್ರಯೋಜನಗಳನ್ನೂ ಹೊಂದಿಕೊಂಡಿರುತ್ತಾರೆ

ಇಷ್ಟು ದೊಡ್ಡ ಸಮಾಜವು ನಡಿಸುತ್ತಾ ಬಂದಿರುವ ಕೆಲಸವನ್ನು ಮುಖ್ಯವಾಗಿ ಎಣಿಸಿ ಅದರ ನೂರನೆಯ ವಾರ್ಷಿಕೋತ್ಸವವನ್ನು ತಕ್ಕಹಾಗೆ ಆಚರಿಸುವುದು ವಿಹಿತವಾಗಿರುತ್ತದೆ. ಕಳೆದ ಸೋಮವಾರ ಎಲ್ಲಾ ವೆಸ್ಲಿಯನ್ ಮಿಷನ್ ದೇವಾಲಯಗಳಲ್ಲಿಯೂ ಕಾಲೋಚಿತವಾದ ಆರಾಧನೆಗಳು ನಡೆದುವು ಆ ಕಾಲದಲ್ಲಿ ಸರ್ವಶಕ್ತನಾದ ದೇವರು ತನ್ನ ಸೇವಕರುಗಳ ಮೂಲಕವಾಗಿ ನಡಿಸಿರುವ ಕೆಲಸಕ್ಕಾಗಿ ಆತನಿಗೆ ಮನಃಪೂರ್ವಕವಾಗಿಯೂ, ಭಕ್ತಿಪೂರ್ವಕವಾಗಿಯೂ ಸ್ತೋತ್ರಗಳನ್ನು ಸಲ್ಲಿಸಿದರು, ಹಿಂದೆ ತಾವು ಮಾಡಿದ ಪಾಪಗಳಿಗಾಗಿಯೂ ಅಪರಾಧಗಳಿಗಾಗಿಯೂ ಪಶ್ಚಾತ್ತಾಪಪಟ್ಟು ಮುಂದೆ ಅಂಥಾ ಕಾರ್ಯಗಳನ್ನು ಮಾಡುವುದಿಲ್ಲವೆಂದು ಪಾಪದ ಅರಿಕೆಯನ್ನು ಮಾಡಿದರು ಮತ್ತು ಜನರು ತಮ್ಮನ್ನು ದೇವರಿಗೆ ಒಪ್ಪಿಸಿಕೊಟ್ಟು, ಮುಂದೆ ಹೆಚ್ಚಾಗಿಯೂ ಉತ್ತಮವಾಗಿಯೂ ಆತನನ್ನು ಸೇವಿಸುವೆವೆಂದು ಪ್ರತಿಜ್ಞೆಮಾಡಿಕೊಂಡರು

ಮುಂದಿನ ಶನಿವಾರ, ಭಾನುವಾರ, ಸೋಮವಾರದಲ್ಲಿ ಬೆಂಗಳೂರಿನಲ್ಲಿ ವಿಶೇಷವಾದ ಸಭೆಯು ನೆರೆದುಬರುವುದಕ್ಕಿದೆ ಆ ಕಾಲದಲ್ಲಿ ಶತಮಾನಮಹೋತ್ಸವವನ್ನು ಇನ್ನೂ ವಿಶೇಷವಾಗಿ ಆಚರಿಸುವುದಕ್ಕೆ ಮೈಸೂರು ಸೀಮೆಯ ಎಲ್ಲಾ ಕಡೆಗಳಿಂದಲೂ ಜನಗಳು ಬರುವರು.

ಮಿಷನ್ ಕೆಲಸದಿಂದ ಪ್ರಯೋಜನವನ್ನು ಪಡೆದುಕೊಂಡಿರುವವರು ಮಿಷನ್ ಸಮಾಜದವರಿಗೆ ಕೃತಜ್ಞತೆಯ ಕಾಣಿಕೆಯನ್ನು ಕೊಟ್ಟಿರುತ್ತಾರೆ ಜನಗಳು ದೇವರಿಗೂ ಮಿಷನ್ ಸಮಾಜದವರಿಗೂ ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸುವುದಕ್ಕಾಗಿ ಎರಡು ವರುಷಗಳಿಂದಲೂ ಚಂದಾ ಹಾಕಿ ಹದಿನೈದು ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತಾರೆ.

ಈ ಕಾಣಿಕೆಗಳನ್ನೂ ಹಿಂದು ದೇಶೀಯ ಕ್ರೈಸ್ತರ ವಂದನೆಗಳನ್ನೂ ತೆಗೆದುಕೊಂಡು ಹೋಗಿ ಮಾತೃ ಸಮಾಜದವರಿಗೆ ಒಪ್ಪಿಸುವುದಕ್ಕಾಗಿ ಹೈದರಾಬಾದಿನ ಬಿ. ಪಿ ವೆಸ್ಲಿ ಬೋಧಕರು ಇಂಗ್ಲಾಂಡಿಗೆ ಹೋಗಿರುತ್ತಾರೆ. ಅವರು ಅಲ್ಲಿನ ಜನಗಳಿಗೆ ವೆಸ್ಲಿಯನ್ ಮಿಷನ್ ಸಮಾಜದವರು ಹಿಂದು ದೇಶದಲ್ಲಿ ನಡಿಸಿರುವ ಕೆಲಸವನ್ನು ಕುರಿತು ತಿಳಿಸುವರು. ಮಿಷನ್‌ನಿಂದ ಉಪಕಾರವನ್ನು ಹೊಂದಿರುವ ನಮ್ಮ ವಾಚಕ ಮಹನೀಯರುಗಳಲ್ಲಿ ಯಾರಾದರೂ ಕೃತಜ್ಞತೆಯ ಕಾಣಿಕೆಯನ್ನು ಕೊಡಲಪೇಕ್ಷೆಪಟ್ಟರೆ, ಅದನ್ನು ಕೃತಜ್ಞತಾ ಪೂರ್ವಕವಾಗಿ ಅಂಗೀಕಾರ ಮಾಡಿಕೊಳ್ಳುವೆವು.

ಒಳದೇಶದ ವೃತ್ತಾಂತಗಳು.

ಕಳೆದ ವಾರ ರಾಜಧಾನಿಯಲ್ಲಿ ವಿಶೇಷ ಮಳೆ ಆಯಿತು ಇನ್ನೂ ಮಳೆ ಬರುವ ಸೂಚನೆ ಕಾಣುತ್ತಿದೆ. ಪ್ರಜಾ ಆರೋಗ್ಯವು ಚೆನ್ನಾಗಿರುವುದು

* * *

ನಾಳೆಯೂ ನಾಡಿದ್ದೂ ರಾಜಧಾನಿಯ ಚಾಮುಂಡಿಬೆಟ್ಟದ ತಪ್ಪಲಲ್ಲಿರುವ ಕುಮರೆ ಜಾಜನ ಬೋರೆಮೈದಾನಕ್ಕೆ ಶ್ರೀಮನ್ ಮಹಾರಾಜರವರು ಬೆಳಿಗ್ಗೆಯೂ ಮಧ್ಯಾಹ್ನವೂ ದಯಮಾಡಿ, ಅಲ್ಲಿ ನಡೆಯುವ ಪ್ರಾಣಿಗಳ ಪ್ರದರ್ಶನವನ್ನು ಪರಾಂಬರಿಸುತ್ತಾರೆ

ಸರ್ಕಾರಿ ಇಲಾಖೆಯಿಂದ ಇನಾಮತಿ ಜಮೀನುಗಳ ವ್ಯವಸಾಯಕ್ಕೆ ನೀರು ಕಟ್ಟಿದರೆ ಅಜುಬಾಜು ಇರುವ ಸರ್ಕಾರಿ ಖುಷ್ಕಿ ಜಮೀನಿನ ಕಂದಾಯದ ದರಕ್ಕಿಂತ ಆ ದರವು ಎಷ್ಟು ಹೆಚ್ಚಾಗಿರುವುದೋ ಅಷ್ಟನ್ನು ಮಾತ್ರ ಕಂದಾಯ ವಸೂಲ್ಮಾಡಬೇಕೆಂದು ಸರ್ಕಾರದವರು ರೂಲಸು ಮಾಡಿದಾರೆ

* * *

ನವರಾತ್ರಿ ಉತ್ಸವಗಳ ನಿಮಿತ್ತ ಬ್ರಿಟಿಷ್ ರೆಸಿಡೆಂಟರಾದ ಸರ್ ಹ್ಯೂ ಡಾಲಿಯವರು ಪತ್ನಿಪುತ್ರಿಯರ ಸಮೇತ ಅಸಿಸ್ಟೆಂಟರೊಡನೆ ಮೊನ್ನೆ ಸಾಯಂಕಾಲ ಸುಮಾರು 5 ಗಂಟೆಗೆ ನೀಲಗಿರಿಯಿಂದ ಮೋಟರ್ ಗಾಡಿಯಲ್ಲಿ ರಾಜಧಾನಿಗೆ ದಯಮಾಡಿದರು ಗೌರವಾರ್ಥವಾದ 13 ತೋಪುಗಳು ಹಾರಿಸಲ್ಪಟ್ಟವು

* * *

ಶ್ರೀಮನ್ ಯುವರಾಜರವರ ಸಂಗಡ ಸೀಮೆಗೆ ಪ್ರಯಾಣಮಾಡಿದ್ದ ಮ|| ರಾಮಲಿಂಗರೆಡ್ಡಿಯವರು ವಿದ್ಯಾ ಶಿಕ್ಷಣದ ವಿಚಾರವನ್ನು ನೋಡಿ ಪರಿಶ್ರಮ ಮಾಡಿಕೊಂಡು ಬರುವುದಕ್ಕಾಗಿ ನಮ್ಮ ಸರ್ಕಾರದ ಅಪ್ಪಣೆಯ ಪ್ರಕಾರ ಇಂಗ್ಲಾಂಡಿನಿಂದ ಅಮೇರಿಕಕ್ಕೆ ಹೋಗಿರುತ್ತಾರೆ ಅವರು ಅಲ್ಲಿಂದ ಜಪಾನ್ ದೇಶಕ್ಕೆ ಹೋಗಿ ನೋಡಿಕೊಂಡು ತರುವಾಯ ಹಿಂತಿರುಗಿ ಮೈಸೂರಿಗೆ ಬರುವ ಹಾಗಿದಾರೆಂದು ತಿಳಿಯುತ್ತೇವೆ

* * *

ಗ್ವಾಲಿಯರ್ ಸಂಸ್ಥಾನದಲ್ಲಿ ಇಷ್ಟರಲ್ಲೇ ಸರ್ವ ವಸ್ತುಪ್ರದರ್ಶನೋತ್ಸವ ನಡೆಯುವುದಾಗಿದೆ ಆ ಸಂಸ್ಥಾನದ ಅಧಿಕಾರಿಗಳ ಪೈಕಿ ಮ|| ಬಿ ಎಲ್ ಗೋಲೆ ಎಂಬುವರು ಕಳೆದ ವಾರ ರಾಜಧಾನಿಗೆ ಬಂದು ಇಲ್ಲಿನ ವಿದ್ಯಮಾನಗಳನ್ನು ನೋಡುತ್ತಲೂ, ಇಲ್ಲಿಂದ ಆ ಪ್ರದರ್ಶನಕ್ಕೆ ವಸ್ತುಗಳನ್ನು ತರಿಸಿಕೊಳ್ಳುವ ವಿಷಯದಲ್ಲಿ ಏರ್ಪಾಡುಗಳನ್ನು ಮಾಡುತ್ತಲೂ ಇದಾರೆ ಇವರು ಒಂದು ದಿನ ಅರಮನೆಯ ದರ್ಬಾರಿಗೂ ಬಂದಿದ್ದರು

* * *

ಕಳೆದ ಸೋಮವಾರ ಸಾಯಂಕಾಲ ರಾಜಧಾನಿಯಲ್ಲಿ ಮೂರನೇ ಮಹಾರಾಜಕುಮಾರಿಯವರ ಕೆ ನಾತಿಯಲ್ಲಿದ್ದ ಹನುಮಂತರಾಯನೆಂಬ ಮರಾಟಿ ಆಳು ಅರಮನೆಯ ಹಿಂಭಾಗದ ಉದ್ಯಾನವನದ ಬಳಿ ಬಹಳ ಆಯಾಸವಾಗುತ್ತದೆಂದು ಹೇಳುತ್ತಾ ಮಲಗಿದವನು ಮತ್ತೆ ಏಳಲೇ ಇಲ್ಲ ಕೂಡಲೇ ಡಾಕ್ಟರು ಹೋಗಿ ನೋಡಿದ್ದರಲ್ಲಿ ಅವನಿಗೆ ಪ್ರಾಣಹೋಗಿತ್ತು ಆಗ ಶವವನ್ನು ಅಲ್ಲಿಂದ ಆಸ್ಪತ್ರೆಗೆ ಸಾಗಿಸಿ, ಮರುದಿನ ಮಧ್ಯಾಹ್ನ ಮೃತನ ರಕ್ತಸಂಬಂಧಿಗಳಿಂದ ದಹನ ಮಾಡಲಾಯಿತೆಂದು ತಿಳಿದುಬಂದಿದೆ

* * *

ನಮ್ಮ ಮಹಾರಾಜರವರು ಮುಂದಿನ ತಿಂಗಳು ರಾಜಧಾನಿಗೆ ದಯಮಾಡುವ ವೈಸ್‌ರಾಯಿ ಪ್ರಭುಗಳನ್ನು ಕರೆದುಕೊಂಡು ಶಿಕಾರಿ ಕ್ಯಾಂಪಿಗೆ ಹೋಗಿ ಬರುವುದಕ್ಕೋಸ್ಕರ ಎರಡು ವಿಸ್ತಾರವಾದ ಮೋಟರ್ ಗಾಡಿಗಳನ್ನು ಸೀಮೆಯಿಂದ ತರಿಸುತ್ತಾರೆ ಹುಜೂರು ಸೆಕ್ರೆಟರಿ ಮ|| ಪಿ ರಾಘವೇಂದ್ರರಾಯರು ಸೀಮೆಯಲ್ಲಿ ಆ ಗಾಡಿಗಳನ್ನು ನೋಡಿ ಚುನಾಯಿಸಿ ಜಹಜಿನ ಮೇಲೆ ಕಳುಹಿಸುವ ಕೆ ಕಂಪನಿಯವರಿಗೆ ತಿಳಿಸಿದರು ಅವು ಮುಂದಿನ ವಾರ ಮದರಾಸಿಗೂ, ಬಳಿಕ ಇನ್ನೊಂದು ವಾರದಲ್ಲಿ ರಾಜಧಾನಿಗೂ ಬರುವವು

* * *

ಶ್ರೀಮನ್ ಯುವರಾಜರವರ ಸಂಗಡ ದಯಮಾಡಿದ್ದ ಸರ್ದಾರ್ ಎಂ ಎನ್ ಬಾಳರಾಜೆ ಅರಸಿನವರೂ, ಡಾಕ್ಟರ್ ಮಹಮದ್ ಉಸ್ಮಾನ್ ರವರೂ, ಸೇವಕಾಳಿಗಳೂ ಎಲ್ಲಾ ಸುರಕ್ಷಿತರಾಗಿ ವಾಪಸು ಬಂದಿರುತ್ತಾರೆ ಹುಜೂರು ಸೆಕ್ರೆಟರಿ ಮ|| ಪಿ ರಾಘವೇಂದ್ರರಾಯರು ಯುವರಾಜರವರ ಸಂಗಡ ಮಾರ್ಸೇಲ್ಸ್ ಬರಲಿಲ್ಲ ಅವರು ಜಹಜು ಇಳಿದ ಮೇಲೆ ಬೊಂಬಾಯಿನಲ್ಲೇ ನಾಲ್ಕು ದಿನ ಇದ್ದು, ಕಂಪನಿಯವರ ಕೂಡ ಲೆಕ್ಕಾಚಾರಗಳನ್ನು ಇತ್ಯರ್ಥಮಾಡಿಕೊಂಡು, ಸೋಮವಾರ ಅಲ್ಲಿಂದ ಪ್ರಯಾಣಮಾಡಿ ನೆನ್ನೆ ಬೆಳಿಗ್ಗೆ ರಾಜಧಾನಿಯನ್ನು ತಲುಪುವವರಾಗಿದ್ದರು

* * *

ಶ್ರೀಮನ್ ಯುವರಾಜರವರು ಕಳೆದ ಭಾನುವಾರ ಸಾಯಂಕಾಲ ಮೆರವಣಿಗೆಯಲ್ಲಿ ದಯಮಾಡಿದಾಗ್ಗೆ ರಾಜಧಾನಿಯ ಪಾರ್ಸಿ ಪ್ರಜೆಗಳೆಲ್ಲಾ ದೊಡ್ಡಪೇಟೆಯಲ್ಲಿ ಗುಂಪಾಗಿ ಸೇರಿದ್ದು ಯುವರಾಜರವರ ದರುಶನವನ್ನು ಮಾಡಿ ಆನಂದಪಟ್ಟು ಜಯಘೋಷವನ್ನು ಮಾಡಿದರು ಅವರಲ್ಲಿ ಮುಖ್ಯರಾದ ಮೆ|| ಕೆ ಫೆರೋಜ್‌ಷಾ ರವರು ಸಂಕ್ಷೇಪವಾದ ಅಡ್ರೆಸ್ಸನ್ನು ಓದಿ ಹೇಳಿದರು ಮೆ|| ಮಾನಕ್‌ಜಿ ಬೊನರ್ಜಿ ಎಂಬ ವಯೋವೃದ್ಧರು ಯುವರಾಜರವರಿಗೆ ದಿಂಡಿನ ಹಾರವನ್ನೂ, ಮಿಸೆಸ್ ಮೆಹರಬಾಯಿ ಮಾನೆಕ್‌ಜಿ ಎಂಬಾಕೆಯು ಪರಿಮಳದ ತುರಾಯಿಯನ್ನೂ ಒಪ್ಪಿಸಿದರು

* * *

ರಾಜಧಾನಿಯ ಮರಿಮಲ್ಲಪ್ಪನವರ ಹೈ ಸ್ಕೂಲ್ ಹೆಡ್ ಮಾಸ್ಟರ್ ಮ|| ಎಂ ವೆಂಕಟಕೃಷ್ಣಯ್ಯನವರ ಹೆಸರನ್ನು ಶಾಶ್ವತಪಡಿಸಬೇಕೆಂದು ಒಂದು ವಿದ್ಯಾರ್ಥಿ ಫಂಡನ್ನು ಏರ್ಪಾಡುಮಾಡಿರುತ್ತಾರಷ್ಟೆ ಆರ್ ಟಿ ಕಂಪನಿಯ ಅಧ್ಯಕ್ಷರಾದ ಮ ಎ ವಿ ವರದಾಚಾರ್ಯರು ಕಳೆದ ಭಾನುವಾರ ರಾತ್ರಿ "ಪ್ರಹ್ಲಾದ ಚರಿತ್ರೆ" ಎಂಬ ನಾಟಕವನ್ನು ತಮ್ಮ ಕಂಪನಿಯವರಿಂದ ಟೌನ್ ಹಾಲಿನಲ್ಲಿ ಆಡಿಸಿ, ಆ ರಾತ್ರಿ ಉತ್ಪತ್ತಿಯಾದ ರೂ 711 1 0 ಯನ್ನು ಮೇಲ್ಕಂಡ ಫಂಡಿಗೆ ಧರ್ಮಾರ್ಥವಾಗಿ ಕೊಟ್ಟು ಇರುತ್ತಾರೆಂದೂ, ಸರ್ದಾರ್ ಎಂ ಕಾಂತರಾಜೆ ಅರಸಿನವರು ಆ ನಾಟಕಕ್ಕೆ ತಮ್ಮ ಕೃಪಾಪೋಷಕತೆಯನ್ನಿತ್ತರೆಂದೂ ತಿಳಿಸಲು ಸಂತೋಷಪಡುತ್ತೇವೆ

ನವರಾತ್ರಿ ಉತ್ಸವಗಳು

ಕಳೆದ ಬುಧವಾರದಿಂದ ರಾಜಧಾನಿಯಲ್ಲಿ ನವರಾತ್ರಿ ಉತ್ಸವಗಳು ಅತ್ಯಂತ ಸಂತೋಷಕರವಾಗಿಯೂ, ವೈಭವದಿಂದಲೂ ನಡೆಯುತ್ತಿರುವವು ದಿನವೂ ಸಾಯಂಕಾಲದ ಹೊತ್ತು ಶ್ರೀಮನ್ ಮಹಾರಾಜರವರು ದಿವ್ಯಾಲಂಕಾರ ಭೂಷಿತರಾಗಿ ಸಿಂಹಾಸನದ ಮೇಲೆ ಚಿತ್ತೈಸಿ ದರ್ಬಾರ್ ನಡಿಸುತ್ತಿದಾರೆ ದರ್ಬಾರಿಗಳ ಮುಜರೆಗಳೂ, ಸೈನಿಕರ ಕವಾತುಗಳು ಮತ್ತೂ ಸಾಧನೆಗಳೂ, ಜಟ್ಟಿಗಳ ಮತ್ತೂ ಕರ್ನಾಟಕ ಕುಸ್ತಿಗಳೂ, ಪಟ್ಟೀವರಿಸೆಗಳೂ, ಪಟ್ಟದಾನೆ ಪಟ್ಟದ ಕುದುರೆಗಳ ಹೆಜ್ಜೆಯೂ, ಬಾಣಬಿರುಸುಗಳ ತಮಾಷೆಯೂ, ದೀಪೋತ್ಸವವೂ ಪದ್ಧತಿಯ ಪ್ರಕಾರ ಗಂಭೀರವಾಗಿಯೂ ಸೌಖ್ಯಾನಂದಕರವಾಗಿಯೂ ನಡೆಯುತ್ತಿರುವವು ಶ್ರೀಮನ್ ಯುವರಾಜರವರು ಭಾನುವಾರವೂ ಸೋಮವಾರವೂ ಸಾಯಂಕಾಲದ ದರ್ಬಾರಿಗೆ ದಯಮಾಡಿ ಸಿಂಹಾಸನದ ಬಲಗಡೆ ಎದುರು ಪಾರ್ಶ್ವದ ಶ್ರೇಷ್ಠಾಸನವನ್ನು ಅಲಂಕರಿಸಿದ್ದರು ದಿನವೂ ಬೆಳಗಿನ ಹೊತ್ತು ಶ್ರೀಮನ್ ಮಹಾರಾಜರವರು ಅರಮನೆಯ ಮುಂಭಾಗದಲ್ಲಿ ಚಿತ್ತೈಸಿ ಮೈದಾನಿನಲ್ಲಿ ನಡೆದ ನಾನಾ ವಿನೋದಗಳನ್ನು ಪರಾಂಬರಿಸುತ್ತಿದ್ದರು

ನೆನ್ನೆ ಬೆಳಿಗ್ಗೆ ಪಟ್ಟದ ಕತ್ತಿಯೇ ಮೊದಲಾದ ಆಯುಧಗಳ ಮೆರವಣಿಗೆಯು ಅತ್ಯಂತ ವೈಭವದಿಂದ ಜರುಗಿತು ಸಾವಿರಾರು ಪ್ರಜೆಗಳು ಸೇರಿ ಮೆರವಣಿಗೆಯ ವೈಖರಿಯನ್ನು ನೋಡಿ ಆನಂದಪಟ್ಟರು ನೆನ್ನೆ ಸಾಯಂಕಾಲ ಇಂಗ್ಲಿಷ್ ದರ್ಬಾರು ಜರುಗುವುದಾಗಿತ್ತು ಈ ದಿನ ಬೆಳಿಗ್ಗೆ 8½ ಗಂಟೆಗೆ ಆಯುಧ ಗಜಾಶ್ವಗಳು ಮೆರವಣಿಗೆಯಲ್ಲಿ ಅರಮನೆಯಿಂದ ಹೊರಟು ದೊಡ್ಡಪೇಟೆಯ ಮಾರ್ಗವಾಗಿ ಬನ್ನೀ ಮಂಟಪಕ್ಕೆ ಬಿಜಮಾಡುವವು ಅನಂತರ ಮಹಾರಾಜರವರು ಅರಮನೆಯ ಮುಂಭಾಗದಲ್ಲಿ ಚಿತ್ತೈಸಿ ಅಲ್ಲಿ ನಡೆಯುವ ಜಟ್ಟಿಗಳ ಮತ್ತೂ ಕರ್ನಾಟಕ ಕುಸ್ತಿಗಳನ್ನು ಪರಾಂಬರಿಸುವವರಾಗಿದಾರೆ ಈ ದಿನ ಸಾಯಂಕಾಲ 4 ಗಂಟೆಗೆ ಜಂಬೂ ಸವಾರೀ ಉತ್ಸವವು ನಡೆಯುತ್ತದೆ

ನಾಳೆಯೂ ನಾಡಿದ್ದೂ ಸಾಯಂಕಾಲ 7½ ಗಂಟೆಗೆ ಅರಮನೆ ಅಂಬಾವಿಲಾಸದಲ್ಲಿ ಶ್ರೀಮನ್ ಮಹಾರಾಜರವರು ದಯಮಾಡಿ ದರ್ಬಾರನ್ನು ನಡಿಸುವರು ಆಗ್ಗೆ ನಜರುಮುಜರೆಗಳೂ, ಸಂಸ್ಕೃತ ವಿದ್ವತ್ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಿಗೆ ಬಹುಮಾನಗಳ ವಿನಿಯೋಗವೂ ನಡೆಯುತ್ತವೆ.

ನವರಾತ್ರಿ ಉತ್ಸವಗಳ ನಿಮಿತ್ತ ರಾಜಧಾನಿಗೆ ಅನೇಕ ಸಹಸ್ರ ಪ್ರಜೆಗಳು ಬಂದು ಪಟ್ಟಣದಲ್ಲಿ ಕಿಕ್ಕಿರಿಯುವಂತೆ ತುಂಬಿರುತ್ತಾರೆ ಇವರ ವಿನೋದಕ್ಕಾಗಿ ಸ್ಥಳ ಪರಸ್ಥಳಗಳ ನಾಟಕಗಳು ಇತರ ಆಟಗಳೂ ನಡೆಯುತ್ತಿರುವವು ಬಳೆಂಗ್ ಆಟಗಳೆಂಬ ಮೋಸಕರವಾದ ವಿನೋದಕ್ಕೆ ಮ್ಯುನಿಸಿಪಾಲಿಟಿಯವರೂ ಮ್ಯಾಜಿಸ್ಟ್ರೇಟರೂ ಅವಕಾಶ ಕೊಟ್ಟಿರುವುದನ್ನು ನೋಡಿ ದುಃಖಪಡಬೇಕಾಗಿದೆ ಇದರಿಂದ ತಿಳುವಳಿಕೆ ಸಾಲದ ಜನರು ಇವುಗಳಲ್ಲಿ ಆಸಕ್ತರಾಗಿ ದುಡ್ಡು ಕಳೆದುಕೊಂಡು ಕೆಡಲು ಅವಕಾಶವಾಗಿದೆ

ತಾ 11 ನೇ ಶನಿವಾರ ಮಧ್ಯಾಹ್ನ 12 ಗಂಟೆಗೆ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ದರ್ಬಾರ್ ಮಂದಿರದಲ್ಲಿ ದಿವಾನ್‌ರವರು ಪ್ರಜಾಪ್ರತಿನಿಧಿ ಸಭೆಯನ್ನು ಪ್ರಾರಂಭಮಾಡಿ, ವಾರ್ಷಿಕ ಅಡ್ರೆಸ್ಸನ್ನು ಓದುತ್ತಾರೆ

ಮೈಸೂರು ಸಂಸ್ಥಾನದ ಪರಸ್ಪರ ಸಹಾಯ ಸಂಘಗಳ ಮೂರನೇ ಮಹಾ ಸಭೆಯು.

ಶ್ರೀಮನ್ ಯುವರಾಜರವರ ಪ್ರತ್ಯುತ್ತರ

ಪರಸ್ಪರ ಸಹಾಯ ಸಂಘಗಳ ಮಹಾಸಭೆಯಲ್ಲಿ ಸೇರಿದ್ದ ಪ್ರತಿನಿಧಿಗಳನ್ನು ಕುರಿತು ಶ್ರೀಮನ್ ಯುವರಾಜರವರು ಅಪ್ಪಣೆಕೊಡಿಸಿದ ಪ್ರತ್ಯುತ್ತರದ ಮುಖ್ಯಾಂಶಗಳೇನೆಂದರೆ—

ಸಭಿಕರೇ,—ನಾವು ಅನ್ಯದೇಶ ಸಂಚಾರವನ್ನು ತೀರಿಸಿಕೊಂಡು ಹಿಂತಿರುಗಿ ನಮ್ಮ ಪ್ರೀತಿಪಾತ್ರವಾದ ಮೈಸೂರಿಗೂ ಈ ಮಹಾಸಭೆಗೂ ಬಂದಿರುವುದಕ್ಕಾಗಿ ಅಂತಃಕರಣಪೂರ್ವಕವಾಗಿಯೂ ಉತ್ಸಾಹದಿಂದಲೂ ನಮಗೆ ಸುಸ್ವಾಗಮನವನ್ನು ಬಯಸಿದ್ದಕ್ಕಾಗಿ ನಾವು ನಿಮ್ಮಗಳನ್ನು ಪೂರ್ಣಮನಸ್ಸಿನಿಂದ ವಂದಿಸುತ್ತೇವೆ ನಾವು ಪಾಶ್ಚಾತ್ಯದೇಶಗಳಲ್ಲಿ ಸಂಚಾರಮಾಡಿ ಬಂದು ಇನ್ನೂ ಇಪ್ಪತ್ತನಾಲ್ಕು ಗಂಟೆಗಳಾಗಲಿಲ್ಲ ಆದರೂ ಈಗ ಇಲ್ಲಿಗೆ ಬಂದು ಈ ಮಹಾಸಭೆಯನ್ನು ಪ್ರಾರಂಭಿಸಬೇಕೆಂದು ನೀವುಗಳು ಪ್ರಾರ್ಥಿಸಿಕೊಂಡದ್ದನ್ನು ನಾವು ನೆರವೇರಿಸದೆ ಇರಲು ನಮ್ಮ ಮನಸ್ಸು ಒಪ್ಪದೇಹೋಯಿತು.—ನಾವು ಈ ದಿನ ದೀರ್ಘವಾದ ಉಪನ್ಯಾಸಮಾಡಬೇಕೆಂದು ನೀವು ನಿರೀಕ್ಷಿಸುತ್ತೀರೆಂಬುದಾಗಿ ನೆನಸುವುದಿಲ್ಲ ನಾವು ಪ್ರಪಂಚದಲ್ಲೆಲ್ಲಾ ವಿಶೇಷವಾಗಿ ಅಭಿವೃದ್ಧಿಗೆ ಬಂದಿರುವ ಮತ್ತೂ ಪರಮಾಶ್ಚರ್ಯಯುಕ್ತವಾಗಿರುವ ಕೆಲವು ಭಾಗಗಳನ್ನು ಸುತ್ತಿ ನೋಡಿಕೊಂಡು ಬಂದಿರುತ್ತೇವೆ ನಮಗೆ ದೊರೆತ ಸ್ವಲ್ಪ ಕಾಲದಲ್ಲಿ ಆ ಪಾಶ್ಚಾತ್ಯ ದೇಶಗಳ ಜನರನ್ನೂ, ಅವರ ಗುಣ ನಡತೆ ಪದ್ಧತಿಗಳನ್ನೂ, ಅವರ ಕಾರ್ಯಗಳನ್ನೂ ಕೆಲವು ಮಟ್ಟಿಗೆ ಮುಂದಿಟ್ಟು ಮಾಡಿಕೊಂಡಿರುವೆವು ಅವುಗಳ ವಿಚಾರದಲ್ಲಿ ನಮಗುಂಟಾಗಿರುವ ನಮ್ಮ ಅನುಭವಾದಿಗಳನ್ನು ಕುರಿತು ಮತ್ತೊಂದುವೇಳೆ ಪ್ರಸ್ತಾಪವಮಾಡುವೆವು —ಆದಾಗ್ಯೂ ಈ ಸಂದರ್ಭದಲ್ಲಿ ಒಂದು ಸಂಗತಿಯನ್ನು ಹೇಳುತ್ತೇವೆ ನಾವು ಡಬ್ಲಿನ್ ನಗರದಲ್ಲಿದ್ದಾಗ್ಗೆ ಸರ್ ಹೊರೆಸ್ ಪ್ಲಂಕೆಟ್ ಎಂಬ ಮಹನೀಯರನ್ನು ಕಂಡು ಅವರ ಕೂಡ ಸಂಭಾಷಿಸಿದೆವು ಇವರು ಪ್ರಪಂಚದಲ್ಲಿ ಪರಸ್ಪರ ಸಹಾಯ ಕೂಟ ಕಾರರುಗಳಲ್ಲೆಲ್ಲಾ ವಿಶೇಷ ಪ್ರಖ್ಯಾತಿಯನ್ನು ಪಡೆದವರಾಗಿರುತ್ತಾರೆ ಅವರ ಸಂಗಡ ಮಾತನಾಡಿದ್ದರಲ್ಲಿ ನಮ್ಮ ಈಗಿನ ದೌರ್ಭಾಗ್ಯಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಪರಸ್ಪರ ಸಹಾಯದ ಏರ್ಪಾಡೇ ಪ್ರಾಮುಖ್ಯವಾದ ಪರಿಹಾರ ಮಾರ್ಗವೆಂದು ನಮಗೆ ಖಚಿತವಾಯಿತು ಐರ್ಲಾಂಡಿನ ಸ್ಥಿತಿಗತಿಯೂ ನಮ್ಮ ಸ್ಥಿತಿಗತಿಯೂ ಸುಮಾರು ಒಂದೇ ಆಗಿರುತ್ತದೆ ಆ ದೇಶವು ಪರಸ್ಪರ ಸಹಾಯ ಸಂಘಗಳ ಮೂಲಕ ಬೇಗಬೇಗನೆ ವೃದ್ಧಿ ಹೊಂದುತ್ತಿರುವುದು ನಿಮ್ಮ ಸಾಹಸ ಪ್ರಯತ್ನಗಳ ಮೂಲಕ ನಮ್ಮ ಗ್ರಾಮಾಂತರಗಳ ಸ್ಥಿತಿಗತಿಯೂ ಹಾಗೆಯೇ ಅಭಿವೃದ್ಧಿಗೆ ಬಂದೀತೆನ್ನುವುದಕ್ಕೆ ನಮಗೆ ಸಂಶಯವಿಲ್ಲ —ಇಲ್ಲಿ ಮೈಸೂರು ಸಂಸ್ಥಾನದೊಳಗೆ ನೀವುಗಳು ಪರಸ್ಪರ ಸಹಾಯದ ಏರ್ಪಾಡಿನ ವಿಷಯದಲ್ಲಿ ಕೆಲವು ನೂರ ವ್ಯವಸಾಯಮಾಡಿರುತ್ತೀರೆಂಬುವುದನ್ನು ನಾವು ಬಲ್ಲೆವು ನೀವು ನಿಧಾನವಾಗಿಯೂ ಜಾಗರೂಕತೆಯಿಂದಲೂ ಈ ಏರ್ಪಾಡನ್ನು ಅಭಿವೃದ್ಧಿಗೆ ತರುತ್ತಿರುವುದನ್ನು ನೋಡುತ್ತಿದೇವಾದಕಾರಣ "ಆತುರಪಡದೆ ನಿಧಾನವಾಗಿ ಕಾರ್ಯಭಾಗಗಳನ್ನು ನಡಿಸುತ್ತಾ ಬನ್ನಿ" ಎಂದು ನಿಮಗೆ ನಾವು ಹೇಳಬೇಕಾದ ಅಗತ್ಯ ಕಾಣುವುದಿಲ್ಲ ನೀವು ಮಾಡುವ ಈ ಒಳ್ಳೇ ಕಾರ್ಯದ ಫಲ ಪರಿಣಾಮಕ್ಕೋಸ್ಕರ ನೀವುಗಳು ನಡಿಸುವ ಚರ್ಚೆಗಳನ್ನು ನಾವು ಕೆಲವು ಕಾಲ ಇದ್ದು ನೋಡುತ್ತಾ ಬರುವೆವು, ಮತ್ತೆ ಪರಸ್ಪರ ಸಹಾಯದ ಏರ್ಪಾಡಿನ ಮೂಲಕ ನೀವುಗಳು ಮೈಸೂರಿನಲ್ಲಿ ಪ್ರಜೆಗಳ ಕ್ಷೇಮಾಭಿವೃದ್ಧಿಯನ್ನು ಕೋರಿ ನಡಿಸುವ ಕಾರ್ಯಗಳು ಸಂತೋಷಕರವಾಗಿಯೂ ಉತ್ಸಾಹಪೂರಿತವಾಗಿಯೂ ಇರತಕ್ಕವುಗಳಾದಕಾರಣ ಅವುಗಳಿಗೆ ಜಯವುಂಟಾಗಲೆಂದು ವಿಶೇಷವಾಗಿ ಹಾರೈಸುತ್ತೇವೆ

ತರುವಾಯ ಮ|| ಕೆ ಪಿ ಪುಟ್ಟಣ್ಣಚೆಟ್ಟಿರವರು ಮಹಾ ಸಭೆಯ ಅಗ್ರಾಸನವನ್ನು ಅಂಗೀಕರಿಸಿ, ಪರಸ್ಪರ ಸಹಾಯದ ವಿಷಯದಲ್ಲಿ ದೀರ್ಘವಾದ ಮತ್ತೂ ಸ್ವಾರಸ್ಯವಾದ ಉಪನ್ಯಾಸಮಾಡಿದರು ಅದರ ಕನ್ನಡ ಭಾಷಣವು ತುಮಕೂರಿನ ಮ|| ಟ ವಿಶ್ವೇಶ್ವರಯ್ಯನವರಿಂದ ಓದಲಾಯಿತು ಬಳಿಕ ಮಾಸ್ ಕಚೇರಿಯ ಕೋಆಪರೇಟಿವ್ ಸೊಸೈಟಿ ಸೆಕ್ರೆಟರಿ ಮ|| ಎಸ್ ರಾಮರಾಯರೂ, ಅ|| ಕಮಿಷನರ್ ಮ|| ಎನ್ ಮಾಧವರಾಯರೂ, ಕಂಟ್ರೋಲರ್ ಮ|| ಜಿ ಟಿ ಚಕ್ರವರ್ತಿಯವರೂ ಪರಸ್ಪರ ಸಹಾಯ ಸಂಘಗಳ ಪುರೋವೃದ್ಧಿಗೆ ಸಾಧಕವಾದ ವಿಷಯಗಳನ್ನು ಕುರಿತು ಭಾಷಣಮಾಡಿದರು ಬಳಿಕ ಅರಕೆರೆಯ ಮ|| ಶ್ರೀನಿವಾಸಯ್ಯಂಗಾರರೂ, ಮುಳಂದೂರಿನ ಮ|| ಶ್ರೀಕಂಠಶಾಸ್ತ್ರಿಗಳೂ, ಮ|| ಎ. ಅಣ್ಣಯ್ಯ ಪಂಡಿತರೂ, ಹಾಸನದ ಮಿ|| ಸಯ್ಯದ್ ಮುಕೀನ್ ಸಾಹೇಬರೂ, ಸೋಸಲೆಯ ಮ|| ಶ್ರೀನಿವಾಸರಂಗಾಚಾರ್ಯರೂ, ಮಿರ್ಲೆಯ ಮ|| ಸುಬ್ರಹ್ಮಣ್ಯ ಅಯ್ಯರವರೂ ಶ್ರೀಮನ್ ಯುವರಾಜರವರಿಗೆ ಅಭಿನಂದನ ಸೂಚಕವಾದ ಭಾಷಣಗಳನ್ನೂ ಅಡ್ರೆಸ್ಸುಗಳನ್ನೂ ಓದಿ ಒಪ್ಪಿಸಿದರು ಕಡೆಯಲ್ಲಿ ತಾಲ್ಲೂಕಿನ ಕೋಆಪರೇಟಿವ್ ಸೆಂಟ್ರಲ್ ಬ್ಯಾಂಕಿನ ಮ|| ಟಿ ಆದಿನಾರಾಯಣಯ್ಯನವರು ಮೈಸೂರು ಸಂಸ್ಥಾನದಲ್ಲಿ ಪ್ರಭುಗಳ ಸಹಾಯ ಪ್ರೋತ್ಸಾಹದಿಂದ ಈ ಪರಸ್ಪರ ಸಹಾಯ ಸಂಘಗಳ ಏರ್ಪಾಡು ತೃಪ್ತಿಕರವಾಗಿಯೂ ಸಂತೋಷಪ್ರದವಾಗಿಯೂ ಅಭಿವೃದ್ಧಿಹೊಂದುತ್ತಿದೆ ಎಂಬ ಅರ್ಥಕ್ಕೆ ಉಪನ್ಯಾಸಮಾಡಿದರು

ಬಳಿಕ ಶ್ರೀಮನ್ ಯುವರಾಜರವರಿಗೆ ಹಾರಾ ತುರಾಯಿಗಳು ಒಪ್ಪಿಸಲ್ಪಟ್ಟವು ಅವರು ಸಭಿಕರ ಪ್ರಾರ್ಥನೆಯನ್ನು ಅಂಗೀಕರಿಸಿ ಫಲಾಹಾರವನ್ನು ಸ್ವೀಕರಿಸಿ ಮೊದಲನೇ ದಿನದ ಸಭೆಯನ್ನು ಮುಕ್ತಾಯಮಾಡಿ ಸಂತೋಷದಿಂದ ತೆರಳಿದರು

ಮೊನ್ನೆಯೂ ನೆನ್ನೆಯೂ ಬೆಳಿಗ್ಗೆ ಮಹಾಸಭೆಯು ನಡೆದು ಮೆಂಬರುಗಳು ನಾನಾ ವಿಚಾರಗಳನ್ನು ಕುರಿತು ಚರ್ಚೆಮಾಡಿದರು ಸಭಿಕರ ತೀರ್ಮಾನಗಳನ್ನು ಬರುವ ವಾರ ಪ್ರಕಟಿಸಬೇಕೆಂದಿದೇವೆ

ತಾಲ್ಲೂಕು ವರ್ತಮಾನಗಳು.

ದೇವನಹಳ್ಳಿ —ಸುಮಾರು 8 10 ದಿನಗಳಿಂದ ಮಳೆ ಆಗುತ್ತಿದೆ ಪೈರು ಪಚ್ಚೆಗಳೆಲ್ಲ ಕೊಂಚ ಮಟ್ಟಿಗೆ ಚೆನ್ನಾಗಿವೆ ಧಾರಣೆವಾಸಿಗಳೂ ಏರಿಹೋಗಿವೆ ರೂಪಾಯಿಗೆ 12 ಸೇರು ರಾಗಿ, 5 6 ಸೇರು ಅಕ್ಕಿ ಮಾರಾಟವಾಗುತ್ತಿದೆ ಆಮಶಂಕೆ, ಜ್ವರಾದಿಗಳು ಹರಡಿವೆ — ಇಲ್ಲಿನ ಕೆರೆಯ ನೀರನ್ನು ಉಪಯೋಗಿಸುವುದೇ ಇದಕ್ಕೆ ಕಾರಣವೆಂದು ಹೇಳಬಹುದು —ಹೊಸ ತೂಕದ ಬಟ್ಟುಗಳೂ, ಅಳತೆ ಸೇರುಗಳೂ ಈಗೀಗ ಜಾರಿಗೆ ಬರುತ್ತಲಿವೆ —ಘನ ಸ್ಕೋವಲ್ ದೊರೆಯವರು ಉಪದೇಶಿಗಳ ಸಮೇತ ಬಂದು ಲಂಡನ್ ಮಿಷನ್ ಸ್ಕೂಲಿನ ಹುಡುಗರಿಗೆ ಬಹುಮಾನವನ್ನು ದಯಪಾಲಿಸಿದರು ಆ ಕಾಲದಲ್ಲಿ ಸ್ಕೂಲಿನಲ್ಲಿ ಪುರನಿವಾಸಿಗಳು ಸೇರಿದ್ದರು ಮ|| ಎನ್ ನಾರಣಪ್ಪನವರು ವಿದ್ಯಾ ವಿಷಯದಲ್ಲಿ ಉಪನ್ಯಾಸ ಮಾಡಿ ಹುಡುಗರಿಗೆ ಬುದ್ಧಿವಾದವನ್ನು ಹೇಳಿದರು ಹುಡುಗರಿಗೆ ಬಹುಮಾನವೂ ಫಲಾಹಾರಾದಿಗಳೂ ಹಂಚಿದನಂತರ ಸಭೆಯು ಬರಖಾಸ್ತಾಯಿತು

ಸಿಕಾರಿಪುರ —ಈ ಪ್ರಾಂತ್ಯ ಸುಮಾರು ಒಂದು ತಿಂಗಳಿಂದಲೂ ಮಳೆ ಇಲ್ಲದೆ ಫಸಲು ಬಹಳಮಟ್ಟಿಗೂ ನಾಶಹೊಂದಿತು ಈ ಮಧ್ಯೆ ಕಳೆದ ವಾರ ಒಂದೆರಡು ಹದ ಮಳೆ ಆದರೂ ಪೂರಾ ಫಸಲು ಕೈಸೇರುವಂತಿಲ್ಲ. ಧಾರಣೆವಾಸಿಗಳಂತು ಪೂರಾ ಕ್ಷಾಮವನ್ನೇ ಸೂಚಿಸುತ್ತಾ ಬಡವರ ಜೀವನಕ್ಕೆ ಪ್ರಯಾಸವಾಗಿರುತ್ತೆ ಬಿಸಲಿನ ತಾಪವೂ ಸೆಕೆಯೂ ಬೇಸಿಗೆಯನ್ನೇ ಹೋಲುತ್ತಿವೆ —ಇಲ್ಲಿನ ಹಳೆಯೂರಿನಲ್ಲಿ 15 20 ಪ್ಲೇಗ್ ಮರಣಗಳಾಗಿ ಊರು ಬಿಟ್ಟರು ಪೇಟೆಯಲ್ಲೂ ಇಲಿಗಳು ಸಾಯುವದು ಪ್ರಬಲಿಸುತ್ತಾ ಬರುವದರಿಂದ ಅವರೂ ಕ್ಯಾಂಪುಗಳನ್ನು ಸಿದ್ಧಪಡಿಸಿಕೊಳ್ಳಬೇಕೆಂದು ತವಕಪಡುತ್ತಿದಾರೆ ಈ ಕಷ್ಟಕಾಲದಲ್ಲಿ ಇಲ್ಲಿನ ಡಿಪೋದಲ್ಲಿ ಬೊಂಬು, ಗಳಗಳೇ ಮೊದಲಾದ ಕ್ಯಾಂಪಿನ ಸಾಹಿತ್ಯಗಳಿಲ್ಲದೆ ತುಂಬಾ ತೊಂದರೆಯಾಗಿರುತ್ತೆ ತರಿಸಿದ ಕೊಂಚ ಬೊಂಬುಗಳನ್ನು ಬ್ರಾಹ್ಮಣರೇ ಮೊದಲಾದ ಸರ್ಕಾರಿ ಉದ್ಯೋಗಸ್ಥರುಗಳೇ ಅನುಕೂಲಪಡಿಸಿಕೊಂಡಿರುವಲ್ಲಿ ಉಳಿದ ಬಡಬಗ್ಗರ ಕಷ್ಟ ತೊಂದರೆಗಳನ್ನು ವಿಚಾರಿಸುವವರೇ ಇಲ್ಲವಾಗಿದೆ ನಮ್ಮ ತಾಲ್ಲೋಕು ಆಫೀಸರವರು ಈ ವಿಚಾರಕ್ಕೆ ಗಮನಕೊಟ್ಟು ಆದಷ್ಟು ಬೇಗನೆ ಕ್ಯಾಂಪಿನ ಸಾಹಿತ್ಯಗಳನ್ನು ಒದಗಿಸಿಕೊಟ್ಟು ಗರೀಬರನ್ನು ಕಾಪಾಡುವವರಾಗಲೆಂದು ಕೋರುತ್ತೇವೆ —ಕಳೆದ ತಾ 3 ನೇ ಶುಕ್ರವಾರ ಬೆಳಿಗ್ಗೆ ಪೇಟೆ ಮಿಷನ್ ಗರ್ಲ್ಸ್ ಸ್ಕೂಲ್ ಪ್ರತಿಷ್ಠೆಯೂ, ಮಕ್ಕಳ ಬಹುಮಾನ ವಿನಿಯೋಗವೂ ನಡಿಯಿತು ಘನ ಎ ಇ ನೈಟಿಂಗೇಲ್ ದೊರೆಗಳವರು ಪತ್ನಿ ಸಮೇತ ದಯಮಾಡಿಸಿದ್ದರು ಅಮಲ್ದಾರ್ ಮ|| ಜಿ ಶಾಂತವೀರಪ್ಪನವರು, ಶಿರಸ್ತೇದಾರರು, ವಕೀಲರು, ಡಾಕ್ಟರವರು, ಎ ವಿ ಸ್ಕೂಲ್ ಹೆಡ್ ಮಾಸ್ಟರವರು ಮತ್ತು ಮ್ಯುನಿಸಿಪಲ್ ಕಮಿಷನರ್‌ರು ಮತ್ತು ವರ್ತಕಮಂಡಲಿಯವರೇ ಮೊದಲಾದ ದೊಡ್ಡಮನುಷ್ಯರುಗಳು ಸ್ಕೂಲ್ ಬಾಲಕಿಯರ ಸಮೇತ ಬಂಗಲಿಗೆ ಹೋಗಿ ದೊರೆ ದೊರೆಸಾನಿಯವರನ್ನು ಸಂದರ್ಶಿಸಿ ಎಲ್ಲರೂ ಏಕೀಭವಿಸಿ, ವಿವಿಧ ಚಿತ್ರ ತಳಿರು ತೋರಣಾದಿಗಳಿಂದ ಅಲಂಕೃತವಾಗಿದ್ದ ಹೊಸ ಸ್ಕೂಲಿನ ಸಮೀಪವನ್ನೈದಲಾಗಿ ದೊರೆಸಾನಮ್ಮನವರು ಸ್ವಹಸ್ತ ಸ್ಕೂಲ್ ಬಾಗಿಲನ್ನು ತೆರೆದು ನೂತನ ಸ್ಕೂಲಿನ ಅಭಿವೃದ್ಧಿಯನ್ನು ಬಯಸಿ ಒಳಗೆ ಪ್ರವೇಶಿಸಲು ಸಭಿಕರೂ ಬಾಲಕಿಯರೂ ಹಿಂಬಾಲಿಸಿ ಸಮಸ್ತರೂ ಸಭೆಯನ್ನು ಅಲಂಕರಿಸಿದರು ದೊರೆಗಳವರ ಕೋರಿಕೆಯಂತೆ ಅಮಲ್ದಾರ್‌ರವರು ಆ ದಿನದ ಸಭೆಯ ಅಗ್ರಾಸನವನ್ನು ವಹಿಸಿದರು ದೊರೆಯವರು ಶ್ರೀದೇವರ ಪ್ರಾರ್ಥನೆಯನ್ನು ನಡಿಸಿದ ನಂತರ ಬಾಲಕಿಯರು ಚಕ್ರವರ್ತಿಗಳವರ ಮತ್ತೂ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನಾ ರೂಪವಾದ ಗೀತವನ್ನು ಹಾರ್ಮೋನಿಯಂ ಮತ್ತು ಪಿಟೀಲುಗಳ ಮಂಜುಳ ಸ್ವರದೊಂದಿಗೆ ಬಹು ಇಂಪಾಗಿ ಹಾಡಿದರು ಅನಂತರ ಅಭಿನಯ ಗೀತಗಳೇ ಮೊದಲಾದುವು ನಡಿಸಲ್ಪಟ್ಟವು ಆ ಮೇಲೆ ಸ್ಕೂಲ್ ಹೆಡ್ ಮಾಸ್ಟರವರು ಸ್ಕೂಲ್ ರಿಪೋರ್ಟನ್ನು ಓದಿದರು ಒಬ್ಬ ಬಾಲಕಿಯು ಓದಿದ ಸ್ತ್ರೀವಿದ್ಯಾಭ್ಯಾಸವನ್ನು ಕುರಿತ ಉಪನ್ಯಾಸವು ಸಭಿಕರ ಚಿತ್ತವನ್ನಾಕರ್ಷಿಸುವುದಾಗಿತ್ತು ಘನ ದೊರೆಸಾನಮ್ಮನವರು ಮಕ್ಕಳಿಗೆ ಸ್ವಹಸ್ತ ಬಹುಮಾನಗಳನ್ನು ದಯಪಾಲಿಸಿದರು ಪುನಃ ಚೇರ್ಮನ್‌ರವರಾದ ಮ|| ಶಾಂತವೀರಪ್ಪನವರು ಸಮಯೋಚಿತವಾಗಿಯೂ, ಅನುಭವಸಿದ್ಧವಾಗಿಯೂ ಇರುವ ಮಿಷನ್ ಸಂಘದವರ ಪರೋಪಕಾರವನ್ನೂ, ಹಿತಚಿಂತನೆಯನ್ನೂ, ಈ ದೇಶೀಯರಿಗೆ ವಿದ್ಯಾದಿ ವಿಷಯಗಳಿಗೆ ಕೊಡುತ್ತಿರುವ ಪ್ರೋತ್ಸಾಹವನ್ನೂ, ಅವರು ಪಡುತ್ತಿರುವ ಪ್ರಯಾಸವನ್ನೂ ವಿವರಿಸಿದ್ದಲ್ಲದೆ ತತ್ಕಾಲದಲ್ಲಿ ಘನ ನೈಟಿಂಗೇಲ್ ದೊರೆಯವರು ಈ ಊರಿನ ಪ್ರಜೆಗಳಿಗೆ ಈ ನವೀನ ಕಟ್ಟಡವನ್ನು ಏರ್ಪಡಿಸಿ ಕೊಟ್ಟಿರುವ ಔದಾರ್ಯವನ್ನು ಕುರಿತು ಸಭಿಕರ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ಬಹು ಸ್ವಾರಸ್ಯವಾದ ಭಾಷಣವನ್ನು ಮಾಡಿದರು ದೊರೆಯವರು ಈ ಪ್ರತಿಷ್ಠೆಯ ಜ್ಞಾಪಕಾರ್ಥವಾಗಿ ಮ|| ಜಿ ಶಾಂತವೀರಪ್ಪನವರ ಹೆಸರಿನಿಂದ ಪ್ರತಿವರ್ಷವೂ ಒಂದು ಬಹುಮಾನವನ್ನು ಮಕ್ಕಳಿಗೆ ಕೊಡುವುದಾಗಿ ಸೂಚಿಸಿದ್ದನ್ನು ಚೇರ್ಮನ್‌ರವರು ಸಂತೋಷದಿಂದ ಅನುಮೋದಿಸಿದರು ಈ ಸ್ಕೂಲಿನ ಅಭಿವೃದ್ಧಿಯ ಹಿತಚಿಂತನೆಗಾಗಿ ಇಲ್ಲಿನ ಮ್ಯುನಿಸಿಪಲ್ ಕಮಿಷನರುಗಳಾದ ಮ|| ನಾಲೂರ್ ಭವಾನಿರಾಯರು, ಮ|| ಉಡುಗಣಿ ಸಂಗನಬಸಪ್ಪನವರು, ಮ|| ರಮಣಿಚನ್ನವೀರಪ್ಪನವರು, ಮ|| ಹಳೇಪಟ್ಟಣಶೆಟ್ಟರ ಹಾಲಪ್ಪನವರು, ಈ ನಾಲ್ಕು ಜನ ದೊಡ್ಡಮನುಷ್ಯರೂ ಈ ಸ್ಕೂಲಿನ ಕಮಿಟಿ ಮೆಂಬರುಗಳಾಗಿ ಇರಬೇಕೆಂದು ಘನ ನೈಟಿಂಗೇಲ್ ದೊರೆಗಳವರು ಕೋರಿದ್ದಕ್ಕೆ ಮೇಲ್ಕಂಡ ದೊಡ್ಡಮನುಷ್ಯರು ಬಹು ಆದರದಿಂದ ಸ್ವೀಕರಿಸಿದ್ದು ತುಂಬ ಅಭಿನಂದನೀಯವಾಗಿದೆ. ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳೂ, ಬಾಲಕಿಯರಿಗೆ ಮಿಠಾಯಿಯೂ ಹಂಚಲ್ಪಟ್ಟ ಮೇಲೆ ಘನ ದೊರೆಗಳಿಂದ ಸ್ಕೂಲ್ ಕಟ್ಟಡದ ಮುಂಭಾಗದಲ್ಲಿ ಸಭಿಕರ ಸ್ಕೂಲ್ ಬಾಲಕಿಯರ ಫೋಟೋ (ಛಾಯಾಚಿತ್ರ) ತೆಗೆಯಲ್ಪಟ್ಟು ಸರ್ವರೂ ಸಂತೋಷದಿಂದ ತೆರಳಿದರು.

ಆರ್ಯವೈಶ್ಯ ವಿದ್ಯಾರ್ಥಿಗಳ ಸಂತೋಷಕೂಟವು.

ಬೆಂಗಳೂರು ಸಿಟಿ ದೊಡ್ಡಪೇಟೆಯಲ್ಲಿರುವ ಮ॥ ಚಿಂತಲಪಲ್ಲಿ ವೆಂಕಟಮುನಯ್ಯಶೆಟ್ಟರವರ ಫ್ರೀ ಬೋರ್ಡಿಂಗ್ ಹೌಸಿನ ವಿದ್ಯಾರ್ಥಿಗಳು ಕಳೆದ ತಾ. 28 ನೇ ಭಾನುವಾರ ಫೌಂಡರ್ಸ್ ಡೇ ಎಂಬ ಗೃಹಸ್ಥಾಪನೆಯ ವಾರ್ಷಿಕೋತ್ಸವವನ್ನು ಜರುಗಿಸಿದರು. ಈಗ ನೂತನವಾಗಿ ನಿರ್ಮಿಸಿರುವ ಭವನದ ಹಾಲನ್ನು ನಾನಾ ಪ್ರಕಾರವಾಗಿ ಅಲಂಕರಿಸಿದ್ದರು. ಈ ಬಾಲಕರು ಆಹ್ವಾನ ಪತ್ರಿಕೆಗಳ ಮೂಲಕ ದೊಡ್ಡ ದೊಡ್ಡ ಅಧಿಕಾರಸ್ಥರನ್ನು ಮತ್ತು ವರ್ತಕ ಮಂಡಲಿಯವರನ್ನೂ ಬರಮಾಡಿಕೊಂಡರು. ಆ ಮಹನೀಯರುಗಳು ಅಲ್ಲಿ ಹಾಕಿದ್ದ ಉಚಿತಾಸನಗಳಲ್ಲಿ ಕುಳಿತುಕೊಂಡರು. ಈ ಬಾಲಕರ ಸೆಕ್ರೆಟರಿಯವರು ಈ ಸಭಾಸ್ಥಾನಕ್ಕೆ ಮೆಕ್ಯಾನಿಕಲ್ ಇಂಜನಿಯರಿಂಗ್ ಸ್ಕೂಲ್ ಸೂಪರಿಂಟೆಂಡೆಂಟರಾದ ಮ॥ ಎಸ್. ವಿ. ಶೆಟ್ಟಿಯವರನ್ನು ಸಭಾಧ್ಯಕ್ಷರಾಗಿರುವಂತೆ ಕೋರಿದ್ದ ಮೇರೆಗೆ ಆ ಮಹನೀಯರು ಸಂತೋಷಾತಿಶಯದಿಂದ ಕೂಡಿದ್ದ ಅಭೋತದ ಮಧ್ಯೆ ಪ್ರವೇಶಿಸಿ ಅಗ್ರಾಸನಾಧಿಪತ್ಯವನ್ನು ವಹಿಸಿದರು. ವಿದ್ಯಾರ್ಥಿಗಳೆಲ್ಲರೂ ತಮ್ಮ ತಮ್ಮ ಆಟಪಾಟಗಳನ್ನು ತೋರಿಸಿದರು. ಮೊದಲು ರಂಗಶೆಟ್ಟರು ದೇವರ ಪ್ರಾರ್ಥನೆ ಹಾಡಿದರು ಕನ್ನಡ, ಸಂಸ್ಕೃತ, ಇಂಗ್ಲೀಷು, ತಮಿಳು ರೆಸಿಟೇಷನ್‌ಗಳು ನಡಿಸಲ್ಪಟ್ಟವು. ಹಾಸ್ಯಾಸ್ಪದವಾಗಿಯೂ, ವಿನೋದಕರವಾಗಿಯೂ, ಇರತಕ್ಕ ಸಂಭಾಷಣೆಗಳನ್ನು ವೆಂಕಟಾಚಲಶೆಟ್ಟರು, ಲಕ್ಕಶೆಟ್ಟರು, ಚಂದ್ರಶೆಟ್ಟರು, ಶ್ರೀರಂಗಶೆಟ್ಟರು ಸೇರಿ ಇಂಗ್ಲೀಷಿನಲ್ಲಿ ನಡಿಸಿದರು ಚಮತ್ಕಾರವಾಗಿಯೂ ನಗೋತ್ಪಾದವಾಗಿಯೂ ಇರುವ ಮಾತುಗಳು ನಂಜುಂಡಶೆಟ್ಟರಿಂದ ಹೇಳಲ್ಪಟ್ಟವು. ರಸವತ್ತಾಗಿಯೂ ಕೇಳುವುದಕ್ಕೆ ಇಂಪಾಗಿಯೂ ಇರುವ ತೆಲುಗಿನ ಸಂಭಾಷಣೆಯು ಸಭಿಕರ ಮನಸ್ಸನ್ನು ಆಹ್ಲಾದಪಡಿಸಿತು ಬಳಿಕ ಸ್ವಲ್ಪ ಹೊತ್ತು ಸಂಗೀತವಾಯಿತು. ತರುವಾಯ ಸಿ. ಎಸ್ ನಾರಾಯಣಸ್ವಾಮಿಶೆಟ್ಟರು ಮೇಲ್ಕಂಡ ಫ್ರೀ ಬೋರ್ಡಿಂಗ್ ಹೌಸಿನ 1912-13 ನೇ ಸಾಲಿನ ವಾರ್ಷಿಕ ರಿಪೋರ್ಟನ್ನು ಓದಿದರು. ನಂತರ ಇನಾಮು ಪುಸ್ತಕಗಳು ವಿದ್ಯಾರ್ಥಿಗಳಾದ ಚಂದ್ರಶೆಟ್ಟರು ಎಂಬುವರಿಗೆ ಅವರ ಒಳ್ಳೇ ನಡತೆಗಾಗಿಯೂ, ಲಕ್ಷ್ಮಣಶೆಟ್ಟಿ ಎಂಬುವರಿಗೆ ಸರಿಯಾದ ಕಾಲದಲ್ಲಿ ಹಾಜರಾಗುತ್ತಿದ್ದದ್ದಕ್ಕಾಗಿಯೂ, ಶ್ರೀರಂಗಶೆಟ್ಟಿ ನಂಜುಂಡಶೆಟ್ಟಿಯವರಿಗೆ ಕ್ಲಾಸಿನಲ್ಲಿ ಮೊದಲನೆಯವರಾಗಿ ನಿಂತು ವ್ಯಾಸಂಗಮಾಡಿದ್ದಕ್ಕಾಗಿಯೂ ಹಂಚಲ್ಪಟ್ಟವು. ಅಲ್ಲದೆ ಇದೇ ಫ್ರೀ ಬೋರ್ಡಿಂಗ್ ಹೌಸಿನಲ್ಲಿರತಕ್ಕ ವಿದ್ಯಾರ್ಥಿಗಳೆಲ್ಲರೂ ಸೇರಿ ತಮ್ಮ ವಿಶ್ವಾಸಕ್ಕೆ ಪಾತ್ರರಾಗಿಯೂ ತಂದೆಯೋಪಾದಿಯಲ್ಲೂ ಇರತಕ್ಕ ಮ್ಯಾನೇಜರ್ ಮ॥ ವಿ. ವೆಂಕಟಾಚಲಶೆಟ್ಟರವರಿಗೆ ತಮ್ಮ ಕೃತಜ್ಞತಾ ಪೂರ್ವಕವಾದ ಮತ್ತು ಸಂತೋಷ ಸೂಚಕವಾದ ಒಂದು ಬಂಗಾರದ ಉಂಗುರವನ್ನು ಒಪ್ಪಿಸಿದರು. ಕೂಡಲೇ ಸೆಕ್ರೆಟರಿಯವರು ಅಗ್ರಾಸನಾಧಿಪತಿಗೆ ಪುಷ್ಪಮಾಲೆಯನ್ನು ಹಾಕಿದರು. ತರುವಾಯ ಅಗ್ರಾಸನಾಧಿಪರು ಮತ್ತು ಮ॥ ಚೆಂಗಯ್ಯಶೆಟ್ಟಿಯವರು ಕುಲಾಭಿಮಾನಿಗಳಾಗಿಯೂ ದೀನದಯಾಪರರಾಗಿಯೂ ವಿದ್ಯಾರ್ಥಿಗಳ ಪೋಷಣಾ ಕರ್ತರಾಗಿಯೂ ಇರುವ ಮ॥ ಚಿಂತಲಪಲ್ಲಿ ವೆಂಕಟಮುನಯ್ಯಶೆಟ್ಟರವರು ಬಾಲಕರ ಪರವಾಗಿ ಕೊಂಡಾಡಿದರು ಅಲ್ಲದೆ ಈ ಧರ್ಮವು ಯಾವಾಗಲೂ ಶಾಶ್ವತವಾಗಿರುವಂತೆ ಮಾಡಿರತಕ್ಕ ಏರ್ಪಾಡುಗಳನ್ನು ಸಭಿಕರೆಲ್ಲರಿಗೂ ತಿಳಿಯಪಡಿಸಿದರು. ಅದೇನೆಂದರೆ ಸುಮಾರು ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟು ಹೊಸದಾಗಿ ತೆಗೆದುಕೊಂಡಿರತಕ್ಕ ಭವನವು ಒಂದನೆಯದಾಗಿಯೂ, ಅಗಲೇ ಅಷ್ಟೇ ದ್ರವ್ಯವನ್ನು ಮೈಸೂರು ಬ್ಯಾಂಕಿಗೆ ಹಾಕಿರುವುದು ಎರಡನೆಯದಾಗಿಯೂ, ಇನ್ನೂ ಹೆಚ್ಚು ದ್ರವ್ಯವನ್ನು ಅದಕ್ಕೆ ಹಾಕುತ್ತಾರೆ ಎಂಬ ವಿಚಾರವನ್ನೂ ವ್ಯಕ್ತಪಡಿಸಿದರು. ಅನಂತರ ಮ॥ ಚಿಂತಲಪಲ್ಲಿ ವೆಂಕಟಮುನಯ್ಯಶೆಟ್ಟರು ಹೇಳಿದ್ದೇನಂದರೆ—“ ನಾನು ಮಾಡತಕ್ಕ ಧರ್ಮವು ಯಾವದೊಂದು ವಿಧದಲ್ಲಿಯೂ ಅಧಿಕವಾದದ್ದಾಗಿಯೇ ಆಗಲಿ, ಸ್ತೋತ್ರಾರ್ಹವಾದದ್ದಾಗಿಯೇ ಆಗಲಿ ಇರುವದಿಲ್ಲ.’ ಆದರೆ ಈ ಬಾಲರೆಲ್ಲರೂ ವಿದ್ಯಾವಂತರಾಗಿ ಗುಣೌದಾರ್ಯಗಳನ್ನು ಹೊಂದಿ ಚಿರಕಾಲ ಬದುಕಲಿ ” ಎಂಬದಾಗಿ ಕೋರಿದರು. ಇನ್ನು ಕೊಂಚಕಾಲದವರೆಗೆ ಮೈಸೂರಿನಿಂದ ಬಂದಿದ್ದ ಅರಮನೆಯ ವಿದ್ವಾಂಸರು ವೀಣಾ ಸಂಗೀತವನ್ನು ನಡಿಸಿದರು ಅದು ಸಭಿಕರ ಹೃದಯವನ್ನು ಕುಣಿಸುವುದೋ ಎಂಬುವ ಹಾಗೆ ಇತ್ತು. ತದನಂತರ ಹಾರತುರಾಯಿಗಳನ್ನೂ ಪಾನ್‌ಸುಪಾರಿಗಳನ್ನೂ ಮಿಠಾಯಿಯನ್ನೂ ಹಂಚಿದರು. ಮಂಗಳವು ಹಾಡಲ್ಪಟ್ಟಿತು ಇವುಗಳೆಲ್ಲಾ ಆದೊಡನೆ ಸೆಕ್ರೆಟರಿಯವರು ನಮ್ಮನ್ನು ಕಾಪಾಡತಕ್ಕ ಶ್ರೀಮನ್ ಮಹಾರಾಜರವರಿಗೂ, ಪ್ರೆಸಿಡೆಂಟರಿಗೂ, ಈ ಫ್ರೀ ಬೋರ್ಡಿಂಗ್ ಹೌಸಿನ ಸ್ಥಾಪನ ಕರ್ತರಿಗೂ ಶ್ರೇಯಸ್ಸನ್ನು ಜಯ ಘೋಷದೊಡನೆ ಪ್ರಾರ್ಥಿಸಿದರು ಮನೋರಂಜಕವಾದ ಆಟಪಾಟಗಳಿಂದ ತೃಪ್ತಿಪಡಿಸಿದ ಬಾಲಕರನ್ನು ಅಲ್ಲಿ ಸೇರಿದ್ದ ಮಹನೀಯರೆಲ್ಲರೂ ತುಂಬಾ ಸಂತೋಷದಿಂದ ಕೊಂಡಾಡಿದರು. ಬಳಿಕ ಸಭೆಯು ಮುಕ್ತಾಯವಾಯಿತು.

ಎ. ಎಸ್. ಎನ್. ಸ್ವಾಮಿ.

ದೊಡ್ಡಬಳ್ಳಾಪುರದಲ್ಲಿ ನಡೆದ ಬಹುಮಾನ ಸಭೆ.

ಕಳೆದ ಸೆಪ್ಟಂಬರ್ 27 ನೆಯ ತಾ. ಶನಿವಾರ ಈ ಸಂಸ್ಥಾನದ ಸೀನಿಯರ್ ಕೌನ್ಸಿಲರ್ ಮ॥ ಎಚ್. ವಿ. ನಂಜುಂಡಯ್ಯ, ಎಂ.ಎ., ಎಂ.ಎಲ್ ರವರು ದೊಡ್ಡಬಳ್ಳಾಪುರದ ಪ್ರಾಂತ್ಯ ದಯಮಾಡಿಸಿದ್ದಾಗ ಅಲ್ಲಿನ ಎಲ್ಲ ಸ್ಕೂಲುಗಳ ವಿದ್ಯಾರ್ಥಿಗಳಿಗೂ ಬಹುಮಾನಗಳನ್ನು ಕೊಡುವ ಉದ್ದೇಶದೊಡನೆ ಸೇರಿದ್ದ ಸಭೆಯಲ್ಲಿ ಅಗ್ರಾಸನವನ್ನು ವಹಿಸಿದ್ದರು. ಸ್ಕೂಲ್ ಕಟ್ಟಡವು ರಮಣೀಯವಾಗಿ ಅಲಂಕರಿಸಲ್ಪಟ್ಟಿತ್ತು. ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರೂ, ಕನ್ನಡ ಮತ್ತು ಹಿಂದುಸ್ಥಾನಿ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರುಗಳೂ, ಮುನ್‌ಸಿಫರು ಅಮಲ್ದಾರರು ಮುಂತಾದ ಸ್ಥಳಾಧಿಕಾರಿಗಳೂ, ಮ್ಯುನಿಸಿಪಲ್ ಕೌನ್ಸಿಲರುಗಳು ಲಾಯರುಗಳು ಮುಂತಾದ ಪುರಪ್ರಮುಖರೂ ಸಭೆಯನ್ನಲಂಕರಿಸಿದ್ದರು

ಗರಲ್ಸ್ ಸ್ಕೂಲಿನ ವಿದ್ಯಾರ್ಥಿನಿಯರು ಸುಖಾಗಮನ ಸೂಚಕವಾದ ಹಾಡನ್ನೂ, ದೇವರ ಪ್ರಾರ್ಥನೆಯನ್ನೂ ರಮ್ಯವಾಗಿ ಹಾಡಿ ಸಭೆಯನ್ನು ಉಪಕ್ರಮ ಮಾಡಿದರು. ಕಿಂಡರ್‌ಗಾರ್ಟನ್ ಹಾಡು, ಡ್ರಾಯಿಂಗ್, ಸಂಭಾಷಣೆ ಮುಂತಾದವುಗಳನ್ನು ಬೇರೆ ಬೇರೆ ಸ್ಕೂಲುಗಳ ವಿದ್ಯಾರ್ಥಿಗಳು ಬಹಳ ತೃಪ್ತಿಕರವಾಗಿ ನಡಿಸಿದ ಬಳಿಕ ಎ. ವಿ. ಸ್ಕೂಲ್ ಹೆಡ್ ಮಾಸ್ಟರ್ ಮತ್ತೂ ಇಂಡಸ್ಟ್ರಿಯಲ್ ಸ್ಕೂಲ್ ಸೂಪರಿಂಟೆಂಡೆಂಟರಾದ ಮ॥ ಡಿ. ಕೊಂಗಾಡಿಯಪ್ಪನವರು ತಮ್ಮ ಛಾರ್ಜಿನಲ್ಲಿರುವ ಎರಡು ಸ್ಕೂಲುಗಳ ರಿಪೋರ್ಟುಗಳನ್ನು ಮಾತ್ರವೇ ಅಲ್ಲದೆ ಈ ಊರಿನ ಇತರ ಎಲ್ಲ ಸ್ಕೂಲುಗಳ ರಿಪೋರ್ಟುಗಳನ್ನೂ ಓದಿದರು. ಈ ರಿಪೋರ್ಟುಗಳಿಂದ ಈ ಊರಿನಲ್ಲಿರುವ ಸ್ಕೂಲುಗಳೆಲ್ಲವೂ ಅಭಿವೃದ್ಧಿ ಸ್ಥಿತಿಯಲ್ಲಿರುವಂತೆಯೂ, ಪುರವಾಸಿಗಳು ಇಲ್ಲಿನ ಬಾಲಕರ ವಿದ್ಯಾವಿಚಾರದಲ್ಲಿ ವಿಶೇಷ ಶ್ರದ್ಧೆಯನ್ನು ತೋರ್ಪಡಿಸುತ್ತಿರುವಂತೆಯೂ ತಿಳಿಯಲಾಯಿತು.

ತರುವಾಯ ಸಭಾಧ್ಯಕ್ಷರವರು ವಿದ್ಯಾರ್ಥಿಗಳಿಗೂ, ವಿದ್ಯಾರ್ಥಿನಿಯರಿಗೂ ಬಹುಮಾನಗಳನ್ನು ಹಂಚಿ ಸಮಸ್ತರಿಗೂ ಹೃದಯಂಗಮವಾಗುವಂತೆ ಉಪನ್ಯಾಸ ಮಾಡಿದರು. ಅದರ ಸಾರಾಂಶವೇನೆಂದರೆ,—ಪಾರಿತೋಷಕ ಸಭೆಯಲ್ಲಿ ಅಗ್ರಾಸನವನ್ನು ವಹಿಸಿದವರು ಕಡೆಯಲ್ಲಿ ತಮ್ಮ ಅಭಿಪ್ರಾಯವನ್ನು ಕೆಲವು ವಾಕ್ಯಗಳಿಂದ ತಿಳಿಯಪಡಿಸುವ ಪದ್ಧತಿಯುಂಟು ಅದರಂತೆ ಈಗ ಎ. ವಿ ಸ್ಕೂಲ್ ಹೆಡ್ ಮಾಸ್ಟರವರು ಓದಿದ ರಿಪೋರ್ಟುಗಳಲ್ಲಿ ಕಂಡ ಪ್ರತಿ ಸ್ಕೂಲಿನ ವಿಷಯದಲ್ಲಿಯೂ ವಿವರದಾಗಿ ಪ್ರಸ್ತಾಪಿಸುತ್ತಾ ಬಂದದ್ದೇ ಆದರೆ ವಿಶೇಷ ಕಾಲವಿಳಂಬವಾಗುವುದು. ಅಷ್ಟು ತಮ್ಮಗಳಿಗೆ ಬೇಜಾರುಮಾಡಲು ಇಷ್ಟವಿಲ್ಲ. ಕೆಲವಂಶಗಳನ್ನು ಮಾತ್ರ ಕುರಿತು ಸಂಕ್ಷೇಪವಾಗಿ ಪ್ರಸ್ತಾಪಿಸುತ್ತೇನೆ. ಈ ದೊಡ್ಡಬಳ್ಳಾಪುರದಲ್ಲಿ 7,500 ಪ್ರಜೆಗಳಿರುತ್ತಾರೆ ಇಲ್ಲಿರುವ ಎಲ್ಲ ಸ್ಕೂಲುಗಳಲ್ಲಿಯೂ ಸೇರಿ 678 ಮಂದಿ ವಿದ್ಯಾರ್ಥಿಗಳೂ, 363 ಮಂದಿ ವಿದ್ಯಾರ್ಥಿನಿಯರೂ ವ್ಯಾಸಂಗ ಮಾಡುವರು, ಎಂದರೆ ಸ್ವಲ್ಪ ಹೆಚ್ಚುಕಡಮೆ 1,000 ಮಕ್ಕಳು ವ್ಯಾಸಂಗದಲ್ಲಿದ್ದಂತಾಯಿತು. ಇದು ಬಹಳ ಸಂತೋಷಪ್ರದವಾಗಿದೆ ತಾಲ್ಲೂಕ್ ಹೆಡ್ ಕ್ವಾರ್ಟರುಗಳಲ್ಲಿ ಬೇರೆ ಯಾವ ಕಡೆಯೂ ಇಷ್ಟು ಹೆಚ್ಚು ಮಂದಿ ವ್ಯಾಸಂಗದಲ್ಲಿರಲಾರರೆಂದು ನಾನು ಭಾವಿಸುತ್ತೇನೆ. ಈ ಟೌನಿನ ಎಲ್ಲ ಸ್ಕೂಲುಗಳ ಅಭಿವೃದ್ಧಿಗೂ ಎ. ವಿ ಸ್ಕೂಲ್ ಹೆಡ್ ಮಾಸ್ಟರ್ ಮ॥ ಡಿ. ಕೊಂಗಾಡಿಯಪ್ಪನವರ ಶ್ರದ್ಧಾಭಕ್ತಿಯೇ ಮೂಲಕಾರಣ ಇವರು ಸ್ಥಳವಂದಿಗರಾಗಿ ಈ ಸ್ಕೂಲಿನಲ್ಲಿಯೇ ಪ್ರಾರಂಭದಿಂದಲೂ ಅವಿಚ್ಛಿನ್ನವಾಗಿ ಉತ್ಸಾಹದಿಂದ ಕೆಲಸಮಾಡುತ್ತಾ ತಮ್ಮ ಯಾವತ್ಕಾಲವನ್ನೂ ವಿನಿಯೋಗಿಸುತ್ತಿದಾರೆ ಇವರು ದೇಹಶ್ರಮೆಯನ್ನು ಸಹ ಲೆಕ್ಕಿಸದೆ ಕೆಲಸಮಾಡುತ್ತಿರುವುದನ್ನು ನಾನಾ ಮುಖವಾಗಿ ಕೇಳಿರುವುದು ಮಾತ್ರವೇ ಅಲ್ಲದೆ ಸ್ವತಃ ಪರೀಕ್ಷಿಸಿಯೂ ತಿಳಿದಿರುವೆನು

ತಾಲ್ಲೂಕ್ ಟಾಣಗಳಲ್ಲಿ ಎ ವಿ. ಸ್ಕೂಲುಗಳನ್ನು ಸ್ಥಾಪಿಸಿದ ಉದ್ದೇಶವೇನೆಂದರೆ, ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಮಾತ್ರಕ್ಕೇ ವಿದ್ಯಾರ್ಥಿಗಳು ಪೂರ್ಣಪಾಂಡಿತ್ಯವನ್ನು ಸಂಪಾದಿಸಿದೆವೆಂದು ಭಾವಿಸದೆ ಇನ್ನೂ ದೊಡ್ಡ ದೊಡ್ಡ ಪರೀಕ್ಷೆಗಳಿಗೆ ವ್ಯಾಸಂಗಮಾಡಲು ಪ್ರಯತ್ನಿಸಬೇಕು. ಪ್ರತಿಯೊಂದು ಸ್ಕೂಲಿನಲ್ಲೂ ಪ್ರಜ್ಞಾಶಾಲಿಗಳಾದ ವಿದ್ಯಾರ್ಥಿಗಳು ಕೆಲವರು ಇದ್ದೇ ಇರುವರು. ಅಂಥವರಿಗೆ ಮೇಲ್ತರದ ವಿದ್ಯಾಭ್ಯಾಸಕ್ಕೆ ತಕ್ಕ ಸಹಾಯ ಸಂಪತ್ತಿಗಳನ್ನು ಉಪಪನ್ನರಾದ ದೊಡ್ಡಮನುಷ್ಯರುಗಳು ಕಲ್ಪಿಸುತ್ತಾ ಬಂದಲ್ಲಿ ಎಷ್ಟೋ ಉಪಕಾರವಾದೀತು, ಸರ್ಕಾರದವರೂ ಸಹ ಈ ವಿಷಯದಲ್ಲಿ ಸಾಧ್ಯವಾದಷ್ಟು ಸಹಾಯ ಮಾಡಲು ಸಿದ್ಧರಾಗಿರುತ್ತಾರೆ. ಈ ಊರಿನ ದೊಡ್ಡಮನುಷ್ಯರು ಇಲ್ಲಿನ ಸ್ಕೂಲುಗಳ ವಿದ್ಯಾರ್ಥಿಗಳಿಗೆ ನಾನಾ ವಿಧವಾಗಿ ಸಹಾಯಮಾಡುತ್ತಿರುವುದನ್ನು ಕೇಳಿ ಸಂತೋಷಿಸುತ್ತೇನೆ. ಅಲ್ಲದೆ ಇಲ್ಲಿಯ ಎಲ್ಲ ಸ್ಕೂಲುಗಳ ಉಪಾಧ್ಯಾಯರುಗಳೂ ಅನ್ಯೋನ್ಯಭಾವದಿಂದ ಕೆಲಸ ಮಾಡುತ್ತಿರುವುದೂ ಸಹ ಸ್ತೋತ್ರಾರ್ಹವಾಗಿರುತ್ತದೆ —ಈಗತಾನೇ ಓದಿದ ರಿಪೋರ್ಟಿನಲ್ಲಿ ಎ ವಿ. ಸ್ಕೂಲ್ ಲೈಬ್ರೆರಿ ವಿಷಯವು ಪ್ರಸ್ತಾಪಿಸಲ್ಪಟ್ಟಿರುತ್ತದೆ. ಬೀರುಗಳಲ್ಲಿ ಪುಸ್ತಕವನ್ನು ಭದ್ರವಾಗಿ ಶೇಖರಿಸಿದ ಮಾತ್ರಕ್ಕೇ ಪ್ರಯೋಜನವಿಲ್ಲ ಅವುಗಳನ್ನು ವಿದ್ಯಾರ್ಥಿಗಳೂ ಉಪಾಧ್ಯಾಯರೂ ಸಹ ವ್ಯಾಸಂಗಮಾಡಿ ಉಪಯೋಗಿಸುತ್ತಾ ಬರಬೇಕಾದದ್ದು ಅವಶ್ಯಕವೆಂಬುವುದನ್ನು ಗಮನದಲ್ಲಿಡಬೇಕು —ಘನತೆಯನ್ನೈದಿದ ನಮ್ಮ ಶ್ರೀಮನ್ ಮಹಾರಾಜಾ ಸಾಹೇಬ್ ಬಹಾದುರವರ ಸರ್ಕಾರದವರು ವಿದ್ಯಾಭ್ಯಾಸದ ವಿಷಯದಲ್ಲಿ ಅತ್ಯಂತ ಉದಾರವಾದ ಸಹಾಯವನ್ನು ಮಾಡಲು ಬದ್ಧಕಂಕಣರಾಗಿರುತ್ತಾರೆ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಕಳೆದ ವರ್ಷ 2 ಲಕ್ಷ ರೂಪಾಯಿಗಳನ್ನು ಮಂಜೂರ್ ಮಾಡಿರುವದಲ್ಲದೆ ಈ ವರ್ಷವೂ ಅಷ್ಟೇ ದ್ರವ್ಯವನ್ನು ದಯಪಾಲಿಸಿರುತ್ತಾರೆ. ಸರ್ಕಾರದವರೊಡನೆ ತಾವುಗಳೂ ಏಕೀಭವಿಸಿ ತಮಗೆ ಆಗಬೇಕಾದ ಕಾರ್ಯಗಳನ್ನು ಸೂಚಿಸಿ ಅನುಕೂಲಪಡಿಸಿಕೊಳ್ಳುತ್ತಾ ಹಣವನ್ನು ಸದ್ವಿನಿಯೋಗ ಪಡಿಸಬೇಕಾದುದು ಆವಶ್ಯಕ —ಇಲ್ಲಿನ ಎ ವಿ. ಸ್ಕೂಲಿಗೆ ಸರಿಯಾದ ಕಟ್ಟಡವಿಲ್ಲದೆ ತೊಂದರೆಯಾಗಿರುವುದು ನಿಜ ಕ್ಷಿಪ್ರದಲ್ಲಿಯೇ ಅನುಕೂಲವಾದ ಒಂದು ಪಕ್ಕಾ ಕಟ್ಟಡವನ್ನು ಕಟ್ಟಿಸಿಕೊಡುವ ವಿಷಯವು ಪರ್ಯಾಲೋಚನೆಯಲ್ಲಿರುತ್ತದೆ.—ಎ ವಿ ಸ್ಕೂಲಿನಂತೆಯೇ ಹಿಂದೂಸ್ತಾನಿ ಸ್ಕೂಲೂ ಸಹ ಉತ್ತಮಸ್ಥಿತಿಯಲ್ಲಿರುತ್ತದೆ. ಹಿಂದೂಸ್ತಾನಿ ಹೆಡ್ ಮಾಸ್ಟರು ಎ. ವಿ. ಸ್ಕೂಲ್ ಹೆಡ್ ಮಾಸ್ಟರ ಪೋಲ್ಪಂಗ್ತಿಯನ್ನನುಸರಿಸಿ ಕೆಲಸಮಾಡುತ್ತಿರುವುದು ಸಂತೋಷ. ಒಂದು ವರ್ಷ ಈ ಸ್ಕೂಲಿನಿಂದ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋದ 9 ಜನರೂ ತೇರ್ಗಡೆಯಾದರೆಂಬ ಸಂಗತಿಯು ಸ್ತೋತ್ರಾರ್ಹವಾಗಿದೆ ಈ ಸ್ಕೂಲನ್ನು ಆಂಗ್ಲೋ ಹಿಂದೂಸ್ತಾನಿ ಸ್ಕೂಲನ್ನಾಗಿ ಮಾಡುವುದು ಯುಕ್ತವಾಗಿ ಕಾಣುವುದಿಲ್ಲ. ಈ ಸ್ಕೂಲಿನಿಂದ 9 ಜನರು ಮಾತ್ರ ಎ. ವಿ ಸ್ಕೂಲಿಗೆ ಹೋಗಿ ಇಂಗ್ಲೀಷನ್ನು ವ್ಯಾಸಂಗಮಾಡುತ್ತಿರುವರು. ಇದು ಸಾಲದು. ಇನ್ನು ಹೆಚ್ಚು ಜನರು ಹೋಗಿ ವ್ಯಾಸಂಗಮಾಡಲು ಇಷ್ಟಪಟ್ಟದ್ದೇ ಆದರೆ ಹಿಂದೂಸ್ತಾನಿ, ಇಂಗ್ಲೀಷ್, ಇವೆರಡನ್ನೂ ಬಲ್ಲಂಥಾ ಒಬ್ಬ ಪಂಡಿತರನ್ನು ನೇಮಕಮಾಡಬಹುದಾಗಿದೆ. ಹಿಂದೂಸ್ತಾನಿ ಸ್ಕೂಲಿನಲ್ಲಿ ಕನ್ನಡ ಪಂಡಿತರೊಬ್ಬರಿದಾರೆ. ಮುಸಲ್ಮಾನ್ ಹುಡುಗರು ದೇಶಭಾಷೆಯಾದ ಕನ್ನಡವನ್ನು ಕಲಿಯುವುದು ಬಹಳ ಆವಶ್ಯಕ. ಅದರಂತೆಯೇ ಮುಸಲ್ಮಾನ್ ಹೆಣ್ಣು ಮಕ್ಕಳೂ ಸಹ ತಮ್ಮ ನೆರೆಹೊರೆಯಲ್ಲಿನ ಹಿಂದೂ ಹೆಂಗಸರೊಡನೆ ಮಾತನಾಡಲು ಅನುಕೂಲವಾಗಿರುವಂತೆ ಕನ್ನಡವನ್ನು ಕೊಂಚ ಮಟ್ಟಿಗೆ ಕಲಿಯುವುದು ಉತ್ತಮ.—ಇಲ್ಲಿನ ಕನ್ನಡ ಗರಲ್ಸ್ ಸ್ಕೂಲಿನಲ್ಲಿ ಬಹುಮಟ್ಟಿನ ಅಭಿವೃದ್ಧಿಯು ಕಾಣಬರುತ್ತಿರುವುದು ಶುಭ ಸೂಚಕವಾಗಿದೆ ಕೆಲವು ವರ್ಷಗಳ ಹಿಂದೆ ಸ್ತ್ರೀವಿದ್ಯಾಭ್ಯಾಸದ ವಿಷಯದಲ್ಲಿ ಎಷ್ಟು ಆಕ್ಷೇಪಣೆಗಳೂ ಕಷ್ಟಗಳೂ ಇದ್ದುವೆಂಬುವುದು ತಮಗೆಲ್ಲಾ ವೇದ್ಯವೇ ಆಗಿದೆ. ಈಗ ಅಂಥ ತೊಂದರೆಗಳು ಕಡಮೆ. ಇಲ್ಲಿನ ಗರಲ್ಸ್ ಸ್ಕೂಲಿನಲ್ಲಿ ಈ ವರುಷ ಮೂವರು ಹೆಣ್ಣು ಮಕ್ಕಳು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾದರೆಂದೂ, ಆ ಪೈಕಿ ಇಬ್ಬರು ಮೈಸೂರು ಮಹಾರಾಣಿಯವರ ಕಾಲೇಜಿನಲ್ಲಿ ಟ್ರೈನಿಂಗ್ ಕ್ಲಾಸಿನಲ್ಲಿ ವ್ಯಾಸಂಗಮಾಡುತ್ತಿದಾರೆಂದೂ ಕೇಳಿ ಸಂತೋಷಿಸುತ್ತೇನೆ. ಈ ರೀತಿ ಸ್ಕೂಲನ್ನು ಅಭಿವೃದ್ಧಿಗೆ ತಂದ ಹೆಡ್ ಮಿಸ್ಟ್ರೆಸ್ ಶ್ರೀಮತಿ ಅಮ್ಮಣ್ಣಮ್ಮನವರು ಸ್ತೋತ್ರಾರ್ಹರಾಗಿರುತ್ತಾರೆ

ಈ ರೀತಿ ಕೌನ್ಸಿಲರ್ ಸಾಹೇಬರವರು ಉಪನ್ಯಾಸವನ್ನು ಅಪ್ಪಣೆಕೊಡಿಸಿದ ನಂತರ ಪುಷ್ಪ ಹಾರಾದಿಗಳು ಸಮರ್ಪಿಸಲ್ಪಟ್ಟು ಸಭೆಯು ಮುಕ್ತಾಯ ಮಾಡಲ್ಪಟ್ಟಿತು.

ಶ್ರೀಮನ್ ಯುವರಾಜರವರು ದಯಮಾಡಿದ್ದು.

ರಾಜಧಾನಿಯಲ್ಲಿ ನಡೆದ ಸತ್ಕಾರವು

ಸೀಮೆಗೆ ದಯಮಾಡಿದ್ದ ನಮ್ಮ ಯುವರಾಜರವರಾದ ಸರ್ ಶ್ರೀ ಕಂಠೀರವ ನರಸಿಂಹರಾಜ ಒಡೆಯರವರು ಕಳೆದ ೫ ನೇ ತಾ. ಭಾನುವಾರ ಸಾಯಂಕಾಲ ರಾಜಧಾನಿಗೆ ಚಿತ್ತೈಸಿದರು. ಅವರು ಬೆಂಗಳೂರಿನಿಂದ ಮೋಟರಿನಲ್ಲಿ ದಯಮಾಡಿ ಬನ್ನೀಮಂಟಪದಲ್ಲಿಳಿದು ಅಲ್ಲಿ ಸಿದ್ಧವಾಗಿ ಕಾದಿದ್ದ ಅರಮನೆಯ ಸಾರೋಟಿನಲ್ಲಿ ಕುಳಿತು ಪುರವನ್ನು ಪ್ರವೇಶಿಸಿ ಅರಮನೆಯ ಮರ್ಯಾದೆಗಳೊಡನೆ ಅಲಂಕಾರಮಾಡಿದ್ದ ದೊಡ್ಡಪೇಟೆಯ ಮಾರ್ಗವಾಗಿ ಬಿಜಮಾಡಿದರು. ಉದ್ದಕ್ಕೂ ರಾಜಭಕ್ತಿಪೂರಿತರಾದ ಪುರಜನರು ಕಿಕ್ಕಿರಿಯುವಂತೆ ನಿಂತು ಶ್ರೀಮನ್ ಯುವರಾಜರವರ ದರ್ಶನವನ್ನು ಮಾಡಿ ಆನಂದಪಟ್ಟು ಜಯಧ್ವನಿಯನ್ನು ಮಾಡುತ್ತಿದ್ದರು. ಮೆರವಣಿಗೆಯು ಕರ್ಸನ್ ಪಾರ್ಕನ್ನು ಪ್ರವೇಶಿಸಿದಾಗ ಪೋಸ್ಟ್ ಆಫೀಸಿನ ಮುಂದುಗಡೆ ಪ್ರಜೆಗಳು ಹಾಕಿಸಿದ್ದ ದಿವ್ಯವಾದ ಮತ್ತೂ ವಿಸ್ತಾರವಾದ ಹಸುರುವಾಣಿ ಚಪ್ಪರದೊಳಗೆ ಪ್ರಜಾಪ್ರತಿನಿಧಿಗಳು ಉತ್ಸಾಹದಿಂದ ಕಾದಿದ್ದು ಯುವರಾಜರವರಿಗೆ ಬಹು ಆಹ್ಲಾದಕರವಾದ ಸುಖಾಗಮನವನ್ನು ಬಯಸಿ, ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಿ, ದಿವ್ಯವಾದ ಚಿತ್ರಕೆಲಸ ಮಾಡಿದ ಬೆಳ್ಳಿ ಬಂಗಾರದ ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಚಪ್ಪರದೊಳಕ್ಕೆ ಸಾರೋಟು ಬಂದು ನಿಂತಿತು. ಅದರಲ್ಲಿ ಶ್ರೀಮನ್ ಯುವರಾಜರವರೂ, ಅವರ ಎಡಪಾರ್ಶ್ವದಲ್ಲಿ ದಿವಾನ್ ಮ॥ ವಿಶ್ವೇಶ್ವರಯ್ಯನವರೂ, ಎದುರು ಭಾಗದಲ್ಲಿ ಸರ್ದಾರ್ ಲಕ್ಷ್ಮೀಕಾಂತರಾಜೆ ಅರಸಿನವರೂ, ಇವರ ಪಕ್ಕದಲ್ಲಿ ಸರ್ದಾರ್ ಎಂ. ಎನ್. ಬಾಳರಾಜೆ ಅರಸಿನವರೂ ಕುಳಿತಿದ್ದರು ಮಾಜಿ ದಿವಾನ್ ಮ॥ ಟಿ ಆನಂದರಾಯರು ಯುವರಾಜರವರಿಗೆ ಹಾರಾ ತುರಾಯಿಗಳನ್ನು ಒಪ್ಪಿಸಿದ ಬಳಿಕ ವಿದ್ವಾನ್ ಮಂಡಿಕಲ್ ರಾಮಾಶಾಸ್ತ್ರಿಗಳು ಯುವರಾಜರವರಿಗೆ ಸುಖಾಗಮನವನ್ನು ಬಯಸುವ ಶ್ಲೋಕಗಳನ್ನು ಕವನಮಾಡಿ ಓದಿಹೇಳಿದರು, ವೈದಿಕಮಂಡಲಿಯವರು ಆಶೀರ್ವಚನಪೂರ್ವಕವಾಗಿ ಫಲಗಳನ್ನೊಪ್ಪಿಸಿ ಮಂಗಳಾಕ್ಷತೆಗಳನ್ನು ಹಾಕಿದರು. ತರುವಾಯ ಸರ್ದಾರ್ ಎಂ. ಕಾಂತರಾಜೆ ಅರಸಿನವರು ಸುಖಾಗಮನ ಸೂಚಕವಾದ ಅಡ್ರೆಸ್ಸನ್ನು ಇಂಗ್ಲೀಷಿನಲ್ಲೂ, ಮ್ಯುನಿಸಿಪಲ್ ಪ್ರೆಸಿಡೆಂಟ್ ಮ॥ ಟಿ ಜಿ. ಲಕ್ಷ್ಮಣರಾಯರು ಕನ್ನಡದಲ್ಲೂ, ಮೌಲ್ವಿ ದುರ್ವೇಶ್ ಪೀರ್‌ರವರು ಹಿಂದುಸ್ತಾನಿಯಲ್ಲೂ ಓದಿ ಅರಿಕೆಮಾಡಿ, ದಿವ್ಯವಾದ ಚಿತ್ರಕೆಲಸಮಾಡಿದ ಬೆಳ್ಳಿ ಬಂಗಾರದ ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದ್ದಲ್ಲದೆ ಘಮಘಮಿಸುತ್ತಿದ್ದ ದಿಂಡಿನಹಾರ ತುರಾಯಿಗಳನ್ನು ಅರ್ಪಿಸಿದರು. ಆ ವಿಜ್ಞಾಪನೆಯಲ್ಲಿದ್ದ ಮುಖ್ಯಾಂಶಗಳೇನೆಂದರೆ—

ಮಹಾಸ್ವಾಮಿಯವರು ಯೂರೋಪ್ ಖಂಡಕ್ಕೂ ಇಂಗ್ಲಾಂಡ್ ದೇಶಕ್ಕೂ ದಯಮಾಡಿಸಿ, ಅಲ್ಲಿನ ರಾಜ್ಯಭಾರ ಕ್ರಮಗಳನ್ನೂ, ಜನಗಳು ಆತ್ಮಾವಲಂಬಿಗಳಾಗಿರುವುದಕ್ಕೆ ಸಾಧಕವಾದ ಅನೇಕ ಕಲಾಕೌಶಲ್ಯಗಳನ್ನೂ, ಆ ದೇಶೀಯರು ತಮ್ಮ ವಿದ್ಯಾವಿನಯಾದಿ ಸದ್ಗುಣಗಳಿಂದಲೂ ಶ್ರದ್ಧೆಯಿಂದಲೂ ಉದ್ಯೋಗಾಸಕ್ತಿಯಿಂದಲೂ ಹೇಗೆ ಐಹಿಕ ವ್ಯಾಪಾರಗಳಲ್ಲಿ ಅತ್ಯುತ್ಕೃಷ್ಟಸ್ಥಿತಿಗೆ ಬರುತ್ತಲಿದ್ದಾರೋ ಅದನ್ನೂ ಮಹಾಸ್ವಾಮಿಯವರು ಪರಿಶೀಲಿಸಿ, ಈ ಭರತಖಂಡದ ಚಕ್ರವರ್ತಿಗಳಾದ ಅತ್ಯಂತ ಘನವನ್ನು ಹೊಂದಿದ ಐದನೆ ಜಾರ್ಜ್ ಮಹಾಪ್ರಭುಗಳವರ ಮತ್ತು ಘನತೆಯನ್ನು ಹೊಂದಿದ ಇತರ ಬ್ರಿಟಿಷ್ ಮಹಾಶಯರ ನಿಸರ್ಗವಾದ ಪ್ರೀತಿಗೆ ಪಾತ್ರರಾಗಿ, ರಾಜ್ಯಭಾರ ಕ್ರಮಗಳಲ್ಲಿಯೂ, ಕೈಗಾರಿಕೆಗಳ ಉಪಾಯಗಳಲ್ಲಿಯೂ, ವ್ಯಾಪಾರದ ಏರ್ಪಾಡುಗಳಲ್ಲಿಯೂ ನೋಡಬೇಕಾದ ಕೌಶಲ್ಯ ಮಹಿಮೆಗಳನ್ನೆಲ್ಲಾ ಪ್ರತ್ಯಕ್ಷವಾಗಿ ನೋಡಿ, ಸರ್ವರಿಂದಲೂ ಸತ್ಕರಿಸಲ್ಪಟ್ಟು, ನಮ್ಮ ಶ್ರೀಮನ್ ಮಹಾರಾಜರವರ ವಿಷಯದಲ್ಲಿ ನಮ್ಮ ಚಕ್ರವರ್ತಿಗಳಿಗೂ ಇತರ ಬ್ರಿಟಿಷ್ ಮಹನೀಯರಿಗೂ ಇರುವ ಪ್ರೀತಿಯೂ ಅನುಬಂಧವೂ ಬಹಳವಾಗಿ ಹೆಚ್ಚುವಂತೆ ಮಾಡಿ, ವಿಶೇಷವಾದ ಸಾಕ್ಷಾತ್ಕೃತ ಅನುಭವದಿಂದ ಆರೋಗ್ಯಭಾಗ್ಯದೊಡನೆ ಮಹಾಸ್ವಾಮಿಯವರು ಈ ರಾಜಧಾನಿಗೆ ದಯಮಾಡಿಸುವಂತೆ ದೇವರು ಅನುಗ್ರಹಿಸಿದ್ದಕ್ಕೋಸ್ಕರ ನಾವು ಅತ್ಯಂತ ಸಂತೋಷಭರಿತರಾಗಿರುತ್ತೇವೆ, ಮಹಾಸ್ವಾಮಿ.—ಶ್ರೀಮನ್ ಮಹಾರಾಜರವರ ಪ್ರಭುತ್ವದಲ್ಲಿ ಈ ನಮ್ಮ ರಾಜ್ಯವು ಅನೇಕ ಮುಖವಾಗಿ ಅಭಿವೃದ್ಧಿಯನ್ನು ಹೊಂದುತ್ತಲಿದೆ, ಮಹಾಸ್ವಾಮಿ.—ಮಹಾಸ್ವಾಮಿಯವರು ಪಾಶ್ಚಾತ್ಯ ದೇಶಗಳಲ್ಲಿ ಮಾಡಿದ ದೇಶಾಟನದಿಂದಲೂ ಪಂಡಿತಭಾಷಣದಿಂದಲೂ ನಮ್ಮ ದೇಶದ ಏಳಿಗೆಗೆ ಅನುಕೂಲವಾದ ಏರ್ಪಾಡುಗಳು ಮಹಾಸ್ವಾಮಿಯವರ ಗೋಚರಕ್ಕೆ ಎಷ್ಟೋ ಬಂದಿರಬೇಕು; ಅವುಗಳನ್ನು ಇಲ್ಲಿ ಪ್ರಚಾರಮಾಡಲು ಪ್ರಯತ್ನವು ನಡೆದ ಹಾಗೆಲ್ಲಾ ಶ್ರೀಮನ್ ಮಹಾರಾಜರವರ ಸರ್ಕಾರದವರು ಈ ದೇಶಾಭಿವೃದ್ಧಿಗಾಗಿ ಮಾಡುತ್ತಲಿರುವ ಪ್ರಯತ್ನಗಳು ಪರಿಪೂರ್ಣವಾಗಿ ನಮ್ಮ ಸಂಸ್ಥಾನವು ಈ ಭರತಖಂಡದ ನೇಟಿವ್ ಪ್ರಭುತ್ವಗಳಲ್ಲಿ ಅಗ್ರಗಣ್ಯವಾಗುವದರಲ್ಲಿ ಸಂದೇಹವೇನೂ ಇರುವದಿಲ್ಲ, ಮಹಾಸ್ವಾಮಿ.—ಜಗದೀಶ್ವರನು ಪಾಶ್ಚಾತ್ಯದೇಶಯಾತ್ರೆಯ ಕಾಲದಲ್ಲಿ ತಮಗೆ ಆರೋಗ್ಯಭಾಗ್ಯವನ್ನು ಅನುಗ್ರಹಿಸಿ ಸುರಕ್ಷಿತವಾಗಿ ಈ ರಾಜಧಾನಿಗೆ ಮಹಾಸ್ವಾಮಿಯವರು ಪುನಃ ಚಿತ್ತೈಸುವಂತೆ ಮಾಡಿದ್ದಕ್ಕೋಸ್ಕರ ನಾವು ತುಂಬಾ ಕೃತಜ್ಞರಾಗಿರುತ್ತೇವೆ, ಮಹಾಸ್ವಾಮಿ —ಜಗದೀಶ್ವರನ ಅನುಗ್ರಹದಿಂದಲೂ ಜಗನ್ಮಾತೆಯಾದ ಶ್ರೀಚಾಮುಂಡೇಶ್ವರಿಯ ಕೃಪಾಕಟಾಕ್ಷದಿಂದಲೂ ಶ್ರೀಮನ್ ಮಹಾರಾಜರವರಿಗೂ, ಮಹಾಸ್ವಾಮಿಯವರಿಗೂ, ಮಹಾಸ್ವಾಮಿಯವರ ಬಂಧುವರ್ಗಕ್ಕೂ, ಈ ಸಂಸ್ಥಾನದ ಪ್ರಜೆಗಳಿಗೂ ಸಕಲ ಸನ್ಮಂಗಳಗಳು ಉಂಟಾಗಲೆಂದು ಕೇವಲ ಭಕ್ತಿಪುರಸ್ಸರವಾಗಿ ನಿರಂತರ ಪ್ರಾರ್ಥಿಸುವ ಮಹಾಸ್ವಾಮಿಯವರ ಪೋಷ್ಯವರ್ಗಕ್ಕೆ ಸೇರಿದವರಾಗಿಯೂ ಆಜ್ಞಾಧಾರಕರಾಗಿಯೂ ಇರುವ ಮೈಸೂರು ರಾಜಧಾನಿಯ ಪ್ರಜೆಗಳು.

ಶ್ರೀಮನ್ ಯುವರಾಜರವರ ಪ್ರತ್ಯುತ್ತರ.

ಶ್ರೀಮನ್ ಯುವರಾಜರವರು ಅವುಗಳನ್ನೆಲ್ಲಾ ಆದರಾತಿಶಯದಿಂದ ಅಂಗೀಕರಿಸಿ ಪ್ರತ್ಯುತ್ತರವಾಗಿ ಅಪ್ಪಣೆಕೊಡಿಸಿದ ಮುಖ್ಯಾಭಿಪ್ರಾಯಗಳೇನೆಂದರೆ— ನೀವುಗಳು ಇಷ್ಟು ಪ್ರೀತಿಪೂರ್ವಕವಾಗಿಯೂ ಭಕ್ತಿಯಿಂದಲೂ ಅರಿಕೆಮಾಡಿದ ವಿಷಯಗಳನ್ನು ಕೇಳಿ ನಮಗೆ ಪರಮಾನಂದ ಉಂಟಾಗಿದೆ. ಇದಕ್ಕಾಗಿ ನಿಮ್ಮನ್ನು ಪ್ರೇಮಾತಿಶಯದಿಂದ ವಂದಿಸುತ್ತೇವೆ.—ನಾವು ಕಳೆದ ಆರು ತಿಂಗಳಲ್ಲಿ ಯೂರೋಪಿನ ಮುಖ್ಯ ಸ್ಥಳಗಳನ್ನೂ ವಿಶ್ವಮಾನಗಳನ್ನೂ ಪರಾಂಬರಿಸಿ ತಿಳಿದುಕೊಂಡಿರುವ ಸಂಗತಿಗಳನ್ನೆಲ್ಲಾ ವಿವರಿಸಲು ಇದು ತಕ್ಕ ಸ್ಥಳವೂ ಸಮಯವೂ ಅಲ್ಲವೆಂದು ನೆನಸುತ್ತೇವೆ. ಆದರೆ ನಾವು ಎಲ್ಲೆಲ್ಲಿ ಸಂಚಾರಮಾಡುತ್ತಿದ್ದರೂ ನಮ್ಮ ಜನ್ಮಸ್ಥಳದ ಮತ್ತೂ ನಮ್ಮ ಜನಗಳ ಜ್ಞಾಪಕವು ಆಗಾಗ್ಗೆ ನಮಗೆ ಉಂಟಾಗುತ್ತಿತ್ತು.—ಕೀರ್ತಿಶೇಷರಾದ ನಮ್ಮ ತಂದೆಯವರಿಗೂ, ನಮ್ಮ ಸಹೋದರರಿಗೂ

ನಮ್ಮ ರಾಜಮನೆತನದವರಿಗೂ ಸ್ನೇಹಿತರಾಗಿರುವ ಅನೇಕ ಮಹನೀಯರು ಸೀಮೆಯಲ್ಲಿ ಇರುತ್ತಾರೆ ಅವರೆಲ್ಲಾ ನಮ್ಮನ್ನು ಅತ್ಯಂತ ವಿಶ್ವಾಸದಿಂದ ಕಂಡು ನಮಗೆ ಕುರಿತಾ ಸಹಾಯಮಾಡಿದ್ದಲ್ಲದೆ ನಮ್ಮನ್ನು ವಿಶೇಷ ಆದರದಿಂದ ನಾನಾ ಪ್ರಕಾರವಾಗಿ ಸತ್ಕಾರಮಾಡಿರುತ್ತಾರೆಂಬ ಸಂಗತಿಯನ್ನು ನಾವು ಈ ಸಂದರ್ಭದಲ್ಲಿ ಕೃತಜ್ಞತಾಪೂರ್ವಕವಾಗಿ ತಿಳಿಸದೆ ಇರಲಾರೆವು. ಇದಲ್ಲದೆ ಚಕ್ರವರ್ತಿ ಸಾರ್ವಭೌಮರವರು ನಮಗೆ ಭೇಟಿಯನ್ನು ದಯಪಾಲಿಸಿ, ನಮ್ಮ, ನಮ್ಮ ಸಹೋದರರ, ನಮ್ಮ ರಾಜವರ್ಗದವರ ಯೋಗಕ್ಷೇಮವನ್ನೂ, ಮೈಸೂರು ಸಂಸ್ಥಾನದ ಸ್ಥಿತಿಗತಿಯನ್ನೂ ಬಹು ಆದರದಿಂದ ವಿಚಾರಿಸಿ ಸನ್ಮಾನಮಾಡಿದ್ದಕ್ಕಾಗಿ ನಾವುಗಳು ಎಷ್ಟು ಕೃತಜ್ಞರಾಗಿದ್ದರೂ ಸಾಲದು.—ನಾವು ಇಂಗ್ಲಾಂಡಿನಲ್ಲಿ ಸಂಚಾರಮಾಡಿ ಅಲ್ಲಿನ ವಿದ್ಯಮಾನಗಳನ್ನು ತಿಳಿದುಕೊಂಡಷ್ಟರಲ್ಲಿ ಇಂಗ್ಲಿಷ್ ಪ್ರಭುತ್ವವು ಹಿಂದು ಸ್ಥಾನದ ಮೇಲೆ ಶಾಶ್ವತವಾಗಿ ಇದ್ದೇತೀರಬೇಕೆಂಬುವುದು ನಮಗೆ ಖಚಿತವಾಗಿ ಗೊತ್ತಾಯಿತು.—ಐಹಿಕ ಶ್ರೇಯೋಭಿವೃದ್ಧಿಯನ್ನು ಕುರಿತು ಹೋಲಿಕೆಮಾಡಿ ನೋಡಿದ ಪಕ್ಷದಲ್ಲಿ ಪಾಶ್ಚಾತ್ಯ ರಾಜ್ಯಗಳು ನಮಗಿಂತ ಎಷ್ಟೋ ಮುಂದಾಗಿರುವವು. ಆದರೆ ದೊಡ್ಡವರಿಗಿಂತಲೂ ಮಕ್ಕಳ ಬೆಳವಣಿಗೆಯು ಬಹಳ ಬೇಗನೆ ಹೆಚ್ಚುವ ರೀತಿಯಲ್ಲಿ ನಾವು ಸಾಹಸಪಡುತ್ತಿದ್ದರೆ ಕ್ರಮೇಣ ಅಭಿವೃದ್ಧಿಯನ್ನು ಹೊಂದೇ ತೀರುವುದಕ್ಕೆ ಸಂಶಯವಿಲ್ಲ.—ನಾವು ನವರಾತ್ರಿ ಉತ್ಸವಕ್ಕೆ ಮುಂಚೆಯೇ ನಮ್ಮ ಈ ಜನ್ಮಸ್ಥಳವನ್ನು ತಲಪಬೇಕೆಂದು ಕುತೂಹಲಪಡುತ್ತಿದ್ದೆವು—ನೀವು ಎಲ್ಲಾ ಈ ಉತ್ಸವದಲ್ಲಿ ಬಹು ಸಂತೋಷದಿಂದ ಭಾಗಿಗಳಾದೀರೆಂದು ಹಾರೈಸುತ್ತೇವೆ

ತರುವಾಯ ಸಾರೋಟು ಮುಂದಕ್ಕೆ ತೆರಳಿತು. ಕಲ್ಲುತೊಟ್ಟಿಯ ಬಳಿ ವೈದಿಕರು ಕಾದಿದ್ದು ಯುವರಾಜರವರಿಗೆ ಫಲ ಮಂತ್ರಾಕ್ಷತೆಗಳನ್ನೊಪ್ಪಿಸಿದರು ಯುವರಾಜರವರು ಒಳಕ್ಕೆ ದಯಮಾಡಿ ದರ್ಬಾರ್ ನಡಿಸಿದರು ಅರಸು ಮುಂತಾದವರೆಲ್ಲಾ ಅಲ್ಲಿ ಹಾಜರಾಗಿದ್ದು ಯುವರಾಜರವರ ಸಂದರ್ಶನವನ್ನು ಮಾಡಿ ಆನಂದಪಟ್ಟರು ಒಳಿಕ ಯುವರಾಜರವರು ಅಲ್ಲಿಂದ ಜನಾನ ಯೊಳಕ್ಕೆ ಚಿತ್ತೈಸಿದರು.

ಯುವರಾಜರವರು ಈ ಪ್ರಯಾಣದ ದೆಸೆಯಿಂದ ದೇಹಾರೋಗ್ಯಹೊಂದಿ ಕಾಯಪುಷ್ಟರಾಗಿ ಬಹಳ ಚೆನ್ನಾಗಿರುತ್ತಾರೆ. ಅವರಿಗೆ ಸಾವಿರಾರು ಪ್ರಜೆಗಳ ಕೂಡ ನಾವೂ ಸುಸ್ವಾಗತವನ್ನು ಬಯಸುವೆವು.

ಏಳನೆಯ ಪ್ರದರ್ಶನೋತ್ಸವವು.

ಕೈಗಾರಿಕೆ ಮತ್ತೂ ವ್ಯವಸಾಯೋಪಕರಣ ವಸ್ತುಗಳ ಪ್ರದರ್ಶನವು

ಮೈಸೂರು ಪಟ್ಟಣದ ಪುಷ್ಪವಾಭಿವೃದ್ಧಿಯಲ್ಲಿ ಕಳೆದ 3 ನೇ ತಾ ಶುಕ್ರವಾರ ಮಧ್ಯಾಹ್ನ 4½ ಗಂಟೆಗೆ ಸಂಸ್ಥಾನದ ದಿವಾನ್‌ರಾದ ಮ|| ಎಂ. ವಿಶ್ವೇಶ್ವರಯ್ಯ, ಸಿ ಐ ಇ ರವರು ವಿದ್ಯಾವಿನಯಸಂಪನ್ನರಿಂ ಕೂಡಿದ ದಿವ್ಯಸಭಾಮಂಡಲಿಯಲ್ಲಿ ಅಗ್ರಾಸನವನ್ನು ವಹಿಸಿ ಏಳನೆಯ ಪ್ರದರ್ಶನಶಾಲೆಯ ಬಾಗಿಲನ್ನು ಉತ್ಸಾಹಪೂರಿತರಾಗಿ ಉಪನ್ಯಾಸಪೂರ್ವಕವಾಗಿ ತೆರೆದಿಟ್ಟರು. ಸಭಾಮಂಡಲಿಯಲ್ಲಿ ಕೌನ್ಸಿಲರುಗಳಾದ ಮ|| ಎಚ್. ವಿ. ನಂಜುಂಡಯ್ಯನವರು, ಸರ್ದಾರ್ ಎಂ. ಕಾಂತರಾಜೆಅರಸಿನವರು, ಯೂರೋಪ್ಯನ್ ಸರದಾರರು, ದೊರೆಸಾನಿಗಳು, ದೇಶೀಯ ಸ್ತ್ರೀಯರು, ಅರಸುಗಳು, ಅಧಿಕಾರಿಗಳು, ಪ್ರಜಾಪ್ರತಿನಿಧಿಗಳೇ ಮೊದಲಾಗಿ ನೂರಾರು ಮಂದಿ ದಯಮಾಡಿದ್ದರು. ಪ್ರೆಸಿಡೆಂಟರಾದ ಮಿ|| ಕ್ರಂಬೀಗಲ್‌ರವರು ಪ್ರದರ್ಶನದ ಕಮಿಟಿಯ ಪರವಾಗಿ ಸಭಿಕರಿಗೆಲ್ಲಾ ಸುಸ್ವಾಗತವನ್ನು ಬಯಸಿ, ಪ್ರದರ್ಶನದ ಪ್ರಾರಂಭೋತ್ಸವವನ್ನು ನೆರವೇರಿಸಬೇಕೆಂದು ದಿವಾನ್‌ರವರನ್ನು ಕೇಳುವ ಸಂದರ್ಭದಲ್ಲಿ ಒಂದು ಭಾಷಣವನ್ನು ಮಾಡಿದರು. ಅದರ ಮುಖ್ಯಾಂಶಗಳೇನೆಂದರೆ—

ಶ್ರೀಮನ್ ಯುವರಾಜರವರು ಪ್ರತಿ ವರುಷವೂ ದಯಮಾಡಿ ಈ ಪ್ರದರ್ಶನ ಶಾಲೆಯನ್ನು ಪ್ರಾರಂಭಿಸುತ್ತಿದ್ದರು. ಈ ಸಂದರ್ಭದಲ್ಲಿ ಅವರು ಇಲ್ಲದಿರೋಣದಿಂದ ನಮ್ಮಗಳ ಮನಸ್ಸೆಲ್ಲಾ ಅವರ ಕಡೆ ತಿರುಗಿರುತ್ತದೆ. ಇದರಿಂದ ಶ್ರೀಮನ್ ಮಹಾರಾಜರವರಿಗೂ ರಾಜವರ್ಗದವರಿಗೂ ಈ ಪ್ರದರ್ಶನದ ಏರ್ಪಾಡಿನ ವಿಷಯದಲ್ಲಿ ವಿಶೇಷವಾದ ಉತ್ಸಾಹವುಂಟೆಂದು ನಮಗೆಲ್ಲಾ ಪ್ರಕಾಶವಾಗಿದೆ. ಅವರು ಸುಖಪ್ರಯಾಣದಿಂದ ವಾಪಸು ಹಿಂದಿರುಗಿ ದಯಮಾಡುವುದು ನಮಗೆಲ್ಲಾ ಆನಂದಪ್ರದವಾಗಿದೆ, ಮತ್ತೂ ಅವರನ್ನು ರಾಜಧಾನಿಯಾದ ಮೈಸೂರಿನಲ್ಲಿ ಎಂದಿಗೆ ಎದುರುಗೊಂಡು ಅವರಿಗೆ ಸುಸ್ವಾಗತವನ್ನು ಬಯಸೇವು ಎಂದು ಕುತೂಹಲಪಡುತ್ತೇವೆ.

ಸಂಸ್ಥಾನದ ಆಳ್ವಿಕೆಯಲ್ಲಿ ಪ್ರಧಾನರಾಗಿರುವ ತಾವು ಈ ದಿನ ದಯಮಾಡಿರುವುದು ಸಾಮಾನ್ಯವಾಗಿ ಸಕಲ ಪ್ರಜೆಗಳಿಗೂ ವಿಶೇಷವಾಗಿ ಪ್ರದರ್ಶಕರಿಗೂ ಎಷ್ಟೋ ಮೆಚ್ಚಿಕೆಯಾಗಿರುತ್ತದೆ ಇದರಿಂದ ಮಹಾರಾಜರವರ ಗವರ್ನ್‌ಮೆಂಟಿನವರಿಗೂ ಪ್ರದರ್ಶನದ ಶ್ರೇಯಸ್ಸಿನ ವಿಷಯದಲ್ಲಿ ಏಕರೀತಿಯಾದ ವಿಶ್ವಾಸವುಂಟೆಂಬುವುದೂ, ತಾವು ವ್ಯವಸಾಯವನ್ನೂ ಕೈಗಾರಿಕೆಗಳನ್ನೂ ಅಭಿವೃದ್ಧಿಗೆ ತರುವ ವಿಷಯದಲ್ಲಿ ತುಂಬಾ ಉತ್ಸಾಹವುಳ್ಳವರಾಗಿರೋಣದರಿಂದ ಈ ಪ್ರದರ್ಶನದ ವಿಷಯದಲ್ಲೂ ತಾವು ವಿಶೇಷ ಚಿಂತಾಯುಕ್ತರಾಗಿರುತ್ತೀರೆಂಬುವುದೂ ಸಕಲರಿಗೂ ವೇದ್ಯವಾಗುವುದು —ಹಿಂದುಸ್ಥಾನದೊಳಗೂ ಇತರ ಕಡೆಗಳಲ್ಲೂ ವ್ಯವಸಾಯವನ್ನೂ ಕಸಬುಗಳನ್ನೂ ಜಿರ್ಣೋದ್ಧಾರ ಮಾಡಬೇಕೆಂಬ ಲವಲವಿಕೆಯುಂಟಾಗಿ ಎಲ್ಲಾ ಕಡೆಗಳಲ್ಲೂ ಪ್ರದರ್ಶನಗಳು ಹೇರಳವಾಗಿ ನಡೆಯುತ್ತಿರುವವು. ಹಿಂದುಸ್ಥಾನದೊಳಗೆ ಒಂದಲ್ಲದಿದ್ದರೆ ಇನ್ನೊಂದು ದೊಡ್ಡ ನಗರದಲ್ಲಿ ಪ್ರತಿ ವರುಷವೂ ದೊಡ್ಡ ಪ್ರದರ್ಶನವು ನಡೆಯುತ್ತದೆ. ಬರೋಡೆಯಲ್ಲೂ ಗ್ವಾಲಿಯರ್‌ನಲ್ಲೂ ಸ್ವಲ್ಪ ಸ್ವಲ್ಪ ದೀರ್ಘಕಾಲಗಳಲ್ಲಿ ಪ್ರದರ್ಶನಗಳು ನಡೆಯುವವು. ಮೈಸೂರಿನಲ್ಲಾದರೋ ಏಳು ಸಂವತ್ಸರಗಳಿಂದ ಪ್ರತಿ ವರುಷವೂ ತಪ್ಪದೆ ಪ್ರದರ್ಶನವನ್ನು ನಡಿಸುತ್ತಿದ್ದೇವೆ. ಈಚೆಗೆ ಕೊಚ್ಚಿ, ಪುದುಕೋಟೆ ಸಂಸ್ಥಾನಗಳವರು ನಮ್ಮನ್ನು ಅನುಕರಿಸುತ್ತಿದ್ದಾರೆ.—ಈ ಪ್ರದರ್ಶನಗಳಿಂದ ಉಂಟಾಗತಕ್ಕ ಫಲಪ್ರಮಾಣದ ವಿಷಯದಲ್ಲಿ ಭಿನ್ನಾಭಿಪ್ರಾಯಗಳುಂಟಾಗಿರುತ್ತವೆ ಗಣ್ಯರಾದವರು ಸಂಶಯಪಡುತ್ತಿದ್ದಾರೆನ್ನುವುದಕ್ಕೆ ಅನುಮಾನವಿಲ್ಲ. ಇದಕ್ಕೆ ದೃಷ್ಟಾಂತ ಲಂಡನ್ ಪಟ್ಟಣದಲ್ಲಿ ನಡೆಯಬೇಕಾಗಿರುವ ದೊಡ್ಡ ಪ್ರದರ್ಶನೋತ್ಸವಕ್ಕೆ ಕಸಬುದಾರರಲ್ಲಿ ಪ್ರಖ್ಯಾತಿಗೊಂಡಿರುವ ಇಂಗ್ಲೆಂಡ್ ಮತ್ತೂ ಜರ್ಮನಿ ಗವರ್ನ್‌ಮೆಂಟಿನವರು ತಮ್ಮ ಕಡೆಯ ವ್ಯಾಪಾರ ವಸ್ತುಗಳನ್ನು ಕಳುಹಿಸುವುದರಿಂದ ತಮಗೆ ತಕ್ಕ ಪ್ರತಿಫಲವಾಗುವುದಿಲ್ಲವೆಂದು ತೀರ್ಮಾನಮಾಡಿ ವಸ್ತುಗಳನ್ನು ಕಳುಹಿಸದೆ ಇರುತ್ತಾರೆ ಹೀಗೆಯೇ ನಮ್ಮ ದಸರಾಪ್ರದರ್ಶನದ ವಿಷಯದಲ್ಲೂ ಭಿನ್ನಾಭಿಪ್ರಾಯ ಉಂಟಾಗಿದೆ.

ಸಮಸ್ತ ಪ್ರದರ್ಶನಗಳಿಂದಲೂ ಎರಡು ಮುಖ್ಯ ಉದ್ದೇಶಗಳು ನೆರವೇರಬೇಕು—ವ್ಯಾಪಾರವನ್ನು ಹೆಚ್ಚುಮಾಡುವುದು ಮತ್ತೂ ಜನಗಳಿಗೆ ತಿಳುವಳಿಕೆ ಬುದ್ಧಿಕುಶಲತೆಯನ್ನುಂಟುಮಾಡುವುದು. ದೊಡ್ಡ ದೊಡ್ಡ ಪ್ರದರ್ಶನಗಳ ಉದ್ದೇಶವು ಪ್ರಥಮತಃ ವ್ಯಾಪಾರವನ್ನು ವೃದ್ಧಿಮಾಡುವುದಾಗಿದೆ. ನಮ್ಮ ಪ್ರದರ್ಶನದ ಉದ್ದೇಶವಾದರೋ ಪ್ರಾರಂಭದಿಂದಲೂ ಪ್ರಜೆಗಳಲ್ಲಿ ಬುದ್ಧಿಕುಶಲತೆಯನ್ನು ಉಂಟುಮಾಡಬೇಕೆಂಬುವುದು ಆದಾಗ್ಯೂ ನಾವು ಜಾಗರೂಕರಾಗಿದ್ದು ಇದರ ಪ್ರಯೋಜನವನ್ನು ಮಥನಮಾಡಿ ಅದರ ವಿಷಯದಲ್ಲಿ ಹುಟ್ಟಿ ಇರುವ ಭಿನ್ನಾಭಿಪ್ರಾಯಗಳನ್ನೆಲ್ಲಾ ಕುರಿತು ಪರ್ಯಾಲೋಚಿಸಬೇಕಾಗಿದೆ. ಸಂಸ್ಥಾನದ ಪ್ರದರ್ಶನ ವಸ್ತುಗಳ ಗುಣವೂ ಯೋಗ್ಯತೆಯೂ ಸಾಮಾನ್ಯವಾಗಿ ಉತ್ಕೃಷ್ಟವಾಗಿರುತ್ತವೆ. ಮಾಲುಗಳ ಬಿಕರಿಯಿಂದ ಬಂದ ಲಾಭವನ್ನು ಬಿಟ್ಟು, ಕಳೆದ ಮೂರು ವರುಷಗಳಲ್ಲಿ ಈ ಪ್ರದರ್ಶನದ ಹುಟ್ಟುವಳಿ ಎಷ್ಟೆಂದರೆ—1910 ರಲ್ಲಿ 2,000 ರೂಪಾಯಿ; 1911 ರಲ್ಲಿ 3,800 ರೂಪಾಯಿ; 1912 ರಲ್ಲಿ 4,100 ರೂಪಾಯಿ. ಇದೆಲ್ಲಾ ಟಿಕೆಟ್ಟುಗಳ ಬಿಕರಿಂದ ಉತ್ಪತ್ತಿಯಾದ ಹಣ. ಇದರಿಂದ ವರುಷೇವರುಷ ನೋಟಕರ ಸಂಖ್ಯೆ ಹೆಚ್ಚುತ್ತಾ ಬಂದಿದೆ ಎಂದು ಗೊತ್ತಾಗುವುದು. ಅಂತಲ್ಲದೆ ಆ ಮೂರು ಸಾಲುಗಳಲ್ಲಿ ಪ್ರದರ್ಶಕರ ಸಂಖ್ಯೆ ಹ್ಯಾಗಿತ್ತೆಂದರೆ—1,200; 1,500; 1,800 ಪ್ರದರ್ಶನಮಾಡಲ್ಪಟ್ಟ ವಸ್ತುಗಳ ಸಂಖ್ಯೆಗಳು—7,000, 13,000, 14,000 ಈ ಸಂಖ್ಯೆಗಳಿಂದ ಮೇಲ್ಕಂಡ ಎರಡು ಮುಖ್ಯ ಉದ್ದೇಶಗಳೂ ತೃಪ್ತಿಕರವಾಗಿ ನೆರವೇರುತ್ತಾ ಬಂದಿರುವಂತೆ ನನಗೆ ತೋರುತ್ತದೆ. ಇದು ಬೇರೆ ಬೇರೆ ಜನರಿಗೆ ಬೇರೆ ಬೇರೆ ರೀತಿಯಾಗಿ ತೋರಬಹುದು.—ಕೆಲವು ವಸ್ತುಗಳು ಬಂದದ್ದೇ ಬರುವವೆಂದು ಹೇಳಬಹುದು. ಅದನ್ನು ತಪ್ಪಿಸುವುದು ಸಾಧ್ಯವಲ್ಲ. ಉಪಾಧ್ಯಾಯನು ಕಲಿಸಿದ್ದನ್ನೇ ಹೊಸ ಹುಡುಗರು ಬಂದಹಾಗೆಲ್ಲಾ ಕಲಿಸುತ್ತಾ ಬರುವುದಿಲ್ಲವೇ? ಕೆಲವು ವೇಳೆ ಹಳಬರಿಗೂ ಅದೇ ಪಾಠವನ್ನೇ ಮತ್ತೆ ಹೇಳುತ್ತಾನಲ್ಲವೇ? ಅದೇ ಪ್ರಕಾರ ಹೊಸದಾಗಿ ಬರತಕ್ಕ ನೋಟಕರಿಗೆ ನಮ್ಮ ಪ್ರದರ್ಶನವು ಶಿಕ್ಷಣ ರೂಪವಾಗಿರುವುದು; ಹಳಬರಲ್ಲಿ ಅನೇಕರಿಗೆ ಅವರ ಬುದ್ಧಿ ಕುಶಲತೆಯನ್ನು ವೃದ್ಧಿಪಡಿಸುವುದು.

ಈಗಿನ ಪ್ರದರ್ಶನವು ಇನ್ನೂ ಗುಟ್ಟಾದದ್ದಾಗಿದೆ; ಹೊರಗಡೆ ನಿಂತು ನಾನು ಅದರ ವಿಷಯವನ್ನು ವಿವರಿಸಿ ಹೇಳುವುದು ಬಹುಶಃ ಸರಿಯಲ್ಲ, ಮತ್ತೂ ಪ್ರಾರಂಭದಲ್ಲೇ ಅದರ ಗುಣದೋಷಗಳನ್ನು ಕುರಿತು ಚರ್ಚಿಸಲು ನನಗೆ ಅಭಿಲಾಷೆ ಇಲ್ಲ. ಆದಾಗ್ಯೂ ಕೆಲವು ಭಾಗಗಳಲ್ಲಿ ಅಂದರೆ ಯಂತ್ರಸಾಧನಗಳು ಮತ್ತು ವಿದ್ಯುಚ್ಛಕ್ತಿಪ್ರದರ್ಶನ ವಸ್ತುಗಳು ಕಡಮೆಯಾಗಿವೆಯೆಂದು ಹೇಳಬಹುದು. ಅನೇಕ ವಸ್ತುಗಳ ಯೋಗ್ಯತೆಯೂ ಗುಣವೂ ಉತ್ಕೃಷ್ಟವಾಗಿವೆ; ಅದರಲ್ಲೂ ಸ್ತ್ರೀಶಾಖೆಯ ಪ್ರದರ್ಶನ ವಸ್ತುಗಳು ಬಹಳ ಚನ್ನಾಗಿವೆ. ಸ್ಥಳೀಯ ವಸ್ತುಗಳು ಕಡಮೆಯಾಗಿಯೂ, ಹೊರಗಿನಿಂದ ಬಂದವು ಹೆಚ್ಚಾಗಿಯೂ ಇರುತ್ತವೆ. ಅನೇಕ ಕಸಬುದಾರರು ಒಂದಾವರ್ತಿ ಬಹುಮಾನವನ್ನು ಪಡೆದುಬಿಟ್ಟರೆ ಅಷ್ಟೇ ಸಾಕೆಂದೂ, ಆ ಹೆಸರುವಾಸಿಯೇ ಅನೇಕ ವರುಷಗಳ ತನಕ ಇರುವುದೆಂದೂ ತೃಪ್ತಕಾಮಿಗಳಾಗುವರೆಂದು ನನಗೆ ತೋರುವುದು. ಹೊರಗಿನ ವಸ್ತುಗಳು ಹೆಚ್ಚಾಗಿ ಬಂದಿರುವುದನ್ನು ನೋಡಿ—ಓಹೋ, ಇಲ್ಲಿ ಒಳ್ಳೇ ವ್ಯಾಪಾರ ನಡೆಯುತ್ತದೆಂದೂ, ಮೈಸೂರಿನಲ್ಲಿ ದೊರಕಿದ ಚಿನ್ನದ ಮೆಡಲು ವ್ಯಾಪಾರಕ್ಕೆ ತುಂಬಾ ಪ್ರೋತ್ಸಾಹಕರವಾಗಿದೆ ಎಂದೂ ಅರ್ಥವಾಗುವುದೋ?

ಈ ವರುಷ ಎಷ್ಟು ಜನ ನೋಟಕರಾಗಿ ಬರುವರೋ ಹೇಳಲಾಗದು; ಅದರಿಂದಲೇ ಈ ಪ್ರದರ್ಶನದ ಫಲಗಳು ಎಣಿಸಲ್ಪಡಬೇಕಾಗುತ್ತದೆ ಈ ಪ್ರದರ್ಶನವು ಮುಗಿಯುವುದರೊಳಗೆ ಮೇಲ್ಕಂಡ ಆಕ್ಷೇಪಣೆಗೆ ಸಮಾಧಾನವು ಕಂಡುಬಂದೀತು ಬಹುಮಾನಗಳ ನಿಯೋಗದಾಲದಲ್ಲಿ ಈ ವಿಚಾರವನ್ನು ಕುರಿತು ಪ್ರಸ್ತಾಪ ಮಾಡಬಹುದಾಗಿದೆ.

ಸ್ವಾಮಿ, ಈ ಪ್ರದರ್ಶನಶಾಲೆಯ ದ್ವಾರವನ್ನು ತೆರೆಯಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ದಿವಾನ್‌ರವರ ಭಾಷಣವು.

ಬಳಿಕ ದಿವಾನ್‌ರವರು ಮಿ|| ಕ್ರಂಬೀಗಲ್‌ರವರನ್ನೂ ಸಭಾ ಮಂಡಲಿಯವರನ್ನೂ ಕುರಿತು ಹೇಳಿದ ಮುಖ್ಯಾಭಿಪ್ರಾಯಗಳೇನೆಂದರೆ—

ಮಿ|| ಕ್ರಂಬೀಗಲ್‌ರವರು ಹೇಳಿದಂತೆ ಶ್ರೀಮನ್ ಯುವರಾಜರವರು ಈ ಪ್ರದರ್ಶನವನ್ನು ತೆರೆಯುವ ಕಾರ್ಯವನ್ನು ನೆರವೇರಿಸಬೇಕಾಗಿತ್ತೆಂದು ನಾವುಗಳೆಲ್ಲಾ ಬಹಳವಾಗಿ ಆಸೆಪಡುತ್ತೇವೆ. ಯಾವಾಗಲೂ ಅವರೇ ಈ ಕಾರ್ಯವನ್ನು ನಡಿಸುತ್ತಿದ್ದರು ಆ ಸಂದರ್ಭದ ದೆಸೆಯಿಂದ ಅವರು ಸೀಮೆಯಿಂದ ವಾಪಸು ದಯಮಾಡಲು ಸ್ವಲ್ಪ ಸಾವಕಾಶವಾದಕಾರಣ ಈದಿನದ ಕಾರ್ಯವನ್ನು ನಾನು ವಹಿಸಬೇಕಾಯಿತು. ಯುವರಾಜರವರು ಈದಿನ ಬೆಳಗ್ಗೆ ಬೊಂಬಾಯಿಗೆ ದಯಮಾಡಿ ಜಹಜು ಇಳಿದಿರುತ್ತಾರೆಂದು ತಂತೀವರ್ತಮಾನ ಬಂದಿದೆ. ಅವರು ಕಸಬುಗಳನ್ನು ಅಭಿವೃದ್ಧಿಗೆ ತರುವುದರಲ್ಲಿ ಕುತೂಹಲವುಳ್ಳವರಾಗಿದಾರೆನ್ನುವುದಕ್ಕೆ ದೃಷ್ಟಾಂತವಾಗಿ ನಾವು ಮೈಸೂರಿನಲ್ಲಿ ಹೆಂಚಿನ ಕಾರ್ಖಾನೆಯನ್ನು ಇಡುತ್ತೇವೆಂಬುವುದನ್ನು ತಿಳಿದು ಅವರು ಯೂರೋಪನ್ನು ತಲಪಿದ ಒಡನೆಯೇ ತರಹಾವರಿ ಹೆಂಚಿನ ಮಣ್ಣುಗಳನ್ನು ನಮಗೆ ಕಳುಹಿಸಿಕೊಟ್ಟಿರುತ್ತಾರೆ.

ಶ್ರೀಮನ್ ಮಹಾರಾಜರವರು ಈ ಸಂಸ್ಥಾನದ ವ್ಯವಸಾಯವನ್ನೂ ಕೈಗಾರಿಕೆಗಳನ್ನೂ ಅಭಿವೃದ್ಧಿಸ್ಥಿತಿಗೆ ತರಬೇಕೆಂಬ ಕುತೂಹಲದಿಂದ 1907ನೇ ಇಸವಿಯಲ್ಲಿ ಈ ಪ್ರದರ್ಶನವನ್ನು ಸ್ಯಾಂಕ್ಷನ್ ಮಾಡಿದರು. ಅದು ಈಗ ಪ್ರತಿವರುಷವೂ ನಡೆಯುತ್ತಾ ನವರಾತ್ರಿ ಕಾಲದಲ್ಲಿ ಜನರಿಗೆ ಒಳ್ಳೇ ನೋಟವಾಗಿ ಪರಿಣಮಿಸಿದೆ. ಹಿಂದುಸ್ಥಾನದ ಎಲ್ಲಾ ಕಡೆಗಳಿಂದಲೂ ಇದಕ್ಕೆ ವಸ್ತುಗಳನ್ನು ಕಳುಹಿಸಲ್ಪಡುತ್ತಿವೆ ವರುಷೇವರುಷ ಪ್ರದರ್ಶನಕ್ಕೆ ಬಂದು ನೋಡುವವರ ಸಂಖ್ಯೆ ಹೆಚ್ಚುತ್ತಿರುವುದು; ಅಂದರೆ, 1910 ನೇ ಇಸವಿಯ ಪ್ರದರ್ಶನವನ್ನು ನೋಡಿ ಹೋದವರ ಸಂಖ್ಯೆಗಿಂತಲೂ ಎರಡರಷ್ಟು ಜನಗಳು ಕಳೆದ ವರುಷದ ಪ್ರದರ್ಶನಕ್ಕೆ ಬಂದಿದ್ದರು. ಮತ್ತು ಸಂಸ್ಥಾನದ ಎಲ್ಲಾ ಕಡೆಗಳಿಂದಲೂ ನವರಾತ್ರಿ ಉತ್ಸವಗಳಿಗಾಗಿ ರಾಜಧಾನಿಗೆ ಬರತಕ್ಕ ತಮ್ಮ ಪ್ರಜೆಗಳಿಗೆ ಈ ಪ್ರದರ್ಶನವು ಬುದ್ಧಿಕುಶಲತೆಯನ್ನುಂಟುಮಾಡಿ ವಿನೋದಪಡಿಸುವುದೆಂದು ಶ್ರೀಮನ್ ಮಹಾರಾಜರವರು ತಿಳಿದಿರುತ್ತಾರೆ. ಈ ಭಾಗದಲ್ಲಿ ಗವರ್ನ್‌ಮೆಂಟಿನವರೂ ಕೂಡ ಪ್ರಜೆಗಳಿಗೆ ಧಾರಾಳವಾದ ಸಹಾಯ ಸಂಪತ್ತುಗಳನ್ನು ಒದಗಿಸುತ್ತಾ ಬಂದಿರುವರು. ವ್ಯವಸಾಯವನ್ನೂ, ಕಸಬು ಮತ್ತೂ ವ್ಯಾಪಾರವನ್ನೂ ಅಭಿವೃದ್ಧಿಮಾಡುವುದಕ್ಕಾಗಿ ನಾವು ಈಚೆಗೆ ಇಲಾಖೆಗಳನ್ನು ಏರ್ಪಡಿಸಿ, ಸೆಂಟ್ರಲ್ ಮತ್ತೂ ಡಿಸ್ಟ್ರಿಕ್ಟ್ ಕಮಿಟಿಗಳನ್ನು ಮಾಡಿರುವೆವು. ವ್ಯವಸಾಯಕ್ರಮಗಳನ್ನೂ ಕಸಬುಗಳನ್ನೂ ಸಾಕ್ಷಾತ್ತಾಗಿ ಕಲಿಸಿಕೊಡುವುದಕ್ಕೆ ಮೈಸೂರಿನಲ್ಲಿ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟನ್ನೂ, ಬೆಂಗಳೂರಿನ ಬಳಿ ವ್ಯವಸಾಯ ಪಾಠಶಾಲೆಯನ್ನೂ, ಅದೇ ಪಟ್ಟಣದಲ್ಲಿ ಮೆಕ್ಯಾನಿಕಲ್ ಇಂಜನಿಯರಿಂಗ್ ಮತ್ತೂ ವ್ಯಾಪಾರದ ಸ್ಕೂಲುಗಳನ್ನೂ ಸ್ಥಾಪಿಸಿರುತ್ತೇವೆ. ಈ ಪ್ರದರ್ಶನಗಳನ್ನು ಅವುಗಳ ಅಂಗಗಳಂತಲೇ ಭಾವಿಸಬೇಕಾಗಿದೆ. ಇದಲ್ಲದೆ ವ್ಯವಸಾಯ ಸಾಧನಗಳನ್ನೂ ಕಸಬುಗಳ ಯಂತ್ರೋಪಕರಣಗಳನ್ನೂ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನಲ್ಲಿ ಇರಿಸಿಟ್ಟು, ಇತರ ಕಡೆಗಳಿಂದ ಬಂದುನೋಡತಕ್ಕವರಿಗೆ ದೃಷ್ಟಾಂತಪಡಿಸಿ ತೋರಿಸಬೇಕೆಂದು ಸರ್ಕಾರದವರು ಯೋಚಿಸುತ್ತಿದ್ದಾರೆ.

ಈ ಸಲ ಪ್ರದರ್ಶನಕ್ಕೆ ಒಳದೇಶದ ವಸ್ತುಗಳು ಹೆಚ್ಚಾಗಿ ಬರಲಿಲ್ಲವೆಂದು ಮಿ|| ಕ್ರಂಬೀಗಲ್‌ರವರು ಹೇಳುತ್ತಾರೆ. ಇದಕ್ಕೆ ಪ್ರದರ್ಶನದ ಉದ್ದೇಶ ಪ್ರಯೋಜನಾದಿಗಳನ್ನು ಡಿಸ್ಟ್ರಿಕ್ಟುಗಳಲ್ಲಿ ಪ್ರಜೆಗಳಿಗೆ ಸರಿಯಾಗಿ ತಿಳಿಯಪಡಿಸದೆ ಹೋದದ್ದೂ, ಅವರಲ್ಲಿ ಉತ್ಸಾಹವನ್ನು ಉಂಟುಮಾಡದೆ ಹೋದದ್ದೂ ಕಾರಣವಾಗಿರಬಹುದು. ಪ್ರದರ್ಶನದಿಂದ ಪ್ರಯೋಜನ ಹೊಂದಬಹುದಾದ ಕಸಬುದಾರ ಜನಗಳಲ್ಲಿ ಉತ್ಸಾಹವನ್ನೂ ಉಮೇದನ್ನೂ ಪೋಟಾಪೋಟಿಯನ್ನೂ ಉಂಟುಮಾಡುವುದಕ್ಕೆ ಕ್ರಮವಾದ ಏರ್ಪಾಡುಗಳು ಇದ್ದೇ ತೀರಬೇಕು. ಡಿಸ್ಟ್ರಿಕ್ಟ್ ಕಮಿಟಿಯವರು ದ್ರವ್ಯ ಸಹಾಯಮಾಡತಕ್ಕವರನ್ನೂ, ದೇಹ ಶ್ರಮಪಡತಕ್ಕವರನ್ನೂ, ಪ್ರದರ್ಶನ ವಸ್ತುಗಳನ್ನು ಕಳುಹಿಸತಕ್ಕವರನ್ನೂ ತಮ್ಮ ಸಹಾಯಕರನ್ನಾಗಿ ಸೇರಿಸಿಕೊಳ್ಳಬೇಕು.

ಬಳಿಕ ದಿವಾನ್‌ರವರು ಶ್ರೀಮನ್ ಮಹಾರಾಜರವರ ಅಜ್ಞಾನುಸಾರ ಮಿ|| ಕ್ರಂಬೀಗಲ್‌ರವರು ಈ ಪ್ರದರ್ಶನದ ಕಾರ್ಯವನ್ನು ವಹಿಸಿಕೊಂಡು ಪ್ರತಿವರುಷವೂ ಬಹು ಶ್ರೇಷ್ಠವಾಗಿ ನಡಿಸುತ್ತಿರುವುದಕ್ಕಾಗಿ ಅವರಿಗೆ ಸಭಿಕರ ಪರವಾಗಿ ವಂದನೆಮಾಡಿ, ಸ್ತ್ರೀಯರ ಸೆಕ್ಷನ್‌ನಲ್ಲಿರುವ ಪ್ರದರ್ಶನವಸ್ತುಗಳು ಬಹಳ ಶ್ಲಾಘ್ಯವಾಗಿರುವುದನ್ನು ಕೇಳಿ ಸಂತೋಷಪಟ್ಟು, ಪ್ರದರ್ಶನದ ಅಂತ್ಯಭಾಗದಲ್ಲಿ ಬಹುಮಾನಗಳನ್ನು ಹಂಚುವಾಗ್ಗೆ ಪ್ರೆಸಿಡೆಂಟರವರು ಇನ್ನೂ ಒಳ್ಳೆಯ ಸಂಗತಿಗಳನ್ನು ಹೇಳುತ್ತಾರೆಂದು ನಿರೀಕ್ಷಿಸಿ, ಪ್ರದರ್ಶನದ ದ್ವಾರವನ್ನು ತೆರೆದರು.

ತರುವಾಯ ದಿವಾನ್‌ರವರನ್ನೂ ಸಭಿಕರನ್ನೂ ಪ್ರೆಸಿಡೆಂಟರು ಜೊತೆಯಲ್ಲಿ ಕರೆದುಕೊಂಡು ಹೋಗಿ ಪ್ರದರ್ಶನದ ಪ್ರತಿ ಒಂದು ಕೊಠಡಿಯಲ್ಲೂ ಜೋಡಿಸಿಟ್ಟಿರುವ ವಸ್ತುಗಳನ್ನು ತೋರಿಸಿ ವಿವರಿಸುತ್ತಾ ಬಂದರು. ದಿವಾನ್‌ರವರು ಸುಮಾರು ಒಂದು ಘಂಟೆಯಹೊತ್ತು ಇದ್ದು ಎಲ್ಲವನ್ನೂ ಪರಾಂಬರಿಸಿ ತುಂಬಾ ಸಂತೋಷಪಟ್ಟುಕೊಂಡು ಪ್ರೆಸಿಡೆಂಟರವರನ್ನು ವಂದಿಸಿ ಹೊರಟುಹೋದರು.

ಪ್ರದರ್ಶನದ ವಸ್ತುವಿವರಣೆಯನ್ನು ನಾಳೇ ವಾರ ಪ್ರಕಟಿಸಬೇಕೆಂದಿದೇವೆ.

ಮೈಸೂರು ಸಂಸ್ಥಾನದ ಪರಸ್ಪರ ಸಹಾಯ ಸಂಘಗಳ ಮೂರನೇ ಮಹಾ ಸಭೆಯು.

ಶ್ರೀಮನ್ ಯುವರಾಜರವರು ಪ್ರಾರಂಭಮಾಡಿದ್ದು.

ರಾಜಧಾನಿಯಾದ ಮೈಸೂರು ಪಟ್ಟಣದ ಟೌನ್ ಹಾಲ್ ಬಂಗಲೆಯಲ್ಲಿ ಮೊನ್ನೆ 6 ನೇ ತಾ. ಸೋಮವಾರ ಮಧ್ಯಾಹ್ನ ಶ್ರೀಮನ್ ಯುವರಾಜರವರು ಅಗ್ರಾಸನವನ್ನು ಅಲಂಕರಿಸಿ, ಉಪನ್ಯಾಸಪೂರ್ವಕವಾಗಿ ಮೂರನೇ ಮಹಾ ಸಭೆಯ ಕಾರ್ಯಗಳನ್ನು ಪ್ರಾರಂಭಮಾಡಿದರು. ಆಗ್ಗೆ ಆ ಮಹಾ ಸಭೆಯಲ್ಲಿ ಸಂಸ್ಥಾನದ ಸುಮಾರು 195 ಕೋಆಪರೇಟಿವ್ ಸೊಸೈಟಿಗಳ 220 ಮಂದಿ ಪ್ರತಿನಿಧಿಗಳೂ (ಡೆಲಿಗೇಟ್), 275 ಮಂದಿ ಮೆಂಬರುಗಳೂ (ವಿಜಿಟರ್) ಹಾಜರಾಗಿದ್ದರಲ್ಲದೆ ದಿವಾನ್‌ರೇ ಮೊದಲಾದ ಸಂಸ್ಥಾನದ ವಿಶಿಷ್ಟ ಅಧಿಕಾರಿಗಳೂ, ರಾಜಧಾನಿಯ ಎಲ್ಲಾ ಕೋಮುಗಳ ಮತ್ತೂ ಕಸಬುಗಳ ಪ್ರಮುಖ ದೊಡ್ಡ ಮನುಷ್ಯರೂ, ಮೈಸೂರು ವಿಧವಾ ನಿಲಯದ ಮೂರು ಮಂದಿ ಸ್ತ್ರೀಯರೂ ದಯಮಾಡಿದ್ದರು.

ರೆಜಿಸ್ಟ್ರಾರ್ ಮ|| ಎಂ.ಎ. ನಾರಾಯಣ ಅಯ್ಯಂಗಾರ್ರವರು ಶ್ರೀಮನ್ ಯುವರಾಜರವರ ಅನುಜ್ಞೆಯನ್ನು ಬೇಡಿ ಅವರಿಗೆ ಒಂದು ಅಡ್ರೆಸ್ಸನ್ನು ಆ ಮಹಾಸಭೆಯ ಪರವಾಗಿ ಇಂಗ್ಲೀಷಿನಲ್ಲಿ ಓದಿ ಒಪ್ಪಿಸಿದ್ದಲ್ಲದೆ ಮ|| ಕೆ. ಪಿ. ಪುಟ್ಟಣ್ಣಶೆಟ್ಟರವರಿಗೆ ಅವರು ಅಗ್ರಾಸನವನ್ನು ವಹಿಸಿ ಸಭಾ ಕಾರ್ಯಗಳನ್ನು ಜರುಗಿಸಬೇಕೆಂಬ ಪ್ರಾರ್ಥನಾಪೂರ್ವಕವಾದ ಇಂಗ್ಲೀಷ್ ಅಡ್ರೆಸ್ಸನ್ನು ಓದಿ ಅರಿಕೆಮಾಡಿದರು. ಇವೆರಡು ಅಡ್ರೆಸ್ಸುಗಳ ಕನ್ನಡ ಭಾಷಾಂತರವನ್ನೂ ಸೀರ್ಯದ ಮ|| ಅಗಳಿ ವೆಂಕಟರಾಮಯ್ಯನವರೂ, ಕೊರಟಗೆರೆಯ ಮ|| ವೀರಣ್ಣದೇವರೂ ಓದಿ ಹೇಳಿದರು.

ಅನ್ಯೋನ್ಯಸಹಾಯಸಂಘಗಳ ಮೂರನೆ ಮಹಾಸಭೆಯ ವಿಜ್ಞಾಪನೆ.

(1) ಕಳೆದ ವರುಷ ಮಹಾಸ್ವಾಮಿಯವರು ಈ ಸಭೆಯನ್ನು ಅಲಂಕರಿಸಿ, ಸಭಾಕಾರ್ಯವನ್ನು ನೆರವೇರಿಸಿ, ಬುದ್ಧಿವಾದಗಳನ್ನು ಅಪ್ಪಣೆಕೊಡಿಸಿದ್ದು ಸರಿಯಷ್ಟೆ. ಆಗ ಮಹಾಸ್ವಾಮಿಯವರು ದಯಪಾಲಿಸಿದ ಆಜ್ಞೆಯನ್ನು ಅನುಸರಿಸಿ ಈಗ ಇಲ್ಲಿ ಮೂರನೆಯ ವರುಷದ ಸಭೆಗಾಗಿ ಪುನಃ ಸೇರಿರುವೆವು. ಈ ಸಭೆಗೂ ನಮ್ಮ ಪೇಪಕ್ಕೂ ಮಹಾಸ್ವಾಮಿಯವರು ದಯಮಾಡಿಸಿದ್ದು ನಮಗೆಲ್ಲಾ ಬಹಳ ಸಂತೋಷವನ್ನು ಕೊಡುತ್ತಾ ಇದೆ. ಮಹಾಸ್ವಾಮಿಯವರು ಕ್ಷೇಮಾರೋಗ್ಯಾದಿಗಳಿಂದ ಕೂಡಿ ನಮಗೆ ಇಲ್ಲಿ ದರ್ಶನವನ್ನು ಕೊಟ್ಟದ್ದಕ್ಕಾಗಿ ನಾವು ಬಹಳ ಕೃತಜ್ಞರಾಗಿರುತ್ತೇವೆ. (2) ಈಗ ಆರುತಿಂಗಳುಕಾಲ ಮಹಾಸ್ವಾಮಿಯವರು ಇಂಗ್ಲೆಂಡ್, ಸ್ಕಾಟ್ಲೆಂಡ್, ಐರ್ಲೆಂಡ್, ಫ್ರಾನ್ಸ್, ಇಟಲಿ, ಸ್ವಿಟ್ಜರ್‌ಲೆಂಡ್ ಎಂಬ ಉನ್ನತ ಸ್ಥಿತಿಯನ್ನೈದಿರುವ ಪಶ್ಚಿಮ ದೇಶಗಳಲ್ಲಿ ಸಂಚಾರಮಾಡಿಕೊಂಡು ನೆನ್ನೆ ತಾನೇ ಇಲ್ಲಿಗೆ ದಯಮಾಡಿಸಿದಿರಿ. ನಮ್ಮ ಮೈಸೂರು ಸೀಮೆಯ ರಾಜರುಗಳಲ್ಲಿ ಮಹಾಸ್ವಾಮಿಯವರೇ ಮೊದಲು ಸಮುದ್ರವನ್ನು ದಾಟಿ, ಅನ್ಯದೇಶಗಳಲ್ಲಿ ಸಂಚರಿಸಿ, ಆ ದೇಶಗಳ ಅಮೂಲ್ಯವಾದ ಆಚರಣೆಗಳನ್ನೂ ವ್ಯವಹಾರಗಳನ್ನೂ ಸಾಕ್ಷಾತ್ತಾಗಿ ಪರಾಂಬರಿಸಿ ಪರಿಶೀಲಿಸಿದ್ದರಿಂದ ಈ ಕಾಲಕ್ಕೆ ಸರಿಯಾದ ಅಭಿವೃದ್ಧಿಸ್ಥಿತಿಗೆ ನಮ್ಮನ್ನು ತರಲು ಅರ್ಹರಾಗಿರುವಿರಿ ಯಾವ ಕಾರ್ಯದಲ್ಲಿಯೂ ಮೊದಲು ಹೊಸದಾಗಿ ಪ್ರವರ್ತಿಸುವುದು ಬಹಳ ಕಷ್ಟ. ಹೀಗಿದ್ದರೂ ಮಹಾಸ್ವಾಮಿಯವರು ಈ ಮಹತ್ಕಾರ್ಯವನ್ನು ನೆರವೇರಿಸಿಕೊಟ್ಟದ್ದರಿಂದ ಇತರರು ಧೈರ್ಯದಿಂದ ಮಹಾಸ್ವಾಮಿಯವರನ್ನು ಅನುಸರಿಸಲು ಅನುಕೂಲವಾಯಿತು. (3) ಆ ದೂರದೇಶಗಳಲ್ಲಿಯೂ ಮಹಾಸ್ವಾಮಿಯವರನ್ನು ಆಯಾ ದೇಶದ ದೊಡ್ಡ ಮನುಷ್ಯರುಗಳು ಬಹಳ ಆದರದೊಡನೆ ಬರಮಾಡಿಕೊಂಡದ್ದನ್ನು ಕೇಳಿ ಬಹಳ ಸಂತೋಷಪಟ್ಟೆವು. ಆ ದೂರದೇಶಗಳಲ್ಲಿಯೂ ಮಹಾಸ್ವಾಮಿಯವರು ತಮ್ಮ ಉದಾರವಾದ ಮನಸ್ಸಿನಿಂದಲೂ, ಸೂಕ್ಷ್ಮವಾದ ಬುದ್ಧಿಯಿಂದಲೂ, ರಾಜಾರ್ಹವಾದ ಗಾಂಭೀರ್ಯದಿಂದಲೂ ಮತ್ತು ಮನೋಹರವಾದ ನಡತೆಯಿಂದಲೂ ನಮ್ಮ ಮೈಸೂರು ಮತ್ತು ಇಂಡಿಯಾ ದೇಶದ ಘನತೆಯನ್ನೂ ಕೀರ್ತಿಯನ್ನೂ ನೆಲೆಗೊಳಿಸಿದಿರಿ. ಮಹಾಸ್ವಾಮಿಯವರು ಈ ರೀತಿಯಲ್ಲಿ ನಡಿಸಿದ ಶ್ಲಾಘ್ಯವಾದ

ಸದ್ವ್ಯವಹಾರಗಳಿಂದ ಪೂರ್ವಖಂಡ ನಿವಾಸಿಗಳೂ, ಪಶ್ಚಿಮಖಂಡ ನಿವಾಸಿಗಳೂ ಪ್ರೇಮಾನುರಾಗಗಳಿಂದಲೂ ಗೌರವದಿಂದಲೂ ಪರಸ್ಪರವಾಗಿ ನೋಡುವಂತೆಯೂ, ಕೊಡುವಂತೆಯೂ ಅವಕಾಶವನ್ನು ಉಂಟುಮಾಡಿದಿರಿ ಈ ಮಹೋಪಕಾರಕ್ಕೆ ಮಹಾಸ್ವಾಮಿಯವರನ್ನು ನಾವು ಎಷ್ಟು ಕೊಂಡಾಡಿದರೂ ತೀರದು (4) ಮಹಾಸ್ವಾಮಿಯವರ ಅಣ್ಣಂದಿರಾದ ಶ್ರೀಮತ್ ಮಹಾರಾಜರವರು ಎಂಟು ವರುಷಗಳ ಹಿಂದೆ ಈ ಅನ್ಯೋನ್ಯ ಸಹಾಯ ಸಂಘದ ಬೀಜವನ್ನು ನೆಟ್ಟರು ಆ ಮಹಾರಾಜರವರು ಮತ್ತು ಅವರ ಸರ್ಕಾರವು ಆ ವೃಕ್ಷಕ್ಕೆ ಕಾಲಕಾಲಕ್ಕೆ ನೀರು ಹಾಕುತ್ತ ತಂದೆಯಂತೆ ಆದರದೊಂದಿಗೆ ಅದರ ಬೆಳವಳಿಗೆಯನ್ನು ನೋಡಿಕೊಳ್ಳುತ್ತ ಇರುವರು ಕಳೆದ ಎರಡು ವರುಷಗಳಿಂದ ಮಹಾಸ್ವಾಮಿಯವರೂ ಕೂಡ ಮಹಾಲಕ್ಷ್ಯವನ್ನು ಆ ವೃಕ್ಷದ ಕಡೆಗೆ ಕೊಟ್ಟು, ಅತಿಶಯವಾದ ಆದರದಿಂದ ಪೋಷಿಸುತ್ತಾ ಇರುವಿರಿ ಈ ತಮ್ಮ ಉದಾರವಾದ ಪೋಷಣೆಯಿಂದಲೂ, ಮಹತ್ತಾದ ಎಚ್ಚರಿಕೆಯಿಂದಲೂ ಆ ವೃಕ್ಷವು ಸೊಂಪಾಗಿ ಬೆಳೆದು ಈಗ ಅನೇಕ ಫಲಗಳನ್ನು ಕೊಡುತ್ತಾ ಇದೆ ಮೌಢ್ಯವನ್ನೂ, ಅವಿವೇಕವನ್ನೂ ತೊಲಗಿಸಿ ಅಭಿವೃದ್ಧಿ ಹೊಂದಬೇಕೆಂಬ ಆಶೆಯೂ, ಪರಸ್ಪರ ಸೌಹಾರ್ದವೂ, ಧನಾರ್ಜನೆಯಲ್ಲಿಯೂ ಧನಶೇಖರದಲ್ಲಿಯೂ ವಿವೇಕದೊಡನೆ ಕೂಡಿದ ಸಾಮರ್ಥ್ಯವೂ, ಸುಲಭವಾದ ಬಡ್ಡಿಯಲ್ಲಿ ದ್ರವ್ಯವನ್ನು ಒದಗಿಸಿಕೊಡುವಿಕೆಯೂ ಇವೇ ಮೊದಲಾದ ಆ ವೃಕ್ಷದ ಫಲಗಳ ಸೇವನೆಯಿಂದ ದೇಶಕ್ಕೆ ಪುರೋಭಿವೃದ್ಧಿಯೂ, ಕ್ಷೇಮಲಾಭವೂ ಉಂಟಾಗುವದರಲ್ಲಿ ಸಂದೇಹವಿಲ್ಲ (5) ಈಗ ನಾವು ಹೊಂದಿರುವ ಅಭಿವೃದ್ಧಿಯೂ ಕೂಡ ಯೂರೋಪ್ ಖಂಡದ ಹಿಂದಾದ ದೇಶಗಳ ಅಭಿವೃದ್ಧಿಗೆ ಸಮವಾಗಲಾರದು ಹೀಗಿದ್ದರೂ ಮಹಾಸ್ವಾಮಿಯವರ ಮತ್ತು ಮಹಾರಾಜರವರ ಅನುರಾಗವೂ, ಸಹಾಯವೂ ಇರುವುದರಿಂದ ನಾವು ಹಿಂಜರಿಯಬೇಕಾಗಿಲ್ಲ ನಾವು ಈ ಕಾರ್ಯದಲ್ಲಿ ಸರ್ವಸಾಹಸವನ್ನು ಬೆಚ್ಚ ಮಾಡಿದಲ್ಲಿ ನಮ್ಮ ಪ್ರಯತ್ನಗಳು ಸಫಲಗಳಾಗುವವೆಂದು ನಂಬಿರುವೆವು (6) ಈ ಮಹಾ ಸಭೆಗೆ ಮಹಾಸ್ವಾಮಿಯವರ ಆಗಮನವು ಅತ್ಯವಶ್ಯಕವಾದದ್ದು ನಮ್ಮ ದೇಶದ ದೂರದೂರದ ಗ್ರಾಮಗಳಲ್ಲಿಯೂ ಕೂಡ ಮಹಾಸ್ವಾಮಿಯವರ ಹೆಸರು ಅನ್ಯೋನ್ಯ ಸಹಾಯ ಸಂಘಗಳ ಪೋಷಕರೆಂದೂ, ಉತ್ತೇಜಕರೆಂದೂ ಹರಡಿಕೊಂಡಿದೆ ಈಗ ಅರಕಲಗೂಡಿನಲ್ಲಿ ಈಗ ಪಾವುಗಡದಲ್ಲಿ, ಈಗ ಸಿದ್ಧಘಟ್ಟದಲ್ಲಿ, ಈಗ ಹೊನ್ನಾಳಿಯಲ್ಲಿ, ಈಗ ಯಳಂದೂರಿನಲ್ಲಿ, ಈಗ ಮೊಳಕಾಲ್ಮೂರಿನಲ್ಲಿ ಅನೇಕ ಬಡವರಾದ ಏನೂ ತಿಳಿಯದ ರೈತರು ಮಹಾಸ್ವಾಮಿಯವರು ಈ ಸಭೆಗೆ ಬಂದು ಉಪನ್ಯಾಸಮಾಡುವಿರೆಂದು ಕೇಳಿ ಮಹಾಸ್ವಾಮಿಯವರನ್ನು ನೋಡಿಯೂ, ಮಹಾಸ್ವಾಮಿಯವರ ಕರ್ಣಶ್ರಾವ್ಯವಾದ ಬುದ್ಧಿವಾದವನ್ನು ಕೇಳಿಯೂ, ಮಹಾಸ್ವಾಮಿಯವರು ತೋರಿಸುವ ಆದರವನ್ನು ಮುಂದಿಟ್ಟುಮಾಡಿಕೊಂಡೂ ಸಂತೋಷಪಡುವದಕ್ಕೆ ಎಷ್ಟೋ ಕುತೂಹಲಪೂರ್ವರಾಗಿ ಬರಬೇಕೆಂದಿರುವದನ್ನೂ ನಾವು ದಿನೇ ದಿನೇ ನೋಡುತ್ತಿರುವೆವು ಆದ್ದರಿಂದ ಮಹಾಸ್ವಾಮಿಯವರು ನಮ್ಮ ಈ ಸಂಘಕ್ಕೆ ಚಿರಕಾಲ ಪೋಷಕರಾಗಿರಬೇಕೆಂದು ನಾವು ಪ್ರಾರ್ಥಿಸುವುದು ಏನು ಆಶ್ಚರ್ಯ ! (7) ಮಹಾಸ್ವಾಮಿಯವರು ಈ ನಮ್ಮ ಪ್ರಾರ್ಥನೆಯನ್ನು ಲಾಲಿಸಿ ಮತ್ತು ಇಲ್ಲಿಗೆ ದಯಮಾಡಿಸಿ ಈ ಸಭೆಯ ಕಾರ್ಯವನ್ನು ಉಪಕ್ರಮಿಸಲು ಅಪ್ಪಣೆ ದಯಪಾಲಿಸಿದ್ದಕ್ಕೆ ನಾವು ಅತ್ಯಂತ ವಿನಯಪೂರ್ವಕವಾದ ವಂದನೆಗಳನ್ನು ಅರ್ಪಿಸುವೆವು

ರಿಟೈರ್ಡ್ ಕೌನ್ಸಿಲರ್ ದಿವಾನ್ ಬಹದೂರ್ ರಾಜ ಸಭಾ ಭೂಷಣ ಮ|| ಕೆ ಪಿ ಪುಟ್ಟಣ್ಣಶೆಟ್ಟರವರಿಗೆ ಪರಸ್ಪರಸಹಾಯ ಸಂಘಗಳ ಮೂರನೇ ಮಹಾ ಸಭೆಯ ಮೆಂಬರುಗಳ ಪರವಾಗಿ ಕೋ-ಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರವರು ಒಪ್ಪಿಸಿದ ಅಡ್ರೆಸ್ಸು —

ಸ್ವಾಮಿ,—ಈ ದಿವಸ ಇಲ್ಲಿ ನೆರೆದಿರತಕ್ಕ ಸಂಸ್ಥಾನದೊಳಗಿನ ಪರಸ್ಪರ ಸಹಾಯ ಸಂಘಗಳ ಪ್ರತಿನಿಧಿಗಳ ಪರವಾಗಿ ಈ ಸಭೆಯ ಅಗ್ರಾಸನಾಧಿಪತ್ಯವನ್ನು ತಾವು ವಹಿಸಬೇಕೆಂದು ಕೇಳಿಕೊಳ್ಳುವುದು ನನಗೆ ಗೌರವವೆಂದು ಭಾವಿಸುತ್ತೇನೆ —ಈ ಮಹಾ ಸಭೆಯು ವರ್ಷ ವರ್ಷ ನಿಯತವಾಗಿ ನಡೆಯಬೇಕೆಂಬುವುದು ಈಗ ಎರಡು ವರ್ಷಗಳ ಹಿಂದೆ ಶ್ರೀಮತ್ ಯುವರಾಜರವರಿಂದ ಅಂಕುರಾರ್ಪಣವಾಯಿತು ಈ ಉದ್ದೇಶವು ಹುಟ್ಟುವುದಕ್ಕೆ ಸಂಸ್ಥಾನದ ಎಲ್ಲಾ ಸಂಘಗಳ ಮೆಂಬರುಗಳ ಉತ್ಸಾಹವೇ ಮೂಲ ಕಾರಣವಾಗಿರುತ್ತದೆ ಆದರೆ ಇದೊಂದು ಸರಿಯಾದ ಆಕೃತಿಗೆ ಬಂದುದಕ್ಕೆ ಶ್ರೀಮತ್ ಮಹಾರಾಜರವರೂ ಶ್ರೀಮತ್ ಯುವರಾಜರವರೂ ಇದಕ್ಕೆ ಕೊಟ್ಟ ಪ್ರೋತ್ಸಾಹವೇ ಮುಖ್ಯ ಕಾರಣವಾಗಿರುತ್ತದೆ. ಇಂಥವರ ಅನುರಾಗವೂ ಬೆಂಬಲವೂ ಇದ್ದರೆ ಎಂಥಾ ಮಹತ್ಕಾರ್ಯವನ್ನಾದರೂ ಸಾಧಿಸಬಹುದೆಂಬ ಭರವಸೆ ಇರುವುದು ಏನೂ ಆಶ್ಚರ್ಯವಲ್ಲ

ಮೊದಲನೆಯ ಮಹಾಸಭೆಯು 1911 ನೇ ಇಸವಿಯ ದಸರಾ ಮಹೋತ್ಸವ ಕಾಲದಲ್ಲಿ ಇದೇ ಕಟ್ಟಡದಲ್ಲಿ ಜರುಗಿತು ಆಗ ಸಭೆಯು ಶ್ರೀಮತ್ ಯುವರಾಜರವರಿಂದಲೇ ಆರಂಭಿಸಲ್ಪಟ್ಟು, ಸಭಾ ಕಾರ್ಯಗಳು ರಿಟೈರ್ಡ್ ಕೌನ್ಸಿಲರಾದ ರಾಜಮಂತ್ರ ಪ್ರವೀಣ ಮ|| ಸಿ ಶ್ರೀನಿವಾಸ ಅಯ್ಯಂಗಾರ್ರವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟವು ಎರಡನೇ ಮಹಾಸಭೆಯು 1912 ನೇ ಇಸವಿ ಅಕ್ಟೋಬರ್ ೨ನೇ ತಾರೀಖಿನಲ್ಲಿ ಜರುಗಿತು ಆಗಲೂ ಶ್ರೀಮತ್ ಯುವರಾಜರವರೇ ಪರಿಪೂರ್ಣ ಕೃಪೆಯಿಂದ ಸಭಾರಂಭವನ್ನು ಮಾಡಿದರು ಆ ವರ್ಷ ಸಭಾಧ್ಯಕ್ಷತೆಯನ್ನು ಫಸ್ಟ್ ಕೌನ್ಸಿಲರಾದ ಮ|| ಎಚ್ ವಿ ನಂಜುಂಡಯ್ಯನವರು ವಹಿಸಿದ್ದರು ಪ್ರಕೃತ ಸಭೆಯು ಮೂರನೆಯ ಮಹಾಸಭೆಯಾಗಿರುತ್ತದೆ

ಯೂರೋಪ್ ಖಂಡದ ಅನೇಕ ದೇಶಗಳಲ್ಲಿ ನಿರ್ವಿಘ್ನವಾಗಿ ದೇಶಸಂಚಾರ ಮಾಡಿ, ಸುಕ್ಷೇಮದಿಂದ ಹಿಂದಿರುಗಿ ಬಂದಿರುವ ಶ್ರೀಮತ್ ಯುವರಾಜರವರಲ್ಲಿ ನಮಗುಂಟಾಗಿರುವ ಪವಿತ್ರವಾದ ರಾಜಭಕ್ತಿ, ನಿಷ್ಕಳಂಕವಾದ ಆನಂದ, ಇವುಗಳನ್ನು ವ್ಯಕ್ತಪಡಿಸುವುದಕ್ಕೆ ತಕ್ಕ ಸಮಯದಲ್ಲಿ ನಾವುಗಳೆಲ್ಲರೂ ಸೇರಿರುವುದು ನಮ್ಮಗಳಿಗೆ ಇನ್ನೂ ಅಪಾರವಾದ ಸಂತೋಷವನ್ನುಂಟುಮಾಡಿರುತ್ತದೆ —ನಾವುಗಳು ವಿಷಯಗಳನ್ನು ಚರ್ಚೆಮಾಡುವುದಕ್ಕೆ ಸಭಾಧ್ಯಕ್ಷರಾಗಿರಲು ತಾವು ಲಭಿಸಿದುದು ಸಂತೋಷಕರವಾದ ವಿಷಯವಾಗಿರುತ್ತದೆ ಶ್ರೀಮತ್ ಮಹಾರಾಜಾ ಸಾಹೇಬ್ ಬಹದ್ದೂರವರ ಸರ್ಕಾರದಲ್ಲಿ ಅನೇಕ ಉನ್ನತ ಪದವಿಗಳನ್ನು ಅಲಂಕರಿಸಿ ಖ್ಯಾತಿಪಡೆದಿರುವಿರಿ ಮೈಸೂರು ದೇಶದ ಸ್ಥಿತಿ, ಆವಶ್ಯಕತೆ ಮೊದಲಾದ ವಿಷಯಗಳಲ್ಲಿ ತಮಗಿರುವ ಪರಿಚಯವು ಅಸದೃಶವಾದುದು ಮತ್ತು ತಮಗಿರುವ ಜನರ ಮತ್ತು ಸ್ಥಿತಿಗಳ ಪರಿಜ್ಞಾನವು ಅನನ್ಯಾದೃಶವಾದುದು ತಾವು ಫಸ್ಟ್ ಕೌನ್ಸಿಲರ್ ಪದವಿಯಿಂದ ವಿಶ್ರಾಂತಿಹೊಂದಿದ ಮೇಲೆಯೂ ಸಾರ್ವಜನಕ್ಷೇಮಲಾಭ ಚಿಂತನೆಯಲ್ಲಿಯೇ ನಿರತರಾಗಿ ತಮ್ಮ ಅಮೂಲ್ಯವಾದ ಕಾಲವನ್ನು ವಿನಿಯೋಗಿಸುತ್ತಿರುವಿರಿ ಬೆಂಗಳೂರಿನ ಸಿಟಿ ಮ್ಯುನಿಸಿಪಲ್ ಆನರರಿ ಪ್ರೆಸಿಡೆಂಟರಾಗಿಯೂ, ಬೆಂಗಳೂರು-ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಪ್ರೆಸಿಡೆಂಟರಾಗಿಯೂ, ಇದರ ಮೇಲೆ ಈಚೆಗೆ ಏರ್ಪಟ್ಟಿರುವ ಮೈಸೂರು ಬ್ಯಾಂಕಿನ ಪ್ರೆಸಿಡೆಂಟರಾಗಿಯೂ ತಾವು ಪಡೆದಿರುವ ಕೀರ್ತಿಯು ಜನಸಾಮಾನ್ಯಕ್ಕೆ ದುರ್ಲಭವಾದುದು ಇಂಥಾ ಕೀರ್ತಿಗೆ ತಾವು ಸತ್ಪಾತ್ರರಾಗಿರುವಿರಿ ಸಾಮರ್ಥ್ಯಾಗಳಿಂದಲೂ, ಪ್ರಜಾಹಿತಚಿಂತನೆಯಿಂದಲೂ ಅನೇಕ ಕಷ್ಟಕರವಾದ ಕೆಲಸಗಳನ್ನು ನಿರ್ವಹಿಸಿ, ಇತರರಿಗೆ ಅಮೋಘವಾದ ಮೇಲುಪಂಕ್ತಿಯನ್ನು ಹಾಕಿರುವಿರಿ ಇದೇ ರೀತಿಯಲ್ಲಿ ಅನೇಕರು ಪ್ರವರ್ತಿಸುವರೆಂದು ನಾವುಗಳು ನಂಬಿರುತ್ತೇವೆ ತಾವು ಕೈಕೊಳ್ಳುವ ಪ್ರತಿ ಒಂದು ಕೆಲಸದಲ್ಲಿಯೂ ತಾವು ತೋರ್ಪಡಿಸುವ ಶಕ್ತಿ, ಉತ್ಸಾಹ, ಕಾರ್ಯತತ್ಪರತೆ, ಸಮರ್ಪಕತೆ, ಇವು ತಮ್ಮಂತೆಯೇ ಕೀರ್ತಿಯನ್ನು ಸ್ವಲ್ಪ ಮಟ್ಟಿಗಾದರೂ ಪಡೆಯಬೇಕೆಂದಿರುವ ಇತರರಿಗೆ ಮಾರ್ಗದರ್ಶಕಗಳಾಗಿರುತ್ತವೆ —ಅನೇಕ ದಿವಸಗಳಿಂದ ಶಾಶ್ವತವಾಗಿ ನಡೆದುಬಂದಿರುವ ಕಾರ್ಯಗಳಿಗೆ ಅನುಗುಣವಾಗಿರತಕ್ಕ ಸಮರ್ಪಕತೆಯು ನಮ್ಮ ಅಭಿವೃದ್ಧಿಗಾಗಿ ನಾವು ಮಾಡುತ್ತಿರುವ ಪ್ರಯತ್ನಗಳಲ್ಲಿ ಇಲ್ಲದಿದ್ದಾಗ್ಯೂ ನಾವು ಬುದ್ಧಿಕುಶಲತೆಯಲ್ಲಿಯೂ, ಉತ್ಸಾಹದಲ್ಲಿಯೂ, ಶಕ್ತಿಯಲ್ಲಿಯೂ, ಯುಕ್ತಿಯಲ್ಲಿಯೂ ಯಾರಿಗೂ ಕಡಮೆಯಾಗಿಲ್ಲವೆಂದು ನಿಸ್ಸಂದೇಹವಾಗಿ ಹೇಳಬಲ್ಲೆವು ನಾವು ನಮ್ಮ ಕೈಲಾದ ಮಟ್ಟಿಗೂ ಶ್ರೀಮತ್ ಯುವರಾಜರವರು ನಮಗೆ ಅಪ್ಪಣೆಕೊಡಿಸಿದ ಬುದ್ಧಿವಾದದಂತೆ ನಡೆದುಕೊಳ್ಳಲು ಪ್ರವರ್ತಿಸಿರುತ್ತೇವೆ

ಕಳೆದ ವರ್ಷದಲ್ಲಿ ಸಂಘಗಳು 206 ರಿಂದ 400 ಕ್ಕೂ, ಮೆಂಬರುಗಳ ಸಂಖ್ಯೆಯು 13,148 ರಿಂದ 30,000 ಕ್ಕೂ, ಬಂಡವಾಳವು ರೂ 6,76,300 ಯಿಂದ 12,90,000 ಕ್ಕೂ, ನಿವ್ವಳ ನಫೆಯು ರೂ 31,900 ಯಿಂದ 62,500 ಕ್ಕೂ ಮತ್ತು ಜಖೀರಿ (ರಿಜರ್ವ್) ಫಂಡು 18,300 ರೂ ಯಿಂದ ರೂ 30,000 ಗಳ ವರೆಗೂ ಹೆಚ್ಚಿರುತ್ತದೆ —ಸಂಘಗಳಲ್ಲಿ ಸುಲಭವಾದ ಬಡ್ಡಿಗೆ ಹಣ ದೊರೆತದ್ದರಿಂದ ಬಡ್ಡಿ ಒಂದರಲ್ಲಿಯೇ 1,00,000 ರೂ ಉಳಿದಿರುತ್ತದೆ ಈ ಸಂಖ್ಯೆಗಳಿಗಿಂತಲೂ ಅತಿಶಯವಾದ ಮತ್ತೊಂದು ವಿಷಯವೇನಂದರೆ, ಈ ಸಂಘಗಳು ಎಲ್ಲಾ ಜಾತಿಯ ಜನಗಳಲ್ಲಿಯೂ ಪ್ರಚುರವಾಗಿರುತ್ತವೆ ಇದುವರಿವಿಗೂ ರೈತರೂ, ಚಿಲ್ಲರೆ ವ್ಯಾಪಾರಸ್ಥರೂ ಮತ್ತು ಸರ್ಕಾರಿ ನೌಕರರೇ ಸಂಘಗಳಲ್ಲಿ ಹೆಚ್ಚಾಗಿ ಮೆಂಬರುಗಳಾಗಿದ್ದರು ಆದರೆ ಈಗಲಾದರೋ ಮೇಲೆ ಹೇಳಿದವರಲ್ಲದೆ ಕೈಗಾರಿಕೆ ಕಸಬಿನವರೂ, ಕೋಲಾರದ ಚಿನ್ನದ ಗಣಿಯಲ್ಲಿ ಕೆಲಸ ಮಾಡುವ ಕೂಲಿ ಜನರೂ, ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರವರ ಬಾಡಿಗಾರ್ಡಿನವರೂ, ಅರಮನೆ ಖಾಸ್ ತಬೇಲೆಯ ನೌಕರರೂ ಮತ್ತು ಬಹು ಹೀನಸ್ಥಿತಿಯಲ್ಲಿರುವ ಹೊಲೆಯರೂ ಮತ್ತು ಮಾದಿಗರೂ ಕೂಡ ಸಂಘಗಳ ಮೆಂಬರುಗಳಾಗಿರುತ್ತಾರೆ

ಅನೇಕ ಜನಗಳ ಕ್ಷೇಮಲಾಭಗಳನ್ನೇ ಒಳಗೊಂಡಿರುವ ಮತ್ತು ನಮ್ಮ ಜನಗಳ ನಡತೆ, ಸಂಪದಭಿವೃದ್ಧಿಯನ್ನು ಉಂಟುಮಾಡುವ ಮುಖ್ಯೋದ್ದೇಶವುಳ್ಳ ಈ ಪರಸ್ಪರಸಹಾಯ ಸಂಘಗಳ ಮೂಲತತ್ವವು ತಮ್ಮನ್ನೇ ಅವಲಂಬಿಸಿರುತ್ತದೆ ಆದುದರಿಂದ ತಾವು ಈ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿ ವಿಷಯಗಳನ್ನು ವಿಮರ್ಶಿಸಿ ತಮ್ಮ ಹಿಂದೆ ಇದೇ ಸ್ಥಾನವನ್ನು ಅಲಂಕರಿಸಿದ್ದ ಮ|| ಶ್ರೀನಿವಾಸ ಅಯ್ಯಂಗಾರ್ರವರು ಮತ್ತು ಮ|| ನಂಜುಂಡಯ್ಯನವರಂತೆಯೇ ಸಭಾಕಾರ್ಯವನ್ನು ಸಮರ್ಥತೆಯಿಂದ ನಿರ್ವಹಿಸುವಿರೆಂದು ನಾವು ದೃಢವಾಗಿ ನಂಬಿರುತ್ತೇವೆ

[ಶ್ರೀಮತ್ ಯುವರಾಜರವರ ಪ್ರತ್ಯುತ್ತರವನ್ನೂ ಆ ಬಳಿಕ ಮಹಾಸಭೆಯಲ್ಲಿ ನಡೆದ ಇತರ ವಿಷಯಗಳನ್ನೂ ವಾಚಕರು ೬ನೇ ಪುಟದಲ್ಲಿ ಓದಿಕೊಳ್ಳಬೇಕೆಂದು ಕೋರುತ್ತೇವೆ —ಎಡಿ]

ಸನ್ ೧೮೭೬ ರಿಂದ ೧೯೦೬ ವರೆಗೆ.

ಕಾಲದ ಪರೀಕ್ಷೆ !

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION 2-41

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಿಯನ್ನು ಘನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆ ಮಾಡಿ, ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಅಕ್ರಮಗಳು, ನಾನಾ ತರದ ಕೆಮ್ಮಲು,

ಸಕಲವಿಧ ಶೈತ್ಯಗಳು, ಮಾಂಸಖಂಡಗಳ ಕ್ಷೀಣತೆ,

ಆಹಾರದಲ್ಲಿ ಅರುಚಿ

ಇದಲ್ಲದೆ ತಿಂಪಿಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷದವೂ ಇದೇ

ಕೈಸೋಕದೆ ತಯಾರಾದದ್ದು

ಔಷಧಗಳ ಅಂಗಡಿಗಳಲ್ಲೆಲ್ಲಾ ವಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷದಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷದವನ್ನೇ ಕೊಡುಕೊಳ್ಳಿ

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ ? ಎಂದು ನಿನ್ನನ್ನು ನೀನೇ ಕೇಳಿಕೋ ಹಾಗೆ ಆಗದಿದ್ದರೆ ಡೋನ್ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೊ ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು ಮಲಬಂದವೆಂಬುವುದರ ಅರ್ಥವೇನೆಂದರೆ ಮಲಾಶಯದೊಳಗೆ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುವನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶದ ರೋಗ, ಪಿತ್ತ, ಪಿತ್ತಜ್ವರ ಅಜೀರ್ಣ, ಅಗ್ನಿಮಾಂದ್ಯ, ಗಾಬರಿ, ಅಶಕ್ತಿ, ಎದೆಯು ತಲ್ಲಣಿಸುವುದು, ತಲೆತಿರುಗುವುದು ತಲೆನೋವು, ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆನೋವು, ಹಂಗರ ವ್ಯಾಧಿಗಳು, ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು



(೧೨ ಆಣೆ ಬುಡ್ಡಿ ಪರಿಮಾಣ)

ಡೋನ್ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕೆಟ್ಟಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [181 5]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಬಳಿಯೆಲ್ಲಾ ದೊರೆಯ ... ಡೋನ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ನತಮಲ್ ಡೈರಿಗಳು

ನಮ್ಮಲ್ಲಿ ಪ್ರತಿ ವರುಷವೂ ತಯಾರಾಗುವಂತೆ 1914 ನೇ ಇಸವಿ 4 ನಮೂನೆವಾದರ್ ಪಾಕೆಟ್ ಡೈರಿಗಳು ತಯಾರಾಗಿ ಬಿಕರಿಗೆ ಸಿದ್ಧವಾಗಿವೆ

ನಂಬರು 1	ಚಿಕ್ಕ ಸೈಜು ಸಾದಾ	,,	ಕ್ರಯ 4 ಆಣೆ	
,, 2	ಡಿಟೊ ಪ್ಲಾಪು	,,	,, 6	,,
,, 3	ದೊಡ್ಡ ಸೈಜು ಸಾದಾ	,,	,, 6	,,
,, 4	ಡಿಟೊ ಪ್ಲಾಪು	,,	,, 8	,,

ಒಂದೇ ದಫಾ 12 ಡೈರಿಗಳನ್ನು ತರಿಸಿಕೊಳ್ಳುವವರಿಗೆ ಒಂದು ಪ್ರತಿ ಜಾಸ್ತಿ 25 ರೂ ಗೆ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ರೂ ಗೆ 2 ಆಣೆಯಂತೆ ಡಿಸ್ಕೌಂಟು ಮಾತ್ರ ದೊರೆಯುವುದು ಈಗಲೇ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಿ ಕಾಲವಿಳಂಬ ಮಾಡಿದಲ್ಲಿ ಮುಗಿದುಹೋಗುತ್ತೆ [198 1]

ವಿಳಾಸ —ಎಸ್. ಡಿ ನತ್‌ಮಲ್ ಕಂಪೆನಿ, ಮೈಸೂರು

Mellin's Food

ಕೈಸೋಕದೆ ತಯಾರಾದದ್ದು.

ಮೆಲಿನ್ಸ್ ಆಹಾರವು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರಿ ಆಹಾರಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಧರ್ಮಾರ್ಥವಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs OAKES & Company, Mount Road, Madras.

[4-49] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

19—9—1913 ರಿಂದ 26—9—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು ಪಟ್ಟಣ	1	1	0	0
ಮೈಸೂರು ,,	2	2	0	0
ಬೆಂಗಳೂರು ಡಿಸ್ಟ್ರಿಕ್ಟು	3	5	0	0
ಮೈಸೂರು ,,	60	38	0	0
ಕೋಲಾರ್ ,,	10	7	5	3
ಕೋಲಾರ್ ಚಿನ್ನದ ಗಣಿಗಳು	1	3	0	0
ತುಂಕೂರು ಡಿಸ್ಟ್ರಿಕ್ಟು	0	0	3	3
ಹಾಸನ ,,	20	16	4	1
ಚಿತ್ರದುರ್ಗ ,,	0	0	5	3
ಕಡೂರ್ ,,	14	15	1	4
ಶಿವಮೊಗ್ಗ ,,	31	24	0	0
ಜುಮ್ಲಾ	151	109	18	14

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನ ಶರದೃತೌ ಆಶ್ವೀಜ ಶುದ್ಧ ಏಕಾದಶಿ ಶುಕ್ರವಾರದಿಂದ ಆಶ್ವೀಜ ಬಹುಳ ಪಾಡ್ಯಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಅಕ್ಟೋಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕನ್ಯಾಮಾಸ ತೇದಿ
10	ಶುಕ್ರ *	ಏಕಾದಶಿ	49-26	ಧನಿಷ್ಠ	2 39	25
11	ಶನಿ ‡	ದ್ವಾದಶಿ	53-57	ಶತಭಿಷ	58-21	26
12	ಭಾನು †	ತ್ರಯೋದಶಿ	59-5	ಪೂಭಾ	60-0	27
13	ಸೋಮ §	ಚತುರ್ದಶಿ	6 0	ಪೂಭಾ	5-4	28
14	ಮಂಗಳ	ಚತುರ್ದಶಿ	1-10	ಉಭಾ	11-39	29
15	ಬುಧ ,,	ಪೌರ್ಣಮಿ	10-47	ರೇವತಿ	17-57	30
16	ಗುರು	ಪಾಡ್ಯಮಿ	14-0	ಅಶ್ವಿನಿ	23-31	31

* ಸರ್ವತ್ರ ಏಕಾದಶಿ, ಮಳೆ ನಕ್ಷತ್ರ—ಚಿತ್ತ 1 ನೇ ಪಾದ ‡ ಗೋದ್ವಾದಶಿ † ಶನಿಪ್ರದೋಷ § ಮಳೆ ನಕ್ಷತ್ರ—ಚಿತ್ತ 2 ನೇ ಪಾದ ,, ಚಂದ್ರೋದಯ ಗೌರೀವ್ರತ, ದಾನಫಲವ್ರತ . ಮಳೆ ನಕ್ಷತ್ರ—ಚಿತ್ತ 3 ನೇ ಪಾದ

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಅಕ್ಕಿ ಪಲ್ಲಾ ೧ಕ್ಕೆ	ರೂ	೧೬-೦-೦	೧೭-೦-೦
ಅಕ್ಕಿ ಅವಲಾ		೧೬-೮-೦	೧೭-೮-೦
ಅಕ್ಕಿ		೧೬-೦-೦	೧೬-೮-೦
ಅವರೆ		೧೮-೦-೦	೧೭-೮-೦
,, ದುಯಂ		೧೭-೦-೦	೧೬-೧೨-೦
ಬೇಳೆ ಅವರೆ ಪಲ್ಲಾ ೧ಕ್ಕೆ		೧೫-೦-೦	೧೬-೪-೦
,, ದುಯಂ ,,		೧೪-೦-೦	೧೪-೦-೦
ರಾಗಿ ಪಲ್ಲಾ ೧ಕ್ಕೆ		೭-೪-೦	೫-೧೦-೦
,,		೬-೮ ೦	೪-೧೨-೦
,,		೭-೪-೦	೭-೪-೦
ಪಲ್ಲಾ ೧ಕ್ಕೆ		೧೩-೦-೦	೧೪ ೦-೦
ಅವರೆ ,,		೧೩-೦ ೦	೧೨ ೦-೦
,,		೧೧-೦-೦	೧೪-೦-೦
,,		೧೩-೦ ೦	೧೬-೮-೦
,,		೧೨-೦-೦	೧೩-೦-೦
ಸೇರು ೧೨ಕ್ಕೆ		೨೨-೦ ೦	೨೪-೦-೦
ಪಲ್ಲಾ ೧ಕ್ಕೆ		೭-೮-೦	೭-೧೦-೦
೧೩೭ ಸೇರಿಗೆ		೧೨-೦-೦	೧೪-೦-೦
ಮಣ ೧ಕ್ಕೆ		೨-೪-೦	೩-೭-೦
,,		೪-೦-೦	೩-೪-೦
,, ದುಯಂ			
ಅಚ್ಚು ೧೦೦ಕ್ಕೆ		೪-೮-೦	ಮಣ ೬-೪-೦
ಮಣ ೧ಕ್ಕೆ		೬-೦-೦	೬-೦-೦
,, ,,		೫-೪ ೦	೬ ೦-೦
		೬ ೦-೦	೬-೪-೦
ಪಲ್ಲಾ ೧ಕ್ಕೆ		೫-೦-೦	೬ ೪-೦
,, ,,		೬ ೮-೦	೬-೦-೦
ಮಣ ೧ಕ್ಕೆ		೧-೧೨-೦	೧-೪-೦
ಮಣ ೧ಕ್ಕೆ		೨೨-೦-೦	೨೨ ೮-೦
,,		೨೪-೮-೦	
ಪಟ್ಟ ೧ಕ್ಕೆ			೫ ೦-೦
೧೦೦ಕ್ಕೆ		೬-೪ ೦	೬-೪-೦
ಮಣ ೧ಕ್ಕೆ		೧-೬-೦	೧-೦-೦
ಮಣ ೧ಕ್ಕೆ		೧-೧೨ ೦	೧-೮-೦
ಕಂಡ್ರ		೧೫-೮-೦	
,, ಪಸಿಮೆ		೧೫ ೧೪-೬	೧೫ ೧೪-೬
,, ತೊಲ ೧ಕ್ಕೆ		೨೪-೩ ೦	೨೪-೦-೦
ತೊಲ ೧೦೦ಕ್ಕೆ		೪೧-೦-೦	೪೧-೩-೦

ಏಮಸ ವಿಧವಾದ ನೋವೂ ಉರಿತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಬೆನ್ನಿನ ಸೆಳೆತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ವಿಕರಿಯಾಗುತ್ತಲಿವೆ. ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ಬಿಕರಿಯಾಗುವದು.

ಹುಳಕಡ್ಡಿ ಔಷಧ ಡಬ್ಬಿಗೆ 6 ಆಣೆ, 12 ಕುಪ್ಪಿಗೆ ರೂ. 3–8–0. ಹಲ್ಲುಪುಡಿ ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ 1–2–0. ವಿ ಪಿ ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ [42–33]

ವಿಳಾಸ :—ಅಮೃತಾಂಜನ ಡಿಪೋ, ೧೮೯ ಫ್ರಿಯರ್ ರೋಡ್, ಫೋರ್ಟ್, ಬೊಂಬಾಯಿ.

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೩೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯ ನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಕೌಶಲವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು. (5) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1-8-0, ಟಪ್ಪಾಲು ಹಾಸಲು 4 ಆಣೆ

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 31 ಸಂಧಿಗೂ ಪ್ರತಿಪದ ಟೀಕಾ, ಕಥಾರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ.

ಇದರ ಕ್ರಯ ಪ್ರತಿ 1 ಕ್ಕೆ ರೂ 4 , ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127 16]

ನಮ್ಮ ವಿಳಾಸ—ಎಮ್. ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ವಿವಾಹ ಪರಿಷ್ಕರಣ.

ಟಿ ನರಸೀಪುರದ ತಾಲ್ಲೂಕು ಸೋಸಲೆ ಮ| ಆರ್ ವೆಂಕಟರಾಮಯ್ಯನವರು ಅರಿಕೆಮಾಡುವುದೇನೆಂದರೆ—

ದ್ವಿತೀಯ ವಿವಾಹ ಅಥವಾ ಕೊಡುವ ಪದವಿಕೆ ಇಲ್ಲದ ಬ್ರಾಹ್ಮಣರು ಮತ್ತೂ ಇತರ ಮಕ್ಕಳು—ಕನ್ನಿಕೆಯರಿಗೆ ಅಂಗಾಂಗಗಳು ಚೆನ್ನಾಗಿ ಕಾಣುವ ಹಾಗೆ ಆದನಂತರ, ಋತುಮತಿಯರಾಗುವುದಕ್ಕೆ ಪೂರ್ವ ಲಗ್ನಮಾಡಬೇಕು. ಬಾಲಕರಿಗೆ 20 ವರುಷದನಂತರ 24 ವರುಷದೊಳಗಾಗಿ ಲಗ್ನಮಾಡಬೇಕು ವಿದ್ಯಾಭ್ಯಾಸದಿಂದ ಪ್ರಸುಪಟ್ಟಿರುವ ಬಾಲಕರಿಗೆ ಇವರ ವಿದ್ಯಾಪೂರ್ತಿ ಆದನಂತರ 1 2 ವರುಷ ಬಿಟ್ಟು ಬಳಿಕ ವಿವಾಹಮಾಡಬೇಕು ಏಕೆಂದರೆ ಅನೇಕರು ಬಾಲ್ಯದಲ್ಲಿ ದುರಭ್ಯಾಸದಿಂದ ದೇಹವನ್ನು ಕೆಡಿಸಿಕೊಳ್ಳುತ್ತಾರೆ ವಿಧುರರಿಗೆ (ಹೆಂಡತಿ ಸತ್ತವರಿಗೆ) 3 ನೇ ವಿವಾಹಕ್ಕೆ ಕನ್ನಿಕೆಯನ್ನು ಕೊಟ್ಟು ಲಗ್ನಮಾಡಬಾರದು 40 ವರುಷಗಳ ನಂತರ ಗಂಡಸು ಕನ್ನಿಕೆಯನ್ನು ಲಗ್ನಮಾಡಿಕೊಳ್ಳಬಾರದು

ದ್ವಿತೀಯ ವಿವಾಹ ಅಥವಾ ಕೊಡುವ ಪದವಿಕೆ ಇರತಕ್ಕ ಮತಸ್ಥರು— ಹುಡುಗಿಗೆ 18 ವರುಷ ಕಳೆಯುವವರೆಗೆ ಪೂರ್ವದ ವಿವಾಹಬಂಧ ವಿಮೋಚನೆಯನ್ನು ಮಾಡಬಾರದು ಹೆಂಡತಿ ಸತ್ತರೆ ಗಂಡ, ಗಂಡ ಸತ್ತರೆ ಹೆಂಡತಿ ಕೂಡು ವಳಿ ಮಾಡಿಕೊಳ್ಳಬೇಕೇ ಹೊರತು ಜೀವಂತರಾಗಿರುವಾಗಲೇ ವಿವಾಹಬಂಧ ವಿಮೋಚನೆ ಮಾಡಿ ಬೇರೆ ಕೂಡುವಳಿ ಮಾಡಿಕೊಳ್ಳಬಾರದು

ವಂಗದ ಮತ್ತು ದೇಶಾಭಿವೃದ್ಧಿ ನಾಡಬೇಕೆಂಬುವವರು ಈ ಪದವಳಿಯನ್ನು ಅನುಸರಿಸಿಕೊಂಡು ಶುದ್ಧವಾದ ಆಚಾರವ್ಯವಹಾರವನ್ನು ನಡಿಸುತ್ತಾ ಸತ್ಯಮಾರ್ಗಾವಲಂಬಿಗಳಾಗಬೇಕೇ ಹೊರತು ಕುಮಾರ್ಗಕ್ಕೆ ಹೋಗಿ ದಾರಿತಪ್ಪಿ ಕಾಡಿನಲ್ಲಿ ಸಿಂತು ತಪಿಸುವವನಂತೆ ಇತರ ಮಾರ್ಗಕ್ಕೆ ಹೋಗಿ ಕೆಡಬಾರದೆಂಬುವುದೇ ಮುಖ್ಯ ತತ

ದೊಡ್ಡಬಳ್ಳಾಪುರದ ಕುಡಿಯುವ ನೀರಿನ ಏರ್ಪಾಡು

ದೊಡ್ಡಬಳ್ಳಾಪುರಕ್ಕೆ ಕೋಗಟ್ಟದ ಕೆರೆಯಿಂದ ನಲ್ಲಿಗಳ ಮೂಲಕ ನೀರು ಸರಬರಾಜು ಮಾಡಲಿಕ್ಕೆ ಇಂಜನಿಯರು ಇಲಾಖೆಯವರು 31 ಸಾವಿರ ರೂಪಾಯಿ ಅಂದಾಜು ಮಾಡಿರುವದರ ಪೈಕಿ ಅರ್ಧ ಭಾಗವನ್ನು ಊರಿನ ಪ್ರಜೆಗಳು ಕೊಟ್ಟರೆ ಬಾಕಿ ಅರ್ಧ ಮೊಬಲಗನ್ನು ಸರ್ಕಾರದಿಂದ ಕೊಡಿಸುವದಾಗಿ ದಿವಾನ್ ಸಾಹೇಬರವರು ಅಪ್ಪಣೆ ಕೊಡಿಸಿರುವ ಮೇರೆಗೆ ಕಳೆದ ಬುಧವಾರ ಅಲ್ಲಿ ನಡೆದ ಮೀಟಿಂಗಿನಲ್ಲಿ ಮ|| ಸಾಹುಕಾರ್ ಆಲಂಗನಲ್ಲಿ ವೆಂಕಟ ನಾರಾಯಣಶೆಟ್ಟರು 5 ಸಾವಿರ ರೂಪಾಯಿ, ಸಾಹುಕಾರ್ ತೂಬಗೆರೆ ಚಂದ್ರಶೇಖರಯ್ಯನವರು ಮುಂದೆ ಅದಷ್ಟನವರೂ ಸೇರಿ 5 ಸಾವಿರ, ಬಾಕಿ 7 ಸಾವಿರ ರೂಪಾಯಿಗಳನ್ನು ಮ|| ಗಣದ ಸರಾಫ್ ಆದಿನಾರಾಯಣಶೆಟ್ಟರು ಒಂದು ಸಾವಿರ, ಸರಾಫ್ ಪುಟ್ಟಪ್ಪನವರು ಒಂದು ಸಾವಿರ, ಸರಾಫ್ ನರಸಿಂಹಯ್ಯನವರು ಒಂದು ಸಾವಿರ, ರೇಂಜ್ ಕಂಟ್ರಾಕ್ಟರ್ ಚಿಕ್ಕ ಹನುಮಂತಯ್ಯನವರು ಒಂದು ಸಾವಿರ, ಹಣಬೆ ಗಿರಿ ಕಂಟ್ರಾಕ್ಟರು ಇನ್ನೂ ಕೆಲವರು ಒಂದು ಸಾವಿರ ಈರೀತಿ ವಾಗ್ದಾನಮಾಡಿದಾರೆ ಬಾಕಿ ಎರಡು ಸಾವಿರ ರೂಪಾಯನ್ನು ಆಲಂಪಲ್ಲಿ ಲಕ್ಷ್ಮಯ್ಯನವರೂ ಹೆಚ್ಚಾ ಜಿ ಶ್ರೀಕಂಠಯ್ಯನವರು ಕೊಡುವರೆಂದು ಸಭಿಕರೆಲ್ಲಾ ಅಭಿಪ್ರಾಯಪಟ್ಟು ಅದಕ್ಕಾಗಿ ಮುಂದಿನ ಭಾನುವಾರ ಬೇರೆ ಒಂದು ಮೀಟಿಂಗು ನಡೆಸುವರು ಈ ಊರಿಗೆ ನೀರು ಸರಬರಾಯಿ ಮಾಡಬೇಕೆಂದು ಕಳೆದ 20 ವರ್ಷಗಳಿಂದಲೂ ಬಹಳವಾಗಿ ಸಾಹಸಪಟ್ಟು 5 ಸಾವಿರ ರೂಪಾಯಿ ಕೊಟ್ಟಿರುವ ಆಲಂಪಲ್ಲಿ ವೆಂಕಟನಾರಾಯಣಶೆಟ್ಟರಿಗೆ ಸಭಿಕರೆಲ್ಲರೂ ವಿಶೇಷ ವಂದನೆಗಳನ್ನು ಅರ್ಪಿಸಿದರು ಈ ಮಿಂಬರುಗಳಲ್ಲಿ ಇಂದಾ ಉದಾರಭಾವವನ್ನೂ ಶ್ರೇಷ್ಠವಾದ ಸದ್ಗುಣವನ್ನೂ ಹೆಚ್ಚಿಸುವಂತೆ ಮಾರ್ಕ್‌ಸಿಫ್ ಮ|| ಮಹದೇವಯ್ಯನವರು ಮಾಡಿದ ಭಾಷಣಗಳು ಅತ್ಯಂತ ಸ್ತೋತ್ರಾರ್ಹವಾಗಿದ್ದವು ಈ ನೀರಿನ ಸರಬರಾಯಿ ಕೆಲಸದಲ್ಲಿ ಚಿಂತೆಪಡುತ್ತಿರುವ ಮಿ|| ಚಾಂಡಿ ಸಾಹೇಬರಿಗೂ, ನಮ್ಮ ಅಮಲ್ದಾರರವರಿಗೂ, ಮಾರ್ಕ್‌ಸಿಫರವರಿಗೂ ವಿಶೇಷ ವಂದನೆಗಳನ್ನು ಅರ್ಪಿಸಲಾಯಿತು. ಕಡೆಯಲ್ಲಿ ಶ್ರೀಮನ್ಮಹಾರಾಜರವರ ಶ್ರೇಯಸ್ಸನ್ನು ಬಯಸಿ ಸಭೆಯನ್ನು ಬರಖಾಸ್ತು ಮಾಡಿದರು ಈ ನೀರಿನ ಕೆಲಸ ಪ್ರಾರಂಭಿಸಿದ ಕೂಡಲೇ ಇನ್ನೂ ಅನೇಕ ದೊಡ್ಡ ಮನುಷ್ಯರು ತಲಾ 500, 300, 200, 100 ಈ ಮೇರೆಗೆ ದ್ರವ್ಯ ಸಹಾಯಮಾಡಿ ಊರಿನ ಎಲ್ಲಾ ಭಾಗಗಳಿಗೂ ನಲ್ಲಿಗಳನ್ನು ಇಡಿಸಿ ನೀರನ್ನು ಒದಗಿಸಿ ಸಮಸ್ತ ನಿವಾಸಿಗಳನ್ನು ಸಂತೋಷಪಡಿಸುವರೆಂದು ತಿಳಿಯಲಾಗಿದೆ

ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಸ್ಥಳ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು , ಇಂಥವುಗಳಿಗೆ ನಾವು ಸ್ಥಳ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲ ವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಕರೆಸ್‌ಪಾಂಡೆನ್ಸ್

ಮೈಸೂರು ತಾ|| ನಾಗನಹಳ್ಳಿಯಲ್ಲಿ ದುಷ್ಕರಕಾಟ

ಅಯ್ಯಾ,

ರಾಜಧಾನಿಯಾದ ಮೈಸೂರಿಗೆ 4 ಮೈಲಿ ದೂರದಲ್ಲಿರುವ ನಾಗನಹಳ್ಳಿಯಲ್ಲಿ ಕೆಲವು ರೈತರೇ ದುಷ್ಕರಗಳಿಗೆ ಪರಿಣಮಿಸಿ ಬಡಬಗ್ಗರಿಗೆ ನಾನಾತರದ ಕಷ್ಟನಷ್ಟಗಳನ್ನುಂಟು ಮಾಡುತ್ತಿದಾರೆ ಪೋಲೀಸಿನವರೂ ಅಂಥವರಿಗೆ ಸಹಾಯಕರಾಗಿದ್ದರೆ ಇದುವರೆಗೆ ಆ ಪೈಕಿ ಅನೇಕರನ್ನು ಹಿಡಿದು ಶಿಕ್ಷೆ ಮಾಡಿಸಿ ದುಷ್ಟಕಾರ್ಯಗಳನ್ನು ನಿಲ್ಲಿಸಿ ಬಿಡುತ್ತಿದ್ದರೆಂದು ಹೇಳಬೇಕಾಗುತ್ತದೆ ಆ ರೈತರ ಸಹಾಯಕ್ಕೆ ಸದಾ ಅನುಭವಿಸಿದವರೇ ಮೊದಲಾದ ಕೆಲವು ಕಟ್ಟ ಜನರೂ ಒದಗಿರುತ್ತಾರೆ ಕಳೆದ ಎರಡುತಿಂಗಳಲ್ಲಿ ಈ ಸಣ್ಣ ಗ್ರಾಮದಲ್ಲಿ ಎರಡು ಮನೆಗಳಲ್ಲಿ ಕಳುವಾಯಿತು ಇದುವರೆಗೂ ಒಂದೂ ದುಷ್ಕರಿಗೆ ಶಿಕ್ಷೆ ಆಗಲಿಲ್ಲ ; ಪತ್ತೆ ತರಿಮೂ ಕೂಡ ಅಷ್ಟೇನೂ ತೃಪ್ತಿಕರವಾಗಿ ಮುಟುವರ್ಜಿಯಿಂದ ನಡೆಯುವಂತೆ ಕಾಣುವುದಿಲ್ಲ ಈ ಎರಡು ಮನೆಗಳಲ್ಲೂ ಪಾತ್ರೆಗಳು ಹೊರ್ತು ದವಸ ಧಾನ್ಯ ನಗನಾಣ್ಯಗಳೂ ಸುಮಾರು 700 800 ರೂಪಾಯಿ ತನಕ ಕಳುವಾಗಿರುತ್ತವೆ ಸರ್ಕಾರದವರು ದರ್ಪವಿಟ್ಟು ದುಷ್ಟರನ್ನು ದಂಡಿಸಿ ಸಭ್ಯ ಪ್ರಜೆಗಳನ್ನು ಕಾಪಾಡಬೇಕೆಂದು ಬೇಡುತ್ತೇನೆ ಮತ್ತು ರೈತರು ತಮ್ಮ ಕಸಬನ್ನು ಅಭಿವೃದ್ಧಿ ಮಾಡಿಕೊಂಡು ಶ್ರೇಯಸ್ಸಿಗೆ ಬರುವುದನ್ನು ಬಿಟ್ಟು ಥಂಗಿ ಸೇದುವುದೇ ಮೊದಲಾದ ದುರ್ಮಾರ್ಗಗಳಲ್ಲಿ ಬಿದ್ದು ತಾವೂ ಬಿದ್ದು ಗ್ರಾಮಸ್ಥರಲ್ಲೂ ಸಂಕಟವನ್ನುಂಟುಮಾಡಿ ದುಷ್ಪರೆನಿಸಿಕೊಳ್ಳುವುದು ತಮಗಾಗಲಿ, ತಮ್ಮ ಗ್ರಾಮಕ್ಕಾಗಲಿ ಕ್ಷೇಮವಲ್ಲವೆಂದು ತಿಳಿಯಬೇಕು

ಸತ್ಯಪ್ರಿಯ

ಮಲೆನಾಡು ಕೆರೆಗಳು

ಅಯ್ಯಾ,

ಘನವನ್ನು ಹೊಂದಿದ ನಮ್ಮ ಸರ್ಕಾರದವರು ಈ ವರ್ಷ ಪ್ರಜಾ ಹಿತ ಕ್ಕೋಸ್ಕರ ಅನೇಕ ಹೊಸ ಕೆರೆಗಳು, ಹಳೇ ಕೆರೆ ರಿಪೇರಿಗಳು, ರಸ್ತೆಗಳು, ಅಣೆ ಕಟ್ಟುಗಳು, ನಾಲಾ ಬಡಾವಣೆಗಳು ವಗೈರೆ ಕೆಲಸಗಳಿಗಾಗಿ ಬಹಳ ಭಾರಿ ಖರ್ಚುಗಳನ್ನಿಟ್ಟಿದಾರೆಂಬ ಅಂಶವನ್ನು ತಿಳಿದು ಬಹು ಸಂತೋಷಪಟ್ಟೆವು ಈ ಅನುಕೂಲಗಳನ್ನು ಉಂಟುಮಾಡಬೇಕೆಂದಿರುವ ಸ್ಥಳಗಳೆಲ್ಲಾ ಅವರ ದೃಷ್ಟಿಗೆ ಬೀಳತಕ್ಕದ್ದು ಬಹಳ ಸುಲಭ. ಈ ವಿಷಯಗಳಿಗೆ ಬದ್ಧ ದೃಷ್ಟಿಯು ಪ್ರಾಯಶಃ ಮಲೆನಾಡು ಪ್ರಾಂತ್ಯ ಬಿದ್ದಿದ್ದರೆ ಬಹಳ ಪ್ರಜೋಪಕಾರವಾದೀತು ಅನೇಕ ಮೇಜರ್ ಕೆರೆಗಳ, ಮೇಜರಿಗೆ ಸೇರದೇ ಇರುವ ಖುಷಕಿ ಕೆರೆಗಳ ಮತ್ತೂ ಅಣೆ ಕಟ್ಟುಗಳ ವತ್ತಾಸೆಯಿಂದ ಜೀವನ ಮಾಡತಕ್ಕ ರೈತರುಗಳು ಸದರಿ ಕೆರೆ ಮತ್ತು ಕಟ್ಟೆಗಳ ಕಾಮಗಾರಿ ವಿಷಯದಲ್ಲಿ ಎಷ್ಟೋ ಆವರ್ತಿ ಅನೇಕ ಆಫೀಸರುಗಳಲ್ಲಿ ಅರ್ಜಿ ಮುಖಾಂತರ ತಮ್ಮ ಕಷ್ಟಗಳನ್ನು ವಿಜ್ಞಾಪಿಸಿಕೊಂಡಾಗ್ಯೂ ಯಾವ ಫಲ ವನ್ನೂ ಕಾಣದೆ ಚಿಂತಿಸುತ್ತಿರುವರು ಇಂಥಾ ಮಲೆನಾಡು ಪ್ರಜೆಗಳ ವಿಚಾರ ದಲ್ಲಿ ನಮ್ಮ ಸರ್ಕಾರದವರು ಹೆಚ್ಚು ಗಮನವನ್ನು ಕೊಡದೆ ಇರುವುದನ್ನು ನೋಡಿದರೆ ತುಂಬಾ ವಿಷಾದವಾಗುತ್ತೆ ಇಂಥಾ ಕೆರೆಗಳ ಪೈಕಿ ನಮ್ಮ ವಾಸಸ್ಥಾನವಾದ ಎಡೇಹಳ್ಳಿ ಸಬ್ ತಾಲ್ಲೂಕ್ಕು ಮಡಬೂರು ಗ್ರಾಮದ ದಾಖಲೆ ಹಾರೆ ಕೊಪ್ಪ ದೊಡ್ಡಕೆರೆ ಎಂಬುವುದು ಒಂದು ಈ ಕೆರೆ ಮೋರಿ ಬಿದ್ದು ತೂಬು ಒಡೆದು ಹೋಗಿ ಸುಮಾರು 15-20 ವರ್ಷಗಳಾಯ್ತು ಈ ಕೆರೆಯ ಕೆಳಗೆ ಸುಮಾರು 600 ರೂಪಾಯಿ ಕಂದಾಯದ ಬಾಗಾಯ್ತು ತರಿ ಜಮೀನುಗಳಿವೆ ಈ ಜಮೀನುಗಳಿಗೆ ನೀರಿಲ್ಲದೆ ಫಲಪೈರೆಲ್ಲಾ ಒಣಗಿ ನಷ್ಟ ಹೊಂದಿದ್ದಲ್ಲದೆ ಬಾಗಾಯ್ತು ಮತ್ತು ತರಿ ಕಂದಾಯವನ್ನು ತೆತ್ತು ಬಹು ಬಡರೈತರಾಗಿರುತ್ತೇವೆ ಅನೇಕ ಅರ್ಜಿಗಳನ್ನು ಕೊಟ್ಟು ಬೇಡಿಕೊಂಡಾಗ್ಯೂ ಇದುವರೆಗೂ ನಮ್ಮ ಗೋಳನ್ನು ಕೇಳಿ ಕನಿಕರಪಡುವ ಆಫೀಸರುಗಳು ನಮ್ಮ ಭಾಗಕ್ಕೆ ಯಾರೂ ಕಾಣಲಿಲ್ಲ ಈಗಲಾದರೂ ಮೇಲ್ಪಟ್ಟ ಆಫೀಸರುಗಳು ಈ ಕೆರೆಗಳ ವಿಷಯವನ್ನು ಅವಗಾಹನೆಗೆ ತಂದುಕೊಂಡು ಬಡರೈತರ ಮೇಲೆ ದಯವಿಟ್ಟು ಕಾಮಗಾರಿ ಮಾಡಿಸಿಕೊಟ್ಟು ಆಚಂದ್ರಾರ್ಕ ಯಶೋಭಾಗಿಗಳಾಗಿ ನಮ್ಮನ್ನು ಕಂಪಾಲಿಸುವರೆಂದು ನಂಬಿ ಬಿನ್ನಯಿಸಿಕೊಂಡಿರುತ್ತೇನೆ

ಮಡಬೂರು ಪಟೇಲ್ ಎಚ್ ಗೋವಿಂದಗೌಡ

ಕುಂಸಿ ಸಬ್ ತಾಲ್ಲೂಕು—ಜವಾಬು

ಅಯ್ಯಾ,

ಕುಂಸಿ ಸಬ್ ತಾಲ್ಲೂಕು ಹಾರನಹಳ್ಳಿಯ ಪ್ರತಿ ಕೊಟ್ಟ ಸೂಚನೆಯನ್ನು ನೋಡಿದೆನು ಕುಂಸಿ ಸಬ್ ತಾಲ್ಲೂಕು ಕಚೇರಿಯನ್ನು ತೆಗೆದು ಆಯನೂರಿಗೆ ಇಡುತ್ತಾರಾಗಿ ಕೇಳುತ್ತೇನೆಂದು ಅವರು ಬರೆದಿರುತ್ತಾರೆ ಅವರಿಗೆ ಕನಸೋ, ಕಳವಳವೋ, ಅಭಿಮಾನವೋ ತಿಳಿಯದು ಯಾಕೆಂದರೆ ಸರ್ಕಾರದವರು ಯಾವುದಾದರೂ ಒಂದು ಏರ್ಪಾಡನ್ನು ಮಾಡುವುದೇ ಆಗಲಿ, ಮಾಡಿದ್ದನ್ನು ತೆಗೆಯುವುದೇ ಆಗಲಿ ಸರ್ವ ಪ್ರಜೆಗಳ ಹಿತಚಿಂತನೆಯನ್ನೇ ಮೂಲಾಧಾರವಾಗಿಟ್ಟುಕೊಂಡು ಮಾಡುತ್ತಾರೆ ಹೀಗೆ ಮಾಡುವುದು ರಾಜಧರ್ಮವೂ ಆಗಿದೆ ಈ ಕುಂಸಿ ಎಂಬುದು ಶಿವಮೊಗ್ಗಾಕ್ಕೆ 15 ಮೈಲಿ ಫಾಸಲೆಯಲ್ಲಿಯೂ, ಸಾಗರಕ್ಕೆ 30 ಮೈಲಿ ಫಾಸಲೆಯಲ್ಲಿಯೂ, ಮತ್ತು ಬೆಂಗಳೂರು ಹೊನ್ನಾವರ ರೋಡಿನಲ್ಲಿ ಇರತಕ್ಕದ್ದಾಗಿಯೂ ಇದೆ ಈಗ ಇರತಕ್ಕ ಸಬ್ ತಾಲ್ಲೂಕು ಚತುರ್ಗಡಿಯೂ ಈ ಕುಂಸಿಗೆ 8 9 ಮೈಲಿ ಫಾಸಲೆ ಇದ್ದು ತಾಲ್ಲೂಕಿಗೇನೇ ಮಧ್ಯಪ್ರದೇಶವಾಗಿದೆ ಪೂರ್ವದಲ್ಲಿ ನಗರದ ಶಿವಪ್ಪನಾಯಕನ ಆಧಿಪತ್ಯವಿದ್ದಾಗಿನಿಂದಲೂ ಈ ಕುಂಸಿಯಲ್ಲಿ ತಾಲ್ಲೂಕು ಕಚೇರಿ ಇದ್ದೇ ಇದೆ ಮಧ್ಯೆ ಯಾವ ಕಾರಣದಿಂದಲೋ ಕೆಲವು ಕಾಲ ಕಛೇರಿಯು ತಪ್ಪಿಹೋಗಿತ್ತು ಆ ತರುಣದಲ್ಲಿ ನಗರ ತಾಲ್ಲೂಕಿನ ಇರಸಾಲ್ 18 ಸಾವಿರ ರೂಪಾಯಿಗಳು ಕುಂಸಿ ಸಮೀಪದಲ್ಲಿ ದರೋಡೆ ಆದ ನಿಮಿತ್ತ ಪುನಃ ಈ ಕುಂಸಿಯಲ್ಲಿ ಕಚೇರಿ ಇರಬೇಕೆಂದು ನಿಷ್ಕರ್ಷೆ ಮಾಡಿ ಸ್ಥಾಪಿಸಿದರು ಆದಾಗ್ಯೂ ಕಳ್ಳಕಾಕರ ಭಯ ಇಲ್ಲ ತಪ್ಪಿಲ್ಲ ತಿರುಗಣೆ ಮಡುವು ಎಂಬುದು ಕಳ್ಳರ ತೌರೂರಾಗಿದೆ ಇಂಥಾ ಮುಖ್ಯವಾದ ಸ್ಥಳದಿಂದ ಕಛೇರಿಯನ್ನು ತೆಗೆಯುತ್ತಾರೆಂದು ಯಾವ ಬಲದಿಂದ ಪತ್ರಬಂದಿರಬಹುದು? ಆಯನೂರಿಗೆ ಆಚೆ ತಾಲ್ಲೂಕು ಸರಹದ್ದು 3 ಮೈಲಿಮಾತ್ರ ಇದೆ ಇಲ್ಲಿ ತಾಲ್ಲೂಕು ಕಛೇರಿಯನ್ನು ಇಡುವದಕ್ಕಿಂತಲೂ ಸಬ್ ತಾಲ್ಲೂಕನ್ನು ತೆಗೆಯುವದೇ ಉತ್ತಮ ಹಾರನಹಳ್ಳಿಯು ಒಂದು ಮೂಲೆಯಾಗಿ ಸರ್ಕಾರದವರ ನೋಟೀಸಿಗೆ ಬರುವ ಸ್ಥಿತಿಯಲ್ಲಿಯೇ ಇಲ್ಲ ಈ ಕುಂಸಿಯು ಹಾರನಹಳ್ಳಿಗಿಂತ ಯಾವ ಭಾಗದಲ್ಲಿಯೂ ಹಿಂದಾಗಿಲ್ಲ ಮನೆಸಂಖ್ಯೆ, ಪ್ರಜಾಸಂಖ್ಯೆ ವಿಷಯದಲ್ಲಿ ಎರಡೂ ಸಮವಾಗಿದೆ ಹವಾ ವಿಷಯದಲ್ಲಿ ಪ್ರತಿ ವರ್ಷವೂ ಪ್ಲೇಗ್ ಹಾರನಹಳ್ಳಿಯಲ್ಲಿ ಇದ್ದೇ ಇರುತ್ತದೆ ಕುಂಸಿಯಲ್ಲಿ ಇರುವುದಿಲ್ಲ ಜಲ ವಸತಿಯ ಭಾಗದಲ್ಲಿ ಬೇಸಿಗೆ ಬಂದಕೂಡಲೆ ಈ ಹಾರನಹಳ್ಳಿಯಲ್ಲಿ ಜನಗಳ ಅಂದರೆ ಮುಖ್ಯವಾಗಿ ಹೆಂಗಸರ ಕಣ್ಣಿನಲ್ಲಿ ನೀರು ತಪ್ಪಿದ್ದೇ ಇಲ್ಲ ಮೈದಾನವೆಂದರೆ ಹಾರನಹಳ್ಳಿಯಂತೆ ಅನಾನುಧೇಯವುಳ್ಳ ಮೈದಾನ ಪ್ರದೇಶಗಳು ಈ ತಾಲ್ಲೂಕಿನಲ್ಲಿ ಎಷ್ಟೋ ಇವೆ ಇದನ್ನೆಲ್ಲಾ ತಿಳಿಯದೆ ಬರೆದಿರುವುದು ಆಶ್ಚರ್ಯ ಇದು ಚರ್ಚಾಸ್ಪದವಾದ ವಿಷಯವಲ್ಲವೆಂದು ಎಲ್ಲಾ ಮೆಂಬರುಗಳಿಗೂ ತಿಳಿದೇ ಇದೆ, ಸರ್ಕಾರದವರು ಇದಕ್ಕೆ ಗಮನಕೊಡಲಾರರೆಂದು ನಂಬಿರುವ

ಕುಂಸಿ ಸಹಜವಕ್ತ

ತಾಲ್ಲೋಕು ವರ್ತಮಾನಗಳು

ಹುಣಸೂರು.—ಮಳೆ ಕಳೆದವಾರ 3 4 ಸಾರಿ ಚೆನ್ನಾಗಿ ವರ್ಷಿಸಿತು ಜನ ಜಾನುವಾರುಗಳಿಗೆ ಎಷ್ಟೋ ಅನುಕೂಲವಾಯಿತು ಕರೀ ಮುದ್ದನ ಹಳ್ಳಿ ಕೊಲೆ ಮೊಕದ್ದಮೆಯು ರುಜುವಾತಾಗದೆ ವಜಾ ಆಯಿತೆಂದು ವರ್ತಮಾನ.—ಕಟ್ಟೇ ಮಳಲ್ವಾಡಿ ಜವಳೀ ಕಳುವಿನಲ್ಲಿ ಸಿಕ್ಕಿದ ಆಸಾಮಿಗೆ ವಿಚಾರಣೆಯಿಂದ 3 ತಿಂಗಳು ಸಜಾ ತೀರ್ಪಾಯಿತು ನಮ್ಮ ಅಮಲ್ದಾರ್ರಿಗೆ ಸರ್ಕಾರದವರು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ವಹಿಸಿದ್ದಕ್ಕಾಗಿ ಪ್ರಜೆಗಳು ಸಂತೋಷಿಸುತ್ತಾ ಮೊದಲಿದ್ದ ಸಬ್ ರೆಜಿಸ್ಟ್ರಾರ್ ಮ॥ ಲಕ್ಷ್ಮೀಕಾಂತಯ್ಯಂಗಾರ್ರು ಹುಣಸೂರಿಂದ ದೊಡ್ಡ ಬಳ್ಳಾಪುರಕ್ಕೆ ವರ್ಗವಟ್ಟು ಹೋಗುವುದಕ್ಕೆ ಮುಂದೆ ಸರ್ಕಾರಿ ಮತ್ತು ಖಾಸಗಿ ದೊಡ್ಡಮನುಷ್ಯರೂ ವರ್ತಕರೂ ಮರ್ಯಾದೆಮಾಡಿ ಔತನಗಳನ್ನು ನಡಿಸಿದರು ಅವರಿಗೆ ಬದಲಾಗಿ ಬಂದಿರುವ ಮ॥ ಬಿ ಟಿ ರಾಮಸ್ವಾಮಯ್ಯಂಗಾರು ಪ್ರತ್ಯುಪಕಾರಿಗಳೂ ಪ್ರಜಾನುರಾಗಿಗಳೂ ಆಗುವರೆಂದು ನಿರೀಕ್ಷಿಸಲ್ಪಟ್ಟಿದೆ ಹೊಸ ಶಿರಸ್ತೇದಾರರು ಮೈಸೂರಿಂದ ಬಂದಿರುತ್ತಾರೆ

ಚಿತ್ರದುರ್ಗ.—ಈ ವಾರ 1 2 ಹದ ಮಳೆಬಿದ್ದು ಸ್ವಲ್ಪ ಅನುಕೂಲವಾಗಿದೆ ಇನ್ನೂ ಟೌನಿನಲ್ಲಿ ಪಿಡುಗಿನ ಅಶಾಂತ್ರತಪ್ಪಲಿಲ್ಲ ಜನಸಾಧಾರಣ ಏರುತ್ತಲೇ ಬಂದುಕೊಂಡು ತಿನ್ನತಕ್ಕವರಿಗೆ ತುಂಬಾ ಕಷ್ಟವಾಗಿದೆ 1 2 ಮನೆಯಲ್ಲಿ ಇಲಿಗಳು ಬಿದ್ದು ಬೇರೆವಾಸಮಾಡುತ್ತಿದ್ದಾರೆ ಸರ್ಕಾರದವರು ಗೂಟ, ಗಳ, ಬೊಂಬು ಮುಂತಾದ್ದನ್ನು ಕಳೆದ ಪ್ಲೇಗಿನ ಕಾಲದಲ್ಲಿ ಸಹಾಯಮಾಡಿದಂತೆ ಈಗಲೇ ಮುಂಜಾಗ್ರತೆಯಿಂದ ಒದಗಿಸಿ ಪ್ರಜೆಗಳನ್ನು ಕಾಪಾಡಲು ಸ್ಥಳಾಧಿಕಾರಿಗಳು ಗಮನಕೊಡಬೇಕಾಗಿ ಪ್ರಜೆಗಳು ಹಾರೈಸುತ್ತಿದಾರೆ.—ಇಲ್ಲಿನ ಹೈಸ್ಕೂಲಿಗೆ ವರ್ಗವಟ್ಟು ನಾಲ್ಕು ತಿಂಗಳಿಂದ ರಜದಮೇಲಿದ್ದ ಹೆಡ್‌ಮಾಸ್ಟರ್ ಮ॥ ನಾರಣಯ್ಯಂಗಾರ್ರು ತಾ 25 ಕ್ಕೆ ಬಂದು ಛಾರ್ಜುವಹಿಸಿಕೊಂಡರು ಈವರೆಗೂ ಸ್ಕೂಲ್ ಛಾರ್ಜಿನಲ್ಲಿದ್ದ ಮ॥ ಲಕ್ಷ್ಮೀಪತಯ್ಯನವರು ಸ್ಕೂಲನ್ನು ಅಭಿವೃದ್ಧಿಪಡಿಸಿದ್ದಲ್ಲದೆ ಸ್ಟೂಡೆಂಟ್ಸ್ ಹೋಮನ್ನು ತುಂಬಾ ಕ್ರಮಪಡಿಸಿದರು ಇವೆಂದೂ ಮುಂದೆ ಇನ್ನೂ ಅಭಿವೃದ್ಧಿಗೆ ಬರಬಹುದೆಂತ ಜನಗಳು ನಿರೀಕ್ಷಿಸುತ್ತಾರೆ ಗುಂಟನೂರು ವರ್ತಕರೊಬ್ಬರು ಜನಗಳ ಉಪಯೋಗಾರ್ಥವಾಗಿ ಒಂದು ಮೋಟರನ್ನು ಚಿತ್ರದುರ್ಗದಿಂದ ಹೊಳಲ್ಕೆರೆಗೆ ಓಡ್ಯಾಡಿಸಲು ತಂದಿರುತ್ತಾರೆ

ಚಿಕ್ಕನಾಯಕನ ಹಳ್ಳಿ.—ಕಳೆದ ವಾರ ಒಳ್ಳೆ ಮಳೆಯಾದ್ದರಿಂದ ಪ್ರಜೆಗಳಿಗೂ ಪೈರುಗಳಿಗೂ ಅನುಕೂಲವಾಯಿತು ಅಮಲ್ದಾರ್ ಮ॥ ಗೋಪಾಲಯ್ಯಂಗಾರ್ರು ಬಂದಲಾಗಾಯ್ತು ಟೌನ್ ಮಾರ್ಕೆಟು ಬಹಳ ಮಟ್ಟಿಗೆ ಚೆನ್ನಾಗಿದೆ ಆದರೆ ಕೆರೆ ಅಂಗಳದಲ್ಲಿ ಬೇಸಿಗೆಮಾಡತಕ್ಕವರನ್ನು ಕೇಳುವುದೇ ಇಲ್ಲ ಇಲ್ಲಿನ ಕೋಆಪರೇಟಿವ್ ಸೊಸೈಟಿಯ ಜನರಲ್ ಮೀಟಿಂಗಿನಲ್ಲಿ ಸೊಸೈಟಿಯನ್ನು ಇಂಡಸ್ಟ್ರಿಯಲ್ ಸ್ಕೂಲಿನಿಂದ ಮ॥ ವೆಂಕಟಶೆಟ್ಟರ ಅಂಗಡಿಗೆ ವರ್ಗಾಯಿಸಿ, ಕಳಸೈಯ್ಯಶೆಟ್ಟರನ್ನು ಪಾಯಿಂಟು ಸೆಕ್ರೆಟರಿಯಾಗಿ ಮಾಡಿದಾರೆ ಈಗ ಅನೇಕ ಜನಗಳು ಲೇವಾದೇವಿ ನಡಿಸಲು ಅನನುಕೂಲವಾಗಿರುತ್ತೆ ಅಲ್ಲದೆ ಈಗ ಆಡಿಟರುಗಳು ಲೆಕ್ಕಗಳನ್ನು ಪ್ರತಿ ತಿಂಗಳೂ ತನಿಖೆಮಾಡಿ ಪ್ರಕಟಿಸದ ಮೆಂಬರುಗಳಿಗೆ ಸೊಸೈಟಿ ಆಡಳಿತ ಗೊತ್ತಾಗಲು ಅವಕಾಶವಾಗುತ್ತೆ.—ಈ ಊರಿನಲ್ಲಿ ಜೂಜಾಡುವದು ಪ್ರಬಲವಾಗಿದೆ ಕಳೆದ ವಾರ ಮ॥ ಹನುಮಂತೇಗೌಡರು ಪೋಲಿಸ್ ಇನ್ಸ್‌ಪೆಕ್ಟರ ಸಹಾಯದಿಂದ ಜೂಜಾಡುತ್ತಿದ್ದವರನ್ನು ಕಂಡುಹಿಡಿದು ಕೇಸುಮಾಡಿರುತ್ತಾರೆಂದು ಕೇಳುತ್ತೇನೆ ಇದರ ಫಲಿತಾಂಶ ಮುಂದೆ ನೋಡಬೇಕು.—ಇಲ್ಲಿನ ಥಿಯೋಸಾಫಿಕಲ್ ಸೊಸೈಟಿಯು ದಿನ ದಿನೇ ಅಭಿವೃದ್ಧಿಹೊಂದುತ್ತಿವೆ ಪೋಸ್ಟಾಫೀಸಿನ ನಡವಳಿಕೆಗಳು ಸುತರಾಂ ಚೆನ್ನಾಗಿಲ್ಲ ಸರಿಪಡಿಸಿಕೊಂಡಾರೆಂದು ನಂಬಿರುತ್ತೇನೆ

ಮಂಡ್ಯ.—ಕಳೆದ ಎರಡು ವಾರಗಳಿಂದಲೂ ಒಳ್ಳೇ ಮಳೆಗಳಾಗಿ ಕೆರೆ ಕಟ್ಟೆಗಳೆಲ್ಲಾ ತುಂಬಿ ರೈತರ ಕೆಲಸಗಳಿಗೆ ತುಂಬಾ ಅನುಕೂಲವಾಯ್ತು ಧಾರಣೆಗಳು ಮಾತ್ರ ಕ್ಷಾಮಕಾಲದಂತೆ ಇದ್ದು ಬಡಬಗ್ಗರ ಜೀವನ ಕಷ್ಟವಾಗಿದೆ ಅದರಲ್ಲೂ ಸೀರು ಬಟ್ಟೆಗಳು ಕಮ್ಮಿಯಾಗಿ ನಾನಾತರದ ರೋಗಗಳು ನಡೆಯುತ್ತವರಿಂದ ಮೇಲ್ಪಟ್ಟ ಆಫೀಸರು ಇಲ್ಲದೆ ಅನೇಕರಿಗೆ ಕಷ್ಟನಷ್ಟಗಳುಂಟಾಗಿವೆ ಕಳೆದ ತಿಂಗಳಿನ ಪ್ರಾರಂಭದಲ್ಲಿ ವ್ಯಥೆಯನ್ನು ಸಹಿಸಲಾರದ ಒಬ್ಬ ರೋಗಿಯು ಭಾವಿಯಲ್ಲಿ ಬಿದ್ದಿರುವಲ್ಲಿ ರಾತ್ರಿ ಬೀಟ್ ತಿರುಗುತ್ತಾ ಇದ್ದ ಹವಲ್ದಾರ್ ಬೋಕನಾಥಂ ಎಂಬಾತನು ತನ್ನ ಇಬ್ಬರು ಕಾನ್‌ಸ್ಟೇಬಲ್ ರೊಂದಿಗೆ ಹೋಗಿ ತಕ್ಷಣವೇ ಆತನನ್ನು ಎತ್ತಿ ಬದುಕಿಸಿದನು 12 ನೇ ಶುಕ್ರವಾರ ರಾತ್ರಿ ವಿಪರೀತಮಳೆಸುರಿಯುತ್ತಿರುವಲ್ಲಿ ಕಳ್ಳರು ಒಂದು ಅಂಗಡಿಗೆ ನುಗ್ಗಿ ಕೆಲವು ನಗನಾಣ್ಯಗಳನ್ನು ದೋಚಿಕೊಂಡು ಹೋದರು ಸಬ್ ಡಿವಿಜನ್ ಸಾಹೇಬರು ಟ್ರೈನಿಂಗ್ ಅಸಿಸ್ಟೆಂಟರೂ ಇನ್ಸ್‌ಪೆಕ್ಷನ್‌ಗಾಗಿ ಬಂದಿದ್ದರು ತಾ 25, 26, 27, ರಲ್ಲಿ ಡೆಪ್ಯುಟಿ ಇನ್ಸ್‌ಪೆಕ್ಟರು ಬಂದು ಸ್ಕೂಲುಗಳನ್ನು ನೋಡಿದರು ಮ್ಯುನಿಸಿಪಾಲಿಟಿ ಚೆನ್ನಾಗಿದೆ ಆದರೆ ಹೊಲಗೇರಿಯ ಸ್ಥಿತಿಗತಿಯನ್ನು ವಿಚಾರಿಸುವವರಿಲ್ಲ ಅಲ್ಲಿ ರಸ್ತೆಗಳೆಲ್ಲಾ ಗತ್ತಿಹೋಗಿವೆ ಕೋಟೆದಪ್ಪನ ಮನೆಯ ಮುಂಭಾಗದಲ್ಲಿ 2 3 ವರ್ಷಗಳ ಹಿಂದೆ ತೆಗಿಸಿದ ಬಾವಿ ಸಂಪೂರ್ಣವಾಗಿ ಕುಸಿದುಹೋಗಿ ಒಂದು ವರ್ಷದ ಮೇಲಾಗಿದ್ದರೂ ಅದನ್ನು ಈವರೆಗೆ ಸರಿಪಡಿಸಿಲ್ಲ ನಮ್ಮ ಅಮಲ್ದಾರ್ರವರು ಇದನ್ನೆಲ್ಲಾ ಸರಿಪಡಿಸಿ ಪ್ರಜೆಗಳ ಕ್ಷೇಮವನ್ನು ಕಾಪಾಡುತ್ತಾರೆಂದು ನಿರೀಕ್ಷಿಸಲಾಗಿದೆ

ಬಾಗೇಪಲ್ಲಿ ತಾ॥ ಪಾತಪಾಳ್ಯ.—ಇಲ್ಲಿ ಒಂದುವಾರದಿಂದ ಮಳೆ ಆಗುತ್ತಿದೆ ನಮ್ಮ ಮೂರು ಕೆರೆಗಳಿಗೆ ಸ್ವಲ್ಪ ನೀರು ಬಂತು.—ನಮ್ಮ ಗ್ರಾಮಕ್ಕೆ ಕೆಲವು ವಾರಗಳಿಂದೆ ಸಬ್ ಡಿವಿಜನ್ ಸಾಹೇಬರು ಮ॥ ಎಂ ಜಿ ಕೃಷ್ಣಸ್ವಾಮಿರಾಯರವರೂ ದಯಮಾಡಿದ್ದರು ಅವರು ಎಲ್ಲರನ್ನೂ ಪ್ರೀತಿಯಿಂದ ಮಾತನಾಡಿಸಿದ್ದಲ್ಲದೆ ಇದ್ದ ಎರಡು ದಿನಗಳೂ ಪೋಲೀಸ್ ಸ್ಟೇಷನ್, ಎ ವಿ ಸ್ಕೂಲ್ ಮತ್ತು ಕೆಲವು ಗ್ರಾಮಗಳನ್ನು ಪರಾಂಬರಿಸಿದರು ಸ್ಕೂಲ್ ವಿಷಯವಾಗಿ ಕೆಲವು ಮಾತು ನಡೆದನಂತರ ಅವರು ಗ್ರಾಮಸ್ಥರು 100 ರೂಪಾಯಿ ಕೊಟ್ಟರೆ 1,200 ರೂಪಾಯಿಗೆ ಒಂದು ಕಟ್ಟಡವನ್ನು ಇಲಾಖೆಯಿಂದ ಈ ವರ್ಷವೇ ಕಟ್ಟಿಸುವ ಹಾಗೂ ಇಂಗ್ಲಿಷ್ ಸಹಾ ಇಡುವಹಾಗೂ ಮಾಡುತ್ತೇವೆಂದು ಹೇಳಿದ್ದರಿಂದ ಗ್ರಾಮಸ್ಥರೆಲ್ಲಾ ಮೇಲ್ಕಂಡ ಮೊಬಲಗನ್ನು ತಾ 27 ರಲ್ಲಿ ಬಾಗೇಪಲ್ಲಿ ಖಜಾನೆಗೆ ಪಾವತಿಮಾಡಿದರು.—ನಮ್ಮ ಗ್ರಾಮಕ್ಕೆ ವಾರಕ್ಕೆ ಎರಡುಸಲ ಬಾಗೇಪಲ್ಲಿಯಿಂದ ಟಪ್ಪಾಲ್ ಬರುತ್ತದೆ ಇದಕ್ಕಾಗಿ ಪೋಸ್ಟ್ ಡಿಪಾರ್ಟ್‌ಮೆಂಟಿನವರು ದಿನವಹಿ ಅಥವಾ ದಿನಬಿಟ್ಟುದಿನ ಟಪಾಲ್ ಬರುವಹಾಗೆ ಮಾಡಿದರೆ ನಾವು 6 ತಿಂಗಳು ರನ್ನರಿಗೆ ಸಂಬಳ ಕೊಡುತ್ತೇವೆಂದೂ, ಲಾಭ ಇದ್ದರೆ ಖಾಯಂ ಇಡಬಹುದೆಂದು 4-5 ವರುಷಗಳಿಂದ ಜನರು ಚರ್ಚೆ ಮಾಡುತ್ತಿದ್ದರು 26 ನೇ ತಾ ಬಂದ ಜವಾಬಿನ ಪ್ರಕಾರ ಗ್ರಾಮಸ್ಥರು 27 ನೇ ತಾ 36 ರೂಪಾಯಿ 6 ಆರುತಿಂಗಳಿಗೆ ಖಜಾನೆಯಲ್ಲಿ ಪಾವತಿಮಾಡಿದರು. ಈಗ ಪೋಸ್ಟಾಫೀಸು ಕೆಲಸ ನೋಡುವವರು ಸ್ಕೂಲು, ಸ್ಟಾಂಪು ಬಿಕರಿ, ಪ್ರೈವೇಟ್ ಟೀಚಿಂಗ್ ಕೆಲಸವನ್ನು ನಡಿಸುವದು ಅಸಾಧ್ಯವಾಗಿದ್ದರೂ ಎಲ್ಲವನ್ನೂ ಕ್ರಮವಾಗಿ ನಡಿಸುವದು ತುಂಬಾ ಕಷ್ಟವೆಂದು ತೋರುತ್ತಿದೆ ಈ ಆಫೀಸಿಗೆ ಒಬ್ಬ ಪೋಸ್ಟು ಪಿವನ್ ಪ್ರತ್ಯೇಕವಾಗಿ ಇಡದಿದ್ದರೆ ಪೋಸ್ಟ್‌ಮಾಸ್ಟರು ಕಾಗದಗಳನ್ನು ಪಾವತಿಮಾಡಲು ಅಸಾಧ್ಯ

ಅತ್ಯುತ್ತಮವಾದ ನೀಲಿ ಕಪ್ಪು ಶಾಯಿಪುಡಿ.

ಒಂದು ಶಾಯಿಪುಡಿಯ ಪೊಟ್ಟಣದಲ್ಲಿ ಒಂದು ಮಸೀಕುಡಿಕೆ ಶಾಯಿಯಾಗುವುದು ತರಿಸಿ ಮಾರುವವರಿಗೆ ಒಳ್ಳೇ ಲಾಭವುಂಟು! ಬೆಲೆ ಬಲು ಸುಲಭ, 100 ಪೊಟ್ಟಣಗಳಿಗೆ 6 ಆಣೆ 200 ಪೊಟ್ಟಣಕ್ಕೆ 11 ಆಣೆ 500 ಕ್ಕೆ 1 9 0 1,000 ಕ್ಕೆ ರೂ 2-8 0 ಪ್ಯಾಕಿಂಗ್ ಪೋಸ್ಟೇಜು ಬೇರೆ [204 1]

ವಿಳಾಸ.—ವಿಕಟಪ್ರತಾಪ ಆಫೀಸ್, ಕುಪ್ಪಂ ಪೋಸ್ಟು.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

104 26

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯುಕೀಲು, ಅರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಚಳಿ ಜ್ವರಗಳು, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮು, ಕುತ್ತಿಗೆ ಕತ್ತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು.—(1) ಎಸ್ ಪೀಟರ್ಸ್, 8 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಜೆ ಎಸ್ ಕೃಷ್ಣಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

ಗೃಹಕೃತ್ಯದ ನೋಟೀಸ್

ಹಾಸನ ಡಿಸ್ಟ್ರಿಕ್ಟು ಚನ್ನರಾಯಪಟ್ನ ತಾ॥ ಹಿರೀಸಾವೆ ಹೋಬಳಿ ಬೊಕ್ಕದ ಗ್ರಾಮದಲ್ಲಿರುವ ಸಂಭು ಜೋರೆಗೌಡನ ಕೆಂಪೆಗೌಡನ ದತ್ತುಮಗ ಕಾಳಯ್ಯನು ತಿಳಿಯಪಡಿಸುವದೇನೆಂದರೆ—ಚನ್ನರಾಯಪಟ್ನ ತಾ॥ ಹಿರೀಸಾವೆ ಹೋಬಳಿ ಬೊಕ್ಕ ಮತ್ತು ಅರಕೆರೆ ಗ್ರಾಮಗಳಲ್ಲಿ ನನ್ನ ದತ್ತು ತಂದೆ ಸಂಭು ಜೋರೆಗೌಡನ ಕೆಂಪಗೌಡಗೆ ಖುಷ್ಕಿ ಮತ್ತು ಬಾಗಾಯ್ತು ಜಮೀನುಗಳು ಸುಮಾರು 13 ಖಾತೆ ಜಮೀನುಗಳು, ಹಂಚಿನಮನೆಗಳು, ಸೊಪ್ಪಿನಮಡಿ, ತಿಪ್ಪೆಹಳ್ಳಗಳು, ಅಲ್ಲದೆ ಭಾರಿ ಬೆಲೆ ಬಾಳುವ ಜಾನುವಾರುಗಳು, ಕುರಿಗಳು, ನಗದು ದ್ರವ್ಯ, ಚಿನ್ನ ಬೆಳ್ಳಿ ಮೊದಲಾದ್ದೆಲ್ಲಾ ಇರುತ್ತೆ ದತ್ತು ತಂದೆಯು ಈವರೆವಿಗೂ ಯಾರಿಂದಲೂ ಸಾಲಗೀಲನೂ ಮಾಡಿರುವದಿಲ್ಲ ಸ್ವಂತ ಲೇವಾದೇವಿಯು ತಕ್ಕಮಟ್ಟಿಗೆ ನಡಿಸುತ್ತಾ ಇದಾರೆ ಇವರಿಗೆ ಸುಮಾರು 70 ವರುಷ ವಯಸ್ಸಾಗಿ ಬುದ್ಧಿ ವಿಕಲ್ಪದಿಂದಲೂ ಜನರ ದುರ್ಬೋಧನೆಯಿಂದಲೂ ಇರತಕ್ಕ ಚರಸ್ಥಿರ ಆಸ್ತಿಗಳನ್ನೆಲ್ಲಾ ಪರಾಧೀನಪಡಿಸಿ ಮುಂದೆ ದತ್ತುಮಗನಾದ ನನ್ನ ಕುಟುಂಬ ಜೀವನಕ್ಕೆ ಅವಕಾಶವಿಲ್ಲದಂತೆ ಮಾಡಬೇಕೆಂಬ ದುರಾಲೋಚನೆಯಿಂದ ನನಗೆ ಅತ್ಯಂತ ತೊಂದರೆ ಪಡಿಸುತ್ತಾ ಇದಾರೆ ಸದರಿ ದತ್ತು ತಂದೆಯ ಸ್ವಾಧೀನದಲ್ಲಿರುವ ಜಮೀನುಗಳು, ಮನೆಗಳು, ಕುರಿ ದನ ವಗೈರೆ ಮೊದಲಾದ ಯಾವ ಚರಸ್ಥಿರ ಆಸ್ತಿಗಳನ್ನೂ ಯಾವ ವಿಧದಿಂದಲೂ ಯಾರೂ ಹೊಂದವಾರದು ಹಾಗೆ ನನ್ನ ರುಜುವಿಲ್ಲದೆ ಯಾವ ಸ್ವತ್ತನ್ನೇ ಆಗಲಿ ಯಾರು ಹೊಂದಿದಾಗ್ಯೂ ಅದು ಸಿದ್ಧವಾಗದೆ ನನ್ನ ನಷ್ಟಕ್ಕೆ ಸಹಾ ಗುರಿಯಾಗಬೇಕು ಚರ ಆಸ್ತಿಗಳನ್ನು ಹೊಂದಿದವರು ಕಳವು ಛಾರ್ಜಿಗೆ ಗುರಿಯಾಗುವರು ಯಾರಾದರೂ ಅವರಿಗೆ ಸಾಲ ಕೊಟ್ಟಿರುತ್ತೇವೆಂದು ಪತ್ರ ಮೊದಲಾದವುಗಳನ್ನು ಮಾಡಿಕೊಂಡದ್ದಾಗಿ ತೋರಿಸಿದ್ದರೆ ಅವು ಫೋರ್ಜರಿ ಆಗುವದು ಅವರಿಂದ ಸಾಲ ಪಡೆದಿರುವವರು ನನಗೆ ಪಾವತಿಮಾಡಬೇಕೇ ಹೊರ್ತು ದತ್ತು ತಂದೆಯವರಿಗೆ ಕೊಡಕೂಡದು ಇದಕ್ಕೆ ವಿರೋಧವಾಗಿ ನಡೆದವರು ನಷ್ಟ ನಷ್ಟಕ್ಕೆ ಒಳಗಾಗುವರಾಗಿ ಇದರಿಂದ ತಿಳಿಸಿ ಎಚ್ಚರಿಸಿದೇನೆ

[196 1] ಕಾಳೈನ ಬದಲಕ್ಕೆ ಹೆಬ್ಬೆಟ್ಟಿನ ಗುರುತು

15 ಬಹುಮಾನದೊಡಗೂಡಿದ ಗಡಿಯಾರವು.

ಕೆಳಗೆ ಕಾಣಿಸುವ ಗಡಿಯಾರದ ಬೆಲೆ 7 ರೂಪಾಯಿಗಳು ಇದು ಬರುವ ಡಿಸೆಂಬರ್ ಆಖೈರುವರೆಗೆ 3 15 0 ಗೆ 15 ಬಹುಮಾನಗಳೊಡನೆ ಬಿಕರಿ ಮಾಡಲ್ಪಡುತ್ತೆ ಇದು ಒಳ್ಳೆಯ ಸಾಮಾನುಗಳಿಂದ ತಯಾರಿಸಲ್ಪಟ್ಟಿರುವುದರಿಂದ 30 ವರುಷಗಳ ವರೆಗೆ ಕೆಡದೆ ನಡೆಯುತ್ತೆ ಇದೊಂದು ಹೊಸ ಮಾದರಿಯಾಗಿರುತ್ತೆ ಇದು ಒಳ್ಳೇ ಚೆನ್ನಾಗಿ ಹದ ಕೊಟ್ಟ ಉಕ್ಕಿನ ಮುಚ್ಚಳವನ್ನು ಹೊಂದಿರುವುದರಿಂದ ಧೂಳು ಸೇರಲು ಅವಕಾಶವಿಲ್ಲ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಸುಲಭವಾಗಿ ಸರಿಮಾಡಲು ಅನುಕೂಲವಾಗಿರುತ್ತೆ ಇದಕ್ಕೆ ಬಹಳವಾಗಿ ಆರ್ಡರುಗಳು ಬರುತ್ತಿರುವುದರಿಂದ ಜಾಗ್ರತೆ ಮಾಡಿರಿ ವಿಳಂಬಮಾಡಿದರೆ ದೊರಕಲಾರದು ಇದನ್ನು ತರಿಸಿಕೊಳ್ಳತಕ್ಕವರಿಗೆ ಈ ಕೆಳಗೆ ಕಾಣಿಸಿರುವ 15 ಸಾಮಾನುಗಳು ಉಚಿತವಾಗಿ ಕೊಡಲ್ಪಡುವುವು ಇವು ಹೆಚ್ಚಾದ ಬೆಲೆಯುಳ್ಳವು—

1 ಈ ಮೈಸೂರು ದೇಶದವರು ಉಪಯೋಗಿಸುವ ಮಾದರಿಯಾಗಿರುವ ಕೈಕಪ್ಪ, ಇದಕ್ಕೆ ಭಂಗಾರದ ಗಿಲ್ಟು ಕೊಡಲ್ಪಟ್ಟಿರುತ್ತೆ ಬೆಲೆ 1 ರೂ 2 ಎಲೆಕ್ಟ್ರಿಕ್ ಭಂಗಾರದ ರೇಖಿನ ಶ್ಯಾಮಂತಿಗೆ ಹುವ್ವು ಬೆಲೆ 12 ಆಣೆ 3 ಭಂಗಾರದ ಗಿಲ್ಟಿನ ಗಡಿಯಾರದ ಸರಪಣಿಗೆ ಕ್ರಯ 1 ರೂ 4 ಇಮಿಟೇಷನ್ ವಜ್ರದ ಶರಟು ಗುಂಡಿ ಬೆಲೆ 8 ಆಣೆ 5 ಒಂದು ಹಸನಾದ ಕತ್ತರಿ ಬೆಲೆ 4 ಆಣೆ 6 ಜರ್ಮನ್ ಬೆಳ್ಳಿಯ ಕುಂಕುಮಭರಣಿ ಬೆಲೆ 8 ಆಣೆ 7 ಭಂಗಾರದ ಗಿಲ್ಟಿನ ತಿರುಪಿನ ಜಡೆ ಹುವ್ವು ಬೆಲೆ 6 ಆಣೆ 8 ಜರ್ಮನ್ ಬೆಳ್ಳಿಯ ಸಾದಿನ ಬಿಲ್ಲೆ ಬೆಲೆ 4 ಆಣೆ 9 ಅಂದವಾದ ಹಣದ ಚೀಲ ಬೆಲೆ 4 ಆಣೆ 10 ಜರ್ಮನ್ ಬೆಳ್ಳಿಯ ಕಡ್ಡಿಪ್ಪಿನ ಭರಣಿ ಬೆಲೆ 2 ಆಣೆ 11 ಒಂದು ಸೀಲ್ ಉಂಗುರ ಬೆಲೆ 8 ಆಣೆ 12 ಜರ್ಮನ್ ಬೆಳ್ಳಿಯ ಪುಡಿ ಡಬ್ಬಿ ಬೆಲೆ 8 ಆಣೆ 13 ಹೆಂಗಸರ ನಗಗಳನ್ನಿಡಲು ಅನುಕೂಲವಾಗಿರುವ ಕೈ ಪೆಟ್ಟಿಗೆ ಬೆಲೆ 10 ಆಣೆ 14 ಜರ್ಮನ್ ಬೆಳ್ಳಿಯ ಹಾಲಿನ ಒಳಲೆ ಬೆಲೆ 6 ಆಣೆ 15 ಒಳ್ಳೇ ಬೆಳ್ಳಿಯಿಂದ ತಯಾರಿಸಿ ಬಲವಾದ ಚಿನ್ನದ ಗಿಲ್ಟಿನ ಮೂಗು ಬೊಟ್ಟು ಬೆಲೆ 8 ಆಣೆ ವಿಳಾಸ— [206-1]

ಜೆ ಎ ಪಾಲ್ ಅಂಡ್ ಕೋ, ಸುಂಗಂಬಾಕಂ, ಮದ್ರಾಸ್

Printed and Published by the Rev H Gulliford, Proprietor and Manager, Wesleyan Mission Press, Mysore 9/10/1913

REGISTERED
M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೧೩ ನೇ ಇಸವಿ ಅಕ್ಟೋಬರ್ ತಾರೀಖು ೧೬ ನೇ ಗುರುವಾರ. ಸಂಚಿಕೆ ೨೦

ಸಚಿತ್ರ ಶುಕಸಪ್ತತಿ ಕಥೆ 1 8 0, ಟಪಾಲು ಹಾಸಲು 4 ಆಣೆ ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ 1-8-0

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕಮಹಾಶಯರುಗಳೇ —ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ವಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹ ಶಕ್ತಿಯಲ್ಲಾಶೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿ ಕಥೆಗಳನ್ನು ಓದಿ. ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ ಬೆಲೆ ರೂ ೧ ೪-೦ ಟಪಾಲು ಹಾಸಲು 4 ಆಣೆ ಈಗಲೇ ಬರೆಯಿರಿ [167-10]

ವಿಳಾಸ:—ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ಕು ಡಿಪೋ, ಚಿಕ್ಕ ಪೇಟೆ, ಬೆಂಗಳೂರು ಸಿಟಿ.

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರತ್ವಗಳನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರಭರಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1 8-0, ಟಪ್ಪಾಲು ಹಾಸಲು 4 ಆಣೆ

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಸರಳವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸವಿಸ್ತಾರವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ 1, ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127 17]

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ

THE MYSORE GOVERNMENT SECURITY

LIFE AND MARRIAGE ASSURANCE COMPANY, LIMITED.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No. III OF 1895)

CAUTION —Before you go in for a Provident Life or Marriage Policy, please ask for a copy of our Company's prospectus which will explain to you the mode of working of the present day provident companies working in India and enables you to select a good institution where your hard earned money will be safe

SPECIAL AND ATTRACTIVE FEATURES OF THE COMPANY

1. ABSOLUTE SECURITY.

The Company has got a capital of **one lakh** and its funds are invested in the **Mysore Government** and other approved securities The policy holder's moneys are **guaranteed**, and the **capital** and **reserve funds** of the Company are liable to the same

2 MARRIAGE SCHEME.

A policy holder can subscribe from Re 1 to Rs 6 every month **Double the premiums paid** to the Company will be paid to the married **on the marriage day** as maximum bonus

3 LIFE SCHEME.

A policy holder can subscribe from As 8 to **Rs** 2 per month Both males and **females**, of ages from 18 to **60** are insured **without medical examination**. The maximum bonus will be paid to **the policy-holders themselves** on surviving **15 years** or to their nominees in case of their earlier death

WANTED.

Energetic and honest **Chief Agents** for every Presidency in India and Taluk Agents in each and every taluk of **the Mysore Province** on commission to represent the Company.

For further particulars and prospectuses, please apply **with one anna stamp** and your previous experience in the line to,—

Mr. M. L. NAGANNAH,
Managing Agent,
MYSORE.

[141-11]

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೇ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿನನುಸಾರವಾಗಿ ಭದ್ರತೆಯ ಠೇವಣಾತಿ ಮೊಬಲಗು ಗಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು.

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[109 20] ಎಸ್ ಕಟ್ಬರ್ಟ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ಶ್ರೀಮದ್ವಾಲ್ಮೀಕಿ ರಾಮಾಯಣ

"ಸುಂದರಕಾಂಡ" ಮಾಸಪತ್ರಿಕೆ

64 ದೊಡ್ಡ ಪುಟಗಳ ಸಂಚಿಕೆ 1 ಕ್ಕೆ ಐದೇ ಆಣೆ ಸುಮಾರು 14 ಸಂಚಿಕೆಗಳಾಗುತ್ತವೆ ಟೀಕು, ತಾತ್ಪರ್ಯ, ಮೂಲ ಇವುಗಳಿಂದೊಡಗೂಡಿ, ಕಾಗದ, ಅಕ್ಷರ, ಅಚ್ಚು, ಸ್ವಾರಸ್ಯಗಳಿಂದ ಬಹು ಸುಂದರ ಪುಸ್ತಕವಾಗುವುದು ಚಂದಾ ಸೇರತಕ್ಕವರು ಮುಂಗಡ ಒಂದು ರೂ ಕೊಡಬೇಕು ಅದರಲ್ಲಿ ಕಡೆಯ ಮೂರು ಸಂಚಿಕೆಗಳಲ್ಲಿ ಉತ್ತಾರಮಾಡಿಕೊಡುವೆವು ಶ್ರೀ "ಶಾರದಾ" ಮಾಸಪತ್ರಿಕಾ ಸಂಪಾದಕರಾದ ವೇ, ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಇದುವರೆಗೆ ಯಾರೂ ಪ್ರಕಾಶಪಡಿಸದ ರಹಸ್ಯಗಳನ್ನೆಲ್ಲ ಸ್ಪಷ್ಟವಾದ ರೀತಿಯಿಂದ ವಿವರಿಸಿ ಬರೆಯುತಲಿದಾರೆ 1 ಆಣೆ ಲೇಬಲ್ ಕಳುಹಿಸಿ ಮಾದರಿ ಸಂಚಿಕೆಯಲ್ಲಿ ನೋಡಬಹುದು

1 1 13 ರಲ್ಲಿ ಆರಂಭವಾಗಿ ಎಂಟು ಸಂಚಿಕೆಗಳು ಸಿದ್ಧವಾಗಿವೆ

ಶ್ರೀ "ಶಾರದಾ" ಮಾಸಪತ್ರಿಕೆ ಇದುವರೆಗೆ 14 ಪುಸ್ತಕಗಳು ಪೂರ್ತಿಯಾಗಿವೆ ವಾರ್ಷಿಕ ಚಂದಾ ರೂ 2 0-0 ರಘುಕುಲಚರಿತೆ ಪ್ರಿಂಟಾಗುತಲಿದೆ 1 ತಿಂಗಳಲ್ಲಿ ಪುಸ್ತಕವು ಪೂರ್ತಿಯಾಗುವುದು ಕ್ರಯ 4 ವಾಲ್ಯೂಂಗೆ ರೂ 2

ವಿಳಾಸ—ಬಿ. ಸೀತಾರಾಮಶಾಸ್ತ್ರಿ (ಅಥವಾ)

ಡಿ ಲಕ್ಷ್ಮೀನರಸಿಂಹಶಾಸ್ತ್ರಿ, ಶ್ರೀ "ಶಾರದಾ" ಆಫೀಸ್,

[1??-3] ಬೆಂಗಳೂರು ಸಿಟಿ.

ಜೀನ್‌ತಾನ್.

ಜೀನತಾನವೆನ್ನುವದು ಜಪಾನ ಮಾತ್ರೆಗಳು ಇದರ ಉಪಯೋಗಗಳು—ಶೀತ, ಕೆಮ್ಮು, ಮಂದ, ತಲೆನೋವು, ಅಜೀರ್ಣ ಭೇದಿಗಳು, ಅರುಚಿ, ಗಂಟಲು ಒಣಗುವುದು, ಶೀತಭೇದಿ, ಮುಂತಾದ್ದಕ್ಕೆ ಒಳ್ಳೇದು ಸಂಗೀತಗಾರರೂ, ಉಪನ್ಯಾಸಕರೂ ಇದನ್ನು ಉಪಯೋಗಿಸಿದರೆ ಗಂಟಲುನಾಳಗಳು ಶುದ್ಧವಾಗುತ್ತವೆ ಮತ್ತು ಬಾಯಿನ ಎಲ್ಲಾ ತರದ ದುರ್ವಾಸನೆ ನಾಶವಾಗುವದು

ಕ್ರಯ—30 ಮಾತ್ರೆ ಉಳ್ಳ ಪೊಟ್ಟಣ 0 1-6, 65 ಮಾತ್ರೆಗೆ 0-3-0, 195 ಮಾತ್ರೆಗಳ ಡಬ್ಬಾ 8 ಆಣೆ, 455 ಮಾತ್ರೆ ಉಳ್ಳ ಸುಂದರವಾದ ಕನ್ನಡಿ ಡಬ್ಬಕ್ಕೆ ರೂ 1 [199-2]

ನಮ್ಮಲ್ಲಿ ತಯಾರಾಗುವ ಹಿತ್ತಾಳೆ ನೀಲದಬತ್ತಿ ಸ್ಟ್ಯಾಂಡುಗಳು ಉತ್ತಮವಾದದ್ದೆಂದು ಎಲ್ಲೆಲ್ಲೂ ಪ್ರಸಿದ್ಧಿ ಹೊಂದಿದೆ ನಾವು ಬೊಂಬಾಯಿ ಬರೋಡ ದೇಶದ ಅಲೆಂಬಿಕ್ ವೈದ್ಯಶಾಲೆಗೂ, ಬೊಂಬಾಯಿ ಐಯೋನಿಕ್ ವೈದ್ಯಶಾಲೆಗೂ, ಬೊಂಬಾಯಿ ಬಾಲಾಮೃತಕ್ಕೂ, ಕಲ್ಕತ್ತಾ ಸಿ ಕೆ ಸೇನ್ ಆಯುರ್ವೇದ ಔಷಧಶಾಲೆಗೂ ಸೋಲ್ ಏಜಂಟರು

ವಿಳಾಸ—ಎಸ್. ವೈದ್ಯ ಮತ್ತು ಕಂಪನಿ,
ಪಾರ್ಕ್ ಟೌನ್, ಮದರಾಸ್.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 1,25,00,000

ಕಂಪನಿಯಿಂದ ಪಾವತಿ ಆಗಿರುವದು ,, 3,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರೆಬಿಲೊ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[194-3] ಬ್ರಾಂಚ್ ಸೆಕ್ರಿಟರಿ, ಮದರಾಸ್.

ಕನ್ನಡ ಲಾ ಪುಸ್ತಕಗಳು

[160 11]

ಗೌರ್ನರ್ ಜನರಲ್‌ರವರ ಹುಕುಂ ಪ್ರಕಾರ ಎಲ್ಲಾ ದೇಶಗಳಲ್ಲಿಯೂ ಜಾರಿಯಲ್ಲಿರುವ ಕನ್ನಡ ಇಂಡಿಯನ್ ಪೆನಲ್‌ಕೋಡು ಕ್ರಯ ರೂ 2-0-0, ವ್ಯವಹಾರನಿರ್ಣಯ ವಿಧಿ ಎಂಬ ಸಿವಲ್ ಪ್ರೊಸಿಜೂರ್ ಯಾನೆ 3 ಭಾಗಗಳುಳ್ಳದ್ದು ರೂ. 3-0-0, ವ್ಯವಹಾರ ಪರಿಹಾರವಿಧಿ ಎಂಬ ಸ್ಪೆಸಿಫಿಕ್ ರಿಲೀಫ್ ಆಕ್ಟು ರೂ. 1-8-0, ಇಂಡಿಯನ್ ಲಾ ಆಫ್ ಕಂಟ್ರಾಕ್ಟ್ ರೂ. 2-0-0, ಪ್ರಶ್ನೋತ್ತರ ಲೇಖ್ಯಬೋಧಿನಿ ಈ ಪುಸ್ತಕದಲ್ಲಿ ಸಿವಲ್ ಕ್ರಿಮಿನಲ್ ರೆವಿನ್ಯೂ ಮುಂತಾದ ವ್ಯವಹಾರ ವಿಧಿಗಳನ್ನು ಬೋಧಿಸುವದು ಕ್ರಯ ರೂ 1-4-0, ತಾನಾಗಿ ಸ್ವತಃ ಇಂಗ್ಲೀಷ್ ಕಲಿಯುವದು ರೂ. 1-8-0 ಇವುಗಳಲ್ಲಿ ಕೆಲವು ಮುದ್ರಣವಾಗುತ್ತಿದೆ ಇನ್ನೂ ಪುಸ್ತಕಗಳು ಅಪೇಕ್ಷಿಸುವವರು ನಮ್ಮ ಪುಸ್ತಕಗಳ ಕ್ಯಾಟ್‌ಲಾಗಿಗೆ ಬರೆಯಿರಿ.

ವಿಳಾಸ—ಬಿ. ನರಸಿಂಗರಾವ್,
ಎಡಿಟರ್, "ಲಾ ಗೆಜೆಟ್," ಬೆಂಗಳೂರು.

ಕುಂತಲಾನಂದ ತೈಲವು

192-4

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಲವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ. 10 ಆಣೆ ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ—ವಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-42

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಭೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿರಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ೧ ರೂ. ೬ ಆ.; ೧ ರೂ. ೪ ಆ.

ಚುಕ್ಕಿಯುಳ್ಳ ಟೋಪಿಗಳು ರೂ ೧—೮; ರೂ. ೧—೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨.

ದಾರದ ಟೋಪಿಗಳು ೧ ರೂ. ೧೨ ಆ., ೧ ರೂ ೮ ಆ.; ೧ ರೂ. ೬ ಆ

ಮುಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಫುಲ್ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ:—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

CHAMBERLAIN'S COUGH REMEDY.

ಚೇಂಬರ್ಲೇನ್‌ರವರು ಕಂಡುಹಿಡಿದ ಕೆಮ್ಮಿನ ಔಷಧವು.



1-42

ಶೀತದ ಕೆಮ್ಮು, ಗಂಟಲು ಗಾನೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಿನಲ್ಲು ಎದೆಯಲ್ಲು ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾಗಿದೆ.

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ. ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ. ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು. ತರುವಾಯ ಉಗುಳಿನಲ್ಲಿ ರಕ್ತಬೀಳುವುದು. ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು.

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಚನ್ನಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ. ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ. ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು. ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ.

ಈ ಔಷಧವು ವನಸ್ಪತಿಗಳ ತಯಾರಿ.

ಕೈಯಿಂದ ಮುಟ್ಟದೆ ತಯಾರಾಗಿದೆ.

ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹುತುಶೂಲೆ, ಮಕ್ಕಳ ಎಳವು, ಜ್ವರ, ನಟ್ಟುಜ್ವರ, ಕ್ಷೀಣತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ; 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ [179-7]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮಾರಿಕೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸಿ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ। ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ। ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ.—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ನತಮಲ್ ಡೈರಿಗಳು.

ನಮ್ಮಲ್ಲಿ ಪ್ರತಿ ವರುಷವೂ ತಯಾರಾಗುವಂತೆ 1914 ನೇ ಇಸವಿ 4 ನಮೂನೆ ಮಾಡಲ್ ಪಾಕೆಟ್ ಡೈರಿಗಳು ತಯಾರಾಗಿ ಬಿಕರಿಗೆ ಸಿದ್ಧವಾಗಿವೆ.

ನಂಬರು	1	ಚಿಕ್ಕ ಸೈಜು ಸಾದಾ	,,	ಕ್ರಯ 4 ಆಣೆ.	
,,	2	ಡಿಟೊ ಪ್ಲಾಷು	,,	,, 6	,,
,,	3	ದೊಡ್ಡ ಸೈಜು ಸಾದಾ	,,	,, 6	,,
,,	4	ಡಿಟೊ ಪ್ಲಾಷು	,,	,, 8	,,

ಒಂದೇ ದಫಾ 12 ಡೈರಿಗಳನ್ನು ತರಿಸಿಕೊಳ್ಳುವವರಿಗೆ ಒಂದು ಪ್ರತಿ ಜಾಸ್ತಿ. 25 ರೂ ಗೆ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ರೂ ಗೆ 2 ಆಣೆಯಂತೆ ಡಿಸ್ಕೌಂಟು ಮಾತ್ರ ದೊರೆಯುವುದು. ಈಗಲೇ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಿ. ಕಾಲವಿಳಂಬ ಮಾಡಿದಲ್ಲಿ ಮುಗಿದುಹೋಗುತ್ತ [198-2]

ವಿಳಾಸ —ಎಸ್. ಟಿ. ನತ್‌ಮಲ್ ಕಂಪೆನಿ, ಮೈಸೂರು.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ.

ಟಪಾಲು ಖರ್ಚು ಪ್ರತ್ಯೇಕ: 1 ಕ್ಕೆ ೬ ಆಣೆ.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು. ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡ್ಲೆ ಬರೆದು ತರಿಸಿಕೊಳ್ಳಿ

ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ,

[120-17] ಪೋಸ್ಟ್ ಬಾಕ್ಸ್, ನಂ 167, ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ.

೧. ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.



ಈ ಚಿತ್ರದಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ. ಟಪಾಲು ಖರ್ಚು ಸಹಿತ ಕ್ರಯ ರೂ 5-0-0. ಇದನ್ನು ಸೆಪ್ಟಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ:—ಧನಲಕ್ಷ್ಮಿ ಅಂಡ್ ಕಂಪೆನಿ,

[120-17] ಸಾಹುಕಾರ್ ಪೇಟೆ ಪೋಸ್ಟು, ಮದರಾಸು.

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ.)

ಈ ಪುಸ್ತಕದಲ್ಲಿ:—1. ಪಿನಲ್‌ಕೋಡು, 2 ದೊಡ್ಡೀ ಆಕ್ಟ್, 3. ಎಕ್ಸೈಜು ರೆಗ್ಯುಲೇಷನ್, 4. ಆಯುಧಗಳ ರೆಗ್ಯುಲೇಷನ್, 5 ದಹ್ಯವಸ್ತುಗಳ ರೆಗ್ಯುಲೇಷನ್, 6. ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7. ಚಿಕ್ಕವಯಸ್ಸಿನವರು ಹುಟ್ಟು ಸೇದಕೂಡದೆಂಬ ರೆಗ್ಯುಲೇಷನ್, 8. ಬಾಲ್ಯ ವಿವಾಹಗಳ ರೆಗ್ಯುಲೇಷನ್, 9. ರೈಲ್ವೆ ರೆಗ್ಯುಲೇಷನ್, 10. ಟೆಲಿಗ್ರಾಫ್ ಆಕ್ಟ್, 11. ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ.

ಪ್ರತಿ ಪೆನಲ್ ಸೆಕ್ಷನ್‌ಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ? ಯಾ ಕೂಡದೆ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟ್ಟಬೇಕೇ? ಜಾಮಿನ್ ತೆಗೆದುಕೊಳ್ಳಬಹುದೆ? ಯಾ ಕೂಡದೆ? ರಾಜಿಯಾಗಬಹುದೆ? ಯಾ ಕೂಡದೆ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲೇ ವಿವರಿಸಲಾಗಿದೆ. ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ. 22-5-1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ. ಕ್ರಯ ರೂಪಾಯಿ 2-0-0. ಟಪಾಲ್ ಹಾಸಲು 3 ಆಣೆ.

ವಿಳಾಸ:—ಎಲ್. ವೇಮಾರೆಡ್ಡಿ,
ಕಂಟ್ರಾಕ್ಟರ್ ಮತ್ತು ಕ್ರಿ॥ ಪ್ಲೀಡರ್,
[103-21] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್.

ಅಸಲ್ ಸವರನ್ ಭಂಗಾರದ ನಗಗಳು.

ಈ ನಗಗಳನ್ನು ಈಗತಾನೇ ನಾವು ನಿಪುಣರಾದ ಮತ್ತು ಪ್ರಸಿದ್ಧಿ ಹೊಂದಿದ ಅಗಸಾಲೆಯರಿಂದ ನೂತನ ನಮೂನೆಯಲ್ಲಿ ನೇತ್ರಾನಂದಕರವಾಗಿ ಸ್ವಂತ ಮುತುವರ್ಜಿಯಿಂದ ತಯಾರುಮಾಡಿಸಿರುತ್ತೇವೆ. ಸವರನ್ ಭಂಗಾರಕ್ಕು ಮತ್ತು ಕೆಲಸಕ್ಕು ನಾವು ಗ್ಯಾರಂಟಿ ಕೊಡುತ್ತೇವೆ. ಹಾಗಿಲ್ಲದ ಪಕ್ಷದಲ್ಲಿ ಹಣವನ್ನು ವಾಪಸ್‌ಮಾಡಲ್ಪಡುತ್ತೆ. ಬಹು ಸುಂದರವಾದ ನಮೂನೆ, ಸದಾಘರು ಧರಿಸಿಕೊಂಡು ಉಪಯೋಗಿಸುವಂತೆ ಸಾಧ್ಯವಾದ ಮಟ್ಟಿಗೂ ಬಹು ಸುಲಭ ಕ್ರಯವನ್ನು ನಮೂದಿಸಿರುತ್ತೇವೆ. ಪ್ರತಿ ಒಬ್ಬರು ತೆಗೆದುಕೊಂಡು ಉಪಯೋಗಿಸಿ ಸಂತೋಷಪಡಬೇಕಾಗಿ ಪ್ರಾರ್ಥನೆ. [77-26]



ಅರ್ಧಚಂದ್ರ 1 ಕ್ಕೆ ರೂಪಾಯಿ	8-0-0
ನಂ. 1 ಮೂಗುಬೊಟ್ಟು 1 ಕ್ಕೆ ರೂಪಾಯಿ ..	7-0-0
,, 2 ಮೂಗುಬೊಟ್ಟು 1 ಕ್ಕೆ ,,	6-0-0
,, 3 ಮೂಗುಬೊಟ್ಟು 1 ಕ್ಕೆ ,, .	5-0-0
ಬುಗಡಿ 1 ಕ್ಕೆ 14 ರೂ ಲಾಗಾಯಿತು	25-0-0

ವರೆಗೂ ಇರುತ್ತೆ. ಇದು ಅಲ್ಲದೆ ಇಮಿಟೇಷನ್ ಕೆಂಪುಗಳಿಂದಲೂ, ಒಳ್ಳೆ ಕೆಂಪುಗಳಿಂದಲೂ ತಯಾರುಮಾಡಿ ಕಳುಹಿಸಲ್ಪಡುವದು. ಮತ್ತು ಬೆಳ್ಳಿ ಭಂಗಾರದ ನಗಗಳು ಸಹ ತಯಾರುಮಾಡಿ ಕಳುಹಿಸಲ್ಪಡುತ್ತೆ. ಬೇಕಾದವರು ಬರೆದರೆ ಜವಾಬು ಬರೆಯುತ್ತೇವೆ. ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

ವಿಳಾಸ—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂ. 7, ಕೋಪ್ ವೆಂಕಟಾಚಲ್ಲೈಯರ್ ಬೀದಿ, ಮದರಾಸು.

ಸಮಸ್ತ ವಿಧವಾದ ನೋವೂ ಇರಿತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಬೆನ್ನಿನ ಸೆಳೆತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ಬಿಕರಿಯಾಗುತ್ತಲಿವೆ ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ಬಿಕರಿಯಾಗುವದು

ಮುಳಕಡ್ಡಿ ಔಷಧ ಡಬ್ಬಿಗೆ ೬ ಆಣೆ, 12 ಕುಪ್ಪಿಗೆ ರೂ 3-8-0 ಹಲ್ಲುಪುಡಿ ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ 1-2-0 ವಿ ಪಿ ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ [4?-31]

ವಿಳಾಸ —ಅಮೃತಾಂಜನ ಡಿಪೋ, ೧೯ ಫ್ರೆಯರ್ ರೋಡ್, ಫೋರ್ಟ್, ಬೊಂಬಾಯಿ

ತಖಾವಿ ಲಾ.

[207 1]

(ಕೈ ಎಂ ಮಲ್ಲಾರಾಧ್ಯರಿಂದ ಬರೆಯಲ್ಪಟ್ಟದು)

ವ್ಯವಸಾಯದ ಮತ್ತು ರೈತರ ಅಭಿವೃದ್ಧಿಗಾಗಿ ಮೈಸೂರು ಸರ್ಕಾರದವರು ಕೊಡುವ ಸಾಲ ಮತ್ತೂ ಸಹಾಯ ಇವುಗಳ ವಿಷಯಕವಾದ ಕಾನೂನುಗಳೂ, ಈ ವಿಷಯಕವಾಗಿ ಮದ್ರಾಸು ಸರ್ಕಾರದ ಕಾನೂನುಗಳೂ, ಅರ್ಥಶಾಸ್ತ್ರ, ಧರ್ಮಶಾಸ್ತ್ರ, ಇತರ ರಾಜ್ಯಪದ್ಧತಿ ಮೊದಲಾದ ಪ್ರತಿಯೊಬ್ಬ ರೈತರೂ ತಿಳಿದಿರಬೇಕಾದ ವಿಷಯಗಳು ಈ ಪುಸ್ತಕದಲ್ಲಿ ಸ್ಪಷ್ಟವಾಗಿ ಬರೆಯಲ್ಪಟ್ಟವೆ ಬೆಲೆ ವಿ ಪಿ ಮೂಲಕ ೧೦ ಆಣೆ

ಶ್ರೀ ಶಂಕರಾಚಾರ್ಯರ ಆತ್ಮಬೋಧೆ ಬೆಲೆ ೧ ಆಣೆ

ಸುಪ್ರಸಿದ್ಧವಾದ "ವ್ಯವಹಾರನಿರ್ಣಯದ" ೩ ನೆಯ ಆವೃತ್ತಿಯ ಮುದ್ರಣವು ನಡೆಯುತ್ತಿದೆ

ಎಂ ಪಂಡಿತಾರಾಧ್ಯ,
ಶ್ರೀರಾಮಪೇಟೆ, ಮೈಸೂರು.

ವಿನೋದಕರಗಳಾದ ನಕಲಿಗಳು

ಪ್ರಹಸನಚತುಷ್ಟಯ—(ಹಾಸ್ಯಸಂಜೀವನಿ) ಯುವತಿಯಾದ ಹೆಂಡತಿ ಮುದುಕನಾದ ಗಂಡ, ವಿದ್ಯಾವಂತನಾದ ಗಂಡ ದಡ್ಡಳಾದ ಹೆಂಡತಿ ಇವರುಗಳ ಕುರಿತ ನಕಲಿಗಳು ನಾಲ್ಕು ಉಕ್ತವಾಗಿವೆ ಇಂಥಾ ವಿನೋದವೂ ನೀತಿಪ್ರದವೂ ಆದ ನಕಲಿಯನ್ನು ನೀವು ಓದದಿರಲಾರಿರಿ ಕ್ರಯ 1 ಆಣೆ [187 11]

ಪ್ರಹಸನತರಂಗ—ಅಂತರಂಗದಲ್ಲಿ ದೃಢವಿಲ್ಲದ ಆಷಾಢಭೂತಿಗಳು, ಮೂಢಭಕ್ತಿಯಿಂದೊಡಗೂಡಿದ ದಡ್ಡರು, ವಿವೇಕವಿಲ್ಲದ ಮೂಢರು ದುರಾಚಾರಿಗಳು ಮುಂತಾದವರ ವಿಷಯವು ಅತಿ ಚಮತ್ಕಾರವಾಗಿ ವರ್ಣಿಸಲ್ಪಟ್ಟಿದೆ ಕ್ರಯ 3 ಆಣೆ ಇದಲ್ಲದೆ ಮಹಾರಣ್ಯಪುರಾಧಿಪತ್ಯ 4 ಆಣೆ ಪುನರ್ಮರಣ ಪ್ರಹಸನ 3 ಆಣೆ ಯೋಗನಿದ್ರಾಪ್ರಹಸನ 2 ಆಣೆ ಮುಂತಾದ ನಕಲಿಗಳೂ ದೊರೆಯುವವು

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

The National Insurance and Banking Co., Ltd,

AMRITSAR

WANTED

A competent Chief Agent for Mysore and Coorg Provinces on very liberal terms None need apply who have no practical experience in life insurance business Cash security Rs 500 at least essential The applicant should be a capable canvasser and organiser The company has its own office buildings at Mysore in a suitable quarter Apply at once to Mr P L Rajpal B A Chief Manager, National Insurance and Banking Company Ltd Amritsar, mentioning two good references past experience present employment age nationality and any other necessary particulars [201 2]

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

104 21

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರಶಲೆ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಗಳು, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು ಹಿಡಿದ ಶ್ವಾಸರೋಗ ಜಜ್ಜು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ನಿರಾಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಪಾದಿ ಗುಣಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಇದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ತಮುಲಿಪ್ಪಿ ಬೀದಿ ಪುರಸವಾಕಂ, ವೇಪೇರಿ, ಮದರಾಸ್ (2) ಜಿ ಎಸ್ ಸೈನ್ಯುಶೆಟ್ಟರು, ಜನರಲ್ ಮರ್ಚೆಂಟ್ ತುಮಕೂರು

ನಮೂನೆ ಮುಫತ್ತು.

ಕೇಶಕುಸುಮಾಕರ ತೈಲವು.

ಸಾಟಿಯಿಲ್ಲದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸಮಾಡುವದರಲ್ಲಿಯೂ, ಒಟ್ಟುತಲೆಯಲ್ಲಿ ಕೇಶವನ್ನು ಬೆಳೆಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ, ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುಡ್ಡಿ ತೈಲ ಕ್ರಯ 10 ಆಣೆ ಮೂರು ಬುಡ್ಡಿಗಳ ತೈಲ ಕ್ರಯ ರೂ 1 12 ಆ ಆರು ಬುಡ್ಡಿಗಳ ತೈಲ ಕ್ರಯ ರೂ 3-4 ಆ ಡಜನ್ ಬುಡ್ಡಿಗಳ ಕ್ರಯ ರೂ 6

ವಿ ಪಿ ಅಂಚೇ ಖರ್ಚು ಪ್ರತ್ಯೇಕ.

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ
[8 ?] ಔಷಧಾಲಯ, 177 ಚೀನಾ ಬಜಾರ್ ರೋಡ್, ಮದ್ರಾಸು

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತು ಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣ ಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳೆಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಕಚಕಿಸುವವು ನಿಬಿಡವಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದು ಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ ಸುಂಡಿನ ಹೊಟ್ಟನ್ನು ಅಣಗಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ ಇದರ ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0 4-0 ಬೇರೆ ತೆರಬೇಕು

3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0 7 0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ

ಮೈಸೂರು ಎಗ್ಸಿಬಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಸಿಬಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಜದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ ಡಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಫಾಯತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕೆಪಿಟೋಲ್‌ಬಾಮ್"—ಮಳೆ ಮತ್ತು ಚಳಿಯ ಥಂಡಿ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಲ್‌ಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ಸೋಯುವುದು, ಸಂದುವಾತ, ಮಸ್ತಕಶೂಲೆ, ಹೆಚ್ಚಾಗಿ ಮೆಹನತ್ತು ಪಟ್ಟದ್ದರಿಂದ ಕ್ಷೀಣವಾಗುವದು, ಸೊಂಟನೋವು, ಎದೆಯುನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ ಬಾಟ್ಲಿ 1ಕ್ಕೆ ಕ್ರಯ 0 8 0 ಟಪಾಲು ಪ್ರತ್ಯೇಕ

ಒಡಮನ್ಸ ಮಲೇರಿಯ ಪಿಲ್ಸ—ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆ ಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿವೆ ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ ಇದು ದೇಶದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ ದಿವಸಕ್ಕೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1 0-0 3 ಬಾಟ್ಲಿಗಳಿಗೆ ರೂ 2 8 0 ವಿ ಪಿ ಖರ್ಚು ಪ್ರತ್ಯೇಕ

ಏಜೆಂಟ್, ದಿ ಉಲನ್ ಮಾರ್ಕೆಟ್, ಮಂಗಳೂರು

ಮೇಲೆ ಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ — [8 40]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್ಜಿದ್, ಬೊಂಬಾಯಿ.

ಹಗೇವಿನಲ್ಲಾದ ಮರಣವು

ತಾ 8ನೇ ಬುಧವಾರ ದಿವ 2 ಘಂಟೆ ಸಮಯದಲ್ಲಿ ಬೌರಿಂಗ್‌ಪೇಟೆ ತಾಲ್ಲೂಕು ದಾಸರ ಹೊಸಹಳ್ಳಿ ಹೊಬಳಿ ದೊಡ್ಡೂರು ಕರಪನಹಳ್ಳಿಯಲ್ಲಿರುವ ಬೇಡರ ಸುಮಾರು 60 ವರುಷದ ಕಾವಲು ಕೆಲಸದ ಪಾಪನೆಂಬುವನು ತನ್ನ ಮನೆಯ ಮುಂದೆ ಇರತಕ್ಕ ಹಗೇವು ತೆಗೆದು ಒಳಗೆ ಇದ್ದ ಕೆಟ್ಟ ಗಾಳಿಯನ್ನು ಆಚೆಗೆ ಹೋಗಲು ಅವಕಾಶ ಕೊಡದೇನೇ ಜಾಗ್ರತೆಯಲ್ಲಿಯೇ ಒಳಕ್ಕೆ ಇಳಿದು ಒಂದು ಮಂಕರಿ ರಾಗಿಯನ್ನು ಮೇಲ್ಗಡೆ ಕ್ಯಾಂಪಿಗೆ ನೌಕರಿಗೆ ಹೋಗಲು ನಿಂತಿದ್ದ ಸುಮಾರು 26 ವರುಷದ ಬಡ್ಡಿಗಾ ಎಂಬ ತನ್ನ ಮಗನನ್ನು ಕೂಗಿ ತನ್ನ ಕೈಯಲ್ಲಿದ್ದ ಮಂಕರಿಯನ್ನು ಹಗ್ಗದ ಮುಖಾಂತ್ರ ಮೇಲ್ಗಡೆಗೆ ಕೊಡುವದರೊಳಗಾಗಿ ಒಳಗಿದ್ದ ಕೆಟ್ಟ ಗಾಳಿಯನ್ನು ತಡೆದುಕೊಳ್ಳಲಾರದೆ ಒಳಕ್ಕೆ ಬಿದ್ದನು ಈ ಶಬ್ದವನ್ನು ಮೇಲ್ಗಡೆ ನಿಂತಿದ್ದ ಮಗನು ಕೇಳಿ ತಂದೆಯನ್ನು ನೋಡುವ ಉದ್ದೇಶ ಮೇಲ್ಗಡೆಯಿಂದ ಹಗೇವಿನ ಬಾಯಿಯಲ್ಲಿ ಬಗ್ಗಿ ನೋಡುತ್ತಿರುವಾಗ ಇವನಿಗೂ ಕೂಡ ಒಳಗಿನಿಂದ ಬಂದ ಕೆಟ್ಟ ಗಾಳಿಯು ಬಡಿದು ಇವನ ಹೊಟ್ಟೆಗೂ ಸೇರಿ ಇವನು ಸಹ ಸ್ಮರಣೆತಪ್ಪಿ ಹಗೇವಿನೊಳಕ್ಕೆ ಬಿದ್ದು ಒಳಗಡೆ ತಂದೆ ಮಗ ಇಬ್ಬರೂ ಒದ್ದಾಡುತ್ತಾ ಇದ್ದರು ಕೊಂಚ ಹೊತ್ತು ಆದ ಮೇಲೆ ಯಾರೋ ನೋಡಿ ಕೂಗಿಕೊಂಡಾಗ ಜನರು ಗುಂಪುಸೇರಿ ಕೆಲವು ಬಿಂದಿಗೆ ನೀರು ತಂದು ಹಗೇವಿನೊಳಕ್ಕೆ ಮೇಲಿನಿಂದ ಸುರಿದು ಹಗ್ಗದ ಮುಖಾಂತ್ರ ಒಳಗಿದ್ದವರನ್ನು ಮೇಲಕ್ಕೆ ಎಳೆದುತಂದು ನೋಡುವಲ್ಲಿ ತಂದೆಗೆ ಕೊಂಚ ಹೊತ್ತು ಆದ ಮೇಲೆ ಸ್ಮರಣೆ ಬಂತು ಮಗನು ಮೊದಲೇ ಸತ್ತುಹೋಗಿದ್ದನು ಈ ವಿಷಯವು ಗ್ರಾಮ ನೌಕರರ ಕಡೆಯಿಂದ ಸರ್ಕಾರಕ್ಕೆ ರಿಪೋರ್ಟು ಹೋಗಿರುತ್ತದೆ

ಬಾತ್ಮಿದಾರ್

ಮೈಸೂರು ಸಂಸ್ಥಾನವೂ ಸಕ್ಕರೆಯೂ

ಮೈಸೂರು ಸಂಸ್ಥಾನದಲ್ಲಿ ಸಕ್ಕರೆಯು ಬಹಳವಾಗಿ ತಯಾರಾಗುತ್ತದೆ ದಿನದಿನಕ್ಕೆ ಅದರ ಉತ್ಪನ್ನವು ಹೆಚ್ಚುತ್ತಾ ಬಂದಿದೆ ಮತ್ತು ಈ ಬಗ್ಗೆ ವಿಶೇಷ ಪ್ರಯತ್ನ ನಡೆದಂತೆ ತೋರುವುದು "ವ್ಯಾಪಾರ ಉದ್ಯೋಗಗಳನ್ನು ವೃದ್ಧಿಮಾಡುವ" ಇಲಾಖೆ ಡೈರೆಕ್ಟರಾದ ಮಿ॥ ಆಲ್ಫ್ರೆಡ್ ಚಾಟರ್ಟನರು ಬೆಂಗಳೂರಲ್ಲಿ ಒಂದು ಉಪನ್ಯಾಸವನ್ನು ಕೊಟ್ಟರು ಪರದೇಶಗಳಿಂದ ಬರುವ ಸಕ್ಕರೆಯಲ್ಲಿ ಜಾವಾ ದ್ವೀಪದ್ದೇ ವಿಶೇಷವಾಗಿರುತ್ತದೆ ಆದರೆ ಕೆಲವು ಕಾಲದ ಹಿಂದೆ ಜಾವಾ ದ್ವೀಪದ ಸ್ಥಿತಿಯೂ ಕೂಡ ಹಿಂದುಸ್ಥಾನದಂತಿತ್ತು ಆದರೆ ಈಗ ಬಹಳ ವೃದ್ಧಿಯಾಗಿದೆ ಇದರಂತೆ ಹಿಂದುಸ್ಥಾನದಲ್ಲಿ ಯಾಕೆ ಈ ಕಸಬು ವೃದ್ಧಿಯಾಗುವುದಿಲ್ಲ ? ಅಲ್ಲಿಯಂತೆ ವೃದ್ಧಿಯಾಗಬೇಕಾದರೆ ದೊಡ್ಡ ಪ್ರಮಾಣದಿಂದ ಇಲ್ಲಿಯೂ ಸಕ್ಕರೆ ತಯಾರಾಗಬೇಕು ರಸಾಯನಶಾಸ್ತ್ರ, ಯಂತ್ರಶಾಸ್ತ್ರಗಳ ಉಪಯೋಗವನ್ನು ಮಾಹಿತಿ ಮಾಡಿಕೊಳ್ಳಬೇಕು ಯಾವ ದ್ರವ್ಯವೂ ವ್ಯರ್ಥವಾಗಬಾರದು ಅದು ಪರದೇಶದ ಸಕ್ಕರೆಯಷ್ಟು ಉತ್ತಮವಾಗಿ ತಯಾರಾಗಬೇಕು ಹಿಂದುಸ್ಥಾನದಲ್ಲಿ ಸುಮಾರು 2? 0? ,000 ಎಕರೆಯ ಭೂಮಿಯಲ್ಲಿ ಕಬ್ಬಿನ ಸಾಗುವಳಿಯಾಗುತ್ತದೆ ಅದರಿಂದ 30,00,000 ಟನ್ ಬೆಲ್ಲವು ಹೊರಡುವುದು ಮೈಸೂರು ಸಂಸ್ಥಾನದಲ್ಲಿ ಸುಮಾರು 40,000 ಎಕರೆ ಭೂಮಿಯಲ್ಲಿ ಕಬ್ಬಿನ ಸಾಗುವಳಿಯಾಗುತ್ತದೆ 1,00 000 ರೂಪಾಯಿನ ಬೆಲ್ಲ ಹೊರಡುವುದು ಈ ಅಂಕಿಗಳು ದೊಡ್ಡವಾಗಿ ಕಂಡುಬಂದರೂ ಹಿಂದುಸ್ಥಾನಕ್ಕೆ ಬೇಕಾಗುವಷ್ಟು ಸಕ್ಕರೆಯು ತಯಾರಾಗುವುದಿಲ್ಲ ಅದರಿಂದ ಹೋದ ವರ್ಷ 6 75,000 ಟನ್ ಸಕ್ಕರೆ, 9?,000 ಟನ್ ಕಾಕಂಬಿ ಪರದೇಶಗಳಿಂದ ಹಿಂದುಸ್ಥಾನಕ್ಕೆ ಬಂತು ಇವರೊಳಗೆ ಕಬ್ಬಿನಿಂದ ತಯಾರಾಗುವ ಸಕ್ಕರೆಯು ಜಾವಾ ದ್ವೀಪದಿಂದ ಬರುತ್ತದೆ ಬೀಟ್ ಎಂಬ ಗೆಡ್ಡೆಯಿಂದ ತಯಾರಾಗುವ ಸಕ್ಕರೆಯು ಆಸ್ಟ್ರಿಯಾದಿಂದ ಬರುತ್ತದೆ ಸಕ್ಕರೆಯ ಸಲುವಾಗಿ ವಿನಃ 4 ಲಕ್ಷ ರೂಪಾಯಿ ಪರದೇಶಕ್ಕೆ ಕೊಡಬೇಕಾಗುತ್ತವೆ ಈ ಹಣವು ಇಲ್ಲಿಯೇ ಉಳಿದರೆ ಬಡಬಗ್ಗರ ಹೊಟ್ಟೆಗೆ ಅನ್ನ ದೊರೆಯುವುದು ಎಷ್ಟೋ ಜನರಿಗೆ ಕೆಲಸ ಸಿಕ್ಕುವುದು ಈಗ ಸಾಗುವಳಿಯಲ್ಲಿರುವ ಜಮೀನಿನಲ್ಲಿ 3 ಕೋಟಿ ರೂಪಾಯಿ ಉತ್ಪನ್ನವನ್ನು ಪಡೆಯಬಹುದೆಂದು ಮಿ॥ ಚಾಟರ್ಟನರು ಅಂದರು ಇದಲ್ಲದೆ ಒಂದೆರಡು ವರ್ಷಗಳಲ್ಲಿ ಕಾವೇರಿ ನದಿಯ ಕೆರೆ ಕಾಮಗಾರಿಯು ಮುಗಿಯುವುದರಿಂದ ಎಷ್ಟೋ ಭೂಮಿಗೆ ನೀರು ದೊರೆಯುವುದು ಅದರಿಂದ ಮೈಸೂರಿನವರು ಸಕ್ಕರೆಯ ಉದ್ಯೋಗದ ಕಡೆಗೆ ಲಕ್ಷ್ಯಕೊಡುವುದು ಅವಶ್ಯವಾದದ್ದು ಹೊಲದವರಿಗೆ ಯಂತ್ರಗಳನ್ನು ಹ್ಯಾಗೆ ಉಪಯೋಗ ಮಾಡಿಕೊಳ್ಳಬೇಕೆಂಬದನ್ನು ಈ ಇಲಾಖೆಯವರು ಹೇಳಿಕೊಡುತ್ತಾರೆ ಈ ಕೆಲಸಕ್ಕೆ ಮೈಸೂರು ಸರಕಾರದವರೂ, ಅಲ್ಲಿನ ಧನಿಕರೂ, ಕಾರಖಾನೆದಾರರೂ ಕೂಡ ಪ್ರಯತ್ನಮಾಡಿದ ವಿನಾ ಉರ್ಜಿತಸ್ಥಿತಿಗೆ ಬರಲಾರದು

ಕ ವೈ

ಗೃಹಕೃತ್ಯದ ನೋಟೀಸು.

ಮಳವಳ್ಳಿ ತಾಲ್ಲೂಕು ಕಸಬಾ ಮಳವಳ್ಳಿ ಪೇಟೆಯಲ್ಲಿರುವ ಒಕ್ಕಲಿಗರ ಭಂಗಿ ಮುತ್ತೇಗೌಡನ ಮಾದೇಗೌಡನು ಈ ಮೂಲಕ ತಿಳಿಯಪಡಿಸುವದೇನೆಂದರೆ — ನನ್ನ ತಂದೆ ಭಂಗಿ ಮುತ್ತೇಗೌಡನಿಗೆ ಸುಮಾರು ೮೦ ವರ್ಷಗಳ ಮೇಲೆ ಆಗಿ ವೃದ್ಧಾಪ್ಯದೆಸೆಯಿಂದ ಬುದ್ಧಿಯು ವಿಕಲ್ಪವಾಗಿರುತ್ತೆ ಇವನು ನಮ್ಮ ಮನೆಯಲ್ಲೇ ಊಟ ಉಪಚಾರಗಳನ್ನು ಮಾಡಿಕೊಂಡು ನನ್ನ ಪೋಷಣೆಯಲ್ಲೇ ಇರುತ್ತಾನೆ, ಗೃಹಕೃತ್ಯದ ಯಾವ ಕೆಲಸಗಳನ್ನೂ ಹಾಲಿ ಮಾಡಶಕ್ಯವನಾಗಿಲ್ಲ ನನ್ನ ಸ್ವಾಧೀನಾನುಭವದಲ್ಲಿರುವ ನಮ್ಮ ಬಾಬತು ಮಳವಳ್ಳಿ, ಮಾರೇಹಳ್ಳಿ ಗ್ರಾಮಗಳಲ್ಲಿ ಇರತಕ್ಕ ಸ್ವತ್ತುಗಳನ್ನು ಅಪಹರಿಸಬೇಕೆಂಬ ದುರಭಿಪ್ರಾಯದಿಂದಲೂ, ನನಗೆ ತೊಂದರೆ ಉಂಟುಮಾಡಬೇಕೆಂತಲೂ ನನಗೆ ವಿರೋಧಿಗಳಾದವರು ನನ್ನ ತಂದೆಗೆ ದುರ್ಬೋಧನೆ ಹೇಳಿ ಸದರಿ ಸ್ವತ್ತುಗಳ ಮೇಲೆ ನೆಪಮಾತ್ರ ಆಧಾರ ಭೋಗ್ಯ ವಗ್ಯೆರೆ ಪತ್ರಗಳನ್ನು ಹುಟ್ಟಿಸುವದಾಗಿ ವಗ್ಯೆರೆ ವರ್ತಮಾನ ಕೇಳುತ್ತೇನೆ ಹಾಗೆ ಯಾರಾದರೂ ಮೇಲ್ಕಂಡ ವೃದ್ಧನಾದ ಮತ್ತೂ ಬುದ್ಧಿಸ್ವಾಧೀನವಿಲ್ಲದ ನನ್ನ ತಂದೆಯಿಂದ ಯಾವ ವಿಧವಾದ ಪತ್ರ ವಗ್ಯೆರೆ ಬರೆಸಿಕೊಂಡಾಗ್ಯೂ ಅದು ಊರ್ಜಿತವಾಗಲಾರದು, ಮತ್ತೂ ನನ್ನ ಸ್ವಾಧೀನಾನುಭವದ ಮೇಲ್ಕಂಡ ಗ್ರಾಮಗಳ ಸ್ವತ್ತು ಸಹ ಈಡಾಗಲಾರದೆಂಬ ಅಂತ ಈ ಮೂಲಕ ತಿಳಿಸಿ ಎಚ್ಚರಿಸಿರುತ್ತೇನೆ [210 1]

ತಾ|| 13-10 1913 — ಮಾದೇಗೌಡನ ಹೆಬ್ಬೆಟ್ಟಿನ ಗುರುತಿದೆ.

ಪ್ರಾಕೃತಿಕ ಭೂಗೋಳ.

ಮೊದಲನೇ ಮುದ್ರಣವು ಅತಿ ಶೀಘ್ರವಾಗಿ ಮುಗಿದುಹೋದ್ದರಿಂದ ಈಚೆಗೆ ಬಂದಿರುವ ಆರ್ಡರುಗಳಿಗೆ ಪ್ರತಿಗಳನ್ನು ಕಳುಹಿಸಲು ಅವಕಾಶವಾಗಲಿಲ್ಲ ಎರಡನೇ ಮುದ್ರಣದಲ್ಲಿ ಅನೇಕ ಹೆಚ್ಚು ವಿಷಯಗಳನ್ನು ಚನ್ನಾಗಿ ವಿವರಿಸಿ ಆರ್ಟ್ ಪೇಪರಿನಮೇಲೆ ಪ್ರಿಂಟುಮಾಡಿರುವ ಅನೇಕ ಹೊಸ ನಕ್ಷೆಗಳನ್ನು ಸೇರಿಸಿರುವುದಲ್ಲದೆ 1 ಆಣೆ ಬೆಲೆ ಬಾಳುವ ಬಣ್ಣಹಾಕಿರುವ ಸುಂದರವಾದ ಒಂದು ಮೈಸೂರು ಮ್ಯಾಪನ್ನು ಸಹ ಸೇರಿಸಿರುತ್ತೆ 1 ನೆಯ ಭಾಗವು ಸಪ್ಟಂಬರ್ ತಿಂಗಳು 25 ರಲ್ಲಿ ಬಿಕರಿಗೆ ಸಿದ್ಧವಾಗುವುದು ಈ ಪುಸ್ತಕವು ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೂ ಮತ್ತು ಸ್ಕೂಲಿನಲ್ಲಿ ಪಾಠಹೇಳುವುದಕ್ಕೂ ಬಹಳ ಸಹಕಾರಿಯಾಗಿರುತ್ತದೆ ಕೆಲವು ಪ್ರತಿಗಳು ಮಾತ್ರ ಪ್ರಿಂಟಾಗಿರುವುದರಿಂದ ಮೊದಲು ಬಂದ ಆರ್ಡರುಗಳಿಗೆ ಜಾಗ್ರತೆಯಲ್ಲಿ ಪ್ರತಿಗಳು ಕಳುಹಿಸಲ್ಪಡುವುವು ಕ್ರಯ 0-4 6

ಹೊಸ ಕನ್ನಡ ಲೇಖನದ ಪುಸ್ತಕವೆಂಬ ಹೆಸರಿನಿಂದ 4 ನಂಬರು ಕಾಪಿಪುಸ್ತಕಗಳನ್ನೂ ಪ್ರಿಂಟ್‌ಮಾಡಿಸಿರುತ್ತೇನೆ ಇದರ ಮೇಲ್ಪಙ್ಕ್ತಿಗಳು ಬಹು ಅಂದವಾದ ಬರವಣಿಗೆಯ ಅಕ್ಷರದಂತೆ ತಿಳಿಕೊಟ್ಟಗಳೇ ಮೊದಲಾದವುಗಳಿವೆಯೇ ಹೊರತು ಪ್ರಿಂಟಿಂಗ್ ಅಕ್ಷರಗಳ ಹಾಗಿಲ್ಲ ಒಳ್ಳೇ ಕಾಗದದ ಮೇಲೆ ನೋಡುವುದಕ್ಕೆ ಬಹು ಅಂದವಾಗಿ ರೂಲುಗಳನ್ನು ಹಾ. ಪ್ರಿಂಟಾಗಿರುತ್ತವೆ ಇವುಗಳು ವಿದ್ಯಾರ್ಥಿಗಳ ಕೈ ತಿದ್ದಲು ಬಹಳ ಸಹಕಾರಿಯಾದ ಕಾಪಿ ಪುಸ್ತಕಗಳೆಂದು ಭಾವಿಸಿ ಮೈಸೂರಿನ ಸ್ಕೂಲುಗಳಲ್ಲಿ ಉಪಯೋಗಿಸುತ್ತಾರೆ ಕ್ರಯ 0 1 3

ಪ್ರಾಕೃತಿಕ ಭೂಗೋಳ ಮತ್ತು ಹೊಸಕನ್ನಡ ಲೇಖನ ಪುಸ್ತಕಗಳನ್ನು ಪಡೆಯಲಿಚ್ಛೆವುಳ್ಳ ಪುಸ್ತಕ ವ್ಯಾಪಾರಿಗಳೇ ಮೊದಲಾದ ಸರ್ವರೂ ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರಿಗೆ ಬರೆದು ತರಿಸಿಕೊಳ್ಳಬಹುದು

ಎಂ ಪಿ ಲಿಂಗಪ್ಪಯ್ಯ ಹೆಡ್ ಮಾಸ್ಟರು, ಇಟ್ಟಿಗೇಗೂಡು,
[186-5] ಎ ವಿ ಸ್ಕೂಲು, ಮೈಸೂರು.

THE MYSORE GOVERNMENT SECURITY LIFE AND MARRIAGE ASSURANCE COMPANY, Ltd.,

Head Office. MYSORE

NOTICE

1 With reference to the notice of Mr P L Rajapal, Chief Manager, National Insurance and Banking Co, Ltd, Amritsar, published in the *Vrittanta Patrike* dated 11th, 18th and 25th ultimo, I beg to bring to the notice of the public that my services were not dispensed with by the Amritsar Company voluntarily, but it has been done so only after I gave my resignation for the Chief Agency as per my letter No 110, dated 12th August I am at a loss to know why the Chief Manager was pleased to get such notice published in such an ambiguous way although he has advised me his wish that I should continue the Chief Agency as per his letter No 7903 dated $\frac{10.8.1913}{1.9.1913}$ i e, subsequent to my resignation

2 In the meanwhile, our Insurance Policy Holders have already been informed about my having severed the connection of the Amritsar Company as per this office post card notices, dated 16th August, and they have also been advised to remit their premiums direct to the Amritsar Company's Head Office thereafter

3 I know that there are some policy holders who cannot or are not willing to send their premiums to that Company except through me and as such a provision is made in this Company that such policy holders can assign their policies in favour of this Company and this Company in return should issue fresh policies for the same amounts giving credit to the premiums actually paid up to the Amritsar Company

4 It is also to be kindly noted that the notice under question is meant only for the insurance policy holders but not for the provident policy holders whose policies have been transferred by the Amritsar Company to the new Company as per Chief Manager's No 46017 dated 4/7th July, 1913

[208—1] **M L Nagannah,**
Managing Agent.

ವಿಜ್ಞಾಪನೆ

ಮಂಗಳೂರು ಜುವೆಲ್ ಮಾರ್ಟಿನ ' ಆರ್ ಕಮ್ಮತ್‌ರವರು ಈ ಸಲದ ದಸರಾ ಪ್ರದರ್ಶನಕ್ಕೆ ಬಂದಿರುವುದರಿಂದ ಸಕಾಲಕ್ಕೆ ತಮ್ಮ ಗ್ರಾಹಕರಿಗೆ ಸಾಮಾನುಗಳು ದೊರೆಯುವರೆ ಸಾವಕಾಶವಾದುದಕ್ಕೆ ಕ್ಷಮಿಸುವುದು [209-1]

ವೃತ್ತಾಂತ ಪತ್ರಿಕೆ

ಸನ್ ೧೯೧೩ ನೇ ಇಸವಿ ಅಕ್ಟೋಬರ್, ತಾ ೧೬ ನೇ ಗುರುವಾರ

ದಿವಾನರವರ ಅಡ್ರೆಸ್ಸು

ಮೈಸೂರು ಸಂಸ್ಥಾನದ ದಿವಾನರಾದ ಮಿ|| ಎಂ ವಿಶ್ವೇಶ್ವರಯ್ಯನವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಕಳೆದ ಶನಿವಾರ ಓದಿ ಹೇಳಿದ ಅಡ್ರೆಸ್ಸು ಬಹಳ ಸ್ವಾರಸ್ಯವಾದದ್ದಾಗಿಯೂ ಅನೇಕ ವಿಚಾರಗಳು ತಿಳಿದುಬರತಕ್ಕದ್ದಾಗಿಯೂ ಇರುತ್ತದೆ ಈ ಅಡ್ರೆಸ್ಸಿನ ಕೆಲವು ಮುಖ್ಯ ಭಾಗಗಳನ್ನು ಈ ವಾರ ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ ಮೈಸೂರು ಸಂಸ್ಥಾನವನ್ನು ಅಭಿವೃದ್ಧಿಸ್ಥಿತಿಗೆ ತರಬೇಕೆಂತಲೂ, ಪ್ರಜೆಗಳಿಗೆ ಹಿತವನ್ನುಂಟುಮಾಡಬೇಕೆಂತಲೂ ನಮ್ಮ ಗವರ್ನಮೆಂಟಿನವರು ಅನೇಕ ಏರ್ಪಾಡುಗಳನ್ನು ಮುಂದಿಟ್ಟುಕೊಂಡಿದ್ದಾರೆ ಈ ಏರ್ಪಾಡುಗಳ ವಿಷಯದಲ್ಲಿ ನಾವು ಆಗಿಂದಾಗ್ಗೆ ಪ್ರಸ್ತಾಪಮಾಡುತ್ತಾ ಬಂದಿರುತ್ತೇವಾದ ಕಾರಣ ಅವುಗಳನ್ನು ಕುರಿತು ಸದ್ಯದಲ್ಲಿ ಏನೂ ಹೇಳಬೇಕಾದ ಅಗತ್ಯ ಕಾಣುವುದಿಲ್ಲ ಪ್ರಜೆಗಳ ಪೂರ್ಣ ವಿಶ್ವಾಸವನ್ನು ಅವರ ಸಹಾಯವನ್ನು ಪಡೆಯಬೇಕೆಂಬ ಕುತೂಹಲವು ನಮ್ಮ ಗವರ್ನಮೆಂಟಿಗೆ ಉಂಟಾಗಿರುತ್ತದೆ ಇದಕ್ಕೆ ಶ್ರೀಮನ್ಮಹಾರಾಜರವರು ಕರುಣವಿಟ್ಟು ಪ್ರಜಾಪ್ರತಿನಿಧಿ ಸಭೆಯಿಂದ ಒಬ್ಬರಿಗೆ ಪ್ರತಿಯಾಗಿ ನಾಲ್ಕು ಮಂದಿ ಮೆಂಬರುಗಳನ್ನು ನ್ಯಾಯವಿಧಾಯಕ ಸಭೆಗೆ ಚುನಾವಣೆಮಾಡಬಹುದೆಂದು ದಯಪಾಲಿಸಿರುವುದೂ, ಪ್ರಜಾಪ್ರತಿನಿಧಿ ಸಭೆಯಿಂದ ಸಂಪದಭ್ಯುದಯ ಸಮಾಜಕ್ಕೆ ಎಂಟು ಜನ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸಬಹುದೆಂದು ಅಪ್ಪಣೆಕೊಡಿಸಿರುವುದೂ ದೃಷ್ಟಾಂತವಾಗಿ ಹೇಳಬಹುದು ಈ ಏರ್ಪಾಡಿನ ದೆಸೆಯಿಂದ ಪ್ರಜೆಗಳಲ್ಲಿ ದೇಶಾಭಿಮಾನವು ಇನ್ನೂ ವಿಶೇಷವಾಗಿ ಹೆಚ್ಚಾಗಬೇಕು ಗವರ್ನಮೆಂಟಿನವರು ನಮಗೆ ಹೆಚ್ಚಾದ ಸ್ವಾತಂತ್ರ್ಯವನ್ನು ವಹಿಸುವುದಕ್ಕೆ ಸಿದ್ಧರಾಗಿರುವಲ್ಲಿ ನಾವು ನಮ್ಮ ಸಂಸ್ಥಾನವನ್ನು ಅಭಿವೃದ್ಧಿಮಾಡುವಂಥಾ ಘನತರವೂ ಕಷ್ಟಸಾಧ್ಯವೂ ಆದ ಮಹತ್ಕಾರ್ಯಗಳಲ್ಲೆಲ್ಲಾ ಗವರ್ನಮೆಂಟಿನವರಿಗೆ ಸಹಾಯಮಾಡುತ್ತಲೂ, ಬೆಂಬಲವಾಗಿ ನಿಲ್ಲುತ್ತಲೂ ಇರಬೇಕಾದದ್ದು ನಮ್ಮ ಕರ್ತವ್ಯವಾಗಿದೆ

ನಮ್ಮ ಸಂಸ್ಥಾನದಲ್ಲಿ ಹರಿಯತಕ್ಕ ನದಿಗಳಿಂದಲೂ, ಕೆರೆಗಳ ಕೆಳಗೂ ಹೆಚ್ಚು ಹೆಚ್ಚಾಗಿ ತರೀ ಫಸಲುಗಳನ್ನು ಬೆಳೆಯುವುದಕ್ಕೆ ಗವರ್ನಮೆಂಟಿನವರು ಮಾಡುವಂಥಾ ಕಾರ್ಯಗಳನ್ನೆಲ್ಲಾ ನಾವು ಪರಮಸಂತೋಷದಿಂದಲೂ, ಕೃತಜ್ಞತಾಪೂರ್ವಕವಾಗಿಯೂ ಒಪ್ಪಿಕೊಳ್ಳುತ್ತೇವೆ ಈ ವಿಷಯದಲ್ಲಿ ನಮ್ಮ ಸಂಸ್ಥಾನದ ಎಲ್ಲಾ ಭಾಗಗಳ ಪ್ರಜೆಗಳೂ ಗವರ್ನಮೆಂಟಿನವರ ಕೂಡ ಏಕೀಭವಿಸಿ ಕಾರ್ಯಗಳನ್ನು ಸಾರ್ಥಕವಾಗಿಯೂ, ಸರಾಗವಾಗಿಯೂ ನಡೆಯುವಂತೆ ಮಾಡುವರೆಂದು ನಂಬಿ ನಿರೀಕ್ಷಿಸುತ್ತೇವೆ ಇದರಿಂದ ನಮ್ಮ ಸಂಸ್ಥಾನದಲ್ಲಿ ಸುರಿಯುವ ಮಳೆನೀರು ಶೇಖರ ಮಾಡಲ್ಪಟ್ಟು ಶ್ರೇಯಸ್ಕರವಾದ ಕಾರ್ಯಗಳಿಗೆ ವಿನಿಯೋಗ ಮಾಡಿಕೊಳ್ಳಲು ಸಹಾಯವಾಗುವುದು ಸಂಸ್ಥಾನದ ವ್ಯವಸಾಯದ ಇಲಾಖೆಯು ನಮ್ಮ ರೈತರಿಗೆ ಅತ್ಯಂತ ವಿಶೇಷವಾದ ರೀತಿಯಲ್ಲಿ ಫಲಕಾರಿಯಾದದ್ದಾಗಬೇಕು

ಸಂಪದಭ್ಯುದಯ ಸಮಾಜದವರ ಪರ್ಯಾಲೋಚನೆಯಲ್ಲಿರುವ ಅನೇಕ ಏರ್ಪಾಡುಗಳ ಪೈಕಿ ಕೆಲವನ್ನು ಅವರು ಫಲದಾಯಕವಾಗಿ ಮಾಡಿದರೆ ನಾವು ಬಹಳವಾಗಿ ಆನಂದಪಡುತ್ತೇವೆ ಈಗಿನ ಸ್ಥಿತಿಗತಿಯನ್ನೂ ವಿದ್ಯಮಾನಗಳನ್ನೂ ಶೋಧಿಸಿ ಅಭಿವೃದ್ಧಿಯ ಕಾರ್ಯಗಳನ್ನು ಸೂಚಿಸುವುದಕ್ಕೆ ಕೆಲವು ಕಾಲ ಹಿಡಿಯುವುದೆಂಬ ಮಾತನ್ನು ನಾವು ಒಪ್ಪಿಕೊಳ್ಳುತ್ತೇವೆ, ಆದರೆ ಕೆಲವು ಏರ್ಪಾಡುಗಳನ್ನಾದರೂ ರೂಢಿಸುವುದಕ್ಕೆ ಇನ್ನೂ ಸಮಯ ಸಾಕಾಗಲಿಲ್ಲವೆಂಬುವದನ್ನು ನಾವು ಒಪ್ಪಲಾರೆವು ಎಲ್ಲಾ ಭಾಗಗಳಲ್ಲೂ ಸಂಸ್ಥಾನವನ್ನು ಅಭಿವೃದ್ಧಿಗೆ ತರಬೇಕೆಂದು ಕುತೂಹಲಪಡುವುದನ್ನು ನಾವು ಮೆಚ್ಚಿಕೊಳ್ಳುತ್ತೇವೆ, ಆದರೂ ಏಕಕಾಲದಲ್ಲಿ ಸಾಧ್ಯವಲ್ಲದಷ್ಟು ಏರ್ಪಾಡುಗಳನ್ನು ಹಿಡಿದು ಸಾಧಿಸಬೇಕೆಂಬ ಪ್ರಯತ್ನವು ಸಹಜವೆಂದು ಕಾಣುವುದಿಲ್ಲ ನಮ್ಮ ಸಂಸ್ಥಾನಕ್ಕೂ ಇಲ್ಲಿನ ಪ್ರಜೆಗಳ ಸ್ಥಿತಿಗತಿಗೂ ಸೂಕ್ತವೂ ಸಹಜವೂ ಯೋಗ್ಯವೂ ಆದ ರೀತಿಯಲ್ಲಿ ಕಸಬುಗಳನ್ನೂ ಕಲಾಕೌಶಲ್ಯಗಳನ್ನೂ ಕಲಿಸುವುದೇನೋ ಅವಶ್ಯವೆಂದು ನಾವು ಒಪ್ಪಿಕೊಳ್ಳುತ್ತೇವೆ ಪ್ರಜೆಗಳಿಗೆ ಅಂಥಾ ಶಿಕ್ಷಣವು ಲಭ್ಯವಾಗದೆ ಹೋದರೆ ಅದಕ್ಕಾಗಿ ವಿಶೇಷ ಶ್ರಮಪಡುವುದೂ ಹೆಚ್ಚು ದ್ರವ್ಯ ಖರ್ಚುಮಾಡುವುದೂ ವ್ಯರ್ಥವಾಗುತ್ತದೆ ನಮ್ಮ ಸಂಸ್ಥಾನವನ್ನೂ ಇಲ್ಲಿನ ಪ್ರಜೆಗಳ ಯೋಗ್ಯತೆ ಸಾಮರ್ಥ್ಯಾದಿಗಳನ್ನೂ ಚನ್ನಾಗಿ ಬಲ್ಲವರೇ ಮುಂದಾಳುಗಳಾಗಿ ಒಂದು ಕಸಬುಗಳನ್ನು ಅಭಿವೃದ್ಧಿಮಾಡಬೇಕಲ್ಲದೆ ಅದು ಇತರರಿಂದ ಸಾಧ್ಯವಲ್ಲ. ಚಿಕ್ಕಬಳ್ಳಾಪುರದ ಸಿಲ್ಕ್ ಫ್ಯಾಕ್ಟರಿಯನ್ನು ಹಾಕಿ ಪೂರೈಸುವುದನ್ನು ಗವರ್ನಮೆಂಟಿನವರೇ ವಹಿಸಿಕೊಂಡು ಮಾಡಬೇಕಾಗಿ ಒಂದದ್ದನ್ನು ನೋಡಿದರೆ ಅಷ್ಟೇನೂ ಸಂತೋಷಪ್ರದವಾಗಿ ಕಾಣುವುದಿಲ್ಲ ಪ್ರಜೆಗಳು ತಾವಾಗಿಯೇ ಮುಂದೆ ಒಂದು ಅಂಥಾ ಕಾರ್ಯಗಳನ್ನು ಧೈರ್ಯದಿಂದ ನಿರ್ವಹಿಸುವವರಾಗಬೇಕು

ಈಗಿನ ಕಾಲದಲ್ಲಿ ಕಸಬುಗಳನ್ನು ಪ್ರಾರಂಭಿಸುವವರು ಅದರಿಂದ ದ್ರವ್ಯ ಸಂಪಾದನೆಮಾಡಿ ಐಶ್ವರ್ಯವಂತರಾಗುತ್ತಾರೆಂಬ ಮಾತಿನಲ್ಲಿ ನಮಗೆ ಸಂಶಯವಿಲ್ಲ ಆದರೆ ಅಂಥಾ ಕಸಬುಗಳ ದೆಸೆಯಿಂದ ಸಾವಿರಾರು ಪ್ರಜೆಗಳಿಗೆ ಸುಖಜೀವನವನ್ನೂ ನೆಮ್ಮದಿಯನ್ನೂ ಕಲ್ಪಿಸಿಕೊಟ್ಟಪಕ್ಷದಲ್ಲಿ ಅವರೇ ಸತ್ಯವಾದ ದೇಶಾಭಿಮಾನಿಗಳೂ ಪ್ರಜಾಬಂಧುಗಳೂ ಆಗುತ್ತಾರೆನ್ನುವುದಕ್ಕೆ ಸಂಶಯವಿಲ್ಲ ವಿಶೇಷ ಲಾಭವನ್ನು ತರುವಂಥಾ ಕಸಬುಗಳನ್ನು ಪ್ರಾರಂಭಿಸತಕ್ಕವರು ಅದಕ್ಕೆ ತುಂಬಾ ಬುದ್ಧಿಯನ್ನೂ ಸಮಯವನ್ನೂ ದ್ರವ್ಯವನ್ನೂ ವಿನಿಯೋಗಿಸುವವರಾಗಬೇಕು ಆತುರಪಟ್ಟು ಕಾರ್ಯಪ್ರಾರಂಭಮಾಡಿ ನಿರ್ವಹಿಸುವ ಸಮಯ ಬಂದಾಗ ಸಾಮರ್ಥ್ಯ ಸಾಲದೆ ನಿಲ್ಲತಕ್ಕವರಿಂದ ಆದು ಸಾಧ್ಯವಲ್ಲ ಆದಕಾರಣ ನಮ್ಮ ದಿವಾನರವರು ಮೈಸೂರು ಸಂಸ್ಥಾನವನ್ನು ಶ್ರೇಯೋಭಿವೃದ್ಧಿಗೆ ತರಬೇಕೆಂದು ಪಡುತ್ತಿರುವ ವಿಶೇಷವಾದ ಕುತೂಹಲವೂ ಮಾಡುತ್ತಿರುವ ಸಾಹಸ ಪ್ರಯತ್ನಗಳೂ ಸಾರ್ಥಕವಾದ ಫಲಕಾರಿಯಾಗಲೆಂದು ನಾವು ನಂಬಿ ಹಾರೈಸುತ್ತೇವೆ

ಕ್ರಿಸ್ತನನ್ನು ನೋಡಿದವರು ನುಡಿದ ಸಾಕ್ಷಿ.

ಕ್ರಿಸ್ತನು ಬೋಧಕೋದ್ಯೋಗವನ್ನು ಆರಂಭಿಸುವದಕ್ಕಿಂತ ಮುಂಚೆ ಯೋಹಾನನೆಂಬ ಮಹಾಋಷಿಯು ಪರ್ವತದ ತೊಪ್ಪಲುಗಳಲ್ಲಿ ವಾಸಮಾಡುತ್ತಲಿದ್ದನು ಆ ದೇಶದ ಪ್ರಜೆಗಳು ಗುಂಪುಗುಂಪಾಗಿ ಆತನ ಬಳಿಗೆ ಆತನ ಉಪದೇಶವನ್ನು ಸ್ವೀಕರಿಸಿ ಸಮೀಪದಲ್ಲಿ ಹರಿಯುತ್ತಿದ್ದ ನದಿಯಲ್ಲಿ ಆತನಿಂದ ಸ್ನಾನದೀಕ್ಷೆಯನ್ನು ಪಡೆಯುತ್ತಿದ್ದರು ಆ ಋಷಿಯನ್ನು ಕುರಿತು—ಈತನೇ ಲೋಕರಕ್ಷಕನಾದ ಕ್ರಿಸ್ತನಿರಬಹುದೇ ? ಎಂದು ಅನೇಕರು ಅನುಮಾನಿಸುತ್ತಿರಲು, ಯೋಹಾನನು ಅವರಿಗೆ—ನಾನು ಮಾಡಿಸುವ ಸ್ನಾನದೀಕ್ಷೆಯು ನೀರಿನದು ಆದರೆ ನಿಮ್ಮ ನಡುವೆ ಒಬ್ಬನು ನಿಂತಿದ್ದಾನೆ ಆತನೇ ನನ್ನ ಹಿಂದೆ ಬರತಕ್ಕ ಕ್ರಿಸ್ತನು ಆತನು ನನಗಿಂತ ಶಕ್ತನು ಆತನ ಕೆರದ ಬಾರನ್ನು ಬಿಚ್ಚುವ ಯೋಗ್ಯತೆಯು ನನಗಿಲ್ಲ ಆತನು ಪವಿತ್ರಾತ್ಮದಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನದೀಕ್ಷೆಯನ್ನು ಮಾಡಿಸುವವನು ಎಂದು ಸಾಕ್ಷಿ ನುಡಿದನು

ಹೀಗೆ ಆ ಯತಿಯು ಕ್ರಿಸ್ತನನ್ನು ಕುರಿತು ಸಾಕ್ಷಿ ನುಡಿಯುತ್ತಿರುವ ಸಮಯಕ್ಕೆ ಸರಿಯಾಗಿ ಕ್ರಿಸ್ತನೇ ಜನಗಳೆಲ್ಲರ ಎದುರಿಗೆ ಯೋಹಾನನ ಮುಂದೆ ಬಂದು ನಿಂತು ಯತೀಶ್ವರನೇ, ನನಗೂ ಸ್ನಾನದೀಕ್ಷೆಯನ್ನು ಮಾಡಿಸು ಎಂದು ಕೇಳಿದನು ಅದಕ್ಕೆ ಯೋಹಾನನು ಜ್ಞಾನದೃಷ್ಟಿಯಿಂದ ಈತನೇ ಲೋಕರಕ್ಷಕನಾದ ಕ್ರಿಸ್ತನೆಂದು ತಿಳಿದು ಆತನಿಗೆ ನಾನು ನಿನ್ನಿಂದ ಸ್ನಾನದೀಕ್ಷೆ ಮಾಡಿಸಿಕೊಳ್ಳತಕ್ಕವನಾಗಿರುವಲ್ಲಿ ನೀನು ನನ್ನ ಬಳಿಗೆ ಬರಬಹುದೇ ? ಎಂದು ತಡೆಯುತ್ತಿದ್ದನು

ಕೆಲವು ಕಾಲ ಗತಿಸಿದ ನಂತರ ಪುನಃ ತನ್ನ ಬಳಿಗೆ ಬರುತ್ತಿರುವ ಕ್ರಿಸ್ತನನ್ನು ಯೋಹಾನದೀಕ್ಷಿತನು ನೋಡಿ ತನ್ನ ಶಿಷ್ಯರನ್ನು ಕರೆದು ಅವರಿಗೆ ಆತನನ್ನು ತೋರಿಸಿ—ಅಗೋ, ಲೋಕದ ಪಾಪವನ್ನು ಹೊತ್ತುಕೊಂಡು ಹೋಗುವ (ಪರಿಹಾರಮಾಡುವ) ದಕ್ಕಾಗಿ ದೇವರು ನೇಮಿಸಿದ ಯಜ್ಞಪಶು ಈತನ ವಿಷಯವಾಗಿಯೇ ನಾನು ಹೇಳುತ್ತಿದ್ದದ್ದು ಜ್ಞಾಪಿಸಿಕೊಳ್ಳಿರಿ ಎಂದರೆ ನನ್ನ ಹಿಂದೆ ಒಬ್ಬನು ಬರುತ್ತಾನೆ ಆತನು ನನಗೆ ಮುಂದಿನವನಾದ್ದಾನೆ ಯಾಕಂದರೆ ನನಗಿಂತ ಮೊದಲೇ ಇದ್ದನು ನನಗೂ ಆತನ ಗುರುತಿಲ್ಲ ಆದರೆ ಆತನನ್ನು ಜನಗಳಿಗೆ ತಿಳಿಯಪಡಿಸುವದಕ್ಕೋಸ್ಕರವೇ ನಾನು ನೀರಿನಲ್ಲಿ ಸ್ನಾನದೀಕ್ಷೆ ಮಾಡಿಸುವವನಾಗಿ ಬಂದೆನು ಅಂದನು ಮತ್ತು ಯೋಹಾನನು ತಿರಿಗಿ ಸಾಕ್ಷಿ ಕೊಟ್ಟು ಹೇಳಿದ್ದೇನಂದರೆ—ದೇವರ ಆತ್ಮವು ಪಾರಿವಾಳದಂತೆ ಆಕಾಶದಿಂದ ಇಳಿದು ಬರುವದನ್ನು ನೋಡಿದೆನು ಅದು ಆತನ ಮೇಲೆ ನೆಲೆಗೊಂಡಿತ್ತು ನನಗೂ ಆತನ ಗುರುತಿರಲಿಲ್ಲ ಆದರೆ ನೀರಿನಿಂದ ಸ್ನಾನದೀಕ್ಷೆ ಮಾಡಿಸುವದಕ್ಕೆ ನನ್ನನ್ನು ಕಳುಹಿಸಿದವನು (ದೇವರು)—ಯಾವನ ಮೇಲೆ ಪವಿತ್ರಾತ್ಮನು ಇಳಿದುಬಂದು ಇರುವುದನ್ನು ನೀನು ನೋಡುವಿಯೋ ಆತನೇ ಪವಿತ್ರಾತ್ಮನಿಂದ ಸ್ನಾನದೀಕ್ಷೆ ಮಾಡಿಸುವವನು ಎಂದು ತಾನೇ ನನಗೆ ಹೇಳಿದನು ನಾನು ಆ ಪವಿತ್ರಾತ್ಮನು ಈತನ ಮೇಲೆ ಇಳಿದುಬಂದು ನೆಲಸಿದ್ದನ್ನು ನೋಡಿ ಈತನೇ ದೇವರ ಕುಮಾರನೆಂದು ಸಾಕ್ಷಿ ನುಡಿದಿದ್ದೇನೆ ಅಂದನು

ಈ ಯೋಹಾನದೀಕ್ಷಿತನ ಚರಿತ್ರೆಯನ್ನು ಸಂಕ್ಷೇಪವಾಗಿ ಹೇಳುತ್ತೇವೆ ಈತನ ತಂದೆಯು ಒಬ್ಬ ಅರ್ಚಕನು ತಂದೆ ತಾಯಿಗಳಿಬ್ಬರೂ ಸ್ವಾಮಿಯ ಎಲ್ಲಾ ಆಜ್ಞೆಗಳನ್ನೂ ನೇಮನಿಷ್ಠೆಗಳನ್ನೂ ಕೈಕೊಂಡು ತಪ್ಪಿಲ್ಲದೆ ನಡೆಯುವ ದೇವರ ದೃಷ್ಟಿಯಲ್ಲಿ ಸತ್ಪುರುಷರೂ ನೀತಿವಂತರೂ ಆಗಿದ್ದರು ಅವರಿಬ್ಬರು ದಿನಹೋದವರಾಗಿದ್ದರೂ ಅವರಿಗೆ ಮಕ್ಕಳಿರಲಿಲ್ಲ

ಆದರೆ ಈತನ ತಂದೆಯು ದೇವತಾರ್ಚನೆ ಮಾಡುವಾಗೆಲ್ಲಾ ದೇವರ ತನಗೊಂದು ಗಂಡುಮಗುವಾಗಬೇಕೆಂದು ಪ್ರಾರ್ಥಿಸುತ್ತಿದ್ದು ಈ ಯೋಹಾನನೆ ಪಡೆದನು ಆ ಬಾಲಕನು ಬೆಳೆದು ದೊಡ್ಡವನಾದ ಮೇಲೆ ಲೋಕದ ಸುಖಭೋಗಗಳನ್ನು ಪರಿತ್ಯಾಗಮಾಡಿ ಅರಣ್ಯದಲ್ಲಿ ಏಕಾಂತದಲ್ಲಿ ಧ್ಯಾನಪರನಾಗಿ ತಪಸ್ವಿಯಾಗಿದ್ದನು ಇವನು ಒಂಟೇಕೂದಲಿನಿಂದ ನೆಯ್ದು ಕಂಬಳಿಯನ್ನು ಹೊದ್ದು ನಡುವಿಗೆ ತೊಗಲಿನ ನಡುಕಟ್ಟನ್ನು ಕಟ್ಟಿಕೊಂಡಿದ್ದನು ಗೆಡ್ಡೆ ಗೆಣಸು ಕಾಡುಜೇನು ಇವೇ ಅವನ ಆಹಾರ ಅವನು ಅವನ ತಂದೆಯ ಹಾಗೆ ಸತ್ಪುರುಷನೂ ನೀತಿವಂತನೂ ದೇವರಲ್ಲಿ ಅಚಂಚಲವಾದ ಭಕ್ತಿಯುಳ್ಳವನೂ ಆಗಿದ್ದನು ಪಕ್ಷಪಾತವಿಲ್ಲದೆ ತನ್ನ ಬಳಿಗೆ ಬಂದವರನ್ನು ತಿದ್ದಿ ಅವರ ತಪ್ಪು ದೋಷಗಳನ್ನು ಬಿಡಿಸಲ್ಪಡಿಸಿದನು

ಆ ಕಾಲದಲ್ಲಿ ಆಚಾರ ನಿರತರಾಗಿ ಇತರರನ್ನು ದುರಾಚಾರಿಗಳೆಂದು ತಿರಸ್ಕರಿಸಿ ತಮ್ಮನ್ನೇ ಅತ್ಯಂತ ಶ್ರೇಷ್ಠರೆಂದು ಭಾವಿಸುತ್ತ ಶ್ರೇಷ್ಠಕುಲೋದ್ಭವರೆಂದು ಹೊಗಳಿಕೊಂಡು ಕಪಟನಿರತರಾಗಿದ್ದ ಫರಿಸಾಯರಿಗೆ ಆತನು ಹೇಳಿದ್ದು —ಎಲೈ ಸರ್ಪಜಾತಿಯವರೇ, ಮುಂದೆ ಕಾಣಬರುವ ದೇವರ ಕೋಪದಿಂದ ತಪ್ಪಿಸಿಕೊಳ್ಳುವದಕ್ಕೆ ನಿಮಗೆ ಮನಸ್ಸುಂಟೋ ? ಹಾಗಾದರೆ ನಿಮ್ಮ ಮನಸ್ಸುಗಳನ್ನು ದೇವರ ಕಡೆಗೆ ತಿರುಗಿಸಿಕೊಂಡು ತಕ್ಕ ಫಲಗಳಿಂದ ನೀವು ಸದ್ಗುಣವಂತರೆಂದು ತೋರಿಸಿರಿ ನಾವು ಅಬ್ರಹಾಮನೆಂಬ ದೇವಭಕ್ತನ ವಂಶದವರು ಎಂದು ಗರ್ವಪಡಬೇಡಿರಿ ಆಗಲೇ ಮರಗಳ ಬೇರಿಗೆ ಕೊಡಲಿ ಇಟ್ಟದೆ ಒಳ್ಳೇ ಫಲ

ಕೊಂಡದ ಪ್ರತಿ ಮರವನ್ನೂ ಕಡಿದು ಬೆಂಕಿಯಲ್ಲಿ ಹಾಕುವರು ಎಂಬುವದೇ ಮುಂತೆ ಎತ್ತುವವರು ಆತನ ಬಳಿಗೆ ಬಂದು ಗುರುವೇ ನಾವೇನು ಮಾಡಬೇಕು? ಎಂದು ಅವನನ್ನು ಕೇಳಲು, ಅವನು ನೇಮಿಸಿದ ಹಾಸಲಿಗಿಂತ ಹೆಚ್ಚಾಗಿ ಏನೂ ವಸೂಲ್ ಮಾಡಬೇಡಿರಿ ಎಂದಾಜ್ಞಾಪಿಸಿದನು ಸಿಪಾಯಿಗಳು ಆತನ ಬಳಿಗೆ ಬಂದು—ನಾವೇನು ಮಾಡಬೇಕೆಂದು ವಿಜ್ಞಾಪಿಸಲು, ಅವನು ಅವರಿಗೆ ಯಾರನ್ನಾದರೂ ಬಾಧಿಸಿ ಯಾರ ಮೇಲಾದರೂ ಚಾಡಿಹೇಳಿ ದುಡ್ಡು ಕಸುಕೊಳ್ಳಬೇಡಿರಿ, ನಿಮ್ಮ ಸಂಬಳದಲ್ಲಿ ತೃಪ್ತರಾಗಿರ್ರಿ ಎಂದು ಹೇಳಿದನು ಕಡೆಗೆ ಆ ದೇಶದ ಪ್ರಭುತ್ವ ವನ್ನು ಮಾಡುತ್ತಿದ್ದ ಹೆರೋದರಾಜನೆಂಬ ಅರಸನು ದುರ್ಮಾರ್ಗಪ್ರವರ್ತಕ ನಾಗಿರಲು ಈ ಮಹಾತ್ಮನು ಆ ದೊರೆಯನ್ನು ಕಂಡು ನೀನು ನಿನ್ನ ತಮ್ಮನ ಹೆಂಡತಿಯನ್ನು ಇಟ್ಟುಕೊಂಡಿರುವದು ನ್ಯಾಯವಲ್ಲವೆಂದು ಗದರಿಸಲು—ಆ ದುಷ್ಟ ದೊರೆಯು ಕೋಪಗೊಂಡು ಈ ಯತಿಯನ್ನು ಕಾರಾಗೃಹದಲ್ಲಿಟ್ಟು ಕಡೆಗೆ ಆ ಹೆಂಗಸಿನ ದುಷ್ಪ್ರೇರಣೆಗೆ ಮನಸೋತು ಆತನನ್ನು ಕೊಲ್ಲಿಸಿದರು

ಯೋಹಾನನು ಇಂತಹ ಸತ್ಯವಂತನು ನಿಷ್ಕಪಟಿಯು ಪಕ್ಷಪಾತವಿಲ್ಲದವನು ಈತನು ಅಧಿಕಾರಕ್ಕೆ ಭಯಪಡದೆ ದೋಷಗಳನ್ನು ಖಂಡಿಸಿದನು ಮರಣಕ್ಕೆ ಭಯಪಡದೆ ಎದುರಾಯಿಸಿದವನು ಕ್ರಿಸ್ತನನ್ನು ನೋಡಿ, ಪರೀಕ್ಷಿಸಿ ನುಡಿದ ಸಾಕ್ಷಿಯನ್ನು ವಾಚಕರ ಅವಗಾಹನೆಗಾಗಿ ಕ್ರೋಢೀಕರಿಸಿದ್ದೇವೆ ಕ್ರಿಸ್ತನ ಕೂಡ ಇದ್ದು, ಆತನನ್ನು ಪರೀಕ್ಷಿಸಿದ ಈ ಸತ್ಪುರುಷನ ಸಾಕ್ಷಿಯು ವಾಚಕರ ಅಂಗೀಕಾರಕ್ಕೆ ಯೋಗ್ಯವಾಗಿದೆಯಲ್ಲವೇ ?

ಒಳದೇಶದ ವೃತ್ತಾಂತಗಳು.

ಕಳೆದ ಶುಕ್ರವಾರವೂ ರಾಜಧಾನಿಯಲ್ಲಿ ಪ್ರಾಣಿಗಳ ಪ್ರದರ್ಶನ ನಡೆದು, ಉತ್ತಮವಾಗಿ ಸಾಕಿದ್ದ ಸ್ವಾಮಿಗಳಿಗೆ ಮಹಾರಾಜರವರು ಬಹುಮಾನಗಳನ್ನು ದಯಪಾಲಿಸಿದರು

* * *

ನಮ್ಮ ಸಂಸ್ಥಾನದ ಚೀಫ್ ಜಡ್ಜಿ ರಾದ ರಾವ್‌ಬಹದೂರ್ ಮ|| ಪಿ ಎಸ್ ಕೃಷ್ಣರಾಯರು ತಮ್ಮ ದೇಹದ ಅಶಕ್ತತೆಯ ನಿಮಿತ್ತವಾಗಿ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು ವಿಶ್ರಾಂತಿಪಡೆಯಲು ಅಪೇಕ್ಷಿಸುತ್ತಿದಾರೆಂದು ಕೇಳುತ್ತೇವೆ

* * *

ಕಳೆದ ವಾರ ರಾಜಧಾನಿಯಲ್ಲಿ 2 3 ದಿನ ಮೋಡ ಹಾಕಿಕೊಂಡು ಜಡಿಮಳೆ ಹಿಡಿದಿತ್ತು ಮಳೆಯು ನಿಂತನೆ ಇನ್ನೂ ತಪ್ಪಲಿಲ್ಲ ಇದುವರೆಗೆ 2-3 ಪ್ಲೇಗ್ ಕಾಯಿಲೆಗಳು ಕಾಣಿಸಿಕೊಂಡಿದೆ ಕೆಲವು ಮನೆಗಳಲ್ಲಿ ಇಲಿ ಬಿದ್ದ ವರ್ತಮಾನವೂ ಉಂಟು

* * *

ಈದಿನ ಪ್ರಜಾಪ್ರತಿನಿಧಿ ಸಭೆಯವರು ತಮ್ಮಲ್ಲಿ ನಾಲ್ಕು ಮಂದಿ ಮೆಂಬರು ಗಳನ್ನು ನ್ಯಾಯವಿಧಾಯಕ ಸಭೆಗೆ ಚುನಾವಣೆ ಮಾಡುತ್ತಾರೆ ಸುಮಾರು ಹದಿಮೂರು ಮಂದಿ ಮೆಂಬರುಗಳು ಚುನಾವಣೆಗೆ ನಿಂತುಕೊಂಡು ತಮಗೆ ಓಟು ಕೊಡಬೇಕೆಂದು ಕೇಳುವರು

* * *

ಪುತ್ತೂರಿನ ಶ್ರೀ ಶಾರದಾ ವಾಚಕಮಂದಿರದ ಆರನೇ ವರುಷೋತ್ಸವವು ಕಳೆದ ಗುರುವಾರ ಆ ವಾಚಕಮಂದಿರದಲ್ಲಿ ನೆರವೇರಿತೆಂದೂ, ಸಭಾಧ್ಯಕ್ಷಸ್ಥಾನವನ್ನು ಮ|| ಪಂತೆ ಮಂಗೇಶರಾವ್, ಬಿ ಎ , ಎಲ್ ಟಿ ಯವರು ಪ್ರೇಮಪೂರ್ವಕವಾಗಿ ಸಮ್ಮತಿಸಿ ವಹಿಸಿದ್ದರೆಂದೂ ತಿಳಿಯುತ್ತೇವೆ

* * *

ನಮ್ಮ ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮ ಎಂ. ಎ ನಾರಾಯಣಯ್ಯಂಗಾರ್ಯರವರು ಕಳೆದ ವಾರ ಸಿಂಲಾಪಟ್ಟಣಕ್ಕೆ ಪ್ರಯಾಣ ಮಾಡಿದರು. ಹಿಂದೂಸ್ಥಾನದ ಪರಸ್ಪರ ಸಹಾಯ ಸಂಘಗಳ ಗವರ್ನ್‌ಮೆಂಟ್ ರಿಜಿಸ್ಟ್ರಾರುಗಳೆಲ್ಲಾ ಕಲೆತು ಅಲ್ಲಿ ಒಂದು ಮಹಾಸಭೆಯನ್ನು ಈ ವಾರವೂ ಮುಂದಿನ ವಾರವೂ ನಡಿಸುತ್ತಾರೆ ನಮ್ಮ ರಿಜಿಸ್ಟ್ರಾರ್‌ರವರು ಈ ಸಭೆಯನ್ನು ಮುಗಿಸಿಕೊಂಡು ಮುಂದಿನ ತಿಂಗಳ ಮೊದಲನೇ ವಾರದಲ್ಲಿ ಅಲ್ಲಿಂದ ವಾಪಸು ಬರುವವರಾಗಿದಾರೆ

* * *

ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮಿ ಸಿ ಶ್ರೀಕಂಠೇಶ್ವರ ಅಯ್ಯರವರು ಕಳೆದ ಶುಕ್ರವಾರ ಬೆಳಗ್ಗೆ ರಾಜಧಾನಿಯ ಗವರ್ನ್‌ಮೆಂಟ್ ಹೌಸ್ ಬಂಗಲೆಯಲ್ಲಿ ಅಜಮಾಯಿಷಿ ಮಾಡುತ್ತಿದ್ದಾಗ ನುಣುಪಾದ ನೆಲದ ಮೇಲೆ ಕಾಲು ಜಾರಿಬಿದ್ದು, ಅವರ ಎಡಗೈಯಿನ ಮುಂಭಾಗಕ್ಕೆ ಬಹಳ ಏಟು ತಗುಲಿತು ಕೂಡಲೇ ಅವರನ್ನು ಆಸ್ಪತ್ರೆಗೆ ಸಾಗಿಸಿಕೊಂಡು ಹೋಗಿ ಡಾಕ್ಟರಿಂದ ಚಿಕಿತ್ಸೆ ಮಾಡಿಸಿದರು ಅವರಿಗೆ ವಾಸಿಯಾಗಲು ಇನ್ನೂ 2 3 ವಾರ ಹಿಡಿಯುವುದೆಂದು ಕೇಳುತ್ತೇವೆ

* * *

ಬೆಂಗಳೂರು ಮಾಮೂಲ್ ಪೇಟೆ ಜಂಗಮಮಠ ಉರುಫ಼ ಗಂಜಾಮ್ಮಠಕ್ಕೆ ನೇಮಕವಾದ ಮರಿಯನ್ನು ಮ್ಯಾನೇಜ್‌ಮೆಂಟಿನ ವಿಷಯದಲ್ಲಿ ವಿವಾದವು ಹಾರಿ ನಡೆಯುತ್ತಿರಲಾಗಿ, ಅನ್ಯಥಾ ಸಾಧನೆಯನ್ನು ಮಾಡಬೇಕೆಂಬ ಇರಾದೆಯಿಂದ ಸದರಿ ಶಾಖಾ ಸಂಬಂಧವಿಲ್ಲದವರು ಸದರಿ ಮರಿಯನ್ನು ಅಪಹರಿಸಿರುವ ವಿಷಯದಲ್ಲಿ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿವಾದ ಹುಟ್ಟಿದೆ ಎಂದು ಹಾಲಿ ಮಠದ ಮ್ಯಾನೇಜ್‌ಮೆಂಟು ನೋಡತಕ್ಕ ಶಿವಕುಮಾರಸ್ವಾಮಿಶರ್ಮ ಎಂಬುವರು ತಿಳಿಸುತ್ತಾರೆ

* * *

ಈ ವರುಷ ರಾಜಧಾನಿಗೆ ಬಂದಿರುವ ಪ್ರಜಾಪ್ರತಿನಿಧಿಗಳಿಗೂ, ಅಧಿಕಾರಿಗಳಿಗೂ ಸ್ಥಳೀಯ ದೊಡ್ಡಮನುಷ್ಯರಿಗೂ ಸರ್ಕಾರದವರು ಪದ್ಧತಿಯಪ್ರಕಾರ ಸರ್ಕಾರದ ಔತಣವನ್ನು ಮೊನ್ನೆ ಭಾನುವಾರ ಮಧ್ಯಾಹ್ನ ಕೋಮುವಾರು ನಡಿಸಿದರು ಈ ಔತಣವು ಬಹಳ ವಿಶದಶೆಯಿಂದಲೂ, ತೃಪ್ತಿಕರವಾಗಿಯೂ ಜರುಗಿತು ಪ್ರತಿನಿಧಿಗಳೇ ಮೊದಲಾದವರೆಲ್ಲಾ ಭೋಜನಾನಂತರ ಸಂಸ್ಕೃತ ಪಾಠಶಾಲೆಯಲ್ಲಿ ಸೇರಿದಾಗ ಸಂಗೀತಾದಿ ವಿನೋದಗಳು ನಡೆದವು ದಿವಾನ್‌ರವರು ಅತಿಥಿಗಳನ್ನು ಆದರದಿಂದ ಕಂಡು ಸತ್ಕಾರಮಾಡಿದರು

* * *

ಲೈಫ್ ಇನ್ಷೂರೆನ್ಸ್ ಕಂಪನಿ ಆಕ್ಟಿನ ಪ್ರಕಾರ ಅಮೃತಸಾರದ ನ್ಯಾಷನಲ್ ಇನ್ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯವರು 25,000 ರೂಪಾಯನ್ನು ನಾತ್ತ ಇಂಡಿಯಾ ಗವರ್ನ್‌ಮೆಂಟಿನಲ್ಲಿ ಡಿಪಾಜಟ್ಟು ಕಟ್ಟಬೇಕಾಗಿತ್ತು. ಆದರೆ ಆ ಕಂಪನಿಯವರು ಇದುವರೆಗೆ 75,000 ರೂಪಾಯಿ ಡಿಪಾಜಟ್ಟು ಮಾಡಿದ್ದು, ಈಚೆಗೆ ಇನ್ನೂ 25,000 ರೂಪಾಯಿ ಡಿಪಾಜಟ್ಟು ಮಾಡಿ, ತಮ್ಮ ಕಂಪನಿಯ ಒಟ್ಟು ಡಿಪಾಜಟ್ಟನ್ನು ಗವರ್ನ್‌ಮೆಂಟಿಗೆ ಒಂದು ಲಕ್ಷ ರೂಪಾಯಿ ಭರ್ತಿಮಾಡಿರುತ್ತಾರೆಂದು ಕಂಪನಿಯ ಚೀಫ್ ಮ್ಯಾನೇಜರವರು ತಿಳಿಸಿರುತ್ತಾರೆ

* * *

ಬೆಂಗಳೂರು ದಂಡಿನಲ್ಲಿರುವ ಲೇಟ್ ಭೂಪಾಲಂ ಸುಬ್ಬರಾಯಶೆಟ್ಟರ ಪತ್ನಿ ತಾಯಮ್ಮನವರು ದಂಡಿನಲ್ಲಿ ಒಂದು ದೇವಸ್ಥಾನವನ್ನು ಪ್ರತಿಷ್ಠೆ ಮಾಡಿದ್ದಲ್ಲದೆ ಅದಕ್ಕೆ ಸಂಬಂಧಪಟ್ಟ ಧರ್ಮಚತ್ರದಲ್ಲಿ ಬಡವರಾದ 4 ಮಂದಿ ಅನಾಥ ಬ್ರಾಹ್ಮಣವಿದ್ಯಾರ್ಥಿಗಳಿಗೂ, 6 ಮಂದಿ ಅನಾಥ ವೈಶ್ಯವಿದ್ಯಾರ್ಥಿಗಳಿಗೂ ಭೋಜನಾದಿಗಳನ್ನು ನಡಿಸುತ್ತಾ ಬರಬೇಕೆಂದು ನಿಶ್ಚಯಿಸಿಕೊಂಡು ಇವೆರಡೂ ಶಾಶ್ವತವಾಗಿ ನಡೆಯುವಂತೆ 20,000 ರೂಪಾಯಿಗಳನ್ನು ಮೈಸೂರು ಗವರ್ನ್‌ಮೆಂಟಿನಲ್ಲಿ ಫಂಡು ಹಾಕಿರುತ್ತಾರೆಂದೂ, ಇದಕ್ಕೆ ಸರ್ಕಾರದವರು ಶೇಕಡಾ ವರುಷಕ್ಕೆ ನಾಲ್ಕು ರೂಪಾಯಿನಂತೆ ಬಡ್ಡಿಯನ್ನು ಆರು ತಿಂಗಳಿಗೊಂದಾವರ್ತಿ ಪಾವತಿ ಮಾಡುವಂತೆ ಒಪ್ಪಿಕೊಂಡಿದಾರೆಂದೂ ತಿಳಿಸಲು ಸಂತೋಷಪಡುತ್ತೇವೆ

* * *

ಕಳೆದ ಭಾನುವಾರ ಸಾಯಂಕಾಲ ರಾಜಧಾನಿಯ ಅರಸು ಮಕ್ಕಳ ಸಂಘ (ಕ್ಲಬ್) ದವರು ವಸಂತ ಮಹಲಿನಲ್ಲಿ ಶ್ರೀಮನ್ ಯುವರಾಜರವರಿಗೆ ಸತ್ಕಾರ ಮಾಡಿ, ಅವರು ವಿದೇಶ ಸಂಚಾರವನ್ನೂ ಪೂರೈಸಿಕೊಂಡು ದಯಮಾಡಿದ ವಿಷಯದಲ್ಲಿ ಉಂಟಾಗಿರುವ ಪರಮಾನಂದವನ್ನು ಕೃತಜ್ಞತಾಪೂರ್ವಕವಾಗಿ ವಿವರಿಸಿ ಅವರಿಗೆ ಅಡ್ರೆಸನ್ನು ಒಪ್ಪಿಸಿದರು ಯುವರಾಜರವರು ಆ ತಮ್ಮ ರಾಜಬಂಧುವರ್ಗದವರ ಅಭಿನಂದನ ಪೂರ್ವಕವಾದ ವಿಜ್ಞಾಪನೆಯನ್ನು ಆದರಾತಿಶಯದಿಂದ ಅಂಗೀಕರಿಸಿ ಬಹು ವಿವೇಕಪೂರ್ವಕವಾದ ಪ್ರತ್ಯುತ್ತರವನ್ನು ದಯಪಾಲಿಸಿ ತೃಪ್ತಿಪಡಿಸಿದರು ಈ ಸಂಬಂಧವಾಗಿ ರಾಜಬಂಧುವರ್ಗದವರು ಯುವರಾಜರವರನ್ನು ಕರಸಿಕೊಂಡು ಒಂದು ವಿಶೇಷವಾದ ಸಂತೋಷಕೂಟವನ್ನು ನಡಿಸುವವರಾಗಿದಾರೆಂದು ತಿಳಿಯುತ್ತೇವೆ

* * *

ಕಳೆದ ಶನಿವಾರ ಬೆಳಗ್ಗೆ ಶ್ರೀಮನ್ ಯುವರಾಜರವರು ರಾಜಧಾನಿಯ ಪ್ರದರ್ಶನಶಾಲೆಗೆ ದಯಮಾಡಿ ಪ್ರಮುಖ ದೊಡ್ಡ ಮನುಷ್ಯರ ಸಭೆಯ ಅಗ್ರಸ್ಥಾನವನ್ನು ಅಂಗೀಕರಿಸಿ ವಿದ್ಯಾಶಾಖೆಯ ಪ್ರದರ್ಶನವನ್ನು ಪ್ರಾರಂಭಮಾಡಿ ಈಗಿನ ವಿದ್ಯಾಕ್ರಮಗಳು ತುಂಬಾ ಅತೃಪ್ತಿಕರವಾಗಿದೆಯೆಂದೂ, ಸಾಮಾನ್ಯ ವಿದ್ಯೆಯ ಜೊತೆಗೆ ಮಕ್ಕಳಿಗೆ ಕಸಬು ಕೈಗಾರಿಕೆ ಶಿಕ್ಷಣವನ್ನು ಮಾಡಿಸಬೇಕಾದದ್ದು ಪ್ರಜೆಗಳ ಶ್ರೇಯಸ್ಸಿಗೆ ಅವಶ್ಯಕವಾಗಿದೆಯೆಂದೂ ಅಪ್ಪಣೆಕೊಡಿಸಿದರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಲ್‌ರಾದ ಮಿ|| ಟಿ ಡೆನ್‌ಹಂ ಸಾಹೇಬರವರೂ, ಗವರ್ನ್‌ಮೆಂಟ್ ನಾರ್ಮಲ್ ಸ್ಕೂಲಿನ ಹೆಡ್‌ಮಾಸ್ಟರಾದ ಮ|| ಡಿ ವೆಂಕಟರಾಮಯ್ಯನವರೂ ವಿದ್ಯಾಶಿಕ್ಷಣದ ವಿಚಾರವಾಗಿಯೂ, ಆ ಪ್ರದರ್ಶನದ ವೃತ್ತಾಂತವನ್ನೂ ಕುರಿತು ಭಾಷಣಗಳನ್ನು ಮಾಡಿದರು

ಮೈಸೂರ ಗೆಜೆಟ್.

ವಿಶೇಷಪತ್ರಿಕೆ

1913ನೇ ಇಸವಿ ಅಕ್ಟೋಬರ್ ತಾರೀಖು 11ರಲ್ಲು ನವರಾತ್ರಿ ಮಹೋತ್ಸವ ಪ್ರಯುಕ್ತವಾದ ದರ್ಬಾರಿನಲ್ಲಿ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರ್‌ರವರು ಬಿರುದುಗಳನ್ನು ದಯಪಾಲಿಸಿ ಅಪ್ಪಣೆ ಕೊಡಿಸಿರುವುದನ್ನು ಈ ಮೂಲಕ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸುತ್ತೆ

ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲ ದೇಶಾವತಂಸ ಕರ್ಣಾಟಕ ಜನಪದ ಸಂಪದಧಿಷ್ಠಾನಭೂತ ಶ್ರೀಮನ್ಮಹಿಸೂರ ಮಹಾಸಂಸ್ಥಾನ ಮಧ್ಯ ದೇದೀಪ್ಯಮಾನ ನಿಖಿಲ ಕಲಾನಿಧಿ ಕುಲಕ್ರಮಾಗತ ರಾಜಕ್ಷಿತಿಪಾಲ ಪ್ರಮುಖ ರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮವೀರ ನರಪತಿ ಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲಪಯಃ ಪಾರಾವಾರ ಕಲಾನಿಧಿ ಶಂಖಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತರಾದ ಕರ್ಣಾಟಕ ಸಿಂಹಾಸನಾಧೀಶ್ವರ ಶ್ರೀಮತ್ಕೃಷ್ಣ ರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ ಎಸ್ ಐ ಯವರು ಶಾಲಿವಾಹನ ಶಕೆ 1836 ನೇ ಪ್ರಮಾದೀಚನಾಮ ಸಂವತ್ಸರದ ಆಶ್ವಯುಜ ಶುದ್ಧ ದ್ವಾದಶಿ ಶನಿವಾರದಲ್ಲು ನವರಾತ್ರೀ ಮಹೋತ್ಸವ ಪ್ರಯುಕ್ತವಾದ ದರ್ಬಾರಿನಲ್ಲಿ ನಮ್ಮ ಅನುಗ್ರಹಕ್ಕೆ ಪಾತ್ರರಾದ—(1) ಹೆಬ್ಬಳಾಳು ವೆಲಪನೂರು ನಂಜುಂಡಯ್ಯನವರಿಗೆ ರಾಜಮಂತ್ರಪ್ರವೀಣ ಎಂಬ ಬಿರುದನ್ನೂ, (2) ಮಸಪಲ್ಲಿ ಮುತ್ತಣ್ಣನವರಿಗೆ ರಾಜಕಾರ್ಯಪ್ರಸಕ್ತ ಎಂಬ ಬಿರುದನ್ನೂ, (3) ದೇವನಹಳ್ಳಿ ಅಪ್ಪುರಾಯರಿಗೆ ಲೋಕಹಿತೋತ್ಸುಕ ಎಂಬ ಬಿರುದನ್ನೂ, (4) ಹಗಿನಾಳು ನಂಜುಂಡರಾಜೆ ಅರಸಿನವರಿಗೆ ಲೋಕಹಿತೈಷಿ ಎಂಬ ಬಿರುದನ್ನೂ, (5) ರಾಮಾನುಜಪುರಂ ಆನನ್ದಾಂಪಿಳ್ಳೆ ನರಸಿಂಹಾಚಾರ್ಯರವರಿಗೆ ಪ್ರಾಕ್ತನವಿಮರ್ಶ ವಿಚಕ್ಷಣ ಎಂಬ ಬಿರುದನ್ನೂ ತಕ್ಕ ಮರ್ಯಾದೆಗಳೊಡನೆ ದಯಪಾಲಿಸಿರುತ್ತಾರೆ

ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳು ದೇಶದ ಏಳಿಗೆಗೆ ಸಹಾಯಕವಾದ ಅಥವಾ ಜನೋಪಕಾರಕವಾದ ಕಾರ್ಯಗಳನ್ನು ಮಾಡಿರುವ ವಿಷಯದಲ್ಲಿ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರ್‌ರವರು ತಮ್ಮ ಮೆಚ್ಚುಗೆಯನ್ನು ಈ ದಿವಸ ನವರಾತ್ರಿ ಮಹೋತ್ಸವ ಪ್ರಯುಕ್ತವಾದ ದರ್ಬಾರಿನಲ್ಲಿ ತಿಳಿಯಪಡಿಸತಕ್ಕದ್ದೆಂದು ಅಪ್ಪಣೆ ದಯಪಾಲಿಸಿರುವದನ್ನು ಈ ಮೂಲಕ ಪ್ರಕಟಿಸಿರುತ್ತದೆ

(1) ಮ|| ರಾ|| ಉರಗಹಳ್ಳಿ ಕೃಷ್ಣಯ್ಯಂಗಾರ್ಯರವರು, ಉರಗಹಳ್ಳಿ, ಕೊಳ್ಳೇಗಾಲ ತಾಲ್ಲೂಕು—ಭಾರೀ ಬೇಸಾಯಗಾರರಿಗೆ ಮೇಲ್ಪಂಕ್ತಿಯಾಗಿರುವಂತೆ ಉತ್ತಮ ತರಹೆಯ ಬೇಸಾಯವನ್ನು ರೂಢಿಗೆ ತಂದದ್ದು

(2) ಮ|| ರಾ|| ಅತ್ತಿಬೆಲೆ ಸಿದ್ಧಬಸಪ್ಪನವರು, ಬೆಂಗಳೂರು —ವಿದ್ಯಾಪ್ರಾಚುರ್ಯಕ್ಕೆ ಧನ ಸಹಾಯಮಾಡಿದ್ದು

(3) ಮ|| ರಾ|| ರುಮಾಲೆ ರುದ್ರಪ್ಪನವರು, ದೊಡ್ಡಬಳ್ಳಾಪುರ —ಧರ್ಮ ಸತ್ರವನ್ನು ಕಟ್ಟಿಸಿದ್ದು

(4) ಮ|| ರಾ|| ಕಿತ್ತಂದೂರು ತಿಮ್ಮಣ್ಣಭಟ್ಟರು, ತೀರ್ಥಹಳ್ಳಿ —ಮಲನಾಡಿನ ವ್ಯಾಪಾರಾಭಿವೃದ್ಧಿಯ ವಿಷಯದಲ್ಲಿ ಮಹತ್ತನ್ನು ತೋರ್ಪಡಿಸಿದ್ದು

(5) ಮ|| ರಾ|| ಜ ಕೆ ಪದ್ಮರಾಜಯ್ಯನವರು, ಪ್ರವಣಬೆಳಗೊಳ — ಧರ್ಮಾರ್ಥವಾಗಿ ವೈದ್ಯಶಾಲೆಯನ್ನು ಕಟ್ಟಿಸಿದ್ದು

ನವರಾತ್ರಿ ಉತ್ಸವಗಳು.

ಇಂಗ್ಲೀಷ್ ದರ್ಬಾರು

ಕಳೆದ ಬುಧವಾರ ಬೆಳಗ್ಗೆ ರಾಜಧಾನಿಯಲ್ಲಿ ನವರಾತ್ರಿಕಟ್ಟೆಯ ಆಯುಧ ಗಜಾಶ್ವಗಳ ಮೆರವಣಿಗೆಯೂ ಪೂಜಾದಿಗಳೂ ವಿಶೇಷ ವೈಭವದಿಂದ ನೆರವೇರಿದವು ಸಾಯಂಕಾಲ ಇಂಗ್ಲಿಷ್ ದರ್ಬಾರು ನಡೆಯಿತು. ಬ್ರಿಟಿಷ್ ರೆಸಿಡೆಂಟರಾದ ಸರ್ ಹ್ಯೂ ಡೇಲಿಯವರು ಅರಮನೆಯ ದಿವ್ಯವಾದ ನಾಲ್ಕು ಕುದುರೆಗಳನ್ನು ಕಟ್ಟಿದ ಸಾರೋಟಿನಲ್ಲಿ ಕುಳಿತು ಸಮಸ್ತ ಮರ್ಯಾದೆಗಳೊಡನೆ ಗೌರವಾರ್ಥದ 13 ತೋಪುಗಳು ಹಾರುತ್ತಿರುವಲ್ಲಿ ಅರಮನೆಗೆ ಚಿತ್ತೈಸಿದರು ಅವರ ಕೂಡ ಅಸಿಸ್ಟೆಂಟ್ ರೆಸಿಡೆಂಟರವರು ಕುಳಿತಿದ್ದರು ಅರಮನೆಯ ಬಾಗಿಲಲ್ಲಿ ಸರ್ದಾರ್ ಗೋಪಾಲಕೃಷ್ಣ ಅರಸಿನವರೂ, ಗವರ್ನ್‌ಮೆಂಟ್ ಚೀಫ್ ಸೆಕ್ರೆಟರಿ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರ್ಯರು ಕಾದಿದ್ದು ರೆಸಿಡೆಂಟರವರಿಗೆ ಸುಸ್ವಾಗತವನ್ನು ಬಯಸಿ ಸಾರೋಟಿನಿಂದ ಅವರನ್ನು ಇಳಿಸಿ ಸಂಗಡ ಅರಮನೆಯೊಳಕ್ಕೆ ಕರೆದುಕೊಂಡುಹೋದರು ದರ್ಬಾರ್ ಹಾಲಿನ ಬಾಗಿಲಲ್ಲಿ ದಿವಾನ್ ಮ|| ಎಂ. ವಿಶ್ವೇಶ್ವರಯ್ಯನವರು ಕಾದಿದ್ದು ರೆಸಿಡೆಂಟರವರನ್ನು ಎದುರುಗೊಂಡು ಸಂಗಡ ಕರೆದುಕೊಂಡು ಹೋಗುವಲ್ಲಿ ಶ್ರೀಮನ್ ಮಹಾರಾಜರವರು ದಿವ್ಯಾಲಂಕಾರ ಭೂಷಿತರಾಗಿ ದಯಮಾಡಿ ರೆಸಿಡೆಂಟರವರನ್ನು ಕಂಡು ಅವರ ಕೂಡ ಸಿಂಹಾಸನದ ಬಳಿಗೆ ಚಿತ್ತೈಸಿ ಬಲಪಾರ್ಶ್ವದಲ್ಲಿ ಹಾಕಿದ್ದ ಶ್ರೇಷ್ಠವಾದ ಪೀಠವನ್ನು ಅವರಿಗೆ ತೋರಿಸಿ, ವಾದ್ಯಗಳು ಘೋಷರಿಯುತ್ತಿರುವಲ್ಲಿ ಸಿಂಹಾಸನವನ್ನು ಹತ್ತಿ ಕುಳಿತುಕೊಂಡು ದರ್ಬಾರ್ ಪ್ರಾರಂಭಮಾಡಿದರು. ಯೂರೋಪಿಯನ್ ಅತಿಥಿಗಳೆಲ್ಲಾ ಬಂದು ಮಹಾರಾಜರವರಿಗೆ ವಂದಿಸಿ ಕುರ್ಚಿಗಳ ಮೇಲೆ ಕುಳಿತುಕೊಂಡರು ದಿವಾನ್‌ರೇ ಮೊದಲಾದ ಸಂಸ್ಥಾನದ ಮುಖ್ಯಾಧಿಕಾರಿಗಳೂ, ಮುಖ್ಯ ಸರದಾರರೂ ಕುರ್ಚಿಗಳನ್ನು ಅಲಂಕರಿಸಿದರು. ಶ್ರೀಮನ್ ಯುವರಾಜರವರು ಸಿಂಹಾಸನದ ಎದುರುಪಾರ್ಶ್ವದಲ್ಲಿ ಶ್ರೇಷ್ಠಾಸನವನ್ನು ಅಲಂಕರಿಸಿದರು ದರ್ಬಾರು ಪ್ರಾರಂಭವಾದ ಕೂಡಲೆ ಕೆಳಗಡೆ ಜಟ್ಟಿಕಾಳಗಗಳೂ, ಕರ್ಣಾಟಕ ಕುಸ್ತಿಗಳೂ, ಪಟ್ಟಾವರಿಸೆಗಳೂ ಬಹು ಉತ್ಸಾಹಕರವಾಗಿ ನಡೆದವು ಇನ್ನೊಂದು ಭಾಗದಲ್ಲಿ ಸವಾರರು ಕುದುರೆಗಳ ಮೇಲೆ ಕುಳಿತು ಬ್ಯಾಂಡ್ ವಾದ್ಯದ ಲಯಕ್ಕೆ ಸರಿಯಾಗಿ ಕುದುರೆಗಳನ್ನು ನಾನಾ ಪ್ರಕಾರವಾಗಿ ತಿರುಗಿಸಿದ್ದು ಬಹಳ ನೇತ್ರಾನಂದಕರವಾಗಿತ್ತು ಮತ್ತೊಂದು ಕಡೆ ಬಾಣ ಬಿರಸುಗಳ ತಮಾಷೆಯು ಬಹು ರಮ್ಯವಾಗಿ ನಡೆಯುತ್ತಿತ್ತು ಕೆಲವು ಹೊತ್ತಿನ ಮೇಲೆ ದರ್ಬಾರಿನಲ್ಲಿ ಮಹಾರಾಜರವರ ಅನುಜ್ಞೆಯನ್ನು ಪಡೆದು ದಿವಾನ್‌ರೇ ಮೊದಲಾದ ಮುಖ್ಯಾಧಿಕಾರಿಗಳು ಯೂರೋಪಿಯನ್ ಸರದಾರರುಗಳಿಗೂ ಧೊರೆಸಾನಿಗಳಿಗೂ ಹಾರಗಳನ್ನು ಹಾಕಿ ತುರಾಯಿಗಳನ್ನು ಕೊಟ್ಟರು ದಿವಾನ್‌ರವರು ರೆಸಿಡೆಂಟರವರನ್ನು ದರ್ಬಾರ್ ಹಾಲಿನ ಮೆಟ್ಟಿಲುಗಳ ತನಕ ಕರೆತಂದು ಬೀಳ್ಕೊಂಡರು ಬಳಿಕ ಮೊದಲಿನಂತೆ ಸರ್ದಾರರೂ ಸೆಕ್ರೆಟರಿಯವರೂ ರೆಸಿಡೆಂಟರನ್ನು ಕರೆದು ತಂದು ಅರಮನೆಯ ಬಾಗಿಲಲ್ಲಿ ಕಾದಿದ್ದ ಸಾರೋಟನ್ನು ಹತ್ತಿಸಿ ಬೀಳ್ಕೊಂಡರು ಮೊದಲಿನಂತೆ ಅರಮನೆ ಮರ್ಯಾದೆಗಳೊಡನೆ ರೆಸಿಡೆಂಟರವರು ತೋಪುಗಳು ಹಾರುತ್ತಿರುವಲ್ಲಿ ಹೊರಟು ಗವರ್ನ್‌ಮೆಂಟ್ ಹೌಸಿಗೆ ದಯಮಾಡಿದರು. ಅತ್ತಲಾಗಿ ದರ್ಬಾರಿನಲ್ಲಿದ್ದ ಸರ್ದಾರರೂ ಧೊರೆಸಾನಿಗಳೂ ಒಬ್ಬೊಬ್ಬರಾಗಿ ಸಿಂಹಾಸನದ ಬಳಿಗೆ ಬಂದು ಮಹಾರಾಜರವರಿಗೆ ವಂದಿಸಿ ದರ್ಬಾರ್ ಮಂದಿರದಿಂದ ತೆರಳಿದರು ತರುವಾಯ ಮಹಾರಾಜರವರು ಸ್ವಲ್ಪ ಹೊತ್ತು ದರ್ಬಾರ್ ನಡಿಸಿದರು ದರ್ಬಾರಿಗಳಿಗೆಲ್ಲಾ ಹಾರಾ ಅಡಿಕೆಲೆಗಳು ಹಂಚಿದ ಮೇಲೆ ಎಲ್ಲರೂ ಮುಜರೆ ಮಾಡಿದರು ಅಲ್ಲಿಗೆ ಆ ದಿನದ ದರ್ಬಾರು ಮುಕ್ತಾಯವಾಯಿತು.

ವಿಜಯದಶಮಿ ಉತ್ಸವವು ಪದ್ಧತಿಯ ಪ್ರಕಾರ ಕಳೆದ ಗುರುವಾರ ಬೆಳಗ್ಗೆ ಪಟ್ಟದಾನೆ ಪಟ್ಟದ ಕುದುರೆಗಳು ಅರಮನೆಯಿಂದ ಸಕಲ ಮರ್ಯಾದೆಗಳೊಡನೆ ಮೆರವಣಿಗೆಯಾಗಿ ಹೊರಟು ದೊಡ್ಡಪೇಟೆಯ ಮಾರ್ಗವಾಗಿ ಬನ್ನಿಮಂಟಪಕ್ಕೆ ಕಳುಹಲ್ಪಟ್ಟವು ಈ ಉತ್ಸವವನ್ನು ಅನೇಕ ಸಹಸ್ರ ಪ್ರಜೆಗಳು ರಸ್ತೆಗಳ ಉದ್ದಕ್ಕೂ ಕಿಕ್ಕಿರಿಯುವಂತೆ ನಿಂತು ನೋಡಿ ನೇತ್ರಾನಂದ ಹೊಂದಿದರು ಸಾಯಂಕಾಲ 11 ಗಂಟೆಗೆ ಶ್ರೀಮನ್ ಮಹಾರಾಜರವರು ಬಹು ಅಪೂರ್ವವಾದ ವಸ್ತ್ರಾಭರಣಗಳನ್ನು ಧರಿಸಿ ಜಯಧ್ವನಿಯೂ ವಾದ್ಯಘೋಷವೂ ಆಗುತ್ತಿರುವಲ್ಲಿ ಆನೆಯ ಮೇಲೆ ಬಂಗಾರದ ಅಂಬಾರಿಯಲ್ಲಿ ಕುಳಿತುಕೊಂಡರು ಅವರ ಎಡಪಾರ್ಶ್ವದಲ್ಲಿ ಶ್ರೀಮನ್ ಯುವರಾಜರವರು ಮಂಡಿಸಿದರು ಸೈನಿಕರನ್ನೂ ವಾದ್ಯಗಾರರನ್ನೂ ಹಿಂದೆಮುಂದೆ ಬಿಟ್ಟುಕೊಂಡು ಶ್ರೀಮನ್ ಮಹಾರಾಜರವರು ದೊಡ್ಡಪೇಟೆಯ ಮಾರ್ಗವಾಗಿ ಮೆರವಣಿಗೆಯಲ್ಲಿ ದಯಮಾಡಿ 6½ ಗಂಟೆಗೆ ಬನ್ನೀಮಂಟಪವನ್ನು ತಲುಪಿದರು ದಾರಿಯ ಉದ್ದಕ್ಕೂ ರಾಜಭಕ್ತಿಯುಳ್ಳ ಪ್ರಜೆಗಳು ತಮ್ಮ ಅಂಗಡಿ, ಮನೆ, ಮಠಗಳ ಮುಂಭಾಗದಲ್ಲಿ ಮಹಾರಾಜರವರಿಗೆ ಪುಷ್ಪಫಲಾದಿಗಳನ್ನು ಒಪ್ಪಿಸಿದರು ಮ್ಯುನಿಸಿಪಲ್ ಕೌನ್ಸಿಲರುಗಳು ಪೊಲೀಸ್ ಸ್ಟೇಷನ್ ಬಳಿ ಹಾಕಿದ್ದ ಚಪ್ಪರದಲ್ಲಿ ಕಾದಿದ್ದು ಮಹಾಸ್ವಾಮಿಯವರಿಗೆ ಫಲಪುಷ್ಪಗಳನ್ನು ಅರ್ಪಣೆಮಾಡಿದರು

ಬನ್ನೀ ಮಂಟಪದಲ್ಲಿ ಮಹಾರಾಜರವರು ಯುವರಾಜರೊಡನೆ ಕುದುರೆಗಳನ್ನು ಹತ್ತಿ ಮೈದಾನಕ್ಕೆ ದಯಮಾಡಿ ಸೈನ್ಯಗಳ ಕವಾತನ್ನು ಪರಾಂಬರಿಸಿ ಬಂದು ಧ್ವಜಸ್ತಂಭದ ಬಳಿ ನಿಂತುಕೊಂಡಾಗ ಸೈನ್ಯಗಳು ಎಡದಿಂದ ಬಲಪಾರ್ಶ್ವಕ್ಕೆ ತೆರಳಿದವು ಸಂತೋಷ ಸೂಚಕವಾದ ಸುರುಟುಗಳೂ ಗೌರವಾರ್ಥವಾದ 21 ತೋಪುಗಳೂ ಆದವು ಅಲ್ಲಿಂದ ಮಹಾರಾಜರವರು ಮಂಟಪಕ್ಕೆ ವಾಪಸು ದಯಮಾಡಿ ಶಾಸ್ತ್ರೋಕ್ತ ಪೂಜಾದಿಗಳನ್ನು ತೀರಿಸಿಕೊಂಡು, ಅಧಿಕಾರಿಗಳೇ ಮೊದಲಾದವರು ಮುಜರೆ ಆದ ಬಳಿಕ ರಾತ್ರಿ 8¼ ಘಂಟೆಗೆ ಆನೆಯ ಮೇಲೆ ಅಂಬಾರಿಯಲ್ಲಿ ಸಹೋದರರ ಸಮೇತ ಕುಳಿತು ಮೆರವಣಿಗೆಯಲ್ಲಿ ವಾಪಸು ಅರಮನೆಗೆ ಚಿತ್ತೈಸಿದರು ಉದ್ದಕ್ಕೂ ದೀಪೋತ್ಸವವೂ ಪ್ರಜೆಗಳ ಸಂದಣಿಯೂ ಅಪೂರ್ವವಾಗಿತ್ತು ಅರಮನೆಯ ಅಂಬಾವಿಲಾಸದಲ್ಲಿ ಮಹಾರಾಜರವರು ಭದ್ರಾಸನದ ಮೇಲೆ ಚಿತ್ತೈಸಿ ಅರಸಳ್ಗಿತ ನುಜರೆ ಮುಗಿದದ್ದು ಬಳಿದ ಮೇಲೆ ದರ್ಬಾರನ್ನು ಮುಕ್ತಾಯಮಾಡಿ ದಯಮಾಡಿದರು

ಶುಕ್ರವಾರವೂ ಶನಿವಾರವೂ ಮಹಾರಾಜರವರು ಅಂಬಾವಿಲಾಸದಲ್ಲಿ ಚಿತ್ತೈಸಿ ದರ್ಬಾರ್ ನಡಿಸಿದರು ಸರ್ದಾರರೂ, ಅರಸುಗಳೂ ಅಧಿಕಾರಿಗಳೇ ಮೊದಲಾದವರೂ, ಮಿಲಿಟರಿ ಹುದ್ದೇದಾರರೂ, ಪ್ರಜಾಪ್ರತಿನಿಧಿಗಳೂ ಮುಜರೆ ಮಾಡಿ ನಜರುಗಳನ್ನೊಪ್ಪಿಸಿದರು ಶನಿವಾರದ ದಿನ ನಡೆದ ದರ್ಬಾರಿನಲ್ಲಿ ಸಂಸ್ಕೃತ ವಿದ್ವತ್ ಪರಿಕ್ಷಾ ಫಲಿತಾಂಶಗಳನ್ನು ಅರಮನೆ ಕಂಟ್ರೋಲರವರು ಓದಿ ಅರಿಕೆ ಮಾಡಿ, ತೇರ್ಗಡೆ ಹೊಂದಿದ ಪಂಡಿತರಿಗೆಲ್ಲಾ ಮಹಾರಾಜರವರ ಹಸ್ತದಿಂದ ಬಹುಮಾನಗಳನ್ನೂ ಸರ್ಟಿಫಿಕೇಟುಗಳನ್ನೂ ಕೊಡಿಸಿದರು ಅದೇ ದಿನ ಮಹಾರಾಜರವರು ಕೆಲವು ಅಧಿಕಾರಿಗಳಿಗೆ ಬಿರುದುಗಳನ್ನು ಖಿಲ್ಲತ್ತುಗಳ ಸಮೇತ ದಯಪಾಲಿಸಿದರು ಮತ್ತು ಕೆಲವು ಸಾಹುಕಾರಿ ದೊಡ್ಡ ಮನುಷ್ಯರಿಗೆ ಅವರು ಮಾಡಿರುವ ಪರೋಪಕಾರ ಕಾರ್ಯಗಳನ್ನು ನೋಡಿ ಮೆಚ್ಚಿಕೊಂಡು ಖಿಲ್ಲತ್ತುಗಳನ್ನು ದಯಪಾಲಿಸಿರುತ್ತಾರೆ ಈ ಎರಡು ಸಂಗತಿಗಳನ್ನೂ ಇನ್ನೊಂದು ಭಾಗದಲ್ಲಿ ಪ್ರಕಟ ಮಾಡಿರುತ್ತೇವೆ

ತಾಲ್ಲೋಕು ವರ್ತಮಾನಗಳು.

ಬೆಂಗಳೂರು ತಾ|| ಯಲಹಂಕ — ಇಲ್ಲಿ 15-20 ದಿನಗಳಿಂದ ಮಳೆಯು ಚೆನ್ನಾಗಿ ನಡೆದು ಹೊಲ ಗದ್ದೆಗಳು ಚೆನ್ನಾಗಿವೆ ಮತ್ತು ಊರಿನ ಹವಾ ಬಹಳ ಮಟ್ಟಿಗೆ ಚೆನ್ನಾಗಿದೆ ಮ್ಯುನಿಸಿಪಾಲಿಟಿಯು ತೃಪ್ತಿಕರವಾಗಿದೆ ರಾತ್ರಿ ಕಾಲಗಳಲ್ಲಿ ಮ್ಯುನಿಸಿಪಲ್ ಲಾಂದ್ರಾಗಳು ಕ್ರಮವಾಗಿ ಹಚ್ಚಲ್ಪಡುತ್ತವೆ ಆಗಾಗ್ಗೆ ಬೆಂಗಳೂರಿನಿಂದ ಸ್ಯಾನಿಟರಿ ಇನ್ಸ್‌ಪೆಕ್ಟರು ಬಂದು ಟವನ್ ಪಾಕೀಜಾ ವಿಷಯದಲ್ಲಿ ಬಹಳ ಮುತುವರ್ಜಿಯಿಂದ ನೋಡುತ್ತಿದ್ದಾರೆ — ಇಲ್ಲಿನ ಶ್ರೀರಾಮ ಮಂದಿರದಲ್ಲಿ ನವರಾತ್ರಿ ಮಹೋತ್ಸವದ ಪೂಜಾದಿಗಳೂ, ಹರಿಕಥೆ ಭಜನೆಗಳೂ ಪ್ರತಿ ನಿತ್ಯವೂ ಬಹಳ ಉತ್ಸಾಹದಿಂದ ಮೆಂಬರುಗಳು ನಡಿಸುತ್ತಿದ್ದಾರೆ — ಇಲ್ಲಿ ಸುಮಾರು 8-9 ತಿಂಗಳಿನಿಂದಲೂ ನಡೆಯುತ್ತಿರುವ ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಾಮಗಾರಿಯಿಂದ ಬಹಳ ಜನ ಬಡಜನರಿಗೆ ಜೀವನ ದೊರಕುತ್ತಿರುವುದು ಈ ಬರಗಾಲದಲ್ಲಿ ಬಹಳ ಸಹಾಯವಾಗಿದೆ — ಈ ಊರಿನ ಸಂತೆಯಲ್ಲಿ ವರ್ತಕರು ಹಳೇ ಪಿಚ್ಚೇರುಗಳನ್ನೇ ಉಪಯೋಗಿಸಿ ವ್ಯಾಪಾರ ತೆಗೆದುಕೊಳ್ಳುವವರಿಗೆ ಬಹಳ ಅನ್ಯಾಯಮಾಡುತ್ತಾರೆ ಇದನ್ನು ಪೋಲೀಸ್ ಆಫೀಸರು ಸಾಧ್ಯವಾದಷ್ಟು ಜಾಗ್ರತೆಯಲ್ಲಿ ಕ್ರಮಪಡಿಸಿ ಹೊಸ ತೂಕದ ಬಟ್ಟು ಮತ್ತು ಹೊಸ ಸೇರುಗಳನ್ನು ಇಡುವಂತೆ ಮಾಡುತ್ತಾರೆಂದು ಹಾರೈಸುತ್ತೇನೆ ಊರಿನಲ್ಲಿಯೂ ಸಹ ಕೆಲವು ಅಂಗಡಿಗಳಲ್ಲಿ ಇದೇ ರೀತಿ ಮಾಡುತ್ತಿರುವದಕ್ಕೆ ನಿಗಾಕೊಟ್ಟಾರೆಂದು ನಂಬಿದೇನೆ

ಚೆನ್ನಪಟ್ಟಣ — ಹವಾ ಚನ್ನಾಗಿದೆ ಮುನ್ಸಿಪಲ್ ಕೆಲಸಗಳು ತೃಪ್ತಿಕರವಾಗಿ ನಡೆಯುತ್ತ ಸೆಪ್ಟಂಬರ್ ತಾ 29 ನೇ ಮಂಗಳವಾರ ಮೈಸೂರು ಬ್ಯಾಂಕಿನ ಏಜಂಟರಾದ ರೋಸ್ ಸಾಹೇಬರು ಡೈರೆಕ್ಟರಾದ ಮ|| ಚಂಗಯ್ಯ ಶೆಟ್ಟಿರು ಸಹಾ ಮುಸಾಫರ ಬಂಗಲೆಯಲ್ಲಿ ಅಮಲ್ದಾರ್ರು, ವರ್ತಕರು, ಷೇರುದಾರ್ರುಗಳನ್ನು ಕರಸಿಕೊಂಡು ಬ್ಯಾಂಕಿನ ಉದ್ದೇಶಗಳನ್ನು ತಿಳಿಸಿದರು ಪ್ಲೀಡರ್ ಮ|| ಗರುಡಾಚಾರ್ರು, ಸಾಹುಕಾರ್ರು ಅಬ್ದುಲ್ ಖುದೂಸ್ ಸಾಹೇಬರು ಮುಂತಾದವರು ಸಭಿಕರ ಅಭಿಮತವನ್ನು ಏಜಂಟರಿಗೂ ಮ|| ಚಂಗಯ್ಯ ಸೆಟ್ಟರಿಗೂ ತಿಳಿಸಿದರು ಏಜಂಟರು ಬ್ಯಾಂಕು ಅಭಿವೃದ್ಧಿಯಾದ ಒಡನೆ ಈ ಊರಿನಲ್ಲಿಯೂ ಬ್ಯಾಂಕು ಇಡುವುದಾಗಿ ಅಪ್ಪಣೆ ಕೊಡಿಸಿದರು — ಕಸಾಯಿ ಅಂಗಡಿಗಳು ಊರಿನೊಳಗೆ ಇದ್ದರೆ ಅನಾರೋಗ್ಯವೂ ಅಸಹ್ಯವೂ ಉಂಟಾಗುತ್ತೆಂದು ಸರ್ಕಾರದವರು ಮುನ್ಸಿಪಲ್ ಹಣದಿಂದ ದಕ್ಷಿಣಪಾರ್ಶ್ವದಲ್ಲಿ ಅಂಗಡಿಗಳನ್ನು ಕಟ್ಟಿಸಿದ್ದಾಗ್ಯೂ ಊರಿನಲ್ಲೇ ಅಂಗಡಿ ಮಾಡಿಕೊಂಡು ಕಸರುಗಳನ್ನು ಬೀದಿಯಲ್ಲೂ, ಹಿತ್ತಲುಗಳಲ್ಲೂ ಹಾಕುವದರಿಂದ ಅನಾರೋಗ್ಯಕ್ಕೂ ಅಸಹ್ಯಗಳಿಗೂ ಕಾರಣವಾಗಿದೆ ಪ್ರಜೆಗಳ ಸೌಖ್ಯಕ್ಕೆ ಸರ್ಕಾರದವರು ಹಣ ಖರ್ಚುಮಾಡಿದ್ದಾಗ್ಯೂ ಪ್ರಯೋಜನವಿಲ್ಲದಂತೆ ಕಾಣುತ್ತೆ — ಗರುಡಗಂಬದ ಬೀದಿಯಲ್ಲಿ ರಸ್ತೆ ಸರಿಯಾಗಿಲ್ಲದ್ದರಿಂದ ಮಳೆಗಾಲದಲ್ಲಿ ರೋಜಾಗಿ ತಿರುಗಾಡಲು ಅಶಕ್ಯವಾಗುತ್ತೆ — ಈ ಪ್ರಾಂತ್ಯ ಎಲ್ಲಾ ಕೆರೆಕಟ್ಟೆಗಳೂ ಭರ್ತಿಯಾಗಿದ್ದಾಗ್ಯೂ ಈ ಊರು ಉನ್ನೇರುಕಟ್ಟೆಗೆ ನೀರಿನ ವಸತಿ ಇಲ್ಲದ್ದರಿಂದ ಇನ್ನೂ ಭರ್ತಿಯಾಗಲಿಲ್ಲ ಅಲ್ಪಸ್ವಲ್ಪ ಬರತಕ್ಕ ನೀರುನಹ ಮುಸಲ್ಮಾನರ ಗೋರಿಗಳಮೇಲೆ ಬರುವದರಿಂದ ಅನಾರೋಗ್ಯಕ್ಕೆ ಕಾರಣವಾಗಿದೆ ನಮ್ಮ ಅಮಲ್ದಾರ್ರವರು ಚಿತ್ತಕ್ಕೆ ತಂದುಕೊಂಡು ಕ್ರಮಪಡಿಸುವರೆಂದು ನಂಬಿರುತ್ತೇನೆ.

ಮದ್ದಗಿರಿ — ಇಲ್ಲಿ ಒಂದೆರಡು ವಾರಗಳಿಂದ ಮೋಡಕಟ್ಟಿಕೊಂಡು ವಿಶೇಷ ಕೆರೆಗೆ ನೀರು ಬರತಕ್ಕ ಮಳೆಯಾಗದೆ ಹದ ಮಳೆಯಾಗಿರುತ್ತೆ ಇತರ ಕಡೆಗಳಲ್ಲಿ ಕೆರೆ ಕುಂಟೆಗಳೆಲ್ಲಾ ತುಂಬಿ ತುಳುಕುತ್ತವೆಂದು ಕೇಳಿ ಸಂತೋಷವಾದರೂ ಈ ಟವನ್ ಸಮೀಪದಲ್ಲಿರತಕ್ಕ ಚೋಳೆನಹಳ್ಳಿ, ಬಿಜವಾರ, ಸಿದ್ದಾಪುರ, ಈ ತಲಾವುಗಳಿಗೆ ಸುತರಾಂ ನೀರೇ ಬರಲಿಲ್ಲ ಕಾರ್ತೀಕಕ್ಕೆ ಇಟ್ಟದ್ದು ಖುಷ್ಕಿ ಪಸಲು ಮಳೆ ಇಲ್ಲದೆ ಒಣಗಿಹೋಯಿತು ವೈಶಾಖ ಫಸಲನ್ನಾದರೂ ನೋಡೋಣವೆಂದರೆ ಕೆರೆಗೆ ಇದುವರಿವಿಗೂ ನೀರೇ ಬರಲಿಲ್ಲ — ಈ ಟವನ್‌ನಲ್ಲಿ ಮಲ್ಲೇಶ್ವರ ದೇವಸ್ಥಾನದ ಮುಂಭಾಗದಲ್ಲಿ ನಂದಿ ಧ್ವಜ ಬರಸಿಕ್ಕ ವಾಡಿಕೆಯು ಪೂರ್ವದಿಂದಲೂ ನಡೆದುಬರುತ್ತಾ ಇದೆ ಇಂಥಾದ್ದರಲ್ಲಿ ಈ ವರ್ಷ 9 ನೇ ತಾ ವಿಜಯದಶಮಿ ಉತ್ಸವಕ್ಕಾಗಿ ಮಾಮೂಲ್ ಮೇರೆಗೆ ಮಲ್ಲೇಶ್ವರಸ್ವಾಮಿ, ವೆಂಕಟ್ರಮಣಸ್ವಾಮಿ, ಹಂಪಿಹರೇಶ್ವರಸ್ವಾಮಿ, ರಾಮದೇವರು ಸಹ ಸುಮಾರು 4-4 ಘಂಟೆಗೆ ಹೊರಡಬೇಕಾದ್ದು ತಪ್ಪಿ ಸಾಯಂಕಾಲ 6 ಘಂಟೆಗೆ ಬನ್ನಿಮಂಟಪಕ್ಕೆ ಹೊರಡಿಸಲ್ಪಟ್ಟವು — ಈ ಟವನ್‌ನಲ್ಲಿ ಕೋತಿಗಳ ಹಾವಳಿ ಬಲು ವಿಶೇಷವಾಗಿದೆ ಮಕ್ಕಳು ಹೊರಗೆ ತಿಂಡಿ ಹಿಡಿದುಕೊಂಡು ಬಂದರೆ ನಿರ್ಭಯವಾಗಿ ಕಿತ್ತುಕೊಂಡು ಹೋಗುತ್ತವೆ ಮನುಷ್ಯರ ಭಯವೆಂಬುವುದು ಸ್ವಲ್ಪವೂ ಇಲ್ಲದೆ ಮನೆಗಳಿಗೂ ಅಂಗಡಿಗಳಿಗೂ ಧಾರಾಳವಾಗಿ ನುಗ್ಗಿ ತಮಗೆ ಬೇಕಾದವುಗಳನ್ನು ತೆಗೆದುಕೊಂಡು ತಿಂದುಬಿಡುತ್ತವೆ ಈ ಮಧ್ಯೆ ಊರೊಳಗೆ ಕಾಯಿಪಲ್ಯ ಬೆಳೆಸತಕ್ಕವರ ಪಾಡು ಹೇಳಬೇಕಾದ್ದಿಲ್ಲ ಹಿಂದೆ ಇದ್ದ ಅಮಲ್ದಾರ್ ಮ|| ರಾಮಚಂದ್ರರಾಯರು ಇವುಗಳ ಹಿಂಡನ್ನು ಹಿಡಿಸಬೇಕೆಂದು ಪ್ರಯತ್ನಮಾಡಿದ್ದರು — ಈಗ ಬಂದಿರತಕ್ಕ ನಮ್ಮ ಅಮಲ್ದಾರ್ರಾದರೂ ಈ ವಿಷಯದಲ್ಲೂ, ಟವನ್ ಪಾಕೀಜಾ ವಿಷಯದಲ್ಲೂ ದಯವಿಟ್ಟು ಸ್ವಲ್ಪ ಗಮನಕೊಡುವುದಾದರೆ ಪ್ರಜೆಗಳ ಸೌಕರ್ಯಕ್ಕೆ ಬಹುಮಟ್ಟಿಗೆ ಉಪಕಾರಮಾಡಿದ ಹಾಗಾಗುತ್ತೆ — ಸಬ್ ಅ|| ಸರ್ಜನ್ ರಾದ ಮ|| ರಾಜರತ್ನಂಪಿಳ್ಳೆಯವರು ಕಾಲರಾ ಮತ್ತು ಪ್ಲೇಗ್ ಇರತಕ್ಕ ಗ್ರಾಮಾಂತರಗಳಿಗೆ ಪದೇ ಪದೇ ಹೋಗಿ ಅವರಿಗೆ ಇನಾಕ್ಯುಲೇಷನ್ ಮುಂತಾದ್ದನ್ನು ಮಾಡುತ್ತಾ ಬಂದಿದಾರೆ ಇವರು ಆಸ್ಪತ್ರೆಗೆ ಬರತಕ್ಕ ಬಡವರಿಗೂ ಬಲ್ಲಿದರಿಗೂ ಏಕಸಮನಾಗಿ ಔಷಧೋಪಚಾರವನ್ನು ಕೇವಲ ಶ್ರದ್ಧೆಯಿಂದ ಮಾಡುತ್ತಿದಾರೆ

ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಪ್ರಕಟಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಕರೆಸ್‌ಪಾಂಡೆನ್ಸ್.

ಪಾಸ್‌ಪಟ್ಟಿಕೊಡುವದು

ಅಯ್ಯಾ,

ತೀರ್ಥಹಳ್ಳಿ ತಾಲ್ಲೋಕು ಆಗುಂಬೆ ಕಣಿವೆ ಕೆಳಗೆ ಸೋಮೇಶ್ವರ ಎನ್ನುವ ಊರಲ್ಲಿ ಪಾಸ್‌ಪಟ್ಟಿ ಎಂದು ಮಾರ್ಗಸ್ಥರಿಗೆ ಬಹಳ ತೊಂದರೆಯಾಗುತ್ತಿತ್ತು ಮೈಸೂರ ಜಿಲ್ಲಾದಿಂದ ಕನ್ನಡಾ ಜಿಲ್ಲೆಕ್ಕೆ ತಮ್ಮ ಕೆಲಸದ ಪ್ರಕೃತಿ ಹೋಗುವವರೇ ಆಗಲಿ, ಅಥವಾ ಕನ್ನಡಾ ಜಿಲ್ಲಾದಿಂದ ಮೈಸೂರು ಜಿಲ್ಲೆಕ್ಕೆ ಬಡ ಜನಗಳು ಕೆಲಸಮಾಡಿ ಜೀವನ ದೊರೆಯುವದಕ್ಕೆ ಬರುವರೇ ಆಗಲಿ ಈ ಪ್ಯಾಸ್‌ಪಟ್ಟಿ ದೆಸೆಯಿಂದ ಅವರ ಗೋಳಾಟವನ್ನು ಹೇಳಿದರೆ ತೀರದಿತ್ತು ಮಾರ್ಗಸ್ಥರು ಹಗಲಲ್ಲಾಗಲಿ, ಅಥವಾ ರಾತ್ರಿಯಲಾಗಲಿ ಜರೂರು ಹೋಗತಕ್ಕ ಅಡಚಣೆ ಇದ್ದು ಪಾಸ್‌ಪಟ್ಟಿ ಕೇಳಿದರೆ "ಕೂತುಕೊಳ್ಳಿ", ನಿಂತುಕೊಳ್ಳೀ, ಬಿದ್ದುಕೊಳ್ಳೀ, ಅಥವಾ ನಿನಗೋಸ್ಕರ ಈ ರಾತ್ರಿಯಲ್ಲಿ ಎದ್ದು ಶ್ರಮಪಡಬೇಕಾಗುವದು, 2 ರೂಪಾಯಿ ಕೊಟ್ಟರೆ ಪ್ಯಾಸ್‌ಪಟ್ಟಿ ಕೊಡುವ" ಹೀಗೆಂದು ಲಂಚರುಸುಂ ವಸೂಲ್ಮಾಡಿಕೊಳ್ಳುವ ಪದ್ಧತಿಯು ಇದ್ದಿತು ಬಡಜನಗಳು ತಮ್ಮ ಅಸಂಗತಕ್ಕೆ ಕೊಡಬೇಕಾಗಿ ಬರುತ್ತಿತ್ತು ನಂತರ ದಾರಿ ಖರ್ಚಿಗೆ ಸಾಲದೆ ಅನ್ನ ನೀರಿಗೂ ಪಜೀತಿಪಟ್ಟು ಊರು ಸೇರುತ್ತಿದ್ದರು ಇದನ್ನೆಲ್ಲಾ ದಯಾಳುಗಳಾಗಿ ಬಂದಿರುವ ಮಂಗಳೂರು ಜಿಲ್ಲಾ ಕಲೆಕ್ಟರಾಗಿರುವ ಕೋಟ್‌ಮನ್ ಸಾಹೇಬರವರು ತಿಳಿದು ಸದರಿ ಊರಾಗಿರುವ ಸೋಮೇಶ್ವರಕ್ಕೆ ಸರ್ಕೀಟು ಬಂದವರಾಗಿ ಖುದ್ದು ಪರಾಂಬರಿಸಿ ಪ್ಯಾಸ್‌ಪಟ್ಟಿಯನ್ನು ವಜಾ ಮಾಡಿಸಿರುತ್ತಾರೆ ಈಗ ಸಾವಿರಾರು ಜನಗಳು ಹಂಗ್ ಇಲ್ಲದೆ ಸಂತೋಷದಿಂದ ತಿರುಗುವರು ತಿರುಗುವಂಥಾ ಬಡಜನಗಳ ದುಃಖ ನಿವಾರಣೆಮಾಡಿದಂಥಾ ಲೋಕೋಪಕಾರಿಗಳಾದ ಕೋಟ್‌ಮನ್ ಮಹಾ ಪ್ರಭುಗಳ ಬುದ್ಧಿ ಚತುರೋಕ್ತಿಗೂ ಯಶಸ್ಸು ಕೀರ್ತಿಗೂ ದೇಹಾರೋಗ್ಯಕ್ಕೂ ದೇವರು ಸಹಾಯನಾಗಬೆಂದು ಪ್ರಾರ್ಥಿಸುವೆನು

ಆನಂದೂರು ಎ ಜಿ ಕಾದಪ್ಪಗೌಡ

[ಈ ಪ್ಲೇಗ್ ಪ್ಯಾಸ್‌ಪೋರ್ಟ್ ಚೀಟಿಗಳನ್ನು ತೆಗೆದುಕೊಳ್ಳಬೇಕೆಂಬ ನಿರ್ಬಂಧವು ಗ್ರಾಮಾಂತರಗಳಲ್ಲಿ ಪ್ರಯಾಣಿಕರಿಗೆ ಬಹಳ ಕಷ್ಟನಷ್ಟಗಳನುಂಟುಮಾಡುತ್ತವೆ — ಎಡಿ]

ಮೈಸೂರು ಸಂಸ್ಥಾನದಲ್ಲಿ ಲೇವಾದೇವಿ ಮಾಡತಕ್ಕವರು

ಅಯ್ಯಾ,

ವರ್ತಕರು ವ್ಯಾಪಾರಿಗಳಿಗೆ ಸ್ಥಳದಿಂದ ಸ್ಥಳಕ್ಕೆ ಹುಂಡಿಗಳನ್ನು ಬರೆದು ಕಳುಹಿಸುವುದುಂಟು ಇವುಗಳಿಗೆ ಪ್ರತಿ ಒಂದಕ್ಕೂ ಗವರ್ನ್‌ಮೆಂಟಿನ ರಸೀದಿ ಸ್ಟಾಂಪು ಹಚ್ಚಿರಬೇಕೆಂಬುವುದು ಪ್ರತಿ ಒಬ್ಬ ವ್ಯಾಪಾರಿಗೂ ತಿಳಿದಿದೆ ಈಗ ಹುಂಡಿಗಳನ್ನು ಕೊಡುವ ಅನೇಕ ಬ್ಯಾಂಕರುಗಳು (ವರ್ತಕರು) ಗವರ್ನ್‌ಮೆಂಟ್ ಸ್ಟಾಂಪು ಹಚ್ಚಿದ ಪುಸ್ತಕಗಳನ್ನು ಇಟ್ಟುಕೊಂಡಿಲ್ಲ ಅವರು ಆಸಹ್ಯವಾದ ತುಂಡು ಕಾಗದಗಳಲ್ಲಿ ಹುಂಡಿ ಬರೆಯುವುದು ಮಾತ್ರವೇ ಅಲ್ಲ ಅದಕ್ಕೆ ರಸೀತಿ ಸ್ಟಾಂಪು ಹಚು ವುದನ್ನು ಬಿಟ್ಟು ಪೋಸ್ಟ್ ಆಫೀಸಿನ ಒಂದಾಣೆ ತಿಕೀಟುಗಳನ್ನು ಹಚ್ಚಿ ಕೊಡುವ ಪದ್ಧತಿಯನ್ನಿಟ್ಟುಕೊಂಡಿದಾರೆ ಇದಕ್ಕೆ ಸರ್ಕಾರದವರ ಗಮನಬಿದ್ದಂತೆ ಕಾಣುವುದಿಲ್ಲ ಮೈಸೂರು ಸಂಸ್ಥಾನದ ಹೊರಗೆ ಹಣ ಪಾವತಿ ಆಗತಕ್ಕ ಹುಂಡಿಗಳಿಗೆ ಹುಂಡಿ ಕೊಡತಕ್ಕವರು ಈ ಸೀಮೆಯ ರಸೀತಿ ಸ್ಟಾಂಪನ್ನೂ, ಅದು ಪಾವತಿ ಆಗುವ ಸ್ಥಳದಲ್ಲಿ ಹಣ ಪಡೆಯತಕ್ಕವರು ಬ್ರಿಟಿಷ್ ರಸೀತಿ ಸ್ಟಾಂಪನ್ನೋ, ಅಂಚೆಯ ಸ್ಟಾಂಪನ್ನೋ ಹಚ್ಚಬೇಕು ಹೀಗೆ ಮಾಡದೆ ಇರೋಣದರಿಂದ ಇವರು ಮೈಸೂರು ಸರ್ಕಾರದವರಿಗೆ ಮೋಸಮಾಡಿದವರಾಗುತ್ತಾರೆ ಈ ಬಾಬಿನಲ್ಲಿ ನಮ್ಮ ಸರ್ಕಾರಕ್ಕೆ ಒಂದು ವರುಷದಲ್ಲಿ ಸಾವಿರಾರು ರೂಪಾಯಿ ನಷ್ಟವಾಗುತ್ತವೆ ಹುಂಡಿಗಳ ಮೂಲಕ ಸಾವಿರಾರು ರೂಪಾಯಿ ಲಾಭಪಡೆಯುತ್ತಿರುವ ಮೈಸೂರು ಸೀಮೆಯ ವರ್ತಕರು ನಮ್ಮ ಮಹಾರಾಜರವರ ಪ್ರಜೆಗಳಾಗಿದ್ದು ಅವರ ಗವರ್ನ್‌ಮೆಂಟಿಗೆ ಈ ರೀತಿ ಮೋಸಪಡಿಸುವುದು ಯಾವ ವ್ಯಾಪಾರ ಧರ್ಮವೋ ತಿಳಿಯದೆ ದುಃಖಪಡುತ್ತೇನೆ ನಮ್ಮ ಗವರ್ನ್‌ಮೆಂಟಿನವರು ಒಂದಾಣೆ ರಸೀತಿ ಸ್ಟಾಂಪು ಉಳ್ಳ ಹುಂಡಿ ಪುಸ್ತಕಗಳನ್ನು ಸರ್ಕಾರದಿಂದಲೇ ಛಾಪಾಮಾಡಿಸಿ ವರ್ತಕರಿಗೆ ದೊರೆಯುವಂತೆ ಮಾಡಿಟ್ಟರೆ ಹುಂಡಿ ವರ್ತಕರು ಅವುಗಳನ್ನು ಕೊಂಡು ಉಪಯೋಗಿಸಲು ಅನುಕೂಲವಾಗುವುದು ಇದರಿಂದ ಸದ್ಯ ಚಿಂದಿ ಕಾಗದಗಳಲ್ಲಿ ಹುಂಡಿ ಬರೆಯುವ ಕೆಟ್ಟ ಪದ್ಧತಿಯೂ ತಪ್ಪಿಹೋದೀತು ಅಂಥಾ ಪುಸ್ತಕಗಳಲ್ಲಿ ವರ್ತಕರು ಹುಂಡಿ ಬರೆದುಕೊಡುವುದು ಅವರ ಗೌರವವನ್ನು ಹೆಚ್ಚಿಸದೆ ಇರಲಾರದು

ಬೆಂಗಳೂರು ವ್ಯಾಪಾರಧರ್ಮ

[ಅಂಥಾ ಹುಂಡಿಯ ಫಾರಮುಗಳನ್ನು ವರ್ತಕರು ಅಚ್ಚು ಹಾಕಿಸಿಕೊಂಡು ಬೆಂಗಳೂರು ಗವರ್ನ್‌ಮೆಂಟ್ ಪ್ರೆಸ್ ಸೂಪರಿಂಟೆಂಡೆಂಟರವರಿಗೆ ಕಳುಹಿಸಿ ಹುಂಡಿ ಒಂದಕ್ಕೆ ಒಂದು ಆಣೆಯಂತೆ ರುಸುಂ ಪಾವತಿಮಾಡಿದರೆ ಅವರು ರಸೀತಿ ಸ್ಟಾಂಪುಗಳನ್ನು ಪ್ರತಿ ಒಂದು ಹುಂಡಿಗೂ ಛಾಪಾ ಹಾಕಿ ಕಳುಹಿಸುತ್ತಾರೆಂದೂ, ಹೀಗೆ ಕೆಲವರು ಮಾಡಿಸಿ ತರಿಸಿಟ್ಟುಕೊಂಡು ಉಪಯೋಗಿಸುತ್ತಿದ್ದಾರೆಂದೂ ಬಲ್ಲೆವು ವ್ಯಾಗಾ ಮೈಸೂರಿನ ವರ್ತಕರು ಮೈಸೂರು ಗವರ್ನ್‌ಮೆಂಟಿನವರಿಗೆ ನ್ಯಾಯವಾಗಿ ಸಲ್ಲಬೇಕಾಗಿರುವ ರುಸುಮನ್ನು ಪಾವತಿಮಾಡದೆ ಮೋಸಮಾಡುವುದು ತರವಲ್ಲ — ಎಡಿ]

ವೈಸ್‌ರಾಯಿಯವರು ಮೈಸೂರಿಗೆ ದಯಮಾಡುವುದು

ಅವರ ಸಂಚಾರದ ಪ್ರೋಗ್ರಾಂ.

ವೈಸ್‌ರಾಯಿ ಪ್ರಭುದಂಪತಿಗಳು ಪರಿವಾರ ಸಮೇತ ಮೈಸೂರು ಸಂಸ್ಥಾನಕ್ಕೆ ದಯಮಾಡಿ, ಈ ಸಂಸ್ಥಾನದ ಬೇರೆ ಬೇರೆ ಸ್ಥಳಗಳಲ್ಲಿ ಸಂಚರಿಸುವ ತಾರೀಖುಗಳೂ, ನಡಿಸುವ ಮುಖ್ಯ ಕಾರ್ಯಗಳೂ ಈಗ ಪ್ರಕಟವಾಗಿರುತ್ತವೆ ವಾಚಕರ ತಿಳುವಳಿಕೆಗಾಗಿ ಅದನ್ನೆಲ್ಲಾ ಇಲ್ಲಿ ಕಾಣಿಸಿರುವೆವು

ಶಿವಮೊಗ್ಗ

ನವಂಬರ್, ತಾರೀಖು 4 — ವೈಸ್‌ರಾಯಿಯವರು ಶಿವಮೊಗ್ಗೆಗೆ ದಯಮಾಡಿ, ಮೋಟರಿನಲ್ಲಿ 65 ಮೈಲಿಯಲ್ಲಿರುವ ಗೆರುಸೊಪ್ಪಾ ಜಲಪಾತವನ್ನು ತಲಪುವರು ಅಲ್ಲಿ ಮೂರನೇ ಝಾಮದ ಫಲಾಹಾರ ಬೆಳೆಯುತ್ತ

ತಾ 4 ನೇ ಮಂಗಳವಾರ — ಗೆರುಸೊಪ್ಪಾದಲ್ಲಿ ತಂಗುತ್ತಾರೆ ಜಲಪಾತದಲ್ಲಿ ದೀಪೋತ್ಸವವನ್ನು ಪರಾಂಬರಿಸುತ್ತಾರೆ

ತಾ 5 ನೇ ಬುಧವಾರ — ಗೆರುಸೊಪ್ಪಾದಿಂದ 65 ಮೈಲಿ ಮೋಟರಿನಲ್ಲಿ ಹೊರಟು ವಾಪಸು ಮಧ್ಯಾಹ್ನ ಶಿವಮೊಗ್ಗೆ ತಲಪುವುದು ರಾತ್ರಿ ಶಿವಮೊಗ್ಗೆಯಲ್ಲಿ ರೈಲುಹತ್ತಿ ಅಲ್ಲಿಂದ ಹೊರಡುತ್ತಾರೆ

ಮೈಸೂರು

ತಾ 6 ನೇ ಗುರುವಾರ — ಬೆಳಿಗ್ಗೆ ರಾಜಧಾನಿಯಾದ ಮೈಸೂರು ಪಟ್ಟಣವನ್ನು ತಲಪುತ್ತಾರೆ ಅವರಿಗೆ ರಾಜ ಮರ್ಯಾದೆಗಳು ನಡೆಯುವವು ಮೈಸೂರು ಮ್ಯುನಿಸಿಪಾಲಿಟಿಯವರು ಒಪ್ಪಿಸುವ ಅಡ್ರೆಸ್ಸನ್ನು ಅಂಗೀಕರಿಸುವರು ಬಳಿಕ ಮಿರಾಜ್ ಪುರ್ಸಿಯೂ, ಬೆಳಗಿನ ಭೋಜನವೂ ನಡೆಯುತ್ತ ಶ್ರೀಮನ್ಮಹಾರಾಜರವರಿಗೆ ಮರುಭೇಟಿ ದಯಪಾಲಿಸುತ್ತಾರೆ ರಾತ್ರಿ ಔತಣವೂ ಬಾಣಗಳ ತಮಾಷೆಯೂ ಬೆಳೆಯುತ್ತ

ತಾ 7 ನೇ ಶುಕ್ರವಾರ — ವೈಸ್‌ರಾಯಿಯವರು ಅರಮನೆ ಖಾಸ್ ತಬೇಲೆಯನ್ನು ಪರಾಂಬರಿಸುತ್ತಾರೆ ಮಧ್ಯಾಹ್ನ ಕೊಡಗಿನ ಮತ್ತೂ ಮೈಸೂರು ಸೀಮೆಯ ಪ್ಲಾಂಟರುಗಳ ಪ್ರತಿನಿಧಿಗಳಿಗೆ ಭೇಟಿ ಕೊಟ್ಟು ಅವರ ಅಡ್ರೆಸ್ಸುಗಳನ್ನು ಅಂಗೀಕರಿಸಿ ಪ್ರತ್ಯುತ್ತರವನ್ನು ದಯಪಾಲಿಸುತ್ತಾರೆ ಸಾಯಂಕಾಲ ಮೃಗಾಲಯವನ್ನು ಪರಾಂಬರಿಸುವರು ರಾತ್ರಿ ಭೋಜನಾನಂತರ ಅರಮನೆಗೆ ಚಿತ್ತೈಸಿ ಸಂಗೀತವನ್ನು ಕೇಳುತ್ತಾರೆ ಆ ರಾತ್ರಿ ದೀಪೋತ್ಸವ ಬೆಳೆಯುತ್ತ

ತಾ 8 ನೇ ಶನಿವಾರ — ಬೆಳಿಗ್ಗೆ ವೈಸ್‌ರಾಯರವರು ಇಂಪೀರಿಯಲ್ ಸರ್ವಿಸ್ ಮತ್ತು ಲೋಕಲ್ ಸರ್ವಿಸ್ ಸೈನ್ಯಗಳ ಕವಾತು ನಡೆಯುವುದನ್ನು ಪರಾಂಬರಿಸಿ, ಶ್ರೀರಂಗಪಟ್ಟಣಕ್ಕೆ ದಯಮಾಡಿ, ಅಲ್ಲಿ ಭೋಜನವನ್ನು ತೀರಿಸಿಕೊಂಡು ಸೋಮನಾಥಪುರವನ್ನು ತಲಪಿ ದೇವಸ್ಥಾನಗಳನ್ನು ಪರಾಂಬರಿಸಿ, ರಾತ್ರಿಭೋಜನ ಮಾಡುವರು

ತಾ 9 ನೇ ಭಾನುವಾರ — ವೈಸ್‌ರಾಯಿಯವರು ಮೈಸೂರಿನಿಂದ ಹೊರಟು ಖಾರಾಪುರದ ಕೆಡ್ಡಾ ಕ್ಯಾಂಪಿಗೆ ಚಿತ್ತೈಸುತ್ತಾರೆ

ತಾ 10 ನೇ ಸೋಮವಾರದಿಂದ ತಾ 15 ನೇ ಶನಿವಾರದ ತನಕ — ಅವರು ಕೆಡ್ಡಾ ಕ್ಯಾಂಪಿನಲ್ಲಿರುತ್ತಾರೆ ಅಲ್ಲೇ ಹುಲಿ ಮೊದಲಾದ ಮೃಗಗಳ ಶಿಕಾರಿಗೆ ದಯಮಾಡುವರು

ತಾ 16 ನೇ ಭಾನುವಾರ — ವೈಸ್‌ರಾಯರವರು ಈ ದಿನವನ್ನು ವಿರಾಮವಾಗಿ ಕ್ಯಾಂಪಿನಲ್ಲೇ ಕಳೆಯುತ್ತಾರೆ

ತಾ 17 ನೇ ಸೋಮವಾರ — ಅವರು ಕೆಡ್ಡಾ ಕ್ಯಾಂಪಿನಿಂದ ರಾಜಧಾನಿಗೆ ವಾಪಸು ದಯಮಾಡುವರು

ತಾ 18 ನೇ ಮಂಗಳವಾರ — ವೈಸ್‌ರಾಯರವರು ಈ ದಿನ ಬೆಳಿಗ್ಗೆ ಹೊಸ ಟೆಕ್ನಿಕಲ್ ಇನ್‌ಸ್ಟಿಟ್ಯೂಟನ್ನು ಪರಾಂಬರಿಸುತ್ತಾರೆ ಅವರ ಪತ್ನೀರವರು ಮಹಾರಾಣಿ ಕಾಲೇಜಿಗೆ ದಯಮಾಡುವರು ಮಧ್ಯಾಹ್ನದ ಮೇಲೆ ವೈಸ್‌ರಾಯಿಯವರು ಮೋಟರಿನಲ್ಲಿ ಕನ್ನಂಬಾಡಿಗೆ ಚಿತ್ತೈಸಿ ಹೊಸ ತಲಾವಿನ ಕಾಮಗಾರಿಯನ್ನು ಪರಾಂಬರಿಸಿಕೊಂಡು ಬಂದು ಆ ರಾತ್ರಿ ರಾಜಧಾನಿಯಿಂದ ಬೆಂಗಳೂರನ್ನು ಕುರಿತು ಪ್ರಯಾಣಮಾಡುತ್ತಾರೆ

ಬೆಂಗಳೂರು

ತಾ 19 ನೇ ಬುಧವಾರ — ಬೆಂಗಳೂರು ಸಿಟಿ ಸ್ಟೇಷನ್‌ನಲ್ಲಿ ಇಳಿಯುತ್ತಾರೆ ರಾಜ ಮರ್ಯಾದೆಗಳು ನಡೆಯುತ್ತವೆ ಬೆಂಗಳೂರು ದಂಡಿನ ಮ್ಯುನಿಸಿಪಾಲಿಟಿಯವರು ಅವರಿಗೆ ಅಡ್ರೆಸ್ಸನ್ನು ಒಪ್ಪಿಸುತ್ತಾರೆ ವೈಸ್‌ರಾಯರವರು ಸಭೆಯಲ್ಲಿ ಮಿ ಕ್ಲಾರ್ಕ್‌ರವರಿಗೆ ಐ ಎಸ್ ಓ ಎಂಬ ಬಿರುದನ್ನು ಸ್ವಹಸ್ತ ದಯಪಾಲಿಸಿ, ಶಾಸ್ತ್ರ ಶೋಧನಾ ವಿದ್ಯಾಶಾಲೆಯನ್ನೂ, ಅಲ್ಲಿಂದ ಮೈಸೂರು ಇಂಪೀರಿಯಲ್ ಸರ್ವಿಸ್ ಸೈನಿಕರ ಲೈನ್ ಮನೆಗಳನ್ನೂ ಪರಾಂಬರಿಸಿಕೊಂಡು ಬರುತ್ತಾರೆ ಆತ್ತಲಾಗಿ ಅವರ ಪತ್ನೀರವರು ಲೇಡಿ ಕರ್ಜನ್‌ರವರ ಆಸ್ಪತ್ರೆಗೆ ಬಾಗಿಲುಗಳನ್ನು ಪ್ರತಿಷ್ಠೆಮಾಡುವರು ಅಲ್ಲಿಂದ ವೈಸ್‌ರಾಯರವರು ಕ್ರೈಸ್ತ ಯೌವನಸ್ಥರ ಸಂಘದ ಹೊಸ ಕಟ್ಟಡದ ಅಸ್ತಿಭಾರಶಿಲೆಯನ್ನು ಪ್ರತಿಷ್ಠೆಮಾಡಿ ಪಟ್ಟಣವನ್ನೆಲ್ಲಾ ಸುತ್ತಿ ಪರಾಂಬರಿಸಿಕೊಂಡು ಬರುತ್ತಾರೆ ಬಳಿಕ ಅವರಿಗೆ ಬಾರೀ ಔತಣವೂ, ದರ್ಬಾರೂ ನಡೆಯುವವು

ತಾ 20 ನೇ ಗುರುವಾರ — ಬೆಳಿಗ್ಗೆ ಸೈನಿಕರ ಕವಾತು ನಡೆದು ವೈಸ್‌ರಾಯರವರು 10ನೇ ಗ್ರೆನೆಡಿಯರ್ ಸೈನಿಕರಿಗೆ ಬಾವುಟಾ ಒಪ್ಪಿಸಿ, ಬಳಿಕ ದಿವಾನ್ ಸರ್ ಶೇಷಾದ್ರಿ ಅಯ್ಯರವರ ಛಾಯಪ್ರತಿಮೆಯನ್ನು ಪ್ರತಿಷ್ಠೆಮಾಡುತ್ತಾರೆ ಅವರ ಪತ್ನೀರವರು ವಿಕ್ಟೋರಿಯಾ ಮತ್ತು ಮಿಂಟೋ ಆಸ್ಪತ್ರೆಗಳನ್ನೂ, ರೇಷ್ಮೆ ವ್ಯವಸಾಯದ ಫಾರಮನ್ನೂ ಪರಾಂಬರಿಸಿಕೊಂಡು ದಯಮಾಡುವರು ರೆಸಿಡೆನ್ಸಿ ಬಂಗಲೆಯಲ್ಲಿ ಗಾರ್ಡನ್ ಪಾರ್ಟಿ ಎಂಬ ಸಂತೋಷಕೂಟವು ಜರುಗುತ್ತದೆ ವೈಸ್‌ರಾಯರವರು ಆ ರಾತ್ರಿ ಭೋಜನಾನಂತರ ಬೆಂಗಳೂರು ದಂಡಿನ ಸ್ಟೇಷನ್ನಲ್ಲಿ ರೈಲುಹತ್ತಿ ಪ್ರಯಾಣಬೆಳಸುತ್ತಾರೆ

ಕೋಲಾರದ ಚಿನ್ನದ ಗಣಿಗಳು

ತಾ 21 ನೇ ಶುಕ್ರವಾರ — ವೈಸ್‌ರಾಯರವರು ಬೌರಿಂಗ್‌ಪೇಟೆ ಸ್ಟೇಷನ್‌ನಲ್ಲಿ ಇಳಿದು ಮೋಟರಿನಲ್ಲಿ ಮಾರಿಕುಪ್ಪಕ್ಕೆ ದಯಮಾಡುತ್ತಾರೆ ಅಲ್ಲಿ ಅವರಿಗೆ ರಾಜ ಮರ್ಯಾದೆಗಳು ನಡೆಯುತ್ತವೆ ಮೈಸೂರು ಗವರ್ನ್‌ಮೆಂಟಿನ ಮತ್ತೂ ಗಣಿ ಕಂಪನಿಗಳ ಮುಖ್ಯಾಧಿಕಾರಿಗಳು ಅವರಿಗೆ ಸುಸ್ವಾಗತವನ್ನು ಬಯಸುತ್ತಾರೆ ಗಣಿ ಕಂಪನಿಯವರು ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸುವರು ವೈಸ್‌ರಾಯರವರು ಮಿ|| ಗಿಪರ್ಡ್‌ರವರ ಬಂಗಲೆಯಲ್ಲಿ ಭೋಜನವನ್ನು ತೀರಿಸಿಕೊಂಡು ಛಾಂಪಿಯನ್ ರೀಫ್ ಗಣಿಯ ಮೇಲ್ಭಾಗದಲ್ಲೇ ನಡೆಯುವ ಬಂಗಾರತೆಗೆಯುವುದೇ ಮೊದಲಾದ ಕಾರ್ಯಭಾಗಗಳನ್ನು ಪರಾಂಬರಿಸಿಕೊಂಡು ದಯಮಾಡಿ ಉರಿಗಾಂ ಸ್ಟೇಷನ್‌ನಲ್ಲಿ ರೈಲುಹತ್ತಿ ದಕ್ಷಿಣದೇಶವನ್ನು ಕುರಿತು ತೆರಳುತ್ತಾರೆ

30 ನಯ ಮೈಸೂರು ಪ್ರಜಾಪ್ರತಿನಿಧಿ ಸಭೆಯು

ರಾಜಧಾನಿಯಲ್ಲಿ ಪ್ರಾರಂಭವಾದದ್ದು

ಕಳೆದ ಶನಿವಾರ ಮಧ್ಯಾಹ್ನ 12 ಗಂಟೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ 30 ನೇ ಕೂಟವು ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದ ದರ್ಬಾರ್ ಮಂದಿರದಲ್ಲಿ ಪ್ರಾರಂಭವಾಯಿತು ಸಭಾ ಮಂದಿರದೊಳಗೆ ಸೇರುವ ಪ್ರತಿನಿಧಿ

ನಗೇ ಮೊದಲಾದವರ ಸೌಕರ್ಯಕ್ಕಾಗಿ 17 ವಿದ್ಯುಚ್ಛಕ್ತಿಯ ಬೀಸಣಿಗೆಗಳನ್ನು ಇಡಿಸಿರುತ್ತಾರೆ. ಸಂಸ್ಥಾನಾಮಳೆಯ 230 ಮಂದಿ ಪ್ರಜಾಪ್ರತಿನಿಧಿಗಳೂ ರಾಜಧಾನಿಯ ಎಲ್ಲಾ ಕೋಮುಗಳ ಮತ್ತು ಕಸಬುಗಳ ದೊಡ್ಡಮನುಷ್ಯರೂ ಸಾಮಾನ್ಯ ಉದ್ಯೋಗಸ್ಥರೂ ಮಂದಿರವು ಕಿಕ್ಕಿರಿಯುವಂತೆ ಸೇರಿದ್ದರು. ಅನೇಕರು—ಇವರಲ್ಲಿ ಪ್ರತಿನಿಧಿಗಳೂ ಕೆಲವರು, ಮಂದಿರದಲ್ಲಿ ಸ್ಥಳವಿಲ್ಲದೆ ಅವಕಾಶ ಸಿಕ್ಕಿದ ಮೂಲೆ ಸಂದಿಗಳಲ್ಲೂ ಹೊಸಲುಗಳ ಮೇಲೂ ನಿಂತು ಇದ್ದರು. ಪ್ಲಾಟ್‌ಫಾರಮಿನ ಮುಂದೆ ಬಲಪಾರ್ಶ್ವದಲ್ಲಿ ಗವರ್ನಮೆಂಟ್ ಇಲಾಖೆಗಳ ಸೆಕ್ರೆಟರಿಗಳೂ, ಎಡಪಾರ್ಶ್ವದಲ್ಲಿ ಸ್ಥಳ ಪರಸ್ಥಳಗಳ ವರ್ತಮಾನ ಪತ್ರಿಕಾ ಪ್ರತಿನಿಧಿಗಳೂ ಸಾಲಾಗಿ ಕುಳಿತಿದ್ದರು. ಪ್ಲಾಟ್‌ಫಾರಮಿನ ಮೇಲೆ ಮಾಜಿ ದಿವಾನ್ ಮ|| ಟಿ. ಆನಂದರಾಯರೂ, ಕೌನ್ಸೆಲರುಗಳೂ, ಚೀಫ್ ಕೋರ್ಟ್ ಜಡ್ಜರುಗಳೂ, ಮಾಜಿ ಕೌನ್ಸೆಲರುಗಳೂ, ಇಲಾಖೆಗಳ ಸೆಕ್ರೆಟರಿಗಳೂ, ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರುಗಳೂ ಅಲ್ಲದೆ ಯೂರೋಪಿಯನ್ ಸರ್ದಾರರೂ ದೊರೆಸಾನಿಗಳೂ ಕುಳಿತಿದ್ದರು.

ದಿವಾನ್ ಮ|| ಎಂ. ವಿಶ್ವೇಶ್ವರಯ್ಯನವರು ಬ್ರಿಟಿಷ್ ರೆಸಿಡೆಂಟ್ ಕರ್ನಲ್ ಡ್ಯಾಲಿಯವರನ್ನೂ, ಅವರ ಪತ್ನಿ ಪುತ್ರಿಯರನ್ನೂ, ಅ|| ರೆಸಿಡೆಂಟರವರನ್ನೂ ಸಂಗಡ ಕರೆದುಕೊಂಡು ದರ್ಬಾರ್ ಮಂದಿರಕ್ಕೆ ದಯಮಾಡಿ ಅವರುಗಳಿಗೆ ಆಸ್ತಾನವನ್ನು ವಹಿಸಿ ತಾವು ಅವರ ಕೂಡ ಕುಳಿತು ಸ್ವಲ್ಪ ಹೊತ್ತು ಅವರೊಡನೆ ಸಂಭಾಷಿಸುತ್ತಿದ್ದು ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ರೆಸಿಡೆಂಟರವರ ಅನುಜ್ಞೆಯನ್ನು ಪಡೆದು ಸಭಿಕರನ್ನೂ ಪ್ರತಿನಿಧಿಗಳನ್ನೂ ಕುರಿತು ತಮ್ಮ ವಾರ್ಷಿಕ ಅಡ್ರೆಸ್ಸನ್ನು ಇಂಗ್ಲಿಷಿನಲ್ಲಿ ಓದಿ ಹೇಳಿದರು. [ಈ ಅಡ್ರೆಸ್ಸಿನ ಮುಖ್ಯ ಭಾಗಗಳನ್ನೆಲ್ಲಾ ವಾಚಕರು ಇನ್ನೊಂದು ಕಡೆ ಓದಿಕೊಳ್ಳಬಹುದು —ಎಡಿ]

ಚಿನ್ನದ ಗಣಿಗಳ ಕಂಪನಿಗಳ ಅಡ್ರೆಸ್ಸು.

ಬಳಿಕ ಕೋಲಾರ್ ಚಿನ್ನದ ಗಣಿಗಳ ಪ್ರತಿನಿಧಿಯಾದ ಮಿ|| ಎಚ್ ಎಚ್. ಆಸ್‌ಮೋರ್‌ರವರು ಓದಿ ಒಪ್ಪಿಸಿದ ಅಡ್ರೆಸ್ಸಿನ ಮುಖ್ಯಾಂಶಗಳೇನೆಂದರೆ— ತಮಗೆ ಈ ಸಂಸ್ಥಾನದ ದಿವಾನ್‌ಗಿರಿ ಆದದ್ದಕ್ಕಾಗಿಯೂ, ನೀವು ಆ ಪದವಿಯನ್ನಲಂಕರಿಸಿದಾರಭ್ಯ ಚಿನ್ನದ ಗಣಿಗಳ ಕಸಬಿನ ಪುರೋವೃದ್ಧಿಗಾಗಿ ನೀವು ಮಾಡುತ್ತಾ ಬಂದಿರುವ ಸಹಾಯಕ್ಕಾಗಿಯೂ ನಿಮ್ಮನ್ನು ಗಣಿಗಳ ಬೋರ್ಡಿನವರು ಕೃತಜ್ಞತಾ ಪೂರ್ವಕವಾಗಿ ವಂದಿಸುತ್ತೇವೆ. ಶ್ರೀಮನ್ ಯುವರಾಜರವರು ಮೊನ್ನೆ ಊರ್ಗಾಮ್ ಪಟ್ಟಣಕ್ಕೆ ದಯಮಾಡಿದ್ದಾಗ್ಗೆ ಚಿನ್ನದ ಗಣಿಗಳ ಕಂಪನಿ ಬೋರ್ಡಿನ ಡೈರೆಕ್ಟರುಗಳೂ ಮ್ಯಾನೇಜರುಗಳೂ ಅವರಿಗೆ ಆತಿಥ್ಯವನ್ನು ನಡಿಸಿದ್ದನ್ನು ನೋಡಿ ಗಣಿಗಳ ಕಂಪನಿಯವರಿಗೆ ಮೈಸೂರು ರಾಜಮನೆತನದವರ ಮೇಲೆ ಎಷ್ಟುಮಟ್ಟಿಗೆ ಪ್ರೀತಿ ಗೌರವಗಳುಂಟೆಂಬುವುದನ್ನು ತಾವು ಯೋಚಿಸಿಕೊಳ್ಳಬೇಕಾಗಿದೆ. ಆ ಆತಿಥ್ಯವನ್ನು ಶ್ರೀಮನ್ ಯುವರಾಜರವರೂ ಅವರ ಕೂಡ ಹೋಗಿದ್ದವರೂ ಮರೆಯಲಾರರೆಂದು ನಿರೀಕ್ಷಿಸುವೆವು.—ಚಿನ್ನದ ಗಣಿಗಳ ಪ್ರಾಂತ್ಯದಲ್ಲಿ ಅನುಮಾನಾಸ್ಪದವಾದ ಜನರನ್ನು ಹಿಡಿದು ತನಿಖೆಮಾಡುವ ಅಧಿಕಾರವನ್ನು ಪೋಲೀಸ್ ಸುಪರಿಂಟೆಂಡೆಂಟರಿಗೆ ವಹಿಸುವ ಭಾಗವನ್ನು ಬೇಗನೆ ಸ್ಯಾಂಕ್ಷನ್ ಮಾಡಿಕೊಡುತ್ತೀರೆಂದು ನಂಬಿ ನಿರೀಕ್ಷಿಸುವೆವು.—50 ರೂಪಾಯಿಯೊಳಗಿರುವ ಗಣಿಗಳ ಸಾಮಾನನ್ನು ಕಳುವುಮಾಡಿದವರ ತಕ್ಸೀರನ್ನು ಸಮ್ಮರಿ ವಿಚಾರಣೆಯಿಂದ ಇತ್ಯರ್ಥಮಾಡುವುದು ಸುಲಭವೆಂದೂ, ಇಲ್ಲವಾದರೆ ಸರ್ಕಾರಕ್ಕೆ ತುಂಬಾ ಕಾಲವೂ ದ್ರವ್ಯವೂ ವಿನಿಯೋಗವಾಗುವವೆಂದೂ ಇನ್ಸ್‌ಪೆಕ್ಟರ್ ಜನರಲ್‌ರವರು ಸೂಚಿಸುತ್ತಾರೆ. ಸಾಮಾನ್ಯ ಸಾಮಾನುಗಳು ಕಳುವಾದ ತಕ್ಸೀರುಗಳನ್ನೇನೋ ಹಾಗೆ ಫೈಸಲ್ಮಾಡಬಹುದು, ಆದರೆ ಆ ಮಾಲು ಅದು ಚಿನ್ನವಾಗಿದ್ದ ಪಕ್ಷದಲ್ಲಿ ಅಂಥಾ ತಕ್ಸೀರನ್ನು ಎಷ್ಟು ಮಾತ್ರಕ್ಕೂ ಸಮ್ಮರಿಯಾಗಿ ವ್ಯವಸ್ಥೆಮಾಡಕೂಡದು.—ಆಹಾರ ಪದಾರ್ಥಗಳನ್ನು ಪರಿಶೋಧನೆಮಾಡುವ ಕಾರ್ಯಾಲಯವು ಇಷ್ಟರಲ್ಲೇ ಕ್ರಮಪಡುವುದೆಂದು ನಿರೀಕ್ಷಿಸುತ್ತೇವೆ. ಗವರ್ನಮೆಂಟಿನವರು ಆ ಕಾರ್ಯಾಲಯದಲ್ಲಿ ಪರೀಕ್ಷೆಗಳನ್ನು ಮಾಡುವಂಥಾ ಒಬ್ಬ ಸಹಾಯಾಧಿಕಾರಿಯನ್ನು ನೇಮಿಸಿ ಕೊಡಬೇಕಾಗಿದೆ.—ಬೇತಮಂಗಲದಿಂದ ಬರುವ ಕುಡಿಯುವ ನೀರಿನ ಪಾಲೆಯನ್ನು ಮೇಲ್ಗಡೆ ಮುಚ್ಚುವ ವಿಷಯದಲ್ಲಿ ಚೀಫ್ ಮೆಡಿಕಲ್ ಆಫೀಸರೂ, ಇಂಜನಿಯರುಗಳೂ ಒಪ್ಪಿರುವ ಪ್ಲಾನನ್ನೇ ಗವರ್ನಮೆಂಟಿನವರು ಬದಲಾಯಿಸಿ ಸ್ಯಾಂಕ್ಷನ್ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.—ನಮ್ಮ ಪ್ರಾಂತ್ಯದಲ್ಲಿರುವ ಯೂರೋಪಿಯನ್ ಮತ್ತು ಆಂಗ್ಲೋ ಇಂಡಿಯನ್ ಪ್ರಜೆಗಳಿಗಾಗಿ ಒಂದು ಆಸ್ಪತ್ರೆಯನ್ನು ಆಗತ್ಯವಾಗಿ ಸರ್ಕಾರದವರು ಕಟ್ಟಿಸಿಕೊಡಬೇಕೆಂದು ನಾವು ಪ್ರಾರ್ಥಿಸಿಕೊಂಡಿದ್ದೆವು. ಗವರ್ನಮೆಂಟಿನವರು ಮಾಡಿಸಿಕೊಡುವುದಾಗಿ 1909 ನೇ ಇಸವಿಯಲ್ಲಿ ಒಪ್ಪಿಕೊಂಡಿರುತ್ತಾರೆ. ಅದು ಇದುವರೆಗೆ ನೆರವೇರಲಿಲ್ಲವೆಂದು ಮತ್ತೆ ಅರಿಕೆಮಾಡಿಕೊಳ್ಳುತ್ತೇವೆ. ನಮ್ಮಲ್ಲಿನ ಹೊಸ ಆಸ್ಪತ್ರೆಯ ಕಾಮಗಾರಿ ಪೂರೈಸುತ್ತಾ ಬಂದಿದೆ. ಇಷ್ಟರಲ್ಲೇ ಅದು ನಡೆಯುತ್ತಿರಬಹುದೆಂದು ಗ್ರಹಿಸುತ್ತೇವೆ.

ಮಹಮದೀಯ ಸಂಘದ ಅಡ್ರೆಸ್ಸು.

ಮಹಮದೀಯ ಸಂಘದ ಪ್ರತಿನಿಯಾದ ಮಿ ಎಂ ಜಿ ಮೋಕ್ರಿಯವರು ಓದಿ ಒಪ್ಪಿಸಿದ ಅಡ್ರೆಸ್ಸಿನ ಮುಖ್ಯಾಭಿಪ್ರಾಯಗಳೇನೆಂದರೆ— ನಮ್ಮ ಸಂಘದವರು ಈಗ ಎರಡು ರಾತ್ರಿಪಾಠಶಾಲೆಗಳನ್ನೂ, ಎರಡು ಗಂಡುಹುಡುಗರ ಸ್ಕೂಲುಗಳನ್ನೂ, ಎರಡು ಹೆಣ್ಣುಮಕ್ಕಳ ಸ್ಕೂಲುಗಳನ್ನೂ, ಒಂದು ವಿದ್ಯಾರ್ಥಿನಿಲಯವನ್ನೂ, ಒಂದು ಧರ್ಮಾರ್ಥವಾದ ವಾಚಕಮಂದಿರವನ್ನೂ ಇಟ್ಟು ನಡಿಸುವುದಲ್ಲದೆ ಕೆಲವು ವಿದ್ಯಾರ್ಥಿಗಳಿಗೆ ವೇತನಗಳನ್ನು ಕೊಡುತ್ತಾ ಬಂದಿದ್ದಾರೆ. ನಮ್ಮ ಜನರು ಅನೇಕರು ಪುಣ್ಯವಂತರು ನಮ್ಮಲ್ಲಿ ಬಹಳ ಕೊಂಚಮಂದಿ, ಇವರಿಗೆ ವಿದ್ಯಾಪ್ರೋತ್ಸಾಹದಲ್ಲಿ ಅಭಿರುಚಿ ಕಡಮೆ. ಈಗಿನ ಧಾರಣೆಗಳಲ್ಲಿ ನಮ್ಮ ಜನರು ಜೀವನ ಮಾಡಿಕೊಂಡು ಹೋಗುವುದೇ ಬಹಳ ಪ್ರಯಾಸ. ಇದರಿಂದ ನಾವು ಹೊರಗಿನ ಸಹಾಯವಿಲ್ಲದೆ ಮೇಲ್ಕಂಡ ಸ್ಕೂಲು ಮುಂತಾದವುಗಳನ್ನು ಸರಿಯಾಗಿ ನಡಿಸುವುದು ಸಾಧ್ಯವಲ್ಲ. ನಮ್ಮ ಬಾಲಿಕಾ ಪಾಠಶಾಲೆಗಳು ಯಾವ ಭಾಗದಲ್ಲೂ ತೃಪ್ತಿಕರವಾಗಿಲ್ಲ. ಅವುಗಳನ್ನು ಒಳ್ಳೇ ಸ್ಥಿತಿಗೆ ತಂದು ಅಭಿವೃದ್ಧಿಪಡಿಸುವುದಕ್ಕೆ ಸರ್ಕಾರದ ಇಲ್ಲವೇ ಹೊರಗಿನ ವಿದ್ಯಾವತಿಯರನ್ನು ಉಪಾಧ್ಯಾಯಿನಿಯರನ್ನಾಗಿ ನೇಮಿಸಿಕೊಡಬೇಕು. ನಮ್ಮ ಮತಸ್ಥರ ಸ್ಕೂಲುಗಳ ಮೇಲ್ತನಿಖೆಗೆ ಒಬ್ಬ ಡೆಪ್ಯುಟಿ ಇನ್ಸ್‌ಪೆಕ್ಟರೂ ಇಬ್ಬರು ಅಸಿಸ್ಟೆಂಟರುಗಳೂ ಇರುವುದು ಸಾಲದು. ಇನ್ಸ್‌ಪೆಕ್ಟರುಗಳ ಸಂಖ್ಯೆಯನ್ನು ಹೆಚ್ಚಿಸಿ, ನೇರಾ ಇನ್ಸ್‌ಪೆಕ್ಟರ್ ಜನರಲ್‌ರವರ ತಾಬೆಯಲ್ಲೇ ನಮ್ಮ ಸ್ಕೂಲುಗಳನ್ನು ಇಟ್ಟುಕೊಡಬೇಕು. ಈಗ ಸಂಸ್ಥಾನದಲ್ಲಿ ಆಂಗ್ಲೋಹಿಂದೂಸ್ಥಾನಿ ಸ್ಕೂಲುಗಳು ಎರಡು ಮಾತ್ರ ಇವೆ. ಇದು ಸಾಲದು. ಕಡೇ ಪಕ್ಷ ಮೈಸೂರಿನಲ್ಲಾದರೂ ಸ್ಥಾಪಿಸಿಕೊಡಬೇಕು. ಬೆಂಗಳೂರಿನಲ್ಲಿ ಮಾಡಿರುವ ಮಾಡಲ್ ಸ್ಕೂಲಿಗೆ ಆ ಹೆಸರು ಸಲ್ಲಬೇಕಾದರೆ ಅದರಲ್ಲಿ ಇನ್ನೂ ಕೆಲವು ಬದಲಾವಣೆಗಳನ್ನು ಮಾಡಿಕೊಡಬೇಕು.

ನಮ್ಮಲ್ಲಿ ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವ ಬಾಲಕರಿಗೆ ಸರ್ಕಾರದವರು ಇನ್ನೂ ಕೆಲವುಕಾಲ ನೌಕರಿಗಳನ್ನು ಒದಗಿಸದೆ ಹೋದರೆ ನಾವಾಗಲಿ ಗವರ್ನಮೆಂಟಿನವರಾಗಲಿ ಪ್ರೌಢವಿದ್ಯೆಯನ್ನು ಹುಡುಗರಿಗೆ ಕಲಿಸಲು ಸಾಹಸಪಡುವುದು ವ್ಯರ್ಥವಾದೀತು. ಮಹಮದೀಯ ಬಾಲಕರಲ್ಲಿ ಯಾರಿಗೂ ಗವರ್ನಮೆಂಟಿನವರು ವೇತನವನ್ನು ಕೊಟ್ಟು ಸೀಮೆಗೆ ಕಳುಹಿಸಿರುವುದಿಲ್ಲವೆಂದು ತಿಳಿಸಲು ವಿಷಾದಿಸುತ್ತೇವೆ. ಮತ್ತು ನಮ್ಮ ಪಂಗಡದ ಯೌವನಸ್ಥರಿಗೆ ಸರ್ಕಾರದ ನೌಕರಿ ದೊರಕುವುದು ಬಹಳ ಪ್ರಯಾಸ; ದೊಡ್ಡ ಅಧಿಕಾರಗಳಿಗೆ ನಮ್ಮವರಿಗೆ ನಿರ್ವಹಿಸುವ ಸಾಮರ್ಥ್ಯವಿಲ್ಲವೆನ್ನುತ್ತಾರೆ. ಈ ಸಾಮರ್ಥ್ಯವೆಂಬುವುದು ಕೆಲವು ಸಂದರ್ಭಗಳಲ್ಲಿ ಪ್ಯಾಸುಗಳ ಮೇಲೂ, ಕೆಲವು ಸಂದರ್ಭಗಳಲ್ಲಿ ಗುಣಶೀಲಸ್ವಭಾವಗಳ ಮೇಲೂ, ಅನೇಕ ಸಂದರ್ಭಗಳಲ್ಲಿ ಶಿಫಾರಸುಗಳ ಮೇಲೂ ದೊರೆಯುವುದು. ಇದಲ್ಲದೆ ಪರೀಕ್ಷೆಯನ್ನು ಬೇರೆ ಇಟ್ಟಿದ್ದಾರೆ. ನಮ್ಮವರು ವಿದ್ಯೆಯಲ್ಲಿ ಹಿಂದಾಗಿರುವುದರಿಂದ ಅವರು ಪ್ಯಾಸುಗಳನ್ನು ಮಾಡುವುದೂ, ಅಧಿಕಾರಗಳನ್ನು ಸಂಪಾದಿಸುವುದೂ ಬಹಳ ಪ್ರಯಾಸ. ಪರೀಕ್ಷೆಗಳಿಂದ ಯೋಗ್ಯತೆ ಸಾಮರ್ಥ್ಯಾದಿಗಳನ್ನು ನಿರ್ಧರಿಸುವುದು ಸಾರ್ಥಕವಲ್ಲೆಂದು ಹೇಳಬೇಕಾಗಿಲ್ಲ. ಆದಕಾರಣ ನಮ್ಮವರಲ್ಲಿ ವಿದ್ಯಾವಂತರನ್ನು ಆರಿಸಿ ಅಧಿಕಾರಸ್ಥಾನಗಳಿಗೆ ಮುಂದಾದರೂ ನೇಮಿಸುತ್ತಾ ಬರಬೇಕೆಂದು ಬೇಡುತ್ತೇವೆ. ಇಲ್ಲವಾದರೆ ನಮ್ಮ ಜನರು ಎಲ್ಲಾ ಭಾಗಗಳಲ್ಲೂ ಹಿಂದುಳಿದವರಾಗಿ ದೇಶೋನ್ನತಿಗೆ ಪ್ರತಿಬಂಧಕರಾಗುತ್ತಾರೆ.

ಮಾಲೂರು ಪ್ರತಿನಿಧಿಗಳ ಪ್ರಾರ್ಥನೆ

ಮಾಲೂರು ಮ|| ರಾಮಗೌಡರು ಓದಿ ಒಪ್ಪಿಸಿದ ಅಡ್ರೆಸ್ಸಿನ ಮುಖ್ಯಾಂಶಗಳೇನೆಂದರೆ—" ಸ್ವದೇಶದ ಸಂಪತ್ತು ಹೆಚ್ಚಿಸಬೇಕೆಂಬ ಉದ್ದೇಶದಲ್ಲಿ ಮುಖ್ಯಭಾಗಗಳಾಗಿರುವ ಅಂಶ ಅಂದರೆ, ಈ ರಾಜ್ಯದಲ್ಲಿರತಕ್ಕ ಸುಮಾರು 37,000 ಕೆರೆಗಳ ಪೈಕಿ, ಶಾಸ್ತ್ರಪರಿಶ್ರಮವುಳ್ಳ ಆಫೀಸರುಗಳ ಸ್ವಾಧೀನದಲ್ಲಿರುವ ಸುಮಾರು 800 ಕೆರೆಗಳ ಶಿವಾಯಿ, ಉಳಿದಿರುವ ಕೆರೆಗಳೆಲ್ಲಾ, ಬಂಧವಿಮೋಚನೆ ಆದ 1876-77 ನೇ ಇಸವಿ ಹಿಂದೆ ಲಾಗಾಯ್ತು ಕಾಮಗಾರಿಗಳು ಇಲ್ಲದೆ ಹೀನಸ್ಥಿತಿಗೆ ಬಂದಿರುವ ಸಣ್ಣಸಣ್ಣ ನೀರಾವರಿ ಕಾಮಗಾರಿಗಳು ಎಲ್ಲಾ ತಾಲ್ಲೂಕುಗಳಲ್ಲಿಯೂ, ರೆವಿನ್ಯೂ ಇಲಾಖೆ ಮಾರ್ಫತ್ತು ಜುಜುವಿ ಮೊಬಲಗಿನಿಂದ ಶೇಕಡ 1-5 ರಂತೆ ಕಾಮಗಾರಿ ನಡೆಯುತ್ತಾ ಕೋಡಿ ಉರಾವಣೆಗಳಿಲ್ಲದೆ ಇದ್ದಾಗ್ಯೂ, ರಾಜ್ಯಕ್ಕೆ ಪ್ರಾಪ್ತವಾಗಿರುವ ಕನಿಷ್ಠ ವರ್ಷಗಳ ಗುಣದಿಂದ ಸಕಾಲಕ್ಕೆ ಮಳೆ ಇಲ್ಲದೆ ಅಕಾಲದಲ್ಲಿ ಪ್ರಾಪ್ತವಾಗುವ ಮಳೇ ನೀರು ಕೆರೆ ಅಚ್ಚುಕಟ್ಟಿಗೆ ಸಾಕಾಗದೆ ಪಸಲು ಪೂರೈಸದೆ ಇರುವಕಾರಣ ಪ್ರಜೆಗಳ ಜೀವನೋಪಾಯಕ್ಕೆ ಉಂಟಾಗಿರುವ ತೊಂದರೆಯು ನಿವಾರಣೆಯಾಗುವದಕ್ಕೆ ಈಗ ಸಕಾಲವಾಗಿರುತ್ತೆ ಸ್ವಾಮಿ.

" ಈ ರಾಜ್ಯದಲ್ಲಿ ಎಲ್ಲಾ ಬಾಬಿನ ಹುಟ್ಟುವಳಿಗಿಂತಲೂ ಲ್ಯಾಂಡ್ ರೆವಿನ್ಯೂ ಬಾಬು ಅಂದರೆ, ಜಮೀನು ಕಂದಾಯ 1,01,50,000 ರೂಪಾಯಿ ಹುಟ್ಟುವಳಿಗೆ ಆಧಾರವಾಗಿರುವ ದನಗಳ ಪೋಷಣೆಗೆ ಮಲೆನಾಡು ಡಿಸ್ಟ್ರಿಕ್ಟುಗಳು ವಿನಹ ಮೈದಾನ ಡಿಸ್ಟ್ರಿಕ್ಟುಗಳಲ್ಲಿ ಆಹಾರಕ್ಕೆ ತಕ್ಕಷ್ಟು ತೃಣವಿಲ್ಲದೆ ಉಂಟಾಗಿರುವ ತೊಂದರೆಯು ಪೇಪರುಗಳಲ್ಲಿ ಉದಹರಿಸುವುದಕ್ಕೆ ಸಾಧ್ಯವಿಲ್ಲದೆ ಇರುತ್ತೆ. ಪ್ರಜಾಸಂಖ್ಯೆ ಹೆಚ್ಚುತ್ತಾ ಬರುವ ಭರವಸೆ ಮೇಲೂ, ರೆವಿನ್ಯೂ ಬಾಬು ಹೆಚ್ಚಿಸಬೇಕೆಂಬ ಉದ್ದೇಶದಿಂದಲೂ ಸರ್ವೆ ಇಲಾಖೆ ಮಾರ್ಫತ್ತು ನಡಿಸಿದ ಮೋಜಣಿ ಕಾಲದಲ್ಲಿ ಸಾಗುವಳಿ ಲಾಯಖ್, ನಾಲಾಯಖ್ ಸೇರಿ ಕೆಲವು ಭಾಗ ನಂಬರು ಮಾಡಿ ಆಕಾರ ಭರಾಯಿಸಿರುವದಾಗಿದೆ. ಇಂಥಾ ಜಮೀನುಗಳ ಪೈಕಿ ಸಾಗುವಳಿ ಲಾಯಖ್ ಸರ್ಕಾರಕ್ಕೆ ಉಳಿಸಿಕೊಂಡು ನಾಲಾಯಖ್ ಜಮೀನುಗಳಿಗೆಲ್ಲಾ ಮಲೆನಾಡು ಡಿಸ್ಟ್ರಿಕ್ಟುಗಳಲ್ಲಿ ವಿಧಾಯಕವಾಗಿರುವಂತೆ " ಸೀಮೆ " ಕಂದಾಯದ ಮೂಲಕ ಗೋಗ್ರಾಸವನ್ನು ಒದಗಿಸುವದರಿಂದ ದನಗಳಿಗೆ ಮೇವು ಉಂಟಾಗಿ ಗೊಬ್ಬರದ ಅನುಕೂಲತೆ ಹೆಚ್ಚಿ ರಾಜ್ಯ ಸಮೃದ್ಧಿಗೆ ಭೂವ್ಯವಸಾಯವೇ ಗುರಿಯಾಗಿರುವದು ಸಮಸ್ತ ರಾಜ್ಯಗಳಲ್ಲಿಯೂ ನಿದರ್ಶನವಾಗಿರುವ ಪ್ರಜೋಪಕಾರವಾದ ಪ್ರಾರ್ಥನೆಗಳನ್ನು ಶಾಂತಚಿತ್ತರಾಗಿ ಸಾವಧಾನದಿಂದ ಸಫಲಗೊಳಿಸಲು ಮಂತ್ರಾಲೋಚನೆ ಸಭೆಯಲ್ಲಿ ನಿರ್ಧರಿಸಬೇಕೆಂದು ಪ್ರಾರ್ಥಿಸುವ ಪ್ರಜೆಗಳ ಪ್ರತಿನಿಧಿಗಳಾಗಿ ಮಹಾಸನ್ನಿಧಾನದಲ್ಲಿ ಉಲ್ಲಾಸದಿಂದ ಅರಿಕೆಮಾಡಿಕೊಳ್ಳುತ್ತೇವೆ ಸ್ವಾಮಿ "

ನಾಗಮಂಗಲದ ಪ್ರತಿನಿಧಿಗಳ ಪ್ರಾರ್ಥನೆ.

ನಾಗಮಂಗಲದ ಮ|| ಗಂಗಾಧರಶೆಟ್ಟಿರ ಗಂಗಪ್ಪನವರು ಓದಿ ಒಪ್ಪಿಸಿದ ಅಡ್ರೆಸ್ಸಿನ ಮುಖ್ಯಾಂಶಗಳೇನೆಂದರೆ—" ಈ ನಾಗಮಂಗಲದ ತಾಲ್ಲೂಕಿನಲ್ಲಿ 305 ಗ್ರಾಮಗಳಿರುತ್ತವೆ. ಇಲ್ಲಿಯ ಪ್ರಜೆಗಳ ದುರಾದೃಷ್ಟದಿಂದ ಕಾಲಕಾಲಕ್ಕೆ ಮಳೆ ಬೆಳೆಗಳು ಆಗದೆ ಪ್ರಜೆಗಳು ದಿನೇ ದಿನೇ ಬಹಳ ಹೀನಸ್ಥಿತಿಗೆ ಬರುತ್ತಿದ್ದಾರೆ. ಹೊಟ್ಟೆಗೇನೆ ಕುಗ್ರಾಮವಾಗಿ ಈ ತಾಲ್ಲೂಕಿನಿಂದ ಕಾಫೀತೋಟದ ಪ್ರಾಂತ್ಯ ಬಹುಜನರು ಹೆಂಗಸರು ಮಕ್ಕಳೊಂದಿಗೆ ಹೋಗುವದು, ಅಲ್ಲಿ ಕೂಲಿಮಾಡಿ ಬಂದ ಹಣದಲ್ಲಿ ಕಾಲುಹೊಟ್ಟೆ ಗ್ರಾಸ ತಿಂದು ಉಳಿದ ಹಣವನ್ನು ಮುಡುಪಿನಂತೆ ಊರಿಗೆ ತಂದು, ವರ್ಷ ವರ್ಷ ಸರ್ಕಾರದ ಕಂದಾಯವನ್ನು ಕೊಟ್ಟು ಜಮೀನನ್ನು ಉಳಿಸಿಕೊಳ್ಳುತ್ತಿರುತ್ತಾರೆ. ಈ ದೆಸೆಯಿಂದ ಜನಗಳಿಗೆ ಆ ಕಾಫಿತೋಟದ ಪ್ರಾಂತ್ಯದ ಹವಾ ಅಂಟದೆ ಅನೇಕರು ಅಲ್ಲೇ ಪ್ರಾಣಬಿಡುವುದು, ಉಳಿದವರು ರೋಗಸಹಿತರಾಗಿ ಊರಿಗೆ ಬಂದು ತಿನ್ನುವುದಕ್ಕೂ ಇಲ್ಲದೆ ನರಳುವುದು, ಈ ರೀತಿ ತೊಂದರೆ ಅನುಭವಿಸುತ್ತಿರುವ ಜನಗಳ ಸ್ಥಿತಿಯು ಬಹಳ ಪರಿತಾಪವನ್ನುಂಟುಮಾಡುತ್ತದೆ. ಈ ತಾಲ್ಲೂಕಿನ ತಲಾವುಗಳ ಕೆಳಗೆ 3—4 ವರ್ಷಕ್ಕೆ ಒಂದಾವರ್ತಿ ಮಾತ್ರ ಅರ್ಧ ಅಥವ ಮುಕ್ಕಾಲು ಬೆಳೆ ಆಗುತ್ತದೆ. ಆದುದರಿಂದ ಈ ವಿದ್ಯಮಾನಗಳು ಸನ್ನಿಧಾನದ ಆಲೋಚನೆಗೆ ಬರಬೇಕೆಂತಲೂ, ನಾಗಮಂಗಲದ ತಾಲ್ಲೂಕಿನ ಸರಹದ್ದಿಗೆ ಹೇಮಾವತಿ ನದಿಯ ಶ್ರೀರಾಮ ದೇವರ ಕಟ್ಟೆಯ ಉತ್ತರ ನಾಲೆಯು ಚನ್ನರಾಯಪಟ್ಟಣದ ತಾಲ್ಲೂಕಿಗೆ ಬಂದಿರುವುದು ಸುಮಾರು 7—8 ಮೈಲಿ ಫಾಸಲೆಯಲ್ಲಿರುವುದರಿಂದ ಈ ನಾಲೆಯ ಪೈಕಿ ಈ ನಾಗಮಂಗಲದ ತಾಲ್ಲೂಕಿಗೆ ಒಂದು ಬ್ರಾಂಚ್ ನಾಲೆಯನ್ನು ಕೊಡಿಸುವಂತೆ ಅಪ್ಪಣೆ ಕೊಡಿಸಿದ್ದಾದರೆ ಇದರಿಂದ ಅನೇಕರು ಕಾಫಿ ತೋಟದ ಪ್ರಯಾಣವನ್ನು ನಿಲ್ಲಿಸಬಹುದಾಗಿರುವದರಿಂದ ಜೀವನಕ್ಕೆ ಅನುಕೂಲವಾಗುತ್ತದೆ. ಒಂದುವೇಳೆ ಮುಂದೆ ಕನ್ನಂಬಾಡಿ ಪ್ರಾಜೆಕ್ಟು ಈ ತಾಲ್ಲೂಕಿಗೆ ಬರುವ ಸಂದರ್ಭದಲ್ಲಿ ಆಗ್ಗೆ ಇನ್ನೂ ಹೆಚ್ಚಾಗಿ ಅನುಕೂಲ ಉಂಟಾಗಿ ಈ ತಾಲ್ಲೂಕಿನ ಪ್ರಜೆಗಳು ಕಾಫಿತೋಟದ ತೊಂದರೆಯಿಂದಲೂ, ಇತರ ಜೀವನೋಪಾಯದ ತೊಂದರೆಯಿಂದಲೂ ಬಿಡುಗಡೆ ಆಗತಕ್ಕವರಾಗಬಹುದು ಸ್ವಾಮಿ.

" ಪರೋಪಕಾರಾಯದುಹಂತಿ ಧೇನವಃ | ಇಹೋಪಕಾರೋಪಥರಾಮಿ ಪೋಷಿಣಂ || ಇದೇ ಮುಂತಾದ ವಚನಗಳಿಂದ ಕೇವಲ ಪರೋಪಕಾರಾರ್ಥವಾದ ಗೋವಿನಂತಿರುವ ಭೂದೇವಿಗೆ ರಕ್ಷಕರಾದ ರಾಜರು ಭೂಮಿಗೆ ಸಮಾನವಾದ ಗೋವುಗಳನ್ನು ಅತ್ಯಾದರದಿಂದ ರಕ್ಷಿಸಬೇಕೆಂಬ ವಿಷಯವು ಶಾಸ್ತ್ರಪ್ರಸಿದ್ಧವಾಗಿಯೇ ಇರೋಣದರಿಂದಲೂ, ಗೋವುಗಳಿಂದ ಪ್ರಪಂಚಕ್ಕೆ ಉಂಟಾಗುತ್ತಿರುವ ಸುಖಪರಂಪರೆಗಳನ್ನು ಸ್ವಾಮಿಯವರ ಸನ್ನಿಧಿಯಲ್ಲಿ ಅರಿಕೆ ಮಾಡಬೇಕಾಗಿಲ್ಲ. ಹೀಗಿರುವಾಗ ಸಂಸ್ಥಾನದ ಅನೇಕ ಭಾಗಗಳಲ್ಲಿ ಪ್ರತ್ಯಕ್ಷ ಪರೋಕ್ಷವಾಗಿ ಗೋವಧೆಯನ್ನು ಮಾಡುತ್ತಿರುವ ವಿಚಾರ ಸರ್ಕಾರದವರಲ್ಲಿ ಹಿಂದೆ ಅನೇಕ ವೇಳೆ ವಿಜ್ಞಾಪಿಸಿಕೊಂಡಿರುವುದು ಫಲಕಾರಿಯಾಗದೆ ಇರುವುದಕ್ಕಾಗಿ ಅತ್ಯಂತ ವಿಷಾದಪಡುತ್ತೇವೆ. ಅನೇಕ ಇತರ ಸಂಸ್ಥಾನಗಳಲ್ಲಿ ಗೋವಧೆಯನ್ನು ನಿಲ್ಲಿಸಿರುತ್ತಾರೆ. ಹಾಗೆಯೇ ಇಲ್ಲಿಯೂ ಆ ಕಾಮಧೇನುವಿನ ಮಹಾ ವ್ಯಸನಕರವಾದ ವ್ಯಥೆಯನ್ನು ನಿಲ್ಲಿಸಿ ಶಾಶ್ವತವಾದ ಕೀರ್ತಿಯನ್ನು ಪಡೆಯಬೇಕೆಂದೂ, ಈ ನಮ್ಮ ವಿಜ್ಞಾಪನೆಗಳನ್ನೆಲ್ಲಾ ಸಾವಧಾನದಿಂದ ಲಾಲಿಸಿ ಕೊಡಲೇ ಫಲಕಾರಿಯಾಗುವಂತೆ ಅಪ್ಪಣೆ ದಯಪಾಲಿಸಬೇಕೆಂದೂ ಪ್ರಾರ್ಥಿಸುತ್ತೇವೆ, ಸ್ವಾಮಿ "

ಈ ರೀತಿ ಮೆಂಬರುಗಳು ಅಡ್ರೆಸ್ಸುಗಳನ್ನು ಓದಿ ಒಪ್ಪಿಸಿದ ಬಳಿಕ ದಿವಾನ್‌ರವರು ಎಲ್ಲಾ ಅಡ್ರೆಸ್ಸುಗಳನ್ನೂ ಒಟ್ಟುಗೂಡಿಸಿ, ಅವುಗಳಲ್ಲಿ ಪ್ರತಿನಿಧಿಗಳು ಕಾಣಿಸಿರುವ ಪ್ರಾರ್ಥನೆಗಳನ್ನು ಗವರ್ನಮೆಂಟಿನವರು ನಿದಾನವಾಗಿಯೂ ಪ್ರೀತಿಪೂರ್ವಕವಾಗಿಯೂ ಪರ್ಯಾಲೋಚನೆಮಾಡಿ ಸಂದರ್ಭಾನುಸಾರ ಹುಕುಂ ಕೊಡುವುದಾಗಿಯೂ ಪ್ರತ್ಯುತ್ತರವನ್ನು ದಯಪಾಲಿಸಿದರು. ಆ ಮೇಲೆ ಚೀಫ್ ಸೆಕ್ರೆಟರಿಯವರೇ ಮೊದಲಾದವರು ಬ್ರಿಟಿಷ್ ರೆಸಿಡೆಂಟರವರಿಗೂ ಇತರ ಯೂರೋಪಿಯನ್ ಅತಿಥಿಗಳಿಗೂ ಸುವಾಸನೆಯುಳ್ಳ ನೇತ್ರಾನಂದಕರವಾದ ಹುರಾಯಿಗಳನ್ನು ಒಪ್ಪಿಸಿದರು. ಸಭಿಕರೆಲ್ಲಾ ಎದ್ದು ವಂದನೆಮಾಡುತ್ತಿರುವಲ್ಲಿ ರೆಸಿಡೆಂಟರೇ ಮೊದಲಾದ ಯೂರೋಪಿಯನ್ ಅತಿಥಿಗಳು ಪ್ರತಿವಂದನೆಮಾಡುತ್ತಾ ದಿವಾನ್‌ರವರಿಂದ ಬೀಳ್ಕೊಂಡು ಸಭೆಯಿಂದ ತೆರಳಿದರು. ತರುವಾಯ ಸೆಕ್ರೆಟರಿ ಮ|| ಬಿ. ರಾಮಸ್ವಾಮಯ್ಯನವರು ದಿವಾನ್‌ರವರ ಉಪನ್ಯಾಸವನ್ನು ಕನ್ನಡದಲ್ಲಿ ಸಭಿಕರಿಗೆ ಓದಿ ಹೇಳಿದರು.

ಇದಾದ ಕೂಡಲೆ ಅಂದರೆ ಸುಮಾರು 3½ ಗಂಟೆಗೆ ಸಭೆಯು ಬರಖಾಸ್ತಾಯಿತು.

ಮೊನ್ನೆ ಸೋಮವಾರದಿಂದ ಪ್ರತಿನಿಧಿಗಳು ಸಂಸ್ಥಾನಾ ಮಳೆ ವ್ಯವಹರಿಸುವ ವಿಷಯಗಳನ್ನು ದಿವಾನ್‌ರವರಿಗೆ ಅರಿಕೆಮಾಡಿ ಚರ್ಚೆಗಳನ್ನು ನಡಿಸುತ್ತಿದ್ದಾರೆ.

ಚರ್ಚೆಗಳು ಪ್ರಾರಂಭವಾಗುವುದಕ್ಕಿಂತ ಮುಂಚೆ ಚರ್ಚೆಗಳ ರೀತಿಯನ್ನು ಕ್ರಮಪಡಿಸುವುದಕ್ಕಾಗಿ ದಿವಾನ್‌ರವರು ಕೆಲವು ರೂಲಸನ್ನು ಮಾಡಿ ಸೆಕ್ರೆಟರಿಯವರ ಮೂಲಕ ಸಭೆಯಲ್ಲಿ ಮೆಂಬರುಗಳಿಗೆ ಓದಿಸಿ ಹೇಳಿದರು. ಮೊದಲನೇ ಮೂರು ಸಾಲುಗಳಲ್ಲಿ ಕುಳಿತಿರುವ ಮೆಂಬರುಗಳು ತಮ್ಮ ತಮ್ಮ ಸ್ಥಾನದಲ್ಲೇ ನಿಂತು ಮಾತನಾಡಬೇಕೆಂದೂ, ಹಿಂದೆ ದೂರದಲ್ಲಿ ಕುಳಿತಿರುವ ಮೆಂಬರುಗಳು ಒಬ್ಬರಾದ ಮೇಲೊಬ್ಬರಂತೆ ದಿವಾನ್‌ರವರ ಎದುರಿಗೆ ಬಂದು ವಿಷಯಗಳನ್ನು ಹೇಳಬೇಕೆಂದೂ, ಮೊದಲು ಚರ್ಚೆಯನ್ನು ಪ್ರಾರಂಭಮಾಡತಕ್ಕವರು ಕಡೆಯಲ್ಲಿ ಎರಡನೇ ಸಲ ಮಾತನಾಡಬಹುದೆಂದೂ ರೂಲುಮಾಡಿರುತ್ತಾರೆ. ಇದರಿಂದ ಅನೇಕ ಮೆಂಬರುಗಳು ಗುಂಪಾಗಿ ಬಂದು ದಿವಾನ್‌ರ ಮುಂದೆ ನಿಲ್ಲುವುದು ತಪ್ಪಿಹೋಯಿತಾದರೂ ಚರ್ಚೆಯ ರೀತಿಯು ಕ್ರಮಪಡಲು ಇನ್ನೂ ಸಾಧ್ಯವಾಗಿಲ್ಲ.

ಮೈಸೂರಿನಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನ್‌ರವರು ಮಾಡಿದ ಉಪನ್ಯಾಸ.

ಪೀಠಿಕೆ.—ಮಹಾಶಯರೇ, ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹಾದುರವರ ಅಜ್ಞಾನುಸಾರವಾಗಿ, ದಸರಾ ಪ್ರಜಾಪ್ರತಿನಿಧಿಗಳ ಈ ಮುವತ್ತನೆಯ ಸಭೆಗೆ ತಮ್ಮಗಳನ್ನು ಆದರದೊಡನೆ ಬರಮಾಡಿಕೊಂಡು, ಕಳೆದ ಸರ್ಕಾರೀ ವರ್ಷದಲ್ಲಿ ನಡೆದ ಆಡಳಿತಕ್ಕೆ ಸಂಬಂಧಪಟ್ಟ ಮುಖ್ಯವಿಷಯಗಳನ್ನೂ, ಹಾಲಿ ವರ್ಷದಲ್ಲಿಯೂ ಮುಂದಿನ ವರ್ಷದಲ್ಲಿಯೂ ನಡಿಸಬೇಕೆಂದು ಆಲೋಚಿಸಿರುವ ಏರ್ಪಾಡುಗಳನ್ನೂ ಪದ್ಧತಿಯನ್ನನುಸರಿಸಿ ತಮಗಳಿಗೆ ತಿಳಿಯಪಡಿಸುವುದು ಗೌರವವಾದ ಕರ್ತವ್ಯವೆಂದು ನಾವು ಭಾವಿಸುತ್ತೇವೆ.—ಸಂಸ್ಥಾನದ ಆಡಳಿತಕ್ಕೆ ಸಂಬಂಧಪಟ್ಟ ಕೆಲಸವು ದಿನೇದಿನೇ ಬೆಳೆಯುತ್ತಿರುವುದರಿಂದ, ಪ್ರತಿ ವರ್ಷವೂ ದಸರಾ ಉಪನ್ಯಾಸದಲ್ಲಿ ಪ್ರಸ್ತಾಪಿಸಬೇಕಾದ ಸಂಗತಿಗಳು ನಾನಾ ವಿಷಯಗಳಿಗೆ ಸಂಬಂಧಪಟ್ಟವುಗಳಾಗಿ, ಸಂಖ್ಯೆಯಲ್ಲಿಯೂ ಹೆಚ್ಚುತ್ತಾ ಇರುತ್ತವೆ. ಆದಕಾರಣ ಈ ವರ್ಷದ ಉಪನ್ಯಾಸವನ್ನು ಎರಡು ಭಾಗವಾಗಿ ವಿಂಗಡಿಸಿರುತ್ತೇವೆ. ಈ ಮೊದಲನೆಯ ಭಾಗದಲ್ಲಿ, ತಮ್ಮಗಳ ಅವಗಾಹನೆಗೆ ತರಬೇಕಾಗಿರುವ ಸಂಗತಿಗಳ ಮತ್ತು ಏರ್ಪಾಡುಗಳ ಮುಖ್ಯ ಮುಖ್ಯವಾದ ಅಂಶಗಳನ್ನು ಮಾತ್ರ ಸೂಚಿಸಿರುತ್ತದೆ. ಇಲಾಖಾ ಕೆಲಸಗಳ ತಪ್ಸೀಲುಗಳನ್ನೂ, ವಸ್ತುತಃ ಮುಖ್ಯವಾದವುಗಳಾದರೂ ಸದ್ಯದಲ್ಲಿ ಮಹತ್ತಾದವುಗಳೆಂದು ತೋರ್ಪಡಿಸಿಕೊಳ್ಳದಿರುವ ವಿಷಯಗಳನ್ನೂ ಎರಡನೆಯ ಭಾಗದಲ್ಲಿ ವಿವರಿಸಲಾಗಿದೆ.

ಕಾಲಸ್ಥಿತಿಗಳು —ಈ ವರ್ಷ ಮುಂಗಾರು ಮಳೆಯು ಬಹಳ ಕಮ್ಮಿಯಾಗಿತ್ತು. ಜೂಲೈ ಮತ್ತು ಆಗಸ್ಟು ಮಾಹೆಗಳಲ್ಲಿ ಮಳೆಯು ಬಂತೆಂದು ಹೇಳುವಷ್ಟು ಆಗಲಿಲ್ಲ. ಈ ರೀತಿ ಮಳೆ ಬಾರದೆಹೋದ ಕಾರಣದಿಂದ ಆ ಕಾಲದಲ್ಲಿ ವಿಶೇಷ ಭೀತಿಯು ಉಂಟಾಯಿತು; ಧಾರಣೆವಾಸಿಗಳೂ ಹೆಚ್ಚುತ್ತಾ ಬಂದುವು. ಆದರೆ ಸೆಪ್ಟೆಂಬರ್ ತಿಂಗಳಲ್ಲಿ ಕಾಲಸ್ಥಿತಿಯು ಅನುಕೂಲಿಸಿ, ಒಣಗಿಹೋಗುತ್ತಿದ್ದ ರಾಗಿ ಬೆಳೆಯು ಸ್ವಲ್ಪಮಟ್ಟಿಗೆ ಉಳಿದುಕೊಂಡಿತು. ಹೋದ ತಿಂಗಳಲ್ಲಿಯೂ, ಈ ತಿಂಗಳಲ್ಲಿಯೂ ಸಹ ಮಳೆಯು ಚೆನ್ನಾಗಿ ಬಿದ್ದಿರುತ್ತದೆ. ಈ ವರ್ಷವು ಅಷ್ಟು ಸುಭಿಕ್ಷವಾದ ವರ್ಷವಲ್ಲದಿದ್ದರೂ, ಸದ್ಯಕ್ಕೆ ಆತಂಕಕ್ಕೆ ಯಾವ ಕಾರಣವೂ ಇರುವದಿಲ್ಲ.

1912—13 ನೆಯ ವರ್ಷದ ತಿದ್ದುಪಾಟಾದ ಅಂದಾಜು —ಮುಂಗಾರು ಮಳೆಯು ಬಾರದೆ ಸಂಸ್ಥಾನದ ಅನೇಕ ಕಡೆಗಳಲ್ಲಿ ಬಿತ್ತನೆಯ ಕೆಲಸವು ಹಿಂದಾದ್ದರಿಂದ, 1912-13 ನೆಯ ಸಾಲಿಗೆ ಆದಾಯವ್ಯಯಗಳು ಮಿತವಾಗಿ ಅಂದಾಜು ಮಾಡಲ್ಪಟ್ಟವು. ಆದರೆ ಅದರಿಂದೀಚೆಗೆ ಕಾಲಸ್ಥಿತಿಯು ಅನುಕೂಲಿಸಿ ಸುಭಿಕ್ಷವುಂಟಾದುದರಿಂದ, ಅದರ ಫಲಿತಾಂಶವು ಆ ವರ್ಷದ ತಿದ್ದುಪಾಟಾದ ಅಂದಾಜಿನಲ್ಲಿ ಕಾಣಿಸಿಕೊಂಡಿರುತ್ತದೆ. 1912-13 ನೆಯ ವರ್ಷದ ಹುಟ್ಟುವಳಿಯು ತಿದ್ದುಪಾಟಾದ ಅಂದಾಜಿನ ಮೇರೆಗೆ 272.92 ಲಕ್ಷ ರೂಪಾಯಿಯೂ, ಆ

ವರ್ಷದ ಖರ್ಚು 248 68 ಲಕ್ಷ ರೂಪಾಯಿಯೂ ಆಗಿತ್ತು. ಆದಕಾರಣ 1912 ನೆಯ ಸಾಲಿನಲ್ಲಿ ಬಡ್ಜೆಟ್ಟು ತಯಾರಾದ ಕಾಲದಲ್ಲಿ ನಿರೀಕ್ಷಿಸಿದಂತೆ ಹುಟ್ಟುವಳಿಗಿಂತಲೂ ಖರ್ಚು ಬಹಳ ಹೆಚ್ಚಾಗುವುದಕ್ಕೆ ಬದಲಾಗಿ, 24 24 ಲಕ್ಷ ರೂಪಾಯಿ ಖರ್ಚು ಜಾಸ್ತಿ ಉಳಿದಿರುತ್ತದೆ —ಸಂಸ್ಥಾನದಲ್ಲಿ ಖಾಯಂ ಎಂದು ಭಾವಿಸಲಾಗದ ಕೆಲವು ಹುಟ್ಟುವಳಿಗಳುಂಟು ಇವುಗಳು 35 74 ಲಕ್ಷ ರೂಪಾಯಿಗಳಾಗುತ್ತವೆಂದು ಮೇಲ್ಕಂಡ ಪಟ್ಟಿಯಲ್ಲಿ ತೋರಿಸಿರುತ್ತದೆ ಕೆಲವು ಖರ್ಚು ಬಾಬುಗಳನ್ನು ಅಸಾಧಾರಣ ಬಾಬುಗಳೆಂದು ಭಾವಿಸಬೇಕಾಗಿದೆ, ಏಕೆಂದರೆ ಅವುಗಳನ್ನು ಸಂಸ್ಥಾನದಲ್ಲಿ ನಡಸಿದ ಕೆಲಸಗಳಿಗೆ ಬೇಕಾದ ಮೂಲಧನ ರೂಪವಾಗಿ ಖರ್ಚುಮಾಡಿರುವುದರಿಂದ ಅವುಗಳನ್ನು ಸಂಸ್ಥಾನದ ಆಸ್ತಿಗೆ ಸೇರತಕ್ಕವುಗಳೆಂದು ತಿಳಿಯತಕ್ಕದ್ದಾಗಿದೆ ಸಾಧಾರಣ ನಿವ್ವಳ ಹುಟ್ಟುವಳಿಯನ್ನೂ ಸಾಧಾರಣ ಖರ್ಚನ್ನೂ ನೋಡಿದರೆ, ಸಾಮಾನ್ಯ ಜಮಾಖರ್ಚಿನ ಪ್ರಕಾರ 7 60 ಲಕ್ಷ ರೂಪಾಯಿಗಳಷ್ಟು ಹಣವು ಖರ್ಚುಜಾಸ್ತಿ ಉಳಿದಿರುವುದೆಂದು ತಿಳಿಯಬರುತ್ತದೆ —ಈ ವಿಧವಾಗಿ ತೃಪ್ತಿಕರವಾದ ಫಲಿತಾಂಶವುಂಟಾಗಿರುವುದಕ್ಕೆ, ಗಂಧದ ಮರದ ಹರಾಜುಗಳೂ, ರೈಲ್ವೆ ಹುಟ್ಟುವಳಿಯೂ, ಜವಿರ್ನ ಕಂದಾಯದ ವಸೂಲಾತಿಯೂ, ಅಬ್ಕಾರೀ ಕಂಟ್ರಾಕ್ಟುಗಳೂ ಕೇವಲ ಅನುಕೂಲಿಸಿದ್ದೇ ಕಾರಣವಾಗಿರುತ್ತದೆ

ರಿಸರ್ವ ಹಣ —ಆಯವ್ಯಗಳ ವಿಷಯದಲ್ಲಿ ಕಳೆದ ವರ್ಷವು ತುಂಬಾ ಅನುಕೂಲವಾದದ್ದೆಂದು ಹೇಳಬಹುದಾಗಿದೆ ಜಮಾಖರ್ಚುಗಳ ಲೆಕ್ಕವನ್ನು ನೋಡುವಲ್ಲಿ ರಿಸವ್ ಹಣದ ಜೊತೆಗೆ 16 74 ಲಕ್ಷ ರೂಪಾಯಿಗಳನ್ನು ಸೇರಿಸಿದಂತಾಯಿತು ಇದೂ ಸೇರಿ ರಿಸವ್ ಹಣವು 1913 ನೆಯ ಜೂಲೈ ಗುರ್ರಿ ತಾರೀಖಿನಲ್ಲಿ 193 11 ಲಕ್ಷ ರೂಪಾಯಾಗಿತ್ತು

1913 14 ನೆಯ ಇಸವಿಯ ಬಡ್ಜೆಟ್ ಅಂದಾಜುಗಳು —ಮಳೆಬೆಳೆಗಳು ಸಾಮಾನ್ಯವಾಗಿ ನಡಿಸಬಹುದೆಂಬ ನಿರೀಕ್ಷಣೆಯಮೇಲೆ ತಯಾರ್ಮಾಡಿದ 1913_14 ನೆಯ ಸಾಲಿನ ಬಡ್ಜೆಟ್ಟಿನಲ್ಲಿ ಒಟ್ಟು 2ಂ7 17 ಲಕ್ಷ ರೂಪಾಯಿಯ ಉತ್ಪತ್ತಿಯೂ, 313 ೬6 ಲಕ್ಷ ರೂಪಾಯಿಯ ಒಟ್ಟು ಖರ್ಚೂ ಆಗುವುದೆಂದು ಅಂದಾಜು ಮಾಡಿದೆ ಇವುಗಳನ್ನು ಸಾಮಾನ್ಯ ಮತ್ತು ವಿಶೇಷ ಬಾಬುಗಳಂತೆ ವಿಂಗಡಿಸಿದರೆ, ಜಮಾಖರ್ಚುಗಳ ಲೆಕ್ಕವು ಇದರತಿ ಕಂಡರೆ ಇರುತ್ತದೆ ಈ ವರ್ಷದ ಅಂದಾಜಿನ ಮೇರೆಗೆ ಸಾಧಾರಣ ಬಾಬುಗಳಲ್ಲಿ ಹುಟ್ಟುವಳಿಯು 231 61 ಲಕ್ಷ ರೂಪಾಯಾಗಿಯೂ, ಖರ್ಚು 218 46 ಲಕ್ಷ ರೂಪಾಯಾಗಿಯೂ ಇಷ್ಟು ಎಂದರೆ ಉತ್ಪತ್ತಿಗಿಂತಲೂ ಖರ್ಚು 26 82 ಲಕ್ಷ ರೂಪಾಯಿ ಜಾಸ್ತಿಯಾದ ಹಾಗಾಯಿತು ಈ ಹೆಚ್ಚು ಖರ್ಚಿಗೆ ಮರಾಮತ್ ಇಲಾಖೆ, ವಿದ್ಯಾಭ್ಯಾಸದ ಇಲಾಖೆ, ವ್ಯವಸಾಯ ಮತ್ತು ಕೈಗಾರಿಕೆ ಇಲಾಖೆ—ಇವುಗಳಿಗೆ ವರ್ಷೇವರ್ಷೇ ಕೊಡಲು ಅವಶ್ಯಕತೆಯಿಲ್ಲದಂಥ ಕೆಲವು ವಿಶೇಷ ಗ್ರ್ಯಾಂಟುಗಳನ್ನು ಕೊಟ್ಟುದೇ ಕಾರಣವಾಯಿತು ಆದುದರಿಂದ ಉತ್ಪತ್ತಿಗಿಂತಲೂ ಖರ್ಚೇ ಜಾಸ್ತಿಯಾದುದು ಚಿಂತಿಸಲು ಕಾರಣವಾಗಿರುವದಿಲ್ಲ ಆಗಂತುಕಗಳಾದ ವಿಶೇಷ ಬಾಬುಗಳಿಂದ 35 54 ಲಕ್ಷ ರೂಪಾಯಿ ಆದಾಯವೂ, ಮುಂದೆ ನಡಿಸಬೇಕಾದ ಕೆಲಸಗಳಿಗೆ ಮೂಲಧನ ರೂಪವಾಗಿ ಕೊಡುವುದಕ್ಕೆ 65 10 ಲಕ್ಷ ರೂಪಾಯಿ ಖರ್ಚೂ ಆಯಿತು, ಎಂದರೆ ಆದಾಯಕ್ಕಿಂತಲೂ ವ್ಯಯವು 29 56 ಲಕ್ಷ ರೂಪಾಯಿ ಜಾಸ್ತಿಯಾದ ಹಾಗಾಯಿತು ಈ ಎರಡು ಬಾಬುಗಳಲ್ಲಿಯೂ ಹೆಚ್ಚಾಗಿ ಆದ 56 38 ಲಕ್ಷ ರೂಪಾಯನ್ನು ಹಿಂದೆ ನಮೂದಿಸಿರುವ 192 11 ಲಕ್ಷ ರೂಪಾಯಿ ರಿಸರ್ವ ಹಣದಿಂದ ಕೊಡಲಾಗುವುದು ನಗದಾಗಿಯೂ ಸಲ್ಪಕಾಲದವರೆಗೆ ಬಡ್ಡಿಗೆ ಹಾಕಿದ ಸಾಲದ ರೂಪವಾಗಿಯೂ ಸಾಕಾದಷ್ಟು ಹಣವು ಇರುವುದರಿಂದ ಈ ವಿಶೇಷ ಖರ್ಚಿಗೋಸ್ಕರ ಸರ್ಕಾರದವರು ಖಾಯಮಾಗಿ ಬಡ್ಡಿಗೆ ಹಾಕಿರುವ ಹಣವನ್ನು ತೆಗೆದುಕೊಳ್ಳಬೇಕಾದುದಿಲ್ಲ —ಮುಂದಿನ ಭಾಗದಲ್ಲಿ ವಿವರಿಸುವಂತೆ ಸಂಸ್ಥಾನದ ಉತ್ಪತ್ತಿಗೆ ಆಕರವಾಗಿರುವ ಅಥವಾ ಜರೂರಾಗಿ ಅಭಿವೃದ್ಧಿ ಪಡಿಸಬೇಕಾಗಿದ್ದ ಇಲಾಖೆಗಳು, ಎಂದರೆ ಫಾರೆಸ್ಟ್, ಪೊಲೀಸ್ ಮತ್ತು ತಾಲ್ಲೂಕುಗಳ ಸಿಬ್ಬಂದಿಗಳನ್ನೂ, ಅಕೌಂಟು ಇಲಾಖೆಯನ್ನೂ ಆಯಾ ಸಂದರ್ಭಾನುಸಾರವಾಗಿ ಅವುಗಳ ಹುಟುವಳಿಯನ್ನು ಹೆಚ್ಚಿಸುವದಕ್ಕೋಸ್ಕರ, ಅಥವಾ ಆ ಇಲಾಖೆಗಳ ನೌಕರಿ ಸ್ಥಿತಿಯನ್ನು ಉತ್ತಮಪಡಿಸುವದಕ್ಕೋಸ್ಕರ ಈಚೆಗೆ ಪುನಃ ಪರಿಷ್ಕರಿಸಲಾಗಿದೆ

ದಂಡಿನ ಸರ್‌ಪ್ಲಸ್ ಪಂಡು —ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿನ ಸರ್‌ಪ್ಲಸ್ ಯಾ ಖರ್ಚು ಜಾಸ್ತಿ ಉಳಿದ ಜಾಸ್ತಿ ಹುಟ್ಟುವಳಿಯ ವಿಷಯವನ್ನು ವ್ಯವಸ್ಥೆಮಾಡುವುದರಲ್ಲಿ ಇಂಡಿಯಾ ಸರ್ಕಾರದವರು ಔದಾರ್ಯವನ್ನೂ, ದಯಾಳುತೆಯನ್ನೂ ತೋರ್ಪಡಿಸಿರುತ್ತಾರೆಂಬ ಅಂಶವನ್ನು ಹೋದ ವರ್ಷದ ಉಪನ್ಯಾಸದಲ್ಲಿ ತಮಗಳಿಗೆ ತಿಳಿಸಿತ್ತಷ್ಟೆ ಈ ತೀರ್ಮಾನದಿಂದ ಸಂಸ್ಥಾನಕ್ಕೆ ಕೊಡಬೇಕಾದ ಕರಾರ್ವಾಕಾದೊಬಲಗು ಎಷ್ಟೆಂಬ ವಿಷಯವೂ, ಮುಂದೆ ಕೊಡಬೇಕಾಗುವ ಮೊಬಲಗನ್ನು ಯಾವ ರೀತಿಯಲ್ಲಿ ಲೆಕ್ಕಾಚಾರ ಮಾಡಬೇಕೆಂಬ ವಿಷಯವೂ ಇಂಡಿಯಾ ಸರ್ಕಾರದವರ ಪರ್ಯಾಲೋಚನೆಯಲ್ಲಿವೆ, ಅವರ ಆಖೈರ್ ಜವಾಬನ್ನು ನಿರೀಕ್ಷಿಸುತ್ತಲಿದೇವೆ

ಅಕೌಂಟು ಇಲಾಖೆ —ಅಕೌಂಟು ಇಲಾಖೆಯ ವಿಷಯದಲ್ಲಿ ಸರ್ಕಾರದಿಂದ ಮಂಜೂರಾಗಿರುವ ಒಂದೆರಡು ಮುಖ್ಯವಾದ ಏರ್ಪಾಡುಗಳನ್ನು ಮಾತ್ರ ಇಲ್ಲಿ ಸೂಚಿಸುವುದು ಅವಶ್ಯಕವಾಗಿದೆ ಈ ಸಭೆಯಲ್ಲಿ ಪದೇಪದೇ ತಿಳಿಸುತ್ತಿದ್ದ ಅಭಿಪ್ರಾಯಗಳಿಗನುಸಾರವಾಗಿ, ವರ್ಷಕ್ಕೆ 2,000 ರೂಪಾಯಿಗಿಂತಲೂ ಮೊತ್ತದಲ್ಲಿ 5,000 ರೂಪಾಯಿಗಿಂತಲೂ ಮೀರಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಬಡ್ಡಿಗೆ ಹಣವನ್ನು ಹಾಕಕೂಡದೆಂಬ ನಿರ್ಬಂಧವನ್ನು ತೆಗೆದುಹಾಕಿ, ಪರಿಮಿತಿಯಿಲ್ಲದೆ ಹಣವನ್ನು ಇಡುವದಕ್ಕೆ ಅವಕಾಶವನ್ನು ಕಲ್ಪಿಸಿ, ಹೆಚ್ಚು ಸೌಲಭ್ಯಗಳನ್ನು ಕೊಟ್ಟಿರುತ್ತದೆ —ಕಂಟ್ರೋಲರ ಆಫೀಸಿನ ನೌಕರಿಸ್ಥಿತಿಯನ್ನು ಉತ್ತಮಪಡಿಸುವ ಉದ್ದೇಶದಿಂದಲೂ ಹೊಸ ಇಲಾಖೆಗಳನ್ನು ಏರ್ಪಡಿಸಿದ್ದರಿಂದಲೂ, ಮತ್ತು ಹಾಲಿ ಇರತಕ್ಕ ಇಲಾಖೆಗಳನ್ನು ವೃದ್ಧಿಗೆ ತಂದಿರುವುದರಿಂದಲೂ ಕೆಲಸಗಳು ಹೆಚ್ಚಿದುದಕ್ಕೋಸ್ಕರ ತಕ್ಕ ಏರ್ಪಾಡು ಮಾಡುವುದಕ್ಕಾಗಿಯೂ, ಸದರೀ ಇಲಾಖಾ ಆಫೀಸರುಗಳ ಮತ್ತು ನೌಕರರ ಸಿಬ್ಬಂದಿಯನ್ನು ಸರ್ಕಾರದವರು ಈಚೆಗೆ ಬಲಪಡಿಸಿರುತ್ತಾರೆ ಡೆಪ್ಯುಟಿ ಕಂಟ್ರೋಲರೆಂಬ ಒಬ್ಬ ಆಫೀಸರನ್ನು ಹೊಸದಾಗಿ ನೇಮಿಸಿರುವುದು ಈ ಏರ್ಪಾಡಿನ ವಿಶೇಷಾಂಶವಾಗಿದೆ ಈ ಆಫೀಸರು ಕಂಟ್ರೋಲರವರ ನೋಲ್ವಿಚಾರಣೆಗೆ ಒಳಪಟ್ಟು ರೈಲ್ವೆ ಮತ್ತು ಮರಾಮತ್ ಅಕೌಂಟುಗಳ ಚಾರ್ಜಿನಲ್ಲಿ ಇರುವರು ಈ ಚಾಲ್ತಿವರ್ಷದಲ್ಲಿ ಮರಾಮತ್ ಕಾಂಗಾರಿಗಳಿಗೂ ರೈಲ್ವೆಗಳಿಗೂ 65 ಲಕ್ಷ ರೂಪಾಯಿಗಳ ಭಾರಿ ಖರ್ಚು ಇರುವುದರಿಂದಲೂ, ಮುಂದಿನ ವರ್ಷಗಳಲ್ಲಿಯೂ ಇದೇ ರೀತಿಯಾಗಿ ಖರ್ಚು ಇರುವದರಿಂದಲೂ ಇವುಗಳ ಕ್ರಮವಾದ ತನಿಖೆ ಉದ್ದೇಶ್ಯ ಈ ಏರ್ಪಾಡನ್ನು ಅತ್ಯವಶ್ಯಕವಾಗಿ ಮಾಡಬೇಕಾಯಿತು

ಮೈಸೂರು ಸಿವಿಲ್ ಸರ್ವಿಸ್ —ಮೈಸೂರು ಸಿವಿಲ್ ಸರ್ವಿಸ್ಸಿಗೆ ಆಫೀಸರುಗಳನ್ನು ಹೊಸದಾಗಿ ನೇಮಕಮಾಡಿಕೊಳ್ಳುವುದಕ್ಕಾಗಿ ಏರ್ಪಟ್ಟ ನಿಬಂಧನೆಗಳನ್ನು ಕಳೆದ ಜನವರಿ ತಿಂಗಳಲ್ಲಿ ತಿದ್ದುಪಾಟು ಮಾಡಿದುದಲ್ಲದೆ ಇದರಲ್ಲಿ ಆಫೀಸರುಗಳನ್ನು ಚುನಾಯಿಸಿಕೊಳ್ಳುವುದಕ್ಕಾಗಿ ಒಂದು ಪರೀಕ್ಷೆಯನ್ನು ನಡಿಸುವುದಕ್ಕೂ ಸಹ ಏರ್ಪಾಡು ಮಾಡಲಾಯಿತು ತಿದ್ದುಪಾಟಾದ ಈ ನಿಬಂಧನೆಗಳಿಗನುಸಾರವಾಗಿ ನಡಿಸಲ್ಪಡುವ ಪ್ರಥಮ ಪರೀಕ್ಷೆಯು ಮುಂದಿನ ತಿಂಗಳಲ್ಲಿ ನಡೆಯುವುದಾಗಿದೆ 19 ಮಂದಿ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಅಂಗೀಕರಿಸಲ್ಪಟ್ಟಿರುತ್ತಾರೆ

ಲ್ಯಾಂಡ್ ರೆವಿನ್ಯೂ ಇಲಾಖೆ —1912-13 ನೇ ಸಾಲಿನ ಕಾಲಸ್ಥಿತಿ — ಕಳೆದ ವರ್ಷದ ಏಪ್ರಿಲ್, ಮೇ, ಜೂನ್ ತಿಂಗಳುಗಳಲ್ಲಿ ಮಳೆ ಚೆನ್ನಾಗಿ ನಡಿಸದೆ, ಅದರೊಳಗೂ ಬೆಂಗಳೂರು, ಕೋಲಾರ, ತುಮಕೂರು, ಮೈಸೂರು ಡಿಸ್ಟ್ರಿಕ್ಟುಗಳಲ್ಲಿ ಸ್ವಲ್ಪ ಕಡಮೆಯಾಗಿಯೇ ಮಳೆಯಾದುದರಿಂದ ವರ್ಷಾರಂಭದಲ್ಲಿ ಕಾಲಸ್ಥಿತಿಯು ಅನುಕೂಲಿಸಬಹುದೆಂದು ತೋರಿಬರಲಿಲ್ಲ ಆದರೆ ಜೂಲೈ ಮಾಹೆಯಲ್ಲಿ ಸಂಸ್ಥಾನದ ಎಲ್ಲಾ ಕಡೆಗಳಲ್ಲಿಯೂ ಸುವೃಷ್ಟಿಯಾಗಿ ಕೆರೆಗಳೆಲ್ಲಾ ತುಂಬಿದುವು ಮುಂಗಾರು ಹಿಂಗಾರು ಎರಡು ಮಳೆಗಳೂ ಚೆನ್ನಾಗಿ ನಡಿಸಿದುವು ಪ್ರಸಕ್ತವರ್ಷದಲ್ಲಿ ಸರಾಸರಿ ಒಟ್ಟು 41 09 ಅಂಗುಲ ಮಳೆಯಾಯಿತು ಇದರಿಂದ ಹಿಂದಿನ ವರ್ಷಕ್ಕಿಂತಲೂ 12 76 ಅಂಗುಲವು, ಕಳೆದ 12 ವರ್ಷಗಳ ಸರಾಸರಿಗಿಂತಲೂ 8 97 ಅಂಗುಲವೂ ಜಾಸ್ತಿಯಾದ ಹಾಗಾಯಿತು ಒಟ್ಟಿನಲ್ಲಿ ಮಳೆಯು ಸಮೃದ್ಧಿಯಾಗಿ ಎಲ್ಲಾ ಕಡೆಗಳಲ್ಲಿಯೂ ಆಯಿತು —ಹಿಂದಿನ ವರ್ಷಕ್ಕಿಂತಲೂ ಈ ವರ್ಷ ಹೆಚ್ಚು ಪ್ರದೇಶದಲ್ಲಿ ರಾಗಿಯ ಬೆಳೆ ಇಡಲ್ಪಟ್ಟು, ಫಸಲೂ ಹೆಚ್ಚಾಗಿ ಆಯಿತು ಕಬ್ಬಿನ ಬೆಳೆಯೂ ಜೋಳದ ಬೆಳೆಯೂ ಸಹ ಚೆನ್ನಾಗಿ ಆಯಿತು ಪೈರುಗಳಿಗೆ ರೋಗ ತಗಲಿ ಸ್ವಲ್ಪಮಟ್ಟಿಗೆ ನಷ್ಟವಾದ ಬೆಂಗಳೂರು ಮತ್ತು ತುಮಕೂರು ಡಿಸ್ಟ್ರಿಕ್ಟುಗಳ ಹೊರತಾಗಿ ಮಿಕ್ಕ ಭಾಗಗಳಲ್ಲಿ ಭತ್ತದ ಪೈರೂ ಸಹ ತೃಪ್ತಿಕರವಾಗಿತ್ತು ಚಿತ್ರದುರ್ಗ ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿ ಆಹಾರ ಧಾನ್ಯಗಳಿಗೆ ಬದಲಾಗಿ ಹತ್ತಿಬೆಳೆಯನ್ನು ಇಡಬೇಕೆಂಬ ಅಭಿಲಾಷೆಯು ರೈತರಲ್ಲಿ ಉಂಟಾಗಿರುತ್ತದೆ ಅಲ್ಲಿ ಮೊದಲಿಗಿಂತ 53,487 ಎಕರೆಯಷ್ಟು ಹೆಚ್ಚು ಜಮೀನಿನಲ್ಲಿ ಹತ್ತಿಯ ಬೆಳೆ ಸಾಗುವಳಿಯಾಯಿತು ಈ ರೀತಿಯಲ್ಲಿ ಮಳೆಗಳು ಅನುಕೂಲವಾಗಿ ನಡಿಸಿ, ಬೆಳೆಗಳು ಚೆನ್ನಾಗಿ ಆದರೂ, ಧಾರಣೆಮಾನಗಳು ಇಳಿಯದೆ ಏರುತ್ತಲೇ ಬಂದವು

ತಾಲ್ಲೂಕು ಕಚೇರಿಗಳು —ಅನೇಕ ವಿಧವಾಗಿ ಕೆಲಸವು ಹೆಚ್ಚಾದುದು, ತಾಲ್ಲೂಕು ಆಡಳಿತವನ್ನು ಉತ್ತಮ ಸ್ಥಿತಿಗೆ ತರಬೇಕಾದ ಅವಶ್ಯಕತೆಯು, ದವಸಗಳ ಧಾರಣೆಮಾಸಿಯು ಏರುತಲೇ ಇರುವುದು, ಈ ಮೊದಲಾದ ಕಾರಣಗಳಿಂದ, ಬಹಳ ದಿನಗಳ ಹಿಂದೆ ಎಂದರೆ 1897ನೆಯ ಇಸವಿಯಲ್ಲಿ, ನಿಷ್ಕರ್ಷೆಯಾಗಿದ್ದ ತಾಲ್ಲೂಕು ಸಿಬ್ಬಂದಿಯ ಸಂಬಳಗಳು, ಈಗಿನ ಕಾಲಸ್ಥಿತಿಗೆ ತಕ್ಕವುಗಳಲ್ಲವೆಂದು ತೋರಿಬಂದ ಕಾರಣ ಪುನರ್ವಿಮರ್ಶೆಯಾಗಿ ಅವುಗಳನ್ನು ಹೆಚ್ಚಿಸಿ ಈ ಬಗ್ಗೆ ಸಾಲಿಯಾನ 41,000 ರೂಪಾಯಿ ಹೆಚ್ಚು ಖರ್ಚಿನಿಂದ ಏರ್ಪಾಡು ಮಾಡಲಾಗಿದೆ ಇದರಿಂದ ತಾಲ್ಲೂಕು ಉದ್ಯೋಗಗಳಿಗೆ ಹೆಚ್ಚು ಯೋಗ್ಯತೆಯುಳ್ಳ ನೌಕರರು ದೊರೆತು, ಸಾಮಾನ್ಯವಾಗಿ ತಾಲ್ಲೂಕುಗಳ ಆಡಳಿತವು ಉತ್ತಮ ಸ್ಥಿತಿಗೆ ಬರಬಹುದೆಂದು ಸರ್ಕಾರದವರು ಭಾವಿಸುತ್ತಾರೆ —ತಾಲ್ಲೂಕು ಕಚೇರಿಗಳಲ್ಲಿನ ಕೆಲಸಗಳನ್ನು ಕ್ರಮಪಡಿಸುವದಕ್ಕೂ, ನೌಕರರ ಕರ್ತವ್ಯಗಳನ್ನೂ ಜವಾಬ್ದಾರಿಗಳನ್ನೂ ನಿಷ್ಕರ್ಷೆ ಮಾಡುವುದಕ್ಕೂ, ಅವರು ಆಚರಿಸುವ ಬಗ್ಗೆ ನಿಬಂಧನೆಗಳನ್ನು ವಿಧಿಸುವುದಕ್ಕೂ ತಾಲ್ಲೂಕು ಮ್ಯಾನ್ಯುಯಲ್ ಎಂಬ ಪುಸ್ತಕವನ್ನು ರಚಿಸಿ ಪ್ರಚುರಪಡಿಸುವುದಕ್ಕೆ ಅವರ ಸವಾದ ಪ್ರಯತ್ನಗಳು ನಡೆಯುತ್ತಾ ಇವೆ

ಅಬ್ಕಾರೀ ಇಲಾಖೆ —ಅಬ್ಕಾರಿ ಬಾಬಿನ ಒಟ್ಟು ಹುಟ್ಟುವಳಿಯು ಹಿಂದಿನ ವರ್ಷ 45,15,518 ರೂಪಾಯಿ ಇದ್ದುದು ಈ ವರ್ಷ 50,94 310 ರೂಪಾಯಿಯಾಗಿರುವುದರಿಂದ 6,18,792 ರೂಪಾಯಿ ಹೆಚ್ಚಾಗಿ ಹುಟ್ಟುವಳಿಯಾದಂತೆ ಆಯಿತು ಈ ಪೈಕಿ ಸುಮಾರು ಅರ್ಧ ಮೊಬಲಗು ದುಕಾನ್ ಗುತ್ತಿಗೆ ಮೊಬಲಗು ಹೆಚ್ಚಿದುದರಿಂದಲೂ, ಉಳಿದ ಅರ್ಧ ಮೊಬಲಗು ಈ ವರ್ಷದಲ್ಲಿ ಶರಾಬು ಹೆಚ್ಚಾಗಿ ಖರ್ಚಾದುದರಿಂದಲೂ ಹುಟ್ಟುವಳಿಯಾಗಿರುತ್ತದೆ ಅಬ್ಕಾರಿ ಇಲಾಖೆ ಏರ್ಪಟ್ಟಲಾಗಾಯಿತು ಈ ವರ್ಷದಲ್ಲಿ ಹುಟ್ಟುವಳಿಯಾದಷ್ಟು ಮೊಬಲಗು ಹಿಂದೆ ಯಾವ ವರ್ಷದಲ್ಲಿಯೂ ಆಗಿರುವುದಿಲ್ಲ ಅಬ್ಕಾರಿಯ ಎಲ್ಲಾ ಬಾಬುಗಳಲ್ಲಿಯೂ ಹುಟ್ಟುವಳಿ ಹೆಚ್ಚಾಗಿರುವುದರ ಜೊತೆಗೆ ಪರಬು ಮೊದಲಾದವುಗಳ ಖರ್ಚು ಹೆಚ್ಚುತ್ತಾ ಬಂದಿದೆ ಈ ಬಾಬಿಗೆ ಸಂಬಂಧಪಟ್ಟ ಎಲ್ಲಾ ಸಂಗತಿಗಳನ್ನೂ ಪರ್ಯಾಲೋಚಿಸಿದರೆ, ಮದ್ಯಗಳನ್ನು ಕಳ್ಳತನದಿಂದ ಉಪಯೋಗಿಸುವುದನ್ನು ತಕ್ಕಮಟ್ಟಿಗೆ ಕಮ್ಮಿಮಾಡಿ, ಇಲಾಖೆಯ ಕೆಲಸಗಳನ್ನು ತೃಪ್ತಿಕರವಾಗಿ ನಡಿಸಲಾಯಿತೆಂದು ನಿಸ್ಸಂದೇಹವಾಗಿ ಕಂಡುಬರುವುದಾದರೂ ಈ ಬಾಬಿನ ಹುಟ್ಟುವಳಿ ಹೆಚ್ಚಿರುವುದು ಅಷ್ಟು ಸಂತೋಷಾಸ್ಪದವಾದ ಅಂಶವಾಗಿರುವುದಿಲ್ಲ

ಫಾರೆಸ್ಟ್ ಇಲಾಖೆ —ಫಾರೆಸ್ಟ್ ಇಲಾಖೆಯ ಕೆಲಸವು ಕ್ರಮವಾಗಿ ಜರುಗಿಸಲ್ಪಟ್ಟಿತು ಎಲ್ಲಾ ಬಾಬಿನಲ್ಲಿಯೂ ಎಂದಿಗಿಂತಲೂ ಹೆಚ್ಚಾಗಿ ಸುಮಾರು 33,02,920 ರೂಪಾಯಿಗಳ ಉತ್ಪತ್ತಿಯಾಗಿರುತ್ತದೆ ಇಷ್ಟು ಹೆಚ್ಚು ಉತ್ಪತ್ತಿಗೆ, ಶ್ರೀಗಂಧದ ಮರಗಳಿಗೆ ಎಂದಿಗಿಂತಲೂ ಹೆಚ್ಚು ಬೆಲೆಯು ಬಂದುದೇ ಮುಖ್ಯಕಾರಣವಾಗಿರುತ್ತದೆ ಈ ಒಂದು ಬಾಬಿನಿಂದಲೇ ಒಟ್ಟು 22,92,419 ರೂಪಾಯಿ ಉತ್ಪತ್ತಿಯಾಯಿತು —ಈ ಇಲಾಖೆಯ ಸಿಬ್ಬಂದಿಯನ್ನು 65,514 ರೂಪಾಯಿವರೆಗೆ ಖರ್ಚು ಹೆಚ್ಚಿಸಿ ಪರಿಷ್ಕಾರಮಾಡಲಾಯಿತು ಇದರಿಂದ ಮುಂದೆ ಈ ಇಲಾಖೆಯ ನೌಕರಿಯು ಇನ್ನೂ ಉತ್ತಮಸ್ಥಿತಿಗೆ ಬರುವುದೆಂದು ನಿರೀಕ್ಷಿಸಲಾಗಿದೆ —ಹಾಲಿ ಈ ಇಲಾಖೆಯ ಆಡಳಿತಗಳು ತಕ್ಕಮಟ್ಟಿಗೆ ವಿಚಕ್ಷಣೆಯಿಂದ ನಿರ್ವಹಿಸಲ್ಪಡುತ್ತಿವೆ, ಆದರೆ ಇನ್ನು ಮುಂದಿನ ವರ್ಷಗಳಲ್ಲಿ ಎಲ್ಲಾ ವಿಧವಾದ ಫಾರೆಸ್ಟು ಉತ್ಪತ್ತಿಗಳನ್ನೂ ಲಾಭಕರವಾಗಿ ಬಿಕರಿಮಾಡುವ ವಿಚಾರಕ್ಕೆ ಈ ಇಲಾಖೆಯವರು ವಿಶೇಷ ಗಮನವನ್ನು ಕೊಡಬೇಕಾಗಿದೆ ಈ ಬಾಬಿನ ಹುಟ್ಟುವಳಿಯನ್ನು ಸ್ಥಳೀಯ ಸ್ಥಿತಿಗತಿಗಳಿಗೆ ಅನುಸಾರವಾಗಿಯೂ ಮತ್ತು ಶಾಸ್ತ್ರಾನುಸಾರವಾಗಿಯೂ ಕೆಲಸ ನಿರ್ವಾಹಮಾಡುವದರಿಂದ ಸಾಧ್ಯವಾದಷ್ಟು ಹೆಚ್ಚಿಸುವುದಕ್ಕಾಗಿ ನಿಪುಣರಾಗಿರತಕ್ಕ ನೌಕರರನ್ನು ನೇಮಿಸಿಕೊಳ್ಳಬೇಕಾಗಿ ಬರಬಹುದು ಇಲ್ಲಿನ ಉಪಯೋಗಕ್ಕೆ ಬೇಕಾದ ಸೌದೆಯೂ, ರೈಲ್ವೆಗಳಿಗೆ ಬೇಕಾದ ಸ್ಲೀಪರುಗಳೂ ಯಥೇಚ್ಛವಾಗಿ ನಮ್ಮ ಜಂಗಲುಗಳಲ್ಲಿ ಬಿದ್ದು ಇರುವಲ್ಲಿ ನಮ್ಮ ದೇಶದಲ್ಲಿ ಸಾಹಸಪಟ್ಟು ಪ್ರಯತ್ನಗಳನ್ನು ಮಾಡದೆ, ಹೊರಗಿನಿಂದ ಇಂಧನ ಸಾಮಗ್ರಿಗಳನ್ನು ತರಿಸಿಕೊಳ್ಳುತ್ತಿರುವುದು ತೃಪ್ತಿಕರವಾದದ್ದೆಂದು ಎಣಿಸಬಾರದು ಶಾಸ್ತ್ರಾನುಸಾರವಾಗಿ ಪರೀಕ್ಷೆಗಳನ್ನು ಮಾಡಿ ನೋಡಿದರೆ ಬಾಜಾರಿನಲ್ಲಿ ವಿಶೇಷ ಬೆಲೆ ಬಾಳುವ ಅನೇಕ ಪದಾರ್ಥಗಳು ನಮ್ಮ ಜಂಗಲಿಗಳಲ್ಲೇ ಸಿಗುತ್ತವೆಂಬ ಅಂಶವು ಗೋಚರಕ್ಕೆ ಬರಬಹುದಲ್ಲವೆ ಅವುಗಳನ್ನು ಸರಿಯಾಗಿ ಉಪಯೋಗಿಸಿಕೊಂಡು ಅಭಿವೃದ್ಧಿಗೆ ತಂದರೆ ಜನರಿಗೆ ಹೊಸ ಸಂಪಾದನೆಯ ಮಾರ್ಗಗಳು ದೊರೆಯುವುವಲ್ಲದೆ ಸರ್ಕಾರಕ್ಕೂ ಹೆಚ್ಚು ಹುಟ್ಟುವಳಿಯಾಗುವುದು

ಪೊಲೀಸ್ ಇಲಾಖೆ —ಪೊಲೀಸ್ ಇಲಾಖೆಯಲ್ಲಿ ತಕ್ಸೀರುಗಳನ್ನು ಪತ್ತೆ ಮತ್ತು ತನಿಖೆ ಮಾಡುವುದರಲ್ಲಿ ಚೆನ್ನಾಗಿ ಕೆಲಸ ನಡೆದಿರುತ್ತದೆ ಪೊಲೀಸ್ ಇಲಾಖೆಯ ಸಿಬ್ಬಂದಿಯ ಸ್ಥಿತಿಯನ್ನು ಉತ್ತಮ ಪಡಿಸಬೇಕೆಂದು ಪ್ರಜಾಪ್ರತಿನಿಧಿ ಸಭೆಯವರು ಅನೇಕವೇಳೆ ಮಾಡಿಕೊಂಡ ಅರಿಕೆಯು ಪರ್ಯಾಲೋಚಿಸಲ್ಪಟ್ಟು ಈ ಮುಖ್ಯವಾದ ಇಲಾಖೆಯ ಅನೇಕ ಶಾಖೆಗಳ ಸ್ಥಿತಿಯನ್ನು ಕ್ರಮಪಡಿಸತಕ್ಕ ಏರ್ಪಾಡನ್ನು ಶ್ರೀಮನ್ಮಹಾರಾಜರವರು ಮಂಜೂರುಮಾಡಿಯಾರೆಂಬ ಸಂಗತಿಯನ್ನು ಕೇಳಲು ತಾವುಗಳು ಸಂತೋಷಿಸಬಹುದು ಈ ಹೊಸ ಏರ್ಪಾಡಿನಿಂದ ವರ್ಷ 1 ಕ್ಕೆ 75,000 ರೂಪಾಯಿ ಹೆಚ್ಚು ಖರ್ಚು ಬರುತ್ತಿಯಲ್ಲದೆ ಪೊಲೀಸ್ ಕಾನ್‌ಸ್ಟೇಬಲುಗಳಿಗೆ ಹೆಚ್ಚು ಸಂಬಳ ದೊರೆಯುವಂತೆ ಮಾಡಿರುವುದೇ ಸದರಿ ಏರ್ಪಾಡಿನ ಮುಖ್ಯಾಂಶವಾಗಿದೆ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿನ ಕೆಲಸಮಾಡುವ ಕಾನ್‌ಸ್ಟೇಬಲುಗಳಿಗೆ ಹಾಲಿ ಸಲ್ಲುತ್ತಿರುವ 9, 8, 7 ರೂಪಾಯಿ ಸಂಬಳಕ್ಕೆ ಬದಲಾಗಿ ಮುಂದೆ 11, 10, 9, 8 ರೂಪಾಯಿ ಸಂಬಳವು ಸಲ್ಲುವುದು ಸದರೀ ಏರ್ಪಾಡಿನಿಂದ ಡಿಸ್ಟ್ರಿಕ್ಟು ಮತ್ತು ರೈಲ್ವೇ ಪೊಲೀಸ್ ಕಾನ್‌ಸ್ಟೆಬಲುಗಳಿಗೆ ಸರಾಸರಿ ಒಂದು ರೂಪಾಯಿನಂತೆ ಬಡ್ತಿ ಸಿಕ್ಕುವುದಕ್ಕೂ, ಇನ್‌ಸ್ಪೆಕ್ಟರುಗಳನ್ನೂ ಇತರ ಸಿಬ್ಬಂದಿಯನ್ನೂ ಬಲಪಡಿಸುವುದಕ್ಕೂ, ಈಗಿನ ಹೆಡ್ ಕ್ವಾರ್ಟರು ಟ್ರೇನಿಂಗ್ ಸ್ಕೂಲನ್ನು ಚೆನ್ನಾಗಿ ಪರಿಷ್ಕರಿಸಿ ಬೇಕಾದ ಸಲಕರಣೆಗಳನ್ನು ಒದಗಿಸುವುದಕ್ಕೂ ಅವಕಾಶವನ್ನುಂಟುಮಾಡಿಯದೆ —ಪೊಲೀಸ್ ನೌಕರರಿಗೆ ಬಡ್ತಿ ದೊರೆಯುವ ಸಂಭವವನ್ನು ಹೆಚ್ಚಿಸಿ ಇರುವುದರಿಂದ ಇನ್ನು ಮುಂದೆ ಸಮರ್ಥರಾದ ಜನರನ್ನು ಇಲಾಖೆಗೆ ಒದಗಿಸಿಕೊಳ್ಳುವುದರಲ್ಲಿ ಕಷ್ಟವುಂಟಾಗಲಾರದೆಂದು ಎಣಿಸಿಯದೆ ಪೊಲೀಸ್ ಸಿಬ್ಬಂದಿಯವರ ಶಿಕ್ಷಣವನ್ನೂ ಸದ್ವರ್ತನವನ್ನೂ ಇನ್ನೂ ಉತ್ತಮಸ್ಥಿತಿಗೆ ತರುವುದಕ್ಕಾಗಿಯೂ, ಸಂಸ್ಥಾನದಲ್ಲೆಲ್ಲಾ ತನಿಖೆಯ ಕೆಲಸವು ಇನ್ನೂ ಕ್ರಮವಾಗಿಯೂ ಚೆನ್ನಾಗಿಯೂ ನಡೆಯುವಂತೆ ಮಾಡುವುದಕ್ಕಾಗಿಯೂ ಒಂದು ಏರ್ಪಾಡನ್ನು ಜಾರಿಗೆ ತರಬೇಕೆಂಬ ವಿಷಯವೂ ಸಹ ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತದೆ

ಮಿಲಿಟರಿ ಇಲಾಖೆ —ಟಾರ್ ಇಲಾಖೆಯನ್ನು ಉತ್ತಮಸ್ಥಿತಿಗೆ ತರಬೇಕೆಂಬ ಉದ್ದೇಶದಿಂದ ಸದರಿ ಇಲಾಖೆಯ ಆಫೀಸರುಗಳ ಮತ್ತು ಶಿಪಾಯಿಗಳ ಸಂಬಳವನ್ನೂ, ಮುಂದೆ ಬಡ್ತಿಗೆ ಬರುವ ಸಂಭವವನ್ನೂ ಹೆಚ್ಚಿಸಿ ಸದರಿ ಇಲಾಖೆಯನ್ನು ಕ್ರಮಪಡಿಸಬೇಕೆಂದು ಉದ್ದೇಶಿಸಿರುತ್ತದೆ ಟ್ರಾನ್ಸ್‌ಪೋರ್ಟು ಸೈನ್ಯದಲ್ಲಿ ಕುದುರೆಗಳನ್ನು ಬದಲಾಯಿಸಿ ಎತ್ತುಗಳನ್ನು ಉಪಯೋಗಿಸಲು ಮಾಡಿದ ರಿಜಿಸ್ಟ್ರೇಷನ್ ಏರ್ಪಾಡು ಚೆನ್ನಾಗಿ ನಡೆಯಲಿಲ್ಲ ರಿಜಿಸ್ಟರ್‌ಮಾಡಿದ ಎತ್ತುಗಳನ್ನು ಅವುಗಳ ಮಾಲೀಕರು ಅನೇಕವಾಗಿ ಮಾರುವದೂ, ಬದಲಾಯಿಸುವುದೂ ತಿಳಿಯಬಂತು ಆದ್ದರಿಂದ ಈ ಏರ್ಪಾಡನ್ನು ವಜಾಮಾಡಬೇಕೆಂತಲೂ ಈಗ ಅವಶ್ಯಕವಾದ ಎತ್ತುಗಳು ಸಿಕ್ಕುತ್ತವೆಯಾದ್ದರಿಂದ ಅವುಗಳನ್ನೇ ಇಟ್ಟುಕೊಳ್ಳಬೇಕೆಂತಲೂ ಈಚೆಗೆ ನಿರ್ಧರಿಸಲಾಗಿದೆ ಸಾಧಾರಣಕಾಲದಲ್ಲಿ ಟ್ರಾನ್ಸ್‌ಪೋರ್ಟು ಸೈನ್ಯವು ತಮ್ಮ ಇಲಾಖೆಗೂ ಸರ್ಕಾರದ ಇಲಾಖೆಗಳಿಗೂ ಅವಶ್ಯಕವಿರುವ ಇತರ ಇಲಾಖೆಗಳಿಗೂ ಮೇವನ್ನು ಒದಗಿಸಿಕೊಡುವ ಏರ್ಪಾಡನ್ನು ಮಾಡುವ ಯೋಚನೆ ಇರುತ್ತದೆ ಈ ಮೂಲಕ ಮೇವನ್ನೂ ಸಾಗಿಸುವ ಮತ್ತು ಕೊಯ್ಯುವ ಖರ್ಚು ಉಳಿಯಬಹುದಾಗುತ್ತದೆ

ವೈದ್ಯ ಮತ್ತು ಆರೋಗ್ಯ ಇಲಾಖೆಗಳು —ಪಾಶ್ಚರ್ ಇನ್‌ಸ್ಟಿಟ್ಯೂಟ್ ಸಹ ಸೇರಿರುವ ಪಬ್ಲಿಕ್ ಹೆಲ್ತ್ ಇನ್‌ಸ್ಟಿಟ್ಯೂಟಿಗೆ ಸರಿಯಾದ ಕಟ್ಟಡವನ್ನು ಕಟ್ಟಿಸುವುದಕ್ಕೆ ಸಲಹೆಗಳು ಸರ್ಕಾರದವರ ಆಲೋಚನೆಯಲ್ಲಿರುತ್ತವೆ —ಮಲೆನಾಡಿನಲ್ಲಿ ಪ್ರಜಾ ಸಂಖ್ಯೆಯು ಕ್ಷೀಣವಾಗುತ್ತಿರುವ ಸಂಗತಿಯು ಈ ವರ್ಷದಲ್ಲಿ ಸರ್ಕಾರದವರ ವಿಶೇಷವಾದ ಪರ್ಯಾಲೋಚನೆಗೆ ಬಂದಿತು ಈ ವಿಷಯವನ್ನು ಚೆನ್ನಾಗಿ ಪರಿಶೀಲನೆ ಮಾಡುವುದಕ್ಕೆ ಹೊಸದಾಗಿ ಒಬ್ಬ ಆಫೀಸರನ್ನು ನೇಮಿಸಿತ್ತು ಈ ಪ್ರಾಂತ್ಯದ ಪ್ರಜೆಗಳ ಕೊರತೆಗಳನ್ನು ಹೋಗಲಾಡಿಸಿ ಅವರ ಸ್ಥಿತಿಯನ್ನು ವೃದ್ಧಿಗೊಳಿಸಲು ಸದ್ಯದಲ್ಲಿ ಕಾರ್ಯಕಾರಿಯಾಗುವುದೆಂದು ಸರ್ಕಾರದವರಿಗೆ ತೋರಿಬರುವಂತಹ ಸಲಹೆಗಳನ್ನು ಜಾರಿಗೆ ತರತಕ್ಕ ಬಗ್ಗೆ ಚಾಲ್ತಿಸಾಲಿನ ಬಡ್ಜೆಟ್ಟಿನಲ್ಲಿ ಒಂದು ಲಕ್ಷ ರೂಪಾಯಿಯನ್ನು ಒದಗಿಸಲಾಗಿದೆ —ದೇವೀ ಹಾಕುವುದಕ್ಕೆ ಉಪಯೋಗಿಸಿದ ಹಾಲಿನಲ್ಲಿ ದೋಷಗಳಿದ್ದವೆಂದು ಕೆಲವು ಫಿರ್ಯಾದುಗಳು ಬಂದುದರ ಮೇಲೆ ಈ ವಿಷಯವನ್ನು ಚೆನ್ನಾಗಿ ವಿಚಾರಮಾಡುವುದಕ್ಕಾಗಿ ಸ್ಯಾನಿಟರಿ ಕಮಿಷನರನ್ನೂ ಇತರ ಇಬ್ಬರು ದೊಡ್ಡ ಮೆಡಿಕಲ್ ಆಫೀಸರುಗಳನ್ನೂ ಸೇರಿಸಿ ಒಂದು ಕಮಿಟಿಯನ್ನು ನೇಮಿಸಿಯದೆ

ಸಂಪದಭ್ಯುದಯ ಸಮಾಜ —ಸಂಪದಭ್ಯುದಯ ಸಮಾಜದ ಕಾರ್ಯಗಳು ಇನ್ನೂ ಹೆಚ್ಚು ಅಭಿವೃದ್ಧಿಗೊಂಡಿವೆ ಸಮಾಜದವರು ಕಾರ್ಯತಃ ನಡಿಸಿರುವ ಮುಖ್ಯವಾದ ಕೆಲಸಗಳನ್ನು ತಮಗಳಿಗೆ ಈಗ ತಿಳಿಸಲಾಗುತ್ತದೆ ಸರ್ಕಾರದ ಸಹಾಯವುಳ್ಳ ಒಂದು ಬ್ಯಾಂಕನ್ನು ಸ್ಥಾಪಿಸುವ ವಿಷಯದಲ್ಲಿ, ಕಾನ್‌ಫರೆನ್ಸಿನವರು 1911 ರಲ್ಲಿ ಮಾಡಿದ ಪ್ರಯತ್ನವು ಈಗ ನೆರವೇರಿರುವುದಲ್ಲದೆ ಈ ತಿಂಗಳು 2 ನೆಯ ತಾರೀಖು ಲಾಗಾಯಿತು ಬ್ಯಾಂಕಿನ ಕೆಲಸವು ನಡೆಯುತ್ತಾ ಇದೆ ಸಂಸ್ಥಾನದ ವರಮಾನವನ್ನು ಬಲಪಡಿಸಬೇಕೆಂಬ ಉದ್ದೇಶದಿಂದಲೂ, ಇದುವರೆಗೆ ಸರ್ಕಾರದ ಹುಟ್ಟುವಳಿ ಬಾಬಿಗೆ ನ್ಯಾಯವಾಗಿ ಕೊಡಬೇಕಾದುದಕ್ಕಿಂತಲೂ ಕಡಮೆಯಾಗಿ ಕೊಡುತ್ತಿರುವ ಹಣವಂತರಿಂದ ತೆರಿಗೆಯನ್ನು ವಸೂಲ್ ಮಾಡುವದರ ಮೂಲಕ ತೆರಿಗೆಯ ಭಾರವನ್ನು ಎಲ್ಲರ ಮೇಲೂ ನ್ಯಾಯಸಮ್ಮತವಾಗಿ ಹೊರಿಸಬೇಕೆಂಬ ಉದ್ದೇಶದಿಂದಲೂ ಇನ್‌ಕಂಟ್ಯಾಕ್ಸ್ ಎಂಬ ತೆರಿಗೆಯನ್ನು ಏರ್ಪಡಿಸುವದು ಸರ್ಕಾರದವರ ಅವಗಾಹನೆಗೆ ಬಂದಿರುತ್ತದೆ ಪ್ರಾಥಮಿಕ ವಿದ್ಯಾಭ್ಯಾಸ ಪ್ರಚಾರದ ವಿಷಯದಲ್ಲಿ ವಿಶೇಷವಾಗಿ ಕಾರ್ಯಗಳನ್ನು ನಡೆಸಲಾಗಿವೆ ಅಲ್ಲದೆ ಜನರಿಂದ ವಿದ್ಯಾಭ್ಯಾಸಕ್ಕಾಗಿ ಹುಟ್ಟಿದ ಮಸೂದೆಯು ಕಳೆದ ತಿಂಗಳಲ್ಲಿ ನ್ಯಾಯವಿಧಾಯಕ ಸಭೆಯಲ್ಲಿ ಮಂಜೂರಾಯಿತು ರೇಷ್ಮೆ ವ್ಯವಸಾಯಾಭಿವೃದ್ಧಿ ವಿಷಯದಲ್ಲಿಯೂ, ಉತ್ತಮವಾದ ವಿಧಾನದಿಂದ ಬೆಲ್ಲ ತಯಾರ್ಮಾಡುವ ವಿಷಯದಲ್ಲಿಯೂ, ನೀರಾವರೀ ಕೆಲಸಗಳಿಗೆ ಜಲಯಂತ್ರಗಳನ್ನು

ಅತ್ಯುತ್ತಮವಾದ ನೀಲಿ ಕಪ್ಪು ಶಾಯಿಪುಡಿ.

ಒಂದು ಶಾಯಿಪುಡಿಯ ಪೊಟ್ಟಣದಲ್ಲಿ ಒಂದು ಮಸಿಕುಡಿಕೆ ಶಾಯಿಯಾಗುವುದು. ಕೊಂಡು ಮಾರುವವರಿಗೆ ಒಳ್ಳೇ ಲಾಭವುಂಟು. ಬೆಲೆ ಬಹು ಸುಲಭ, 100 ಪೊಟ್ಟಣಗಳಿಗೆ 6 ಆಣೆ 300 ಪೊಟ್ಟಣಕ್ಕೆ 11 ಆಣೆ 500 ಕ್ಕೆ 1 9 0 1,000 ಕ್ಕೆ ರೂ ೩ 8 0 ಪ್ಯಾಕಿಂಗ್ ಪೋಸ್ಟೇಜು ಬೇರೆ [201 ೨]

ವಿಳಾಸ —ವಿಕಟಪ್ರತಾಪ ಆಫೀಸ್, ಕುಪ್ಪಂ ಪೋಸ್ಟು

"ವೃತ್ತಾಂತ ಪತ್ರಿಕೆ" ಏಜಂಟರಿಗೆ ನೋಟೀಸ್.

ವೃತ್ತಾಂತ ಪತ್ರಿಕೆಯ 1913 ನೇ ವರುಷದ ಒಂದನೇ ಕ್ವಾರ್ಟರು ಕಳೆದ ಆಗಸ್ಟ್ ತಿಂಗಳಿಗೆ ಪೂರೈಸಿತು. ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಸ್ಪಷ್ಟಮಾಡಿ, - ಬಿ - ಫಾರಂಗಳಿಗೆ ಎತ್ತಿಬರೆದು, ತಮ್ಮ ತಮ್ಮ ಸೂಪರಿಂಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಿಂದ ಕಳುಹಿಸಿಕೊಡಬೇಕಾಗಿ ಪ್ರಾರ್ಥಿಸುವ

ಮ್ಯಾನೇಜರ್, "ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು

ಅಪಾಯದ ಕುರುಹುಗಳು

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು

ಶ್ವಾಸಕೋಶಗಳು ಬಲಹೀನವಾಗಿ ಇವೆಯೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೆ ಬಲಪಡಿಸಬೇಕಾದ್ದು ಬಹು ಅವಶ್ಯಕ

SCOTT'S EMULSION 2-13

(ಸ್ಕಾಟ್ಸ್ ಇಮಲ್ಷನ್)

ಎಂಬ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವುದು

ಉತ್ತಮವಾದ ೨ ಸಹಜ ಬಗೆಗಳನ್ನು ಬಲಪಡಿಸುವುದು

Always get the Emulsion with this mark the Fishman —the mark of the "Scott" process

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ

ಎಲ್ಲಾ ಔಷಧ ವ್ಯಾಪಾರಿಗಾರರಲ್ಲೂ ದೊರಕುವುದು

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್, ಔಷಧಗಳ ಕಾರ್ಖಾನೆ, ಲಂಡನ್, ಇಂಗ್ಲೆಂಡ್

ಮೀನುಗಾರನ ಗುರುತು ಇರುವ ಔಷಧವನ್ನೇ ಕೇಳಿ ತೆಗೆದುಕೊಳ್ಳಿ

ಶುದ್ಧವಾದ ಹತ್ತಿಯ ತುಪ್ಪವು.

"ಬಹಳ ರುಚಿ, ಆರೋಗ್ಯ, ಎಲ್ಲಕ್ಕಿಂತ ಪುಷ್ಟಿಕಾರಿ"

(ಬಿ) ಎಸ್ ಅಪ್ಪು, L C E ಇಂಜನಿಯರು,—"ನಿಮ್ಮಿಂದ ತರಿಸಿಕೊಂಡ ಹತ್ತಿಯ ತುಪ್ಪವನ್ನು ಉಪಯೋಗಿಸಿದೆನು. ಅದು ಸೇವನೆಗೆ ಬಹಳ ರುಚಿಯಾಗಿಯೂ ಬಹಳ ಆರೋಗ್ಯಕರವಾಗಿಯೂ ಇದೆ. ಇದಕ್ಕೆ ಸಮಾನವಾದ ಪುಷ್ಟಿಕಾರಿ ವಸ್ತುವೇ ಇಲ್ಲ" ಬೆಂಗಳೂರು 2-9-13

ಎಚ್ಚರಿಕೆ!

ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ [110 20]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪೆನಿ, ಲಿಮಿಟೆಡ್,

153, ಕಿಲಾರಿ ರೋಡ್, (ಕುಂಬಿಗರಪೇಟೆ), ಬೆಂಗಳೂರು ಸಿಟಿ

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು ನಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿಪರೀತವಾಗಿಯೋ ಬಿಸಿಯಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ಕಲ್ಲಣಿಸುವುದು, ತಲೆಸುತ್ತು, ಗಾಬರಿ, ಕಣ್ಣುಮೊಬ್ಬು, ತಲೆತಿರುಗುವಿಕೆ, [illegible], ನಿದ್ದೆ ಇಲ್ಲದಿರುವುದು ಮೊದಲಾದುವು. ಅಲಕ್ಷ್ಯ ಮಾಡಿದರೆ ಮೂತ್ರಾಶ್ಮರಿ, ಸಂಧಿವಾತ, ಮೈಬಾವು, ಉರುಮೂತ್ರ, ಮೂತ್ರಕೋಶದ [illegible] ಮೂತ್ರಕೋಶ ಸಂಬಂಧವಾದ ರೋಗಗಳಿಂದ ಸಂಭವಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [181 6]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨ —೦, ಆರಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್ [illegible] ೨, ಬೊಂಬಾಯಿ—ಇವರಲ್ಲಿ ದೊರೆಯುವುದು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

19—9—1913 ರಿಂದ 26—9—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	1	1	0	0
ಮೈಸೂರು ,,	2	2	0	0
ಬೆಂಗಳೂರು ಡಿಸ್ಟ್ರಿಕ್ಟ್	3	5	0	0
ಮೈಸೂರು ,,	60	38	0	0
ಕೋಲಾರ್ ,,	10	7	5	3
ಕೋಲಾರ್ ಚಿನ್ನದ ಗಣಿಗಳು	1	2	0	0
ತುಮಕೂರು ಡಿಸ್ಟ್ರಿಕ್ಟ್	0	0	3	3
ಹಾಸನ ,,	29	16	4	1
ಚಿತ್ರದುರ್ಗ ,,	0	0	5	3
ಕಡೂರ್ ,,	14	15	1	4
ಶಿವಮೊಗ್ಗ ,,	31	23	0	0
ಜುಮ್ಲಾ	151	109	18	14

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೇ ಶರದೃತೌ ಆಶ್ವೀಜ ಬಹುಳ ಬಿದಿಗೆ ಶುಕ್ರವಾರದಿಂದ ಆಶ್ವೀಜ ಬಹುಳ ಅಷ್ಟಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಅಕ್ಟೋಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ ತೇದಿ
17	ಶುಕ್ರ *	ಬಿದಿಗೆ	17 53	ಭರಣಿ	28 12	1
18	ಶನಿ ,	ತದಿಗೆ	19 36	ಕೃತ್ತಿಕೆ	31 47	2
19	ಭಾನು †	ಚೌತಿ	21-03	ರೋಹಿಣಿ	34 3	3
20	ಸೋಮ §	ಪಂಚಮಿ	21 37	ಮೃಗಶಿರ	35 0	4
21	ಮಂಗಳ ‡	ಷಷ್ಠಿ	20 4	ಆರಿದ್ರಾ	34 52	5
22	ಬುಧ ,	ಸಪ್ತಮಿ	16-28	ಪುನರ್ವಸು	23-37	6
23	ಗುರು	ಅಷ್ಟಮಿ	12-41	ಪುಷ್ಯ	31-19	7

* ತ್ರಿತೀಯಾ ತಿಥಿ, ಶ್ರೀ ಚಾಮುಂಡೇಶ್ವರಿ ರಥ ,, ಶೂನ್ಯತಿಥಿ, ಶ್ರೀರಂಗದಲ್ಲಿ ದೋಳೋತ್ಸವಾರಂಭ, ಸಂಕಟಹರ ಚತುರ್ಥೀ † ಚತುರ್ಥೀ ತಿಥಿ § ಪಂಚಮೀ ತಿಥಿ, ಮಳೆ ನಕ್ಷತ್ರ—ಚಿತ್ರ 1 ನೇ ಪಾದ ‡ ತಿಥಿದ್ವಯಂ ,, ಅಷ್ಟಮೀ ತಿಥಿ ಅಮೃತಸಿದ್ಧಿಯೋಗ ಮಳೆನಕ್ಷತ್ರ—ಸ್ವಾತಿ 1ನೇ ಪಾದ

ಪೇಟೇ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೬-೦-೦	೧೭ ೦-೦
ಕೆಂಬೂತಿ ಅಕ್ಕಿ ಅವಲ್		೧೬ ೮ ೦	೧೭ ೮-೦
ಜಾಪತ್ರಿಣೆ ಅಕ್ಕಿ		೧೬ ೦ ೦	೧೬-೮-೦
ಸಣ್ಣಕ್ಕಿ ಅವಲ್		೧೮-೦ ೦	೧೭ ೮-೦
,, ದುಯಂ		೧೭ ೦-೦	೧೬ ೧೨ ೦
ತೊಗರಿ ಬೇಳೆ ಅವಲ್ ಪಲ್ಲ ೧ಕ್ಕೆ		೧೯-೦-೦	೧೬-೪ -
,, ದುಯಂ		೧೪-೦ ೦	೧೪-೦ ೦
ಬೈಕ್ ರಾಗಿ ಪಲ್ಲಾ ೧ಕ್ಕೆ		೭ ೦-೦	೫ ೧೦ ೦
ಕಾರ್‍ರಾಗಿ ,,		೬ ೮-೦	೪ ೧೨ ೦
ಜೋಳ ,,		೬-೧೦-೦	೭-೪-೦
ಕಲಸಂಬೆ ಪಲ್ಲಾ ೧ಕ್ಕೆ		೧೩ ೦-೦	೧೪-೦ ೦
ಬೇಳೆ ಅವರೆ ,,		೧೩-೦ ೦	೧೨ ೦ ೦
ಹೆಸರು ,,		೧೩-೦ ೦	೧೪-೮-೦
ಉದ್ದು ,,		೧೬-೦ ೦	೧೬-೮-೦
ಕಡಲೆ ,,		೧೨ ೧೨-೦	೧೩ ೦-೦
ಎಳ್ಳು ಸೇರು ೧೨೭ಕ್ಕೆ		೨೨ ೮ ೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ		೭ ೪ ೦	೭ ೧೦ ೦
ಹರಳು ೧೨೭ ಸೇರಿಗೆ		೧೨ ೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ		೨-೪ ೦	೩ ೬ ೦
ಮೆಣಸಿನಕಾಯಿ ,,		೪ ೦-೦	೩-೪-೦
,, ದುಯಂ		೩ ೦ ೦	೧ ೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೪ ೮-೦	ಮಣ ೬ ೪ ೦
ಒಳ್ಳೆಣ್ಣೆ ಮಣ ೧ಕ್ಕೆ		೬-೪ ೦	೬ ೮ ೦
ಹರಳೆಣ್ಣೆ ,, ,,		೫-೪-೦	೬ ೦ ೦
ಕಡಲೇಕಾಯಿ ಎಣ್ಣೆ		೬ ೦ ೦	೬ ೪ ೦
ಕೊಬ್ಬರಿ ಪಲ್ಲಾ ೧ಕ್ಕೆ		೫ ೪ ೦	೬ ೪ ೦
ಉಪ್ಪು ,, ,,		೬ ೮ ೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ		೧ ೧೨ -	೧ ೪-೦
ತುಪ್ಪ—ಧಾರವಾಡದ್ದು ಮಣ ೧ಕ್ಕೆ		೨೧ ೮-೦	೨೨ ೮-೦
,, ಬೆಣ್ಣೆ ಕಾಸಿದ್ದು ,, ,,		೨೪ ೦-೦	
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೧೨ ೦	೫-೦-೦
ತೆಂಗಿನಕಾಯಿ ೧೦೦ಕ್ಕೆ		೬ ೪ ೦	೬-೪-೦
ಅಡಕೆಕಾಯಿ ಮಣ ೧ಕ್ಕೆ		೧-೦-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ		೧ ೧೨ ೦	೧-೮-೦
ಚಿನ್ನ (ಸಾವರಿನ್) ಕೆಂಪು		೧೫ ೮-೦	೧೫-೮-೦
,, ,, ಪಸಿಮೆ		೧೫ ೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ		೨೪-೩ ೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧-೦-೦	೮೧-೩-೦

ಡೋಂಗರೆ ಇವರ ಬಾಲಾಮೃತ.

[150 13]

ಸಣ್ಣ ಹುಡುಗರಿಗೆ ಡೋಂಗರೆ ಇವರ ಬಾಲಾಮೃತವು ಬಹಳ ಗುಣವುಳ್ಳದ್ದು. ಅದು ಮಧುರ (ಸವಿ) ಇದ್ದುದರಿಂದ ಹುಡುಗರು ಬಹಳ ಆನಂದದಿಂದ ತಕ್ಕೊಳ್ಳುತ್ತಾರೆ. ಇದರಿಂದ ಕೈಕಾಲುಗಳು ಕೃಶ ಇರೋಣ, ಹೊಟ್ಟೆಯು ದೊಡ್ಡದಾಗಿರೋಣ, ಅಸ್ಥಿಗಳು ಕಟ್ಟಿಯಿಂದ ಇರೋಣ. ಪಳ ಕೆಮ್ಮು ಮುಂತಾದವುಗಳ ಅಶಕ್ತತೆಯ ರೋಗಗಳು ಪೂರಾ ಇಲ್ಲದಂತಾಗುತ್ತವೆ. ಒಂದು ಬಾಟ್ಲಿಯ ಕಿಮ್ಮತ್ತು ೧೦ ಆಣೆ, ಟಪಾಲ್ ಖರ್ಚು ೪ ಆಣೆ

ಕೆ ಟಿ. ಡೋಂಗರ ಮತ್ತು ಕಂಪನಿ, ಗಿರಗಾಂವ. ಮುಂಬಾಯಿ.

Mellin's Food

ಮೆಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ದೊರೆಯುತ್ತಲಿವೆ

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅದು ಪುಕ್ಕಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs. OAKES & Company, Mount Road, Madras.

[4 10] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev. H GULLIFORD, Proprietor and Manager, Wesleyan Mission Press, Mysore. 16/10/1913

ಸ್ಥಾಪಿಸುವ ವಿಷಯದಲ್ಲಿಯೂ, ಆಬಕಾರಿಯ ಕೆಲಸಗಳನ್ನೂ ತುಂಬಾ ಮುತು ವರ್ಜಿಯಿಂದ ನಡೆಯಿಸುತ್ತಲಿದೆ ನವೀನ ಸಂವಿಧಾನಗಳನ್ನೆಲ್ಲಾ ಅನುಸರಿಸಿದ ಒಂದು ನೇಗೆಯ ಕಾರ್ಖಾನೆಯ ಸ್ಥಾಪನೆ, ಮೈಸೂರಲ್ಲಿ ಒಂದು ಹೆಂಚಿನ ಕಾರ್ಖಾನೆಯ ಸ್ಥಾಪನೆ, ಗಿಡಮೂಲಿಕೆಗಳಿಂದ ಔಷಧಿಗಳನ್ನು ತಯಾರುಮಾಡುವ ಏರ್ಪಾಡು, ಕೆಲವು ಬೀಜಗಳಿಂದ ಅಂದರೆ ಮುಖ್ಯವಾಗಿ ಹತ್ತಿಯ ಬೀಜದಿಂದ ಎಣ್ಣೆಯನ್ನು ತಯಾರುಮಾಡುವುದಕ್ಕೆ ಬೇಕಾದ ಎಣ್ಣೆ ಯಂತ್ರಗಳನ್ನು ಸ್ಥಾಪಿಸುವುದು, ಬೆಂಗಳೂರಲ್ಲಿ ಒಂದು ಕೈಗಾರಿಕೆಯ ಡಿಪೋವನ್ನು ಇಡುವುದು, ಇವುಗಳೇ ಕಾಣ್ಫರೆನ್ಸಿನವರು ನಡೆಯಿಸಿದ ಮತ್ತು ಈಗಲೂ ನಡೆಯಿಸುತ್ತಿರುವ ಇತರ ಕಾರ್ಯಗಳಾಗಿರುತ್ತವೆ ಮೇಲೆ ಉದಹರಿಸಿರುವ ಕೆಲಸಗಳು ಮಾತ್ರವಲ್ಲದೆ, ಜನಗಳು ನಾನಾ ವಿಷಯಗಳನ್ನು ಕುರಿತು ಚೆನ್ನಾಗಿ ಆಲೋಚಿಸುವಂತೆಯೂ ಪರಿಶೀಲನೆಮಾಡುವಂತೆಯೂ ಕಾರ್ಯವನ್ನು ನಡಿಸಲು ಒಟ್ಟಾಗಿ ಸೇರಿ ತಮ್ಮ ತಮ್ಮ ಏಳಿಗೆಗೆ ಬೇಕಾದ ಏರ್ಪಾಡುಗಳನ್ನು ಮಾಡಿಕೊಳ್ಳುವಂತೆಯೂ ಈ ಸಮಾಜವು ಪ್ರೋತ್ಸಾಹಮಾಡುತ್ತಿರುವುದು

ವಿದ್ಯಾಭ್ಯಾಸ —ವಿದ್ಯಾಭ್ಯಾಸ ವಿಚಾರಗಳಲ್ಲಿ ಪ್ರಸಕ್ತ ವರ್ಷದಲ್ಲಿ ಹೆಚ್ಚಾದ ಕೆಲಸವು ನಡೆದಿರುತ್ತದೆ ವಿದ್ಯಾಭ್ಯಾಸದ ಸಾಮಾನ್ಯಾಭಿವೃದ್ಧಿಯಲ್ಲಿ ಸರ್ಕಾರಿಯ ಮತ್ತು ಖಾಸಗಿ ಪಾಠಶಾಲೆಗಳ ಸಂಖ್ಯೆಯು ಮೊದಲಿಗಿಂತಲೂ 30 ಹೆಚ್ಚಿತು ಸದರೀ ಪಾಠಶಾಲೆಗಳಲ್ಲಿ ಓದುವವರ ಸಂಖ್ಯೆಯು 7,226 ಜಾಸ್ತಿಯಾಯಿತು ಸಂಸ್ಥಾನದ ಉಭಯ ಕಾಲೇಜುಗಳಲ್ಲಿಯೂ ಶೀಘ್ರದಲ್ಲಿಯೇ ಕೆಲವು ಶಾಖೆಗಳಲ್ಲಿ ಆನರ್ಸ್ ಕೋರ್ಸ್ ವ್ಯಾಸಂಗಕ್ಕೆ ಏರ್ಪಾಡುಮಾಡುವ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ

ರೈಲ್ವೆ —ರೈಲ್ವೇ ಇಲಾಖೆಯಲ್ಲಿ ಕೆಲಸವು ಹೆಚ್ಚಿದುದರಿಂದ, ಪ್ರತ್ಯೇಕವಾದ ಒಂದು ರೈಲ್ವೇ ಸೆಕ್ರೆಟರಿಯೆಟನ್ನು ಏರ್ಪಡಿಸಲಾಯಿತು ಸದರಿ ಸೆಕ್ರೆಟರಿಯೆಟ್ಟಿಗೆ, ಸಂಸ್ಥಾನದ ರೈಲ್ವೇ ಇಲಾಖೆಯ ಎಂಜನೀಯರ್ ಇನ್ ಚೀಫ್‌ರವರು ಸೆಕ್ರೆಟರಿಗಳಾಗಿಯೂ ಅವರ ಪರಸನಲ್ ಅಸಿಸ್ಟೆಂಟರು ಅಂಡರ್ ಸೆಕ್ರೆಟರಿಗಳಾಗಿಯೂ ಇರುವರು —ಸಂಸ್ಥಾನದಲ್ಲಿ ಈಗ ಹಾಕಿರುವ ಎಲ್ಲಾ ರೈಲ್ ಮಾರ್ಗಗಳಿಂದ ಒಟ್ಟು 36,03,226 ರೂಪಾಯಿ ಹುಟ್ಟುವಳಿಯಾಯಿತು ಈ ಮೊಬಲಗು ಹೋದಸಾಲಿನ ಹುಟ್ಟುವಳಿಗಿಂತ 4,40,177 ರೂಪಾಯಿ ಜಾಸ್ತಿಯಾಗಿರುತ್ತದೆ ಪ್ರಕೃತ ಸಂವತ್ಸರದಲ್ಲಿ ಸಂಸ್ಥಾನದ ಎಲ್ಲಾ ರೈಲ್ವೇ ಮಾರ್ಗಗಳಿಗಾಗಿ 21,05,637 ರೂಪಾಯಿ ಖರ್ಚಾಯಿತು ಈ ಬಗೆ ಖರ್ಚು 1911-12 ರಲ್ಲಿ 19,15,764 ರೂಪಾಯಿಯಾಗಿತ್ತು —ಒಟ್ಟು ನಿವ್ವಳ ಹುಟ್ಟುವಳಿಯು 15,87,589 ರೂಪಾಯಿ ಮೊಬಲಗು ಅಥವಾ ಪೂರಾ ಬಂಡವಾಳವಾದ 2,54,22,188 ರೂಪಾಯಿ ಮೇಲೆ ಶೇಕಡ 6 24 ಬಂದಹಾಗಾಯಿತು ಪ್ರಕೃತ ಸಂವತ್ಸರದಲ್ಲಿ ಇಂಗ್ಲಿಷ್ ಸಾಲದ ಬಗ್ಗೆ 1,63,82 801 ರೂಪಾಯಿ ಮೊಬಲಗಿಗೆ ಬಡ್ಡಿ 7,17,377 ರೂಪಾಯಿ ಆಯಿತು ನಿವ್ವಳ ಹುಟ್ಟುವಳಿಯಲ್ಲಿ ಈ ಬಡ್ಡಿಯ ಮೊಬಲಗನ್ನು ಕಳೆದರೆ ಸಂಸ್ಥಾನಕ್ಕೆ 8,70,212 ರೂಪಾಯಿ ಬಂದಹಾಗಾಯಿತು —ಹಿಂದಿನ ಕೆಲವು ವರ್ಷಗಳಿಂದ ರೈಲ್ವೇ ವರಮಾನವು ಸ್ವಲ್ಪಮಟ್ಟಿಗೆ ಹೆಚ್ಚಿದ್ದರೂ, ರೈಲ್ವೇ ಕಾರ್ಯಗಳ ಆಯುವ್ಯಯಗಳ ಫಲಿತಾಂಶವನ್ನು ಯೋಚಿಸಿದಲ್ಲಿ ಸಂಸ್ಥಾನಕ್ಕೆ ಬಹಳ ನಷ್ಟವಾಗಿ ಇರುತ್ತದೆ ಸಂಸ್ಥಾನದಿಂದ ಬಡ್ಡಿಗಾಗಿ ಕೊಟ್ಟ ಹಣವನ್ನು ಮಾತ್ರ ಪರ್ಯಾಲೋಚಿಸಿ ನೋಡಿದರೆ ಈಗಿರುವ ರೈಲ್ ಮಾರ್ಗಗಳಿಂದ ಸಂಸ್ಥಾನಕ್ಕೆ ಇದುವರೆಗೆ ಸುಮಾರು ಒಟ್ಟು 55 ಲಕ್ಷ ರೂಪಾಯಿನ ನಷ್ಟವಾಗಿರುತ್ತದೆ ಎಂದು ಅಂದಾಜು ಮಾಡಲಾಗಿದೆ

ಪ್ರಸಕ್ತ ವರ್ಷದಲ್ಲಿ ರೈಲ್ವೇ ಕಾಂಗಾರಿಯು ಇಲಾಖೆಯವರು ಹಿಂದಿನ ಏರ್ಪಾಟುಗಳನ್ನು ಪುನರ್ವಿಮರ್ಶೆ ಮಾಡುವುದರಲ್ಲಿಯೂ, ಹೊಸ ಏರ್ಪಾಟುಗಳನ್ನು ಕಲ್ಪಿಸುವುದರಲ್ಲಿಯೂ ಉದ್ಯುಕ್ತರಾಗಿದ್ದರು ಈ ಕೆಳಗೆ ಕಂಡ ರೈಲ್ ಮಾರ್ಗಗಳನ್ನು ಹಾಕುವುದಕ್ಕೆ ರೈಲ್ವೇ ಬೋರ್ಡಿನ ಮಂಜೂರಾತಿ ಬಗ್ಗೆ ಬರೆಯಿಸಿರುತ್ತದೆ —(1) ಎಡೆತೊರೆ, ಹೊಳೆನರಸೀಪುರ, ಹಾಸನ, ಇವುಗಳ ಮಾರ್ಗವಾಗಿ ಮೈಸೂರಿಂದ ಅರಸೀಕೆರೆಗೆ ಒಂದು ರೈಲ್‌ರಸ್ತೆ ಈಗ ಮೈಸೂರಿಂದ ಕೊಣೇಹಳ್ಳಿಗೆ ಹಾಕಬೇಕೆಂದಿದ್ದ ಶಾಖಾಮಾರ್ಗದ ಏರ್ಪಾಡನ್ನು ಬಿಟ್ಟಿರುತ್ತದೆ ಈಗ ಗೊತ್ತುಮಾಡಿರುವ ರಸ್ತೆಯ ಸರ್ವೇಕೆಲಸವು ನಡೆಯುತ್ತಿದೆ, ಮತ್ತು ಮಂಜೂರಾತಿಯನ್ನು ಕೊಟ್ಟ ಕೂಡಲೆ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು (2) ಬೆಂಗಳೂರಿಂದ ಹೊಸೂರಿಗೆ ಒಂದು ರೈಲ್‌ರಸ್ತೆ ಈ ಮಾರ್ಗದ ರೀಸರ್ವೇ ಕೆಲಸವನ್ನು ನಡಿಸುತ್ತಲಿದೆ (3) ತರೀಕೆರೆಯಿಂದ ಎದೆಹಳ್ಳಿಗೆ ಜಂಗಲ್ ಟ್ರಾಂ ಮಾರ್ಗವನ್ನು ಹಾಕುವ ವಿಷಯದಲ್ಲಿ ಪ್ರಾಥಮಿಕ ಪರಿಶೀಲನೆಗಳನ್ನು ನಡೆಯಿಸಲಾಯಿತು ಈ ಏರ್ಪಾಡಿಗೆ ಮಂಜೂರಾತಿಯನ್ನು ಕೊಡಲಾಗಿದೆ ಎಂಬದಾಗಿ ಈಚೆಗೆ ಲೇಖನವು ಬಂದಿರುತ್ತವೆ ಪ್ರಕೃತ ಸಂವತ್ಸರದಲ್ಲಿ ಚಿಕ್ಕಜಾಜೂರು ಚಿತ್ರದುರ್ಗದ ಮೀಟರ್ ಗೇಜ್ ರೈಲ್ವೇ ಅಂದಾಜನ್ನು ತಯಾರುಮಾಡಿಸಿ ಮಂಜೂರಾತಿಯ ಬಗ್ಗೆ ಇಂಡಿಯಾ ಸರ್ಕಾರಕ್ಕೆ ಕಳುಹಿಸಲಾಗಿರುತ್ತದೆ ಈಗ ಕಾಂಗಾರಿ ನಡಿಯುತ್ತಿರುವ ಬೆಂಗಳೂರು—ಚಿಕ್ಕಬಳ್ಳಾಪುರದ ರೈಲ್ವೆಯನ್ನೂ ಮತ್ತು ಬೌರಿಂಗ್‌ಪೇಟೆ—ಕೋಲಾರದ ರೈಲ್ವೆಯನ್ನೂ ಸೇರಿಸುವಂತೆ ಶ್ರೀನಿವಾಸಪುರ, ಚಿಂತಾಮಣಿ, ಶಿಡ್ಲಘಟ್ಟ ಇವುಗಳ ಮಾರ್ಗವಾಗಿ, ಕೋಲಾರದಿಂದ ಚಿಕ್ಕಬಳ್ಳಾಪುರಕ್ಕೆ ಒಂದು ರೈಲ್ ರಸ್ತೆಯನ್ನು ಹಾಕುವುದಕ್ಕೂ ಅಂದಾಜುಗಳು ತಯಾರಾಗಿರುತ್ತವೆ ಈ ರಸ್ತೆಗಳಿಗೆ ಹಣ ಒದಗಿಸುವ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತದೆ ಹಾಸನದಿಂದ ಮಂಗಳೂರುವರೆಗೆ ಒಂದು ರೈಲ್ ರಸ್ತೆ ಹಾಕುವುದಕ್ಕಾಗಿ ಮೆಸರ್ಸ್ ಜಿಲ್‌ಕ್ರಿಸ್ಟ್ ಮತ್ತು ಗ್ರಿಫಿನ್ಸ್ ರವರಿಂದ ತಯಾರುಮಾಡಲ್ಪಟ್ಟ ಅಂದಾಜುಗಳನ್ನು ಏತತ್ಕ್ಷಣಪರ್ಯಂತ ಸಮಗ್ರವಾಗಿರುವಂತೆ ಸರಿಯಾಗಿ ತಿದ್ದುಪಾಟುಮಾಡುವ ಉದ್ದೇಶದಿಂದ ಪರೀಕ್ಷಿಸಲಾಯಿತು —ಬೌರಿಂಗಪೇಟೆ—ಕೋಲಾರದ ರೈಲ್ ರಸ್ತೆಯು ಪೂರೈಸುತ್ತಾ ಬಂದಿದೆ, ಮುಂದಿನ ತಿಂಗಳಲ್ಲಿ ಸಂಚಾರಕ್ಕೂ ಅದು ರಸ್ತೆಗೂ ಅವಕಾಶವಾಗುವುದೆಂದು ನಿರೀಕ್ಷಿಸಲಾಗಿದೆ —ಬೆಂಗಳೂರು—ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಂಪೆನಿಯವರ ಪ್ರಾರ್ಥನೆಯ ಮೇಲೆ ಸದರಿ ಕಂಪೆನಿಯವರ ಪರವಾಗಿ ಆ ರಸ್ತೆಯನ್ನು ಹಾಕುವ ಕೆಲಸವನ್ನು ಸರ್ಕಾರದವರು ಕೈಗೊಂಡರು ಕಾಂಗಾರಿ ಕೆಲಸವು ತೃಪ್ತಿಕರವಾಗಿ ಮುಂದೆ ಸಾಗುತ್ತಲಿದೆ

ಆಡಳಿತದ ವಿಚಕ್ಷಣೆ —ಈ ಸಭೆಯು ಸ್ಥಾಪಿತವಾದ ಕಾಲದಿಂದ ಈಚೆಗೆ ಜನಗಳಿಗೆ ಬೇಕಾದ ಅಂಶಗಳನ್ನೆಲ್ಲ ಸರ್ಕಾರೀ ನೌಕರರೂ ಚೆನ್ನಾಗಿ ತಿಳಿದುಕೊಳ್ಳುವುದಕ್ಕೂ ಸರ್ಕಾರದವರ ಉದ್ದೇಶಗಳೇನೆಂಬುವುದು ಜನಗಳಿಗೆ ಚೆನ್ನಾಗಿ ತಿಳಿಯುವುದಕ್ಕೂ ಅವಕಾಶವಾಗಿರುತ್ತದೆ —ಸಂಸ್ಥಾನದ ಆಡಳಿತದ ವಿಚಕ್ಷಣೆಯನ್ನು ಉತ್ತಮಪಡಿಸುವದರಲ್ಲಿ ಶ್ರೀಮನ್ಮಹಾರಾಜರವರ ಸರ್ಕಾರದವರು ಬಹಳ ಕುತೂಹಲದಿಂದ ಪರ್ಯಾಲೋಚಿಸುತ್ತಿರುತ್ತಾರೆ ಸಮರ್ಥರಾದ ಈ ಸಂಸ್ಥಾನದ ವಿದ್ಯಾವಂತರು ಇಲ್ಲಿನ ಸರ್ಕಾರೀ ಉದ್ಯೋಗಗಳನ್ನು ಪಡೆಯುವುದಕ್ಕಾಗಿ ಸ್ಪರ್ಧೆಯಿಂದ ಪ್ರಯತ್ನಮಾಡಲು ಅವಕಾಶವನ್ನು ಕಲ್ಪಿಸಿ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯ ಏರ್ಪಾಟನ್ನು ತಿದ್ದುಪಾಟು ಮಾಡುವ ಬಗ್ಗೆ ಶ್ರೀಮನ್ಮಹಾರಾಜಾ ಸಾಹೇಬ್ಬಹಾದುರವರು, ಹುಕುಂ ಈಚೆಗೆ ದಯಪಾಲಿಸಿರುವುದು ತಮಗೆ ತಿಳಿದ ಅಂಶವಾಗಿದೆ ಶ್ರೀಮನ್ಮಹಾರಾಜರವರ ಸರ್ಕಾರದವರು ಉತ್ಪತ್ತಿಗೆ ಆಕರವಾದ ಕೆಲವು ಇಲಾಖೆಗಳಲ್ಲಿಯೂ ಬಹಳವಾಗಿ ದ್ರವ್ಯೋಪಪತ್ತಿಯನ್ನು ಅಪೇಕ್ಷಿಸುತ್ತಿಪ್ಪ ಕೆಲವು ಇಲಾಖೆಗಳಲ್ಲಿಯೂ ಇರುವ ಶಿಬ್ಬಂದಿಯನ್ನು ಬಲಪಡಿಸಿ, ನೌಕರರು ಬಡ್ತಿಗೆ ಬರುವ ಸಂಭವವನ್ನು ಉತ್ತಮಸ್ಥಿತಿಗೆ ತಂದಿರುತ್ತಾರೆ —ಕ್ರಮಪ್ರಕಾರವಾಗಿ ಪದೇಪದೇ ತನಿಖೆಗಳನ್ನೂ ನಡಿಸುವಂತೆ ಮಾಡುವುದಕ್ಕಾಗಿಯೂ, ಆಫೀಸು ಮ್ಯಾನ್ಯುಅಲ್‌ಗಳನ್ನೂ ಚಾಲ್ತಿ ಹುಕುಮುಗಳನ್ನೂ ಉತ್ತಮಪಡಿಸುವುದಕ್ಕಾಗಿಯೂ ಜಾರಿಯಲ್ಲಿರುವ ನಿಬಂಧನೆಗಳನ್ನೂ ಹುಕುಮುಗಳನ್ನೂ ಅನುಸರಿಸಿ ಸರಿಯಾಗಿ ಕೆಲಸವು ನಡೆಯುತ್ತದೆ ಎಂತಲಾಗಲಿ ಅಥವಾ ಹಾಗೆ ಅವುಗಳನ್ನು ಅನುಸರಿಸಿ ಶೀಘ್ರವಾಗಿ ಕೆಲಸ ನಡಿಸಲು ಸಾಧ್ಯವಿಲ್ಲದೇ ಹೋದರೆ ಅವುಗಳು ಬದಲಾಯಿಸಲ್ಪಟ್ಟವೆಂತಲಾಗಲಿ ದೃಢಪಡಿಸಿಕೊಳ್ಳುವುದಕ್ಕಾಗಿಯೂ , ಪರೋಪಕಾರ ಸ್ವಭಾವವುಳ್ಳ ಪ್ರತಿಕಾರ್ಯಕ್ಕೂ ಪ್ರೋತ್ಸಾಹವನ್ನೂ ಕೊಡುವುದಕ್ಕಾಗಿಯೂ , ಸಂಸ್ಥಾನದ ಯಾವ ಭಾಗದಲಿಯೇ ಆಗಲಿ ಸಂಭವಿಸಬಹುದಾದ ಭಾರೀ ಅಕ್ರಮಗಳಿಗೆ ಕಾಲವಿಳಂಬವಿಲ್ಲದೆ ನಿಗಾಕೊಡುವಂತೆ ಮಾಡುವುದಕ್ಕಾಗಿಯೂ , ಮುಖ್ಯವಾಗಿ, ಸರ್ಕಾರದ ನಾನಾ ಇಲಾಖೆಗಳಲ್ಲಿ ಅಧಿಕಾರವನ್ನು ಸಿರರ್ಥಕವಾಗಿ ವಿನಿಯೋಗಿಸುವುದನ್ನೂ ಮತ್ತು ಅದನ್ನು ಚಲಾಯಿಸುವುದರಲ್ಲಿ ಉಪೇಕ್ಷೆಯಿಂದ ಸುಸ್ತಿಮಾಡೋಣವನ್ನೂ ಹಸ್ತಕ್ಷೇಪವನ್ನೂ ಕಡಿಮೆಮಾಡುವುದಕ್ಕಾಗಿಯೂ ಸಹ "ಎಫಿಸೆನ್ಸಿ ಆಡಿಟ್" ಎಂಬ ಒಂದು ಕ್ರಮವನ್ನು ಜಾರಿಗೆ ತರುವುದಕ್ಕಾಗಿ ಏರ್ಪಾಟುಗಳು ಪರ್ಯಾಲೋಚನೆಯಲ್ಲಿರುತ್ತವೆ ಶಿಬ್ಬಂದಿಗಳಿಗಾಗಿ ಸರ್ಕಾರದವರು ಖರ್ಚುಮಾಡುವ ಹಣಕ್ಕೆ ತಕ್ಕ ಪ್ರಯೋಜನವನ್ನು ಪಡೆಯಬೇಕಾದರೆ, ಶಿಬ್ಬಂದಿಗಳ ಕೆಲಸದಲ್ಲಿ ಸರಿಯಾದ ವಿಚಕ್ಷಣೆಯು ಇರಲೇಬೇಕು ನಮ್ಮ ಸಂಸ್ಥಾನದಲ್ಲಿ ಸರ್ಕಾರದ ಇಲಾಖೆಗಳ ಆಡಳಿತಗಳು ಯೂರೋಪ್ ದೇಶದ ಮಾದರಿಗಳ ಮೇಲೆ ಏರ್ಪಾಟು ಮಾಡಲಟ್ಟಿರುತ್ತವೆಯಾಗಿ ಆ ಇಲಾಖೆಗಳಲ್ಲಿ ನೇಮಿಸಲ್ಪಟ್ಟ ಶಿಬ್ಬಂದಿಯು ವರ್ಗವು ಯೂರೋಪ್ ದೇಶದವರ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಅನುಸರಿಸದೆ ಇರುವುದರಿಂದ ಈ ಸಂಸ್ಥಾನದಲ್ಲಿ ಖರ್ಚುಬಾಬು ತನಿಖೆ ಕ್ರಮವು ಎಷ್ಟರಮಟ್ಟಿಗೆ ಅವಶ್ಯಕವೋ ಇತರ ಸರ್ಕಾರಿ ಕೆಲಸದ ತನಿಖೆಯು ಕ್ರಮವೂ ಅಷ್ಟೇ ಅವಶ್ಯಕವಾಗಿರುತ್ತದೆ

ನ್ಯಾಯವಿಧಾಯಕ ಸಭೆ ಮುಂತಾದವುಗಳಲ್ಲಿ ಬದಲಾವಣೆಗಳು —ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹಾದುರವರು ವಿಶೇಷ ಪ್ರಮುಖವಾದ ಒಂದು ಅಂಶವನ್ನು ಈ ಸಭೆಯಲ್ಲಿ ತಮಗಳಿಗೆ ತಿಳಿಯಪಡಿಸಬೇಕೆಂದು ಅಪ್ಪಣೆ ದಯಪಾಲಿಸಿರುವುದರಿಂದ ಸದರೀ ಅಂಶವನ್ನು ಕುರಿತು ಈ ಸಮಯದಲ್ಲಿ ಪ್ರಸ್ತಾಪಿಸುತ್ತೇನೆ ಈ ಪ್ರಜಾಪ್ರತಿನಿಧಿ ಸಭೆಯು 1881 ನೆಯ ಇಸವಿಯಲ್ಲಿ, ಎಂದರೆ ಈ ಸಂಸ್ಥಾನದ ರಾಜ್ಯಾಡಳಿತವು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಟ್ಟ ಪ್ರಥಮ ವರ್ಷದಲ್ಲಿಯೇ ಪ್ರತಿಷ್ಠಿತವಾಯಿತು ಈ ಸಭೆಗೆ ಅತ್ಯಂತ ಸಾಮರ್ಥ್ಯಪರರೂ, ಮೇಧಾವಿಗಳೂ ಆದ ಪ್ರತಿನಿಧಿಗಳು ಸೇರಿರುವರಾದರೂ ಸಾಮಾನ್ಯತಃ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕ್ ಪ್ರದೇಶಗಳ ಪ್ರತಿನಿಧಿಗಳೇ ಹೆಚ್ಚಾಗಿರುತ್ತಾರೆ ಸದ್ಯದಲ್ಲಿ ಈ ಸಭೆಯು ವರ್ಷಕ್ಕೊಂದುಸಾರಿ ಮಾತ್ರ ನಡೆಯುತ್ತಲಿದೆ ಮತ್ತು ನಮ್ಮ ಸಂಸ್ಥಾನದ ವಿಸ್ತೀರ್ಣವನ್ನೂ ವರಮಾನವನ್ನೂ ಪರ್ಯಾಲೋಚಿಸಿದಲ್ಲಿ ಇಷ್ಟು ದೊಡ್ಡ ಸಭೆಯನ್ನು ವರ್ಷಕೊಂದುಸಾರಿಗಿಂತ ಹೆಚ್ಚಾಗಿ ನಡಿಸುವುದು ಸಾಧ್ಯವಲ್ಲ ಯಾವ ವಿಚಾರದಲ್ಲಿ ಮತ್ತು ಯಾವ ರೀತಿಯಿಂದ ಈ ಸಭೆಯನ್ನು ಹೆಚ್ಚು ಪ್ರಯೋಜನಕಾರಿಯಾಗುವಂತೆ ಮಾಡಬಹುದೆಂಬ ವಿಷಯದಲ್ಲಿ ಕಾರ್ಯಕಾರಿಯಾಗುವಂಥ ಯಾವುದೊಂದು ಏರ್ಪಾಡಾಗಲಿ ಇದುವರೆಗೆ ಪ್ರಸ್ತಾಪಿಸಲ್ಪಟ್ಟಿಲ್ಲ ಆದ ಕಾರಣ ಈ ಸಭೆಯ ರಚನೆಯು ಹೇಗೆ ಇರಬೇಕು, ಪ್ರತಿನಿಧಿಗಳನ್ನು ಯಾವರೀತಿ ಚುನಾಯಿಸಬೇಕು, ಅವರ ಕರ್ತವ್ಯಗಳೇನು, ಕಾರ್ಯನಿರ್ವಾಹದ ವಿಷಯದಲ್ಲಿ ಯಾವ ನಿಯಮಗಳಿರಬೇಕು—ಎಂಬೀ ವಿಷಯಗಳನ್ನು ಈ ವರ್ಷದಸಭೆಯು ನಡೆಯುತ್ತಿರುವಾಗ ಪರ್ಯಾಲೋಚಿಸಿರುವುದರಿಂದ ಪ್ರಯೋಜನವುಂಟು ಈ ಅಂಶಗಳನ್ನು ಪ್ರತಿನಿಧಿಗಳು ಚರ್ಚಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಯಪಡಿಸಿದಲ್ಲಿ ಅವುಗಳನ್ನು ಶ್ರೀಮನ್ಮಹಾರಾಜರವರ ಕೃಪಾಪೂರಿತವಾದ ಪರ್ಯಾಲೋಚನೆಯ ಬಗ್ಗೆ ಅರಿಕೆ ಮಾಡಲಾಗುವುದು —ಈ ಸಭೆಯಿಂದ ನ್ಯಾಯವಿಧಾಯಕ ಸಭೆಗೆ ಚುನಾಯಿಸಲ್ಪಡುವ ಪ್ರತಿನಿಧಿಗಳ ಸಂಖ್ಯೆಯನ್ನು 2 ರಿಂದ 4 ಕ್ಕೆ ಹೆಚ್ಚಿಸುವಂತೆಯೂ, ಮತ್ತು ಸಂಪದಭಿವೃದ್ಧಿ ಸಮಾಜಕ್ಕೆ 4 ಜನ ಪ್ರತಿನಿಧಿಗಳನ್ನು ಚುನಾಯಿಸುವಂತೆಯೂ ಶ್ರೀಮನ್ಮಹಾರಾಜರವರು ನಿಶ್ಚಯಿಸಿರುತ್ತಾರೆ. —ತಮ್ಮೆಲ್ಲರಿಗೂ ಬಹುಶಃ ವೇದ್ಯವೇ ಇರುವಂತೆ ನಮ್ಮ ನ್ಯಾಯವಿಧಾಯಕ ಸಭೆಯು ಬ್ರಿಟಿಷ್ ಇಂಡಿಯಾ ದೇಶದ 1861 ನೆಯ ಇಸವಿಯ ಕಾನೂನನ್ನನುಸರಿಸಿ ಏರ್ಪಟ್ಟಿರುತ್ತದೆ ಆದರೆ ಸದರೀ ಇಸವಿಯಿಂದೀಚೆಗೆ ಆ ಕಾನೂನು ಎರಡು ಬಾರಿ ತಿದ್ದುಪಾಟಾಗಿರುವುದರಿಂದ ನಮ್ಮ ನ್ಯಾಯವಿಧಾಯಕಸಭೆಯೂ ಸಾಧ್ಯವಾದಮಟ್ಟಿಗೆ ಬ್ರಿಟಿಷ್ ಇಂಡಿಯದ ಸಭೆಗಳಿಗೆ ಅನುಸಾರವಾಗಿ ಇಲ್ಲಿನ ಪ್ರತಿನಿಧಿಗಳು ತಕ್ಕಮಟ್ಟಿಗೆ ಪ್ರಜಾಪಕ್ಷದವರಾಗಿರುವಂತೆ ಮಾಡುವುದರಿಂದ ಬಾಧಕವಿರಲಾರದೆಂದು ಶ್ರೀಮನ್ಮಹಾರಾಜರವರು ಭಾವಿಸುತ್ತಾರೆ — ನಮ್ಮ ನ್ಯಾಯವಿಧಾಯಕ ಸಭೆಯಲ್ಲಿ ಹಾಲಿ 15 ರಿಂದ 18 ರ ವರೆಗೆ ಮೆಂಬರುಗಳಿರುತ್ತಾರೆ. ಇನ್ನು ಮುಂದೆ ಈ ಸಂಖ್ಯೆಯನ್ನು 24 ಕ್ಕೆ ಹೆಚ್ಚಿಸಲಾಗುತ್ತದೆ ಈ ಪೈಕಿ ಹಿಂದೆ ಸೂಚಿಸಿರುವಂತೆ ಈ ಪ್ರತಿನಿಧಿಸಭೆಯವರ ಚುನಾವಣೆಯಿಂದ ನಾಲ್ವರನ್ನೂ, ಡಿಸ್ಟ್ರಿಕ್ಟುಗಳಿಂದ ಚುನಾವಣೆಯ ಮೂಲಕ ನಾಲ್ವರನ್ನೂ ನೇಮಿಸಲಾಗುತ್ತದೆ ಉಳಿದ ಮೆಂಬರುಗಳಪೈಕಿ ಹತ್ತು ಜನರು ಸರ್ಕಾರೀ ಅಧಿಕಾರಿಗಳೂ, ಆರು ಜನರು ಸರ್ಕಾರದವರಿಂದ ನೇಮಿಸಲ್ಪಟ್ಟವರೂ ಆಗಿರುತ್ತಾರೆ ಇದರಿಂದ ಈಗ ಪ್ರಜೆಗಳಿಂದಲೇ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಇಬ್ಬರುಮಾತ್ರ ಇರುವುದಕ್ಕೆ ಬದಲಾಗಿ ಇನ್ನುಮೇಲೆ ಎಂಟು ಜನರು ಇದ್ದಂತಾಗುತ್ತದೆ ಈ ಪ್ರತಿನಿಧಿಸಭೆಯಿಂದಲಾಗಲಿ, ಡಿಸ್ಟ್ರಿಕ್ಟುಗಳಿಂದಾಗಲಿ ಚುನಾಯಿಸಲ್ಪಟ್ಟ ಮೆಂಬರುಗಳು ನ್ಯಾಯವಿಧಾಯಕ ಸಭೆಯ ನಡೆವಳಿಕೆಗಳಲ್ಲಿ ಭಾಗಿಗಳಾಗುವುದಕ್ಕೆ ಸಾಧ್ಯವಾಗುವಂತೆ ತಕ್ಕಮಟ್ಟಿಗೆ ಇಂಗ್ಲಿಷ್ ಭಾಷೆ ಬಲ್ಲವರಾಗಿರುವುದು ಅವಶ್ಯಕವಾಗಿರುತ್ತದೆ ನ್ಯಾಯವಿಧಾಯಕ ಸಭೆಗೆ ಸಂಸ್ಥಾನದ ಆಯುವ್ಯಯದ ಅಂದಾಜನ್ನು ಚರ್ಚಿಸುವ ಅಧಿಕಾರವನ್ನೂ, ಸರ್ಕಾರದ ಆಡಳಿತಗಳ ವಿಷಯದಲ್ಲಿ ಪ್ರಶ್ನೆಗಳನ್ನು ಕೇಳುವ ಅಧಿಕಾರವನ್ನೂ ಸಹ, ಪ್ರಾರಂಭದಲ್ಲಿ ನಿಯಮಿತವಾದ ಪರಿಮಿತಿಗಳಿಗೆ ಒಳಪಟ್ಟು, ಶ್ರೀಮನ್ಮಹಾರಾಜರವರು ದಯಪಾಲಿಸಿರುತ್ತಾರೆ ನಮ್ಮ ಸಂಸ್ಥಾನದ ವರಮಾನವೂ ಸಿಬ್ಬಂದಿಯೂ ಮಿತವಾಗಿರುವುದರಿಂದರಿಂದಲೂ. ಆಗಿಂದಾಗ್ಗೆ ನಡೆಯುವ ಸಭೆ ಮುಂತಾದವುಗಳಲ್ಲಿ ಅಧಿಕಾರಿಗಳ ಕಾಲವು ವಿನಿಯೋಗಿಸಲ್ಪಡುವುದರಿಂದಲೂ ಮೇಲ್ಕಂಡ ಅಧಿಕಾರಗಳನ್ನು ಪರಿಮಿತಿಗಳಿಗೆ ಒಳಪಡಿಸುವುದು ಅವಶ್ಯಕವಾಗಿರುತ್ತದೆ ಸರ್ಕಾರದ ಆಡಳಿತಗಳ ವಿಷಯದಲ್ಲಿ ಕೇಳುವ ಪ್ರಶ್ನೆಗಳ ಸಂಖ್ಯೆಯು ಪ್ರತಿಯೊಂದು ಸಾರಿಯ ಸಭೆಯಲ್ಲಿ 12 ಕ್ಕಿಂತ ಜಾಸ್ತಿಯಾಗಿರಕೂಡದು ಮತ್ತು ಎಂಥ ಪ್ರಶ್ನೆಗಳನ್ನು ಕೇಳಲು ಅವಕಾಶ ಕೊಡಲ್ಪಡುವುದೆಂಬುವುದು ಆಯಾ ಪ್ರಶ್ನೆಯ ವಿಷಯದಲ್ಲಿ ಮೆಂಬರುಗಳು ಎಷ್ಟರಮಟ್ಟಿಗೆ ತಮ್ಮ ಒಪ್ಪಿಗೆಯನ್ನು ತೋರ್ಪಡಿಸುವರೋ ಅದಕ್ಕನುಗುಣವಾಗಿರುವುದು ನ್ಯಾಯವಿಧಾಯಕ ಸಭೆಯ ಕಾನೂನನ್ನು ತಿದ್ದುಪಾಟು ಮಾಡಿದನಂತರ ಈ ವಿಚಾರದಲ್ಲಿ ಯುಕ್ತವಾದ ನಿಬಂಧನೆಗಳು ಏರ್ಪಡಿಸಲಾಗುವುವು —ಶ್ರೀಮನ್ಮಹಾರಾಜರವರು ದಯಾಪೂರ್ವಕವಾಗಿ ಮಂಜೂರ್ ಮಾಡಿರುವ ಈ ಬದಲಾವಣೆಗಳಿಂದ ಪ್ರಜೆಗಳ ಪರವಾಗಿ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಆಲೋಚನಾ ಸಭೆಗಳಲ್ಲಿ ಸೇರಿ ತನ್ಮೂಲಕ ಸರ್ಕಾರದವರ ಉದ್ದೇಶವೂ ಕಾರ್ಯಕ್ರಮವೂ ಪ್ರಜಾಕ್ಷೇಮಕ್ಕನುಸಾರವಾಗಿ ನಡೆಯುವಂತೆ ಮಾಡುವುದಕ್ಕೆ ಸಹಾಯಕವಾಗಿರುತ್ತವೆ —ರಾಜ್ಯಭಾರವನ್ನು ಸಮಂಜಸವಾಗಿ ನೆರವೇರಿಸುವ ವಿಷಯದಲ್ಲಿ ಮುಖ್ಯ ಜವಾಬ್ದಾರಿಯು ಶ್ರೀಮನ್ಮಹಾರಾಜರವರಿಗೆ ಸೇರಿದುದಾಗಿರುತ್ತದೆಂಬ ಅಂಶವನ್ನು ನಾವು ಇಲ್ಲಿ ಸೂಚಿಸಬೇಕಾದ ಪ್ರಕೃತವಿಲ್ಲ ಸಂಸ್ಥಾನದ ಪ್ರಜೆಗಳೆಲ್ಲರೂ ರಾಜಭಕ್ತಿಯುತರಾಗಿಯೂ, ಪ್ರಜ್ಞಾಶಾಲಿಗಳಾಗಿಯೂ, ಪರಹಿತಾಕಾಂಕ್ಷಿಗಳಾಗಿಯೂ ಇರುವರೆಂತಲೂ, ಈಗ ಅವರಿಗೆ ದಯಪಾಲಿಸಿರುವ ಅಧಿಕಾರಗಳನ್ನು ಸಂಸ್ಥಾನದ ಆಡಳಿತ ಕ್ರಮವು ಚೆನ್ನಾಗಿ ನಡೆಯುವುದಕ್ಕೂ, ಪ್ರಜೆಗಳ ನಿರಂತರ ಕ್ಷೇಮಾಭ್ಯುದಯಗಳು ನೆಲೆಗೊಳ್ಳುವುದಕ್ಕೂ, ಸಹಕಾರಿಯಾಗುವಂತೆ ಎಚ್ಚರಿಕೆಯಿಂದಲೂ, ಮಿತಿಮೀರದಂತೆಯೂ ಉಪಯೋಗಿಸುತ್ತಾ ಬರುತ್ತಾರೆಂದು ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹಾದುರವರು ನಂಬಿರುತ್ತಾರೆ

ಶ್ರೀಮನ್ ಯುವರಾಜರವರು ಯೂರೋಪ್ ಖಂಡದಲ್ಲಿ ಸಂಚಾರವನ್ನಿಮುಗಿಸುದು —ಈ ದೇಶೀಯರ ಪ್ರಬುದ್ಧ ಸ್ಥಿತಿಯನ್ನೂ, ದೇಶದ ಏಳಿಗೆಯನ್ನೂ ಸೂಚಿಸುವ ಶುಭ ಚಿಹ್ನೆಗಳ ಪೈಕಿ, ನಮ್ಮೆಲ್ಲರಿಗೂ ಮೇಲ್ಪಟ್ಟದಾಗಿ ಶ್ರೀಮದ್ಯುವರಾಜರವರು ಯೂರೋಪ್ ಖಂಡಕ್ಕೆ ದಯಮಾಡಿ ಅಲ್ಲಲ್ಲಿ ಸಂಚಾರ ಮಾಡಿಕೊಂಡು ಬಂದುದು ಒಂದಾಗಿರುತ್ತದೆ ಸಂಸ್ಥಾನದ ಮೂವರು ಆಫೀಸರುಗಳು, ಅರಸು ಮಂಡಲಿಗೆ ಸೇರಿದ ದೊಡ್ಡಮನುಷ್ಯರೊಬ್ಬರು, ಇವರುಗಳ ಸಹಿತರಾಗಿ ಕಳೆದ ಆರು ತಿಂಗಳಿಂದಲೂ ವಿದೇಶಗಳಲ್ಲಿ ಸಂಚಾರಮಾಡುತ್ತಿದ್ದು ಈಗ ತಾನೆ ಸ್ವದೇಶಕ್ಕೆ ಹಿಂದಿರುಗಿ ದಯಮಾಡಿಸಿರುವ ಶ್ರೀಮದ್ಯುವರಾಜರವರ ಸುಖಾಗಮನವನ್ನು ಹಾರೈಸಿ ಅವರಲ್ಲಿ ಪ್ರಜೆಗಳು ತಮ್ಮ ಭಕ್ತಿ ವಿಶ್ವಾಸಗಳನ್ನು ತೋರ್ಪಡಿಸಿಕೊಂಡಿರುತ್ತಾರೆ ಇವರು ಯೂರೋಪ್ ಖಂಡದ ದೇಶಗಳಲ್ಲಿ ನಾನಾ ವಿದ್ಯಾಲಯಗಳನ್ನೂ, ಕಲಾಶಾಲೆಗಳನ್ನೂ ಸಂದರ್ಶಿಸುತ್ತಲೂ ಆಯಾ ದೇಶೀಯರು ಉತ್ಸಾಹದಿಂದ ನಡೆಸುತ್ತಿರುವ ವಿವಿಧವಾದ ಉದ್ಯೋಗಗಳನ್ನು ಪರಿಶೀಲನೆ ಮಾಡುತ್ತಲೂ ವಿರಾಮಸುಖವೆಂಬುದನ್ನು ತೊರೆದು ಸಂಚಾರಮಾಡುತ್ತಿದ್ದರು ಅವರು ದಯಮಾಡಿಸಿದ್ದ ಸ್ಥಳಗಳಲ್ಲೆಲ್ಲಾ ಪರಮಾದರದಿಂದ ಸತ್ಕರಿಸಲ್ಪಟ್ಟರೆಂಬುದಾಗಿ ನಾನಾ ಮುಖದಿಂದ ತಿಳಿಯಬಂದಿರುವುದಲ್ಲದೆ ಅವರು ತಮ್ಮ ಸಂದರ್ಶನದಿಂದುಂಟಾದ ಸಂತೋಷಲಾಭವನ್ನು ಆಯಾ ದೇಶೀಯರು ಸ್ಮರಿಸಿಕೊಳ್ಳುತ್ತಿರುವಂತೆ ಮಾಡಿ ಅಪಾರವಾದ ಅನುಭವವನ್ನು ಪಡೆದು ಪ್ರಜೆಗಳನ್ನು ಉನ್ನತಸ್ಥಿತಿಗೆ ತರತಕ್ಕ ವಿಷಯದಲ್ಲಿ ಸಹಾಯಕರಾಗಿರಬೇಕೆಂಬ ಆಸಕ್ತಿಯಿಂದೊಡಗೂಡಿ ರಾಜಧಾನಿಗೆ ಹಿಂದಿರುಗಿ ದಯಮಾಡಿಸಿರುತ್ತಾರೆ ಜ್ಞಾನಾರ್ಜನೆಯನ್ನೂ, ಮನಃ ಪರಿಪಾಕವನ್ನೂ ಪಡೆದುಕೊಳ್ಳುವುದಕ್ಕಾಗಿ ಪೂರ್ವದೇಶಗಳಲ್ಲಿಯೂ ಪಶ್ಚಿಮದೇಶಗಳಲ್ಲಿಯೂ ಈ ತರುಣವಯಸ್ಸಿನಲ್ಲಿ ಸಂಚಾರಮಾಡುತ್ತಾ ಇಂಥ ಅಸಾಧಾರಣವಾದ ಧೈರ್ಯ ಸ್ಥೈರ್ಯಗಳನ್ನು ತೋರ್ಪಡಿಸಿರುವ ರಾಜಕುಮಾರರ ವಿಷಯದಲ್ಲಿ ಸಂಸ್ಥಾನದ ಪ್ರಜೆಗಳು ಕೇವಲ ಅಭಿಮಾನಶಾಲಿಗಳಾಗಿರುವುದು ಸಹಜವೇ ಆಗಿರುತ್ತದೆ ಇಂಗ್ಲೆಂಡ್ ದೇಶದ ಪ್ರಜೆಗಳಲ್ಲಿ ಪ್ರಮುಖರಾದವರೂ, ಗ್ಲಾಸ್‌ಗೋ, ಡಬ್ಲಿನ್ ಮೊದಲಾದ ಕೆಲವು ನಗರವಾಸಿಗಳೂ ಸಹ ನಮ್ಮ ಯುವರಾಜರವರಿಗೆ ತೋರಿಸಿದ ಸತ್ಕಾರಾತಿಶಯವನ್ನೂ ಇಲ್ಲಿನ ಪ್ರಜೆಗಳು ಕೇಳಿ ವಿಶೇಷವಾಗಿ ಸಂತೋಷಚಿತ್ತರಾಗಿರುತ್ತಾರೆ —ಮೈಸೂರು ಸಂಸ್ಥಾನದ ರಾಜವಂಶೋತ್ಪನ್ನರಾದ ಈ ಮಹನೀಯರು ವಿದೇಶಗಳಲ್ಲಿ ಸಂಚಾರಮಾಡುವುದರ ಮೂಲಕ ಹಾಕಿರುವ ಮೇಲುಪಂಕ್ತಿಯನ್ನು ನಮ್ಮ ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಅನೇಕರು ಅನುಸರಿಸಿ ವಿಶೇಷ ಪ್ರಯೋಜನವನ್ನು ಪಡೆಯುವರೆಂದು ನಿರೀಕ್ಷಿಸಬಹುದಾಗಿದೆ

ಅತ್ಯಂತ ಘನತೆಯನ್ನೈದಿದ ವ್ಯೆಸರಾಯಿಯವರ ಆಗಮನ —ಅತ್ಯಂತ ಘನತೆಯನ್ನೈದಿದ ಇಂಡಿಯಾ ದೇಶದ ವೈಸರಾಯಿ ಮತ್ತು ಗವರ್ನರ್ ಜನರಲ್ ಲಾರ್ಡ್ ಹಾರ್ಡಿಂಜ್ ಪ್ರಭುಗಳನ್ನು ಬರುವ ತಿಂಗಳಲ್ಲಿ ಈ ಸಂಸ್ಥಾನಕ್ಕೆ ಆದರದಿಂದ ಬರಮಾಡಿಕೊಂಡು ಅವರನ್ನು ಸತ್ಕರಿಸುವ ಗೌರವವು ನಮ್ಮ ಶ್ರೀಮನ್ಮಹಾರಾಜಾ ಸಾಹೇಬ್ಬಹಾದುರವರಿಗೆ ದೊರಕುತ್ತದೆ ಎಂಬ ಸಂತೋಷವಾರ್ತೆಯನ್ನು ಅವರ ಆಜ್ಞಾನುಸಾರವಾಗಿ ಇಲ್ಲಿ ತಮಗಳಿಗೆ ತಿಳಿಯಪಡಿಸಲಪೇಕ್ಷಿಸುತ್ತೇನೆ ಸಂಸ್ಥಾನದ ಎಲ್ಲಾ ಪ್ರಜೆಗಳೂ ಈ ಶುಭವಾರ್ತೆಯನ್ನು ಕೇಳಿ ಬಹಳವಾಗಿ ಆನಂದಿಸುತ್ತಾರೆಂತಲೂ, ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ಬರುವ ಸುಪ್ರಖ್ಯಾತರಾದ ಈ ಮಹನೀಯರನ್ನು ಎಲ್ಲಾ ಪ್ರಜೆಗಳೂ, ಶ್ರೀಮದಿಂಡಿಯಾ ಚಕ್ರವರ್ತಿಗಳವರ ಪ್ರತಿನಿಧಿಗಳಿಗೆ ಸಲ್ಲಬೇಕಾದ ರಾಜಭಕ್ತಿಯಿಂದಲೂ, ಗೌರವದಿಂದಲೂ ಸತ್ಕರಿಸುತ್ತಾರೆಂತಲೂ ನಿಸ್ಸಂದೇಹವಾಗಿ ನಂಬಿರುತ್ತೇವೆ ಘನತೆಯನ್ನೈದಿದ ಈ ಪ್ರಭುಗಳು ಈಗ ಅಲಂಕರಿಸುವ ಮಹಾಪದವಿಗೆ ದಯಮಾಡಿಸಿದಾಗಳಿಂದಲೂ, ದೇಶೀಯ ಸಂಸ್ಥಾನಗಳ ವಿಚಾರದಲ್ಲಿಯೂ, ಮತ್ತು ದೇಶದ ಪ್ರಜೆಗಳ ವಿಚಾರದಲ್ಲಿಯೂ, ಅನುಸರಿಸಿಕೊಂಡು ಬರುತ್ತಿರುವ ಸಹೃದಯ ಭಾವವನ್ನೂ, ಉದಾರವಾದ ಉದ್ದೇಶವನ್ನೂ, ಇಂಡಿಯಾ ದೇಶದ ಇತರ ಪ್ರಜೆಗಳಂತೆಯೇ ನಾವುಗಳು ಮೆಚ್ಚುವವರಾದ್ದರಿಂದ ಘನತೆಯನ್ನೈದಿದ ಲಾರ್ಡ್ ಹಾರ್ಡಿಂಜ್ ಪ್ರಭುಗಳನ್ನೂ, ಅವರ ಪತ್ನಿಯವರಾದ ಲೇಡಿ ಹಾರ್ಡಿಂಜ್‌ರವರನ್ನೂ ಬರಮಾಡಿಕೊಂಡು ಸತ್ಕರಿಸುವುದರಲ್ಲಿ ಪ್ರಜೆಗಳಿಗೆ ಇಮ್ಮಡಿಯಾದ ಉತ್ಸಾಹವಿರುತ್ತದೆಂದು ಧಾರಾಳವಾಗಿ ಹೇಳಬಹುದಾಗಿದೆ.

ಎಂ ವಿಶ್ವೇಶ್ವರಯ್ಯ,
ಮೈಸೂರು ಸಂಸ್ಥಾನದ ದಿವಾನ್‌ರವರು

REGISTERED
M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—ಸನ್ ೧೯೧೩ ನೇ ಇಸವಿ ಅಕ್ಟೋಬರ್ ತಾರೀಖು ೨೩ ನೇ ಗುರುವಾರ. ಸಂಚಿಕೆ ೨೧

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಎಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತುಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ" ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣ ಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ ನಯವಾಗಿ ಒಕಟಕಿಸುವವು ನಿಜವಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ ತ್ತು ಬುರುಡೆಯನ್ನು ಶುದ್ಧಮಾಡುತ್ತೆ ಸುಂಡಿನ ಹೊಟ್ಟನ್ನು ಅಣಗಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ಹಿಡಿದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶರಾಶಿಯನ್ನು ದಟ್ಟವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ ಬಾಟಲ್ ಬೆಲೆ 1 ಸೀಸೆಗೆ ರೂ 1 0-0 ಅಂಚೆಯ ವೆಚ್ಚ 0-4-0 ಬೇರೆ ತೆರವೇಕು

3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7 0

ಮೂಸೆಯು ಬೇಕೆಂದರೆ ಒಂದು ಅರ್ಧಾಣೆಯ ಟೀಟನ್ನು ಕಳುಹಿಸಿರಿ

ಮೈಸೂರು ಎಗ್ಜಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಜದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ಮನ್ನಾರ್‌ಗುಡಿ ಜಿಲ್ಲಾ ಸೆಕ್ರೆಟರಿ ಮಿ| ಟಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಇನ್ನು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನಮ್ಮ ಮನೆ ಹೆಂಗಸರು ಇದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಪಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಕೊಟ್ಟು ಹೆಸರಿಟ್ಟು ಕಿಫಾಯತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು ಅಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕೆಪಿಟೋಲ್ಬಾಮ್" ಮಳೆ ಮತ್ತು ಚಳಿಯ ಥಂಡಿ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಲ್ಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ನೋಯುವುದು, ಸಂಧಿವಾತ, ಮಸ್ತಕಶೂಲೆ, ಹೊಟ್ಟೆಗೆ ಮೆಹನತ್ತುಪಟ್ಟದ್ದರಿಂದ ಕ್ಷೀಣವಾಗುವದು, ಹೊಟ್ಟೆನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ ಬಾಟ್ಲ 1ಕ್ಕೆ ಕ್ರಯ 0 8 0 ಟ ಪಿ ಪ್ರತ್ಯೇಕ

ಒಡಮಸ್ಸ ಮಲೇರಿಯ ಪಿಲ್ಸ—ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮಸ್ಸ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿವೆ ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರುವುದಿಲ್ಲ ಇದು ದೇಹದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ ಬೇರೆ ಗುಳಿಗೆಗಳನ್ನು ತಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ ದಫೆಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಡನೆ ತಕೊಳ್ಳತಕ್ಕದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1 0 0 3 ಬಾಟ್ಲಿಗಳಿಗೆ ರೂ 2 8 0
ವಿ. ಪಿ. ಖರ್ಚು ಪ್ರತ್ಯೇಕ

ಮೇಲೆಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ — [8 41]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ಬಿ ಉಲ್ ಮಾರ್ಕೆಟ್, ಮಂಗಳೂರು

THE MYSORE GOVERNMENT SECURITY

LIFE AND MARRIAGE ASSURANCE COMPANY, LIMITED.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No III OF 1895)

CAUTION —Before you go in for a Provident Life or Marriage Policy, please ask for a copy of our Company's prospectus which will explain to you the mode of working of the present day provident companies working in India and enables you to select a good institution where your hard earned money will be safe

SPECIAL AND ATTRACTIVE FEATURES OF THE COMPANY

1. ABSOLUTE SECURITY.

The Company has got a capital of **one lakh** and its funds are invested in the **Mysore Government** and other approved securities The policy holder's moneys are **guaranteed**, and the **capital** and **reserve funds** of the Company are liable to the same

2. MARRIAGE SCHEME

A policy holder can subscribe from Re 1 to **Rs 6** every month **Double the premiums paid** to the Company will be paid to the married **on the marriage day** as maximum bonus

3. LIFE SCHEME

A policy holder can subscribe from As 8 to **Rs 2** per month Both males and **females**, of ages from 18 to **60** are insured **without medical examination** The maximum bonus will be paid to **the policy-holders themselves** on surviving **15 years** or to their nominees in case of their earlier death

WANTED.

Energetic and honest **Chief Agents** for every Presidency in India and Taluk Agents in each and every taluk of **the Mysore Province** on commission to represent the Company

For further particulars and prospectuses, please apply **with one anna stamp** and your previous experience in the line to,—

Mr. M. L. NAGANNAH,
Managing Agent,
MYSORE.

[161 12]

ಓರಿಯಂಟಲ್ ಗ॰ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು ರೂ 4,25 00,000

ಕಂಪನಿಯಿಂದ ಪಾವತಿ ಆಗಿರುವದು ,, 3,00 00,000

ಸಂಪೂರ್ಣವಾದ ಖಾತರಿಯುಳ್ಳದ್ದು, ದಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ —ಮಿ|| ಎಂ ಎಸ್ ರೆಡ್ಡಿ, ಡಿಸ್ಟ್ರಿಕ್ಟ್ ಏಜೆಂಟ್, ಬೆಂಗಳೂರು, ಮ್ಮ ಎ ಎಸ್ ನಂಜಪ್ಪನವರು ಅಥವಾ ಮ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು ಅಥವಾ

[191 1] ಬ್ರಾಂಚ್ ಸೆಕ್ರೆಟರಿ, ಮದರಾಸ್.

ಕನ್ನಡ ಲಾ ಪುಸ್ತಕಗಳು

[160 12]

ಗೌರ್ನರ್ ಜನರಲ್‌ರವರ ಹುಕುಂ ಪ್ರಕಾರ ಎಲ್ಲಾ ದೇಶಗಳಲ್ಲಿಯೂ ಜಾರಿಯಲ್ಲಿರುವ ಕನ್ನಡ ಇಂಡಿಯನ್ ಪೆನಲ್‌ಕೋಡು ಕ್ರಯ ರೂ 2 0 0, ವ್ಯವಹಾರಣೆಯ ವಿಧಿ ಎಂಬ ಸಿವಲ್ ಪ್ರೊಸಿಜೂರ್ ಯಾನೆ 3 ಭಾಗಗಳುಳ್ಳದ್ದು ರೂ 3 0 0, ವ್ಯವಹಾರ ಪರಿಹಾರವಿಧಿ ಎಂಬ ಸ್ಪೆಸಿಫಿಕ್ ರಿಲೀಫ್ ಆಕ್ಟು ರೂ 1 8 0, ಇಂಡಿಯನ್ ಲಾ ಆಫ್ ಕಂಟ್ರಾಕ್ಟ್ ರೂ 2 0 0, ಪ್ರಶ್ನೋತ್ತರ ಲೀಮ್ಮಬೋಧಿನಿ ಈ ಪುಸ್ತಕದಲ್ಲಿ ಸಿವಲ್ ಕ್ರಿಮಿನಲ್ ರೆವಿನ್ಯೂ ಮುಂತಾದ ವ್ಯವಹಾರ ವಿಧಿಗಳನ್ನು ಬೋಧಿಸುವದು ಕ್ರಯ ರೂ 1-4-0, ತಾನಾಗಿ ಸ್ವತಃ ಇಂಗ್ಲೀಷ್ ಕಲಿಯುವದು ರೂ 1 8-0 ಇವುಗಳಲ್ಲಿ ಕೆಲವು ಮುದ್ರಣವಾಗುತ್ತಿದೆ ಇನ್ನೂ ಪುಸ್ತಕಗಳು ಅಪೇಕ್ಷಿಸುವವರು ನಮ್ಮ ಪುಸ್ತಕಗಳ ಕ್ಯಾಟಲಾಗಿಗೆ ಬರೆಯಿರಿ

ವಿಳಾಸ—ಬಿ. ನರಸಿಂಗರಾವ್,
ಎಡಿಟರ್, "ಲಾ ಗೆಜೆಟ್." ಬೆಂಗಳೂರು.

ವಿನೋದಕರಗಳಾದ ನಕಲಿಗಳು

ಪ್ರಹಸನಚತುಷ್ಟಯ (ಹಾಸ್ಯಸಂಜೀವನಿ) ಯುವತಿಯಾದ ಹೆಂಡತಿ ಮುದುಕನಾದ ಗಂಡ, ವಿದ್ಯಾವಂತನಾದ ಗಂಡ ದಡ್ಡಳಾದ ಹೆಂಡತಿ ಇವರುಗಳನ್ನು ಕುರಿತ ನಕಲಿಗಳು ನಾಲ್ಕು ಉಕ್ತವಾಗಿವೆ ಇಂಥಾ ವಿನೋದವೂ ನೀತಿಪ್ರದವೂ ಆದ ನಕಲಿಯನ್ನು ನೀವು ಓದಿರಲಾರಿರಿ ಕ್ರಯ 4 ಆಣೆ [187 45]

ಪ್ರಹಸನತರಂಗ—ಅಂತರಂಗದಲ್ಲಿ ಧೈರ್ಯವಿಲ್ಲದ ಆಷಾಢಭೂತಿಗಳು, ಮೂಢಭಕ್ತಿಯಿಂದೊಡಗೂಡಿದ ದಡ್ಡರು, ಐಕಮತ್ಯವಿಲ್ಲದ ಮೂಢರು, ದುರಾಚಾರಿಗಳು ಮುಂತಾದವರ ವಿಷಯವು ಅತಿ ಚಮತ್ಕಾರವಾಗಿ ವರ್ಣಿಸಲ್ಪಟ್ಟಿದೆ ಕ್ರಯ 4 ಆಣೆ ಇದಲ್ಲದೆ ಮಹಾರಣ್ಯಪುರಾಧಿಪತ್ಯ 4 ಆಣೆ ಪುನರ್ವಿವಾಹ ಪ್ರಹಸನ 3 ಆಣೆ ಯೋಗನಿದ್ರಾಪ್ರಹಸನ 3 ಆಣೆ ಮುಂತಾದ ನಕಲಿಗಳೂ ದೊರೆಯುವವು

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ತಖಾವಿ ಲಾ.

[207 2]

(ಕೈ ಎಂ ಮಲ್ಲಾರಾಧ್ಯರಿಂದ ಬರೆಯಲ್ಪಟ್ಟದ್ದು)

ವ್ಯವಸಾಯದ ಮತ್ತು ರೈತರ ಅಭಿವೃದ್ಧಿಗಾಗಿ ಮೈಸೂರು ಸರ್ಕಾರದವರು ಕೊಡುವ ಸಾಲ ಮತ್ತೂ ಸಹಾಯ ಇವುಗಳ ವಿಷಯಕವಾದ ಕಾನೂನುಗಳೂ, ಈ ವಿಷಯಕವಾಗಿ ಮದ್ರಾಸು ಸರ್ಕಾರದ ಕಾನೂನುಗಳೂ, ಅರ್ಥಶಾಸ್ತ್ರ, ಧರ್ಮಶಾಸ್ತ್ರ, ಇತರ ರಾಜ್ಯಪದ್ಧತಿ ಮೊದಲಾದ ಪ್ರತಿಯೊಬ್ಬ ರೈತರೂ ತಿಳಿದಿರಬೇಕಾದ ವಿಷಯಗಳು ಈ ಪುಸ್ತಕದಲ್ಲಿ ಸ್ಪಷ್ಟವಾಗಿ ಬರೆಯಲ್ಪಟ್ಟಿವೆ ಬೆಲೆ ವಿ ಪಿ ಮೂಲಕ ೧೦ ಆಣೆ.

ಶ್ರೀ ಶಂಕರಾಚಾರ್ಯರ ಆತ್ಮಬೋಧೆ ಬೆಲೆ ೧ ಆಣೆ.

ಸುಪ್ರಸಿದ್ಧವಾದ "ವ್ಯವಹಾರನಿರ್ಣಯದ" ೩ ನೆಯಾವೃತ್ತಿಯ ಮುದ್ರಣವು ನಡೆಯುತ್ತಿದೆ.

ಎಂ ಪಂಡಿತಾರಾಧ್ಯ,
ಶ್ರೀರಾಮಪೇಟೆ, ಮೈಸೂರು.

ದೀಪಾವಳಿಯ ಮಹಾ ವಾರ್ಷಿಕೋತ್ಸವವು



[313 1]

ಸಮೀಪವಾಗುತ್ತಾ ಬರುತ್ತದೆ ಇಂಥ ಶುಭ ಮುಹೂರ್ತಗಳಲ್ಲಿ ಪೂರ್ವಕಾಲದ ಜ್ಞಾನಿಗಳಾದ ಸ್ತ್ರೀ ಪುರುಷರುಗಳು ತಮ್ಮ ಗಳನ್ನು ಆರೋಗ್ಯವಾಗಿಯೂ ತಂಪಾಗಿಯೂ ಇಟ್ಟುಕೊಳ್ಳುವದಕ್ಕೆ ನಿರ್ಮಲವಾದ ಸುಗಂಧ ತೈಲಾಭಿಷೇಕ ಮಾಡಿಕೊಳ್ಳುತ್ತಿದ್ದರೆಂದು ಚರಿತ್ರೆಯಿಂದ ತಿಳಿದು ಬರುತ್ತದೆ ಯಾಕೆಂದರೆ ಆ ತೈಲಗಳ ಸುವಾಸನೆಯು ಅವರು ಹೋದ ಕಡೆಗಳಲ್ಲೆಲ್ಲಾ ಅವರ ಸುತ್ತಲೂ ಇದ್ದ ವಾಯುಮಂಡಲವನ್ನು ನಿರ್ಮಲವಾಗಿಯೂ ಆಹ್ಲಾದಕರವಾಗಿಯೂ ಮಾಡಿತು ಅದು ಮನಸ್ಸನ್ನು ಸ್ವಚ್ಛವಾಗಿಯೂ ಚಟುವಟಿಕೆಯು ಳ್ಳದ್ದಾಗಿಯೂ ಮಾಡಿತು ಇಂಥ ಶುದ್ಧೀಕರಿಸಲ್ಪಟ್ಟ ಮನಸ್ಸು ಶುಭಕಾರ್ಯಗಳನ್ನು ಕೈಗೊಳ್ಳುವದಕ್ಕೆ ಅತ್ಯಂತ ಅನುಕೂಲವಾಗಿದೆ ಎಂ ದನ್ನು ಆ ಮಹನೀಯರುಗಳು ಚೆನ್ನಾಗಿ ತಿಳಿದುಕೊಂಡಿದ್ದರು ಜ್ಞಾನಿಗಳಾದ ಪೂರ್ವಿಕರ ಪದ್ಧತಿಗಳನ್ನು ಅನುಸರಿಸಿ ನಡೆಯುವದು ನಿಮಗೆ ಕರವೆಂದು ಬಗೆದುಕೊಂಡರೆ, ಈಗ ಬಹಳವಾಗಿ ಮಾರಾಟವಾಗುತ್ತಿರುವ ಸುಲಭ ಕ್ರಯದ, ನಿಕೃಷ್ಟವಾದ, ನೀವು ಪರೀಕ್ಷೆ ಮಾಡದಿರುವ ಹೇರ್ ಆಯಿಲ್ ಎಂಬ ತೈಲಗಳಿಗೆ ನಿಮ್ಮ ಕಷ್ಟಾರ್ಜಿತ ದ್ರವ್ಯವನ್ನು ವ್ಯಯಮಾಡಬೇಡಿರಿ

ಪ್ರಸಿದ್ಧವಾಗಿಯೂ, ಬಹಳಾಯಿಸಿ ತಯಾರಿಸಿದ್ದಾಗಿಯೂ ಇರುವ "ಕಾಮಿನಿಯ ಆಯಿಲನ್ನು" ಮಾತ್ರ ಉಪಯೋಗಿಸಿರಿ ಕಾಮಿನಿಯ ಆಯಿಲ್ ಎಂಬುದು ಏನೆಂದು ತಿಳಿಯದ ಒಬ್ಬ ವ್ಯಕ್ತಿ ಗೌಡನು ಸಿಕ್ಕುವದು ಕಷ್ಟ ಇದರ ಸುವಾಸನೆಯು ಅಪಾರವಾಗಿರುವದಲ್ಲದೆ ಇದು ಕೂದಲು ಮಿಂಚುವ ಸ್ವಾಭಾವಿಕವಾದ ಕಪ್ಪಾಗ ಮಾಡುತ್ತದೆ, ತಲೆಗೆ ತಂಪಾಗಿರುತ್ತದೆ ಮೆದುಳನ್ನು ನೂತನಪಡಿಸುತ್ತದೆ ಇದರ ಶ್ರೇಷ್ಠತೆಗಾಗಿ ಇದಕ್ಕೆ ಮೈಸೂ ರಿನಲ್ಲಿ ಒಂದು ಚಿನ್ನದ ಮೆಡಲ್ ಕೊಡಲ್ಪಟ್ಟಿರುತ್ತದೆ ಮತ್ತು ಲಂಡನಿನ ವಸ್ತುಪ್ರದರ್ಶನ ಶಾಲೆಯಲ್ಲಿ ಒಂದು ಯೋಗ್ಯತಾಪತ್ರವು ಕೊಡಲ್ಪಟ್ಟಿರುತ್ತದೆ ಇಷ್ಟೇ ಅಲ್ಲ ಇದು ಉತ್ಕೃಷ್ಟವಾದದ್ದೆಂದು ಸಾಕ್ಷಿ ಕೊಡುವವರು ಸಾವಿರಾರು ಮಂದಿ ಇರುತ್ತಾರೆ ಇವರಲ್ಲಿ ಕೆಲವರ ಅಭಿಪ್ರಾಯಗಳನ್ನು ಮಾತ್ರ ಕೆಳಗೆ ಸೂಚಿಸುತ್ತೇವೆ —

ಮದ್ರಾಸ್ ಸ್ಟಾಂಡರ್ಡ್ ಎಂಬ ಪತ್ರಿಕೆ —ಈ ಕಂಪನಿಯವರು ಆಮದಾಯಿಸುವ ಬಗ್ಗೆ ನಮ್ಮಲ್ಲಿಗೆ ಕಳುಹಿಸಿಕೊಟ್ಟಿದ್ದ ಇವರ ಸ್ವಯಂ ಕಲ್ಪಿತವಾದ ಕಾಮಿನಿಯ ಆಯಿಲಿನ ಶ್ರೇಷ್ಠತೆಯನ್ನು ವಿಮರ್ಶೆಮಾಡಿನೋಡುವ ಅವಕಾಶವು ನಮಗೆ ಸಿಕ್ಕಿರುತ್ತದೆ ಈಗ ಮಾರಾಟದಲ್ಲಿರುವ ಸುಲಭ ಕ್ರಯದ ಕೆಲಸಕ್ಕೆ ಬಾರದ ಅನೇಕಾನೇಕ ತೈಲಗಳಿಗಿಂತ ಇದು ಉತ್ಕೃಷ್ಟವಾಗಿರುತ್ತದೆಂದು ನಾವು ಕಂಡುಕೊಂಡಿರುತ್ತೇವೆ ಈ ಅಂಶವನ್ನು ಯಥಾರ್ಥವಾಗಿ ಪ್ರಕಟಪಡಿಸಲು ಹಿಂದೆಗೆಯುವದಿಲ್ಲ

ಒಂದು ಪ್ರಾಕಾಶವೆಂಬ ಬೊಂಬಾಯಿಯ ದಿನ ಪತ್ರಿಕೆ ಕೃತ್ರಿಮ ಮತ್ತು ಮಿಶ್ರಿತ ಮಾಲುಗಳು ಹೆಚ್ಚಾಗಿರುವ ಈ ಕಾಲದಲ್ಲಿ ಸರ್ವರೂ ಉಪಯೋಗಿಸತಕ್ಕ ಹೇರ್ ಆಯಿಲನ್ನೂ ಕೂಡ ಬರಿಸಿಕೊಳ್ಳುವದರಲ್ಲಿ [illegible] ಜಾಗರೂಕರಾಗಿರತಕ್ಕದ್ದು ಅವಶ್ಯಕವೆಂದು ಒತ್ತಾಯಮಾಡಿ ಹೇಳುವದು ಸಾಧ್ಯವಲ್ಲ ಬೇರೆ ಹೇರ್ ಆಯಿಲ್‌ಗಳನ್ನು ಉಪಯೋಗಿಸಿ ನೋಡಿದಂತ ಅವರು ನಮ್ಮ ಕೊಡುವ ವಿಷಯ ಚಿಂತಿಸಹುವಂತ ನಮ್ಮ ವಾಚಕ ಮಹನೀಯರುಗಳಿಗೆ ಅವರು ನೋಡಲು ಒಂದು ಸೀಸೆ ಕಾಮಿನಿಯ ಆಯಿಲನ್ನು ಉಪಯೋಗಿಸಿ ನೋಡುವಂತೆ ನಾವು ಬಲವಾಗಿ ಶಿಫಾರಸು ಮಾಡುತ್ತೇವೆ

ಇಂಡಿಯನ್ ಪೇಟ್ರಿಯಟ್ ಮದ್ರಾಸ್ —ಕಾಮಿನಿಯ ಎಂಬ ತೈಲವು ಉತ್ಕೃಷ್ಟವಾದದ್ದೆಂದು ಭಾವಿಸಲ್ಪಟ್ಟಿರುತ್ತದೆ ಅದರಲ್ಲಿರಬೇಕಾದ ಗುಣಗಳೆಲ್ಲಾ ಇರುತ್ತವೆ

ಮೈಸೂರ್ ಅಡ್ವೋಕೇಟ್ ಮ|| ಬಿ ರಾಮಣ್ಣನವರು ಬರೆಯುವದು —ದಯವಿಟ್ಟು ಎರಡು ಸೀಸೆ ಕಾಮಿನಿಯ ಆಯಿಲನ್ನು ವಿ ಪಿ ಪಿ ಮೂಲಕ ಕಳುಹಿಸಿ ಕೊಡಿರಿ ಹಿಂದೆ ನೀವು ಕಳುಹಿಸಿಕೊಟ್ಟಿದ್ದವುಗಳನ್ನು ಸ್ತ್ರೀಯರುಗಳು ವಿಶೇಷವಾಗಿ ಮೋಹಿಸುತ್ತಾರೆ

ಬಾತಾ ಸುಮುಲ್ಲಾ ರಾಮರು ಬರೆಯುವದು —ನಿಮ್ಮ ಶೋಧಕ ಪ್ರಧಾನ ಕಾಮಿನಿಯ ಆಯಿಲಿನ ಸುಗುಣಗಳ ವಿಷಯ ನಿಮ್ಮಲ್ಲಿ ಪ್ರಸ್ತಾಪಿಸುವುದು ನನಗೆ ಬಹಳ ಸಂತೋಷ ಅದರ ಹೆಸರು ಅದಕ್ಕೆ ಸಲ್ಲತಕ್ಕದ್ದೇ ಆಗಿರುತ್ತದೆ ಅರ್ಧ ಡಜನ್ ಸೀಸೆಗಳನ್ನು ವಿ ಪಿ ಪಿ ಮೂಲಕ ದಯವಿಟ್ಟು ಕಳುಹಿಸಿಕೊಡಿರಿ

ಇದನ್ನು ಪರೀಕ್ಷಿಸಿ ನೋಡಿ, ನಿಮ್ಮ ದೀಪಾವಳಿಯನ್ನು ಸಂತೋಷವಾಗಿಯೂ ಸುಖವಾಗಿಯೂ ಕಳೆಯುವದಕ್ಕೆ ತಪ್ಪಬೇಡಿರಿ

ಕ್ರಯ ೧ ಶೀಸೆಗೆ ರೂ ೧, ವಿ ಪಿ ಪಿ ಇತ್ಯಾದಿ ೪ ಆಣೆ ಕ್ರಯ ೩ ಶೀಸೆಗಳಿಗೆ ರೂ ೨ ೧೦ ಆಣೆ, ವಿ ಪಿ ಪಿ ಇತ್ಯಾದಿ ೭ ಆಣೆ

ಪ್ರತಿಯೊಂದು ಪಟ್ಟಣದಲ್ಲಿಯೂ ಗ್ರಾಮದಲ್ಲಿಯೂ ಇರುವ ಪ್ರಸಿದ್ಧವಾದ ಎಲ್ಲಾ ಸ್ಟೋರುಗಳಲ್ಲಿ ಕಾಮಿನಿಯ ಆಯಿಲ್ ಮಾರಲ್ಪಡುತ್ತದೆ ಇದನ್ನು ಮಾರುವವರು ನಿಮ್ಮ ಸಮೀಪದಲ್ಲಿಲ್ಲದಿದ್ದರೆ ನಿಮ್ಮ ಆರ್ಡರುಗಳನ್ನು ನೇರಾಗಿ ಈ ಕೆಳಗಿನ ವಿಳಾಸಕ್ಕೆ ರವಾನಿಸಿರಿ ಅದರೆ ಸ್ಥಳಿಕ ವರ್ತಕರುಗಳಿಂದ ಕೊಂಡುಕೊಳ್ಳುವಾಗ್ಯೆ—ಇದು ಸುಲಭಕ್ರಯದ್ದು ಉತ್ತಮವಾದದ್ದು ಎಂದು ಹೇಳಿ ಕನಿಷ್ಟವಾದದ್ದನ್ನು ಕೊಡುವ ಅನೇಕ ವರ್ತಕರುಂಟಾದ್ದಾರೆಂದು ದಯವಿಟ್ಟು ಜ್ಞಾಪಕಮಾಡಿಕೊಳ್ಳಿರಿ ಯಾಕೆಂದರೆ ಇದರಲ್ಲಿ ಅವರಿಗೆ ಹೆಚ್ಚು ಆದಾಯ ಸಿಕ್ಕುತ್ತದೆ ಆದಕಾರಣ ಇಂಥ ಕುಯುಕ್ತಿಗಳಿಗೆ ಮರುಳಾಗದೆ ಯಾವಾಗಲೂ ಸ್ವಚ್ಛವಾದ ಕಾಮಿನಿಯ ಆಯಿಲನ್ನೇ ಕೊಂಡುಕೊಳ್ಳಿರಿ

ಸೋಲ್ ಏಜೆಂಟ್—ದಿ ಆಂಗ್ಲೋ ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ ಕಂಪನಿ, ಡ್ರಗಿಸ್ಟ್ಸ್ ಅಂಡ್ ಕೆಮಿಸ್ಟ್ಸ್, ಜುಮ್ಮಾ ಮಸ್‌ಜಿದ್, ಬೊಂಬಾಯಿ

ಏಜೆಂಟ್—ಉಲ್ಲನ್ ಮಾರ್ಟನ್, ಮಂಗಳೂರು

ಪ್ರತಿಯೊಬ್ಬರಿಗೂ ಅತ್ಯವಶ್ಯಕವಾದ

ಬೆಲೆಯುಳ್ಳ ೨ ಬಹುಮಾನ ಕೊಡಲಾಗುತ್ತೆ. ನಿಮಗೆ ಬೇಕೋ?

ಆರು ಆಣೆ ಕ್ರಯ ಬಾಳುವ ಸ್ವತಹ ಸದಾ ನಾಯಿ ಇರುವ ಮುತ್ತ 1 (ಪೆಲ್ಲಿಕನ್ ಪ್ಯಾಟರ್) ಸುಂದರವಾದ ಪೆಟ್ಟಿ 1 ಇವೆರಡನ್ನೂ ಬಹುಮಾನ ಕೊಡಲ ಗುತ್ತೆ ಪ್ರತಿಯೊಬ್ಬ ಒಂದುವಿನೂ ಅಗತ್ಯ ಬೇಕಾದ 6 ಪಿಕ್ಚರ್‌ಗಳನ್ನು ಠಿಲ್ಪನಲ್ಲಿ ತಯಾರ್‌ಮಾಡಿಸಿದ್ದೇವೆ ತಮಗೆ ಬೇಕಾದ ಕಡೆ ತಮ್ಮಿಷ್ಟಬಂದ ಪಿಕ್ಚರನ್ನು ತಾವೇ ಮುದ್ರಿಸಿಕೊಳ್ಳಬಹುದು 6 ಪಿಕ್ಚರ್‌ಗಳೊಡನೆ ಮೇಲ್ಕಂಡ ಬಹುಮಾನ ಸಹಿತ ಕ್ರಯ 1 0 0 ಪ್ಯಾಕಿಂಗ್ ಪೋಸ್ಟೇಜು ಮಾಫಿ

ಹಿಂದೂ ದೇಶದ ರಾಜರುಗಳೊಡನೆ ಜಾರ್ಜ್ ಚಕ್ರವರ್ತಿಯವರೂ ಮತ್ತೂ ಮೇರೀ ಚಕ್ರವರ್ತಿನಿಯವರ

ದೇಹಲೀ ಕಾರೋನೇಷನ್ ಪಟ ಇರತಕ್ಕ 1914 ನೇ ಇಸವಿ ಕ್ಯಾಲೆಂಡರ್

ಇದರಲ್ಲಿ ತಿಂಗಳು, ತಾರೀಖು, ವಾರ, ತಿಥಿ, ನಕ್ಷತ್ರ, ಹಬ್ಬಗಳು ಗೌರ್ನ್ಮೆಂಟ್ ರಜಾದಿನಗಳು, ರಾಹು ಗುಳಿಕಾಲ, ಇವೆಲ್ಲಾ ಇರುತ್ತೆ ಕ್ರಯ 1 ಕ್ಕೆ 6 ಪೈ 50 ಕ್ಕೆ 1 1 0, 100 ಕ್ಕೆ 2 0 0 ಪೋಸ್ಟೇಜು ಮಾಫಿ 50 ಕ್ಕೆ ಕಡಿಮೆ ರವಾನಿಸಲಾಗುವದಿಲ್ಲಾ

ಸ್ಕೂಲ್ ಮಾಸ್ಟರ್‌ಗಳಿಗೂ ಇತರ ದೊಡ್ಡ ಮನುಷ್ಯರಿಗೂ ನಮ್ಮದೊಂದು ವಿಜ್ಞಾಪನೆ

ದಿ ನ್ಯಾಷನಲ್ ಬ್ಲೂಬ್ಲಾಕ್ ಇಂಕ್‌ಪೌಡರ್ ಪೊಟ್ಟಣ ೧ ಕ್ಕೆ ೨ ಆಣೆ, ೧ ಡಜನ್ ಪೊಟ್ಟಣಗಳಿಗೆ ರೂ ೧–೫ ಆಣೆ. ಪ್ಯಾಕಿಂಗ್ ಪೋಸ್ಟೇಜು ಮಾಫಿ

೧ ಪೊಟ್ಟಣ ಪುಡಿಯನ್ನು ೨೦ ಔನ್ಸು ನೀರಿಗೆ ಹಾಕಿದ ತಕ್ಷಣವೇ ಬರಿಯಲು ಯೋಗ್ಯವಾಗಿ ಅತ್ಯುತ್ತಮವಾದ ಬ್ಲೂಬ್ಲಾಕ್ ಇಂಕ್ ಆಗುತ್ತೆ.

ತಾವು ಅನೇಕತರದ ಶಾಯಿಪುಡಿಯನ್ನು ಉಪಯೋಗಿಸಿರುವಿರಿ ಇದನ್ನೊಂದು ಸಾರಿ ಉಪಯೋಗಿಸಿ ನೋಡಬೇಕಾಗಿ ನಮ್ಮ ಕೋರಿಕೆ ಈ ಶಾಯಿಯಲ್ಲಿ ಮಸ್ಸು ನಿಲುವದಿಲ್ಲಾ, ನಿಬ್ ತುಕ್ಕು ಹಿಡಿಯುವದಿಲ್ಲಾ, ಬರೆದನಂತರ ಪೇಪರ್ ಒಂದಕ್ಕೊಂದು ಅಂಟಿಕೊಳ್ಳುವದಿಲ್ಲಾ, ಬರದ ಅಕ್ಷರಗಳು ಹರಡುವದಿಲ್ಲಾ, ಬರಿಯಲು ಮನೋಹರವಾಗಿಯೂ ನಂತ್ರ ನೋಡುವದಕ್ಕೆ ರಮ್ಯವಾಗಿಯೂ ಇರುತ್ತೆ ಮೇಲ್ಕಂಡ ಗುಣಗಳಲ್ಲಿ ವ್ಯತ್ಯಾಸ ಕಂಡು ಬಂದಲ್ಲಿ ಅಥವಾ ತಮಗ ಸಮ್ಮತವಿಲ್ಲದೇ ಇದ್ದಲ್ಲಿ ನಮ್ಮ ಪದಾರ್ಥವನ್ನು ವಾಪಸು ತೆಗದುಕೊಳ್ಳುತ್ತೇವೆ ಖಂಡಿತವಾಗಿಯೂ ಒಂ ಸಾರಿ ಉಪಯೋಗಿಸಬೇಕೆಂಬುವದೇ ನಮ್ಮ ಕೋರಿಕೆ

ಪದ್ಧತಿಯ ಪ್ರಕಾರ ಅನೇಕ ವಿಷಯಗಳನೊಳಗೊಂಡಿರುವ

1914 ನೇ ಇಸವಿ ನಾಲ್ಕು ನಮೂನೆ ಪಾಕೆಟ್ ಡೈರಿಗಳು ವಿಕರಿಗೆ ಸಿದ್ಧವಾಗಿವೆ

ಒಂದು ಡಜನ್ ಡೈರಿಗಳಿಗೆ ಒಂದು ಬಹುಮಾನ ಕೊಡಲಾಗುತ್ತೆ ಕ್ರಯ 1 ನೇ ನಂ 0–3 0, 2 ನೇ ನಂ 0–1–0, 3 ನೇ ನಂ 0–6–0, 4 ನೇ ನಂ 0–8–0 ಪೋಸ್ಟೇಜ ಅಲಾಯಿ

(ಜಾಗ್ರತೇ ಆರ್ಡರ್ ಕೊಟ್ಟು ತರಿಸಿಕೊಳ್ಳಿ ಹೋದಸಾರಿಯಂತೆ ಮುಗಿದ ನಂತರ ಯೋಚಿಸಬೇಡಿರಿ.)

"ಜುಮಲೆ" ಇದೊಂದು ಅತ್ಯಾಶ್ಚರ್ಯಕರವಾದ ಹೊಸ ಕಾದಂಬರಿ (ಬಂಗಾಳಿ ನಾವೆಲ್)

ಓದುವದಕ್ಕೆ ಕುಳಿತರೆ ಮುಗಿಸುವ ವರಿಗೂ ಮನಸ್ಸು ನಿಲ್ಲುವದಿಲ್ಲ ಓದುತ್ತಾ ಓದುತ್ತಾ ಹೊಸ ಭಾವಗಳು ತಲೆದೋರಿ ರೋಮಾಂಚವುಂಟಾಗುವದಲ್ಲದೆ ಗೋರೀಯಲ್ಲಿದ್ದ ಹೆಂಗಸಿನ ಶವಕ್ಕೆ ಪ್ರತಿಯಾಗಿ ಗಂಡಸಿನ ಶವವಿರುವದನ್ನು ಓದುತ್ತಲೆ ಆಶ್ಚರ್ಯ ಸಮುದ್ರದಲ್ಲಿ ಮುಳುಗಿ ಹೋಗುವಿರಿ ನಾವೇ ಇದನ್ನು ಹೊಗಳುವದಕ್ಕಿಂತಲೂ ಈ ಪುಸ್ತಕವನ್ನು ಓದಿದರೆ ಇದರ ನಿಜಸ್ಥಿತಿ ತಮಗೆ ವ್ಯಕ್ತವಾಗುತ್ತೆ ಕ್ರಯ ಪ್ರತಿಯೊಂದಕ್ಕೆ 0–1–0, 10 ಪ್ರತಿಗೆ ಒಂದು ಉಚಿತ, ಪೋಸ್ಟೇಜು ಅಲಾಯಿದಾ [319-1]

ನಮ್ಮ ವಿಳಾಸ —ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು

ಮರೆಯಬ್ಯಾಡಿರಿ! ಮರೆಯಬ್ಯಾಡಿರಿ!!

ದರ್ಬಾರ್ ಸಾಬೂನು

ಏಜಂಟರುಗಳು ಬೇಕಾಗಿದೆ.

ಒಳ್ಳೇ ಕಮಿಷನ್ ದೊರೆಯುವದು.

ಅಪಾಯವಿಲ್ಲದ ರೋಮಸಂಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು

ಉರಿ, ಸಕೆ ಮೊದಲಾದ ಬಾಧೆಗಳಿಲ್ಲವು ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು ಮರೆಯಬ್ಯಾಡಿರಿ

3 ಸಬ್ಬುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ 14 ಆಣೆ

2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1-10-0

ಅಂಚೇ ಹಾಸಲು 1 ಆಣೆ

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ. [271-1]

ವಿಳಾಸ—ಎ. ಪಿ. ಎಸ್. ವಾಣಿ ಕಂಪೆನಿ,

3, ಇರುಳಪ್ಪನ್ ಬೀದಿ, ಮದರಾಸು.

ಜೀನ್ ತಾನ್.

ಜೀನತಾನ ಎನ್ನುವದು ಜಪಾನಿ ಮಾತ್ರೆಗಳು ಆದರ ಉಪಯೋಗಗಳು—ಶೀತ, ಕೆಮ್ಮು, ಮಂದ, ತಲೆನೋವು, ಅಜೀರ್ಣ ಬೇಧಿಗಳು, ಅರುಚಿ, ಗಂಟ್ಲು ಒಣಗುವುದು, ಬೀದಿ ಧೂಳಿನಿಂದುಂಟಾದ ದೋಷ ಒಳ್ಳೇದು

ಸಂಗೀತಗಾರರೂ, ಉಪನ್ಯಾಸಕರೂ ಇದನ್ನು ಉಪಯೋಗಿಸಿದರೆ ಗಂಟ್ಲಿನ ರೋಗಗಳು ಶುದ್ಧವಾಗುತ್ತವೆ ಮತ್ತು ಬಾಯಿನ ಎಲ್ಲಾ ತರದ ದುರ್ವಾಸನ ನಾಶವಾಗುವದು

ಕ್ರಯ—30 ಮಾತ್ರೆ ಉಳ್ಳ ಪೆಟ್ಟಿ 0-1-0 65 ಮಾತ್ರೆಗೆ 0-3-0, 195 ಮಾತ್ರೆಗಳ ದಬ್ಬಾ 8 ಆಣೆ, 155 ಮಾತ್ರೆ ಉಳ್ಳ ಸುಂದರವಾದ ಕನ್ನಡಿ ದಬ್ಬಕ್ಕೆ ರೂ 1 [199-3]

ನಮ್ಮಲ್ಲಿ ತಯಾರಾಗುವ ಪಿತ್ತಾಳೆ ಮಂಚದಬತ್ತಿ ಸ್ಟಾಂಡುಗಳು ಉತ್ತಮವಾದವೆಂದು ಎಲ್ಲೆಲ್ಲೂ ಪ್ರಸಿದ್ಧಿ ಹೊಂದಿವೆ ನಾವು ಬೊಂಬಾಯಿ ಬರೋಡ ಬೀಚ ಅಲೆಂಬಿಕ್ ವೈದ್ಯಶಾಲೆಗೂ, ಬೊಂಬಾಯಿ ಐಯೋನಿಕ್ ವೈದ್ಯಶಾಲೆಗೂ, ಬೊಂಬಾಯಿ ಬಾಲಾಮೃತಕ್ಕೂ, ಕಲ್ಕತ್ತಾ ಸಿ ಕೆ ಸೆನ್ ಆಯುರ್ವೇದ ಔಷಧಶಾಲೆಗೂ ಸೋಲ್ ಏಜೆಂಟರು

ವಿಳಾಸ—ಎಸ್. ವೈದ್ಯ ಮತ್ತು ಕಂಪನಿ,

ಪಾರ್ಕ್ ಟವನ್, ಮದರಾಸ್.

---

15 ಬಹುಮಾನದೊಡಗೂಡಿದ ಗಡಿಯಾರವು.

ಕೆಳಗೆ ಕಾಣಿಸಿರುವ ಗಡಿಯಾರದ ಬೆಲೆ 7 ರೂಪಾಯಿಗಳು ಇದು ಬರುವ ಡಿಸೆಂಬರ್ ಆಖೈರುವರೆಗೆ 3-15-0 ಗೆ 15 ಬಹುಮಾನಗಳೊಡನೆ ವಿಕರಿ ಮಾಡಲ್ಪಡುತ್ತೆ ಇದು ಒಳ್ಳೆಯ ಸಾಮಾನುಗಳಿಂದ ತಯಾರಿಸಲ್ಪಟ್ಟಿರುವುದರಿಂದ 30 ವರುಷಗಳ ವರೆಗೆ ಕೆಡದೆ ನಡೆಯುತೆ. ಇದೊಂದು ಹೊಸ ಸಮಾಚಾರವಾಗಿರುತ್ತೆ. ಇದು ಒಳ್ಳೇ ಚನ್ನಾಗಿ ಹದ ಕೊಟ್ಟ ಉಕ್ಕಿನ ಮುಚ್ಚಳವನ್ನು ಹೊಂದಿರುವುದರಿಂದ ಧೂಳು ಸೇರಲು ಅವಕಾಶವಿಲ್ಲ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಸುಲಭವಾಗಿ ಕೀಕೊಡಲು ಅನುಕೂಲವಾಗಿರುತ್ತೆ ಇದಕ್ಕೆ ಬಹಳವಾಗಿ ಆರ್ಡರುಗಳು ಬರುತ್ತಿರುವುದರಿಂದ ಜಾಗ್ರತೆ ಮಾಡಿರಿ ನಿಧಾನವಾದವರೆ ದೊರಕಲಾರದು ಇದನ್ನು ತರಿಸಿಕೊಳ್ಳತಕ್ಕವರಿಗೆ ಈ ಕೆಳಗೆ ಕಾಣಿಸಿರುವ 15 ಸಾಮಾನುಗಳು ಉಚಿತವಾಗಿ ಕೊಡಲ್ಪಡುವುವು ಇವು ಹೆಚ್ಚಾದ ಬೆಲೆಯುಳ್ಳವು —

1 ಈ ಮೈಸೂರು ದೇಶದವರು ಉಪಯೋಗಿಸುವ ಮಾದರಿಯಾಗಿರುವ ಕೈಕಟ್ಟು, ಇದಕ್ಕೆ ಭಂಗಾರದ ಗಿಲ್ಟು ಕೊಡಲ್ಪಟ್ಟಿರುತ್ತೆ ಬೆಲೆ 1 ರೂ 2 ಎಲೆಕ್ಟ್ರಿಕ್ ಭಂಗಾರದ ಕೇಶಿನ ಪ್ರಾವಿಂಶಿಗೆ ಹುಪ್ಪು ಬೆಲೆ 12 ಆಣೆ 3 ಭಂಗಾರದ ಕೈನ ಗಡಿಯಾರದ ಸರಪಣಿಗೆ ಕ್ರಯ 1 ರೂ 4 ಇಮಿಟೇಷನ್ ವಜ್ರದ ಪದಟು ಪಿನ್ನು ಬೆಲೆ 8 ಆಣೆ 5 ಒಂದು ಹಸನಾದ ಕತ್ತರಿ ಬೆಲೆ 1 ಆಣೆ 6 ಜರ್ಮನ್ ಬೆಳ್ಳಿಯ ಕುಂಕುಮಭರಣಿ ಬೆಲೆ 8 ಆಣೆ 7 ಬಂಗಾರದ ಗಿಲ್ಟಿನ ತಿರುಪಿನ ಜಡೆಬಿಲ್ಲೆ ಬೆಲೆ 6 ಆಣೆ 8 ಜರ್ಮನ್ ಬೆಳ್ಳಿಯ ಸಾದಿನ ಚಿಪ್ಪು ಬೆಲೆ 4 ಆಣೆ 9 ಅಂದವಾದ ಹವಳದ ಬೀಲು ಬೆಲೆ 1 ಆಣೆ 10 ಜರ್ಮನ್ ಬೆಳ್ಳಿಯ ಕಣ್ಣುಕಪ್ಪಿನ ಭರಣಿ ಬೆಲೆ 2 ಆಣೆ 11 ಒಂದು ಸೀಲ್ ಉಂಗುರ ಬೆಲೆ 8 ಆಣೆ 12 ಜರ್ಮನ್ ಬೆಳ್ಳಿಯ ಪುಡಿ ಡಬ್ಬಿ ಬೆಲೆ 8 ಆಣೆ. 13 ಹೆಂಗಸ ನಗಗಳನ್ನಿಡಲು ಅನುಕೂಲವಾಗಿರುವ ಕೈ ಪೆಟ್ಟಿಗೆ ಬೆಲೆ 10 ಆಣೆ 14 ಜರ್ಮನ್ ಬೆಳ್ಳಿಯ ಹಾಲಿನ ಲೋಟ ಬೆಲೆ 6 ಆಣೆ. 15 ಒಳ್ಳೇ ಬೆಳ್ಳಿಯಿಂದ ತಯಾರಿಸಿ ಬಲವಾದ ಚಿನ್ನದ ಕೈನ ಮೂಗು ಬೊಟ್ಟು ಬೆಲೆ 8 ಆಣೆ ವಿಳಾಸ— [206 2]

ಪೈ. ಎ ವಾಲ ಅಂಡ್ ಕೋ, ನುಂಗಂಬಾಕಂ, ಮದ್ರಾಸ್.

ಪ್ರಾಕೃತಿಕ ಭೂಗೋಳ.

ಮೊದಲನೇ ಮುದ್ರಣವು ಅತಿ ಶೀಘ್ರವಾಗಿ ಮುಗಿದುಹೋದ್ದರಿಂದ ಈಚೆಗೆ ಬಂದಿರುವ ಆರ್ಡರುಗಳಿಗೆ ಪ್ರತಿಗಳನ್ನು ಕಳುಹಿಸಲು ಅವಕಾಶವಾಗಲಿಲ್ಲ. ಎರಡನೇ ಮುದ್ರಣದಲ್ಲಿ ಅನೇಕ ಹೆಚ್ಚು ವಿಷಯಗಳನ್ನು ಚನ್ನಾಗಿ ವಿವರಿಸಿ ಆರ್ಟ್ ಪೇಪರಿನಮೇಲೆ ಪ್ರಿಂಟುಮಾಡಿರುವ ಅನೇಕ ಹೊಸ ನಕ್ಷೆಗಳನ್ನು ಸೇರಿಸುವುದಲ್ಲದೆ 1 ಆಣೆ ಬೆಲೆ ಬಾಳುವ ಬಣ್ಣಹಾಕಿರುವ ಸುಂದರವಾದ ಒಂದು ಮೈಸೂರು ನಕ್ಷೆಯನ್ನು ಸಹ ಸೇರಿಸುತ್ತೆ 1 ನೆಯ ಭಾಗವು ಸೆಪ್ಟೆಂಬರ್ ಸಂಗಳು 25 ರಲ್ಲಿ ಬಿಕರಿಗೆ ಸಿದ್ಧವಾಗುವುದು ಈ ಪುಸ್ತಕವು ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೂ ಮತ್ತು ಇತರರಿಗೂ ಪಾಠಹೇಳುವುದಕ್ಕೂ ಬಹಳ ಸಹಕಾರಿಯಾಗಿರುತ್ತದೆ ಕೆಲವು ಪ್ರತಿಗಳು ಮಾತ್ರ ಪ್ರಿಂಟಾಗಿರುವುದರಿಂದ ಮೊದಲು ಬಂದ ಆರ್ಡರುಗಳಿಗೆ ಜಾಗ್ರತೆಯಲ್ಲಿ ಪ್ರತಿಗಳು ಕಳುಹಿಸಲ್ಪಡುವುವು. ಕ್ರಯ 0-1-6

ಹೊಸ ಕನ್ನಡ ಬರಹದ ಪುಸ್ತಕವೆಂಬ ಹೆಸರಿನಿಂದ 1 ನಂಬರು ಕಾಪಿ ಪುಸ್ತಕಗಳನ್ನೂ ಪ್ರಿಂಟ್‌ಮಾಡಿಸಿರುತ್ತೇನೆ ಇವರ ಮೇಲ್ಪಟ್ಟಿಗಳು ಬಹು ಅಂದವಾದ ಬರವಣಿಗೆಯ ಅಕ್ಷರದಂತೆ ಚೆಲಿಕೊಟ್ಟುಗಳು ಮೊದಲಾದವುಗಳಿಂದ ಹೊರತು ಪ್ರಿಂಟಿಂಗ್ ಅಕ್ಷರಗಳ ಹಾಗಿಲ್ಲ. ಒಳ್ಳೇ ಕಾಗದದ ಮೇಲೆ ನೋಡುವುದಕ್ಕೆ ಬಹು ಅಂದವಾಗಿ ರೂಲುಗಳನ್ನು ಹಾಕಿ ಪ್ರಿಂಟಾಗಿರುತ್ತವೆ. ಇವುಗಳು ವಿದ್ಯಾರ್ಥಿಗಳ ಕೈ ತಿದ್ದಲು ಬಹಳ ಸಹಕಾರಿಯಾದ ಕಾಪಿ ಪುಸ್ತಕಗಳೆಂದು ಭಾವಿಸಿ ಮೈಸೂರಿನ ಸ್ಕೂಲುಗಳಲ್ಲಿ ಉಪಯೋಗಿಸುತ್ತಿದ್ದಾರೆ ಕ್ರಯ 0-1-3.

ಪ್ರಾಕೃತಿಕ ಭೂಗೋಳ ಮತ್ತು ಹೊಸಕನ್ನಡ ಲೇಖನ ಪುಸ್ತಕಗಳನ್ನು ಪಡೆಯಲಿಷ್ಟವುಳ್ಳ ಪುಸ್ತಕ ವ್ಯಾಪಾರಿಗಳು ಮೊದಲಾದ ಸರ್ವರೂ ಸಿ ಎಲ್ ಎಸ್ ಬುಕ್ ಡಿಪೊ, ಮೈಸೂರಿಗೆ ಬರೆದು ತರಿಸಿಕೊಳ್ಳಬಹುದು

ಎಂ ಸಿ. ಲಿಂಗಪ್ಪಯ್ಯ ಹೆಡ್ ಮಾಸ್ಟರು, ಇಟ್ಟಿಗೇಗೂಡು,

[186–6] ಎ ವಿ. ಸ್ಕೂಲು, ಮೈಸೂರು.

ENGLISH PAPERS FOR L. S. STUDENTS

Contain well-chosen, full answered questions. Monthly Examination Papers. Subscription Rs. 2 in advance Specimen As. 4. Students Spelling Book As 4 Postage Extra

M N SITARAMA RAO,

[211-1] *K. Mohalla, Mysore.*

ಶುದ್ಧವಾದ ಹತ್ತಿಯ ತುಪ್ಪವು.

ಬಹಳ ನಿರ್ಮಲ! ಬಹಳ ಹಸನು!! ವಾಸನೆಯಿಲ್ಲ!!!"

(10) ಕುಂದಲಗುರಿಕಿ ಶ್ರೀನಿವಾಸರಾವ್, ಬೆಂಗಳೂರು—"ಇವರಲ್ಲಿ ಮಾರುತ್ತಿರುವ ಹತ್ತಿಯ ತುಪ್ಪವು ಸ್ವಲ್ಪವೂ ವಾಸನೆ ಇರುವುದಿಲ್ಲ. ಅನೇಕ ಕಡೆ ಮಾರುತ್ತಿರುವವರಲ್ಲೂ ಕಪ್ಪುಬಣ್ಣ ಮತ್ತು ವಾಸನೆ ಇರುತ್ತದೆ. ಇವರ ಎಣ್ಣೆಯು ಬಹಳ ನಿರ್ಮಲ ವಾದದ ಪದಾರ್ಥವೇ ಆಗಲಿ, ಸಿಹಿ ಪದಾರ್ಥವೇ ಆಗಲೀ, ಮಾಡಿದ ದಿನ ಹೇಗಿರುತ್ತೋ ಅದೇ ರೀತಿ 15 ದಿನವಾದಾಗ್ಯೂ ಕೆಡದೆ ಇರುತ್ತೆ ಇತರರ ಅಂಗಡಿಗಳ ಎಣ್ಣೆಯಲ್ಲಿ ಮಾಡಿದ್ದು ಮಾರನೇ ದಿನ ವಿಪರೀತ ವಾಸನೆಯಾಗಿ ತಿನ್ನುವುದಕ್ಕೆ ಅಸಹ್ಯ ತೋರುತ್ತೆ" ಇವರ ಸಾಪಿನಲ್ಲಿ ಸ್ವಲ್ಪ ದಾರಣೆ ಜಾಸ್ತಿಯಾದಾಗ್ಯೂ, ಗುಣ ಜಾಸ್ತಿ. ನಷ್ಟವಿಲ್ಲ ಪದಾರ್ಥ ಬಹಳ ಹಸನು ನೋಡಿದರೆ ಎಲ್ಲರಿಗೂ ನಿಜಕ್ಕೆ ವ್ಯಕ್ತವಾಗುತ್ತೆ "—6-9-13.

ಎಚ್ಚರಿಕೆ —ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ. [110-21]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

150, ಕಿಲಾರಿ ರೋಡ್, (ಕುಂಚಿಗರಪೇಟೆ), ಬೆಂಗಳೂರು ಸಿಟಿ.

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲಿನ್ಸ್ ತಯಾರು ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್‌ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಗಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs. OAKES & Company, Mount Road, Madras.

[4-51] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

The National Insurance & Banking Co., Ltd., Amritsar.

Madras Branch—33 Armenian Street, Madras.

Authorised and Subscribed Capital Rs 10,00,000

Paid up Capital only about Rs. 1,50,000.

POSSESSES GOVERNMENT SECURITY.

The company has deposited Rs. 1,00,000 (one lakh) with the Government of India for the Security of the Policy-holders in compliance with the Government of India Indian Insurance Company's Act of 1912

'The Searchlight', a Monthly Journal of Insurance and Finance, published in London, writes:—"Evidently the company covers a lot of ground And while we consider that so far the company has done quite as well as it could fairly expect, we must add that it is engaged in so admirable a work that it deserves the best wishes of all upholders of life assurance throughout the world. We are sure that it will have these, for there is nothing that knits the fabric of society together more closely than the successful carrying on of life assurance by a sound office."

Statement of Progress:—

Year	Subscribed Capital	Paid up Capital	Working Capital	Government Papers and Debentures	Deposits
1907	2,78,100	17,820	65,966	2,500	28,786
1908	4,64,800	48,605	1,94,406	5,100	1,30,888
1909	5,29,000	62,470	4,15,213	18,100	3,09,726
1910	5,56,300	74,787	6,44,190	23,100	5,36,069
1911	7,42,000	99,482	11,68,022	77,100	8,21,678
1912 Half year	8,79,400	1,16,711	14,74,902	1,12,100	9,71,232
1912 „ 2nd	10,00,000	1,41,594	15,42,419	1,32,600	10,39,916

For further particulars apply to—

[216 1] **T. S. R. Iyer, Secretary (Madras Branch),**

Camp, Amritsar National Insurance Buildings, Mysore.

ಜನನ

ಬ್ರಾಕ್‌ಬ್ಯಾಂಕ್—ಅಕ್ಟೋಬರ್ ತಾ॥ 20 ನೇ ಸೋಮವಾರ ಹಾಸನದಲ್ಲಿ ರೆವ್ ಎ ಮತ್ತು ಮಿಸೆಸ್ ಬ್ರಾಕ್‌ಬ್ಯಾಂಕ್ ದಂಪತಿಗಳಿಗೆ ಹೆಣ್ಣು ಶಿಶು ಜನನವಾಯಿತು

ವೃತ್ತಾಂತ ಪತ್ರಿಕೆ.

ಸನ್ ೧೯೧೩ ನೇ ಇಸವಿ ಅಕ್ಟೋಬರ್, ತಾ ೨೩ ನೇ ಗುರುವಾರ

ಮೈಸೂರು ಪ್ರಜಾಪ್ರತಿನಿಧಿ ಸಭೆಯು

ಈ ವರುಷ ಮೈಸೂರು ಪ್ರಜಾಪ್ರತಿನಿಧಿಸಭೆಯಲ್ಲಿ ನಡೆದ ಚರ್ಚೆಗಳ ಪೈಕಿ ಪ್ರಾಮುಖ್ಯವಾದ ಕೆಲವನ್ನು ಕೂಡಿದ ಮಟ್ಟಿಗೂ ವಿಸ್ತಾರವಾಗಿ ಪ್ರಕಟಿಸಿರುತ್ತೇವೆ ಈ ಚರ್ಚೆಗಳನ್ನು ನೋಡುತ್ತಾ ಬಂದದ್ದರಲ್ಲಿ ದಿವಾನ್ ಮಿ॥ ವಿಶ್ವೇಶ್ವರಯ್ಯನವರು ಪ್ರತಿನಿಧಿಸಭೆಯನ್ನು ಯಥಾರ್ಥವಾಗಿಯೂ ಪ್ರಯೋಜನಕರವಾಗಿಯೂ ಮಾಡಿಟ್ಟುಕೊಳ್ಳಬೇಕೆಂದು ಕುತೂಹಲಪಡುತ್ತಿರುವಂತೆ ಗೊತ್ತಾಗುತ್ತದೆ ಇದರ ದೆಸೆಯಿಂದ ಈ ಸಭೆಯ ಮೆಂಬರುಗಳಲ್ಲಿ ವಿಶೇಷ ಬದಲಾವಣೆಯಾಗಬೇಕಾಗುವದು ಕೆಲವರು ಗೌರವಕ್ಕೋಸ್ಕರ ಮೆಂಬರಾಗಿ ಬರುತ್ತಾರೆ, ಇವರಿಗೆ ತಮ್ಮ ಕರ್ತವ್ಯಾಂಶವೇನೆಂಬುವದು ತಿಳಿಯದು. ತಮ್ಮ ಕರ್ತವ್ಯವನ್ನೂ ಜವಾಬ್ದಾರಿಯನ್ನೂ ತಕ್ಕ ಮಟ್ಟಿಗೆ ಬಲ್ಲಂಥಾ ಮೆಂಬರುಗಳು ಬಹಳ ಸ್ವಲ್ಪವಾಗಿದ್ದಾರೆ ಈ ಸಭೆಯನ್ನು ಬರೀ ಅರ್ಜಿದಾರರ ಕೂಟವಾಗಿ ಇಟ್ಟಿರುವ ಭಾಗದಲ್ಲಿ ನಮ್ಮ ದಿವಾನ್‌ರವರಿಗೆ ಇಷ್ಟವಿಲ್ಲ ಗವರ್ನಮೆಂಟಿನವರು ಮಾಡಿರುವ ಕಾನೂನಿನ ವಿಷಯದಲ್ಲಾಗಲಿ, ಅವರ ನಡವಳಿಕೆಯ ವಿಷಯದಲ್ಲಾಗಲಿ ಬದಲಾವಣೆಯಾಗಬೇಕೆಂದು ಅಪೇಕ್ಷಿಸತಕ್ಕವರು ಅದಕ್ಕೆ ಸಮಂಜಸವಾದ ಕಾರಣಗಳನ್ನು ಹೇಳಬೇಕಲ್ಲದೆ ಅಂಥಾ ಬದಲಾವಣೆಯ ರೀತಿಯನ್ನು ತೋರಿಸಿಕೊಡಬೇಕು

ಸಾಮಾನ್ಯವಾಗಿ ಖರ್ಚುಬಾಬನ್ನು ಹೆಚ್ಚಿಸದೆ ಯಾವ ಬದಲಾವಣೆಯನ್ನೂ ಮಾಡಲಾಗುವುದಿಲ್ಲ ಬದಲಾವಣೆ ಮಾಡಿಕೊಡಬೇಕೆಂದು ಕೇಳುವವರು ಅದಕ್ಕೆ ತಗಲುವ ಖರ್ಚು ಎಷ್ಟಾದೀತೆಂದೂ, ಆ ಹೆಚ್ಚು ಹಣವನ್ನು ಯಾವ ಬಾಬಿನಿಂದ ಕೊಡಬೇಕೆಂದೂ ತೋರಿಸಿಕೊಡುವಷ್ಟು ಶಕ್ತರಾಗಿರಬೇಕು ಅವರು ಹಣವಿಚಾರವನ್ನೂ ಕಾರ್ಯರೀತಿಯನ್ನೂ ನಿದಾನವಾಗಿ ಆಲೋಚನೆ ಮಾಡಿದ ಪಕ್ಷದಲ್ಲಿ ಬಹುಶಾ ಅಂಥಾ ಪ್ರಶ್ನೆಗಳನ್ನು ಕೇಳದೆ ಇರುತ್ತಾರೆ ಮಗುವು—ಅಪ್ಪಾ, ಚಂದ್ರನನ್ನು ಹಿಡಿದು ಕೊಡು ಎಂದು ಕೇಳುವುದು ಎಷ್ಟು ಸುಲಭ? ಹಾಗೆ ತಂದು ಕೊಡುವುದು ಸಾಧ್ಯವೇ? ನಮ್ಮ ಸಂಸ್ಥಾನದ ಆಳ್ವಿಕೆಯ ಕ್ರಮಗಳು ಚೆನ್ನಾಗುವವೆಂಬ ಒಳ್ಳೇ ಉದ್ದೇಶದಿಂದಲೇ ಮೆಂಬರುಗಳು ಅನೇಕ ವಿಷಯಗಳನ್ನು ಸೂಚಿಸಿ ಕೇಳುವುದೇನೋ ಬಹಳ ಸುಲಭ, ಆದರೆ ಅವರು ಕೇಳುವ ಬದಲಾವಣೆಗಳನ್ನು ಹ್ಯಾಗೆ ರೂಢಿಸಬಹುದೋ ಅದನ್ನು ಮಾತ್ರ ಅವರು ಯೋಚಿಸುವುದಿಲ್ಲ ಈ ಪ್ರಜಾಪ್ರತಿನಿಧಿ ಸಭೆಯಿಂದ ನಮ್ಮ ಸಂಸ್ಥಾನಕ್ಕೆ ಯಥಾರ್ಥವಾದ ಪ್ರಯೋಜನವುಂಟಾಗಬೇಕಾದ ಪಕ್ಷದಲ್ಲಿ ಅದು ಬರೀ ಅರ್ಜಿದಾರರ ಕೂಟವಾಗಿದ್ದರೆ ಫಲವಾಗಲಾರದು, ಅದರ ಮೆಂಬರುಗಳು ತಾವು ಹೇಳುವ ವಿಷಯಗಳ ಪಕ್ಷಪರಪಕ್ಷಗಳನ್ನು ಚೆನ್ನಾಗಿ ಯೋಚಿಸತಕ್ಕವರಾಗಿಯೂ, ಕಾರ್ಯಕ್ರಮವನ್ನು ಸೂಚಿಸಲು ಯೋಗ್ಯರಾಗಿಯೂ, ಸಮರ್ಥರಾಗಿಯೂ ಇದ್ದರೇನೇ ಪ್ರಯೋಜನವಾದೀತು.

ಕೆಲವು ಪ್ರತಿನಿಧಿಗಳಿಗೆ ಕಷ್ಟಸಾಧ್ಯವಾದ ವಿಷಯಗಳನ್ನು ವಿಮರ್ಶೆಮಾಡಿ ತಿಳಿದುಕೊಳ್ಳುವುದಕ್ಕೆ ಸಮಯವಾಗಲಿ ಸಂದರ್ಭವಾಗಲಿ ಯೋಗ್ಯತೆಯಾಗಲಿ ಇರುವುದಿಲ್ಲ. ಇಂಥವರು ತಮ್ಮ ತಮ್ಮ ಗ್ರಾಮ ಊರುಗಳಲ್ಲೇ ಇದ್ದರೆ ಸುಖ, ಇಲ್ಲವೇ ಬಂದು ಸಭೆಯಲ್ಲಿ ಕುಳಿತುಕೊಂಡು ಅಲ್ಲಿ ನಡೆಯುವ ವಿಚಾರಗತಿಗಳನ್ನು ನೋಡುತ್ತಾ ಬರಲಿ ದಿವಾನ್‌ರವರು ಇಷ್ಟೊಂದು ಮೆಂಬರುಗಳನ್ನು ಇಟ್ಟುಕೊಂಡು ಸರಿಯಾಗಿಯೂ ಸಾರ್ಥಕವಾಗಿಯೂ ವಿಷಯಗಳನ್ನು ಹಿಡಿದು ಚರ್ಚೆಮಾಡುವುದು ಸಾಧ್ಯವಲ್ಲವೆಂದು ಹೇಳಿರುವ ಮಾತನ್ನು ಯಥಾರ್ಥವೆಂದು ನಾವು ಒಪ್ಪಿಕೊಳ್ಳುತ್ತೇವೆ ಚರ್ಚೆಗೆ ಬರುವ ವಿಷಯಗಳು ಅಪಾರವಾಗಿರುತ್ತವೆ, ಅಷ್ಟನ್ನೂ ತೃಪ್ತಿಕರವಾಗಿ ಚರ್ಚಿಸಿ ವ್ಯವಸ್ಥೆಮಾಡುವುದಕ್ಕೆ ಒಂದು ವಾರ ಎಷ್ಟು ಮಾತ್ರಕ್ಕೂ ಸಾಕಾಗುವುದಿಲ್ಲ ಅನೇಕ ವಿಷಯಗಳನ್ನು ಸುಮ್ಮನೆ ಸೂಚಿಸುವುದಕ್ಕಿಂತಲೂ ಪ್ರಾಮುಖ್ಯವಾದ ಕೆಲವು ವಿಚಾರಗಳನ್ನು ಹಿಡಿದು ಸಮರ್ಪಕವಾಗಿ ಚರ್ಚೆ ಮಾಡುವುದೇ ಉತ್ತಮವೆಂದು ಕಾಣುತ್ತದೆ

ದಿವಾನ್‌ರವರು ಈ ವರುಷದ ಸಭೆಯಲ್ಲಿ ಕೆಲವು ವಿಷಯಗಳನ್ನು ಮೆಂಬರುಗಳ ಕೂಡ ಚರ್ಚೆ ಮಾಡಿದ ಮೇಲೆ ಒಪ್ಪುವವರು ಎಷ್ಟು ಮಂದಿ, ಒಪ್ಪದಿರುವವರು ಎಷ್ಟು ಮಂದಿ ಎಂಬದನ್ನು ಕೇಳಿ ತಿಳಿದುಕೊಂಡಿರುತ್ತಾರೆ. ಮತ್ತು ಗವರ್ನಮೆಂಟಿನವರಿಗೆ ಅವಶ್ಯವೆಂದು ತೋರಿದ ಸಂದರ್ಭಗಳಲ್ಲಿ ಇನ್ನು ಮುಂದೆಯೂ ಹೀಗೆ ಮೆಂಬರುಗಳ ಸಮ್ಮತಿಯನ್ನು ಕೇಳಿ ತಿಳಿದುಕೊಳ್ಳುವರೆಂದು ದಿವಾನ್‌ರವರು ಸೂಚನೆ ಕೊಟ್ಟಿದ್ದಾರೆ ಇದನ್ನು ನೋಡಿ ನಾವು ತುಂಬಾ ಸಂತೋಷಪಡುತ್ತೇವೆ. ಆದರೆ ಸದ್ಯದಲ್ಲಿ ಇದು ಸರಿಯಾದ ಪ್ರತಿನಿಧಿಸಭೆಯೇ? ಸಂಸ್ಥಾನದ ಸಮಸ್ತ ಪಂಗಡಗಳ ಪ್ರತಿನಿಧಿಗಳೂ ಈ ಸಭೆಯಲ್ಲಿರುತ್ತಾರೆಯೇ? ಎಂಬೀ ಸಂಶಯವು ನಮ್ಮನ್ನು ಬಾಧಿಸುತ್ತಿರುವುದು ಈ ಪ್ರತಿನಿಧಿಗಳ ಅಭಿಪ್ರಾಯವು ಪ್ರಜಾ ಸಾಮಾನ್ಯದ ಸಹಜವಾದ ಅಭಿಮತವನ್ನು ಪ್ರತಿಬಿಂಬಿಸುತ್ತದೆಂದು ಊಹಿಸುವುದು ಸ್ವಲ್ಪ ಕಷ್ಟ. ನಮ್ಮ ಸಂಸ್ಥಾನದಲ್ಲಿ ವಿದ್ಯಾವಂತರೂ ನವನಾಗರಿಕರೂ ಬಹು ಮಂದಿ ಇರುವುದೇನೋ ನಿಜ, ಆದರೆ ಇನ್ನೂ ಲಕ್ಷಾಂತರ ಪ್ರಜೆಗಳು ವಿದ್ಯೆಯ ಗಂಧವೇ ಕಾಣದೆ ಬುದ್ಧಿಶೂನ್ಯರಾಗಿರುವರು. ಪ್ರಜಾಪಾಲಕರು ಪ್ರಜೆಗಳಿಗಿಂತ ಎಲ್ಲಾ ವಿಷಯಗಳಲ್ಲೂ ವಿಶೇಷಜ್ಞರಾಗಿರಬೇಕಾದದ್ದು ಅವಶ್ಯ, ಇಲ್ಲವಾದರೆ ದೇಶೋನ್ನತಿಯು ಎಷ್ಟು ಮಾತ್ರಕ್ಕೂ ಸಾಧ್ಯವಲ್ಲ ನಮ್ಮ ಪ್ರತಿನಿಧಿ ಸಭೆಯು ಈಗಿನ ಸ್ಥಿತಿಯಲ್ಲೇ ಇದ್ದು ಅದರ ಇಷ್ಟಾನಿಷ್ಟದ ಪ್ರಕಾರ ಗವರ್ನಮೆಂಟಿನ ಕಾರ್ಯಕ್ರಮಗಳು ಜರುಗುವುದಾದರೆ ನಮ್ಮ ಸಂಸ್ಥಾನವು ಅಭಿವೃದ್ಧಿ ಹೊಂದುವುದು ಬಹಳ ಕಷ್ಟವಾದೀತು. ಪ್ರತಿನಿಧಿಸಭೆಯು ಅಭಿಮತವೇ ಕಾರ್ಯಕಾರಿಯಾಗಿಯಾಗಬೇಕೆಂಬ ಪಕ್ಷದಲ್ಲಿ ಈ ಸಭೆಯು ಬಹಳ ಮಟ್ಟಿಗೆ ರೂಪಾಂತರ ಹೊಂದಬೇಕು ಸಂಸ್ಥಾನದಲ್ಲಿ ಬಹಳ ಹಿಂದೆ ಬಿದ್ದಿರುವ ಪ್ರಜೆಗಳ ಮತ್ತೂ ಪೂರ್ವಾಚಾರಗಳಲ್ಲೇ ತೃಪ್ತಿಪಡುತ್ತಿರುವ ಪ್ರಜೆಗಳ ಪ್ರತಿನಿಧಿಗಳು ಕೆಲವರಾದರೂ ಈ ಸಭೆಯಲ್ಲಿರಬೇಕಾಗುತ್ತದೆ ಇಂಥವರ ಸಂಖ್ಯೆಯೇ ಸಭೆಯಲ್ಲಿ ವಿಶೇಷವಾಗಿದ್ದರೆ ಅವರು ಗವರ್ನಮೆಂಟಿನವರಿಗೆ ಪ್ರತಿಬಂಧಕವಾಗಿ ಪರಿಣಮಿಸುತ್ತಾರೆ

ದಿವಾನ್‌ರವರು ಈ ವರುಷ ಪ್ರಜಾಪ್ರತಿನಿಧಿ ಸಭೆಯನ್ನು ನಡೆಸಿದ ಕ್ರಮವನ್ನೂ ರೀತಿಯನ್ನೂ ನೋಡಿ ನಾವು ತುಂಬಾ ಸಂತೋಷ ಪಡುವದು ಮತ್ತು ಈ ಸಭೆಯು ಕಾಲಕ್ರಮದಲ್ಲಿ ವಿಶೇಷ ಅಭಿವೃದ್ಧಿಯನ್ನು ಹೊಂದಿ, ಎಲ್ಲಾ ಭಾಗಗಳಲ್ಲೂ ನಮ್ಮ ಸಂಸ್ಥಾನವನ್ನು ಮುಂದಕ್ಕೆ ತರುವಂಥಾ ಮಾರ್ಗಗಳನ್ನು ಸರ್ಕಾರದವರಿಗೆ ತೋರಿಸುತ್ತಾ ಬರುವುದಾಗಲೆಂದು ಹಾರೈಸುತ್ತೇವೆ

ಮೈಸೂರು ಸೀಮೆಯಲ್ಲಿರುವ ವೆಸ್ಲಿಯನ್ ಮಿಷನ್

ವೆಸ್ಲಿಯನ್ ಮಿಷನ್ ವಿಷಯ ಮೈಸೂರು ಸೀಮೆಯಲ್ಲಿ ಅನೇಕರಿಗೆ ತಿಳಿದದೆ ಏಕೆಂದರೆ ಸುಮಾರು ಎಂಭತ್ತು ವರುಷ ಅದಕ್ಕಿಂತಲೂ ಹೆಚ್ಚು ವರುಷಗಳಿಂದಲೂ ಮಿಷನರಿಗಳು ಈ ಸೀಮೆಯಲ್ಲಿ ಕೆಲಸವನ್ನು ನಡಿಸುತ್ತಲೇ ಬಂದಿರುತ್ತಾರೆ ಲಕ್ಷೋಪಲಕ್ಷ ಬಾಲಕರೂ ಬಾಲಕಿಯರೂ ಮಿಷನ್ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸಮಾಡಿರುತ್ತಾರೆ ಮಿಷನ್ ಕಾರ್ಖಾನೆಗಳಲ್ಲಿ ನೂರಾರು ಮಂದಿ ಕೆಲಸಗಳನ್ನು ಕಲಿತುಕೊಂಡಿರುತ್ತಾರೆ ಮತ್ತು ಸಾವಿರಾರು ಮಂದಿ ಮಿಷನ್ ಆಸ್ಪತ್ರೆಗಳಲ್ಲಿ ಔಷದವನ್ನೂ ಚಿಕಿತ್ಸೆಯನ್ನೂ ಹೊಂದಿಕೊಂಡಿರುತ್ತಾರೆ ಈ ಎಲ್ಲಾ ಧರ್ಮಕಾರ್ಯಗಳ ಉದ್ದೇಶವು ದೇವರ ಒಳ್ಳೆಯತನವನ್ನು ಪ್ರಕಟಪಡಿಸಬೇಕೆಂಬುದೇ ಆಗಿರುತ್ತದೆ ಮಿಷನರಿಗಳು ಈ ದೇಶಕ್ಕೆ ಬಂದಿರುವುದಕ್ಕೆ ಕಾರಣವೇನೆಂದರೆ—ಅವರು ಯೇಸು ಕ್ರಿಸ್ತನ ಮುಖೇನ ಪ್ರಕಟಿಸಲ್ಪಟ್ಟಿರುವ ದೇವರ ಪ್ರೇಮಾತಿಶಯವನ್ನು ಅನುಭವಪೂರ್ವಕವಾಗಿ ಮುಂದಟ್ಟು ಮಾಡಿಕೊಂಡಿರುವುದರಿಂದ ಮೈಸೂರು ಸೀಮೆಯವರಿಗೂ ಇದೇ ಆಶೀರ್ವಾದವು ಆಗತ್ಯವಾಗಿದೆ ಎಂಬುದನ್ನು ತಮ್ಮ ಅನುಭವದಿಂದ ಅರಿದುಕೊಂಡಿರುತ್ತಾರೆ

ಲಂಡನ್ ಮಿಷನ್ ಮುಂತಾದ ಇತರ ಮಿಷನ್‌ಗಳ ಜೊತೆಯಲ್ಲಿ ಮೈಸೂರು ಸೀಮೆಯಲ್ಲಿ ಕೆಲಸವನ್ನು ನಡಿಸುತ್ತಾ ಬಂದಿರುವ ವೆಸ್ಲಿಯನ್ ಮಿಷನ್ ಎಲ್ಲಾ ವರ್ಣಾಶ್ರಮಗಳವರಿಗೂ ಮೇಲನ್ನು ಮಾಡುವುದಕ್ಕೆ ಪ್ರಯತ್ನಪಟ್ಟಿರುತ್ತದೆ ಈ ದೇಶೀಯರಿಗೆ ಇಂಗ್ಲಿಷ್ ವಿದ್ಯಾಭ್ಯಾಸಮಾಡಿಸುವುದಕ್ಕೆ ಪ್ರಾರಂಭಮಾಡಿದವರಲ್ಲಿ ಅವರೇ ಮೊದಲನೆಯವರು ಅನೇಕ ತಲೆಗಳಿಂದ ಉತ್ತಮ ಜಾತಿಗಳ ವಿದ್ಯಾರ್ಥಿಗಳು ಮಿಷನ್ ಹೈ ಸ್ಕೂಲುಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಕಲಿತುಕೊಂಡಿರುತ್ತಾರೆ ಅವರು ಈ ಸೀಮೆಯಲ್ಲಿ ವಿದ್ಯವನ್ನು ಹದುವಾಗಿ ಹರಡುವ ಕಾರ್ಯದಲ್ಲಿ ಮುಂದಾಳುಗಳಾಗಿಯೂ ಇದ್ದರು ಅವರ ಬಾಲಿಕಾ ಪಾಠಶಾಲೆಗಳಲ್ಲಿ ಸಾವಿರಾರು ಮಂದಿ ವಿದ್ಯಾರ್ಜನೆಮಾಡಿಕೊಂಡಿರುತ್ತಾರೆ ಅವರು ಕೀಳು ಜಾತಿಯವರನ್ನು ತಿರಸ್ಕಾರಮಾಡಿ ಬಿಡದೆ ಅವರಿಗೋಸ್ಕರವಾಗಿ ಪಾಠಶಾಲೆಗಳನ್ನು ಏರ್ಪಡಿಸಿರುತ್ತಾರೆ ಅವರಲ್ಲಿ ನೂರಾರು ಮಂದಿ ಓದುವುದಕ್ಕೂ ಬರೆಯುವುದಕ್ಕೂ ಕಲಿತುಕೊಂಡಿರುತ್ತಾರೆ. ಇಷ್ಟೇ ಅಲ್ಲ. ಅವರು ತಮ್ಮನ್ನು ಪ್ರೀತಿಸಿ ತಮ್ಮ ಪಾಪಗಳಿಂದ ತಮ್ಮನ್ನು ಬಿಡಿಸುವುದಕ್ಕೆ ಪೂರ್ಣ ಅಪೇಕ್ಷೆಯುಳ್ಳವನಾಗಿರುವ ದೇವರ ವಿಷಯವಾಗಿಯೂ ಸ್ವಲ್ಪಮಟ್ಟಿಗೆ ತಿಳಿದುಕೊಂಡಿರುತ್ತಾರೆ ಈ ಮಿಷನ್ ಎಲ್ಲಾ ಸ್ಥಿತಿಗತಿವಿದ್ಯಮಾನಗಳ ಗಂಡಸರಿಗೂ ಹೆಂಗಸರಿಗೂ ಮಕ್ಕಳಿಗೂ ಸಹಾಯಮಾಡುವುದಕ್ಕೆ ಪ್ರಯತ್ನಪಟ್ಟಿರುತ್ತದೆ

ಇಂಗ್ಲಾಂಡಿನಿಂದ ಬೇರೆ ಬೇರೆ ಕಡೆಗಳಿಗೆ ಮಿಷನರಿಗಳನ್ನು ಕಳುಹಿಸಿಕೊಡುವಂಥ ಸಮಾಜವು ಸ್ಥಾಪನೆಯಾದ ನೂರನೆಯ ವಾರ್ಷಿಕೋತ್ಸವವನ್ನು ಈ ಮಿಷನ್‌ನವರು ಈಗತಾನೇ ಆಚರಿಸಿರುತ್ತಾರೆ ಇದೇ ಅಕ್ಟೋಬರ್ 5 ಮತ್ತು 6 ನೆಯ ತಾರೀಖು ಭಾನುವಾರವೂ ಸೋಮವಾರವೂ ಈ ಸೀಮೆಯಲ್ಲಿರುವ ಎಲ್ಲಾ ಮಿಷನ್ ದೇವಾಲಯಗಳಲ್ಲಿ ದೇವತಾರಾಧನೆಗಳು ನಡಿಸಲ್ಪಟ್ಟವು ಆದರೆ ಈ ಶತಮಾನ ಮಹೋತ್ಸವವನ್ನು ಸಾಧ್ಯವಾದ ಮಟ್ಟಿಗೆ ಎಲ್ಲರೂ ಏಕೀಭವಿಸಿ ಆಚರಿಸಬೇಕೆಂಬ ಉದ್ದೇಶದಿಂದ ಇದೇ ಅಕ್ಟೋಬರ್ 11 ರಿಂದ 13 ರ ವರೆಗೆ ಬೆಂಗಳೂರಿನಲ್ಲಿ ಒಂದು ಮಹಾ ಸಮ್ಮೇಳನವು ನೆರೆದು ಬಂದಿತು. ಜನಗಳು ಉತ್ತರ ದಿಕ್ಕಿನಲ್ಲಿರುವ ಹರಿಹರ ಮತ್ತು ಚಿತ್ರದುರ್ಗದಿಂದಲೂ ದಕ್ಷಿಣದಲ್ಲಿರುವ ಚಾಮರಾಜನಗರದಿಂದಲೂ ಪೂರ್ವ ದಿಕ್ಕಿನಲ್ಲಿರುವ ಕೋಲಾರದ ಚಿನ್ನದ ಗಣಿಗಳಿಂದಲೂ ಪಶ್ಚಿಮ ದಿಕ್ಕಿನಲ್ಲಿರುವ ತೀರ್ಥಹಳ್ಳಿಯಿಂದಲೂ ಬಂದಿದ್ದರು ಸುಮಾರು ಎರಡು ಸಾವಿರ ಜನಗಳು ಸೇರಿದ್ದರು, ಇವರುಗಾಗಿ ಪ್ರತಿ ದಿನದಲ್ಲಿಯೂ ನಾಲ್ಕು ಸಾರಿ ಕೂಟಗಳು ನಡಿಸಲ್ಪಡುತ್ತಿದ್ದುವು ಜನಗಳಿಗೆ ನೀತಿಯ ವಿಷಯವಾಗಿಯೂ ಭಕ್ತಿಯ ವಿಷಯವಾಗಿಯೂ ತಿಳುವಳಿಕೆಯನ್ನು ಕೊಟ್ಟು, ಸತ್ಕಾರ್ಯಗಳಲ್ಲಿ ಒಬ್ಬರನ್ನೊಬ್ಬರು ಪ್ರೋತ್ಸಾಹಪಡಿಸಬೇಕೆಂಬುದೇ ಈ ಕೂಟಗಳ ಮುಖ್ಯೋದ್ದೇಶವಾಗಿದ್ದಿತು

ಸೋಮವಾರ ಮಧ್ಯಾಹ್ನದ ಮೇಲೆ ಸುಮಾರು ಎರಡು ಸಾವಿರ ಜನರು ಬೆಂಗಳೂರು ಪೇಟೆಯ ರಾಜಬೀದಿಗಳಲ್ಲಿ ಮೆರವಣಿಗೆ ಹೊರಟ ಈ ಒಂದು ಕಾರ್ಯವು ಮಾತ್ರ ತಮಾಷೆಯೆಂದು ಹೇಳಬಹುದು ಪ್ರತಿಯೊಂದು ಸಭೆಯವರೂ ಪಾಠಶಾಲೆಯವರೂ ತಮ್ಮ ತಮ್ಮ ಧ್ವಜಪಟವನ್ನು ಹಿಡಿದುಕೊಂಡು, ದೇವರು ಈ ಮಿಷನ್ ಮೂಲಕವಾಗಿ ತಮಗಳಿಗೆ ಅನುಗ್ರಹಿಸಿದ ಎಲ್ಲಾ ವರಪ್ರಸಾದಗಳಿಗಾಗಿ ಉತ್ಸಾಹಪೂರ್ವಕವಾಗಿ ಆತನನ್ನು ಸ್ತೋತ್ರಮಾಡುತ್ತಾ ಸಂಗೀತಗಳನ್ನೂ ಕೀರ್ತನೆಗಳನ್ನೂ ಹಾಡುತ್ತಾ ಮೆರವಣಿಗೆಯಲ್ಲಿ ನಡೆದರು ಹೀಗೆ ಅವರು ಮೆರವಣಿಗೆಯನ್ನು ಪೂರೈಸಿ ಹರ್ಸ್ಟ್ ಮೆಮೋರಿಯಲ್ ದೇವಾಲಯದ ಕಂಪೌಂಡಿಗೆ ಬಂದು ದೇವರಿಗೆ ಒಂದು ಸ್ತುತಿಪದವನ್ನು ಹಾಡಿ, ಕಡೆಯಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರಾದ ಐದನೆಯ ಜಾರ್ಜ್ ದೊರೆಗಳಿಗೂ ಮೈಸೂರು ಶ್ರೀಮನ್ ಮಹಾರಾಜರವರಿಗೂ ಶ್ರೀಯಸ್ಸನ್ನು ಬಯಸಿ, ಮೂರು ಮೂರು ಸಾರಿ ಹಿಪ್ ಹಿಪ್ ಹುರ್ರೇ ಎಂಬ ಕೋಲಾಹಲ ಧ್ವನಿಯನ್ನು ಮಾಡಿದರು ಮೊದಲನೆಯ ಕೂಟದಲ್ಲಿ ಕ್ರೈಸ್ತ ಸಮಾಜದವರ ರಾಜಭಕ್ತಿಯನ್ನು ಪ್ರಕಾಶಪಡಿಸುವುದಕ್ಕಾಗಿ ನಮ್ಮ ಮೈಸೂರು ಶ್ರೀಮನ್ ಮಹಾರಾಜರವರಿಗೆ ಒಂದು ತಂತೀ ವರ್ತಮಾನವನ್ನು ಕಳುಹಿಸಿಕೊಡಲಾಯಿತು.

ದೂರದ ಸ್ಥಳಗಳಲ್ಲಿ ಸತ್ಸಂಪನ್ನರಾಗಿಯೂ ದೇವಭಕ್ತರಾಗಿಯೂ ಜೀವಿಸುವುದಕ್ಕೆ ಸಹಾಯಹೀನರಾಗಿದ್ದ ಅನೇಕಾನೇಕ ಕ್ರೈಸ್ತರಿಗೆ ಬೆಂಗಳೂರಿನಲ್ಲಿ ನೆರೆದುಬಂದಿದ್ದ ಈ ಮಹಾ ಸಮ್ಮೇಳನದಿಂದ ಉತ್ತೇಜನವೂ ಸಹಾಯವೂ ಆಶೀರ್ವಾದವೂ ಲಭಿಸಿರುವವು ಈ ಸಮ್ಮೇಳನದಲ್ಲಿ ನಡೆದ ಕಾರ್ಯವು ಮೈಸೂರು ಸೀಮೆಯಲ್ಲಿ ದೇವರ ರಾಜ್ಯವು ಬರುವುದಕ್ಕೆ ತುಂಬಾ ಸಹಕಾರಿಯಾಗಿರುವುದೆಂದು ನಂಬಿದ್ದೇವೆ

ಪ್ರಜಾಪ್ರತಿನಿಧಿ ಸಭೆಯಲ್ಲಿ ನಡೆದ ಚುನಾವಣೆಗಳು

ಈ ಸಲ ದಿವಾನ್‌ರವರ ಉಪನ್ಯಾಸದಲ್ಲಿ ಕಂಡ ಪ್ರಕಾರ ಪ್ರಜಾಪ್ರತಿನಿಧಿ ಸಭೆಯಿಂದ ನ್ಯಾಯವಿಧಾಯಕ ಸಭೆಗೆ ಇಬ್ಬರ ಬದಲಾಗಿ 4 ಜನ ಮೆಂಬರುಗಳ ಚುನಾವಣೆಯು ಸರ್ಕಾರದವರ ಹೊಸ ಇಸ್ತಹಾರಿನ ಪ್ರಕಾರ ಕಳೆದ 16ನೇ ತಾ ಗುರುವಾರ ಪ್ರತಿನಿಧಿ ಸಭೆಯಲ್ಲಿ ಜರುಗಿತು 13 ಜನ ಮೆಂಬರುಗಳು ಚುನಾವಣೆಗೆ ನಿಲ್ಲುತ್ತೇವೆಂದು ಅರ್ಜಿ ಕೊಟ್ಟಿದ್ದರು ಮರುದಿನ ಸಾಯಂಕಾಲ ಪ್ರತಿನಿಧಿ ಸಭೆಯಲ್ಲಿ ಈ ಚುನಾವಣೆಯ ಫಲಿತಾಂಶವನ್ನು ಚೀಫ್ ಸೆಕ್ರೆಟರಿ ಮ॥ ಕೆ ಆರ್ ಶ್ರೀನಿವಾಸಯ್ಯಂಗಾರ‍್ರು ದಿವಾನ್‌ರವರ ಅಪ್ಪಣೆ ಪಡೆದು ಓದಿ ಹೇಳಿದರು. ಅದರಂತೆ ಚುನಾಯಿತರಾಗಿರತಕ್ಕವರು ಯಾರೆಂದರೆ—ಮೈಸೂರು ಮರಿಮಲ್ಲಪ್ಪನವರ ಹೈ ಸ್ಕೂಲ್ ಹೆಡ್ ಮಾಸ್ಟರು ಮ॥ ಎಂ ವೆಂಕಟಕೃಷ್ಣಯ್ಯನವರು, ಬೆಂಗಳೂರಿನಲ್ಲಿರುವ ಮಾಗಡಿ ಜಹಗೀರ್‌ದಾರ್ ಮ॥ ಕರಣಿಕ ಕೃಷ್ಣಮೂರ್ತಿರಾಯರು, ಶ್ರೀರಂಗಪಟ್ಟಣದ ಪ್ಲೀಡರ್ ಮ॥ ಬಿ ನರಸಿಂಗರಾಯರು ಶಿವಮೊಗ್ಗೆಯಲ್ಲಿರುವ ಅಡ್ವೊಕೇಟ್ ಮ॥ ಎಸ್ ಆರ್ ಬಾಲಕೃಷ್ಣರಾಯರು

ದಿವಾನ್‌ರವರ ಉಪನ್ಯಾಸದಲ್ಲಿ ಪ್ರತಿನಿಧಿಸಭೆಯಿಂದ 8 ಮಂದಿ ಮೆಂಬರುಗಳನ್ನು ಮೈಸೂರು ಸಂಪದಭ್ಯುದಯ ಸಮಾಜಕ್ಕೆ ಮೆಂಬರಾಗಿ ಚುನಾಯಿಸಬೇಕೆಂದು ಅಪ್ಪಣೆಕೊಡಿಸಿದ ಪ್ರಕಾರ 27 ಮಂದಿ ಮೆಂಬರುಗಳು ಚುನಾವಣೆಗೆ ಅರ್ಜಿಹಾಕಿ ನಿಂತುಕೊಂಡರು ಚುನಾವಣೆಯು ತಾ 16 ನೇ ಗುರುವಾರ ನಡೆದು ಅದರ ಫಲಿತಾಂಶವನ್ನೂ ಮರುದಿನ ಸೆಕ್ರೆಟರಿಯವರು ಸಭೆಯಲ್ಲಿ ಓದಿ ಹೇಳಿದರು ಚುನಾಯಿಸಲ್ಪಟ್ಟವರು ಯಾರೆಂದರೆ—ಮ॥ಗಳಾದ ಕರಣಿಕ ಕೃಷ್ಣಮೂರ್ತಿರಾಯರು, ಕಡಬದ ರಾಮಾನುಜಯ್ಯಂಗಾರ‍್ರು, ಅತ್ತಿಕುಪ್ಪ ಎಚ್ ಕೃಷ್ಣಶಾಸ್ತ್ರಿಗಳು, ತಿಪಟೂರು ಸಿಂಗ್ರಿ ನಂಜಪ್ಪನವರು, ಕಡೂರು ಡಿಸ್ಟ್ರಿಕ್ಟ್ ಬೋರ್ಡ್ ಎಚ್ ಕೃಷ್ಣರಾಯರು, ಲಿಂಗಾಯತ ಫಂಡ್ ಸಂಘದ ಎಚ್ ಕೆ ವೀರಬಸವಯ್ಯನವರು, ಮಂಜರಾಬಾದು ಮಳಲಿ ವೆಂಕಟರಾಮಯ್ಯನವರು, ದೇವನಹಳ್ಳಿ ಡಿ ಎಸ್ ಹನುಮಂತರಾಯರು

ದುಃಖಕರವಾದ ಸಮಾಚಾರಗಳು

(1) ಭಯಂಕರವಾದ ಜಹಜಿನ ಅನಾಹುತ

ಇದೇ ತಿಂಗಳು 2 ನೇ ತಾರೀಖಿನ ದಿನ ಹಾಲೆಂಡ್ ದೇಶದ ಆಮ್‌ಸ್ಟರ್‌ಡಾಮ್ ಪಟ್ಟಣದಿಂದ ಒಂದು ಜಹಜು ನ್ಯೂಯಾರ್ಕ್ ನಗರವನ್ನು ಕುರಿತು ಪ್ರಯಾಣಮಾಡಿತು ಅದರಲ್ಲಿ ಸುಮಾರು 757 ಜನ ಪ್ರಯಾಣಿಕರಿದ್ದರು 9 ನೇ ತಾರೀಖಿನ ದಿನ ಆ ಜಹಜು ಅಟ್ಲಾಂಟಿಕ್ ಸಾಗರದ ಮಧ್ಯದಲ್ಲಿ ಹೋಗುತ್ತಿದ್ದಾಗ ಬೆಳಿಗ್ಗೆ ಸುಮಾರು 7 ಗಂಟೆ ಸಮಯದಲ್ಲಿ ಯಾವ ಕಾರಣದಿಂದಲೋ ಜಹಜು ಹತ್ತಿಕೊಂಡಿತು ಸ್ವಲ್ಪ ಹೊತ್ತಿನಲ್ಲಿಯೇ ಉರಿಯು ಹಡಗಿನ ಎಲ್ಲಾ ಭಾಗಗಳನ್ನು ಆವರಿಸಿ ಪ್ರಯಾಣಿಕರಿಗೆ ಅತ್ಯಂತ ಗಾಬರಿಯನ್ನುಂಟುಮಾಡಿತು ಬಲವಾದ ಗಾಳಿ ಬೀಸುತ್ತಿದ್ದದ್ದರಿಂದ ಸಮುದ್ರದಲ್ಲಿ ಅಲೆಗಳು ವಿಪರೀತವಾಗಿ ಎದ್ದು, ಜಹಜು ನಿಂತಲ್ಲಿ ನಿಲ್ಲದೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ತೂಗಾಡಲಾರಂಭಿಸಿತು ಅಷ್ಟರಲ್ಲಿ ಜಹಜಿನ ಮೇಲ್ಭಾಗದಲ್ಲಿದ್ದ ಎರಡು ದೋಣಿಗಳನ್ನು ಇಳಿಸಿ ಅದರಲ್ಲಿ ಹೆಂಗಸರನ್ನೂ ಮಕ್ಕಳನ್ನೂ ಸಾಗಿಸಲು ಪ್ರಯತ್ನಪಟ್ಟರು ಈ ದೋಣಿಗಳಲ್ಲಿ ಜನರು ತುಂಬುವ ಹೊತ್ತಿಗೆ ಸರಿಯಾಗಿ ದೊಡ್ಡ ಅಲೆಗಳು ಬಂದು ಎರಡು ದೋಣಿಗಳನ್ನೂ ರಭಸವಾಗಿ ಕೊಚ್ಚಿ ಜಹಜಿಗೆ ಬಡಿದದ್ದರಿಂದ ದೋಣಿಗಳು ಚೂರಾಗಿ ಅವುಗಳಲ್ಲಿದ್ದ ಜನರು ನೀರಿನ ಪಾಲಾದರು ಸ್ವಲ್ಪ ಹೊತ್ತಿನ ಮೇಲೆ ಜನಗಳು ತುಂಬಿದ್ದ ಇನ್ನೊಂದು ದೋಣಿಯು ಅಲೆಗಳ ಮಧ್ಯೆ ಸಿಕ್ಕಿ ಮುಳುಗಿಹೋಯಿತು ಈ ಅನಾಹುತಗಳನ್ನು ನೋಡಿ ಜಹಜಿನಲ್ಲಿ ಉಳಿದಿದ್ದ ಪ್ರಯಾಣಿಕರು ಅಲ್ಲೇ ನಿಂತರು ಸುತ್ತಮುತ್ತ ಸಂಚರಿಸುತ್ತಿದ್ದ ಜಹಜುಗಳಿಗೆ ವಿದ್ಯುಚ್ಛಕ್ತಿಯ ಮೂಲಕ ಈ ಸಮಾಚಾರವನ್ನು ತಿಳಿಸಲಾಯಿತು ಮಧ್ಯಾಹ್ನ ಸುಮಾರು 11 ಗಂಟೆಗೆ ಒಂದು ಜಹಜು ಬಂದು, ಉರಿಯುತ್ತಿರುವ ಜಹಜಿನಿಂದ ಪ್ರಯಾಣಿಕರನ್ನು ಕೆಳಕ್ಕೆ ಇಳುಹಲು ಪ್ರಯತ್ನಿಸಿತು ಆದರೆ ಅದು ಸಾಧ್ಯವಾಗಲಿಲ್ಲ ಯಾತಕ್ಕೆಂದರೆ ಗಾಳಿಯಿಂದ ವಿಶೇಷವಾಗಿ ಅಲೆಗಳು ಹುಟ್ಟಿ ಯಾವ ದೋಣಿಯನ್ನೂ ಜಹಜಿನ ಹತ್ತಿರಕ್ಕೆ ಬರಲು ಅವಕಾಶಕೊಡಲಿಲ್ಲ ಇದೇ ರೀತಿಯಲ್ಲಿ ಆ ದಿನದ ಹಗಲೂ ರಾತ್ರಿಯೂ ಕಳೆದು ಮಾರನೇ ದಿನ ಬೆಳಿಗ್ಗೆ 5 ಗಂಟೆ ಸಮಯದಲ್ಲಿ ಸಾಗರವು ಶಾಂತವಾದ್ದರಿಂದ ಉಳಿದ ಜನರು ಸುತ್ತಲೂ ಬಂದು ಸೇರಿದ್ದ ದೋಣಿಗಳಿಗೆ ಇಳಿದರು ಸುಮಾರು 8 ಗಂಟೆಗೆ ಪ್ರಯಾಣಿಕರೆಲ್ಲರೂ ಉರಿಯುತ್ತಿದ್ದ ಜಹಜನ್ನು ಬಿಟ್ಟು ಸೌಖ್ಯವಾಗಿ ಪ್ರಯಾಣಮಾಡಿದರು. ಇದು

ವರೆಗೆ ಬಂದಿರುವ ವರ್ತಮಾನಗಳಿಂದ ಸುಮಾರು 185 ಜನರು ಈ ಅನಾಹುತದಿಂದ ಮರಣಹೊಂದಿದರೆಂದು ತಿಳಿದುಬರುತ್ತದೆ

(೨) ಇಂಗ್ಲೆಂಡಿನಲ್ಲಿ ನಡೆದ ಗಣಿಯ ಅನಾಹುತ

ವೇಲ್ಸ್ ಅಧಿಪತ್ಯದ ಕಾರ್ಡಿಫ್ ಎಂಬ ಪಟ್ಟಣದ ಹತ್ತಿರ ಇರುವ ಒಂದು ಕಲ್ಲಿದ್ದಲಿನ ಗಣಿಯಲ್ಲಿ ಇದೇ ತಿಂಗಳು 14 ನೇ ತಾ ಸುಮಾರು 931 ಜನರು ಕೆಲಸಮಾಡುತ್ತಿದ್ದಾಗ ಭೂಮಿಯು ಕುಸಿದುಬಿದ್ದು ನೂರಾರು ಜನರು ಮೃತಪಟ್ಟರು ಸ್ವಲ್ಪ ಹೊತ್ತಿನೊಳಗಾಗಿ ಕಲ್ಲಿದ್ದಲಿನ ಪುಡಿಗೆ ಬೆಂಕಿಯು ತಗಲಿ ಗಣಿಯ ಒಳಭಾಗವೆಲ್ಲಾ ಹತ್ತಿ ಉರಿಯಲಾರಂಭಿಸಿತು ಸಾಯಂಕಾಲದ ಹೊತ್ತಿಗೆ ಉರಿಯು ಸ್ವಲ್ಪ ಶಮನವಾದದ್ದರಿಂದ ಸುಮಾರು 116 ಜನರು ಗಣಿಯಿಂದ ಹೊರಗೆ ತೆಗೆಯಲ್ಪಟ್ಟರು ಅನೇಕರು ತಮ್ಮ ಪ್ರಾಣವನ್ನು ಲಕ್ಷಿಸದೆ ಜನರನ್ನು ಬದುಕಿಸುವುದರಲ್ಲಿ ಸಾಹಸಪಟ್ಟರು ಚಕ್ರವರ್ತಿಯವರೂ ಅವರ ಪತ್ನಿಯವರೂ ಮರಣಹೊಂದಿದವರ ಬಂಧುಮಿತ್ರರಿಗೆ ತಮ್ಮ ಸಂತಾಪಸೂಚಕವಾದ ವರ್ತಮಾನವನ್ನು ಕಳುಹಿಸಿದರು ಮಾರನೇ ದಿನ ಬೆಂಕಿಯು ಸ್ವಲ್ಪ ಕಡಮೆಯಾಯಿತು ಮೃತಜನರ ಕೆಲವು ದೇಹಗಳು ಮಾತ್ರ ಸಿಕ್ಕಿದವು ಇದುವರೆಗೆ ನಡೆದ ವಿಚಾರಣೆಯಿಂದ ಸುಮಾರು 117 ಜನರಾಗಲೀ ಅವರ ದೇಹಗಳಾಗಲೀ ಸಿಕ್ಕಿರುವುದಿಲ್ಲವೆಂದು ತಿಳಿಯುತ್ತದೆ ಮರಣಹೊಂದಿದವರ ಪೋಷಣೆಯಲ್ಲಿದ್ದ 1,000 ಜನರು ಜೀವನಕ್ಕೆ ಬಹಳ ತೊಂದರೆಪಡುತ್ತಿದ್ದಾರೆ ಈ ಅನಾಹುತದಿಂದ ಗಣಿಯ ಮಾಲೀಕರಿಗೆ ಸುಮಾರು 15 ಲಕ್ಷ ರೂಪಾಯಿ ನಷ್ಟವಾಗಿರುತ್ತದೆ ಯುವರಾಜರಾದ ಪ್ರಿನ್ಸ್ ಆರ್ಥರವರು ಈ ಅನಾಹುತಕ್ಕೆ ತುಂಬಾ ವ್ಯಸನಪಟ್ಟು ಅಲ್ಲಿನ ಜನರಿಗೆ ಈ ರೀತಿ ತಂತಿ ವರ್ತಮಾನ ಕೊಟ್ಟಿರುತ್ತಾರೆ—"ನಾವು ಅತ್ಯಂತ ಸಂತೋಷಕಾಲದಲ್ಲಿರುವಾಗಲೂ ನಮ್ಮ ಯೋಚನೆಯು ನಿಮ್ಮ ಕಡೆಗೆ ತಿರುಗುತ್ತದೆ ನಿಮ್ಮ ಕಷ್ಟನಷ್ಟಗಳಿಗೆ ನಾವು ತುಂಬಾ ವ್ಯಸನಪಡುತ್ತೇವೆ" ಗಣಿಯೊಳಗಿನ ಉರಿಯು ಕ್ರಮೇಣ ಶಾಂತವಾಗುತ್ತಿದೆ ಈ ಅನಾಹುತದಿಂದ ನಷ್ಟಹೊಂದಿದವರ ಸಹಾಯಾರ್ಥವಾಗಿ ಒಂದು ರಿಲೀಫ್ ಫಂಡು ಏರ್ಪಾಡಾಗಿರುವುದು ಆ ಫಂಡಿಗೆ ಚಕ್ರವರ್ತಿಯವರು 7,500 ರೂಪಾಯಿ, ಮಾರ್ಕ್ವಿಸ್ ಬ್ಯೂಟ್‌ರವರು 23,625 ರೂಪಾಯಿ, ಮೂರು ಕಲ್ಲಿದ್ದಲಿನ ಗಣಿಯವರು ತಲಾ 15,750 ರೂಪಾಯಿ ಈ ರೀತಿ ಚಂದಾ ಕೊಟ್ಟಿರುತ್ತಾರೆ

(೩) ವಿಮಾನಕ್ಕೆ ಸಂಭವಿಸಿದ ಅನಾಹುತ

ಕಳೆದ ಶುಕ್ರವಾರ ಬರ್ಲಿನ್ ನಗರದ ಹತ್ತಿರ ಒಂದು ವಿಮಾನವು 30 ಜನರನ್ನು ಕೂರಿಸಿಕೊಂಡು ಮೇಲಕ್ಕೆ ಹೋಯಿತು, ಸುಮಾರು 1,000 ಅಡಿಗಳವರೆಗೂ ಮೇಲೆ ಪ್ರಯಾಣಮಾಡುವಷ್ಟರಲ್ಲಿ ವಿಮಾನದಲ್ಲಿದ್ದ ಯಂತ್ರಗಳು ಒಡೆದುಹೋಗಿ ವಿಮಾನವು ಬಹಳ ವೇಗದಿಂದ ಕೆಳಕ್ಕೆ ಇಳಿದು ನೆಲಕ್ಕೆ ಬಡಿಯಿತು ತಕ್ಷಣವೇ ಅವರಲ್ಲಿದ್ದ ಮೂವತ್ತು ಮಂದಿಯೂ ಮೃತಪಟ್ಟರು ಈ ವಿಮಾನವನ್ನು ತಯಾರ್ಮಾಡಿ ಕೆಲವು ವಾರಗಳು ಮಾತ್ರವೇ ಆಗಿತ್ತು ಜರ್ಮನಿಯ ನಾವೆಯ ಸೈನ್ಯಕ್ಕೆ ಸೇರಿದ ವಿಮಾನಗಳಲ್ಲೆಲ್ಲಾ ಇದು ಬಹಳ ಹೊಸದಾಗಿಯೂ ಸುಂದರವಾಗಿಯೂ ಇತ್ತು

ಸ್ವದೇಶದ ವೃತ್ತಾಂತಗಳು

ಮ|| ಎಂ ವೆಂಕಟಕೃಷ್ಣಯ್ಯನವರಿಗೆ ನ್ಯಾಯವಿಧಾಯಕ ಸಭೆಯ ಮೆಂಬರ ಪದವಿ ಚುನಾವಣೆಯಲ್ಲಿ ದೊರಕಿದ್ದರ ಸಂತೋಷಕ್ಕಾಗಿ ರಾಜಧಾನಿಯ ಪ್ರಜೆಗಳು ಅವರಿಗೆ ಒಂದು ಎಂಟರ್‌ಟೈನ್‌ಮೆಂಟ್ ಕೊಡಬೇಕೆಂದು ಏರ್ಪಾಡು ಮಾಡುತ್ತಿದ್ದಾರೆ

* * *

ಕಳೆದ ಸೋಮವಾರ ಮ ವೋಕ್ಸ್‌ಗುಂಡಿ ಕೃಷ್ಣಮೂರ್ತಿಯವರು ಬೆಂಗಳೂರು ಚೀಫ್ ಕೋರ್ಟಿನಲ್ಲಿ ಅಡ್ವೋಕೇಟರಾಗಿ ದಾಖಲಾದರು ನಮ್ಮ ದಿವಾನರವರ ಮನೆತನಕ್ಕೆ ಸೇರಿದವರ ಪೈಕಿ ಬೆಂಗಳೂರಿನಲ್ಲಿ ವಕೀಲರಾಗಿರತಕ್ಕವರಲ್ಲಿ ಇವರು ಮೂರನೆಯವರಾಗಿರುತ್ತಾರೆ

* * *

ಬೆಂಗಳೂರು ಜನರಲ್ ದಾಸರ ಹೋಟೆಲಿನವರಿಗೆ ಮಿ|| ಆರ್ ಪುಟ್ಟಣ್ಣನವರು ತಮ್ಮ ಕೆಲಸವನ್ನು ಕೊಟ್ಟು ಬೆಂಗಳೂರಿನಲ್ಲಿ ಹಿಂದಿನ ಭಾನುವಾರ ವಿವಾಹವನ್ನು ನೆರವೇರಿಸಿದರು ಆಗ ಅನೇಕ ದೊಡ್ಡಮನುಷ್ಯರೂ ಅಧಿಕಾರಿಗಳೂ ಹಾಜರಾಗಿದ್ದು ನೂತನ ವಧೂವರರನ್ನು ಹರಸಿ ಬಂದರು

* * *

ಈಗ 3 4 ದಿವಸಗಳಿಂದ ರಾಜಧಾನಿಯಲ್ಲಿ ಬೆಳಗಿನ ಹೊತ್ತು ವಿಶೇಷ ಮಂಜು ಬೀಳುತ್ತಾ, ಬಳಿಕ ಬಹಳ ಬಿಸಿಲು ಕಾಯುತ್ತಾ ಇದೆ ಇದರಿಂದ ಮಳೆಯ ಸೂಚನೆ ತಪ್ಪಿ, ಧಾರಣೆಗಳು ಹೆಚ್ಚುತ್ತಿರುವವು ಇದುವರೆಗೆ 2-3 ಪ್ಲೇಗ್ ಕೇಸುಗಳು ಸಂಭವಿಸುತ್ತಿದ್ದರೂ ಪ್ರಜಾ ಆರೋಗ್ಯವು ಚೆನ್ನಾಗಿದೆ

* * *

ಬೆಂಗಳೂರಿನಲ್ಲಿರುವ ನಮ್ಮ ದಿವಾನರವರ ಬಂಗಲೆಯಲ್ಲಿ ಕಳೆದ ಶನಿವಾರ ಒಂದು ಇಲಿ ಸತ್ತುಹೋಗಿತ್ತು ಹೆಲ್ತ್ ಆಫೀಸರವರು ಅದನ್ನು ಪರೀಕ್ಷಿಸಿ ನೋಡಿ ಪ್ಲೇಗ್‌ನಿಂದ ಅದು ಸತ್ತಿತೆಂದು ಹೇಳಿದಕಾರಣ ಮರುದಿನ ಆ ಬಂಗಲೆ ಯನ್ನೆಲ್ಲಾ ಚೆನ್ನಾಗಿ ಡಿಸಿನ್‌ಫೆಕ್ಷನ್ ಮಾಡಿದರೆಂದು ತಿಳಿಯುತ್ತದೆ

* * *

ಮೈಸೂರು ನ್ಯಾಯವಿಧಾಯಕ ಸಭೆಯವರು ಚರ್ಚೆಮಾಡಿ ಗೊತ್ತುಮಾಡಿರುವ ಮೋಟರ್ ಗಾಡಿಗಳ ಕಾನೂನನ್ನೂ, ನಿರ್ಬಂಧನೀಯ ಪ್ರಥಮ ವಿದ್ಯೆಯನ್ನು ಕುರಿತ ಕಾನೂನನ್ನೂ ಶ್ರೀಮನ್ ಮಹಾರಾಜರವರು ಒಪ್ಪಿ ಸ್ಯಾಂಕ್ಷನ್ ಮಾಡಿರುತ್ತಾರೆ ಇವೆರಡೂ ಯಾವಾಗ ಜಾರಿಗೆ ಬರುವವೋ ತಿಳಿಯಲಿಲ್ಲ

* * *

ಸರ್ಕಾರದವರು ಗುಂಡ್ಲುಪೇಟೆ ತಾಲ್ಲೂಕ್ ಅಮಲ್ದಾರ್ ಮಿ|| ಸಿ ವಿ ಲಕ್ಷ್ಮಣಮೂರ್ತಿಯವರನ್ನು ಪ್ರೈವರಾಯರವರು ವಾಪಸು ದಯಮಾಡುವ ತನಕ ಕೃಷ್ಣರಾಜಪುರದ ಪಿಡಾಕ್ಯಾಂಪಿನಲ್ಲಿ ನೌಕರಿಮಾಡತಕ್ಕದ್ದೆಂದು ಹುಕುಂ ಕೊಟ್ಟು, ಶಿರಸ್ತೇದಾರ್ ಮ|| ರಾಮಚಂದ್ರರಾಯರನ್ನು ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಿರುತ್ತಾರೆ

* * *

ದಿವಾನ್ ಮಿ|| ಎಂ ವಿಶ್ವೇಶ್ವರಯ್ಯನವರು ಪರಿವಾರ ಸಮೇತ ಮೊನ್ನೆ ಮಂಗಳವಾರ ರಾತ್ರಿ ರಾಜಧಾನಿಯಿಂದ ಬೆಂಗಳೂರಿಗೆ ಪ್ರಯಾಣ ಮಾಡಿದರು ಅಲ್ಲಿಂದ ಶಿವಮೊಗ್ಗೆಗೆ ಹೋಗಿ ಜೋಗ್ ಜಲಪಾತದಲ್ಲಿ ನಡೆಯುವ ಕೆಲಸಗಳನ್ನು ಪರಾಂಬರಿಸಿಕೊಂಡು 8 10 ದಿವಸಗಳಲ್ಲಿ ವಾಪಸು ರಾಜಧಾನಿಗೆ ದಯಮಾಡುತ್ತಾರೆಂದು ತಿಳಿದು ಬಂದಿದೆ

* * *

ಕಳೆದ ಬುಧವಾರ ರಾತ್ರಿ ಸರ್ದಾರ್ ಎಂ ಲಕ್ಷ್ಮೀಕಾಂತರಾಜೆ ಅರಸಿನವರು ಫೈವ್‌ಸ್ಟೇಷನ್ ಬಳಿ ಇರುವ ತಮ್ಮ ಮ್ಯಾನ್‌ಷನ್‌ನಲ್ಲಿ ರಾಜಯೋಗ್ಯವಾದ ಔತಣವನ್ನು ಮಾಡಿಸಿದರು ರಾಜಪಿಂಡೆಯವರೂ, ಎಲ್ಲಾ ಪಂಗಡಗಳ ಮುಖ್ಯ ಅಧಿಕಾರಿಗಳು, ದೊಡ್ಡಮನುಷ್ಯರೂ ಕರೆಸಲ್ಪಟ್ಟಿದ್ದರು ಭೋಜನಾನಂತರ ವಿದ್ವಾನ್ ಬಿ ಕೃಷ್ಣಪ್ಪನವರ ಹಾಡುಗಾರಿಕೆ ನಡೆದು, ಅತಿಥಿಗಳು ಆನಂದ ಹೊಂದಿ ಅರಸರನ್ನು ವಂದಿಸಿ ತೆರಳಿದರು

* * *

ಕಳೆದ ಗುರುವಾರ ಮಧ್ಯಾಹ್ನ ರಾಜಧಾನಿಯಲ್ಲಿ ದಿವಾನರವರು ಪ್ರತಿನಿಧಿಗಳನ್ನು ಕುರಿತ ಚರ್ಚೆಗಳನ್ನು ಪ್ರಾರಂಭಿಸುವಷ್ಟರೊಳಗಾಗಿ ಒಬ್ಬಾನೊಬ್ಬ ವೃದ್ಧ ಬ್ರಾಹ್ಮಣನು ಬಲಾತ್ಕಾರದಿಂದ ದಿವಾನರವರ ಎದುರಿಗೆ ನುಗ್ಗಿ ಬಂದು ಅವರಿಗೆ ಅರ್ಜಿಯನ್ನು ಒಪ್ಪಿಸಿದನು ದಿವಾನರವರು ಪ್ರೀತಿಯಿಂದ ಅದನ್ನೂ ರಿಕಾರ್ಡುಗಳನ್ನೂ ತೆಗೆದುಕೊಂಡು ಸೆಕ್ರೆಟರಿಯವರಿಗೆ ಕೊಟ್ಟು, ಆತನನ್ನು ಕುರಿತು—ನಿಮ್ಮ ಅರ್ಜಿಯನ್ನು ನೋಡಿ ವ್ಯವಸ್ಥೆಮಾಡಿ ನಿಮಗೆ ತಿಳಿಸುತ್ತೇವೆಂದು ಹೇಳಿದ್ದಲ್ಲದೆ ಈ ಅರ್ಥವನ್ನು ಸೆಕ್ರೆಟರಿಯವರ ಮೂಲಕ ತಿಳಿಯಪಡಿಸಿದರು

* * *

ರಾಜಧಾನಿಯ ಶ್ರೀಮನ್ ಮೋತೀಖಾನೆ ಲಕ್ಷ್ಮೀಪತಯ್ಯನವರ ಜೈನ ಬೋರ್ಡಿಂಗ್ ಹೋಮಿನ ವಿದ್ಯಾರ್ಥಿಗಳು ಡಿಬೇಟಿಂಗ್ ಸೊಸೈಟಿಯ ವರುಷೋತ್ಸವವನ್ನು ಹಿಂದಿನ ಭಾನುವಾರ ರಾತ್ರಿ ನಡಿಸಿದರು ದಿವಾನ್ ಬಹದ್ದೂರ್ ರಾಜಸಭಾ ಭೂಷಣ ಮ|| ಕೆ ಪಿ ಪುಟ್ಟಣ್ಣಶೆಟ್ಟರವರು ಅಗ್ರಾಸನವನ್ನು ವಹಿಸಿದ್ದರು ಮುಖ್ಯರಾದ ದೊಡ್ಡಮನುಷ್ಯರೂ ಹಾಜರಾಗಿದ್ದು ವಿದ್ಯಾರ್ಥಿಗಳ ತೃಪ್ತಿಕರವಾದ ಅಭಿವೃದ್ಧಿಯನ್ನು ನೋಡಿ ಸಂತೋಷಪಟ್ಟಿದ್ದಲ್ಲದೆ ಶ್ರೀಮನ್ ವರ್ಧಮಾನಯ್ಯನವರು ಪರಹಿತಚಿಂತನೆಯಿಂದ ಈ ಬೋರ್ಡಿಂಗ್ ಹೋಮನ್ನು ಸ್ಥಾಪಿಸಿ ಉತ್ಸಾಹದಿಂದಲೂ ಸಾರ್ಥಕವಾಗಿಯೂ ನಡಿಸುತ್ತಾಬಂದಿರುವುದನ್ನು ನೋಡಿ ಅವರ ಧರ್ಮವೃತ್ತಿಯನ್ನು ಕೊಂಡಾಡಿದರು

* * *

ಕಳೆದ ಭಾನುವಾರ ಸಾಯಂಕಾಲ ಶ್ರೀಮನ್ ಮಹಾರಾಜರವರು ರಾಜಸಹೋದರರೊಡನೆ ರಾಜಬಂಧುವರ್ಗದವರ ಸಮೇತ ಪ್ರದರ್ಶನ ಶಾಲೆಗೆ ಚಿತ್ತೈಸಿ, ಅಧ್ಯಕ್ಷರ ರಿಪೋರ್ಟಿನಿಂದ ಪ್ರದರ್ಶನದ ವೃತ್ತಾಂತವನ್ನು ತಿಳಿದು ಉಪನ್ಯಾಸಪೂರ್ವಕವಾಗಿ ಮುಖ್ಯಪ್ರದರ್ಶಕರಿಗೆ ಬೆಳ್ಳಿ ಭಂಗಾರದ ಮೆಡಲುಗಳನ್ನೂ, ಅಂಗಸಾಧನೆಯಲ್ಲಿ ಚತುರರಾದವರಿಗೆ ಬಹುಮಾನ ವಸ್ತುಗಳನ್ನೂ ಸ್ವಹಸ್ತ ದಯಪಾಲಿಸಿ, ಈ ವರುಷದ ಪ್ರದರ್ಶನವನ್ನು ಮುಕ್ತಾಯಮಾಡಿದರು ಅದರ ಹಿಂದಿನ ಸಾಯಂಕಾಲ ಮಾರನೇ ಮಹಾರಾಜಕುಮಾರಿಯವರು ಕಸೂತಿ ಮೊದಲಾಗಿದ್ದ ಸ್ತ್ರೀ ಶಾಖೆಯ ಪ್ರದರ್ಶನಶಾಲೆಗೆ ಶ್ರೇಷ್ಠವಾದ ವಸ್ತುಗಳನ್ನು ಕಳುಹಿಸಿದ್ದವರಿಗೆ ಸ್ವಹಸ್ತ ಮೆಡಲುಗಳನ್ನು ಕೊಟ್ಟು ಸಂತೋಷಪಡಿಸಿದರು

* * *

ರಾಜಧಾನಿಯ ಪ್ರಜಾಪ್ರತಿನಿಧಿಗಳ ಮಂದಿರದಲ್ಲಿ ಈ ಸಲ 16 ಮೆಂಬರುಗಳೂ, 20 ಜನ ಅವರ ಸ್ನೇಹಿತರೂ ಸಂಬಂಧಿಗಳೂ, 8 ಮಂದಿ ಆಗಂತುಕರೂ ಇದ್ದರು ಈ ಮಂದಿರದ ಕಾರ್ಯದರ್ಶಿಗಳಾದ ಮ|| ಕರಣಿಕ ಕೃಷ್ಣಮೂರ್ತಿರಾಯರು ಬಹು ತೃಪ್ತಿಕರವಾದ ಏರ್ಪಾಡುಗಳನ್ನು ಮಾಡಿದ್ದರು ಶನಿವಾರ ಸಾಯಂಕಾಲ ಪ್ರತಿನಿಧಿಗಳೆಲ್ಲಾ ಸೇರಿ ಮಂದಿರದಲ್ಲಿ ಟೀ ಪಾರ್ಟಿಯನ್ನು ನಡಿಸಿದರು ಸೀನಿಯರ್ ಕೌನ್ಸಿಲರ್ ಮ|| ನಂಜುಂಡಯ್ಯನವರೇ ಮೊದಲಾದ ಅಧಿಕಾರಿಗಳು ಹೋಗಿ ಆ ಕೂಟದಲ್ಲಿ ಸೇರಿ ಸಂತೋಷಪಟ್ಟರು ಮ|| ವೆಂಕಟಕೃಷ್ಣಯ್ಯನವರು ಈ ಸಲ ಪ್ರತಿನಿಧಿ ಸಮಾಜವನ್ನು ದಿವಾನರವರು ಅತ್ಯಂತ ಸಂತೋಷಕರವಾಗಿಯೂ ತೃಪ್ತಿಕರವಾಗಿಯೂ ನೆರವೇರಿಸಿದ್ದಕ್ಕಾಗಿ ಅವರಿಗೆ ವಂದನೆಗಳನ್ನು ಸಲ್ಲಿಸಿದ್ದಲ್ಲದೆ ಪ್ರತಿನಿಧಿ ಸಭೆಗೂ ನ್ಯಾಯವಿಧಾಯಕ ಸಭೆಗೂ ವಿಶೇಷವಾದ ಸೌಲಭ್ಯಗಳನ್ನು ದಯಪಾಲಿಸಿ ರಾಜ್ಯಭಾರವನ್ನು ಪ್ರಜಾರಂಜಕವಾಗಿ ಮಾಡುತ್ತಾ ಬಂದಿರುವುದಕ್ಕಾಗಿ ಶ್ರೀಮನ್ ಮಹಾರಾಜರವರನ್ನು ಕೊಂಡಾಡಿದರು

* * *

ಮೊನ್ನೆ ಸೋಮವಾರ ಸಾಯಂಕಾಲ ರಾಜಧಾನಿಯ ಚಾಮುಂಡಿ ಬೆಟ್ಟದ ತಪ್ಪಲಿನ ಜೂಬಿಲಿ ಹೋಟೆಲಿನಲ್ಲಿ ರಾಜಪಿಂಡೆಯವರು ಶ್ರೀಮನ್ ಯುವರಾಜರ ಹೆಸರಿನ ಮೇತ ಅಟ್ ಹೋಂ ಎಂಬ ಸಂತೋಷ ಕೂಟವನ್ನು ನಡಿಸಿದರು ಶ್ರೀಮನ್ ಮಹಾರಾಜರವರೂ, ಯುವರಾಜರವರೂ ಅಲ್ಲದೆ ದಿವಾನರೇ ಮೊದಲಾದ ಗವರ್ನಮೆಂಟ್ ಮುಖ್ಯಾಧಿಕಾರಿಗಳೂ, ಪ್ರಜಾಪ್ರತಿನಿಧಿಗಳೂ, ಸ್ಥಳೀಯ ದೊಡ್ಡಮನುಷ್ಯರೂ, ಮಿಲಿಟರಿ ಹುದ್ದೇದಾರರೂ ಕರೆಸಲ್ಪಟ್ಟಿದ್ದರು ಅತಿಥಿಗಳ ವಿನೋದಾರ್ಥವಾಗಿಯೂ ವಿನೋದಾರ್ಥವಾಗಿಯೂ ಸಂಗೀತ, ಆಟಗಳು, ಬ್ಯಾಂಡ್ ವಾದ್ಯಗಳು, ಸಮಾರಂಭ ವಿಚಿತ್ರವಾದ ಸಾಹಸ ಕಾರ್ಯಗಳು ಮುಂತಾದವೆಲ್ಲಾ ಏರ್ಪಾಡಾಗಿ ಬಹು ಸಂಭ್ರಮದಿಂದ ಜರುಗಿದವು ಯೂರೋಪಿಯರ್ನರಿಗೂ, ಮಹಮದೀಯರಿಗೂ, ಹಿಂದುಗಳಿಗೂ ಬೇರೆ ಬೇರೆ ವಿಸ್ತಾರವಾದ ಡೇರಾಗಳಲ್ಲಿ ರುಚಿಕರವಾದ ಫಲಾಹಾರಗಳನ್ನು ಅರಸುಗಳಲ್ಲಿ ಮುಖಂಡರಾದವರೇ ನಿಂತು ಅತಿಥಿಗಳಿಗೆ ಕೊಟ್ಟು ಆದರಿಸಿ ಸಂತೋಷಪಡಿಸಿದರು ಎಲ್ಲಾ ಏರ್ಪಾಡುಗಳೂ ರಾಜಯೋಗ್ಯವಾಗಿ ನೆರವೇರಿದವು

ಮೈಸೂರು ಗೆಜೆಟ್ ಸಂಗ್ರಹ

ತಿಪ್ಟೂರು ತಾ|| ಸಾರ್ಥವಳ್ಳಿ, ಹಾಸನ ತಾ|| ಕೆಳಗಿನಕೊಪ್ಪಲು, ಹೊಂಗೆರೆ, ಹಾಸನ ಅರಸೀಕೆರೆ ತಾ|| ಗಂಡಸಿ—ಈ ಸ್ಥಳಗಳಲ್ಲಿ ಪ್ಲೇಗ್ ಉಪದ್ರವವಿದೆ ಎಂದು ತಿಳಿಯತಕ್ಕದ್ದು

ಮೂಗು ಪ್ರಾಣಿಗಳಿಗೆ ಹಿಂಸೆ ಮಾಡುವುದನ್ನು ತಡೆಯುವುದಕ್ಕಾಗಿ ಮಾಡಿರುವ ಕಾನೂನನ್ನು ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಇಲವಾಲ, ಬಿಳಿಕೆರೆ, ಬನ್ನಿಕೊಪ್ಪ, ಹುಣಸೂರು, ಪಿರಿಯಾಪಟ್ಣ, ಈ ಸ್ಥಳಗಳಲ್ಲಿ 1913 ನೇ ನವಂಬರ್ 1ನೇ ತಾರೀಖಿನಿಂದ ಜಾರಿಗೆ ತರಲಾಗುವುದು

ಬೆಂಗಳೂರು ಸಿಟಿ ಬಸವನಗುಡಿ ಆಸ್ಪತ್ರೆಯ ಅ|| ಸರ್ಜನ್ ಆದ ಮಿ|| ಕೆ ಅನಂತರಾಮಯ್ಯಂಗಾರ್ರಿಗೆ ನವರಾತ್ರಿ ಹಬ್ಬದ ರಜಾ ಜೊತೆಗೆ ಒಂದು ತಿಂಗಳೂ ಹದಿನಾರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮಿ|| ಎಸ್ ರೂಬಿನ್‌ರವರು ವಾಪಸು ಬರುವ ತನಕ ಕಡೂರು ತಾಲ್ಲೂಕ್ ಶಿರಸ್ತೇದಾರ್ ಮ|| ಎಂ ನಾರಾಯಣರಾಯರನ್ನು ಮೂಡಿಗೆರೆ ತಾಲ್ಲೂಕ್ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲಿ ನೇಮಿಸಿದೆ

ಆಕ್ಟಿಂಗ್ ಅ|| ಕಮಿಷನರ್ ಆದ ಮಿ|| ಎಸ್ ಚಕ್ರಪಾಣಿ ಅಯ್ಯಂಗಾರ್ರು ಅಮಲ್ದಾರರಾಗಿ ವಾಪಸು ಹೋಗತಕ್ಕದ್ದು ಇವರನ್ನು ಕಾನಕಾನಹಳ್ಳಿ ತಾಲ್ಲೂಕಿಗೆ ಅಮಲ್ದಾರ್ ಮತ್ತು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ವರ್ಗಮಾಡಿದೆ

ಅ|| ಕಮಿಷನರ್ ಮಿ|| ನರಸಿಂಗರಾವ್ ಪೂರ್ಣಯ್ಯನವರಿಗೆ ಕೊಟ್ಟಿರುವ ರಜಾ ಪೂರೈಸಿದ ಬಳಿಕ ಅವರು ಕಡೂರು ಡಿಸ್ಟ್ರಿಕ್ಟ್ ಖಜಾನೆಯ ಛಾರ್ಜನ್ನು ವಹಿಸತಕ್ಕದ್ದು

ಮಿ ಸಿ ಶ್ರೀನಿವಾಸರಾಯರು ಕಾನಕಾನಹಳ್ಳಿ ತಾಲ್ಲೂಕು ಅಮಲ್ದಾರಿಯಿಂದ ಡಿಸ್ಟ್ರಿಕ್ಟ್ ಖಜಾಂಚೀರಾಗಿ ವರ್ಗಮಾಡಲ್ಪಟ್ಟಿದ್ದಾರೆ

ಅ|| ಜಿಯಾಲಜಿಸ್ಟ್ ಮಿ|| ಅಜಿತ ಮೋಹನ ಸೇನರವರಿಗೆ ಅಕ್ಟೋಬರ್ ತಾ 18 ರಿಂದ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳೂ ಆರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ

ಮಳೆಯಿಂದಾದ ನಷ್ಟ

ಹೊನ್ನಾಳಿ ತಾಲ್ಲೂಕು ಕುಂದೂರ ಸಮ್ಮತು ಯರೆಚಿಕ್ಕನಹಳ್ಳಿಯಲ್ಲಿ ತಾ 12 ನೇ ಭಾನುವಾರ ಪ್ರಾತಃಕಾಲ 6 ಗಂಟೆಲಾಗಾಯ್ತು ರಾತ್ರಿ 12 ಗಂಟೆವರೆಗೆ ಒಂದು ನಿಮಿಷವಾದರೂ ಬಿಡುಗಡೆ ಇಲ್ಲದೆ ಅಘೋರವಾದ ಮಳೆ ಸುರಿಯಿತು ಈ ಮಳೆಯಿಂದ ಸುಮಾರು 20 ಅಂಗುಲ ಮಳೆ ಆಗಿರಬಹುದು ಇಂಥಾ ಮಳೆಯನ್ನು ನಮ್ಮ ಗ್ರಾಮದ ವೃದ್ಧರ ಪೈಕಿ ಪರಗೌಡರ ಎದ್ದಪ್ಪನು ನಾನು ಹುಟ್ಟಿದಂದಿನಿಂದಲೂ ಇಂಥಾ ಮಳೆಯನ್ನು ಕಂಡಿರಲಿಲ್ಲ ಎಂಬದಾಗಿ ಹೇಳುತ್ತಾನೆ ಈ ಮಳೆಯಿಂದ ಊರಲ್ಲಿರುವ ದುರ್ಗಮ್ಮನ ದೇವಸ್ಥಾನ, ಬಸವಣ್ಣ ದೇವರ ದೇವಸ್ಥಾನ, ಮತ್ತು ಚೌಡೇಶ್ವರಿ ದೇವಸ್ಥಾನದ ಗೋಡೆಗಳೂ ಮತ್ತು ಗ್ರಾಮದಲ್ಲಿ ಅನೇಕ ಮನೆಗಳೂ ಉರುಳಿ ಹಾಳಾದವು ಒಂದು ಸಾವಿರ ರೂಪಾಯಿನ ಲುಕ್ಸಾನು ಆಗಿರಬಹುದು ಮತ್ತು ಊರಮುಂದೆ ಇರುವ ಸರ್ಕಾರಿ ಹೊಂಡವು ತುಂಬಿ ನೀರಿನ ಪ್ರವಾಹವು ಹೆಚ್ಚಾಗಿ ದಿಣ್ಣೆಯ ಮೇಲೆ ನುಗ್ಗಿ ಅಕ್ಕಪಕ್ಕ ಬಾಜು ಮನೆಗಳಿಗೆ ನುಗ್ಗಿದ್ದಲ್ಲದೆ ಅಂಗಳದಲ್ಲಿ ಸುಮಾರು 4 ಅಡಿ ಭೂಮಿಯನ್ನು ಕೊಚ್ಚಿಕೊಂಡು ಹೋಗಿದೆ ಸಾಯಂಕಾಲ 6 ಗಂಟೆ ಸಮಯದಲ್ಲಿ ಊರ ಪಕ್ಕದಲ್ಲಿ ಹರಿಯುವ ರಾಯನ ಹಳ್ಳ ನೋಡಿದರೆ ಎರಡನೆಯ ತುಂಗಭದ್ರಾ ನದಿ ಎಂಬುವ ಹಾಗೆ ಪ್ರವಾಹವು ಮೀರಿತ್ತು ಒಡೆದು ಹೋದ ಹೊಂಡದ ಏರಿಯನ್ನು ಗ್ರಾಮದ ಪಟೇಲ್ ಪುಟ್ಟಪ್ಪ, ಶಾ|| ದೊಡ್ಡ ಪುಟ್ಟಪ್ಪನವರ ಬಸಪ್ಪ, ಶಾ|| ಡಿ ಚನ್ನಬಸಪ್ಪ, ಗೌಡ್ರ ಇಟಿಗಿ ದೊಡ್ಡಮುಂಗಪ್ಪ, ಶಾ|| ಗೌ|| ಹರಳಹಳ್ಳಿಮುಳ್ಳಪ್ಪ, ಬು ಓದೋ ಸಂಜಪ್ಪ, ಕೋಲಂಬಿ ಸ್ವಾಮಿಹುಡದಪ್ಪ, ಗಿ ಸಣ್ಣಬಸಪ್ಪ, ಇವರುಗಳು ಮುತುವರ್ಜಿವಹಿಸಿ ಗ್ರಾಮದ ಜನಗಳನ್ನು ಸಹಾಯಕ್ಕೆ ಕರೆದುಕೊಂಡು ತಾ 13 ನೇ ಸೋಮವಾರ ಬೆಳಗ್ಗೆ ನೀರು ಹೋಗದ ಹಾಗೆ ಏರಿಯನ್ನು ಬಲಪಡಿಸಿದರು ಇವರು ಸಹಾಯ ಮಾಡದೆ ಬಿಟ್ಟಿದ್ದರೆ ಮುಂದೆ ನೀರಿನ ಕ್ಷಾಮ ಉಂಟಾಗುತ್ತಿತ್ತು ಈ ಊರಿನ ಜಾಗ ಎರೆನೆಲವಾದದ್ದರಿಂದ ಕುಡಿಯುವ ನೀರಿನ ಭಾವಿಯು 2 ಫರ್ಲಾಂಗ್ ದೂರವಾಗಿ, ಮಳೆ ಬಂದಕಾಲದಲ್ಲಿ ನೀರು ತರುವ ಜನಗಳಿಗೆ ಬಹಳ ಜಾರಿಕೆಯಾಗುತ್ತಾ ಗಡಿಗೆಗಳು ಒಡೆಯುವದಲ್ಲದೆ ಅನೇಕ ತೊಂದರೆಗಳಿಗೆ ಕಾರಣರಾಗುತ್ತಾರೆ ಆದ್ದರಿಂದ ದಯಾಳು ಸರ್ಕಾರದವರು ಊರು ಒಳಗೆ ಸರ್ಕಾರಿ ಭಾವಿವರೆಗೆ ರಸ್ತೆ ಮಾಡಿಸಿ ಜನಗಳ ಕಷ್ಟವನ್ನು ಹೋಗಲಾಡಿಸುವರೆಂದು ಹಾರೈಸುತ್ತೇನೆ ಈ ಊರಲ್ಲಿ ಪ್ರಜಾಸಂಖ್ಯೆ 600 ಜನರು ಇರತಕ್ಕ ಗ್ರಾಮವಾಗಿಯೂ, ಸ್ಕೂಲಿಗೆ ಸರಾಸರಿ 40-50 ಬಾಲಕರು ವಿದ್ಯಾರ್ಥಿಗಳು ಆಗುವದಕ್ಕೆ ಸಂದೇಹವಿಲ್ಲ ಸ್ಕೂಲ್ ಕೊಟ್ಟರೆ ಬಹಳ ಅನುಕೂಲವಾದೀತು

[ಇಂಥಾ ಸಣ್ಣ ಗ್ರಾಮಗಳಿಗೆಲ್ಲಾ ಸರ್ಕಾರದವರು ರಸ್ತೆ ಹಾಕಿಸುವುದೇ ಮುಂತಾದ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತಾರೆಂದು ನಿರೀಕ್ಷಿಸುವುದು ಸಹಜವಲ್ಲ ಗ್ರಾಮದ ಮುಖಂಡರು ಏಕೀಭವಿಸಿ ತಮ್ಮ ಗ್ರಾಮದಲ್ಲಿ ಅವಶ್ಯವಾದ ಸೌಕರ್ಯಗಳನ್ನು ಮಾಡಿಕೊಳ್ಳಬೇಕಾಗಿದೆ ಮುಖಂಡರು ಮುಂದಾಳಾಗಿ ನಿಂತು ಗ್ರಾಮಸ್ಥರಿಗೆ ಹೇಳಿದರೆ ಇಂಥಾ ಕಾರ್ಯಗಳೆಲ್ಲಾ ಸರಾಗವಾಗಿಯೂ ತೃಪ್ತಿಕರವಾಗಿಯೂ ನಡೆಯುವವು —ಎಡಿ]

ಬಾತ್ಮೀದಾರರಿಗೆ ನೋಟೀಸ್

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಕರೆಸ್ಪಾಂಡೆನ್ಸ್.

ಮಂಡ್ಯದ ಪೋಸ್ಟ್ ಆಫೀಸು

ಅಯ್ಯಾ,

ಮಂಡ್ಯದ ತಾಲ್ಲೂಕಿನಲ್ಲಿ ಮಂಡ್ಯಕ್ಕೆ 7 8 ಮೈಲಿ ಹಳ್ಳಿಗಳಲ್ಲಿರುವ ಜನಗಳು ಏಜಂಟರ ಮೂಲಕ ಪತ್ರಿಕೆ ಹೊಂದುವುದು ಅಸಾಧ್ಯ ಪೋಸ್ಟು ಮೂಲಕ ಪತ್ರಿಕೆ ತರಿಸಿಕೊಳ್ಳಬೇಕಾಗಿದೆ ಪ್ರತಿ ಗುರುವಾರವೂ ಮೆಯಿಲ್ ರೈಲಿನಲ್ಲಿ ಪತ್ರಿಕೆಗಳು ಬರುತ್ತವೆ ಪೋಸ್ಟ್ ಮೆನ್‌ರು ಗುರುವಾರ 10 ಘಂಟೆಯೊಳಗೆ ಕಾಗದಗಳನ್ನು ತೆಗೆದುಕೊಂಡು ಪೋಸ್ಟ್ ಆಫೀಸು ಬಿಟ್ಟು ಹೊರಟು ಹೋಗುತ್ತಾರೆ ಪತ್ರಿಕೆಯು ಮುಂದಿನ ಸೋಮವಾರದ ತನಕ ಪೋಸ್ಟ್ ಆಫೀಸಿನಲ್ಲೇ ಬಿದ್ದಿರುತ್ತವೆ ಮುಂದಿನ ಸೋಮವಾರ (8 ದಿನದ ಮೇಲೆ) ಪೋಸ್ಟ್ ಮೆನ್‌ರು ಅದನ್ನು ತೆಗೆದುಕೊಂಡು ಮುಂದಿನ ಬುದವಾರ (11 ದಿನದ ಮೇಲೆ) ಚಂದಾದಾರರಿಗೆ ತಲಪಿಸುತ್ತಾರೆ ಇದರಿಂದ ಚಂದಾದಾರರಿಗೆ ಬಹಳ ತೊಂದರೆಯಾಗಿದೆ ದಯಾಳುಗಳಾದ ನಮ್ಮ ಪೋಸ್ಟ್ ಮಾಸ್ಟರವರು ದಯವಿಟ್ಟು ಸಾಧ್ಯವಾದಮಟ್ಟಿಗೂ ಪ್ರತಿ ಸೋಮವಾರದೊಳಗಾಗಿಯಾದರೂ ಚಂದಾದಾರರಿಗೆ ಆಯಾವಾರದ ಪತ್ರಿಕೆಗಳು ತಲಪುವಂತೆ ಏರ್ಪಾಟು ಮಾಡಿಕೊಟ್ಟಾರೆಂದು ನಂಬಿ ನಿರೀಕ್ಷಿಸುತ್ತೇನೆ

ತಮ್ಮ ಪತ್ರಿಕಾ ಚಂದಾದಾರ.

ಮಲೆನಾಡಿನಲ್ಲಿ ವಿದ್ಯೆಹೆಚ್ಚದಿರಲು ಮುಖ್ಯಕಾರಣ

ಅಯ್ಯಾ,

ನಮ್ಮ ಮೈಸೂರುದೇಶದಲ್ಲಿ ಪ್ರಜೆಗಳ ಹಿತಕ್ಕಾಗಿಯೂ, ದೇಶದಅಭಿವೃದ್ಧಿಗಾಗಿಯೂ, ಬಡಪ್ರಜೆಗಳ ಜೀವನಕ್ಕಾಗಿಯೂ ಸರಕಾರಿ ಉದ್ಯೋಗಗಳು ಸಂಖ್ಯೆಯಿಲ್ಲದಷ್ಟು ಇರುತ್ತ ಕಷ್ಟಪಡಲು ಶಕ್ತಿಯಿಲ್ಲದೆ ಬೇರೆಜೀವನ ಮಾರ್ಗವಿಲ್ಲದೆ ಇಂಥಾ ಉದ್ಯೋಗವನ್ನೇ ನಂಬಿ ಸ್ವಊರು, ಸ್ವಜನಗಳನ್ನೆಲ್ಲಾ ಬಿಟ್ಟು ಎಷ್ಟೋ ಜನರು ಏಕಾಂಗಿಗಳಾಗಿ ಪರಸ್ಥಳದಲ್ಲಿ ವಾಸಮಾಡಿಕೊಂಡಿರುತ್ತಾರೆ

ಇಂಥಾ ಉದ್ಯೋಗಗಳಲ್ಲಿ ಒಂದಾದ ಸ್ಕೂಲ್ ಇಲಾಖಾಕ್ಕೆ ಅನೇಕ ಶ್ರೀಮಂತರೂ, ಬಡಜನರೂ ಸೇರಿಕೊಂಡಿರುತ್ತಾರೆ ಅವರಿಗೆ ರಜಾ ಸಿಕ್ಕಿದಕಾಲಕ್ಕೆ ಅನೇಕ ಉಮೇದುವಾರರು ಅಪ್ಲಿಕೇಷನ್ ಬರೆದುಕೊಂಡು ಪಿಸತ್ತು 2 3 ತಿಂಗಳ ಬದ್ಲಿಗೆ ಸಹಾ ಹೋಗುತ್ತಾ ಇರುವುದು ಸಕಲರಿಗೂ ತಿಳಿದಿರತಕ್ಕದ್ದೆ ಆಗಿರುತ್ತ ಇಂಥಾ ಬದ್ಲಿಗೆ ಹೋದಕಾಲದಲ್ಲಿ ಅಕಸ್ಮಾತ್ ಅವರಿಗೆ ಋತುಧರ್ಮದಿಂದಲೋ ಬಾಣಂತನದಿಂದಲೋ, ಮಲೆನಾಡಿಗೆ ತೌರುಮನೆ ಎನಿಸಿರುವ ಮಲೇರಿಯ ಜ್ವರವು ಪ್ರಾಪ್ತವಾಗುವುದು ಆಶ್ಚರ್ಯವಲ್ಲ ಕೂಡಲೆ ಅವರು ಮೇಲ್ಪಟ್ಟ ಆಫೀಸರಿಗೆ ರಿಪೋರ್ಟು ಮಾಡಿದರೂ ಗಣನೆಬರುವುದು 15 20 ದಿವಸದ ನಂತರ ಆಮೇಲೆ "ನಿಮಗೆ ಬದ್ಲಿ ತಪ್ಪಿಸಿರುತ್ತ ಬಗಡು ಹುಕುಂ ಗೈರಹಾಜರು ಅದಿರಿ, ಎಂತ ಆರ್ಡರುಬಂದು, 1 2 ದಿವಸದ ಒಳಗೆ ಬೇರೆ ಬದ್ಲಿಯವರನ್ನು ಕಳುಹಿಸುತ್ತಾರೆ ಬದ್ಲಿ ಸ್ಕೂಲ್ ಮಾಸ್ತರು ತಲೆಮೇಲೆ ಕೈಹಾಕಿಕೊಂಡು ಊರಿಗೆ ಹೋಗುತ್ತಾರೆ ನಂತರ ಅರ್ಜಿ ಬರೆದರೆ ಆರ್ಡರೆ ಬರುವುದಿಲ್ಲ ಮೊಖ್ತಾ ಹೋಗಿ ಕೇಳಿಕೊಂಡರೆ ಖಾಲಿಬದ್ದಾಗ ಕೊಡಿಸುತ್ತೇವೆಂತ ಆರ್ಡರು ಮಾಡುವ ಆಫೀಸರವರ ದರುಶನವಲ್ಲದೆ ನೌಕರಿ ದರುಶನವಾಗುವುದಿಲ್ಲ ಹೀಗಾಗುವದರಿಂದ "ಮೂರು ದಿವಸಕ್ಕೆ ಆರುಜನ ಮಾಸ್ತರು" ಎಂಬ ಮಲೆನಾಡು ಗಾದೆಗೆ ಸರಿಯಾಗಿ ಗ್ರಾಮಾಂತರಗಳಲ್ಲಿ ವಿದ್ಯಾಭಿವೃದ್ಧಿಗೆ ಅವಕಾಶವಿಲ್ಲದೆ ಸ್ಕೂಲ್‌ಮಾಸ್ತರಿಗೆ ಮನೆ ಮಾಡಿಕೊಡುವುದೂ, ಹೊಸ ಹೊಸ ಮಾಸ್ತರನ್ನು ನೋಡುವುದೂ ಇದರಲ್ಲೇ ದಿವಸ ಕಳೆಯುತ್ತ ನಮ್ಮ ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ತೀರ್ಥಹಳ್ಳಿ, ನಗರ, ಸಾಗರ, ಈ ತಾಲ್ಲೋಕುಗಳ ಗ್ರಾಮಗಳು ಅನಾರೋಗ್ಯವಾಗಿಯೂ, ಅನುಕೂಲತೆ ಕಡಮೆಯಾಗಿಯೂ ಇರುವವುಗಳೇ ಜಾಸ್ತಿ ಹಿಂದೊಂದುಕಡೆ ಒಂದು ಸ್ಕೂಲು ಇದ್ದರೆ ಮೇಲ್ಕಂಡ ದುರವಸ್ಥೆಯಿಂದ ಸ್ಕೂಲ್‌ವರ್ಷಕ್ಕೆ ಇನ್‌ಸ್ಪೆಕ್ಷನ್ ಕಾಲದಲ್ಲಿ 16 ದಿವಸ ಮಾತ್ರ ಜಾರಿಯಾಗಿ ಬಾಕಿದಿವಸ ಮಕ್ಕಳ ಇಚ್ಛೆಯಂತೆ ಛಾರಿಯಾಗಿ ವಿದ್ಯಾಭಿವೃದ್ಧಿಗೆ ತುಂಬಾ ಅನನುಕೂಲವಾಗಿದೆ ಮೇಲ್ಪಟ್ಟ ಆಫೀಸರು ಆಗಾಗ್ಗೆ ತನಿಖೆ ಸರಿಯಾಗಿಟ್ಟರೆ ಇಂಥಾ ಲೋಪಕ್ಕೆ ಕಾರಣವಾಗದೆ ದೇಶ ಉನ್ನತಿಗೆ ಬರುವುದಾಗಿ ತೋರುತ್ತ

ವಿದ್ಯಾಭಿಮಾನಿ

ಮೂವತ್ತನೇ ಪ್ರಜಾಪ್ರತಿನಿಧಿ ಸಭೆಯು.

ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾದ ಮುಖ್ಯ ವಿಚಾರಗಳು.

ಕಳೆದ ತಾ 11ನೇ ಶನಿವಾರ ರಾಜಧಾನಿಯಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾದ ವೃತ್ತಾಂತವನ್ನೂ, ದಿವಾನ್‌ರವರು ಮಾಡಿದ ಉಪನ್ಯಾಸದ ಮುಖ್ಯಾಂಶಗಳನ್ನೂ ಹೋದವಾರ ತಿಳಿಸಿರುತ್ತೇವೆ ಈ ವಾರ ಆ ಉಪನ್ಯಾಸದ ಇನ್ನು ಕೆಲವು ಭಾಗಗಳನ್ನೂ, ಸಭೆಯಲ್ಲಿ ಏಳು ದಿನ ಜರುಗಿದ ಚರ್ಚೆಗಳ ಪೈಕಿ ಪ್ರಾಮುಖ್ಯವೆಂದು ಕಂಡುಬಂದಿರುವ ವಿಷಯಗಳನ್ನೂ ಸವಿಸ್ತಾರವಾಗಿ ಈ ವಾರ ಪ್ರಕಟಿಸಿರುವೆವು ಸಭೆಯಲ್ಲಿ ನಡೆದ ಚರ್ಚೆಗಳನ್ನೂ ದಿವಾನ್‌ರವರ ಪ್ರತ್ಯುತ್ತರಗಳನ್ನೂ ಬರುವ ವಾರ ಪ್ರಕಟಮಾಡಬೇಕೆಂದಿರುತ್ತೇವೆ

(1) ಗ್ರಾಮಾಂತರಗಳನ್ನು ಅಭಿವೃದ್ಧಿಗೆ ತರುವ ಏರ್ಪಾಡು.

ಮೈಸೂರು ಸಂಸ್ಥಾನದಲ್ಲಿ ಗ್ರಾಮಾಂತರಗಳ ಹೀನಸ್ಥಿತಿಯನ್ನು ಸರಿಪಡಿಸುವುದಕ್ಕಾಗಿ ದಿವಾನ್‌ರವರು ಮಾಜಿ ರೆವಿನ್ಯೂ ಕಮಿಷನರ್ ಮ|| ಎ ರಂಗಸಾಮಿ ಅಯ್ಯಂಗಾರ್ರವರ ಕೂಡ ಪರ್ಯಾಲೋಚನೆಮಾಡಿ ಒಂದು ಏರ್ಪಾಡನ್ನು ಮಾಡಿದರು. ಇದಕ್ಕಾಗಿ ಒಂದು ತಃಖ್ತೆ ತಯಾರುಮಾಡಿ ಮೆಂಬರುಗಳಿಗೆಲ್ಲಾ ಹಂಚಿರುತ್ತಾರೆ ಸರ್ಕಾರದವರು ಹೀಗೆ ಮಾಡಲು ಅವರ ಉದ್ದೇಶವೇನೆಂದರೆ—

(1) ಪ್ರತಿಯೊಂದು ಗ್ರಾಮದ ಸ್ಥಿತಿಯೂ ವರ್ಷದ ಷುರುವಿನಲ್ಲಿ ಹೇಗೆ ಇತ್ತು ? ವರ್ಷದ ಆಖ್ಯೆರಿನಲ್ಲಿ ಹೇಗೆ ಇತ್ತು ? ಈ ವರ್ಷದಲ್ಲಿ ಗ್ರಾಮದಲ್ಲಿ ವಿದ್ಯಾಭ್ಯಾಸ, ಕೈಗಾರಿಕೆಯ ಉದ್ಯೋಗ, ವ್ಯಾಪಾರ, ನೀರಾವರಿ ಕೆಲಸಗಳು, ಗ್ರಾಮಾರೋಗ್ಯ ಈ ಮುಂತಾದ ವಿಚಾರಗಳಲ್ಲಿ ಏನಾದರೂ ಅಭಿವೃದ್ಧಿಯು ಉಂಟಾಗಿರುತ್ತದೆಯೇ ಇಲ್ಲವೆ ? ಹಾಗೆ ಏನೂ ಅಭಿವೃದ್ಧಿಯು ಇಲ್ಲವೆಹೋದರೆ ಮುಂದಿನ ವರ್ಷದಲ್ಲಿಯಾದರೂ ಏನಾದರೂ ಅಭಿವೃದ್ಧಿಯು ಉಂಟಾಗುವ ಹಾಗೆ ಗ್ರಾಮಸ್ಥರು ಪ್ರಯತ್ನ ಮಾಡಲಿ ಎಂಬುವುದೂ, ಅಭಿವೃದ್ಧಿಯು ತೋರಿಬಂದಿರುವ ಗ್ರಾಮಗಳ ಮೇಲ್ಪಂಕ್ತಿಯನ್ನು ಅನುಸರಿಸಿ ಹಿಂದೆ ಬಿದ್ದಿರುವ ಗ್ರಾಮಗಳ ಪ್ರಜೆಗಳೂ ಸಹ ವೃದ್ಧಿಗೆ ಬರಲು ಪ್ರಯತ್ನಮಾಡುವಂತೆ ಪ್ರೋತ್ಸಾಹ ಉಂಟಾಗಲಿ ಎಂಬುವುದೂ, ಈ ತಃಖ್ತೆಯನ್ನು ತಯಾರುಮಾಡಿಸುವುದರ ಉದ್ದೇಶವಾಗಿರುತ್ತದೆ —ವಿದ್ಯಾಭಿವೃದ್ಧಿಗೆ ಸಹಾಯಮಾಡುವುದು, ಗ್ರಾಮದ ಉತ್ಪನ್ನವು ಹೆಚ್ಚುವಂತೆ ಮಾಡುವುದು, ಕೈಗಾರಿಕೆಯ ಕೆಲಸಗಳಿಂದ ಅಥವಾ ವ್ಯಾಪಾರದಿಂದ ವರಮಾನವನ್ನು ಹೆಚ್ಚಿಸುವ ಪ್ರಯತ್ನಮಾಡುವುದು, ಈ ಮುಂತಾದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ವರ್ಷವು ಷುರುವಾಗುವುದಕ್ಕೆ ಮುಂಚೆಯೇ ಆಯಾ ಗ್ರಾಮದ ಮಹಾಜನಗಳೇ ಚೆನ್ನಾಗಿ ಆಲೋಚಿಸಿ ತಮ್ಮ ಪೈಕಿ ಗ್ರಾಮ ಪಂಚಾಯಿತಿಯನ್ನಾಗಲಿ, ಗ್ರಾಮ ನೌಕರರನ್ನಾಗಲಿ, ಸಮಾಜವನ್ನಾಗಲಿ, ಇತರ ದೊಡ್ಡ ಮನುಷ್ಯರನ್ನಾಗಲಿ ನೇಮಿಸಬೇಕು ಹಾಗೆ ನೇಮಿಸಲ್ಪಟ್ಟ ಅಧಿಕಾರಿಗಳು ತಮ್ಮ ಕೆಲಸವನ್ನು ಸಮರ್ಪಕವಾಗಿ ಮಾಡತಕ್ಕದ್ದು, ಮತ್ತು ಇನ್ನೊಂದು ವರ್ಷವು ಷುರು ಆಗುವುದಕ್ಕೆ ಮುಂಚೆಯೇ ಆಯಾ ಗ್ರಾಮದ ಮಹಾಜನರ ಅನುಮತಿಯಿಂದ ಮತ್ತೊಬ್ಬರನ್ನಾದರೂ ಆಗಲಿ ಅಥವಾ ತಮ್ಮನ್ನೇ ಆಗಲಿ ಮುಂದಿನ ವರ್ಷದ ಕೆಲಸವನ್ನು ನಡಿಸುವ ಬಗ್ಗೆ ನೇಮಿಸುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸತಕ್ಕದ್ದು —(3) ಯಾವ ಗ್ರಾಮದಲ್ಲಿ ಜನರು ತಾವಾಗಿಯೇ ಮೇಲ್ಕಂಡಂತೆ ಕಾರ್ಯ ನಡಿಸುವುದಕ್ಕೆ ತಕ್ಕ ಅಧಿಕಾರಿಗಳನ್ನು ನೇಮಿಸುವುದಿಲ್ಲವೋ ಅಂಥ ಗ್ರಾಮಕ್ಕೆ ತಾಲ್ಲೂಕ್ ಪ್ರೋಗ್ರೆಸ್ ಕಮಿಟಿಯವರಾಗಲಿ, ಅಮಲ್ದಾರರಾಗಲಿ ವರ್ಷವು ಷುರು ಆಗುವುದಕ್ಕೆ ಮುಂಚೆಯೇ ಕಾರ್ಯ ನಡಿಸುವುದಕ್ಕೆ ತಕ್ಕ ಅಧಿಕಾರಿಗಳನ್ನು ನೇಮಿಸಬೇಕು —(4) ಗ್ರಾಮಗಳು ವಿಶೇಷ ಸಣ್ಣವಾಗಿದ್ದರೆ ಎಂದರೆ ಸಾಮಾನ್ಯವಾಗಿ 300ಕ್ಕಿಂತ ಕಮ್ಮಿ ಪ್ರಜಾಸಂಖ್ಯೆ ಉಳ್ಳವಾಗಿದ್ದರೆ 2ರಿಂದ 6ರ ವರೆಗೆ ಗ್ರಾಮಗಳನ್ನು ಒಟ್ಟುಗೂಡಿಸಿ ಅವೆಲ್ಲಕ್ಕೂ ಸೇರಿ ಕಾರ್ಯನಡಿಸುವುದಕ್ಕೆ ಒಬ್ಬ ಅಧಿಕಾರಿಯನ್ನಾಗಲಿ, ಜವಾಬ್ದಾರಿ ಕಮಿಟಿಯನ್ನಾಗಲಿ ನೇಮಿಸಬೇಕು —(5) ಈ ತಃಖ್ತೆಯಲ್ಲಿ ಪ್ರಶ್ನೆಗಳಿಗೆಲ್ಲ ಸರಿಯಾದ ಉತ್ತರಗಳನ್ನು ಜೂನ್ ತಿಂಗಳಲ್ಲಿಯೇ ಸಾಧ್ಯವಾದಷ್ಟು ಜವಾಯಿಸಿಟ್ಟುಕೊಂಡಿದ್ದು ಜೂಲೈ ತಿಂಗಳು ಆಖೈರಿನೊಳಗಾಗಿ ತಃಖ್ತೆಯಲ್ಲಿ ದಾಖಲ್ಮಾಡಿ ತಾಲ್ಲೂಕ್ ಪ್ರೋಗ್ರೆಸ್ ಕಮಿಟಿಯವರಿಗಾಗಲಿ, ಅಮಲ್ದಾರರಿಗಾಗಲಿ ಕಳುಹಿಸಿಕೊಡಬೇಕು

ಪ್ರಶ್ನೆಗಳು —(1) 1913 ನೆಯ ಇಸವಿ ಜೂನ್ ಗುರ್ರೆ ತಾರೀಖಿನಲ್ಲಿ ಗ್ರಾಮದಲ್ಲಿ ಎಷ್ಟು ಒಕ್ಕಲುಗಳಿವೆ ? ಗ್ರಾಮದ ಒಟ್ಟು ಜನಸಂಖ್ಯೆ ಎಷ್ಟು ? 15 ವಯಸ್ಸಿಗೆ ಮೇಲ್ಪಟ್ಟ ಗಂಡಸರು ಎಷ್ಟು, ಹೆಂಗಸರು ಎಷ್ಟು ? 15 ವಯಸ್ಸಿಗೆ ಒಳಪಟ್ಟ ಹುಡುಗರು ಎಷ್ಟು, ಹುಡುಗಿಯರು ಎಷ್ಟು ? ಒಟ್ಟು ಎಷ್ಟು ? [ಷರಾ — ಈ ಸಂಖ್ಯೆಗಳನ್ನು ಆಯಾ ವರ್ಷದ ಗ್ರಾಮ ಜಾನೇಷುಮಾರಿ ಲೆಕ್ಕಗಳಿಂದ ಸಂಗ್ರಹಿಸಬಹುದು]. (2) ಈ ವರ್ಷ ಜನನವೆಷ್ಟು, ಮರಣವೆಷ್ಟು ? [ಷರಾ —ಈ ಸಂಖ್ಯೆಗಳನ್ನು ಜನನಮರಣ ರಿಜಿಸ್ಟರಿನಿಂದ ಸಂಗ್ರಹಿಸಬಹುದು] (3) ಓದುವುದೂ, ಬರೆಯುವುದೂ ಬರುವ ಗಂಡಸರ (ಹುಡುಗರೂ ದೊಡ್ಡವರೂ ಸೇರಿ) ಸಂಖ್ಯೆ ಎಷ್ಟು, ಅಂಥಾ ಹೆಂಗಸರ ಸಂಖ್ಯೆ ಎಷ್ಟು ? (4) ಗ್ರಾಮದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ಒಟ್ಟು ಎಷ್ಟು ಮಂದಿಗೆ ಓದುವುದೂ ಬರೆಯುವುದೂ ಬರುತ್ತದೆ ? (5) ಗ್ರಾಮದಲ್ಲಿ ಎಷ್ಟು ಸ್ಕೂಲುಗಳು ಅಥವಾ ಮಠಗಳು ಇವೆ ? ಸ್ಕೂಲಿಗೆ ಹೋಗುತ್ತಿರುವ ಹುಡುಗರ ಮತ್ತು ಹುಡುಗಿಯರ ಸಂಖ್ಯೆ ಎಷ್ಟು ? (6) ಗ್ರಾಮದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ಎಷ್ಟುಮಂದಿ ಸ್ಕೂಲಿಗೆ ಹೋಗುತ್ತಿದಾರೆ (ಅಥವಾ ಬೇರೆ ವಿಧವಾಗಿ ವಿದ್ಯೆಯನ್ನು ಕಲಿಯುತ್ತಿದಾರೆ) ? (7) ಗ್ರಾಮಸ್ಥರು ಎಲ್ಲರೂ ಸೇರಿ ಆಗಲಿ, ಬೇರೆಬೇರೆ ಆಗಲಿ ಯಾವ ಯಾವ ವರ್ತಮಾನ ಪತ್ರಿಕೆಗಳನ್ನು ತರಿಸಿಕೊಳ್ಳುತ್ತಿದಾರೆ ? (8) ಗ್ರಾಮದಲ್ಲಿ ಎಷ್ಟುಮಂದಿ ಯಾವ ಯಾವ ಕಸುಬುಗಳನ್ನು ತಮ್ಮ ಮುಖ್ಯ ಕಸಬಾಗಿ ನಡಿಸುತ್ತಿದಾರೆ ? [ಷರಾ —ಈ ತಃಖ್ತೆಯಲ್ಲಿ ಗ್ರಾಮಸ್ಥರು ನಡಿಸುತ್ತಿರುವ ಬಡಗಿಯ ಕೆಲಸ, ಕಮ್ಮಾರರ ಕೆಲಸ, ನೇಯಿಗೆ ವಗೈರೆ ಮುಖ್ಯ ಕಸುಬುಗಳನ್ನು ದಾಖಲ್ಮಾಡಬೇಕು] (9) ಗ್ರಾಮದ ಮುಖ್ಯ ಬೆಳೆಗಳ ಅಥವಾ ಕಸಬುಗಳ ವಿಷಯದಲ್ಲಿ ವಿವರಗಳನ್ನು ತಿಳಿಸಿ [ಷರಾ —ಈ ಪೈಕಿ ಬೆಳೆಗೆ ಸಂಬಂಧಪಟ್ಟ ವಿವರಗಳನ್ನು ಪಹಣಿ ತಃಖ್ತೆಗಳಿಂದಲೂ, ಕಸಬುಗಳಿಗೆ ಸಂಬಂಧಪಟ್ಟ ವಿವರಗಳನ್ನು ಖುದ್ದು ವಿಚಾರಣೆಯಿಂದಲೂ ಸಂಗ್ರಹಿಸಬಹುದು] (10) ಬೇಸಾಯವನ್ನು ಮುಖ್ಯ ವೃತ್ತಿಯಾಗಿಟ್ಟುಕೊಂಡಿರುವ ಎಷ್ಟು ಒಕ್ಕಲುಗಳು ಹೆಚ್ಚು ವರಮಾನ ಬರುವಂತೆ ಬೇರೆ ಕಸಬುಗಳನ್ನು ಅವಲಂಬಿಸಿರುತ್ತಾರೆ ? (11) ಕ್ಷಾಮವು ಬಂದರೆ ಎರಡು ವರ್ಷಗಳಿಗೆ ಸಾಕಾಗುವಷ್ಟು ದವಸವನ್ನಾಗಲಿ, ಹಣವನ್ನಾಗಲಿ ದಾಸ್ತಾನ್ ಇಟ್ಟುಕೊಂಡಿರುವ ಒಕ್ಕಲುಗಳ ಸಂಖ್ಯೆ ಎಷ್ಟು ? (12) ಗ್ರಾಮದಲ್ಲಿ ಪರಸ್ಪರ ಸಹಾಯಕ ಸಂಘವು ಇವೆಯೋ ? ಎಷ್ಟು ಜನರು ಇದೇ ಗ್ರಾಮ ಯಾ ಬೇರೆ ಗ್ರಾಮಕ್ಕೆ ಸೇರಿದ ಪರಸ್ಪರ ಸಹಾಯಕ ಸಂಘಕ್ಕೆ ಮೆಂಬರುಗಳಾಗಿದಾರೆ ? ಗ್ರಾಮದಲ್ಲಿ ಪಂಚಾಯತಿ ಯಾ ಇತರ ಕೋರ್ಟುಗಳಾಗಲಿ, ಸಂಘಗಳಾಗಲಿ ಇವೆಯೇ ? ಇದ್ದರೆ ಅವು ಯಾವವು ? (13) ಈ ವರ್ಷದಲ್ಲಿ ಗ್ರಾಮಸ್ಥರು ಏಕೀಭವಿಸಿ ಕೆಲಸಮಾಡಿ ಅಥವಾ ಹಣ ಕೊಟ್ಟು ಸ್ಕೂಲ್ ಕಟ್ಟಡ, ರಸ್ತೆ, ಕೆರೆ, ನಾಲಾ, ದೇವಸ್ಥಾನದ ದುರಸ್ತು, ಭಾವಿ ಮುಂತಾದ ಗ್ರಾಮಸ್ಥರಿಗೆ ಉಪಯೋಗವಾದ ಕಾರ್ಯಗಳನ್ನು ಮಾಡಿಸಿರುತ್ತಾರೆಯೇ ? ಮಾಡಿಸಿದ್ದರೆ ಅವುಗಳನ್ನು ವಿವರಿಸಿ ಈ ವರ್ಷದಲ್ಲಿ ನಡಿಸಲ್ಪಟ್ಟ ಅಂಥ ಕಾರ್ಯಗಳಿಗೆ ಸುಮಾರು ಬೆಲೆ ಎಷ್ಟಾಗಬಹುದು ? (14) ಮೇಲಿನ ಪ್ರಶ್ನೆಯಲ್ಲಿ ಉದಹರಿಸಿರುವ ಗ್ರಾಮಸ್ಥರಿಗೆ ಉಪಯೋಗವಾಗುವಂಥ ಎಂದರೆ ವಿದ್ಯಾಭ್ಯಾಸ, ವ್ಯವಸಾಯ, ಕೈಗಾರಿಕೆ, ವ್ಯಾಪಾರ, ಗ್ರಾಮಾರೋಗ್ಯ ಮುಂತಾದ ಕೆಲಸಗಳನ್ನು ಮುಂದಿನ ವರ್ಷ ನಡಿಸಲು ಉದ್ದೇಶ ಮಾಡಿದ್ದಲ್ಲಿ ಅಂಥ ಕೆಲಸಗಳು ಯಾವವು ? (15) ಕಳೆದ ವರ್ಷ ಗ್ರಾಮಾಭಿವೃದ್ಧಿಗೆ ಕಾರಣರಾಗಿದ್ದ ಮತ್ತು ಈ ತಃಖ್ತೆಯಲ್ಲಿ ಕಂಡ ವಿವರಗಳನ್ನು ಸರಬರಾಜ್ ಮಾಡಿದ ಶಾನುಭೋಗರು, ಪಟೇಲರು ಮುಂತಾದ ನೌಕರರ ಅಥವ ಪಂಚಾಯತಿ, ಯೂನಿಯನ್, ಕಮಿಟಿ ಮುಂತಾದ ಸಂಘಗಳ ಹೆಸರುಗಳನ್ನು ತಿಳಿಸಿ (16) ಮುಂದಿನ ವರ್ಷ ಗ್ರಾಮಾಭಿವೃದ್ಧಿಯನ್ನು ನೋಡಿಕೊಳ್ಳುವುದಕ್ಕೂ, ಈ ತಃಖ್ತೆಯ ವಿವರಗಳನ್ನು ಸರಬರಾಜು ಮಾಡುವುದಕ್ಕೂ ಜವಾಬ್ದಾರಿಯನ್ನು ವಹಿಸುವ ಶಾನುಭೋಗರು, ಪಟೇಲರು ಮುಂತಾದ ನೌಕರರ, ಅಥವಾ ಪಂಚಾಯತಿ, ಯೂನಿಯನ್, ಕಮಿಟಿ ಮುಂತಾದ ಸಂಘಗಳ ಹೆಸರುಗಳನ್ನು ತಿಳಿಸಿ

ಈ ತಃಖ್ತೆಗೆ ಶಾನುಭೋಗರೂ, ಆ ಸಾಲಿನ ಅಭಿವೃದ್ಧಿಗೆ ಜವಾಬ್ದಾರಿ ವಹಿಸಿದ ಪಂಚಾಯಿತರು ಅಥವಾ ಅಧಿಕಾರಿಗಳು ರುಜು ಮಾಡಬೇಕು

ಮೇಲ್ಕಂಡ ತಃಖ್ತೆಯಲ್ಲಿ ಕಂಡ ವಿಚಾರಗಳನ್ನು ಮೆಂಬರುಗಳು ಓದಿಕೊಂಡು ಸಭೆಗೆ ಬಂದನಂತರ ದಿವಾನ್‌ರವರು ಅವರನ್ನು ಕುರಿತು—ಈ ಸಂಸ್ಥಾನದಲ್ಲಿ ಒಟ್ಟು 16,800 ಹಳ್ಳಿಗಳಿವೆ ಇವುಗಳನ್ನು ಎಲ್ಲಾ ಭಾಗಗಳಲ್ಲೂ ಉತ್ತಮ ಸ್ಥಿತಿಗೆ ತರುವುದಕ್ಕೆ ಈ ಏರ್ಪಾಡು ಮಾಡಿದೇವೆ ಇದರ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು ಎಂದು ಪ್ರಶ್ನೆ ಮಾಡಿದರು

ಮ|| ವಿ ರಾಘವಾಚಾರ್ರು —ಆರೋಗ್ಯಕರವಾದ ನೀರನ್ನು ಗ್ರಾಮಗಳಿಗೆ ಒದಗಿಸಿ ಕಾಪಾಡಬೇಕು ಗ್ರಾಮಗಳ ಮುಂಭಾಗದಲ್ಲಿ ಗುಂಡಿಗಳನ್ನು ಮುಚ್ಚಿಸಬೇಕು ಗ್ರಾಮಗಳಿಗೆ ವಾಯುವ್ಯ ಮತ್ತು ಈಶಾನ್ಯ ದಿಕ್ಕುಗಳಿಂದ ಗಾಳಿ ಬೀಸೋಣದ್ದರಿಂದ ಆ ಕಡೆ ತಿಪ್ಪೆಗಳಿರಕೂಡದು ಮತ್ತು ಸ್ಮಶಾನವಿರಕೂಡದು ತಿಪ್ಪೆಗಳನ್ನು ದೂರದಲ್ಲಿ ಹಾಕಿಸಬೇಕು ಸ್ವಂತ ಎರಡು ಮೂರು ಗ್ರಾಮಗಳಿಗೂ ಒಬ್ಬೊಬ್ಬ ಸ್ಥಳೀಯ ಪಂಡಿತರಿದ್ದೇ ಇದಾರೆ ಇಂಥವರಿಗೆ ಸರ್ಕಾರದವರು ಅಲ್ಪಸ್ವಲ್ಪ ವರುಷಾಶನವನ್ನು ಬಹುಮಾನವಾಗಿ ಕೊಡುತ್ತಾ ಬಂದರೆ ಅವರ ಮೂಲಕ ಆ ಗ್ರಾಮಗಳ ರೋಗಿಗಳಿಗೆ ಸಹಾಯವಾಗುತ್ತದೆ ಗ್ರಾಮದಿಂದ ಗ್ರಾಮಕ್ಕೆ ಗಾಡಿ ರಸ್ತೆಗಳನ್ನು ಹಾಕಿಸಬೇಕು ಗ್ರಾಮದಲ್ಲಿರುವ ಪ್ರೇತಗಳನ್ನೆಲ್ಲಾ ಆಗಾಗ್ಗೆ ಒಂದುಕಡೆ ಸೇರಿಸಿ ಗ್ರಾಮದ ಮತ್ತು ಪ್ರಜೆಗಳ ಶ್ರೇಯಸ್ಸಿಗೆ ಅನುಕೂಲವಾದ ವಿಷಯಗಳನ್ನು ಉಪನ್ಯಾಸಗಳ ಮೂಲಕ ಹೇಳಿ ಕಲಿಸುತ್ತಾ ಬರಬೇಕು ಗ್ರಾಮಗಳೊಳಗೆ ಕೊಚ್ಚೆ ಗುಂಡಿಗಳಾಗಲಿ ನೀರು ನಿಲ್ಲುವ ಡಾಗಲಿ ಇರಬಾರದು ಗ್ರಾಮ ಬಡಾವಣೆಗೋಸ್ಕರ ಖಾಲಿ ನಿವೇಶನಗಳನ್ನು ಬಿಡಿಸಿಕೊಟ್ಟು ಯಾವಾಗಲೂ ಅದು ಮನೆ ಕಟ್ಟುವುದಕ್ಕೆ ಒದಗುವಂತೆ ಮಾಡಿಟ್ಟು ಬಡಬಗ್ಗರಿಗೆ ಅಲ್ಪಸ್ವಲ್ಪ ಸಹಾಯವಾಗಬೇಕು

ಮ|| ಎ ರಂಗಸ್ವಾಮಿ ಅಯ್ಯಂಗಾರ್ರು ದಿವಾನ್‌ರವರ ಅಪ್ಪಣೆಯ ಪ್ರಕಾರ ಪ್ರತಿನಿಧಿಗಳನ್ನು ಕುರಿತು —ನೀವುಗಳೆಲ್ಲಾ ನಾವು ಸೇರಿಸುವ ಗ್ರಾಮಗಳ ಅಭಿವೃದ್ಧಿಯ ತಃಖ್ತೆಯಲ್ಲಿ ಕಂಡ ಬಾಗಗಳನ್ನು ಅನುಮೋದಿಸಿ ಒಪ್ಪಿಕೊಂಡಿರುವುದರಿಂದ ನನ್ನ ಕೆಲಸ ಇನ್ನೇನೂ ಹೆಚ್ಚಾಗಿರುವುದಿಲ್ಲ ಈ ಕಾರ್ಯಕ್ಕೆ ಶಾನುಭೋಗರೂ ಇರತಕ್ಕವರೇ, ಪಟೇಲರು ಕೂಡ ಬೇಕೇ ಬೇಕು ನಿಮ್ಮಲ್ಲಿ ಲಾಯರುಗಳೂ, ಮಿಷನ್ ಜನರೂ ಜಹಗೀರುದಾರರೂ ಆ ರೀತಿ ನಡೆಸಿಕೊಳ್ಳುವುದಾಗಿ ಒಪ್ಪಿಕೊಂಡಿರುವಲ್ಲಿ ಪಟೇಲರೂ ಶಾನುಭೋಗರೂ ಆದ ನಿಮಗೆ ಅದು ಅಸಾಧ್ಯವಲ್ಲ ನೀವುಗಳೆಲ್ಲಾ ಯೋಚಿಸಿ ಆ ತಃಖ್ತೆಯನ್ನು ಭರ್ತಿಮಾಡಿ ಅನುಮಾನ ಕಂಡುಬರುವ ಭಾಗಗಳನ್ನು ನಮಗೆ ತಿಳಿಸಿದರೆ ನಾವು ಅದನ್ನು ವಿವರಿಸಿ ನಿಮಗೆ ಸುಲಭವಾಗುವಂತೆ ಮಾಡಿ ಕೊಡುತ್ತೇವೆ ಎಂದು ಹೇಳಿದರು

ಕಳೆದ ಭಾನುವಾರ ಮಧ್ಯಾಹ್ನ 3 ಗಂಟೆಗೆ ಮೆಂಬರುಗಳು ಸಭೆ ಸೇರಿ ಮ|| ರಂಗಸಾಮಯ್ಯಂಗಾರ್ರಿಗೆ ತಮ್ಮ ಅನುಮಾನಗಳನ್ನೆಲ್ಲಾ ತಿಳಿಸಿದಾಗ ಅವರು ವಿವರಿಸಿ ಸಂತೋಷಪಡಿಸಿದರು

ಮೆಂಬರುಗಳ ಸಮ್ಮತಿಯನ್ನು ಕೇಳಿದಾಗ ಒಹುಜನರು ಸುಮಾರು 100 ಗ್ರಾಮಗಳ ವಿಷಯದಲ್ಲಿ ಮೇಲ್ಕಂಡ ತಃಖ್ತೆಯನ್ನು ಭರ್ತಿಮಾಡಿ ಸರ್ಕಾರಕ್ಕೆ ವರುಷೇವರುಷ ಕಳುಹಿಸುತ್ತೇವೆಂದು ಒಪ್ಪಿಕೊಂಡಿರುತ್ತಾರೆ

(2) ಸಣ್ಣ ಕೆರೆಗಳ ದುರಸ್ತಿನ ವಿಚಾರ.

ಮೈಸೂರು ಸಂಸ್ಥಾನದಲ್ಲಿ ಸಣ್ಣ ಮತ್ತು ದೊಡ್ಡ ಕೆರೆಗಳು ಸುಮಾರು 25,000 ಇರುತ್ತವೆ. ಇವುಗಳನ್ನು ದುರಸ್ತು ಮಾಡಿಸಿ ಕೊಡಬೇಕೆಂದು ಅನೇಕ ವರುಷಗಳಿಂದ ಪ್ರಜಾ ಪ್ರತಿನಿಧಿಗಳು ಕೇಳಿಕೊಳ್ಳುತ್ತಾ ಬಂದಿದಾರೆ ಸರ್ಕಾರದವರು ಪ್ರತಿ ವರುಷವೂ ಇದಕ್ಕಾಗಿ ಹಣತೆಗದಿಟ್ಟು ಕಾಮಗಾರಿ ಮಾಡಿಸುತ್ತಿದಾರಾದಾಗ್ಯೂ ಎಲ್ಲಾ ಕೆರೆಗಳೂ ದುರಸ್ತಾಗುವುದು ಸಾಧ್ಯವಲ್ಲವೆಂದೂ, ಅದಕ್ಕೆಲ್ಲಾ ಹಣ ಒದಗುವುದಿಲ್ಲವೆಂದೂ ದಿವಾನ್ ಮ ವಿಶ್ವೇಶ್ವರಯ್ಯನವರಿಗೆ ಕಂಡು ಬಂದದ್ದರಿಂದ ಈ ವಿಚಾರದಲ್ಲಿ ಅವರು ಪ್ರತಿನಿಧಿಗಳ ಸಲಹೆಯನ್ನು ಕೇಳಿದರು ಬಹುಮಂದಿ ಮೆಂಬರುಗಳು ತಮಗೆ ತೋರಿದ ಉಪಾಯಗಳನ್ನು ಸೂಚಿಸಿದರು ಕೆಲವರು ಗವರ್ನ್‌ಮೆಂಟಿನವರು ಮೊದಲು ಆ ಕೆರೆಗಳನ್ನೆಲ್ಲಾ ದುರಸ್ತು ಮಾಡಿಸಿ ಕೊಟ್ಟರೆ ಅದರ ಸಾಲಿಯಾನ ಕಾಮಗಾರಿಯನ್ನು ರೈತರು ಮಾಡಿಸಿಕೊಂಡು ಬರುತ್ತಾರೆಂದೂ, ಒಡೆದು ಹೋಗಿರುವಂಥಾ ಕೆರೆ ಕೆಳಗಿನ ಜಮೀನಿಗೆ 8 10 ವರುಷ ತರಿ ಕಂದಾಯವನ್ನು ಮಾಫಿಮಾಡಿ ಖುಷ್ಕಿ ರೇಟನ್ನು ಹಾಕಿದರೆ ಆ ಜಮೀನುದಾರರೇ ಸೇರಿ ಆ ಕೆರೆಯನ್ನು ದುರಸ್ತು ಮಾಡಿಸಿಕೊಳ್ಳುತ್ತಾರೆಂದೂ, ಮಲನಾಡಿನಲ್ಲಿ ಕೆರೆಗಳ ಕಾಮಗಾರಿಯನ್ನು ಸರ್ಕಾರದವರು ವಹಿಸಿಕೊಂಡು ಮಾಡಿಸಬೇಕಲ್ಲದೆ ರೈತರು ಮಾಡಲಾರರೆಂದೂ ಅಭಿಪ್ರಾಯಪಟ್ಟರು ಇನ್ನು ಕೆಲವರು ಇನಾಂ ಗ್ರಾಮಗಳ ಕೆರೆಗಳ ಸ್ಥಿತಿಯೂ ಬಹಳ ಶೋಚನೀಯವಾಗಿರುವದರಿಂದ ಇನಾಂದಾರರು ಅನುಮತಿಪಟ್ಟರೆ ಸರ್ಕಾರದವರು ಅಂಥಾ ಇನಾಂ ಗ್ರಾಮಗಳ ಕೆರೆಗಳನ್ನು ಕಾಮಗಾರಿ ಮಾಡಿಸಿ ಖರ್ಚನ್ನು ದಾಮಾಷಾಲು ಪ್ರಕಾರ ಇನಾಂದಾರರಿಂದ ಪಂಚಿಮಾಡಿ ವಸೂಲ್ಮಾಡಬೇಕೆಂದು ಹೇಳಿದರು

ಕಳೆದ ಭಾನುವಾರ ಬೆಳಿಗ್ಗೆ ಪ್ರತಿನಿಧಿ ಸಭೆಯಲ್ಲಿ ದಿವಾನ್‌ರವರು ಪ್ರತಿನಿಧಿಗಳನ್ನು ಕುರಿತು ಹೇಳಿದ್ದೇನೆಂದರೆ—ಈ ಸಣ್ಣ ಕೆರೆಗಳ ಕಾಮಗಾರಿ ನಡೆಯುವುದಕ್ಕೆ ಆಲೋಚನೆಮಾಡಿ ಕಾರ್ಯ ಕ್ರಮವನ್ನು ಸೂಚಿಸುವುದಕ್ಕೋಸ್ಕರ ಒಂದು ಸಣ್ಣ ಕಮಿಟಿ ಮಾಡುತ್ತೇವೆ ಅದಕ್ಕೆ ಸರ್ಕಾರದ ತರಫಿನಲ್ಲಿ ರೆವಿನ್ಯೂ ಕಮಿಷನರನ್ನೂ, ಡೆಪ್ಯುಟಿ ಚೀಫ್ ಇಂಜಿನಿಯರನ್ನೂ ಸರ್ವೆ ಸೂಪರಿಂಟೆಂಡೆಂಟರನ್ನೂ ಕೊಡುವುದಲ್ಲದೆ ವಿಶೇಷ ಪರಿಶ್ರಮವುಳ್ಳಂಥಾ ಇನ್ನಿಬ್ಬರನ್ನು ಸಹಾಯಕ್ಕೆ ಕಳುಹಿಸುವೆವು ನಿಮ್ಮ ಸಭೆಯಿಂದ ಮೂರು ಮಂದಿಯನ್ನು ಚುನಾಯಿಸಿಕೊಡಿ ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಹೆಚ್ಚು ಕೆರೆಗಳಿರೋಣದರಿಂದ ಅವೆರಡು ಡಿಸ್ಟ್ರಿಕ್ಟುಗಳಿಗೂ ಒಬ್ಬೊಬ್ಬ ಮೆಂಬರ ಹೆಸರನ್ನು ತಿಳಿಸಿ ಕೆಲಸ ಜಾಗ್ರತೆಯಾಗಿ ನಡೆಯುವುದಕ್ಕಾಗಿ ಆರು ತಿಂಗಳೊಳಗೆ ಈ ಕಮಿಟಿಯವರ ಆಲೋಚನೆಯೆಲ್ಲಾ ನಡೆದು ಕ್ರಮಗಳು ನಿಷ್ಕರ್ಷೆಯಾಗ ಬೇಕಾಗಿರೋದರಿಂದ ಮೆಂಬರುಗಳು ಬಹುಮಾತನಾಡತಕ್ಕವರಾಗಿರದೆ ಕರೆದಾಗ ತಪ್ಪಿಸಿಕೊಳ್ಳದೆ ಮೀಟಿಂಗುಗಳಿಗೆ ಬಂದು ಕಷ್ಟಪಟ್ಟು ಕೆಲಸ ಮಾಡಿ ಜಾರಿಗೆ ಫಲವಾಗುವಂಥವರಾಗ ಬೇಕು ಎಂದು ಹೇಳಿದರು

ಮೆಂಬರುಗಳೆಲ್ಲಾ ಯೋಚಿಸಿ ತಮ್ಮ ಪ್ರತಿನಿಧಿಗಳನ್ನು ಕಮಿಟಿಗೆ ಚುನಾಯಿಸಿ ತಿಳಿಸಿದರು ಅವರ್‍ಯಾರೆಂದರೆ ಬೆಂಗಳೂರು ಅಡ್ವೊಕೇಟ್ ಮ|| ದಿ ವೆಂಕಟರಾಮಯ್ಯನವರು, ಕೋಲಾರದ ಮ|| ಗಿರಿವಾಜರಾಯರು, ಚಿಕ್ಕಮಗಳೂರಿನ ಮ|| ಸಿ ಶ್ರೀನಿವಾಸರಾಯರು

ದಿವಾನ್‌ರವರು ಮೆಂಬರುಗಳನ್ನು ಕುರಿತು ಬೇಗನೆ ಈ ಕಮಿಟಿಯನ್ನು ರಚಿಸಿ ಕಾರ್ಯಾರಂಭ ಮಾಡುವಂತೆ ಹುಕುಂ ಕೊಡುತ್ತೇವೆಂದು ಅಪ್ಪಣೆ ಕೊಡಿಸಿರುತ್ತಾರೆ

(3) ಮಲೆನಾಡನ್ನು ಅಭಿವೃದ್ಧಿ ಮಾಡುವುದು.

ಮಲೆನಾಡಿನಲ್ಲಿ ಪ್ರಜಾಕ್ಷೋಭೆಯಾಗುತ್ತಿರುವ ಭಾಗದಲ್ಲಿ ಮೈಸೂರು ಸರ್ಕಾರದವರೂ ಪ್ರಜೆಗಳೂ ಸಲವು ವರುಷಗಳಿಂದ ಚಿಂತೆ ಪಡುತ್ತಿದಾರಷ್ಟೆ ಈ ಪ್ರಜಾಲಯವನ್ನು ತಪ್ಪಿಸಿ ಅದನ್ನು ಅಭಿವೃದ್ಧಿಗೆ ತರುವುದಕ್ಕೆ ಸರ್ಕಾರದವರು ಈಚೆಗೆ ಒಂದು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿ ಕೆಲವು ಏರ್ಪಾಡುಗಳನ್ನು ಮಾಡಿಸಿರುತ್ತಾರೆ ಈ ವರುಷ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್‌ರವರು ಮೆಂಬರುಗಳನ್ನು ಕುರಿತು ಈ ವಿಚಾರದಲ್ಲಿ ಅವರಿಗೆ ಕಂಡು ಒಂದಿರುವ ಕಾರಣಗಳನ್ನೂ ಅವರಿಗೆ ತೋರುವ ಪರಿಹಾರಗಳನ್ನೂ ಸರ್ಕಾರಕ್ಕೆ ತಿಳಿಸ ಬೇಕೆಂದು ಕೇಳಿದರು. ಆಗ ಅನೇಕ ಮಂದಿ ಪ್ರತಿನಿಧಿಗಳು ದಿವಾನ್‌ರವರಿಗೆ ಅರಿಕೆ ಮಾಡಿದ ವಿಷಯಗಳೇನೆಂದರೆ—

ಅಲ್ಲಲ್ಲಿ ಒಂದೊಂದು ಗ್ರಾಮವನ್ನು ತೆಗೆದುಕೊಂಡು ಆದೇಮಾದ್ರಿ ಗ್ರಾಮವಾಗಿ ಇತರ ಸುತ್ತು ಮುತ್ತಿನ ಗ್ರಾಮಗಳಿಗೆ ಮೇಲ್ಪಂಕ್ತಿಯಾಗುವ ರೀತಿಯಲ್ಲಿ ಅದನ್ನು ಎಲ್ಲಾ ಬಾಗಗಳಲ್ಲೂ ಅಭಿವೃದ್ಧಿ ಮಾಡಬೇಕು ಜಂಗಲಿರುವುದನ್ನು ಕಡಿದು ಹಾಕಬೇಕು ಒಳ್ಳೇ ಕುಡಿಯುವ ನೀರು ಜನರಿಗೆ ಸುಲಭವಾಗಿ ಸಿಕ್ಕುವಂತೆ ಭಾವಿಗಳನ್ನು ತೋಡಿಸಬೇಕು ಆಸ್ಪತ್ರೆಗಳನ್ನು ಹೆಚ್ಚುಮಾಡಬೇಕು ಹೇಗೆ ಮಾಡುವುದರಲ್ಲಿ ತರಪೇತಾದ ಸೂಲಗಿತ್ತಿಯರನ್ನು ನೇಮಿಸಬೇಕು ವೈದ್ಯರಿಗೆ ಔಷದಗಳನ್ನು ಒದಗಿಸಿ ಅವರು ಊರಿಂದೂರಿಗೆ ಸಂಚಾರ ಮಾಡುತ್ತಾ ಅಲ್ಲಲ್ಲಿರುವ ರೋಗಿಗಳಿಗೆ ಚಿಕಿತ್ಸೆಮಾಡಿ ವಾಸಿಮಾಡುತ್ತಾ ಬರುವಂತೆ ಮಾಡಬೇಕು ಜಲಾಶಯಗಳ ಬಳಿಯಲ್ಲೂ ಕೆರೆ ಕಟ್ಟೆಗಳ ಏರಿಗಳ ಮೇಲೂ ಇರುವ ಗಿಡ ಮರಗಳನ್ನೂ, ಗ್ರಾಮಗಳ ಮುಂಭಾಗದಲ್ಲಿರುವ ಹುಣಿಸೆ ಮರಗಳನ್ನೂ ಕಡಿದು ಹಾಕಬೇಕು ಗ್ರಾಮದಿಂದ ಗ್ರಾಮಕ್ಕೆ ಧಾರಾಳವಾಗಿ ಸಂಚರಿಸುವುದಕ್ಕೆ ತಕ್ಕ ರಸ್ತೆಗಳನ್ನು ಮಾಡಿಸಬೇಕು ಜನರು ಮತ್ತು ಸರಕುಗಳ ಆಮದು ರಫ್ತಿಗೆ ಅಟಕ ಇಲ್ಲದೆ ಟ್ರಾಂವೇ, ರೈಲ್ ರಸ್ತೆ ಮುಂತಾದವುಗಳನ್ನು ಹಾಕಿಸಬೇಕು ರಸ್ತೆ ಕಾಮಗಾರಿ ಮಾಡುವುದಕ್ಕೆ ರೈತರು ಒಂದು ಕೆಲಸಮಾಡುವುದಕ್ಕೂ, ಕೆಲಸ ಮಾಡಲಾರದವರು ಹಣಕೊಡುವುದಕ್ಕೂ ಸ್ಥಳಾಧಿಕಾರಿಗಳ ಪ್ರೋತ್ಸಾಹವಿಲ್ಲದೆ ಇದ್ದರೆ [illegible] ಬೆಳೆದು ಕೊಂಡಿರುವ ಲಾಂಟಾನಾ, ಪಾರ್ಥೇನಿಯಂ ಗಿಡಗಳನ್ನು ಕಡಿದು, ಮನುಷ್ಯರಿಗೂ ದನಗಳಿಗೂ ಆರೋಗ್ಯಕರವಾದ [illegible] ಗಳು ಊರಿನ ಬಳಿಯಲ್ಲೇ [illegible] ಹಂದಿಗಳೂ [illegible] ನಾರುವಂತಹ [illegible] ಪ್ರೈವೇಟ್ ಪ್ಲಾಂಟರುಗಳು [illegible] ಗುರಿಪಡಿಸುತ್ತಾರೆ ಈ ಕಾಟವನ್ನು [illegible] ಹಾಲು ಮನುಷ್ಯನ ಉಪಕಾರಕ್ಕೆ [illegible] [illegible] ನವರ [illegible] ಕಾರಿಗಳನ್ನೂ ಪ್ರಜೆಗಳ ಮುಖಂಡರನ್ನೂ [illegible] ದು ಕಮಿಟಿಯನ್ನು ಏರ್ಪಾಡು ಮಾಡಿಕೊಡಬೇಕು

ಇನ್ನೊಂದು ವಿಶೇಷವಾದ ಕೊರತೆಯು ಮಲೆನಾಡಿಗೆ ಉಂಟು ಸಾಹುಕಾರರು ದಿನಕ್ಕೆ ರೂಪಾಯಿಗೆ ಒಂದು ಕಾಸಿನಂತೆ ಬಡ್ಡಿ ವಸೂಲ್ಮಾಡುತ್ತಾರೆ ರೈತನಿಗೆ ಬೇಕಾಗುವ ದವಸವನ್ನೆಲ್ಲಾ ಸಾಹುಕಾರರೇ ಸಾಲವಾಗಿ ಒದಗಿಸಿ ವಸೂಲ್ಮಾಡಿಕೊಳ್ಳೋಣದ್ದರಿಂದ ರೈತರಿಗೆ ಊಟ ಮಾಡಲು ಸಾಕಾದ ಆಹಾರವಿಲ್ಲದೆ ಗೆಣಸುಗಳನ್ನು ಅನಾರೋಗ್ಯಕರವಾದ ಹಣ್ಣುಗಳನ್ನೂ ತಿಂದು ಕೆಟ್ಟ ನೀರು ಕುಡಿದು ರೋಗ ಹಿಡಿದು ಸಾಯುತ್ತಾರೆ ಈ ಬಡ್ಡಿಯ ದರವನ್ನು ಕಡಮೆ ಮಾಡುವ ಏರ್ಪಾಡಾದರೆ ರೈತನು ಬದುಕುತ್ತಾನೆ ಕೋಆಪರೇಟಿವ್ ಸೊಸೈಟಿಗಳು ಅಲ್ಲಿ ಅಭಿವೃದ್ಧಿ ಹೊಂದುವುದಿಲ್ಲ ಟ್ಯೂಕಿರಿ ಲೈಸೆನ್ಸಿನಲ್ಲಿ "ಪರಿಜನ" ಎಂಬವರ ಹೆಸರನ್ನೂ ದಾಖಲ್ ಮಾಡಿ ಕೊಡುವಂತೆ ಹುಕುಂ ಆಗಬೇಕು ಪಾರೆಸ್ಟ್ ಇಲಾಖೆಯವರು ಫಾರೆಸ್ಟ್ ಬೇಲಿಯನ್ನು ಗ್ರಾಮಗಳ ಹತ್ತಿರಕ್ಕೆ ಬೆಳೆಸಿದ್ದಾರೆ ಇದನ್ನು ಎರಡು ಮೈಲು ಆಚೆಗೆ ಹಾಕಬೇಕು ಜಮೀನನ್ನು ಕೇಳುವವರಿಗೆ ದಯಾಳುವಾಗಿ ಕೊಡಬೇಕು ಜನರು ದಕ್ಷಿಣ ಕನ್ನಡ ಸೀಮೆಯಿಂದ ಬಂದು ನಿಲ್ಲುವುದಕ್ಕೆ ಪ್ರೋತ್ಸಾಹವಾದೀತು ಈಗ ಫಾರೆಸ್ಟಿನೊಳಗೆ ಸೇರಿ ಹೋಗಿರುವ ಗದ್ದೆಗಳನ್ನು ದರಖಾಸ್ತು ಹಾಕಿ ಕೇಳುವವರಿಗೆ ಬೇಗನೆ ಸುಲಭವಾಗಿ ಕೊಡಿಸುವಂತಾಗಬೇಕು

ಮ|| ಎಚ್ ಕೃಷ್ಣಶಾಸ್ತ್ರಿಗಳು — ನಾನು ಮಲೆನಾಡಿನ ಪ್ರಜೆಯಲ್ಲನನ್ನನ್ನು ಕೆಲವು ಅಂಗಸೇವಕ ಸಂಘದವರು ಕರೆದುಕೊಂಡು ಹೋಗಿದ್ದರು ನಾನು ಆ ಪ್ರಾಂತ್ಯದಲ್ಲೆಲ್ಲಾ ಸಂಚಾರಮಾಡಿ ಅಲ್ಲಿನ ಸ್ಥಿತಿಗತಿಯನ್ನು ಕಣ್ಣುಮುಟ್ಟಿಗೆ ನೋಡಿ ಮಲೆನಾಡಿನ ಅನೇಕ ಸಹಸ್ರ ಪ್ರಜೆಗಳ ಬಳಿಯ ಹಿತವನ್ನು ಬಯಸಿ ಕೆಲವು ದಿನ ಉಪನ್ಯಾಸಗಳನ್ನು ಮಾಡಿರುತ್ತೇನೆ ಅಲ್ಲಿ ಜನರು ಸಾಮಾನ್ಯವಾಗಿ ತುಂಬಾ ಬಡವರಾಗಿದಾರೆ ಅವರಿಗೆ ಸಾಲಗಾರರ ಕಾಟ ತಪ್ಪುವಂತೆ ಸರ್ಕಾರದವರು ಸಾಲ ಕೊಡಿಸಬೇಕು ವಯಸ್ಸಾಗಿದ್ದರೂ ಕೂಡ ಅನೇಕಾನೇಕರು ಮದುವೆ ಮಾಡಿಕೊಳ್ಳದೆ ಸಂಸಾರಿಗಳಾಗಿಲ್ಲ ಸಂಸಾರಿಗಳಾಗಿರುವವರಿಗೆ ಸರ್ಕಾರದವರು ಪ್ರೋತ್ಸಾಹವನ್ನೂ ದ್ರವ್ಯ ಸಹಾಯವನ್ನೂ ಮಾಡಬೇಕು ಊರುಗಳು ಪಟ್ಟಣದಿಂದ 4 ಮೈಲಿ ಆಚೆಯೂ, ಹೋಬಳಿಗಳಿಂದ 2 ಮೈಲಿ ಆಚೆಯೂ, ಗ್ರಾಮಗಳಿಂದ 1 ಮೈಲಿ ಆಚೆಯೂ ಇರುವಂತೆ ದೂರ ಮಾಡಬೇಕು ಜನರು ಸಿಕ್ಕಿದ ಹಣ್ಣುಗೆಡ್ಡೆಗಳನ್ನು ತಿನ್ನುವುದನ್ನು ತಪ್ಪಿಸಬೇಕು ಅವರು ಧಾನ್ಯ (ಕಾಳು) ಗಳನ್ನು ತಿಂದೇ ಅರಿಯರು ಇದು ಮನುಷ್ಯನ ದೇಹ ಬೆಳವಣಿಗೆಗೆ ಅತ್ಯಾವಶ್ಯಕವಾದದ್ದರಿಂದ ಅದನ್ನು ತಿನ್ನುವಂತೆ ಜನಗಳಿಗೆ ಆಗಾಗ್ಗೆ ವಿವೇಕ ಹೇಳುತ್ತಿರಬೇಕು ಸರ್ಕಾರದವರು ಇಷ್ಟಪಟ್ಟು ನನಗೆ ಅಪ್ಪಣೆ ಕೊಟ್ಟರೆ ನಾನು ನಾಲ್ಕೈದು ವರುಷಕಾಲದ ತನಕ ಮಲೆನಾಡಿನಲ್ಲಿ ಸಂಚಾರ ಮಾಡುತ್ತಾ, ಸರ್ಕಾರದವರು ನಿರ್ಧರಿಸುವ ಅಭಿವೃದ್ಧಿ ಕ್ರಮಗಳನ್ನು ರೂಢಿಸುವಂತೆ ಪ್ರಜೆಗಳಿಗೆ ಬೋಧನೆ ಮಾಡುತ್ತಾ ಬರಲು ಸಿದ್ಧನಾಗಿದ್ದೇನೆ

ದಿವಾನ್‌ರವರು ಮೆಂಬರುಗಳ ಹೇಳಿಕೆಯನ್ನೆಲ್ಲಾ ಗುರುತು ಮಾಡಿಕೊಂಡು, ಪರೋಪಕಾರಕ್ಕಾಗಿ ಮಾತುಕೊಟ್ಟ ಮ|| ಕೃಷ್ಣಶಾಸ್ತ್ರಿಗಳ ಮಾತುಗಳನ್ನು ಅವರ ಉತ್ಸಾಹವನ್ನೂ ಕೇಳಿ ನೋಡಿ ತುಂಬಾ ಸಂತೋಷಪಟ್ಟು ಈ ವಿಚಾರವನ್ನು ಬೇಗನೆ ಇತ್ಯರ್ಥ ಮಾಡುತ್ತೇವೆಂದು ಹೇಳಿದರು

(4) ಪ್ರಜಾಪ್ರತಿನಿಧಿಸಭೆಯ ರಚನೆಯನ್ನು ತಿದ್ದುವುದು ಮತ್ತು ಚರ್ಚೆಗೆ ಬರುವ ವಿಷಯಗಳನ್ನು ಕಡಮೆ ಮಾಡುವುದು.

ಕಳೆದ ಬುಧವಾರ ಮಧ್ಯಾಹ್ನ 12 ಗಂಟೆಗೆ ಪ್ರಜಾಪ್ರತಿನಿಧಿಸಭೆಯು ಸೇರಿದಾಗ ದಿವಾನ್‌ರವರು ಮೇಲ್ಕಂಡ ವಿಷಯಗಳನ್ನು ಕುರಿತು ಮೆಂಬರುಗಳಿಗೆ ತಿಳಿಸಿದ್ದೇನೆಂದರೆ—ಮೈಸೂರು ಪ್ರಜಾಪ್ರತಿನಿಧಿಸಭೆಗೆ ಈಗ 300 ಮೆಂಬರುಗಳು ಇದ್ದು, ಈ ಸಲ ಆ ಪೈಕಿ 235 ಮಂದಿ ಬಂದಿರುತ್ತಾರೆ ಪ್ರಪಂಚದ ಯಾವ ಕ್ರಮಪಟ್ಟ ರಾಜ್ಯದಲ್ಲೂ ನಮ್ಮಲ್ಲಿರುವಷ್ಟು ಪ್ರತಿನಿಧಿಗಳು ಇರುವುದಿಲ್ಲ ನಮ್ಮ ಪ್ರಜಾಸಂಖ್ಯೆಗೆ ಇಷ್ಟು ಮಂದಿ ಮೆಂಬರುಗಳು ಇರುವುದು ಬಹಳ ಹೆಚ್ಚಾಗಿ

ಇಷ್ಟು ಹೆಚ್ಚು ಪ್ರತಿನಿಧಿಗಳನ್ನಿಟ್ಟುಕೊಂಡು ತೃಪ್ತಿಕರವಾಗಿ ಕೆಲಸಗಳನ್ನು ನಡೆಸುವುದು ಪ್ರಯಾಸ. ಆದಕಾರಣ ನೀವು ಈ ಭಾಗವನ್ನು ಚೆನ್ನಾಗಿ ಪರ್ಯಾಲೋಚಿಸಿ ನಮ್ಮ ಪ್ರತಿನಿಧಿಗಳ ಸಂಖ್ಯೆಯನ್ನು ಯಾವರೀತಿಯಲ್ಲಿ ಕಡಮೆ ಮಾಡಬಹುದೋ ಸಲಹೆಗಳನ್ನು ಕೊಡಬೇಕೆಂದು ಕೋರುತ್ತೇನೆ. ಇದಲ್ಲದೆ ಪ್ರತಿನಿಧಿ ಸಭೆಯಲ್ಲಿ ಚರ್ಚೆಗಳು ನಡೆಯುವ ಭಾಗದಲ್ಲಿ ಯಾವದೊಂದು ಕ್ರಮವೂ ಇದುವರೆಗೆ ರೂಢಿಗೆ ಬಂದಿರುವುದಿಲ್ಲ. ಕ್ರಮವಿಲ್ಲದಿದ್ದರೆ ಯಾವುದೂ ಸರಿಯಾಗಿ ನಡೆಯಲಾರದಾದಕಾರಣ ನೀವುಗಳು ಯಾವಕ್ರಮಗಳು ಬೇಕೆನ್ನುವಿರೋ ಅದನ್ನು ಯೋಚಿಸಿ ಸೂಚಿಸಬೇಕು. ಕ್ರಮವಿಲ್ಲದ್ದರಿಂದ ನಾವು ಮುಂದರಿಸುವುದೂ, ಈ ಸಭೆಯನ್ನು ಅಭಿವೃದ್ಧಿಗೆ ತರುವುದೂ ಬಹಳ ಕಷ್ಟ. ಬಿ.ಎ. ಮೊದಲಾದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ವಿದ್ಯಾವಂತರನ್ನು ಈ ಸಭೆಗೆ ಮೆಂಬರಾಗಿ ಸೇರಿಸಿಕೊಳ್ಳಬೇಕೆಂಬುವ ಸಲಹೆಯೊಂದು ಉಂಟಾಗಿದೆ. ಈ ಭಾಗದಲ್ಲೂ ನಿಮ್ಮ ಅಭಿಮತವನ್ನು ತಿಳಿಸಬೇಕು. ಪಟೇಲರೂ ಶ್ಯಾನುಭೋಗರೂ ಸರ್ಕಾರದ ತರ್ಫಿನವರೆಂದೂ, ಅವರನ್ನು ಮೆಂಬರಾಗಿ ಬಾರದಂತೆ ತಡೆಯಬೇಕೆಂದೂ ನಿಮ್ಮಲ್ಲಿ ಕೆಲವರು ಸೂಚಿಸಿದಾರೆ. ಮೆಂಬರಾಗಿ ಚುನಾಯಿಸಲ್ಪಟ್ಟವರಲ್ಲಿ ಕೆಲವರು ಸಭೆಗೆ ಹಾಜರಾಗದೆ ನಿಂತುಬಿಡುತ್ತಾರೆ, ಇನ್ನು ಕೆಲವರು ಒಂದೆರಡು ದಿನ ಸಭೆಯಲ್ಲಿದ್ದು ಊರಿಗೆ ವಾಪಸು ಹೋಗುತ್ತಾರೆ; ಮತ್ತೆ ಕೆಲವರು ವಿಷಯಗಳನ್ನು ಸೂಚಿಸಿ, ಅದರ ಸರದಿ ಕೂಗಿದಾಗ ಆ ವಿಷಯವನ್ನು ವಾಪಸು ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಹಾಗೆ ಸಭೆಗೆ ಬಾರದೆ ನಿಂತುಬಿಡತಕ್ಕವರನ್ನು, ಒಂದೆರಡುದಿನ ಇದ್ದು ತಿಳಿಸದೆ ಹೊರಟುಹೋಗತಕ್ಕವರನ್ನೂ ಮತ್ತೆ ಆಯಾ ಸ್ಥಳದವರು ಚುನಾಯಿಸಿ ಕಳುಹಿಸದಂತೆ ತಡೆಯುವುದು ಒಳ್ಳೇದಲ್ಲವೇ? ಯಾಕೆಂದರೆ ಅಂಥಾವರು ತಮ್ಮ ಜವಾಬ್ದಾರಿಯನ್ನೂ ತಮ್ಮ ಕರ್ತವ್ಯವನ್ನೂ ಅಲಕ್ಷ್ಯವಾಗಿ ಎಣಿಸುವರೆಂಬ ಊಹೆ ಬರುತ್ತದೆ.

ಇನ್ನೊಂದು ಮುಖ್ಯ ವಿಚಾರವೇನೆಂದರೆ, ಮೆಂಬರುಗಳು ಸಭೆಯಲ್ಲಿ ಚರ್ಚೆಗೆ ತರಬೇಕೆಂದು ಸೂಚಿಸುವ ವಿಷಯಗಳ ಸಂಖ್ಯೆಯು ವರುಷೇವರುಷ ಹೆಚ್ಚುತ್ತಬಂದಿದೆ. ಇಷ್ಟೊಂದು ವಿಚಾರಗಳನ್ನು ಸಾವಧಾನವಾಗಿಯೂ ಸಮರ್ಪಕವಾಗಿಯೂ ಚರ್ಚೆಮಾಡುವುದು ಸಾಧ್ಯವಲ್ಲ. ಈ ಸಲ ನಾವು 300 ವಿಷಯಗಳನ್ನು ಚರ್ಚಿಸಬೇಕಾಗಿದೆ. ಇದಕ್ಕೆ 7-8 ದಿನ ಹಿಡಿಯುತ್ತದೆ; ಆದರೂ ತೃಪ್ತಿಕರವಾಗಿ ಸಾಗುವುದಿಲ್ಲ. ಈ ವಿಷಯಗಳನ್ನು ಯಾವರೀತಿ ಕಡಮೆ ಮಾಡಬಹುದೋ ನೀವು ಯೋಚಿಸಿ, ತಿಳಿಸಬೇಕು. ಈ ಸಭೆಯನ್ನು ವರುಷಕ್ಕೆ ಎರಡಾವರ್ತಿ ನಡೆಸಬೇಕೆಂದು ವರುಷೇವರುಷ ಕೇಳುತ್ತಾ ಬಂದಿದ್ದೀರಿ. ಇಷ್ಟು ಹೆಚ್ಚು ಮೆಂಬರುಗಳನ್ನು ಇಟ್ಟುಕೊಂಡು ಇಷ್ಟು ಹೆಚ್ಚು ವಿಷಯಗಳನ್ನು ಚರ್ಚಿಸುವುದಕ್ಕೆ ಎರಡುಸಲ ಸಭೆಯನ್ನು ನಡಿಸುವುದು ಸಾಧ್ಯವೋ? ಮೆಂಬರುಗಳ ಸಂಖ್ಯೆಯನ್ನೂ, ವಿಷಯಗಳ ಸಂಖ್ಯೆಯನ್ನೂ ಬಹಳ ಮಟ್ಟಿಗೆ ಕಡಮೆ ಮಾಡುವ ಕ್ರಮವನ್ನು ನೀವು ಸೂಚಿಸಿದರೆ ಅದು ಸಾಧ್ಯವಾದರೂ ಆಗಬಹುದು. ನವರಾತ್ರಿ ಉತ್ಸವ ಕಾಲದಲ್ಲಿ ಈ ಸಭೆಗಾಗಿ 5 ದಿನಗಳನ್ನೂ, ವರ್ಷಾಂತಕಾಲದಲ್ಲಿ 3 ದಿನಗಳನ್ನೂ ವಿನಿಯೋಗಿಸಬಹುದೆಂಬ ಊಹೆ ಇದೆ. ಮೆಂಬರುಗಳ ಸಂಖ್ಯೆಯನ್ನು ತಾಲ್ಲೂಕಿಗೆ ಇಬ್ಬರು, ಡಿಸ್ಟ್ರಿಕ್ಟ್ ಬೋರ್ಡಿಗೆ ಇಬ್ಬರು, ದೊಡ್ಡ ಮ್ಯುನಿಸಿಪಾಲಿಟಿಗೆ ಇಬ್ಬರು, ಸಣ್ಣ ಮ್ಯುನಿಸಿಪಾಲಿಟಿಗೆ ಒಬ್ಬರು, ಸಂಘಗಳಿಗೆ ಒಬ್ಬರು, ಈ ಕ್ರಮವು ವಿಧಾಯಕವಾದರೆ ಸಾಲದೇ? ಹೀಗೆಮಾಡಿದರೆ ಈ ಸಭೆಯನ್ನು ವರುಷಕ್ಕೆ ಎರಡುಸಲ ಕೂಡಿಸಿ ನಡಿಸುವ ಭಾಗವನ್ನು ಯೋಚಿಸಬಹುದು. ಪ್ರತಿ ಡಿವಿಷನ್ ಸ್ಟಾಂಡಿಂಗ್ ಕಮಿಟಿ (ಮಿಗೆ ಬೇಕೆಂದು) ಕೇಳುತ್ತೀರಾ? ಈಗ ಪ್ರತಿ ಡಿಸ್ಟ್ರಿಕ್ಟಿನ ಹೆಡ್ ಕ್ವಾರ್ಟರಿನಲ್ಲೂ ನಡೆಯುವ ಪ್ರತಿನಿಧಿಗಳ ಪ್ರಿಲಿಮಿನರಿ ಮೀಟಿಂಗುಗಳು ಅವಶ್ಯವೇ? ಅದನ್ನು ಏತಾಮಾಡಿದರೆ ಅನುಕೂಲವಾಗುವುದೇ? ಈ ಪಟಾಂಗಗಳನ್ನೆಲ್ಲಾ ಕುರಿತು ನಿಮ್ಮ ಯೋಚಿಸಿ ನಿಮ್ಮ ಅಭಿಪ್ರಾಯಗಳನ್ನು ಗವರ್ನ್ಮೆಂಟಿಗೆ ತಿಳಿಸಬೇಕು ಎಂಬದಾಗಿ ದಿವಾನ್‌ರವರು ಅಪ್ಪಣೆಕೊಡಿಸಿದರು.

ಪ್ರತಿನಿಧಿಗಳು ಮಲ್ಕಂಡ ವಿಷಯದಲ್ಲಿ ದಿವಾನ್‌ರವರಿಗೆ ಅರಿಕೆ ಮಾಡಿದ ಸಂಗತಿಗಳ ಮುಖ್ಯಾಂಶಗಳೇನೆಂದರೆ: ಮೆಂಬರುಗಳ ಸಂಖ್ಯೆಯನ್ನು ಕಡಮೆ ಮಾಡಕೂಡದು. ಇತರ ರಾಜ್ಯಗಳ ಸ್ಥಿತಿಗತಿಯ ಕೂಡ ನಮ್ಮ ಸೀಮೆಯನ್ನು ಹೋಲಿಸಬಾರದು. ಈ ಸಭೆಯಲ್ಲಿ 30 ವರುಷಗಳಿಂದ ನಡೆದುಬಂದಿರುವ ಅಧಿಕಾರದ ಕ್ರಮಗಳನ್ನು ಸ್ವಲ್ಪವಾದರೂ ಕಡಮೆ ಮಾಡುವುದು ಸರಿಯಲ್ಲ. ಸಂಸ್ಥಾನದಲ್ಲಿ ರೈತರಿಗೂ ವರ್ತಕರಿಗೂ ಇರುವ ಕುಂದುಕೊರತೆಗಳನ್ನೂ, ಕಷ್ಟನಷ್ಟಗಳನ್ನೂ ಗವರ್ನ್ಮೆಂಟಿನವರ ಸನ್ನಿಧಾನದಲ್ಲಿ ಅರಿಕೆ ಮಾಡಿಕೊಳ್ಳುವದಕ್ಕೂ, ಗವರ್ನ್ಮೆಂಟಿನವರ ಅಭಿಮತ ಉದ್ದೇಶ ಕಾರ್ಯಕ್ರಮಗಳನ್ನು ಸಾಕ್ಷಾತ್ತಾಗಿ ಕೇಳಿ ತಿಳಿದುಕೊಳ್ಳುವುದಕ್ಕೂ ನಮ್ಮ ಲೇಟ್ ಮಹಾರಾಜರವರು ಈ ಸಭೆಯನ್ನು ಸ್ಥಾಪಿಸಿರುತ್ತಾರೆ. ಅವರು ಪ್ರಾರಂಭಿಸಿದಾರಭ್ಯ ಇದುವರೆಗೆ ನಡೆದುಬಂದಿರುವ ರೀತಿಯಲ್ಲೇ ಈ ಸಭೆಯನ್ನು ಇಟ್ಟು ಕಾಪಾಡಿಕೊಂಡು ಬರಬೇಕು. ಬಿ.ಎ. ಮೊದಲಾದ ಹೆಚ್ಚು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ಮಾತ್ರಕ್ಕೇ ಗ್ರಾಮಾಂತರಗಳಲ್ಲಿರುವ ರೈತರ ಮತ್ತೂ ವರ್ತಕರ ಕುಂದುಕೊರತೆಗಳು ಅವರಿಗೂ ಪರಿಚಯವಾಗುವುದು ಕಷ್ಟ. ಅವರು ಮೆಂಬರಾಗಿ ಬರಬೇಕಾದ್ದು ಅವಶ್ಯವೆಂದು ಗವರ್ನ್ಮೆಂಟಿನ ತೋರಿದರೆ ಬಿ.ಎ. ಪ್ಯಾಸ್‌ಮಾಡಿದವರು ಯಾವ ಸ್ಥಳದಿಂದ ಚುನಾಯಿಸಲ್ಪಡಬೇಕೋ ಅಂಥಾ ಸ್ಥಳದಲ್ಲಿ ಕಡೇ ಪಕ್ಷ 3 ವರುಷಗಳಾದರೂ ವಾಸಸ್ಥರಾಗಿರಬೇಕೆಂದು ವಿಧಿಸಬಹುದು. ಪಟೇಲರು ಶ್ಯಾನುಭೋಗರೂ ಈಗಿನಂತೆ ಮೆಂಬರುಗಳಾಗಿ ಇದ್ದೇ ತೀರಬೇಕು. ಅವರಿಗೆ ರೈತ ಪ್ರಜೆಗಳ ಯೋಗಕ್ಷೇಮವೂ, ಸ್ಥಳೀಯ ವಿದ್ಯಮಾನಗಳೂ ತಿಳಿದಿರುವ ಹಾಗೆ ಇತರರಿಗೆ ತಿಳಿಯುವುದಿಲ್ಲ. ಅವರು ಸರ್ಕಾರದ ತಾಬೇದಾರರೇನೂ ಅಲ್ಲ, ಅವರಿಗೆ ಆ ಕೆಲಸ ಗೌರವಾರ್ಥವಾಗಿರುತ್ತದೆ. ಅವರಿಗೆ ಕ್ರಮವಾದ ಮತ್ತು ಸಹಾಯ ಹಣವನ್ನು ಸರ್ಕಾರದವರು ನಿಗದಿಮಾಡಿ ಕೊಡುವುದಿಲ್ಲ. ಕೆಲವು ಮೆಂಬರುಗಳು ಸ್ವಂತ ಅನನುಕೂಲದಿಂದ ಸಭೆಗೆ ಬಾರದೆ ನಿಂತುಬಿಡುತ್ತಾರಲ್ಲದೆ ಅವರ ಉತ್ಸಾಹವಾಗಲಿ ಪ್ರಜಾಪಾತ್ಸಲ್ಯವಾಗಲಿ ಎಳ್ಳಷ್ಟೂ ಕಡಮೆಯಾಗಿಲ್ಲ. ಇಲ್ಲಿ ಬಂದ ಮೆಂಬರುಗಳಲ್ಲಿ ಕೆಲವರು ಒಂದೆರಡು ದಿನ ಇದ್ದು ವಾಪಸು ಹೋಗುತ್ತಾರೆ. ಕಾರಣವಾದರೂ ಅವರು ದಿವಾನ್‌ರವರ ಅಪ್ಪಣೆ ಪಡೆಯದೆ ಹೋಗುವುದು ತರವಲ್ಲವೆಂದು ಒಪ್ಪಿಕೊಳ್ಳುತ್ತೇವೆ.

ಚರ್ಚೆಗೆ ಬರುವ ವಿಷಯಗಳು ಹೆಚ್ಚುತ್ತಾ ಬಂದಿರುವುದಕ್ಕೆ ಕಾರಣವೇನೆಂದರೆ, ಅನೇಕ ವಿಷಯಗಳು ಹಿಂದಿನ ವರುಷಗಳಲ್ಲಿ ಚರ್ಚೆ ನಡೆದವುಗಳಾಗಿರುತ್ತವೆ. ಅವುಗಳ ವಿಷಯದಲ್ಲಿ ದಿವಾನ್‌ರವರು "ಆಲೋಚಿಸೆಯಲ್ಲಿದೆ" ಎಂದೂ, "ಗುರುತುಮಾಡಿಕೊಂಡಿದೇವೆ" ಎಂದೂ ಉತ್ತರವನ್ನು ಹೇಳುತ್ತಾರೆ. ಆ ವಿಷಯಗಳು ಇತ್ಯರ್ಥವಾಗದೆ ಇರೋಣದರಿಂದ ಮತ್ತೆ ಮತ್ತೆ ಅವು ಬರುವವು. ಇದಲ್ಲದೆ ಇನ್ನು ಕೆಲವು ವಿಷಯಗಳಿಗೆ "ಇದು ಆಗಲಾರದು," "ಇದು ಸಾಧ್ಯವಿಲ್ಲ" ಎಂಬ ಉತ್ತರ ಬರುತ್ತದೆ. ಈ ವಿಷಯಗಳು ಪ್ರಜೆಗಳಿಗೆ ಕಷ್ಟನಷ್ಟವಾಗಿರೋಣದರಿಂದ ಅದನ್ನು ಪರಿಹರಿಸಿಕೊಳ್ಳಬೇಕೆಂದು ಮೆಂಬರುಗಳು ಮತ್ತೆ ಕೇಳುತ್ತಾರೆ. ಪರಿಹಾರವಾಗುತ್ತಾ ಬಂದಪಕ್ಷದಲ್ಲಿ ಅವು ಮತ್ತೆ ಬರುವುದಿಲ್ಲ. ಇದರಿಂದಲೇ ವಿಷಯಗಳು ಹೆಚ್ಚೆಂದು ಕಾಣುವವು. ವರುಷಕ್ಕೆ ಸಭೆಯನ್ನು ಎರಡುಸಲ ನಡೆಯುವಂತೆ ಮಾಡಿಕೊಟ್ಟರೆ ಆಯಾ ವರುಷದ ವಿಷಯಗಳೆಲ್ಲಾ ಚರ್ಚೆಯಾಗುತ್ತವೆ. ಹಾಗೂ ಹೆಚ್ಚೆಂದು ಕಂಡುಬಂದಲ್ಲಿ ಜನರಲ್ ಯಾನೆ ಸಂಸ್ಥಾನಮುಖೇ ವ್ಯವಹರಿಸುವ ಸಾಮಾನ್ಯ ವಿಷಯಗಳನ್ನು, ಲೋಕಲ್ ಯಾನೆ ಸ್ಥಳೀಯ ವಿಷಯಗಳು 100 ಕ್ಕೂ ಮಿಗದಂತೆ ವಿಧಿಸಬಹುದು ಮತ್ತು ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಅಧಿಕಾರಿಗಳು ಪ್ರಜೆಗಳ ಕುಂದುಕೊರತೆಗಳನ್ನು ವಿಚಾರಿಸಿ ಅಲ್ಲಲ್ಲೇ ವ್ಯವಸ್ಥೆಮಾಡಿದರೆ ಬರುವ ವಿಷಯಗಳ ಸಂಖ್ಯೆಯು ಕಡಮೆಯಾದೀತು. ಇದಲ್ಲದೆ ಸಭೆಗೆ ಬರುವ ವಿಷಯಗಳ ಪೈಕಿ ಮುಖ್ಯವಾದವುಗಳನ್ನು ಗವರ್ನ್ಮೆಂಟಿನವರು ಒಂದು ಕಮಿಟಿ ಮಾಡಿ ಚುನಾಯಿಸಿಕೊಂಡು ಮೊದಲು ಅಂಥವುಗಳನ್ನು ಚೆನ್ನಾಗಿ ಚರ್ಚೆಯಾಗುವಂತೆ ಮಾಡಬಹುದು. ಈಗಿರುವ ಮೆಂಬರುಗಳ ಸಂಖ್ಯೆಯನ್ನು ಕಡಮೆ ಮಾಡಕೂಡದು, ಯಾಕೆಂದರೆ ಮೂರುವರುಷಕ್ಕೊಂದಾವರ್ತಿ ನಡೆಯುವ ಮೆಂಬರ ಚುನಾವಣೆಯಲ್ಲಿ ಹಿಂದಿನವರುಷ ಬಂದಿದ್ದವರು ಮತ್ತೆ ಬಾರದೆ ಹೋಗುತ್ತಾರೆ. ಹೊಸಬರು ಒಂದೆರಡು ವರುಷದ ಅನುಭವದಾತರಾದರೆ ವಿಷಯಗಳನ್ನು ಗ್ರಹಿಸಿ ಚರ್ಚೆಗಳನ್ನು ನಡಿಸಲು ಸಮರ್ಥರಾಗುತ್ತಾರೆ. ಮುಖ್ಯವಾಗಿ ಈ ಸಭೆಯು ಹಳಬರಾದ ಮೆಂಬರುಗಳು ಚರ್ಚೆ ನಡಿಸುವುದಕ್ಕೂ, ಹೊಸ ಮೆಂಬರುಗಳು ಚರ್ಚೆಗಳನ್ನು ಕೇಳಿ ಕಲಿಯಬೇಕಾಗುವುದಕ್ಕೂ ಅವಕಾಶವನ್ನು ಕೊಡತಕ್ಕಂಥಾದ್ದಾಗಿರಬೇಕು. ನಮಗೆ ಪ್ರತಿನಿಧಿಗಳ ಸ್ಟ್ಯಾಂಡಿಂಗ್ ಕಮಿಟಿ ಅವಶ್ಯವಿಲ್ಲ. ಆದರೆ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ನಡೆಯುವ ಪ್ರತಿನಿಧಿಗಳ ಪ್ರಿಲಿಮಿನರಿ ಮೀಟಿಂಗು ಇದ್ದೇ ತೀರಬೇಕು. ಈ ಮೀಟಿಂಗುಗಳಲ್ಲಿ ಮೆಂಬರುಗಳು ತರುವ ಅನೇಕ ವಿಷಯಗಳು ಚರ್ಚೆಯಾಗಿ ಸಾಧ್ಯವಾದವುಗಳನ್ನೆಲ್ಲಾ ಡಿಸ್ಟ್ರಿಕ್ಟ್ ಕಮಿಷನರುಗಳು ವ್ಯವಸ್ಥೆಗೆ ತಮ್ಮಲ್ಲೇ ಇಟ್ಟುಕೊಂಡು ಉಳಿದವುಗಳನ್ನೇ ಈ ಸಭೆಗೆ ಕಳುಹಿಸುತ್ತಾರೆ ಎಂಬದಾಗಿ ಮೆಂಬರುಗಳು ತಮ್ಮ ಅಭಿಮತವನ್ನು ದಿವಾನ್‌ರವರಿಗೆ ಅರಿಕೆಮಾಡಿದರು.

ದಿವಾನ್‌ರವರು ಮೇಲ್ಕಂಡ ಸಲಹೆಗಳನ್ನೆಲ್ಲಾ ಬಹು ಪ್ರೀತಿಯಿಂದಲೂ ಸಾವಧಾನವಾಗಿಯೂ ಆಲಿಸಿ ಪ್ರತ್ಯುತ್ತರವನ್ನು ಹೇಳಿದ್ದೇನೆಂದರೆ—ಪಟೇಲ್ ಶ್ಯಾನುಭೋಗರುಗಳನ್ನು ವಜಾಮಾಡುವುದಿಲ್ಲ. ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾವಂತರು 3 ವರುಷಕಾಲ ಒಂದು ಸ್ಥಳದಲ್ಲಿ ವಾಸಮಾಡುತ್ತಿದ್ದ ಪಕ್ಷದಲ್ಲಿ ಆ ಸ್ಥಳಕ್ಕೆ ಅವರನ್ನು ಪ್ರತಿನಿಧಿಯಾಗಿ ಚುನಾಯಿಸುವಂತೆ ಮಾಡಬೇಕೆಂದು ಆಲೋಚನೆಯುಂಟಾಗಿದೆ. ಮುಖ್ಯವಾಗಿ ನಾವು ಯಾವುದನ್ನೂ ನಿಷ್ಕರ್ಷೆ ಮಾಡಿಕೊಂಡಿಲ್ಲ; ಅದಕ್ಕೆ ನಮಗೆ ಸ್ವಾತಂತ್ರ್ಯವೂ ಕಡಮೆ. ನೀವು ತಿಳಿಸಿದ ಅಂಶಗಳನ್ನೆಲ್ಲಾ ಶ್ರೀಮನ್ಮಹಾರಾಜರವರ ಸನ್ನಿಧಾನದಲ್ಲಿ ಅರಿಕೆ ಮಾಡುತ್ತೇನೆಂದು ಖಂಡಿತವಾಗಿ ಹೇಳಬಲ್ಲೆನು ಎಂಬದಾಗಿ ತಿಳಿಸಿದರು.

* * *

(೨) ಎಕ್ಸ್‌ಪೋರ್ಟ್ ಯಾನೆ ರಫ್ತಾಯದಮೇಲಣ ತೆರಿಗೆ.

ಮೈಸೂರು ಸಂಸ್ಥಾನದಲ್ಲಿ ಪ್ರಜೆಗಳ ಮೇಲೆ ಈ ಹೊಸ ತೆರಿಗೆಯನ್ನು ಹಾಕಿ ವಸೂಲ್ಮಾಡಬೇಕೆಂಬ ಯೋಚನೆಯು ಸರ್ಕಾರದವರಲ್ಲಿ ಉಂಟಾಗಿದೆಯೆಂದು ಪ್ರಜಾ ಪ್ರತಿನಿಧಿಗಳಿಗೆ ಗೊತ್ತಾಗಿ, ಕಳೆದ ವರುಷ ಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ತಂದರು. ಆಗ ದಿವಾನ್‌ರವರು—"ಆದಕ್ಕೋಸ್ಕರ ಸರ್ಕಾರದವರು ಒಂದು ಕಮಿಟಿಯನ್ನು ಏರ್ಪಾಡು ಮಾಡಿದಾರೆ, ಇವರು ಈ ತೆರಿಗೆಯ ವಿಷಯದಲ್ಲಿ ಚರ್ಚೆನಡಿಸುತ್ತಿದಾರೆ" ಎಂಬದಾಗಿ ಅಪ್ಪಣೆ ಕೊಟ್ಟರು. ಈಚೆಗೆ ಈ ವಿಚಾರವನ್ನು ಸಂಪದಭ್ಯುದಯವೆಂಬ ಹೊಸ ಸಮಾಜದವರು ಪರ್ಯಾಲೋಚನೆ ಮಾಡಿ, ಈ ತೆರಿಗೆಯನ್ನು ಸಂಸ್ಥಾನಮುಖೇ ಹಾಕಬೇಕೆಂತಲೂ, ಅದರಲ್ಲಿ ಉತ್ಪತ್ತಿಯಾಗ ಬಹುದಾದ ಸುಮಾರು 1½—2 ಲಕ್ಷ ರೂಪಾಯನ್ನು ಪ್ರಥಮ ವಿದ್ಯಾಭ್ಯಾಸವನ್ನು ಹರಡುವುದಕ್ಕಾಗಿ ವಿನಿಯೋಗಿಸ ಬೇಕೆಂತಲೂ ತೀರ್ಮಾನಮಾಡಿ, ಗವರ್ನ್ಮೆಂಟಿಗೆ ತಿಳಿಸಿದರು.

ಕಳೆದ ತಾ 17 ನೇ ಶುಕ್ರವಾರ ಮಧ್ಯಾಹ್ನ ದಿವಾನ್‌ರವರು ಪ್ರತಿನಿಧಿ ಸಭೆಯಲ್ಲಿ ಮೆಂಬರುಗಳನ್ನು ಕುರಿತು—ಈ ಹೊಸ ಕಂದಾಯವನ್ನು ಹಾಕುವ ಭಾಗದಲ್ಲಿ ನಿಮ್ಮಗಳ ಅಭಿಮತವೇನೆಂದು ತಿಳಿಯಬೇಕಾಗಿದೆ. ನಾವು ಈ ಕಂದಾಯವನ್ನು ಹಾಕಬೇಕೆಂದಾಗಲಿ, ಹಾಕಬಾರದೆಂದಾಗಲಿ ನಿಶ್ಚಯಮಾಡಿಕೊಂಡಿಲ್ಲ. ಆದರೆ ನೀವು ಅದಾಗಬೇಕು, ಇದಾಗಬೇಕು ಎಂದು ಹೇಳುತ್ತಾ ಬಂದಿರುತ್ತೀರೇ ವಿನಹಾ ನಿಮ್ಮಿಂದ ಸಹಾಯವೇನು ಬಂದೀತೆಂಬ ಭಾಗವನ್ನು ಹೇಳುವವಿಲ್ಲ. ಎಲ್ಲಾ ಸರ್ಕಾರದವರೇ ಮಾಡಬೇಕಾದರೆ ಅದು ಅಸಾಧ್ಯ. ನೀವು ಹೆಚ್ಚು ಹೆಚ್ಚಾಗಿ ದ್ರವ್ಯವನ್ನೂ ಕಾಲವನ್ನೂ ಸರ್ಕಾರದವರಿಗೆ ಒದಗಿಸುತ್ತಾ ಬಂದಲ್ಲಿ ಕೊರತೆಗಳನ್ನೆಲ್ಲಾ ಒಂದೊಂದಾಗಿ ನಿವಾರಣೆಮಾಡಬಹುದು. ಈ ಹೊಸ ತೆರಿಗೆಯ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು ಎಂಬದಾಗಿ ಪ್ರಶ್ನೆಮಾಡಿದರು.

ಈ ತೆರಿಗೆಯನ್ನು ವಿಧಾಯಕಮಾಡಿ ವಸೂಲ್ಮಾಡಿ ದೇಶೋನ್ನತಿಯ ಕಾರ್ಯಗಳನ್ನು ನಡಿಸಬೇಕಾದದ್ದು ಅವಶ್ಯಕವೆಂದು ಮ॥ ಗಳಾದ ವಿ. ರಾಘವಾಚಾರ್ಯರು, ಎಸ್. ರಾಮಣ್ಣನವರು, ಎ. ಪಂಡಿತರು, ಕೇಶವಯ್ಯನವರು, ನರಸಿಂಹಯ್ಯನವರು, ಕೆ. ಕೃಷ್ಣಮೂರ್ತಿರಾಯರು, ಈ ಮೊದಲಾದವರು ತಮ್ಮ ಅಭಿಪ್ರಾಯವನ್ನು ಹೇಳಿದರು. ಅವರು ತಿಳಿಸಿದ ಮುಖ್ಯಾಂಶಗಳೇನೆಂದರೆ—ಈ ಹೊಸ ತೆರಿಗೆಯಿಂದ ರೈತರಿಗೆ ಯಾವತೊಂದರೆಯೂ ಇಲ್ಲ; ವರುಷಕ್ಕೆ 1,000 ರೂಪಾಯಿನೊಳಗೆ ವರಮಾನವುಳ್ಳ ಚಿಲ್ಲರೆ ನೌಕರರಿಗಾಗಲಿ, ಚಿಲ್ಲರೆ ವರ್ತಕರಿಗಾಗಲಿ, ಸ್ವಂತಬೆಳೆಗಾರರಿಗಾಗಲಿ ಈ ತೆರಿಗೆ ಬೀಳುವುದಿಲ್ಲ. ಅರ್ಥಶಾಸ್ತ್ರ, ಮನು, ವಸಿಷ್ಠ, ಗೌತಮ, ಇವರು ಹೇಳುವಂತೆ ಸಂಸ್ಥಾನದಲ್ಲಿ ಬಲ್ಲಿದರಾದೋ ಅವರೆಲ್ಲಾ ಸರ್ಕಾರಕ್ಕೆ ತಮ್ಮ ಪಾಲಿನ ದ್ರವ್ಯವನ್ನು ಒದಗಿಸಬೇಕಾಗಿದೆ. ದೇಶೋನ್ನತಿಗೆ ಪರ್ಯಾಪ್ತವಾದಷ್ಟು ಹಣವನ್ನು ಪ್ರಭುವು ನಿರ್ಬಂಧಮಾಡಿ ಹಣ ತೆಗೆದುಕೊಳ್ಳಬೇಕಾದದ್ದು ರಾಜಧರ್ಮವೂ ಪ್ರಜಾಸಮ್ಮತವೂ ಆಗಿದೆ. ರಫ್ತಾಗುವ ಸರಕುಗಳಿಗೂ ಜಮಾತಾಗಳಿಗೂ ಸುಂಕ ಹಾಕಕೂಡದು. ಲಬ್ಬೆ, ಮಾರ್ವಾಡಿ, ಮುಲ್ತಾನಿ, ನಾಟಕೋಟಿ, ಇವರುಗಳೆಲ್ಲಾ ಬಂದು ನಮ್ಮ ಸಂಸ್ಥಾನದಲ್ಲಿ ವ್ಯಾಪಿಸಿಕೊಂಡು ತುಂಬಾ ಲಾಭ ಸಂಪಾದನೆ ಮಾಡಿಕೊಂಡು ಹೋಗುತ್ತಿದಾರೆ. ಈ ತೆರಿಗೆಯನ್ನು ಜಾರಿಗೆ ತಂದರೆ ವಸೂಲುಮಾಡುವ ನೌಕರರಮೂಲಕ ಪ್ರಜೆಗಳಿಗೆ ಕಷ್ಟನಷ್ಟಗಳುಂಟಾಗುವವೆಂದು ಹೇಳುವುದು ಸಹಜವಲ್ಲ. ವರ್ತಕರೇ ಮುಂತಾದವರೆಲ್ಲಾ ಕ್ರಮವಾದ ಲೆಕ್ಕಗಳನ್ನು ಇಟ್ಟೇ ಇದಾರೆ. ಆ ಲೆಕ್ಕಗಳನ್ನು ನೋಡಿ ಯಾರಿಗೂ ತೊಂದರೆ ಆಗದಂತೆ ತೆರಿಗೆಯನ್ನು ವಸೂಲ್ಮಾಡಬಹುದು—ಗ್ರಾಮಾಂತರಗಳಲ್ಲಿರುವ ರೈತರಿಗೆ ಈಗ ಸರ್ಕಾರದಿಂದ ಯಾವದೊಂದು ಸಹಾಯವೂ ದೊರಕುತ್ತಾ ಇಲ್ಲ. ಅವರು ಕೊಡುವ ಕಂದಾಯದಿಂದ ಟವನ್‌ಗಳಲ್ಲಿ ವಾಸಮಾಡತಕ್ಕ ಪ್ರಜೆಗಳೇ ಎಲ್ಲಾ ಸೌಕರ್ಯಗಳನ್ನೂ ಅನುಭವಿಸುತ್ತಿದಾರೆ. ಆದಕಾರಣ ಈ ಟವನ್ ನಿವಾಸಿಗಳು ಗ್ರಾಮಾಂತರ ಪ್ರಜೆಗಳ ಕ್ಷೇಮಾಭಿವೃದ್ಧಿಗಾಗಿ ದ್ರವ್ಯವನ್ನು ಈ ತೆರಿಗೆಯ ರೂಪದಲ್ಲಿ ಕೊಟ್ಟು ಸಹಾಯಮಾಡಬೇಕು. ಈಗ ನಾವು ಅವರಿಗೆ ಯಾವ ಸಹಾಯವನ್ನೂ ಕೊಡುತ್ತಾ ಇಲ್ಲ.—ನಮ್ಮಲ್ಲಿ ಕೆಲವರು ರೈತರಾಗಿಯೂ ಲೇವಾದೇವಿಮಾಡತಕ್ಕವರಾಗಿಯೂ ಇದೇವೆ. ನಾವು ಬೆಳೆಯುವುದು ಒಂದಾದರೆ ಒಂಭತ್ತನ್ನು ಕೊಂಡು ತರಬೇಕು. ಇವೆರಡೂ ಒಂದಕ್ಕೊಂದು ಸಮನಾಗಿವೆ. ನಾವು ಇದಾಗಬೇಕು ಅದಾಗಬೇಕು ಎಂದು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುತ್ತೇವೆ. ಇಷ್ಟೇ. ಪ್ರತಿಮನುಷ್ಯನೂ ತನ್ನ ಆದಾಯದಲ್ಲಿ ಆರನೇ ಒಂದು ಭಾಗವನ್ನು ರಾಜನಿಗೆ ತಂದು ಕೊಡಬೇಕಾಗಿದೆ. ಇದು ನಮ್ಮ ಹಿರಿಯರಿಂದ ಆಚರಣೆಯಲ್ಲಿ ಬಂದ ಧರ್ಮ. ಈ ತೆರಿಗೆಯಿಂದ ಉತ್ಪತ್ತಿಯಾಗುವ 2 ಲಕ್ಷ ದ್ರವ್ಯದಿಂದಲೇ ವಿದ್ಯೆ ಹರಡುವ ಕೆಲಸ ಸಾರ್ಥಕವಾದೀತೆಂದು ಹೇಳಲಾಗದು. ಸರ್ಕಾರದವರು ಈ ತೆರಿಗೆಯನ್ನು ವಿಧಿಸಿ ನಮಗೆ ಬಾಧೆಯಾಗದ ರೀತಿ ವಸೂಲ್ಮಾಡುವ ಕ್ರಮಗಳನ್ನು ರೂಪಿಸಬೇಕೆಂಬುವುದೇ ನಮ್ಮ ಪ್ರಾರ್ಥನೆ.—ಈಚೆಗೆ ಕಾಲಕ್ಕೆ ಸರಿಯಾಗಿ ಮಳೆ ಬಾರದೆ ಎಲ್ಲೆಲ್ಲೂ ಬೆಳೆ ಕಡಮೆಯಾಗಿದೆ. ಇದಲ್ಲದೆ 30 ವರುಷಕ್ಕೊಂದುಸಲ ಕಂದಾಯಗಳನ್ನು ಹೆಚ್ಚಿಸುತ್ತಾರೆ. ಈಗ ಕಂದಾಯ ಕೊಡುವವರೆಲ್ಲಾ ರೈತರೇ ಆಗಿರುತ್ತಾರೆ. ಸಂಬಳಗಾರರೂ, ಲೇವಾದೇವಿ ಮಾಡತಕ್ಕವರೇ ಮುಂತಾದವರಿಗೆಲ್ಲಾ ಈ ತೆರಿಗೆಯನ್ನು ಹಾಕಿ ವಸೂಲ್ಮಾಡಬೇಕು.—ಸಂಸ್ಥಾನದಲ್ಲಿ ಒಳ್ಳೊಳ್ಳೇ ಸೌಕರ್ಯಗಳನ್ನೆಲ್ಲಾ ಪಡೆದು ಅನುಭೋಗಿಸತಕ್ಕವರ್ಯಾರೋ ಅವರು ಈ ತೆರಿಗೆಯನ್ನು ಕೊಡಬೇಕಾದದ್ದು ನ್ಯಾಯವಾಗಿದೆ. ಸಿಲೋನ್ ಮುಂತಾದ ಕಡೆಗಳಲ್ಲಿರುವಂತೆ ಸರ್ಕಾರದವರು ನಮ್ಮ ಸಂಸ್ಥಾನದಲ್ಲೂ ಜಮೀನ್ ಕಂದಾಯವನ್ನು ಸಂಪೂರ್ಣವಾಗಿ ತೆಗೆದುಹಾಕಿ ಸಮಸ್ತ ಪ್ರಜೆಗಳಿಂದಲೂ ಈ ಕಂದಾಯವನ್ನು ವಸೂಲ್ಮಾಡಬಹುದು. ಈ ತೆರಿಗೆಯು ಪರೋಕ್ಷದಲ್ಲಿ ರೈತನ ತಲೆಯ ಮೇಲೆಯೇ ಬೀಳುವುದೆಂದು ಹೇಳುವುದು ತರವಲ್ಲ. ಮ್ಯುನಿಸಿಪಲ್ ಕಂದಾಯಕ್ಕೂ ಈ ತೆರಿಗೆಗೂ ಯಾವ ಸಂಬಂಧವೂ ಇಲ್ಲ. ಇದನ್ನು ಹಾಕಲೇ ಬೇಕು ಎಂಬೀ ರೀತಿಯಾಗಿ ಹೇಳಿದರು.

ಈ ತೆರಿಗೆಯನ್ನು ಎಷ್ಟುಮಾತ್ರಕ್ಕೂ ಹಾಕಕೂಡದೆಂಬ ಅರ್ಥಕ್ಕೆ ಮ॥ ಗಳಾದ ಸಿಂಗ್ರಿನಂಜಪ್ಪನವರು, ಸಂತಾನಂಅಯ್ಯಂಗಾರ್ಯ, ಸಿ. ವಾಸುದೇವರಾಯರು, ಕೆ. ಶಂಕರನಾರಾಯಣರಾಯರು, ಚಿನ್ನಸಾಮಿಶೆಟ್ಟರು, ಗಿರಿಮಾಜಿರಾಯರು, ಸಿ. ಕೃಷ್ಣಮೂರ್ತಿಯವರು, ಎಚ್. ಕೃಷ್ಣಶಾಸ್ತ್ರಿಗಳು, ಬಿ. ಕೆ. ಗರುಡಾಚಾರ್ಯ, ಈ ಮೊದಲಾದವರು ಮಾತನಾಡಿ ತಮ್ಮ ಅಭಿಮತವನ್ನು ಸೂಚಿಸಿದರು. ಇವರು ತಿಳಿಸಿದ ಮುಖ್ಯ ಸಂಗತಿಗಳೇನೆಂದರೆ—ಮೊದಲು ಸಂಸ್ಥಾನದ ಉತ್ಪತ್ತಿಯು ಒಂದು ಕೋಟಿ ಇದ್ದುದ್ದು ಈಗ ಮೂರು ಕೋಟಿಯಾಗಿರುತ್ತದೆ. ಆದರೂ ಖರ್ಚಿಗೆ ಸಾಲದೆಂದೂ ಇನ್ನೂ ಬೇಕೆಂದೂ ಕೇಳುವುದಾಗಿದೆ. ಇಷ್ಟು ಸಣ್ಣ ಸಂಸ್ಥಾನಕ್ಕೆ ಈಗಿರುವಷ್ಟು ಹೆಚ್ಚಾದ ಸಿಬ್ಬಂದಿ ಅವಶ್ಯಕವಿಲ್ಲ. ಬ್ರಿಟಿಷ್ ಸೀಮೆಯಲ್ಲಿ ಈ ತೆರಿಗೆಯ ದೆಸೆಯಿಂದ ಉಂಟಾಗಿರುವ ಕಷ್ಟನಷ್ಟಗಳನ್ನು ನಾವೆಲ್ಲಾ ನೋಡುತ್ತಿದೇವೆ. [ಅದು ಇದ್ದೇ ಇದೆ. ನಾವು ಒಪ್ಪಿಕೊಳ್ಳುತ್ತೇವೆ.—ದಿವಾನ್‌ರವರು.] ನಮ್ಮಲ್ಲಿ ಮೂರುಪಾಲಿನ ಪ್ರಜೆಗಳು ವ್ಯವಸಾಯದಿಂದಲೇ ಜೀವನಮಾಡುತ್ತಾರೆ: ಇತರ ಕಸಬಿನವರು ಬಹಳ ಸ್ವಲ್ಪ. ಇವರಮೇಲೆ ಈ ಹೊಸತೆರಿಗೆ ಹಾಕಿದರೆ ಹೊರಲಾರದಂಥಾ ಭಾರ ಹೊರಿಸಿದಹಾಗಾಗುತ್ತದೆ. ವರ್ತಕರು ಸಾಮಾನುಗಳ ಕ್ರಯವನ್ನೂ, ಲಾಯರು ಫೀಜಿನ ದರವನ್ನೂ ಹೆಚ್ಚಿಸುವರು. ಈ ತೆರಿಗೆಯನ್ನು ರೈತರೂ, ಬಡಬಗ್ಗರೂ, ಮಧ್ಯವರ್ಗಗಳಾದ ಪ್ರಜೆಗಳೂ ಕೊಡಬೇಕಾಗುತ್ತದೆ. ವರ್ತಕರೂ ರೈತರೂ ಅಣ್ಣತಮ್ಮಂದಿರಂತೆ ಇದ್ದುಕೊಂಡು ಪೋಷಿಸ್ಕಾಮಬೇಕಾಗ್ಗೆ ವರ್ತಕರು ದ್ರವ್ಯ ಸಹಾಯಮಾಡಿ ಬಡವರನ್ನು ಬದುಕಿಸಿದರು. ಈ ತೆರಿಗೆ ವಿದ್ಯೆಗೋಸ್ಕರವೆಂದು ಹೇಳುತ್ತೀರಿ. ನಮ್ಮ ಪಕ್ಕದ ಸೀಮೆಯಲ್ಲಿ ಈ ತೆರಿಗೆ ಇದ್ದರೂ ಅವರೂ ನಾವೂ ಒಂದೇ ಸ್ಥಿತಿಯಲ್ಲಿರುತ್ತೇವೆ. ಈ ತೆರಿಗೆ ಹಾಕಿದಮೇಲೂ ನಮ್ಮ ಸ್ಥಿತಿ ಈಗಿನಂತೆಯೇ ಇದ್ದೀತೆಂಬ ಶಂಕೆಯುಂಟು.—ವ್ಯವಸಾಯಗಾರರಿಗೆ ಈ ತೆರಿಗೆಯನ್ನು ಹಾಕದೆ ಇರಕೂಡದು. ಲೇಟ್ ವೈಸ್‌ರಾಯಿ ಲಾರ್ಡ್ ರಿಪ್ಪನ್‌ರವರು ರೈತರ ಸ್ಥಿತಿ ಹೀನವಾಗಿರುವುದರಿಂದ ಸದ್ಯ ಅವರಿಗೆ ಈ ತೆರಿಗೆ ಹಾಕಬೇಕಾದದ್ದಿಲ್ಲವೆಂದು ಹೇಳಿ ವಿನಾಯಿತಿ ಮಾಡಿರುತ್ತಾರೆ. ನಮ್ಮ ಸರ್ಕಾರದವರು ಖರ್ಚುಹೆಚ್ಚಿಸಿಕೊಂಡು ಹೆಚ್ಚು ಹಣ ಬೇಕೆನ್ನುತ್ತಾರೆ.—ತೆರಿಗೆ ಹಾಕುವುದು ಅವಶ್ಯವಾದರೆ ಎಲ್ಲರೂ ಕೊಡಬೇಕಾದಷ್ಟೇ ಧರ್ಮ. ರೈತಮಾತ್ರ ಈಗ ಕಂದಾಯ ಕೊಡುತ್ತಾನೆನ್ನುವುದು ಸರಿಯಲ್ಲ. ಇತರರೂ ನಾನಾತೆರಿಗೆಗಳನ್ನು ಕೊಡುತ್ತಿದಾರೆ.—ವಿದ್ಯಾಭಿವೃದ್ಧಿಗೆ ಹಣ ಬೇಕೆಂದು ಎಲ್ಲರೂ ಒಪ್ಪುತ್ತಾರೆ. ಈಗ ಈ ವಿಷಯ ಇಲ್ಲಿ ಇತ್ಯರ್ಥವಾಗುವುದಿಲ್ಲ. ಮುಂದೆ ಬಜೆಟ್ಟು ಈ ಸಭೆಯಲ್ಲಿ ಚರ್ಚೆಗೆ ಬರುತ್ತದೆ. ಆಗ್ಗೆ ತೆರಿಗೆಯ ಅವಶ್ಯಕತೆಯನ್ನು ನಿರ್ಧರಿಸಬಹುದು. 30 ವರುಷದಿಂದೀಚೆಗೆ ಧಾರಣೆಯು ಬಹಳ ಹೆಚ್ಚಾಗಿ ರೈತರಿಗೆ ಪ್ರಯೋಜನವಾಗುತ್ತಿದೆಯೇ ಹೊರತು ಕೊಂಡು ತಿನ್ನುವವರ ಜೀವನಕ್ಕೆ ಎರಡರಷ್ಟು ಖರ್ಚಾಗುವುದು. ಈ ತೆರಿಗೆ ಹಾಕಿದರೂ ಒಂದೆರಡು ಲಕ್ಷ ಮಾತ್ರ ಉತ್ಪತ್ತಿಯಾದೀತು. ಪ್ರಜೆಗಳಿಗೆ ತೊಂದರೆಯೂ ಕಷ್ಟವೂ ಹೆಚ್ಚಾಗುವುದಲ್ಲದೆ ಫಾಯಿದೆ ಏನೂ ಇರಲಾರದು. ಈಗಿನ ರಾಜಾದಾಯವನ್ನೇ ಇನ್ನೂ ವಿಶರಣೆಯಾಗಿ ಖರ್ಚುಮಾಡಿದರೆ ಎಷ್ಟೋ ಕೆಲಸಗಳು ಮಾಡಿಸಬಹುದಾಗಿದೆ. ಈ ಹೊಸತೆರಿಗೆಯನ್ನು ಹಾಕಬೇಕೆಂದು ಸೂಚಿಸಲ್ಪಟ್ಟಿರುವ ಕಾಗದಪತ್ರಗಳನ್ನೆಲ್ಲಾ ಸರ್ಕಾರದವರು ದಯವಿಟ್ಟು ಪ್ರಕಟಮಾಡಿದರೆ ನಾವು ಓದಿಕೊಂಡು ನಮ್ಮ ಅಭಿಪ್ರಾಯವನ್ನು ಅರಿಕೆ ಮಾಡುವೆವು.—ಲೇಟ್ ದಿವಾನ್ ಸರ್ ಶೇಷಾದ್ರಿ ಅಯ್ಯರವರು ಈ ತೆರಿಗೆ ಅವಶ್ಯವಿಲ್ಲವೆಂದು ಹೇಳಿದಾರೆ. ನೇಟೀವ್ ಸಂಸ್ಥಾನದಲ್ಲಿ ಅದನ್ನು ಹಾಕುವುದು ತರವಲ್ಲ. ಈಚೀಚೆ ಧಾರಣೆನಾಶಿಗಳು ಹೆಚ್ಚಾಗಿವೆ. ಈ ತೆರಿಗೆಯಿಂದ ಬರುವ ಫಾಯಿದೆ ಸ್ವಲ್ಪ, ಅದರ ಹಿಂಸೆ ಪ್ರಜೆಗಳಿಗೆ ಹೆಚ್ಚಾಗುತ್ತದೆ. ಅವರು ಅಧಿಕಾರಿಗಳನ್ನು ಆಜಾಜಾರಿ ಮಾಡುವುದು ಇನ್ನೂ ಹೆಚ್ಚುವುದು. ನಮ್ಮ ಮೈಸೂರು ದೇಶದಿಂದ ರಫ್ತಾಗುವ ಧಾನ್ಯಾದಿಗಳಿಗೆ ಸುಂಕವನ್ನು ಹಾಕಿದರೆ ಎಷ್ಟೋ ಉಪಕಾರವಾದೀತು.—ಸಂಸ್ಥಾನದ ಸ್ಪೆಷಲ್ ಇಲಾಖೆಗಳ ವಿಶೇಷ ಉತ್ಪತ್ತಿಯಿಂದ ವಿದ್ಯಾಪ್ರಚಾರಕ್ಕೆ ಹಣ ಕೊಡಬಹುದು. ಈ ತೆರಿಗೆಯಿಂದ ಬರುವ 2 ಲಕ್ಷದಲ್ಲಿ 1 ಲಕ್ಷ ಸಿಬ್ಬಂದಿಗೇನೇ ಖರ್ಚಾಗುತ್ತದೆ. ಈ ತೆರಿಗೆ ಪ್ರಜೆಗಳ ಮೇಲೆ ಬೀಳುತ್ತದೆ. ರೈತರಿಗೆ ತಪ್ಪುವುದಿಲ್ಲ. ಇದನ್ನು ಹಾಕಕೂಡದು.—ಈಗಿನ ಖರ್ಚನ್ನು ಕಡಮೆಮಾಡಿದರೆ ಹಣ ಒದಗುತ್ತದೆ. ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಬಜೆಟ್ಟು ಬಂದು ಚರ್ಚೆಯಾಗಬೇಕಾಗಿರೋಣದರಿಂದ ಆಗ್ಗೆ ಅಜಮಾಯಿಷಿಮಾಡಿ ಖರ್ಚುಬಾಬು ಕಡಮೆಮಾಡುವ ಪಕ್ಷಾಗದಿದ್ದರೆ ಈ ತೆರಿಗೆಯನ್ನು ಹಾಕಬಹುದೆಂದು ಒಪ್ಪಿಕೊಳ್ಳುವೆವು. ಅದುವರೆಗೆ ಈ ತೆರಿಗೆಯ ವಿಚಾರವನ್ನು ಮನ್ನಾಮಾಡಬೇಕು.—ಸಂಸ್ಥಾನದಲ್ಲಿ ಉಳಿಕೆಯಾಗಿರುವ 1,75,00,000 ದ್ರವ್ಯದಲ್ಲಿ 75,00,000 ವನ್ನು ಫಂಡು ತೆಗೆದಿಟ್ಟು ಅದರ ಬಡ್ಡಿಯಿಂದ ವಿದ್ಯಾಭಿವೃದ್ಧಿಯನ್ನು ಮಾಡಬಾರದೇ? ಇದು ಶಾಶ್ವತವಾಗಿದ್ದೀತಲ್ಲಾ? ಇದು ಜನರಿಗೆ ಅಹಿತವಾದ ತೆರಿಗೆ ಎಂದು ತಾವೇ ಅಪ್ಪಣೆಕೊಟ್ಟಿದ್ದೀರಿ. ಇಂಥಾದ್ದನ್ನು ಕಷ್ಟ ಕಾಲದಲ್ಲಿ ಹಾಕಬೇಡಿ. ನಮ್ಮ ಸಂಸ್ಥಾನವನ್ನು ಅಭಿವೃದ್ಧಿಗೆ ತರುವುದಕ್ಕೆ ಪರದೇಶದಿಂದ ಸಾಲ ತರಬಹುದು. ಈಗ ಹಣ ಒದಗುವುದು ಅಸಾಧ್ಯವಾದ ಪಕ್ಷದಲ್ಲಿ ಪ್ರಜೆಗಳು ಇದನ್ನು ಒಪ್ಪಿಕೊಳ್ಳುತ್ತಾರೆ. ಸಾರ್ವಭೌಮ ಸರ್ಕಾರದವರು ಹಿಂದೆ ನಮ್ಮ ಕಷ್ಟದೆಸೆಯನ್ನು ನೋಡಿ ಹತ್ತಾರು ವರುಷಗಳ ತನಕ ಪೋಗದಿಯಲ್ಲಿ 10 ಲಕ್ಷದಂತೆ ಕಡಮೆಮಾಡಿಕೊಟ್ಟು ನಮ್ಮನ್ನು ಕಾಪಾಡಲಿಲ್ಲವೇ? ನಮ್ಮ ದೇಶೀಯರಾದ ತಾವು ಈ ತೆರಿಗೆಯ ಸುದ್ದಿಯನ್ನು ಇನ್ನೂ ಹತ್ತು ವರುಷದ ತನಕ ಸೂಚಿಸಕೂಡದೆಂದು ಬೇಡುತ್ತೇವೆ.—ಚಿನ್ನದ ಗಣಿಗಳಲ್ಲಿ ಬರುವ ವರಮಾನ ಅನುಮಾನಾಸ್ಪದವಾಗಿದ್ದರೆ ಕಂಪನಿಯವರು ಇನ್ನು 30 ವರುಷಕ್ಕೆ ಕಂಟ್ರಾಕ್ಟು ತೆಗೆದುಕೊಳ್ಳುತ್ತಿರಲಿಲ್ಲ. ವಿದ್ಯುಚ್ಛಕ್ತಿಯ ಉತ್ಪತ್ತಿಯು ವರುಷೇ ವರುಷ ಹೆಚ್ಚುತ್ತಾ ಇದೆ. ಇದು ಕಡಮೆಯಾಗದಂತೆ ಶಾಶ್ವತವಾದ ಕನ್ನಂಬಾಡಿ ತಲಾವು ಕಾಮಗಾರಿಯಾಗುವುದು. ಆದಕಾರಣ ಸರ್ಕಾರಕ್ಕೆ ಹಣ ಒದಗುವುದು ಕಡಮೆಯಾಗುವುದಿಲ್ಲ. ನಮ್ಮ ವರ್ತಕರು ಬಹಳ ಹೀನಸ್ಥಿತಿಗೆ ಬರುತ್ತಿದಾರೆ. ಈ ಭಾಗವನ್ನು ಸರ್ಕಾರದವರು ಯೋಚಿಸಿಲ್ಲ. ಧಾನ್ಯದ ರಫ್ತು ಹೆಚ್ಚು. ಲಾಭವೆಲ್ಲಾ ಹೊರಗಿನವರಿಗೆ ಸಿಕ್ಕುತ್ತಿದೆ. ಸರ್ಕಾರದವರು ಸಿಬ್ಬಂದಿಯನ್ನು ಕಡಮೆಮಾಡುವುದಕ್ಕೆ 1890 ರಲ್ಲಿ ಕಮಿಟಿಯನ್ನು ನೇಮಕಮಾಡಿದರು. ಈ ಕಮಿಟಿಯವರು ಕಳೆದ ಹದಿಮೂರು ವರುಷಗಳಲ್ಲಿ ಬರೆದಿರುವ ರಿಪೋರ್ಟೇನೋ ನಮಗೆ ತಿಳಿಯದು. ಈಗ ಸಿಬ್ಬಂದಿ ಖರ್ಚು ಹೆಚ್ಚಾಗಿಯೇ ಇದೆ. ಮತ್ತು ಸಂಸ್ಥಾನದಲ್ಲಿ ಡಿಪಾಜಿಟ್ಟು ಹಣ ಇದ್ದೇ ಇದೆ. ಈ ಹೊಸ ತೆರಿಗೆ ಅವಶ್ಯವಿಲ್ಲ ಎಂಬೀ ರೀತಿ ಅಭಿಪ್ರಾಯಗಳನ್ನು ಹೇಳಿದರು.

ದಿವಾನ್‌ರವರು—ಈ ತೆರಿಗೆಯು ಪ್ರಜೆಗಳಿಗೆ ಹಿತಕರವಾಗಿಲ್ಲವೆಂಬುವುದೇನೋ ನಿಜ. ಇನ್ನೊಂದು ಕಮಿಟಿಯವರು ಯೋಚನೆಮಾಡಿ ಇದನ್ನು ಹಾಕಬಹುದೆಂದು ಸೂಚಿಸಿದಾರೆ. ಮೆಂಬರುಗಳ ಸಮ್ಮತಿ ಹ್ಯಾಗಿದೆಯೋ ನೋಡೋಣ. ಈ ತೆರಿಗೆ ಹಾಕಬೇಕೆನ್ನುವವರೆಲ್ಲಾ ಕೈ ಎತ್ತಿ [43 ಮೆಂಬರುಗಳು ಕೈ ಎತ್ತಿ ತಮ್ಮ ಸಮ್ಮತಿಯನ್ನು ಸೂಚಿಸಿದರು.] ಈಗ ಈ ತೆರಿಗೆಯನ್ನು ಹಾಕಕೂಡದು ಎನ್ನುವವರೆಲ್ಲರೂ ಕೈ ಎತ್ತಿ. [81 ಮಂದಿ ಈ ತೆರಿಗೆ ಅವಶ್ಯವಿಲ್ಲವೆಂದು ಹೇಳಿ ಕೈ ಎತ್ತಿದರು. ಇನ್ನು ಕೆಲವು ಮೆಂಬರುಗಳು ಯಾವ ಪಕ್ಷವನ್ನೂ ವಹಿಸಿ ಕೈ ಎತ್ತದೆ ಮೌನವಾಗಿದ್ದರು.] ಈಗ ಈ ಹೊಸ ತೆರಿಗೆ ಅವಶ್ಯವಿಲ್ಲವೆಂದು ನಿರ್ಧಾರವಾಯಿತು. ಇನ್ನೊಂದು ವರುಷ ಈ ಯೋಚನೆ ಮಾಡುವುದಿಲ್ಲ. ಸರ್ಕಾರದಲ್ಲಿ ಹಣ ಬೇಕಾದಷ್ಟು ಇದೆ ಎಂದು ಅಪ್ಪಣೆಕೊಟ್ಟರು. ಸಭಿಕರು ಕೈ ಚಪ್ಪಾಳೆ ಹೊಡೆಯುತ್ತಾ ತಮ್ಮ ಸಂತೋಷವನ್ನು ಪ್ರಕಾಶಮಾಡಿದರು.

(6) ಸಭೆಯ ಕಡೇ ದಿನದ ಭಾಷಣಗಳು

ಕಳೆದ ಭಾನುವಾರ ಬೆಳಿಗ್ಗೆ 12 ಗಂಟೆಗೆ ಸಭೆಯಲ್ಲಿ ಚರ್ಚೆಗಳು ಪೂರೈಸಿದಾಗ ಮ|| ಅಂಬಳೆ ಅಣ್ಣಯ್ಯ ಪಂಡಿತರವರೂ ಮ|| ಎಚ್ ಕೃಷ್ಣಶಾಸ್ತ್ರಿಗಳೂ ದಿವಾನ್‌ರವರನ್ನು ಕುರಿತು ಹೇಳಿದ ಸಂಗತಿಗಳ ಮುಖ್ಯಾಭಿಪ್ರಾಯವೇನೆಂದರೆ— ಈ ಸಭೆಯು 30 ವರುಷ ಪ್ರಾಯವುಳ್ಳದ್ದಾಗಿದೆ ಇದರ ವಯಸ್ಸನ್ನು ತಾವು ಪರಿಗಣಿಸಿ ಕಾಲಾನುಗುಣ್ಯವಾಗಿ ಈ ಸಲ ನಮಗೆ ಬಹು ವಿಶೇಷವಾದ ರಿಯಾಯಿತಿಗಳನ್ನು ದಯಪಾಲಿಸಿರುತ್ತೀರಿ ಇದಕ್ಕಾಗಿ ಪ್ರಜೆಗಳ ಪರವಾಗಿ ತಮ್ಮನ್ನು ಕೃತಜ್ಞತಾಪೂರ್ವಕವಾಗಿ ವಂದಿಸುವೆವು ನಮ್ಮ ಅರಿಕೆಗಳನ್ನೂ ರಾಜಭಕ್ತಿಪೂರ್ವಕವಾದ ವಿಜ್ಞಾಪನೆಗಳನ್ನೂ ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಮತ್ ಮಹಾರಾಜರವರಿಗೆ ದಯವಿಟ್ಟು ಸಲ್ಲಿಸಬೇಕೆಂದು ಬೇಡುತ್ತೇವೆ ಎಂಬದಾಗಿ ಹೇಳಿದರು

ದಿವಾನ್‌ರವರ ಭಾಷಣವು

ಮಹಾಶಯರೇ,—ನಾನು ಸುಮಾರು 29 ವರ್ಷಕಾಲ ಬೇರೆ ದೇಶಗಳಲ್ಲಿ ಇದ್ದುಕೊಂಡು ಕನ್ನಡನುಡಿಯನ್ನು ಕೇಳುವುದಕ್ಕೇ ಮಾರ್ಗವಿಲ್ಲದೆ ಇದ್ದುದರಿಂದ ನನಗೆ ಕನ್ನಡದಲ್ಲಿ ಧಾರಾಳವಾಗಿ ಮಾತನಾಡುವ ಅಭ್ಯಾಸವಿಲ್ಲ ಆದರೂ ನನ್ನ ಅಭಿಪ್ರಾಯಗಳನ್ನು ಕನ್ನಡದಲ್ಲೇ ಒಂದೆರಡು ಮಾತುಗಳಲ್ಲಿ ತಮಗೆ ತಿಳಿಸಬೇಕೆಂದು ಅಪೇಕ್ಷಿಸುತ್ತೇನೆ —ನಾನು ಪ್ರಪಂಚದ ಬೇರೆ ಬೇರೆ ಪ್ರದೇಶಗಳಲ್ಲಿ ಆರೇಳು ಪಾರ್ಲಿಮೆಂಟ್ ಮಹಾ ಸಭೆಗಳನ್ನು ನೋಡಿರುತ್ತೇನೆ ಅಲ್ಲದೆ ಈ ಸಭೆಯಲ್ಲಿ ನಡೆಯುವ ಚರ್ಚೆಗಳನ್ನೂ ಮೂರು ವರ್ಷಗಳಿಂದ ನೋಡಿರುತ್ತೇನೆ ಅಲ್ಲಿಯ ನಡವಳಿಕೆಗಳಿಗೂ, ಈ ಸಭೆಯ ನಡವಳಿಕೆಗೂ ಹೋಲಿಸಿ ನೋಡಿದ್ದೇ ಆದರೆ ತಾವುಗಳು ಬುದ್ಧಿಕುಶಲತೆಯಲ್ಲಿ ಏನೂ ಕಡಮೆಯಾಗಿಲ್ಲವೆಂದು ನನಗೆ ತೋರುವುದು ತಮ್ಮಲ್ಲಿ ಅನೇಕರಿಗೆ ಇಂಗ್ಲಿಷ್ ಭಾಷೆಯು ಅಭ್ಯಾಸವಿಲ್ಲದಿದ್ದರೂ ಪುಸ್ತಕ ವ್ಯಾಸಂಗದಿಂದಲೂ ಲೋಕವ್ಯವಹಾರಜ್ಞಾನದಿಂದಲೂ ವಿಷಯಗಳನ್ನು ಸ್ವಾರಸ್ಯವಾಗಿ ಚರ್ಚಿಸುತ್ತಾ ಬಂದಿರುವುದನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು ಇದೇ ರೀತಿ ತಮ್ಮ ಬುದ್ಧಿಕುಶಲತೆಯನ್ನು ಸರ್ವದಾ ದೇಶಾಭಿವೃದ್ಧಿಗೋಸ್ಕರ ವಿನಿಯೋಗಿಸುತ್ತಾ ಬಂದದ್ದೇ ಆದರೆ ಎಷ್ಟೋ ಪ್ರಯೋಜನವುಂಟು —ಈಗ ಐದಾರು ದಿವಸಗಳಿಂದ ತಾವು ವಿಷಯಗಳನ್ನು ಚರ್ಚಿಸಿದ್ದರಲ್ಲಿ ಈ ಊರಲ್ಲಿ ಕೆರೆ ಕಟ್ಟಿಸಿಕೊಡಬೇಕು ಇನ್ನೊಂದು ಊರಿನಲ್ಲಿ ಸ್ಕೂಲ್ ಇಡಿಸಿಕೊಡಬೇಕು—ಈ ರೀತಿಯಾಗಿ ಕೇಳುತ್ತಾ ಬಂದಿರುವಿರಿ ಈ ಪ್ರಕಾರ ಪ್ರತಿಯೊಂದು ಕೆಲಸಕ್ಕೂ ಸರ್ಕಾರದವರ ಸಹಾಯವನ್ನೇ ಅಪೇಕ್ಷಿಸುತ್ತಾ ಬಂದರೆ ಕೆಲಸವು ಬೇಗನೇ ಕೈಗೂಡುವುದು ಅಸಾಧ್ಯ ಸರ್ಕಾರದ ಅಧಿಕಾರಿಗಳಿಗೆ ಈಗಲೇ ಕೆಲಸವು ಬೇಕಾದಷ್ಟು ಇದೆ, ದಿನೇದಿನೇ ಅದು ಹೆಚ್ಚುತ್ತಲೂ ಇದೆ ಇಂಥಾದ್ದರಲ್ಲಿ ಅವರು ಎಲ್ಲಾ ಕೆಲಸವನ್ನೂ ಒಂದೇ ಸಮನಾಗಿ ನಡಿಸುವುದು ಹೇಗೆ? ಇದಲ್ಲದೆ ಸರ್ಕಾರದವರು ಎಷ್ಟು ಕೆಲಸಗಳಿಗೆ ತಾನೇ ಹಣವನ್ನು ಒದಗಿಸುವುದಕ್ಕಾದೀತು? ಆದಕಾರಣ ತಾವುಗಳು ಸ್ವಪ್ರಯಾಸ, ಪರಸ್ಪರ ಸಹಾಯ—ಇವುಗಳನ್ನು ಮೂಲಮಂತ್ರವಾಗಿಟ್ಟುಕೊಂಡು ತಮ್ಮ ತಮ್ಮ ಊರುಗಳಲ್ಲಿ ಪ್ರತಿಯೊಬ್ಬರೂ ಯಾವುದಾದರೂ ಒಂದೊಂದು ಪ್ರಯೋಜನಕರವಾದ ಕೆಲಸಕ್ಕೆ ಸಹಾಯ ಮಾಡುತ್ತಾ ಬರಬೇಕು

ಈ ದೇಶದಲ್ಲಿ ಸುಮಾರು 25,000 ಸಣ್ಣಸಣ್ಣ ಕೆರೆಗಳು ಇರುವವು ಇವುಗಳಲ್ಲಿ ಅನೇಕ ಕೆರೆಗಳು ನಮ್ಮ ಪೂರ್ವಿಕರು ಕಟ್ಟಿಸಿದವುಗಳಾಗಿವೆ ಇಂಥಾವುಗಳನ್ನು ನಮ್ಮ ಕಾಲದಲ್ಲಿ ದುರಸ್ತುಮಾಡುತ್ತಾ ಸರಿಯಾದ ಸ್ಥಿತಿಯಲ್ಲಿ ಇಡದೇ ಇರುವುದು ಯೋಗ್ಯವೇ? ಸರ್ಕಾರೀ ಮಾರಾಮತ್ತಿನಿಂದಲೇ ಇಷ್ಟು ಕೆರೆಗಳನ್ನೂ ದುರಸ್ತುಮಾಡಿಸುವುದೆಂದರೆ ಎಲ್ಲಿಗೆ ಸಾಧ್ಯ? ಇನ್ನೂ ನೂರು ವರ್ಷಗಳಾದರೂ ಆಗಲಾರದು ಇದಕ್ಕೆ ಪ್ರತಿಯಾಗಿ ಆಯಾ ಊರಿನವರೇ ದುರಸ್ತಿನ ಕೆಲಸವನ್ನು ವಹಿಸುತ್ತಾ ಬಂದರೆ ಸರ್ಕಾರದವರೂ ಸಹ ತುಂಬಾ ಸಂತೋಷದಿಂದ ಸಾಧ್ಯವಾದಷ್ಟು ಸಹಾಯವನ್ನು ಒದಗಿಸುವುದರಲ್ಲಿ ಅಭ್ಯಂತರವಿಲ್ಲ —ಹೀಗೆಯೇ ಇನ್ನೂ ಅನೇಕ ಭಾಗಗಳಲ್ಲಿ ಆಯಾ ಊರಿನವರು ತಮ್ಮ ತಮ್ಮ ಊರನ್ನು ಅಭಿವೃದ್ಧಿಗೆ ತರುವ ವಿಷಯದಲ್ಲಿ ಎಷ್ಟೋ ಸಹಾಯಮಾಡಬಹುದು ಊರಿನ ಕಶ್ಮಲಗಳನ್ನು ದೂರ ಸಾಗಿಸಿ ಆರೋಗ್ಯವನ್ನು ಹೆಚ್ಚಿಸಬಹುದು, ಊರುಗಳು ಸುಂದರವಾಗಿ ಕಾಣುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬಹುದು ಸೇತುವೆ, ಛತ್ರ, ದೇವಾಲಯ, ಸತ್ರ, ಮುಂತಾದವುಗಳನ್ನು ಊರ್ಜಿತಪಡಿಸಬಹುದು ಇವೆಲ್ಲಕ್ಕೂ ಜನರು ಒಗ್ಗಟ್ಟಾಗಿ ಸೇರಿ ಕೆಲಸಮಾಡುವುದು ಅವಶ್ಯಕ —ನಾಗರಿಕ ದೇಶಗಳಲ್ಲಿ ಮುಖ್ಯವಾಗಿ ಯಾವ ಕೆಲಸಗಳಿಗಾದರೂ ಕಮಿಟಿಗಳನ್ನು ಏರ್ಪಡಿಸಿಕೊಂಡು ನಡಿಸುತ್ತಾರೆ ನಮ್ಮ ಸೀಮೆಯಲ್ಲಿ ಈ ತರಹೆಯ ಅಭ್ಯಾಸವು ಕಡಮೆ ಕಮಿಟಿಯಿಂದ ಏನು ಪ್ರಯೋಜನ, ಯಾರಾದರೂ ಆಫೀಸರು ಕೆಲಸ ನಡಿಸಿದರೆ ಸರಿ ಎಂದು ಮುಂತಾಗಿ ಹೇಳುತ್ತಾ ಜನರು ಒಗ್ಗಟ್ಟಾಗಿ ಸೇರುವುದಕ್ಕೇ ಇಷ್ಟಪಡುವುದಿಲ್ಲ ಹೀಗೆ ಮಾಡದೆ ಆಯಾ ಗ್ರಾಮಕ್ಕೆ ಸಂಬಂಧಪಟ್ಟ ಅಭಿವೃದ್ಧಿಯ ಕಾರ್ಯಗಳನ್ನು ಆಯಾ ಗ್ರಾಮದವರೇ ಮಾಡಿಕೊಳ್ಳುತ್ತಾ ಬಂದರೆ ದೇಶಾಭಿವೃದ್ಧಿಗೆ ವಿಶೇಷ ಸಹಕಾರಿಯಾಗುವುದು —ನೆನ್ನೆ ತಾನೇ ತಮ್ಮಲ್ಲಿ ಕೆಲವು ಪ್ರತಿನಿಧಿಗಳು ತಲಾ ಹತ್ತಾರು ಗ್ರಾಮಗಳ ಮೇರೆಗೆ ಒಟ್ಟು 100 ಗ್ರಾಮಗಳ ಅಭಿವೃದ್ಧಿಯನ್ನು ಮುಂದಿನ ವರ್ಷದಲ್ಲಿ ನೋಡಿಕೊಳ್ಳುವುದಾಗಿ ತಿಳಿಸಿದ್ದನ್ನು ಕೇಳಿ ನಾನು ತುಂಬಾ ಸಂತೋಷಪಡುತ್ತೇನೆ ಹೀಗೆಯೇ ಇತರ ದೊಡ್ಡ ಮನುಷ್ಯರುಗಳೂ ಮುಂದಾಳುಗಳಾಗಿ ನಿಂತು ಕೆಲಸಮಾಡುತ್ತಾ ಬಂದಲ್ಲಿ ಈ ಸಂಸ್ಥಾನದಲ್ಲಿರುವ ಸುಮಾರು 16,800 ಗ್ರಾಮಗಳೂ ಪ್ರವರ್ಧಮಾನಕ್ಕೆ ಬರುವುದರಲ್ಲಿ ಸಂಶಯವಿಲ್ಲ

ವಿದ್ಯಾಭ್ಯಾಸವನ್ನು ವೃದ್ಧಿಗೆ ತರಬೇಕೆಂಬ ವಿಷಯದಲ್ಲಿ ನಾನು ಅನೇಕ ವೇಳೆ ಪ್ರಸ್ತಾಪಿಸಿರುತ್ತೇನೆ ನಮ್ಮ ಸೀಮೆಯಲ್ಲಿ ವಿದ್ಯಾಭಿವೃದ್ಧಿಯು ಏನೇನೂ ಸಾಲದು ಹದಿನಾರು ಜನರಲ್ಲಿ ಒಬ್ಬರಿಗೆ ಮಾತ್ರ ಓದುವುದೂ ಬರೆಯುವುದೂ ಬರುತ್ತದೆ, ಉಳಿದ ಹದಿನೈದು ಜನರು ಏನೂ ಅರಿಯದವರಾಗಿರುತ್ತಾರೆ ನಮ್ಮ ಸಂಪಾದನಾ ಶಕ್ತಿಯೂ ಕೂಡ, ನಮ್ಮ ವಿದ್ಯಾಭ್ಯಾಸಕ್ಕೆ ಅನುಗುಣವಾಗಿಯೇ ಇರುತ್ತದೆ ಇತರ ನಾಗರಿಕ ದೇಶಗಳಲ್ಲಿ 16 ರಲ್ಲಿ 15 ಮಂದಿ ವಿದ್ಯಾವಂತರಾಗಿರುತ್ತಾರೆ ನಾವುಗಳು ಒಂದು ರೂಪಾಯಿ ಸಂಪಾದಿಸಿದರೆ ಅವರು 16 ರೂಪಾಯಿ ಸಂಪಾದಿಸಬಲ್ಲರು ಇದಕ್ಕೆ ಅವರ ವಿದ್ಯಾಸಾಮರ್ಥ್ಯವೇ ಮುಖ್ಯಕಾರಣ ಇಂಥಾ ಶೋಚನೀಯವಾದ ಸ್ಥಿತಿಯನ್ನು ಹೋಗಲಾಡಿಸುವ ವಿಷಯದಲ್ಲಿ ಸಾಧ್ಯವಾದಷ್ಟು ಪ್ರಯತ್ನ ಮಾಡಬೇಕಾದುದು ತಮ್ಮ ಕರ್ತವ್ಯವಲ್ಲವೇ? ಒಂದೊಂದು ಗ್ರಾಮದಲ್ಲಿ ವರ್ಷಕ್ಕೆ 20 ಮಂದಿ ಹೆಚ್ಚಾಗಿ ವಿದ್ಯಾವಂತರಾಗುತ್ತಾ ಬಂದರೆ ಸಂಸ್ಥಾನಕ್ಕೆಲ್ಲ ಸೇರಿ ಎಷ್ಟೋ ವಿದ್ಯಾಭಿವೃದ್ಧಿಯು ಆದಂತೆ ಆಗುವುದಿಲ್ಲವೇ? ಅಮೆರಿಕಾ ಖಂಡಕ್ಕೆ ಸೇರಿದ ಕ್ಯಾನಡಾ ರಾಜ್ಯವು ನಮ್ಮ ಸೀಮೆಗಿಂತ ಶೇಕಡಾ 35 ರಷ್ಟು ಹೆಚ್ಚು ಜನಸಂಖ್ಯೆಯುಳ್ಳದ್ದಾಗಿದೆ, ಎಂದರೆ, ನಮ್ಮ ಸೀಮೆಯಲ್ಲಿ 58 ಲಕ್ಷ ಪ್ರಜೆಗಳಿದ್ದರೆ ಅಲ್ಲಿ 70-80 ಲಕ್ಷ ಪ್ರಜೆಗಳಿರಬಹುದು ಆದರೂ ಆ ರಾಜ್ಯದಲ್ಲಿ ಕಳೆದುಹೋದ ವಿದ್ಯಾಭ್ಯಾಸಕ್ಕೆ ಮುಂದಿನ ವರ್ಷದಲ್ಲಿ ಒಂದು ಕೋಟಿ ರೂಪಾಯಿ ಖರ್ಚುಮಾಡಬೇಕೆಂದು ಉದ್ದೇಶಿಸಿರುವುದಾಗಿ ಒಂದಾನೊಂದು ರಿಪೋರ್ಟಿನಿಂದ ತಿಳಿಯುವುದು ಇದರಿಂದ ಇತರ ದೇಶಗಳಲ್ಲಿ ವಿದ್ಯಾಭಿವೃದ್ಧಿಗಾಗಿ ಎಷ್ಟು ಆಸಕ್ತಿಯನ್ನು ವಹಿಸುತ್ತಿದ್ದಾರೆನ್ನುವುದು ತಮಗೇ ವಿಶದವಾಗುತ್ತದೆ ಇವನ್ನೆಲ್ಲಾ ನೋಡಿಕೊಂಡು ತಾವೂ ಕೂಡ ವಿದ್ಯಾವಂತರ ಸಂಖ್ಯೆಯನ್ನು ಹೆಚ್ಚಿಸುವ ವಿಷಯದಲ್ಲಿ ಪ್ರಯತ್ನಮಾಡುತ್ತೀರೆಂದು ನಂಬಿದ್ದೇನೆ —ಈ ದೇಶದಲ್ಲಿ ಲೋಕಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳೂ, ಮ್ಯುನಿಸಿಪಾಲಿಟಿಗಳೂ ಏರ್ಪಾಡಾಗಿ ಬಹಳ ವರ್ಷಗಳಾದವು ಇವುಗಳನ್ನು ಈ ಕಾಲಕ್ಕೆ ತಕ್ಕಂತೆ ಬದಲಾಯಿಸುವುದು ಅವಶ್ಯಕ ಈಗಾಗಲೇ ಅನೇಕ ಕಡೆಗಳಲ್ಲಿ ಪ್ರಜಾಪಕ್ಷದವರಾದ ಪ್ರೆಸಿಡೆಂಟರನ್ನೂ, ವೈಸ್ ಪ್ರೆಸಿಡೆಂಟರನ್ನೂ ನೇಮಕಮಾಡಿರುವುದಾಗಿದೆ ಇನ್ನೂ ಯಾವ ವಿಷಯದಲ್ಲಿ ಬದಲಾವಣೆ ನಡಿಸಬೇಕೆಂದು ತಾವು ಸಲಹೆಗಳನ್ನು ಕೊಟ್ಟಲ್ಲಿ ಸರ್ಕಾರದವರು ಅವುಗಳನ್ನು ಅಂಗೀಕರಿಸಿ ಪರ್ಯಾಲೋಚಿಸುವುದರಲ್ಲಿ ಅಭ್ಯಂತರವಿಲ್ಲ

ತಮ್ಮೆಲ್ಲರಿಗೂ ತಿಳಿಸಬೇಕಾದ ಇನ್ನೊಂದು ವಿಷಯವೇನೆಂದರೆ, ಎಲ್ಲರೂ ಸರ್ವದಾ ಕೆಲಸದಲ್ಲಿ ನಿರತರಾಗಿರಬೇಕೆನ್ನುವುದು ನಮ್ಮಲ್ಲಿ ಅನೇಕರಿಗೆ ಇದು ವಾಡಿಕೆಯಾಗಿಲ್ಲ ಅನೇಕವೇಳೆ ವಿರಾಮವನ್ನು ತೆಗೆದುಕೊಂಡು ಸುಮ್ಮನಾಗಿ ಕಾಲಹರಣ ಮಾಡುವುದು ನಮ್ಮವರಿಗೆ ಇಷ್ಟ ಏನೊಂದು ಕೆಲಸವನ್ನೂ ಮಾಡದೆ ವೃಥಾ ಕಾಲಕ್ಷೇಪಮಾಡುವುದು ವಿಶ್ರಾಂತಿಯಲ್ಲ ಎಂಬ ಅರ್ಥಕ್ಕೆ ಇಂಗ್ಲಿಷ್ ಭಾಷೆಯಲ್ಲಿ ಒಂದು ಗಾದೆಯುಂಟು ಇದರಂತೆ ಪ್ರತಿಯೊಬ್ಬರೂ ಬುದ್ಧಿಶಕ್ತಿಯನ್ನಾಗಲಿ, ಕಾಯಶಕ್ತಿಯನ್ನಾಗಲಿ ಉಪಯೋಗಿಸುವ ಯಾವುದಾದರೂ ಕೆಲಸದಲ್ಲಿ ದಿನಕ್ಕೆ ನಾಲ್ಕಾರು ಘಂಟೆಗಳ ಕಾಲವಾಗಲಿ ನಿರತರಾಗಿರುವುದು ಒಳ್ಳೆಯದು ಹಾಗೆ ಸರ್ವರೂ ಶ್ರಮಪಟ್ಟು ಕೆಲಸಮಾಡುತ್ತಾ ಬಂದರೆ ದೇಶವು ವೃದ್ಧಿಗೆ ಬರಲು ಸಹಕಾರಿಯಾದೀತು

ಮ|| ಅಣ್ಣಯ್ಯ ಪಂಡಿತರವರೂ, ಮ|| ಕೃಷ್ಣಶಾಸ್ತ್ರಿಗಳವರೂ ನನ್ನ ಕಾರ್ಯಭಾಗದ ವಿಷಯದಲ್ಲಿ ಈ ಸಭೆಯವರ ಪರವಾಗಿ ವಂದನೆಗಳನ್ನು ಸೂಚಿಸಿದ್ದಕ್ಕಾಗಿ ಕೃತಜ್ಞನಾಗಿರುತ್ತೇನೆ ಮೊದಲನೆಯ ವರ್ಷದಲ್ಲಿ ಹೊಸ ದಿವಾನರನ್ನು ಶ್ಲಾಘನೆ ಮಾಡುವುದು ವಾಡಿಕೆಯೇ ಆಗಿರುತ್ತದೆ ಯಾವ ಕಾರ್ಯಗಳನ್ನೂ ದಿವಾನ್‌ರು ಒಬ್ಬರೇ ಮಾಡುವುದಿಲ್ಲ ಕೌನ್ಸಿಲರುಗಳೂ ಇಲಾಖಾ ಮೊಖ್ತೇಸರರುಗಳೂ ಅನೇಕ ಭಾಗದಲ್ಲಿ ಸಹಾಯಕರಾಗಿರುತ್ತಾರೆ ಅವರುಗಳೆಲ್ಲರೂ ಸಹಾಯಕರಾಗಿ ನಿಂತು ನೆರವೇರಿಸಿದ ಕಾರ್ಯಗಳ ವಿವರವನ್ನು ಶ್ರೀಮನ್ ಮಹಾರಾಜರವರ ಮುಂದೆಯೂ ತಮ್ಮ ಮುಂದೆಯೂ ಇಡುವ ಕೆಲಸ ನನ್ನದಾಗಿರುತ್ತದೆ ನಾನೂ ನನ್ನ ಬುದ್ಧಿಶಕ್ತಿಯನ್ನು ತಕ್ಕಮಟ್ಟಿಗೆ ಉಪಯೋಗಿಸಿ ಕೆಲಸಮಾಡುತ್ತೇನೆ

ನಮ್ಮ ಶ್ರೀಮನ್ ಮಹಾರಾಜರವರು ನಿರಂತರವೂ ತಮ್ಮ ಪ್ರಜೆಗಳ ಕ್ಷೇಮಚಿಂತನೆಯಲ್ಲಿಯೇ ಆಸಕ್ತರಾಗಿರುತ್ತಾರೆ ಪ್ರಜೆಗಳು ಅಭಿವೃದ್ಧಿಗೆ ಬರುವ ಪ್ರಯತ್ನಗಳನ್ನು ಮಾಡುತ್ತಾ ಬಂದರೆ ಆ ವಿಷಯದಲ್ಲಿ ತಮ್ಮ ಪ್ರೋತ್ಸಾಹವನ್ನು ತೋರಿಸುತ್ತಾರೆ ಕಾರ್ಯ ನಡಿಸುವಲ್ಲಿ ನಮಗೆ ಕಷ್ಟಗಳು ತೋರಿಬಂದರೆ ತಮ್ಮ ಬುದ್ಧಿವಾದವನ್ನು ಅಪ್ಪಣೆ ಕೊಡಿಸುತ್ತಾರೆ ಪ್ರಜೆಗಳು ಯಾವುದಾದರೂ ಒಳ್ಳೆಯ ಕೆಲಸವನ್ನು ನಡಿಸಿದ್ದೇ ಆದರೆ ತಮ್ಮ ಸಂತೋಷವನ್ನು ಸೂಚಿಸುತ್ತಾರೆ ಈ ರೀತಿಯಲ್ಲಿ ತಮ್ಮ ಪ್ರಜೆಗಳ ಶ್ರೇಯೋವೃದ್ಧಿಯಲ್ಲಿಯೇ ಸರ್ವದಾ ಆಸಕ್ತಿಯನ್ನು ವಹಿಸಿ ಎಲ್ಲರನ್ನೂ ಅಭಿಮಾನಪೂರ್ವಕವಾಗಿ ಪರಿಪಾಲಿಸುತ್ತಿರುವ ನಮ್ಮ ಶ್ರೀಮನ್ ಮಹಾರಾಜರವರ ವಿಷಯದಲ್ಲಿ ತಾವು ಸೂಚಿಸುವ ಭಕ್ತಿಪೂರಿತವಾದ ವಿಜ್ಞಾಪನೆಗಳನ್ನು ಮಹಾಸ್ವಾಮಿಯವರಲ್ಲಿ ಸಮರ್ಪಿಸುವ ಭಾಗದಲ್ಲಿ ನಾನು ವಿಶೇಷ ಸಂತೋಷವುಳ್ಳವನಾಗಿರುತ್ತೇನೆ

ಈ ಪ್ರಕಾರ ದಿವಾನ್‌ರವರು ಉಪನ್ಯಾಸಮಾಡಿ ಪ್ರಜಾಪ್ರತಿನಿಧಿಗಳನ್ನು ವಂದಿಸುತ್ತಾ, 30 ನೇ ವರುಷದ ಸಭೆಯನ್ನು ಮುಕ್ತಾಯಮಾಡಿದರು

ಗೃಹಕೃತ್ಯದ ನೋಟೀಸು.

ಶ್ರೀರಂಗಪಟ್ಟಣದ ತಾಲ್ಲೂಕು ಗಂಜಾಂ ಶುಕ್ರವಾರ ಪೇಟೆಯಲ್ಲಿರುವ ಕಾಳೇಗೌಡ ಉರುಫ್ ಗೌಡಯ್ಯನ ಮಗ ಕರಿಯಣ್ಣನು ಸಮಸ್ತರಿಗೂ ತಿಳಿಯಪಡಿಸುವದೇನಂದರೆ— ನನ್ನ ತಂದೆಯೂ ಮತ್ತು ದೊಡ್ಡಪ್ಪ ತಿಮ್ಮಣ್ಣ ಸಹ ನೀಲಪ್ಪನ ಮಕ್ಕಳಾಗಬೇಕು ಇವರು ಏಕಗೃಹಕೃತ್ಯದಲ್ಲಿದ್ದರು ನನ್ನ ತಂದೆಯೂ ಇದೇ ಶುಕ್ರವಾರ ಪೇಟೆಯಲ್ಲಿರುವ ಪೌತಿ ನನ್ನ ದೊಡ್ಡಪ್ಪ ತಿಮ್ಮಣ್ಣನ ಹೆಂಡತಿ ನನ್ನ ದೊಡ್ಡಮ್ಮ ಗಂಗಮ್ಮನಿಗೆ ಜೀವನಕ್ಕಾಗಿ ಹೊಲಾ ಮತ್ತು ಗದ್ದೆಗಳನ್ನು ಕೊಟ್ಟಿದ್ದನು ಇವುಗಳನ್ನು ಗಂಗಮ್ಮನು ಮೋಜಾರಾಗಿರುವ ನನಗೆ ಮೋಸಮಾಡಿ ಅಳಿಯನಿಗೆ ಸಹಾಯಮಾಡಬೇಕೆಂದು ಈ ಜಮೀನುಗಳನ್ನು ಇತರರಿಗೆ ವಿಕ್ರಯಮಾಡಲು ಉದ್ಯುಕ್ತಳಾಗಿರುವುದಾಗಿ ತಿಳಿಯುತ್ತೇನೆ ಸದರಿ ಜೀವನಕ್ಕಾಗಿ ಬಿಟ್ಟಿರುವ ಸ್ವತ್ತುಗಳು ನನ್ನದಾಗಿರುತ್ತವೆ ನನಗೆ ತಿಳಿಯದೆ ಇವುಗಳನ್ನು ಪರಭಾರೆ ಮಾಡಿಕೊಂಡರೂ, ಮಾಡಿಕೊಂಡಿದ್ದರೂ ಆ ಹಕ್ಕನ್ನು ಕಳೆದುಕೊಳ್ಳುವುದಲ್ಲದೆ ನನ್ನ ಲುಕ್ಸಾನಿಗೂ ಗುರಿಯಾಗಬೇಕು [212 1]

ತಾ 20 10 13 ರುಜು ಗೌಡಯ್ಯನ ಮಗ ಕರಿಯಣ್ಣ

ಗೃಹಕೃತ್ಯದ ನೋಟೀಸು

ಹಾಸನದ ಡಿಸ್ಟ್ರಿಕ್ಟು ಚನ್ನರಾಯಪಟ್ಟಣದ ಕಸಬಾ ಕೋಟೆಯಲ್ಲಿರುವ ಗಂಗಡಿಕಾರ ಒಕ್ಕಲಿಗರ ಜಾತಿ ಈರೇಗೌಡನ ಹೆಂಡತಿ ದ್ಯಾವಮ್ಮ ಈ ಮೂಲಕ ತಿಳಿಯಪಡಿಸುವದೇನಂದರೆ—ನನ್ನ ಒಬ್ಬನೇ ಮಗನಾದ ತಿಮ್ಮಪ್ಪನೆಂಬುವನು ಈಗೆ 4 ವರ್ಷಗಳ ಕೆಳಗೆ ಪ್ಲೇಗಿನಿಂದ ಸತ್ತುಹೋದನು ಇವನ ಹೆಂಡತಿ (ನನ್ನ ಸೊಸೆಯಾದ) ಮಾರಿ ಎಂಬುವಳು ಇದುವರಿಗೂ ನನ್ನ ಕೈಕೆಳಗೆ ನನ್ನ ಮನೆಯಲ್ಲೇ ಇದ್ದುಕೊಂಡಿದ್ದಳು ಈಗೆ ಸುಮಾರು 20 ದಿವಸಗಳ ಕೆಳಗೆ ತನ್ನ ಗಂಡನಿಗೆ ಹುಟ್ಟಿದ 1 ವರ್ಷದ ಹೆಣ್ಣುಮಗು ಸಮೇತ ಪರಾರಿಯಾಗಿರುತ್ತಾಳೆ ಈಕೆಯು ವ್ಯಭಿಚಾರಸ್ತ್ರೀಯಾಗಿ ಜಾತಿಭ್ರಷ್ಟಳಾಗಿರುವದರಿಂದ ತನ್ನ ಗಂಡನ ಸ್ಥಿರ, ಚರ ಆಸ್ತಿಯ ಹಕ್ಕು ಯಾವದೂ ಅವಳಿಗೆ ಇರುವದಿಲ್ಲ ಸದರಿಯವಳಿಂದ ಯಾರಾದರೂ ಅವಳ ಗಂಡನ ಸ್ಥಿರ, ಚರ ಸ್ವತ್ತುಗಳನ್ನು ಕ್ರಯ, ಭೋಗ, ಆಧಾರ, ವಗೈರೆಗಳಿಗೆ ಹೊಂದಬಾರದು ಹಾಗೆ ನನ್ನ (ಅಂದರೆ ದ್ಯಾವಮ್ಮನ) ರುಜು ಇಲ್ಲದೆ ಯಾವ ಸ್ವತ್ತನ್ನೇ ಆಗಲಿ ಯಾರು ಹೊಂದಿದಾಗ್ಯೂ ಸ್ಥಿರವಾಗುವದಿಲ್ಲ, ಮತ್ತೂ ಅವರು ನನ್ನ ನಷ್ಟಕ್ಕೆ ಸಹ ಗುರಿಯಾಗಬೇಕು [211-1]

ದ್ಯಾವಮ್ಮನ ಹೆಬ್ಬೆಟ್ಟಿನ ಗುರ್ತಿನ ರುಜು

WHY LOOK OLD WITH GREY HAIR

A SINGLE APPLICATION OF

B. C. SHAH'S HAIR DYE

Will make you look like a youth of 20 years, making your hair jet black and glossy. The special property of this dye is that after use it does not impart to the hair the reddish tinge as other hair oils in the market of the day Price per bottle, Rupee One, postage extra.

B. C. SHAH'S & CO.,

177, Chana Bazaar Road, MADRAS.

[215 1]

"ವೃತ್ತಾಂತ ಪತ್ರಿಕೆ" ಏಜಂಟರಿಗೆ ನೋಟಿಸ್.

ವೃತ್ತಾಂತ ಪತ್ರಿಕೆಯ 1913 ನೇ ವರುಷದ ಒಂದನೇ ಕ್ವಾರ್ಟರು ಕಳೆದ ಆಗಸ್ಟ್ ತಿಂಗಳಿಗೆ ಪೂರೈಸಿದೆ ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಖೈದುಮಾಡಿ, "ಬಿ" ಫಾರಂಗಳಿಗೆ ಎತ್ತಿಬರೆದು, ತಮ್ಮ ತಮ್ಮ ಸೂಪರ್‌ಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ನಾರದತ್ತೀ ಜಾಗ್ರತೆಯಿಂದ ಕಳುಹಿಸಕೊಡಬೇಕಾಗಿ ಕೃತಪಡಿಸುವ

ಮ್ಯಾನೇಜರ್, "ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು

ಹೌದು! ಶ್ರೇಷ್ಠವಾದ ವಾಚ್," ಹೌದು!

ಸ್ಪ್ರಿಂಗ್ ಇಂಗ್ಲಿಷ್ ಲೀವರ್ ವಾಚು

ಚೊಕ್ಕಬೆಳ್ಳಿಯಂತೆ ಥಳಥಳಿಸುವ, ಎಂದಿಗೂ ಕಪ್ಪಾಗದ ನಾಣ್ಯವಾದ ಮತ್ತು ಸುಂದರ ನಮೂನೆಯ ವಾಚ್ ಸರಪಣಿ ಸಮೇತ ರೂ 1-4 0 ಮಾತ್ರ

7 ವರುಷಗಳ ಖಾತ್ರಿಯಾದ ಗ್ಯಾರಂಟಿ

ಈ ವಾಚ್ ಈಗತಾನೆ ನಾವು ನಮ್ಮ ಸ್ವಂತ ಆರ್ಡರ್‌ನಿಂದ ತರಿಸಿರುತ್ತೇವೆ ಇದು ಸಾಧಾರಣವಾದ ವಾಚುಗಳಿಗೆ ಹೋಲಿಕೆ ಎಂದು ತಿಳಿಯಕೂಡದು ಶ್ರೇಷ್ಠವಾದ ಸ್ಪ್ರಿಂಗ್ ಇಂಗ್ಲಿಷ್ ಲೀವರ್ ಕೆಲಸದಿಂದ ತಯಾರಾದದ್ದು ಬಹು ನಾಣ್ಯವಾದ ಯಂತ್ರ ಸಾಮಾನುಗಳಿಂದ ತಯಾರಾದದ್ದು ಗಂಭೀರವಾದ ಗಂಟೆ ಮತ್ತು ಮಿನಿಟ್ ಮುಳ್ಳುಗಳುಳ್ಳದ್ದು ಎನಮಲ್ ಡಯಲ್ ಉಳ್ಳದ್ದು ಗೌರ್ನಮೆಂಟ್ ಟೈಂಗೆ ಸರಿಯಾದ ಕಾಲವನ್ನು ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ತೋರಿಸತಕ್ಕದ್ದು ಆದಕಾರಣವೇ ಇದು ಇಷ್ಟು ಗೌರವವನ್ನು ಹೊಂದಿರುತ್ತೆ

ಖಾತ್ರಿಯಾದ ವಾಚ್ ನಾಣ್ಯವಾದ ವಾಚ್ ಸುಂದರವಾದ ವಾಚ್!!

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ [77 27]

ವಿಳಾಸ—ಪಿ ಆರ್ ವೆಂಕಟರಮಣ ಅಂಡ್ ಕಂಪನಿ,

ನಂ 7, ಕೇಥೀಸ್ ವೆಂಕಟಾಚಲ್ಯಯರ್ ಬೀದಿ, ಮದರಾಸು

ಒಡವೆಗಳೂ ಗಡಿಯಾರಗಳೂ.

ಈ ಚಂದ್ರಹಾರವು ನೋಡುವುದಕ್ಕೆ ಬಹಳ ಅಂದವಾಗಿರುತ್ತೆ ಇದನ್ನು ಒಳ್ಳೇ ಚತುರರಾದ ತಂಜಾವೂರಿನ ಕೆಲಸಗಾರರಿಂದ ತಯಾರಿಸಿರುತ್ತೇವೆ ಇದಕ್ಕೆ ಎಂದೂ ಹೋಗದ ಹಾಗೆ ಬಂಗಾರದ ಗಿಲ್ಟುಕೊಡಲ್ಪಟ್ಟಿರುತ್ತೆ ಇದನ್ನು ಹೆಂಗಸರೂ ಹಾಕಿಕೊಳ್ಳಬಹುದು ಒಳ್ಳೆಯ ಬಂಗಾರದಿಂದ ತಯಾರಿಸಿದ್ದೇ ಎಂಬ ಹಾಗೆ ಬಹಳ ಪ್ರಕಾಶವಾಗಿರುತ್ತೆ ಇದುವರೆಗೆ ಇದನ್ನು ಅನೇಕರು ತರಿಸಿಕೊಂಡಿರುತ್ತಾರೆ 5 ಸರಗಳುಳ್ಳದ್ದು ಬೆಲೆ ರೂ 4-8-0 4 ಸರಗಳುಳ್ಳದ್ದು ಬೆಲೆ ರೂ 1 0 0 3 ಸರಗಳುಳ್ಳದ್ದು ಬೆಲೆ ರೂ 3 8 0 ಸಾದ ಮೋಪಿನ ಬೆಲೆ ರೂ 0 12-0 ಕಲ್ಲುಗಳ ದ ತಯಾರಿಸಿದ ಮೋಪಿನ ಬೆಲೆ ರೂ 1-0 0



ನಿಮಗೆ ಸಾದಾ ಮೋಪಿರಬೇಕೋ ಅಥವಾ ಕಲ್ಲುಗಳುಳ್ಳ ಮೋಪಿರಬೇಕೋ ಅಥವಾ ಮೋಪೇ ಅವಶ್ಯಕವಿಲ್ಲವೆ ಬರೆಯುವುದು [202-2]

ಪದಕ ಸಹಿತವಾದ ನಾಲ್ಕು ಎಳೆ ಮುತ್ತಿನ ಕಂಠಿಗೆ ರೂ 1 7 0, ಪದಕವಿಲ್ಲದ ಹಾರಕ್ಕೆ 0 11 0 ಆಣೆ ಜಂಟಲ್‌ಮೆನ್ ಲೀವರ್ ವಾಚು ಕ್ರಯ ರೂ 1 15-0 ರೇಡಿಯಂ ಸಿಲ್ವರ್ ವಾಚ್ ಕ್ರಯ ರೂ 3 8 0 ಶ್ರೀ ಸೀತಾರಾಘವ ಗಡಿಯಾರ ಸುಂದರವಾದ ಗಡಿಯಾರದ ಸರಪಣಿ ಸಮೇತ ಇದರ ಕ್ರಯ ರೂ 3 0 0 ಮಾತ್ರ 5 ವರುಷಗಳ ಗ್ಯಾರಂಟಿ

ಅಚ್ಚ ಕರಿಬಣ್ಣದ ಮೂರು ಚಿಕ್ಕೆಯ ಮಧುರೆ ಬನ್ನಡಿ ಸೀರೆಗಳು — ಅವಲ್ ರಮಿ ಕ್ರಯ ರೂ 2 6 0 ದುಯಂ ರಮಿ ಕ್ರಯ ರೂ 2 3-0

ವಿಳಾಸ —— ಶೀವಾ ಅಂಡ್ ಬ್ರದರ್ಸ್,

ಸಂದಂಬಾಕಂ, ಸೆಂಟ್ ಥಾಮಸ್ ಮೌಂಟ್ ಪೋಸ್ಟ್, ಮದರಾಸ್

19 ಬಹುಮತಿಗಳೊಡನೆ ಕೂಡಿದ ಕೈಗಡಿಯಾರ

19 ಸಾಮಾನುಗಳು ಬಹುಮತಿ ಸಹಿತ ರೂ 3-15-0

ಇದು ಸಣ್ಣ ಸೈಜು ಸುಂದರಾಕಾರ ಬೀಳಿಕೆಯಲ್ಲಿ ಇತರ ಗಡಿಯಾರಕ್ಕಿಂತಲೂ ಮೇಲಾದದ್ದು 5 ವರುಷ ಗ್ಯಾರಂಟಿ 1 ತಿಂಗಳವರಿಗೆ ಮಾತ್ರ ಬಹುಮಾನಗಳು ಉಚಿತವಾಗಿ ಕೊಡುತ್ತೇವೆ ಉತ್ತಮ ಮುಖ ಸ್ಫಟಿಕ ದರ್ಪಣ ಸಾಮಾನ್ಯ ಪ್ರಮಾಣ ಸುಕುಶಲ ಪರಿವರ್ತನ ಉಳ್ಳ ಗಡಿಯಾರವು 30 ವರುಷಗಳವರಿಗೆ ಚೆನ್ನಾಗಿ ನಡೆಯುತ್ತೆ ಇದನ್ನು ತರಿಸಿಕೊಳ್ಳುವರಿಗೆ ಕೊಡುವ ಬಹುಮಾನಗಳ ವಿವರ— 1 ಚಂದ್ರಕಾಂತಿ ಕನ್ನಡಕ, 2 ಚೆನ್ನಡಿ ರವಕೆಗಳು, 3 ಮ್ಯಾಜಿಕ್ ಪೇನಾ ಕತ್ತಿ, 4 ಹವಳದ ಸರ 5 ಹಣದ ಪೆಟ್ಟಿಗೆ 0 9 0, 6 ಹಣದ ಚೀಲ, 7 ಸೀಲುಂಗುರ 1 0 0, 8 ಅಮೆರಿಕನ್ ಕತ್ತರಿ 0 8 0, 9 ಮಾರ್ಕಿಂಗ್ ಇಂಕಿ ಶೀಸ, 10 ಬಂಗಾರದ ಗಿಲೀಟು ಕೈಕಪ್ಪ, 11 ಗಡಿಯಾರ ಸರಪಣಿ, 12 ಎಲೆಕ್ಟ್ರಿಕ್ ಬಂಗಾರದ ಕ್ಯಾಮಂಚ್ ಹೂವು, 13 ಇಮಿಟೇಷನ್ ಡೈಮಂಡ್ ಷರಟು ಗುಂಡಿ, 14 ಜರ್ಮನ್ ಬೆಳ್ಳಿ ಕುಂಕುಮ ಭರಣಿ, 15 ಡಿಟೋ ಸಾದಿನ ಚಿಪ್ಪು 16 ಡಿಟೋ ಕನ್ನಡಿ ಭರಣಿ, 17 ಡಿಟೋ ನಶ್ಯದ ಡಬ್ಬಿ, 18 ಡಿಟೋ ಹಾಲಿನ ಬಟ್ಟಲು, 19 ಇಮಿಟೇಷನ್ ಡೈಮಂಡ್ ಮೂಗಬಟ್ಟು — [218 1]



ಈ ಕೆಳಗಿನ ಸಾಮಾನುಗಳು ಸಹ ನಮ್ಮಲ್ಲಿ ದೊರೆಯುತ್ತೆ

ಪದಕ ಸಹಿತ ನಾಲ್ಕು ಎಳೆಯ ಇಮಿಟೇಷನ್ ಮುತ್ತಿನ ಕಂಠಿ	1 4-0
ಪದಕವಿಲ್ಲದ್ದು	0 10-0
ಮಧುರೆ ಬನ್ನಡಿ ಸೀರೆ 1 ಕ್ಕೆ	2 4-0

ರೈಲ್ವೇ ರೆಗ್ಯುಲೇಟರ್ ಗಡಿಯಾರ 1-15 0, ರಾಸ್ಕೋಫ ಗಡಿಯಾರ 1 13 ಕೈಯಲ್ಲಿ ಕಟ್ಟುವ ಬೆಳ್ಳಿ ಗಡಿಯಾರ 3 14-0, ಕೈಯಲ್ಲಿ ಕಟ್ಟುವ ಚಿನ್ನದ ಗಡಿಯಾರ ರೂ 16-0-0, ಟಿ|| ಟೈಂಪೀಸು 2-12 0, ಜರ್ಮನ್ ಜೇಬಿನ 1-10-0, ಎಲೆಕ್ಟ್ರಿಕ್ ದೀಪ ದೊಡ್ಡದು 2 14-0, ಚಿಕ್ಕದು 2 4 0

ನಮ್ಮ ವಿಳಾಸ—ಏಕಾಂಬರಂ ಕಂಪನಿ,

ಸೆಕೆಂಡ್ ಲೈನ್ ಬೀಚ್, ಮದರಾಸ್

ಮೈಸೂರಿನಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನ್‍ರವರು ಮಾಡಿದ ಉಪನ್ಯಾಸ

ಮಿಕ್ಕ ಕೆಲವು ಭಾಗಗಳು

ಜುಡಿಷಲ್ ಇಲಾಖೆ — 1911 ನೆಯ ಫೆಬ್ರುವರಿ ತಿಂಗಳಲ್ಲಿ ಚಿಕ್ಕಬಳ್ಳಾಪುರದಲ್ಲಿ ಸ್ಥಾಪಿಸಿದ ಆಡಿಷನಲ್ ಮುನ್ಸಿಫ್ ಕೋರ್ಟನ್ನು ಖಾಯಂ ಮಾಡಿ, ಜನರ ಅನುಕೂಲ್ಯಕ್ಕಾಗಿ ದೊಡ್ಡಬಳ್ಳಾಪುರ, ನೆಲಮಂಗಲ, ಗೋರಿಬಿದನೂರು ತಾಲ್ಲೂಕುಗಳ ಮೇಲೆ ಸಿವಿಲ್ ಅಧಿಕಾರದ ಯಃಕ್ತ್ಯಾರಿಯನ್ನು ಕೊಟ್ಟು ಸದರೀ ಕೋರ್ಟನ್ನು ಪ್ರಕೃತವರ್ಷದ ಆಖೈರಿನಲ್ಲಿ ದೊಡ್ಡಬಳ್ಳಾಪುರಕ್ಕೆ ವರ್ಗಾಯಿಸಲಾಯಿತು ಇದರಿಂದ, ಮೊದಲನೆಯ ಮುನ್ಸಿಫ್ ಕೋರ್ಟ್, ಎರಡನೆಯ ಮುನ್ಸಿಫ್ ಕೋರ್ಟ್ ಎಂದು ಈಗ ಕರೆಯಲ್ಪಡುವ ಬೆಂಗಳೂರು ಪ್ರಿನ್ಸಿಪಲ್ ಮತ್ತು ಅಡಿಷನಲ್ ಕೋರ್ಟುಗಳ ಅಧಿಕಾರ ಸರಹದ್ದನ್ನು ಚಿಕ್ಕಬಳ್ಳಾಪುರ ಮುನಸಿಫ್ ಕೋರ್ಟಿನ ಅಧಿಕಾರ ಸರಹದ್ದನ್ನು ಹೊಸದಾಗಿ ಗೊತ್ತುಮಾಡಿ ಸದರೀ ಕೋರ್ಟುಗಳಲ್ಲಿ ನಡೆಯತಕ್ಕ ಕೆಲಸವು ಬಹಳಮಟ್ಟಿಗೆ ಸರಿಸಮವಾಗಿರುವಂತೆ ಮಾಡಲಾಯಿತು —1909 ನೆಯ ವರ್ಷದಲ್ಲಿ ಅಜಮಾಯಿಷಿ ತಾರೀಖು ಬೆಂಗಳೂರು ಮತ್ತು ಮೈಸೂರು ನಗರದಲ್ಲಿ ಹೊಸದಾಗಿ ಏರ್ಪಡಿಸಿದ ಆನರೆರಿ ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ತೃಪ್ತಿಕರವಾಗಿ ಕೆಲಸನಡೆದುದರಿಂದ ಅವುಗಳನ್ನು ಖಾಯಂ ಮಾಡಲಾಯಿತು ಚಾಮರಾಜನಗರ ತಾಲ್ಲೂಕು ಕಣ್ಣೇಗಾಲದಲ್ಲಿ ನಡೆದ ದೊಂಬಿ ಮೊಕದ್ದಮೆಯ ವಿಚಾರಣೆಗಾಗಿ 1913 ನೆಯ ಮಾರ್ಚಿ ತಿಂಗಳಲ್ಲಿ ಮೈಸೂರಲ್ಲಿ ಹಂಗಾಮಿಯಾಗಿ ಒಂದು ಅಡಿಷನಲ್ ಸೆಷನ್ಸ್ ಕೋರ್ಟು ಸ್ಥಾಪಿಸಲ್ಪಟ್ಟಿತು ಈ ಸಂಸ್ಥಾನದ ಕೆಳಕೋರ್ಟುಗಳನ್ನು ಅಜಮಾಯಿಷಿ ಮಾಡುವುದರಲ್ಲಿ ಹಿಂದಿನವರ್ಷಗಳಿಗಿಂತಲೂ ಪ್ರಸಕ್ತ ವರ್ಷದಲ್ಲಿ ಈ ಇಲಾಖೆಯವರು ವಿಶೇಷ ಆಸಕ್ತಿಯನ್ನು ತೋರಿಸಿರುತ್ತಾರೆ

ಕೈಗಾರಿಕೆ ಮತ್ತು ಶಿಲ್ಪವಿದ್ಯಾಭ್ಯಾಸ —ಕೈಗಾರಿಕೆ ಮತ್ತು ವ್ಯಾಪಾರದ ವಿಷಯದಲ್ಲಿ ಸಾಮಾನ್ಯವಾದ ಮತ್ತು ಪ್ರೌಢವಾದ ವಿದ್ಯಾಭ್ಯಾಸವನ್ನು ಮಾಡಿಸತಕ್ಕ ಬಗ್ಗೆ ಒಂದು ಸಮಗ್ರವಾದ ಏರ್ಪಾಟನ್ನು ಸರ್ಕಾರದವರು ಮಂಜೂರು ಮಾಡಿರುತ್ತಾರೆ ಮುಖ್ಯವಾಗಿ ಇದರ ಕ್ರಮವೇನಂದರೆ, ಮೈಸೂರಿನಲ್ಲಿ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಎಂಬ ಕಸಬುದಾರಿಯ ವಿದ್ಯಾನಿಲಯವನ್ನೂ, ಬೆಂಗಳೂರಿನಲ್ಲಿ ಕಮರ್ಷಿಯಲ್ ಮತ್ತು ಮೆಕ್ಯಾನಿಕಲ್ ಎಂಜನಿಯರಿಂಗ್ ಸ್ಕೂಲನ್ನು ಸ್ಥಾಪಿಸಿರುವುದೇ ಸದರಿ ಏರ್ಪಾಟಿನ ಮುಖ್ಯಾಂಶವಾಗಿರುತ್ತದೆ ಹಾಲಿ ಮೈಸೂರಿನಲ್ಲಿರುವ ಎಂಜನಿಯರಿಂಗ್ ಸ್ಕೂಲನ್ನೂ, ಇಂಡಸ್ಟ್ರಿಯಲ್ ಸ್ಕೂಲನ್ನೂ ಒಂದು ತಡೆ ಸೇರಿಸಿ ಸದರಿ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿಗೆ ಮೂಲಾಧಾರವಾಗಿ ಮಾಡಿ ಸದರೀ ವಿದ್ಯಾನಿಲಯವನ್ನು ಅದಕ್ಕಾಗಿಯೇ ಕಟ್ಟುವ ವಿಶಾಲವಾದ ಕಟ್ಟಡದಲ್ಲಿ ಇಡಲಾಗುವುದು ಇದರಲ್ಲಿ ಶಿಲ್ಪಶಾಲೆ, ಕೈಗಾರಿಕೆ ಮತ್ತು ಕಸಬುದಾರಿ ಶಾಲೆ ಕುಶಲಕಲಾ ಶಾಲೆ, ವಾಣಿಜ್ಯ ವಿದ್ಯಾ ಶಾಲೆ ಮತ್ತು ಕಾರ್ಖಾನೆ ಎಂಬುದಾಗಿ ಐದು ಭಾಗಗಳಿರುತ್ತವೆ —ಬೆಂಗಳೂರಿನಲ್ಲಿರುವ ವಾಣಿಜ್ಯ ವಿದ್ಯಾಶಾಲೆಯಲ್ಲಿ ಇಂಗ್ಲೀಷು ಭಾಷೆಯಲ್ಲಿಯೂ ಕನ್ನಡ ಭಾಷೆಯಲ್ಲಿಯೂ ಒಂದು ವರ್ಷದ ಪರ್ಯಂತರ ವಾಣಿಜ್ಯ ಸಂಬಂಧವಾದ ವಿಷಯಗಳಲ್ಲಿ ಸಾಮಾನ್ಯ ಬೋಧನೆಯನ್ನೂ ಮಾಡುವುದಕ್ಕೂ, ಎರಡುವರ್ಷಗಳ ಪರ್ಯಂತರ ಇಂಗ್ಲೀಷ್ ಭಾಷೆಯಲ್ಲಿ ಹೆಚ್ಚು ವಿದ್ಯಾಭ್ಯಾಸವನ್ನು ಮಾಡುವುದಕ್ಕೂ ತಕ್ಕ ಏರ್ಪಾಟನ್ನು ಮಾಡಲಾಗಿದೆ ಕಲಾಭಿಜ್ಞರಾದವರು ವ್ಯಾಪಾರ ವಿಷಯಗಳಲ್ಲಿಯೂ, ಅರ್ಥ ಶಾಸ್ತ್ರದಲ್ಲಿಯೂ, ರಾಜ್ಯಾಡಳಿತ ವಿಷಯದಲ್ಲಿಯೂ, ಲೇವಾದೇವಿ ವಿಷಯಗಳಲ್ಲಿಯೂ, ಈ ತರಹೆಯ ಇತರ ವಿಷಯಗಳಲ್ಲಿಯೂ ತುಂಬಾ ಪ್ರೌಢವಾದ ಉಪನ್ಯಾಸಗಳನ್ನು ಕೊಡತಕ್ಕ ಬಗ್ಗೆ ಏರ್ಪಾಟು ಮಾಡಲಾಗುವುದು ಗವರನ್‌ಮೆಂಟ್ ಹೈಸ್ಕೂಲಿನ ಕಟ್ಟಡದ ಒಂದು ಭಾಗದಲ್ಲಿ ಸದರೀ ಸ್ಕೂಲನ್ನು ಸ್ಥಾಪಿಸಿ ಪ್ರಾರಂಭಿಸಲಾಗಿರುತ್ತದೆ —ಮೆಕ್ಯಾನಿಕಲ್ ಎಂಜನಿಯರಿಂಗ್ ಸ್ಕೂಲಿನಲ್ಲಿ, ಹಬೆಯ ಯಂತ್ರ ಮತ್ತು ಎಣ್ಣೆಯ ಯಂತ್ರಗಳನ್ನು ನಡೆಯಿಸುವುದು, ಮತ್ತು ಅವುಗಳನ್ನು ನೋಡಿಕೊಳ್ಳುವುದು, ಯಂತ್ರಗಳನ್ನು ಸ್ಥಾಪಿಸುವುದು, ಯಂತ್ರಶಾಲೆಗಳಲ್ಲಿ ಕೆಲಸವನ್ನು ನಡೆಯಿಸುವುದು, ವಿದ್ಯುಚ್ಛಕ್ತಿಯ ಕೆಲಸ, ಮೋಟಾರ್ ಗಾಡಿಗಳನ್ನು ನಡೆಯಿಸುವುದು, ಇವೇ ಮುಂತಾದ ವಿಷಯಗಳನ್ನು ಕಲಿಸಲಾಗುವುದು, ಇದಕ್ಕಾಗಿ ಒಂದು ಹೊಸ ಕಟ್ಟಡವನ್ನು ಕಟ್ಟುತ್ತಲಿದೆ ತತ್ಕಾಲದಲ್ಲಿ ಈ ಸ್ಕೂಲನ್ನು ಶೇಷಾದ್ರಿ ಮೆಮೋರಿಯಲ್ ಹಾಲಿನಲ್ಲಿ ಇಟ್ಟಿರುತ್ತದೆ ಸದರಿ ಸ್ಕೂಲು ಇಂಗ್ಲೆಂಡಿನಲ್ಲಿ ಫ್ಯಾರಡೆ ಕೌನ್ಸಿಲ್ ವಿದ್ಯುಚ್ಛಕ್ತಿಯ ಇಂಜನಿಯರಿಂಗ್ ಕೆಲಸದಲ್ಲಿ ಚನ್ನಾಗಿ ಪರಿಶ್ರಮವಿದ ಮರಾಮತ್ ಇಲಾಖೆಯ ಒಬ್ಬ ಅಸಿಸ್ಟೆಂಟ್ ಇಂಜನಿಯರವರ ಮೇಲ್ವಿಚಾರಣೆಯಲ್ಲಿರುತ್ತದೆ —ಮೇಲ್ಕಂಡ ಸ್ಕೂಲುಗಳಲ್ಲಿ ಒಳಆಡಳಿತಗಳನ್ನು ನಡಿಸತಕ್ಕ ಬಗ್ಗೆ ಜವಾಬ್ದಾರಿಯನ್ನು ವಹಿಸತಕ್ಕ ಕಮಿಟಿಗಳನ್ನು ನೇಮಿಸಲಾಗಿದೆಯಲ್ಲದೆ ಅವುಗಳಲ್ಲಿ ಕ್ರಮವಾಗಿ ಕೆಲಸಗಳನ್ನು ನಡಿಸುವುದಕ್ಕೆ ಸಹಾಯಕವಾಗಿ ನಿಬಂಧನೆಗಳನ್ನು ಏರ್ಪಡಿಸಲಾಗಿದೆ ಕಸಬುದಾರಿ ಜನರನ್ನು ರೆಡಿಮೇಡ್ ಮಾಡತಕ್ಕ ಬಗ್ಗೆ ಸದರಿ ಸ್ಕೂಲುಗಳಲ್ಲಿ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಹುಡುಗರಿಗೆ ಸಣ್ಣವಯಸ್ಸಿನಲ್ಲಿ ಇಂಥ ಕಸಬುಗಳಲ್ಲಿ ಆಸಕ್ತಿಯನ್ನು ಹುಟ್ಟಿಸಿ, ಸಾಧಾರಣ ಸರ್ಕಾರಿ ನೌಕರಿಯನ್ನು ಬಯಸುವುದಕ್ಕೆ ಬದಲಾಗಿ ಅಂತಹ ಯಾವುದಾದರೂ ಒಂದು ಸ್ವತಂತ್ರವಾದ ಕಸುಬಿನಿಂದ ತಮ್ಮ ಜೀವನೋಪಾಯವನ್ನು ಸಂಪಾದಿಸಿಕೊಳ್ಳುವಂತೆ ಮಾಡಬೇಕೆಂಬ ಉದ್ದೇಶದಿಂದಲೇ ಸರ್ಕಾರದವರು ಈ ಸ್ಕೂಲುಗಳನ್ನು ಸ್ಥಾಪಿಸಿರುತ್ತಾರೆ —ಕಮರ್ಷಿಯಲ್ ಸ್ಕೂಲಿನ ಸಂಬಂಧದಲ್ಲಿ ಛಾಪಾಖಾನೆ ಕಸಬು ಬೋಧಿಸುವಬಗ್ಗೆ ಒಂದು ತರಗತಿಯನ್ನು ಸ್ಥಾಪಿಸುವ ವಿಷಯವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ ಇಲ್ಲಿ ಕಲಿಸತಕ್ಕ ಬೋಧನೆಯು ಮುಖ್ಯವಾದುದಾಗಿಯೂ ಪ್ರಕೃತದಲ್ಲಿ ಸ್ವಲ್ಪಮಟ್ಟಿಗೆ ಪ್ರಾಥಮಿಕ ಸ್ಥಿತಿಯದಾಗಿಯೂ ಇರುತ್ತದೆ ಈಗ ಕಲ್ಪಿಸಿರುವ ಸೌಲಭ್ಯಗಳನ್ನು ಜನರು ಆದರಪೂರ್ವಕವಾಗಿಯೂ ಧಾರಾಳವಾಗಿಯೂ ಉಪಯೋಗಿಸಿಕೊಂಡದ್ದಲ್ಲಿ ಸದರಿ ಸ್ಕೂಲಿನ ಉಪಯೋಗವನ್ನು ಇನ್ನೂ ಹೆಚ್ಚಿಸುವುದಕ್ಕೂ ಆ ವಿದ್ಯೆಗೆ ಸಂಬಂಧಪಟ್ಟ ನಾನಾಶಾಲೆಗಳಲ್ಲಿ ಪ್ರೌಢಬೋಧನೆ ನಡೆಯುವಂತೆ ಮಾಡುವುದಕ್ಕೂ ಸರ್ಕಾರದವರು ಸಿದ್ಧರಾಗಿರುತ್ತಾರೆ

ಧರ್ಮನೀತಿಬೋಧೆ —1908 ನೆಯ ಇಸವಿಯ ನವಂಬರ್ ಮಾಹೆಯಲ್ಲಿ ಮಾಡಿಯಲ್ಲಿ ಕರಲ್ಪಟ್ಟ ಧರ್ಮನೀತಿ ಬೋಧೆಯ ಏರ್ಪಾಟಿನ ಮೇರೆಗೆ ಕ್ಲುಪ್ತವಾದ ಪಾಠಕ್ರಮವನ್ನು ಅನುಸರಿಸಿ ಪಾಠಗಳ ಬೋಧನೆಯು ಕ್ರಮವಾಗಿ ನಡೆಯುತ್ತಿದೆ ಈ ಭಾಗದಲ್ಲಿ ಸುಮಾರು ಐದು ವರ್ಷಗಳ ಅನುಭವ ಉಂಟಾಗಿದ್ದಾಗ್ಯೂ ಈ ಏರ್ಪಾಟಿನಿಂದ ವಾಸ್ತವವಾಗಿ ಎಷ್ಟರಮಟ್ಟಿಗೆ ಅಭಿವೃದ್ಧಿ ಉಂಟಾಗಿರುತ್ತದೆ ಎಂಬುದನ್ನೂ, ನಿರೀಕ್ಷಿಸಲ್ಪಟ್ಟ ಫಲಿತಾಂಶಗಳ ಪೈಕಿ ಯಾವುದಾದರೂ ನೆರವೇರಿದೆಯೋ ಎಂಬುದನ್ನೂ ಈಗಲೇ ಹೇಳಲು ಕಷ್ಟವಾಗಿದೆ [illegible] ಗಳಲ್ಲಿಯೂ, ಹೈಸ್ಕೂಲುಗಳಲ್ಲಿಯೂ ಸಮರ್ಥರಾದ ಉಪಾಧ್ಯಾಯರು ಈ ವಿಷಯವನ್ನು ಬೋಧಿಸುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಿದೆ ಆದರೆ ಇತರ ಸ್ಕೂಲುಗಳಲ್ಲಿ, ನೀತಿಧರ್ಮಗಳನ್ನು ಬೋಧಿಸುವುದಕ್ಕೆ ತಕ್ಕಂತಾದ ಉಪಾಧ್ಯಾಯರುಗಳು ಇಲ್ಲದಿರುವುದರಿಂದಲೂ, ಸರಿಯಾದ ಟೆಕ್ಸ್ಟ್ ಬುಕ್ಕುಗಳು ಇಲ್ಲದಿರುವುದರಿಂದಲೂ, ಅವರು ಕೊಡುವ ಬೋಧೆಯಲ್ಲಿ ಹುಡುಗರಿಗೆ ಆಸಕ್ತಿಯು ಕಡಮೆಯಾಗುವುದಲ್ಲದೆ ಹೆಚ್ಚು ಫಲವು ಹೇಳಿದ್ದೇ ಹೇಳಿದಹಾಗೆ ಆಗಿರುತ್ತದೆ ಆದಕಾರಣ, ಕ್ರಮೋಣ ವಿದ್ಯಾಭ್ಯಾಸ ಕ್ರಮದ ಈ ಶಾಖೆಯನ್ನು ಹುಡುಗರ ತಂದೆತಾಯಿಗಳಿಗೂ, ಆಯಾ ಮತದವರಿಗೂ ಬಿಡುವುದು ಉತ್ತಮವಲ್ಲವೇ ಎಂಬ ಅಂಶವನ್ನು ಇನ್ನೂ ಚೆನ್ನಾಗಿ ಚರ್ಚಿಸಬೇಕಾಗಿದೆ —ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಕೆಲಸಗಳು ಸಂಸ್ಥಾನದಲ್ಲಿ ಹೆಚ್ಚುತ್ತಿರುವುದರಿಂದಲೂ, ಈಗ ಹೆಚ್ಚಾಗಿ ಕೊಟ್ಟಿರುವ ಗ್ರ್ಯಾಂಟುಗಳನ್ನು ವಿಶೇಷ ಪ್ರಯೋಜನಕರವಾಗುವಂತೆ ಉಪಯೋಗಿಸಬೇಕಾದುದು ಆವಶ್ಯಕವಾಗಿರುವುದರಿಂದಲೂ, ಸರ್ಕಾರದವರು ವಿದ್ಯಾಭ್ಯಾಸದ ಇಲಾಖೆಗೆ ಡಿಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಎಂಬ ಒಬ್ಬ ಆಫೀಸರನ್ನು ನೇಮಕರ್ಮಾಡಿರುತ್ತಾರೆ ಸಂಸ್ಥಾನದಲ್ಲಿ ಎಲಿಮೆಂಟರಿ ಮತ್ತು ಸೆಕೆಂಡರಿ ವರ್ನಾಕ್ಯುಲರ್ ವಿದ್ಯಾಭ್ಯಾಸದ ಚಾರ್ಜನ್ನು ಈ ಆಫೀಸರಿಗೆ ವಹಿಸಿಕೊಟ್ಟಿರಲಾಗಿದೆ

ಕೈಗಾರಿಕೆ ಮತ್ತು ವ್ಯಾಪಾರ —ಕಳೆದ ಜನವರಿ ಮಾಹೆಯಲ್ಲಿ ಕೈಗಾರಿಕೆ ಮತ್ತು ವ್ಯಾಪಾರದ ಇಲಾಖೆಯು ಸ್ಥಾಪಿಸಲ್ಪಟ್ಟಿತು ; ಅದುವರೆಗೂ ಕೈಗಾರಿಕೆ ಮತ್ತು ವ್ಯಾಪಾರ ಭಾಗಗಳ ಸ್ಪೆಸಲ್ ಆಫೀಸರಿಂದ ನಡೆಯುತ್ತಿದ್ದ ಕೆಲಸವನ್ನೇ ಸದರಿ ಇಲಾಖೆಯವರು ಈಗ ನಡೆಸುತ್ತಲಿದ್ದಾರೆ ಕೂಡಲೇ ಆಚರಣೆಗೆ ತರಬಹುದಾದ ಹೊಸ ಏರ್ಪಾಟುಗಳನ್ನು ರಚಿಸಿ ಅವುಗಳ ಕಲ್ಪನೆಗಳನ್ನು ವಿವರಿಸುವುದೂ, ಇಂಥಾ ಏರ್ಪಾಡುಗಳಿಗೆ ಸಾಧಕವಾದ ಅಜಮಾಯಿಷಿಗಳನ್ನು ಪೂರ್ವಭಾವಿಯಾಗಿ ನಡೆಯಿಸುವುದೂ, ಅವಶ್ಯಕವಾದ ಲೆಕ್ಕಗಳನ್ನು ಸಂಗ್ರಹಿಸುವುದೂ, ಕೈಗಾರಿಕೆ ವಿಷಯಗಳಲ್ಲಿ ಜನರಿಗೆ ಅವಶ್ಯವಾದ ವರ್ತಮಾನವನ್ನು ದೊರಕಿಸುವುದು ಇವೇ ಈ ಇಲಾಖೆಯ ಮುಖ್ಯ ಕರ್ತವ್ಯಗಳಾಗಿರುತ್ತವೆ — ಸರ್ಕಾರದವರು ಸಂಸ್ಥಾನದಲ್ಲಿ ಮುಖ್ಯವಾದ ರೇಷ್ಮೆಯ ಉತ್ಪತ್ತಿಯನ್ನು ಅಭಿವೃದ್ಧಿಗೊಳಿಸುವುದಕ್ಕೋಸ್ಕರ ರೇಷ್ಮೆಯ ತಯಾರೀ ಕೆಲಸದಲ್ಲಿ ಸಮರ್ಥರಾದ ಒಬ್ಬರನ್ನು ಇಟಲೀದೇಶದಿಂದ ಕರೆಯಿಸಿಕೊಂಡು ಅವರನ್ನು ಈಚೆಗೆ ಸದರಿ ಕಾರ್ಯಕ್ಕಾಗಿ ನೇಮಿಸಿಕೊಂಡಿರುತ್ತಾರೆ ಕೆಲವು ವರ್ಷಗಳ ಕೆಳಗೆ ಈ ಸಂಸ್ಥಾನದಿಂದ ಒಂದು ಕೋಟಿ ರೂಪಾಯಿಗಿಂತಲೂ ಜಾಸ್ತಿ ಬೆಲೆ ಬಾಳುವ ರೇಷ್ಮೆಯು ರಫ್ತು ಆಗಿರುವುದಾಗಿ ತಿಳಿಯಬರುವುದು,

ವ್ಯವಸಾಯ ಪಾಠಶಾಲೆ —ಈಚೆಗೆ ಬೆಂಗಳೂರಲ್ಲಿ ಒಂದು ವ್ಯವಸಾಯ ಪಾಠಶಾಲೆಯನ್ನು ಸ್ಥಾಪಿಸಲಾಗಿರುತ್ತದೆ ಆ ಪಾಠಶಾಲೆಯಲ್ಲಿ ಈಗ ಹದಿನಾಲ್ಕು ಜನ ವಿದ್ಯಾರ್ಥಿಗಳು ಇರುತ್ತಾರೆ ಸಾಧ್ಯವಾದಷ್ಟು ಜಾಗ್ರತೆಯಾಗಿ, ವ್ಯವಸಾಯಗಾರರಿಗಾಗಿ ಕನ್ನಡಭಾಷೆಯಲ್ಲಿ ಪಾಠಕ್ರಮವನ್ನು ಏರ್ಪಡಿಸಲಾಗುವುದು ಈ ರೀತಿಯಾಗಿ ಅನೇಕ ರೈತರಿಗೆ ಈ ವಿದ್ಯಾಭ್ಯಾಸವು ಲಭಿಸುವುದೆಂದು ನಿರೀಕ್ಷಿಸಲಾಗಿದೆ ಈ ಪಾಠಶಾಲೆಯಲ್ಲಿ ಪಾಠ ಕ್ರಮಗಳನ್ನು ಸಾಧ್ಯವಾದ ಮಟ್ಟಿಗೂ ಕಾರ್ಯತಃ ಉಪಯೋಗಕ್ಕೆ ಬರುವ ರೀತಿಯಲ್ಲಿ ಏರ್ಪಡಿಸಿರುತ್ತದೆ ವಿದ್ಯಾರ್ಥಿಗಳು ತಮ್ಮ ವ್ಯಾಸಂಗಕಾಲದಲ್ಲಿ ವ್ಯವಸಾಯ ಕ್ಷೇತ್ರದೊಳಗೆ ಕೆಲಸ ಮಾಡುವುದಕ್ಕೆ ವಿಶೇಷ ಗಮನವನ್ನು ಕೊಡಬೇಕಾಗುವುದು , ಅವರಿಗೆ ವ್ಯವಸಾಯ ವಿಧಾನಗಳನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುವಂತೆ, ಸಂಗ್ರಹ ರೂಪವಾದ ವ್ಯವಸಾಯ ಶಾಸ್ತ್ರ ಮೊದಲಾದವುಗಳಲ್ಲಿ ಮುಖ್ಯಾಂಶಗಳನ್ನು ಮಾತ್ರ ಹೇಳಿಕೊಡಲಾಗುತ್ತದೆ ವ್ಯವಸಾಯದ ಮುಟ್ಟುಗಳನ್ನೂ ಯಂತ್ರಗಳನ್ನೂ ತಯಾರ್ ಮಾಡುವುದು ಮತ್ತು ದುರಸ್ತು ಮಾಡುವುದು, ಬಡಗಿಯ ಕೆಲಸವನ್ನು ಸ್ವಲ್ಪಮಟ್ಟಿಗೆ ಕಲಿಸುವುದು, ಕೊಲಮಿಯ ಕೆಲಸ, ಎಣ್ಣೆ ಯಂತ್ರಗಳನ್ನು ನಡೆಯಿಸುವುದು ಈ ವಿಷಯಗಳಲ್ಲಿ ಸ್ವತಃ ಕೆಲಸಮಾಡಿ ಕಲಿಯುವ ಅಭ್ಯಾಸವನ್ನುಂಟುಮಾಡಿಕೊಡಲ್ಪಡುತ್ತೆ

ಪರಸ್ಪರ ಸಹಾಯ ಸಂಘಗಳು —ಹಿಂದಿನ ವರ್ಷದಲ್ಲಿ ಸಂಸ್ಥಾನದಲ್ಲಿ ಪರಸ್ಪರ ಸಹಾಯ ಸಂಘದ ಏರ್ಪಾಟಿನ ಅಭಿವೃದ್ಧಿಯು ತೃಪ್ತಿಕರವಾಗಿ ನಡೆಯಿತು ಪ್ರಕೃತವರ್ಷದಲ್ಲಿ ಒಂದು ಸಂಘವು ಮುಚ್ಚಲ್ಪಟ್ಟು 136 ಸಂಘಗಳು ಹೊಸದಾಗಿ ಸ್ಥಾಪಿತವಾದುದರಿಂದ ಸಂಘಗಳ ಸಂಖ್ಯೆಯು 208 ರಿಂದ 343 ಕ್ಕೆ ಏರಿರುತ್ತದೆ ಈ ಸಂಘಗಳ ಮೆಂಬರುಗಳ ಸಂಖ್ಯೆಯು 13,116 ರಿಂದ 21,639 ರ ವರೆಗೂ, ಬಂಡವಾಳದ ಹಣವು 6,75,312 ರೂಪಾಯಿಯಿಂದ 12,80,338 ರೂಪಾಯಿವರೆಗೂ, ರಿಜರ್ವು ಫಂಡಿನ ಮೊಬಲಗು 18,833 ರೂಪಾಯಿಯಿಂದ 31,600 ರೂಪಾಯಿ ವರೆಗೂ ಹೆಚ್ಚಿರುತ್ತದೆ ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಈ ಸಂಘಗಳ ಪ್ರಚಾರಕ್ಕೆ ಅವಶ್ಯಕವಾದ ಸಂದರ್ಭಗಳು ಸಾಕಾದಷ್ಟು ಮಟ್ಟಿಗೆ ಅನುಕೂಲವಾಗಿಲ್ಲದ, ಅಭಿವೃದ್ಧಿಯು ಕಡಿಮೆಯಾಗಿರುವುದರಿಂದ, ಈ ಎರಡು ಡಿಸ್ಟ್ರಿಕ್ಟುಗಳ ಹೊರತು ಸಂಸ್ಥಾನದ ಇತರ ಪ್ರದೇಶಗಳಲ್ಲೆಲ್ಲ ಈ ವಿಷಯದ ಪುರೋಭಿವೃದ್ಧಿಯು ಸರ್ವಸಾಧಾರಣವಾಗಿ ಆಗಿರುತ್ತದೆಂದು ತಿಳಿಯಬರುವುದು ಬೋರ್ಡಲ್ ಫಂಡುಗಳು ಮೊದಲಾದ ಎಲ್ಲಾ ಬಾಬುಗಳಿಂದಲೂ ಮರಾಮತ್ ಕೆಲಸಗಳಿಗಾಗಿ ಒಟ್ಟು ಖರ್ಚಾದ ಸಾಲಿನಲ್ಲಿ 141 ಲಕ್ಷ ರೂಪಾಯಿಯಾಗಿದ್ದು ಪ್ರಕೃತಸಂವತ್ಸರದಲ್ಲಿ 16 ಲಕ್ಷ ರೂಪಾಯಿಯಾಯಿತು ಹಿಂದಿನ 10 ವರ್ಷಗಳ ಸರಾಸರಿ ಖರ್ಚು 151 ಲಕ್ಷ ರೂಪಾಯಿಯಾಗಿತ್ತದೆ ಈ ಹಣದ ಪೈಕಿ, ನೀರಾವರಿ ಕೆಲಸಗಳಿಗಾಗಿ 2¼ ಲಕ್ಷ ರೂಪಾಯಿಯನ್ನೂ, ಕಟ್ಟಡ, ರೋಡು ವಗೈರೆ ಕೆಲಸಗಳಿಗಾಗಿಯೂ, ಮಿಲಿಟರಿ ಕಟ್ಟಡಗಳಿಗಾಗಿಯೂ 17¼ ಲಕ್ಷ ರೂಪಾಯಿಯನ್ನೂ ಖರ್ಚುಮಾಡಲಾಯಿತು

ನೀರಾವರಿ ಕೆಲಸಗಳು —1911 ನೆಯ ನವಂಬರಿನಲ್ಲಿ, ಕನ್ನಂಬಾಡಿ ಬಳಿ ಕಾವೇರಿ ನದಿಗೆ ಅಡ್ಡವಾಗಿ ಆಣೆಯನ್ನು ಕಟ್ಟಲುಪಕ್ರಮ ಮಾಡಲಾಯಿತು ಅದನ್ನು ... ದನೆಯ ಪರ್ಯಾಯದವರಿಗೆ ಕಟ್ಟತಕ್ಕ ಕೆಲಸವೇ ಪ್ರಕೃತ ಸಂವತ್ಸರದಲ್ಲಿ ಕೈಗೊಂಡ ಬಹು ಮುಖ್ಯವಾದ ಕೆಲಸವಾಗಿರುತ್ತದೆ ವಿದ್ಯುಚ್ಛಕ್ತಿಯ ಏರ್ಪಾಟಿಗೆ ತಗಲುವ, ಖರ್ಚನ್ನು ಬಿಟ್ಟುಬಿಟ್ಟು, ಈ ಕೆಲಸಕ್ಕೆ 91 ಲಕ್ಷ ರೂಪಾಯಿ ಖರ್ಚು ತಗಲುವುದೆಂದು ಅಂದಾಜು ಮಾಡಲಾಗಿದೆ ನದೀಪಾತ್ರದಲ್ಲಿ ತಳಹದಿಯನ್ನು ತೋಡುವುದೇ ಈ ವರ್ಷದಲ್ಲಿ ನಡಿಸಿದ ಮುಖ್ಯ ಕಾರ್ಯವಾಗಿದೆ ನೀರು ನುಗ್ಗುವುದರಿಂದಲೂ, ಊಟೆ ಏಳುವುದರಿಂದಲೂ ನದೀ ದಕ್ಷಿಣತೀರದ ಸಮೀಪದಲ್ಲಿ ಬಹಳ ಆಳದವರೆಗೆ ಅಭ್ರಕದ ಪೊರೆಗಳು ಸಿಕ್ಕಿದುದರಿ ದಲೂ ತಳಹದಿ ಕೆಲಸವು ಕಷ್ಟವಾಯಿತು ಆದರೂ ನದೀಪಾತ್ರ ಭಾಗದಲ್ಲಿ ಆಸೆನಟ್ಟಿಗಾಗಿ ಅಗಬೇಕಾದ ಅಗತೆಯ ಕೆಲಸವನ್ನೆಲ್ಲ ಸ್ವಲ್ಪ ಹೆಚ್ಚು ಕಡಮೆಯಾಗಿ ಪೂರೈಸಿ, ತಳಹದಿಯನ್ನು ಹಾಕಲಾಯಿತು ಪ್ರಕೃತ ಸಂವತ್ಸರದಲ್ಲಿ ರೆವಿನ್ಯು ಮತ್ತು ಮರಾಮತ್ ಇಲಾಖೆಯ ಅಧಿಕಾರಿಗಳು ನೀರು ಮುಳುಗಡೆಗೆ ಒಳಗಾಗುವ ಜಮೀನುಗಳಿಗೆ ಪರಿಹಾರಕೊಡತಕ್ಕ ವಿಷಯವನ್ನೂ ಅಲ್ಲಿ ಸ್ಥಳವಸತಿಯನ್ನು ಕಳೆದುಕೊಂಡ ಜನಗಳಿಗೆ ಹೊಸ ಜಾಗಗಳಲ್ಲಿ ಸ್ಥಳವಸತಿಯನ್ನು ಕಲ್ಪಿಸಿಕೊಡತಕ್ಕ ಸಂಗತಿಯನ್ನೂ ಪರ್ಯಾಲೋಚಿಸುತ್ತಿದ್ದರು ಚೆನ್ನಾಗಿ ವಿಚಾರಮಾಡಿ ಪ್ರತ್ಯಕ್ಷ ಬದಲಾಗಿ ಜಮೀನನ್ನು ಪರಿಹಾರ ರೂಪವಾಗಿ ಕೊಡಬೇಕೆಂದು ಏರ್ಪಾಡನ್ನು ಮಾಡಿಯದೆ ಆಣೆಕಟ್ಟಿನ ಕಾಮಗಾರಿಗಾಗಿ ಪ್ರಕೃತ ಸಂವತ್ಸರದಲ್ಲಿ 16¼ ಲಕ್ಷ ರೂಪಾಯಿ ಖರ್ಚುಮಾಡಿದುದರಿಂದ, 1913ನೆಯ ಜೂನ್ ಆಖೈರ್‌ವರೆಗೆ ಈ ಕೆಲಸಕ್ಕಾಗಿ ಒಟ್ಟು 23¼ ಲಕ್ಷ ರೂಪಾಯಿ ಖರ್ಚಾಯಿತು —ಸರ್ಕಾರದವರು ಉದ್ದೇಶಿಸಿರುವ ಸದರಿ ಜಲಾಶಯದ ಎರಡನೆಯ ಪರ್ಯಾಯದ ವಿಷಯದಲ್ಲಿ, ಇಂಡಿಯಾ ಸರ್ಕಾರದವರು ಈಚೆಗೆ ಒಂದು (ಆರ್ಬಿಟ್ರೇಷನ್) ಪಂಚಾಯಿತಿ ಕೋರ್ಟನ್ನು ಏರ್ಪಡಿಸಿದ್ದಾರೆ ಈ ಕೋರ್ಟಿಗೆ ಅಲಹಾಬಾದ್ ಹೈ ಕೋರ್ಟು ಜಡ್ಜಿಗಳಾದ ಸರ್ ಹ್ಯಾರಿಗ್ರಿಫಿನ್‌ರವರನ್ನು ಅಧ್ಯಕ್ಷರನ್ನಾಗಿಯೂ ಅವರ ಸಹಾಯಕ್ಕಾಗಿ ಇಂಡಿಯ ದೇಶದ ಇರಿಗೇಷನ್ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್‌ರ ದ ಮಿ|| ನೆದರ್‌ಸೋಲ್‌ರವರನ್ನು ಪಂಚಾಯಿತಿದಾರರನ್ನಾಗಿಯೂ ನಿಯಮಿಸಿರುತ್ತಾರೆ ಸದರಿ ಕೋರ್ಟಿನವರು ಕಳೆದ ಜೂನ್ನೈ 18 ನೆಯ ತಾರೀಖಿನಲ್ಲಿ ಕಾರ್ಯವನ್ನು ಉಪಕ್ರಮಿಸಿದರು ವಿವಾದವಾದ ಅಂಶಗಳನ್ನೆಲ್ಲಾ ಸಂಗ್ರಹಿಸಿ ಗೊತ್ತುಮಾಡಿಕೊಂಡ ಬಳಿಕ ಸದ್ಯಕ್ಕೆ ಕೆಲಸವನ್ನು ನಿಲ್ಲಿಸಿ ಈ ತಿಂಗಳ ಕೊನೆಯ ಭಾಗದಲ್ಲಿ ಪುನಃ ಆವರ ವಿಚಾರವನ್ನು ನಡಿಸಬೇಕೆಂದು ನಿಶ್ಚಯಿಸಿರುತ್ತಾರೆ

ನೀರಾವರಿ ಕಾರ್ಯಗಳ ಅಭಿವೃದ್ಧಿ —ಕೆರೆ ಪಂಚಾಯಿತಿ ರೆಗ್ಯುಲೇಷನನ್ನು ಅನುಸರಿಸಿ ನಿಬಂಧನೆಗಳನ್ನು ಏರ್ಪಡಿಸಿ ಇದೆ ಈ ನಿಬಂಧನೆಗಳನ್ನು ಜಾರಿಗೆ ತಂದ ಬಳಿಕ ಅವುಗಳಿಂದ ಎಷ್ಟುಮಟ್ಟಿನ ಪ್ರಯೋಜನವಾಗುವುದೆಂಬುದನ್ನು ಪರೀಕ್ಷಿಸಿ ತಿಳಿಯುವ ಉದ್ದೇಶದಿಂದ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಮೂರು ನಾಲ್ಕು ಗೊತ್ತುಮಾಡಿದ ಗ್ರಾಮಗಳಲ್ಲಿ ಸದರಿ ನಿಬಂಧನೆಗಳನ್ನು ಸ್ವಲ್ಪ ಕಾಲದಲ್ಲಿಯೇ ಜಾರಿಗೆ ತರಲಾಗುತ್ತದೆ ಸಣ್ಣ ಕೆರೆಗಳ ಆಬಾದಿನ ಏರ್ಪಾಟಿಗಾಗಿ ಇರುವ ಶಿಬ್ಬಂದಿಯನ್ನು ಪರಿಷ್ಕಾರಪಡಿಸಲು ಸಲಹೆಗಳು ಬಂದು ಪರ್ಯಾಲೋಚನೆಯಲ್ಲಿ ಇರುತ್ತವೆ —ಡಿಸ್ಟ್ರಿಕ್ಟುಗಳಲ್ಲಿ ಚುನಾಯಿಸಿಕೊಂಡಿರುವ ಕೆಲವು ಕೆರೆಗಳ ಕೆಳಗೆ ಇರುವ ಜಮೀನುಗಳಿಗೆ ನೀರು ಸರಬರಾಯಿಮಾಡುವುದನ್ನು ಹತೋಟಿಯಲ್ಲಿಟ್ಟುಕೊಂಡು ಕ್ರಮಪಡಿಸುವುದಕ್ಕಾಗಿ ತಕ್ಕ ಪ್ರಯತ್ನಗಳನ್ನು ಜರುಗಿಸಿರುತ್ತದೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿರುವ ಸೂಳೆಕೆರೆ ಮತ್ತು ಸೌಳಂಗಕೆರೆ, ಇವೆರಡರ ನೀರನ್ನು ಸರಬರಾಯಿಮಾಡತಕ್ಕ ವಿಚಾರದಲ್ಲಿ ಸಲಹೆಗಳು ಸಿದ್ಧವಾಗಿವೆ ಮಿಕ್ಕ ಕೆರೆಗಳ ವಿಚಾರದಲ್ಲಿ ಸಲಹೆಗಳು ಬೇರೆ ಬೇರೆ ಸ್ಥಿತಿಯಲ್ಲಿವೆ —ಇರ್ರಿಗೇಷನ್ ಡಿವಿಜನನ್ನು ಏರ್ಪಡಿಸುವ ವಿಚಾರವು ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತದೆ ಕಾವೇರಿ ಜಲಾಶಯದಿಂದ ನೀರು ಹರಿಯುವ ನಾಲೆಗಳ ಕೆಳಗೆ ಕಬ್ಬಿನ ಸಾಗುವಳಿಯನ್ನು ವೃದ್ಧಿಗೊಳಿಸುವುದು, ಚುನಾಯಿಸಲ್ಪಟ್ಟ ಕೆರೆಗಳ ಕೆಳಗೆ ಶಾಸ್ತ್ರರೀತಿಯನ್ನು ಅನುಸರಿಸಿ ಹತೋಟಿಯಲ್ಲಿಟ್ಟುಕೊಂಡು ನೀರು ಸರಬರಾಯಿ ಮಾಡುವುದು, ಮಳೆ ಬೀಳುವ ವಿಷಯವಾಗಿಯೂ, ನೀರು ಹರಿಯುವ ವಿಷಯವಾಗಿಯೂ, ಪ್ರವಾಹದಿಂದ ನೀರು ಹೋಗುವ ವಿಷಯವಾಗಿಯೂ ಜಲಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯಗಳನ್ನು ಸಂಗ್ರಹಿಸುವುದು, ಕೆರೆ ಮ್ಯಾಪ್‌ಗಳನ್ನೂ ರಿಜಿಸ್ಟರುಗಳನ್ನೂ ಪೂರೈಸುವುದು—ಈ ಕೆಲಸಗಳನ್ನೆಲ್ಲ ಸದರಿ ಡಿವಿಜನಿಗೆ ವಹಿಸಬೇಕೆಂದು ಉದ್ದೇಶಿಸಿರುತ್ತದೆ —ಜನಗಳಿಗೆ ಉಪಯೋಗಕರವಾದ ಮರಾಮತ್ ಚಿಲ್ಲರೆ ಕಾಮಗಾರಿಗಳ ಪೈಕಿ, ಮೈಸೂರು ಪಟ್ಟಣದ ನೀರು ಸರಬರಾಯಿಗಾಗಿ ಜೂಯೆಲ್ ಫಿಲ್ಟರ್ (ಜಲಶೋಧಕ ಯಂತ್ರ) ಮತ್ತು ಸಹಾಯಕವಾದ ಪಂಪಿಂಗ್ ಯಂತ್ರಗಳನ್ನು ಸ್ಥಾಪಿಸುವುದೇ ಮುಖ್ಯ ಕಾರ್ಯವೆಂದು ಹೇಳಬಹುದು ಶಕ್ತಿ ಸಹಾಯಕ್ಕೂ ಯಂತ್ರಗಳಿಗೂ ಬೇಕಾದ ಕಟ್ಟಡವು ಪೂರೈಸುತ್ತಲಿದೆ ಜೂಯೆಲ್ ಫಿಲ್ಟರಿನ ಯಂತ್ರಸಾಮಗ್ರಿಗಳನ್ನು ಜೋಡಿಸುತ್ತಲಿದೆ

ವಿದ್ಯುಚ್ಛಕ್ತಿ —ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಡಿನ ನಾಲ್ಕನೆಯ ಸ್ಥಾಪನೆಯನ್ನು ಪ್ರಾರಂಭಿಸಲಾಯಿತು ಮತ್ತು ಸದರಿ ಏರ್ಪಾಡಿಗೆ ಬೇಕಾದ ಅನೇಕ ಸಾಮಾನುಗಳಿಗಾಗಿಯೂ ಯಂತ್ರಗಳಿಗಾಗಿಯೂ ಇತರ ದೇಶಗಳ ಕಾರ್ಖಾನೆಯವರಿಗೆ ಬರೆದು ಇರುತ್ತದೆ ಬೆಂಗಳೂರು ನಗರದಲ್ಲಿ ಟ್ರ್ಯಾಂ ಹಾಕತಕ್ಕ ಮಾರ್ಗಗಳನ್ನು ಆಖೈರಾಗಿ ವ್ಯವಸ್ಥೆಮಾಡಿ ಆ ಬಗ್ಗೆ ಕೆಲಸವನ್ನು ಪೂರೈಸುತ್ತಲಿದೆ ಟ್ರ್ಯಾಂ ಗಾಡಿಗಳು ನಿಲ್ಲುವುದಕ್ಕೂ ವಿದ್ಯುಚ್ಛಕ್ತಿಯನ್ನು ತಯಾರ್ಮಾಡುವುದಕ್ಕೂ ಕಟ್ಟಡಗಳು ಸಿದ್ಧವಾಗುತ್ತಲಿವೆ

ಮುಜರಾಯಿ ಇಲಾಖೆ —ಸತ್ರ, ದೇವಸ್ಥಾನ ಮೊದಲಾದ ಧರ್ಮಾಲಯ ಗಳ ಸ್ಥಿತಿಯನ್ನು ವಿಚಾರಮಾಡಿ ಅವುಗಳ ಆಡಳಿತದ ವಿಷಯದಲ್ಲಿಯೂ, ಕಾರ್ಯಕ್ರಮದ ಏರ್ಪಾಟಿನ ವಿಷಯದಲ್ಲಿಯೂ, ಪುರೋಭಿವೃದ್ಧಿಯ ವಿಷಯದಲ್ಲಿಯೂ ತನಿಖೆಯಿಂದ ರಿಪೋರ್ಟು ಮಾಡತಕ್ಕಬಗ್ಗೆ ಸರ್ಕಾರದವರು ಹುಕುಂಮಾಡಿರುತ್ತಾರೆ ಇದಕ್ಕಾಗಿ ಏರ್ಪಡಿಸಿರುವ ಕಮಿಟಿಯವರು ತಮ್ಮ ಕಾರ್ಯವನ್ನು ಉಪಕ್ರಮಿಸಿರುತ್ತಾರೆ

ಬೆಂಗಳೂರು ಮತ್ತು ಮೈಸೂರು ಸಿಟಿ ಮ್ಯುನಿಸಿಪಾಲಿಟಿಗಳು —ಕೆಲವು ವರ್ಷಗಳಿಂದ ಈಚೆಗೆ ಬೆಂಗಳೂರು ಮತ್ತು ಮೈಸೂರು ಡೆಪ್ಯುಟಿ ಕಮಿಷನರುಗಳಿಗೆ ನಾನಾ ವಿಧವಾದ ಕೆಲಸಗಳ ದೆಸೆಯಿಂದ ಆ ಎರಡು ಮ್ಯುನಿಸಿಪಾಲಿಟಿಗಳ ಕೆಲಸಕಾರ್ಯಗಳಿಗೆ ಅವಶ್ಯಕವಾದಷ್ಟು ಅವಧಾನವನ್ನು ಕೊಡಲು ಸಾಧ್ಯವಾಗಲಿಲ್ಲವೆಂದು ಕಂಡುಬಂದದರಿಂದ, ಪ್ರಕೃತವರ್ಷದ ಆಖೈರ್‌ಭಾಗದಲ್ಲಿ ಸರ್ಕಾರದವರು ಅವರುಗಳಿಗೆ ಸದರಿ ಮ್ಯುನಿಸಿಪಾಲಿಟಿಗಳ ಕೌನ್ಸಿಲರ್ ಮತ್ತು ಪ್ರೆಸಿಡೆಂಟರ ಕೆಲಸಗಳನ್ನು ತಪ್ಪಿಸಿದರು ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಪ್ರೆಸಿಡೆಂಟರನ್ನು ನಿಯಮಿಸುವುದಕ್ಕೆ ಸಕಾಲವು ಒದಗಿರುತ್ತದೆ ಎಂದು ಭಾವಿಸಿ ರಿಟೈರ್ಡ್ ಕೌನ್ಸಿಲರಾದ ರಾಜಸಭಾಭೂಷಣ ದಿವಾನ್ ಬಹದುರ್ ಮಿ|| ಕೆ ಪಿ ಪುಟ್ಟಣ್ಣಶೆಟ್ಟರವರನ್ನು 1913 ನೇಯ ಫೆಬ್ರವರಿ 1 ನೆಯ ತಾರೀಖು ಲಾಗಾಯಿತು ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿಗೆ ಪ್ರೆಸಿಡೆಂಟರನ್ನಾಗಿ ನಿಯಮಿಸಲಾಯಿತು ಮರಾಮತ್ ಇಲಾಖೆಯ ಒಬ್ಬ ಆಫೀಸರನ್ನು ಮೈಸೂರು ಸಿಟಿಯಲ್ಲಿನ ಮ್ಯುನಿಸಿಪಲ್ ಕೌನ್ಸಿಲಿಗೆ ಪ್ರೆಸಿಡೆಂಟರನ್ನಾಗಿಯೂ ಸದರಿ ನಗರದ ಟ್ರಸ್ಟ್ ಬೋರ್ಡಿಗೆ ಅಧ್ಯಕ್ಷರನ್ನಾಗಿಯೂ ಹಂಗಾಮಿ ತರೀಕ್ ನಿಯಮಿಸಲಾಗಿರುತ್ತದೆ

ಪ್ರಜೆಗಳಲ್ಲಿ ಕಾರ್ಯೋತ್ಸಾಹ —ಸಂಪದಭ್ಯುದಯ ಸಮಾಜದ ಕೆಲಸಗಳ ಪರಸ್ಪರ ಸಹಾಯಕ ಪ್ರಯತ್ನದ ಸೂಚನೆಗಳು ಕಾಣಬರುತ್ತವೆ ಆದರೆ ಡಿಸ್ಟ್ರಿಕ್ಟ್ ಕಮಿಟಿಯವರು ಈಗ ತಾನೇ ಕೆಲಸವು ಮುಂದೆ ಸಾಗುವುದಕ್ಕೆ ಸಹಕಾರಿಯಾಗುವ ಪ್ರಯತ್ನಗಳನ್ನು ಮಾಡುತ್ತಲಿದ್ದಾರೆ —ಮತ್ತೊಂದು ವಿಚಾರದಲ್ಲಿ ಜನರು ಅಭಿವೃದ್ಧಿಗೆ ಬಂದಿರುವ ಸೂಚನೆಗಳು ಕಾಣಬರುತ್ತವೆ ಕೆಲವು ದೊಡ್ಡ ಮನುಷ್ಯರು ಮ್ಯುನಿಸಿಪಲ್ ಆಡಳಿತವನ್ನು ಗೌರವಾರ್ಥವಾಗಿ ನೆರವೇರಿಸಲು ಮುಂದಾಗಿ ಬಂದಿರುತ್ತಾರೆ ಹಿಂದೆ ತಿಳಿಸಿರುವಂತೆ ರಾಜಸಭಾಭೂಷಣ ದಿವಾನ್ ಬಹಾದುರ್ ಮಿ ಕೆ ಪಿ ಪುಟ್ಟಣ್ಣಶೆಟ್ಟಿಯವರು ಬೆಂಗಳೂರು ಸಿಟಿಯಲ್ಲಿ ಪ್ರೆಸಿಡೆಂಟರ ಕೆಲಸವನ್ನೂ, ಮೆಸರ್ಸ್ ಶೇಷಾದ್ರಿಅಯ್ಯಂಗಾರ್ಯರೂ, ಎಸ್. ಮಲ್ಲಾರಿರಾಯರೂ, ಸಿ ವಾಸುದೇವರಾಯರೂ, ತುಮಕೂರು, ಕೋಲಾರ, ಚಿಕ್ಕಮಗಳೂರು ಕಸಬಾ ಮ್ಯುನಿಸಿಪಾಲಿಟಿಗಳಲ್ಲಿ ವೈಸ್ ಪ್ರೆಸಿಡೆಂಟರ ಕೆಲಸಗಳನ್ನು ವಹಿಸಿರುತ್ತಾರೆ ಕಳೆದ ಫೆಬ್ರುವರಿ ಲಾಗಾಯಿತು ಮಿ|| ಕೆ ಪಿ ಪುಟ್ಟಣ್ಣಶೆಟ್ಟರವರು ಈ ಸಂಸ್ಥಾನದಲ್ಲಿ ಮುಖ್ಯತಮವಾದ ಮ್ಯುನಿಸಿಪಾಲಿಟಿಯ ಕೆಲಸಗಳಲ್ಲಿಯೂ, ಪ್ರಜೋಪಕಾರವಾದ ಇತರ ಕಾರ್ಯಗಳಲ್ಲಿಯೂ ಸಹ ಫಲಾಪೇಕ್ಷೆಯಿಲ್ಲದೆ ಮಾಡುತ್ತಿರುವ ಕಾರ್ಯನಿರ್ವಾಹವು ಕೇವಲ ಶ್ಲಾಘನೀಯವಾಗಿದೆ —ಪರಸ್ಪರ ಸಹಾಯಕಾರ್ಯಗಳು ಅಭಿವೃದ್ಧಿಗೆ ಬಂದಿರುವುದಕ್ಕೆ ರಾಜಮಂತ್ರ ಪ್ರವೀಣ ಮಿ|| ಸಿ ಶ್ರೀನಿವಾಸ ಅಯ್ಯಂಗಾರ್ಯರು ಮಿ|| ಡಿ ಅಪ್ಪಾರಾಯರು ಮೊದಲಾದ ಪರಹಿತ ಚಿಂತಕರು ಸ್ವಪ್ರಯೋಜನಾಪೇಕ್ಷೆಯಿಲ್ಲದೆ ಮಾಡುತ್ತಿರುವ ಉಪಕಾರವೇ ಕಾರಣವಾಗಿರುತ್ತದೆ —ಧನಿಕರಾದ ಅನೇಕರು ಸರ್ವಜನೋಪಯುಕ್ತವಾದ ಸ್ಕೂಲು ಕಟ್ಟಡಗಳನ್ನೂ ವಿದ್ಯಾರ್ಥಿನಿಲಯಗಳನ್ನೂ ಕಟ್ಟಿಸುವುದರ ಮೂಲಕವೂ, ಜನಗಳಿಗೆ ವಿದ್ಯಾಭ್ಯಾಸಪ್ರಯುಕ್ತವಾದ ಸೌಲಭ್ಯಗಳನ್ನು ಕಲ್ಪಿಸುವುದರ ಮೂಲಕವೂ, ಶ್ಲಾಘನೀಯವಾದ ಔದಾರ್ಯವನ್ನು ತೋರಿಸಿರುತ್ತಾರೆ —ಜನಗಳಿಗೆ ಪ್ರಜೋಪಕಾರವಾದ ಕಾರ್ಯಗಳಲ್ಲಿ ಉತ್ಸಾಹ ಉಂಟಾಗಿರುತ್ತದೆ ಎಂಬ ಈ ಸೂಚನೆಗಳನ್ನೆಲ್ಲಾ ಶ್ರೀಮನ್ಮಹಾರಾಜರವರ ಸರ್ಕಾರದವರು ಬಹಳವಾಗಿ ಮೆಚ್ಚಿರುತ್ತಾರೆ ಇದೇ ರೀತಿಯಾಗಿ ಸರ್ವರೂ ಇಂತಹ ಕೆಲಸಗಳು ಎಲ್ಲಿಯೇ ನಡೆಯಲಿ ಅವುಗಳನ್ನು ಆದರದಿಂದ ಅಂಗೀಕರಿಸಿ ತನ್ಮೂಲಕ ಪ್ರೋತ್ಸಾಹಗೊಳಿಸುವರೆಂದು ಸರ್ಕಾರದವರು ನಿರೀಕ್ಷಿಸುತ್ತಾರೆ

ಈಗ ನಡೆಯುತ್ತಿರುವ ಅಥವಾ ಮುಂದೆ ನಡಿಯಿಸಬೇಕೆಂದಿರುವ ಏರ್ಪಾಟುಗಳು —ಸರ್ಕಾರದವರು ಸಂಸ್ಥಾನದಲ್ಲಿ ವಿಶೇಷವಾಗಿ ರೈಲುಗಳನ್ನು ಹಾಕುವ ಪ್ರಯತ್ನಕ್ಕೆ ಉಪಕ್ರಮಿಸುತ್ತಾರೆ ಸಾಧ್ಯವಾದರೆ ಮೈಸೂರು ಡಿಸ್ಟ್ರಿಕ್ಟಿನಲ್ಲಿ ನಂಜನಗೂಡಿನಿಂದ ರೈಲು ರಸ್ತೆಯನ್ನು ಬನಾಯಿಸಿ ನೀಲಗಿರಿ ಬೆಟ್ಟದ ಒಂದು ಪಾರ್ಶ್ವದಲ್ಲಿ ದಕ್ಷಿಣ ಇಂಡಿಯಾ ರೈಲ್ವೆಯ ರಸ್ತೆಯನ್ನು ಸೇರುವಂತೆ ಮಾಡಬೇಕೆಂಬ ಅಭಿಪ್ರಾಯವು ಸರ್ಕಾರದವರಿಗೆ ಇರುತ್ತದೆ ಬೆಂಗಳೂರು ಹಾಸನ ಲೈನಿನಲ್ಲಿರುವ ಅರಸೀಕೆರೆಗೂ ಮಂಗಳೂರು ರೇವು ಪಟ್ಟಣಕ್ಕೂ ರೈಲು ರಸ್ತೆ ಹಾಕುವ ವಿಷಯವೂ ಪರ್ಯಾಲೋಚನೆಯಲ್ಲಿದೆ ಈ ಎರಡು ರೈಲು ರಸ್ತೆಗಳ ವಿಚಾರದಲ್ಲಿಯೂ, ಈ ಸಂಸ್ಥಾನದ ಸರಹದ್ದಿನ ವರೆಗೂ ರೈಲು ರಸ್ತೆಯನ್ನು ಹಾಕುವುದಕ್ಕೆ ಸರ್ಕಾರದವರು ಸಿದ್ಧರಾಗಿದ್ದಾರೆ. ಈ ಎರಡು ವಿಷಯಗಳೂ

ಇಂಡಿಯಾ ಸರ್ಕಾರದವರೊಡನೆ ಆಲೋಚನೆಯಲ್ಲಿವೆ —ಸಂಸ್ಥಾನದಲ್ಲಿ ಸಣ್ಣ ಸಣ್ಣ ಕಾಲುವೆ ನಾಲೆಗಳ ಕಾಮಗಾರಿಗಳನ್ನು ಅವುಗಳ ಅವಶ್ಯಕತೆಗೂ ಪ್ರಾಮುಖ್ಯತೆಗೂ ಅನುಸಾರವಾಗಿ ಪ್ರಾರಂಭಿಸಲಾಗುತ್ತದೆ —ಹುಟ್ಟುವಳಿಯನ್ನು ಹೆಚ್ಚಿಸುವಂಥ ಮರಾಮತ್ ಕಾಮಗಾರಿಗಳನ್ನು ಸಂದರ್ಭಾನುಸಾರವಾಗಿ ತಕ್ಕಷ್ಟು ಜಾಗ್ರತೆಯಿಂದ ನಡಿಸುತ್ತಾ ಇದೆ ಈ ವಿಚಾರದಲ್ಲಿ ವಿಶೇಷವಾದ ಕಾರ್ಯಗಳನ್ನು ನಡಿಸುವುದು ಎರಡು ಅತ್ಯವಶ್ಯವಾದ ನಿಯಮಗಳಿಗೆ ಒಳಪಟ್ಟಿರಬೇಕು ಯಾವುವೆಂದರೆ, 1 ಪ್ರತಿಯೊಂದು ಸಂದರ್ಭದಲ್ಲಿಯೂ ಖರ್ಚುಮಾಡುವ ಹಣಕ್ಕೆ ಸರಿಯಾದ ಆದಾಯವು ಬಂದು, ಆ ಕಾಮಗಾರಿಯು ಸಂಸ್ಥಾನಕ್ಕೆ ಹೊಸ ಆಸ್ತಿಯಾಗಿ ಪರಿಣಮಿಸಬೇಕು 2 ಯಾವ ಸಂದರ್ಭದಲ್ಲೂ ಸಂಸ್ಥಾನದಲ್ಲಿ ಹಣದ ಅಡಚಣೆಗೆ ಅವಕಾಶವಿರಬಾರದು —ಕನ್ನಂಬಾಡಿ ಜಲಾಶಯದ ಕಾಮಗಾರಿಯನ್ನೂ ಅದಕ್ಕೆ ಸಂಬಂಧಪಟ್ಟ ಇತರ ಕೆಲಸಗಳನ್ನೂ ಜಾಗ್ರತೆಯಿಂದ ನಡಿಸುತ್ತಾ ಇದೆ ಇದುವರೆಗೂ ಆ ಪ್ರದೇಶದಲ್ಲಿ ನಿರಂತರವೂ ನೀರು ಬೇಕಾದ ಬೆಳೆಗಳಿಗೆ ತೃಪ್ತಿಕರವಾದ ಸರಬರಾಯಿ ಇಲ್ಲದಿರುವುದರಿಂದ ಸದರೀ ಬೆಳೆಗಳಿಗೆ ನೀರನ್ನು ಒದಗಿಸತಕ್ಕದ್ದು ಮತ್ತು ವಿದ್ಯುಚ್ಛಕ್ತಿಯ ಸರಬರಾಯಿಯನ್ನು ಕಾಪಾಡತಕ್ಕದ್ದು, ಇವೇ ಈ ಜಲಾಶಯವನ್ನು ಕಟ್ಟುವುದಕ್ಕೆ ಮುಖ್ಯೋದ್ದೇಶಗಳಾಗಿರುತ್ತವೆ ಈಗ ಗೊತ್ತುಮಾಡಿರುವ ಕ್ರಮದ ಮೇರೆಗೆ ಜಲಾಶಯವನ್ನು ಪೂರೈಸಿದಲ್ಲಿ ಸಮುದ್ರಕ್ಕೆ ವ್ಯರ್ಥವಾಗಿ ಈಗ ಹೋಗುತ್ತಿರುವ ಭಾಗದ ನೀರೂ ಸದರಿ ಜಲಾಶಯದಲ್ಲಿ ನಿಲ್ಲುತ್ತದೆಯಾಗಿ ಇವರಿಂದಲೂ ಮುಂದೆ ಕಟ್ಟುವ ನಾಲೆಗಳಿಂದಲೂ ಜನಗಳ ಜೀವನಕ್ಕೆ ವಿಶೇಷ ಆಶ್ರಯವುಂಟಾಗಿ ದುರ್ಭಿಕ್ಷದಿಂದ ಒದಗುವ ಕೇಡುಗಳು ಬಹುಮಟ್ಟಿಗೆ ಕಡಮೆಯಾಗುತ್ತವೆ ಅಲ್ಲದೆ ಈ ಜಲಾಶಯದಿಂದ ವರ್ಷವೆಲ್ಲಾ ಆಗುವ ಉತ್ತಮ ತರಹೆ ಬೆಳೆಗಳ ಸಾಗುವಳಿಯನ್ನು ವಿಶೇಷವಾಗಿ ಹೆಚ್ಚಿಸುವುದಕ್ಕೆ ಅವಕಾಶವಾಗುತ್ತದೆ —ವಿದ್ಯುಚ್ಛಕ್ತಿಯ ನಾಲ್ಕನೆಯ ಸ್ಥಾಪನೆಯನ್ನು ಏರ್ಪಡಿಸುವುದಕ್ಕೆ ತಕ್ಕ ಪ್ರಯತ್ನಮಾಡಿ ಇದೆ ಕೋಲಾರದ ಮೈನಿಂಗ್ ಕಂಪನಿಗಳೊಡನೆ ಈಗತಾನೆ ಒಂದು ಒಪ್ಪಂದವು ಮಾಡಿಕೊಳ್ಳಲ್ಪಟ್ಟಿದೆ ಇದರ ಪ್ರಕಾರ ಕನ್ನಂಬಾಡಿ ಜಲಾಶಯದಲ್ಲಿ ನೀರು ನಿಲ್ಲಿಸಿಕೊಳ್ಳುವುದರಿಂದ ಈಗ ಇರುವ ವಿದ್ಯುಚ್ಛಕ್ತಿಯ ಸರಬರಾಯಿಗೆ ನ್ಯೂನತೆಯುಂಟಾಗದಂತೆಯೂ ಮೈನಿಂಗ್ ಕಂಪೆನಿಯವರು ಹೆಚ್ಚಾಗಿ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳುವಂತೆಯೂ ಆಗುತ್ತದೆ ಈಗ ಕೆಲವು ಗಣಿಗಳಲ್ಲಿ ಸುಮಾರು ಒಂದು ಮೈಲಿಯಷ್ಟು ಆಳದಲ್ಲಿ ಕೆಲಸ ನಡೆಯುತ್ತಿರುವುದು ನಿಮಗೆ ತಿಳಿದಿರಬಹುದು ಈಗ ಮಾಡಿಕೊಂಡಿರುವ ಏರ್ಪಾಟುಗಳಿಂದ ಗಣಿ ಕಂಪೆನಿಯವರು ಗಣಿಗಳಲ್ಲಿ ಇನ್ನೂ ಕೆಳಗಡೆ ಲಾಭಕರವಾಗಿ ಕೆಲಸ ನಡಿಸುವುದಕ್ಕೆ ಅನುಕೂಲವಾಗುವುದಲ್ಲದೆ ಸರ್ಕಾರಕ್ಕೆ ಹೆಚ್ಚು ಹುಟ್ಟುವಳಿಯೂ ಆಗುವುದು ಜನರು ಕೈಗಾರಿಕೆ ಕೆಲಸಗಳಿಗೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸಲು ಅವರಿಗೆ ಪ್ರೋತ್ಸಾಹವನ್ನು ಕೊಡಬೇಕೆಂಬ ಉದ್ದೇಶದಿಂದ ಬೆಂಗಳೂರು ಪಟ್ಟಣದಲ್ಲಿ ವಿದ್ಯುಚ್ಛಕ್ತಿಗಾಗಿ ಕೊಡಬೇಕಾದ ದರಗಳನ್ನು ಈಚೆಗೆ ಕಡಮೆ ಮಾಡಿ ಇದೆ ಮತ್ತು ಮೈಸೂರು ಬೆಂಗಳೂರು ಪಟ್ಟಣಗಳವರು ಇನ್ನೂ ಹೆಚ್ಚು ಸರಬರಾಯಿ ಮಾಡಬೇಕೆಂದು ಕೇಳಿದಲ್ಲಿ, ಸರ್ಕಾರದವರು ಆ ನಗರಗಳಿಗೆ ವಿದ್ಯುಚ್ಛಕ್ತಿಯ ಸರಬರಾಯಿಯನ್ನು ಇನ್ನೂ ಹೆಚ್ಚಾಗಿ ಕೊಡಲು ಸಿದ್ಧರಾಗಿರುತ್ತಾರೆ —ಶಾಸ್ತ್ರೀಯ ಕ್ರಮದಿಂದ ನೀರನ್ನು ಹಂಚುವ ಉದ್ದೇಶದಿಂದಲೂ, ಗನ್ನೆ ಮೊದಲಾದ ಲಾಭಕರವಾದ ಬೆಳೆಗಳನ್ನೂ ಇನ್ನೂ ಹೆಚ್ಚಾಗಿ ಬೆಳಸುವ ಉದ್ದೇಶದಿಂದಲೂ ದೊಡ್ಡ ದೊಡ್ಡ ನೀರಾವರೀ ಕೆರೆಗಳನ್ನೂ ನಾಲೆಗಳನ್ನೂ ಚೆನ್ನಾಗಿ ನೋಡಿಕೊಳ್ಳುವುದಕ್ಕಾಗಿ ಅಜಮಾಯಿಷೀ ತರೀಖ್ ಈಗ ವಿಶೇಷ ಏರ್ಪಾಡುಗಳನ್ನು ಮಾಡುತ್ತಲಿದೆ —ಈ ಸಭೆಯಲ್ಲಿ ಪದೇಪದೇ ಆಶೆಮಾಡಿಕೊಂಡಿರುವಂತೆ ಸಣ್ಣ ಸಣ್ಣ ನೀರಾವರೀ ಕಾಮಗಾರಿಗಳನ್ನು ಉತ್ತಮಸ್ಥಿತಿಗೆ ತರಬೇಕಾದರೆ, ಸರ್ಕಾರದ ಸಹಾಯದಿಂದ ಸದರೀ ಕಾಮಗಾರಿಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಅವಶ್ಯಕವಾದ ಗ್ರಾಮಕಟ್ಟುಪಾಟು ಪೂರೈಸುವುದನ್ನೇ ನಿರೀಕ್ಷಿಸಬೇಕಾಗಿದೆ ಈ ಸಣ್ಣ ಕೆರೆಗಳ ಕಾಮಗಾರಿ ವಿಷಯವು ಮುಂದಿನ ವರ್ಷದಲ್ಲಿ ತೃಪ್ತಿಕರವಾಗಿ ವ್ಯವಸ್ಥೆ ಮಾಡಲ್ಪಡುತ್ತೆಂದು ಶ್ರೀಮನ್ಮಹಾರಾಜರವರ ಸರ್ಕಾರದವರು ಅಪೇಕ್ಷೆಯುಳ್ಳವರಾಗಿರುತ್ತಾರೆ —ಬೆಂಗಳೂರು ಮತ್ತು ಮೈಸೂರು ನಗರ ರಚನೆಗೆ ಸಂಬಂಧಪಟ್ಟ ಏರ್ಪಾಟುಗಳು, ಸಂಸ್ಥಾನದಲ್ಲಿ ಅನೇಕ ಪಟ್ಟಣಗಳಿಗೆ ನೀರು ಸರಬರಾಯಿನ ಏರ್ಪಾಟುಗಳು ಮತ್ತು ಚರಂಡಿ ಕಾಮಗಾರಿಗಳು ಇವುಗಳು ಅಭಿವೃದ್ಧಿಪಡಿಸಬೇಕಾಗಿದೆ ಇವುಗಳ ಪೈಕಿ ಕೆಲವಕ್ಕೆ ಗಮನಕೊಡುತ್ತಿರಲಾಗಿದೆ —ಖಾಸಗಿ ಕೈಗಾರಿಕೆಗಳೂ ತತ್ಸಂಬಂಧವಾದ ಸಾಹಸಕಾರ್ಯಗಳಿಗೂ ಸಹಾಯಮಾಡುವುದಕ್ಕಾಗಿ ಹೊಸದಾಗಿ ಸ್ಥಾಪಿಸಲ್ಪಟ್ಟ ಕೈಗಾರಿಕೆಗಳ ಮತ್ತು ವ್ಯಾಪಾರದ ಇಲಾಖೆಗೆ ಬೇಕಾದ ಅನುಕೂಲತೆಯನ್ನು ಕೊಡಲಾಗುವುದು —ಒಬ್ಬ ಡೈರೆಕ್ಟರವರನ್ನು ನೇಮಿಸುವುದರ ಮೂಲಕ ವ್ಯವಸಾಯದ ಇಲಾಖೆಯನ್ನು ಬಲಪಡಿಸಿರುತ್ತದೆ ಈ ಸಂಸ್ಥಾನದಲ್ಲಿ ವ್ಯವಸಾಯದ ವಿಷಯಗಳನ್ನು ಉತ್ತಮಸ್ಥಿತಿಗೆ ತರುವುದಕ್ಕಾಗಿ ಸದರೀ ಇಲಾಖೆಯವರು ಮಾಡಬೇಕಾದ ಕಾರ್ಯಭಾಗಗಳನ್ನು ವೃದ್ಧಿಪಡಿಸಲು ಅವಶ್ಯಕವಾದ ಏರ್ಪಾಡುಗಳಿಗೂ ಗಮನಕೊಡುತ್ತಿರಲಾಗಿದೆ ಗ್ರಾಮಾಂತರಗಳಲ್ಲಿ ನಡೆಯುವ ಅನೇಕ ಕಾರ್ಯಗಳಿಗೂ, ಸಾಮಾನ್ಯವಾಗಿ ಹಳ್ಳಿಗಾಡುಗಳಲ್ಲಿ ಆಚರಣೆಯಲ್ಲಿರುವ ವ್ಯವಹಾರಗಳಿಗೂ ಪರಸ್ಪರ ಸಹಾಯಕ ವಿಷಯವಾದ ನಿಯಮವು ಅನ್ವಯಿಸುವಂತೆ ಸದರೀ ಪರಸ್ಪರ ಸಹಾಯಕ ಕ್ರಮವನ್ನು ಅಭಿವೃದ್ಧಿಪಡಿಸುವುದಕ್ಕೆ ಇನ್ನುಮೇಲೆ ಹೆಚ್ಚಾಗಿ ಗಮನಕೊಡಲಾಗುವುದು —ಈಗ ಹೊಸದಾಗಿ ಒಂದು ಗ್ರಾಮಕೋರ್ಟುಗಳ ಕಾನೂನನ್ನು ಜಾರಿಗೆ ತಂದಿದೆ ಗ್ರಾಮಪಾಠಶಾಲೆ, ನೀರಾವರೀ, ಗ್ರಾಮಸಮಾಜಗಳ ಇತರ ಕರ್ತವ್ಯಗಳು ಇವುಗಳ ಆಡಳಿತಕ್ಕಾಗಿ ಗ್ರಾಮಪಂಚಾಯಿತಿಗಳನ್ನು ಸ್ಥಾಪಿಸುವ ವಿಷಯವು ಜಾಗ್ರತೆಯಲ್ಲಿಯೇ ಸರ್ಕಾರದವರಿಂದ ಪರ್ಯಾಲೋಚಿಸಲ್ಪಡುತ್ತದೆ ಹಿಂದೆಯೇ ತಿಳಿಸಿದಂತೆ, ಮಲೆನಾಡು ಪ್ರದೇಶದ ಜನಗಳ ಅನಾರೋಗ್ಯವನ್ನು ಕಮ್ಮಿ ಮಾಡುವುದಕ್ಕಾಗಿಯೂ ಪ್ರಜಾಸಂಖ್ಯೆಯು ಕ್ಷೀಣವಾಗುವುದನ್ನು ತಡೆಯುವುದಕ್ಕಾಗಿಯೂ ಸೂಚಿಸಲ್ಪಟ್ಟಿರುವ ಕೆಲವು ಏರ್ಪಾಡುಗಳ ವಿಷಯದಲ್ಲಿ ಕ್ಷಿಪ್ರದಲ್ಲಿಯೇ ಹುಕುಂ ಸಾದರಾಗುತ್ತದೆ —ಇಂಡಿಯಾ ಸರ್ಕಾರದವರ ಕ್ರಮವನ್ನು ಅನುಸರಿಸಿ ಈ ಸಂಸ್ಥಾನದಲ್ಲಿಯೂ ವಿದ್ಯಾಭಿವೃದ್ಧಿಗಾಗಿ ವಿಶೇಷ ದ್ರವ್ಯವನ್ನು ಖರ್ಚುಮಾಡುವುದಲ್ಲದೆ ಸರ್ಕಾರದವರು ಹೆಚ್ಚಾದ ನಿಗಾವನ್ನು ಕೊಡುತ್ತಿದಾರೆ ಈ ಮೈಸೂರು ಸಂಸ್ಥಾನಕ್ಕೆ ಒಂದು ಯೂನಿವರ್ಸಿಟಿಯನ್ನು ಏರ್ಪಾಡುಮಾಡುವ ವಿಷಯವು ಶ್ರೀಮನ್ಮಹಾರಾಜರವರ ಸರ್ಕಾರದ ಆಲೋಚನೆಯಲ್ಲಿದೆ —ಮೇಲೆ ಸೂಚಿಸಿದ ವಿಷಯಗಳಲ್ಲಿ ಕ್ರಮ ಜರುಗಿಸುವುದು ವಿಶೇಷ ಕಷ್ಟವೇನೂ ಕಾಣಬರುವುದಿಲ್ಲ ಇನ್ನೂ ಇತರ ಅನೇಕ ವಿಷಯಗಳು ಸರ್ಕಾರದವರ ವಿಮರ್ಶೆಯಲ್ಲಿವೆ ಕೆಲವು ವಿಷಯಗಳಲ್ಲಿ ತಕ್ಕಮಟ್ಟಿಗೆ ತರದೂದು ಸಹ ನಡೆದಿದೆ

ಜನಗಳ ಕಾರ್ಯದಕ್ಷತೆ —ಜನಗಳ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಮಾಡಬೇಕಾದ ಏರ್ಪಾಟುಗಳನ್ನು ಕುರಿತು ಈಗ ಕೆಲವು ವಿಷಯಗಳನ್ನು ತಿಳಿಸುವುದು ಅಪ್ರಕೃತವಾಗಿರಲಾರದು —ಮರಾಮತ್ ಕೆಲಸಗಳನ್ನು ನಡಿಸುವುದೂ, ರೈಲ್ವೆ ಟ್ರಾಂವೆಗಳನ್ನು ಹಾಕುವುದೂ, ಸಹ ಈಗಿನ ಕಾಲದಲ್ಲಿ ಕಷ್ಟವಲ್ಲ ಏಕೆಂದರೆ ಈ ಕೆಲಸಗಳಿಗೋಸ್ಕರ ಬಂಡವಾಳದ ಮೇಲೆ ಸಾಮಾನ್ಯವಾಗಿ ನಫೆಯನ್ನು ಭರವಸೆಕೊಡಬಹುದಾದರೆ, ಅನ್ಯದೇಶದಿಂದ ಮೂಲಧನವನ್ನೂ ತರಬಹುದು ಇಂಡಿಯಾದೇಶದಲ್ಲೆಲ್ಲಾ ಅಂಥಾ ಪ್ರಪಂಚದಲ್ಲೆಲ್ಲಾ ಕೇವಲ ಸಮರ್ಥರಾದ ಜನಗಳನ್ನು ಸರ್ಕಾರದ ಕೆಲಸಕ್ಕೆ ನಿಯಮಿಸಿಕೊಳ್ಳುವುದೂ ಸಹ ಸುಲಭವಾಗಿದೆ ಏಕೆಂದರೆ ಅಂಥಾ ಸಮರ್ಥರನೇಕರು ಉದ್ಯೋಗವನ್ನು ಹುಡುಕುತ್ತಿದ್ದಾರೆ ಹಾಗೆ ಹೊರಗಿನಿಂದ ಬಂದ ಜನಗಳು ಸ್ವಪ್ರಯೋಜನವನ್ನು ಹೊಂದುವುದರಜತೆಗೆ ನಮಗೂ ಪ್ರಯೋಜನವನ್ನುಂಟುಮಾಡಿಕೊಡುವದಾದರೆ ಅಂಥವರ ಸಹಾಯವು ಆದರದಿಂದ ಸ್ವೀಕರಿಸತಕ್ಕದ್ದಾಗಿದೆ ಆದರೆ ಕೇವಲ ಅನ್ಯದೇಶೀಯರ ಸಹಾಯದಿಂದಲೇ ಭಾರೀಭಾರೀ ಕಾರ್ಯಗಳನ್ನು ನಡಿಸಿದರೆ, ನಮ್ಮ ದೇಶದ ಜನಗಳಲ್ಲಿ ಕೆಲಸ ಮಾಡುವ ಶಕ್ತಿಯು ಹೆಚ್ಚುವುದಿಲ್ಲ, ಅಥವಾ ದೇಶವೂ ಅಭಿವೃದ್ಧಿಸ್ಥಿತಿಗೆ ಬರುವುದಿಲ್ಲ ಅಲ್ಲದೆ, ಮೈಸೂರು ಸಂಸ್ಥಾನದೊಳಗೇ ಮೈಸೂರು ಸಂಸ್ಥಾನದ ದ್ರವ್ಯವನ್ನೇ ಉಪಯೋಗಿಸಿ, ಜನಗಳ ಬುದ್ಧಿಕುಶಲತೆಯನ್ನೂ, ಸಹಜವಾಗಿ ದೊರೆಯುವ ಸಂಪದಭಿವರ್ಧಕ ಸಾಧನಗಳನ್ನೂ, ಸಿದ್ಧವಾಗಿರತಕ್ಕ ಮೂಲಧನವನ್ನೂ ಸಹ ದಿನೇದಿನೇ ಹೆಚ್ಚುವಂತೆ ಪ್ರಚಾರಕ್ಕೆ ತಂದಹೊರತು ದೇಶವು ಸ್ಥಿರವಾದ ಅಭಿವೃದ್ಧಿಯನ್ನು ಪಡೆಯುತ್ತಿದೆ ಎಂದು ಹೇಳುವುದಕ್ಕೆ ಸುತರಾಂ ಆಗಲಾರದು —ನಮ್ಮ ಈಗಿನ ಸ್ಥಿತಿಯಲ್ಲಿ ಬಹಳ ಜಾಗರೂಕತೆಯಿಂದ ನೋಡಿಕೊಳ್ಳಲವಶ್ಯಕವಾದ ಕೆಲವು ಅಂಶಗಳಿರುತ್ತವೆ ಕಳೆದ 30 ವರ್ಷಗಳಲ್ಲಿ ದೇಶವು ಅಭಿವೃದ್ಧಿಯನ್ನೈದಿದೆಯೆಂಬುವುದರಲ್ಲಿ ಸಂದೇಹವಿಲ್ಲ ಈಗ ಜನಗಳು ಮೊದಲಿಗಿಂತಲೂ ಉತ್ತಮವಾದ ಮನೆಗಳಲ್ಲಿ ವಾಸಮಾಡುತ್ತಾರೆ, ಮೊದಲಿಗಿಂತಲೂ ಉತ್ತಮವಾದ ಉಡುಪುಗಳನ್ನು ಧರಿಸುತ್ತಾರೆ, ಮೊದಲಿಗಿಂತಲೂ ಒಳ್ಳೆಯ ಆಹಾರವನ್ನು ತೆಗೆದುಕೊಳ್ಳುತ್ತಾರೆ ಮತ್ತು ಜೀವನಸ್ಥಿತಿಯು ಕೂಡ ಮೊದಲಿಗಿಂತಲೂ ಉಚ್ಚಸ್ಥಿತಿಯಕ್ಕೆ ಬಂದಿರುತ್ತದೆ ಆದರೆ ಈ ಅಭಿವೃದ್ಧಿಗಳಿಗೆ ಈ ಭರತ ಖಂಡದಲ್ಲಿ ಸಾಮಾನ್ಯವಾಗಿ ಎಲ್ಲಾ ಪ್ರದೇಶಗಳಲ್ಲಿಯೂ ಆ ಅಭಿವೃದ್ಧಿಗಳೇ ಕಾರಣವೇ ಹೊರತು ನಾವು ಸಂಘೀಕರಿಸಿ ಮಾಡಿದ ಪ್ರಯತ್ನಗಳೇ ಆಗಲಿ ನಮ್ಮ ಚಟವಟಿಕೆಯೇ ಆಗಲಿ ಕಾರಣವಲ್ಲ ಪ್ರತಿ ಹದಿನಾರು ಜನಗಳಲ್ಲಿ ಒಬ್ಬನಿಗೆ ಮಾತ್ರ ಓದು ಬರಹ ಬರುತ್ತದೆ ಭೂಮಿ ವ್ಯವಸಾಯಗಾರರಿಗೆ ಮಳೆಬೆಳೆಯು ಸಾಮಾನ್ಯಸ್ಥಿತಿಯಲ್ಲಿರುವಾಗಲೂಕೂಡ ಪೂರಾ ಕೆಲಸವಿರುವದಿಲ್ಲ ದುರ್ಭಿಕ್ಷಕಾಲಗಳಲ್ಲಿ ಅನೇಕ ತಿಂಗಳವರೆಗೆ ಅವರಿಗೆ ಕೆಲಸವೇ ಇರುವುದಿಲ್ಲ ಮುಂದಿನ ನಿರೀಕ್ಷೆಯೂ ಇರುವುದಿಲ್ಲ ನಮ್ಮ ದೇಶದ ಜನಗಳ ಪೈಕಿ ಮುಕ್ಕಾಲುಪಾಲು ಜನರು ಭೂಮಿಯ ವ್ಯವಸಾಯವನ್ನೇ ನಂಬಿಕೊಂಡಿರುತ್ತಾರೆ ಇವರ ಪೈಕಿ ಬಹುಭಾಗದವರು ಗ್ರಾಮಾಂತರಗಳಲ್ಲಿ ವಾಸಮಾಡುತ್ತಾರೆ ಇವರಿಗೆ ತಮ್ಮ ತಮ್ಮ ಮನೆಗಳಿಂದ ಹೊರಗೆ ಕೆಲಸಗಳೂ ಇಲ್ಲ, ಹೆಚ್ಚಾಗಿ ಸಂಪಾದಿಸಬೇಕೆಂಬ ಕಾಂಕ್ಷೆಯೂ ಇಲ್ಲ ನಮ್ಮ ದೇಶದ ಜಮೀನುದಾರರು ಸ್ವಲ್ಪ ಉಪಪತ್ತಿಯುಳ್ಳವರು ದೇಶದ ವ್ಯಾಪಾರವೂ ಕೂಡ ಸಣ್ಣಸಣ್ಣ ವರ್ತಕರಿಂದ ನಡೆಯುತ್ತದೆ ಇವರು ತಮ್ಮ ತಮ್ಮ ಮಟ್ಟಿಗೆ ಒಬ್ಬೊಬ್ಬರೇ ಕೆಲಸಮಾಡಿಕೊಳ್ಳುತ್ತಾರೆ ಒಬ್ಬರಿಗೊಬ್ಬರು ಸೇರಿ ಸಂಘೀಕರಿಸಿ ನಡಿಸತಕ್ಕ ಪರಸ್ಪರ ಸಹಾಯದ ಪ್ರಯೋಜನಗಳು ನಮ್ಮ ಜನಗಳಲ್ಲಿ ಕೇವಲ ಉನ್ನತಸ್ಥಿತಿಯಲ್ಲಿರತಕ್ಕವರಿಗೂ ಕೂಡ ತಿಳಿದಿರುವುದಿಲ್ಲ —ರೆಂಡಿಷ್ಟ ಆದನಂತರ ಮೊದಲನೆಯ ದಿವಾನ್‌ರವರು ಆಗತಾನೇ ಗೋಚರಿಸಿದ್ದ 1876_78ನೆಯ ಸಾಲುಗಳ ಕ್ಷಾಮದ ಅನುಭವದ ಮೇಲೆ, ಇದೇ ವಿಧವಾಗಿದ್ದ ಆಗಿನ ಸ್ಥಿತಿಯನ್ನು ಕುರಿತು ಪ್ರಸ್ತಾಪಿಸಿರುತ್ತಾರೆ. ಮಿ| ರಂಗಾಚಾರ್ಲುಯವರು 1881ನೆಯ ಇಸವಿಯಲ್ಲಿ ಈ ಸಭೆಯವರನ್ನು ಕುರಿತು ಮಾಡಿದ ಉಪನ್ಯಾಸದಲ್ಲಿ “ವ್ಯವಸಾಯ ವೃತ್ತಿಯನ್ನೂ, ಕೈಗಾರಿಕೆಯ ವೃತ್ತಿಯನ್ನೂ ಒಂದೇ ಸಮವಾಗಿ ವೃದ್ಧಿಪಡಿಸಿದ ಹೊರತು ಯಾವ ದೇಶವೂ ಏಳಿಗೆಗೆ ಬರಲಾರದೆಂದು” ಹೇಳಿ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರಬೇಕಾದ ಆವಶ್ಯಕತೆಯನ್ನು ಬಹು ದೃಢವಾಗಿ ಹೇಳಿರುತ್ತಾರೆ —ಮತ್ತು “ಪ್ರಪಂಚದ ಇತರ ದೇಶಗಳ ಜನಗಳು ಆಶ್ಚರ್ಯಕರವಾಗಿ ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವಾಗ, ಈ ದೇಶದ ನಿವಾಸಿಗಳಾದ 20 ಕೋಟಿ ಜನಗಳು, 2,000 ವರ್ಷಗಳ ಹಿಂದ ಇದ್ದ ತಮ್ಮ ಪೂರ್ವಿಕರಿಂದ ಪರಂಪರಾಪ್ರಾಪ್ತವಾಗಿ ಬಂದ ಸಂಪ್ರದಾಯಗಳನ್ನೇ ಅನುಸರಿಸುತ್ತಲೂ, ಅಹಸ್ಯಹನಿ ಕಾಲಕ್ಷೇಪಕ್ಕೆ ತಕ್ಕಷ್ಟನ್ನು ಸಂಪಾದಿಸಿಕೊಂಡು ಬಹು ಕಷ್ಟದಿಂದ ಜೀವನಮಾಡುತ್ತಲೂ, ಕ್ಷಾಮವಾಗಲಿ ಅಥವಾ ಇತರ ದುರ್ದೆಸೆಯಾಗಲಿ ತಲೆದೋರಿದ ಕೂಡಲೆ ಕಶರಾಗುವ ಸ್ಥಿತಿಯಲ್ಲಿ ಇದು ಕೊಂಡಿದ್ದಂತೆ, ಇಂಥಾ ಚಿರಕಾಲ ನಿದ್ರಾವಸ್ಥೆಯಲ್ಲಿಯೇ ಇನ್ನೂ ಬಹುಕಾಲ ಇರಲಾಗದೆಂದು” ಸಹ ಅಭಿಪ್ರಾಯಪಟ್ಟಿರುತ್ತಾರೆ —ಈ ವಚನಗಳು 30 ವರ್ಷಗಳ ಹಿಂದೆ ಅವುಗಳನ್ನು ಹೇಳಿದಾಗ ಎಷ್ಟರಮಟ್ಟಿಗೆ ಯಥಾರ್ಥವಾಗಿದ್ದವೋ ಈಗಲೂ ಕೂಡ ಅಷ್ಟೇ ಯಥಾರ್ಥವಾಗಿರುತ್ತವೆ ಬದಲಾವಣೆಗೆ ಪ್ರಯತ್ನವನ್ನು ಮಾಡದೇ ಇರುವ ಪಕ್ಷಕ್ಕೆ, ಇನ್ನು ಮುಂದೆ 30 ವರ್ಷಗಳ ಮೇಲೂಕೂಡ ಹಾಗೇ ಇರುತ್ತವೆ ನಮ್ಮ ಶ್ರೀಮನ್ಮಹಾರಾಜಾಸಾಹೆಬ್ಬಹಾದುರವರು ಹಿಂದೆ 1903ನೆಯ ಇಸವಿಯಲ್ಲಿ ಮಾಡಿದ ಒಂದು ಭಾಷಣದಲ್ಲಿ “ಜನರು ಉದ್ಯಮಶೀಲರಾದ ಜನಾಂಗಗಳಾಗುವುದಕ್ಕೆ ಜನಗಳ ಉತ್ಸಾಹವೂ, ಸರ್ವಸಾಮಾನ್ಯಲಾಭಕ್ಕಾಗಿ ಎಲ್ಲರೂ ಒಟ್ಟಾಗಿ ಮಾಡುವ ಪ್ರಯತ್ನಗಳೂ ಸಹ ಕಾರಣವೇ ಹೊರತು ರಾಜ್ಯಭಾರವಾಗಲೀ ವಿವಿಧವಾದ ರಾಜ್ಯಭಾರ ಕ್ರಮಗಳಾಗಲಿ ಕಾರಣವಲ್ಲವೆಂದು” ಅಪ್ಪಣೆ ಕೊಡಿಸಿರುತ್ತಾರೆ —ಶ್ರೀಮನ್ಮಹಾರಾಜರವರು ತೋರ್ಪಡಿಸಿರುವ ಮಾರ್ಗವನ್ನು ಅನುಸರಿಸಿ ನಾವು ಜನಗಳಲ್ಲಿ ಸ್ವಪ್ರಯತ್ನವನ್ನೂ, ಕಾರ್ಯಾರಂಭ ಶಕ್ತಿಯನ್ನೂ, ಬದಲಾಯಿಸುವ ಧೈರ್ಯವನ್ನೂ, ಹೊಸ ವಿಧಾನಗಳನ್ನು ಕಲ್ಪಿಸುವುದಕ್ಕೆ ಧೈರ್ಯವನ್ನೂ, ಪರಸ್ಪರ ಸಹಾಯಕ ಬುದ್ಧಿಯನ್ನೂ ಸಂಘೀಕರಿಸಿ ಸನ್ನಿವೇಶಗಳನ್ನು ನಡಿಸುವ ಶಕ್ತಿಯನ್ನೂ ಪ್ರೋತ್ಸಾಹಗೊಳಿಸುವುದರ ಮೂಲಕ ನಮ್ಮ ಜನಗಳ ಜೀವನ ಮಾರ್ಗವನ್ನೂ ಶಕ್ತಿಯನ್ನೂ ಅಭಿವೃದ್ಧಿಪಡಿಸಬೇಕು —ಎಕನಾಮಿಕ್ ಕಾನ್ಫರೆನ್ಸ್ ಎಂಬ ಸಮಾಜವನ್ನು ಸ್ಥಾಪಿಸುವುದರ ಮೂಲಕ ಸಂಸ್ಥಾನದಲ್ಲಿ ಜನಗಳು ಪರಸ್ಪರ ಸಹಾಯಮಾಡಲು ಪ್ರಯತ್ನಪಡುವುದಕ್ಕಾಗಿ ಎಷ್ಟೇ ಸ್ವಲ್ಪವಾದುದಾದರೂ, ತಕ್ಕಮಟ್ಟಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿರುತ್ತವೆ, ಪಾಶ್ಚಾತ್ಯದೇಶಗಳಲ್ಲಿರುವ ವಿದ್ಯಾಭ್ಯಾಸ ಸಂಬಂಧವಾದ ಚಟವಟಿಕೆಗಳನ್ನೂ, ಕೈಗಾರಿಕೆಯ ಅತ್ಯಂತ ಪ್ರಾಮುಖ್ಯತೆಯನ್ನೂ, ವ್ಯಾಪಾರದಲ್ಲಿರುವ ತೀಕ್ಷ್ಣವಾದ ಸ್ಪರ್ಧೆಯನ್ನೂ ನೋಡಿದ ಯಾವ ಜನರೇ ಆಗಲಿ ಈ ಸಮಾಜದ ಉದ್ದೇಶಗಳಲ್ಲಿ ಮಮತೆಯನ್ನು ತೋರ್ಪಡಿಸಿ ಅವುಗಳಿಗೆ ಸಹಕಾರಿಗಳಾಗದೆ ಇರಲಾರರು

ಭಾರಿ ಪಹರುಗಳಲ್ಲಿಯೂ, ಪಟ್ಟಣಗಳಲ್ಲಿಯೂ ಕ್ರಮೇಣ ಗ್ರಾಮಾಂತರಗಳಲ್ಲಿಯೂ ಸಹ ಜನಗಳು ಪರಸ್ಪರ ಸಹಾಯದಿಂದ ದೊಡ್ಡ ಪ್ರಯತ್ನಗಳನ್ನು ಮಾಡಲಾರಂಭಿಸುವಂತೆ ಅವರಿಗೆ ಉತ್ತೇಜನವನ್ನು ಕೊಡುವುದೇ ಈ ಸಮಾಜದ ಏರ್ಪಾಡಿನ ಉದ್ದೇಶವಾಗಿರುತ್ತದೆ ಆದರೆ ಈ ಜನಗಳ ಪೈಕಿ 10ರಲ್ಲಿ 9 ಪಾಲು ಜನಗಳು ಹಳ್ಳಿಗಾಡಿನಲ್ಲಿಯೇ ವಾಸಮಾಡುತ್ತಿರುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿಗೆ ಸಾಧಕಗಳಾದ ಕಾರ್ಯಗಳು ನಡೆಯುವುದಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡುವುದಕ್ಕಾಗಿ ವಿಶೇಷ ಪ್ರಯತ್ನಗಳನ್ನು ಮಾಡುವುದು ಅವಶ್ಯಕವಾಗಿದೆ —ಒಂದು ವರ್ಷದ ಮೊದಲಿನಲ್ಲಿಯೂ ಆಖೈರಿನಲ್ಲಿಯೂ ಎಷ್ಟರಮಟ್ಟಿಗೆ ಅಭಿವೃದ್ಧಿಯಾಗಿದೆಯೆಂದು ತಿಳಿದುಕೊಳ್ಳುವುದಕ್ಕೆ ಗ್ರಾಮವೇ ವಿಚಾರದ ಆರಂಭಕ್ಕೆ ಅನುಕೂಲವಾದ್ದಾಗಿ ಇರುತ್ತದೆ ಪ್ರತಿ ಗ್ರಾಮದಲ್ಲಿಯೂ ವರ್ಷೇವರ್ಷೇ ಸ್ವಲ್ಪಸ್ವಲ್ಪವಾಗಿ ಅಭಿವೃದ್ಧಿಯು ತೋರುತ್ತ ಬಂದಲ್ಲಿ ಒಟ್ಟಿನ ಮೇಲೆ ವಿಶೇಷವಾದ ಅಭಿವೃದ್ಧಿಯು ಕಂಡುಬರುತ್ತದೆ ಯಾವ ಗ್ರಾಮದಲ್ಲಿ ಶೇಕಡಾ 5ರ ಲಾಗಾಯಿತು 10ರ ವರೆಗೆ ಅದರ ನಿವಾಸಿಗಳು ವಿದ್ಯಾಭ್ಯಾಸವನ್ನು ಮಾಡುತ್ತಾ ಇಲ್ಲವೋ ಆ ಗ್ರಾಮವು ಯಥೋಚಿತವಾದಷ್ಟು ಉತ್ತಮಸ್ಥಿತಿಯನ್ನು ಪಡೆದಿಲ್ಲವೆಂದು ಭಾವಿಸಬೇಕಾಗಿದೆ ಹೊರಗೆ ಪ್ರಪಂಚದಲ್ಲಿ ಏನೇನು ನಡೆಯುತ್ತದೆಯೆಂದು ತಿಳಿದುಕೊಳ್ಳುವುದಕ್ಕೋಸ್ಕರ ಯಾವ ಗ್ರಾಮವೂ ಒಂದೆರಡು ಒಳ್ಳೇ ಕನ್ನಡ ವರ್ತಮಾನ ಪತ್ರಿಕೆಗಳನ್ನಾದರೂ ತರಿಸಿಕೊಳ್ಳದೆ ಇರಕೂಡದು ಗ್ರಾಮದ ಪ್ರತಿಯೊಬ್ಬ ಕುಟುಂಬಿಯೂ ಎರಡು ವರ್ಷದ ಕ್ಷಾಮವನ್ನು ತಡೆದುಕೊಳ್ಳುವುದಕ್ಕೆ ಸಾಕಾದಷ್ಟು ಧಾನ್ಯವನ್ನಾಗಲಿ, ಹಣವನ್ನಾಗಲಿ ದಾಸ್ತಾನು ಇಟ್ಟುಕೊಳ್ಳುವವನಾಗಿರಬೇಕು ಬೇಸಾಯಿಕೆ ಕೆಲಸಗಳು ಕಮ್ಮಿಯಾಗಿರುವಾಗ ಅಥವಾ ಕ್ಷಾಮಕಾಲದಲ್ಲಿ ನಿಂತುಹೋದಾಗ ಯಾವ ರೈತನ ಕುಟುಂಬದವರಾಗಲಿ ತಮ್ಮ ಜೀವನೋಪಾಯವನ್ನು ಸಂಪಾದಿಸಿಕೊಳ್ಳುವುದಕ್ಕೆ ಸಹಾಯಕವಾಗಿ ಮತ್ತೊಂದು ಕಸಬನ್ನು ಕಲಿತುಕೊಳ್ಳದೆ ಇರಕೂಡದು

ಪ್ರತಿಯೊಂದು ಗ್ರಾಮದವರೂ ವರ್ಷದ ಆಖೈರಿನಲ್ಲಿ ಎಲ್ಲರೂ ಒಟ್ಟಾಗಿ ಮಾಡಿದ ಪ್ರಯತ್ನಗಳ ಫಲಿತಾಂಶರೂಪವಾಗಿ ಅಭಿವೃದ್ಧಿಯನ್ನು ಪ್ರತ್ಯಕ್ಷವಾಗಿ ತೋರ್ಪಡಿಸುವುದಕ್ಕೆ ಶಕ್ತರಾಗಿರಬೇಕು —ಪ್ರತಿ ಗ್ರಾಮದವರೂ ಅಭಿವೃದ್ಧಿ ಕಾರ್ಯಗಳಲ್ಲಿ ತಾವು ಪಡೆದಿರುವ ಪುರೋವೃದ್ಧಿ ಸೂಚಕವಾದ ಕೆಲವು ಮುಖ್ಯವಾದ ಲೆಕ್ಕಗಳನ್ನು ವರ್ಷಕ್ಕೊಂದುಸಾರಿ ಪ್ರಕಟಿಸುವುದು ಅತ್ಯವಶ್ಯಕವಾಗಿರುತ್ತದೆ ನಮ್ಮ ಪ್ರಜೆಗಳ ಪೈಕಿ ಬಹುಭಾಗದವರು ಗ್ರಾಮಗಳಲ್ಲಿ ವಾಸಮಾಡುತ್ತಿರುವುದರಿಂದ ಗ್ರಾಮದ ಸ್ಥಿತಿಯನ್ನು ಅಭಿವೃದ್ಧಿಗೆ ತರುವುದಕ್ಕಾಗಿ ಮಾಡುವ ಪ್ರತಿಯೊಂದು ಸಾರ್ಥಕವಾದ ಪ್ರಯತ್ನವೂ ಈಗ ಜನಗಳಲ್ಲಿರುವ ಸಾರಭೂತವಾದ ಕಾರ್ಯನಿರ್ವಾಹ ಶಕ್ತಿಯನ್ನೂ ದೇಶದ ವಸ್ತೂತ್ಪತ್ತಿ ಶಕ್ತಿಯನ್ನೂ ವಿಶೇಷವಾಗಿ ಹೆಚ್ಚಿಸದೇ ಹೋಗಲಾರದು

ಯಂ ವಿಶ್ವೇಶ್ವರಯ್ಯ,
ಮೈಸೂರು ಸಂಸ್ಥಾನದ ದಿವಾನ್‌ರವರು.

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ

SCOTT'S EMULSION. 2.43

(ಸ್ಕಾಟ್ಸ್ ಇಮಲ್ಷನ್)

ಘಟ್ಟಿ ಶರೀರವುಳ್ಳವರ್‍ಯಾರೂ ಪ್ಲೇಗ್, ಮಹಾಮಾರಿರೋಗ, ಷಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ.

ರೋಗವು ಬಲಹೀನರನ್ನೂ ದುರ್ಬಲರನ್ನೂ ಹಿಡಿಯುತ್ತದೆ.

Always get the Emulsion with this mark—the Fishman—the mark of the "Scott" process!

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪ್ರಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರಲ್ಲು ಮಾರಾಟವಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್,

ಈ ವಿಾನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ —ಬೆನ್ನಿನಲ್ಲಿ ಛಳುಕು ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು ಎದದೆ ಬಾಯಾರಿಕೆ, ಆಲಿಕೆ ಎದೆ ತಲ್ಲಣಿಸುವುದು, ತಲೆನೋವು ಗಾಬರಿ ಕಣ್ಣುಮೊಬ್ಬು, ತಲೆ ತಿರುಗ ವಿಕೆ, ಮೈನೋವು ಕೀಲುನೋವು, ಜುರವು, ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂಶಯಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [1817]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವವು



ರೂ. ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಥೋರ್ಸ್, ಪಿ ಓ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೇ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ “ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್” ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಧರವತ್ತು ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುವು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[109 31] ಎಸ್ ಕಟ್ಟೂರ್, ಬ್ರಾಂಚ್ ಸೆಕ್ರೆಟರಿ

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ.

The National Insurance and Banking Co., Ltd.,
AMRITSAR

WANTED

A competent Chief Agent for Mysore and Coorg Provinces on very liberal terms None need apply who have no practical experience in life insurance business Cash security Rs 500 at least essential The applicant should be a capable canvasser and organiser The company has its own office buildings at Mysore in a suitable quarter Apply at once to MR P L RAJPAI, B A, Chief Manager, National Insurance and Banking Company, Ltd, Amritsar, mentioning two good references, past experience present employment, age, nationality and any other necessary particulars [201 3]

ನಮೂನೆ ಮುಫತ್ತು.

ಕೇಶಕುಸುಮಾಕರ ತೈಲವು.

ನಾಟಿಯಿಲ್ಲದ ಈ ತೈಲವು ಜ್ಞಾಪಕ ಶಕ್ತಿಯನ್ನು ವೃದ್ಧಿಮಾಡುವದರಲ್ಲಿಯೂ, ಬುದ್ಧಿಯನ್ನು ವಿಕಾಸಮಾಡುವದರಲ್ಲಿಯೂ, ಬಟ್ಟೆತಲೆಯಲ್ಲಿ ಕೇಶವನ್ನು ಬೆಳಸುವದರಲ್ಲಿಯೂ, ಮೂಳೆಯನ್ನು ಬಲಪಡಿಸುವದರಲ್ಲಿಯೂ, ಉದ್ದವಾಗಿ ಬೆಳೆಯುವಂತೆ ಮಾಡುವದರಲ್ಲಿಯೂ, ಮೆದುಳಿಗೆ ತಂಪನ್ನುಂಟುಮಾಡುವದರಲ್ಲಿಯೂ ಅಪೂರ್ವ ಪ್ರಖ್ಯಾತಿಯನ್ನು ಹೊಂದಿದೆ ಇದರ ವಾಸನೆಯು ಬಹಳ ಮನೋಹರವಾಗಿದೆ

ಒಂದು ಬುದ್ದಿ ತೈಲ ಕ್ರಯ 10 ಆಣೆ ಮೂರು ಬುದ್ದಿಗಳ ತೈಲ ಕ್ರಯ ರೂ 1-12 ಆ ಆರು ಬುದ್ದಿಗಳ ತೈಲ ಕ್ರಯ ರೂ 3-4 ಆ ಡಜನ್ ಬುದ್ದಿಗಳ ಕ್ರಯ ರೂ ೬

ಏ ಪಿ ಅಂಚೇ ಹಾಸಲು ಪ್ರತ್ಯೇಕ.

ರಾಜವೈದ್ಯ ನಾರಾಯಣಜೀ ಕೇಶವಜೀ, ಆಯುರ್ವೇದೋದಯ

[೫೩೮] ಔಷಧಾಲಯ, 177 ಚೀನಾ ಬಜಾರ್ ರೋಡ್, ಮದ್ರಾಸು

“ವಾಸಿಮಾಡಿಕೊಳ್ಳುತ್ತೇನೆಂದು ಹೇಳು.”

101 22

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ಕೀಲು, ಆರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆ ಚಳಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು ಕೀಟನಡಿ, ಶ್ವಾಸರೋಗ, ಜಜ್ಜು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಪಾದಿ ಕೆಲಸಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಉಪಯೋಗಿಸಿದ್ದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

“ಕ್ಲೆಮೆಂಟರ ಮ್ಯಾಜಿಕ್ ಬಾಂ” ಎಂಬ ಹೆಸರನ್ನು ಮರೆಯಬೇಡಿ ಇದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಘನವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು —(1) ಎಸ್ ಪೀಟರ್ಸ್, 37 ತಮುರೆಟ್ಟಿ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಜಿ ಎಸ್ ಕೃಷ್ಣಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಶ್ರೀಮದ್ವಾಲ್ಮೀಕಿ ರಾಮಾಯಣ

“ಸುನ್ದರಕಾಣ್ಡ” ಮಾಸಪತ್ರಿಕೆ

64 ದೊಡ್ಡ ಪುಟಗಳ ಸಂಚಿಕೆ 1 ಕ್ಕೆ ಐದೇ ಆಣೆ ಸುಮಾರು 11 ಸಂಚಿಕೆಗಳಾಗುತ್ತವೆ ಟೀಕು, ತಾತ್ಪರ್ಯ, ಮೂಲ ಇವುಗಳಿಂದೊಡಗೂಡಿ, ಕಾಗದ, ಅಕ್ಷರ, ಅಚ್ಚು, ಸ್ವಾರಸ್ಯಗಳಿಂದ ಬಹು ಸುಂದರ ಪುಸ್ತಕವಾಗುವುದು ಚಂದಾ ಕೊಡತಕ್ಕವರು ಮುಂಗಡ ಒಂದು ರೂ ಕೊಡಬೇಕು ಅದರಲ್ಲಿ ಕಡೆಯ ಮೂರು ಸಂಚಿಕೆಗಳಲ್ಲಿ ಉತ್ತರವಾಡಿಕೊಡುವೆವು ಶ್ರೀ “ಶಾರದಾ” ಮಾಸಪತ್ರಿಕಾ ಸಂಪಾದಕರಾದ ವೇ| ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಇದುವರೆಗೆ ಯಾರೂ ಪ್ರಕಾಶಪಡಿಸದ ರಹಸ್ಯಗಳನ್ನೆಲ್ಲ ಶ್ರೀಷ್ಠವಾದ ರೀತಿಯಿಂದ ವಿವರಿಸಿ ಬರೆಯುತ್ತಿರುವರು 1 ಆಣೆ ಸ್ಟಾಂಪ್ ಕಳುಹಿಸಿ ಮಾದರಿ ಸಂಚಿಕೆಯಲ್ಲಿ ನೋಡಬಹುದು

1 1 13 ರಲ್ಲಿ ಆರಂಭವಾಗಿ ಎಂಟು ಸಂಚಿಕೆಗಳು ಸಿದ್ಧವಾಗಿವೆ

ಶ್ರೀ “ಶಾರದಾ” ಮಾಸಪತ್ರಿಕೆ ಇದುವರೆಗೆ 14 ಪುಸ್ತಕಗಳು ಪೂರ್ತಿಯಾಗಿವೆ ವಾರ್ಷಿಕ ಚಂದಾ ರೂ 2 0 0 ರಘುಕುಲಚರಿತೆ ಪ್ರಿಂಟಾಗುತಲಿದೆ 1 ತಿಂಗಳಲ್ಲಿ ಪುಸ್ತಕವು ಪೂರ್ತಿಯಾಗುವುದು ಕ್ರಯ 4 ವಾಲ್ಯೂಂಗೆ ರೂ 2

ವಿಳಾಸ—ಬಿ ಸೀತಾರಾಮಶಾಸ್ತ್ರಿ (ಅಥವಾ)

ಡಿ. ಲಕ್ಷ್ಮೀನರಸಿಂಹಶಾಸ್ತ್ರಿ, ಶ್ರೀ “ಶಾರದಾ” ಆಫೀಸ್,

[105–1] ಬೆಂಗಳೂರು ಸಿಟಿ

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



1 43

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರದ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಿಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಸಚಿತ್ರ, ಶುಕಸಪ್ತತಿ ಕಥೆ 1 8 0, ಟಪಾಲು ಹಾಸಲು 4 ಆಣೆ, ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ 1 8 0.

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕಮಹಾಶಯರುಗಳೇ —ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹ ಶಕ್ತಿಯಲ್ಲಾಶೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿ ಕಥೆಗಳನ್ನು ಓದಿರಿ. ೩೭೦ ಪುಟಗಳಿಂದ ಕೂಡಿದ ೭೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ ಬೆಲೆ ರೂ ೧–೪–೦ ಟಪಾಲು ಹಾಸಲು ೩ ಆಣೆ ಈಗಲೇ ಬರೆಯಿರಿ [167–11]

ವಿಳಾಸ:—ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ಕು ಡಿಪೋ, ಚಿಕ್ಕ ಪೇಟೆ, ಬೆಂಗಳೂರು ಸಿಟಿ.

ಸಮಸ್ತ ವಿಧವಾದ ನೋವೂ ಇರಿತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಬೆನ್ನಿನ ಸೆಳೆತ, ಕೀಲುನೋವು, ಕೃತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ.

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ಬಿಕರಿಯಾಗುತ್ತಲಿವೆ. ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ. ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ವಿಕರಿಯಾಗುವದು.

ಮುಳಕಡ್ಡಿ ಔಷಧ ಡಬ್ಬಿಗೆ 6 ಆಣೆ, 12 ಕುಪ್ಪಿಗೆ ರೂ 3–8–0 ಹಲ್ಲುಪುಡಿ ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ 1–2–0 ಏ ಪಿ ಮತ್ತು ಪ್ಯಾಕಿಂಗ್ ಛಾರ್ಜ ಪ್ರತ್ಯೇಕ [42–35]

ವಿಳಾಸ —ಅಮೃತಾಂಜನ ಡಿಪೋ, ೧೯ ಫ್ರೇಯರ್ ರೋಡ್, ಫೋರ್ಟ್, ಬೊಂಬಾಯಿ

ಡೋಂಗರೆ

ಇವರ ಬಾಲಾಮೃತ

[150 14]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧೨ ಆಣೆ ಟಪಾಲ್ ಖರ್ಚು ೪ ಆಣೆ

ಕೆ ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವರ್, ಮದರಾಸು ಇವರಲ್ಲೂ ದೊರೆಯುವುದು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೈಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ —320 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ [179 8]

೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ.—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೩೯೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು. (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು. (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು. (5) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವ ದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1-8-0, ಟಪ್ಪಾಲು ಹಾಸಲು 4 ಆಣೆ.

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಕಥಾಪೂರಕವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ. 4 , ಟಪಾಲು ಹಾಸಲು 10 ಆಣೆ. ಇವುಗಳಲ್ಲದೆ ಅನೇಕ ವಿಷಯದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127-13]

ನಮ್ಮ ವಿಳಾಸ—ಎಮ್. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಸು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

3—10—1913 ರಿಂದ 10—10—1913 ರ ವರೆಗೆ

ಸ್ಥಳ		ಪ್ಲೇಗ್ ಹಿಡಿದದ್ದು	ಪ್ಲೇಗ್ ಸತ್ತದ್ದು	ಕಾಲರಾ ಹಿಡಿದದ್ದು.	ಕಾಲರಾ ಸತ್ತದ್ದು
ಬೆಂಗಳೂರು	ಪಟ್ಟಣ	0	0	0	0
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟ್		29	16	0	0
ಮೈಸೂರು	,,	17	19	0	0
ಕೋಲಾರ್	,,	13	6	100	55
ಕೋಲಾರ್ ಚಿನ್ನದ ಗಣಿಗಳು		0	0	0	0
ತುಂಕೂರು ಡಿಸ್ಟ್ರಿಕ್ಟ್		0	0	0	0
ಹಾಸನ	,,	8	5	0	0
ಚಿತ್ರದುರ್ಗ	,,	0	0	0	0
ಕಡೂರ್	,,	15	8	0	0
ಶಿವಮೊಗ್ಗಾ	,,	23	6	0	0
	ಜುಮ್ಲಾ	105	60	100	55

ಶಾಲಿವಾಹನ ಶಕೆ ವರುಷಂಗಳು 1835 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ಶರದೃತೌ ಆಶ್ವೀಜ ಬಹುಳ ನವಮಿ ಶುಕ್ರವಾರದಿಂದ ಕಾರ್ತಿಕ ಶುದ್ಧ ಪಾಡ್ಯಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಅಕ್ಟೋಬರ್

ತಾ	ವಾರ		ತಿಥಿ.	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ ತೇದಿ
24	ಶುಕ್ರ		ನವಮಿ	8 14	ಆಶ್ಲೇಷ	28 20	8
25	ಶನಿ	*	ದಶಮಿ	3 5	ಮಖಾ	54-41	9
26	ಭಾನು	†	ದ್ವಾದಶಿ	01-38	ಪುಬ್ಬಾ	19-45	10
27	ಸೋಮ	§	ತ್ರಯೋದಶಿ	45-31	ಉತ್ತರಾ	16 30	11
28	ಮಂಗಳ		ಚತುರ್ದಶಿ	19-34	ಹಸ್ತ	12-19	12
29	ಬುಧ	,,	ಅಮಾವಾಸ್ಯ	34-1	ಚಿತ್ತ	8-25	13
30	ಗುರು	‡	ಪಾಡ್ಯಮಿ	28-51	ಸ್ವಾತಿ	4-53	14

* ಸ್ಮಾರ್ತ ಏಕಾದಶಿ † ವೈಷ್ಣವ ಏಕಾದಶಿ, ಹರಿವಾಸರ, ದಗ್ಧಯೋಗ, ಮಳೆ ನಕ್ಷತ್ರ—ಸ್ವಾತಿ 2 ನೇ ಪಾದ § ಸೋಮಪ್ರದೋಷ, ನೀರುತುಂಬುವ ಹಬ್ಬ, ಯಮತರ್ಪಣ , ಸರ್ವತ್ರಾ ಮಾಸಾಸ್ಯ, ಕೇದಾರೇಶ್ವರ ವ್ರತ, ಬಲೀಂದ್ರ ಪೂಜಾ. ‡ ದೀಪಾವಳಿ, ದೀಪದಾನ, ಚಂದ್ರ ದರ್ಶನ 1, ಮಳೆ ನಕ್ಷತ್ರ—3 ನೇ ಪಾದ.

ಪೇಟೇ ಧಾರಣೆ.

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೬-೦-೦	೧೭-೦-೦
ಕೆಂಬೂತಿ ಅಕ್ಕಿ ಅವಲ್		೧೬-೮-೦	೧೭-೮-೦
ಜಾಪತ್ರಿಣಿ ಅಕ್ಕಿ		೧೬-೨-೦	೧೬-೮-೦
ಸಣ್ಣಕ್ಕಿ ಅವಲ್		೨೮ -೦	೧೭-೮-೦
,, ದುಯಂ		೧೭-೦-೦	೧೬-೧೨-೦
ತೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ		೨೫-೦-೦	೧೬-೪-೦
,, ದುಯಂ ,,		೧೪-೦-೦	೧೪-೦-೦
ಹೈಕ್ ರಾಗಿ ಪಲ್ಲಾ ೧ಕ್ಕೆ		೭-೦-೦	೫-೧೦-೦
ಕಾರ್ರಾಗಿ ,,		೬-೮-೦	೪-೧೨-೦
ಜೋಳ ,,		೬-೧೦-೦	೭-೪-೦
ಹುರುಳಿ ಪಲ್ಲಾ ೧ಕ್ಕೆ		೨೩-೦-	೧೪-೦-೦
ಬಿಳೀ ಅವರೆ ,,		೧೩-೦ ೦	೧೨-೦-೦
ಹೆಸರು ,,		೨೩-೦-೦	೧೪-೦-೦
ಉದ್ದು ,,		೧೬-೦-೦	೧೬-೮-೦
ಕಡಲೆ ,,		೧೨-೧೨-೦	೧೩-೦-೦
ಎಳ್ಳು ಸೇರು ೧೨೭ಕ್ಕೆ		೨೧-೮-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ		೭-೪-೦	೭-೧೦-೦
ಹಲಸು ೧೨೭ ಸೇರಿಗೆ		೧೨-೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ		೨-೪-೦	೩-೬ ೦
ಮೆಣಸಿನಕಾಯಿ ,,		೪ ೦-೦	೩-೪-೦
,, ದುಯಂ		೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೪ ೮ ೦	ಮಣ ೬ ೪-೦
ಒಳ್ಳೆಣ್ಣೆ ಮಣ ೧ಕ್ಕೆ		೬-೨-೦	೬ ೮-೦
ಹರಳೆಣ್ಣೆ ,, ,,		೫-೪-೦	೬-೦-೦
ಕಡಲೇಕಾಯಿ ಎಣ್ಣೆ		೬-೦-೦	೬ ೪ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೫ ೮-೦	೬-೪-೦
ಉಪ್ಪು ,, ,,		೬-೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ		೨ ೪-೦	೧-೪-೦
ತುಪ್ಪ—ಧಾರಾಪುರದ್ದು ಮಣ ೧ಕ್ಕೆ		೨೦-೦-೦	೨೨-೮-೦
,, ಬೆಣ್ಣೆ ಕಾಸಿದ್ದು ,, ,,		೨೨ ೦-೦	
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೧೨-೦	೫-೦-೦
ತೆಂಗಿನಕಾಯಿ ೧೦೦ಕ್ಕೆ		೬-೪-೦	೬-೪-೦
ಅರಲೇಕಾಯಿ ಮಣ ೧ಕ್ಕೆ		೧-೦-೦	೧-೦-೦
ಅಂಟುವಾಳದಕಾಯಿ ಮಣ ೧ಕ್ಕೆ		೧-೧೨-೦	೧-೮-೦
ಚಿನ್ನ (ಪೌನ್) ಕೆಂಪು		೧೫-೮-೦	೧೫-೮-೦
,, ,, ಪಸಿಮೆ		೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ		೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧-೦-೦	೮೧-೩-೦

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ.)

ಈ ಪುಸ್ತಕದಲ್ಲಿ.—1. ಪಿನಲ್‌ಕೋಡು, 2. ದೂಡ್ಡೀ ಆಕ್ಟ್, 3. ಎಕ್ಸೈಜು ರೆಗ್ಯುಲೇಷನ್, 4. ಆಯುಧಗಳ ರೆಗ್ಯುಲೇಷನ್, 5. ದಹ್ಯವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7. ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9. ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11. ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ.

ಪ್ರತಿ ಪೆನಲ್ ಸೆಕ್ಷನ್‌ಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ? ಯಾ ಕೂಡದೆ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟ್ಟಬೇಕೇ? ಜಾಮೀನ್ ತೆಗೆದುಕೊಳ್ಳಬಹುದೆ? ಯಾ ಕೂಡದೆ? ರಾಜಿಯಾಗಬಹುದೆ? ಯಾ ಕೂಡದೆ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ. 22-5-1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ. ಕ್ರಯ ರೂಪಾಯಿ 2 0 0. ಟಪಾಲ್ ಹಾಸಲು 3 ಆಣೆ.

ವಿಳಾಸ:—ಎಲ್. ವೇಮಾರೆಡ್ಡಿ,

ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್,

[103-22] ಮಾಲೂರು—ಕೋಲಾರ್ ಡಿಸ್ಟ್ರಿಕ್ಟ್.

ಸತಮಲ್ ಡೈರಿಗಳು.

ನಮ್ಮಲ್ಲಿ ಪ್ರತಿ ವರುಷವೂ ತಯಾರಾಗುವಂತೆ 1914 ನೇ ಇಸವಿ 4 ನಮೂನೆ ಮಾಡಲ್ ಪಾಕೆಟ್ ಡೈರಿಗಳು ತಯಾರಾಗಿ ಬಿಕರಿಗೆ ಸಿದ್ಧವಾಗಿವೆ.

ನಂಬರು 1	ಚಿಕ್ಕ ಸೈಜು ಸಾದಾ	,,	ಕ್ರಯ	4	ಆಣೆ
,, 2	ಡಿಟೋ ಪ್ಲಾವು	,,	,,	6	,,
,, 3	ದೊಡ್ಡ ಸೈಜು ಸಾದಾ	,,	,,	6	,,
,, 4	ಡಿಟೋ ಪ್ಲಾವು	,,	,,	8	,,

ಒಂದೇ ದಫಾ 12 ಡೈರಿಗಳನ್ನು ತರಿಸಿಕೊಳ್ಳುವವರಿಗೆ ಒಂದು ಪ್ರತಿ ಜಾಸ್ತಿ 2 ರೂ ಗೆ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ರೂ ಗೆ 2 ಆಣೆಯಂತೆ ಡಿಸ್ಕೌಂಟು ಮಾತ್ರ ದೊರೆಯುವುದು ಈಗಲೇ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಿ. ಕಾಲವಿಳಂಬ ಮಾಡಿದಲ್ಲಿ ಮುಗಿದುಹೋಗುತ್ತೆ [198 3]

ವಿಳಾಸ —ಎಸ್. ಡಿ ಸತಮಲ್ ಕಂಪೆನಿ, ಮೈಸೂರು

ಕುಂತಳಾನಂದ ತೈಲವು

192-5

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿವೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ

ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ:—ಬಿ ಎಮ್ ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4-0 ಮಾತ್ರ. 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 4 ಆಣೆ.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರುಮಾಡಲ್ಪಟ್ಟಿದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,

[129-18] ಪೋಸ್ಟ್ ಬಾಕ್ಸ್, ನಂ 167, ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ

೧. ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೇಸ್ ಲಿವರ್ ಚಿಕ್ಕ ಸೈಜು ಕಾಂಪೆನ್‌ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 5-0-0 ಇದನ್ನು ಸೆಪ್ಟಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 10 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ:—ಧನಲಕ್ಷ್ಮಿ ಅಂಡ್ ಕಂಪೆನಿ,

[129-18] ಸಾಹುಕಾರ್ ಪೇಟೆ ಪೋಸ್ಟು, ಮದರಾಸು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-43

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೀಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ, ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ. ೧—೮, ರೂ ೧—೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ; ೧ ರೂ. ೬ ಆ.

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ. ೬ ಆ.

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ:—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

Printed and Published by the Rev. H. Gulliford, Proprietor and Manager, Wesleyan Mission Press, Mysore 23/10/1913.

REGISTERED
M. 30

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು

ಸಂಪುಟ ೨೭ ಮೈಸೂರು—ಸರ್ ೧೯೧೩ ನೇ ಇಸವಿ ಅಕ್ಟೋಬರ್ ತಾರೀಖು ೩೦ ನೇ ಗುರುವಾರ. ಸಂಚಿಕೆ ೪೪

ವಿನೋದಕರಗಳಾದ ನಕಲಿಗಳು

ಪ್ರಹಸನಚತುಷ್ಟಯ—(ಹಾಸ್ಯಸಂಜೀವನಿ) ಯುವತಿಯಾದ ಹೆಂಡತಿ ಮುದುಕನಾದ ಗಂಡ, ವಿದ್ಯಾವಂತನಾದ ಗಂಡ ದಡ್ಡಳಾದ ಹೆಂಡತಿ ಇವರುಗಳ ಸ್ನ ಕುರಿತ ನಕಲಿಗಳು ನಾಲ್ಕು ಉಕ್ತವಾಗಿವೆ. ಇಂಥಾ ವಿನೋದವೂ ನೀತಿ ಪ್ರದವೂ ಆದ ನಕಲಿಯನ್ನು ನೀವು ಓದಿರಲಾರಿರಿ. ಕ್ರಯ 1 ಆಣೆ. [187-46]

ಪ್ರಹಸನತರಂಗ—ಅಂತರಂಗದಲ್ಲಿ ದೃಢವಿಲ್ಲದ ಆಷಾಢಭೂತಿಗಳು, ಮೂಢಭಕ್ತಿಯಿಂದೊಡಗೂಡಿದ ದಡ್ಡರು, ಐಕಮತ್ಯವಿಲ್ಲದ ಮೂಢರು, ದುರಾಚಾರಿಗಳು ಮುಂತಾದವರ ವಿಷಯವು ಅತಿ ಚಮತ್ಕಾರವಾಗಿ ವರ್ಣಿಸಲ್ಪಟ್ಟಿದೆ. ಕ್ರಯ 3 ಆಣೆ. ಇದಲ್ಲದೆ ಮಹಾರಣ್ಯಪುರಾಧಿಪತ್ಯ 4 ಆಣೆ. ಪುನರ್ಮರಣ ಪ್ರಹಸನ 3 ಆಣೆ. ಯೋಗನಿದ್ರಾಪ್ರಹಸನ 2 ಆಣೆ. ಮುಂತಾದ ನಕಲಿಗಳೂ ದೊರೆಯುವವು

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಪಂಡಿತ್ ಎಸ್. ಗರಳಪುರಿಯವರ

ಪ್ರಖ್ಯಾತಿ ಹೊಂದಿದ ಓರಿಯಂಟಲ್

ಫಾರ್ಮಸಿ, ಮೈಸೂರು.

ಕಸ್ತೂರಿ ಮಾತ್ರೆ.—ಶ್ರೇಷ್ಠತರ ವನಸ್ಪತಿಗಳು, ಮುತ್ತು, ಹವಳ, ಕಸ್ತೂರಿಗಳಿಂದ ತಯಾರಿಸಿದ್ದು ಜಲದೋಷ, ಅರುಚಿ, ಮೈ ಕೈ ತಲೆನೋವುಗಳಿಗೆ ಸಂಜೀವನ. ಇದನ್ನು ಕತಂಬೂಲದ ಸಂಗಡ ಪ್ರತಿ ದಿನವೂ ಸೇವಿಸಿದರೆ ಪ್ಲೇಗು ಕಾಲರಾ ಮುಂತಾದ ಸಾಂಕ್ರಾಮಿಕ ವ್ಯಾಧಿಗಳಿಂದ ಖಂಡಿತ ಕಾಪಾಡುತ್ತೆ 300 ಮಾತ್ರೆಗೆ 4 ಆಣೆ, 6 ಶೀಷೆಗೆ ರೂ. 1-4-0.

ಬಾಲಸಂಜೀವಿನಿ.—8 ವರ್ಷದ ಮಕ್ಕಳಿಗೆ ಬರುವ ಎಲ್ಲಾ ವಿಧ ಜ್ವರ, ಶೀತ ನೆಗಡಿ, ಕೆಮ್ಮಲು, ವಾಯು, 3 ಪಕ್ಕೆ ಎಳತ, ಸೆಳತ, ಇವಕ್ಕೆಲ್ಲಾ ಅಮೃತ, 100 ವರ್ಷದ ಅನುಭವಸಿದ್ಧವಾದದ್ದು. 30 ಸಲದ ಔಷಧಿಗೆ 4 ಆಣೆ. 1 ಡಜನಿಗೆ ರೂ. 1-8 0.

ಜ್ವರದ ಮಾತ್ರೆ.—ಸಮಸ್ತವಿಧ ಜ್ವರಗಳಿಗೂ ಖಾತರಿ ಅಮೃತ. ಸೇವಿಸಿದವರು ಇವರ ಗುಣವನ್ನು ಕಂಠೋಕ್ತವಾಗಿ ಹೊಗಳುವರು. 24 ಮಾತ್ರೆಗೆ 8 ಆಣೆ, 12 ಶೀಷೆಗೆ ರೂ. 5. [222-1]

ಇನ್ನೂ ಅನೇಕ ದಿವ್ಯೌಷಧಿಗಳು ನಮ್ಮಲ್ಲಿ ಸಿಕ್ಕುತ್ತವೆ 1 ಆಣೆ ಸ್ಟಾಂಪು ಬರೆದರೆ ಕ್ಯಾಟಲಾಗ್ ಕಳುಹಿಸುತ್ತೇವೆ. ಪೋಸ್ಟೇಜ್, ಪ್ಯಾಕಿಂಗ್ ಛಾರ್ಜು ಅಲಾಯಿದ.

ವಿಳಾಸ:—ಪಂಡಿತ್ ಎಸ್. ಗರಳಪುರಿ,

ಓರಿಯಂಟಲ್ ಫಾರ್ಮಸಿ, ಬಂಡಿಕೇರಿ, ಮೈಸೂರು.

ಕನ್ನಡ ಲಾ ಪುಸ್ತಕಗಳು

[160-13]

ಗೌರ್ನರ್ ಜನರಲ್‌ರವರ ಹುಕುಂ ಪ್ರಕಾರ ಎಲ್ಲಾ ದೇಶಗಳಲ್ಲಿಯೂ ಜಾರಿಯಲ್ಲಿರುವ ಕನ್ನಡ ಇಂಡಿಯನ್ ಪೆನಲ್‌ಕೋಡು ಕ್ರಯ ರೂ. 2-0-0, ವ್ಯವಹಾರನಿರ್ಣಯ ವಿಧಿ ಎಂಬ ಸಿವಲ್ ಪ್ರೊಸಿಜೂರ್ ಯಾನೆ 3 ಭಾಗಗಳುಳ್ಳದ್ದು ರೂ. 3-0-0, ವ್ಯವಹಾರ ಪರಿಹಾರವಿಧಿ ಎಂಬ ಸ್ಪೆಸಿಫಿಕ್ ರಿಲೀಫ್ ಆಕ್ಟು ರೂ. 1-8-0, ಇಂಡಿಯನ್ ಲಾ ಆಫ್ ಕಂಟ್ರಾಕ್ಟ್ ರೂ. 2-0-0, ಪ್ರಶ್ನೋತ್ತರ ಲೀಗಲ್‌ಬೋಧಿನಿ ಈ ಪುಸ್ತಕದಲ್ಲಿ ಸಿವಲ್ ಕ್ರಿಮಿನಲ್ ರೆವಿನ್ಯೂ ಮುಂತಾದ ವ್ಯವಹಾರ ವಿಧಿಗಳನ್ನು ಬೋಧಿಸುವದು ಕ್ರಯ ರೂ. 1-4-0, ತಾನಾಗಿ ಸ್ವತಃ ಇಂಗ್ಲೀಷ್ ಕಲಿಯುವದು ರೂ. 1-8-0. ಇವುಗಳಲ್ಲಿ ಕೆಲವು ಮುದ್ರಣವಾಗುತ್ತಿವೆ. ಇನ್ನೂ ಪುಸ್ತಕಗಳು ಅಪೇಕ್ಷಿಸುವವರು ನಮ್ಮ ಪುಸ್ತಕಗಳ ಕ್ಯಾಟಲಾಗಿಗೆ ಬರೆಯಿರಿ.

ವಿಳಾಸ—ಬಿ. ನರಸಿಂಗರಾವ್,

ಎಡಿಟರ್, "ಲಾ ಗೆಜೆಟ್" ಬೆಂಗಳೂರು.

ವಿದ್ಯಾಸಾಗರ ಬುಕ್ ಡಿಪೋ

ಚಿಕ್ಕ ಪೇಟೆ, ಬೆಂಗಳೂರು ಸಿಟಿ.

ಇಲ್ಲಿ ಎಲ್ಲಾ ತರಹ ಇಂಗ್ಲೀಷು ಮತ್ತು ಕನ್ನಡ ಸ್ಕೂಲ್ ಪುಸ್ತಕಗಳೂ, ಉತ್ತಮ ಕಥೆಗಳೂ, ಉದ್ಗ್ರಂಥಗಳೂ, ಸ್ಟೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತೆ. ಚಿಕ್ಕ ಮತ್ತು ದೊಡ್ಡ ಸ್ಕೂಲು ಡೈರಿಗಳೂ ಸಿದ್ಧವಾಗಿವೆ.

ಕೆಲವು ಪುಸ್ತಕಗಳು.

ಚಿಕ್ಕೋಪಾಧ್ಯಾಯ ವಿರಚಿತ ಶುಕಸಪ್ತತಿ ಉತ್ತಮ ಪ್ರತಿ 2 ರೂಪಾಯಿ. ಅಯ್ಯರ್ ಕೀರ್ತನೆ 10 ಆಣೆ. ಶಿವಗೀತಾ ಉತ್ತಮ ಪ್ರತಿ 12 ಆಣೆ. ಡಿಟ್ಟೋ ಸಾದಾ 8 ಆಣೆ ರಂಗಾಚಾರ್ಲು ಜೀವನ ಚರಿತ್ರೆ 6 ಆಣೆ. ಚಿಕ್ಕೋಜಿ ಸಾಹಸ ಕಥೆ 3 ಆಣೆ. ಕನಕಾಲುಕಾ (ಡ್ರಾಮಾ) 6 ಆಣೆ. ಸಂಕ್ಷೇಪ ರಾಮಾಯಣ ನೋಟ್ಸು 4 ಆಣೆ. ಜೈಮಿನಿ (೧ ನೇ ಭಾಗ) ಟೀಕು ತಾತ್ಪರ್ಯ ಸಹಿತ 4 ರೂಪಾಯಿ. ಟಪ್ಪಾಲು ಹಾಸಲು ಅಲಾಯಿದಾ. [225-1]

"ನೀತಿಗೀತ"—1 ಆಣೆ. "ಬಾಲ್ಯನೀತಿ"—3 ಪೈ.

ಬಾಲಕರಿಗೆ ದೈವಭಕ್ತಿ ಗುರುಭಕ್ತಿ ರಾಜಭಕ್ತಿ ಮಾತೃಭಕ್ತಿ ಪಿತೃಭಕ್ತಿ ಯುಕ್ತಿ ಸತ್ಯತೆ ಶಾಂತತೆ ಪ್ರಾಮಾಣಿಕತೆ ಸಾಹಸ ಧೈರ್ಯ ಕೋಪ ಇವುಗಳನ್ನು ಸುಲಭ ಶೈಲಿಯಲ್ಲಿ ಗೀತಾರೂಪಕವಾಗಿ ಬೋಧಿಸುವುದೇ "ನೀತಿಗೀತ" 100 ಕ್ಕೆ 10 ಉಚಿತ. "ಬಾಲ್ಯನೀತಿ" 100 ಕ್ಕೆ 25 ಉಚಿತ. [226-1]

ವಿಳಾಸ:—ಎಸ್. ಕೋಂಟದಾಯರ್, ವಡಿಗೇನಹಳ್ಳಿ, ದೇವನಹಳ್ಳಿ ತಾಲ್ಲೂ.

ಜಗತ್ಪ್ರಸಿದ್ಧ "ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ. ಕೂದಲು ಸತ್ತು ಹೋಗುತ್ತೆ. ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ. ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ. ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಕಚಕಿಸುವವು, ನಿಬಿಡವಾದ ನೀಲವರ್ಣದಿಂದ ಕೂಡಿ, ಆಗಾಗ್ಗೆ ಹಂದು ಬಿದ್ದು ಹೋಗದೆ ದಟ್ಟವಾಗಿ ಬೆಳೆಯುವವು. ಕೂದಲಿಗೆ ಹೊಳಪುಕೊಡುತ್ತೆ. ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ. ಸುಂಡಿನ ಹೊಟ್ಟನ್ನು ಅಡಗಿಸುತ್ತೆ. ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು. ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂಬಳೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ. ಇದರ ಬೆಲೆ 1 ಸೀಸೆಗೆ ರೂ. 1-0-0. ಅಂಚೆಯ ವೆಚ್ಚ 0-4-0 ಬೇರೆ ಕರಬೇಕು.

3 ಸೀಸೆಗಳಿಗೆ ರೂ. 2-10-0. ಅಂಚೆಯ ವೆಚ್ಚ 0-7-0.

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಮೈಸೂರು ಎಗ್ಜಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು.

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿವಾರೆ. ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ|| ಡಿ. ಸಾಲೊಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ. ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ. ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ."

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ. ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಫಾಯತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ: "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು. ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ. ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ.

"ಕೆಪಿಟೋಲ್‌ಬಾಮ್"—ಮಳೆ ಮತ್ತು ಚಳಿಯ ಥಂಡೀ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಲ್‌ಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ನೋಯುವುದು, ಸಂದುವಾತ, ಮಸ್ತಕಶೂಲೆ, ಹೆಚ್ಚಾಗಿ ಮೆಹನತ್ತು ಪಟ್ಟಿದ್ದರಿಂದ ಕ್ಷೀಣವಾಗುವದು, ಸೊಂಟನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ ಬಾಟ್ಲ 1ಕ್ಕೆ ಕ್ರಯ 0-8-0 ಟಿ.ಪಿ. ಪ್ರತ್ಯೇಕ.

ಒಡಮನ್ಸ ಮಲೇರಿಯ ಪಿಲ್ಸ.—ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆ ಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿದೆ ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ ಇದು ದೇಶದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ. ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ. ದಫೆಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದು.

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ. 1-0-0. 3 ಬಾಟ್ಲಗಳಿಗೆ ರೂ. 2-8-0 ವಿ. ಪಿ. ಖರ್ಚು ಪ್ರತ್ಯೇಕ.

ಮೇಲ್ಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ:— [8-42]

ಆಂಗ್ಲೊ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ಡಿ. ಉಬನ್ ಮಾರ್ಟಿನ್, ಮಂಗಳೂರು.

(A Novelty of the Twentieth Century)

MYSORE GOVERNMENT SECURITY

MUTUAL PROPERTY INVESTMENT COMPANY, LIMITED,

Head Office:—MYSORE.

[161-13]

CAPITAL—Rs. 1,00,000.

SPECIAL FEATURES OF THE COMPANY.

SHARES.—Shares of the Company are selling at Re. 1 premium, and only a few shares are open to the public The nominal value of each share is Rs. 10 and only Rs. 5 are called by 5 monthly instalments.

BANKING.—Every sort of Banking business is transacted.

Land and house purchase and investment policies are a speciality of the Company, by which the poor and middle class people can purchase immovable properties and also clear their debts by easy instalments without the capital of their own.

WANTED.

Four Local Directors to be in charge of the Branch of the Company in each Taluk of the Mysore Province on liberal terms. Only those gentlemen of position and influence need apply. For further particulars and prospectuses, please apply with two anna stamp and your previous experience in the line to

Mr. M. L. NAGANNAH,

Managing Agent.

ನಿಜವ್ಯಾಪಾರವು?

ಶೇಷಾದೇವಿ ಮಾಡುವವರು ಪತ್ರಗಳನ್ನು ಬರೆಯುವವರು 1 ರೂ ಬೆಲೆಯ "ಲೇಖನಾಪ್ರಕಾಶಿಕಾ" ವನ್ನೇ ಕೊಂಡುಕೊಂಡರೆ ದಂಡಪಿಸ್ಸಿ ಸಿಕೊಳ್ಳುವುದು ನಿಜ ಹಣಸಂಪಾದಿಸುವುದು ನಿಜ ಸರ್ವೆ ಮ್ಯಾನ್ಯುಯಲ್ 6 ಆ ಚಪಲೆ 1 ಆ, ಸನ್ಮಿತ್ರ 2 ಆಣೆ ರಾಜೇಂದ್ರ ಮತ್ತು ಸುಂದರಿ 2 ಆಣೆ ಪ್ರಾಣಾಹನರ್ಾನೆ 6 ಪೈ 300 ವರ್ಷಗಳ ಕ್ಯಾಲೆಂಡರ್ 6 ಪೈ [223 1]

ವಿಳಾಸ —ಕೆ ಮಟ್ಟಪ್ಪಂ ಮತ್ತು ಕಂಪನಿ, ಶಿವಮೊಗ್ಗ

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-41

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಕಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದವು ಚನ್ನಾಗಿಲ್ಲದ್ದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಜಿರಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ; ೧ ರೂ ೬ ಆ, ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧_೮, ರೂ ೧_೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ, ೧ ರೂ ೮ ಆ ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ, ೧ ರೂ ೬ ಆ

ಕೂಸುಗಳ ಟೋಪಿ, ಪೂರ್ತಿ ಮೇಜೋಡು ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

20 ಬಹುಮಾನದೊಡಗೂಡಿದ ಗಡಿಯಾರವು

ನಮ್ಮ ಕಂಪನಿಯು ಪ್ರಸಿದ್ಧಿಯಾಗುವದಕ್ಕಾಗಿ 6 ರೂಪಾಯಿನ ಈ ಗಡಿಯಾರವನ್ನು ಇದು ಬರುವ ಡಿಸೆಂಬರ್ ಆಖೈರುವರೆಗೆ 3 15 0 ಗೆ 20 ಬಹುಮಾನಗಳೊಡನೆ ಬಿಕರಿ ಮಾಡಲ್ಪಡುತ್ತ ಇದು ಒಳ್ಳೆಯ ಸಾಮಾನುಗಳಿಂದ ತಯಾರಿಸಲ್ಪಟ್ಟಿರುವುದರಿಂದ 30 ವರುಷಗಳ ವರೆಗೆ ಕೆಡದೆ ನಡೆಯುತ್ತ ಇದೊಂದು ಹೊಸ ನಮೂನೆಯಾಗಿರುತ್ತ ಇದು ಒಳ್ಳೇ ಚೆನ್ನಾಗಿ ಇದ ಕೊಟ್ಟ ಉಕ್ಕಿನ ಮುಚ್ಚಳವನ್ನು ಹೊಂದಿರುವುದರಿಂದ ಧೂಳು ಸೇರಲು ಅವಕಾಶವಿಲ್ಲ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಸುಲಭವಾಗಿ ಸರಿಮಾಡಲು ಅನುಕೂಲವಾಗಿರುತ್ತ ಇದಕ್ಕೆ ಬಹಳವಾಗಿ ಆರ್ಡರುಗಳು ಬರುತ್ತಿರುವುದರಿಂದ ಜಾಗ್ರತೆ ಮಾಡಿರಿ ವಿಳಂಬಮಾಡಿದರೆ ದೊರಕಲಾರದು ಇದನ್ನು ತರಿಸಿಕೊಳ್ಳತಕ್ಕವರಿಗೆ ಈ ಕೆಳಗೆ ಕಾಣಿಸುವ 20 ಸಾಮಾನುಗಳು ಉಚಿತವಾಗಿ ಕೊಡಲ್ಪಡುವವು ಇವು ಹೆಚ್ಚಾದ ಬೆಲೆಯುಳ್ಳವು —



1 ಈ ಮೈಸೂರು ದೇಶದವರು ಉಪಯೋಗಿಸುವ ಮಾದರಿಯಾಗಿರುವ ಕೈ ಕಪ್ಪು, ಇವಕ್ಕೆ ಭಂಗಾರದ ಗಿಲ್ಟು ಕೊಡಲ್ಪಟ್ಟಿರುತ್ತ ಬೆಲೆ 1 ರೂ 2 ಎಲೆಕ್ಟ್ರಿಕ್ ಭಂಗಾರದ ರೇಖಿನ ಬ್ಯಾಮಂಟಿಗೆ ಹುವ್ವು ಬೆಲೆ 12 ಆಣೆ 3 ಗಡಿಯಾರದ ಸರಪಣಿಗೆ ಕ್ರಯ 8 ಆಣೆ 1 ಪರಟು ಗುಂಡಿ ಬೆಲೆ 7 ಆಣೆ 5 ಒಂದು ಹಸನಾದ ಕತ್ತರಿ ಬೆಲೆ 4 ಆಣೆ 6 ಜರ್ಮನ್ ಬೆಳ್ಳಿಯ ಕುಂಕುಮಭರಣಿ ಬೆಲೆ 8 ಆಣೆ 7 ಭಂಗಾರದ ಗಿಲ್ಟಿನ ತಿರುಪಿನ ಜಡೆ ಹುವ್ವು ಬೆಲೆ 6 ಆಣೆ 8 ಜರ್ಮನ್ ಬೆಳ್ಳಿಯ ಸಾದಿನ ಚಿಪ್ಪು ಬೆಲೆ 4 ಆಣೆ 9 ಅಂದವಾದ ಹಣದ ಚೀಲ ಬೆಲೆ 4 ಆಣೆ 10 ಜರ್ಮನ್ ಬೆಳ್ಳಿಯ ಕಣ್ಣುಕಪ್ಪಿನ ಭರಣಿ ಬೆಲೆ 3 ಆಣೆ 11 ಒಂದು ಸೀಲ್ ಉಂಗುರ ಬೆಲೆ 8 ಆಣೆ 12 ಜರ್ಮನ್ ಬೆಳ್ಳಿಯ ಪುಡಿ ಡಬ್ಬಿ ಬೆಲೆ 8 ಆಣೆ 13 ಹೆಂಗಸರ ನಗಗಳನ್ನಿಡಲು ಅನುಕೂಲವಾಗಿರುವ ಕೈ ಪೆಟ್ಟಿಗೆ ಬೆಲೆ 10 ಆಣೆ 14 ಜರ್ಮನ್ ಬೆಳ್ಳಿಯ ಹಾಲಿನ ಬಟ್ಟಲು ಬೆಲೆ 6 ಆಣೆ 15 ಒಳ್ಳೇ ಬೆಳ್ಳಿಯಿಂದ ತಯಾರಿಸಿ ಬಲವಾದ ಚಿನ್ನದ ಗಿಲ್ಟಿನ ಮೂಗು ಬೊಟ್ಟು ಬೆಲೆ 8 ಆಣೆ 16 ಅಧಿಕ ಸುವಾಸನೆಯ ಪರಿಮಳ ಅತ್ತರ್ 4 ಆಣೆ 17 ಕಾಲುಂಗರ 8 ಆಣೆ 18 ನಾಜೂಕಾದ ಕರವಸ್ತ್ರ 4 ಆಣೆ 19 ವಿವಿಧವಾದ 6 ಸ್ಟೀಲ್ ಮುಳ್ಳು 1 ಆಣೆ ದಿಕ್ಕನ್ನು ತೋರಿಸುವ ಉತ್ತರಮುಖಿ 4 ಆಣೆ [202 3]

ಪದಕ ಸಹಿತ ನಾಲ್ಕು ಎಳೆಯ ಇಮಿಟೇಷನ್ ಮುತ್ತಿನ ಕಂಠಿ ರೂ 1 3 0

ಪದಕವಿಲ್ಲದ್ದು „ „ „ 0 9 0

ವಿಳಾಸ —ಪಿ. ಶೇಷಾ ಅಂಡ್ ಬ್ರದರ್ಸ್,

ನಂಪಂಬಾಕಂ, ಸೆಂಟ್ ಥಾಮಸ್ ಮೌಂಟ್ ಪೋಸ್ಟ್, ಮದರಾಸ್.

ಸಮಸ್ತವಿಧವಾದ ನೋವೂ ಇರಿತವೂ ನಿಮಗೆ ವಾಸಿಯಾಗಬೇಕೋ!

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು, ತಲೆನೋವು, ವಾಯುನೋವು, ಬೆನ್ನಿನ ಸೆಳೆತ, ಕೀಲುನೋವು, ಶೈತ್ಯ, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲಿ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ಬಿಕರಿಯಾಗುತ್ತಲಿವೆ ಡಾಕ್ಟರುಗಳೂ ವೈದ್ಯಮಾಡತಕ್ಕವರೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ಬಿಕರಿಯಾಗುವದು

ಹುಳಕಡ್ಡಿ ಔಷಧ ಡಬ್ಬಿಗೆ 6 ಆಣೆ, 12 ಕುಪ್ಪಿಗೆ ರೂ 3-8-0 ಹಲ್ಲುಪುಡಿ ಡಬ್ಬಿಗೆ 2 ಆಣೆ, 12 ಕುಪ್ಪಿಗೆ ರೂ 1-2-0 ವಿ ಪಿ ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ [42-16]

ವಿಳಾಸ —ಅಮೃತಾಂಜನ ಡಿಪೋ, ೧೯ ಫ್ರೈಯರ್ ರೋಡ್, ಫೋರ್ಟ್, ಬೊಂಬಾಯಿ

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೦ ಪುಟಗಳು)

ಶುಕಮುಖಸ್ಥೀಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯ ನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1 8 0 ಟಪ್ಪಾಲು ಹಾಸಲು 4 ಆಣೆ

(೩೪ ಸಂಧಿಗಳು) **ಸಟೀಕಾ ತಾತ್ಪರ್ಯ ಜೈಮಿನೀ ಭಾರತವು.** (೯೫೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಟೀಕಾರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ 4 ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127 19]

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ ಪಬ್ಲಿಷರ್ಸ್, ಬೆಂಗಳೂರು ಸಿಟಿ

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ —1 ಪಿನಲ್‌ಕೋಡು, 2 ಪೊಲೀಸ್ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ದಹ್ಯವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯವಿವಾಹಗಳ ರೆಗ್ಯುಲೇಷನ್ 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್ ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ

ಪ್ರಿಂಸಿಪಲ್ ಸೆಕ್ಷನ್‌ಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ? ಯಾ ಕೂಡದೆ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟ್ಟಬೇಕೇ? ಜಾಮೀನ್ ತೆಗೆದುಕೊಳ್ಳಬಹುದೆ? ಯಾ ಕೂಡದೆ? ರಾಜಿಯಾಗಬಹುದೆ? ಯಾ ಕೂಡದೆ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿವೆ 22 5 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ ಕ್ರಯ ರೂಪಾಯಿ 2 0 0 ಟಪಾಲ್ ಹಾಸಲು 3 ಆಣೆ

ವಿಳಾಸ:—ಎಲ್. ವೇಮಾರೆಡ್ಡಿ,

ಕಂಟ್ರಾಕ್ಟರ್ ಮತ್ತು ಕ್ರಿ॥ ಪ್ಲೀಡರ್,

[103-23] ಮಾಲೂರು —ಕೋಲಾರ್ ಡಿಸ್ಟ್ರಿಕ್ಟ್

ಹೌದು! ಶ್ರೇಷ್ಠವಾದ ವಾಚ್ ಹೌದು!

ಸ್ಟ್ರಾಂಗ್ ಇಂಗ್ಲಿಷ್ ಲೀವರ್ ವಾಚ್

ಚೊಕ್ಕಬೆಳ್ಳಿಯಂತೆ ಥಳಥಳಿಸುವ, ಎಂದಿಗೂ ಕಪ್ಪಾಗದ ನಾಜೂಕಾದ ಮತ್ತು ಸುಂದರ ನಮೂನೆಯ ವಾಚ್ ಸರಪಣಿ ಸಮೇತ ರೂ 3-4-0 ಮಾತ್ರ

7 ವರುಷಗಳ ಖಾತ್ರಿಯಾದ ಗ್ಯಾರಂಟಿ



ಈ ವಾಚ್ ಈಗತಾನೆ ನಾವು ನಮ್ಮ ಸ್ವಂತ ಆರ್ಡರ್‌ನಿಂದ ತರಿಸಿದ್ದೇವೆ ಇದು ಸಾಧಾರಣವಾದ ವಾಚ್‌ಗಳಿಗೆ ಹೋಲಿಕೆ ಎಂದು ತಿಳಿಯಕೂಡದು ಶ್ರೇಷ್ಠವಾದ ಸ್ಟ್ರಾಂಗ್ ಇಂಗ್ಲಿಷ್ ಲೀವರ್ ಕೆಲಸದಿಂದ ತಯಾರಾದದ್ದು ಒಳ್ಳೆ ನಾಜೂಕಾದ ಯಂತ್ರ ಸಾಮಾನುಗಳಿಂದ ತಯಾರಾದದ್ದು ಗಂಭೀರವಾದ ಗಂಟೆ ಮತ್ತು ಮಿನಿಟ್ ಮುಳ್ಳುಗಳುಳ್ಳದ್ದು ಎನಾಮಲ್ ಡಯಲ್ ಉಳ್ಳದ್ದು ಗೌರ್ನಮೆಂಟ್ ಟೈಂಗೆ ಸರಿಯಾದ ಕಾಲವನ್ನು ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ತೋರಿಸತಕ್ಕದ್ದು ಆದಕಾರಣವೇ ಇದು ಇಷ್ಟು ಗೌರವವನ್ನು ಹೊಂದಿರುತ್ತ

ಖಾತ್ರಿಯಾದ ವಾಚ್! ನಾಜೂಕಾದ ವಾಚ್!! ಸುಂದರವಾದ ವಾಚ್!!!

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ [77-28]

ವಿಳಾಸ—ಬಿ ಆರ್. ವೆಂಕಟರಮಣ ಅಂಡ್ ಕಂಪೆನಿ,

ನಂ 7, ಕೋಪ್ ವೆಂಕಟಾಚಲೈಯರ್ ಬೀದಿ, ಮದರಾಸು.

ದೇವೀಭಾಗವತ

ಕನ್ನಡ ವಚನರೂಪ, ಬೆಲೆ ರೂ ೧ ೪ ೦

ವಿಳಾಸ —ಆರ್ ವೆಂಕಟರಾಮಶಾಸ್ತ್ರಿ, ಶಂಕರಪುರ,

[221 1] ಬೆಂಗಳೂರು ಸಿಟಿ, ಬಸವನಗುಡಿ ಪೋಸ್ಟ್

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಮತ್ತು ಮ್ಯಾರಿಯೇಜ್ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್,

ಹೆಡ್ ಆಫೀಸ್—ಮೈಸೂರು

ನೋಟೀಸು.

1 ಕಳೆದ ತಿಂಗಳು ತಾ 11 ತಾ 18 ಮತ್ತು ತಾ 25 ನೇ ವೃತ್ತಾಂತ ಪತ್ರಿಕೆ ಸಂಚಿಕೆಗಳಲ್ಲಿ ಅಮೃತಸಾರದ ನ್ಯಾಷನಲ್ ಇನ್ಶೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯ ಚೀಫ್ ಮ್ಯಾನೇಜರ್ ಮಿ ಪಿ ಎಲ್ ರಾಜಪಾಲ್ ರವರು ಪ್ರಕಟಿಸಿರುವ ನೋಟೀಸಿನ ವಿಷಯದಲ್ಲಿ ನಾನು ಈ ಮೂಲಕ ಪಬ್ಲಿಕ್ ಜನರಿಗೆ ಗೊತ್ತುಪಡಿಸುವುದೇನೆಂದರೆ ಅಮೃತಸಾರ ಕಂಪನಿಯವರು ಇದುವರೆಗೂ ನನ್ನನ್ನು ತಮ್ಮ ಕಂಪನಿ ನೌಕರಿಯಿಂದ ವಜಾಮಾಡಿರುವುದಿಲ್ಲ ನಾನು ಚೀಫ್ ಏಜನ್ಸಿಗೆ ಕಳೆದ ಆಗಸ್ಟ್ ತಾ 12 ರಲ್ಲಿ 110 ನೇ ನಂಬರುಳ್ಳ ಕಾಗದವನ್ನು ಬರೆದು ರಾಜೀನಾಮೆ ಕೊಟ್ಟಿದ್ದೇನು ನಾನು ರಾಜೀನಾಮೆ ಕೊಟ್ಟ ಮೇಲೂ ಚೀಫ್ ಮ್ಯಾನೇಜರವರು ನನಗೆ ... ನೇ ತಾರೀಖಿನ 7903 ನೇ ನಂಬರ್ ಕಾಗದವನ್ನು ಬರೆದು ನಾನು ಇನ್ನೂ ಚೀಫ್ ಏಜಂಟಾಗಿರಬೇಕೆಂದು ತಿಳಿಸಿರುವುದರ ಮೇಲೂ ಅವರು ಮೇಲ್ಕಂಡ ರೀತಿಯಲ್ಲಿ ದ್ವಂದ್ವಾರ್ಥವುಳ್ಳ ನೋಟೀಸನ್ನು ಪತ್ರಿಕೆಯಲ್ಲಿ ಯಾಕೆ ಪ್ರಕಟಮಾಡಿರುತ್ತಾರೋ ನನಗೆ ತಿಳಿಯದೆ ಇದೆ

2 ಈ ಮಧ್ಯೆ ನಾನು ನಮ್ಮ ಇನ್ಶೂರೆನ್ಸ್ ಪಾಲಿಸಿ ಹೋಲ್ಡರುಗಳಿಗೆ ನಮ್ಮ ಆಫೀಸಿನಿಂದ ಆಗಸ್ಟ್ ತಾ 16 ನೇ ಮಾರ್ಕು ಪೋಸ್ಟ್‌ಕಾರ್ಡು ನೋಟೀಸು ಕಳಿಸಿರುವುದರಿಂದ ನಾನು ಅಮೃತಸಾರದ ಕಂಪನಿ ಸಂಬಂಧವನ್ನು ತ್ಯಜಿಸಿರುತ್ತೇನೆಂಬುವುದು ಸ್ಪಷ್ಟವಾಗಿದೆ ಮತ್ತೂ ಅವರಿಗೆಲ್ಲಾ ಆ ತಾರೀಖಿನಿಂದ ಅವರ ಪ್ರೀಮಿಯಂಗಳನ್ನೆಲ್ಲಾ ನೇರಾ ಅಮೃತಸಾರ ಕಂಪನಿ ಹೆಡ್ ಆಫೀಸಿಗೆ ಕಳುಹಿಸುವಂತೆಯೂ ತಿಳಿಸಲಾಗಿದೆ

3 ನನ್ನ ಮುಖಾಂತರವಲ್ಲದೆ ನೇರಾ ಆ ಕಂಪನಿಗೆ ಪ್ರೀಮಿಯಂಗಳನ್ನು ಕಳುಹಿಸುವುದರಲ್ಲಿ ಕೆಲವು ಪಾಲಿಸಿ ಹೋಲ್ಡರುಗಳಿಗೆ ಇಷ್ಟವಿಲ್ಲವೆಂಬುವುದನ್ನು ನಾನು ಬಲ್ಲೆ ಇಂಥಾ ಪಾಲಿಸಿ ಹೋಲ್ಡರುಗಳು ನಮ್ಮ ಕಂಪನಿಗೆ ಪಾಲಿಸಿಯನ್ನು ವರ್ಗಮಾಡಿಕೊಳ್ಳುವಂತೆ ಅವಕಾಶ ಮಾಡಿಕೊಟ್ಟಿರುತ್ತೇನೆ ಹೀಗೆ ಮಾಡುವವರಿಗೆ ಅವರು ಅಮೃತಸಾರ ಕಂಪನಿಗೆ ಪಾವತಿಮಾಡಿರುವ ಪ್ರೀಮಿಯಂ ಹಣಕ್ಕೆ ನಾವು ನಮ್ಮ ಕಂಪನಿಯಲ್ಲಿ ಜಮಾ ಕೊಟ್ಟು ಹೊಸ ಪಾಲಿಸಿಗಳನ್ನು ಕೊಡುತ್ತಿದೇವೆ [208 2]

4 ಮೇಲ್ಕಂಡ ನೋಟೀಸ್ ಕೊಟ್ಟಿರುವುದು ಇನ್ಶೂರೆನ್ಸ್ ಪಾಲಿಸಿ ಹೋಲ್ಡರುಗಳಿಗೆ ಮಾತ್ರವಲ್ಲದೆ ಪ್ರಾವಿಡೆಂಟ್ ಪಾಲಿಸಿ ಹೋಲ್ಡರುಗಳಿಗೆ ಸಂಬಂಧಪಡುವುದಿಲ್ಲ ಈ ಪ್ರಾವಿಡೆಂಟ್ ಪಾಲಿಸಿ ಹೋಲ್ಡರುಗಳ ಪಾಲಿಸಿಗಳೆಲ್ಲಾ ಚೀಫ್ ಮ್ಯಾನೇಜರವರ 1913 ನೇ ಇಸವಿ ಜೂಲೈ 17 ತಾರೀಖಿನ 16017 ನೇ ನಂಬರಿನ ಕಾಗದದ ಪ್ರಕಾರ ಅಮೃತಸಾರ ಕಂಪನಿಯಿಂದ ನಮ್ಮ ಹೊಸ ಕಂಪನಿಗೆ ವರ್ಗಮಾಡಲಾಗಿರುತ್ತವೆ

ಎಂ. ಎಲ್. ನಾಗಣ್ಣ,

ಮ್ಯಾನೇಜಿಂಗ್ ಏಜಂಟ್.

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೇ ?" ಎಂದು ನಿನ್ನನ್ನು ನೀನೇ ಕೇಳಿಕೋ ಹಾಗೆ ಆಗದಿದ್ದರೆ ಡೋನ್ಸರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೋ ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ

(೧೨ ಆಣೆ ಬುಡ್ಡಿ ಪರಿಮಾಣ)

ಸ್ವಸ್ಥವಾಗುವುದು ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು ಈ ವಿಷವೆ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇವರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶರೋಗ ಪಿತ್ತ ಪಿತ್ತಜ್ವರ ಅಜೀರ್ಣ ಅಗ್ನಿಮಾಂದ್ಯ ಗಾಬರಿ ಅಶಕ್ತಿ, ಎದೆಯು ತಲ್ಲಣಿಸುವುದು ತಲೆತಿರುಗುವುದು, ತಲೆನೋವು ಹೊಟ್ಟೆಯುಬ್ಬರ ಹುಳಿತೇಗಿನ ಹೊಟ್ಟೆನೋವು ಹೆಂಗಸರ ವ್ಯಾಧಿಗಳು ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

ಡೋನ್ಸರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಲ್ಮಷವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ರುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ರೋಗವನ್ನು ಪರಿಹರಿಸಿ ಆರೋಗ್ಯವನ್ನುಂಟುಮಾಡುವುವು [181 9]

ಬೆಲೆ ೪ ಆಣೆ ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ಪಟ್ಟು ಹೆಚ್ಚು ಮಾತ್ರೆಗಳುಂಟು ಔಷಧಿ ಮಾರುವವರ ಬಳಿಯೆಲ್ಲಾ ದೊರೆಯುವುದು ಅಥವಾ ಬೋರ್ ಪಿ ಓ ಬಾಕ್ಸ್ ೨ ಬೊಂಬಾಯಿ—ಇವರಲ್ಲಿ ದೊರೆಯುವುದು

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣದಿಂದಾದ ವಾಯುವಿನಿಂದ ನಾನಾ ವೇದನೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸ್ನಾಯುಗಳೂ ಮೂಳೆಗಳೂ ಪರಿಪೂರ್ಣವಾಗಿ ಸರಿಯಾಗಿ ಬಲಗೊಂಡು ಬೆಳೆಯುವುದಕ್ಕೆ ಅವರಿಗೆ ಚಿಕ್ಕಂದಿನಿಂದಲೇ ಬಲಕಾರಿಯಾದ ಸೇವನಾ ಔಷಧವನ್ನು ಕೊಡುವುದು ಉಚಿತ

SCOTT'S EMULSION 211
(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧವು ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸುವಂಥಾ ಬಹು ಉತ್ತಮವಾದ ಗುಣಗಳುಳ್ಳದ್ದು

ಯಾವಾಗಲೂ ಇರುವ ಈ ಔಷಧದ ಗುರುತು

ಇದಕ್ಕೆ ಸಮಾನವಾದದ್ದು ಮತ್ತಾವುದೂ ಇಲ್ಲ

ಈ ಔಷಧವನ್ನು ಸೇವನೆ ಮಾಡುತ್ತಾ ಬಂದರೆ ಇದರ ಗುಣಗಳು ಗೊತ್ತಾಗುವುವು

ಶ್ರಮೆಯಿಂದ ಮುಚ್ಚಲ್ಪಟ್ಟು ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತಿದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್ ಇಂಗ್ಲೆಂಡ್

ಸತಿಮುಲ್ ಡೈರಿಗಳು

ಮೈಸೂರಿನಲ್ಲಿ ಪ್ರತಿ ವರುಷವೂ ತಯಾರಾಗುವಂತೆ 1914 ನೇ ಇಸವಿ 4 ನಮೂನೆ ಪಾಕೆಟ್ ಡೈರಿಗಳು ತಯಾರಾಗಿ ಬಿಕರಿಗೆ ಸಿದ್ಧವಾಗಿವೆ

ನಂಬರು 1	ಚಿಕ್ಕ ಸೈಜು ಸಾದಾ	,,	ಕ್ರಯ 4	ಆಣೆ
,, 2	ಡಿಟ್ಟೊ ಫ್ಲಾಪು	,	,, 6	,,
,, 3	ದೊಡ್ಡ ಸೈಜು ಸಾದಾ	,	, 6	,,
,, 4	ಡಿಟ್ಟೊ ಫ್ಲಾಪು	,,	,, 8	,

ಒಂದೇ ದಫಾ 12 ಡೈರಿಗಳನ್ನು ತರಿಸಿಕೊಳ್ಳುವವರಿಗೆ ಒಂದು ಪ್ರತಿ ಜಾಸ್ತಿ ಕೊಡಲಾಗುವುದು ೧೦ ರೂ ಗೆ ಮೇಲ್ಪಟ್ಟು ತರಿಸಿಕೊಳ್ಳುವವರಿಗೆ ರೂ ಗೆ 3 ಆಣೆಯಂತೆ ಡಿಸ್ಕೌಂಟು ಮಾತ್ರ ದೊರೆಯುವುದು ಈಗಲೇ ಕೆಳಗಿನ ವಿಳಾಸದಾರರಿಗೆ ಬರೆದು ತರಿಸಿಕೊಳ್ಳಿ ಕಾಲವಿಳಂಬ ಮಾಡಿದಲ್ಲಿ ಮುಗಿದುಹೋಗುತ್ತೆ [198 4]

ವಿಳಾಸ —ಎಸ್ ಡಿ ಸತಿಮುಲ್ ಕಂಪನಿ, ಮೈಸೂರು

"ವೃತ್ತಾಂತ ಪತ್ರಿಕೆ" ಏಜಂಟರಿಗೆ ನೋಟಿಸ್.

ವೃತ್ತಾಂತ ಪತ್ರಿಕೆಯ 1913 ನೇ ವರುಷದ ಒಂದನೇ ಕ್ವಾರ್ಟರು ಕಳೆದ ಜೂನ್ ತಿಂಗಳಿಗೆ ಪೂರೈಸಿದೆ ಏಜಂಟರುಗಳು ಆ ಕ್ವಾರ್ಟರಿನ ಲೆಕ್ಕಗಳನ್ನು ಫೈಸಲ್ ಮಾಡಿ, "ಬಿ" ಫಾರಂಗಳಿಗೆ ಎತ್ತಿಬರೆದು, ತಮ್ಮ ತಮ್ಮ ಸೂಪರ್‌ಟೆಂಡೆಂಟರಿಗೆ ಒಂದು ಪ್ರತಿಯನ್ನೂ, ನಮಗೆ ಒಂದು ಪ್ರತಿಯನ್ನೂ ಈ ವಾರದಲ್ಲೇ ಜಾಗ್ರತೆಯಾಗಿ ಕಳುಹಿಸಿಕೊಡಬೇಕಾಗಿ ಕೃತಜ್ಞನಾಗಿರುವ

ಮ್ಯಾನೇಜರ್, "ವೃತ್ತಾಂತ ಪತ್ರಿಕೆ" ಆಫೀಸ್, ಮೈಸೂರು.

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮಾ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್‌ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಧರವಸೆಯು ಕೇವಲಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮಾ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[100-22] ಎಲ್ ಕಬ್ಬೂರ್, ಬ್ರಾಂಚ್ ಸೆಕ್ರಿಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್ ಬೆಂಗಳೂರು ಸಿಟಿ

ಶ್ರೀಮದ್ವಾಲ್ಮೀಕಿ ರಾಮಾಯಣ

"ಸುನ್ದರಕಾಣ್ಡ" ಮಾಸಪತ್ರಿಕೆ

14 ದೊಡ್ಡ ಪುಟಗಳ ಸಂಚಿಕೆ 1 ಕ್ಕೆ ಐದೇ ಆಣೆ ಸುಮಾರು 14 ಸಂಚಿಕೆಗಳಾಗುತ್ತವೆ ಟೀಕು ತಾತ್ಪರ್ಯ, ಮೂಲ ಇವುಗಳೊಂದೊಡಗೂಡಿ, ಕಾಗದ, ಅಕ್ಷರ ಅಚ್ಚು, ಸ್ವಾರಸ್ಯಗಳಿಂದ ಬಹು ಸುಂದರ ಪುಸ್ತಕವಾಗುವುದು ಚಂದಾ ಸೇರತಕ್ಕವರು ಮುಂಗಡ ಒಂದು ರೂ ಕೊಡಬೇಕು ಅದರಲ್ಲಿ ಕಡೆಯ ಮೂರು ಸಂಚಿಕೆಗಳಲ್ಲಿ ಉತ್ತಾರಮಾಡಿಕೊಳ್ಳುವೆವು ಶ್ರೀ "ಶಾರದಾ" ಮಾಸಪತ್ರಿಕಾ ಸಂಪಾದಕರಾದ ವೇ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಇದುವರೆಗೆ ಯಾರೂ ಪ್ರಕಾಶಪಡಿಸದ ರಹಸ್ಯಗಳನ್ನೆಲ್ಲಾ ಸ್ಪಷ್ಟವಾದ ರೀತಿಯಿಂದ ವಿವರಿಸಿ ಬರೆಯುತಲಿದಾರೆ 1 ಆಣೆ ಸ್ಟಾಂಪು ಕಳುಹಿಸಿ ಮಾದರಿ ಸಂಚಿಕೆಯಲ್ಲಿ ನೋಡಬಹುದು

1 1 13 ರಲ್ಲಿ ಆರಂಭವಾಗಿ ಎಂಟು ಸಂಚಿಕೆಗಳು ಸಿದ್ಧವಾಗಿವೆ

ಶ್ರೀ "ಶಾರದಾ" ಮಾಸಪತ್ರಿಕೆ ಇದುವರೆಗೆ 14 ಪುಸ್ತಕಗಳು ಪೂರ್ತಿಯಾಗಿವೆ ವಾರ್ಷಿಕ ಚಂದಾ ರೂ 2 0 0 ರಘುಕುಲಚರಿತೆ ಪ್ರಿಂಟಾಗುತಲಿದೆ 1 ತಿಂಗಳಲ್ಲಿ ಪುಸ್ತಕವು ಪೂರ್ತಿಯಾಗುವುದು ಕ್ರಯ 1 ವಾಲ್ಯೂಂಗೆ ರೂ 2

ವಿಳಾಸ—ಬಿ ಸಿ ತಾರಾಮಶಾಸ್ತ್ರಿ (ಅಥವಾ)

ಡಿ. ಲಕ್ಷ್ಮೀನರಸಿಂಹಶಾಸ್ತ್ರಿ, ಶ್ರೀ ಶಾರದಾ ಆಫೀಸ್,

[11] ಬೆಂಗಳೂರು ಸಿಟಿ

ಬನ್ನಿರಿ ಬನ್ನಿರಿ ಇತ್ತಕಡೆ ನೋಡಿರಿ

ಆಶ್ಚರ್ಯಕರವಾದ ಸೊಳ್ಳೆಯ ಪರದೆ

ನಿಮ್ಮ ಮುದ್ದು ಮಕ್ಕಳುಗಳನ್ನು ಭಯಂಕರವಾದ ವಿಷಜ್ವರ ಸೊಳ್ಳೆಯ ಕಡಿತದಿಂದ ಬಿಡಿಸಿಕೊಳ್ಳಿರಿ [206 3]

ಸೊಳ್ಳೆಯ ಕಡಿತದಿಂದ ಅನೇಕ ಮಕ್ಕಳುಗಳು ಬಲಹೀನವಾಗುತ್ತವೆ ಇವುಗಳಿಂದ ನಿಮ್ಮ ಮಕ್ಕಳನ್ನು ಬಿಡಿಸಿಕೊಳ್ಳುವ ಪ್ರಯತ್ನ ಮಾಡಿರಿ ಈಗ ನಮ್ಮಲ್ಲಿ ಹೊಸ ನಮೂನೆ ಸೊಳ್ಳೆಯ ಪರದೆಗಳು ಬಂದಿರುತ್ತವೆ ಇವು ನೋಡುವುದಕ್ಕೆ ಆಶ್ಚರ್ಯಕರವಾಗಿಯೂ ಚೆನ್ನಾಗಿಯೂ ಇರುತ್ತೆ ಆಕಾರಕ್ಕೆ ಪಕ್ಕದ ಬಹು ಸುಲಭ ಚಿತ್ರವನ್ನು ನೋಡಿ ಮತ್ತೇನೆ ಆಗಾಗ ನಿಮ್ಮ ಎಳೆ ಮಕ್ಕಳುಗಳು ಜ್ವರದಿಂದ ಬಾಧಿಸುವುದನ್ನು ಡಾಕ್ಟರ ಫೀಜನ್ನೂ ತಪ್ಪಿಸುತ್ತೆ ಇದರ ಗುಣವನ್ನು ಇಲ್ಲಿ ಬರೆಯುವುದರಿಂದ

ಪ್ರಯೋಜನವಿಲ್ಲ ಒಂದು ಸಲ ತರಿಸಿ ನೋಡಿದರೆ ತಿಳಿಯುತ್ತೆ ಮುದ್ದು ಎಳೆ ಮಕ್ಕಳುಗಳು ಚಾಪೆಯ ಮೇಲಾಗಲಿ ಮಂಚದ ಮೇಲಾಗಲಿ, ತೊಟ್ಟಿಲಲ್ಲಾಗಲಿ ಸುಖವಾಗಿ ಸೊಳ್ಳೆಯ ಕಡಿತವಿಲ್ಲದೆ ನಿದ್ರೆಮಾಡಬಹುದು ಇದನ್ನು ಬೇಕಾದಾಗ ಮುಚ್ಚಬಹುದು ಆದುದರಿಂದ ಇದು ಪ್ರಯಾಣಿಕರಿಗೂ ಬಹಳ ಅನುಕೂಲ ಇದನ್ನು ರೈಲಿನಲ್ಲಿಯೂ ಕೂಡ ಉಪಯೋಗಿಸಬಹುದು ಇದನ್ನು ಮಕ್ಕಳುಗಳ ಚಿಕ್ಕ ಗಾಡಿಯ ಮೇಲೆ ಸುಲಭವಾಗಿ ಮುಚ್ಚಬಹುದು ಇದರಿಂದ ಮಕ್ಕಳುಗಳ ಮೇಲೆ ಬೀದಿಯ ಧೂಳು ಬೀಳುವುದಿಲ್ಲ ಎಳೆಮಕ್ಕಳಿರುವ ಮನೆಗಳಲ್ಲಿ ಇದು ಅವಶ್ಯವಾಗಿರಬೇಕು ಇದನ್ನು ಸರಿಯಾಗಿ ಉಪಯೋಗಿಸಿದರೆ ಬಹಳ ದಿನಗಳ ವರೆಗೆ ಬಾಳಿಕೆ ಬರುತ್ತೆ ಬೆಲೆ ರೂ 3 8 0

ಜಿ . ನಾಯಾ ಅಂಡ್ ಕೋ ಸುಂಗುವಾರ್‌ಕಂ, ಮದ್ರಾಸ್

ಅವಶ್ಯಕವಾಗಿ ಓದಿ ನೋಡಿರಿ! ಕೈಕೆಲಸದ ಔಷಧಶಾಲಾ !!

ಅವರವರ ಕುಟುಂಬಸ್ಥರ ಮನೆಯಲ್ಲಿ ಅವಶ್ಯಕ ಔಷಧ ಇರಬೇಕು 14 ವರುಷದ ಲಾಗಾಯ್ತು ಇದುವರೆವಿಗೂ ರೂಢಿಯಲ್ಲಿರುವ ಅನುಭವ ಔಷಧಗಳು ಕೆಲವು ಜನಗಳು ಕೇಳಿಕೊಂಡ ವಿಷಯಕ್ಕೆ ಬಹಿರಂಗಪಡಿಸಬೇಕಾಯಿತು ಬೇಕಾದವರು ನಮ್ಮ ವಿಕ್ರಯ ಕ್ಯಾಟ್ಲಾಗು ತರಿಸಿಕೊಂಡು ನೋಡಬಹುದು ತಮಗೆ ತೋರಿಸಿರುವ ರೋಗಗಳಿಗೆ ಔಷಧಗಳು ಒಂದು ದಫಾ ಉಪಯೋಗಿಸಿ ನೋಡಿದರೆ ಗೊತ್ತಾಗಬಹುದು ಕಲಿತವರೂ ಕಲಿಯದೆ ಇರತಕ್ಕವರೂ ಇರುತ್ತಾರೆ ಔಷಧಗಳನ್ನು ಯುನಾನಿ ಮಿಕ್ಚರ್, ಕರ್ನಾಟಕ ಮಿಕ್ಚರ್, ಇಂಗ್ಲೀಷು ಮಿಕ್ಚರ್, ಮೂರು ಭಾಷೆಯುಳ್ಳ ಔಷಧಗಳು ನನ್ನ ಭಾರದಿಂದ ನಡೆಸುವದಾಗುತ್ತೆ ಯಾವ ವಿಷಯದಲ್ಲು ನಾನು ಪರೀಕ್ಷೆಯುಳ್ಳವನಾದ್ದರಿಂದ ರಾಜರಾಜರುಗಳು ಮೊದಲುಗರು ಅನೇಕ ಸರ್ಟಿಫಿಕೇಟುಗಳು ಕೊಟ್ಟಿರುತ್ತಾರೆ ಬೇಕಾದವರು ಬಂದು ನೋಡಬಹುದು ಬೇಕಾದವರಿಗೆ ಸರ್ಟಿಫಿಕೇಟುಗಳು ಕಳುಹಿಸುತ್ತೇನೆ

ಸನ್ನಿಜ್ವರ, ಪ್ಲೇಗ್ ಹುಚ್ಚು ಪೌಡರ್ ವಿವರ

ಮೊದಲು ಗೆಡ್ಡೆ ಅಲ್ಲವೆ ಪುನಹ ಗೆಡ್ಡೆ, ಬಿಡದೆ ಜ್ವರ ಇರುವದು, ಕಣ್ಣು ಕೆಂಪು ಮತ್ತು ವಾಂತಿ, ಸ್ವಲ್ಪ ಬೇದಿ ಹುಚ್ಚುಸನ್ನಿ, ತಿಕ್ಕಲವಾತು, ನಾನಾ ವಿಧ ಇರುವದು ಇದ್ದವರು ಗಾಬರಿಯಾಗುತ್ತಾರೆ ನಾಡಿಗಳು ಕೆಟ್ಟು ಸತ್ತು ಹೋಗುತ್ತಾರೆ ಇದರ ತಾರತಮ್ಯ ತಿಳಿಯದೆ ಇದ್ದಾರೆ ಇನ್ನು ಮೇಲಾದರೂ ಗೌರವ ತಿಳಿದು ಮಾಡಿರುವ ಈ ಔಷಧಿಯನ್ನು ಒಂದು ದಫ ಸೇವಿಸಲು ತಿಳಿಯುತ್ತೆ ಇದರ ಬೆಲೆ 3 ರೂಪಾಯಿ [22 1]

ವಿಷಜ್ವರಾಂಕುಶ ಅಮೃತ ವಿವರ

ಬಿಡದೆ ಸನ್ನಿಜ್ವರ, ಪ್ಲೇಗಲ್ಲದೆ ಅಮಾಯಿಯಾ ಪ್ಲೇಗು ಎನ್ನುವ ವಿಷಜ್ವರ, ವಿಧವಿಧವಾಗಿ ವಾಂತಿಯಾಗುವದು, ಹುಚ್ಚು ಮಾತನಾಡುವದು, ವಾಂತಿ ನಿಂತು ಪಿತ್ತಶಮನವಾಗಿ ನಿದ್ರೆ ಬರುವದು, ವಾತನಾಡಿ ಪಿತ್ತನಾಡಿ ಶ್ಲೇಷ್ಮನಾಡಿ ಆಯಾಯ ಸ್ಥಳದಲ್ಲಿ ನಿಲ್ಲುವದು ಇದು ಒಪ್ಪತ್ತು ಉಪಯೋಗಿಸಲು ಹಾವು ಕಚ್ಚಿದರೂ ವಿಷವಾಗದೆ ಅದೇ ಕಾಯುವದು ಇದರ ಕಿರೀದಿ ರೂ 1-8-0

ಬಿಟ್ಟುಬಿಟ್ಟು ಬರುವ ಚಳಿಜ್ವರಕ್ಕೆ ಮೋಲಿ ಜ್ವರಾಂಕುಶ ವಿವರ

ಜ್ವರ ಮೇಲೆ ಹಾಕಿರುವ ಅಳತೆ ಮೇರೆಗೆ ತಣ್ಣೀರಲ್ಲಿ ತೆಗೆದುಕೊಂಡು ಕಂಬಳಿ ಹೊದ್ದು ಮಲಗಲು ಬೆವರು ತೋರುವದು ವಾತ ಪಿತ್ತ ಮಂದ ಸನ್ನಿ ಎತ್ತಿಕುಕ್ಕುವ ಜ್ವರ ಮೂರು ದಿನ ಆರು ವ್ಯಾಳೆ ಖಂಡಿತ ನಿಲ್ಲುವದು ಒಂದು ದಿನ ಕುಡಿದ ಮೇಲೆ ಒರಪೆ ನಿಲ್ಲುವದು ಇದು ಜೇನುತುಪ್ಪದಲ್ಲಿ ಮಾಡಲ್ಪಡುವದು ದೊಡ್ಡವರು ಚಿಕ್ಕವರು ಮುದ್ದು ಎಂದು ಭಯಪಡುವವರಿಗೆ ತಕ್ಕ ಅಮೃತ ಶೀಸೆಯಾಗಿರುವದು ಕ್ರಯ 0 8 0

ಗುಜ್ಜಕಟ್ಟುವ ಮೈಲು, ವಿವರ

ಉಷ್ಣವಾಯುವಿನಿಂದ ಉಂಟಾದ ಗಂಡಸರಿಗೂ ಹೆಂಗಸರಿಗೂ ಹೊಟ್ಟೆಯಲ್ಲಿ ಗುಜ್ಜಜ್ವರದ ಕಟ್ಟು, ನೀರುಕಟ್ಟು ಕರಳಲ್ಲಿ ನಾನಾ ವಿಧ ಉತ್ಪತ್ತಿಯಾಗುವ ಕಷ್ಟಗಳು ಸಂದೇಹ ಪರೀಕ್ಷೆ ಮಾಡಬಹುದು ಇದರಲ್ಲಿ ಅನೇಕ ಔಷಧಗಳು ಇದೆ ಬರೆದು ತಿಳಿದುಕೊಳ್ಳುವದು ಇದರ ಬೆಲೆ 0 12 0

ಜೀರ್ಣಾಂಕುಶ ವಿವರ

ಗಂಡಸರಿಗೂ ಹೆಂಗಸರಿಗೂ ದೊಡ್ಡವರಿಗೂ ಚಿಕ್ಕವರಿಗೂ ಶೂಲೆವಾಯು, ಶೀಘ್ರವಾಗಿ ಬರುವ ಹೊಟ್ಟೆಯುರಿ ಚಳುಕಾಗುವದು, ಜೀರ್ಣಶಕ್ತಿ ಇಲ್ಲದೆ ಇರುವದು, ವಾತ ಪಿತ್ತ ವಾಂತಿ ಎತ್ತುವದು, ನಾನಾ ವಿಧ ಮಂದ ಭೇದಿ, ಉಷ್ಣಜ್ವರ ಈ ವ್ಯಾಧಿಗಳೆಲ್ಲಾ ಕೆಲವು ಗಂಟೆಯಲ್ಲಿ ನಿಲ್ಲುವವು ಇದರ ಬೆಲೆ 3 ಆಣೆ

32 ನಾನಾ ವಿಧ ತಲೆನೋವು ವ್ಯಾಧಿಗಳಿಗೆ ತಕ್ಷಣ ವಾಸಿಯಾಗುವ ನಶ್ಯದ ಪೌಡರ್ 8 ದಿನಕ್ಕೆ 1 ರೂ ಮೇಲ್ಕಾಣಿಸಿದ ವಿಪರೀತ ರೋಗಗಳು ಸೇರಿಕೊಂಡು ಬಿಡದ ಅಸ್ಥಿಜ್ವರಗಳಿಗೆಲ್ಲ 9 ದಿನಕ್ಕೆ ಕುಮಾರಿಭಸ್ಮ ಬೆಲೆ 1 8 0

ಮೇಲ್ಕಾಣಿಸಿದ ವ್ಯಾಧಿಗಳಿಗೆ ಇಟ್ಟಿರುವ ಬೆಲೆಯುಳ್ಳ ಔಷಧಗಳು ಅಂಥಂಥಾ ಸಮಯಗಳಲ್ಲಿ ಶಾಂತಿಮಾಡಲ್ಪಡುವದು ಖಂಡಿತ ಹಾಗೆ ವಾಸಿಯಾಗದೆಹೋದರೆ ಹಣ ವಾಪಸು ಕೊಡುತ್ತೇವೆ ಮನಸ್ಸಿನಲ್ಲಿ ಸತ್ಯವಿರಬೇಕು ಬದಲು ಉತ್ತರ ಕ್ಯಾಟ್ಲಾಗು ಕಳುಹಿಸುವದಾಗುತ್ತೆ ಔಷಧದ ಚಾರ್ಜು ಬೇರೆ ವಿ ಪಿ ಚಾರ್ಜು ಬೇರೆ ಪರೀಕ್ಷೆಮಾಡುವಲ್ಲಿ ತಿಳಿಯುವದು ಅನೇಕ ವಿಷಯಗಳು ಇದೆ

ನಮ್ಮ ವಿಳಾಸ —ಕೈಕೆಲಸ ಔಷಧಶಾಲಾ ಆಯುರ್ಯೋಗೀಶ್ವರರೈವತಿ,
ಸುದಾಮನಗರ್ ಇಂಚಾಲಪಲ್ಲಿ, ಸಿದ್ಧೇಶ್ವರ ದೇವಸ್ಥಾನಕ್ಕೆ ಎದುರು
167 ನಂಬರ್, ಕೇವಲ್ರಿ ರೋಡು, ಬೆಂಗಳೂರು ದಂಡು

Mellin's Food

ಮೆಲ್ಲಿನ್ಸ್ ಆಹಾರವು.

ಕೈಸೋಕದೆ ತಯಾರಾದದ್ದು.

ಮಕ್ಕಳಿಗೂ ಮತ್ತು ರೋಗಿಗಳಿಗೂ

ಮೆಲ್ಲಿನ್ಸ್ ತಯಾರಿ ಆಹಾರ ಪದಾರ್ಥಗಳು ಹಿಂದುಸ್ಥಾನ, ಬರ್ಮಾ ಮತ್ತು ಸಿಲೋನ್ ಗಳ ಎಲ್ಲಾ ವ್ಯಾಪಾರಸ್ಥರಲ್ಲೂ ಬಿಕರಿ ಆಗುತ್ತಲಿವೆ.

"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ" ಎಂಬ ಅತ್ಯಂತ ಸಹಾಯಕವಾದ ಪುಸ್ತಕವನ್ನು ಅಪೇಕ್ಷಿಸಿ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳುವವರಿಗೆಲ್ಲಾ ಅವರು ಪುಕಸಟ್ಟೆಯಾಗಿ ಸಂತೋಷದಿಂದ ಕಳುಹಿಸಿಕೊಡುತ್ತಾರೆ. Messrs OAKES & Company, Mount Road Madras.

[4-52] ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

ಓರಿಯಂಟಲ್ ಗೌ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ. 4,35,00,000

ಕಂಪನಿಯಿಂದ ಪಾವತಿ ಆಗಿರುವದು ,, 3,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ಎಳಾಸದಾರರಿಗೆ ಬರೆಮಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್. ರಟಲೊ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು, ಅಥವಾ

[194-5] ಬ್ರಾಂಚ್ ಸೆಕ್ರೆಟರಿ, ಮದರಾಸ್.

ತ ಖಾ ವಿ ಲಾ.

[207-3]

(ಕೈ. ಎಂ. ಮಲ್ಲಾರಾಧ್ಯರಿಂದ ಬರೆಯಲ್ಪಟ್ಟದ್ದು.)

ವ್ಯವಸಾಯದ ಮತ್ತು ರೈತರ ಅಭಿವೃದ್ಧಿಗಾಗಿ ಮೈಸೂರು ಸರ್ಕಾರದವರು ಕೊಡುವ ಸಾಲ ಮತ್ತೂ ಸಹಾಯ ಇವುಗಳ ವಿಷಯಕವಾದ ಖಾನೂನುಗಳೂ, ಈ ವಿಷಯಕವಾಗಿ ಮದ್ರಾಸು ಸರ್ಕಾರದ ಖಾನೂನುಗಳೂ, ಅರ್ಥಶಾಸ್ತ್ರ, ಧರ್ಮಶಾಸ್ತ್ರ, ಇತರ ರಾಜ್ಯಪದ್ಧತಿ ಮೊದಲಾದ ಪ್ರತಿಯೊಬ್ಬ ರೈತರೂ ತಿಳಿದಿರಬೇಕಾದ ವಿಷಯಗಳು ಈ ಪುಸ್ತಕದಲ್ಲಿ ಸ್ಪಷ್ಟವಾಗಿ ಬರೆಯಲ್ಪಟ್ಟಿವೆ. ಬೆಲೆ ವಿ.ಪಿ. ಮೂಲಕ ೧೦ ಆಣೆ.

ಶ್ರೀ ಶಂಕರಾಚಾರ್ಯರ ಆತ್ಮಬೋಧೆ. ಬೆಲೆ ೧ ಆಣೆ

ಸುಪ್ರಸಿದ್ಧವಾದ "ವ್ಯವಹಾರನಿರ್ಣಯದ" ೩ ನೆಯ ಆವೃತ್ತಿಯ ಮುದ್ರಣವು ನಡೆಯುತ್ತಿದೆ.

ಎಂ. ಪಂಡಿತಾರಾಧ್ಯ,
ಶ್ರೀರಾಮಪೇಟೆ, ಮೈಸೂರು.

ವೃತ್ತಾಂತ ಪತ್ರಿಕೆ.

—:o:—

ಸನ್ ೧೯೧೩ ನೇ ಇಸವಿ ಅಕ್ಟೋಬರ್, ತಾ ೩೦ ನೇ ಗುರುವಾರ.

ಮೈಸೂರು ಸಂಸ್ಥಾನದ ಗ್ರಾಮಗಳನ್ನು ಅಭಿವೃದ್ಧಿಗೆ ತರುವುದು.

ಈ ವರುಷ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಟ್ಟ ಮುಖ್ಯ ವಿಷಯಗಳ ಪೈಕಿ ಗ್ರಾಮಗಳನ್ನು ಅಭಿವೃದ್ಧಿಗೆ ತರಬೇಕೆಂಬ ವಿಚಾರವು ಸಾಮಾನ್ಯವಾದದ್ದೆಂದು ಎಣಿಸಲಾಗದು. ಅನೇಕ ಗ್ರಾಮಗಳಲ್ಲಿ ಪಾಠಶಾಲೆ ಇರುವುದಿಲ್ಲ, ಆರೋಗ್ಯವನ್ನು ಕಾಪಾಡುವ ಏರ್ಪಾಡುಗಳಿಲ್ಲ, ಯೋಗ್ಯವಾದ ಕುಡಿಯುವ ನೀರಿನ ವಸತಿ ಇಲ್ಲ, ದೊಡ್ಡ ರಸ್ತೆಗೆ ಬಂದು ಸೇರುವುದಕ್ಕೆ ಅನುಕೂಲವಾದ ಮಾರ್ಗಗಳಿಲ್ಲ. ಇಷ್ಟೊಂದು ಕೊರತೆಗಳನ್ನೆಲ್ಲಾ ಮೈಸೂರು ಸೀಮೆಗೆ ಸೇರಿದ ಸುಮಾರು 16,800 ಗ್ರಾಮಗಳಲ್ಲಿ ನಿವಾರಣೆಮಾಡಿ ಅನುಕೂಲಪಡಿಸುವುದು ಯಾವ ಗವರ್ನಮೆಂಟಿನಿಂದಲೂ ಸಾಧ್ಯವಲ್ಲವೆಂಬ ಮಾತು ಸ್ವತಸ್ಸಿದ್ಧವಾಗಿರುತ್ತದೆ. ದಿವಾನರವರು ಮೊದಲು ಗ್ರಾಮಸ್ಥರು ಏಕೀಭವಿಸಿ ಕೆಲಸಮಾಡುವುದಕ್ಕೆ ನಿಂತುಕೊಂಡರೆ ಆ ಬಳಿಕ ಸರ್ಕಾರದವರು ಅವರಿಗೆ ಸಹಾಯಕರಾಗಿ ಬಂದಾರು ಎಂಬದಾಗಿ ಅಪ್ಪಣೆಕೊಡಿಸಿರುವ ಮಾತು ಬಹು ವಿವೇಕವಾದದ್ದಾಗಿದೆ. ಆದರೆ ಇದರಲ್ಲಿ ಜನರಿಗೆ ತಮ್ಮತಮ್ಮಲ್ಲಿ ಪರಸ್ಪರ ಸಹಾಯಕ್ಕೆ ನಿಂತು ಮುಂದೆಬರುವಂತೆ ಪ್ರೋತ್ಸಾಹಪಡಿಸುವ ಮಾರ್ಗವ್ಯಾವುದೋ ಅದು ಗೊತ್ತಾಗಲಿಲ್ಲ.

ಮಾಜಿ ರೆವಿನ್ಯೂ ಕಮಿಷನರ್ ಮ॥ ಎ. ರಂಗಸ್ವಾಮಿ ಅಯ್ಯಂಗಾರ್ರವರ ಸಲಹೆ ಮತ್ತು ಸಹಾಯವನ್ನು ಪಡೆದು ಗ್ರಾಮಗಳ ಪುರೋಭಿವೃದ್ಧಿಗೆ ಅನುಕೂಲವಾದ ಕೆಲವು ಪ್ರಶ್ನೆಗಳನ್ನು ರಚಿಸಿ ನೋಟೀಸುಗಳನ್ನು ಅಚ್ಚುಹಾಕಿಸಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಹಂಚಿಸಿದರು. ಈ ಪ್ರಶ್ನೆಗಳನ್ನು ಕಳೆದ ವಾರ ಈ ಪತ್ರಿಕೆಯಲ್ಲಿ ಪ್ರಕಟಮಾಡಿರುತ್ತೇವಾದ್ದರಿಂದ ಮತ್ತೆ ಅವುಗಳನ್ನು ಇಲ್ಲಿ ಸೂಚಿಸಬೇಕಾದ ಅಗತ್ಯ ಕಾಣುವುದಿಲ್ಲ. ಆ ಫಾರಮುಗಳಲ್ಲಿ ಕಂಡ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆದುಕೊಡೋಣದರಿಂದ ಸರ್ಕಾರಕ್ಕೂ ಪ್ರಜೆಗಳಿಗೂ ಎಷ್ಟೋ ಪ್ರಯೋಜನವಾದೀತೆನ್ನುವುದಕ್ಕೆ ಸಂಶಯವಿಲ್ಲ. ಪಟೇಲ್ ಶ್ಯಾನುಭೋಗರನ್ನು ಈ ತಃಖ್ತೆಯನ್ನು ಭರ್ತಿಮಾಡಿಕೊಡುವಂತೆ ಸರ್ಕಾರದವರು ಒತ್ತಾಯಮಾಡಿ ಕೇಳಿದಂತೆ ತಿಳಿದುಬರುತ್ತದೆ. ಅವರು ಆ ರೀತಿ ಪಟ್ಟಿಗಳನ್ನು ಬರೆದುಕೊಡದೆ ಹೋಗುವ ಪಕ್ಷದಲ್ಲಿ ಈ ಕೆಲಸ ನಡೆಯುವುದು ಅಸಾಧ್ಯವಾದೀತೆಂದು ನಮಗೆ ತೋರುವುದು. ಸರ್ಕಾರದ ನೌಕರರೇ ಬರೆದುಕೊಡುವುದಾದರೆ ಅದರಿಂದ ವಿಶೇಷ ಪ್ರಯೋಜನವಾದೀತೆಂದು ನಾವು ಹೇಳಲಾರೆವು. ಈ ಕೆಲಸವನ್ನು ಪ್ರಜೆಗಳೇ ವಹಿಸಿಕೊಂಡು ಬರೆದುಕೊಡುವುದನ್ನು ತಿಳಿದುಕೊಳ್ಳುವುದು ಆವಶ್ಯವೆಂದು ತೋರುತ್ತಿದೆ.

ಗ್ರಾಮಗಳಲ್ಲಿ ಜಮೀನ್ ಹಿಡುವಳಿದಾರರಾಗಿರತಕ್ಕವರು ಈ ಕೆಲಸದ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು ಮುಖ್ಯವಾಗಿರುತ್ತದೆ. ಲಾಯರುಗಳೂ, ವರ್ತಕರೂ, ಇತರ ಕಸಬಿನಲ್ಲಿರತಕ್ಕವರೂ ಗ್ರಾಮಗಳಲ್ಲಿ ಅಪಾರವಾದ ಜಮೀನುಗಳನ್ನು ಪಡೆದವರಾಗಿರುತ್ತಾರೆ. ಆ ಜಮೀನುಗಳ ಬೆಳೆಯನ್ನು ಪಡೆಯುತ್ತಿರುವಂಥಾ ಈ ಜನಗಳು ಗ್ರಾಮಗಳಲ್ಲಿರುವ ತಮ್ಮ ಕೈಕೆಳಗಣ ಜಿರಾಯತುದಾರರ ಸ್ಥಿತಿಗತಿಯನ್ನು ಅಭಿವೃದ್ಧಿಪಡಿಸುವ ಭಾಗದಲ್ಲಿ ಎಷ್ಟರಮಟ್ಟಿಗಾದರೂ ಸಾಹಸಪಡುತ್ತಾರೆಯೋ? ಅಂಥಾ ಹಿಕ್ಮ ರೈತರು ದೃಢಕಾಯರಾಗಿಯೂ, ಆರೋಗ್ಯಶಾಲಿಗಳಾಗಿಯೂ, ಬುದ್ಧಿವಂತರಾಗಿಯೂ ಇದ್ದಪಕ್ಷದಲ್ಲಿ ಇವರಿಂದ ಜಮೀನ್ದಾರರಿಗೆ ಹೆಚ್ಚಾದ ಪ್ರಯೋಜನವಾಗುವುದು. ಜಮೀನುಗಳಲ್ಲಿ ಚೆನ್ನಾಗಿ ವ್ಯವಸಾಯ ನಡೆದು, ಹೆಚ್ಚು ಬೆಳೆ ಬೆಳೆಯುತ್ತದೆ. ಬೆಳೆದವನಿಗೂ ಜಮೀನ್ ಮಾಲೀಕನಿಗೂ ಅದರಿಂದ ಪ್ರಯೋಜನವಾದೀತು. ಅಂಥಾ ಸಾಗುವಳಿದಾರರು ದೃಢಕಾಯರಾಗಿಯೂ, ಆರೋಗ್ಯಶಾಲಿಗಳಾಗಿಯೂ, ಬುದ್ಧಿವಂತರಾಗಿಯೂ ಇರಬೇಕಾದರೆ ಅವರು ವಾಸಮಾಡುವ ಮನೆಗಳು ಆರೋಗ್ಯಕರವಾಗಿರಬೇಕು; ಅವರಿಗೆ ನಿರ್ಮಲವಾದ ನೀರು ದೊರಕಬೇಕು, ಅವರ ಮಕ್ಕಳಿಗೆ ವಿದ್ಯೆಕಲಿಸುವಂಥಾ ಪಾಠಶಾಲೆಗಳಿರಬೇಕು, ಮತ್ತು ಅವರು ಬೆಳೆಯುವ ಧಾನ್ಯಾದಿಗಳನ್ನು ಸರಾಗವಾಗಿ ಸಾಗಿಸುವುದಕ್ಕೆ ಯೋಗ್ಯವಾದ ರಸ್ತೆಗಳಿರಬೇಕು. ತಮ್ಮ ಗ್ರಾಮಗಳಲ್ಲಿರುವ ತಮ್ಮ ಕುಳಗಳಿಗೆ ಇಷ್ಟೆಲ್ಲಾ ಅನುಕೂಲಗಳನ್ನು ಮಾಡಿಕೊಡುವ ಭಾಗದಲ್ಲಿ ಚಿಂತೆಪಡತಕ್ಕ ಜಮೀನ್ದಾರರು ಎಷ್ಟು ಮಂದಿ ಸಿಕ್ಕಬಹುದು? ಇವರು ತಮ್ಮ ಗ್ರಾಮಗಳಿಗೆ ಆಗಿಂದಾಗ್ಗೆ ಹೋಗಿಬರುತ್ತಾ, ಅಲ್ಲಿನ ಸ್ಥಿತಿಗತಿಯನ್ನು ಪರಿಷ್ಕಾರವಾಗಿ ತಿಳಿಯುತ್ತಾ, ತಮ್ಮ ರೈತರ ಮೇಲೆ ಪ್ರೀತಿ ವಿಶ್ವಾಸವನ್ನಿಟ್ಟು, ಅವರ ಸುಜೀವನಕ್ಕೆ ಬಾವಿಗಳನ್ನು ತೆಗಿಸಿಕೊಟ್ಟು, ಒಳ್ಳೆಯ ಮನೆಗಳನ್ನು ಕಟ್ಟಿಸಿ, ಪಾಠಶಾಲೆಗಳನ್ನಿಡಿಸುತ್ತಾ ಬಂದ ಪಕ್ಷದಲ್ಲಿ ಆ ಗ್ರಾಮಗಳು ರೂಪವೇ ಬಲಾವಣೆಯಾಗುವುದು.

ಅನೇಕ ಗ್ರಾಮಗಳಲ್ಲಿ ಮನೆಗಳಿಗೆ ಸರಿಯಾದ ಬಾಗಿಲುಗಳಾಗಲಿ, ಬೆಳಕು ಗಾಳಿ ಬರುವುದಕ್ಕೆ ಕಿಟಿಕಿಗಳಾಗಲಿ ಇರುವುದಿಲ್ಲ. ಜನಗಳು ದನಗಳ ಜೊತೆಯಲ್ಲೇ ಒಂದೇ ಕೋಣೆಯಲ್ಲಿ ವಾಸಮಾಡುವರು. ಬಚ್ಚಲುಗಳೇ ಇಲ್ಲ, ಗ್ರಾಮದೊಳಗಿರುವ ಸಂದಿಗಳಲ್ಲೇ ಬಚ್ಚಲ ರೊಚ್ಚು ಹರಿದು ಇಂಗುತ್ತದೆ. ಮಳೆ ಬಂದರೆ ಈ ರೊಚ್ಚು ಕೊಳೆತು ದುರ್ನಾತ ಬಡಿಯುವುದು. ಗ್ರಾಮಸ್ಥರಾದರೋ ಮೈತೊಳೆಯುವುದು ಅಪರೂಪ, ಅವರು ಉಟ್ಟು ಹೊದಿಯುವ ಬಟ್ಟೆಗಳಂತೂ ನೀರು ಕಾಣುವುದೇ ಇಲ್ಲವೆಂದೂ ಹೇಳಬಹುದು. ಹೆಚ್ಚು ಹೇಳಬೇಕಾದದ್ದೇನು! ಗ್ರಾಮವಾಸಿಗಳು ತಮ್ಮ ಜಮೀನುಗಳನ್ನು ಉಳುವಂಥಾ ದನಗಳೋಪಾದಿಯಲ್ಲಿ ಜೀವಮಾನವನ್ನು ಕಳೆಯುತ್ತಲಿದ್ದಾರೆ. ಅಯ್ಯೋ ಪಾಪ! ಇವರ ಯೋಗಕ್ಷೇಮವನ್ನು ನೋಡುವ ಜಮೀನ್ದಾರರು ಯಾರೂ ಇಲ್ಲವೇ? ಒಬ್ಬ ಒಳ್ಳೇ ಜಮೀನ್ದಾರನು ಮುಂದೆಬಂದು ತನ್ನ ಗ್ರಾಮದ ರೈತರಿಗೆ ಸೌಕರ್ಯಗಳನ್ನು ಕಲ್ಪಿಸಿಕೊಟ್ಟ ಪಕ್ಷದಲ್ಲಿ ಈತನ ಒಳ್ಳೇ ಕೆಲಸದಿಂದ ತನ್ನ ಗ್ರಾಮ ಒಂದಕ್ಕೇ ಅಲ್ಲ, ನೆರೆಹೊರೆಯ ಗ್ರಾಮಗಳಿಗೂ ಕ್ಷೇಮವಾಗಬಹುದು. ಪ್ರಾರಂಭದಲ್ಲಿ ಇತನಿಗೆ ಸ್ವಲ್ಪ ಕಷ್ಟ ತೋರಬಹುದು. ಜನರು ತಮ್ಮ ಅಜ್ಞಾನದಿಂದ ಹಳೆ ಪದ್ಧತಿಗಳನ್ನು ಬದಲಾಯಿಸುವುದಕ್ಕೆ ಸಮ್ಮತಿಸದೆ ಇರುತ್ತಾರೆ; ಆದರೆ ಕ್ರಮೇಣ ಇವರೇ ಇಂಥಾ ಬದಲಾವಣೆಯ ಫಲವನ್ನು ಕಂಡು ಅನುಸರಿಸುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ನಿರ್ಮಲವಾದ ಗಾಳಿ, ಚೊಕ್ಕಟವಾದ ನೀರು, ಒಳ್ಳೆಯ ರಸ್ತೆ, ಒಳ್ಳೆಯ ವರ್ತಮಾನ ಪತ್ರಿಕೆಗಳು, ಸ್ವಾರಸ್ಯವಾದ ಪುಸ್ತಕಗಳು, ಇವುಗಳ ಪ್ರಯೋಜನವನ್ನು ತಿಳಿಯುತ್ತಾ ಬಂದ ಹಾಗೆಲ್ಲಾ ಇವರು ತಾವಾಗಿಯೇ ತಮ್ಮ ಹಳೆಯ ಪದ್ಧತಿಗಳನ್ನು ಬಿಟ್ಟುಬಿಡುತ್ತಾರೆ. ಆಗ್ಗೆ ಗ್ರಾಮಕ್ಕೆ ರೋಗದ ಉತ್ಪತ್ತಿಸ್ಥಾನವೆಂಬ ಹೆಸರು ತಪ್ಪಿಹೋಗಿ ಆರೋಗ್ಯಜನಕವಾದ ಸ್ಥಳವೆಂದೂ ಪ್ರಜೆಗಳು ನೆಮ್ಮದಿ ಸುಖಸಂತೋಷಗಳನ್ನು ಪಡೆದಿರುತ್ತಾರೆಂದೂ ಕೀರ್ತಿಯುಂಟಾಗುವುದು.

ಪ್ರತಿಫಲಾಪೇಕ್ಷೆಯಿಲ್ಲದ ಸಾವಿರಾರು ಪ್ರಜೆಗಳು ಮುಂದೆ ಬಂದು ಸರ್ಕಾರದವರಿಗೆ ಸಹಾಯಕರಾಗಿ ನಿಂತು ನಮ್ಮ ಸಂಸ್ಥಾನದಲ್ಲಿರುವ ಗ್ರಾಮಗಳ ಶ್ರೇಯೋಭಿವೃದ್ಧಿಗಾಗಿ ಸಾಹಸಪಡುವುದನ್ನು ನೋಡಬೇಕೆಂದು ತುಂಬಾ ಕುತೂಹಲ ಪಡುತ್ತೇವೆ. ಜಮೀನ್ದಾರರೂ, ಇತರ ಹಿಡುವಳಿದಾರರೂ, ದೇಶವತ್ಸಲರಾದ ಪ್ರಜೆಗಳೂ ಗ್ರಾಮಗಳ ಪುರೋಭಿವೃದ್ಧಿಗೆ ಈ ವರುಷ ಏನೇನು ಮಾಡುತ್ತಾರೆಯೋ, ಅದರ ಫಲಿತಾಂಶವೇನಾಗುವುದೋ ಮುಂದಿನ ಪ್ರಜಾಪ್ರತಿನಿಧಿಸಭೆಯಲ್ಲಿ ಕೇಳಬೇಕೆಂದು ನಿರೀಕ್ಷಿಸಿಕೊಂಡಿರುವೆವು.

ನಿನ್ನ ಗಂಟು ಇದ್ದಲ್ಲಿಯೇ ನಿನ್ನ ಮನಸ್ಸು ಇರುವದಷ್ಟೆ.

ನಮ್ಮ ಪಂಚೇಂದ್ರಿಯಗಳಲ್ಲಿ ಪ್ರತಿಯೊಂದಕ್ಕೆ ವಿಷಯವಾದ ಒಂದೊಂದು ವಸ್ತುವು ಲೋಕದಲ್ಲಿ ಉಂಟು. ನೇತ್ರೇಂದ್ರಿಯಕ್ಕೆ ಬೆಳಕು, ಘ್ರಾಣೇಂದ್ರಿಯಕ್ಕೆ ವಾಸನೆಯು, ಜಿಹ್ವೇಂದ್ರಿಯಕ್ಕೆ ರುಚಿಯು, ಶ್ರೋತ್ರೇಂದ್ರಿಯಕ್ಕೆ ಶಬ್ದವು ವಿಷಯಗಳಾಗಿರುತ್ತವೆ. ದೇವರು ಕಣ್ಣನ್ನು ನಿರ್ಮಿಸಿ ಅದಕ್ಕೆ ಸಂತೋಷವನ್ನು ಕೊಡುವ ನಾನಾ ವಿಧವಾದ ರೂಪಗಳನ್ನೂ ಬಣ್ಣಗಳನ್ನೂ ನೋಟಕ್ಕೆ ಆನಂದವನ್ನುಂಟುಮಾಡುವ ವಿಷಯವಾಗಿ ನಿರ್ಮಿಸಿದ್ದಾನೆ. ಕಿವಿಯನ್ನು ಸೃಷ್ಟಿಸಿ ಅದಕ್ಕೆ ವಿಷಯವಾದ ಮಧುರ ವಚನಗಳನ್ನೂ ಕರ್ಣಾನಂದವನ್ನೂ ಕಲ್ಪಿಸುವ ಗಾನವನ್ನುಂಟುಮಾಡಿದ್ದಾನೆ. ಹೀಗೆಯೇ ನಾಲಿಗೆಗೆ ಉಪ್ಪು, ಹುಳಿ, ಸಿಹಿ, ಕಹಿ ಮುಂತಾದ ರಸವರ್ಗಗಳನ್ನೂ ಮೂಗಿಗೆ ವಾಸನೆ ಕೊಡುವ ಹೂವು ಮುಂತಾದ ಪರಿಮಳದ್ರವ್ಯಗಳನ್ನೂ ನೇಮಿಸಿದ್ದಾನೆ. ಹೀಗಿರುವಲ್ಲಿ ಜ್ಞಾನೇಂದ್ರಿಯಕ್ಕೆ ತಕ್ಕ ವಿಷಯವ್ಯಾವುದೂ ಇಲ್ಲವೋ?

ಜ್ಞಾನೇಂದ್ರಿಯವು ಅಥವಾ ಮನಸ್ಸು ಸಕಲ ವಿಷಯಗಳನ್ನು ಪರೀಕ್ಷಿಸಿ ಯುಕ್ತಾಯುಕ್ತಗಳನ್ನು ಭೇದಿಸಿ ಗ್ರಹಿಸಬಲ್ಲದು. ಆದ್ದರಿಂದ ಜ್ಞಾನೇಂದ್ರಿಯಕ್ಕೆ ಜ್ಞಾನವೇ ತಕ್ಕ ವಿಷಯವೆಂತ ನಿಶ್ಚಯಿಸಬೇಕು. ಆದರೆ ಮನಸ್ಸು ಸಕಲ ವಿಷಯಗಳನ್ನು ಪರೀಕ್ಷಿಸಿ ಗ್ರಹಿಸಿದನಂತರ ತನಗೆ ಅತ್ಯುತ್ತಮವೆಂದು ತೋರಿಬರುವ ಯಾವದೋ ಒಂದು ವಸ್ತುವನ್ನು ನಿರ್ಧರಿಸಿ ಅದನ್ನು ತನಗೆ ಗೊತ್ತಾದ ವಿಷಯವೆಂದು ಭಾವಿಸಿ ಅದನ್ನು ಪ್ರೀತಿಮಾಡುವದಕ್ಕೂ ಅದನ್ನು ಸಂಪಾದಿಸಿ ವೃದ್ಧಿಪಡಿಸಿ ಅದರ ಸಂಬಂಧದಲ್ಲಿ ಯಾವಾಗಲೂ ಇರುವದಕ್ಕೂ ಆಸೆಪಡುತ್ತದೆ. ಮಸಲಾ ಒಬ್ಬನ ಮನಸ್ಸು ಬೆಳ್ಳಿ ಭಂಗಾರವನ್ನು ಬಹಳವಾಗಿ ಮೆಚ್ಚಿ ಅದನ್ನು ದೊರಕಿಸಿಕೊಳ್ಳುವದು; ಅದನ್ನು ಕಾಪಾಡುವದು, ಅದನ್ನು ಹೆಚ್ಚಿಸಿ, ಹೆಚ್ಚಿದಾಗ ಹಿಗ್ಗುವದು, ಕಡಮೆಯಾದಾಗ ಚಿಂತಿಸುವದು ಅವನಿಗೆ ಕೆಲಸವಾಗುತ್ತದೆ. ಅದಕ್ಕಿಂತ ಉತ್ತಮವಾದ ಕೆಲಸವು ಉಂಟೆಂದು ಅವನ ಮನಸ್ಸಿಗೆ ಎಂದೂ ಹೊಳೆಯುವದಿಲ್ಲ. ರೇಷ್ಮೆ ಕಲಾಬತ್ತಿನ ಸೀರೆ ಕುಪ್ಪಸಗಳನ್ನು ಉಟ್ಟು ತೊಟ್ಟು ಒಡವೆ ಆಭರಣಗಳನ್ನು ಧರಿಸಿ ಮಂದಿಯು ನಮ್ಮನ್ನು ಮೆಚ್ಚಿ ಹೊಗಳಲಿ ಎಂಬ ಅಭಿಪ್ರಾಯಕ್ಕಿಂತ ಉತ್ತಮವಾದ ಆಲೋಚನೆ ಅಭಿಪ್ರಾಯ ಉದ್ದೇಶಗಳು ಅನೇಕ ಸ್ತ್ರೀಯರ ಕನಸಿನಲ್ಲಿಯೂ ಬರುವದಿಲ್ಲ. ಯೇಸು ಸ್ವಾಮಿಯು ಇಂಥವರನ್ನು ನೋಡಿ ಅವರಿಗೆ ಹೇಳಿದ್ದನ್ನು ನಾವೆಲ್ಲರೂ ಮನನಮಾಡತಕ್ಕದ್ದು. ಅದೇನಂದರೆ—ಭೂಲೋಕದಲ್ಲಿ ನಿಮಗೆ ಗಂಟುಮಾಡಿ ಇಟ್ಟುಕೊಳ್ಳಬೇಡಿರಿ, ಇಲ್ಲಿ ಅದು ನುಸಿಹಿಡಿದು ಕಿಲುಬುಹತ್ತಿ ಕೆಟ್ಟುಹೋಗುವದು, ಇಲ್ಲಿ ಕಳ್ಳರು ಕನ್ನಾಕೊರೆದು ಕದ್ದಾರು, ಆದರೆ ಪರಲೋಕದಲ್ಲಿ ಲಯವಾಗದ ದ್ರವ್ಯವನ್ನು ಗಂಟುಮಾಡಿ ಇಟ್ಟುಕೊಳ್ಳಿರಿ, ಅಲ್ಲಿ ಅದು ನುಸಿಹಿಡಿದು ಕಿಲುಬುಹತ್ತಿ ಕೆಟ್ಟುಹೋಗುವದಿಲ್ಲ. ಅಲ್ಲಿ ಕಳ್ಳರು ಕನ್ನಾಕೊರೆದು ಕದಿಯುವದೂ ಇಲ್ಲ. ನಿಮ್ಮ ದ್ರವ್ಯವೆಲ್ಲಿರುವದೋ ನಿಮ್ಮ ಮನಸ್ಸೂ ಕೂಡ ಅಲ್ಲಿಯೇ ಇರುವದು ಎಂಬುವದೇ.

ಆದರೆ ಹಣಕಾಸು ಒಡವೆವಸ್ತು ಮೊದಲಾದ ದ್ರವ್ಯದ ವಿಷಯದಲ್ಲಿ ಇದು ನಿಜವೇ. ಆದರೂ ನಮಗೆ ದೇವರು ಕೊಟ್ಟಿರುವ ಮಕ್ಕಳು ನಮ್ಮ ಬುದ್ಧಿಯನ್ನು ಪ್ರಕಾಶಗೊಳಿಸುವ ವಿದ್ಯೆ ಮುಂತಾದ ವಿಷಯಗಳು ಉತ್ತಮವಲ್ಲವೇ? ಹೌದು. ಮಕ್ಕಳು ದೇವರು ನಮಗೆ ಕೊಟ್ಟಿರುವ ವರವೆಂದು ಭಾವಿಸಿ ಅವರನ್ನು ತಕ್ಕ ಲಕ್ಷಣೆಯಲ್ಲಿ ತಿದ್ದಿ ಕಾಪಾಡುವದು ನ್ಯಾಯವಾದ ವಿಷಯವೇ ಆಗಿದೆ. ಆದರೆ ಮಕ್ಕಳ ಸೌಂದರ್ಯಕ್ಕೆ ಬೆರಗಾಗಿ ಅವರನ್ನು ತಕ್ಕ ವಿದ್ಯೆ, ಬುದ್ಧಿ, ಗುಣ, ನಡತೆಗಳಲ್ಲಿ ಬೆಳಸದೆ ಅವರು ಕೇಳಿದ್ದನ್ನು ಕೊಟ್ಟು, ಹೇಳಿದ್ದನ್ನು ಮಾಡಿ ಅವರ ದೇಹದ ಅನುಕೂಲ್ಯಗಳನ್ನು ಮಾತ್ರ ಲಕ್ಷಿಸುವದು ಪಶುಸ್ವಭಾವ. ಅನೇಕ ಸ್ತ್ರೀಯರು ಪುರುಷರು ಹೀಗೆಯೇ ಮಾಡುತ್ತಾರೆ. ವಿದ್ಯೆಯು ಇವರಿಗೆ ಸತ್ಸಾಧನವೇ ಆಗಿರುವದು. ಆದರೆ ಅದನ್ನು ಅಧಿಕಾರ ಐಶ್ವರ್ಯ ಕೀರ್ತಿ ಮುಂತಾದ ಲಯವಾಗುವ ವಸ್ತುಗಳನ್ನು ಆರ್ಜಿಸುವದಕ್ಕೋಸ್ಕರವಾಗಿ ಅಭ್ಯಾಸಮಾಡುವದು ಸಾರ್ಥಕವೆನಿಸಲಾರದು.

ದ್ರವ್ಯ, ವಿದ್ಯೆ, ಮಕ್ಕಳುಮರಿ, ಕೀರ್ತಿ, ಅಧಿಕಾರ ಮೊದಲಾದವ್ಯಾವೂ ಜ್ಞಾನೇಂದ್ರಿಯವೆಂಬ ಮನಸ್ಸಿಗೆ ತಕ್ಕ ವಿಷಯವಲ್ಲದಿದ್ದರೆ ಇನ್ಯಾವದು ಅದಕ್ಕೆ ತಕ್ಕ ವಿಷಯವಾಗಿರುವದು? ಕ್ರಿಸ್ತನು ಪರಲೋಕದಲ್ಲಿ ನಿಮಗೆ ಲಯವಾಗದ ದ್ರವ್ಯವನ್ನು ಗಂಟುಮಾಡಿಟ್ಟುಕೊಳ್ಳಿರಿ. ಅಲ್ಲಿ ಅದಕ್ಕೆ ನುಸಿಹಿಡಿದು ಕಿಲುಬುಹತ್ತಿ ಕೆಟ್ಟುಹೋಗುವದಿಲ್ಲವೆಂದು ಹೇಳಿದನಲ್ಲ. ಆ ದ್ರವ್ಯವ್ಯಾವದು? ಆ ದ್ರವ್ಯದ ಗಂಟು ಇದ್ದಲ್ಲಿಯೇ ನಮ್ಮ ಮನಸ್ಸೂ ಇರುವದನ್ನು ಪ್ರೇರಣೆಯು ಆದರಿಂದ ನಮ್ಮ ಮನಸ್ಸಿನಲ್ಲಿ ಹುಟ್ಟಬೇಕಾದರೆ ಆ ದ್ರವ್ಯವಿನ್ನಾವುದು? ಇದಕ್ಕೆ ಉತ್ತರವೇನಂದರೆ—ನಮ್ಮ ಮನಸ್ಸಿನಲ್ಲಿ ಸದಾ ಅಡಗಿಸಿಕೊಂಡು ಪ್ರೀತಿಮಾಡಿ ಸೇವಿಸುವದಕ್ಕೆ ತಕ್ಕ ದ್ರವ್ಯವು ದೇವರೇ ವಿನಾ ಮತ್ತಿನ್ಯಾವದು? ವಸ್ತುವಾಗಲಿ ಪುರುಷನಾಗಲಿ ತಕ್ಕ ದ್ರವ್ಯವೇ ಅಲ್ಲ. ಒಂದೊಂದು ವಸ್ತುವಿಗೆ ತಕ್ಕ ಸ್ಥಳವಿರುವುದು. ಆಯಾ ಸ್ಥಳಕ್ಕೆ ಒಪ್ಪತಕ್ಕ ವಸ್ತುವಿರುವದು. ಅರಮನೆಯಲ್ಲಿ ಕಳ್ಳನೂ, ಗುರುಮನೆಯಲ್ಲಿ ಕುರುಬನೂ ಇರುವದು ಚಂದವೋ? ಕಿರೀಟಕ್ಕೆ ತಕ್ಕ ಸ್ಥಾನವು ಶಿರಸ್ಸು. ಪಾದಕ್ಕೆ ತಕ್ಕ ಅಲಂಕಾರವು ಜೋಡು ಅಲ್ಲವೇ? ಕಿರೀಟವನ್ನು ಪಾದಕ್ಕೆ ತಗಲಹಾಕುವದು ಜೋಡನ್ನು ತಲೆಗೆ ಮುಡಿಸುವದು ವಿಪರೀತ ಬುದ್ಧಿಯಲ್ಲವೇ?

ಹೃದಯವು ದಿವ್ಯತರನಾದ ಅರಮನೆ. ಅದರಲ್ಲಿ ಹುಟ್ಟಿ ಉಕ್ಕಿ ಬರುವ ಪ್ರೀತಿಗೆ ದೇವರೇ ತಕ್ಕವನು. ಇನ್ಯಾವ ವಸ್ತುವಿನ ಮೇಲಾದರೂ ಮತ್ತಾವ ಪುರುಷ ಸ್ತ್ರೀಯರ ಮೇಲಯಾದರೂ ನಮ್ಮ ಮನಸ್ಸನ್ನು ಇಟ್ಟರೆ ಅರಮನೆಯನ್ನು ಕುರೀಹಿಂಡಿಗೂ ಪವಿತ್ರವಾದ ದೇವಾಲಯವನ್ನು ದೆವ್ವದನಿವಾಸಕ್ಕೂ ಕೊಟ್ಟಂತಾಗುವದು. ಕ್ರಿಸ್ತನು ತಾನು ವಾಸಮಾಡುತ್ತಿದ್ದ ಹಳ್ಳಿಯಿಂದ ರಾಜಧಾನಿಯಲ್ಲಿದ್ದ ದೇವಾಲಯಕ್ಕೆ ದೇವರ ಸೇವೆಮಾಡುವದಕ್ಕೆ ಬಂದು ನೋಡುವಲ್ಲಿ ಅಲ್ಲಿ ಸಂತೆ ನೆರೆದಿರುವದನ್ನೂ ಚಿನಿವಾರರು ರೊಕ್ಕಗಳನ್ನು ಝಣ ಝಣವೆಂದು ಎಣಿಸುತ್ತಿರುವದನ್ನು ಸಂತೆಗೆ ನೆರದು ಬಂದ ಕುರಿ ಕೋಳಿ ಕೋಣಗಳ ಸಂದಣಿಯನ್ನೂ ದೇವತಾಸೇವೆಗೆ ಬಂದಿದ್ದ ಭಗವದ್ಭಕ್ತರು ನ್ಯಾಕಾ

ವಿದಲ್ಲಿಯೂ ಕೂಡ ಧಾವಿಲ್ಲದೆ ಷೂರಗೆ ನಿಂತಿರುವದನ್ನು ನೋಡಿ ವಿಸ್ಮಿತನಾಗಿ ತನಗ ಯಾವ ಅಧಿಕಾರವೂ ಇಲ್ಲದ ಹಳ್ಳಿಯವನಾದರೂ ಅವರನ್ನೆಲ್ಲಾ ಗದರಿಸಿ ಓಡಿಸಿ ದೇವರ ಸೇವಕರಿಗೆ ಸರಾಗಮಾಡಿದನು ಮತ್ತು ಅವರ ಮೇಲೆ ದೋಷವನ್ನಾರೋಪಿಸಿ— ಶ್ರುತಿಯಾದ ದೇವರ ಮನೆಯನ್ನು ಕಳ್ಳರ ಗವಿಮಾಡಿದ್ದೀರಿಯೆಂದು ಗದರಿದನು ವಾಚಕರೇ ದೇವರ ಆಲಯಗಳಲ್ಲಿ ಉತ್ತಮೋತ್ತಮವಾದದ್ದು ನಿಮ್ಮ ಮನಸ್ಸು ಅದು ಯಾರ ನಿವಾಸವಾಗಿದೆ?

ಒಳದೇಶದ ವೃತ್ತಾಂತಗಳು.

ಮದರಾಸ್ ಪಟ್ಟಣದಲ್ಲಿ ಈಗ ಬಹಳ ವಿಶೇಷವಾಗಿ ಮಳೆಯಾಗುತ್ತಿರುವುದರಿಂದ ರಾಜಧಾನಿಯಲ್ಲೂ ಈಗ ಮೋಡ ಕವಿಯುತ್ತದೆ ಇಲ್ಲಿ ಸ್ವಲ್ಪ ಮಳೆ ಸುರಿಯಬಹುದೆಂಬ ನಿರೀಕ್ಷೆಯುಂಟು

ಸೀಮೆಗೆ ಹೋಗಿದ್ದ ಮ॥ ಜ ರುದ್ರಪ್ಪನವರು ಅಲ್ಲಿ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಕಳೆದ ವಾರ ಸುರಕ್ಷಿತರಾಗಿ ಬೆಂಗಳೂರನ್ನು ತಲುಪಿದರೆಂದು ತಿಳಿಸಲು ಸಂತೋಷಪಡುತ್ತೇವೆ

ಮ॥ ಆರ್ ಎಚ್ ಕ್ಯಾಂಡೆಲ್‌ರವರು ಪತ್ನಿಪುತ್ರಿಯರ ಸಮೇತ ಸೀಮೆಯಿಂದ ಕಳೆದ ಶನಿವಾರ ರಾಜಧಾನಿಗೆ ಬಂದು ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಕೆಲಸದ ಛಾರ್ಜನ್ನು ವಹಿಸಿಕೊಂಡಿದಾರೆ

ಮೈಸೂರಾಯರವರ ಕೆಡ್ಡಾ ಕ್ಯಾಂಪಿನವರ ದೃಷ್ಟಿಯಲ್ಲಿದ್ದ ಎರಡುನೂರು ಮಂದಿಗಳ ಆನೆಗಳು ತಪ್ಪಿಸಿಕೊಂಡು ಹೋದವೆಂದೂ, ಈಚೆಗೆ ಒಂದು ಮಂದೆಯು ದೊರಕಿ ಅದರಲ್ಲಿ ಸುಮಾರು 31 ಆನೆಗಳಿರುವವೆಂದೂ ತಿಳಿಯುತ್ತೇವೆ

ಕೊಡಗು ಚೀಫ್ ಕಮಿಷನರ್‌ರವರ ಆಫೀಸ್ ಮ್ಯಾನೇಜರಾಗಿದ್ದ ಮ॥ ಟಿ ಗೋಪಾಲಕೃಷ್ಣಯ್ಯಂಗಾರ್ರನ್ನು ಹೊಸಪೇಟೆಯ ಮುನ್ಸಿಫರಾಗಿಯೂ, ಮ॥ ಮೆಕೆನ್ಸಿರವರನ್ನು ಆಫೀಸ್ ಮ್ಯಾನೇಜರಾಗಿಯೂ ನೇಮಕಮಾಡಿರುತ್ತಾರೆ

ಮೈಸೂರು ವ್ಯವಸಾಯದ ಇಲಾಖಾ ಅ॥ ಕಮಿಷನರಾದ ಮ॥ ಎ ಕೆ ಯಜ್ಞನಾರಾಯಣನವರು ರಾತ್ರಿ ದೀಪವಿಲ್ಲದೆ ಬೈಸಿಕಲ್ ಸವಾರಿ ಮಾಡಿದರೆಂದು ಬೆಂಗಳೂರು ಸಿಟಿ ಮಾಜಿಸ್ಟ್ರೇಟರು ಅವರಿಗೆ 2 ರೂಪಾಯಿ ಜುಲ್ಮಾನೆ ಹಾಕಿದರು

ವೈಸ್‌ರಾಯಿ ಪ್ರಭುಗಳು ಮೈಸೂರಿಗೆ ದಯಮಾಡುವುದರ ಸಂತೋಷಕ್ಕಾಗಿ ನಮ್ಮ ಸರ್ಕಾರದವರು ಮೈಸೂರು ಪಟ್ಟಣದಲ್ಲಿರುವ ಕೋರ್ಟು ಕಚೇರಿಗಳಿಗೂ ಸ್ಕೂಲುಗಳಿಗೂ ಮುಂದಿನ 6, 7, 8 ನೇ ತಾರೀಖುಗಳಲ್ಲಿ ರಜಾ ದಯಪಾಲಿಸಿರುತ್ತಾರೆ

ದಕ್ಷಿಣದೇಶದಲ್ಲಿ ಪಂಚಮರಿಗೋಸ್ಕರ ಭಾವಿಗಳನ್ನು ತೆಗಿಸುವ ಪರಹಿತ ಕಾರ್ಯವನ್ನು ವಹಿಸಿಕೊಂಡಿರುವ ಮ ಪಿ ಬಿ ಪಾಂಡಿಯನ್‌ರವರು ಕೋಲಾರ ಚಿನ್ನದ ಗಣಿಗಳಿಗೆ ಬಂದು ಉಪನ್ಯಾಸಗಳನ್ನು ಮಾಡಿ, ಅಲ್ಲಿನ ಪ್ರಭುಗಳು ಆ ಫಂಡಿಗೆ ಕೊಟ್ಟ 3,000 ರೂಪಾಯನ್ನು ತೆಗೆದುಕೊಂಡು ಹೋದರು

ಕಳೆದ ಬಾನುವಾರ ರಾತ್ರಿ ರಾಜಧಾನಿಯ ಡಿ ಸುಬ್ಬಯ್ಯನವರ ಬೀದಿಯಲ್ಲಿರುವ ವಿದ್ಯಾವಿಲಾಸ ಪಾಠಶಾಲೆಯಲ್ಲಿ ಬೇಲೂರು ಕೇಶವದಾಸರೆಂಬ ಪಂಡಿತರು ಬಹು ಸ್ವಾರಸ್ಯವೂ ಭಕ್ತಿರಸವೂ ಉಳ್ಳ ಸಂಕೀರ್ತನೆಯನ್ನು ಮಾಡಿದರೆಂದೂ, ಅನೇಕರು ಬಂದಿದ್ದು ಕೇಳಿ ಸಂತೋಷಪಟ್ಟು ದಾಸರನ್ನು ವಂದಿಸಿದರೆಂದೂ ತಿಳಿದುಬಂದಿದೆ

ಬೆಂಗಳೂರು ಸಿಟಿಯಲ್ಲಿ ಆ ಗಡಿಗಳಿಗೆ ನೀರಿನ ತೆರಿಗೆಯನ್ನು ಬೇಕಾದಷ್ಟು ರೂಪಾಯಿಗಳಷ್ಟು ಹಾಕಬೇಕೆಂಬ ವಿಷಯದಲ್ಲಿ ಮ್ಯುನಿಸಿಪಲ್ ಪ್ರೆಸಿಡೆಂಟರವರು ವರ್ತಕರ ಪ್ರತಿನಿಧಿಗಳನ್ನು ಕರೆಸಿಕೊಂಡು ಅವರ ಅಭಿಪ್ರಾಯವನ್ನು ಕೇಳಿ, ಗವರ್ನ್‌ಮೆಂಟಿಗೆ ತಿಳಿಸುವುದಾಗಿ ಹೇಳಿದರು ವರ್ತಕರು ಈ ತೆರಿಗೆ ಹಾಕಕೂಡದೆಂದು ಅಭಿಪ್ರಾಯಪಟ್ಟಿದಾರೆ

ಮೈಸೂರು ಮಡಿಕೇರಿ ಮೆಯಿಲ್ ಟಾಂಗಾ ಕಂಟ್ರಾಕ್ಟನ್ನು ಮಾಡಿಕೊಂಡಿದ್ದ ಮ॥ ರ ಗಯಗೌಡರವರು ಸರಿಯಾಗಿ ಕೆಲಸ ನಡಿಸಲಿಲ್ಲವೆಂದು ತಿಳಿದು ಪೋಸ್ಟ್ ಮಾಸ್ಟರ್ ಜನರಲ್‌ರವರು ಆ ಕಂಟ್ರಾಕ್ಟನ್ನು ಮತ್ತೆ ಮೈಸೂರಿನಲ್ಲಿರುವ ಮ॥ ಪಿ ಪಾಲಣ್ಣಯ್ಯನವರಿಗೆ ವಹಿಸಿದರು ಇವರು ಹೊಸ ಕುದುರೆಗಳನ್ನು ಕೊಂಡುಕೊಂಡು ಉತ್ತಮ ಪದ್ಧತಿಯಲ್ಲಿ ಹೋಗಿದಾರೆ

ಬೆಂಗಳೂರು ಸಿಟಿಗೆ ಸೇರಿದ ಲಕ್ಕಸಂದ್ರ ಹಳ್ಳಿಯಲ್ಲೂ, ನಾಗಬ ದಿನ್ನೆ ಯಲ್ಲೂ 15 ಪ್ಲೇಗ್ ಜಾಡ್ಯವು ಸಂಭವಿಸಿದ್ದರಿಂದ ಮೃತಪಟ್ಟವರು ಒಂಬತ್ತು ಜನರ ರೋಗಿಗಳನ್ನು ಹೆಲ್ತ್ ಆಫೀಸರವರು ಪ್ಲೇಗ್ ಆಸ್ಪತ್ರೆಗೆ ಕಳುಹಿಸಿದ್ದಲ್ಲದೆ ಆ ಬಳಿಯ ಮನೆಗಳನ್ನು ಡಿಸಿನ್‌ಫೆಕ್ಟ್ ಮಾಡಿಸಿದರು 10 12 ಜನರಿರುವವರು ಮನೆಗಳನ್ನು ಬಿಟ್ಟಿರುತ್ತಾರೆ ಪ ದಿನಗಳಲ್ಲೂ ನಾಲ್ಕಾರು ಜಾಗಗಳಲ್ಲಿ ಪ್ಲೇಗ್ ಉಪದ್ರವು ಕಾಣಿಸಿದೆ

ಕೋಲಾರ್ ಚಿನ್ನದ ಗಣಿಗಳ ಪೋಲೀಸ್ ಸೂಪರಿಂಟೆಂಡೆಂಟಾದ ಮಿ॥ ಎಚ್ ಎ ಪ್ರಿಟನ್‌ರವರನ್ನು ಸರ್ಕಾರದವರು ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ಲಾಗಿ ನೇಮಕಮಾಡಿ, ವೈಸ್‌ರಾಯರವರು ಮೈಸೂರು ಸಂಸ್ಥಾನದಿಂದ ವಾಪಸು ದಯಮಾಡುವ ತನಕ ಪೋಲೀಸ್ ಉಸ್ತುವಾರಿಯನ್ನು ನೋಡಿಕೊಳ್ಳತಕ್ಕದ್ದೆಂದು ಹುಕುಂ ಕೊಟ್ಟಿದಾರೆ ಇದಲ್ಲದೆ ಚಿನ್ನದಗಣಿ ಪೋಲೀಸಿನವರ ಪೈಕಿ ಸಮರ್ಥರಾದ ಕೆಲವು ಇನ್ಸ್‌ಪೆಕ್ಟರುಗಳನ್ನೂ, ಕೆಲವು ಹೆಡ್ ಕಾನ್‌ಸ್ಟೇಬಲ್‌ರನ್ನೂ ಸೈನ್ಯಕ್ಕೆ ನೇಮಕಮಾಡಿದಾರೆ

ಬೆಂಗಳೂರು ದಂಡಿನ ಕ್ರೈಮ್ ಪೋಲೀಸಿನವರು ಹಿಂದಿನ ಮಂಗಳವಾರ ರಾಮಚಂದ್ರ ಬ್ರಹ್ಮಚಾರಿ ಎಂಬ ಮನುಷ್ಯನನ್ನು ಅನುಮಾನದ ಮೇಲೆ ಆ ಸ್ಟೇಷನ್ನಲ್ಲಿ ವಸ್ತಗಿರಿ ಮಾಡಿದರು ಆತನ ಬಳಿ ಸಾವಿರ ರೂಪಾಯಿನ ಒಡವೆಗಳೂ, ಜರತಾರಿ ಬಟ್ಟೆಗಳೂ ಅಲ್ಲದೆ ಒಂದು ಬಂದೂಕು ಒಂದು ಕತ್ತಿ ಸಹ ಸಿಕ್ಕಿದುತ್ತವೆ ಆತನು ಪದ್ಮನಾಭಸ್ವಾಮಿಯಿಂದ ಜೋಲಾರಪೇಟೆಗೆ ಹೋಗುವವನಾಗಿದ್ದನೆಂದು, ಕೇಳಿದಾಗ ಸರಿಯಾದ ಜವಾಬು ಕೊಡದೆಯಿಲ್ಲವಾದದ್ದರಿಂದ ಆತನನ್ನು ಹಿಡಿದು, ವಿಸರ್ಜಿಸಲ್ಲದೆ ಮರಣಕರವಾದ ಆಯುಧಗಳನ್ನು ಇಟ್ಟುಕೊಂಡಿದಾನೆಂದು ಮೊಕದ್ದಮೆ ಮಾಡಿರುತ್ತಾರೆ

ಕಳೆದ ಸೋಮವಾರ ಬೆಳಗ್ಗೆ ರಾಜಧಾನಿಯಲ್ಲಿ ವೈಸ್‌ರಾಯರವರು ರೈಲ್ವೆ ಸ್ಟೇಷನ್ನಿಂದ ಗವರ್ನ್‌ಮೆಂಟ್ ಹೌಸಿಗೆ ಮೆರವಣಿಗೆಯಾಗಿ ದಯಮಾಡುವ ರಸ್ತೆಗಳಲ್ಲಿ ಸೈನಿಕರನ್ನು ನಿಲ್ಲಿಸಿ ಅವರಿಗೆಲ್ಲಾ ಮೆರವಣಿಗೆ ನಡೆಯುವ ಕ್ರಮವನ್ನು ಕಲಿಸಿದರು ಬೆಂಗಳೂರಿನಲ್ಲೂ ಕಳೆದ ವಾರ ಈ ರೀತಿ ಮಾಡಿ ಕ್ರಮಪಡಿಸಿರುತ್ತಾರೆ ಸ್ಟೇಷನ್ನಲ್ಲೂ ಪಟ್ಟಣದ ರಾಜಬೀದಿಗಳಲ್ಲೂ ವಿಶೇಷ ನೇತ್ರಾನಂದಕರವಾದ ಏರ್ಪಾಡುಗಳು ಬಹು ಆತುರದಿಂದ ಜರುಗುತ್ತಿರುವವು ವೈಸ್‌ರಾಯರವರು ದಯಮಾಡಿದಾಗ್ಗೆ ಪೋಲೀಸ್ ಉಸ್ತುವಾರಿಯನ್ನು ಅತ್ಯಂತ ಕಟ್ಟುನಿಟ್ಟಾಗಿ ಮಾಡಿಡುವಂತೆ ತಿಳಿದು ಬರುತ್ತದೆ. ಇಲ್ಲಿರುವಾಗ್ಗೆ ಅವರ ಸಂಚಾರವೆಲ್ಲಾ ಮೋಟರುಗಳಲ್ಲೇ ನಡೆಯುವಂತೆ ಏರ್ಪಾಡಾಗಿದೆ

ರಾಜಧಾನಿಯಲ್ಲಿರುವ ಅಡ್ವೊಕೇಟ್ ಮ॥ ಎಂ ಶ್ರೀನಿವಾಸಯ್ಯಂಗಾರ್ರು ಒಂದು ಕೊಲೆ ಮೊಕದ್ದಮೆಯನ್ನು ನಡಿಸುವುದಕ್ಕಾಗಿ ವಕಾಲತ್ತು ವಹಿಸಿ, ಮೋಟರನ್ನು ಬಾಡಿಗೆ ಮಾಡಿಕೊಂಡು ಕಳೆದ ಭಾನುವಾರ 3 ಮಕ್ಕಳ ಸಮೇತ ರಾಜಧಾನಿಯಿಂದ ಸಕಲೇಶಪುರವನ್ನು ಕುರಿತು ಬಹು ವೇಗವಾಗಿ ಹೋಗುತ್ತಿದ್ದಾಗ ಅಚಾತುರ್ಯದಿಂದ ದಾರಿಯಲ್ಲಿ ಮೋಟರು ಹಳ್ಳಕ್ಕೆ ಮಗುಚಿಕೊಂಡಿತು ಅವರ ಸಣ್ಣ ಮಗಳಿಗೆ ಪೂರಾ ಏಟುಬಿದ್ದು ತತ್‌ಕ್ಷಣ ಸತ್ತುಹೋದಳು ಮಗನಿಗೆ ಕತ್ತಿನ ಎಲುಬು ಮುರಿದು ಗಾಯವಾಯಿತು ಮಗುವಿಗೂ ಅವರಿಗೂ ಏಟು ತಗಲಿ ಸ್ವಲ್ಪ ಜಖಂ ಆಗಿದೆ ಇಂಥಾ ಅಚಾತುರ್ಯದ ದೆಸೆಯಿಂದ ಅವರಿಗೆ ಸಂಭವಿಸಿದ ದುಃಖವನ್ನೂ ಕಷ್ಟವನ್ನೂ ಕೇಳಿ ವಿಷಾದಿಸುತ್ತೇವೆ

ಒಬ್ಬ ಬಾತ್ಮಿದಾರರಿಂದ—ಕಳೆದ ತಾ 24 ನೇ ಶುಕ್ರವಾರ ಮಧ್ಯಾಹ್ನ 4 ಘಂಟೆಗೆ ಬೆಂಗಳೂರು ಶ್ರೀನಿವಾಸ ಮಂದಿರದ ಸ್ತ್ರೀ ಶಾಖಾ ಸಮಾಜದಲ್ಲಿ ಸ್ತ್ರೀ ಶಾಖೆಯ ಪ್ರೆಸಿಡೆಂಟರು, ಮೆಂಬರುಗಳು, ಇತರ ದೊಡ್ಡ ಮನುಷ್ಯರುಗಳು, ಕೆಲ ಯೂರೋಪಿಯನ್ ಲೇಡಿಗಳು ಸುಮಾರು 300 ಜನಗಳ ವರಿವಿಗೂ ಸೇರಿದ್ದರು ಆಗ ಚಿ॥ ಬಾಲಸರಸ್ವತಿ ಎಂಬ 5 ವರುಷದ ಹುಡುಗಿಯು 16 ಅಧ್ಯಾಯವುಳ್ಳ ಗೀತೆ ಮತ್ತು ಅನೇಕ ಸ್ತೋತ್ರಪಾಠಗಳನ್ನು ಬಾಯಿಪಾಠವಾಗಿ ಸಂಸ್ಕೃತ, ತಮಿಳು, ತೆನುಗು ಭಾಷೆಗಳಲ್ಲಿ ಬಹಳ ರಮ್ಯವಾಗಿ ಯಾವ ಶ್ಲೋಕವನ್ನು ಕೇಳಿದಾಗ್ಯೂ ತಡೆಯಿಲ್ಲದಂತೆ ಹೇಳಿದ್ದಕ್ಕೆ ಆ ಹುಡುಗಿಯು ಹೊಂದಿರತಕ್ಕ ಅಸಾಧಾರಣ ಯೋಗ್ಯತೆಗೆ ಪ್ರೆಸಿಡೆಂಟರೇ ಮೊದಲಾದ ಸಭಿಕರು ಆತ್ಯಾಶ್ಚರ್ಯ ಪಟ್ಟರು ಅದಲ್ಲದೆ ಈ ಹುಡುಗಿಯು ಅನೇಕ ದೊಡ್ಡದೊಡ್ಡ ಸಭೆಗಳಲ್ಲಿ ಮೆಡಲುಗಳನ್ನು ಹೊಂದಿರುವುದನ್ನು ಕೇಳಿ ಬಹಳ ಆನಂದ ಪಟ್ಟರು ಪ್ರೆಸಿಡೆಂಟರು ಆ ಬಾಲಕಿಯನ್ನು ಆಶೀರ್ವದಿಸಿ ಉಚಿತದ್ರವ್ಯದಿಂದ ಬಹುಮಾನಿಸಿದರು ನಮ್ಮ ದೇಶದಲ್ಲಿ ಇಷ್ಟು ಚಿಕ್ಕವಯಸ್ಸಿನಲ್ಲಿ ಇಂಥಾ ಅಸಾಧಾರಣವಾದ ಸಾಮರ್ಥ್ಯವನ್ನು ಹೊಂದಿರತಕ್ಕದ್ದನ್ನು ಕೇಳಿ ಎಲ್ಲರೂ ಬಹು ಸಂತೋಷಪಟ್ಟು ಸಭೆಯನ್ನು ಮುಕ್ತಾಯಮಾಡಿದರು —ಕ್ರಮಪ್ರಕಾರ ತಾ 25 ನೇ ಶನಿವಾರ ಮಧ್ಯಾಹ್ನ ಶ್ರೀ, ಕೆ ಯಸ್ ಪಾರ್ವತಮ್ಮನವರು ದೃಢಸಂಕಲ್ಪ ಎಂಬ ವಿಷಯದಲ್ಲೂ, ಈ ಸಮಾಜದ ಸೆಕ್ರೆಟರಿ ಲೇಡಿ ಸ್ತ್ರೀಯರ ನಡವಳಿಕೆ ವಿಷಯದಲ್ಲೂ ಉಪನ್ಯಾಸಗಳನ್ನು ಬಹಳ ರಮ್ಯವಾಗಿ ಹೇಳಿದರು

ಎರಡು ಸಂತೋಷಕೂಟಗಳು

ಮೈಸೂರಿನಲ್ಲಿ —ಈ ವರುಷ ನವರಾತ್ರಿ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳು ಮೈಸೂರು ಮರಿಮಲ್ಲಪ್ಪನವರ ಹೈಸ್ಕೂಲ್ ಹೆಡ್ ಮಾಸ್ಟರಾದ ಮ॥ ಎಂ ವೆಂಕಟಕೃಷ್ಣಯ್ಯನವರನ್ನು ನ್ಯಾಯವಿಚಾರಕ ಸಭೆಯ ಮೆಂಬರಾಗಿ ಚುನಾವಣೆ ಮಾಡಿದರಷ್ಟೆ ಆ ಹೈಸ್ಕೂಲಿನ ಉಪಾಧ್ಯಾಯರೂ ವಿದ್ಯಾರ್ಥಿಗಳೂ ವಿಶೇಷವಾಗಿ ತಮ್ಮ ಹೆಡ್ ಮಾಸ್ಟರಿಗೆ ದೊರಕಿದ ಗೌರವಯುಕ್ತವಾದ ಪದವಿಯನ್ನು ಕೇಳಿ ತಮ್ಮ ಸಂತೋಷವನ್ನು ಪ್ರಕಾಶಪಡಿಸುವುದಕ್ಕಾಗಿ ಅದೇ ಹೈಸ್ಕೂಲಿನಲ್ಲಿ ಕಳೆದ ಶನಿವಾರ ಸಾಯಂಕಾಲ ಅವರನ್ನು ಬರಮಾಡಿಕೊಂಡು ಅವರಿಗೆ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು ರಾಜಧಾನಿಯ ಬಹುಮಂದಿ ದೊಡ್ಡ ಮನುಷ್ಯರು ಈ ಸಂತೋಷಕೂಟದಲ್ಲಿ ಹಾಜರಾಗಿದ್ದು ಆನಂದಪಟ್ಟರು ರಸಿಕೋಪನ್ಯಾಸಗಳೂ, ಹಾಡುಗಾರಿಕೆಯೂ, ಹಾರ್ಮೋನಿಯಂ ಸಂಗೀತವೂ ಮನೋಹರವಾಗಿಯೂ ಆಹ್ಲಾದಕರವಾಗಿಯೂ ನಡೆದ ಬಳಿಕ ಮ ಎಂ ಪುಟ್ಟಸಂಜಪ್ಪನವರು ಮ॥ ಎಂ ವೆಂಕಟಕೃಷ್ಣಯ್ಯನವರಿಗೆ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು ಅಡ್ವೊಕೇಟ್ ಮ ಎ ರಾಮಣ್ಣನವರು ಮ॥ ವೆಂಕಟಕೃಷ್ಣಯ್ಯನವರ ಧಾರಾಶಕ್ತಿ, ಪ್ರಜಾವಾತ್ಸಲ್ಯ, ಪರೋಪಕಾರ ಮೊದಲಾದ ಸ್ವಭಾವವನ್ನು ಕುರಿತು ದೀರ್ಘವಾಗಿ ಕೊಂಡಾಡಿದರು ಮ ಎ ವೆಂಕಟಕೃಷ್ಣಯ್ಯನವರು ನ್ಯಾಯ ವಿಧಾಯಕ ಸಭೆಗೆ ತಮ್ಮನ್ನು ಚುನಾಯಿಸಿದ ಮೆಂಬರುಗಳಿಗೂ, ಚುನಾವಣೆಯನ್ನು ಸ್ಯಾಂಕ್ಷನ್ ಮಾಡಿದ ಗವರ್ನ್‌ಮೆಂಟಿನವರಿಗೂ, ಆ ದಿನ ಸಂತೋಷಕೂಟವನ್ನು ನಡಿಸಿದ ಮತ್ತೂ ಅಲ್ಲಿ ಹಾಜರಾಗಿದ್ದ ದೊಡ್ಡಮನುಷ್ಯರಿಗೂ ಕೃತಜ್ಞತಾಪೂರ್ವಕವಾಗಿ ವಂದನೆಗಳನ್ನು ಸಲ್ಲಿಸಿ ಕೂಟವನ್ನು ಮುಕ್ತಾಯ ಮಾಡಿದರು

ಶ್ರೀರಂಗಪಟ್ಟಣ —ಶ್ರೀರಂಗಪಟ್ಟಣದ ಪ್ಲೀಡರ್ ಮ ಎ ನರಸಿಂಗರಾಯರನ್ನು ಪ್ರಜಾಪ್ರತಿನಿಧಿಗಳು ಎರಡನೇ ಸಲ ನ್ಯಾಯ ವಿಧಾಯಕ ಸಭೆಗೆ ಮೆಂಬರಾಗಿ ಚುನಾಯಿಸಿದ್ದಕ್ಕಾಗಿ ಶ್ರೀರಂಗಪಟ್ಟಣದ ಪುರನಿವಾಸಿಗಳಾದ ಮ ಕೆ ವಿ ನಂಜುಂಡ ಶೆಟ್ಟರೇ ಮೊದಲಾದ ಮುಖ್ಯಸ್ಥರು ಕಳೆದ ಭಾನುವಾರ ಮಧ್ಯಾಹ್ನ ಅಲ್ಲಿನ ಶ್ರೀ ಚಾಮರಾಜೇಂದ್ರ ಛತ್ರದಲ್ಲಿ ಒಂದು ಸಂತೋಷ ಕೂಟವನ್ನು ನಡಿಸಿದರು ಶ್ರೀರಂಗಪಟ್ಟಣ, ಗಂಜಾಮ, ಮೈಸೂರು, ಫ್ರೆಂಚ್‌ರಾಕ್ಸ್ ಮುಂತಾದ ಕಡೆಗಳಿಂದ ಅಧಿಕಾರಿಗಳೂ ದೊಡ್ಡಮನುಷ್ಯರೂ ಈ ಸಂತೋಷಕೂಟಕ್ಕೆ ಕರೆಸಲ್ಪಟ್ಟು ಹಾಜರಾಗಿದರು ಮ ಶ್ರೀರಾಮಣ್ಣನವರ ಮನೋಹರವಾದ ಹಾಡುಗಾರಿಕೆಯಾದ ಬಳಿಕ ಅತಿಥಿಗಳೆಲ್ಲಾ ವಿನೋದ ಫಲಾಹಾರವನ್ನು ಮಾಡಿ ಸೇರಿದರು ಸಭಿಕರ ಅಪೇಕ್ಷೆಯಂತೆ ಅಡ್ವೊಕೇಟ್ ಮ ಎಂ ಸಿ ರಂಗಯ್ಯಂಗಾರ್ರವರು ಮ॥ ನರಸಿಂಗರಾಯರಿಗೆ ಎರಡನೆಯಾವರ್ತಿ ನ್ಯಾಯ ವಿಧಾಯಕ ಸಭಾ ಮೆಂಬರ ಪದವಿ ದೊರಕಿದ್ದಕ್ಕಾಗಿ ಶ್ರೀರಂಗಪಟ್ಟಣಕ್ಕೆ ವಿಶೇಷವಾದ ಸನ್ಮಾನವುಂಟಾಯಿತೆಂದೂ, ಅವರು ನ್ಯಾಯ ವಿಧಾಯಕ ಸಭೆಯಲ್ಲಿ ಬಹು ತೃಪ್ತಿಕರರಾಗಿಯೂ, ವಿಶೇಷ ಪ್ರಮಾಣವುಳ್ಳ ಸೂಚನೆಗಳನ್ನು ಕೊಟ್ಟು ಚರ್ಚೆ ನಡಿಸಿರುತ್ತಾರೆಂದೂ ಪ್ರಶಂಸಿಸಿದರು ... ಮ ಎಸ್ ... ರಾಯರು ತಮ್ಮ ಭಾಷಣದಲ್ಲಿ ... ನೋಟೀಸುಗಳನ್ನು ಪ್ರತಿನಿಧಿ ಸಭೆಯಲ್ಲಿ ಹಾಕಿ ಮ ನರಸಿಂಗರಾಯರಿಗೆ ಓಟುಗಳನ್ನು ಹಾಕಕೂಡದೆಂದು ತಿಳಿಸಿದ್ದು ಲಜ್ಜಾಸ್ಪದವಾಗಿರುತ್ತದೆಂದೂ, ತಮಗೆ ಮ॥ ನರಸಿಂಗರಾಯರ ವಿಷಯದಲ್ಲಿ ಅಚಂಚಲವಾದ ಪ್ರೀತಿ ವಿಶ್ವಾಸಗಳುಂಟೆಂದೂ ಹೇಳಿದರು ಮ॥ ಎ ನರಸಿಂಗರಾಯರು ತಮಗೆ ಈ ಬಹುಮಾನವನ್ನು ದಯಪಾಲಿಸಿಕೊಟ್ಟ ಪ್ರತಿನಿಧಿಗಳನ್ನು ಮಾತ್ರವಲ್ಲದೆ ಆ ಸನ್ಮಾನಕೂಟವನ್ನು ನಡಿಸಿದ ಶ್ರೀರಂಗಪಟ್ಟಣದ ಪ್ರಮುಖ ದೊಡ್ಡಮನುಷ್ಯರನ್ನೂ ಕೂಟಕ್ಕೆ ದಯಮಾಡಿದವರನ್ನೂ ವಿನಯಪೂರ್ವಕವಾಗಿ ವಂದಿಸಿ ನ್ಯಾಯ ವಿಧಾಯಕ ಸಭೆಯಲ್ಲಿ ಪ್ರಜಾಹಿತವಾದ ಕಾರ್ಯಗಳನ್ನು ನಡಿಸುವುದರಲ್ಲಿ ಉತ್ಸಾಹಶೀಲರಾಗಿರುತ್ತೇವೆಂದು ತಿಳಿಸಿದರು ಮ॥ ಎಂ ವೆಂಕಟಕೃಷ್ಣಯ್ಯನವರು ತಮ್ಮ ಮತ್ತು ಮ ನರಸಿಂಗರಾಯರ ಪರವಾಗಿ ಮ ರಂಗಯ್ಯಂಗಾರ್ರನ್ನೂ ಅಲ್ಲಿ ಸೇರಿದ್ದ ದೊಡ್ಡಮನುಷ್ಯರನ್ನೂ ವಂದನೆಮಾಡಿ, ಸಂತೋಷಕೂಟವನ್ನು ಮುಕ್ತಾಯಮಾಡಿದರು

ತೆರಕಣಾಂಬಿ ಸಂತೆಯಲ್ಲಿ ವರ್ತಕರ ಮೋಸಕೃತ್ಯಗಳು.

ಗುಂಡ್ಲುಪೇಟೆಗೆ ಪೂರ್ವಕ್ಕೆ 7 ಮೈಲಿ ದೂರದಲ್ಲಿ ತೆರಕಣಾಂಬಿಯೆಂಬ ಒಂದು ಗ್ರಾಮವುಂಟು ಇದು ಪೂರ್ವದಲ್ಲಿ ಸೋಮಶೇಖರ ಚಿಕ್ಕದೇವರಾಯರ ಪುರಾತನ ಪಟ್ಟಣವೆಂದು ಜನಗಳು ರೂಢಿಯಾಗಿ ಹೇಳುತ್ತಾರೆ ಇದಕ್ಕೆ ದೃಷ್ಟಾಂತವಾಗಿ ಅನೇಕ ದೊಡ್ಡದೊಡ್ಡ ವಿಷ್ಣು ಮತ್ತು ಶಿವಾಲಯಗಳು ಇರುತ್ತವೆ ಇಂಥಾ ಪಟ್ಟಣದಲ್ಲಿ ಪ್ರತಿ ಗುರುವಾರವೂ ಬಹಳವಾಗಿ ಸಂತೆ ನಡೆಯುವ ಪದ್ಧತಿ ಉಂಟು ಸಂತೇ ದಿನ ಬೆಳಿಗ್ಗೆ 7 ಘಂಟೆ ಮೊದಲು ಸಾಯಂಕಾಲ 4 ಘಂಟೆ ಒಳಗಾಗಿ ಒಂದು ಲಕ್ಷ ರೂಪಾಯಿಗೆ ಮೇಲೆ ವ್ಯಾಪಾರ ನಡೆಯುತ್ತೆ ಇಂಥಾ ಸಂತೆಗೆ ದೊಡ್ಡ ದೊಡ್ಡ ವ್ಯಾಪಾರಿಗಳು ಸಾವಿರಗಟ್ಟಲೆ ರೂಪಾಯಿಗಳನ್ನು ತೆಗೆದುಕೊಂಡುಬಂದು ದಿನಸು ಕೊಂಡುಕೊಳ್ಳುವ ಪದ್ಧತಿ ಉಂಟು. ಕೆಲವು ಜನ ಬಡರೈತರು ಕಂದಾಯ, ಬಟ್ಟೆಬರೆ ಮುಂತಾದ ಖರ್ಚಿಗೆ ಹಣವಿಲ್ಲದೆ ಬೆಳೆದ ಧಾನ್ಯವನ್ನೇ ತೆಗೆದುಕೊಂಡು ಹೋಗುತ್ತಾರೆ ಅಂಥಾ ಧಾನ್ಯವನ್ನು ನಾಲ್ಕೂವರೆ, ನಾಲ್ಕೂಮುಕ್ಕಾಲು ಪಾವಿನ ಸೇರಿನಲ್ಲಿ ಮೇಲ್ಕಂಡ ದೊಡ್ಡ ವರ್ತಕರು ಕೊಂಡುಕೊಂಡು, ಕೂಲಿ ಮಾಡುವ ಜನಗಳಿಗೆ ಮೂರೂವರೆ, ಮೂರೂಮುಕ್ಕಾಲು ಪಾವಿನ ಸೇರಿನಲ್ಲಿ ಅಳೆಯುತ್ತಾರೆ ಇಂಥಾ ಕ್ಷಾಮಕಾಲದಲ್ಲಿ ಈ ಪ್ರಕಾರ ಅನ್ಯಾಯ ಮಾಡುವ ವರ್ತಕರ ಮೇಲೆ ನಮ್ಮ ತಾಲ್ಲೂಕು ಅಮಲ್ದಾರರೇ ಆಗಲಿ, ಪೋಲೀಸ್ ಅಧಿಕಾರಿಗಳೇ ಆಗಲಿ ಇದುವರೆಗೆ ನಿಗಾಕೊಡಲಿಲ್ಲವೆಂಬುವದು ಸ್ಪಷ್ಟವಾಗಿ ಕಂಡುಬರುತ್ತೆ ಪ್ರಜಾಹಿತಚಿಂತಕರಾದ ನಮ್ಮ ಮೈಸೂರು ಗೌರ್ನಮೆಂಟಿನವರು ಬಡಜನಗಳ ಮೇಲೆ ದಯವಿಟ್ಟು ವರ್ತಕರು ಮಾಡತಕ್ಕ ಈ ಅನ್ಯಾಯವನ್ನು ನಿಲ್ಲಿಸಿ ಅವರುಗಳಿಗೆ ತಕ್ಕ ಬಂದೋಬಸ್ತು ಮಾಡಿಸುವದಲ್ಲದೆ, ಈಗ ಬಂದಿರತಕ್ಕ ಹೊಸ ತೂಕದ ಬಟ್ಟುಗಳನ್ನೂ ಹೊಸ ಸೇರುಗಳನ್ನೂ ಸಾವಿರಗಟ್ಟಲೆ ತಾಲ್ಲೋಕು ಅಮಲ್ದಾರರ ವಶಕ್ಕೆ ಕಳುಹಿಸಿ ಅವರಿಂದ ಪ್ರತಿ ಊರು, ಗ್ರಾಮ, ಹಳ್ಳಿ ಮುಂತಾದ ಸ್ಥಳಗಳಿಗೆ ಸಪ್ಲೈ ಮಾಡಿಸಿ ಅದರ ಖರೀದಿ ಮೊಬಲಗನ್ನು ವಸೂಲ್ ಮಾಡಿಸಿಕೊಂಡು, ಕೊಡುವವರೂ ಕೊಳ್ಳುವವರೂ ಎಲ್ಲಾ ಒಂದೇ ತರಹಾ ಸೇರಿನಲ್ಲಿ ಅಳೆಯುವಂತೆ ಮಾಡಿಸಬೇಕೆಂದು ಬೇಡುತ್ತೇನೆ

ಬಿ ಎಂ ಮುನಿಬೈರಣ್ಣ

ಇಂಡಿಯಾ ದೇಶದ ವೃತ್ತಾಂತಗಳು

ಕಲ್ಕತ್ತಾ ಪಟ್ಟಣದಲ್ಲಿ ಮುಂದಿನ ತಿಂಗಳು ಲಾರ್ಡ್ ಕ್ಲೈವಿನ ಪ್ರತಿಮೆಯನ್ನು ಗೌರ್ನರ್ ಲಾರ್ಡ್ ಕಾರ್ಮೈಕೇಲ್ ರವರು ಪ್ರತಿಷ್ಠೆ ಮಾಡುತ್ತಾರೆಂದು ತಿಳಿದು ಬಂದಿದೆ

ಕೆಲವು ದಿನಗಳ ಹಿಂದೆ ಬರ್ದ್‌ವಾನ್ ಡಿಸ್ಟ್ರಿಕ್ಟಿನ ಒಂದು ಹಳ್ಳಿಯಲ್ಲಿ ಕೆಲವು ಜನ ಡಕಾಯಿತರು ಒಬ್ಬ ಐಶ್ವರ್ಯವಂತರ ಮನೆಗೆ ನುಗ್ಗಿ, ಮನೆಯಲ್ಲಿದ್ದವರನ್ನು ಹೆದರಿಸಿ ಸುಮಾರು ಐದು ಸಾವಿರ ರೂಪಾಯಿ ಬೆಲೆಯುಳ್ಳ ಒಡವೆಗಳನ್ನೂ ಹಣವನ್ನೂ ಅಪಹರಿಸಿಕೊಂಡು ಹೋದರು ಕಳ್ಳರು ಇದುವರೆಗೂ ಸಿಕ್ಕಲಿಲ್ಲ ಪತ್ತೆಕರಡೆಯು ನಡೆಯುತ್ತಿದೆ

ಕಲ್ಕತ್ತಾ ಪಟ್ಟಣದಿಂದ 24 ಜನರು ಉತ್ತರ ಅಮೇರಿಕಾ ಖಂಡದ ಕೊಲಂಬಿಯಾ ರಾಜ್ಯಕ್ಕೆ ಹೋದರು ಕಾನೂನಿನಂತೆ ಅವರು ಮಧ್ಯಮಾರ್ಗದಲ್ಲಿ ಇಳಿಯದೆ ಪ್ರಯಾಣ ಮಾಡಬೇಕಾಗಿತ್ತು ಆದರೆ ಅವರು ಹಾಂಕಾಂಗ್ ಪಟ್ಟಣದಲ್ಲಿ ಇಳಿದು ಮುಂದೆ ಹೊರಟದ್ದಕ್ಕಾಗಿ ಕೊಲಂಬಿಯಾ ಸರ್ಕಾರದವರು ಅವರನ್ನು ಶಿಕ್ಷೆಗೆ ಗುರಿಪಡಿಸುತ್ತಾರೆ

ಹಿಂದುಸ್ಥಾನದ ಈಗಿನ ಸೈನ್ಯಾಧಿಪತಿಗಳಾದ ಸರ್ ಓಮೂರ್ ಕ್ರೀರವರು ಮುಂದಲ ವರುಷ ಕೆಲಸದಿಂದ ನಿವೃತ್ತರಾಗುವರು ಇವರ ಕೆಲಸಕ್ಕೆ ಇಂಡಿಯಾ ಸರ್ಕಾರದವರು ಸರ್ ಬೀಚಾಂಪ್ ಡಫ್‌ರವರನ್ನು ನೇಮಕಮಾಡಿರುತ್ತಾರೆ ಇವರು ಹಿಂದುಸ್ಥಾನದ ಸೈನ್ಯದ ಇಲಾಖೆಯಲ್ಲಿ ಬಹಳ ಕಾಲದಿಂದ ಕೆಲಸಮಾಡಿ ಸಮರ್ಥರೆಂದು ಹೆಸರುಪಡೆದಿರುತ್ತಾರೆ ಅನೇಕ ಪತ್ರಿಕಾಕರ್ತರು ಇವರ ಸದ್ಗುಣಗಳನ್ನು ಹೊಗಳಿ ಬರೆಯುತ್ತಿರುವರು

ಬರ್ಮಾ ದೇಶದಲ್ಲಿ ಹರಿಯುವ ಇರಾವಾಡಿ ನದಿಯ ಒಂದು ಉಪನದಿಯಲ್ಲಿ ಕಳೆದ ವಾರ ಬಹಳ ಹೆಚ್ಚಾಗಿ ಪ್ರವಾಹ ಬಂದು ನದಿಯ ದಡಗಳು ಒಡೆದು ಹೋಗಿ ಕೆಲವು ಸೇತುವೆಗಳು ಕೊಚ್ಚಿಹೋಗಿವೆ ಸುತ್ತುಮುತ್ತ ಇರುವ ಪ್ರದೇಶದಲ್ಲೆಲ್ಲಾ ಬಹಳವಾಗಿ ನೀರುನಿಂತು ಪೈರುಗಳೆಲ್ಲಾ ಹಾಳಾಗಿರುತ್ತವೆ ಈ ಪ್ರವಾಹದಿಂದ ಅನೇಕರಿಗೆ ನಾನಾ ವಿಧವಾಗಿ ನಷ್ಟವಾಗಿರುವದಲ್ಲದೆ ಕೆಲವು ಜನರೂ ಪ್ರಾಣಕಳೆದುಕೊಂಡರೆಂದು ತಿಳಿದು ಬಂದಿದೆ

ಮುಂದಿನ ಡಿಸೆಂಬರ್ ತಿಂಗಳಲ್ಲಿ ಕಲ್ಕತ್ತೆಯ ಹತ್ತಿರ ಪೋಟಿಫರ್ ಬೈಸಿಕಲ್‌ಗಳ ಪಂದ್ಯವನ್ನು ನಡಿಸಬೇಕೆಂದು ಏರ್ಪಾಡು ಮಾಡುತ್ತಿದಾರೆ ಟಿಕಾರಿ ಸಂಸ್ಥಾನದ ಮಹಾರಾಜರವರು ಈ ಪಂದ್ಯದಲ್ಲಿ ಗೆದ್ದವರಿಗೆ 1,500 ರೂಪಾಯಿ ಬಹುಮಾನವನ್ನು ಕೊಡುವುದಾಗಿ ಮಾತು ಕೊಟ್ಟಿದಾರೆ ಪಂದ್ಯವನ್ನು ನಡಿಸಲು ಮಾಡಬೇಕಾದ ಸಮಸ್ತ ಏರ್ಪಾಡುಗಳನ್ನೂ ಬ್ಲಾಕ್‌ಬರ್ನ್ ಮತ್ತು ಜಾರ್ಜ್ ಸ್ಮಿತ್ ಕಂಪನಿಯವರು ಒಪ್ಪಿಕೊಂಡಿರುತ್ತಾರೆ

ಸಿಲೋನ್ ದ್ವೀಪಕ್ಕೆ ಹೊಸದಾಗಿ ನೇಮಕವಾಗಿರುವ ಗವರ್ನರ್ ಸರ್ ರಾಬರ್ಟ್ ಚಾಲ್ಮರ್ಸ್‌ರವರು ಕಳೆದ 18 ನೇ ತಾ ಶನಿವಾರ ಕೊಲಂಬೊ ಪಟ್ಟಣವನ್ನು ತಲುಪಿದರು ಅಲ್ಲಿನ ನಾನಾ ಸಂಪದ ಜನರು ವಿಜ್ಞಾಪನಾ ಪತ್ರಿಕೆಗಳನ್ನು ಒಪ್ಪಿಸಿದರು ಗವರ್ನರವರು ವಿಜ್ಞಾಪನಾ ಪತ್ರಿಕೆಗಳಿಗೆ ಕೊಟ್ಟ ಉತ್ತರದಲ್ಲಿ ಹೀಗೆ ಹೇಳಿರುತ್ತಾರೆ —"ಸಿಲೋನ್ ದ್ವೀಪವನ್ನು ಉತ್ತಮಸ್ಥಿತಿಗೆ ತರುವ ಎಲ್ಲಾ ಕಾರ್ಯಗಳಲ್ಲಿಯೂ ನಾನು ಅತ್ಯಂತ ಆಸಕ್ತನಾಗಿರುವೆನು"

ಢಾಕ್ಕಾ ಪಟ್ಟಣದ ಸತೀಶಚಂದ್ರಸೇನನೆಂಬ ಲಾಯರು ಸ್ವಲ್ಪದಿವಸದ ಹಿಂದೆ ಹೈದರಾಬಾದ ಸಂಸ್ಥಾನವನ್ನು ನೋಡಿಕೊಂಡುಬರಲು ಹೋದನು ಗುಪ್ತ ಪೋಲೀಸಿನ ಅಧಿಕಾರಿಗಳು ಅವನ ಮೇಲೆ ಅನುಮಾನಪಟ್ಟು ಅವನ ಸಂಗಡಲೇ ಪ್ರಯಾಣಮಾಡಿದರು, ಅವನು ಹೈದರಾಬಾದಿನಲ್ಲಿ ಇಳಿದ ತಕ್ಷಣವೇ ಸ್ಥಳೀಯ ಅಧಿಕಾರಿಗಳು ಬಂದು, ಅವನು ತಮ್ಮ ದೇಶವನ್ನು ಬಿಟ್ಟು ಹೊರಟುಹೋಗಬೇಕೆಂದು ತಿಳಿಸಿದರು ಹೆಚ್ಚು ಸಂಗತಿ ವಿಚಾರಿಸುವಲ್ಲಿ ಹೈದರಾಬಾದಿಗೆ ಬಂಗಾಳಿಗಳೂ, ಪಂಜಾಬಿಗಳೂ, ಕಾನ್‌ಪುರದ ಮಹಮದೀಯರೂ ಬರಕೂಡದೆಂಬ ಸರ್ಕಾರದ ಅಭಿಪ್ರಾಯವು ತಿಳಿದುಬಂತು

ಮುಂದಿನ ಕ್ರಿಸ್‌ಮಸ್ ರಜಾದಲ್ಲಿ ಪುದುಕೋಟೆ ಸಂಸ್ಥಾನದವರು ವ್ಯವಸಾಯದ ಮತ್ತು ಕೈಗಾರಿಕೆಗಳ ಪ್ರದರ್ಶನವನ್ನು ಪ್ರಾರಂಭಮಾಡುತ್ತಾರೆ ತಮ್ಮ ದೇಶದಲ್ಲೂ, ಮದರಾಸು ಅಧಿಪತ್ಯದಲ್ಲೂ ಕೈಗಾರಿಕೆಗಳನ್ನೂ ಕುಶಲ ವಿದ್ಯೆಗಳನ್ನೂ ಅಭಿವೃದ್ಧಿಪಡಿಸಬೇಕೆಂಬುವದೇ ಈ ಪ್ರದರ್ಶನದ ಮುಖ್ಯ ಉದ್ದೇಶ ಈ ಪ್ರದರ್ಶನಕ್ಕೆ ಯಾರುಬೇಕಾದರೂ ಪದಾರ್ಥಗಳನ್ನು ಕಳುಹಿಸಬಹುದೆಂದು ಪ್ರಕಟಿಸಿರುತ್ತಾರೆ ವ್ಯವಸಾಯ ಕೈಗಾರಿಕೆಗಳಲ್ಲಿ ಹೊಸ ವಿಷಯಗಳನ್ನು ಜನರಿಗೆ ತಿಳಿಸಲು ಉಪನ್ಯಾಸಗಳು ಕೊಡಲ್ಪಡುವವು ಉತ್ತಮವಾದ ಪದಾರ್ಥಗಳಿಗೆ ಇನಾಮುಗಳನ್ನೂ, ಚಿನ್ನ ಬೆಳ್ಳಿಯ ಪದಕಗಳನ್ನೂ ಕೊಡುವದಕ್ಕಾಗಿ ಪುದುಕೋಟೆಯ ಸರ್ಕಾರದವರು ವಿಶೇಷ ದ್ರವ್ಯವನ್ನು ಸ್ಯಾಂಕ್ಷನ್ ಮಾಡಿರುತ್ತಾರೆ

ತಾಲ್ಲೋಕು ವರ್ತಮಾನಗಳು

ಬೌರಿಂಗ್‌ಪೇಟೆ —ಈಗ ಮೂರು ತಿಂಗಳ ಲಾಗಾಯ್ತು ಪ್ಲೇಗು ಎಂಬುವ ಅವಾಂತ್ರವು ತಲೆದೋರಿ ಸುಮಾರು 60 ಜನಗಳಿಗೆ ಹೆಚ್ಚು ಮೃತಪಟ್ಟರು ಅಲ್ಲದೆ ಕಾಯಿಲೆಯಾದವರು ಕೆಲವರು ದೇವರ ಕೃಪೆಯಿಂದಲೂ, ಅಮಲ್ದಾರ್ರು ಮತ್ತು ಡಾಕ್ಟರವರ ಪ್ರಯಾಸದಿಂದಲೂ ಸುಖವಾಗಿರುತ್ತಾರೆ ಅಲ್ಲದೆ ಸಮ್ಮಸ್ಯಾನಿಟರಿ ಇನ್‌ಸ್ಪೆಕ್ಟರವರು ಊರನ್ನು ಪಾಕೀಜನಲ್ಲಿ ಇಟ್ಟಿರುತ್ತಾರೆ ಈಗ ಪ್ಲೇಗಿನ ಸೋಂಕು ತಕ್ಕಮಟ್ಟಿಗೆ ಕಮ್ಮಿಯಾಗುತ್ತಾ ಬಂದಿದೆ —ಆದರೆ ಇಂಥಾ ಸಂಕಟವಾದ ಕಾಲದಲ್ಲಿ ಕಳ್ಳರ ಅವಾಂತ್ರವು ಜಾಸ್ತಿಯಾಗಿದೆ ಇದಕ್ಕೆ ಕಾರಣ ಸ್ವಲ್ಪ ಪೋಲೀಸಿನವರೆಂದು ಹೇಳುತ್ತಾರೆ ಅಗಸರ ಪೂವಣ್ಣ ಎಂಬುವವನ ಮನೆಯಲ್ಲಿ ಹಗಲು ಹೊತ್ತಿನಲ್ಲಿ ಕಳೆದ 20 ನೇ ತಾರೀಖಿನಲ್ಲಿ 400 ರೂಪಾಯಿಗಳ ಕಳವು ನಡೆದಿರುತ್ತದೆ ಪೋಲೀಸಿನವರು ಪತ್ತೇ ತರದೂದಿನಲ್ಲಿದಾರೆ ಜನಗಳು ಈ ರೀತಿ ನೋವುಪಡುವದಾದರೆ ಕಳ್ಳರು ಯಾವಾಗಲೂ ಕಳ್ಳತನದಲ್ಲಿ ಸಂತೋಷಪಡುತ್ತಾರೆ ಅಲ್ಲದೆ ಒಬ್ಬರನ್ನೊಬ್ಬರು ಕೊಲೆಮಾಡುವದು ಹೆಚ್ಚಾಗಿದೆ

ಚನ್ನಪಟ್ಟಣ —ಹಿಂದಿನ ವಾರ ಬೆಂಗಳೂರಿಂದ ರೆವ್ ಪುಲ್ಲರ್ ಧೊರೆಯವರೂ, ಅಮಲ್ದಾರರಾದ ಮೆ॥ ನಾರಾಯಣಸ್ವಾಮಿ ಮೊದಲಿಯಾರ್ರೂ, ಹೈಸ್ಕೂಲ್ ಹೆಡ್ ಮಾಸ್ಟರೂ, ಮಿಸ್ ಹಾವರ್ಥ್‌ರವರೂ ಮಂಗಳವಾರ ಪೇಟೆಗೆ ಹೋಗಿ ಪಂಚಮರಿಗಾಗಿ ಒಂದು ಸ್ಕೂಲನ್ನು ಸ್ಥಾಪಿಸಿದರು ಅಲ್ಲಿ ಸೇರಿದ್ದ ಬಾಲಕರಿಗೂ, ಅವರ ತಂದೆತಾಯಿಗಳಿಗೂ ಅಮಲ್ದಾರ್ರು ಹಿತೋಕ್ತಿಗಳನ್ನು ಹೇಳಿದರು —ಸಾಹುಕಾರ್ ಮ॥ ರಾಮಸಂಜೀವಯ್ಯನವರು ಪ್ರವಾಸಿಗಳಾಗಿ ಬರತಕ್ಕ ಗೋಸಾಯಿಗಳಿಗೆ ಪ್ರತಿಯೊಬ್ಬನಿಗೂ ಮಧ್ಯರಾತ್ರಿಯಲ್ಲಿ ಬಂದು ಕೇಳಿದಾಗ್ಯೂ ಬೇಸರಪಡದೆ ಸದಾವರ್ತ ಕೊಡುತ್ತಾರೆ ಇವರ ಪರೋಪಕಾರ ಗುಣವು ಸ್ತೋತ್ರಾರ್ಹವಾಗಿದೆ — ನಾಟಕದ ಕಂಪನಿಯವರು ಬಂದು ದುಡ್ಡನ್ನು ಸೂರೆ ಮಾಡುತ್ತಿದಾರೆ ಕುರುಡರಿಗೆ ಕುಂಟರಿಗೆ ಭಿಕ್ಷ ಕೊಡುವದಕ್ಕೆ ಕೈ ಬಾರದವರು ನಾಟಕಕ್ಕೆ ಧಾರಳವಾಗಿ ಕೊಡುವುದು ಈ ಕಾಲದ ಒಂದು ಪ್ರಮಾದ ಮಹತ್ವಾಗಿದೆ —ಮ॥ ಶ್ರೀನಿವಾಸರಾಯರ ಕುಮಾರನಾದ ಸುಮಾರು 30 ವರುಷದ ಮದ್ದೂರಾವೆಂಬಾತನು ಇಲ್ಲಿನ ರಾಯಿಪೇಟ ಕೆರೆಯಲ್ಲಿ ಈಜದನು ಈಜದ ದೂರ ಸುಮಾರು 2 ಮೈಲಿಗಳು ನಮ್ಮ ಸೀಮೆಗೆ ಇದು ಆಶ್ಚರ್ಯವಾಗಿದೆ —ಚನ್ನಪಟ್ಟಣದಲ್ಲಿ ನರಸಿಂಹಯ್ಯನ ಮನೆಯಲ್ಲಿಯೂ, ಬೇರೆ ಕಡೆಯಲ್ಲಿಯೂ ಕಳುವಾದ ಮಾಲುಗಳನ್ನು ಕಳ್ಳರಿಂದ ಕಿತ್ತುಕೊಂಡ ಕಳ್ಳರ ಸಂಗತಿಯು ಯಾವ ರೀತಿ ಇತ್ಯರ್ಥವಾಯಿತೋ ಗೊತ್ತಾಗಲಿಲ್ಲ

ಬೌರಿಂಗ್‌ಪೇಟೆ ತಾ॥ ಬೇತಮಂಗಲ —ಕಳೆದ ತಾ 8 ರಲ್ಲು ಪೋಲೀಸ್ ಇನ್‌ಸ್ಪೆಕ್ಟರ್ ಮೆ॥ ಮಹಮ್ಮದ್‌ಹುಸೇನ್ ಸಾಹೇಬರೂ, ಬೇತಮಂಗಲದ ರೇಂಜ್ ಜಮೇದಾರರಾದ ಮ॥ ಬಿ ಕೆ ಸುಂದರರಾಮಯ್ಯನವರೂ ನಮ್ಮ ಮಹಾರಾಜರವರ ಕೀರ್ತಿಯನ್ನು ಕೊಂಡಾಡುವ ಉದ್ದಿಶ್ಯ ಪೋಲೀಸ್ ಸ್ಟೇಷನ್ ಮುಂಭಾಗದಲ್ಲಿ ದೊಡ್ಡ ಕೊಪ್ಪಾಯನ್ನು ಕಟ್ಟಿಸಿ ಅಲಂಕರಿಸಿ, ಲಗ್ನ ಪತ್ರಿಕೆಗಳ ಮೂಲಕ ಗಣಿ ಮ್ಯಾಜಿಸ್ಟ್ರೇಟ್ ಮ॥ ಚೊಕ್ಕಣ್ಣನವರನ್ನೂ, ಪೋಲೀಸ್ ಸೂಪರಿನ್‌ಟೆಂಡೆಂಟರಾದ ಮಿ॥ ಪ್ರಿಚರ್ಡ್ ಸಾಹೇಬರನ್ನೂ, ಪಂಜಾಬು ಸೂಪರೆಂಟರಾದ ಮೆ॥ ಜೋನ್ಸ್ ಸಾಹೇಬರನ್ನೂ, ಮತ್ತು ಇದೇ ತಾಲ್ಲೂಕು ಮ್ಯಾಜಿಸ್ಟ್ರೇಟ್ ಮ॥ ರಾಘವಾಚಾರ್ರನ್ನೂ ಇನ್ನೂ ಅನೇಕ ಆಫೀಸರುಗಳನ್ನೂ ಕರೆಸಿಕೊಂಡದ್ದಲ್ಲದೆ ಈ ಪ್ರಾಂತ್ಯದ ಅನೇಕ ದೊಡ್ಡಮನುಷ್ಯರುಗಳನ್ನು ಸಹ ಕರೆಸಿಕೊಂಡು ದಸರಾ ಮಹೋತ್ಸವ ಕಾರ್ಯವನ್ನು ನಡಿಸಿದರು ಇದನ್ನು ನೋಡಿದವರೆಲ್ಲಾ ಇಂಥಾ ದಸರಾ ಉತ್ಸವವು ಈ ಬೇತಮಂಗಲದಲ್ಲಿ ಇದ ವರಿವಿಗೂ ನಡೆಯಲಿಲ್ಲವೆಂದು ಕೃತಜ್ಞತೆಯುಳ್ಳ ವಂದನೆಗಳನ್ನು ಸಲ್ಲಿಸಿದರು ಈ ಕೆಲಸದಲ್ಲಿ ಇಲ್ಲಿನ ದಫೇದಾರ್ ಮುನಿಸ್ವಾಮಪ್ಪನು ಬಹು ಮುತುವರ್ಜಿಯನ್ನು ವಹಿಸಿ ಚಪ್ಪರವನ್ನು ನೇತ್ರಾನಂದಕರವಾಗಿ ಅಲಂಕಾರ ಮಾಡಿಸಿ ಏನೂ ಗಲಾಟೆ ವಗೈರೆ ನಡೆಯನೆ ಬಹು ನಾಜೂಕಾದ ಉಸ್ತುವಾರಿಯನ್ನು ಇಟ್ಟಿದ್ದಕ್ಕಾಗಿ ಅನೇಕರು ಸಂತೋಷಪಟ್ಟರು

ಮಂಜರಾಬಾದು ತಾ ದೇವಾಲದಕೆರೆ —ಈ ಗ್ರಾಮದಲ್ಲಿರುವ ಗೌರ್ನಮೆಂಟ್ ಕನ್ನಡ ಸ್ಕೂಲ್ ಕಟ್ಟಡದಲ್ಲಿ ಶಾರದಾಪೂಜೆಯ ಮಹೋತ್ಸವದ ಉದ್ದಿಶ್ಯ ಹಿಂದಿನ ಸೋಮವಾರ ಮಧ್ಯಾಹ್ನ ಸ್ಕೂಲ್ ಕಟ್ಟಡವು ತಳಿರು ತೋರಣಗಳಿಂದಲೂ, ಚಿತ್ರಪಟಗಳಿಂದಲೂ ಮನೋಹರವಾಗಿ ಅಲಂಕರಿಸಲ್ಪಟ್ಟು ನೋಟಕರ ಮನಸ್ಸನ್ನು ಆಕರ್ಷಿಸುತ್ತಾ ಇತ್ತು ಈ ಗ್ರಾಮದ ಮತ್ತು ಸುತ್ತುಮುತ್ತಲಿನ ಗ್ರಾಮಗಳ ಅನೇಕ ಮಹನೀಯರು ಮತ್ತು ಬಾಲಕ ಬಾಲಕಿಯರು ಹಾಜರಾಗಿ ಸಭೆಯನ್ನಲಂಕರಿಸಿದ್ದರು ಮಂಟಪದ ಮಧ್ಯದಲ್ಲಿ ಶೋಭಾಯಮಾನವಾಗಿ ಅಲಂಕರಿಸಿದ್ದ ಶಾರದಾಪೂಜೆ ಮಂಗಳಾರತಿಗಳು ನಡೆದನಂತರ ಬಾಲಕ ಬಾಲಕಿಯರ ದೇವತಾ ಪ್ರಾರ್ಥನೆ ಮತ್ತು ನಮ್ಮ ಶ್ರೀಮನ್ಮಹಾರಾಜರವರು ಶ್ರೀಮಚ್ಚಕ್ರವರ್ತಿ ಸಾರ್ವಭೌಮರವರ ಶ್ರೇಯಃ ಪ್ರಾರ್ಥನಾರೂಪವಾದ ಹಾಡಗಳನ್ನು ಹಾಡಿದ್ದು ಸಭೆಯವರಿಗೆ ಕರ್ಣಾನಂದವಾಗಿತ್ತು ಭಗವದ್ಭಕ್ತಿ, ರಾಜಭಕ್ತಿ ಪೂರ್ವಕವಾದ ಈ ಮಹಾಕಾರ್ಯವನ್ನು ನೆರವೇರಿಸಬೇಕೆಂದು ದೃಢಸಂಕಲ್ಪಮಾಡಿ ಈ ಸಭೆಯು ನೆರೆಯಲು ಸಹಾಯಮಾಡಿದ ಮ॥ ಪಟೇಲ್ ಶಿವೇಗೌಡರ ಮಕ್ಕಳು ಪುಟ್ಟೇಗೌಡರ ಗುಣಜ್ಞತೆಯನ್ನು ಕುರಿತು ಸಭೆಯವರ ಪರವಾಗಿ ಮ॥ ಸುಬ್ರಾಯರು ಸೂಚಿಸಿದರು ಸ್ಕೂಲ್ ಮಾಸ್ಟರು ಮ॥ ವೆಂಕಟರಾಮಯ್ಯನವರು ಈ ಸಭೆಯ ಉದ್ದೇಶ, ಇಂಥಾ ಸತ್ಕಾರ್ಯದಿಂದ ನಮಗೂ ನಮ್ಮ ಬಾಲಕ ಬಾಲಕಿಯರಿಗೂ ಉಂಟಾಗತಕ್ಕ ಭಗವದ್ಭಕ್ತಿ ಮತ್ತು ರಾಜಭಕ್ತಿ, ಈ ಮಲೆನಾಡು ಪ್ರಾಂತ್ಯದಲ್ಲಿ ವಿದ್ಯಾಭ್ಯಾಸದ ಹೀನಸ್ಥಿತಿ, ಇವುಗಳನ್ನು ಕುರಿತು ಸಂಕ್ಷೇಪವಾಗಿ ಉಪನ್ಯಾಸಮಾಡಿದರು ಈ ಸ್ಕೂಲಿನ ಒಬ್ಬ ಬಾಲಕನು ಮಾಡಿದ ಪ್ರಾರ್ಥನಾರೂಪವಾದ ಭಾಷಣವು ಸಭೆಯವರು ಅನುಮೋದಿಸತಕ್ಕದ್ದಾಗಿತ್ತು. ನಂತರ ಸಭೆಯವರಿಗೆ ಗಂಧ ಪುಷ್ಪ ತಾಂಬೂಲವೂ, ಬಾಲಬಾಲಕಿಯರಿಗೆ ಸಕ್ಕರೆಯೂ ಹಂಚಲ್ಪಟ್ಟು ಭಗವಂತನು ಸರ್ವರಿಗೂ ಆಯುರಾರೋಗ್ಯಾದಿಗಳನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸಿ ಜಯಘೋಷದಿಂದ ಬರಖಾಸ್ತಾಯಿತು

ತರೀಕೆರೆ —ಈ ಊರಿನ ಸಂತೆಯಲ್ಲಿ ಜೂಜಾಡುವವರನ್ನು ಕೇಳುವವರೇ ಇಲ್ಲವೆಂದು ಹೇಳಬೇಕೋ ಅಥವಾ ಅಧಿಕಾರಿಗಳು ಅಪ್ಪಣೆಕೊಟ್ಟು ಅವಕಾಶ ಕೊಟ್ಟಿದಾರೆಯೋ ತಿಳಿಯದು 8 ವರ್ಷದ ಬಾಲಕರಿಂದ 50 60 ವರ್ಷದ ಪ್ರಾಯದವರು ತರಗತಿಯ ಮೇಲೆ ಜೂಜಾಡುವದನ್ನು ನೋಡಿದರೆ ತುಂಬಾ ಶೋಚನೀಯವಾಗಿದೆ ಈ ಅಭ್ಯಾಸವನ್ನು ನಿಲ್ಲಿಸದಿದ್ದರೆ ಯೋಗ್ಯರು ದೇಶದಲ್ಲಿ ಎಷ್ಟು ಜನ ಸಿಕ್ಕಬಹುದು —ಈ ಊರಲ್ಲಿ ಒಬ್ಬ ಹುಚ್ಚಹೆಂಗಸಿರುತ್ತಾಳೆ ಇವಳು ಕೆಲವು ದಿನಗಳ ಹಿಂದೆ ಗೊಲ್ಲರನ್ನು ಬೈದ ಹಾಗೂ, ಅವರು ಕಲ್ಲಿನಿಂದ ತಲೆಗೆ ಹೊಡೆದು ರಕ್ತ ಬಹಳವಾಗಿ ಸುರಿದ ಹಾಗೂ ಕೇಳುತ್ತೇನೆ ಈ ಹೆಂಗಸು ಅನೇಕರನ್ನು ಬೈಯುತ್ತಾ ಜನರಿಗೆ ತೊಂದರೆಮಾಡುತ್ತಾ ಇರುತ್ತಾಳೆ ಅಲ್ಲದೆ ಈ ಹುಚ್ಚಹೆಂಗಸನ್ನು ಅನೇಕರು ಅವಮಾನಮಾಡುವವನ್ನು ನೋಡಿದರೆ ನಾಚಿಕೆಯಾಗುತ್ತೆ ಅಧಿಕಾರಿಗಳು ಇವಳನ್ನು ಬೆಂಗಳೂರಿಗೆ ಕಳುಹಿಸದ ಯಾತಕ್ಕೆ ಸುಮ್ಮನಿರುತ್ತಾರೋ ತಿಳಿಯದು —ಇಲ್ಲಿನ ಮೆ॥ ಬಾಬಾ ಸಾಹೇಬರು ತಮ್ಮ ಸ್ವಂತ ಮನೆಯನ್ನು ಕೆಲವರಿಗೆ ಬಾಡಿಗ್ಗೆ ಕೊಟ್ಟಿರುತ್ತಾರೆ ಇವರ ಮಗನು ತಂದೆಯ ಮೇಲಿನ ಜಿದ್ದಿನಿಂದ ಒಂದು ರೊಟ್ಟಿ ಅಂಗಡಿಗೆ ಬೀಗಹಾಕಿ, ಗಲಾಟೆ ಮಾಡಿದನು ಮತ್ತು ಅಂಗಡಿಯವನ ಎದುರಿನಲ್ಲಿ, ಅಂಗಡಿಯವನ ಬೀಗವನ್ನು ಕತ್ತರಿಸಿದಾಗ್ಗೆ ಅಂಗಡಿಯವನು ಪೋಲೀಸಿಗೆ ತಿಳಿಸಲು ಹೋದನು ಈ ಕಡೆ ಬಾಗಲು ತೆರೆದು ಕಂಬಳಿ, ತಾಲು, ರೊಟ್ಟಿ, ಹಲಗೆಗಳನ್ನು ತೆಗೆದು ತಾನಿರುವ ಮನೆಗೆ ಹೈದನು ಇತ್ತಲಾಗಿ ಅಂಗಡಿಯವನು ಸುತ್ತಿ ಕಾಣದೆ, ಕಡೆಗೆ ಜಮಾದಾರ್ರನ್ನೂ ದಫೇದಾರ್ರನ್ನೂ ಕಂಡು ಹೇಳಿಕೊಂಡಾಗ ಅವರು ಬಂದು ನೋಡಿ ಬೆಳಿಗ್ಗೆ ಇದನ್ನೆಲ್ಲಾ ವಿಚಾರಿಸುತ್ತೇವೆ ನೀನು ಇಲ್ಲಿಯೇ ಮಲಗಿರು ಎಂದು ಹೇಳಿ ಹೋದರು ಸ್ವಲ್ಪ ಹೊತ್ತಿನ ಮೇಲೆ ಆದ್ ಅಧಿಕಾರಿಗಳು ಬಂದು ರೊಟ್ಟಿ ಅಂಗಡಿಯವನು ಮತ್ತೊಂದು ಅಂಗಡಿ ಜಗುಲಿ ಮೇಲಿರುವದನ್ನು ಕಂಡು ಕೇಳಿ ಪುಂಡುಮಾಡುವದಕ್ಕೆ ಇಲ್ಲಿರುತ್ತೀಯೋ ಎಂದು ಬಾರುಕೋಲಿನಿಂದ ನಿಷ್ಕಾರಣವಾಗಿ ಮೃಗವನ್ನು ಹೊಡೆವಂತೆ ಹೊಡೆದು ಲಾಕಪ್ಪಿನಲ್ಲಿ ಇರಿಸಿದರು ಬೆಳಿಗ್ಗೆ ಅಂಗಡಿಯವರು—ಸ್ವಾಮಿ, ಹಣವತ್ತು ಬಂದು ನೋಡಬೇಕೆಂದು ಕೇಳಿದಾಗ, ನಿಮ್ಮಲ್ಲಿ ಎಷ್ಟೋ ಹಣ ಎಂದು ಅವಮಾನದ ಮಾತಾಡಿ ಸುಮ್ಮನಿರಿಸಿದರು ಈ ಕಡೆ ಲಾಕಪ್ಪಿಗೆ ಹೋದ ಮೇಲೆ ಆಸಾಮಿಯು ಒಳನುಗ್ಗಿ ಮಾಲನ್ನು ಅಪಹರಿಸಿದನು ಇದನ್ನೆಲ್ಲಾ ನೋಡಿದವರಿದಾರೆ ಕಡೆಗೆ ತೀರ್ಮಾನ ಬಡಪಾಯಿಗಳಿಗೆ ಮೇಲಾಗುವಂತೆ ಆದರೆ ಒಳ್ಳೇದು ನೋಡಬೇಕು —ಇಲ್ಲಿ ಪೋಸ್ಟ್ ಮಾಸ್ಟರು ಹೊಸದಾಗಿ ತೆಗೆದುಕೊಂಡಿದ್ದ ಹಸುವು ಹಾಲು ಕರೆಯುವಾಗ್ಗೆ ಹಾದು ಅವರ ತೊಡೆಯಲ್ಲಿ ಸುಮಾರು 1½ ಅಂಗುಲ ಆಳವೂ, ಉದ್ದವೂ ಗಾಯವಾಗಿದೆ ಇವರು ಈಗ ಸುಮ್ಮನೆ ಮಲಗಿರುತ್ತಾರೆ ಸರಸಿಗಳೂ, ಹಿತವಾದಿಗಳೂ ಆಗಿದ್ದ ಇವರಿಗೆ ಬೇಗ ಗುಣವಾಗಲೆಂದು ಹಾರೈಸುತ್ತೇವೆ

ದೊಡ್ಡಬಳ್ಳಾಪುರ —ಶ್ರೀಮನ್ಮಹಾರಾಜರವರು ದೊಡ್ಡಬಳ್ಳಾಪುರದಲ್ಲಿ ಸುಮಾರು 30 ಸಾವಿರ ರೂಪಾಯಿ ಮುಟ್ಟಿಸಿ ಛತ್ರಕಟ್ಟಿಸಿರುವ ಮ ರುಮಾಲೆ ರುದ್ರಪ್ಪನವರನ್ನು ಟೆಲಿಗ್ರಾಂ ಮೂಲಕ ದರ್ಬಾರಿಗೆ ಕರಸಿಕೊಂಡು ಅವರ ಧರ್ಮಕಾರ್ಯವನ್ನು ಮೆಚ್ಚಿ ತುಂಬಾ ಸಂತೋಷಪಟ್ಟು ಅವರಿಗೆ ಶಾಲುಜೋಡಿ ಮತ್ತು ದುಪ್ಪಟಾಗಳನ್ನು ಮರ್ಯಾದೆ ಮಾಡಿರುವುದರಿಂದ ಈ ಊರಿನ ನಿವಾಸಿಗಳೆಲ್ಲಾ ಅತ್ಯಾನಂದಭರಿತರಾಗಿರುತ್ತಾರೆ —ಮ ಅಮಾವಾಸ್ಯೆ ನಂಜುಂಡಪ್ಪನವರು ಈ ಊರಿನ ನೀರಿನ ಸರಬರಾಯಿಗೋಸ್ಕರ 1,000 ರೂಪಾಯನ್ನೂ, ಮ॥ ಆಲಂಪಲ್ಲಿ ಲಕ್ಷ್ಮಯ್ಯಶೆಟ್ಟರೂ, ಮ ಜೆ ಶ್ರೀಕಂಠಯ್ಯಶೆಟ್ಟರೂ, ತಲಾ 1,000 ರೂಪಾಯನ್ನು ಕೊಟ್ಟಿರುತ್ತಾರೆ ಈಗ ಒಟ್ಟು 18 ಸಾವಿರ ರೂಪಾಯಿ ಜಮಾಯಿಸಿರುವುದರಿಂದ ಡೆಪ್ಟಿ ಕಮಿಷನರವರು ಬೇಗನೆ ನೀರಿನ ಪ್ಲಾನನ್ನು ಸರ್ಕಾರದವರಿಂದ ಸ್ಯಾಂಕ್ಷನ್ ಮಾಡಿಸಿ ನೀರು ತರಿಸಿಕೊಟ್ಟು ಪ್ರಜೆಗಳ ಪ್ರೀತಿ ಗೌರವವನ್ನು ಹೊಂದಬೇಕಾಗಿದ —ಈ ಊರಲ್ಲಿರುವ ವೆಸ್ಲಿಯನ್ ಮಿಷನ್ ವಿಡೋಸ್ ಹೋಮನ್ನು ನಡಿಸುತ್ತಿರುವ ಶ್ರೀಮತಿ ಮೇರಿಬಾಯಿ ಅಮ್ಮನವರು ಮಿಸ್ ರೂತ್ ವೈಟ್ ಎಂಬ ಹುಡುಗಿಯು ಜಾಪಕಾರ್ಥವಾಗಿ ಕಟ್ಟಿಸಿರುವ ಒಂದು ಸಣ್ಣ ಪ್ರಾರ್ಥನಾಲಯವನ್ನು ಪ್ರತಿಷ್ಠೆಮಾಡಿದರು ಉಪದೇಶಿಯುವವರೂ ಹೋಮಿನ ಸಹೋದರಿಯರೂ ಇತರ ಕ್ರೈಸ್ತರೂ ಹಾಜರಿದ್ದರು ಈ ಮಿಸ್ ವೈಟ್ ಎಂಬ ಒಬ್ಬ ಅಮೇರಿಕ ದೇಶದ ಹುಡುಗಿಯು ತನ್ನಲ್ಲಿ ಹಣವಿಲ್ಲದೆ ಇದ್ದಾಗ್ಯೂ ಪರೋಪಕಾರ ಮಾಡಬೇಕೆಂದು ತನ್ನ ತಲೆ ಕೂದಲನ್ನೇ ಕತ್ತರಿಸಿ ಮಾರಿ ಅದರಿಂದ ಬಂದ ಮೊಬಲನ್ನು ಈ ಬಡ ವಿಧವೆಗಳ ಅನಾಥಾಲಯಕ್ಕೋಸ್ಕರ ಕೊಟ್ಟಳು ಈ ಚಿಕ್ಕ ವಯಸ್ಸಿನ ಹುಡುಗಿಗೆ ಪರೋಪಕಾರ ಮಾಡಲು ಹುಟ್ಟಿದ ಬುದ್ಧಿಯು ಸ್ತೋತ್ರಾರ್ಹವಾಗಿದೆ —ಮ್ಯುನಿಸಿಪಾಲಿಟಿಯ ಸ್ಥಿತಿಯು ಮುಂದಕ್ಕೆ ಬರುತ್ತಿದೆ ಆದರೆ ಊರೊಳಗಿನ ರಸ್ತೆಗಳು ಬರ ಬರ ಕೆಡುತ್ತಿವೆ ಗ್ಯಾಸು ಲಾಕೀಜೂ ಸಾಲದು ಸಂದು ಗೊಂದುಗಳಲ್ಲಿ ಲಾಂದ್ರಗಳ ಬೆಳಕು ಸಾಲದು — ಈ ಊರಿನ ಮುಖಂಡರಲ್ಲಿ ಅನೇಕರ ಒಂದು ಕಾರೊನೇಷನ್ ಹಾಲ್ ಕಟ್ಟಬೇಕೆಂದು ಉದುಕ್ತಪಟ್ಟು ಮೀಟಿಂಗು ಮಾಡಿದರು ಆ ಕಾಲದಲ್ಲಿ ಅನೇಕರು ಮೈಸೂರಿಗೆ ಹೋಗಿದ್ದರಿಂದ ಮತ್ತೊಂದು ಮೀಟಿಂಗು ನಡೆಯುವುದಾಗಿದೆ ಹೀಗೆ ಈ ಊರು ಕ್ರಮೇಣ ಅನೇಕ ವಿಧವಾದ ಸಹಾಯ ಸಂಪತ್ತುಗಳನ್ನು ಪಡೆದು ಅಭಿವೃದ್ಧಿಗೆ ಬರುವದರಲ್ಲಿದೆ —ನಮ್ಮ ಅಮಲ್ದಾರ್ರು ಬಹು ಖಂಡಿತವಾಗಿ ಕೆಲಸ ನಡಿಸುತ್ತಾ, ಸರ್ವರ ಮೆಚ್ಚಿಕೆಗೂ ಪಾತ್ರರಾಗಿರುವದರಿಂದಲೂ, ಚಟುವಟಿಕೆಯಾಗಿ ಕೆಲಸ ಮಾಡುತ್ತಿರುವದರಿಂದಲೂ ಈ ತಾಲ್ಲೋಕಿನ ರೈತರೇ ಮುಂತಾದವರಿಗೆ ಬಹು ಸಂತೋಷವಾಗಿದೆ ಆದರೆ ಲಂಚ ಮುಂತಾದ ಲಾಭ ತಪ್ಪಿತೆಂದು ಕೆಲವರು ಇವರ ಮೇಲೆ ಆಗ್ರಹಪಡುತ್ತಾರೆ —ಈಚೆಗೆ ಮಳೆಯ ಪ್ರಸ್ತಾಪವೇ ಇಲ್ಲ ಕೆಲವು ಅಂಗಡಿಗಳಲ್ಲಿ ಇಲಿಗಳು ಸತ್ತವೆಂದು ಕೇಳುವದು ತುಂಬಾ ವ್ಯಸನಕರವಾಗಿದೆ

ಹುಣಸೂರು —ಈ ಊರಿನ ಮುಸಲ್ಮಾನ್ ಜನರಲ್ಲಿ ಮೂರು ಪಂಗಡಗಳಿದ್ದು, ನಮ್ಮ ಅಮಲ್ದಾರ್ ಮ॥ ನರಸಿಂಹಯ್ಯಂಗಾರ್ರವರು ಇವರುಗಳನ್ನು ಒಟ್ಟುಗೂಡಿಸಿದ ಸಂಗತಿಯನ್ನು ಮೊದಲೇ ಸೂಚಿಸಿದೆಯಷ್ಟೆ ಆದರೆ ಎಲ್ಲರೂ ಒಟ್ಟಿಗೆ ಸೇರಿ ಜುಮ್ಮಾ ಮಸೀದಿಯಲ್ಲಿ ನಮಾಜುಮಾಡಲು ಸ್ವಲ್ಪ ಅನನುಕೂಲವಿತ್ತು ಹಿಂದಿನ ವಾರ ನಮ್ಮ ಅಮಲ್ದಾರ್ ಸಾಹೇಬರವರು ಮೂರು ಪಾರ್ಟಿಯ ಮುಸಲ್ಮಾನ್ ಜನಗಳನ್ನೂ ಕರಸಿಕೊಂಡು ಎಲ್ಲರೂ ಒಟ್ಟಿಗೆ ಸೇರಿ ನಮಾಜು ಮಾಡಲು ಇದ್ದ ಅಡಚಣೆಯನ್ನು ಇತ್ಯರ್ಥಮಾಡಿ, ಆ ದಿನಸ ಶುಕ್ರವಾರವಾಗಿದ್ದದ್ದರಿಂದ ಎಲ್ಲರ ಸಮೇತ ಜುಮ್ಮಾ ಮಸೀದಿಗೆ ಹೋಗಿ ಮುಸಲ್ಮಾನ್ ಜನಗಳೆಲ್ಲರೂ ಸೇರಿ ನಮಾಜು ಮಾಡುವುದನ್ನು ಪರಾಂಬರಿಸಿದರು ಆ ಜನಗಳೆಲ್ಲರೂ ಆನಂದಭರಿತರಾಗಿ ತಮ್ಮ ಹಿತಕ್ಕೋಸ್ಕರ ಇಷ್ಟೊಂದು ಶ್ರಮಪಟ್ಟ ಅಮಲ್ದಾರವರನ್ನು ವಂದಿಸಿ, ತಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸಿದರು ಹುಣಸೂರಿನ ಮೂರು ಪಾರ್ಟಿಯ ಮುಸಲ್ಮಾನ್ ಜನರೂ ಒಟ್ಟಿಗೆ ಸೇರಿ ನಮಾಜುಮಾಡಿ ಬಹಳ ದಿವಸಗಳಾಗಿತ್ತೆಂದು ತಿಳಿಯ ಬರುತ್ತೆ ನಮ್ಮ ಅಮಲ್ದಾರ್ರವರ ಧರ್ಮಬುದ್ಧಿಯೂ ಪ್ರಜಾನುರಾಗವೂ ಅತ್ಯಂತ ಶ್ಲಾಘನೀಯವಾಗಿದೆ —ಮೈಸೂರು ಸೀಮೆಯ ಫಾರೆಸ್ಟುಗಳ ಇನ್‌ಸ್ಪೆಕ್ಟರ್ ಸಾಹೇಬರಾದ ರಾಯಬಹದ್ದೂರ್ ಎಂ ಮುತ್ತಣ್ಣನವರು ಕಳೆದ ವಾರ ಇಲ್ಲಿಗೆ ದಯಮಾಡಿ ಸಂಟ್ರಲ್ ಕೋಠಿಯನ್ನು ಇನ್‌ಸ್ಪೆಕ್ಷನ್ ಮಾಡಿಕೊಂಡು ಮರುದಿನ ಆಸಿಕೂರು ಪ್ರಾಂತ್ಯ ದಯಮಾಡಿಸಿದರು ಇವರ ಕಾಲದಲ್ಲಿ ಫಾರೆಸ್ಟ್ ಇಲಾಖೆಯು ತುಂಬಾ ಅಭಿವೃದ್ಧಿ ಹೊಂದಿತೆಂಬುವುದಕ್ಕೆ ಸಂಶಯವಿಲ್ಲ —ನಮ್ಮ ಸೀಮೆಯ 2 ನೇ ಕೌನ್‌ಸೆಲರು ಮತ್ತೂ ಎಕ್ಸಿಕ್ಯುಟಿವ್ ಕಮಿಷನರಾದ ಸರ್ದಾರ್ ಎಂ ಕಾಂತರಾಜೇಅರಸಿನವರು ಕಳೆದ ತಾ 23 ನೇ ಬುಧವಾರ ಮಧ್ಯಾಹ್ನ 1 ಗಂಟೆಗೆ ಮೋಟಾರ್ ಗಾಡಿಯಲ್ಲಿ ಇಲ್ಲಿಗೆ ದಯಮಾಡಿಸಿದರು ತಾಲ್ಲೂಕು ಆಫೀಸ್ ಮುಂಭಾಗದಲ್ಲಿ ಹಾಕಿಸಿದ್ದ ಚಪ್ಪರದಲ್ಲಿ ನಮ್ಮ ಅಮಲ್ದಾರ್ರವರು ಇಲ್ಲಿನ ಇತರ ಅಧಿಕಾರಿಗಳೂ ದೊಡ್ಡಮನುಷ್ಯರುಗಳೊಡನೆ ಕಾದಿದ್ದು ಕೌನ್ಸಲರ್ ಸಾಹೇಬರನ್ನು ಎದುರುಗೊಂಡು ಅವರಿಗೆ ಹಾರ ತುರಾಯಿಗಳನ್ನು ಒಪ್ಪಿಸಿದರು ಅವರು ತಲುಕ್ಕು ಫಸ್ಟ್ ಆಫೀಸ್, ಎಕ್ಸೈಸ್ ರೇಂಜ್ ಆಫೀಸುಗಳನ್ನು ಇನ್‌ಸ್ಪೆಕ್ಷನ್ ಮಾಡಿದ್ದಲ್ಲದೆ ತಾವು ಸ್ವತಃ ದಯಮಾಡಿಸಿ ಪ್ರಾರಂಭೋತ್ಸವವನ್ನು ನೆರವೇರಿಸಿದ್ದ ಇಲ್ಲಿನ ಕೋಆಪರೇಟಿವ್ ಸೊಸೈಟಿಯ ಲೆಕ್ಕಗಳನ್ನು ಇನ್‌ಸ್ಪೆಕ್ಷನ್ ಮಾಡಿ ತುಂಬಾ ಸಂತೋಷಪಟ್ಟರು ಇದಕ್ಕೆಲ್ಲಾ ನಮ್ಮ ಅಮಲ್ದಾರ್ರವರ ಕಾರ್ಯದಕ್ಷತೆಯೂ ನಿತರಣೆಯುಳ್ಳ ವರ್ತನವೂ ಕಾರಣವೆಂದು ನಿಸ್ಸಂದೇಹವಾಗಿ ಹೇಳಬಹುದು ನಮ್ಮ ಕೌನ್‌ಸೆಲರ್ ಸಾಹೇಬರವರಿಗೆ ಶಾಂತಿಯೂ, ಶಾಂತಸ್ವಭಾವವೂ, ಪ್ರಜಾಭಿಮಾನವೂ ವಿಶೇಷವಾಗಿರುತ್ತವೆ ಇವರಿಗೆ ನಮ್ಮನ್ನಾಳುವ ಶ್ರೀಮನ್ಮಹಾರಾಜಾ ಸಾಹೇಬ್ ಒಡೆಯರವರು ಘನತೆಯುಳ್ಳ ಕೌನ್‌ಸೆಲರ್ ಪದವಿಯನ್ನು ದಯಪಾಲಿಸಿದ್ದಕ್ಕಾಗಿ ಈ ಪುರವಾಸಿಗಳು ಸಂತೋಷಭರಿತರಾಗಿ ಕೌನ್‌ಸೆಲರ್ ಸಾಹೇಬರಿಗೆ ಇಂಗ್ಲೀಷಿನಲ್ಲೂ, ಮುಸಲ್ಮಾನ್ ಪಂಗಡದವರು ಉರ್ದೂ ಬಾಷೆಯಲ್ಲೂ ಅಡ್ರೆಸ್ಸುಗಳನ್ನು ಒಪ್ಪಿಸಿದರು ಆನಂತರ ಮೆಹರ್ಬಾನ್ ಕೌನ್‌ಸೆಲರ್ ಸಾಹೇಬರವರು ಸಾಯಂಕಾಲ 6 ಗಂಟೆ ಸಮಯದಲ್ಲಿ ಮೈಸೂರಿಗೆ ವಾಪಸು ದಯಮಾಡಿಸಿದರು

ಮೈಸೂರು ಪ್ರಜಾಪ್ರತಿನಿಧಿ ಸಭೆಯು

ಈ ವರುಷ ಕಳೆದ ತಾ 13 ನೇ ಸೋಮವಾರದಿಂದ ತಾ 19 ನೇ ಭಾನುವಾರ ಮಧ್ಯಾಹ್ನದ ತನಕ ಪ್ರಜಾಪ್ರತಿನಿಧಿ ಸಭೆಯಲ್ಲಿ ನಡೆದ ಚರ್ಚೆಗಳ ಪೈಕಿ ಪ್ರಮುಖ್ಯವಾದ ವಿಚಾರಗಳನ್ನು ಕಳೆದ ವಾರ ತಕ್ಕಮಟ್ಟಿಗೆ ವಿಸ್ತಾರವಾಗಿ ಪ್ರಕಟಮಾಡಿದ್ದಾಯಿತು ಸಾಮಾನ್ಯ ಅಂದರೆ ಸಂಸ್ಥಾನಾವಳ ವ್ಯವಹರಿಸುವ ಇತರ ವಿಷಯಗಳನ್ನೂ ಅವುಗಳಿಗೆ ದಿವಾನ್‌ರವರು ದಯಪಾಲಿಸಿದ ಪ್ರತ್ಯುತ್ತರಗಳನ್ನೂ ಇಲ್ಲಿ ಪ್ರಕಟಮಾಡುತ್ತೇವೆ

ನ್ಯಾಯನಿರ್ಮಾಣ ವಿಚಾರಗಳು

ಪ್ರಾರ್ಥನೆ ಪ್ರಜಾಸೌಕರ್ಯಗಳಿಗೆ ಅವಶ್ಯವಾದದ್ದೆಲ್ಲಾ ಟವನ್‌ಗಳಲ್ಲಿ ಉಂಟು ಗ್ರಾಮಾಂತರಗಳಲ್ಲಿರುವ ರೈತರುಗಳಿಂದ ವಸೂಲಾಗುವ ಹಣದಿಂದಲೇ ಅವೆಲ್ಲಾ ಆಗುತ್ತವೆ ಜನರಲ್ಲಿ ಟವನ್‌ಗಳಿಗೆ ಹೋಗಿರುವುದೇ ಉತ್ತಮವೆಂಬ ಅಭಿಪ್ರಾಯ ಉಂಟಾಗುತ್ತಿರುವುದು ದ್ರವ್ಯ ಉತ್ಪತ್ತಿಗೆ ಪಟೇಲ್ ಶ್ಯಾನುಭೋಗರು ಇದಾರಲ್ಲದೆ ಅದರ ವಿನಿಯೋಗದ ವಿಚಾರವೇನೂ ಇಲ್ಲ 10,000 ಕ್ಕಿಂತಲೂ ಹೆಚ್ಚಾಗಿರುವ ನಮ್ಮ ಸಂಸ್ಥಾನದ ಗ್ರಾಮಗಳಲ್ಲಿ ಪ್ರಜಾಸೌಕರ್ಯ ಉಂಟಾಗುವಂತೆ ಗ್ರಾಮಕಟ್ಟುಪಾಡಿನ ಕಾನೂನನ್ನು ಮಾಡಿ ಜಾರಿಗೆ ತಂದರೆ ಕ್ಷೇಮ ದಿವಾನ್‌ರವರ ಪ್ರತ್ಯುತ್ತರ —ಗ್ರಾಮ ಪಂಚಾಯತಿಗಳನ್ನು ಕಲ್ಪಿಸಿ ರೂಢಿಸಬೇಕೆಂಬ ಉದ್ದೇಶದಿಂದ ಗವರ್ನ್‌ಮೆಂಟಿನವರು ಒಂದು ಕಾನೂನಿನ ಮಸೂದೆಯನ್ನು ಮಾಡಿ ಆಲೋಚನೆಯಲ್ಲಿಟ್ಟುಕೊಂಡಿದಾರೆ ಜಾಗ್ರತೆ ಪಡಿಸುತ್ತೇವೆ

ಪ್ರಾ —ಸರ್ಕಾರದವರು ವರ್ತಮಾನ ಪತ್ರಿಕೆಗಳ ಕಾನೂನ್ ಮಾಡಿ ಜಾರಿಯಲ್ಲಿಟ್ಟಿರೋಣದರಿಂದ ಯೋಗ್ಯವಾದ ವರ್ತಮಾನ ಪತ್ರಿಕೆ ಒಂದೂ ಇಲ್ಲದಂತೆ ನಿಂತು ಹೋಗಿವೆ ಈಗಿನ ನಿರ್ಬಂಧದಿಂದ ಸರ್ಕಾರದವರಿಗಾಗಲಿ ಪ್ರಜೆಗಳಿಗಾಗಲಿ ಸಂಸ್ಥಾನದ ಮುಖ್ಯಾಂಶಗಳಲ್ಲದೆ ಇತರ ಕಡೆಗಳಲ್ಲಿ ನಡೆಯುವ ಸಂಗತಿಗಳು ಸಹಜವಾದ ರೀತಿಯಲ್ಲಿ ತಿಳಿಯದಂತಾಗಿದೆ ಆ ಕಾನೂನನ್ನು ಸರ್ಕಾರದವರು ರದ್ದುಮಾಡಿಬಿಡಬೇಕು ಉ —ಈ ವಿಚಾರ ಗವರ್ನ್‌ಮೆಂಟಿನವರ ಪರ್ಯಾಲೋಚನೆಯಲ್ಲಿದೆ ಬೇಗನೆ ಇತ್ಯರ್ಥಮಾಡುವೆವು ಮೈಸೂರು ಸಂಸ್ಥಾನದಲ್ಲಿ ವರ್ತಮಾನ ಪತ್ರಿಕೆಗಳ ಸಂಖ್ಯೆ ಹೆಚ್ಚಾಗಿ ಆಗಬೇಕೆಂದು ನಮಗೆ ಕುತೂಹಲವುಂಟಾಗಿದೆ

ಪ್ರಾ —ಗ್ರಾಮ ಪಂಚಾಯತಿ ಕೋರ್ಟುಗಳನ್ನು ಸ್ಥಾಪಿಸಿ ಕೊಟ್ಟರೆ ಸಿವಿಲ್ ಕೋರ್ಟುಗಳ ಕೆಲಸ ಬಹಳ ಕಡಮೆಯಾದೀತು ಕಕ್ಷಿಗಾರರಿಗೆ ಅಲೆಯುವುದೂ ಹಣದ ಖರ್ಚೂ ತಪ್ಪುತ್ತದೆ 25 ರೂಪಾಯಿನೊಳಗಿನ ಸಣ್ಣ ಲೇವಾದೇವಿ ವ್ಯಾಜ್ಯಗಳನ್ನು ಗ್ರಾಮಪಂಚಾಯತಿ ಕೋರ್ಟುಗಳೇ ಹಿಡಿದು ವ್ಯವಸ್ಥೆ ಮಾಡುವ ಹಾಗಿದ್ದು ಉ —ಈಗತಾನೇ ಒಂದು ಕಾನೂನನ್ನು ಪ್ಯಾಸ್ ಮಾಡಿರುತ್ತೇವೆ ಯಾವ ಗ್ರಾಮಕ್ಕೆ ಅದನ್ನು ಜಾರಿಗೆ ತರಬಹುದು ? ಯಾವ ಗ್ರಾಮದಲ್ಲಿ ಯೋಗ್ಯರಾದ ತಿಳುವಳಿಕಸ್ಥರು ದೊರಕುತ್ತಾರೆ ? ಎಂಬೀ ಸಂಗತಿಗಳನ್ನು ವಿಚಾರಿಸುತ್ತಿರುವೆವು ಯಾವ ಯಾವ ಗ್ರಾಮಗಳಿಗೆ ಈ ಕಾನೂನು ಜಾರಿಗೆ ತರಬಹುದೋ ಆಯಾ ಗ್ರಾಮದವರು ಮುಂದಾಳಾಗಿ ಬಂದು ಗವರ್ನ್‌ಮೆಂಟಿಗೆ ಬರೆದುಕೊಳ್ಳಲಿ

ಪ್ರಾ —ಹೆಣ್ಣುಮಕ್ಕಳ ವಿವಾಹಕ್ಕೆ ಈಗ ವಿಧಿಸಿರುವ 8 ವರುಷವೆಂಬ ನಿರ್ಬಂಧವನ್ನು 10 ವರುಷಕ್ಕೆ ಹೆಚ್ಚಿಸಬೇಕು ಗಂಡುಹುಡುಗರಿಗೆ 18 ವರುಷಕ್ಕೆ ಮುಂಚೆ ವಿವಾಹವಾಗಕೂಡದೆಂದು ಕಟ್ಟುಮಾಡಬೇಕು ಯಾಕೆಂದರೆ ಮೊನ್ನೆ ಎತ್ತಿದ ಸೆನ್ಸಸ್ ಲೆಕ್ಕವನ್ನು ನೋಡಿದರೆ ನಮ್ಮ ಸಂಸ್ಥಾನದಲ್ಲಿ ಮದುವೆಯಾಗಿರುವ ಹೆಣ್ಣುಮಕ್ಕಳ ಪೈಕಿ 10 ವರುಷದೊಳಗಿರುವವರ ಸಂಖ್ಯೆ 2,987 ಎಂದೂ, ಈ ಪೈಕಿ 65 ಮಂದಿ ಮಕ್ಕಳು ಆಗಲೇ ವಿಧವೆಯರಾಗಿದಾರೆಂದೂ ತಿಳಿಯುತ್ತದೆ ಸರ್ಕಾರದವರು ನಿರ್ಬಂಧ ಮಾಡಿದ ಹೊರ್ತು ಈ ಭಾಗದಲ್ಲಿ ಪ್ರಜೆಗಳಿಗೆ ಹಿತವಾಗುವುದಿಲ್ಲ 18 ವರುಷಕ್ಕೆ ಮುಂಚೆ ಮದುವೆಯಾಗಿರುವ ವಿದ್ಯಾರ್ಥಿಗಳಿಗೆ ಸ್ಕೂಲುಗಳಲ್ಲಿ ಫೀಜು ಮಾಫಿ ಬಿಡಕೂಡದು, ಅವರಿಗೆ ವೇತನಗಳನ್ನು ಕೊಡಕೂಡದು ಈ ರೀತಿ ಕಟ್ಟುಮಾಡಿದರೆ ಕ್ಷೇಮವಾದೀತು ಉ —ಹೆಣ್ಣುಮಕ್ಕಳ ವಿವಾಹದ ವಯಸ್ಸನ್ನು 8 ರಿಂದ 10 ವರುಷಕ್ಕೆ ಹೆಚ್ಚಿಸಬೇಕೆನ್ನುವವರೆಲ್ಲಾ ಕೈ ಎತ್ತಿ ನೋಡೋಣ [68 ಮಂದಿ ಪ್ರತಿನಿಧಿಗಳು ಒಪ್ಪಿ ಕೈ ಎತ್ತಿದರು] ಅವರ ವಿವಾಹ ವಯಸ್ಸನ್ನು ಈಗಿರುವಂತೆ ಇರಬಹುದೆಂದೂ ಬದಲಾವಣೆ ಅವಶ್ಯವಿಲ್ಲವೆಂದೂ ಒಪ್ಪುವವರೆಲ್ಲಾ ಕೈ ಎತ್ತಿ [ಈಗಿರುವಂತೆಯೇ ಇರಲಿ ಎಂಬರ್ಥ

[illegible] ಮೆಂಬರುಗಳು ಕೈ ಎತ್ತಿದರು] ಈ ವಿಷಯದಲ್ಲಿ ಪ್ರಜೆಗಳ ಮನೋವೃತ್ತಿಯು ಇನ್ನೂ ಬದಲಾವಣೆಯಾಗಿಲ್ಲವಾದದ್ದರಿಂದ ಈ ಕಾನೂನನ್ನು ತಿದ್ದಬೇಕಾದ ಕಾಲ ಇನ್ನೂ ಒದಗಲಿಲ್ಲ, ಮುಂದೆ ನೋಡೋಣ

ಪ್ರಾ—ವಿಧವೆಯರು ಪುನರ್ವಿವಾಹ ಮಾಡಿಕೊಂಡು ಮಕ್ಕಳನ್ನು ಹೆತ್ತರೆ ಅವರ ದಾಯಭಾಗದ ವಿಷಯದಲ್ಲಿ ನಮ್ಮ ಸೀಮೆಯಲ್ಲಿ ಇನ್ನೂ ಯಾವ ಕಾನೂನೂ ಆಗಿರುವುದಿಲ್ಲ ಈ ಕಾನೂನು ಜಾರಿಗೆ ತಂದಿಟ್ಟರೆ ವಿಶೇಷಕ್ಕಲ್ಲ, ಭ್ರೂಣಹತ್ಯೆ ಕಡಮೆಯಾಗಬಹುದು ಈ ಕಾನೂನು ಜಾರಿಗೆ ತಂದ ಮಾತ್ರಕ್ಕೇ ವಿಧವೆಯರೆಲ್ಲಾ ಪುನರ್ವಿವಾಹ ಮಾಡಿಕೊಳ್ಳಬೇಕೆಂಬ ನಿರ್ಬಂಧವೇನೂ ಉಂಟಾಗುವುದಿಲ್ಲ ಇದರಿಂದ ಮುಂದಕ್ಕೆ ಅನುಕೂಲವಾದೀತು ಉ—ಇದು ಪರಿಶೀಲನಾ ವಿಚಾರವಾದ ವಿಷಯ. ಆದರೆ ಪ್ರಜೆಗಳಿಗೆ ಅದು ಇನ್ನೂ ರುಚಿಸುವುದಿಲ್ಲ

ಪ್ರಾ—ಕೂಲಿಗಳು ಕರಾರು ಬರೆದುಕೊಟ್ಟು ಅಡ್ವಾನ್ಸು ತೆಗೆದುಕೊಂಡು ಕೆಲಸಕ್ಕೆ ಬಾರದೆ ತಪ್ಪಿಸಿಕೊಂಡು ಹೋಗುತ್ತಾರೆ ಅವರನ್ನು ಹಿಡಿದು ತರಿಸಿ ಶಿಕ್ಷೆ ಮಾಡುವುದಕ್ಕೆ ಕಾನೂನ್ ಬದಲಿ ಮಾಡಿಕೊಡಬೇಕು ಉ—ಇದಕ್ಕೆ ಸಂಬಂಧಪಡುವ ಕಾನೂನನ್ನು ಜಾರಿಗೆ ತರಬಹುದೇ ಎಂದು ಗವರ್ನಮೆಂಟಿನವರು ಯೂರೋಪಿಯನ್ ಪ್ಲಾಂಟರುಗಳ ಸಂಘದವರನ್ನು ಕೇಳಿದ್ದೇವೆ ಅವರಿಂದ ಜವಾಬು ಬಂದ ಬಳಿಕ ಆಲೋಚಿಸುತ್ತೇವೆ

ಪ್ರಾ—ಇನಾಂ ಗ್ರಾಮಗಳಿಗೆ ಸರ್ವೆ ಸೆಟ್ಲ್ಮೆಂಟ್ ಮಾಡುವುದು, ಅಲ್ಲಿನ ಗ್ರಾಮ ಕೆಲಸ ಯೋಗಕ್ಷೇಮವನ್ನು ಕಾಪಾಡುವುದು, ಆಡಳಿತವನ್ನು ಕ್ರಮಪಡಿಸುವುದು, ಇಂಥ ಮುಂತಾದ ಕಾರ್ಯಗಳನು ನಿರ್ಬಂಧನಾಗಿ ಮಾಡಿಸುವುದಕ್ಕೆ ಒಂದು ಆಕ್ಟ್ ಮಾಡಬೇಕು ಉ—ಇದು ಆಲೋಚನೆಯಲ್ಲಿದೆ ಅರೆವಾಸಿ ಇನಾಂ ಗ್ರಾಮದವರು ಒಪ್ಪಿದಪಕ್ಷದಲ್ಲಿ ಸರ್ಕಾರದವರು ಸರ್ವೆ ಸೆಟ್ಲ್ಮೆಂಟ್ ಮಾಡಿ, ಖರ್ಚನ್ನು ಇನಾಂದಾರರಿಂದಲೇ ವಸೂಲ್ಮಾಡುವಂತೆ ಏರ್ಪಾಡು ಮಾಡಬೇಕೆಂಬ ಯೋಚನೆ ಇದೆ

ಪ್ರಾ—ಕಾಬೂಲಿಗಳೂ ಕಂಧಾರ ಜನಗಳೂ ಗುಂಪು ಗುಂಪಾಗಿ ಗ್ರಾಮಾಂತರಗಳ ಮೇಲೆ ಬಂದು ಅನೇಕ ದಾಂದಲೆಮಾಡಿ ಪ್ರಜೆಗಳನ್ನು ಕಷ್ಟನಷ್ಟಗಳಿಗೆ ಗುರಿಮಾಡುತ್ತಾರೆ ಅವರ ಉಸ್ತುವಾರಿಗೆ ಬರುವ ಒಬ್ಬಿಬ್ಬರು ಪೋಲೀಸಿನವರಿಂದ ಏನೂ ಆಗುವುದಿಲ್ಲ ಅವರನ್ನು ನಮ್ಮ ಸೀಮೆಗೆ ಬಿಡದಂತೆ ತಡೆಯಬೇಕು [illegible] ಕಡೆ 5 10 ರೂಪಾಯಿ ತೆಗೆದು ಕೊಂಡು ಲೈಸೆನ್ಸು ಕೊಟ್ಟು ನಮ್ಮ ಸೀಮೆಗೆ ಬಿಡಬೇಕು ಹಾಗಿದ್ದರೂ ಅವರ ಕಾಟವನ್ನು ನಮ್ಮವರೆ ತಪ್ಪಿಸಿಕೊಳ್ಳಬೇಕು ಉ—ಈ ಭಾಗದಲ್ಲಿ ನಮ್ಮ ಜನರು ಧೈರ್ಯ ಶೌರ್ಯಗಳನ್ನು ತೋರಿ ಉಪದ್ರವನ್ನು ಹಿಡಿದು ಪೋಲೀಸಿಗೆ ಕೊಟ್ಟರೆ ಒಳ್ಳೇದು ಪೋಲೀಸ್ [illegible] ಅವರ ವಿಷಯದಲ್ಲಿ ಹೆಚ್ಚು ಜಾಗ್ರತೆ ಇಡುವಂತೆ ಹುಕುಂ ಕೊಡುತ್ತೇವೆ

ಕಾನೂನುಗಳ ವಿಚಾರವಾದ ವಿಚಾರದಲ್ಲಿ ಪ್ರತಿನಿಧಿಗಳು ಸೂಚಿಸಿ ಚರ್ಚೆ ಮಾಡಿದ ಅನೇಕ ವಿಷಯಗಳನ್ನು ದಿವಾನರವರು ಚೀಫ್ ಕೋರ್ಟಿಗೆ ತಿಳಿಸಿ ಅವರ ಅಭಿಪ್ರಾಯವನ್ನು ತರಿಸಿಕೊಳ್ಳುವುದಾಗಿ ಅಪ್ಪಣೆಕೊಡಿಸಿದರು

ಜುಡಿಷಲ್ ಇಲಾಖಾ ವಿಚಾರಗಳು

ಪ್ರಾ—ಚೀಫ್ ಕೋರ್ಟಿನವರ ತೀರ್ಮಾನದ ಮೇಲೆ ಅಪೀಲ್ ಮಾಡುವುದಕ್ಕೋಸ್ಕರ ಒಂದು ಜುಡಿಷಲ್ ಕೌನ್ಸಿಲನ್ನು ಇಟ್ಟುಕೊಡಬೇಕು ಉ—[illegible] ಈಗಿರುವ ಸ್ಥಿತಿಯಲ್ಲಿ ಇದು ಅಸಾಧ್ಯವಾದ ಸಂಗತಿ

ಪ್ರಾ—ಜುಡಿಷಲ್ ಇಲಾಖೆಗೆ ಚೀಫ್ ಜಡ್ಜಿಯನ್ನು ನೇಮಿಸಿ, ಅನುಭವ [illegible] ಗಳನ್ನು ಕೊಡುವ ಪದ್ಧತಿ ಈ ಸಂಸ್ಥಾನದ [illegible] ಯೋಗ್ಯ [illegible]. ಮತ್ತು ಆ ಇಲಾಖೆಯ [illegible] ನೌಕರರ ಸಂಬಳಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಜಾಸ್ತಿಮಾಡಿ [illegible] ಕವನ್ನು ಕೊಡಬೇಕು ಉ—ಸರ್ಕಾರದವರು ಈ ಭಾಗಗಳನ್ನು ಯೋಚಿಸುತ್ತಲಿದ್ದಾರೆ [illegible] ವಾಗುವ ಮಟ್ಟಿಗೂ ಬೇಗನೆ ಅನುಕೂಲ ಮಾಡುತ್ತಾರೆ

ಪ್ರಾ—ಮೊಟ್ಟ ಅಧಿಕಾರಸ್ಥರನ್ನು ಎಲ್ಲಾ ಕೋರ್ಟುಗಳ ವಿದ್ಯಾ [illegible] ಕೊಡಬೇಕು ಉ—ಹಿಂದುಳಿದ ಪಂಗಡದವರಿಗೆ ವಿದ್ಯಾವಂತರಾಗುವುದಕ್ಕೆ ಬೇಕಾದಷ್ಟು ಸಹಾಯಮಾಡುವೆವು ಯೋಗ್ಯತೆಯನ್ನು ಪಡೆಯದೆ [illegible] ಅಧಿಕಾರಗಳನ್ನು ಕೊಡ ಲ್ಲವಿಲ್ಲ ಇದರಿಂದ ಸರ್ವಿಸು ಕೆಟ್ಟು ಹೋಗುವುದು ಸರ್ವಿಸಿಗೆ ಸಮರ್ಥರೂ, ಯೋಗ್ಯರೂ ಆದವರೇ ಬೇಕು

ಪ್ರಾ—ಮೊಕದ್ದಮೆಗಳನ್ನು ಪೈಸಲ್ ಮಾಡುವುದಕ್ಕೆ ಪೂರ್ವದಲ್ಲಿದ್ದಂತೆ [illegible] ಪಡಿಗಳನ್ನು ನೇಮಿಸಿಕೊಡಬೇಕು ಉ—ಇದು ಬಹಳ ಕಷ್ಟ, ಅಷ್ಟು ಸಾಧ್ಯವಲ್ಲ

ಪ್ರಾ—ಗೌರವ (ಆನರರಿ) ಮಾಜಿಸ್ಟ್ರೇಟರನ್ನು ಎಲ್ಲಾ ಡಿಸ್ಟ್ರಿಕ್ಟುಗಳಲ್ಲೂ ನೇಮಿಸಿಕೊಡಬೇಕು ಉ—ಯೋಗ್ಯರಾದವರು ಇರುವಂಥಾ ಕಡೆಗಳಿಂದ [illegible] ಸರ್ಕಾರಕ್ಕೆ ಅರ್ಜಿ ಬರೆದು ಬಂದರೆ ತನಿಖೆಯಿಂದ ಆ ರೀತಿ [illegible] ಮಾಡಿಕೊಡಬಹುದು

ಪ್ರಾ—ಅಮಲ್ದಾರರಿಗೆ ಸಿವಿಲ್ ಕೇಸುಗಳನ್ನು ವಿಚಾರಿಸುವ ಅಧಿಕಾರವನ್ನು ವಹಿಸಬೇಕು ಇದರಿಂದ ಬಹಳ ಪ್ರಮಾದಕ್ಕೆ ಕಾರಣವುಂಟು ಉ—[illegible] ಗವರ್ನಮೆಂಟಿನವರ ಯೋಚನೆಯಲ್ಲಿದೆ

ಪ್ರಾ—ಸಿವಿಲ್ ಕೋರ್ಟುಗಳಲ್ಲಿ ಜಡ್ಜಿಗಳು ಸಾಕ್ಷಿಗಳ ಹೇಳಿಕೆಯನ್ನು ಇಂಗ್ಲೀಷಿನಲ್ಲಿ ಬರೆದುಕೊಳ್ಳುತ್ತಿದ್ದರು ಇಲ್ಲವೇ ಅವರು ಇಂಗ್ಲೀಷಿನಲ್ಲಿ [illegible] ಕೋರ್ಟ್ ಮುನ್ಷಿಯು ಕನ್ನಡದಲ್ಲಿ ಬರೆದುಕೊಳ್ಳುತ್ತಿದ್ದರು [illegible] ಓದುವುದು ನಿಂತುಹೋಗಿ, ಜಡ್ಜಿಗಳು ಇಂಗ್ಲೀಷಿನಲ್ಲೇ ಬರೆದುಕೊಳ್ಳುವುದರಿಂದ ಅನೇಕ ಲೋಪದೋಷಗಳಿಗೆ ಕಾರಣವಾಗಿರುತ್ತದೆ [illegible] ಕನ್ನಡದಲ್ಲಿ ಬರೆದುಕೊಳ್ಳುವ ರೂಲಸು ಜಾರಿಗೆ ತರಬೇಕು [illegible] ಚೀಫ್ ಕೋರ್ಟ್ ಜಡ್ಜಿಗಳು ಇದು ಅವಶ್ಯವಿಲ್ಲವೆನ್ನುತ್ತಾರೆ ನೋಟ್ [illegible] ಮತ್ತೆ ಯೋಚಿಸುತ್ತೇವೆ

ಪ್ರಾ—ಕ್ರಿಮಿನಲ್ ಮೊಕದ್ದಮೆಯಲ್ಲಿ ಸಮನ್ ಜೊತೆಯಲ್ಲೇ ಫಿರಿಯಾದಿಯ [illegible] ನಕಲನ್ನು ಅಪರಾಧಿಗೆ ಜಾರಿಮಾಡುವಂತೆ ಅಪ್ಪಣೆ ಆಗಬೇಕು ಉ—ಯೋಚನೆಯಲ್ಲಿದೆ ಹೀಗೆ ವ್ಯವಸ್ಥೆ ಮಾಡುತ್ತೇವೆ ಮತ್ತು ಜಡ್ಜಿಗಳ [illegible] ಪಟ್ಟಿಯನ್ನು ಕಕ್ಷಿಗಾರರಿಗೆ ಕೊಡಿಸುವ ಭಾಗವೂ ಸರ್ಕಾರದ ಯೋಚನೆಯಲ್ಲಿದೆ

ಪ್ರಾ—ಒಂದು ಸಾವಿರ ರೂಪಾಯಿನೊಳಗಿರುವ ವಾರಸ್ ಸರ್ಟಿಫಿಕೇಟುಗಳಿಗೆ ಮೊದಲಿನಂತೆ ಕೋರ್ಟ್ ಫೀಜನ್ನು ವಿನಾಯಿತಿ ಮಾಡಿಕೊಡಬೇಕು ಉ—ಈಗಿರುವ ರೂಲಸನ್ನು ಸದ್ಯ ನಾವು ಬದಲಾಯಿಸುವುದಿಲ್ಲ

ಪ್ರಾ—ಕ್ರಿಮಿನಲ್ ಮೊಕದ್ದಮೆಗಳಲ್ಲಿ ಜುಲ್ಮಾನೆ ಹಣವನ್ನು ವಾಪಸು ಕೊಡುವಾಗ್ಗೆ ಆ ಹಣಕ್ಕೆ ಕೊಡುವ ಚೆಕ್ಕು ಮೂರೇ ದಿನ ವಾಯಿದೆಯುಳ್ಳದ್ದು ಅಷ್ಟರಲ್ಲಿ ಪಾವತಿ ತೆಗೆದುಕೊಳ್ಳದಿದ್ದರೆ ನಷ್ಟವಾಗುವುದು ಉ—ಈ ವಾಯಿದೆಯನ್ನು ಮೂರರಿಂದ ಏಳು ದಿನಕ್ಕೆ ಹೆಚ್ಚಿಸಿಕೊಡುವಂತೆ ಹುಕುಂ ಮಾಡುವೆವು

ಪ್ರಾ—ಪತ್ರಗಳನ್ನು ರೆಜಿಸ್ಟರ್ ಮಾಡುವಾಗ್ಗೆ ಹೆಬ್ಬೆಟ್ಟಿನ ಗುರುತು ಒತ್ತುವುದಿಲ್ಲವೆಂದು ಇನ್ಕಾರ ಮಾಡಿದರೆ ಬಲಾತ್ಕಾರ ಮಾಡಕೂಡದೆಂದು ರೂಲಸು ಮಾಡಿದೆ ಇದರಿಂದ ಅನೇಕ ಮೋಸಗಳಿಗೆ ಕಾರಣವಾಗುತ್ತಿದೆ ಉ—ಎಲ್ಲರಿಂದಲೂ ಹೆಬ್ಬೆಟ್ಟಿನ ಗುರುತು ಒತ್ತಿಸಿಕೊಳ್ಳಬೇಕೆಂದು ಬಲಾತ್ಕರಿಸುವಂತೆ ಹುಕುಂ ಕೊಡಲಾರೆವು ಈಗಿರುವ ರೂಲಸೇ ಸರಿಯಾಗಿದೆ

ಪ್ರಾ—ಪೋಲೀಸ್ ಲಾಕಪ್ಪುಗಳಲ್ಲಿ ಹಿಂಸೆಗಳು ನಡೆಯುತ್ತವೆಂಬ ಈಗಿನ ಅಪವಾದವನ್ನು ತಪ್ಪಿಸಿಕೊಳ್ಳುವುದಕ್ಕೆ ಸರ್ಕಾರದವರು ಆಯಾ ಸ್ಥಳದ ಕೆಲವು ಸಾಹುಕಾರಿ ದೊಡ್ಡಮನುಷ್ಯರನ್ನು ಲಾಕಪ್ಪುಗಳ ಮೇಲ್ವಿಚಾರಣೆಗೆ ನೇಮಕ ಮಾಡಿಕೊಡಬೇಕು ಉ—ಸದ್ಯದಲ್ಲಿ ಇದು ಸಾಧ್ಯವಲ್ಲ ಹಾಗೆ ಏರ್ಪಾಡು ಮಾಡಿದರೆ ಇಲಾಖೆಯ ಬಿಗಿಯು ಕೆಡಲು ಅವಕಾಶವಾದೀತು

ಪ್ರಾ—ಅನೇಕ ಕಡೆಗಳಲ್ಲಿ ಹೆಂಗಸರು ಅಪರಾಧಿಗಳಾಗಿ ಸಿಕ್ಕಿದರೆ ಅವರನ್ನು ಇಡುವುದಕ್ಕೆ ಪ್ರತ್ಯೇಕವಾದ ಪೋಲೀಸ್ ಲಾಕಪ್ಪುಗಳು ಇಲ್ಲ ಇದರಿಂದ ನಾನಾ ಕಷ್ಟನಷ್ಟಗಳುಂಟು ಉ—ಇದು ನಮಗೂ ತಿಳಿದಿದೆ ಸಾಧ್ಯವಾದಾಗೆಲ್ಲಾ ಪ್ರತ್ಯೇಕವಾದ ಕಟ್ಟಡಗಳನ್ನು ಮಾಡಿಸುತ್ತೇವೆ

ಪ್ರಾ—ಸಣ್ಣ ವಯಸ್ಸಿನವರು ಅಪರಾಧಿಗಳಾಗಿ ಬಂದರೆ ಅವರನ್ನು ವಯಸ್ಸಾದ ವ್ಯಕ್ತಿಗಳ ಕೂಡ ಸೇರಿಸದೆ ಅವರಿಗೆ ಪ್ರತ್ಯೇಕವಾದ ಶಿಕ್ಷಣನಿಲಯವನ್ನು ಮಾಡಿ ವಿದ್ಯೆ, ಕಸಬು ಮುಂತಾದ್ದನ್ನು ಕಲಿಸುವಂತೆ ಏರ್ಪಾಡು ಮಾಡಬೇಕು ಉ—ಈಗಲೂ ಅಂಥವರನ್ನು ದೊಡ್ಡ ಖೈದಿಗಳ ಸಂಪರ್ಕಕ್ಕೆ ಬಿಡುವುದಿಲ್ಲ ಹುಡುಗರ ಸಂಖ್ಯೆ ಹೆಚ್ಚಿದಾಗ ಈ ಭಾಗವನ್ನು ಯೋಚಿಸೋಣ

ಪ್ರಾ—ಪೋಲೀಸಿನವರಲ್ಲಿ ತಕ್ಷೀರುಗಳ ಎ ಬಿ ಸಿ ರಿಪೋರ್ಟುಗಳನ್ನು ವರುಷಾಂತರವಾದರೂ ಇಟ್ಟುಕೊಂಡಿರುತ್ತಾರೆ ಉ—ನೀವು ಹೇಳಿರುವ ಸಂಗತಿಯನ್ನು ಪೋಲೀಸ್ ಇನ್ಸ್ಪೆಕ್ಟರ್ ಜನರಲ್ರವರ ತಿಳುವಳಿಕೆ ಮತ್ತು ತನಿಖೆ ಬಗ್ಗೆ ಬರೆದು ಕಳುಹಿಸುತ್ತೇವೆ

ಪ್ರಾ—ಗೋಕಾಯಿಗಳ ಕಳುವು ಬಹಳವಾಗಿ ಹೆಚ್ಚಿದೆ ಅದನ್ನು ಕಟ್ಟುನಿಟ್ಟಾಗಿ ತಡೆಯದಿದ್ದರೆ ವ್ಯವಸಾಯವು ಕ್ಷೀಣಗತಿಗೆ ಬಂದೀತು ಉ—ಈ ಭಾಗದಲ್ಲಿ ಏನುಮಾಡಬಹುದೆಂದು ಸರ್ಕಾರದವರು ಆಲೋಚನೆಮಾಡುತ್ತಿದ್ದಾರೆ

ಪ್ರಾ—ತಕ್ಷೀರು ನಡೆದ ವಿಷಯದಲ್ಲಿ ಪೋಲೀಸ್ ಪಟೇಲನು ರಿಪೋರ್ಟನ್ನು ಮೂರು ಪ್ರತಿಗಳಾಗಿ ಬರೆದು ಒಂದನ್ನು ತನ್ನ ಬಳಿ ಇಟ್ಟುಕೊಂಡು, ಒಂದನ್ನು ಪೋಲೀಸ್ ಆಫೀಸರಿಗೂ, ಇನ್ನೊಂದನ್ನು ಅಮಲ್ದಾರರಿಗೂ ಕಳುಹಿಸುವಂತಾದರೆ ತಕ್ಷೀರಿನ ವಿದ್ಯಮಾನಗಳು ಸಹಜವಾದ ರೀತಿಯಲ್ಲಿ ತಿಳಿಯಲು ಸಹಾಯವಾಗುತ್ತದೆ ಈಗ ನಾನಾ ಅಕ್ರಮಗಳು ನಡೆಯಲು ಅವಕಾಶವಿದೆ ಉ—ಚೀಫ್ ಕೋರ್ಟಿನವರು ಇಂಥಾ ಬದಲಾವಣೆ ಅವಶ್ಯಕವಿಲ್ಲವೆನ್ನುತ್ತಾರೆ ನಮಗೆ ಸ್ವಲ್ಪ ಸಂಶಯ ಉಂಟಾಗಿದೆ ಯೋಚಿಸಿ ಇತ್ಯರ್ಥಮಾಡುವೆವು

ಪ್ರಾ—ಸಂಸ್ಥಾನದ ಅನೇಕ ಕಡೆಗಳಲ್ಲಿ ಉತ್ಸವ, ಮೆರವಣಿಗೆಗಳು ಬೀದಿಗಳಲ್ಲಿ ಹೋಗಬಹುದಕ್ಕೆ ನಾನಾ ಪ್ರತಿಬಂಧಕಗಳುಂಟು ಸರ್ಕಾರದ ರಸ್ತೆಯಲ್ಲಿ ಇಂಥಾ ನಿರ್ಬಂಧಗಳೇನೂ ಇರಕೂಡದೆಂದು ಹುಕುಂ ಆಗಬೇಕು ಮಾಮೂಲ್ ಎಂಬುವುದನ್ನು ತಪ್ಪಿಸದೆಹೋದರೆ ನಾನಾ ಘೋರ ಕಲಹಗಳಿಗೂ, ಪ್ರಜೆಗಳು ಕಡಿದಾಡಿ ಹಾಳಾಗಿಹೋಗುವುದಕ್ಕೂ, ಸ್ಥಳಾಧಿಕಾರಿಗಳು ಅಕ್ರಮಗಳನ್ನು ನಡೆಸುತ್ತಾರೆಂಬ ಅಪವಾದಕ್ಕೂ ಅಂತ್ಯವಿರಲಾರದು ಹಿಂದು ಸ್ಥಾನದ ಹೈಕೋರ್ಟ್ ಜಡ್ಜಿಗಳು ಈ ಮಾಮೂಲನ್ನು ರದ್ದುಮಾಡಿಬಿಟ್ಟಿದ್ದಾರೆ ಅದರಂತೆ ನಮ್ಮ ಸೀಮೆಯೊಳಗೂ ಇದನ್ನು ವಜಾಮಾಡಿದರೆ ಕ್ಷೇಮ ಉ—ಸದ್ಯ ಗವರ್ನಮೆಂಟಿನವರು ಆ ರೀತಿ ಮಾಡಲು ಸಾಧ್ಯವಲ್ಲ ಕಾಲಾನುಕಾಲದಲ್ಲಿ ಆ ರೀತಿ ಆಗಬಹುದು

ರೆವಿನ್ಯೂ ವಿಚಾರಗಳು

ಪ್ರಾ—ರೆವಿನ್ಯೂ ಕಮಿಷನರವರ ಕೋರ್ಟಿಗೆ ಲಾಯರು ಹಾಜರಾಗಿ ಕಕ್ಷಿಗಾರರ ಮೊಕದ್ದಮೆಯನ್ನು ಕುರಿತು ವಾದಿಸುವುದಕ್ಕೆ ಅವಕಾಶಕೊಡಬೇಕು ಹೋದ ವರುಷ ಆ ರೀತಿ ಹುಕುಂ ಕೊಡುತ್ತೇವೆಂದು ಅಪ್ಪಣೆ ಆಗಿತ್ತು [ಈ ವಿಷಯ ಬಹಳ ದೀರ್ಘವಾಗಿ ಚರ್ಚೆಯಾಯಿತು ಸೀನಿಯರ್ ಕೌನ್ಸಿಲರವರು ಅಪ್ಪಣೆಕೊಡಿಸುದೆಂಬ ಇರಾದೆಯುಳ್ಳವರಾಗಿದ್ದರು ರೆವಿನ್ಯೂ ಕಮಿಷನರವರು ಪ್ರತಿನಿಧಿಗಳ ಕೂಡ ಬಹಳ ಹೋರಾಡಿದರು ದಿವಾನರವರು ರೆವಿನ್ಯೂ ಕಮಿಷನರ ಸಂಗಡ ಸ್ವಲ್ಪ ಹೊತ್ತು ಚರ್ಚೆಮಾಡಿ] ಉ—ಇನ್ನೂ ಸ್ವಲ್ಪ ಆಲೋಚನೆ ಮಾಡಿ ಇಷ್ಟರಲ್ಲೇ ಹುಕುಂ ಕೊಡುತ್ತೇವೆ

ಪ್ರಾ—ಮಾಲ್ಕಿ ಹರಾಜನ್ನು 50 ರೂಪಾಯಿನೊಳಗಿದ್ದರೆ ಅಮಲ್ದಾರರು ಖಾಯಂ ಮಾಡಬಹುದು 100 ರೂಪಾಯಿ ವರೆಗೆ ಅವರ ಅಧಿಕಾರವನ್ನು ಹೆಚ್ಚಿಸಿ ಕೊಡಬೇಕು ಉ—ಇದು ಒಳ್ಳೇ ವಿಷಯ ಯೋಚಿಸಿ ತೀರ್ಮಾನ ಮಾಡುತ್ತೇವೆ ಇದರ ಕೂಡ ಮನೆಯ ನಿವೇಶನದ ಹರಾಜು 25 ರೂಪಾಯಿ ವರೆಗೂ ಅಮಲ್ದಾರರಿಗೆ ಖಾಯಂ ಮಾಡುವ ಅಧಿಕಾರಕೊಡುವುದನ್ನು ಇತ್ಯರ್ಥಮಾಡುವೆವು

ಪ್ರಾ—ಪಟೇಲ್ ಶಾನುಭೋಗರಿಗೆ ಪಾವತಿ ಆಗುವ ಪೋಟಿಗೆ ಹಣ ತಿಂಗಳಿಗೆ 8 10 ರೂಪಾಯಿ ಕೂಡ ಆಗುವುದಿಲ್ಲ ಈ ಕಷ್ಟಕಾಲದಲ್ಲಿ ಅವರು ಸತ್ಯವಂತರಾಗಿ ಜೀವನ ಮಾಡುವುದು ಬಹಳ ಸಂಕಟಕರವಾಗಿದೆ ಎಲ್ಲರಿಗೂ ತಲಾ ತಿಂಗಳಿಗೆ 10 ರೂಪಾಯಿಯಾದರೂ ಬರುವಂತೆ ನಿಗದಿ ಮಾಡಿಕೊಡಬೇಕು ಉ—ಸದ್ಯದಲ್ಲಿ ಇದು ಸಾಧ್ಯವಲ್ಲ ಮುಂದೆ ನೋಡೋಣ

ಪ್ರಾ—ತೋಟಿ ತಳವಾರರು ಗ್ರಾಮಗಳಲ್ಲಿ ಪ್ರಜೆಗಳಿಗೆ ಯಾವ ವಿದವಾದ ಕೆಲಸ ಮಾಡತಕ್ಕವರಲ್ಲ ಸರ್ಕಾರದ ನೌಕರಿ ಮಾಡುತ್ತಾರೆ ಪಟೇಲ್ ಶಾನುಭೋಗರ ತಾಬೆಯಲ್ಲಿದ್ದು ರೈತರನ್ನು ಕಷ್ಟನಷ್ಟಗಳಿಗೆ ಗುರಿಪಡಿಸುವುದೆಷ್ಟೋ ಅಷ್ಟೇ ಇವರಿಗೆ ಈ ನೌಕರಿಗಾಗಿ ಸರ್ಕಾರದಿಂದ ಇನಾಮತಿಗಳುಂಟು ಇದರ ಮೇಲೂ ರೈತರು ಅವರಿಗೆ ಎಕರೆಗೆ ಇಷ್ಟೆಂದು ದವಸವನ್ನು ಪಾವತಿಮಾಡಬೇಕೆನ್ನುವುದು ರೈತರಿಗೆ ನಷ್ಟ ಬೆಳೆಯುವ ರೈತನಿಗಿಂತಲೂ ಈ ನೌಕರರ ಜೀವನವೇ ಎಷ್ಟೋ ಸುಖವಾಗಿದೆ ಈ ಮಿರಾಸನ್ನು ತಪ್ಪಿಸಿಕೊಡಬೇಕು ಇದು ಸಾಧ್ಯವಲ್ಲದಿದ್ದರೆ ಎಕರೆಗೆ ಇಷ್ಟೆಂದು ವರಿ ಕೊಡುವುದನ್ನು ವಜಾ ಮಾಡಿ ಕುಳವಾರು ಮಿರಾಸು ಕೊಡತಕ್ಕದ್ದೆಂದು ವಿಧಿಸಬಹುದು ಹೀಗೂ ಸರ್ಕಾರದವರಿಗೆ ಇಷ್ಟವಾಗದಿದ್ದರೆ ಈ ಮಿರಾಸನ್ನೇ ಸಂಪೂರ್ಣವಾಗಿ ವಜಾಮಾಡಿ ಕುಳವಾರು ಒಂದು ಸೆಸ್ಸನ್ನು ಹಾಕಿದರೂ ಸಮ್ಮತ ಉ—ಈ ವಿಚಾರವು ಹತ್ತಾರು ವರುಷಗಳಿಂದ ಚರ್ಚೆಯಾಗುತ್ತಿದೆ ಸರ್ಕಾರದವರು ಇದರ ತನಿಖೆಗಾಗಿ ಒಂದು ಕಮಿಟಿಯನ್ನು ನೇಮಕಮಾಡಿದರು ಅವರು ಆಲೋಚನೆಮಾಡಿ ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ತಿಳಿಸಿರುತ್ತಾರೆ ಇನ್ನೂ ಕೆಲವು ಅಭಿಪ್ರಾಯಗಳನ್ನು ತರಿಸಿಕೊಂಡು ಬೇಗನೆ ಇತ್ಯರ್ಥಮಾಡುವೆವು

ಪ್ರಾ—ಯಾವ ಕೆರೆಯ ಕೆಳಗೆ ತರಿ ವ್ಯವಸಾಯಕ್ಕೆ ನೀರು ಒದಗುವುದಿಲ್ಲವೋ ಅಂಥಾ ಜಮೀನುಗಳ ತರಿ ಕಂದಾಯದಲ್ಲಿ ಅರ್ಧ ಭಾಗವನ್ನು ಪೂರ್ವದಲ್ಲಿ ಮಾಡುತ್ತಿದ್ದಂತೆ ಮಾಫ್ ಮಾಡಿಕೊಡಬೇಕು ರೈತರು ಬೆಳೆ ಇಲ್ಲದೆ ಬರೀ ಕಂದಾಯ ತೆತ್ತುತ್ತಿದ್ದಾರೆ ಉ—ಇದು ಸಾಧ್ಯವಲ್ಲ

ಪ್ರಾ—ಕೆರೆ ಕೆಳಗಿನ ತರಿ ಜಮೀನುಗಳಿಂದ ವಸೂಲಾಗುವ ನೀರಿನ ಸೆಸ್ಸನ್ನು ಆಯಾ ಕೆರೆಯ ಅಚ್ಚುಕಟ್ಟಿಗಾಗಿಯೇ ಉಪಯೋಗಿಸಿದರೆ ಕ್ಷೇಮ ಇದರಿಂದ ರೈತರಿಗೂ ಸರ್ಕಾರಕ್ಕೂ ತುಂಬಾ ಅನುಕೂಲ ಉ—ಈ ಭಾಗದಲ್ಲಿ ನಮ್ಮಲ್ಲಿಗೆ ಒಂದು ರಿಪೋರ್ಟು ಬಂದಿದೆ ಗವರ್ನಮೆಂಟಿನವರು ಯೋಚಿಸಿ ತೀರ್ಮಾನಮಾಡುತ್ತಾರೆ

ಪ್ರಾ—ಸಾಲುಮರಗಳನ್ನು ಹಾಕಿ ಕಾಪಾಡುವ ಭಾರವನ್ನು ಗ್ರಾಮಾಧಿಕಾರಿಗಳಿಗೆ ವಹಿಸಿರುವುದರಿಂದ ಅವರಿಗೆ ಬಹಳ ಕಷ್ಟಕರವಾಗಿದೆ ಬೇಸಗೆಯಲ್ಲಿ ನೀರು ಗಿಡಗಳಿಗೆ ತರಿಸಿ ಹಾಕುವುದು ಮಹಾ ಪ್ರಯಾಸ ಇದನ್ನು ಅವರಿಗೆ ತಪ್ಪಿಸಿಕೊಡಬೇಕು ಸರ್ಕಾರದವರೇ ವಹಿಸಿಕೊಳ್ಳುವುದು ಕ್ಷೇಮ ಉ—ಇದು ಆಗುವುದಿಲ್ಲ ಸ್ಥಳೀಯ ಕಮಿಟಿ ಮೆಂಬರುಗಳು ಏರ್ಪಟ್ಟು ಈ ಕೆಲಸವನ್ನು ವಿಚಾರಕ್ಕೆ ಇಟ್ಟು ನೋಡಿಕೊಳ್ಳಬೇಕು

ಪ್ರಾ—ಅನುಭವದಾರನು ಕಂದಾಯ ಕೊಡದಿದ್ದರೆ ಅವನ ಜಮೀನನ್ನು ಹರಾಜುಮಾಡಿಸದೆ ಖಾತೇದಾರನ ಜಮೀನುಗಳನ್ನು ಹರಾಜು ಮಾಡಿಸುತ್ತಾರೆ. ಇದು ತುಂಬಾ ಅನ್ಯಾಯ, ಇದನ್ನು ತಪ್ಪಿಸಿ ಕ್ರಮಪಡಿಸಬೇಕು ಉ—ಗವರ್ನಮೆಂಟಿನವರ ಆಲೋಚನೆಯಲ್ಲಿದೆ ಇತ್ಯರ್ಥಮಾಡುವೆವು

ಪ್ರಾ—ಲಾಂಟಾನಾ, ಪಾಪಾಸುಕಳ್ಳಿ, ಮುಟ್ಟಿದರೆಮುನಿ, ಈ ಗಿಡಗಳು ಅಪಾರವಾಗಿ ಹಬ್ಬಿಕೊಂಡು ಗ್ರಾಮ ಊರುಗಳನ್ನೇ ನಾಶಮಾಡಿವೆ, ಇನ್ನೂ ನಾಶಮಾಡುತ್ತಿರುವವು ಈ ವಿಷಯದಲ್ಲಿ ಸರ್ಕಾರದವರು ಜಾಗ್ರತೆ ಗಮನ ಕೊಟ್ಟು ಕಟ್ಟುನಿಟ್ಟಾದ ಕ್ರಮವನ್ನು ರೂಢಿಸಬೇಕಲ್ಲದೆ ಸರ್ಕಾರಿ ಜಮೀನುಗಳಿಂದ ಮೊದಲು ಆ ಗಿಡಗಳನ್ನು ತೆಗೆಸಿಹಾಕಬೇಕು ಉ—ಗವರ್ನಮೆಂಟಿನವರ ಯೋಚನೆಯಲ್ಲಿದೆ ಇನ್ನೂ ಸರಿಯಾದ ಪರಿಹಾರಮಾರ್ಗ ಗೊತ್ತಾಗಲಿಲ್ಲ ಒಳ್ಳೇದು, ನಿಮ್ಮ ಹೇಳಿಕೆಯನ್ನು ಗುರುತುಹಾಕಿಕೊಂಡಿದ್ದೇವೆ

ಪ್ರಾ—ಮಲೆನಾಡಿನಲ್ಲಿ ನಗದೀಮಾತು ಇನಾಮುಗಳನ್ನು ತೆಗೆದುಕೊಳ್ಳುವುದಕ್ಕೆ ಗ್ರಾಮಗಳಿಂದ ಬಹಳ ದೂರ ತಾಲ್ಲೂಕಿಗೆ ಹೋಗಿಬರುವುದು ತುಂಬಾ ಪ್ರಯಾಸ ಮನಿಯಾರ್ಡರು ಮೂಲಕ ಆ ಮೊಬಲಗು ಪಾವತಿ ಮಾಡಿಸಿದರೆ ಕ್ಷೇಮ ಉ—ಸರ್ವತ್ರ ಈ ರೀತಿ ಹುಕುಂ ಮಾಡಲಾಗದು ಕಷ್ಟವಿರತಕ್ಕವರು ಅರ್ಜಿ ಬರೆದುಕೊಂಡರೆ ವಿಚಾರಿಸಿ ಅನುಕೂಲಮಾಡಿಕೊಡಬಹುದು

ಫಾರೆಸ್ಟ್ ವಿಚಾರಗಳು

ಪ್ರಾರ್ಥನೆ—ನಗರ್ ತಾಲ್ಲೂಕಿನಲ್ಲಿ ಈಚೆಗೆ ಹೊಸದಾಗಿ ಮೂರು ಫಾರೆಸ್ಟುಗಳನ್ನು ಮಾಡಿ ಸರ್ಕಾರದ ಸ್ಟೇಟ್ ಫಾರೆಸ್ಟಿಗೆ ಸೇರಿಸುವುದರಿಂದ ರೈತರಿಗೆ ಬಿಟ್ಟಿರುವ ಕಾಡಿನಲ್ಲಿ ಯಾವುದೊಂದೂ ಸಿಕ್ಕುವುದಿಲ್ಲ ರೈತರ ಕೆಲಸಗಳಿಗೆ ತುಂಬಾ ನಿರ್ಬಂಧವುಂಟಾಗಿದೆ ಉ—ವಿಚಾರಿಸಿ ಅನುಕೂಲಮಾಡಿಕೊಡುವಂತೆ ಫಾರೆಸ್ಟ್ ಇಲಾಖೆಗೆ ಬರೆಯುತ್ತೇವೆ

ಪ್ರಾ—ಗಂಧದ ಮರಗಳಿರುವ ಜಮೀನಿಗೆ ದರಖಾಸ್ತು ಮಾಡಿದರೆ ಆ ಮರಗಳ ಕ್ರಯವನ್ನೂ ಸರ್ಕಾರಕ್ಕೆ ಕಟ್ಟಬೇಕಾಗಿದೆ ಇದರಿಂದ ಬಡಬಗ್ಗರಿಗೆ ಜಮೀನು ಸಿಕ್ಕುವುದು ದುರ್ಲಭ ಗಂಧದ ಮರಗಳ ಹಣ ಕಟ್ಟಲಿಲ್ಲವೆಂದು ಅನೇಕ ದರಖಾಸ್ತುಗಳನ್ನು ಸ್ಥಳಾಧಿಕಾರಿಗಳು ವಜಾಮಾಡಿರುತ್ತಾರೆ ಉ—ಸರ್ಕಾರದಲ್ಲಿ ಈ ವಿಷಯ ಚರ್ಚೆಯಾಗಿ ಪೈಸಲಿಗೆ ನಿಂತಿದೆ ಬೇಗನೆ ತೀರ್ಮಾನ ಮಾಡುವೆವು ಸಂದಲ್ ಗಿಡಗಳಿರುವ ಜಮೀನನ್ನು ರೈತನು ರಾಜೀನಾಮೆಕೊಟ್ಟು ಬಿಟ್ಟುಬಿಟ್ಟರೆ ಆ ಗಿಡಗಳನ್ನು ಕಾಪಾಡಿದ್ದಕ್ಕೋಸ್ಕರ ಅವನಿಗೆ ಪ್ರತಿಫಲ ಕೊಡಬೇಕೆಂಬ ವಿಷಯವೂ ಇಷ್ಟರಲ್ಲೇ ಇತ್ಯರ್ಥವಾಗಬಹುದು

ಪ್ರಾ—ಸೌದೆಗೂ ಬೇಲಿ ಹಾಕಿಕೊಳ್ಳುವುದಕ್ಕೂ ಸಣ್ಣ ಬಿದಿರನ್ನು (ಕಿಬ್ಬು) ರೈತರು ಮಾಫಿ ಲೈಸೆನ್ಸು ಪಡೆದು ತಂದುಕೊಳ್ಳುತ್ತಿದ್ದರು ಈಗ ಲೈಸೆನ್ಸಿಗೆ 8 ಆಣೆ, 1 ಆಣೆ ರುಸುಂ ಹಾಕಿ ವಸೂಲ್ಮಾಡುತ್ತಾರೆ ಇದನ್ನು ವಜಾಮಾಡಿ ರೈತರ ಕಸುಬಿಗೂ ಜೀವನಕ್ಕೂ ಮೊದಲಿನಂತೆ ಸಹಾಯ ಮಾಡಬೇಕು ಉ—ಫಾರೆಸ್ಟ್ ಕನ್ಸರ್ವೇಟರಿಗೆ ಬರೆದು ಕೇಳಿರುತ್ತೇವೆ, ಅವರ ರಿಪೋರ್ಟು ಬಂದನಂತರ ಯೋಚಿಸುವೆವು

ಪ್ರಾ—ಹಿಡುವಳಿ ಜಮೀನಿನಿಂದಲೂ ಕಾಫಿ ತೋಟಗಳಿಂದಲೂ ಮರಗಳನ್ನು ಕಡಿದು ಸಾಗಿಸಿಕೊಳ್ಳುವುದಕ್ಕೆ ಫಾರೆಸ್ಟಿನವರು ಎಷ್ಟು ದಿನಗಳಾದರೂ ಲೈಸೆನ್ಸು ಕೊಡುವುದಿಲ್ಲ ಕಡಿದ ಮರಗಳು ಕೆಟ್ಟು ಹಾಳಾಗುತ್ತವೆ ಬೇಗ ಅಪ್ಪಣೆ ಸಿಕ್ಕುವಂತೆ ಹುಕುಂ ಆಗಬೇಕು ಉ—ಅಂಥಾ ರೈತರೂ ಪ್ಲಾಂಟರುಗಳೂ ಎರಡು ತಿಂಗಳ ತನಕ ನಿರೀಕ್ಷಿಸಿ ಅದುವರೆಗೆ ಲೈಸೆನ್ಸ್ ಬಾರದಿದ್ದರೆ ಬಗರು ಲೈಸೆನ್ಸಿನಿಂದ ಮರವನ್ನು ಸಾಗಿಸಿಕೊಳ್ಳುವಂತೆ ಹುಕುಂ ಕೊಡುತ್ತೇವೆ

ವ್ಯವಸಾಯ ವಿಚಾರಗಳು

ಪ್ರಾರ್ಥನೆ—ಬುದ್ಧಿಶಾಲಿಗಳಾದ ರೈತರ ಮಕ್ಕಳನ್ನು ಸಂಸ್ಥಾನದ ಮುಖ ಜುನಾಯಿಸಿ ಸರ್ಕಾರದ ಖರ್ಚಿನಿಂದ ಹೆಬ್ಬಾಳದ ವ್ಯವಸಾಯದ ಫಾರಂನಲ್ಲಿಟ್ಟುಕೊಂಡು ಹೆಬ್ಬಾಳದ ವ್ಯವಸಾಯದ ಫಾರಂನಲ್ಲಿ ಅವರಿಗೆ ನೂತನ ವ್ಯವಸಾಯಕ್ರಮಗಳನ್ನು ಕಲಿಸಬೇಕು ಉ—ಸದ್ಯದಲ್ಲಿ ಸ್ವಲ್ಪಮಟ್ಟಿಗೆ ಇಂಗ್ಲೀಷ್ ತಿಳಿದ ಹುಡುಗರನ್ನು ಸರ್ಕಾರದವರು ತರಬೇತುಮಾಡುತ್ತಿದ್ದಾರೆ ಇನ್ನು ಕೆಲವು ಕಾಲಾಂತರ ಹುಡುಗರಿಗೆ ಕನ್ನಡದಲ್ಲೇ ಒಂದು ವರುಷದ ವರೆಗೆ ವ್ಯವಸಾಯವನ್ನು ಕಲಿಸುವುದನ್ನು ಪ್ರಾರಂಭಿಸಬೇಕೆಂದಿರುತ್ತಾರೆ ಇದಲ್ಲದೆ ವ್ಯವಸಾಯ ಕ್ರಮವನ್ನು ಕಲಿತು ರೈತರ ಬಳಿ ಇದ್ದುಕೊಂಡು ಗ್ರಾಮಾಂತರ ಸಂಚಾರಮಾಡುತ್ತಾ ಎಲ್ಲಾ ವಿಚಾರಗಳನ್ನು

ರೈತರಿಗೆ ಹೇಳಿಕೊಡುವುದಕ್ಕಾಗಿ ಕೆಲವು ಇನ್‌ಸ್ಪೆಕ್ಟರುಗಳನ್ನೂ ನೇಮಕಮಾಡುವೆವು.

ಪ್ರಾ.—ವ್ಯವಸಾಯದ ಮುಟ್ಟುಗಳನ್ನೂ, ಬೀಜ ಗೊಬ್ಬರ ಮುಂತಾದವುಗಳನ್ನೂ ರೈತರು ಅಪೇಕ್ಷಿಸಿದಾಗ ತರಿಸಿಕೊಳ್ಳುವುದು ಬಹಳ ಕಷ್ಟ. ಸರ್ಕಾರದವರು ಬೆಂಗಳೂರಿನಲ್ಲಿ ಮಾತ್ರ ಒಂದು ಡಿಪೋ ಇಟ್ಟಿದಾರೆ. ತಾಲ್ಲೂಕಿನಲ್ಲಿ ಅಂಥಾ ಡಿಪೋ ಇಡಿಸಿಕೊಟ್ಟರೆ ಅನುಕೂಲ. ಉ.—ತಾಲ್ಲೂಕುಗಳಲ್ಲಿ ಡಿಪೋ ಇಟ್ಟರೆ ಪದಾರ್ಥಗಳು ಮಾರಾಟವಾಗದೆ ಕೆಟ್ಟು ಹೋಗುವವು ರೈತರು ಅಮಲ್ದಾರರಿಗೆ ಬರೆದುಕೊಂಡರೆ ಅವರು ಬೇಗನೆ ತರಿಸಿ ಕೊಡುವರು ಈ ಪದಾರ್ಥಗಳ ಬಳಕೆ ಹೆಚ್ಚಿದ ಮೇಲೆ ಸರ್ಕಾರದವರು ತಮ್ಮ ಡಿಪೋವನ್ನು ಮುಚ್ಚಿ, ಖಾಸಗಿ ವರ್ತಕರಿಗೆ ವ್ಯಾಪಾರವಾಗಲು ಅನುಕೂಲ ಮಾಡಿಕೊಡುತ್ತಾರೆ.

ಪ್ರಾ.—ಸರ್ಕಾರದವರು ಸಂಸ್ಥಾನಾದ್ಯಂತವೂ ವ್ಯವಸಾಯದ ಫಾರಮುಗಳನ್ನು ಇಟ್ಟು ಸುತ್ತುಮುತ್ತಣ ಗ್ರಾಮಗಳ ರೈತಪ್ರಜೆಗಳಿಗೆ ವ್ಯವಸಾಯಕಸಬನ್ನು ಸಾಕ್ಷಾತ್ತಾಗಿ ಕಲಿಸಿಕೊಡಬೇಕು. ಉ.—ಜಮೀನುಗಳನ್ನು ಬಾಡಿಗೆಗೆ ಕೊಡಲು ಇಷ್ಟವುಳ್ಳವರು ಸರ್ಕಾರಕ್ಕೆ ಬರೆದುಕೊಂಡರೆ ಅಂಥಾ ಫಾರಂಗಳನ್ನು ಇಡಿಸುತ್ತೇವೆ.

ಪ್ರಾ.—ಈಗ ಡಿಸ್ಟ್ರಿಕ್ಟಿಗೆ ಒಬ್ಬರಂತೆ ನೇಮಕವಾಗಿರುವ ಪಶುವೈದ್ಯರು ದೂರದೂರದಲ್ಲಿರುವ ಗ್ರಾಮಾಂತರಗಳಿಗೆ ಹೋಗಿ ರೈತರ ಗೋಕಾಯಿಗಳನ್ನು ನೋಡಿ ಚಿಕಿತ್ಸೆ ಮಾಡುವುದು ಬಹಳ ಅಸಾಧ್ಯ. ಅವರು ಬಂದು ನೋಡುವಷ್ಟರಲ್ಲೇ ಅನೇಕ ಗೋಕಾಯಿಗಳು ಸತ್ತುಹೋಗುತ್ತವೆ. ಪ್ರತಿ ತಾಲ್ಲೂಕಿಗೂ ಒಬ್ಬೊಬ್ಬ ಪಶುವೈದ್ಯರನ್ನು ನೇಮಿಸಿಕೊಡಬೇಕು. ಇದು ಸಾಧ್ಯವಾಗುವ ತನಕ ಗ್ರಾಮಾಂತರಗಳಲ್ಲಿ ಹಾಲಿ ಸಾಲಂತ್ರಿಗಳಾಗಿರುವ ಖಾಸಗಿ ಪಶುವೈದ್ಯರಿಗೆ ಸರ್ಕಾರದಿಂದ ಅಲ್ಪ ಸ್ವಲ್ಪ ವರುಷಾಶನವನ್ನಾದರೂ ಕೊಡಿಸುತ್ತಾ ಬರಬೇಕು. ಉ.—ಹಣ ಒದಗಿ ವೈದ್ಯರು ದೊರಕಿದ ಹಾಗೆಲ್ಲಾ ಅವರ ಸಂಖ್ಯೆಯನ್ನು ಹೆಚ್ಚು ಮಾಡುತ್ತೇವೆ. ಎರಡನೇ ವಿಷಯವನ್ನು ವ್ಯವಸಾಯದ ಕಮಿಟಿಯವರು ಆಲೋಚಿಸಿ, ಸರ್ಕಾರಕ್ಕೆ ರಿಪೋರ್ಟು ಕಳಿಸಿದರೆ ಇತ್ಯರ್ಥಮಾಡುವೆವು.

ಸಂಪದಭ್ಯುದಯ ಸಮಾಜ ವಿಚಾರಗಳು.

ಪ್ರಾರ್ಥನೆ.—ಸಂಪದಭ್ಯುದಯ ಸಮಾಜದ ಮೀಟಿಂಗುಗಳನ್ನು ಗುಟ್ಟಾಗಿ ನಡಿಸಬೇಕಾದ ಅಗತ್ಯ ಕಾಣುವುದಿಲ್ಲ. ಪಬ್ಲಿಕ್ ಜನರು ಅಪೇಕ್ಷಿಸಿದರೆ ಮೀಟಿಂಗುಗಳಿಗೆ ಬರುವಂತೆ ಅವಕಾಶವಾಗಬೇಕು. ಉ.—ಕೆಲವು ವೇಳೆ ಸಮಾಜದವರು ವ್ಯಾಪಾರ ಮತ್ತೂ ಕಸಬುಗಳ ವಿಷಯಗಳನ್ನು ಕುರಿತು ಚರ್ಚೆ ಮಾಡುತ್ತಾರೆ. ಅವು ಪ್ರಕಟವಾಗುವುದು ಸರಿಯಲ್ಲ. ಆದದ್ದರಿಂದ ಜನರನ್ನು ಧಾರಾಳವಾಗಿ ಮೀಟಿಂಗಿಗೆ ಸೇರಿಸುವುದಿಲ್ಲ.

ಪ್ರಾ.—ಸಣ್ಣ ಕೆರೆಗಳನ್ನು ಆ ಬಾಡಿಗೆ ತರತಕ್ಕ ವಿಚಾರವನ್ನು ಸಂಪದಭ್ಯುದಯ ಸಮಾಜದವರು ಚರ್ಚೆಮಾಡಿ ತೀರ್ಮಾನಿಸಬಹುದು. ಉ.—ಇದು ಒಳ್ಳೇ ಸಲಹೆ, ಆ ರೀತಿ ಮಾಡುವಂತೆ ತಿಳಿಸುತ್ತೇವೆ

ಪ್ರಾ.—ಸಣ್ಣ ಕಸಬುಗಳೆಲ್ಲಾ ಈಗ ನಿಂತುಹೋಗುತ್ತಿವೆ. ಅವುಗಳನ್ನು ಊರ್ಜಿತಪಡಿಸಿಕೊಟ್ಟರೆ ಆಯಾ ಕಸಬಿನವರಿಗೆ ಜೀವನವಾದೀತು. ಅಂಥವುಗಳನ್ನು ಸರ್ಕಾರದವರು ಗೊತ್ತುಮಾಡಿ, ಆಯಾ ಕಸಬುದಾರರಿಗೆ ಪ್ರೋತ್ಸಾಹ ಕೊಡಬೇಕು. ಉ.—ಈ ವಿಷಯವನ್ನು ಡಿಸ್ಟ್ರಿಕ್ಟ್ ಕಮಿಟಿಯವರು ಮೊದಲು ವಿಚಾರಣೆಮಾಡಿ ಸೆಂಟ್ರಲ್ ಕಮಿಟಿಗೆ ತಮ್ಮ ಅಭಿಮತವನ್ನು ತಿಳಿಸಿದರೆ ಅವರು ಚರ್ಚೆಮಾಡಿ ಗವರ್ನ್‌ಮೆಂಟಿಗೆ ರಿಪೋರ್ಟು ಕಳುಹಿಸುತ್ತಾರೆ. ಸರ್ಕಾರದವರಿಗೆ ಕಾರ್ಯಾರಂಭಮಾಡಲು ಸುಲಭವಾದೀತು

ಪ್ರಾ.—ಗ್ರಾಮಾಂತರ ಪಾಠಶಾಲೆಗಳಲ್ಲಿ ಕಸಬುಗಳಿಗೆ ಸಂಬಂಧಪಡುವ ಶಿಕ್ಷಣವನ್ನು ವಿಶೇಷವಾಗಿ ಮಾಡಿಸಬೇಕು. ಉ.—ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್‌ರವರು ಈ ವಿಚಾರವನ್ನು ಯೋಚಿಸುತ್ತಿದಾರೆ.

ಕಸಬು ಮತ್ತು ವ್ಯಾಪಾರ ವಿಚಾರಗಳು

ಪ್ರಾರ್ಥನೆ.—ವಿದ್ಯುಚ್ಛಕ್ತಿಯ ದರಗಳನ್ನು ಸಣ್ಣ ಕಸಬುಗಳ ಅಭಿವೃದ್ಧಿಗೂ, ದೀಪಗಳನ್ನು ಉರಿಸುವುದಕ್ಕೂ, ಅಡಿಗೆಗೂ, ಬೀಸಣಿಗೆಗೂ, ಇತರ ಚಿಲ್ಲರೆ ಕೆಲಸಗಳಿಗೂ ಉಪಯೋಗಿಸಿಕೊಳ್ಳಲು ಅನುಕೂಲಿಸುವಂತೆ ಇನ್ನೂ ಅಗ್ಗವಾಗಿ ಮಾಡಿಕೊಡಬೇಕು. ಉ.—ಮೊನ್ನೆತಾನೇ ತಕ್ಕಮಟ್ಟಿಗೆ ಕಡಮೆ ಮಾಡಿರುತ್ತೇವೆ. ಜನರು ಈ ಶಕ್ತಿಯನ್ನು ಉಪಯೋಗಿಸಿಕೊಳ್ಳುವುದು ಹೆಚ್ಚುತ್ತಾ ಬಂದಹಾಗೆಲ್ಲಾ ಇನ್ನೂ ದರಗಳನ್ನು ಕಡಮೆಮಾಡುವೆವು

ಪ್ರಾ.—ವ್ಯಾಪಾರ ಪಾಠಶಾಲೆಗಳಲ್ಲೆಲ್ಲಾ ವಿದ್ಯಾರ್ಥಿಗಳಿಗೆ ತಮಿಳು ಹಿಂದುಸ್ತಾನಿ ಭಾಷೆಗಳನ್ನು ಮಾತನಾಡುವ ಮಟ್ಟಿಗೆ ಕಲಿಸಿಕೊಡಬೇಕು. ಉ.—ಮೈಸೂರಿನಲ್ಲಿ ವ್ಯಾಪಾರದ ಪಾಠಶಾಲೆಯನ್ನು ಪ್ರಾರಂಭಮಾಡಿ, ಅದರಲ್ಲಿ ಇವೆರಡನ್ನು ಸೇರಿಸಿ ಹೇಳಿಕೊಡುವಂತೆ ಏರ್ಪಾಡು ಮಾಡುವೆವು.

ಪ್ರಾ.—ಆರೋಗ್ಯ, ವ್ಯಾಪಾರ, ಕಸಬು, ಪ್ರಜೆಗಳ ಕರ್ತವ್ಯ, ಈ ಮೊದಲಾದ ವಿಚಾರಗಳನ್ನು ಕುರಿತು ಕನ್ನಡದಲ್ಲಿ ಉಪನ್ಯಾಸಮಾಡುವಂಥಾ ವಿದ್ಯಾವಂತರನ್ನು ತರಪೇತುಮಾಡಿ ಸಂಬಳಕೊಟ್ಟು ನೇಮಿಸಿ ಗ್ರಾಮಾಂತರಗಳಲ್ಲಿ ಅವರು ಸಂಚರಿಸಿ ಉಪನ್ಯಾಸಮಾಡುತ್ತಾ ಬರುವಂತೆ ಏರ್ಪಾಡುಮಾಡಿಕೊಟ್ಟರೆ ಪ್ರಜೆಗಳಿಗೆ ಅವುಗಳ ಮೇಲೆ ಗಮನ ಬೀಳಲು ಸಹಾಯವಾಗುತ್ತದೆ. ಉ.—ಈ ವಿಚಾರವನ್ನು ಮೊದಲು ಸಂಪದಭ್ಯುದಯ ಸಮಾಜದ ವಿದ್ಯಾಶಾಖೆಯ ಕಮಿಟಿಯವರು ಪರ್ಯಾಲೋಚನೆ ಮಾಡಿ ಅವರ ಅಭಿಪ್ರಾಯವನ್ನು ತಿಳಿಸಲಿ. ಸರ್ಕಾರದವರು ಬಳಿಕ ಇತ್ಯರ್ಥ ಮಾಡಬಹುದು.

ವಿದ್ಯಾ ವಿಚಾರಗಳು.

ಪ್ರಾರ್ಥನೆ.—ಮೈಸೂರು ಸಂಸ್ಥಾನಕ್ಕೆ ಪ್ರತ್ಯೇಕವಾದ ಒಂದು ಸರ್ವ ವಿದ್ಯಾನಿಲಯ (ಯೂನಿವರ್ಸಿಟಿ) ವನ್ನು ಸ್ಥಾಪಿಸಿಕೊಡಬೇಕು. ಉ.—ಈ ವಿಷಯವು ಈ ಸಭೆಯಲ್ಲೂ, ಸಂಪದಭ್ಯುದಯ ಸಮಾಜದಲ್ಲೂ ಚರ್ಚೆಯಾಗಿದೆ. ಒಂದು ಕಮಿಟಿಯನ್ನು ಮಾಡಿ ಈ ನಿಲಯದ ಸ್ಥಾಪನೆಯನ್ನು ಜಾಗ್ರತೆಪಡಿಸಬೇಕೆಂದಿದೇವೆ.

ಪ್ರಾ.—ಬಲಾತ್ಕರಿಸಿ ವಿದ್ಯೆ ಕಲಿಸುವ ಕಾನೂನನ್ನು ಗವರ್ನ್‌ಮೆಂಟಿನವರು ಸಾವಕಾಶಮಾಡದೆ ಪ್ರತಿ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿನಲ್ಲೂ ಜಾರಿಗೆ ತರಬೇಕು. ಇದಲ್ಲದೆ ಸಾಮಾನ್ಯವಾದ ಓದುಬರಹ ಲೆಕ್ಕಗಳ ಜೊತೆಗೆ ಯಾವುದಾದರೊಂದು ಕಸಬನ್ನು ಬಾಲಕರಿಗೆ ಬಲಾತ್ಕರಿಸಿ ಕಲಿಸಬೇಕು. ಉ.—ಸರ್ಕಾರದ ಯೋಚನೆಯಲ್ಲಿದೆ ; ಕೂಡಿದಮಟ್ಟಿಗೂ ಜಾಗ್ರತೆಯಾಗಿ ಜಾರಿಗೆ ತರುವೆವು.

ಪ್ರಾ.—ಶಿವಮೊಗ್ಗೆಯಲ್ಲಿ ಮೊದಲಿದ್ದ ಕಾಲೇಜನ್ನು ಮತ್ತೆ ಸ್ಥಾಪಿಸಿಕೊಡಬೇಕು. ಉ.—ಪ್ರಾರಂಭಿಸಬೇಕೆಂಬ ಕುತೂಹಲ ನಮಗೂ ಉಂಟು, ಆದರೆ ಹಣಕಾಸು ಒದಗುವುದು ಹ್ಯಾಗೆಂದು ಯೋಚಿಸುತ್ತಿದೇವೆ.

ಪ್ರಾ.—ಎ. ವಿ. ಸ್ಕೂಲುಗಳಲ್ಲಿ ಹೆಡ್ ಮಾಸ್ಟರುಗಳು ಸ್ವೇಚ್ಛಾಪ್ರವರ್ತಕರಾಗಿ ಪಕ್ಷಪಾತದಿಂದ ಸ್ಕಾಲರ್‌ಶಿಪ್ಪುಗಳನ್ನು ವಿದ್ಯಾರ್ಥಿಗಳಿಗೆ ಹಂಚುವುದುಂಟು. ಇದನ್ನು ತಪ್ಪಿಸುವುದಕ್ಕೆ ಅಂಥಾ ಸ್ಕೂಲುಗಳ ಮೇಲ್ವಿಚಾರಣೆಗೆ ಒಂದೊಂದು ಕಮಿಟಿಯನ್ನು ನೇಮಿಸಿಕೊಡಬೇಕು. ಉ.—ಎಲ್ಲಾ ಸ್ಕೂಲುಗಳಿಗೂ ಅಂಥಾ ಕಮಿಟಿಗಳನ್ನು ಮಾಡಿಟ್ಟರೆ ಹೆಡ್ ಮಾಸ್ಟರಿಗೂ ವಿದ್ಯಾರ್ಥಿಗಳಿಗೂ ಇರಬೇಕಾದ ಸಂಬಂಧಕ್ಕೆ ಲೋಪವುಂಟಾದೀತು. ಅನ್ಯಾಯವಾಗಿದೆ ಎಂಬ ಸಂದರ್ಭವನ್ನು ಇಲಾಖಾ ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ತಿಳಿಸಿದರೆ ಅವರು ತನಿಖೆಮಾಡಿ ಸಂದರ್ಭಾನುಸಾರ ಹುಕುಂ ಕೊಡುತ್ತಾರೆ.

ಪ್ರಾ.—ಸರ್ಕಾರದ ಬೇರೆಬೇರೆ ಸ್ಕೂಲುಗಳಲ್ಲಿ ಒಂದೇ ತರಗತಿಗೆ ಬೇರೆ ಬೇರೆ ವಿಧವಾದ ಟೆಕ್ಸ್ಟ್ ಬುಕ್ಕುಗಳನ್ನು ಇಟ್ಟಿದಾರೆ. ಇದು ವರುಷಕ್ಕೆ ಒಂದೆರಡುಸಲ ಬದಲಾಗುವುದೂ ಉಂಟು. ಹೀಗಾದರೆ ತಂದೆತಾಯಿಗಳು ಹುಡುಗರಿಗೆ ಪುಸ್ತಕಗಳನ್ನು ಕೊಂಡುಕೊಡುವುದರಲ್ಲೇ ಅವರ ವರಮಾನವೆಲ್ಲಾ ಮುಗಿಯುತ್ತೆ. ಬಡ ನೌಕರರಿಗೂ ಮಧ್ಯವರ್ತಿಗಳಾದ ಪ್ರಜೆಗಳಿಗೂ ಬಹಳ ನಷ್ಟ. ಎಲ್ಲಾ ಸ್ಕೂಲುಗಳಲ್ಲೂ ಆಯಾ ತರಗತಿಗಳಿಗೆ ಒಂದೇ ಹೆಸರಿನ ಪುಸ್ತಕಗಳನ್ನು ಇಟ್ಟು ಹೇಳಿಕೊಡುವಂತೆ ಹೆಡ್ ಮಾಸ್ಟರುಗಳಿಗೆ ಹುಕುಂ ಆಗಬೇಕು. ಉ.—ಇದು ನ್ಯಾಯವಾದ ವಿಷಯ. ವಿದ್ಯೆ ಕಲಿಯುವುದಕ್ಕೆ ಜನರು ಬಹಳ ಹಣ ಖರ್ಚು ಮಾಡಬೇಕಾಗುತ್ತೆ. ಈ ರೀತಿ ಆಗದಂತೆ ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ಹೇಳಿದೇವೆ. ಅವರು ಈ ಭಾಗದಲ್ಲಿ ಸ್ಕೂಲುಗಳಿಗೆಲ್ಲಾ ತಕ್ಕ ಹುಕುಂ ಕೊಡುತ್ತಾರೆ.

ಪ್ರಾ.—ಮಲೆನಾಡಿನಲ್ಲಿ ಪ್ರತಿ ಒಂದು ಗ್ರಾಮದಲ್ಲೂ ಒಂದು ಹೋಬಳಿ ಸ್ಕೂಲನ್ನು ಇಟ್ಟುಕೊಡಬೇಕು. 15 ಹುಡುಗರಾದರೂ ಇರಬೇಕೆಂಬ ನಿರ್ಬಂಧವನ್ನು ತಪ್ಪಿಸಬೇಕು. ಉ.—ಯೋಚಿಸಿ ಹುಕುಂ ಕೊಡುತ್ತೇವೆ.

ಪ್ರಾ.—ಪರಸ್ಥಳಗಳಿಂದ ಬರುವ ಸ್ಕೂಲ್ ವಿದ್ಯಾರ್ಥಿನಿಯರಿಗೆ ವಾಸಮಾಡುವುದಕ್ಕೆ ನಿಲಯಗಳನ್ನು ಕಲ್ಪಿಸಿಕೊಡಬೇಕು. ಉ.—ಯೋಚನೆಯಲ್ಲಿದೆ, ಮಾಡುತ್ತೇವೆ.

ಪ್ರಾ.—ಉಪಾಧ್ಯಾಯರು ತೃಪ್ತಿಕರವಾಗಿ ಕೆಲಸ ಮಾಡಬೇಕಾದರೆ ಅವರಿಗೆ ಕಡೇಪಕ್ಷ 15 ರೂಪಾಯಾದರೂ ಸಂಬಳ ನಿಗದಿಯಾಗಬೇಕು. ಇಲ್ಲವಾದರೆ ಒಳ್ಳೇ ಉಪಾಧ್ಯಾಯರು ಸಿಕ್ಕುವುದಿಲ್ಲ. ಉ.—ಈ ವಿಚಾರವನ್ನು ಬೇಗನೆ ಇತ್ಯರ್ಥಮಾಡಿ ಹುಕುಂ ಕೊಡುವೆವು

ಪ್ರಾ.—18 ಅಥವಾ 20 ವಯಸ್ಸಿನೊಳಗೆ ಮದುವೆ ಮಾಡಿಕೊಂಡಿರುವ ವಿದ್ಯಾರ್ಥಿಗಳಿಗೆ ಸ್ಕೂಲುಗಳಲ್ಲಿ ಯಾವ ವಿಧವಾದ ರಿಯಾಯತಿಯೂ ದೊರಕದಂತೆ ಮಾಡಿಟ್ಟರೆ ಬಾಲ್ಯವಿವಾಹ ನಿಲ್ಲುವುದು. ಉ.—ಇದೇನೋ ಒಳ್ಳೆಯ ಸಲಹೆ, ಆದರೆ ರೂಢಿಸುವುದರಲ್ಲಿ ಕಷ್ಟವಿದೆ

ಪ್ರಾ.—ಸ್ಕೂಲ್ ಫೈನಲ್ ಪರೀಕ್ಷೆಗೆ ಇಟ್ಟಿರುವ ಐಚ್ಛಿಕ ಭಾಗಗಳು ಅನೇಕವಾಗಿವೆ. ಅವುಗಳಲ್ಲಿ ಮುಖ್ಯವಾದ ಎರಡು ಮಾತ್ರ ಇಟ್ಟುಕೊಂಡು ಉಳಿದವುಗಳನ್ನು ಬಿಟ್ಟುಬಿಡಬಹುದು. ಉ.—ಇನ್‌ಸ್ಪೆಕ್ಟರ್ ಜನರಲ್‌ರವರು ಈ ವಿಷಯದಲ್ಲಿ ರಿಪೋರ್ಟು ಕಳುಹಿಸಿದಾರೆ. ಅದು ಗವರ್ನ್‌ಮೆಂಟಿನವರ ಪರ್ಯಾಲೋಚನೆಯಲ್ಲಿದೆ.

ಪ್ರಾ.—ಭಕ್ತಿ ಮತ್ತು ಮತ ಬೋಧೆಯನ್ನು ಸ್ಕೂಲುಗಳಲ್ಲಿ ಮಾಡುವುದನ್ನು ವಜಾಮಾಡಿ, ಹುಡುಗರ ತಂದೆತಾಯಿಗಳಿಗೇ ವಹಿಸುವುದು ಕ್ಷೇಮ. ಈ ಬೋಧೆಯಿಂದ ಹುಡುಗರಿಗೆ ಪ್ರಯೋಜನವಾಗುವುದಕ್ಕೆ ಪ್ರತಿಯಾಗಿ ಮತಶಾಖೆಗಳ ಅಭಿಮಾನವು ಹೆಚ್ಚುತ್ತದೆ. ಉ.—ನಾನೂ ನಿಮ್ಮಂತೆಯೇ ಅಭಿಪ್ರಾಯವುಳ್ಳವನಾಗಿದೇನೆ; ಆದರೆ ಗವರ್ನ್‌ಮೆಂಟಿನವರ ಅಭಿಮತವು ಒಂದೇ ರೀತಿಯಾಗಿಲ್ಲ.

ಪ್ರಾ.—ಗ್ರಾಂಟು ಪಡೆಯುವ ಸ್ಕೂಲುಗಳಲ್ಲಿ ಮತ ಬೋಧೆಮಾಡುವಾಗ್ಗೆ ಅನ್ಯಮತದ ಬಾಲಕರು ಇಷ್ಟಪಟ್ಟರೆ ಕ್ಲಾಸಿನಲ್ಲಿರದೆ ಹೊರಗೆ ಹೋಗಲು ಅವರಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಉ.—ಇದು ಸದ್ಯದಲ್ಲಿ ಆಗತಕ್ಕದ್ದಲ್ಲ

ಪ್ರಾ.—ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರು ಪ್ಲೀಡರ್ ಪರೀಕ್ಷೆಗೆ ಓದುವಂತೆ ರೂಲಸು ಬದಲಾವಣೆ ಆಗಬೇಕು. ಉ.—ಈ ವಿಷಯದಲ್ಲಿ ಅನುಕೂಲವಾದ ಹುಕುಂ ಕೊಡುತ್ತೇವೆ.

ಪ್ರಾ.—ಅಕೌಂಟು ಪರೀಕ್ಷೆಗೆ ಕನ್ನಡದಲ್ಲೇ ಓದಿ ತೇರ್ಗಡೆಹೊಂದುವುದಕ್ಕೆ ಕನ್ನಡ ಪುಸ್ತಕಗಳನ್ನು ಮಾಡಿಲ್ಲ. ಉ.—ಇದನ್ನು ಮಾಡಿಸುತ್ತೇವೆ ಈಗ ತಾಲ್ಲೂಕ್ ನೌಕರಮಾನೇರು ಕಲಿಯಬೇಕಾದ ವಿಚಾರಗಳನ್ನು ತಿಳಿಸುವ ಮ್ಯಾನ್ಯುಯಲ್ ಎಂಬ ಪುಸ್ತಕಮಾತ್ರ ಕನ್ನಡದಲ್ಲಿ ತಯಾರಾಗಿದೆ.

ಹಣಕಾಸಿನ ವಿಚಾರಗಳು.

ಪ್ರಾ.—ಧರ್ಮಕೆಲಸಗಳಿಗೆ ಸರ್ಕಾರದಲ್ಲಿ ಫಂಡು ಹಾಕಿದರೆ ಆ ಫಂಡು 3,000 ರೂಪಾಯಿಗಿಂತ ಹೆಚ್ಚಾಗಿದ್ದರೇನೇ ಅದಕ್ಕೆ ಶೇಕಡಾ 1 ರಂತೆ ಬಡ್ಡಿ ಕೊಡತಕ್ಕದ್ದೆಂದು ಈಗ ವಿಧಾಯಕವಾಗಿದೆ. ಆ ಪರಿಮಿತಿಯನ್ನು 500 ರೂಪಾಯಿಗೆ ಇಳಿಸಿದರೆ ಅನೇಕ ಜನಗಳು ಧರ್ಮಫಂಡುಗಳನ್ನು ಹಾಕಲು ಪ್ರೋತ್ಸಾಹವಾದೀತು. ಉ.—ಒಳ್ಳೇದು, ಯೋಚಿಸಿ ಅನುಕೂಲವಾದ ಹುಕುಂ ಕೊಡುತ್ತೇವೆ.

ಪ್ರಾ.—ಸರ್ಕಾರದ ನೌಕರರು ಸರ್ಕಾರಿ ಹಣವನ್ನು ಬಹಳವಾಗಿ ತಿಂದುಹಾಕುತ್ತಾರೆಂಬ ಪ್ರವಾದ ಉಂಟಾಗಿದೆ. ಅಂಥಾ ಮೊಕದ್ದಮೆಗಳು ಎಷ್ಟು ನಡೆದವೋ, ಅವು ಯಾವ ರೀತಿ ಇತ್ಯರ್ಥವಾದವೋ ಮೂರು ತಿಂಗಳಿಗೆ ಅಥವಾ ಆರು ತಿಂಗಳಿಗೆ ಒಂದಾವರ್ತಿ ಸರ್ಕಾರದವರು ಒಂದು ತಃಖ್ತೆಯನ್ನು ಪ್ರಕಟಿಸುವುದು ಉತ್ತಮ. ಉ.—ನೌಕರರು ಸರ್ಕಾರದ ಹಣವನ್ನು ತಿನ್ನುವುದು ನಿಜ. ಎಲ್ಲಾ ಕಡೆಗಳಲ್ಲೂ ಇದು ನಡೆಯುವುದುಂಟು. ಆದರೆ ನಮ್ಮ ಸೀಮೆಯಲ್ಲಿ ಈ ವಿಷಯ ಪ್ರಕಟವಾಗುವಷ್ಟು ಇತರ ಕಡೆ ಆಗುವುದಿಲ್ಲ. ಮತ್ತೂ ಒಂದೆರಡು ನಡೆದರೂ ಅದನ್ನು ಬಹಳವಾಗಿ ಉತ್ಪ್ರೇಕ್ಷೆಮಾಡುತ್ತಾರೆ. ಅದನ್ನು ಕಡಮೆಮಾಡಬೇಕೆಂದು ನಮ್ಮ ಕೈಲಾಗುವ ಮಟ್ಟಿಗೂ ಸಾಹಸಪಡುತ್ತೇವೆ.

ಪ್ರಾ.—ಸರ್ಕಾರಿ ನೌಕರರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಸರ್ಕಾರದಿಂದ ಹಣವನ್ನು ಅಡ್ವಾನ್ಸು ಕೊಡುವಂತೆ ಖಾಸಗಿ ಜನಗಳಿಗೂ ಕೊಡಿಸಬೇಕು. ಉ.—ಗವರ್ನ್‌ಮೆಂಟಿನವರು ಖಾಸಗಿ ಜನಗಳಲ್ಲಿ ಲೇವಾದೇವಿ ಮಾಡಕೂಡದು. ಬೇಕಾದರೆ ಮ್ಯುನಿಸಿಪಲ್ ಬೋರ್ಡುಗಳಿಗೆ ಸಾಲಕೊಡುತ್ತೇವೆ. ಅವರು ತಮ್ಮ ಜವಾಬ್ದಾರಿ ಮೇಲೆ ಪ್ರಜೆಗಳಿಗೆ ಮನೆ ಕಟ್ಟುವುದಕ್ಕೆ ಸಾಲ ಕೊಡಬಹುದು.

ಪ್ರಾ.—ಸಂಸ್ಥಾನದ ರಾಜಾದಾಯವನ್ನು ಹೆಚ್ಚಿಸುವುದಕ್ಕೆ ನಮ್ಮ ಸೀಮೆಯಿಂದ ಹೊರಕ್ಕೆ ರವಾನೆಯಾಗುವ ಪದಾರ್ಥಗಳ ಮೇಲೆ ಸುಂಕವನ್ನು ಹಾಕಿ ವಸೂಲ್ಮಾಡಬಹುದು. ಉ.—ಇದು ದೊಡ್ಡ ವಿಷಯ. ಈಗ ಸಾಧ್ಯವಾಗತಕ್ಕದ್ದಲ್ಲ.

ಪ್ರಾ.—ಸರ್ಕಾರದ ಜೀವವಿಮೆ ಕಂಪನಿಗೆ ಸಾಮಾನ್ಯ ಪ್ರಜೆಗಳೂ ಸೇರಿಕೊಂಡು ಬೀಮಾ ಹಣವನ್ನು ಪಾವತಿಮಾಡುವಂತೆ ಅವಕಾಶವನ್ನು ಕಲ್ಪಿಸಬೇಕು. ಅನೇಕ ವರುಷಗಳಿಂದ ಈ ವಿಚಾರವನ್ನು ಕೇಳಿಕೊಳ್ಳುತ್ತಾ ಬಂದಿದೇವೆ. ಉ.—ಇದು ಗವರ್ನ್‌ಮೆಂಟಿನವರ ಯೋಚನೆಯಲ್ಲಿದೆ ಇನ್ನೂ ವ್ಯವಸ್ಥೆಯಾಗಲಿಲ್ಲ.

ಪ್ರಾ.—ಸರ್ಕಾರದ ಸಿಬ್ಬಂದಿ ಖರ್ಚು ಈಗಲೇ ಹೆಚ್ಚಿದೆ, ಇನ್ನೂ ಹೆಚ್ಚುವುದರಲ್ಲೂ ಇದೆ. ಗವರ್ನ್‌ಮೆಂಟಿನವರು ಈ ಸಿಬ್ಬಂದಿಯನ್ನು ಕಡಮೆ ಮಾಡುವುದಕ್ಕೆ 1907 ನೇ ಇಸವಿಯಲ್ಲಿ ಒಂದು ಕಮಿಟಿ ಏರ್ಪಾಡು ಮಾಡಿದಾರೆ. ಈ ಕಮಿಟಿಯವರು ರಿಪೋರ್ಟು ಏನು ಕೊಟ್ಟಿದಾರೆಯೋ, ಅದರಂತೆ ಎಷ್ಟುಮಟ್ಟಿಗೆ ಸಿಬ್ಬಂದಿಯನ್ನು ಕಡಮೆ ಮಾಡಲಾಯಿತೋ ತಿಳಿಯಬೇಕೆಂದು ಪ್ರಾರ್ಥಿಸುತ್ತೇವೆ. ಉ.—ಇದಕ್ಕೆ ಉತ್ತರ ಹೇಳುವುದು ಬಹಳ ಕಷ್ಟ. ಆ ಕಮಿಟಿಯವರು ಒಂದೂವರೆ ಲಕ್ಷ ರೂಪಾಯಿನ ಸಿಬ್ಬಂದಿಯನ್ನು ಕಡಮೆ ಮಾಡಬೇಕೆಂದು ರಿಪೋರ್ಟು ಮಾಡಿದಾರೆ. ಅದರಂತೆ ಕೆಲವು ಜಾರಿಯೂ ಆಗಿದೆ. ಇನ್ನೂ ಕೆಲವು ಭಾಗವನ್ನು ಇತ್ಯರ್ಥಮಾಡಿಲ್ಲ. ಈ ವಿಚಾರವು ಸರ್ಕಾರದವರಿಗೆ ಸಂಬಂಧಪಟ್ಟದ್ದೇ ಹೊರತು ಪಬ್ಲಿಕ್ ಜನರು ತಿಳಿಯುವಂತೆ ಪ್ರಕಟಮಾಡುವಂಥಾದ್ದಲ್ಲ. ಸಿಬ್ಬಂದಿ ಖರ್ಚನ್ನು ಕೂಡಿದ ಮಟ್ಟಿಗೂ ಕಡಮೆ ಮಾಡಬೇಕೆಂಬುವುದು ಸರ್ಕಾರದವರಿಗೆ ವಿಶೇಷವಾಗಿ ಉಂಟು.

ಪ್ರಾ.—ಹುಂಡಿಗಳನ್ನು ಬರೆಯುವುದಕ್ಕೆ ಯೋಗ್ಯವಾದ ಸ್ಟಾಂಪು ಒತ್ತಿದ ಕಾಗದಗಳನ್ನು ಸರ್ಕಾರದವರು ಇನ್ನೂ ಸಿದ್ಧಮಾಡಲಿಲ್ಲ. ಇದನ್ನು ಜಾಗ್ರತೆಪಡಿಸಬೇಕು. ಉ.—ನಮೂನೆಗಳು ತಯಾರಾಗಿವೆ. ಬೇಗನೆ ಇತ್ಯರ್ಥಮಾಡಿ ಸಿದ್ಧಪಡಿಸುತ್ತೇವೆ.

ಎಕ್ಸೈಸ್ ವಿಚಾರಗಳು

ಪ್ರಾರ್ಥನೆ.—ಎಕ್ಸೈಸ್ ಕಾನೂನು, ರೂಲಸು, ಲೈಸೆನ್ಸ್ ನಮೂನೆ ಈ ವಿಚಾರಗಳನ್ನು ಪುನರಾಲೋಚನೆಮಾಡಿ ಈಗಿನ ಕಾಲಕ್ಕೆ ಸರಿಹೋಗುವಂತೆ ಬದಲಾವಣೆಮಾಡಬೇಕು. ಇದಕ್ಕೆ ಸರ್ಕಾರಿ ಅಧಿಕಾರಿಗಳನ್ನೂ, ಕೆಲವು ಮುಖ್ಯ ಕಂಟ್ರಾಕ್ಟರುಗಳನ್ನೂ ಸೇರಿಸಿ ಒಂದು ಕಮಿಟಿಮಾಡಿದರೆ ಅನುಕೂಲ. ಉ.—ಈ ವಿಷಯಗಳನ್ನೆಲ್ಲಾ ನಮೂದುಮಾಡಿ ಎಕ್ಸೈಸ್ ಕಮಿಷನರವರಿಗೆ ತಿಳಿಸಿ. ಅವರು ನಿಮ್ಮಗಳನ್ನು ಕರೆಕೊಂಡು ನಿಮ್ಮ ಅಭಿಪ್ರಾಯವನ್ನು ಕೇಳಿ ತಿಳಿದುಕೊಳ್ಳುವರು. ಆ ಬಳಿಕ ಬದಲಾವಣೆಯ ವಿಷಯ ಯೋಚಿಸಬಹುದು.

ಪ್ರಾ.—ಎಕ್ಸೈಸ್ ಹರಾಜನ್ನು ಪ್ರತಿವರುಷವೂ ಮಾಡುವುದು ಕಂಟ್ರಾಕ್ಟರುಗಳಿಗೆ ತುಂಬಾ ನಷ್ಟ. ಪೋಟಾಪೋಟಿಯಲ್ಲಿ ಬೊಬಲಗು ಹೆಚ್ಚುಮಾಡಿ ನಷ್ಟಹೊಂದಿ ಕೆಡುತ್ತಿದಾರೆ. 8-10 ವರುಷದ ಉತ್ಪತ್ತಿಯನ್ನು ಹರಾಜುಹಾಕುವುದು ಒಳ್ಳೇದು. ಉ.—ಸೂಕ್ತತೋರಿದ ಕಡೆ 3 5 ವರುಷಗಳಿಗೆ ಒಂದಾವರ್ತಿ ಹರಾಜುಹಾಕುತ್ತೇವೆ. ಪ್ರತಿ ವರುಷವೂ ಹರಾಜುಹಾಕುವುದೇ ಒಳ್ಳೇದೆಂದು ಇಂಡಿಯಾ ಗವರ್ನ್‌ಮೆಂಟಿನವರು ಅಭಿಪ್ರಾಯಪಡುತ್ತಾರೆ. ಸಂದರ್ಭಾನುಸಾರ ವ್ಯವಸ್ಥೆಮಾಡುತ್ತೇವೆ.

ಪ್ರಾ.—ತನ್ನ ಜವಾಬ್ದಾರಿ ಮೇಲೆ ಸಿಕ್ಕ ಕಂಟ್ರಾಕ್ಟನ್ನು ವಹಿಸುವುದಕ್ಕೆ ಕಂಟ್ರಾಕ್ಟರಿಗೆ ಅಧಿಕಾರ ಕೊಡಬೇಕು. ಉ.—ಡೆಪ್ಯುಟಿ ಕಮಿಷನರು ಒಪ್ಪಿದರೆ ಆಗಬಹುದೆಂದು ಈಗ ರೂಲಸು ಇದೆ. ಅದನ್ನು ವಜಾಮಾಡಲಾಗುವುದಿಲ್ಲ.

ಪ್ರಾ.—ಮಲೆನಾಡಿನಲ್ಲಿ ಹಿಡುವಳಿ ಜಮೀನಿನಲ್ಲಿರುವ ಎರಡು ಬಗನಿ ಮರಗಳನ್ನು ಶೇಂದಿ ಇಳಿಸಿಕೊಳ್ಳುವುದಕ್ಕೆ ಹಿಡುವಳಿದಾರನಿಗೆ ಬಿಟ್ಟುಕೊಡುವುದಾಗಿ ಕಳೆದ ವರುಷ ಈ ಸಭೆಯಲ್ಲಿ ಹುಕುಂ ಕೊಡೋಣವಾಯಿತು. ಆದರೆ ಅದು ಜಾರಿಯಲ್ಲಿ ಬರಲಿಲ್ಲ. ಈಗಲಾದರೂ ಹುಕುಂ ಕೊಡಬೇಕು. —ಇಷ್ಟೊಬ್ಬ ಮೆಂಬರು ಕುಡುಕುತನವನ್ನು ಎಷ್ಟು ಮಾತ್ರಕ್ಕೂ ಹೆಚ್ಚಿಸಕೂಡದೆಂದೂ, ಈ ರಿಯಾಯತಿ ತೋರಿದರೆ ಕೂಲಿ ಜನರೂ ರೈತರೂ ಕುಡಿದು ಕೆಟ್ಟುಹೋಗುತ್ತಾರೆಂದೂ ಎದುರುವಾದಿಸಿದರು. ಉ.—ಈ ವಿಚಾರವನ್ನು ಗವರ್ನ್‌ಮೆಂಟಿನವರು ಎಕ್ಸೈಸ್ ಕಮಿಷನರವರ ಕೂಡ ಯೋಚಿಸಿ ಇತ್ಯರ್ಥ ಮಾಡುತ್ತಾರೆ.

ಪ್ರಾ.—ಇನಾಂದಾರರಿಗೆ ಸರ್ಕಾರದಿಂದ ಸಲ್ಲಬೇಕಾದ ಎಕ್ಸೈಸ್ ಬಾಬಿನ ಹಣಗಳು ಹತ್ತಿಪ್ಪತ್ತು ವರುಷಗಳಾದರೂ ಇನ್ನೂ ಪಾವತಿ ಆಗಿಲ್ಲ. ಅವರು ಅರ್ಜಿಗಳನ್ನು ಬರೆದು ಸಾಕಾಗಿದಾರೆ. ಉ.—ಇನ್ನೂ ಇದು ಇತ್ಯರ್ಥವಾಗಲಿಲ್ಲ, ಚರ್ಚೆಯಲ್ಲಿದೆ.

ವಿದೇಶ ವೃತ್ತಾಂತಗಳು.

ಬರ್ಲಿನ್ ನಗರದ ಹತ್ತಿರ ಒಂದು ವಿಮಾನವು ಮುರಿದು ಬಿದ್ದು ಅದರಲ್ಲಿದ್ದ ಮೂವತ್ತು ಜನರೂ ಮೃತಪಟ್ಟರೆಂದು ಕಳೆದ ವಾರ ತಿಳಿಸಿದೆವಷ್ಟೆ. ಈ ಮೃತ ಜನರ ಉತ್ತರಕ್ರಿಯಾದಿಗಳನ್ನು ನಡಿಸುವಾಗ್ಗೆ ಜರ್ಮನಿಯ ಚಕ್ರವರ್ತಿಯವರೂ, ಅವರ ಪತ್ನಿಯವರೂ, ಅವರ ಆರು ಜನ ಮಕ್ಕಳೂ ಹಾಜರಿದ್ದು ತಮ್ಮ ವ್ಯಸನವನ್ನು ಸೂಚಿಸಿದರು

ಲೀಪ್ಸಿಗ್ ಪಟ್ಟಣದಲ್ಲಿ ಓಡುತ್ತಿದ್ದ ಟ್ರಾಂಗಾಡಿಯು ಸರ್ಕಸ್ ಆಟದವರ ಒಂದು ಸಿಂಹದ ಬೋನಿಗೆ ತಗಲಿ ಬೋನು ಒಡೆದು ಹೋಯಿತು. ಅದರಲ್ಲಿದ್ದ ಎಂಟು ಸಿಂಹಗಳೂ ಬೀದಿಗಳಲ್ಲಿ ಓಡುತ್ತಾ ಜನರಲ್ಲಿ ಬಹಳ ಭೀತಿಯನ್ನುಂಟುಮಾಡಿದವು. ಒಂದು ಸಿಂಹವು ಒಂದು ಹೋಟಲನ್ನು ಪ್ರವೇಶಿಸಿ ಅಲ್ಲಿದ್ದ ಜನರನ್ನೆಲ್ಲಾ ಹೆದರಿಸುತ್ತಿತ್ತು. ಅವುಗಳನ್ನು ಹಿಡಿಯಲು ಅಸಾಧ್ಯವಾಗಿ ಕೆಂಪುಬಂದದ್ದರಿಂದ ಪೊಲೀಸಿನವರು ಆರು ಸಿಂಹಗಳನ್ನು ಬಂದೂಕದಿಂದ ಕೊಂದುಹಾಕಿದರು. ಉಳಿದ ಎರಡು ಸಿಂಹಗಳು ಸಿಕ್ಕಲಿಲ್ಲ.

ಪೋರ್ಚುಗಲ್ ರಾಜ್ಯದಲ್ಲಿ ಕಳೆದ ವಾರ ಜನರು ದಂಗೆ ಎದ್ದು ಗಲಭೆಯನ್ನುಂಟುಮಾಡಿರುತ್ತಾರೆ. ಅನೇಕರು ಪೊಲೀಸಿನವರಂತೆ ಉಡುಪನ್ನು ಧರಿಸಿ ಲಾಕಪ್ಪುಗಳಲ್ಲಿಯೂ ಜೈಲುಖಾನೆಗಳಲ್ಲಿಯೂ ಇರುವ ಖೈದಿಗಳನ್ನು ಬಿಡಿಸಲು ಪ್ರಯತ್ನ ಮಾಡಿದರು. ಕೆಲವರನ್ನು ಹಿಡಿದು ವಿಚಾರಣೆ ಮಾಡಿದಾಗ ಪ್ರಜಾಪ್ರಭುತ್ವವನ್ನು ಏರ್ಪಡಿಸಲು ಹೀಗೆ ಮಾಡಿದೆವೆಂದು ಹೇಳಿರುತ್ತಾರೆ. ಈ ದಂಗೆಯು ಅನೇಕ ಸ್ಥಳಗಳಲ್ಲಿ ಏಕಕಾಲ ನಡೆಯುವಂತೆ ಏರ್ಪಾಡಾಗಿದ್ದರೂ ದಂಗೇಕೋರರ ಅಭಿಮತವು ಸಾರ್ಥಕವಾಗದೆ ಅವರಲ್ಲಿ ಹಲವು ಮಂದಿ ಮುಖಂಡರು ಸಿಕ್ಕಿಬಿದ್ದರು. ಈಚೆಗೆ ಬಂದ ವರ್ತಮಾನದಿಂದ ಆ ರಾಜ್ಯದ ಎಲ್ಲಾ ಭಾಗದಲ್ಲಿಯೂ ಸಮಾಧಾನವು ನೆಲೆಗೊಂಡಿರುವದೆಂದು ತಿಳಿದುಬಂದಿದೆ.

ಲಾರ್ಡ್ ಕಿಚ್ಚನರ್‌ರವರು ಯೂರೋಪ್ ಖಂಡದಲ್ಲಿ ತಮ್ಮ ಸಂಚಾರವನ್ನು ಪೂರೈಸಿಕೊಂಡು ಈಜಿಪ್ಟಿಗೆ ವಾಪಸು ಹೋಗುವಾಗ ವೆನಿಸ್ ಪಟ್ಟಣದ ಮೂಲಕ ಪ್ರಯಾಣ ಮಾಡಬೇಕೆಂದು ನಿಶ್ಚಯಿಸಿದ್ದರು. ಮೊದಲು ಮಾಡಿದ ಏರ್ಪಾಡಿನಂತೆ ಕಿಚ್ಚನರ್‌ರವರು ರೈಲಿನಲ್ಲಿ ವೆನಿಸ್ ಪಟ್ಟಣಕ್ಕೆ ಬಂದು ಅಲ್ಲಿ 15 ದಿನವಿದ್ದು ನಂತರ ಈಜಿಪ್ಟಿಗೆ ಹೋಗಬೇಕಾಗಿತ್ತು. ಸುಮಾರು 18 ಜನ ಈಜಿಪ್ಟಿನ ಮುಸಲ್ಮಾನರು ಒಂದು ಗುಪ್ತ ಸಂಘವನ್ನು ಮಾಡಿಕೊಂಡು ಕಿಚ್ಚನರ್‌ರವರನ್ನು ವೆನಿಸ್ ಪಟ್ಟಣದಲ್ಲಿ ಕೊಂದುಹಾಕಬೇಕೆಂದು ಏರ್ಪಾಡು ಮಾಡಿದ್ದರು. ಕಾರಣಾಂತರದಿಂದ ಕಿಚ್ಚನರ್‌ರವರು ರೈಲು ಗಾಡಿಯಲ್ಲಿ ಪ್ರಯಾಣ ಮಾಡದೆ ಮೋಟರ್ ಗಾಡಿಯಲ್ಲಿ ವೆನಿಸ್ ನಗರವನ್ನು ತಲುಪಿ ಅಲ್ಲಿ ಸ್ವಲ್ಪ ಹೊತ್ತು ಮಾತ್ರ ವಿಶ್ರಮಿಸಿಕೊಂಡು ಹಡಗನ್ನು ಹತ್ತಿ ಅಲೆಗ್ಸಾಂಡ್ರಿಯಾ ರೇವು ಪಟ್ಟಣಕ್ಕೆ ಹೋದರು. ಈ ದುಷ್ಕಾರ್ಯವನ್ನು ಇಟಲೀ ದೇಶದ ಪೊಲೀಸಿನವರು ಕಂಡುಹಿಡಿದು ಪ್ರಕಟಿಸಿರುತ್ತಾರೆ.

ಒಬ್ಬ ಸ್ಕೂಲ್ ಮಾಸ್ಟರಿಗೆ ಸನ್ಮಾನ ಮಾಡಿದ್ದು.

ಗೌರ್ನಮೆಂಟ್ ಎ. ವಿ ಸ್ಕೂಲ್, ದೇವನಹಳ್ಳಿ

ಈ ಸ್ಕೂಲಿನಲ್ಲಿ ಅ|| ಮಾಸ್ಟರಾಗಿದ್ದ ಮ|| ರಾಮಕೃಷ್ಣಯ್ಯನವರಿಗೆ ಇಲ್ಲಿಂದ ...ಕೋಟೆ ಗೌರ್ನಮೆಂಟ್ ಎ. ವಿ ಸ್ಕೂಲ್ ಹೆಡ್ ಮಾಸ್ಟರ್ ಕೆಲಸಕ್ಕೆ ...ವಾಗಿರುವ ಪ್ರಯುಕ್ತ ಇಲ್ಲಿನ ಪ್ರಜೆಗಳೂ, ಸ್ಕೂಲ್ ವಿದ್ಯಾರ್ಥಿಗಳೂ ಸೇರಿ ...ರ್ ಸ್ಕೂಲಿನ ಹಾಲಿನಲ್ಲಿ ಕಳೆದ 18 ಮತ್ತು 20 ನೇ ತಾ. ಶನಿವಾರ, ...ಸೋಮವಾರಗಳಲ್ಲಿ ಅವರಿಗೆ ಎಂಟರ್‌ಟೇನ್‌ಮೆಂಟ್ ಕೊಡುವ ಉದ್ದಿಶ್ಯ ಸಭೆ ಸೇರಿಸಿದ್ದರು ಆ ಕಾಲದಲ್ಲಿ ಸರ್ಕಾರಿ ನೌಕರರುಗಳೂ, ಸಮಸ್ತ ಪ್ರಜೆಗಳೂ ...ಬಂದಿದ್ದರು ಸಂಗೀತ ಮೊದಲಾದ ವಾದ್ಯಗಳಿಂದ ಶೋಭಾಯಮಾನವಾ ...ತ್ತು. ಸಂಸ್ಕೃತ ಪಂಡಿತರು ವೇ|| ಉಗ್ರಶಾಸ್ತ್ರಿಗಳವರು ಮತ್ತು ಶಿವನಗೆರೆ ...ದಾರ್ ಮ|| ವೆಂಕಟಾಚಲಯ್ಯನವರು ಮೊದಲಾದವರು ಇವರುಗಳ ...ಗುಣಗಳನ್ನು ಕೊಂಡಾಡಿದರು ಅಗ್ರಾಸನಾಧಿಪತಿಗಳಾಗಿದ್ದ ಹೆಡ್ ಮಾಸ್ಟರು ...ಶಿವರಾಮಯ್ಯನವರೂ, ಪ್ರೈಟ್ ರೈಲ್ವೆ ಇಂಜನಿಯರ್ ಮ|| ಗರುಡಾಚಾ ...ರೂ ಇವರುಗಳ ಗುಣಕಥನವನ್ನು ಮಾಡಿ ಸಭಿಕರನ್ನು ಸಂತೋಷ ...ಪಡಿಸಿದರು ಇವರು ಈ ಸ್ಕೂಲಿಗೆ ಬಂದ 5 ವರುಷಗಳಿಂದ ಅತಿ ಶ್ರದ್ಧೆಯಿಂದಲೂ ...ಶಕ್ತಿಯಿಂದಲೂ ಕೆಲಸಮಾಡಿ ಅನೇಕ ಮಂದಿ ಬಾಲಕರನ್ನು ಪರೀಕ್ಷೆಯಲ್ಲಿ ...ರ್ಣರ ಮಾಡಿಸಿರುವುದಲ್ಲದೆ ಬಾಲಕರ ನಡೆನುಡಿಗಳನ್ನು ತಿದ್ದಿ ಸರಿಪಡಿಸುತ್ತಾ ...ಬೋಧಕರಾಗಿ ಇದ್ದುದರಿಂದ ಇವರಲ್ಲಿ ಪ್ರಜೆಗಳಿಗೂ ಬಾಲಕರಿಗೂ ವಿಶೇಷವಾದ ...ಭಕ್ತಿ ಉಂಟಾಗಿತ್ತು ಇವರಿಗೆ ವರ್ಗವಾದದ್ದು ಈ ಊರಿನ ಜನಗಳಲ್ಲಿ ವಿಷಾದ ...ವನ್ನುಂಟುಮಾಡಿದೆ ಇದುವರಿವಿಗೆ ಈ ಊರಿಗೆ ಬಂದಿದ್ದ ಯಾವ ಮಾಸ್ಟರಿಗೂ ...ಇಷ್ಟರ ಮಟ್ಟಿನ ಸನ್ಮಾನಗಳು ನಡೆಯಲಿಲ್ಲ ಆದುದರಿಂದ ಇವರ ಸಹಜವಾದ ಗುಣಗಳೇ ಇಲ್ಲಿನ ಪ್ರಜೆಗಳನ್ನು ಪ್ರೇರೇಪಿಸಿ ಈ ರೀತಿಯಾದ ಸಂತೋಷಕ್ಕೆ ಕಾರಣವನ್ನುಂಟುಮಾಡಿವೆ ಪ್ರಜೆಗಳು ಮತ್ತು ವಿದ್ಯಾರ್ಥಿಗಳು ಇವರನ್ನು ಬಹಳ ದೂರದವರಿವಿಗೂ ಸಾಗಕಳುಹಿಸಲು ಹೋಗಿದ್ದರು

ಪ್ರತ್ಯಕ್ಷದರ್ಶಿ

ಚಿತ್ರದುರ್ಗದಲ್ಲಿ ದಸರಾ ಮಹೋತ್ಸವಗಳು.

ಈ ವರ್ಷ ನಲ್ಲಿ ಅತ್ಯಂತ ಮನೋಹರವಾಗಿರುವ ಶ್ರೀ ಮದುಕ್ಕಮ್ಮಾಂಬಾ ...ಮ್ಮನವರ ದೇವಸ್ಥಾನದಲ್ಲಿ ತಯಾರಿಸಲ್ಪಟ್ಟ ಮಂಟಪವು ಅತ್ಯಂತ ಶೋಭಾಯ ...ಮಾನವಾಗಿಯೂ ಅತಿ ವಿಚಿತ್ರವಾಗಿಯೂ ನೂತನ ನಮೂನೆಯುಳ್ಳದ್ದಾಗಿದ್ದು ...ಮಂಟಪವನ್ನು ತಯಾರಿಸಿದ ಕುಶಲವಿದ್ಯೆಗಾರರ ಕೌಶಲ್ಯವನ್ನು ಅತ್ಯುನ್ನತವಾಗಿ ...ಪ್ರಕಾಶಿಸಿತು ಬಿಳಿಯ ಮತ್ತು ತಗಡಿನಲ್ಲಿ ಬಳ್ಳಿ ಮೊದಲಾದ್ದನ್ನು ಬಿಡಿಸಿ ಮರಕೆ ...ಲಸದ ಬಣ್ಣ ಕೊಟ್ಟಿದ್ದರಿಂದ ಕೆಲಸದ ಮೋಹನತ್ವ ವರ್ಣಿಸಲು ಸಾಧ್ಯವಿಲ್ಲ ಇಂಥಾ ...ಮನೋಹರವಾದ ಮಂಟಪದಲ್ಲಿ ಶ್ರೀ ಅಮ್ಮನವರು ನವರಾತ್ರಿಗಾಗಿ ಬಿಜಯ ಮಾಡಿ ...ದರು. ಪದ್ಧತಿಯ ಪ್ರಕಾರ ಎಲ್ಲಾ ಕಟ್ಲೆಗಳೂ ಈ ಊರು ಗಾಳ್ಯಗಾರರ ವಿಚಾ ...ರದಿಂದ ಬಹು ವಿಜೃಂಭಣೆಯಿಂದ ನಡೆದು, ಮಹಾನವಮಿ ದಿವಸ ಆಯುಧಪೂಜೆ ...ವಿಜಯ ದಶಮಿ ದಿವಸ ಊರ ಹೊರಗೆ ಶ್ರೀ ಅಮ್ಮನವರಿಗೆ ಕೆಂಡಾರ್ಚನೆ ಸಹ ...ಬಹು ವಿಜೃಂಭಣೆಯಿಂದ ನಡೆದವು ಆ ದಿವಸ ಶ್ರೀ ಅಮ್ಮನವರು ಅರ್ಚಕರ ...ಮೇಲೆ ಆವೇಶವಾಗಿ ಅಗ್ನಿಯಲ್ಲಿ ಪ್ರವೇಶಿಸುವುದುಂಟು ಕೊಂಡವಂತು ಅಗಾಧ ...ವಾಗಿತ್ತು —ಈ ಊರು ನಾಳ್ಯಗಾರರು ಮಾಡ್ಯದ ಲಾಗಾಯ್ತು ತಮ್ಮ ಪೂರ್ವ ...ಪದ್ಧತಿ ಪ್ರಕಾರ ತಮ್ಮ ಕಟ್ಲೆಗಳನ್ನು ತೀರಿಸಿಕೊಂಡು ನವಮಿ ದಿವಸ ಹೊಂಡಕ್ಕೆ ...ಹೋಗಿ ಆಯುಧ ಪೂಜೆ ಪೂರೈಸಿಕೊಂಡು ದಶಮಿ ದಿವಸ ಪಂಚೂಸವಾರಿಗಾಗಿ ...ಸಿದ್ಧವಾದ ಪಂಚಕಲಶಯುಕ್ತವಾದ ಪಾಲಖಿಯಲ್ಲಿ ಕುಳಿತು ಸ್ವೀಕಚ್ಛತ್ರಿ ಚಾಮ ...ರ ಅಫ್ತಾಗಿರಿ ಮೋರ್ಚಲ್ ಮೊದಲಾದ ತಮ್ಮ ಬಿರುದು ಸಹಿತ ತಮ್ಮ ಸ್ವಬಂ ...ಧುಗಳು ಸ್ವಜನಗಳು ಆಪ್ತಮಿತ್ರರು ನಾಯ್ಕವಾಡಿ ಜನಸಹಿತ ವಾದ್ಯಘೋಷ ...ಸಹಿತ ಉತ್ಸವದೊಡನೆ ದೊಡ್ಡಪೇಟೆ ಹಾದು ಶ್ರೀ ವೆಂಕಟರಮಣ ದೇವಸ್ಥಾನದ ...ಬಳಿ ಬನ್ನಿಮಂಟಪವನ್ನು ಸೇರಿ ಪೂಜಾದಿಗಳನ್ನು ಪೂರೈಸಿಕೊಂಡು ಸ್ವಗೃಹ ...ವನ್ನು ಸೇರಿದರು —ಊರು ಹೊರಭಾಗದಲ್ಲಿ ಶ್ರೀ ವೆಂಕಟರಮಣ ದೇವ ...ಸ್ಥಾನದ ಬಳಿ ವಿಜಯ ದಶಮಿ ದಿವಸ ಬ್ರಹ್ಮರಥೋತ್ಸವವಾಗುವದುಂಟು ...ಈ ದೇವಸ್ಥಾನದ ಅರ್ಚಕನಿಗೂ ಆಚಾರ್ಯ ಪುರುಷನಿಗೂ ಬಹು ದಿವಸ ...ದಿಂದ ವಿವಾದವಿರುತ್ತೆ ಅರ್ಚಕ ಮತ್ತು ಆಚಾರ್ಯ ಪುರುಷ ಎಂಬೆರಡು ...ಹೆಸರಿನ ಮೇಲೆ ಅವರವರ ಕರ್ತವ್ಯಗಳು ಸ್ಪಷ್ಟವಾಗುವವು ಇಂಥಾದ್ದರಲ್ಲಿ ...ಅರ್ಚಕನು ತಾನು ಪಂಚರಾತ್ರ ಮತದ ಗುರುವೆಂದೂ, ಆಚಾರ್ಯ ಪುರುಷನು ...ತಾನು ಸಹ ಸರಿಸಮಾನನೆಂದೂ ಹೇಳಿಕೊಳ್ಳುವರು ಇದು ತಹಶೀಲ್ ಮರಾಮತ್ತಿ ...ಡಿಪಾರ್ಟ್‌ಮೆಂಟಿನವರ ಗಮನಕ್ಕೆ ಬೀಳದೆ ಇರುವದು ಆಶ್ಚರ್ಯ

ಸತ್ಯವಾದಿ.

ನಾಟಕ ಸಂಘಗಳು ಮತ್ತು ಅವುಗಳಿಗೆ ಪ್ರೋತ್ಸಾಹ.

ಮ|| ಗೋವಿಂದಾಚಾರ್ಯರವರು ನೆನ್ನೆವಾರದ ಇಂಗ್ಲಿಷ್ ಪತ್ರಿಕೆಯೊಂದ ...ರ ಕಾಲಂಗಳಲ್ಲಿ ಮತ ಮತ್ತು ನೀತಿಬೋಧನೆ ವಿಚಾರವಾಗಿ ಕೆಲವು ಸಂಗ ...ತಿಗಳನ್ನು ಸೂಚಿಸಿರುತ್ತಾರೆ ಅವುಗಳಲ್ಲಿ ನಾಟಕ ಸಂಘದವರು ನೀತಿಬೋಧಕ ...ವಾದ ನಾಟಕಗಳನ್ನು ಆಡಿ ಅದರಿಂದ ನೋಟಕರು ಆ ನೀತಿಯನ್ನು ಗ್ರಹಿಸುವ ...ಹಾಗೆ ಮಾಡುವುದೂ ಒಂದು ಮಾರ್ಗವೆಂದು ಅಭಿಪ್ರಾಯಪಟ್ಟು, ಅಂಥಾ ನಾಟಕ ...ವನ್ನು ಅಭಿನಯಿಸುವವರಿಗೆ ಸರಕಾರದವರೂ ದ್ರವ್ಯಸಹಾಯ, ಖಿಲ್ಲತ್ತು, ಬಿರು ...ದುಗಳನ್ನು ಕೊಡೋಣವದರ ಮೂಲಕ ಪ್ರೋತ್ಸಾಹಿಸಬೇಕೆಂದೂ, ಅಂಥಾ ಅಭಿನ ...ಯಿಸುವವರ ನಡತೆಯೂ ಒಳ್ಳೆಯದಾಗಿರಬೇಕೆಂದೂ ಮನಃಪೂರ್ವಕವಾಗಿ ತಿಳಿ ...ಸಿರುತ್ತಾರೆ ಈ ಅಭಿಪ್ರಾಯಗಳನ್ನು ಪ್ರಾಜ್ಞರೆಲ್ಲರೂ ಒಪ್ಪುವರೆಂದು ಕಂಠೋಕ್ತ ...ವಾಗಿ ಹೇಳಬಹುದು ಆದರೆ ಈಗ ನಮ್ಮ ಮೈಸೂರು ಸೀಮೆಯಲ್ಲಿ ಪ್ರತಿಯೊಂ ...ದು ಗ್ರಾಮಗ್ರಾಮದಲ್ಲಿಯೂ ಹಳ್ಳಿ ಹಳ್ಳಿಯಲ್ಲಿಯೂ ಒಂದೊಂದು ನಾರಶಾಲೆ ...ಇರುವದಕ್ಕೆ ಬದಲಾಗಿ ಒಂದೊಂದು ನಾಟಕಶಾಲೆ ಇರುವದು ಇದು ಅತಿ ...ಶಯೋಕ್ತಿಯಲ್ಲ ಈ ನಾಟಕ ಸಂಘಗಳು ನಮ್ಮ ದೇಶದಲ್ಲಿ ಹುಟ್ಟಿದಾರಭ್ಯ ...ವ್ಯಾಖ್ಯಾನ ಮಾಡಿದರೆ ಇವುಗಳಿಂದ ಅನರ್ಥಗಳು ಹೆಚ್ಚಾಗಿವೆ ಎಂದು ಧಾರಾಳವಾಗಿ ...ಹೇಳಬಹುದು. ಇಂಥಾ ಸಂಘಗಳನ್ನು ಏರ್ಪಡಿಸಿರುವವರಲ್ಲಿ ಅನೇಕರು ವಿಶೇಷ ...ದ್ರವ್ಯವನ್ನು ಖರ್ಚುಮಾಡಿ, ಸಂಪಾದನೆಯಿಲ್ಲದೆ ದರಿದ್ರಾವಸ್ಥೆಗೆ ಬಂದಿರುವರು ...ತನ್ನ ಕಣ್ಣೆದುರಿಗೆ ಎಷ್ಟೋ ದನಿಕರ ಮತ್ತು ಇತರ ಗೌರವಸ್ಥರ ಮಕ್ಕಳು ಕೆಟ್ಟುಹೋಗಿದಾರೆ ಇಂಥಾ ಸಂಘಕ್ಕೆ ಸೇರಿದ ಅನೇಕ ಮೆಂಬರುಗಳು ದುರಾಚಾರ ಪ್ರವರ್ತಕರಾಗಿ ಸಂಸಾರವಿಲ್ಲದೆ ನಾಯಿಯೋಪಾದಿಯಲ್ಲಿ ಅಲೆದಾಡುತ್ತಿದಾರೆ ಕೆಲವು ಮಂದಿ ಬಾಲಕರೂ, ಯುವಕರೂ ವಿದ್ಯಾಭ್ಯಾಸಂಗವನ್ನು ಬಿಟ್ಟು ತಂದೆತಾಯಿಗಳ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಅಹರ್ನಿಶಿ ಕಾಲಕ್ಷೇಪ ಮಾಡುತ್ತಿದಾರೆ ಅನಾಥರಾದ ಕೆಲವು ಬಾಲಕರು ಹೊಟ್ಟೆಹೊರಕೊಳ್ಳುವದಕ್ಕೆ ಈ ನಾಟಕ ಸಂಘಗಳಿಗೆ ಸೇರಿಕೊಂಡು ಕಾಲಕಳೆಯುತ್ತಿರುವರು ಇಂಥಾ ನಾಟಕ ಸಂಘಗಳಿಂದ ಅಭಿನಯಿಸಲ್ಪಟ್ಟ ನಾಟಕಗಳನ್ನು ಅವಲೋಕಿಸಿದ ಮಾತ್ರದಿಂದಲೇ ಸ್ವಲ್ಪಮಂದಿ ಯುವಕರು ಮತ್ತು ಯುವತಿಯರು ಕೆಟ್ಟುಹೋಗಿರುತ್ತಾರೆ ಅಲ್ಲದೆ ಈಚೀಚೆಗೆ ನಾಟಕ ಸಂಘಗಳಲ್ಲಿ ಕೆಲವು ವೇಶ್ಯಾಸ್ತ್ರೀಯರೂ ಸೇರಿಕೊಂಡು ಜನಗಳ ಆಕರ್ಷಣೆಗೆ ಅವಕಾಶವಾಗಿದೆ ಇದರಿಂದ ಪ್ರಜಾಕೋಟಿಯಲ್ಲಿ ಕೇಡನ್ನು ಅನುಭವಿಸುವವರು ಮತ್ತು ಅನುಭವಿಸಿರುವವರು ಕೇವಲ ಅಲ್ಪ ಮಂದಿಯಲ್ಲ, ಗಣಿಸಲ್ಪಡತಕ್ಕಷ್ಟೇ ಆಗಿದೆ ಇವೆಲ್ಲಕ್ಕೂ ಮುಖ್ಯ ಕಾರಣ ಸರಕಾರದವರು ಈ ಭಾಗಕ್ಕೆ ಸ್ವಲ್ಪವೂ ಗಮನಕೊಡದೆ ಇರುವುದೇ ಆದರೆ ಸರಕಾರದವರು ಗಮನಕೊಡತಕ್ಕ ವಿಷಯವಲ್ಲವೆಂದೂ, ಜನಗಳು ತಾವಾಗಿಯೇ ತಿಳಿದುಕೊಂಡು ತಿದ್ದಿಕೊಳ್ಳತಕ್ಕದ್ದು ಎಂದೂ ಅನೇಕರು ಹೇಳಬಹುದು ಪ್ರಕೃತ ಸರಕಾರದವರು ಸ್ವಲ್ಪ ಗಮನಿಸಿದರೆ ಅನಂತರ ಪ್ರಜೆಗಳು ತಾವಾಗಿಯೇ ನಡಿಸುವರು ಈ ಸಂಘಗಳಿಂದ ಉಂಟಾಗುವ ಅನರ್ಥಗಳನ್ನು ತಕ್ಕಮಟ್ಟಿಗೆ ತಪ್ಪಿಸಲಾಗುತ್ತೆಂದು ಹೇಳಬಹುದು

ಈ ಕೆಳಗೆ ತಿಳಿಸಿತಕ್ಕ ಅಂಶಗಳನ್ನು ಗಮನಿಸಿದರೆ ಮೇಲಾದೀತು:—

(1) ನಾಟಕ ಸಂಘದ ಯಜಮಾನನು ಏರ್ಪಾಡುಮಾಡುವದಕ್ಕೆ ಮುಂಚೆ ಸರಕಾರದ ಅಪ್ಪಣೆ ಪಡೆಯಬೇಕು, (2) ಸಂಘದ ಹೆಸರನ್ನು ರೆಜಿಸ್ಟರ್ ಮಾಡಿಸಬೇಕು (ಯಾವ ಫೀಯೂ ಇಲ್ಲದೆ), (3) ಸಂಘದ ಯಜಮಾನನು ತನ್ನ ನಡತೆಯ ವಿಷಯಕ್ಕೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅಥವಾ ಪೊಲೀಸ್ ಕಮಿಷನರ್‌ರವರಿಂದ ಸರ್ಟಿಫಿಕೇಟ್ ಪಡೆದು ಅಪ್ಪಣೆ ಪಡೆಯುವಾಗ ಅದನ್ನು ರುಜುಪಡಿಸಬೇಕು, (4) ಸಂಘಕ್ಕೆ ಸೇರತಕ್ಕ ಮೆಂಬರುಗಳನ್ನು ತಂದೆತಾಯಿಗಳ ಅಪ್ಪಣೆಯಿಲ್ಲದೆ ಸೇರಿಸಕೂಡದು, (5) ಅನಾಥರಾದ ಬಾಲಕರನ್ನು ಸೇರಿಸಿಕೊಳ್ಳಬೇಕಾದರೆ ಅಂಥಾ ಬಾಲಕರ ಊಟ, ವಿದ್ಯಾಭ್ಯಾಸ, ನಡತೆ, ಇವುಗಳ ವಿಷಯದಲ್ಲಿ ಯಜಮಾನನು ಜವಾಬ್ದಾರನಾಗಿರಬೇಕು, (6) ಅಂಥಾ ಅನಾಥರನ್ನು ಸೇರಿಸಿಕೊಳ್ಳಬೇಕಾದರೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅಥವಾ ತಾಲ್ಲೂಕು ಮ್ಯಾಜಿಸ್ಟ್ರೇಟರ ಅಪ್ಪಣೆ ಪಡೆಯಬೇಕು, (7) ನಾಟಕಗಳನ್ನು ಬಹಿರಂಗದಲ್ಲಿ ಆಡುವದಕ್ಕೆ ಮುಂಚೆ ನಾಟಕಗಳ ಕಾಪಿಯನ್ನು ಪೊಲೀಸ್ ಕಮಿಷನರ್‌ರ ಅಥವಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಲೈಸೆನ್ಸು ಪಡೆದು, ಪಂಡಿತರುಗಳು ಪರಾಂಬರಿಸಿ ನೀತಿಬೋಧಕವಾದ ನಾಟಕಗಳೆಂದು ಒಪ್ಪಿದರೆ ಆನಂತರ ಸರಕಾರದವರು ಅಪ್ಪಣೆಕೊಡಬೇಕು

ಈ ವಿಧವಾದ ಒಂದು ಕಟ್ಟಳೆ ಇದ್ದರೆ ತಕ್ಕಮಟ್ಟಿಗೆ ಇವುಗಳಿಂದ ಉಂಟಾಗುವ ಹಾನಿಗಳು ಕಡಮೆಯಾಗಬಹುದು ಆದರೆ ನಮ್ಮ ದೇಶದಲ್ಲಿರತಕ್ಕ ಸಂಘಗಳೆಲ್ಲವೂ ಅಂಥವೇ ಎಂದು ನಾನೆಂದಿಗೂ ಹೇಳುವುದಿಲ್ಲ ಒಳ್ಳೇ ಸಂಘಗಳೂ ಇರುತ್ತವೆ, ಆದರೆ ಕೇವಲ ಅಲ್ಪಸಂಖ್ಯೆ ಅಭಿನಯಿಸುವವರೆಲ್ಲರೂ ಅಂಥವರೆಂದೂ ಹೇಳುವುದಕ್ಕಾಗುವುದಿಲ್ಲ ಗೌರವಸ್ಥರಾಗಿಯೂ, ವಿದ್ಯಾವಂತರಾಗಿಯೂ ಹಲವು ಮಂದಿ ಇರುವರು ಇವರು ಒಟ್ಟಿನಲ್ಲಿ ಸ್ವಲ್ಪಮಂದಿ ಎಂದು ನಿರ್ಧಾರವಾಗಿ ಹೇಳಬಹುದು ನಾಟಕ ಸಂಘಗಳನ್ನು ಮಾಡತಕ್ಕವರು ಯೋಗ್ಯರಾಗಿ, ಒಳ್ಳೆ ನಡತೆಯುಳ್ಳವರನ್ನು ಸೇರಿಸಿಕೊಂಡು, ನೀತಿಬೋಧಕ ನಾಟಕಗಳನ್ನೇ ಆಡಿದರೆ ಅಂಥಾ ಮಹನೀಯರು ಸರಕಾರದಿಂದ ದ್ರವ್ಯ ಸಹಾಯವನ್ನೂ, ನಾಟಕ ಶಿರೋಮಣಿ ಎಂಬ ಬಿರುದನ್ನೂ ಪಡೆಯುವದಕ್ಕೆ ಅರ್ಹರಾಗಿರುತ್ತಾರೆ ಇಂಥಾ ಮಹನೀಯರು ನೀತಿ ಬೋಧನೆಯನ್ನು ಮಾಡಿದ ಹಾಗೇ ಆಗಿ ದೇಶವೂ ಕೂಡ ವೃದ್ಧಿಗೆ ಬರಲು ಅವಕಾಶವಾಗುತ್ತೆಂದು ನಂಬಿರುತ್ತೇನೆ

ನೀತಿಬೋಧಕ

ಬಾತ್ಮಿದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ವಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಮದ್ದಗಿರಿ ತಾಲ್ಲೂಕಿಗೆ ಸೇರಿದ ಒಂದು ಸಮ್ಮತಿನ ಶೇಕದಾರರ ಅಧರ್ಮವಾದ ನಡವಳಿಕೆಯನ್ನು ಕುರಿತು ಒಂದು ಬಾತ್ಮಿಯು ನಮಗೆ ತಲಪಿರುತ್ತದೆ ಪ್ರಜೆಗಳು ಒಂದಾಗಿ ಅಮಲ್ದಾರರಲ್ಲೂ ಡೆಪ್ಯುಟಿ ಕಮಿಷನರ್‌ರಲ್ಲೂ ಅರಿಕೆ ಮಾಡಿಕೊಂಡರೆ ಅವರು ತನಿಖೆಯಿಂದ ಕ್ರಮಪಡಿಸುವರು ಮೊದಲೇನೇ ಈ ಬಾತ್ಮಿಯನ್ನು ಪ್ರಕಟಿಸಲು ನಮಗೆ ಆಭಿಮತವಿಲ್ಲ

ನಂಜನಗೂಡಿನಿಂದ ತಾಲ್ಲೂಕ್ ನೌಕರಮಾನೇರುಗಳ ಮತ್ತು ಮ್ಯುನಿಸಿಪಾಲಿಟಿ ನಡವಳಿಕೆಯ ವಿಚಾರವಾಗಿ ನಮ್ಮಲ್ಲಿಗೆ ಒಂದು ಸಂಭಾಷಣಾ ರೂಪವಾದ ವಾತ್ಮಿ ಪ್ರಕಟನೆಗಾಗಿ ಬಂದಿರುತ್ತವೆ ಪ್ರಜೆಗಳು ಅಂಥಾ ವರ್ತನೆಗಳನ್ನು ನೋಡಿ ಎಷ್ಟು ಕಾಲ ಸಹಿಸಿಕೊಂಡಿರುವರೋ ಅಷ್ಟರ ತನಕ ಅವು ಕ್ರಮಪಡುವುದಿಲ್ಲ ಮೇಲ್ಪಟ್ಟ ಅಧಿಕಾರಿಗಳು ಅವುಗಳನ್ನು ನಿಗಾ ಇಟ್ಟು ಕ್ರಮಪಡಿಸಬೇಕಾದದ್ದು ಅವರ ಕರ್ತವ್ಯವಾಗಿದೆ. ದೇಶವತ್ಸಲರಾದ ಪ್ರಜೆಗಳ ಮುಖಂಡರು ಅಲ್ಲಲ್ಲಿ ಏರ್ಪಟ್ಟು ಅಂಥಾ ದುರ್ನಡತೆಗಳನ್ನೂ ಕಷ್ಟನಷ್ಟಗಳನ್ನೂ ಅಧಿಕಾರಿಗಳ ತಿಳುವಳಿಕೆಗೆ ತರಬೇಕು ಹಾಗೆ ಗೋಪ್ಯವಾಗಿ ತಿಳಿಸುವಂಥಾವರನ್ನು ಯಾವ ಕಷ್ಟಕ್ಕೂ ಗುರಿಪಡಿಸುವುದಿಲ್ಲವೆಂದು ನಮ್ಮ ದಿವಾನ್ ಎಂ ವಿಶ್ವೇಶ್ವರಯ್ಯನವರು ಈ ಸಲ ಪ್ರತಿನಿಧಿಸಭೆಯಲ್ಲಿ ಮೆಂಬರುಗಳಿಗೆಲ್ಲಾ ಕಂಠೋಕ್ತವಾಗಿ ಅಪ್ಪಣೆ ಕೊಡಿಸಿರುತ್ತಾರೆ ಪ್ರಜೆಗಳು ಸರ್ಕಾರದವರಿಗೆ ತಿಳುವಳಿಕೆ ಕೊಟ್ಟು ಸಹಾಯ ಮಾಡದಿದ್ದರೆ ಇಂಥಾ ಅಕೃತ್ಯಗಳು ಅಡಗಿಸಲ್ಪಡವು

ಪ್ರತ್ಯಕ್ಷದರ್ಶಿ, ಚಿಕ್ಕಬಿದರೆ ಗ್ರಾಮ, ಅರ್ಕಸಾಲೇ ವೀರಾಚಾರಿ, ಚಿತ್ರದುರ್ಗ; ಗ್ರಾಮವಾಸಿ, ಹುಣಸೂರು, ತಿಪಟೂರು ಸಂಗತಿಗಳು; ಎಚ್. ಮಾದಯ್ಯ, ಹೊಸೂರುಗ್ರಾಮ, ನಿಷ್ಪಕ್ಷಪಾತಿ, ಶಿವಮೊಗ್ಗ, ಬಿರುದಾವಳಿಗಳ ಫೈಸಲ್ ನಿರೀಕ್ಷಕ, ಮಂಡಗದ್ದೆ, ಪ್ರತ್ಯಕ್ಷದರ್ಶಿ, ಶ್ರವಣಬೆಳಗೊಳ; ಯಾತ್ರಾಭವಾನಿ, ಸಕಲೇಶಪುರ.—ಈ ಬಾತ್ಮಿಗಳನ್ನು ಪ್ರಕಟಿಸಬಾರೆವೆಂದು ವಿಷಾದಿಸುತ್ತೇವೆ.

—ಎಡಿಟರ್.]

ಕರೆಸ್‌ಪಾಂಡೆನ್ಸ್.

ಅಧಿಕಾರಿಗಳೂ ಕುಡುಕುತನವೂ.

ಅಯ್ಯಾ,

ಅಧಿಕಾರಿಗಳು ಕುಡಿದು ಪ್ರಜ್ಞೆತಪ್ಪಿ ಹ್ಯಾಗೆ ಕೆಲಸಮಾಡಬಲ್ಲರು? ಹಾಜರಿ (ಡ್ಯೂಟಿ) ಯಲ್ಲಿರುವಾಗ್ಗೆ ಹೀಗಾಗುತ್ತಾ ಇದ್ದರೆ ಕೆಲಸ ಹ್ಯಾಗೆ ನೆರವೇರಿಸಬಹುದು? ಮತ್ತು ವಿಚಾರಿಸದೆ ಅತಿ ಕ್ರೂರವಾಗಿ ಬೀದಿಯಲ್ಲಿ ಒಬ್ಬನನ್ನು ಹೊಡೆಯಬಹುದೇ? ಹಾಗೆ ಏಟುತಿಂದವರು ಅಧಿಕಾರಿ ಎಂಬ ಭಯದಿಂದ ಸುಮ್ಮನೆ ಇದ್ದರಿಂತೂ ಮರ್ಯಾದೆ ಉಳಿಯುತು ಇಲ್ಲವಾದರೆ ಏಟ್ಟು ಸಹಿಸಲಾರದೆ ಅಧಿಕಾರಿಯ ಮೇಲೆ ತಿರುಗಿಬಿದ್ದರೆ ಆ ಅಧಿಕಾರಿಯ ಅಧಿಕಾರವೇನು? ಸರ್ಕಾರಿ ಅಧಿಕಾರಿಗಳಿಗೆ ಮರ್ಯಾದೆ ಏನು? ಕಡೆಗೆ ಸರ್ಕಾರದ ದರ್ಪವೇನು?

ನಿಮ್ಮ ವಾಚಕ.

ನಂಜನಗೂಡು ಎಕ್ಸೈಸ್ ವಿಚಾರ

ಅಯ್ಯಾ,

ಈ ಊರಲ್ಲಿ ಈ ವಾರ ಪ್ಲೇಗ್ ವ್ಯಾಧಿಯು ಹೆಚ್ಚಾಗಿದೆ ದಿನಕ್ಕೆ 4-5 ರ ವರೆಗೆ ಸಾಯುತ್ತಿದಾರೆ ಅನೇಕರು ಹಳ್ಳಿಪಳ್ಳಿಗಳಲ್ಲಿ ಸೇರಿಕೊಂಡಿದಾರೆ. ಹಳ್ಳಿಗಳಲ್ಲಿಯೂ ಈ ಉಪದ್ರವು ಹೆಚ್ಚುತ್ತಿದೆ

ಕೆಂಭಳ್ಳಿ ಎಂಬ ಗ್ರಾಮದ ಮಂಚಮರು ಸೇಂದಿಯಲ್ಲಿ ನೀರು ಹೆಚ್ಚಾಗಿ ಸೇರಿಸುತ್ತಾರೆಂದೂ, ಇದರಿಂದ ರೋಗಾದಿಗಳು ಉಂಟಾಗುತ್ತವೆಂದೂ, ಆದ್ದರಿಂದ ಸದರಿ ಗ್ರಾಮದಲ್ಲಿ ಯಾರೂ ಸೇಂದಿ ಕುಡಿಯಬಾರದೆಂದೂ ತೀರ್ಮಾನ ಮಾಡಿಕೊಂಡಿದಾರೆ ನಂಜನಗೂಡಿನಲ್ಲಿ ಸೇಂದಿ ಬಾಬು ಸಾಲೀಯಾನಾ ಒಟ್ಟು ಕಂಟ್ರಾಕ್ಟು ಆಗುತ್ತಾ ಇರೋಣದರಿಂದ ಸೇಂದಿ ಇಲಾಖಾ ನೌಕರರುಗಳಿಗೆ ಏನೇನೂ ಕೆಲಸವಿರುವದಿಲ್ಲ ಟ್ರೀಮಾರ್ಕರುಗಳಿಗೆ ಸಲ್ಲುವ ಸಂಬಳವು ವೇಸ್ಟ್ ಖರ್ಚಾಗಿದೆ ಒಬ್ಬ ಇನ್ಸ್‌ಪೆಕ್ಟರೂ, ಬ್ರಾಹ್ಮಣೇತರರಾದ ಇಬ್ಬರು ಟ್ರೀಮಾರ್ಕರೂ ಇದ್ದರೆ ಸಾಕಾಗಿದೆ. ಟ್ರೀಮಾರ್ಕರಾದ ಬ್ರಾಹ್ಮಣರು ಸೇಂದಿ ಮುಟ್ಟಿ ಅಜಮಾಯಿಷಿ ಮಾಡುವವರಲ್ಲ ಇವರುಗಳು ಇತರ ವ್ಯಾಸಂಗಗಳಲ್ಲಿ ಕಾಲ ಕಳೆಯುತ್ತಾ, ಮುಫತ್ತು ಸಂಬಳ ತೆಗೆದುಕೊಳ್ಳುತ್ತಿದಾರೆ ಸೇಂದಿಯಲ್ಲಿ ನೀರು ಎಷ್ಟರಮಟ್ಟಿಗೆ ಸೇರಿದೆಯೋ ಅವರಿಗೆ ಗೊತ್ತಾಗುವದಿಲ್ಲ ಆದದ್ದರಿಂದ ತಕ್ಕವರನ್ನು ಏರ್ಪಡಿಸಿ ಪಕೃತ ಇವರುಗಳನ್ನು ಬೇರೆ ನೌಕರಿಗೆ ಕಳುಹಿಸಿ ನಂತರ ದಿಗರು ತಾಲ್ಲೂಕಿಗೆ ವರ್ಗಾಯಿಸಲು ಮೇಲ್ಪಟ್ಟ ಆಫೀಸರುಗಳು ಗಮನಿಸುವರೆಂದು ಪ್ರಾರ್ಥನೆ.

ಪುರವಾಸಿ.

ನಾಮಧಾರಿ ಕುಟುಂಬಗಳ ಅವ್ಯವಸ್ಥೆ

ಅಯ್ಯಾ,

ಒಂದು ಮನೆಯಲ್ಲಿ ನಾಲ್ಕಾರು ಜನರು ಇದ್ದರೆ ಒಬ್ಬ ಯಜಮಾನನೆಂದು ನೇಮಕವಾಗಿ ಇರುತ್ತಾನೆ ಪ್ರತಿ ಒಂದು ಮನೆಯಲ್ಲಿಯೂ ಆ ಯಜಮಾನರುಗಳು ಮಾಡುವ ವಿಷಯ ಏನಂದರೆ, ತಮ್ಮ ಮಕ್ಕಳಿಗೆ ವಿದ್ಯಾಬುದ್ಧಿಯನ್ನು ಕಲಿಸುತ್ತಾರೆಯೇ ಹೊರತು ತಮ್ಮ ಅಣ್ಣನ ಮಕ್ಕಳು ತಮ್ಮನ ಮಕ್ಕಳಿಗೆ ವಿದ್ಯೆಯನ್ನು ಕಲಿಸುವುದಕ್ಕೆ ಪ್ರಾರಂಭಕ್ಕೆ ಬರುತ್ತೆ ಅವರಿಗೆ ಗುರುವಿದ್ಯೆಯನ್ನು ಕಲಿಸಿದರೆ ತಮಗೆ ಮುಂದೆ ಬಹಳ ಕೇಡು ಪ್ರಾಪ್ತಿಯಾಗುತ್ತೆಂದು ತಿಳಿದುಕೊಳ್ಳುತ್ತಾರೆ. ಅದರ ಸಾರಾಂಶ ಏನಂದರೆ ಎಲ್ಲರೂ ವಿದ್ಯೆಯನ್ನು ಕಲಿತುಕೊಂಡರೆ ಮುಂದೆ ಗದ್ದೆಗಳನ್ನು ಮಾಡುವವರು ಯಾರು ಎಂಬದಾಗಿ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಾರೆ ಮತ್ತೊಂದು ವಿಷಯ ಏನಂದರೆ ಒಬ್ಬ ಮನೆಯ ಯಜಮಾನನು ಮನೆಯಲ್ಲಿ ಇದ್ದ ತನ್ನ ಕುಟುಂಬದವರಿಗೆ ಮೋಸಗೊಳಿಸಬೇಕೆಂದು ಆಭರಣ ಮತ್ತು ದ್ರವ್ಯ ಸಹ ಆಕ್ರಮಿಸಿಕೊಂಡು ಮನೆಯಲ್ಲಿ ಕಲಹಗಳನ್ನು ಹುಟ್ಟಿಸುತ್ತಾನೆ ಆ ಮೇಲೆ ಅವರುಗಳು ಸಹಿಸುವುದು ಕಷ್ಟವಾಗಿ ಕೆಲವು ಮನೆ ಯಜಮಾನರನ್ನು ಪಂಚಾಯಿತಿಗೋಸ್ಕರ ಒಂದು ಸ್ಥಳದಲ್ಲಿ ಸೇರಿಸುತ್ತಾರೆ. ಆಗ್ಗೆ ಆ ಮನೆ ಯಜಮಾನನು ನಾನು ಹಾಗೆ ಕಡಿವೆ, ಹೀಗೆ ಕೊಟ್ಟಿದೆ, ಆದದ್ದರಿಂದ ನನಗೆ ಜ್ಯೇಷ್ಠವಾಲು ಸಲ್ಲಬೇಕು, ಕುಟುಂಬದಲ್ಲಿ ವಂಚನೆಯಿಲ್ಲದೆ ಮನೆಯಲ್ಲಿ ಇದ್ದದ್ದನ್ನೆಲ್ಲಾ ಪಂಚಾಯಿತರ ಮುಖಾಂತರ ಹಾಜರು ಪಡಿಸಿದರೆ ನಾವುಗಳು ನಾಲ್ಕು ಜನರು ಹೇಳಿದ್ದಕ್ಕೆ ಒಪ್ಪುತ್ತೇವೆ ಅನ್ನುತ್ತಾರೆ ಅದಕ್ಕೆ ಪಂಚಾಯಿತ ಯಜಮಾನರುಗಳು ಅವನು ಹಾಗೆ ವಂಚನೆ ಮಾಡತಕ್ಕವನಲ್ಲ ಎಂದು ಅವನಿಗಿಂತ ಮುಂಚೆಯೇ ಪಂಚಾಯಿತರುಗಳೇ ಹೇಳುತ್ತಾರೆ ಅದು ಯಾತಕ್ಕೆಂದರೆ ನಾಳೆ ತಮ್ಮಗಳ ಮನೆಯಲ್ಲಿಯೂ ಅದೇ ರೀತಿಯಾಗುವುದೆಂದು ಮುಂಚೆಯೇ ತಿಳಿದಿರುತ್ತಾರೆ ಆದ್ದರಿಂದ ಬಡ ರೈತರುಗಳಾದ ನಾವುಗಳು ಕೋರ್ಟಿಗೆ ಹೋಗುವದಕ್ಕೆ ನಮಗೆ ಕೈಯಲ್ಲಿ ಮೂರು ಕಾಸು ಸಹ ಇಲ್ಲ, ಮತ್ತು ತಿಳುವಳಿಕೆಯೂ ಇಲ್ಲ ಆದ್ದರಿಂದ ಕಷ್ಟಕ್ಕೂ ನಷ್ಟಕ್ಕೂ ಪಂಚಾಯಿತರು ಹೇಳಿದ ಮೇರೆಗೆ ಗುರಿಯಾಗಬೇಕು ಆದ್ದರಿಂದ ನಮ್ಮ ಗವರ್ನ್‌ಮೆಂಟಿನವರು ಬಡ ಪ್ರಜೆಗಳ ಮೇಲೆ ದಯವಿಟ್ಟು ಒಂದು ಕುಟುಂಬದಲ್ಲಿ ಎಷ್ಟು ಜನಗಳು ಇರುತ್ತಾರೆಯೋ ಅಷ್ಟು ಜನಕ್ಕೂ ವಿದ್ಯಾಬುದ್ಧಿಯನ್ನು ಕಲಿಸುವ ಏರ್ಪಾಡು ಮಾಡುವರೆಂದು ನಂಬುತ್ತೇನೆ.

ನಾಮಧಾರಿ ರೈತ ದಾಸಣ್ಣ

ಜಗಲೂರಿನ ಎ. ವಿ. ಸ್ಕೂಲು

ಅಯ್ಯಾ,

ಈ ಜಗಲೂರಲ್ಲಿ ಎ. ವಿ ಸ್ಕೂಲಾಗಿ ಸುಮಾರು 15-16 ವರುಷಗಳಾಗಿರಬಹುದು ಅಷ್ಟು ಕಾಲಕ್ಕೆ 7-8 ಜನ ಹೆಡ್ ಮಾಸ್ಟರುಗಳು ಈ ಸ್ಕೂಲಿನಲ್ಲಿ ಸರ್ವೀಸು ಹೊಂದಿರುತ್ತಾರೆ. ಒಬ್ಬೊಬ್ಬ ಹೆಡ್ ಮಾಸ್ಟರು ಒಂದೊಂದು ವಿಧವಾಗಿ ವಿದ್ಯಾಭ್ಯಾಸ ಕ್ರಮವನ್ನು ...ತೋರಿರುತ್ತಾರೆ ಆದರೆ ಕೆಲವು ಹೆಡ್

ಮಾಸ್ತರು ಇಲ್ಲಿದ್ದಾಗ ಸ್ಕೂಲಿನ ಸ್ಥಿತಿ ಬಹಳ ಚೆನ್ನಾಗಿತ್ತು ಆ ಸ್ಥಿತಿಯಾದರೂ ಹಿಂದೆ 7-8 ವರುಷಗಳ ವರೆಗೂ ಊರ್ಜಿಯ ಸ್ಥಿತಿಯಲ್ಲಿತ್ತು ಈಗ 5-6 ವರುಷಗಳಿಂದ ಮೊದಲಿಗಿಂತಲೂ ಕಾಲ ಕಾಲ ಕಡಮೆಯಾಯಿತು ಅಲ್ಲಿಂದೀಚೆ 2-3 ವರುಷಗಳಿಂದ ಅರೆವಾಸಿ ಕೆಟ್ಟುಹೋಯಿತು ಈಗಿನ ಸ್ಥಿತಿಯಂತು ಕೇಳಿದರೆ ವಿದ್ಯಾಭಿಮಾನಿಗಳಿಗೆ ತುಂಬಾ ವ್ಯಸನವಾಗುವದರಲ್ಲಿ ಯಾವ ಸಂಶಯವಿಲ್ಲ ಹುಡುಗರ ಸಂಖ್ಯೆಯಾದರೋ ರೋಲಿನಲ್ಲಿ ಎಲ್ಲಾ ಕ್ಲಾಸುಗಳಲ್ಲಿಯೂ ಸೇರಿ 400 ವಿದ್ಯಾರ್ಥಿಗಳಿದ್ದರೂ ಕ್ರಮೇಣ ಒಂದು ವರುಷಕ್ಕೆ 100 ಜನರು ಕಮ್ಮಿಯಾದಂತೆ ಆಯಿತು ಈಗ 2 ವರುಷಗಳ ಕೆಳಗೆ 200 ಹುಡುಗರು ಇದ್ದರು ಒಂದು ವರುಷದ ಕೆಳಗೆ 150 ಕ್ಕೆ ಬಂತು ಈಗ ಅಂದರೆ 1 ವರುಷದಿಂದೀಚೆ ಇನ್ನು ಕಮ್ಮಿಯಾಗಿ ಈಗ ಸದ್ಯದಲ್ಲಿ 75 ಕ್ಕೆ ಇಳಿದಿವ ... ಮುಂದೆ ಈ ಸ್ಕೂಲಿನ ಸ್ಥಿತಿ ಹ್ಯಾಗೆ ಪರಿಣಮಿಸುತ್ತೊ ತಿಳಿಯದು ಇಂಥಾ ಹೀನ ಸ್ಥಿತಿಯಲ್ಲಿರುವ ಸ್ಕೂಲಿನಲ್ಲಿ ಓದುವ ವಿದ್ಯಾರ್ಥಿಗಳಿಗೆ ಅನೇಕ ದುಃಖ ಸೂಚಕವಾದ ಕಷ್ಟಗಳು ಬರುವದರಲ್ಲಿ ಯಾವ ಸಂದೇಹವಿರುತ್ತೆ ಎಂಬುವದನ್ನು ನಮ್ಮ ವಿದ್ಯಾಭಿಮಾನಿಗಳ ದಿವ್ಯ ಚಿತ್ತಕ್ಕೆ ವೇದ್ಯರಾಗಬೇಕು ನಮ್ಮ ಗೌರ್ನಮೆಂಟಿನವರಾದರೋ ತಮ್ಮ ದೇಶದಲ್ಲಿ ಬಡ ಪ್ರಜೆಗಳ ಬಾಲಕರು ವಿದ್ಯಾವಂತರಾಗಿ ಅಭಿವೃದ್ಧಿಗೆ ಬಂದಾರೆಂಬ ಕುತೂಹಲದಿಂದ ಎಷ್ಟೋ ದ್ರವ್ಯ ವ್ಯಯಮಾಡಿ ಭಾರಿ ಕಟ್ಟಡಗಳನ್ನು ಕಟ್ಟಿ ಅನೇಕ ಸಿಬ್ಬಂದಿಯನ್ನು ಇಟ್ಟೂ ಕೂಡ ಬಡ ಪ್ರಜೆಗಳಿಗೆ ಮೇಲಿನವರ ದಯಾಳುತ್ವವು ಲಭಿಸಲು ಅನೇಕ ತೊಂದರೆಗಳಿವೆ ಅದೇನಂದರೆ ಮನೆಯ ಎಲ್ಲಾ ಸುಖ ಕಷ್ಟಗಳಿಗೂ ಮನೆ ಯಜಮಾನನು ಹ್ಯಾಗೆ ಕಾರಣ ಭೂತನಾಗುತ್ತಾನೆಯೋ ಅದರಂತೆ ಸ್ಕೂಲಿನ ಎಲ್ಲಾ ಭಾಗಕ್ಕೂ ಮಾಸ್ತರುಗಳೇ ಕಾರಣ ಭೂತರಾಗಿರುತ್ತಾರೆ ಆದ್ದರಿಂದ ನಮ್ಮ ದಯಾಳು ಸರ್ಕಾರದವರು ದಯವಿಟ್ಟು ಸರಿಯಾದ ಮಾಸ್ತರುಗಳನ್ನು ಚುನಾಯಿಸಿ ಸ್ಕೂಲ್ ಅಭಿವೃದ್ಧಿಗೆ ತಂದು ಬಡ ಪ್ರಜೆಗಳನ್ನು ಉದ್ಧಾರಮಾಡುವರೆಂದು ನಂಬಿರುತ್ತೇವೆ

ಶ್ರೀ ಗುರಪ್ಪ

ಆಗುಂಬೆ ನೇಟೀವ್ ಡಿಸ್‌ಪೆನ್ಸರಿಯು

ಅಯ್ಯಾ,

ಈ ಆಗುಂಬೆ ನೇಟೀವ್ ವೈದ್ಯಶಾಲೆ ಚಾರ್ಜಿಗೆ 1911 ನೇ ಇಸ್ವಿ ಅಕ್ಟೋಬರ್ ತಾ 22 ರಲ್ಲಿ ಪ್ರೆಂಚ್‌ರಾಕ್ಸ್ ನಿಂದ ಮ ಎಂ ಎ ಆನಂದಾಳ್ವಾರ್ ಎಂಬ ಪಂಡಿತರು ದಯಮಾಡಿಸಿದ ಲಾಗಾಯ್ತು ಈ ಕೇವಲ ಮಲೆನಾಡು ಪ್ರಾಂತ್ಯದ ಮಲೇರಿಯ ಎಂಬ ಜ್ವರ ವೈರಿಗೆ ತಕ್ಕಂಥಾ ಚಿಕಿತ್ಸೆ ನಡಿಸುತ್ತಾ ಬಂದಿದ್ದರಲ್ಲಿ ಶ್ರೀಕರ ಶೊಂಭತ್ತ್ಯೈದರಂತೆ ಎಲ್ಲರು ಗುಣಪಟ್ಟಿರುವದಲ್ಲದೆ ಈಗಲೂ ಸದರಿ ಡಾಕ್ಟರನ್ನು ಕರೆಸುತಕ್ಕ ಬಗ್ಗೆ ಪ್ರತಿದಿವಸವು ಗಾಡಿಗಳು ಬರುತ್ತಲೇ ಇವೆ ಹಾಗು ಈ ನಮ್ಮ ತೀರ್ಥಹಳ್ಳಿ ತಾಲ್ಲೂಕು ವಿನಾಯಿ ಕೊಪ್ಪ ಮತ್ತು ನಗರ ಈ ಎರಡು ತಾಲ್ಲೂಕಿಗೂ ಹೋಗಿ ಕೆಲಸ ನೋಡಬೇಕಾಗಿರುತ್ತದೆ ಈ ಬಗ್ಗೆ ಇವರ ಸಹಾಯಕ್ಕೆ ಒಬ್ಬ ಸಿಬ್ಬಂದಿಯನ್ನು ನಮ್ಮ ಮಹಾರಾಜಾ ಸರ್ಕಾರದವರು ನೇಮಿಸಿಕೊಡಬೇಕಾಗಿ ಈ ಜೂಂದೆ ಜನವರಿಯಲ್ಲಿ ಒಬ್ಬ ಖಾತ್ರಿದಾರರು ಸೂಚಿಸಿರುವ ಮೇರೆ ಈ ವರೆಗೆ ನಮ್ಮ ದಯಾಳು ಸರ್ಕಾರದವರು ಯಾವ ಏರ್ಪಾಡನ್ನೂ ಮಾಡಿಸಿಕೊಟ್ಟಂತೆ ಕಾಣುತ್ತಿದಿಲ್ಲ ಮತ್ತು ಈ ಹಿಂದೆ ಜನವರಿ ತಾ 9 ರಲ್ಲಿ ನಮ್ಮ ದಿವಾನ್‌ರಾದ ಮ|| ವಿಶ್ವೇಶ್ವರಯ್ಯನವರು ಈ ಪ್ರಾಂತ್ಯ ದಯಮಾಡಿಸಿದ ಕಾಲದಲ್ಲಿ ಈ ಪಂಡಿತರಿಗೆ 1912 ನೇ ಸಾಲ್ ದಸರಾ ಎಗ್ಜಿಬಿಷನ್ನಲ್ಲಿ ಬಂದಿರುವ ಮೆಡಲು ಮತ್ತು ಸರ್ಟಿಫಿಕೇಟ್ ವಿಷಯದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| ಕೆ ಶ್ರೀನಿವಾಸರಾಯರು ದಿವಾನ್ ಸಾಹೇಬರಿಗೆ ಮನವೇ ಮಾಡಿದರು ವಿನಾಯಿ ಜೊತೆಯಲ್ಲಿದ್ದ ಡಾಕ್ಟರ್ ನಂಜಪ್ಪನವರು ಸದರಿ ಆನಂದಾಳ್ವಾರ್ ಯವರಿಂದ ಕೆಲವು ಗಿಡಮೂಲಿಕೆ ವಿಷಧಗಳನ್ನು ತರಿಸಿಕೊಂಡರು ಎಂದು ಕೇಳುತ್ತೇವೆ ವಿನಾಯಿ ಈ ಪಂಡಿತರವರು ಈ ವರೆಗೆ ಸಾವಿರಾರು ರೋಗಿಗಳನ್ನು ಗುಣಪಡಿಸಿದ್ದಲ್ಲದೆ ಸುಮಾರು ಎರಡು ನೂರಐವತ್ತು ಮೂರುನೂರು ನ್ಯೂಮೋನಿಯಾ ಮತ್ತು ಡಬಲ್ ನ್ಯೂಮೋನಿಯಾ (ರೇಷೆ ಕಾಯಿಲೆ ಮತ್ತು ಸನ್ನಿಪಾತ) ರೋಗವನ್ನು ಶೇಕಡಕ್ಕೆ ಒಂದುನೂರರಂತೆ ಎಲ್ಲರನ್ನೂ ಗುಣಪಡಿಸಿರುತ್ತಾರೆ ಇದಕ್ಕೆ ತಕ್ಕಂತೆ ನಮ್ಮ ಮಹಾರಾಜಾ ಸರ್ಕಾರದವರು ಇವರಿಗೆ ಸರಿಯಾದ ಏರ್ಪಾಡನ್ನು ಮಾಡಿಸಿಕೊಟ್ಟು ದೀರ್ಘಕಾಲ ಈ ಮಲೆನಾಡು ಪ್ರಾಂತ್ಯವೇ ಇವರನ್ನು ಇರಿಸಿಕೊಟ್ಟು ಬಡಪ್ರಜೆಗಳಾದ ನಮ್ಮನ್ನು ಕಾಪಾಡಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ

ಒಬ್ಬ ನಿರೋಗಿ

[ಸರ್ಕಾರದವರು ಸಾಧ್ಯವಾದಷ್ಟು ಏರ್ಪಾಡನ್ನು ಮಾಡಿಕೊಟ್ಟಿದಾರೆ ಅದರಿಂದ ಫಲವನ್ನು ಹೊಂದುತ್ತಿರುವ ಗ್ರಾಮ ಊರುಗಳ ಮುಖಂಡರು ಸಾಲೀಯಾನಾ ಚಂದಾ ಹಾಕಿ ಈ ಪಂಡಿತರಿಗೆ ಬೇಕಾಗುವ ಸಿಬ್ಬಂದಿ ಮೊದಲಾದ ಖರ್ಚನ್ನು ವಹಿಸಿಕೊಳ್ಳುವದು ಅನುಕೂಲ ಇದಕ್ಕೆ ಸರ್ಕಾರದವರ ಸಹಾಯವನ್ನೇ ಕೋರುವುದೂ, ಅದನ್ನೇ ನಿರೀಕ್ಷಿಸಿಕೊಂಡಿರುವುದೂ ಸಹಜವಲ್ಲ ಎಡಿ]

"ನನ್ನ ಮಗಳನ್ನು ಯಾಕೆ ಸ್ಕೂಲಿಗೆ ಸೇರಿಸುವುದಿಲ್ಲ?"

ಅಯ್ಯಾ,

ಮಳವಳ್ಳಿಯಲ್ಲಿ ಸರ್ಕಾರದವರು ಗರಲ್ಸ್ ಸ್ಕೂಲನ್ನು ಯಾರಿಗೋಸ್ಕರ ಇಟ್ಟಿದಾರೆಂಬುವದು ತಿಳಿಯದು ನನ್ನ ಮಗಳನ್ನು ಸ್ಕೂಲಿಗೆ ಸೇರಿಸಬೇಕೆಂದು 1911 ನೇ ಇಸವಿ ಲಾಗಾಯ್ತು ಇದುವರೆಗೂ 23 ಅರ್ಜಿಗಳನ್ನು ಬರೆದುಕೊಂಡಾಗ್ಯೂ ಯಾವದಕ್ಕೂ ಸರಿಯಾದ ಜವಾಬೇ ಇಲ್ಲ ಇದಕ್ಕಾಗಿ ಪೋಸ್ಟಿನಲ್ಲಿ ರಿಜಿಸ್ಟರ್ ಮಾಡುವದೇ ಕೆಲಸವಾಯಿತು ಈ ಮಧ್ಯೆ ನಮ್ಮ ಸರ್ಕಲ್ ಇನ್ಸ್ಪೆಕ್ಟರವರು ಮಳವಳ್ಳಿಗೆ ಬಂದಿದ್ದಾಗ ನನ್ನ ಮಗಳನ್ನು ಸೇರಿಸಿಕೊಂಡು ವಜಾ ಮಾಡಿದ್ದವುಗಳನ್ನೆಲ್ಲಾ ತಪಸೀಲಾಗಿ ಹೇಳಿಕೊಳ್ಳಲು 1912 ನೇ ಡಿಸೆಂಬರ್ 13 ರಲ್ಲಿ ಇಲ್ಲಿನ ಗೌರ್ನಮೆಂಟ್ ಮುಖ್ಯಾಧಿಕಾರಿಗಳು, ವರ್ತಕ ದೊಡ್ಡಮನುಷ್ಯರು, ಮೆಂಬರುಗಳು ಮತ್ತು ಬ್ರಾಹ್ಮಣ ದೊಡ್ಡಮನುಷ್ಯರೆಲ್ಲರೂ ಸೇರಿ ನನ್ನ ವೃತ್ತಾಂತವನ್ನು ಮತ್ತು ಪೂರ್ವದ ನಡವಳಿಕೆಗಳನ್ನು ವಿಚಾರಿಸಿದ್ದಲ್ಲದೆ ತಾಲ್ಲೂಕು ಅಧಿಪತಿಯಾದ ಅಮಲ್ದಾರ್ರವರು ಅನೇಕವಾಗಿ ಚರ್ಚಿಸಿ ನಂತರ ಎಲ್ಲರ ಒಪ್ಪಂದದಂತೆಯೂ, ಹೊಸದಾಗಿ ಸ್ಕೂಲಿಗೆ ಮನೆಯನ್ನು ಕೊಡುವಂತೆಯೂ, ಶ್ಯಾನುಭೋಗರನ್ನು ಸಹ ವಿಚಾರಿಸಿ ನಾಳೆಯಿಂದ ನಿಮ್ಮ ಹುಡುಗಿಯನ್ನು ಸ್ಕೂಲಿಗೆ ಸೇರಿಸಿಕೊಳ್ಳಬಹುದೆಂದು ಅಪ್ಪಣೆಕೊಟ್ಟಂತೆ ಸೇರಿಸಲಾಯಿತು ನಂತರ ಊರಲ್ಲಿ ಕಾಲರಾ ಉಪದ್ರವು ಜಾಸ್ತಿಯಾಗಲು ಬೇರೆ ಸ್ಥಳಕ್ಕೆ ಹೋಗುವುದಕ್ಕಾಗಿ ಲೀವಿಂಗ್ ಸರ್ಟಿಫಿಕೇಟುಪಡೆದು ಕರೆದುಕೊಂಡುಹೋಗಿ ನಂತರ ಸರ್ಟಿಫಿಕೇಟ್ ಮೂಲಕ ಪುನಃ ಮಳವಳ್ಳಿ ಸ್ಕೂಲಿಗೆ ಬಿಡುವ ಕಾಲದಲ್ಲಿ—ನಿಮ್ಮ ಸರ್ಟಿಫಿಕೇಟು ಅವಶ್ಯವಿಲ್ಲ, ನಿಮ್ಮ ಹುಡುಗಿಯನ್ನು ಸೇರಿಸಿಕೊಳ್ಳುವುದಿಲ್ಲ ಎಂದು ತಿರಸ್ಕಾರಮಾಡಿ ತಳ್ಳಿದರು ಈ ವಿಷಯವಾಗಿ ಇಲ್ಲಿನ ಮೆಂಬರುಗಳನ್ನೆಲ್ಲಾ ಬಹು ದೈನ್ಯದಿಂದ ಬೇಡಿಕೊಂಡರೆ—ಅಯ್ಯೋ ಪಾಪ, ನಮ್ಮಗಳ ಅಡಚಣೆ ಯಾವುದೂ ಇಲ್ಲ ಮೇಲಕ್ಕೆ ಬರೆದುಕೊಳ್ಳಿ ಎಂದು ಉಪಚಾರದ ಮಾತುಗಳು ಎಷ್ಟೋ ಆದವು ಕಾರ್ಯತಃ ಇಲ್ಲವೇ ಇಲ್ಲ ಆದರೆ ಪರೋಪಕಾರದಲ್ಲಿರುವಂಥಾ ನಮ್ಮ ಗೌರ್ನಮೆಂಟು ಪಕ್ಷಪಾತವಾದದೆ ಆಲಿಸಿ ತೀರ್ಮಾನಿಸಬೇಕೆಂದು ಬೇಡುವುದೇನಂದರೆ—ಮೈಸೂರು ಗೌರ್ನಮೆಂಟು ಯಾವ ಜಾತಿಗೋಸ್ಕರವಾಗಿ ಇದೆ? ಮತ್ತು ಎಲ್ಲಾ ಒಂದೇ ಜಾತಿಯವರು ಅಧಿಕಾರದಲ್ಲಿದೇವೆಂದು ನಮ್ಮಗಳನ್ನು ತಿರಸ್ಕಾರಮಾಡುವುದು ಯಾವ ಧರ್ಮ? ಅಲ್ಲದೆ ಇವರುಗಳಿಗೆ ಮಾತ್ರ ಅನುಕೂಲವಾದ ಕ್ರಮಪ್ರೊಸೀಡಿಂಗ್ಸುಗಳು ಜಾರಿಗೆ ಬರಬೇಕು, ನಮ್ಮ ಬಡ ಕ್ರೈಸ್ತ ಪ್ರಜೆಗಳಿಗೆ ವಿದ್ಯೆ ಬೇಕಾದರೆ ಬ್ರಾಹ್ಮಣರ ಬೀದಿಯವರೆಲ್ಲರ ಅನುಮತಿ ಬೇಕು ಈ ವಿಷಯವಾಗಿ ನಾನು ಯಾರಲ್ಲಿ ಮೊರೆಯಿಟ್ಟುಕೊಳ್ಳಲಿ ಎಂಬ ಅಂಶವನ್ನು ಪುಣ್ಯಾತ್ಮರು ಯಾರಾದರೂ ಸಹಾಯಮಾಡಬೇಕೆಂದು ಬೇಡಿಕೊಂಡಿದೇನೆ ಮತ್ತು ಇದೇ ಮಳವಳ್ಳಿಯಲ್ಲಿ ಗರಲ್ಸ್ ಸ್ಕೂಲ್ ಪ್ರಾರಂಭ ಮಾಡಿದ ಕಾಲದಲ್ಲಿ ಕ್ರೈಸ್ತರ ಉಪಾಧ್ಯಾಯಳೇ ಇದ್ದದ್ದು ಅಸ್ತಿಭಾರಕ್ಕೂ ವಿದ್ಯೆಕ್ಕೂ ಮೊದಲು ಕ್ರೈಸ್ತರು ಬೇಕು, ಎಲ್ಲವನ್ನೂ ತಿಳಿದುಕೊಂಡು ಮುಂದೆ ಬಂದ ಮೇಲೆ ಅವರು ಬೇಕಿಲ್ಲ ನಮ್ಮನ್ನಾಳುವ ಮಹಾರಾಜರವರೂ ನಮ್ಮ ಗೌರ್ನಮೆಂಟಿನವರೂ ಬಡ ಪ್ರಜೆಗಳ ಗೋಳಾಟವನ್ನು ಕಾಣಿ ನಮ್ಮ ಮಕ್ಕಳಿಗೆ ಬೇಕಾಗಿರುವ ವಿದ್ಯೆಯನ್ನು ಕೊಟ್ಟು ಕಾಪಾಡಬೇಕೆಂಬುವುದೇ ನನ್ನ ಪ್ರಾರ್ಥನೆ

ಎಸ್ ಎಲ್ ರಾಮುಂದರಂ ಪಿಳ್ಳೆ

[ಈ ಓಲೆಯಲ್ಲಿ ಕಂಡ ಆಕ್ಷೇಪಣೆಯನ್ನು ಗವರ್ನ್‌ಮೆಂಟಿನವರು ವಿಚಾರಿಸುವುದು ಆವಶ್ಯವೆಂದು ಕಾಣುತ್ತದೆ—ಎಡಿ]

ದಿವಾನ್‌ರವರ ಉಪನ್ಯಾಸದ ಎರಡು ವಿಷಯಗಳು

ಅಯ್ಯಾ,

ಈ ಸಂವತ್ಸರದ ಪ್ರೀಮರ್ ದಿವಾನರವರ ಉಪನ್ಯಾಸದಿಂದ ಅವರಿಗೆ ಈ ದೇಶಾಭ್ಯುದಯದ ವಿಚಾರದಲ್ಲಿರುವ ಉತ್ಸಾಹವು ಸ್ಪಷ್ಟಪಟ್ಟಿರುತ್ತೆಂದು ಯಾರಾದರೂ ಹೇಳಬಹುದು ಉಪನ್ಯಾಸದ 13 ನೇ ಕಲಂನಲ್ಲಿ "ಈ ಬಾಬಿನ ಹುಟ್ಟುವಳಿಯು ಹೆಚ್ಚಿರುವುದು ಅಷ್ಟು ಸಂತೋಷಾಸ್ಪದವಾದ ಆ ಶವಾಗಿರುವದಿಲ್ಲ" ಎಂದು ದಿವಾನ್‌ರವರು ಆಬ್ಕಾರಿ ಬಾಬಿನಲ್ಲಿ ಅಪ್ಪಣೆಕೊಡಿಸಿರುವರು ಹಾಗಿರುವಲ್ಲಿ ಆ ಬಾಬನ್ನೇ ಯಾತಕ್ಕೆ ವಜಾಮಾಡಬಾರದು? ಸರ್ಕಾರಕ್ಕೆ ಲುಕ್ಸಾನಾಗುತ್ತೆಂದು ಹೇಳುವರೋ? ವಿದ್ಯಾಭ್ಯಾಸಕ್ಕಾಗಿ ಧಾರಾಳವಾಗಿ ಖರ್ಚುಮಾಡೋಣವು ಲುಕ್ಸಾನಲ್ಲವೇ ಲುಕ್ಸಾನಾದರೂ ಪ್ರಜೆಗಳ ಶ್ರೇಯಸ್ಸಿಗಾಗಿ ಆಗುವ ಲುಕ್ಸಾನು ಲುಕ್ಸಾನಲ್ಲವೆಂಬರು ಹಾಗೆ ವಿದ್ಯಾಭ್ಯಾಸದ ವ್ಯಯದಿಂದ ಲುಕ್ಸಾನಲ್ಲದಿದ್ದರೆ ಆಬ್ಕಾರಿಯ ಹುಟ್ಟುವಳಿಯು ಹೆಚ್ಚಾದಷ್ಟೂ ಜನರಿಗೆ ಹಾನಿಯು ಹೆಚ್ಚುತ್ತಿರುವದರಿಂದ ಈ ಬಾಬಿನ ಲುಕ್ಸಾನು ಲಾಭಕಾರಿಯಾಗಲಿಲ್ಲವೇ —15 ನೇ ಕಲಂನ 2 ನೇ ಪ್ಯಾರಾದಲ್ಲಿ ಮ್ಯುನಿಸಿಪಾಲಿಟಿಗಳಲ್ಲಿ ಕೆಲವಕ್ಕೆ ಫಲಾಪೇಕ್ಷೆಯಿಲ್ಲದ ದೊಡ್ಡಮನುಷ್ಯರು ವೈಸ್ ಪ್ರೆಸಿಡೆಂಟರಾಗಿರಲು ಮುಂದರಿದು ಬಂದು ಇರುವುದನ್ನು ನಮ್ಮ ದಿವಾನ್‌ರವರು ಶ್ಲಾಘಿಸಿರುವುದು ನ್ಯಾಯವೇ ಸರಿ ಈ ಕೆಲಸಗಳನ್ನು ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರುಗಳಲ್ಲಿ ಅ, ಕಮಿಷನರುಗಳು ನೋಡುತ್ತಿರುವುದರಿಂದ ಉಪಯೋಗವಿಲ್ಲವೆಂಬುದು ನಿಜ ಯಾತಕ್ಕೆಂದರೆ ಇತರ ಕೆಲಸಗಳು ಇವರಿಗೆ ಅನೇಕವಿರುವವು ಆದರೆ ಮುಂದರಿದು ಬಂದಿರುವ ದೊಡ್ಡಮನುಷ್ಯರು ಈ ಬಾಬಿನಲ್ಲಿ ಎಷ್ಟುಮಟ್ಟಿಗೆ ಅನುಭವಶಾಲಿಗಳೆಂದು ಮೊದಲು ದೃಢಪಡಿಸಿಕೊಳ್ಳಬೇಕಾಗಿರುತ್ತೆ ಮ್ಯುನಿಸಿಪಾಲಿಟಿಗಳ ಅಭಿವೃದ್ಧಿಗೆ ಮುಖ್ಯವಾದದ್ದು ಹಣ ಈ ಹಣವು ಆ ಬಾಬಿನ ಕೆಲವು ಶಾಖೆಗಳ ಮೂಲಕ ಹುಟ್ಟುವಳಿಯಾಗಬೇಕು ಅಂಥಾ ಶಾಖೆಗಳ ಅಲ್ಪ ವೇತನದ ನೌಕರರ ಮೋಸಗಳನ್ನೂ, ರಕ್ಕಗಳನ್ನೂ ಕಂಡುಹಿಡಿದು, ಅವರನ್ನು ನಿಗ್ರಹಿಸುವ ಶಕ್ತಿಯುಳ್ಳ ವೈಸ್ ಪ್ರೆಸಿಡೆಂಟರಿದ್ದರಲ್ಲವೇ ಸರಿಯಾಗಿ ಹುಟ್ಟುವಳಿಯಾಗುವದು? ಈ ಸಂಸ್ಥಾನದ ಎಲ್ಲಾ ಮ್ಯುನಿಸಿಪಾಲಿಟಿಗಳೂ 1871 ನೇ ಇಸವಿಯಲ್ಲಿ ಸ್ಥಾಪಿತವಾದವು ಈ ಇಲಾಖೆಯಲ್ಲಿ ಹುಟ್ಟುವಳಿ ಬಾಬುಗಳು ಮೊಹತರ್ಫಾ ಆಕ್ಟ್ರಾಯಿ ಅಮರಾಯಿ ಒಣಮರ ಹರಾಜು, ಪಾಳುನಿವೇಶನ ಹರಾಜು, ಗೊಬ್ಬರದ ಹರಾಜು ಇತ್ಯಾದಿಗಳಿವೆ ಇವುಗಳಲ್ಲಿ ಸಣ್ಣನೌಕರರು ಸೋಮಾರಿಗಳಾಗಿ ಸಂಬಳ ಬಂದರೆ ಸಾಕೆಂದು ಹೊತ್ತು ಕಳೆಯೋಣದ್ದರಿಂದ ವಸೂಲಿಯು ಸಮರ್ಪಕವಾಗುವುದಿಲ್ಲ ಆಕ್ಟ್ರಾಯಿ ಬಾಬಿನಲ್ಲಿರುವ ಪಿತ್ತಲಾಟಗಳನ್ನು ವರ್ಣಿಸುವುದು ಅಸಾಧ್ಯ ಇತರ ಬಾಬುಗಳೂ ಹೀಗೆಯೇ ಇರುವವು ಒಂದಾನೊಂದು ಮ್ಯುನಿಸಿಪಾಲಿಟಿಯಲ್ಲಿ ಮೊದಲು ಯಾವ ಪಿತ್ತಲಾಟವೂ ತಿಳಿಯದುದಕ್ಕೆ ಪೂರ್ವ ಇದ್ದ ಆಕ್ಟ್ರಾಯಿ ಹುಟ್ಟುವಳಿಯು ಸಾಲೀಯಾನಾ ಸುಮಾರು 4,000 ದಿಂದ 3,000 ರೂಪಾಯಿಗೆ ಹತ್ತು ವರುಷಗಳಲ್ಲಿ ಇಳಿಯಿತು ಆಗ ಗವರ್ನ್‌ಮೆಂಟಿನವರು ಆ ಮ್ಯುನಿಸಿಪಲ್ ಪ್ರೆಸಿಡೆಂಟರನ್ನು ಯಾವ ಏರ್ಪಾಡಾದರೂ ಮಾಡಿ ಮೊದಲಿನ ಸ್ಥಿತಿಗೆ ತರಬೇಕೆಂದು ಖಂಡಿತಮಾಡಿದ್ದರ ಮೇಲೆ ಅವರು ಮಾಡಿದ ಏರ್ಪಾಡಿನಿಂದ ಒಂದೇ ವರುಷದಲ್ಲಿ ಈ ಉತ್ಪತ್ತಿ ಒಂದರಿಂದ ಐದು ಸಾವಿರ ರೂಪಾಯಿಗೆ ಹೆಚ್ಚಿತು ಅಮರಾಯಿ ಹುಟ್ಟುವಳಿ 20 ರೂಪಾಯಿನೊಳಗೆ ಇದ್ದದ್ದು 200 ರ ಮೇಲಾಯಿತು ಇದರಂತೆ ಹುಟ್ಟುವಳಿ ಬಾಬುಗಳೆಲ್ಲಾ ಹೆಚ್ಚಿದವು ಈ ರೀತಿಯಲ್ಲಿ ಅಭಿವೃದ್ಧಿಗೆ ತಂದವರು ಸುಮಾರು 4 ವರುಷ ಮಾತ್ರ ಇದ್ದರು. ಆ ವರೆಗೂ ಸರಿಯಾಗಿಯೇ ಇತ್ತು ಅವರ ಅನಂತರ ಹುಟ್ಟುವಳಿ ಯಥಾಪ್ರಕಾರ ಇಳಿಯುತ್ತಾ ಬಂತು ಈ ಮೇರೆ ಅಭಿವೃದ್ಧಿಮಾಡಬಲ್ಲವರನ್ನೇ ಹುಡುಕಿ ಎಲ್ಲಾ ಮ್ಯುನಿಸಿಪಾಲಿಟಿಗಳಿಗೂ ನೇಮಿಸಿದರೆ ಅನುಕೂಲ. ಪ್ರಯತ್ನಪಟ್ಟರೆ ಫಲಾಪೇಕ್ಷೆಯಿಲ್ಲದೆ ಮುಂದರಿದು ಬರುವವರು ದೊರೆಯಬಹುದು ಅದಕ್ಕೆ ವೃದ್ಧರೆಂದು ಮಾತ್ರ ತಾತ್ಸಾರಮಾಡಬಾರದು ಈ ಕೆಲಸಗಳಿಗೆ ಹಳ್ಳಿಹಳ್ಳಿಗಳಿಗೆ ಸುತ್ತಲಾರದ ವೃದ್ಧರೇ ಅನುಕೂಲವೆಂದು ತಿಳಿಯಬೇಕು

ದೀವಟಿಗೆ

ಆಶ್ಚರ್ಯವಾದ ಲೇವಾದೇವಿ (ಬ್ಯಾಂಕ್)

ಅಯ್ಯಾ,

ತರೀಕೆರೆಯು ದೊಡ್ಡ ಊರಿನ ಪ್ಯಾಟೆಯ ಮಧ್ಯೆ ಇಪ್ಪತ್ತು ವರ್ಷದ ಯಸ್ಸಿನ ಒಬ್ಬ ಹೆಂಗಸು ವಾಸಿಸುತ್ತಿದ್ದಾಳೆ ಈಕೆ ವಿಧವೆಯು. ಈಕೆಯು ಕೆಲವು ವರ್ತಕರಲ್ಲೂ, ಹಣವಿಟ್ಟುಕೊಂಡಿರುವ ಹೆಂಗಸರಲ್ಲೂ 7 8 ರೂಪಾಯಿನ ಸಾಲ ತರುತ್ತಾ ವಾರಕ್ಕೆ 2 ರೂಪಾಯಿ ಬಡ್ಡಿ ನಿಗದಿಯಿಂದ ಸಾಲ ತಿಳ್ಳು ಕೊಳ್ಳುವಾಗಲೇ ಅಸಲು ಮೊಬಲಗಿನಲ್ಲಿ ಬಡ್ಡಿ ಬಾಬ್ತು ಪಾವತಿಮಾಡುತ್ತಾ ಅಸಲು ಪೂರಾ ಮೊಬಲಗನ್ನು ವಾಯಿದೆಗೆ ಸರಿಯಾಗಿ ವಾಪಸು ಪಾವತಿಮಾಡುತ್ತಾ ಈ ರೀತಿ ಒಂದು ಕಡೇ ನಾಡಿದ ಸಾಲವು ಮತ್ತೊಂದು ಕಡೆ ತೀರುತ್ತಾ ಸಾಲಮಾಡುವುದೂ ವಾಪಸು ಕೊಡುವುದೂ ಈ ರೀತಿ ಸೀರಾ ನಡೆದುಕೊಳ್ಳುತ್ತಾ ಬಂದಳು ಹಣ ಕೊಡುವವರಿಗೆ ಬಡ್ಡಿಯ ಆಶೆ ಹೆಚ್ಚಿತು ಈಕೆಯ ನಂಬಿಕೆಯೂ ಹೆಚ್ಚಿತು ನಾನು ಕೊಡುವೆನು, ತಾನು ಕೊಡುವೆನು ಎಂಬ ಪೋಟಿಯು ಹುಟ್ಟಿತು ಈಕೆಗೂ ಗಿರಾಕಿ ಜಾಸ್ತಿಯಾಗುತ್ತಾ ಬಂತು ನಂತರ ಈಕೆಯು 7 8 ರೂಪಾಯಿ ಇದ್ದದ್ದನ್ನು 19 20 ಕ್ಕೆ ಹೆಚ್ಚಿಸಿ ವಾರಕ್ಕೆ 4 ರೂಪಾಯಿ ಬಡ್ಡಿ ನಿಗದೀಮಾಡಿ ಮೊಬಲಗು ತೆಗೆದುಕೊಳ್ಳುವಾಗಲೇ ಬಡ್ಡಿ ಪಾವತಿಮಾಡುತ್ತಲೂ, ಕಾಲಕ್ಕೆ ಸರಿಯಾಗಿ ಅಸಲು ಮೊಬಲಗನ್ನು ಪಾವತಿಮಾಡುತ್ತಲೂ ಬಂದಳು ಈಕೆಗೆ ಯಾವ ಕಾಲಕ್ಕೆ ಬೇಕಾದರೂ ನೂರಾರು ರೂಪಾಯಿ ಸಿಗುವಂತೆ ಆಗಿ ಗಂಡಸರೂ, ಹೆಂಗಸರೂ ಈಕೆಯ ಮನೆಗೆ ವಿಶೇಷವಾಗಿ ಬರುವುದೂ ವಿಶ್ವಾಸ ಬೆಳಸುವುದೂ, ಹಣಬೇಕಾದರೆ ಕೇಳು ಕೊಡುತ್ತೇವೆ ಎಂದು ಗುಟ್ಟಾಗಿ ಹೇಳುವುದೂ, ಈರೀತಿ ಮಾಡುತ್ತಾಬಂದರು ಅನೇಕ ಜನ ಗಂಡಸರೂ, ಹೆಂಗಸರೂ ರುಚಿ ಕಂಡವರಾಗಿ ಬಡ್ಡಿ ಮೊಬಲಗಿನಲ್ಲಿ ಒಡವೆಗಳನ್ನು ಮಾಡಿಸುವದೂ ಸೀರೆಗಳನ್ನು ಕೊಂಡುಕೊಳ್ಳುವದೂ ಈ ರೀತಿ ಮಾಡುತ್ತಾ ಬಂದರು ಅಷ್ಟರಲ್ಲಿ ಬ್ಯಾಂಕಿನವಳು ಎರಡಿಪ್ಪತ್ತು, ಮೂರಿಪ್ಪತ್ತು, ನಾಲ್ಕಿಪ್ಪತ್ತು ಐದಿಪ್ಪತ್ತು ಈ ರೀತಿ ಹೆಚ್ಚು ಪಡಿಸುತ್ತಲೂ ಒಂದು ವಾರಕ್ಕೆ ಒಂದಿಪ್ಪತ್ತಿಗೆ 4 ರೂಪಾಯಿ ಬಡ್ಡಿಯಂತೆ ಐದಿಪ್ಪತ್ತು ತೆಗೆದುಕೊಂಡ ಒಡನೆಯೇ ಒಂದಿಪ್ಪತ್ತು ರೂಪಾಯಿ ಬಡ್ಡಿಗಾಗಿ ಕೊಟ್ಟು ಪೂರಾ ಐದಿಪ್ಪತ್ತನ್ನು ವಾಯಿದೆಗೆ ಸರಿಯಾಗಿ ವಾಪಸು ಕೊಡುತ್ತಾ ಬಂದಳು ಗಂಡಗೆ ತಿಳಿಯದಂತೆ ಹೆಂಡತಿಯೂ, ಹೆಂಡತಿಗೆ ತಿಳಿಯದಂತೆ ಗಂಡನೂ, ಮಗನಿಗೆ ತಿಳಿಯದಂತೆ ತಂದೆಯೂ ತಂದೆಗೆ ತಿಳಿಯದಂತೆ ಮಗನೂ ಈ ರೀತಿ ಒಂದು ಸಂಸಾರದಲ್ಲಿ 2 3 ಕಡೆ ಸಾಲಪಡೆಯುತ್ತಲೂ ಗಂಡನಲ್ಲಿ ತಂದ ಹಣವು ಹೆಂಡತಿಯು ಸಾಲತೀರುವಳಿಗೂ, ಮಗನಲ್ಲಿ ಪಡೆದ ಹಣವು ತಂದೆಯ ಸಾಲತೀರುವಳಿಗೂ ಈ ರೀತಿ ಒಂದೇ ಸಂಸಾರದ ಹಣದಿಂದ ಅದೇ ಸಂಸಾರದ ಸಾಲಾ ತೀರಿಸುತ್ತಲೂ ನಂಬಿಗೆ ಹೆಚ್ಚುಪಡಿಸುತ್ತಲೂ ವಾಯಿದೆ ತಪ್ಪದ ರೀತಿ ಪಾವತಿ ಮಾಡುತ್ತಲೂ ಬಂದಳು ಈಚೆಗೆ ಈ ಮೊಬಲಗು ಹದಿನಾರಿಪತ್ತು, ಇಪ್ಪತ್ತಿಪ್ಪತ್ತು, ಇಪ್ಪತ್ತೈದಿಪ್ಪತ್ತು, ಮುವ್ವತ್ತಿಪ್ಪತ್ತು ಈ ರೀತಿ ಬೆಳೆಯುತ್ತಾ ಬಂತು ಒಬ್ಬೊಬ್ಬ ಮಹನೀಯರು ನೂರಾರು ರೂಪಾಯಿ ಬಡ್ಡಿ ಸಂಪಾದನೆ ಮಾಡಿರುತ್ತಾರೆಂದೂ ಈ ಪೈಕಿ 1 2 ಜನರು ಸಾವಿರಾರು ರೂಪಾಯಿ ಬಡ್ಡಿ ಪಾವತಿ ಮಾಡಿರುತ್ತಾರೆಂದೂ ಕೇಳುತ್ತೇನೆ ಈಚೆಗೆ ಬ್ಯಾಂಕಿನವಳು ಕಾಲಕ್ಕೆ ಸರಿಯಾಗಿ ಪಾವತಿಮಾಡದೆ ಸುಸ್ತಿ ಬಡ್ಡಿ ಪಾವತಿ ಮಾಡುತ್ತಾ ಬಂದಳು ಒಬ್ಬೊಬ್ಬರ ಸಾಲವು ಸಂಪೂರ್ಣ ತೀರಿ ಲಾಭಸಂಪಾದನೆ ಮಾಡಿದಾರೆ ಆದರೆ ಅನೇಕರಲ್ಲಿ ಸಾವಿರಾರು ರೂಪಾಯಿ ಸಾಲಾ ನಿಂತಹಾಗೆಯೇ ಕಂಪೆನಿಯು ವಾಪಸು ಕಾಗೆಸಿಕೊಂಡಿತು "ಆಶೀ ಆಸೆ ಗತೀ ಕೆಡಿಸಿತು" ಎಂಬ ಸಾಮತಿಗೆ ಸರಿಯಾಗಿ ನೂರಾರು ರೂಪಾಯಿ ಸಾಲಾ ನಿಂತಿರುವ ಅನೇಕ ಜನರು ಗಂಡಸರೂ ಹೆಂಗಸರೂ ಅಸಲು ಹಣವಿಗಾಗಿ ಆಕೆಯ ಮನೆಗೆ ಅಲೆಯುತ್ತಿರುವರು ಗಂಡಸು ತಾನು ಕಳೆದುಕೊಂಡದ್ದನ್ನು ಹೆಂಡತಿಗೆ ತಿಳಿಸಲಾರದಿರುವನು ಹೆಂಡತಿಯು ಗಂಡನಿಗೆ ತಿಳಿಸಲಾರದಿರುವಳು ತಂದ ಮಕ್ಕಳು ತಮಗೆ ಆಗಿರುವ ಲುಕ್ಸಾನು ಒಬ್ಬರಿಗೊಬ್ಬರು ತಿಳಿಸಲಾರದಿರುವರು ಯಾರೂ ಕಾಣದಂತೆ ಬ್ಯಾಂಕಿಗೆ ಬಂದು ಕೇಳಿ ಹೋಗುತ್ತಿರುವರು ಬ್ಯಾಂಕಿನವಳಾದರೋ ಒಂದು ಕಾಸೂ ಸಂಪಾದಿಸಿಕೊಂಡಿಲ್ಲ ಬ್ಯಾಂಕು ಲೇವಾದೇವಿಯು ಸೀದಾ ನಡೆಯುತ್ತಿರುವ ಕಾಲದಲ್ಲಿ ದುಂದು ಖರ್ಚು ಮಾತ್ರ ಮಾಡುತ್ತಿದ್ದಳು ಈಕೆಯನ್ನು ತಗಾದೆ ಮಾಡುವ ಪ್ರತಿ ಒಬ್ಬರಿಗೂ ಈಕೆಯು ಪುನಃ ಮೊದಲಿನಂತೆ ಹಣ ಕೊಡಿ ಬಡ್ಡಿಯೂ ಅಸಲೂ ಸಹ ತೀರಿಸುತ್ತೇನೆ ಎಂದು ಹೇಳುತ್ತಿರುವಳು ಆದರೆ ಒಬ್ಬರೂ ಕೊಡುತ್ತಿಲ್ಲ ಮಹಾಲಕ್ಷ್ಮಿಯು 6 ತಿಂಗಳು ವಾಸಮಾಡಿದ್ದ ಬಳಿ ದರಿದ್ರ ಲಕ್ಷ್ಮಿಯು ಸೇರಿರುತ್ತಾಳೆ ಇಂಥಾ ಆಶ್ಚರ್ಯವಾದ ಬ್ಯಾಂಕು ವಾಚಕರು ಎಂದೂ ನೋಡಿರಲಾರರು ಈ ನವನಾಗರಿಕ ಕಾಲದಲ್ಲೂ ಇಂಥಾ ಬ್ಯಾಂಕುಗಳಲ್ಲಿ ಜನರು ನಂಬಿಕೆ ಇಡುತ್ತಿರುವದೂ, ಮೋಸಹೋಗುತ್ತಿರುವುದೂ ಆಶ್ಚರ್ಯವಲ್ಲವೇ? ದೀಪವನ್ನೇ ತಿನ್ನುತ್ತೇನೆಂಬ ಪತಂಗವು ದೀಪಕ್ಕೆ ಸಿಕ್ಕಿ ಪ್ರಾಣಕಳೆದುಕೊಳ್ಳುವಂತೆ ಬಡ್ಡಿಯ ಆಶೆಗಾಗಿ ಅಸಲು ಮೊಬಲಗನ್ನು ಕಳೆದುಕೊಂಡಿರುವ ಅನೇಕರ ವಿಷಯದಲ್ಲಿ ನಾನು ತುಂಬಾ ವ್ಯಸನಪಡುತ್ತಿರುವೆನು ಜೂಜಿನ ಸ್ವರೂಪವುಳ್ಳ ಈ ಬ್ಯಾಂಕಿನ ಲೇವಾದೇವಿಯು ಇಷ್ಟು ವಿಪುಳವಾಗಿ ಬಲಿಯುವ ಪರಿಯಂತ ಪೋಲೀಸಿನವರ ನಿಗಾ ಬೀಳದೆ ಹೋದದ್ದು ತುಂಬಾ ವ್ಯಾಕುಲವುಂಟುಮಾಡಿರುತ್ತದೆ

ಬೆಲಗೂರು ಕೆ ವೆಂಕಟರಾಯಶೆಟ್ಟಿ

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

104 20

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ಕೀಲು, ಆರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು—(1) ಎಸ್ ಪೀಟರ್ಸ್, 31 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಜಿ ಎಸ್ ಕೃಷ್ಣಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಕುಂತಳಾನಂದ ತೈಲವು

192 6

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬೆಳ್ಳಿಗ ... ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಗೊಳಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗನ್ನು ತರಿಸಿ ನೋಡಿರಿ

ನಮ್ಮ ವಿಳಾಸ—ಬಿ ಎಮ್ ನಾಥ ಮತ್ತು ಕಂಪನಿ,

ಪೇಟೇರಿ, ಮದರಾಸ್.

CHAMBERLAIN'S PAIN BALM.

ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವು.

1 44



ಬೆನ್ನೆಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಚಜ್ಜಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇಂಗಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇದೇ ಇದೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು

ಆಗ ಚೇಂಬರ್ಲೇನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ,

ಕೈಯಿಂದ ಮುಟ್ಟಿದ್ದೇನೂ ಅಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವದು   ಸಣ್ಣ ಸೀಸೆಗೆ ೧ ರೂಪಾಯಿ.   ದೊಡ್ಡ ಸೀಸೆಗೆ ೨ ರೂಪಾಯಿ.

ವರ್ಣಿಸಿಲು   ಅತ್ಯವಶ್ಯಕ

ಬಿ. ವಿ. ಪಂಡಿತ್‌ರವರ

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟು ಆಬಾಲವೃದ್ಧರಿಗೂ ಆಮೋದವನ್ನುಂಟುಮಾಡುತ್ತಿರುವ

ಆಮೋದಿನಿ

150 ಮಾತ್ರೆಯುಳ್ಳ ಸೀಸೆಗೆ 4 ಆ , 5 ಸೀಸೆಗಳಿಗೆ 1 ಇನಾಮ

ಈ ಮಾತ್ರೆಗಳು 1 2 ನ್ನು ಬಾಯಿನಲ್ಲಿ ಹಾಕಿಕೊಂಡ ಕೂಡಲೆ ಮನಸ್ಸಿಗೆ ಅಪೂರ್ವವಾದ ಆನಂದವುಂಟಾಗುವುದು ಎಷ್ಟು ಹಾಡಿದರೂ ದಣುವಾಗದಂತೆ ... ಕಂಠವನ್ನು ... ಪ್ರಖ್ಯಾತಿ ಪಡೆದಿರುವುದು ಬಾಯಿ ... ಜೀರ್ಣಶಕ್ತಿ ... ಕೆಮ್ಮು ದಮ್ಮು ಅಜೀರ್ಣ ... ಗುಣಪಡಿಸುವ ... ಗುಣವನ್ನು ಹೊಂದಿರುವದು ... ಅನುಭವಿಸುವವರಿಗೂ ... ಜೀವನವು ಅಮೃತಕ್ಕೆ ಸಮವಾದುದು ಟಪಾಲ್ ಖರ್ಚ 12 ಸೀಸೆ ವರೆಗೆ 1 ಆಣೆ ಕಸ್ತೂರಿ ಮಾತ್ರೆ —ಸೀಸೆ 1ಕ್ಕೆ 4 ಆ ... 5 ಸೀಸೆಗಳಿಗೆ ಒಂದು ಇನಾಮು [220 1]

ವಿಳಾಸ—ಮ್ಯಾನೇಜರ್ ಸದ್ವೈದ್ಯಶಾಲಾ, ನಂಜನಗೂಡು

The National Insurance & Banking Co., Ltd., Amristsar.

Madras Branch—33 Armenian Street, Madras.

Authorised and Subscribed Capital Rs 10,00,000

Paid up Capital only about Rs. 1,50,000

POSSESSES GOVERNMENT SECURITY

The company has deposited Rs 1,00,000 (one lakh) with the Government of India for the Security of the Policy holders in compliance with the Government of India Indian Insurance Company's Act of 1912

The Searchlight" a Monthly journal of Insurance and Finance published in London, writes — Evidently the company covers a lot of ground And while we consider that so far the company has done quite as well as it could fairly expect we must add that it is engaged in so admirable work that it deserves the best wishes of all upholders of life assurance throughout the world We are sure that it will have these, for there is nothing that knits the fabric of society together more closely than the successful carrying on of life assurance by a sound office '

Statement of Progress

Year	Subscribed Capital	Paid up Capital	Working Capital	Government Papers and Debentures	Deposits
1907	2,28,100	17,820	65,966	2,500	28,786
1908	4,64,800	48 605	1,94,406	5,100	1,30,888
1909	5 29 000	62 470	4,15 213	18,100	3,09 726
1910	5 56 300	74 787	6 44 490	23,100	5,36 069
1911	7 42,000	99 482	11 68,022	77 100	8 21 678
1912 Half yea	8,79,400	1 18 711	14,74 902	1 12,100	9 71,232
1912 „ 2nd	10 00 000	1 41,594	15,42,419	1,32,600	10,39,916

For further particulars apply to—

[216 -] **T. S. R. Iyer, Secretary (Madras Branch),**

Camp, Amritsar National Insurance Buildings, Mysore

ಮಯ ಬ್ರಾಂಡಿ   ಮರೆಯಬ್ಯಾಡಿರಿ

ದರ್ಬಾರ್ ಸಾಬೂನು

ಏಜಂಟರುಗಳು ಬೇಕಾಗಿದೆ.

ಒಳ್ಳೇ ಕಮಿಷನ್ ದೊರೆಯುವದು.

ಅಪಾಯವಿಲ್ಲದ ರೋಮಸಂಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ನಿಮಿಷಗಳೊಳಗಾಗಿ ರೋಮವು ಮಾಯವಾಗುವದು

ಉರಿ ನವೆ ಮುಂತಾದ ಬಾಧೆಗಳಿಲ್ಲವು ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು ಮರೆಯಬ್ಯಾಡಿರಿ

1 ಸಬ್ಬುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ 14 ಆಣೆ

2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1 10 0

ಅಂಚೆ ಹಾಸಲು 1 ಆಣೆ

ಏಜೆಂಟರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ [271 2]

ವಿಳಾಸ ... ಸ್ ... ಕಂಪನಿ,

3 ... ರುಕ್ಸ್ ... ಬೀದಿ ಮದರಾಸು

ಶ್ವಾಸಕೇಸರಿ ಲೇಹ.

ಆಸ್ತ್ಮಕ್ಕೆ ತಪ್ಪದೆ ತತ್‌ಕ್ಷಣ ಗುಣಕೊಡುತ್ತೆ.

ಆಸ್ತ್ಮಕಾಯಿಲೆಯು ಎಷ್ಟೇ ಹಳೇದಾಗಿದ್ದರೂ ಎಷ್ಟೇ ಕಠಿಣವಾಗಿದ್ದರೂ ಈ ಲೇಹವನ್ನು ಮೂರು ವಾರ ಸೇವಿಸುವುದರೊಳಗೆ ನಿಶ್ಚಿತವಾಗಿ ಸ್ವಸ್ಥ ... ಮಾಡುತ್ತೆ ಇದು ಚೆನ್ನಾಗಿ ಪರೀಕ್ಷಿಸಿ ನೋಡಿದ ಔಷಧ, ಸಾವಿರಾರು ಜನರು ಉಪಯೋಗಿಸಿ ಸೌಖ್ಯಹೊಂದಿದಾರೆ ದೃಷ್ಟಾಂತಕ್ಕಾಗಿ ಈಗತಾನೇ ನಮಗೆ ಬಂದಿರುವ ಯೋಗ್ಯತಾಪತ್ರಿಕೆಯನ್ನು ಕೆಳಗೆ ಪ್ರಕಟಿಸಿರುತ್ತೇವೆ ಓದಿನೋಡಿ

30 ತೊಲಾ ಲೇಹದ ಟಿನ್ ಡಬ್ಬಾಕ್ಕೆ ಕ್ರಯ ರೂ 1-8-0

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[82–27] 177 ಜೇನಾ ಬಜಾರ್ ರೋಡ್, ಮದ್ರಾಸು

ಈ ಯೋಗ್ಯತಾ ಪತ್ರವನ್ನು ಜಬ್ಬಲ್‌ಪೂರದ ಸೂಪರಿಂಟೆಂಡಿಂಗ್ ಇಂಜಿನೀಯರ್ ಆಫೀಸ್ ಕ್ಲಾರ್ಕ್ ಮ, ಎ ಘೇಮುರಾವ್ ಮೊದಲಿಯಾರ್ರು ತಾ 11-10-1913 ರಲ್ಲಿ ಬರೆಯುತ್ತಾರೆ — ನಾನು ಬಹುಕಾಲದಿಂದ ಆಸ್ತ್ಮರೋಗದಿಂದ ನರಳುತ್ತಿದ್ದೆನು ಅನೇಕ ಹೆಸರುವಾಸಿಯಾದ ದಾಕ್ಟರುಗಳಿಂದಲೂ ಹಕೀಮರಿಂದಲೂ ಅನೇಕ ಔಷಧಗಳನ್ನು ತೆಗೆದುಕೊಂಡಾಗ್ಯೂ ನನ್ನ ಉಬ್ಬಸರೋಗವು ಹೋಗಲಿಲ್ಲ ಕಡೆಗೆ ನಿಮ್ಮ ಶ್ವಾಸಕೇಸರಿ ಲೇಹ್ಯವನ್ನು ಸೇವಿಸಿನೋಡೋಣವೆಂದು ಕುತೂಹಲಪಟ್ಟು ತೆಗೆದುಕೊಂಡೆನು ನಿಮ್ಮ ಈ ಎರಡು ಟಿನ್ ಲೇಹ್ಯ ತಿನ್ನುವಷ್ಟರಲ್ಲಿ ನನ್ನ ಭಯಂಕರವಾದ ರೋಗವು ವಾಸಿಯಾಗಿದೆ ಎಂದು ಬಹಳ ಆನಂದಪಡುತ್ತೇನೆ ಈ ನನ್ನ ಅಭಿಲಾಷೆಯನ್ನೂ ಅನುಭವವನ್ನೂ ದಯವಿಟ್ಟು ಪಬ್ಲಿಕ್ ಜನರಿಗೆಲ್ಲಾ ತಿಳಿಸಿ "

ರಾಸ್‌ಕೋಫ್ ಸಿಸ್ಟಮ್ ಲೀವರ್ ರಿಜಿಸ್ಟರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 4 ಆಣೆ

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಿಸಲ್ಪಟ್ಟದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಟಲೆ ಗಡಿಯಾರಗಳು ಖರ್ಚಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ ಕೂಡಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪನಿ,

[129 19] ಪೋಸ್ಟ್ ಬಾಕ್ಸ್, ನಂ 167, ಮದರಾಸು

ಮುಖ್ಯವಾಗಿ ಗಮನಿಸಿ ಓದಿರಿ

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ



ಈ ನಕ್ಷೆಯಲ್ಲಿ ಕಂಡ ಲೇಡಿ ನಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂವರ್ಸೇಷನ್ ಬ್ರೇಸ್‌ಲೆಟ್ಸು ಬಹು ಬಲಿಷ್ಟವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 6 0 0 ಇದನ್ನು ಸೆಪ್ಟಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ಧನಲಕ್ಷ್ಮಿ ಅಂಡ್ ಕಂಪೆನಿ,

[129 11] ಸಾಹುಕಾರ್ ಬೀದಿ ಪೋಸ್ಟು, ಮದರಾಸು.

ಪ್ರಾಕೃತಿಕ ಭೂಗೋಳ.

ಮೊದಲನೇ ಮುದ್ರಣವು ಅತಿ ಶೀಘ್ರವಾಗಿ ಮುಗಿದುಹೋದ್ದರಿಂದ ಈಚೆಗೆ ಬಂದಿರುವ ಆರ್ಡರುಗಳಿಗೆ ಪ್ರತಿಗಳನ್ನು ಕಳುಹಿಸಲು ಅವಕಾಶವಾಗಲಿಲ್ಲ ಎರಡನೇ ಮುದ್ರಣದಲ್ಲಿ ಅನೇಕ ಹೆಚ್ಚು ವಿಷಯಗಳನ್ನು ಚನ್ನಾಗಿ ವಿವರಿಸಿ ಆರ್ಟ್ ಪೇಪರಿನಮೇಲೆ ಪ್ರಿಂಟುಮಾಡಿರುವ ಅನೇಕ ಹೊಸ ನಕ್ಷೆಗಳನ್ನು ಸೇರಿಸಿರುವುದಲ್ಲದೆ 1 ಆಣೆ ಬೆಲೆ ಬಾಳುವ ಬಣ್ಣಹಾಕಿರುವ ಸುಂದರವಾದ ಒಂದು ಮೈಸೂರು ಮ್ಯಾಪನ್ನು ಸಹ ಸೇರಿಸಿರುತ್ತೆ 1 ನೆಯ ಭಾಗವು ಸೆಪ್ಟಂಬರ್ ತಿಂಗಳು 25 ರಲ್ಲಿ ಬಿಕರಿಗೆ ಸಿದ್ಧವಾಗುವುದು ಈ ಪುಸ್ತಕವು ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೂ ಮತ್ತು ಸ್ಕೂಲಿನಲ್ಲಿ ಪಾಠಹೇಳುವುದಕ್ಕೂ ಬಹಳ ಸಹಕಾರಿಯಾಗಿರುತ್ತದೆ ಕೆಲವು ಪ್ರತಿಗಳು ಮಾತ್ರ ಪ್ರಿಂಟಾಗಿರುವುದರಿಂದ ಮೊದಲು ಬಂದ ಆರ್ಡರುಗಳಿಗೆ ಜಾಗ್ರತೆಯಲ್ಲಿ ಪ್ರತಿಗಳು ಕಳುಹಿಸಲ್ಪಡುವುವು ಕ್ರಯ 0 4-6

ಹೊಸ ಕನ್ನಡ ಲೆಖನದ ಪುಸ್ತಕವೆಂಬ ಹೆಸರಿನಿಂದ 4 ನಂಬರು ಕಾಪಿಪುಸ್ತಕಗಳನ್ನೂ ಪ್ರಿಂಟ್‌ಮಾಡಿಸಿರುತ್ತೇನೆ ಇದರ ಮೇಲ್ಪುಟಗಳು ಬಹು ಅಂದವಾದ ಬರವಣಿಗೆಯ ಅಕ್ಷರವಂತೆ ತಲೆಕಟ್ಟುಗಳೇ ಮೊದಲಾದವುಗಳವೆಯೇ ಹೊರತು ಪ್ರಿಂಟಿಂಗ್ ಅಕ್ಷರಗಳ ಹಾಗಿಲ್ಲ ಒಳ್ಳೇ ಕಾಗದದ ಮೇಲೆ ನೋಡುವುದಕ್ಕೆ ಬಹು ಅಂದವಾಗಿ ರೂಲುಗಳನ್ನು ಹಾಕಿ ಪ್ರಿಂಟಾಗಿರುತ್ತವೆ ಇವುಗಳು ವಿದ್ಯಾರ್ಥಿಗಳ ಕೈ ತಿದ್ದಲು ಬಹಳ ಸಹಕಾರಿಯಾದ ಕಾಪಿ ಪುಸ್ತಕಗಳೆಂದು ಭಾವಿಸಿ ಮೈಸೂರಿನ ಸ್ಕೂಲುಗಳಲ್ಲಿ ಉಪಯೋಗಿಸುತ್ತಿದಾರೆ ಕ್ರಯ 0 1 3

ಪ್ರಾಕೃತಿಕ ಭೂಗೋಳ ಮತ್ತು ಹೊಸಕನ್ನಡ ಲೇಖನ ಪುಸ್ತಕಗಳನ್ನು ಪಡೆಯಲಿಷ್ಟವುಳ್ಳ ಪುಸ್ತಕ ವ್ಯಾಪಾರಿಗಳೇ ಮೊದಲಾದ ಸರ್ವರೂ ಸಿ ಎಲ್ ಎಸ್ ಬುಕ್ ಡಿಪೊ, ಮೈಸೂರಿಗೆ ಬರೆದು ತರಿಸಿಕೊಳ್ಳಬಹುದು

ಎಂ. ಪಿ. ಲಿಂಗಪ್ಪಯ್ಯ ಹೆಡ್ ಮಾಸ್ಟರು, ಇಟ್ಟಿಗೇಗೂಡು,

[186–7] ಎ. ವಿ. ಸ್ಕೂಲು, ಮೈಸೂರು.

ENGLISH PAPERS FOR L. S. STUDENTS

Contain well-chosen, full answered questions, Monthly Examination Papers. Subscription Rs. 2 in advance. Specimen As. 4. Students Spelling Book As. 4. Postage Extra.

M. N. SITARAMA RAO,
K. Mohalla, Mysore.
[211-2]

ಜೀನ ತಾನ.

ಜೀನತಾನವೆನ್ನುವದು ಜಪಾನಿ ಮಾತ್ರೆಗಳು. ಅದರ ಉಪಯೋಗಗಳು—ಶೀತ, ಕೆಮ್ಮು, ಮಂದ,ತಲೆನೋವು, ಅಜೀರ್ಣ ಭೇದಿಗಳು, ಅರುಚಿ, ಗಂಟ್ಲು ಒಣಗುವುದು, ಶೀತಭೇದಿ, ನುಂತಾದ್ದಕ್ಕೆ ಒಳ್ಳೇದು

ಸಂಗೀತಗಾರರೂ, ಉಪನ್ಯಾಸಕರೂ ಇದನ್ನು ಉಪಯೋಗಿಸಿದರೆ ಗಂಟ್ಲನಾಳಗಳು ಶುದ್ಧವಾಗುತ್ತವೆ ಮತ್ತು ಬಾಯಿನ ಎಲ್ಲಾ ತರದ ದುರ್ವಾಸನೆ ನಾಶವಾಗುವದು

ಕ್ರಯ—30 ಮಾತ್ರೆ ಉಳ್ಳ ಪೊಟ್ಟ 0-1-6, 65 ಮಾತ್ರೆಗೆ 0-3-0; 195 ಮಾತ್ರೆಗಳ ಡಬ್ಬಾ 8 ಆಣೆ, 155 ಮಾತ್ರೆ ಉಳ್ಳ ಸುಂದರವಾದ ಕನ್ನಡಿ ಡಬ್ಬಿಕ್ಕೆ ರೂ. 1 [199 4]

ನಮ್ಮಲ್ಲಿ ತಯಾರಾಗುವ ಹಿತ್ತಾಳೆ ಮೇಜದಬತ್ತಿ ಸ್ಟಾಂಡುಗಳು ಉತ್ತಮವಾದದ್ದೆಂದು ಎಲ್ಲೆಲ್ಲೂ ಪ್ರಸಿದ್ಧಿ ಹೊಂದಿದೆ. ನಾವು ಬೊಂಬಾಯಿ ಬರೋಡ ದೇಶದ ಅಲೆಂಬಿಕ್ ವೈದ್ಯಶಾಲೆಗೂ, ಬೊಂಬಾಯಿ ಐಯೋನಿಕ್ ವೈದ್ಯಶಾಲೆಗೂ, ಬೊಂಬಾಯಿ ಬಾಲಾಮೃತಕ್ಕೂ, ಕಲ್ಕತ್ತಾ ಸಿ. ಕೆ. ಸೆನ್. ಆಯುರ್ವೇದ ಔಷಧಶಾಲೆಗೂ ಸೋಲ್ ಏಜಂಟರು

ವಿಳಾಸ—ಎಸ್. ವೈದ್ಯ ಮತ್ತು ಕಂಪನಿ,
ಪಾರ್ಕ್ ಟೌನ್, ಮದರಾಸ್.

The National Insurance and Banking Co., Ltd.,
AMRITSAR

WANTED

A competent Chief Agent for Mysore and Coorg Provinces on very liberal terms. None need apply who have no practical experience in life insurance business. Cash security Rs. 500 at least essential. The applicant should be a capable canvasser and organiser. The company has its own office buildings at Mysore in a suitable quarter. Apply at once to MR. P. L. RAJPAL, B.A., Chief Manager, National Insurance and Banking Company, Ltd., Amritsar, mentioning two good references, past experience, present employment, age, nationality and any other necessary particulars. [201 4]

ಶುದ್ಧವಾದ ಹತ್ತಿಯ ತುಪ್ಪವು.

"ಬಹಳ ನಿರ್ಮಲ! ಬಹಳ ಹಸನು!! ವಾಸನೆಯಿಲ್ಲ!!!"

(10) ಕುಂದಲಗುರಿಕಿ ಶ್ರೀನಿವಾಸರಾವ್, ಬೆಂಗಳೂರು— ಇವರಲ್ಲಿ ಮಾರುತ್ತಿರುವ ಹತ್ತಿಯ ತುಪ್ಪವು ಸ್ವಲ್ಪವೂ ವಾಸನೆ ಇರುವುದಿಲ್ಲ ಅನೇಕ ಕಡೆ ಮಾರುತ್ತಿರುವದರಲ್ಲೂ ಕಪ್ಪುಬಣ್ಣ ಮತ್ತು ವಾಸನೆ ಇರುತ್ತದೆ ಇವರ ಎಣ್ಣೆಯು ಬಹಳ ನಿರ್ಮಲ ಖಾರದ ಪದಾರ್ಥವೇ ಆಗಲಿ, ಸಿಹಿ ಪದಾರ್ಥವೇ ಆಗಲೀ, ಮಾಡಿದ ದಿನ ಹೇಗಿರುತ್ತೋ ಅದೇ ರೀತಿ 15 ದಿನವಾದಾಗ್ಯೂ ಕೆಡದೆ ಇರುತ್ತೆ ಇತರರ ಅಂಗಡಿಗಳ ಎಣ್ಣೆಯಲ್ಲಿ ಮಾಡಿದ್ದು ಮಾರನೇ ದಿನ ವಿಪರೀತ ವಾಸನೆಯಾಗಿ ತಿನ್ನುವುದಕ್ಕೆ ಅಸಹ್ಯ ತೋರುತ್ತೆ" ಇವರ ಷಾಪಿನಲ್ಲಿ ಸ್ವಲ್ಪ ಧಾರಣೆ ಜಾಸ್ತಿಯಾದಾಗ್ಯೂ, ಗುಣ ಜಾಸ್ತಿ, ನಷ್ಟವಿಲ್ಲ ಪದಾರ್ಥ ಬಹಳ ಹಸನು ನೋಡಿದರೆ ಎಲ್ಲರಿಗೂ ನಿಜತ್ವ ವ್ಯಕ್ತವಾಗುತ್ತೆ."—5-9-13

ಎಚ್ಚರಿಕೆ.—ಹತ್ತಿಯ ತುಪ್ಪವು ರೂಢಿಗೆ ಬಂದಾಗಲೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತವೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವರು ಮೋಸಹೋಗಲು ಅವಕಾಶವಿಲ್ಲ. [110-2]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,
159, ತಿಲಾರಿ ರೋಡ್, (ಕುಂಚಿಗರಪೇಟೆ), ಬೆಂಗಳೂರು ಸಿಟಿ.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

10—10—1913 ರಿಂದ 17—10—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು.	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	1	1	0	0
ಮೈಸೂರು ,,	1	1	0	0
ಬೆಂಗಳೂರು ಡಿಸ್ಟ್ರಿಕ್ಟು.	12	9	0	0
ಮೈಸೂರು ,,	13	25	0	0
ಕೋಲಾರ್ ,,	9	8	18	27
ಕೋಲಾರ್ ಚಿನ್ನದ ಗಣಿಗಳು	2	1	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,,	8	5	0	0
ಚಿತ್ರದುರ್ಗ ,,	0	0	56	24
ಕಡೂರ್ ,,	27	13	0	0
ಶಿವಮೊಗ್ಗಾ ,,	30	17	0	0
ಜುಮ್ಲಾ	133	80	104	51

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ಶರದೃತೌ ಕಾರ್ತೀಕ ಶುದ್ಧ ಬಿದಿಗೆ ಶುಕ್ರವಾರದಿಂದ ಕಾರ್ತೀಕ ಶುದ್ಧ ಅಷ್ಟಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಅಕ್ಟೋಬರ್ ಮತ್ತು ನವಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶುಕ್ಲ ಮಾಸ ತಿಥಿ
31	ಶುಕ್ರ	ಬಿದಿಗೆ	24-38	ವಿಶಾಖ	2-1	15
1	ಶನಿ *	ತದಿಗೆ	21-16	ಜ್ಯೇಷ್ಟ	58-6	16
2	ಭಾನು †	ಚೌತಿ	18-50	ಮೂಲ	59-5	17
3	ಸೋಮ §	ಪಂಚಮಿ	18-37	ಪೂಷಾ	58 11	18
4	ಮಂಗಳ ,,	ಷಷ್ಠಿ	17-37	ಉತ್ತಷಾ	60-0	19
5	ಬುಧ ,,	ಸಪ್ತಮಿ	19-0	ಉತ್ತಷಾ	2-16	20
6	ಗುರು ‡	ಅಷ್ಟಮಿ	21-29	ಶ್ರವಣ	5-53	21

ದ್ವಿತೀಯಾ ತಿಥಿ. * ತಿದಿಷ್ಟಯಂ † ಪಂಚಮಿ ತಿಥಿ, ಮಳೆ ನಕ್ಷತ್ರ-ಸ್ವಾತಿ 1 ನೇ ಪಾದ § ಷಷ್ಟಿ ತಿಥಿ, ಕಾರ್ತೀಕ ಸೋಮವಾರ ,, ಸಪ್ತಮಿ ತಿ ,, ಪ್ಯೂನತಿಥಿ, ಮಳೆ ನಕ್ಷತ್ರ—ವಿಶಾಖಾ 1 ನೇ ಪಾದ ‡ ಅಷ್ಟಮಿ ತಿಥಿ.

ಪೇಟೆ ಧಾರಣೆ.

ದಿನಸಿ.		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೬-೦-೦	೧೭-೦
ಕೆಂಬೂತಿ ಅಕ್ಕಿ ಅವಲ್		೧೬-೮-೦	೧೭-೮
ಜಾಪ್ರಾಣಿ ಅಕ್ಕಿ		೧೬-೦-೦	೧೬-೮
ಸಣ್ಣಕ್ಕಿ ಅವಲ್		೨೮-೦-೦	೧೭-೮
,, ದುಯಂ		೧೭-೦-೦	೧೬ ೧೨
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ		೧೫-೦-೦	೧೬-೪
,, ದುಯಂ ,,		೧೪-೦-೦	೧೪-೦
ತ್ಯೆಣ ರಾಗಿ ಪಲ್ಲಾ ೧ಕ್ಕೆ		೬-೧೨ ೦	೫-೧೦
ಕಾರ್ರಾಗಿ ,,		೬-೮ ೦	೪-೧೨
ಜೋಳ ,,		೬-೪-೦	೭-೪
ಹಲಸಂದೆ ಪಲ್ಲಾ ೧ಕ್ಕೆ		೧೩-೦-೦	೧೪-೦
ಬೀಳ ಅವರೆ ,,		೧೩-೦-೦	೧೨-೦
ಹೆಸರು ,,		೧೩-೦-೦	೧೪-೦
ಉದ್ದು ,,		೧೬-೦-೦	೧೬-೮
ಕಡಲೆ ,,		೧೨ ೧೨ ೦	೧೩-೦
ಎಳ್ಳು ಸೇರು ೧೨೭ಕ್ಕೆ		೨೧-೮ ೦	೨೪ ೦
ಹುರುಳಿ ಪಲ್ಲಾ ೧ಕ್ಕೆ		೭-೯-೦	೭-೧೦
ಹುಣಿಸೇ ಹಣ್ಣು ೧೨೭ ಸೇರಿಗೆ		೧೨-೦-೦	೧೪ ೦
ಸೀಗೇಕಾಯಿ ಮಣ ೧ಕ್ಕೆ		೨ ೪-೦	೩-೬
ಮೆಣಸಿನಕಾಯಿ ,,		೪-೦-೦	೩-೪
,, ದುಯಂ		೩-೦-೦	೧-೮
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೪ ೮-೦	ಮಣ ೬-೪
ಒಳ್ಳೆಣ್ಣೆ ಮಣ ೧ಕ್ಕೆ		೬ ೨-೦	೬-೮
ಹರಳೆಣ್ಣೆ ,, ,,		೫-೬-೦	೬-೦
ಕಡಲೇಕಾಯಿ ಎಣ್ಣೆ		೫-೧೨ ೦	೬-೪
ಕೊತ್ತುಂಬರಿ ಪಲ್ಲಾ ೧ಕ್ಕೆ		೫-೮-೦	೬-೪
ಉಪ್ಪು ,, ,,		೬-೮-೦	೬-೦
ಹುಣಸೇ ಹಣ್ಣು ಮಣ ೧ಕ್ಕೆ		೨-೪-೦	೧-೪
ತುಪ್ಪ—ಧಾರಾಪುರದು ಮಣ ೧ಕ್ಕೆ		೧೮-೧೨-೦	೨೨-೮
,, ಬೆಣ್ಣೆ ಕಾಸಿದ್ದು ,,		೨೦ ೦-೦	
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೧೨-೦	೫-೦
ತೆಂಗಿನಕಾಯಿ ೧೦೦ಕ್ಕೆ		೬-೪-೦	೬-೪
ಅರಲೇಕಾಯಿ ಮಣ ೧ಕ್ಕೆ		೧-೦-೦	೧-೦
ಅಂಟ್ವಾಳದಕಾಯಿ ಮಣ ೧ಕ್ಕೆ		೧-೧೨-೦	೧-೮
ಚಿನ್ನ (ಪೌನ್) ಕೆಂಪು		೧೫-೮-೦	೧೫-೮
,, ,, ಪಸಿಮೆ		೧೫ ೧೪-೬	೧೫-೧೪
,, ,, ಗಟ್ಟಿ ತೊಲ ೧ಕ್ಕೆ		೨೪-೩-೦	೨೪-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ ...		೮೧-೦-೦	೮೧-೩

ಸಚಿತ್ರ ವಿದ್ಯಾಮಂಜರಿ ಕಥೆಗಳು

ಪಾಠಕಮಹಾಶಯರುಗಳೇ.—ಮಾನ್ಯತೆಯು ಬೇಕಾದರೆ, ವಾಗ್ವೈಭವಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆಪಟ್ಟರೆ, ನೀತಿಯು ಆವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹ ಶಕ್ತಿಯಲ್ಲಾಶೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿ ಕಥೆಗಳನ್ನು ಓದಿರಿ. ೩೭೦ ಪುಟಗಳಿಂದ ಕೂಡಿದ ೭೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ. ೧-೪-೦ ಟಪಾಲು ಹಾಸಲು ೩ ಆಣೆ. ಈಗಲೇ ಬರೆಯಿರಿ [167-12]

ವಿಳಾಸ:—ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ಕು ಡಿಪ್ಪೋ, ಚಿಕ್ಕ ಪೇಟೆ, ಬೆಂಗಳೂರು ಸಿಟಿ.

ಡೋಂಗರೆ

ಇವರ ಬಾಲಾಮೃತ [150-15]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ. ಒಂದು ಬಾಟ್ಲಿಗೆ ೧೦ ಆಣೆ ಟಪಾಲ್ ಖರ್ಚು ೪ ಆಣೆ.

ಕೆ ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟೌನ್, ಮದರಾಸು ಇವರಲ್ಲೂ ದೊರೆಯುವುದು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ನೋವಿಕ (ಭಾರ), ಮೈ ನಡುಕ, ಶೀತಪ್ರಕಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಸನ್ನಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥಾ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಕುತುಕೂಳೆ, ಮಕ್ಕಳ ಎಳವು, ಜ್ವರ, ಸಣ್ಣು ಜ್ವರ, ಕೃಪತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ —320 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 1 ಆಣೆ [179 7]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮಾರಿತೆಂದು ತೋರುವಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನನ್ನ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Printed and Published by the Rev. H GULLIFORD Proprietor and Manager, Wesleyan Mission Press Mysore. 30/10/1913.

REGISTERED
M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೧೩ ನೇ ಇಸವಿ ನವಂಬರ್ ತಾರೀಖು ೬ ನೇ ಗುರುವಾರ. ಸಂಚಿಕೆ ೨೩

ಸಮಸ್ತ ವಿಧವಾದ ನೋವೂ ಅಂತವೂ ನಿಮಗೆ ವಾಸಿಯಾಗಬೇಕೋ?

ಹಾಗಾದರೆ ಅಮೃತಾಂಜನವನ್ನು ಉಪಯೋಗಿಸಿ.

ಅಮೃತಾಂಜನವು ತಲೆನೋವು, ವಾಯುನೋವು, ಪಕ್ಕ ಸಳಿತ, ಕೀಲುನೋವು, ಕೆಮ್ಮು, ಈ ಮೊದಲಾದ ಅನೇಕ ತರದ ಬಾಧೆಗಳನ್ನು ವಾಸಿಮಾಡುತ್ತದೆ

ಪ್ರತಿ ತಿಂಗಳಲ್ಲೂ ಸಾವಿರಾರು ಕುಪ್ಪಿಗಳು ಎಂಟು ಆಣೆಗೆ ಒಂದರಂತೆ ವಿಕರಿಯಾಗುತ್ತಿರುವೆ ಡಾಕ್ಟರುಗಳೂ ವೃದ್ಧ ಮಾತಾಪಿತೃಗಳೂ ಅನೇಕವಾಗಿ ಸರ್ಟಿಫಿಕೇಟುಗಳನ್ನು ಕೊಟ್ಟಿದಾರೆ ಅಮೃತಾಂಜನವು ಎಲ್ಲಾ ಕಡೆಗಳಲ್ಲೂ ಔಷಧ ಮಾರಾಟದ ಅಂಗಡಿಗಳಲ್ಲಿ ವಿಕರಿಯಾಗುವದು

ಮುಳಕಡ್ಡಿ ಔಷಧ ಡಬಿಗೆ 6 ಆಣೆ, 12 ಕುಪ್ಪಿಗೆ ರೂ 3-8-0. ಹಲ್ಲುಪುಡಿ ಡಬ್ಬಿಗೆ 2 ಆಣೆ 12 ಕುಪ್ಪಿಗೆ ರೂ 1-2-0 ವಿ ಪಿ ಮತ್ತು ಪ್ಯಾಕಿಂಗ್ ಚಾರ್ಜ ಪ್ರತ್ಯೇಕ [42-37]

ವಿಳಾಸ —ಅಮೃತಾಂಜನ ಡಿಪೋ, ೧೯ ಫ್ರೆಯರ್ ರೋಡ್, ಫೋರ್ಟ್, ಬೊಂಬಾಯಿ

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ... ಕನ್ನಡದಲ್ಲಿ ರಚಿಸಿದೆ 1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ... ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ... ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ಸನ್ಮಾರ್ಗಪ್ರವರ್ತನೆ ... ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರವುಳ್ಳದ್ದಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದುವವರಿಗೂ ಮನೋಹರವಾಗಿರುವದು ಹೀಗೆ ಎಲ್ಲರಿಗೂ ಉಪಯೋಗವಾಗಿರುವ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1-8-0 ಟಪಾಲು ಹಾಸಲು 1 ಆಣೆ

(೪೯ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನಿ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಸಮಗ್ರವಾದ ತಾತ್ಪರ್ಯ, ಸಂಧಿ ಸಮಾಸಗಳು, ... ಶ್ಲೇಷಾರ್ಥ, ... ವಿಶೇಷ ... ಸರಸವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ 4 ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127 20]

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 1,00,000.

(INCORPORATED UNDER THE MYSORE COMPANIES REGULATION No III OF 1895)

CAUTION.—Before you go in for a Provident Life or Marriage Policy please ask for a copy of our Company's prospectus which will explain to you the need of the working of the present day provident companies in India, and enables you to select a good institution where your hard earned money will be safe **Absolute Security, Attractive Schemes, Soundest Principles**

Wanted Chief Agents and agents throughout India on Commission and Salary For prospectuses, etc, please apply to

Mr. M. L. NAGANNAH,
Managing Agent, MYSORE.

A NOVELTY OF THE TWENTIETH CENTURY!

THE MYSORE GOVERNMENT SECURITY

MUTUAL PROPERTY INVESTMENT COMPANY, LTD.

HEAD OFFICE MYSORE.

CAPITAL Rs. 1,00,000.

(INCORPORATED UNDER THE MYSORE COMPANIES REGULATION No III OF 1895)

BANKING.—Every sort of banking business transacted The company's shares are most valuable and are within the reach of all

Land and house purchase and investment policies are a speciality of the company, by which the company advances loans on the security of immovable properties to purchase houses and lands or to liquidate prior debts, and recovers the same by easy monthly instalments

WANTED

Four local directors for each and every taluk of the Mysore Province on liberal terms to represent the company. Only men of position and influence need apply For prospectuses, etc please apply to

[... 14]

Mr. M. L. NAGANNAH,
Managing Agent, MYSORE.

"ನೀತಿಗೀತ"—1 ಆಣೆ "ಬಾಲ್ಯನೀತಿ"—3 ಪೈ.

ಬಾಲಕರಿಗೆ ದೈವಭಕ್ತಿ ಗುರುಭಕ್ತಿ ರಾಜಭಕ್ತಿ ಮಾತೃಭಕ್ತಿ ಪಿತೃಭಕ್ತಿ ಶಕ್ತಿ ಯುಕ್ತಿ ಸತ್ಯತೆ ಶಾಂತತೆ ಪ್ರಾಮಾಣಿಕತೆ ಸಾಹಸ ಧೈರ್ಯ ಕೋಪ ... ಗಳನ್ನು ಸುಲಭ ಶೈಲಿಯಲ್ಲಿ ಗೀತಾರೂಪಕವಾಗಿ ಬೋಧಿಸುವುದೇ "ನೀತಿಗೀತ" 100 ಕ್ಕೆ 10 ಉಚಿತ "ಬಾಲ್ಯನೀತಿ" 100 ಕ್ಕೆ 25 ಉಚಿತ [226 2]

ವಿಳಾಸ —ಎಸ್ ... , ವಡಿಗೇನಹಳ್ಳಿ, ದೇವನಹಳ್ಳಿ ತಾ||

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತು ಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ" ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ. ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಕಚಕಿಸುವವು, ನಿಬಿಡವಾದ ನೀಲವರ್ಣದಿಂದ ಕೂಡಿ, ಆಗಾಗ್ಗೆ ಹಂದು ಬಿದ್ದು ಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ. ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ ಸುಂಡಿನ ಹೊಟ್ಟನ್ನು ಅಡಗಿಸುತ್ತೆ ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ ಇದರ ಬೆಲೆ 1 ಸೀಸೆಗೆ ರೂ 1-1-0 ಅಂಚೆಯ ವೆಚ್ಚ 0-4-0 ಬೇರೆ ತರಬೇಕು.

3 ಸೀಸೆಗಳಿಗೆ ರೂ 2-10-0 ಅಂಚೆಯ ವೆಚ್ಚ 0-7-0

ನಮೂನೆಯೂ ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ ... ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಬಿಷನ್ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಜದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ಮನ್ನಾರ್‌ಗುಡಿ ಮಿಷನ್ ಸೆಕ್ರಿಟರಿ ಎ. ... ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಲಾಭಕೋಸ್ಕರ ವಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು. ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕೆಪಿಟೋಬಾಮ್"—ಮಳೆ ಮತ್ತು ಚಳಿಯ ಥಂಡೀ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ನೋಯುವುದು, ಸಂಧುವಾತ, ಪಕ್ಕಶೂಲೆ, ... ಕ್ಷೀಣವಾಗುವದು, ಸೊಂಟನೋವು ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ ಬಾಟ್ಲಿ 1ಕ್ಕೆ ಕ್ರಯ 0 8 0 ಟಪಾಲು ಪ್ರತ್ಯೇಕ.

ಒಡಮನ್ಸ ಮಲೇರಿಯ ಪಿಲ್ಸ.—ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿವೆ ... ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ ಇದು ದೇಶದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ. ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ ದಿನಕ್ಕೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ. 1-0-0 3 ಬಾಟ್ಲಿಗಳಿಗೆ ರೂ. 2-8-0 ವಿ ಪಿ ಖರ್ಚು ಪ್ರತ್ಯೇಕ

ಮೇಲೆಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ — [8-43]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ಡಿ. ... ಮಾರ್ಟ್, ಮಂಗಳೂರು.

The National Insurance & Banking Co., Ltd., Amritsar.

Madras Branch—33 Armenian Street, Madras.

Authorised and Subscribed Capital Rs. 10,00,000

Paid up Capital only about Rs. 1,50,000.

POSSESSES GOVERNMENT SECURITY.

The company has diposited Rs. 1,00,000 (one lakh) with the Government of India for the *Security of the Policy-holders* in compliance with the Government of India Indian Insurance Company's Act of 1912.

"The Searchlight", a Montnly Journal of Insurance and Finance, published in London, writes:—"Evidently the company covers a lot of ground. And while we consider that so far the company has done quite as well as it could fairly expect, we must add that it is engaged in so admirable a work that it deserves the best wishes of all upholders of life assurance throughout the world. We are sure that it will have these, for there is nothing that knits the fabric of society together more *closely than the successful carrying on of life assurance by a sound office.*"

Statement of Progress:—

Year	Subscribed Capital	Paid up Capital	Working Capital	Government Papers and Debentures	Deposits
1907	2,28,100	17,820	65,966	2,500	28,786
1908	4,64,800	48,605	1,94,406	5,100	1,30,888
1909	5,29,000	62,470	4,15,213	18,100	3,09,726
1910	5,56,300	74,787	6,44,490	23,100	5,36,069
1911	7,42,000	99,482	11,68,022	77,100	8,21,678
1912 Half year	8,79,400	1,18,711	14,24,902	1,12,100	9,71,232
1912 „ 2nd	10,00,000	1,41,594	15,42,419	1,32,600	10,39,916

For further particulars apply to—

[216-3] **T. S. R. Iyer, Secretary (Madras Branch),**

Camp, Amirtsar National Insurance Buildings, Mysore

The National Insurance and Banking Co., Ltd.

AMRITSAR

WANTED

A competent Chief Agent for Mysore and Coorg Provinces on very liberal terms. None need apply who have no practical experience in life insurance business. Cash security Rs. 500 at least essential. The applicant should be a capable canvasser and organiser. The company has its own office building at Mysore in a suitable quarter Apply at once to MR. P. L. RAJPAL, B.A., Chief Manager, National Insurance and Banking Company, Ltd, Amritsar, mentioning two good references, past experience, present employment, age, nationality and any other necessary particulars [201-5]

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

104 24

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ಕೀಲು, ಅರತಲೆ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಬಜ್ಜು, ಉಳಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ; ನಮಗೂ ಖಂಡಿತವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಇದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು.—(1) ಎಸ್. ಪೀಟರ್ಸ್, 37 ವಡಮಲೈಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್; (2) ಜಿ. ಎಸ್. ಕೃಷ್ಣಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ನೋಟೀಸ್.

ಶಿವಮೊಗ್ಗಾ ಸಬಾರ್ಡಿನೇಟ್ ಜಡ್ಜರವರ ಕೋರ್ಟಿನಲ್ಲಿ.

1912—13 ನೇ ಇಸವಿ ಅಸಲ್ ನಂಬರು 109.

ವಾದಿಗಳು.—ಕಂಟ್ರಾಕ್ಟರ್ ರಂಗಯ್ಯ ಬಿನ್ ರಂಗನಾಯ್ಕ ವಗೈರೆ, ತರಿಕೆರೆ ಕಸಬಾ ವಾಸಿಗಳು

ಪ್ರತಿವಾದಿಗಳು.—ಬೇಲೂರು ಸಂಕಣ್ಣ ಬಿನ್ ಬಸಪ್ಪ ವಗೈರೆಯು, ತರಿಕೆರೆ ಕಸಬಾ ವಾಸಿಗಳು.

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ತರಿಕೆರೆ ಕಸಬಾದಲ್ಲಿ ಊರಿಗೆ ಸ್ಥಾಪಿಸಲ್ಪಟ್ಟು ಇರುವ ಶ್ರೀ ಗ್ರಾಮದೇವರ ದೇವಸ್ಥಾನದ ಕಟ್ಟಡವನ್ನು ಮತ್ತು ದೇವರ ಬಾಬ್ತು ಕೆಲವು ಚರಸೊತ್ತುಗಳನ್ನು ಪ್ರತಿವಾದಿಯರಿಂದ ಸ್ವಾಧೀನಪೊಂದುವ ಬಗ್ಗೆ ಸದರಿ ಶ್ರೀ ರಾಮದೇವರ ಭಕ್ತಾದಿಗಳ ಪೈಕಿ ಮುಖಂಡರಾಗಿಯೂ, ಪ್ರೈವೇಟ್ ದಾರರಾಗಿಯೂ ಇರುವ ವಾದಿಯರು ಈ ದಾವಾ ತಂದು ನಡಿಸುತ್ತಲಿದಾರೆ. ಆದಪ್ರಯುಕ್ತ ಸಿವಿಲ್ ಪ್ರೊಸೀಜರ್ ಕೋಡ್ 1 ನೇ ಆರ್ಡರ್ 8 ನೆಯ ರೂಲ್ ಅನುಸರಿಸಿ ಈ ನೋಟಿಫಿಕೇಷನನ್ನು ಪ್ರಸಿದ್ಧ ಪಡಿಸಿರುತ್ತದೆ. ಈ ಬಗ್ಗೆ ಸಬೂಬು ತೋರಿಸಲು 1913 ನೇ ಇಸವಿ ನವಂಬರ್ ತಾರೀಖು ಇಪ್ಪತ್ತೊಂದು (21-11-1913) ದಿವಸ ಹೀರಿಂಗ್ ಇಟ್ಟಿರುತ್ತದೆ. ಈ ದಾವೆಗೆ ಕಕ್ಷಿಗಾರರಾಗಬೇಕೆಂತ ಅಪೇಕ್ಷೆಯುಳ್ಳವರು ಆ ರೀತಿ ಕೋರಬಹುದು; ಇಲ್ಲವಾದರೆ ಸರ್ವರೂ ಹಾಲಿ ನಡೆಯುತ್ತಿರುವ ಕ್ರಮಗಳಿಗೆ ಸಮ್ಮತಿಸಿರುತ್ತಾರೆಂತ ಯೋಚಿಸಲ್ಪಡಲಾಗುತ್ತೆ. [229—1]

ಶಿವಮೊಗ್ಗಾ, **(Sd.) B. NAGAPPA,**

ತಾ. 22-10-1913. ಸಬಾರ್ಡಿನೇಟ್ ಜಡ್ಜ್.

ವಿನೋದಕರಗಳಾದ ನಕಲಿಗಳು

ಪ್ರಹಸನಚತುಷ್ಟಯ.—(ಹಾಸ್ಯಸಂಜೀವನಿ) ಯುವತಿಯಾದ ಹೆಂಡತಿ ಮುದುಕನಾದ ಗಂಡ, ವಿದ್ಯಾವಂತನಾದ ಗಂಡ ದಡ್ಡಳಾದ ಹೆಂಡತಿ ಇವರುಗಳನ್ನು ಕುರಿತ ನಕಲಿಗಳು ನಾಲ್ಕು ಉಕ್ತವಾಗಿವೆ ಇಂಥಾ ವಿನೋದತ್ವ ನೀತಿಪ್ರದವೂ ಆದ ನಕಲಿಯನ್ನು ನೀವು ಓದಿರಲಾರಿರಿ ಕ್ರಯ 1 ಆಣೆ [187-47]

ಪ್ರಹಸನತರಂಗ. ಅಂತರಂಗದಲ್ಲಿ ವೈಥವಿಲ್ಲದ ಅಷಾಢಭೂತಿಗಳು, ಮೂಢಭಕ್ತಿಯಿಂದೊಡಗೂಡಿದ ದಡ್ಡರು, ಏಕಮತ್ಯವಿಲ್ಲದಮೂಢರು, ದುರಾಚಾರಿಗಳು ಮುಂತಾದವರ ವಿಷಯವು ಅತಿ ಚಮತ್ಕಾರವಾಗಿ ವರ್ಣಿಸಲ್ಪಟ್ಟಿದೆ ಕ್ರಯ 3 ಆಣೆ ಇದಲ್ಲದೆ ಮಹಾಧಣ್ಯಪುರಾಧಿಪತ್ಯ 1 ಆಣೆ ಪುನರ್ವಿವಾಹ ಪ್ರಹಸನ 3 ಆಣೆ ಯೋಗಿವ್ಯಾಘ್ರ ಪ್ರಹಸನ 2 ಆಣೆ ಮುಂತಾದ ನಕಲಿಗಳೂ ದೊರೆಯುವವು

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ತುಂಕೂರು ಮುನ್ಸಿಫ್ ಕೋರ್ಟಿನಲ್ಲಿ.

1912 1913 ನೇ ಒರಿಜಿನಲ್ 281 ನೇ ನಂಬರ್ ಮೊಕದ್ದಮೆ.

ವಾದಿಗಳು —1 ನೇ ತುಂಕೂರಲ್ಲಿರುವ ಗುಂಚಾಭಕ್ತರಜಾತಿ ಈರಣ್ಣನವರ ಮಗ ಹುಚ್ಚವೀರಪ್ಪ, 2 ನೇ ವೀರಣ್ಣನ ಮಗ ಕುಮಾರಯ್ಯ, 3 ನೇ ವೀರಣ್ಣನ ಮಗ ದೊಡ್ಡವೀರಪ್ಪ, 4 ನೇ ತಿರುಕಪ್ಪನ ಮಗ ಚೌಡಯ್ಯ, 5 ನೇ ಹೊನ್ನಯ್ಯ ಮೈನರ್ ಗಾರ್ಡಿಯನ್ ತಾಯಿ ಗಂಗಮ್ಮ.

ಪ್ರತಿವಾದಿಗಳು —ತುಂಕೂರಲ್ಲಿರುವ ಗುಂಚಾಭಕ್ತರ ಜಾತಿ 1 ನೇ ಯಜಮಾನ ಹೊನ್ನಯ್ಯನ ಮಗ ಹೊನ್ನಣ್ಣ, 2 ನೇ ಇವನ ತಮ್ಮ ದೊಡ್ಡಮರಿಯಪ್ಪ, 3 ನೇ ಇವನ ತಮ್ಮ ಚಿಕ್ಕಮರಿಯಪ್ಪ, 4 ನೇ ಇವನ ತಮ್ಮ ರೇವಣ್ಣ, 5 ನೇ ಇವನ ತಮ್ಮ ಸಿದ್ದ, 6 ನೇ ಇವನ ತಮ್ಮ ಸಿದ್ದಹೊನ್ನಯ್ಯ, 7 ನೇ ವೀರಣ್ಣನ ಮಗ ಸಿದ್ದ, 8 ನೇ ಕೋರಯ್ಯನ ಮಗ ಹುಚ್ಚಯ್ಯ ಮೈನರ್ ಗಾರ್ಡಿಯನ್ ತಾಯಿ ಮಲ್ಲಕ್ಕ, 9 ನೇ ಕುಣಿಗಲ್ ತಾಲ್ಲೂಕು ಎಡೆಯೂರಲ್ಲಿರುವ ಕುಂಬಾರಜಾತಿ ದೊಡ್ಡ ಹೊನ್ನಯ್ಯನ ಮಗ ಹೊನ್ನಣ್ಣ, 10 ನೇ ತುಂಕೂರು ತಾಲ್ಲೂಕು ಕಸಬಾ ಸಮ್ಮತು ಯಲ್ಲಾಪುರದಲ್ಲಿರುವ ಮರಿಯಪ್ಪನ ಮಗ ಸಿದ್ದಹೊನ್ನಯ್ಯ ಮೈನರ್ ಗಾರ್ಡಿಯನ್ ತಾಯಿ ಗಂಗಮ್ಮ (ಈ ಮೈನರನ್ನು 5 ನೇ ವಾದಿಯಾಗಿ ಸೇರಿಸಿದೆ) 11 ನೇ ತುಂಕೂರು ತಾಲ್ಲೂಕು ಹೆಬ್ಬೂರು ಸಮ್ಮತು ತರೂರಲ್ಲಿರುವ ಎಡ್ಡಹೊನ್ನಯ್ಯನ ಮಗ ಮರಿಹೊನ್ನಯ್ಯ, 12 ನೇ ಕುಣಿಗಲ್ ತಾಲ್ಲೂಕು ಯಡಿಯೂರು ಸಮ್ಮತು ಬೆಳಗುಂಬದಲ್ಲಿರುವ ಮರಿಹೊನ್ನಯ್ಯನ ಹೆಂಡತಿ ಸಿದ್ದನಂಜಮ್ಮ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ಮೊಕದ್ದಮೆಯಲ್ಲಿ ತುಂಕೂರು ಕಸಬಾ ಗ್ರಾಮದ ಹೊನ್ನಯ್ಯನ ಪಟ್ಟಾ ದಾಖಲೆ ಬಾಳಂಕಟ್ಟೆ ಹಿಂದೆ ಇರುವ ಸರ್ವೆ 117 ನೇ ನಂಬರು ಎಕರೆ 1 ಗುಂಟೆ 27 ಆಕಾರ 1 ರೂಪಾಯಿ ಉಳ್ಳ ಕುಂಬಾರ್ರಗುಂಡಿ ಜಮೀನು ವಾದಿ ಪ್ರತಿವಾದಿಗಳಿಗೆ ಕೂಡ ಸೇರಿದ್ದೆಂತಲೂ, ಪ್ರತಿವಾದಿಗಳು ಅಕ್ರಮವಾಗಿ ಕಡಿದು ಉಪಯೋಗಿಸಿಕೊಂಡಿರುವ ಮುಗಳಿ ಮರಗಳ ಕಿಮ್ಮತು 25 ರೂಪಾಯಿಗಳ ಪೈಕಿ 10 ರೂಪಾಯಿ ಮತ್ತು ಕೋರ್ಟು ಖರ್ಚು 1 ರ ಲಾಗಾಯ್ತು 6 ನೇ ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂತಲೂ ವಾದಿಗಳು ದಾವಾ ತಂದಿರುವದರಿಂದ ಈ ದಾವಾಕ್ಕೆ ವಾದಿ ಯಾ ಪ್ರತಿವಾದಿಯಾಗಿ ಸೇರತಕ್ಕವರೆಲ್ಲಾ ತಾರೀಖು 5-12-1913 ನೇ ದಿವಿ 11 ಘಂಟೆಗೆ ಈ ಕೋರ್ಟು ರೂಬರೂಬು ಹಾಜರಾಗತಕ್ಕದ್ದು. [233-1]

ತುಂಕೂರು, **(Sd.) S. Krishna Rao,**

ತಾ. 26-10-1913. **Munsiff.**

ಗೃಹಕೃತ್ಯದ ನೋಟೀಸು.

ಮೈಸೂರು ಡಿಸ್ಟ್ರಿಕ್ಟ್ ಮಂಡ್ಯದ ತಾಲ್ಲೋಕ್ ಕಸಬಾ ಹೋಬಳಿ ಸಾತನೂರಲ್ಲಿರುವ ಗಾಣಿಗರ ಅಂಗಡಿ ಸಿದ್ದಶೆಟ್ಟಿಯು ಸಮಸ್ತರಿಗೂ ತಿಳಿಸುವುದೇನೆಂದರೆ— ನನ್ನ ಕುಟುಂಬದ ಪೋಷಣೆಯಲ್ಲಿದ್ದ ನನ್ನ ಹಿರೀ ಮಗ ಕರಿಶೆಟ್ಟಿಯು ಕೆಲವು ದುಷ್ಟ ಜನರ ಸಹವಾಸಕ್ಕೆ ಬಿದ್ದು ನನ್ನ ಮನೆ ಬಿಟ್ಟು ಬೇರೆ ಹೋಗಿದ್ದು ನನಗೆ ಆಗದ ಕೆಲವು ಜನಗಳ ದುರ್ಬೋಧನೆಗೆ ಅವನು ಒಳಪಟ್ಟು ನನ್ನ ಮನೆಯಿಂದ ತೆಗೆದುಕೊಂಡುಹೋಗಿರುವ ದಸ್ತಾವೇಜು ಮೊದಲಾದ ಕಾಗದಪತ್ರಗಳ ಮೇಲೂ, ನನ್ನ ಕುಟುಂಬಕ್ಕೆ ಸೇರಿದ ಕೊಮ್ಮೆರಹಳ್ಳಿ ಮತ್ತು ಸಾತನೂರು ಗ್ರಾಮಗಳಲ್ಲಿರುವ ಸ್ಥಿರಚರ ಆಸ್ತಿಗಳ ಮೇಲೂ ಸಾಲಸೋಲಗಳನ್ನು ಕೊಟ್ಟು ಯಾರೂ ನನ್ನ ಮಗನಿಂದ ಆಧಾರ ಭೋಗ್ಯ ವಗೈರೆ ಯಾವ ವಿಧವಾದ ಕಾಗದವನ್ನು ಬರಸಿಕೊಂಡಾಗ್ಯೂ ಅದ್ಯಾವದೂ ಎಂದಿಗೂ ಊರ್ಜಿತವಾಗಲಾರದು ಮತ್ತು ನನ್ನ ಎಲ್ಲಾ ನಷ್ಟಕ್ಕೂ ಗುರಿಯಾಗಬೇಕಾಗುತ್ತದೆ. [237-1]

ಸಾತನೂರು ಗಾಣಿಗರ ಅ. ಸಿದ್ದಶೆಟ್ಟಿ ರುಜು.

ಗೃಹಕೃತ್ಯದ ನೋಟೀಸು.

ಮೈಸೂರು ಡಿಸ್ಟ್ರಿಕ್ಟ್ ಮಂಡ್ಯದ ತಾಲ್ಲೋಕು ಮದ್ದೂರ ಹೋಬಳಿ ಕಸಬಾ ಗ್ರಾಮದಲ್ಲಿರುವ ಕಲ್ಲಹಳ್ಳಿ ಕರಿಗೌಡನ ಮಗಳು ಬೋರಮ್ಮನು ಸಮಸ್ತರಿಗೂ ತಿಳಿಯಪಡಿಸುವದೇನಂದರೆ—ನನ್ನ ಗಂಡನಾದ ಲಿಂಗ ಉರುಫ್ ಮೊಳ್ಳೆಗೌಡನು ಬುವನೂ, ನಾನೂ ಮತ್ತು 6 ವರ್ಷದ ನನ್ನ ಮಗನೂ ಈ ತನಕ ಪರಸ್ಪರ ಅನ್ಯೋನ್ಯವಾಗಿದ್ದೆವು ಈಗ ನನ್ನ ಗಂಡನು ಕೆಲವು ಜನಗಳ ದುರ್ಬೋಧನೆಗೆ ಒಳಪಟ್ಟು ನನಗೂ ನನ್ನ ಮಗನಿಗೂ ಮೋಸಪಡಿಸಿ ನಮ್ಮ ಜೀವನಕ್ಕೇನೂ ಇಲ್ಲದಂತೆ ಮಾಡಬೇಕೆಂದು ನನ್ನ ಕುಟುಂಬಕ್ಕೆ ಸೇರಿರುವ ಸದರಿ ಗ್ರಾಮದಲ್ಲಿರುವ ಹೆಂಚಿನಮನೆ ಒಂದು, ಹುಲ್ಲಿನಮನೆ ಒಂದು ಮತ್ತು ಹೊಲ ಒಂದು ಈ ಸ್ಥಿರಚರ ಸ್ವತ್ತುಗಳನ್ನು ಪರಾಧೀನಮಾಡುತ್ತಾನೆಂದು ಕೇಳುತ್ತೇನೆ ಸದರಿ ಸ್ವತ್ತಿನ ಆಧಾರ ಭೋಗ್ಯ ವಗೈರೆಗಳನ್ನು ಯಾರೇ ಆಗಲಿ ಅವನಿಂದ ಬರೆಸಿಕೊಂಡರೆ ಅದೊಂದೂ ಎಂದಿಗೂ ಊರ್ಜಿತವಾಗಲಾರದು ಮತ್ತು ನಮ್ಮ ಎಲ್ಲಾ ನಷ್ಟಕ್ಕೂ ಗುರಿಯಾಗಬೇಕಾದೀತು [238-1]

ಮದ್ದೂರ ಬೋರಮ್ಮನ ಬಳಿ ರುಜು

ವಿದ್ಯಾಸಾಗರ ಬುಕ್ ಡಿಪೋ

ಚಿಕ್ಕ ಪೇಟೆ, ಬೆಂಗಳೂರು ಸಿಟಿ.

ಇಲ್ಲಿ ಎಲ್ಲಾ ತರಹ ಇಂಗ್ಲೀಷು ಮತ್ತೂ ಕನ್ನಡ ಸ್ಕೂಲ್ ಪುಸ್ತಕಗಳು ಉತ್ತಮ ಕಥೆಗಳೂ, ಉದ್ಗ್ರಂಥಗಳೂ, ಸ್ಟೇಷನರಿ ಸಾಮಾನುಗಳೂ ಸುಕ್ರಯಕ್ಕೆ ದೊರೆಯುತ್ತ ಚಿಕ್ಕ ಮತ್ತು ದೊಡ್ಡ ಸ್ವದೇಶಿ ಡೈರಿಗಳೂ ಸಿದ್ಧವಾಗಿ

ಕೆಲವು ಪುಸ್ತಕಗಳು.

ಚಿಕ್ಕುಪಾಧ್ಯಾಯ ವಿರಚಿತ ಶುಕಸಪ್ತತಿ ಉತ್ತಮ ಪ್ರತಿ 2 ರೂಪಾಯಿ ಅರ್ಯಕೀರ್ತಿ 10 ಆಣೆ ಶಿವಗೀತಾ ಉತ್ತಮ ಪ್ರತಿ 12 ಆಣೆ ಡಿಟೋ ಸಾ 8 ಆಣೆ ರಂಗಾಚಾರ್ಲು ಜೀವನ ಚರಿತ್ರೆ 6 ಆಣೆ ಬೆಕ್ಕೋಜಿ ಸಾಹಸ ಕಥೆ 3 ಆ ಕನಕಾಲುಕಾ (ಡ್ರಾಮಾ) 6 ಆಣೆ ಸಂಕ್ಷೇಪ ರಾಮಾಯಣ ನೋಟ್ಸ್ 4 ಆ ಜೈಮಿನಿ (೧ ನೇ ಭಾಗ) ಟೀಕು ತಾತ್ಪರ್ಯ ಸಹಿತ 1 ರೂಪಾಯಿ. ಟಪ್ಪಾಲು ಅಲಾಯಿದಾ [225-3]

ಪಂಡಿತ್ ಎಸ್. ಗರಳಪುರಿಯವರ

ಪ್ರಖ್ಯಾತಿ ಹೊಂದಿದ ಓರಿಯಂಟಲ್ ಫಾರ್ಮಸಿ, ಮೈಸೂರು.

ಕಸ್ತೂರಿ ಮಾತ್ರೆ.—ಶ್ರೇಷ್ಠತರ ವನಸ್ಪತಿಗಳು, ಮುತ್ತು, ಕಸ್ತೂರಿಗಳಿಂದ ತಯಾರಿಸಿದ್ದು ಜಲದೋಷ, ಅಜೀರ್ಣ, ಮೈ ಕೈ ತಲೆನೋವುಗಳಿಗೆ ಸಂಜೀವನ. ಇದನ್ನು ತಾಂಬೂಲದ ಸಂಗಡ ಪ್ರತಿ ದಿನವೂ ಸೇವಿಸಿದರೆ ಪ್ಲೇಗ್ ಕಾಲರಾ ಮುಂತಾದ ಸಾಂಕ್ರಾಮಿಕ ವ್ಯಾಧಿಗಳಿಂದ ಖಂಡಿತ ಕಾಪಾಡುತ್ತೆ. 1 ಮಾತ್ರೆಗೆ 4 ಆಣೆ 6 ಶೀಸೆಗೆ ರೂ 1-1-0.

ಬಾಲಸಂಜೀವಿನಿ —8 ವರ್ಷದ ಮಕ್ಕಳಿಗೆ ಬರುವ ಎಲ್ಲಾ ಜ್ವರ, ಶೀತ, ನೆಗಡಿ, ಕೆಮ್ಮಲು, ವಾಯು, 3 ಪಕ್ಕೆ ಎಳತ, ಸೆಳತ, ಇವಕ್ಕೆ ಅಮೃತ. 100 ವರ್ಷದ ಅನುಭವಸಿದ್ಧವಾದದ್ದು 30 ಸಲದ ಔಷಧಿಗೆ 4 ಆ 1 ತೊಲೆಗೆ ರೂ. 1-8-0

ಜ್ವರದ ಮಾತ್ರೆ.—ಸಮಸ್ತವಿಧ ಜ್ವರಗಳಿಗೂ ಖಾತರಿ ಅಮ ಬಹಳ ಜನರು ಇದರ ಗುಣವನ್ನು ಕಂಠೋಕ್ತವಾಗಿ ಹೊಗಳುವರು. 24 ಮಾತ್ರೆಗೆ 8 ಆಣೆ, 12 ಶೀಸೆಗೆ ರೂ. 6. [232-2]

ಇನ್ನೂ ಅನೇಕ ದಿವ್ಯೌಷಧಿಗಳು ನಮ್ಮಲ್ಲಿ ಸಿಕ್ಕುತ್ತವೆ. ½ ಆಣೆ ಸ್ಟಾಂಪು ಬರೆದರೆ ಕ್ಯಾಟಲಾಗ್ ಕಳುಹಿಸುತ್ತೇವೆ. ಪೋಸ್ಟೇಜ್, ಪ್ಯಾಕಿಂಗ್ ಛಾರ್ಜು ಅಲಾಯಿದ.

ವಿಳಾಸ.—ಪಂಡಿತ್ ಎಸ್ ಗರಳಪುರಿ,

ಓರಿಯಂಟಲ್ ಫಾರ್ಮಸಿ, ಬಂಡಿಕೇರಿ, ಮೈಸೂರು

ನ್ಯಾಷನಲ್ ಇನ್ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿ, ಲಿಮಿಟೆಡ್, ಅಮೃತಸಾರ.

ಮದರಾಸ್ ಬ್ರಾಂಚ್—33, ಆರ್ಮೀನಿಯನ್ ಬೀದಿ, ಜಿ. ಟಿ., ಮದರಾಸ್

ಇಂಗ್ಲಾಂಡಿನ ಪತ್ರಿಕೆಗಳ ಅಭಿಪ್ರಾಯಗಳ ಸಾರಾಂಶ.

ಲಂಡನ್ ಪಟ್ಟಣದ ಇನ್ಷುರೆನ್ಸ್ ಜರ್ನಲ್ ಮತ್ತು ಜನರಲ್ ಫೈನಾನ್ಷಲ್ ರೆಕಾರ್ಡ್ ಪತ್ರಿಕೆಯು 1913 ನೇ ಜೂಲೈ ತಾ. 16 ರಲ್ಲಿ ಬರೆಯುವುದೇನೆಂದರೆ—"ಪಂಜಾಬಿಗೆ ಸೇರಿದ ಅಮೃತಸಾರದಲ್ಲಿ ಹೆಡ್ ಆಫೀಸನ್ನು ಉಳ್ಳ ನ್ಯಾಷನಲ್ ಇನ್ಷುರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯ ಕಳೆದ ವರುಷದ ವಾರ್ಷಿಕ ರಿಪೋರ್ಟಿನ ಒಂದು ಪ್ರತಿಯು ನಮಗೆ ತಲುಪಿರುತ್ತದೆ. ಈ ಕಂಪನಿಯ ಮೂಲಧನಕ್ಕೆ 1,41,591 ರೂಪಾಯಿ ಷೇರುದಾರರಿಂದ ಪಾವತಿ ಆಗಿದೆ ಮತ್ತು ಕಂಪನಿಯು ರೆಜಿಸ್ಟರಾದ ಮೂಲಧನವೆಲ್ಲಾ ವಸೂಲಾಗಿರುವುದು. ಪ್ರಾರಂಭದ ಲಾಗಾಯಿತು ಈ ಕಂಪನಿಯು ನಿಧಾನವಾಗಿಯೂ ಸ್ಥಿರಕರವಾಗಿಯೂ ವೃದ್ಧಿಗೆ ಬಂದಿರುತ್ತದೆ. ಅದರ ಮ್ಯಾನೇಜರುಗಳು ಜಾಗರೂಕರಾಗಿಯೂ ಧಾರಾಳಿಗಳಾಗಿಯೂ ಕಂಪನಿಯ ಕಾರುಬಾರುಗಳನ್ನು ನಡಿಸುತ್ತಾ ಬಂದಿರುವುದರಿಂದ ಅದು ಬಹಳ ಪ್ರಯೋಜನಕರವಾಗಿ ಆಗುತ್ತಿರುವುದು ಮಾತ್ರವೇ ಅಲ್ಲ, ಹಿಂದುಸ್ಥಾನದಲ್ಲಿ ಜನಸಾಮಾನ್ಯದಲ್ಲಿ ಪ್ರೀತಿ ವಿಶ್ವಾಸಗಳಿಗೆ ಪಾತ್ರವಾಗಿರುವ ಇನ್ಷುರೆನ್ಸ್ ಕಂಪನಿಗಳ ಪೈಕಿ ಇದು ಪ್ರಶಸ್ತವಾದ ಮಾರ್ಗದರ್ಶಕಸ್ಥಾನವನ್ನು ಪಡೆಯುವುದಾಗಿರುತ್ತದೆ. ಈ "ನ್ಯಾಷನಲ್" ಕಂಪನಿಯ ಕಾರ್ಯಗಳು 1908 ನೇ ಇಸವಿಯಿಂದ ಪ್ರಾರಂಭಿಸಲ್ಪಟ್ಟದ್ದಾಗ್ಯೂ ಈ ಸಣ್ಣ ಪ್ರಾಯದ ಕಂಪನಿಯು ಬಹಳ ಸಾಮರ್ಥ್ಯವನ್ನು ತೋರಿಸುತ್ತಾ ಬೆಳುವಳಿಗೆಯನ್ನು ಹೊಂದುತ್ತಾ ಬಂದಿದೆ. ಇಟ್ಟು ಹಣ 1908 ರಲ್ಲಿ 28,786 ಇದ್ದದ್ದು 1912 ನೇ ಇಸವಿ ಕಡೆಯಲ್ಲಿ 10,39,016 ರೂಪಾಯಿಗೆ ಹೆಚ್ಚಿತು. ಕಳೆದ ಆರು ತಿಂಗಳಲ್ಲಿ ಹೊಸದಾಗಿ 186 ಮೆಂಬರುಗಳು 5,90,900 ರೂಪಾಯಿಗೆ ಇನ್ಷೂರ್ ಮಾಡಬೇಕೆಂದು ಅರ್ಜಿ ಹಾಕಿದ್ದರಲ್ಲಿ ಒಟ್ಟು 1,16,262 ರೂಪಾಯಿ ಉಳ್ಳ 403 ಪಾಲಿಸಿಗಳು ದಾಖಲಾಗಿರುವುದರಿಂದ ಕಂಪನಿಗೆ ಸಾಲ್ ಒಂದಕ್ಕೆ ರೂ 27,970-0-0 ಪ್ರೈ ಕಂತು ಪಾವತಿಯಾಗುವಂತಾಯಿತು. 1912 ನೇ ಡಿಸೆಂಬರ್ ತಾ 31 ರಲ್ಲಿ ಈ ಕಂಪನಿಯ ಒಟ್ಟು ಪಾಲಿಸಿಗಳ ಬೆಲೆಯು 14,61,658 ರೂಪಾಯಿ ಆಗಿ ಚಾಲ್ತಿಯಲ್ಲಿರುತ್ತದೆ. ಈ ಪೈಕಿ ವಸೂಲಾಗುವ ಪ್ರೀಮಿಯಂ ಹಣದಲ್ಲಿ ಶೇಕಡ 53 ರೂಪಾಯಿನಂತೆ ಲೈಫು ಅಷೂರೆನ್ಸ್ ಫಂಡು ಮಾಡಿದಾರೆ.—ಪ್ರಾವಿಡೆಂಟ್ ಫಂಡ್ ಬಾಬಿನಲ್ಲಿ ಕಳೆದ ಆರು ತಿಂಗಳೊಳಗೆ 8,371 ಹೊಸ ಮೆಂಬರುಗಳು ದಾಖಲಾಗಿರುವರು. ಮತ್ತು ಈ ಮೆಂಬರುಗಳ ಸಂಖ್ಯೆಯು 1912 ನೇ ಡಿಸೆಂಬರ್ ತಾ 31 ರಲ್ಲಿ ಒಟ್ಟು 79,131 ಚಂದಾ ಮೆಂಬರುಗಳು ದಾಖಲಾಗಿ ಈ ಪೈಕಿ 57,180 ಮೆಂಬರುಗಳು ಚಾಲ್ತಿಯಲ್ಲಿರುತ್ತಾರೆ. ಅಷೂರೆನ್ಸ್ ಫಂಡನ್ನು ಪ್ರತ್ಯೇಕವಾಗಿಯೇ ಇಟ್ಟು ಅದನ್ನು ಮುಟ ಬೇಸ್ ವರುಷಾಂತ್ಯದ ಲೆಕ್ಕದಿಂದ ರೂ 15,167-10-9 ಪೈ ಲಾಭ ಬಂದಿರುತ್ತೆ. ಈ ಕಂಪನಿಯ ಫಂಡುಗಳನ್ನು ಭದ್ರವಾಗಿಯೂ, ಲಾಭಕರವಾಗಿಯೂ ಇಟ್ಟು ಇರುತ್ತಾರೆ. ಒಟ್ಟಿಗೆ ಕಳೆದ ವರುಷದ ರಿಪೋರ್ಟನ್ನು ನೋಡುವಲ್ಲಿ ಈ ಕಂಪನಿಯು ಸಂತೋಷಕರವಾಗಿ ವೃದ್ಧಿಯಾಗುತ್ತಿರುವದು ಗೊತ್ತಾಗುವುದು. ಮತ್ತು ಡೈರೆಕ್ಟರುಗಳು ಪ್ರಸ್ತಾಪಿಸಿರುವುಗಳಲ್ಲಿ ಮೆಚ್ಚಿಕೆಗೆ ಅರ್ಹವಾದ ವಿಚಾರವನ್ನೂ, ನಡವಳಿಕೆಯ ಸಲಹೆಗಳನ್ನೂ ಪ್ರಕಟಿಸಿರುವುದು ಸಂತೋಷಪ್ರದವಾಗಿದೆ. ಇದುವರೆಗೆ ಅಭಿವೃದ್ಧಿಗೆ ಬರುತ್ತಿರುವುದನ್ನು ನೋಡಿದರೆ ಈ ನ್ಯಾಷನಲ್ ಇನ್ಷುರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯು ಇನ್ನೂ ವಿಶೇಷವಾಗಿ ಜನಾಂಗಗಳ ಪ್ರೀತಿಯನ್ನೂ ನಂಬಿಕೆಯನ್ನೂ ಸಂಪಾದಿಸಿಕೊಂಡು, ಆ ವಿಸ್ತಾರವಾದ ಹಿಂದುಸ್ಥಾನ ದೇಶವೆಲ್ಲಾ ಹರಡಿಕೊಂಡೀತೆಂದು ಧಾರಾಳವಾಗಿ ಹೇಳಬಹುದು."

ಲಂಡನ್ ಪಟ್ಟಣದ ಇನ್ಷುರೆನ್ಸ್ ಅಬ್ಸರ್ ವರ್ ಪತ್ರಿಕೆಯು 1913 ನೇ ಜೂಲೈ ತಾ 11 ರಲ್ಲಿ ಬರೆಯುವುದೇನೆಂದರೆ—"ಇದುವರೆಗೆ ನಾವು ಬ್ರಿಟಿಷ್ ಇಂಡಿಯದಲ್ಲಿರುವ ಅಮೃತಸಾರದ ನ್ಯಾಷನಲ್ ಇನ್ಷುರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯ ವಿಚಾರವನ್ನು ಕುರಿತು ಪ್ರಸ್ತಾಪಮಾಡಲಿಲ್ಲ. ಯಾಕೆಂದರೆ ಆ ಕಂಪನಿಯ ಲೆಕ್ಕಗಳ ಪ್ರತಿಗಳು ನಮಗೆ ಸಿಕ್ಕದೆ ಇದ್ದದ್ದೇ ಕಾರಣ. ಈಗ ಆ ಕಂಪನಿಯ 1912 ನೇ ಇಸವಿಯ ಎರಡು ಅರ್ಧವಾರ್ಷಿಕಗಳ ಲೆಕ್ಕಗಳೂ, ಆ ಕಂಪನಿಯವರು ಪ್ರಕಟಿಸಿದ ಕಾಗದಪತ್ರಗಳೂ ನಮಗೆ ತಲುಪಿರೋಣವರಿಂದ ಪಂಜಾಬಿನ ಈ ಸಂಸ್ಥೆಯ ವ್ಯಾಪಕವಾದ ವೃತ್ತಾಂತವನ್ನು ನಮ್ಮ ವಾಚಕರಿಗೆ ತಿಳಿಸಲು ನಮಗೆ ಅನುಕೂಲವಾಗಿದೆ. ಈ ಕಂಪನಿಯು 1907 ನೇ ಇಸವಿಯಲ್ಲಿ ಏರ್ಪಟ್ಟಾಯಿತು. ಆ ಇಸವಿಯ ಆಖೈರಿನಲ್ಲಿ 2,28,100 ರೂಪಾಯಿನ ಷೇರುಗಳು ವಿಕರಿ ಆಗಿ 17,520 ರೂಪಾಯಿ ಪಾವತಿ ಆಗಿತ್ತು. ಮತ್ತು ಅಗ್ರಿಮೆಂಟ್ ಕ್ಯಾಪಿಟಲ್ (ಲೇವಾದೇವಿಯ ಫಂಡು) 65,966 ರೂಪಾಯಿ ಇತ್ತು. ಸರ್ಕಾರಿ ಮತ್ತು ಇತರ ಷೇರ್ ಪತ್ರಗಳು 2,500 ರೂಪಾಯಿನಷ್ಟು ಇದ್ದವು. 28,786 ರೂಪಾಯಿ ಡಿಪಾಜಟ್ಟು ಬಂದಿತ್ತು. ಮತ್ತು ಆಗ ಒಂದು ಬ್ರಾಂಚ್ ಆಫೀಸನ್ನು ಮಾತ್ರ ಪ್ರಾರಂಭಿಸಿದ್ದರು. ಈ ರೀತಿ ಪ್ರಾರಂಭದಲ್ಲಿ ಈ ಕಂಪನಿಯು ಗಂಭೀರವಾಗಿಯೇನೂ ಇಲ್ಲದಾಗ್ಯೂ ಇತ್ತು. ಆದರೆ ಅತ್ತಲಾಗಿ ಲೇವಾದೇವಿಯು ಬೇಗ ಬೇಗ ಹೆಚ್ಚಾಯಿತು. 1911 ನೇ ಅಂದರೆ ಐದನೇ ವರುಷಾಂತ್ಯದಲ್ಲಿ 7,12,000 ರೂಪಾಯಿನ ಷೇರುಗಳು ವಿಕರಿ ಆಗಿ, ಆ ಪೈಕಿ 99,182 ರೂಪಾಯಿ ಮೂಲಧನ ಪಾವತಿ ಆಗಿ, ಲೇವಾದೇವಿಯಲ್ಲಿ 11,08,022 ರೂಪಾಯೂ, ಸರ್ಕಾರಿ ಮತ್ತು ಇತರ ಷೇರ್ ಪತ್ರಗಳ ಮೇಲೆ 77,100 ರೂಪಾಯೂ ಇದ್ದಿತಲ್ಲದೆ ಡಿಪಾಜಟ್ಟು ಹಣ 8,21,678 ರೂಪಾಯಿ ಸೇರಿ ಇತ್ತು. ಅತ್ತಲಾಗಿ ಕಂಪನಿಯ ಬ್ರಾಂಚ್ ಆಫೀಸುಗಳ ಸಂಖ್ಯೆ 1 ರಿಂದ 21 ಕ್ಕೆ ಹೆಚ್ಚಿತ್ತು. ಅಲ್ಲಿಂದೀಚೆಗೆ ಅಂದರೆ 1912 ನೇ ಇಸವಿಯಲ್ಲಿ ಈ ಕಂಪನಿಯು ಇನ್ನೂ ವಿಶೇಷವಾದ ಅಭಿವೃದ್ಧಿಸ್ಥಿತಿಯನ್ನು ಹೊಂದಿರುತ್ತದೆ. ಈಗ 10,00,000 ರೂಪಾಯಿನ ಷೇರುಗಳೂ ವಿಕರಿ ಆಗಿ 1,41,591 ರೂಪಾಯಿ ಮೂಲಧನಕ್ಕೆ ವಸೂಲಾಗಿರುತ್ತದೆ. ಲೇವಾದೇವಿಯಲ್ಲಿ 15,12,119 ರೂಪಾಯೂ, ಸರ್ಕಾರಿ ಮತ್ತು ಇತರ ಸಾಲಗಳ ಪತ್ರಗಳ ಮೇಲೆ 1,32,600 ರೂಪಾಯೂ, ಡಿಪಾಜಟ್ಟಿನಲ್ಲಿ 10,31,916 ರೂಪಾಯೂ ಇರುತ್ತವೆ. ಹೊಸದಾಗಿ ಎರಡು ಬ್ರಾಂಚ್ ಆಫೀಸುಗಳನ್ನು (ಅಂದರೆ ಒಟ್ಟು 23 ಆಫೀಸುಗಳು) ಪ್ರಾರಂಭಮಾಡಿದಾರೆ.

* * * *

ನಿಜವಾಗಿಯೂ ಈ ಕಂಪನಿಯು ಕಾರ್ಯ ನಡಿಸುವ ಮೂರು ಭಾಗಗಳ್ಯಾವವೆಂದರೆ—ಇನ್ಷೂರೆನ್ಸ್, ಲೇವಾದೇವಿ, ಪ್ರಾವಿಡೆಂಟ್ ಫಂಡು, ಇವೇ. * *

ನಮ್ಮ ದೃಷ್ಟಿಯಲ್ಲಿ ಲೇವಾದೇವಿಯ ಭಾಗದಲ್ಲಿ ನಡೆಯುವ ಕಾರ್ಯಗಳು ಸ್ವಲ್ಪ ಹೆಚ್ಚಾಗಿದ್ದರೂ ಇನ್ಷೂರೆನ್ಸ್ ಭಾಗವೇ ಬಹಳ ಸ್ವಾರಸ್ಯವಾಗಿ ಕಾಣುತ್ತದೆ. ಕಂಪನಿ ಪ್ರಾರಂಭಿಸಿ ಕೆಲವು ವರುಷ ಮಾತ್ರ ಆಗಿದ್ದರೂ ಬಹಳ ಚೆನ್ನಾಗಿ ವೃದ್ಧಿಹೊಂದಿರುವುದು. 1912 ನೇ ಇಸವಿ ಆಖೈರಿನಲ್ಲಿ ಲೈಫ್ ಅಷೂರೆನ್ಸ್ ಫಂಡಿನಲ್ಲಿ 96,000 ರೂಪಾಯಿ ಶೇಖರವಾಗಿತ್ತು. ಮತ್ತು ಕಂಪನಿಯ ಆಸ್ತಿಯೆಲ್ಲಾ 1,10,313 ರೂಪಾಯಿ ಬಾಳುತ್ತದೆ. 1912 ನೇ ವರುಷದ ಮೊದಲನೇ ಅರ್ಧವಾರ್ಷಿಕದಲ್ಲಿ ಇವೆರಡು ಬಾಬುಗಳೂ 89,310 ರೂಪಾಯೂ, 1,02,222 ರೂಪಾಯೂ ಆಗಿದ್ದವು. ಇದಲ್ಲದೆ ಕಂಪನಿಗೆ ಮೊದಲನೆ ಅರ್ಧವಾರ್ಷಿಕದಲ್ಲಿ 8,713 ರೂಪಾಯಿ ಪ್ರೀಮಿಯಂ ವರಮಾನವೂ, ಎರಡನೇ ಅರ್ಧವಾರ್ಷಿಕದಲ್ಲಿ 15,217 ರೂಪಾಯಿ ಪ್ರೀಮಿಯಂ ವರಮಾನವೂ ಉಂಟಾಗಿತ್ತು. ಅತ್ತಲಾಗಿ ಪ್ರಾವಿಡೆಂಟ್ ಫಂಡಿನ ಬಾಬಿನಲ್ಲಿ ಪ್ರೀಮಿಯಂ ವರಮಾನವು ಮೊದಲನೇ ಅರ್ಧವಾರ್ಷಿಕದಲ್ಲಿ 79,003 ರೂಪಾಯಿ ಇದ್ದದ್ದು ಎರಡನೇ ಅರ್ಧವಾರ್ಷಿಕದಲ್ಲಿ 77,897 ರೂಪಾಯಿಗೆ ಇಳಿದಿದೆ.

* * * *

ಹಿಂದುಸ್ಥಾನದಲ್ಲಿರುವ ಇತರ ಎಲ್ಲಾ ಜೀವವಿಮೆ (ಲೈಫ್ ಅಷೂರೆನ್ಸ್) ಕಂಪನಿಗಳಂತೆಯೇ ಅಮೃತಸಾರದ ಕಂಪನಿಯೂ ಪ್ರಾರಂಭ ದೆಸೆಯಲ್ಲಿ ಪುನಃ ಸ್ಥಿರವಾದ ಮೆಂಬರುಗಳನ್ನು ಸಂಪಾದಿಸುವುದರಲ್ಲಿ ಕಷ್ಟಪಡಬೇಕಾಗಬಹುದೆಂದು ಊಹಿಸಬಹುದು. ಮುಗಿದು ಹೋದ ಬಳಿಕ ಪಾಲಿಸಿಗಳನ್ನು ಹೊಸದಾಗಿ ಮಾಡಿಸುವುದು ಪ್ರಯಾಸ, ಇದಕ್ಕೋಸ್ಕರ ಕಂಪನಿಯವರು ಬಹಳ ಜಾಗರೂಕತೆಯಿಂದ ನಂಬಿಕೆಯನ್ನೂ ಗುರುತ್ವವನ್ನೂ ಉಂಟುಮಾಡಿ ದೇಶೀಯ ಜನರನ್ನು ಸೇರಿಸಿಕೊಳ್ಳುತ್ತಾ ಬರಬೇಕಾಗುತ್ತದೆ. ನ್ಯಾಷನಲ್ ಇನ್ಷುರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಗೆ ಈ ಭಾಗವು ಬಹಳ ಸುಲಭವಾಗಿರುವುದು, ಯಾಕಂದರೆ ಈ ಕಂಪನಿಯವರು ಇಂಡಿಯನ್ ಕಂಪನಿಗಳ ಕಾನೂನ್ ಪ್ರಕಾರ ಆಗಲೇ 75,000 ರೂಪಾಯಿನ ಪತ್ರಗಳನ್ನು ಇಂಡಿಯಾ ಕಂಟ್ರೋಲರ್ ಜನರಲ್ ರವರಲ್ಲಿ ಡಿಪಾಜಟ್ಟುಮಾಡಿರುತ್ತಾರೆ. ಮತ್ತು ಕಂಪನಿಯ ಡೈರೆಕ್ಟರುಗಳು ಇನ್ಷೂರೆನ್ಸ್ ಬಾಬಿನಲ್ಲಿ ಉತ್ಪತ್ತಿಯಾಗಿ ಉಳಿಯುವ ಎಲ್ಲಾ ಹಣಗಳನ್ನೂ ಸರ್ಕಾರಿ ಪತ್ರಗಳ ಮೇಲೆ ಹಾಕಿ ಕಂಟ್ರೋಲರ್ ಜನರಲ್‌ರವರ ವಶದಲ್ಲಿ ಇಡಬೇಕೆಂದು ಗೊತ್ತುಮಾಡಿರುವರು. ಎರಡು ಲಕ್ಷ ರೂಪಾಯಿ ಆಗುವ ತನಕ ಡಿಪಾಜಟ್ಟುಮಾಡುತ್ತಾ ಬರುತ್ತಾರೆ. ಈ ಏರ್ಪಾಡು ಬಹು ಭದ್ರವಾದದ್ದೆಂದು ಖಂಡಿತವಾಗಿ ಹೇಳಬಹುದು. ಕೆಲವು ದೇಶೀಯ ಸಣ್ಣ ಕಂಪನಿಗಳಿಂದುಂಟಾದ ಕಷ್ಟನಷ್ಟಗಳನ್ನು ನೋಡಿದ್ದರಿಂದ ಈ ಕಂಪನಿಗೆ ಅಂಥಾದ್ದೇನೂ ಆಗುವುದಿಲ್ಲವೆಂದು ಸಿದ್ಧವಾಯಿತು. ಹೀಗೆ ಶೇಖರವಾಡೋಣದರಲ್ಲಿ ಬಡ್ಡಿ ಹಣ ಸ್ವಲ್ಪ ಕಡಮೆಯಾಗಬಹುದು. ಆದರೆ ಕಾಲಕ್ರಮದಲ್ಲಿ ಇದರಿಂದ ತುಂಬಾ ಪ್ರಯೋಜನ ಉಂಟೇ ಉಂಟು. ಈ ಏರ್ಪಾಡಿನಿಂದ ಹೊಸ ಮೆಂಬರುಗಳು ಸೇರಿಕೊಳ್ಳುವುದಕ್ಕೂ, ಇರತಕ್ಕವರಿಗೆ ಪೂರ್ಣ ಭರವಸೆ ಉಂಟಾಗುವುದಕ್ಕೂ ತುಂಬಾ ಸಹಾಯವಾಯಿತು.

ಭರವಸೆಯನ್ನು ಸಂಪಾದಿಸಿಕೊಂಡಂಥಾ ಜೀವವಿಮೆ ಕಂಪನಿಗಳು ಹಿಂದುಸ್ಥಾನದಲ್ಲಿ ಬಹಳ ಬೇಗನೆ ಅಭಿವೃದ್ಧಿಹೊಂದುತ್ತವೆ. ಹೊಸದಾಗಿ ಸೇರತಕ್ಕವರ ಸಂಖ್ಯೆಯು ಅಪಾರವಾಗಿದೆ. ಕೆಲಸಗಳ ಕ್ರಮವೂ ಸರಳವಾಗಿಯೂ, ಅನುಕೂಲವಾಗಿಯೂ ಇರೋಣದರಿಂದ ಕಂಪನಿಯ ಖರ್ಚನ್ನು ಮಿತವಾಗಿಯೂ, ಬಹಳ ಲಾಭಕರವಾಗಿಯೂ ಮಾಡಿಕೊಳ್ಳಬಹುದು. ಇನ್ನೂ ಸಣ್ಣ ಪ್ರಾಯದ ಅಮೃತಸಾರದ ನ್ಯಾಷನಲ್‌ನಂಥಾ ಕಂಪನಿಗಳಿಗೆ ಸುಲಭವಾಗಿ ಮೆಂಬರುಗಳು ಸೇರಿಕೊಳ್ಳುತ್ತಾರೆ. ಕಳೆದ ವರುಷ ಈ ಕಂಪನಿಗೆ 862 ಜನರು ಸೇರಿ 9,59,672 ರೂಪಾಯಿಗೆ ಪಾಲಿಸಿ ಪತ್ರಗಳನ್ನು ಪಡದು 40,937 ರೂಪಾಯಿ ಪ್ರೀಮಿಯಂಗಳನ್ನು ಕಟ್ಟಿ ಪ್ರಾರಂಭಿಸಿದರು. ಇದು ಬಹಳ ತೃಪ್ತಿಕರವಾಗಿದೆ. ಕ್ರಮವಾಗಿ ಪ್ರೀಮಿಯಂ ಸಲ್ಲುವಂತೆ ಏರ್ಪಡಿಸಿಕೊಂಡ ಪಕ್ಷದಲ್ಲಿ ಒಟ್ಟು ಪ್ರೀಮಿಯಂ ಉತ್ಪತ್ತಿಯು ಬೇಗನೆ ಹೆಚ್ಚುತ್ತಾ ಬಂದೀತು.

* * * *

ಮುಖ್ಯವಾಗಿ ಈ ನ್ಯಾಷನಲ್ ಕಂಪನಿಯು ಉತ್ಪತ್ತಿಯಲ್ಲಿ ಎಲ್ಲಾ ಖರ್ಚನ್ನೂ ಕಳೆಯುತ್ತಾ ಬರುವುದು ವಿವೇಕವಾಗಿದೆ, ಇದರಿಂದ ಈಗ ಅವರ ಬ್ಯಾಲೆನ್ಸ್ ಷೀಟು ನಿರ್ದೋಷವಾಗಿರುವುದು.

* * * *

ಕಳೆದ ಡಿಸೆಂಬರ್ ತಾ 31 ರಲ್ಲಿ ಇನ್ಷುರೆನ್ಸ್ ಬಾಬಿನ ಪ್ರೀಮಿಯಂ ಹಣದಲ್ಲಿ ಶೇಕಡ 51 ರಷ್ಟು ಕಂಪನಿಯಲ್ಲಿ ರಿಸರ್ವಿನಲ್ಲಿಟ್ಟಿವೆ ಎಂದು ತಿಳಿಯೋಣದರಿಂದ ಕಂಪನಿಯ ಖರ್ಚುಬಾಬು ಬಹಳ ಸ್ವಲ್ಪವಾಗಿದೆ ಎಂದು ಹೇಳಬಹುದು."

ಈಚೆಗೆ ಕಂಪನಿಯವರು ಇನ್ನೂ 25,000 ರೂಪಾಯನ್ನು ಗವರ್ನ್‌ಮೆಂಟಿನ ಕಂಟ್ರೋಲರ್ ಜನರಲ್ ರವರಲ್ಲಿ ರಿಸರ್ವಿ ಇಟ್ಟು, ತಮ್ಮ ಡಿಪಾಜಟ್ಟನ್ನು ಒಂದು ಲಕ್ಷ ರೂಪಾಯಿಗೆ ಭರ್ತಿಮಾಡಿದಾರೆ.

ಹೆಚ್ಚು ಸಂಗತಿ ತಿಳಿಯಬೇಕಾದವರು ಈ ವಿಳಾಸದಾರರಿಗೆ ಬರೆಯಿರಿ.— [231 1]

ಟಿ. ಎಸ್. ಆರ್. ಅಯ್ಯರ್,

ಸೆಕ್ರೆಟರಿ, ಮದರಾಸ್ ಬ್ರಾಂಚ್, 33 ಆರ್ಮೀನಿಯನ್ ಬೀದಿ, ಮದರಾಸ್.

ಕನ್ನಡ ಲಾ ಪುಸ್ತಕಗಳು

[160-14]

ಗೌರ್ನರ್ ಜನರಲ್‌ರವರ ಹುಕುಂ ಪ್ರಕಾರ ಎಲ್ಲಾ ದೇಶಗಳಲ್ಲಿಯೂ ಜಾರಿಯಲ್ಲಿರುವ ಕನ್ನಡ ಇಂಡಿಯನ್ ಪೆನಲ್‌ಕೋಡು ಕ್ರಯ ರೂ 2-0-0. ವ್ಯವಹಾರನಿರ್ಣಯ ವಿಧಿ ಎಂಬ ಸಿವಲ್ ಪ್ರೊಸಿಜೂರ್ ಕೋಡ್ 3 ಭಾಗಗಳುಳ್ಳದ್ದು ರೂ 3-0-0 ಪ್ರಶ್ನೋತ್ತರ ಲೀಗಲ್ ಬೋಧಿನಿ—ಈ ಪುಸ್ತಕದಲ್ಲಿ ಸಿವಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ವ್ಯವಹಾರ ವಿಧಿಗಳನ್ನು ಬೋಧಿಸುವದು ಕ್ರಯ ರೂ. 1-4-0 ತಾನಾಗಿ ಸ್ವತಃ ಇಂಗ್ಲೀಷ್ ಕಲಿಯುವದು—ರೂ. 1-8-0. ಇವುಗಳಲ್ಲಿ ಕೆಲವು ಮುದ್ರಣವಾಗುತ್ತಿವೆ. ಇನ್ನೂ ಪುಸ್ತಕಗಳು ಅಪೇಕ್ಷಿಸುವವರು ನಮ್ಮ ಪುಸ್ತಕಗಳ ಕ್ಯಾಟಲಾಗಿಗೆ ಬರೆಯಿರಿ. ನಮಗೆ ಪ್ರತಿ ಒಂದು ತಾಲ್ಲೂಕುಗಳಲ್ಲಿಯೂ ಏಜಂಟರು ಬೇಕಾಗಿದೆ. ಅವರ ಶಕ್ತ್ಯಾನುಸಾರ ಕಲಬು ಕೊಡಲ್ಪಡುತ್ತೆ.

ವಿಳಾಸ—ಬಿ. ನರಸಿಂಗರಾವ್,

ಎಡಿಟರ್, "ಲಾ ಗೆಜೆಟ್," ಬೆಂಗಳೂರು.

ಕ್ರಿಮಿನಲ್ ಲಾ ಸಂಗ್ರಹ.

(ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ.)

ಈ ಪುಸ್ತಕದಲ್ಲಿ —1 ಪಿನಲ್‌ಕೋಡು, 2. ಪೊಲೀಸ್ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ದಹ್ಯವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7. ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ.

ಪ್ರತಿ ಪೆನಲ್ ಸೆಕ್ಷನ್‌ಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೇ? ಯಾ ಕೂಡದೆ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟ್ಟಬೇಕೇ? ಜಾಮಿನ್ ತೆಗೆದುಕೊಳ್ಳಬಹುದೇ? ಯಾ ಕೂಡದೆ? ರಾಜಿಯಾಗಬಹುದೇ? ಯಾ ಕೂಡದೆ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ. ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ. 22-5-1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ. ಕ್ರಯ ರೂಪಾಯಿ 2-0-0 ಟಪಾಲ್ ಹಾಸಲು 3 ಆಣೆ.

ವಿಳಾಸ:—ಎಲ್. ವೇಮಾರೆಡ್ಡಿ,

ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್,

[103-21] ಮಾಲೂರು —ಕೋಲಾರ್ ಡಿಸ್ಟ್ರಿಕ್ಟ್.

ಶ್ವಾಸಕೇಸರಿ ಲೇಹ.

ಅಸ್ತಮಕ್ಕೆ ತಪ್ಪದೆ ತತ್‌ಕ್ಷಣ ಗುಣಕೊಡುತ್ತೆ.

ಅಸ್ತಮಕಾಯಿಲೆಯು ಎಷ್ಟೇ ಹಳೇದಾಗಿದ್ದರೂ ಎಷ್ಟೇ ಕಠಿಣವಾಗಿದ್ದರೂ ಈ ಲೇಹವನ್ನು ಮೂರು ವಾರ ಸೇವಿಸುವುದರೊಳಗೆ ಖಂಡಿತವಾಗಿ ಪೂರ್ಣ ಗುಣ ಮಾಡುತ್ತೆ. ಇದು ಚೆನ್ನಾಗಿ ಪರೀಕ್ಷಿಸಿ ನೋಡಿದ ಔಷಧ, ಸಾವಿರಾರು ಜನರು ಉಪಯೋಗಿಸಿ ಸೌಖ್ಯಹೊಂದಿದಾರೆ. ದೃಷ್ಟಾಂತಕ್ಕಾಗಿ ಈಗತಾನೇ ನಮಗೆ ತಲುಪಿರುವ ಯೋಗ್ಯತಾಪತ್ರಿಕೆಯನ್ನು ಕೆಳಗೆ ಪ್ರಕಟಿಸಿರುತ್ತೇವೆ. ಓದಿನೋಡಿ.

20 ತೊಲಾ ಲೇಹದ ಟಿನ್ ಡಬ್ಬಾಕ್ಕೆ ಕ್ರಯ ರೂ. 1-8-0.

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[82-25] 177 ಜೇನಾ ಬಜಾರ್ ರೋಡ್, ಮದ್ರಾಸು.

ಈ ಯೋಗ್ಯತಾ ಪತ್ರವನ್ನು ಜಬ್ಬಲ್‌ಪುರದ ಸೂಪರಿಂಟೆಂಡಿಂಗ್ ಇಂಜನಿಯರ್ ಆಫೀಸ್ ಕ್ಲಾರ್ಕ್ ಮ|| ಎ ಭೀಮರಾವ್ ನೊಡಲಿಯಾತ್ರ ತಾ. 21-10-1913 ರಲ್ಲಿ ಬರೆಯುತ್ತಾರೆ —"ನಾನು ಬಹುಕಾಲದಿಂದ ಅಸ್ತಮರೋಗದಲ್ಲಿ ನರಳುತ್ತಿದ್ದೆನು. ಅನೇಕ ಹೆಸರುವಾಸಿಯಾದ ಡಾಕ್ಟರುಗಳಿಂದಲೂ ಹಕೀಮರಿಂದಲೂ ಅನೇಕ ಔಷಧಗಳನ್ನು ತೆಗೆದುಕೊಂಡಾಗ್ಯೂ ನನ್ನ ಉಬ್ಬಸರೋಗವು ಹರಿಯಲಿಲ್ಲ. ಕಡೆಗೆ ನಿಮ್ಮ ಶ್ವಾಸಕೇಸರಿ ಲೇಹ್ಯವನ್ನು ಸೇವಿಸಿನೋಡೋಣವೆಂದು ಕುತೂಹಲಪಟ್ಟು ತೆಗೆದುಕೊಂಡೆನು. ನಿಮ್ಮ ಈ ಎರಡು ಟಿನ್ ಲೇಹ್ಯ ಮುಗಿಯುವಷ್ಟರಲ್ಲಿ ನನ್ನ ಭಯಂಕರವಾದ ರೋಗವು ವಾಸಿಯಾಗಿದೆ ಎಂದು ತಿಳಿಸಲು ಆನಂದಪಡುತ್ತೇನೆ. ಈ ನನ್ನ ಅಭಿಲಾಷೆಯನ್ನೂ ಅನುಭವವನ್ನೂ ನೀವು ದಯವಿಟ್ಟು ಪಬ್ಲಿಕ್ ಜನರಿಗೆಲ್ಲಾ ತಿಳಿಸಿ."

ಹೌದು! ಶ್ರೇಷ್ಠವಾದ ವಾಚ್!! ಹೌದು!!

ಸ್ಪ್ರಿಂಗ್ ಇಂಗ್ಲಿಷ್ ಲೀವರ್ ವಾಚು

ಬೊಕ್ಕಬೆಳ್ಳಿಯಂತೆ ಥಳಥಳಿಸುವ, ಎಂದಿಗೂ ಕಪ್ಪಾಗದ ನಾಜೂಕಾದ ಮತ್ತು ಸುಂದರ ನಮೂನೆಯ ವಾಚ್ ಸರಪಳಿ ಸಮೇತ ರೂ 3-4-0 ಮಾತ್ರ.

7 ವರುಷಗಳ ಖಾತ್ರಿಯಾದ ಗ್ಯಾರಂಟಿ.



ಈ ವಾಚ್ ಈಗತಾನೆ ನಾವು ನಮ್ಮ ಸ್ವಂತ ಆರ್ಡರ್‌ನಿಂದ ತರಿಸುತ್ತೇವೆ. ಇದು ಸಾಧಾರಣವಾದ ವಾಚ್‌ಗಳಿಗೆ ಹೋಲಿಕೆ ಎಂದು ತಿಳಿಯಕೂಡದು. ಶ್ರೇಷ್ಠವಾದ ಸ್ಪ್ರಿಂಗ್ ಇಂಗ್ಲಿಷ್ ಲೀವರ್ ಕೆಲಸದಿಂದ ತಯಾರಾದದ್ದು. ಬಹು ನಾಜೂಕಾದ ಯಂತ್ರ ಸಾಧನಗಳಿಂದ ತಯಾರಾದದ್ದು. ಗಂಭೀರವಾದ ಗಂಟೆ ಮತ್ತು ಮಿನಿಟ್ ಮುಳ್ಳುಗಳುಳ್ಳದ್ದು. ಎನಾಮಲ್ ಡಯಲ್ ಉಳ್ಳದ್ದು. ಗೌರ್ನಮೆಂಟ್ ಟೈಂಗೆ ಸರಿಯಾದ ಕಾಲವನ್ನು ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ತೋರಿಸತಕ್ಕದ್ದು. ಆದಕಾರಣವೇ ಇದು ಇಷ್ಟು ಗೌರವವನ್ನು ಹೊಂದಿರುತ್ತೆ.

ಖಾತ್ರಿಯಾದ ವಾಚ್! ನಾಜೂಕಾದ ವಾಚ್!! ಸುಂದರವಾದ ವಾಚ್!!

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ. [77-29]

ವಿಳಾಸ—ಬಿ ಆರ್, ವೆಂಕಟರಮಣ ಅಂಡ್ ಕಂಪೆನಿ,

ನಂ 7, ಕೋಪ್ ವೆಂಕಟಾಚಲೈಯರ್ ಬೀದಿ, ಮದರಾಸು.

WANTED

Several English Compositors. Salary according to qualifications.

Apply to **The Manager, Wesleyan Mission Press, Mysore** [235 1]

ವೃತ್ತಾಂತ ಪತ್ರಿಕೆ.

—o—

ಸನ್ ೧೯೧೩ ನೇ ಇಸವಿ ನವಂಬರ್, ತಾ ೬ ನೇ ಗುರುವಾರ.

ವೈಸ್‌ರಾಯರವರು ದಯಮಾಡಿದ್ದು.

ಹಿಂದುಸ್ಥಾನದ ವೈಸ್‌ರಾಯ್ ಮತ್ತು ಗವರ್ನರ್ ಜನರಲ್‌ರವರಾದ ಲಾರ್ಡ್ ಹಾರ್ಡಿಂಗ್ ಪ್ರಭುಗಳು ಪತ್ನಿ ಸಮೇತರಾಗಿ ನಮ್ಮ ಪ್ರೀತಿಪಾತ್ರರಾದ ಮಹಾರಾಜರವರಿಗೆ ಭೇಟಿಯನ್ನು ದಯಪಾಲಿಸುವ ಉದ್ದಿಶ್ಯ ಮೈಸೂರಿಗೆ ಚಿತ್ತೈಸಿರುತ್ತಾರೆ ನಮ್ಮ ಸೀಮೆಯ ಸಕಲ ಪ್ರಜೆಗಳೂ ಪರಮಸಂತೋಷಿಗಳಾಗಿ ಆ ಪ್ರಭು ದಂಪತಿಗಳಿಗೆ ಸುಸ್ವಾಗತವನ್ನು ಬಯಸುವುದರಲ್ಲಿ ಆನಂದಪಡುವರು. ಯಾಕಂದರೆ ಆ ಪ್ರಭುಗಳ ವಿಷಯದಲ್ಲಿ ನಾವೆಲ್ಲಾ ವಿಶೇಷವಾದ ಗೌರವವನ್ನೂ ಅಪಾರವಾದ ವಿಶ್ವಾಸವನ್ನೂ ಉಳ್ಳವರಾಗಿರುತ್ತೇವೆ.

ಮೈಸೂರು ಸಂಸ್ಥಾನದರಾಜಮನೆತನದವರು ಆರ್ಷೇಯದಿಂದಲೂ ಬ್ರಿಟಿಷ್ ಪ್ರಭುಗಳ ವಿಷಯದಲ್ಲಿ ಅಚಂಚಲವಾದ ಭಕ್ತಿವಿಶ್ವಾಸಗಳನ್ನು ಪಡೆದವರಾಗಿರುತ್ತಾರೆ. ಇಂಗ್ಲಿಷ್ ಪ್ರಭುಗಳು ಮೈಸೂರು ಸೀಮೆಗೂ, ನಮ್ಮ ಯುವರಾಜರವರು ಇಂಗ್ಲಾಂಡ್ ಸೀಮೆಗೂ ಬಂದು ಹೋಗುತ್ತಿರುವುದು ಪರಸ್ಪರವಾದ ಗೌರವವನ್ನೂ ಭಕ್ತಿಪ್ರೀತಿಗಳನ್ನೂ ವೃದ್ಧಿಮಾಡಲು ಅನುಮಾನವಿಲ್ಲ ಈಗ ವೈಸ್‌ರಾಯರವರು ದಯಮಾಡಿರುವುದು ಆ ಪರಸ್ಪರವಾದ ಸಂಬಂಧಗಳನ್ನು ಇನ್ನೂ ಚನ್ನಾಗಿ ಕಾಪಾಡಿದಂತಾಗಿರುತ್ತದೆ

ಲಾರ್ಡ್ ಹಾರ್ಡಿಂಗ್ ಪ್ರಭುವು ಹಿಂದುಸ್ಥಾನದ ಪ್ರಜಾಕೋಟಿಗಳನ್ನು ಪ್ರೀತಿಸುವುದನ್ನೂ, ದೇಶೀಯ ರಾಜರುಗಳ ಯೋಗಕ್ಷೇಮ ಚಿಂತಕರಾಗಿರುವುದನ್ನೂ ಅನೇಕ ಸಂದರ್ಭಗಳಲ್ಲಿ ದೃಷ್ಟಾಂತಪಡಿಸಿರುತ್ತಾರೆ ಅವರು ಕಷ್ಟವಾದ ವಿಚಾರಗಳನ್ನು ಕುರಿತು ಚರ್ಚಿಸಿ ತೀರ್ಮಾನ ಮಾಡುವುದಕ್ಕಾಗಿ ನಮ್ಮ ಸೀಮೆಗೆ ದಯಮಾಡುವುದಿಲ್ಲ, ನಮ್ಮ ಮಹಾರಾಜರವರ ವಿಷಯದಲ್ಲೂ ನಮ್ಮ ಸೀಮೆಯ ಮೇಲೂ ಇಟ್ಟುಕೊಂಡಿರುವ ಪ್ರೀತಿ ಗೌರವಗಳನ್ನು ಪ್ರಕಾಶಪಡಿಸಬೇಕೆಂಬ ಉತ್ಸಾಹದಿಂದಲೇ ಅವರು ಚಿತ್ತೈಸಿರುವರು. ನಮ್ಮ ಪ್ರಭುಗಳಿಗೂ ಸಾರ್ವಭೌಮ ಸರ್ಕಾರದವರಿಗೂ ಇರುವ ಸಂಬಂಧವು ಕೇವಲ ಅನ್ಯೋನ್ಯವಾಗಿರುವುದು ವೈಸ್‌ರಾಯ್ ಪ್ರಭುಗಳು ಆಗಿಂದಾಗ್ಗೆ ಮೈಸೂರಿಗೂ, ನಮ್ಮ ಮಹಾರಾಜರವರು ದೆಹಲಿಗೂ ಬಂದು ಹೋಗುತ್ತಿರುವುದು ಅನ್ಯೋನ್ಯ ವಾತ್ಸಲ್ಯವನ್ನು ಹುಟ್ಟಿಸಿ ವೃದ್ಧಿಮಾಡುತ್ತದೆ

ವೈಸ್‌ರಾಯ್ ದಂಪತಿಗಳು ನಮ್ಮ ಸಂಸ್ಥಾನದಲ್ಲಿ ಪರಿಪೂರ್ಣವಾದ ಆನಂದವನ್ನೂ ಸಂತೋಷವನ್ನೂ ಪಡೆದು ದಯಮಾಡುವರೆಂದು ನಂಬುತ್ತೇವೆ ಈ ಸಂದರ್ಭದಲ್ಲಿ ಅವರು ಅಭಿವೃದ್ಧಿಗೆ ಬರುತ್ತಿರುವ ನಮ್ಮ ರಾಜಧಾನಿಯನ್ನೂ ಬೆಂಗಳೂರು ನಗರವನ್ನೂ ಪರಾಂಬರಿಸುವರು ಇದಲ್ಲದೆ ಶಿವಸಮುದ್ರವೆಂಬ ಒಂಗಲಿನಲ್ಲಿ ಕಾಡಾನೆಗಳನ್ನು ಹಿಡಿಯುವ ಕ್ರಮಗಳೂ, ಕೋಲಾರದಲ್ಲಿ ವಿದ್ಯುಚ್ಛಕ್ತಿಯ ಪ್ರಯೋಗದಿಂದ ಗಣಿಗಳ ಚಿನ್ನವನ್ನು ತೆಗೆಯುವ ಆಶ್ಚರ್ಯ ವಿಧಾನಗಳೂ ಅವರಿಗೆ ಸಾಕ್ಷಾತ್ತಾಗಿ ತೋರಿಸಲ್ಪಡುತ್ತವೆ ಮೊದಲನೆಯದು ಅನಾಗರಿಕವಾದದ್ದಾಗಿಯೂ ಕಾಲಾನುಗುಣ್ಯವಾಗಿ ಅಭಿವೃದ್ಧಿಹೊಂದಲಾರದ್ದಾಗಿಯೂ ಇರುತ್ತದೆ, ಎರಡನೆಯದಾದರೋ ಈಗಿನ ಬುದ್ಧಿಕುಶಲತೆಗೆ ಅನುಗುಣವಾಗಿ ಐಶ್ವರ್ಯವನ್ನು ವೃದ್ಧಿಪಡಿಸುವುದಾಗಿದೆ

ವೈಸ್‌ರಾಯ್ ದಂಪತಿಗಳು ನಮ್ಮ ಸಂಸ್ಥಾನದಲ್ಲಿ ವಿಶೇಷ ಕಾಲ ಇರತಕ್ಕವರಾಗಿಲ್ಲ ಆದರೂ ಅವರಿಗೂ, ಅವರ ಸಂಗಡ ಬಂದಿರುವ ಮಹನೀಯರಿಗೂ ನಮ್ಮ ಸೀಮೆಯಲ್ಲಿ ಇರುವಷ್ಟು ದಿನಗಳೂ ವಿಹಾರವಾಗಿಯೂ ಸಂತೋಷಕರವಾಗಿಯೂ ಪರಿಣಮಿಸುವವೆಂದು ನಂಬಿ ನಿರೀಕ್ಷಿಸುತ್ತೇವೆ.

ನೈಮಿತ್ತಿಕ ವಿಷಯಗಳು

ವೆಸ್ಲಿಯನ್ ಮಿಷನ್ ಸಂಘವು ತನ್ನ ಶತಮಾನೋತ್ಸವವನ್ನು ಈಗತಾನೇ ನೆರವೇರಿಸಿತೆಂದು ನಮ್ಮ ವಾಚಕರಿಗೆಲ್ಲಾ ತಿಳಿದಿದೆಯಷ್ಟೆ. ಪ್ರಪಂಚದ ಎಲ್ಲಾ ಭಾಗಗಳಿಂದಲೂ ಆ ಸಂಘದ ಪ್ರತಿನಿಧಿಗಳು ಲಂಡನ್ ಪಟ್ಟಣಕ್ಕೆ ಹೋಗಿ ಪ್ರಖ್ಯಾತವಾದ ಆಲ್ಬರ್ಟ್ ಹಾಲ್ ಎಂಬ ದಿವ್ಯ ಮಂದಿರದಲ್ಲಿ ಅಪೂರ್ವವಾದ ಮಹಾಸಭೆಯನ್ನು ನಡಿಸಿದಾಗ ಮಹಾರಾಜಾ ಚಕ್ರವರ್ತಿಯವರ ಕೃಪಾಪೂರಿತವಾದ ಮುಂದಿನ ವಾಕ್ಯಗಳು ವೆಸ್ಲಿಯನ್ ಮಿಷನ್ ಸಂಘದ ಮಹಾಜನರಿಗೆ ಓದಿ ಹೇಳಲಾಯಿತು —

"ಲೋಕದ ಎಲ್ಲಾ ಕಡೆಗಳಿಂದಲೂ ಪ್ರತಿನಿಧಿಗಳು ಕೂಡಿ ಬಂದಿರುವಂಥಾ, ಈಗ ಶತಮಾನದ ಮಹೋತ್ಸವವನ್ನು ಆಚರಿಸುತ್ತಲಿರುವಂಥಾ ವೆಸ್ಲಿಯನ್ ಮೆಥೊಡಿಸ್ಟ್ ಮಿಷನರಿ ಸೊಸೈಟಿಯ ಹೆಸರಿನಲ್ಲಿ ನೀವುಗಳು ನಮ್ಮ ರಾಜಭಕ್ತಿ ಪ್ರೀತಿ ವಿಶ್ವಾಸಗಳನ್ನು ಪ್ರಕಾಶಪಡಿಸುವ ಸಮಾಚಾರವನ್ನು ಕಳುಹಿಸಿಕೊಟ್ಟುದಕ್ಕಾಗಿ ದೊರೆಗಳವರು ತಮ್ಮ ಹೃತ್ಪೂರ್ವಕವಾದ ವಂದನೆಗಳನ್ನು ನಿಮಗಳಿಗೆ ವ್ಯಕ್ತಪಡಿಸಬೇಕೆಂದು ನನಗೆ ಆಜ್ಞೆಯನ್ನು ದಯಪಾಲಿಸಿರುತ್ತಾರೆ ಈ ಸೊಸೈಟಿಯವರು ಕ್ರೈಸ್ತ ಮತದ ಸದುದ್ದೇಶಗಳನ್ನು ಸಿದ್ಧಿಗೆ ತರುವುದಕ್ಕಾಗಿ ಎಲ್ಲಾ ಕಡೆಗಳಲ್ಲಿಯೂ ನಡಿಸುತ್ತಾ ಬಂದಿರುವ ಮತಸಂಬಂಧವಾದ ಕಾರ್ಯಗಳನ್ನೂ ಧರ್ಮಕಾರ್ಯಗಳನ್ನೂ ದೊರೆಗಳವರು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು ಕಳೆದ ನೂರು ವರುಷಗಳ ನಿಮ್ಮ ಕೆಲಸದಲ್ಲಿ ನೀವುಗಳು ಹೊಂದಿಕೊಂಡಿರುವ ಅಮೋಘವಾದ ಪ್ರತಿಫಲಗಳಿಗಾಗಿ ಅವರುಗಳು ನಿಮಗಳಿಗೆ ಅಭಿನಂದನಗಳನ್ನು ಸಲ್ಲಿಸುತ್ತಾರೆ —ಸ್ಟಾಂಫೋರ್ಡ್‌ಹಾಂ."

* * * * *

ಕೆಲವು ವಾರಗಳಿಂದ ನಮ್ಮ ವಾಚಕರಿಗೆ ಓದಿಕೊಳ್ಳಲು ವರ್ತಮಾನಗಳು ಕಡಮೆಯಾಗಬಾರದೆಂಬ ಉದ್ದೇಶದಿಂದ ನಾವು ನಮ್ಮ ಪತ್ರಿಕೆಯಲ್ಲಿ ಕೆಲವು ಪುಟಗಳನ್ನು ಹೆಚ್ಚುಮಾಡಿ ಪ್ರಕಟಿಸುತ್ತಾ ಬಂದಿದ್ದೇವೆ ಈ ವರುಷ ಪ್ರಜಾಪ್ರತಿನಿಧಿ ಸಭೆಯಲ್ಲಿ ನಡೆದ ಕಲವು ಮುಖ್ಯ ವಿಚಾರಗಳ ಚರ್ಚೆಗಳನ್ನು ದೀರ್ಘವಾಗಿ ಬರೆದು ಪ್ರಕಟಿಸಿದೆವು. ಗೌರವವುಳ್ಳ ನಮ್ಮ ಸಹೋದರ ಪತ್ರಿಕೆಯಾದ "ಒಕ್ಕಲಿಗರ ಪತ್ರಿಕೆ" ಯ ಸಂಪಾದಕರು ಆ ಚರ್ಚೆಗಳನ್ನು ಮೊದಲಿನಿಂದ ಕಡೆಯ ತನಕ ಎತ್ತಿ ತಮ್ಮ ಪತ್ರಿಕೆಯಲ್ಲಿ ಹಾಕಿ, ಅದೆಲ್ಲಾ ಯಾರಿಂದ ಬರೆಯಲ್ಪಟ್ಟಿತೆಂಬುವುದನ್ನು ಒಪ್ಪಿ ತಿಳಿಸದೆಹೋದರು ಇದನ್ನು ನೋಡಿದಾಗ ನಮಗೆ ಆಶ್ಚರ್ಯವಾಯಿತು ನಮ್ಮ ವಾಚಕರಿಗೆ ಸಮಾಚಾರಗಳನ್ನು ಕೊಡಿದಮಟ್ಟಿಗೂ ಹೆಚ್ಚಾಗಿ ಬರೆದು ಪ್ರಕಟಿಸಬೇಕೆಂದು ಕುತೂಹಲಪಡುತ್ತೇವೆ ಇದಕ್ಕೋಸ್ಕರ ನಾವು ಯಾವಾಗಲೂ ಪತ್ರಿಕೆಯ ಪುಟಗಳನ್ನು ಹೆಚ್ಚಿಸಬೇಕೆಂದು ಯೋಚಿಸಿರುವೆವು ಆದರೆ ನಮ್ಮ ಪತ್ರಿಕೆಯು ವಿಶೇಷವಾಗಿ ಬಟವಾಡೆಯಾಗುತ್ತಿರುವುದರಿಂದ ನಮಗೆ ಹೆಚ್ಚು ಖರ್ಚು ಬೀಳುತ್ತದೆ ಆದರ ಚಂದಾ ಕ್ರಮವನ್ನು ಹೆಚ್ಚುಮಾಡುವುದರಲ್ಲಿ ನಮಗೆ ಅಭಿಲಾಷೆ ಇಲ್ಲ ಈಗ ನಮ್ಮ ವಾಚಕರು ಕೊಡುವ ಚಂದಾ ಮೊಬಲಗಿನಲ್ಲಿ ಕಾಗದಕ್ಕೂ ಪ್ರಿಂಟಿನ ಖರ್ಚಿಗೂ ಸಾಲದು ಆಗಿಂದಾಗ್ಗೆ ವರ್ತಮಾನಗಳನ್ನು ಬರೆದು ಕಳುಹಿಸುವುದರ ಮೂಲಕ ನಮಗೆ ಸಹಾಯಮಾಡುತ್ತಿರುವ ನಮ್ಮ ಅನೇಕರಾದ ಬಾತ್ಮಿದಾರರುಗಳನ್ನೆಲ್ಲಾ ಈ ಮೂಲಕ ಕೃತಜ್ಞತಾಪೂರ್ವಕವಾಗಿ ವಂದಿಸುವೆವು

ಒಂದು ಚಿಕ್ಕ ಕಥೆ

ಇಟಲೀ ದೇಶದಲ್ಲಿ ಮುಂದೆ ಬರುವ ಕಥೆಯು ಬಹು ಪೂರ್ವಕಾಲದಿಂದ ರೂಢಿಯಲ್ಲಿದೆ ಅದು ನಮ್ಮ ವಾಚಕರಿಗೂ ಸಂತೋಷಪ್ರದವಾಗಿರುವದೆಂದು ನಂಬಿ ಇಲ್ಲಿ ಪ್ರಕಟಿಸುವೆವು ಅದೇನಂದರೆ,—

ಒಬ್ಬ ಅಂಗನಾಮಣಿಯ ಹತ್ತಿರ ಒಂದು ವಜ್ರವಿದ್ದಿತು ಅದು ಬಹು ಶೋಭಾಯಮಾನವಾಗಿ ಅಪರೂಪದ ಒಡವೆಯಾಗಿದ್ದುದರಿಂದ ಆ ತರುಣಿಯು ಅದನ್ನು ಅತಿಕಪಟತೆಯುಳ್ಳದಂದು ಬಹಳ ಭದ್ರವಾಗಿ ಕಾಪಾಡಿಕೊಂಡಿದ್ದಳು. ಆದರೆ ಅವಳಿಗೆ ಐದು ಮಂದಿ ಸಹೋದರರಿದ್ದರು ಅವರಲ್ಲಿ ಪ್ರತಿಯೊಬ್ಬನು ಆ ಅಮೂಲ್ಯವಾದ ವಜ್ರವನ್ನು ಅಪಹರಿಸಬೇಕೆಂದು ಯತ್ನಿಸಿ ಅದನ್ನು ಕಸುಕೊಳ್ಳುವದಕ್ಕೆ ತಮ್ಮ ಬುದ್ಧಿಗೆ ಅರಿದ ಸಕಲ ತಂತ್ರೋಪಾಯಗಳನ್ನು ಮಾಡುತ್ತಿದ್ದರು ಹೇಗಂದರೆ—ಮೊದಲನೆಯ ಅಣ್ಣನು ಅವಳ ಬಳಿಗೆ ಬಂದು- ಅಮ್ಮಣ್ಣೀ, ನೋಡು ನಾನು ಸಂಗೀತಗಾರನಷ್ಟೆ ಈ ವೀಣೆಯನ್ನು ನುಡಿಸಿಕೊಳ್ಳುತ್ತಾ ಬಹೋಪ್ಪೇ ಮನೋಹರವಾದ ಹಾಡುಗಳನ್ನು ಹೇಳುತ್ತೇನೆ ನನಗೆ ಆ ವಜ್ರವನ್ನು ನೀನು ಕೊಡುವದಿಲ್ಲವೆ? ಎಂದು ಪ್ರಾರ್ಥಿಸಿದನು ಅವನ್ನು ಕೇಳಿ ಅವನ ಸಂಗೀತದ ಆನಂದಕ್ಕೆ ಬೆರಗಾದರು ಸಂಗೀತದ ಸಂತೋಷವು ಕ್ಷಣಿಕವಾದುದೆಂದು—ಅಣ್ಣಯ್ಯಾ, ನಿನ್ನ ಸಂಗೀತವು ಬಹು ಇಂಪಾಗಿದೆ, ಆದರೂ ಕ್ಷಣಮಾತ್ರಕ್ಕೆ ನನ್ನನ್ನು ಪರವಶಮಾಡುವ ಸಂಗೀತ ಸ್ವರಕ್ಕೆ ನನ್ನ ಅಮೂಲ್ಯವಾದ ವಜ್ರವು ಈಡಲ್ಲವೆಂದು ಅವನನ್ನು ಕಳುಹಿಸಿಬಿಟ್ಟಳು ಎರಡನೆಯ ಅಣ್ಣನು ಅವಳನ್ನು ನೋಡಿ—ತಂಗೀ, ನಾನು ಚಿತ್ರಗಾರನು ಈ ರಮಣೀಯವಾದ ಚಿತ್ರವನ್ನು ಬಹು ಪ್ರಯತ್ನದಿಂದ ನಿನ್ನನ್ನು ಮೆಚ್ಚಿಸಬೇಕೆಂದು ಈಗತಾನೇ ಮುಗಿಸಿರುವೆನು ಇದನ್ನು ಸ್ವೀಕರಿಸಿ ಆ ವಜ್ರವನ್ನು ನನ್ನ ಹಸ್ತಕ್ಕೆ ಬಹುಮಾನವಾಗಿ ಕೊಡಲಾರೆಯಾ? ಎಂದು ಕೇಳಿದನು ಅವಳು ಅದನ್ನು ನೋಡಿ—ಇದು ಬಹು ಸೊಗಸಾಗಿದೆ ಆದರೂ ಇದರ ಕಾಂತಿಯೂ ಬಣ್ಣವೂ ಮಾಸಿಹೋಗುವವೆಂದು ಅವನನ್ನು ಕಳುಹಿಸಿಬಿಟ್ಟಳು ಮೂರನೆಯ ಅಣ್ಣನು ಅವಳನ್ನು ಸಮೀಪಿಸಿ—ತಂಗೀ! ನೋಡು, ಸುಂದರಿಯೇ, ನಾನು ವರ್ತಕನು ನಾನು ಬಹು ದೂರ ಪ್ರಯಾಣ ಮಾಡಿ ನಿನಗಾಗಿ ಒಳ್ಳೊಳ್ಳೆ ಸುಗಂಧ ದ್ರವ್ಯಗಳನ್ನು ಹಡಗುಗಳ ತುಂಬ ತಂದಿದ್ದೇನೆ ನಾನು ನಿನ್ನ ಅನುಗ್ರಹಕ್ಕೆ ಪಾತ್ರನಲ್ಲವೇ? ಅಂದನು ಅವಳು ಅದಕ್ಕೆ ಕಾಲಕ್ರಮೇಣ ಸುಗಂಧ ದ್ರವ್ಯಗಳು ತಮ್ಮ ಪರಿಮಳವನ್ನು ಹೋಗಲಾಡಿಸಿಕೊಳ್ಳುತ್ತವೆಂದು ಪ್ರತ್ಯುತ್ತರ ಹೇಳಿದಳು ನಾಲ್ಕನೇಯವನು ಬಂದು—ನಾನು ಪಾಕಶಾಸ್ತ್ರಿ ಅರಸುಗಳು ಮೆಚ್ಚುವ ವಿಚಿತ್ರವಾದ ಭಕ್ಷ್ಯಭೋಜ್ಯಗಳನ್ನು ಮಾಡಿ ತಂದಿದ್ದೇನೆ ನೀನು ನೋಡು ಎಂದನು ಅದಕ್ಕವಳು—ನಿಜವೇ, ಆದರೇನು? ಅದರ ಮಾಧುರ್ಯವು ನಾಲಗೆಯ ಮೇಲಿರುವವರೆಗೂ ಮಾತ್ರವಲ್ಲವೇ? ಎಂದು ಅವನನ್ನು ತಿರಸ್ಕರಿಸಿದಳು ಆಗ ಐದನೆಯ ಅಣ್ಣನು ಬಂದು—ತರುಣಿಯೇ, ನಾನು ಪ್ರಸಿದ್ಧನಾದ ಶಿಲ್ಪಿಯು. ನಾನು ಸಂಗಮವರಿ ಕಲ್ಲಿನಿಂದ ನಿನ್ನ ವಾಸಕ್ಕೆ ಅತ್ಯುತ್ಕೃಷ್ಟವಾದ ಅರಮನೆಯನ್ನು ಕಟ್ಟಿರುವೆನು ನೋಡು ಎಂದು ಕರೆಯಲು, ಅವಳು ಅದರ ಸೌಂದರ್ಯಕ್ಕೆ ಮೆಚ್ಚಿದರೂ—ಇದು ಸಹ ಕಾಲಾಂತರದಲ್ಲಿ ಶಿಥಿಲವಾದೀತು. ನನ್ನ ವಜ್ರವು ಸದಾ ಸ್ಥಿರವಾಗಿ ನಿಲ್ಲುವದು ಎಂದು ಅತನನ್ನು ಧಿಕ್ಕರಿಸಿದಳು. ಕಡೆಗೆ ಒಬ್ಬ ರಾಜಪುತ್ರನು ಅವಳ ಬಳಿಗೆ ಬಂದು ಆ ವಜ್ರವನ್ನು ಕಾಂಕ್ಷಿಸಿ—ರಮಣೀಮಣಿ, ನನಗೆ ನಿನ್ನ ವಜ್ರವು ಅಗತ್ಯವಾಗಿಬೇಕು ಆದರೆ ನನ್ನ ಅಷ್ಟೈಶ್ವರ್ಯವು ನಿನ್ನ ವಜ್ರಕ್ಕೆ ಸಮನಲ್ಲ ನನ್ನನ್ನೆ ನಿನಗೆ ಸಮರ್ಪಿಸುತ್ತೇನೆ ನನ್ನನ್ನು ಅಂಗೀಕರಿಸೆಂದು ವಿಜ್ಞಾಪಿಸಲು, ಅವಳು ಅತ್ಯಂತ ಸಂತೋಷದಿಂದ ಅವನನ್ನು ಸ್ವೀಕರಿಸಿದಳು.

ಈ ಕಥೆಯ ತಾತ್ಪರ್ಯವೇನು? ಆ ಹುಡುಗಿಯಲ್ಲಿದ್ದ ವಜ್ರವ್ಯಾವುದು? ಅವಳ ಹೃತ್ಕಮಲವೇ ಅಲ್ಲವೆ? ಅದಕ್ಕಿಂತ ಅಮೂಲ್ಯವಾದ ವಜ್ರವೇ ಇಲ್ಲ ಅವಳು ತನ್ನನ್ನೂ ತನ್ನ ಪ್ರೀತಿಯೆಂಬ ರತ್ನವನ್ನೂ ಸಕಲ ವಜ್ರ ವೈಢೂರ್ಯಗಳಿಗಿಂತ ಶ್ರೇಷ್ಠವಾದುದೆಂದು ಭಾವಿಸಿದ್ದು ನ್ಯಾಯವಾಗಿದೆ ನಮ್ಮೊಳಗೊಬ್ಬರಲ್ಲಿ ಅಂತಹ ವಜ್ರವಿದೆ ನಮ್ಮ ಮನಸ್ಸು ಹೃದಯ ಇವೇ ಆ ವಜ್ರಗಳು. ಇವುಗಳನ್ನು ಯಾರಿಗೆ ಸಮರ್ಪಿಸೋಣ? ಯಾರು ತಾನೇ ನಮ್ಮ ಹೃದಯಕ್ಕೆ ತಕ್ಕ ಕಾಂತರು?

ಆ ತರುಣಿಗೆ ಐವರು ಸಹೋದರರಿದ್ದರು ಸಂಗೀತಗಾರನೆಂಬ ಶ್ರೋತ್ರೇಂದ್ರಿಯ, ಚಿತ್ರಗಾರನೆಂಬ ನೇತ್ರೇಂದ್ರಿಯ; ಪರಿಮಳ ದ್ರವ್ಯಗಳನ್ನು ಕಾಂಕ್ಷಿಸುವ ಘ್ರಾಣೇಂದ್ರಿಯ, ರುಚಿಕರವಾದ ಭಕ್ಷ್ಯಗಳಿಂದ ಮನವನ್ನೊಲಿಸಬೇಕೆಂದು ಯತ್ನಿಸುವ ಜಿಹ್ವೇಂದ್ರಿಯ, ಮತ್ತು ತ್ವಗಿಂದ್ರಿಯ ಇವುಗಳ ಮೂಲಕ ಪ್ರಪಂಚವು ಅವಳ ಹೃದಯವನ್ನು ತನ್ನ ಸ್ವಾಧೀನ ಮಾಡಿಕೊಳ್ಳಬೇಕೆಂದು ಅಪೇಕ್ಷಿಸುತ್ತದೆ ಪಂಚೇಂದ್ರಿಯಗಳು ನಮಗೆ ಕೊಡುವ ಸ್ವಲ್ಪ ಹೊತ್ತಿನ ಸುಖಕ್ಕೆ ಮರುಳಾಗಿ ನಮ್ಮನ್ನೂ ನಮ್ಮ ಪ್ರೀಯರನ್ನೂ ಪ್ರಪಂಚದ ದುರಾಶೆಗಳಿಗೆ ವಿಕ್ರಯಿಸುವುದೇ? ಪ್ರಪಂಚದ ಭೋಗಗಳು ಅನಿತ್ಯವಾದವು. ಮತ್ತು ಅತೃಪ್ತಿಕರವಾದವು, ಆದರೆ ಆ ಸುಂದರಿಯ ಹೃದಯವೆಂಬ ವಜ್ರವನ್ನು ಒಲಿಸಿ ವರಿಸಿದ ರಾಜಕುಮಾರನು ತನ್ನ ಅಷ್ಟೈಶ್ವರ್ಯದಿಂದ ಅವಳನ್ನು ಬೆರಗುಮಾಡದೆ ಅವಳ ಹೃದಯದ ಪ್ರೀತಿಯನ್ನು ಸಂಪಾದಿಸಿಕೊಳ್ಳುವದಕ್ಕೆ ತನ್ನನ್ನೆ ಅವಳಿಗೆ ಸಮರ್ಪಿಸಿದನಷ್ಟೆ ಇದೀಗ ಬಹುಮುಖ್ಯ ರಹಸ್ಯ ಮತ್ತು ನಮ್ಮ ಹೃದಯದ ಒಲುಮೆಗೆ ಯಾರು ತಕ್ಕವನು? ನಮ್ಮ ಶರೀರಾಧೀನಸ್ವಭಾವಕ್ಕೆ ಒಳಪಟ್ಟು ಪಂಚೇಂದ್ರಿಯಗಳ ಗಾಳಕ್ಕೆ ಸಿಕ್ಕಿ ಪ್ರಪಂಚಕ್ಕೆ ನಮ್ಮನ್ನು ಅಧೀನಪಡಿಸಿಕೊಳ್ಳುವದಕ್ಕೆ ಒಪ್ಪಲೇ ಬಾರದು. ನಮ್ಮ ಹೃದಯಗಳು ಅತ್ಯಂತ ಅಮೂಲ್ಯವಾದವುಗಳು ಪ್ರಪಂಚವು ಅವಕ್ಕೆ ತೃಪ್ತಿಯನ್ನು ನೀಡಲಾರದು

ಹಾಗಾದರೆ ನಮ್ಮ ಹೃದಯಕ್ಕೆ ತಕ್ಕ ಕರ್ತನು ಯಾರು! ದೇವರೇ ಅಲ್ಲವೆ? ಅತನೊಬ್ಬನೇ ಅದನ್ನು ಸ್ವೀಕರಿಸುವದಕ್ಕೆ ಯೋಗ್ಯನು ಅತನು ನಮ್ಮ ಪ್ರೀತಿಯನ್ನು ಸಂಪಾದಿಸಿಕೊಳ್ಳುವದಕ್ಕೆ ಏನು ಮಾಡಿದನು? ಅತನು ನಮ್ಮನ್ನು ಪ್ರೀತಿಸಿ ನಮಗೋಸ್ಕರವಾಗಿ ತನ್ನನ್ನೇ ಬಲಿಯಾಗಿ ಅರ್ಪಿಸಿದನು ಅತನು ಮನುಷ್ಯರೂಪವನ್ನೂ ಸ್ವಭಾವವನ್ನೂ ಹೊಂದಿ, ನಮ್ಮನ್ನು ಪಾಪವೆಂಬ [illegible] ಕಾಯದ [illegible] ದಿಂದ ಬಿಡುಗಡೆಮಾಡಿಕೊಂಡನು. ಪ್ರಪಂಚದ ಭೋಗಗಳಿಗೆ [illegible] ಶರೀರಾಧೀನಸ್ವಭಾವಕ್ಕೆ ವಶವರ್ತಿಗಳಾಗಿ ನಮ್ಮನ್ನು [illegible] ಭೋಗವೆಂಬ ಪಾಪಕ್ಕೆ ಮಾರಿಕೊಂಡಿರುವೆವು [illegible] ಕ್ರಿಸ್ತನೆಂಬ ನಾಮಧೇಯದಿಂದ ಲೋಕಕ್ಕೆ ಅವತರಿಸಿ ಬಂದು, ನಮ್ಮನ್ನು [illegible] ಬಂಧನದಿಂದ ಬಿಡಿಸುವುದಕ್ಕೆ [illegible] ಮೇಲೆ ಮರಣವನ್ನು ಹೊಂದಿದನು. [illegible] ಮನ[illegible] ಹೃದಯಗಳನ್ನು [illegible] ಸುವದಿಲ್ಲವೆಂದು ಯಾರಾದರೂ [illegible] ನ್ಯಾಯವೇ?

ವೈಸ್‌ರಾಯರವರ ಆಗಮನವು

[illegible] 10 ಕ್ಕೆ [illegible] ರಾಜಧಾನಿಯ ರೈಲ್ವೆ ಸ್ಟೇಷನ್ ತಲಪುವರು ಪ್ಲಾಟ್‌ಫಾರಮಿನಲ್ಲಿ ಮಹಾರಾಜರವರು ರಾಜವರ್ಗದವರೊಡನೆಯೂ, ಮುಖ್ಯರಾದ ಅಧಿಕಾರಿಗಳು ಮತ್ತು ದೊಡ್ಡ ಮನುಷ್ಯರುಗಳೊಡನೆಯೂ ವೈಸ್‌ರಾಯ್ [illegible] ಎದುರುಗೊಂಡು ಅವರುಗಳಿಗೆ ಸುಸ್ವಾಗತವನ್ನು ಬಯಸುತ್ತಾರೆ ಮಹಾರಾಜರವರು ವೈಸ್‌ರಾಯರವರ [illegible] ಕುಳಿತು ರೈಲ್ವೆ ಸ್ಟೇಷನ್ನಿನಿಂದ ಹೊರಟು ಸಮಸ್ತ ಖಾಸಾ ಮರ್ಯಾದೆಗಳೊಡನೆ ಸಯ್ಯಾಜಿರಾವ್ ರಸ್ತೆಯಲ್ಲಿ ಹಾಯ್ದು [illegible] ಪ್ರವೇಶಿಸಿ ಪೂರ್ವ ಬಾಗಿಲಿನಿಂದ ದೊಡ್ಡಕೆರೆ ಏರಿಯ ಉತ್ತರಕ್ಕೆ ಹೋಗಿ ಗವರ್ನ್‌ಮೆಂಟ್ ಹೌಸಿಗೆ ದಯಮಾಡಿ, ವೈಸ್‌ರಾಯಿಯವರನ್ನು ಅಲ್ಲಿ ಇಳಿಸಿ ವಾಪಸು ಅರಮನೆಗೆ ಚಿತ್ತೈಸುತ್ತಾರೆ ಈ ಮೆರವಣಿಗೆ ಬರುವ ರಸ್ತೆಯ ಉಭಯ ಪಾರ್ಶ್ವಗಳಲ್ಲಿಯೂ ರಾಜಧಾನಿಯ ಸುಮಾರು 176 ಪಾಠಶಾಲೆಗಳ 10,000 ಬಾಲಕ ಬಾಲಕಿಯರು ವೈಸ್‌ರಾಯಿಯವರ ದರ್ಶನವೊಂದಿ ಜಯಘೋಷಮಾಡುತ್ತಾರೆ. ಆಸ್ಪತ್ರೆಯ ಎದುರಿಗೆ ಹಾಕಿರುವ ಭುವನೇಶ್ವರಿಯಲ್ಲಿ ಪಂಡಿತರೂ, ಮೌಲ್ವಿಗಳೂ, ಕೆಲವು ದೊಡ್ಡಮನುಷ್ಯರೂ ಕಾದಿದ್ದು ವೈಸ್‌ರಾಯಿರವರಿಗೆ ಅಭಿವಾದನಗಳನ್ನು ಅರಿಕೆಮಾಡಿದರು ಕರ್ಜನ್ ಪಾರ್ಕಿನಲ್ಲಿ ಹಾಕಿರುವ ಭುವನೇಶ್ವರಿಯಲ್ಲಿ ಪುರಪ್ರಮುಖರೂ ದೊಡ್ಡಮನುಷ್ಯರೂ ಕಾದಿದ್ದು ವೈಸ್‌ರಾಯಿರವರಿಗೆ ಸುಸ್ವಾಗತ ಸೂಚಕವಾದ ಅಡ್ರೆಸ್ಸನ್ನು ಓದಿ ದಿವ್ಯವಾದ ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸುತ್ತಾರೆ ಪ್ರಭುಗಳು ಅಲ್ಲಿ ಸಮಯೋಚಿತವಾದ ಪ್ರತ್ಯುತ್ತರವನ್ನು ದಯಪಾಲಿಸುತ್ತಾರೆ

11 ಗಂಟೆಗೆ ಅರಮನೆಯಿಂದ ಸರ್ದಾರರೂ ಅಧಿಕಾರಿಗಳೂ ಗವರ್ನ್‌ಮೆಂಟ್ ಹೌಸಿಗೆ ಹೋಗಿ ವೈಸ್‌ರಾಯಿಯವರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬರುವರು ತರುವಾಯ 1 ಗಂಟೆಗೆ ನಮ್ಮ ಮಹಾರಾಜರವರ ಭೇಟಿಯೂ 5½ ಗಂಟೆಗೆ ವೈಸ್‌ರಾಯರವರ ಮರುಭೇಟಿಯೂ ಜರುಗುವುವು ರಾತ್ರಿ 8½ ಗಂಟೆಗೆ ವೈಸ್‌ರಾಯರವರಿಗೆ ಔತಣ ನಡೆದು, ನೇತ್ರಾನಂದಕರವಾಗಿ ಚಿತ್ರವಿಚಿತ್ರವಾದ ಬಾಣಬಿರುಸುಗಳು ಆಗುತ್ತವೆ

ತಾ. 7 ನೇ ಶುಕ್ರವಾರ—ನಾಳೆ ಬೆಳಿಗ್ಗೆ ವೈಸ್‌ರಾಯಿಯವರು [illegible] ಮಾಡಿ ಖಾಸಾ ತಬೇಲೆಯನ್ನು ಪರಾಂಬರಿಸುತ್ತಾರೆ ಭೋಜನಾನಂತರ 11 ಗಂಟೆಗೆ ಕೊಡಗಿನ ಪ್ರತಿನಿಧಿಗಳ ಮತ್ತು ಪ್ಲಾಂಟರುಗಳ ಅಡ್ರಸ್ಸುಗಳನ್ನು ಗವರ್ನ್‌ಮೆಂಟ್ ಹೌಸಿನಲ್ಲಿ ಅಂಗೀಕರಿಸಿ ಪ್ರತ್ಯುತ್ತರಗಳನ್ನು ದಯಪಾಲಿಸುವರು ಸಾಯಂಕಾಲ ಖಾಸಾ ಬಂಗಲೆಗೆ ಚಿತ್ತೈಸಿ ಅರಮನೆಯ ಮೃಗಾಲಯವನ್ನು ಪರಾಂಬರಿಸುತ್ತಾರೆ ಮಹಾಮಾತೃಶ್ರೀಯವರ ಭೇಟಿಯೂ, ಲೇಡಿ ಹಾರ್ಡಿಂಗ್ ರವರ ಮರುಭೇಟಿಯೂ ಜರುಗುವವು ರಾತ್ರಿ ಪಟ್ಟಣದಲ್ಲಿ ದೀಪೋತ್ಸವವನ್ನು ನೋಡಿಕೊಂಡು ವೈಸ್‌ರಾಯಿಯವರು ಅರಮನೆಗೆ ದಯಮಾಡಿ ಅಲ್ಲಿ ಸಂಗೀತವನ್ನು ಕೇಳುವರು

ತಾ 8 ನೇ ಶನಿವಾರ ಬೆಳಗ್ಗೆ ವೈಸ್‌ರಾಯರವರು ಚಾಮುಂಡಿಬೆಟ್ಟಕ್ಕೆ ದಯಮಾಡಿ ಮೈಸೂರು ಸಂಸ್ಥಾನದ ಮತ್ತೂ ಅರಮನೆಯ ಸೈನ್ಯಗಳನ್ನೆಲ್ಲಾ ಪರಾಂಬರಿಸಿ ಕವಾಯತು ಮಾಡಿಸುವರು ಮಧ್ಯಾಹ್ನ ತೋಟದಲ್ಲಿ ಶ್ರೀ

ಪಟ್ಟಣಕ್ಕೆ, ಅಲ್ಲಿಂದ ಸೋಮನಾಥಪುರಕ್ಕೆ ದಯಮಾಡಿ ರಾತ್ರಿ ಭೋಜನಕ್ಕೆ ರಾಜಧಾನಿಗೆ ದಯಮಾಡುತ್ತಾರೆ.

ತಾ. 9ನೇ ಭಾನುವಾರ.—ಈ ದಿನ ಮೋಟರುಗಳಲ್ಲಿ ಅವರು ನಮ್ಮ ಮಹಾರಾಜರವರೊಡನೆ ಖಾರಾಪುರದ ಖೆಡ್ಡಾ ಕ್ಯಾಂಪಿಗೆ ದಯಮಾಡಿ, 10 ನೇ ತಾರೀಖು ದಾಮನಾಗದ ಷನಕ ಅಲ್ಲೇ ಇರುತ್ತಾರೆ

ಪಟ್ಟಣವನ್ನು ಬಹಳ ನೇತ್ರಾನಂದಕರವಾಗಿ ಶೃಂಗಾರಮಾಡಿರುತ್ತಾರೆ. ವೈಸ್‌ರಾಯ್ ಪ್ರಭುಗಳು ಸಂಚಾರಮಾಡುವ ರಸ್ತೆಗಳೆಲ್ಲಾ ರಮಣೀಯವಾಗಿ ಮಾಡಲ್ಪಟ್ಟಿರುವುದಲ್ಲದೆ ಎರಡು ಕಡೆಗಳಲ್ಲೂ ಮಂಗಳಕರವಾದ ಬಾವುಟಗಳನ್ನು ಸ್ತಂಭಗಳನ್ನು ನೆಟ್ಟಿರುವರು. ಮುಖ್ಯವಾಗಿ ರೈಲ್ವೆ ಸ್ಟೇಷನ್ ಆವರಣ, ಸಯ್ಯಾಜೀರಾವ್ ರಸ್ತೆ, ಕರ್ಜನ್ ಪಾರ್ಕ್, ಈ ಭಾಗಗಳು ನಾನಾ ಪ್ರಕಾರವಾಗಿ ಅಲಂಕರಿಸಲ್ಪಟ್ಟು ಬಹು ಮುದ್ದಾಗಿರುತ್ತವೆ

ಪಟ್ಟಣದ ಎಲ್ಲಾ ಭಾಗಗಳಲ್ಲೂ, ಪ್ರಾಮುಖ್ಯವಾಗಿ ರಾಜಬೀದಿಗಳಲ್ಲೂ ಪೋಲೀಸ್ ಉಸ್ತುವಾರಿಯು ಬಹಳ ಬಿಟ್ಟುನಿಟ್ಟಾಗಿ ಮಾಡಲಾಗಿದೆ ಇಷ್ಟುಮಟ್ಟಿನ ಪೋಲೀಸ್ ಏರ್ಪಾಡು ಹಿಂದೆ ಯಾವಾಗಲೂ ಇರಲಿಲ್ಲ. ಸಂಸ್ಥಾನದ ಎಲ್ಲಾ ಭಾಗಗಳಿಂದಲೂ 500-600 ಜನ ಆಯಪಾನೆಗಳಾದ ಪೋಲೀಸಿನವರನ್ನು ರಾಜಧಾನಿಗೆ ಕರೆದುತಂದು, ದಿರಸಿನಲ್ಲೂ ಮಫ್ತಿಯಲ್ಲೂ ಪಟ್ಟಣದಲ್ಲೆಲ್ಲಾ ಚದರಿಸಿ ನೇಮಕಮಾಡಿರುತ್ತಾರೆ ಪೋಲೀಸಿನವರು ನೋಟ ನೋಡುವ ಪ್ರಜೆಗಳಿಗೆ ಅನಾವಶ್ಯವಾಗಿ ಯಾವ ವಿಧವಾದ ನಿರ್ಬಂಧವನ್ನೂ ಮಾಡದಂತೆ ಅಧಿಕಾರಿಗಳು ಸರಿಯಾದ ಹುಕುಂ ಕೊಟ್ಟು ವಿವರಣೆಯಿಂದ ನೋಡಿಕೊಳ್ಳುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ.

ಒಳದೇಶದ ವೃತ್ತಾಂತಗಳು.

ಕಳೆದ ವಾರ ರಾಜಧಾನಿಯಲ್ಲಿ ಒಂದೆರಡು ದಿನ ಸ್ವಲ್ಪ ಮಳೆ ಆಯಿತು. ಮುನ್ನೆಯಿಂದ ಬೆಳಗಿನತೊತ್ತು ವಿಶೇಷ ಮಂಜು ಸುರಿಯುತ್ತಾ ಮಧ್ಯಾಹ್ನದ ಮೇಲೆ ತೀಕ್ಷ್ಣವಾದ ಬಿಸಿಲು ಕಾಯುತ್ತಾ ಇದೆ ಪ್ರಜಾ ಆರೋಗ್ಯವು ತೃಪ್ತಿಕರವಾಗಿರುವುದು

ಕಡೂರು ಟವನ್ನಲ್ಲಿ ಮ್ಯುನಿಸಿಪಲ್ ಬೀದಿ ಗುಡಿಸುವುದಕ್ಕೆ ನೇಮಕವಾಗಿರುವ 13 ಜನರೂ ಸಂಬಳ ಹೆಚ್ಚು ಮಾಡದಿದ್ದರೆ ಚಾಕರಿಮಾಡುವುದಿಲ್ಲವೆಂದು ಹಟಹಿಡಿದು ಈ ವಾರದ ಪ್ರಾರಂಭದಿಂದ ನಿಂತುಬಿಟ್ಟರು ಅವರಿಗೆ ತಿಂಗಳಿಗೆ 5-6 ರೂಪಾಯಿ ಸಂಬಳವಿದೆ

ಬೆಂಗಳೂರು ವರ್ತಕ ಮಂಡಲಿಯವರು ಕಳೆದ ಭಾನುವಾರ ಮ|| ಕರಣಿಕ ಕೃಷ್ಣಮೂರ್ತಿರಾಯರಿಗೆ ನ್ಯಾಯ ವಿಧಾಯಕ ಸಭೆಯ ಮೆಂಬರ ಸ್ಥಾನವು ದೊರೆತ ಸಂತೋಷಕ್ಕಾಗಿ ಒಂದು ದಿವ್ಯವಾದ ಯಂಟರ್‌ಟೇನ್‌ಮೆಂಟ್ ಮಾಡಿ ಅವರ ವಿಷಯದಲ್ಲಿ ತಮಗಿರುವ ಪ್ರೀತಿಗೌರವಗಳನ್ನು ಪ್ರಕಾಶಪಡಿಸಿದರು

ಮೈಸೂರು ಜನರಲ್ ಏಜನ್ಸಿಯ ಮ ಎಲ್ ರಾಮಚಂದ್ರರಾಯರು ದಿವ್ಯವಾದ ಚಿತ್ರಪಟಗಳನ್ನುಳ್ಳ ಒಂದು ತಪ್ಪೇರನ್ನು ಮಿನರ್ವಾ ಪ್ರೆಸ್ಸಿನಲ್ಲಿ ನೇತ್ರಾನಂದಕರವಾಗಿ ಅಚ್ಚು ಹಾಕಿಸಿ ಒಂದು ಪತ್ರಿಕೆಯನ್ನು ನಮ್ಮಲ್ಲಿಗೆ ಕಳುಹಿಸಿರುತ್ತಾರೆ. ಇದರಲ್ಲಿ ವೈಸ್‌ರಾಯ್ ದಂಪತಿಗಳ, ಮಹಾರಾಜಯುವರಾಜರವರುಗಳ ಭಾವಚಿತ್ರಗಳು, ಇತರ ವಿಶೇಷ ಚಿತ್ರಗಳೂ ಬಹಳ ಮುದ್ದಾಗಿ ಹಾಕಲ್ಪಟ್ಟಿವೆ.

ಮೈಸೂರು ಆಸ್ಥಾನದಲ್ಲಿ ಮಹಾವಿದ್ವಾಂಸರಾಗಿಯೂ, ದ್ವೈತಶಾಸ್ತ್ರದಲ್ಲಿ ಪಂಡಿತರಾಗಿಯೂ ಇದ್ದ ವೇ|| ಶ್ರೀರಂಗದ ವೆಂಕಟಾಚಾರ್ಯರವರು ವೃದ್ಧಾಪ್ಯದ ವಶವಾಗಿ ರಾಜಧಾನಿಯಲ್ಲಿ ಕಳೆದ ವಾರ ಕಾಲವಾದರೆಂದು ಪ್ರಕಟಿಸಲು ವಿಷಾದವಾಗುವುದು ಇವರು ಅರಮನೆಯಲ್ಲಿ ದರ್ಮಾಧಿಕಾರಿಗಳಾಗಿಯೂ ಇದ್ದು, ಪುರಾಣಗಳನ್ನು ಮಹಾರಾಜರವರಲ್ಲಿ ಅರಿಕೆಮಾಡುವವರಾಗಿದ್ದರು

ಸಾಗಪ್ಪ, ಚನ್ನಪ್ಪ ಎಂಬಿಬ್ಬರು ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಒಬ್ಬ ಗುಮಾಸ್ತೆಗೆ ಲಂಚಕೊಡಲು ಪ್ರಯತ್ನಪಟ್ಟರೆಂದು ಮೊಕದ್ದಮೆ ಆಗಿ, ಸಬ್ ಡಿವಿಜನ್ ಕೋರ್ಟಿನಲ್ಲಿ ವಿಚಾರಣೆ ನಡೆದು ಅವರಿಬ್ಬರಿಗೂ ತಲಾ ಆರು ತಿಂಗಳ ಸಾದಾ ಸಜಾ, 50 ರೂಪಾಯಿ ಜುಲ್ಮಾನೆಯೂ ವಿಧಿಸಲಾಯಿತು. ಅವರು ಅದರ ಮೇಲೆ ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿದ್ದರಲ್ಲಿ ತಪ್ಪಕ್ಕೆ ಅವರಿಗೆ ನಿರ್ದೋಷ ಮೇಲೆ ಖುಲಾಸೆಯಾಗಿರುತ್ತದೆ.

ಕಳೆದ ಮಂಗಳವಾರ ರಾತ್ರಿ ರಾಜಧಾನಿಯಲ್ಲಿರುವ ಮಿ|| ಪ್ಯಾನಿಕನ್‌ರವರು ಚಾಮುಂಡಿ ಬೆಟ್ಟದ ತಪ್ಪಲಲ್ಲಿ ಬಟ್ ಫ್ಲೆರ್‌ಪಾಸುವ ಸರಹದ್ದಿನಲ್ಲಿ ಒಂದು ಭಾರಿ ಚಿರತೆಯನ್ನು ಕೊಂದುಹಾಕಿ ನೆನ್ನೆ ಬೆಳಗ್ಗೆ ಶ್ರೀಮನ್ಮಹಾರಾಜರವರಿಗೆ ತಂದು ತೋರಿಸಿದರು ಈ ಮೃಗವು ಒಂದು ವರುಷದಿಂದ ಅಲ್ಲಿ ಸೇರಿಕೊಂಡು ಆಗಾಗ್ಗೆ ಊರಿನೊಳಕ್ಕೆ ಬರುತ್ತಾ, ಕತ್ತೆ ಗೋಕಾಯಿಗಳನ್ನೂ ಖಾಸಾ ಬಂಗಲೆಯ ಮೃಗಾಲಯದಲ್ಲಿರುವ ನಾನಾ ಮೃಗಗಳನ್ನೂ ಹಿಡಿದು ತಿನ್ನುತ್ತಾ, ಹೊಡೆಯಬೇಕೆಂದು ಕಾಯುತ್ತಿದ್ದವರಿಗೆ ಎಕ್ಕವೆ ತಪ್ಪಿಸಿಕೊಂಡು ಹೋಗುತ್ತಾ ಇತ್ತು.

ಮೈಸೂರಿನ ದಹಾಸನಕ್ಕೆ ರೈಲ್ವೆ ಹಾಕಿಕೊಳ್ಳಬಹುದೆಂದು ಇಂಡಿಯಾ ಗವರ್ನಮೆಂಟಿನವರು ಸ್ಯಾಂಕ್ಷನ್ ದಯಪಾಲಿಸಿ ಸುಮಾರು ಮೂರು ವಾರಗಳಾದವೆಂದು ಕೇಳುತ್ತೇವೆ ನಮ್ಮ ಸರ್ಕಾರದವರು ಕಾಮಗಾರಿಯನ್ನು ಪ್ರಾರಂಭಿಸುವುದಕ್ಕಾಗಿ ಆದುರದಟ್ಟು ಕೆಲಸಗಳನ್ನು ನಡಿಸುತ್ತಿದಾರೆ ಒಂದೆರಡು ಮೈಲಿಯಂತೆ ಚಿಕ್ಕ ಕಂಟ್ರಾಕ್ಟನ್ನು ಆಯಾ ಪ್ರದೇಶದ ಜನರಿಗೇ ವಹಿಸಿ ಉಸ್ತುವಾರಿ ಮಾಡುತ್ತಾ ಒಂದರೆ ಕೆಲಸವು ಜಾಗ್ರತೆಯಿಂದಲೂ, ತೃಪ್ತಿಕರವಾಗಿಯೂ ನಡೆಯುವುದಲ್ಲದೆ ಅವರುಗಳ ಹಣವು ನಮ್ಮ ದೇಶದ ಕೂಲಿಮಾಡುವವರಿಗೇ ಸಿಕ್ಕಿ ಜೀವನಕ್ಕೆ ಸಹಾಯವಾದೀತು.

ಒಬ್ಬ ವಾತ್ರದಾರರಿಂದ.—ಬೆಂಗಳೂರು ಶ್ರೀನಿವಾಸ ಮಂದಿರ ಸ್ತ್ರೀ ಶಾಖೆಯಲ್ಲಿ ಕಳೆದ ತಾ 28 ನೇ ಮಂಗಳವಾರ ದೀಪಾವಳಿ ಹಬ್ಬದ ಪ್ರಯುಕ್ತ, ಸಮಾಜಕ್ಕೆ ಸೇರಿದ ಮಹನೀಯರೊಬ್ಬರು (ಹಿತೈಷಿಯವರು) ಮಂದಿರಕ್ಕೆ ಸೇರಿದ ಅನಾಥಾಲಯದ ಬಾಲಕರಿಗೋಸ್ಕರ ಆ ದಿನ ಅತ್ಯುತ್ತಮವಾದ ಊಟ ಉಪಚಾರಗಳಿಗೆ ತಕ್ಕ ಏರ್ಪಾಡುಗಳನ್ನು ಮಾಡಿದ್ದರು. ಅವರಿಗೆ ಅನಾಥಬಾಲಕರ ಮೇಲೆ ಇರತಕ್ಕ ಅಭಿಮಾನವನ್ನೂ ಧಾರಾಳವನ್ನೂ ಬಹಳ ಕೊಂಡಾಡತಕ್ಕದ್ದಾಗಿದೆ.—ಕ್ರಮ ಪ್ರಕಾರ ಕಳೆದ ತಾ. 1 ನೇ ಶನಿವಾರ ಶ್ರೀ|| ಎಂ ಮಹಲಕ್ಷ್ಮಮ್ಮನವರು ಅತ್ಯಂತ ಉಪಯುಕ್ತವಾದ ಚೂಡಾಲೋಪಾಖ್ಯಾನವೆಂಬುದನ್ನು 5 ಭಾಗ ಮಾಡಿ 5 ವಾರಗಳಿಂದ ಹೇಳಿ, ನೆನ್ನೆ ಮುಗಿಸಿದರು ಸೌ|| ಕೆ ಎಸ್. ಪಾರ್ವತಮ್ಮನವರು ಇದರ ಅರ್ಥವನ್ನು ಸಭಿಕರಿಗೆ ಚೆನ್ನಾಗಿ ತಿಳಿಯುವಂತೆ ಹೇಳಿದರು

ಮೊನ್ನೆ ಸೋಮವಾರ ಬೆಳಗ್ಗೆ ರಾಜಧಾನಿಯ ಕೆರವಗೆರೆಯಲ್ಲಿ ಸರ್ದಾರ್ ಎಂ. ಕಾಂತರಾಜೇ ಅರಸಿನವರು ಅಗ್ರಸ್ಥಾನವನ್ನು ವಹಿಸಿ ಒಂದು ಹೊಸ ಆಸ್ಪತ್ರೆ ಕಟ್ಟಡವನ್ನು ತೆರೆದರು ಈ ಕಟ್ಟಡವನ್ನು ಮ|| ಅಂಬಳೆ ಅಣ್ಣಯ್ಯ ಪಂಡಿತರು ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟಿದ್ದಾರೆ. ರಾಜಧಾನಿಯಲ್ಲಿ ಇದೂ ಸೇರಿ ಮೂರುಕಟ್ಟಡಗಳು ಧರ್ಮಕ್ಕೆ ಕಟ್ಟಲ್ಪಟ್ಟವುಗಳಾಗಿವೆ. ಸರ್ದಾರರು ಮ|| ಪಂಡಿತರವರ ಔದಾರ್ಯವನ್ನು ಕೊಂಡಾಡಿ ಗವರ್ನಮೆಂಟಿನವರೂ, ಮ್ಯುನಿಸಿಪಾಲಿಟಿಯವರೂ, ಪ್ರಜೆಗಳೂ ಅವರಿಗೆ ಕೃತಜ್ಞರಾಗಿರುತ್ತಾರೆಂದೂ, ಹೀಗೆಯೇ ಐಶ್ವರ್ಯವಂತರು ಪ್ರಜೆಗಳಿಗೆ ಹಿತಕರವಾದ ಸ್ಕೂಲು ಮೊದಲಾದ ಕಟ್ಟಡಗಳನ್ನು ಕಟ್ಟಿಸಿಕೊಟ್ಟು ಕೀರ್ತಿ ಪಡೆಯಬೇಕೆಂದೂ ಹೇಳಿದರು. ಮ|| ಎಂ ಸಿ. ರಂಗಯ್ಯಂಗಾರ್ಯರೇ ಮೊದಲಾದವರೂ ಧರ್ಮಕಾರ್ಯಗಳ ಪ್ರಶಂಸೆಯನ್ನು ಮಾಡಿ, ಮ|| ಪಂಡಿತರನ್ನು ವಂದಿಸಿದರು.

ಕಳೆದ ಗುರುವಾರ ಮ|| ಕೆಂಪರಾಮ ಪಂಡಿತರವರು ಕೆಲವು ಕಾಲದಿಂದ ಪಾರ್ಶ್ವವಾಯು ಗ್ರಸ್ತರಾಗಿದ್ದು ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಆಯುರ್ವೇದ ವೈದ್ಯ ವಿದ್ಯೆಯಲ್ಲಿ ಬಹಳ ಗಟ್ಟಿಗರಾಗಿ ಲೇಟ್ ದಿವಾನ್ ಸರ್ ಶೇಷಾದ್ರಯ್ಯರವರ ಕಾಲದ ಹೋರಾಡಿ ರಾಜಧಾನಿಯಲ್ಲಿ ಸರ್ಕಾರಿಯಾದ ಕರ್ನಾಟಕ ವೈದ್ಯ ಶಾಲೆಯನ್ನು ಇಡಿಸಿ, ಪ್ರಾರಂಭದಿಂದಲೂ ಅಲ್ಲಿ ಮುಖ್ಯ ವೈದ್ಯರಾಗಿದ್ದು ರೋಗಿಗಳ ಹಿತಚಿಂತಕರಾಗಿ ಚಿಕಿತ್ಸೆ ಮಾಡುತ್ತಾ ಬಂದದ್ದಲ್ಲದೆ, ಆಯುರ್ವೇದ ವೈದ್ಯ ವಿದ್ಯೆಯನ್ನು ಹೇಳಿಕೊಡುವ ಪಾಠಶಾಲೆಯೊಂದನ್ನು ಸಾಹಸಪಟ್ಟು ಸರ್ಕಾರದಿಂದ ಇಡಿಸಿ, ಅಲ್ಲಿ ವೈದ್ಯ ವಿದ್ಯೆಯನ್ನು ಕಲಿಸುತ್ತಾ ಬಂದರು. ಇವರ ಚಿಕಿತ್ಸಾ ಸಾಮರ್ಥ್ಯವನ್ನು ಕೇಳಿ ಅನೇಕ ಪರಸ್ಥಳದ ರೋಗಿಗಳು ಬಂದು ಗುಣ ಹೊಂದಿರುತ್ತಾರೆ ಮೈಸೂರಿನಲ್ಲಿ ಆಯುರ್ವೇದ ವೈದ್ಯದಲ್ಲಿ ಇಷ್ಟು ಮಟ್ಟಿಗೆ ಪ್ರಾಶಸ್ತ್ಯವನ್ನು ಪಡೆದಂಥಾ ಮ|| ಕೆಂಪರಾಮ ಪಂಡಿತರು ಕಾಲವಾದದ್ದಕ್ಕಾಗಿ ಅನೇಕಾನೇಕರಿಗೆ ಸಂತಾಪವುಂಟಾಗಿದೆ

ತಾಲ್ಲೋಕು ವರ್ತಮಾನ.

ಕುಲೀಜ್‌ಪೇಟೆ —ಈ ಪ್ರಾಂತ್ಯ 15 ದಿನಗಳಿಂದ ಮಳೆಯಿಲ್ಲದೆ ರಾಗಿ ಪೈರು ಕೆಲವು ಕಡೆ ಬಾಡುತ್ತಾ ಇವೆ ಪೈರು ಎಲ್ಲಾ ಕಡೆಗಳಲ್ಲಿಯೂ ಚೆನ್ನಾಗಿ ಬೆಳೆದು ತೆನೆಗಳಾಗಿ ನಿಂತಿವೆ ಈ ಸಮಯದಲ್ಲಿ ಮಳೆಬಾರದೆ ಇರುವುದು. ರೈತರು ಮಳೆಯನ್ನೇ ಎದುರುನೋಡುತ್ತಾ ಭಯಹೊಂದಿದಾರೆ. ಧಾರಣೆವಾಸಿಗಳು ಕ್ಷಾಮವನ್ನೇ ಸೂಚಿಸುತ್ತಾ ಇವೆ ರಾಗಿ ರೂಪಾಯಿಗೆ 16-17 ಸೇರು, ಅಕ್ಕಿ 6-6½ ಸೇರು ಮಾರುವುದು. ಬಿಸಿಲಿನ ತಾಪವು ಹೆಚ್ಚಾಗಿದೆ. ಅರ್ಕಾವತಿ ನದಿಯಲ್ಲಿ ನೀರು ಸಮೃದ್ಧಿಯಾಗಿ ಹರಿಯುತ್ತಾ ಇರುವುದರಿಂದ ಇಲ್ಲಿನ ಜನಗಳಿಗೂ ಗೋಕಾಯಿಗಳಿಗೂ ನೀರಿನ ತೊಂದರೆ ಸ್ವಲ್ಪವೂ ಇಲ್ಲದೆ ಸೌಖ್ಯವಾಗಿದೆ.—ಇಲ್ಲಿ ವೈಶ್ಯ ಜನಗಳಿಗೆ ಸುಮಾರು 20-25 ವರ್ಷಗಳಿಂದಲೂ ಇದ್ದ ದೇವಸ್ಥಾನವು ಬಹಳ ಶಿಥಿಲವಾಗಿದ್ದದ್ದರಿಂದ ಇದನ್ನು ತೆಗೆದು ಕಲ್ಲುಕಟ್ಟಡವನ್ನು ಅಂದವಾಗಿ ಕಟ್ಟಬೇಕೆಂದು ಇಲ್ಲಿನ ವೈಶ್ಯ ಮಹನೀಯರು ಉದಾರ ಗುಣದಿಂದ ಈಗ್ಗೆ 2-3 ವರ್ಷಗಳ ಕೆಳಗೆ ಸರ್ಕಾರದವರ ಆರ್ಡರು ಹೊಂದಿ ದೇವಾಲಯಕ್ಕೆ ಬೇಕಾದ ವಿಶಿಷ್ಟ ಸಾಮಾನುಗಳನ್ನೂ ಕಲ್ಲುಗಳಲ್ಲಿ ತಯಾರುಮಾಡಿಸಿ, ಕಟ್ಟಡ ಪ್ರಾರಂಭಮಾಡಿ ಕೆಲಸ ನಡೆಯುತ್ತಾ ಇರುವಲ್ಲಿ ಲಿಂಗಾಯತ ಮತಸ್ಥರು ದೇವಸ್ಥಾನ ಕಟ್ಟಬಾರದೆಂದು ಯಾವ ಕಾರಣವೂ ಇಲ್ಲದೆ ತಕರಾರು ಮಾಡಿದರು. ಎರಡು ವರ್ಷಗಳಿಂದ ತಕರಾರು ನಡೆದು ಕೊನೆಗೆ ಶ್ರೀಮನ್ಮಹಾರಾಜರವರ ವರೆಗೂ ಹೋಗಿ ದೇವಸ್ಥಾನ ಕಟ್ಟಬಹುದೆಂದೂ, ದೇವಾಲಾಯಕ್ಕೆ ಬಾಗಿಲು ಮಾತ್ರ ಉತ್ತರಕ್ಕೆ ಇಡಬೇಕೆಂದೂ ಸುಮಾರು 4-5 ತಿಂಗಳ ಕೆಳಗೆ ಹುಕುಂ ಸಾದರಾಯಿತು ಆದರೆ ಉತ್ತರ ಕಡೆಗೆ ಬಾಗಿಲು ಇಟ್ಟರೆ ದೇವಸ್ಥಾನಕ್ಕೆ ಹೋಗಿಬರಲು ಉಭಯ ಪಾರ್ಶ್ವಗಳಲ್ಲಿಯೂ ವಾಸದ ಮನೆಗಳಿರುವುದರಿಂದಲೂ, ಪೂರ್ವಭಾಗದ ಕಡೆ ಇರುವುದರಿಂದ ಯಾವ ಜನಗಳಿಗೂ ಯಾವ ಭಾಗದಲ್ಲೂ ತೊಂದರೆ ಇಲ್ಲವೆಂತಲೂ ಇದುವರೆಗೆ ಬಂದು ನೋಡಿಕೊಂಡುಹೋದ ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಯದೆ ಇದೆ —ಟವನ್ ನಾಕೀಜಾ ವಿಷಯ ತಕ್ಕಮಟ್ಟಿಗೆ ಶುಚಿಯಾಗಿದೆ. ಇಲ್ಲಿಗೆ ವರ್ಗವಟ್ಟು ಬಂದಿರುವ ಡಾಕ್ಟರವರು ಬಹಳ ಒಳ್ಳೆಯವರು ಕನ್ನಡ ಗೌರ್ನಮೆಂಟು ಬಾಯಿಸ್ ಸ್ಕೂಲು ಹೆಡ್ ಮಾಸ್ಟರು ಮ|| ಮೂರ್ತಯ್ಯನವರ ಮೇಲ್ವಿಚಾರಣೆಯಿಂದ ಅಭಿವೃದ್ಧಿಸ್ಥಿತಿಯಲ್ಲಿದೆ —ಟವನ್ನಲ್ಲಿ ವಿಶೇಷವಾಗಿ ನಡೆಯುತ್ತಾ ಇದ್ದ ರೇಷ್ಮೆ ವ್ಯಾಪಾರವು ಸುತರಾಂ ನಿಂತುಹೋಗಿರುವುದರಿಂದ ವರ್ತಕರಿಗೆ ಬಹಳ ನಷ್ಟವಾಗಿದೆ ಇನ್ನು ಬೇರೆ ವ್ಯಾಪಾರಮಾಡಲು ಇಲ್ಲಿ ಅನುಕೂಲ ಕಡಮೆ

ಇಂಡಿಯಾ ದೇಶದ ವೃತ್ತಾಂತಗಳು.

ಕಳೆದ ವಾರ ಕಲ್ಕತ್ತಾ ಪಟ್ಟಣದ ಒಂದು ಮನೆಯಲ್ಲಿ 50 ಜನರು ಜೂಜಾಡುತ್ತಿದ್ದರು ಪೋಲೀಸಿನವರು ಆ ಮನೆಗೆ ನುಗ್ಗಿ ಅವರೆಲ್ಲರನ್ನೂ ಕೈಸೆರೆ ಹಿಡಿದದ್ದಲ್ಲದೆ ಅವರ ವಶದಲ್ಲಿದ್ದ 21,000 ರೂಪಾಯನ್ನು ತೆಗೆದುಕೊಂಡು ಅವರನ್ನು ವಿಚಾರಣೆಗೆ ಗುರಿಪಡಿಸಿರುತ್ತಾರೆ

ಸಂಯುಕ್ತ ಆಧಿಪತ್ಯಗಳಲ್ಲಿ ಬಹಳ ದಿನಗಳಿಂದಲೂ ಮಳೆ ಇಲ್ಲದೆ ಪೈರುಗಳೆಲ್ಲಾ ಒಣಗುತ್ತಿವೆ. ಅನೇಕ ಕಡೆ ಬಿತ್ತಿಯೇ ಇಲ್ಲ. ಇದರಿಂದ ಕ್ಷಾಮ ತಲೆದೋರುವದೆಂಬ ಭಯ ಹುಟ್ಟಿ ಅಲ್ಲಿನ ಲೆಫ್ಟಿನೆಂಟ್ ಗವರ್ನರ್‌ರವರು ಕ್ಷಾಮ ನಿವಾರಣೆಯ ಏರ್ಪಾಡನ್ನು ಮಾಡಲು ಒಂದು ಸಭೆಯನ್ನು ಸೇರಿಸಿದ್ದರು.

ಬೊಂಬಾಯಿನ ಚರ್ನಿ ರಸ್ತೆಯಲ್ಲಿ ಬೋರಾಜನರ ಒಂದು ಸ್ಮಶಾನವಿದೆ ಕಳೆದ ವಾರ ಯಾರೋ ದುಷ್ಟರು ಆ ಸ್ಮಶಾನದಲ್ಲಿದ್ದ ಗೋರಿಗಳನ್ನೆಲ್ಲಾ ಅಗೆದು ಹಾಕಿರುತ್ತಾರೆ ಇದರಿಂದ ಆ ಜನಗಳಲ್ಲಿ ಬಹಳ ಅಸಮಾಧಾನವು ಹುಟ್ಟಿ ಈ ವಿಚಾರವನ್ನು ತನಿಖೆಮಾಡಬೇಕೆಂದು ಪೋಲೀಸ್ ಕಮಿಷನರ್‌ರವರಿಗೆ ಮನವಿ ಮಾಡಿಕೊಂಡಿರುತ್ತಾರೆ

ಪಾಟಿಯಾಲದಲ್ಲಿ ಆಯುರ್ವೇದೀಯ ಮತ್ತು ಯುನಾನಿ ವೈದ್ಯಶಾಸ್ತ್ರಗಳನ್ನು ಕಲಿಸುವದಕ್ಕೆ ಒಂದು ಕಾಲೇಜನ್ನು ಕಟ್ಟಬೇಕೆಂದು ಏರ್ಪಾಡು ಮಾಡುತ್ತಿದಾರೆ ಆ ಕಟ್ಟಡದ ಮೂಲಧನಕ್ಕಾಗಿ ಪಾಟಿಯಾಲಾ ಸಂಸ್ಥಾನದ ಮಹಾರಾಜರು 25,000 ರೂ. ನ್ನು ಕೊಟ್ಟಿರುತ್ತಾರೆ ಅಲ್ಲದೆ ಪ್ರತಿ ವರ್ಷವೂ 1,800 ರೂನ್ನು ಕೊಡುವದಾಗಿ ಹೇಳಿರುತ್ತಾರೆ.

ಪಾಲಂಕೋಟೆಯ ಮ್ಯುನಿಸಿಪಲ್ ಕೌನ್ಸಲರ್ ಮತ್ತು ಅಲ್ಲಿನ ಮಹಮದೀಯ ಸಂಘದ ಮುಖ್ಯಸ್ಥನಾಗಿಯೂ ಆಗಿದ್ದ ಕಸ್ತೂರ್ ಫುಲವಾರ್ ಎಂಬಾತನು ಸಿಲೋನ್ ದ್ವೀಪದ ಕೊಲಂಬೋ ಪಟ್ಟಣಕ್ಕೆ ಹೋಗಿದ್ದಾಗ ಅಲ್ಲಿನ ನಿವಾಸಿಯಾದೊಬ್ಬನಿಗೂ ಈತನಿಗೂ ಜಗಳ ಹುಟ್ಟಿ ಅವನಿಂದ ಕೊಲ್ಲಲ್ಪಟ್ಟನು ಈತನು ಸಿಲೋನಿನಲ್ಲಿ ದೊಡ್ಡ ಜಹಜಿನ ಕಂಟ್ರಾಕ್ಟುದಾರನಾಗಿಯೂ, ಬಹಳ ಧರ್ಮಕೆಲಸಗಳನ್ನು ಮಾಡಿದವನಾಗಿಯೂ ಇದ್ದನು.

ಕಲ್ಕತ್ತೆಯ ಒಂದು ದೊಡ್ಡ ಚೌಕದಲ್ಲಿ ಕೆಲವು ದಿನಗಳ ಹಿಂದೆ ಒಬ್ಬ ಪೋಲೀಸ್ ಅಧಿಕಾರಿಯನ್ನು ಖೂನಿ ಮಾಡಿಬಿಟ್ಟರಷ್ಟೆ ಈಗ ಜಿಲ್ಲಾ ಸ್ಟೇಷನ್ನಿನ ಬಳಿಯಲ್ಲೂ ಪಟ್ಟಣದ ಮುಖ್ಯವಾದ ಪ್ರದೇಶಗಳಲ್ಲೂ ಸಣ್ಣ ನೋಟೀಸುಗಳು ಸಿಕ್ಕಿರುತ್ತವೆ ಖೂನಿ ಮಾಡಿದವನೂ ವೈಸ್‌ರಾಯಿಯವರ ಮೇಲೆ ದೆಹಲಿಯಲ್ಲಿ ಗುಂಡು ಎಸೆದವನೂ ನಾನೇ ಎಂದು ಅದರಲ್ಲಿ ಬರೆದಿರುತ್ತೆ. ಈ ನೋಟೀಸಿನ ಮೂಲಕ ಆ ಕ್ರೂರ ಕೃತ್ಯವು ಎಷ್ಟುಮಟ್ಟಿಗೆ ಹೊರಪಡುವದೋ ನೋಡಬೇಕು.

ಕಳೆದ 18 ನೇ ತಾರೀಖಿಗೆ ಆಖೈರಾದ ಒಂದು ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ಒಟ್ಟು 2,274 ಜನರಿಗೆ ಪ್ಲೇಗು ತಗಲಿ 1,657 ಜನರು ಮೃತಪಟ್ಟರು. ಈ ಪೈಕಿ ಬೊಂಬಾಯಿ ಆಧಿಪತ್ಯದಲ್ಲಿ 1,192 ಜನರು, ಮದರಾಸ್ ಆಧಿಪತ್ಯದಲ್ಲಿ 56 ಜನರು, ಬೀಹಾರ್‌ನಲ್ಲಿ 39 ಜನರು, ಸಂಯುಕ್ತ ಸಂಸ್ಥಾನಗಳಲ್ಲಿ 133, ಪಂಜಾಬಿನಲ್ಲಿ 55, ಬರ್ಮಾದಲ್ಲಿ 17 ಜನರು, ಮೈಸೂರು ಸಂಸ್ಥಾನದಲ್ಲಿ 111 ಜನರು, ಹೈದರಾಬಾದಿನಲ್ಲಿ 48, ರಾಜಪುಟಾನಾದಲ್ಲಿ 6 ಜನರು ಈ ಪ್ರಕಾರ ಮರಣಹೊಂದಿರುತ್ತಾರೆ.

ಅಜಾಂಘರ್ ಎಂಬ ಸ್ಥಳದಲ್ಲಿ ಒಬ್ಬ ಜಮೀನ್‌ದಾರನು ಸಿದ್ಧಮಾಡುತ್ತಿದ್ದಾಗ ಜಾಂಪರ್, ರಘು, ಬಕ್ಷು ಎಂಬ ಮೂರು ಜನರು ಅವನನ್ನು ಕೊಂದುಹಾಕಿದ್ದು ರುಜುವಾತಾಗಿ ಸೆಷನ್ಸ್ ಜಡ್ಜರು ಮೊದಲನೇ ಅಪರಾಧಿಯನ್ನು ಗಲ್ಲಿಗೆ ಹಾಕಬೇಕೆಂದೂ ಎರಡು ಮೂರನೇ ಅಪರಾಧಿಗಳನ್ನು ದ್ವೀಪಾಂತರವಾಸಕ್ಕೆ ಕಳುಹಿಸಬೇಕೆಂದೂ ಶಿಕ್ಷೆಯನ್ನು ವಿಧಿಸಿದರು ಅಪರಾಧಿಗಳು ಅಲಹಾಬಾದ್ ಹೈಕೋರ್ಟಿನಲ್ಲಿ ಅಪೀಲು ಮಾಡಲು ಅಲ್ಲಿಯ ಜಡ್ಜರು ಕೆಳಗಣ ಕೋರ್ಟಿನ ಶಿಕ್ಷೆಯನ್ನೇ ಖಾಯಂ ಮಾಡಿ ಅಪೀಲನ್ನು ವಜಾಮಾಡಿದರು

ಸುಮಾರು ಎರಡು ತಿಂಗಳ ಕೆಳಗೆ ಕಲ್ಕತ್ತೆಯ ಒಬ್ಬ ಐಶ್ವರ್ಯವಂತನಾದ ಮಾರ್ವಾಡಿ ಸಾಹುಕಾರನ ಮನೆಯಲ್ಲಿ 30,000 ರೂ ಬೆಲೆಯುಳ್ಳ ನಗನಾಣ್ಯಗಳು ಕಳುವಾದವು ಪೋಲೀಸಿನವರು ಗುಮಾನಿಯ ಮೇಲೆ ಸುರೇಶಚಂದ್ರನೆಂಬವನನ್ನು ಕಳೆದ ಮಂಗಳವಾರ ದಸ್ತಗಿರಿಮಾಡಿದರು. ಅವನ ಹತ್ತಿರ 10,000 ರೂಪಾಯಿನ ಒಂದು ವಜ್ರದ ಹಾರವೂ, ಇನ್ನೂ ಕೆಲವು ಚಿನ್ನದ ನಗಗಳೂ ಸಿಕ್ಕಿರುತ್ತವೆ. ಸುರೇಶಚಂದ್ರನೂ ಇನ್ನೊಬ್ಬನೂ ಈ ಕಳುವನ್ನು ಮಾಡಿದರೆಂತಲೂ, ಅವರಿಬ್ಬರಿಗೂ ಜಗಳ ಹುಟ್ಟಿದ್ದರಿಂದ ಅವರ ಪೈಕಿ ಒಬ್ಬನು ಪೋಲೀಸಿಗೆ ತಿಳಿಸಿದನೆಂತಲೂ ಗೊತ್ತಾಗಿದೆ

ಕಲ್ಕತ್ತೆಯ ಹತ್ತಿರ ಒಂದು ಕಲ್ಲಿದ್ದಲಿನ ಗಣಿಯಲ್ಲಿ ಬೆಂಕಿಯು ಹುಟ್ಟಿ ಕೆಲವರು ಮೃತಪಟ್ಟರೆಂದು ತಿಳಿಸಿದೆವಷ್ಟೆ. ಈಚೆಗೆ ಬಂದಿರುವ ವರ್ತಮಾನದಿಂದ ತಿಳಿದು ಬರುವದೇನಂದರೆ—ಬುಧವಾರ ಸಾಯಂಕಾಲ 6 ಗಂಟೆಯ ಸಮಯದಲ್ಲಿ ಗಣಿಯ ಒಂದು ಭಾಗವು ಹತ್ತಿಕೊಂಡು ಬೆಂಕಿಯು ಅರ್ಧರಾತ್ರಿಯೊಳಗಾಗಿ ಗಣಿಯ ಇತರ ಭಾಗಗಳಿಗೂ ಆವರಿಸಿತು ಶುಕ್ರವಾರ ರಾತ್ರಿಯ ಹೊತ್ತಿಗೆ ಬೆಂಕಿಯೆಲ್ಲಾ ಆರಿಹೋಗಿ ವಿಪರೀತವಾಗಿ ಹೊಗೆಯು ಹೊರಡುತ್ತಿತ್ತು. ಈ ಗಣಿಯಿಂದ ಕಲ್ಲಿದ್ದಲನ್ನು ತೆಗೆಯಬೇಕಾದರೆ ಇನ್ನೂ ಒಂದೆರಡು ವಾರವಾದರೂ ಬೇಕಾಗುತ್ತದೆ.

ಬೊಂಬಾಯಿನ ಭಾಟಿಯಾ ಜನರಲ್ಲಿ ಮತಸಂಬಂಧವಾದ ಚರ್ಚೆಯು ಹೊಸದಾಗಿ ಪ್ರಾರಂಭವಾಗಿರುತ್ತದೆ. ಯಾಕಂದರೆ ಇವರ ಪಂಗಡಕ್ಕೆ ಸೇರಿದ ಪ್ರಸಿದ್ಧ ಸಾಹುಕಾರರಾದ ನರೋತ್ತಮ ಗೋಕುಲದಾಸ್‌ರವರೂ, ಗೋವರ್ಧನದಾಸ್ ಖತ್ತಾವ್‌ರವರೂ ಅವರ ಜೊತೆಯಲ್ಲಿ ಇನ್ನೂ ಇಬ್ಬರೂ ಸೀಮೆಯಿಂದ ಈಗತಾನೆ ವಾಪಸು ಬಂದಿರುತ್ತಾರೆ. ಆ ಪಂಗಡದ ಮಹಾಜನ ಸಭೆಯ ಪ್ರೆಸಿಡೆಂಟರು ಸೀಮೆಯಿಂದ ಬಂದವರು ತಮ್ಮ ಮತಸ್ಥರೊಡನೆ ಸವ್ಯವಹಾರಕ್ಕೆ ಅರ್ಹರಲ್ಲವೆಂಬ ಅಂಶವನ್ನು ಅವರಿಗೆ ತಿಳಿಸಿದ್ದಲ್ಲದೆ ಬೊಂಬಾಯಿನ ವರ್ತಮಾನ ಪತ್ರಿಕೆಗಳಲ್ಲಿಯೂ ಈ ವಿಚಾರವನ್ನು ಪ್ರಕಟಿಸಿರುತ್ತಾರೆ.

ಪಂಜಾಬಿಗೆ ಸೇರಿದ ಲೂಧಿಯಾನಾ ಡಿಸ್ಟ್ರಿಕ್ಟಿನಲ್ಲಿ ಕಳೆದ ವಾರ ಒಂದು ಭಾರಿ ದಕಾಯತಿಯು ನಡೆಯಿತು. ಏಳು ಜನ ಕಳ್ಳರು ಆಯುಧಸಮೇತರಾಗಿ ಪಂಜುಗಳನ್ನು ಹಿಡಿದುಕೊಂಡು ಲಾಲಾ ಬಾಬುರಾಂ ಎಂಬ ಐಶ್ವರ್ಯವಂತನಾದ ಸಾಹುಕಾರನ ಮನೆಗೆ ನುಗ್ಗಿದರು, ಸುಮಾರು ನಾಲ್ಕು ಗಂಟೆಕಾಲ ಮನೆಯಲ್ಲೆಲ್ಲಾ ಹುಡುಕಿ 16,000 ರೂ. ಬೆಲೆ ಬಾಳುವ ಒಡವೆಗಳನ್ನೂ, 10,000 ರೂ. ನಗದು ಹಣವನ್ನೂ ಅಪಹರಿಸಿಕೊಂಡು ಹೋದರು ಒಬ್ಬ ನೆರೆಮನೆಯವನೂ ಒಬ್ಬ ಆಳೂ ಅವರನ್ನು ತಡೆಯಲು ಪ್ರಯತ್ನಿಸಿದರು ಆದರೆ ಕಳ್ಳರು ಅವರಿಬ್ಬರನ್ನೂ ಬಂದೂಕಿನಿಂದ ಕೊಂದುಹಾಕಿದರು

ಕಳೆದ ವಾರ ಸುಮಾರು 1,200 ಜನ ಮಹಮದೀಯ ಯಾತ್ರಾರ್ಥಿಗಳು ಬೊಂಬಾಯಿನಲ್ಲಿ ಜಹಜು ಹತ್ತಿ ಮೆಕ್ಕಾ ಪಟ್ಟಣಕ್ಕೆ ಪ್ರಯಾಣ ಮಾಡಿದರು. ಜಹಜಿನ ಕಂಪನಿಯವರು ತಲೆಗೆ 50 ರೂ ನಿಂದ 75 ರೂ ಮಾತ್ರವೇ ಛಾರ್ಜು ತೆಗೆದು ಕೊಂಡಿರುತ್ತಾರೆ. 300 ಜನರಿಗೆ ಸ್ಥಳ ಸಾಲದೆ ತಮ್ಮ ಊರುಗಳಿಗೆ ವಾಪಸು ಹೋಗಬೇಕಾಗಿದೆ, ಈ ವರುಷ ಒಟ್ಟು 18,000 ಜನ ಮಹಮದೀಯರು ಬೊಂಬಾಯಿನಿಂದ ಪ್ರಯಾಣ ಮಾಡಿದ ಹಾಗಾಯಿತು. ಅನೇಕ ಸ್ಥಳಗಳಲ್ಲಿ ಮಳೆ ಬಿದ್ದಿರುವದರಿಂದ ಬಹಳ ಜನರು ಯಾತ್ರೆಗೆ ಹೊರಡದೆ ತಮ್ಮ ಹೊಲಗದ್ದೆಗಳಲ್ಲಿ ಪೈರುಗಳನ್ನು ಕಾಪಾಡಿಕೊಳ್ಳುತ್ತಿದಾರೆ

ಸಂಯುಕ್ತ ಆಧಿಪತ್ಯಗಳಲ್ಲಿ ಒಂದು ಸಣ್ಣ ಪಟ್ಟಣವಾದ ಬಾಂಡ ಎಂಬಲ್ಲಿ ಪ್ಲೇಗಿನಿಂದ ಕೆಲವು ಮರಣಗಳಾದವು ಈ ಸಂಗತಿಯನ್ನು ಸಿವಿಲ್ ಸರ್ಜನ್‌ರು ಮೇಲಣ ಅಧಿಕಾರಿಗಳಿಗೆ ತಿಳಿಸಿದಾಗ ಮ್ಯಾಜಿಸ್ಟ್ರೇಟ್ ಮತ್ತು ಕಲೆಕ್ಟರಾದ ಸ್ಟಾರ್ಕ್ ಎಂಬವರು ಆ ಪಟ್ಟಣದ ನಿವಾಸಿಗಳೆಲ್ಲರೂ ಊರನ್ನು ಬಿಡಬೇಕೆಂದು ಪ್ರಸಿದ್ಧ ಪತ್ರಿಕೆಯ ಮೂಲಕ ತಿಳಿಯಪಡಿಸಿದರು ಯಾರನ್ನೂ ಬಲವಂತಮಾಡದಿದ್ದರೂ 20,000 ಜನರ ಪೈಕಿ 17,000 ಜನರು ಅನಾವಶ್ಯಕವಾಗಿ ತೊಂದರೆಪಟ್ಟುಕೊಂಡು, ಏಕಾಏಕಿ ಊರನ್ನು ಬಿಟ್ಟರು ತಾವು ಯಾವ ವಿಧವಾಗಿಯೂ ಜನರನ್ನು ತೊಂದರೆಪಡಿಸಲಿಲ್ಲವೆಂದು ಕಲೆಕ್ಟರವರು ಹೇಳುತ್ತಾರೆ

ಹಿಂದುಸ್ಥಾನದ ಟಪಾಲಾಫೀಸುಗಳ ವಾರ್ಷಿಕ ರಿಪೋರ್ಟು ಈಗ ಪ್ರಕಟವಾಗಿದೆ. ಇದರಿಂದ ತಿಳಿದುಬರುವ ಮುಖ್ಯಾಂಶಗಳೇನಂದರೆ—1912-13 ನೇ ಸಾಲಿನಲ್ಲಿ ಈ ಇಲಾಖೆಯಲ್ಲಿ 92,170 ಜನರು ಕೆಲಸ ಮಾಡುತ್ತಿದ್ದರು. 10,140 ಲಕ್ಷ ಪದಾರ್ಥಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಟ್ಟವು 2,68,20,000 ರೂ ಬೆಲೆಯುಳ್ಳ ಟಪಾಲಾಫೀಸಿನ ಸ್ಟಾಂಪುಗಳು ಬಿಕರಿಯಾದವು. ವಿ. ಪಿ ಪಾರ್ಸಲ್ ಬಾಬಿನಿಂದ 1,087½ ಲಕ್ಷ ರೂ. ಆದಾಯ ಬಂದಿದೆ ಅನೇಕ ತಂತೀ ಆಫೀಸುಗಳನ್ನು ಟಪಾಲಾಫೀಸುಗಳ ಮೇಲ್ವಿಚಾರಣೆಗೆ ಒಳಪಡಿಸಿರುವದೇ ಈ ವರುಷ ನಡಿಸಿದ ಬದಲಾವಣೆಗಳಲ್ಲಿ ಮುಖ್ಯವಾದದ್ದು. ಗತವರ್ಷದಲ್ಲಿ 52½ ಕೋಟಿ ರೂಪಾಯಿ ಬೆಲೆಯುಳ್ಳ 29,618,384 ಮನಿಯಾರ್ಡರುಗಳು ಪಾವತಿಯಾದವು. ತಂತಿಯ ಮೂಲಕ ಹಣವನ್ನು ರವಾನಿಸುವ ಪದ್ಧತಿಯು ಈಗೀಗ ಹೆಚ್ಚುತ್ತಾ ಇದೆ. ಸೇವಿಂಗ್ಸ್ ಬ್ಯಾಂಕಿನಲ್ಲಿ 15,06,800 ಜನರು ಹಣವನ್ನು ಇಟ್ಟು ಲೇವಾದೇವಿ ನಡಿಸಿರುತ್ತಾರೆ. ಕಳೆದ ವರುಷ ಅನೇಕರು ಟಪಾಲಾಫೀಸಿನ ನ್ಯೂನಾತಿರಿಕ್ತಗಳ ವಿಷಯವಾಗಿ ಆಕ್ಷೇಪಣೆಮಾಡಿ ಇಲಾಖೆಯವರಿಗೆ ಬರೆದಿರುತ್ತಾರೆ. ಅವುಗಳನ್ನೆಲ್ಲಾ ವಿಚಾರಮಾಡಲಾಗಿ ಅವುಗಳ ಪೈಕಿ ಅನೇಕ ಫಿರ್ಯಾದುಗಳಿಗೆ ಸಾಕಾದಷ್ಟು ಕಾರಣವಿಲ್ಲವೆಂದು ತಿಳಿದುಬಂದಿದೆ ಎಲ್ಲಾ ಬಾಬಿನಿಂದಲೂ ಈ ಇಲಾಖೆಯಲ್ಲಿ 28,03,916 ರೂ ಖರ್ಚುಕಳೆದು ಉತ್ಪತ್ತಿಯಾಗಿರುತ್ತದೆ.

ಮೈಸೂರು ಸರ್ಕಾರದ ವ್ಯವಸಾಯದ ಇಲಾಖೆಯವರಿಂದ ಬರೆಯಲ್ಪಟ್ಟ ಸಂಗತಿಗಳು.

[ವ್ಯವಸಾಯದ ವಿಚಾರವಾಗಿ ತಿಳಿಯಬೇಕಾದ ಸಂಗತಿಗಳ ಮತ್ತು ವ್ಯವಸಾಯಾಭಿವೃದ್ಧಿಗೆ ಬೇಕಾಗುವ ಸಹಾಯದ ವಿಷಯವಾಗಿ ಬರೆಯುವ ಕಾಗದಗಳನ್ನು ಬೆಂಗಳೂರಲ್ಲಿರುವ ವ್ಯವಸಾಯದ ಇಲಾಖಾ ಡೈರೆಕ್ಟರವರಿಗೆ ಬರೆಯಬೇಕು]

ವ್ಯವಸಾಯವೂ, ಗೊಬ್ಬರವನ್ನು ಕೂಡಿಸುವುದೂ

ನಮ್ಮ ಸೀಮೆಯ ರೈತರು ಕೂಡಿಹಾಕುವ ಗೊಬ್ಬರದಲ್ಲಿ ಸಾಧಾರಣವಾಗಿ ಸಸ್ಯಾಹಾರಾಂಶಗಳು ಎಷ್ಟರ ಮಟ್ಟಿಗೆ ಇರುತ್ತದೆಂಬುದನ್ನು ತಿಳಿದುಕೊಳ್ಳುವದಕ್ಕಾಗಿ ಬೆಂಗಳೂರು ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೋಕುಗಳಿಂದಲೂ ದನದ ಗೊಬ್ಬರವನ್ನು ತಂದು ಅಜಮಾಯಿಷಿ ಮಾಡಿದೆ ಈ ಡಿಸ್ಟ್ರಿಕ್ಟಿನ ಹಳ್ಳಿಗಳಲ್ಲೆಲ್ಲಾ ದನದ ಗೊಬ್ಬರವನ್ನು ಕೂಡಿಹಾಕುವುದರಲ್ಲಿ ಒಂದು ವಿಧಾನವು ಮಾತ್ರ ವಿಶೇಷವಾಗಿ ಪ್ರಚಾರದಲ್ಲಿದೆ ದನದ ಕೊಟ್ಟಿಗೆಯನ್ನು ನಿತ್ಯವೂ ಗುಡಿಸಿ ಆ ಕಸವನ್ನೆಲ್ಲಾ ರೈತರು ತಮ್ಮ ಹಳ್ಳಿಗಳ ಹತ್ತಿರ ಬೇರೆ ಬೇರೆ ಗುಣಿಗಳಲ್ಲಿ ಹಾಕುವರು ದನಗಳ ಕೆಳಕ್ಕೆ ಸೋಜು ಹುಲ್ಲನ್ನಾಗಲಿ ಯಾವ ವಿಧವಾದ ಎಲೆ ಕಡ್ಡಿಗಳನ್ನಾಗಲಿ ಹಾಕುವ ಪದ್ಧತಿಯೂ ಯಾವ ಹಳ್ಳಿಯಲ್ಲಿಯೂ ಕಂಡು ಬರಲಿಲ್ಲ, ಮತ್ತು ಮಳೆಯ ನೀರು ಬಿದ್ದು ಗೊಬ್ಬರವು ಕೆಟ್ಟುಹೋಗದ ಹಾಗೆ ಮೇಲೆ ಯಾವ ವಿಧವಾದ ಹೊದಿಕೆಯನ್ನೂ ಹಾಕುವ ಪದ್ಧತಿಯು ಎಲ್ಲಿಯೂ ಇಲ್ಲ.

ಹೀಗೆ ಅಜಮಾಯಿಷಿಮಾಡಿದ ಗೊಬ್ಬರಗಳಲ್ಲೆಲ್ಲಾ ಸಾರಜನಕವು ಸರಾಸರಿ ಶೇಕಡ 7 ರಷ್ಟು ಮಾತ್ರ ಇರುತ್ತದೆ. ಅಪೂರ್ವವಾಗಿ ಕೆಲವು ಮಾದರಿಗಳಲ್ಲಿ ಮಾತ್ರ ಶೇಕಡ 1-2 ರಷ್ಟು ಇತ್ತು ಸಸ್ಯಾಹಾರಗಳಲ್ಲಿ ಮುಖ್ಯವಾದ ಸಾರಜನಕವು ಇಷ್ಟು ಕಮ್ಮಿಯಾಗಿರುವುದಕ್ಕೆ ಕಾರಣವೇನೆಂದು ವಿಚಾರಮಾಡಿದರೆ ಗಂಜಳವನ್ನು ಸ್ವಲ್ಪ ಮಟ್ಟಿಗಾದರೂ ಗೊಬ್ಬರದಲ್ಲಿ ಸೇರಿಸದೆ ನೆಲದಲ್ಲಿಯೇ ಇಂಗುವುದಕ್ಕೆ ಬಿಡುವುದೇ ಇದರ ಕಾರಣವೆಂದು ವ್ಯಕ್ತವಾಗುತ್ತದೆ

ಹೀಗೆ ರೈತರು ಕೂಡಿಹಾಕುವ ಗೊಬ್ಬರಗಳಿಗೆ ಹೋಲಿಸಿ ನೋಡುವದಕ್ಕಾಗಿ ವ್ಯವಸಾಯದ ಇಲಾಖೆಗೆ ಸೇರಿದ ಹೆಬ್ಬಾಳದ ಪರೀಕ್ಷಾಕ್ಷೇತ್ರದಿಂದ ಕೆಲವು ಗೊಬ್ಬರಗಳ ಮಾದರಿಗಳನ್ನು ತಂದು ರಸಾಯನಶಾಸ್ತ್ರರೀತ್ಯಾ ಪರೀಕ್ಷಿಸಿದ್ದಾಯಿತು ಹೆಬ್ಬಾಳದಲ್ಲಿ ಗೊಬ್ಬರವನ್ನು ಕೂಡಿಡುವ ವಿಧಾನಕ್ಕೂ, ಸಾಧಾರಣವಾಗಿ ರೈತರು ಕೂಡಿಡುವ ವಿಧಾನಕ್ಕೂ ಒಂದು ವ್ಯತ್ಯಾಸ ಮಾತ್ರವಿರುವುದು ದನಗಳ ಗಂಜಳವನ್ನು ನೆಲದಲ್ಲಿ ಇಂಗುವುದಕ್ಕೆ ಬಿಡದೆ ಕೊಟ್ಟಿಗೆಯಲ್ಲಿ ಮಾಡಿರುವ ಗುಣಿಗಳಲ್ಲಿ ಸೇರಿಸಿ ಅದನ್ನೂ ಗೊಬ್ಬರದ ರಾಸಿಯ ಮೇಲೆ ಹಾಕುತ್ತಾರೆ ಹೀಗೆ ಇಡಲ್ಪಟ್ಟಿರುವ ಗೊಬ್ಬರದ 6 ಮಾದರಿಗಳನ್ನು ಪರೀಕ್ಷಿಸಿದ್ದರಲ್ಲಿ ಸಾರಜನಕವು ಶೇಕಡ 1.03 ರಿಂದ 1 5 ರ ವರೆಗೂ ಇತ್ತು ಶೇಕಡ 1 ಕ್ಕಿಂತ ಕಮ್ಮಿಯಾಗಿ ಯಾವುದರಲ್ಲಿಯೂ ಇರಲಿಲ್ಲ ಗಂಜಳವನ್ನು ನಷ್ಟಪಡಿಸುವುದರಿಂದ ಬೆಳೆಗೆ ಸುಲಭವಾಗಿ ಒದಗುವ ಸಾರಜನಕವು ಎಷ್ಟರಮಟ್ಟಿಗೆ ವ್ಯರ್ಥವಾಗುವದೆಂದು ಇದರಿಂದ ವಿಶದವಾಗಿ ಗೊತ್ತಾಗುವುದು ದನಗಳ ಸಗಣಿಗಿಂತಲೂ ಗಂಜಳವು ಒಂದು ವಿಷಯದಲ್ಲಿ ಬಹಳ ಉತ್ಕೃಷ್ಟವಾಗಿರುವುದು ಗಂಜಳದಲ್ಲಿ ಬೆಳೆಗೆ ಸುಲಭವಾಗಿ ಒದಗುವ ರೀತಿಯಲ್ಲಿರುವ ಸಾರಜನಕವು ಮತ್ತು ಪೋಟಾಷು ಹೆಚ್ಚಾಗಿರುವುದು ಆದರೆ ರಂಜಕಾಮ್ಲವು ಸಗಣಿಗಿಂತಲೂ ಗಂಜಳದಲ್ಲಿ ಬಹಳ ಕಮ್ಮಿ ಆದ್ದರಿಂದಲೇ ಗಂಜಳವನ್ನೂ ಸಗಣಿಯನ್ನೂ ಸೇರಿಸಿ ಉಪಯೋಗಿಸುವುದರಿಂದ ಒಂದರಲ್ಲಿ ಕಮ್ಮಿಯಾಗಿರುವ ಸಸ್ಯಾಹಾರಾಂಶಗಳು ಇನ್ನೊಂದರಲ್ಲಿ ಜಾಸ್ತಿಯಾಗಿರುವುದರಿಂದ ಎರಡೂ ಸೇರಿ ಒಳ್ಳೇ ರಸವತ್ತಾದ ಗೊಬ್ಬರವಾಗುವುದು

ದನಗಳ ಸಗಣಿಗಿಂತ ಗಂಜಳವು ಕೆಲವು ವಿಷಯಗಳಲ್ಲಿ ಎಷ್ಟು ಸಾರವತ್ತಾದ್ದೆಂಬುವದು ಪರೀಕ್ಷಿಸಿ ನೋಡಲಾಗಿದೆ ಸರಾಸರಿ ಸಗಣಿಗಿಂತ ಗಂಜಳದಲ್ಲಿ 2½ ಯಷ್ಟು ಸಾರಜನಕವೂ 6 ರಷ್ಟು ಸೋಡೀ ಮತ್ತು ಪೋಟಾಷೂ ಇರುವುದೆಂಬಂಶವು ಇದರಿಂದ ಕಾಣಬರುವುದು. ಆದ್ದರಿಂದ ಗೊಬ್ಬರವನ್ನು ಕಾಪಾಡುವ ವಿಷಯದಲ್ಲಿ ರೈತರು ಈಗ ತೆಗೆದುಕೊಳ್ಳುವದಕ್ಕಿಂತ ಹೆಚ್ಚು ಮುತುವರ್ಜಿಯನ್ನು ತೆಗೆದುಕೊಂಡು ಗಂಜಳವನ್ನು ನಷ್ಟಪಡಿಸದಿದ್ದರೆ ಮೊದಲು ಸ್ವಲ್ಪ ಹೆಚ್ಚು ಲಾಗುವದು ಆದರೂ ಒಟ್ಟಿನ ಮೇಲೆ ಬಹಳ ಫಾಯಿದೆಯಾಗುವದರಲ್ಲಿ ಸಂದೇಹವಿಲ್ಲ.

ಸರಾಸರಿ ಒಬ್ಬ ರೈತನು ಒಂದು ವರ್ಷಕ್ಕೆ 20 ಭಂಡಿ ದನಗಳ ಗೊಬ್ಬರವನ್ನು ಕೂಡಿಡುವನೆಂದು ಇಟ್ಟುಕೊಂಡರೆ ಮೇಲೆ ಹೇಳಿರುವ ಅಜಮಾಯಿಷಿಗಳ ಮೇರೆಗೆ ಅದರಲ್ಲಿ 125 ಪೌಂಡುಗಳಷ್ಟು ಸಾರಜನಕವು ಇರುವುದು ಅದೇ ರೈತನು ತನ್ನ ದನಗಳ ಗಂಜಳವನ್ನು ಕಳೆಯದೆ ಸಗಣಿಯೊಂದಿಗೆ ಸೇರಿಸುತ್ತಾ ಬಂದರೆ ಹಾಗೆ ಕೂಡಿಹಾಕುವ ಗೊಬ್ಬರದಲ್ಲಿ 125 ಪೌಂಡಿಗೆ ಬದಲಾಗಿ 215 ಪೌಂಡು ಸಾರಜನಕವು ಇರುವುದು ಅಂದರೆ ಮೊದಲಿಗಿಂತಲೂ 90 ಪೌಂಡು ಸಾರಜನಕವು ಹೆಚ್ಚುವದು. ಈ 90 ಪೌಂಡು ಸಾರಜನಕವನ್ನು ಬೇರೆ ವಿಧದಲ್ಲಿ ಭೂಮಿಗೆ ಒದಗಿಸಬೇಕಾದರೆ ಭಂಡಿ ಒಂದಕ್ಕೆ 12 ಆಣೆ ಮೇರೆಗೆ 15 ಬಂಡಿ ದನದ ಗೊಬ್ಬರವನ್ನು ಕೊಂಡುಕೊಳ್ಳಬೇಕಾಗುವದು ಈ ಮೇಲೆ ಹೇಳಿದ ನಿದರ್ಶನಗಳಿಂದ ಗೊಬ್ಬರವನ್ನು ಕೂಡಿಹಾಕುವ ವಿಷಯದಲ್ಲಿ ಸ್ವಲ್ಪ ಹೆಚ್ಚು ಮುತುವರ್ಜಿಯನ್ನು ತೆಗೆದುಕೊಂಡು ಗಂಜಳವನ್ನು ನಷ್ಟಪಡಿಸದೇ ಇರುವುದರಿಂದ ರೈತನಿಗೆ ಬಹಳ ಫಾಯಿದೆ ಉಂಟೆಂದು ಸ್ಪಷ್ಟವಾಗುವದು.

ದನದ ಗೊಬ್ಬರವನ್ನು ಜಮೀನಿಗೆ ಉಪಯೋಗಿಸುವುದರಲ್ಲಿ ಇನ್ನೊಂದು ಪದ್ಧತಿಯು ಬೆಂಗಳೂರು ಡಿಸ್ಟ್ರಿಕ್ಟಿನ ಕೆಲವು ಹಳ್ಳಿಗಳಲ್ಲಿರುವದು. ದನಗಳ ಮಂದೆಯನ್ನು ನಾಲ್ಕಾರು ದಿನಗಳವರೆಗೆ ಜಮೀನಿನ ಮೇಲೆಯೇ ಕೂಡಿ ನಂತರ ಅಲ್ಲಿಂದ ಮತ್ತೊಂದು ಜಮೀನಿಗೆ ಹೊಡೆದು ಈ ರೀತಿ ಜಮೀನುಗಳಿಗೆಲ್ಲಕ್ಕೂ ಗೊಬ್ಬರವು ಬೀಳುವಂತೆ ಮಾಡುವರು. ಹೀಗೆ ಮಾಡವುದರಿಂದ ದನಗಳ ಸಗಣಿಯೂ ಗಂಜಳವೂ ಕೂಡಿ ಜಮೀನಿಗೆ ಸೇರುವದಲ್ಲದೆ ಕೆಳಗೆ ಬಿದ್ದ ಸಗಣಿಯು ದನಗಳಿಂದ ಚೆನ್ನಾಗಿ ತುಳಿಯಲ್ಪಡುವದರಿಂದ ಹುಳಿ ಹಿಡಿಯುವದಕ್ಕೆ ಅವಕಾಶವಿಲ್ಲದಂತಾಗುವದು ಆದ್ದರಿಂದ ಸಾಧ್ಯವಾದ ಕಡೆಗಳಲ್ಲಿ ಈ ಪದ್ಧತಿಯನ್ನು ಅವಲಂಬಿಸುವದು ಒಳ್ಳೆಯದೆಂದೇ ಹೇಳಬೇಕು

ಮೇಲೆ ಹೇಳಿದ ಎರಡು ವಿಧಾನಗಳಿಗಿಂತಲೂ ದನಗಳ ಕೊಟ್ಟಿಗೆಯಲ್ಲಿ ಅವುಗಳ ಕೆಳಕ್ಕೆ ಸೋಜು ಹುಲ್ಲನ್ನಾಗಲಿ ಕಡ್ಡಿ ಸೊಪ್ಪುಗಳನ್ನಾಗಲಿ ಹಾಕಿ ಗಂಜಳವು ಸೋಜು ಹುಲ್ಲಿನಿಂದ ಹೀರಲ್ಪಟ್ಟು ಸಗಣಿಯು ದನಗಳಿಂದ ಚೆನ್ನಾಗಿ ತುಳಿಯಲ್ಪಡುವ ಹಾಗೆ ಮಾಡುವ ಪದ್ಧತಿಯು ಬಹಳ ಉತ್ಕೃಷ್ಟವಾದದ್ದೆಂದು ಧಾರಾಳವಾಗಿ ಹೇಳಬಹುದು ರಸಾಯನ ಶಾಸ್ತ್ರರೀತ್ಯಾ ಪರೀಕ್ಷೆ ಮಾಡಿದ್ದರಲ್ಲಿ ಇಂಥಾ ಗೊಬ್ಬರವು ಮಿಕ್ಕ ಗೊಬ್ಬರಗಳಿಗಿಂತ ರಸವತ್ತಾದ್ದೆಂದು ಗೊತ್ತಾಗುವುದು ಈ ವಿಧದಲ್ಲಿ ಗೊಬ್ಬರವನ್ನೇ ಕಾಪಾಡುವದರಿಂದ ಗಂಜಳವು ನಷ್ಟವಾಗದಿರುವದಲ್ಲದೆ ಗೊಬ್ಬರವೆಲ್ಲವೂ ದನಗಳಿಂದ ಚೆನ್ನಾಗಿ ತುಳಿಯಲ್ಪಟ್ಟು ಒತ್ತಾಗಿರುವದರಿಂದ ಹುಳಿ ಹಿಡಿಯುವುದಕ್ಕೆ ಅವಕಾಶವಿರುವದಿಲ್ಲ ಇದೂ ಅಲ್ಲದೆ ಹೀಗೆ ಸೋಜು ಹುಲ್ಲನ್ನು ದನಗಳ ಕೆಳಕ್ಕೆ ಉಪಯೋಗಿಸುವದರಿಂದ ಇತರ ವಿಧದಲ್ಲಿ ನಷ್ಟವಾಗುತ್ತಿದ್ದ ಅಮೋನಿಯ ಉಳಿಯುವದಲ್ಲದೆ ಭೂಮಿಯಲ್ಲಿ ಕೊಳೆಯುವ ಪದಾರ್ಥಗಳನ್ನು ಹೆಚ್ಚಿಸುವದರಿಂದ ಕ್ಷ್ಯಾವನ್ನು ಹೀರಿ ಇಟ್ಟುಕೊಂಡಿರುವ ಗುಣವನ್ನು ವೃದ್ಧಿಗೊಳಿಸುವುದು

ದನದ ಗೊಬ್ಬರವು ಸಾಧಾರಣವಾಗಿ ಸುಲಭವಾಗಿ ಕೆಟ್ಟುಹೋಗುವ ಪದಾರ್ಥ ಆಗಾಗ್ಗೆ ಗೊಬ್ಬರವನ್ನು ತೆಗೆದುಕೊಂಡು ಹೋಗಿ ಹೊಲದಲ್ಲಿ ಹರಡುವದರಿಂದ ಹೀಗೆ ಗೊಬ್ಬರವು ಕೆಟ್ಟುಹೋಗುವುದರಿಂದಾಗುವ ನಷ್ಟವು ಕಮ್ಮಿಯಾದರೂ ಹೀಗೆ ಮಾಡಲು ಅನುಕೂಲವಿಲ್ಲದೆ ಅನೇಕ ದಿನಗಳವರೆಗೂ ಕೂಡಿಡಬೇಕಾಗಿರುವಾಗ ನಷ್ಟವಾಗದಂತೆ ನೋಡಿಕೊಳ್ಳಬೇಕಾದರೆ ನಮ್ಮ ರೈತರು ಸ್ವಲ್ಪ ಹೆಚ್ಚು ಶ್ರಮವನ್ನು ತೆಗೆದುಕೊಳ್ಳಬೇಕಾಗಿದೆ

ಆದ್ದರಿಂದ ನಮ್ಮ ಸೀಮೆಯ ರೈತರು ಈ ಕೆಳಗೆ ಹೇಳಿರುವ ವಿಷಯಗಳಿಗೆ ಸಾಧ್ಯವಾದ ಮಟ್ಟಿಗೂ ಗಮನವನ್ನು ಕೊಟ್ಟರೆ ಗೊಬ್ಬರವು ಹೆಚ್ಚು ಸಾರವತ್ತಾಗುವದರಲ್ಲಿ ಯಾವ ಸಂದೇಹವೂ ಇರುವದಿಲ್ಲ (1) ಸಾಧ್ಯವಾದ ಮಟ್ಟಿಗೆ ಗಂಜಳವನ್ನು ಕಳೆಯದೆ ಅದನ್ನು ಸಗಣಿಯೊಡನೆ ಸೇರಿಸಬೇಕು (2) ಹುಳಿ ಹಿಡಿಯುವದರಿಂದಾಗುವ ನಷ್ಟವನ್ನು ಕಮ್ಮಿ ಮಾಡುವುದಕ್ಕಾಗಿ ಸೋಜು ಹುಲ್ಲನ್ನಾಗಲಿ ಸೊಪ್ಪನ್ನಾಗಲಿ ದನಗಳ ಕೆಳಕ್ಕೆ ಹಾಕಿ ಗೊಬ್ಬರವನ್ನು ಒಳಗೆ ಗಾಳಿ ಆಡದಂತೆ ಒತ್ತಾಗಿಯೂ ತೇವವಾಗಿಯೂ ಇಟ್ಟಿರಬೇಕು (3) ಮಳೆಯ ನೀರು ಬಿದ್ದು ಗೊಬ್ಬರದಲ್ಲಿರುವ ಸಸ್ಯಾಹಾರಾಂಶಗಳು ಕರಗಿ ನಷ್ಟವಾಗದಂತೆ ಗೊಬ್ಬರವನ್ನು ಬಯಲಿನಲ್ಲಿ ಕುಪ್ಪೆ ಹಾಕದೆ ಗುಡಿಸಲಿನಲ್ಲಾಗಲಿ ಒಂದು ಚಪ್ಪರದ ಕೆಳಗಾಗಲಿ ಗುಣಿಗಳನ್ನು ಮಾಡಿ ಅವುಗಳಲ್ಲಿ ಗೊಬ್ಬರವನ್ನು ಕೂಡಿಹಾಕಬೇಕು (4) ಕುರಿಗೊಬ್ಬರ, ದನಗಳ ಗೊಬ್ಬರ ಮೊದಲಾದ ಬೇರೆ ಬೇರೆ ವಿಧವಾದ ಗೊಬ್ಬರಗಳನ್ನು ಚೆನ್ನಾಗಿ ಬೆರಕೆ ಮಾಡಿಟ್ಟಿರಬೇಕು (5) ಗೊಬ್ಬರವನ್ನು ಹೊಲದಲ್ಲಿ ಸಣ್ಣ ಸಣ್ಣ ಕುಪ್ಪೆಗಳಾಗಿ ಹಾಕದೆ ಸಮನಾಗಿ ಹರಡಬೇಕು ಏಕೆಂದರೆ ಹೀಗೆ ಕುಪ್ಪೆಗಳಾಗಿ ಬಿಟ್ಟರೆ ಅವರಲ್ಲಿರುವ ಸಾರಜನಕವು ನೀರಿನಲ್ಲಿ ಕರಗಿ ಕುಪ್ಪೆ ಹಾಕಿರುವ ಸ್ಥಳಗಳಲ್ಲಿಯೇ ಇಂಗಿ ಇತರ ಭಾಗಗಳಿಗೆ ಇಲ್ಲದಂತೆ ನಷ್ಟವಾಗುವುದು ಇದರಿಂದ ಹೊಲದ ಕೆಲವು ಭಾಗಗಳು ಹೆಚ್ಚು ಸಾರವನ್ನು ಹೊಂದಿ ಮಿಕ್ಕ ಭಾಗಗಳಿಗೆ ಇಲ್ಲದೇನೇ ಹೋಗುವದು (6) ಗಂಜಳವು ಕೆಲವು ಸಸ್ಯಾಹಾರಾಂಶಗಳನ್ನೂ, ಸಗಣಿಯು ಕೆಲವು ಸಸ್ಯಾಹಾರಾಂಶಗಳನ್ನೂ ಹೆಚ್ಚಾಗಿ ಉಂಟಾಗಿರುವದರಿಂದ ಇವೆರಡನ್ನೂ ಸೇರಿಸಿ ಉಪಯೋಗಿಸಿದರೆ ಸಸಿಗಳಿಗೆ ಮುಖ್ಯವಾಗಿ ಬೇಕಾಗಿರುವ ಆಹಾರಾಂಶಗಳೆಲ್ಲವೂ ಇರುವ ಸಾರವತ್ತಾದ ಗೊಬ್ಬರವಾಗುವದಾಗಲಿ ಇವುಗಳನ್ನು ಬೇರೆ ಬೇರೆಯಾಗಿ ಉಪಯೋಗಿಸುವದರಿಂದ ಅಷ್ಟು ಅನುಕೂಲವಾಗಲಾರದು (7) ಗೊಬ್ಬರವನ್ನು ಹೊಲಕ್ಕೆ ಹೊಡೆದಾಗ ಅಲ್ಲಲ್ಲಿ ಸಣ್ಣ ಸಣ್ಣ ಕುಪ್ಪೆಗಳಾಗಿ ಬಿಡದೆ ಮಣ್ಣಿನ ಜೊತೆಗೆ ಚೆನ್ನಾಗಿ ಬೆರೆಯುವಂತೆ ಮಾಡಬೇಕು

ಬಾತ್ಮಿದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮಿದಾರರ ಸ್ವಂತ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ನಿಷ್ಪಕ್ಷಪಾತಿ, ಶಿವಮೊಗ್ಗೆ—ನಿಮ್ಮ ಬಾತ್ಮಿಯನ್ನು ನೀವು ಹೇಳುವ ರೀತಿ ಪ್ರಕಟಿಸಲಾರೆವು

ಸಂಸ್ಥಾನದ ಕಂಟ್ರೋಲರ್ ಮೆ॥ ಜಿ ಎಸ್ ಚಕ್ರವರ್ತಿಯವರು ಕಳೆದ ತಿಂಗಳು ತಾ 22 ರಲ್ಲಿ ತಲಕಾಡು ಪರಸ್ಪರಸಹಾಯ ಸಂಘದ ಆಫೀಸಿಗೆ ಹೋಗಿ ಸಂಘದ ಆಡಳಿತ ಮತ್ತು ಲೆಕ್ಕಪತ್ರಗಳನ್ನು ನೋಡಿ ತೃಪ್ತಿಪಟ್ಟು ಬರೆದಿರುವ ಅಭಿಪ್ರಾಯವನ್ನು ಒಬ್ಬ ಬಾತ್ಮಿದಾರರು ಬರೆದು ಕಳುಹಿಸಿರುವರೆ ಇದನ್ನು ಪ್ರಕಟಮಾಡಬೇಕಾದ ಅಗತ್ಯವೇನೂ ಕಾಣುವುದಿಲ್ಲ

—ಎಡಿ.]

ಕರೆಸ್‌ಪಾಂಡೆನ್ಸ್.

ಪತ್ರಿಕೆಗಳ ಪರಸ್ಪರ ಮರ್ಯಾದಾ ಕ್ರಮ

ಅಯ್ಯಾ,

ಈ ಸಲ ಪ್ರಜಾಪ್ರತಿನಿಧಿಸಭೆಯಲ್ಲಿ ನಡೆದ ಐದು ಚರ್ಚೆಗಳು ಸುಮಾರು 8½ ಕಾಲಮುಗಳು ಒಂದೇ ರೀತಿಯಲ್ಲಿ ನಿಮ್ಮ ಪತ್ರಿಕೆಯಲ್ಲಿಯೂ ಒಕ್ಕಲಿಗರ ಪತ್ರಿಕೆಯಲ್ಲಿಯೂ ಬರೆಯಲ್ಪಟ್ಟಿರುತ್ತದೆ ಇದರಿಂದ ಈ ಎರಡು ಪತ್ರಿಕೆಗಳಲ್ಲಿ ಒಂದು ಮತ್ತೊಂದನ್ನು ನೋಡಿ ಏನೂ ಪ್ರಯಾಸವಿಲ್ಲದೆ ಕಾಪಿ ಮಾಡಿರುತ್ತದೆ ಇದರಿಂದ ಒಬ್ಬರ ಕಷ್ಟಾರ್ಜಿತವನ್ನು ಇನ್ನೊಬ್ಬರು ಬಹು ಸುಲಭವಾಗಿ ಉಂಡು ಘನತೆಯನ್ನು ಪಡೆದಂತಾಯಿತು ಆದ್ದರಿಂದ ನಿಮ್ಮ ಪತ್ರಿಕೆ ಒಕ್ಕಲಿಗರ ಪತ್ರಿಕೆಯನ್ನು ನೋಡಿ ಕಾಪಿಮಾಡಿದ್ದಾಯಿತೋ, ಇಲ್ಲವೇ ಒಕ್ಕಲಿಗರ ಪತ್ರಿಕೆಯು ನಿಮ್ಮದನ್ನು ನೋಡಿ ಕಾಪಿಮಾಡಿರುತ್ತದೋ ದಯವಿಟ್ಟು ತಿಳಿಸುವಿರಾ?

ನಿಮ್ಮ ಪತ್ರಿಕಾ ವಾಚಕ.

[ಆ ಎರಡು ಪತ್ರಿಕೆಗಳ ತಾರೀಖುಗಳನ್ನೂ ಹೋಲಿಸಿ ನೋಡಿದರೆ ಯಾವುದು ಮೊದಲು ಪ್ರಿಂಟಾಯಿತೆಂದು ನಿಮಗೇ ಗೊತ್ತಾಗುತ್ತದೆ —ಎಡಿ]

ಬಾಲಕರ ಕಾಯಪುಷ್ಟಿ

ಅಯ್ಯಾ,

ಅನೇಕ ಬಾಲಕರು ಕಾಯಪುಷ್ಟಿಯಿಲ್ಲದೆಯೂ, ಮಹೇಡಿಗಳಾಗಿಯೂ ಇರುವರು ಇದಕ್ಕೊಂದು ಕಾರಣವುಂಟು ಈ ಹುಡುಗರ ತಾಯಿತಂದೆಗಳು ತಮ್ಮ ಮಕ್ಕಳನ್ನು ಹೊರಗೆ ಆಟನಾಟಗಳಿಗೆ ಕಳುಹಿಸದೆ ಯಾವಾಗಲೂ ಮನೆಯಲ್ಲಿಯೇ ಇಟ್ಟುಕೊಂಡು ಅವರನ್ನು ಮುದ್ದಿಸಿ ಅವರಿಗೆ ಸಕಾಲದಲ್ಲಿ ವಿದ್ಯಾಭ್ಯಾಸ ಮಾಡಿಸದೆ ಕೆಡಿಸುವರು ಇದರಿಂದ ತಮ್ಮ ಮನೆಗೆ ತಾವೇ ಬೆಂಕಿಯಿಟ್ಟುಕೊಂಡ ಹಾಗಾಗುವುದು ಹೀಗೆ ಅನೇಕ ಬಾಲಕರು ಕಟ್ಟು 18-20 ವಯಸ್ಸಾದಾಗ್ಯೂ ಲೋವರ್ ಸೆಕೆಂಡರಿ ಪರೀಕ್ಷೆಯಿಲ್ಲದೆ ಗೋಳಾಡುವರು 12-13 ವಯಸ್ಸಿನ ಬಾಲಕರೂ ಸಹ ಮನೆ ಬಿಟ್ಟು ಹೋಗಕೂಡದೆಂದೂ, ಹಾಗೆ ಹೋದರೆ ಅವರಿಗೆ ಮನೆಯಲ್ಲಿ ಅನ್ನಾಹಾರಾದಿಗಳನ್ನು ಕೊಡುವುದಿಲ್ಲನೆಂದೂ ಪೋಷಕರು ಹೆದರಿಸಿ ಅವರನ್ನು ಆಚೆಗೆ ಕಳುಹಿಸುವದಿಲ್ಲ ಈಗಲಾದರೂ ಅಂಥಾ ಬುದ್ಧಿಹೀನರಾದ ಜನಗಳು ತಮ್ಮ ಮಕ್ಕಳಿಗೆ ಸರಿಯಾದ ವಿದ್ಯೆಯೂ, ವ್ಯಾಯಾಮವೂ ದೊರಕುವಂಥ ತಕ್ಕ ಏರ್ಪಾಡನ್ನು ಮಾಡಿ, ಅವರಿಗೆ ಲೋಕವ್ಯಾಪಾರವು ಸ್ವಲ್ಪವಾದರೂ ತಿಳಿಯುವ ರೀತಿ ಓಡಾಡುವಂತೆ ಅವಕಾಶಕೊಡುವರೆ ಮ ನಂಬಿದೇನೆ

ಮಾಲೂರು — ವಾಚಕ.

[ಈ ಬಾತ್ಮಿದಾರರು ಹೇಳುವ ರೀತಿ ಪಟ್ಟಣವಾಸಗಳಲ್ಲೂ ಆಚರಣೆಯಲ್ಲಿದೆ ಮಕ್ಕಳು ದುಷ್ಟರ ಸಹವಾಸಕ್ಕೆ ಬೀಳದಂತೆ ನೋಡಿಕೊಳ್ಳಬೇಕಲ್ಲದೆ ತಂದೆತಾಯಿಗಳು ಅವರನ್ನು ಅನಾವಶ್ಯವಾಗಿ ನಿರ್ಬಂಧಪಡಿಸುವದರಿಂದ ಅವರ ದೇಹಧಾರಾಢ್ಯವು ಕೆಡುವುದಕ್ಕೂ, ಮನೋಧರ್ಮವು ಸಂಕುಚಿತವಾಗುವುದಕ್ಕೂ ಧೈರ್ಯಸ್ಥೈರ್ಯಾದಿಗಳು ಉಂಟಾಗದೆಹೋಗುವುದಕ್ಕೂ ಕಾರಣವಾದೀತು —ಎಡಿ]

ಒಪ್ಪರಿಂದಾಗುತ್ತಿರುವ ಕಷ್ಟನಷ್ಟಗಳ ಫಿರ್ಯಾದು

ಅಯ್ಯಾ,

ಚನ್ನರಾಯಪಟ್ಟಣವು ಚಿಕ್ಕದಾಗಿದ್ದರೂ ಈ ತಾಲ್ಲೂಕಿಗೆ ಸೇರಿದ್ದ ಅನೇಕ ಗ್ರಾಮಗಳಿರುತ್ತವೆ ಸುಮಾರು ಎರಡು ತಿಂಗಳ ಲಾಗಾಯ್ತು ಕಸಬಾ ಮೂರು ಮೈಲಿ ಸಮೀಪದಲ್ಲಿ ಒಪ್ಪರು ಎಂಬ ನೂರ ಜನಕ್ಕೆ ಜನರು ಗುಡಿಸಲುಗಳನ್ನು ಹಾಕಿಕೊಂಡು ಸುತ್ತುಮುತ್ತಿನ ಗ್ರಾಮಗಳನ್ನೆಲ್ಲಾ ಲೂಟಿಮಾಡುತ್ತಿದ್ದಾರೆ "ಈ ಗ್ರಾಮದಲ್ಲಿ ಕುರಿಗಳನ್ನು ಕಳ್ಳತನಮಾಡಿದರು," "ಈ ಗ್ರಾಮದಲ್ಲಿ ಹಗೇವಿನ ರಾಗಿ ಕಿತ್ತರು," "ಈ ಗ್ರಾಮದಲ್ಲಿ ರಾಗಿ ತೆನೆಯನ್ನು ಕೊಯಿದುಕೊಂಡು ಹೋದರು," "ಈ ರಸ್ತೆಯಲ್ಲಿ ತುಂಬಿದ ಬಿನ್ನಿ ಕಂಬಳಿಗಳು ಪರಾರಿಯಾಯ್ತು" ಎಂಬೀ ಮೊದಲಾದ ಫಿರ್ಯಾದುಗಳು ಬರುತ್ತಲಿವೆ. ಇದರಿಂದ ಪೋಲೀಸ್ ಬಂದೋಬಸ್ತು ಬಹಳ ಕಡಮೆ ಎಂದು ಹೇಳಬೇಕಾಗಿದೆ ಇದರಿಂದ ಈ ಸುತ್ತಮುತ್ತಿನ ಇಪ್ಪತ್ತು ಗ್ರಾಮದ ರೈತರ ಕಷ್ಟ ಹೇಳಲು ಅಸಾಧ್ಯವಾಗಿದೆ ಆದ್ದರಿಂದ ನಮ್ಮ ಅಮಲ್ದಾರ್ರವರು ಚಿತ್ತಕ್ಕೆ ತಂದುಕೊಂಡು ಕ್ಷಿಪ್ರದಲ್ಲೇ ಈ ಒಪ್ಪರನ್ನು ಈ ತಾಲ್ಲೂಕಿನಿಂದ ಬೇರೇ ಕಡೆ ಕಳುಹಿಸಿದರೆ ರೈತರಿಗೆಲ್ಲಾ ಅನುಕೂಲವಾಗುತ್ತೆ ಇಲ್ಲವಾದರೆ ಬೆಳೆದಿರತಕ್ಕ ಫಲಗಳನ್ನೆಲ್ಲಾ ಪಲಾಯನವಾಗುವದಲ್ಲದೆ ಕೂಡ್ಲೆ ರೈತರಿಗೆಲ್ಲಾ ಕ್ಷಾಮ ಪ್ರಾಪ್ತವಾಗುತ್ತೆ. ಇಂಥಾ ನಾಗರೀಕತೆ ಕಾಲದಲ್ಲೂ ಹೀಗಾದರೆ ಬದುಕುವುದು ಹ್ಯಾಗೆ?—ನಮ್ಮ ಅಮಲ್ದಾರ್ ಸಾಹೇಬರವರು ರಾತ್ರಿ 7 ಘಂಟೆ ವರೆಗೂ ಕೋರ್ಟುಮಾಡುತ್ತಾರೆ ಇದರಿಂದ ಕಕ್ಷಿಗಾರರಿಗೆ ಅನೇಕ ತೊಂದರೆಯಾಗಿದೆ ಹೀಗಿದ್ದರೂ ಒಂದು ಕೇಸು ಫೈಸಲ್ ಆಗುವದು ವರುಷದ ಮೇಲಾಗುತ್ತೆ ಆದ್ದರಿಂದ ನಮ್ಮ ದಯಾಳುಗಳಾದ ಸರ್ಕಾರದವರು ತಕ್ಕ ರೀತಿಯಲ್ಲಿ ಈ ಲೋಪಗಳನ್ನು ಸರಿಪಡಿಸಿ ಈ ಸುತ್ತಿನ ರೈತರಿಗೆಲ್ಲಾ ಕ್ಷೇಮವನ್ನುಂಟುಮಾಡುತ್ತಾರೆಂದು ನಂಬಿದೇನೆ

ಚನ್ನರಾಯಪಟ್ಟಣ — ಮೈಸೂರು ಟಿ ದಾಸಪ್ಪ

ಬಾಬಾಬುಡನ್ ದರ್ಗಾ ವಿಚಾರವು

ಅಯ್ಯಾ,

ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೂಕು ಬಾಬಾಬುಡನ್ ಬೆಟ್ಟದಲ್ಲಿ ಮುಖ್ಯ ಯಾತ್ರಾ ಸ್ಥಳವಾಗಿರುವುದು ಶ್ರೀ ಗುರುದತ್ತಾತ್ರೇಯ ಬಾಬಾಬುಡನ್ ಸ್ವಾಮಿಯವರ ದರ್ಗಾ ಎಂಬುವುದು ಒಂದು ಇರುವದೂ, ಅದಕ್ಕೆ ನಮ್ಮ ಮಹಾರಾಜಾ ಸಾಹೇಬರವರ ಸರ್ಕಾರದಿಂದ ಮಾಹೆಯಾನಾ ನಗದು ಒಂದು ನೂರು ರೂಪಾಯಿಯೂ, ವಿಶೇಷ ಅಮದಾನ್ ಆಗುವ ಜಮೀನ್‌ಗಳೂ ಕೊಡಲ್ಪಟ್ಟಿರುವುದೂ ಸರ್ವರಿಗೂ ತಿಳಿದೇ ಇರಬಹುದು ಈ ಮೂಲಕ ಆಗುವ ಉತ್ಪತ್ತಿಯು ದುರುಪಯೋಗವಾಗುತ್ತಾ ಇರುವದಾಗಿ ಕಾಣುತ್ತಿವೆ ಅಲ್ಲಿಗೆ ಹೋಗುವ ಯಾತ್ರಾರ್ಥಿಗಳೆಲ್ಲರೂ ಅಲ್ಲಿನ ಕಟ್ಟು ಅನುಸರಿಸಿ ಕಾಣಿಕೆಯನ್ನು ದ್ರವ್ಯರೂಪವಾಗಿಯೂ, ಜೀನಸಿರೂಪವಾಗಿಯೂ ಕೊಡುತ್ತಾರೆ ದರ್ಗಾದಿಂದ ವಿಶೇಷ ಖರ್ಚು ಆಗದೆ ಯಾತ್ರಾರ್ಥಿಗಳಿಂದ ಕೊಡಲ್ಪಡುವದರಲ್ಲಿಯೇ ಉಳಿಯುತ್ತೆಂಬುವದು ಅಲ್ಲಿಗೆ ಹೋದವರಿಗೆಲ್ಲಾ ತಿಳಿಯದೆ ಇಲ್ಲ ಹೀಗಿರುತ್ತಾ ಸರ್ಕಾರಕ್ಕೆ ಕೊಡುವ ಲೆಕ್ಕಗಳಲ್ಲಿ ಭಕ್ತಿಪೂರ್ವಕವೂ, ಕಟ್ಟಿನ ನಿಮಿತ್ತವೂ ಯಾತ್ರಾರ್ಥಿಗಳಿಂದ ಆಗುವ ಆಮದಾನ್ ತೋರಿಸದೆ ಎಲ್ಲಾ ದರಗಾದ ಖರ್ಚೆಂತ ನಮೂದಾಗುತ್ತಾ ಇರುವ ಸಂದರ್ಭಗಳು ತಿಳುವಳಿಕೆಗೆ ಬಂದಿರುತ್ತೆ ದರಗಾದ ಮೊಖ್ತೇಸರ್ ಆದವರು ಯಾತ್ರಾರ್ಥಿಗಳ ಸಂಖ್ಯೆ ಗೊತ್ತಾಗುವ ನಿಮಿತ್ತವೆಂದು ರುಜು ಪಡೆಯುತ್ತಾರೆ ಇದರ ಉದ್ದೇಶವು ದರಗಾದ ಆಮದಾನಿನಲ್ಲಿ ಸದರಿ ಯವರುಗಳಿಗೆ ಖರ್ಚು ದಾಖಿಲ್ಮಾಡಲಿಕ್ಕೆ ಅವಕಾಶವಾಗುವದು ಇದನ್ನು ತಪ್ಪಿಸುವ ನಿಮಿತ್ತ ಸದರಿ ಬುಕ್ಕಿನಲ್ಲಿ ರುಜು ಹಾಕುವ ವೇಳೆ ಯಾತ್ರಾರ್ಥಿಗಳಾದವರು ಕೊಡುವ ಜಿನಸಿ ಕಾಣಿಕೆ ಸಹ ನಮೂದಿಸುವದರೊಂದಿಗೆ ದರಗಾದಿಂದ ಎಷ್ಟರಮಟ್ಟಿಗೆ ಯಾವ ಮೂಲಕ ಸಹಾಯಹೊಂದಿದ್ದೆಂಬುವದನ್ನು ನಮೂದಿಸುವದಾದರೆ ದರಗಾದ ಆಮದಾನ್ ಉಳಿದು ಕಾಲಾನುಕಾಲದಲ್ಲಿ ಉತ್ತಮಕೆಲಸಗಳಿಗೆ ಉಪಯೋಗಿಸಲಿಕ್ಕೆ ಅವಕಾಶವಾಗುತ್ತೆ ಆದ್ದರಿಂದ ಈ ರೀತಿ ನಡೆಯುವಂತೆ ಮಾಡಿಸಬೇಕಾಗಿ ಕೇಳಿಕೊಳ್ಳುತ್ತೇನೆ

ಸಯುದ್ ಷಾಲಿ ಹುಸೇನ್ ಷಾ ಖಾದ್ರಿ.

ತಾಲ್ಲೂಕ್ ಕಚೇರಿಗಳು

ಅಯ್ಯಾ,

ಸಾಮಾನ್ಯವಾಗಿ ತಾಲ್ಲೂಕ್ ಕಚೇರಿಗಳಲ್ಲಿ ನೌಕರಿ ಮಾಡುವವರ ಪೈಕಿ ಶೇಕಡ 90 ರಂತೆ ಸರ್ವೀಸಿನಿಂದ ಬಂದಿರುವವರು, ಅಥವಾ ಅಭಿಮಾನದಿಂದ ಬಂದಿರತಕ್ಕವರೇ ಆಗಿರುತ್ತಾರೆ ವಿದ್ಯಾಭ್ಯಾಸದ ಇಲಾಖೆಯಲ್ಲೂ ಇನ್ನು ಕೆಲವು

ಇಲಾಖೆಗಳಲ್ಲಿ ತಕ್ಕ ಯೋಗ್ಯತೆಯುಳ್ಳವರಿಗೇನೇ ಕೆಲಸ ಕೊಡಬೇಕೆಂಬ ನಿರ್ಬಂಧವು ಇರುತ್ತೆ. ರೆವಿನ್ಯೂ ಇಲಾಖೆಯು ಬಹು ದೊಡ್ಡ ಇಲಾಖೆ, ಮತ್ತು ಜವಾಬ್ದಾರಿಯುಳ್ಳದ್ದು. ಇಂಥಾ ದೊಡ್ಡ ಇಲಾಖೆಯು ಸರಿಯಾದ ಸ್ಥಿತಿಯಲ್ಲಿ ಇಲ್ಲವೆಂಬ ಅಂಶವು ನಮ್ಮ ದಿವಾನ್ ಸಾಹೇಬರವರ ನಿಗಾಕ್ಕೆ ಬಂದಿರುವಂತೆ ಈ ವರ್ಷದ ಅಪ್ರೈಲ್‌ನಿಂದ ವ್ಯಕ್ತವಾಗುತ್ತೆ. ಮಾಜಿ ದಿವಾನ್ ಮ|| ಮಾಧವರಾಯರವರು ಇವರುಗಳ ವಿಚಾರದಲ್ಲಿ 1906 ರಲ್ಲಿ ರೂಲ್ಸನ್ನು ಮಾಡಿರುತ್ತಾರೆ. ಇಷ್ಟು ದೀರ್ಘಕಾಲವಾದರೂ ಅದು ಜಾರಿಗೆ ತರದೆ ಇರಲು ಕಾರಣ ಗೊತ್ತಾಗಲಿಲ್ಲ. ಈ ಇಲಾಖೆಯವರಿಗೆ ಸ್ಕೂಲನ್ನು ಏರ್ಪಾಡುಮಾಡಿ, 35 ಸಂವತ್ಸರಕ್ಕೆ ಕಡಮೆ ಇರತಕ್ಕವರೆಲ್ಲರೂ ಕ್ರಮವಾಗಿ ಟ್ರೈನಿಂಗ್ ಹೊಂದುವಂತೆ ಮಾಡಿದಲ್ಲಿ ಈ ಇಲಾಖೆಯು ಸ್ವಲ್ಪಮಟ್ಟಿಗೆ ಈಗ ಇರುವ ನ್ಯೂನತೆಗಳು ಪರಿಹಾರಹೋಗಿ ಮುಂದೆ ಸೇರತಕ್ಕವರು ತಕ್ಕ ಯೋಗ್ಯತೆಯನ್ನು ಪಡೆಯಲೇ ಬೇಕೆಂದು ವಿಧಾಯಕ ಮಾಡಿದಂತೆ ಆಗುತ್ತೆ. ನಮ್ಮ ರೆವಿನ್ಯೂ ಕಮಿಷನರ್‌ರವರು ಈಗ ಸರ್ವೀಸಿನಲ್ಲಿ ಇರತಕ್ಕವರ ರೆಜಿಸ್ಟರುಗಳನ್ನು ತರಿಸಿ ಪರಾಂಬರಿಸಿದಲ್ಲಿ ನಾನು ಹೇಳುವ ಅಂಶವು ನಿಜವೇ ಸುಳ್ಳೇ ಎಂಬುವದು ಚಿತ್ತಕ್ಕೆ ವೇದ್ಯವಾಗುತ್ತೆ. ದೇಶದ ಅಭಿವೃದ್ಧಿಯನ್ನು ಮುಖ್ಯವಾಗಿ ಯೋಚಿಸುತ್ತಾ ಇರುವ ನಮ್ಮ ದಿವಾನ್‌ರವರ ದೃಷ್ಟಿಗೆ ಈ ಅಂಶವು ಬಂದಿರುವದರಿಂದ ಚಿರಕಾಲ ಈಗಿನಂತೆ ಅಭಿಮಾನದಿಂದ ಕೆಲಸಕ್ಕೆ ಸೇರುತ್ತಾ ಇರುವ ಪಾಡಿಕೆಯು ನಿಂತುಹೋಗಬಹುದೆಂದು ನಂಬುತ್ತೇನೆ.

ಹುಣಸೂರು — ಸತ್ಯವಾದಿ

[ದಿವಾನ್‌ರವರು ತಾಲ್ಲೂಕ್ ಮ್ಯಾನ್ಯುಯಲ್ ಎಂಬ ಪುಸ್ತಕವನ್ನು ಈಗ ತಾನೇ ತಯಾರ್ ಮಾಡಿಸಿರುತ್ತೇವೆಂದು ಅಪ್ಪಣೆಕೊಟ್ಟಿರೋಣದರಿಂದ ಇನ್ನು ಮುಂದೆ ತಾಲ್ಲೂಕ್ ನೌಕರಿ ಪಡೆಯತಕ್ಕವರು ಈ ಪುಸ್ತಕದಲ್ಲಿ ಪರೀಕ್ಷೆ ಕೊಟ್ಟಿರಬೇಕೆಂದು ಸರ್ಕಾರದಿಂದ ವಿಧಿಸಲ್ಪಡಬಹುದೆಂದು ಊಹಿಸಬೇಕಾಗುತ್ತದೆ —ಎಡಿ.]

ಯಡೆಹಳ್ಳಿ ಪೋಲೀಸ್ ವಿಚಾರ

ಅಯ್ಯಾ,

ಯಡೇಹಳ್ಳಿ ಸೆಂಟರ್ ಕುಸುಗೂರು ಮುರಿಗಮ್ಮನೆಂಬುವಳು ಕಾರಣಾಂತರದಿಂದ ಆಕೆ ವಾಸವಾಗಿದ್ದ ಮನೆ ಬಿಟ್ಟು ಬೀಗಾ ವಗೈರೆ ಬಂದೋಬಸ್ತು ಮಾಡಿಕೊಂಡು ಹೊರಟು ಹೋದಳು. ಆಕೆಯ ಗಂಡನು ಅನುಕೂಲಸ್ಥನಾಗಿ ಬಾಳಿದ್ದನಂತೆ. ಕೆಲವು ಕಾಲಾನಂತರ ಮುರಿಗಮ್ಮನು ಮನೆಗೆ ಬಂದು ನೋಡಲಾಗಿ ಮನೆಯ ಬಾಗಿಲನ್ನು ಮುರಿದು ಒಳಗೆ ಕೆಲವು ಸ್ಥಳಗಳನ್ನು ಅಗೆದು ಇರುವುದನ್ನು ನೋಡಿ ಸೊತ್ತು ಕಳುವಾಗಿದೆ ಎಂದು ಪೋಲೀಸಿಗೆ ಫಿರ್ಯಾದು ಕೊಟ್ಟಳು. ಯಡೇಹಳ್ಳಿ ಸೆಂಟರ್ ಪೋಲೀಸ್ ಆಫೀಸರು ಹೋಗಿ ಸ್ಥಳವನ್ನು ನೋಡಿ ಇದು ಹೊಸ ತೋಡಿದ ಹಳ್ಳಗಳಾಗಿರುವುವೆಂದು ಆ ಮೊಕದ್ದಮೆಗೆ ಸಂಬಂಧಪಟ್ಟ ಜನಗಳನ್ನು ಸೇರಿಸಿ ಮಹಜರ್ ಮಾಡಿ ಎ ರಿಪೋರ್ಟ್ ಕಳುಹಿಸಿ ಸುಮ್ಮನೆ ಕೈಕಳಚಿಕೊಂಡಿರು.

ಹಲಸಿನಹಳ್ಳಿ ಗ್ರಾಮದ [illegible]ಮ್ಮನೆಂಬುವಳು ನಿಸ್ಸಂತತಿಯಂತೆ. ಅವಳ ಗಂಡನು ಬಹಳ ಅನುಕೂಲಸ್ಥನಾಗಿ ಬಾಳಿದ್ದು ಜನಜನಿತವಾಗಿದೆ. ಅವಳು [illegible] ವರ್ಷದ ಕೆಳಗೆ [illegible] ಅವಳ ವಾರಸ್ದಾರನಾಗಿ ನರಸೀಪುರದ ರುದ್ರಯ್ಯನು ಸೊತ್ತುಗಳ [illegible] ಸ್ವಾಧೀನ ಹೊಂದಿದನು. ಪತಿಯವಳ ಸೊತ್ತಲ್ಲದೆ ಸದರಿ ರುದ್ರಯ್ಯನು ಒಳ್ಳೇ ಸ್ವಂತ ಸ್ವತ್ತಿನಲ್ಲಿಯೇ ಅನುಕೂಲಸ್ಥನಾಗಿದ್ದಾನೆ. [illegible]ಮ್ಮ ಸತ್ತ ಸಕ್ಷ [illegible] ಒಳ್ಳೇದಲ್ಲವೆಂಬದರ ಮೇರೆ ರುದ್ರಯ್ಯನು ಅವಳ ಮನೆಯಲ್ಲಿದ್ದ ಸೊತ್ತುಗಳನ್ನೆಲ್ಲಾ ಅಲ್ಲೇ ಬಿಟ್ಟು ಬಾಗಿಲು ಬೀಗ ಹಾಕಿ ಈಗ್ಗೆ ಒಂದು ವರ್ಷದ ಕೆಳಗೆ [illegible] ನರಸೀಪುರಕ್ಕೆ ಹೋದನು. ಕಳೆದ ಸೆಪ್ಟಂಬರ್ [illegible]ಲ್ಲಿ ಒಂದು ದಿವಸ ರುದ್ರಯ್ಯ ನರಸೀಪುರದಿಂದ ಹಲಸಿನಹಳ್ಳಿಗೆ ಹೋಗಿ [illegible] ಸದರಿ ಮನೆ ಬಾಗಿಲು ತೆರೆದ ಹಾಕಿದ್ದ ಬೀಗ ಮುರಿದಿತ್ತು. ಒಳಹೋಗಿ ನೋಡಲಾಗಿ [illegible] ಸ್ಥಳಗಳಲ್ಲಿ ಮನೆಯನ್ನು ಅಗೆದು ಗುಂಡಿಗಳಾಗಿದ್ದವನ್ನು ಕಂಡು ಯಡೇಹಳ್ಳಿ ಡೆಪ್ಟಿ ಅಮಲ್ದಾರ್ ಮ|| ಅಹೋಬಲಶಾಸ್ತ್ರಿಗಳಲ್ಲಿ ಈ ಸಂಗತಿಯನ್ನು ತಿಳಿಸಿದನು. ಸದರಿ ಡೆಪ್ಟಿ ಅಮಲ್ದಾರು ವಾಳೆಯ [illegible] ಸೆಂಟರ್ ಪೋಲೀಸ್ ಜಮೇದಾರರ ಸಹಾಯ ಹೊಂದಿ ಕೇಸನ್ನು ವಿಚಾರಣೆ ತೆಗೆದುಕೊಂಡರು. ಹಲಸಿನಹಳ್ಳಿ ಮನೆಯಲ್ಲಿ ಕನ್ನಾ ಕಳುವು ತಕ್ಷೀರು ನಡದು ಈಗ್ಗೆ 6 ತಿಂಗಳ ಕೆಳಗೇ ತಲೂ, ಜನಾಂದನಿಗೆ ಗುರಿಯಾಗಿರುವ ಮುಸಲ್ಮಾನ್ ಜನಗಳಿಂದ ನಡೆದಿರಬಹುದೆ ತಲೂ ಅನುಮಾನ ಉಂಟಾಗಿತ್ತು. ಆ ವ[illegible]ವನ್ನು ಅಮಲ್ದಾರರು ಮತ್ತು ಪಾಳೇಯಗಾರರು ಜಮೇದಾರರು ನ ಬಿಟ್ಟಲ್ಲಿ ಅನೇಕ ಜನ ಮುಸಲ್ಮಾನರು ಪೋಲೀಸಿನವರ ಸೆರೆಯಲ್ಲಿ ಸಿಕ್ಕಿಕ್ಕಾ ಇದ್ದರಲ್ಲದೆ ಅನೇಕ ಜನ ಮುಸಲ್ಮಾನರ ಮನೆಗಳು ಶೋಧನೆಗೆ ಅವಕಾಶವಾಗುತ್ತಿತ್ತು. ವಿವೇಕಿಗಳಾದ ಅಮಲ್ದಾರರು ಪಶ್ಚಾತ್ತಾಪವಾದಕ್ಕೆ ಮನಸ್ಸು ಕೊಡದೆ ಪವನ್ನು ಕಂಡುಹಿಡಿಯುವುದರಲ್ಲಿ ಉದ್ಯುಕ್ತಪಟ್ಟರಾದ್ದರಿಂದ ಕೈಸದ ಚಂಪಕ್ಕ ವಗೈರೇ ಜನಗಳಲ್ಲಿದ್ದ ಸದರಿ ಮೊಕದ್ದಮೆಗೆ ಸಂಬಂಧಪಟ್ಟ 700 ರೂಪಾಯಿನ ಚಿನ್ನ ಬೆಳ್ಳಿ ದೊರೆದು, ಅಪರಾಧಿಗಳು ವಸ್ತಗಿರಿಯಾಗಿ ಡಿಸ್ಟ್ರಿಕ್ಟ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿರುತ್ತವ.

ಯಡೆಹಳ್ಳಿ ಸ್ಥಳವಾಸಿ

ಮೈಸೂರು ಪ್ರಜಾಪ್ರತಿನಿಧಿ ಸಭೆಯು

ಈ ಸಲ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ನಡೆದ ಚರ್ಚೆಗಳನ್ನೂ ದಿವಾನ್‌ರವರ ಉತ್ತರಗಳನ್ನೂ ಈ ವಾರ ಪೂರೈಸುತ್ತೇವೆ.

ರೈಲ್ವೆ ವಿಚಾರಗಳು

ಪ್ರಾರ್ಥನೆ —ನಂಜನಗೂಡಿನಿಂದ ಗುಂಡ್ಲುಪೇಟೆಗೆ ರೈಲ್ ರಸ್ತೆಯನ್ನು ನಮ್ಮ ಸರ್ಕಾರದವರು ಮೊದಲು ಮಾಡಿಸಿಕೊಡಬೇಕು. ನೀಲಗಿರಿ, ಚಿಟ್ಟಗೇರಿ, ವೈನಾಡು, ಕೊಡಗು ಪ್ರಾಂತ್ಯಗಳ ರೈತರೂ, ವರ್ತಕರೂ, ಪ್ರಜೆಗಳೂ ನಂಜನಗೂಡಿಗೆ ಗಾಡಿಗಳಲ್ಲಿ ಬರುವುದು ಬಹಳ ಕಷ್ಟವಾಗಿದೆ. ಈ ರೈಲ್ ರಸ್ತೆ ಮಾಡಿದರೆ ತುಂಬಾ ಪ್ರಯೋಜನವಿದೆ ಎಂದು ಸರ್ಕಾರಕ್ಕೂ ತಿಳಿಯದೆ ಇಲ್ಲ.

ಉತ್ತರ —ಇದು ನಮ್ಮ ಕೈಯಲ್ಲಿಲ್ಲ. ಇಂಡಿಯಾ ಗವರ್ನ್ಮೆಂಟಿನವರು ಸ್ಯಾಂಕ್ಷನ್ ಮಾಡಿ ತಮ್ಮ ಎಲ್ಲೆಕಟ್ಟಿನ ತನಕ ರೈಲ್ ರಸ್ತೆ ಹಾಕಿಸಿದರೆ ನಾವು ಆ ಬಳಿಕ ರೈಲು ಹಾಕಬಹುದು. ಈ ವಿಚಾರದಲ್ಲಿ ನಾವು ಇಂಡಿಯಾ ಗವರ್ನ್ಮೆಂಟಿನವರ ಕೂಡ ಕಾಗದಪತ್ರಗಳನ್ನು ನಡಿಸುತ್ತಾ ಇದೇವೆ.

ಪ್ರಾ —ಬೆಂಗಳೂರಿನಿಂದ ಶಿವಮೊಗ್ಗೆಗೆ ಹೋಗತಕ್ಕವರಿಗೆ ಬೀರೂರಿನಲ್ಲಿ ರೈಲ್ ಗಾಡಿಗಳನ್ನು ಬದಲಾಯಿಸಬೇಕಾಗಿರುವ ಕಷ್ಟವನ್ನು ತಪ್ಪಿಸಿಕೊಡಬೇಕೆಂದು ಅನೇಕ ವರುಷಗಳಿಂದ ಕೇಳಿಕೊಳ್ಳುತ್ತಿದೇವೆ. ಈಗಲಾದರೂ ಇದು ಪರಿಹಾರವಾಗಬೇಕು. ಉ —ಉದ್ದಕ್ಕೂ ಒಂದೇ ಗಾಡಿಯನ್ನು ಹಾಕುವ ಅಗತ್ಯ ವಿಶೇಷವಾಗಿ ಕಂಡು ಬಂದಿಲ್ಲವೆಂದೂ, ಅರ್ಧ ಗಾಡಿಯ ಬೋಜಾ ಛಾರ್ಜಿನ ಜವಾಬ್ದಾರಿಯನ್ನು ಶಿವಮೊಗ್ಗೆಯವರು ಒಪ್ಪಿಕೊಳ್ಳುವ ಪಕ್ಷಕ್ಕೆ ಆಗಬಹುದೆಂದೂ ರೈಲ್ವೆ ಕಂಪನಿಯವರು ಹೇಳುತ್ತಾರೆ. ಹಾಗೆ ಒಪ್ಪುವುದಾದರೆ ಆ ರೀತಿ ಅರ್ಜಿ ಬರೆದುಕೊಳ್ಳಿ.

ಪ್ರಾ —ವಿಶೇಷ ಸಮಯಗಳಲ್ಲಿ ರೈಲ್ ಕಂಪನಿಯವರು ಹೆಚ್ಚು ಗಾಡಿಗಳನ್ನು ಹಾಕದೆ ಪ್ರಯಾಣಿಕರನ್ನು ನಿಷ್ಕರುಣೆಯಿಂದ ಗಾಡಿಗಳೊಳಕ್ಕೆ ಕುರಿ ದನಗಳಂತೆ ತುಂಬಿಬಿಡುತ್ತಾರೆ. ಈ ಅನ್ಯಾಯವನ್ನು ತಪ್ಪಿಸಬೇಕು. ಉ —ಈ ಸಂಗತಿಯನ್ನು ರೈಲ್ವೆ ಕಂಪನಿಯವರಿಗೆ ಬರೆದು ತಿಳಿಸುತ್ತೇವೆ.

ಪ್ರಾ —ಬೀರೂರಿನಲ್ಲಿ 3 ನೇ ಕ್ಲಾಸ್ ಪ್ರಯಾಣಿಕರಿಗೆ ನಿಲ್ಲುವುದಕ್ಕೆ ಸ್ಥಳವೇ ಇಲ್ಲ. ಮಳೆ ಬಿಸಿಲು ಗಾಳಿಯಲ್ಲಿ ಹೆಂಗಸರು ಮಕ್ಕಳು ರಾತ್ರಿ ಕಾಲದಲ್ಲಿ ಬೈಲಿನಲ್ಲಿ ಕಾದಿರಬೇಕಾಗಿದೆ. ಉ —ಅಲ್ಲಿ ಪ್ರಯಾಣಿಕರಿಗೆ ಒಂದು ಕಟ್ಟಡವನ್ನು ಕಟ್ಟಬೇಕೆಂದು ರೈಲ್ವೆ ಕಂಪನಿಯವರು ಯೋಚಿಸಿದಾರೆ. ಜಾಗ್ರತೆ ಪಡಿಸುವಂತೆ ಅವರಿಗೆ ತಿಳಿಸುತ್ತೇವೆ.

ಪ್ರಾ —ನಮ್ಮ ಸೀಮೆಯಲ್ಲಿ ಎಲ್ಲಾ ರೈಲ್ವೆ ಸ್ಟೇಷನ್‌ಗಳಲ್ಲೂ ಪ್ರಯಾಣಿಕರಿಗಾಗಿ ಪ್ರತ್ಯೇಕವಾದ ಕಟ್ಟಡಗಳನ್ನು ಮಾಡಿಸಿಕೊಡಬೇಕು. ವಿಶೇಷ ವರಮಾನವನ್ನು ಕೊಡುವ 3 ನೇ ಕ್ಲಾಸ್ ಪ್ರಯಾಣಿಕರನ್ನು ಈ ರೀತಿ ಅಸಡ್ಡೆಯಾಗಿ ಕಾಣುವುದು ಸಹಜವಲ್ಲ. ಉ —ಎಲ್ಲಾ ಸ್ಟೇಷನ್‌ಗಳಲ್ಲೂ ನೀವು ಹೇಳುವಂತೆ ಅನುಕೂಲ ಮಾಡಿಕೊಡಬೇಕಾದದ್ದೇನೋ ಅವಶ್ಯ. ಆದರೆ ಸರ್ಕಾರದಲ್ಲಿ ಹಣ ಒದಗಿದ ಹಾಗೆ ಮಾಡಿಸುತ್ತೇವೆ.

ಪ್ರಾ —ಬೆಂಗಳೂರಿನಿಂದ ಕುಣಿಗಲಿಗೆ ರೈಲು ಹಾಕಿಸಿ ಕೊಡಬೇಕು. ಡಿಸ್ಟ್ರಿಕ್ಟ್ ಬೋರ್ಡಿನವರು ರೂಪಾಯಿಗೆ 3 ಪೈನಂತೆ ವರಿಯನ್ನು ಕೊಡಲು ಒಪ್ಪುತ್ತಾರೆ. ಉ —ಈ ವಿಚಾರವನ್ನು ಸರಿಯಾಗಿ ಚರ್ಚೆಮಾಡಿ ಗವರ್ನ್ಮೆಂಟಿಗೆ ತಿಳಿಸಿದರೆ ಯೋಚಿಸಬಹುದು.

ಪ್ರಾ —ರೈಲ್ ರಸ್ತೆಯ ಎರಡು ಕಡೆಗಳಲ್ಲೂ ಬೇಲಿ ಹಾಕಿಲ್ಲವಾದದ್ದರಿಂದ ಗೋವುಗಳು ಗಾಡಿಗೆ ಸಿಕ್ಕಿ ಸಾಯುತ್ತವೆ. ಬೇಲಿ ಹಾಕುವಂತೆ ರೈಲ್ವೆ ಕಂಪನಿಯವರಿಗೆ ಬರೆಯಬೇಕು. ಉ —ಇದನ್ನು ನಾವೇ ಹಾಕಿಸಬೇಕು. ಹಣ ಒದಗಿದ ಹಾಗೆ ಮಾಡಿಸಬಹುದು.

ಪ್ರಾ —ಕಡೂರಿನಿಂದ ಚಿಕ್ಕಮಗಳೂರಿಗೂ ಅಲ್ಲಿಂದ ಅರಸೀಕೆರೆಗೂ ರೈಲನ್ನು ಬಡಾವಣೆ ಮಾಡಬೇಕು. ಉ —ಅಂದಾಜು ಪಟ್ಟಿಗಳು ತಯಾರಾಗಿ ಗವರ್ನ್ಮೆಂಟಿಗೆ ಬಂದಿವೆ. ಯೋಚಿಸುತ್ತಾ ಇದೇವೆ.

ಲೋಕಲ್ ಮತ್ತು ಮುನಿಸಿಪಲ್ ವಿಚಾರಗಳು

ಪ್ರಾರ್ಥನೆ —ಮ್ಯುನಿಸಿಪಾಲಿಟಿಗಳಿಗೂ ಲೋಕಲ್ ಬೋರ್ಡುಗಳಿಗೂ ಪ್ರಜಾಪಕ್ಷದ ಮೆಂಬರುಗಳನ್ನೇ ಸಂದರ್ಭಾನುಸಾರ ಪ್ರೆಸಿಡೆಂಟಾಗಿಯೂ, ವೈಸ್ ಪ್ರೆಸಿಡೆಂಟಾಗಿಯೂ ನೇಮಿಸಿಕೊಡಬೇಕು. ಉ —ಕೆಲವು ಕಡೆ ಹಾಗೆ ನೇಮಿಸಿದೇವೆ. ಹೀಗೆ ಯೋಗ್ಯರಾದವರು ದೊರಕಿದ ಸ್ಥಳಗಳಲ್ಲಿ ನೇಮಿಸಬೇಕೆಂದಿರುತ್ತೇವೆ. ಅಪೇಕ್ಷೆಯುಳ್ಳವರು ಅಂಥವರ ಹೆಸರುಗಳನ್ನು ಕಾಣಿಸಿ ಗವರ್ನ್ಮೆಂಟಿಗೆ ತಿಳಿಸಬಹುದು.

ಪ್ರಾ —ಯೂನಿಯನ್ ಪಂಚಾಯತಿಗಳಿಗೂ ಪ್ರಜಾಪಕ್ಷದ ಮೆಂಬರುಗಳನ್ನೇ ಅಧ್ಯಕ್ಷ (ಚೇರ್‌ಮನ್) ರಾಗಿ ನೇಮಕ ಮಾಡಬೇಕು. ಉ —ಸರ್ಕಾರದವರಿಗೆ ಕೆಲಸ ಎಷ್ಟು ಕಡಮೆ ಆದರೆ ಅಷ್ಟು ಒಳ್ಳೇದು. ಯೋಗ್ಯರಾದವರು ದೊರೆತರೆ ಕೆಲವು ಕಡೆ ಪ್ರಾರಂಭಿಸಿ ಆ ರೀತಿ ನೇಮಿಸಬೇಕೆಂದಿದೇವೆ.

ಪ್ರಾ —ಯೂನಿಯನ್ ಪಂಚಾಯತಿಗಳಲ್ಲಿ ಪಟೇಲ್ ಶ್ಯಾನುಭೋಗರುಗಳ ಕರ್ತವ್ಯಗಳು ಇಷ್ಟೆಂದು ವಿಧಾಯಕವಾಗಿಲ್ಲ. ಉ —ಗ್ರಾಮಗಳಲ್ಲಿ ಎಲ್ಲರೂ ಒಟ್ಟಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡಿಸ ಬೇಕಾದದ್ದು ಅವಶ್ಯವಾಗಿದೆ. ಯೂನಿಯನ್, ಮ್ಯುನಿಸಿಪಾಲಿಟಿ ಡಿಸ್ಟ್ರಿಕ್ಟ್ ಬೋರ್ಡ್ ಈ ಸಂಸ್ಥೆಗಳನ್ನು ಇನ್ನೂ ಒಳ್ಳೇ ಸ್ಥಿತಿಗೆ ತರುವ ಬಾಗದಲ್ಲಿ ಮುಂದಿನ ವರುಷ ಸರ್ಕಾರದವರು ಕೆಲವು ಬದಲಾವಣೆಗಳನ್ನು ರೂಢಿಸಬೇಕೆಂದು ಯೋಚಿಸುತ್ತಿದಾರೆ.

ಪ್ರಾ —ಮುನಿಸಿಪಾಲಿಟಿಗಳ ಉತ್ಪತ್ತಿಯನ್ನು ಆಯಾ ಮ್ಯುನಿಸಿಪಾಲಿಟಿಯಲ್ಲೇ ಖರ್ಚು ಮಾಡುವಂತೆ ಅಪ್ಪಣೆ ಆಗಬೇಕು. ಈಗ ಆ ಹಣವನ್ನು ವಿದ್ಯಾಭ್ಯಾಸವೇ ಮೊದಲಾದ ಬಾಬುಗಳಿಗೆ ವಿನಿಯೋಗಿಸ್ಕಿಕೊಳುತ್ತಾರೆ. ಇದರಿಂದ ಊರು ಅಭಿವೃದ್ಧಿಗೆ ಬರುವುದು ಪ್ರಯಾಸವಾಗಿದೆ. ಉ —ಇದನ್ನು ಗುರುತು ಮಾಡಿಕೊಂಡಿದೇವೆ. ನಮಗೂ ಆ ರೀತಿ ಮಾಡಬೇಕೆಂಬ ಯೋಚನೆ ಇದೆ.

ಪ್ರಾ —ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ಕುಡಿಯುವ ನೀರಿಗೆ ಹಾಕಿರುವ ಕಂದಾಯವನ್ನು ಛತ್ರಗಳೇ ಮೊದಲಾದ ಧರ್ಮಗಳಿಗೆ ಮಾಫ್ ಮಾಡಿಕೊಡಬೇಕು. ಉ —10 15 ಮೈಲಿ ದೂರದಿಂದ ಬಹಳ ಖರ್ಚಿಟ್ಟು ತಂದು ಒದಗಿಸುವ ನೀರನ್ನು ಧರ್ಮಾರ್ಥವಾಗಿ ಕೊಡಲಾಗದು. ಈಗ ಬೇಕಾದಷ್ಟು ರಿಯಾಯತಿ ತೋರಿಸಿದೇವೆ. ಮುಂದೆ ನೋಡೋಣ.

ಪ್ರಾ —ಜನನ ಮರಣಗಳ ಲೆಕ್ಕವನ್ನು ಈಗ ಸರಿಯಾಗಿಡುವುದಿಲ್ಲ. ಇದನ್ನು ಕ್ರಮಪಡಿಸಬೇಕು. ಉ — ನೀವು ಹೇಳುವುದು ನಿಜ. ಈ ಲೆಕ್ಕವನ್ನು ಸರಿಮಾಡಬೇಕಾದದ್ದು ಅವಶ್ಯ. ಜನನ ಮರಣಗಳನ್ನು ಸರ್ಕಾರಕ್ಕೆ ತಿಳಿಸಬೇಕೆಂದು ಕಟ್ಟುಮಾಡಿ, ತಪ್ಪಿದವರಿಗೆ ಶಿಕ್ಷೆ ವಿಧಿಸಬಹುದೇ ಎಂದು ಯೋಚಿಸುತ್ತಿದೇವೆ.

ಪ್ರಾ —ಸೇತುವೆಗಳಿಲ್ಲದಿರುವ ಕಡೆ ಜನರು ದೋಣಿಗಳಲ್ಲಿ ಹೋಗಿ ಕೆಲವು ವೇಳೆ ನದಿಗಳ ಪಾಲಾಗಿದಾರೆ. ಜಂಜಾಲುಗಳನ್ನು ಇಂಜನಿಯರ್ ಇಲಾಖೆಯವರು ಮಾಡಿಸಿಕೊಟ್ಟು ಆಗಾಗ್ಗೆ ಅವನ್ನು ಅಜಮಾಯಿಷಿ ಮಾಡುತ್ತಿರುವಂತೆ ಆಗಬೇಕು. ಉ —ಇನ್ನು ಮೇಲೆ ಸರ್ಕಾರದಿಂದಲೇ ಕೆಲವು ಕಡೆಗಳಿಗೆ ಮಾಡಿಸಿಕೊಡುತ್ತೇವೆ. ಟಿ ನರಸೀಪುರದಲ್ಲಿ ಕಬ್ಬಿಣದ ತಂತಿಗಳನ್ನು ಹಾಕಿಸಿ ಅದರ ಸಹಾಯದಿಂದ ದೋಣಿಗಳು ಸಂಚರಿಸುವಂತೆ ಏರ್ಪಾಡು ಮಾಡುವೆವು.

ವೈದ್ಯ ವಿಚಾರಗಳು

ಪ್ರಾರ್ಥನೆ —ಮೈಸೂರಿನಲ್ಲಿ ವೈದ್ಯಶಾಸ್ತ್ರವನ್ನು ಹೇಳಿಕೊಡುವ ಒಂದು ವಿದ್ಯಾಶಾಲೆ ಆಗಬೇಕು. ಉ —ಇದು ಸರ್ಕಾರದವರ ಯೋಚನೆಯಲ್ಲಿದೆ.

ಪ್ರಾ —ಕರ್ನಾಟಕ ಪಂಡಿತರನ್ನು ಸರ್ಕಾರದ ನೌಕರರಂತೆ ಮಾಡಿ, ಅವರಿಗೆ ರಜಾ ರಷ್ಷ ಪೆನ್ಷನ್ ಮುಂತಾದ್ದು ಕೊಡುವಂತೆ ಮಾಡಬೇಕು. ಇಲ್ಲವಾದರೆ ಅವರು ಶ್ರದ್ಧೆವಹಿಸಿ ನೌಕರಿಮಾಡುವುದು ಕಷ್ಟ. ಉ —ಹಾಗೆ ಮಾಡಬೇಕೆಂದು ನಮಗೂ ಅಭಿಪ್ರಾಯವಿದೆ. ಆದರೆ ಅದಕ್ಕೆ ಈಗ ದ್ರವ್ಯಸಹಾಯ ಸಾಲದು.

ಪ್ರಾ —ಮ್ಯುನಿಸಿಪಾಲಿಟಿಗಳ ಮತ್ತು ರೈಲ್ವೆ ಸ್ಟೇಷನ್‌ಗಳ ಅಜುಬಾಜು ಇರುವ ಇನಾಂ ಗ್ರಾಮಗಳಲ್ಲಿ ಮನೆಗಳನ್ನು ಕಟ್ಟುವುದಾಗಲಿ, ಆರೋಗ್ಯದ ಏರ್ಪಾಡುಗಳಾಗಲಿ ತೃಪ್ತಿಕರವಾಗಿಲ್ಲ. ಇದನ್ನು ಸರ್ಕಾರದವರು ನಿರ್ಬಂಧದಿಂದ ಕ್ರಮಪಡಿಸಬೇಕು. ಉ —ಇದು ಒಳ್ಳೇ ಸಲಹೆ. ವಿಚಾರಿಸಿ ನಂಬಡಿಸುತ್ತೇವೆ.

ಮುಜರಾಯಿ ವಿಚಾರಗಳು

ಪ್ರಾರ್ಥನೆ —ದೇವಸ್ಥಾನ ಮಠಗಳ ಜಮೀನುಗಳೂ ವರಮಾನಗಳೂ ದುರ್ವಿನಿಯೋಗವಾಗುತ್ತಿವೆ. ಪಂಡಿತರ ದೀಪಾರಾಧನೆಗಳು ನಡೆಯುವುದಿಲ್ಲ. ಅನ್ನಛತ್ರಗಳಲ್ಲಿ ಪ್ರಯಾಣಿಕರಿಗೆ ಭೋಜನಾದಿಗಳು ನಡೆಯದೆ, ಸರ್ಕಾರದ ಉದ್ದೇಶವು ನೆರವೇರುವುದಿಲ್ಲ. ಇದನ್ನೆಲ್ಲಾ ಕ್ರಮಪಡಿಸಬೇಕಾದದ್ದು ಸರ್ಕಾರದವರ ಕರ್ತವ್ಯವಾಗಿದೆ. ಉ —ಈಗ ಒಂದು ಮುಜರಾಯಿ ಕಾನೂನು ಮಾಡಿರುತ್ತೇವೆ. ಅದರಂತೆ ತಾಲ್ಲೂಕ್ ಕಮಿಟಿಗಳನ್ನು ಮಾಡಿ ಮೆಂಬರುಗಳಿಗೆ ಹೆಚ್ಚಾದ ಅಧಿಕಾರವನ್ನು ವಹಿಸಬೇಕೆಂದಿದೇವೆ. ಪ್ರಜೆಗಳು ಸಹಾಯ ಮಾಡಿದರೆ ಇದು ಸಾರ್ಥಕವಾದೀತು. ಈಗ ಆಕ್ಷೇಪಣೆಗಳು ಹೆಚ್ಚಾಗಿವೆಯೇ ಹೊರತು ಸಹಾಯ ದೊರಕುವುದು ಕಷ್ಟವಾಗಿದೆ.

ಪ್ರಾ —ಅನಾಥ ಬಾಲಕರಿಗೂ, ಬಾಲಕಿಯರಿಗೂ ಬೇರೆ ಬೇರೆ ಪೋಷಣಾ ನಿಲಯಗಳನ್ನು ಇಟ್ಟು ನಡಿಸಬೇಕು. ಉ —ಸರ್ಕಾರದವರೇ ಇಟ್ಟು ನಡಿಸುವುದು ಸದ್ಯ ಸಾಧ್ಯವಲ್ಲ. ಅಲ್ಲಲ್ಲಿ ಪ್ರಜೆಗಳು ಏರ್ಪಾಡುಮಾಡಿ ನಡಿಸಿದರೆ ಸರ್ಕಾರದವರು ಅಂಥವುಗಳಿಗೆ ಗ್ರಾಂಟನ್ನು ಕೊಡಬಹುದು. ಇದು ಬಹಳ ಅವಶ್ಯವಾದ ವಿಚಾರ, ಪ್ರಜೆಗಳ ಮುಖಂಡರು ಯೋಚಿಸಿ ಮಾಡಬೇಕಾಗಿದೆ.

ಪ್ರಾ —ಭಿಕ್ಷಗಾರರ ಕಾಟ ತಡೆಯುವುದು ಕಷ್ಟ. ಪಾಶ್ಚಾತ್ಯರಾಜ್ಯಗಳಲ್ಲಿರುವಂತೆ ಬಡವರನ್ನು ಪ್ರತ್ಯೇಕಸ್ಥಳಗಳಲ್ಲಿಟ್ಟು ಸಾಕಿ ಅವರಿಗೆ ವಿದ್ಯೆ ಕಸಬುಗಳನ್ನು ಕಲಿಸುವಂತೆ ನಮ್ಮ ಸೀಮೆಯಲ್ಲೂ ಏರ್ಪಾಡಾಗಬೇಕು. ಉ —ಇದು ಬಹಳ ಕ್ಷೇಮಕರವಾದ ಸಲಹೆ. ದೀರ್ಘವಾಗಿ ಪರ್ಯಾಲೋಚಿಸಿ ಮಾಡಬೇಕಾಗಿದೆ.

ಇತರ ವಿಚಾರಗಳು

ಪ್ರಾರ್ಥನೆ —ತಾಲ್ಲೂಕುಗಳಲ್ಲೂ ಇತರ ಸಂಘಗಳಲ್ಲೂ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳನ್ನು ಚುನಾಯಿಸುವ ಕ್ರಮಗಳು ತೃಪ್ತಿಕರವಾಗಿ ನೆರವೇರುವುದಿಲ್ಲ. ಮೆಂಬರಾಗಬೇಕೆಂದು ಯಾರು ಅಪೇಕ್ಷಿಸುತ್ತಾರೋ ಅಂಥವರು ಮೊದಲೇ ಅರ್ಜಿ ಬರೆದುಕೊಳ್ಳುವಂತೆಯೂ, ಹೀಗೆ ಚುನಾವಣೆಗೆ ಹೆಸರು ಕೊಟ್ಟವರುಗಳ ಪೈಕಿ ಓಟರುಗಳು ತಮ್ಮ ಇಷ್ಟ ಬಂದವರಿಗೆ ಸಮ್ಮತಿಗಳನ್ನು ಹಾಕುವಂತೆಯೂ, ಹೆಚ್ಚು ಸಮ್ಮತಿ ಪಡೆಯತಕ್ಕವರನ್ನು ಮೆಂಬರಾಗಿ ಗೊತ್ತುಮಾಡುವಂತೆಯೂ ಆಚರಣೆಗೆ ಬಂದರೆ ತುಂಬಾ ಕ್ಷೇಮವಾದೀತು. ಉ —ನೀವು ಹೇಳುವುದು ನ್ಯಾಯವಾಗಿದೆ. ಆ ರೀತಿ ಕ್ರಮಪಡಿಸುವ ಭಾಗವನ್ನು ವಿಚಾರಮಾಡುತ್ತೇವೆ.

ಪ್ರಾ —ರಾಜಧಾನಿಯಲ್ಲಿ ಪ್ರಜಾಪ್ರತಿನಿಧಿಗಳಿಗೆ ಇರುವುದಕ್ಕೆ ಅನುಕೂಲವಾದ ಏರ್ಪಾಡುಗಳಿಲ್ಲದ್ದರಿಂದ ನಾನಾ ತೊಂದರೆಗಳಾಗುತ್ತಿವೆ. ಉ —ಈ ವಿಚಾರ ನೀವು ಹೇಳುವುದಕ್ಕೆ ಮೊದಲೇ ಗವರ್ನ್ಮೆಂಟಿನವರ ಪರ್ಯಾಲೋಚನೆಯಲ್ಲಿದೆ. ಎಷ್ಟು ಸಾಧ್ಯವೋ ಅಷ್ಟು ಮಾಡಿಕೊಡುವೆವು.

ಪ್ರಾ —ಸರ್ಕಾರದವರು ಪ್ರಜಾಪ್ರತಿನಿಧಿ ಸಭೆಯಲ್ಲಿ ವಿಷಯಗಳು ಚರ್ಚೆಯಾದ ಬಳಿಕ ಮೆಂಬರುಗಳ ಓಟುಗಳನ್ನು (ಸಮ್ಮತಿ) ಕೇಳಿ ತಿಳಿದುಕೊಳ್ಳುವ ಪದ್ಧತಿಯನ್ನು ರೂಢಿಗೆ ತರಬೇಕು. ಉ —ಸರ್ಕಾರದವರು ಪ್ರತಿನಿಧಿಸಭೆಯ ಮೆಂಬರುಗಳ ಅಭಿಮತ ಹ್ಯಾಗಿದೆ ಎಂದು ತಿಳಿದುಕೊಳ್ಳಬೇಕೆಂದು ಇಷ್ಟಪಡುವಂಥಾ ಸಂದರ್ಭಗಳಲ್ಲೆಲ್ಲಾ ಆ ರೀತಿ ಮಾಡುತ್ತಿದಾರೆ. ಮುಂದೆಯೂ ಹಾಗೇ ಕೇಳಿ ತಿಳಿದುಕೊಳ್ಳುವರು.

ಪ್ರಾ —ಯಡೆಹಳ್ಳಿ ಸಬ್ ತಾಲ್ಲೂಕಿನಿಂದ ಪೂರ್ವದಲ್ಲಿ ಈ ಸಭೆಗೆ 2 3 ಮಂದಿ ಮೆಂಬರುಗಳು ಬರುತ್ತಿದ್ದರು. ಈಗ ಒಬ್ಬರೇ ಬರುವಂತೆ ವಿಧಾಯಕವಾಗಿದೆ. ಇವರಿಗೂ ಕಾಯಿಲೆ ಮೊದಲಾದ ಅನನುಕೂಲವುಂಟಾದರೆ ಆ ಸಬ್ ತಾಲ್ಲೂಕಿನ ಕಷ್ಟನಷ್ಟಗಳನ್ನು ಗವರ್ನ್ಮೆಂಟಿಗೆ ಅರಿಕೆ ಮಾಡಲು ಅವಕಾಶವಿಲ್ಲದೆ ಹೋಗುತ್ತದೆ. ಆದ್ದರಿಂದ ಆ ಸಬ್ ತಾಲ್ಲೂಕಿಗೆ ಇಬ್ಬರು ಮೆಂಬರನ್ನಾದರೂ ಚುನಾಯಿಸುವಂತೆ ಅಪ್ಪಣೆಯಾಗಬೇಕು. ಉ —ಇದು ನಿಜ, ಯೋಚನೆಯಲ್ಲಿದೆ.

ಪ್ರಾ —ಮೈಸೂರು ಗವರ್ನ್ಮೆಂಟ್ ದೊಡ್ಡ ಅಧಿಕಾರಸ್ಥಾನಗಳಿಗೆ ಸಿವಿಲ್ ಸರ್ವೀಸ್ ಪರೀಕ್ಷೆಯನ್ನಿಟ್ಟು, ಈ ಪರೀಕ್ಷೆಗೆ ಹೊರಗಿನ ಉಮೇದುವಾರರನ್ನು ಸೇರಿಸುವುದಿಲ್ಲವೆಂದು ತೀರ್ಮಾನ ಮಾಡಿರುವುದಕ್ಕಾಗಿ ನಾವು ಗವರ್ನ್ಮೆಂಟಿನವರನ್ನು ಭಕ್ತಿಪೂರ್ವಕವಾಗಿ ವಂದಿಸುತ್ತೇವೆ. ಆದರೆ ಮೈಸೂರು ಮತ್ತು ಬೆಂಗಳೂರು ಕಾಲೇಜುಗಳಲ್ಲಿ ತೇರ್ಗಡೆ ಹೊಂದಿರುವವರೆಲ್ಲಾ ಈ ಪರೀಕ್ಷೆಗೆ ದಾಖಲಾಗಬಹುದೆಂದು ಅವಕಾಶ ಕೊಟ್ಟಿರೋಣದರಿಂದ ಅಂಥವರಲ್ಲಿ ಅನ್ಯಸ್ಥಳದ ವಿದ್ಯಾರ್ಥಿಗಳು ಬರಲು ಅಡ್ಡಿ ಕಾಣುವುದಿಲ್ಲ. ಇದನ್ನು ತಪ್ಪಿಸಬೇಕು. ಉ —ಹಿಂದೆ ನಿಮ್ಮ ಪ್ರಾರ್ಥನೆಯನ್ನು ಲಾಲಿಸಿ ಮಹಾರಾಜರವರು ಇಷ್ಟು ವಿಶೇಷವಾದ ರಿಯಾಯತಿಯನ್ನು ತೋರಿಸಿದಾರೆ. ಅದರಲ್ಲಿ ಇನ್ನೂ ಸ್ವಲ್ಪಭಾಗ ಉಳಿದಿವೆ. ಇನ್ನು ಕೆಲವು ಕಾಲ ಹೀಗೆ ನಡೆಯಲಿ, ಇದರ ಸಾಧಕಬಾಧಕಗಳನ್ನು ತಿಳಿದು ಮುಂದೆ ಯೋಚಿಸೋಣ.

ಪ್ರಾ —ಮೈಸೂರು ಸಂಸ್ಥಾನದ ಪ್ರಜೆಗಳು ಬ್ರಿಟಿಷ್ ಇಂಡಿಯಾ ಪ್ರಜೆಗಳಲ್ಲವೆಂದೂ, ಇವರನ್ನು ಇಂಗ್ಲಾಂಡಿನಲ್ಲಿ ನಡೆಯುವ ಇಂಡಿಯಾ ಸಿವಿಲ್ ಸರ್ವೀಸ್ ಪರೀಕ್ಷೆಗಳಿಗೆ ದಾಖಲು ಸೇರಿಸಿಕೊಳ್ಳಕೂಡದೆಂದೂ ತೀರ್ಮಾನ ಮಾಡಿರುವುದು ಧರ್ಮವಾಗಿಲ್ಲ. ಇದನ್ನು ತಪ್ಪಿಸಿ ಕೊಡಬೇಕೆಂಬ ಭಾಗದಲ್ಲಿ ನಮ್ಮ ಅರಿಕೆಯನ್ನು ಇಂಡಿಯಾ ಗವರ್ನ್ಮೆಂಟಿಗೆ ಶಿಫಾರಸು ಮಾಡಬೇಕು. ಉ —ಈ ವಿಚಾರವಾಗಿ ನಾವು ಇಂಡಿಯಾ ಗವರ್ನ್ಮೆಂಟಿನವರ ಕೂಡ ಕಾಗದ ಪತ್ರಗಳನ್ನು ನಡಿಸುತ್ತಲೇ ಇದೇವೆ. ಇನ್ನೂ ಇದು ಇತ್ಯರ್ಥವಾಗಿಲ್ಲ. ನಿಮ್ಮ ಪ್ರಾರ್ಥನೆಯನ್ನು ಕುರಿತು ಇನ್ನೊಂದಾವರ್ತಿ ಅವರಿಗೆ ಅರಿಕೆ ಮಾಡುವೆವು.

ಪ್ರಾ —ಕೆಲವು ಹುದ್ದೇದಾರರೂ ಭಾರಿ ಉದ್ಯೋಗಸ್ಥರೂ ಬಹಳ ಚೆನ್ನಾಗಿ ನೌಕರಿ ಮಾಡಿದರೆಂಬ ಕಾರಣ ಹೇಳಿ ಸರ್ಕಾರದವರು ಅಂಥವರ ಮಕ್ಕಳಿಗೂ ದಕ್ಕೆ ಸಂಬಂಧಿಗಳಿಗೂ ಒಂದೇಸಲ ದೊಡ್ಡ ನೌಕರಿಗಳನ್ನು ಕೊಟ್ಟುಬಿಡುತ್ತಾರೆ. ಇವರು ಕೆಲಸ ತಿಳಿಯದೆ, ಯೋಗ್ಯತೆ ಇಲ್ಲದೆ, ನೌಕರಿಯ ಗೌರವವನ್ನು ಹಾಳುಮಾಡಿ ಪ್ರಜೆಗಳಲ್ಲಿ ಅಪಹಾಸ್ಯಕ್ಕೆ ಗುರಿಯಾಗುವರು. ಅವರ ಕೈಕೆಳಗೆ ಚಾಕರಿ ಮಾಡುವವರು ತಮಗೆ ಬಡ್ತಿಯಾಗುವ ಸಂದರ್ಭವೇ ಇಲ್ಲವೆಂದು ಮತಿಕಮಾಡಿಕೊಂಡು ನಿರಾಶರಾಗಿ ದುರಭ್ಯಾಸಗಳಿಗೆ ಬೀಳುತ್ತಾರೆ. ಚಿಕ್ಕ ಕೆಲಸದಿಂದ

ಬಡ್ತಿಹೊಂದಿ ಮೇಲಕ್ಕೆ ಹತ್ತುವಂತೆ ಏರ್ಪಾಡಾದ ಹೊರ್ತು ಸರ್ಕಾರದ ಕಾರ್ಯಗಳು ಪ್ರಜಾಸಮ್ಮತವಾಗಿಯೂ ಹಿತಕರವಾಗಿಯೂ ನಡೆಯಲಾರವು ಉ —ನೀವು ಹೇಳುವುದೆಲ್ಲಾ ನಿಜವೆಂದು ನಮಗೆ ಗೊತ್ತಿದೆ ಇನ್ನು ಮುಂದೆ ಗವರ್ನ್‌ಮೆಂಟಿನವರು ಚೆನ್ನಾಗಿ ಪರ್ಯಾಲೋಚಿಸಿ ಹೊಸಬರನ್ನು ನೇಮಕ ಮಾಡುವರು

ಪ್ರಾ —ಈಗ ಸರ್ಕಾರಿ ಅಧಿಕಾರಿಗಳ ಪೈಕಿ ಹಲವರು ಚಟುವಟಿಕೆಯಾಗಿಯೂ, ಮುತುವರ್ಜಿಯಿಂದಲೂ, ರೈತ ಪರವಂಹಿಗೋಸ್ಕರಲೂ, ಕೆಲಸಮಾಡುವುದಿಲ್ಲ ಉಂಟಿರುಸುವತ್ತು ಹೆಚ್ಚುತ್ತಾ ಇವೆ ರುಜುವಾತು ಒದಗಿಸುವುದು ಬಹಳ ಕಷ್ಟ ಸರ್ಕಾರದವರು ದರ್ಪವಿಟ್ಟು ಇದನ್ನೆಲ್ಲಾ ಸಂಪಡಿಸದೆ ತಾತ್ಸಾರ ಮಾಡಿದರೆ ಪ್ರಜೆಗಳ ಕಷ್ಟನಷ್ಟಗಳು ಬಹಳವಾಗಿ ಹೆಚ್ಚುವವು ಉ —ಅಧಿಕಾರಿಗಳ ನಡವಳಿಕೆಯನ್ನೂ, ಅವರ ಶೀಲಸ್ವಭಾವಗಳನ್ನೂ ನಾವು ಈಗಲೂ ಅಂತರಂಗದಲ್ಲಿ ವಿಚಾರಿಸುತ್ತಾ ಇದೇವೆ ಆಯಾ ಸ್ಥಳಗಳಲ್ಲಿ ಮುಖಂಡರಾಗಿರತಕ್ಕವರು ಅಂಥಾ ಅಧಿಕಾರಿಗಳ ದುರ್ನಡತೆ ಮುಂತಾದದ್ದನ್ನು ಬರೆದು ಸರ್ಕಾರದ ಇಲಾಖಾ ಮುಖ್ಯಸ್ಥರಿಗೂ, ದಿವಾನ್‌ರವರಿಗೂ, ಕೌನ್ಸಿಲ್ ಮೆಂಬರುಗಳಿಗೂ ಕಳುಹಿಸಿದಲ್ಲಿ ಅವರು ಅಂತರಂಗವಾಗಿಯೇ ತನಿಖೆಮಾಡಬಹುದು ಹಾಗೆ ಬರೆಯತಕ್ಕವರನ್ನು ಯಾವ ವಿಧವಾದ ಕಷ್ಟನಷ್ಟಗಳಿಗೂ ಗುರಿಮಾಡುವುದಿಲ್ಲ ದೇಶವತ್ಸಲರು ಮುಂದೆ ಬಂದು ಸರ್ಕಾರಕ್ಕೆ ಈ ಭಾಗದಲ್ಲಿ ಸಹಾಯಮಾಡುತ್ತಾರೆಂದು ನಿರೀಕ್ಷಿಸುತ್ತೇವೆ

ಪ್ರಾ —ಮೋಟ್ಟಿ ಅಧಿಕಾರಿಗಳು ಸರ್ಕೀಟುಮಾಡುವ ಸಂದರ್ಭದಲ್ಲಿ ಅವರಿಗೆ ಅಡಿಗೆ ಮುಂತಾದದ್ದಕ್ಕೆ ಸಾಮಾನುಗಳನ್ನು ಒದಗಿಸುವ ಜವಾಬ್ದಾರಿಯನ್ನು ಅಮಲ್ದಾರ್ ಮತ್ತು ಶೇಕದಾರ್ರುಗಳಿಗೆ ತಪ್ಪಿಸಿ, ಕಂಟ್ರಾಕ್ಟರುಗಳನ್ನು ಏರ್ಪಡಿಸಿದರೆ ರೈತಪ್ರಜೆಗಳಿಗೆ ಎಷ್ಟೋ ಕ್ಷೇಮವಾದೀತು ಉ —ಇದು ಚರ್ಚೆಯಲ್ಲಿದೆ, ಯೋಚಿಸಿ ತೀರ್ಮಾನಮಾಡುವೆವು

ಪ್ರಾ —ಸರ್ಕಾರದವರು ಇಟ್ಟಿರುವ ಟ್ರಾನ್ಸ್‌ಪೋರ್ಟ್ ಗಾಡಿಗಳನ್ನು ಅಧಿಕಾರಿಗಳಿಗೆ ಮಾತ್ರ ಬಾಡಿಗೆಗೆ ಕೊಡಬೇಕೆಂಬ ನಿರ್ಬಂಧವನ್ನು ತಪ್ಪಿಸಿ ಖಾಸಗಿ ದೊಡ್ಡಮನುಷ್ಯರಿಗೂ ಬಾಡಿಗೆಗೆ ಕೊಡುವಂತೆ ಹುಕುಂ ಆಗಬೇಕು ಉ —ಅಂಥಾ ನಿರ್ಬಂಧವಿರಬೇಕಾದ ಅಗತ್ಯ ಕಾಣುವುದಿಲ್ಲ ವಿಚಾರಿಸಿ ಹುಕುಂ ಕೊಡುತ್ತೇವೆ

ಪ್ರಾ —ಮಲೆನಾಡಿನ ವಾಸ ಬಹಳ ರೋಗಜನಕವಾದದ್ದು ಅಲ್ಲಿನ ಸರ್ಕಾರಿ ನೌಕರರು ೨೫ ವರುಷ ಸರ್ವಿಸ್ ಮಾಡಿದರೆ ಪೂರಾ ಪೆನ್ಷನ್ ಕೊಡಿಸಬೇಕು ಉ —ಈ ವಿಷಯದಲ್ಲಿ ವಿವೇಕವುಂಟು ಆಲೋಚನೆ ಮಾಡಿ ಇತ್ಯರ್ಥಮಾಡುವೆವು

ಪ್ರಾ —ಮಲೆನಾಡಿನಲ್ಲಿ ದೀರ್ಘಕಾಲ ನೌಕರಿ ಮಾಡಿದವರನ್ನು ಮೈದಾನ್ ಕಡೆಗಳಿಗೆ ವರ್ಗ ಮಾಡಬೇಕೆಂದು ಹುಕುಂ ಇದ್ದರೂ ಅದು ಜಾರಿಯುಲ್ಲಿಲ್ಲ ಮತ್ತು ಸಾಮಾನ್ಯವಾಗಿ ನೌಕರರನ್ನು ಮೂರು ವರುಷಕ್ಕಾದರೂ ಒಂದಾವರ್ತಿ ವರ್ಗ ಮಾಡದೆ ಹೋದರೆ ರೈತರಿಗೆ ನಾನಾ ಕಷ್ಟ ನಷ್ಟಗಳಾಗುತ್ತವೆ ಉ —ಇದು ಅವಶ್ಯ ಮಾಡಬೇಕಾದದ್ದು ಅಧಿಕಾರಿಗಳನ್ನು ವಿಚಾರಿಸುತ್ತೇವೆ

ಪ್ರಾ —ನಮ್ಮ ಸಂಸ್ಥಾನದ ಸ್ಥಳಚರಿತ್ರೆಯನ್ನು (ಗೆಜಟಿಯರ್) ರೈಸ್ ಸಾಹೇಬರು ಬರೆದು ಬಹಳ ದಿನಗಳಾದವು ಈಚೆಗೆ ನಡೆದಿರುವ ಅನೇಕ ವಿಚಾರಗಳು ಅದರಲ್ಲಿ ಕಾಣಿಸಲಿಲ್ಲ ಹತ್ತು ವರ್ಷಕ್ಕೊಂದಾವರ್ತಿಯಾದರೂ ಆ ಪುಸ್ತಕವನ್ನು ತಿದ್ದಿ ಪ್ರಕಟಿಸುವಂತಾಗಬೇಕು ಉ —ಇದು ಮಾಡಬೇಕಾದದ್ದು, ಬಹಳ ಅವಶ್ಯ ಖಾಸಗಿ ಜನಗಳು ಬರೆಯುವುದಾದರೆ ಬೇಕಾದ ಸಹಾಯ ಮಾಡಬಹುದು

ಪ್ರಾ —ಸಂಸ್ಥಾನಾದ್ಯಂತ ಇರುವ ರೀಡಿಂಗ್ ರೂಮುಗಳಿಗೆ ಸರ್ಕಾರದ ರೆವಿನ್ಯೂ ಮತ್ತು ವ್ಯವಸಾಯದ ಗೆಜಟ್ಟನ್ನು ಛಾರ್ಜು ಇಲ್ಲದೆ ಕಳುಹಿಸಿ ಕೊಡಬೇಕು ಮತ್ತು ಸರ್ಕಾರದ ಹುಕುಮುಗಳನ್ನೆಲ್ಲಾ (ಸ್ಟ್ಯಾಂಡಿಂಗ್ ಆರ್ಡರ್ಸ್) ಕನ್ನಡಕ್ಕೆ ಮಾಡಿಸಿ ಪ್ರಕಟಿಸಿದರೆ ಅನುಕೂಲ ಉ —ಯೋಚಿಸಿ ಮಾಡುತ್ತೇವೆ

ಪ್ರಾ —ತಾಲ್ಲೂಕ್ ಹೆಡ್‌ಕ್ವಾರ್ಟರುಗಳಿಗೆಲ್ಲಾ ಟೆಲಿಗ್ರಾಫ್ ತಂತಿಗಳನ್ನು ಹಾಕಿಸಬೇಕು ಉ —ಇದು ವಿಚಾರಣೆಯಲ್ಲಿದೆ, ಬೇಗನೆ ಇತ್ಯರ್ಥವಾದುತ್ತೇವೆ

ಪ್ರಾ —ಸಂಸ್ಕೃತ ವಿದ್ವಾಂಸರನ್ನು ಪರಿಕ್ಷಿಸಿ ಬಹುಮಾನಗಳನ್ನು ಕೊಡುವ ಏರ್ಪಾಡಿದೆ ಪಾರಸಿ ಮತ್ತು ಅರಬ್ಬಿ ಭಾಷೆಗಳಲ್ಲಿ ಪಂಡಿತರಾದವರಿಗೂ ಬಹುಮಾನಗಳು ದೊರಕುವಂತೆ ಮಾಡಿದರೆ ಆ ವಿದ್ಯೆಗಳು ಉಜ್ಜೀವಿಸುವವು ಉ —ಈ ವಿಚಾರವನ್ನು ಶ್ರೀಮನ್ ಮಹಾರಾಜರವರಿಗೆ ಅರಿಕೆ ಮಾಡುತ್ತೇವೆ

ಪ್ರಾ —ಗಾಡಿಗಳನ್ನು ಸರ್ಕಾರಿ ಕೆಲಸಕ್ಕೆಂದು ಬಿಟ್ಟಿ ಹಿಡಿಯುವುದರಲ್ಲಿ ಅನೇಕರಿಗೆ ನಾನಾ ಬಾಧೆಯುಂಟು ಗ್ರಾಮಸ್ಥರ ಗಾಡಿಗಳನ್ನು ಹಿಡಿಯಕೂಡದು ಬಾಡಿಗೆಗಾಗಿಯೇ ಇರುವ ಗಾಡಿಗಳಿಗೆ ಇನ್ನೂ ಸ್ವಲ್ಪ ಹೆಚ್ಚು ದರವನ್ನು ಕೊಟ್ಟರೆ ಸುಲಭವಾಗಿ ಸಿಕ್ಕುತ್ತವೆ ಉ —ಈ ಕಷ್ಟವನ್ನು ನಾವೂ ಬಲ್ಲೆವು ಆ ದರಗಳನ್ನು ಬದಲಾಯಿಸಬೇಕೆಂದಿದ್ದೇವೆ

ಪ್ರಾ —ಎತ್ತುಗಳು ಎಳೆಯಲಾರದಷ್ಟು ಬೋಜಾವನ್ನು ಗಾಡಿಗಳಿಗೆ ಹಾಕಿ ಮೂಗು ಪ್ರಾಣಿಗಳನ್ನು ಹಿಂಸಿಸುವುದು ತಪ್ಪಬೇಕು ಉ —ಕಾನೂನಿದೆ ಅದನ್ನು ಜಾರಿಗೆ ತರುವಂತೆ ಡೆಪ್ಯುಟಿ ಕಮಿಷನರುಗಳಿಗೆ ತಿಳಿಸುತ್ತೇವೆ

ಪ್ರಾ —ಬಂಗಾಳದಲ್ಲಿ ಮಾಡಿರುವಂತೆ ಮಹಮದೀಯ ನೌಕರರಿಗೆ ಶುಕ್ರವಾರ ನಮಾಜಿಗೆ ಹೋಗಿಬರಲು ಸ್ವಲ್ಪ ಪುರುಸತ್ತು ಕೊಡಬೇಕು ಉ —ಇದು ಆಯಾ ಆಫೀಸಿನ ಅಧಿಕಾರಿಯಲ್ಲಿ ಹೇಳಿಕೊಂಡರೆ ಮಾಡಿಕೊಡುತ್ತಾರೆ

ಸನ್ 1914 ನೇ ಇಸವಿಯ ಕ್ಯಾಲೆಂಡರ್

ಹಿಂದೂ ರಾಜರುಗಳೊಡನೆ ಜಾರ್ಜ್ ಚಕ್ರವರ್ತಿಯವರು ಮೇರಿ ಚಕ್ರವರ್ತಿನಿಯವರೊಡನೆ ದೇಹಲಿ ಕಾರೊನೇಷನ್ ಪಟ ಇದ್ದು, ತಿಂಗಳು, ವಾರ, ತಿಥಿ, ನಕ್ಷತ್ರ, ಹಬ್ಬಗಳು, ಮತ್ತೂ ವಿಶೇಷ ದಿವಸಗಳು, ಗೌರ್ನ್ಮೆಂಟ್ ರಜಾ ದಿವಸಗಳು, ರಾಹು ಗುಳಿಕಕಾಲ ಇವೆಲ್ಲಾ ಸುಂದರವಾದ ಅಕ್ಷರದಲ್ಲಿ ಗ್ಲೇಜ್ ಕಾಗದದ ಮೇಲೆ ಮೈಸೂರ್ ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಅಂದವಾಗಿ ಮುದ್ರಿಸಿ ಬಿಕರಿಗೆ ಸಿದ್ಧವಾಗಿವೆ ಕ್ರಯ 1 ಕ್ಕೆ 0-0-6 50 ಕ್ಕೆ 1-1-0 100 ಕ್ಕೆ 2-0-0, ಪ್ಯಾಕಿಂಗ್ ಪೋಸ್ಟೇಜ್ ಮಾಫಿ ಇದೇ ಪ್ರೆಸ್ಸಿನಲ್ಲಿ ಪ್ರಿಂಟಾಗಿರತಕ್ಕ ಡಿಟೋ ರಫ್ ಕಾಗದದ ಕ್ಯಾಲೆಂಡರ್ 1ಕ್ಕೆ 0 0-4 ಮೈ 50ಕ್ಕೆ 0 11 0 100ಕ್ಕೆ 1-4-0 ಪರಸ್ಥಳಕ್ಕೆ 50 ಕ್ಕೆ ಕಡಮೆ ರವಾನಿಸುವದಿಲ್ಲ ಸ್ವಲ್ಪ ಪತ್ರಿಗಳು ಮಾತ್ರ ಉಳಿದಿರುವದರಿಂದ ಜಾಗ್ರತ ಆರ್ಡರ್ ಕೊಟ್ಟು ತರಿಸಿಕೊಳ್ಳಿ ಮುಗಿದನಂತರ ಬಂದ ಆರ್ಡರ್‌ಗಳನ್ನು ಕ್ಯಾನ್ಸಲ್ ಮಾಡಿಬಿಡುತ್ತೇವೆ ಪದ್ಧತಿಯ ಪ್ರಕಾರ ಸುಂದರವಾಗಿ 1914 ನೇ ಇಸವಿಯ 4 ನಮೂನೆ ಪಾಕೆಟ್ ಡೈರಿಗಳನ್ನು ಪ್ರಿಂಟ್ ಮಾಡಿಸಿದೇವೆ 1 ನೇ ನಂ 0-3 0 2 ನೇ ನಂ 0-5 0 3 ನೇ ನಂ 0 6-0 4 ನೇ ನಂ 0 8-0, 12 ಪ್ರತಿ ಒಟ್ಟಿಗೆ ತರಿಸಿಕೊಳ್ಳುವವರಿಗೆ 1 ಪ್ರತಿ ಬಹುಮಾನ ಪೋಸ್ಟೇಜು ಅಲಾಯಿದ [234-1]

"ಜುಮಲಿ"—ಇದೊಂದು ಬಂಗಾಳಿ ಹೊಸ ಕಾದಂಬರಿ, ಆಶ್ಚರ್ಯವನ್ನು ಉಂಟುಮಾಡತಕ್ಕ ನಾವೆಲ್ ಕ್ರಯ 1 ಕ್ಕೆ 0-6-0, ಪೋಸ್ಟೇಜು ಅಲಾಯಿದ

ಎಂ. ಎಸ್ ಸಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು

ಪ್ರಾ —ಬೆಲೂಚಿಗಳೂ, ಕೊರಚರೂ ಊರಿಂದೂರಿಗೆ ಸಂಚಾರಮಾಡುವಲ್ಲಿ ರೈತರಿಗೆ ನಾನಾ ಕಷ್ಟನಷ್ಟಗಳನ್ನುಂಟುಮಾಡುತ್ತಾರೆ ತಪ್ಪುಮಾಡಿದ ಗಂಡಸರನ್ನು ಹಿಡಿದು [illegible] ಅದೂ [illegible] ಹೆಚ್ಚಾಗಿವೆ ಅದನ್ನು ತಪ್ಪಿಸಿಕೊಡಬೇಕು ಸ್ಥಳಾಧಿಕಾರಿಗಳು ಅವರ ಹೆಸರನ್ನು ಬರೆದುಕೊಂಡು, ಅವರು ಮತ್ತೊಂದು ಸ್ಥಳಕ್ಕೆ ಹೊರಟಾಗ ಆ ಸ್ಥಳದ ಅಧಿಕಾರಿಗಳಿಗೆ ತಿಳಿಸಿ, ಅವರ ಮೇಲೆ ಬಲವಾದ ಕಾವಲಿಟ್ಟು ನೋಡಿಕೊಳ್ಳುವಂತಾಗಬೇಕು ಉ —ಇದು ಪೊಲೀಸ್ ಇಲಾಖೆಯವರು ಮಾಡಬೇಕಾದ ಕೆಲಸ ಈ ವಿಷಯಕ್ಕೆ ಸರಿಯಾಗಿ ಗಮನಕೊಡುವಂತೆ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ತಿಳಿಸುತ್ತೇವೆ

ವಿದೇಶ ವೃತ್ತಾಂತಗಳು

ಮೆಕ್ಸಿಕೋ ರಾಜ್ಯದಲ್ಲಿ ದಂಗೆ ಕೋರರು ಸೈನ್ಯದೊಡನೆ ಹೋಗುತ್ತಿದ್ದ ಒಂದು ರೈಲು ಗಾಡಿಯನ್ನು ಸಿಡಿಮದ್ದಿನ ಮೂಲಕ ಹಾರಿಸಿದರು ಇದರಿಂದ 115 ಜನರು ಮೃತಪಟ್ಟರು, ಇನ್ನೂ ಅನೇಕರಿಗೆ ಗಾಯಗಳಾಗಿವೆ

ರಷ್ಯಾ ರಾಜ್ಯದ ಫಿನ್‌ಲ್ಯಾಂಡ್ ಎಂಬ ವಿಭಾಗದಿಂದ ಹೊರಟ ಒಂದು ಜಹಜು ಸ್ವೀಡನ್ ರಾಜ್ಯದ ಹತ್ತಿರ ಒಂದು ಕಲ್ಲಿಗೆ ತಗಲಿ ಒಡೆದುಹೋಯಿತು ಅದರಲ್ಲಿ ಪ್ರಯಾಣಮಾಡುತ್ತಿದ್ದ 10 ಜನರು ಸಮುದ್ರದ ಪಾಲಾದರು

ಅಸೋಸಿಯೇಟೆಡ್ ರಾಜ್ಯಗಳಲ್ಲಿ ಒಂದಾದ ನ್ಯೂ ಮೆಕ್ಸಿಕೋ ಸಂಸ್ಥಾನದ ಹತ್ತಿರ ಒಂದು ಕಲ್ಲಿದ್ದಲಿನ ಗಣಿಯಲ್ಲಿ ಸುಮಾರು 281 ಜನರು ಕೆಲಸಮಾಡುತ್ತಿದ್ದಾಗ ಗಣಿಯ ಮೇಲ್ಭಾಗವು ಕುಸಿದುಬಿದ್ದು 22 ಜನರು ವಿನಹಾ ಉಳಿದವರೆಲ್ಲರೂ ಮರಣಹೊಂದಿದರು

ಸರ್ ಅರ್ನೆಸ್ಟ್ ಷ್ಯಾಕಲ್‌ಟನ್ ರವರು ಕೆಲವು ಕಾಲದ ಹಿಂದೆ ಸ್ವಲ್ಪ ಸ್ನೇಹಿತರೊಡನೆ ದಕ್ಷಿಣ ಧ್ರುವ ಪ್ರದೇಶಕ್ಕೆ ಹೋಗಿ ಅಲ್ಲಿ ಸಂಚಾರಮಾಡಿ ಬಂದರು ಮುಂದಿನ ವರುಷ ಅವರು ಅದೇ ಉದ್ದೇಶದಿಂದ ಹೊರಡುತ್ತೇವೆಂದು ತಿಳಿಸಿರುತ್ತಾರೆ

ಡಬ್ಲಿನ್ ನಗರದಲ್ಲಿ ಕೂಲಿಯವರನ್ನೆಲ್ಲಾ ಕೆಲಸಕ್ಕೆ ಹೋಗದಂತೆ ಪ್ರೇರೇಪಿಸಿದ್ದಕ್ಕಾಗಿಯೂ ರಾಜದ್ರೋಹಕರವಾದ ಮಾತುಗಳನ್ನು ಆಡಿದ್ದಕ್ಕಾಗಿಯೂ ಸರ್ಕಾರದವರು ಜಮಲಾರ್ಕಿನ್ ಎಂಬವನನ್ನು ವಿಚಾರಣೆಗೆ ಗುರಿಪಡಿಸಲು ಜಡ್ಜಿಯವರು ಅವನಿಗೆ ಏಳು ತಿಂಗಳ ಸಜವನ್ನು ವಿಧಿಸಿದರು

ನಮ್ಮ ದೇಶದಿಂದ ಇಂಗ್ಲೆಂಡಿಗೆ ಟಪಾಲನ್ನು ಸಾಗಿಸುವ ಜಹಜಿನ ಕಂಪನಿಯವರಿಗೂ ಕಂಪನಿಯಲ್ಲಿ ಕೆಲಸಮಾಡುವ ನೌಕರಮಾರ್ಗರಿಗೂ ವಿವಾದಹುಟ್ಟಿ ಸುಮಾರು 100 ಜನರು ಕೆಲಸಕ್ಕೆ ಬರದೆ ನಿಂತಿದ್ದರು ಈಚೆಗೆ ವಿವಾದವು ತೀರ್ಮಾನವಾಗಿ ಎಲ್ಲರೂ ಕೆಲಸಕ್ಕೆ ಹಾಜರಾಗಿರುತ್ತಾರೆಂದು ತಿಳಿದುಬಂದಿದೆ

ಮುಸಲ್ಮಾನರಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ತಿಳಿಯುವದಕ್ಕೂ, ಅವರಿಗೂ ಮತ್ತು ಪಾಶ್ಚಾತ್ಯರ ನಾಗರಿಕತೆಗೂ ಇರುವ ವ್ಯತ್ಯಾಸಗಳನ್ನು ಕಲಿಸುವದಕ್ಕೂ ಈಜಿಪ್ಟ್ ದೇಶದ ಮುಖ್ಯ ಪಟ್ಟಣವಾದ ಕೈರೋ ಎಂಬಲ್ಲಿ ಒಂದು ಪಾಠಶಾಲೆಯನ್ನು ಏರ್ಪಡಿಸಬೇಕೆಂದು ಜೇಮ್ಸ್ ಪ್ರೆಸ್‌ರವರು ಅಭಿಪ್ರಾಯಪಟ್ಟಿರುತ್ತಾರೆ

ಪೋರ್ಚುಗೀಸ್ ಪೂರ್ವ ಆಫ್ರಿಕಾದ ಸರ್ಕಾರದವರು ಒಂದು ಹೊಸ ತಲೆಕಂದಾಯವನ್ನು ವಸೂಲ್ಮಾಡಬೇಕೆಂದು ನಿಶ್ಚಯಿಸಿದ್ದಾರೆ ಇದರಿಂದ ಆ ದೇಶದಲ್ಲಿ ಇರುವ ಪ್ರತಿಯೊಬ್ಬ ಏಷ್ಯಾಖಂಡದ [illegible] ವರುಷಕ್ಕೆ [illegible] ರೂಪಾಯಿಯಂತೆಯೂ ಹೊಸದಾಗಿ ಬರುವವರು ವರುಷಕ್ಕೆ 120 ರೂ ಪ್ರಕಾರ ಮೂರು ವರ್ಷಗಳ ವರೆಗೂ ತೆರಿಗೆ ಕೊಡಬೇಕಾಗುತ್ತದೆ

ಬೆವೇರಿಯಾ ರಾಜ್ಯದಲ್ಲಿ ಒಬ್ಬ ರೀಜೆಂಟರವರು ರಾಜ್ಯಭಾರ ಮಾಡುತ್ತಿದ್ದಾರೆ ಹಿಂದಿನ ಇಬ್ಬರು ದೊರೆಗಳೂ ಬುದ್ಧಿ ಭ್ರಮಣೆಯಿಂದ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ, ಈಗಿನ ಸರ್ಕಾರದವರು ಆ ರೀಜೆಂಟಾದ ಅಧ್ಯಕ್ಷನಿಗೆ ರಾಜ್ಯಭಾರವನ್ನು ವಹಿಸಬೇಕೆಂದು [illegible] ಬೇಕೆಂಬ ನಿರ್ಧಾರವನ್ನು ಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ತಂದಿರುತ್ತಾರೆ

ಜರ್ಮನಿಯ ಚಕ್ರವರ್ತಿಯವರು ಬರ್ಲಿನ್ ಪಟ್ಟಣದ ಶಾಸ್ತ್ರ ಶೋಧನಾ ಶಾಲೆಯನ್ನು ಪರೀಕ್ಷಿಸುತ್ತಿದ್ದಾಗ ಅಲ್ಲಿನ ಮುಖ್ಯಾಧಿಕಾರಿಯು ಚಕ್ರವರ್ತಿಯವರಿಗೆ ಒಂದು ಹೊಸದಾದ ಯಂತ್ರವನ್ನು ತೋರಿಸಿದನು ಕಲ್ಲಿದ್ದಲಿನ ಗಣಿಯಲ್ಲಿ ವಿಷಮಿಶ್ರವಾದ ಗಾಳಿಯು ಹುಟ್ಟಿ ಅದರಿಂದ ಅನೇಕರು ಮರಣ ಹೊಂದುವರಷ್ಟೆ ಇಂಥಾ ಗಾಳಿಯು ಇದ್ದರೆ ಆ ಯಂತ್ರವು ಕೂಗುವದರ ಮೂಲಕ ಅಲ್ಲಿ ಕೆಲಸ ಮಾಡುವವರನ್ನು ಎಚ್ಚರಿಸುತ್ತದೆ ಇದರಿಂದ ಅನೇಕರು ತಮ್ಮ ಪ್ರಾಣವನ್ನು ಕಾಪಾಡಿಕೊಳ್ಳಬಹುದು

ಉತ್ಕೃಷ್ಟವಾದ ವಸ್ತು ! ಬೆಲೆ ಕಡಮೆಮಾಡಿದೆ !!

100 ನೇ ನಂ ಪ್ರೈಮಸ್ ಕೆರೊಸೀನ್ ಒಲೆ

ಸಂಸಾರಕ್ಕೂ ಪ್ರಯಾಣಕ್ಕೂ ಮುಖ್ಯ ಉಪಯೋಗ

ಇದರ ಬರ್ನರಿನ ರಚನೆ ಸುಲಭ ಬೊಗ್ಗಿನ ಕೊಳವೆಗಳಿಲ್ಲ ಸಿಲಿಂಡರ್ ಕೊಳವೆ ಮಾತ್ರ ಉಂಟು ಇದನ್ನು ಸುಲಭವಾಗಿ ತೆಗೆದು ಎಣ್ಣೆಯ ಮಷ್ಟನ್ನು ಸುಲಭವಾಗಿ ತೊಡೆಯಬಹುದು ಬರ್ನರ್ ನೆತ್ತಿಯನ್ನೂ ಸೂಳೆಯುವ ತಿದಿ ಗಾಳಿಯ ಸಹಾಯದಿಂದ ಬಹಳ ತೀಕ್ಷ್ಣವಾದ ಜ್ವಾಲೆ ಉರಿಯುತ್ತೆ ಬರ್ನರಿನ ಉರಿ ಶಬ್ದವಿಲ್ಲದೆ ಇರುವುದಕ್ಕಾಗಿ ಅದರ ಜೊತೆಯಲ್ಲೇ ನಾವು ಸೈಲೆನ್ಸರ್ ಎಂಬುದನ್ನೂ ಕೊಡುವೆವು ಬರ್ನರಿನ ಪೀಠ ಮತ್ತು ಕಡ್ಡಿಗಳನ್ನು ಎಚ್ಚಿ ಗಂಟುಕಟ್ಟುವಂತೆ ಎಲ್ಲಾ ಮೆರುಗುಳ್ಳ ಹಿತ್ತಾಳೆಯಲ್ಲಿ ಮಾಡಿದ ಎತ್ತರ 8 ಅಂಗುಲ, ಒಂದು ಸೀಸೆ ಸೀಮೆಯೆಣ್ಣೆ ಹಿಡಿಯುವುದು



ಕ್ರಯ —ಮೇಲ್ಭಾಗದ ಉಂಗುರದ ಸಂಗಡ ರೂ 6-8 0, ಬರ್ನರ್ ಟಿನ್ ಪೆಟ್ಟಿಗೆಯ ಸಹಿತ ರೂ 7 8 0 ಪೋಸ್ಟೇಜ್ ಬೇರೆ

ಆರ್ಡರ್ ಸಮೇತ ಒಂದು ರೂಪಾಯಿ ಅಡ್ವಾನ್ಸು ಕಟ್ಟಿದ್ದರೆ ಈ ಒಲೆಯನ್ನು ಕಳುಹಿಸಲಾರೆವು. [230-1]

ನಮ್ಮ ವಿಳಾಸ—The Bombay Popular Agency,
Dharavy, BOMBAY.

ಪ್ರಸಿದ್ಧವಾದ ಚಿತ್ರಪಟಗಳ ಮಾರಾಟ

ಮುದ್ರಿತವಾದ [illegible] 18 23 ಇಂಚು ವೈಸ್‌ರಾಯಿಯವರ ಚಕ್ರವರ್ತಿ ಚಕ್ರವರ್ತಿನಿಯವರು, ಶ್ರೀಮನ್ ಮಹಾರಾಜರವರ, ಶ್ರೀಮನ್ ಯುವರಾಜರವರ, [illegible], ಶ್ರೀ ನಂಜುನಾಥ ದೇವಸ್ಥಾನದ, ಗೆರುಸೊಪ್ಪ ಜಲಪಾತದ [illegible] ಸಿದ್ಧವಾಗಿವೆ ಕ್ರಯ ಒಂದು ಆಣೆ ಮಾತ್ರ [illegible]

[231-1] ವಿಳಾಸ—ಟಿ ಜನರಲ್ ಏಜನ್ಸಿ ಮೈಸೂರು

ಬಿ. ವಿ. ಪಂಡಿತರ

220 ಮಾತ್ರೆಯುಳ್ಳ ಸೀಸೆಗೆ 4 ಅ, 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಬೆಲೆಯನ್ನು ನೋಡಿ ಇದರ ಗುಣವನ್ನು ಊಹಿಸಲಾಗದು ಟಿಬೆಟ್ ದೇಶದ [illegible] ರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಜ್ವರನಿವಾರಕ [illegible] ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು ಮಕ್ಕಳಿಗೆ ಉಂಟಾಗುವ ಅಜೀರ್ಣಭೇದಿ [illegible] ಹೊಟ್ಟೆಯುಬ್ಬರ ಈ ರೋಗಗಳನ್ನು [illegible] ಯೇ ವೈದ್ಯರಿಲ್ಲ [illegible] ಗುಣವಾಗುವುದು ಪ್ರಯಾಣಿಗರು ನಾನಾ ರೋಗರಲ್ಲದಲ್ಲಿರುವವರಿಗೂ ಮಲೆನಾಡಿನಲ್ಲಿರುವವರಿಗೂ ಇದರಂತೆ ಮತ್ಯಾವದೂ ಆರೋಗ್ಯವನ್ನು ಕಾಪಾಡಲಾರದು [220 2]

ವಿಷಮಜ್ವರಗಳು ನೆಗಡಿ ಕೆಮ್ಮು ತಲೆನೋವು ಅಗ್ನಿಮಾಂದ್ಯ [illegible] ಹಲು ನೋವು ಮಲಬದ್ಧ [illegible] ನರಗಳ ದೌರ್ಬಲ್ಯ — ಈ ರೋಗಗಳನ್ನು ಪ್ರತಿಯೊಬ್ಬರಿಗೂ ಗುಣ [illegible] ರಕ್ತವೃದ್ಧಿಯನ್ನುಂಟುಮಾಡುವ [illegible] ಸಾವಿರಾರು ಜನರು ಪರೀಕ್ಷಿಸಿದ್ದಾರೆ ಟಪಾಲ್ [illegible] 12 [illegible] ವರೆಗೆ 1 ಆಣೆ

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ ನಂಜನಗೂಡು.

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತವರ ಮೇಲೆ ಬಿದ್ದ ಜವಾಬ್ದಾರಿ

ಸಣ್ಣ ಮಕ್ಕಳು ಹೇಳಿದಂತೆ [illegible] ಧರಿಸಿದ್ದು ಆಹಾರರುಚಿ ಕಡಮೆಯುಳ್ಳವರಾಗಿದ್ದಾರೆಂದು [illegible]

SCOTT'S EMULSION 2-6

(ಸ್ಕಾಟ್ಸ್ ಇಮಲ್ಷನ್)

ಎ [illegible] ಕೊಡಬೇಕು

Always get the Emulsion with this mark—the Fishman—the mark of the "Scott" process

ಈ ಮಾರ್ಕಿನ್ನು ಇರುವ ಔಸಧವನ್ನೇ ಕೊಂಡುಕೊಳ್ಳಿ

ಹಾಲಿಗಿಂತ ಕಲವು ಬಟ್ಟು [illegible] ಕೊಟ್ಟ ಕೊಡ [illegible] ತೋರುವುದು

ಅದು ಸಂತೋಷವ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ [illegible] ತೋರಿಸುವದು

ಕ್ರಮದಿಂದ ಮುಂಚೆ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರುವವರಲ್ಲೂ ಸಿಕ್ಕುತ್ತದೆ

ಸ್ಕಾಟ ಅಂಡ ಬೌನ್ ಲಿಮಿಟೆಡ್,
ಔಷದಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್,

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ನಿಡದೆ ಬಾಯಾರಿಕೆ, ಬಳಲಿಕೆ, ಎದೆ ಜಲ್ಲಣಿಸುವುದು ತಲೆನೋವು ಗಾಬರಿ, ಕಣ್ಣುನೋವು, ತಲೆ ತಿರುಗುವಿಕೆ, ಮೈನೋವು ಕೀಲುನೋವು, ಮರವು, ನಿಶ್ಶಕ್ತಿ ಇವೇ ಮೊದಲಾದುವ ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು ಉರುಮೂತ್ರ ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [181 9]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವವು



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

ನಿಜವ್ಯಾಪಾರವು?

ಶಿವಾದೇವಿ ವಾಡುವವರು ಪತ್ರಗಳನ್ನು ಬರೆಯುವವರು 1 ರೂ ಬೆಲೆಯ ... ತೆಗೆದುಕೊಂಡರೆ ... ೫ ... ಸುಂದರ 2 ಆನೆ ... 6 ಪೈ ... ಕ್ಯಾಲೆಂಡರ್ ೬ ಪೈ [231 2]

ವಿಳಾಸ —ಕ ಮಲ್ಲಪ್ಪನು ಮತ್ತು ಕಂಪನಿ, ಶಿವಮೊಗ್ಗ

ಓರಿಯೆಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಮಂಡು · · ರೂ. 1,25,00,000

ಕಂಪನಿಯಿಂದ ಪಾವತಿ ಆಗಿರುವದು , 3,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಬೇಕೆನ್ನುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ... ಮುಂತಾದದ್ದನ್ನು ಕಳುಹಿಸುತ್ತಾರೆ —ಮಿ॥ ಎಂ ಎಸ್ ... ಚೀಫ್ ಏಜೆಂಟ್, ಬೆಂಗಳೂರು ಮ॥ ಎಂ ಎಸ್ ಸಂಜಪ್ಪನವರು ... ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು ಅಥವಾ

[184 6] ಬ್ರಾಂಚ್ ಸೆಕ್ರೆಟರಿ, ಮದರಾಸ್

ತಖಾವಿ ಲಾ.

[207 4]

(ಶ್ರೀ. ಎಂ ಮಲ್ಲಾರಾಧ್ಯರಿಂದ ಬರೆಯಲ್ಪಟ್ಟದು)

ವ್ಯವಸಾಯದ ಮತ್ತು ರೈತರ ಅಭಿವೃದ್ಧಿಗಾಗಿ ಮೈಸೂರು ಸರ್ಕಾರದವರು ಕೊಡುವ ಸಾಲ ಮತ್ತು ಸಹಾಯ ಇವುಗಳ ವಿಷಯಕವಾದ ಕಾನೂನುಗಳೂ ಈ ವಿಷಯಕವಾಗಿ ಮದ್ರಾಸು ಸರ್ಕಾರದ ಕಾನೂನುಗಳೂ, ಅರ್ಥಶಾಸ್ತ್ರ, ಧರ್ಮಶಾಸ್ತ್ರ, ಇತರ ರಾಜ್ಯಪದ್ಧತಿ ಮೊದಲಾದ ಪ್ರತಿಯೊಬ್ಬ ರೈತರೂ ತಿಳಿದಿರಬೇಕಾದ ವಿಷಯಗಳು ಈ ಪುಸ್ತಕದಲ್ಲಿ ಸ್ಪಷ್ಟವಾಗಿ ಬರೆಯಲ್ಪಟ್ಟಿವೆ ಬೆಲೆ ವಿ ಪಿ ಮೂಲಕ ೧೦ ಆಣೆ

ಶ್ರೀ ಶಂಕರಾಚಾರ್ಯರ ಆತ್ಮಬೋಧ ಬೆಲೆ ೧ ಆಣೆ

ಸುಪ್ರಸಿದ್ಧವಾದ "ವ್ಯವಹಾರನಿರ್ಣಯದ" ೩ ನೇ ಯಾವೃತ್ತಿಯ ಮುದ್ರಣವು ನಡೆಯುತ್ತಿದೆ.

ಎಂ ಪಂಡಿತಾರಾಧ್ಯ,

ಶ್ರೀರಾಮಪೇಟೆ, ಮೈಸೂರ.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರದು ತರಿಸಿಕೊಳ್ಳಿ

3 ೬

ಟೋಪಿಗಳು ಯಾವುವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಸ್ಥಳಗಳಿಗೆ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ...

ಈಗ ಇತರ ಕಡೆಗಳಲ್ಲಿ ನೋಡಿ ಬಿಕರಿಯಾಗುತ್ತಿರುವ ಟೋಪಿಗಳ ದಾವಲೆ ... ಆದರೆ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ... ಸೆಟ್ಟಿಗೆ ವಿಲಾಯಿತಿಯಿಂದಲೇ ಬರುವವು (೨) ಟೋಪಿಗಳನ್ನು ... ಚೆನ್ನಾಗಿ ಹಾಕಿಸುತ್ತೇವೆ ಅವೇಕ್ಷಿಸುವವರಿಗೆ ಬಹಳ ... ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲ ... ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿರಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ; ... ೨ ಆ , ೧ ರೂ ೪ ಆ

ರೇಷ್ಮೆಯುಳ್ಳ ಟೋಪಿಗಳು ರೂ ೧–೭ ರೂ ೧–೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೩

ಸಾದ ಟೋಪಿಗಳು ೧ ರೂ ೧೨ ಆ , ೧ ರೂ ೪ ಆ , ೧ ರೂ ೬ ಆ.

ಮುಕುಟದ ಟೋಪಿಗಳು ೧ ರೂ ೮ ಆ , ೧ ರೂ ೬ ಆ

ಹೊಸನಗ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕಿತ್ತಿನೆ ... ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು

1-45

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲುಬೇನೆ ಎದೆಯಲ್ಲಿ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಸ್ವಾಯವಾದೆ

ಆ ಕೆಮ್ಮನ್ನು ಅಲಕ್ಷ್ಯ ಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡಬಹುದು. ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ಕಡದಾಯ ಉಸುರಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನು ಶ್ಲೇಷ್ಮ ಬೀಳುವುದನ್ನು ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ವಾಸಿಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ರೆ ಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪ ಮಾತ್ರವಾದರೂ ಅಫೀಮನ್ನು ಸೇರಿಸಿರುವದಿಲ್ಲ.

ಈ ಔಷಧವು ಮಕ್ಕಳಿಗೇ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಸೀಸೆಗೆ ೧ ರೂಪಾಯಿ ದೊಡ್ಡ ಸೀಸೆಗೆ ೨ ರೂಪಾಯಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಕೆಟ್ಟ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೆ ನೋವು, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತದ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಮುಟುಸಂಬಂಧವಾದ, ಮಕ್ಕಳ ಎಳವು, ಜ್ವರ, ಸಣ್ಣಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ – 230 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 6 ಕುಪ್ಪಿಗೆ ಒಂದು ಕುಪ್ಪಿ ಬಿಟ್ಟು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 1 ಆಣೆ [179-10]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈನಿವಾರಕೆಂದು ತೋರಿದೊಡನೆ ಆಶ್ಚರ್ಯಕರವಾಗಿ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸಿದ ಮಾತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ ! ಒಂದೇ ಒಂದು ಬುದ್ಧಿಯು ನಿಮ್ಮಲ್ಲಿರಲಿ ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ.—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ದೇವೀಭಾಗವತ

ಕನ್ನಡ ವಚನರೂಪ, ಬೆಲೆ ರೂ ೨-೪ ೦

ವಿಳಾಸ —ಬಿರಾ ವೆಂಕಟರಾಮಶಾಸ್ತ್ರಿ, ಶಂಕರಪುರ,

[221 1] ಬೆಂಗಳೂರು ಸಿಟಿ, ಪೋಸ್ಟಾಫೀಸ್ ಆಫೀಸ್

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್ ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮುಲ್ಕಿಂದ ವಿಮೆ ಸಂಘದ ಆಕ್ಟಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿನ ಪ್ರಕಾರವಾಗಿ ಧರಣಿಯ ... ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೆದಾರರು ಪಾವತಿಮಾಡುವ ಮೊಬಲಗಿಗೆ ಆಗಲೀ, ಅಥವಾ ವಿಮೆ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹವಾದಲ್ಲಿಟ್ಟು ವಿಮೆದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[109 23] ಎಸ್ ಕೃಷ್ಣರ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ಕುಂತಳಾನಂದ ತೈಲವು

192 7

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಪದಕಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳನ್ನು ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ. ಎಮ್ ನಾಥ ಮತ್ತು ಕಂಪೆನಿ,

ಷಾಪೇರಿ, ಮದರಾಸ್.

ಶ್ರೀಮದ್ವಾಲ್ಮೀಕಿ ರಾಮಾಯಣ

"ಸುಂದರಕಾಣ್ಡ" ಮಾಸಪತ್ರಿಕೆ

1 ದೊಡ್ಡ ಪುಟಗಳ ಸಂಚಿಕೆ 1 ಕ್ಕೆ ಐದೇ ಆಣೆ ಸುಮಾರು 14 ಸಂಚಿಕೆಗಳಾಗುತ್ತವೆ ಟೀಕು, ತಾತ್ಪರ್ಯ, ಮೂಲ ಇವುಗಳೊಂದೊಡಗೂಡಿ, ಕಾಗದ, ಅಕ್ಷರ ಅಚ್ಚು, ಸ್ವಾರಸ್ಯಗಳಿಂದ ಬಹು ಸುಂದರ ಪುಸ್ತಕವಾಗುವುದು ಚಂದಾದಾರರಾಗಬೇಕೆನ್ನುವವರು ಮುಂಗಡ ಒಂದು ರೂ ಕೊಡಬೇಕು ಅವರಲ್ಲಿ ಕಡೆಯ ಮೂರು ಸಂಚಿಕೆಗಳಲ್ಲಿ ಉತ್ತಾರಮಾಡಿಕೊಡುವೆವು ಶ್ರೀ "ಶಾರದಾ" ಮಾಸಪತ್ರಿಕಾ ಸಂಪಾದಕರಾದ ವೇ॥ ದೊಡ್ಡ ಬೆಲೆ ನಾರಾಯಣಶಾಸ್ತ್ರಿಗಳು ಇದುವರೆಗೆ ಯಾರೂ ಪ್ರಕಾಶಪಡಿಸದ ರಹಸ್ಯಗಳನ್ನೆಲ್ಲ ಶ್ರೇಷ್ಠವಾದ ರೀತಿಯಿಂದ ವಿವರಿಸಿ ಬರೆಯುತಲಿದಾರೆ 1 ಆಣೆ ಟಿಕೆಟ್ ಕಳುಹಿಸಿ ಮಾದರಿ ಸಂಚಿಕೆಯಲ್ಲಿ ನೋಡಬಹುದು

1 1 13 ರಲ್ಲಿ ಆರಂಭವಾಗಿ ಎಂಟು ಸಂಚಿಕೆಗಳು ಸಿದ್ಧವಾಗಿವೆ

ಶ್ರೀ "ಶಾರದಾ" ಮಾಸಪತ್ರಿಕೆ ಇದುವರೆಗೆ 11 ಪುಸ್ತಕಗಳು ಪೂರ್ತಿಯಾಗಿವೆ ವಾರ್ಷಿಕ ಚಂದಾ ರೂ 2 0-0 ರಘುಕುಲಚರಿತೆ ಪ್ರಿಂಟಾಗುತಲಿದೆ 1 ತಿಂಗಳಲ್ಲಿ ಪುಸ್ತಕವು ಪೂರ್ತಿಯಾಗುವುದು ಕ್ರಯ 4 ವಾಲ್ಯೂಂಗೆ ರೂ 2

ವಿಳಾಸ—ಬಿ ಸೀತಾರಾಮಶಾಸ್ತ್ರಿ (ಅಥವಾ)

ಬಿ ಲಕ್ಷ್ಮೀನರಸಿಂಹಶಾಸ್ತ್ರಿ, ಶ್ರೀ "ಶಾರದಾ" ಆಫೀಸ್,

[105 1] ಬೆಂಗಳೂರು ಸಿಟಿ

ಶುದ್ಧವಾದ ಹತ್ತಿಯ ತುಪ್ಪವು.

'ಬಹಳ ನಿರ್ಮಲ ! ಬಹಳ ಹಸನು !! ವಾಸನೆಯಿಲ್ಲ !!!'

(10) ಕಂದಲಗುರಿಕಿ ಶ್ರೀನಿವಾಸರಾವ್, ಬೆಂಗಳೂರು —"ಇವರಲ್ಲಿ ಮಾರುತ್ತಿರುವ ಹತ್ತಿಯ ತುಪ್ಪವು ಸ್ವಲ್ಪವೂ ವಾಸನೆ ಇರುವುದಿಲ್ಲ ಅನೇಕ ಕಡೆ ಮಾರುತ್ತಿರುವದರಲ್ಲಿ ಕಪ್ಪುಬಣ್ಣ ಮತ್ತು ವಾಸನೆ ಇರುತ್ತದೆ ಇವರ ಎಣ್ಣೆಯು ಬಹಳ ನಿರ್ಮಲ ವಾದದ ಪದಾರ್ಥವೇ ಆಗಲಿ, ಸಿಹಿ ಪದಾರ್ಥವೇ ಆಗಲೀ, ಮಾಡಿದ ದಿನ ಹೇಗಿರುತ್ತೋ ಅದೇ ರೀತಿ 15 ದಿವಸವಾದ್ಯೂ ಕೆಡದೆ ಇರುತ್ತೆ ಇತರರ ಅಂಗಡಿಗಳ ಎಣ್ಣೆಯಲ್ಲಿ ಮಾಡಿದ್ದು ಮಾರನೇ ದಿನ ವಿಪರೀತ ವಾಸನೆಯಾಗಿ ತಿನ್ನುವುದಕ್ಕೆ ಅಸಹ್ಯ ತೋರುತ್ತೆ" "ಇವರ ಷಾಪಿನಲ್ಲಿ ಸ್ವಲ್ಪ ಧಾರಣೆ ಜಾಸ್ತಿಯಾದಾಗ್ಯೂ ಗುಣ ಜಾಸ್ತಿ ನಷ್ಟವಿಲ್ಲ ಪದಾರ್ಥ ಬಹಳ ಹಸನು ನೋಡಿದರೆ ಎಲ್ಲರಿಗೂ ನಿಜತ್ವ ವ್ಯಕ್ತವಾಗುತ್ತೆ" —5-9 13

ಎಚ್ಚರಿಕೆ.—ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಆವಕಾಶವಿಲ್ಲ [110 23]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್,

15ಎ, ಕಿಲಾರಿ ರೋಡ್, (ಬಳೆಪೇಟೆ), ಬೆಂಗಳೂರು ಸಿಟಿ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

17—10—1913 ರಿಂದ 24—10—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು ಪಟ್ಟಣ	7	0	0	0
ಮೈಸೂರು ,,	1	1	0	0
ಬೆಂಗಳೂರು ಡಿಸ್ಟ್ರಿಕ್ಟು	11	21	0	0
ಮೈಸೂರು ,,	45	27	0	0
ಕೋಲಾರ್ ,,	8	6	51	31
ಕೋಲಾರ್ ಚಿನ್ನದ ಗಣಿಗಳು	2	1	0	0
ತುಂಕೂರು ಡಿಸ್ಟ್ರಿಕ್ಟು	0	0	0	0
ಹಾಸನ ,	13	7	0	0
ಚಿತ್ರದುರ್ಗ ,,	0	0	20	12
ಕಡೂರ್ ,,	25	16	0	0
ಶಿವಮೊಗ್ಗ ,,	27	22	0	0
ಜುಮ್ಲಾ	139	100	71	13

ಶಾಲಿವಾಹನ ಶಕೆ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ಶರದೃತೌ ಕಾರ್ತೀಕ ಶುದ್ಧ ನವಮಿ ಶುಕ್ರವಾರದಿಂದ ಕಾರ್ತೀಕ ಶುದ್ಧ ಪೌರ್ಣಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ನವಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ ತೇದಿ
7	ಶುಕ್ರ	ನವಮಿ	26 8	ಧನಿಷ್ಟ	10 39	22
8	ಶನಿ *	ದಶಮಿ	29-49	ಶತಭಿಷ	16 18	23
9	ಭಾನು †	ಏಕಾದಶಿ	36 0	ಪೂಭಾ	22 32	24
10	ಸೋಮ §	ದ್ವಾದಶಿ	40 3	ಉತ್ರಭಾ	29-8	25
11	ಮಂಗಳ ,,	ತ್ರಯೋದಶಿ	45 44	ರೇವತಿ	37 41	26
12	ಬುಧ ,	ಚತುರ್ದಶಿ	50 16	ಅಶ್ವಿನಿ	41 29	27
13	ಗುರು ‡	ಪೌರ್ಣಮಿ	51-56	ಭರಣಿ	46 28	28

ಮೇಲುಕೋಟೆಯಲ್ಲಿ ರಾಜಮುಡೀ ಉತ್ಸವ * ಮೇಲುಕೋಟೆಯಲ್ಲಿ ಅಷ್ಟತೀರ್ಥೋತ್ಸವ † ಸರ್ವತ್ರ ಏಕಾದಶಿ, ಮಳೆ ನಕ್ಷತ್ರ—ವಿಶಾಖ 2 ನೇ ಪಾದ § ಉತ್ಥಾನದ್ವಾದಶಿ, ಕಾರ್ತೀಕ ಸೋಮವಾರ, ಮೇಲುಕೋಟೆಯಲ್ಲಿ ಅಷ್ಟತೀರ್ಥ ರಥ ಪುಷ್ಪಬೃಂದಾವನೋತ್ಸವ ,, ಪ್ರದೋಷ, ಮೃತ್ಯುಯೋಗ ವೈಕುಂಠಚತುರ್ದಶಿ, ಜಯಲಕ್ಷ್ಮಮ್ಮಣ್ಣಿಯವರ ಕುಮಾರ್ತಿ ವರ್ಧಂತಿ, ಮಳೆ ನಕ್ಷತ್ರ—ವಿಶಾಖ 3 ನೇ ಪಾದ ‡ ವ್ಯಾಸಪೂಜಾ

ಪೇಟೆ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೬ ೦ ೦	೧೭ ೦ ೦
ಕೆಂಬೂತಿ ಅಕ್ಕಿ ಅವಲ್	೧೬ ೮ ೦	೧೭ ೮-೦
ಜಾಪ್ರಾಣಿ ಅಕ್ಕಿ	೧೬ ೦ ೦	೧೬ ೮ ೦
ಸಣ್ಣಕ್ಕಿ ಅವಲ್	೧೮ ೦ ೦	೧೭-೮ ೦
,, ದುಯಂ	೧೭ ೦ ೦	೧೬ ೧೨-೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೨೫ ೪ ೦	೧೬-೪ ೦
,, ದುಯಂ	೧೪ ೦ ೦	೧೪ ೦ ೦
ಕೈಜ್ ರಾಗಿ ಪಲ್ಲಾ ೧ಕ್ಕೆ	೭ ೪ ೦	೫ ೧೦ ೦
ಸಾರ್ವಾಗಿ ,	೬ ೮ ೦	೪ ೧೨
ಜೋಳ ,,	೫ ೧೦ ೦	೭ ೪ ೦
ಹಲಸಂದೆ ಪಲ್ಲಾ ೧ಕ್ಕೆ	೨೩ ೦ ೦	೧೪ ೦ ೦
ಬೇಳೆ ಅವರೆ ,,	೧೩ ೦ ೦	೧೨ ೦ ೦
ಹೆಸರು ,,	೨೩ ೦ ೦	೧೪ ೦ ೦
ಉದ್ದು ,	೧೫ ೦ ೦	೧೬ ೮ ೦
ಕಡಲೆ	೧೨ ೧೨ ೦	೧೩ ೦ ೦
ಎಳ್ಳು ಸೇರು ೧೨೭ಕ್ಕೆ	೨೧ ೮ ೦	೨೪ ೦-೦
ಹುರುಳಿ ಪಲ್ಲಾ ೧ಕ್ಕೆ	೭ ೪ ೦	೭ ೧೦ ೦
ಹರಳು ೧೨೭ ಸೇರಿಗೆ	೧೨ ೦ ೦	೧೪ ೦ ೦
ಸೀಗೇಕಾಯಿ ಮಣ ೧ಕ್ಕೆ	೨ ೪ ೦	೩-೬ ೦
ಮೆಣಸಿನಕಾಯಿ ,,	೩ ೦ ೦	೩ ೪-೦
,, ದುಯಂ	೩ ೦ ೦	೧ ೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫ ೦ ೦	ಮಣ ೬ ೪ ೦
ಒಳ್ಳೆಣ್ಣೆ ಮಣ ೧ಕ್ಕೆ	೬ ೨ ೦	೬ ೮ ೦
ಹರಳೆಣ್ಣೆ ,, ,,	೫ ೮ ೦	೬ ೦ ೦
ಕಡಲೇಕಾಯಿ ಎಣ್ಣೆ	೫ ೧೨ ೦	೬ ೪ ೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫ ೪ ೦	೬ ೪ ೦
ಉಪ್ಪು ,, ,,	೬ ೮-೦	೬ ೦ ೦
ಹುಣಸೇ ಹಣ್ಣು ಮಣ ೧ಕ್ಕೆ	೨ ೪ ೦	೧ ೪ ೦
ತುಪ್ಪ—ಧಾರಾಪುರದ್ದು ಮಣ ೧ಕ್ಕೆ	೧೮ ೦-೦	೨೨ ೮-೦
,, ಬೆಣ್ಣೆ ಕಾಸಿದ್ದು ,, ,	೧೯ ೮ ೦	
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫ ೧೨ ೦	೫ ೦ ೦
ತೆಂಗಿನಕಾಯಿ ೧೦೦ಕ್ಕೆ	೬-೪ ೦	೬-೪-೦
ಅಡಿಕೇಕಾಯಿ ಮಣ ೧ಕ್ಕೆ	೧ ೦-೦	೧ ೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೧-೧೨ ೦	೧-೮-೦
ಚಿನ್ನ (ಪಾರ್) ಕೆಂಪು	೧೫-೮ ೦	೧೫ ೮ ೦
,, ,, ಪಸಿಮ	೧೫ ೧೪-೬	೧೫ ೧೪-೬
,, ,, ಗಟ್ಟಿ ತೋಲ ೧ಕ್ಕೆ	೨೪-೩ ೦	೨೪-೦ ೦
ಬೆಳ್ಳಿ ಗಟ್ಟಿ ತೋಲ ೧೦೦ಕ್ಕೆ	೮೧-೦ ೦	೮೧ ೩ ೦

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕಮಹಾಶಯರುಗಳೇ —ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೈಪಟ್ಟರೆ, ನೀತಿಯು ಆವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜ್ಞಾನಕನವನ್ನಪೇಕ್ಷಿಸಿದರೆ, ಉತ್ಸಾಹ ಶಕ್ತಿಯಲ್ಲಾಕ್ಷೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿ ಕಥೆಗಳನ್ನು ಓದಿರಿ ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ ಬೆಲೆ ರೂ ೧-೪-೦ ಟಪಾಲು ಹಾಸಲು ೩ ಆಣೆ ಈಗಲೇ ಬರೆಯಿರಿ [167-13]

ವಿಳಾಸ:—ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ಕು ಡಿಪ್ರೋ, ಚಿಕ್ಕ ಪೇಟೆ, ಬೆಂಗಳೂರು ಸಿಟಿ.

ಡೋಂಗರೆ

ಇವರ ಬಾಲಾಮೃತ

[150 16]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧೦ ಆಣೆ ಟಪಾಲ್ ಖರ್ಚು ೪ ಆಣೆ

ಕೆ ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವರ್, ಮದರಾಸು ಇವರಲ್ಲೂ ದೊರೆಯುವುದು.

ಅವಶ್ಯಕವಾಗಿ ಓದಿ ನೋಡಿರಿ: ಕೈಕೆಲಸದ ಪಾಠಶಾಲಾ!!

ಅವರವರ ಕುಟುಂಬಸ್ಥರ ಮನೆಯಲ್ಲಿ ಅವಶ್ಯಕ ಔಷಧ ಇಡಬೇಕು 14 ವರುಷದ ಲಾಗಾಯ್ತು ಇದುವರಿವಿಗೂ ದೂಸ್ತಿಯಲ್ಲಿರುವ ಅನುಭವ ಔಷಧಗಳು ಕೆಲವು ಜನಗಳು ಕೇಳಿಕೊಂಡ ವಿಷಯಕ್ಕೆ ಬಹಿರಂಗಪಡಿಸಬೇಕಾಯಿತು ಬೇಕಾದವರು ನಮ್ಮ ವಿಕ್ರಯ ಕ್ಯಾಟ್ಲಾಗು ತರಿಸಿಕೊಂಡು ನೋಡಬಹುದು ತಮಗೆ ತೋರಿ ರುವ ರೋಗಗಳಿಗೆ ಔಷಧಗಳು ಒಂದು ದಫಾ ಉಪಯೋಗಿಸಿ ನೋಡಿದರೆ ಗೊತ್ತಾಗಬಹುದು ಕಲಿತವರೂ ಕಲಿಯದೆ ಇರತಕ್ಕವರೂ ಇರುತ್ತಾರೆ ಔಷಧಗಳನ್ನು ಯುನಾನಿ ಮಿಕ್ಸರ್, ಕರ್ನಾಟಕ ಮಿಕ್ಸರ್ ಐರೋಪ್ಯ ಮಿಕ್ಸರ್ ಮೂರು ಭಾಷೆಯುಳ್ಳ ಔಷಧಗಳು ನನ್ನ ಭಾರದಿಂದ ನಡಸುವದಾಗುತ್ತೆ ಯಾವ ವಿಷಯದಲ್ಲು ನಾನು ಪರೀಕ್ಷೆಯುಳ್ಳವನಾದ್ದರಿಂದ ರಾಜರಾಜರುಗಳು ಮೊದಲುಗಳು ಅನೇಕ ಸರ್ಟಿಫಿಕೇಟುಗಳು ಕೊಟ್ಟಿರುತ್ತಾರೆ ಬೇಕಾದವರು ಬಂದು ನೋಡಬಹುದು ಬೇಕಾದವರಿಗೆ ಸರ್ಟಿಫಿಕೇಟುಗಳು ಕಳುಹಿಸುತ್ತೇನೆ

ಸನ್ನಿಜ್ವರ, ಪ್ಲೇಗ್, ಹುಚ್ಚು ಪೌಡರ್ ವಿವರ

ಮಾದಲು ಗೆಡ್ಡೆ ಅಲ್ಲದೆ ಪುನಹ ಗೆಡ್ಡೆ ಬಿಡದೆ ಜ್ವರ ಇರುವದು ಕಣ್ಣು ಕೆಂಪು ಮತ್ತು ವಾಂತಿ, ಸ್ವಲ್ಪ ಭೇದಿ, ಹುಚ್ಚುಸನ್ನಿ ತಿಕ್ಕಲಮಾತು, ನಾನಾ ವಿಧ ಇರುವದು ಇದ್ದವರು ಗಾಬರಿಯಾಗುತ್ತಾರೆ ನಾಡಿಗಳು ಕೆಟ್ಟು ಸತ್ತು ಹೋಗುತ್ತಾರೆ ಇದರ ತಾರತಮ್ಯ ತಿಳಿಯದೆ ಇದಾರೆ ಇನ್ನು ಮೇಲಾದರೂ ಗೌರವ ತಿಳಿದು ಮಾಡಿರುವ ಈ ಔಷಧಿಯನ್ನು ಒಂದು ದಫ ಸೇವಿಸಲು ತಿಳಿಯುತ್ತೆ ಇದರ ಬೆಲೆ 3 ರೂಪಾಯಿ [324 2]

ವಿಷಜ್ವರಾಂಕುಶ ಅಮೃತ ವಿವರ

ಬಿಡದೆ ಸನ್ನಿಜ್ವರ, ಪ್ಲೇಕಟ್ಟೆ ಅಲ್ಲದೆ ಅನಾನಿಯಾ ಪ್ಲೇಗು ಎನ್ನುವ ವಿಷಜ್ವರ, ವಿಧವಿಧವಾಗಿ ವಾಂತಿಯಾಗುವದು, ಹುಚ್ಚು ಮಾತನಾಡುವದು, ವಾಂತಿ ನಿಂತು ಪಿತ್ತಶಮನವಾಗಿ ನಿದ್ರೆ ಬರುವದು ವಾತನಾಡಿ ಪಿತ್ತನಾಡಿ ಶ್ಲೇಷ್ಮನಾಡಿ ಆಯಾಯ ಸ್ಥಳದಲ್ಲಿ ನಿಲ್ಲುವದು ಇದು ಒಪ್ಪತ್ತು ಉಪಯೋಗಿಸಲು ಹಾವು ಕಚ್ಚಿದರೂ ವಿಷವಾಗದೆ ಆದೇ ಗಾಯುವದು ಇದರ ಖರೀದಿ ರೂ 1 8-0

ಬಿಟ್ಟುಬಿಟ್ಟು ಬರುವ ಚಳಿಜ್ವರಕ್ಕೆ ಘೋರ ಜ್ವರಾಂಕುಶ ವಿವರ

ತಿಂಗಳು ಮೇಲೆ ಪಾಲರ ವ ಅಳತೆ ಮೇರೆಗೆ ತಣ್ಣೀರಲ್ಲಿ ತೆಗೆದುಕೊಂಡು ಕಂಬಳಿ ಹೊದ್ದು ಮಲಗಲು ಬೆವರು ತೋರುವದು ವಾತ ಪಿತ್ತ ಮಂದ ಸನ್ನಿ ಎತ್ತಿಕುಕ್ಕುವ ಜ್ವರ ಮೂರು ದಿನ ಆರು ವೇಳೆ ಖಂಡಿತ ನಿಲ್ಲುವದು ಒಂದು ದಫ ಕುಡಿದ ಮೇಲೆ ಬರದೆ ನಿಲ್ಲುವದು ಇದು ಜೇನುತುಪ್ಪದಲ್ಲಿ ಮಾಡಲ್ಪಡುವದು ದೊಡ್ಡವರು ಚಿಕ್ಕವರು ಮದ್ದು ಎಂದು ಭಯಪಡುವವರಿಗೆ ತಕ್ಕ ಅಮೃತ ಶೀಘ್ರವಾಗಿರುವದು ಕ್ರಯ 0 8-0

ಗುಹ್ಯಕಟ್ಟುವ ಮೈಲು, ವಿವರ

ಉಷ್ಣವಾಯುವಿನಿಂದ ಉಂಟಾದ ಗಂಡಸರಿಗೂ ಹೆಂಗಸರಿಗೂ ಹೊಟ್ಟೆಯಲ್ಲಿ ಗುಹ್ಯಜ್ವರದ ಕಟ್ಟು, ನೀರುಕಟ್ಟು, ಕರಳಲ್ಲಿ ನಾನಾ ವಿಧ ಉತ್ಪತ್ತಿಯಾಗುವ ಕಜ್ಜಿಗಳು, ಸಂದೇಹ ಪರೀಕ್ಷೆ ಮಾಡಬಹುದು ಇದರಲ್ಲಿ ಅನೇಕ ಔಷಧಗಳು ಇದೆ ಬರೆದು ತಿಳಿದುಕೊಳ್ಳುವದು ಇದರ ಬೆಲೆ 0 12 0

ಜೀರ್ಣಾಂಕುಶ ವಿವರ

ಗಂಡಸರಿಗೂ ಹೆಂಗಸರಿಗೂ ದೊಡ್ಡವರಿಗೂ ಚಿಕ್ಕವರಿಗೂ ಸೂಲೆವಾಯು, ಶೀಘ್ರವಾಗಿ ಬರುವ ಹೊಟ್ಟೆಯುರಿ ಚಳುಕಾಗುವದು, ಜೀರ್ಣಶಕ್ತಿ ಇಲ್ಲದೆ ಇರುವದು, ವಾತ ಪಿತ್ಥ ವಾಂತಿ ಎತ್ತುವದು, ನಾನಾ ವಿಧ ಮಂದ ಭೇದಿ, ಉಷ್ಣ ಜ್ವರ ಈ ವ್ಯಾಧಿಗಳೆಲ್ಲಾ ಕಾಲು ಗಂಟೆಯಲ್ಲಿ ನಿಲ್ಲುವವು ಇದರ ಬೆಲೆ 8 ಆಣೆ

32 ನಾನಾ ವಿಧ ಕಲಿಸೋವು ವ್ಯಾಧಿಗಳಿಗೆ ತಕ್ಷಣ ವಾಸಿಯಾಗುವ ನವನೀತನ ಪೌಡರ್ 8 ದಿನಕ್ಕೆ 1 ರೂ ಮೇಲ್ಭಾಗ ವಿಪರೀತ ರೋಗಗಳು ಸೇರಿಕೊಂಡು ಬಿಡದೆ ಅಸ್ತಿಜ್ವರಗಳಿಗೆಲ್ಲ 8 ದಿನಕ್ಕೆ ಕುರಾಂಭಸ್ಮ ಬೆಲೆ 1-8 0

ಮೇಲ್ಭಾಗ ವ್ಯಾಧಿಗಳಿಗೆ ಇಟ್ಟಿರುವ ಬೆಲೆಯುಳ್ಳ ಔಷಧಗಳು ಅಂಥಂಥಾ ಸಮಯಗಳಲ್ಲಿ ಶಾಂತಿಮಾಡಲ್ಪಡುವದು ಖಂಡಿತ ಹಾಗೆ ವಾಸಿಯಾಗದೆಹೋದರೆ ಹಣ ವಾಪಸು ಕೊಡುತ್ತೇವೆ ಮನಸ್ಸಿನಲ್ಲಿ ಸತ್ಯವಿರಬೇಕು ಬದಲು ಉತ್ತರ ಕ್ಯಾಟ್ಲಾಗು ಕಳುಹಿಸುವದಾಗುತ್ತೆ ಔಷಧದ ಚಾರ್ಜು ಬೇರೆ ವಿ ಪಿ ಚಾರ್ಜು ಬೇರೆ ಪರೀಕ್ಷೆಮಾಡುವಲ್ಲಿ ತಿಳಿಯುವದು ಅನೇಕ ವಿಷಯಗಳು ಇದೆ

ನಮ್ಮ ವಿಳಾಸ —ಕೈಕೆಲಸ ಪಾಠಶಾಲ ಆಯುರ್ಯೋಗೀಶ್ವರರ್ಸೈವತಿ,
ಸುರಾಜಗೋಪಾಲಪಿಳ್ಳೆ, ಸಿದ್ಧೇಶ್ವರ ದೇವಸ್ಥಾನಕ್ಕೆ ಎದುರು
167 ನಂಬರ್, ಕೇವಲ್ರಿ ರೋಡು, ಬೆಂಗಳೂರು ದಂಡು

ಪ್ರಾಕೃತಿಕ ಭೂಗೋಳ.

ಮೊದಲನೇ ಮುದ್ರಣವು ಅತಿ ಶೀಘ್ರವಾಗಿ ಮುಗಿದುಹೋದ್ದರಿಂದ ಈಚೆಗೆ ಬಂದಿರುವ ಆರ್ಡರುಗಳಿಗೆ ಪ್ರತಿಗಳನ್ನು ಕಳುಹಿಸಲು ಅವಕಾಶವಾಗಲಿಲ್ಲ ಎರಡನೇ ಮುದ್ರಣದಲ್ಲಿ ಅನೇಕ ಹೆಚ್ಚು ವಿಷಯಗಳನ್ನು ಚೆನ್ನಾಗಿ ವಿವರಿಸಿ ಆರ್ಟ್ ಪೇಪರಿನಮೇಲೆ ಪ್ರಿಂಟುಮಾಡಿರುವ ಅನೇಕ ಹೊಸ ನಕ್ಷೆಗಳನ್ನು ಸೇರಿಸಿರುವುದಲ್ಲದೆ 1 ಆಣೆ ಬೆಲೆ ಬಾಳುವ ಬಣ್ಣಹಾಕಿರುವ ಸುಂದರವಾದ ಒಂದು ಮೈಸೂರು ಮ್ಯಾಪನ್ನು ಸಹ ಸೇರಿಸಿರುತ್ತೆ 1 ನೆಯ ಭಾಗವು ಸೆಪ್ಟಂಬರ್ ತಿಂಗಳು 25 ರಲ್ಲಿ ಬೆಳಕಿಗೆ ಸಿದ್ಧವಾಗುವುದು ಈ ಪುಸ್ತಕವು ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೂ ಮತ್ತು ಸ್ಕೂಲಿನಲ್ಲಿ ಪಾಠಹೇಳುವುದಕ್ಕೂ ಬಹಳ ಸಹಕಾರಿಯಾಗಿರುತ್ತದೆ ಕೆಲವು ಪ್ರತಿಗಳು ಮಾತ್ರ ಪ್ರಿಂಟಾಗಿರುವುದರಿಂದ ಮೊದಲು ಬಂದ ಆರ್ಡರುಗಳಿಗೆ ಜಾಗ್ರತೆಯಲ್ಲಿ ಪ್ರತಿಗಳು ಕಳುಹಿಸಲ್ಪಡುವುವು ಕ್ರಯ 0 4 6

ಹೊಸ ಕನ್ನಡ ಲೆಖನದ ಪುಸ್ತಕವೆಂಬ ಹೆಸರಿನಿಂದ 4 ನಂಬರು ಕಾಪಿ ಪುಸ್ತಕಗಳನ್ನೂ ಪ್ರಿಂಟ್‌ಮಾಡಿಸಿರುತ್ತೇನೆ ಇದರ ಮೇಲ್ಪಙ್ತಿಗಳು ಬಹು ಅಂದವಾದ ಬರವಣಿಗೆಯ ಅಕ್ಷರದಂತೆ ತಲೆಕೊಟ್ಟುಗಳೇ ಮೊದಲಾದವುಗಳಿವೆಯೇ ಹೊರತು ಪ್ರಿಂಟಿಂಗ್ ಅಕ್ಷರಗಳ ಹಾಗಿಲ್ಲ ಒಳ್ಳೇ ಕಾಗದದ ಮೇಲೆ ನೋಡುವುದಕ್ಕೆ ಬಹು ಅಂದವಾಗಿ ರೂಲುಗಳನ್ನು ಹಾಕಿ ಪ್ರಿಂಟಾಗಿರುತ್ತವೆ ಇವುಗಳು ವಿದ್ಯಾರ್ಥಿಗಳ ಕೈ ತಿದ್ದಲು ಬಹಳ ಸಹಕಾರಿಯಾದ ಕಾಪಿ ಪುಸ್ತಕಗಳೆಂದು ಭಾವಿಸಿ ಮೈಸೂರಿನ ಸ್ಕೂಲುಗಳಲ್ಲಿ ಉಪಯೋಗಿಸುತ್ತಿದಾರೆ ಕ್ರಯ 0 1 3

ಪ್ರಾಕೃತಿಕ ಭೂಗೋಳ ಮತ್ತು ಹೊಸಕನ್ನಡ ಲೇಖನ ಪುಸ್ತಕಗಳನ್ನು ಪಡೆಯಲಿಷ್ಟವುಳ್ಳ ಪುಸ್ತಕ ವ್ಯಾಪಾರಿಗಳೇ ಮೊದಲಾದ ಸರ್ವರೂ ಸಿ ಎಲ್ ಎಸ್ ಬುಕ್ ಡಿಪೊ ಮೈಸೂರಿಗೆ ಬರೆದು ತರಿಸಿಕೊಳ್ಳಬಹುದು

ಎಂ ಪಿ ಲಿಂಗಪ್ಪಯ್ಯ ಹೆಡ್ ಮಾಸ್ಟರ್ ಇಟ್ಟಿಗೇಗೂಡು
[186–8] ಎ ವಿ ಸ್ಕೂಲು ಮೈಸೂರು

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಸ್ಟರ್ ಗಡಿಯಾರ

ಇದರ ಕ್ರಯ ಸು ಪವಾದ ಗಡಿಯಾರದ ಸರಪಣಿ ಸಮೇತ

ರೂ 2-4-0 ಮಾತ್ರ ೨ ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 4 ಆಣೆ

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರುಮಾಡಲ್ಪಟ್ಟದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ ಕೂಡ್ಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ
[129 20] ಪೋಸ್ಟು ಬಾಕ್ಸು ನಂ 167 ಮದರಾಸು

ಮುಖ್ಯವಾಗಿ ಗಮಿನಿಸಿ ಓದಿರಿ

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್ ಸೇಷನ್ ಬ್ಯಾಲೆನ್ಸು ಬಹು ಬಲಿಷ್ಟವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 5 0 0 ಇದನ್ನು ಸೆಪ್ಟಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಕೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ಧನಲಕ್ಷ್ಮಿ ಅಂಡ್ ಕಂಪೆನಿ,
[129 20] ಸಾಹುಕಾರ್ ಪೇಟೆ ಪೋಸ್ಟು, ಮದರಾಸು

Printed and Published by the Rev H Gulliford Proprietor and Manager Wesleyan Mission Press Mysore 6/11/1913

REGISTERED M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—ಸ್ ೧೯೧೩ ನೇ ಇಸವಿ ನವಂಬರ್ ತಾರೀಖು ೧೩ ನೇ ಗುರುವಾರ. ಸಂಚಿಕೆ ೪೬

A MANUAL OF CRIMINAL LAW.

ಕ್ರಿಮಿನಲ್ ಲಾ ಸಂಗ್ರಹ.

ಕೆಲವು ಕಾಪಿಗಳು ಮಾತ್ರ ಉಳಿದಿವೆ ಜಾಗ್ರತೆಪಡದಿದ್ದರೆ ಪುನಃ ಪ್ರಿಂಟಾಗುವ ವರೆಗೂ ದೊರೆಯಲಾರದು ಒಂದು ಪುಸ್ತಕವನ್ನು ತರಿಸಿಕೊಂಡವರು ಅನೇಕ ಪ್ರತಿಗಳಿಗೆ ಬರೆಯುವದೇ ಪ್ರತಿಗಳು ಜಾಗ್ರತೆ ಮುಗಿದುಹೋಗುವದೆಂಬುವದಕ್ಕೆ ನಿದರ್ಶನವಾಗಿದೆ (ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ.)

ಈ ಪುಸ್ತಕದಲ್ಲಿ:—೧. ಪಿನಲ್‌ಕೋಡು ೨ ಪೊಲೀಸ್ ಆಕ್ಟ್, ೩ ಎಕ್ಸೈಜು ರೆಗ್ಯುಲೇಷನ್, ೪. ಅರಣ್ಯಗಳ ರೆಗ್ಯುಲೇಷನ್, ೫. ದನ್ನವಸ್ತುಗಳ ರೆಗ್ಯುಲೇಷನ್, ೬ ಜೂಜಿಗೆ ಸಂಬಂಧಪಟ್ಟ ರೆಗ್ಯುಲೇಷನ್, ೭. ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, ೮ ಬಾಲ್ಯ ವಿವಾಹಗಳ ರೆಗ್ಯುಲೇಷನ್, ೯. ರೈಲ್ವೆ ರೆಗ್ಯುಲೇಷನ್, ೧೦. ಟೆಲಿಗ್ರಾಫ್ ಆಕ್ಟ್ ೧೧. ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ.

ಪ್ರತಿ ಪೀನಲ್ ಸೆಕ್ಷನಿಗೂ —ವಿಚಾರಣೆಯಾಗತಕ್ಕ ಕೋರ್ಟು ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ? ಯಾ ಕೂಡದೆ? ಮೊದಲು ಸಮನ್ ಹುಟ್ಟಬೇಕೇ? ಯಾ ವಾರಂಟು ಹುಟ್ಟಬೇಕೇ? ಜಾಮೀನ್ ತೆಗೆದುಕೊಳ್ಳಬಹುದೆ? ಯಾ ಕೂಡದೆ? ರಾಜಿಯಾಗಬಹುದೆ? ಯಾ ಕೂಡದೆ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ. ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ ೨೨ ೪ ೧೯೧೩ ನೇ ವೃತ್ತಾಂತ ಪತ್ರಿಕೆಯನ್ನು ನೋಡಿ. ಕ್ರಯ ರೂಪಾಯಿ ೨-೦-೦. ಟಪಾಲ್ ಹಾಸಲು ೩ ಆಣೆ.

ವಿಳಾಸ:—ಎಲ್. ವೇಮಾರೆಡ್ಡಿ, ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್, ಮಾಲೂರು, ಕೋಲಾರ್ ಡಿಸ್ಟ್ರಿಕ್ಟ್.

ಅಭಿಪ್ರಾಯಗಳು.

1. ಮ|| ರಾ|| ಶ್ರೀ|| ಬಿ. ಸೂರ್ಯನಾರಾಯಣರಾವ್, ಬಿ ಎ, ಎಂ. ಆರ್. ಎ ಎಸ್. ಯವರು ಬರೆಯಿಸುವದೇನೆಂದರೆ:—

……..ಮ|| ರಾ|| ಶ್ರೀ|| ವೇಮಾರೆಡ್ಡಿಯವರು ಇದಕ್ಕಿಂತಲೂ ಅತಿಶಯವಾದ "ಕ್ರಿಮಿನಲ್ ಲಾ ಸಂಗ್ರಹ" ಎಂಬ ಮತ್ತೊಂದು ಪುಸ್ತಕವನ್ನು ರಚಿಸಿರುತ್ತಾರೆ ಈ ಪುಸ್ತಕವು ಬಹಳ ದೊಡ್ಡದಾಗಿದ್ದಾಗ್ಯೂ ಈ ಸಂಬಂಧವಾದ ಪುಸ್ತಕಗಳಲ್ಲಿ ಇದು ಅತ್ಯುತ್ತಮವಾದದ್ದಾಗಿದೆ. ವಿಷಯಗಳನ್ನು ಬಹಳ ಚೆನ್ನಾಗಿ ವಿಂಗಡಿಸಿರುವುದಲ್ಲದೆ ಅನೇಕ ಉದಾಹರಣೆಗಳನ್ನೂ ಪ್ರಕರಣಾನುಸಾರವಾದ ಹೈ ಕೋರ್ಟು ತೀರ್ಮಾನಗಳನ್ನೂ ಕೊಟ್ಟಿರುತ್ತಾರೆ. ಭಾಷಾ ಶೈಲಿಯು ಅತಿ ಸರಳವಾಗಿಯೂ ಮನೋರಂಜಕವಾಗಿಯೂ ಇರುತ್ತದೆ…… ………

2. ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ಮ|| ರಾ|| ಶ್ರೀ|| ಬಿ. ಜಿ. ಕುಮಾರಸ್ವಾಮಿನಾಯಕರು, ಬಿ.ಎ, ಯವರು ಬರೆಯಿಸುವದೇನೆಂದರೆ —

……… ಕ್ರಿಮಿನಲ್ ಲಾ ಸಂಗ್ರಹವೆಂಬ ಪುಸ್ತಕದ ಇವರ ಪ್ರಕಟನೆಯೂ ಬಹಳ ದೊಡ್ಡ ಪ್ರಯತ್ನವೆಂಬುವದರಲ್ಲಿ ಸಂದೇಹವಿಲ್ಲ. ಇವರು ಈ ವಿಷಯದಲ್ಲಿ ಮತ್ತೂ ಬಹಳ ಶ್ರಮತೆಗೆದುಕೊಂಡಿರುತ್ತಾರೆ ಇದು ಸುಲಭವಾದ ಕನ್ನಡ ಭಾಷೆಯಲ್ಲಿ ಬರೆಯಲ್ಪಟ್ಟಿರುತ್ತದೆ ಪ್ರತಿಯೊಬ್ಬರೂ [illegible] ತಿಳಿದುಕೊಳ್ಳಬಹುದು… ……

3. ಮ|| ರಾ|| ಶ್ರೀ|| ಬಿ ರಾಮಣ್ಣನವರು, ಬಿ ಎ, ಎಲ್.ಎಲ್ ಬಿ, ಹೈ ಕೋರ್ಟ್ ವಕೀಲ್ ಮತ್ತು ಅಡ್ವೋಕೇಟರವರು ಬರೆಯಿಸುವದೇನೆಂದರೆ:—

ತಮ್ಮ ಕ್ರಿಮಿನಲ್ ಲಾಸಂಗ್ರಹ'ದ ಕೆಲವು ಭಾಗಗಳನ್ನು ಓದಿ ನೋಡಿದ್ದರಲ್ಲಿ ಈ ಪುಸ್ತಕವು ಬಹಳ ಮನೋರಂಜಕವಾಗಿಯೂ ಸುಬೋಧಕವಾಗಿಯೂ ಇರುತ್ತದೆ ಎಂದು ತಿಳಿಯಲಾಯಿತು. ಇದು ಗ್ರಾಮಾಂತರಗಳಲ್ಲಿರತಕ್ಕವರಿಗೆ ಮಾತ್ರವಲ್ಲದೆ ಪಟ್ಟಣವಾಸಿಗಳಿಗೂ ಸಹ ಕ್ರಿಮಿನಲ್ ಲಾ ವಿಷಯವನ್ನು [illegible]ವದಕ್ಕೆ ಉಪಯೋಗವಾದದ್ದಾಗಿರುತ್ತದೆ. ಇಂಥಾ ಉತ್ತಮವಾದ ಕಾರ್ಯವನ್ನು ಕೈಗೊಳ್ಳುವವರದಲ್ಲಿ ಜಯಪ್ರದವೊಂದುವಿರೆಂದು ಕೇವಲ ಅಪೇಕ್ಷಿಸುತ್ತೇನೆ………

4. ಮ|| ರಾ|| ಶ್ರೀ|| ಸಿ ಕೃಷ್ಣಶಾಸ್ತ್ರಿಗಳು, ಬಿ ಎ ಅಸಿಸ್ಟೆಂಟ್ ಕಮಿಷನರ್ ಮತ್ತು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರವರು ಬರೆಯಿಸುವದೇನೆಂದರೆ:—

ತಮ್ಮ ಕ್ರಿಮಿನಲ್ ಲಾ ಸಂಗ್ರಹ ಪುಸ್ತಕವನ್ನು ಸಂಪೂರ್ಣವಾಗಿ ಓದಲು ಅವಕಾಶ ದೊರೆಯದ್ದರಿಂದ ಇದರ ಕೆಲವು ಭಾಗಗಳನ್ನು ಓದಿದ್ದೇನೆ. ಈ ಪುಸ್ತಕವನ್ನು ನೀವು ಬರೆದದ್ದಕ್ಕಾಗಿ ನಾನು ಬಹಳ ಸಂತೋಷಪಡುತ್ತೇನೆ ಇಂಗ್ಲೀಷಿನಲ್ಲಿ ಲಾ ಪುಸ್ತಕಗಳನ್ನು ಓದಿ ತಿಳಿದುಕೊಳ್ಳುವಷ್ಟು ಇಂಗ್ಲೀಷ್ ವಿದ್ಯೆ ಸಾಲದ ಅನೇಕ ಜನರಿಗೆ ಇದು ಉಪಯೋಗವಾಗಿ ಬರುವದೆಂದು ನಾನು ಅಭಿಪ್ರಾಯಪಡುತ್ತೇನೆ ಕನ್ನಡದಲ್ಲಿ ಉತ್ತಮವಾದ ಲಾ ಪುಸ್ತಕಗಳಿಲ್ಲದ್ದರಿಂದ ಗ್ರಾಮಾಂತರಗಳಲ್ಲಿರುವ ಇಂಗ್ಲೀಷ್ ತಿಳಿಯದ ಜನಗಳಿಗೆ ಕ್ರಿಮಿನಲ್ ಲಾ ವಿಷಯ ಗೊತ್ತಿರುವದಿಲ್ಲ ಇಂಥಾವರಿಗೆಲ್ಲಾ ನಿಮ್ಮ ಕ್ರಿಮಿನಲ್ ಲಾ ಸಂಗ್ರಹವು ನಿಶ್ಚಯವಾಗಿಯೂ ಬಹಳ ಪ್ರಯೋಜನಕಾರಿಯಾಗಿರುತ್ತದೆ………

5. ಅಡ್ವೋಕೇಟರಾದ ಮ|| ರಾ|| ಶ್ರೀ|| ಸುಬ್ಬರಾಯಮೊದಲಿಯಾರ್ರವರು ಬರೆಯಿಸುವದೇನೆಂದರೆ:—

ತಮ್ಮ ಕ್ರಿಮಿನಲ್ ಲಾ ಸಂಗ್ರಹವೆಂಬ ಪುಸ್ತಕವನ್ನು ಓದಿ ನೋಡಿದೆನು ನೀವು ಇದನ್ನು ಜಾಗರೂಕತೆಯಿಂದ ರಚಿಸಿರುವಿರೆಂದು ಇದನ್ನು ನೋಡಿದ್ದರಿಂದ ನನಗೆ ತಿಳಿಯಬಂತು. ಇಂಥಾದ್ದೊಂದು ಪುಸ್ತಕವು ಆವಶ್ಯಕವಾಗಿತ್ತು ಈ ನ್ಯೂನತೆಯನ್ನು ಹೋಗಲಾಡಿಸುವದಕ್ಕಾಗಿ ತಾವು ಮಾಡಿದ ಪ್ರಯತ್ನಕ್ಕೆ ನಾನು ಸಂತೋಷಿಸುತ್ತೇನೆ. ಅನೇಕ ಪ್ರಕರಣಗಳ ಕೆಳಗೆ ಹೈ ಕೋರ್ಟು ತೀರ್ಮಾನಗಳನ್ನಿಟ್ಟು ಕೊಟ್ಟಿರುವ ನೋಟುಗಳು ಬಹಳ ಉಪಯುಕ್ತಗಳಾಗಿವೆ ಈ ಪುಸ್ತಕವು ಮುಖ್ಯವಾಗಿ ಗ್ರಾಮಾಂತರಗಳಲ್ಲಿರುವ ಇಂಗ್ಲೀಷ್ ತಿಳಿಯದ ವಕೀಲರುಗಳಿಗೂ ಮತ್ತು ಇತರರಿಗೂ ಬಹಳ ಉಪಯುಕ್ತವಾಗಿದೆ

6 ಅಮಲ್ದಾರರೂ ಮತ್ತು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರೂ ಆದ ಮ|| ರಾ|| ಶ್ರೀ|| ಬಿ ಕೇಸರ್‌ಸಿಂಗರವರು ಬರೆಯಿಸುವದೇನೆಂದರೆ:—

…… ..ತಮ್ಮ "ಕ್ರಿಮಿನಲ್ ಲಾ ಸಂಗ್ರಹ" ಪುಸ್ತಕವನ್ನು ಓದಿನೋಡಿದೆನು. ಇಂಗ್ಲೀಷ್ ಭಾಷೆಯ ಪರಿಚಯವಿಲ್ಲದವರಿಗೆ ಕನ್ನಡ ತರ್ಜುಮೆಯಲ್ಲಿ ಕ್ರಿಮಿನಲ್ ಲಾಸಿನ ಕಾನೂನುಗಳನ್ನು ಒಳಗೊಂಡಿರುವ ಪುಸ್ತಕವು ಅತ್ಯವಶ್ಯಕವಾಗಿತ್ತು ಈಗ ನೀವು ರಚಿಸಿರುವ "ಕ್ರಿಮಿನಲ್ ಲಾ ಸಂಗ್ರಹ" ಎಂಬ ಪುಸ್ತಕದಿಂದ ಈ ಅನಾನುಕೂಲವು ಪರಿಹಾರವಾಗಿರುತ್ತದೆ. ತಿಳಿದುಕೊಳ್ಳಲು ಕಷ್ಟಸಾಧ್ಯವಾದ ಸೆಕ್ಷನುಗಳ ಕೆಳಭಾಗದಲ್ಲಿ ಹೈ ಕೋರ್ಟ್ ರೂಲಿಂಗ್ಸ್‌ಗಳನ್ನು ನಮೂದಿಸಿರುವುದರಿಂದಲೂ, ಇಂಗ್ಲೀಷ್ ಶಬ್ದಗಳ ಅರ್ಥಕ್ಕೆ ಭಂಗವುಂಟಾಗದಂತೆ ಸರಳಭಾಷೆಯಲ್ಲಿ ತಾವು ಈ ಪುಸ್ತಕವನ್ನು ಬರೆದಿರುವುದರಿಂದಲೂ ಮತ್ತು ಶಿಕ್ಷೆಯನ್ನು ಉದಹರಿಸುವ ಪ್ರತಿ ಸೆಕ್ಷನಿನ ಕೆಳಗೆ ಉದಾಹರಣೆಯನ್ನು ಕಾಣಿಸಿರುವುದರಿಂದಲೂ ಈ ಪುಸ್ತಕವನ್ನು ಓದುವವರಿಗೆ ಬಹಳ ಸೌಕರ್ಯವನ್ನು ಉಂಟುಮಾಡಿದ್ದೀರಿ. .. ……………………………

ಪೋಲೀಸ್ ಇನ್ಸ್‌ಪೆಕ್ಟರಾದ ಮ|| ರಾ|| ಶ್ರೀ|| ಎ ಚನ್ನಂಬಾಜಯ್ಯನವರು ಬರೆಯಿಸುವದೇನೆಂದರೆ

ತಮ್ಮ "ಕ್ರಿಮಿನಲ್ ಲಾ ಸಂಗ್ರಹ" ವೆಂಬ ಪುಸ್ತಕವನ್ನು ನೋಡಿದೆನು ಇದಕ್ಕೋಸ್ಕರ ತಾವು ತೆಗೆದುಕೊಂಡಿರುವ ಶ್ರಮವು ಶ್ಲಾಘ್ಯತರವಾಗಿರುತ್ತದೆ. ಈ ಪುಸ್ತಕದಲ್ಲಿ ಅನೇಕ ಕ್ರಿಮಿನಲ್ ಲಾ ವಿಷಯಗಳು ಬಂದಿರುವದರಿಂದ ಕನ್ನಡವನ್ನು ಸಾಧಾರಣವಾಗಿ ತಿಳಿದವರೆಲ್ಲರಿಗೂ ಈ ಪುಸ್ತಕದಿಂದ ಬಹಳ ಅನುಕೂಲ ಕಲ್ಪಿಸಿದಂತೆ ಆಯಿತು. ಇದರಲ್ಲಿ ಸೆಕ್ಷನುಗಳಿಂದು ಅಲ್ಲಲ್ಲಿ ಉದಹರಿಸಿರುವ ಹೈ ಕೋರ್ಟು ತೀರ್ಮಾನಗಳೂ ಮತ್ತು ಪ್ರತಿಯೊಂದು ವಿಧವಾದ ತಪ್ಪಿತಗಳನ್ನೂ ಬೇರೆಬೇರೆ ತಂದವಾಗಿ ವಿಂಗಡಿಸಿ ಸೂಚಿಸಿರುವದು ಸಹಾ ವಕೀಲರುಗಳಿಗೂ, ಪೋಲೀಸಿನವರಿಗೂ ಮತ್ತು ಕ್ರಿಮಿನಲ್ ಪರೀಕ್ಷೆಗೆ ಓದುವವರಿಗೂ ಸಹಾ ಬಹಳ ಉಪಯುಕ್ತಕರವಾಗಿರುತ್ತದೆ. ಇಂಥಾ ಪುಸ್ತಕವನ್ನು ನಾನು ಇದುವರೆಗೂ ನೋಡಿರಲಿಲ್ಲ.

[ಇವುಗಳಲ್ಲದೆ ಇನ್ನೂ ಅನೇಕ ದೊಡ್ಡ ಮನುಷ್ಯರ ಒಳ್ಳೇ ಅಭಿಪ್ರಾಯಗಳಿವೆ.] [237–1]

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 4 ಆಣೆ

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರು ಮಾಡಲ್ಪಟ್ಟದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ ಕೂಡ್ಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,

[120-31] ಪೋಸ್ಟ್ ಬಾಕ್ಸ್, ನಂ 167, ಮದರಾಸು

ಮುಖ್ಯವಾಗಿ ಗಮಿನಿಸಿ ಓದಿರಿ

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ



ಈ ನಕ್ಷೆಯಲ್ಲಿ ಕಂಡ ಜೇಬಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ ೨ ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 5 0 0 ಇದನ್ನು ಸೆಪ್ಟಂಬರ್ ಆಖೈರಿನೊಳಗಾಗಿ ತರಿಸಿಕೊಳ್ಳುವವರಿಗೆ 10 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ಧನಲಕ್ಷ್ಮಿ ಅಂಡ್ ಕಂಪೆನಿ,

[120 21] ಸಾಹುಕಾರ್ ಪೇಟೆ ಪೋಸ್ಟು ಮದರಾಸು

ಅವಶ್ಯಕವಾಗಿ ಓದಿ ನೋಡಿರಿ! ಕೈಕೆಲಸದ ಔಷಧಾಲಯ!!

ಅವರವರ ಕುಟುಂಬಸ್ಥರ ಮನೆಯಲ್ಲಿ ಅವಶ್ಯಕ ಔಷಧ ಇರಬೇಕು 11 ವರುಷದ ಲಾಗಾಯ್ತು ಇದುವರೆವಿಗೂ ರೂಢಿಯಲ್ಲಿರುವ ಅನುಭವ ಔಷಧಗಳು ಕೆಲವು ಜನಗಳು ಕೇಳಿಕೊಂಡ ವಿಷಯಕ್ಕೆ ಬಹಿರಂಗಪಡಿಸಲಾಯಿತು ಬೇಕಾದವರು ನಮ್ಮ ವಿಕ್ರಯ ಕ್ಯಾಟ್ಲಾಗು ತರಿಸಿಕೊಂಡು ನೋಡಬಹುದು ತಮಗೆ ತೋರಿಸಿರುವ ರೋಗಗಳಿಗೆ ಔಷಧಗಳು ಒಂದು ದಫಾ ಉಪಯೋಗಿಸಿ ನೋಡಿದರೆ ಗೊತ್ತಾಗಬಹುದು ಕಲಿತವರೂ ಕಲಿಯದೆ ಇರತಕ್ಕವರೂ ಇರುತ್ತಾರೆ ಔಷಧಗಳನ್ನು ಯುನಾನಿ ಮಿಕ್ಸ್ಚರ್, ಕರ್ನಾಟಕ ಮಿಕ್ಸ್ಚರ್, ಇಂಗ್ಲೀಷು ಮಿಕ್ಸ್ಚರ್, ಮೂರು ಭಾಷೆಯುಳ್ಳ ಔಷಧಗಳು ನನ್ನ ಸ್ವಾತದಿಂದ ನಡೆಸುವದಾಗುತ್ತೆ ಯಾವ ವಿಷಯದಲ್ಲು ನಾನು ಪರೀಕ್ಷೆಯುಳ್ಳವನಾದ್ದರಿಂದ ರಾಜಮಹಾರಾಜರುಗಳು ಮೊದಲುಗಳು ಅನೇಕ ಸರ್ಟಿಫಿಕೇಟುಗಳು ಕೊಟ್ಟಿರುತ್ತಾರೆ ಬೇಕಾದವರು ಬಂದು ನೋಡಬಹುದು ಬೇಕಾದವರಿಗೆ ಸರ್ಟಿಫಿಕೇಟುಗಳು ಕಳುಹಿಸುತ್ತೇನೆ

ಸನ್ನಿಜ್ವರ, ಪ್ಲೇಗ್, ಹುಚ್ಚು ಪೌಡರ್ ವಿವರ

ಮೊದಲು ಗೆಡ್ಡೆ ಅಲ್ಲದೆ ಫುನಹ ಗೆಡ್ಡೆ, ಬಿಡದೆ ಜ್ವರ ಇರುವದು, ಕಣ್ಣು ಕೆಂಪು ಮತ್ತು ವಾಂತಿ, ಸ್ವಲ್ಪ ಬೇದಿ, ಹುಚ್ಚು ಸನ್ನಿ, ತಿಕ್ಕಲಮಾತು, ನಾನಾ ವಿಧ ಇರುವದು ಇವ್ವವರು ಗಾಬರಿಯಾಗುತ್ತಾರೆ ನಾಡಿಗಳು ಕೆಟ್ಟು ಸತ್ತು ಹೋಗುತ್ತಾರೆ ಇದರ ತಾರತಮ್ಯ ತಿಳಿಯದೆ ಇದಾರೆ ಇನ್ನು ಮೇಲಾದರೂ ಗೌರವ ತಿಳಿದು ಮಾಡಿರುವ ಈ ಔಷಧಿಯನ್ನು ಒಂದು ದಫ ಸೇವಿಸಲು ತಿಳಿಯುತ್ತೆ ಇದರ ಬೆಲೆ 3 ರೂಪಾಯಿ [224 1]

ವಿಷಜ್ವರಾಂಕುಶ ಅಮೃತ ವಿವರ

ಬಿಡದೆ ಸನ್ನಿಜ್ವರ, ಪ್ಲೇಕಟ್ಟೆ ಅಲ್ಲದೆ ಅಮಾಸಿಯಾ ವೇಗು ಎನ್ನುವ ವಿಷಜ್ವರ, ವಿಧವಿಧವಾಗಿ ವಾಂತಿಯಾಗುವದು ಹುಚ್ಚು ಮಾತನಾಡುವದು, ವಾಂತಿ ನಿಂತು ಪಿತ್ಥಶಮನವಾಗಿ ನಿದ್ರೆ ಬರುವದು, ವಾತನಾಡಿ ಪಿತ್ತನಾಡಿ ಶ್ಲೇಷ್ಮನಾಡಿ ಆಯಾಯ ಸ್ಥಳದಲ್ಲಿ ನಿಲ್ಲುವದು ಇದು ಒಪ್ಪತ್ತು ಉಪಯೋಗಿಸಲು ಹಾವು ಕಚ್ಚಿದರೂ ವಿಷವಾಗದೆ ಅದೇ ಆಯುವದು ಇದರ ಖರೀದಿ ರೂ 1 8-0

ಬಿಟ್ಟುಬಿಟ್ಟು ಬರುವ ಚಳಿಜ್ವರಕ್ಕೆ ಮೋರೆ ಜ್ವರಾಂಕುಶ ವಿವರ

ಶೀಷೆ ಮೇಲೆ ಹಾಕಿರುವ ಅಳತೆ ಮೇರೆಗೆ ಚಳ್ಳೀರಲ್ಲಿ ತೆಗೆದುಕೊಂಡು ಕಂಬಳಿ ಹೊದ್ದು ಮಲಗಲು ಬೆವರು ತೋರುವದು ವಾತ ಪಿತ್ತ ಮಂದ ಸನ್ನಿ ಎತ್ತಿಕುಕ್ಕುವ ಜ್ವರ ಮೂರು ದಿನ ಆರು ವ್ಯಾಳೆ ಖಂಡಿತ ನಿಲ್ಲುವದು ಒಂದು ದಫ ಕುಡಿದ ಮೇಲೆ ಬರದೆ ನಿಲ್ಲುವದು ಇದು ಜೇನುತುಪ್ಪದಲ್ಲಿ ಮಾಡಲ್ಪಡುವದು ದೊಡ್ಡವರು ಚಿಕ್ಕವರು ಮದ್ದು ಎಂದು ಭಯಪಡುವವರಿಗೆ ತಕ್ಕ ಅಮೃತಶೀಯಾಗಿರುವದು ಕ್ರಯ 0 8-0

ಗುಹ್ಮಕಟ್ಟುವ ಮೈಲು, ವಿವರ

ಉಷ್ಣವಾಯುವಿನಿಂದ ಉಂಟಾದ ಗಂಡಸರಿಗೂ ಹೆಂಗಸರಿಗೂ ಹೊಟೆಯಲ್ಲಿ ಗುಹ್ಮಜ್ವರದ ಕಟ್ಟು, ನೀರುಕಟ್ಟು, ಕರುಳಲ್ಲಿ ನಾನಾ ವಿಧ ಉತ್ಪತ್ತಿಯಾಗುವ ಕಜ್ಜಿಗಳು, ಸಂದೇಹ ಪರೀಕ್ಷೆಮಾಡಬಹುದು ಇದರಲ್ಲಿ ಅನೇಕ ಔಷಧಗಳು ಇದೆ ಬರೆದು ತಿಳಿದುಕೊಳ್ಳುವದು ಇದರ ಬೆಲೆ 0 12 0

ಜೀರ್ಣಾಂಕುಶ ವಿವರ

ಗಂಡಸರಿಗೂ ಹೆಂಗಸರಿಗೂ ದೊಡ್ಡವರಿಗೂ ಚಿಕ್ಕವರಿಗೂ ಸೂಳುವಾಯು, ಶೀಘ್ರವಾಗಿ ಬರುವ ಹೊಟ್ಟೆಯುರಿ, ಚಳುಕಾಗುವದು, ಜೀರ್ಣಶಕ್ತಿ ಇಲ್ಲದ ಇರುವದು, ವಾತ ಪಿತ್ಥ ವಾಂತಿ ಎತ್ತುವದು, ನಾನಾ ವಿಧ ಥಂಡ ಭೇದಿ ಉಷ್ಣಜ್ವರ ಈ ವ್ಯಾಧಿಗಳೆಲ್ಲಾ ಕಾಲು ಗಂಟೆಯಲ್ಲಿ ನಿಲ್ಲುವವು ಇದರ ಬೆಲೆ 8 ಆಣೆ

32 ನಾನಾ ವಿಧ ಚಳಿಷೋವು ವ್ಯಾಧಿಗಳಿಗೆ ತಕ್ಷಣ ವಾಸಿಯಾಗುವ ನವನೀತನ ಪೌಡರ್ 8 ದಿನಕ್ಕೆ 1 ರೂ ಮೇಲ್ಭಾಗ ವಿಪರೀತ ರೋಗಗಳು ಸೇರಿಕೊಂಡು ಬಿಡದೆ ಅಸ್ತಿಜ್ವರಗಳಿಗೆಲ್ಲ 8 ದಿನಕ್ಕೆ ಕುರಾಧಿಭಸ್ಮ ಬೆಲೆ 1-8-0

ಮೇಲ್ಭಾಗ ವ್ಯಾಧಿಗಳಿಗೆ ಇಟ್ಟಿರುವ ಬೆಲೆಯುಳ್ಳ ಔಷಧಗಳು ಅಂಥಂಥಾ ಸಮಯಗಳಲ್ಲಿ ಶಾಂತಿಮಾಡಲ್ಪಡುವದು ಖಂಡಿತ ಹಾಗೆ ವಾಸಿಯಾಗನೇಹೋದರೆ ಹಣ ವಾಪಸು ಕೊಡುತ್ತೇವೆ ಮನಸ್ಸಿನಲ್ಲಿ ಸತ್ಯವಿರಬೇಕು ಬದಲು ಉತ್ತರ ಕ್ಯಾಟ್ಲಾಗು ಕಳುಹಿಸುವದಾಗುತ್ತೆ ಔಷಧದ ಚಾರ್ಜು ಬೇರೆ ವಿ ಪಿ ಚಾರ್ಜು ಬೇರೆ ಪರೀಕ್ಷೆಮಾಡುವಲ್ಲಿ ತಿಳಿಯುವದು ಅನೇಕ ವಿಷಯಗಳು ಇದೆ

ನಮ್ಮವಿಳಾಸ —ಕೈಕೆಲಸ ಪಾಠಶಾಲ ಆಯುರ್ಯೋಗೀಶ್ವರರೈವತಿ,

ಸುರಾಜಗೋಪಾಲಪಿಳ್ಳೆ, ಸಿದ್ಧೇಶ್ವರ ದೇವಸ್ಥಾನಕ್ಕೆ ಎದುರು

167 ನಂಬರ್, ಕೇವಲ್ರಿ ರೋಡು, ಬೆಂಗಳೂರು ದಂಡು

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ್ ಯವರು ಹೊಟ್ಟೆಶೂಲೆ ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



14

ಕೆಳ ಹೊಟ್ಟೆಯ ನೋವು ಎರಿ ಬೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು ಹೊಟ್ಟೆಯ ನಾನಾ ತರದ ರೋಗಗಳು—ಈ ರೋಗಗಳನ್ನೆಲ್ಲಾ ದಮನಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ ಬಾಧೆಯನ್ನೂ ಪಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೇಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ

ಡೋಂಗರೆ

ಇವರ ಬಾಲಾಮೃತ

[150 17]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧೨ ಆಣೆ ಟಪಾಲ್ ಖರ್ಚು 8 ಆಣೆ

ಕೆ ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟೌನ್, ಮದರಾಸು ಇವರಲ್ಲೂ ದೊರೆಯುವುದು.

ಶುದ್ಧವಾದ ಹತ್ತಿಯ ತುಪ್ಪವು

"ಆರೋಗ್ಯ! ರುಚಿ! ಪುಷ್ಟಿಕಾರಿ!"

(11) ಎ ರಾಮಣ್ಣ, ಬಿ ಎ ಎಲ್ ಎಲ್ ಬಿ ಹೈಕೋರ್ಟು ವಕೀಲರು ಮತ್ತು ಅಡ್ವೋಕೇಟರು, ಬೆಂಗಳೂರು —"ಹತ್ತಿಯ ತುಪ್ಪವನ್ನು ಕೆಲವು ಕಾಲದಿಂದ ಉಪಯೋಗಿಸುತ್ತಿದೇನೆ ಆರೋಗ್ಯಕ್ಕೆ ಕುಂದಿಲ್ಲ ರುಚಿಯಾಗಿದೆ ಮತ್ತು ಪುಷ್ಟಿಕಾರಿಯೆಂದೂ ತೋರುತ್ತದೆ ಜೆಬ್ಬು ಎರಿದಿ ಆದರೆ ಮಣಕ್ಕೆ 21 25 ರೂಪಾಯಿ ಕೊಟ್ಟರೂ ಒಳ್ಳೆಯ ತುಪ್ಪ ದೊರೆಯದ ಈ ಕಾಲದಲ್ಲಿ ಅಗ್ಗವಾಗಿ ಬರುವ ಇದು ಮಾಂಸಾಹಾರಿಗಳಲ್ಲದವರಿಗೆ ದ್ವಿಗುಣವಾಗಿ ಫಲಕಾರಿ ಏಕೆಂದರೆ ತುಪ್ಪವೂ ಸಸ್ಯಜನ್ಯವಾದುದು 11 9 1913

ಎಚ್ಚರಿಕೆ —ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೆಕಾಯಿ ಎಣ್ಣೆ, ಕುಸುಮೆ ಎಣ್ಣೆ ಇವುಗಳನ್ನೂ ಕೊಬ್ಬನ್ನು ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ [110 24]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ ಲಿಮಿಟೆಡ್,

153, ಕಿಲಾರಿ ರೋಡ್ (ಕುಂಚಿಗರಪೇಟೆ), ಬೆಂಗಳೂರುಸಿಟಿ

ಸ್ಮಾರ್ಟ್ ಟ್ರಾವಲರ್ಸ್ ಲೀವರ್ ವಾಚ್.

ಇದರ ಕ್ರಯ ನಾಣ್ಯವಾದ ಮತ್ತು ಬೆಲೆಯುಳ್ಳ 8 ಬಹುಮಾನ ಸಾಮಾನುಗಳ ಸಮೇತ ರೂ 3 8 0 ಮಾತ್ರ [77 30]

ಧನವಂತರೇ ಈ ವಾಚ್ ಈಗತಾನೆ ಬಂದಿರುತ್ತೆ ಇದು ಬಹು ಬಲಿಷ್ಠವಾದ ಯಂತ್ರಸಾಮಾನುಗಳಿಂದಲೂ ಮತ್ತು ಶ್ರೇಷ್ಠವಾದ ಮತ್ತು ಫೂಲೋಕದ



ಲ್ಲೆಲ್ಲಾ ಹೆಸರುವಾಸಿಯಾದ ಲೀವರ್ ಕೆಲಸದಿಂದಲೂ ತಯಾರಾದದ್ದು ಆದಕಾರಣವೇ ಆರ್ಡರುಗಳು ಒಂದೇ ಸುರಿಯುತ್ತವೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಸುಂದರವಾದದ್ದು ಖಾತ್ರಿಯಾದ ಮಾಲು

ಇದರ ಬಹುಮಾನ ಸಾಮಾನುಗಳ ವಿವರ —

(1) ಸುಂದರವಾದ ವಾಚ್ ಸರಪಣಿ (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ (3) ಸುವಾಸನೆಯುಳ್ಳ ಪರಿಮಳದ ಅತ್ತರ್ (4) ಧೂಳು ಸೇರದಂತೆ ವಾಚ್ ಮುಚ್ಚುವ ಕವರ್ (5) ಮೋಕ್ ಉಂಗುರ (6) ಜಟ್ಲಿಮೆನ್ ಪೆನ್ಸಿಲ್ (ಕವರ್ ಸಮೇತ) (7) ತಮಾಷಿಯಾದ ಚಿಂಬೆ (8) ಷರ್ಟು ಗುಂಡಿಗಳ ಸೆಟ್ಟು

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ —

ವಿಳಾಸ—ಬಿ ಆರ್ ವೆಂಕಟರಮಣ ಅಂಡ್ ಕಂಪೆನಿ,

ನಂ 7, ಕೋಪ್ ವೆಂಕಟಾಚಲೈಯರ್ ಬೀದಿ, ಮದರಾಸು.

ನೀತಿಗೀತ"—1 ಆಣೆ "ಬಾಲ್ಯನೀತಿ —3 ಪೈ

ಬಾಲಕರಿಗೆ ದೇವಭಕ್ತಿ ಗುರುಭಕ್ತಿ ರಾಜಭಕ್ತಿ ಮಾತೃಭಕ್ತಿ ಪಿತೃಭಕ್ತಿ ಯುಕ್ತಿ ಸತ್ಯತೆ ಶಾಂತತೆ ಪ್ರಾಮಾಣಿಕತೆ ಸಾಹಸ ಧೈರ್ಯ ಕೋಪ ... ಗಳನ್ನು ಸುಲಭ ಶೈಲಿಯಲ್ಲಿ ಗೀತಾರೂಪಕವಾಗಿ ಬೋಧಿಸುವುದೇ "ನೀತಿಗೀತ" 100 ಕ್ಕೆ 10 ಉಚಿತ "ಬಾಲ್ಯನೀತಿ" 100 ಕ್ಕೆ 25 ಉಚಿತ [226-3]

ವಿಳಾಸ —ಎಸ್ ಕೋಂಟಿದಾರ್ಯ, ವಡಿಗೇನಹಳ್ಳಿ, ದೇವನಹಳ್ಳಿ ...

ಕನ್ನಡ ಲಾ ಪುಸ್ತಕಗಳು

[160 19]

ಗವರ್ನರ್ ಜನರಲ್‌ರವರ ಹುಕುಂ ಪ್ರಕಾರ ಎಲ್ಲಾ ದೇಶಗಳಲ್ಲಿಯೂ ಜಾರಿಯಲ್ಲಿರುವ ಕನ್ನಡ ಇಂಡಿಯನ್ ಪೆನಲ್‌ಕೋಡು ಕ್ರಯ ರೂ 2-0-0 ವ್ಯವಹಾರನಿರ್ಣಯ ವಿಧಿ ಎಂಬ ಸಿವಲ್ ಪ್ರೊಸಿಜೂರ್ ಯಾನೆ 3 ಭಾಗಗಳುಳ್ಳದ್ದು ರೂ 3 0 0 ಪ್ರಶ್ನೋತ್ತರ ರೆಸ್ಪಾಂಡೆನ್ಸ—ಈ ಪುಸ್ತಕದಲ್ಲಿ ಸಿವಿಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ವ್ಯವಹಾರ ವಿಧಿಗಳನ್ನು ಬೋಧಿಸುವದು ಕ್ರಯ ರೂ 1 4-0 ತಾನಾಗಿ ಸ್ವತಃ ಇಂಗ್ಲೀಷ್ ಕಲಿಯುವದು—ರೂ 1 8-0 ... ಗಳಲ್ಲಿ ಕೆಲವು ಮುದ್ರಣವಾಗುತ್ತಿದೆ ಇನ್ನೂ ಪುಸ್ತಕಗಳು ಅಪೇಕ್ಷಿಸುವವರು ನಮ್ಮ ಪುಸ್ತಕಗಳ ಕ್ಯಾಟಲಾಗಿಗೆ ಬರೆಯಿರಿ ನಮಗೆ ಪ್ರತಿ ಒಂದು ತಾಲ್ಲೂಕುಗಳಲ್ಲಿಯೂ ಏಜಂಟರು ಬೇಕಾಗಿದೆ ಅವರ ಸಖ್ಯಾನುಸಾರ ಕಮಿಷನ್ ಕೊಡಲ್ಪಡುತ್ತೆ

ವಿಳಾಸ—ಬಿ. ನರಸಿಂಗರಾವ್,

ಎಡಿಟರ್, "ಲಾ ಗೆಜೆಟ್" ಬೆಂಗಳೂರು

ಶ್ವಾಸಕೇಸರಿ ಲೇಹ್.

ಆಸ್ತ್ಮಕ್ಕೆ ತಪ್ಪದೆ ತತ್‌ಕ್ಷಣ ಗುಣಕೊಡುತ್ತೆ

ಆಸ್ತಮ ಕಾಯಿಲೆಯು ಎಷ್ಟೇ ಹಳೇದಾಗಿದ್ದರೂ ಎಷ್ಟೇ ಕಠಿಣವಾಗಿದ್ದರೂ ಈ ಲೇಹವನ್ನು ಮೂರು ವಾರ ಸೇವಿಸುವುದರೊಳಗೆ ಖಂಡಿತವಾಗಿ ಪೂರ್ಣ ಗುಣ ಮಾಡುತ್ತೆ ಇದು ಚೆನ್ನಾಗಿ ಪರೀಕ್ಷಿಸಿ ನೋಡಿದ ಔಷಧ ಸಾವಿರಾರು ಜನ ಉಪಯೋಗಿಸಿ ಸೌಖ್ಯಹೊಂದಿದಾರೆ ದೃಷ್ಟಾಂತಕ್ಕಾಗಿ ಈಗತಾನೇ ನಮಗೆ ಬಂದಿರುವ ಯೋಗ್ಯತಾಪತ್ರಿಕೆಯನ್ನು ಕೆಳಗೆ ಪ್ರಕಟಿಸಿರುತ್ತೇವೆ ಓದಿನೋಡಿ.

20 ತೊಲಾ ಲೇಹದ ಟಿನ್ ಡಬ್ಬಾಕ್ಕೆ ಕ್ರಯ ರೂ 1-8-0

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

[87-2] 177 ಚೀನಾ ಬಜಾರ್ ರೋಡ್, ಮದ್ರಾಸು

ಈ ಯೋಗ್ಯತಾ ಪತ್ರವನ್ನು ಜಬ್ಬಲ್‌ಪುರದ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಫೀಸ್ ಕ್ಲಾರ್ಕ್ ಮ|| ಎ ಭೀಮರಾವ್ ಮೊದಲಿಯಾರ್ರು 21 10 1913 ರಲ್ಲಿ ಬರೆಯುತ್ತಾರೆ —"ನಾನು ಬಹುಕಾಲದಿಂದ ಆಸ್ತ್ಮರೋಗದಲ್ಲಿ ನರಳುತ್ತಿದ್ದೆನು ಅನೇಕ ಹೆಸರುವಾಸಿಯಾದ ಡಾಕ್ಟರುಗಳಿಂದಲೂ ವೈದ್ಯರಿಂದಲೂ ಅನೇಕ ಔಷಧಗಳನ್ನು ತೆಗೆದುಕೊಂಡಾಗ್ಯೂ ನನ್ನ ಉಬ್ಬಸರೋಗ ಹರಿಯಲಿಲ್ಲ ಕಡೆಗೆ ನಿಮ್ಮ ಶ್ವಾಸಕೇಸರಿ ಲೇಹ್ಯವನ್ನು ಸೇವಿಸಿನೋಡಬೇಕೆಂದು ಕುತೂಹಲಪಟ್ಟು ತೆಗೆದುಕೊಂಡೆನು ನಿಮ್ಮ ಈ ಎರಡು ಟಿನ್ ಲೇಹ ಮುಗಿಯುವಷ್ಟರಲ್ಲಿ ನನ್ನ ಭಯಂಕರವಾದ ರೋಗವು ವಾಸಿಯಾಗಿದೆ ಎಂದು ತಿಳಿಸಲು ಆನಂದಪಡುತ್ತೇನೆ ಈ ನನ್ನ ಅಭಿಲಾಷೆಯನ್ನೂ ಅನುಭವವನ್ನೂ ನೀವು ದಯವಿಟ್ಟು ಪಬ್ಲಿಕ್ ಜನರಿಗೆಲ್ಲಾ ತಿಳಿಸಿ"

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು.............ರೂ. 4,25,00,000

ಕಂಪನಿಯಿಂದ ಪಾವತಿ ಆಗಿರುವದು ,, 3,60,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ॥ ಎಂ. ಎಸ್ ರೆಬಿಟಿ, ಚೀಫ್ ಏಜೆಂಟ್, ಬೆಂಗಳೂರು; ಮ॥ ಎಂ. ಎಸ್. ಸಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[194-7] ಬ್ರಾಂಚ್ ಸೆಕ್ರೆಟರಿ, ಮದರಾಸ್

ಸರ್ 1914 ನೇ ಇಸವಿಯ ಕ್ಯಾಲೆಂಡರ್

ಹಿಂದೂ ರಾಜರುಗಳೊಡನೆ ಜಾರ್ಜ್ ಚಕ್ರವರ್ತಿಯವರು ಮೇರಿ ಚಕ್ರವರ್ತಿಣಿಯವರೊಡನೆ ದೆಹಲಿ ಕಾರೊನೇಷನ್ ಪಠ ಇದ್ದು, ತಿಂಗಳು, ವಾರ, ತಿಥಿ, ನಕ್ಷತ್ರ, ಹಬ್ಬಗಳು, ಮತ್ತೂ ವಿಶೇಷ ದಿವಸಗಳು, ಗೌರ್ನ್ಮೆಂಟ್ ರಜಾ ದಿವಸಗಳು, ರಾಹುಗುಳಿಕಕಾಲ ಇವೆಲ್ಲಾ ಸುಂದರವಾದ ಅಕ್ಷರದಲ್ಲಿ ಗ್ಲೇಜ್ ಕಾಗದದ ಮೇಲೆ ಮೈಸೂರ್ ವೆಸ್ಲಿಯನ್ ಮಿಷನ್ ಪ್ರೆಸ್ಸಿನಲ್ಲಿ ಅಂದವಾಗಿ ಮುದ್ರಿಸಿ ಬಿಕರಿಗೆ ಸಿದ್ಧವಾಗಿವೆ. ಕ್ರಯ 1 ಕ್ಕೆ 0-0-6. 50 ಕ್ಕೆ 1-1-0. 100 ಕ್ಕೆ 2-0-0 ಪ್ಯಾಕಿಂಗ್ ಪೋಸ್ಟೇಜ್ ಮಾಫಿ ಇದೇ ಪ್ರೆಸ್ಸಿನಲ್ಲಿ ಪ್ರಿಂಟಾಗಿರತಕ್ಕ ಡಿಟೋ ರಫಿಂಗ್ ಕಾಗದದ ಕ್ಯಾಲೆಂಡರ್ 1ಕ್ಕೆ 0-0-4 ಪೈ 50ಕ್ಕೆ 0-11-0 100ಕ್ಕೆ 1-4-0. ಏಜಂಟರಿಗೆ 50 ಕ್ಕೆ ಕಡಮೆ ರವಾನಿಸುವದಿಲ್ಲ. ಸ್ವಲ್ಪ ಪತ್ರಿಗಳು ಮಾತ್ರ ಉಳಿದಿರುವದರಿಂದ ಜಾಗ್ರತೆ ಆರ್ಡರ್ ಕೊಟ್ಟು ತರಿಸಿಕೊಳ್ಳಿ. ಮುಗಿದನಂತರ ಬಂದ ಆರ್ಡರ್‌ಗಳನ್ನು ಕ್ಯಾನ್ಸಲ್ ಮಾಡಿಬಿಡುತ್ತೇವೆ. ಪದ್ಧತಿಯ ಪ್ರಕಾರ ಸುಂದರವಾಗಿ 1914 ನೇ ಇಸವಿಯ 4 ನಮೂನೆ ಪಾಕೆಟ್ ಡೈರಿಗಳನ್ನು ಪ್ರಿಂಟ್ ಮಾಡಿಸಿದೆ, 1 ನೇ ನಂ 0-3-0. 2 ನೇ ನಂ 0-5-0 3 ನೇ ನಂ 0-6-0 4 ನೇ ನಂ 0-8-0. 12 ಪ್ರತಿ ಒಟ್ಟಿಗೆ ತರಿಸಿಕೊಳ್ಳುವವರಿಗೆ 1 ಪ್ರತಿ ಬಹುಮಾನ ಪೋಸ್ಟೇಜು ಅಲಾಯಿದ [233-3]

ಬಿಮಲೆ:—ಇದೊಂದು ಬಂಗಾಳಿ ಹೊಸ ಕಾದಂಬರಿ ಅತ್ಯಾಶ್ಚರ್ಯವನ್ನುಂಟುಮಾಡತಕ್ಕ ನಾವೆಲ್. ಕ್ರಯ 1 ಕ್ಕೆ 0-6-0. ಪೋಸ್ಟೇಜು ಅಲಾಯಿದ

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಮೈಸೂರು.

The National Insurance and Banking Co., Ltd., AMRITSAR

NOTICE.

This is to notify that Mr. T. S. R. Iyer, Secretary of our Madras Branch, and at present on deputation to Mysore, is hereby authorised to collect premiums of our Mysore and Coorg Policy-holders, directly or through any agents he may appoint for the purpose. Mr Iyer holds the Company's Power of Attorney, and the Policy-holders making payments to him should feel no hesitation in doing so.

P. L. RAJPAL,
Chief Manager.

[201-6]

ಬಿ. ವಿ. ಪಂಡಿತರಿಂದ

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟು ಆಬಾಲವೃದ್ಧರಿಗೂ ಆಮೋದವನ್ನುಂಟುಮಾಡುತ್ತಿರುವ

ಆಮೋದಿನಿ

150 ಮಾತ್ರೆಯುಳ್ಳ ಸೀಸೆಗೆ 4 ಆ., 5 ಸೀಸೆಗಳಿಗೆ 1 ಇನಾಂ

ಈ ಮಾತ್ರೆಗಳು 1-2 ನ್ನು ಬಾಯಿನಲ್ಲಿ ಹಾಕಿಕೊಂಡ ಕೂಡಲೆ ಮನಸ್ಸಿಗೆ ಅಪೂರ್ವವಾದ ಆನಂದವುಂಟಾಗುವುದು ಎಷ್ಟು ಹಾಡಿದರೂ ದಣಿವಾಗದಂತೆ ಸಂಗೀತಗಾರರ ಕಂಠವನ್ನು ಕಾಪಾಡುವುದರಲ್ಲಿ ಪ್ರಖ್ಯಾತಿ ಪಡೆದಿರುವುದು. ಬಾಯಿನಾತವನ್ನು ಹೋಗಲಾಡಿಸಿ ಬಾಯಾರಿಕೆಯನ್ನು ಶಮನಮಾಡಿ ತಾಂಬೂಲವನ್ನು ರಂಜಿಸಿ, ಜೀರ್ಣಶಕ್ತಿಯನ್ನು ಹೆಚ್ಚಿಸಿ ಅಸಾಧ್ಯವಾದ ಕೆಮ್ಮು-ದಮ್ಮು-ಅರೋಚಕ ಹೊಟ್ಟೆನೋವು-ಮಲಬಂಧ-ಶರೀರದಲ್ಲಿ ದೌರ್ಬಲ್ಯ-ಇವುಗಳನ್ನು ಗುಣಮಾಡುವ ಅಮೋಘವಾದ ಗುಣವನ್ನು ಹೊಂದಿರುವದು ಮಲೆನಾಡಿನಲ್ಲಿರುವವರಿಗೂ ಪ್ರಯಾಣಿಕರಿಗೂ ಇದರ ಸೇವನೆಯು ಅಮೃತಕ್ಕೆ ಸಮವಾದುದು. ಟಪಾಲ್ ಖರ್ಚು 12 ಸೀಸೆ ವರೆಗೆ 1 ಆಣೆ [220-3]

ಶ್ರೀಕರ ಕಸ್ತೂರಿ ಮಾತ್ರೆ.— ಅನುಪಾನಪತ್ರ ಸಹಿತ 250 ಮಾತ್ರೆ 1 ಆಣೆ ಐದು ಸೀಸೆಗೆ ಒಂದು ಇನಾಮು

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ಕುಂತಲಾನಂದ ತೈಲವು.

192-8

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಹುಮಾನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಬಣ್ಣಗಿಯೂ ಕ್ರಿಯೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ.

ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಕೂಲಿ ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

104 25

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಅರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟ್ಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಛಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ.

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಿಸವಾಕಂ, ವೇಪೇರಿ, ಮದರಾಸ್; (2) ಜಿ. ಎಸ್. ಕೃಷ್ಣಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

ಉತ್ಕೃಷ್ಟವಾದ ವಸ್ತು ! ಬೆಲೆ ಕಡಮೆಮಾಡಿದೆ !!

100 ನೇ ನಂ. ಪ್ರೈಮಸ್ ಕೆರೊಸೀನ್ ಒಲೆ.

ಸಂಸಾರಕ್ಕೂ ಪ್ರಯಾಣಕ್ಕೂ ಮುಖ್ಯ ಉಪಯೋಗ.

ಇದರ ಬರ್ನರಿನ ರಚನೆ ಸುಲಭ, ಬೊಗ್ಗದ ಕೊಳವೆಗಳಿಲ್ಲ ಸಿಲಿಂಡರ್ ಕೊಳವೆ ಮಾತ್ರ ಉಂಟು ಇದನ್ನು ಸುಲಭವಾಗಿ ತೆಗೆದು ಎಣ್ಣೆಯ ಮಷ್ಟನ್ನು



ಸುಲಭವಾಗಿ ತೊಳೆಯಬಹುದು. ಬರ್ನರ್ ನೆತ್ತಿಯನ್ನೂ ತೆಗೆಯುವಂತಿದೆ. ಗಾಳಿಯ ಸಹಾಯದಿಂದ ಬಹಳ ತೀಕ್ಷ್ಣವಾದ ಜ್ವಾಲೆ ಉರಿಯುತ್ತೆ. ಬರ್ನರಿನ ಉರಿ ಶಬ್ದವಿಲ್ಲದೆ ಇರುವುದಕ್ಕಾಗಿ ಅದರ ಜೊತೆಯಲ್ಲೇ ನಾವು ಸೈಲೆನ್ಸರ್ ಎಂಬುದನ್ನೂ ಕೊಡುವೆವು ಬರ್ನರಿನ ಪೀಠ ಮತ್ತು ಕಡ್ಡಿಗಳನ್ನು ಬಿಚ್ಚಿ ಗಂಟುಕಟ್ಟುವಂತೆ ಎಲ್ಲಾ ಮರುಗುಳ್ಳ ಹಿತ್ತಾಳೆಯಲ್ಲಿ ಮಾಡಿದೆ. ಎತ್ತರ 8 ಅಂಗುಲ , ಒಂದು ಸೀಸೆ ಸೀಮೆಯೆಣ್ಣೆ ಹಿಡಿಯುವುದು

ಕ್ರಯ :—ಮೇಲ್ಭಾಗದ ಉಂಗುರದ ಸಹಿತ ರೂ. 6-8-0 ; ಬರ್ನರ್ ಬಿನ್ ಪೆಟ್ಟಿಗೆಯ ಸಹಿತ ರೂ 7-8-0. ಪೋಸ್ಟೇಜ್ ಬೇರೆ.

ಆರ್ಡರ್ ಸಮೇತ ಒಂದು ರೂಪಾಯಿ ಅಡ್ವಾನ್ಸು ಕಟ್ಟಿದ್ದರೆ ಈ ಒಲೆಯನ್ನು ಕಳುಹಿಸಲಾಗುವುದು. [230-2]

ನಮ್ಮ ವಿಳಾಸ—The Bombay Popular Agency,
Dharavy, BOMBAY.

ಪಂಡಿತ್ ಎಸ್. ಗರಳಪುರಿಯವರ ಪ್ರಖ್ಯಾತಿ ಹೊಂದಿದ ಓರಿಯಂಟಲ್ ಫಾರ್ಮಸಿ, ಮೈಸೂರು.

ಕಸ್ತೂರಿ ಮಾತ್ರೆ.—ಶ್ರೇಷ್ಠತರ ವನಸ್ಪತಿಗಳು, ಮುತ್ತು, ಹವಳ, ಕಸ್ತೂರಿಗಳಿಂದ ತಯಾರಿಸಿದ್ದು. ಜಲದೋಷ, ಅರುಚಿ, ಮೈ ಕೈ ಶರೆನೋವುಗಳಿಗೆ ಸಂಜೀವನ, ಇವನ್ನು ತಾಂಬೂಲದ ಸಂಗಡ ಪ್ರತಿ ದಿನವೂ ಸೇವಿಸಿದರೆ ಪ್ಲೇಗು ಕಾಲರಾ ಮುಂತಾದ ಸಾಂಕ್ರಾಮಿಕ ವ್ಯಾಧಿಗಳಿಂದ ಖಂಡಿತ ಕಾಪಾಡುತ್ತೆ. 300 ಮಾತ್ರೆಗೆ 4 ಆಣೆ, 6 ಸೀಸೆಗೆ ರೂ. 1-4-0.

ಬಾಲಸಂಜೀವಿನಿ.—8 ವರ್ಷದ ಮಕ್ಕಳಿಗೆ ಬರುವ ಎಲ್ಲಾ ವಿಧ ಜ್ವರ, ಶೀತ, ನೆಗಡಿ, ಕೆಮ್ಮಲು, ವಾಯು, 3 ಪಕ್ಕೆ ಎಳತ, ಸೆಳತ, ಇವಕ್ಕೆಲ್ಲಾ ಅಮೃತ. 100 ವರ್ಷದ ಅನುಭವಸಿದ್ಧವಾದದ್ದು 20 ಸಲದ ಔಷಧಿಗೆ 4 ಆಣೆ, 1 ತೊಲೆಗೆ ರೂ. 1-8-0.

ಜ್ವರದ ಮಾತ್ರೆ.—ಸಮಸ್ತವಿಧ ಜ್ವರಗಳಿಗೂ ಖಾತರಿ ಅಮೃತ. ಬಹಳ ಜನರು ಇದರ ಗುಣವನ್ನು ಕಂಠೋಕ್ತವಾಗಿ ಹೊಗಳುವರು. 24 ಮಾತ್ರೆಗೆ 8 ಆಣೆ, 12 ಸೀಸೆಗೆ ರೂ. 5 [222-3]

ಇನ್ನೂ ಅನೇಕ ದಿವ್ಯೌಷಧಿಗಳು ನಮ್ಮಲ್ಲಿ ಸಿಕ್ಕುತ್ತವೆ ½ ಆಣೆ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗ್ ಕಳುಹಿಸುತ್ತೇವೆ. ಪೋಸ್ಟೇಜ್, ಪ್ಯಾಕಿಂಗ್ ಛಾರ್ಜು ಅಲಾಯಿದ.

ವಿಳಾಸ.—ಪಂಡಿತ್ ಎಸ್. ಗರಳಪುರಿ,
ಓರಿಯಂಟಲ್ ಫಾರ್ಮಸಿ, ಬಂಡಿಕೇರಿ, ಮೈಸೂರು.

1914 ನೇ ವರ್ಷದ ಕೆಲೆಂಡರು 1914.

ರಮಣೀಯಕರವಾದ ಸ್ತ್ರೀಯರ ನಕ್ಷೆಯುಳ್ಳದು.

ಇಂಥಾ ಸುಂದರವಾದ ಕೆಲೆಂಡರು ಎಲ್ಲೆಲ್ಲಿಯೂ ದೊರಕುವಾರದು. ಒಂದರ ಕಿಮ್ಮತು 0-4-0, 6 ಕ್ಕೆ 1-0-0 12 ಕ್ಕೆ 1-10-0 ಪೋಸ್ಟು ಖರ್ಚು ಮಾಫಿ ಜನವರಿ ಆಖೈರು ವರೆಗೆ

ಅಮೃತಾಂಜನ.

ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಡುತ್ತವೆ. ಎಲ್ಲಾ ತರದ ನೋವುಗಳ ಮೇಲೆ ದಿವ್ಯಾಮೃತ. ಬಾಟ್ಲಿ ಒಂದಕ್ಕೆ 0-8-0, ಡಜನ್ 1 ಕ್ಕೆ 5-1-0 ಟಪಾಲ್ ಖರ್ಚು ಪ್ರತ್ಯೇಕ. [12-39]

ವಿಳಾಸ —ಅಮೃತಾಂಜನ ಡಿಪೋ, ಫೋರ್ಟ್, ಬೊಂಬಾಯಿ.

The National Insurance & Banking Co., Ltd., Amristsar.

Madras Branch—33 Armenian Street, Madras.

Authorised and Subscribed Capital Rs. 10,00,000.

Paid up Capital only about Rs. 1,50,000.

POSSESSES GOVERNMENT SECURITY.

The company has diposited Rs 1,00,000 (one lakh) with the Government of India for the Security of the Policy-holders in compliance with the Government of India Indian Insurance Company's Act of 1912.

"The Searchlight", a Monthly Journal of Insurance and Finance, published in London, writes.—"Evidently the company covers a lot of ground. And while we consider that so far the company has done quite as well as it could fairly expect, we must add that it is engaged in so admirable a work that it deserves the best wishes of all upholders of life assurance throughout the world. We are sure that it will have these, for there is nothing that knits the fabric of society together more closely than the successful carrying on of life assurance by a sound office."

Statement of Progress

Year	Subscribed Capital	Paid up Capital	Working Capital	Government Papers and Debentures	Deposits
1907	2,28,100	17,820	65,966	2,500	28,786
1908	4,64,800	48,605	1,94,406	5,100	1,30,888
1909	5,29,000	62,470	4,15,213	18,100	3,09,726
1910	5,56,300	74,787	6,44,490	23,100	5,36,069
1911	7,42,000	99,482	11,68,022	77,100	8,21,678
1912 Half year	8,79,400	1,18,711	14,24,902	1,12,100	9,71,232
1912 " 2nd	10,00,000	1,41,594	15,42,419	1,32,600	10,39,916

Messrs. **N. Rama Row** and **K. Anantaramiah** have been appointed as **Chief Agents** for the Provinces of Mysore and Coorg, excepting Kolar and Bangalore Districts, and **Mr D. Seshagiri Row** has been appointed as Chief Agent for the Districts of Kolar and Bangalore in the Province of Mysore.

For further particulars apply to—

T. S. R. Iyer, Secretary (Madras Branch),

Camp, Amirtsar National Insurance Buildings, Mysore.

ಮಕ್ಕಳ ಹಿತಕಾರಿ

ಎಂದು

SCOTT'S EMULSION 2-40

(ಸ್ಕಾಟ್ಸ್ ಇಮಲ್ಷನ್)

ಎಂಬ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದ್ದಾರೆ ಯಾಕಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

Always get the Emulsion with this mark—the Fishman—the mark of the "Scott" process!

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಕೈಸೋಕದೆ ತಯಾರಾದದ್ದು

—

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ

—

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

ವೃತ್ತಾಂತ ಪತ್ರಿಕೆ

—o.—

ಸನ್ ೧೯೧೩ ನೇ ಇಸವಿ ನವಂಬರ್, ತಾ ೧೩ ನೇ ಗುರುವಾರ

ಮೈಸೂರು ಸಂಸ್ಥಾನವೂ ಸಾರ್ವಭೌಮ ಸರ್ಕಾರವೂ

ಹಿಂದುಸ್ಥಾನದ ವೈಸ್‌ರಾಯ ಮತ್ತೂ ಗವರ್ನರ್ ಜನರಲ್‌ರಾದ ಘನವೆತ್ತಿದ ಲಾರ್ಡ್ ಹಾರ್ಡಿಂಗ್ ಪ್ರಭುಗಳ ಸವಾರಿಯು ಮೈಸೂರಿಗೆ ಬಿತ್ತೈಸಿದ್ದು ಈ ಸಂಸ್ಥಾನದ ಆಳ್ವಿಕೆಯ ಚರಿತ್ರೆಯಲ್ಲಿ ನವೀನ ಭಾಗವನ್ನೂ ವಿಶೇಷ ಪ್ರಾಮುಖ್ಯತೆಯನ್ನೂ ಪಡೆಯುವಂಥಾದ್ದಾಗುತ್ತದೆ ಮೈಸೂರಿನ ಅರಸುಗಳೆಲ್ಲರೂ ಧೈರ್ಯ ಸ್ಥೈರ್ಯ ಶೌರ್ಯಾದಿಗಳನ್ನು ಪಡೆದವರಾಗಿದ್ದರೆಂದು ಹೇಳಲಾಗುವುದಿಲ್ಲವಾದಾಗ್ಯೂ ಈ ಸಂಸ್ಥಾನದ ಕೀರ್ತಿಯು ಬಹಳ ಕಾಲದಿಂದ ವಿಶೇಷ ಗೌರವಯುಕ್ತವಾದದ್ದಾಗಿರುವುದು ಹೈದರಲ್ಲಿ, ಟೀಪೂಸುಲ್ತಾನರು ಹುಟ್ಟಿ ಅವರ ಪ್ರತಾಪದ ದಸೆಯಿಂದ ಅನೇಕ ವರುಷಗಳ ತನಕ ಮೈಸೂರು ರಾಜವಂಶೀಯರ ಹೆಸರೇ ಮಲಿನವಾಗಿ ಹೋಗಿತ್ತು ಆವರೆ ಬ್ರಿಟಿಷರ ಪರಾಕ್ರಮವು ಜಯಶೀಲವಾದಾಗ ಅವರು ಮೈಸೂರು ಸಂಸ್ಥಾನವನ್ನು ಪುರಾತನ ರಾಜವಂಶೀಯರೊಬ್ಬರಿಗೆ ವಹಿಸಿಕೊಟ್ಟರು ಆ ರಾಜರ ಆಳ್ವಿಕೆಯು ಪ್ರಶಸ್ತವಾಗದೆ ಹೋಯಿತಾದಕಾರಣ ಬ್ರಿಟಿಷ್ ಗವರ್ನಮೆಂಟಿನವರು ಪ್ರವೇಶಮಾಡಿ ನಮ್ಮ ಸಂಸ್ಥಾನವನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಐವತ್ತು ಸಂವತ್ಸರಗಳ ಕಾಲ ವಿಚಕ್ಷಣೆಯಿಂದ ಆಳ್ವಿಕೆಯನ್ನು ನಡಿಸಿ, 1881 ನೇ ಇಸವಿಯಲ್ಲಿ ಕೀರ್ತಿಶೇಷರಾದ ಮಹಾರಾಜಾ ಚಾಮರಾಜ ಒಡೆಯರವರಿಗೆ ರಾಜ್ಯಭಾರವನ್ನು ವಹಿಸಿಬಿಟ್ಟರು

ಹೀಗೆ ಸಂಸ್ಥಾನವನ್ನು ಅವರಿಗೆ ವಹಿಸಿದ್ದು ಪರಿಕ್ಷಾರ್ಥವಾಗಿ ಎಂದು ಆಗಿನ ಕಾಲದಲ್ಲಿ ಅಭಿಪ್ರಾಯವಿದ್ದಂತೆ ಕಾಣುತ್ತದೆ ಆಗ್ಗೆ ಇಂಡಿಯಾ ಗವರ್ನಮೆಂಟಿಗೂ ಮೈಸೂರು ಮಹಾರಾಜರವರಿಗೂ ಇರಬೇಕಾದ ಪರಸ್ಪರ ಸಂಬಂಧವನ್ನೂ ಹದವಳಿಕೆಯನ್ನೂ ವಿವರಿಸಿ ಒಂದು ತಹನಾಮೆಯು ರಚಿಸಲ್ಪಟ್ಟಿತು ಈ ತಹನಾಮೆಗೆ "ವರ್ಗಪತ್ರಿಕೆ" (ಇನ್‌ಸ್ಟ್ರುಮೆಂಟ್ ಆಫ್ ಟ್ರಾನ್ಸ್‌ಫರ್) ಎಂಬ ಹೆಸರಾಯಿತಲ್ಲದೆ "ಕರಾರು" ಎನಿಸಿಕೊಳ್ಳಲಿಲ್ಲ ಅಲ್ಲಿಂದೀಚೆಗೆ ಈ ಪರಿಕ್ಷಾರ್ಥವಾದ 32 ಸಂವತ್ಸರಗಳ ಕಾಲದಲ್ಲಿ ಈರ್ವರು ಮಹಾರಾಜರುಗಳೂ ಒಬ್ಬ ರೀಜೆಂಟರೂ ಈ ಸಂಸ್ಥಾನವನ್ನು ಪರಿಪಾಲನೆಮಾಡಿರುತ್ತಾರೆ ಮೈಸೂರು ಮಹಾರಾಜರುಗಳು ಆ ವರ್ಗಪತ್ರಿಕೆಯಲ್ಲಿ ಕಾಣಿಸಿರುವ ನಿಬಂಧನೆಗಳನ್ನು ಅನುಸರಿಸಿಕೊಂಡು ಅವುಗಳಿಗೆ ಸ್ವಲ್ಪವೂ ವ್ಯತ್ಯಸ್ತವಾಗದಂತೆ ಆಳ್ವಿಕೆಯನ್ನು ನಡಿಸುತ್ತಾ ಒಂದಿದಾರಲ್ಲದೆ ಸಂಸ್ಥಾನವನ್ನು ಅಭಿವೃದ್ಧಿ ಮಾಡಬೇಕೆಂಬದಾಗಿಯೂ, ಪ್ರಜೆಗಳನ್ನು ನೆಮ್ಮದಿ ಸುಖ ಸಂತೋಷದಿಂದ ಪರಿಪಾಲನಮಾಡಿಕೊಂಡು ಬರಬೇಕೆಂಬದಾಗಿಯೂ ಕುತೂಹಲಪಟ್ಟಿರುತ್ತಾರೆ ಈ ಭಾಗದಲ್ಲಿ ಅವರ ಉದ್ದೇಶವೂ ಕಾರ್ಯಭಾಗಗಳೂ ಬಹಳಮಟ್ಟಿಗೂ ಫಲಕಾರಿಗಳಾಗಿರುವವು ಮೈಸೂರು ಸಂಸ್ಥಾನದ ಪ್ರಜೆಗಳು ಮೈಸೂರು ರಾಜಮನೆತನದವರಲ್ಲಿ ಬಹು ವಿಶೇಷವಾದ ಭಕ್ತಿ ಪ್ರೀತಿ ಅನುರಾಗಗಳನ್ನು ಇಟ್ಟುಕೊಂಡಿದಾರೆ ಇದಲ್ಲದೆ ಈ ಸಂಸ್ಥಾನದಲ್ಲಿ ಪ್ರಜೆಗಳ ಶ್ರೇಯಸ್ಸಿಗೂ ಸೀಮೆಯ ಅಭಿವೃದ್ಧಿಗೂ ಸಹಕಾರಿಗಳಾದ ನವೀನ ಏರ್ಪಾಡುಗಳೂ ವಿಶೇಷ ಕಾಮಗಾರಿಗಳೂ ಅನೇಕವಾಗಿ ನಡೆದಿರುವವು

ಮೇಲ್ಕಂಡ ವರ್ಗಪತ್ರಿಕೆಯಲ್ಲಿ ನಿರೂಪಿಸಲ್ಪಟ್ಟಿರುವ ನಿಬಂಧನಗಳನ್ನು ಪುನರಾಲೋಚನೆಗೆ ತರಬೇಕಾದ ಸಮಯವು ಪ್ರಾಪ್ತವಾಗಿದೆ ಎಂದು ನಮ್ಮ ಮಹಾರಾಜರವರಿಗೂ ಇಂಡಿಯಾ ಗವರ್ನಮೆಂಟಿನವರಿಗೂ ವಿದಿತವಾಯಿತು ಅದಕ್ಕೆ ಅನುಸಾರವಾಗಿ ಕಳೆದ ಗುರುವಾರ ರಾತ್ರಿ ಘನವೆತ್ತಿದ ವೈಸ್ರಾಯ್ ಪ್ರಭುಗಳು ರಾಜಧಾನಿಯಲ್ಲಿ ನಡೆದ ಔತಣೋತ್ಸವದ ಸಮಯದಲ್ಲಿ ಆಗಿನ ಆ ವರ್ಗಪತ್ರಿಕೆಯನ್ನು ರದ್ದುಮಾಡಿ ಮೈಸೂರು ಮಹಾರಾಜರವರೊಡನೆ ಇಂಡಿಯಾ ಗವರ್ನಮೆಂಟಿನವರು "ಕರಾರು" (ಟ್ರೀಟಿ) ಮಾಡಿಕೊಳ್ಳುವಂತೆ ಒಪ್ಪಿ ಸ್ಯಾಂಕ್ಷನ್ ಆಗಿದೆ ಎಂಬದಾಗಿ ಅಪ್ಪಣೆಕೊಡಿಸಿದರು ಈ ಶುಭಕರವಾದ ಅಪ್ಪಣೆಯನ್ನು ಕೇಳಿ ಶ್ರೀಮನ್ಮಹಾರಾಜರವರ ಸಕಲ ಪ್ರಜೆಗಳೂ ಆನಂದಪಡುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಇದರಿಂದ ಮೈಸೂರು ರಾಜ್ಯಭಾರದ ಈಗಿನ ರೀತಿಯನ್ನೂ ಕ್ರಮಗಳನ್ನೂ ಪರಾಂಬರಿಸಿ ಇಂಡಿಯಾ ಗವರ್ನಮೆಂಟಿನವರು ತುಂಬಾ ಮೆಚ್ಚಿಕೊಂಡಿರುತ್ತಾರೆಂಬುವುದು ಖಚಿತವಾಯಿತು

ವೈಸ್‌ರಾಯರವರು ಅಪ್ಪಣೆ ಕೊಡಿಸಿದ ಹೊಸ ಕರಾರಿನ ಕಲಮುಗಳು ಯಾವ ರೀತಿಯಾದವುಗಳೋ ಅದನ್ನು ಮಾತ್ರ ಆ ಸಂತೋಷ ಸಮಯದಲ್ಲಿ ಹೊರಪಡಿಸದೆ ಹೋದರು ಆದಕಾರಣ ಆ ಕಲಮುಗಳನ್ನು ಕುರಿತು ನಾವು ಈಗ ಪ್ರಸ್ತಾಪಮಾಡೋಣದರಿಂದ ಪ್ರಯೋಜನವೇನೂ ಕಾಣುವುದಿಲ್ಲ ಆದಾಗ್ಯೂ ಈ ಕರಾರಿನ ದೆಸೆಯಿಂದ ಮೈಸೂರು ಸಂಸ್ಥಾನದ ಘನತೆಯೂ ಸನ್ಮಾನವೂ ಹಿಂದುಸ್ಥಾನದ ದೇಶೀಯ ಸಂಸ್ಥಾನಗಳಲ್ಲಿ ಹೆಚ್ಚುಗುತ್ತವೆನ್ನುವುದರಲ್ಲಿ ಅನುಮಾನವಿಲ್ಲ, ಮತ್ತೂ ಇದರಿಂದ ನಮ್ಮ ಮಹಾರಾಜರವರ ಹಿತಕರವಾದ ರಾಜ್ಯಪರಿಪಾಲನಾ ರೀತಿಯನ್ನೂ, ಅವರ ಮತ್ತು ಅವರ ಸಮಸ್ತ ಪ್ರಜೆಗಳ ಭಕ್ತಿ ಪ್ರೀತಿ ಅನುರಾಗಗಳನ್ನೂ ಮೆಚ್ಚಿಕೊಂಡದ್ದಕ್ಕೆ ಸಾಕ್ಷಿಯಾಗುತ್ತದೆ ಇಂಡಿಯಾ ಗವರ್ನಮೆಂಟಿಗೆ ಸಲ್ಲುವ ಪೊಗದಿಯು ಕಡಮೆಯಾದೀತೋ, ನಮ್ಮ ಮಹಾರಾಜರವರಿಗೆ ಇನ್ನೂ ಹೆಚ್ಚಾದ ಅಧಿಕಾರಗಳು ವಹಿಸಲ್ಪಡುವವೋ ಊಹಿಸಿ ಹೇಳುವುದು ಸಾಧ್ಯವಲ್ಲ ಈಗ ವರ್ಗಪತ್ರಿಕೆಯಲ್ಲಿ ಕಂಡುಬರುವುದಕ್ಕಿಂತಲೂ ಇನ್ನುಮುಂದೆ ನಮ್ಮ ಮಹಾರಾಜರವರಿಗೆ ಹೆಚ್ಚಾದ ಸ್ವಾತಂತ್ರ್ಯಗಳು ಲಭ್ಯವಾಗುವುದೂ ನಿಶ್ಚಿತವೆಂದು ತೋರುತ್ತದೆ.

ನಮ್ಮನ್ನು ಪರಿಪಾಲಿಸುವ ದೊರೆಯವರಿಗೆ ವಿಶೇಷತರವಾದ ಸನ್ಮಾನವು ದೊರಕಿದ್ದಕ್ಕಾಗಿ ರಾಜಭಕ್ತಿ ಪೂರಿತರಾದ ನಾವು ಬಹಳವಾಗಿ ಆನಂದಪಡುತ್ತೇವಲ್ಲದೆ ನಮ್ಮ ಮಹಾರಾಜರವರಿಗೆ ದೀರ್ಘಾಯುಸ್ಸುಂಟಾಗಿ ಅವರ ಆಳ್ವಿಕೆಯ ದೆಸೆಯಿಂದ ಈ ಸಂಸ್ಥಾನದಲ್ಲೆಲ್ಲಾ ಧರ್ಮವೂ ಸತ್ಯವೂ ನೀತಿಯೂ ಯಥಾರ್ಥವೂ ಉಕ್ಕಿ ಬರಲಿ ಎಂದು ಮನಃಪೂರ್ವಕವಾಗಿ ಹಾರೈಸಿ ನಿರೀಕ್ಷಿಸಿಕೊಂಡು ಇರುತ್ತೇವೆ

ಮದ್ಯಪಾನವನ್ನು ವಿಸರ್ಜಿಸುವದಕ್ಕೆ ಕಾರಣಗಳು

(1) ದೇಹದ ನಷ್ಟ — ಹೆಂಡ, ಸಾರಾಯಿ, ಬ್ರಾಂಡಿ, ಬೀರು ವೈನ್ ಮುಂತಾದ ಮದ್ಯಪಾನಕಗಳಲ್ಲಿ ಆಲ್ಕೋಹಾಲ್ ಎಂಬ ಸಿರಾಪದಾರ್ಥವಿರುತ್ತದೆ ಈ ಆಲ್ಕೋಹಾಲು ದೇಹವನ್ನು ಕ್ಷಯಪೀಡಿಸಿ ನಾಶಮಾಡುವುದರಲ್ಲಿ ಅತ್ಯಂತ ತೀಕ್ಷ್ಣ ಸ್ವಭಾವತರದ್ದು. ಆಲ್ಕೋಹಾಲನ್ನು ಒಬ್ಬ ಮನುಷ್ಯನ ದೇಹದ ಮೇಲೆ ಹೊಯಿದರೆ ಅದು ಅವನ ಚರ್ಮವನ್ನು ಬೇಯಿಸಿ ಅದು ಸುಟ್ಟ ಮೇಲೆ ಒಬ್ಬನಿಗೆ ಆಗುವ ಬೊಬ್ಬೆಯನ್ನೆಬ್ಬಿಸುವದು ಅದನ್ನು ಬಾಯಿಯೊಳಕ್ಕೆ ಹೊಯಿದುಕೊಂಡು ಸ್ವಲ್ಪ ನಿಮಿಷಗಳ ವರೆಗೂ ನುಂಗದೆ ಇದ್ದರೆ ಬೇಗ ಉಗುಳದ ಹಾಗೂ ಅದರ ತೀಕ್ಷ್ಣವಾದ ಉಷ್ಣಲಹರಿ ಉಂಟಾಗಿ ನಾಲಿಗೆಯ ನರಗಳನ್ನು ಸುಟ್ಟುಬಿಡುವದರಿಂದ ಅಂದವನ ನಾಲಿಗೆಗೆ ಯಾವ ಸ್ವಾದವೂ ರುಚಿಯೂ ಸಿಕ್ಕುವದೇ ಇಲ್ಲ ಇಂಥ ಆಲ್ಕೋಹಾಲನ್ನು ಹೊಟ್ಟೆಗೆ ಕುಡಿದರೆ ಏನಾಗುವದೆಂದು ಕೇಳಬಹುದೋ ಅದು ಅತಿ ಸೂಕ್ಷ್ಮವಾದ ಒಳಚರ್ಮವನ್ನು ಕ್ರಮೇಣ ಬೆಂದು ಸವೆಯಿಸುತ್ತದೆ ಅನಂತರ ಹೊಟ್ಟೆಯಲ್ಲಿಯೂ ಕರುಳುಗಳಲ್ಲಿಯೂ ಉರಿ ಹುಟ್ಟಿ ಹುಣ್ಣುಗಳಾಗುವದಕ್ಕೆ ಕಾರಣವಾಗುತ್ತದೆ ಅದು ರಕ್ತಗತವಾದರೆ ರಕ್ತದ ಪರಿಣಾಮವೇನು? ಒಂದು ತೊಟ್ಟು ರಕ್ತದಲ್ಲಿ ಒಂದು ಬಗೆಯ ಬಹು ಸೂಕ್ಷ್ಮವಾದ ಗುಂಡು ವಸ್ತುಗಳಿರುತ್ತವೆ ಅವುಗಳಿಗೆ ಕಾರ್ಪಸಲ್ಸ್ ಎಂದು ಹೇಳುತ್ತಾರೆ ಈ ಅತ್ಯಂತ ಸೂಕ್ಷ್ಮ ವಸ್ತುಗಳ ವಿಚಾರವನ್ನು ಎಲ್ಲ ಮಾತಾಡುವದು ಅಸಾಧ್ಯ ಆದರೆ ಆ ಸೂಕ್ಷ್ಮ ವಸ್ತುಗಳು ರಕ್ತದಲ್ಲಿ ಕಲೆತಿರುವದು ನಮಗೆ ಬಹು ಪ್ರಯೋಜನವಾಗಿದೆ ಹೇಗೆಂದರೆ ಅವು ಯಾವ ರೋಗವಾದರೂ ದೇಹದೊಳಕ್ಕೆ ಪ್ರವೇಶಮಾಡದ ಹಾಗೆ ದಂಡಿನ ಸಿಪಾಯಿಗಳಂತೆ ಕಾವಲಿರುವದು ಅವುಗಳ ಕೆಲಸ ಜ್ವರ ಕೆಮ್ಮು, ಪ್ಲೇಗ್, ಕಾಲರಾ ಮುಂತಾದ ಯಾವದಾದರೂ ಒಂದು ರೋಗದಲ್ಲಿ ಸೋಂಕು ದೇಹವನ್ನು ಪ್ರವೇಶಿಸಿ ಹಿಡಿಯಿತೆಂದರೆ ಕಾರ್ಪಸಲ್ಸ್ ಎಂಬ ರಕ್ತದ ಸೂಕ್ಷ್ಮ ವಸ್ತುಗಳಿಗೂ ಆ ರೋಗದ ಸೋಂಕಿಗೂ ಯುದ್ಧವು ಹತ್ತುವದು ಕಾರ್ಪಸಲ್ಸ್ ಸೂಕ್ಷ್ಮ ವಸ್ತುಗಳು ರಕ್ತದಲ್ಲಿ ಬಲವಾಗಿಯೂ ಹೆಚ್ಚಾಗಿಯೂ ಇದ್ದರೆ ಆ ರೋಗದ ಸೋಂಕನ್ನು ಗದ್ದು ದೇಹದ ಅಂಗ ಅದನ್ನು ಹೊರದೂಡಿಬಿಡುವವು ಆಲ್ಕೋಹಾಲು ಎಂಬ ಸಿರಾಪದಾರ್ಥವು ರಕ್ತಗತವಾದ ಕೂಡಲೆ ಸೂಕ್ಷ್ಮ ವಸ್ತುಗಳಾದ ಉಪಯೋಗಕಾರಿಗಳಾದ ಕಾರ್ಪಸಲ್ಸ್ ಎಂಬ ರಕ್ತದ ಅಣುಗಳನ್ನು ಹಿಡಿದು ಕಟುಗರವನು ಮಾಂಸದ ತುಂಡನ್ನು ಕಾವಲಿಯಿಂದ ಕೆಂಪಗೆ ಕೊಚ್ಚಿ ಪುಡಿಪುಡಿಮಾಡುವಂತೆ ಮಾಡಿ ಸಂಹರಿಸುತ್ತದೆ ಯಾವದಾದರು ಕೆಲವು ಕಾರ್ಪಸಲ್ಸ್ ಇದರ ಪೆಟ್ಟನ್ನು ತಪ್ಪಿಸಿಕೊಂಡರೆ ಅವು ದೇಹಕ್ಕೆ ಏನೂ ಸಹಾಯ ಮಾಡಲಾರದಷ್ಟು ದುರ್ಬಲವಾಗುತ್ತವೆ ಹೀಗಾಗಿ ಆಲ್ಕೋಹಾಲು ಕಡೆಕಡೆಗೆ ದೇಹದ ರಕ್ತ ಮಾಂಸಗಳನ್ನು ತಿಂದು ದೇಹವನ್ನು ಬತ್ತುವ ಹಾಗೆ ಮಾಡಿ ಒಣಗಿಸಿಬಿಡುತ್ತದೆ.

(2) ಮೆದುಳಿಗೂ ನರಗಳಿಗೂ ಪ್ರಾಪ್ತಿಸುವ ನಷ್ಟ — ದೇಹದ ಕೈಕಾಲು ಮುಂತಾದ ಯಾವದಾದರೂ ಒಂದು ಅವಯವವು ಒಂದೊಂದು ವೇಳೆ ಮುರಿದುಹೋಗುವದುಂಟು ಅಥವಾ ಕೆಲವು ಸರ್ತಿ ದೇಹದಲ್ಲಿ ಕೆಟ್ಟ ಹುಣ್ಣುಗಳು ಏಳುವದುಂಟು ಇಂಥಾ ಸಂದರ್ಭಗಳಲ್ಲಿ ವೈದ್ಯರು ಅಂಥಾ ರೋಗಿಯನ್ನು ಗುಣಮಾಡುವದಕ್ಕೆ ಶಸ್ತ್ರಗಳನ್ನು ಪ್ರಯೋಗಿಸಬೇಕಾಗಿ ಬರುವುದು. ಶಸ್ತ್ರಪ್ರಯೋಗದ ಭಯವನ್ನೂ ನೋವನ್ನೂ ರೋಗಿಯು ಸಾಧಾರಣ ಸ್ಥಿತಿಯಲ್ಲಿ ತಡೆಯಲಾರನು ಆದುದರಿಂದ ವೈದ್ಯರು ಕೆಲವು ಸರ್ತಿ ಶಸ್ತ್ರಪ್ರಯೋಗವು ಮುಗಿಯುವ ವರಿವೆಗೂ ರೋಗಿಗೆ ಪ್ರಜ್ಞೆ ತಪ್ಪಿಸಿ ಮೈಮರೆಸುವ ಔಷಧವನ್ನು ಮೂಸಿಸುತ್ತಾರೆ. ಆಗ ದೇಹದ ಒಂದು ಅಂಗವನ್ನು ಕೊಯಿದುಹಾಕಿದರೂ ಅದು ರೋಗಿಗೆ ಗೊತ್ತಾಗುವದಿಲ್ಲ ಪ್ರಜ್ಞೆ ತಪ್ಪಿಸುವ ಆ ಔಷಧವನ್ನು ಆಲ್ಕೋಹಾಲೆಂಬ ಮದದ್ರಾವಕದಿಂದಲೇ ಮಾಡುತ್ತಾರೆ ಹೀಗಿರುವಲ್ಲಿ ಆಲ್ಕೋಹಾಲು ಬೆರೆತಿರುವ ಹೆಂಡ, ಸಾರಾಯಿ, ಬ್ರಾಂಡಿ ಮುಂತಾದವುಗಳನ್ನು ಕುಡಿಯಬಾರದೆಂದು ಹೇಳುವದು ಅಗತ್ಯವೇ? ಚೆನ್ನಾಗಿ ಕುಡಿದು ಮತ್ತೇರಿದವನು ಪ್ರಜ್ಞೆ ತಪ್ಪಿಸುವ ಔಷಧಿಯನ್ನು ಮೂಸಿದವನ ಹಾಗೆಯೇ ಮೈಮರೆತಿರುತ್ತಾನೆ. ಅವನನ್ನು ಒದ್ದರೂ ಕಡಿದರೂ ಸಹಾಯಹೀನನಾಗಿ ಮರದ ಮೊದ್ದಿನಂತೆ ಬಿದ್ದಿರುತ್ತಾನೆ ಯಾಕಂದರೆ ಅವನ ನರಗಳ ಸ್ಥಿತಿಯು ನಿತ್ರಾಣವಾಗಿರುತ್ತದೆ ನರಗಳ ಗತಿ ಹೀಗಾದಲ್ಲಿ ಮದುಳಿನ ಪಾಡೇನು? ಆಲ್ಕೋಹಾಲಿನಿಂದ ದೇಹದ ಯಾವ ಭಾಗಕ್ಕೆ ಆಗುವ ಕೇಡಿಗಿಂತಲೂ ಮದುಳಿಗೆ ಹೆಚ್ಚು ಹಾನಿಯುಂಟಾಗಿ ಕುಡಿಯುವ ದುರಭ್ಯಾಸದಲ್ಲಿ ಪಳಗಿದವನ ಮೆದಳು ಉಪ್ಪಿನಕಾಯಿಯ ಹಾಗೆ ಅಳಿದು ಜೀರ್ಣವಾಗಿರುತ್ತೆ ಅವನ ಬುದ್ಧಿ ಭ್ರಷ್ಟವಾಗಿ ಅವನ ಕೈಗಳು ನಡಗುತ್ತವೆ ಅವನ ರಕ್ತಚಲನೆಯು ಶಟಸ್ಥವಾಗಿ ಅವನ ಮೂಗು ಕೆಂಪೇರಿರುತ್ತದೆ ಅವನ ರಕ್ತನಾಳಗಳು ಸಿಥಿಲವಾಗಿ ಹಿಗ್ಗಿ ಅಗಲವಾಗಿರುತ್ತವೆ ಅವನ ಮಾತುಗಳು ಅರ್ಥರಹಿತವಾದ ಬುದ್ಧಿ ಇಲ್ಲದ ತೊದಲು ಅವನು ಎದ್ದು ನಡೆಯುವದಕ್ಕೆ ಪ್ರಯತ್ನಿಸಿದರೆ ತಟ್ಟಾಡಿ ಬೀಳುತ್ತಾನೆ ಮಾದಕದ ಅಮಲು ಅವನನ್ನು ಕಡವುತ್ತದೆ ಹಳ್ಳದೊಳಕ್ಕೊ? ಗುಂಡಿಗೊ? ಬರಂಡಿಗೋ? ಒಂದಯ ಮೋರಿಯೋ? ಎಲ್ಲಿ ಬೀಳುತ್ತಾನೋ ಅವನಿಗೆ ತಿಳಿಯದು.

ಹೀಗೆ ಕೆಲವು ಕಾಲ ಸಂಭವಿಸುವದರೊಳಗಾಗಿ ಪ್ರಾಣಾಂತಕವು ಸಮೀಪಿಸುತ್ತದೆ

ಮನುಷ್ಯನಿಗೆ ಸಹಜವಾಗಿ ಪ್ರಾಪ್ತಿಸತಕ್ಕ ಸ್ಥಿತಿ ಇದೆಯೋ? ಮರ್ತ್ಯಲೋಕದಲ್ಲಿ ಮನುಷ್ಯನ ದೇಹಕ್ಕಿಂತ ಸುಂದರವಾದ ನಿರ್ಮಾಣವಾವುದು ಈ ದೇಹವನ್ನು ಪ್ರಕೃತ ಸ್ಥಿತಿಗೆ ಮುಟ್ಟಿಸುವದಕ್ಕೆ ಅನೇಕ ಸಾವಿರ ವರುಷಗಳು ಹಿಡಿಯಿತೆಂದು ಶಾಸ್ತ್ರಜ್ಞರು ಸಿದ್ಧಾಂತಮಾಡಿದಾರೆ ನಾವು ಅಮೂಲ್ಯವಾದ ಒಡವೆಗಳನ್ನು ಜತನವಾಗಿ ಕಾಪಾಡುವದಕ್ಕೆ ರಮಣೀಯವಾಗಿಯೂ ಬಲವಾಗಿಯೂ ಸಾಧ್ಯವಾಗಿಯೂ ಇರುವ ಸಂದೂಕಗಳನ್ನು ಮಾಡಿಸುತ್ತೇವಷ್ಟೆ ದೇವರು ಈ ಲೋಕಕ್ಕೆ ತನ್ನ ಜೀವ ತನ್ನ ... ತನ್ನ ಮನಸ್ಸು ತನ್ನ ಆತ್ಮವನ್ನು ಕಳುಹಿಸಿಕೊಟ್ಟಿರುವದು ... ದಯಾಳುವಾಗಿ ... ಜೀವ, ... ಮನಸ್ಸು, ಇವುಗಳಿಗಿಂತ ಅಮೂಲ್ಯವಾದ ಒಡವೆಗಳನ್ನು ನಾವು ಕಾಣೆವಷ್ಟೆ ಆತ ಮೂಲ್ಯವಾದ ತನ್ನ ... ಗಳನ್ನು ... ಕಾಪಾಡುವ ಉದ್ದೇಶ ದೇಹವೆಂಬ ಈ ಸಂದೂಕವನ್ನು ಆತನೇ ನಿರ್ಮಾಣ ಮಾಡಿದನು ಈ ಸಂದೂಕವನ್ನು ... ಪವಿತ್ರವಾದ ದೇವರ ಒಡವೆಗಳನ್ನೂ ಮದ್ಯಪಾನಕದ ... ಕೆಡಿಸುವದಕ್ಕೆ ಪ್ರಯತ್ನಪಡುವವನು ಸ್ವರ್ಗೀಯನಾದ ದೇವರ ವಿರೋಧಿಯಾಗಿದ್ದಾನೆ

... ಇಂಥ ಆಕಾರದವನ್ನು ಯಾರಾದರೂ ತಮ್ಮ ... ಮೇಲೆ ಹೊತ್ತುಕೊಂಡು ಸಮಾಧಾನವಾಗಿ ಬಾಳಬಹುದೆ? ... ತನ್ನ ... ಡಿಯಲ್ಲಿ ಬೆಂಕಿ ಕೆಂಡಗಳನ್ನು ತುಂಬಿಕೊಂಡು ತನ್ನ ... ಸುಟ್ಟುಹೋಗದಂತೆ ಕಾಪಾಡಿಕೊಳ್ಳುವದು ... ತನ್ನ ದೇಹದೊಳಕ್ಕೆ ಉರಿಯುವ ವಿಷವನ್ನು ಕುಡಿದು ... ಸಾಧ್ಯವೇ?

ಒಳದೇಶದ ವೃತ್ತಾಂತಗಳು.

ಕಳೆದ ವಾರ ಬೆಂಗಳೂರಿನಲ್ಲಿ ಪೋಲೀಸಿನವರು ಇಬ್ಬರು ಬಂಗಾಳಿಗಳನ್ನು ಹಿಡಿದು ಇಟ್ಟು ಕೊಂಡಿದಾರೆ

*

ಶಿವಾಪುರದ ಕೆಡ್ಡಾದಲ್ಲಿ ಮೂರು ಹಿಂಡುಗಳ ಆನೆಗಳು ಸಿಕ್ಕಿ ವೈಸ್‌ರಾಯವರಿಗೆ ಅವುಗಳನ್ನು ತೋರಿಸಿದ್ದಾಯಿತು ಎಲ್ಲಾ ಒಟ್ಟು 120 ಆನೆಗಳೆಂದು ಗೊತ್ತಾಗುವುದು

*

ಕಳೆದ ಶನಿವಾರ ವೇಳೆಗೆ ವೈಸ್‌ರಾಯವರು ರಾಜಧಾನಿಯ ನಜರಾಬಾದಿನಲ್ಲಿರುವ ಪಿಕೆಂಡಿನಾವರಾದ ಮಿ|| ತಿಯೋಬಾಲ್ಡರವರ ಬಂಗಲೆಗೆ ದಯಮಾಡಿ, ಅಲ್ಲಿ ಶೇಖರಿಸಿದ್ದ ಶಿಕಾರಿ ವಸ್ತುಗಳನ್ನೆಲ್ಲಾ ಪರಾಂಬರಿಸಿ ಸಂತೋಷಪಟ್ಟು ಕೊಂಡು ಬಂದರು

*

ಮದರಾಸ್ ಗವರ್ನಮೆಂಟಿನಲ್ಲಿ ಪ್ರಾಚೀನ ಲಿಪಿಶೋಧನದ ಇಲಾಖಾ ಸೂಪರಿಂಟೆಂಡೆಂಟರಾಗಿದ್ದು ಪೆನ್‌ಷನ್ ಪಡೆದಿರುವ ಮಿ|| ಎ ರೀ ಸಾಹೇಬರ

...ವನ್ನು ನಮ್ಮ ಸರ್ಕಾರದವರು ಇಲ್ಲಿನ ಅಬೇ ಇಲಾಖೆಯ ಕೆಲಸಕ್ಕೆ ಕರಸಿ ನೇಮಿಸಿಕೊಳ್ಳುತ್ತಾರೆಂದು ಕೇಳುತ್ತೇವೆ

*

...ನಿರ್ಯದಲ್ಲಿ ಕೋಟೆ ಹಿಂಭಾಗದ ಕಬ್ಬಿನ ಗದ್ದೆಯಲ್ಲೂ ಜಂಗಲಿನಲ್ಲೂ ಸೇರಿಕೊಂಡು ಕತ್ತೆಗಳನ್ನು ಕೊಂದುಹಾಕಿದ್ದ ಒಂದು ಚಿರತೆಯನ್ನು ಅಲ್ಲಿನ ...ದಾರರಾದ ಮ|| ಕೆ ಅಬ್ದುಲ್ ಅಜೀಸ್‌ರವರು ಕಳೆದ ಶನಿವಾರ ಸಾಯಂಕಾಲ ...ಯಿಂದ ಹೊಡೆದು ಶಿಕಾರಿಮಾಡಿದರೆಂದು ತಿಳಿಯುತ್ತೇವೆ

*

ಬರುವ ಮಂಗಳವಾರ ಬೆಳಿಗ್ಗೆ ವೈಸ್‌ರಾಯರವರು ರಾಜಧಾನಿಯ ಜನರಲ್ ಆಸ್ಪತ್ರೆಯ ಎದುರಿಗಿರುವ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟೂಟೆಂಬ ಕೈಗಾರಿಕೆಗಳ ಪಾಠಶಾಲೆಗೆ ದಯಮಾಡಿ ಪರಾಂಬರಿಸಿಕೊಂಡು, ಅಲ್ಲಿಂದ ಮಹಾರಾಣಿಯವರ ಕಾಲೇಜಿಗೆ 10 ಗಂಟೆಗೆ ಚಿತ್ತೈಸಿ ಬಾಲಕಿಯರಿಗೆ ಬಹುಮಾನಗಳನ್ನು ವಿನಿಯೋಗಮಾಡುತ್ತಾರೆ.

*

ಬೆಂಗಳೂರು ಸಿಟಿ ಅರಳೆಪೇಟೆಯಲ್ಲಿ ರೇವಮ್ಮನೆಂಬ 25 ವರುಷದ ಹೆಂಗಸು ...ಯು ಕಚ್ಚಿದ್ದರಿಂದ ಕಾಯಿಲೆಯಾಗಿ ತೀರಿಹೋದಳು ಕೂಡಲೇ ಆಕೆಯನ್ನು ...ಯಂತ ಆಸ್ಪತ್ರೆಗೆ ಕಳುಹಿಸಿ ಚಿಕಿತ್ಸೆಮಾಡಿಸಿದ್ದರೆ ಆಕೆ ಬದುಕಿಕೊಳ್ಳಬಹುದಾಗಿತ್ತು ಈ ಭಾಗದಲ್ಲಿ ಸರ್ಕಾರದವರು ಸೌಲಭ್ಯವನ್ನು ಕಲ್ಪಿಸಿದ್ದರೂ ಆಕೆಗೆ ...ಯ ಸಂಬಂಧಿಗಳಿಂದ ಅದು ದೊರಕದೆಯೋಯಿತೆಂದು ವಿಷಾದಿಸಬೇಕಾಗಿದೆ

*

ನಮ್ಮ ಬಾತ್ಮೀದಾರರಿಂದ — ತೀರ್ಥಹಳ್ಳಿಗೆ ಸುಮಾರು 8 ಮೈಲಿ ದೂರದಲ್ಲಿ ...ವ ಹೆಗ್ಗೋಡು ಎಂಬ ನಾಮಧಾರಿ ಗೌಡರುಗಳ ಗ್ರಾಮಕ್ಕೆ ಬೆಂಕಿಬಿದ್ದು ಎರ...ಡು ಮನೆಗಳ ಹೊರ್ತು ಬಾಕಿ ಊರೆಲ್ಲಾ ಸುಟ್ಟು ಬೂದಿಯಾಯಿತೆಂದು ತಿಳಿಸಲು ಬಹು ದುಃಖವಾಗುತ್ತದೆ ಆದರೆ ಪ್ರಾಣನಷ್ಟವಾಗಲಿಲ್ಲ ಬಡಜನರು ಎಲ್ಲವನ್ನೂ ...ಕೊಂಡು ತಿನ್ನುವುದಕ್ಕೆ ಸಹ ಮಾರ್ಗವಿಲ್ಲದೆ ಕಷ್ಟಪಡುತ್ತಿದ್ದಾರೆ ಇವರಿಗೆ ...ಎಲ್ಲಾ ಭಾಗದಲ್ಲೂ ಸರ್ಕಾರದವರ ಸಹಾಯ ತುಂಬಾ ಅವಶ್ಯವಾಗಿದೆ.

*

ಗ್ವಾಲಿಯರ್ ಮಹಾರಾಜರವರು ಮೊನ್ನೆ ಮಂಗಳವಾರ ಬೆಳಿಗ್ಗೆ ರೈಲಿನಲ್ಲಿ ರಾಜಧಾನಿಗೆ ದಯಮಾಡಿದರು ಅರಸುಗಳೂ ಅರಮನೆಯ ಅಧಿಕಾರಿಗಳೂ ...ಪ್ರಮುಖರೂ ಸ್ಟೇಷನ್ನಿನಲ್ಲಿ ಕಾದಿದ್ದು ಹಾರ ತುರಾಯಿಗಳನ್ನು ಒಪ್ಪಿಸಿ ಅವರಿಗೆ ಸುಖಾಗಮನವನ್ನು ಬಯಸಿದರು. ಗೌರವಾರ್ಥವಾದ 19 ತೋಪುಗಳು ಹಾರಿಸಲ್ಪಟ್ಟವು ಮಹಾರಾಜರವರು ಸರ್ದಾರ್ ಬಾಮುಸ್ವಾಮಿ ಅರಸಿನವರ ...ಯಲ್ಲಿ ಮೋಟರ್ ಗಾಡಿಗಳಲ್ಲಿ ಪರಿವಾರ ಸಮೇತ ಸೆಟ್ಟಿಗೆ ಕೆಡ್ಡಾ ಕ್ಯಾಂಪಿಗೆ ಪ್ರಯಾಣಮಾಡಿದರು

*

ಕಳೆದ ಭಾನುವಾರ ಮಧ್ಯಾಹ್ನ ವೈಸ್‌ರಾಯ್ ದಂಪತಿಗಳು ನಮ್ಮ ಮಹಾರಾಜರು ಯುವರಾಜರುಗಳೊಡನೆ ಮೋಟರುಗಳಲ್ಲಿ ರಾಜಧಾನಿಯಿಂದ ಕಾರಾಪುರ ಕೆಡ್ಡಾ ಕ್ಯಾಂಪಿಗೆ ತೆರಳಿದರು ಚಟ್ಟನಹಳ್ಳಿ ಉಕ್ಕಡದ ಆಚೆ ಪಂಚಮರು ...ಚಿತ್ರವಾದ ಹಸಿರುವಾಣಿ ಚಪ್ಪರವನ್ನು ಹಾಕಿ ಫಲಪುಷ್ಪಾದಿಗಳನ್ನು ...ಕಾದಿದ್ದರು ಪಂಚಮ ಬೋರ್ಡಿಂಗ್ ಸ್ಕೂಲಿನ ಹುಡುಗರೂ, ಪಂಚಮ ...ಹೆಣ್ಣು ಮಕ್ಕಳೂ ಜೊತೆಯಾಗಿ ಸೇರಿ ವೈಸ್‌ರಾಯ್ ದಂಪತಿಗಳು ...ಗೆ ದಯಮಾಡಿದಾಗ ವಂದನಾ ಗೀತಗಳನ್ನು ಹಾಡಿ ಫಲಪುಷ್ಪಾದಿಗಳನ್ನು ...ಟ್ಟರು ವೈಸ್‌ರಾಯರವರು ಬಹು ಸಂತೋಷದಿಂದಲೂ ಆದರದಿಂದಲೂ ...ಸ್ವೀಕರಿಸಿ ಅವರನ್ನು ವಂದಿಸಿ ಪ್ರಯಾಣಮಾಡಿದರು

*

ವೈಸ್‌ರಾಯರವರು ಪ್ರಾಂಕ್ ಸೆಕ್ರೆಟರಿಯವರ ಜೊತೆಯಲ್ಲಿ ಕಳೆದ ಶುಕ್ರವಾರ ರಾತ್ರಿ ಗವರ್ನ್‌ಮೆಂಟ್ ಹೌಸಿನಿಂದ ನಡೆದುಕೊಂಡು ಹೊರಗೆ ದಯಮಾಡಿ ...ಶಿಕ್ಷಾದ ಮೇರಿ ಪಿ ತಿರುಗಿ ಬಂಗಲೆಗೆ ಹೋಗುವಲ್ಲಿ ಹೊರಗಡೆ ಆವರಣದ ಬಾಗಿಲಲ್ಲಿ ಕಾವಲಿದ್ದ ಪೊಲೀಸಿನವರು ಪ್ಯಾಸ್ ಟಿಕೆಟನ್ನು ತೋರಿಸಿದ ಹೊರ್ತು ಒಳಕ್ಕೆ ಬಿಡುವುದಿಲ್ಲವೆಂದು ತಡೆದುಬಿಟ್ಟರು ಅವರಿಬ್ಬರೂ ಒಳಕ್ಕೆ ಹೋಗಬೇಕೆಂದು ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗದೆ ಹೋಯಿತೆಂದೂ, ...ಅವರು ಒಳಗೆ ಡೇಪ್ಯೂಟಿ ಪೊಲೀಸ್ ಅಧಿಕಾರಿಗೆ ಸಮಾಚಾರಕೊಟ್ಟು ಕರಸಿಕೊಂಡಾಗ ವೈಸ್‌ರಾಯರೆಂಬುದು ಗೊತ್ತಾಗಿ ಅವರಿಬ್ಬರನ್ನೂ ...ಮಾನದಿಂದ ಒಳಕ್ಕೆ ಬಿಟ್ಟರೆಂದೂ, ವೈಸ್‌ರಾಯರವರು ಪೊಲೀಸ್ ಬಂದೋಬಸ್ತಿನ ಕ್ರಮವನ್ನು ಮೆಚ್ಚಿಕೊಂಡು ಮುಂಬಯಿನ ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ...ಮುಖತಃ ವಂದಿಸಿದರೆಂದೂ ಕೇಳುತ್ತೇವೆ

*

ರಾಜಧಾನಿಯ ಖಾಸಾ ಬಂಗಲೆಯಲ್ಲಿ ಮೊನ್ನೆ ಮಂಗಳವಾರ ಬೆಳಿಗ್ಗೆ ಸುಮಾರು 9 ಗಂಟೆಗೆ ಲೇಟ್ ಎರಡನೇ ಮಹಾರಾಜ ಕುಮಾರಿಯವರ ಎರಡನೇ ಹೆಣ್ಣುಮಗಳು ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಈಕೆಗೆ ಸುಮಾರು 18 ವರುಷವಾಗಿದ್ದು ಕೆಲವು ಕಾಲದಿಂದ ಕಾಯಿಲೆಯಾಗಿ ಚಿಕಿತ್ಸೆ ಮಾಡಿದರೂ ಗುಣವಾಗದೆ ಹೋಯಿತು ಈ ದುಃಖಸಮಾಚಾರವು ತಂತಿಯ ಮೂಲಕ ಕೂಡಲೆ ಮಹಾಮಾತೃಶ್ರೀಯವರು ಕೆಡ್ಡಾಕ್ಯಾಂಪಿನಿಂದ ಮೋಟರಿನಲ್ಲಿ ದಯಮಾಡಿದರು ಅರಮನೆಯ ಸಮಸ್ತ ಮರ್ಯಾದೆಗಳ ಸಮೇತ ...ವನ್ನು ಮೆರವಣಿಗೆಯಲ್ಲಿ ಸಾಗಿಸಿ ಸಾಯಂಕಾಲ 1 ಗಂಟೆ ಹೊತ್ತಿಗೆ ದಹನಮಾಡಿದರು ತಂದೆಯಾದ ಕರ್ನಲ್ ದೇಸರಾಜ್ ಅರಸಿನವರೂ, ರಾಜಧಾನಿಯ ...ನ ಸಮಸ್ತ ಅರಸುಗಳೂ ಅರಮನೆಯ ಅಧಿಕಾರಿಗಳೂ ಜವದಳದ ಹೋಗಿದ್ದರು ಸಾವಿರಾರು ಪ್ರಜೆಗಳು ಕೆರೆ ಏರಿಯ ಉದ್ದಕ್ಕೂ ನಿಂತು ಸಂತಾಪಪಟ್ಟರು ಎರಡನೇ ಮಹಾರಾಜ ಕುಮಾರಿಯವರ ಮೂರು ಮಂದಿ ಹೆಣ್ಣು ಮಕ್ಕಳೂ ಈ ರೀತಿ ಚಿಕ್ಕವಯಸ್ಸಿನಲ್ಲಿ ತೀರಿಹೋದದ್ದಕ್ಕಾಗಿ ರಾಜವರ್ಗದವರಿಗೆಲ್ಲಾ ವಿಷಾದ ಉಂಟಾಯಿತಲ್ಲಾ ಎಂದು ಸಂತಾಪಪಡುತ್ತೇವೆ.

ತಾಲ್ಲೋಕು ವರ್ತಮಾನಗಳು.

ಕಾವೇರಿ ರಿಜರ್ವಾಯರ್ — ಇಲ್ಲಿ ಹವ ತಕ್ಕಮಟ್ಟಿಗೆ ಚೆನ್ನಾಗಿದೆ ಧಾರಣೆಗಳು ತುಂಬಾ ಪ್ರಿಯವಾಗಿರುತ್ತದೆ — ನಮ್ಮ ಘನವನ್ನು ಹೊಂದಿದ ವೈಸ್ರಾಯರವರ ಸವಾರಿಯು ಇಲ್ಲಿಗೆ ಈ ಮಾಹೆ 18 ಕ್ಕೆ ದಯಮಾಡಿಸುವದರಿಂದ ...ಕೆಲಸಗಳು ಬಹಳ ಚುರಕಾಗಿ ನಡೆಯುತ್ತವೆ. — ಇಲ್ಲಿಯ ಪೋಸ್ಟು ಮಾಸ್ಟರ್ ಮ|| ಸುಂದರೇಶಯ್ಯರವರು ಬಂದ ಲಾಗಾಯ್ತು ಜನಗಳಿಗೆ ತುಂಬಾ ಅನುಕೂಲವಾಗಿದೆ ಸಾರ್ವಿ ಬ್ಯಾಂಕಿಗೆ ಇನ್ನೊಬ್ಬ ಪೋಸ್ಟುಮನ್ ಕೊಡದಿರುವದು ...ದಾ ಅನನುಕೂಲವಾಗಿದೆ

ಕೊಳ್ಳೇಗಾಲ — ಕಳೆದ ಅಕ್ಟೋಬರ್ ತಾ 27 ನೇ ಸೋಮವಾರ ರಾತ್ರಿ ಇಲ್ಲಿನ ಮಿಷನ್ ಗರ್ಲ್ಸ್ ಹೋಮಿನಲ್ಲಿ ಯಾರೋ ಚೋರರು ಅಲ್ಲಿರುವ ದೊರಸಾನಿಗಳ ಬಂಗಲೆಗೆ ಬಹುಸಮೀಪವಾಗಿರುವ ಕೋಳಿಯ ಮನೆಯ ಬೀಗವನ್ನು ಒಡೆದು ಒಳಗಿದ್ದ 13 ಭಾರಿಭಾರಿ ಸೀಮೆ ಕೋಳಿಗಳನ್ನು ಕದ್ದುಕೊಂಡು ಹೋದರು ಪೊಲೀಸಿಗೆ ರಿಪೋರ್ಟು ಮಾಡಲಾಗಿ ಸಬ್ ಇನ್‌ಸ್ಪೆಕ್ಟರು ಬಂದುನೋಡಿ ಪತ್ತೆ ಮಾಡುವದಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಿದಾರೆ. ಹೀಗೆಯೇ ಎರಡಾವರ್ತಿ ನಡೆದಿದೆ — ತಾ 28 ನೇ ಮಂಗಳವಾರ ಟಿ. ನರಸೀಪುರದ ತಾಲೋಕು ಕಲಿಯೂರು ಗ್ರಾಮದಲ್ಲಿ 12 ವರುಷದ ಒಬ್ಬ ಅಕ್ಕಸಾಲಿಗರ ಹುಡುಗನು ಮದ್ದಿನ ಪಟಾಸನ್ನು ಕಟ್ಟಿ ಒಂದು ಕಾಗದವನ್ನೊಳಗೆ ತುಂಬುತ್ತಿದ್ದನು. ಕಡೇ ಪಟಾಸನ್ನು ಕಟ್ಟಿಮುಗಿಸುವಷ್ಟರಲ್ಲಿಯೇ ಬಿಸಿಲಿನ ಧಗೆಗೆ ಹೋಗೆ ಹೊರಟಿತು. ಹತ್ತಿಕೊಂಡಿತಲ್ಲಾ ಎಂಬ ಭೀತಿಯಿಂದ ಎದುರಲ್ಲಿದ್ದ ಟಿನ್ನಿನೊಳಗೆ ಹಾಕಿಬಿಟ್ಟನು. ತಕ್ಷಣವೇ ಎಲ್ಲಾ ಪಟಾಸುಗಳೂ ಒಂದಾಗಿ ಸಿಡಿದು ಹುಡುಗನ ಎರಡು ಹಸ್ತಗಳನ್ನೂ ಸಂಪೂರ್ಣವಾಗಿ ಕೊಚ್ಚಿಕೊಂಡು ಹೋದದ್ದಲ್ಲದೆ, ಹೊಟ್ಟೆಗೂ ತಾಗಿ ಕರುಳು ಹೊರಗೆ ಬಂದು ಮೂರ್ಛಿತನಾಗಿ ಬಿದ್ದುಬಿಟ್ಟನು ತಕ್ಷಣವೇ ಕೊಳ್ಳೇಗಾಲದ ಆಸ್ಪತ್ರೆಗೆ ಅವನನ್ನು ತಕ್ಕೊಂಡುಹೋದರು ಡಾಕ್ಟರ್ ಬಿರಿಯನ್‌ರವರು ಬಹು ಮುತುವರ್ಜಿಯಿಂದ ಚಿಕಿತ್ಸೆಮಾಡುತ್ತಲಿದ್ದಾರೆ ಈಗ ಹುಡುಗನಿಗೆ ಬುದ್ಧಿಸ್ವಾಧೀನವೇ ಇಲ್ಲ. ಮೈಸೂರು ಸರ್ಕಾರದವರಾದರೂ, ಕುಂಪಣಿ ಸರ್ಕಾರದವರಾದರೂ ತಮ್ಮ ತಮ್ಮ ಮೇರೆಗಳಲ್ಲಿ ಇರುವ ಅಂಗಡಿಗಳಲ್ಲಿ ಮದ್ದು ಮಾರದಿರುವದಕ್ಕೂ, ಯಾರೂ ಅದನ್ನು ಕೊಂಡುಕೊಳ್ಳದ ಹಾಗೂ ಕಠಿಣವಾದ ಬಂದೋಬಸ್ತು ಮಾಡಿದರೆ ಹಬ್ಬ ಕಾಲದಲ್ಲಿ ಆಗುವ ದುಃಖವು ನಿಂತು ಸಂತೋಷ ಉಂಟಾದೀತು

ದೊಡ್ಡಬಳ್ಳಾಪುರ — ಕಳೆದ ಬುಧವಾರ ಮಧ್ಯಾಹ್ನ ಈ ಊರಲ್ಲಿರುವ ಜವಳಿ ಅಂಗಡಿ ರಂಗಣ್ಣನವರ ಮಗ ಸುಮಾರು 14 ವರ್ಷದ ಸುಬ್ರಾಯನೆಂಬ ಹುಡುಗನು ಅಕಸ್ಮಾತ್ ಭವಾನಿ ಭಾವಿಯಲ್ಲಿ ಬಿದ್ದುಕೊಂಡನು ಅಷ್ಟರೊಳಗೆ ಆ ಮಾರ್ಗವಾಗಿ ಬರುತ್ತಿದ್ದ ಮರಾಟೆ ರಾಣೋಜಿ ಎಂಬಾತನು ಇದನ್ನು ತಿಳಿದು ತಕ್ಷಣವೇ ತನ್ನ ಉಡುಪಿನೊಂದಿಗೆ ಸದರಿ ಭಾವಿಯೊಳಕ್ಕೆ ಧುಮುಕಿ ತಳಕಚ್ಚಿ ಸತ್ತುಹೋಗುತ್ತಿದ್ದ ಮೇಲ್ಕಂಡ ಹುಡುಗನನ್ನು ಎತ್ತಿ ತಬ್ಬಿಕೊಂಡು ನಿಲವು ಉಜಿನಿಂದ ಮೇಲಕ್ಕೆ ಬರುವಷ್ಟರಲ್ಲೇ ಹೊಟ್ಟೆ ಅಮುಕಿ ನೀರುಹೊರಡಿಸಿ ಧಡಕ್ಕೆ ಹಾಕಿ ನೀರೆಲ್ಲಾ ಹೊರಡಿಸಿದನು ಆಮೇಲೆ ಡಾಕ್ಟರು ಬಂದು ತಕ್ಕ ಇಲಾಜುಮಾಡಿದರು ಈಗ ಹುಡುಗನು ಆರೋಗ್ಯವಾಗಿದಾನೆ ಈ ರಾಣೋಜಿರಾವ್ ಮಾಡಿದ ಕೃತ್ಯ ಬಹು ಸ್ತೋತ್ರಾರ್ಹವಾದದ್ದು ಮತ್ತು ಹುಡುಗನ ತಂದೆತಾಯಿಗಳು ತಮ್ಮ ಯೋಗ್ಯತಾನುಸಾರವಾಗಿ ಆತನಿಗೆ ಸನ್ಮಾನಮಾಡಿದರು — ಈ ಊರಲ್ಲಿರುವ ಅಗಸರ ನಾಗಪ್ಪನ ಮಗ ಸುಮಾರು 21 ವರ್ಷದ ತಿಮ್ಮನೆಂಬುವನು ನೇಯ್ಗೆ ಕೆಲಸಮಾಡುವ ಗೋವಿಂದಪ್ಪನ ಹೆಂಡತಿಯನ್ನು ಮಾನಭಂಗ ಮಾಡಲಿಕ್ಕೆ ಪ್ರಯತ್ನಿಸಿದನೆಂದು ಮೊಕದ್ದಮೆ ಬಂದು ಅಮಲ್ದಾರ್ ಮ್ಯಾಜಿಸ್ಟ್ರೇಟರು ಅವನಿಗೆ 15 ದಿನಗಳ ಕಠಿಣ ಸಜಾ ವಿಧಿಸಿದರು ಇವನನ್ನು ಜಾಮಿನ್ ಮೇಲೆ ಬಿಡಿಸಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿ ಅಪೀಲ್ ಮಾಡುತ್ತಾರೆಂದು ತಿಳಿಯಲಾಗಿದೆ — ಈ ಊರಿಗೆ ಮುನ್ಸಿಫ್ ಕೋರ್ಟು ಬಂದ ಲಾಗಾಯಿತು ಮುನ್ಸಿಫರಿಗೂ ಲಾಯರುಗಳಿಗೂ ವಿಶೇಷವಾಗಿ ಕೆಲಸವಿದೆ ಊರಲ್ಲಿ ಕಕ್ಷಿಗಾರರನ್ನು ಯಾವಾಗಲೂ ನೋಡಬಹುದು — ನೀರಿನ ಸರಬರಾಯಿ ಕಾರ್ಯವು ಕೂಡಿದ ಮಟ್ಟಿಗೂ ಶೀಘ್ರವಾಗಿ ನೆರವೇರಿದರೆ ಅನುಕೂಲ — ಈ ಊರಲ್ಲಿರುವ ಹಳೇ ತಾಲ್ಲೋಕು ಕಛೇರಿಯು ಸ್ಕೂಲ್ ಮಕ್ಕಳಿಗೆ ಬಹಳ ಹಳೇದಾಗಿ ಬಿದ್ದು ಅಪಾಯವಾಗುವ ಹಾಗಿದೆ ಎಂದು ಸೀನಿಯರ್ ಸರ್ಜನ್‌ರೇ ಮುಂತಾದವರು ತಿಳಿದದ್ದರಿಂದ ಆಸ್ಥಳದಿಂದ ಹೆಣ್ಣು ಮಕ್ಕಳನ್ನು ಬಾಡಿಗೆ ಮನೆಗಳಿಗೆ ಕಳುಹಿಸಿ ವಿದ್ಯಾಭ್ಯಾಸ ಮಾಡಿಸುತ್ತಿದಾರೆ ಈ ಮನೆಗಳು ಕೆಲವು ಚಿಕ್ಕ ಮಕ್ಕಳಿಗೆ ಬಹು ದೂರವೆಂದು ಅನೇಕ ತಂದೆತಾಯಿಗಳು ತಿಳಿಸುತ್ತಾರಲ್ಲದೆ ಮನೆಗಳೂ ಸ್ಕೂಲ್ ಕೆಲಸಕ್ಕೆ ಅಷ್ಟು ಅನುಕೂಲವಾಗಿಲ್ಲ. ಆದ್ದರಿಂದ ಇಲಾಖೆಯವರು ತಮ್ಮ ಅಂದಾಜಿನಂತೆ ಹಳೇ ಕಚೇರಿಯನ್ನು ಶೀಘ್ರವಾಗಿ ದುರಸ್ತು ಮಾಡಿಸಿಕೊಟ್ಟರೆ ಕ್ಷೇಮವಾದೀತು — ಇಲ್ಲಿ ಸಬ್ ಅ|| ಸರ್ಜನ್‌ರಾಗಿದ್ದ ಮ|| ರಾಮಸ್ವಾಮಿ ಸಿಳ್ಳೆಯವರನ್ನು ಶಿವಮೊಗ್ಗೆಗೆ ವರ್ಗಾಯಿಸಿದರು. ಇವರು ಇಲ್ಲಿದ್ದ ಸುಮಾರು ಒಂದು ವರ್ಷಕಾಲ ಜನಾನುರಾಗಿಗಳಾಗಿ ಸ್ನೇಹತೆಯಿಂದ ಪ್ರಜೆಗಳ ಕ್ಷೇಮಕ್ಕೋಸ್ಕರ ಸತ್ಯಸಂಧರಾಗಿ ಕೆಲಸಮಾಡಿದರೆಂತ ತಿಳಿಸುವವರು ಅಪರೂಪವೇ ಸರಿ — ಧಾರಣೆಗಳು ರಾಗಿ 16 ಸೇರು, ಅಕ್ಕಿ 8 ಸೇರು ಈ ಮೇರೆಗಿದೆ ಈ ಪ್ರಾಂತ್ಯ ಪ್ರಾಯಶಃ ಅರ್ಧಪಾಲು ರಾಗಿಬೆಳೆ ಆಗುವಂತಿದೆ

ತರೀಕೆರೆ — ಈ ಊರಲ್ಲಿ ದನಗಳಿಗೂ, ಎಮ್ಮೆಗಳಿಗೂ ಕಾಲುಬಾಯಿ ಜ್ವರ ಬಂದಿವೆ — ಈ ಊರಿಗೆ 12 ಮೈಲಿ ದೂರದಲ್ಲಿರುವ ಬೆಂಕಿಪುರದಲ್ಲಿ ಪ್ಲೇಗ್ ಹೆಚ್ಚಾಗಿದ್ದು, ಈಗ ಕಡಮೆಯಾಗಿದೆ ಹಾಗೇ ಬೇರೆ ಕಡೆ ವ್ಯಾಪಿಸದೆ ನಿಂತರೆ ಮೇಲಾದೀತು. ಈ ಊರಲ್ಲಿ ಬೇರೂರಿನಿಂದ ಪ್ಲೇಗ್ ತಗಲಿ ಬಂದವನೊಬ್ಬನು ಸತ್ತನು ಕಳೆದ 3 ನೇ ತಾ ಒಬ್ಬ ಪ್ರಾಯದ ಹುಡುಗನು ಅಕಸ್ಮಾತ್ ಬಾವಿಗೆ ಬಿದ್ದು ತೀರಿಹೋದನು — ವೈಸ್‌ರಾಯಿ ಪ್ರಭುಗಳು ಹೋಗುವಾಗಲೂ, ಬರುವಾಗಲೂ ತಕ್ಕ ಎಚ್ಚರಿಕೆಯಿಂದ ಅಧಿಕಾರಿಗಳೂ, ಪೊಲೀಸಿನವರೂ, ಗ್ರಾಮದ ಜನರೂ ರೈಲುರಸ್ತೆ ಉದ್ದಕ್ಕೂ ಕಾದಿದ್ದು ಸಾಗಕಳುಹಿಸಿದರು ಪ್ರಭುಗಳು ಶಿವಮೊಗ್ಗದಿಂದ ಹಿಂತಿರುಗಿ ಬರುವಾಗ್ಗೆ ರೈಲ್ ಸೂಚನಾಕಂಭದ ಮರವು (ಕೈಮರ) ಯಾತಕ್ಕೋ ಬೀಳದೆ ಹೋದದ್ದರಿಂದ ಗಾಡಿಯು ಸ್ವಲ್ಪಹೊತ್ತು ನಿಂತು ತರುವಾಯ ಬಂತು ಸ್ಟೇಷನ್ನಿನಲ್ಲಿ ಇಳಿದು ಪಹರೆ ಕೊಡುತ್ತಿದ್ದ ಒಬ್ಬ ಅಧಿಕಾರಿಗೆ ರೈಲ್ ಗಾಡಿಯಲ್ಲಿ ಹೋಗುವದಕ್ಕೆ ಆಗಲಿಲ್ಲ. ಅಂದರೆ ಗಾಡಿಯು ಹೊರಡುತ್ತೆಂದು ಬಾವಿಸಲಿಲ್ಲವೇನೋ ತಿಳಿಯದು ಹ್ಯಾಗೂ ಆತನು ನಿಂತು ಹೋದನು — ಈ ಊರಿಗೆ ಸರಿಯಾದ ಸೇರು, ಮೊಳದ ಬಟ್ಟುಗಳು ಬರಲಿಲ್ಲ ಮುಂದಕ್ಕೂ ಬರುತ್ತವೋ ಇಲ್ಲವೋ ತಿಳಿಯದು ಈ ಊರಲ್ಲಿ ಸೇರು 1 ಕ್ಕೆ 23 ರೂಪಾಯಿ ತೂಕವಿದೆ ಈ ತೂಕವು ಯಾವ ಕಾಲಕ್ಕೆ ನಿಲ್ಲುವದೋ ತಿಳಿಯದು — ಈ ಊರಲ್ಲಿ ಆಗಾಗ್ಗೆ ಸಿಡುಬಿನ ಹಾವಳಿ ಹೆಚ್ಚಾಗಿದೆ ಕಳೆದ ಸಾರಿ ಅನೇಕ ಮಕ್ಕಳು ತೀರಿಹೋದರು ಇದಕ್ಕಾಗಿ ನಿರ್ಬಂಧವಾಗಿ ಸಿಡುಬು ಹಾಕುವ ಹುಕುಂ ಆಗಿದೆಯಷ್ಟೆ ಈ ಕಾರಣದಿಂದ ಇಲ್ಲಿನ ಡ್ರೆಸ್ಸರು ಸಿಡುಬು ಹಾಕುತ್ತಿದಾರೆ, ಸ್ಕೂಲುಗಳಲ್ಲಿ ಮಕ್ಕಳಿಗೆ ಸಿಡುಬು ಹಾಕಲು ಹೋಗಿ ಹಾಕಿದ ಮೇಲೆ ಅನೇಕ ತಂದೆತಾಯಿಗಳು ಉಪಾಧ್ಯಾಯರ ಮೇಲೆ ಆಕ್ಷೇಪಣೆಮಾಡುತ್ತಾರೆ. ಇಂಥಾ ಪ್ರೌಢ್ಯತೆ ಯಾವ ಕಾಲಕ್ಕೆ ನಿವೃತ್ತಿಯಾಗುತ್ತೆಯೋ ತಿಳಿಯದು — ಡೆಪ್ಟಿ ಕಮಿಷನರ್ ಸಾಹೇಬರು ಬಂದು ಇಲ್ಲಿ ಸಂತೆಮಾರ್ಕೆಟ್ಟಿನಲ್ಲಿ ಜನರು ತಮ್ಮ ಖಾಯಂ ಸ್ಥಳಗಳಲ್ಲಿ ಕಂಭಗಳನ್ನು ನೆಟ್ಟು ಟಿನ್ ತಗಡು ಹಾಕಿಕೊಳ್ಳಲಿಕ್ಕೆ ಅಪ್ಪಣೆ ಕೊಟ್ಟರು — ಕಳೆದ ತಿಂಗಳು ತಾ. 30 ರಲ್ಲಿ ಹೇಳಿದ ದಸ್ತಗೀರ್ ಎಂಬವನನ್ನು ಪೊಲೀಸಿನವರು ದಸ್ತಗಿರಿಮಾಡಿದಾರೆ — ಇಲ್ಲಿನ ಕುಡಿಯುವ ನೀರಿನ ಕೆರೆಯು ಮಳೆ ಬಾರದ್ದರಿಂದ ತುಂಬಲಿಲ್ಲ. ಈ ನೀರು ಎಷ್ಟು ಬೇಗ ಕಡಮೆಯಾಗುವುದೋ, ಎಷ್ಟು ಬೇಗ ಕೆಟ್ಟುಹೋಗುವದೋ ತಿಳಿಯದು. ಹಾಗೂ ನೀರನ್ನು ಕೆಡಿಸದಂತೆ ಇಟ್ಟಿರುವ ಆಳು ಎಲ್ಲಿದಾನೋ ತಿಳಿಯುವುದೇ ಇಲ್ಲ. ನೀರನ್ನು ಜನರು ನಿಶ್ಚಿಂತೆಯಿಂದ ಕೆಡಿಸುತ್ತಾ ಇದಾರೆ. ಕೆಡಿಸುವ ರೀತಿಯನ್ನು ಹೇಳಲಾಗದು. ಸುತ್ತಮುತ್ತಲೂ ರೋಗಗಳಿವೆ. ಇದಕಾರಣ ನೀರನ್ನು ಬಹಳ ಎಚ್ಚರಿಕೆಯಿಂದ ಕಾಪಾಡಲೂ, ಉಪಯೋಗಿಸಲೂ ತಕ್ಕ ಏರ್ಪಾಡನ್ನು ಅಧಿಕಾರಿಗಳು ಮಾಡುವರೆಂದು ನಂಬಲಾಗಿದೆ. ಮಳೆಬಾರದ್ದರಿಂಲೂ, ಬೆಳೆ ಕೆಟ್ಟುಹೋಗಿರುವದರಿಂದಲೂ ಜನರು ತುಂಬಾ ಗಾಬರಿ ಪಡುತ್ತಲಿದಾರೆ.

ಚಿತ್ರದುರ್ಗ — ಕಳೆದ ತಿಂಗಳು 14 ನೇ ತಾ, ನಿಂದ ಮಳೆ ನಿಂತುಹೋಗಿ ಬಿಸಿಲು ಜಾಸ್ತಿಯಾಗಿದೆ. ನೆಗಡಿ ಕೆಮ್ಮು ಜಾಸ್ತಿಯಾಗಿದೆ. ಜನಿಸಿ ಧಾರಣೆ ಕ್ಷಾಮಕಾಲವನ್ನು ಸೂಚಿಸುವದು — ಈ ಟವನ್ ಪ್ರಜೆಗಳಿಗೆ ನೀರು ಸಪ್ಲೈ ಮಾಡುತ್ತಿರ ತಕ್ಕ ತಿಮ್ಮಣ್ಣನಾಯ್ಕನ ಕೆರೆಗೆ ಈ ವರ್ಷ ನೀರು ಬರಲಿಲ್ಲ ಮುಂದೆ ಸಂಭವಿಸಬಹುದಾದ ನೀರಿನ ಕ್ಷಾಮಕ್ಕಾಗಿ ಈಗಿನಿಂದಲೇ ಜನಗಳು ಭಯಪಡುತ್ತಿದಾರೆ — ಈಚೆಗೆ ಇಲ್ಲಿ ಬ್ರಾಹ್ಮಣರಲ್ಲಿ ವ್ಯಾಪಾರ ಕಸಬು ಹೆಚ್ಚಿತು. ಆ ಪೈಕಿ ಹೊಸದಾಗಿ ಕಾಬುಚೀಲ ಹೆಣೆಯತಕ್ಕ ಮಿಷನ್ ತರಿಸಿಕೊಂಡು ಕೆಲಸ ಮಾಡುತ್ತಿರುವ ಪೆನುಕೊಂಡೆ ಶೇಷಾಚಾರ್ ಕಂಪನಿಗೆ ಮೈಸೂರು ಎಗ್ಸಿಭಿಷನ್ನಲ್ಲಿ ಒಂದು ಮೆಡಲ್ ಬಂತೆಂದು ತಿಳಿಯಬರುತ್ತೆ. — ಈಗ್ಗೆ ಕೆಲವು ದಿವಸಗಳ ಕೆಳಗೆ ಚಳ್ಳಕೆರೆ ತಾಲ್ಲೂಕಿನಲ್ಲಿ ಹಳ್ಳಿ ಜನಗಳು ಜಿಂಕೆ ಶಿಕಾರಿಗೋಸ್ಕರ ಹೋಗಿದ್ದಾಗ ಆ ಜನಗಳ ಪೈಕಿ ಒಬ್ಬನ ಲೋಡಾದ ಬಂದೂಕು ಅಕಸ್ಮಾತ್ ಹಾರಿ ಆವನನ್ನೇ ಕೊಂದಿತು ಈ ವಿಷಯದ ನಿಜತ್ವವನ್ನು ಜೊತೆಯಲ್ಲಿದ್ದವರು ಭಯದಿಂದ ಹೊರಪಡಿಸದೆ ಇದ್ದರು. ಲಾಷ್ ಅಜಮಾಯಿಷಿ ಮಾಡಿದ ಪೊಲೀಸ್‌ನವರೂ ಪೋಸ್ಟ್ ಮಾರ್ಟೆಂ ಮಾಡಿದ ಸಬ್ ಅ|| ಸರ್ಜನ್‌ರೂ ಸಹ ಈ ಕೃತ್ಯವು ಹರಿತವಾದ ಆಯುಧದಿಂದ ಆದದ್ದೆಂತ ನಿಷ್ಕರ್ಷಿಸಿ ಈ ಮರಣದ ಕೃತ್ಯ ಖೂನಿ ಎಂತ ಫೈಲ್ ಮೇಲೆ ತೆಗೆದುಕೊಂಡು ಸತ್ತವನ ಜೊತೆಯಲ್ಲಿ ಶಿಕಾರಿಗೆ ಹೋಗಿದ್ದ ಮೂರು ಜನಗಳನ್ನು ದಸ್ತಗಿರಿ ಮಾಡಿದರು ಇದೆಲ್ಲಾ ನಡೆದ 10-12 ದಿನಗಳ ಮೇಲೆ ಪೊಲೀಸ್ ಸೂ|| ಮಿ|| ಸಿ. ಮಾಚಯ್ಯನವರು ಕೃತ್ಯ ನಡೆದ ಸ್ಥಳಕ್ಕೆ ಹೋಗಿ ವಿಚಾರಿಸಿದ್ದರಲ್ಲಿ ನಿಜತ್ವ ಹೊರಪಟ್ಟಿತು. ಅವರು ದಫನ್ ಆಗಿದ್ದ ಶವವನ್ನು ಮ್ಯಾಜಿಸ್ಟ್ರೇಟರ ಅಪ್ಪಣೆ ಪಡೆದು ಹೊರಕ್ಕೆ ತಗಿಸಿ ಸೀನಿಯರ್ ಸರ್ಜನ್‌ರವರಿಂದ ಅಜಮಾಯಿಷಿ ಮಾಡಿಸಿದ್ದರಲ್ಲಿ ಬಂದೂಕಿನ ಏಟಿನಿಂದಲೇ ಅವನು ಮೃತಪಟ್ಟಿರುವುದಾಗಿ ಸ್ಥಿರಪಟ್ಟಿತು ಕೂಡ್ಲೆ ಅಪರಾಧಿಗಳನ್ನು ಜಾಮಿನು ಮೇಲೆ ಬಿಟ್ಟು, ಕೇಸು ಅಕಸ್ಮಾತ್ ಮರಣವೆಂತ ಇತ್ಯರ್ಥಪಡಿಸಿದರು ಈ ಸೂಪರಿನ್‌ಟೆಂಡೆಂಟರವರು ಈ ಡಿಸ್ಟ್ರಿಕ್ಟಿಗೆ ಬಂದೀಚೆಗೆ ಪೊಲೀಸ್ ಇಲಾಖೆಯ ಕೆಲಸಗಳು ದರ್ಪವಾಗಿಯೂ, ಸತ್ಯವಾಗಿಯೂ ನಡೆಯಲಿಕ್ಕೆ ಆರಂಭವಾಗಿದೆ. ಸರ್ಕಾರದ ನೌಕರರು ಗೌರ್ನಮೆಂಟಿಗೆ ದ್ರೋಹಮಾಡಿ ತಲೆತಪ್ಪಿಸಿಕೊಳ್ಳತಕ್ಕದ್ದು ಜಾಸ್ತಿಯಾಯಿತು. ಚಿತ್ರದುರ್ಗದ ಸ್ಥಳೀಯನಾದ ರಾಮಚಂದ್ರರಾವ್ ಎಂಬಾತನು ಬೆಂಗಳೂರಿನಲ್ಲಿ ಇಂಜಿನಿಯರ್ ಇಲಾಖಾ ಸ್ಟೋರ್ ಕೀಪರಾಗಿದ್ದು ಈಗ್ಗೆ ಸುಮಾರು ನಾಲ್ಕು ತಿಂಗಳಿಂದ ಕಾಣದೇಹೋಗಿದಾನೆ ಆತನ ಹೆಂಡತಿಮಕ್ಕಳು ಬಂದು ಸ್ಥಳದಲ್ಲಿ ಸಂಕಟಪಡುತ್ತಲಿದಾರೆ — ನಮ್ಮ ಚಕ್ರವರ್ತಿ ಸಾರ್ವಭೌಮರ ಪ್ರತಿನಿಧಿಗಳಾದ ಲಾರ್ಡ್ ಹಾರ್ಡಿಂಗ್ ಪ್ರಭುಗಳು ದಂಪತಿಯುಕ್ತರಾಗಿ ನಮ್ಮ ದೇಶಕ್ಕೆ ದಯಮಾಡಿಸಿರತಕ್ಕದ್ದು ಈ ದೇಶದ ಪ್ರಜೆಗಳಿಗೆ ಪರಮ ಸಂತೋಷವನ್ನುಂಟುಮಾಡಿದೆ. ಈ ಪ್ರಾಂತ್ಯದಲ್ಲಿ ಪ್ರಜೆಗಳೆಲ್ಲಾ ನಮ್ಮ ಚಕ್ರವರ್ತಿ ಸಾರ್ವಭೌಮರಿಗೂ ಅವರ ಪ್ರತಿನಿಧಿಯಾದ ವೈಸ್‌ರಾಯರವರಿಗೂ ಶ್ರೇಯಸ್ಸುಂಟಾಗಲೆಂದೂ, ಆ ಚಂದ್ರಾರ್ಕಸ್ಥಾಯಿಯಾಗಿ ನಮಗೆ ಇಂಗ್ಲೀಷ್ ಛತ್ರಚ್ಛಾಯಾ ಶಾಶ್ವತವಾಗಿರಲೆಂದೂ ಪ್ರಾರ್ಥಿಸುತ್ತಲಿದಾರೆ

ಹಾಸನ — ಈ ಪ್ರಾಂತ್ಯ ಹಿಂದಿನ ಎರಡು ವಾರಗಳಿಂದ ಮಳೆ ನಿಂತುಹೋಗಿ ಕಾಡಿಗೆ ಬಂದಿದ್ದ ಭತ್ತದ ಬೆಳೆ ಒಣಗುತ್ತಾ ಇದೆ ಚಿತ್ತೆ ಮಳೆಯು ಈ ಪ್ರಾಂತ್ಯದಲ್ಲಿ ಸಾಧಾರಣವಾಗಿ ಬಂದಿದ್ದರೂ ದೊಡ್ಡದೊಡ್ಡ ಕೆರೆಗಳು ತುಂಬಲಿಲ್ಲ — ಹಿಂದೆ ಇಲ್ಲಿನ ಸೆಷನ್ನಲ್ಲಿ ವಿಚಾರಣೆಯಾಗಿ ಮರಣದಂಡನೆ ವಿಧಿಸಿದ್ದ ಚನ್ನಲಿಂಗಯ್ಯನೆಂಬವನ ಖೂನೀ ಕೇಸಿನ ನಾಲ್ಕು ಮಂದಿ ಅಪರಾಧಿಗಳಲ್ಲಿ ಚೀಫ್ ಕೋರ್ಟನವರು ಇಬ್ಬರನ್ನು ಜನ್ಮಾವಧಿ ಸಜಾ ಶಿಕ್ಷೆಗೆ ಗುರಿಪಡಿಸಿ, ಇನ್ನಿಬ್ಬರಿಗೆ ಮರಣದಂಡನೆಯನ್ನೇ ಸ್ಥಿರಪಡಿಸಿದರು ಆ ಇಬ್ಬರಿಗೂ ಕಳೆದ ತಾ 3 ನೇ ಸೋಮವಾರ ಮರಣದಂಡನೆಯು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ವಿಧಿಸಲ್ಪಡುವುದೆಂದು ಈ ಟವನ್ನಲ್ಲಿ ದಂಡೂರಿ ಮೂಲಕ ಪ್ರಕಟಿಸಿದರು ಹೀಗೆ ಶಿಕ್ಷೆಯನ್ನು ಪ್ರಸಿದ್ಧಪಡಿಸುವುದರಿಂದ ಮುಂದುಜನರಿಗೆ ಭಯವುಂಟಾಗಿ, ಕ್ರೂರಕೃತ್ಯಗಳು ಅಡಗಲವಕಾಶವಾಗುತ್ತದೆ ಇದು ಒಳ್ಳೆ ಏರ್ಪಾಡಾಗಿದೆ — ಅರಸೀಕೆರೆಯಿಂದ ಈ ಊರು ಮಾರ್ಗವಾಗಿ ಹೊಳೆನರಸೀಪುರದ ಮೇಲೆ ಮೈಸೂರಿಗೆ ರೈಲ್ವೆಯನ್ನು ಹಾಕಲು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿ ಕೆಲಸ ಪ್ರಾರಂಭಿಸುವಂತೆ ಇಲಾಖೆಯವರಿಗೆ ಹುಕುಂ ಕೊಟ್ಟಿದಾರೆಂದು ಕೇಳಿ ಈ ಪ್ರಾಂತ್ಯದವರೆಲ್ಲಾ ಸಂತೋಷಭರಿತರಾಗಿದಾರೆ — ಇಲ್ಲಿ ಪ್ಲೇಗ್ ಹಾವಳಿಯು ಇನ್ನೂ ಶಮನವಾಗಲಿಲ್ಲ. ಆಗಸ್ಟ್ ತಾ 28 ರಲ್ಲಿ ಪ್ಲೇಗ್ ಪ್ರಾರಂಭವಾಗಿ ಇದುವರೆಗೆ ಸುಮಾರು 160 ಮಂದಿಗೆ ಈ ರೋಗ ತಗಲಿ, 100 ಮಂದಿ ಮೃತಪಟ್ಟಂತೆಯೂ, 20 ಮಂದಿ ನರಳುತ್ತಾರೆಂತಲೂ, 40 ಮಂದಿಗೆ ಗುಣವಾಯಿತೆಂತಲೂ ತಿಳಿದು ಬಂದಿದೆ. ಗುಡಿಸಿಲುಗಳಲ್ಲೂ ಪ್ಲೇಗ್ ಮರಣಗಳಾಗಿರುತ್ತವೆ ಇಲ್ಲಿನ ಪ್ಲೇಗ್ ರೋಗಿಗಳನೇಕರಿಗೆ ಔಷಧವನ್ನು ಕೊಟ್ಟು ಗುಣಮಾಡಿದ ಮ|| ಪಿ ಕೃಷ್ಣರಾಯರ ಮಹಾ ಭೃಂಗಾಮಲಕ ತೈಲಕ್ಕೆ ಅದರ ಶ್ರೇಷ್ಠತೆಗೋಸ್ಕರ ಮೈಸೂರು ದಸರಾ ಪ್ರದರ್ಶನದಲ್ಲಿ ಈ ಸಲ ಭಂಗಾರದ ಮೆಡಲ್ ಬಹುಮಾನ ಬಂತೆಂದು ಕೇಳಿ ಬಹುಜನರು ಸಂತೋಷಪಡುತ್ತಿದಾರೆ. — ಇಲ್ಲಿ ಪ್ರತಿವರ್ಷವೂ ದೀಪಾವಳಿ ಹಬ್ಬದ ವಾರದಲ್ಲಿ ನಡೆಯುವ ಸಿಂಹಾಸನಕಾಂಬಾ ದೇವಾಲಯದ ಬಾಗಿಲು ತೆರೆಯಲ್ಪಟ್ಟು ಮಹೋತ್ಸವವು ವಿಜೃಂಭಣೆಯಿಂದ ನಡೆದರೂ ಊರೊಳಗೆ ಜನರು ಇಲ್ಲದಕಾರಣ, ಪ್ಲೇಗಿನ ಭಯದಿಂದಲೂ ಹೊರಗಿನ ಜನರು ವಿಶೇಷವಾಗಿ ಬರಲಿಲ್ಲ — ನಮ್ಮ ಡೆಪ್ಟಿ ಕಮಿಷನ್‌ರವರು ದಸರಾ ಹಬ್ಬಕ್ಕೆ ಮೈಸೂರಿಗೆ ದಯಮಾಡಿ ಪ್ರಜಾಪ್ರತಿನಿಧಿ ಸಭಾ ಕಾರ್ಯವನ್ನು ತೀರಿಸಿಕೊಂಡು ಬಂದಾಗಿನಿಂದ ತಮ್ಮ ಆಫೀಸ್ ಕಾರ್ಯವನ್ನು ಮಧ್ಯಾಹ್ನ 11 ರಿಂದ ರಾತ್ರಿ 7 ಘಂಟೆ ವರೆಗೆ ನಡಿಸುವುದಾಗಿ ಹುಕುಂ ಕೊಟ್ಟಿದಾರಂತೆ ರಾತ್ರಿಯೆಲ್ಲಾ ಕಾಯಬೇಕಾಗಿದ್ದ ಕಕ್ಷಿಗಾರರಿಗೂ, ವಕೀಲರಿಗೂ ಇದರಿಂದ ತುಂಬಾ ಉಪಕಾರವಾಯಿತು. ಎಲ್ಲಾ ಕಡೆಯೂ ಜಾರಿಯಲ್ಲಿರುವಂತೆ 11 ರಿಂದ 5 ಘಂಟೆ ವರೆಗೆ ಏತಕ್ಕೆ ಕೆಲಸ ನಡಿಸಬಾರದೋ ತಿಳಿಯದು — ಮಿಷನ್ ಆಸ್ಪತ್ರೆಯ ಬಳಿ ಇರುವ ಮೈದಾನುಗಳಲ್ಲಿ ಜನರಿಗೆ ಗುಡಿಸಲುಗಳಿಗೋಸ್ಕರ ಸ್ಥಳ ಕೊಟ್ಟಿದಾರೆ ಅವರೆಲ್ಲಾ ಷೆಡ್ಡುಗಳನ್ನು ಕಟ್ಟಿಕೊಂಡು ಖಾಯಮಾಗಿ ವಾಸಮಾಡುತ್ತಿದಾರೆ ಈ ಸ್ಥಳವು ಆಸ್ಪತ್ರೆಗೆ ಸಮೀಪವಾಗಿದೆ ಹತ್ತಿರದಲ್ಲೇ ಪಾಠಶಾಲೆಗಳಿವೆ. ಈ ಸ್ಥಳವು ಎಲ್ಲಾ ಆಫೀಸುಗಳಿಗೂ ಸಮೀಪವಾಗಿದೆ ಈ ಸ್ಥಳವನ್ನು ಅವರವರಿಗೇ ಕ್ರಯಕ್ಕೆ ಕೊಟ್ಟುಬಿಟ್ಟರೆ ನಮ್ಮ ಡೆಪ್ಟಿ ಕಮಿಷನರವರಿಗೆ ಎಷ್ಟೋ ಕೀರ್ತಿಯುಂಟಾಗುವುದು. ಅವರೆಲ್ಲರೂ ಮನೆಗಳನ್ನು ಕಟ್ಟಿಕೊಂಡು ಸುಖವಾಗಿರಲು ಸಹಾಯವಾದೀತು.

ಮಕ್ಕಳ ಹಿತಕಾರಿ

ಎಂದು

SCOTT'S EMULSION 2-40

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದಾರೆ ಯಾಕಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳಸಿರುತ್ತದೆ

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು, ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು.

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್

Always get the Emulsion with this mark—the Fishman—the mark of the "Scott" process!

ಈ ವಿಾನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ,

ವೃತ್ತಾಂತ ಪತ್ರಿಕೆ

ಸನ್ ೧೯೧೩ ನೇ ಇಸವಿ ನವಂಬರ್, ತಾ ೧೩ ನೇ ಗುರುವಾರ.

ಮೈಸೂರು ಸಂಸ್ಥಾನವೂ ಸಾರ್ವಭೌಮ ಸರ್ಕಾರವೂ

ಹಿಂದುಸ್ಥಾನದ ವೈಸ್‌ರಾಯ್ ಮತ್ತೂ ಗವರ್ನರ್ ಜನರಲ್ ರಾದ ಘನವೆತ್ತಿದ ಲಾರ್ಡ್ ಹಾರ್ಡಿಂಗ್ ಪ್ರಭುಗಳ ಸವಾರಿಯು ಮೈಸೂರಿಗೆ ಚಿತ್ತೈಸಿದ್ದು ಈ ಸಂಸ್ಥಾನದ ಆಳ್ವಿಕೆಯ ಚರಿತ್ರೆಯಲ್ಲಿ ನವೀನ ಭಾಗವನ್ನೂ ವಿಶೇಷ ಪ್ರಾಮುಖ್ಯತೆಯನ್ನೂ ಪಡೆಯುವಂಥಾದ್ದಾಗುತ್ತದೆ ಮೈಸೂರಿನ ಅರಸುಗಳೆಲ್ಲರೂ ಧೈರ್ಯ ಸ್ಥೈರ್ಯ ಶೌರ್ಯಾದಿಗಳನ್ನು ಪಡೆದವರಾಗಿದ್ದರೆಂದು ಹೇಳಲಾಗುವುದಿಲ್ಲವಾದಾಗ್ಯೂ ಈ ಸಂಸ್ಥಾನದ ಕೀರ್ತಿಯು ಬಹಳ ಕಾಲದಿಂದ ವಿಶೇಷ ಗೌರವಯುಕ್ತವಾದದ್ದಾಗಿರುವುದು ಹೈದರಲ್ಲಿ, ಟೀಪೂಸುಲ್ತಾನರು ಮಟ್ಟಿ ಅವರ ಪ್ರತಾಪದ ದೆಸೆಯಿಂದ ಅನೇಕ ವರುಷಗಳ ತನಕ ಮೈಸೂರು ರಾಜವಂಶೀಯರ ಹೆಸರೇ ಮಲಿನವಾಗಿ ಹೋಗಿತ್ತು ಆದರೆ ಬ್ರಿಟಿಷರ ಪರಾಕ್ರಮವು ಜಯಶೀಲವಾದಾಗ ಅವರು ಮೈಸೂರು ಸಂಸ್ಥಾನವನ್ನು ಪುರಾತನ ರಾಜವಂಶೀಯರೊಬ್ಬರಿಗೆ ವಹಿಸಿಕೊಟ್ಟರು ಆ ರಾಜರ ಆಳ್ವಿಕೆಯು ಪ್ರಖ್ಯಾತವಾಗದೆ ಹೋಯಿತಾದಕಾರಣ ಬ್ರಿಟಿಷ್ ಗವರ್ನ್‌ಮೆಂಟಿನವರು ಪ್ರವೇಶಮಾಡಿ ನಮ್ಮ ಸಂಸ್ಥಾನವನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಐವತ್ತು ಸಂವತ್ಸರಗಳ ಕಾಲ ವಿಚಕ್ಷಣೆಯಿಂದ ಆಳ್ವಿಕೆಯನ್ನು ನಡಿಸಿ, 1881 ನೇ ಇಸವಿಯಲ್ಲಿ ಕೀರ್ತಿಶೇಷರಾದ ಮಹಾರಾಜಾ ಚಾಮರಾಜ ಒಡೆಯರವರಿಗೆ ರಾಜ್ಯಭಾರವನ್ನು ವಹಿಸಿಬಿಟ್ಟರು

ಹೀಗೆ ಸಂಸ್ಥಾನವನ್ನು ಅವರಿಗೆ ವಹಿಸಿದ್ದು ಪರೀಕ್ಷಾರ್ಥವಾಗಿ ಎಂದು ಆಗಿನ ಕಾಲದಲ್ಲಿ ಅಭಿಪ್ರಾಯವಿದ್ದಂತೆ ಕಾಣುತ್ತದೆ ಆಗ್ಗೆ ಇಂಡಿಯಾ ಗವರ್ನ್‌ಮೆಂಟಿಗೂ ಮೈಸೂರು ಮಹಾರಾಜರವರಿಗೂ ಇರಬೇಕಾದ ಪರಸ್ಪರ ಸಂಬಂಧವನ್ನೂ ನಡವಳಿಕೆಯನ್ನೂ ವಿವರಿಸಿ ಒಂದು ತಹನಾಮೆಯು ರಚಿಸಲ್ಪಟ್ಟಿತು ಈ ತಹನಾಮೆಗೆ "ವರ್ಗಪತ್ರಿಕೆ" (ಇನ್‌ಸ್ಟ್ರುಮೆಂಟ್ ಆಫ್ ಟ್ರಾನ್ಸ್‌ಫರ್) ಎಂಬ ಹೆಸರಾಯಿತಲ್ಲದೆ "ಕರಾರು" ಎನಿಸಿಕೊಳ್ಳಲಿಲ್ಲ ಅಲ್ಲಿಂದೀಚೆಗೆ ಈ ಪರೀಕ್ಷಾರ್ಥವಾದ 12 ಸಂವತ್ಸರಗಳ ಕಾಲದಲ್ಲಿ ಈರ್ವರು ಮಹಾರಾಜರುಗಳೂ ಒಬ್ಬ ರೀಜೆಂಟರೂ ಈ ಸಂಸ್ಥಾನವನ್ನು ಪರಿಪಾಲನೆಮಾಡಿರುತ್ತಾರೆ ಮೈಸೂರು ಮಹಾರಾಜರುಗಳು ಆ ವರ್ಗಪತ್ರಿಕೆಯಲ್ಲಿ ಕಾಣಿಸಿರುವ ನಿಬಂಧನೆಗಳನ್ನು ಅನುಸರಿಸಿಕೊಂಡು ಅವುಗಳಿಗೆ ಸ್ವಲ್ಪವೂ ವ್ಯತ್ಯಸ್ತವಾಗದಂತೆ ಆಳ್ವಿಕೆಯನ್ನು ನಡಿಸುತ್ತಾ ಬಂದಿದಾರಲ್ಲದೆ ಸಂಸ್ಥಾನವನ್ನು ಅಭಿವೃದ್ಧಿ ಮಾಡಬೇಕೆಂಬದಾಗಿಯೂ, ಪ್ರಜೆಗಳನ್ನು ನೆಮ್ಮದಿ ಸುಖ ಸಂತೋಷದಿಂದ ಪರಿಪಾಲನೆಮಾಡಿಕೊಂಡು ಬರಬೇಕೆಂಬದಾಗಿಯೂ ಕುತೂಹಲಪಟ್ಟಿರುತ್ತಾರೆ ಈ ಭಾಗದಲ್ಲಿ ಅವರ ಉದ್ದೇಶವೂ ಕಾರ್ಯಭಾಗಗಳೂ ಬಹಳಮಟ್ಟಿಗೂ ಫಲಕಾರಿಗಳಾಗಿರುವವು ಮೈಸೂರು ಸಂಸ್ಥಾನದ ಪ್ರಜೆಗಳು ಮೈಸೂರು ರಾಜಮನೆತನದವರಲ್ಲಿ ಬಹು ವಿಶೇಷವಾದ ಭಕ್ತಿ ಪ್ರೀತಿ ಅನುರಾಗಗಳನ್ನು ಇಟ್ಟುಕೊಂಡಿದಾರೆ, ಇದಲ್ಲದೆ ಈ ಸಂಸ್ಥಾನದಲ್ಲಿ ಪ್ರಜೆಗಳ ಶ್ರೇಯಸ್ಸಿಗೂ ಸೀಮೆಯ ಅಭಿವೃದ್ಧಿಗೂ ಸಹಕಾರಿಗಳಾದ ನವೀನ ಏರ್ಪಾಡುಗಳೂ ವಿಶೇಷ ಕಾಮಗಾರಿಗಳೂ ಅನೇಕವಾಗಿ ನಡೆದಿರುವವು

ಮೇಲ್ಕಂಡ ವರ್ಗಪತ್ರಿಕೆಯಲ್ಲಿ ನಿರೂಪಿಸಲ್ಪಟ್ಟಿರುವ ನಿಬಂಧನೆಗಳನ್ನು ಪುನರಾಲೋಚನೆಗೆ ತರಬೇಕಾದ ಸಮಯವು ಪ್ರಾಪ್ತವಾಗಿದೆ ಎಂದು ನಮ್ಮ ಮಹಾರಾಜರವರಿಗೂ ಇಂಡಿಯಾ ಗವರ್ನ್‌ಮೆಂಟಿನವರಿಗೂ ವಿದಿತವಾಯಿತು ಅದಕ್ಕೆ ಅನುಸಾರವಾಗಿ ಕಳೆದ ಗುರುವಾರ ರಾತ್ರಿ ಘನವೆತ್ತಿದ ವೈಸ್‌ರಾಯ್ ಪ್ರಭುಗಳು ರಾಜಧಾನಿಯಲ್ಲಿ ನಡೆದ ಔತಣೋತ್ಸವದ ಸಮಯದಲ್ಲಿ ಈಗಿರುವ ವರ್ಗಪತ್ರಿಕೆಯನ್ನು ರದ್ದುಮಾಡಿ ಮೈಸೂರು ಮಹಾರಾಜರವರೂ ಇಂಡಿಯಾ ಗವರ್ನ್‌ಮೆಂಟಿನವರು "ಕರಾರು" (ಟ್ರೀಟಿ) ಮಾಡಿಕೊಳ್ಳುವಂತೆ ಒಪ್ಪಿ ಸ್ಯಾಂಕ್ಷನ್ ಆಗಿದೆ ಎಂಬದಾಗಿ ಅಪ್ಪಣೆಕೊಡಿಸಿದರು ಈ ಶುಭಕರವಾದ ಅಪ್ಪಣೆಯನ್ನು ಕೇಳಿ ಶ್ರೀಮನ್ ಮಹಾರಾಜರವರ ಸಕಲ ಪ್ರಜೆಗಳೂ ಆನಂದಪಡುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಇದರಿಂದ ಮೈಸೂರು ರಾಜ್ಯಭಾರದ ಈಗಿನ ರೀತಿಯನ್ನೂ ಕ್ರಮಗಳನ್ನೂ ಪರಾಂಬರಿಸಿ ಇಂಡಿಯಾ ಗವರ್ನ್‌ಮೆಂಟಿನವರು ತುಂಬಾ ಮೆಚ್ಚಿಕೊಂಡಿರುತ್ತಾರೆಂಬುವುದು ವಿಚಿತವಾಯಿತು.

ವೈಸ್‌ರಾಯರವರು ಅಪ್ಪಣೆ ಕೊಡಿಸಿದ ಹೊಸ ಕರಾರಿನ ಕಲಮುಗಳು ಯಾವ ರೀತಿಯಾದವುಗಳೋ ಅದನ್ನು ಮಾತ್ರ ಆ ಸಂತೋಷ ಸಮಯದಲ್ಲಿ ಹೊರಪಡಿಸದೆ ಹೋದರು ಆದಕಾರಣ ಆ ಕಲಮುಗಳನ್ನು ಕುರಿತು ನಾವು ಈಗ ಪ್ರಸ್ತಾಪಮಾಡೋಣದರಿಂದ ಪ್ರಯೋಜನವೇನೂ ಕಾಣುವುದಿಲ್ಲ ಆದಾಗ್ಯೂ ಈ ಕರಾರಿನ ದೆಸೆಯಿಂದ ಮೈಸೂರು ಸಂಸ್ಥಾನದ ಘನತೆಯೂ ಸನ್ಮಾನವೂ ಹಿಂದುಸ್ಥಾನದ ದೇಶೀಯ ಸಂಸ್ಥಾನಗಳಲ್ಲಿ ಹೆಚ್ಚುಗುತ್ತವನ್ನುವುದರಲ್ಲಿ ಅನುಮಾನವಿಲ್ಲ, ಮತ್ತೂ ಇದರಿಂದ ನಮ್ಮ ಮಹಾರಾಜರವರ ಹಿತಕರವಾದ ರಾಜ್ಯಪರಿಪಾಲನಾ ಶೀಲವನ್ನೂ, ಅವರ ಮತ್ತು ಅವರ ಸಮಸ್ತ ಪ್ರಜೆಗಳ ಭಕ್ತಿ ಪ್ರೀತಿ ಅನುರಾಗಗಳನ್ನೂ ಮೆಚ್ಚಿಕೊಂಡದ್ದಕ್ಕೆ ಸಾಕ್ಷಿಯಾಗುತ್ತದೆ ಇಂಡಿಯಾ ಗವರ್ನ್‌ಮೆಂಟಿಗೆ ಸಲ್ಲುವ ಪೊಗದಿಯು ಕಡಮೆಯಾದೀತೋ, ನಮ್ಮ ಮಹಾರಾಜರವರಿಗೆ ಇನ್ನೂ ಹೆಚ್ಚಾದ ಅಧಿಕಾರಗಳು ವಹಿಸಲ್ಪಡುವವೋ ಊಹಿಸಿ ಹೇಳುವುದು ಸಾಧ್ಯವಲ್ಲ ಈಗ ವರ್ಗಪತ್ರಿಕೆಯಲ್ಲಿ ಕಂಡುಬರುವುದಕ್ಕಿಂತಲೂ ಇನ್ನುಮುಂದೆ ನಮ್ಮ ಮಹಾರಾಜರವರಿಗೆ ಹೆಚ್ಚಾದ ಸ್ವಾತಂತ್ರ್ಯಗಳು ಲಭ್ಯವಾಗುವುದೋಸೋ ಖಂಡಿತವೆಂದು ತೋರುತ್ತದೆ.

ನಮ್ಮನ್ನು ಪರಿಪಾಲಿಸುವ ದೊರೆಯವರಿಗೆ ವಿಶೇಷತರವಾದ ಸನ್ಮಾನವು ದೊರಕಿದ್ದಕ್ಕಾಗಿ ರಾಜಭಕ್ತಿ ಪೂರಿತರಾದ ನಾವು ಬಹಳವಾಗಿ ಆನಂದಪಡುತ್ತೇವಲ್ಲದೆ ನಮ್ಮ ಮಹಾರಾಜರವರಿಗೆ ದೀರ್ಘಾಯುಸ್ಸುಂಟಾಗಿ ಅವರ ಆಳ್ವಿಕೆಯ ದೆಸೆಯಿಂದ ಈ ಸಂಸ್ಥಾನದಲ್ಲೆಲ್ಲಾ ಧರ್ಮವೂ ಸತ್ಯವೂ ನೀತಿಯೂ ಯಥಾರ್ಥವೂ ಉಕ್ಕುವಂತಾಗಲೆಂದು ಪೂರ್ಣಪೂರ್ವಕವಾಗಿ ಕೋರಿ ನಿರೀಕ್ಷಿಸಿಕೊಂಡು ಇರುವೆವು

ಮದ್ಯಪಾನವನ್ನು ವಿಸರ್ಜಿಸುವದಕ್ಕೆ ಕಾರಣಗಳು

(1) ದೇಹದ ನಷ್ಟ — ಹೆಂಡ, ಸಾರಾಯಿ, ಬ್ರಾಂಡಿ, ಬೀರು, ವೈನ್ ಮುಂತಾದ ಮದದ್ರಾವಕಗಳಲ್ಲಿ ಆಲ್ಕೊಹಾಲ್ ಎಂಬ ವಿಷಪದಾರ್ಥವಿರುತ್ತದೆ ಈ ಆಲ್ಕೊಹಾಲ್ ದೇಹವನ್ನು ಕ್ಷಯಪೀಡಿಸಿ ನಾಶಮಾಡುವದರಲ್ಲಿ ಅತ್ಯಂತ ತೀಕ್ಷ್ಣ ಸ್ವಭಾವವುಳ್ಳದ್ದು. ಆಲ್ಕೊಹಾಲನ್ನು ಒಬ್ಬ ಮನುಷ್ಯನ ದೇಹದ ಮೇಲೆ ಹೊಯಿದರೆ ಅದು ಅವನ ಚರ್ಮವನ್ನು ಬೇಯಿಸಿ ಅದು ದೇಹದ ಮೇಲೆ ಒದ್ದಷ್ಟು ಅಗಲವು ಬೊಬ್ಬೆಯನ್ನೆಬ್ಬಿಸುವದು ಅದನ್ನು ಬಾಯಿಯೊಳಕ್ಕೆ ಹೊಯಿದುಕೊಂಡು ಕೆಲವು ನಿಮಿಷಗಳ ವರೆಗೂ ನುಂಗದೆ ಅದಿನಾ ಬಾಗೆ ಉಗುಳದೆ ಹಾಗೆಯೆ ಇದ್ದರೆ ತೀಕ್ಷ್ಣವಾದ ಉಷ್ಣವು ಉಂಟಾಗಿ ನಾಲಗೆಯ ನರಗಳನ್ನು ಸುಟ್ಟುಬಿಡುವದರಿಂದ ಅಂಥವನ ನಾಲಿಗೆಗೆ ಯಾವ ಪದಾರ್ಥದ ರುಚಿಯೂ ಸಿಕ್ಕುವದೇ ಇಲ್ಲ ಇಂತಹ ಆಲ್ಕೊಹಾಲನ್ನು ಹೊಟ್ಟೆಗೆ ಕುಡಿದರೆ ಏನಾಗುವದೆಂದು ಕೇಳುವಿರೋ ಅದು ಅತಿ ಸೂಕ್ಷ್ಮವಾದ ಒಳಚರ್ಮವನ್ನು ಕ್ರಮೇಣ ತಿಂದು ಸವೆಯಿಸಿಬಿಡುತ್ತದೆ ಅನಂತರ ಹೊಟ್ಟೆಯಲ್ಲಿಯೂ ಕರುಳುಗಳಲ್ಲಿಯೂ ಊರಿ ಹುಟ್ಟಿ ಹುಣ್ಣುಗಳಾಗುವದಕ್ಕೆ ಕಾರಣವಾಗುತ್ತದೆ ಅದು ರಕ್ತಗತವಾದರೆ ರಕ್ತದ ಪರಿಣಾಮವೇನು? ಬಿಳಿ ರಕ್ತದಲ್ಲಿ ಒಂದು ಬಗೆಯ ಬಹು ಸೂಕ್ಷ್ಮವಾದ ಗುಂಡು ವಸ್ತುಗಳಿರುತ್ತವೆ ಅವುಗಳಿಗೆ ಕಾರ್ಪಸಲ್ಸ್ ಎಂದು ಹೇಳುತ್ತಾರೆ ಈ ಅತ್ಯಂತ ಸೂಕ್ಷ್ಮ ವಸ್ತುಗಳ ವಿಚಾರವನ್ನು ಇಲ್ಲಿ ಮಾಡುವದು ಅಸಾಧ್ಯ ಆದರೆ ಆ ಸೂಕ್ಷ್ಮ ವಸ್ತುಗಳು ರಕ್ತದಲ್ಲಿದ್ದುಕೊಂಡಿರುವದು ನಮಗೆ ಬಹು ಪ್ರಯೋಜನವಾಗಿದೆ ಹ್ಯಾಗೆಂದರೆ ಅವು ಯಾವ ರೋಗವಾದರೂ ದೇಹದೊಳಕ್ಕೆ ಪ್ರವೇಶಮಾಡದ ಹಾಗೆ ದಂಡಿನ ಸಿಪಾಯಿಗಳಂತೆ ಕಾವಲಿರುವದು ಅವುಗಳ ಕೆಲಸ ಜ್ವರ, ಕಮ್ಮು, ಪ್ಲೇಗ್, ಕಾಲರಾ ಮುಂತಾದ ಯಾವದಾದರೂ ಒಂದು ರೋಗದಲ್ಲಿ ಸೋಂಕು ದೇಹವನ್ನು ಪ್ರವೇಶಿಸಿ ಹಿಡಿಯಿತೆಂದರೆ ಕಾರ್ಪಸಲ್ಸ್ ಎಂಬ ರಕ್ತದ ಸೂಕ್ಷ್ಮ ವಸ್ತುಗಳಿಗೂ ಆ ರೋಗದ ಸೋಂಕಿಗೂ ಯುದ್ಧವು ಹತ್ತುವದು ಕಾರ್ಪಸಲ್ಸ್ ಸೂಕ್ಷ್ಮ ವಸ್ತುಗಳು ರಕ್ತದಲ್ಲಿ ಬಲವಾಗಿಯೂ ಹೆಚ್ಚಾಗಿಯೂ ಇದ್ದರೆ ಆ ರೋಗದ ಸೋಂಕನ್ನು ಗದ್ದು ದೇಹದ ಆಚೆಗೆ ಅದನ್ನು ಹೊರಡಿಸಿಬಿಡುವವು ಆಲ್ಕೊಹಾಲು ಎಂಬ ವಿಷಪದಾರ್ಥವು ರಕ್ತಗತವಾದ ಕೂಡಲೆ ಸೂಕ್ಷ್ಮ ವಸ್ತುಗಳಾದ ಉಪಯೋಗಕರಗಳಾದ ಕಾರ್ಪಸಲ್ಸ್ ಎಂಬ ರಕ್ತದ ಅಣುಗಳನ್ನು ಹಿಡಿದು ಕಟುಕರವನು ಮಾಂಸದ ಮುದ್ದನ್ನು ಕಾಡುಕತ್ತಿಯಿಂದ ಕೊಚ್ಚಿ ಕೊಚ್ಚಿ ಪುಡಿಪುಡಿಮಾಡುವಷ್ಟೆಂದ ಮಾಡಿ ಸಿಂಗರಿಸುತ್ತದೆ ಯಾವದಾದರು ಕೆಲವು ಕಾರ್ಪಸಲ್ಸ್ ಇದರ ಪೆಟ್ಟನ್ನು ತಪ್ಪಿಸಿಕೊಂಡರೆ ಅವು ದೇಹಕ್ಕೆ ಏನೂ ಸಹಾಯ ಮಾಡಲಾರದಷ್ಟು ದುರ್ಬಲವಾಗುತ್ತವೆ ಹೀಗಾಗಿ ಆಲ್ಕೊಹಾಲು ಕಡೆಕಡೆಗೆ ದೇಹದ ರಕ್ತ ಮಾಂಸಗಳನ್ನು ತಿಂದು ದೇಹವನ್ನು ಬತ್ತುವ ಹಾಗೆ ಮಾಡಿ ಒಣಗಿಸಿಬಿಡುತ್ತದೆ

(2) ಮೆದುಳಿಗೂ ನರಗಳಿಗೂ ಪ್ರಾಪ್ತಿಸುವ ನಷ್ಟ — ದೇಹದ ಕೈಕಾಲು ಮುಂತಾದ ಯಾವದಾದರೂ ಒಂದು ಅವಯವವು ಒಂದೊಂದು ವೇಳೆ ಮುರಿದುಹೋಗುವದುಂಟು ಅಥವಾ ಕೆಲವು ಸರ್ತಿ ದೇಹದಲ್ಲಿ ಕೆಟ್ಟ ಹುಣ್ಣುಗಳು ಏಳುವದುಂಟು ಇಂಥಾ ಸಂದರ್ಭಗಳಲ್ಲಿ ವೈದ್ಯರು ಅಂಥಾ ರೋಗಿಯನ್ನು ಗುಣಮಾಡುವದಕ್ಕೆ ಶಸ್ತ್ರಗಳನ್ನು ಪ್ರಯೋಗಿಸಬೇಕಾಗಿ ಬರುವುದು. ಶಸ್ತ್ರಪ್ರಯೋಗದ ಭಯವನ್ನೂ ನೋವನ್ನೂ ರೋಗಿಯು ಸಾಧಾರಣ ಸ್ಥಿತಿಯಲ್ಲಿ ತಡೆಯಲಾರನು ಆದುದರಿಂದ ವೈದ್ಯರು ಕೆಲವು ಸರ್ತಿ ಶಸ್ತ್ರಪ್ರಯೋಗವು ಮುಗಿಯುವ ವರಿವೆಗೂ ರೋಗಿಗೆ ಪ್ರಜ್ಞೆ ತಪ್ಪಿಸಿ ಮೈಮರೆಸುವ ಔಷಧವನ್ನು ಮೂಸಿಸುತ್ತಾರೆ. ಆಗ ದೇಹದ ಒಂದು ಅಂಗವನ್ನು ಕೊಯಿದುಹಾಕಿದರೂ ಅದು ರೋಗಿಗೆ ಗೊತ್ತಾಗುವದಿಲ್ಲ ಪ್ರಜ್ಞೆ ತಪ್ಪಿಸುವ ಆ ಔಷಧವನ್ನು ಆಲ್ಕೊಹಾಲೆಂಬ ಮದದ್ರಾವಕದಿಂದಲೇ ಮಾಡುತ್ತಾರೆ ಹೀಗಿರುವಲ್ಲಿ ಆಲ್ಕೊಹಾಲು ಬೆರೆತಿರುವ ಹೆಂಡ, ಸಾರಾಯಿ, ಬ್ರಾಂಡಿ ಮುಂತಾದವುಗಳನ್ನು ಕುಡಿಯಬಾರದೆಂದು ಹೇಳುವದು ಅಗತ್ಯವೇ? ಚೆನ್ನಾಗಿ ಕುಡಿದು ಮತ್ತೇರಿದವನು ಪ್ರಜ್ಞೆ ತಪ್ಪಿಸುವ ಔಷಧವನ್ನು ಮೂಸಿದವನ ಹಾಗೆಯೇ ಮೈಮರೆತಿರುತ್ತಾನೆ. ಅವನನ್ನು ಒದ್ದರೂ ಕಡಿದರೂ ಸಹಾಯಹೀನನಾಗಿ ಮರದ ಮೊದ್ದಿನಂತೆ ಬಿದ್ದಿರುತ್ತಾನೆ ಯಾಕೆಂದರೆ ಅವನ ನರಗಳ ಸ್ಥಿತಿಯು ನಿತ್ರಾಣವಾಗಿರುತ್ತದೆ ನರಗಳ ಗತಿ ಹೀಗಾದಲ್ಲಿ ಮೆದುಳಿನ ಪಾಡೇನು? ಆಲ್ಕೊಹಾಲಿನಿಂದ ದೇಹದ ಯಾವ ಭಾಗಕ್ಕೆ ಆಗುವ ಕೇಡಿಗಿಂತಲೂ ಮೆದುಳಿಗೆ ಹೆಚ್ಚು ಹಾನಿಯುಂಟಾಗಿ ಕುಡಿಯುವ ದುರಭ್ಯಾಸದಲ್ಲಿ ಪಳಗಿದವನ ಮೆದಳು ಉಪ್ಪಿನಕಾಯಿಯ ಹಾಗೆ ಅಳಿದು ಜೀರ್ಣವಾಗಿರುತ್ತೆ ಅವನ ಬುದ್ಧಿ ಭ್ರಷ್ಟವಾಗಿ ಅವನ ಕೈಗಳು ನಡುಗುತ್ತವೆ ಅವನ ರಕ್ತಚಲನೆಯು ತಟಸ್ಥವಾಗಿ ಅವನ ಮೂಗು ಕೆಂಪೇರಿರುತ್ತದೆ ಅವನ ರಕ್ತನಾಳಗಳು ಸಡಿಲವಾಗಿ ಹಿಗ್ಗಿ ಅಗಲವಾಗಿರುತ್ತವೆ ಅವನ ಮಾತುಗಳು ಅರ್ಥರಹಿತವಾದ ಬುದ್ಧಿ ಇಲ್ಲದ ತೊದಲು ಅವನು ಎದ್ದು ನಡೆಯುವದಕ್ಕೆ ಪ್ರಯತ್ನಿಸಿದರೆ ತಟ್ಟಾಡಿ ಬೀಳುತ್ತಾನೆ ಮಾದಕದ ಅಮಲು ಅವನನ್ನು ಕೆಡವುತ್ತದೆ ಹಳ್ಳದೊಳಕ್ಕೊ? ಗುಂಡಿಗೊ? ಚರಂಡಿಗೋ? ಬಂಡೆಯ ಮೇಲೆಯೋ? ಎಲ್ಲಿ ಬೀಳುತ್ತಾನೋ ಅವನಿಗೆ ತಿಳಿಯದು.

ಹೀಗೆ ಕೆಲವು ಕಾಲ ಸಂದವಿಸುವದರೊಳಗಾಗಿ ಪ್ರಾಣಾಂತಕವು ಸಮೀಪಿಸುತ್ತದೆ

ಮನುಷ್ಯನಿಗೆ ಸಹಜವಾಗಿ ಪ್ರಾಪ್ತಿಸತಕ್ಕ ಸ್ಥಿತಿ ಇದೆಯೋ? ಮರ್ತ್ಯಲೋಕದಲ್ಲಿ ಮನುಷ್ಯನ ದೇಹಕ್ಕಿಂತ ಸುಂದರವಾದ ನಿರ್ಮಾಣವಾವುದು? ಈ ದೇಹವನ್ನು ಪ್ರಕೃತ ಸ್ಥಿತಿಗೆ ಹುಟ್ಟಿಸುವದಕ್ಕೆ ಅನೇಕ ಸಾವಿರ ವರುಷಗಳು ಹಿಡಿಯಿತೆಂದು ಶಾಸ್ತ್ರಜ್ಞರು ಸಿದ್ಧಾಂತಮಾಡಿದ್ದಾರೆ ನಾವು ಅಮೂಲ್ಯವಾದ ಒಡವೆಗಳನ್ನು ಜತನವಾಗಿ ಕಾಪಾಡುವದಕ್ಕೆ ರಮಣೀಯವಾಗಿಯೂ ಬಲವಾಗಿಯೂ ನಾಜೂಕಾಗಿಯೂ ಇರುವ ಸಂದೂಕುಗಳನ್ನು ಮಾಡಿಸುತ್ತೇವಷ್ಟೆ ದೇವರು ಈ ಲೋಕಕ್ಕೆ ತನ್ನ ಜೀವ ತನ್ನ ಬುದ್ಧಿ, ತನ್ನ ಮನಸ್ಸು, ತನ್ನ ಆತ್ಮವನ್ನು ಕಳುಹಿಸಿಕೊಟ್ಟಿರುವದು ಆತನ ದಯಾಳು ಬುದ್ಧಿಗೆ ಒಳ್ಳೇದಾಗಿ ತೋರಿತು ಜೀವ, ಬುದ್ಧಿ, ಆತ್ಮ, ಮನಸ್ಸು, ಇವುಗಳಿಗಿಂತ ಅಮೂಲ್ಯವಾದ ಒಡವೆಗಳು ಇನ್ನು ಯಾವುವೂ ಇಲ್ಲವಷ್ಟೆ ಅತ್ಯಮೂಲ್ಯವಾದ ತನ್ನ ಈ ಒಡವೆಗಳನ್ನು ಇಟ್ಟು ಕಾಪಾಡುವ ಉದ್ದಿಶ್ಯ ದೇಹವೆಂಬ ಈ ಸಂದೂಕವನ್ನು ಆತನು ನಿರ್ಮಾಣ ಮಾಡಿದನು ಈ ಸಂದೂಕವನ್ನೂ ಅದರೊಳಗಿರುವ ಪವಿತ್ರವಾದ ದೇವರ ಒಡವೆಗಳನ್ನೂ ಮದದ್ರಾವಕದ ಅಮಲಿನಿಂದ ಕೆಡಿಸುವದಕ್ಕೆ ಧೈರ್ಯಪಡುವವನು ಸೃಷ್ಟಿಗೀಶನಾದ ದೇವರ ವಿರೋಧಿಯಾಗಿದ್ದಾನೆ

ವಾಚಕರೇ ಇಂತಹ ಅಪರಾಧವನ್ನು ಯಾರಾದರೂ ತಮ್ಮ ತಲೆಯ ಮೇಲೆ ಹೊತ್ತುಕೊಂಡು ಸಮಾಧಾನವಾಗಿ ಬಾಳಬಹುದೇ? ಒಬ್ಬನು ತನ್ನ ಉಡಿಯಲ್ಲಿ ಬೆಂಕಿ ಕೆಂಡಗಳನ್ನು ತುಂಬಿಕೊಂಡು ತನ್ನ ವಸ್ತ್ರಗಳು ಸುಟ್ಟುಹೋಗದಂತೆ ಕಾಪಾಡಿಕೊಳ್ಳುವದು ಸಾಧ್ಯವೇ? ಒಬ್ಬನು ತನ್ನ ದೇಹದೊಳಕ್ಕೆ ಉರಿಯುವ ವಿಷವನ್ನು ಕುಡಿದು ಬದುಕುವದು ಸಾಧ್ಯವೋ?

ಒಳದೇಶದ ವೃತ್ತಾಂತಗಳು

ಕಳೆದ ವಾರ ಬೆಂಗಳೂರಿನಲ್ಲಿ ಪೋಲೀಸಿನವರು ಇಬ್ಬರು ಬಂಗಾಳಿಗಳನ್ನು ಹಿಡಿದು ಇಟ್ಟು ಕೊಂಡಿದಾರೆ

* * *

ಖಾರಾಪುರದ ಕೆಡ್ಡಾದಲ್ಲಿ ಮೂರು ಹಿಂಡುಗಳ ಆನೆಗಳು ಸಿಕ್ಕಿ ವೈಸ್‌ರಾಯವರಿಗೆ ಅವುಗಳನ್ನು ತೋರಿಸಿದ್ದಾಯಿತು ಎಲ್ಲಾ ಒಟ್ಟು 128 ಆನೆಗಳಿವೆ ಎಂದು ಗೊತ್ತಾಗುವುದು

* * *

ಕಳೆದ ರವಿವಾರ ಬೆಳಿಗ್ಗೆ ವೈಸ್‌ರಾಯರವರು ರಾಜಧಾನಿಯ ಸಬರ್ಬಿನಲ್ಲಿರುವ ಶಿಕಾರಿದಾರರಾದ ಮಿ|| ಥಿಯೋಬಾಲ್ಡ್‌ರವರ ಬಂಗಲೆಗೆ ದಯಮಾಡಿ ಅಲ್ಲಿ ಶೇಖರಿಸಲ್ಪಟ್ಟಿದ್ದ ಶಿಕಾರಿ ವಸ್ತುಗಳನ್ನೆಲ್ಲಾ ಪರಾಂಬರಿಸಿ ಸಂತೋಷಪಟ್ಟು ಕೊಂಡು ಬಂದರು.

* * *

ಮದರಾಸ್ ಗವರ್ನ್‌ಮೆಂಟಿನಲ್ಲಿ ಪ್ರಾಚೀನ ಲಿಖ್ಯನ್ವೇಷಣದ ಇಲಾಖಾ ಸೂಪರಿಂಟೆಂಡೆಂಟರಾಗಿದ್ದು ಪೆನ್‌ಷನ್ ಪಡೆದಿರುವ ಮಿ|| ಎ. ರೀ ಸಾಹೇಬರು

ಷ್ಟು ನಮ್ಮ ಸರ್ಕಾರದವರು ಇಲ್ಲಿನ ಅದೇ ಇಲಾಖೆಯ ಕೆಲಸಕ್ಕೆ ಕರಸಿ ನೇಮಿಸಿಕೊಳ್ಳುತ್ತಾರೆಂದು ಕೇಳುತ್ತೇವೆ

***

ಸೀಯರ್ದಲ್ಲಿ ಕೋಟೆ ಹಿಂಭಾಗದ ಕಬ್ಬಿನ ಗದ್ದೆಯಲ್ಲೂ, ಜಂಗಲಿನಲ್ಲೂ ಸೇರಿಕೊಂಡು ಕತ್ತೆಗಳನ್ನು ಕೊಂದುಹಾಕಿದ್ದ ಒಂದು ಚಿರತೆಯನ್ನು ಅಲ್ಲಿನ ಶಾನುಭೋಗರಾದ ಮ|| ಕೆ ಅಬ್ದುಲ್ ಅಜಿಸ್‌ರವರು ಕಳೆದ ಶನಿವಾರ ಸಾಯಂಕಾಲ ಬಂದೂಕಿನಿಂದ ಹೊಡೆದು ಶಿಕಾರಿಮಾಡಿದರೆಂದು ತಿಳಿಯುತ್ತೇವೆ

***

ಬರುವ ಮಂಗಳವಾರ ಬೆಳಿಗ್ಗೆ ವೈಸ್‌ರಾಯರವರು ರಾಜಧಾನಿಯ ಜನರಲ್ ಆಸ್ಪತ್ರೆಯ ಎದುರಿಗಿರುವ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟೆಂಬ ಕೈಗಾರಿಕೆಯ ಪಾಠಶಾಲೆಗೆ ದಯಮಾಡಿ ಪರಾಂಬರಿಸಿಕೊಂಡು, ಅಲ್ಲಿಂದ ಮಹಾರಾಣಿಯವರ ಕಾಲೇಜಿಗೆ 10 ಗಂಟೆಗೆ ಚಿತ್ತೈಸಿ ಬಾಲಕಿಯರಿಗೆ ಬಹುಮಾನಗಳನ್ನು ಪ್ರಯೋಗಮಾಡುತ್ತಾರೆ

***

ಬೆಂಗಳೂರು ಸಿಟಿ ಅರಳೆಪೇಟೆಯಲ್ಲಿ ರೇವಮ್ಮನೆಂಬ 26 ವರುಷದ ಹೆಂಗಸು ಹಾವು ಕಚ್ಚಿದ್ದರಿಂದ ಕಾಯಿಲೆಯಾಗಿ ತೀರಿಹೋದಳು ಕೂಡಲೇ ಆಕೆಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿ ಚಿಕಿತ್ಸೆ ಮಾಡಿಸಿದ್ದರೆ ಆಕೆ ಬದುಕಿಕೊಳ್ಳಬಹುದಾಗಿತ್ತು ಈ ಭಾಗದಲ್ಲಿ ಸರ್ಕಾರದವರು ಸೌಲಭ್ಯವನ್ನು ಕಲ್ಪಿಸಿದ್ದರೂ ಆಕೆಗೆ ಆಕೆಯ ಸಂಬಂಧಿಗಳಿಂದ ಅದು ದೊರಕದೆಹೋಯಿತೆಂದು ವಿಷಾದಿಸಬೇಕಾಗಿದೆ

***

ನಮ್ಮ ಬಾತ್ಮಿದಾರರಿಂದ —ತೀರ್ಥಹಳ್ಳಿಗೆ ಸುಮಾರು 8 ಮೈಲಿ ದೂರದಲ್ಲಿರುವ ಹೆಗ್ಗೋಡು ಎಂಬ ನಾಮಧಾರಿ ಗೌಡರುಗಳ ಗ್ರಾಮಕ್ಕೆ ಬೆಂಕಿಬಿದ್ದು ಎರಡು ಮನೆಗಳ ಹೊರತಾಗಿ ಊರೆಲ್ಲಾ ಸುಟ್ಟು ಬೂದಿಯಾಯಿತೆಂದು ತಿಳಿಸಲು ಬಹು ದುಃಖವಾಗುತ್ತದೆ ಆದರೆ ಪ್ರಾಣನಷ್ಟವಾಗಲಿಲ್ಲ ಬಡಜನರು ಎಲ್ಲವನ್ನೂ ಕಳೆದುಕೊಂಡು ತಿನ್ನುವುದಕ್ಕೆ ಸಹ ಮಾರ್ಗವಿಲ್ಲದೆ ಕಷ್ಟಪಡುತ್ತಿದ್ದಾರೆ ಇವರಿಗೆ ಈಗ ಎಲ್ಲಾ ಭಾಗದಲ್ಲೂ ಸರ್ಕಾರದವರ ಸಹಾಯ ತುಂಬಾ ಅವಶ್ಯವಾಗಿದೆ

***

ಗ್ವಾಲಿಯರ್ ಮಹಾರಾಜರವರು ಮೊನ್ನೆ ಮಂಗಳವಾರ ಬೆಳಿಗ್ಗೆ ರೈಲಿನಲ್ಲಿ ರಾಜಧಾನಿಗೆ ದಯಮಾಡಿದರು ಅರಸುಗಳೂ ಅರಮನೆಯ ಅಧಿಕಾರಿಗಳೂ ಪುರಪ್ರಮುಖರೂ ಸ್ಟೇಷನ್ನಿನಲ್ಲಿ ಕಾದಿದ್ದು ಹಾರ ತುರಾಯಿಗಳನ್ನು ಒಪ್ಪಿಸಿ ಅವರಿಗೆ ಸುಸ್ವಾಗತವನ್ನು ಬಯಸಿದರು ಗೌರವಾರ್ಥವಾದ 19 ತೋಪುಗಳು ಹಾರಿಸಲ್ಪಟ್ಟವು ಮಹಾರಾಜರವರು ಸರ್ದಾರ್ ಚಾವಸ್ವಾಜಿ ಅರಸಿನವರ ಜೊತೆಯಲ್ಲಿ ಮೋಟಾರ್ ಗಾಡಿಗಳಲ್ಲಿ ಪರಿವಾರ ಸಮೇತ ನೆಟ್ಟಗೆ ಕೆಡ್ಡಾ ಕ್ಯಾಂಪಿಗೆ ಪ್ರಯಾಣಮಾಡಿದರು

***

ಕಳೆದ ಭಾನುವಾರ ಮಧ್ಯಾಹ್ನ ವೈಸ್‌ರಾಯ್ ದಂಪತಿಗಳು ನಮ್ಮ ಮಹಾರಾಜರು ಯುವರಾಜರುಗಳೊಡನೆ ಮೋಟಾರುಗಳಲ್ಲಿ ರಾಜಧಾನಿಯಿಂದ ಕಾರಾಪುರ ಕೆಡ್ಡಾ ಕ್ಯಾಂಪಿಗೆ ತೆರಳಿದರು ಬಿಳ್ಳಿಹಳ್ಳಿ ಉಕ್ಕಡದ ಆಚೆ ಪಂಚಮರು ಒಂದು ದಿವ್ಯವಾದ ಹಸುರುವಾಣಿ ಚಪ್ಪರವನ್ನು ಹಾಕಿ ಫಲಪುಷ್ಪಾದಿಗಳನ್ನು ಹಿಡಿದು ಕಾದಿದ್ದರು ಪಂಚಮ ಬೋರ್ಡಿಂಗ್ ಸ್ಕೂಲಿನ ಹುಡುಗರೂ, ಪಂಚಮರು ಹೆಣ್ಣು ಮಕ್ಕಳೂ ಹೇರಳವಾಗಿ ಸೇರಿ ವೈಸ್‌ರಾಯ್ ದಂಪತಿಗಳು ಅಲ್ಲಿಗೆ ದಯಮಾಡಿದಾಗ ವಂದನಾ ಗೀತಗಳನ್ನು ಹಾಡಿ ಫಲಪುಷ್ಪಾದಿಗಳನ್ನು ಒಪ್ಪಿಸಿದರು ವೈಸ್‌ರಾಯರವರು ಬಹು ಸಂತೋಷದಿಂದಲೂ ಆದರದಿಂದಲೂ ಸ್ವೀಕರಿಸಿ ಅವರನ್ನು ವಂದಿಸಿ ಪ್ರಯಾಣಮಾಡಿದರು

***

ವೈಸ್‌ರಾಯರವರು ಫಾರಿನ್ ಸೆಕ್ರೆಟರಿಯವರ ಜೊತೆಯಲ್ಲಿ ಕಳೆದ ಶುಕ್ರವಾರ ರಾತ್ರಿ ಗವರ್ನ್‌ಮೆಂಟ್ ಹೌಸಿನಿಂದ ನಡೆದುಕೊಂಡು ಹೊರಗೆ ದಯಮಾಡಿ ಸ್ವಲ್ಪ ಹೊತ್ತಾದ ಮೇಲೆ ಹಿಂದಿರುಗಿ ಬಂಗಲೆಗೆ ಹೋಗುವಲ್ಲಿ ಹೊರಗಡೆ ಅವರ ಬಾಗಿಲಲ್ಲಿ ಕಾವಲಿದ್ದ ಪೋಲೀಸಿನವರು ಪಾಸ್ ಚೀಟಿಯನ್ನು ತೋರಿಸದ್ದರಿಂದ ಒಳಕ್ಕೆ ಬಿಡುವುದಿಲ್ಲವೆಂದು ತಡೆದುಬಿಟ್ಟರು ಅವರಿಬ್ಬರೂ ಒಳಕ್ಕೆ ಹೋಗಬೇಕೆಂದು ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗದೆ ಹೋಯಿತೆಂದೂ, ಕಡೆಗೆ ಅವರು ಒಳಗಿದ್ದ ಡೆಪ್ಯುಟಿ ಪೋಲೀಸ್ ಅಧಿಕಾರಿಗೆ ಸಮಾಚಾರ ಕೊಟ್ಟು ಕರೆಸಿಕೊಂಡಾಗ ವೈಸ್‌ರಾಯರೆಂಬುದು ಗೊತ್ತಾಗಿ ಅವರಿಬ್ಬರನ್ನೂ ಕ್ಷಮಾಪಣೆ ಬೇಡಿ ಒಳಕ್ಕೆ ಬಿಟ್ಟರೆಂದೂ, ವೈಸ್‌ರಾಯರವರು ಪೋಲೀಸ್ ಬಂದೋಬಸ್ತಿನ ಕ್ರಮವನ್ನು ಮೆಚ್ಚಿಕೊಂಡು ಮರುದಿನ ಇನ್ಸ್‌ಪೆಕ್ಟರ್ ಜನರಲ್‌ರವರನ್ನು ಮುಖತಃ ವಂದಿಸಿದರೆಂದೂ ಕೇಳುತ್ತೇವೆ

***

ರಾಜಧಾನಿಯ ಖಾಸಾ ಬಂಗಲೆಯಲ್ಲಿ ಮೊನ್ನೆ ಮಂಗಳವಾರ ಬೆಳಿಗ್ಗೆ ಸುಮಾರು 9 ಗಂಟೆಗೆ ರಾಜ್ ಎರಡನೇ ಮಹಾರಾಜ ಕುಮಾರ್ತೆಯವರ ಎರಡನೇ ಹೆಣ್ಣುಮಗಳು ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ ಈಕೆಗೆ ಸುಮಾರು 18 ವರುಷವಾಗಿದ್ದು ಕೆಲವು ಕಾಲದಿಂದ ಕಾಯಿಲೆಯಾಗಿ ಚಿಕಿತ್ಸೆ ಮಾಡಿದರೂ ಗುಣವಾಗದೆ ಹೋಯಿತು ಈ ದುಃಖಸಮಾಚಾರವು ತಂತಿಯ ಮೂಲಕ ತಿಳಿದ ಒಡನೆಯೇ ಮಹಾಮಾತೃಶ್ರೀಯವರು ಕೆಡ್ಡಾ ಕ್ಯಾಂಪಿನಿಂದ ಮೋಟಾರಿನಲ್ಲಿ ದಯಮಾಡಿದರು ಅರಮನೆಯ ಸಮಸ್ತ ಮರ್ಯಾದೆಗಳ ಸಮೇತ ಶವವನ್ನು ಮೆರವಣಿಗೆಯಲ್ಲಿ ಸಾಗಿಸಿ ಸಾಯಂಕಾಲ 5 ಗಂಟೆ ಹೊತ್ತಿಗೆ ದಹನ ಮಾಡಿದರು ಶ್ರೀಯುತ ಕರ್ನಲ್ ಡಿ ದೇವರಾಜ ಅರಸಿನವರೂ, ರಾಜಧಾನಿಯ ಲ್ಲಿನ ಸಮಸ್ತ ಅರಸುಗಳೂ ಅರಮನೆಯ ಅಧಿಕಾರಿಗಳೂ ಶವದ ಕೂಡ ಹೋಗಿದ್ದರು ಸಾವಿರಾರು ಪ್ರಜೆಗಳು ಕೇರಿ ಏರಿಯ ಉದ್ದಕ್ಕೂ ನಿಂತು ಸಂತಾಪ ಪಟ್ಟರು ಎರಡನೇ ಮಹಾರಾಜ ಕುಮಾರ್ತೆಯವರ ಮೂರು ಮಂದಿ ಹೆಣ್ಣು ಮಕ್ಕಳೂ ಈ ರೀತಿ ಚಿಕ್ಕವಯಸ್ಸಿನಲ್ಲಿ ತೀರಿಹೋದದ್ದಕ್ಕಾಗಿ ರಾಜವಂಶದವರಿಗೆಲ್ಲಾ ವಿಷಾದ ಉಂಟಾಯಿತಲ್ಲಾ ಎಂದು ಸಂತಾಪಪಡುತ್ತೇವೆ

ತಾಲ್ಲೋಕು ವರ್ತಮಾನಗಳು.

ಕಾವೇರಿ ರಿಜರ್ವಾಯರ್ —ಇಲ್ಲಿ ಹವ ತಕ್ಕಮಟ್ಟಿಗೆ ಚನ್ನಾಗಿದೆ ಧಾರಣೆ ಗಳೂ ತುಂಬಾ ಪ್ರಿಯವಾಗಿರುತ್ತದೆ —ನಮ್ಮ ಘನವನ್ನು ಹೊಂದಿದ ವೈಸ್ರಾಯರವರ ಸವಾರಿಯು ಇಲ್ಲಿಗೆ ಈ ಮಾಹೆ 18 ಕ್ಕೆ ದಯಮಾಡಿಸುವದರಿಂದ ಕೆಲಸ ಮುಂತಾದ್ದು ಬಹಳ ಚುರುಕಾಗಿ ನಡೆಯುತ್ತದೆ —ಇಲ್ಲಿಯ ಪೋಸ್ಟು ಮಾಸ್ಟರ್ ಮ|| ಸುಂದರೇಶಯ್ಯರವರು ಬಂದ ಲಾಗಾಯ್ತು ಜನಗಳಿಗೆ ತುಂಬಾ ಅನುಕೂಲವಾಗಿದೆ ಸಾಹುಕಾರ್ ಬ್ಯಾಂಕಿಗೆ ಇನ್ನೊಬ್ಬ ಪೋಸ್ಟುಮೆನ್ ಕೊಡದಿರುವದು ಬಹಳ ಅನನುಕೂಲವಾಗಿದೆ

ಕೊಳ್ಳೇಗಾಲ —ಕಳೆದ ಅಕ್ಟೋಬರ್ ತಾ 27 ನೇ ಸೋಮವಾರ ರಾತ್ರಿ ಇಲ್ಲಿನ ಮಿಷನ್ ಗರ್ಲ್ಸ್ ಹೋಮಿನಲ್ಲಿ ಯಾರೊ ಚೋರರು ಅಲ್ಲಿರುವ ದೊರೆಸಾನಿಗಳ ಬಂಗಲೆಗೆ ಬಹು ಸಮೀಪವಾಗಿರುವ ಕೋಳಿಯ ಮನೆಯ ಬೀಗವನ್ನು ಒಡೆದು ಒಳಗಿದ್ದ 13 ಭಾರಿ ಸೀಮೆ ಕೋಳಿಗಳನ್ನು ಕದ್ದುಕೊಂಡು ಹೋದರು ಪೋಲೀಸಿಗೆ ರಿಪೋರ್ಟ್ ಮಾಡಲಾಗಿ ಸಬ್ ಇನ್ಸ್‌ಪೆಕ್ಟರು ಬಂದುನೋಡಿ ತನಿಖೆ ಮಾಡುವದಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಿದಾರೆ ಹೀಗೆಯೇ ಎರಡಾವರ್ತಿ ನಡೆದಿದೆ —ತಾ 28 ನೇ ಮಂಗಳವಾರ ಟಿ ನರಸೀಪುರದ ತಾಲೋಕು ಕಲಿಯೂರು ಗ್ರಾಮದಲ್ಲಿ 12 ವರುಷದ ಒಬ್ಬ ಅಕ್ಕಸಾಲಿಗರ ಹುಡುಗನು ಮಣಸಿಪಟಾಸನ್ನು ಕಟ್ಟಿ ಒಂದು ಕಾಫಿಟಿನ್ನಿನೊಳಗೆ ತುಂಬುತ್ತಿದ್ದನು ಕಡೇ ಪಟಾಸನ್ನು ಕಟ್ಟಿಮುಗಿಸುವಷ್ಟರಲ್ಲಿಯೇ ಬಿಸಿಲಿನ ಧಗೆಗೆ ಹೋಗಿ ಹೊರಟಿತು ಹತ್ತಿಕೊಂಡಿತಲ್ಲಾ ಎಂಬ ಭೀತಿಯಿಂದ ಎದುರಲ್ಲಿದ್ದ ಟಿನ್ನಿನೊಳಗೆ ಹಾಕಿಬಿಟ್ಟನು ತಕ್ಷಣವೇ ಎಲ್ಲಾ ಪಟಾಸುಗಳೂ ಒಂದಾಗಿ ಸಿಡಿದು ಹುಡುಗನ ಎರಡು ಹಸ್ತಗಳನ್ನೂ ಸಂಪೂರ್ಣವಾಗಿ ಕೊಚ್ಚಿಕೊಂಡು ಹೋದದ್ದಲ್ಲದೆ, ಹೊಟ್ಟೆಗೂ ತಾಗಿ ಕರುಳು ಈಚೆಗೆ ಬಂದು ಮೂರ್ಛಿತನಾಗಿ ಬಿದ್ದುಬಿಟ್ಟನು ತಕ್ಷಣವೇ ಕೊಳ್ಳೇಗಾಲದ ಆಸ್ಪತ್ರೆಗೆ ಅವನನ್ನು ತಕ್ಕೊಂಡುಹೋದರು ಡಾಕ್ಟರ್ ಟಿರಿಯನ್‌ರವರು ಬಹು ಮುತುವರ್ಜಿಯಿಂದ ಚಿಕಿತ್ಸೆ ಮಾಡುತ್ತಲಿದಾರೆ ಈಗ ಹುಡುಗನಿಗೆ ಬುದ್ಧಿಸ್ವಾಧೀನವೇ ಇಲ್ಲ ಮೈಸೂರು ಸರ್ಕಾರದವರಾದರೂ, ಈ ಘನ ಸರ್ಕಾರದವರಾದರೂ ತಮ್ಮ ತಮ್ಮ ಮೇರೆಗಳಲ್ಲಿ ಇರುವ ಅಂಗಡಿಗಳಲ್ಲಿ ಮದ್ದು ಮಾರದಿರುವದಕ್ಕೂ, ಯಾರೂ ಅದನ್ನು ಕೊಂಡುಕೊಳ್ಳದ ಹಾಗೂ ಕಠಿಣವಾದ ಬಂದೋಬಸ್ತು ಮಾಡಿದರೆ ಹಬ್ಬಕಾಲದಲ್ಲಿ ಆಗುವ ದುಃಖವು ನಿಂತು ಸಂತೋಷ ಉಂಟಾದೀತು

ದೊಡ್ಡಬಳ್ಳಾಪುರ —ಕಳೆದ ಬುಧವಾರ ಮಧ್ಯಾಹ್ನ ಈ ಊರಲ್ಲಿರುವ ಜವಳಿ ಅಂಗಡಿ ರಂಗಣ್ಣನವರ ಮಗ ಸುಮಾರು 14 ವರ್ಷದ ಸುಬ್ರಾಯನೆಂಬ ಹುಡುಗನು ಅಕಸ್ಮಾತ್ ಭವಾನಿ ಬಾವಿಯಲ್ಲಿ ಬಿದ್ದುಕೊಂಡನು ಅಷ್ಟರೊಳಗೆ ಆ ಮಾರ್ಗವಾಗಿ ಬರುತ್ತಿದ್ದ ಮರಾಟೆ ರಾನೋಜಿ ಎಂಬಾತನು ಇದನ್ನು ತಿಳಿದು ತಕ್ಷಣವೇ ತನ್ನ ಉಡುಪಿನೊಂದಿಗೆ ಸದರಿ ಭಾವಿಯೊಳಕ್ಕೆ ಧುಮುಕಿ ತರಕೆಟ್ಟು ಸತ್ತುಹೋಗುತ್ತಿದ್ದ ಮೇಲ್ಕಂಡ ಹುಡುಗನನ್ನು ಎತ್ತಿ ಸಬ್ಬಿಕೊಂಡು ನಿಲವು ಈಜಿನಿಂದ ಮೇಲಕ್ಕೆ ಬರುವಷ್ಟರಲ್ಲೇ ಹೊಟ್ಟೆ ಅಮುಕಿ ನೀರುಹೊರಡಿಸಿ ಧಡಕ್ಕೆ ಹಾಕಿ ನೀರೆಲ್ಲಾ ಹೊರಡಿಸಿದನು ಆಮೇಲೆ ಡಾಕ್ಟರು ಬಂದು ತಕ್ಕ ಇಲಾಜುಮಾಡಿದರು ಈಗ ಹುಡುಗನು ಆರೋಗ್ಯವಾಗಿದಾನೆ ಈ ರಾನೋಜಿರಾವ್ ಮಾಡಿದ ಕೃತ್ಯ ಬಹು ಸ್ತೋತ್ರಾರ್ಹವಾದದ್ದು. ಮತ್ತು ಹುಡುಗನ ತಂದೆತಾಯಿಗಳು ತಮ್ಮ ಯೋಗ್ಯತಾನುಸಾರವಾಗಿ ಆತನಿಗೆ ಸನ್ಮಾನಮಾಡಿದರು —ಈ ಊರಲ್ಲಿರುವ ಅಗಸರ ನಾಗಪ್ಪನ ಮಗ ಸುಮಾರು 21 ವರ್ಷದ ತಿಮ್ಮನೆಂಬುವನು ನೇಯ್ಗೆ ಕೆಲಸಮಾಡುವ ಗೋವಿಂದಪ್ಪನ ಹೆಂಡತಿಯನ್ನು ಮಾನಭಂಗ ಮಾಡಲಿಕ್ಕೆ ಪ್ರಯತ್ನಿಸಿದನೆಂದು ಮೊಕದ್ದಮೆ ಬಂದು ಅನುಲ್ದಾರ್ ಮ್ಯಾಜಿಸ್ಟ್ರೇಟರು ಅವನಿಗೆ 15 ದಿನಗಳ ಕಠಿಣ ಸಜಾ ವಿಧಿಸಿದರು ಇವನನ್ನು ಜಾಮಿನ್ ಮೇಲೆ ಬಿಡಿಸಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿ ಅಪೀಲ್ ಮಾಡುತ್ತಾರೆಂದು ತಿಳಿಯಲಾಗಿದೆ —ಈ ಊರಿಗೆ ಮುನ್ಸಿಫ್ ಕೋರ್ಟು ಬಂದ ಲಾಗಾಯಿತು ಮುನ್ಸಿಫರಿಗೂ ಲಾಯರುಗಳಿಗೂ ವಿಶೇಷವಾಗಿ ಕೆಲಸವಿದೆ ಊರಲ್ಲಿ ಕಕ್ಷಿಗಾರರನ್ನು ಯಾವಾಗಲೂ ನೋಡಬಹುದು —ನೀರಿನ ಸರಬರಾಯಿ ಕಾರ್ಯವು ಕೂಡಿದ ಮಟ್ಟಿಗೂ ಶೀಘ್ರವಾಗಿ ನೆರವೇರಿದರೆ ಅನುಕೂಲ —ಈ ಊರಲ್ಲಿರುವ ಹಳೇ ತಾಲ್ಲೋಕು ಕಛೇರಿಯು ಸ್ಕೂಲ್ ಮಕ್ಕಳಿಗೆ ಬಹಳ ಹಳೇದಾಗಿ ಬಿದ್ದು ಅಪಾಯವಾಗುವ ಹಾಗಿದೆ ಎಂದು ಸೀನಿಯರ್ ಸರ್ಜನ್‌ರೇ ಮು ತಾದವರು ತಿಳಿದದ್ದರಿಂದ ಆಸ್ಥಳದಿಂದ ಹೆಣ್ಣು ಮಕ್ಕಳನ್ನು ಬಾಡಿಗೆ ಮನೆಗಳಿಗೆ ಕಳುಹಿಸಿ ವಿದ್ಯಾಭ್ಯಾಸ ಮಾಡಿಸುತ್ತಿದಾರೆ ಈ ಮನೆಗಳು ಕೆಲವು ಚಿಕ್ಕ ಮಕ್ಕಳಿಗೆ ಬಹು ದೂರವೆಂದು ಅನೇಕ ತಂದೆತಾಯಿಗಳು ತಿಳಿಸುತ್ತಾರಲ್ಲದೆ ಮನೆಗಳೂ ಸ್ಕೂಲ್ ಕೆಲಸಕ್ಕೆ ಅಷ್ಟು ಅನುಕೂಲವಾಗಿಲ್ಲ ಆದ್ದರಿಂದ ಇಲಾಖೆಯವರು ತಮ್ಮ ಅಂದಾಜಿನಂತೆ ಹಳೇ ಕಚೇರಿಯನ್ನು ಶೀಘ್ರವಾಗಿ ದುರಸ್ತು ಮಾಡಿಸಿಕೊಟ್ಟರೆ ಕ್ಷೇಮವಾದೀತು —ಇಲ್ಲಿ ಸಬ್ ಅ|| ಸರ್ಜನ್ ರಾಗಿದ್ದ ಮ|| ರಾಮಸ್ವಾಮಿಸಿಳ್ಳೆಯವರನ್ನು ಶಿವಮೊಗ್ಗೆಗೆ ವರ್ಗಾಯಿಸಿದರು ಇವರು ಇಲ್ಲಿದ್ದ ಸುಮಾರು ಒಂದು ವರ್ಷಕಾಲ ಜನಾನುರಾಗಿಗಳಾಗಿ ಎಚ್ಚರಿಕೆಯಿಂದ ಪ್ರಜೆಗಳ ಕ್ಷೇಮಕ್ಕೋಸ್ಕರ ಸತ್ಯಸಂಧರಾಗಿ ಕೆಲಸಮಾಡಿದರೆಂದು ತಿಳಿಸುವವರು ಅಪರೂಪವೇ ಸರಿ —ಧಾರಣೆವಾಸಿಗಳು ರಾಗಿ 16 ಸೇರು, ಅಕ್ಕಿ 6 ಸೇರು ಈ ಮೇರೆಗಿದೆ ಈ ಪ್ರಾಂತ್ಯ ಪ್ರಾಯಶಃ ಅವರ್ಷಾಟ ರಾಗಿಬೆಳೆ ಆಗುವಂತಿದೆ

ತರೀಕೆರೆ —ಈ ಊರಲ್ಲಿ ದನಗಳಿಗೂ, ಎಮ್ಮೆಗಳಿಗೂ ಕಾಲುಬಾಯಿ ಜ್ವರ ಬಂದಿದೆ —ಈ ಊರಿಗೆ 12 ಮೈಲಿ ದೂರದಲ್ಲಿರುವ ಬೆಂಕಿಪುರದಲ್ಲಿ ಪ್ಲೇಗ್ ಹೆಚ್ಚಾಗಿದ್ದು, ಈಗ ಕಡಿಮೆಯಾಗಿದೆ ಹಾಗೇ ಬೇರೆ ಕಡೆ ವ್ಯಾಪಿಸದೆ ನಿಂತರೆ ಮೇಲಾದೀತು ಈ ಊರಲ್ಲಿ ಬೇರೂರಿನಿಂದ ಪ್ಲೇಗ್ ತಗಲಿ ಬಂದವನೊಬ್ಬನು ಸತ್ತನು ಕಳೆದ 3 ನೇ ತಾ ಒಬ್ಬ ಪ್ರಾಯದ ಹುಡುಗನು ಅಕಸ್ಮಾತ್ ಭಾವಿಗೆ ಬಿದ್ದು ತೀರಿಹೋದನು —ವೈಸ್‌ರಾಯಿ ಪ್ರಭುಗಳು ಹೋಗುವಾಗಲೂ, ಬರುವಾಗಲೂ ತಕ್ಕ ಎಚ್ಚರಿಕೆಯಿಂದ ಅಧಿಕಾರಿಗಳೂ, ಪೋಲೀಸಿನವರೂ, ಗ್ರಾಮದ ಜನರೂ ರೈಲುರಸ್ತೆ ಉದ್ದಕ್ಕೂ ಕಾದಿದ್ದು ಸಾಗಕಳುಹಿಸಿದರು ಪ್ರಭುಗಳು ಶಿವಮೊಗ್ಗಾದಿಂದ ಹಿಂತಿರುಗಿ ಬರುವಾಗ್ಗೆ ರೈಲ್ ಸೂಚನಾಕಂಭದ ಮರವು (ಸೈನು) ಯಾತಕ್ಕೋ ಬೀಳದೆ ಹೋದದ್ದರಿಂದ ಗಾಡಿಯು ಸ್ವಲ್ಪಹೊತ್ತು ನಿಂತು ಹರುವಾಯಿ ಬಂತು ಸ್ಟೇಷನ್ನಿನಲ್ಲಿ ಇಳಿದು ಪಹರೆ ಕೊಡುತ್ತಿದ್ದ ಒಬ್ಬ ಅಧಿಕಾರಿಗೆ ರೈಲ್ ಗಾಡಿಯಲ್ಲಿ ಹೋಗುವದಕ್ಕೆ ಆಗಲಿಲ್ಲ, ಅಂದರೆ ಗಾಡಿಯು ಹೊರಡುತ್ತೆಂದು ಭಾವಿಸಲಿಲ್ಲವೇನೋ ತಿಳಿಯದು ಪ್ಯಾಗಾ ಆತನು ನಿಂತುಹೋದನು —ಈ ಊರಿಗೆ ಸರಿಯಾದ ಸೇಗು, ತೂಕದ ಒಟ್ಟುಗಳು ಬರಲಿಲ್ಲ ಮುಂದಕ್ಕೂ ಬರುತ್ತವೋ ಇಲ್ಲವೋ ತಿಳಿಯದು ಈ ಊರಲ್ಲಿ ಸೇರು 1 ಕ್ಕೆ 22 ರೂಪಾಯಿ ತೂಕವಿದೆ ಈ ತೂಕವು ಯಾವ ಕಾಲಕ್ಕೆ ನಿಲ್ಲುವದೋ ತಿಳಿಯದು —ಈ ಊರಲ್ಲಿ ಆಗಾಗ್ಗೆ ಸಿಡುಬಿನ ಹಾವಳಿ ಹೆಚ್ಚಾಗಿದೆ ಕಳೆದ ಸಾರಿ ಅನೇಕ ಮಕ್ಕಳು ತೀರಿಹೋದರು ಇದಕ್ಕಾಗಿ ನಿರ್ಬಂಧವಾಗಿ ಸಿಡುಬು ಹಾಕುವ ಹುಕುಂ ಆಗಿದೆಯಷ್ಟೆ ಈ ಕಾರಣದಿಂದ ಇಲ್ಲಿನ ಡ್ರೆಸ್ಸರು ಸಿಡುಬು ಹಾಕುತ್ತಿದಾರೆ ಸ್ಕೂಲುಗಳಲ್ಲಿ ಮಕ್ಕಳಿಗೆ ಸಿಡುಬು ಹಾಕಲು ಹೋಗಿ ಹಾಕಿದ ಮೇಲೆ ಅನೇಕ ತಂದೆತಾಯಿಗಳು ಉಪಾಧ್ಯಾಯರ ಮೇಲೆ ಆಕ್ಷೇಪಣೆಮಾಡುತ್ತಾರೆ ಇಂಥಾ ಮೌಢ್ಯವು ಯಾವ ಕಾಲಕ್ಕೆ ನಿವೃತ್ತಿಯಾಗುತ್ತೋ ತಿಳಿಯದು —ಡೆಪ್ಯುಟಿ ಕಮಿಷನರ್ ಸಾಹೇಬರು ಬಂದು ಇಲ್ಲಿ ಸಂತೆಮಾರ್ಕೆಟ್ಟಿನಲ್ಲಿ ಜನರು ತಮ್ಮ ಪಾಯಿಖಾನೆ ಸ್ಥಳಗಳಲ್ಲಿ ಕಂಭಗಳನ್ನು ನೆಟ್ಟು ಟಿನ್ ತಗಡು ಹಾಕಿಕೊಳ್ಳಲಿಕ್ಕೆ ಅಪ್ಪಣೆ ಕೊಟ್ಟರು —ಕಳೆದ ತಿಂಗಳು ತಾ 30 ರಲ್ಲಿ ಹೇಳಿದ ದಸ್ತಗೀರ್ ಎಂಬವನನ್ನು ಪೋಲೀಸಿನವರು ದಸ್ತಗಿರಿಮಾಡಿದಾರೆ—ಇಲ್ಲಿನ ಕುಡಿಯುವ ನೀರಿನ ಕೆರೆಯು ಮಳೆ ಬಾರದ್ದರಿಂದ ತುಂಬಲಿಲ್ಲ ಈ ನೀರು ಎಷ್ಟು ಬೇಗ ಕಡಮೆಯಾಗುವುದೋ, ಎಷ್ಟು ಬೇಗ ಕೆಟ್ಟುಹೋಗುವದೋ ತಿಳಿಯದು ಹಾಗೂ ನೀರನ್ನು ಕೆಡಿಸದಂತೆ ಇಟ್ಟಿರುವ ಆಳು ಎಲ್ಲಿರುವನೋ ತಿಳಿಯುವುದೇ ಇಲ್ಲ. ನೀರನ್ನು ಜನರು ನಿಶ್ಚಿಂತೆಯಿಂದ ಕೆಡಿಸುತ್ತಾ ಇದಾರೆ ಕೆಡಿಸುವ ರೀತಿಯನ್ನು ಹೇಳಲಾಗದು. ಸುತ್ತಮುತ್ತಲೂ ರೋಗಗಳಿವೆ ಇದಕಾರಣ ನೀರನ್ನು ಬಹಳ ಎಚ್ಚರಿಕೆಯಿಂದ ಕಾಪಾಡಲೂ, ಉಪಯೋಗಿಸಲೂ ತಕ್ಕ ಏರ್ಪಾಡನ್ನು ಅಧಿಕಾರಿಗಳು ಮಾಡುವರೆಂಬು ನಂಬಲಾಗಿದೆ. ಮಳೆಬಾರದ್ದರಿಂದಲೂ, ಬೆಳೆ ಕೆಟ್ಟುಹೋಗಿರುವದರಿಂದಲೂ ಜನರು ತುಂಬಾ ಗಾಬರಿ ಪಡುತ್ತಲಿದಾರೆ

ಚಿತ್ರದುರ್ಗ —ಕಳೆದ ತಿಂಗಳು 14 ನೇ ತಾ ನಿಂದ ಮಳೆ ನಿಂತುಹೋಗಿ ಬಿಸಿಲು ಜಾಸ್ತಿಯಾಗಿದೆ ನೆಗಡಿ ಕೆಮ್ಮು ಜಾಸ್ತಿಯಾಗಿದೆ ಜಾಸ್ತಿ ಧಾರಣೆ ಕ್ಷಾಮಕಾಲವನ್ನು ಸೂಚಿಸುವದು —ಈ ಟವನ್ ಪ್ರಜೆಗಳಿಗೆ ನೀರು ಸಪ್ಲೈ ಮಾಡುತ್ತಿದ್ದ ತಿಮ್ಮಣ್ಣನಾಯ್ಕನ ಕೆರೆಗೆ ಈ ವರ್ಷ ನೀರು ಬರಲಿಲ್ಲ ಮುಂದೆ ಸಂಭವಿಸಬಹುದಾದ ನೀರಿನ ಕ್ಷಾಮಕ್ಕಾಗಿ ಈಗಿನಿಂದಲೇ ಜನಗಳು ಭಯಪಡುತ್ತಿದಾರೆ —ಈಚೆಗೆ ಇಲ್ಲಿ ಬ್ರಾಹ್ಮಣರಲ್ಲಿ ವ್ಯಾಪಾರ ಕಸಬು ಹೆಚ್ಚಿತು. ಆ ಪೈಕಿ ಹೊಸದಾಗಿ ಕಾಲುಚೀಲ ಹೆಣೆಯತಕ್ಕ ಮಿಷನ್ ತರಿಸಿಕೊಂಡು ಕೆಲಸ ಮಾಡುತ್ತಿರುವ ವೆಂಕಟೇಶಯ್ಯ ಶೇಷಾಚಾರ್ ಕಂಪನಿಗೆ ಮೈಸೂರು ಎಗ್ಜಿಭಿಷನ್ನಲ್ಲಿ ಒಂದು ಮೆಡಲ್ ಬಂತೆಂದು ತಿಳಿಯಬರುತ್ತೆ —ಈಗ್ಗೆ ಕೆಲವು ದಿವಸಗಳ ಕೆಳಗೆ ಚಳ್ಳಕೆರೆ ತಾಲ್ಲೂಕಿನಲ್ಲಿ ಹಳ್ಳಿ ಜನಗಳು ಜಿಂಕೆ ಶಿಕಾರಿಗೋಸ್ಕರ ಹೋಗಿದ್ದಾಗ ಆ ಜನಗಳ ಪೈಕಿ ಒಬ್ಬನ ಲೋಡಾದ ಬಂದೂಕು ಅಕಸ್ಮಾತ್ ಹಾರಿ ಅವನನ್ನೇ ಕೊಂದಿತು ಈ ವಿಷಯದ ನಿಜತ್ವವನ್ನು ಜೊತೆಯಲ್ಲಿದ್ದವರು ಭಯದಿಂದ ಹೊರಪಡಿಸದೆ ಇದ್ದರು ಲಾಷ್ ಅಜಮಾಯಿಷಿ ಮಾಡಿದ ಪೋಲೀಸ್‌ನವರೂ ಪೋಸ್ಟ್ ಮಾರ್ಟಂ ಮಾಡಿದ ಸಬ್ ಅ|| ಸರ್ಜನ್‌ರೂ ಸಹ ಈ ಕೃತ್ಯವು ಹರಿತವಾದ ಆಯುಧದಿಂದ ಆದದ್ದೆಂತ ನಿಷ್ಕರ್ಷಿಸಿ ಈ ಮರಣದ ಕೃತ್ಯ ಖೂನಿ ಎಂತ ಫೈಲ್ ಮೇಲೆ ತೆಗೆದುಕೊಂಡು ಸತ್ತವನ ಜೊತೆಯಲ್ಲಿ ಶಿಕಾರಿಗೆ ಹೋಗಿದ್ದ ಮೂರು ಜನಗಳನ್ನು ದಸ್ತಗಿರಿ ಮಾಡಿದರು ಇದೆಲ್ಲಾ ನಡೆದ 10 12 ದಿನಗಳ ಮೇಲೆ ಪೋಲೀಸ್ ಸೂ|| ಮಿ|| ಸಿ ಮಾಚಯ್ಯನವರು ಕೃತ್ಯ ನಡೆದ ಸ್ಥಳಕ್ಕೆ ಹೋಗಿ ವಿಚಾರಿಸಿದ್ದರಲ್ಲಿ ನಿಜತ್ವ ಹೊರಪಟ್ಟಿತು ಅವರು ದಫನ್ ಆಗಿದ್ದ ಶವವನ್ನು ಮ್ಯಾಜಿಸ್ಟ್ರೇಟರ ಅಪ್ಪಣೆ ಪಡೆದು ಹೊರಕ್ಕೆ ತೆಗೆಸಿ ಸೀನಿಯರ್ ಸರ್ಜನ್‌ರವರಿಂದ ಅಜಮಾಯಿಷಿ ಮಾಡಿಸಿದ್ದರಲ್ಲಿ ಬಂದೂಕಿನ ಏಟಿನಿಂದಲೇ ಅವನು ಮೃತಪಟ್ಟಿರುವುದಾಗಿ ಸ್ಥಿರಪಟ್ಟಿತು ಕೂಡ್ಲೆ ಅಪರಾಧಿಗಳನ್ನು ಜಾಮಿನು ಮೇಲೆ ಬಿಟ್ಟು, ಕೇಸು ಅಕಸ್ಮಾತ್ ಮರಣವೆಂತ ಇತ್ಯರ್ಥಪಡಿಸಿದರು ಈ ಸೂಪರಿನ್ ಟೆಂಡೆಂಟರವರು ಈ ಡಿಸ್ಟ್ರಿಕ್ಟಿಗೆ ಬಂದೀಚೆಗೆ ಪೋಲೀಸ್ ಇಲಾಖೆಯ ಕೆಲಸಗಳು ದರ್ಪವಾಗಿಯೂ, ಸತ್ಯವಾಗಿಯೂ ನಡೆಯಲಿಕ್ಕೆ ಆರಂಭವಾಗಿದೆ ಸರ್ಕಾರದ ನೌಕರರು ಗೌರ್ನಮೆಂಟಿಗೆ ದ್ರೋಹಮಾಡಿ ತಲೆತಪ್ಪಿಸಿಕೊಳ್ಳತಕ್ಕದ್ದು ಜಾಸ್ತಿಯಾಯಿತು ಚಿತ್ರದುರ್ಗದ ಸ್ಥಳೀಯನಾದ ರಾಮಚಂದ್ರರಾವ್ ಎಂಬಾತನು ಬೆಂಗಳೂರಿನಲ್ಲಿ ಇನ್‌ಜನಿಯರ್ ಇಲಾಖಾ ಸ್ಟೋರ್ ಕೀಪರಾಗಿದ್ದು ಈಗ್ಗೆ ಸುಮಾರು ನಾಲ್ಕು ತಿಂಗಳಿಂದ ಕಾಣದೇಹೋಗಿದಾನೆ ಆತನ ಹೆಂಡತಿಮಕ್ಕಳು ಬಂದು ಸ್ಥಳದಲ್ಲಿ ಸಂಕಟಪಡುತ್ತಲಿದಾರೆ —ನಮ್ಮ ಚಕ್ರವರ್ತಿ ಸಾರ್ವಭೌಮರ ಪ್ರತಿನಿಧಿಗಳಾದ ಲಾರ್ಡ್ ಹಾರ್ಡಿಂಗ್ ಪ್ರಭುಗಳು ದಂಪತಿಯುಕ್ತವಾಗಿ ನಮ್ಮ ದೇಶಕ್ಕೆ ದಯಮಾಡಿಸಿರತಕ್ಕದ್ದು ಈ ದೇಶದ ಪ್ರಜೆಗಳಿಗೆ ಪರಮ ಸಂತೋಷವನ್ನುಂಟುಮಾಡಿದೆ ಈ ಪ್ರಾಂತ್ಯದಲ್ಲಿ ಪ್ರಜೆಗಳೆಲ್ಲಾ ನಮ್ಮ ಚಕ್ರವರ್ತಿ ಸಾರ್ವಭೌಮರಿಗೂ ಅವರ ಪ್ರತಿನಿಧಿಯಾದ ವೈಸ್‌ರಾಯರವರಿಗೂ ಶ್ರೇಯಸ್ಸುಂಟಾಗಲೆಂದೂ, ಆ ಚಂದ್ರಾರ್ಕಸ್ಥಾಯಿಯಾಗಿ ನಮಗೆ ಇಂಗ್ಲೀಷ್ ಛತ್ರಛಾಯಾ ಶಾಶ್ವತವಾಗಿರಲೆಂದೂ ಪ್ರಾರ್ಥಿಸುತ್ತಲಿದಾರೆ

ಹಾಸನ —ಈ ಪ್ರಾಂತ್ಯ ಹಿಂದಿನ ಎರಡು ವಾರಗಳಿಂದ ಮಳೆ ನಿಂತುಹೋಗಿ ತೆನೆಗೆ ಬಂದಿದ್ದ ಭತ್ತದ ಬೆಳೆ ಒಣಗುತ್ತಾ ಇದೆ ಚಿತ್ತೆ ಮಳೆಯು ಈ ಪ್ರಾಂತ್ಯದಲ್ಲಿ ಸಾಧಾರಣವಾಗಿ ಬಂದಿದ್ದರೂ ದೊಡ್ಡದೊಡ್ಡ ಕೆರೆಗಳು ತುಂಬಲಿಲ್ಲ —ಹಿಂದೆ ಇಲ್ಲಿನ ಸೆಷನ್ನಲ್ಲಿ ವಿಚಾರಣೆಯಾಗಿ ಮರಣದಂಡನೆ ವಿಧಿಸಿದ್ದ ಚನ್ನಲಿಂಗಯ್ಯನೆಂಬವನ ಖೂನೀ ಕೇಸಿನ ನಾಲ್ಕು ಮಂದಿ ಅಪರಾಧಿಗಳಲ್ಲಿ ಚೀಫ್ ಕೋರ್ಟಿನವರು ಇಬ್ಬರನ್ನು ಜನ್ಮಾವಧಿ ಸಜಾ ಶಿಕ್ಷೆಗೆ ಗುರಿಪಡಿಸಿ, ಇನ್ನಿಬ್ಬರಿಗೆ ಮರಣದಂಡನೆಯನ್ನೇ ಸ್ಥಿರಪಡಿಸಿದರು ಆ ಇಬ್ಬರಿಗೂ ಕಳೆದ ತಾ 3 ನೇ ಸೋಮವಾರ ಮರಣದಂಡನೆಯು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ವಿಧಿಸಲ್ಪಡುವುದೆಂದು ಈ ಟವನ್ನಲ್ಲಿ ದಂಡೂರ ಮೂಲಕ ಪ್ರಕಟಿಸಿದರು ಹೀಗೆ ಶಿಕ್ಷೆಯನ್ನು ಪ್ರಸಿದ್ಧಪಡಿಸುವುದರಿಂದ ಪುಂಡುಜನರಿಗೆ ಭಯವುಂಟಾಗಿ, ಕ್ರೂರಕೃತ್ಯಗಳು ಅಡಗಲವಕಾಶವಾಗುತ್ತದೆ ಇದು ಒಳ್ಳೆ ಏರ್ಪಾಡಾಗಿದೆ —ಅರಸೀಕೆರೆಯಿಂದ ಈ ಊರು ಮಾರ್ಗವಾಗಿ ಹೊಳೆನರಸೀಪುರದ ಮೇಲೆ ಮೈಸೂರಿಗೆ ರೈಲ್ವೆಯನ್ನು ಹಾಕಲು ಗವರ್ನ್‌ಮೆಂಟಿನವರು ಸ್ಯಾಂಕ್ಷನ್ ಮಾಡಿ ಕೆಲಸ ಪ್ರಾರಂಭಿಸುವಂತೆ ಇಲಾಖೆಯವರಿಗೆ ಹುಕುಂ ಕೊಟ್ಟಿದಾರೆಂದು ಕೇಳಿ ಈ ಪ್ರಾಂತ್ಯದವರೆಲ್ಲಾ ಸಂತೋಷಭರಿತರಾಗಿದಾರೆ —ಇಲ್ಲಿ ಪ್ಲೇಗ್ ಹಾವಳಿಯು ಇನ್ನೂ ಶಮನವಾಗಲಿಲ್ಲ ಆಗಸ್ಟ್ ತಾ 28 ರಲ್ಲಿ ಪ್ಲೇಗ್ ಪ್ರಾರಂಭವಾಗಿ ಇದುವರೆಗೆ ಸುಮಾರು 160 ಮಂದಿಗೆ ಈ ರೋಗ ತಗಲಿ, 100 ಮಂದಿ ಮೃತಪಟ್ಟರೆಂತಲೂ, 20 ಮಂದಿ ನರಳುತ್ತಾರೆಂತಲೂ, 40 ಮಂದಿಗೆ ಗುಣವಾಯಿತೆಂತಲೂ ತಿಳಿದು ಬಂದಿದೆ. ಗುಡಿಸಿಲುಗಳಲ್ಲೂ ಪ್ಲೇಗ್ ಮರಣಗಳಾಗಿರುತ್ತವೆ ಇಲ್ಲಿನ ಪ್ಲೇಗ್ ರೋಗಿಗಳನೇಕರಿಗೆ ಔಷಧವನ್ನು ಕೊಟ್ಟು ಗುಣಮಾಡಿದ ಮ|| ಸಿ ಕೃಷ್ಣರಾಯರ ಮಹಾ ಭೃಂಗಾಮಲಕ ತೈಲಕ್ಕೆ ಅದರ ಶ್ರೇಷ್ಠತೆಗೋಸ್ಕರ ಮೈಸೂರು ದಸರಾ ಪ್ರದರ್ಶನದಲ್ಲಿ ಈ ಸಲ ಭಂಗಾರದ ಮೆಡಲ್ ಬಹುಮಾನ ಬಂತೆಂದು ಕೇಳಿ ಬಹುಜನರು ಸಂತೋಷಪಡುತ್ತಿದಾರೆ.—ಇಲ್ಲಿ ಪ್ರತಿ ವರ್ಷವೂ ದೀಪಾವಳಿ ಹಬ್ಬದ ವಾರದಲ್ಲಿ ನಡೆಯುವ ಸಿಂಹಾಸನಕಾಂಬಾ ದೇವಾಲಯದ ಬಾಗಿಲು ತೆರೆಯಲ್ಪಟ್ಟು ಮಹೋತ್ಸವವು ವಿಜೃಂಭಣೆಯಿಂದ ನಡೆದರೂ ಊರೊಳಗೆ ಜನರು ಇಲ್ಲದಕಾರಣ, ಪ್ಲೇಗಿನ ಭಯದಿಂದಲೂ ಹೊರಗಿನ ಜನರು ವಿಶೇಷವಾಗಿ ಬರಲಿಲ್ಲ —ನಮ್ಮ ಡೆಪ್ಯುಟಿ ಕಮಿಷನರ್‌ರವರು ದಸರಾ ಹಬ್ಬಕ್ಕೆ ಮೈಸೂರಿಗೆ ದಯಮಾಡಿ ಪ್ರಜಾಪ್ರತಿನಿಧಿ ಸಭಾ ಕಾರ್ಯವನ್ನು ತೀರಿಸಿಕೊಂಡು ಬಂದಾಗಿನಿಂದ ತಮ್ಮ ಆಫೀಸ್ ಕಾರ್ಯವನ್ನು ಮಧ್ಯಾಹ್ನ 11 ರಿಂದ ರಾತ್ರಿ 7 ಘಂಟೆ ವರೆಗೆ ನಡಿಸುವುದಾಗಿ ಹುಕುಂ ಕೊಟ್ಟಿದಾರಂತೆ ರಾತ್ರಿಯೆಲ್ಲಾ ಕಾಯಬೇಕಾಗಿದ್ದ ಕಕ್ಷಿಗಾರರಿಗೂ, ವಕೀಲರಿಗೂ ಇದರಿಂದ ತುಂಬಾ ಉಪಕಾರವಾಯಿತು ಎಲ್ಲಾ ಕಡೆಯೂ ಜಾರಿಯಲ್ಲಿರುವಂತೆ 11 ರಿಂದ 5 ಘಂಟೆ ವರೆಗೆ ಏತಕ್ಕೆ ಕೆಲಸ ನಡಿಸಬಾರದೋ ತಿಳಿಯದು —ಮಿಷನ್ ಆಸ್ಪತ್ರೆಯ ಬಳಿ ಇರುವ ಮೈದಾನುಗಳಲ್ಲಿ ಜನರಿಗೆ ಗುಡಿಸಲುಗಳಿಗೋಸ್ಕರ ಸ್ಥಳ ಕೊಟ್ಟಿದ್ದಾರೆ ಅವರೆಲ್ಲಾ ಷೆಡ್ಡುಗಳನ್ನು ಕಟ್ಟಿಕೊಂಡು ಖಾಯಮಾಗಿ ವಾಸಮಾಡುತ್ತಿದಾರೆ ಈ ಸ್ಥಳವು ಆಸ್ಪತ್ರೆಗೆ ಸಮೀಪವಾಗಿದೆ ಹತ್ತಿರದಲ್ಲೇ ವಿದ್ಯಾಶಾಲೆಗಳಿವೆ ಈ ಸ್ಥಳವು ಎಲ್ಲಾ ಆಫೀಸುಗಳಿಗೂ ಸಮೀಪವಾಗಿದೆ ಈ ಸ್ಥಳವನ್ನು ಅವರವರಿಗೇ ಕ್ರಯಕ್ಕೆ ಕೊಟ್ಟುಬಿಟ್ಟರೆ ನಮ್ಮ ಡೆಪ್ಯುಟಿ ಕಮಿಷನರವರಿಗೆ ಎಷ್ಟೋ ಕೀರ್ತಿಯುಂಟಾಗುವುದು ಅವರೆಲ್ಲರೂ ಮನೆಗಳನ್ನು ಕಟ್ಟಿಕೊಂಡು ಸುಖವಾಗಿರಲು ಸಹಾಯವಾದೀತು.

ಬಾತ್ಮಿದಾರರಿಗೆ ನೋಟೀಸ್.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು.

ಎ ರಿಟೈರ್ಡ್ ಆಫೀಸರ್—ನಿಮ್ಮ ಬಾತ್ಮಿಯು ಪ್ರಕಟನೆಗೆ ಹಿತಕರವಾದದ್ದಾಗಿ ಕಾಣುವುದಿಲ್ಲ.

ಬಡ ತಾಬೇದಾರ, ಹುಣಸೂರು.—ನಿಮ್ಮ ಬಾತ್ಮಿಯಿಂದ ನಿಮ್ಮ ಉದ್ದೇಶವೂ ಅಭಿಪ್ರಾಯವೂ ಗೊತ್ತಾಗುವುದಿಲ್ಲ. ಸ್ಪಷ್ಟವಾಗಿಯೂ, ಸ್ಫುಟವಾಗಿಯೂ, ಊಹಾಪೋಹಗಳಿಲ್ಲದೆಯೂ ಬಾತ್ಮಿಗಳನ್ನು ಬರೆದರೆ ಅನುಕೂಲ.

ವನಮಾಲಿಶೆಟ್ಟಿ, ಮದ್ದೂ—ಗ್ರಾಮದಲ್ಲಿ ಪುಣ್ಯವಂತರಾಗಿರುವವರು ಸ್ಕೂಲ್ ಕಟ್ಟಡವನ್ನು ತಮ್ಮ ಹೆಸರಿನ ಮೇಲೆ ಕಟ್ಟಿಸಿಕೊಟ್ಟು ಶಾಶ್ವತವಾದ ಹೆಸರುವಾಸಿಯನ್ನು ಹೊಂದಬಹುದು ಸರ್ಕಾರದವರನ್ನು ಪ್ರಾರ್ಥಿಸಿ ನಿರೀಕ್ಷಿಸಿದರೆ ಬಹಳ ತಾಮಸಕ್ಕೆ ಬೀಳುತ್ತೆ. ಮುಖ್ಯವಾಗಿ ಗ್ರಾಮದ ಮುಖಂಡರು ಸೇರಿ ಎಲ್ಲಾ ಮಕ್ಕಳಿಗೂ ವಿದ್ಯೆಬರುವಂತೆ ಬೇಕಾದ ಸಹಾಯವನ್ನು ಮಾಡಿಕೊಳ್ಳಬೇಕಾಗಿದೆ. ವಿದ್ಯಾ ಇಲಾಖೆಯವರು ಅವಶ್ಯಕತೆ ಬಿದ್ದಹಾಗೆ ಉಪಾಧ್ಯಾಯರನ್ನು ಹೆಚ್ಚಿಸಿಕೊಡುವರು ಅವರ ಸಂಬಳದ ದರಗಳೂ ಕೆಲವುಕಾಲದಲ್ಲೇ ಬಡ್ತಿಯಾಗುವವೆಂದು ನಿರೀಕ್ಷಿಸುತ್ತೇವೆ

—ಎಡಿ.]

ಕರೆಸ್‌ಪಾಂಡೆನ್ಸ್.

ಹರಿಹರಪುರಮಠದ ಜೀರ್ಣೋದ್ಧಾರ.

ಅಯ್ಯಾ,

ಸರ್ಕಾರದವರ ಮ್ಯಾನೇಜಮೆಂಟಿಗೆ ಒಳಪಟ್ಟಿರುವ ಕಡೂರು ಡಿಸ್ಟ್ರಿಕ್ಟು ಕೊಪ್ಪಾ ತಾಲ್ಲೂಕು ಹರಿಹರಪುರ ಶ್ರೀಮಠದ ಕಟ್ಟಡಗಳ ಪೈಕಿ ಮುಂಭಾಗದ ಚಾವಡಿಯ ಮೇಲಿನ ಮಹಡಿಯು ಕಳೆದ 18 ನೇ ತಾ. ಮಂಗಳವಾರ ರಾತ್ರಿ ಸುಮಾರು 11 ಘಂಟೆ ಸಮಯದಲ್ಲಿ ಅಕಸ್ಮಾತ್ತಾಗಿ ಬಿದ್ದು, ಇದರಿಂದ ಉಂಟಾದ ನಷ್ಟವನ್ನು ತಿಳಿಸಲು ತುಂಬಾ ವ್ಯಥೆಯುಂಟಾಗಿರುತ್ತೆ. ಕಟ್ಟಡವು ಬಹು ಪುರಾತನವಾದದು ಇದರ ಜೀರ್ಣೋದ್ಧಾರಕ್ಕಾಗಿಯೇ ನಮ್ಮ ಗವರ್ನ್‌ಮೆಂಟಿನವರು ಪ್ರಯಾಸ ಪಡುವಷ್ಟರಲ್ಲೇ ಅದು ಅಕಸ್ಮಾತ್ತಾಗಿ ಬಿದ್ದದ್ದು ಜೀರ್ಣೋದ್ಧಾರಕ್ಕೆ ಶುಭಸೂಚನೆ ಎಂದು ಊಹಿಸಬೇಕಾಗಿದೆ. ಮಠದ ಶ್ರೀಸ್ವಾಮಿಗಳವರ ಸವಾರಿಯು ಈ ಮೊದಲು ಸರ್ಕಾರದವರ ಸಹಾಯದಿಂದಲೇ ಅನೇಕ ದೇಶಗಳನ್ನು ಸಂಚಾರಮಾಡಿ ಈ ಮಠದ ಕೆಲವು ಭಾಗಗಳನ್ನೂ ಶ್ರೀಶಾರದಮ್ಮನವರ ಗರ್ಭಗೃಹವನ್ನೂ ಹೊಸದಾಗಿ ಜೀರ್ಣೋದ್ಧಾರಮಾಡಿಸಿರುವದು ಎಲ್ಲರಿಗೂ ತಿಳಿದಿರಬಹುದಾಗಿ ಯೋಚಿಸುತ್ತೇವೆ

ಜೀರ್ಣೋದ್ಧಾರ ಪ್ರಿಯ.

ವೃದ್ಧವಿವಾಹ.

ಅಯ್ಯಾ,

ಚಿಕ್ಕಮಗಳೂರಿನಲ್ಲಿರುವ ಒಬ್ಬ ಬ್ರಾಹ್ಮಣರಿಗೆ ಸುಮಾರು 65 ವರ್ಷಕ್ಕೆ ಕಡಮೆಯಿಲ್ಲವೆಂದೇ ಹೇಳಬೇಕು. ಈ ವಯಸ್ಸಿನಲ್ಲಿ ಅವರಿಗೆ ಒಂದು ಕನ್ಯೆಯನ್ನು ವಿವಾಹ ಮಾಡಿಕೊಳ್ಳಬೇಕೆಂಬ ಆಸೆಮಾತ್ರ ಪ್ರಬಲವಾಗಿದೆ ಚಿಕ್ಕಮಗಳೂರಿಗೆ ಸಮೀಪದಲ್ಲಿರುವ ಅದೇ ಮತದವರೊಬ್ಬರು ಈ ನಮ್ಮ ಹಣ್ಣುಮುದುಕರಿಗೋಸ್ಕರ ಶ್ರಮಪಟ್ಟು ಒಂದು ಹೆಣ್ಣನ್ನು ನೋಡಿಕೊಂಡು ಬಂದಿರುವರು. ಹೆಣ್ಣು ನಾಗಮಂಗಲದ ತಾಲ್ಲೂಕಿನದು ಹೆಣ್ಣಿಗೆ 15-16 ವರ್ಷಗಳಂತೆ. ಹೆಣ್ಣಿನ ಕಡೆಯವರೊಡನೆ ಆಗಲೇ ಪತ್ರವ್ಯವಹಾರಕ್ಕೆ ಆರಂಭವಾಗಿರುವಂತೆ ತಿಳಿಯಬಂದಿದೆ. ಈ ಮುದಿ ವರನಿಗೆ ಮೊದಲನೆಯ ಹೆಂಡತಿ ಹೋಗಿ 10 ವರ್ಷಗಳ ಮೇಲೆಯೇ ಆಗುತ್ತದೆ. ಸುಮಾರು 6 ವರ್ಷಗಳ ಕೆಳಗೆ ಈ ವೃದ್ಧ ವರನೇ ತನಗೆ ಮತ್ತೊಂದು ಮದುವೆಯ ವಿಚಾರದಲ್ಲಿ ಪ್ರಯತ್ನ ಪಡುತ್ತಿದ್ದು, ಅದು ಆಗ ಇತರ ಜನಗಳಿಗೆ ತಿಳಿದು, ಆ ಸದ್ದು ಆಗಲೇ ಅಡಗಿಹೋಯಿತು ಪುನಃ ಈ ಆಶೆಯು ಈಗ ಆರಂಭವಾಗಿದೆ ಈ ನಾಚಿಕೆಯಿಲ್ಲದ ವಿವಾಹ ವಿಚಾರದಲ್ಲಿ ಪ್ರತಿಯೊಬ್ಬ ವಿಚಾರವಂತರಿಗೂ ವ್ಯಸನವೂ, ಅಸಹ್ಯವೂ, ಕೋಪವೂ ಉಂಟಾಗದಿರದು.

ವಿಚಾರದರ್ಶಿ.

[ಇಂಥಾ ವಿವಾಹಕ್ಕೆ ಈಗಿನ ಕಾಲದಲ್ಲಿ ಹೆಣ್ಣು ಕೊಡಲು ಒಪ್ಪತಕ್ಕ ತಂದೆತಾಯಿಗಳ ಅಥವಾ ಪೋಷಕರ ಕುತೂಹಲವೂ ಪ್ರಯತ್ನವೂ ನಿಂದಾಸ್ಪದವಾಗಿರುತ್ತದೆ.—ಎಡಿ.]

ವಿದ್ಯಾಭಿವೃದ್ಧಿಯ ವಿಚಾರ.

ಅಯ್ಯಾ,

ನಮ್ಮ ದಿವಾನ್‌ರವರೂ ಅವರಿಗೆ ಸಲಹೆ ಹೇಳುವ ಇತರ ದೊಡ್ಡ ಮನುಷ್ಯರೂ ಈ ದೇಶದಲ್ಲಿ ವಿದ್ಯಾಪ್ರಚುರ್ಯವು ಕಡಮೆಯಾಗಿರುವದಾಗಿಯೂ, ಅದನ್ನು ಹೆಚ್ಚಿಸಬೇಕೆಂತಲೂ ಅಭಿಪ್ರಾಯಪಡುತ್ತಿರುವದು ಎಲ್ಲರೂ ಅನುಮೋದಿಸತಕ್ಕದ್ದಾಗಿದೆ. ಪರಂತು ಅಂಥಾ ಅಭಿವೃದ್ಧಿಗೆ ಅವರು ಮಾಡುತ್ತಿರುವ ಆಲೋಚನೆಗಳು ಮಾತ್ರ ನನಗೆ ತೃಪ್ತಿಯಾಗಿಲ್ಲದೆ ನನ್ನ ಹೇಳಿಕೆಯನ್ನು ಪ್ರಕಟಪಡಿಸಬೇಕೆಂದು ಬೇಡುತ್ತೇನೆ

ಅಭಿವೃದ್ಧಿಗಾಗಿ ನಡೆಯುತ್ತಿರುವ ಮತ್ತೂ ನಡಿಸಿರುವ ಯೋಚನೆಗಳು—(1) ಈ ದೇಶದಲ್ಲಿ ಒಂದು ಯೂನಿವರ್ಸಿಟಿಯನ್ನು ಸ್ಥಾಪಿಸುವದು, (2) ಹೈಸ್ಕೂಲುಗಳನ್ನು ಹೆಚ್ಚಿಸುವದು, (3) ಎಲ್ಲಾ ತರಗತಿಯ ಉಪಾಧ್ಯಾಯರ ಸಂಬಳಗಳನ್ನೂ ಹೆಚ್ಚಿಸುವದು, ಮತ್ತು (4) ಹೋಬಳಿ ಮಾಸ್ತರುಗಳ ಸಂಬಳಗಳನ್ನು ಹೆಚ್ಚಿಸುವದು

ಈ ವರೆಗೆ ಕೆಲವು ದಿವಸಗಳ ಕೆಳಗೆ ನಡೆದಿರುವದು (1) ಸರ್ಕಲ್ ಇನ್ಸ್‌ಪೆಕ್ಟರುಗಳನ್ನು ಏರ್ಪಡಿಸಿರುವದು, ಮತ್ತು (2) ಈಚೆಗೆ ಡೆಪ್ಟಿ ಇನ್ಸ್‌ಪೆಕ್ಟರ್ ಜನರಲ್‌ರವರನ್ನು ನೇಮಿಸಿರುವದು

ಈ ವಿಚಾರದಲ್ಲಿ ನನ್ನ ಅರಿಕೆ ಏನೆಂದರೆ—ಒಬ್ಬ ಸಂಸಾರಿಯು ತನ್ನ ಮನೆಯು ಇಕ್ಕಟ್ಟಾಗಿದ್ದು ವಾಸಕ್ಕೆ ಸಾಲದೆ ಅದನ್ನು ವಿಸ್ತರಿಸಬೇಕೆಂದು ಅಪೇಕ್ಷಿಸಿದಾಗ ಇರುವ ಮನೆಗೆ ಹೆಚ್ಚಾದ ಅಲಂಕಾರವುಳ್ಳ ಛಾವಣಿ ಹಾಕುವ, ನೆಲಕ್ಕೆ ಅಲಂಕಾರವಾದ ಗಾರೆ ಮಾಡಿಸುವ, ಗೋಡೆಗಳಿಗೆ ನಾನಾ ಬಣ್ಣಗಳನ್ನು ಬಳಿಸುವ, ಬಾಗಿಲು ಕಿಟಕಿಗಳಿಗೆ ಚಿತ್ರ ವಿಚಿತ್ರವಾದ ಕೆಲಸಗಳನ್ನು ಮಾಡಿಸುವ ಯೋಚನೆ ಮಾಡುವನೇ? ಅಥವಾ ಆ ಮನೆಗೆ ಇನ್ನೂ ಹೆಚ್ಚಾಗಿ ಕಟ್ಟಡವನ್ನು ಸೇರಿಸುವ ಯೋಚನೆ ಮಾಡುವನೇ? ಈಗ ಎರಡನೆಯ ಪರ್ಯಾಯದಂತೆ ನಡವಳಿಕೆ ಇದೆ ಎಂದು ಯಾರೂ ಒಪ್ಪಲಾರರಷ್ಟೆ. ಹಾಗಾದಮೇಲೆ ವಿದ್ಯಾಭಿವೃದ್ಧಿಗೋಸ್ಕರ ಮಾಡುತ್ತಿರುವ ಮತ್ತೂ ಮಾಡಿರುವ ನಮ್ಮ ದಿವಾನ್‌ರವರ ಯೋಚನೆಯು ಆ ಸಂಸಾರಿಕನ ಮೊದಲನೇ ಪರ್ಯಾಯದ ಯೋಚನೆಯಂತೆ ಆಗುವದಿಲ್ಲವೇ!

ಈ ದೇಶವನ್ನು ಒಬ್ಬ ಮನುಷ್ಯನಿಗೆ ಹೋಲಿಸೋಣ, ಯಾವ ಮನುಷ್ಯನಿಗಾದರೂ ಸೊಂಟದಿಂದ ಕೆಳಗೆ ಒಂದು ಕೌಪೀನ ಮಾತ್ರ ಇದ್ದು ತಲೆಗೆ ಭಾರಿ ಜರದ್ದೇ ಮಡಿ ರುಮಾಲನ್ನು ಸುತ್ತಿಕೊಂಡರೆ ಭೂಷಣವಾಗಿರುವದೋ? ದಿವಾನ್‌ರವರ ಉಪನ್ಯಾಸದಲ್ಲಿ ಈ ದೇಶದ ಗ್ರಾಮಗಳು 16,800 ಎಂದು ತಿಳಿದೆನು. ಇವೆಲ್ಲವೂ ವಿದ್ಯಾಶಾಲೆಗಳು ಉಳ್ಳವೋ? ಇಲ್ಲದಿದ್ದರೆ ಇದನ್ನು ಮೊದಲುಮಾಡಿ, ತರುವಾಯ ತಾಲ್ಲೂಕು ಕಸಬೆಗಳ ಸ್ಥಿತಿಗಳನ್ನು ಸಂಪಡಿಸಿ, ಆ ಮೇಲೆ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರುಗಳ ರೀತಿಯನ್ನು ಪರಿಷ್ಕರಿಸಿ, ಅನಂತರ ಕಾಲೇಜುಗಳನ್ನು ಉಚಿತ ರೀತಿಗೆ ತಂದು, ಕಡೆಗೆ ಯೂನಿವರ್ಸಿಟಿಯ ಯೋಚನೆ ಮಾಡಿದಲ್ಲವೇ ಮನುಷ್ಯನು ಸರಿಯಾದ ಪಂಚೆಯನ್ನು ಉಟ್ಟುಕೊಂಡು ಅಂಗಿ ತೊಟ್ಟುಕೊಂಡು ಭಾರೀ ರುಮಾಲು ಸುತ್ತಿಕೊಂಡಂತೆ ಆಗುವುದು. ಮೊದಲು ಹೋಬಳಿ ಸ್ಕೂಲುಗಳ ವಿಚಾರದಲ್ಲಿ ಮಾತ್ರ ಸಂಕ್ಷೇಪವಾಗಿ ಬರೆಯುವೆನು. ಇದು ನಮ್ಮ ದಿವಾನ್‌ರವರ ನೋಟೀಸಿಗೆ ಬಂದು ಅಂಗೀಕರಿಸಲ್ಪಡೋಣವೇ ನನ್ನ ಪ್ರತಿಫಲವು. ಹೋಬಳಿ ಸ್ಕೂಲುಗಳಲ್ಲಿ ಹೆಡ್‌ಮಾಸ್ತರಿಗೂ 10 ರೂಪಾಯಿ, ಅಸಿಸ್ಟೆಂಟರಿಗೂ 10 ರೂಪಾಯಿ ಸಂಬಳವಿದೆ, ಇದು ಕೆಮ್ಮಣ್ಣು ದುಡ್ಡಿಗೆ ಪಂಚೇರು, ಅಪರಂಜಿಗೂ ದುಡ್ಡಿಗೆ ಪಂಚೇರು ಧಾರಣೆ ಇರುವಂತೆ ಇಲ್ಲವೇ? ತಾರತಮ್ಯವನ್ನು ಸರ್ಕಾರದ ಅನುಕೂಲಾನುಗುಣವಾಗಿ ಕಲ್ಪಿಸೋಣವು ಅತ್ಯವಶ್ಯಕವಾದ ಮತ್ತು ಪ್ರಥಮ ಕರ್ತವ್ಯವಾದ ವಿಷಯ. (2) ಈ ದೇಶದ ಎಲ್ಲಾ ಗ್ರಾಮಗಳಲ್ಲೂ ಪಟೇಲರೂ ಶ್ಯಾನುಭೋಗರೂ ಇರುವಂತೆ ಸ್ಕೂಲ್ ಮಾಸ್ಟರುಗಳೂ ಇರುವಂತೆ ಮಾಡಬೇಕು ಅಲ್ಪ ಪ್ರಜೆಗಳುಳ್ಳ ಗ್ರಾಮಗಳಲ್ಲಿ ಮಾಡೋಣ ಹ್ಯಾಗೆ ಸಾಧ್ಯವೆಂದು ಆಕ್ಷೇಪಣೆಯುಂಟಾಗಬಹುದು; ಅಲ್ಪ ಆದಾಯವುಳ್ಳ ಸಣ್ಣ ಗ್ರಾಮಗಳಿಗೆ ಪಟೇಲ್ ಶ್ಯಾನುಭೋಗರನ್ನು ನೇಮಿಸೋಣವು ಹ್ಯಾಗೆ ಸಾಧ್ಯವೋ ಅದರಂತೆಯೇ ಸ್ಕೂಲ್ ಮಾಸ್ಟರನ್ನೂ ನೇಮಿಸಬಹುದೆಂದು ಸೂಚಿಸುತ್ತೇನೆ ಸರ್ವರೂ ಸಮಾಧಾನದಿಂದ ತಲೆದೂಗುವಂತೆ ಮತ್ತೊಂದು ವೇಳೆ ಅರಿಕೆಮಾಡುವೆನು.

ದೀಪಟಿಗೆ

ಜಗಲೂರಿಗೂ ದಾವಣಗೆರೆಗೂ ಮಾಡಿರುವ ರಸ್ತೆಯ ಅಸಾಸ್ಥಿತಿ

ಅಯ್ಯಾ,

ಜಗಲೂರಿಂದ ದಾವಣಗೆರೆಗೆ ಮಾಡಿರುವ ರಸ್ತೆಯಲ್ಲಿ ಸಂಚರಿಸುವ ಗಾಡಿಗಳವರ ಶ್ರಮೆಯನ್ನು ಇಲ್ಲಿ ನಾನು ಸಾಧ್ಯವಾದ ಮಟ್ಟಿಗೆ ಸೂಚಿಸಿರುತ್ತೇನೆ ಈ ರಸ್ತೆಯ ಮೇಲೆ ದಿನ ಒಂದಕ್ಕೆ ಸುಗ್ಗೀಕಾಲದಲ್ಲಿ ಇನ್ನೂರಕ್ಕೆ ಮೇಲ್ಪಟ್ಟೂ, ಬಾಕೀ ಕಾಲಗಳಲ್ಲಿ ನೂರಕ್ಕೆ ಎಂಥಾ ಮಳೆಬಂದಾಗ್ಯೂ ಐವತ್ತಕ್ಕೆ ಕಮ್ಮಿ ಇಲ್ಲದೆ ಸಂಚರಿಸುತ್ತವೆ ಈ ರಸ್ತೆಯಲ್ಲಿರುವ ಹಳ್ಳಗಳು ಅಂಥಾ ದೊಡ್ಡವೇನೂ ಅಲ್ಲದಿದ್ದಾಗ್ಯೂ ಎತ್ತುಗಳಿಗೆ ತುಂಬಾ ಕಷ್ಟ. ಎಂಥಾ ಎತ್ತಾದರೂ ನಿಂತುಹೋಗುತ್ತದೆ. ಅಲ್ಲದೆ ಒಂದೊಂದು ಹಳ್ಳವನ್ನು ಭರ್ತಿಗಾಡಿಗಳು ತಪಾಯಿಸಬೇಕಾದರೆ ಎರಡು ಮೂರು ಜನಗಳಿಂದ ಆಗುವದಿಲ್ಲವಾದ್ದರಿಂದ ಅನೇಕ ಗಾಡಿಗಳು ಅಲ್ಲಿ ಜಮಾಯಿಸುವ ಪರ್ಯಂತರ ನಿರೀಕ್ಷಿಸಿ, ಆ ಮೇಲೆ ಹತ್ತೆಂಟು ಜನ ಒಟ್ಟಾಗಿ ಒಂದೊಂದೇ ಗಾಡಿಯನ್ನು ದೊಬ್ಬಿ ಎತ್ತಿ ಕಷ್ಟಪಟ್ಟು ಸಾಗಿಸಿದರೆ ಘಂಟೆಗೆ ನಾಲ್ಕೈದು ಗಾಡಿ ತಪಾಯಿಸುವುದು ಅಸಾಧ್ಯ. ಹೀಗೆ ಬಹಳ ಗಾಡಿಗಳು ಆಚೇದಡ ಸೇರಬೇಕಾದರೆ ಒಂದು ದಿನ ಅಲ್ಲೇ ಕಾಲ ಕಳೆಯಬೇಕು. ಹೀಗೆ ಪ್ರತಿ ಒಂದು ಹಳ್ಳದಲ್ಲಿಯೂ ವ್ಯಥೆಪಟ್ಟು ಹೋದರೆ ದಾವಣಗೆರೆ ಸಮೀಪ ಆರು ಮೈಲಿ ದೂರದಲ್ಲಿ ಬೇತೂರು ಹೆರೆ ಸಿಕ್ಕುತ್ತದೆ. ಅಲ್ಲಿಮಾತ್ರ ಸ್ವಲ್ಪಮಳೆ ಬಂದರೆ ಸಾಕು. ಮೂವತ್ತು ಮಣ ವಜನ್ ಉಳ್ಳ ಗಾಡಿಗೆ ನಾಲ್ಕು ಎತ್ತುಗಳು ಹೂಡಿ, ಹಿಂದೆ ಎರಡು ಜನ ದೊಬ್ಬಿದರೆ ಈ ಆರು ಮೈಲಿಗಳನ್ನು ಒಂದು ದಿನ ಪೂರ್ತಿಯಾದರೂ ಆಸ್ಪದವಾದು, ದಾವಣಗೆರೆಗೆ ಸೇರಿದರೆ ಸಾಕು ಹೀಗಾಗುವದರಿಂದ ನಾಲ್ಕು ದಿನಕ್ಕೆ ಊರು ಸೇರಬಹುದಾದವರು ಎಂಟು ದಿನಕ್ಕೆ ಸೇರಿದರೆ ದೈವಸಹಾಯ ಚೆನ್ನಾಗಿತ್ತೆಂದೇ ಹೇಳಬೇಕು. ಬಂದ ಬಾಡಿಗೆಯು ಎತ್ತುಗಳ ಖರ್ಚಿಗೆ ಸಾಲದಾಗುವದು. ಹೀಗಿರುವಲ್ಲಿ ಎತ್ತುಗಾಡಿಗಳ ಬಾಡಿಗೆಯಿಂದ ಜೀವಿಸತಕ್ಕ ಬಡವರು ಕುಟುಂಬ ರಕ್ಷಣೆ ಮಾಡುವುದು ಹ್ಯಾಗೆ? ಅಲ್ಲದೆ ಎತ್ತುಗಾಡಿ ಕೊಂಡುಕೊಂಡ ಸಾಲಾ ತೀರಿಸುವುದು ಯಾವ ರೀತಿ? ಮೇಲಾಗಿ, ಬಡವರಿಗಲ್ಲದೆ ಎಂಥಾವರಿಗಾದರೂ ಇಂಥಾ ದಾರಿಯಲ್ಲಿ ಪ್ರಯಾಣಮಾಡುವುದು ಕಷ್ಟವಲ್ಲವೇ? ಈ ಮುಖ್ಯಭಾಗವನ್ನು ನಮ್ಮ ದಯಾಳು ಸರ್ಕಾರದವರು ಜಾಗ್ರತ ಮನಕ್ಕೆ ತಂದುಕೊಂಡು ಈ ರಸ್ತೆಯನ್ನು ಚೆನ್ನಾಗಿ ದುರಸ್ತುಮಾಡಿಸಿಕೊಟ್ಟು, ಪ್ರಜೆಗಳಿಗೆ ಈ ರಸ್ತೆಯಿಂದ ಉಂಟಾಗುವ ಶ್ರಮೆಯನ್ನು ತಪ್ಪಿಸಿ ಕಾಪಾಡುತ್ತಾರೆಂದು ಆಶ್ರಯಿಸಿಕೊಂಡು ಇದ್ದೇನೆ

ಗೂಬನಹಳ್ಳಿ. ಗೊಂಬೆಗಾರ ಹಂಪೇ ಭೀಮಣ್ಣ.

[ಇಷ್ಟು ಸಂಕಟವಾಗಿರುವ ಈ ರಸ್ತೆಯ ಹೀನಸ್ಥಿತಿಯು ಚಿತ್ರದುರ್ಗದ ಡೆಪ್ಟಿ ಕಮಿಷನರ್‌ರವರ ಅಥವಾ ಡಿಸ್ಟ್ರಿಕ್ಟ್ ಬೋರ್ಡಿನವರ ಗಮನಕ್ಕೆ ಬಾರದೆ ಇರುವುದು ಬೋರ್ಡ್ ಮೆಂಬರುಗಳ ಕರ್ತವ್ಯಲೋಪವೆಂದು ಕಾಣುತ್ತದೆ ಎಡಿ.]

ಚಿಕ್ಕಮಗಳೂರು ಮುನ್ಸಿಫರೂ ಲಾಯರುಗಳೂ.

ಅಯ್ಯಾ,

ಚಿಕ್ಕಮಗಳೂರಿನ ಲಾಯರ್ ಸಂಘದವರು ಅಲ್ಲಿನ ಮುನಸೀಫರು ತಮಗೆ ಕೊಟ್ಟ ವಿವೇಕಪೂರ್ವಕವಾದ ಸಲಹೆಗಳನ್ನು ಆಕ್ಷೇಪಣೆಮಾಡಿ ಅವರಿಗೆ ಒಂದು ಪತ್ರವನ್ನು ಬರೆದಿರುತ್ತಾರೆ ಮುನಸೀಫರು ಕೊಟ್ಟ ಸಲಹೆಗಳು ಯಾವುವೆಂದರೆ—(1) ಕಕ್ಷಿಗಾರರ ಅನುಮತಿ ಯಾ ತಿಳುವಳಿಕೆ ಇಲ್ಲದೇ ಅವರ ಬಾಬತು ಕೋರ್ಟಿನಲ್ಲಿ ಉಳಿಯುವ ಡಿಪಾಜಿಟ್ಟಿನ ಹಣವನ್ನು ಏಕಾಏಕಿ ತೆಗೆದುಕೊಳ್ಳುವುದು ಸರಿಯಲ್ಲ; ಅಲ್ಲದೆ (2) ಪ್ರತಿಯೊಬ್ಬ ಲಾಯರೂ ತಮಗೂ ತಮ್ಮ ಕಕ್ಷಿಗಾರರಿಗೂ ನಡೆಯತಕ್ಕ ಹಣಕಾಸಿನ ಲೆಕ್ಕಗಳನ್ನು ಕ್ರಮವಾಗಿ ಇಡತಕ್ಕದ್ದೆಂಬುವುದೇ. ಈ ವಿಷಯದಲ್ಲಿ ಇಲ್ಲಿನ ಲಾಯರುಗಳೆಲ್ಲಾ ಸೇರಿ—ಇವು ತಮ್ಮ ಮರ್ಯಾದೆಗೆ ಕುಂದಕವನ್ನುಂಟುಮಾಡತಕ್ಕ ಸಲಹೆಗಳೆಂತಲೂ, ತಮ್ಮ ಕಕ್ಷಿಗಾರರಲ್ಲಿ ಯಾರೇ ಆಗಲಿ ಇದುವರೆಗೆ ಅಂಥಾ ಡಿಪಾಜಿಟ್ ಹಣವನ್ನು ತೆಗೆದುಕೊಂಡದ್ದರ ವಿಷಯದಲ್ಲಿ ತಮ್ಮ ಮೇಲೆ ಆಕ್ಷೇಪಣೆಮಾಡಿರುವುದಿಲ್ಲವೆಂತಲೂ, ತಮಗೂ ತಮ್ಮ ಕಕ್ಷಿಗಾರರಿಗೂ ಇರುವ ಲೆಕ್ಕಾಚಾರಗಳನ್ನು ಕುರಿತು ಮುನಸೀಫರು ವಿಚಾರಣೆಮಾಡಬೇಕಾದ ಅಗತ್ಯವೇನೂ ಇಲ್ಲವೆಂತಲೂ ಮುನಸೀಫರ ಮೇಲೆ ದೋಷಾರೋಪಣೆಮಾಡಿ ಬರೆದಿರುತ್ತಾರೆ. ಆದರೆ ಮೇಲ್ಕಂಡ ಮುನಸೀಫರ ಸಲಹೆಗಳಲ್ಲಿ ದೋಷವೇನೂ ಇಲ್ಲವೆಂದು ಪ್ರಾಜ್ಞರಾದವರು ಯೋಚಿಸದೆ ಇರಲಾರರು; ಅಲ್ಲದೆ ಇಂತಹ ಕ್ರಮವು ಮದರಾಸ್ ಸರಕಾರದಲ್ಲಿ ಜಾರಿಯಲ್ಲಿದೆ ಎಂಬುವುದು ಎಲ್ಲರಿಗೂ ವೇದ್ಯವಾಗಿದೆ ಈ ಕ್ರಮದಂತೆ ನಡೆದುಕೊಳ್ಳದೆಹೋದರೆ ಲಾಯರುಗಳಿಗೆ ಅಲ್ಲಿ ಸಸ್ಪೆಂಡ್ ಆಗುವುದುಂಟು ಇಂಥಾ ಕ್ರಮವು ಮೈಸೂರು ಸಂಸ್ಥಾನದಲ್ಲೂ ಇದುವರೆಗೂ ಜಾರಿಗೆಬಾರದೆ ಇರುವುದಕ್ಕೆ ಕಾರಣವೇನೋ ತಿಳಿಯದು. ಲಾಯರುಗಳು ಕಕ್ಷಿಗಾರರಿಗೆ ತಿಳಿಸಿ, ಕಕ್ಷಿಗಾರರ ಡಿಪಾಜಿಟ್ ಹಣವನ್ನು ತೆಗೆದುಕೊಳ್ಳುವುದರಲ್ಲಿಯೂ, ತಮಗೂ ತಮ್ಮ ಕಕ್ಷಿಗಾರರಿಗೂ ಇರುವ ಲೆಕ್ಕಾಚಾರಗಳನ್ನು ಕ್ರಮವಾಗಿ ಇಟ್ಟುಕೊಳ್ಳುವುದರಲ್ಲಿಯೂ ಲಾಯರುಗಳ ಮರ್ಯಾದೆಗೆ ಹೇಗೆ ಕುಂದಕವಾಗುತ್ತದೆಯೋ ತಿಳಿಯುವುದು ಕಷ್ಟವಾಗಿದೆ ಇಂಥಾ ಕ್ರಮವನ್ನು ಜಾರಿಗೆ ತರುವುದರಿಂದ ಕಕ್ಷಿಗಾರರಿಗೆ ತುಂಬಾ ಪ್ರಯೋಜನವುಂಟೆಂಬುವುದನ್ನು ಒಪ್ಪುತ್ತೇವೆ. ಆದರೆ ಇದರಿಂದ ಲಾಯರುಗಳು ನಂಬಿಕೆಗೆ ಅನರ್ಹರೆಂದು ಹೇಳಿದಹಾಗಾಗುತ್ತದೆಂದು ಎಂದಿಗೂ ಭಾವಿಸಬಾರದು ಲೇವಾದೇವಿ ಲೆಕ್ಕಗಳು ಕ್ರಮವಾಗಿರಬೇಕಾದದ್ದು ಅವಶ್ಯವೂ ಧರ್ಮವೂ ಆಗಿದೆ ಇದನ್ನು ಹೇಳಿದ್ದಕ್ಕೆ ನಮ್ಮ ಲಾಯರ್‌ಮಹನೀಯರುಗಳಿಗೆ ಆಕ್ಷೇಪವೇಕೋ ತಿಳಿಯದು ನಮ್ಮ ಮುನಸೀಫರು ಮಾಡಿರುವ ಸಲಹೆಗಳು ನ್ಯಾಯವೂ ಸಹಜವೂ ಅಲ್ಲವೆಂದು ಕಕ್ಷಿಗಾರರಲ್ಲಿ ಯಾರೂ ಹೇಳಲಾರರು ಆದಕಾರಣ ಇಂಥಾ ಧರ್ಮವಾದ ಸಲಹೆಗಳು ನಮ್ಮ ಸೀಮೆಯಲ್ಲಿ ಜಾರಿಗೆ ಬರುವಹಾಗೆ ಕಕ್ಷಿಗಾರರೆಲ್ಲರೂ ನಮ್ಮ ಮಹಾರಾಜಾ ಸರ್ಕಾರದವರಿಗೆ ವಿಜ್ಞಾಪನೆ ಮಾಡಿಕೊಳ್ಳುವರೆಂದು ನಿರೀಕ್ಷಿಸುತ್ತೇನೆ.

ಸತ್ಯವಾದಿ.

ವೈಸ್‌ರಾಯಿಯವರಿಗೆ ಮೈಸೂರು ಸಂಸ್ಥಾನದಲ್ಲಿ ನಡೆದ ಅಪೂರ್ವ ಆತಿಥ್ಯಗಳು.

ಗೆರುಸೊಪ್ಪೆ ಜಲಪಾತವನ್ನು ಪರಾಂಬರಿಸಿದ್ದು.

ಹಿಂದುಸ್ಥಾನದ ವೈಸ್‌ರಾಯ್ ಮತ್ತೂ ಗವರ್ನರ್ ಜನರಲ್‌ರವರಾದ ಲಾರ್ಡ್ ಹಾರ್ಡಿಂಗ್ ಪ್ರಭುಗಳು ಪತ್ನಿ ಪರಿವಾರ ಸಮೇತ ಇದೇ ನವಂಬರ್ ತಾ 2 ನೇ ಭಾನುವಾರ ಸಾಯಂಕಾಲ 5-30 ಕ್ಕೆ ಬಿಜಾಪುರದಲ್ಲಿ ಸ್ಪೆಷಲ್ ರೈಲು ಹತ್ತಿ ಪ್ರಯಾಣಮಾಡಿ ತಾ 3 ನೇ ಸೋಮವಾರ ಮಧ್ಯಾಹ್ನ 2-15 ಕ್ಕೆ ಶಿವಮೊಗ್ಗಾ ಸ್ಟೇಷನ್ ತಲಪಿದರು ಅಲ್ಲಿ ಬ್ರಿಟಿಷ್ ರೆಸಿಡೆಂಟರಾದ ಸರ್ ಹ್ಯೂ ಡೇಲಿಯವರೂ, ಕ್ಯಾಪ್ಟನ್ ಹಾಗ್‌ರವರೂ, ನಮ್ಮ ಮಹಾರಾಜರವರ ಮಿಲಿಟರಿ ಸೆಕ್ರೆಟರಿಯವರ ಅಸಿಸ್ಟೆಂಟರಾದ ಕರ್ನಲ್ ಎ. ಎ ಜೋನ್ಸ್‌ರವರೂ, ಸಂಸ್ಥಾನದ ಸ್ಥಳೀಯಾಧಿಕಾರಿಗಳೂ ಕಾದಿದ್ದು ವೈಸ್‌ರಾಯಿ ದಂಪತಿಗಳಿಗೆ ಸುಸ್ವಾಗತವನ್ನು ಬಯಸಿದರು ಅಲ್ಲಿ ಸಿದ್ಧವಾಗಿದ್ದ ಮೋಟರುಗಳಲ್ಲಿ ವೈಸ್‌ರಾಯಿ ದಂಪತಿಗಳೂ ಪರಿವಾರದವರೂ ಕುಳಿತುಕೊಂಡು ಅಲ್ಲಿಗೆ ಸುಮಾರು 65 ಮೈಲಿ ದೂರದಲ್ಲಿರುವ ಗೆರುಸೊಪ್ಪಾ ಜಲಪಾತಕ್ಕೆ ಚಿತ್ತೈಸಿದರು ಶರಾವತಿ ನದಿಯು ಅಲ್ಲಿ ವಿಸ್ತಾರವಾಗಿ ಹರಿಯುತ್ತಾ ನಾಲ್ಕು ಭಾಗಗಳಾಗಿ ಆಳವಾದ ಪಳ್ಳಕ್ಕೆ ಧುಮುಕುತ್ತದೆ. ಮೈಸೂರು ಸೀಮೆಯು ಎಲ್ಲೆಯೊಳಗೆ ಮೂರು ಭಾಗಗಳೂ, ಎಲ್ಲಕ್ಕಿಂತಲೂ ದೊಡ್ಡದಾದದ್ದು ಬೊಂಬಾಯಿ ಆಧಿಪತ್ಯದ ಎಲ್ಲೆಯೊಳಗೂ ಬೀಳುತ್ತವೆ ಮೈಸೂರು ಗವರ್ನ್‌ಮೆಂಟಿನವರು ತಮ್ಮ ಎಲ್ಲೆಯೊಳಗೆ ಆ ಜಲಪಾತಗಳ ಎದುರಿನಲ್ಲಿ ದಿವ್ಯವಾದ ಮಂಟಪವನ್ನು ರಚಿಸಿ ವೈಸ್‌ರಾಯರವರ ಆತಿಥ್ಯಕ್ಕಾಗಿ ಅಣಿಮಾಡಿದ್ದರು. ಶಿವಮೊಗ್ಗೆಯಿಂದ ಉದ್ದಕ್ಕೂ ರಸ್ತೆಯ ಸಂರಕ್ಷಣೆಗೆ ಗ್ರಾಮಸ್ಥರೂ ಅಧಿಕಾರಿಗಳೂ ನೇಮಕವಾಗಿದ್ದರು. ರಸ್ತೆಯು ಬಹು ಒತ್ತಾದ, ನಿರ್ಜನ ಪ್ರದೇಶವಾದ, ನೇತ್ರಾನಂದಕರವಾದ ಮಹಾ ಕಾಡಿನಲ್ಲಿ ಹೋಗುವುದರಿಂದ ಈ ನೋಟವು ಆ ಮಹನೀಯರಾದ ಅತಿಥಿಗಳಿಗೆ ಬಹು ಇಂಪಾಗಿತ್ತು ಅಲ್ಲಲ್ಲಿಗೆ ರೈತಪ್ರಜೆಗಳು ರಾಜಭಕ್ತಿ ಪ್ರೀತಿಗಳ ಪ್ರದರ್ಶನಾರ್ಥವಾಗಿ ಬಗೆಬಗೆಯ ಚಪ್ಪರ, ಕಮಾನು, ತೋರಣಾದಿಗಳನ್ನು ಕಟ್ಟಿ ಮನೋಹರವಾಗಿ ಮಾಡಿದ್ದರು. ಉದ್ದಕ್ಕೂ ಸಾಲುಮರಗಳನ್ನು ಸುಣ್ಣ ಕೆಮ್ಮಣ್ಣು ಪಟ್ಟೆಗಳಿಂದ ಅಲಂಕರಿಸಿದ್ದರು. ಈ ಕಳಕಳಿಸುವ ಮಾರ್ಗದಲ್ಲಿ ಸಂಚಾರಮಾಡಿಕೊಂಡು ನದಿಯ ಬಳಿಯನ್ನು ಸೇರಿ, ಮೋಟರನ್ನು ಬಿಟ್ಟು ವೈಸ್‌ರಾಯರವರು ದೋಣಿಹತ್ತಿ ಸುಖವಾಗಿ ಆಚೆ ದಡವನ್ನು ತಲಪಿ ಅಲ್ಲಿಂದ ಸುಮಾರು ಒಂದೂವರೆ ಮೈಲಿದೂರದಲ್ಲಿ ಅವರಿಗಾಗಿ ಸಿದ್ಧಪಡಿಸಿದ್ದ ದಿವ್ಯಮಂಟಪವನ್ನು ಸಾಯಂಕಾಲ 5-30 ಗಂಟೆಗೆ ತಲಪಿದರು ಅಲ್ಲಿ ಮೈಸೂರು ಇಂಪೀರಿಯಲ್ ಸರ್ವಿಸ್ ಸೈನ್ಯದ ಸವಾರರು ಕಾದಿದ್ದು ಅವರಿಗೆ ಸನ್ಮಾನಮಾಡಿದರು.

ಅಲ್ಲಿ ಆ ರಾತ್ರಿ ವೈಸ್‌ರಾಯಿ ದಂಪತಿಗಳು ಭೋಜನಮಾಡಿದ ಬಳಿಕ ಬಂಗಲೆಯ ಮುಂಭಾಗಕ್ಕೆ ದಯಮಾಡಿ ವಿದ್ಯುಚ್ಛಕ್ತಿಯ ಕಿರಣಗಳಿಂದ ಹೊಳೆಯುತ್ತಿದ್ದ ಆ ಭಯಂಕರವಾದ ಜಲಪಾತವನ್ನು ಪರಾಂಬರಿಸಿ ಅದರ ವೈಖರಿಯನ್ನು ಕೊಂಡಾಡಿದರು. ನಮ್ಮ ಮಹಾರಾಜರವರು ಇದಕ್ಕೋಸ್ಕರವೇ ವಿದ್ಯುಚ್ಛಕ್ತಿಯ ಇನ್‌ಜನಿಯರ್ ಮಿ|| ಬೀಮ್ಸ್‌ರವರ ಮೂಲಕ ಅಮೇರಿಕದಿಂದ ಕೆಲವು ದಿನಗಳ ಹಿಂದೆ 18-20 ಸಾವಿರ ಮೇಣಬತ್ತಿಗಳ ಪ್ರಕಾಶವನ್ನು ಉಗುಳುವಂಥಾ ವಿದ್ಯುಚ್ಛಕ್ತಿಯ ದೀಪವನ್ನು ತರಿಸಿ ಅಲ್ಲಿಗೆ ಕಳುಹಿಸಿದ್ದರು. ವೈಸ್‌ರಾಯಿಪ್ರಭು ದಂಪತಿಗಳು ಮರುದಿನವೆಲ್ಲಾ ಆ ಪ್ರಾಂತ್ಯದಲ್ಲಿ ಸಂಚಾರಮಾಡಿ ಅಗಾಧವಾದ ಮತ್ತೂ ಅಪೂರ್ವವಾದ ಜಲಪಾತವೇ ಮೊದಲಾದ ಭಾಗಗಳನ್ನು ಪರಾಂಬರಿಸಿದರು. ಆ ರಾತ್ರಿ ಅಲ್ಲಿ ದಿವ್ಯವಾದ ನಾನಾ ಬಾಣ ಬಿರುಸುಗಳ ನೋಟವು ಜರುಗಿತು. ವೈಸ್‌ರಾಯರವರು ತಮಗಾಗಿ ಅಲ್ಲಿ ಮಾಡಿದ್ದ ಏರ್ಪಾಡುಗಳೆಲ್ಲಾ ತುಂಬಾ ತೃಪ್ತಿಕರವಾಗಿದ್ದವೆಂದು ಅಪ್ಪಣೆಕೊಡಿಸಿದರು.

ತಾ. 5 ನೇ ಮಧ್ಯಾಹ್ನ 3 ಗಂಟೆಗೆ ಅಲ್ಲಿಂದ ವೈಸ್‌ರಾಯರವರು ಮೋಟರುಗಳಲ್ಲಿ ಹಿಂತಿರುಗಿ ಶಿವಮೊಗ್ಗೆಯನ್ನು ತಲಪಿ ಅಲ್ಲಿ ಕಾದಿದ್ದ ಸ್ಪೆಷಲ್ ರೈಲು ಹತ್ತಿ ಸಾಯಂಕಾಲ 6-15 ಗಂಟೆಗೆ ಅಲ್ಲಿಂದ ಹೊರಟು ರಾಜಧಾನಿಯನ್ನು ಕುರಿತು ಪ್ರಯಾಣಮಾಡಿದರು. ಆ ರಾತ್ರಿ ದಾರಿಯ ಉದ್ದಕ್ಕೂ ಸ್ಥಳಾಧಿಕಾರಿಗಳೂ ಗ್ರಾಮಗಳ ರೈತಪ್ರಜೆಗಳೂ ಪಂಜು ದೀವಟಿಗೆಗಳನ್ನು ಹಿಡಿದಿದ್ದು ಆ ಮಹನೀಯರ ಪ್ರಯಾಣವನ್ನು ಸುರಕ್ಷಿತವಾಗಿ ಆಗಮಾಡಿಸಿದರು

ಫ್ರೆಂಚ್ ರಾಕ್ಸಿನಲ್ಲಿ ಉಪಸ್ತಕಪಾಲು.

ತಾ 6 ನೇ ಗುರುವಾರ ಬೆಳಗ್ಗೆ ವೈಸ್‌ರಾಯರವರ ರೈಲ್‌ಗಾಡಿಯು 8-37 ಕ್ಕೆ ಫ್ರೆಂಚ್ ರಾಕ್ಸ್ ಸ್ಟೇಷನ್ ತಲಪಿ 8 ನಿಮಿಷ ನಿಂತುಕೊಂಡಿತು ಅಷ್ಟು ಹೊತ್ತಿಗೆ ಬ್ರಿಟಿಷ್ ರೆಸಿಡೆಂಟರವರ ಅಸಿಸ್ಟೆಂಟರೂ, ಸೀನಿಯರ್ ಕೌನ್ಸಿಲರ್ ಮಿ|| ಎಚ್. ವಿ. ನಂಜುಂಡಯ್ಯನವರೂ, ಸರ್ದಾರ್ ಎಂ. ಗೋಪಾಲಕೃಷ್ಣ ಅರಸಿನವರೂ ಫ್ರೆಂಚ್ ರಾಕ್ಸಿಗೆ ಮೈಸೂರಿನಿಂದ ಹೋಗಿ ಕಾದಿದ್ದು, ವೈಸ್‌ರಾಯರವರ ಭೇಟಿಮಾಡಿ ರಾಜಧಾನಿಗೆ ಬಿಜಮಾಡುವಂತೆ ಮಹಾರಾಜರವರ ಪರವಾಗಿ ಅರಿಕೆ ಮಾಡಿ, ಇನ್ನೊಂದು ರೈಲ್‌ಗಾಡಿಯಲ್ಲಿ ಕುಳಿತುಕೊಂಡರು ಈ ಗಾಡಿಯನ್ನು ವೈಸ್‌ರಾಯರವರಿದ್ದ ಗಾಡಿಗೆ ಜಂಟಿಸಿದ ಮೇಲೆ ವೈಸ್‌ರಾಯರವರು ಅಲ್ಲಿಂದ ಹೊರಟು ರಾಜಧಾನಿಯನ್ನು ಕುರಿತು ಚಿತ್ತೈಸಿದರು

ರಾಜಧಾನಿಯಲ್ಲಿ ನಡೆದ ಆತಿಥ್ಯಗಳು.

ತಾ 6 ನೇ ಗುರುವಾರ ಬೆಳಗ್ಗೆ ರಾಜಧಾನಿಯ ರೈಲ್ವೆಸ್ಟೇಷನ್ ಪ್ಲಾಟ್‌ಫಾರಮು ರಾಜವರ್ಗದ ಸರ್ದಾರರು ಅರಸುಗಳಿಂದಲೂ, ಗವರ್ನ್‌ಮೆಂಟ್ ಅಧಿಕಾರಿಗಳಿಂದಲೂ, ಯೂರೋಪಿಯನ್ ಮತ್ತೂ ದೇಶೀಯರಲ್ಲಿ ಮುಖ್ಯರಾದ ದೊಡ್ಡ ಮನುಷ್ಯರಿಂದಲೂ, ಕೊಡಗರ ಪ್ರತಿನಿಧಿಗಳಿಂದಲೂ ತುಂಬಿತುಳುಕುತ್ತಿತ್ತು. 9-50 ಗಂಟೆಗೆ ಶ್ರೀಮನ್ ಮಹಾರಾಜರವರು ಶ್ರೀಮದ್ಯುವರಾಜರವರ ಸಮೇತ ಮೋಟರಿನಲ್ಲಿ ಸ್ಟೇಷನ್‌ಗೆ ಚಿತ್ತೈಸಿ ಅಲ್ಲಿ ಸೇರಿದ್ದ ಮಹನೀಯರ ವಂದನೆಗಳನ್ನು ಹಸನ್ಮುಖದಿಂದ ಅಂಗೀಕರಿಸಿ ಅವರಿಗಾಗಿ ಏರ್ಪಡಿಸಿದ್ದ ಕೊಟಡಿಗೆ ಚಿತ್ತೈಸಿದರು. ಯುವರಾಜರವರು ಹೊರಗಡೆ ಪ್ಲಾಟ್‌ಫಾರಮಿನಲ್ಲಿ ನಿಂತು ಇದ್ದ ಸರ್ದಾರರ ಮತ್ತು ಅಧಿಕಾರಿಗಳ ಕೂಡ ಸಂಭಾಷಣೆ ಬೆಳೆಸುತ್ತಿದ್ದರು 10 ಗಂಟೆಗೆ ಸರಿಯಾಗಿ ರೈಲುಕೂಗಿ ಗಾಡಿಯು ನಿಧಾನವಾಗಿ ಸ್ಟೇಷನ್ ಒಳಕ್ಕೆ ಬಂದು ನಿಂತಿತು. ಕೂಡಲೇ ಗೌರವಾರ್ಥವಾದ 31 ತೋಪುಗಳು ಹಾರಲಾರಂಭವಾದವು ಏಡಿಕಾಂಗರವರು ಗಾಡಿಯ ಬಾಗಿಲನ್ನು ತೆರೆದರು ಪ್ಲಾಟ್‌ಫಾರಮಿನಲ್ಲಿದ್ದವರೆಲ್ಲಾ ಅದಕ್ಕಿಂದ ತಮ್ಮತಮ್ಮ ಸ್ಥಾನವನ್ನರಿತು ನಿಂತುಕೊಂಡರು. ಶ್ರೀಮನ್ ಮಹಾರಾಜರವರು ಕೊಟಡಿಯಿಂದ ಗಾಡಿಯ ಬಾಗಿಲ ಬಳಿಗೆ ಚಿತ್ತೈಸುವುದಕ್ಕೂ ವೈಸ್‌ರಾಯಿ ಪ್ರಭುಗಳು ಗಾಡಿಯೊಳಗಿಂದ ಇಳಿದು ಬರುವುದಕ್ಕೂ ಸರಿಹೋಯಿತು. ಅವರೀರ್ವರೂ 3-4 ಹೆಜ್ಜೆ ಅಭಿಮುಖವಾಗಿ ಹೋಗಿ, ವೈಸ್‌ರಾಯಿ ಲಾರ್ಡ್ ಹಾರ್ಡಿಂಜ್‌ರವರು ಕೈನೀಡಿ ನಮ್ಮ ಮಹಾರಾಜರವರ ಹಸ್ತವನ್ನು ಹಿಡಿದು ಯೋಗಕ್ಷೇಮವನ್ನು ವಿಚಾರಿಸಿ, ಮುಂದಕ್ಕೆ ದಯಮಾಡಿ ಶ್ರೀಮದ್ಯುವರಾಜರವರ ಕೈಯನ್ನು ಹಿಡಿದು ಅವರ ಸಂಗಡಲೂ ಯೋಗಕ್ಷೇಮವನ್ನು ಬೆಳಸುವಷ್ಟರಲ್ಲಿ ಬ್ರಿಟಿಷ್ ರೆಸಿಡೆಂಟ್ ಸರ್ ಹ್ಯೂ ಡೇಲಿಯವರು ಅಲ್ಲಿಗೆ ಹೋಗಿ ವೈಸ್‌ರಾಯಿಯವರ ಭೇಟಿಮಾಡಿದರು ಅತ್ತಲಾಗಿ ನಮ್ಮ ಮಹಾರಾಜರವರು ವೈಸ್‌ರಾಯಿಯವರ ಪತ್ನೀರವರ ಯೋಗಕ್ಷೇಮವನ್ನು ವಿಚಾರಿಸಿಕೊಂಡು ವೈಸ್‌ರಾಯಿಯವರ ಸಮೀಪಕ್ಕೆ ದಯಮಾಡಿದರು, ಯುವರಾಜರವರು ವೈಸ್‌ರಾಯರವರ ಪತ್ನೀಯವರ ಭೇಟಿಮಾಡಿ ಅವರ ಕೂಡ ಸಂಭಾಷಣೆಮಾಡಲಾರಂಭಿಸಿದರು

ವೈಸ್‌ರಾಯರವರಿಗೆ ಭೇಟಿಮಾಡಿಸಿದ್ದು.

ಬಳಿಕ ಶ್ರೀಮನ್ ಮಹಾರಾಜರವರು ವೈಸ್‌ರಾಯಿ ಲಾರ್ಡ್ ಹಾರ್ಡಿಂಜ್‌ರವರನ್ನು ಕರೆದುಕೊಂಡುಹೋಗಿ ಮುಂದೆ ಹೇಳುವವರನ್ನೆಲ್ಲಾ ಕಾಣಿಸಿ ಭೇಟಿಮಾ

ಗಳಾದ ದಿವಾನ್ ಮಿ|| ಎಂ ವಿಶ್ವೇಶ್ವರಯ್ಯನವರು, ಸರ್ದಾರ್ ಎಂ ಕಾಂತರಾಜೆ ಅರಸಿನವರು, ಸರ್ದಾರ್ ಕರ್ನಲ್ ಜೆ ದೇಶರಾಜೆ ಅರಸಿನವರು, ಸರ್ದಾರ್ ಎಂ ಲಕ್ಷ್ಮೀಕಾಂತರಾಜೆ ಅರಸಿನವರು, ಮಾಜಿ ದಿವಾನ್ ಮಿ|| ಟಿ ಆನಂದರಾಯರು, ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಮಿ|| ಆರ್ ಎಚ್ ಕ್ಯಾಂಬೆಲ್‌ರವರು, ಸರ್ದಾರ್ ಎಂ ಗೋಪಾಲರಾಜೆ ಅರಸಿನವರು, ಸೀನಿಯರ್ ಕೌನ್ಸೆಲರ್ ಮಿ|| ಎಚ್ ವಿ ನಂಜುಂಡಯ್ಯನವರು, ಚೀಫ್ ಜಡ್ಜ್ ಮಿ|| ಪಿ ಎಸ್ ಕೃಷ್ಣರಾಯರು, ಸರ್ದಾರ್ ಎಂ ಗೋಪಾಲಕೃಷ್ಣ ಅರಸಿನವರು, ಸರ್ದಾರ್ ರಾಣಾಸಾಹೇಬರವರು, ಚೀಫ್ ಕೋರ್ಟ್ ಜಡ್ಜ್ ಮಿ|| ಕೆ ಎಸ್ ಚಂದ್ರಶೇಖರಯ್ಯರವರು ಇವರೆಲ್ಲಾ ವೈಸ್‌ರಾಯರವರ ಭೇಟಿಮಾಡಿದ ತರುವಾಯ ಮಹಾರಾಜರವರು ವೈಸ್‌ರಾಯರನ್ನು ಪ್ಲಾಟ್‌ಫಾರಮಿನ ಉತ್ತರಭಾಗಕ್ಕೆ ಸಂಗಡ ಕರೆದು ಹೋಗಿ ಅಲ್ಲಿ ಎರಡು ಲೈನ್ ಕಟ್ಟಿ ಬಾವುಟಗಳ ಸಮೇತ ನಿಂತಿದ್ದ ಕಮಿಷನ್ ಬಾರ್ ಸಿಪಾಯಿಗಳನ್ನು ತೋರಿಸಿದರು ಅವರು ಬಂದೂಕುಗಳನ್ನೆತ್ತಿ ತೋರಿಸಿ ವೈಸ್‌ರಾಯರವರಿಗೆ ಮರ್ಯಾದೆಮಾಡಿದರು ಅವರ ಚಾಟುಮಾಟನ್ನು ನೋಡಿ ಸಂತೋಷಪಟ್ಟು ವೈಸ್‌ರಾಯರವರು ಅವರಿಗೆ ಪ್ರತಿವಂದನೆಮಾಡುತ್ತಾ ಮಹಾರಾಜರವರ ಕೂಡ ಹಿಂತಿರುಗಿ ಸ್ಟೇಷನ್ ಬಾಗಿಲ ಬಳಿಗೆ ಚಿತ್ತೈಸಿ ಅಲ್ಲಿ ಸೇರಿದ್ದ ಅಧಿಕಾರಿಗಳೂ, ದೊಡ್ಡ ಮನುಷ್ಯರೂ, ಸರ್ದಾರರೂ ಮಾಡಿದ ವಂದನೆಗಳನ್ನು ಬಹುವಿನಯದಿಂದ ಅಂಗೀಕರಿಸಿ ಸಂತೋಷಪೂರ್ವಕವಾಗಿ ತಲೆಬಗ್ಗಿಸಿ ಅವರಿಗೆಲ್ಲಾ ಪ್ರತಿವಂದನೆಗಳನ್ನು ಮಾಡಿದರು ಅವರು ಸಾಧಾರಣವಾದ ಕರಿಯ ನಿಲುವಂಗಿಯನ್ನೂ, ಕರಿಯ ಪರಾಯಿಯನ್ನೂ ಧರಿಸಿದ್ದರು ನಮ್ಮ ಮಹಾರಾಜರವರು ಥಳಥಳಿಸುವ ಕಿಂಕಾಪಿನ ಪೋಷಾಕಿನ ಮೇಲೆ ಅಮೂಲ್ಯವಾದ ರತ್ನಾಭರಣಗಳನ್ನೂ, ಮುತ್ತಿನ ಕಂಠೀಯನ್ನೂ, ಜಿ ಸಿ ಎಸ್ ಐ ಬಿರುದನ್ನೂ ಧರಿಸಿದ್ದರು ಪ್ಲಾಟ್‌ಫಾರಮಿನಲ್ಲಿ ಬಂಗಾರದ ಕಂಭಗಳ ಮೇಲೆ ಮಹಾ ನೇತ್ರಾನಂದಕರವಾಗಿಯೂ ವಿಚಿತ್ರವಾಗಿಯೂ ಮನೋಹರವಾಗಿಯೂ ಮಾಡಿದ್ದ ಭುವನೇಶ್ವರಿಯೂ, ಬಾಗಿಲಲ್ಲಿ ಕಮಾನುಕಟ್ಟಿ ಬಿಡಿಸಿದ್ದ ಚಿತ್ರಕೆಲಸಗಳೂ ಮೈಸೂರಿನ ನಾಜೂಕು ಕೆಲಸಗಾರರ ಕೌಶಲ್ಯವನ್ನು ಪ್ರಕಾಶಪಡಿಸುತ್ತಿದ್ದವು

ಸಲಾಂ ಬಾಜಾ ಆಗುತ್ತಿರುವಲ್ಲಿ ಮಹಾರಾಜರವರು ವೈಸ್‌ರಾಯರವರನ್ನು ಸ್ಟೇಷನ್ ದ್ವಾರದಿಂದ ಅಲಂಕರಿಸಲ್ಪಟ್ಟ ಮೊಗಸಾಲೆಗೆ ಕರೆದುಕೊಂಡು ಹೋದಾಗ ಅಲ್ಲಿ ಸಾಲುಸಾಲಾಗಿ ನಿಂತಿದ್ದ ಕಮಿಷನ್ ಬಾರ್ ಸಿಪಾಯಿಗಳೂ, ಅಮಾನಿ ಬಾರ್ ಸಿಪಾಯಿಗಳೂ ಇತರ ಸೈನಿಕರೂ, ಕುದುರೆಗಳ ರೆಜಿಮೆಂಟುಗಳೂ ವೈಸ್‌ರಾಯರವರಿಗೆ ಸನ್ಮಾನಮಾಡಿದರು ಅಷ್ಟರಲ್ಲಿ ನಾಲ್ಕು ಕುದುರೆ ಕಟ್ಟಿದ ದಿವ್ಯವಾದ ಸಾರೋಟು ಬಂದು ನಿಂತಿತು ಅದರಲ್ಲಿ ವೈಸ್‌ರಾಯರವರೂ ಶ್ರೀಮನ್ ಮಹಾರಾಜರವರೂ ಒಂದು ಕಡೆಯೂ, ಬ್ರಿಟಿಷ್ ರೆಸಿಡೆಂಟರವರೂ ವೈಸ್‌ರಾಯರವರ ಮಿಲಿಟರಿ ಸೆಕ್ರೆಟರಿಯವರೂ ಅವರ ಎದುರಿನಲ್ಲೂ ಕುಳಿತುಕೊಂಡರು ಆ ಸಾರೋಟು ಮುಂದೆ ಹೊರಟಿತು ಶ್ವೇತಚ್ಛತ್ರಿಯನ್ನೂ ಇತರ ಶ್ರೇಷ್ಠವಾದ ಮರ್ಯಾದೆಗಳನ್ನೂ ವೈಸ್‌ರಾಯರವರಿಗೆ ಒಪ್ಪಿಸಲಾಯಿತು ಆ ಸಾರೋಟಿನ ಹಿಂದೆ ಬಂದ ಎರಡನೆಯದರಲ್ಲಿ ವೈಸ್‌ರಾಯರವರ ಪತ್ನೀಯೂ ಶ್ರೀಮದ್ಯುವರಾಜರವರೂ ಒಂದು ಕಡೆಯೂ, ಸರ್ದಾರ್ ಎಂ ಗೋಪಾಲರಾಜೆ ಅರಸಿನವರೂ ವೈಸ್‌ರಾಯರವರ ಎಡಿಕಾಂಗರೊಬ್ಬರೂ ಎದುರಿನಲ್ಲೂ ಕುಳಿತುಕೊಂಡರು ಅದರ ಹಿಂದೆ ಮಹಾರಾಜರವರ ಬಾಡಿಗಾರ್ಡ್ ಸವಾರರೂ, ಇತರ ಹಿಂದೆ ಕುದುರೆ ಸವಾರರೂ ಸಾಲುಕಟ್ಟಿ ಹೊರಟರು ಮೂರನೇ ಸಾರೋಟಿನಲ್ಲಿ ಇಂಡಿಯಾ ಗೌರ್ನಮೆಂಟಿನ ಫಾರಿನ್ ಸೆಕ್ರೆಟರಿಯವರು, ದಿವಾನ್‌ರವರು, ಅಸಿಸ್ಟೆಂಟ್ ರೆಸಿಡೆಂಟರವರು, ವೈಸ್‌ರಾಯರವರ ಎಡಿಕಾಂಗರೊಬ್ಬರೂ ಕುಳಿತುಕೊಂಡರು ಅದರ ಹಿಂದೆ ಬಂದ ನಾಲ್ಕನೇ ಸಾರೋಟಿನಲ್ಲಿ ಮಿಸ್ ಆರ್ ಬೋರ್ನ್ ರವರು, ವೈಸ್‌ರಾಯರವರ ಪ್ರೈವೆಟ್ ಸೆಕ್ರೆಟರಿಯವರು, ವೈಸ್‌ರಾಯರವರ ಎಡಿಕಾಂಗರೊಬ್ಬರು ಕುಳಿತಿದ್ದರು ಐದನೇ ಸಾರೋಟಿನಲ್ಲಿ ವೈಸ್‌ರಾಯರವರ ಡಾಕ್ಟರವರು, ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯವರು, ಇಕ್ವೆರಿ ಬೋರ್ನ್ ರವರು, ರೆಸಿಡೆಂಟರವರ ಪ|| ಅಸಿಸ್ಟೆಂಟರವರೂ ಕುಳಿತಿದ್ದರು ಈ ಸಾರೋಟಿನ ಹಿಂದೆ ಕುದುರೆ ಸವಾರರು ಹೊರಟರು ಈ ಮೆರವಣಿಗೆಯ ಮುಂಭಾಗದಲ್ಲಿ ಮೊದಲು ಎರಡು ಡಿವಿಜನ್ ಕುದುರೆ ಸವಾರರೂ, ಇವರ ಹಿಂದೆ ಮಹಾರಾಜರವರ ಬಾಡಿಗಾರ್ಡ್ ಸವಾರರೂ ಹೋಗುತ್ತಿದ್ದರು ಸಾರೋಟುಗಳ ಎಡಬಲ ಪಾರ್ಶ್ವಗಳಲ್ಲಿ ಅರಮನೆಯ ಖಾಸಾ ಮರ್ಯಾದೆಗಳು ಹೊರಟವು ರಸ್ತೆಯ ಉದ್ದಕ್ಕೂ ಕುದುರೆ ಸವಾರರೂ, ಬಂದೂಕುಗಳನ್ನು ಹಿಡಿದ ಸಿಪಾಯಿಗಳೂ, ಓರೇವಾರಿಯೂ ಪೋಲೀಸಿನವರೂ ಅಷ್ಟಷ್ಟು ದೂರಕ್ಕೆ ನಿಂತು ಕಾಯುತ್ತಿದ್ದರು ಪ್ರಜೆಗಳ ಗುಂಪು ರಸ್ತೆಗಳ ಉದ್ದಕ್ಕೂ ಎರಡು ಕಡೆಗಳಲ್ಲೂ ಬಹಳ ಜನವಾಗಿ ಕಿಕ್ಕಿರಿಯುವಂತೆ ತುಂಬಿ ನಿಂತು ಮೆರವಣಿಗೆ ಹೋದಹಾಗೆ ಜಯಧ್ವನಿ ಮಾಡುತ್ತಿತ್ತು ಉದ್ದಕ್ಕೂ ಮಹಡಿಗಳಲ್ಲೂ ಬಿಸಿಲುಮಚ್ಚುಗಳ ಮೇಲ್ಗಡೆಯೂ ನೋಟಕರಾರನ್ನೂ ಬಿಡದೆ ಪೋಲೀಸಿನವರನ್ನು ಕಾವಲಿಟ್ಟು ಉಸ್ತುವಾರಿ ಮಾಡುತ್ತಿದ್ದರು ವೈಸ್‌ರಾಯರವರ ಸಾರೋಟು ರೈಲೆ ಸ್ಟೇಷನ್‌ನಿಂದ ನಿಧಾನವಾಗಿ ಪಟ್ಟಣದೊಳಕ್ಕೆ ಪ್ರವೇಶಿಸಿ ಸಯ್ಯಾಜಿರಾವ್ ರಸ್ತೆಯಲ್ಲಿ ತಿರುಗಿತು ಅಲ್ಲಿ ರಸ್ತೆಯ ಎರಡು ಕಡೆಗಳಲ್ಲೂ ಉದ್ದಕ್ಕೂ ಗ್ಯಾಲರಿಗಳ ಮೇಲೆ ಸ್ಕೂಲ್ ಬಾಲಕರು ತಮ್ಮ ತಮ್ಮ ಉಪಾಧ್ಯಾಯರುಗಳ ಕಾವಲಿನಲ್ಲಿ ಕುಳಿತು ವೈಸ್‌ರಾಯರವರ ದರ್ಶನವನ್ನು ಮಾಡಿ ಜಯಧ್ವನಿ ಮಾಡಲಾರಂಭಿಸಿದರು ಕೆಲವು ವಿದ್ಯಾರ್ಥಿಗಳು ಆಹ್ಲಾದಕರವಾದ ಪದಗಳನ್ನು ಹಾಡುತ್ತಿದ್ದರು ಜನರಲ್ ಆಸ್ಪತ್ರೆಯ ಎದುರಿನಲ್ಲಿ ಹಾಕಿದ್ದ ದಿವ್ಯವಾದ ಭುವನೇಶ್ವರಿ ಮಂಟಪದಲ್ಲಿ ಎಲ್ಲಾ ಸಂಗಡಗಳ ಕಡೆಯ ಪ್ರಮುಖರೂ, ಲೌಕಿಕ ದೊಡ್ಡ ಮನುಷ್ಯರೂ ದರ್ಬಾರ್ ದಿರಸಿನಲ್ಲಿ ಕಾದಿದ್ದು ವೈಸ್‌ರಾಯರವರಿಗೆ ಪದ್ಯಗಳನ್ನು ಕನ್ನಡ, ಸಂಸ್ಕೃತ, ಹಿಂದುಸ್ತಾನಿ ಭಾಷೆಗಳಲ್ಲಿ ಓದಿ ಹೇಳಿ ಅಭಿನಂದನವನ್ನು ಮಾಡಿ ಸುಖಾಗಮನವನ್ನು ಬಯಸಿದ್ದಲ್ಲದೆ ಅವರಿಗೆ ಹಾರ ತುರಾಯಿಗಳನ್ನು ಒಪ್ಪಿಸಿದರು ವೈಸ್‌ರಾಯರವರು ಆ ಮಂಟಪದಲ್ಲಿ 1-5 ನಿಮಿಷಗಳ ತನಕ ಸಾರೋಟನ್ನು ನಿಲ್ಲಿಸಿ ಬಹು ಸಂತೋಷದಿಂದ ಆ ಪದ್ಯಗಳನ್ನು ಲಾಲಿಸಿ ಆದರಪೂರ್ವಕವಾಗಿ ಅವರನ್ನೆಲ್ಲಾ ವಂದಿಸಿ ಮುಂದೆ ತೆರಳಿದರು ತರುವಾಯ ರಸ್ತೆಯ ಎರಡು ಕಡೆಗಳಲ್ಲೂ ಸ್ಕೂಲ್ ಮಕ್ಕಳು ಸಾಲಾಗಿ ಕುಳಿತು ಜಯಘೋಷಮಾಡುತ್ತಿದ್ದರು ಅಲ್ಲಿಂದ ಮೆರವಣಿಗೆಯು ಉತ್ತರಬಾಗಿಲಿನಿಂದ ಕರ್ಸನ್ ಪಾರ್ಕಿನೊಳಕ್ಕೆ ಪ್ರವೇಶಿಸಿ ಲೇಟ್ ಮಹಾರಾಜರವರ ಮೆಮೋರಿಯಲ್ ಫೌಂಟನನ್ನು ಬಲಕ್ಕೆ ಬಿಟ್ಟು ಮುಂದಕ್ಕೆ ತೆರಳಿತು ಅಲ್ಲಿ ರಸ್ತೆಯ ಎರಡು ಕಡೆಗಳಲ್ಲೂ ಅಲಂಕಾರವಾದ ಮೇಲ್ ಛಾವಣಿಯುಳ್ಳ ಗ್ಯಾಲರಿಗಳ ಮೇಲೆ ಸಾವಿರಾರು ಮಂದಿ ಬಾಲಕಿಯರು ಕುಳಿತು ವೈಸ್‌ರಾಯರವರಿಗೆ ಸುಖಾಗಮನ ಸೂಚಕವಾದ ಬಹು ಇಂಪಾದ ಹಾಡುಗಳನ್ನು ಹೇಳುತ್ತಿದ್ದರು ಸಾರೋಟು ಮುಂದಿನ ದಿವ್ಯವಾದ ಮ್ಯುನಿಸಿಪಲ್ ಚಪ್ಪರದೊಳಕ್ಕೆ ಹೋಯಿತು ಅದರಲ್ಲಿ ಮಾಡಿದ್ದ ಅಲಂಕಾರಗಳು ನೇತ್ರಾನಂದಕರವಾಗಿದ್ದವು ಈ ಭುವನೇಶ್ವರಿಯೊಳಗೆ ಅಧಿಕಾರಿಗಳೂ, ದೊಡ್ಡ ಮನುಷ್ಯರೂ, ಪುರಾಧ್ಯಕ್ಷ ಮಂಡಲಿಯವರೂ ದರ್ಬಾರ್ ದಿರಸಿನಲ್ಲಿ ನೂರಾರು ಮಂದಿ ಸೇರಿದ್ದರು ಸಾರೋಟು ನಿಂತ ಒಡನೆಯೇ ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮ|| ಟಿ ಜಿ ಲಕ್ಷ್ಮಣರಾಯರು ವೈಸ್‌ರಾಯ ಪ್ರಭುಗಳಿಗೆ ಸುಖಾಗಮನವನ್ನು ಬಯಸುವ ಅಡ್ರೆಸ್ಸನ್ನು ಓದಿ ಒಪ್ಪಿಸಿದರು, ಈ ಅಡ್ರೆಸ್ಸಿನ ಮುಖ್ಯಾಭಿಪ್ರಾಯವೇನೆಂದರೆ—

ಮ್ಯುನಿಸಿಪಲ್ ಅಡ್ರೆಸ್ಸು

ರಾಜಧಾನಿಯ ಪ್ರಜೆಗಳ ಪ್ರತಿನಿಧಿಗಳಾದ ನಾವು ಈ ಸಮಯದಲ್ಲಿ ಮಹಾಪ್ರಭುಗಳಾದ ತಮಗೆ ಭಯಭಕ್ತಿ ಪೂರ್ವಕವಾಗಿ ನಮ್ಮ ವಿಜ್ಞಾಪನೆಗಳನ್ನು ಸಲ್ಲಿಸಿ ತಮಗೆ ಪರಮಸಂತೋಷದಿಂದ ಸುಖಾಗಮನವನ್ನು ಬಯಸುತ್ತೇವೆ ಸಾರ್ವಭೌಮ ಸರ್ಕಾರದವರು ದೇಶೀಯ ಸಂಸ್ಥಾನಗಳ ವಿಷಯದಲ್ಲಿ ಸರ್ವಸಮ್ಮತವಾದ ಉದಾರನೀತಿಯನ್ನು ಆಶ್ರಯದಿಂದಲೂ ಇಟ್ಟು ನಡಿಸಿಕೊಂಡು ಬಂದಿರೋಣದರಿಂದ ದೇಶೀಯ ಸಂಸ್ಥಾನಗಳೂ ರಾಜವಂಶೀಯರೂ ಆ ಚಕ್ರಾಧಿಪತ್ಯದಲ್ಲಿ ಅಚಂಚಲವಾದ ಭಕ್ತಿಯನ್ನೂ ಕೃತಜ್ಞತಾಪೂರ್ವಕವಾದ ವಾತ್ಸಲ್ಯವನ್ನೂ ಇಟ್ಟುಕೊಂಡು ಬಂದಿರುತ್ತಾರೆ ಅವರವರಿಗಿರುವ ಸಂಬಂಧವು ವಿಶೇಷವಾಗಿ ಸ್ಥಿರಪಟ್ಟಿರುವುದು ನಮ್ಮ ಪ್ರೀತಿಪಾತ್ರರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದೂರ್‌ರವರ ಮತ್ತು ಕೀರ್ತಿಶೇಷರಾದ ಅವರ ಹಿರಿಯರ ವಿವೇಕಪೂರಿತವೂ ಪ್ರೇಮಯುಕ್ತವೂ ಆದ ಆಳ್ವಿಕೆಯಲ್ಲಿ ಪ್ರಜೆಗಳಾದ ನಾವು ಅಭಿವೃದ್ಧಿಹೊಂದುತ್ತಾ ಸುಖವಾಗಿರುತ್ತೇವೆ ತಮಗೆ ಕಳೆದ ಡಿಸೆಂಬರ್ ತಿಂಗಳಲ್ಲಿ ಪ್ರಾಪ್ತವಾದ ಗಂಡಾಂತರವನ್ನು ಕೇಳಿ ನಾವುಗಳೆಲ್ಲಾ ಅಪಾರವಾಗಿ ಸಂತಾಪಪಟ್ಟು ದೇವರು ತಮಗೆ ಬೇಗನೆ ದೇಹಾರೋಗ್ಯವನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತಿದ್ದೆವು ತಮಗೆ ಈಗ ಆರೋಗ್ಯವುಂಟಾಗಿ ತಾವು ನಮಗೆ ದರುಶನವನ್ನು ಕೊಟ್ಟದ್ದಕ್ಕೋಸ್ಕರ ನಾವು ಕೃತಜ್ಞತೆಯಿಂದಲೂ ಪರಮಸಂತೋಷದಿಂದಲೂ ತಮಗೆ ಸುಖಾಗಮನವನ್ನು ಬಯಸುವೆವಲ್ಲದೆ ನಾವುಗಳು ಬ್ರಿಟಿಷ್ ಚಕ್ರಾಧಿಪತ್ಯದ ವಿಷಯದಲ್ಲಿ ನಿರ್ದುಷ್ಟವಾದ ಭಕ್ತಿಪ್ರೀತಿಗಳನ್ನು ಎಂದೆಂದಿಗೂ ಇಟ್ಟು ಕಾಪಾಡಿಕೊಂಡು ಬರುವೆವೆಂದು ಅರಿಕೆಮಾಡುತ್ತೇವೆ.

ಈ ಅಡ್ರೆಸ್ಸನ್ನು ದಿವ್ಯವಾದ ಸಣ್ಣ ಕೆಲಸಮಾಡಿದ ರಾಜಯೋಗ್ಯವಾದ ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು ವೈಸ್‌ರಾಯರವರು ಬಹು ಆದರದಿಂದ ಅಡ್ರೆಸ್ಸನ್ನು ಲಾಲಿಸಿ ಅಂಗೀಕರಿಸದ ಮೇಲೆ ಅವರಿಗೆ ಪ್ರತ್ಯುತ್ತರವನ್ನು ದಯಪಾಲಿಸಿದರು ಅದರ ಮುಖ್ಯಾಂಶಗಳೇನೆಂದರೆ—

ವೈಸ್‌ರಾಯರವರ ಪ್ರತ್ಯುತ್ತರವು

ನೀವು ಓದಿ ಒಪ್ಪಿಸಿದ ರಾಜಭಕ್ತಿಪೂರ್ವಕವಾದ ಅಡ್ರೆಸ್ಸಿಗಾಗಿಯೂ, ನಮ್ಮ ವಿಷಯದಲ್ಲೂ ನಮ್ಮ ಪತ್ನೀರವರ ವಿಷಯದಲ್ಲೂ ನೀವು ಅರಿಕೆಮಾಡಿದ ಪ್ರೀತಿಯುಕ್ತವಾದ ಅಭಿಪ್ರಾಯಗಳಿಗಾಗಿಯೂ, ನಮಗೆ ಆರೋಗ್ಯವುಂಟಾದ ವಿಷಯದಲ್ಲೂ ನಿಮ್ಮನ್ನು ಮನಃಪೂರ್ವಕವಾಗಿ ವಂದಿಸುತ್ತೇವೆ ಮೈಸೂರು ಸಂಸ್ಥಾನವನ್ನು ನಾವು ಬಂದು ನೋಡುವುದರಲ್ಲಿ ನಮಗೆ ವಿಶೇಷವಾದ ಆನಂದವುಂಟಾಗಿದೆ ಈ ಸಂಸ್ಥಾನವು ಒಂದು ಭಾಗದಲ್ಲಿ ವಿಚಕ್ಷಣೆಯುಳ್ಳ ಮತ್ತೂ ನಾಗರಿಕವಾದ ರಾಜ್ಯಭಾರ ಕ್ರಮಗಳನ್ನು ಪಡೆದು ಯಶಸ್ಸನ್ನು ಹೊಂದಿರುತ್ತದೆ ಇನ್ನೊಂದು ಭಾಗದಲ್ಲಿ ಈ ಸಂಸ್ಥಾನವು ಅನೇಕ ಪ್ರಾಚೀನವೂ ಚರಿತ್ರಾರ್ಹವೂ ಆದ ಕಟ್ಟಡಗಳನ್ನೂ ಸ್ಥಳಗಳನ್ನೂ ಪಡೆದು ಹೆಸರುವಾಸಿಗೆ ಬಂದಿರುವುದೂ ಅಲ್ಲದೆ ಸ್ವಭಾವಸಿದ್ಧವಾದ ಅನೇಕ ಸೌಂದರ್ಯಾಂಗಗಳನ್ನುಳ್ಳದ್ದಾಗಿದೆ ನಿಮಗೂ ನಿಮ್ಮನ್ನಾಳುವವರಿಗೂ ಪರಸ್ಪರವಾದ ಪ್ರೀತಿ ಅನುರಾಗಗಳು ಉಂಟೆಂಬುವುದನ್ನು ನಾವು ಚೆನ್ನಾಗಿ ತಿಳಿದುಬಲ್ಲೆವು ನಿಮ್ಮ ರಾಜರು ತುಂಬಾ ಸಮರ್ಥರು ನೀವುಗಳು ಸಾರ್ವಭೌಮ ಸರ್ಕಾರದವರ ವಿಷಯದಲ್ಲಿ ಬಹಳವಾಗಿ ಭಕ್ತಿಪ್ರೀತಿಗಳನ್ನು ಇಟ್ಟುಕೊಂಡಿದ್ದೀರೆಂಬುವುದನ್ನು ನೀವು ನಮ್ಮ ಮುಂದೆ ಒತ್ತಿ ಅರಿಕೆಮಾಡಬೇಕಾದ ಅಗತ್ಯವಿಲ್ಲ ನೀವುಗಳು ಇಷ್ಟು ಪ್ರೀತಿಪೂರ್ವಕವಾಗಿ ಒಪ್ಪಿಸಿದ ಅಡ್ರೆಸ್ಸಿಗಾಗಿ ನಿಮ್ಮನ್ನು ಇನ್ನೊಂದು ಸಲ ಮನಃ ವಂದಿಸುವೆವು

ಬಳಿಕ ಪ್ರೆಸಿಡೆಂಟರೂ ಇತರರೂ ವೈಸ್‌ರಾಯರವರಿಗೂ ಶ್ರೀಮನ್ ಮಹಾರಾಜರವರಿಗೂ ಘಮಘಮಿಸುವ ತುರಾಯಿಗಳನ್ನು ಒಪ್ಪಿಸಿದರು ಬಳಿಕ ಎರಡನೆಯ ಸಾರೋಟು ಬಂದಾಗ ವೈಸ್‌ರಾಯರವರ ಪತ್ನೀರವರಿಗೂ ಶ್ರೀಮದ್ಯುವರಾಜರವರಿಗೂ ತುರಾಯಿಗಳನ್ನು ಒಪ್ಪಿಸಿದರು

ಅಲ್ಲಿಂದ ಮೆರವಣಿಗೆಯು ಕರ್ಸನ್ ಪಾರ್ಕಿನ ಪೂರ್ವಬಾಗಿಲ ಮಾರ್ಗವಾಗಿ ಹೊರಟು ಹೊಸದಾಗಿ ಕಲ್ಪಿಸಿರುವ ಮನೋಹರವಾದ ಸರ್ಕಸ್ ಮೈದಾನವನ್ನು ಪ್ರವೇಶಿಸಿ ಎಡಕ್ಕೆ ತಿರುಗಿಕೊಂಡು ನೆಟ್ಟಗೆ ಹೋಗಿ ಗವರ್ನಮೆಂಟ್ ಹೌಸನ್ನು ತಲಪಿತು ವೈಸ್‌ರಾಯರವರು ಅಲ್ಲಿ ಸಾರೋಟಿನಿಂದ ಇಳಿದು ಗೌರವಾರ್ಹವಾದ 31 ತೋಪುಗಳಾಗುತ್ತಿರುವಲ್ಲಿ ಬಂಗಲೆಯ ಮುಂಭಾಗದಲ್ಲಿ ಸಾಲುಕಟ್ಟಿ ನಿಂತಿದ್ದ ಸೈನಿಕರುಮಾಡಿದ ಸನ್ಮಾನಗಳನ್ನು ಅಂಗೀಕರಿಸಿ ಪ್ರತಿವಂದಿಸುತ್ತಾ ಒಳಕ್ಕೆ ಚಿತ್ತೈಸಿದರು ಮೆರವಣಿಗೆ ಬಂದ ರಸ್ತೆಯ ಉದ್ದಕ್ಕೂ ಪೋಲೀಸ್ ಏರ್ಪಾಡೂ, ಅವರ ಕಟ್ಟುನಿಟ್ಟಾದ ಉಸ್ತುವಾರಿಯೂ ಬಹಳ ತೃಪ್ತಿಕರವಾಗಿಯೂ, ಶ್ಲಾಘ್ಯವಾಗಿಯೂ ಇತ್ತು

ಮಿಜಾಜ್ ಪುರ್ಸಿ

ಮಹಾರಾಜರವರು ವೈಸ್‌ರಾಯರವರಿಂದ ಬೀಳ್ಕೊಂಡು ವಾಪಸು ಅರಮನೆಗೆ ಚಿತ್ತೈಸಿದರು ಬಳಿಕ 11 ಗಂಟೆಗೆ ದಿವಾನ್ ಮಿ| ಎಂ ವಿಶ್ವೇಶ್ವರಯ್ಯನವರು, ಸರ್ದಾರ್ ಕರ್ನಲ್ ದೇಶರಾಜೆಅರಸಿನವರು, ಸರ್ದಾರ್ ಎಂ ಗೋಪಾಲರಾಜೆಅರಸಿನವರು, ಚೀಫ್ ಜಡ್ಜ್ ಮಿ|| ಪಿ ಎಸ್ ಕೃಷ್ಣರಾಯರೂ ಮೋಟರುಗಳಲ್ಲಿ ಅರಮನೆಯಿಂದ ಗವರ್ನಮೆಂಟ್ ಹೌಸಿಗೆ ವೈಸ್‌ರಾಯರವರ ಆರೋಗ್ಯಭಾಗ್ಯವನ್ನು ವಿಚಾರಿಸುವುದಕ್ಕಾಗಿ ಹೋಗಿ ಬಂದರು ಆಗ್ಗೆ ಇಂಡಿಯಾ ಗವರ್ನಮೆಂಟಿನ ಫಾರಿನ್ ಸೆಕ್ರೆಟರಿಯವರೂ, ವೈಸ್‌ರಾಯರವರ ಮಿಲಿಟರಿ ಸೆಕ್ರೆಟರಿಯವರೂ, ಅವರ ಒಬ್ಬ ಎಡಿಕಾಂಗರವರೂ ಅವರನ್ನು ಗವರ್ನಮೆಂಟ್ ಹೌಸಿಗೆ ಕರೆದುಕೊಂಡುಹೋಗಿ ಅತ್ತರ್ ಪಾನ್‌ಗಳನ್ನು ಕೊಟ್ಟು ಮರ್ಯಾದೆಮಾಡಿ ಕಳುಹಿಸಿಕೊಟ್ಟರು

ಮಹಾರಾಜರವರು ಭೇಟಿಮಾಡಿದ್ದು

ಅದೇ ಗುರುವಾರ ಮಧ್ಯಾಹ್ನ 3 40 ಗಂಟೆಗೆ ಇಂಡಿಯಾ ಗವರ್ನಮೆಂಟಿನ ಫಾರಿನ್ ಸೆಕ್ರೆಟರಿಯವರು, ವೈಸ್‌ರಾಯರವರ ಮಿಲಿಟರಿ ಸೆಕ್ರೆಟರಿಯವರು, ಅವರ ಇಬ್ಬರು ಎಡಿಕಾಂಗರೂ ಮೋಟರುಗಳಲ್ಲಿ ಗವರ್ನಮೆಂಟ್ ಹೌಸಿನಿಂದ ಅರಮನೆಗೆ ಹೋಗಿ ವೈಸ್‌ರಾಯರವರ ಭೇಟಿಗಾಗಿ ಮಹಾರಾಜರವರನ್ನು ದಯಮಾಡುವಂತೆ ಅರಿಕೆಮಾಡಿ, ದಿವಾನ್‌ರೇ ಮೊದಲಾದವರಿಂದ ಸನ್ಮಾನಹೊಂದಿ ತೆರಳಿದರು

ತರುವಾಯ 4 ಗಂಟೆಗೆ ಸರಿಯಾಗಿ ಶ್ರೀಮನ್ ಮಹಾರಾಜರವರೂ ಶ್ರೀಮದ್ಯುವರಾಜರೂ ಅಮೂಲ್ಯವಸ್ತ್ರಾಭರಣಗಳನ್ನು ಧರಿಸಿಕೊಂಡು ಪರಿವಾರಸಮೇತರಾಗಿ ಐದು ಮೋಟರುಗಳಲ್ಲಿ ಅರಮನೆಯಿಂದ ಹೊರಟು, ಗೌರವಾರ್ಹವಾದ 21 ತೋಪುಗಳಾಗುತ್ತಿರುವಲ್ಲಿ ಗವರ್ನಮೆಂಟ್ ಹೌಸಿಗೆ ಚಿತ್ತೈಸಿದರು ಮೊದಲನೇ ಮೋಟರಿನಲ್ಲಿ ಅವರ ಕೂಡ ಸರ್ದಾರ್ ಎಂ. ಗೋಪಾಲರಾಜೆ ಅರಸಿನವರು ಕುಳಿತಿದ್ದರು 2 ನೇ ಮೋಟರಿನಲ್ಲಿ ದಿವಾನ್‌ರವರು, ಸರ್ದಾರ್ ಎಂ ಕಾಂತರಾಜೆ ಅರಸಿನವರು ರೆವಿನ್ಯೂ ಕಮಿಷನರ್ ಮಿ|| ಕೆ ಎಸ್ ದೊರಸಾಮಿ ಅಯ್ಯರವರು ಇದ್ದರು 3 ನೇ ಮೋಟರಿನಲ್ಲಿ ಸರ್ದಾರ್ ಕರ್ನಲ್ ದೇಶರಾಜೆ ಅರಸಿನವರು, ಸರ್ದಾರ್ ಎಂ ಲಕ್ಷ್ಮೀಕಾಂತರಾಜೆ ಅರಸಿನವರು, ಹುಜೂರು ಸೆಕ್ರೆಟರಿ ಮಿ|| ಪಿ ರಾಘವೇಂದ್ರರಾಯರು ಕುಳಿತರು 4 ನೇ ಮೋಟರಿನಲ್ಲಿ ಸೀನಿಯರ್ ಕೌನ್ಸೆಲರ್ ಮಿ|| ಎಚ್ ವಿ ನಂಜುಂಡಯ್ಯನವರು, ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಮಿ|| ಆರ್ ಎಚ್ ಕ್ಯಾಂಬೆಲ್‌ರವರು, ಗವರ್ನಮೆಂಟ್ ಸೆಕ್ರೆಟರಿ ಮಿ|| ಕೆ ಆರ್ ಶ್ರೀನಿವಾಸಯ್ಯಂಗಾರ್ರೂ ಹೊರಟರು 5 ನೇ ಮೋಟರಿನಲ್ಲಿ ಸರ್ದಾರ್ ರಾಣಾಸಾಹೇಬರೂ, ಚೀಫ್ ಜಡ್ಜ್ ಮಿ|| ಪಿ ಎಸ್ ಕೃಷ್ಣರಾಯರೂ ಇದ್ದರು ಗವರ್ನಮೆಂಟ್ ಹೌಸಿನ ಬಾಗಿಲಿನಲ್ಲಿ ವೈಸ್‌ರಾಯರ ಕಡೆಯ ಅಧಿಕಾರಿಗಳು ಕಾದಿದ್ದು ಶ್ರೀಮನ್ ಮಹಾರಾಜರನ್ನೂ ಯುವರಾಜರನ್ನೂ ಎದುರುಗೊಂಡು ಅವರನ್ನು ಪರಿವಾರ ಸಮೇತ ದರ್ಬಾರ್ ಕೊಟಡಿಗೆ ಕರೆದುಕೊಂಡು ಹೋದರು ವೈಸ್‌ರಾಯರವರು ಕೊಟಡಿಯ ಬಾಗಿಲಿಗೆ ದಯಮಾಡಿ ಮಹಾರಾಜರವರನ್ನೂ ಯುವರಾಜರನ್ನೂ ಸಂಧಿಸಿ ಕರೆದುಕೊಂಡು ಹೋಗಿ ತಮ್ಮ ಪೀಠದ ಬಲಪಾರ್ಶ್ವದಲ್ಲಿ ಕೂಡಿಸಿಕೊಂಡರು ಪರಿವಾರದವರೆಲ್ಲಾ ಮಹಾರಾಜರವರ ಬಲಗಡೆ ಸಾಲಾಗಿ ಕುರ್ಚಿಗಳಲ್ಲಿ ಕುಳಿತುಕೊಂಡರು ವೈಸ್‌ರಾಯರವರ ಕಡೆಯ ಅಧಿಕಾರಿಗಳೆಲ್ಲಾ ಅವರ ಎಡಪಾರ್ಶ್ವದಲ್ಲಿ ಕುಳಿತುಕೊಂಡರು ವೈಸ್‌ರಾಯರವರು ಶ್ರೀಮನ್ ಮಹಾರಾಜರವರ ಕೂಡ ನಾಲ್ಕಾರು ನಿಮಿಷ ಕುಶಲ ಪ್ರಶ್ನೆಗಳನ್ನು ಬೆಳಸಿದ ಮೇಲೆ ಹಾರ ಅತ್ತರ್ ಪಾನ್ ಮುಂತಾದವುಗಳನ್ನು ಒಪ್ಪಿಸಿದರು ವೈಸ್‌ರಾಯರವರ ಕಡೆಯ ಅಧಿಕಾರಿಗಳು ಮಹಾರಾಜರವರ ಸಂಗಡ ಹೋಗಿದ್ದ ಸರ್ದಾರರಿಗೂ ಅಧಿಕಾರಿಗಳಿಗೂ ಹೂವಿನ ಹಾರ ಹಾಕಿ ಅತ್ತರ್ ಪಾನ್‌ಗಳನ್ನು ಕೊಟ್ಟರು ಅಲ್ಲಿಗೆ ದರ್ಬಾರ್ ಮುಗಿಯಿತು. ವೈಸ್‌ರಾಯರವರು ಮಹಾರಾಜರವರನ್ನೂ ಯುವರಾಜರನ್ನೂ ಬಾಗಿಲ ವರೆಗೆ ಬಂದು ಸಾಗಕಳುಹಿಸಿದ ಮೇಲೆ ಅವರ ಕಡೆಯ ಅಧಿಕಾರಿಗಳೂ ಎಡಿಕಾಂಗರೂ ಎಲ್ಲರನ್ನೂ ಬಂಗಲೆಯ ಬಾಗಿಲ ತನಕ ಕರೆದುತಂದು ಮೋಟರುಗಳಲ್ಲಿ ಕೂಡಿಸಿದರು ಮಹಾರಾಜರವರೂ ಯುವರಾಜರವರೂ ಗವರ್ನಮೆಂಟ್ ಹೌಸಿನಿಂದ ಹೊರಟು 21 ತೋಪುಗಳಾಗುತ್ತಿದ್ದಾಗ ಹಿಂತಿರುಗಿ ಅರಮನೆಗೆ ದಯಮಾಡಿದರು

ವೈಸ್‌ರಾಯಿಯವರ ಮರುಭೇಟಿಯು

ತರುವಾಯ ಸಾಯಂಕಾಲ 5 15 ಗಂಟೆಗೆ ದಿವಾನ್ ಮಿ|| ಎಂ ವಿಶ್ವೇಶ್ವರಯ್ಯನವರೂ, ಸರ್ದಾರ್ ಎಂ ಲಕ್ಷ್ಮೀಕಾಂತರಾಜೆ ಅರಸಿನವರೂ, ಸರ್ದಾರ್ ಎಂ. ಗೋಪಾಲಕೃಷ್ಣ ಅರಸಿನವರೂ, ಸೀನಿಯರ್ ಕೌನ್ಸೆಲರ್ ಮಿ|| ಎಚ್. ವಿ ನಂಜುಂಡಯ್ಯನವರೂ ಮೋಟರುಗಳಲ್ಲಿ ಅರಮನೆಯಿಂದ ಗವರ್ನಮೆಂಟ್ ಹೌಸಿಗೆ ಹೋಗಿ ಮರುಭೇಟಿಗೆ ಎಲ್ಲಾ ಸಿದ್ಧವಾಗಿದೆ ಎಂದು ವೈಸ್‌ರಾಯರವರಿಗೆ ಅರಿಕೆಮಾಡಿ ವಾಪಸು ಬಂದರು

ಬಳಿಕ ಅರಮನೆಯ ಐದು ಮೋಟರುಗಳಲ್ಲಿ ವೈಸ್‌ರಾಯಿಯವರು ತಮ್ಮ ಪರಿವಾರಕ್ಕೆ ಸೇರಿದ ಅಧಿಕಾರಿಗಳ ಸಮೇತ ಗವರ್ನಮೆಂಟ್ ಹೌಸಿನಿಂದ 5-30 ಗಂಟೆಗೆ ಗೌರವಾರ್ಹವಾದ ತೋಪುಗಳು ಹಾರುತ್ತಿರುವಲ್ಲಿ ಹೊರಟು ಅರಮನೆಗೆ ದಯಮಾಡಿದರು ದಿವಾನ್‌ರವರೂ ಸರ್ದಾರರೂ ಅಧಿಕಾರಿಗಳೂ ಬಾಗಿಲಲ್ಲಿ ಕಾದಿದ್ದು ವೈಸ್‌ರಾಯರವರನ್ನು ಎದುರುಗೊಂಡು ಅಂಬಾವಿಲಾಸ್ ದರ್ಬಾರ್ ಮಂದಿರಕ್ಕೆ ಕರೆದುಕೊಂಡು ಹೋದರು ಶ್ರೀಮನ್ ಮಹಾರಾಜರವರೂ ಯುವರಾಜರವರೂ ಬಾಗಿಲಬಳಿಗೆ ದಯಮಾಡಿ ವೈಸ್‌ರಾಯಿಯವರನ್ನು ಸಂಧಿಸಿ ಕರೆದುಕೊಂಡುಹೋಗಿ ದಿವ್ಯವಾದ ಶ್ರೇಷ್ಠಾಸನದಲ್ಲಿ ಕೂಡಿಸಿದರು, ವೈಸ್‌ರಾಯರವರು ಮಹಾರಾಜರವರೊಡನೆ ಸ್ವಲ್ಪಹೊತ್ತು ಸಂಭಾಷಣೆ ಬೆಳಸಿದ ಬಳಿಕ ಮಹಾರಾಜರವರು ಅವರಿಗೆ ಹಾರ ತುರಾಯಿಗಳನ್ನೂ ಅತ್ತರ್ ಪಾನ್‌ಗಳನ್ನೂ ಒಪ್ಪಿಸಿದರು ಸರ್ದಾರರೂ, ಅಧಿಕಾರಿಗಳೂ ವೈಸ್‌ರಾಯರವರ ಕಡೆಯ ಅಧಿಕಾರಿಗಳಿಗೆಲ್ಲಾ ಹೂವಿನ ಹಾರ ಹಾಕಿ ತುರಾಯಿಗಳನ್ನೂ ಅತ್ತರ್ ಪಾನ್‌ಗಳನ್ನೂ ಕೊಟ್ಟರು

ಈ ದರ್ಬಾರಿನಲ್ಲಿ ಮಹಾರಾಜರವರು ವೈಸ್‌ರಾಯರವರಿಗೆ ಕಾಣಿಸಿ ಪರಿಚಯಮಾಡಿಸಿದ ಸರ್ದಾರರೂ, ಅಧಿಕಾರಿಗಳೂ ಯಾರೆಂದರೆ—ಮಿ|| ಎಂ. ವಿಶ್ವೇಶ್ವರಯ್ಯನವರು, ಸರ್ದಾರ್ ಎಂ ಕಾಂತರಾಜೆ ಅರಸಿನವರು, ಸರ್ದಾರ್ ಕರ್ನಲ್ ಜೆ ದೇಶರಾಜೆಅರಸಿನವರು, ಸರ್ದಾರ್ ಎಂ ಲಕ್ಷ್ಮೀಕಾಂತರಾಜೆಅರಸಿನವರು, ಮಾಜಿ ದಿವಾನ್ ಮಿ|| ಟಿ ಆನಂದರಾಯರು, ಸರ್ದಾರ್ ಎಂ ಗೋಪಾಲಕೃಷ್ಣ ಅರಸಿನವರು, ಮಿ|| ಗಳಾದ ಕೆ ಎಸ್ ಚಂದ್ರಶೇಖರಯ್ಯರವರು, ಕಪೂರ್ ಶ್ರೀನಿವಾಸರಾಯರು, ಇ ಎಸ್ ಬೆಲ್‌ರವರು, ಎ. ಚಾಟರ್‌ಟನ್ ರವರು, ಡಾ|| ಡಬ್ಲಿಯು ಎಫ್ ಸ್ಮೀತ್‌ರವರು, ಕರ್ನಲ್ ಎ ಎ. ಜೋನ್ಸ್‌ರವರು, ಮಿ|| ಪಿ ಎಸ್ ಅಚ್ಯುತರಾಯರು, ಕರ್ನಲ್ ಪಿ ಎಚ್ ಫೂಕ್ಸ್‌ರವರು, ಮಿ|| ಗಳಾದ ಡಿ ರಾಮರಾಯರು, ಸಿ ಶ್ರೀಕಂಠೇಶ್ವರಯ್ಯರವರು, ಎಂ ಮುತ್ತಣ್ಣನವರು, ಎಂ ರಾಮರಾಯರು, ಎ ಎನ್ ಬಾಳರಾಜೆ ಅರಸಿನವರು, ಸಿ ಎಫ್ ಬೀಮ್ಸ್‌ರವರು, ಡಾ|| ಎಲ್ ಸಿ ಕೋಲ್‌ಮನ್ ರವರು, ಇವರಲ್ಲದೆ ದರ್ಬಾರಿನಲ್ಲಿ ಇನ್ನೂ 41 ಮಂದಿ ಹಾಜರಾಗಿದ್ದರು

ಈ ಮರುಭೇಟಿಯ ದರ್ಬಾರ್ ಮುಗಿದನಂತರ ಮಹಾರಾಜರವರು ವೈಸ್‌ರಾಯರವರನ್ನು ಕರೆದುತಂದು ಬಾಗಿಲ ಬಳಿ ಬಿಟ್ಟರು ಸರ್ದಾರರೂ ಅಧಿಕಾರಿಗಳೂ ಅವರನ್ನು ಮುಂದಕ್ಕೆ ಕರೆದುತಂದು ಹೊರಗೆ ಕಾದಿದ್ದ ಮೋಟರುಗಳಲ್ಲಿ ಕೂರಿಸಿ ಸಾಗಕಳುಹಿಸಿದರು, ವೈಸ್‌ರಾಯರವರು ಗೌರವಾರ್ಹವಾದ 31 ತೋಪುಗಳಾಗುತ್ತಿರುವಲ್ಲಿ ಅರಮನೆಯಿಂದ ವಾಪಸು ದಯಮಾಡಿ ತಮ್ಮ ಬಿಡಾರವನ್ನು ತಲಪಿದರು

ವೈಸ್‌ರಾಯರವರಿಗೆ ಔತನವು.

ಆ ದಿನ ರಾತ್ರಿ ಗವರ್ನಮೆಂಟ್ ಹೌಸಿನಲ್ಲಿ ವೈಸ್‌ರಾಯರವರಿಗೆ ದಿವ್ಯವಾದ ಔತನವನ್ನು ಮಾಡಿಸಿದರು 8 15 ಗಂಟೆಗೆ ವೈಸ್‌ರಾಯ ದಂಪತಿಗಳೂ ಅವರ ಸಂಗಡ ಬಂದಿರುವ ಅಧಿಕಾರಿಗಳೂ, ಗವರ್ನಮೆಂಟಿನ ಯೂರೋಪಿಯನ್ ಅಧಿಕಾರಿಗಳೂ, ರಾಜಧಾನಿಯ ಮುಖ್ಯ ಯೂರೋಪಿಯನ್‌ರುಗಳೂ 61 ಮಂದಿ ಕುಳಿತು ಭೋಜನವನ್ನು ಮಾಡಿ ಸಂತೋಷಪಟ್ಟರು ಊಟವಾದ ಬಳಿಕ ಅದೇ ಭೋಜನದ ಮಂದಿರದೊಳಕ್ಕೆ ಶ್ರೀಮನ್ ಮಹಾರಾಜರವರೂ ಯುವರಾಜರೂ ದಯಮಾಡಿ, ಮಹಾರಾಜರವರು ವೈಸ್‌ರಾಯರವರ ಪಕ್ಕದಲ್ಲೂ, ಯುವರಾಜರವರು ವೈಸ್‌ರಾಯರ ಪತ್ನೀರವರ ಪಕ್ಕದಲ್ಲೂ ಕುಳಿತುಕೊಂಡರು ದಿವಾನ್ ಮಿ|| ವಿಶ್ವೇಶ್ವರಯ್ಯನವರು, ಸರ್ದಾರ್ ಕಾಂತರಾಜೆ ಅರಸಿನವರು, ಸರ್ದಾರ್ ಕರ್ನಲ್ ದೇಶರಾಜೆ ಅರಸಿನವರು, ಸರ್ದಾರ್ ಲಕ್ಷ್ಮೀಕಾಂತರಾಜೆ ಅರಸಿನವರು, ಮಿ|| ಟಿ ಆನಂದರಾಯರು, ಸರ್ದಾರ್ ಗೋಪಾಲರಾಜೆ ಅರಸಿನವರು, ಸರ್ದಾರ್ ಬಾಳರಾಜೆ ಅರಸಿನವರು, ಮಿ||ಗಳಾದ ಕೆ ಎಸ್. ದೊರಸಾಮಿ ಅಯ್ಯರವರು, ಎಚ್ ವಿ ನಂಜುಂಡಯ್ಯನವರು, ಜೆ ಎಸ್ ಚಕ್ರವರ್ತಿಯವರು, ಪಿ ರಾಘವೇಂದ್ರರಾಯರು, ಕೆ ಆರ್ ಶ್ರೀನಿವಾಸಯ್ಯಂಗಾರ್ರು, ಮಿರ್ಜಾ ಇಸ್ಮೈಲ್‌ರವರು, ಎಸ್ ಹಿರಿಯಣ್ಣಯ್ಯನವರು—ಇವರೆಲ್ಲಾ ಹೋಗಿ ಯೂರೋಪಿಯನ್ ಅತಿಥಿಗಳ ಪಕ್ಕದಲ್ಲಿ ಕುಳಿತುಕೊಂಡರು

ಮಹಾರಾಜರವರು ಎದ್ದು ಚಕ್ರವರ್ತಿ ಸಾರ್ವಭೌಮರವರ ಶ್ರೇಯಸ್ಸನ್ನು ಬಯಸಿದರು ಹೊರಗಡೆ ಸಲಾಂ ಬಾಜಾ ಆಗುತ್ತಿರುವಲ್ಲಿ ಅಥಿತಿಗಳೆಲ್ಲಾ ಎದ್ದು ಜಯಘೋಷವನ್ನು ಮಾಡಿದರು

ಮಹಾರಾಜರವರ ಭಾಷಣವು

ಬಳಿಕ ಮಹಾರಾಜರವರು ವೈಸ್‌ರಾಯರವರು ಮತ್ತೂ ಲೇಡಿ ಹಾರ್ಡಿಂಗ್‌ರವರ ಆರೋಗ್ಯವನ್ನು ಬಯಸಿ ವೈಸ್‌ರಾಯ ದಂಪತಿಗಳನ್ನೂ ಅತಿಥಿಗಳನ್ನೂ ಕುರಿತು ಅಪ್ಪಣೆಕೊಡಿಸಿದ ಭಾಷಣದ ಮುಖ್ಯಾಂಶಗಳೇನಂದರೆ—

ವೈಸ್‌ರಾಯಿ ದಂಪತಿಗಳ ಆರೋಗ್ಯ —ತಮಗೂ ಲೇಡಿ ಹಾರ್ಡಿಂಗ್‌ರವರಿಗೂ ಮೈಸೂರಿನಲ್ಲಿ ಸುಖಾಗಮನವನ್ನು ಬಯಸಬೇಕೆಂದು ನಾನು ಬಹುಕಾಲದಿಂದಲೂ ಕುತೂಹಲಪಟ್ಟು ನಿರೀಕ್ಷಿಸುತ್ತಾ ಬಂದಿರುತ್ತೇನೆ ನಾನಿರುವ ಸ್ಥಳವು ದೇಹಲಿಗೂ ಸಿಂಲಾಪಟ್ಟಣಕ್ಕೂ ಬಹಳ ದೂರವಾಗಿರೋಣದರಿಂದ ತಮ್ಮಗಳ ಸಂದರ್ಶನವು ನನಗೆ ದೊರಕುವುದು ಅಪರೂಪವಾಗಿರುತ್ತದೆ ಈಗ ತಾವುಗಳು ನನ್ನ ಗೌರವ ಅತಿಥಿಗಳಾಗಿ ದಯಮಾಡಿ ನನಗೆ ಸಮಾಗಮನವನ್ನು ಕೊಟ್ಟದ್ದು ನನಗೆ ತುಂಬಾ ಸಂತೋಷವೂ ಸಂತೃಪ್ತಿಯೂ ಉಂಟಾಗಿರುವುದು ಇದೂ ಅಲ್ಲದೆ ತಮಗೆ ಪೂರ್ಣ ಆರೋಗ್ಯವೂ ಪುಷ್ಟಿಯೂ ಲಭ್ಯವಾಗಿರುವುದು ನಮ್ಮ ಆನಂದವನ್ನು ಮತ್ತಷ್ಟು ಹೆಚ್ಚಿಸಿರುತ್ತದೆ ದೇಹಲಿಯಲ್ಲಿ ನಡೆದ ಘಾತುಕಕೃತ್ಯದ ದೆಸೆಯಿಂದ ತಮಗೆ ದೀರ್ಘಕಾಲ ವಿಶೇಷ ಬಾಧೆಯುಂಟಾದಾಗ್ಗೆ ಮೈಸೂರಿನಲ್ಲಿ ಉಂಟಾದ ಆಗ್ರಹವೂ ಗಾಬರಿಯೂ ಇನ್ನೆಲ್ಲಾ ಉಂಟಾಗಲಿಲ್ಲವೆಂದೂ, ತಮಗೆ ಆರೋಗ್ಯವಾಯಿತೆಂಬ ಸಂತೋಷ ವರ್ತಮಾನವನ್ನು ಕೇಳಿ ಮೈಸೂರಿನಲ್ಲಿ ಪಟ್ಟ ನೈಜವಾದ ಮತ್ತೂ ಸಾರ್ವತ್ರಿಕವಾದ ಆನಂದದಷ್ಟು ಇನ್ಯಾವ ಕಡೆಯಲ್ಲೂ ಪಡಲಿಲ್ಲವೆಂದೂ ತಮಗೆ ನಾನು ಖಚಿತವಾಗಿ ಹೇಳಬಲ್ಲೆನು

ಸುಭಿಕ್ಷವುಳ್ಳ ಸಂಸ್ಥಾನ —ತಮ್ಮ ಧಾರಾಳವಾದ ಮತ್ತೂ ನಾಗರಿಕವಾದ ಆಳ್ವಿಕೆಯಲ್ಲಿ ಹಿಂದೂಸ್ಥಾನದ ಇತರ ಭಾಗಗಳೆಲ್ಲಾ ಹೇಗೆ ಸುಕ್ಷೇಮದಿಂದ ಅಭಿವೃದ್ಧಿ ಹೊಂದುತ್ತಿರುವುದೋ ಅದೇ ರೀತಿಯಲ್ಲಿ ತಾವು ನಮಗೆ ಭೇಟಿದಯಪಾಲಿಸಿರುವ ಈ ಸಮಯದಲ್ಲಿ ಮೈಸೂರು ಸೀಮೆಯೂ ಸಮೃದ್ಧಿ ಸುಖಸಂತೋಷಗಳನ್ನು ಪಡೆದು ವೃದ್ಧಿಹೊಂದುತ್ತಿದೆ ಸುಭಿಕ್ಷಸಹಿತವಾದ ಸಂವತ್ಸರಗಳು ಒಂದರ

ಹಿಂದೊಂದು ಲಭ್ಯವಾದದ್ದರಿಂದ ನಮ್ಮ ಗವರ್ನ್‌ಮೆಂಟಿನವರು ಸಂಸ್ಥಾನದ ಐಶ್ವರ್ಯವನ್ನು ವೃದ್ಧಿಮಾಡುವ ಕಾರ್ಯಗಳಿಗೆ ಗಮನಕೊಡಲು ಸಹಾಯವಾಗಿರುತ್ತದೆ ನೀರಾವರಿ ಕಾಮಗಾರಿಗಳಿಗೂ, ಪಬ್ಲಿಕ್ ಕಟ್ಟಡಗಳಿಗೂ, ರೈಲ್ವೆ ಬಡಾವಣೆಗೂ, ವಿದ್ಯಾಪ್ರಚಾರಕ್ಕೂ, ಕಸಬುಗಳ ಪ್ರೋತ್ಸಾಹಕ್ಕೂ ಹೆಚ್ಚು ದ್ರವ್ಯವನ್ನು ಒದಗಿಸಬಲ್ಲವರಾಗಿದಾರೆ ನಮ್ಮ ಸಂಸ್ಥಾನದಲ್ಲಿ ನಮ್ಮ ಗವರ್ನ್‌ಮೆಂಟಿನವರ ಕಾರ್ಯಗಳಲ್ಲೂ, ರಾಜ್ಯಭಾರ ಕ್ರಮಗಳಲ್ಲೂ ಪ್ರಜೆಗಳ ಸಹಾಯಸಮ್ಮೇಳನವನ್ನು ಪಡೆಯುವುದಕ್ಕೋಸ್ಕರ ಸಂಘಗಳೂ ಏರ್ಪಾಡುಗಳೂ ಧಾರಾಳವಾಗಿ ಕಲ್ಪಿಸಲ್ಪಟ್ಟಿರುತ್ತವೆ. ಪ್ರಜಾಪ್ರತಿನಿಧಿಸಭೆ ಎಂಬುವುದು ಬಹು ಕಾಲದ ಹಿಂದೆ ಸ್ಥಾಪಿಸಲ್ಪಟ್ಟು ನಡೆಯುತ್ತಾ ಬಂದಿದೆ. ಪಬ್ಲಿಕ್ ಪ್ರಜೆಗಳ ಅಭಿಮತವೇನೆಂಬುವುದೂ, ಅವರ ಕೋರಿಕೆಗಳೂ, ಕಷ್ಟಕೊರತೆಗಳೂ ಗವರ್ನ್‌ಮೆಂಟಿನವರ ದೃಷ್ಟಿಗೆ ತಂದಿಡುವುದರಲ್ಲಿ ಈ ಪ್ರಜಾಪ್ರತಿನಿಧಿಸಭೆಯು ಬಹಳ ಪ್ರಯೋಜನಕರವಾಗಿದೆ

ಸಂಪದಭ್ಯುದಯ ಸಮಾಜ—ಆಳ್ವಿಕೆಯ ಕಾರ್ಯದಲ್ಲಿ ಪ್ರಜೆಗಳ ಸಹಾಯವನ್ನು ಮತ್ತಷ್ಟು ಹೆಚ್ಚಾಗಿ ಪಡೆಯಬೇಕೆಂತಲೂ, ಪ್ರಜೆಗಳಲ್ಲಿ ಸ್ವತಂತ್ರವಾದ ಆಲೋಚನಾ ಶಕ್ತಿಯನ್ನೂ ಕಾರ್ಯಸಾಧನೆಯನ್ನೂ ಹುಟ್ಟಿಸಬೇಕೆಂತಲೂ ನಮ್ಮ ಗವರ್ನ್‌ಮೆಂಟಿನವರು ಈಚೆಗೆ ಸಂಪದಭ್ಯುದಯ ಸಮಾಜವನ್ನು ಸ್ಥಾಪನೆಮಾಡಿದಾರೆ ಈ ಸಮಾಜದಲ್ಲಿ ಕಸಬುಗಳ ಪ್ರೋತ್ಸಾಹಕ್ಕೂ, ವಿದ್ಯಾಪ್ರಚಾರಕ್ಕೂ, ವ್ಯವಸಾಯಾಭಿವೃದ್ಧಿಗೂ ಪ್ರತ್ಯೇಕ ಪ್ರತ್ಯೇಕವಾದ ಭಾಗಗಳಿರುತ್ತವೆ, ವಿಷಯಗಳನ್ನು ಕುರಿತು ಚರ್ಚಿಸಿ ತೀರ್ಮಾನಗಳನ್ನು ಅರಿಕೆ ಮಾಡುವುದೇ ಈ ಸಮಾಜದ ಕರ್ತವ್ಯವಾಗಿದೆ ಪ್ರಜೆಗಳನ್ನು ಯೋಚನಾಪರರಾಯೂ, ಕಾರ್ಯಸಕ್ತರಾಗಿಯೂ, ಇವೆಲ್ಲದಕ್ಕಿಂತಲೂ ಹೆಚ್ಚಾಗಿ ಹುಡುಕಾಡುವವರಾಗಿಯೂ ಮಾಡಬೇಕೆಂಬುವುದು ನಮ್ಮ ಉದ್ದೇಶವಾಗಿದೆ ಈ ಮೂರು ಭಾಗಗಳೂ ಸರ್ಕಾರಿ ಇಲಾಖೆಗಳ ಕೂಡ ಮಿಳಿತವಾಗಿ ಕಾರ್ಯಗಳನ್ನು ನಡಿಸುತ್ತಾ ಬಂದಿರುವುದಲ್ಲದೆ ಇದುವರೆಗೆ ದೇಶಾಭಿವೃದ್ಧಿಗೆ ಕಾರ್ಯಕಾರಿಯಾದ ಕೆಲವು ಏರ್ಪಾಡುಗಳನ್ನು ಹುಡುಕಿ ಚರ್ಚಿಸಿ ಗೊತ್ತುಮಾಡಿರುವುದನ್ನು ನೋಡಿದರೆ ಮುಂದೆ ಈ ಸಮಾಜದಿಂದ ಬಹಳ ಪ್ರಯೋಜನವುಂಟೆಂದು ನನಗೆ ತೋರುತ್ತದೆ.

ನ್ಯಾಯವಿಚಾರಸಭೆ—ನಮ್ಮ ಸಂಸ್ಥಾನದ ನ್ಯಾಯವಿಧಾಯಕ ಸಭೆಯಲ್ಲಿ ಪ್ರಜಾಪ್ರತಿನಿಧಿಗಳನ್ನು ಸೇರಿಸಿಕೊಳ್ಳುವಂತೆಯೂ, ಸಂಸ್ಥಾನದ ಮುಖಂಡ ಪ್ರಜೆಗಳು ಮೆಂಬರಾಗುವಂತೆಯೂ ನಿಬಂಧನೆಗಳನ್ನು ಮಾಡಿ ಈಗ ತಾನೇ ಸ್ಯಾಂಕ್ಷನ್ ಮಾಡಿರುತ್ತೇನೆ ಈ ಸಭೆಯ ಮೆಂಬರುಗಳಿಗೆ ಕೆಲವು ನಿರ್ಬಂಧಗಳನ್ನಿಟ್ಟು ಗವರ್ನ್‌ಮೆಂಟ್ ಅಧಿಕಾರಿಗಳ ಕೂಡ ಕಲೆತು ಸಂಸ್ಥಾನದ ಜಮಾಖರ್ಚುಗಳ ಅಂದಾಜು ಪಟ್ಟಿಗಳನ್ನು ಹಿಡಿದು ಚರ್ಚೆ ಮಾಡುವುದಕ್ಕೂ, ರಾಜ್ಯಾಡಳಿತದ ವಿಷಯದಲ್ಲಿ ಅಧಿಕಾರಿಗಳನ್ನು ಪ್ರಶ್ನೆಕೇಳುವುದಕ್ಕೂ ಕೆಲವು ಮಟ್ಟಿಗೆ ಅಧಿಕಾರವನ್ನು ವಹಿಸಿರುತ್ತೇನೆ ಈ ಏರ್ಪಾಡುಗಳನ್ನು ನನ್ನ ಸಕಲ ಪ್ರಜೆಗಳೂ ಅಂಗೀಕರಿಸಿ ಮೆಚ್ಚಿಕೊಂಡಿದಾರೆ ಇದರ ನೆರವಿನಿಂದ ಅವರ ಶ್ರೇಯಸ್ಸೂ ಸಂಸ್ಥಾನದ ಆಳ್ವಿಕೆಯ ರಚನೆಯೂ ಚೆನ್ನಾಗಿ ವೃದ್ಧಿಹೊಂದುವವೆಂಬ ಭಾಗದಲ್ಲಿ ನನಗೆ ಅನುಮಾನವಿಲ್ಲ

ವಿದ್ಯಾಭ್ಯಾಸ—ಸಮಸ್ತ ಅಭಿವೃದ್ಧಿಗೂ ವಿದ್ಯೆಯೇ ಮೂಲವಾಗಿದೆ ತಮ್ಮ ದಯಾಪೂರಿತವಾದ ಕಾರ್ಯಕ್ರಮವನ್ನೇ ನಾವೂ ಅನುಸರಿಸಿ ಪ್ರೈಮರಿ, ಕಸಬುದಾರಿ ಮತ್ತು ಯೂನಿವರ್ಸಿಟಿ ಎಂಬ ಭಾಗಗಳಲ್ಲೆಲ್ಲಾ ವಿದ್ಯೆಯನ್ನು ಅಭಿವೃದ್ಧಿಮಾಡಬೇಕೆಂದು ಪ್ರಯತ್ನಪಡುತ್ತಿದೇವೆ ಪ್ರೈಮರಿ ಸ್ಕೂಲುಗಳಿಗೂ, ಸ್ಕೂಲ್ ಕಟ್ಟಡಗಳಿಗೂ ಬಹಳ ಹೆಚ್ಚಾದ ಹಣವನ್ನು ಸ್ಯಾಂಕ್ಷನ್ ಮಾಡಿರುತ್ತೇವಲ್ಲದೆ ಕಸಬುಗಳ ಮತ್ತೂ ವ್ಯಾಪಾರದ ವಿದ್ಯೆಗಳಲ್ಲಿ ಬಾಲಕರನ್ನು ತರಪೇತು ಮಾಡುವ ಏರ್ಪಾಡನ್ನೂ ಈಗತಾನೇ ಪ್ರಾರಂಭಮಾಡಿರುವೆವು ಮತ್ತು ಗೊತ್ತಾದ ಸ್ಥಳಗಳಲ್ಲಿ ಬಲಾತ್ಕರಿಸಿ ವಿದ್ಯೆಕಲಿಸುವ ಕಾನೂನನ್ನು ಕೂಡ ಪಾಸ್‌ಮಾಡಿಕೊಂಡಿದೇವೆ ಈಗ ಪ್ರೈಮರಿ ಪಾಠಶಾಲೆಗಳನ್ನು ಹೆಚ್ಚಿಸುವುದು, ತಕ್ಕಹಾಗೆ ತರಪೇತಾದ ಉಪಾಧ್ಯಾಯರನ್ನು ಒದಗಿಸಿಕೊಳ್ಳುವುದು, ಸ್ತ್ರೀವಿದ್ಯಾಭ್ಯಾಸವನ್ನು ಪ್ರಬಲಪಡಿಸುವುದು, ಈ ಮೂರೂ ನಾವು ಮುಖ್ಯವಾಗಿ ಮೊದಲು ಮಾಡಿಕೊಳ್ಳಬೇಕಾದ ಭಾಗಗಳಾಗಿವೆ

ಸರ್ಕಾರಿ ಸರ್ವೀಸು—ಒಂದೆರಡು ವರುಷಗಳಿಂದೀಚೆಗೆ ಸಂಸ್ಥಾನದ ಮುಖ್ಯ ಇಲಾಖೆಗಳ ಆಫೀಸರುಗಳ ಸಂಬಳಗಳನ್ನು ನನ್ನ ಗವರ್ನ್‌ಮೆಂಟಿನವರು ಹೆಚ್ಚುಮಾಡಲು ಪ್ರಾರಂಭಿಸಿರುತ್ತಾರೆ ಇನ್ನುಮುಂದೆ ಸರ್ಕಾರದ ನೌಕರಿಗೆ ಯೋಗ್ಯರಾದವರನ್ನೇ ಆರಿಸಿಕೊಳ್ಳುತ್ತಾ ಬರುವುದಕ್ಕೂ, ಸಮರ್ಥರಾದವರನ್ನು ಯೂರೋಪಿಗೆ ಕಳುಹಿಸಿ ತರಪೇತು ಮಾಡಿಸಿ ಕರೆಸಿಕೊಳ್ಳುವುದಕ್ಕೂ ನಾವು ಚಿಂತಿಸುತ್ತಿದೇವೆ ಹ್ಯಾಗೂ ಒಳ್ಳೇ ಶೀಲಸ್ವಭಾವವುಳ್ಳವರನ್ನೂ ಚಟುವಟಿಕೆಯಿಂದ ನೌಕರಿ ಮಾಡತಕ್ಕವರನ್ನೂ ಆರಿಸುವ ಭಾಗದಲ್ಲಿ ತುಂಬಾ ಮನಸ್ಸಾಗಿದೆ

ರೈಲ್‌ರಸ್ತೆಗಳೂ, ನೀರಾವರಿಯೂ—ಈಗ ಕಟ್ಟುತ್ತಾ ಇರುವ ಕನ್ನಂಬಾಡಿ ತಲಾವಿನಿಂದ ಕೋಲಾರದ ಚಿನ್ನದ ಗಣಿಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದನ್ನು ಕಾಪಾಡುತ್ತದೆ, ಮತ್ತು ಕಾವೇರಿ ನದಿಯ ನೀರಿನಿಂದ ನಮ್ಮ ನೀರಾವರಿ ವ್ಯವಸಾಯವನ್ನು ಅಚ್ಚುಕಟ್ಟಾಗಿ ಮಾಡುವುದು ಇದಲ್ಲದೆ ಒಂದೇ ಸ್ಥಳದಲ್ಲಿ ವಿಸ್ತಾರವಾದ ನೀರು ನಿಂತು ಪ್ರಪಂಚದಲ್ಲಿರುವ ಭಾರೀ ಕೆರೆಗಳಲ್ಲಿ ಇದೂ ಒಂದೆಂಬ ಹೆಸರುವಾಸಿಯನ್ನು ಪಡೆಯುತ್ತದೆ ಅನೇಕ ವರುಷಗಳಿಂದ ಮೈಸೂರಿನಲ್ಲಿ ರೈಲ್ವೆ ಬಡಾವಣೆಯೇನೂ ನಡೆಯಲಿಲ್ಲ ಒಳದೇಶದಲ್ಲಿ ರೈಲ್‌ರಸ್ತೆಗಳನ್ನು ಹಾಕಿಕೊಂಡು ಬಡಾವಣೆ ಮಾಡಬೇಕೆಂದೂ, ಅದನ್ನು ಸಂಸ್ಥಾನದ ಹೊರಪಾರ್ಶ್ವದಲ್ಲಿರುವ ಬ್ರಿಟಿಷ್ ರೈಲ್ ರಸ್ತೆಗಳಿಗೆ ಜಂಟಿಸಬೇಕೆಂದೂ ಕೆಲವು ಕಾಲದಿಂದ ಅದರ ಅವಶ್ಯಕತೆ ಕಂಡುಬಂದಿದೆ ಈ ನಮ್ಮ ಬಡಾವಣೆಗಳನ್ನು ತಮ್ಮ ಗವರ್ನ್‌ಮೆಂಟಿನವರು ಪ್ರೀತಿಯಿಂದ ಕಂಡು ನಮಗೆ ತಮ್ಮ ಗವರ್ನ್‌ಮೆಂಟಿನ ಸಹಾಯವನ್ನೂ ಬೆಂಬಲವನ್ನೂ ಕೊಡುತ್ತಾರೆಂದು ನಾನು ನಂಬಿಕೊಂಡಿದೇನೆ

ನಮ್ಮ ಅಭಿವೃದ್ಧಿಗಾಗಿ ಈ ದೃಷ್ಟಾಂತಗಳನ್ನೆಲ್ಲಾ ಈಗ ಅರಿಕೆ ಮಾಡಿರುತ್ತೇನೆ ಯಾಕೆಂದರೆ ನಮ್ಮ ಗವರ್ನ್‌ಮೆಂಟು ಯಾವ ಅಭಿವೃದ್ಧಿ ಕಾರ್ಯಗಳನ್ನೂ ಮಾಡದೆ ಸುಮ್ಮನೆ ಇಲ್ಲವೆಂಬ ಸಂಗತಿಯನ್ನೂ, ನಾಲ್ವತ್ತೆರಡು ವರುಷಗಳ ಹಿಂದೆ ಬ್ರಿಟಿಷ್ ಕಮಿಷನರವರಿಂದ ನಮಗೆ ಒಪ್ಪಿಸಲ್ಪಟ್ಟ ಪ್ರಜಾಕ್ಷೇಮದ ಚಿಂತನೆಯುಳ್ಳ ಆಳ್ವಿಕೆಯನ್ನು ವಿಶೇಷವಾಗಿ ಕ್ರಮಪಟ್ಟ ಸ್ಥಿತಿಯಲ್ಲಿಟ್ಟು ನಡಿಸಿಕೊಂಡು ಬರುತ್ತಾ ಇರುವ ಅಂಶವನ್ನೂ, ತಮಗೆ ಉಚಿತವಾಗಿ ತಿಳಿಸಬೇಕಾಗಿದೆ ಮತ್ತು ಚಕ್ರವರ್ತಿ ಸಾರ್ವಭೌಮರವರಲ್ಲಿ ನಮಗಿರುವ ರಾಜಭಕ್ತಿಗೂ, ಬ್ರಿಟಿಷ್ ಆಳ್ವಿಕೆಯಿಂದ ನಮಗುಂಟಾಗಿರುವ ಪ್ರಯೋಜನಗಳಿಗಾಗಿಯೂ, ಹಿಂದುಸ್ಥಾನದ ದೇಶೀಯ ಸಂಸ್ಥಾನಗಳ ವಿಚಾರದಲ್ಲಿ ತಮ್ಮ ಗವರ್ನ್‌ಮೆಂಟಿನ ಪ್ರೀತಿಯುಕ್ತವಾದ ನಡವಳಿಕೆಗಾಗಿಯೂ ನಾವು ನಮ್ಮ ಕಾರ್ಯಗಳಿಂದ ದೃಷ್ಟಾಂತಪಡಿಸಿ ತಮಗೆ ತೋರಿಸುತ್ತೇವೆ

ತಾವು ನನ್ನ ವಿಷಯದಲ್ಲೂ, ನನ್ನ ಸಂಸ್ಥಾನದ ವಿಷಯದಲ್ಲೂ ಯಾವಾಗಲೂ ಪ್ರೀತಿಯನ್ನೂ ಸದಭಿಪ್ರಾಯವನ್ನೂ ಇಟ್ಟುಕೊಂಡು, ಅನೇಕ ಸಂದರ್ಭಗಳಲ್ಲಿ ಪ್ರಕಾಶಪಡಿಸುತ್ತಾ ಬಂದಿರುವುದಕ್ಕಾಗಿ ಈ ಸಂದರ್ಭದಲ್ಲಿ ತಮ್ಮನ್ನು ವಂದಿಸುತ್ತೇನೆ ನಮ್ಮ ಬ್ರಿಟಿಷ್ ರೆಸಿಡೆಂಟರಾದ ಸರ್ ಹ್ಯೂ ಡೇಲಿಯವರು ನನ್ನ ವಿಷಯದಲ್ಲೂ ನನ್ನ ಗವರ್ನ್‌ಮೆಂಟಿನ ವಿಷಯದಲ್ಲೂ ಅತ್ಯಂತವಾದ ಪ್ರೀತಿ ಅನುರಾಗಗಳನ್ನು ಪಡೆದವರಾಗಿದಾರೆ ಇಂಥಾ ಸತ್ಯಸಂಧರೂ ಗುಣಾಢ್ಯರೂ ಆದ ರೆಸಿಡೆಂಟರನ್ನು ಮೈಸೂರಿಗೆ ಕಳುಹಿಸಿಕೊಟ್ಟಿರುವ ಭಾಗದಲ್ಲಿ ನಾನು ಇಂಡಿಯಾ ಗವರ್ನ್‌ಮೆಂಟಿನವರನ್ನು ಕೃತಜ್ಞತಾಪೂರ್ವಕವಾಗಿ ವಂದಿಸುತ್ತೇನೆ

ಅಂತ್ಯೋಕ್ತಿಗಳು—ತಮಗೂ ಲೇಡಿ ಹಾರ್ಡಿಂಗ್‌ರವರಿಗೂ ಮತ್ತೊಂದಾವರ್ತಿ ಮನಃಪೂರ್ವಕವಾಗಿ ಸುಸ್ವಾಗತವನ್ನು ಬಯಸುತ್ತೇನೆ ಮುಂದೆ ಕೆಡ್ಡಾ ಕ್ಯಾಂಪಿನಲ್ಲಿ ತಾವು ವಿರಾಮಹೊಂದಿ ಸಂತೋಷಪಟ್ಟು, ನಮ್ಮ ಸಂಸ್ಥಾನದಲ್ಲಿ ತಾವುಗಳು ಪರಾಂಬರಿಸಿದ ವಿಷಯಗಳನ್ನು ಸಂತೋಷದಿಂದ ಯಾವಾಗಲೂ ಸ್ಮರಿಸಿಕೊಳ್ಳುವಂತೆ ಆದೀತೆಂದು ನಂಬಿ ನಿರೀಕ್ಷಿಸುತ್ತೇನೆ

ವೈಸ್‌ರಾಯರವರ ಪ್ರತ್ಯುತ್ತರವು

ಅತಿಥಿಗಳೆಲ್ಲಾ ಶ್ರೀಮನ್ ಮಹಾರಾಜರವರ ಕೋರಿಕೆಯಂತೆ ವೈಸ್‌ರಾಯಿ ದಂಪತಿಗಳ ಆರೋಗ್ಯಭಾಗ್ಯವನ್ನು ಕೋರಿದ ಒಳಿಕ ವೈಸ್‌ರಾಯರವರು ನಮ್ಮ ಮಹಾರಾಜರವರ ಆರೋಗ್ಯವನ್ನು ಬಯಸುವಂತೆ ಅತಿಥಿಗಳನ್ನು ಕರೆದು ಮಹಾರಾಜರವರನ್ನು ಕುರಿತು ಅಪ್ಪಣೆಕೊಡಿಸಿದ್ದೇನೆಂದರೆ—

ಮೊದಲು ನಾವು ನನ್ನ ಮತ್ತೂ ಲೇಡಿ ಹಾರ್ಡಿಂಗರ ಶ್ರೇಯಸ್ಸನ್ನು ಅತ್ಯಂತ ಪ್ರೀತಿಪೂರ್ವಕವಾಗಿ ಬಯಸಿದ್ದಕ್ಕಾಗಿಯೂ, ಸ್ನೇಹವನ್ನೂ ಸೌಹಾರ್ದವನ್ನೂ ಪ್ರಕಾಶಪಡಿಸಿದ್ದಕ್ಕಾಗಿಯೂ ನಿಮ್ಮನ್ನು ವಂದಿಸುತ್ತೇನೆ ನೀವು ಹೇಳಿದಂತೆ ದೆಹಲಿ ಮತ್ತೂ ಸಿಂಲಾಪಟ್ಟಣಗಳು ಮೈಸೂರಿಗೆ ಬಹಳ ದೂರವಾಗಿರುವುದೂ, ನಾವು ನೀವು ಸೇರುವುದು ಸ್ವಲ್ಪ ಅಪರೂಪವೆಂದೂ ಹೇಳಿಒಪ್ಪಿಕೊಳ್ಳುತ್ತೇನೆ ದೇವರ ದಯದಿಂದ ನಾನು ದೆಹಲಿಯ ಗಂಡಾಂತರದಿಂದ ತಪ್ಪಿಸಿಕೊಂಡು ಯಥಾಪ್ರಕಾರ ಆರೋಗ್ಯದಿಂದಿರುವ ವಿಚಾರವನ್ನು ಕುರಿತು ನೀವು ಪ್ರಸ್ತಾಪಿಸಿದ್ದಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ

ಅಭಿವೃದ್ಧಿಯ ನಿದರ್ಶನಗಳು—ಹತ್ತು ವರುಷಗಳ ಹಿಂದೆ ಲಾರ್ಡ್ ಕರ್ಜನ್‌ರವರು ಮೈಸೂರಿಗೆ ಬಂದು ನಿಮಗೆ ರಾಜ್ಯಾಧಿಕಾರವನ್ನು ವಹಿಸಿದಾಗ ನಿಮಗೆ ಯಶಸ್ಸನ್ನು ಸಂಪಾದಿಸಲು ವಿಶೇಷವಾದ ಅವಕಾಶವುಂಟೆಂಬದಾಗಿ ಹೇಳಿದರು ಈ ದಿನ ನೋಡುವಲ್ಲಿ ನೀವು ಆ ಅವಕಾಶವನ್ನು ಎಲ್ಲಾ ಭಾಗಗಳಲ್ಲೂ ಒಳ್ಳೆಯ ಕಾರ್ಯಗಳಲ್ಲಿ ವಿನಿಯೋಗಿಸಿರುತ್ತೀರೆಂಬುವುದು ಸ್ಪಷ್ಟವಾಗಿ ಕಾಣುತ್ತದೆ. ಆಳ್ವಿಕೆಯ ಕ್ರಮವು ಚೆನ್ನಾಗಿರುವುದರಿಂದ ಯಾವ ಕಡೆ ನೋಡಿದರೂ ಅಭಿವೃದ್ಧಿಯೇ ಕಾಣುವುದು, ಸಂಸ್ಥಾನದಲ್ಲಿ ಸ್ವಭಾವಸಿದ್ಧವಾದ ಅನುಕೂಲಗಳು ವಿಶೇಷವಾಗಿರುವವು ಈ ಅನುಕೂಲತೆಗಳನ್ನು ಮನುಷ್ಯನ ಬುದ್ಧಿ ಶಕ್ತಿ ಮತ್ತೂ ಕೌಶಲ್ಯಗಳ ಪ್ರಯೋಗದಿಂದ ಪ್ರಜೆಗಳ ಶ್ರೇಯಸ್ಸಿಗೆ ಒದಗಿಸಿಕೊಂಡಿದೀರಿ, ವಿದ್ಯುಚ್ಛಕ್ತಿಯ ಆಶ್ಚರ್ಯಕರವಾದ ಉತ್ಪತ್ತಿಯನ್ನು ನೀವು ಮಾಡಿಕೊಂಡಿರುವ ಭಾಗವೂ, ಅದಕ್ಕಾಗಿ ನೀವು ಖರ್ಚುಮಾಡಿದ ಮೂಲಧನವೆಲ್ಲಾ ಅದರ ಆದಾಯದಿಂದ ಆಗಲೇ ನೀವು ಸಂಪಾದನೆಮಾಡಿಕೊಂಡಿರುವುದೂ, ಅದರಿಂದ ಕಳೆದ ವರುಷ ನಿಮ್ಮ ಗವರ್ನ್‌ಮೆಂಟಿಗೆ 16 ಲಕ್ಷ ರೂಪಾಯಿ ಉತ್ಪತ್ತಿಯಾಗಿರತಕ್ಕದ್ದೂ ನನಗೆ ತುಂಬಾ ಸಂತೋಷವನ್ನುಂಟುಮಾಡಿರುತ್ತದೆ ಅದಾಗ್ಯೂ ಈ ಸಂಸ್ಥಾನವು ವಿಶೇಷವಾಗಿ ವ್ಯವಸಾಯ ಸೀಮೆಯಾಗಿರುವುದು ನಿಮ್ಮ ಗವರ್ನ್‌ಮೆಂಟಿನವರು ನೀರಾವರಿಯನ್ನೂ ರಸ್ತೆಗಳನ್ನೂ ವಿಶೇಷವಾಗಿ ಹೆಚ್ಚಿಸುವುದರಲ್ಲಿ ಆಸಕ್ತರಾಗಿರುವುದು ಸಹಜವಾಗಿರುತ್ತದೆ ಇದಕ್ಕೆ ದೃಷ್ಟಾಂತವಾಗಿ ಕಾವೇರಿ ವಿದ್ಯುಚ್ಛಕ್ತಿಯ ಏರ್ಪಾಡನ್ನು ಸೂಚಿಸಬಹುದು ಇದರಿಂದ ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಉತ್ಪತ್ತಿ ಮಾಡಿಕೊಳ್ಳುವುದಕ್ಕೂ ತರೀ ವ್ಯವಸಾಯದ ಜಮೀನನ್ನು ಹೆಚ್ಚುಮಾಡಿಕೊಳ್ಳುವುದಕ್ಕೂ ಅನುಕೂಲವಾಗುವುದು, ಕಾವೇರಿನದಿಯ ನೀರನ್ನು ಉಪಯೋಗಿಸಿಕೊಳ್ಳುವ ಭಾಗದಲ್ಲಿ ಈಗ ಏರ್ಪಾಡಾಗಿರುವ ಪಂಚಾಯತಿಯಿಂದ ನಿಮ್ಮ ಗವರ್ನ್‌ಮೆಂಟಿಗೂ ಮದರಾಸ್ ಗವರ್ನ್‌ಮೆಂಟಿಗೂ ತೃಪ್ತಿಕರವಾಗಿ ಇತ್ಯರ್ಥವಾದೀತೆಂದು ನಿರೀಕ್ಷಿಸುತ್ತೇನೆ ಎರಡು ಪಕ್ಷದವರೂ ಆ ನೀರನ್ನು ಉಪಯೋಗಿಸಿಕೊಳ್ಳ ಬೇಕಾದದ್ದೇನೋ ಅವಶ್ಯ ಆದರೂ ಆ ಪಂಚಾಯತರ ತೀರ್ಮಾನವು ಧರ್ಮವಾಗಿಯೂ, ಶಾಶ್ವತವಾಗಿರುವಂತೆ ಉಚಿತವಾಗಿಯೂ, ಉಭಯಪಕ್ಷರಿಗೂ ಅನುಕೂಲವಾಗಿಯೂ ನಿರ್ಧಾರವಾದೀತೆಂದು ನಂಬುತ್ತೇನೆ

ಮಾರ್ಗಗಳು—ಮೈಸೂರು ಗವರ್ನ್‌ಮೆಂಟಿನವರು ರೈಲ್‌ರಸ್ತೆಗಳನ್ನು ಹಾಕಿ ದವಸಗಳು ಮಾರ್ಕೆಟ್ಟಿಗೆ ಸಾಗುವಂತೆಯೂ, ವ್ಯಾಪಾರ ಹೆಚ್ಚುವಂತೆಯೂ ಮಾಡಿಕೊಳ್ಳಬೇಕೆಂದು ಸಾಹಸ ಪಡುತ್ತಿರುವುದು ಸಂತೋಷಕರವಾಗಿದೆ ಹಿಂದುಸ್ಥಾನದ ಎಲ್ಲಾ ದೇಶೀಯ ಸಂಸ್ಥಾನಗಳಲ್ಲೂ ಈ ಉದ್ದೇಶವು ಫಲಕಾರಿಯಾಗುತ್ತಿದೆ ಇಂಥಾ ಕಾರ್ಯಕ್ಕೆ ನಾನು ವಿಶೇಷವಾಗಿ ಸಹಾಯಮಾಡತಕ್ಕವನಾಗಿರುತ್ತೇನೆ ಇದರಲ್ಲಿ ಕೆಲವು ವೇಳೆ ಕಷ್ಟಗಳು ಪ್ರಾಪ್ತವಾಗುವದನ್ನು ತಪ್ಪಿಸಿಕೊಳ್ಳುವುದು ಸಾಧ್ಯವಲ್ಲ ಬಹು ಕಾಲದಿಂದ ನಡೆದು ಬಂದಿರುವ ಹಕ್ಕು ಬಾಧ್ಯತೆಗಳಿಗೆ ನ್ಯೂನತೆಯುಂಟಾಗಬಾರದು ಅಂಥವರ ಹಕ್ಕುಗಳನ್ನು ಕಾಪಾಡಬೇಕಾದದ್ದು ಸಹಜವಾಗಿದೆ ಆದಾಗ್ಯೂ ನಿಮ್ಮ ಗವರ್ನ್‌ಮೆಂಟಿನವರು ರೈಲ್‌ರಸ್ತೆಗಳನ್ನು ಹಾಕಬೇಕೆಂದಿರುವ ಭಾಗದಲ್ಲಿ ಅದಕ್ಕೆ ಸಂಬಂಧಪಡುವ ಹೊರಗಿನ ಕಕ್ಷಿಗಳಿಗೆಲ್ಲಾ ಅನುಕೂಲವಾಗುವಂಥಾ ರೀತಿಯಲ್ಲಿ ನಿರ್ಧರಮಾಡಿಕೊಳ್ಳುವುದು ಸಾಧ್ಯವೆಂದು ನಂಬುತ್ತೇನೆ

ಪರಸ್ಪರಸಹಾಯಕಸಂಘ—ಇತರ ಭಾಗಗಳಲ್ಲೂ ನಿಮ್ಮ ಗವರ್ನ್‌ಮೆಂಟಿನವರು ನಿಮ್ಮ ಪ್ರಜೆಗಳ ಶ್ರೇಯಸ್ಸನ್ನು ಕೋರುವವರಾಗಿರುತ್ತಾರೆ ಪರಸ್ಪರ ಸಹಾಯಕಸಂಘಗಳ ಏರ್ಪಾಡು ಜರುಗಲ್ಪಟ್ಟಿರುತ್ತದೆ ಎಂದೂ, ಇದರಿಂದ ರೈತರು ಸಾಲಗಳನ್ನು ಹರಿಸಿಕೊಳ್ಳುವುದಕ್ಕೆ ತುಂಬಾ ಸಹಾಯವಾಗಿದೆ ಎಂದೂ, ಪ್ರಜೆಗಳ ಆರೋಗ್ಯವನ್ನು ಕಾಪಾಡುವುದಕ್ಕಾಗಿ ಒಂದು ಇಲಾಖೆಯನ್ನೂ ಆರೋಗ್ಯಶಿಕ್ಷಣ ಪಾಠಶಾಲೆಯನ್ನೂ ಸ್ಥಾಪಿಸಿ ನಡಿಸುತ್ತಾ ಬಂದಿರುತ್ತೀರೆಂದೂ, ದೇಶೀಯ ವಿಳೆ ಮತ್ತು ಕಸಬುಗಳ ಪರಿಮಾಣವನ್ನು ಕಂಡುಹಿಡಿಯುವುದಕ್ಕೆ ಸರ್ವೆಮಾಡಿಸಿರುತ್ತೀರೆಂದೂ ತಿಳಿದು ಸಂತೋಷಪಡುತ್ತೇನೆ ಇದು ಯಥಾರ್ಥವಾದ ಸ್ವದೇಶೀಕಾರ್ಯ ಅದಕ್ಕೆ ಜಯವಾಗಲೆಂದು ಪ್ರಾರ್ಥಿಸುವೆನು

ವಿದ್ಯಾಪ್ರಚಾರ—ಕಸಬುಗಳ ಅಭಿವೃದ್ಧಿಯಿಂದಲೇ ಪ್ರಜೆಗಳು ಶ್ರೇಯಸ್ಸಿಗೆ ಬರುವುದಿಲ್ಲವೆಂಬುವುದನ್ನು ನೀವು ಕಂಡುಕೊಂಡಿರುತ್ತೀರಿ ನಿಮ್ಮ ಆಳ್ವಿಕೆಯ ರೀತಿಯು ಧಾರಾಳವಾದದ್ದೆಂದು ಸರ್ವರಿಗೂ ಚೆನ್ನಾಗಿ ತಿಳಿದಿದೆ ಪ್ರಜಾಪ್ರತಿನಿಧಿಸಭೆಯೂ, ಅದಕ್ಕೆ ನೀವು ಕೊಟ್ಟಿರುವ ಹಕ್ಕುಗಳೂ, ಸಂಪದಭಿವೃದ್ಧಿ ಸಮಾಜವೂ ತಮ್ಮ ತಮ್ಮ ಕರ್ತವ್ಯಾಂಶಗಳನ್ನು ಅರಿತು ನೀವು ನಿರೀಕ್ಷಿಸುವಂತೆ ಸಾರ್ಥಕತೆಯನ್ನು ಪಡೆಯುವವೆಂದು ನಂಬಿ ನಿರೀಕ್ಷಿಸುವೆನು ಪ್ರಜೆಗಳು ನೀವು ಕೋರುವಂತೆ ಯೋಚನಾ ಪರರಾಗಿಯೂ, ಕಾರ್ಯಾಸಕ್ತರಾಗಿಯೂ, ಹೊಸ ವಿಷಯಗಳನ್ನು ಹುಡುಕಿ ಹಿಡಿಯತಕ್ಕವರಾಗಿಯೂ ಆಗಬೇಕೆಂದು ಎದುರುನೋಡುತ್ತೇನೆ ವಿದ್ಯಾಪ್ರಚಾರದ ವಿಷಯದಲ್ಲಿ ನೀವು ಮಾಡುತ್ತಿರುವ ಕಾರ್ಯಗಳು ನನಗೆ ಸಂತೋಷವನ್ನುಂಟುಮಾಡಿರುವುದು ನಿಮ್ಮ ಪ್ರೋತ್ಸಾಹದಲ್ಲಿ ವಿದ್ಯೆಯು ಹೆಚ್ಚಾಗಿ ಹರಡುತ್ತಿದೆ ಪ್ರೈಮರಿ ವಿದ್ಯಾಭ್ಯಾಸಕ್ಕೂ, ತರಪೇತಾದ ಉಪಾಧ್ಯಾಯರನ್ನು ಒದಗಿಸುವುದಕ್ಕೂ, ಕಸಬುದಾರಿ ವಿದ್ಯೆಯನ್ನು ಕಲಿಸುವುದಕ್ಕೂ, ಪರೀಕ್ಷಾರ್ಥವಾಗಿ ಮೈಸೂರಿನಲ್ಲಿ ಪಂಚಮರಿಗೆ ವಿದ್ಯೆ ಕಲಿಸಲು ಬೋರ್ಡಿಂಗ್ ಸ್ಕೂಲು ಸ್ಥಾಪಿಸಿರುವುದಕ್ಕೂ ಬಹು ಧಾರಾಳವಾಗಿ ಹಣವನ್ನು ಸ್ಯಾಂಕ್ಷನ್ ಮಾಡಿರುವುದು ಸಂತೋಷಪ್ರದವಾಗಿದೆ ಇದಲ್ಲದೆ ಮೈಸೂರಿನಲ್ಲಿ ಒಂದು ಕಸಬುಗಳ ಪಾಠಶಾಲೆಯನ್ನೂ, ಬೆಂಗಳೂರಿನಲ್ಲಿ ಒಂದು ಇಂಜಿನಿಯರಿಂಗ್ ಸ್ಕೂಲನ್ನೂ ಒಂದು ವ್ಯಾಪಾರದ ಸ್ಕೂಲನ್ನೂ ಕಲ್ಪಿಸಿ ಪರೀಕ್ಷಾರ್ಥವಾಗಿ ಅವುಗಳನ್ನು ನಡಿಸುವ ಏರ್ಪಾಡನ್ನು ಮಾಡಿರುತ್ತೀರಿ

ದಂಡಿನ ಹುಟ್ಟುವಳಿ ಬಿಲ್ಲು—ಬೆಂಗಳೂರು ದಂಡಿನ ಉತ್ಪತ್ತಿಯ ಬಿಲ್ಲಿನ ವಿಚಾರವು ಕಳೆದ ವರುಷ ಇತ್ಯರ್ಥವಾದದ್ದು ನನಗೆ ಸಂತೋಷವಾಯಿತು ಈಚೆಗೆ ಆ ಲೆಕ್ಕಗಳನ್ನು ನೋಡಿದ್ದರಲ್ಲಿ 10 ಲಕ್ಷ ರೂಪಾಯಿ ನಿಮ್ಮ ಗವರ್ನ್‌ಮೆಂಟಿಗೆ ಸಲ್ಲಬೇಕಾದ ಬಾಕಿ ಉಳಿದಿದೆ ಎಂದು ಗೊತ್ತಾಯಿತು ಈ ವಿಚಾರವು ನಿಮಗೆ ಸಂತೋಷವನ್ನುಂಟುಮಾಡೀತೆನ್ನುವುದಕ್ಕೆ ಸಂಶಯವಿಲ್ಲ—ಮೈಸೂರು ಗವರ್ನ್‌ಮೆಂಟಿಗೂ ಇಂಡಿಯಾ ಗವರ್ನ್‌ಮೆಂಟಿಗೂ ಇರುವ ಪರಸ್ಪರವಾದ ಪ್ರೀತಿ ಅನುರಾಗಗಳನ್ನು ಕುರಿತು ಪ್ರಸ್ತಾಪಿಸಬೇಕಾದ ಆವಶ್ಯವೇನೂ ಕಾಣುವುದಿಲ್ಲ ಅದಕ್ಕೆ ಎಂದೆಂದಿಗೂ ಕುಂದು ಕೊರತೆಗಳು ಉಂಟಾಗುವುದಿಲ್ಲವೆಂತಲೂ, ಅದರಲ್ಲೂ ನಿಮ್ಮ ಆಳ್ವಿಕೆಯಲ್ಲೂ, ವಿವೇಕಶಾಲಿಗಳೂ ಪ್ರೀತಿಯುಳ್ಳವರೂ ಆದ ಬ್ರಿಟಿಷ್ ರೆಸಿಡೆಂಟ್ ಸರ್ ಹ್ಯೂ ಡೇಲಿಯವರ ಕಾಲದಲ್ಲೂ ಉಂಟಾಗುವುದೇ ಇಲ್ಲವೆಂದೂ ನಾನು ಖಚಿತವಾಗಿ ತಿಳಿದಿರುತ್ತೇನೆ

ಹೊಸ ಕರಾರು—ಮುಂದೆ ನಾನು ಹೇಳುವ ವಿಚಾರವು ನಿಮಗೆ ಹ್ಯಾಗೆ ಸಂತೋಷವನ್ನುಂಟುಮಾಡಿದೆಯೋ ಅದರಂತೆಯೇ ನಮಗೂ ಸಂತೋಷವನ್ನುಂಟುಮಾಡುವುದೆಂದು ನಂಬುತ್ತೇನೆ ಸುಮಾರು ನಾಲ್ವತ್ತು ವರುಷಗಳ ಹಿಂದೆ ಒಂದು ಕರಾರುನಾಮೆಯನ್ನು ಬರೆದು ಯಾವ ಷರತ್ತಿನ ಮೇಲೆ ೧೮೮೧ನೇ ಇಸವಿಯಲ್ಲಿ ನಿಮ್ಮ ತಂದೆಯವರಿಗೆ ಸಂಸ್ಥಾನವನ್ನು ವಹಿಸಲಾಗಿ ಅದರಂತೆ ನಡೆದು ಬಂದಿದೆಯೋ ಆ ಕರಾರುನಾಮೆಯಲ್ಲಿ ಕಂಡ ಕೆಲವು ಕಲಮುಗಳನ್ನು ಸಹಜವಾದ ರೀತಿಯಲ್ಲಿ ತಿದ್ದಿ ಬದಲಾಯಿಸಿಕೊಡಬೇಕೆಂದು ಕೇಳಿದ್ದೀರಷ್ಟೆ ಈ ವಿಚಾರವನ್ನು ಕುರಿತು ನಾನು ದೀರ್ಘವಾಗಿ ಆಲೋಚನೆಮಾಡಿ, ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಸಂಪೂರ್ಣವಾದ ಅನುಮತಿಯನ್ನು ಪಡೆದು, ಈಗಿನ ಕರಾರುನಾಮೆಯನ್ನು ಬದಲಾಯಿಸಿ ಹೊಸ ಕರಾರನ್ನು ರಚಿಸಿಕೊಡುವುದು ನ್ಯಾಯವಾಗಿದೆ ಎಂದು ತೀರ್ಮಾನಮಾಡಿರುತ್ತೇನೆ ಹಿಂದುಸ್ಥಾನದ ಸಾಮಂತರಾಜರುಗಳ ಸ್ಥಾನಕ್ಕೆ ನಿಮ್ಮನ್ನು ಸೇರಿಸುವುದು ಸಹಜವಾಗಿರುತ್ತದೆ ಚಕ್ರವರ್ತಿ ಸಾರ್ವಭೌಮರವರ ಸರ್ಕಾರದವರು ನನ್ನ ಸಲಹೆಯನ್ನು ಒಪ್ಪಿಕೊಂಡು, ನೀವು ಮಾಡಿರುವ ಆಕ್ಷೇಪಣೆಗಳೂ ಕಾಣಿಸಿರುವ ಅಭಿಪ್ರಾಯಗಳೂ ನ್ಯಾಯವಾಗಿವೆ ಎಂದು ಅಪ್ಪಣೆಕೊಡಿಸಿರುತ್ತಾರಲ್ಲದೆ ನಿಮ್ಮ ಶ್ರೇಷ್ಠವಾದ ಶೀಲಸ್ವಭಾವಾದಿ ಗುಣಗಳೂ ನಿಮ್ಮ ಕೀರ್ತಿಯೂ ನಿರ್ದೋಷವಾಗಿರುವುದನ್ನು ಕಂಡು ಇನ್ನೂ ಸಂತೋಷಪಟ್ಟವರಾಗಿ ನನ್ನ ಸಲಹೆಯನ್ನು ಸ್ಯಾಂಕ್ಷನ್ ಮಾಡಿರುತ್ತಾರೆ ಈ ಶುಭ ಸಮಾಚಾರವನ್ನು ನಿಮಗೆ ತಿಳಿಯಪಡಿಸುವ ಸಂತೋಷವು ನನ್ನ ಪಾಲಿಗೆ ಬಂದದ್ದಕ್ಕಾಗಿ ನಾನು ಆನಂದಪಡುತ್ತೇನೆ

ಯುವರಾಜರವರು—ನಿಮ್ಮ ಸಹೋದರರಾದ ಯುವರಾಜರವರನ್ನು ಎರಡನೆಯಸಲ ಸಂಧಿಸಿದ್ದಕ್ಕಾಗಿ ನಾನು ತುಂಬಾ ಸಂತೋಷಪಡುವೆನು ಹೀಗೆಯೇ ನಾನು ಹಿಂದುಸ್ಥಾನದಲ್ಲಿ ಇರುವ ಸಮಯದಲ್ಲಿ ಇನ್ನೂ ಅನೇಕವೇಳೆ ಅವರ ಸಮಾಗಮವನ್ನು ಪಡೆಯುತ್ತಾಬರಲು ಅವಕಾಶವುಂಟಾದೀತೆಂದು ನಿರೀಕ್ಷಿಸುತ್ತೇನೆ

ನಾನೂ ಲೇಡಿ ಹಾರ್ಡಿಂಗ್‌ರವರೂ ಮೈಸೂರಿನಲ್ಲಿ ಬಹಳ ಆನಂದದಿಂದ ಕೆಲವು ಕಾಲವನ್ನು ಕಳೆಯುವಂತೆ ಆದದ್ದಕ್ಕಾಗಿ ಮತ್ತೊಂದುಸಲ ನಿಮ್ಮನ್ನು ವಂದಿಸುತ್ತೇನೆ ಇನ್ನುಮುಂದೆ ನಾವು ಕೆಡ್ಡಾ ಕ್ಯಾಂಪಿನಲ್ಲಿ ಅಪೂರ್ವವಾದ ನೋಟಗಳನ್ನು ನೋಡುವ ನಿರೀಕ್ಷೆಯಲ್ಲಿರುವೆವು ಮೈಸೂರು ಶ್ರೀಮನ್ ಮಹಾರಾಜರವರಿಗೆ ಆರೋಗ್ಯಭಾಗ್ಯಗಳುಂಟಾಗಲೆಂದು ಬಯಸುವೆವು

ಅತಿಥಿಗಳೆಲ್ಲಾ ಸಲಾಂ ಬಾಜಾ ಆಗುತ್ತಿರುವಲ್ಲಿ ಜಯಘೋಷಮಾಡಿ ಮಹಾರಾಜರವರ ಶ್ರೇಯಸ್ಸನ್ನು ಬಯಸಿದರು

ಮಹಾರಾಜರವರ ಪ್ರತ್ಯುತ್ತರವು

ಶ್ರೀಮನ್ ಮಹಾರಾಜರವರು ವೈಸ್‌ರಾಯರವರ ಭಾಷಣವನ್ನು ಕೇಳಿ ಅವರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಿ, ಸಮಯೋಚಿತವಾಗಿ ಕೆಲವು ಮಾತುಗಳನ್ನಾಡಿದರು

ಕಡೆಯಲ್ಲಿ ಬಹು ನೇತ್ರಾನಂದಕರವಾದ ಬಾಣಬಿರುಸುಗಳು ಹಚ್ಚಲ್ಪಟ್ಟವು ವೈಸ್‌ರಾಯಿ ದಂಪತಿಗಳು ಅವುಗಳನ್ನು ಪರಾಂಬರಿಸಿ ತುಂಬಾ ಸಂತೋಷಪಟ್ಟುಕೊಂಡರು.

WANTED

Several English Compositors. Salary according to qualifications.

Apply to The Manager, Wesleyan Mission Press, Mysore [235 2]

ಗೃಹಕೃತ್ಯದ ನೋಟೀಸು

ಅರಕಲಗೂಡು ತಾಲ್ಲೂಕು ರಾಮನಾಥಪುರದ ಹೋಬಳಿ ಕೆಲ್ಲಾಪುರದ ಶಿವಾಚಾರದ ಬಸಮ್ಮನ ಮಗ ನಂಜುಂಡಶೆಟ್ಟಿಯು ತಿಳಿಯಪಡಿಸುವದೇನೆಂದರೆ—ನನ್ನ ಚಿಕ್ಕ ತಾಯಿ ಭದ್ರಕಾಳಮ್ಮನಿಗೆ ಸಂತಾನವೇ ಇಲ್ಲ ನನ್ನ ತಂದೆ ಆಸ್ತಿಗೂ ನನ್ನ ಚಿಕ್ಕಪ್ಪನ ಆಸ್ತಿಗೂ ನಾನೇ ಹಕ್ಕುದಾರನಾಗಿದೇನೆ ಇದನ್ನು ಇತರರಿಗೆ ಪರಾಧೀನಮಾಡಬೇಕೆಂದು ನನ್ನ ಚಿಕ್ಕ ತಾಯಿ ಯತ್ನಿಸುತ್ತಾಳೆ ನನ್ನ ಅನುಮತಿ ಶಿವಾಯಿ ಯಾರು ಪಡೆದರೂ ನನ್ನ ಬಾತ್ಲಿಗೆ ಗುರಿಯಾಗಬೇಕಾದ ವಿಷಯ ತಿಳಿಯುವದು ಷೆಡ್ಯೂಲ್—ಸರ್ವೆ ನಂ 99 ನೆ 3 ಎಕರೆ 14-3 ಆಕಾರ 7 ರೂ ಸರ್ವೆ ನಂ, 102 ಎಕರೆ 16-39 ಆಕಾರ ರೂ 7 ಸರ್ವೆ ನಂ 111 ನೇ 1 ಎಕರೆ 1 16 ಆಕಾರ 0 12 0 ಸರ್ವೆ ನಂ 66 ನೇ ಎಕರೆ 2 23 ಆಕಾರ 16 ರೂ ಈ ನಂಬರುಗಳಲಿ 1 ನೇ 1 ಭಾಗ [236 1]

ನಂಜುಂಡಶೆಟಿ ರುಜು

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ತೆಗೆದು ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ—ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬೆಳುವಾಗಿಯೋ ಇಳಿಯುವುದು, ಬಡವೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು ತಲೆನೋವು, ಗಾಬರಿ, ಕಣ್ಣುಮಬ್ಬು ತಲೆ ತಿರುಗುವಿಕೆ ಮೈನೋವು, ಕೀಲುನೋವು, ಮರವು, ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವವು

ಡೋನ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [151 10]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವವು



ರೂ. ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು. ಅಥವಾ ಡೋನ್ಸ್, ಪಿ ಓ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುವು.

ನಾಗರಿಕ ಮೈಸೂರಿನಲ್ಲಿ ಅನಾಗರಿಕ ಉಡುಪು

ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರ ಮ|| ವಿ ಮುತ್ತುಸಾಮಿದಾಸರವರು ಬರೆಯುವದೇನೆಂದರೆ—

ಹೊಸಕೋಟೆ ತಾಲ್ಲೋಕು ಸೂಲಿಬೆಲೆ ಮತ್ತು ಬೆಂಗಳೂರು ತಾಲ್ಲೋಕು ಕೆಂಗೇರಿ ಹೋಬಳಿಗಳಿಗೆ ಸೇರಿದ ಹಲವು ಗ್ರಾಮಾಂತರವಾಸಿಗಳಾದ ಹಾಲುಮತಾವಲಂಬಿಗಳಿಗೆ ಈ ನಾಗರಿಕ ಕಾಲದಲ್ಲಿಯೂ ತಮ್ಮ ನೆರೆಹೊರೆಯ ಗ್ರಾಮವಾಸಿಗಳೂ, ಇತರ ಹಿಂದುಗಳೂ ತನ್ನ ಆಚಾರ ವ್ಯವಹಾರ, ಉಡುಪು ಮುಂತಾದವುಗಳಲ್ಲಿ ಸಂಪೂರ್ಣವಾಗಿ ಮಾರ್ಪಟ್ಟಿದ್ದರೂ ತಾವು ಮಾತ್ರ ಈಗಲೂ ತಮ್ಮ ಪೂರ್ವಿಕರಂತೆಯೇ ಕಂಬಳಿಗಳನ್ನು ಧರಿಸುತ್ತಿರುವುದೇ ಕೇವಲ ವಿಷಾದಕ್ಕೆ ಕಾರಣವಾಗಿದೆ. ಯಾವ ಜನಾಂಗವೇ ಆಗಲಿ ಎಂದಿನ ವರೆಗೆ ತಮ್ಮ ಸ್ತ್ರೀ ಪುರುಷರು ವಿದ್ಯಾಹೀನರಾಗಿಯೂ, ಅನಾಗರಿಕವೇಷರಾಗಿಯೂ ಇರುವರೋ ಅಂದಿನವರೆಗೆ ಆ ದೇಶವು ಉನ್ನತಸ್ಥಿತಿಗೆ ಬರಲಾರದು. ದೇಶದಲ್ಲಿ ವಿದ್ಯೆಯೂ, ನಾಗರಿಕತೆಯೂ ಹೆಚ್ಚಿದ ಹಾಗೆಲ್ಲಾ ದೇಹಮರ ಉಡಿಗೆ ಮತ್ತು ನಡೆನುಡಿಗಳಲ್ಲಿ ಕಾಲಾನುಗುಣವಾಗಿ ಮಾರ್ಪಾಟಾಗಬೇಕಾದದ್ದು ಅತ್ಯಾವಶ್ಯಕವಾಗಿರುತ್ತದೆ. ಎಂದರೆ ಎಲ್ಲರೂ ಹೆಚ್ಚಿನ ಬೆಲೆಯುಳ್ಳ ಉಡಿಗೆಯನ್ನು ಧರಿಸಬೇಕೆಂಬುವುದು ನಮ್ಮ ಅಭಿಪ್ರಾಯವಲ್ಲ. ಎದೆ ಮೊಳಕಾಲಿನವರೆಗೂ ಹಾಲುಮತಸ್ಥರು ಕಂಬಳಿಯನ್ನು ಉಡುವುದಕ್ಕೆ ಬದಲಾಗಿ ಈಗಿನ ಕಾಲದಲ್ಲಿ ಕೇವಲ ಅಗ್ಗವಾಗಿ ಎರಡು ರೂಪಾಯಿಗೆಲ್ಲಾ ದೊರೆಕತಕ್ಕ ಸೀರೆಗಳನ್ನು ಉಟ್ಟರೆ ಆದರೆ ಹೆಂಗಸರು ಲಕ್ಷಣವಾಗುವದಲ್ಲದೆ ಅವರಿಗೆ ಸಂಘದಲ್ಲಿ ಗೌರವವೂ, ಪೂಜ್ಯತೆಯೂ ಉಂಟಾಗುವವು, ಅಲ್ಲದೆ ಕಂಬಳಿಯನ್ನು ಆಗಾಗ ಒಗೆಯದೇ ಇರುವುದರಿಂದ ಉಂಟಾಗಬಹುದಾದ ಚರ್ಮಸಂಬಂಧವಾದ ರೋಗಗಳಿಂದ ಪಾರಾಗಬಹುದು.

ಆದ್ದರಿಂದ ವಿದ್ಯಾವಂತರೂ, ದೇಶಾಭಿಮಾನಿಗಳೂ ಆದ ಮಹನೀಯರು ತಮ್ಮ ಪ್ರಾಂತದಲ್ಲಿ ಮೇಲ್ಕಂಡ ಜನರಿದ್ದರೆ ಅವರಿಗೆ ಹಿತೋಪದೇಶಮಾಡಿ, ಅವರ ಹೇಸಿಗೆಕರವಾದ ಕಂಬಳಿ ಉಡುವ ಅಭ್ಯಾಸವನ್ನು ಬಿಡಿಸಿ ಅವರ ಮೌಢ್ಯವನ್ನು ಹೋಗಲಾಡಿಸ ಬೇಕೆಂಬುದಾಗಿ ಲೇಖಕರ ಶ್ರಮವು ಸಾರ್ಥಕವಾಗುತ್ತದೆ.

ಚಿತ್ರದುರ್ಗ ಡಿಸ್ಟ್ರಿಕ್ಟ್ ಉಪಾಧ್ಯಾಯ ಸಂಘ

1913 ನೇ ನೋವೆಂಬರ್ 3 ಗಳ ವಿಸಾಟಿಂಗು

ಈ ಸಂಘದ ಮೆಂಬರುಗಳು ಎಂದಿನಂತೆ 2 ನೇ ತಾರೀಖು ಭಾನುವಾರ ಮಧ್ಯಾಹ್ನ 1 ಘಂಟೆಗೆ ಎ ವಿ ಸ್ಕೂಲ್ ಹಾಲಿನಲ್ಲಿ ಸೇರಿದ್ದರು. ಹೈ ಸ್ಕೂಲ್ ಹೆಡ್ ಮಾಸ್ಟರು ಮ|| ಕೆ ನಾರಾಯಣಾಯ್ಯಂಗಾರ್ಯರು ಸಭೆಯ ಅಗ್ರಾಸನವನ್ನು ವಹಿಸಿದ್ದಕ್ಕಾಗಿ ಮೆಂಬರುಗಳೆಲ್ಲರೂ ಅತ್ಯಂತ ಸಂತೋಷವನ್ನು ಸೂಚಿಸಿದರು—ಸೆಕ್ರೆಟರಿಯವರು ಕಳೆದ ತಿಂಗಳಲ್ಲಿ ನಡೆದ ಮುಖ್ಯಾಂಶಗಳನ್ನು ಓದಿ ರಿಕಾರ್ಡು ಮಾಡಿದರು. ತರುವಾಯ ಗತ ವಾರದಲ್ಲಿ ಪ್ರಾಕ್ಟಿಕಲ್ ಕ್ಲಾಸು ನಡೆಯಬೇಕಾಗಿತ್ತು. ಅದಕ್ಕಾಗಿ ಒಪ್ಪಿಕೊಂಡಿದ್ದ ಉಪಾಧ್ಯಾಯರು ತಮ್ಮ ಅನನುಕೂಲವನ್ನು ತಿಳಿಸಿದ್ದರಿಂದ ಅದಕ್ಕೆ ಬದಲಾಗಿ ಎ ವಿ ಸ್ಕೂಲ್ ಹೆಡ್ ಮಾಸ್ಟರು ಮ|| ವೀರಭದ್ರಪ್ಪನವರು ಭೂವಿವರಣೆ ಪಾಠದಲ್ಲಿ ಕೆಲವು ಮುಖ್ಯವಾದ ಅಂಶಗಳನ್ನು ಕುರಿತು ಉಪನ್ಯಾಸ ಮಾಡಿದರು. ತರುವಾಯ ಡಿಸ್ಟ್ರಿಕ್ಟ್ ಎಡುಕೇಷನಲ್ ಎಕ್ಸಾಮಿನ್ ಕಾನ್ಫರೆನ್ಸ್ ಸೆಕ್ರೆಟರಿಯವರಾದ ಮ|| ಅಡ್ವೊಕೇಟ್ ರಾಮಣ್ಣನವರು ಉಪಾಧ್ಯಾಯರ ಕರ್ತವ್ಯವನ್ನು ಕುರಿತು ಸೂಕ್ಷ್ಮವಾಗಿ ಹೇಳಿದರು. ಸಂಘದ ಸರ್ಕಾರದವರು ಒಲಾಕ್ಯಾರವಾಗಿ ವಿದ್ಯಾಭ್ಯಾಸ ಮಾಡಬೇಕೆಂಬುದರ ಉದ್ದೇಶವನ್ನೂ ಮತ್ತು ಕೈಗಾರಿಕೆ ವಿದ್ಯಾಭ್ಯಾಸದ ಪ್ರಯೋಜನವನ್ನೂ ವಿವರಿಸಿ, ಇದಕ್ಕಾಗಿ ಎಲ್ಲ ಉಪಾಧ್ಯಾಯರುಗಳೂ ತಮ್ಮ ಸ್ಕೂಲಿಗೆ ಬೇಕಾಗುವ ಉಪಕರಣಗಳು, ತೋಟಗಳಿಗೆ ಸ್ಥಳ ಕಟ್ಟಡಗಳ ವಿಷಯ ಕೈಗಾರಿಕೆ ವಿಚಾರವಾಗಿ ಸ್ಥಳ ವಿದ್ಯಾಮಾನವನ್ನು ಕುರಿತು ತಮ್ಮ ಅನುಭವವನ್ನು ಬರೆದು ಕಳುಹಿಸುವ ಭಾಗದಲ್ಲಿ ಹೆಚ್ಚು ಸಹಾಯವಾಗುವುದೆಂದು ತಿಳಿಸಿದರು. ವಿದ್ಯಾಭಿಮಾನಿಗಳಾದ ದೊಡ್ಡಮನುಷ್ಯರುಗಳಿಗೂ ಇತರೇ ದೊಡ್ಡಮನುಷ್ಯರಿಗೂ ಈ ಸಂಘದಿಂದ ಹೆಚ್ಚು ಪ್ರಯೋಜನವಾಗಬೇಕಾಗಿದೆ ಮತ್ತು ಈ ಸಭೆಗೆ ಬಂದು ಅನೇಕ ವಿಷಯಗಳನ್ನು ಕುರಿತು ಚರ್ಚಿಸಿ ಸಲಹೆಗಳನ್ನು ಕೊಡುವದು ಅವಶ್ಯವಾಗಿದೆ. ಈ ವರೆವಿಗೂ ಇದ್ದ ಉಪಾಧ್ಯಾಯ ಸಂಘವೆಂಬ ಹೆಸರಿಗೆ ಬದಲಾಗಿ "ವಿದ್ಯಾಭಿವೃದ್ಧಿ ಸಂಘ" ವೆಂಬದಾಗಿ ಹೆಸರಿಡಬೇಕೆಂದು ಮ|| ಸೂರಪ್ಪನವರೇ ಮೊದಲಾದವರು ಅಭಿಪ್ರಾಯಪಟ್ಟರು. ಮ|| ರಾಮರಾವ್, ಮ|| ಶಿವಶಂಕರಯ್ಯ ಮೊದಲಾದವರು ಅನುಮೋದಿಸಿದರು. ಸಭೆಯ ಎಲ್ಲಾ ಮೆಂಬರುಗಳೂ ಅದನ್ನು ಒಪ್ಪಿದರು. ಈ ಪ್ರಕಾರ ಆಯಿತು. ಚಿತ್ರದುರ್ಗ ಡಿಸ್ಟ್ರಿಕ್ಟ್ ವಿದ್ಯಾಭಿವೃದ್ಧಿ ಸಂಘ" ವೆಂಬದಾಗಿ ಕರೆಯತಕ್ಕದ್ದೆಂದು ಇತ್ಯರ್ಥವಾಯಿತು. ಕಳೆದ ವರ್ಷದ ಮೈಸೂರು ಜಿಯೋಲಜಿಯಲ್ಲಿ ಉತ್ತಮವಾದ ವಸ್ತುಗಳನ್ನು ಕಳುಹಿಸಿದ ಸ್ಕೂಲುಗಳಿಗೆಲ್ಲಾ ಸರ್ಟಿಫಿಕೇಟನ್ನು ಕಳುಹಿಸತಕ್ಕದ್ದೆಂದು ತೀರ್ಮಾನಿಸಿದರು. ಕಡೆಯಲ್ಲಿ ಅಗ್ರಾಸನಾಧಿಪತಿಗಳಿಗೆ ವಂದನೆಗಳನ್ನು ಸಮರ್ಪಿಸಿ ಮೀಟಿಂಗನ್ನು ಮುಕ್ತಾಯಮಾಡಿದರು.

ವೀರಭದ್ರಪ್ಪ, ಸೆಕ್ರೆಟರಿ

ವಿದ್ಯಾಸಾಗರ್ ಬುಕ್ ಡಿಪೋ

ಚಿಕ್ಕ ಪೇಟೆ, ಬೆಂಗಳೂರು ಸಿಟಿ.

ಇಲ್ಲಿ ಎಲ್ಲಾ ತರಹ ಇಂಗ್ಲೀಷು ಮತ್ತೂ ಕನ್ನಡ ಸ್ಕೂಲ್ ಪುಸ್ತಕಗಳೂ, ಉತ್ತಮ ಕಥೆಗಳೂ, ಉದ್ಗ್ರಂಥಗಳೂ, ಸ್ಟೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ. ಚಿಕ್ಕ ಮತ್ತು ದೊಡ್ಡ ಸ್ಟಾಂಪು ಡೈಗಳೂ ಸಿದ್ಧವಾಗಿವೆ.

ಕೆಲವು ಪುಸ್ತಕಗಳು

ವಿದ್ಯಾಸಾಗರ ಬುಕ್ ಡಿಪೋವಿನಲ್ಲಿ ಮಾತ್ರ ದೊರೆಯುವ ಅಪೂರ್ವವಾದ ಮತ್ತು ಬಹು ಉಪಯೋಗವುಳ್ಳ ಪುಸ್ತಕಗಳು—

(1) ವೈದ್ಯಸಾರಸಂಗ್ರಹ – ದೊಡ್ಡವೈದ್ಯಗ್ರಂಥ, ಮೈಸೂರು ಅರಮನೆಯಲ್ಲಿ ತಯಾರಾದ ಅಪೂರ್ವಗ್ರಂಥ ಮೊದಲು ಬೆಲೆ ರೂ 5 8-0 ಟಪಾಲು ಖರ್ಚು ಸೇರಿ ಈಗ ರೂ 3 6-0 (2) ಶಿವಾನಂದಲಹರಿ, ಶ್ರೀಶಂಕರಾಚಾರ್ಯಕೃತವಾದ್ದು, ಟೀಕಾ ತಾತ್ಪರ್ಯ ಸಹಿತ—6 ಆಣೆ (3) ಸಂಗ್ರಹ ರಾಮಾಯಣ—4 ಆಣೆ (4) ವಿಷ್ಣುಸಹಸ್ರನಾಮಸ್ತೋತ್ರ ಶ್ರೀಮತಭಾಷ್ಯದೊಡನೆ ಸಹ —1 ರೂ (5) ವೃಷಭೇಂದ್ರವಿಜಯ, ಪುರಾತನ ಪ್ರತಿ—2 ರೂ (6) ಸೂರ್ಯನಮಸ್ಕಾರ—2 ಆಣೆ (7) ಉದಕಶಾಂತಿ ಮಾತ್ರ—2 ಆಣೆ [225]

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೪೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು. (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನು ತಿಳಿಸುವದು. (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು. (4) ನವರಸಾಲಂಕೃತವಾದ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರಕೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು. (5) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು. ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ. ಇದರ ಕ್ರಯ ಪ್ರತಿ 1 ಕ್ಕೆ 1 8-0, ಟಪ್ಪಾಲು ಹಾಸಲು 4 ಆಣೆ

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಕಥಾರೂಪವಾದ ತಾತ್ಪರ್ಯ ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ.

ಇದರ ಕ್ರಯ ಪ್ರತಿ 1 ಕ್ಕೆ ರೂ 4 ಟಪಾಲು ಹಾಸಲು 10 ಆಣೆ. ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು. [197-31]

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ. ಕೂದಲು ಸತ್ತು ಹೋಗುತ್ತೆ. ಆ ದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ" ವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ, ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳೆಸುತ್ತೆ. ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಕಚಕಿಸುವವು, ನಿಬಿಡವಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದು ಹೋಗದೆ ದಟ್ಟವಾಗಿ ಬೆಳೆಯುವವು. ಕೂದಲಿಗೆ ಹೊಳಪುಕೊಡುತ್ತೆ, ತಲೆ ಬುರುಡೆಯನ್ನು ಶುದ್ಧಮಾಡುತ್ತೆ, ಸುಂಡಿನ ಹೊಟ್ಟನ್ನು ಅಲಗಿಸುತ್ತೆ, ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ. ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು. ಕಾಮಿನಿಯಾ ತೈಲ ಅತ್ಯಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ. ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0 4 0 ಬೇರೆ ಸೇರಬೇಕು.

3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0 7-0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ. ಮೈಸೂರು ಎಗ್ಜಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು.

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ. ಮನ್ನಾರ್‌ಗುಡಿ ಬಿಷಪ್ ಸೆಕ್ರೆಟರಿ ಮಿ|| ಡಿ ಸಾಲೊಮನ್‌ರವರು ಬರೆಯುವದು—"ದಯವಾಡಿ ಆರು ಬಾಟ್ಲು ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ. ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ. ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ."

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಹಾವುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ. ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಥಾಯತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ. ಇದು ಅಗ್ಗ, ಇದು ಒಳ್ಳೆಯದು" ಎಂದು ಹೇಳಿ ಮೋಸಮಾಡುವರು. ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ. ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ.

'ಕೆಪಿಟೋಲ್‌ಬಾಮ್' —ಮಳೆ ಮತ್ತು ಚಳಿಯ ಥಂಡಿ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಲ್‌ಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ. ಕೈಕಾಲು ನೋಯುವುದು, ಸಂದುವಾತ, ಮಸ್ತಕಶೂಲೆ, ಹೆಚ್ಚಾಗಿ ಮೆಹನತ್ತುಪಟ್ಟದ್ದರಿಂದ ಕ್ಷೀಣವಾಗುವದು, ಸೊಂಟನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ. ಬಾಟ್ಲು 1ಕ್ಕೆ ಕ್ರಯ 0 8 0 ಟಪಾಲು ಪ್ರತ್ಯೇಕ.

ಒಡಮನ್ಸ ಮಲೇರಿಯ ಪಿಲ್ಸ—ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆ ಬರುವ ಜ್ವರ ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯಸ್" ಗುಳಿಗೆಗಳು ರಾಮಬಾಣವಾಗಿದೆ. ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ. ಇದು ದೇಶದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ. ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ. ದಿನಕ್ಕೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದು.

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1 0 0 3 ಬಾಟ್ಲಿಗಳಿಗೆ ರೂ 2 8 0 ವಿ ಪಿ ಖರ್ಚು ಪ್ರತ್ಯೇಕ.

ಮೇಲ್ಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ— [8 11]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ದಿ ಕುಲಕ್ ಮಾರ್ಟ್, ಮಂಗಳೂರು

ಪ್ರಾಕೃತಿಕ ಭೂಗೋಳ.

ಮೊದಲನೇ ಮುದ್ರಣವು ಅತಿ ಶೀಘ್ರವಾಗಿ ಮುಗಿದುಹೋದ್ದರಿಂದ ಈಚಿಗೆ ಬಂದಿರುವ ಆರ್ಡರುಗಳಿಗೆ ಪ್ರತಿಗಳನ್ನು ಕಳುಹಿಸಲು ಅವಕಾಶವಾಗಲಿಲ್ಲ. ಎರಡನೇ ಮುದ್ರಣದಲ್ಲಿ ಅನೇಕ ಹೆಚ್ಚು ವಿಷಯಗಳನ್ನು ಚನ್ನಾಗಿ ವಿವರಿಸಿ ಆರ್ಟ್ ಪೇಪರಿನಮೇಲೆ ಪ್ರಿಂಟುಮಾಡಿರುವ ಅನೇಕ ಹೊಸ ನಕ್ಷೆಗಳನ್ನು ಸೇರಿಸಿರುವುದಲ್ಲದೆ 1 ಆಣೆ ಬೆಲೆ ಬಾಳುವ ಬಣ್ಣಹಾಕಿರುವ ಸುಂದರವಾದ ಒಂದು ಮೈಸೂರು ಮ್ಯಾಪನ್ನು ಸಹ ಸೇರಿಸಿರುತ್ತೆ. 1 ನೆಯ ಭಾಗವು ಸೆಪ್ಟಂಬರ್ ತಿಂಗಳು 25 ರಲ್ಲಿ ಬಿಕರಿಗೆ ಸಿದ್ಧವಾಗುವುದು. ಈ ಪುಸ್ತಕವು ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೂ ಮತ್ತು ಸ್ಕೂಲಿನಲ್ಲಿ ಪಾಠಹೇಳುವುದಕ್ಕೂ ಬಹಳ ಸಹಕಾರಿಯಾಗಿರುತ್ತದೆ. ಕೆಲವು ಪ್ರತಿಗಳು ಮಾತ್ರ ಪ್ರಿಂಟಾಗಿರುವುದರಿಂದ ಮೊದಲು ಬಂದ ಆರ್ಡರುಗಳಿಗೆ ಜಾಗ್ರತೆಯಲ್ಲಿ ಪ್ರತಿಗಳು ಕಳುಹಿಸಲ್ಪಡುವುವು. ಕ್ರಯ 0 4 6

ಹೊಸ ಕನ್ನಡ ಲೇಖನದ ಪುಸ್ತಕವೆಂಬ ಹೆಸರಿನಿಂದ 4 ನಂಬರು ಕಾಪಿಪುಸ್ತಕಗಳನ್ನೂ ಪ್ರಿಂಟ್‌ಮಾಡಿಸಿರುತ್ತೇನೆ. ಇದರ ಮೇಲ್ಪಟ್ಟಿಗಳು ಬಹು ಅಂದವಾದ ಬರವಣಿಗೆಯ ಅಕ್ಷರದಂತೆ ತಲೆಕಟ್ಟುಗಳೇ ಮೊದಲಾದವುಗಳವೆಯೇ ಹೊರತು ಪ್ರಿಂಟಿಂಗ್ ಅಕ್ಷರಗಳ ಹಾಗಿಲ್ಲ. ಒಳ್ಳೇ ಕಾಗದದ ಮೇಲೆ ನೋಡುವುದಕ್ಕೆ ಬಹು ಅಂದವಾಗಿ ರೂಲುಗಳನ್ನು ಹಾಕಿ ಪ್ರಿಂಟಾಗಿರುತ್ತವೆ. ಇವುಗಳು ವಿದ್ಯಾರ್ಥಿಗಳ ಕೈ ತಿದ್ದಲು ಬಹಳ ಸಹಕಾರಿಯಾದ ಕಾಪಿ ಪುಸ್ತಕಗಳೆಂದು ಭಾವಿಸಿ ಮೈಸೂರಿನ ಸ್ಕೂಲುಗಳಲ್ಲಿ ಉಪಯೋಗಿಸುತ್ತಿದಾರೆ. ಕ್ರಯ 0 1 3

ಪ್ರಾಕೃತಿಕ ಭೂಗೋಳ ಮತ್ತು ಹೊಸಕನ್ನಡ ಲೇಖನ ಪುಸ್ತಕಗಳನ್ನು ಪಡೆಯಲಿಷ್ಟವುಳ್ಳ ಪುಸ್ತಕ ವ್ಯಾಪಾರಿಗಳೇ ಮೊದಲಾದ ಸರ್ವರೂ ಸಿ ಎಲ್ ಎಸ್ ಬುಕ್ ಡಿಪೊ, ಮೈಸೂರಿಗೆ ಬರೆದು ತರಿಸಿಕೊಳ್ಳಬಹುದು.

ಎಂ ಪಿ ಲಿಂಗಪ್ಪಯ್ಯ ಹೆಡ್ ಮಾಸ್ಟರು, ಇಟ್ಟಿಗೇಗೂಡು,

[186-3] ಎ ವಿ ಸ್ಕೂಲು, ಮೈಸೂರು

THE PLACE FOR HASSAN CAPS IS

HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-46

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ; ೧ ರೂ ೬ ಆ , ೧ ರೂ ೪ ಆ

ಚುಕ್ಕಿಯುಳ್ಳ ಟೋಪಿಗಳು ರೂ ೧—೮, ರೂ ೧—೧೨

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ.

ಮುಸುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ —

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ

ದೇವೀಭಾಗವತ

ಕನ್ನಡ ವಚನರೂಪ, ಬೆಲೆ ರೂ ೨-೪-೦

ವಿಳಾಸ —ಆರ್ ವೆಂಕಟರಾಮಶಾಸ್ತ್ರಿ, ಶಂಕರಪುರ,

[221 3] ಬೆಂಗಳೂರು ಸಿಟಿ, ವೇದವಾಹಿನಿ ಆಫೀಸ್

ಶ್ರೀಮದ್ವಾಲ್ಮೀಕಿ ರಾಮಾಯಣ

"ಸುನ್ದರಕಾಣ್ಡ" ಮಾಸಪತ್ರಿಕೆ

64 ದೊಡ್ಡ ಪುಟಗಳ ಸಂಚಿಕೆ 1 ಕ್ಕೆ ಐದೇ ಆಣೆ ಸುಮಾರು 14 ಸಂಚಿಕೆಗಳಾಗುತ್ತವೆ ಟೀಕು, ತಾತ್ಪರ್ಯ, ವಿಮಲ ಇವುಗಳಿಂದೊಡಗೂಡಿ, ಕಾಗದ, ಅಕ್ಷರ, ಅಚ್ಚು, ಸ್ವಾರಸ್ಯಗಳಿಂದ ಬಹು ಸುಂದರ ಪುಸ್ತಕವಾಗುವುದು ಚಂದಾ ಸೇರತಕ್ಕವರು ಮುಂಗಡ ಒಂದು ರೂ ಕೊಡಬೇಕು ಅದರಲ್ಲಿ ಕಡೆಯ ಮೂರು ಸಂಚಿಕೆಗಳಲ್ಲಿ ಉತ್ತರಮಾಡಿಕೊಡುವವು ಶ್ರೀ "ಶಾರದಾ" ಮಾಸಪತ್ರಿಕಾ ಸಂಪಾದಕರಾದ ವೇ॥ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಇದುವರೆಗೆ ಯಾರೂ ಪ್ರಕಾಶಪಡಿಸದ ರಹಸ್ಯಗಳನ್ನೆಲ್ಲ ಶ್ರೇಷ್ಠವಾದ ರೀತಿಯಿಂದ ವಿವರಿಸಿ ಬರೆಯುತಲಿದಾರೆ 1 ಆಣೆ ಲೇಬಿಲ್ ಕಳುಹಿಸಿ ಮಾದರಿ ಸಂಚಿಕೆಯಲ್ಲಿ ನೋಡಬಹುದು

1 1 13 ರಲ್ಲಿ ಆರಂಭವಾಗಿ ಎಂಟು ಸಂಚಿಕೆಗಳು ಸಿದ್ಧವಾಗಿವೆ

ಶ್ರೀ "ಶಾರದಾ" ಮಾಸಪತ್ರಿಕೆ ಇದುವರೆಗೆ 14 ಪುಸ್ತಕಗಳು ಪೂರ್ತಿಯಾಗಿವೆ ವಾರ್ಷಿಕ ಚಂದಾ ರೂ 2-0 0 ರಘುಕುಲಚರಿತೆ ಪ್ರಿಂಟಾಗುತಲಿದೆ 1 ತಿಂಗಳಲ್ಲಿ ಪುಸ್ತಕವು ಪೂರ್ತಿಯಾಗುವುದು ಕ್ರಯ 4 ವಾಲ್ಯೂಂಗೆ ರೂ 3

ವಿಳಾಸ—ಬಿ ಸೀತಾರಾಮಶಾಸ್ತ್ರಿ (ಅಥವಾ)

ಡಿ ಲಕ್ಷ್ಮೀನರಸಿಂಹಶಾಸ್ತ್ರಿ, ಶ್ರೀ 'ಶಾರದಾ ಆಫೀಸ್',

[195-7] ಬೆಂಗಳೂರು ಸಿಟಿ

ವಿನೋದಕರಗಳಾದ ನಕಲಿಗಳು

ಪ್ರಹಸನಚತುಷ್ಟಯ—(ಹಾಸ್ಯಸಂಜೀವನಿ) ಯುವತಿಯಾದ ಹೆಂಡತಿ ಮುದುಕನಾದ ಗಂಡ, ವಿದ್ಯಾವಂತನಾದ ಗಂಡ ದಡ್ಡಳಾದ ಹೆಂಡತಿ ಇವರುಗಳನ್ನು ಕುರಿತ ನಕಲಿಗಳು ನಾಲ್ಕು ಉಕ್ತವಾಗಿವೆ ಇಂಥಾ ವಿನೋದವೂ ನೀತಿಪ್ರದವೂ ಆದ ನಕಲಿಯನ್ನು ನೀವು ಓದಿರಲಾರಿರಿ ಕ್ರಯ 1 ಆಣೆ [187 48]

ಪ್ರಹಸನತರಂಗ ಅಂತರಂಗದಲ್ಲಿ ದೃಢವಿಲ್ಲದ ಆಷಾಢಭೂತಿಗಳು, ಮೂಢಭಕ್ತಿಯಿಂದೊಡಗೂಡಿದ ದಡ್ಡರು, ಏಕಮತ್ಯವಿಲ್ಲದ ಮೂಢರು, ದುರಾಚಾರಿಗಳು ಮುಂತಾದವರ ವಿಷಯವು ಅತಿ ಚಮತ್ಕಾರವಾಗಿ ವರ್ಣಿಸಲ್ಪಟ್ಟಿದೆ ಕ್ರಯ 3 ಆಣೆ ಇದಲ್ಲದೆ ಮಹಾರಣ್ಯಪುರಾಧಿಪತ್ಯ 4 ಆಣೆ ಪುನರ್ಮರಣ ಪ್ರಹಸನ 3 ಆಣೆ ಯೋಗಸಿದ್ಧಾಪ್ರಹಸನ 2 ಆಣೆ ಮುಂತಾದ ನಕಲಿಗಳೂ ದೊರೆಯುವವು

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮೇ ಸಂಘದ ಆಡಳಿತಗಳು 1913 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿನನುಸಾರವಾಗಿ ಧರವಸೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿನ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[109 24] ಎಸ್ ಕಟ್ಟೂರ್ ಬ್ರಾಂಚ್ ಸಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳುಳ್ಳ ಕುಪ್ಪಿಗೆ 1 ಆಣೆ 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 1 ಆಣೆ [179-11]



೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕ್ರಮಾಂತರದಿಂದ ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 1,00,000.

(INCORPORATED UNDER THE MYSORE COMPANIES REGULATION No III OF 1895)

CAUTION —Before you go in for a Provident Life or Marriage Policy, please ask for a copy of our Company's prospectus which will explain to you the mode of the working of the present day provident companies in India, and enables you to select a good institution, where your hard earned money will be safe **Absolute Security, Attractive Schemes, Soundest Principles**

Wanted Chief Agents and agents throughout India on Commission and Salary For prospectuses, etc, please apply to

Mr. M. L. NAGANNAH,
Managing Agent, MYSORE.

A NOVELTY OF THE TWENTIETH CENTURY!

THE MYSORE GOVERNMENT SECURITY

MUTUAL PROPERTY INVESTMENT COMPANY, LTD.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES REGULATION No III OF 1895)

BANKING.—Every sort of banking business transacted The company's shares are most valuable and are within the reach of all **Land and house purchase and investment policies are a speciality** of the company, by which the company advances loans on the security of immovable properties to purchase houses and lands, or to liquidate prior debts, and recovers the same by easy monthly instalments

WANTED

Four local directors for each and every taluk of the Mysore Province on liberal terms to represent the company Only men of position and influence need apply For prospectuses etc, please apply to

Mr. M. L. NAGANNAH,
Managing Agent, MYSORE.

[161 16]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ

25—10—1915 ರಿಂದ 31—10—1913 ರ ವರೆಗೆ

ಸ್ಥಳ		ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು	ಪಟ್ಟಣ	1	1	0	0
ಮೈಸೂರು	,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು		9	21	0	0
ಮೈಸೂರು	,,	35	28	0	0
ಕೋಲಾರ್	,	8	10	27	16
ಕೋಲಾರ್ ಚಿನ್ನದ ಗಣಿಗಳು		2	1	6	0
ತುಮಕೂರು ಡಿಸ್ಟ್ರಿಕ್ಟು		0	0	0	0
ಹಾಸನ	,,	15	8	0	0
ಚಿತ್ರದುರ್ಗ	,,	0	0	13	5
ಕಡೂರ್	,	58	27	0	0
ಶಿವಮೊಗ್ಗಾ	,,	24	16	0	0
	ಜುಮ್ಲಾ	178	117	70	51

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ಶರದೃತೌ ಕಾರ್ತೀಕ ಬಹುಳ ಪಾಡ್ಯಮಿ ಶುಕ್ರವಾರದಿಂದ ಕಾರ್ತೀಕ ಬಹುಳ ಸಪ್ತಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ನವಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶುಲಾ ವೃಶ್ಚಿಕ ತೇದಿ
14	ಶುಕ್ರ	ಪಾಡ್ಯಮಿ	51 26	ಕೃತ್ತಿಕೆ	0 25	29
15	ಶನಿ •	ಬಿದಿಗೆ	58 29	ರೋಹಿಣಿ	53 1	30
16	ಭಾನು †	ತದಿಗೆ	57 10	ಮೃಗಶಿರ	54 16	1
17	ಸೋಮ §	ಚೌತಿ	55 16	ಆರಿದ್ರಾ	54 _	2
18	ಮಂಗಳ ,	ಪಂಚಮಿ	52 10	ಪುನರ್ವಸು	53 21	3
19	ಬುಧ	ಷಷ್ಠಿ	48 1	ಪುಷ್ಯ	51 15	4
20	ಗುರು ‡	ಸಪ್ತಮಿ	44 39	ಆಶ್ಲೇಷ	48 10	5

• ಅಮೃತಸಿದ್ಧಿಯೋಗ, ಮಳೆ ನಕ್ಷತ್ರ—ವಿಶಾಖ 4 ನೇ ಪಾದ † ವಿಷ್ಣುಪದಪುಣ್ಯಕಾಲ § ಕಾರ್ತೀಕ ಸೋಮವಾರ ಸಂಕಟಹರಚತುರ್ಥಿ , ದಗ್ಧಯೋಗ ಮಳೆ ನಕ್ಷತ್ರ—ಅನೂರಾಧ 1 ನೇ ಪಾದ ‡ ಪಾತಾಭಂವ

ಪೇಟೇ ಧಾರಣೆ

ದಿನಸಿ		ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ	೧೬ ೦ ೦	೧೭ ೦
ಕೆಂಬೂತಿ ಅಕ್ಕಿ ಅವಲ್		೧೬ ೮-೦	೧೯ ೮
ಜಾವಾತ್ರಿಣಿ ಅಕ್ಕಿ		೧೬ ೦ ೦	೧೬ ೮ ೦
ಸಣ್ಣಕ್ಕಿ ಅವಲ್		೨೮ ೦ ೦	೧೭ ೮ ೦
,, ದುಯಂ		೧೭ ೦ ೦	೧೬ ೧೨ ೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ		೨೫-೪ ೦	೧೬ ೪ ೦
,, ದುಯಂ ,,		೧೪ ೦ ೦	೧೪ ೦ ೦
ಹ್ಯಕ್ ರಾಗಿ ಪಲ್ಲಾ ೧ಕ್ಕೆ		೬ ೪ ೦	೫ ೧೦ ೦
ಕಾರ್‍ರಾಗಿ ,,		೬ ೨ ೦	೪ ೧೨ ೦
ಜೋಳ ,,		೭ ೧ ೦	೭ ೪
ಹಲಸಂದೆ ಪಲ್ಲಾ ೧ಕ್ಕೆ		೨೩ ೬ ೦	೧೪ ೦ ೦
ಬೇಳೆ ಅವರೆ ,		೧೯ ೦ ೦	೧೩ ೦ ೦
ಹೆಸರು ,,		೨೯ ೦ ೦	೧೪ ೦ ೦
ಉದ್ದು ,,		೧೫ ೦ ೦	೧೬ ೮ ೦
ಕಡಲೆ ,,		೧೨ ೧೨ ೦	೧೯ ೦ ೦
ಎಳ್ಳು ಸೇರು ೧೨೭ಕ್ಕೆ		೩೧ ೮ ೦	೩೪ ೦ ೦
ಹುರುಳಿ ಪಲ್ಲಾ ೧ಕ್ಕೆ		೭ ೪ ೦	೭ ೧೦ ೦
ಹರಳು ೧೨೭ ಸೇರಿಗೆ		೧೩ ೦ ೦	೧೪ ೦ ೦
ಸೀಗೇಕಾಯಿ ಮಣ ೧ಕ್ಕೆ		೩ ೪ ೦	೯-೬ ೦
ಮೆಣಸಿನಕಾಯಿ ,,		೯ ೦ ೦	೯ ೪-೦
,, ದುಯಂ		೯ ೦ ೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೫ ೦ ೦	ಮಣ ೬ ೪ ೦
ಒಳ್ಳೆಣ್ಣೆ ಮಣ ೧ಕ್ಕೆ		೬ ೨ ೦	೬ ೮ ೦
ಹರಳೆಣ್ಣೆ ,, ,,		೫ ೮ ೦	೬ ೦ ೦
ಕಡಲೇಕಾಯಿ ಎಣ್ಣೆ		೫ ೮ ೦	೬ ೪ ೦
ಕೊತ್ತುಂಬರಿ ಪಲ್ಲಾ ೧ಕ್ಕೆ		೫ ೪ ೦	೬ ೪ ೦
ಉಪ್ಪು ,, ,,		೬ ೮ ೦	೬-೦ ೦
ಹುಣಸೇ ಹಣ್ಣು ಮಣ ೧ಕ್ಕೆ		೨ ೪ ೦	೧ ೪ ೦
ತುಪ್ಪ—ಧಾರಾಪುರದ್ದು ಮಣ ೧ಕ್ಕೆ		೧೮ ೦ ೦	೨೨ ೮ ೦
,, ಬೆಣ್ಣೆ ಕಾಸಿದ್ದು ,, ,		೧೯-೮ ೦	
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫ ೧೨ ೦	೫ ೦ ೦
ತೆಂಗಿನಕಾಯಿ ೧೦೦ಕ್ಕೆ		೬ ೪ ೦	೬ ೪ ೦
ಅರಳೇಕಾಯಿ ಮಣ ೧ಕ್ಕೆ		೧ ೦-೦	೧ ೦ ೦
ಅಂಟ್ವಾಳದಕಾಯಿ ಮಣ ೧ಕ್ಕೆ		೧ ೧೨ ೦	೧-೮ ೦
ಚಿನ್ನ (ಪೌನ್) ತೆಂಪು		೧೫ ೮ ೦	೧೫ ೮ ೦
,, ,, ಪಸಿಮೆ		೧೫ ೧೪ ೬	೧೫ ೧೪-೦
,, ,, ಗಟ್ಟಿ ತೊಲ ೧ಕ್ಕೆ		೨೪ ೯-೦	೨೪ ೦ ೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ		೮೧-೦-೦	೮೧ ೯ ೦

Printed and Published by the Rev H Gulliford Proprietor and Manager, Wesleyan Mission Press Mysore 13/11/1913

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—೧೯೧೩ ನೇ ಇಸವಿ ನವಂಬರ್ ತಾರೀಖು ೨೦ ನೇ ಗುರುವಾರ. ಸಂಚಿಕೆ ೪೫

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No. III OF 1895.)

CAUTION:—Before you go in for a Provident, Life or Marriage Policy, please ask for a copy of our Company's prospectus, which will explain to you the mode of the working of the present-day provident companies in India, and enables you to select a good institution, where your hard-earned money will be safe.

Absolute Security, Attractive Schemes, Soundest Principles.

Wanted Chief Agents and agents throughout India on Commission and Salary. For prospectuses, etc., please apply to

Mr. M. L. NAGANNAH,
Managing Agent, MYSORE.

A NOVELTY OF THE TWENTIETH CENTURY!

THE MYSORE GOVERNMENT SECURITY

MUTUAL PROPERTY INVESTMENT COMPANY, LTD.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No. III OF 1895.)

BANKING:—*Every sort of banking business transacted. The company's shares are most valuable* and are within the reach of all.

Land and house purchase and investment policies are a speciality of the company, by which the company advances loans on the security of immovable properties to purchase houses and lands, or to liquidate prior debts, and recovers the same by easy monthly instalments.

WANTED

Four local directors for each and every taluk of the Mysore Province on liberal terms to represent the company. Only men of position and influence need apply. For prospectuses, etc., please apply to

[161-16]

Mr. M. L. NAGANNAH,
Managing Agent, MYSORE.

ನೋಟೀಸು

ಅಮೃತಸಾರದ ನ್ಯಾಷನಲ್ ಇನ್‌ಷುರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯು

ಷೇರುದಾರರಿಗೂ, ಡಿಪಾಜಿಟ್‌ದಾರರಿಗೂ, ಪಾಲಿಸಿ ಹೋಲ್ಡರುಗಳಿಗೂ, ಇತರ ಕಕ್ಷಿಗಾರರಿಗೂ ತಿಳಿಯಪಡಿಸುವುದೇನೆಂದರೆ:

ಪೀಪಲ್ಸ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅಮೃತಸಾರ ಬ್ಯಾಂಕು—ಇವೆರಡು ಬ್ಯಾಂಕೂ ಲೇವಾದೇವಿಯನ್ನು ನಿಲ್ಲಿಸಿ ಬಿಟ್ಟವೆಂದು ನಮ್ಮ ಕಂಪನಿಯ ಡೈರೆಕ್ಟರುಗಳು ನಿಮಗೆ ತಿಳಿಸಲು ವಿಷಾದಪಡುತ್ತಾರೆ. ಈ ಸಮಾಚಾರವು ಇತರ ಬ್ಯಾಂಕುಗಳ ಡಿಪಾಜಿಟ್‌ದಾರರಲ್ಲೂ ಷೇರುದಾರರಲ್ಲೂ ಬಹಳ ಗಾಬರಿಯನ್ನೂ ಕಳವಳವನ್ನೂ ಉಂಟುಮಾಡಿರಬೇಕು. ಈಗ ನಿಮಗೆ ನಿಮ್ಮ ಬ್ಯಾಂಕಿನ ವಿಷಯದಲ್ಲೂ ಕಳವಳ ಉಂಟಾಗಿರುವುದು ಸ್ವಾಭಾವಿಕವಾಗಿಯೇ ಇದೆ. ಇಂಥಾ ಸಮಯದಲ್ಲಿ ನಿಮ್ಮ ಡೈರೆಕ್ಟರುಗಳು ನಿಮಗೆ ನಂಬಿಕೆಯಾಗಿ ಹೇಳುವುದೇನೆಂದರೆ—ನಿಮ್ಮ ಬ್ಯಾಂಕಿನ ಸ್ಥಿತಿಗತಿಯು ಬಹಳ ಭದ್ರವಾಗಿಯೂ, ಸುರಕ್ಷಿತವಾಗಿಯೂ ಇರುವುದು. ಎಷ್ಟುಮಟ್ಟಿನ ಬೇಡಿಕೆಗಳು ಬಂದಾಗ್ಯೂ, ಪಾವತಿಮಾಡಲು ನಿಮ್ಮ ಬ್ಯಾಂಕಿನಲ್ಲಿ ಬೇಕಾದಷ್ಟು ದ್ರವ್ಯವನ್ನು ಇಟ್ಟುಕೊಂಡಿದಾರೆ. ಈ ಭಾಗದಲ್ಲಿ ನಿಮ್ಮ ಬ್ಯಾಂಕಿಗೆ ಯಾವ ಕಷ್ಟವೆಸೆಯೂ ಬರುವದಾಗಿಲ್ಲವೆಂದು ಖಂಡಿತವಾಗಿ ತಿಳಿಯಿರಿ. ನ್ಯಾಷನಲ್ ಇನ್‌ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯು ಈಚೆಗೆ ಒಂದು ಲಕ್ಷ ರೂಪಾಯನ್ನು ಇಂಡಿಯಾ ಗವರನ್‌ಮೆಂಟಿನಲ್ಲಿ ಠೇವಣಿ ಇಟ್ಟಿರುತ್ತದೆ.

ಇದಲ್ಲದೆ ಪೀಪಲ್ಸ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅಮೃತಸಾರ ಬ್ಯಾಂಕ್—ಇವರಡರಿಂದಲೂ ನಿಮ್ಮ ಬ್ಯಾಂಕಿಗೆ ಯಾವ ದುಡ್ಡೂ ಸಾಲ ಬರಬೇಕಾದ ಬಾಕಿ ಇರುವುದಿಲ್ಲವೆಂಬುದನ್ನು ನಿಮ್ಮ ಡೈರೆಕ್ಟರುಗಳು ಈ ಸಂದರ್ಭದಲ್ಲಿ ನಿಮಗೆ ತಿಳಿಸದೆ ಇರಲಾರರು.

ನಮ್ಮ ಬ್ಯಾಂಕೂ ಅಮೃತಸಾರ ಬ್ಯಾಂಕೂ ಅಮೃತಸಾರ ನಗರದಲ್ಲೇ ಹೆಡ್ ಕ್ವಾರ್ಟರ್ ಆಫೀಸುಗಳನ್ನು ಪಡೆದಿರೋಣದರಿಂದ ಕೆಲವು ಜನರು ಅದೇ ನಮ್ಮ ಬ್ಯಾಂಕೆಂದು ಭ್ರಾಂತಿಪಡುತ್ತಿದಾರೆ. ಅಮೃತಸಾರ ಬ್ಯಾಂಕ್ ಎನ್ನುವುದು ಬೇರೆ, ನಮ್ಮದು ಬೇರೆ, ನಮ್ಮ ಬ್ಯಾಂಕಿಗೂ ಅದಕ್ಕೂ ಸ್ಥಳದ ಹೆಸರು ಒಂದೇ ಆಗಿದಲ್ಲದೆ ಇನ್ಯಾವ ವಿಧದಲ್ಲೂ ಒಂದಕ್ಕೊಂದಕ್ಕೆ ಏನೇನೂ ಸಂಬಂಧವಿಲ್ಲ.

ನಿಮ್ಮ ಡೈರೆಕ್ಟರುಗಳು ನಿಮ್ಮ ಬ್ಯಾಂಕಿನ ಕಾರುಬಾರುಗಳನ್ನು ಸಾಧ್ಯವಾದ ಮಟ್ಟಿಗೂ ಒಳ್ಳೇ ಹಿತಕರವಾದ ರೀತಿಯಲ್ಲಿ ನಡಿಸುತ್ತಾ ಬಂದಿದಾರೆಂದೂ, ನೀವು ಅವರ ವಿಷಯದಲ್ಲೂ ನಿಮ್ಮ ಬ್ಯಾಂಕಿನ ವಿಷಯದಲ್ಲೂ ಇದುವರೆಗೆ ಯಾವ ರೀತಿಯಲ್ಲಿ ಸಂಪೂರ್ಣವಾದ ನಂಬಿಕೆ ಭರವಸೆಗಳನ್ನಿಟ್ಟುಕೊಂಡು ಬಂದಿದೀರೋ ಇನ್ನು ಮುಂದೆಯೂ ಅದೇ ರೀತಿ ಇರುತ್ತೀರೆಂದೂ ಭರವಸೆಯುಳ್ಳವರಾಗಿದಾರೆ.

[216—5]

ಟಿ. ಎಸ್. ಆರ್. ಅಯ್ಯರ್,
ಸೆಕ್ರೆಟರಿ, ಮದರಾಸ್ ಬ್ರಾಂಚ್.

ಪಿ. ಎಲ್. ರಾಜಪಾಲ್, ಬಿ.ಎ.,
ಚೀಫ್ ಮ್ಯಾನೇಜರ್.

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ. ಕೂದಲು ಸತ್ತು ಹೋಗುತ್ತೆ. ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ" ವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ. ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ. ಕೂದಲು ಇದರಿಂದ ವಿಪುಲವಾಗಿ, ನಯವಾಗಿ, ಚಕಚಕಿಸುವವು; ನಿಬಿಡವಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು. ಕೂದಲಿಗೆ ಹೊಳಪುಕೊಡುತ್ತೆ. ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ. ಹುಂಡಿನ ಹೊಟ್ಟನ್ನು ಅಡಗಿಸುತ್ತೆ. ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ. ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ. ಇದರ ಬೆಲೆ 1 ಸೀಸೆಗೆ ರೂ 1 0 0, ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ 2-10-0. ಅಂಚೆಯ ವೆಚ್ಚ 0-7-0.

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಮೈಸೂರು ಎಗ್ಜಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು.

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ. ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ|| ಡಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ. ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ. ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ."

ಎಚ್ಚರಿಕೆ.—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ. ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಫಾಯತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ. "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ. ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ.

"ಕೆಪಿಟೋಲಬಾಮ್"—ಮಳೆ ಮತ್ತು ಚಳಿಯ ಥಂಡೀ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಲಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ. ಕೈಕಾಲು ನೋಯುವುದು, ಸಂಧುವಾತ, ಮಸ್ತಕಶೂಲೆ, ಹೆಚ್ಚಾಗಿ ಮೆಹನತ್ತುಪಟ್ಟದ್ದರಿಂದ ಕ್ಷೀಣವಾಗುವದು, ಸೊಂಟನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ. ಬಾಟ್ಲಿ 1ಕ್ಕೆ ಕ್ರಯ 0 8-0 ಟಪಾ. ಪ್ರತ್ಯೇಕ.

ಒಡಮನ್ಸ ಮಲೇರಿಯ ಪಿಲ್ಸ್.—ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿದೆ. ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ. ಇದು ದೇಹದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ. ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ. ದಫೆಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದು.

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ. 1-0-0, 3 ಬಾಟ್ಲಿಗಳಿಗೆ ರೂ. 2-8-0 ವಿ. ಪಿ. ಖರ್ಚು ಪ್ರತ್ಯೇಕ.

ಮೇಲೆಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ:— [8-45]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸೀದ್, ಬೊಂಬಾಯಿ.

ಏಜೆಂಟ್, ಡಿ. ಅಲನ್ ಮಾರ್ಟ್, ಮಂಗಳೂರು.

ವಿನೋದಕರಗಳಾದ ನಕಲಿಗಳು

ಪ್ರಹಸನಚತುಷ್ಟಯ—(ಹಾಸ್ಯಸಂಜೀವನಿ) ಯುವತಿಯಾದ ಹೆಂಡತಿ ಮುದುಕನಾದ ಗಂಡ, ವಿದ್ಯಾವಂತನಾದ ಗಂಡ ದಡ್ಡಳಾದ ಹೆಂಡತಿ ಇವರುಗಳನ್ನು ಕುರಿತ ನಕಲಿಗಳು ನಾಲ್ಕು ಉಕ್ತವಾಗಿವೆ. ಇಂಥಾ ವಿನೋದವೂ ನೀತಿಪ್ರದವೂ ಆದ ನಕಲಿಯನ್ನು ನೀವು ಓದಿರಲಾರಿರಿ ಕ್ರಯ 4 ಆಣೆ. [187-49]

ಪ್ರಹಸನತರಂಗ—ಅಂತರಂಗದಲ್ಲಿ ಧೃಢವಿಲ್ಲದ ಆಷಾಢಭೂತಿಗಳು, ಮೂಢಭಕ್ತಿಯಿಂದೊಡಗೂಡಿದ ದಡ್ಡರು, ಏಕಮತ್ಯವಿಲ್ಲದ ಮೂಢರು, ದುರಾಚಾರಿಗಳು ಮುಂತಾದವರ ವಿಷಯವು ಅತಿ ಚಮತ್ಕಾರವಾಗಿ ವರ್ಣಿಸಲ್ಪಟ್ಟಿದೆ ಕ್ರಯ 8 ಆಣೆ. ಇದಲ್ಲದೆ ಮಹಾರಣ್ಯಪುರಾಧಿಪತ್ಯ 4 ಆಣೆ. ಪುನರ್ಮರಣ ಪ್ರಹಸನ 8 ಆಣೆ. ಯೋಗನಿದ್ರಾಪ್ರಹಸನ 2 ಆಣೆ ಮುಂತಾದ ನಕಲಿಗಳೂ ದೊರೆಯುವವು.

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಆಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ.

ಮೇಲ್ಕಂಡ ವಿಮೇ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭರವಸೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ. ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[100-25] ಎಸ್ ಕಟ್ಬ್ಬರ್, ಬ್ರಾಂಚ್ ಸೆಕ್ರೆಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ.

ವಿದ್ಯಾಸಾಗರ್ ಬುಕ್ ಡಿಪೋ

ಚಿಕ್ಕ ಪೇಟೆ, ಬೆಂಗಳೂರು ಸಿಟಿ.

ಇಲ್ಲಿ ಎಲ್ಲಾ ತರಹ ಇಂಗ್ಲೀಷು ಮತ್ತೂ ಕನ್ನಡ ಸ್ಕೂಲ್ ಪುಸ್ತಕಗಳೂ, ಉತ್ತಮ ಕಥೆಗಳೂ, ಉದ್ಗ್ರಂಥಗಳೂ, ಸ್ಟೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತೆ ಚಿಕ್ಕ ಮತ್ತು ದೊಡ್ಡ ಸೈಜು ಡೈರಿಗಳೂ ಸಿದ್ಧವಾಗಿವೆ

ಕೆಲವು ಪುಸ್ತಕಗಳು

ವಿದ್ಯಾಸಾಗರ ಬುಕ್ಕು ಡಿಪೋದಿನಲ್ಲಿ ಮಾತ್ರ ದೊರೆಯುವ ಅಪೂರ್ವವಾದ ಮತ್ತು ಬಹು ಉಪಯೋಗವುಳ್ಳ ಪುಸ್ತಕಗಳು:—

(1) ವೈದ್ಯಸಾರಸಂಗ್ರಹ—ದೊಡ್ಡವೈದ್ಯಗ್ರಂಥ, ಮೈಸೂರು ಅರಮನೆಯಲ್ಲಿ ತಯಾರಾದ ಅಪೂರ್ವಗ್ರಂಥ ಮೊದಲು ಬೆಲೆ ರೂ ೬ 8 0 ಟಪಾಲು ಖರ್ಚು ಸೇರಿ ಈಗ ರೂ 3 6 0, (2) ಶಿವಾನಂದಲಹರಿ, ಶ್ರೀಶಂಕರಾಚಾರ್ಯಕೃತವಾದ್ದು, ಟೀಕಾ ತಾತ್ಪರ್ಯ ಸಹಿತ—6 ಆಣೆ (3) ಸಂಗ್ರಹ ರಾಮಾಯಣ—4 ಆಣೆ (4) ವಿಷ್ಣುಸಹಸ್ರನಾಮಸ್ತೋತ್ರ ತ್ರಿಮತಭಾಷ್ಯದೊಡನೆ ಸಹ 3 ರೂ (5) ವೃಷಭೇಂದ್ರವಿಜಯ, ಪುರಾತನ ಪ್ರತಿ—2 ರೂ (6) ಸೂರ್ಯನಮಸ್ಕಾರ—2 ಆಣೆ (7) ಉದರಶಾಂತಿ ಮಾತ್ರೆ—3 ಆಣೆ. [225-4]

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-47

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ವಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ.—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಿಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ ; ೧ ರೂ ೬ ಆ., ೧ ರೂ ೪ ಆ.

ಚುಕ್ಕಿಯುಳ್ಳ ಟೋಪಿಗಳು ರೂ. ೧—೮, ರೂ ೧—೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ. ೧೨ ಆ , ೧ ರೂ. ೮ ಆ., ೧ ರೂ. ೬ ಆ.

ಮುಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ.

ಕೂಸುಗಳ ಟೋಪಿ, ಪೂರ್ತಿ ಮೇಜೋಡು, ಅರ್ಧ ಮೇಜೋಡು, ಕತ್ತಿನ ಪಟ್ಟಿ, ಇವುಗಳ ಕ್ರಯದ ಪಟ್ಟಿಯನ್ನು ನಮ್ಮನ್ನು ಕೇಳುವಂಥವರಿಗೆ ಕೊಟ್ಟು ಕಳುಹಿಸುವೆವು. ನಮ್ಮ ವಿಳಾಸ:—

ಮ್ಯಾನೇಜರ್, ಹಾಸನದ ಟೋಪಿ ಕಾರ್ಖಾನೆ, ಹಾಸನ.

CHAMBERLAIN'S PAIN BALM.

ಚೇಂಬರ್ಲೈನ್ ರವರು ಮಾಡಿದ ನೋವುಹರ ಔಷಧವು.

1-47



ಬೆನ್ನಲುಬಿನ ನೋವು, ಪಕ್ಕಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಿದ ಗಾಯ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ.

ವಾಯುನೋವೆಂದರೇನು ?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆಹತ್ತದೆ ಇರುವುದು—ಇವೇ. ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲೈನ್‌ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ ಮನಸ್ಸಿಗೆ ಉಲ್ಲಾಸವಾಗುತ್ತದೆ ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ವಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೩೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು. ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ. (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (5) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು. ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1-8-0, ಟಪಾಲು ಹಾಸಲು 4 ಆಣೆ.

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕು, ಕಥಾರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ 4, ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು. [127-22]

ನಮ್ಮ ವಿಳಾಸ—ಎಮ್ ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಕುಂತಳಾನಂದ ತೈಲವು.

102 9

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ

ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

ಬಿ. ವಿ. ಪಂಡಿತರ

250 ಮಾತ್ರೆಯುಳ್ಳ ಸೀಸೆಗೆ 4 ಆ ; 5 ಸೀಸೆಗಳಿಗೆ 1 ಇನಾಂ

ಶ್ರೀಕರ ಕಸ್ತೂರಿ ಮಾತ್ರೆ

ಈ ಮಾತ್ರೆಗಳ ಬೆಲೆಯನ್ನು ನೋಡಿ ಇದರ ಗುಣವನ್ನು ಊಹಿಸಲಾಗದು ಟಿಬೆಟ್ ದೇಶದ ಕಸ್ತೂರಿಯಿಂದಲೇ ಶಾಸ್ತ್ರೋಕ್ತವಾಗಿ ತಯಾರಾದದ್ದಾಗಿರುತ್ತಿರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂಥಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು ಮಕ್ಕಳಿಗೆ ಉಂಟಾಗುವ ಅಜೀರ್ಣಬೇಧಿ-ಜ್ವರ-ಕೆಮ್ಮು-ನೆಗಡಿ-ಬಳವು-ಹೊಟ್ಟೆಯುಬ್ಬರ-ಈ ರೋಗಗಳನ್ನು ಸವಿಸವದಲ್ಲಿಯೇ ವೈದ್ಯನಿದ್ದಂತೆ ತಕ್ಷಣ ಗುಣಪಡಿಸುವುದು ಪ್ರಯಾಣಿಕರಿಗೂ ಸೊಂಕು ರೋಗಸ್ಥಳದಲ್ಲಿರುವವರಿಗೂ ಮಲೆನಾಡಿನಲ್ಲಿರುವವರಿಗೂ ಇದರಂತೆ ಮತ್ತಾವದೂ ಆರೋಗ್ಯವನ್ನು ಕಾಪಾಡಲಾರದು. [220-1]

ವಿಷಮಜ್ವರಗಳು ನೆಗಡಿ-ಕೆಮ್ಮು-ತಲೆನೋವು-ಅಗ್ನಿಮಾಂದ್ಯ-ಶೀತವಾಯು-ಹಲ್ಲುನೋವು-ಮಲಬಂಧ-ಅರೋಚಕ-ನರಗಳ ದೌರ್ಬಲ್ಯ—ಈ ರೋಗಗಳನ್ನು ಪ್ರತಿಯೊಬ್ಬರಿಗೂ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವದು ಸಾವಿರಾರು ಜನರು ಪರೀಕ್ಷಿಸಿದ್ದಾರೆ. ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ.

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

104 26

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೈಮಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯಿಂದ ನೋವು ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದ್ದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೈಮಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡ ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 1 ಆಣೆ 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್ ಪೀಟರ್ಸ್, 37 ಪಡಮಟಪಿಳ್ಳೆ ಬೀದಿ, ಪುರಸೈವಾಕಂ, ವೇಪೇರಿ, ಮದರಾಸ್, (2) ಜಿ. ಎಸ್ ಕೃಷ್ಣಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

ಉತ್ಕೃಷ್ಟವಾದ ವಸ್ತು ! ಬೆಲೆ ಕಡಮೆಮಾಡಿದೆ !!

100 ನೇ ನಂ ಪ್ರೈಮಸ್ ಕೆರೊಸೀನ್ ಒಲೆ

ಸಂಸಾರಕ್ಕೂ ಪ್ರಯಾಣಕ್ಕೂ ಮುಖ್ಯ ಉಪಯೋಗ.

ಇದರ ಬರ್ನರಿನ ರಚನೆ ಸುಲಭ ಬೊಗ್ಗಿದ ಕೊಳವೆಗಳಿಲ್ಲ ಸಿಲಿಂಡರ್ ಕೊಳವೆ ಮಾತ್ರ ಉಂಟು ಇದನ್ನು ಸುಲಭವಾಗಿ ತೆಗೆದು ಎಣ್ಣೆಯ ಮಸ್ಸನ್ನು ಸುಲಭವಾಗಿ ತೊಡೆಯಬಹುದು ಬರ್ನರ್ ನ್ನೆ ಯನ್ನೂ ಕಳಚುವಂತಿದೆ, ಗಾಳಿಯ ಸಹಾಯದಿಂದ ಬಹಳ ತೀಕ್ಷ್ಣವಾದ ಜ್ವಾಲೆ ಉರಿಯುತ್ತೆ.



ಬರ್ನರಿನ ಉರಿ ತಪ್ಪಿಲ್ಲದೆ ಇರುವುದಕ್ಕಾಗಿ ಇದರ ಜೊತೆಯಲ್ಲೇ ನಾವು ಸ್ಟೈಲೆನ್ಸರ್ ಒಂದನ್ನೂ ಕೊಡುವೆವು ಬರ್ನರಿನ ಪೀರ ಮತ್ತು ಕಡ್ಡಿಗಳನ್ನು ಬಿಚ್ಚಿ ಗಂಟುಕಟ್ಟುವಂತೆ ಎಲ್ಲಾ ಮೆರುಗುಳ್ಳ ಹಿತ್ತಾಳೆಯಲ್ಲಿ ಮಾಡಿದೆ. ಎತ್ತರ 8 ಅಂಗುಲ , ಒಂದು ಸೀಸೆ ಸೀಮೆಯೆಣ್ಣೆ ಹಿಡಿಯುವುದು

ಕ್ರಯ.—ಮೇಲ್ಭಾಗದ ಉಂಗುರದ ಸಹಿತ ರೂ. 6-8 0 , ಬರ್ನರ್ ಟಿನ್ ಪೆಟ್ಟಿಗೆಯ ಸಹಿತ ರೂ 7-8-0. ಪೋಸ್ಟೇಜ್ ಬೇರೆ.

ಆರ್ಡರ್ ಸಮೇತ ಒಂದು ರೂಪಾಯಿ ಅಡ್ವಾನ್ಸು ಕಟ್ಟದಿದ್ದರೆ ಈ ಒಲೆಯನ್ನು ಕಳುಹಿಸಲಾರೆವು. [230-3]

ನಮ್ಮ ವಿಳಾಸ—The Bombay Popular Agency,
Dharavy, BOMBAY.

ದೇವೀಭಾಗವತ

ಕನ್ನಡ ವಚನರೂಪ, ಬೆಲೆ ರೂ ೨-೪-೦

ವಿಳಾಸ —ಬಿ. ವೆಂಕಟರಾಮಶಾಸ್ತ್ರಿ, ಶಂಕರಪುರ, ಬೆಂಗಳೂರು ಸಿಟಿ, ಮದವಾಹಿನಿ ಆಫೀಸ್

[131-1]

ರಾಸ್‌ಕೋಫ್ ಸಿಸ್ಟಂ ಪೇಟೆಂಟ್ ರಿಜಿಸ್ಟರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 4 ಆಣೆ

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರ್ಮಾಡಲ್ಪಟ್ಟದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾಧಾರಣವಾಗಿ ಗಡಿಯಾರಗಳು ಮುಚ್ಚಿರುತ್ತೆ. ಸರಿಯಾದ ಕಾಲವನ್ನು ತಿಳಿಯಬೇಕಾದ್ದು, ಜಾಗ್ರತೆಯಾದ ಗಡಿಯಾರ ಕೊಡ್ಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,

ಪೋಸ್ಟ್ ಬಾಕ್ಸ್, ನಂ 117, ಮದರಾಸು

[133-32]

ಮುಖ್ಯವಾಗಿ ಗಮನಿಸಿ ಓದಿರಿ

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲೀವರ್ ಚಿಕ್ಕ ಸೈಜು ಕಂಪೆನ್ಸೇಷನ್ ಬ್ಯಾಲೆನ್ಸು ಬಹು ಬಲಿಷ್ಟವಾದ ೬ ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 6 0 0 ಇದನ್ನು ಸೆಪ್ಟಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 10 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ — ಧನಲಕ್ಷ್ಮಿ ಅಂಡ್ ಕಂಪೆನಿ,

ಸಾಹುಕಾರ್ ಪೇಟೆ ಪೋಸ್ಟು, ಮದರಾಸು

[133 32]

ಓರಿಯಂಟಲ್ ಗೌ|| ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು ರೂ 4,25,00,000

ಕಂಪನಿಯಿಂದ ಪಾವತಿ ಆಗಿರುವದು ,, 3,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ —ಮ|| ಎಂ ಎಸ್ ರೆಡ್ಡಿ, ಚೀಫ್ ಏಜೆಂಟ್, ಬೆಂಗಳೂರು ಮ|| ಎಂ ಎಸ್ ನಂಜಪ್ಪನವರು ಅಥವಾ ಮ| ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು ಅಥವಾ

[195 8] ಬ್ರಾಂಚ್ ಸೆಕ್ರೆಟರಿ, ಮದರಾಸ್

ಶುದ್ಧವಾದ ಹತ್ತಿಯ ತುಪ್ಪವು.

“ಆರೋಗ್ಯ! ರುಚಿ! ಪುಷ್ಟಿಕಾರಿ!”

(11) ಬಿ ರಾಮಣ್ಣ, ಬಿ ಎ ಎಲ್ ಎಲ್ ಬಿ, ಹೈಕೋರ್ಟು ವಕೀಲರು ಮತ್ತು ಅಡ್ವೊಕೇಟರು, ಬೆಂಗಳೂರು —“ಹತ್ತಿಯ ತುಪ್ಪವನ್ನು ಕೆಲವು ಕಾಲದಿಂದ ಉಪಯೋಗಿಸುತ್ತಿದೇನೆ ಆರೋಗ್ಯಕ್ಕೆ ಕುಂದಿಲ್ಲ, ರುಚಿಯಾಗಿದೆ ಮತ್ತು ಪುಷ್ಟಿಕಾರಿಯೆಂದೂ ತೋರುತ್ತದೆ ಜಾಸ್ತಿ ಖರೀದಿ ಅಂದರೆ ಮೂಣಕ್ಕೆ 24 25 ರೂಪಾಯಿ ಕೊಟ್ಟರೂ ಒಳ್ಳೆಯ ತುಪ್ಪ ದೊರೆಯದ ಈ ಕಾಲದಲ್ಲಿ ಅಗ್ಗವಾಗಿ ಬರುವ ಇದು ಮಾಂಸಾಹಾರಿಗಳಲ್ಲದವರಿಗೆ ದ್ವಿಗುಣವಾಗಿ ಸಲಕಾರಿ ಏಕೆಂದರೆ ತುಪ್ಪವು ಸಸ್ಯಜನ್ಯವಾದುದು” 14 9-1913

ಎಚ್ಚರಿಕೆ —ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ ಕುಸುಮೆ ಎಣ್ಣೆ, ಇವುಗಳನ್ನು ಕೊಬ್ಬನ್ನು ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಒಲವಾಗುತ್ತಿವೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ [110 26]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, 159, ಕಿಲಾರಿ ರೋಡ್, (ಕುಂಚಿಗರಪೇಟೆ), ಬೆಂಗಳೂರು ಸಿಟಿ

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

31—10—1913 ರಿಂದ 7—11—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	16	12	0	0
ಮೈಸೂರು ,,	41	36	0	0
ಕೋಲಾರ್ ,,	7	4	8	9
ಕೋಲಾರ್ ಚಿನ್ನದ ಗಣಿಗಳು	1	0	0	0
ತುಂಕೂರು ಡಿಸ್ಟ್ರಿಕ್ಟು	13	6	0	0
ಹಾಸನ ,,	14	11	5	2
ಚಿತ್ರದುರ್ಗ ,,	0	0	12	7
ಕಡೂರ್ ,,	34	28	0	0
ಶಿವಮೊಗ್ಗಾ ,,	6	4	0	0
ಜುಮ್ಲಾ	132	101	25	18

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ಶರದೃತೌ ಕಾರ್ತೀಕ ಬಹುಳ ಅಷ್ಟಮಿ ಶುಕ್ರವಾರದಿಂದ ಕಾರ್ತೀಕ ಬಹುಳ ಚತುರ್ದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ನವಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಶ್ಚಿಕ ಮಾಸ ತೇದಿ
21	ಶುಕ್ರ	ಅಷ್ಟಮಿ	39-25	ಮಘಾ	14-49	6
22	ಶನಿ *	ನವಮಿ	33 16	ಪುಬ್ಬ	10 47	7
23	ಭಾನು †	ದಶಮಿ	27 17	ಉತ್ತರ	36-36	8
24	ಸೋಮ §	ಏಕಾದಶಿ	21 16	ಹಸ್ತ	2 17	9
25	ಮಂಗಳ ,,	ದ್ವಾದಶಿ	15 56	ಚಿತ್ತ	28-17	10
26	ಬುಧ ,,	ತ್ರಯೋದಶಿ	10 29	ಸ್ವಾತಿ	24 38	11
27	ಗುರು ‡	ಚತುರ್ದಶಿ	5 31	ವಿಶಾಖ	21-34	12

ದಗ್ಧಯೋಗ * ದಗ್ಧಯೋಗ ಮಳೆ ನಕ್ಷತ್ರ—ಅನೂರಾಧ 2 ನೇ ಪಾದ

† ದಶಮಿ ತಿಥಿ § ತಿವಿದ್ಯಯಂ, ಸರ್ವತ್ರ ಏಕಾದಶಿ, ಕಾರ್ತೀಕ ಸೋಮವಾರ.

,, ತ್ರಯೋದಶೀತಿಥಿ, ಪ್ರದೋಷ, ಮಳೆ ನಕ್ಷತ್ರ—ಅನೂರಾಧ 4 ನೇ ಪಾದ

,, ಚತುರ್ದಶೀತಿಥಿ, ಮಾಸಶಿವರಾತ್ರಿ ‡ ಸರ್ವತ್ರ ಅಮಾವಾಸ್ಯೆ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೫ ೮ ೦	೧೭ ೦-೦
ಕೆಂಬೂತಿ ಅಕ್ಕಿ ಅವಲ್	೧೬ ೦ ೦	೧೭-೮-೦
ಜುಪ್ರಾಣಿ ಅಕ್ಕಿ	೧೪ ೮-೦	೧೬-೮-೦
ಸಣ್ಣಕ್ಕಿ ಅವಲ್	೧೪ ೦ ೦	೧೭ ೮-೦
,, ದುಯಂ	೧೭ ೦ ೦	೧೬ ೧೨-೦
ಡೋಂಗಿ ಬೇಳೆ ಅವಲ್ ಪಲ್ಲಾ ೧ಕ್ಕೆ	೧೬ ೦-೦	೧೬-೪-೦
,, ದುಯಂ ,,	೧೪ ೦-೦	೧೪ ೦-೦
ಹೈಕ ರಾಗಿ ಪಲ್ಲಾ ೧ಕ್ಕೆ	೭ ೪ ೦	೫ ೧೦ ೦
ಕಾರ್ರಾಗಿ ,,	೬ ೮ ೦	೪-೧೨-೦
ಜೋಳ ,,	೭ ೦ ೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ	೧೨ ೬-೦	೧೪ ೦ ೦
ಬಿಳೀ ಅವರೆ ,,	೧೩-೦ ೦	೧೨ ೦-೦
ಹೆಸರು ,,	೧೩ ೪ ೦	೧೪ ೦ ೦
ಉದ್ದು ,,	೧೪ ೦ ೦	೧೬ ೮-೦
ಕಡಲೆ ,,	೧೨ ೧೨ ೦	೧೩-೦-೦
ಎಳ್ಳು ಸೇರು ೧೨೭ಕ್ಕೆ	೨೧ ೮ ೦	೨೪ ೦-೦
ಹುರುಳಿ ಪಲ್ಲಾ ೧ಕ್ಕೆ	೭ ೪-೦	೭ ೧೦-೦
ಹುರುಳು ೧೨೭ ಸೇರಿಗೆ	೧೨ ೬-೦	೧೪ ೦ ೦
ಸೀಗೇಕಾಯಿ ಮಣ ೧ಕ್ಕೆ	೨ ೪-೦	೩-೬-೦
ಮೆಣಸಿನಕಾಯಿ ,,	೩ ೦ ೦	೩-೪-೦
,, ದುಯಂ	೩ ೦ ೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫ ೦ ೦	ಮಣ ೬-೪-೦
ಒಳ್ಳೆಣ್ಣೆ ಮಣ ೧ಕ್ಕೆ	೬-೨ ೦	೬ ೮-೦
ಹರಳೆಣ್ಣೆ ,, ,,	೫ ೨-೦	೬-೦ ೦
ಕಡಲೇಕಾಯಿ ಯೆಣ್ಣೆ	೫ ೨-೦	೬-೪-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫ ೪ ೦	೬-೪-೦
ಉಪ್ಪು ,, ,,	೬ ೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೨-೪ ೦	೧-೪-೦
ತುಪ್ಪ—ಧಾರವಾಡದ್ದು ಮಣ ೧ಕ್ಕೆ	೧೬-೦-೦	೨೨-೮-೦
,, ಬೆಣ್ಣೆ ಕಾಸಿದ್ದು ,, ,,	೧೯-೨-೦	
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫ ೧೨-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೬ ೪ ೦	೬-೪-೦
ಅರಸಿನಕಾಯಿ ಮಣ ೧ಕ್ಕೆ	೧-೦-೦	೧-೦-೦
ಅಡಿಕ್ಕೆಲದಕಾಯಿ ಮಣ ೧ಕ್ಕೆ	೧-೧೨ ೦	೧-೮-೦
ಚಿನ್ನ (ಪವನ್) ತೊಲ	೧೫ ೮ ೦	೧೫-೮-೦
,, ,, ಪಸಿಮೆ	೧೫ ೧೪-೬	೧೫ ೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ ...	೮೧-೦-೦	೮೧-೩-೦

1914 ನೇ ವರ್ಷದ ಕೆಲೆಂಡರು 1914.

ರಮಣೀಯಕರವಾದ ಸ್ತ್ರೀಯ ನಕ್ಷೆಯುಳ್ಳದು.

ಇಂಥಾ ಸುಂದರವಾದ ಕೆಲೆಂಡರು ಎಲ್ಲಿಯೂ ದೊರಕುವದಿಲ್ಲ ಒಂದರ ಕಿಮ್ಮತು 0-4 0 [illegible] 1 0-0 12 ಕ್ಕೆ 1 10 0 ಪೋಸ್ಟು ಖರ್ಚು ಮಾಫ [illegible] ಆಖೈರು ವರೆಗೆ

ಅಮೃತಾಂಜನ.

[illegible] ಬಾಟ್ಲಿಗಳು ಮಾರಲ್ಪಡುತ್ತವೆ [illegible] ಪೇಟೆ ದಿವ್ಯಾಮೃತ ಬಾಟ್ಲಿ ಒಂದಕ್ಕೆ 0 8 0 [illegible] 1 ಕ್ಕೆ [illegible] ಪ್ರತ್ಯೇಕ. [12 30]

ವಿಳಾಸ —ಅಮೃತಾಂಜನ ಡಿಪೋ, ಪೋರ್ಟ್, ಬೊಂಬಾಯಿ.

ಡೋಂಗರೆ

ಇವರ ಬಾಲಾಮೃತ

[150 18]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧೨ ಆಣೆ ಟಪಾಲ್ ಖರ್ಚು 8 ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟೌನ್, ಮದರಾಸು ಇವರಲ್ಲೂ ದೊರೆಯುವುದು.

ವೈದ್ಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ.— ಈ ಮಾತ್ರೆಗಳನ್ನು ಹವಳದ ಭಸ್ಮ ಚಿನ್ನದ ರೇಖು ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಕಿಮ್ಮತ್ತುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ ಜ್ವರ, ಹೊಟ್ಟೆ ನೋವು [illegible] ಮೈ ಕಾಲು ಹೊಡೆತ (ವಾರ), ಮೈ ನಡುಕ, [illegible] ಕಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, [illegible] ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಪಾನ್ಯದೊಡನೆ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುದೋಷ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕೈಕಡ್ಡಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ರಕ್ತವರ್ಧಕವಾಗಿದೆ —220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ [179-12]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕ್ಷಣಮಾತ್ರದಲ್ಲಿ [illegible] ಗಳೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತವೆ ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ಧಿ [illegible] ವೈದ್ಯೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ದಿವ್ಯಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ.—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

“ನೀತಿಗೀತ”—1 ಆಣೆ. “ಬಾಲ್ಯನೀತಿ”—3 ಪೈ.

ಬಾಲಕರಿಗೆ ದೈವಭಕ್ತಿ ಗುರುಭಕ್ತಿ ರಾಜಭಕ್ತಿ ಮಾತೃಭಕ್ತಿ ಪಿತೃಭಕ್ತಿ ಶಕ್ತಿ ಯುಕ್ತಿ ಸತ್ಯತೆ ಶಾಂತತೆ ಪ್ರಾಮಾಣಿಕತೆ ಸಾಹಸ ಧೈರ್ಯ ಕೋಪ ಇವುಗಳನ್ನು ಸುಲಭ ಶೈಲಿಯಲ್ಲಿ ಗೀತಾರೂಪಕವಾಗಿ ಬೋಧಿಸುವುದೇ “ನೀತಿಗೀತ” 100 ಕ್ಕೆ 10 ಉಚಿತ “ಬಾಲ್ಯನೀತಿ” 100 ಕ್ಕೆ 25 ಉಚಿತ [226-4]

ವಿಳಾಸ —ಎಸ್ ತೋಂಟದಾರ್ಯ, ವಡಿಗೇನಹಳ್ಳಿ, ದೇವನಹಳ್ಳಿ ತಾ||

ಪ್ರಸಿದ್ಧವಾದ ಚಿತ್ರಪಟಗಳ ಮಾರಾಟ.

ಮಜಬೂತಾದ ಕಾಗದದ ಮೇಲೆ ಸೈಜು (18×21 ಇಂಚು) ವೈಸರಾಯಿಯವರ, ವೈಸರಾಯಿಣಿಯವರ, ಚಕ್ರವರ್ತಿ, ಚಕ್ರವರ್ತಿನಿಯವರ, ಶ್ರೀಮನ್ ಮಹಾರಾಜರವರ, ಶ್ರೀಮನ್ ಯುವರಾಜರವರ, ಮಂತ್ರಿವರ್ಯರ, ಗೇರುಸೊಪ್ಪೆ ಜಲಪಾತದ, ಚಿನ್ನದ ಗಣಿಗಳ, ವೈಸರಾಯರವರು ಮಹಾರಾಜರೊಡನೆ ಗಾಡಿಯಲ್ಲಿ ಸಯ್ಯಾಜಿ ರಾವ್ ರಸ್ತೆಯಲ್ಲಿ ಹೋಗುವ ಚಿತ್ರಪಟಗಳು ಅಚ್ಚಾಗಿವೆ ಕ್ರಯ ಒಂದು ಆಣೆ ಮಾತ್ರ (6 ಕ್ಕೆ ಕಮ್ಮಿಯಾಗಿ ವಿ ಪಿ ಇಲ್ಲ) ಒಂದು ವಾರದೊಳಗಾಗಿ ಮೂರು ಮುದ್ರಣಗಳಾಗಿವೆ ಜಾಗ್ರತೆಮಾಡಿ [242 1]

ವಿಳಾಸ —ದಿ ಜನರಲ್ ಏಜನ್ಸಿ, ಮೈಸೂರು

ದಿ ನ್ಯಾಷನಲ್ ಇನ್ಷುರೆನ್ಸ್ ಮತ್ತು ಬ್ಯಾಂಕಿಂಗ್
ಕಂಪನಿ, ಲಿಮಿಟೆಡ್, ಅಮೃತಸರ್

ನೋಟೀಸ್.

ನಮ್ಮ ಮದರಾಸ್ ಬ್ರಾಂಚಿನ ಸೆಕ್ರೆಟರಿಯವರಾಗಿ, ಸದ್ಯದಲ್ಲಿ ಮೈಸೂರಿಗೆ ಕಂಪನಿ ಕೆಲಸಕ್ಕಾಗಿ ಕಳುಹಿಸಲ್ಪಟ್ಟಿರುವ ಮ|| ರಾ|| ಟಿ ಎಸ್ ಆರ್ ಅಯ್ಯರವರಿಗೆ ಮೈಸೂರು ಮತ್ತು ಕೊಡಗಿನಲ್ಲಿರುವ ನಮ್ಮ ಪಾಲಿಸಿ ಹೋಲ್ಡರುಗಳಿಂದ ಕಂಪನಿಗೆ ಸಲ್ಲಬೇಕಾಗಿರುವ ಪ್ರೀಮಿಯಂ (ಚಂದಾ) ಹಣಗಳನ್ನು ತಾವೇ ಆಗಲಿ, ತಾವು ನೇಮಕಮಾಡುವ ಏಜಂಟರುಗಳ ಮೂಲಕವಾಗಿಯೇ ಆಗಲಿ ಪಾವತಿ ತೆಗೆದುಕೊಳ್ಳುವ ಅಧಿಕಾರ ವಹಿಸಿರುತ್ತೆಂದು ಈ ಮೂಲಕ ಪ್ರಸಿದ್ಧಪಡಿಸಿದೆ ಮ|| ರಾ|| ಅಯ್ಯರವರು ಪವರ್ ಆಫ್ ಅಟರ್ನಿ (ವಕಾಲತ್ತು) ಯನ್ನು ಪಡೆದಿದ್ದಾರೆ ಪಾಲಿಸಿ ಹೋಲ್ಡರುಗಳು ಅವರಿಗೆ ಹಣ ಪಾವತಿಮಾಡುವ ವಿಷಯದಲ್ಲಿ ಸ್ವಲ್ಪವೂ ಅನುಮಾನಪಡಬೇಕಾದದ್ದಿಲ್ಲ [239 1]

ಪಿ ಎಲ್ ರಾಜಪಾಲ್,
ಚೀಫ್ ಮ್ಯಾನೇಜರ್

THE BANK OF MYSORE, LIMITED, BANGALORE

Applications are invited for the appointment of Agents to the above Bank at Mysore, Davangere and Tiptur

Applicants must be of the highest financial standing Preference will be given to those not actively engaged in the principal trade of the town and Banking

Applicants must clearly state the nature and value of the security they propose offering Cash or Government Bonds preferred.

Terms of commission and other conditions of Agency will be furnished to parties to be selected by the Directors

Applications should reach the Manager by noon of Monday, 24th instant

All communications to be addressed to the Manager [238-1]

NOTICE

Wanted at once an active and efficient hand for the place of Assistant Secretary, Bangalore City Co-operative Society Ltd Salary Rs 40 rising to Rs 60 by five equal annual instalments of Rs 4 each after each year's approved service

QUALIFICATIONS REQUIRED—(1) Good knowledge of English and Kanarese to attend to correspondence work, (2) Fair knowledge of accounts, Book-keeping, Banking and Commerce, (3) Certificate of good moral character and respectability, (4) Ability to furnish cash security of Rs 2,000

Preference will be given to graduates from the Colleges in the Mysore State The candidate selected will be appointed on probation for six months

Apply with the testimonials, to the Honorary Secretary, Bangalore City Co operative Society, Ltd, so as to reach him on or before the 15th December, 1913 [240-1]

BANGALORE, Dated, 11th Nov, 1913 — C. RAMA RAO, *Hony Secretary*

ವೃತ್ತಾಂತ ಪತ್ರಿಕೆ

ಸನ್ ೧೯೧೩ ನೇ ಇಸವಿ ನವಂಬರ್, ತಾ ೨೦ ನೇ ಗುರುವಾರ.

ಕೋಆಪರೇಟಿವ್ ಸೊಸೈಟಿಗಳೂ ಬ್ಯಾಂಕುಗಳೂ.

ಕೋಆಪರೇಟಿವ್ ಸೊಸೈಟಿಗಳು ಹಿಂದುಸ್ಥಾನದ ಎಲ್ಲಾ ಭಾಗಗಳಿಗೂ ಹಬ್ಬುತ್ತಿರುವುದು ಬಹಳ ಹರ್ಷಕರವಾಗಿದೆ ಮೈಸೂರು ಸಂಸ್ಥಾನದ ಪರಸ್ಪರ ಸಹಾಯ ಸಂಘಗಳ 1911-12 ನೇ ಸಾಲಿನ ವಾರ್ಷಿಕ ರಿಪೋರ್ಟು ನಮಗೆ ತಲುಪಿದ ಕೆಲವು ದಿನಗಳ ಮೇಲೆ ಕೊಡಗಿನಲ್ಲಿರುವ ಸೊಸೈಟಿಗಳ 1912-13 ನೇ ಸಾಲಿನ ರಿಪೋರ್ಟು ಬಂದಿರುತ್ತದೆ ಮೈಸೂರಿನ ರಿಪೋರ್ಟು ಪ್ರಕಟವಾಗುವುದು ಯಾಕೆ ಹನ್ನೆರಡು ತಿಂಗಳು ತಾಮಸವಾಯಿತೋ ನಮಗೆ ಗೊತ್ತಾಗುವುದಿಲ್ಲ ಮೈಸೂರಿನ ರಿಪೋರ್ಟು 1912 ನೇ ಡಿಸೆಂಬರ್ ತಾ 20 ರಲ್ಲಿ ರಿಜಿಸ್ಟ್ರಾರ್ರಿಂದ ರವಾನೆಯಾಯಿತೆಂದೂ, ಗವರ್ನಮೆಂಟಿನವರು ಅದನ್ನು ಓದಿಕೊಂಡು 1913 ನೇ ಸೆಪ್ಟಂಬರ್ ತಾ 19 ರಲ್ಲಿ ತಮ್ಮ ಹುಕುಮನ್ನು ಬರೆದಿರುತ್ತಾರೆಂದೂ ನಮಗೆ ಗೊತ್ತಾಗಿದೆ ಕೋಆಪರೇಟಿವ್ ಸೊಸೈಟಿಗಳ ಇಲಾಖೆಯು ಇನ್ನೂ ಹೊಸದಾಗಿದ್ದು, ಈ ಇಲಾಖೆಯ ರಿಪೋರ್ಟನ್ನು ಗವರ್ನಮೆಂಟಿನವರು ಒಂಭತ್ತು ತಿಂಗಳ ಕಾಲ ತಮ್ಮ ಮೇಜಿನ ಮೇಲೆ ಸುಮ್ಮನೆ ಇಟ್ಟುಕೊಳ್ಳುವುದು ಆ ಮುಖ್ಯಾಧಿಕಾರಿಗೆ ಪ್ರೋತ್ಸಾಹವನ್ನುಂಟುಮಾಡುವುದಿಲ್ಲ

ಇದು ಹ್ಯಾಗಾದರೂ ಇರಲಿ, ಮೈಸೂರು ಮತ್ತು ಕೊಡಗಿನ ಎರಡು ರಿಪೋರ್ಟುಗಳನ್ನೂ ಓದುವುದರಲ್ಲಿ ಬಹಳ ಸಂತೋಷವಾಗುವುದು ಪ್ರತಿ ಒಂದು ದೊಡ್ಡ ಗ್ರಾಮದೊಳಗೂ ಸತ್ಯವಂತರೂ ಬುದ್ಧಿಶಾಲಿಗಳೂ ಆದ ಜನಗಳು ದೊರಕಿ ಗ್ರಾಮಸ್ಥರಲ್ಲಿ ಪರಸ್ಪರ ಸಹಾಯವನ್ನು ಹುಟ್ಟಿಸಿ ಅಭಿವೃದ್ಧಿಮಾಡುವುದಕ್ಕೆ ಸಮಯವನ್ನೂ ಸಾಮರ್ಥ್ಯವನ್ನೂ ವಿನಿಯೋಗಿಸುವಂತೆ ಆಗಬೇಕೆಂದು ಆಶಿಸುತ್ತೇವೆ ಇದು ಸಾಧ್ಯವಾಗಿ, ಗ್ರಾಮದೊಳಗೇ ಒಂದು ಸಂಘವು ಏರ್ಪಾಡಾದರೆ ಅಲ್ಲಿನವರು ದುಬಾರಿ ಬಡ್ಡಿಗೆ ಸಾಲ ತರುವುದಕ್ಕೋಸ್ಕರ ಮನೆಮಠಗಳನ್ನೂ ಕೆಲಸಗಳನ್ನೂ ಬಿಟ್ಟು ದೂರ ಸ್ಥಳಗಳಿಗೆ ಹೋಗಿ ಅಲೆದು ಬರುವುದು ತಪ್ಪಿ, ಆಯಾ ಗ್ರಾಮದವರಿಗೆ ಅಲ್ಲಲ್ಲೇ ಬೇಕಾದಾಗ ಸುಲಭ ಬಡ್ಡಿಗೆ ಸಾಲ ದೊರಕುವುದಕ್ಕೆ ತುಂಬಾ ಸಹಾಯವಾದೀತು

ಮೈಸೂರು ಸಂಸ್ಥಾನದೊಳಗಿನ ಸೊಸೈಟಿಗಳಲ್ಲಿ ಅಷ್ಟೇನೂ ಹೆಚ್ಚು ಲೇವಾದೇವಿ ನಡೆದಿರುವುದಿಲ್ಲ, ನಡೆದಿರುವ ಲೇವಾದೇವಿಯನ್ನು ಬಹಳ ಸ್ವಲ್ಪವೆಂದೇ ಹೇಳಬೇಕಾಗಿದೆ ಒಟ್ಟು 219 ಸಂಘಗಳಲ್ಲಿ 10 ಸಂಘಗಳೊಳಗೆ ಕೆಲಸ ಪ್ರಾರಂಭವೇ ಆಗಿರಲಿಲ್ಲ, 70 ಸೊಸೈಟಿಗಳಲ್ಲಿ ಲೇವಾದೇವಿಯೇನೂ ಇರಲಿಲ್ಲ ಕೊಡಗು ಸೀಮೆಯೊಳಗೆ ಕೋಆಪರೇಟಿವ್ ಸೊಸೈಟಿಗಳ ಪ್ರಾಬಲ್ಯಕ್ಕೆ ಮ|| ಮುಲ್ಲರ್ ಯವರೇ ಮುಖ್ಯ ಕಾರಣಭೂತರಾಗಿದ್ದಾರೆ ಅವರು ಈಗ ಗೋಣಿಕೊಪ್ಪದಲ್ಲಿ ಒಂದು ಪರ್ಚೇಸಿಂಗ್ ಸೊಸೈಟಿಯೊಂದನ್ನು ಪ್ರಾರಂಭಮಾಡಬೇಕೆಂದು ಸಾಹಸಪಡುತ್ತಿರುವಂತೆ ತಿಳಿಯುತ್ತೇವೆ ಈ ಸೊಸೈಟಿಗೆ ಸೇರಿದವರ ಗೋಣಿಕಾಯಿಗಳು ಸತ್ತುಹೋಂದರೆ ಅವುಗಳ ಬೆಲೆಯನ್ನು ಸೊಸೈಟಿ ಹಣದಿಂದ ಪಾವತಿಮಾಡಬೇಕೆನ್ನುವುದೇ ಅದರ ಉದ್ದೇಶವಾಗಿದೆ ಈ ಏರ್ಪಾಡು ರೈತರಿಗೆ ತುಂಬಾ ಪ್ರಯೋಜನಕರವಾದದ್ದು, ಆದಕಾರಣ ಅವರ ಸಾಹಸವು ಸಾರ್ಥಕವಾಗಲೆಂದು ಹಾರೈಸುತ್ತೇವೆ.

ಒಂದೆರಡು ತಿಂಗಳುಗಳಿಂದೀಚೆಗೆ ಪಂಜಾಬ್ ಮತ್ತು ಬೊಂಬಾಯಿ ಆದಿಪತ್ರಗಳೊಳಗೆ ಕೆಲವು ಜಾಯಿಂಟ್ ಸ್ಟಾಕ್ ಬ್ಯಾಂಕುಗಳು ದಿವಾಳಿಯಾಗಿ ಷೇರುದಾರರಿಗೆ ಬಹಳ ಹಣಗಳು ನಷ್ಟವಾಗಿ ಹಿಂದುಸ್ಥಾನದಲ್ಲಿ ತುಂಬಾ ದುಃಖವನ್ನೂ ಗಾಬರಿಯನ್ನೂ ಉಂಟುಮಾಡಿರುತ್ತವೆ ಬ್ಯಾಂಕುಗಳೆಲ್ಲಾ ಸುಮಾರಾಗಿ ಕೋಆಪರೇಟಿವ್ ಸೊಸೈಟಿಗಳೆಂದೇ ಹೇಳಬಹುದು, ಯಾಕೆಂದರೆ ಅನೇಕ ಜನಗಳು ಹಣವನ್ನು ಕೊಟ್ಟು ಬ್ಯಾಂಕಿನ ಷೇರುಗಳನ್ನು ಪಡೆಯುತ್ತಾರೆ ದಿವಾಳಿಯಾದ ಬ್ಯಾಂಕುಗಳ ಕಥೆಯನ್ನು ಕೇಳಿದಾಗ ಕೆಲವರು ಹಣವನ್ನು ಕೊಡದೇ ಇರಲಿಲ್ಲವೆಂದು ಗೊತ್ತಾಗುತ್ತದೆ ಕೆಲವು ಜನರು ಏಕವಾಗಿ ಒಂದು ಬ್ಯಾಂಕನ್ನು ಪ್ರಾರಂಭಮಾಡಿದರು, ಷೇರುಗಳನ್ನು ಬಿಕರಿಮಾಡಿದರು, ಷೇರುಗಳಲ್ಲಿ ಕೆಲವು ಭಾಗವನ್ನು ಮಾತ್ರ ವಸೂಲ್ಮಾಡಿಕೊಂಡರು. ಆ ಕೆಲವು ಭಾಗದ ಹಣವನ್ನೂ ಮುಂದಿನಗಳು ಬೇರೆ ಬ್ಯಾಂಕಿನಲ್ಲಿ ಸಾಲತೆಗೆದುಕೊಂಡರು ಇದರಿಂದ ಬ್ಯಾಂಕಿನಲ್ಲಿ ಷೇರುದಾರರ ಹಣ ಬಹಳ ಸ್ವಲ್ಪವೇ ಇದ್ದಿತು ಈ ಬ್ಯಾಂಕಿನ ಸ್ಥಿತಿಯನ್ನು ತಿಳಿಯದ ಅನೇಕ ಜನಗಳು ತಮ್ಮ ಹಣಗಳನ್ನು ತಂದು ಬ್ಯಾಂಕಿನಲ್ಲಿ ಡಿಪಾಜಿಟ್ಟು ಹಾಕಿದರು ಈ ರೀತಿಯಾಗಿ ಏರ್ಪಾಡಾದ ಬ್ಯಾಂಕು ದಿವಾಳಿಯಾಗುವುದೂ, ಜನಗಳು ಮೋಸಹೋಗಿ ಹಣವನ್ನು ಕಳೆದುಕೊಂಡು ದುಃಖಿಸುವುದೂ ಆಶ್ಚರ್ಯವೇನೂ ಇಲ್ಲ ಬ್ಯಾಂಕುಗಳಲ್ಲಿ ಡಿಪಾಜಿಟ್ಟು ಹಾಕತಕ್ಕವರು ಷೇರುಗಳ ಹಣಗಳೆಲ್ಲಾ ಪೂರಾ ಪಾವತಿಯಾಗಿದೆಯೇ, ಆ ಹಣದಿಂದಲೇ ಬ್ಯಾಂಕಿನಲ್ಲಿ ಲೇವಾದೇವಿ ನಡೆಯುತ್ತಿದೆಯೇ ಎಂಬ ಸಂಗತಿಗಳನ್ನು ಮೊದಲು ವಿಚಾರಿಸಿ ತಿಳಿದುಕೊಳ್ಳಬೇಕು

ಪಂಜಾಬ್ ಮತ್ತು ಬೊಂಬಾಯಿ ಆದಿಪತ್ರಗಳಲ್ಲಿ ಈಗ ಅನೇಕ ಜನಗಳು ಈ ಬ್ಯಾಂಕುಗಳ ದಿವಾಳಿಯಿಂದ ಬಹಳ ನಷ್ಟಪಟ್ಟಿದ್ದಾರೆನ್ನುವುದಕ್ಕೆ ಸಂಶಯವಿಲ್ಲ. ಇದರ ದೆಸೆಯಿಂದ ನಂಬಿಕೆಯಾಗಿ ನಡೆಯುವ ಬ್ಯಾಂಕುಗಳ ಷೇರುಗಳಿಗೂ ಅಪ್ರೋಹ ಬರುವ ಹಾಗಾಯಿತು ಈ ವಿಚಾರವು ನಾವು ಅನೇಕ ಸಲ ಕಂಠೋಕ್ತವಾಗಿ ಹೇಳುತ್ತಾ ಬಂದಿರುವ ಮಾತಿಗೆ ಮತ್ತೊಂದು ದೃಷ್ಟಾಂತವಾಗಿರುತ್ತದೆ ಆ ಮಾತು ಯಾವುದೆಂದರೆ—ದೇವರಲ್ಲಿ ಭಯಭಕ್ತಿಯನ್ನು ಪಡೆದು ನಡತೆಗಳಲ್ಲಿ ಸತ್ಯಸಂಧರಾಗಿ ಐಕ್ಯಮತ್ಯಕ್ಕೆ ಹದರತಕ್ಕಂಥಾ ಪ್ರಜೆಗಳು ಹಿಂದುಸ್ಥಾನದಲ್ಲೆಲ್ಲಾ ಹೇರಳವಾಗಿ ಹಬ್ಬಿ ಹರಡಿಕೊಳ್ಳುವ ತನಕ ಈ ರಾಷ್ಟ್ರವು ಖಂಡಿತವಾಗಿಯೂ ಐಹಿಕವಾದ ಶ್ರೇಯಸ್ಸನ್ನು ಪಡೆಯುವುದಿಲ್ಲ

ರಹಸ್ಯವಾದ ನಿಕ್ಷೇಪ

ಪಾರಸೀ ದೇಶದ ಅರಸಾದ ಷಹ ಅಬ್ಬಾಸ್ ಎಂಬವನು ಆ ದೇಶದ ರಾಜಧಾನಿಯಾದ ಇಸ್ಫಹಾನ್ ನಗರದಲ್ಲಿ ಕ್ರಿಸ್ತಶಕ 1585 ರಲ್ಲಿ ಸಿಂಹಾಸನಾರೂಢನಾಗಿ ಆಳುತ್ತಿದ್ದನು ಈತನು ಒಂದು ದಿನ ಸಿಕಾರಿ ಮಾಡಬೇಕೆಂದು ಪರಿವಾರಸಮೇತ ಹೊರಟು ಶಿಕಾರಿಯ ಆಸಕ್ತಿಯಲ್ಲಿ ದಾರಿತಪ್ಪಿ ಕಾಡಿನಲ್ಲಿ ರಾಜಧಾನಿಯನ್ನು ಹುಡುಕುತ್ತ ಬರುತ್ತಿರುವಲ್ಲಿ ಒಬ್ಬ ಕುರುಬರ ಹುಡುಗನು ಕಣಿವೆಯಲ್ಲಿ ಕುರಿಗಳನ್ನು ಮೇಯಿಸುತ್ತ ಪಿಳ್ಳಂಗೋವಿಯನ್ನು ಬಹು ಚಮತ್ಕಾರವಾಗಿ ಊದುತ್ತಿರುವುದನ್ನು ಕೇಳಿ ಸಮೀಪಕ್ಕೆ ಬಂದು ಇನ್ನೂ ಚೆನ್ನಾಗಿ ಸ್ವಲ್ಪ ಹೊತ್ತು ಕೇಳಿದ ನಂತರ ಆ ಹುಡುಗನನ್ನು ಮಾತಾಡಿಸ ತೊಡಗಿದನು ಆ ಹುಡುಗನು ತನ್ನ ವಿಷಯದಲ್ಲಿಯೂ ತನ್ನ ಕೆಲಸದ ವಿಷಯದಲ್ಲಿಯೂ ರಾಜಧಾನಿಗೆ ಹೋಗುವ ರಸ್ತೆಯ ವಿಷಯದಲ್ಲಿಯೂ ಹೇಳಿದ ಪ್ರತ್ಯುತ್ತರಗಳನ್ನು ಕೇಳಿ ದೊರೆಗೆ ಬಹಳ ಸಂತೋಷವಾದುದರಿಂದ ಮಾರನೆ ದಿವಸ ಅರಸನು ಆ ಹುಡುಗನನ್ನು ಕರೆಸಿ ಅವನಿಗೆ ತಕ್ಕ ವಿದ್ಯಾಭ್ಯಾಸವನ್ನು ಮಾಡುವುದಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಿದನು ಈ ಬಾಲಕನು ಆಶ್ಚರ್ಯಕರವಾದ ವಿದ್ಯಾಭಿವೃದ್ಧಿಯನ್ನು ಹೊಂದಿದ್ದರಿಂದ ಅರಸನೂ ಆಸ್ಥಾನದ ಪಂಡಿತರೂ ಬಹು ಸಂತೋಷಪಟ್ಟರು ಕಡೆಗೆ ಅರಸನು ಅವನಿಗೆ ಮೊಹಮದ್ ಅಲಿ ಬೆ ಎಂಬ ನಾಮಾಂಕಿತವನ್ನು ಕೊಟ್ಟು ಅರಮನೆಯ ಮೇಲ್ವಿಚಾರಣಾ ಕರ್ತನಾದ ನಾಜರನಾಗಿರಲು ನೇಮಿಸಿದನು ಇವನು ಆ ಕಾಲದಲ್ಲಿ ಬಹು ರೂಢಿಯಾಗಿದ್ದ ಲಂಚಕೊಡುವಿಕೆಗೆ ಒಳಪಡದೆ ರಾಜಕಾರ್ಯಧುರೀಣನಾಗಿದ್ದದ್ದರಿಂದ ಮಾತ್ರವೇ ಅಲ್ಲದೆ ಅವನನ್ನು ಎರಡು ಸರ್ತಿ ದೇಹಲಿಯಲ್ಲಿದ್ದ ಮೊಗಲಾಯಿ ಚಕ್ರವರ್ತಿಯ ಆಸ್ಥಾನಕ್ಕೆ ತನ್ನ ಕಡೆಯ ರಾಯಭಾರಿಯಾಗಿ ಕಳುಹಿಸಿದ್ದನು ದೊರೆಯ ಕಟಾಕ್ಷವು ಈತನಿಗೆ ಲಭ್ಯವಾದುದನ್ನು ನೋಡಿ ಆಸ್ಥಾನದ ಅಧಿಕಾರಿಗಳೆಲ್ಲರೂ ಇವನ ಮೇಲೆ ಗುರುಕಾಯಿಸ ತೊಡಗಿದರು ಆದರೂ ಅವನ ಶಕ್ತಿ ಸಾಮರ್ಥ್ಯಗಳನ್ನೂ ನಿಸ್ಪೃಹವಾದ ಅವನ ನಡತೆಯನ್ನೂ ಮನಗಂಡವನಾದುದರಿಂದ ಯಾರಿಗೂ ಅವನಿಗೆ ವಿರೋಧವಾಗಿ ಕೇಡುಬಗೆಯುವ ಅವಕಾಶವು ದೊರೆಯಲಿಲ್ಲ

ಅವರೆ ಅರಸನು ಮೃತಪಟ್ಟು ಷಹಸಫಿಯು ಅವನಿಗೆ ಬದಲಾಗಿ ಸಿಂಹಾಸನವನ್ನು ಹತ್ತಲು ಮೊಹಮದ್ ಅಲಿಬೆಯ ಶತ್ರುಗಳು ಅವನನ್ನು ಹ್ಯಾಗಾದರೂ ಅಗ್ರಪಕ್ಷ ಕುಸ್ತುಮಾಡಿ ಕೊಲ್ಲಿಸಬೇಕೆಂದು ಪ್ರಯತ್ನ ಮಾಡುತ್ತಿದ್ದರು ಅವರು ಒಂದು ದಿನ ದೊರೆಯ ಸನ್ನಿಧಿಗೆ ಬಂದು ಮೊಹಮದನು ಅನೇಕ ಛತ್ರಗಳನ್ನು ಕಟ್ಟಿಸಿ ನಡಿಯಿಸುತ್ತಿದ್ದಾನೆ ಆತನ ಅರಮನೆಯು ಅತ್ಯಂತ ಶ್ರೀಮಂತವಾದ ಪಿನ್ನ ಸಾಮಾನುಗಳಿಂದ ಅತನು ರಾಜ್ಯದ ಭಂಡಾರವನ್ನೆಲ್ಲ ಹೀಗೆ ವ್ಯಯಮಾಡುತ್ತಿರುವನು ದಯಮಾಡಿ ಪರಾಂಬರಿಸಬೇಕೆಂದು ಬಾಡಿಕೇಳಿದರು

ಅರಸನು ಅನನುಭವಿಯಾದ ಯುವಕನಾಗಿದ್ದುದರಿಂದ ಅವರ ಮಾತುಗಳನ್ನು ನಂಬಿ ಮೊಹಮದನನ್ನು ಕರೆದು—ಇನ್ನು ಹದಿನೈದು ದಿನಗಳಲ್ಲಿ ನಿನ್ನ ಲೆಖ್ಖಗಳನ್ನೆಲ್ಲಾ ಸ್ಪಷ್ಟಮಾಡಿ ನಮಗೊಪ್ಪಿಸಬೇಕೆಂದು ಆಜ್ಞಾಪಿಸಿದನು ಇತ್ತ ನಾಜರನಾದರೋ ಮಹಾಸ್ವಾಮಿ, ನಾಳೆಯೇ ತಾವು ಸಕಲ ಬಾಬುಗಳನ್ನು ಪರೀಕ್ಷಿಸಬೇಕೆಂದು ಬೇಡಿದನು ದೊರೆಯು ಖಜಾನೆಗೆ ಬಂದು ನೋಡಿ ಸಕಲವೂ ಅತ್ಯಂತ ವ್ಯವಸ್ಥಿತವಾದ ರೀತಿಯಲ್ಲಿರುವುದನ್ನು ನೋಡಿದನು ಅನಂತರ ಅರಸನು ಮೊಹಮದನ ಮನೆಗೆ ಹೋಗಿ ಪ್ರತಿಯೊಂದು ಕೋಣೆಯನ್ನೂ ಕ್ರಮವಾಗಿ ನೋಡುತ್ತಾ ಬರಲು ಅವನಲ್ಲಿರುವ ಸಾಮಾನು ಒಡವೆಗಳೆಲ್ಲಾ ಅತಿ ಸಾಧಾರಣವಾದವೆಂದು ತಿಳಿದು ಬಹಳ ಸೋಜಿಗಪಟ್ಟು ಅಲ್ಲದೆ ಮೊಹಮದ್ ಅಲಿಬೆಯು ಅಂತಹ ಉನ್ನತ ಪದವಿಯಲ್ಲಿದ್ದರೂ ತನ್ನ ಗೃಹಕೃತ್ಯದ ಕಾರುಬಾರುಗಳನ್ನು ಅಷ್ಟು ದೀನಸ್ಥಿತಿಯಲ್ಲಿ ನಡಿಸುತ್ತಿರುವುದನ್ನು ತಿಳಿದು ಮೊಹಮದನನ್ನು ಮೆಚ್ಚಿ ಕೊಂಡಾಡಿದನು ಆದರೆ ಒಬ್ಬ ಅಧಿಕಾರಿಯು ಅರಸನು ಇನ್ನೂ ಪ್ರವೇಶಿಸದೆ ಇದ್ದ ಒಂದು ಕೊಠಡಿಯನ್ನು ತೋರಿ—ಪ್ರಭುಗಳೇ, ಈ ಕೋಣೆಗೆ ಮೂರು ಬಲವಾದ ಬೀಗಗಳನ್ನು ಹಾಕಿ ಎಂದೋಬಸ್ತು ಮಾಡಿದೆಯೆಂದು ಹೇಳಿದನು ರಾಜನು—ಮಂತ್ರಿ ಶಿರೋಮಣಿಯೇ, ಇಷ್ಟು ಭದ್ರಮಾಡಲ್ಪಟ್ಟಿರುವ ಈ ಕೊಠಡಿಯಲ್ಲಿ ಯಾವ ವಸ್ತುವನ್ನು ಇಟ್ಟಿದ್ದೀಯೆಂದು ಕೇಳಲು —ಆತನು ಜೀಯಾ, ತಾವು ಈವರೆಗೂ ನೋಡಿದ್ದೆಲ್ಲವೂ ತಮ್ಮದು ಹೊರತು ನನ್ನದಲ್ಲ ಆದರೆ ಈ ಕೊಠಡಿಯಲ್ಲಿರುವುದು ಮಾತ್ರ ನನ್ನ ಸಂಪಾದನೆ ಅದೇ ನನ್ನ ಸ್ವತ್ತು ಅದರ ಹೊರತು ಇಲ್ಲಿರುವುದಾವುದೂ ನನ್ನದಲ್ಲವೆಂದು ಹೇಳುತ್ತ ಆ ಕೊಠಡಿಯ ಬೀಗಗಳನ್ನು ತೆರೆದು ಅಲ್ಲಿಗೆ ಅರಸನನ್ನು ಕರೆದೊಯ್ದನು. ಮತ್ತು ಅಲ್ಲಿ ಗೋಡೆಯ ಗೂಟಕ್ಕೆ ನೇತುಹಾಕಿರುವ ಕುರುಬರವರ ಕೋಲು, ಹುಟ್ಟಿಚೀಲ, ತಾನು ಬಾಲಕನಾಗಿದ್ದಾಗ ಊದುತ್ತಿದ್ದ ಪಿಳ್ಳಂಗೋವಿ ಹೊದೆಯುತ್ತಿದ್ದ ಕಂಬಳಿ ಇವುಗಳನ್ನು ತೆಗೆದುಕೊಂಡು—ಮಹಾಸ್ವಾಮಿ, ಅಪ್ಪಣೆಯಾದರೆ ತನ್ನ ಬಾಲ್ಯದ ಕಸುಬಿಗೆ ಹೋಗುವುದಕ್ಕೆ ಸಿದ್ಧನಾಗಿದ್ದೇನೆಯೆಂದು ನುಡಿದನು ಅರಸನು ವಿಸ್ಮಿತನಾಗಿ ಇದರ ಅಭಿಪ್ರಾಯವೇನು ಎಂದು ಕೇಳಲು, ಮೊಹಮದನು ತನ್ನ ಚರಿತ್ರೆಯನ್ನು ಬಾಲ್ಯದಿಂದ ಅವರೆಲ್ಲರ ಮುಂದೆ ವಿವರಿಸಿದನು ಅರಸನು ಆ ವೃತ್ತಾಂತವನ್ನೆಲ್ಲಾ ಕೇಳಿ ಅವನ ಸದ್ಗುಣ, ಸುಶೀಲ, ಸ್ವಭಾವಗಳಿಗೆ ಬಹು ಮೆಚ್ಚಿ ತನ್ನ ಮೈಮೇಲಿದ್ದ ವಸ್ತ್ರಾಭರಣ ತೊಡಿಗೆಗಳನ್ನು ತೆಗೆದು ಸಕಲರ ಮುಂದೆ ತನ್ನ ನಾಜರನಿಗೆ ಅವುಗಳನ್ನು ತೊಡಿಸಿದನು ಪಾರಸೀ ದೇಶದ ಅರಸರು ತಮ್ಮ ಪ್ರಜೆಗಳ ಪೈಕಿ ಯಾರಿಗಾದರೂ ಅತ್ಯಂತ ಶ್ರೇಷ್ಠವಾದ ಗೌರವವನ್ನು ತೋರಿಸಬೇಕೆಂದು ಅಪೇಕ್ಷಿಸಿದರೆ ಹೀಗೆ ಮಾಡುವುದು ಪದ್ಧತಿ ಮತ್ತು ಅರಸನು ಮೊಹಮದನನ್ನು ಮಂತ್ರಿಪದವಿಯಲ್ಲಿರಬೇಕೆಂದು ಬೇಡಿಕೊಂಡನು. ಮೊಹಮದನು ಜೀವಿತಕಾಲವೆಲ್ಲಾ ಆ ಪದವಿಯಲ್ಲಿದ್ದನು

ಧನಾಸ್ಥೆಯಿಂದ ಲೋಕದಲ್ಲಿ ಸಿಟ್ಟು ಕುರುಬಿದುತ್ತಾ ಧನಾಸ್ಥೆಯಿಂದ ಲೋಕದಲ್ಲಿ ನಿರ್ಭ್ರಾಂತಿಯಿಲ್ಲದೆ ಆಳಿದಾದುವವರಿಗೆ ಮಹಮದ್ ಅಲಿಬೆಯ ಚರಿತ್ರೆಯು ಒಳ್ಳೇ ಪಾಠವನ್ನು ಕಲಿಸುವದಾಗಿದೆ ಧನಾಪೇಕ್ಷೆಯು ಅಥವಾ ಲೋಭವು ನಮ್ಮ ಬುದ್ಧಿಯನ್ನು ಕುರುಡುಮಾಡುತ್ತದೆ ಬುದ್ಧಿಯನ್ನು ಮಂದವಾಗಿಸುತ್ತದೆ ಮತ್ತು ಅದು ಸಕಲ ವರಗಳಿಗೂ ಕಾರಣಭೂತನಾದ ದೇವರನ್ನೇ ನಮ್ಮ ದೃಷ್ಟಿಗೆ ಮರೆಮಾಡಿ, ಕರುಣೆ, ಪ್ರೀತಿ, ಪರೋಪಕಾರ ಸತ್ಯ, ನೀತಿ ಮುಂತಾದ ಸದ್ಗುಣಗಳನ್ನು ನಾಯಿಸಿಬಿಡುತ್ತದೆ ಲೋಭವು ಲಾಭವಲ್ಲ ಕಟ್ಟಕಡೆಗೆ ಅದು ಯಾವ ಪ್ರಯತ್ನದಿಂದಲಾದರೂ ವಿಮುಕ್ತಿಯನ್ನು ಪಡೆಯಲಾರದ ನಾಶನಕ್ಕೆ ನಮ್ಮನ್ನು ಎಳೆಯುವದಾಗುವದು ಈ ಸಂದರ್ಭದಲ್ಲಿ ಶ್ರೀ ಪೌಲನೆಂಬ ಪರಮಭಕ್ತನು ಹೇಳಿರುವ ದಿವ್ಯೋಪದೇಶವನ್ನು ನಮ್ಮ ವಾಚಕರು ಲಕ್ಷ್ಯವಿಟ್ಟು ಗ್ರಹಿಸಬೇಕೆಂದು ಬೇಡುತ್ತೇವೆ ಅದೇನಂದರೆ—ಇವುಗಳಿಂದ ಹೊಟ್ಟೆಕಿಚ್ಚು, ಜಗಳ, ದೂಷಣೆ, ದುಸ್ಸಂಶಯ, ನಿತ್ಯವಾದ ಕಚ್ಚಾಟ ಇವುಗಳು ಉಂಟಾಗುತ್ತವೆ ನಾವು ಲೋಕದೊಳಕ್ಕೆ ಏನೂ ತಕ್ಕೊಂಡು ಬರಲಿಲ್ಲವಷ್ಟೆ ಅದರೊಳಗಿಂದ ಏನೂ ತಕ್ಕೊಂಡು ಹೋಗಲಾರೆವು ನಮಗೆ ಅನ್ನವಸ್ತ್ರವಿದ್ದರೆ ಅದು ಸಾಕಾಗಿರುವುದು ಐಶ್ವರ್ಯವಂತರಾಗಬೇಕೆಂದು ಮನಸ್ಸು ಮಾಡುವವರು ದುಷ್ಪ್ರೇರಣೆಗೊಳಗಾಗಿ ಉರುಲೊಳಕ್ಕೆ ಸಿಕ್ಕಿಕೊಂಡು ಬುದ್ಧಿಯಿಲ್ಲದ ಹಾನಿಕರವಾದ ಅನೇಕ ಆಶೆಗಳಲ್ಲಿ ಬೀಳುತ್ತಾರೆ ಇಂಥವುಗಳು ಮನುಷ್ಯರನ್ನು ಸಂಹಾರ ನಾಶನಗಳಲ್ಲಿ ಮುಳುಗಿಸುತ್ತವೆ ಯಾಕೆಂದರೆ ಹಣದಾಶೆಯು ಸಕಲ ವಿಧವಾದ ಕೆಟ್ಟತನಕ್ಕೆ ಒಂದು ಮೂಲವಾಗಿದೆ ಕೆಲವರು ಹಣವನ್ನು ಹಾರೈಸುವವರಾಗಿ ಮೋಸಹೋಗಿ ದೇವರ ಮೇಲಣ ನಂಬಿಕೆಯನ್ನು ಬಿಟ್ಟು ಅನೇಕ ವೇದನೆಗಳಿಂದ ತಮ್ಮನ್ನು ತಾವೇ ತಿವಿದುಕೊಂಡರು ಯಾವುದು ಲಾಭವೆಂದು ಕೇಳುತ್ತೀರೋ? ಹೇಳುತ್ತೇನೆ. ಸಂತುಷ್ಟಿ ಸಹಿತವಾದ ಭಕ್ತಿಯೇ ದೊಡ್ಡ ಲಾಭವಾಗಿದೆ

ಒಳದೇಶದ ವೃತ್ತಾಂತಗಳು.

ಕನ್ನಂಬಾಡಿ ತಲಾವ್ ಆಣೆಕಟ್ಟೆಯ ಪಂಚಾಯತದಾರರು ತಾ 24 ನೇ ಸೋಮವಾರದಿಂದ ರಾಜಧಾನಿಯಲ್ಲಿ ಸೇರಿ ವಿಷಯಗಳನ್ನು ಕುರಿತು ಚರ್ಚೆಮಾಡುವವರಾಗಿದ್ದಾರೆ

*

ವೈಸ್‌ರಾಯ್ ಪ್ರಭುಗಳು ನಾಳೆ ಬೆಂಗಳೂರಿನಿಂದ ಕೋಲಾರಕ್ಕೆ ಚಿತ್ತೈಸಿ ಚಿನ್ನದ ಗಣಿಗಳನ್ನು ಪರಾಂಬರಿಸಿಕೊಂಡು ದಕ್ಷಿಣ ದೇಶದ ಕಡೆ ತೆರಳುವರೆಂದೂ, ಈ ದಿನ ಮಧ್ಯಾಹ್ನ ನಮ್ಮ ದಿವಾನ್‌ರವರ ಬಂಗಲೆಗೆ ದಯಮಾಡಿ ಭೇಟಿ ದಯಪಾಲಿಸುತ್ತಾರೆಂದೂ, ಅವರ ಪತ್ನೀರವರು ಭಾನುವಾರದ ತನಕ ಬೆಂಗಳೂರಿನಲ್ಲಿ ಇರುತ್ತಾರೆಂದೂ ಪ್ರಕಟವಾಗಿದೆ

ಕನ್ನಾಗಾಲದ ದಂಗೆ ಮೊಕದ್ದಮೆಯಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವ ತಿಪ್ಪಸುಬ್ಬೇಗೌಡ ಮತ್ತು ಕಾಶೀಪತಯ್ಯ ಎಂಬವರು ಬ್ಯಾರಿಸ್ಟರ್ ವಿ|| ಕಸ್ತೂರ್ಜ್ ರವರ ಮೂಲಕ ಚೀಫ್ ಕೋರ್ಟಿನಲ್ಲಿ ಅಪೀಲ್ ದಾಖಲ್ ಮಾಡಿರುತ್ತಾರೆಂದು ಬೆಂಗಳೂರಿನ ಪತ್ರಿಕೆಯು ತಿಳಿಸುತ್ತದೆ

ಕಾಕನಕೋಟೆ ಕೆಡ್ಡಾ ಕ್ಯಾಂಪಿನಲ್ಲಿ ಪಬ್ಲಿಕ್ ಜನರು ಹೋಗಿ ನೋಡುವ ಹಾಗೆ ಸರ್ಕಾರದವರು ನಾಳೆ ಶನಿವಾರವೂ ಭಾನುವಾರವೂ ಇನ್ನೊಂದು ಹಿಂಡಿನ ಆನೆಗಳನ್ನು ಕೆಡ್ಡಾದೊಳಕ್ಕೆ ಓಡಿಸಿ ಕಟ್ಟಿಹಾಕುವ ಕಾರ್ಯಗಳನ್ನು ನಡೆಸುತ್ತಾರಾದಕಾರಣ ಅನುಕೂಲವಿದ್ದವರು ಹೋಗಿ ನೋಡಬಹುದೆಂದು ತಿಳಿಸಿದೆ. ಈ ಏರ್ಪಾಡೆಲ್ಲಾ ಫಾರೆಸ್ಟ್ ಕನ್ಸರ್ವೇಟರವರಿಗೆ ವಹಿಸಲ್ಪಟ್ಟಿದೆ

ಮೊನ್ನೆ ಮಂಗಳವಾರ ಸಾಯಂಕಾಲ ರಾಜಧಾನಿಯ ಮಿಷನ್ ಹೈ ಸ್ಕೂಲಿನಲ್ಲಿ 4 ನೇ ಫಾರಮಿನ ವಿದ್ಯಾರ್ಥಿಗಳು ಕೆಲವು ಕಾಲ ತಮ್ಮ ಉಪಾಧ್ಯಾಯರಾಗಿದ್ದ ಮ|| ಟಿ. ಕೆ. ಶ್ರೀನಿವಾಸರಾಯರಿಗೆ ಒಂದು ಆಹ್ಲಾದಕರವಾದ ಎಂಟರ್‌ಟೇನ್‌ಮೆಂಟ್ ನಡಿಸಿ ಅಡ್ರೆಸ್ಸನ್ನು ಓದಿ ಒಪ್ಪಿಸಿ ಅವರಲ್ಲಿ ತಮಗಿರುವ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಿದರು ಪ್ರಿನ್ಸಿಪಲ್‌ರಾದ ರೆವ್. ಆರ್. ಡಬ್ಲಿಯು. ಬೂಟ್, ಬಿ ಎಸ್. ಸಿ ರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು.

ರಾಜಧಾನಿಯ ಕೋಟೆಯೊಳಗೆ ವಾಸವಾಗಿದ್ದ ಮನೆಗಳು ಹೋದ ಬಳಿಕ ಅಲ್ಲಿಂದ ಸಂಸಾರ ಸಮೇತ ನಂಜನಗೂಡಿಗೆ ಹೋಗಿ ಮೂರು ವರ್ಷಗಳಿಂದ ಅಲ್ಲೇ ಇದ್ದ ವೇ|| ಈಶ್ವರಜೋಯಿಸರ ರಾಮಾಜೋಯಿಸರೂ, ಅವರ ಪತ್ನೀಯವರೂ ಹಿಂದಿನ ವಾರ ಪ್ಲೇಗ್ ಉಪದ್ರದಲ್ಲಿ ಕಾಲವಾದರೆಂದು ತಿಳಿಸಲು ವಿಷಾದವಾಗುತ್ತದೆ. ಇವರು ವೈದಿಕ ವಿದ್ಯೆ ಆಚಾರ ವ್ಯವಹಾರಗಳಲ್ಲಿ ತುಂಬಾ ಗೌರವವನ್ನು ಹೊಂದಿ ಆಸ್ಥಾನವಿದ್ವಾಂಸರ ಮಂಡಲಿಗೆ ಸೇರಿದವರಾಗಿ ಶ್ರೀಶೃಂಗೇರಿ ಮಠದ ಸ್ಥಳೀಯ ಅಧಿಕಾರವನ್ನು ನಡೆಸುತ್ತಿದ್ದರು.

ಗ್ವಾಲಿಯರ್ ಸಂಸ್ಥಾನದ ಸಿಂಧಿಯಾ ಮಹಾರಾಜರವರು ಕೆಡ್ಡಾ ಕ್ಯಾಂಪಿಗೆ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ದಯಮಾಡಿ, ಆನೆಗಳನ್ನು ಹಿಡಿವ ಸಾಹಸ ಚಮತ್ಕಾರಗಳನ್ನು ಪರಾಂಬರಿಸಿಕೊಂಡು ಕಳೆದ ಶನಿವಾರ ಸಾಯಂಕಾಲ ನಮ್ಮ ಶ್ರೀಮದ್ಯುವರಾಜರವರ ಕೂಡ ವಾಪಸು ರಾಜಧಾನಿಗೆ ಬಂದು ರಾತ್ರಿ ಅರಮನೆಗೆ ಚಿತ್ತೈಸಿ ದೀಪೋತ್ಸವವನ್ನು ನೋಡಿ ಸಂತೋಷಪಟ್ಟು ಮರುದಿನ ಬೆಳಗ್ಗೆ ಮೋಟರಿನಲ್ಲಿ ಬೆಂಗಳೂರಿಗೆ ಪ್ರಯಾಣಮಾಡಿದರು. ಗೌರವಾರ್ಥವಾಗಿ 19 ತೋಪುಗಳು ಹಾರಿಸಲ್ಪಟ್ಟವು.

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯ ನಾರಾಯಣ ವಿಲಾಸ ಪಾಠಶಾಲೆಯಲ್ಲಿ ಯಂಗ್ ಮೆನ್ಸ್ ಲಿಟರರಿ ಯೂನಿಯನ್ ಮೆಂಬರುಗಳು ಒಂದು ಸಭೆಯನ್ನು ನಡಿಸಿ ಮ|| ಎಂ ವೆಂಕಟಕೃಷ್ಣಯ್ಯನವರಿಗೆ ಸನ್ಮಾನಮಾಡಿದರು ಮಿ|| ಎಫ್ ಡಬ್ಲಿಯು ಫ್ರಿಟ್ ಲೆಂಡರ್ಸನ್ ರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು ಆ ಸಭೆಯಲ್ಲಿ ಹಿಂದುಸ್ಥಾನದ ಪ್ರಜೆಗಳಿಗೆ ದಕ್ಷಿಣ ಆಫ್ರಿಕೆಯಲ್ಲಿ ಪ್ರಾಪ್ತವಾಗಿರುವ ಕಷ್ಟಸಂಕಟಗಳ ನಿವಾರಣೆಗೋಸ್ಕರ ರಾಜಧಾನಿಯಲ್ಲಿ ಒಂದು ಫಂಡನ್ನು ಕೂಡಿಸಬೇಕೆಂದು ತೀರ್ಮಾನಮಾಡಿರುತ್ತಾರೆ.

ವೈಸ್‌ರಾಯ್‌ರವರು ಕನ್ನಂಬಾಡಿ ತಲಾಬಿನ ಕಾಮಗಾರಿಯನ್ನು ಮೊನ್ನೆ ಮಂಗಳವಾರ ಸಾಯಂಕಾಲ ಪರಾಂಬರಿಸಿ ದಯಮಾಡಿದ ಸಂದರ್ಭದಲ್ಲಿ ಅಲ್ಲಿನ ಸ್ಪೆಷಲ್ ಡ್ಯೂಟಿಗಾಗಿ ಕರಸಿ ನೇಮಿಸಲ್ಪಟ್ಟಿದ್ದ 300 ಮಂದಿ ಪೋಲೀಸಿನವರ ಪೈಕಿ ತನಸ್ಥಳದ ಸುಮಾರು 250 ಜನರಿಗೆ ಅಲ್ಲಿನ ಪೋಲೀಸ್ ಸೂಪರಿನ್‌ಟೆಂಡೆಂಟರವರಾದ ಮ|| ಎ ಕೃಷ್ಣಸ್ವಾಮಿಅಯ್ಯಂಗಾರ್ರವರು ಎರಡು ದಿನವೂ ಬಹಳ ಸಾಹಸಪಟ್ಟು ಸುಭೋಜನವನ್ನು ಮಾಡಿಸಿ ಅವರ ಯೋಗಕ್ಷೇಮವನ್ನು ತುಂಬಾ ಪ್ರೀತಿಯಿಂದ ನೋಡಿಕೊಂಡು ಕಳುಹಿಸಿಕೊಟ್ಟರೆಂದು ಕೇಳಿ ಸಂತೋಷಪಡುತ್ತೇವೆ.

ಒಬ್ಬ ಬಾತ್ಮಿದಾರನಿಂದ.—ಮೂಡಿಗೆರೆ ತಾಲ್ಲೂಕು ಕಳಸದ ಗ್ರಾಮದಲ್ಲಿ ಫ್ರೆಂಡ್ಸ್ ಯೂನಿಯನ್ ಎಂಬ ಹೆಸರಿನಿಂದ ಒಂದು ರೀಡಿಂಗ್ ರೂಮ್ ಕಳೆದ ತಾ. 1 ನೇ ಶನಿವಾರ ಸ್ಥಾಪಿಸಲ್ಪಟ್ಟಿತು. ಮೆಂಬರುಗಳಾದ ಶ್ರಾ|| ಕೆ ಮಂಜಯ್ಯನವರು, ಗರ್ಲ್ಸ್ ಸ್ಕೂಲ್ ಮಾಸ್ಟರ್ ಜಿ. ಸೂರ್ಯನಾರಾಯಣಪ್ಪನವರು, ಪಟೇಲ್ ಲಿಂಗಪ್ಪನವರು, ಬಿ ಶಿವರಾಮಭಟ್ಟರು, ವಿ ಶಿವರಾಮಭಟ್ಟರು ಮೊದಲಾದವರೆಲ್ಲಾ ಸೇರಿದ್ದರು. ರೀಡಿಂಗ್ ರೂಮುಗಳ ಪ್ರಯೋಜನವನ್ನು ಕುರಿತು ಗರ್ಲ್ಸ್ ಸ್ಕೂಲ್ ಮಾಸ್ಟರವರು ಉಪನ್ಯಾಸ ಮಾಡಿದರು ಸದ್ಯ ಇದಕ್ಕೆ ಈಗ ಐದು ಪತ್ರಿಕೆಗಳು ಮಾತ್ರ ಬರುತ್ತಿವೆ.

ಕಳೆದ ಭಾನುವಾರ ಸಾಯಂಕಾಲ ರಾಜಧಾನಿಯ ಟೌನ್ ಹಾಲ್ ಬಂಗಲೆಯಲ್ಲಿ ಮೈಸೂರು ಮಹಾಜನರು ಸಭೆ ಸೇರಿ, ನಮ್ಮ ಮಹಾರಾಜರವರಿಗೂ ಬ್ರಿಟಿಷ್ ಸರ್ಕಾರಕ್ಕೂ ಟ್ರೀಟಿ (ಕರಾರು) ಸಂಬಂಧದ ಗೌರವವುಂಟಾದ ಭಾಗದಲ್ಲೂ ಬೆಂಗಳೂರು ದಂಡಿನ ಉತ್ಪತ್ತಿಯು ಇಲ್ಲಿ ನಮ್ಮ ಗವರ್ನ್‌ಮೆಂಟಿಗೆ ಶಾಮೀಲಾಗುವುದೆಂಬ ಭಾಗದಲ್ಲೂ ಸಂತೋಷವನ್ನು ಉಪನ್ಯಾಸಗಳ ಮೂಲಕ ಪ್ರಕಾಶಪಡಿಸಿ, ಮಹಾರಾಜರವರಿಗೂ ವೈಸ್‌ರಾಯ್ ಪ್ರಭುಗಳಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ತಂತಿಯ ಮೂಲಕ ಅರಿಕೆಮಾಡಿದರು. ಈ ಸಭೆಯಲ್ಲಿ ರಾಯ ಬಹದೂರ್ ಮ|| ಎ ನರಸಿಂಹಯ್ಯಂಗಾರ್ರವರು ಅಗ್ರಾಸನವನ್ನು ವಹಿಸಿ ಅವರೂ ಇನ್ನು ಕೆಲವು ಸ್ಥಳೀಯ ದೊಡ್ಡ ಮನುಷ್ಯರೂ ಉಪನ್ಯಾಸಗಳನ್ನು ಮಾಡಿದರು. ಇದೇ ರೀತಿ ಬೆಂಗಳೂರು ಪಟ್ಟಣದ ಮಹಾಜನರೂ ಸಭೆಯನ್ನು ನಡಿಸಿ ತಂತೀವರ್ತಮಾನಗಳನ್ನು ಕಳುಹಿಸಿಕೊಟ್ಟರು.

ಮೈಸೂರು ಮಹಾರಾಣಿಯವರ ಕಾಲೇಜು.

ಕಳೆದ 18 ನೇ ತಾ. ಮಂಗಳವಾರ ಬೆಳಿಗ್ಗೆ ವೈಸ್‌ರಾಯರವರ ಪತ್ನೀರಾದ ಶ್ರೀಮನ್ನ್ಮಹಿಷ ಲೇಡಿ ಹಾರ್ಡಿಂಗ್‌ರವರು ನಮ್ಮ ಯುವರಾಜರವರ ಕೂಡ ಮಹಾರಾಣಿಯವರ ಕಾಲೇಜಿಗೆ ದಯಮಾಡಿ ಬಹುಮಾನ ಸಭೆಯ ಅಗ್ರಾಸನವನ್ನು ಅಲಂಕರಿಸಿದರು. ದಿವಾನ್‌ರು, ಕೌನ್ಸಿಲರುಗಳು, ಇಲಾಖೆ ಅಧಿಕಾರಿಗಳು, ಕೆಲವು ಮುಖ್ಯರಾದ ಯೂರೋಪಿಯನ್ ಮತ್ತು ದೇಶೀಯ ದೊಡ್ಡ ಮನುಷ್ಯರು ಸಭೆಯಲ್ಲಿ ಹಾಜರಾಗಿದ್ದರು ಸಭೆಯು ಆರಂಭವಾದ ಕೂಡಲೆ ಅಲಮೇಲಮ್ಮನೆಂಬ ವಿದ್ಯಾರ್ಥಿನಿಯು ಸಂಸ್ಕೃತದಲ್ಲಿ ಸರಸ್ವತಿಯ ಸ್ತೋತ್ರವಚನಗಳನ್ನು ಹೇಳಿದ ಮೇಲೆ ಕಮಲಮ್ಮನು ಪಿಟೀಲಿನ ಮೇಲೆ ವಿಷ್ಣುವಿನ ಕೀರ್ತನೆಯನ್ನು ಹಾಡಿದಳು ಬಳಿಕ ಎಂ ಕೆ ಜೀವಮ್ಮನು ಸೂರ್ಯೋದಯವನ್ನು ವರ್ಣನೆಮಾಡಿ ಮೂರು ಪದ್ಯಗಳನ್ನು ಹೇಳಿದಳು ತರುವಾಯ ಎಚ್ ನಂಜಮ್ಮ, ತಂಗಚ್ಚಮ್ಮ, ವೆಂಕಟಲಕ್ಷ್ಮಮ್ಮ ಇವರು ಷೇಕ್ಸ್‌ಪಿಯರ್ ಕವಿರಚಿತವಾದ ನಾಟಕದಿಂದ ಒಂದು ಭಾಗವನ್ನು ಅಭಿನಯಿಸಿದರು. ರಂಗನಾಯಕಮ್ಮನು ಪ್ರಾಣವಾಯು (ಆಕ್ಸಿಜನ್) ವನ್ನು ಪ್ರತ್ಯೇಕಮಾಡಿ ತೋರಿಸಿ ಸಿದ್ಧಾಂತಮಾಡಿದಳು ಪುಟ್ಟತಾಯಮ್ಮ, ವೆಂಕಟಲಕ್ಷ್ಮಮ್ಮ ಇವರು ರಾಮ ಕೀರ್ತನೆಯನ್ನು ಹಾಡಿದರು.

ಲೇಡಿ ಸೂಪರಿನ್‌ಟೆಂಡೆಂಟರಾದ ಶ್ರೀ ಕೆ ಡಿ. ರುಕ್ಮಿಣಿಯಮ್ಮ, ಬಿ ಎ. ಯವರು ಮಹಾರಾಣಿ ಕಾಲೇಜಿನ ರಿಪೋರ್ಟನ್ನು ಸಂಕ್ಷೇಪವಾಗಿ ಓದಿ ಅರಿಕೆ ಮಾಡಿದರು ಅದರ ಮುಖ್ಯಾಂಶಗಳೇನೆಂದರೆ—

ಕಳೆದ 1981 ನೇ ಇಸವಿಯಲ್ಲಿ ದ್ವಿಜರ ಹೆಣ್ಣುಮಕ್ಕಳಿಗೆ ವಿದ್ಯೆಕಲಿಸುವುದಕ್ಕೋಸ್ಕರ ಕೆಲವು ದೊಡ್ಡ ಮನುಷ್ಯರು ಈ ಸ್ಕೂಲನ್ನು ಪ್ರಾರಂಭಮಾಡಿದರು. ಆದಕಾರಣ ಸ್ತ್ರೀ ವಿದ್ಯಾಭ್ಯಾಸಕ್ಕೆ ಈ ಪಾಠಶಾಲೆಯೇ ದಕ್ಷಿಣ ದೇಶದಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುತ್ತದೆ ಹತ್ತು ವರ್ಷಗಳಾದ ಬಳಿಕ ಸರ್ಕಾರದವರು ಇದನ್ನು ವಹಿಸಿಕೊಂಡರು. 1902 ನೇ ಇಸವಿಯಲ್ಲಿ ಈ ಸ್ಕೂಲು ಎರಡನೇ ಗ್ರೇಡ್ ಕಾಲೇಜಾಗಿ ಸೇರಿಸಲ್ಪಟ್ಟಿತು ಈ 32 ವರುಷಗಳಲ್ಲಿ ಈ ಸ್ಕೂಲಿನಿಂದ ಸುಮಾರು 6,000 ಬಾಲಕಿಯರು ತೇರ್ಗಡೆಹೊಂದಿರುತ್ತಾರೆ. 4 ಮಂದಿ ಬಿ. ಎ. ಪರೀಕ್ಷೆಯಲ್ಲೂ, 9 ಜನ ಎಫ್. ಎ. ಪರೀಕ್ಷೆಯಲ್ಲೂ, 17 ಜನ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲೂ, 136 ಮಂದಿ ಇಂಗ್ಲಿಷ್ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲೂ, 195 ಮಂದಿ ಕನ್ನಡ ಲೋ. ಸೆ. ಪರೀಕ್ಷೆಯಲ್ಲೂ ಇಬ್ಬರು ಸಂಸ್ಕೃತ ಪಂಡಿತಾ ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿರುವರು ಈ ಕಾಲೇಜಿನಲ್ಲಿ ವಿದ್ಯಾಭ್ಯಾಸಮಾಡಿದ 58 ಮಂದಿ ಈ ಸಂಸ್ಥಾನದ ಸ್ಕೂಲುಗಳಲ್ಲಿ ಉಪಾಧ್ಯಾಯಿನಿಯರಾಗಿಯೂ, 4 ಮಂದಿ ಆಸ್ಪತ್ರೆಗಳಲ್ಲಿ ನರ್ಸ್‌ಗಳಾಗಿಯೂ ಸೂಲಗಿತ್ತಿಯರಾಗಿಯೂ ಕೆಲಸ ಮಾಡುತ್ತಿದ್ದಾರೆ.—ದ್ವಿಜರಲ್ಲಿ ವಿಧವೆಯರಿಗೆ ವಿದ್ಯೆಯನ್ನು ಕಲಿಸುವ ಭಾಗದಲ್ಲಿ ಈ ಕಾಲೇಜು ದಕ್ಷಿಣ ದೇಶದಲ್ಲಿ ಮೊದಲನೆ ಸ್ಥಾನವನ್ನು ಪಡೆದಿರುತ್ತದೆ, ಇದುವರೆಗೆ ಸುಮಾರು 500 ಮಂದಿ ವಿಧವೆಯರು ಇಲ್ಲಿ ವಿದ್ಯಾಭ್ಯಾಸಂಗಮಾಡಿರುವರು.—ಹೆಣ್ಣುಮಕ್ಕಳಿಗೆ ಈ ವಿದ್ಯಾಶಾಲೆಯಲ್ಲಿ ವಿದ್ಯೆಯ ಜೊತೆಗೆ ಸಂಗೀತವನ್ನೂ, ಚಿತ್ರಬರೆಯುವುದನ್ನೂ, ಹೊಲಿಗೆಯನ್ನೂ ಕಲಿಸುತ್ತಾರೆ ವಿದ್ಯೆಯನ್ನು ಈ ಪಾಠಶಾಲೆಯಲ್ಲಿ ಪಾಶ್ಚಾತ್ಯ ಕ್ರಮಗಳ ಪ್ರಕಾರ ಕಲಿಸುವುದಲ್ಲದೆ ಹಿಂದೂ ಮತಾಚಾರ ಪದ್ಧತಿಗಳು ಸನ್ಮಾನಿಸಲ್ಪಡುವವು ಹೆಣ್ಣುಮಕ್ಕಳ ಬುದ್ಧಿಯನ್ನು ವಿಕಸನಮಾಡಿ, ಕಾಲಕ್ರಮದಲ್ಲಿ ನಮ್ಮ ಪದ್ಧತಿ ಆಚಾರಗಳು ಬದಲಾವಣೆ ಹೊಂದುವುದಕ್ಕೆ ಸಹಕಾರಿಯಾಗುವಂಥಾ ರೀತಿಯಲ್ಲಿ ಸಾಹಸಪಡುತ್ತಿದ್ದೇವೆ. ಗವರ್ನ್‌ಮೆಂಟಿನವರು ಈ ಪಾಠಶಾಲೆಯನ್ನು ಫಸ್ಟ್ ಗ್ರೇಡ್ ಕಾಲೇಜಾಗಿ ಮಾಡುವವರಾಗಿದ್ದಾರೆಂದೂ, ಪುಸ್ತಕ ವಿದ್ಯೆಯಲ್ಲಿ ಅಭಿರುಚಿ ಇಲ್ಲದಿರುವಂಥಾ ಬಾಲಕಿಯರಿಗೆ ಯಾವುದಾದರೊಂದು ಸಣ್ಣ ಕಸಬನ್ನು ಕಲಿಸ ಬೇಕೆಂದಿದ್ದಾರೆಂದೂ ತಿಳಿದು ಬಂದಿದೆ — ಹಿಂದುಸ್ಥಾನದಲ್ಲಿ ಸ್ತ್ರೀ ವಿದ್ಯಾಭ್ಯಾಸಕ್ಕೆ ನಾನಾ ಅಡಚಣೆಗಳಿರುವವೆಂದು ತಮಗೆ ತಿಳಿದೇ ಇದೆ ಆ ಪೈಕಿ ಅನೇಕ ಅಡಚಣೆಗಳನ್ನು ಮೈಸೂರಿನವರು ಜಯಿಸುತ್ತಾ ಬಂದಿದ್ದಾರೆಂದು ತಿಳಿಸಲು ಸಂತೋಷವಾಗುವುದು ಈಗ ಪ್ರಜೆಗಳಲ್ಲಿ ಎಲ್ಲಾ ಪಂಗಡಗಳವರೂ ಸ್ತ್ರೀ ವಿದ್ಯಾಭ್ಯಾಸವನ್ನು ಪ್ರೀತಿಯಿಂದ ಕಂಡು ಪ್ರೋತ್ಸಾಹಪಡಿಸುತ್ತಾ ಬಂದಿರೋಣದರಿಂದ ಇಲ್ಲಿಂದ ಮುಂದಕ್ಕೆ ನಮ್ಮ ಅಭಿವೃದ್ಧಿಯು ಅತಿ ಜಾಗ್ರತೆಯಿಂದ ಕೈಗೂಡುವುದೆಂದು ನಂಬಿದ್ದೇವೆ ಈ ಕಾಲೇಜಿನ ವಿಶೇಷತೆ ಏನೆಂದರೆ, ಬ್ರಾಹ್ಮಣರಲ್ಲಿ ವೈದಿಕರಾದ ಪಂಡಿತರುಗಳ ಮನೆ ಹೆಣ್ಣುಮಕ್ಕಳೇ ಹೆಚ್ಚಾಗಿ ಬಂದು ವಿದ್ಯೆಕಲಿಯುತ್ತಿದ್ದಾರೆ ಇಷ್ಟುಮಟ್ಟಿಗೆ ಈ ಕಾಲೇಜು ಅಭಿವೃದ್ಧಿಹೊಂದಿರುವುದೆಲ್ಲಾ ನಮ್ಮ ಮಹಾರಾಜರವರ ಮತ್ತು ಮಹಾರಾಣಿಯವರ ಕೃಪಾಪೋಷಣೆಯಿಂದಲೇ ಎನ್ನುವುದಕ್ಕೆ ಸಂದೇಹವಿಲ್ಲ.

ಈ ಸಭೆಯಲ್ಲಿ ಮೈಸೂರು ವಿಧವಾ ನಿಲಯದ ಬೋರ್ಡರುಗಳೂ, ವಿದ್ಯಾರ್ಥಿನಿಯರೂ ಹಾಜರಾಗಿದ್ದಾರೆ. ಉತ್ತಮ ಜಾತಿಯ ಹಿಂದೂ ವಿಧವೆಯರ ಸ್ಥಿತಿಗತಿಯನ್ನು ಕೂಡಿದ ಮಟ್ಟಿಗೂ ಅನುಕೂಲವಾಗಿ ಮಾಡಬೇಕೆಂಬ ಪರಹಿತಚಿಂತನೆಯಿಂದ ಕೆಲವು ದೊಡ್ಡ ಮನುಷ್ಯರು ಈ ವಿಧವಾ ನಿಲಯವನ್ನು ಸ್ಥಾಪನೆಮಾಡಿರುತ್ತಾರೆ. ಅದರ ಖರ್ಚಿಗೆ ಶ್ರೀಮನ್ಮಹಾರಾಜರವರೂ, ಶ್ರೀಮದ್ಯುವರಾಜರವರೂ, ಮೈಸೂರು ಗವರ್ನ್‌ಮೆಂಟಿನವರೂ, ಅದರ ಮೂಲಸ್ಥಾಪಕರಾದ ರಾಯ ಬಹದೂರ್ ಎ ನರಸಿಂಹಯ್ಯಂಗಾರ್ರವರೂ ದ್ರವ್ಯಸಹಾಯಮಾಡುತ್ತಿದ್ದಾರಲ್ಲದೆ ದೇವರಾಜ ಬಹದೂರರವರ ಧರ್ಮಫಂಡಿನ ಉತ್ಪತ್ತಿಯನ್ನೂ ಅದಕ್ಕೆ ವಿನಿಯೋಗಿಸುತ್ತಾ ಬಂದಿದ್ದಾರೆ ಈ ಕಾಲೇಜಿನಲ್ಲಿ ವ್ಯಾಸಂಗಮಾಡುವ ಕೆಲವು ಹುಡುಗಿಯರೂ ಈ ವಿಧವಾ ನಿಲಯದಲ್ಲಿ ವಾಸ ಭೋಜನಗಳನ್ನು ಮಾಡಿಕೊಂಡಿದ್ದಾರೆ.

ಇದುವರೆಗೆ ಲಾರ್ಡ್ ಮತ್ತು ಲೇಡಿ ಡಫ್ರಿನ್, ಲಾರ್ಡ್ ಮತ್ತು ಲೇಡಿ ಲ್ಯಾನ್ಸ್‌ಡೌನ್, ಲೇಡಿ ಎಲ್ಗಿನ್, ಲಾರ್ಡ್ ಮತ್ತು ಲೇಡಿ ಮಿಂಟೋ ಪ್ರಭುಗಳು ಈ ಕಾಲೇಜಿಗೆ ಭೇಟಿ ದಯಪಾಲಿಸಿ ಗೌರವಪಡಿಸಿರುತ್ತಾರೆ ಆ ಘನತೆಯನ್ನು ಪಡೆದವರ ಪಟ್ಟಿಗೆ ತಮ್ಮ ಹೆಸರನ್ನೂ ಸೇರಿಸುವಂತೆ ಆದದ್ದಕ್ಕಾಗಿ ತುಂಬಾ ಕೃತಜ್ಞರಾಗಿರುವೆವು —ಈಗ ತಾವು ಕೃಪೆಯಿಟ್ಟು ಬಾಲಕಿಯರಿಗೆ ಸ್ವಹಸ್ತ ಬಹುಮಾನಗಳನ್ನು ದಯಪಾಲಿಸಬೇಕೆಂದು ಬೇಡುತ್ತೇನೆ ಅವರೆಲ್ಲಾ ತಮ್ಮ ಹಸ್ತಗಳಿಂದ ಬಹುಮಾನಗಳನ್ನು ಪಡೆದ ಸನ್ಮಾನವನ್ನು ಎಂದೆಂದಿಗೂ ಬಹು ಗೌರವದಿಂದ ಜ್ಞಾಪಿಸಿಕೊಳ್ಳುತ್ತಾರೆಂದು ಹೇಳಬಲ್ಲೆನು. ಮತ್ತು ತಾವು ಕೃಪೆಯಿಟ್ಟು ಈ ದಿನ ಇಲ್ಲಿಗೆ ದಯಮಾಡಿ ಬಹುಮಾನಗಳನ್ನು ಹಂಚಿಕೊಡುವ ಕಾರ್ಯಭಾರವನ್ನು ವಹಿಸಿದ್ದಕ್ಕಾಗಿ ನಾನು ತಮ್ಮನ್ನು ಮನಃಪೂರ್ವಕವಾಗಿ ವಂದಿಸುತ್ತೇನೆ

ಈ ರೀತಿಯಾಗಿ ರಿಪೋರ್ಟು ಓದಿದ್ದನ್ನು ಘನಪನ್ನೆಯಿದ ಲೇಡಿ ಹಾರ್ಡಿಂಗ್ ರವರು ಲಾಲಿಸಿ ತುಂಬಾ ಸಂತೋಷಪಟ್ಟು, ಎದ್ದುನಿಂತು ಸಂಕ್ಷೇಪವಾದ ಪ್ರತ್ಯುತ್ತರವನ್ನು ಹೇಳಿದರು ಮಹಾರಾಣಿಯವರ ಕಾಲೇಜು ಇಷ್ಟುಮಟ್ಟಿಗೆ ಅಭಿವೃದ್ಧಿಯಾಗಿರುವುದನ್ನು ಕೇಳಿ ತಮಗೆ ತುಂಬಾ ಸಂತೋಷವಾಯಿತೆಂದೂ, ಉಪಾಧ್ಯಾಯರುಗಳೆಲ್ಲಾ ತುಂಬಾ ಶ್ರಮಪಟ್ಟು ಬೋಧನಾ ಕಾರ್ಯಗಳನ್ನು ನಡಿಸುತ್ತಿರುವುದು ಸಾರ್ಥಕವಾಗುತ್ತಿದೆ ಎಂದೂ, ಇನ್ನು ಮುಂದೆಯೂ ಈ ಕಾಲೇಜು ಅಭಿವೃದ್ಧಿ ಹೊಂದುತ್ತಾ ಬರಬೇಕೆಂದೂ ಆಶೆಯುವರು ಪ್ರಾರ್ಥಿಸಿದರು ಆ ಮೇಲೆ ಬಾಲಕಿಯರಿಗೆ ಮೊದಲೇ ನಿಷ್ಕರ್ಷೆಯಾಗಿದ್ದ ಬಹುಮಾನಗಳನ್ನು ದಯಪಾಲಿಸಿದರು.

ಬಾಲಕಿಯರು ಮಂಗಳವನ್ನು ಹಾಡಿ, ಲೇಡಿ ಹಾರ್ಡಿಂಗ್‌ರವರ ಶ್ರೇಯಸ್ಸನ್ನು ಕೋರಿದರು. ಅಲ್ಲಿಗೆ ಈ ಸಂತೋಷಕೂಟವು ಮುಕ್ತಾಯವಾಯಿತು.

ಇಂಡಿಯಾ ದೇಶದ ವೃತ್ತಾಂತಗಳು.

ಮಾಲ್ಟಾ ಎಂಬ ಜಹಜು ಹಿಂದುಸ್ಥಾನಕ್ಕೆ 22½ ಲಕ್ಷ ರೂಪಾಯಿ ಚಿನ್ನವನ್ನು ತರುತ್ತಲಿದೆ

ಹಿಂದುಸ್ಥಾನದ ಸರ್ಕಾರದವರು ನಮ್ಮ ದೇಶದಲ್ಲಿ ವಿಶೇಷವಾಗಿರುವ ಬಹುಮೂತ್ರ ರೋಗಕ್ಕೆ ಸರಿಯಾದ ಕಾರಣಗಳನ್ನು ಕಂಡುಹಿಡಿಯಬೇಕೆಂದು ಕೆಲವು ವೈದ್ಯರನ್ನು ಗೊತ್ತುಮಾಡುವವರಲ್ಲಿದ್ದಾರೆ ಆ ವೈದ್ಯರು ಪಂಜಾಬಿನಲ್ಲಿ ಮೊದಲು ವಿಚಾರಣೆ ಕೆಲಸವನ್ನು ಪ್ರಾರಂಭಮಾಡುತ್ತಾರೆಂದು ತಿಳಿದು ಬಂದಿದೆ ಇದೇ ರೀತಿಯಾಗಿ ಕುಷ್ಟರೋಗಕ್ಕೂ ಕಾರಣಗಳನ್ನು ಕಂಡುಹಿಡಿಯುವದಕ್ಕೆ ಕೆಲವು ವೈದ್ಯರನ್ನು ನೇಮಿಸಿದ್ದಾರೆ. ಅವರು ಬೀಹಾರಿನಲ್ಲಿ ಕೆಲಸಕ್ಕೆ ಮೊದಲು ಮಾಡಿರುತ್ತಾರೆ.

ಲಾಹೋರ್ ಬ್ಯಾಂಕ್ ಕಟ್ಟಡಕ್ಕೆ ಕಳೆದ ಶುಕ್ರವಾರ ಬೆಂಕಿಬಿದ್ದು ಅಲ್ಲಿ ಭಕ್ತೀಮಾಡಿದ್ದ ಕಾಗದ ಮುಂತಾದ ಸಾಮಾನುಗಳೆಲ್ಲಾ ಸುಟ್ಟುಹೋದವು. ಉರಿಯನ್ನು ಆರಿಸುವುದಕ್ಕೆ ಬಹಳ ಶ್ರಮವಾಯಿತು. ಬ್ಯಾಂಕಿನವರಿಗೆ ಇದರಿಂದ 30,000 ರೂಪಾಯಿನ ವರೆಗೆ ನಷ್ಟವಾದರೂ ಆ ಹಣವು ಇನ್ಷೂರೆನ್ಸ್ ಕಂಪನಿಯವರಿಂದ ವಸೂಲ್ಮಾಡಿಕೊಳ್ಳಬೇಕಾಗಿದೆ ಇವರಿಗಾದ ನಷ್ಟವನ್ನು ನೋಡಿ ಅಲ್ಲಿನ ಜನರು ಸ್ವದೇಶಿ ಬ್ಯಾಂಕುಗಳಿಗೆ ಸಂಭವಿಸಿದ ದುರವಸ್ಥೆಕ್ಕೆ ಇದೂ ಒಂದು ಗುರುತೆಂದು ಹೇಳಿಕೊಳ್ಳುತ್ತಾರೆ

ಕಳೆದ ಶುಕ್ರವಾರ ಕೂಚ್ ಬಿಹಾರಿನ ಮಹಾರಾಜರೂ ಮಹಾರಾಣಿಯವರೂ ಸೀಮೆಯಿಂದ ಬಂದು ಬೊಂಬಾಯಿನಲ್ಲಿ ಜಹಜು ಇಳಿದರು ತಕ್ಷಣವೇ ರೈಲು ಹತ್ತಿ ತಮ್ಮ ಊರಿಗೆ ಪ್ರಯಾಣಮಾಡಲು ರೈಲಿನಲ್ಲಿ ಅನನುಕೂಲವಾದದ್ದರಿಂದ ಬೊಂಬಾಯಿನ ಒಂದು ಹೋಟಲಿನಲ್ಲಿ ಇಳಿದುಕೊಂಡರು. ಈ ಮಹಾರಾಜರು ಇಂಗ್ಲೆಂಡಿನಲ್ಲಿ ಗತಿಸಿದ ತಮ್ಮ ತಂದೆಯವರ ಅಸ್ತಿಗಳನ್ನು ತಂದಿರುತ್ತಾರೆ. ಅದೇ ರಾತ್ರಿ ಅವರು ಕಲ್ಕತ್ತೆಯ ಮೂಲಕ ಹೊರಟು ತಮ್ಮ ಸಂಸ್ಥಾನವನ್ನು ಸೇರಿದರು. ಇದೇ ತಿಂಗಳು 17 ನೇ ತಾ. ಬಂಗಾಳಾ ಗವರ್ನರವರು ಈ ಮಹಾರಾಜರಿಗೆ ಪಟ್ಟಾಭಿಷೇಕವನ್ನು ನೆರವೇರಿಸುವವರಾಗಿದ್ದರು.

ತಿನ್ನವೆಲ್ಲಿಯಲ್ಲಿ ಕಳೆದ ತಿಂಗಳು ಆಖೈರು ವಾರದಲ್ಲಿ ವಿಪರೀತವಾಗಿ ಮಳೆ ಸುರಿಯಿತು. ತಾಮ್ರಪರ್ಣಿನದಿಯಲ್ಲಿ ಸಂಪೂರ್ಣ ಪ್ರವಾಹವು ಬಂದಿದೆ. ನೀರು ಹೆಚ್ಚಾದ್ದರಿಂದ ಅನೇಕ ಕೆರೆಗಳು ಹೊಡೆದುಹೋಗಿ ಕಾಲುವೆಗಳಲ್ಲಿ ನೀರು ಹರಿದು ಊರಿನೊಳಗೆಲ್ಲಾ ಪ್ರವೇಶಮಾಡಿರುತ್ತದೆ. ಅನೇಕ ರಸ್ತೆಗಳಲ್ಲಿ ಒಂದೂವರೆ ಅಡಿ ಮಟ್ಟ ನೀರುನಿಂತು, ಅನೇಕ ಗುಡಿಸಲುಗಳೂ ಹೊಸದಾಗಿ ಕಟ್ಟಿದ ಮನೆಗಳೂ ಬಿದ್ದು ಹೋಗಿವೆ. ಬತ್ತದ ಗದ್ದೆಗಳಲ್ಲಿ ನೀರು ಬಹಳವಾಗಿ ನಿಂತು ಪೈರೆಲ್ಲಾ ಹಾಳಾಗುವವೆಂದು ಜನರು ಗಾಬರಿ ಪಡುತ್ತಿದ್ದಾರೆ. ರೈಲ್ ರಸ್ತೆಗಳು ಯಾವವಿಧದಲ್ಲೂ ನಷ್ಟಹೊಂದಿಲ್ಲವಾದ್ದರಿಂದ ಗಾಡಿಗಳು ಹೊತ್ತಿಗೆ ಸರಿಯಾಗಿ ಹೋಗಿಬರುತ್ತಿರುವವು.

ಪಂಜಾಬಿನ ಒಂದು ಹಳ್ಳಿಯಲ್ಲಿ ಇಬ್ರಾಹಿಂ ಎಂಬವನು ಹದಿನಾರು ವರುಷದ ಒಂದು ಹುಡುಗಿಯನ್ನು ಕಳವು ಮಾಡಿ ತನ್ನ ಅಂಗಡಿಯ ಒಂದು ಭಾಗದಲ್ಲಿ ಮೂರು ತಿಂಗಳಿಂದಲೂ ಬಚ್ಚಿಟ್ಟಿದ್ದನು ನಂತರ ಅವಳನ್ನು ರೈಲಿನಲ್ಲಿ ಮತ್ತೊಂದು ಸ್ಥಳಕ್ಕೆ ಕರೆದುಕೊಂಡು ಹೋಗಿ ಜಾಮಾ ಎಂಬವನ ಮೂಲಕ ಅವಳನ್ನು ವಿಕ್ರಯಿಸಲು ಪ್ರಯತ್ನಿಸಿದನು. ಆದರೆ ಅವನ ಪ್ರಯತ್ನವು ಸಾರ್ಥಕವಾಗಲಿಲ್ಲವಾಗಿ ಅಲ್ಲಿಂದ ವಾಪಸು ಹೊರಟು ಪಂಜಾಬಿನ ಮಧ್ಯಮಾರ್ಗದಲ್ಲಿ ಇಳಿದನು. ಅಲ್ಲಿ ಹುಡುಗಿಯು ಗಟ್ಟಿಯಾಗಿ ಅಳುವದನ್ನು ಕೇಳಿ ರೈಲ್ವೆ ಪೋಲೀಸಿನವರು ಬಂದು ತನಿಖೆ ಮಾಡಲಾಗಿ ಎಲ್ಲಾ ಸಂಗತಿಯೂ ಹೊರಪಟ್ಟಿತು. ಜಡ್ಜಿಯವರು ಇಬ್ರಾಹಿಂ ಮತ್ತು ಜಾಮಾ ಇಬ್ಬರಿಗೂ ತಲಾ ಆರು ವರುಷದಂತೆ ಕಠಿಣ ಸಜವನ್ನು ವಿಧಿಸಿದರು.

ಹಿಂದುಸ್ಥಾನದ ರಾಜದ್ರೋಹಕರವಾದ ಕೆಲಸಗಳಿಗೆ ಸಹಾಯಮಾಡಿ ಅಭಿವೃದ್ಧಿಪಡಿಸಬೇಕೆಂದು ಯೂರೋಪಿಗೆ ಸೇರಿದ ಸ್ವಿಟ್ಸರ್‌ಲೆಂಡಿನಲ್ಲಿ ಕೆಲವು ಜನರು ಒಂದು ಸಂಘವನ್ನು ಏರ್ಪಾಡುಮಾಡಬೇಕೆಂದಿರುತ್ತಾರೆ. ಈ ಸಂಘಕ್ಕೆ ಹಿಂದುಸ್ಥಾನದ ಕೆಲವರೂ, ಅಲ್ಲಿನ ಕೆಲವು ಮಂದಿ ಲಾಯರುಗಳೂ ಸೇರುವರು. ಹಿಂದುಸ್ಥಾನದಲ್ಲೂ ಈಜಿಪ್ಟಿನಲ್ಲೂ ಇಂಗ್ಲಿಷರ ರಾಜ್ಯಭಾರವನ್ನು ಅಲ್ಲಗಳೆದು ಜನರನ್ನು ಇಂಗ್ಲಿಷರಮೇಲೆ ತಿರುಗಿಬೀಳುವಂತೆ ಮಾಡಬೇಕೆಂಬುವುದೇ ಈ ಸಂಘದವರ ಮುಖ್ಯ ಉದ್ದೇಶ. ಬ್ರಿಟಿಷ್ ಸರ್ಕಾರದವರಮೇಲೆ ಮಾಡಿರುವ ಎಲ್ಲಾ ಅಪನಿಂದೆಗಳನ್ನೂ ಸ್ವಿಟ್ಸರ್‌ಲೆಂಡಿನ ಜನರು ನಿಶ್ಚಯವೆಂದು ನಂಬಿರುತ್ತಾರೆ. ಈ ಸಂಘವು ಸ್ಥಾಪಿತವಾದ ಕೂಡಲೇ ಅವರು ಬ್ರಿಟಿಷರ ರಾಜ್ಯಭಾರಕ್ರಮವನ್ನು ನಾನಾವಿಧವಾಗಿ ತಿರಸ್ಕರಿಸುವದರಲ್ಲಿ ಸಂದೇಹವಿಲ್ಲ. ಈಗ ಕೆಲವು ಕಾಲದಿಂದಲೂ ರಾಜದ್ರೋಹಕರವಾದ ವರ್ತಮಾನ ಪತ್ರಿಕೆಗಳು ಹಿಂದುಸ್ಥಾನಕ್ಕೆ ಬಂದು ತಲಪುತ್ತಿವೆ. ನಮ್ಮ ದೇಶದ ಕಾರುಬಾರುಗಳನ್ನೆಲ್ಲಾ ಅಲ್ಲಿನ ಜನರಿಗೆ ಸರಿಯಾಗಿ ತಿಳಿಸಬೇಕೆಂದು ಇಂಗ್ಲಿಷಿನವರು ಈಚೆಗೆ ಒಬ್ಬ ಅಧಿಕಾರಿಯನ್ನು ಗೊತ್ತುಮಾಡಿ, ಸ್ವಿಟ್ಸರ್‌ಲೆಂಡಿಗೆ ಕಳುಹಿಸಿಕೊಟ್ಟಿದ್ದಾರೆಂದು ತಿಳಿದುಬಂದಿದೆ.

ವಿದೇಶ ವೃತ್ತಾಂತಗಳು.

ವಿಮಾನ ಯಂತ್ರಗಳನ್ನು ನಡಿಸುವುದರಲ್ಲಿ ಪ್ರಖ್ಯಾತಿಪಡೆದಿದ್ದ ಕ್ಯಾಪ್ಟನ್ ಗಾಡ್ ಎಂಬೊಬ್ಬ ಫ್ರೆಂಚ್ ಕಾರೇಗಾರನು ಕಳೆದ ಬುಧವಾರ ವಿಮಾನದಲ್ಲಿ ಕುಳಿತು ಪ್ಯಾರಿಸ್ ಪಟ್ಟಣದಲ್ಲಿ ಸಂಚರಿಸುತ್ತಿದ್ದಾಗ ಬಿದ್ದು ಆ ಯಂತ್ರದ ಕೆಳಗೆ ಸಿಕ್ಕಿ ಮೃತನಾದನು.

ಬವೇರಿಯಾ ರಾಜ್ಯದ ಪ್ರತಿನಿಧಿಸಭೆಯವರು ತಮ್ಮನ್ನಾಳುತ್ತಿರುವ ರೀಜಂಟರಿಗೆ ರಾಜ್ಯಭಾರದ ಸರ್ವಾಧಿಕಾರವನ್ನೂ ಎಂದರೆ ದೊರೆತನವನ್ನು ವಹಿಸುವದಕ್ಕೆ ಒಪ್ಪಿ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಈಚೆಗೆ ಅದರಂತೆ ಅವರಿಗೆ ರಾಜ್ಯಾಭಿಷೇಕವೂ ಆಯಿತು.

ಗಲಭೆ ನಡೆಯುತ್ತಿರುವ ಮೆಕ್ಸಿಕೋ ರಾಜ್ಯದ ತಂಟೆಗೆ ಯಾರೂ ಪ್ರವೇಶಿಸಕೂಡದೆಂದೂ, ಹಾಗೆ ಪ್ರವೇಶ ಮಾಡುವ ಇತರ ರಾಜ್ಯದವರನ್ನು ತಮ್ಮ ಸ್ನೇಹಿತರ ಹಾಗೆ ಕಾಣುವದಿಲ್ಲವೆಂದೂ ಅಮೇರಿಕದ ಅನ್ಯೋನ್ಯ ರಾಜ್ಯಗಳವರು ಪ್ರಸಿದ್ಧಪತ್ರಿಕೆಯ ಮೂಲಕ ತಿಳಿಯಪಡಿಸಿರುತ್ತಾರೆ.

ಕ್ಯಾನಡಾ ಎಂಬ ಇಂಗ್ಲಿಷ್ ಸ್ವಾಸ್ಥ್ಯದಲ್ಲಿ ಅನೇಕ ಕಡೆ ಕಳೆದ ವಾರ ಅಪರಿಮಿತವಾದ ಬಿರುಗಾಳಿ ಹುಟ್ಟಿ ಕೊಚ್ಚಿಬಿಟ್ಟದ್ದರಿಂದ ಹಲವು ಹಡಗುಗಳೂ ದೋಣಿಗಳೂ ಮಗುಚಿಕೊಂಡು ನೂರಾರು ಜನರು ಅಕಾಲಮರಣಹೊಂದಿದರು. ಅನೇಕ ಮನೆಮಠಗಳೂ ಜಮೀನುಗಳ ಬೆಳೆಗಳೂ ಕೊಚ್ಚಿ ಹಾಳಾದವು

ಕಳೆದ 10 ನೇ ತಾ. ಸೋಮವಾರ ಅಮೇರಿಕಕ್ಕೆ ಸೇರಿದ ಓಹಿಯೋ ಜಿಲ್ಲಾ ಕ್ಲೀವ್‌ಲೆಂಡ್ ಎಂಬ ಸ್ಥಳದಲ್ಲಿ 21 ಅಂಗುಲ ಪ್ರಮಾಣ ಹಿಮಗಡ್ಡೆಗಳ ಮಳೆ ಸುರಿಯಿತು ರೈಲುಗಳ ಸಂಚಾರವೂ ವರ್ತಮಾನಗಳೂ ನಿಂತುಹೋದವು. ಅನೇಕರು ಪ್ರಾಣ ಕಳೆದುಕೊಂಡರು. ಹಲವು ದೋಣಿಗಳೂ ಹಡಗುಗಳೂ ಸಿಕ್ಕಿ ಇಲ್ಲ.

ಮೋಟರ್ ಗಾಡಿಯನ್ನು ಓಡಿಸುವದರಲ್ಲಿ ಪ್ರಸಿದ್ಧಿಹೊಂದಿದ್ದ ಪರ್ಸಿ ಲ್ಯಾಂಬರ್ಟ್ ಎಂಬಾತನು ಲಂಡನ್ ಪಟ್ಟಣದ ಹತ್ತಿರ ಮೋಟರನ್ನು ಅತಿವೇಗದಲ್ಲಿ ಅಂದರೆ ಗಂಟೆಗೆ 111 ಮೈಲಿಯಂತೆ ಓಡಿಸುತ್ತಿದ್ದಾಗ ಚಕ್ರದ ರಬ್ಬರು ಒಡೆದು ಹೋದ್ದರಿಂದ ಆತನಿಗೆ ಅಪಾಯ ಸಂಭವಿಸಿ ಮರಣಹೊಂದಿದನು. ಈತನಷ್ಟು ವೇಗವಾಗಿ ಮೋಟರ್‌ಗಾಡಿಯನ್ನು ಯಾರೂ ಓಡಿಸಿಲ್ಲ.

ದಕ್ಷಿಣ ಆಫ್ರಿಕಾದಲ್ಲಿ ನಮ್ಮ ದೇಶೀಯರನೇಕರು ಕೆಲಸಮಾಡುತ್ತಿರುವರಷ್ಟೆ. ಅಲ್ಲಿನ ಸರ್ಕಾರದವರು 45 ರೂ. ತಲೆತೆರಿಗೆಯನ್ನು ವಿಧಿಸಿದ್ದರಿಂದ 4,000 ಕೂಲಿಜನರ ಪೈಕಿ 2,000 ಜನರು ಕೆಲಸಕ್ಕೆ ಹೋಗದೆ ನಿಂತಿರುತ್ತಾರೆ. ಅವರ ಜೀವನಕ್ಕಾಗಿ ನಟಾಲ್ ಮತ್ತು ಟ್ರಾನ್ಸ್‌ವಾಲ್ ಅಧಿಪತ್ಯಗಳಿಂದ ವಿಶೇಷ ದ್ರವ್ಯವು ಕಳುಹಿಸಲ್ಪಟ್ಟಿರುವದು. ಈ ಅಸಮಾಧಾನವು ಕಬ್ಬಿನ ಗದ್ದೆಗಳಲ್ಲಿ ಕೆಲಸ ಮಾಡುವ 7,000 ಕೂಲಿಗಳಿಗೆ ಹಬ್ಬಿದರೆ ಬಹಳ ತೊಂದರೆಯಾಗುವದು.

ಅಮೇರಿಕಾ ಖಂಡದ ಚಿಕಾಗೋ ಪಟ್ಟಣದಲ್ಲಿ ಸಮಾಜದ ಅಗ್ರಗಣ್ಯರಾದ ಕೆಲವು ಜನ ಹೆಂಗಸರು ತಮ್ಮ ಬಟ್ಟೆಬರೆಗಳಿಗೆ ಮಾತ್ರ ಒಂದು ವರುಷಕ್ಕೆ 2½ ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಾರೆ. ಇನ್ನು ನೂರಾರು ಮಂದಿ 1½ ಲಕ್ಷ ರೂಪಾಯನ್ನು ವ್ಯಯಮಾಡುತ್ತಾರೆ. ಉಡಿಗೆ ತೊಡಿಗೆಗಳಿಗೆ 15,000 ರೂಪಾಯಿ ಖರ್ಚುಮಾಡುವ ಸ್ತ್ರೀಯರು ಬಹಳ ದರಿದ್ರರೆಂದು ಎಣಿಸಲ್ಪಟ್ಟಿದ್ದಾರೆ. ಕೂಲಿ ಕೆಲಸಮಾಡುತ್ತಾ ವರುಷಕ್ಕೆ 600 ರೂಪಾಯಿ ಬಟ್ಟೆಗೆ ಖರ್ಚು ಮಾಡುವ ಹೆಂಗಸರನ್ನು ಲಕ್ಷಿಸುವವರೇ ಇಲ್ಲ.

ಹಿತಬೋಧೆಗಳು

(1) ಒಂದು ಉದ್ಯೋಗವನ್ನು ಸಂಪಾದಿಸುವುದಕ್ಕಿಂತ ಅದನ್ನು ಉಳಿಸಿಕೊಳ್ಳುವುದು ಕಷ್ಟ. ನಿನ್ನ ಕೆಲಸವು ಪ್ರಾರಂಭಿಸುವುದಕ್ಕಿಂತ 5 ನಿಮಿಷಗಳ ಮುಂಚೆಯೇ ನಿನ್ನ ಕಾರ್ಯಸ್ಥಾನವನ್ನು ಸೇರು, ನಿಯಮಿತ ಕಾಲ ತೀರಿದ 5 ನಿಮಿಷಗಳ ತರುವಾಯ ನಿನ್ನ ಸ್ಥಳದಿಂದ ಎದ್ದುಹೊರಡು ನೀನು ಹೆಚ್ಚುಕಾಲ ಕೆಲಸಮಾಡಬೇಕಾಗಿ ಬಂದರೆ ನಿನ್ನ ಧಣಿಯನ್ನು ಮೆಚ್ಚಿಸುವುದಕ್ಕಾಗಿ ತ್ವರಣೆಯಿಂದ ಆ ಕೆಲಸ ಮಾಡು ಗೊಣಗಬೇಡ ಕೆಲಸವು ಇನ್ನೂ ಹೆಚ್ಚಾಗಿದ್ದರೆ ನಿನ್ನ ಮನೆಯಲ್ಲಿ ಕೂಡ ಆ ಕೆಲಸ ಮಾಡಿ ಮುಗಿಸು ಅವನಿಗೆ ಕೆಲಸ ಕಷ್ಟ ಇವನಿಗೂ ಕೆಲಸವಿಲ್ಲ, ನನಗೆ ಮಾತ್ರ ಕೆಲಸ ಹೆಚ್ಚಾಗಿದೆ ಎಂದು ನೊಂದುಕೊಳ್ಳಬೇಡ ನಿನಗೆ ಕೆಲಸ ಹೆಚ್ಚಿದ್ದರೆ ಲಾಭವೂ ತಪ್ಪದೆ ಹೆಚ್ಚುವುದು ನಿನ್ನ ಧಣಿಯೂ ಯಾವಾಗಲೂ ನಿನ್ನ ಕಡೆ ನೋಡುತ್ತಿರುವನೆಂದು ತಿಳಿದುಕೊಂಡು ಕೆಲಸವನ್ನು ಮಾಡುತ್ತಿರು ನಿನ್ನ ಕಷ್ಟಕ್ಕೆ ತಕ್ಕಫಲವನ್ನು ನಿನ್ನ ಯಜಮಾನನು ಕೊಡದೆ ಹೋದರೂ ದೇವರು ತಕ್ಕ ಫಲವನ್ನು ಕೊಡದೆ ಇರನು.

(2) ಒಬ್ಬ ಮಿತ್ರನ ಸುಗುಣಗಳನ್ನು ನಾವು ಚೆನ್ನಾಗಿ ತಿಳಿದಹಾಗೆಲ್ಲ ನಮ್ಮ ಹಲವು ದುರ್ಗುಣಗಳನ್ನು ಬಿಟ್ಟುಬಿಡಬೇಕೆಂದು ತಿಳಿದುಕೊಳ್ಳುವೆವು ಒಂದು ವಾಗ್ದಾನಮಾಡುವುದೂ, ತರುವಾಯ ಅದನ್ನು ಮರೆತುಬಿಡುವುದೂ ನಿನ್ನನ್ನು ಇತರರು ನಂಬದಹಾಗೆ ಮಾಡುತ್ತದೆ. ನೀನು ಮಾಡಲೆಣಿಸಿದ ಕೆಲಸವನ್ನು ಮಾಡುವುದಕ್ಕೆ ತಕ್ಕಕಾಲವು ನಿನ್ನದು ಈ ದಿನವೇ ಎಂದೂ ನಾಳೆ ಮತ್ತೊಬ್ಬರದೆಂದೂ, ತಿಳಿದುಕೋ ಸಂತುಷ್ಟಿಯೆಂಬ ಶಿಖರವನ್ನು ಸೇರಬೇಕೆಂದು ಆಶಿಸುವುದಕ್ಕೆ ಮುಂಚೆ ನೀನು ಕಷ್ಟಗಳನ್ನು ಅನುಭವಿಸಿಯೇ ತೀರಬೇಕು ಒಂದು ವೇಳೆಯಲ್ಲಿ ನಾವು ಕಳೆದುಕೊಂಡ ಪ್ರೇಮವು ಮರಳಿ ಬಂದಾಗ ಅದರ ಮಾಧುರ್ಯ ಮತ್ತಷ್ಟು ಹೆಚ್ಚಾಗಿರುವುದು ಕುಜನರ ಬೋಧೆಗಳು ಮನಸ್ಸಿನಲ್ಲಿ ಪ್ರವೇಶಿಸಿದಾಗ ಅವುಗಳನ್ನು ಹೊರಡಿಸಿ ಬಾಗಿಲು ಮುಚ್ಚದೆ ಇದ್ದರೆ ವ್ಯಸನಗಳು ಉಂಟಾಗಲಾರವು

(3) ಮಿತಿಮೀರಿ ವೆಚ್ಚಮಾಡುವುದರಿಂದ ಧನಿಕರಿಗೆ ನಷ್ಟತೋರುವುದಿಲ್ಲ. ಬಡಬಗ್ಗರಿಗಂತು ಇದರಿಂದ ಅನೇಕ ಕಷ್ಟನಷ್ಟಗಳುಂಟಾಗುವುದರಲ್ಲಿ ಅಡ್ಡಿಯಿಲ್ಲ ಆದಾಯಕ್ಕೆ ಮೀರಿದ ವೆಚ್ಚಮಾಡುವುದರಿಂದ ಸಾಲಗಾರರ ಪಾಲಾಗಿ ಹಗಲೂ ರಾತ್ರಿಯೂ ಚಿಂತೆಯಿಂದ ಕೊರಗಬೇಕಾಗುವುದು ನಮ್ಮ ಸ್ತ್ರೀಯರಿಗೆ ಕುಟುಂಬದ ಸ್ಥಿತಿಗತಿಗಳು ಚೆನ್ನಾಗಿ ತಿಳಿಯವು ಹೆಂಗಸರು ಅಲಂಕಾರ ಪ್ರಿಯರು ಹಣವನ್ನು ಕಂಡ ಒಡನೆಯೇ ಒಡವೆಗಳಾಗಲಿ, ಒಳ್ಳೇ ಸೀರೆಗಳಾಗಲಿ ಹಣವನ್ನು ವೆಚ್ಚಮಾಡಿದಹೊರತು ಅವರಿಗೆ ನಿದ್ದೆಯೇ ಹತ್ತದು ಪತಿಯು ತನ್ನ ಸ್ಥಿತಿಗತಿಗಳನ್ನು ಹೇಳಿಕೊಂಡರೂ ಅವರು ಒಪ್ಪದೆ ಕಣ್ಣಿನಲ್ಲಿ ನೀರುಹಾಕಿ ಹಟ ಹಿಡಿಯುವುದರಿಂದ ಅವರ ಮಾತನ್ನು ಮೀರಲಾರದೆ ಹಣವನ್ನು ನಿರರ್ಥಕವಾಗಿ ವೆಚ್ಚಮಾಡಿಬಿಡುವನು ಹಬ್ಬಹರಿದಿನಗಳೆಂತಲೂ, ಪ್ರಸ್ತಪ್ರಯೋಜನಗಳೆಂತಲೂ, ಬೇರೆಬೇರೆ ನೆವಗಳಿಟ್ಟು ಶಕ್ತಿಮೀರಿ ವೆಚ್ಚಮಾಡಿಸುವುದರಿಂದ ಎಷ್ಟು ಹಣ ಸಂಪಾದಿಸಿದರೂ ದರಿದ್ರನಾಗಿ ಸಾಯಬೇಕಾಗುವುದು ಪುರುಷರು ಎಷ್ಟು ಹಿಡಿತದಿಂದ ವೆಚ್ಚಮಾಡಬೇಕೆಂದರೂ ಹೆಂಗಸರು ವಿವೇಕವಿಲ್ಲದವರಾದರೆ ನುಡಿದ ಹಾಗೆ ನಿಲ್ಲಿಸುವುದು ಕಷ್ಟ ಧಾರಣೆವಾಸಿಗಳು ಏರುತ್ತಿರುವ ಈ ಕಾಲದಲ್ಲಿ ಪ್ರತಿಯೊಬ್ಬನೂ ತನ್ನ ಸಾಮಾನ್ಯ ವೆಚ್ಚಕ್ಕೆ ಸಾಕಾಗುವಷ್ಟನ್ನು ಕೂಡ ಸಂಪಾದಿಸುವುದು ಕಷ್ಟ ಇಂತಹದರಲ್ಲಿ ಸ್ತ್ರೀಯರ ಅವಿವೇಕದಿಂದಲೂ, ನೆರೆಯವರಂತೆ ಬಾಳಬೇಕೆಂಬ ದುರಾಶೆಯಿಂದಲೂ ಸ್ವಲ್ಪಸಂಪಾದನೆಯುಳ್ಳವನ ಬಾಳು ಬಲುಕಷ್ಟವಾಗಿ ತೋರುವುದು ಸಂಸಾರಿಯು ರಾಜ್ಯವಾಳುವ ಮಂತ್ರಿಗಿಂತಲೂ ವೆಚ್ಚದ ವಿಷಯದಲ್ಲಿ ಚತುರನಾಗಿರಬೇಕಾದದ್ದು ಅಗತ್ಯ ಅಂತವನು ದುರಾಚಾರಗಳಲ್ಲಿ ಬಿದ್ದು, ಜೂಜು ಕುಡಿತ, ವ್ಯಭಿಚಾರ ಮುಂತಾದ ಅಭ್ಯಾಸಗಳನ್ನು ಕಲಿತನೆಂದರೆ ಅಂತವನ ಪರಿಣಾಮವು ಎಂದಿಗಾದರು ನೆಟ್ಟಗಾದೀತೆ? ಹಿಂದೂದೇಶದ ಬಡತನಕ್ಕೆ ಅಮಿತವಾದ ವೆಚ್ಚವೂ, ದುರಾಚಾರವೂ ಮುಖ್ಯಕಾರಣಗಳೆನ್ನಲು ಅಡ್ಡಿಯಿಲ್ಲ ಹೆಣ್ಣುಮಕ್ಕಳಿಗೆ ವಿದ್ಯೆಕಲಿಸುವುದು ಮುಖ್ಯವಾದರೂ ಅದರ ಜೊತೆಗೆ ಒಪ್ಪಿ ಮಿತವ್ಯಯ, ಸಂತುಷ್ಟಿ ಸದಾಚಾರ ಮುಂತಾದ ಸದ್ಗುಣಗಳನ್ನು ಕಲಿಸುವುದು ಅಗತ್ಯವೆಂಬುದನ್ನೂ ಮರೆಯಲಾಗದು ಪ್ರತಿ ಒಬ್ಬನೂ ತನ್ನ ಆದಾಯಕ್ಕೆ ಮೀರದಂತೆ ವೆಚ್ಚಮಾಡುವುದನ್ನು ರೂಢಿಯಲ್ಲಿ ತರುವುದೇ ಸಂಪದಭಿವೃದ್ಧಿಯ ಪ್ರಥಮ ಸೋಪಾನವು

ಉಪಯುಕ್ತ ವಿಷಯಗಳು

ಪಾಪಾಸುಕಳ್ಳಿಯ ಪ್ರಯೋಜನ

ಅಮೇರಿಕ ದೇಶಸ್ಥರಾದ ಮಿ॥ ಜೆ ರ್‍ಯಾಸ್‌ಮುಸೆನ್ ಎಂಬುವರು ಪಾಪಾಸುಕಳ್ಳಿಯನ್ನು ನಾಶಮಾಡತಕ್ಕ ವಿಷಯದಲ್ಲಿ ಬರೆಯುವುದೇನೆಂದರೆ—ಪಾಪಾಸುಕಳ್ಳಿಯನ್ನು ಯಂತ್ರಗಳ ಸಹಾಯದಿಂದ ಕತ್ತರಿಸಿ ನಾನಾ ವಿಧವಾಗಿ ಉಪಯೋಗಿಸಬಹುದು ಮೆಕ್ಸಿಕೋದಲ್ಲಿ ಇದನ್ನು ದನಗಳ ಮೇವಿಗೂ, ಮನುಷ್ಯರ ಸೇವನೆಗಾಗಿ ಒಂದು ತರಹ ಸಾರಾಯನ್ನು ತಯಾರಿಸುವುದಕ್ಕೂ, ಕಾಗದವನ್ನು ಮಾಡುವುದಕ್ಕೂ ಉಪಯೋಗಿಸುತ್ತಾರೆ ಪಾಪಾಸುಕಳ್ಳಿಯ ಬುಡದಿಂದ ತುದಿಯ ವರಿವಿಗೂ ಪ್ರತಿ ಭಾಗವೂ ತಿನ್ನತಕ್ಕ ಮತ್ತು ಕುಡಿಯತಕ್ಕ ಪದಾರ್ಥವಾಗಿದೆ ಕೆಲವು ಪ್ರಾಂತ್ಯಗಳಲ್ಲಿ ದನ ಮತ್ತು ಕುದುರೆಗಳು ನೀರನ್ನು ಕುಡಿಯದೆ ಸುಮಾರು ಸೇಕಡ 80 ರಷ್ಟು ಜಲಾಂಶವಿರುವ ಪಾಪಾಸುಕಳ್ಳಿಯನ್ನೇ ತಿಂದು ಬಾಯಾರಿಕೆಯನ್ನು ಅಡಗಿಸಿಕೊಳ್ಳುತ್ತವೆ ಪಾಪಾಸುಕಳ್ಳಿಯನ್ನೇ ತಿಂದು ಜೀವಿಸುವ ಪ್ರಾಣಿಗಳು ಆಶ್ಚರ್ಯವನ್ನುಂಟುಮಾಡುವಷ್ಟು ಕೊಬ್ಬಿ ಬೆಳೆದಿರುವವು ಹುಲ್ಲು ಬೆಳೆಯುವ ನೀರಿಗೆ ಅಭಾವವಾಗಿರುವ ಪ್ರದೇಶಗಳಲ್ಲಿ ಪಾಪಾಸುಕಳ್ಳಿಯು ಅತಿ ಪ್ರಯೋಜನಕಾರಿ ಎಂದು ಹೇಳಬಹುದು ಪಾಪಾಸುಕಳ್ಳಿಯಿಂದ ಕಬ್ಬಿನಿಂದ ತೆಗೆಯುವುದಕ್ಕಿಂತಲೂ ಹೆಚ್ಚಾಗಿ ಸಕ್ಕರೆಯನ್ನು ತೆಗೆಯಬಹುದು ಮತ್ತು ಈ ಸಕ್ಕರೆಯು ಉತ್ತಮ ತರಗತಿಯ ಸಕ್ಕರೆಯಾಗಿಯೂ ಇದೆ

ಹಾಲನ್ನು ಒದಗಿಸುವ ಸಂಘಗಳು

ಸಂಯುಕ್ತ ಪ್ರಾಂತ್ಯಗಳ ಪರಸ್ಪರ ಸಹಾಯ ಸಂಘಗಳ ರೆಜಿಸ್ಟ್ರಾರ್ ಮಿ॥ ಎ ಸಿ ಮುಕರ್ಜಿಯವರು ಬರೆಯುವುದೇನೆಂದರೆ—ಸಂಯುಕ್ತ ಪ್ರಾಂತ್ಯದ ದೊಡ್ಡ ದೊಡ್ಡ ಪಟ್ಟಣಗಳಲ್ಲೆಲ್ಲಾ ಶುದ್ಧವಾದ ಹಾಲು ದೊರೆಯುವುದು ಅತಿ ದುಸ್ತರವಾಗಿದೆ ಸಾಧಾರಣವಾಗಿ ಜನುಕೂಲಸ್ಥರಿಂದ ಕೊಡಬಹುದಾದ ಬೆಲೆಗೂ ಒಳ್ಳೇ ಹಾಲು ಸಿಕ್ಕದಿರುವುದುಮಾತ್ರವಲ್ಲದೆ ಸುಮಾರಾಗಿ ಚೆನ್ನಾಗಿರುವ ಹಾಲು ಬೇಕಾದಷ್ಟು ಸಿಕ್ಕುವುದೂ ಕಷ್ಟ ಸಾಧ್ಯವಾದ ಮಟ್ಟಿಗೂ ಈ ತೊಂದರೆಯನ್ನು ನಿವಾರಣೆಮಾಡುವ ಉದ್ದೇಶದಿಂದ ೧೯೧೧ ನೇ ಇಸವಿಯಲ್ಲಿ ಕಾಶಿಯಲ್ಲಿ "ವಿಶ್ವೇಶ್ವರ ಡೈರಿ ಸೊಸೈಟಿ" ಎಂಬದಾಗಿ ಒಂದು ಸಂಘವು ಸ್ಥಾಪಿಸಲ್ಪಟ್ಟಿತು ಈ ಸಂಘದ ಮೆಂಬರುಗಳಿಗೆ ಬನಾರಿಸ್ ಡಿಸ್ಟ್ರಿಕ್ಟಿನ ಸೆಂಟ್ರಲ್ ಬ್ಯಾಂಕಿನವರು ಹಸು ಮತ್ತು ಎಮ್ಮೆಗಳನ್ನು ಕೊಳ್ಳುವುದಕ್ಕೂ, ಹುಲ್ಲು ಮತ್ತು ಅವಶ್ಯಕವಾದ ಇತರ ಪದಾರ್ಥಗಳನ್ನು ಕೊಳ್ಳುವುದಕ್ಕೂ ಸಾಲಕೊಡುತ್ತಾರೆ ಸಂಘದ ಮೆಂಬರುಗಳು ತಮ್ಮ ಕರೆಯುವ ರಾಸುಗಳನ್ನು ಸಂಘದವರಿಂದ ಅದಕ್ಕಾಗಿಯೇ ಕಟ್ಟಲ್ಪಟ್ಟಿರುವ ಕೊಟ್ಟಿಗೆಗಳಲ್ಲಿ ಕಟ್ಟಬೇಕಲ್ಲದೆ ಅವುಗಳಿಗೆ ಒಬ್ಬ ಜವಾಬ್ದಾರಿಯನ್ನು ವಹಿಸಿರತಕ್ಕ ಮ್ಯಾನೇಜರು ಒಪ್ಪುವಂಥಾ ಮೇವನ್ನೇ ಹಾಕಿ ಅತನೆದುರಿಗೇ ಹಾಲನ್ನು ಕರೆಯಬೇಕು ಕರೆದ ಹಾಲನ್ನು ಪಾತ್ರೆಗಳಲ್ಲಿ ತುಂಬಿ ಬೀಗಹಾಕಿ ಪಟ್ಟಣದಲ್ಲಿ ಬೇರೆ ಬೇರೆ ಬೀದಿಗಳಲ್ಲಿ ಇಡಲ್ಪಟ್ಟಿರುವ ಅಂಗಡಿಗೆ ಸಾಗಿಸಿ ರೂಪಾಯಿಗೆ ಎಂಟು ಸೇರಿನಂತೆ ಬಿಕರಿ ಮಾಡುತ್ತಾರೆ ಆದರೆ ಸಂಘದವರು ರೂಪಾಯಿಗೆ ಹತ್ತು ಸೇರಿನಂತೆ ಕೊಂಡುಕೊಳ್ಳುವರು ಈ ಉಳಿತೆ ಹಣವನ್ನು ಇತರ ಖರ್ಚುಬಾಬುಗಳಿಗೂ, ಮೆಂಬರುಗಳಿಗೆ ಸಲ್ಲಿಸುವ ಬಡ್ಡಿಗೂ, ರಿಜರ್ವ್ ಫಂಡಿಗೂ ವಿನಿಯೋಗಿಸುತ್ತಾರೆ ಈ ವಿಧವಾದ ಏರ್ಪಾಡಿನಲ್ಲಿ ಹಾಲನ್ನು ಚಿಲ್ಲರೆ ಅಂಗಡಿಗಳಿಗೆ ಸಾಗಿಸುವುದಕ್ಕೂ, ಪ್ರಾರಂಭದಲ್ಲಿ ಕೊಟ್ಟಿಗೆಗಳನ್ನು ಕಟ್ಟುವುದಕ್ಕೂ ಹೆಚ್ಚು ಬಂಡವಾಳ ಬೇಕಾಗುವುದು ಈ ದೊಡ್ಡ ತೊಂದರೆಗೆ ಸಾಧ್ಯವಾದ ಮಟ್ಟಿಗೂ ಅವಕಾಶವಾಗದಂತೆ ಮಾಡಬೇಕೆಂಬ ಉದ್ದೇಶದಿಂದ ಅಲಹಾಬಾದಿನಲ್ಲಿ ಮತ್ತೊಂದು ವಿಧವಾದ ಸಂಘವು ಸ್ಥಾಪಿಸಲ್ಪಟ್ಟಿತು ಈ ಸಂಘದವರು ಕೊಟ್ಟಿಗೆಗಳನ್ನು ಸಧ್ಯದಲ್ಲಿ ಕಟ್ಟಿಲ್ಲ ಅಲ್ಲಲ್ಲಿ ಗೊತ್ತಾದ ಸ್ಥಳಗಳಿಗೆ ರಾಸುಗಳನ್ನು ತೆಗೆದುಕೊಂಡು ಹೋಗಿ ಜವಾಬ್ದಾರಿ ವಹಿಸಿರುವ ಅಧಿಕಾರಿಯ ಎದುರಿಗೆ ಹಾಲುಕರೆದು ಕೊಡುತ್ತಾರೆ ಈ ಹಾಲನ್ನು ಸಮೀಪದಲ್ಲಿರುವ ಚಿಲ್ಲರೆ ಅಂಗಡಿಗಳಿಗೆ ಸಾಗಿಸಿ ನಗದಾಗಿ ಬಿಕರಿಮಾಡುವರು ಈ ಸಂಘದವರು ಸ್ವಂತವಾಗಿ ಕೊಟ್ಟಿಗೆಗಳನ್ನು ಕಟ್ಟಿಲ್ಲವಾದ್ದರಿಂದ ರಾಸುಗಳ ಮಾಲೀಕರ ಮನೆಗಳಿಗೆ ಒಬ್ಬ ಅಧಿಕಾರಿಯು ಹೋಗಿ ಕೊಟ್ಟಿಗೆಗಳನ್ನೂ, ಮೇವನ್ನೂ ಆಗಾಗ್ಗೆ ಮೇಲ್ವಿಚಾರಣೆ ತೆಗೆದುಕೊಳ್ಳುತ್ತಾನೆ

ಅನೇಕ ಸ್ಥಳಗಳಲ್ಲಿ ಈ ವಿಧವಾದ ಬೇರೆ ಬೇರೆ ಮಾದರಿಯ ಸಂಘಗಳು ಚೆನ್ನಾಗಿ ಕೆಲಸಮಾಡಬಲ್ಲವೆಂದು ಗೊತ್ತುಮಾಡಿ ಹೇಳಲಾಗುವುದಿಲ್ಲ ಅಲಹಾಬಾದಿನ ಮಾದರಿಯ ಸಂಘವು ಉತ್ತಮವಾದದ್ದೆಂದು ಇದುವರೆಗಿನ ಅನುಭವದಿಂದ ತಿಳಿಯಬರುತ್ತದೆ ಈ ಮಾದರಿ ಸಂಘಗಳು ಸ್ಥಾಪಿತವಾಗಿ ಅವುಗಳ ಪ್ರಯೋಜನವು ಪಶುಪಾಲಕರ ಮಾಹಿತಿಗೆ ಬಂದನಂತರ ಆವಶ್ಯಕವಾದ ಕೊಟ್ಟಿಗೆಗಳನ್ನು ಕಟ್ಟುವುದಕ್ಕೂ, ಸಾಮಾನು ಮತ್ತು ಯಂತ್ರಗಳನ್ನು ಕೊಳ್ಳುವುದಕ್ಕೂ ದುಡ್ಡು ಮುಟ್ಟಿಸುವುದರಿಂದ ಹಾಲು ಮಾರುವವರಿಗೆ ಲಾಭವೂ, ಪ್ರಜೆಗಳಿಗೆ ಉತ್ತಮವಾದ ಹಾಲೂ ಸಿಕ್ಕುವಂತಾಗುವುದರಲ್ಲಿ ಸಂಶಯವಿಲ್ಲವೆಂದು ಹೇಳಬಹುದು

ಈ ವಿಷಯದಲ್ಲಿ ಬೊಂಬಾಯಿ ಸರ್ಕಾರದವರು ಮೊನ್ನೆ ತಾನೇ ಹುಕುಂ ಕೊಟ್ಟಿರುವುದೇನೆಂದರೆ—ನಮ್ಮ ಅಧಿಪತ್ಯದ ದೊಡ್ಡಪಟ್ಟಣಗಳಲ್ಲಿ ಸಮರ್ಪಕವಾದ ಆರೋಗ್ಯಕರವಾದ ಒಳ್ಳೆ ಹಾಲು ಸಿಕ್ಕುವುದು ಪ್ರಯಾಸವಾಗಿದೆ ದಂಡು ಇರತಕ್ಕ ಕಡೆಗಳಲ್ಲಿಮಾತ್ರ ಸೈನ್ಯದ ಇಲಾಖೆಯವರು ಸರಿಯಾದ ಏರ್ಪಾಡು ಮಾಡಿಕೊಂಡಿದ್ದಾರೆ ಸ್ಥಳೀಯ ಅಧಿಕಾರಿಗಳು ಒಳ್ಳೆಹಾಲನ್ನು ಪ್ರಜೆಗಳಿಗೆ ಒದಗಿಸುವಭಾಗದಲ್ಲಿ ಯಾವುದೊಂದು ಕ್ರಮವಾದ ಪ್ರಯತ್ನವನ್ನೂ ಮಾಡಿಲ್ಲ ಮ್ಯುನಿಸಿಪಾಲಿಟಿಯವರು ಆರೋಗ್ಯಸೂತ್ರಗಳಿಗೆ ಅನುಸಾರವಾದ ರೀತಿಯಲ್ಲಿ ಹಸುಗಳ ಕೊಟ್ಟಿಗೆಗಳನ್ನೂ, ಹಾಲುಕರೆದು ಬಿಕರಿಮಾಡುವ ಕಟ್ಟಡಗಳನ್ನೂ ತಯಾರುಮಾಡಿಸಿ ಅಲ್ಪಬಾಡಿಗೆ ದರಗಳನ್ನು ಗೊತ್ತುಮಾಡಿ ಗವಾಡಿಗರಿಗೆ ಕೊಡಬೇಕಲ್ಲದೆ ಹಾಲುಕರೆಯುವ ಪಾತ್ರೆ ಮೊದಲಾದವುಗಳನ್ನೂ ತರಿಸಿಟ್ಟು ಬಾಡಿಗೆಗೆ ಕೊಡಬಹುದು ಹೀಗೆಮಾಡಿದರೆ ಒಳ್ಳೇ ಹಾಲು ಸಿಕ್ಕಿ ಪ್ರಜೆಗಳಲ್ಲಿ ಆರೋಗ್ಯವನ್ನು ಕಾಪಾಡಬಹುದಾಗಿದೆ ಈ ಬಾಬಿಗೆ ಆಯಾ ಮ್ಯುನಿಸಿಪಾಲಿಟಿಯವರು ಎಷ್ಟು ಹಣವನ್ನು ವಿನಿಯೋಗಿಸಿ ಯಾವರೀತಿಯಾದ ಏರ್ಪಾಡುಗಳನ್ನು ಮಾಡಲು ಒಪ್ಪುತ್ತಾರೆಯೋ ಆಲೋಚನೆಮಾಡಿ ತಿಳಿಸಿದಪಕ್ಷದಲ್ಲಿ ಗವರ್ನ್‌ಮೆಂಟಿನವರು ಅವರಿಗೆ ಅನುಕೂಲವಾದಷ್ಟು ದ್ರವ್ಯಸಹಾಯಮಾಡಲು ಸಿದ್ಧರಾಗಿರುತ್ತಾರೆ

ಬಾತ್ಮಿದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ಬಾತ್ಮಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಬಾತ್ಮಿದಾರರು ನಮ್ಮ ತಿಳುವಳಿಕಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು ಇಂಥವುಗಳಿಗೆ ನಾವು ನಿಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲುಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಟಿ ವಿ ಎಸ್, ಹಿರಿಕೊಟ್ಟಿಗೆರೆ, ಅ ಜ ನ ಶರಣ, ಯಥಾರ್ಥವಾದಿ, ಮಾರಗೆರೆ ಸರ್ವರ ಹಿತೈಷಿ, ಹಾಸನ — ಈ ಬಾತ್ಮಿಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ

ಹೊನ್ನಪ್ಪರಾವ್ ಮಂಡಿ, ಮೈಸೂರು — [illegible] ಕೊಟ್ಟರೆ ಪ್ರಕಟಿಸುತ್ತೇವೆ

ದೀವಟಿಗೆ, ಪುಷ್ಪಗಿರಿ ನಿಮ್ಮ ಬಾತ್ಮಿಗಳಲ್ಲಿ ಕಂಡ [illegible] ಅನೇಕ ಸಂದರ್ಭಗಳಲ್ಲಿ ಸವಿಗಳಿಗೂ ಪತ್ರಿಕೆಗಳೊಳಗೂ ಚರ್ಚೆಯಾಗಿ [illegible] ವಾಗಿಯೂ ಅನುಕೂಲವಾಗಿಯೂ [illegible] ಗಳನು ರೂಪಿಸಬೇಕೆಂದು [illegible] ಮಾಡುತ್ತಿರುವಂತೆ ನೆನಪುತ್ತೇವೆ

—ಎಡಿ]

ಕರೆಸ್ಪಾಂಡೆನ್ಸ್

ಸ್ಕೂಲ್ ಜವಾನರ ಸಂಬಳ

ಅಯ್ಯಾ,

ಈ ಸಲ ಪ್ರಜಾಪ್ರತಿನಿಧಿಸಭೆಯಲ್ಲಿ ಪ್ರತಿನಿಧಿಗಳು— ಒಬ್ಬಾತ ಯಥೋಚಿತ್ರಕರವಾಗಿ ಕೆಲಸ ಮಾಡಬೇಕಾದರೆ ಕಡೇ ಪಕ್ಷ 10 ರೂಪಾಯಾದರೂ ಸಂಬಳ ನಿಗದಿಯಾಗಬೇಕೆಂದು ಪ್ರಾರ್ಥಿಸಿ, ಈ ವಿಷಯವನ್ನು ವಿಗಸೇ ಇತ್ಯರ್ಥಮಾಡಿ ಹುಕುಂ ಕೊಡುವೆವು ಎಂಬ ಉತ್ತರವನ್ನು ಪಡೆದಿದ್ದಾರಷ್ಟೆ [illegible] ಸಲ್ಪಟ್ಟ ಅಂಶಗಳನ್ನೆಲ್ಲಾ ಓದಿದಾಗ್ಯೂ ಸ್ಕೂಲ್ ಜವಾನರ ವಿಷಯದಲ್ಲಿ ಒಂದು ಮಾತಾದರೂ ಇಲ್ಲ ಅವರಿಗೆ ಸಂಬಳ ಬಹಳ ಕಡಮೆ ಅವರು ಕೆಲಸಕ್ಕೆ ಸೇರಿದಾಗ ನಿಗದಿ ಮಾಡಿದ 6 7 ರೂಪಾಯಿ ಸಂಬಳವನ್ನೇ ಈ ವರೆಗೂ ಹೊಂದುತ್ತಿದ್ದಾರೆ ಕಾಲ ನೋಡಿದರೆ ದುರ್ಭಿಕ್ಷಕಾಲ ಜೀವನಕ್ಕೆ ಹತ್ತು ರೂಪಾಯಿ ಸಾಲದಿದ್ದರೆ 6 7 ರೂಪಾಯಿ ಹ್ಯಾಗೆ ಸಾಕಾಗಬಹುದು? ದಯಾಳು ಸರ್ಕಾರದವರು ಈ ಜವಾನರ ಕಷ್ಟವನ್ನು ಲಾಲಿಸಿ ಅವರ ಕೋರಿಕೆಯನ್ನು ನೆರವೇರಿಸಿ ಕೀರ್ತಿ ಪಡೆಯುವರೆಂದು ನಂಬಿದೇನೆ

ಬಡವರ ಹಿತಚಿಂತಕ

ತಂದೆತಾಯಿಗಳ ನಿರ್ಬಂಧ

ಅಯ್ಯಾ,

ಮಾಲೂರಿನಲ್ಲಿ ಒಬ್ಬ ವಿದ್ಯಾರ್ಥಿಯನ್ನು ಅವನ ತಂದೆಯು ಒಂದು ಕಡೆಗೂ ಹೋಗಗೊಡಿಸುತ್ತಿರಲಿಲ್ಲ ಆ ಹುಡುಗನು ತನ್ನ ತಂದೆಯಮಾತನ್ನು ಲಕ್ಷ್ಯೀಕರಿಸದೆ ಸರಿಯಾಗಿ ಓದುತ್ತಲೂ, ವ್ಯಾಯಾಮವನ್ನು ತೆಗೆದುಕೊಳ್ಳುತ್ತಲೂ ಬೇಕಾದ ಸ್ಥಳಗಳಲ್ಲಿ ತನ್ನ ವಿದ್ಯಾಭ್ಯಾಸಕ್ಕೆ ಕೊರತೆಯಾಗದಂತೆ ಓಡಾಡಿಕೊಂಡಿದ್ದನು ಒಂದು ದಿನ ಅವನ ಸ್ನೇಹಿತನು ಬೆಂಗಳೂರಿಗೆ ವಿದ್ಯಾಭ್ಯಾಸಕ್ಕೆ ಹೋದುದರಿಂದ ಅವನನ್ನು ಸಾಗಕಳುಹುವದಕ್ಕಾಗಿ ಈ ಹುಡುಗನು ರೈಲ್ವೆ ಸ್ಟೇಷನ್‌ಗೆ ಹೋಗಿ ಬರುವಾಗ್ಗೆ ಕೊಂಚ ಹೊತ್ತಾದುದರಿಂದ ಅವನ ತಂದೆಯು ದಂಡಿಸಿ ಅವನ ವಿದ್ಯಾಭ್ಯಾಸಕ್ಕೆ ಏನೂ ಕೊಡುವುದಿಲ್ಲವೆಂದೂ, ಮನೆ ಕೇಸಗಳನ್ನು ನೋಡಿಕೊಂಡಿರಬೇಕೆಂದೂ ನಿರ್ಬಂಧಪಡಿಸಿದನು ಆ ಹುಡುಗನು ಅಧ್ಯಯನಪಡವೆ ಚೆನ್ನಾಗಿ ಓದಿದ್ದರಿಂದ ಅವನಿಗೆ ಸ್ಕೂಲಿನಲ್ಲಿ ಫ್ರೀಷಿಪ್ ಕೊಟ್ಟರು. ಅವನ ತಂದೆಯನ್ನು ನಿಂದಿಸಬೇಕೆಂಬುವದು ಅಭಿಪ್ರಾಯವಲ್ಲ ನಾಗರಿಕವಿಲ್ಲದಿರುವ ತಂದೆತಾಯಿಗಳ ನಡವಳಿಕೆಯಿಂದ ಮಕ್ಕಳಿಗೆ ಎಷ್ಟು ತೊಂದರೆಯಾಗುತ್ತಿದೆ ಎಂಬುದನ್ನು ತೋರಿಸಬೇಕೆಂದು ಅರಿಕೆ ಮಾಡಿದೇನೆ

ಪ್ರತ್ಯಕ್ಷದರ್ಶಿ

ತಾಲ್ಲೂಕು ವರ್ತಮಾನಗಳು

ಟಿ ನರಸೀಪುರ.—ಟಿ. ನರಸೀಪುರ ತಾಲ್ಲೂಕು ಕೃಷ್ಣಾಪುರದಲ್ಲಿರುವ ಡೈಮಂಡ್ ಜೂಬಿಲಿ ನೇಟಿವ್ ವೈದ್ಯಶಾಲೆಯ ಪಂಡಿತರಾದ ಮ॥ ವೀರವಲ್ಲಿ ತಿರುಮಲಾಚಾರ್ಯರು ಈಚೆಗೆ ಕಾಲರಾ ಮತ್ತು ಪ್ಲೇಗ್ ಕಾಯಿಲೆಗೆ ಔಷಧಿ ಕೊಡುತ್ತಾ ಅನೇಕರಿಗೆ ಗುಣವಾಗುತ್ತಾ ಇರುವದು ಅಜಮಾಯಿಷಿಯಿಂದ ವ್ಯಕ್ತವಾಗಿರುವದಕ್ಕಾಗಿ ಇವರಿಗೆ ಪ್ರೋತ್ಸಾಹಕ್ಕಾಗಿಯೂ ಜನಗಳ ಪರವಾದ ಕೃತಜ್ಞತೆಯ ಸ್ಮರಣೆಯ ಸೋಮನಾಥಪುರಕ್ಕೆ ಮೈಸೂರ್ ರಾಯಿಯವರು ದಯಮಾಡ ನ ಜ್ಞಾಪಕಾರ್ಥವಾಗಿ ಒಂದು ಭಂಗಾರದ ಮೆಡೆಲು ಕೊಡಿಸಬೇಕೆಂದು ಉದ್ದೇಶಿಸಿದ್ದರೂ ಪ್ರಭುಗಳು ಅನಿವಾರ್ಯದಿಂದ ದಯಮಾಡದೆ ಹೋದಾಗ್ಯೂ ಅದೇ ದಿನ ನಮ್ಮ ದಿವಾನ್ ಸಾಹೇಬರು ದಯಮಾಡಿ ಇಲ್ಲಿನ ಚತ್ರ ಮತ್ತು ದೇವಸ್ಥಾನವನ್ನು ಪರಾಂಬರಿಸಿಕೊಂಡು ಹೋದರೆಂಬ ಸಂತೋಷಸೂಚಕವಾಗಿ ಆ ದಿನ ಸದರಿ ಭಂಗಾರದ ಮೆಡಲನ್ನು ಅಮಲ್ದಾರ್ ಮ॥ ವೆಂಕಟರಮಣಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಸದರಿ ಮ॥ ವಿ ತಿರುಮಲಾಚಾರ್ರಿಗೆ ಕೊಡಲಾಯಿತು

ಕಡೂರು—ಒಂದುವರೆ ತಿಂಗಳಿಂದ ಮಳೆ ಸುತರಾಂ ಇಲ್ಲ ರಾಗಿ ಪೈರೆಲ್ಲಾ ಇದಕ್ಕೆ ಮುಂಚೆಯೇ ಒಣಗಿ ಅದಕ್ಕೆ ಬದಲಾಗಿ ಬೇಸಗೆ ಜೋಳವನ್ನು ಹಾಕಿದ್ದರು ಅನೇಕೂಪ 7 8 ದಿವಸದಲ್ಲಿ ಮಳೆ ಬಾರದಿದ್ದರೆ ಕೈ ಸೇರುವದಿಲ್ಲ —ಈ ಊರಿನಲ್ಲಿರುವ ಮಾರ್ವಾಡಿ ಸಾಹುಕಾರ್ ಗುಲ್ಬಾಬಿ ಹೀರಾಜಿಯವರು ದೀಪಾವಳಿ ಹಬ್ಬದ ಸಂಬಂಧವಾಗಿ ಇಲ್ಲಿನ ವರ್ತಕರು, ದೊಡ್ಡ ಮನುಷ್ಯರು, ಸರ್ಕಾರಿ ಅಧಿಕಾರಿಗಳನ್ನು ಬರಮಾಡಿಕೊಂಡು ಸತ್ಕಾರಮಾಡಿದರು —ಸೀಡಿ ಕಂಟ್ರಾಕ್ಟರ್ ಮ॥ [illegible]ಗೌಡರು ಕಟ್ಟಿರುವ ಹೊಸಮನೆ ಗೃಹಪ್ರವೇಶಕ್ಕಾಗಿ ಅವರ ಸಂಬಂಧಿಗಳಲ್ಲದ ಇತರ ಕಡೆಯಿಂದಲೂ ಬಹಳ ಜನರನ್ನು ಕರೆಸಿ, ಹೋಮಮಾರು ವ್ರತವನ್ನು ಬಹಳ ವಿಜೃಂಭಣೆಯಿಂದ ನಡೆಸಿದರು ಅನೇಕ ಬಡವರಿಗೆ ಉದಾರವಾಗಿ ಅನ್ನದಾನಮಾಡಿದರು —ಈ ಊರು ಕೋಆಪರೇಟಿವ್ ಸೊಸೈಟಿಯು ಕಳೆದ ಆಗಸ್ಟ್ ತಿಂಗಳಲ್ಲಿ ಪ್ರಾರಂಭವಾಗಿ ಸುಮಾರು 160 ಜನ ಮೆಂಬರುಗಳು ಸೇರಿ ಐದು ಸಾವಿರ ರೂಪಾಯಿವರೆಗೆ ಜಮಾ ಆಗಿ ಲೇವಾದೇವಿ ನಡೆದಿರುತ್ತೆ ಒಂದುಬಿದ್ದು ಹೋಗಿದ್ದ ಸೊಸೈಟಿಯು ಈಗಿನ ಸೆಕ್ರೆಟರಿ ಮತ್ತು ಕಮಿಟಿ ಮೆಂಬರುಗಳಿಂದ ಅಭಿವೃದ್ಧಿಗೆ ಬರುತ್ತಿರುವದು ಸಂತೋಷವಾಗಿದೆ

ಚಿತ್ರದುರ್ಗದ ತಾ ದೊಡ್ಡಸಿದ್ದವ್ವನಹಳ್ಳಿ—ಸುಮಾರು ತಿಂಗಳ ಕೆಳಗೆ ಒಂದು ಹದವಾಳೆಯಾದ್ದರಿಂದ ರೈತರು ಹವಿಜನುಗಳಿಗೆ ಬೀಜಸೇರಾವ ಮಾಡಿಕೊಂಡರು ಆ ಲಾಗಾಯಿತು ಮಳೆಯಿಲ್ಲದೆ ಎಲ್ಲೆಲ್ಲಾ ಒಣಗುತ್ತಾ ಇವೆ ಈಗಿನ ಕಾಲಸ್ಥಿತಿಯನ್ನು ನೋಡಿ ಇದು ದುರ್ಭಿಕ್ಷದ ಹೇತುಗಳೆಂದು ಜನರು ಕಳವಳಪಡುತ್ತಾ ಇದ್ದಾರೆ ಇಲ್ಲಿನ ಕೆಲವರು ಸೇರಿ ತಿಂಗಳಿಂದಲೂ ಭಜನೆಮಾಡುತ್ತಾ ಇರುವರು — ಈ ಗ್ರಾಮಕ್ಕೆ ತಾಲ್ಲೂಕು ಜಮಾಬಂದಿಗೋಸ್ಕರ ಅಮಲ್ದಾರವರು ತಾ 5 ರಲ್ಲಿ ದಯಮಾಡಿ ಎರಡು ದಿನ ಲೆಕ್ಕಪತ್ರಗಳನ್ನೆಲ್ಲ ಅಜಮಾಯಿಷಿ ಮಾಡಿದ್ದಲ್ಲದೆ ರೈತರ ಅಹವಾಲುಗಳನ್ನು ಬಹಳ ಆದರದಿಂದ ಕೇಳಿ ಅವರ ತೊಂದರೆಗಳನ್ನು ಸಾಧ್ಯವಾದಮಟ್ಟಿಗೂ ಯೋಗಲಾಡಿಸಿ ಪ್ರಜೆಗಳ ಕೂರಿಕೆಗಳನ್ನು ಕಳ್ಳಿಸಿಕೊಟ್ಟಿರು ಇವರು ಈ ತಾಲ್ಲೂಕಿಗೆ ಒ ಪ 1 1 ವರ್ಷಗಳಿಂದ ಪ್ರಜಾನುರಾಗಿಗಳಾಗಿ ಸರ್ಕಾರಿ ಕೆಲಸಕ್ಕೆ ಲೋಪಬಾರದ ರೀತಿ ಚಟುವಟಿಕೆಯಿಂದ ಕೆಲಸಮಾಡುತ್ತಾ ಇದ್ದಾರೆ ಇವರು 6ನೇ ತಾ ಸಾಯು ಕಾಲ ಹಾಯರ್ ಸ್ಕೂಲಿಗೆ ದಯಮಾಡಿ ಹೆಡ್ ಮಾಸ್ಟರು ಮಾಡಿದ್ದ ಏರ್ಪಾಡನ್ನೂ, ಬಾಲಕರು ಮಾಡಿದ ಡ್ರಿಲ್ ಮೊದಲಾದ ಅಂಗಸಾಧನೆಗಳನ್ನೂ ನೋಡಿ ಬಹಳ ಸಂತೋಷಪಟ್ಟು ಅಲ್ಲಿ ಸೇರಿದ್ದ ಮೆಂಬರುಗಳು, ಮುಖಂಡರು, ವಗೈರೆ ಜನರಿಗೆ ವಿದ್ಯಾವಿಷಯದಲ್ಲಿ ತಕ್ಕ ಪ್ರೋತ್ಸಾಹಕೊಟ್ಟು ಅಲ್ಲಿಂದ ಗರ್ಲ್ಸ್‌ಸ್ಕೂಲಿಗೆ ಬಿಜಮಾಡಿ ಬಾಲಿಕೆಯರ ಕರ್ನಾಟಕ ಪದ್ಯದ ಗಾನವನ್ನು ಕೇಳಿ ಆನಂದಪಟ್ಟು ಎಂಡಿಯನ್ನು ಸ್ವಹಸ್ತದಿಂದ ಬಹುಮಾನ ತೆರಳಿದರು

ವಡಿಗೇನಹಳ್ಳಿ—ಇಲ್ಲಿ ಮಳೆ ಇಲ್ಲದೆ ರಾಗಿ ಬೆಳೆ ಸುತರಾಂ ಕೈ ಸೇರುವಂತಿಲ್ಲ [illegible] ದೆ ಭತ್ತದ ಬೆಳೆ ಇರುವಂತೆಯೇ [illegible] ಧಾರಣೆ [illegible] ರಾಗಿ ರೂಪಾಯಿಗೆ 12 12½ ಸೇರೂ, ಅಕ್ಕಿ 6 ಸೇರೂ ಇದ್ದು [illegible] ಜೀವನವನ್ನು ಹೇಗೆ ಮಾಡುವರೆಂದು ತಿಳಿಯದು — ಮ್ಯುನಿಸಿಪಲ [illegible] ವಾಗಿದೆ ಸೂರಾರು ಮಂದಿ ಜನಗಳು ಮಾರಾಟಕ್ಕೆ ಬರುತ್ತವೆ ನಮ್ಮ ಸರ್ಕಾರದವರು ಇಲ್ಲಿ [illegible] ಟೋಲ್‌ಗೇಟನ್ನು ಏರ್ಪಡಿಸಿದರೆ ಉತ್ಪತ್ತಿ ಹೆಚ್ಚಿಸಿ ಕೊಟ್ಟಂತಾಗುವುದು ಇಲ್ಲಿನ [illegible] ರೀಡಿಂಗ್ ರೂಮಿನ ಕಟ್ಟಡವನ್ನು 2,000 ರೂಪಾಯಿನ ಅಂದಾಜಿನಮೇಲೆ ಬದಾವಣೆ ಮಾಡಬೇಕೆಂದು ಅನೇಕ ಧರ್ಮಾತ್ಮರ ಸಹಾಯದಿಂದ ಅಸ್ತಿಭಾರವನ್ನು ಹಾಕಲಿಕ್ಕೆ ಪ್ರಯತ್ನಿಸುತ್ತಿರುವರು ಇಲ್ಲಿ ಪ್ರತಿ ಭಾನುವಾರವೂ ನಡೆದು ಬರುತ್ತಿರುವ ಶ್ರೀಗೋಪಾಲಕೃಷ್ಣ ಕಥಾ ಪ್ರಚಾರ ಸಭೆಗೆ ಚಿಕ್ಕಬಳ್ಳಾಪುರದ ಅಡ್ವೊಕೇಟ್ ಮ॥ ನಾರಾಯಣನವರು ಕಳೆದ ಸೋಮವಾರ ದಯಮಾಡಿ ಯೋಗ, ಆಧ್ಯಾತ್ಮಿಕ, ವೇದಾಂತ ವಿಚಾರದಲ್ಲಿ ಉಪನಿಷತ್ತುಗಳ ಆಧಾರಗಳೊಂದಿಗೆ ಅಬಾಲವೃದ್ಧರಿಗೂ ಸುಲಭವಾಗಿ ತಿಳಿಯುವಂತೆ ಉಪನ್ಯಾಸ ಮಾಡಿದರು ಈಚೆಗೆ ದೊಡ್ಡಬಳ್ಳಾಪುರದ ವೇ ಶಿವದೇವಶಾಸ್ತ್ರಿಗಳವರು ದಯಮಾಡಿ ಸರ್ವಸಮ್ಮತವಾಗಿ ಹರಿಕಥೆಮಾಡಿ ಜನಗಳನ್ನು ಸಂತೋಷಪಡಿಸಿದರು —ಇಂಥ ದೊಡ್ಡ ಗ್ರಾಮದಲ್ಲಿ ಒಬ್ಬ ಸೂಲಗಿತ್ತಿ ಇಲ್ಲದಿರುವುದನ್ನು ಕುರಿತು ಅನೇಕವೇಳೆ ಪ್ರಜೆಗಳು ಸರ್ಕಾರಕ್ಕೆ ಅರಿಕೆಮಾಡಿಕೊಂಡರೂ ಇದುವರೆಗೂ ಅವರ ಗಮನಕ್ಕೆ ಬರಲಿಲ್ಲ ಇನ್ನಾದರೂ ಅವರು ಇಲ್ಲಿಗೆ ಒಬ್ಬ ಸೂಲಗಿತ್ತಿಯನ್ನು ಕೊಟ್ಟು ಪ್ರಜೆಗಳ ಕಷ್ಟಗಳನ್ನು ನಿವಾರಣೆ ಮಾಡುವರೆಂದು ನಂಬಿದ್ದೇನೆ

ಕೋಲಾರ—ಬೌರಿಂಗ್ ಪೇಟೆಯಿಂದ ಈ ಊರಿಗೆ ಹಾಕುತ್ತಿರುವ ರೈಲ್ವೆ ಮಾರ್ಗವು ಮುಕ್ತಾಯಕ್ಕೆ ಬರುತ್ತಾ ಇದೆ ಕೆಲಸ ತರಾತುರಿಯಿಂದ ನಡೆಯುತ್ತಿದೆ ಇಷ್ಟರಲ್ಲಿ ಕೆಲಸ ಪೂರ್ತಿಯಾಗಿ ಪ್ರಯಾಣಿಕರ ಗಾಡಿಗಳು ಬಿಡಬಹುದು —ಈ ಪ್ರಾಂತ್ಯ ಹಿಂಗಾರೆ ಮಳೆ ಹಿಂದುದ್ದರ ಮೇಲೆ ಹಿಂದಿನ ಪೇರಾವು ಆದ ರಾಗಿ ಹೊಲಗಳೂ ಹುರುಳಿ ಬೆಳೆಗಳೂ ಕೆಡಕಾಗುವಂತಿದೆ —ಈ ಊರಿನಲ್ಲಿ ಕಳೆದ ತಿಂಗಳ ಅಂತ್ಯದಲ್ಲಿ ಎಂ ಇ ಮಿಷನ್ ಡಿಸ್ಟ್ರಿಕ್ಟ್ ಕಾನ್‌ಫರೆನ್ಸು ನಡೆದು ಬಿಷಪ ರಾಬಿನ್‌ಸನ್‌ರವರೂ, ಇತರ ಮಿಷನರಿಗಳೂ, ಬೆಂಗಳೂರು ಡಿಸ್ಟ್ರಿಕ್ಟಿನ ಎಲ್ಲಾ ಸುವಾರ್ತಾ ಕೆಲಸದವರೂ, ಈ ಊರಿನ ಕ್ರೈಸ್ತರೂ ಸೇರಿ ಸುಮಾರು 100 ಮಂದಿ ಬೀದಿಬೀದಿಗಳಿಗೆ ಹೊರಟು ಚೌಕದಲ್ಲಿ ನಿಂತು ಪ್ರಸಂಗಿಸಿ, ಕ್ರೈಸ್ತ ಕೀರ್ತನೆ ಭಜನೆಗಳೊಂದಿಗೆ ಊರುಸುತ್ತಿದ್ದು ಬಹಳ ವಿಜೃಂಭಣೆಯಾಗಿತ್ತು ಅನೇಕರು ಕ್ರೈಸ್ತರು ಕೋಟೆಹಿಡಿಯುವ ಕಾಲಸಮೀಪಿಸಿತೆಂಬ ಉತ್ಪ್ರೇಕ್ಷಣ ಮಾತುಗಳನ್ನು ಆಡಿದರು —ಈಗ ಹಲವು ದಿನಗಳಿಂದ ಈ ಊರಿನಲ್ಲಿ ಇಲಿಗಳು ಸಾಯುತ್ತಾ ಇದ್ದು, ಈಗ ಅಲ್ಲಲ್ಲಿ ಜನಗಳು ಸಾಯುತ್ತಲಿದ್ದಾರೆ ಈ ಪ್ಲೇಗ್ ವ್ಯಾಪಕವು ಬೌರಿಂಪೇಟೆ ಗಣಿ ಮುಂತಾದ ಸ್ಥಳಗಳಿಂದ ಬಂದಂತೆ ಕಾಣುತ್ತೆ — ಶ್ರೀನಿವಾಸಪುರ ತಾಲೂಕು ಜೇಡಿಮಾಕಲಪಲ್ಲಿ ಎಂಬ ಗ್ರಾಮದಲ್ಲಿ ಮಲ್ಲಿಕಿದ್ದರ ಒಂದು ಮನೆಯಲ್ಲಿ ಅದೇ ಜಾತಿಯ ಇನ್ನೊಬ್ಬರು ನಗನಾಣ್ಯಗಳನ್ನು ಹಗಲುವೇಳೆಯಲ್ಲಿ ಅಪಹರಿಸಿದರೆಂಬ ಗುಮಾನಿಯಿಂದ ನಗನಾಣ್ಯ ಕಳೆದುಕೊಂಡ

ವು ಅಸ್ಸಿನ ಪಟೇಲನಿಗೆ ತಿಳಿಸಿದ್ದರ ಮೇಲೆ ಪಟೇಲನ ಮನೆಯವರು ಮೂರು ಮಂದಿ ಮತ್ತು ಒಬ್ಬ ಆರಂಬಗಾರನು ಹ್ಯಾಗೂ ನಾಲ್ಕುಮಂದಿ ಗುಮಾಸಿ ಮನೆಯ ಮೂವರನ್ನು ಕಾಡಿಗೆ ಕರೆದುಕೊಂಡುಹೋಗಿ ಮೊದಲನೇ ದಿನವೂ ಮಾರನೆ ದಿನವೂ ಚೆನ್ನಾಗಿ ಹೊಡೆದದ್ದರ ಮೇಲೆ ಗುಮಾಸಿ ಮನೆಯ ಯಜಮಾನನ ಹೆಂಡತಿ ಸ್ವಾಮಿಕೊಂದ ಆಕೆ ಪೆಟ್ಟಿಗಳು ತಾಳಲಾರದೆ ಒಡವೆ ಕುರುತ್ತೇನೆಂದು ಹೇಳಿ ಹೋಗಿ ಹಾಗೆಯೇ ಬಾವಿಯಲ್ಲಿ ಬಿದ್ದು ಪ್ರಾಣವನ್ನು ನೀಗಿಕೊಂಡಳೆಂದು ವರ್ತಮಾನವಿದೆ ಈಚೆಗೆ ಈ ಊರಿನ ಪೊಲೀಸ್ ಸೂಪರೆಂಟರು ಸದರಿ ಗ್ರಾಮಕ್ಕೆ ಹೋಗಿ ಯಾವತ್ತು ಸಂಗತಿಗಳನ್ನೂ ರಿಕಾರ್ಡುಮಾಡಿ ಇಲ್ಲಿನ ಕೋರ್ಟಿನಲ್ಲಿ ಫಿರ್ಯಾದು ತಂದಿರುತ್ತಾರೆ ಕೆಲಸವನ್ನು ಸೂಪರೆಂಟರು ಮುತುವರ್ಜಿಯಿಂದ ನಡೆಸುತ್ತಿದ್ದಾರೆಂಬ ವರ್ತಮಾನ

ಚಿಂತಾಮಣಿ — ಈ ಊರಿನಲ್ಲಿ ಥಿಯೊಸಾಫಿಕಲ್ ಸೊಸೈಟಿ ಮೀಟಿಂಗುಗಳು ಕ್ರಮವಾಗಿ ಪ್ರತಿನಿತ್ಯವೂ ಜರುಗುತ್ತಾ ಇವೆ ಆದರೆ ಮೆಂಬರುಗಳು ಬರುವುದು ಕಡಮೆ — ಕಳೆದ ತಾ 10 ನೇ ಸೋಮವಾರ ಈ ಊರಿನ ಕೋಆಪರೇಟಿವ್ ಸೊಸೈಟಿ ಜನರಲ್ ಮೀಟಿಂಗು ಶ್ರೀ ರಾಘವ ಮಂದಿರದಲ್ಲಿ ನಡೆಯಿತು ವೈಶ್ಯ ಮಹಾ ಜನಗಳೂ, ಸರ್ಕಾರದ ಉದ್ಯೋಗಸ್ಥರೂ ಹಾಜರಿದ್ದರು ಆ ದಿನ ಅಕಸ್ಮಾತ್ತು ಈ ಗ್ರಾಮಕ್ಕೆ ದಯಮಾಡಿದ್ದ ಸಬ್ ಡಿವಿಜನ್ ಆಫೀಸರು ಮ॥ ಬಿ ಸಿ ಕೃಷ್ಣಶಾಸ್ತ್ರಿಗಳನ್ನೂ ಎಕನಾಮಿಕ್ ಕಾನ್ಫರೆನ್ಸು ಅಗ್ರಿಕಲ್ಚರ್ ಕಮಿಟಿ ಸೆಕ್ರಟರಿ ಮ॥ ಕೆ ಸುಬ್ಬರಾಯರನ್ನೂ ಮೀಟಿಂಗಿಗೆ ಬರಮಾಡಿಕೊಂಡು, ಮ॥ ಕೆ ಸುಬ್ಬರಾಯರನ್ನು ಸಭಾಧ್ಯಕ್ಷರನ್ನಾಗಿ ಮಾಡಿದರು ಈ ಸಂಘದ ಸೆಕ್ರಟರಿಯವರು ವಾರ್ಷಿಕ ರಿಪೋರ್ಟು ಓದಿದ ನಂತರ ಈ ಗ್ರಾಮದಲ್ಲಿ ಈ ಸಂಘದಿಂದ ಆಗಬೇಕಾದ ಇನ್ನೂ ಹೆಚ್ಚು ಅನುಕೂಲಗಳ ವಿಚಾರವಾಗಿ ಚರ್ಚೆಗಳು ನಡೆಯುತ್ತಿರುವಷ್ಟರಲ್ಲಿಯೇ ಮೊದಲು ಏರ್ಪಡಿಸಿಕೊಂಡಿದ್ದಂತೆ ಅ॥ ರೆಜಿಸ್ಟ್ರಾರ್ ಮ॥ ಆರ್ ರಂಗರಾಯರೂ, ಇನ್ಸ್ಪೆಕ್ಟರ್ ಮ॥ ಎಸ್ ಮಹದೇವರಾಯರೂ ಬೆಂಗಳೂರಿನಿಂದ ಇಲ್ಲಿಗೆ ಬಂದುಸೇರಿ ಆ ದಿನ ಜಡಿಮಳೆ ಪ್ರಾಪ್ತವಾದ್ದರಿಂದ ಸ್ವಲ್ಪ ಹೊತ್ತು ತಡವಾಗಿ ಬಂದರು ಆ ದಿನ ಅವರು ಪಟ್ಟ ದೇಹಶ್ರಮೆಗಾಗಿ ಅವರನ್ನು ಎಷ್ಟು ಕೊಂಡಾಡಿದರೂ ಸಾಲದು ನಮ್ಮ ಘನವಾದ ಗವರ್ನ್‌ಮೆಂಟಿನವರು ಈ ರೀತಿ ಪ್ರಜಾಹಿತಚಿಂತಕರನ್ನು ಆರಿಸಿ ತಕ್ಕ ಕೆಲಸಗಳಲ್ಲಿ ನೇಮಿಸಿರುವುದು ಸ್ತೋತ್ರಾರ್ಹವಾಗಿದೆ ಈ ಸಂಘದಿಂದ ಅನೇಕ ಉಪಯೋಗಗಳು ರೈತರುಗಳಿಗೂ ವ್ಯಾಪಾರಸ್ಥರಿಗೂ ಉಂಟಾಗುತ್ತಾವೆನ್ನುವದಕ್ಕೆ ಸಂದೇಹವಿಲ್ಲ ನಮ್ಮ ಸರಕಾರದವರು ಬಹಳ ಅನುಕೂಲವಾದ ಏರ್ಪಾಡುಗಳನ್ನು ಮಾಡುತ್ತಾ ಬಂದಿರುವುದೂ ಅಲ್ಲದೆ ಇತರ ವಿಧವಾದ ಪ್ರೋತ್ಸಾಹಗಳನ್ನು ಕಲ್ಪಿಸುತ್ತಾ ಇರುವರು ಆದರೆ ಆಯಾ ಗ್ರಾಮಗಳಲ್ಲಿ ಮೆಂಬರುಗಳು ಒಳ್ಳೇ ನಡತೆಯುಳ್ಳವರಾಗಿರುವುದೂ, ನಿಷ್ಪಕ್ಷಪಾತವಾಗಿ ಕೆಲಸಮಾಡುವುದೂ ಈ ಸಂಘದ ಅಭಿವೃದ್ಧಿಗೆ ಮೂಲಗಳಾಗಿವೆ ಈ ರೀತಿ ಚರ್ಚೆಗಳಾದನಂತರ ಈ ಸಂಘದ ಇನ್ಸ್ಪೆಕ್ಟರವರು ಈ ಸಂಘಕ್ಕೆ ಅನುಗುಣವಾಗಿ ಪ್ರಾವಿಡೆಂಟ್ ಫಂಡು ಆಗಬೇಕೆಂದು ಸೂಚಿಸಿದ್ದು ಹಾಜರಿದ್ದ ಮೆಂಬರುಗಳೆಲ್ಲಾ ಅನುಮೋದಿಸಿದರು ಈ ಹೊಸವರ್ಷಕ್ಕಾಗಿ ನೂತನ ಕಮಿಟಿ ಮೆಂಬರುಗಳನ್ನು ಚುನಾಯಿಸಿದರು ಅನಂತರ ಪಾನಸುಪಾರಿಗಳು ಸಭಿಕರಿಗೆ ಸಮರ್ಪಿಸಲ್ಪಟ್ಟವು ಪಾನ್ ಸುಪಾರಿ ಹಂಚಿಕೆ ಯಾದ ಬಳಿಕ ಜಯಘೋಷಗಳೊಡನೆ ಮೀಟಿಂಗು ಬರಖಾಸ್ತಾಯಿತು

ವೈಸ್‌ರಾಯ್ ದಂಪತಿಗಳಿಗೆ ಮೈಸೂರು ಸಂಸ್ಥಾನದಲ್ಲಿ ನಡೆದ ಅಪೂರ್ವ ಆತಿಥ್ಯಗಳು.

ಕಳೆದ 6 ನೇ ತಾ ಗುರುವಾರ ರಾತ್ರಿ ರಾಜಧಾನಿಯ ಗವರ್ನ್‌ಮೆಂಟ್ ಹೌಸಿನಲ್ಲಿ ನಮ್ಮ ಮಹಾರಾಜರವರು ವೈಸ್‌ರಾಯ ದಂಪತಿಗಳಿಗೆ ಔತಣವನ್ನು ಮಾಡಿದಾಗ್ಗೆ ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್ ಪ್ರಭುಗಳು ಮೈಸೂರು ಸಂಸ್ಥಾನದ ಆಳ್ವಿಕೆಯ ಏಳಿಗೆಯನ್ನು ಕುರಿತು ಪ್ರಸ್ತಾಪಮಾಡಿ, ನಮ್ಮ ಮಹಾರಾಜರವರನ್ನು ಬ್ರಿಟಿಷ್ ಗವರ್ನ್‌ಮೆಂಟಿನವರ ಸಮಾನಸ್ಕಂಧರಂತೆ ಭಾವಿಸಿ ಇನ್‌ಸ್ಟ್ರುಮೆಂಟ್ ಆಫ್ ಟ್ರಾನ್ಸ್‌ಫರ್ ಎಂಬ ಪತ್ರವನ್ನು ರದ್ದುಮಾಡುವುದಾಗಿಯೂ, ಮಹಾರಾಜರವರ ಸಾಮರ್ಥ್ಯಕ್ಕೆ ಅನುಗುಣವಾಗಿ ಕೌಲುನಾಮೆಯನ್ನು ಬರಮಾಡುವುದಾಗಿಯೂ ಅಪ್ಪಣೆ ಕೊಡಿಸಿದರಷ್ಟೆ ಅಂಥಾ ಗೌರವಯುಕ್ತವಾದ ಸಂತೋಷ ಪ್ರಸಂಗವನ್ನು ಕೇಳಿ ನಮ್ಮ ಮಹಾರಾಜರವರು ವೈಸ್‌ರಾಯವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಿ ಅವರನ್ನು ಕುರಿತು ಅಪ್ಪಣೆ ಕೊಡಿಸಿದ್ದೇನೆಂದರೆ —

ಈಗ ಪತ್ರಿಕೆಯ ಮೂಲಕ ಇಂಡಿಯಾ ಗವರ್ನ್‌ಮೆಂಟಿನವರು 1, ವರುಷಗಳಿಗೆ ನಮ್ಮ ತಂದೆಯವರಿಗೆ ಮೈಸೂರು ಸಂಸ್ಥಾನದ ಆಳ್ವಿಕೆಯ ಭಾರವನ್ನು ವಹಿಸಿಕೊಡಲಾಯಿತೋ ಆ ಪತ್ರಿಕೆಯನ್ನು ತಮ್ಮ ಗವರ್ನ್‌ಮೆಂಟಿನವರು ಈಗ ರದ್ದುಮಾಡುವುದಾಗಿಯೂ ಅದಕ್ಕೆ ಪ್ರತಿಯಾಗಿ ಟ್ರೀಟಿ (ಕೌಲುನಾಮೆ)ಯನ್ನು ದಯಪಾಲಿಸುವುದಾಗಿಯೂ ಅಪ್ಪಣೆ ಕೊಡಿಸಿದುದರಿಂದ ಈ ಭಾಗದಲ್ಲಿ ತಮ್ಮ ಸಮಾಗಮವನ್ನು ಪೂರ್ಣ ಮನಸ್ಸಿನಿಂದ ಕೃತಜ್ಞತಾಪೂರ್ವಕವಾಗಿ ಕೊಂಡಾಡಲು ಸರಿ ಮಾತುಗಳು ದೊರಕುವುದು ಕಷ್ಟವಾಗಿದೆ ತಾವು ಈಗ ಕರಾರನ್ನು ದಯಪಾಲಿಸಿದ ವಿಷಯದಲ್ಲಿ ಮಾತ್ರವೇ ಅಲ್ಲ ಅದರ ಮೂಲಕ ನನ್ನ ರಾಜ್ಯಭಾರ ಕ್ರಮಗಳು ಯೋಗ್ಯವಾಗಿಯೂ ಹಿತಕರವಾಗಿಯೂ ಇರುತ್ತವೆಂದು ತಮ್ಮಲ್ಲಿ ಉಂಟಾಗಿರುವ ನಂಬಿಕೆ ಮತ್ತು ಭರವಸೆಗಳಿಗಾಗಿಯೂ ನಾನು ತುಂಬಾ ಕೃತಜ್ಞನಾಗಿರುತ್ತೇನೆ ಈಗ ತಾವು ನನ್ನ ರಾಜ್ಯಪರಿಪಾಲನಾ ರೀತಿಯು ಉತ್ಕೃಷ್ಟವಾದುದಾಗಿದೆ ಎಂದು ಅಪ್ಪಣೆಕೊಡಿಸಿರುವಂಥಾ ದಯಾಪೂರಿತವಾದ ವಾಕ್ಯಗಳನ್ನು ನಾನು ಕಾಪಾಡಿಕೊಂಡು ಬರುವದಕ್ಕಿಂತಲೂ ಹೆಚ್ಚಿನ ಮತ್ಯಾವ ಪ್ರತಿಫಲವನ್ನೂ ಅಪೇಕ್ಷಿಸತಕ್ಕವನಲ್ಲ ಈ ಕರಾರಿನ ವಿಷಯವು ನನ್ನ ಸಮಸ್ತಪ್ರಜೆಗಳಿಗೂ ಮಹದಾನಂದವನ್ನು ಟು ಮಾಡುವುದು ಮಾತ್ರವೇ ಅಲ್ಲದೆ ಅದು ನಮ್ಮಗಳಿಗೂ ಬ್ರಿಟಿಷ್ ಗವರ್ನ್‌ಮೆಂಟಿಗೂ ಇರತಕ್ಕ ಭಕ್ತಿ ಅನುರಾಗಗಳನ್ನು ಮತ್ತಷ್ಟು ವೃದ್ಧಿಪಡಿಸತಕ್ಕದ್ದಾಗಿದೆ ಇವಲ್ಲದೆ ಶ್ರೀಮನ್ ಲೇಡಿ ಹಾರ್ಡಿಂಗ್ ರವರು ಬೇರೆಯವರಿಗೆ ಶ್ರೀ ಚಾಮುಂಡೇಶ್ವರೀ ದೇವಿಯವರ ಸನ್ನಿಧಿಯಲ್ಲಿ ಪ್ರೀತಿಯಿಂದ ದಯಮಾಡಿ ದರ್ಶನವನ್ನು ಮಾಡಿದ್ದಕ್ಕಾಗಿಯೂ ಅದಕ್ಕೆ ಈ ಕರಾರು ಶುಭಸೂಚಕ ನಿದರ್ಶನವೆಂದು ಎಣಿಸಬಹುದು

ಬಳಿಕ ಮಹಾರಾಜರವರ ಬ್ಯಾಂಡ್ ವಾದ್ಯಗಾರರು ಮನೋಹರವಾದ ಹಾಡುಗಳನ್ನು ನುಡಿಸಿ ಆನಂದಪಡಿಸಿದರು ದಿವ್ಯವಾದ ಪಾನಬೀರಸುಗಳು ಹಾದಿ ಹೋಯ್ತು ಮೊದಲನೇ ದಿನದ ಆತಿಥ್ಯವು ಮುಕ್ತಾಯವಾಯಿತು

ತಾ 7 ನೇ ಶುಕ್ರವಾರ ಬೆಳಿಗ್ಗೆ ವೈಸ್‌ರಾಯವರು ನಮ್ಮ ಮಹಾರಾಜರವರ ಪಟ್ಟಣದಲ್ಲಿ ಖಾಸಾ ತಬೇಲೆಗೆ ದಯಮಾಡಿ ಅಲ್ಲಿರುವ ದಿವ್ಯವಾದ ನಾನಾ ಜಾತಿಯ ಒಳ್ಳೇ ಕುದುರೆಗಳನ್ನೂ, ಶ್ವೇತಬಣ್ಣದ ಶ್ರೇಷ್ಠ ಲಕ್ಷಣಗಳುಳ್ಳ ಪಟ್ಟದ ಕುದುರೆಯನ್ನೂ, ಬಗೆಬಗೆಯ ಸಾರೋಟುಗಳನ್ನೂ, ನಂಬರ್‌ಲತೆಗಳುಳ್ಳ ಬಹು ಅಮೂಲ್ಯವಾದ ಬಂಗಾರದ ಗಾಡಿಯನ್ನೂ, ಜೀನು ರೇಕಸು ಮೊದಲಾದ ವಿಶೇಷ ಅಲಂಕಾರಗಳನ್ನೂ ಪರಾಂಬರಿಸಿ ತುಂಬಾ ಸಂತೋಷಪಟ್ಟು ವಾಪಸು ಗವರ್ನ್‌ಮೆಂಟ್ ಹೌಸಿಗೆ ಬಂದರು

ಕೊಡಗರ ಅಡ್ರೆಸ್ಸು

ಭೋಜನಾನಂತರ ಕೊಡಗು ಸೀಮೆಯ ಪ್ರಜಾಪ್ರತಿನಿಧಿಗಳು ಮಿ॥ ಗಳಾದ ರಾವ್ ಬಹದೂರ್ ಕೆ ಅಪ್ಪಯ್ಯನವರು, ರಾವ್ ಬಹದೂರ್ ಕೆ ಕುಟ್ಟಯ್ಯನವರು, ಕೆ ಸುಬ್ಬಯ್ಯನವರು, ಎ ಎಂ ಅಪ್ಪಚ್ಚುರವರು, ಎಂ ಎ ಮಂದಣ್ಣನವರು, ಬ್ಯಾರಿಷ್ಟರ್ ಸಿ ಎನ್. ಮುತ್ತಣ್ಣನವರು, ಸಿ ದೇವಯ್ಯನವರು — ಈ ಏಳು ಮಂದಿ ದೊಡ್ಡ ಮನುಷ್ಯರೂ 11 ಗಂಟೆಗೆ ವೈಸ್‌ರಾಯ್ ಪ್ರಭುಗಳ ಭೇಟಿಯನ್ನು ಹೊಂದಿ ಅವರಿಗೆ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು ಅದರಲ್ಲಿ ಅವರು ಪ್ರಾರ್ಥಿಸಿಕೊಂಡ ಮುಖ್ಯ ವಿಷಯಗಳೇನೆಂದರೆ—

ತಮ್ಮ ಸವಾರಿಯು ಕೊಡಗಿಗೆ ದಯಮಾಡುವದೆಂಬ ಸುದ್ದಿ ಹುಟ್ಟಿ ಕೊಡಗಿನ ಪ್ರಜೆಗಳೆಲ್ಲಾ ಆನಂದಪಡುತ್ತಿದ್ದರು ಅದು ಸಾಧ್ಯವಾಗಿದ್ದರೆ ತಾವೇ ಅಲ್ಲಿಗೆ ದಯಮಾಡಿದ ವೈಸ್‌ರಾಯರುಗಳಲ್ಲಿ ಮೊದಲನೇಯವರಾಗುತ್ತಿದ್ದಿರಿ ಆ ಸೌಂದರ್ಯಯುಕ್ತವಾದ ಸೀಮೆಯನ್ನು ಇದುವರೆಗೆ ಯಾವ ವೈಸ್‌ರಾಯರವರೂ ದಯಮಾಡಿ ಪರಾಂಬರಿಸಲಿಲ್ಲ ಆದರೆ ಅಲ್ಲಿಗೆ ಹೋಗಿಬರಲು ರೈಲ್‌ರಸ್ತೆ ಇಲ್ಲದಿರುವುದು ದೊಡ್ಡ ಅಡಚಣೆಯಾಗಿದೆ ಮೈಸೂರು ಸರ್ಕಾರದವರು ತಮ್ಮ ಎಲ್ಲೆಯವರೆಗೆ ರೈಲು ಹಾಕಲು ಸಿದ್ಧರಾಗಿರುವಂತೆ ತಿಳಿಯುತ್ತದೆ ಇಂಡಿಯಾ ಗವರ್ನ್‌ಮೆಂಟಿನವರು ಆ ರಸ್ತೆಯನ್ನು ಪಶ್ಚಿಮಘಟ್ಟಕ್ಕೆ ತಂದು ಸೇರಿಸಿದರೆ ತುಂಬಾ ಉಪಕಾರವಾಗುವುದು ಇದನ್ನು ತಾವು ಕರುಣವಿಟ್ಟು ಪರ್ಯಾಲೋಚಿಸಬೇಕೆಂದು ಪ್ರಾರ್ಥಿಸುತ್ತೇವೆ —ಪ್ರಥಮ ವಿದ್ಯಾಶಿಕ್ಷಣವನ್ನು ಹರಡುವ ಭಾಗದಲ್ಲಿ ತಮ್ಮ ಗವರ್ನ್‌ಮೆಂಟಿನವರು ಮಾಡುತ್ತಿರುವ ಸಹಾಯವು ಸ್ತೋತ್ರಾರ್ಹವಾಗಿದೆ ಕೊಡಗು ಮಡಿಕೇರಿಯಲ್ಲಿ ಪ್ರತ್ಯೇಕವಾಗಿರೋಣದರಿಂದ ದಕ್ಷಿಣ ಕೊಡಗಿನಲ್ಲಿ ಇನ್ನೊಂದು ಹೈಸ್ಕೂಲನ್ನೂ ಮಡಿಕೇರಿಯಲ್ಲಿ ಎರಡನೇ ಗ್ರೇಡ್ ಕಾಲೇಜನ್ನೂ ಇಡಿಸಿಕೊಟ್ಟರೆ ಅನುಕೂಲವಾದೀತು ಇದನ್ನು 1895 ರಲ್ಲಿ ತಮ್ಮ ಸ್ಥಾನದಲ್ಲಿದ್ದ ಲಾರ್ಡ್ ಎಲ್ಗಿನ್ ಪ್ರಭುಗಳನ್ನೂ ಕೇಳಿಕೊಂಡಿದ್ದೆವು ಉಪಾಧ್ಯಾಯರುಗಳ ಸಂಬಳವನ್ನು ಹೆಚ್ಚಿಸಿ, ಅವರನ್ನು ತರಬೇತುಮಾಡುವ ಏರ್ಪಾಡು ಇಟ್ಟರೆ ವಿದ್ಯಾಭಿವೃದ್ಧಿಯು ಈಗಿನ ಕಾಲಕ್ಕೆ ತಕ್ಕಂತಾಗುವುದು

ವೈಸ್‌ರಾಯರವರ ಪ್ರತ್ಯುತ್ತರ

ಕೊಡಗಿನ ಪ್ರತಿನಿಧಿಗಳು ಅರಿಕೆ ಮಾಡಿಕೊಂಡ ವಿಷಯಗಳನ್ನು ಆದರದಿಂದ ಲಾಲಿಸಿ ವೈಸ್‌ರಾಯ್ ಪ್ರಭುಗಳು ಅಪ್ಪಣೆಕೊಡಿಸಿದ ಪ್ರತ್ಯುತ್ತರದ ಮುಖ್ಯಾಭಿಪ್ರಾಯವೇನೆಂದರೆ—

ನೀವುಗಳು ನನ್ನ ವಿಷಯದಲ್ಲೂ ನನ್ನ ಪತ್ನಿಯವರ ವಿಷಯದಲ್ಲೂ ಅರಿಕೆ ಮಾಡಿದ ವಿಷಯಗಳನ್ನು ಕೇಳಿ ಸಂತೋಷಪಟ್ಟು ನಿಮ್ಮನ್ನು ವಂದಿಸುತ್ತೇವೆ ಕಳೆದ ಜೂನ್ 30 ರಲ್ಲಿ ನೀವುಗಳು ಕೊಡಗಿನಲ್ಲಿ ಮಕ್ಕಳನ್ನು ಕೂಡಿಸಿ ಅವರಿಗೆ ವಿನೋದಾದಿಗಳನ್ನು ಕಲ್ಪಿಸಿ ಅವರನ್ನು ಸಂತೋಷಪಡಿಸಿದ ವೃತ್ತಾಂತವನ್ನು ಕೇಳಿ ಆನಂದಪಟ್ಟೆನು ನಿಮ್ಮ ಸೀಮೆಯಲ್ಲಿ ಹಿಂದುಗಳಿಗೆಲ್ಲಾ ಪವಿತ್ರಸ್ಥಳವಾಗಿರುವ ಮೂಲಕಾವೇರಿಯುಂಟೆಂಬುದನ್ನು ಬಲ್ಲೆನು ಅಂಥಾ ಸಂತೋಷಪ್ರದೇಶವನ್ನು ನಾನು ಸ್ವತಃ ಬಂದು ನೋಡಲು ರಸ್ತೆಯು ಅನುಕೂಲವಾಗಿಲ್ಲವೆಂದು ವಿಷಾದಿಸುತ್ತೇನೆ ರೈಲ್ವೆ ಬಡಾವಣೆಯ ವಿಷಯದಲ್ಲಿ ಹಲವು ಸಲಹೆಗಳು ಬಂದಿರುತ್ತವೆ ಅವುಗಳನ್ನು ತನಿಖೆ ಮಾಡಿ ನೋಡುವ ಸಂದರ್ಭದಲ್ಲಿ ಈ ರೈಲ್‌ರಸ್ತೆಯ ವಿಷಯವನ್ನು ಇಂಡಿಯಾ ಗವರ್ನ್‌ಮೆಂಟಿನವರು ಪ್ರೀತಿಯಿಟ್ಟು ವ್ಯವಸ್ಥೆ ಮಾಡುತ್ತಾರೆಂದು ಹೇಳಬಲ್ಲೆನು ವಿದ್ಯಾಭಿವೃದ್ಧಿಗಾಗಿ ಕಳೆದ ಎರಡು ವರುಷಗಳಿಂದ ನಾವು ನಿಮ್ಮ ಸೀಮೆಗೆ ಸ್ಯಾಂಕ್ಷನ್ ಮಾಡಿರುವ ಹಣವನ್ನು ನೋಡಿದ ಪಕ್ಷದಲ್ಲಿ ನಾವು ಕೊಡಗನ್ನು ಮರೆತಿಲ್ಲವೆಂಬುವುದು ನಿಮಗೆ ಗೊತ್ತಾಗುತ್ತದೆ ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸುವ ಭಾಗದಲ್ಲಿ ನೀವುಗಳು ವಿಶೇಷ ಸಾಹಸಪಡುತ್ತಿದೀರೆಂದೂ, ಆ ವಿದ್ಯಾಬಾಸವು ಅಭಿವೃದ್ಧಿ ಹೊಂದುತ್ತಿದೆ ಎಂದೂ ತಿಳಿದು ನಾನು ತುಂಬಾ ಆನಂದಪಡುತ್ತೇನೆ ಈ ದಿನ ಹೆಣ್ಣುಮಕ್ಕಳಾಗಿರತಕ್ಕವರೇ ನಾಳೆ ಸಂಸಾರಿಗಳಾಗಿ ಮಕ್ಕಳನ್ನು ಎಲ್ಲಾ ಬಾಗಗಳಲೂ ತೃಪ್ತಿಕರವಾಗಿ ಬೆಳೆಯಿಸುವವರಾಗುತ್ತಾರೆ ಸ್ತ್ರೀವಿದ್ಯಾಭ್ಯಾಸದ ಸಲಗಳನ್ನು ಅಸ್ಪಷ್ಟವೆಂದು ಎಣಿಸಲಾರೆನು ಮಡಿಕೇರಿ ಹೈಸ್ಕೂಲ್ ಬದಲಾವಣೆಯು ಇನ್ನೂ ಯೋಚನೆಯಲ್ಲಿದೆ ಮುಂದೆ ನಾನು ನಿರೀಕ್ಷಿಸುವಂತೆ ಅದು ನೆರವೇರಿದ ಪಕ್ಷದಲ್ಲಿ ಆ ಸ್ಕೂಲು ವಿದ್ಯಾರ್ಥಿಗಳ ನಿಲಯಕ್ಕೂ ಸ್ಥಳವಸತಿಯುಂಟಾಗಿ ತುಂಬಾ ಅಭಿವೃದ್ಧಿಗೆ ಬಂದೀತೆನ್ನುವದಕ್ಕೆ ಸಂಶಯವಿಲ್ಲ —ಮಡಿಕೇರಿಯಲ್ಲಿ ಮಲೇರಿಯಾ ಜ್ವರ ಹೆಚ್ಚಾಗಿದೆ ಎಂದೂ, ಹೈಸ್ಕೂಲಿನ ಬೋರ್ಡರುಗಳಾದ ವಿದ್ಯಾರ್ಥಿಗಳಲ್ಲಿ ಅನೇಕರಿಗೆ ಹೊಟ್ಟೆಯಲ್ಲಿ ಗಡ್ಡೆಗಳು ಬರುತ್ತವೆ ಎಂದೂ ನಮ್ಮ ಗವರ್ನ್‌ಮೆಂಟಿಗೆ ತಿಳಿದು ಬಂದಿದೆ ಕೊಚ್ಚೆಗುಂಡಿಗಳನ್ನು ಭರ್ತಿಮಾಡಿ, ನೀರು ನಿಲ್ಲದಂತೆ ಮಾಡುವ ಕಾಮಗಾರಿಗಳು ನಿಮ್ಮಲ್ಲಿ ನಡೆಸುತ್ತಾ ಇದೆ ಗ್ರಾಮಗಳ ಸಾನಿಟರಿ ಏರ್ಪಾಡುಗಳಿಗೆ ಇಂಡಿಯಾ ಗವರ್ನ್‌ಮೆಂಟಿನವರು ಮೂರು ವರ್ಷಗಳಿಂದ 36 ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ ಮಲೇರಿಯಾ ಜ್ವರವನ್ನು ಅಡಗಿಸುವುದಕ್ಕೆ ಶಾಸ್ತ್ರಶೋಧಕರು ಪರೀಕ್ಷೆಗಳನ್ನು ಮಾಡುತ್ತಿರುವರು ಮಡಿಕೇರಿಗೆ ಒಂದು ಬಂದೀಖಾನೆಯನ್ನು ಕಟ್ಟುವುದಕ್ಕೆ ಸ್ಯಾಂಕ್ಷನ್ ಮಾಡಲಾಗಿದೆ ಕೊಡಗಿನ ಸರ್ಕಾರಿ ನೌಕರರ ಸ್ಥಿತಿಗತಿಯನ್ನೂ ಸಂಬಳಗಳನ್ನೂ ಕ್ರಮಪಡಿಸಿ ಹೆಚ್ಚಿಸುವುದಕ್ಕೆ ಆಗಿಂದಾಗ್ಗೆ ಹುಕುಂಗಳನ್ನು ಕೊಟ್ಟು ನಡಿಸುತ್ತಾಬಂದಿವೆ ಟಿಂಬರ್ ಗಿಡಗಳನ್ನು ನಾಟಿ ಹಾಕುವ ಭಾಗದಲ್ಲಿ ಕೊಡಗರು ತುಂಬಾ ಸಾಹಸಪಡುತ್ತಿದ್ದಾರೆಂದು ಇಂಡಿಯಾ ಗವರ್ನ್‌ಮೆಂಟಿನವರು ತಿಳಿದು ಸಂತೋಷಪಡುವರು ನಿಮ್ಮ ರಾಜಭಕ್ತಿಯನ್ನೂ ಪ್ರೀತಿಯನ್ನೂ ಚಕ್ರವರ್ತಿ ಸಾರ್ವಭೌಮರವರಿಗೆ ಅರಿಕೆ ಮಾಡುತ್ತೇನೆ

ಕೊಡಗು ಪ್ಲಾಂಟರುಗಳ ಅಡ್ರೆಸ್ಸು

ಕೊಡಗಿನ ಪ್ರತಿನಿಧಿಗಳು ಬೀಳ್ಕೊಂಡು ವೈಸ್‌ರಾಯರವರ ಸಮ್ಮುಖದಿಂದ ಹೊರಟುಹೋದ ಬಳಿಕ ಕೊಡಗಿನ ಪ್ಲಾಂಟರುಗಳು ಮಿ॥ ಗಳಾದ ಎ ಮೇಪಲ್ಸ್ಟನವರು, ಡಬ್ಲ್ಯು ಎಂ ಪಾಲ್‌ರವರು, ಜಿ ಕೆ ಮಾರ್ಟಿನ್‌ರವರು, ಎ ಇ ಮುರ್ರೆ ಐನ್ಸ್ಲಿಯವರು, ಟಿ ಎ ಗ್ರೇಹಂರವರು, ಇ ಎನ್ ಮಾರ್ಟಿನ್‌ರವರು ವೈಸ್‌ರಾಯರವರ ಬಳಿಗೆ ಹೋಗಿ ಅವರಿಗೆ ಒಂದು ಅಡ್ರೆಸ್ಸನ್ನು ಓದಿ ಒಪ್ಪಿಸಿದರು

ವೈಸ್‌ರಾಯರವರ ಪ್ರತ್ಯುತ್ತರ

ವೈಸ್‌ರಾಯಿಯವರು ಆ ಪ್ಲಾಂಟರುಗಳ ಅಡ್ರೆಸ್ಸನ್ನು ಪ್ರೀತಿಪೂರ್ವಕವಾಗಿ ಅಂಗೀಕರಿಸಿ ಅವರನ್ನು ಕುರಿತು ಪ್ರತ್ಯುತ್ತರ ಕೊಟ್ಟ ಮುಖ್ಯ ವಿಚಾರಗಳೇನೆಂದರೆ —

ನೀವುಗಳು ಯಾವ ಪ್ರದೇಶದಲ್ಲಿದ್ದುಕೊಂಡು ಪ್ಲಾಂಟೇಷನ್‌ಗಳನ್ನು ಮಾಡಿ ಅಭಿವೃದ್ಧಿಗೆ ತಂದಿರೋ ಆ ಸ್ಥಳದಲ್ಲೇ ನಾನು ಬಂದು ನಿಮ್ಮ ಅಡ್ರೆಸ್ಸನ್ನು ಸ್ವೀಕರಿಸಲು ಸಾಧ್ಯವಾಗದೆ ಹೋಯಿತೆಂದು ವಿಷಾದಪಡುತ್ತೇನೆ ನಿಮ್ಮ ಪ್ಲಾಂಟರುಗಳು ಇತ್ತೀಚೆಗೆ ಕೇಳಿಕೊಳ್ಳುತ್ತಾ ಬಂದಿರುವ ಆಳ್ವಿಕೆಯ ಕ್ರಮಗಳ ಬದಲಾವಣೆಗಳು ಬಹುಮಟ್ಟಿಗೆ ತೃಪ್ತಿಕರವಾಗಿ ಇತ್ಯರ್ಥಮಾಡಲ್ಪಟ್ಟವೆಂದು ತಿಳಿದು ಸಂತೋಷಪಡುವೆನು ಪಶ್ಚಿಮಘಟ್ಟಗಳಿಗೆ ರೈಲ್ ರಸ್ತೆಯನ್ನು ಬಡಾವಣೆ ಮಾಡಿಕೊಡಬೇಕೆಂದು ನೀವು ಕುತೂಹಲಪಡುವುದನ್ನು ನಾನು ಪ್ರೀತಿಯಿಂದ ಒಪ್ಪಿಕೊಂಡು ಸದ್ಯದಲ್ಲಿ ಈ ವಿಚಾರವನ್ನು ಆದರಪೂರ್ವಕವಾಗಿ ಪರ್ಯಾಲೋಚಿಸುವೆನೆಂದು ಮಾತ್ರ ಹೇಳಬಲ್ಲೆನು —ಆ ಟಪಾಲುಗಳು ಸಾಗುವ ವಿಷಯದಲ್ಲಿ ನಿಮಗೆ ತೊಂದರೆಯುಂಟಾಗಿತ್ತು, ಆದರೆ ಈಚೆಗೆ ಅದರ ಕಂಟ್ರಾಕ್ಟನ್ನು ಹೆಚ್ಚು ಹಣ ಕೊಟ್ಟು ಬೇರೆಯವರಿಗೆ ವಹಿಸಿ ಕ್ರಮಪಡಿಸಿದ್ದಾರೆಂದು ತಿಳಿಯುತ್ತದೆ ಮೋಟರ್ ಟಪ್ಪಾಲನ್ನು ಇಡುವುದು ಅನುಕೂಲ, ಆದರೆ ಅದಕ್ಕೆ ಯಾರೂ ಮುಂದರಿದು ಬಂದಿಲ್ಲ ನಿಮ್ಮ ಕೊಡಗಿನಲ್ಲೂ ಹೊರಗಡೆಯಲ್ಲೂ ರಸ್ತೆಗಳನ್ನು ಒಳ್ಳೇ ಸ್ಥಿತಿಯಲ್ಲಿಟ್ಟಿರುವ ಭಾಗದಲ್ಲಿ ಸ್ಥಳಾಧಿಕಾರಿಗಳು ಗಮನಕೊಡುತ್ತಿದ್ದಾರೆಂದು ತಿಳಿದುಬಂದಿದೆ ಕಾಫಿ ಟೀ, ರಬ್ಬರ್ ಮೊದಲಾದ ಬೆಳೆಗಳಿಗೆ ಹಿಡಿಯುವ ರೋಗಗಳನ್ನು ಪರೀಕ್ಷೆಮಾಡಿ ಪರಿಹಾರಗಳನ್ನು ಕಂಡುಹಿಡಿಯುವುದಕ್ಕೆ ಶಾಸ್ತ್ರಶೋಧನಾ ಅಧಿಕಾರಿಗೆ ಗವರ್ನ್‌ಮೆಂಟಿನಿಂದ ಹೆಚ್ಚಾದ ಸಹಾಯ ದ್ರವ್ಯ ಕೊಡಲಾಗಿದೆ —ಸದ್ಯದಲ್ಲಿ ಕೊಡಗಿನ ಆಳ್ವಿಕೆಯನ್ನು ಯಾವ ರೀತಿಯಾಗಿಯೂ ಬದಲಾವಣೆಮಾಡತಕ್ಕ ಯೋಚನೆ ಇಂಡಿಯಾ ಗವರ್ನ್‌ಮೆಂಟಿನವರಿಗೆ ಇರುವುದಿಲ್ಲ ಹಾಗೆ ಬದಲಾವಣೆಮಾಡುವ ಸಂದರ್ಭದಲ್ಲಿ ಅದಕ್ಕೆ ಸಂಬಂಧಪಡತಕ್ಕ ಎಲ್ಲಾ ಪ್ರಜೆಗಳ ಅಭಿಮತವನ್ನೂ ಮೊದಲು ಗವರ್ನ್‌ಮೆಂಟಿನವರು ತಿಳಿದುಕೊಳ್ಳದೆ ಮಾಡುವುದಿಲ್ಲ —ನಿಮ್ಮ ಪ್ರೀತಿಪೂರ್ವಕವಾದ ಅಡ್ರೆಸ್ಸಿಗಾಗಿ ನಿಮ್ಮನ್ನು ಮನಃಪೂರ್ವಕವಾಗಿ ವಂದಿಸುತ್ತೇವೆ

ಮೈಸೂರು ಪ್ಲಾಂಟರುಗಳ ಅಡ್ರೆಸ್ಸು

ತರುವಾಯ ವೈಸ್‌ರಾಯರವರು ಮೈಸೂರು ಪ್ಲಾಂಟರುಗಳ ಪ್ರತಿನಿಧಿಗಳನ್ನು ಬರಮಾಡಿಕೊಂಡು ಅವರ ಅಡ್ರೆಸ್ಸನ್ನು ಲಾಲಿಸಿದರು ಅದರ ಮುಖ್ಯಾಂಶಗಳೇನೆಂದರೆ—

ರೈಲ್ ರಸ್ತೆಯನ್ನು ಪಶ್ಚಿಮಘಟ್ಟಗಳಿಗೂ ಮಂಗಳೂರಿಗೂ ಬಡಾವಣೆಮಾಡದೆ ಹೋದಪಕ್ಷದಲ್ಲಿ ಮೈಸೂರು ಸಂಸ್ಥಾನದ ತಸಟುಗಳ ಶ್ರೇಯಸ್ಸಿಗೆ ತುಂಬಾ ಅಡಚಣೆಯುಂಟಾಗುತ್ತದೆಂದು ನಾವು ಖಚಿತವಾಗಿ ತಿಳಿದಿರುತ್ತೇವೆ ದಕ್ಷಿಣ ಕನರಾದಲ್ಲಿ ತಮ್ಮ ಎಲ್ಲೆಕಟ್ಟಿನ ತನಕ ರೈಲ್ವೆಕಾಮಗಾರಿ ಮಾಡಿಸುವುದಕ್ಕೆ ಮೈಸೂರು ಸರ್ಕಾರದವರು ಸಿದ್ಧರಾಗಿದ್ದಾರೆಂದು ನಾವು ಬಲ್ಲೆವು ಇಂಡಿಯಾ ಗವರ್ನ್‌ಮೆಂಟಿನವರು ಅಲ್ಲಿಂದ ಮುಂದಕ್ಕೆ ಲೈನನ್ನು ಬಡಾವಣೆಮಾಡಿಕೊಡಬೇಕು ಇದು ಅಷ್ಟೇನೂ ಹೆಚ್ಚು ಖರ್ಚಾಗತಕ್ಕ ಲೈನ್ ಅಲ್ಲ ಇದನ್ನು ಗವರ್ನ್‌ಮೆಂಟಿನವರು ಮಾಡಿಸಿಕೊಡಬೇಕಾಗಿ ಪ್ರಾರ್ಥಿಸಿ ನಿರೀಕ್ಷಿಸಿಕೊಂಡಿದ್ದೇವೆ

ವೈಸ್‌ರಾಯರವರ ಪ್ರತ್ಯುತ್ತರ.

ಈ ಅಡ್ರೆಸ್ಸನ್ನು ವೈಸ್‌ರಾಯಿ ಪ್ರಭುಗಳು ಸಾವಧಾನದಿಂದ ಕೇಳಿ, ಅವರಿಗೆ ಉತ್ತರವನ್ನಿತ್ತರು ಅದರ ಮುಖ್ಯಾಭಿಪ್ರಾಯವೇನೆಂದರೆ—

ಮೈಸೂರಿನ ಕ್ಷೇಮಚಿಂತನೆಯನ್ನು ಕೋರಿ ಪಶ್ಚಿಮಘಟ್ಟಗಳಿಗೆ ರೈಲ್ವೆ ಬಡಾವಣೆ ಮಾಡಿಕೊಡಬೇಕೆಂದು ಪ್ರಾರ್ಥಿಸಿದ್ದು ನಿಮ್ಮದು ಮೂರನೆಯ ಅಡ್ರೆಸ್ಸಾಗಿರುತ್ತದೆ ಈ ವಿಷಯ ಪ್ರತ್ಯೇಕವಾಗಿ ನಮ್ಮ ಗಮನಕ್ಕೆ ಬಂದು, ಅದರ ಸಾಧಕಬಾಧಕಗಳ ವಿಷಯದಲ್ಲಿ ನಾವು ಚರ್ಚೆಗಳನ್ನು ಕೇಳಿ ಅಭಿಮತಗಳನ್ನು ಗುರುತುಹಾಕಿಕೊಂಡಿರುತ್ತೇವೆ ಇದೆಲ್ಲಾ ಪ್ಲಾಂಟರುಗಳ ಸಭೆಯಲ್ಲಿ ಚರ್ಚೆಯಾಗಿರುತ್ತದೆ ಮೊದಲೇ ಕೊಡಗಿನ ಪ್ರತಿನಿಧಿಗಳಿಗೆ ಹೇಳಿರುವಂತೆ ಈ ವಿಷಯವನ್ನು ನಾವು ಪ್ರೀತಿಪೂರ್ವಕವಾಗಿಯೂ ಚೆನ್ನಾಗಿಯೂ ಆಲೋಚನೆ ಮಾಡುವೆವೆಂದು ಮಾತ್ರ ನಿಮಗೆ ಸಮಾಧಾನ ಹೇಳುವೆವು ಶ್ರೀಮನ್ ಮಹಾರಾಜರವರು ನಿಮ್ಮಗಳ ಶ್ರೇಯೋಭಿವೃದ್ಧಿಗೆ ಬೇಕಾಗುವ ಕಾರ್ಯಗಳನ್ನೆಲ್ಲಾ ಮಾಡಿಕೊಡುತ್ತಾ ಬಂದಿದ್ದಾರೆಂದು ತಿಳಿದುಕೊಂಡಿರುತ್ತೇವೆ ನಿಮ್ಮಗಳ ಉದ್ದೇಶಕಾರ್ಯಗಳೆಲ್ಲಾ ನಿಮಗೂ ಸಂಸ್ಥಾನಕ್ಕೂ ಫಲಕಾರಿಗಳಾಗಲೆಂದು ಮಹಾರಾಜರವರ ಕೂಡ ನಾನೂ ಹಾರೈಸುತ್ತೇನೆ

ಕೊಡಗರ ಅಡ್ರೆಸ್ಸು ಒಪ್ಪಿಸಿದ ಕಡೆಯಲ್ಲಿ ವೈಸ್‌ರಾಯರವರು ಅ॥ ಕಮಿಷನರ್ ಮಿ॥ ಕೆ ಅಪ್ಪಯ್ಯನವರನ್ನು ಸಮೀಪಕ್ಕೆ ಕರೆಸಿಕೊಂಡು ರಾವ್ ಬಹದೂರ್ ಎಂಬ ಬಿರುದು ಅವರಿಗೆ ಬಂದದ್ದನ್ನು ಅವರಿಗೆ ಓದಿಹೇಳಿ ಸನ್ನದು ಕೊಟ್ಟು ಬಿರುದನ್ನು ಅಂಗರೇಖೆಗೆ ಅಂಟಿಸಿದರು

ಮೃಗಾಲಯವನ್ನು ಪರಾಂಬರಿಸಿದ್ದು

ಆ ದಿನ ಸಾಯಂಕಾಲ ವೈಸ್‌ರಾಯರವರು ಶ್ರೀಮನ್ ಮಹಾರಾಜರವರ ಕೂಡ ಖಾಸಾ ಬಂಗಲೆಯ ಎಡಪಾರ್ಶ್ವದಲ್ಲಿರುವ ಮೃಗಾಲಯಕ್ಕೆ ದಯಮಾಡಿ, ಅಲ್ಲಿಟ್ಟಿರುವ ನೂತನ ಮೃಗ ಪಕ್ಷಿ ಮೊದಲಾದವುಗಳನ್ನು ನೋಡಿ ಬಹಳ ಸಂತೋಷಪಟ್ಟರು

ಮಹಾಮಾತೃಶ್ರೀಯವರ ಭೇಟಿ

ಸಾಯಂಕಾಲ 5 ಗಂಟೆಯ ಮೇಲೆ ನಮ್ಮ ಮಹಾಮಾತೃಶ್ರೀಯವರು ಗವರ್ನ್‌ಮೆಂಟ್ ಹೌಸಿಗೆ ದಯಮಾಡಿ, ವೈಸ್‌ರಾಯರವರ ಪತ್ನೀರವರ ಭೇಟಿ ಮಾಡಿ ಸ್ವಲ್ಪ ಹೊತ್ತು ಅವರ ಕೂಡ ಸಂಭಾಷಣೆಯನ್ನು ಬೆಳಸಿ ಅವರಿಂದ ಸನ್ಮಾನಹೊಂದಿ ಬಂದರು ಬಳಿಕ ಸ್ವಲ್ಪ ಹೊತ್ತಿನ ಮೇಲೆ ಲೇಡಿ ಹಾರ್ಡಿಂಗ್‌ರವರು ಮೋಟರಿನಲ್ಲಿ ಅರಮನೆಗೆ ಒತ್ತೈಸಿ ಮಹಾಮಾತೃಶ್ರೀಯವರಿಗೆ ಮರು ಭೇಟಿಯನ್ನಿತ್ತು ಮರ್ಯಾದೆಗಳನ್ನು ಹೊಂದಿ ವಾಪಸು ದಯಮಾಡಿದರು

ದೀಪೋತ್ಸವವೂ ಸಂಗೀತವೂ

ಅದೇ ಶುಕ್ರವಾರ ರಾತ್ರಿ ರಾಜಧಾನಿಯಲ್ಲಿ ದೀಪೋತ್ಸವವಾಯಿತು ವೈಸ್‌ರಾಯರವರು ದಯಮಾಡುವ ರಾಜಬೀದಿಗಳೂ, ಗವರ್ನ್‌ಮೆಂಟ್ ಹೌಸ್ ಕಟ್ಟಡವೂ, ಟೌನ್ ಹಾಲ್, ಲ್ಯಾನ್ಸ್‌ಡೌನ್ ಬಜಾರ್, ಪೋಸ್ಟ್ ಆಫೀಸ್ ಮುಂತಾದ ಕಟ್ಟಡಗಳೂ, ಕೋಟೆ ಬತೇರಿಗಳೂ, ಕರ್ಜನ್ ಪಾರ್ಕೂ, ಎಲ್ಲಾ ಲಕ್ಷಾಂತರ ದೀಪಗಳಿಂದ ಬೆಳಗುತ್ತಿದ್ದವು ಕೋಟೆಯೊಳಗೆ ಅರಮನೆಯ ಮುಂಭಾಗದ ಚೌಕದಲ್ಲೂ ಅರಮನೆಯ ಮೇಲಣ ಶಿಖರಗಳಲ್ಲೂ ವಿದ್ಯುಚ್ಛಕ್ತಿಯ ದೀಪಗಳ ಪಙ್ತಿಗಳು ಪ್ರಕಾಶಿಸುತ್ತಾ ರಾತ್ರಿಯನ್ನು ಹಗಲಾಗಿ ಮಾಡಿದ್ದವು ಸಹಸ್ರಾರು ಪ್ರಜೆಗಳು ಬೀದಿಗಳ ತುಂಬಾ ನಿಂತು ದೀಪೋತ್ಸವವನ್ನು ನೋಡಿ ಆನಂದಪಟ್ಟರು ಚಾಮುಂಡಿಬೆಟ್ಟದ ಮೇಲೆ ಅಗಾಧವಾದ ಉರಿಯನ್ನು ಹಾಕಿದ್ದರು

ರಾತ್ರಿ ಭೋಜನವನ್ನು ತೀರಿಸಿಕೊಂಡು ವೈಸ್‌ರಾಯ್ ದಂಪತಿಗಳು ಪರಿವಾರ ಸಮೇತ ಹತ್ತಾರು ಮೋಟರುಗಳಲ್ಲಿ ಗವರ್ನ್‌ಮೆಂಟ್ ಹೌಸಿನಿಂದ ಹೊರಟು ದೀಪೋತ್ಸವವನ್ನು ನೋಡುತ್ತಾ ಹರ್ಷಯುಕ್ತರಾಗಿ ಅರಮನೆಗೆ ಚಿತ್ತೈಸಿದರು ಅರಮನೆಯ ಒಳಗಡೆ ತೊಟ್ಟಿಯಲ್ಲಿ ರಾಚಾವಾರದವರೂ ಫಲ್ಕದವರೂ ದೀವಟಿಗೆಗಳನ್ನು ಹಿಡಿದು ಬ್ಯಾಂಡ್ ವಾದ್ಯದ ಲಯಕ್ಕೆ ಅನುಸಾರವಾಗಿ ಪಟ್ಟಾವರಸೆಗಳನ್ನೂ ಕಸರತ್ತುಗಳನ್ನೂ ಮಾಡಿ ತೋರಿಸಿದರು ಈ ಕಸರತ್ತುಗಳು ಬಹು ರಮ್ಯವಾಗಿಯೂ ತುಂಬಾ ತೃಪ್ತಿಕರವಾಗಿಯೂ ನಡೆದವು ಇವನ್ನೆಲ್ಲಾ ವೈಸ್‌ರಾಯರವರು ಪರಾಂಬರಿಸಿ ತುಂಬಾ ಮೆಚ್ಚಿಕೊಂಡರು

ಅಲ್ಲಿಂದ ಮುಂದೆ ಅಂಬಾವಿಲಾಸದಲ್ಲಿ ಅರಮನೆಯ ಸಂಗೀತವಿದ್ವಾಂಸರುಗಳ ವಿನಿಕೆಗಳು ನಡೆದವು ವೈಸ್‌ರಾಯಿ ದಂಪತಿಗಳೂ, ಶ್ರೀಮನ್ ಮಹಾರಾಜರವರೂ, ಯೂರೋಪಿಯನ್ ಅತಿಥಿಗಳೂ ದಯಮಾಡಿ ಪೀಠಾಸನಗಳನ್ನು ಅಲಂಕರಿಸಿ ಸಂಗೀತಗಾರರ ಹಾಡುಗಾರಿಕೆಯನ್ನೂ ವೀಣೆ ಮೊದಲಾದವುಗಳನ್ನು ನುಡಿಸಿದ್ದನ್ನೂ ಕೇಳಿ ಬಹಳ ಸಂತೋಷಪಟ್ಟರೆಂದು ತಿಳಿದುಬಂದಿದೆ ಆಗ ತಮ್ಮ ಪಾಂಡಿತ್ಯವನ್ನು ತೋರಿದ ವಿದ್ವಾಂಸರುಗಳ್ಯಾರೆಂದರೆ—

(1) ಮ॥ ಸುಬ್ಬಣ್ಣನವರು, ಮ॥ ಶೇಷಣ್ಣನವರ ಜಂಟಿ ವೀಣಾ ಗಾನ, ಮುಷರಾಫ್ ಮುತ್ತಯ್ಯನವರ ಮೃದಂಗ (2) ಮ॥ ಅಪ್ಪಾದೊರೆಐಯ್ಯಂಗಾರ್ರ ಜಲತರಂಗ ಇದಕ್ಕೆ ನಂಜನಗೂಡು ನಂಜಪ್ಪನವರ ತಬಲ (3) ಮ॥ ಮಗುರೆ ಕೃಷ್ಣಯ್ಯಂಗಾರ್ರ ಹಾಡುಗಾರಿಕೆ, ಇದಕ್ಕೆ ಎನ್ ನಂಜಪ್ಪನವರ ತಬಲ ಇವರೆಲ್ಲರ ಸಂಗೀತಕ್ಕೂ ಮ॥ ಸೀತಾರಾಮಯ್ಯನವರು ಮೂರ್ಚಿಂಗ್ ಬಾರಿಸಿದರು ಈ ಭಾಗವು ಘನವನ್ನೈದಿದ ಅತಿಥಿಗಳಲ್ಲಿ ವಿಶೇಷ ಆಶ್ಚರ್ಯವನ್ನೂ ಸಂತೋಷವನ್ನೂ ಉಂಟುಮಾಡಿತೆಂದು ಕೇಳುತ್ತೇವೆ

ಅಲ್ಲಿಂದ ಅವರೆಲ್ಲಾ ಇನ್ನೊಂದು ಕೊಟ್ಟಡಿಗೆ ಚಿತ್ತೈಸಿ ವಿದ್ಯುಚ್ಛಕ್ತಿಯಿಂದ ನುಡಿಸಲ್ಪಟ್ಟ ಅಮೂಲ್ಯವಾದ ಆರ್ಗನ್ ಎಂಬ ದೊಡ್ಡ ವಾದ್ಯದ ಗಾನಗಳನ್ನು ಲಾಲಿಸಿದರು ಇದನ್ನು ನುಡಿಸುವುದಕ್ಕೆ ನಮ್ಮ ಮಹಾರಾಜರವರು ಬಹು ವಿಶೇಷವಾದ ಏರ್ಪಾಡುಗಳನ್ನು ಮಾಡಿಸಿ ಗಟ್ಟಿಗರಾದವರನ್ನು ಪರಸ್ಥಳಗಳಿಂದ ಕರಸಿದ್ದರು ಈ ಇಂಗ್ಲಿಷ್ ಗಾಯನವು ಬಹಳ ಚೆನ್ನಾಗಿ ನಡೆಯಿತೆಂದು ತಿಳಿದು ಬರುತ್ತದೆ ಅದನ್ನೆಲ್ಲಾ ತೀರಿಸಿಕೊಂಡು ಅತಿಥಿಗಳು ಮಹಾರಾಜರವರನ್ನು ಬಹು ಪ್ರೀತಿಯಿಂದ ವಂದಿಸಿ ಬೀಳ್ಕೊಂಡು ಅರಮನೆಯಿಂದ ಹೊರಟು ತಮ್ಮ ಬಿಡಾರವನ್ನು ತಲುಪಿದರು

ಸೈನ್ಯದ ಕವಾತು

ತಾ 8 ನೇ ಶನಿವಾರ ಬೆಳಿಗ್ಗೆ 8 ಗಂಟೆಗೆ ಶ್ರೀಮನ್ ಮಹಾರಾಜರವರು ವೈಸ್‌ರಾಯ್ ಪ್ರಭುಗಳನ್ನು ಕರೆದುಕೊಂಡುಹೋಗಿ ಮೈಸೂರು ಸಂಸ್ಥಾನದ ಮತ್ತು ಅರಮನೆಯ ಸೈನಿಕರ ಕವಾತನ್ನು ತೋರಿಸಿದರು ಚಾಮುಂಡಿ ಬೆಟ್ಟದ

ತಪ್ಪಲಲ್ಲಿರುವ ಹೊಸ ಜೂಜಿನ ಮೈದಾನವು ಬಹು ಮನೋಹರವಾಗಿ ಮಾಡಲ್ಪಟ್ಟಿತ್ತು. ಇಂಪೀರಿಯಡ್ ಸರ್ವಿಸ್, ಲೋಕಲ್ ಸರ್ವಿಸ್, ಮಹಾರಾಜರವರ ಬಾಡಿ ಗಾರ್ಡ್ ಎಂಬ ಕುದುರೆ ಸೈನಿಕರೂ, ಅರಮನೆಯ ಮತ್ತೂ ಕವಾಯತ್ ಬಾರ್ ಸಿಪಾಯಿಗಳೂ, ಅರಮನೆಯ ರಾಟವಾರ್ ಮತ್ತೂ ಭಲ್ಯಸಿಪಾಯಿಗಳೂ ಎಲ್ಲಾ ಆ ವಿಸ್ತಾರವಾದ ಮೈದಾನಿನಲ್ಲಿ ಸಾಲುಕಟ್ಟಿ ಪ್ರತ್ಯೇಕ ಪ್ರತ್ಯೇಕವಾಗಿ ನಿಂತು ಚತುರತೆಯನ್ನು ತೋರ್ಪಡಿಸಿದರು. ಕರ್ನಲ್ ದೇಶರಾಜೇ ಅರಸಿನವರು ಸೈನ್ಯಾಧಿಪತ್ಯವನ್ನು ವಹಿಸಿ ಸೈನಿಕರ ಸಾಮರ್ಥ್ಯವನ್ನು ಪ್ರಭುಗಳಿಗೆ ಕಾಣಿಸಿದರು. ಕಡೆಗೆ ವೈಸ್‌ರಾಯರವರೂ ಮಹಾರಾಜರವರೂ ಕುದುರೆಗಳ ಮೇಲೆ ಕುಳಿತು 31 ತೋಪುಗಳು ಆಗುತ್ತಿರುವಲ್ಲಿ ಹೊರಟು ಸಾಲುಕಟ್ಟಿ ನಿಂತಿದ್ದ ಸೈನಿಕರ ಮಧ್ಯೆ ತಿರುಗಾಡಿಕೊಂಡು ಸೈನಿಕರು ಮಾಡಿದ ಸನ್ಮಾನವನ್ನು ಸ್ವೀಕರಿಸಿ ವಾಪಸು ಬಂದು ಬಾವುಟ ನಿಲ್ಲಿಸಿದ್ದ ಧ್ವಜದ ಬಳಿಗೆ ದಯಮಾಡಿದರು. ಸೈನಿಕರೆಲ್ಲಾ ತಮ್ಮ ತಮ್ಮ ರೆಜಿಮೆಂಟಿನ ಬ್ಯಾಂಡ್ ವಾದ್ಯದ ಸಮೇತ ವೈಸ್‌ರಾಯರವರ ಎದುರಿಗೆ ಹಾಸಿಹೋದರು. ವೈಸ್‌ರಾಯರವರು ಸೈನಿಕರ ಕವಾಯತನ್ನೂ ಅವರ ಸಾಮರ್ಥ್ಯವನ್ನೂ ಅವರ ಚಟುವಟಿಕೆಯನ್ನೂ ಪರಾಂಬರಿಸಿ ಮೆಚ್ಚಿಕೊಂಡು ತಮ್ಮ ಸಂತೋಷವನ್ನು ಮಹಾರಾಜರವರಿಗೂ ಸೈನ್ಯಾಧಿಪತಿಗಳಿಗೂ ತಿಳಿಸಿ, ಸೈನಿಕರಿಗೆಲ್ಲಾ ಆ ತಮ್ಮ ಅಭಿಮತವನ್ನೂ ಸಂತೋಷವನ್ನೂ ತಿಳಿಸಬೇಕೆಂದು ಅಪೇಕ್ಷಿಸಿದರು.

ಬಾಡಿ ಗಾರ್ಡಿಗೆ ಬಾವುಟದ ಬಹುಮಾನ.

ಬಳಿಕ ಸೈನಿಕರೆಲ್ಲಾ ಮೈದಾನದಲ್ಲಿ ಒಂದು ಸಣ್ಣ ಚೌಕಟ್ಟಿನಂತೆ ಸೇರಿಸಿ ನಿಂತುಕೊಂಡರು. ನಮ್ಮ ಮಹಾರಾಜರವರ ಅಂಗರಕ್ಷಕರಾದ ಬಾಡಿ ಗಾರ್ಡ್ ಎಂಬ ತುರುಫ್ ಸವಾರರ ಸೈನ್ಯವು ಅದರ ಅಧಿಪತಿಯಾದ ಮ|| ಗೋಪಾಲರಾಯರ ತಾಬೆಯಲ್ಲಿ ಮಧ್ಯೆ ನಿಂತುಕೊಂಡಿತು. ವೈಸ್‌ರಾಯರವರು ಮಹಾರಾಜರವರ ಕೂಡ ಸವಾರಿಮಾಡಿಕೊಂಡು ಹೋಗಿ ಅಂಗರಕ್ಷಕರನ್ನು ಆಜಮಾಯಿಷಿ ಮಾಡಿ ಸಂತೋಷಪಟ್ಟರು. ಮಹಾರಾಜರವರು ಭಂಗಾರದ ಪಂಚ ಕಲಶ ಸಹಿತವಾದ ಹೊಸ ಬಾವುಟವನ್ನು ವೈಸ್‌ರಾಯ ಪ್ರಭುಗಳ ಕೈಗೆ ಒಪ್ಪಿಸಿ, ಅದನ್ನು ಆ ಸೈನ್ಯಕ್ಕೆ ಬಹುಮಾನಮಾಡಬೇಕೆಂದು ಪ್ರಾರ್ಥಿಸಿಕೊಂಡರು. ಆ ಸಂದರ್ಭದಲ್ಲಿ ಅವರು ಪ್ರಭುಗಳನ್ನು ಕುರಿತು ಹೇಳಿದ್ದೇನೆಂದರೆ—

ನನ್ನ ಅಂಗರಕ್ಷಕರಾದ ಈ ಸೈನ್ಯಕ್ಕೆ ಒಂದು ಧ್ವಜವನ್ನು ಕೊಡಬೇಕೆಂದು ನನಗೆ ಬಹಳ ಕಾಲದಿಂದ ಕುತೂಹಲವುಂಟಾಗಿದೆ. ತಾವು ದಯಮಾಡಿರುವ ಈ ಸುಸಮಯದಲ್ಲಿ ಅದನ್ನು ತಮ್ಮ ಹಸ್ತದಿಂದ ಅವರಿಗೆ ಕೊಡಿಸಬೇಕೆಂದು ಪ್ರಯತ್ನಪಟ್ಟಿರುತ್ತೇನೆ. ಈ ನನ್ನ ಕುತೂಹಲವನ್ನು ನೆರವೇರಿಸುವುದಕ್ಕೆ ತಾವು ಒಪ್ಪಿಕೊಂಡಿರುವ ಭಾಗದಲ್ಲಿ ನಾನು ತುಂಬಾ ಕೃತಜ್ಞನಾಗಿರುವೆನು. ನಮ್ಮ ಈ ಸೈನ್ಯದ ಹುದ್ದೇದಾರರೂ ಸವಾರರೂ ತಮ್ಮ ಹಸ್ತದಿಂದ ಒಪ್ಪಿಸಲ್ಪಡುವ ಈ ಧ್ವಜವನ್ನು ಅಪರಿಮಿತವಾದ ಗೌರವಯುಕ್ತವಾದದ್ದೆಂದು ಎಣಿಸಿ, ಎಂದೆಂದಿಗೂ ಕೃತಜ್ಞರಾಗಿರುವರೆಂದು ನಾನು ಖಂಡಿತವಾಗಿ ಹೇಳಬಲ್ಲೆನು.

ಆಗ ವೈಸ್‌ರಾಯರವರು ತಮ್ಮ ಮಹದಾನಂದವನ್ನು ಪ್ರಕಾಶಪಡಿಸಿ ಆ ಧ್ವಜವನ್ನು ಸೈನ್ಯದ ಹುದ್ದೇದಾರರಿಗೆ ಸ್ವಹಸ್ತ ಒಪ್ಪಿಸಿ, ಈ ಬಹುಮಾನದ ಮಹತ್ವವನ್ನು ಅವರು ತಿಳಿದು ಅದನ್ನು ಕಾಪಾಡಿಕೊಂಡು ಬರುವುದರಲ್ಲಿ ಸಾಹಸಪಡುತ್ತಾರೆಂದು ಹೇಳಬಲ್ಲೆನು ಎಂಬದಾಗಿ ಅಪ್ಪಣೆ ಕೊಡಿಸಿದರು.

ಆ ದಿನ ನಡೆದ ಕವಾತು ಬಹು ಅಪೂರ್ವವಾಗಿಯೂ, ಅತ್ಯಂತ ನೇತ್ರಾನಂದಕರವಾಗಿಯೂ ಇತ್ತು. ವೈಸ್‌ರಾಯರವರು ತಮ್ಮ ಸಂತೋಷವನ್ನು ತಿಳಿಯಪಡಿಸಿ ಅಲ್ಲಿಂದ ವಾಪಸು ಗವರ್ನ್‌ಮೆಂಟ್ ಹೌಸಿಗೆ ದಯಮಾಡಿಸಿದರು.

ಶ್ರೀರಂಗಪಟ್ಟಣಕ್ಕೆ ದಯಮಾಡಿದ್ದು

ಶನಿವಾರ ಮಧ್ಯಾಹ್ನ 3½ ಘಂಟೆಗೆ ವೈಸರಾಯ್ ದಂಪತಿಗಳು ಮಹಾರಾಜರೊಡನೆ ಪರಿವಾರ ಸಮೇತ ಮೋಟರುಗಳಲ್ಲಿ ರಾಜಧಾನಿಯಿಂದ ಶ್ರೀರಂಗಪಟ್ಟಣಕ್ಕೆ ದಯಮಾಡಿ, ಅಲ್ಲಿನ ಚರಿತ್ರಾರ್ಹವಾದ ಕಟ್ಟಡಗಳನ್ನೂ ಸ್ಥಳಗಳನ್ನೂ ಪರಾಂಬರಿಸಿದರು. 104 ವರ್ಷಗಳ ಹಿಂದೆ ಕ್ಯಾಪ್ಟನ್ ಡಿ ಹಾವಿಲ್ಲೆಂಡ್ ಎಂಬ ಪ್ರಸಿದ್ಧ ಇಂಜನಿಯರು ಕಟ್ಟಿರುವ ಕಮಾನು, ಇಂಗ್ಲಿಷರು 1799 ನೇ ಮೇ ತಾ 4 ರಲ್ಲಿ ಹಲ್ಲಾ ಹತ್ತಿದ ಸ್ಥಳ, ಅಲ್ಲಿ ನಮ್ಮ ಮಹಾರಾಜರವರು 1907 ರಲ್ಲಿ ಕಟ್ಟಿಸಿರುವ ಜ್ಞಾಪಕಾರ್ಥವಾದ ಸ್ತಂಭ, ಅಲ್ಲಿಂದ ಮುಂದೆ ಟೀಪೂಸುಲ್ತಾನನು ಸತ್ತು ಬಿದ್ದಿದ್ದ ಸ್ಥಳವೆಂದು ಹೇಳುವ ನದೀ ಕೋಟೆ ಬಾಗಿಲು, ಅದರ ಸಮೀಪದಲ್ಲಿ ಟೀಪೂಸುಲ್ತಾನನು ಕೈಸೆರೆ ಹಿಡಿದ ಇಂಗ್ಲಿಷ್ ಸಿಪಾಯಿಗಳನ್ನು ಇಟ್ಟಿದ್ದ ನೆಲಮಾಳಿಗೆಗಳು, ಪ್ರಸಿದ್ಧವಾದ ಶ್ರೀರಂಗನಾಥಸ್ವಾಮಿ ದೇವಸ್ಥಾನ, ಲಾಲ್ ಬಾಗ್ ಉದ್ಯಾನ, ಈ ಮುಂತಾದ ಸ್ಥಳಗಳನ್ನು ನೋಡಿಕೊಂಡು ದರಿಯಾ ದವಲತ್ ಬಾಗ್ ಎಂಬ ದಿವ್ಯವಾದ ಬಂಗಲೆಗೆ ದಯಮಾಡಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು, ಅದರ ರಚನೆಯನ್ನೂ ಅಲಂಕಾರ ಕಟ್ಟಡಗಳನ್ನೂ ಗೋಡೆಗಳ ಮೇಲೆ ಯುದ್ಧಗಳನ್ನು ವಿವರಿಸಿ ಬಿಡಿಸಿರುವ ಚಿತ್ರಗಳನ್ನೂ ನೋಡಿಕೊಂಡು, ಹಿಂತಿರುಗಿ ಕತ್ತಲಾದ ಮೇಲೆ ರಾಜಧಾನಿಗೆ ಚಿತ್ತೈಸಿದರು. ಅಲ್ಲಿ ಪೊಲೀಸ್ ಬಂದೋಬಸ್ತು ಕಟ್ಟುನಿಟ್ಟಾಗಿಯೂ, ತೃಪ್ತಿಕರವಾಗಿಯೂ ಇತ್ತು. ಸ್ಥಳಾಧಿಕಾರಿಗಳು ಬಹು ನೇತ್ರಾನಂದಕರವಾಗಿ ಎಲ್ಲಾ ಭಾಗಗಳನ್ನೂ ಅಲಂಕರಿಸಿ ಸಿದ್ಧಪಡಿಸಿದ್ದರು.

ಅರಮನೆಗೆ ದಯಮಾಡಿದ್ದು

ತಾ 9 ನೇ ಭಾನುವಾರ ವೈಸ್‌ರಾಯ್ ದಂಪತಿಗಳು ಅರಮನೆಗೆ ದಯಮಾಡಿ ಆಯುಧಶಾಲೆಯಲ್ಲಿ ಪೇರಿಸಿರುವ ಬಗೆ ಬಗೆಯ ಪ್ರಾಚೀನಕಾಲದ ಆಯುಧಗಳನ್ನೂ, ಮಹಾರಾಜರವರ ಬೊಕ್ಕಸದಲ್ಲಿ ಅಣಿಮಾಡಿ ಇಟ್ಟಿದ್ದ ದಿವ್ಯವಾದ ರತ್ನಾಭರಣಗಳನ್ನೂ, 1699 ನೇ ಇಸವಿಯಲ್ಲಿ ಚಕ್ರವರ್ತಿಯಾಗಿದ್ದ ಔರಂಗಜೇಬನಿಂದ ರಾಯಭಾರಿಗಳ ಮೂಲಕ ಚಿಕ್ಕ ದೇವರಾಜ ಒಡೆಯರವರಿಗೆ ಬಹುಮಾನವಾಗಿ ಕಳುಹಿಸಲ್ಪಟ್ಟಿತೆಂಬ ಸಿಂಹಾಸನವನ್ನೂ ಪರಾಂಬರಿಸಿಕೊಂಡು ವಾಪಸು ಗವರ್ನ್‌ಮೆಂಟ್ ಹೌಸಿಗೆ ಚಿತ್ತೈಸಿದರು.

ಕಿಡ್ಡಾ ಕ್ಯಾಂಪಿಗೆ ದಯಮಾಡಿದ್ದು

ಭಾನುವಾರ ಮಧ್ಯಾಹ್ನ ಮಹಾರಾಜರವರು ವೈಸ್‌ರಾಯ್ ದಂಪತಿಗಳನ್ನೂ ಅವರ ಪರಿವಾರಕ್ಕೆ ಸೇರಿದ ಅಧಿಕಾರಿಗಳನ್ನೂ ಬ್ರಿಟಿಷ್ ರೆಸಿಡೆಂಟರೇ ಮೊದಲಾದವರನ್ನೂ ಕರೆದುಕೊಂಡು ಮೋಟರುಗಳಲ್ಲಿ ರಾಜಧಾನಿಯಿಂದ ಸುಮಾರು 16 ಮೈಲಿ ದೂರದಲ್ಲಿರುವ ಕೆಡ್ಡಾ ಕ್ಯಾಂಪಿಗೆ ದಯಮಾಡಿದರು. ಅಲ್ಲಿ ಅರವತ್ತೈದು ಆನೆಗಳನ್ನು ಹಿಡಿದು ಓಡಿಸಿ ಕಟ್ಟುಹಾಕಿದ್ದನ್ನು ವೈಸ್‌ರಾಯ್ ದಂಪತಿಗಳು ಪರಾಂಬರಿಸಿ ತುಂಬಾ ಸಂತೋಷಪಟ್ಟರು. ಕೆಲವು ದಿನ ಮಹಾರಾಜರವರ ಕೂಡ ಪ್ರಭುಗಳು ಷಿಕಾರಿಗಾಗಿ ಜಂಗಲುಗಳಿಗೆ ಹೋಗಿಬಂದರು. ವೈಸ್‌ರಾಯರವರು ಅಲ್ಲಿ ಎಂಟು ದಿನಗಳ ತನಕ ಇದ್ದು ಕೆಡ್ಡಾ ಕಾರ್ಯಗಳನ್ನೂ ಷಿಕಾರಿಯನ್ನೂ ಪೂರೈಸಿಕೊಂಡು ತಾ 17 ನೇ ಸೋಮವಾರ ರಾತ್ರಿ ಸುಮಾರು 8 ಘಂಟೆಹೊತ್ತಿಗೆ ಅಲ್ಲಿಂದ ಹಿಂತಿರುಗಿ ಮಹಾರಾಜರವರ ಕೂಡ ರಾಜಧಾನಿಗೆ ಚಿತ್ತೈಸಿದರು. ರಸ್ತೆಯ ಉದ್ದಕ್ಕೂ ರಮ್ಯವಾದ ದೀಪಗಳನ್ನು ಹಚ್ಚಿ ಕಟ್ಟುನಿಟ್ಟಾದ ಪೊಲೀಸ್ ಪಹರೆಯನ್ನು ನೇಮಿಸಿದ್ದರು.

ಕನ್ನಂಬಾಡಿ ತಲಾವು

ಮಂಗಳವಾರ ಮಧ್ಯಾಹ್ನ ವೈಸ್‌ರಾಯರವರು ಮಹಾರಾಜರವರ ಕೂಡ ಪರಿವಾರ ಸಮೇತ ಮೋಟರುಗಳಲ್ಲಿ ರಾಜಧಾನಿಯಿಂದ ಸುಮಾರು 11 ಮೈಲಿ ದೂರದಲ್ಲಿರುವ ಕನ್ನಂಬಾಡಿಗೆ ದಯಮಾಡಿ, ಮೈಸೂರು ಗವರ್ನ್‌ಮೆಂಟಿನವರು ಅಲ್ಲಿ ಕಟ್ಟುತ್ತಿರುವ ಬಹು ವಿಸ್ತಾರವಾದ ಅಣೆಯ ಕಾಮಗಾರಿಯನ್ನೂ ಕೆರೆಕಟ್ಟುವ ಪ್ರದೇಶಗಳನ್ನೂ ಚೆನ್ನಾಗಿಯೂ ಸಾವಧಾನದಿಂದಲೂ ಪರಾಂಬರಿಸಿ ಆಜಮಾಯಿಷಿಮಾಡಿ ಸಾಯಂಕಾಲ ಹಿಂತಿರುಗಿ ವಾಪಸು ರಾಜಧಾನಿಯನ್ನು ತಲಪಿದರು.

ರಾಜಧಾನಿಯಿಂದ ದಯಮಾಡಿದ್ದು

ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್ ದಂಪತಿಗಳು ರಾಜಧಾನಿಯಲ್ಲಿ ನಡೆದ ಆತಿಥ್ಯಗಳನ್ನೆಲ್ಲಾ ಪೂರೈಸಿಕೊಂಡು ತಾ 18ನೇ ಮಂಗಳವಾರ ರಾತ್ರಿ ಭೋಜನಾನಂತರ ಸ್ಪೆಷಲ್ ರೈಲು ಹತ್ತಿ 11 ಘಂಟೆಗೆ ಪರಿವಾರ ಸಮೇತ ರಾಜಧಾನಿಯನ್ನು ಬಿಟ್ಟು ಬೇಗಳೂರನ್ನು ಕುರಿತು ದಯಮಾಡಿದರು. ಮಹಾರಾಜರವರು, ಯುವರಾಜರವರು, ದಿವಾನ್‌ರವರು ಸ್ಟೇಷನ್ನಿನಲ್ಲಿ ಕಾದಿದ್ದು ಪ್ರಭುಗಳನ್ನು ಸಾಗಕಳುಹಿಸಿದರು. ನೆನ್ನೆ ಬೆಳಗ್ಗೆ ಗೌರವಾರ್ಥವಾದ 31 ತೋಪುಗಳು ಕೋಟೆಕೊತ್ತಲದಿಂದ ಹಾರಿಸಲ್ಪಟ್ಟವು.

ಕನ್ನಡ ಲಾ ಪುಸ್ತಕಗಳ್

[160 16]

ಗೌರ್ನರ್ ಜನರಲ್‌ರವರ ಹುಕುಂ ಪ್ರಕಾರ ಎಲ್ಲಾ ದೇಶಗಳಲ್ಲಿಯೂ ಜಾರಿಯಲ್ಲಿರುವ ಕನ್ನಡ ಇಂಡಿಯನ್ ಪೆನಲ್‌ಕೋಡು ಕ್ರಯ ರೂ 2-0 0 ವ್ಯವಹಾರನಿರ್ಣಯ ವಿಧಿ ಎಂಬ ಸಿವಲ್ ಪ್ರೊಸೀಜರ್ ಯಾನೆ 4 ಭಾಗಗಳುಳ್ಳದ್ದು ರೂ 3 0 0 ಪ್ರಶ್ನೋತ್ತರ ಲೇಖ್ಯಬೋಧಿನಿ—ಈ ಪುಸ್ತಕದಲ್ಲಿ ಸಿವಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ವ್ಯವಹಾರ ವಿಧಿಗಳನ್ನು ಬೋಧಿಸಿ ವದು ಕ್ರಯ ರೂ 1-4 0 ತಾನಾಗಿ ಸ್ವತಃ ಇಂಗ್ಲೀಷ್ ಕಲಿಯುವದು—ರೂ 1 8 0 ಇವುಗಳಲ್ಲಿ ಕೆಲವು ಮುದ್ರಣವಾಗುತ್ತಿದೆ. ಇನ್ನೂ ಪುಸ್ತಕಗಳು ಅಪೇಕ್ಷಿಸುವವರು ನಮ್ಮ ಪುಸ್ತಕಗಳ ಕ್ಯಾಟಲಾಗಿಗೆ ಬರೆಯಿರಿ. ನಮಗೆ ಪ್ರತಿ ಒಂದು ತಾಲ್ಲೂಕುಗಳಲ್ಲಿಯೂ ಏಜಂಟರು ಬೇಕಾಗಿದೆ. ಅವರ ಶಕ್ತ್ಯಾನುಸಾರ ತಲಬು ಕೊಡಲ್ಪಡುತ್ತೆ.

ವಿಳಾಸ—ಬಿ. ನರಸಿಂಗರಾವ್,
ಎಡಿಟರ್, "ಲಾ ಗೆಜಿಟ್," ಬೆಂಗಳೂರು.

ಸನ್ ೧೮೭೬ ರಿಂದ ೧೯೧೩ ವರೆಗೆ

ಕಾಲದ ಪರೀಕ್ಷೆ !

ಮೂವತ್ತೇಳು ವರ್ಷಗಳಿಗಿಂತಲೂ ಹೆಚ್ಚಾಗಿ

SCOTT'S EMULSION

2-47

(ಸ್ಕಾಟ್ಸ್ ಇಮಲ್‌ಷನ್)

ಎಂಬ ಸೇವನಾ ಔಷಧಿಯನ್ನು ಸನ ಪಂಡಿತರೆಲ್ಲಾ ಅನೇಕ ವೇಳೆ ಪರಿಶೋಧನೆ ಮಾಡಿ ಸರ್ವೋತ್ತಮವಾದದ್ದೆಂದು ಹೇಳಿರುತ್ತಾರೆ.

ಆದದರಿಂದ ಮುಂದೆ ಹೇಳುವ ರೋಗಗಳಿಗೆ ಪ್ರಪಂಚದಲ್ಲೆಲ್ಲಾ ಈಗ ಈ ಔಷಧವು ಸರ್ವ ಶ್ರೇಷ್ಠವಾದದ್ದಾಗಿ ಪರಿಣಮಿಸಿದೆ —

ಶ್ವಾಸಕೋಶದ ಅಕ್ರಮಗಳು, ನಾನಾ ತರದ ಕೆಮ್ಮಲು
ಸಕಲವಿಧ ಕ್ಷಿತ್ತಗಳು, ಮಾಂಸಖಂಡಗಳ ಕ್ಷೀಣತೆ
ಆಹಾರದಲ್ಲಿ ಅರುಚಿ

ಇವಲ್ಲದೆ ತಂದೆಗೂ ಮಗನಿಗೂ ಬಲಕಾರಿಯಾದ ಮತ್ತು ಅಂಗ ಬೆಳಸುವ ಸೇವನಾ ಔಷಧವೂ ಇದೇ

ಕೈಸೋಕದೆ ತಯಾರಾದದ್ದು

ಔಷದಗಳ ಅಂಗಡಿಗಳಲ್ಲೆಲ್ಲಾ ಬಿಕರಿಯಾಗುವದು

ಸ್ಕಾಟ್ ಅಂಡ್ ಬೌನ್, ಲಿಮಿಟಡ್,
ಔಷದಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

Always get the Emulsion with this mark—the Fishman—the mark of the "Scott" process!

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ನಿನಗೆ ಮೈ ಸ್ವಸ್ಥವಿಲ್ಲವೋ ?

ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ ನಿನಗೆ ಯಾವ ನೋವೇ ಉಂಟಾಗಿರಲಿ—"ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತದೆಯೋ ?" ಎಂದು ನಿನ್ನನ್ನು ನೀನೇ ಕೇಳಿಕೋ. ಹಾಗೆ ಆಗದಿದ್ದರೆ ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ನುಂಗೆದುಕೋ. ಮಾರನೇ ದಿನ ಬೆಳಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನಿನಗೆ ಮೈ ಸ್ವಸ್ಥವಾಗುವುದು.

(೧೨ ಆಣೆ ಬುಡ್ಡಿ ಪರಿಯಾಣ)

ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಪರಿಣಮಿಸುವುದು. ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು. ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು. ಆ ರೋಗಗಳಾವುವೆಂದರೆ —ಪಿತ್ತಕೋಶ ರೋಗ, ಪಿತ್ತ, ಪಿತ್ತಜ್ವರ, ಅಜೀರ್ಣ, ಅಗ್ನಿಮಾಂದ್ಯ, ಗಾಬರಿ, ಅಶಕ್ತಿ, ಎದೆಯು ತಲ್ಲಣಿಸುವುದು, ತಲೆತಿರುಗುವುದು, ತಲೆನೋವು, ಹೊಟ್ಟೆಯುಬ್ಬರ, ಹುಳಿತೇಗಿನ ಹೊಟ್ಟೆನೋವು, ಬೆಂಗಾರ ವ್ಯಾಧಿಗಳು, ಇವೇ ಮೊದಲಾದವು. ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು.

ಡೋನ್‌ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು. ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕೆಟ್ಟಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತಳ್ಳಿ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ, ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ಬೇಗ ನೋವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು. [181 11]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ. ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು. ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುದು ಅಥವಾ ಡೋನ್, ಪಿ ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಷಿಕಾರಿಪುರ, ಶಿರಾಳಕೊಪ್ಪ ಪ್ರಾಂತ್ಯಗಳಲ್ಲಿ ವೃತ್ತಾಂತ ಪತ್ರಿಕೆಗಳ ವಿತರಣೆಯ ಪ್ರಕಟಣೆ

ಷಿಕಾರಿಪುರ, ಶಿರಾಳಕೊಪ್ಪ ತಾಲ್ಲೋಕ್ ಹೋಬಳಿ ಗ್ರಾಮಗಳ ಪ್ರತಿನಿಧಿಕರು ಪ್ರಸ್ತುತಕಾಲದ ನಾಗರಿಕತೆಯನ್ನು ಅನುಸರಿಸಿ ವರ್ತಮಾನ ಪತ್ರಿಕೆಗಳನ್ನು ಓದಲು ಅಪೇಕ್ಷಿಸುವವರಾಗಿರುವದರಿಂದ ನಾವು ಇಂಥಾವರುಗಳಿಗೆ ಟಪಾಲು ಖರ್ಚು ಬೀಳದಂತೆಯೂ ಪತ್ರಿಕೆಗಳು ಸಕಾಲಕ್ಕೆ ಕ್ರಮವಾಗಿ ಸಿಕ್ಕುವಂತೆಯೂ ಅನುಕೂಲಪಡಿಸಿರುತ್ತೇವೆ. ಹ್ಯಾಗೆಂದರೆ—

ಷಿಕಾರಿಪುರ —ಪ್ರತಿ ಶನಿವಾರ ಸಂತೆಯ ದಿವಸ ಅಲ್ಲಿನ ವೆಸ್ಲಿಯನ್ ಮಿಷನ್ ಗರಲ್ಸ್ ಸ್ಕೂಲಿನಲ್ಲಿ "ವೃತ್ತಾಂತ ಪತ್ರಿಕೆ" ಗಳು ಮಾರಲ್ಪಡುವವು. ಜನರು ಸಂತೆಗೆ ಹೋದಾಗ್ಗೆ ಬಹು ಸುಲಭವಾಗಿ ಪತ್ರಿಕೆಗಳನ್ನು ಪಡೆಯಬಹುದು.

ಶಿರಾಳಕೊಪ್ಪ —ಪ್ರತಿ ಭಾನುವಾರವೂ (ಸಂತೆಯ ದಿನ) ಶಿರಾಳಕೊಪ್ಪದ ಟವನ್ ಪಟೇಲರಾಗಿರುವ ಮ|| ರಾ|| ಗುರುಶಾಂತಪ್ಪಯ್ಯನವರ ಮೂಲಕ ಪತ್ರಿಕೆಗಳನ್ನು ಸುಲಭವಾಗಿ ಹೊಂದಬಹುದು.

ಪೈ ಅಬ್ರಹಮ, ಏಜಂಟ್, ಷಿಕಾರಿಪುರ

ಶ್ವಾಸಕೇಸರಿ ಲೇಹ್.

ಅಸ್ತ್ಮಕ್ಕೆ ತಪ್ಪದೆ ತತ್‌ಕ್ಷಣ ಗುಣಕೊಡುತ್ತೆ.

ಅಸ್ತ್ಮಾ ಕಾಯಿಲೆಯು ಎಷ್ಟೇ ಹಳೇದಾಗಿದ್ದರೂ ಎಷ್ಟೇ ಕಠಿಣವಾಗಿದ್ದರೂ ಈ ಲೇಹವನ್ನು ಮೂರು ವಾರ ಸೇವಿಸುವುದರೊಳಗೆ ಖಂಡಿತವಾಗಿ ಪೂರ್ಣ ಗುಣ ಮಾಡುತ್ತೆ. ಇದು ಚೆನ್ನಾಗಿ ಪರೀಕ್ಷಿಸಿ ನೋಡಿದ ಔಷಧ. ಸಾವಿರಾರು ಜನರು ಉಪಯೋಗಿಸಿ ಸೌಖ್ಯ ಹೊಂದಿದಾರೆ. ದೃಷ್ಟಾಂತಕ್ಕಾಗಿ ಈಗತಾನೇ ನಮಗೆ ಬಂದಿರುವ ಯೋಗ್ಯತಾಪತ್ರಿಕೆಯನ್ನು ಕೆಳಗೆ ಪ್ರಕಟಿಸಿರುತ್ತೇವೆ. ಓದಿನೋಡಿ.

20 ತೊಲಾ ಲೇಹದ ಟಿನ್ ಡಬ್ಬಕ್ಕೆ ಕ್ರಯ ರೂ 1-8-0

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,
[82-10] 177 ಚೀನಾ ಬಜಾರ್ ರೋಡ್, ಮದ್ರಾಸು

ಈ ಯೋಗ್ಯತಾ ಪತ್ರವನ್ನು ಪಲ್ಲವಪುರದ ಸೂಪರಿಂಟೆಂಡಿಂಗ್ ಇಂಜನಿಯರ್ ಆಫೀಸ್ ಕ್ಲಾರ್ಕ್ ಮ|| ಎ ಭೀಮರಾವ್ ಮೊದಲಿಯಾರ್ರು ತಾ 21 10 1913 ರಲ್ಲಿ ಬರೆಯುತ್ತಾರೆ —"ನಾನು ಬಹುಕಾಲದಿಂದ ಅಸ್ತ್ಮಾ ರೋಗದಲ್ಲಿ ನರಳುತ್ತಿದ್ದೆನು. ಅನೇಕ ಹೆಸರುವಾಸಿಯಾದ ಡಾಕ್ಟರುಗಳಿಂದಲೂ ಹಕೀಮರಿಂದಲೂ ಅನೇಕ ಔಷದಗಳನ್ನು ತೆಗೆದುಕೊಂಡಾಗ್ಯೂ ನನ್ನ ಉಬ್ಬಸರೋಗವು ಹರಿಯಲಿಲ್ಲ. ಕಡೆಗೆ ನಿಮ್ಮ ಶ್ವಾಸಕೇಸರಿ ಲೇಹ್ಯವನ್ನು ಸೇವಿಸಿನೋಡೋಣವೆಂದು ಕುತೂಹಲಪಟ್ಟು ತೆಗೆದುಕೊಂಡೆನು. ನಿಮ್ಮ ಈ ಎರಡು ಟಿನ್ ಲೇಹ್ಯ ಮುಗಿಯುವಷ್ಟರಲ್ಲಿ ನನ್ನ ಭಯಂಕರವಾದ ರೋಗವು ವಾಸಿಯಾಗಿದೆ ಎಂದು ತಿಳಿಸಲು ಆನಂದಪಡುತ್ತೇನೆ. ಈ ನನ್ನ ಅಭಿಲಾಷೆಯನ್ನೂ ಅನುಭವವನ್ನೂ ನೀವು ದಯವಿಟ್ಟು ಪಬ್ಲಿಕ್ ಜನರಿಗೆಲ್ಲಾ ತಿಳಿಸಿ."

ಪಂಡಿತ್ ಎಸ್. ಗರಳಪುರಿಯವರ

ಪ್ರಖ್ಯಾತಿ ಹೊಂದಿದ ಓರಿಯಂಟಲ್ ಫಾರ್ಮಸಿ, ಮೈಸೂರು

ಕಸ್ತೂರಿ ಮಾತ್ರೆ —ಶ್ರೇಷ್ಠಕರ ವನಸ್ಪತಿಗಳು, ಮುತ್ತು ಹವಳ, ಕಸ್ತೂರಿಗಳಿಂದ ತಯಾರಿಸಿದ್ದು. ಜಲದೋಷ, ಅರುಚಿ, ಮೈ ಕೈ ತಲೆನೋವುಗಳಿಗೆ ಸಂಜೀವನ. ಇದನ್ನು ತಾಂಬೂಲದ ಸಂಗಡ ಪ್ರತಿ ದಿನವೂ ಸೇವಿಸಿದರೆ ಪ್ಲೇಗು ಕಾಲರಾ ಮುಂತಾದ ಸಾಂಕ್ರಾಮಿಕ ವ್ಯಾಧಿಗಳಿಂದ ಖಂಡಿತ ಕಾಪಾಡುತ್ತೆ. 300 ಮಾತ್ರೆಗೆ 1 ಆಣೆ 6 ಶೀಸೆಗೆ ರೂ 1 1 0

ಬಾಲಸಂಜೀವಿನಿ —8 ವರ್ಷದೊಳಗೆ ಮಕ್ಕಳಿಗೆ ಬರುವ ಎಲ್ಲಾ ವಿಧ ಜ್ವರ, ಶೀತ, ನೆಗಡಿ, ಕೆಮ್ಮಲು, ವಾಯು, 3 ಪಕ್ಷಿ, ಎಳತ, ಸಳತ, ಇವಕ್ಕೆಲ್ಲಾ ಅಮೃತ. 100 ವರ್ಷದ ಅನುಭವಸಿದ್ಧವಾದದ್ದು. 20 ಸಲದ ಔಷಧಿಗೆ 4 ಆಣೆ 1 ತೊ ಲೆಗೆ ರೂ 1 8 0

ಜ್ವರದ ಮಾತ್ರೆ —ಸಮಸ್ತವಿಧ ಜ್ವರಗಳಿಗೂ ಖಾತರಿ ಅಮೃತ. ಬಹಳ ಜನರು ಇದರ ಗುಣವನ್ನು ಕಂಠೋಕ್ತವಾಗಿ ಹೊಗಳುವರು. 24 ಮಾತ್ರೆಗೆ 8 ಆಣೆ 12 ಶೀಸೆಗೆ ರೂ 5 [222-4]

ಇನ್ನೂ ಅನೇಕ ದಿವ್ಯೌಷಧಿಗಳು ನಮ್ಮಲ್ಲಿ ಸಿಕ್ಕುತ್ತವೆ. 1 ಆಣೆ ಸ್ಟಾಂಪಿಟ್ಟು ಬರೆದರೆ ಕ್ಯಾಟಲಾಗ್ ಕಳುಹಿಸುತ್ತೇವೆ. ಪೋಸ್ಟೇಜ್, ಪ್ಯಾಕಿಂಗ್ ಛಾರ್ಜು ಅಲಾಯಿದ.

ವಿಳಾಸ —ಪಂಡಿತ್ ಎಸ್ ಗರಳಪುರಿ,
ಓರಿಯಂಟಲ್ ಫಾರ್ಮಸಿ, ಒಂಡಿಕೇರಿ ಮೈಸೂರು

ಸ್ಪ್ರಿಂಗ್ ಟ್ರಾವಲರ್ಸ್ ಲೀವರ್ ವಾಚ್.

ಇದರ ಕ್ರಯ ಸಾಧ್ಯವಾದ ಮತ್ತು ಜೊತೆಯುಳ್ಳ 8 ಬಹುಮಾನ ಸಾಮಾನುಗಳ ಸಮೇತ ರೂ 3 8 0 ಮಾತ್ರ [77 31]

ಪಸನಂತರೇ ಈ ವಾಚ್ ಈಗತಾನೆ ಬಂದಿರುತ್ತೆ. ಇದು ಬಹು ಬಲ್ತವಾದ ಯಂತ್ರಸಾಮಾನು. ನೆಲೂ ಮತ್ತು ಶ್ರೇಷ್ಠವಾದ ಮತ್ತು ಯೂರೋಪಿನಲ್ಲೆಲ್ಲಾ ಹೆಸರುವಾಸಿಯಾದ ಲೀವರ್ ಕೆಲಸದಿಂದಲೂ ತಯಾರಾದದ್ದು. ಆದಕಾರಣವೇ ಅರ್ಡರುಗಳು ಬಂದು ಸುರಿಯುತ್ತಿವೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಸುಂದರವಾದದ್ದು. ಖಾತ್ರಿಯಾದ ಮಾಲು.



ಇದರ ಬಹುಮಾನ ಸಾಮಾನುಗಳ ವಿವರ —

(1) ಸುಂದರವಾದ ವಾಚ್ ಸರಪಣಿ (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ (3) ಸುವಾಸನೆಯುಳ್ಳ ಪರಿಮಳದ ಅತ್ತರ್ (4) ಧೂಳು ಸೇರದಂತೆ ವಾಚ್ ಮುಚ್ಚುವ ಕವರ್ (5) ಷೋಕ್ ಉಂಗುರ (6) ಜಂಟ್ಲಮೆನ್ ಪೆನ್ಸಲ್ (ಕವರ್ ಸಮೇತ) (7) ತಮಾಷೆಯಾದ ಬೊಂಬೆ (8) ಷರ್ಟಿನ ಗುಂಡಿಗಳ ಸೆಟ್ಟು

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

ವಿಳಾಸ—ಬಿ ಆರ್ ವೆಂಕಟರಮಣ ಅಂಡ್ ಕಂಪೆನಿ,
ನಂ 7, ಕೂಪ್ ವೆಂಕಟಾಚಲ್ಲೈಯರ್ ಬೀದಿ, ಮದರಾಸು

Printed and Published by the Rev H Gulliford, Proprietor and Manager Wesleyan Mission Press. Mysore 20/11/1913

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಸಂಪುಟ ೨೭. ಮೈಸೂರು—ಸನ್ ೧೯೧೩ ನೇ ಇಸವಿ ನವಂಬರ್ ತಾರೀಖು ೨೭ ನೇ ಗುರುವಾರ. ಸಂಚಿಕೆ ೨೮

ಜಗಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತುಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚಿಕೊಳ್ಳಿ ಇದು ಕೂದಲಿಗೆ ಪುಷ್ಟಿಕೊಡುತ್ತೆ ಪ್ರಾಣಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ ನಯವಾಗಿ, ಚಕಚಕಿಸುವವು ನವಿರಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ಹಂದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ ಬುರುಡೆಯನ್ನು ಶುದ್ಧಮಾಡುತ್ತೆ ಹೊಂಡಿನ ಹೊಟ್ಟನ್ನು ಅಡಗಿಸುತ್ತೆ ಸರ್ವೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಬಹಳ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ಉಳಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶರಾಶಿಯನ್ನು ದಟ್ಟವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-4 0 ಬೇರೆ ತರಬೇಕು

3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0 7 0

ಸ್ಯಾಂಪಲು ಬೇಕೆಂದರೆ ಒಂದು ಆರ್ಧಾಣೆಯ ಚೀಟನ್ನು ಕಳುಹಿಸಿರಿ ಮೈಸೂರು ಎಗ್ಜಿಭಿಷನ್ ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರೆತಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಮೈಸೂರಿನ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ತೈಲವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ ಮುನ್ಸಾಲ್‌ಗುಡಿ ಸಬ್ ರಿಜಿಸ್ಟ್ರಾರ್ ಎಮ್ ಡಿ ನಾಲೋಮನ್‌ರವರು ಬರೆಯುವದು—ದಯಮಾಡಿ ಒಂದು ಡಜನ್ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯಲ್ಲಿ ಇದನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ ನಮ್ಮ ಮನೆ ಹೆಂಗಸರು ಇದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ತೈಲಕ್ಕೆ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಕೊಟ್ಟು ಕಿಫಾಯತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೆಯದು" ಎಂದು ಹೇಳಿ ಮೋಸಮಾಡುವವರ ಕೈಗೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕಿಪಿಟೋಬಾಮ್"—ಮಳೆ ಮತ್ತು ಚಳಿಯ ಥಂಡಿ ಹವೆಯ ಕಾಲದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕಿಪಿಟೋಬಾಮ್" ಎಂಬ ಮುಲಾಮು ರಾಮಬಾಣವಾಗಿದೆ ಕೈಕಾಲು ನೋಯುವುದು, ಸಂಧಿವಾತ, ಮಕ್ಕಳಿಗೆ ಕೆಮ್ಮು, ಹೆಪ್ಪಾಗಿ ಮಡಸನ್ನು ಪಟ್ಟಿದ್ದರಿಂದ ಕ್ಷೀಣವಾಗುವದು ಶೀತ, ಎದೆಯನೋವು ವಗೈರೆ ವ್ಯಾಧಿಗಳಿಗೆ ಈ ಮುಲಾಮು ಗುಣಕಾರಿಯಾಗಿದೆ ಬಾಟ್ಲಿ 1ಕ್ಕೆ ಕ್ರಯ 0 8 0 ಟಪಾಲು ಪ್ರತ್ಯೇಕ

ಓಡಮನ್ಸಮಲೇರಿಯ ಪಿಲ್ಸ—ಶೀತಜ್ವರ ಚಳಿಯಿಂದ ಬರುವ ಜ್ವರ, ಮತ್ತು ಒಂದೇ ಸಮನೆ ಬಿಡದೇ ಬರುವ ಜ್ವರ ಇವೇ ಮೊದಲಾದವುಗಳಿಗೆ ಈ "ಓಡಮನ್ಸ ಮಲೇರಿಯನ್" ಗುಳಿಗೆಗಳು ರಾಮಬಾಣ ಜ್ವರವಿರುವ ಸ್ಥಿತಿಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರುವುದಿಲ್ಲ ಇದು ದೇಹದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ ಜ್ವರವನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ಪ್ರಾರಂಭ ಮಾಡುತ್ತೀರಿ ದಿನಕ್ಕೆ ಎರಡು ಗುಳಿಗೆಗಳಂತೆ ದಿವಸಕ್ಕೆ 1 ಸಲ ತಕ್ಕೊಳ್ಳತಕ್ಕದ್ದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1 0 0 3 ಬಾಟ್ಲಿಗಳಿಗೆ ರೂ 2 8 0 ಟಪಾಲು ಖರ್ಚು ಪ್ರತ್ಯೇಕ

ಮೇಲೆ ಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ — [8-46]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್ಸ್ ಡಿ ಉಲ್‌ಟ್ ಮಾರ್ಟ್, ಮಂಗಳೂರು

ಪಿಟೀಲ್.

ಪೂರ್ವದ ಕ್ರಯ ರೂ 15–0–0

ಈಗಿನ ಕ್ರಯ ರೂ 8–8–0

ಒಂದು ತಿಂಗಳವರೆಗೆಮಾತ್ರ

ಇದು ನಮ್ಮ ಸ್ವಂತ ಆರ್ಡರ್ ಮೇರಿಗೆ ಸೀಮೆಯಲ್ಲಿ ತಯಾರಿಸಿ ನಮ್ಮ ಏಜಂಟರು ಕಳುಹಿಸಿ ಇರುತ್ತಾರೆ ಇದು ಸಾಧಾರಣ ಪಿಟೀಲುಗಳಂತಾದ್ದಲ್ಲ ಇದರ ನಾದವು ಬಹಳ ಮನೋಹರವಾಗಿದೆ ಪಿಟೀಲು ಕಲಿಯುವವರಿಗೂ, ಪಂಡಿತರುಗಳಿಗೂ, ಸ್ತ್ರೀಯರಿಗೂ ಬಹಳ ಉಪಯೋಗವಾದದ್ದು ಈ ತರಹದ ಮೇಕರ್ ಪಿಟೀಲನ್ನು ಉಪಯೋಗಿಸುವವರು ಬೇರೆ ಪಿಟೀಲನ್ನು ಉಪಯೋಗಿಸರು"

ನಮ್ಮ ವಿಳಾಸ — ರಾಮಸ್ವಾಮಿಮತ್ತು ಕಂಪನಿ ನಂ| 4, ಬೊಮ್ಮಾಲೈಯನ ಬೀದಿ, ಅನೇಗುಂದಿ ಸಮೀಪ ಮದರಾಸು

[216–1]

1906 ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಬಹಳ ಅಭಿವೃದ್ಧಿಸ್ಥಿತಿಯಲ್ಲಿರುವ ಭೀಮನೀ ಪಟ್ಟಣದ ಸರ್ಕಾರದ ಭರವಸೆಯುಳ್ಳ "ದಿ ಕೋಲ್ಲೋಪೂರ್ ಡಲ್ ಜೀವ ವಿಮೆ ಕಂಪೆನಿ" ಲಿಮಿಟೆಡ್ ನಲ್ಲಿ ಮರಣ ಮತ್ತು ಜೀವ ವಿಮೆ ಬ್ರಾಂಚಿನ ಮೊದಲನೇ ತರಗತಿಯಲ್ಲಿ ಮಾಹೆಯಾನ ರೂ 1 8-0, ರೂ 1 0-0 ಗಳ ಮೇರೆ ಪಾಲಿಸಿಗೆ ಕೊಟ್ಟು ಚಂದಾದಾರರು ಕೊಡುವ ಹಣಕ್ಕೆ ಎರಡರಷ್ಟು ಹಣಕ್ಕೆ ಕಡಮೆಯಿಲ್ಲದೆ ಬೋನಸ್ ಕೊಡುವುದಕ್ಕೆ ಭರವಸೆಯುಳ್ಳದ್ದಾಗಿರುತ್ತೆ ನಂಬಿಕೆ ಮತ್ತು ಚಟುವಟಿಕೆಯುಳ್ಳ ಏಜಂಟರುಗಳು ಧಾರಾಳವಾದ ಕಮಿಷನ್ ಏರ್ಪಾಡು ಮೇರೆ ಬೇಕಾಗಿದೆ ಮತ್ತು ಇದರಲ್ಲಿ ಪ್ರತಿ ವರ್ಷವೂ ಮರಣ ಮತ್ತು ಜೀವ ವಿಮೆ ಬ್ರಾಂಚಿನಲ್ಲಿ ಲಕ್ಷಾಂತರ ರೂಪಾಯಿಗಳು ಹಂಚಲ್ಪಡುತ್ತೆ ಹೆಚ್ಚು ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಒಂದಾಣೆ ಸ್ಟಾಂಪಿನೊಡನೆ ಕಾಗದ ಬರೆಯಿರಿ [213 1]

Hindustan Co-operative Insurance Society, Limited, Hindustan Buildings, Calcutta.

Authorized capital—One Crore Policies effected—over Rs 2 20 00 00 Subscribed capital—Rs 87 00 000 Funds secured—Rs 20 80 000

Paid up Capital over Rs 10 00,000.

This famous Society's Premiums are the lowest and the insurance value therefore the highest Rules exceptionally advantageous and preferential Financial conditions based on sound principles Rs 2 00 000 deposited with the Government as per new Insurance Act of 1912

Wanted Immediately

Active and influential District and Taluk Agents on liberal terms of commission or pay Bonus and rewards, a speciality This is the only business which requires no capital or higher education to earn a handsome amount daily For further particulars and agency prospectus, &c, apply with one anna stamp to

Messrs Venkatachalam & Son,

Chief Agents,

166, Dodpeta, Mysore.

ಡೋಂಗರೆ

ಇವರ ಬಾಲಾಮೃತ [150 19]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧೦ ಆಣೆ ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ., ಪಾರ್ಕ್ ಟೌನ್, ಮದರಾಸು ಇವರಲ್ಲೂ ದೊರೆಯುವುದು.

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೩೯೧ ಪುಟಗಳು)

ಪೂರ್ವ ಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಕರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಅರ್ಥ, ಕಾಮ ... ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯನಿವಾರಕ ಮೂರ್ತಿಗಳನ್ನು ತಿಳಿಸುವದು (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (5) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಕವಾಗಿರುವದು ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1 8 0, ಟಪ್ಪಾಲು ಹಾಸಲು 4 ಆಣೆ.

(೩೪ ಸಂಧಿಗಳು) ಸಟೀಕಾ ತಾತ್ಪರ್ಯ ಜೈಮಿನೀ ಭಾರತವು. (೯೩೦ ಪುಟಗಳು)

ಪದ ರಚನೆಯಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಕಥಾರೂಪವಾದ ತಾತ್ಪರ್ಯ ... ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ 4, ಟಪಾಲು ಹಾಸಲು 10 ಆಣೆ ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127-52]

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

ಓರಿಯಂಟಿಲ್ ಗಾ॥ ಸೆಕ್ಯೂರಿಟಿ ಲೈಫ್ ಅಷೂರೇನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು. . . ರೂ 4,25,00,000

ಕಂಪನಿಯಿಂದ ಪಾವತಿ ಆಗಿರುವದು ,, 3,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ —ಮಿ॥ ಎಂ ಎಸ್ ರೆಟೆಲೊ, ಚೀಫ್ ಏಜೆಂಟ್, ಬೆಂಗಳೂರು, ಮ॥ ಎಂ ಎಸ್ ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು, ಅಥವಾ ಬ್ರಾಂಚ್ ಸೆಕ್ರೆಟರಿ, ಮದರಾಸ್

[194 9]

NOTICE

Wanted at once an active and efficient hand for the place of Assistant Secretary, Bangalore City Co-operative Society, Ltd Salary Rs 40 rising to Rs. 60 by five equal annual instalments of Rs 4 each, after each year's approved service

QUALIFICATIONS REQUIRED—(1) Good knowledge of English and Kanarese to attend to correspondence work (2) Fair knowledge of accounts, Book-keeping, Banking and Commerce, (3) Certificate of good moral character and respectability, (4) Ability to furnish cash security of Rs 2,000

Preference will be given to graduates from the Colleges in the Mysore State The candidate selected will be appointed on probation for six months

Apply with the testimonials, to the Honorary Secretary, Bangalore City Co operative Society, Ltd so as to reach him on or before the 15th December 1913 [240-2]

BANGALORE, Dated, 14th Nov 1913 — **C. RAMA RAO,** *Hony Secretary*

ಶುದ್ಧವಾದ ಹತ್ತಿಯ ತುಪ್ಪವು.

"ಆರೋಗ್ಯ! ರುಚಿ! ಪುಷ್ಟಿಕಾರಿ!"

(11) ಬಿ ರಾಮಣ್ಣ, ಬಿ ಎ ಎಲ್ ಎಲ್ ಬಿ, ಹೈಕೋರ್ಟು ವಕೀಲರು ಮತ್ತು ಅಡ್ವೋಕೇಟರು, ಬೆಂಗಳೂರು —"ಹತ್ತಿಯ ತುಪ್ಪವನ್ನು ಕೆಲವು ಕಾಲದಿಂದ ಉಪಯೋಗಿಸುತ್ತಿದ್ದೇನೆ ಆರೋಗ್ಯಕ್ಕೆ ಕುಂದಿಲ್ಲ, ರುಚಿಯಾಗಿದೆ ಮತ್ತು ಪುಷ್ಟಿಕಾರಿಯೆಂದೂ ತೋರುತ್ತದೆ ಹೆಚ್ಚು ಖರೀದಿ ಆದರೆ ಮಣಕ್ಕೆ 21 25 ರೂಪಾಯಿ ಕೊಟ್ಟರೂ ಒಳ್ಳೆಯ ತುಪ್ಪ ದೊರೆಯದ ಈ ಕಾಲದಲ್ಲಿ ಅಗ್ಗವಾಗಿ ಬರುವ ಇದು ಮಾಂಸಾಹಾರಿಗಳಲ್ಲದವರಿಗೆ ದ್ವಿಗುಣವಾಗಿ ಪಲಕಾರಿ ಏಕೆಂದರೆ ತುಪ್ಪವೂ ಸಸ್ಯಜನ್ಯವಾದುದು" 11 9 1913

ಎಚ್ಚರಿಕೆ —ಹತ್ತಿಯ ತುಪ್ಪವು ರೂಢಿಗೆ ಬಂದಹಾಗೆಲ್ಲಾ ಅದರಲ್ಲಿ ಅಗ್ಗವಾದ ಎಣ್ಣೆಗಳನ್ನು ಬೆರೆಯಿಸುವುದೂ, ಅನಾರೋಗ್ಯಕರವಾದ ಕಡಲೇಕಾಯಿ ಎಣ್ಣೆ, ಕುಸುಮೆ ಎಣ್ಣೆ, ಇವುಗಳನ್ನೂ ಕೊಬ್ಬನ್ನೂ ಹತ್ತಿಯ ತುಪ್ಪವೆಂದು ಅಗ್ಗವಾಗಿ ಮಾರುವುದೂ ಬಲವಾಗುತ್ತಿವೆ

ನಮ್ಮ ಕಂಪೆನಿಯ ಏಜಂಟರಿಂದಾಗಲಿ, ನಮ್ಮಿಂದಾಗಲಿ ತರಿಸಿಕೊಳ್ಳುವವರು ಮೋಸಹೋಗಲು ಅವಕಾಶವಿಲ್ಲ [110 26]

ಇಂಡಿಯನ್ ಕೋಆಪರೇಟಿವ್ ಸ್ಟೋರ್ಸ್ ಕಂಪನಿ, ಲಿಮಿಟೆಡ್, 169, ಕಿಲಾರಿ ರೋಡ್, (ತುಂಬಿಗರಪೇಟೆ), ಬೆಂಗಳೂರುಸಿಟಿ

ರಾಸ್‌ಕೋಫ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 1 ಆಣೆ



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾದಲ್ಪಟ್ಟದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟು ದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ ಕೂಡ್ಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,

[129 23] ಪೋಸ್ಟ್ ಬಾಕ್ಸ್, ನಂ 107, ಮದರಾಸು

ಮುಖ್ಯವಾಗಿ ಗಮಿನಿಸಿ ಓದಿರಿ

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಸೀಲಿಸ್ ಲಿವರ್ ಚಿಕ್ಕ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 6 0 0 ಇದನ್ನು ಸೆಪ್ಟಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 40 ಗಂಟೆಗೊಂದಾವರ್ತಿ ಕೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ಧನಲಕ್ಷ್ಮಿ ಅಂಡ್ ಕಂಪೆನಿ,

[129 23] ಸಾಹುಕಾರ್ ಪೇಟೆ ಪೋಸ್ಟು, ಮದರಾಸು

CHAMBERLAIN'S COUGH REMEDY.

ಚೇಂಬರ್ಲೇನರವರು ಕಂಡುಹಿಡಿದ ಕೆಮ್ಮಿನ ಔಷಧವು.



148

ಶೀತದ ಕೆಮ್ಮು, ಗಂಟ್ಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟ್ಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು—ಇವಕ್ಕೆಲ್ಲಾ ಈ ಔಷಧವು ಬಾಣಪ್ರಾಯವಾದೆ

ಆ ಕೆಮ್ಮನ್ನು ಅಲಕ್ಷ್ಯಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯುಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟ್ಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಚಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಕಟ್ಟವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕಟ್ಟು ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸಿರುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು — ಸಣ್ಣ ಶೀಸೆಗೆ ೧ ರೂಪಾಯಿ — ದೊಡ್ಡ ಶೀಸೆಗೆ ೨ ರೂಪಾಯಿ

1914ನೇ ವರ್ಷದ ಕೆಲೆಂಡರು 1914.

ರಮಣೀಯಕರವಾದ ಸ್ತ್ರೀಯ ನಕ್ಷೆಯುಳ್ಳದು.

ಇಂಥಾ ಸುಂದರವಾದ ಕೆಲೆಂಡರು ಎಲ್ಲೆಲ್ಲಿಯೂ ದೊರಕಲಾರದು ಒಂದರ ಕಿಮ್ಮತು 0-4-0. ೧ ಕ್ಕೆ 1 0 0 12 ಕ್ಕೆ 1 10 0 ಪೋಸ್ಟು ಖರ್ಚು ಮಾಫಿ ಜನವರಿ ಆಖೈರು ವರೆಗೆ

ಅಮೃತಾಂಜನ್.

ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಡುತ್ತವೆ ಎಲ್ಲಾ ತರದ ನೋವುಗಳ ಮೇಲೆ ದಿವ್ಯಾಮೃತ. ಬಾಟ್ಲಿ ಒಂದಕ್ಕೆ 0-8-0, ಡಜನ್ 1 ಕ್ಕೆ 5-1 0 ಟಪಾಲ್ ಖರ್ಚು ಪ್ರತ್ಯೇಕ. [12-10]

ವಿಳಾಸ —ಅಮೃತಾಂಜನ ಡಿಪೋ, ಫೋರ್ಟ್, ಬೊಂಬಾಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು ಮೈ ಕಾಲು ಹೊದೆತ (ಭಾರ), ಮೈ ನಡುಕ, ಕೀಲುಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲು ನೋವು, ಕೆಮ್ಮಲು, ನೆಗಡಿ, ಸಿಕ್ಕತ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಘುಘುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕ್ಷಯತಪ್ತಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —220 ಪತ್ರಿಕೆಗಳು ಕುಪ್ಪಿಗೆ 4 ಆಣೆ, 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 13 ಕುಪ್ಪಿ ವರೆಗೆ ಪೋಸ್ಟೇಜು 1 ಆಣೆ [179 18]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮಾರಿತೆಂದು ಕೊಡಲಾಗಲೂ ಆಶ್ಚರ್ಯಕರವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ! ವಿಷಪ್ರಯೋಗ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1, ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 1,00,000.

(INCORPORATED UNDER THE MYSORE COMPANIES REGULATION No III OF 1895)

CAUTION —Before you go in for a Provident Life or Marriage Policy, please ask for a copy of our Company's prospectus, which will explain to you the mode of the working of the present day provident companies in India and enables you to select a good institution, where your hard earned money will be safe

Absolute Security, Attractive Schemes, Soundest Principles.

Wanted Chief Agents and Agents throughout India on Commission and Salary For prospectuses, etc, please apply to

Mr. M. L. NAGANNAH,
Managing Agent, MYSORE

A NOVELTY OF THE TWENTIETH CENTURY!

THE MYSORE GOVERNMENT SECURITY

MUTUAL PROPERTY INVESTMENT COMPANY, LTD.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES REGULATION No. III OF 1895)

BANKING—Every sort of banking business transacted The company's shares are most valuable and are within the reach of all

Land and house purchase and investment policies are a speciality of the company, which the company advances loans on the security of immovable properties to purchase houses and lands or to liquidate prior debts, and recovers the same by easy monthly instalments

WANTED

Four local directors for each and every taluk of the Mysore Province on liberal terms represent the company Only men of position and influence need apply For prospectuses, etc, please apply to

Mr. M. L. NAGANNAH,
Managing Agent, MYSORE

[161-17]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

31—10—1913 ರಿಂದ 7—11—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಪಟ್ಟಣ	0	0	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	16	12	0	0
ಮೈಸೂರು ,,	41	36	0	0
ಕೋಲಾರ್ ,,	7	4	8	೯
ಕೋಲಾರ್ ಚಿನ್ನದ ಗಣಿಗಳು	1	0	0	0
ತುಂಕೂರು ಡಿಸ್ಟ್ರಿಕ್ಟು	13	6	0	0
ಹಾಸನ ,,	14	11	5	2
ಚಿತ್ರದುರ್ಗ ,,	0	0	12	7
ಕಡೂರ್ ,,	34	28	0	0
ಶಿವಮೊಗ್ಗ ,,	6	4	0	0
ಜುಮ್ಲಾ	132	101	26	18

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ಶರದೃತೌ ಕಾರ್ತೀಕ ಬಹುಳ ಅಮಾವಾಸ್ಯೆ ಶುಕ್ರವಾರದಿಂದ ಮಾರ್ಗಶಿರ ಶುದ್ಧ ಸಪ್ತಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1913 ನೇ ನವಂಬರ್ ಮತ್ತು ಡಿಸೆಂಬರ್.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಶ್ಚಿಕ ಮಾಸ ತೇದಿ
28	ಶುಕ್ರ	ಅಮಾವಾಸ್ಯೆ	1-19	ಅನುರಾಧ	56 5	13
29	ಶನಿ	ಬಿದಿಗೆ	56 7	ಜ್ಯೇಷ್ಠ	17-53	14
30	ಭಾನು †	ತದಿಗೆ	53-58	ಮೂಲ	17 37	15
1	ಸೋಮ	ಚೌತಿ	೬೨-11	ಪೂಷಾ	18-26	16
2	ಮಂಗಳ *	ಪಂಚಮಿ	66-31	ಉತ್ತರಾ	20 31	17
3	ಬುಧ §	ಷಷ್ಠಿ	69-25	ಶ್ರವಣ	23-64	18
4	ಗುರು ‡	ಸಪ್ತಮಿ	60-0	ಧನಿಷ್ಠ	28-24	19

:. ಮಳೆ ನಕ್ಷತ್ರ—ಅನೂರಾಧ 4 ನೇ ಪಾದ

† ಚಂದ್ರೋದಯ, ಮೊಹರಂ ಪ್ರಾರಂಭ.

* ನಾಗಪಂಚಮಿ, ದಗ್ಧಯೋಗ, ಮಳೆ ನಕ್ಷತ್ರ—ಜ್ಯೇಷ್ಠ 1 ನೇ ಪಾದ.

§ ಚಂಪಾಷಷ್ಠೀ, ಸುಬ್ರಹ್ಮಣ್ಯಾ ಆರಾಧನೆ

‡ ವಾತಾಭಾವಃ, ತ್ರಿದ್ಯುಃ

ಪೇಟೇ ಧಾರಣೆ.

ದಿನಸಿ		ಮೈಸೂರು.	ಬೆಂಗಳೂರು
ಕಟ್ಟು ಅಕ್ಕಿ ಪಲ್ಲಾ ೧ಕ್ಕೆ	ರೂ	೧೪-೩-೦	೧೭-೦-೦
ಸಿಂಟುಕ ಅಕ್ಕಿ ಅವಲ್		೧೪-೧೩-೦	೧೭-೮-೦
ಕಾಪ್ರಾಡಿ ಅಕ್ಕಿ		೧೪-೦-೦	೧೬-೮-೦
ಸಣ್ಣಕ್ಕಿ ಅವಲ್		೧೭-೦-೦	೧೭-೮-೦
,, ಮಧ್ಯಂ		೧೬-೦-೦	೧೬-೧೩-೦
ಕೊಣಗೀ ಬೇಳೆ ಅವಲ್ ಪಲ್ಲಾ ೧ಕ್ಕೆ		೧೬-೦-೦	೧೬-೪-೦
,, ಮಧ್ಯಂ ,,		೧೪-೦-೦	೧೪-೦-೦
ಕೈಕ ರಾಗಿ ಪಲ್ಲಾ ೧ಕ್ಕೆ		೯-೪-೦	೫-೧೦-೦
ಹಾರ್ಕಿ ,,		೬-೮-೦	೪-೧೩-೦
ಜೋಳ ,,		೭-೪-೦	೭-೪-೦
ಕುಸಂಬೆ ಪಲ್ಲಾ ೧ಕ್ಕೆ		೧೨-೮-೦	೧೪-೦-೦
ಹೆಸರ ಅವರೆ ,,		೧೫-೦-೦	೧೩-೦-೦
ತೊಗರಿ ,,		೧೨-೪-೦	೧೪-೦-೦
ಉದ್ದು ,,		೧೪-೦-೦	೧೬-೮-೦
ಕಡಲೆ ,,		೧೪ ೪-೦	೧೫-೦-೦
ಎಳ್ಳು ಸೇರು ೧೨೭ಕ್ಕೆ		೨೧-೮-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ		೭-೧೧-೦	೭-೧೦-೦
ಹರಳು ೧೨೭ ಸೇರಿಗೆ		೧೨ ೮-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ		೨-೪-೦	೫-೬-೦
ಮೆಣಸಿನಕಾಯಿ ,,		೩ ೪-೦	೫-೪-೦
,, ಮಧ್ಯಂ		೫-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ		೫-೦ ೦	ಮಣ ೬-೪-೦
ಬೆಳ್ಳುಳ್ಳಿ ಮಣ ೧ಕ್ಕೆ		೬-೩-೦	೬-೮-೦
ಈರುಳ್ಳಿ ,, ,,		೫-೨-೦	೬-೦-೦
ಕಡಲೇಕಾಯಿ ಎಣ್ಣೆ		೫ ೪-೦	೬-೪-೦
ಕೊತ್ತುಂಬರಿ ಪಲ್ಲಾ ೧ಕ್ಕೆ		೫-೦-೦	೬-೪-೦
ಜೀರಿಗೆ ,, ,,		೬-೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ		೨ ೪-೦	೧-೪-೦
ತುಪ್ಪ—ಧಾರಾಪುರದ್ದು ಮಣ ೧ಕ್ಕೆ		೧೮-೦ ೦	೨೨-೮-೦
,, ಬೆಣ್ಣೆ ಕಾಸಿದ್ದು ,, ,,		೧೯-೮-೦	
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ		೫-೧೨-೦	೫-೦-೦
ತೆಂಗಿನಕಾಯಿ ೧೦೦ಕ್ಕೆ		೬ ೪-೦	೬-೪-೦
ಅಡಕೇಕಾಯಿ ಮಣ ೧ಕ್ಕೆ		೧-೦-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ		೧-೧೨-೦	೧-೮-೦
ಚಿನ್ನ (ಪೌನ್) ಕೆಂಪು ...		೧೫ ೮-೦	೧೫-೮-೦
,, ,, ಪಸಿಮೆ		೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ ...		೨೪-೫-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ ...		೮೧-೦-೦	೮೧-೫-೦

The National Insurance & Banking Co., Ltd.,

Amristsar.

Madras Branch—33 Armenian Street, Madras.

Authorised and Subscribed Capital Rs 10,00,000.

Paid up Capital only about Rs. 1,50,000.

POSSESSES GOVERNMENT SECURITY.

The company has diposited Rs. 1,00,000 (one lakh) with the Government of India for the Security of the Policy-holders in compliance with the Government of India Indian Insurance Company's Act of 1912

"The Searchlight", a Monthly Journal of Insurance and Finance, published in London, writes:—"*Evidently the company covers a lot of ground. And while we consider that so far the company* has done quite as well as it could fairly expect, we must add that it is engaged in so admirable a work that it deserves the best wishes of all upholders of life assurance throughout the world *We are sure that it will have these, for there is nothing that knits the fabric of society together* more closely than the successful carrying on of life assurance by a sound office."

Statement of Progress:—

Year	Subscribed Capital	Paid up Capital	Working Capital	Government Papers and Debentures	Deposits
1907	2,28,100	17,820	65,966	2,500	28,786
1908	4,64,800	48,605	1,94,406	5,100	1,30,888
1909	5,29,000	62,470	4,15,213	18,100	3,09,726
1910	5,56,300	74,787	6,44,490	23,100	5,36,069
1911	7,42,000	99,482	11,68,022	77,100	8,21,678
1912 Half year	8,79,400	1,18,711	14,24,902	1,12,100	9,71,232
1912 2nd	10,00,000	1,41,594	15,42,419	1,32,600	10,39,916

Messrs **N Rama Row** and **K. Anantaramiah** have been appointed as **Chief Agents** for the Provinces of Mysore and Coorg excepting Kolar and Bangalore Districts, and **Mr. D. Seshagiri Row** has been appointed as Chief Agent for the Districts of Kolar and Bangalore in the Province of Mysore.

For further particulars apply to—

[216-6] **T. S. R. Iyer, Secretary (Madras Branch),**

Camp, Amirtsar National Insurance Buildings, Mysore.

ವಿನೋದಕರಗಳಾದ ನಕಲಿಗಳು

ಪ್ರಹಸನಚತುಷ್ಟಯ—(ಹಾಸ್ಯಸಂಜೀವನಿ) ಯುವತಿಯಾದ ಹೆಂಡತಿ ಮುದುಕನಾದ ಗಂಡ, ವಿದ್ಯಾವಂತನಾದ ಗಂಡ ದಡ್ಡಳಾದ ಹೆಂಡತಿ ಇವರುಗಳನ್ನು ಕುರಿತ ನಕಲಿಗಳು ನಾಲ್ಕು ಉಕ್ತವಾಗಿವೆ ಇಂಥಾ ವಿನೋದವೂ ನೀತಿಪ್ರದವೂ ಆದ ನಕಲಿಯನ್ನು ನೀವು ಓದಿರಲಾರಿರಿ ಕ್ರಯ 1 ಆಣೆ [187-50]

ಪ್ರಹಸನತರಂಗ—ಅಂತರಂಗದಲ್ಲಿ ದೃಢವಿಲ್ಲದ ಆಷಾಢಭೂತಿಗಳು, ಮೂಢಭಕ್ತಿಯಿಂದೊಡಗೂಡಿದ ದಡ್ಡರು, ವಿಚಾರವಿಲ್ಲದ ಮೂಢರು, ದುರಾಚಾರಿಗಳು ಮುಂತಾದವರ ವಿಷಯವು ಅತಿ ಚಮತ್ಕಾರವಾಗಿ ವರ್ಣಿಸಲ್ಪಟ್ಟಿದೆ. ಕ್ರಯ 3 ಆಣೆ. ಇದಲ್ಲದೆ ಮಹಾರಣ್ಯಪುರಾಧಿಪತ್ಯ 4 ಆಣೆ ಪುನರ್ವಿವಾಹ ಪ್ರಹಸನ 3 ಆಣೆ ಜೋಗನಿದ್ರಾಪ್ರಹಸನ 2 ಆಣೆ ಮುಂತಾದ ನಕಲಿಗಳೂ ದೊರೆಯುವವು

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-48

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ವಿಕ್ರಯವಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ, ೧ ರೂ ೬ ಆ,

ಚುಕ್ಕಿಯುಳ್ಳ ಟೋಪಿಗಳು ರೂ ೧—೮, ರೂ. ೧—೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨.

ದಾರದ ಟೋಪಿಗಳು ೧ ರೂ ೧೨ ಆ; ೧ ರೂ ೮ ಆ., ೧ ರೂ. ೬ ಆ.

ಮುಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ. ೬ ಆ

"In addition to cap making we are giving special attention to knitting stockings All our stockings, for adults and children, are hand-made Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,

ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—

MANAGER, CAP WORKS,

GIRLS' INDUSTRIAL SCHOOL, HASSAN.

ಶಿಕಾರಿಪುರ, ಶಿರಾಳಕೊಪ್ಪ ಪ್ರಾಂತ್ಯಗಳಲ್ಲಿ ವೃತ್ತಾಂತ ಪತ್ರಿಕೆಗಳ ವಿಲೇವಾರಿ ಪ್ರಕಟಣೆ

ಶಿಕಾರಿಪುರ, ಶಿರಾಳಕೊಪ್ಪ ತಾಲ್ಲೋಕ್ ಹೋಬಳಿ ಗ್ರಾಮಗಳ ಪ್ರಜೆಗಳನೇಕರು ಪ್ರಕೃತಕಾಲದ ನಾಗರಿಕತೆಯನ್ನು ಅನುಸರಿಸಿ ವರ್ತಮಾನ ಪತ್ರಿಕೆಗಳನ್ನು ಓದಲು ಅಪೇಕ್ಷಿಸುವವರಾಗಿರುವದರಿಂದ ನಾವು ಇಂಥಾವರುಗಳಿಗೆ ಟಪಾಲು ಖರ್ಚು ಬೀಳದಂತೆಯೂ, ಪತ್ರಿಕೆಗಳು ಸಕಾಲಕ್ಕೆ ಕ್ರಮವಾಗಿ ಸಿಕ್ಕುವಂತೆಯೂ ಅನುಕೂಲಪಡಿಸಿರುತ್ತೇವೆ ಹ್ಯಾಗಂದರೆ—

ಶಿಕಾರಿಪುರ—ಪ್ರತಿ ಶನಿವಾರ ಸಂತೆಯ ದಿವಸ ಅಲ್ಲಿನ ವೆಸ್ಲಿಯನ್ ಮಿಷನ್ ಗರಲ್ಸ್ ಸ್ಕೂಲಿನಲ್ಲಿ "ವೃತ್ತಾಂತ ಪತ್ರಿಕೆ" ಗಳು ಮಾರಲ್ಪಡುವವು ಜನರು ಸಂತೆಗೆ ಹೋದಾಗ್ಗೆ ಬಹು ಸುಲಭವಾಗಿ ಪತ್ರಿಕೆಗಳನ್ನು ಪಡೆಯಬಹುದು

ಶಿರಾಳಕೊಪ್ಪ—ಪ್ರತಿ ಭಾನುವಾರವೂ (ಸಂತೆಯ ದಿನ) ಶಿರಾಳಕೊಪ್ಪದ ಟವನ್ ಪಟೇಲರಾಗಿರುವ ಮ॥ ರಾ॥ ಗುರುಶಾಂತಪ್ಪಯ್ಯನವರ ಮೂಲಕ ಪತ್ರಿಕೆಗಳನ್ನು ಸುಲಭವಾಗಿ ಹೊಂದಬಹುದು

ವೈ. ಅಬ್ರೈಜ, ಏಜಂಟ್, ಶಿಕಾರಿಪುರ

ಕನ್ನಡ ಲಾ ಪುಸ್ತಕಗಳು

[160-17]

ಗೌರ್ನರ್ ಜನರಲ್‌ರವರ ಹುಕುಂ ಪ್ರಕಾರ ಎಲ್ಲಾ ದೇಶಗಳಲ್ಲಿಯೂ ಜಾರಿಯಲ್ಲಿರುವ ಕನ್ನಡ ಇಂಡಿಯನ್ ಪೆನಲ್‌ಕೋಡು ಕ್ರಯ ರೂ 2-0-0. ವ್ಯವಹಾರನಿರ್ಣಯ ವಿಧಿ ಎಂಬ ಸಿವಲ್ ಪ್ರೊಸಿಜರ್ ಯಾನೆ 3 ಭಾಗಗಳುಳ್ಳದ್ದು ರೂ 3-0-0 ಪ್ರಶ್ನೋತ್ತರ ಚಿಂತ್ಯಬೋಧಿನಿ—ಈ ಪುಸ್ತಕದಲ್ಲಿ ಸಿವಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ವ್ಯವಹಾರ ವಿಧಿಗಳನ್ನು ಬೋಧಿಸುವದು. ಕ್ರಯ ರೂ. 1-4-0. ತಾನಾಗಿ ಸ್ವತಃ ಇಂಗ್ಲೀಷ್ ಕಲಿಯುವದು—ರೂ. 1 8-0. ಇವುಗಳಲ್ಲಿ ಕೆಲವು ಮುದ್ರಣವಾಗುತ್ತದೆ ಇನ್ನೂ ಪುಸ್ತಕಗಳು ಅಪೇಕ್ಷಿಸುವವರು ನಮ್ಮ ಪುಸ್ತಕಗಳ ಕ್ಯಾಟ್‌ಲಾಗಿಗೆ ಬರೆಯಿರಿ ನಮಗೆ ಪ್ರತಿ ಒಂದು ತಾಲ್ಲೂಕುಗಳಲ್ಲಿಯೂ ಏಜಂಟರು ಬೇಕಾಗಿದೆ ಅವರ ಯೋಗ್ಯತಾನುಸಾರ ತಲಬು ಕೊಡಲ್ಪಡುತ್ತೆ

ವಿಳಾಸ—ಬಿ. ನರಸಿಂಗರಾವ್,

ಎಡಿಟರ್, "ಲಾ ಗೆಜೆಟ್," ಬೆಂಗಳೂರು.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

104-27

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು, ಹೊಟ್ಟೆನೋವು, ಶ್ವಾಸರೋಗ, ಜಜ್ಜು, ಉಳುಕು, ಭಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿಮುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು—(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸೈವಾಕಂ, ವೇಪೇರಿ, ಮದರಾಸ್; (2) ಟಿ. ಎನ್. ಕೃಷ್ಣಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಪಂಡಿತ್ ಎಸ್. ಗರಳಪುರಿಯವರ

ಪ್ರಖ್ಯಾತಿ ಹೊಂದಿದ ಓರಿಯಂಟಲ್ ಫಾರ್ಮಸಿ, ಮೈಸೂರು.

ಕಸ್ತೂರಿ ಮಾತ್ರೆ —ಶ್ರೇಷ್ಠವಾದ ವನಸ್ಪತಿಗಳು, ಮುತ್ತು, ಹವಳ, ಕಸ್ತೂರಿಗಳಿಂದ ತಯಾರಿಸಿದ್ದು. ಜಲದೋಷ, ಅರುಚಿ, ಮೈ ಕೈ ಕಳಕೊಳ್ಳುವಿಕೆಗೆ ಸಂಜೀವನ. ಇದನ್ನು ತಾಂಬೂಲದ ಸಂಗಡ ಪ್ರತಿ ದಿನವೂ ಸೇವಿಸಿದರೆ ಪ್ಲೇಗು ಕಾಲರಾ ಮುಂತಾದ ಸಾಂಕ್ರಾಮಿಕ ವ್ಯಾಧಿಗಳಿಂದ ಖಂಡಿತ ಬಾಧಿಸವು. 300 ಮಾತ್ರೆಗೆ 4 ಆಣೆ. 6 ಶೀಸೆಗೆ ರೂ 1 4 0

ಬಾಲಸಂಜೀವಿನಿ —8 ವರ್ಷದೊಳಗೆ ಮಕ್ಕಳಿಗೆ ಬರುವ ಎಲ್ಲಾ ವಿಧ ಜ್ವರ, ಶೀತ ನೆಗಡಿ, ಕೆಮ್ಮಲು, ವಾಯು, 3 ಪಕ್ಕೆ ಎಳತ, ಸೆಳತ, ಇವಕ್ಕೆಲ್ಲಾ ಅಮೃತ. 100 ವರ್ಷದ ಅನುಭವಸಿದ್ಧವಾದದ್ದು. 20 ಸಲದ ಔಷಧಿಗೆ 4 ಆಣೆ. 1 ತೋಲೆಗೆ ರೂ 1 8-0.

ಜ್ವರದ ಮಾತ್ರೆ —ಸಮಸ್ತವಿಧ ಜ್ವರಗಳಿಗೂ ಖಾತರಿ ಅಮೃತ. ಬಹಳ ಜನರು ಇದರ ಗುಣವನ್ನು ಕಂಠೋಕ್ತವಾಗಿ ಹೊಗಳುವರು. 24 ಮಾತ್ರೆಗೆ 8 ಆಣೆ, 12 ಶೀಸೆಗೆ ರೂ 5 [222 5]

ಇನ್ನೂ ಅನೇಕ ದಿವ್ಯೌಷಧಿಗಳು ನಮ್ಮಲ್ಲಿ ಸಿಕ್ಕುತ್ತವೆ. ½ ಆಣೆ ಸ್ಟಾಂಪು ಕಳುಹಿಸಿ ಬರೆದರೆ ಕ್ಯಾಟಲಾಗ್ ಕಳುಹಿಸುತ್ತೇವೆ. ಪೋಸ್ಟೇಜ್, ಪ್ಯಾಕಿಂಗ್ ಛಾರ್ಜು ಅಲಾಯಿದ.

ವಿಳಾಸ —ಪಂಡಿತ್ ಎಸ್. ಗರಳಪುರಿ,

ಓರಿಯಂಟಲ್ ಫಾರ್ಮಸಿ, ಬಂಡಿಕೇರಿ, ಮೈಸೂರು

ವೃತ್ತಾಂತ ಪತ್ರಿಕೆ.

ಸನ್ ೧೯೧೩ ನೇ ಇಸವಿ ನವಂಬರ್, ತಾ ೨೭ ನೇ ಗುರುವಾರ

ಗತಿಸಿದ ಸರ್ ಕೆ ಶೇಷಾದ್ರಿ ಅಯ್ಯರವರು.

ಸರ್ ಕೆ ಶೇಷಾದ್ರಿ ಅಯ್ಯರವರು ಮೈಸೂರು ಸಂಸ್ಥಾನದಲ್ಲಿ ಹದಿನಂಟು ವರುಷ ದಿವಾನ್‌ಗಿರಿಮಾಡಿ ಕಳೆದ 1901 ನೇ ಸೆಪ್ಟಂಬರ್ ತಿಂಗಳಲ್ಲಿ ಕಾಲವಾದರು. ಹದಿಮೂರು ಸಂವತ್ಸರಗಳು ಕಳೆದುಹೋದಮೇಲೆ ಬೆಂಗಳೂರು ಕಬ್ಬನ್ ಪಾರ್ಕ್ ಎಂಬ ಉದ್ಯಾನವನದಲ್ಲಿ ಅವರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಅವರ ಛಾಯಾ ಪ್ರತಿಮೆಯನ್ನು ಮಾಡಿ ನಿಲ್ಲಿಸಿದರು. ವೈಸ್‌ರಾಯ್ ಮತ್ತೂ ಗವರ್ನರ್ ಜನರಲ್‌ರವರಾದ ಲಾರ್ಡ್ ಹಾರ್ಡಿಂಗ್ ಪ್ರಭುಗಳು ವಿಶೇಷ ಆದರದಿಂದ ಆ ಪ್ರತಿಮೆಯನ್ನು ಕಳೆದ ಗುರುವಾರ ತೆರೆದು ಪ್ರತಿಷ್ಠೆಮಾಡಿ, ಗತಿಸಿದ ಆ ಮಹನೀಯ ರಾಜ್ಯಧುರಂಧರರ ಸಾಮರ್ಥ್ಯಾದಿಗಳನ್ನು ಬಹಳವಾಗಿ ಕೊಂಡಾಡಿದರು. ನಮ್ಮ ಸಂಸ್ಥಾನದ ಶ್ರೇಯಸ್ಸಿಗೆ ಕಾರಣಭೂತರಾಗಿದ್ದ ಪುರುಷರನ್ನು ನಮ್ಮ ಜನರಿಗೆ ಗುರುತಿಟ್ಟು ತೋರಿಸುವಂಥಾ ಸ್ಮಾರಕ ಕಟ್ಟಡಗಳೂ, ಪ್ರತಿಮೆಗಳೂ ನಮ್ಮ ಮಧ್ಯೆ ಇರುವುದು ಎಷ್ಟೋ ಪ್ರಯೋಜನಕರವಾಗಿದೆ ಎನ್ನುವುದಕ್ಕೆ ಸಂಶಯವಿಲ್ಲ.

ಕೀರ್ತಿಶೇಷರಾದ ದಿವಾನ್ ರಂಗಾಚಾರ್ಯರು ಕಾಲವಾದಾಗಲೂ, ಈಗಲೂ ನಮ್ಮ ಸಂಸ್ಥಾನದ ಸ್ಥಿತಿಗತಿಯನ್ನು ಸಾಕ್ಷಾತ್ತಾಗಿ ಹೋಲಿಸಿ ನೋಡತಕ್ಕವರಿಗೆ ಲೇಟ್ ಸರ್ ಶೇಷಾದ್ರಿಅಯ್ಯರವರ ದಿವಾನಗಿರಿಯಿಂದ ನಮ್ಮ ಸೀಮೆಯು ಎಷ್ಟು ಮಟ್ಟಿಗೆ ಉಚ್ಛ್ರಾಯಸ್ಥಿತಿಗೆ ಬಂದಿರುವುದೋ ಬಹಳ ಚೆನ್ನಾಗಿ ದೃಷ್ಟಾಂತಕ್ಕೆ ಬರುತ್ತದೆ. ಅವರು ನಮ್ಮ ಸಂಸ್ಥಾನದ ಶ್ರೇಯಸ್ಸನ್ನು ಬಯಸುತ್ತಾ ಹದಿನಂಟು ವರುಷ ಬಹಳ ಸಾಹಸಪಟ್ಟು, ಅಭಿವೃದ್ಧಿಹೊಂದಿದ್ದನ್ನು ಕಣ್ಣಾರ ನೋಡಿದರು. ಅವರ ಸಾಹಸಕಾರ್ಯಗಳ ಫಲಪ್ರಯೋಜನಾದಿಗಳನ್ನು ನಾವು ಈಗ ಅನುಭವಿಸುತ್ತಿದ್ದೇವಾದಕಾರಣ ಅವುಗಳನ್ನು ನಾವು ಸ್ಮರಣೆಗೆ ತಂದುಕೊಂಡು ಅವರ ಹೆಸರನ್ನು ಶಾಶ್ವತಪಡಿಸಿ ಕೊಂಡಾಡುವುದು ನಮಗೆ ಸಹಜವೂ ಕರ್ತವ್ಯವೂ ಆಗಿರುತ್ತದೆ.

ಸರ್ ಶೇಷಾದ್ರಿ ಅಯ್ಯರವರು ಸರ್ವಶ್ರೇಷ್ಠರಾಗಿದ್ದರೆಂದಾಗಲಿ, ಅವರು ಮಾಡಿದ ಕಾರ್ಯಗಳೆಲ್ಲಾ ಉತ್ತಮೋತ್ತಮವಾದವುಗಳೆಂದಾಗಲಿ, ಅವರಲ್ಲಿ ತಪ್ಪೇನೂ ಇರಲಿಲ್ಲವೆಂದಾಗಲಿ ಯಾರೂ ಹೇಳುವುದಿಲ್ಲ. ಅವರ ಸಾಹಸಕಾರ್ಯಗಳಲ್ಲಿ ವಿಶೇಷ ತಪ್ಪುಗಳಿರಲಿಲ್ಲವೆಂಬುವುದೂ, ಅವರು ಅಧಿಕಾರವನ್ನು ಧರ್ಮದಿಂದಲೂ ವಿವೇಕವಾಗಿಯೂ ಚಲಾಯಿಸಿದರೆಂಬುವುದೂ ನೋಡಿದರೆ ಅವರಲ್ಲಿ ಅಳ್ವಿಕೆಯ ಸಾಮರ್ಥ್ಯವು ವಿಶೇಷವಾಗಿತ್ತೆಂದು ಚೆನ್ನಾಗಿ ಗೊತ್ತಾಗುತ್ತದೆ. ಯಾವ ಮಹಾಪುರುಷನಾದರೂ ತನ್ನ ಕಾಲದ ಜನರಿಗಿಂತ ತಕ್ಕಮಟ್ಟಿಗಲ್ಲದೆ ಮಿತಿಮೀರಿ ಮುಂದರಿದು ಹೋಗಲಾರನು. ಪ್ರಜೆಗಳು ವಿದ್ಯೆಯಲ್ಲೂ ಶೀಲಸ್ವಭಾವಗಳಲ್ಲೂ ವೃದ್ಧಿಹೊಂದಿದ ಹಾಗೆಲ್ಲಾ ಶ್ರೇಯೋವಂತರಾಗುತ್ತಾ ಬಂದಾರು. ಜನರು ವಿದ್ಯೆಯಿಲ್ಲದ ನಂಬಿಕೆಗೆ ಅನರ್ಹರಾಗಿದ್ದರೆ ನಮ್ಮ ಸಂಸ್ಥಾನವನ್ನಾಳುವವರು ಎಂಥಾ ಸ್ತೋತ್ರಾರ್ಹವಾದ ಏರ್ಪಾಡುಗಳನ್ನು ಮಾಡಿದರೂ, ಎಷ್ಟು ನಿರ್ದುಷ್ಟವಾಗಿ ಕಟ್ಟು ಕಾನೂನುಗಳನ್ನು ಮಾಡಿ ಜಾರಿಗೆ ತಂದರೂ ಅವುಗಳಿಂದ ಜನರಿಗೆ ಯಾವ ಪ್ರಯೋಜನವೂ ಸುಖವೂ ಉಂಟಾಗುವುದಿಲ್ಲ. ಆಳುವವರ ಸಾಹಸ ಪ್ರಯತ್ನಗಳೆಲ್ಲಾ ನಿರರ್ಥಕವಾಗುತ್ತವೆ. ಶೇಷಾದ್ರಿ ಅಯ್ಯರವರ ದಿವಾನ್‌ಗಿರಿಯಲ್ಲಿ ನಮ್ಮ ಸಂಸ್ಥಾನದೊಳಗೆ ರೈಲ್ವೆ ಬಿಡಾವಣೆಯಾಯಿತು, ವಿದ್ಯುಚ್ಛಕ್ತಿಯ ಕಾರ್ಖಾನೆಯು ಪ್ರಾರಂಭಿಸಲ್ಪಟ್ಟಿತು, ಭಾರಿ ನೀರಾವರಿ ಕ್ಷಾಮಗಾರಿಗಳನ್ನು ನಡಿಸಿದರು, ಮತ್ತೂ ಸಾಮಾನ್ಯವಾಗಿ ಸಂಸ್ಥಾನದ ಪ್ರಜೆಗಳ ಶ್ರೇಯೋಭಿವೃದ್ಧಿಗೆ ಹಿತಕರವಾದ ಅನೇಕ ಕಾರ್ಯಗಳನ್ನು ನಡಿಸಿರುತ್ತಾರೆ. ಅಂತು ಅವರು ನಮ್ಮ ಸೀಮೆಯ ಕ್ಷೇಮಚಿಂತನೆಯಿಂದ ಕಷ್ಟಪಟ್ಟು ಕೆಲಸಮಾಡಿದರು. ಅವರು ಮಾಡಿದ ಏರ್ಪಾಡುಗಳ ದೆಸೆಯಿಂದ ರಾಜಾದಾಯವೂ ಪ್ರಜಾ ಸೌಕರ್ಯಗಳೂ ವೃದ್ಧಿಹೊಂದಿರುತ್ತವೆ. ಆದಕಾರಣ ಅವರನ್ನು ನಾವು ಕೃತಜ್ಞತಾ ಪೂರ್ವಕವಾಗಿ ಸ್ಮರಿಸಿಕೊಳ್ಳುವುದಕ್ಕೆ ಅವರು ಸತ್ಪಾತ್ರರಾಗಿರುವರು.

ಇಂಥಾ ಮಹಾಪುರುಷರ ಹೆಸರನ್ನು ಶಾಶ್ವತಪಡಿಸುವುದಕ್ಕೆ ಈಗಲಾದರೂ ಅವರ ಪ್ರತಿಮೆಯು ಪ್ರತಿಷ್ಠೆಯಾಯಿತಲ್ಲಾ ಎಂದು ಆನಂದಪಡುವೆವು. ಇದರಿಂದ ನಮ್ಮ ಜನರಿಗೂ ನಮ್ಮ ಮಕ್ಕಳಿಗೂ ಸರ್ ಶೇಷಾದ್ರಿ ಅಯ್ಯರೆಂಬುವರು ನಮ್ಮ ಸಂಸ್ಥಾನದಲ್ಲಿ ದಿವಾನ್‌ಗಿರಿ ಮಾಡಿ ಸೀಮೆಯನ್ನು ಅಭಿವೃದ್ಧಿಗೆ ತಂದರೆಂದೂ, ಅವರು ಶ್ರಮಪಟ್ಟು ಚೆನ್ನಾಗಿ ಸೇವೆಮಾಡಿದರೆಂದೂ, ದೇಶವತ್ಸಲರೆಲ್ಲಾ ಅವರನ್ನೂ ಅವರ ಕಾರ್ಯಗಳನ್ನೂ ಸ್ಮರಿಸಿಕೊಳ್ಳುವುದಕ್ಕೆ ಅವರು ಸತ್ಪಾತ್ರರೆಂದೂ ಆ ಪ್ರತಿಮೆಯು ಹೇಳುತ್ತಾ ಬರುವುದು. ಅವರು ಪ್ರಾರಂಭಿಸಿದ ಕಾರ್ಯಗಳನ್ನು ಮುಂದರಿಸಿ ಹೆಚ್ಚಿಸಿಕೊಂಡು ಹೋಗಬೇಕಾದದ್ದು ನಮ್ಮ ಕರ್ತವ್ಯವಾಗಿದೆ. ನಾವು ಆ ರೀತಿ ಮಾಡುತ್ತಾ ಬಂದ ಪಕ್ಷದಲ್ಲಿ ನಮ್ಮ ಸೀಮೆಯು ಎಷ್ಟೋ ಶ್ರೇಯಸ್ಸಿಗೆ ಬಂದೀತು. ಪ್ರಜೆಗಳಲ್ಲಿ ಪ್ರತಿ ಒಬ್ಬರೂ ನಮ್ಮ ಸಂಸ್ಥಾನದಲ್ಲಿ ವಿದ್ಯೆಯನ್ನೂ, ವಿವೇಕವನ್ನೂ, ಒಳ್ಳೆಯ ಶೀಲಸ್ವಭಾವಗಳನ್ನೂ, ಸುಖಸಂತೋಷಗಳನ್ನೂ ಹೆಚ್ಚು ಮಾಡಿ ಹರಡುವುದಕ್ಕೆ ತಂತಮ್ಮ ಕೈಲಾಗುವ ಮಟ್ಟಿಗೂ ಸಾಹಸ ಪ್ರಯತ್ನಗಳನ್ನು ಮಾಡುವವರಾಗಲೆಂದು ಹಾರೈಸುತ್ತೇವೆ.

ನಿಜವಾದ ಅಭಿವೃದ್ಧಿ.

ಯಾವ ದೇಶವಾದರೂ ಸಹಜವಾಗಿ ಪ್ರವರ್ಧಮಾನ ಸ್ಥಿತಿಗೆ ಬರಬೇಕಾದರೆ, ಆ ದೇಶೀಯರು ಎರಡು ಮುಖ್ಯ ವಿಷಯಗಳಿಗೆ ತುಂಬಾ ಲಕ್ಷ್ಯ ಕೊಡಬೇಕಾಗಿರುತ್ತದೆ. ಅವುಗಳೇನೆಂದರೆ—ವ್ಯಾವಹಾರಿಕ ಮತ್ತು ಪಾರಮಾರ್ಥಿಕ ವಿಷಯಗಳೇ. ಇವೆರಡರಲ್ಲಿ ಪಾರಮಾರ್ಥಿಕ ವಿಚಾರವೇ ಪ್ರಾಮುಖ್ಯವಾದದು. ನಾವು ನಮ್ಮ ಪಂಚೇಂದ್ರಿಯಗಳ ಮೂಲಕವಾಗಿ ನಮ್ಮ ಸುತ್ತುಮುತ್ತಲೂ ವಿವಿಧ ವಸ್ತುಗಳು ಇವೆ ಎಂಬುದನ್ನು ಮುಂದಟ್ಟು ಮಾಡಿಕೊಳ್ಳುತ್ತೇವೆ. ನಾವು ನೋಡುವಂಥಾ ಕೇಳುವಂಥಾ ಘ್ರಾಣಿಸುವಂಥಾ ರುಚಿಸುವಂಥಾ ಸ್ಪರ್ಶಿಸುವಂಥಾ ಅನೇಕಾನೇಕ ವಸ್ತುಗಳು ಇರುತ್ತವೆ. ಇವುಗಳಿಂದ ನಮ್ಮ ಪಂಚೇಂದ್ರಿಯಗಳಿಗೆ ಸಂತೃಪ್ತಿಯಾಗಬೇಕಾಗಿದೆ. ನಮಗೆ ಊಟಮಾಡುವುದಕ್ಕೆ ಆಹಾರವೂ ಹೊದಿಯುವದಕ್ಕೆ ವಸ್ತ್ರಗಳೂ ವಾಸಮಾಡುವುದಕ್ಕೆ ಮನೆಗಳೂ, ನಮ್ಮ ಸಂತೋಷಕ್ಕೆ ಬೇಕಾದ ಅನುಕೂಲಗಳೂ ನಮಗೆ ಇರಬೇಕಾದರೆ, ಈ ವ್ಯಾವಹಾರಿಕ ವಸ್ತುಗಳನ್ನು ಉಪಯೋಗಿಸಿ ಕೆಲಸ ಮಾಡತಕ್ಕದ್ದು. ನಾವು ವಿವೇಕದಿಂದ ಕಷ್ಟಪಟ್ಟು ಕೆಲಸ ಮಾಡಿದರೆ ಹಣವನ್ನಾಗಲಿ, ಮನೆಮಠಗಳನ್ನಾಗಲಿ ಅಥವಾ ಭೂಮಿಕಾಣಿಯನ್ನಾಗಲಿ ಗಳಿಸಿ, ಐಹಿಕ ವಸ್ತುಗಳನ್ನು ಹೇರಳವಾಗಿ ಕೂಡಿಟ್ಟುಕೊಳ್ಳಬಹುದು.

ಐಹಿಕ ವಸ್ತುಗಳಿಂದ ಬರುವಂಥ ಸುಖಸಂತೋಷಗಳನ್ನು ಅನುಭವಿಸುವುದು ಒಳ್ಳೆಯದೇ. ಏಕೆಂದರೆ ಐಹಿಕ ಸುಖವನ್ನು ಅನುಭವಿಸುವುದಕ್ಕೆ ಬೇಕಾದ ಇಂದ್ರಿಯಗಳನ್ನು ದೇವರೇ ನಮಗೆ ದಯಪಾಲಿಸಿರುತ್ತಾನೆ. ಈ ಲೋಕವು ನಿತ್ಯವಾದುದಲ್ಲ, ಅದು ಮಾಯವಾಗತಕ್ಕದ್ದೇ ಎಂಬುದನ್ನು ನಾವು ಒಪ್ಪುವೆವು. ಇದರಲ್ಲಿರುವ ನಾವೂ ಕೂಡ ಇದನ್ನು ಬಿಟ್ಟುಹೋಗತಕ್ಕವರೇ ಆಗಿರುತ್ತೇವೆ. ಹೀಗಿದ್ದರೂ ಇಷ್ಟುಮಾತ್ರಕ್ಕೆ ನಾವು ಈ ಜೀವಮಾನದ ಸುಖಸಂತೋಷಗಳನ್ನೆಲ್ಲಾ ತ್ಯಾಜ್ಯಮಾಡಬೇಕಾದ ಕಾರಣವಿರುವುದಿಲ್ಲ. ಈ ಲೋಕವು ಅನಿತ್ಯವಾದುದೇ ಆಗಿದ್ದರೂ ಇದನ್ನು ದೇವರು ನಮಗಳ ಪ್ರಯೋಜನಾರ್ಥವಾಗಿ ಉಂಟುಮಾಡಿರುತ್ತಾನೆ. ಈ ಲೋಕವು ಕೊಡುವಂಥ ಸುಖಸಂತೋಷಗಳನ್ನು ನಾವು ಅನುಭವಿಸಿದರೆ ಅದು ದೋಷವಲ್ಲ.

ಇದು ಮಾತ್ರವಲ್ಲದೆ ನಾವು ದೇವರ ಕಾರ್ಯಗಳನ್ನು ಚೆನ್ನಾಗಿ ಪರಿಶೋಧಿಸಿ, ಅವುಗಳಲ್ಲಿ ಆಶ್ಚರ್ಯಕರವಾಗಿಯೂ ಸೊಗಸಾಗಿಯೂ ಇರುವ ಪ್ರತಿಯೊಂದನ್ನೂ ಕಂಡುಹಿಡಿಯಬೇಕಾಗಿದೆ. ಇದಕ್ಕಾಗಿ ನಾವು ಸಯನ್ಸ್ ಎಂಬ ಶಾಸ್ತ್ರವನ್ನು ಓದಬೇಕು. ಪಂಚಭೂತಗಳಿಂದ ಮಾಡಲ್ಪಟ್ಟಿರುವ ಈ ಪ್ರಪಂಚವನ್ನು ದೇವರು ಯಾವ ನಿಯಮಗಳನ್ನನುಸರಿಸಿ ಆಳುತ್ತಾ ಬರುತ್ತಾನೆ ಎಂಬುದನ್ನು ಈ ಶಾಸ್ತ್ರವು ನಮಗೆ ವ್ಯಕ್ತಪಡಿಸುವುದು. ದೇವರು ನಮ್ಮ ಸುತ್ತುಮುತ್ತಲೂ ಇಟ್ಟಿರುವ ವಸ್ತುಗಳನ್ನು ನಾವು ಉಪಯೋಗಿಸಿ, ಈ ಲೋಕವನ್ನು ನಮ್ಮ ವಾಸಕ್ಕೆ ಅನುಕೂಲವಾದ ಸ್ಥಳವನ್ನಾಗಿ ಮಾಡಿಕೊಳ್ಳುವುದಕ್ಕೆ ಪ್ರಯತ್ನಪಡತಕ್ಕದ್ದು. ಮನುಷ್ಯರು ರೈಲ್‌ಗಾಡಿಗಳು, ಟೆಲಿಗ್ರಾಫ್, ಬೈಸಿಕಲ್‌ಗಳು, ಮೋಟರ್‌ಗಾಡಿಗಳು, ವಾಯುವಿಮಾನಗಳು ಇವೇ ಮುಂತಾದ ಪ್ರಯೋಜನಕರವಾಗಿಯೂ, ಆಶ್ಚರ್ಯಕರವಾಗಿಯೂ ಇರುವ ನೂರಾರು ವಸ್ತುಗಳನ್ನು ಮಾಡಿರುತ್ತಾರೆ. ಇವುಗಳನ್ನೆಲ್ಲಾ ನಾವು ಉಪಯೋಗ ಮಾಡಿಕೊಳ್ಳೋಣ. ಆದರೆ ನಾವು ಇವುಗಳ ಮೇಲೆಯೇ ನಮ್ಮ ಪೂರ್ಣಮನಸ್ಸನ್ನು ಇಡಬಾರದು. ಇವುಗಳು ನಮಗೆ ಇಲ್ಲದ ಪಕ್ಷದಲ್ಲಿ ನಾವು ಖಿನ್ನಮನಸ್ಕರಾಗ ಬಾರದು.

ಈ ಎಲ್ಲಾ ಐಹಿಕ ವಸ್ತುಗಳಿಗಿಂತಲೂ ಹೆಚ್ಚು ಪ್ರಾಮುಖ್ಯವಾದುದು ಬೇರೊಂದು ಇರುತ್ತದೆ. ಲೋಕಪ್ರಖ್ಯಾತನಾದ ಒಬ್ಬ ಮತೋಪದೇಶಕನು ಹೇಳಿರುವದೇನೆಂದರೆ —"ನೀವು ದೇವರ ರಾಜ್ಯವನ್ನೂ ನೀತಿಯನ್ನೂ ಪಡೆದು ಕೊಳ್ಳುವುದಕ್ಕೆ ಮೊದಲು ಪ್ರಯತ್ನಿಸಿರಿ. ಇವುಗಳ ಕೂಡ ಅವೆಲ್ಲಾ ದೊರಕುವುವು" ಎಂಬುದೇ. ಐಹಿಕ ವಸ್ತುಗಳಿಂದ ನಮ್ಮ ಪಂಚೇಂದ್ರಿಯಗಳಿಗೆ ಸಂತೃಪ್ತಿಯು ಆಗುತ್ತದೆ. ಆದರೆ ನಮ್ಮ ಆತ್ಮಗಳಿಗೆ ಇವುಗಳಿಂದ ಸಂತೃಪ್ತಿಯು ಆಗುವುದೇ ಇಲ್ಲ. ನಮಗೆ ಸಹಜವಾದ ಸುಖವು ಲಭ್ಯವಾಗಬೇಕಾದರೆ, ನಾವು ದೇವರನ್ನು ತಿಳಿದು, ಆತನ ಆಜ್ಞೆಗಳನ್ನು ಅನುಸರಿಸಿ ನಡೆಯಬೇಕಾಗಿದೆ. ನಾವು ದೇವರ ಆಜ್ಞೆಗಳನ್ನು ವಿನಾಯಿಸಿ ನಡೆದರೆ, ನಮ್ಮ ಮನಸ್ಸಾಕ್ಷಿಯು ನಮ್ಮನ್ನು ಪೀಡಿಸುವುದು. ಇದರಿಂದ ನಮಗೆ ಸಹಜವಾದ ಮನಶ್ಶಾಂತಿಯು ಇರಲಾರದು. ನಮಗೆ ಲಕ್ಷಾಂತರ ರೂಪಾಯಿಯೂ, ರಾಜಭವನಗಳೂ, ಲೋಕದ ಸಕಲ ಭೋಗಭಾಗ್ಯಗಳೂ ಲಭ್ಯವಾಗಿದ್ದರೂ ನಮ್ಮಲ್ಲಿ ಒಳ್ಳೆಯ ಮನಸ್ಸಾಕ್ಷಿಯು ಇಲ್ಲದ ಪಕ್ಷದಲ್ಲಿ ದೇವರ ಸಂಗಡ ನಮಗೆ ಸಮಾಧಾನವು ಎಂದಿಗೂ ಇರಲಾರದು.

ಆದಕಾರಣ ದೇವರಿಗೆ ವಿಧೇಯರಾಗಿರುವುದೇ ನಮ್ಮ ಪರಮ ಧರ್ಮವಾಗಿದೆ. ಆತನು ನಮ್ಮ ಮನಸ್ಸಾಕ್ಷಿಯ ಮುಖೇನ ನಮ್ಮ ಸಂಗಡ ಮಾತನಾಡುತ್ತಾನೆ. ಆತನು ದಿನಂಪ್ರತಿಯಲ್ಲಿಯೂ ನಮ್ಮ ಧರ್ಮವೇನೆಂದು ನಮಗೆ ಸ್ಪಷ್ಟವಾಗಿ ತಿಳಿಸುತ್ತಾ ಬರುವಲ್ಲಿ ನಾವು ಅದಕ್ಕೆ ವಿಧೇಯರಾಗಿ ನಡೆಯತಕ್ಕದು. ಈ ರೀತಿಯಲ್ಲಿ ನಾವು ದೇವರು ಮೆಚ್ಚುವಂಥ ನೀತಿ ಏನೆಂಬುದನ್ನು ತಿಳಿದುಕೊಳ್ಳಬಹುದು. ನಾವು ದೇವರನ್ನು ಕುರಿತು ಧ್ಯಾನಮಾಡುತ್ತಲೂ ಆತನಿಗೆ ಪ್ರಾರ್ಥನೆಮಾಡುತ್ತಲೂ ಬಂದರೆ, ಆತನು ನಮ್ಮ ಮನಸ್ಸಿಗೆ ಸಮಾಧಾನವನ್ನೂ ಆದರಣೆಯನ್ನೂ ದಯಪಾಲಿಸುವನೆಂದು ನಮಗೆ ಕಂಡುಬರುವುದು.

ಅನೇಕರು ದ್ರವ್ಯಾರ್ಜನೆ ಮಾಡಬೇಕು, ಅಥವಾ ಭಾರಿ ಉದ್ಯೋಗಗಳನ್ನು ಸಂಪಾದಿಸಬೇಕು ಎಂಬ ಪ್ರಯತ್ನದಲ್ಲಿ ದೇವರನ್ನು ಮರೆತು, ಆತನ ಆಜ್ಞೆಗಳನ್ನು ಅತಿಕ್ರಮಿಸಿ ನಡೆಯುತ್ತಾರೆ. ತಾವು ಲೋಕದಲ್ಲಿ ಸುಖವಾಗಿದ್ದುಕೊಂಡು, ದೇವರನ್ನು ಸೇವಿಸುವುದು ಅಸಾಧ್ಯವೆಂದು ಅವರು ಭಾವಿಸುವರು. ಸಹಜವಾದ ಸುಖವನ್ನು ಪಡೆಯಬೇಕಾದರೆ ಒಂದೇ ಒಂದು ಮಾರ್ಗವು ಇರುವುದು. ಅದೇನೆಂದರೆ—ಮೊಟ್ಟಮೊದಲು ದೇವರಿಗೆ ವಿಧೇಯನಾಗಿ, ಆತನು ಮೆಚ್ಚುವಂಥ ಧರ್ಮಮಾರ್ಗದಲ್ಲಿ ನಡೆಯುವುದಕ್ಕೆ ಪ್ರಯತ್ನಪಡು, ಆಗ ಕರುಣಾಸಮುದ್ರನಾದ ದೇವರು ಈ ಲೋಕದಲ್ಲಿ ನಮ್ಮ ಸುಖಸಂತೋಷಗಳಿಗೆ ಆವಶ್ಯಕವಾದ ಸಕಲ ಭಾಗ್ಯಗಳನ್ನು ನಮಗೆ ದಯಪಾಲಿಸುವನು ಎಂಬುದೇ. ಹಾಗಾದರೆ "ನೀವು ದೇವರ ರಾಜ್ಯವನ್ನೂ ನೀತಿಯನ್ನೂ ಪಡೆಕೊಳ್ಳುವುದಕ್ಕೆ ಮೊದಲು ಪ್ರಯತ್ನಿಸಿರಿ" ಎಂಬ ಸ್ವರ್ಣವಾಕ್ಯವನ್ನು ನಾವು ನಮ್ಮ ನಡತೆಯ ಸೂತ್ರವನ್ನಾಗಿ ಮಾಡಿಕೊಂಡು ಅದರಂತೆ ಯಾವಾಗಲೂ ನಡೆದುಕೊಳ್ಳುತ್ತಾ ಬರೋಣ. ಆಗ ನಮ್ಮ ಸುಖಸಂತೋಷಗಳಿಗೆ ಬೇಕಾದಷ್ಟು ಈ ಲೋಕದಲ್ಲಿ ನಮಗೆ ಸಿಕ್ಕುವುದು.

ವೈಸ್‌ರಾಯ್ ದಂಪತಿಗಳಿಗೆ ಮೈಸೂರು ಸಂಸ್ಥಾನದಲ್ಲಿ ನಡೆದ ಅಪೂರ್ವ ಆತಿಥ್ಯಗಳು.

ಬೆಂಗಳೂರು ರೈಲ್ವೆ ಸ್ಟೇಷನ್.

ಕಳೆದ ತಾ 18 ನೇ ಮಂಗಳವಾರ ರಾತ್ರಿ ವೈಸ್‌ರಾಯ್ ದಂಪತಿಗಳು ಪರಿವಾರ ಸಮೇತ ರಾಜಧಾನಿಯಲ್ಲಿ ಸ್ಪೆಷಲ್ ರೈಲು ಹತ್ತಿ ನಮ್ಮ ಮಹಾರಾಜರವರಿಂದ ಬೀಳ್ಕೊಂಡು ಪ್ರಯಾಣಮಾಡಿ ಮರುದಿನ ಬೆಳಗ್ಗೆ 8 30 ಗಂಟೆಗೆ ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ ತಲಪಿದರು. ಬ್ರಿಟಿಷ್ ರೆಸಿಡೆಂಟರೂ ಅವರ ಅಸಿಸ್ಟೆಂಟರೂ ಸೈನ್ಯದ ಅಧಿಪತಿಯೂ ಅವರ ಕೈಕೆಳಗಿನ ಹುದ್ದೇದಾರರೂ, ದಂಡಿನ ಮತ್ತೂ ಸಿಟಿಯ ಎಲ್ಲಾ ಕೋಮುಗಳ ಮುಖ್ಯ ಅಧಿಕಾರಿಗಳೂ ಪ್ರಜಾಮುಖಂಡರೂ ದಿವ್ಯವಾಗಿ ಅಲಂಕರಿಸಲ್ಪಟ್ಟಿದ್ದ ಸ್ಟೇಷನ್ ಪ್ಲಾಟ್‌ಫಾರಮಿನಲ್ಲಿ ಕಾದಿದ್ದು ಬಹು ಉತ್ಸಾಹದಿಂದ ವೈಸ್‌ರಾಯ್ ದಂಪತಿಗಳ ಭೇಟಿಮಾಡಿ ಅವರಿಗೆ ಸುಸ್ವಾಗತವನ್ನು ಬಯಸಿದರು. ರೆಸಿಡೆಂಟರು ಮುಖ್ಯರಾದ ಸರ್ದಾರರನ್ನೂ ಅಧಿಕಾರಿಗಳನ್ನೂ ದೊಡ್ಡ ಮನುಷ್ಯರನ್ನೂ ವೈಸ್‌ರಾಯರವರಿಗೆ ಕಾಣಿಸಿ ಪರಿಚಯಮಾಡಿದರು. ಗೌರವಾರ್ಥವಾದ 31 ತೋಪುಗಳು ಹಾರಿಸಲ್ಪಟ್ಟವು. ವೈಸ್‌ರಾಯರವರು ಸೈನಿಕರ ಸಾಲುಗಳನ್ನು ಪರಾಂಬರಿಸಿ ಸಂತೋಷಪಟ್ಟು, ದಿವ್ಯವಾದ ಚಪ್ಪರದೊಳಕ್ಕೆ ದಯಮಾಡಿ ಪತ್ನಿಯವರ ಕೂಡ ಶ್ರೇಷ್ಠಾಸನಗಳನ್ನು ಅಲಂಕರಿಸಿದರು. ಆಗ ದಂಡಿನ ಮ್ಯುನಿಸಿಪಾಲಿಟಿ ಪ್ರೆಸಿಡೆಂಟರಾದ ಮ|| ಎ ಆರ್ ಕಾಕ್ಸ್‌ರವರು ವೈಸ್‌ರಾಯರವರಿಗೆ ಸುಸ್ವಾಗತವನ್ನು ಬಯಸಿ ಒಂದು ಅಡ್ರೆಸನ್ನು ಓದಿ ಒಪ್ಪಿಸಿದರು. ಅದರಲ್ಲಿ ಅವರು ಪ್ರಾರ್ಥಿಸಿಕೊಂಡ ಮುಖ್ಯ ವಿಷಯಗಳೇನೆಂದರೆ—

ಬೆಂಗಳೂರು ದಕ್ಷಿಣದೇಶದಲ್ಲೆಲ್ಲಾ ಬಹು ಆರೋಗ್ಯಕರವಾದ ಪಟ್ಟಣವೆಂದು ಕೀರ್ತಿಪಡೆದಿರುತ್ತದೆ. ಆ ಕೀರ್ತಿಯನ್ನು ಕಾಪಾಡಿಕೊಳ್ಳುವುದಕ್ಕೆ ಇಂಡಿಯಾ ಗವರ್ನ್‌ಮೆಂಟಿನವರು ನಮಗೆ ಇನ್ನೂ ಹೆಚ್ಚಾದ ಸೌಕರ್ಯಗಳನ್ನೂ ಧನಸಹಾಯವನ್ನೂ ದಯಪಾಲಿಸಬೇಕು. ನಮ್ಮ ಆಸ್ಪತ್ರೆಗಳು ಸಾಲವು, ನಮ್ಮ ಮಾರ್ಕೆಟ್ಟುಗಳು ಒಳ್ಳೇ ಸ್ಥಿತಿಯಲ್ಲಿಲ್ಲ. ನಮ್ಮ ನೀರಿನ ಸೌಕರ್ಯವು ತೃಪ್ತಿಕರವಾಗಿಲ್ಲ, ನಮ್ಮ ದಂಡಿನ ಡ್ರೇನೇಜು (ಚರಂಡಿ ಬಚ್ಚಲುಗಳು) ಕ್ರಮಪಟ್ಟಿಲ್ಲ. ಭಾರೀ ಏರ್ಪಾಡನ್ನು ನಡಿಸುವುದಕ್ಕೆ ನಮ್ಮ ಮ್ಯುನಿಸಿಪಲ್ ಉತ್ಪತ್ತಿ ಸಾಲದು, ಮತ್ತು ಇದನ್ನು ಹೆಚ್ಚಿಸುವುದೂ ಸಾಧ್ಯವಲ್ಲ. ಇಂಡಿಯಾ ಗವರ್ನ್‌ಮೆಂಟಿನವರು ನಮ್ಮ ಕ್ಷೇಮಚಿಂತನೆಯಿಂದ ಇದುವರೆಗೆ ದ್ರವ್ಯಸಹಾಯಮಾಡಿರುವುದಕ್ಕೆ ನಾವು ಕೃತಜ್ಞರಾಗಿರುತ್ತೇವೆ. ಈ ವರುಷ ನಮ್ಮ ಸ್ಯಾನಿಟೇಷನ್‌ಗಾಗಿ 4 ಲಕ್ಷ ರೂಪಾಯಿ ದಯಪಾಲಿಸಿರುವುದಲ್ಲದೆ ಅದೇ ಉದ್ದೇಶಕ್ಕೆ ಪ್ರತಿವರುಷವೂ 10,000 ರೂಪಾಯಿನಂತೆ ಐದು ವರುಷಕಾಲ ಗ್ರಾಂಟು ಕೊಡಿಸುವುದಾಗಿ ಅಪ್ಪಣೆ ಕೊಟ್ಟಿರುತ್ತೀರಿ. ನಮಗೆ ಕಳೆದ 1911 ನೇ ಜುಲೈನಲ್ಲಿ ಕೊಟ್ಟಿರುವ 80,000 ರೂಪಾಯಿ ಸಾಲವನ್ನು ಮಾಫಿ ಬಿಟ್ಟುಕೊಡಬೇಕೆಂದು ಪ್ರಾರ್ಥಿಸುತ್ತೇವೆ. ನಾವು ಹೆಚ್ಚು ನೀರನ್ನು ಉಪಯೋಗಿಸಿಕೊಂಡದ್ದಕ್ಕೆ ಇದುವರೆಗೆ ಮೈಸೂರು ಸರ್ಕಾರಕ್ಕೆ ಕೊಟ್ಟಿರುವ 3,965 ರೂಪಾಯನ್ನು ನಮ್ಮ ಮೇಲೆ ಕಡಿಮೆಮಾಡಿಟ್ಟು ಇಂಡಿಯಾ ಗವರ್ನ್‌ಮೆಂಟಿನ ಬೊಕ್ಕಸದಿಂದ ನಮಗೆ ಗ್ರಾಂಟು ಕೊಡಿಸಿಕೊಡಬೇಕು. ಇನ್ನು ಮುಂದೆ ನಮ್ಮ ದಂಡಿನ ಬಜೆಟ್‌ನಲ್ಲಿ ಶಿಲ್ಕು ಉಳಿಯದಂತೆ ಉತ್ಪತ್ತಿಯಾಗುವ ಹಣವನ್ನೆಲ್ಲಾ ದಂಡಿನ ಸೌಕರ್ಯಗಳಿಗಾಗಿಯೇ ವಿನಿಯೋಗಿಸುವಹಾಗೆ ಏರ್ಪಾಡುಮಾಡಿಕೊಡಬೇಕು. ಇಲ್ಲವಾದರೆ ಉಳಿಯುವ ಶಿಲ್ಕಿನ ಹಣ ಇಂಡಿಯಾ ಗವರ್ನ್‌ಮೆಂಟಿಗೆ ಸೇರದೆ ಮೈಸೂರು ಸರ್ಕಾರಕ್ಕೆ ವಾಪಸು ಆಗಬೇಕಾಗುತ್ತದೆ. ನಮ್ಮಲ್ಲಿ ವಸೂಲಾಗುತ್ತಿರುವ ಆದಾಯದ ಮೇಲಿನ ತೆರಿಗೆಯನ್ನು ವಜಾಮಾಡಿಕೊಡಬೇಕಲ್ಲದೆ ಸ್ಟ್ಯಾಂಪ್ ಇಲಾಖೆಯಿಂದ ನಮಗೆ ದೊರಕುವ ಹಣವನ್ನು ಹೆಚ್ಚಿಸಿಕೊಡಬೇಕು. ಇದಲ್ಲದೆ ದಂಡಿನೊಳಗಿರುವ ಸರ್ಕಾರಿ ಕಟ್ಟಡಗಳಿಗೆ ತೆರಿಗೆ ಸುಂಕವನ್ನು ವಸೂಲುಮಾಡುವಂತೆ ನಮಗೆ ಅಧಿಕಾರಕೊಡಿಸಬೇಕು. ಈಗ ನಾವು ಮ್ಯುನಿಸಿಪಲ್ ಆಸ್ಪತ್ರೆಗಳಿಗೆ ಸಾಲಿಯಾನಾ ಖರ್ಚು ಮಾಡುತ್ತಿರುವ 9,200 ರೂಪಾಯನ್ನು ಇಂಡಿಯಾ ಗವರ್ನ್‌ಮೆಂಟಿನವರೇ ವಹಿಸಿಕೊಂಡು ವಾಪಸುಮಾಡುವುದರ ಮೂಲಕ ನಮಗೆ ಸಹಾಯಮಾಡಿಕೊಡಬೇಕು. ಬ್ರಿಟಿಷ್ ರೆಸಿಡೆಂಟರು ಈಗ ನಮ್ಮ ಸಿವಿಲ್ ಮೊಕದ್ದಮೆಗಳ ಅಪೀಲ್ ಕೇಳುವುದನ್ನು ತಪ್ಪಿಸಿ ಮದರಾಸ್ ಹೈ ಕೋರ್ಟನ್ನು ನಮಗೆ ಅಪೀಲ್ ಕೋರ್ಟಾಗಿ ಕಲ್ಪಿಸಿಕೊಡಬೇಕು.

ಈ ಅಡ್ರೆಸನ್ನು ದಿವ್ಯವಾದ ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದ್ದನ್ನು ವೈಸ್‌ರಾಯ್ ಪ್ರಭುಗಳು ಅಂಗೀಕರಿಸಿ ಪ್ರತ್ಯುತ್ತರವಾಗಿ ಅಪ್ಪಣೆಕೊಡಿಸಿದ್ದೇನೆಂದರೆ—

ನೀವು ನಿಮ್ಮ ಅಡ್ರೆಸ್ಸಿನಲ್ಲಿ ಪ್ರಾರ್ಥಿಸಿಕೊಂಡಿರುವ ವಿಷಯಗಳನ್ನೆಲ್ಲಾ ನಮ್ಮ ರೆಸಿಡೆಂಟರವರು ತನಿಖೆಮಾಡಿ ತಮ್ಮ ಅಭಿಪ್ರಾಯಗಳ ಸಮೇತ ಇಂಡಿಯಾ ಗವರ್ನ್‌ಮೆಂಟಿಗೆ ಬರೆದಪಕ್ಷದಲ್ಲಿ ಅವರ ಶಿಫಾರಸಿನ ಪ್ರಕಾರ ಇತ್ಯರ್ಥಮಾಡಿಕೊಡುತ್ತೇವೆ. ಇದುವರೆಗೆ ನಿಮ್ಮಗಳ ಸೌಕರ್ಯಗಳಿಗಾಗಿ ಇಂಡಿಯಾಗವರ್ನ್‌ಮೆಂಟಿನವರು ಬಹಳ ದಾರಾಳವಾದ ರಿಯಾಯಿತಿಗಳನ್ನು ತೋರಿಸಿ ಹೆಚ್ಚು ಹಣವನ್ನು ಕೊಟ್ಟಿರುತ್ತಾರೆ. ನಿಮ್ಮ ನೀರಿನ ಏರ್ಪಾಡಿಗೆ 11 ಲಕ್ಷ ರೂಪಾಯಿತನಕ ಕೊಡಲಾಗಿದೆ. ಕಳೆದ ಎರಡುವರೆ ವರುಷಗಳಲ್ಲಿ 8 ಲಕ್ಷ ರೂಪಾಯಿತನಕ ಕೊಟ್ಟಿರುವೆವು. ಇದಲ್ಲದೆ ಆರೋಗ್ಯಾಭಿವೃದ್ಧಿಯ ಕಾರ್ಯಗಳಿಗೆ 5 ವರುಷಗಳ ತನಕ ಪ್ರತಿವರುಷವೂ 10,000 ರೂಪಾಯಿನಂತೆ ದ್ರವ್ಯಸಹಾಯ ಮಾಡಲು ಒಪ್ಪಿ ಸ್ಯಾಂಕ್ಷನ್ ಮಾಡಿರುವೆವು. ನಿಮ್ಮಲ್ಲಿ ವಿದ್ಯಾಭಿವೃದ್ಧಿಗೋಸ್ಕರ ಇದುವರೆಗೆ ಸಾಲಿಯಾನಾ ಒಂದೂಕಾಲು ಲಕ್ಷ ರೂಪಾಯಿನಂತೆ ನಾವು ಕೊಡುತ್ತಾ ಬಂದಿರುವುದು ನಿಮಗೆ ತಿಳಿಯದೆ ಇಲ್ಲ. ದಂಡಿನ ಶಿಲ್ಕು ಹಣದ ವಿನಿಯೋಗದ ವಿಷಯದಲ್ಲಿ ಬ್ರಿಟಿಷ್ ರೆಸಿಡೆಂಟರವರು ನಿಮಗೆ ತಕ್ಕ ಕಾರಣಗಳನ್ನು ತಿಳಿಸುತ್ತಾರೆ. ಈ ವಿಚಾರದಲ್ಲಿ ನಮ್ಮ ಅಧಿಕಾರವು ಎಷ್ಟುಮಟ್ಟಿನದೆಂಬುವುದು ನಿಮಗೆ ವೇದ್ಯವಾಗುತ್ತದೆ. ಕ್ರಿಮಿನಲ್ ಅಪೀಲುಗಳನ್ನು ನೀವು ಮದರಾಸ್ ಹೈ ಕೋರ್ಟಿನಲ್ಲಿ ದಾಖಲ್‌ಮಾಡಬಹುದಾಗಿದೆ. ಸಿವಿಲ್ ಅಪೀಲುಗಳನ್ನು ಆ ಕೋರ್ಟಿನಲ್ಲಿ ದಾಖಲ್‌ಮಾಡತಕ್ಕ ರಿಯಾಯಿತಿಯನ್ನು ತಮಗೆ ತೋರಿಸಬೇಕಾದ ಅಗತ್ಯವಿಲ್ಲವೆಂದು ಗೊತ್ತಾಗುವುದು. ಇದರಿಂದ ನಮಗೆ ಖರ್ಚು ಹೆಚ್ಚುವುದೇ ಹೊರತು ಪ್ರಯೋಜನ ಕಡಿಮೆ ಎಂದು ತಿಳಿಯುತ್ತೇವೆ.

ಈ ರೀತಿಯಾದ ಪ್ರತ್ಯುತ್ತರವನ್ನು ದಯಪಾಲಿಸಿ ವೈಸ್‌ರಾಯಿ ಪ್ರಭುದಂಪತಿಗಳು ಪರಿವಾರ ಸಮೇತ ಸ್ಟೇಷನ್‌ನಿಂದ ಹೊರಟು ಮೆಟ್ಟಿಲು ಹತ್ತಿ ಇಳಿದು ಪಟ್ಟಣವನ್ನು ಪ್ರವೇಶಮಾಡಿದರು. ಅಲ್ಲಿ ಬಹು ನೇತ್ರಾನಂದಕರವಾದ ಚಪ್ಪರ ಮತ್ತು ಕಮಾನುಗಳು ಹಾಕಲ್ಪಟ್ಟಿದ್ದವು. ಬೆಂಗಳೂರು ಸಿಟಿ ಮ್ಯುನಿಸಿಪಲ್ ಮೆಂಬರುಗಳು ಅಲ್ಲಿ ಕಾದಿದ್ದು ವೈಸ್‌ರಾಯ್ ದಂಪತಿಗಳನ್ನು ವಂದಿಸಿದರು. ಮುಂದೆ ಸಾರೋಟುಗಳಲ್ಲಿ ಪ್ರಭುಗಳು ದಯಮಾಡಿ ಅನೇಕ ಸಹಸ್ರ ಪ್ರಜೆಗಳೂ ಬಾಲಕ ಬಾಲಕಿಯರೂ ಕಿಕ್ಕಿರಿಯುವಂತೆ ನಿಂತಿದ್ದ ರಸ್ತೆಯನ್ನು ಹಾಸಿ ಮೆರವಣಿಗೆಯಲ್ಲಿ ದಯಮಾಡಿ ರೆಸಿಡೆನ್ಸಿ ಬಂಗಲೆಯನ್ನು ತಲಪಿ ಅಲ್ಲಿ ಕಾದಿದ್ದ ಸೈನಿಕರನ್ನು ಪರಾಂಬರಿಸಿ 31 ತೋಪುಗಳಾಗುತ್ತಿರುವಲ್ಲಿ ಸಾರೋಟು ಇಳಿದು ಬಂಗಲೆಯೊಳಕ್ಕೆ ಚಿತ್ತೈಸಿದರು.

ತಾ, 19 ನೇ ಬುಧವಾರ ಬೆಳಗ್ಗೆ 10-30 ಗಂಟೆಗೆ ಘನವನ್ನೈದಿದ ಲೇಡಿ ಹಾರ್ಡಿಂಗ್‌ರವರು ಬ್ರಿಟಿಷ್ ರೆಸಿಡೆಂಟರವರ ಪತ್ನಿಯವರ ಸಮೇತ ಲೇಡಿ ಕರ್ಜನ್

...ರ ಹೆಸರಿನ ಮೇಲೆ ಕಟ್ಟಿ ನಡೆಯುತ್ತಿರುವ ಆಸ್ಪತ್ರೆಗೆ ದಯಮಾಡಿದರು. ಅಲ್ಲಿ ಆಸ್ಪತ್ರೆಯ ಮುಖ್ಯಾಧಿಕಾರಿಗಳು ಕೂಡಿದ್ದು ದಿವ್ಯವಾದ ಚಪ್ಪರದಲ್ಲಿ ಅವರನ್ನು ಎದುರುಗೊಂಡರು ದಂಡಿನ ಆರು ಮಂದಿ ದೇಶೀಯ ದೊಡ್ಡಮನುಷ್ಯರು ದ್ರವ್ಯಸಹಾಯಮಾಡಿ 1900 ನೇ ಡಿಸೆಂಬರ್ ತಾ. 10 ರಲ್ಲಿ ಈ ಆಸ್ಪತ್ರೆಯನ್ನು ಕಟ್ಟಿಸಿದರು ಬೌರಿಂಗ್ ಆಸ್ಪತ್ರೆಗೂ ಈ ಆಸ್ಪತ್ರೆಗೂ ನಡುವೆ ಇದ್ದ ...ಯೊ ವರ್ಕೇಟ್ ರಸ್ತೆಯನ್ನು ಮುಚ್ಚಿಬಿಟ್ಟು ಆಸ್ಪತ್ರೆಯೊಳಕ್ಕೆ ಸೇರಿಸಿದ್ದಾರೆ. ಮಿ॥ ಅಹಮದ್ ಸೇಟರವರು ಈ ಕಟ್ಟಡಕ್ಕೆ ಕಟ್ಟಿಸಿದಲ್ಲಿ ಸುಂದರವಾಗಿ ಮಾಡಿದ ಹೊರಬಾಗಿಲನ್ನು ಮಾಡಿಸಿಕೊಟ್ಟರು ಲೇಡಿ ಹಾರ್ಡಿಂಗ್ ರವರು ಅದನ್ನು ತೆರೆದು ಪ್ರತಿಷ್ಠೆಮಾಡಿ ಮಿ॥ ಸೇಟರ ಔದಾರ್ಯವನ್ನು ಕೊಂಡಾಡಿ ಆಸ್ಪತ್ರೆಯನ್ನು ನೋಡಿಕೊಂಡು 11-30 ಗಂಟೆಗೆ ವಾಪಸು ರೆಸಿಡೆನ್ಸಿ ಬಂಗಲೆಗೆ ದಯಮಾಡಿದರು

ಆ ದಿನ ಮಧ್ಯಾಹ್ನ ಘನವನ್ನೈದಿದ ವೈಸ್‌ರಾಯರವರು 11 ಗಂಟೆಗೆ ...ನಲ್ಲಿ ಕುಳಿತು ಬ್ರಿಟಿಷ್ ರೆಸಿಡೆಂಟರು, ಮಿಲಿಟರಿ ಮತ್ತು ಪ್ರೈವೇಟ್ ಸೆಕ್ರೆಟರಿಗಳೇ ಮುಂತಾದ ಮುಖ್ಯ ಅಧಿಕಾರಿಗಳ ಕೂಡ ರೆಸಿಡೆನ್ಸಿ ಬಂಗಲೆಯಿಂದ ದಯಮಾಡಿ, ಯಶವಂತಪುರದ ರೈಲ್ವೆ ಸ್ಟೇಷನ್ ಬಳಿ ಇರುವ ಚಾಮರಾಜೇಂದ್ರ ರೆಜರ್ವಾಯಿರ್ ಎಂಬ ಕೊಳಕ್ಕೆ ಹೋಗಿ ಅಲ್ಲಿ ಜೂಯಲ್ ಫಿಲ್ಟರ್ ಎಂಬ ವಿಧಾನದಿಂದ ನೀರನ್ನು ಶುದ್ಧ ಮಾಡಿ ಶೋಧಿಸಿ ಬೆಂಗಳೂರು ಸಿಟಿಗೂ ದಂಡಿಗೂ ಕುಡಿಯುವ ನೀರನ್ನು ಒದಗಿಸುತ್ತಿರುವ ಏರ್ಪಾಡನ್ನು ಪರಾಂಬರಿಸಿದರು ಅಲ್ಲಿ ಮೈಸೂರು ಸರ್ಕಾರದ ಇಂಜನಿಯರುಗಳಾದ ಮಿ॥ ಕೆ. ಕೃಷ್ಣಯ್ಯಂಗಾರ್ರು, ಮಿ॥ ವಿ ರಂಗಸ್ವಾಮಯ್ಯಂಗಾರ್ರು, ಮಿ॥ ಶ್ರೀನಿವಾಸಯ್ಯಂಗಾರ್ರು ಶಾವಿಮ್ನ ಪ್ರಭುಗಳನ್ನು ಎಲ್ಲಾ ಭಾಗಗಳಿಗೂ ಕರೆದುಕೊಂಡು ಹೋಗಿ ಅವರಿಗೆ ಅಲ್ಲಿನ ವಿಧ್ಯಮಾನಗಳನ್ನೆಲ್ಲಾ ಕಾಣಿಸಿ ವಿವರಿಸಿದರು

ವೈಸ್‌ರಾಯರವರು ಪರಿವಾರ ಸಮೇತ ಅಲ್ಲಿಂದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಶಾಸ್ತ್ರಶೋಧನಾ ವಿದ್ಯಾಶಾಲೆ) ಕಟ್ಟಡಕ್ಕೆ ಚಿತ್ತೈಸಿದರು ಡಾಕ್ಟರ್ ಮಾರಿಸ್ ಟ್ರಾವರ್ಸ್‌ರವರೇ ಮೊದಲಾದ ಆ ವಿದ್ಯಾಶಾಲೆಯ ...ರೂ, ದಿವಾನ್ ಮಿ॥ ವಿಶ್ವೇಶ್ವರಯ್ಯನವರೂ ಪ್ರಭುಗಳನ್ನು ಎದುರುಗೊಂಡು ಕರೆದುಕೊಂಡು ಹೋಗಿ ಆ ವಿದ್ಯಾಶಾಲೆಯನ್ನೆಲ್ಲಾ ತೋರಿಸಿ ವಿವರಿಸಿದರು

ಅಲ್ಲಿಂದ ವೈಸ್‌ರಾಯರವರು ದಯಮಾಡಿ ಮೈಸೂರು ಇಂಪೀರಿಯಲ್ ಸರ್ವೀಸ್ ಕುದುರೆ ಸೈನಿಕರ ಸಾಲುಮನೆಗಳನ್ನೂ, ತಬೇಲೆಗಳನ್ನೂ ಅಡವಾಯಿ ... ಬಹಳ ಸಂತೋಷಪಟ್ಟು ಇನ್‌ಸ್ಪೆಕ್ಟಿಂಗ್ ಆಫೀಸರ್ ಮೇಜರ್ ...ರ್ಟರವರನ್ನು ವಂದಿಸಿ ವಾಪಸು ರೆಸಿಡೆನ್ಸಿ ಬಂಗಲೆಯನ್ನು ತಲಪಿದರು ...ಳ ಪ್ರಭುಗಳು 1 ಗಂಟೆಗೆ ಪೈಗ್ರೌಂಡಿಗೆ ದಯಮಾಡಿ ದಿವಾನ್ ಮಿ॥ ವಿಶ್ವೇಶ್ವರಯ್ಯನವರ ಬಂಗಲೆಗೆ ಚಿತ್ತೈಸಿ ಅವರ ಆತಿಥ್ಯವನ್ನು ಸ್ವೀಕರಿಸಿದರು. ಅಲ್ಲಿಗೆ ಅನೇಕ ಮಹನೀಯರು ಕರೆಸಲ್ಪಟ್ಟು ಹಾಜರಾಗಿದ್ದರು. ಆತಿಥ್ಯವು ...ಲ್ಲಾ ಭಾಗಗಳಲ್ಲೂ ರಾಜಯೋಗ್ಯವಾಗಿಯೂ ಅತ್ಯುತ್ಸಾಹದಿಂದಲೂ ನೆರವೇರಿತು ವೈಸ್‌ರಾಯರವರು ದಿವಾನ್‌ರವರನ್ನು ಬಹು ಆದರದಿಂದ ವಂದಿಸಿ ಅಲ್ಲಿಂದ ದಿವ್ಯವಾಗಿ ಅಲಂಕರಿಸಲ್ಪಟ್ಟಿದ್ದ ರಾಜಬೀದಿಗಳಲ್ಲಿ ಹಾಸಿ, ಅಲ್ಲಲ್ಲಿ ಪುಷ್ಪಮಯದಿಂದ ಒಪ್ಪಿಸಲ್ಪಟ್ಟ ಹಾರ ತುರಾಯಿಗಳನ್ನು ಪ್ರೀತಿಪೂರ್ವಕವಾಗಿ ಸ್ವೀಕರಿಸಿ ಪ್ರತಿವಂದನೆಯನ್ನು ಮಾಡಿ ವೈ ಎಂ ಸಿ. ಏ. ಎಂಬ ಸಂಘದ ...ತಕ್ಕೆ ಅಸ್ತಿಭಾರ ಶಿಲೆಯನ್ನು ಹಾಕಿ ಪ್ರತಿಷ್ಠೆಮಾಡಿ ಆ ಪರೋಪಕಾರ್ಯವನ್ನು ಕೊಂಡಾಡಿ ಭಾಷಣಮಾಡಿದರು

ತಾ 20 ನೇ ಗುರುವಾರ ಬೆಳಗ್ಗೆ ಪೆರೇಡ್ ಮೈದಾನವು ಕಳಕಳಿಸುತ್ತಿತ್ತು ಸುಮಾರು ಆರು ಸಹಸ್ರ ಇಂಗ್ಲಿಷ್ ಮತ್ತೂ ದೇಶೀಯ ಸೈನಿಕರೂ ಸವಾರರೂ ... ಸೈನಿಕರೂ ಎಲ್ಲಾ ತಮ್ಮ ದಿಕ್ಕುಗಳಲ್ಲಿ ಸಾಲು ಕಟ್ಟಿ ನಿಂತುಕೊಂಡರು. ವೈಸ್‌ರಾಯರವರು ದಿವ್ಯವಾದ ಕುದುರೆಯನ್ನು ಹತ್ತಿ ಹಿಂದೆ ಮುಂದೆ ಸವಾರರನ್ನು ಬಿಟ್ಟುಕೊಂಡು ಸೈನ್ಯಾಧಿಪತಿಯ ಸಮೇತ ಮೈದಾನಕ್ಕೆ ಚಿತ್ತೈಸಿ 31 ತೋಪುಗಳು ಆಗುತ್ತಿರುವಲ್ಲಿ ಧ್ವಜಸ್ತಂಭದ ಬಳಿಗೆ ದಯಮಾಡಿಸಿದರು ಸೈನಿಕರ ...ಣ ಪೂರೈಸಿದ ಬಳಿಕ ವೈಸ್‌ರಾಯರವರು ಗ್ರೆನೆಡಿಯರ್ ಎಂಬ ಸೈನ್ಯಕ್ಕೆ ಗೌರವಾರ್ಥವಾದ ಒಂದು ಬಾವುಟವನ್ನು ಒಪ್ಪಿಸಿ ಅವರ ಪರಾಕ್ರಮ ಕಾರ್ಯಗಳನ್ನು ವಿವರಿಸಿ ಕೊಂಡಾಡಿದರು ಈ ಅಪೂರ್ವವೂ ನೇತ್ರಾನಂದಕರವೂ ಆದ ...ದ್ಧ ಘೋಷವನ್ನು ಸುಮಾರು 50,000 ಪ್ರಜೆಗಳು ನೋಡಿ ಆನಂದಪಟ್ಟರು. ...ರೂ, ಅಧಿಕಾರಿಗಳೂ ಆ ಮೈದಾನದೊಳಗೆ ಬೇರೆಬೇರೆ ವಿಭಾಗಗಳಲ್ಲಿ ...ವಾಗಿ ಕುಳಿತು ಇದ್ದರು ಅದೆಲ್ಲಾ ಪೂರೈಸಿದಮೇಲೆ ವೈಸ್‌ರಾಯರವರು ...ರನ್ನು ಪ್ರತಿವಂದಿಸಿ 31 ತೋಪುಗಳಾಗುತ್ತಿರುವಾಗ ಮೈದಾನದಿಂದ ಹಿಂ... ರೆಸಿಡೆನ್ಸಿ ಬಂಗಲೆಗೆ ಚಿತ್ತೈಸಿದರು

ಭೋಜನಾನಂತರ ವೈಸ್‌ರಾಯರವರು ಬ್ರಿಟಿಷ್ ರೆಸಿಡೆಂಟ್ ಸರ್ ಹ್ಯೂ ಡೇ...ರವರ ಕೂಡ ಬಂಗಲೆಯಿಂದ ಹೊರಟು ಅಠಾರಾ ಕಚೇರಿ ಕಟ್ಟಡದ ಮೈದಾನದ ...ಪಾರ್ಕಿನಲ್ಲಿ ಕಟ್ಟಿರುವ ಸರ್ ಶೇಷಾದ್ರಿ ಮೆಮೋರಿಯಲ್ ಹಾಲಿನ ಮುಂಭಾಗಕ್ಕೆ ಚಿತ್ತೈಸಿ ಲೇಟ್ ದಿವಾನ್‌ರವರ ಭಾವ ಪ್ರತಿಮೆಯನ್ನು ತೆರೆದು ...ಮಾಡಿದರು ಆ ಸಂತೋಷ ಕೂಟದಲ್ಲಿ ಮೆಮೋರಿಯಲ್ ಕಮಿಟಿ ...ರೂ, ಲೇಟ್ ಸರ್ ಶೇಷಾದ್ರಿಯ್ಯರವರ ರಕ್ತಸಂಬಂಧಿಗಳೂ, ಇಷ್ಟ... ಅಲ್ಲದೆ ದಿವಾನ್‌ರೇ ಮೊದಲಾದ ಅಧಿಕಾರಿಗಳೂ, ಸಿಟಿ ಮತ್ತು ದಂ... ದೊಡ್ಡ ಮನುಷ್ಯರೂ ಬಹು ಮಂದಿ ಹಾಜರಾಗಿದ್ದರು ಮಾಜಿ ದಿವಾನ್ ...ತ್ತು ಮೆಮೋರಿಯಲ್ ಕಮಿಟಿಯ ಪ್ರೆಸಿಡೆಂಟರಾದ ಮಿ॥ ವಿ ಪಿ ಮಾಧವ...ಸಿ.ಐ.ಇ ರವರು ವೈಸ್‌ರಾಯರವರನ್ನು ಕುರಿತು ಕಮಿಟಿಯ ಅಡ್ರೆಸ್ಸನ್ನು ಓದಿ ಲೇಟ್ ದಿವಾನ್ ಸರ್ ಕೆ ಶೇಷಾದ್ರಿ ಅಯ್ಯರವರ ಪ್ರಖ್ಯಾತವಾದ ಮಹತ್ಕಾರ್ಯಗಳನ್ನು ವಿವರಿಸಿ, ಅಂಥಾ ದೇಶೀಯ ಪುರುಷನ ಭಾವ ಪ್ರತಿಮೆಯನ್ನು ಪ್ರತಿಷ್ಠೆ ಮಾಡಬೇಕೆಂದು ಪ್ರಾರ್ಥಿಸಿದರು ವೈಸ್‌ರಾಯರವರು ಬಹು ...ದಿಂದ ಅಂಥಾ ಮಹನೀಯರ ಹೆಸರು ಶಾಶ್ವತವಾಗಿ, ಸಕಲ ದೇಶೀಯ... ಸನ್ಮಾರ್ಗವನ್ನು ತೋರಿಸುವುದಾಗಲೆಂದು ಹರಸಿ ಪ್ರತಿಷ್ಠೆ ಮಾಡಿದರು

ಆ ದಿನ ರಾತ್ರಿ ರೆಸಿಡೆನ್ಸಿ ಬಂಗಲೆಯಲ್ಲಿ ದಿವ್ಯವಾದ ಔತಣೋತ್ಸವ ...ಸುಮಾರು ಅರವತ್ತು ಮಂದಿ ಅಧಿಕಾರಿಗಳೂ ಹುದ್ದೇದಾರರೂ ಕುಳಿತು ...ಮಾಡಿದರು ಆ ಬಳಿಕ ವೈಸ್‌ರಾಯರವರು ಪ್ರೀತ್ಯಾಸನವನ್ನು ...ರಿಸಿ ದರ್ಬಾರ್ ನಡಿಸಿದಾಗ ಬಹುಮಂದಿ ದೊಡ್ಡಮನುಷ್ಯರು ಅವರ ...ಮಾಡಿ ಸಂತುಷ್ಟರಾದರು

ತಾ 20 ನೇ ರಾತ್ರಿ ವೈಸ್‌ರಾಯರವರು ರೈಲುಹತ್ತಿ ಬೆಂಗಳೂರಿಂದ ...ರು ಸ್ಟೇಷನ್ ವರೆಗೆ ಪ್ರಯಾಣಮಾಡಿ ಗಾಡಿಯೊಳಗೇ ಸುಖನಿದ್ರೆಮಾಡಿ... 200 ಮಂದಿ ಪೋಲೀಸಿನವರು ಸ್ಟೇಷನ್ ಸುತ್ತಾ ಎರಡು ಸಾಲುಕಟ್ಟಿ ...ರಾತ್ರಿಯೆಲ್ಲಾ ಬಹಳ ಕಟ್ಟುನಿಟ್ಟಾಗಿ ಕಾವಲಿದ್ದರು ರೈಲ್ವೆ ಲೈನನ್ನು ...ಪೋಲೀಸಿನವರು ಉಸ್ತುವಾರಿ ಇಟ್ಟು ಕಾಯುತ್ತಿದ್ದರು ಬೆಳಗಾದ ಮೇಲೆ (ತಾ. 17 ನೇ ಶುಕ್ರವಾರ) ವೈಸ್‌ರಾಯರವರು ಚೋಟಾ ಹಜಾರಿಯನ್ನು ...ಯಲ್ಲೇ ಪೂರೈಸಿಕೊಂಡು ಅಲ್ಲಿಂದ ಮುಂದಕ್ಕೆ ಪ್ರಯಾಣಮಾಡಿ ಬೌರಿಂಗ್ ...ಸ್ಟೇಷನ್ ಪ್ಲಾಟ್‌ಫಾರಮನ್ನು ಬೆಳಗ್ಗೆ 7-30 ಗಂಟೆಗೆ ತಲಪಿದರು. ...ಗಣಿಗಳ ಅಧಿಕಾರಿಗಳೂ, ಮೈಸೂರು ಗವರ್ನ್‌ಮೆಂಟಿನ ಸ್ಥಳಾಧಿಕಾರಿಗಳೂ ...ವಾದ ಚಪ್ಪರವನ್ನು ಹಾಕಿಸಿ ಕಾದು ಇದ್ದು ವೈಸ್‌ರಾಯರವರಿಗೆ ಸುಬಾಗ...ವನ್ನು ಬಯಸಿದರು. ಅವರು ಅಲ್ಲಿ ತಮಗಾಗಿ ಕಾದಿದ್ದ ಸುಂದರವಾದ ...ನಲ್ಲಿ ಕುಳಿತು, ದಾರಿಯಲ್ಲಿ ಹಾಕಿದ್ದ ನೇತ್ರಾನಂದಕರವಾದ ಕಮಾನಿನ ...ದಯಮಾಡಿ ಅಲ್ಲಿ ಕಾದಿದ್ದ ಮ್ಯುನಿಸಿಪಲ್ ಮೆಂಬರುಗಳಿಗೆ ಭೇಟಿ ದಯ... ಮುಂದಕ್ಕೆ ತೆರಳಿದರು. ಉದ್ದಕ್ಕೂ ಪೋಲೀಸ್ ಕಾವಲು ಬಹಳ ...ವಾಗಿತ್ತು. ಚಿನ್ನದ ಗಣಿಗಳನ್ನು ತಲಪಿದಕೂಡಲೇ ಗಣಿಗಳ ಕಂಪನಿಯವರು ಅವರಿಗೆ ಒಂದು ಅಡ್ರೆಸ್ಸನ್ನು ಓದಿ ದಿವ್ಯವಾಗಿ ಚಿತ್ರಕೆಲಸ ಮಾಡಿದ ಕೈಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಅದನ್ನು ವೈಸ್‌ರಾಯರವರು ಆದರದಿಂದ ಸ್ವೀಕರಿಸಿ ಸಮಯೋಚಿತವಾದ ಉತ್ತರವನ್ನು ದಯಪಾಲಿಸಿ ಗಣಿ ಸೂಪರಿಂಟೆಂಡೆಂಟರವರ ಬಂಗಲೆಯನ್ನು ಸೇರಿ, ಅಧಿಕಾರಿಗಳ ಪಂಕ್ತಿಯಲ್ಲಿ ಕುಳಿತು ಸುಖಭೋಜನಮಾಡಿದರು ಬಳಿಕ ಅವರು ಪರಿವಾರ ಸಮೇತ ಹೊರಟು ಎಡ್ಗರ್ ಷಾಫ್ಟ್ ಎಂಬ ಗಣಿಗೆ ಚಿತ್ತೈಸಿ ಕಲ್ಲುಗಳಿಂದ ಭಂಗಾರವನ್ನು ವಿದ್ಯುಚ್ಛಕ್ತಿಯ ಸಹಾಯದಿಂದ ಬಿಡಿಸಿ ಶೋಧಿಸಿ ಸಿದ್ಧಮಾಡುವ ವಿಧಾನಗಳನ್ನೆಲ್ಲಾ ಸಾಕ್ಷಾತ್ತಾಗಿ ಪರಾಂಬರಿಸಿದರು ಬಳಿಕ ಲೋಕಪ್ರಖ್ಯಾತವಾದ ಛಾಂಪಿಯನ್ ರೀಫ್ ಎಂಬ ಚಿನ್ನದ ಗಣಿಗೆ ದಯಮಾಡಿ ಅಲ್ಲಿ ನಡೆಯುವ ಚಿನ್ನಬಿಡಿಸುವ ಕಾರ್ಯಗಳನ್ನು ಕಣ್ಣಾರ ನೋಡಿದರು ಈ ಪ್ರಕಾರ ವೈಸ್‌ರಾಯರವರು ಉರಿಗದಲ್ಲಿ ವಿಶೇಷ ಭಾಗಗಳನ್ನೆಲ್ಲಾ ಪರಾಂಬರಿಸಿಕೊಂಡು ಮೈನ್ ರೀಫ್ಸ್ ಸ್ಟೇಷನ್‌ನಲ್ಲಿ ಒಂದು ಗಂಟೆಯ ವರೆಗೆ ತಂಗಿದ್ದು ರೈಲುಹತ್ತಿ ಬೌರಿಂಗ್‌ಪೇಟೆಗೆ ದಯಮಾಡಿ ಅಲ್ಲಿಂದ ತಿರುಚನಾಪಲ್ಲಿಯನ್ನು ಕುರಿತು ಪ್ರಯಾಣಮಾಡಿ ತಾ. 22 ನೇ ಶನಿವಾರ ಬೆಳಗ್ಗೆ ರಾಮೇಶ್ವರದ ಮಾರ್ಗದಲ್ಲಿರುವ ಮಂಟಪಸ್ಟೇಷನನ್ನು ಸುರಕ್ಷಿತವಾಗಿ ತಲಪಿದರು

ಎರಡನೇ ಸಲ ಆನೆಗಳನ್ನು ಹಿಡಿದದ್ದು.

ಕಳೆದ 10 ನೇ ತಾ. ನಿಂದ ವೈಸ್‌ರಾಯಿ ದಂಪತಿಗಳು ಕಾರಾಪುರದ ಕ್ಯಾಂಪಿನಲ್ಲಿ ಒಂದು ವಾರ ಇದ್ದಾಗ್ಗೆ ಅವರ ವಿನೋದಾರ್ಥವಾಗಿ ನಮ್ಮ ಮಹಾರಾಜರವರು ಕಾಕನಕೋಟೆ ಕಾಡಿನಲ್ಲಿ ಫಾರೆಸ್ಟ್ ಅಧಿಕಾರಿಗಳ ಮುಖಾಂತರ ಕಾಡಾನೆಗಳ ಎರಡು ಹಿಂಡುಗಳನ್ನು ಹಿಡಿಸಿ ಆ ಪೈಕಿ ಒಂದು ಹಿಂಡಿನ 65 ಆನೆಗಳನ್ನು ಪ್ರಭುದಂಪತಿಗಳ ಸಮ್ಮುಖದಲ್ಲಿ ಓಡಿಸಿ ಒಂದೊಂದಾಗಿ ಕಟ್ಟಿಹಾಕಿ ಬೇರೆಬೇರೆ ಕಟಕಟೆ ಕಟ್ಟಿದ ಆವರಣಗಳಲ್ಲಿ ಕೂಡಿಸಿದರಷ್ಟೆ. ವೈಸ್‌ರಾಯರವರು ದಯಮಾಡಿದ ಬಳಿಕ ನಮ್ಮ ಮಹಾರಾಜರವರು ಕಳೆದ ತಾ. 23 ನೇ ಭಾನುವಾರ ಮೊದಲ್ಗೊಂಡ ಎರಡನೇ ಹಿಂಡಿನ ಆನೆಗಳನ್ನು ಕಾಡಿನಿಂದ ಓಡಿಸಿತಂದು ಕೂಡಿ ಕಟ್ಟಿಹಾಕುವ ವಿಧಾನಗಳನ್ನು ಸಂಸ್ಥಾನದಲ್ಲಿ ಗಣ್ಯರಾದ ಪ್ರಜೆಗಳಿಗೂ ತೋರಿಸಬೇಕೆಂದು ಅಪ್ಪಣೆಯನ್ನು ದಯಪಾಲಿಸಿದರು ಅದರಂತೆ ಗವರ್ನ್‌ಮೆಂಟಿನವರು ಕಳುಹಿಸಿದ ಸರೂಪದ ಪ್ರಕಾರ ಕಾರಾಪುರದ ಕ್ಯಾಂಪಿನಲ್ಲಿ ಸರ್ಕಾರದ ಅತಿಧಿಗಳಾಗಿ ಹೋಗಿದ್ದವರ್ಯಾರೆಂದರೆ— ಮ॥ ಗಳಾದ ಕೆ ಪಿ ಪುಟ್ಟಣ್ಣಶೆಟ್ಟರು, ಜಿ ಎಸ್ ಚಕ್ರವರ್ತಿಯವರು, ಲಕ್ಷ್ಮಣರಾವ್ ಹೆಬ್ಳೀಕರವರು, ಎಚ್ ನಂಜುಂಡರಾಜೆಅರಸಿನವರು, ಎಂ. ಪುಟ್ಟಯ್ಯಾಜಅರಸಿನವರು, ಕೆ ಆರ್ ಶ್ರೀನಿವಾಸಯ್ಯಂಗಾರ್ರು, ಸಿ ಎಸ್. ಬಾಲಸುಂದರಂ ಅಯ್ಯರು, ಜ ಆರಮಾಮುದು ಅಯ್ಯಂಗಾರ್ರು, ಬಿ ರಾಮಸ್ವಾಮಯ್ಯನವರು, ಎಂ ವೆಂಕಟಕೃಷ್ಣಯ್ಯನವರು, ಸಿ ಶ್ರೀನಿವಾಸರಾಯರು, ಡಿ ವೆಂಕಟರಾಮಯ್ಯನವರು, ಎಂ ವೆಂಕಟೇಶಯ್ಯನವರು, ಮಂಡಿ ಹರಿಯಣ್ಣನವರು, ರಣಕ ಕೃಷ್ಣಮೂರ್ತಿಯವರು, ಅಂಬಳೆ ಅಣ್ಣಯ್ಯಪಂಡಿತರು, ಸಿ. ಬಿ. ಗೋಪಾಲರಾಯರು, ಎಂ ಸಿ ರಂಗಯ್ಯಂಗಾರ್ರು, ಎಚ್ ನರಸಿಂಗರಾಯರು, ಬಿ. ನರಸಿಂಗರಾಯರು, ಎಸ್ ಸೀತಾರಾಮಯ್ಯನವರು, ಎಂ. ಅನಂತರಾಜಯ್ಯನವರು, ಬಸುಮಯ್ಯನವರು, ಅನಂತಶೆಟ್ಟರು, ವೈ. ರಾಮರಾಯರು, ದೊಡ್ಡಣ್ಣಶೆಟ್ಟರು, ಷಡಕ್ಷರಪ್ಪನವರು, ಶಿಂಗ್ರಿ ನಂಜಪ್ಪನವರು, ಪತ್ರೆ ವೀರಪ್ಪನವರು, ಅಮೀರ್ ಹುಸೇನ್‌ರವರು, ಮಹಮದ್ ಜಾಫರವರು, ಡಾ॥ ರಾಮಸ್ವಾಮಯ್ಯಂಗಾರ್ರು, ಕೆ. ಚಾಮುಂಡಿಯವರು, ಡಾ॥ ಸಿ ಎ. ನಂಜಪ್ಪನವರು, ಪರುವತಪ್ಪನವರು. ಇವರಲ್ಲದೆ ರಾಜಧಾನಿಯಲ್ಲಿರುವ ಎಲ್ಲಾ ರಾಜಬಂಧುಗಳೂ, ಅವರ ಜನಾನಾದವರೂ, ಅರಸುಗಳ ಬೋರ್ಡಿಂಗ್ ಸ್ಕೂಲಿನ ಕೆಲವು ವಿದ್ಯಾರ್ಥಿಗಳೂ ಕರೆಸಲ್ಪಟ್ಟಿದ್ದರು. ಮತ್ತೂ ಸುಮಾರು 15 ಮಂದಿ ಯೂರೋಪಿಯನ್ ಸರದಾರರು ಅತಿಥಿಗಳಾಗಿ ಹೋಗಿದ್ದರು. ಸರ್ಕಾರದವರು ಇವರನ್ನೆಲ್ಲಾ ಗವರ್ನ್‌ಮೆಂಟ್ ಮೋಟರುಗಳಲ್ಲಿ ಕಾರಾಪುರದ ಕ್ಯಾಂಪಿಗೆ ಕರೆದುಕೊಂಡುಹೋಗಿ ಪ್ರತ್ಯೇಕ ಪ್ರತ್ಯೇಕವಾದ ಡೇರಾಗಳಲ್ಲಿ ಇಳಿಸಿ ರಾಜಯೋಗ್ಯವಾದ ರೀತಿಯಲ್ಲಿ ಸತ್ಕಾರ ಮಾಡಿದರು. ಮೈಸೂರಿನಿಂದ ಹುಂಪಾಪುರದ ವರೆಗೆ ರಸ್ತೆಯು ಅಷ್ಟು ಚೆನ್ನಾಗಿಲ್ಲ, ಅಲ್ಲಿಂದಾಚೆಗೆ ಕೆಡ್ಡಾ ಕ್ಯಾಂಪಿನ ವರೆಗೂ ಬಹಳ ಒಳ್ಳೇ ಸ್ಥಿತಿಯಲ್ಲಿದೆ. ಸಾಲು ಮರಗಳು ಉದ್ದಕ್ಕೂ ಬಹು ಒತ್ತಾಗಿಯೂ ಇಂಪಾಗಿಯೂ ಪ್ರಯಾಣಕ್ಕೆ ಹಿತಕರವಾಗಿಯೂ ಇವೆ ಹುಂಪಾಪುರದಿಂದ ಈಚೆಗೂ ಆಚೆಗೂ ಇರುವ ಮೂರು ದೊಡ್ಡ ಕೆರೆಗಳ ಕಿರಿದಾದ ಏರಿಗಳ ಮೇಲೆಯೇ ರಸ್ತೆ ಹಾಕಿರುವುದರಿಂದ ಪಕ್ಕಗಳಲ್ಲಿ ಕಟಕಟೆಗಳಿಲ್ಲದೆ ತುಂಬಾ ಅಪಾಯಕರವಾಗಿದೆ

ತಾ. 22 ನೇ ಶನಿವಾರ ಸಾಯಂಕಾಲ ಗವರ್ನ್‌ಮೆಂಟಿನವರು ಅತಿಥಿಗಳನ್ನೆಲ್ಲಾ ಕ್ಯಾಂಪಿನಿಂದ 6 ಮೈಲಿ ಆಚೆ ಇರುವ ಕೆಡ್ಡಾ ಜಂಗಲಿಗೆ ಮೋಟರುಗಳಲ್ಲಿ ಕಳುಹಿಸಿದರು. ಇವರು ಅಲ್ಲಿ ಜಂಗಲಿನ ದೊಡ್ಡ ಆವರಣದೊಳಗೆ ಬಂದು ಸೇರಿಕೊಂಡು ಅಲೆಯುತ್ತಿದ್ದ ಎರಡನೇ ಹಿಂಡಿನ ಸುಮಾರು 10 ಆನೆಗಳನ್ನು ನೋಡಿಕೊಂಡು ಅಲ್ಲಿಂದ ಮುಂದೆ ಮಾಸ್ತಿಗುಡಿ ಕ್ಯಾಂಪಿಗೆ ಹೋಗಿ ಅಲ್ಲಿ ಕಟ್ಟಿಹಾಕಿದ್ದ 57 ಆನೆಗಳನ್ನು ನೋಡಿಬಂದರು. ಈ ಆನೆಗಳು ಒಂದೊಂದು ಒಂದೊಂದು ಚೌಕವಾದ ಆವರಣದಲ್ಲಿ ಕೂಡಲ್ಪಟ್ಟಿವೆ. ಕೆಲವು ದೊಡ್ಡ ಆನೆಗಳನ್ನೂ ಸಣ್ಣ ಮರಿಗಳನ್ನೂ ಆವರಣವಿಲ್ಲದೆ ಬಯಲಿನಲ್ಲಿ ಗಿಡಮರಗಳಿಗೆ ಕಟ್ಟಿಹಾಕಿದ್ದಾರೆ. ಅವುಗಳನ್ನು ಒಗ್ಗಿಸುವುದಕ್ಕೂ ಗಾಯಗಳನ್ನು ಮಾಗಿಸುವುದಕ್ಕೂ ಸರ್ಕಾರದವರು ನೌಕರರನ್ನೂ ಪಶುವೈದ್ಯರನ್ನೂ ನೇಮಿಸಿ ಆ ಭಾಗವನ್ನೇ ಒಂದು ಸಣ್ಣ ಊರಾಗಿ ಮಾಡಿರುತ್ತಾರೆ. ಒಂದು ಕಾಡಾನೆಯು ತನ್ನ ಮರಿಯನ್ನು ಹುಡುಕಿಕೊಂಡು ತಾನಾಗಿಯೇ ಬಂದು ಅದನ್ನು ಕಟ್ಟಿದ್ದ ಸ್ಥಳದಲ್ಲಿ ನಿಂತು ಇದ್ದಾಗ ಅಲ್ಲಿದ್ದ ಫಾರೆಸ್ಟ್ ನೌಕರರು ಅದರ ಸುತ್ತಲೂ ಬಲವಾದ ತಡಿಕೆಗಳನ್ನು ಕಟ್ಟಿ ಸೇರಿಸಿಕೊಂಡರೆಂದೂ, ಕಟ್ಟಿಹಾಕಿದ್ದ ಒಂದು ಆನೆಯು ತನ್ನ ಮರಿಯನ್ನು ಕಾಣದೆ ವ್ಯಸನದಿಂದ ಕಟ್ಟಿದ್ದ ಕಡೆಯೇ ಬಿದ್ದು ಸತ್ತುಹೋಯಿತೆಂದೂ, ಇನ್ನೊಂದು ಆನೆ ಹಿಡಿದ ಮೇಲೆ ತನ್ನ ಆವರಣದೊಳಗೆ ಮರಿ ಹಾಕಿತೆಂದೂ ತಿಳಿದುಬಂತು. ಅತಿಥಿಗಳೆಲ್ಲಾ ಈ ವಿಚಾರವನ್ನು ಸಾಕ್ಷಾತ್ತಾಗಿ ನೋಡಿಕೊಂಡು ಕ್ಯಾಂಪಿಗೆ ವಾಪಸುಬಂದರು

ಮರುದಿನ (ತಾ. 23 ನೇ ಭಾನುವಾರ) ಬೆಳಗ್ಗೆ 8 ಗಂಟೆಗೆ ಅತಿಥಿಗಳೆಲ್ಲಾ ಭೋಜನಾದಿಗಳನ್ನು ತೀರಿಸಿಕೊಂಡು ಮೋಟರುಗಳಲ್ಲಿ 2 ನೇ ಹಿಂಡಿನ ಆನೆಗಳಿದ್ದ ಜಂಗಲಿಗೆ ಹೋದರು ಬೆಳಗ್ಗೆ 11 ಗಂಟೆಯಿಂದ ಆ 40 ಆನೆಗಳ ಹಿಂಡನ್ನು ಫಾರೆಸ್ಟ್ ನೌಕರರು ಜಂಗಲಿನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಟ್ಟಿ ಓಡಿಸ್ಯಾಡಿ ತೋರಿಸಿದರು. ಬಳಿಕ 13 ಗಂಟೆಗೆ ಆ ಹಿಂಡನ್ನು ಓಡಿಸಿಕೊಂಡು ಹೋಗಿ ಸಣ್ಣ ಆವರಣದೊಳಕ್ಕೆ ಕೂಡಬೇಕೆಂದು ಪ್ರಯತ್ನಪಟ್ಟರು. ಆ ಹಿಂಡು ಒಟ್ಟಾಗಿ ಒಳಗೆ ಹೋಗುತ್ತಿದ್ದು, ಹಾಗೇ ಯಾವ ಕಾರಣದಿಂದಲೋ ಒಂದೇ ಸಲ ಹಿಂದಿರುಗಿ ವಾಪಸು ಹೊರಟುಹೋಯಿತು. ಫಾರೆಸ್ಟ್ ನೌಕರರೆಲ್ಲಾ ಸುತ್ತಲೂ ನೋಟನೋಡುತ್ತಿದ್ದವರನ್ನೆಲ್ಲಾ ದೂರಕ್ಕೆ ಕಳುಹಿಸಿ ಎರಡು ಗಂಟೆಯ ಹೊತ್ತು ಸಾಹಸಪಟ್ಟು ಕಡೆಗೆ ಆ ಹಿಂಡನ್ನು ಮಧ್ಯಾಹ್ನ 2½ ಗಂಟೆ ಓಡಿಸಿ ತಂದು ಆ ಸಣ್ಣ ಆವರಣದೊಳಕ್ಕೆ ಕೂಡಿದರು ಆದರೆ ಆ ಹಿಂಡಿನಲ್ಲಿದ್ದ ಒಂದು ಸಲಗವೂ ಇನ್ನು ಕೆಲವು ಆನೆಗಳೂ ತಪ್ಪಿಸಿಕೊಂಡು ವಾಪಸು ಹೋಗಿಬಿಟ್ಟವು. ಸಣ್ಣ ಆವರಣದ ಬಾಗಿಲು ಮುಚ್ಚಿಕೊಂಡಾಗ್ಗೆ ಒಳಗೆ ಒಂದು ಸಲಗವೂ, 3-4 ಗಂಡೂ, 3 ಸಣ್ಣ ಮರಿಗಳೂ, ಹೆಣ್ಣುಗಳೂ, ಒಟ್ಟು 26 ಆನೆಗಳು ಒಳಗೆ ಸಿಕ್ಕಿಕೊಂಡವು ಇವುಗಳ ಪೈಕಿ 2 3 ಆನೆಗಳು ಸುತ್ತಲೂ ಕಟ್ಟಿದ್ದ ಬಲವಾದ ಆವರಣದ ತಡಿಕೆಗಳನ್ನು ಬಹಳ ರೋಷದಿಂದ ನೂಕಿ ಕೆಡವಬೇಕೆಂದು ಪ್ರಯತ್ನಪಟ್ಟವು. ಈ ಪ್ರಯತ್ನ ಸಾರ್ಥಕವಾಗಲಿಲ್ಲ. ಆ ಆನೆಗಳೆಲ್ಲಾ ಒಂದಕ್ಕೊಂದು ಸೇರಿಕೊಂಡು ಆವರಣದೊಳಗೇ ತಳ್ಳ ನೂಕಾಡುತ್ತಾ - ಗಾಬರಿಯಿಂದ ಸುತ್ತುತ್ತಾ, ಮರಿಗಳನ್ನು ತಳ್ಳಿ ತುಳಿದು ನೂಕುತ್ತಾ, ಸೊಂಡಿಲಿನಲ್ಲಿ ಬಾಯಿಂದ ಹೊಟ್ಟೆಯೊಳಗಣ ನೀರನ್ನು ಸೆಳೆದು ಎರಚಿಕೊಳ್ಳುತ್ತಾ, ಉಚ್ಚಾಡಿ ಕೂಗಿಕೊಳ್ಳುತ್ತಾ ಅರ್ಧ ಗಂಟೆಯ ಹೊತ್ತು ಕಳವಳಪಡುತ್ತಿದ್ದವು. ಈ ಆವರಣದ ಸುತ್ತಲೂ ಮೇಲ್ಭಾಗದಲ್ಲಿ ಅಟ್ಟಣಿಗೆಗಳ ಮೇಲೆ ಮಹಾರಾಜರೂ, ಯುವರಾಜರೂ, ಅರಮನೆಯ ರಾಣೀವಾಸದವರೂ, ಅರಸುಗಳ ಜನಾನಾದವರೂ, ಯೂರೋಪಿಯನ್ ಮತ್ತು ದೇಶೀಯ ಅತಿಥಿಗಳೂ ಸಾಲುಕಟ್ಟಿ ನಿಂತು ಆವರಣದೊಳಗೆ ನಡೆಯುವ ವಿಧ್ಯಮಾನಗಳನ್ನು ನೋಡುತ್ತಿದ್ದರು. ಸುಮಾರು 3 ಗಂಟೆಗೆ 10 ಕುಮ್ಕಿ ಆನೆಗಳ ಮೇಲೆ ರಾವುತರು ಕುಳಿತು ಸೆಣಬಿನ ದಪ್ಪ ಹಗ್ಗಗಳನ್ನೂ ಅಂಕುಶಗಳನ್ನೂ ಹಿಡಿದು ಆವರಣದ ಬಾಗಿಲು ಎತ್ತಿ ಒಳಕ್ಕೆ ನುಗ್ಗಿಬಂದು ಬಾಗಿಲನ್ನು ಮುಚ್ಚಿಕೊಂಡರು. ಬಳಿಕ ಕುಮ್ಕಿ ಆನೆಗಳು ಕಳವಳದಿಂದ ಒಂದರೊಳಗೆ ಒಂದು ಹೊಕ್ಕು ಒದ್ದಾಡುತ್ತಿದ್ದ ಹೊಸ ಆನೆಗಳ ಮಧ್ಯ ನುಗ್ಗಿ ಕೊಂಬುಗಳಿಂದ ನೂಕಿ ತಳ್ಳಿ ಒಂದೊಂದು ಹೊಸ ಆನೆಯನ್ನೇ ಸುತ್ತಿಕೊಂಡವು. ಮೇಲಿದ್ದ ರಾವುತರು ಸೆಣಬಿನ ಹಗ್ಗಗಳನ್ನು ಉರುಲುಕಟ್ಟಿ ಹೊಸ ಆನೆಗಳ ಕತ್ತಿಗೆ ಎಸೆದರು. ಅವು ಗಾಬರಿಯಿಂದ ಸೊಂಡಿಲಿನಲ್ಲಿ ಉರುಲನ್ನು ಹಿಡಿಯುವುದಕ್ಕೆ ಪ್ರಯತ್ನಪಡುವಲ್ಲಿ ಉರುಲು ಕುತ್ತಿಗೆಗೆ ಸೇರಿಕೊಂಡವು. ಕುಮ್ಕಿ ಆನೆಗಳು ಉರುಲಿನ ಕೊನೆಗಳನ್ನು ಎತ್ತಿ ರಾವುತರಿಗೆ ಕೊಟ್ಟವು. ಅವರು ಅವನ್ನು ಸೆಳೆದುಕೊಂಡು ಕುಮ್ಕಿ ಆನೆಗಳಿಂದ ತಳ್ಳಿಕೊಂಡುಹೋಗಿ ಆವರಣದ ಕಂಭಗಳ ತುದಿಗೆ ಕಟ್ಟಿಹಾಕಿದರು. ಈ ಒದ್ದಾಟದಲ್ಲಿ ಸಣ್ಣ ಎಳೇ ಮರಿಗಳು ತಮ್ಮ ತಾಯಿಯ ನಾಲ್ಕು ಕಾಲುಗಳೊಳಗೇ ಆಶ್ರಯಮಾಡಿಕೊಂಡು ತಿರುಗುತ್ತಾ ಬೇರೆ ಆನೆಗಳು ಒದ್ದು ಕೆಡವಿದಾಗ ಬಿದ್ದು ಅರಚುತ್ತಾ ಎದ್ದು ತಾಯಿಯನ್ನು ಸೇರುತ್ತಾ ಇದ್ದದ್ದೂ, ತಾಯಿ ಆನೆ ತನ್ನ ಮರಿಯನ್ನು ಕಾಪಾಡುವುದಕ್ಕೆ ಸಾಹಸಪಡುತ್ತಿದ್ದದ್ದೂ ನೋಟಕರಿಗೆ ತುಂಬಾ ಸಂತಾಪಕರವಾಗಿತ್ತು. ಒಂದು ಸಲಗವನ್ನು ಹಿಡಿದು ಅದರ ಕುತ್ತಿಗೆಗೆ ಉರುಲುಹಾಕುವುದಕ್ಕೆ ಬಹಳ ಕಷ್ಟಪಟ್ಟರು. ಅದು ಕುಮ್ಕಿ ಆನೆಗಳನ್ನು ಬಹು ರೋಷದಿಂದ ತಿವಿದು ಅನೇಕ ಸಲ ಓಡಿಸುತ್ತಾ ಬಂದಿತು. ಆಗ 4-5 ಕುಮ್ಕಿ ಆನೆಗಳು ಅದನ್ನು ಸಾಹಸಪಟ್ಟು ಆವರಣದ ಒಂದು ಕಡೆಗೆ ತಳ್ಳಿಕೊಂಡು ಬಂದವು. ಫಾರೆಸ್ಟಿನ ನೌಕರರು ಕಟಕಟೆಗಳ ಕೆಳಭಾಗದ ಕನ್ನಾಗಿಂದ ಆವರಣದೊಳಕ್ಕೆ ನುಗ್ಗಿಹೋಗಿ ಆ ಸಲಗದ ಹಿಂಗಾಲುಗಳಿಗೆ ಉರುಲುಗಳನ್ನು ತೊಡಿಸಿ ಆವರಣದ ಕಂಭಗಳಿಗೆ ಕೊನೆಗಳನ್ನು ಕಟ್ಟಿಬಿಟ್ಟರು. ಅದರ ಒದ್ದಾಟವೂ ಸಾಹಸವೂ ನೋಟಕರಿಗೆ ತುಂಬಾ ಕನಿಕರವನ್ನುಂಟುಮಾಡಿತು. ಹೀಗೆಯೇ ಕಾಡಾನೆಗಳನ್ನು ಕುಮ್ಕಿ ಆನೆಗಳ ಸಹಾಯದಿಂದ ಉರುಲುಹಾಕಿ ಕಟ್ಟಿದ ಬಳಿಕ ಆ ಕಟ್ಟಿದವುಗಳನ್ನು ಕುಮ್ಕಿ ಆನೆಗಳ ಬೆಂಬಲದಿಂದ ಒಂದೊಂದಾಗಿ ಆವರಣದ ಹೊರಕ್ಕೆ ಸಾಗಿಸಿಕೊಂಡುಹೋಗಿ ನೀರುಕುಡಿಸಿ ಬೇರೆಬೇರೆ ಸ್ಥಳದಲ್ಲಿ ಕಟ್ಟಿಹಾಕಿದರು. ಕುಮ್ಕಿ ಆನೆಗಳು ಮಾಡಿದ ಸಹಾಯ ಕಾರ್ಯಗಳೂ, ಮಾವುತರ ಧೈರ್ಯ ಸಾಹಸಗಳೂ ಸ್ತೋತ್ರಾರ್ಹವಾಗಿದ್ದವು.

ಇಂಥಾ ಅಪೂರ್ವವಾದ ನೋಟವನ್ನು ದೇಶೀಯ ದೊಡ್ಡ ಮನುಷ್ಯರಿಗೆ ತೋರಿಸಿದ್ದಕ್ಕಾಗಿ ಎಲ್ಲರೂ ಶ್ರೀಮನ್ ಮಹಾರಾಜರವರನ್ನು ಕೊಂಡಾಡುತ್ತಾರೆ. ಪಬ್ಲಿಕ್ ಪ್ರಜೆಗಳು ಸಂಸ್ಥಾನದ ಎಲ್ಲಾ ಭಾಗಗಳಿಂದಲೂ ವಿಶೇಷವಾಗಿ ರಾಜಧಾನಿಯಿಂದಲೂ ನಾನಾತರದ ವಾಹನಗಳಲ್ಲಿ ಹೋಗಿ ಕೆಡ್ಡಾ ಕಾರ್ಯಗಳನ್ನು ನೋಡಿಕೊಂಡು ಬಂದರು. ಇದುವರೆಗೆ ನಡೆದಿರುವ ಕೆಡ್ಡಾಗಳಲ್ಲಿ ಹಿಂದೆ ಯಾವಾಗಲೂ ಪಬ್ಲಿಕ್ ಜನರು ನೋಡಬರಲು ಅವಕಾಶವಿರಲೇ ಇಲ್ಲ. ಈ ಸಲ ಮಹಾರಾಜರವರೂ ದಿವಾನ್‌ರವರೂ ಈ ರಿಯಾಯಿತಿಗಳನ್ನು ತೋರಿಸಿದ್ದಲ್ಲದೆ ಎಲ್ಲಾ ಕೋಮುಗಳ ಪ್ರತಿನಿಧಿಗಳನ್ನೂ ಕರೆಸಿ ಅವರನ್ನು ಆದರಾತಿಶಯದಿಂದ ಸತ್ಕಾರಮಾಡಿ ಆನೆ ಹಿಡಿಯುವ ವಿಧಾನಗಳನ್ನು ತೋರಿಸಿದ್ದು ಅವರ ಬಹು ವಿಶೇಷವಾದ ಔದಾರ್ಯವನ್ನೂ ಪ್ರಜಾ ಪ್ರೀತಿಯನ್ನು ಪ್ರಕಾಶಪಡಿಸುತ್ತದೆ. ಕಾರಾಪುರದ ಕ್ಯಾಂಪಿನಲ್ಲಿ ಅತಿಥಿಗಳ ಸೌಕರ್ಯವನ್ನು ನೋಡಿಕೊಳ್ಳುವುದಕ್ಕೆ ನೇಮಕವಾಗಿದ್ದ ಡೆಪ್ಯುಟಿ ಕಮಿಷನರ್ ಮ॥ ಎ ಸುಬ್ರಹ್ಮಣ್ಯ ಅಯ್ಯರವರೂ, ಸಬ್ ಡಿವಿಜನ್ ಆಫೀಸರ್ ಮ॥ ಕೆ. ಮೈಲಾರರಾಯರೂ, ರಿಜಿಸ್ಟ್ರಾರ್ ಮ॥ ಬಿ. ನಾರಾಯಣಸ್ವಾಮಿ ಅಯ್ಯಂಗಾರ್ರು, ಅಮಲ್ದಾರ್ ಮ॥ ಸಿ. ಬಿ. ಲಕ್ಷ್ಮಣರಾಯರೂ, ಮ॥ ಎಂ. ಶ್ರೀನಿವಾಸಯ್ಯಂಗಾರ್ರು. ಇವರುಗಳ ಸಿಬ್ಬಂದಿಯವರೂ ಅತಿಥಿಗಳಿಗೆ ಯಾವುದೊಂದಕ್ಕೂ ಕೊರತೆಯಿಲ್ಲದಂತೆ ತುಂಬಾ ಆದರದಿಂದ ನೋಡಿಕೊಂಡು ಎಲ್ಲಾ ಅನುಕೂಲಗಳನ್ನೂ ಒದಗಿಸುತ್ತಿದ್ದರು ಈ ಭಾಗದಲ್ಲಿ ಇವರುಗಳು ಮಾಡಿದ್ದ ಏರ್ಪಾಡುಗಳೆಲ್ಲಾ ಸಂತೋಷಪ್ರದವಾಗಿಯೂ, ಸ್ತೋತ್ರಾರ್ಹವಾಗಿಯೂ ಇದ್ದವು

ಒಳದೇಶದ ವೃತ್ತಾಂತಗಳು.

ಕೆಡ್ಡಾ ಕ್ಯಾಂಪಿನಿಂದ ಮಹಾರಾಜರವರೂ ಯುವರಾಜರವರೂ ಅರಮನೆಯ ರಾಣೀವಾಸದವರೂ ಕಳೆದ ಸೋಮವಾರ ಮಂಗಳವಾರ ವಾಪಸು ರಾಜಧಾನಿಗೆ ದಯಮಾಡಿದರು

* * *

ಗ್ವಾಲಿಯರ್ ಸಂಸ್ಥಾನದ ಸಿಂಧಿಯ ಮಹಾರಾಜರವರು ಕಳೆದ ಶುಕ್ರವಾರ ಬೆಂಗಳೂರಿನಿಂದ ಕೋಲಾರ್ ಚಿನ್ನದ ಗಣಿಗಳಿಗೆ ದಯಮಾಡಿ, ಗಣಿ ಸೂಪರಿಂಟೆಂಡೆಂಟರ ಆತಿಥ್ಯವನ್ನು ಸ್ವೀಕರಿಸಿ, ಚಿನ್ನತೆಗೆಯುವ ವಿಧಾನಗಳನ್ನೆಲ್ಲಾ ನೋಡಿಕೊಂಡು ತೆರಳಿದರು

* * *

ವೈಸ್‌ರಾಯರವರು ಕೆಡ್ಡಾ ಕ್ಯಾಂಪಿನಲ್ಲೂ, ಮೈಸೂರು, ಬೆಂಗಳೂರು ಪಟ್ಟಣಗಳಲ್ಲೂ, ಕೋಲಾರ್ ಚಿನ್ನದ ಗಣಿಗಳಲ್ಲೂ ನೌಕರರುಗಳಿಗೆ ಬಹು ಸಂತೋಷದಿಂದ ಕೆಲವು ಬಹುಮಾನಗಳನ್ನು ದಯಪಾಲಿಸಿ ಅವರುಗಳನ್ನು ವಂದಿಸಿದರೆಂದು ಕೇಳುತ್ತೇವೆ.

* * *

ಘನವನ್ನೈದಿದ ಲೇಡಿ ಹಾರ್ಡಿಂಗ್‌ರವರು ಕಳೆದ ಭಾನುವಾರದ ವರೆಗೆ ಬೆಂಗಳೂರಲ್ಲೇ ಇದ್ದು ಆ ರಾತ್ರಿ ಬ್ರಿಟಿಷ್ ರೆಸಿಡೆಂಟರ ಕೂಡ ರೈಲುಹತ್ತಿ ಜೋಲಾರಪೇಟೆಯ ವರೆಗೆ ದಯಮಾಡಿದರು. ವೈಸ್‌ರಾಯರವರು ದಕ್ಷಿಣದೇಶದ ಸಂಚಾರವನ್ನು ತೀರಿಸಿಕೊಂಡು ಆ ರಾತ್ರಿಯೇ ಜೋಲಾರಪೇಟೆಗೆ ಚಿತ್ತೈಸಿ, ಅಲ್ಲಿಂದ ಪತ್ನಿಸಮೇತರಾಗಿ ಮದರಾಸನ್ನು ಕುರಿತು ಪ್ರಯಾಣಮಾಡಿದರು.

* * *

ಬೌರಿಂಗ್‌ಪೇಟೆಯಿಂದ ಕೋಲಾರಕ್ಕೆ ರೈಲ್ ರಸ್ತೆಯ ಕಾಮಗಾರಿಯೆಲ್ಲಾ ಪೂರೈಸಿರೋಣದರಿಂದ ಡಿಸೆಂಬರ್ ತಾ. 15 ಕ್ಕೆ ಶ್ರೀಮನ್ ಮಹಾರಾಜರವರು ಅಲ್ಲಿಗೆ ದಯಮಾಡಿ ಆಮದು ರಸ್ತೆನ್ನು ಪ್ರಾರಂಭಮಾಡುವಂತೆ ಏರ್ಪಾಡಾಗಿದೆ ಎಂದೂ, ಈ ಕಾಮಗಾರಿಯ ಖರ್ಚಿನಲ್ಲಿ ಇನ್ನೂ 4-5 ಲಕ್ಷ ರೂಪಾಯಿ ಮಿಗುವುದರಿಂದ ಈ ಹಣವನ್ನು ಶ್ರೀನಿವಾಸಪುರದ ಕಡೆ ರೈಲ್ ಹಾಕುವುದಕ್ಕೆ ಉಪಯೋಗಿಸಿಕೊಳ್ಳುವ ಭಾಗದಲ್ಲಿ ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆಂದೂ ಕೇಳುತ್ತೇವೆ.

* * *

ವೈಸ್‌ರಾಯರವರ ಕೂಡ ಬಂದಿದ್ದ ಇಬ್ಬರು ಸರ್ದಾರರು ಹಿಂದಿನ ಸೋಮವಾರ 9½ ಅಡಿ ಉಳ್ಳ ಒಂದು ಭಾರೀ ಗಂಡು ಹುಲಿಯನ್ನು ಷಿಕಾರಿ ಮಾಡಿದರು. ಮರುದಿನ ಅವರ ಪಡಿಕಾರಿಗರೊಬ್ಬರು ಕಾರಾಪುರದಿಂದ ರಾಜಧಾನಿಗೆ ವಾಪಸು ಬರುವಾಗ್ಗೆ ಮಿ॥ ವ್ಯಾಸಗನ್‌ರವರ ಕೂಡ ಹೋಗಿ 7½ ಅಡಿ ಉಳ್ಳ ಒಂದು ದೊಡ್ಡ ಕಿರುಬನನ್ನು ಗಾಯಮಾಡಿದರು. ಈ ಸಂದರ್ಭದಲ್ಲಿ ಐದು ಮಂದಿ ಸೇವಕರನ್ನು ಆ ಮೃಗವು ಕಡಿದು ಬಡಿದು ಘೋರ ಗಾಯಮಾಡಿದ್ದರಿಂದ ಅವರನ್ನು ಮೈಸೂರಿಗೆ ಸಾಗಿಸಿತಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸುತ್ತಿದ್ದಾರೆ. ಈ ಪೈಕಿ ಒಬ್ಬನು ಸತ್ತುಹೋದನು.

ರಾಮಗಿರಿ ರೀಡಿಂಗ್ ರೂಂ ಸ್ಥಾಪನೆ

ಹೊಳಲ್ಕೆರೆ ತಾಲ್ಲೂಕು ರಾಮಗಿರಿಯಲ್ಲಿ ತಾ 14 ನೇ ಶುಕ್ರವಾರ ಸಾಯಂಕಾಲ ಈ ಸಮ್ಮತು ಶೇಕದಾರ್ರವರು, ಸ್ಟೇಷನ್ ಮಾಸ್ಟರ್‌ಗಳು, ಸ್ಕೂಲ್ ಮಾಸ್ಟರುಗಳು, ಪಟೇಲರು, ಶ್ಯಾನುಭೋಗರು, ಯೂನಿಯನ್ ಮೆಂಬರುಗಳು, ವರ್ತಕರು, ರೂಂ ಮೆಂಬರುಗಳು ಮೊದಲಾದ ಅನೇಕ ದೊಡ್ಡ ಮನುಷ್ಯರುಗಳು ಸೇರಿದ್ದರು ರೂಂ ಸೆಕ್ರೆಟರಿಗಳಾದ ಮಾಸ್ಟರ್ ದಾಸಪ್ಪನವರು ಈ ರೀಡಿಂಗು ರೂಂ ಸ್ಥಾಪನೆಮಾಡಬೇಕೆಂಬ ಕುತೂಹಲದಿಂದ ಹೋದಿಗ್ಗೆರೆ ಹಿರೇಮಠದ ಪಟ್ಟಾಧ್ಯಕ್ಷರು 2 ತಿಂಗಳಿಂದಲೂ ಜನಗಳಿಗೆಲ್ಲಾ ಪ್ರೋತ್ಸಾಹಪಡಿಸಿ ಈಗ 13 ಮೆಂಬರುಗಳನ್ನು ಚುನಾಯಿಸಿ ತಮ್ಮ ಉದ್ದೇಶವನ್ನು ಈ ದಿನ ನೆರವೇರಿಸಿದರು. ಇದನ್ನು ಭಗವಂತನು ಸಾರ್ವದಾ ನಡಿಸಲೆಂದು ಪ್ರಾರ್ಥಿಸಿದರು ನಂತರ ಶೇಕ್ದಾರ್ ಮ॥ ಅಬ್ದುಲ್ ರಹಿಮಾನ್‌ರವರು ಮತ್ತು ಹೆಡ್ ಮಾಸ್ಟರ್ ವೆಂಕಟೇಶಶಾಸ್ತ್ರಿಗಳು ಐಕಮತ್ಯದಿಂದುಂಟಾಗುವ ಪ್ರಯೋಜನಗಳನ್ನೂ, ಪತ್ರಿಕೆಗಳನ್ನು ಓದುವದರಿಂದುಂಟಾಗುವ ಫಲಿತಾಂಶವನ್ನೂ ಸರಸವಾಗಿ ಭಾಷಣಮಾಡಿದರು ಆ ದಿನ ರೂಂಗೆ ಬಂದ ಪೇಪರುಗಳನ್ನು ಓದುವದರಲ್ಲಿ ಈ ಸಮಯದಲ್ಲಿಯೇ ನಮ್ಮ ಮೈಸೂರು ದೇಶಕ್ಕೆ ನಮ್ಮ ಚಕ್ರವರ್ತಿಪ್ರತಿನಿಧಿಗಳಾದ ವೈಸ್‌ರಾಯಿ ಪ್ರಭುಗಳು ದಯಮಾಡಿಸಿ ನಮ್ಮ ದೇಶೀಯರನೇಕರಿಗೆ ದರುಶನವಿತ್ತು ಆನಂದವನ್ನುಂಟುಮಾಡಿದರು ಇವರಿಗೂ, ನಮ್ಮ ಶ್ರೀಮನ್ ಮಹಾರಾಜಾ ಬಹದ್ದೂರವರಿಗೂ ಆಯುರಾರೋಗ್ಯಾಭಿವೃದ್ಧಿಯುಂಟಾಗಲೆಂದು ಭಗವಂತನನ್ನು ಪ್ರಾರ್ಥಿಸಲಾಯ್ತು ನಂತರ ಗಂಧ ಫಲ ಪುಷ್ಪ ತಾಂಬೂಲಾದಿಗಳಿಂದ ಸರ್ವರನ್ನೂ ಸತ್ಕರಿಸಿ ಬಾಲಕರಿಗೆ ಮಿಠಾಯಿ ಹಂಚಲ್ಪಟ್ಟಿತು

ಚಿಕ್ಕಬಳ್ಳಾಪುರ ತಾಲ್ಲೂಕು ನಂದಿ ವಿಲೇಜ್ ಎಲಿಮೆಂಟರಿ ಸ್ಕೂಲಾ ಪ್ರವೇಶ ಮಹೋತ್ಸವವು

ಈ ನಂದೀ ಗ್ರಾಮದಲ್ಲಿದ್ದ ಸ್ಕೂಲ್ ಕಟ್ಟಡವು ದೇವಸ್ಥಾನದ ಪ್ರಾಕಾರದಲ್ಲಿದ್ದು ಕೋಲಾರದ ಡೆಪ್ಟಿ ಕಮಿಷನರ್ ಮಿ॥ ಪಿ ಎಫ್ ಬೌರಿಂಗ್ ಸಾಹೇಬರವರು, ಡೆಪ್ಟಿ ಇನ್‌ಸ್ಪೆಕ್ಟರವರು ಮತ್ತೂ ಇತರ ದೊಡ್ಡ ಆಫೀಸರುಗಳು ಪರಾಂಬರಿಸಿ ಕೇವಲ ಅಪಾಯಸ್ಥಿತಿಯಲ್ಲಿದ್ದದ್ದನ್ನು ಬಿಟ್ಟು ಸರ್ಕಾರದಿಂದಲೇ ನಂದಿ ಸುಲ್ತಾನ್‌ಪೇಟೆಗೆ ಮಧ್ಯ ಭಾಗದಲ್ಲಿ 5,600 ರೂಪಾಯಿ ಮುಟ್ಟಿಸಿ ಅಂದವಾಗಿಯೂ, ಬಲವಾಗಿಯೂ, ಹವಾ ವಗ್ಯೆರೆಗೆ ಅನುಕೂಲವಾಗಿರುವಂತೆ ಸರ್ಕಾರದವರು ಕಟ್ಟಿಸಿಕೊಟ್ಟಿರುತ್ತಾರೆ

ಈ ನೂತನ ಕಟ್ಟಡವನ್ನು ಕಳೆದ ತಾ 16 ನೇ ಭಾನುವಾರ ನಾನಾ ವಿಧವಾಗಿ ಅಲಂಕಾರಮಾಡಿ ಸುಂದರವಾದ ಚಪ್ಪರದಿಂದೊಡಗೂಡಿ ಮಹನೀಯರ ಫೋಟೋಗಳಿಂದಲೂ, ಸಭಿಕರಿಂದಲೂ ಸಹ ಕೂಡಿದ ಈ ನೂತನ ಕಟ್ಟಡವು ನೋಟಕರಿಗೆ ಬಹಳ ಆಹ್ಲಾದವನ್ನುಂಟುಮಾಡುತಲಿತ್ತು ಈ ಪ್ರವೇಶ ಮಹೋತ್ಸವ ಸಭೆಗೆ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಆಫೀಸರವರಾದ ಮ| ಎಂ ಜಿ ಕೃಷ್ಣಸ್ವಾಮಿರಾಯರವರೂ, ಇನ್‌ಸ್ಪೆಕ್ಟರುಗಳಾದ ಮ॥ ತಿರುಮಲಾಚಾರ್ರು, ಮ॥ ಆಳ್ವಾರಯ್ಯಂಗಾರರ್ರು, ಡಿ ಪಿ ಡಬ್ಲ್ಯು ಇಲಾಖೆಯ ಪರಿವಾರ ಸಮೇತರಾದ ಸಬ್ ಡಿವಿಜನ್ ಇಂಜನಿಯರಾದ ಮ ರಾಮಸ್ವಾಮಯ್ಯರವರೂ, ಡಾಕ್ಟರ್ ವೆಂಕಟಾಚಾರ್ರು, ನೇಟಿವ್ ಡಾಕ್ಟರ್ ಮ, ನಂದಿ ಪಂಡಿತ ನರಸಿಂಗರಾಯರೂ, ಚಿಕ್ಕಬಳ್ಳಾಪುರದ ಹೈ ಸ್ಕೂಲ್ ಮ| ವೆಂಕಟರಾಮಯ್ಯರವರೂ, ಸ್ಲಿಂಪರುಗಳಾದ ಮ| ಸಿ ನಾರಾಯಣಸ್ವಾಮಿಚೆಟ್ಟಿಯವರೂ, ಮ, ಪಾರ್ಥಸಾರಥ್ಯನವರೂ ಮ, ಖಾಜೀ ಸಯ್ಯದ್ ಆರೀಫ್‌ರವರೂ, ಈ ಸ್ಕೂಲ್ ಕಟ್ಟಡವನ್ನು ಕಟ್ಟಿಸಿದ ಮ॥ ಕಂಟ್ರಾಕ್ಟ್‌ದಾರ್ ಇಸುಫ್ ಖಾನ್‌ರವರೂ, ನಂದೀ ಸುಲ್ತಾನ್ ಪೇಟೆ ವಗ್ಯೆರೆ ಗ್ರಾಮಗಳ ಹಿಂದೂ ಮುಸಲ್ಮಾನ್ ದೊಡ್ಡಮನುಷ್ಯರುಗಳೂ, ಪ್ರೇಕ್ಷಕರೂ ಸಭೆಯನ್ನಲಂಕರಿಸಿದ್ದರು ಫಲಾಹಾರವಾದ ನಂತರ ಸಭಿಕರ ಕೋರಿಕೆಯಂತೆ ಸಬ್ ಡಿವಿಜನ್ ಆಫೀಸರವರಾದ ಮ| ಎಂ ಜಿ ಕೃಷ್ಣಸ್ವಾಮಿರಾಯರವರು ಅಗ್ರಾಸನವನ್ನಲಂಕರಿಸಿದರು ವಿದ್ಯಾರ್ಥಿಗಳಲ್ಲಿ ಇಬ್ಬರ ಹಾಡಿಕೆಯಾದ ನಂತರ ಸುಲ್ತಾನ್‌ಪೇಟೆಯ ಮ॥ ತತ ವಾದಿ ಚಿಕ್ಕಸುಬ್ಬಣ್ಣಾಚಾರ್ಯರಿಂದ ಗಾನರೂಪವಾಗಿ ಪರಮೇಶ್ವರನ ಧ್ಯಾನವಾಯಿತು ಮ॥ ಡಿ ಶೇಷಗಿರಿರಾಯರಿಂದ ವಿದ್ಯಾ ವಿಷಯಕವಾದ ಬಹು ಸ್ವಾರಸ್ಯವಾದ ಉಪನ್ಯಾಸವು ಓದಲ್ಪಟ್ಟಿತು ಆ ಮೇಲೆ ಅಗ್ರಾಸನಾಧಿಪತಿಯವರು ಮ॥ ಡಿ ಶೇಷಗಿರಿರಾಯರು ಓದಿದ ಉಪನ್ಯಾಸವನ್ನೇ ವಿಶದೀಕರಿಸಿ ಗ್ರಾಮಸ್ಥರಿಗೆ ಸದ್ಬೋಧನೆಯಾಗುವಂತೆ ಉಪನ್ಯಾಸರೂಪವಾಗಿಯೇ ಅಪ್ಪಣೆಕೊಡಿಸಿದರು ಅನಂತರ ಮ॥ ತಿರುಮಲಾಚಾರ್ಯರವರು ಈ ಸ್ಕೂಲ್ ಉತ್ತರೋತ್ತರ ಇನ್ನೂ ಅಭಿವೃದ್ಧಿ ಆಗಬೇಕಾದ ಮಾರ್ಗಗಳನ್ನು ಮಾಸ್ಟರುಗಳಿಗೂ, ಸ್ಕೂಲಿನ ಕಮಿಟಿ ಮೆಂಬರುಗಳಿಗೂ ಉಪನ್ಯಾಸರೂಪವಾಗಿಯೇ ತಿಳಿಯಹೇಳಿದರು ಬಳಿಕ ಸುಲ್ತಾನ್‌ಪೇಟೆಯ ಮ॥ ಸಾಹುಕಾರ್ ಮಾಕಂ ಸುಬ್ರಾಯಶೆಟ್ಟರವರು—ನಮ್ಮ ಚಕ್ರವರ್ತಿ ಸಾರ್ವಭೌಮರವರ ಪ್ರತಿನಿಧಿಗಳಾದ ಶ್ರೀಯುತ ಲಾರ್ಡ್ ಹಾರ್ಡಿಂಗ್ ಪ್ರಭುಗಳವರು ಈ ನಮ್ಮ ಮೈಸೂರ್ ದೇಶಕ್ಕೆ ದಯಮಾಡಿಸಿದ ಈ ಸುಸಮಯದ ಜ್ಞಾಪಕಾರ್ಥವಾಗಿ ಈ ಸ್ಕೂಲ್ ಪ್ರವೇಶ ಮಹೋತ್ಸವವು ಇಷ್ಟು ವಿಜೃಂಭಣೆಯಿಂದ ನಡೆಯಿತೆಂದು ವಗ್ಯೆರೆ ಉಪನ್ಯಾಸರೂಪವಾಗಿ ಹೇಳಿದರು

ಅನಂತರ ಸ್ಕೂಲ್ ಕಮಿಟಿ ಮೆಂಬರುಗಳೂ, ಮಾಸ್ಟರುಗಳೂ, ಇವರುಗಳೊಂದಿಗೆ ಸೇರಿದ ವಿದ್ಯಾರ್ಥಿಗಳಿಂದಲೂ, ಸಭಿಕರಿಂದಲೂ, ಅಲ್ಲಿ ಸೇರಿದ್ದ 300 100 ಜನ ಪ್ರೇಕ್ಷಕರಿಂದಲೂ ಹಿಂದೂಸ್ಥಾನಿ ಸ್ಕೂಲ್ ಮಾಸ್ಟರ್ ಮತ್ತೂ ಈ ಸ್ಕೂಲಿನ ಕಮಿಟಿ ಮೆಂಬರುಗಳೂ, ವಿದ್ಯಾರ್ಥಿಗಳಿಂದಲೂ ಸಹ ಕನ್ನಡ ಮತ್ತೂ ಹಿಂದೂಸ್ಥಾನಿ ಈ ಎರಡು ಸ್ಕೂಲುಗಳಿಗೂ ಅನುಕೂಲವಾಗಿ ಈ ಭಾರೀ ಕಟ್ಟಡವನ್ನು ನಮ್ಮಗಳಿಗೆ ದಯಪಾಲಿಸಿದ ಮಹಾರಾಜಾ ಸರ್ಕಾರದವರಿಗೂ, ಶ್ರೀಮನ್ ಮಹಾರಾಜ ರಾಜಾ ಸಾಹೇಬ್ ಬಹದ್ದೂರವರಿಗೂ, ದೇಶ ದೇಶಾಂತರಗಳ ನವೀನ ವಿಚಕ್ಷಣೆಗಳನ್ನು ನಮ್ಮ ದೇಶದಲ್ಲಿ ಹರಡಬೇಕೆಂದಿರುವ ಪ್ರಜಾವತ್ಸಲರಾದ ನಮ್ಮ ಯುವರಾಜರವರಿಗೂ, ಮಂತ್ರಿಶ್ರೇಷ್ಠರಾದ ಶ್ರೀಮಾನ್ ಎಂ ವಿಶ್ವೇಶ್ವರಯ್ಯನವರಿಗೂ, ನಮ್ಮ ಭರತಖಂಡದ ಸಾಂಬ್ರಾಜ್ಯಾಧಿಪತಿಗಳಾಗಿಯೂ, ಕಿರೀಟಧಾರಣಾ ಮಹೋತ್ಸವದ ಜ್ಞಾಪಕಾರ್ಥವಾಗಿ ತಮ್ಮ ಆಧಿಪತ್ಯದಲ್ಲಿ ವಿದ್ಯಾಭಿವೃದ್ಧಿಯನ್ನು ಬಯಸಿ ಪ್ರಜಾವತ್ಸಲತೆಯಿಂದ ಬಹು ದ್ರವ್ಯವನ್ನಿತ್ತ ನಮ್ಮ ಇಂಡಿಯಾ ಚಕ್ರವರ್ತಿಗಳವರಾದ ಶ್ರೀ ಜಾರ್ಜ್ ಸಾರ್ವಭೌಮರವರಿಗೂ, ಶ್ರೀ ಮೇರಿ ಮಹಾರಾಣಿಯವರಿಗೂ, ರಾಜ ಪ್ರತಿನಿಧಿಗಳಾದ ನಮ್ಮ ಲಾರ್ಡ್ ಹಾರ್ಡಿಂಗರವರಿಗೂ, ಲೇಡಿ ಹಾರ್ಡಿಂಗರವರಿಗೂ ಸಹ ಪರಮೇಶ್ವರನು ಆಯುರಾರೋಗ್ಯಾದಿಗಳನ್ನು ಕೊಟ್ಟು ಚಿರಕಾಲ ಸಂರಕ್ಷಿಸಲೆಂದು ಆನಂದದಿಂದ ಕರತಾಳಧ್ವನಿ ಮಾಡಿ ಸಭೆಯು ಭರಖಾಸ್ತಾಯಿತು ಗಂಧಪುಷ್ಪ ತಾಂಬೂಲಾದಿಗಳನ್ನು ಸ್ವೀಕರಿಸಿ ಸಭಿಕರೆಲ್ಲಾ ಎದ್ದ ನಂತರ ಶ್ರೀಶಾರದಾ ವಿಲಾಸ ಧರ್ಮ ನಾಟಕ ಮಂದಿರದ ಮ್ಯಾನೇಜರವರಾದ ಮ॥ ಎನ್. ಸೊಣ್ಣಪ್ಪನವರಿಂದಲೂ, ಈ ಮಂದಿರದ ಅಭಿಮಾನಶಾಲಿಗಳಾದ ಮ॥ ಪರವಸ್ತು ಶ್ರೀನಿವಾಸಯ್ಯನವರಿಂದಲೂ ಫೋಟೋ ತೆಗೆಯಲ್ಪಟ್ಟಿತು

ವಾರ್ತಾದಾರರಿಗೆ ನೋಟೀಸ್.

ಹೆಸರು ವಿಳಾಸವಿಲ್ಲದ ಬರತಕ್ಕ ವಾರ್ತೆಗಳಿಗೆ ನಾವು ಜಾಗಾ ಕೊಡಲಾರೆವು ಆದಕಾರಣ ವಾರ್ತಾದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸವನ್ನು ಬರೆದು ತಿಳಿಸತಕ್ಕದ್ದು ಮತ್ತು ವಾರ್ತೆಯನ್ನು ಕಾಗದದ ಎರಡು ಪಕ್ಕಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ಜಾಗಾ ಕೊಡಲಾರೆವು

ಪ್ರಚುರಪಡಿಸುವುದಕ್ಕೆ ಬರತಕ್ಕ ವಾರ್ತೆಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ವಾರ್ತೆಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ವಾರ್ತೆಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ.

ವಾರ್ತಾದಾರರು ಪಡುವ ಅಭಿಪ್ರಾಯಗಳಿಗೆ ನಾವು ಜೊತೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಸಜ್ಜನಪ್ಪ, ಜಗಲೂರು, ಸತ್ಯವಾದಿ, ಹೊಸಗನಹಳ್ಳಿ—ಈ ವಾರ್ತೆಗಳನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ

ನಂಜುಂಡಾರಾಧ್ಯರು, ಬೆಂಗಳೂರು—ಕಾಮಗಾರಿ ಮಾಡಿಸುತ್ತಿರುವವರಿಗೇ ಹೇಳಿಕೊಂಡರೆ ಅವರೇ ಆ ಭಾಗವನ್ನು ಕ್ರಮಪಡಿಸಬಹುದು

ಪ್ರತ್ಯಕ್ಷದರ್ಶಿ, ಹಿರೀಕಾಟ—ಗ್ರಾಮದ ಮುಖ್ಯಸ್ಥರೆಲ್ಲಾ ಏಕವಾಗಿ ನೀವು ಹೇಳುವ ಸ್ಕೂಲಿನ ದುಃಸ್ಥಿತಿಯನ್ನು ಕುರಿತು ಇನ್‌ಸ್ಪೆಕ್ಟರುಗಳಿಗೂ ಮೇಲ್ಪಟ್ಟ ಅಧಿಕಾರಿಗಳಿಗೂ ಬರೆದುಕೊಂಡರೆ ಆವರು ತನಿಖೆಮಾಡಿ ಕ್ರಮಪಡಿಸುವುದಕ್ಕೆ ಅವಕಾಶವಾದೀತು ಹಾಗೆ ಮಾಡುವುದಕ್ಕೆ ಮೊದಲೇ ನಿಮ್ಮ ವಾರ್ತೆಯನ್ನು ಪ್ರಕಟಿಸಲಾರೆವೆಂದು ವಿಷಾದಿಸುತ್ತೇವೆ

—ಎಡಿಟರ್]

ಕರೆಸ್‌ಪಾಂಡೆನ್ಸ್

ತರೀಕೆರೆಯ ವಿಷಯ

ಅಯ್ಯಾ,

ವರ್ತಮಾನ ಪತ್ರಿಕೆಗಳಿರುವದರಿಂದ ಬೇರೆ ಬೇರೆ ಸಂಗತಿಗಳನ್ನು ಕೇಳುವದು ಮಾತ್ರವಲ್ಲದೆ ನಡೆಯುವ ಸಂಗತಿಗಳನ್ನು ಪ್ರಕಟಿಸುವದರಿಂದ ಅಧಿಕಾರಿಗಳಿಗೆ ತಿಳಿಯದಿರುವ ಸಂಗತಿಗಳೆಷ್ಟೋ ಗಮನಕ್ಕೆ ಬರುವದೂ ಉಂಟು ವಾರ್ತಾದಾರರು ದ್ವೇಷಭಾವದಿಂದ ಬರೆಯದೆ ಅಧಿಕಾರಿಗಳಲ್ಲಿ ಖುದ್ದಾಗಿ ಹೇಳಿಕೊಳ್ಳುವದಕ್ಕೆ ಪರಿಚಿತಯಿಲ್ಲದಿರುವದರಿಂದಲೋ ಪರಸ್ಪರ ಅನುರಾಗವಿಲ್ಲದಿರುವದರಿಂದಲೋ ಖುದ್ದು ಮಾತಾಡಿ ತಿಳಿಸುವದಕ್ಕೆ ಬದಲಾಗಿ ಪತ್ರಿಕೆಗಳಿಗೆ ಬರೆಯುವದುಂಟು ಹಾಗೆ ಬರೆಯುವದರಿಂದ ಅನೇಕರು ಸಂತೋಷಪಡುವದಕ್ಕೆ ಬದಲಾಗಿ ದ್ವೇಷಭಾವವನ್ನು ತೋರಿಸುವದುಂಟು ಇಂಥಾ ಅಭಿಪ್ರಾಯಕ್ಕೆ ಯಾರೂ ದಯಮಾಡಿ ಅವಕಾಶಕೊಡದೆ ಪ್ರಚುರಪಡಿಸಿದ ಸಂಗತಿಯನ್ನು ಪರೀಕ್ಷಿಸಲೂ, ದೇಶೋನ್ನತಿಗೆ ಸಹಾಯಕರಾಗಲೂ, ದುಷ್ಕೃತವನ್ನು ಅಡಗಿಸಲೂ ಈ ಮೂಲಕ ಸೃತಪಡಿಸಿ, ತರೀಕೆರೆಯಲ್ಲಿರುವ ಹುಚ್ಚ ಹೆಂಗಸನ್ನು ಬೆಂಗಳೂರಿಗೆ ಸಾಗಿಸಿ, ಸಂತೆಯಲ್ಲಿ ಜೂಜಾಟಕ್ಕೆ ಅವಕಾಶಕೊಡದೆ, ಗುಪ್ತವಾಗಿ (ಪೋ ದಿರಿಸಲ್ಲಿ) ಸಂಚರಿಸಿ ಜೂಜುಗಾರರನ್ನೂ, ಜೂಜಾಡುವ ಮತ್ತು ಸಹಾಯಕರಾದ ಪೋಲೀಸಿನವರನ್ನೂ ಶಿಕ್ಷೆಗೆ ಗುರಿಪಡಿಸಬೇಕೆಂದು ಬೇಡುತ್ತೇನೆ

ವಾರ್ತಾಬಾರ್

ಪರಸ್ಪರ ವ್ಯಾಜ್ಯಕ್ಕಿಂತಲೂ ಕ್ಷೇಮಚಿಂತನೆಯೇ ಶ್ರೇಯಸ್ಕರ

ಅಯ್ಯಾ,

ಚಿಕ್ಕಮಗಳೂರು ತಾಲ್ಲೂಕು ಅಂಬಳೆ ಹೋಬಳಿ ಮುಗಳವಳ್ಳಿಯಲ್ಲಿ ಸನ್ 1906 ನೆ ಇಸ್ವಿ ಲಾಗಾಯ್ತು ಈ ವರಿವಿಗೆ ನಡೆಯುತ್ತಿದ್ದ ವೀರಶೈವ ಬ್ರಾಹ್ಮಣ ಮಠದ ವ್ಯಾಜ್ಯದ ಸಂಗತಿಯು ದೇಶಬಾಂಧವರಿಗೆ ಗೊತ್ತೇ ಇರಬಹುದು ಈ ವಿಷಯದಲ್ಲಿ ಶ್ರೀಮತ್ಸಾಲ್ಯರಿಕೆ ಯಲಿಯೂರಿನ ಶ್ರೀಮಠದ ವ್ಯಾಜ್ಯವು ಮೊನ್ನೆ ತಾನೇ ಶ್ರೀಮಠದವರ ಪರವಾಗಿ ಫೈಸಲಾಗಿ ಇದೇ ನವಂಬರು 12 ನೇ ತಾ ಬುಧವಾರ ಚಿಕ್ಕಮಗಳೂರು ತಾಲ್ಲೂಕು ಶ್ರೀ ಜಾಬಲಾಪುರೀ ಶ್ರೀಮಠದಿಂದ ಶ್ರೀ ಸ್ವಾಮಿಗಳವರು ಪರಿವಾರ ಸಮೇತ ಬಿರುದಾವಳಿಗಳೊಡನೆ ಸಂಚಾರ ಹೊರಟಿರುತ್ತಾರೆ

ನಮ್ಮ ವೀರಶೈವ ಬ್ರಾಹ್ಮಣಮತದ ಏಕಮತ್ಯದಿಂದಲೂ ಈ ಉಭಯ ಪಾರ್ಟಿಯವರಿಗೂ ಧನವ್ಯಯವಾಗಿರಬಹುದೆಂಬ ಅಭಿಪ್ರಾಯ ವಾಚಕರಿಗೆ ಗೊತ್ತು ಇರಬಹುದು ಆದರೆ ಇಂಥಾ ವಿಷಯದಲ್ಲಿ ಇವು ಸಾಧುವಾದದ್ದು, ಅಸಾಧುವಾದುವೆಂಬ ಪರ್ಯಾಲೋಚನೆ ಮಾಡದೆ ಈ ರೀತಿ ಧನವ್ಯಯಮಾಡತಕ್ಕ ಮಹನೀಯರಿಗೆ ಏನು ಕೀರ್ತಿಯು ಬಂದೀತು? ಮನುಷ್ಯ ಶರೀರವು ಅಶಾಶ್ವತವೆಂದು ತಿಳಿದೂ ಕೂಡ ಇಂಥಾ ದುವ್ರ್ಯಯ ಮಾಡತಕ್ಕದ್ದು ಯೋಚನೀಯವಾಗಿರುತ್ತೆ ಅಂಥಾ ಧನಸಂಪಾದನೆಮಾಡಿ ಯಾವದಾದರೊಂದು ಧರ್ಮಕಾರ್ಯಗಳಿಗೆ ವಿನಿಯೋಗಿಸಿ ತಮ್ಮ ಕೀರ್ತಿಯನ್ನು ಪ್ರಕಾಶಗೊಳಿಸುವದು ದೇಶಾಭಿವೃದ್ಧಿಗೂ, ಪುರೋಭಿವೃದ್ಧಿಗೂ ಎಷ್ಟೋ ಉತ್ತೇಜನವನ್ನು ಕೊಟ್ಟಂತಾಗುತ್ತೆ ಹಿಂದೆ ಮೈಸೂರು ಸಿವಾಸಿಯಾಗಿ ಪ್ರಖ್ಯಾತಿಯನ್ನು ಪಡೆದು ಗತಿಸಿದ ಮ॥ ಮರಿಮಲ್ಲಪ್ಪನವರೂ, ಮ॥ ರಾಯಬಹದ್ದೂರು ತೋಟದಪ್ಪನವರೂ, ಬೆಂಗಳೂರು ಧರ್ಮ ಪ್ರವರ್ತಕ ಮ॥ ದೊಡ್ಡಣ್ಣನವರು ಇವರುಗಳು ಮಾಡಿರತಕ್ಕ ಸತ್ಕಾರ್ಯಗಳು ಈಗಲೂ ಚಿರಕಾಲ ಸ್ಮರಣೀಯಾಸ್ಪದವಾಗಿರುತ್ತವೆಯಲ್ಲದೆ ಅರಿಯದೆ ಇದ್ದ ನಮ್ಮಂಥಾವರಿಗೂ ದೇಶಬಾಂಧವರಿಗೂ ಮೇಲ್ಕಂಡ ಕಾರ್ಯಗಳು ಮೇಲ್‌ಪಂಕ್ತಿಯಾಗಿಲ್ಲವೆ? ಮತ್ತೂ ಆನೆಕಲ್ಲು ತಾ॥ ಅತ್ತಿಬೆಲೆ ಮ॥ ಸಾಹುಕಾರ್ರು ತಿಪ್ಪಬಸಪ್ಪನವರು ಮಾಡಿದ ಸತ್ಕಾರ್ಯಸಮಾರಂಭದಲ್ಲಿ ದಯಮಾಡಿಸಿ ಉಪನ್ಯಾಸಮಾಡಿದ ಮ॥ ರಾಜಸಭಾಭೂಷಣ ದಿವಾನ್ ಬಹದ್ದೂರು ಫಸ್ಟ್ ಕೌನ್ಸಲರ್ ಪುಟ್ಟಣ್ಣಶೆಟ್ಟರವರು ಮತ್ತು ಡೆಪ್ಟಿ ಕಮಿಷನ್ ಮ॥ ಛಾಂಡಿ ಸಾಹೇಬರವರು ಮಾಡಿದ ತಕ್ಕ ಉಪನ್ಯಾಸಗಳೇ ಮುಖ್ಯಾಧಾರವಾಗಿರುತ್ತವಲ್ಲದೆ ದೊಡ್ಡಬಳ್ಳಾಪುರದ ಮ॥ ಸಾಹುಕಾರ್ರು ರುವಾಲಿ ರುದ್ರಪ್ಪನವರು ಮಾಡಿರತಕ್ಕ ಕಾರ್ಯಗಳೇ ನಮಗೆ ಎಷ್ಟೋ ಎಚ್ಚರಿಕೆಗೆ ಆಸ್ಪದವಾಗಿರುತ್ತವೆ ಇಂಥಾ ವಿಷಯವನ್ನು ದೇಶಬಾಂಧವರು ತಮ್ಮ ಘನವಾದ ಚಿತ್ತಕ್ಕೆ ತಂದುಕೊಂಡು ಮುಂದೆ ಇಂಥಾ ಕಾರ್ಯಗಳಿಗೆ ಅನುಮೋದಿಸದೆ ಸತ್ಕಾರ್ಯಗಳಲ್ಲಿ ಪ್ರವರ್ತಿಸಿ ತಮ್ಮ ಧನ ಕಾಲಾದಿಗಳನ್ನು ವಿನಿಯೋಗಿಸುತ್ತಾರೆಂದು ನಂಬಿದ್ದೇನೆ

ಪ್ರತ್ಯಕ್ಷದರ್ಶಿ

ಚಿಕ್ಕಮಗಳೂರು ಮುನಸೀಫರೂ, ಲಾಯರುಗಳೂ

ಅಯ್ಯಾ,

ನಿಮ್ಮ ಕಳೆದ ವಾರದ ಪತ್ರಿಕೆಯಲ್ಲಿ ಸತ್ಯವಾದಿ ಎಂಬ ಮಹನೀಯರು ಮೇಲ್ಕಂಡ ಅಭಿದಾನದಿಂದ ಬರೆದಿರುವ ಲೇಖನವನ್ನು ನೋಡಿ ತುಂಬಾ ಆಶ್ಚರ್ಯಪಡಬೇಕಾಗಿದೆ ಆ ಮಹನೀಯರು ತಮ್ಮ ನಾಮವನ್ನು ಸಾರ್ಥಕಮಾಡಿಕೊಂಡಿದ್ದರೆ ಬಹು ಚೆನ್ನಾಗಿಯೇ ಇತ್ತು ಆದರೆ ಇಲ್ಲಿನ ಲಾಯರುಗಳಿಗೂ ಮುನ್‌ಸೀಫರಿಗೂ ಇರುವ ವೈಷಮ್ಯದ ಸಾರಾಂಶವನ್ನು ತಿಳಿದುಕೊಳ್ಳದೆ ವೃಥಾ ಏನೂ ತಿಳಿಯದ ಜನಗಳಲ್ಲಿ ಲಾಯರುಗಳಿಗೆ ಒಂದು ಅಪವಾದವನ್ನು ತರಬೇಕೆಂಬುವುದೇ ಸತ್ಯವಾದಿಗಳ ಮತ್ತು ಮರೆಯಲ್ಲಿದ್ದುಕೊಂಡು ಇವರನ್ನು ಪ್ರೋತ್ಸಾಹಿಸಿದ ಮಹನೀಯರ ಮುಖ್ಯ ಉದ್ದೇಶವೆಂದು ಊಹಿಸಬೇಕಾಗಿದೆ ಲಾಯರುಗಳಿಗೂ ಅವರ ಕಕ್ಷಿಗಾರರಿಗೂ ಇರುವ ಲೆಕ್ಕಾಚಾರದ ವಿಚಾರವನ್ನು ಮುನ್ಸೀಫರು ಮಾಡಲು ಕಾರಣವಿಲ್ಲವೆಂತಲೂ, ತಾವು ತಮ್ಮ ಕಕ್ಷಿಗಾರರಿಗೆ ಯಾವ [illegible] ಚಾರಕ್ಕಾದರೂ ಜವಾಬ್ದಾರರೇ ಹೊರತು ಕೋರ್ಟಿನವರು ಕಾರಣವಿಲ್ಲದೆ ಆ [illegible]ಯದಲ್ಲಿ ಪ್ರವರ್ತಿಸಿ ಲೇಖನವ್ಯವಹಾರ ಬೆಳೆಯಿಸುವುದು ಉಚಿತವಲ್ಲವೆಂ[illegible] ಇಲ್ಲಿನ ಲಾಯರುಗಳು ಚರ್ಚೆಮಾಡುವ ಮುಖ್ಯ ಅಂಶವಾಗಿದೆ ಆದ[illegible]ದಿಯು ಮದರಾಸು ಸರ್ಕಾರದ ಆಚರಣೆಯನ್ನು ತಮ್ಮ ಪತ್ರದಲ್ಲಿ ಉದಾ[illegible]ಸುತ್ತಾರೆ ಅಲ್ಲಿ ಯಾವ ಕಾರಣದಿಂದ ಆ ನಿಬಂಧನೆ ಜಾರಿಗೆ ಬಂದಿರುತ್ತೆ? [illegible] ಲಾಯರುಗಳಿಗೂ ಕೂಡ ಆ ವಿಷಯದಲ್ಲಿ ಎಷ್ಟು ಗೌರವ್ಯವಿದೆ? ಎಂಬುವ[illegible] ಸತ್ಯವಾದಿಯು ಇನ್ನೂ ಹೆಚ್ಚಾಗಿ ವಿಶದಪಡಿಸಿದ್ದರೆ ಚೆನ್ನಾಗಿತ್ತು ಮೈಸೂ[illegible] ದೇಶದಲ್ಲಿ ಈ ವಿಚಾರವಾದ ನಿಬಂಧನೆಗಳನ್ನು ಜಾರಿಗೆ ತರುವುದು ಯುಕ್ತವೆ[illegible] ತೋರಿಸಿದ್ದಲ್ಲಿ ನಮ್ಮ ಮುನಸೀಫರಿಗಿಂತಲೂ ಹೆಚ್ಚು ಅನುಭವಶಾಲಿಯಾಗಿ[illegible] ಮೇಧಾವಿಗಳಾಗಿಯೂ ಇದ್ದು ಮತ್ತು ಇರುವ ಇತರ ಯಾವ ಜಡ್ಜರಾದ[illegible] ಈ ಸಲಹೆಯನ್ನು ಸರ್ಕಾರಕ್ಕೆ ಕೊಡುತ್ತಿರಲಿಲ್ಲವೇ? ಮೊನ್ನೆ ತಾನೆ ಪ್ರಜಾಪ್ರ[illegible] ಸಭೆಯಲ್ಲಿ ಇದೇ ವಿಷಯವೇ ತುಂಬಾ ಚರ್ಚೆ ನಡೆದು ಬಹು ಅನುಭವಶಾ[illegible]ಳಾಗಿಯೂ, ಮುನ್‌ಸೀಫರಾಗಿಯೂ, ಸಬ್ ಜಡ್ಜರಾಗಿಯೂ, ಡೆಪ್ಯುಟಿ ಕಮಿಷನರ್, ಡಿಸ್ಟ್ರಿಕ್ಟ್ ಜಡ್ಜ್, ಚೀಫ್ ಕೋರ್ಟ್ ಜಡ್ಜ್, ಇವೇ ಮುಂತಾದ ಪದಗಳನ್ನು ಅನೇಕ ವರ್ಷ ಅಲಂಕರಿಸಿ ಈಗ ಮೊದಲನೇ ಕೌನ್ಸಲರ್ ಆಗಿರುವ ಮ॥ ಎಚ್ ವಿ ನಂಜುಂಡಯ್ಯನವರು ಈ ವಿಚಾರದಲ್ಲಿ ಸರ್ಕಾರದವರು ಪ್ರವೇಶ ಮಾಡುವುದು ಸರಿಯಲ್ಲವೆಂದೂ, ಕಕ್ಷಿಗಾರರಿಗೂ ಲಾಯರಿಗೂ ಇರುವ ಸಂಬಂಧ ಕೇವಲ ಖಾಸಗಿ ಎಂದೂ ಅವರವರಲ್ಲಿ ಲೆಕ್ಕಾಚಾರ ಸರಿಬೀಳದೆ ಇದ್ದಲ್ಲಿ ಸಿವಿಲ್ ಕೋರ್ಟಿನಲ್ಲಿ ದಾವಾ ಮಾಡಿಕೊಳ್ಳಬಹುದೆಂಬದಾಗಿ ವಗ್ಯೆರೆ ತೀರ್ಮಾನ ಮಾಡಿದ್ದಾರೆ ನಮ್ಮ ಸತ್ಯವಾದಿಗೆ ಆ ವಿಷಯ ಇನ್ನೂ ಅವಗಾಹನಕ್ಕೆ ಬಂದ[illegible] ತೋರಲಿಲ್ಲ

ಮುಖ್ಯವಾಗಿ ಲಾಯರುಗಳಿಗೂ ಮುನಸೀಫರಿಗೂ ಇರುವ ಈ ವೈಷಮ್ಯದಿಂದ ಕಕ್ಷಿಗಾರರಿಗೆ ತೊಂದರೆಯಾಗಿ ನ್ಯಾಯವಿಮರ್ಶೆಗೆ ಕುಂದಕವಾಗುವುದರಲ್ಲಿ ಸಂದೇಹವಿಲ್ಲ ಈ ಮುನಸೀಫ ಮಹನೀಯರು ಈ ಕೋರ್ಟಿನಲ್ಲಿ ಆಸನವನ್ನಲಂಕರಿಸಿದ ಲಾಗಾಯಿತು ದಿನೇದಿನೇ ಹೊಕದ್ದಮಾ ಸಂಖ್ಯೆಯು ಕಡಿಮೆಯಾಗುತ್ತಾ ಇದೆ ಈಚೀಚೆಗೆ ವ್ಯಾಜ್ಯಗಳೇ ಕಮ್ಮಿಯಾಯಿತು ಇನ್ನೂ ಕೊಂಚ ಕಾಲ ಇದೇ ಮಹನೀಯರ ಇಲ್ಲೇ ಇದ್ದಲ್ಲಿ ಸರ್ಕಾರದವರಿಗೆ ಇಲ್ಲಿಂದ ಕೋರ್ಟನ್ನೇ ವರ್ಜಾಮಾಡಬೇಕೆಂಬ ಯೋಚನೆಯು ಬರಬಹುದು ಮೊಕದ್ದಮಾ ವ್ಯಾಜ್ಯದ ಸಂಖ್ಯೆ ಕಮ್ಮಿಯಾದದ್ದಕ್ಕೆ ತರೀಕೆರೆ ತಾಲ್ಲೂಕು ಶಿವಮೊಗ್ಗ ಸಬ್ ಜಡ್ಜ್ ಕೋರ್ಟಿಗೆ ಸೇರಿಸಿದ್ದೂ, ಚಿಕ್ಕಮಗಳೂರಲ್ಲಿ ಕೋಆಪರೇಟಿವ್ ಸೊಸೈಟಿ ಸ್ಥಾಪನೆಯೂ ಕಾರಣವೆಂದು ಹೇಳಲು ನಮ್ಮ ಮಹನೀಯರಿಗೆ ಸಾಧ್ಯವಾದೀತು ಬಹುಶಾ ಈ ವರ್ಷ ಇಲ್ಲಿನ ಬ್ರಹ್ಮಜ್ಞಾನ ಸಭೆಯಿಂದಲೂ ಸತ್ಯವಾದಿಯಂತಹ ಮಹನೀಯರಿಂದಲೂ ಕಡೂರು ಡಿಸ್ಟ್ರಿಕ್ಟಿನ ಜನಗಳು ಕಾಮಕ್ರೋಧಾದಿಗಳನ್ನು ಬಿಟ್ಟು ಕೇವಲ ಸಾಧುಗಳಾಗುತ್ತಾ ಬಂದಿರುತ್ತಾರಾಗಿ ನಮ್ಮ ಮುನ್ಸೀಫರು ಕಂಡಾ ತೋರಿಸಬಹುದು

ನ್ಯಾಯವಿಮರ್ಶಿ

ತಾಲ್ಲೋಕು ವರ್ತಮಾನಗಳು

ತಿಪಟೂರು—ಇಲ್ಲಿ ಸಕಾಲಕ್ಕೆ ಮಳೆ ಬಾರದೆ ಪೈರುಗಳು ಒಣಗಿ ಬಹಳ ತರಿಗೆ ತುಂಬಾ ತೊಂದರೆಯಾಗಿದೆ ಕೋಟೆ ಪೇಟೆಯಲ್ಲಿ ಇಲಿಗಳು ಬೀಳುತ್ತಲಿಯೆಂದು ವರ್ತಮಾನವಿದೆ ಚರಂಡಿಗಳಲ್ಲೂ ಸಂದಿಗಳಲ್ಲೂ ಹೇಸಿಕೆ ಕಸ ತುಂಬಿದೆ ಒಬ್ಬರಿದ್ದ ಸ್ಯಾನಿಟರಿ ಇನ್‌ಸ್ಪೆಕ್ಟರು ಇಬ್ಬರಾದರೂ ಗ್ರಾಮ ಶಾಚ ವಿಷಯವು ತೃಪ್ತಿಕರವಾಗಿಲ್ಲ ಕೆರೆಯಲ್ಲಿ ನೀರಿಲ್ಲದೆ ಗಿಡಗಳು ಬೆಳೆದಿರುವದು ಕಳ್ಳಸಿಗೆ ಅನುಕೂಲವಾಗಿದೆ—ನಮ್ಮ ಅಮಲ್ದಾರ್ ಮಿ॥ ಬಸವರಾಜ ಅರಸಿನವರು ದೇಹಾಲಸ್ಯದಿಂದ ರಜಾ ಪಡೆದು ಮೈಸೂರಿಗೆ ಹೋದರು ಇವರಿಗೆ ಬದಲಾಗಿ ತುರುವೇಕೆರೆ ಡೆಪ್ಟಿ ಅಮಲ್ದಾರರು ಬಂದು ಚಾರ್ಜ್ ತೆಗೆದುಕೊಂಡು ಹೋದರು—ಟವನ್ ಪಾಕೀಜ ವಿಷಯಕ್ಕೂ, ಪ್ಲೇಗುಸೋಂಕು ಹರಡುವದಕ್ಕೂ ಕರೆಯಲ್ಲಿ ಹೇಸಿಗೆಮಾಡುವವರಕ್ಕೂ ಸಮರ್ಥರಾದ ಮೇಲ್ಪಟ್ಟ ಅಧಿಕಾರಿಗಳ ಗಮನ ಇಲ್ಲದಿರುವದೇ ಕಾರಣ

ಮಾಗಡಿ ತಾ| ಗುಡೆಮಾರನಹಳ್ಳಿ—ಈ ಪ್ರಾಂತ್ಯ ಸ್ವಾತಿ, ವಿಶಾಖೆ ಮಳೆ ಸುತರಾಮು ಆಗದೆ ಪಸಲುಗಳು ಬಹಳ ನಷ್ಟವಾಗಿರುತ್ತವೆ ಭತ್ತದ ಪೈರು ಗದ್ದೆಗಳು ಒಣಗಿರುತ್ತೆ ಪಸಲು ಸುತ್ರಾಮು ಇಲ್ಲ ರೂಪಾಯಿಗೆ 5 9 ಸೇರು ಅಕ್ಕಿ ಮಾರುತ್ತೆ ಬಡಬಗ್ಗರಿಗೆ ಬಹಳ ಅನನುಕೂಲವಾಗಿದೆ ಇಂಥಾ ದುರ್ಭಿಕ್ಷ ಕಾಲದಲ್ಲಿ ಈ ಊರಿನಲ್ಲಿ ಯೂನಿಯನ್ ಮಾಡಿ 6 7 ವರುಷಗಳು ಆಯಿತು ಇದುವರೆಗೂ ಯಾವ ಸಂಸ್ಕಾರದ ಕೆಲಸವೂ ಮಾಡಿಸಲಿಲ್ಲ ಯೂನಿಯನ್ ಆಗುವದಕ್ಕೆ ಮುಂಚೆ ಇದ್ದಂತೆಯೇ ಬೀದಿ ಗಲ್ಲಿಗಳಲ್ಲಿ ಹಳ್ಳಕೊಳ್ಳಗಳ ಅಡಚಣೆ ಇರುತ್ತದೆ ಬೃಹತ್ ಅವರ ಕಣದಿಂದ ದಿನಸಿಗಳನ್ನು ಗಾಡಿಗಳ ಮೇಲೆ ತರುವದಕ್ಕೆ ತುಂಬಾ ಕಷ್ಟವಾಗಿದೆ ರಾತ್ರಿ ಕಾಲದಲ್ಲಿ ಜನಗಳು ತಿರುಗುವದಕ್ಕೆ ಬಹಳ ಕಷ್ಟ ನಮ್ಮ ಅಮಲ್ದಾರ್ರವರು ಇದನ್ನು ಖುದ್ದಾಗಿ ಅಜಮಾಯಿಷಿಮಾಡಿ ಈ ಯೂನಿಯನ್ನಲ್ಲಿ ಗ್ರಾಮವಾಚೀಜುಮಾಡಿಸಿ ರೈತರಿಗೆ ಯಾವ ಗಲೀಜೂ ತೊಂದರೆಯೂ ಇಲ್ಲದಂತೆ ಮಾಡಿಸಿಕೊಡುತ್ತಾರೆಂದು ನಂಬಿದ್ದೇನೆ

ಚಿಂತಾಮಣಿ—ಈ ಪ್ರಾಂತ್ಯ ಮಳೆ ಕಡಮೆಯಾಗಿದೆ ಧಾರಣೆವಾಸಿಗಳು ಇಳಿಯಬಲ್ಲ—ಈ ಊರಿನ ಎ ವಿ ಸ್ಕೂಲು ಹೆಡ್ ಮಾಸ್ಟರು ಮ॥ ವಿ ಕೃಷ್ಣರಾಯರು ಕೋಲಾರಕ್ಕೆ ವರ್ಗವಾಯ್ತು ಹೊರಟರು—ರಾತ್ರಿ ಕಾಲದಲ್ಲಿ ಮನೆ ಯಜಮಾನರು ಹೊರಗೆ ಹೊರಟ ವೇಳೆಯಲ್ಲಿ ಮನೆಗಳ ಕಡೆ ಕಳ್ಳರ ಕಾಟ ಜಾಸ್ತಿಯಾಗುತ್ತಾ ಬಂದಿದೆ ರಾತ್ರಿ 10 ಘಂಟೆ ಆಯಿತೆಂದರೆ ಮನೆ ಮಾಳಿಗೆಗಳ ಮೇಲೆ ಕೋಳಿಗಳನ್ನು ಓಡಿಸಿದಂತೆ ಕಳ್ಳರನ್ನು ಗಾಬರಿ ಕೂಗುಗಳಿಂದ ಓಡಿಸಬೇಕಾಗಿದೆ ಹೀಗಿರುವಲ್ಲಿ ಜನರ ತೊಂದರೆ ಹೇಳಬೇಕಾಗಿಲ್ಲ ಪೋಲೀಸಿನವರು ಇನ್ನು ಮುಂದಾದರೂ ಸ್ವಲ್ಪ ಮೆಹನತ್ತು ಮಾಡಿ ತುಂಟರಾದ ಕಳ್ಳರ ಹಾವಳಿ ಕಡಮೆಮಾಡುತ್ತಾರೆಂತ ನಿರೀಕ್ಷಿಸಲ್ಪಟ್ಟಿದೆ—ಹಾಲಿ ಕೋಲಾರದಲ್ಲಿ ಪ್ಲೇಗ್ ಗಲಾಟೆ ಉಂಟಾಗಿ ಊರು ಬಿಡುತ್ತಿದಾರೆ ವರ್ತಕರೂ ಇತರರೂ ಗುಡಿಸಲು ಹಾಕಿಕೊಳ್ಳುತ್ತಿದಾರೆ ಮುಸಲ್ಮಾನರು ಘೋಷಾ ಜನಸ್ತ್ರೀಯರನ್ನು ಗ್ರಾಮಾಂತರಗಳಿಗೆ ತಮ್ಮ ಬಂಧುಗಳಿರುವ ಸ್ಥಳಗಳಲ್ಲಿ ಬಿಟ್ಟು ಬರುತ್ತಿದಾರೆ

ಸಕಲೇಶಪುರ—ಈಚೆಗೆ ಒಂದು ತಿಂಗಳಿಂದ ಮಳೆ ಬಾರದೆ ನಿಂತುಹೋಗಿರುತ್ತದೆ ಪ್ರಾತಃಕಾಲ ಹಿಮವೂ, ಮಧ್ಯಾಹ್ನ ಬಿಸಿಲೂ ಅಧಿಕವಾಗಿದೆ ರಾತ್ರಿ ಕಾಲದಲ್ಲಿ ಛಳಿ ಬಹಳ ಧಾರಣೆವಾಸಿಗಳು ದಿನೇ ದಿನೇ ಹೆಚ್ಚಾಗುತ್ತಲಿವೆ—ಎರಡು ವಾರಗಳಿಂದ ಇಲ್ಲಿನ ಬ್ರಾಹ್ಮಣರ ಬೀದಿಯ ಕಡೆ ಮನೆಗಳಲ್ಲಿ ಇಲಿಗಳು ಸಾಯುತ್ತಲೂ ಇವೆ ಜನರಲ್ಲಿ ಪ್ಲೇಗಿನ ಭೀತಿಯು ಬಹಳವಾಗಿರುವದರಿಂದ ಅನೇಕರು ಆಗಲೇ ಊರು ಬಿಟ್ಟು ತಮ್ಮ ತೋಟಗಳಿಗೂ ಗುಡಿಸಲುಗಳಿಗೂ ಹೋಗುವವರಲ್ಲಿದಾರೆ ಹಾಸನದಿಂದ ಬಂದ ಪ್ರಯಾಣಿಕರನ್ನು ಬ್ರಾಹ್ಮಣರ ಬೀದಿಯ ಕಡೆ ಮನೆಗಳಲ್ಲಿ ಬಹಳವಾಗಿ ಸೇರಿಸಿಕೊಂಡದ್ದರಿಂದ ಹೀಗೆ ವ್ಯಾಧಿಯು ಇಲ್ಲಿಯೂ ತಲೆದೋರಿತೆಂದು ಜನರು ಬಹಳವಾಗಿ ಹೇಳಾಡುತ್ತಲಿದಾರೆ ಹಾಸನದಿಂದ ಡೆಪ್ಯುಟಿ ಕಮಿಷನರವರು ಊರನ್ನು ನೋಡಲು ಬರುತ್ತಾರೆಂಬ ವರ್ತಮಾನ ಇದೆ ಕಾಡುಗಳಲ್ಲಿ ಬೊಂಬು, ಗಳ ಸಿಕ್ಕುವದು ಕಷ್ಟ ನಮ್ಮ ಅಮಲ್ದಾರ್ರವರು ಬೇಗನೆ ಎಲ್ಲಾದರೂ ಬೊಂಬು, ಗಳ, ಕತೆ ಮುಂತಾದವುಗಳನ್ನು ಪ್ರಜೆಗಳಿಗೆ ಕರಿಸಿಕೊಟ್ಟರೆ ಬಹಳ ಉತ್ತಮವಾಗಿರುತ್ತವೆ

ಅಕ್ಕಿಹಬ್ಬ.—ಕೃಷ್ಣರಾಜಪೇಟೆ ತಾಲ್ಲೋಕು ಅಕ್ಕಿಹೆಬ್ಬಾಳು ಗ್ರಾಮ ಸ್ಥರು ವಿದ್ಯಾವಿಲಾಸ ಸಮಾಜವೆಂಬ ಹೆಸರಿನಿಂದ ಒಂದು ಸಮಾಜವನ್ನು ಏರ್ಪಡಿಸಿ ಕೊಂಡು ಈಗ್ಗೆ ಎರಡು ವರುಷಗಳ ಲಾಗಾಯ್ತು ಒಂದು ಇಂಗ್ಲಿಷ್ ಸ್ಕೂಲನ್ನು ಗೌರ್ನಮೆಂಟಿನ ಸಹಾಯದಿಂದ ನಡಿಸಿಕೊಂಡು ಬರುತ್ತಿದಾರೆ ಮತ್ತು ಈ ಸಭೆಯವರು ಆಗಾಗ್ಗ ಅಜುಬಾಜು ಗ್ರಾಮಗಳಿಗೆ ಹೋಗಿ ರೈತರಿಗೆ ವಿದ್ಯಾಭ್ಯಾಸ, ಕೈಗಾರಿಕೆ, ವ್ಯವಸಾಯ, ಆರೋಗ್ಯ ಮೊದಲಾದ ವಿಚಾರಗಳನ್ನು ಕುರಿತು ಹೇಳು ತ್ತಾರೆ ಅಲ್ಲದೆ ಇದೇ ಮಾಹೆ ತಾ 13 ರಲ್ಲಿ ಡೆಪ್ಟಿ ಅಮಲ್ದಾರ್ ಮ॥ ರಾಮರಾ ಯರು ಚಿನ್ನೇನಹಳ್ಳಿ ಗ್ರಾಮಕ್ಕೆ ಜಮಾಬಂದಿಗೆ ಬಂದಿದ್ದಾಗ ಈ ಸಮಾಜದ ಮೆಂಬ ರುಗಳು ಹೋಗಿ ಅಲ್ಲಿನ ರೈತರುಗಳಿಗೆ ವಿದ್ಯೆಯ ಆವಶ್ಯಕತೆಯನ್ನು ತಿಳಿಸಿದ್ದಲ್ಲದೆ ಆ ಗ್ರಾಮದ ಬಾಲಕರಿಗೆ ಪಾಠಶಾಲೆ ಇಲ್ಲದೆ ತೊಂದರೆ ಪಡುತ್ತಿದ್ದುದನ್ನು ನೋಡಿ ಪಾಠಶಾಲೆಯನ್ನೇರ್ಪಡಿಸಿಕೊಳ್ಳಲು ಸರ್ಕಾರಕ್ಕೆ ಅರ್ಜಿಹಾಕುವಂತೆ ಬೋಧಿಸಿ ಸ್ಕೂಲು ಕಟ್ಟಡವನ್ನು ಕಟ್ಟಲು ಸರಿಯಾದ ಜಾಗವನ್ನು ಕೊಡಿಸಲು ಡೆಪ್ಟಿ ಅಮ ಲ್ದಾರ್ರಿಗೆ ಅರ್ಜಿಸಹಾ ಹಾಕಿಸಿ ಜಾಗವನ್ನು ಏರ್ಪಡಿಸಿಕೊಟ್ಟರು. ಇದೇ ರೀತಿ ದೊಡ್ಡದೊಡ್ಡ ಗ್ರಾಮಗಳಲ್ಲಿರುವ ಮಹಾಜನಗಳು ಸಮಾಜವನ್ನೇರ್ಪಡಿಸಿಕೊಂಡು, ಅಭಿವೃದ್ಧಿ ಹೊಂದವೆ ಹಿಂದುಳಿದಿರತಕ್ಕ ಸಣ್ಣ ಗ್ರಾಮದ ರೈತರುಗಳಿಗೆ ಪ್ರೋತ್ಸಾಹ ಕೊಡುತ್ತ ಬಂದರೆ ದೇಶವು ಬೇಗನೆ ಅಭಿವೃದ್ಧಿ ಹೊಂದಬಹುದು.

ಚಿಕ್ಕನಾಯಕನಹಳ್ಳಿ.—ಇಲ್ಲಿ ಸುಮಾರು 2-3 ತಿಂಗಳಿಂದಲೂ ಸುತರಾಂ ಮಳೆಯಿಲ್ಲದೆ ಬೆಳಗಳೆಲ್ಲಾ ಬಿಸಿಲಿನ ತಾಪಕ್ಕೆ ಸಿಕ್ಕಿ ನಷ್ಟವಾದವು. ದವಸದ ಧಾರ ಣೆಗಳಂತೂ ಕಳೆದುಹೋಗಿದ್ದ ಕ್ಷಾಮವನ್ನು ಪುನಃ ಕರೆಯುತ್ತಿವೆ. ಅಕ್ಕಿ ರೂಪಾ ಯಿಗೆ 5½-6 ಸೇರು, ರಾಗಿ 12 ಸೇರು ಮಾರುತ್ತಿದೆ. ಬಡಬಗ್ಗರ ಸಂಕಟವಂತೂ ಹೇಳತೀರದು.—ಕಸಬಾ ಕನ್ನಡ ಗರಲ್ ಸ್ಕೂಲ್ ಸಂಗೀತ ಮಾಸ್ಟರು ಮ॥ ಟಿ ವಿ. ಸುಬ್ಬಾಚಾರ್ರನ್ನು ಕುಣಿಗಲ್ ತಾ ಅಮೃತೂರು ಸ್ಕೂಲಿಗೆ ವರ್ಗಾಯಿಸಿ ರುವರಲ್ಲದೆ, ಇವರ ಬದಲು ಚಿಕ್ಕನಾಯಕನಹಳ್ಳಿ ತಾ ಆಫೀಸಿನಲ್ಲಿರುವ ಮ॥ ವೆಂಕಟೇಶಯ್ಯನವರು ಬರುವದಾಗಿಯೂ ವರ್ತಮಾನವಿದೆ. ಮ॥ ಸುಬ್ಬಾಚಾರ್ರು ಇಲ್ಲಿಗೆ ಬಂದ ಸುಮಾರು 1 ವರ್ಷಗಳಿಂದ ಬಹಳ ಮುತುವರ್ಜಿವಹಿಸಿ ಸ್ಕೂಲಿನ ಬಾಲಕಿಯರಿಗೆ ಸಂಗೀತ ಪಾಠವನ್ನೂ, ಕಿಂಡರ್‌ಗಾರ್ಟನ್ ಗೀತಗಳನ್ನೂ, ಆಟ ಗಳನ್ನೂ ಕಲಿಸಿರುತ್ತಾರಲ್ಲದೆ ಗ್ರಾಮದಲ್ಲಿ ಸರ್ವರ ಅನುರಾಗಕ್ಕೆ ಪಾತ್ರರಾಗಿದಾರೆ ಪಟ್ಟಣದಲ್ಲಿ ವೈಶ್ಯರ ಮ॥ ಸಿದ್ಧನಂಜಶೆಟ್ರ ಹಾಲಿ ಮನೆಯಲ್ಲಿ ಮ॥ ಮೈಲಾರ ಶೆಟ್ಟರು ಸುಮಾರು 1 ಖಂಡಿ ಹುಲ್ಲು ಜಮಾಯಿಸಿದ್ದರು ಅಕಸ್ಮಾತ್ ಬೆಂಕಿಬಿದ್ದು ಹುಲ್ಲೆಲ್ಲಾ ನಷ್ಟವಾಗಿ ಛಾವಣಿಯೂ ಸುಟ್ಟುಹೋದ್ದಲ್ಲದೆ ಮಗ್ಗುಲಿನ ಕಾಳಿಂಗ ಶೆಟ್ರ ಮನೆಗೂ ಆವರಿಸಿತು. ಅಷ್ಟರಲ್ಲಿ ಕೆಲವರು ಸೇರಿ ತುಂಬಾ ಶ್ರಮಪಟ್ಟು ಬೆಂಕಿಯನ್ನು ಆರಿಸಿದರು —ಗ್ರಾಮದ ಹವಾ ಚೆನ್ನಾಗಿರುತ್ತೆ

ನಂಜನಗೂಡು.—ಧಾರಣೆವಾಸಿಗಳು ಬಹಳ ಭಾರವಾಗಿರುತ್ತೆ. ಪ್ಲೇಗಿನ ಗಲಾಟೆ ಕಡಮೆಯಾಗಿದೆ. ಇಲ್ಲಿಂದ ಪರಸ್ಥಳಕ್ಕೆ ಹೋಗಿರುವ ಜನಗಳು ಊರು ಸೇರಿಲ್ಲ.—ಇಲ್ಲಿಗೆ ಹೊಸದಾಗಿ ಬಂದಿರುವ ಡಾಕ್ಟರು ಪ್ರತಿನಿತ್ಯವು ಟವನ್ ಸುತ್ತ ರೋಗಿಗಳ ಯೋಗಕ್ಷೇಮವನ್ನು ವಿಚಾರಿಸುವದಲ್ಲದೆ ಜಾಗ್ರತೆ ಆಸ್ಪತ್ರೆಗೆ ಬಂದು ರೋಗಿಗಳಿಗೆ ಔಷಧಿ ವಗೈರೆ ಮುತವರ್ಜಿಯಿಂದ ಕೊಡುತ್ತಾರೆ. ಮತ್ತು ಇವರು ತಮ್ಮ ವಿರಾಮಕಾಲವನ್ನೆಲ್ಲಾ ರೋಗಿಗಳ ಚಿಕಿತ್ಸೆಯಲ್ಲೇ ವಿನಿಯೋಗಿಸು ತ್ತಾರೆ.—ಇಲ್ಲಿರತಕ್ಕ ಮಹಾರಾಜರವರ ಧರ್ಮಛತ್ರದಲ್ಲಿ ರಾತ್ರಿವೇಳೆ ಬಂದ ಪ್ರಯಾಣಿಕರಿಗೆ ಸಕಾಲದಲ್ಲಿ ತೃಪ್ತಿಕರವಾಗಿ ಊಟಮಾಡಿಸುತ್ತಾರೆ. ಇಲ್ಲಿನ ಛತ್ರ ಮತ್ತು ಶಿವಕೂಟವನ್ನು ಸಬ್ ಡಿವಿಜನ್ ಆಫೀಸರವರೂ, ಅಮಲ್ದಾರರೂ, ಧರ್ಮದರ್ಶಿಗಳೂ ಬಹಳ ಮೆಹನತ್ತಿನಿಂದಲೂ ಮುತುವರ್ಜಿಯಾಗಿಯೂ ನಡಿ ಸುತ್ತಾ ಇದಾರೆ. ಗ್ರಾಮಪಾಕೀಜಾ ಚೆನ್ನಾಗಿದೆ ಮ್ಯುನಿಸಿಪಲ್ ಲಾಂದ್ರಗಳು ಬೆಳಗಿನವರೆಗೂ ಉರಿಯುತ್ತವೆ ಪ್ಲೇಗಿನ ಗಲಾಟೆಗಾಗಿ ಬಹಳ ಜನವು ಮನೆ ಬಾಗಿಲು ಹಾಕಿಕೊಂಡು ಪರಸ್ಥಳಕ್ಕೆ ಹೋಗಿರುತ್ತಾರೆ. ಪೊಲೀಸ್ ಸಿಬ್ಬಂದಿ ಸ್ಪೆಷಲ್ ಡ್ಯೂಟಿಗಾಗಿ ಹೋಗಿ, ಬಹಳ ಕಡಮೆಯಾಗಿದ್ದಾಗ್ಯೂ ಇಲ್ಲಿನ ಜಮೇ ದಾರರೂ ಟವನ್ ದಫೇದಾರರೂ ಇರತಕ್ಕ ಸ್ವಲ್ಪ ಸಿಬ್ಬಂದಿಯಿಂದಲೇ ಬಹಳ ಮೆಹನತ್ತಿನಿಂದ ಕೆಲಸಮಾಡುತ್ತಾ ಇರುವದರಿಂದ ಕಳ್ಳತನದ ಅವಾಂತ್ರ ಕಡಮೆ ಯಾಗಿದೆ —ಈ ಊರಿನಲ್ಲಿದ್ದು ಹಾಲಿ ಪರಸ್ಥಳದಲ್ಲಿ ವಾಸವಾಗಿರುವವರ ಪೈಕಿ ಕೆಲವು ಕುಂಟರು ರಾತ್ರಿ 10 ಘಂಟೆ ವೇಳೆಯಲ್ಲಿ ಕೆಲವು ಪುಂಡರ ಗುಂಪುಕಟ್ಟಿ ಕೊಂಡು ಛತ್ರಕ್ಕೆ ಬಂದು ಅಲ್ಲಿ ಜನಗಳು ಇಲ್ಲದೆ ಇರುವದನ್ನು ನೋಡಿ ಮನ ಸ್ಸಿಗೆ ಬಂದಂತೆ ಆಫೀಸರುಗಳ ಮೇಲೆ ಆಕ್ಷೇಪಣೆ ಮಾಡುತ್ತಾ ಇರುವಂತೆ ಕೇಳುತ್ತೇನೆ

ಮಂಡ್ಯ.—ಪೈರುಗಳು ಕಟಾವಾಗುತ್ತಿವೆ ಧಾರಣೆ ಇಳಿಯಲಿಲ್ಲ ಊರೊ ಳಗೆ ರೋಗಾದಿಗಳೇನೂ ಇಲ್ಲದಿದ್ದರೂ 1 ಮೈಲಿ ದೂರದಲ್ಲಿ ಪ್ಲೇಗ್ ಉಪದ್ರ ವಿದೆ. 2-3 ಗ್ರಾಮಗಳಲ್ಲಿ ಪ್ಲೇಗ್ ರೋಗದಿಂದ 7 8 ಜನಗಳು ಸತ್ತರೂ ಊರು ಬಿಡದೆ ಊರು ದೇವತೆ ಮಹಿಮೆಯಂತೆ ನಂಬಿ ಇದ್ದು ಮತ್ತೂ ಹೆಚ್ಚಾಗಲೂ ಹೇಳದೆ ಕೇಳದೆ ತಾವು ತಾವೇ ಊರನ್ನು ಬಿಡುವವರಾದರು. —ಮಂಡ್ಯದ ತಾಲ್ಲೋಕ್ ಅನೇಕ ಗ್ರಾಮಗಳಲ್ಲಿ ಸರ್ಕಾರದವರು ಸ್ಕೂಲುಗಳನ್ನು ಸ್ಥಾಪಿಸಿ ದ್ದರೂ ಗ್ರಾಮಗಳಲ್ಲಿ ವಿದ್ಯಾಭಿಮಾನವು ಬಹುಮಟ್ಟಿಗೆ ಕಡಮೆಯಾದ್ದರಿಂದ ಹಾಳಾಗುತ್ತಿವೆ ಸರ್ಕಾರದವರು ಆಯಾ ಸ್ಥಳಗಳಲ್ಲೇ ಬಲಾತ್ಕಾರ ವಿದ್ಯೆ ಯ ಏರ್ಪಾಡು ಮಾಡಿದರೆ ಸಾರ್ಥಕವಾದೀತು —ಸಂತೆಯಲ್ಲಿ ತೂಕ, ಅಳತೆಗಳು ಬಹಳ ಕಡಮೆ ಇರುವುದರಿಂದ ಅಮಲ್ದಾರ್ರವರು ಸಗಡಿ ಅಳತೆ, ತೂಕಗಳನ್ನು ಎಲ್ಲರೂ ಕೊಂಡುಕೊಳ್ಳುವಂತೆ ಏರ್ಪಡಿಸಿ ಕೀರ್ತಿ ಪಡೆಯುವರೆಂದು ಹಾರೈಸುತ್ತೇವೆ.—ಈ ಊರಲ್ಲಿ ಸುಮಾರು 20-30 ಮನೆಗಳಲ್ಲಿ ಬತ್ತಕುಟ್ಟಿ ದ ಮೂಲಕ ಅನೇಕ ವಿಧವೆಗಳೂ, ಬಡವರೂ ಜೀವಿಸುತ್ತಿದಾರೆ. ಮ್ಯುನಿಸಿ ಪಾಲಿಟಿಯವರು ಅವರ ಮೇಲೆ ಹಾಕಿರುವ ಕಂದಾಯವನ್ನು ವಜಾಮಾಡಿ, ಇಳಿಸಿ ಕಡಮೆಮಾಡಿದರೆ ಎಷ್ಟೋ ಪುಣ್ಯ ಉಂಟಾಗುತ್ತದೆ —ಬಹುದಿನಗಳಿಂದ ಪೇಟೆಯು ಈಗಿನ ದೂರವಾಗಿರಲೆಂದು ಎಲ್ಲರೂ ಹಾರೈಸುತ್ತಾ ಇದ್ದರು. ಈಗ ಸ್ಥಿರವಾಗಿದ್ದ ಆ ಅಂಗಡಿಯು ಮತ್ತೂ ಬೇರೂರಿ ಸ್ಥಿರಪಡಲು ಮ್ಯುನಿಸಿ ಪಾಲಿಟಿಯವರು ಹೊಸ ಕಟ್ಟಡಕ್ಕೆ ಲೈಸೆನ್ಸ್ ಕೊಟ್ಟಿದ್ದನ್ನು ನೋಡಿದರೆ ಆಶ್ಚರ್ಯವಾಗುತ್ತದೆ —ವೈಸ್ರಾಯ್ ಪ್ರಭುಗಳು ಬಂದು ಹೋದದ್ದರ ದೆಸೆ ಯಿಂದ ಮದ್ದೂರು ಲಾಗಾಯ್ತು ಫ್ರೆಂಚರಾಕ್ಸ್‌ವರೆಗೂ ರೈಲ್‌ರಸ್ತೆಯ ಉದ್ದಕ್ಕೂ ಪೊಲೀಸ್ ಏರ್ಪಾಡುಗಳು ಬಹು ಕಟ್ಟುನಿಟ್ಟಾಗಿದ್ದವು. ಆಯಾ ಗ್ರಾಮಗಳವರು ರಾತ್ರಿ ಕಾಲಗಳಲ್ಲಿ ದೀಪಗಳನ್ನೂ, ಪಂಜುಗಳನ್ನೂ ಹಿಡಿದಿದ್ದರಿಂದ ನೋಡುವು ದಕ್ಕೆ ತುಂಬಾ ಮನೋಹರವಾಗಿತ್ತು.

ಚಾಮರಾಜನಗರ —ಕಳೆದ ತಿಂಗಳು ಬಿದ್ದ ಅಪೂರ್ವವಾದ ಮಳೆಯಿಂದ ಪೈರುಗಳೆಲ್ಲಾ ಫಸಲುಜ್ಜೀವಿತವಾಗಿ ಚೆನ್ನಾಗಿವೆ ಭತ್ತ, ಕಬ್ಬು, ಹುರಳಿ ಬೆಳೆ ಗಳು ಚೆನ್ನಾಗಿದ್ದು ಕೈಗೂಡುವದರಲ್ಲಿ ಅಭ್ಯಂತರವಿಲ್ಲ —ಎಂಟು ತಿಂಗಳಿಂದ ಊರ ಹೊರಗೆ ಇದ್ದು ಬೇಸತ್ತು ಬೆಂಡಾಗಿರುವ ಜನರು ಊರಿಗೆ ಬರಲು ಪ್ಲೇಗ್ ರೋಗವು ಅಲ್ಲಲ್ಲಿದ್ದು ದಿನಕ್ಕೆ ಒಂದೆರಡು ಮರಣಗಳಾಗುತ್ತಿರುವದರಿಂದ ಗಾಬ ರಿಯಾಗಿದೆ. ಇಲಿಗಳಂತು ಸಾಯುತ್ತಲೇ ಇವೆ.—ಈ ತಿಂಗಳು ಸುಮಾರು 27-28 ಕ್ಕೆ ನಮ್ಮ ಯುವರಾಜರವರ ಸವಾರಿಯು ಈ ಪ್ರಾಂತ್ಯ ಶಿಕಾರಿಗೆ ದಯ ಮಾಡಿಸುವದಾಗಿ ವರ್ತಮಾನವಿದೆ. ದೂರದೇಶ ಸಂಚಾರಮಾಡಿ ಅನುಭವವನ್ನು ಪಡೆದು ನಮ್ಮ ಮಹಾರಾಜರವರ ಸಹಾಯಕರಾಗಿರುವ ಇವರನ್ನು ನೋಡಲು ಜನರೆಲ್ಲರೂ ಕುತೂಹಲಿಗಳಾಗಿದಾರೆ —ಊರಿನ ಜನರಿಗೆ ಉಪಯೋಗವಾಗಿರುವ ದೊಡ್ಡ ಕೊಳದಲ್ಲಿ ಅನೇಕರು ಬಹಿರಂಗವಾಗಿ ಹೇಸಿಕೆ ಮಾಡುತ್ತಾರೆ. ಕಾವಲು ಗಾರರ ಸಹಾ ಕಡಮೆ. ಸ್ಥಳಾಧಿಕಾರಿಗಳು ಗಮನಕೊಟ್ಟು ಕಾವಲನ್ನು ಕ್ರಮಪಡಿ ಸಬೇಕು.—ಈಗಿರುವ ಡಾಕ್ಟರು ಬಂದು 4-5 ವರುಷಗಳಾಗಿ ಎಲ್ಲರಲ್ಲೂ ಮತ್ತು ಮುಖ್ಯ ಸರ್ಕಾರಿ ನೌಕರರಲ್ಲಿ ಪ್ರೀತಿ ವಿಶ್ವಾಸವನ್ನು ಹೊಂದಿದಾರೆ. ಇವರು ಸ್ಥಳವಂದಿಗರಂತೆ ಇದ್ದು ಲೇವಾದೇವಿಗಳನ್ನು ಮಾಡಿ ಹಳ್ಳಿ ಜನರಿಗೆ ಉಪ ಕಾರಮಾಡುತ್ತಿದಾರೆ. ಸ್ವಂತವಾಗಿ ಮನೆ ಕಟ್ಟಿಸಲು ತಕ್ಕ ಸಲಕರಣೆಗಳಿಗಾಗಿ ಊರಲ್ಲೆಲ್ಲಾ ತಿರುಗುತ್ತಾ ಈ ಸಂದರ್ಭದಲ್ಲಿ ಜನಗಳ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತಾರೆ.—ಪ್ಲೇಗಿನ ದೆಸೆಯಿಂದ 7-8 ತಿಂಗಳು ಎ ವಿ ಸ್ಕೂಲು ಮುಚ್ಚಲ್ಪಟ್ಟಿದ್ದರಿಂದ ಹುಡುಗರಿಗೆ ವಿದ್ಯಾ ಕೊರತೆ ಬಹಳವಾಯಿತು ಕೆಲವರು ಸ್ಕೂಲು ಮಾಡಿಸಬೇಕೆಂದು ಪ್ರಾರ್ಥಿಸಿ ಇಲಾಖಾಧಿಕಾರಿಗಳಿಗೆ ಬರೆದುಕೊಂಡಿರಲು ಈಗ ಬೇರೊಂದು ಕಟ್ಟಡದಲ್ಲಿ ಮಾಡುತ್ತಿದಾರೆ. ಖಾಯಂ ಹೆಡ್ ಮಾಸ್ಟರು ಕೋಲಾರದ ಹೈ ಸ್ಕೂಲಿಗೆ ವರ್ಗವಾಗಿರುವದರಿಂದ ಅವರ ಬದಲಿ ಇಲ್ಲಿನ ಅ॥ ಮಾಸ್ಟರು ವೆಂಕಟರಮಣಯ್ಯನವರನ್ನು ಹಂಗಾಮಿಯಾಗಿ ನೇಮಿಸಿದಾರೆ. ಇವ ರು ಚಟುವಟಿಕೆಯಾಗಿಯೂ ಮುತುವರ್ಜಿಯಿಂದಲೂ ಕೆಲಸಮಾಡುತ್ತಾರೆ.

ಹಾಸನ —ಇಲ್ಲಿರುವ ಒಬ್ಬ ಸರ್ಕಾರಿ ನೌಕರನ ಪತ್ನಿಯು ತನ್ನ ಅತ್ತೆ ಯೂ ತನ್ನ ಪತಿಯೂ ಸೇರಿ ತನ್ನನ್ನು ಹಿಂಸೆಮಾಡುತ್ತಿರುವುದಾಗಿಯೂ, ಮೈಕೈ ಗೆಲ್ಲಾ ಕ್ರೂರತರವಾಗಿ ಬರೆಗಳನ್ನು ಹಾಕಿದಾರೆಂತಲೂ, ಹೀಗೆ ಸಂಕಟಪಡುತ್ತಿ ರುವ ತನ್ನನ್ನು ಸರ್ಕಾರದವರು ಬಂದು ಪರೀಕ್ಷೆ ಮಾಡಿಸಿದರೆ ತನ್ನ ಸಂಕಟವು ಪ್ರತ್ಯಕ್ಷವಾಗುವದೆಂದೂ ಅಮಲ್ದಾರಿಗೂ, ಪೊಲೀಸ್ ಸೂಪರೆಂಟರಿಗೂ ಅರ್ಜಿ ಬರೆದುಕೊಂಡಳೆಂದೂ, ಪೊಲೀಸ್ ಅಧಿಕಾರಿಗಳು ಹೋಗಿ ವಿಚಾರಣೆಮಾಡಿದ ರೆಂದೂ, ಈಚೆಗೆ ಆ ಪತಿಯು ಪತ್ನಿಯನ್ನು ತೌರುಮನೆಗೆ ಕರೆದುಕೊಂಡುಹೋಗಿ ಬಿಟ್ಟುಬಂದನೆಂದೂ ವರ್ತಮಾನವಿದೆ —ಇಲ್ಲಿನ ವೆಸ್ಲಿಯನ್ ಮಿಷನ್ ಆಸ್ಪತ್ರೆ ಯಲ್ಲಿರುವ ಪ್ರಖ್ಯಾತೆಯರಾದ ಲೇಡಿ ಡಾಕ್ಟರ್ ಮಿಸ್ ಲೋವಮ್ಮನವರು ಈಗ್ಗೆ ಒಂದು ತಿಂಗಳಿನ ಹಿಂದೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡುತ್ತಿದ್ದಾಗ ಅವರ ಮೇಜಿನ ಮೇಲಿದ್ದ ಬಹು ಬೆಲೆಯುಳ್ಳ ಮತ್ತು ವೈದ್ಯಕಾರ್ಯಗಳಿಗೆ ಬಹು ಉಪಯೋಗ ಕರವಾದ ಚಿನ್ನದ ಕೈಗಡಿಯಾರವನ್ನು ಯಾರೋ ಅಪಹರಿಸಿದರು. ತಕ್ಷಣ ಅವರು ಪೊಲೀಸಿಗೆ ತಿಳಿಸಿದರೂ ಇದುವರೆಗೂ ಯಾವ ಫಲವೂ ಕಂಡುಬಂದಿಲ್ಲ. ಈ ಆಸ್ಪ ತ್ರೆಗೆ ಇಂಗ್ಲಾಂಡಿನಲ್ಲಿರುವ ಘನಯುತರಾದ ಡಾಕ್ಟರವರೊಬ್ಬರು ಸ್ವಯಂ ಪರೀ ಕ್ಷಿಸಿ, ವಿಶೇಷ ಪ್ರಯೋಜನಕಾರಿಗಳಾದ ಹೆರಿಗೆ ಮತ್ತು ಇತರ ಅಪಾಯಕರಗ ಳಾದ ಖಾಯಿಲೆಗಳಿಗೆ ಒದಗುವ ಆಯುಧೋಪಕರಣಗಳನ್ನು ಆರಿಸಿ ಕಳುಹಿಸಿ ಕೊಟ್ಟಿದಾರೆ. ಈಗ ಈ ಆಸ್ಪತ್ರೆಯಲ್ಲಿ ಸಾಕಾದಷ್ಟು ವಾರ್ಡುಗಳೂ ಕಟ್ಟಲ್ಪಟ್ಟು, ಸಿದ್ಧವಾಗಿವೆ ಔಷಧೋಪಚಾರಗಳೂ, ಆಪರೇಷನ್ ಮೊದಲಾದ ಶಸ್ತ್ರ ಚಿಕಿತ್ಸೆ ಗಳೂ ಬಹು ಆಸಕ್ತಿಯೊಡನೆ ನಡೆಯುತ್ತಲಿವೆ.—ಇಲ್ಲಿನ ಮಿಷನ್ ಬಾಲಿಕಾ ಅನಾಥಾಲಯದಿಂದ ಕಳೆದ ದಸರಾ ಪ್ರದರ್ಶನಕ್ಕೆ ಮೈಸೂರಿಗೆ ಕಳುಹಿಸಲ್ಪಟ್ಟಿದ್ದ ಹೊಲಿಗೆ ಹೆಣಿಗೆ ಸಾಮಾನುಗಳು ಮೂರಕ್ಕೂ ಮೂರು ಬಹುಮಾನಗಳು ಬಂದಿವೆ. ಮಿಸ್ ಬ್ರೈವೆಟ್ ಅಮ್ಮನವರು ಈ ಕಾರ್ಯವನ್ನು ಬಹು ಆಸಕ್ತಿಯಿಂದ ನಡಿ ಸುತ್ತಾ ಬಂದಿರುವುದಕ್ಕೆ ಈ ಉತ್ಕೃಷ್ಟ ಬಹುಮಾನಗಳೇ ದೃಷ್ಟಾಂತವಾಗಿವೆ — ಮಳೆ ನಿಂತುಹೋಗಿದೆ. ಬಹುಮಟ್ಟಿಗೆ ಚೆನ್ನಾಗಿದ್ದ ಪೈರುಪಚ್ಚೆಗಳು ಒಣಗುತ್ತಾ ಬಂದಿವೆ. ಕೆರೆಕಟ್ಟೆಗಳೆಲ್ಲವೂ ಬತ್ತಿಹೋಗುತ್ತಲಿವೆ. ಸರ್ವತ್ರ ಕ್ಷಾಮಾನುಭವ ವನ್ನು ಸೂಚಿಸುತ್ತಲಿವೆ ಇದರ ಜೊತೆಗೆ ಪ್ಲೇಗಿನ ಹಾವಳಿ ಬೇರೆ. ಇಲ್ಲಿನ ಪಟೇಲರು ಮೊದಲೇ ಪಟ್ಟಿಗೆ ಹೋಗಿದ್ದರೂ ಆ ಪಟ್ಟಿನಲ್ಲಿಯೂ ಹಾನಿ ತಪ್ಪ ಲಿಲ್ಲ. ಪುನಹ ಇನ್ನೊಂದು ಷೆಡ್ ಕಟ್ಟಿ ಅಲ್ಲಿಗೆ ವಾಸ ಹೋದರೂ, ಈಗ ಅಲ್ಲಿ ಯೂ ಒಬ್ಬ ಮುಸ್ಸಿಸ್ಸನಿಗೇ ಪ್ಲೇಗ್ ತಗಲಿದೆ.

ಕಡೂರು —ಕಡೂರಿನಲ್ಲಿರುವ ಟಾಡಿ ಕಂಟ್ರಾಕ್ಟುದಾರ್ ಮ॥ ತಿಮ್ಮೇಗೌಡ ರವರು ಕಡೂರು ಟವನ್ನಲ್ಲಿ ನೂತನವಾಗಿ 15,000 ರೂಪಾಯಿ ಮುಟ್ಟಿಸಿ ಅಂದವಾದ ಬಂಗ್ಲೆಯನ್ನು ಕಟ್ಟಿಸಿರುವುದು ಕಡೂರು ಗ್ರಾಮಕ್ಕೆಲ್ಲಾ ಬಹಳ ಅಲಂಕಾರವಾಗಿದೆ. ಇವರು ಇದೇ ಕಾರ್ತೀಕ ಶುದ್ಧ ದ್ವಾದಶಿ ದಿನ ಶಾಸ್ತ್ರೋಕ್ತ ವಾಗಿ ಗೃಹಪ್ರವೇಶಮಾಡಿದರು ಗೃಹಪ್ರವೇಶಮಾಡುವ ಕಾಲದಲ್ಲಿ ಕಡೂರು ಮತ್ತು ಇತರ ಸ್ಥಳಗಳಲ್ಲಿರುವ ಬ್ರಾಹ್ಮಣರನ್ನೂ, ಇತರ ವರ್ಣಾಶ್ರಮದವ ರನ್ನೂ, ಅವರ ಕುಟುಂಬ ಜನಗಳನ್ನೆಲ್ಲಾ ಆದರಪೂರ್ವಕವಾಗಿ ಕರೆಸಿ ಪ್ರತ್ಯೇಕ ಪ್ರತ್ಯೇಕ ಸಂತರ್ಪಣೆಗಳನ್ನು ಬಹಳ ವಿಜೃಂಭಣೆಯಿಂದ ನಡಿಸಿದರು ಬಂದ ಅನೇಕ ಅತಿಥಿಗಳನ್ನು ಬಹಳ ಆದರಪೂರ್ವಕವಾಗಿ ಸತ್ಕಾರಮಾಡಿರುತ್ತಾರೆ ಇದೇ ಕಾರ್ತೀಕ ಶುದ್ಧ ದ್ವಾದಶಿ 12 ಲಾಗಾಯ್ತು ಬಹುಳ ಪಂಚಮಿ ವರಿವಿಗೂ ಇವರು ಏಕಪ್ರಕಾರ ಪ್ರತಿದಿವಸವೂ ಹರಿಕಥೆ, ಸಂಗೀತ ಮುಂತಾದ್ದನ್ನು ನೂತನ ಗೃಹದಲ್ಲಿ ಮಾಡಿಸುತ್ತಿರುವುದಲ್ಲದೆ ಇವರ ಕುಲದೇವರ ಉತ್ಸವವನ್ನು ಮೇಳ ತಾಳ ಬಾಜಾ ಬಿರಸು ಇತ್ಯಾದಿ ಮೆರವಣಿಗೆ ವೈಭವಗಳಿಂದ ಮಾಡಿಸುತ್ತಾ ಅನೇಕ ಜನ ಬ್ರಾಹ್ಮಣರಿಗೂ ಇತರ ವರ್ಣಾಶ್ರಮದವರಿಗೂ 3,000 ರೂಪಾಯಿ ತನಕ ಅನ್ನ ದಾನ, ವಸ್ತ್ರದಾನ, ಹಿರಣ್ಯದಾನಾದಿಗಳಿಂದ ಸಂತೃಪ್ತಿಪಡಿಸಿರುವುದು ಚಿರಕಾಲ ಸ್ಮರಣೀಯವಾಗಿದೆ ಈ ನೂತನ ಗೃಹವನ್ನು ಕಟ್ಟಿರುವ ರಾ॥ ಮುನಿಸ್ವಾಮಿ ಮೊದಲಿಯಾರ್ರಿಗೂ, ಇವರ ಬಳಿ ಇರುವ ಮೇಸ್ತ್ರಿಗಳಿಗೂ ಯಥೋಚಿತವಾಗಿ 500 ರೂಪಾಯಿ ತನಕ ವಸ್ತ್ರ ಮತ್ತು ಸುವರ್ಣಾಭರಣಗಳನ್ನು ಬಹುಮಾನಮಾಡಿ ರುತ್ತಾರಲ್ಲದೆ ರಾಯದುರ್ಗದ ತಾಲ್ಲೂಕ್ ಕಣೆಕಲ್‌ನಿಂದ ಬಂದಿದ್ದ ಪಂಡಿತ ರಿಗೂ, ಮಹಮದೀಯ ಜ್ಯೋತಿಷ್ಯಗಾರರಿಗೂ ತುಂಬಾ ಸನ್ಮಾನಮಾಡಿ ಸಂತುಷ್ಟಿ ಪಡಿಸಿರುತ್ತಾರೆ ನೂತನವಾಗಿ ಗೃಹಪ್ರವೇಶಮಾಡುವ ಕಾಲದಲ್ಲಿ ಈ ರೀತಿ ಸುವ್ರಯಮಾಡಿ ಧರ್ಮದಿಂದ ಅನೇಕ ಜನಗಳನ್ನು ಸಂತೃಪ್ತಿಪಡಿಸಿರುವುದು ಬಹಳ ಅಪೂರ್ವವಾಗಿದೆ

ಬೆಂಗಳೂರು —ಬೆಂಗಳೂರು ಚಾಮರಾಜೇಂದ್ರ ಪೇಟೆಯಲ್ಲಿರುವ ವೆಸ್ಲಿ ಯನ್ ಮಿಷನ್ ಬಾಲಿಕಾ ಪಾಠಶಾಲೆಗೆ ಕಳೆದ 14 ನೇ ತಾ. ಶುಕ್ರವಾರ ಇಂಗ್ಲೆಂ ಡಿನಿಂದ ಇಂಡಿಯಾಕ್ಕೆ ಕಾರಣಾಂತರ ದಯಮಾಡಿಸಿದ್ದ ಮಿಸೆಸ್ ವಿಲ್ಲಿಯಂಸ್ ಯವರೂ, ಈಕೆಯ ಪುತ್ರಿಯಾದ ಎ. ವಿಲ್ಲಿಯಂಸ್‌ಯವರೂ ಲೇಡಿ ಸೂ॥ ರಾದ ಮಿಸ್ ಎ ವಿಲ್ಲಿಯಂಸ್‌ಯವರ ಮುಖಾಂತರ ಕರೆಸಲ್ಪಟ್ಟಿದ್ದರು ಸ್ಕೂಲಿನ ಉಪಾಧ್ಯಾಯರುಗಳು ಆ ವೇಳೆಗೆ ಪಾಠಶಾಲೆಯ ಮುಂಭಾಗದಲ್ಲಿ ವಿಶೇಷವಾಗಿ ಅಲಂಕಾರಮಾಡಿಸಿ, ರಸ್ತೆಯಿಂದ ಸ್ಕೂಲಿನ ಒಳಭಾಗದವರೆಗೆ ವಿಚಿತ್ರವಾದ ರಂಗ ವಲ್ಲಿಗಳಿಂದ ಅಲಂಕರಿಸಿ, ಒಳಭಾಗದಲ್ಲಿ ಬಾಗಿಲಿನಿಂದ ಅವರಿಗೋಸ್ಕರ ಏರ್ಪಡಿ ಸಿದ್ದ ಪೀಠಗಳವರೆಗೂ ಪುಷ್ಪಗಳನ್ನು ಚೆಲ್ಲಲು ಸಿದ್ಧಪಡಿಸಿದ್ದರು ಆ ದೊರೆಸಾನಿ ಗಳು ಸಾಯಂಕಾಲ 4 ಗಂಟೆಗೆ ಸ್ಕೂಲಿಗೆ ಚಿತ್ತೈಸಿದರು. ತಕ್ಷಣ ಉಪಾಧ್ಯಾಯ ರುಗಳೆಲ್ಲಾ ಸೇರಿ ಲೇಡಿ ಸೂ॥ರ ಸಂಗಡ ಸುಸ್ವಾಗತವನ್ನು ಬಯಸಿ, ಸ್ಕೂಲಿನ ಒಳಭಾಗಕ್ಕೆ ಕರೆದುಕೊಂಡು ಬರುವ ವೇಳೆಗೆ ಸರಿಯಾಗಿ ಕೆಲವು ಬಾಲಕಿಯರು ದಿವ್ಯವಾದ ವಸ್ತ್ರಾಭರಣಗಳಿಂದಲಂಕೃತರಾಗಿ ಜಯಧ್ವನಿಯೊಡನೆ ದೊರೆಸಾನಿಗಳ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದನಂತರ ಅವರಿಗೋಸ್ಕರ ಏರ್ಪಡಿಸಿದ್ದ ಪೀಠಗಳ ಮೇಲೆ ಕುಳಿತುಕೊಂಡರು. ಬಳಿಕ ಬೇರೆ ಕೆಲವರು ಸುಸ್ವಾಗತ ಸೂಚಕವಾದ ದಿವ್ಯ ಮಂಗಳಗಳನ್ನು ಪುಷ್ಪಗಳನ್ನು ಎರಚುತ್ತ ಹಾಡಿದನಂತರ ಬಾಲಕಿಯರಿಂದಲೇ ವಿಚಿತ್ರವಾಗಿಯೂ, ವಿಧವಿಧವಾಗಿಯೂ ತಯಾರ್‌ಮಾಡಲ್ಪ ಟ್ಟಿದ್ದ ಪುರಿ, ಹುರಿಗಡಲೆ, ಅರಳು ಇವುಗಳ ದಿವ್ಯವಾದ ಹಾರಗಳು ಒಪ್ಪಿಸಲ್ಪ ಟ್ಟವು. ಆ ಮೇಲೆ ದೊರೆಸಾನಿಗಳು "ನೇಚರ್‌ಸ್ಟಡಿ" ಪಾಠಗಳನ್ನೂ, "ಸ್ಲಾಯ್ಡ್" ಕೆಲಸಗಳನ್ನೂ, "ಪೇಪರ್ ಫೋಲ್ಡಿಂಗ್" ಕೆಲಸಗಳನ್ನೂ, "ಕ್ಲೇ ಮಾಡಲಿಂಗ್" (ಜೇಡಿ ಮಣ್ಣಿನ) ಕೆಲಸಗಳನ್ನೂ ನೋಡಿ ಹರ್ಷಪಟ್ಟು, ಸ್ಕೂಲಿನ ಏರ್ಪಾಡು ಗಳನ್ನೂ, ಅಭಿವೃದ್ಧಿಯನ್ನೂ ನೋಡಿ ಸಂತೋಷಪಟ್ಟು ಹೇಳಿದ್ದೇನೆಂದರೆ— "ಲೇಡಿ ಸೂ॥ ರವರೇ, ಉಪಾಧ್ಯಾಯಿನಿಯರುಗಳೇ, ಈ ದಿನ ನಾನು ನಿಮ್ಮ ಪಾಠಶಾಲೆಗೆ ಬಂದು ನಿಮ್ಮಗಳಿಂದ ಆದರಿಸಲ್ಪಡುವ ಭಾಗ್ಯವು ನಮಗೆ ಲಭಿಸಿದ್ದಕ್ಕಾಗಿ ಬಹಳ ಸಂತೋಷಪಡುತ್ತೇವೆ ನಿಮ್ಮಗಳ ಐಕಮತ್ಯವನ್ನು ನೋಡಿ, ಇದೇ ಐಕ ಮತ್ಯವು ನಿಮ್ಮಲ್ಲಿ ಸದಾ ಬೇರೂರಿರಲೆಂದು ದೇವರಲ್ಲಿ ಪ್ರಾರ್ಥಿಸುತ್ತೇವೆ ಈಗ ಬಾಲಕಿಯರಿಂದ ನಮಗೊಪ್ಪಿಸಲ್ಪಟ್ಟ ಈ ದಿವ್ಯವಾದ ಹಾರಗಳು ಅವರ ಬುದ್ಧಿಕುಶಲತೆಯನ್ನು ಪ್ರದರ್ಶನಪಡಿಸುವುದರಲ್ಲಿ ಸಂಶಯವಿಲ್ಲ. ಇವುಗಳನ್ನು ನಾವು ಅತ್ಯಾದರದಿಂದ ಸ್ವೀಕರಿಸಿರುವುದಲ್ಲದೆ ಇಂಗ್ಲೆಂಡಿಗೆ ತೆಗೆದುಕೊಂಡು ಹೋಗಿ ನಮ್ಮ ಸ್ನೇಹಿತರುಗಳಿಗೆಲ್ಲಾ ತೋರಿಸಿ ಅವರೊಡನೆ ಹರ್ಷಿಸುತ್ತೇವೆ. ಇದೇ ರೀತಿ ಇಂಡಿಯಾ ದೇಶವು ಇನ್ನೂ ಉಚ್ಛ್ರಾಯಸ್ಥಿತಿಗೆ ಬಂದು ನಮ್ಮ ಇಂಗ್ಲೆಂಡ್ ದೇಶಕ್ಕೆ ಸರಿಸಮವಾಗಲೆಂದು ಹಾರೈಸುತ್ತೇವೆ ನಮ್ಮ ಪ್ರೀತಿಯನ್ನು ಈ ಮಕ್ಕಳಿಗೆಲ್ಲಾ ದಯವಿಟ್ಟು ತಿಳಿಸುವುದು. ಈ ರೀತಿಯಾಗಿ ಭಾಷಿಸಿದನಂತರ ಉಪಾಧ್ಯಾಯರುಗಳಿಂದ ಒಪ್ಪಿಸಲ್ಪಟ್ಟ ದಿವ್ಯವಾದ ಹಾರ, ಕುದಾಯಿಗಳನ್ನು ಸ್ವೀಕರಿಸಿದರು. ಪುನಹ ಬಾಲಕಿಯರು ಅವರಿಗೆ ಭಗವಂತನು ಆಯುರಾರೋ ಗ್ಯಾದಿಗಳನ್ನು ಕೊಟ್ಟು ಕಾಪಾಡಲಿ ಎಂಬ ಗೀತವನ್ನು ಹಾಡಿದನಂತರ ಆ ದೊರೆ ಸಾನಿಗಳು ಅತ್ಯಂತ ಉತ್ಸಾಹಿಗಳಾಗಿ ಸ್ವಸ್ಥಳಗಳಿಗೆ ತೆರಳಿದರು.

ಕಾವೇರಿ ರಿಜರ್ವಾಯರ್.—ನಮ್ಮ ಘನವನ್ನು ಹೊಂದಿದ ವೈಸ್ರಾಯಿ ಪ್ರಭುಗಳವರ ಸವಾರಿಯು ದಯಮಾಡಿಸುವ ಉದ್ದಿಶ್ಯ ಇಲ್ಲಿನ ಪಾಯಾ ಮುಂಭಾಗದಲ್ಲೂ ಮತ್ತು ಮೆಕ್ಯಾನಿಕಲ್ ಆಫೀಸು ಮುಂಭಾಗದ ದೊಡ್ಡ ಮೈದಾನದಲ್ಲೂ ಇದ್ದ ಕಟರಾಗಳೆಲ್ಲವೂ ಪಾಕು ಮಾಡಿಸುತ್ತಾ, ಆಫೀಸು ಬಂಗ್ಲೆದ ಮುಂಭಾಗದ ಕ್ರಾಸಿಂಗು ರೋಡಿನಲ್ಲಿ ಸುಂದರವಾದ ಒಂದು ಚಪ್ಪರ ಸಹಾ ಹಾಕಲ್ಪಟ್ಟಿತ್ತು. ಮತ್ತು ಪೋಸ್ಟ್ ಆಫೀಸ್ ಮೇಲ್ಭಾಗ ದಲ್ಲಿ ಯೂನಿಯನ್ ಜಾಕ್ ಎಂಬ ಇಂಗ್ಲಿಷ್ ಬಾವುಟವೂ ಸಹಾ ಹಾಕ ಲ್ಪಟ್ಟಿತ್ತು. ತಾ. 18 ನೇ ಮಂಗಳವಾರ ನಮ್ಮ ವೈಸ್ರಾಯಿ ಪ್ರಭುಗಳಾದ ಲಾರ್ಡ್ ಹಾರ್ಡಿಂಗ್ ಪ್ರಭುಗಳವರೂ, ಲೇಡಿ ಹಾರ್ಡಿಂಗ್‌ರವರೂ ಮತ್ತು ನಮ್ಮ ಶ್ರೀಮನ್ ಮಹಾರಾಜರವರೂ ಯುವರಾಜರವರೂ ಸಹಾ ತಮ್ಮ ಪರಿವಾರ ದೊಡನೆ ಸಾಯಂಕಾಲ 5 ಘಂಟೆಗೆ ಸರಿಯಾಗಿ ದಯಮಾಡಿಸಿದರು. ಇವರಿಗೆ ಸುಸ್ವಾಗತವನ್ನು ಬಯಸುವ ಉದ್ದಿಶ್ಯ ಚೀಫ್ ಇಂಜನಿಯರ್ ಮ॥ ಕಸ್ತೂರ್ ಶ್ರೀನಿವಾಸರಾಯರವರೂ, ಸೂಪರಿಂಟೆಂಡಿಂಗ್ ಇಂಜನಿಯರ್ ಮ॥ ಬಿ ಸುಬ್ಬಾ ಯರವರೂ, ಎಗ್ಜಿಕ್ಯುಟಿವ್ ಇಂಜನಿಯರ್ ಮ॥ ಬಿ. ಬಿ. ಗರುಡಾಚಾರ್ರವರೂ ಮುಂತಾಗಿ ಇನ್ನೂ ಅನೇಕ ಜನ ನೌಕರರೆಲ್ಲರೂ ಪಾಯದ ಬಳಿ ಕಾದಿದ್ದು ಸುಸ್ವಾಗತವನ್ನು ಬಯಸಿದರು ಅನಂತರ ಪ್ರಭುಗಳವರು ಮೊದಲೇ ತಯಾರು ಮಾಡಿದ್ದ ಪ್ಲಾನು ಮುಂತಾದ್ದನ್ನು ಪರಾಂಬರಿಸಿ (ನಾರ್ತ್ ಬ್ಯಾಂಕ್ ಡ್ಯಾಮ್ ಸೈಟಿಗೆ) ಅಂದರೆ ನದಿಯಿಂದ ಆಚೆ ಭಾಗಕ್ಕೆ ವೈಸ್ರಾಯಿಯವರ ಸವಾರಿಯು ದಯಮಾಡಿಸಲು, ಅ॥ ಇಂಜನಿಯರ್ ಮ॥ ಸ್ಕಾಟ್‌ವೆಲ್ ಸಾಹೇಬರ ಜಾಜನಲ್ಲಿ ಸುಂದರವಾಗಿ ಮೊದಲೇ ತಯಾರುಮಾಡಿದ್ದ ಕೂಲಿ ಬಾರ್ಜು ಎಂಬ ದೋಣಿಯ ಮುಖಾಂತರ ಆಚೆ ಭಾಗಕ್ಕೆ ದಯಮಾಡಿಸಿ, ಅಲ್ಲಿನ ಪಾಯಾ ಮುಂ ತಾದ್ದನ್ನು ಪರಾಂಬರಿಸಿ ಹಿಂತಿರುಗಿ ಅದೇ ಕೂಲಿ ಬಾರ್ಜು ಮುಖಾಂತರ ಸೌತು ಬ್ಯಾಂಕಿಗೆ ದಯಮಾಡಿಸಿ ಇಲ್ಲಿ ಪಾಯಾದಲ್ಲಿ ನಡೆದಿರುವ ಕೆಲಸಗಳನ್ನೆಲ್ಲಾ ಪರಾಂಬರಿಸಿಕೊಂಡು, ಈಗ್ಗೆ ಒಂದು ಶತಮಾನದ ಹಿಂದೆ ನವಾಬ್ ಟೀಪೂಸುಲ್ತಾ ನರ ಕಾಲದಲ್ಲಿ ಸ್ಥಾಪಿಸಿರುವ ಶಾಸನದ ಇಂಗ್ಲಿಷ್ ಭಾಷಾಂತರವನ್ನು ಸಹಾ ಪರಾಂಬರಿಸಿ ಸಂತೋಷಪಟ್ಟುಕೊಂಡು ವಾಪಸು ದಯಮಾಡಿಸುವಾಗ್ಗೆ ಸುಂದರ ವಾದ ಹಾರಾ ತುರಾಯಿಗಳನ್ನು ಸ್ವೀಕರಿಸಿ ಸಿದ್ಧವಾಗಿ ನಿಂತಿದ್ದ ಮೋಟರುಗಳ ನ್ನೇರಿ ಮೈಸೂರಿಗೆ ಸುಖವಾಗಿ ದಯಮಾಡಿಸಿದರು ಸ್ಪೆಷಲ್ಲಾಗಿ ಏರ್ಪಡಿಸಿದ್ದ ಪೊಲೀಸ್ ಸಿಬ್ಬಂದಿಯು ಮಾತ್ರ ಬಹು ತೃಪ್ತಿಕರವಾಗಿತ್ತು. ಮತ್ತು ಈ ಪೊಲೀಸ್ ಸಿಬ್ಬಂದಿಯ ಊಟ ಮುಂತಾದ್ದರ ವಿಷಯದಲ್ಲಿ ಕೃಷ್ಣರಾಜಪೇಟೆ ತಾಲ್ಲೂಕು ಚಿಕ್ಕಾಯರಹಳ್ಳಿ ಗ್ರಾಮಸ್ಥರು ತಮ್ಮ ಸ್ವಂತಖರ್ಚಿನಿಂದ ಸುಮಾರು 200 ಜನ ಪೊಲೀಸಿನವರಿಗೆ ಸುಭೋಜನದ ಏರ್ಪಾಡು ಮಾಡಿದ್ದು ತುಂಬಾ ಸ್ತೋತ್ರಾರ್ಹ ವಾಗಿರುತ್ತದೆ. ಅಲ್ಲದೆ ಇಲ್ಲಿಯ ಸ್ಕೂಲು ಬಾಲಕ, ಬಾಲಕಿಯರುಗಳು ಪ್ರಭು ಗಳವರ ಸುಸ್ವಾಗತವನ್ನು ಬಯಸುವದಕ್ಕೆ ಏರ್ಪಾಡು ಮಾಡಿದ್ದರೆ ಚೆನ್ನಾ ಗಿತ್ತು ಆ ರೀತಿ ಯಾಕೆ ಮಾಡಲಿಲ್ಲವೋ ಗೊತ್ತಾಗಲಿಲ್ಲ.

ತರೀಕೆರೆ —ಹಿಮಕಾಲ ಪ್ರಾರಂಭಿಸಿದ್ದರಿಂದ ಜನರು ಹೆಚ್ಚಾಗಿ ಜ್ವರ ಪೀಡಿತರಾಗಿ ಆಸ್ಪತ್ರೆಗೆ ಬರುತ್ತಿದಾರೆ — ಈ ಸಾರಿ ಮಳೆ ಸಾಕಾದಷ್ಟು ಬಾರದಿದ್ದ ರಿಂದ ಜನರಲ್ಲಿ ಅಷ್ಟು ಕಳೆಯಿಲ್ಲ. ಈಗ ಭತ್ತದ ಕಟಾವುಕಾಲ ಪ್ರಾರಂಭವಾ ಗಿದೆ ಸ್ವಲ್ಪವಾಗಿ ಬಂದ ಬೆಳೆಯನ್ನು ಆತುರದಿಂದ ರೈತರು ಕೂಡಿಸಲು ಪ್ರಯತ್ನಿಸುತ್ತಿದಾರೆ. ಧಾರಣೆವಾಸಿಯ ಭಯ ಜನರಲ್ಲಿ ಕಳವಳವನ್ನುಂಟುಮಾ ಡುತ್ತಲಿದೆ —ಒಂದು ದುಃಖದ ವಾರ್ತೆಯೇನೆಂದರೆ ಕಳೆದ 9 ತಾ. ರಾತ್ರಿ ಒಬ್ಬ ಬ್ರಾಹ್ಮಣವಿಧವೆಯು ಹೆಣ್ಣುಮಗುವನ್ನು ಹೆತ್ತು ಬೆಳಗಿನ ಮುಂದೆಯೇ ಹಾಳು ಗೋಡೆಯ ಸ್ಥಳವನ್ನು ಕಂಡುಕೊಂಡು ಅಲ್ಲಿದ್ದ ಮುಳ್ಳುಹಂಪೆ ಗಿಡದಲ್ಲಿ ಎತ್ತಿ ಹಾಕಿದ್ದಳು. ಬೆಳಗ್ಗೆ ಪಕ್ಕದ ಮನೆಯವರು ಈಚೆಗೆ ಬಂದಾಗ ಅಳುವ ಮಗು ವಿನ ಶಬ್ದ ಕೇಳಿ, ನೋಡಿ ಪೊಲೀಸಿಗೆ ತಿಳಿಸಿದರು. ಅವರು ಬಂದು ಮಗುವನ್ನು ಆಸ್ಪತ್ರೆಗೆ ಸಾಗಿಸಿ, ಪೋಷಣೆಮಾಡುತ್ತಾ ಇದಾರೆ. ಇತ್ತಲಾಗಿ ಪತ್ತೆ ತಲಾಷು ನಡಿಸಿದಾಗ್ಗೆ ಗುಮಾನಿಯ ಮೇಲೆ ಅದೇ ಹೆಂಗಸನ್ನು ಹಿಡಿದು ಕೇಳಿದಾಗ್ಗೆ ಆಕೆ ಒಪ್ಪಲಿಲ್ಲ ಕಡೆಗೆ ಶಿವಮೊಗ್ಗೆಯಿಂದ ಲೇಡಿ ಅಪಾಥಿಕೆರಿ ಮಿಸ್ ಬ್ರೌನ್ ಎಂಬುವರನ್ನು ಕರಸಿ ಪರೀಕ್ಷಿಸಿದರು ಆಗ ಒಪ್ಪಿಕೊಂಡಳು. ಈಗ ಲಾಕಪ್ಪಿ ನಲ್ಲಿಟ್ಟಿದಾರೆ. ಮಗುವು ಆಸ್ಪತ್ರೆಯಲ್ಲಿದ್ದು ಬಿಸಾಟಾಗ ಎದೆ ಮತ್ತು ತಲೆಗೆ ಆದ ಪೆಟ್ಟುಗಳು ಡ್ರೆಸರವರ ಪರಾಮರಿಕೆಯಿಂದ ಗುಣವಾಗುತ್ತಾ ಕ್ಷೇಮದಲ್ಲಿ ರುತ್ತದೆ.—ತರೀಕೆರೆಯಿಂದ ಲಕ್ಕುವಳ್ಳಿಗೆ ಹೋಗುವಾಗ್ಗೆ ಕಂಚಿನ ಬಾಗಲಿಂಬ ಸೇತುವೆಯನ್ನು ರಿಪೇರಿಮಾಡಲು ಹಣ ಸ್ಯಾಂಕ್ಷನ್ ಆಗಿತ್ತು. ಕೆಲಸವೂ ನಡೆದು ಸ್ವಲ್ಪಮಾತ್ರ ಬಾಕಿ ಇದೆ. ಎಷ್ಟು ರಿಪೇರಿ ಮಾಡಿದರೂ ಅಲ್ಲಲ್ಲೇ ಕಟ್ಟಡವು ಬಿರಕುಬಿಟ್ಟಿದೆ ಇದನ್ನು ಕೆಲವು ಕಡೆ ಕೆಸರು ಹಾಕಿ ಕಟ್ಟಿದ್ದನ್ನು ಕೆಲವರು ನೋಡಿದಾರೆ. ಇದು ದೊಡ್ಡ ಸೇತುವೆ. ಕಟ್ಟಡವು ಭದ್ರವಾಗಿಲ್ಲದಿದ್ದರೆ ಅಕಸ್ಮಾ ತ್ತಾಗಿ ಬರುವ ನೀರಿನಿಂದ ದೊಡ್ಡ ನಷ್ಟ ಸಂಭವಿಸುವದರಲ್ಲಿ ಸಂದೇಹವಿಲ್ಲ. ಮೇಲ್ಪಟ್ಟ ಅಧಿಕಾರಿಗಳು ಇದಕ್ಕೆ ಬಹುಮಟ್ಟಿಗೆ ಗಮನಕೊಡುವರೆಂದು ನಂಬ ಲಾಗಿದೆ.—ಲಕ್ಕುವಳ್ಳಿ ಜಂಗಲಿನಲ್ಲಿ ಮೂರು ಆನೆ (ಗಂಡು, ಹೆಣ್ಣು, ಮರಿ) ಗಳು ಬಂದು ಗಳಕ ಡಿಯಲಿಕ್ಕೆ ಹೋದವರನ್ನು ಓಡಿಸಿಕೊಂಡು ಬಂದವು ಈಚೆಗೆ ಜನರು ಹೆಚ್ಚಾಗಿ ಗಲಾಟೆ ಮಾಡಿಕೊಂಡು ಹೆಚ್ಚಾಗಿ ಗಳ ಕಡಿಯಲಿಕ್ಕೆ ಹೋದಾಗ ಅವು ಕಾಣಲಿಲ್ಲ. ಇವು ಜನರನ್ನು ಭಾಸಪಡಿಸಿದ್ದನ್ನು ಕೇಳಿ ಅವು ಹಿಡಿದ ಸ್ಥಳ ದಿಂದ ತಪ್ಪಿಸಿಕೊಂಡು ಬಂದವುಗಳೆಂದು ಹೇಳುತ್ತಾರೆ —17 ನೇ ತಾ. ಬೆಂಕಿ ಯಿಂದ ಮೂರು ಮನೆ ಸುಟ್ಟುಹೋದವು. ಜನರು ತುಂಬಾ ಶ್ರಮಪಟ್ಟದ್ದ ರಿಂದ ಹೆಚ್ಚು ಮನೆ ಸುಡದೆ ತಪ್ಪಿತು ಅದರಲ್ಲಿ ಮದಿವೆಮಾಡಲು ಸಿದ್ಧಪಡಿಸಿ ಕೊಂಡಿದ್ದವರ ಮನೆ ಒಂದು ಇವರು ತುಂಬಾ ಬಡವರು. ಇವರ ಪರಿತಾಪವನ್ನು ತಿಳಿಯಲು ಉಟ್ಟಬಟ್ಟೆಯೊಂದಿಗೆ ಸಂಜೆ 6 ಗಂಟೆವರೆಗೂ ಸುಟ್ಟಿದ್ದನ್ನೆಲ್ಲಾ ತೆಗೆದು ಮೇಲ್ಛಾವಣಿಯಿಲ್ಲದ ಸುಟ್ಟಮನೆಯಲ್ಲೇ ಮಲಗಿದ್ದುಕೊಂಡದ್ದನ್ನು ಕೇಳಿದರೆ ತಿಳಿಯುತ್ತೆ. ಇವರಿಗೂ, ಬೆಂಕಿ ಆರಿಸುವದರಲ್ಲಿ ಬಹಳ ಕಷ್ಟಪಟ್ಟವರಿಗೂ ಸರ್ಕಾರದವರು ಸಹಾಯ ಮಾಡುವರೆಂದು ನಂಬುತ್ತೇನೆ. ಪರೋಪಕಾರಕ್ಕೆ ಸರ್ಕಾರದವರಿಗೂ ಮುನಿಸಿಪ್ಲಾನ ಪ್ರಜೆಗಳಿಗೂ ಇದು ಒಳ್ಳೇ ಸಮಯವಾಗಿದೆ.

ದಿ ನ್ಯಾಷನಲ್ ಇನ್ಷುರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿ, ಲಿಮಿಟೆಡ್, ಅಮೃತಸರ್.

ನೋಟೀಸ್.

ಮ॥ ಗಳಾದ ಎಸ್. ರಾಮರಾಯರನ್ನೂ ಕೆ. ಅನಂತರಾಮಯ್ಯನವರನ್ನೂ ಮೈಸೂರು ಮತ್ತೂ ಕೊಡಗು ಸೀಮೆಗಳ ಚೀಫ್ ಏಜಂಟರುಗಳಾಗಿಯೂ, ಮ॥ ಡಿ. ಶೇಷಗಿರಿರಾಯರನ್ನು ಕೋಲಾರ ಮತ್ತೂ ಬೆಂಗಳೂರು ಡಿಸ್ಟ್ರಿಕ್ಟುಗಳ ಚೀಫ್ ಏಜಂಟರಾಗಿಯೂ ನೇಮಕಮಾಡಲಾಗಿದೆ ಎಂದು ತಿಳಿಯತಕ್ಕದ್ದು.

ಪಿ. ಎಲ್. ರಾಜಪಾಲ್,
[239-2] ಚೀಫ್ ಮ್ಯಾನೇಜರ್.

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್--ಅಜ್ಮೀರ್. ಬ್ರಾಂಚಾಫೀಸ್--ಬೆಂಗಳೂರು ಸಿಟಿ.

ಮೇಲ್ಕಂಡ ವಿಮೇ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭರವಸೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ. ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು.

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[109-26] ಎಸ್. ಕಬ್ಬೂರ್, ಬ್ರಾಂಚ್ ಸೆಕ್ರೆಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ.

ಅಪಾಯದ ಕುರುಹುಗಳು.

ಸ್ವಾಭಾವಿಕವಾಗಿ ಅಪಾಯ ಬರಬಹುದಾದ ಕುರುಹುಗಳನ್ನು ಕಂಡುಹಿಡಿಯಬಹುದು

ಕೆಮ್ಮು ಅಪಾಯದ ಕುರುಹು !

ಶ್ವಾಸಕೋಶಗಳು ಬಲಹೀನವುಳ್ಳವುಗಳೆಂದು ಇದರಿಂದ ತೋರಿಬರುತ್ತದೆ. ಅವನ್ನು ಬೇಗನೇ ಬಲಪಡಿಸತಕ್ಕದ್ದು ಬಹು ಅವಶ್ಯಕ.

SCOTT'S EMULSION 2-18
(ಸ್ಕಾಟ್ಸ್ ಇಮಲ್‌ಷನ್)

ಎಂಬ ಔಷಧವು ಈ ಕುರುಹುಗಳನ್ನು ಹೋಗಲಾಡಿಸುವದು.

ಬಲಹೀನವಾದ ಶ್ವಾಸಕೋಶಗಳನ್ನು ಬಲಪಡಿಸಿ, ಕೆಮ್ಮನ್ನು ನಿಲ್ಲಿಸುತ್ತದೆ

ಕೈಯಿಂದ ಮುಟ್ಟಿ ತಯಾರಿಸಿದ್ದಲ್ಲ.

ಎಲ್ಲಾ ಔಷಧ ಮಾರಾಟಗಾರರಲ್ಲೂ ದೊರಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಸ್ವಸ್ಥವಾಗುವುದಕ್ಕೆ ಉಪಾಯವು.

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು. ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ.— ಬೆನ್ನಿನಲ್ಲಿ ಛಳುಕು, ನಿದ್ದೆಯಿಲ್ಲದೆ ಇರುವುದು; ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು; ಬಿಡದೆ ಬಾಯಾರಿಕೆ, ಬಳಲಿಕೆ; ಎದೆ ತಲ್ಲಣಿಸುವುದು; ತಲೆನೋವು; ಗಾಬರಿ; ಕಣ್ಣುಮೊಬ್ಬು, ತಲೆ ತಿರುಗುನಿಕೆ, ಮೈನೋವು; ಕೀಲುನೋವು, ಮರವು; ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [181-13]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು. ಡೋನ್ಸ್ ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ. ೨—೦—೦; ಅಥವಾ ೬ ಬುಡ್ಡಿಗಳಿಗೆ ರೂ. ೧೦—೩—೦. ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು. ಅಥವಾ ಡೋನ್ಸ್, ಪಿ. ಒ. ಬಾಕ್ಸ್ ೫೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಕುಂತಲಾನಂದ ತೈಲವು.

192-10

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಿರುದಿನ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ. ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕುದಾಗಿದೆ. ಬೆಲೆ ಬಾಟ್ಲಿಗೆ 1 ರೂಪಾಯಿ. ೩ ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ. ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್.

ಉತ್ಕೃಷ್ಟವಾದ ವಸ್ತು ! ಬೆಲೆ ಕಡಮೆಮಾಡಿದೆ !!

100 ನೇ ನಂ. ಪ್ರೈಮಸ್ ಕೆರೊಸೀನ್ ಒಲೆ.

ಸಂಸಾರಕ್ಕೂ ಪ್ರಯಾಣಕ್ಕೂ ಮುಖ್ಯ ಉಪಯೋಗ.

ಇದರ ಬರ್ನರಿನ ರಚನೆ ಸುಲಭ, ಬೆಸುಗೆ ಕೊಳವೆಗಳಿಲ್ಲ ಸಿಲಿಂಡರ್ ಕೊಳವೆ ಮಾತ್ರ ಉಂಟು ಇದನ್ನು ಸುಲಭವಾಗಿ ತೆಗೆದು ಎಣ್ಣೆಯ ಪಾತ್ರೆಯನ್ನು ಸುಲಭವಾಗಿ ತೊಳೆಯಬಹುದು ಬರ್ನರ್ ನೆತ್ತಿಯನ್ನೂ ತೊಳೆಯುವಂತಿದೆ, ಗಾಳಿಯ ಸಹಾಯದಿಂದ ಬಹಳ ತೀಕ್ಷ್ಣವಾದ ಜ್ವಾಲೆ ಉರಿಯುತ್ತ ಬರ್ನರಿನ ಉರಿ ಶಬ್ದವಿಲ್ಲದ ಇರುವುದಕ್ಕಾಗಿ ಅದರ ಜೊತೆಯಲ್ಲೇ ನಾವು ಸೈಲೆನ್ಸರ್ ಎಂಬುದನ್ನೂ ಕೊಡುವೆವು ಬರ್ನರಿನ ಸೀಳ ಮತ್ತು ಕಡ್ಡಿಗಳನ್ನು ಬಿಚ್ಚಿ ಗಂಟುಕಟ್ಟುವ ತೆ ಎಲ್ಲಾ ಮರುಗುಳ್ಳ ಹಿತ್ತಾಳೆಯಲ್ಲಿ ಮಾಡಿದೆ, ಎತ್ತರ 8 ಅಂಗುಲ , ಒಂದು ಸೀಸೆ ಸೀಮೆಯೆಣ್ಣೆ ಹಿಡಿಯುವುದು.



ಕ್ರಯ :—ಮೇಲ್ಭಾಗದ ಉಂಗುರದ ಸಹಿತ ರೂ 6-8-0 ಬರ್ನರ್ ಟಿನ್ ಪೆಟ್ಟಿಗೆಯ ಸಹಿತ ರೂ. 7-8-0. ಪೋಸ್ಟೇಜ್ ಬೇರೆ.

ಆರ್ಡರ್ ಸಮೇತ ಒಂದು ರೂಪಾಯಿ ಅಡ್ವಾನ್ಸು ಕಟ್ಟಿದ್ದರೆ ಈ ಒಲೆಯನ್ನು ಕಳುಹಿಸಲಾರೆವು [230-4]

ನಮ್ಮ ವಿಳಾಸ—The Bombay Popular Agency,
Dharavy, BOMBAY.

ಮರೆಯಬ್ಯಾಡಿರಿ ! ಮರೆಯಬ್ಯಾಡಿರಿ !

ದರ್ಬಾರ್ ಸಾಬೂನು.

ಏಜೆಂಟರುಗಳು ಬೇಕಾಗಿದೆ!

ಒಳ್ಳೇ ಕಮಿಷನ್ ದೊರೆಯುವದು.

ಅಪಾಯವಿಲ್ಲದ ರೋಮಸಂಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ದ ವದರೆ ಸುಮಾರು ರೋಮವು ಮಾಯವಾಗುವದು

ಉರಿ, ನೆಕೆ ಮುಂತಾದ ಬಾಧೆಯಿಲ್ಲದೆ ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು ಮರೆಯಬ್ಯಾಡಿರಿ 3 ಸಾಬೂನುಗಳಿರುವ ಪೆಟ್ಟಿಗೆ 1ಕ್ಕೆ ಕ್ರಯ 11 ಆಣೆ 2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1-10-0 ಅಂಚೆ ಹಾಸಲು 4 ಆಣೆ

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ.

ವಿಳಾಸ —ವಿ ಎ. ಎಸ್. ಪಾಣಿ ಕಂಪೆನಿ,
ನಂ. 3, ಇರುಳಪ್ಪನ್ ಬೀದಿ, ಮದರಾಸು.

V. A. S. PANI,
[244-1] No. 3, Erulappen Street, Madras.

ರಬ್ಬರ್ ಸ್ಟಾಂಪು ಕ್ರಯ

ರೂ. 1-12-0.

ಯಾವ ತರಹ ಯಾವ ಸೈಜು ಯಾವ ಭಾಷೆಯಲ್ಲಾದರೂ ಸರಿ.

ಇದುವರೆಗೆ ವಿಕ್ರಯಿಸುತ್ತಲಿದ್ದ ರೂ. 3 8 0 ಕ್ರಯದ ರಬ್ಬರ್ ಸ್ಟಾಂಪನ್ನು ಡಿಸೆಂಬರ್ ಒಳಗಾಗಿ ತರಿಸಿಕೊಳ್ಳುವವರಿಗೆ 1 ಶೀಷ ಶಾಯಿ 1 ಪೆಟ್ಟಿಗೆ, 1 ಬ್ರಷ್, 2 ಪ್ಯಾಡು ಸಮೇತ ರೂ. 1 12—0 ಗೆ ತಯಾರಿಸಿ ಕಳುಹಿಸುತ್ತೇವೆ

ಕ್ಯಾಟಲಾಗು ಬೇಕಾದರೆ ಬರೆಯಿರಿ. ನಮಗೆ ಏಜಂಟರು ಬೇಕು. ತಿಂಗಳಿಗೆ ರೂ 15—0 0 ಸಂಬಳ ಕೊಡುತ್ತೇವೆ. ಬೇಕಾದವರು ಈ ವಿಳಾಸಕ್ಕೆ ಬರೆಯಿರಿ [244 1]

ವಿಳಾಸ :—ಎಸ್. ಎನ್. ಮೂರ್ತಿ,
ರಬ್ಬರ್ ಸ್ಟಾಂಪು ಮೇಕರ್, ತಿರುವಲ್ಲಿಕೇಣಿ, ಮದರಾಸ್.

ಗೃಹಕೃತ್ಯದ ನೋಟೀಸು

ಚಾಮರಾಜನಗರದ ತಾಲ್ಲೂಕು ಹರದೇ ಹೋಬಳಿ ಹೆಗ್ಗವಾಡಿ ಗ್ರಾಮದ 16 ನೇ ಖಾತೇದಾರ ಗಿರಿಯನ ಮಗ ಹನುಮನು ತಿಳಿಯಪಡಿಸುವದೇನೆಂದರೆ— ಸದರಿ ಗ್ರಾಮದ ಸರ್ವೆ 25, 26, 30 2, 31-1, 85-2, 32, 60, ಈ ನಂಬರು ಜಮೀನುಗಳನ್ನು ನಮ್ಮ ಚಿಕ್ಕಪ್ಪ ಮಾಲಿ ಕೊಣಪ್ಪರವರು ಇಲ್ಲಿ ವಾಸವಾಗಿರುವ ಗಿರಿಯಾಬೋಯಿ ನನ್ನ ಅನುಮತಿ ಇಲ್ಲದೆ ವಿಕ್ರಯಿಸುವದಾಗಿ ತಿಳಿಯಬರುತ್ತ ಈ ಜಮೀನುಗಳು ಒಟ್ಟು ಕುಟುಂಬದ ಆಸ್ತಿಯಾಗಿರುವಕಾರಣ ನನ್ನ ಭಾಗ್ಯ ಹಿಸ್ಸೆ ಜಮೀನುಗಳನ್ನು ನನ್ನ ಇರಾದೆ ಇಲ್ಲದೆ ಯಾರೂ ಕ್ರಯಕ್ಕೆ ಪಡೆಯಕೂಡದು ಹಾಗೇನಾದರೂ ಪಡೆದರೆ ನನ್ನ ವಿಷ್ಯ ಖರ್ಚಿಗೂ ಲುಕ್ಸಾನಿಗೂ ಅವರು ಗುರಿಯಾಗಬೇಕಾಗಿರುವದೆಂದು ಈ ಮೂಲಕ ಎಚ್ಚರಿಸಿರುತ್ತೇನೆ

[244-1] ಹನುಮನ ಗುರ್ತಿನ ರುಜು

ಸ್ಕೂಲ್ ಮಾಸ್ಟರುಗಳಿಗೂ ವೃತ್ತಾಂತ ಪತ್ರಿಕೆ ಏಜಂಟರುಗಳಿಗೂ ಸೂಚನೆ.

ಡಿಸೆಂಬರ್ ೯ ಡೇ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ.

1914 ನೇ ಇಸವಿಯ ಕ್ಯಾಲೆಂಡರನ್ನು ರಾಜಾ ರವಿವರ್ಮ ಪ್ರೆಸ್ಸಿನಲ್ಲಿ ನಾನಾ ತರಹ ಬಣ್ಣಗಳಿಂದ ತಯಾರಿಸಲ್ಪಟ್ಟ ಪಿಕ್ಚರ್ ಗಳನ್ನಿಟ್ಟು ಮೈಸೂರು ಕ್ರೌನ್ ಪ್ರೆಸ್ಸಿನಲ್ಲಿ 2-3 ತರಹಾ ಶಾಯಿಯಲ್ಲಿ ನುಣುಪಾದ ದಪ್ಪ ಕಾರ್ಡಿನಲ್ಲಿ ಪ್ರಿಂಟು ಮಾಡಿಸಿ ಗೌರ್ನಮೆಂಟ್ ರಜಾ ದಿವಸಗಳನ್ನು ಸಹ ಸೂಚಿಸಿ ಪ್ರತಿ ೩೦ ಕ್ಕೆ ಒಂದೊಂದು ಷೀಟ್ ತೆಗೆಯುವಂತೆ ತಯಾರುಮಾಡಿರುವ ಸುಂದರವಾದ ಕ್ಯಾಲೆಂಡರ್ 1 ಕ್ಕೆ 0-4-0, 6 ಕ್ಕೆ 1-8-0, 12 ಕ್ಕೆ 1-11-0 ಪ್ಯಾಕಿಂಗ್ ಪೋಸ್ಟೇಜು ಮಾಫಿ ಮಾದ್ರಿ ಕ್ಯಾಲಂಡರ್ ಅಪೇಕ್ಷಿಸತಕ್ಕವರು 3 ಆಣೆ ಪೋಸ್ಟೇಜು ಸ್ಟ್ಯಾಂಪ್ ರವಾನಿಸಬೇಕು 1914 ನೇ ಇಸವಿಯ ಕಾರೊನೇಷನ್ ಷೀಟ್ ಕ್ಯಾಲೆಂಡರ್ 1 ಕ್ಕೆ 6 ಪೈ, 50 ಕ್ಕೆ ರೂ. 1-1-0 100 ಕ್ಕೆ ರೂ 2 10 ಕ್ಕೆ ಕಡಮೆ ಪರಸ್ಥಳಕ್ಕೆ ರವಾನಿಸುವದಿಲ್ಲ [217-1]

ವಿಳಾಸ- ಎಂ ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,
ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಬಿ. ವಿ. ಪಂಡಿತರಿಂದ

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟ ಬಾಲವೃದ್ಧರಿಗೂ ಆಮೋದವನ್ನುಂಟುಮಾಡುತ್ತಿರುವ

ಆಮೋದಿನಿ

150 ಮಾತ್ರೆಯುಳ್ಳ ಸೀಸೆಗೆ 4 ಆ ; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳು 1 2 ನ್ನು ಬಾಯಿನಲ್ಲಿ ಹಾಕಿಕೊಂಡ ಕೂಡಲೆ ಮನಸ್ಸಿಗೆ ಅಪೂರ್ವವಾದ ಆನಂದವುಂಟಾಗುವುದು ಎಷ್ಟು ಹಾಡಿದರೂ ದಣಿವಾಗದಂತೆ ಸಂಗೀತಗಾರರ ಕಂಠವನ್ನು ಕಾಪಾಡುವುದರಲ್ಲಿ ಪ್ರಖ್ಯಾತಿ ಪಡೆದಿರುವುದು ಬಾಯಿನಾತವನ್ನು ಹೋಗಲಾಡಿಸಿ [illegible] ಶಮನಮಾಡಿ [illegible] [illegible] ಆಹಾರವಾದ ಕೆಮ್ಮು [illegible] ಅಜೀರ್ಣ ಹೊಟ್ಟೆನೋವು ಮುಂತಾದ [illegible] ದೌರ್ಬಲ್ಯ [illegible] ಗುಣವಾಡುವ ಆಮೋಘವಾದ ಗುಣವನ್ನು ಹೊಂದಿರುವವು ಮಲೆನಾಡಿನಲ್ಲಿ ರುವವರಿಗೂ ಪ್ರಯಾಣಿಕರಿಗೂ ಇದರ ಸೇವನೆಯು ಅತ್ಯಾವಶ್ಯಕ ನಮೂನೆ ಟಪಾಲ್ ಮಿಷನ್ 12 ಸೀಸೆಗೆ 1 ಆಣೆ [220 5]

ಶ್ರೀಕರ ಕಸ್ತೂರಿ ಮಾತ್ರೆ.—ಅನುಪಾನಪತ್ರ ಸಹಿತ 250 ಮಾತ್ರೆ 1 ಆಣೆ ಐದು ಸೀಸೆಗೆ ಒಂದು ಇನಾಮು

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

ಸ್ಟರ್ಲಿಂಗ್ ಟ್ರಾವಲರ್ಸ್ ಲೀವರ್ ವಾಚ್.

ಇದರ ಕ್ರಯ ನ್ಯಾಯವಾದ ಮತ್ತು ಬೆಲೆಯುಳ್ಳ 8 ಬಹುಮಾನ ಸಾಮಾನುಗಳ ಸಮೇತ ರೂ. 3-8 0 ಮಾತ್ರ [77-33]

ಘನವಂತರೇ, ಈ ವಾಚ್ ಈಗತಾನೆ ಬಂದಿರುತ್ತೆ. ಇದು ಬಹು ಬಲ್ಲಿದವಾದ ಯಂತ್ರಸಾಮಾನುಗಳಿಂದಲೂ ಮತ್ತು ಶ್ರೇಷ್ಠವಾದ ಮತ್ತು ಪಾಲೀಷ್ ಮಾಡಿದ ಲೀವರ್ ಕೆಲಸದಿಂದಲೂ ತಯಾರಾದದ್ದು. ಆದರಿಂದಲೇ ಅದು ಬಹಳ ಒಂದು ಸುರಿಯುತ್ತಿವೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಸುಂದರವಾದದ್ದು ಖಾತ್ರಿಯಾದ ವಾಚು.



ಇದರ ಬಹುಮಾನ ಸಾಮಾನುಗಳ ವಿವರ —

(1) ಸುಂದರವಾದ ವಾಚ್ ಸರಪಣಿ (2) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ. (3) ಸುವಾಸನೆಯುಳ್ಳ ಪರಿಮಳದ ಅತ್ತರ್. (4) ಧೂಳು ಸೇರದಂತೆ ವಾಚ್ ಮುಚ್ಚುವ ಕವರ್. (5) ಷೋಕ್ ಉಂಗುರ (6) ಜಂಟ್ಲಮನ್ ಪೆನ್ಸಲ್ (ಕವರ್ ಸಮೇತ). (7) ತಮಾಷೆಯಾದ ಚೊಂಬು. (8) ಷರ್ಟ್ ಗುಂಡಿಗಳ ಸೆಟ್ಟು.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ—

ವಿಳಾಸ—ಪಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂ. 7, ಕೋನ್ ವೆಂಕಟಾಚಲೈಯರ್ ಬೀದಿ, ಮದರಾಸು.

Printed and Published by the Rev. H. Gulliford, Proprietor and Manager, Wesleyan Mission Press, Mysore 27/11/1913.

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೭ ಮೈಸೂರು—ಸನ್ ೧೯೧೩ ನೇ ಇಸವಿ ಡಿಸೆಂಬರ್ ತಾರೀಖು ೪ ನೇ ಗುರುವಾರ. ಸಂಚಿಕೆ ೨೭

ಓರಿಯಂಟಲ್ ಗೌ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು.. ....ರೂ 4,25,00,000

ಕಂಪನಿಯಿಂದ ಪಾವತಿ ಆಗಿರುವದು ,, 3,50,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಎಲ್ಲಾ ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ —ಮಿ ಎ ಎಸ್. ರೆಟಿ ರು, ಚೀಫ್ ಏಜೆಂಟ್, ಬೆಂಗಳೂರು. ಮ॥ ಎಂ ಎಸ್ ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು, ಅಥವಾ

[184-10] ಬ್ರಾಂಚ್ ಸೆಕ್ರೆಟರಿ, ಮದರಾಸ್

ಬಿ. ಪಿ. ಪಂಡಿತರ ಶ್ರೀಕರ "ಕಸ್ತೂರಿಮಾತ್ರೆ."

30 ಮಾತ್ರೆಯುಳ್ಳ ಸೀಸೆಗೆ 4 ಆ , 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳ ಬೆಲೆಯನ್ನು ನೋಡಿ ಇದರ ಗುಣವನ್ನು ಊಹಿಸಲಾಗದು ಟಿಬೆಟ್ ದೇಶದ ಕಸ್ತೂರಿ ಯ ವಲಃ ಶಾಸ್ತ್ರೋಕ್ತವಾಗಿ ತಯಾರಾಗಿದಲ್ಲದುತ್ತಿ ರುವ ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ತಾಂಬೂಲದೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವವು. ಮಕ್ಕಳಿಗೆ ಉಂಟಾಗುವ ಅಜೀರ್ಣಬೇಧಿ. ಜ್ವರ ಕೆಮ್ಮು ನೆಗಡಿ ಮುಳವ್ಯಾಧಿ ಹೊಟ್ಟೆಯುಬ್ಬರ ಈ ರೋಗಗಳನ್ನು ನಿವಾರಿಸುವುದಲ್ಲದೆ ವೈದ್ಯರು ಶಕ್ತಿ ಗುಣಪಡಿಸುವುದು ಪ್ರಯಾಣಿಕರಿಗೂ ಸೊಂಕು ರೋಗ ಸ್ಥಳದಲ್ಲಿರುವವರಿಗೂ ಮಲೆನಾಡಿನಲ್ಲಿರುವವರಿಗೂ ಇದರಂತೆ ಮತ್ತಾವ ಆರೋಗ್ಯವನ್ನು ಉಂಟುಮಾಡಲಾರದು [220-6]

ವಿಷಮಜ್ವರಗಳು ನೆಗಡಿ ಕೆಮ್ಮು ತಲೆನೋವು ಅಗ್ನಿಮಾಂದ್ಯ ಶೀತವಾಯು-ಕಟ್ಟುನೋವು ಮಲಬದ್ಧ ಅರೋಚಕ-ನರಗಳ ದೌರ್ಬಲ್ಯ — ಈ ರೋಗಗಳನ್ನು ಕ್ಷಣಮಾತ್ರದಲ್ಲಿ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವದು ಸಾವಿರಾರು ಜನ ಪರೀಕ್ಷಿಸಿದ್ದಾರೆ ಟಪಾಲ್ ಖರ್ಚು 12 ಸೀಸೆ ವರೆಗೆ 1 ಆಣೆ

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ ನಂಜನಗೂಡು

1906 ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಬಹಳ ಅಭಿವೃದ್ಧಿ ಸ್ಥಿತಿಯಲ್ಲಿರುವ ಮತ್ತು ಸರ್ಕಾರದ ಭರವಸೆಯುಳ್ಳ "ದಿ ಕೋಲೋಮಾಂಡಲ್ ಜೀವ ವಿಮೆ ಕಂಪೆನಿ" ಲಿಮಿಟೆಡ್ ನಲ್ಲಿ ಮದುವೆ ಮತ್ತು ಜೀವ ವಿಮೆ ಬ್ರಾಂಚಿನ ಮೊದಲನೇ ತರಗತಿಯಲ್ಲಿ ಮಾಹೆಯಾನ ರೂ 1-8-0, ರೂ 1-0 0 ಗಳ ಮೇರೆ ಪಾಲಿಸಿಗೆ ಕೊಟ್ಟು ಚಂದಾದಾರರು ಕೊಡುವ ಹಣಕ್ಕೆ ಎಷ್ಟು ಹಣಕ್ಕೆ ಕಡಮೆಯಿಲ್ಲದೆ ಬೋನಸ್ ಕೊಡುವುದಕ್ಕೆ ಭರವಸೆಯುಳ್ಳ ದ್ದಾಗಿಯೂ ನಂಬಿಕೆ ಮತ್ತು ಚಟುವಟಿಕೆಯುಳ್ಳ ಏಜೆಂಟರುಗಳು ಧಾರಾಳ ಕಮಿಷನ್ ಏರ್ಪಾಡು ಮೇರೆ ಬೇಕಾಗಿದೆ ಮತ್ತು ಇದರಲ್ಲಿ ಪ್ರತಿ ತಿಂಗಳು ಮದುವೆ ಮತ್ತು ಜೀವ ವಿಮೆ ಬ್ರಾಂಚಿನಲ್ಲಿ ಲಕ್ಷಾಂತರ ರೂಪಾಯಿ ಗಳು ಹಂಚಲ್ಪಡುತ್ತೆ ಇತರ ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಒಂದಾಣೆ ಸ್ಟಾಂಪಿನೊಡನೆ ಕಾಗದ ಬರೆಯಿರಿ [213-2]

Hindustan Co-operative Insurance Society, Limited,

Hindustan Buildings, Calcutta

Authorized capital **One Crore.** Policies effected—over Rs 2,70,00,00 Subscribed capital Rs 10,00,000. Funds exceed Rs 20,80,000

Paid up Capital over Rs 10,00,000.

This famous Society's Premiums are the lowest and the assurance value, therefore, the highest Rules exceptionally advantageous and preferential Financial conditions based on sound principles Rs 2 00 000 deposited with the Government, as per new Insurance Act of 1912

Wanted Immediately

Active and influential District and Taluk Agents on liberal terms of commission or pay Bonus and rewards, a speciality This is the only business which requires no capital or higher education to earn a handsome amount. For further particulars and agency prospectus &c., apply with one anna stamp to

Messrs. Venkatachalam & Son,

Chief Agents,

166, Dodpeta, Mysore.

ವಿನೋದಕರಗಳಾದ ನಕಲಿಗಳು

ಪ್ರಹಸನಚತುಷ್ಟಯ—(ಹಾಸ್ಯಸಂಜೀವನಿ) ಯುವತಿಯಾದ ಹೆಂಡತಿ ಮುದುಕನಾದ ಗಂಡ, ವಿದ್ಯಾವಂತನಾದ ಗಂಡ ದಡ್ಡಳಾದ ಹೆಂಡತಿ ಇವರುಗಳನ್ನು ಕುರಿತ ನಕಲಿಗಳು ನಾಲ್ಕು ಇರುತ್ತವೆ ಇಂಥಾ ವಿನೋದವೂ ನೀತಿಪ್ರದವೂ ಆದ ನಕಲಿಯನ್ನು ನೀವು ಓದಿರಲಾರಿರಿ. ಕ್ರಯ 1 ಆಣೆ [187-51]

ಪ್ರಹಸನತರಂಗ—ಅಂತರಂಗದಲ್ಲಿ ದೃಢವಿಲ್ಲದ ಆಷಾಢಭೂತಿಗಳು, ಮೂಢಭಕ್ತಿಯಿಂದೊಡಗೂಡಿದ ದಡ್ಡರು, ಏಕಮತ್ಯವಿಲ್ಲದವರು, ದುರಾಚಾರಿಗಳು ಮುಂತಾದವರ ವಿಷಯವು ಅತಿ ಚಮತ್ಕಾರವಾಗಿ ವರ್ಣಿಸಲ್ಪಟ್ಟಿದೆ ಕ್ರಯ 3 ಆಣೆ ಇದಲ್ಲದೆ ಮಹಾರಣ್ಯಪುರಾಧಿಪತ್ಯ 4 ಆಣೆ ಪುನರ್ಮರಣ ಪ್ರಹಸನ 3 ಆಣೆ ಯೋಗಿನಿವ್ಯಸ್ವಪ್ನ 2 ಆಣೆ ಮುಂತಾದ ನಕಲಿಗಳೂ ದೊರೆಯುವವು

ವಿಳಾಸ—ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸ್—ಅಜ್ಮೀರ್ ಬ್ರಾಂಚ್ ಆಫೀಸ್—ಬೆಂಗಳೂರು ಸಿಟಿ

ಪಾಲಿಸಿ ದ ವಿಮೆ ಸಂಘದ ಆದಾಯಗಳು, 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಅಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಭರವಸೆಯ ಠೇವಣಿ ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೆ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ. ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಡಿಮೆಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತಾರೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[109-27] ಎಸ್ ಕಬ್ಬೂರ್, ಬ್ರಾಂಚ್ ಸೆಕ್ರೆಟರಿ.

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್. ಬೆಂಗಳೂರು ಸಿಟಿ.

ಗೃಹಕೃತ್ಯದ ನೋಟೀಸು

ಹೊಳೆನರಸೀಪುರದ ತಾ ಹಳೆಕೋಟೆ ಹೋಬಳಿ ದೊಡ್ಡ ಕುಂಚೇದ ಗ್ರಾಮದಲ್ಲಿರುವ ಒಕ್ಕಲಿಗರ ಮುನಿಗೌಡರ ತಮ್ಮಣ್ಣಗೌಡನ ದತ್ತು ಮಗ ತಿಮ್ಮನು ತಿಳಿಯಪಡಿಸುವದೇನೆಂದರೆ ನನ್ನ ದತ್ತುತಂದೆಗೆ ವಯಸ್ಸು ಮೀರಿ ಬುದ್ಧಿ ಹತೋಟಿಯಲ್ಲಿಲ್ಲ ನನ್ನ ಹಕ್ಕಿಗೆ ಸಂಬಂಧಪಟ್ಟ ಷೆಡ್ಯೂಲಿನಲ್ಲಿ ಕಂಡ ಸ್ಥಿರ ಸೊತ್ತುಗಳನ್ನು ಯಾರೇ ಆಗಲಿ ನನ್ನ ದಸ್ತುಖತದಿಯಿಂದ ಕ್ರಯ ಭೋಗ್ಯ ವಗೈರೆ ನನ್ನ ಅನುಮತಿ ವಿನಾ ಮಾಡಿಕೊಂಡಲ್ಲಿ ಊರ್ಜಿತವಾಗಲಾರದೆಂದೂ, ನನ್ನ ನಷ್ಟಕ್ಕೆಲ್ಲಾ ಸಹರಿಸುವರು ಗುರಿಯಾಗಬೇಕಾದೀತೆಂದೂ ಈ ಮೂಲಕ ಎಚ್ಚರಿಸಿರುತ್ತೇನೆ

ಈ ಸರ್ವೆ ನಂಬರುಗಳಲ್ಲಿ ನಾಲ್ಕನೇ ಮೂರು ಭಾಗ —

ಸರ್ವೆ ನಂಬರು	ಹಿಸ್ಸಾ ನಂ	ಎಕರೆ	ಆಕಾರ
7	2	2 26	3-0-0
25	,,	3-21	3-9 0
71	3	0-32	0-12-0
122	2	2-1	2-4-0
141	1	3-17	3-8-0
151	,,	1-30	1-12-0
153	2	1-21	1-8-0
138	,,	0-27	2-4-0

[219-1] ತಿಮ್ಮನ ಗೆರೆ ಗುರ್ತಿನ ರುಜು

ಜೈರಾಮನರ ಸ್ವದೇಶೀ ಬಾಮ್.

ರೆಜಿಸ್ಟರಾದ ಟ್ರೇಡ್ ಮಾರ್ಕು

ಈ ಬಾಮ್ ವಾತ, ಸಂಧಿವಾತ, ಕುತ್ತಿಗೆ ನೋವು, ಆರೆತಲೆನೋವು, ಸಡು ನೋವು, ಶೀತ, ಸ , ಬೆನ್ನುನೋವು, ಊತ, ಕೆಮ್ಮು, ಎದೆನೋವು, ಹೊಟ್ಟೆ

ನೋವು, ಚಳುಕು, ಚೇಳುಕಡಿತ, ಕೈಕಾಲು ದೇಹ ಕೀಲುಗಳ ನೋವು, ಉರಿ, ಸುಟ್ಟಗಾಯ ಮೊದಲಾದವುಗಳನ್ನು ನಿರ್ಮೂಲವಾಗಿ ಹೋಗಲಾಡಿಸುತ್ತದೆ ಜವಿಗಳಿಗೂ, ಮೆದುಳಿನ ಕೆಲಸಗಾರರಿಗೂ, ಸಾಮಾನ್ಯವಾಗಿ ಎಲ್ಲಾ ಕೆಲಸದವರಿಗೂ ಈ ಸ್ವದೇಶೀ ಬಾಮ್ ಬಹಳ ಪ್ರಯೋಜನಕರವಾದದ್ದು ಕೊಬ್ಬಾಗಲಿ, ಬೇರೆ ಯಾವ ಕೆಟ್ಟ ಪದಾರ್ಥವಾಗಲಿ ಮಿಶ್ರಮಾಡಿಲ್ಲ ಯೂರೋಪ್, ಇಂಡಿಯಾ, ಅಮೆರಿಕಾ ವೈದ್ಯಗ್ರಂಥಗಳನ್ನು ನೋಡಿ ತಯಾರಾಗಿದೆ ಹಿಂದುಗಳೆಲ್ಲಾ ಇದನ್ನು ಉಪಯೋಗಿಸಬಹುದು ಇದು ಯುಕ್ತಿಯಿಂದಾದ ಮದ್ದು ಲಕ್ಷಾಂತರ ಜನರನ್ನೆಲ್ಲಾ ಶಾಸಿಮಾಡಿದೆ ಪ್ರತಿ ಬಜಾರ, ಪ್ರತಿ ಮನೆಯವರೂ ಇದನ್ನು ಇಟ್ಟೇ ಇರಬೇಕು ಇದು ಚಿನ್ನ ದೇಶದ ಎಲ್ಲಾ ವೈದ್ಯಶಾಲೆಗಳಲ್ಲೂ ಬಿಕರಿಯಾಗುತ್ತಿದೆ ಸೂರ್ಯಕಿರಣಗಳ ರಿಜಿಸ್ಟರ್ ಮಾರ್ಕ್ ಇರುವುದನ್ನು ನೋಡಿ ಕೊಂಡುಕೊಳ್ಳಿ ನಕ್ಕಲ್ ಔಷಧವನ್ನು ಕೊಂಡು ಮೋಸಹೋಗಬೇಡಿ ಉಪಯೋಗದ ಕ್ರಮ ಬಾಟ್ಲಿ ಸಂಗಡಲೇ ಇಟ್ಟಿದೆ 1 ಬಾಟ್ಲಿಗೆ 12 ಆಣೆ, 3 ಕ್ಕೆ ಪೋಸ್ಟೇಜ್ ಮಾಫಿ ನಮ್ಮ ಎಲ್ಲಾ ಔಷಧಿಗಳ ಕ್ಯಾಟಲಾಗನ್ನೂ ಬರೆದು ತರಿಸಿಕೊಳ್ಳಿ. [219-1]

ವಿಳಾಸ—ಜೆ ಗುಲಾಬ್‌ಚಂದ್ ಪೌವಾಳ್,

50 ನೈನಪ್ಪನಾಯಕ್ ಬೀದಿ, ಸಾಹ್ಕಾರ್ ಪೇಟ್, ಮದರಾಸ್

ಜಗಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ. ಕೂದಲು ಸತ್ತು ಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ. ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ ಚಕಚಕಿಸುವವು , ನಿಬಿಡವಾದ ನೀಲಿಯಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದು ಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ. ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ. ಸುಂಡಿನ ಹೊಟ್ಟನ್ನು ಅಡಗಿಸುತ್ತೆ. ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳೆಸುವದು. ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ. ಇದರ ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ 2-10 0 ಅಂಚೆಯ ವೆಚ್ಚ 0-7-0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಮೈಸೂರು ಎಗ್ಜಿಬಿಷನ್ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಬಿಷನ್ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು.

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದ್ದಾರೆ ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ ಡಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ.—ಹೊಸದಾಗಿ ಇಟ್ಟಿರುವ ಹಾವುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಫಾಯತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು. ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕೆಪಿಟೋಲ್ ಬಾಮ್"—ಮಳೆ ಮತ್ತು ಚಳಿಯ ಥಂಡಿ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಲ್ ಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ಸೆಳೆಯುವುದು, ಸಂಧುವಾತ, ಮಸ್ತಕಶೂಲೆ, ಹುಚ್ಚುಗಿ ಮೊದಲಾದ ವ್ಯಾಧಿಗಳು ಕ್ಷೀಣವಾಗುವದು, ಸೊಂಟನೋವು, ಎದೆನೋವು ಮುಂತಾದ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿ ಬಾಟ್ಲಿ 1 ಕ್ಕೆ ಕ್ರಯ 0-8-0 ಟ ಖ ಪ್ರತ್ಯೇಕ.

ಒಡಮನ್ಸ ಮಲೇರಿಯ ಪಿಲ್ಸ್.—ಶೀತಜ್ವರ, ಛಳಿಬಿಟ್ಟು ಬರುವ ಜ್ವರ, ಅಗ್ನಿಜ್ವರ, ಮತ್ತು ಒಂದೇ ಸಮನೆ ಬಿಡದೆ ಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿದೆ ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ ಇದು ಪೇಟದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ ದಫೆಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದು.

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ. 1-0-0. 3 ಬಾಟ್ಲಿಗಳಿಗೆ ರೂ. 2-8-0 ವಿ. ಪಿ. ಖರ್ಚು ಪ್ರತ್ಯೇಕ.

ಮೇಲಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ :— [8-37]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,

ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ಡಿ. ಉಲ್ಫ್ ಮಾರ್ಟ್ಸ್, ಮಂಗಳೂರು.

ಪಂಡಿತ್ ಎಸ್. ಗರಳಪುರಿಯವರ

ಪ್ರಖ್ಯಾತಿ ಹೊಂದಿದ ಓರಿಯಂಟಲ್
ಫಾರ್ಮಸಿ, ಮೈಸೂರು.

ಕಸ್ತೂರಿ ಮಾತ್ರೆ.—ಶ್ರೇಷ್ಠತರ ವನಸ್ಪತಿಗಳು, ಮುತ್ತು, ಹವಳ, ಕಸ್ತೂರಿಗಳಿಂದ ತಯಾರಿಸಿದ್ದು. ಜಲದೋಷ, ಅಜೀರ್ಣ, ಮೈ ಕೈ ತಲೆನೋವುಗಳಿಗೆ ಸಂಜೀವನ. ಇದನ್ನು ತಾಂಬೂಲದ ಸಂಗಡ ಪ್ರತಿ ದಿನವೂ ಸೇವಿಸಿದರೆ ಪ್ಲೇಗು ಕಾಲರಾ ಮುಂತಾದ ಸಾಂಕ್ರಾಮಿಕ ವ್ಯಾಧಿಗಳಿಂದ ಖಂಡಿತ ಕಾಪಾಡುತ್ತೆ. 300 ಮಾತ್ರೆಗೆ 4 ಆಣೆ, 6 ಶೀಸೆಗೆ ರೂ. 1-4-0.

ಬಾಲಸಂಜೀವಿನಿ.—8 ವರ್ಷದೊಳಗೆ ಮಕ್ಕಳಿಗೆ ಬರುವ ಎಲ್ಲಾ ವಿಧ ಜ್ವರ, ಶೀತ, ನೆಗಡಿ, ಕೆಮ್ಮಲು, ವಾಯು, 3 ಪಕ್ಕೆ ಎಳತ, ಸೆಳತ, ಇವಕ್ಕೆಲ್ಲಾ ಅಮೃತ. 100 ವರ್ಷದ ಅನುಭವಸಿದ್ಧವಾದದ್ದು. 20 ಸಲದ ಔಷಧಿಗೆ 4 ಆಣೆ, 1 ಕೋಲೆಗೆ ರೂ. 1-3-0.

ಜ್ವರದ ಮಾತ್ರೆ.—ಸಮಸ್ತವಿಧ ಜ್ವರಗಳಿಗೂ ಖಾತರಿ ಅಮೃತ. ಬಹಳ ಜನರು ಇದರ ಗುಣವನ್ನು ಕಂಠೋಕ್ತವಾಗಿ ಹೊಗಳುವರು. 24 ಮಾತ್ರೆಗೆ 8 ಆಣೆ, 12 ಶೀಸೆಗೆ ರೂ. 6 [222-8]

ಇನ್ನೂ ಅನೇಕ ದಿವ್ಯೌಷಧಿಗಳು ನಮ್ಮಲ್ಲಿ ಸಿಕ್ಕುತ್ತವೆ. ½ ಆಣೆ ಸ್ಟಾಂಪು ಕಳುಹಿ ಬರೆದರೆ ಕ್ಯಾಟಲಾಗ್ ಕಳುಹಿಸುತ್ತೇವೆ. ಪೋಸ್ಟೇಜ್, ಪ್ಯಾಕಿಂಗ್ ಛಾರ್ಜು ಅಲಾಯಿದ.

ವಿಳಾಸ.—ಪಂಡಿತ್ ಎಸ್. ಗರಳಪುರಿ,
ಓರಿಯಂಟಲ್ ಫಾರ್ಮಸಿ, ಬಂಡಿಕೇರಿ, ಮೈಸೂರು.

ಮರೆಯಬ್ಯಾಡಿರಿ! ಮರೆಯಬ್ಯಾಡಿರಿ!!

ದರ್ಬಾರ್ ಸಾಬೂನು.

ಏಜೆಂಟುಗಳು ಬೇಕಾಗಿವೆ!
ಒಳ್ಳೇ ಕಮಿಶನ್ ದೊರಿಯುವದು.

ಅನಾಯಸವಾಗಿ ರೋಮಸಂಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು. ಉರಿ, ಸೆಕೆ ಮುಂತಾದ ಬಾಧೆಗಳಿಲ್ಲದೆ ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು ಮರೆಯಬ್ಯಾಡಿರಿ. 3 ಸಾಬೂನುಗಳಿರುವ ಪೆಟ್ಟಿಗೆ 1ಕ್ಕೆ ಕ್ರಯ 14 ಆಣೆ 2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1-10-0. ಅಂಚೆ ಹಾಸಲು 4 ಆಣೆ ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ.

ವಿಳಾಸ—ವಿ. ಎ. ಎಸ್. ಪಾಣಿ ಕಂಪನಿ,
ನಂ. 3, ಇರುಳಪ್ಪನ್ ಬೀದಿ, ಮದರಾಸು.

V. A. S. PANI,
[245-2] No 3, Erulappen Street, Madras.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?
ಹಾಸನದ ಟೋಪಿ ಅಲ್ಲವೋ?
ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-49

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?
ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ:—(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿರಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ. ೮ ಆ, ೧ ರೂ ೬ ಆ;

ಚುಕ್ಕಿಯುಳ್ಳ ಟೋಪಿಗಳು ರೂ. ೧_೮; ರೂ. ೧_೧೨.

ರೇಷ್ಮೆ ಚುಕ್ಕಿಯುಳ್ಳ ಟೋಪಿಗಳು ರೂ ೨.

ದಾರದ ಟೋಪಿಗಳು ೧ ರೂ ೧೨ ಆ.; ೧ ರೂ. ೮ ಆ., ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ. ೮ ಆ.; ೧ ರೂ ೬ ಆ.

"In addition to cap making we are giving special attention to knitting stockings. All our stockings, for adults and children, are hand-made. Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,
ಗರ್ಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply.—
MANAGER, CAP WORKS,
GIRLS' INDUSTRIAL SCHOOL, HASSAN.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೀನ್ ರವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು.



1-49

ಕೆಳ ಹೊಟ್ಟೆಯ ನೋವು, ಬರೀ ಭೇದಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ರೋಗಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನು ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ.

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಸೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ತರಹ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ.

ಕೈಯಿಂದ ಸ್ವಲ್ಪವೂ ಮುಟ್ಟಿರುವುದಿಲ್ಲ.

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಶೀಸೆಗೆ ೧ ರೂಪಾಯಿ ದೊಡ್ಡ ಶೀಸೆಗೆ ೨ ರೂಪಾಯಿ.

ಡೋಂಗರೆ

ಇವರ ಬಾಲಾಮೃತ

[150-20]

ಸೇವನದಿಂದ ಮಕ್ಕಳು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧_ ಆಣೆ ಟಪಾಲ್ ಖರ್ಚು ೪ ಆಣೆ

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವನ್, ಮದರಾಸು ಇವರಲ್ಲೂ ದೊರೆಯುವುದು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಜೋಡಿತ (ಭಾರ), ಮೈ ನಡುಕ, ಶೀತಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೈಶಕ್ತಿಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 4 ಆಣೆ [173-14]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈವಿಸಾರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಸಚಿತ್ರ ಶುಕಸಪ್ತತಿ ಕಥೆಗಳು

(೭೦ ಕಥೆಗಳು) (ಅಪೂರ್ವ ಗ್ರಂಥ) (೫೧೦ ಪುಟಗಳು)

ಶುಕಮಹರ್ಷಿಗಳು ಲೋಕದ ಜನರಿಗೆ ಸುಲಭವಾಗಿ ತಿಳಿಯುವಂತೆ ವೇದಶಾಸ್ತ್ರಸಮ್ಮತವಾದ ಧರ್ಮಗಳನ್ನೂ ವಿವಿಧ ನೀತಿಗಳನ್ನೂ ಕಥೆಗಳ ಮೂಲಕ ಸಂಸ್ಕೃತ ಭಾಷೆಯಲ್ಲಿ ಹೇಳಿರುವರು ಈ ಕಥೆಗಳನ್ನು ಭಾಷಾಂತರಮಾಡಿ ಕನ್ನಡದಲ್ಲಿ ರಚಿಸಿದೆ (1) ಗೃಹಸ್ಥಾಶ್ರಮದಲ್ಲಿ ಅವಶ್ಯಕವೆನಿಸುವ ಧರ್ಮ, ಕರ್ಮ, ಸತ್ಯ ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಲೌಕಿಕರಿಗೆ ಬೋಧಿಸುವದು (2) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, ಸನ್ಮಾರ್ಗಪ್ರವರ್ತನೆ, ಬುದ್ಧಿಚಾಂಚಲ್ಯನಿವಾರಣೆ ಮುಂತಾದ್ದನ್ನು ತಿಳಿಸುವದು. (3) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧ ನೀತಿ ಮುಂತಾದವುಗಳನ್ನು ಬೋಧಿಸುವದು. (4) ನವರಸಾಲಂಕೃತವಾಗಿ ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಸುಲಭಶೈಲಿಯಿಂದ ಬರೆದಿರುವದರಿಂದ ಪಂಡಿತರು ಪಾಮರರು ಎಂಬ ಭೇದವಿಲ್ಲದೆ ಸರ್ವರಿಗೂ ಗ್ರಾಹ್ಯಯೋಗ್ಯವಾಗಿರುವದು (5) ಅಲ್ಲಲ್ಲಿ ಕಥಾ ಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುವದರಿಂದ ಓದು ಬಾರದವರಿಗೂ ಮನೋರಂಜಿತವಾಗಿರುವದು. ಹೀಗೆ ಸಮಸ್ತರಿಗೂ ಉಪಯೋಗವಾಗಿರುವದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿ ಇರತಕ್ಕ ಪುಸ್ತಕವಾಗಿದೆ ಇದರ ಕ್ರಯ ಪ್ರತಿ 1 ಕ್ಕೆ 1-8-0, ಟಪ್ಪಾಲು ಹಾಸಲು 4 ಆಣೆ.

(೩೪ ಸಂಧಿಗಳು) **ಸಟೀಕಾ ತಾತ್ಪರ್ಯ ಜೈಮಿನೀ ಭಾರತವು.** (೯೩೦ ಪುಟಗಳು)

ಪದ್ಯರೂಪದಲ್ಲಿರುವ ಈ ಮಹಾಗ್ರಂಥವನ್ನು ಸುಲಭವಾಗಿ ತಿಳಿದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಂಪೂರ್ಣ 34 ಸಂಧಿಗೂ ಪ್ರತಿಪದ ಟೀಕಾ, ಕಥಾರೂಪವಾದ ತಾತ್ಪರ್ಯ, ಸಂಧಿ ಸಮಾಸಗಳು, ಛಂದೋವರ್ಣನೆ, ಶ್ಲೇಷಾರ್ಥ, ಅಲಂಕಾರ ವಿಶೇಷ ಇತ್ಯಾದಿಗಳನ್ನು ಸರಸವಾಗಿ ವಿಂಗಡಿಸಿ ರಚಿಸಿದೆ

ಇದರ ಕ್ರಯ ಪ್ರತಿ 1 ಕ್ಕೆ ರೂ. 4, ಟಪಾಲು ಹಾಸಲು 10 ಆಣೆ. ಇವುಗಳಲ್ಲದೆ ಅನೇಕ ವಿಧವಾದ ಕಥೆ, ಕಾವ್ಯ, ನಾಟಕ, ಯಕ್ಷಗಾನ, ವೈದ್ಯ ಮುಂತಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್) ಗೆ ಬರೆದರೆ ಉಚಿತವಾಗಿ ಕಳುಹಿಸುವೆವು [127-34]

ನಮ್ಮ ವಿಳಾಸ—ಎಮ್. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

1914ನೇ ವರ್ಷದ ಕೆಲೆಂಡರು 1914.

ರಮಣೀಯಕರವಾದ ಸ್ತ್ರೀಯ ನಕ್ಷೆಯುಳ್ಳದು.

ಇಂಥಾ ಸುಂದರವಾದ ಕೆಲೆಂಡರು ಎಲ್ಲಿಯೂ ದೊರಕಲಾರದು ಒಂದರ ಕಿಮ್ಮತ್ತು 0-1-0 ೧ಕ್ಕೆ 1-0-0 ೧೦ಕ್ಕೆ 1-10-0 ಪೋಸ್ಟು ಖರ್ಚು ಮಾಫಿ ಜನವರಿ ಆಖೈರು ವರೆಗೆ

ಅಮೃತಾಂಜನ್.

ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಡುತ್ತವೆ ಎಲ್ಲಾ ತರದ ನೋವುಗಳ ಮೇಲೆ ದಿವ್ಯಾಮೃತ ಬಾಟ್ಲಿ ಒಂದಕ್ಕೆ 0-8-0, ಡಜನ್ 1 ಕ್ಕೆ 5-1 0 ಟಪಾಲ್ ಖರ್ಚು ಪ್ರತ್ಯೇಕ [12-11]

ವಿಳಾಸ —ಅಮೃತಾಂಜನ ಡಿಪೋ, ಫೋರ್ಟ್, ಬೊಂಬಾಯಿ.

ನೋಟೀಸು

ಅಮೃತಸಾರದ ನ್ಯಾಷನಲ್ ಇನ್‌ಷುರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯ

ಷೇರುದಾರರಿಗೂ, ಡಿಪಾಜಿಟ್‌ದಾರರಿಗೂ, ಪಾಲಸಿ ಹೋಲ್ಡರುಗಳಿಗೂ, ಇತರ ಕಕ್ಷಿಗಾರರಿಗೂ ತಿಳಿಯಪಡಿಸುವುದೇನೆಂದರೆ:

ಪೀಪಲ್ಸ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅಮೃತಸಾರ ಬ್ಯಾಂಕು-ಇವೆರಡು ಬ್ಯಾಂಕೂ ಲೇವಾದೇವಿಯನ್ನು ನಿಲ್ಲಿಸಿಟ್ಟವೆಂದು ನಮ್ಮ ಕಂಪನಿಯ ಡೈರೆಕ್ಟರುಗಳು ನಿಮಗೆ ತಿಳಿಸಲು ವಿಷಾದಪಡುತ್ತಾರೆ ಈ ಸಮಾಚಾರವು ಇತರ ಬ್ಯಾಂಕುಗಳ ಡಿಪಾಜಿಟ್‌ದಾರರಲ್ಲೂ ಷೇರುದಾರರಲ್ಲೂ ಬಹಳ ಗಾಬರಿಯನ್ನೂ ಕಳವಳವನ್ನೂ ಉಂಟುಮಾಡಿರಬೇಕು ಈಗ ನಿಮಗೆ ನಿಮ್ಮ ಬ್ಯಾಂಕಿನ ವಿಷಯದಲ್ಲೂ ಕಳವಳ ಉಂಟಾಗಿರುವುದು ಸ್ವಾಭಾವಿಕವಾಗಿಯೇ ಇದೆ ಇಂಥಾ ಸಮಯದಲ್ಲಿ ನಿಮ್ಮ ಡೈರೆಕ್ಟರುಗಳು ನಿಮಗೆ ನಂಬಿಕೆಯಾಗಿ ಹೇಳುವುದೇನೆಂದರೆ —ನಿಮ್ಮ ಬ್ಯಾಂಕಿನ ಸ್ಥಿತಿಗತಿಯು ಬಹಳ ಭದ್ರವಾಗಿಯೂ, ಸುರಕ್ಷಿತವಾಗಿಯೂ ಇರುವುದು ಎಷ್ಟು ಮಟ್ಟಿನ ಬೇಡಿಕೆಗಳು ಬಂದಾಗ್ಯೂ ಪಾವತಿಮಾಡಲು ನಿಮ್ಮ ಬ್ಯಾಂಕಿನಲ್ಲಿ ಬೇಕಾದಷ್ಟು ದ್ರವ್ಯವನ್ನು ಇಟ್ಟುಕೊಂಡಿದಾರೆ ಈ ಬಾಗದಲ್ಲಿ ನಿಮ್ಮ ಬ್ಯಾಂಕಿಗೆ ಯಾವ ಕಷ್ಟದೆಸೆಯೂ ಬರುವಹಾಗಿಲ್ಲವೆಂದು ನಿಂದಿತವಾಗಿ ತಿಳಿಯಿರಿ ನ್ಯಾಷನಲ್ ಇನ್‌ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯು ಈಚಿಗೆ ಒಂದು ಲಕ್ಷ ರೂಪಾಯನ್ನು ಇಂಡಿಯಾ ಗವರನ್‌ಮೆಂಟಿನಲ್ಲಿ ಠೇವಣಿ ಇಟ್ಟಿರುತ್ತದೆ

ಇದಲ್ಲದೆ ಪೀಪಲ್ಸ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅಮೃತಸಾರ ಬ್ಯಾಂಕ್-ಇವೆರಡರಿಂದಲೂ ನಿಮ್ಮ ಬ್ಯಾಂಕಿಗೆ ಯಾವ ಋಣವೂ ಸಾಲ ಬರಬೇಕಾದ ಬಾಕಿ ಇರುವುದಿಲ್ಲವೆಂಬುದನ್ನು ನಿಮ್ಮ ಡೈರೆಕ್ಟರುಗಳು ಈ ಸಂದರ್ಭದಲ್ಲಿ ನಿಮಗೆ ತಿಳಿಸದೆ ಇರಲಾರರು

ನಮ್ಮ ಬ್ಯಾಂಕೂ ಅಮೃತಸಾರ ಬ್ಯಾಂಕೂ ಅಮೃತಸಾರ ನಗರದಲ್ಲೇ ಹೆಡ್ ಕ್ವಾರ್ಟರಾ ಆಫೀಸುಗಳನ್ನು ಪಡೆದಿರೋಣಾದರಿಂದ ಕೆಲವು ಜನರು ಅದೇ ನಮ್ಮ ಬ್ಯಾಂಕೆಂದು ಭ್ರಾಂತಿಪಡುತ್ತಿದಾರೆ ಅಮೃತಸಾರ ಬ್ಯಾಂಕ್ ಎನ್ನುವುದು ಬೇರೆ ನಮ್ಮದು ಬೇರೆ, ನಮ್ಮ ಬ್ಯಾಂಕಿಗೂ ಅದಕ್ಕೂ ಸ್ಥಳದ ಹೆಸರು ಒಂದೇ ಆಗಿರುವುದಲ್ಲದೆ ಇನ್ನಾವ ವಿಧದಲ್ಲೂ ಒಂದಕ್ಕೊಂದಕ್ಕೆ ಏನೇನೂ ಸಂಬಂಧವಿಲ್ಲ

ನಿಮ್ಮ ಡೈರೆಕ್ಟರುಗಳು ನಿಮ್ಮ ಬ್ಯಾಂಕಿನ ಕಾರುಬಾರುಗಳನ್ನು ಸಾಧ್ಯವಾದ ಮಟ್ಟಿಗೂ ಒಳ್ಳೇ ಹಿತಕರವಾದ ರೀತಿಯಲ್ಲಿ ನಡೆಸುತ್ತಾ ಬಂದಿದಾರೆಂದೂ, ನೀವು ಅವರ ವಿಷಯದಲ್ಲೂ ನಿಮ್ಮ ಬ್ಯಾಂಕಿನ ವಿಷಯದಲ್ಲೂ ಇದುವರೆಗೆ ಯಾವ ರೀತಿಯಲ್ಲಿ ಸಂಪೂರ್ಣವಾದ ನಂಬಿಕೆ ಭರವಸೆ ಇಟ್ಟುಕೊಂಡು ಬಂದಿದೀರೋ ಇನ್ನು ಮುಂದೆಯೂ ಅದೇ ರೀತಿ ಇರುತ್ತೀರೆಂದೂ ಭರವಸೆಯುಳ್ಳವರಾಗಿದಾರೆ [216-7]

ಟಿ. ಎಸ್. ಆರ್. ಅಯ್ಯರ್.
ಸೆಕ್ರೆಟರಿ, ಮದರಾಸ್ ಬ್ರಾಂಚ್

ಪಿ. ಎಲ್. ರಾಜಪಾಲ್, ಬಿ.ಎ.,
ಚೀಫ್ ಮ್ಯಾನೇಜರ್

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 1,00,000.

(INCORPORATED UNDER THE MYSORE COMPANIES REGULATION No III OF 1895)

CAUTION —Before you go in for a Provident, Life or Marriage Policy, please ask for a copy of our Company's prospectus, which will explain to you the mode of the working of the present day provident companies in India and enables you to select a good institution where your hard earned money will be safe

Absolute Security, Attractive Schemes Soundest Principles

Wanted Chief Agents and agents throughout India on Commission and Salary For prospectuses, etc, please apply to

Mr. M L. NAGANNAH,
Managing Agent, MYSORE.

A NOVELTY OF THE TWENTIETH CENTURY!

THE MYSORE GOVERNMENT SECURITY

MUTUAL PROPERTY INVESTMENT COMPANY, LTD.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No. III OF 1895)

BANKING:—Every sort of banking business transacted The company's shares are most valuable and are within the reach of all

Land and house purchase and investment policies are a speciality of the company, by which the company advances loans on the security of immoveable properties to purchase houses and lands, or to liquidate prior debts, and recovers the same by easy monthly instalments

WANTED

Four local directors for each and every taluk of the Mysore Province on liberal terms to represent the company Only men of position and influence need apply For prospectuses, etc, please apply to

[101-8]

Mr. M. L. NAGANNAH,
Managing Agent, MYSORE.

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

14—11—1913 ರಿಂದ 21—11—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು.	ಕಾಲರಾ ಸತ್ತದ್ದು.
ಬೆಂಗಳೂರು ಪಟ್ಟಣ	0	1	0	0
ಮೈಸೂರು ,,	0	0	0	0
ಬೆಂಗಳೂರು ಡಿಸ್ಟ್ರಿಕ್ಟು	7	7	0	0
ಮೈಸೂರು ,,	18	38	4	3
ಕೋಲಾರ್ ,,	12	8	0	0
ಕೋಲಾರ್ ಚಿನ್ನದ ಗಣಿಗಳು	4	4	0	0
ತುಂಕೂರು ಡಿಸ್ಟ್ರಿಕ್ಟು	6	1	0	0
ಹಾಸನ ,,	6	6	0	0
ಚಿತ್ರದುರ್ಗ ,,	0	0	0	0
ಕಡೂರ್ ,,	12	11	0	0
ಶಿವಮೊಗ್ಗ ,,	20	12	0	0
ಜುಮ್ಲಾ	114	91	1	3

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ಹೇಮಂತಋತೌ ಮಾರ್ಗಶಿರ ಶುದ್ಧ ಸಪ್ತಮಿ ಶುಕ್ರವಾರದಿಂದ ಮಾರ್ಗಶಿರ ಶುದ್ಧ ತ್ರಯೋದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಡಿಸೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಶ್ಚಿಕ ಮಾಸ ತೇದಿ
5	ಶುಕ್ರ	ಸಪ್ತಮಿ	2 52	ಶತಭಿಷ	33-53	20
6	ಶನಿ	ಅಷ್ಟಮಿ	7 31	ಪೂಭಾ	40 1	21
7	ಭಾನು †	ನವಮಿ	12 19	ಉ‌ಭಾ	46-38	22
8	ಸೋಮ §	ದಶಮಿ	18-17	ರೇವತಿ	3 18	23
9	ಮಂಗಳ *	ಏಕಾದಶಿ	23 28	ಅಶ್ವಿನಿ	59-29	24
10	ಬುಧ ,	ದ್ವಾದಶಿ	37-54	ಭರಣಿ	60 0	25
11	ಗುರು ‡	ತ್ರಯೋದಶಿ	31-31	ಭರಣಿ	1-12	26

ದಗ್ಧಯೋಗ, ಮಳೆ ನಕ್ಷತ್ರ—ಜ್ಯೇಷ್ಠ 2 ನೇ ಪಾದ † ದಶಮೀತಿಥಿ. § ಶೂನ್ಯತಿಥಿ, ಮಳೆ ನಕ್ಷತ್ರ—ಜ್ಯೇಷ್ಠ 3 ನೇ ಪಾದ * ಏಕಾದಶೀತಿಥಿ, ಸರ್ವತ್ರ ಏಕಾದಶೀ, ಅಮೃತಸಿದ್ಧಿಯೋಗ ,, ಕೈಶಿಕದ್ವಾದಶೀ ‡ ಪ್ರದೋಷ, ಮಾರ್ಗಶಿರಲಕ್ಷ್ಮೀವ್ರತ, ಹನುಮಜ್ಜಯಂತಿ, ಶಿವದೀಪ

ಪೇಟೇ ಧಾರಣೆ

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೪ ೪-೦	೧೭-೦-೦
ಕೆಂಬೂತಿ ಅಕ್ಕಿ ಅವಲ್	೧೫-೦ ೦	೧೭-೮-೦
ಜಾಪತ್ರೆ ಅಕ್ಕಿ	೧೪-೪ ೦	೧೬-೮-೦
ಸಣ್ಣಕ್ಕಿ ಅವಲ್	೧೭-೦-೦	೧೭-೮-೦
,, ದುಯಂ	೧೬ ೦-೦	೧೬ ೧೨-೦
ತೊಗರಿ ಬೇಳೆ ಅವಲ್ ಪಲ್ಲಾ ೧ಕ್ಕೆ	೧೬ ೦ ೦	೧೬ ೪-೦
,, ದುಯಂ ,,	೧೪ ೦-೦	೧೪-೦-೦
ಪೈರ್ ರಾಗಿ ಪಲ್ಲಾ ೧ಕ್ಕೆ	೭ ೧೨ ೦	೫-೧೦-೦
ಕಾರ್‍ರಾಗಿ ,,	೬ ೮ ೦	೬ ೧೨-೦
ಜೋಳ ,,	೭-೪-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ	೧೩ ೦-೦	೧೪-೦-೦
ಬೇಳೆ ಅವರೆ ,,	೧೩-೦ ೦	೧೨-೦-೦
ಹೆಸರು ,,	೧೩-೪ ೦	೧೪-೦-೦
ಉದ್ದು ,,	೧೫-೦ ೦	೧೬ ೮-೦
ಕಡಲೆ ,,	೧೪-೪ ೦	೧೩-೦-೦
ಎಳ್ಳು ಸೇರು ೧೨೮ಕ್ಕೆ	೨೧ ೮ ೦	೨೪ ೦-೦
ಹುರುಳಿ ಪಲ್ಲಾ ೧ಕ್ಕೆ	೯ ೪ ೦	೭ ೧೦-೦
ಹರಳು ೧೨೮ ಸೇರಿಗೆ	೧೨ ೦-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೩-೬-೦
ಮೆಣಸಿನಕಾಯಿ ,,	೩-೪-೦	೩-೪-೦
,, ದುಯಂ	೩ ೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫ ೦ ೦	ಮಣ ೬-೪-೦
ಒಳ್ಳೆಣ್ಣೆ ಮಣ ೧ಕ್ಕೆ	೬-೨-೦	೬ ೮-೦
ಹರಳೆಣ್ಣೆ ,, ,,	೫-೨-೦	೬-೦-೦
ಕಡಲೇಕಾಯಿ ಎಣ್ಣೆ	೫ ೪ ೦	೬-೪-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫ ೦ ೦	೬-೪-೦
ಉಪ್ಪು ,, ,,	೬ ೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೨ ೪ ೦	೧-೪-೦
ತುಪ್ಪ ಧಾರಾಪುರದ್ದು ಮಣ ೧ಕ್ಕೆ	೧೮ ೦-೦	೨೨ ೮-೦
,, ಬೆಣ್ಣೆ ಕಾಸಿದ್ದು ,, ,,	೧೯-೫ ೦	
ಸೀಮೆಎಣ್ಣೆ ಪೆಟ್ಟಿ ೧ಕ್ಕೆ	೫ ೧೨ ೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೭ ೪-೦	೬-೪-೦
ಅಳಲೇಕಾಯಿ ಮಣ ೧ಕ್ಕೆ	೧-೦-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೧ ೧೨-೦	೧-೮-೦
ಚಿನ್ನ (ಪೌನ್) ಕೆಂಪು	೧೫ ೮ ೦	೧೫-೮-೦
,, ,, ಪಸಿಮೆ	೧೫ ೧೪ ೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೦ ೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧ ೦-೦	೮೧ ೩-೩

ಬ್ರಾಹ್ಮಣರ ಶ್ರೇಣಿಯಲ್ಲಿರುವ ಮನೆ.

ಮೈಸೂರು ಹಳ್ಳದಕೇರಿಯಲ್ಲಿ ನಾರ್ಮಲ್ ಸ್ಕೂಲಿಗೆ ಪಶ್ಚಿಮ ಭಾಗದಲ್ಲಿರುವ ಎರಡು ಅಂತಸ್ತಿನ ತಾರಸಿ ಮಹಡಿಮನೆ ತ್ಯಾಗದಮರ ಸುಟ್ಟ ಇಟ್ಟಿಗೆ ಗಾರೆಯಿಂದ ಮಜಬೂತಾಗಿ ಕಟ್ಟಿರುವ ಕಟ್ಟಡವು ಖರೀದಿಗೆ ಕೊಡಲ್ಪಡುತ್ತೆ. ಇಷ್ಟವುಳ್ಳವರು ಕೆಳಗಿನ ವಿಳಾಸದಾರರಿಗೆ ಬರೆದು ಬೆಲೆಯನ್ನು ತಿಳಿದು ತೆಗೆದುಕೊಳ್ಳಿರಿ.

ಜಿ ರಾಮಯ್ಯ, ಕ್ಯಾಷ್ ಬಜಾರ್, ಬೆಂಗಳೂರು ಸಿಟಿ.

ಭತ್ತ ಕುಟ್ಟುವ ಯಂತ್ರಗಳು.

ಡಗ್ಲಸ್ ಮತ್ತು ಗ್ರಾಂಟ್ ಕಂಪನಿಯಲ್ಲಿ ತಯಾರಾಗುವ ಭತ್ತ ಕುಟ್ಟುವ ಯಂತ್ರಗಳೇ ಉತ್ತಮೋತ್ತಮವಾಗಿವೆ. ಈ ಕಂಪನಿಗೆ 60 ವರುಷದ ಅನುಭವವುಂಟು. ಅವರೇ ಪ್ರಪಂಚದ ಕಾರೀಗಾರರಲ್ಲಿ ಬಹಳ ಪ್ರಖ್ಯಾತಿಪಡೆದವರು. ಅವರ ಯಂತ್ರಗಳು ಎಲ್ಲೆಲ್ಲೂ ಉಪಯೋಗದಲ್ಲಿವೆ.

ಹೆಚ್ಚು ವಿಷಯ ತಿಳಿಯಬೇಕಾದವರು

ಡಗ್ಲಸ್ ಅಂಡ್ ಗ್ರಾಂಟ್, ಲಿಮಿಟೆಡ್,

ತಂಜಾವೂರು ಎಂಬೀ ವಿಳಾಸಕ್ಕೆ ಬರೆದುಕೊಳ್ಳಿ.

ಅವರು ನಿಪುಣರಾದ ಕಾರೀಗಾರರನ್ನು ಕಳುಹಿಸುತ್ತಾರೆ. ಎಲ್ಲಾ ತರದ ಮಿಲ್ಲು (ಯಂತ್ರ) ಗಳನ್ನೂ ಒದಗಿಸಬಲ್ಲರು. [255 1]

Bangalore Christmas Fete and INDUSTRIAL EXHIBITION OF 1913

ಬೆಂಗಳೂರು ಕ್ರಿಸ್ತಮಸ್ ಫೀಟ್ ಅಂಡ್ ಇಂಡಸ್ಟ್ರಿಯಲ್ ಎಕ್ಸಿಬಿಷನ್ ೧೯೧೩.

[253 1]

ಇದೇ ಡಿಸೆಂಬರ್ ತಿಂಗಳು ೨೦ ನೆಯ ತಾರೀಖಿನಿಂದ ನಡೆಯುವ ಪ್ರದರ್ಶನದಲ್ಲಿ ಕೈಗಾರಿಕೆ ಮತ್ತು ಇತರ ಸಾಮಾನುಗಳನ್ನು ಪ್ರದರ್ಶಿಸಲಿಚ್ಛೈಸುವವರು ಕೂಡ್ಲೆ ಈ ಕೆಳಗೆ ನಮೂದಿಸಿರುವ ಯಾರಾದರೂ ಒಬ್ಬರಿಗೆ ಅವರವರಿಗೆ ಬೇಕಾಗುವ ಸ್ಥಳದ ವಿಚಾರದಲ್ಲೂ ಮತ್ತು ಇತರ ವಿಷಯಗಳಲ್ಲೂ ಬರೆದುಕೊಳ್ಳಬಹುದು. ಸ್ಥಳಸಂಕೋಚವಿರುವದರಿಂದ ಜಾಗ್ರತೆಮಾಡಿದರೆ ಅನುಕೂಲವುಂಟು.

ಬೆಂಗಳೂರು, 1-12 1913

ಬಿ ಕೆ ಗರುಡಾ ಚಾರ್, ಚಿಕ್ಕಪೇಟೆ, ಬೆಂಗಳೂರು ಸಿಟಿ

ಯಂ ಯೂನಸ್ ಸೇಟ್, ಇಕ್ಪೆಂಟ್ರಿ ರೋಡ್, ಬೆಂಗಳೂರು

(ವೈಸ್ ಪ್ರೆಸಿಡೆಂಟರು, ಇಂಡಸ್ಟ್ರಿಯಲ್ ಇಲಾಖೆ)

ದಿ ನ್ಯಾಷನಲ್ ಇನ್ಷುರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿ, ಲಿಮಿಟೆಡ್, ಅಮೃತಸರ್

ನೋಟೀಸ್.

ಮ|| ಗಳಾದ ಎ. ರಾಮರಾಯರನ್ನೂ ಕೆ ಅನಂತರಾಮಯ್ಯನವರನ್ನೂ ಮೈಸೂರು ಮತ್ತೂ ಕೊಡಗು ಸೀಮೆಗಳ ಚೀಫ್ ಏಜಂಟರುಗಳಾಗಿಯೂ, ಮ|| ಡಿ. ಶೇಷಗಿರಿರಾಯರನ್ನು ಕೋಲಾರ ಮತ್ತೂ ಬೆಂಗಳೂರು ಡಿಸ್ಟ್ರಿಕ್ಟುಗಳ ಚೀಫ್ ಏಜಂಟರಾಗಿಯೂ ನೇಮಕಮಾಡಲಾಗಿದೆ ಎಂದು ತಿಳಿಯತಕ್ಕದ್ದು.

ಪಿ ಎಲ್ ರಾಜಪಾಲ್,
ಚೀಫ್ ಮಾನೇಜರ್

[239 1]

ಜ್ವರದ ಔಷಧ ಪುಗಸಟ್ಟೆ ಕೊಡುವುದು.

ಮಲೇರಿಯಾ ಎಂಬ ಛಳಿಜ್ವರವನ್ನು ಪರಿಹಾರಮಾಡತಕ್ಕ "ಕ್ವಿನೈನ್" ಎಂಬ ಔಷಧದ ಪೊಟ್ಟಣಗಳನ್ನು ಸರ್ಕಾರದವರು ಎಲ್ಲಾ ಗ್ರಾಮಗಳ ಪಟೇಲರಲ್ಲಿ ವಿಕ್ರಯಮಾಡುವುದಕ್ಕೆ ಕೊಟ್ಟಿದ್ದ ಅಂಶವು ಸರ್ವರಿಗೂ ತಿಳಿದೇ ಇರುತ್ತದೆ. ಆದರೆ ಈಗ ಸರ್ಕಾರದವರು ಆ ಔಷದ ಪೊಟ್ಟಣಗಳನ್ನು ಧರ್ಮಾರ್ಥವಾಗಿ ಕೊಡುವ ಏರ್ಪಾಡುಮಾಡಿರುತ್ತಾರೆ. ಇದ್ದರಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಅನೇಕ ಗ್ರಾಮಸ್ಥರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—ಅವರು ವಾಸಿಸತಕ್ಕ ಗ್ರಾಮಗಳಲ್ಲಿ ಮಲೇರಿಯಾ ಎಂಬ ಛಳಿಜ್ವರ ವ್ಯಾಧಿಯು ಇದ್ದಲ್ಲಿ ಅಂಥ ಗ್ರಾಮಸ್ಥರು ಸದರಿ ಗ್ರಾಮದ ಪಟೇಲರ ಮೂಲಕವೇ ಆಗಲಿ, ಅಥವಾ ಸ್ಕೂಲುಮೇಷ್ಟರ ಮೂಲಕವೇ ಆಗಲಿ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಕಾಗದ ಬರೆದಲ್ಲಿ 'ಕ್ವಿನೈನ್' ಎಂಬ ಔಷದದ ಪೊಟ್ಟಣಗಳನ್ನು ಉಚಿತವಾಗಿ ಕಳುಹಿಸಲಾಗುವುದು.

ಬೆಂಗಳೂರು, 2 12 1913

ವಿ ಮುತ್ತುಸ್ವಾಮಿದಾಸ್,
ಡಿ|| ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರ್

ನಿಮ್ಮ ಹತ್ತಿರ ಹೂವಿನ ತೋಟವಿರಬೇಕೋ? ಹಾಗಾದರೆ

ಆಟೋ ಮೋಹಿನಿ

ಎಂಬ ಲೋಕಪ್ರಖ್ಯಾತವಾದ ಪರಿಮಳವನ್ನೇ ಕೊಂಡುಕೊಳ್ಳಿ. ನಾಕ್ಕೇ ತೊಟ್ಟು ನಿಮ್ಮ ಕರವಸ್ತ್ರಕ್ಕೆ ಚಿಮುಕಿಸಿಕೊಂಡರೆ ನಾಲ್ಕು ದಿನ ತಾಜ ಪರಿಮಳದ ಸುಗಂಧವಿದ್ದೀತು. ಅದರ ಮನೋಹರ ವಾಸನೆಯನ್ನೂ ಪುಷ್ಪಶ್ರೇಷ್ಠತೆಯನ್ನೂ ಶಾಶ್ವತ ಸ್ವಭಾವವನ್ನೂ ಮೆಚ್ಚಿ ಬಹು ಸಂತೋಷದಿಂದ 1913 ನೇ ಮೈಸೂರು ದಸರಾ ಎಗ್ಸಿಬಿಷನ್‌ನಲ್ಲಿ ಅವಕ್ಕೆ ಬಂಗಾರದ ಮೆಡಲನ್ನು ಬಹುಮಾನ ಕೊಟ್ಟಿದ್ದಾರೆ. ಆ ರೀತಿ ಈ ಸುವಾಸನೆಯು ನಿಲ್ಲದೆ ಆರಿಹೋದದ್ದನ್ನು ರುಜುವಾತುಪಡಿಸತಕ್ಕವರಿಗೆ ನ್ಯಾಯದಲ್ಲಿ 100 ರೂಪಾಯಿ ಬಹುಮಾನಕೊಡುವೆವೆಂದು ಚಾಲೆಂಜ್ ಕೊಡುತ್ತೇವೆ. ಸಣ್ಣ ಸೀಸೆಯ ಪರಿಮಳವನ್ನು ತರಿಸಿ ಪರೀಕ್ಷೆಯಿಂದ ಇನಾಂ ಪಡೆಯಿರಿ.

ಕ್ರಯ ಅರ್ಧ ಔನ್ಸ್ ಸೀಸೆಗೆ ರೂ 2 0 0

" ಒಂದು ಡ್ರಾಮ್ " " 0 12 0

ಆಟೋ ಮೋಹಿನಿ ಪರಿಮಳವುಳ್ಳ ಕಾರ್ಡು 1 ಡಜನ್‌ಗೆ 0 12 0

ಪ್ರೊಪ್ರೈಟರು—ದಿ ಓರಿಯಂಟಲ್ ಡ್ರಗ್ ಕೆಮಿಕಲ್ ಕಂಪನಿ,
ಏಜಂಟರು—ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
[251-1] 177, ಜೈನಾ ಬಜಾರ್ ರೋಡ್, ಮದರಾಸ್

ವೃತ್ತಾಂತ ಪತ್ರಿಕೆ

ಸನ್ ೧೯೧೩ ನೇ ಇಸವಿ ಡಿಸೆಂಬರ್, ತಾ ೪ ನೇ ಗುರುವಾರ

ದಕ್ಷಿಣ ಆಫ್ರಿಕದಲ್ಲಿ ನಮ್ಮ ದೇಶೀಯರ ಪಾಡು.

ದಕ್ಷಿಣ ಆಫ್ರಿಕದಿಂದ ದಿನವಹಿ ಅನೇಕ ತಂತೀವರ್ತಮಾನಗಳು ಬರುತ್ತಲಿವೆ, ಈ ವರ್ತಮಾನಗಳು ಒಂದಕ್ಕೊಂದು ಅಸಮಂಜಸವಾಗಿಯೂ, ವಿರೋಧವಾಗಿಯೂ ಇರೋಣದರಿಂದ ಅಲ್ಲಿರುವ ನಮ್ಮ ಸಹೋದರ ವರ್ಗಕ್ಕೆ ಸೇರಿದ ಭಾರತೀಯರ ಸ್ಥಿತಿಗತಿ ಏನಾಗಿದೆಯೋ ಖಚಿತವಾಗಿ ತಿಳಿದು ಹೇಳುವುದು ಕಷ್ಟವಾಗಿದೆ. ನಮಗೆ ತಿಳಿದಿರುವ ಮಟ್ಟಿಗೆ ಅಲ್ಲಿನ ಸ್ಥಿತಿಗತಿಯನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸುವೆವು.

ನಮ್ಮ ದೇಶದ ಬೇರೆ ಬೇರೆ ಕೋಮುಗಳ ಮತ್ತೂ ಕಸಬುಗಳ ಪ್ರಜೆಗಳು ಆರ್ಷೇಯದಿಂದಲೂ ದಕ್ಷಿಣ ಆಫ್ರಿಕಕ್ಕೆ ಹೋಗಿ ಬರುವುದುಂಟು. ಅವರಿಗೆ ಅಲ್ಲಿ ನಾನಾ ಜೀವನೋಪಾಯಗಳು ದೊರಕುವವು. ಮತ್ತೂ ಅಂಥಾ ಅನೇಕ ಜನರು ಅಲ್ಲಿ ತಕ್ಕಮಟ್ಟಿಗೆ ದ್ರವ್ಯಸಂಪಾದನೆಯನ್ನೂ ಮಾಡಿಕೊಂಡಿದ್ದಾರೆ. ಅಲ್ಲಿ ಒಳ್ಳೇ ಸಂಪಾದನೆ ಇದೆ ಎಂದು ಮದರಾಸ್ ಅಧಿಪತ್ಯದಲ್ಲೂ ನಮ್ಮ ದೇಶದ ಇತರ ಕಡೆಗಳಲ್ಲೂ ಪ್ರಚಾರವಾಗಿ, ಅನೇಕಾನೇಕರು ದಕ್ಷಿಣ ಆಫ್ರಿಕಕ್ಕೆ ಹೋದರು. ಇವರೆಲ್ಲಾ ಸಾಮಾನ್ಯವಾಗಿ ಕೀಳು ಜಾತಿಯವರಾಗಿದ್ದು, ಸಮುದ್ರಯಾನದ ಕಟ್ಟನ್ನು ಲಕ್ಷ್ಯಮಾಡತಕ್ಕವರಲ್ಲವೆಂದು ಹೇಳಬಹುದು.

ಈ ಪ್ರಕಾರ ನಮ್ಮ ದೇಶದಿಂದ ಹೋದವರು ದಕ್ಷಿಣ ಆಫ್ರಿಕದಲ್ಲಿ ಸಾಮಾನ್ಯವಾಗಿ ಕೂಲಿನಾಲಿ ಮಾಡುವವರಾಗಿಯೂ, ಕೆಲವರು ಅಂಗಡಿಮುಂಗಟ್ಟುಗಳನ್ನಿಟ್ಟು ಕೊಂಡು ವ್ಯಾಪಾರ ಮಾಡುವವರಾಗಿಯೂ ಇರುತ್ತಾರೆ. ಈ ಕೆಲಸಗಳಲ್ಲಿ ಕ್ರಮೇಣ ಇವರಿಗೂ, ಅಲ್ಲಿನ ಸ್ಥಳವಾಸಿಗಳಾದ ಬೋಅರರಿಗೂ, ಗ್ರೇಟ್ ಬ್ರಿಟನ್ನಿಂದ ಹೋಗಿರುವ ಇಂಗ್ಲಿಷ್ ಜನರಿಗೂ ಪ್ರತಿಸ್ಪರ್ಧೆಯು ಸ್ವಭಾವವಾಗಿ ಉಂಟಾಗಿ, ಅವರಿಗೂ ನಮ್ಮ ದೇಶೀಯರಿಗೂ ಪರಸ್ಪರ ಹೋರಾಟಕ್ಕೂ ವೈಷಮ್ಯಗಳಿಗೂ ಅವಕಾಶ ಹುಟ್ಟಿ ಬೆಳೆಯುತ್ತಾ ಬಂದವು.

ಈ ಹೋರಾಟಗಳಲ್ಲಿ ಅಲ್ಲಿರುವ ನಮ್ಮ ದೇಶೀಯರಾಗಲಿ ಅವರ ಎದುರುಪಕ್ಷದವರಾಗಲಿ ಧರ್ಮವಾಗಿಯೂ ವಿವೇಕದಿಂದಲೂ ವರ್ತಿಸಲಿಲ್ಲವೆಂದು ನಮಗೆ ತೋರುತ್ತದೆ. ಆದರೆ ಅಲ್ಲಿನವರು ನಮ್ಮ ದೇಶೀಯರನ್ನು ಅಧಮವಾದ ಕೆಲವು ನಿರ್ಬಂಧಗಳಿಗೆ ಗುರಿಮಾಡಿ, ಅವರ ಮೇಲೆ ಅನ್ಯಾಯವಾದ ತೆರಿಗೆಗಳು ಮುಂತಾದ ಭಾರಗಳನ್ನು ಹಾಕಿ ಪೀಡಿಸುವರು. ನಮ್ಮ ದೇಶೀಯರು ಈ ಪಕ್ಷಪಾತವುಳ್ಳ ನಿರ್ಬಂಧಗಳನ್ನು ನಿವಾರಣೆ ಮಾಡಿಕೊಳ್ಳಬೇಕೆಂಬ ಕುತೂಹಲದಿಂದ ಕಾರ್ಯಸಾಧನೆಮಾಡುತ್ತಾ ಬಂದದ್ದರಲ್ಲಿ ಅವರು ನಡೆಸಿದ ಕಾರ್ಯಗಳೆಲ್ಲಾ ಅಲ್ಲಿನ ರಾಜನೀತಿಗೆ ಅನುಸಾರವಾಗಿಯೂ, ವಿವೇಕಪೂರ್ವಕವಾಗಿಯೂ ಇದ್ದುವೆಂದು ಹೇಳಲು ನಮಗೆ ಖಚಿತವಾಗಿಲ್ಲ. ಹೇಗೂ ಎರಡು ಕಕ್ಷಿಗಳಿಗೂ ಪರಸ್ಪರವಾದ ದ್ವೇಷಾಸೂಯೆಗಳೂ ದಿನಕ್ರಮೇಣ ಹೆಚ್ಚಾಗುತ್ತಾ ಬಂದು, ಈಗ ನಮ್ಮ ದೇಶೀಯರಿಗೆ ಅಲ್ಲಿ ವಿಶೇಷವಾದ ಕಷ್ಟನಷ್ಟಗಳೂ ಅವಮಾನಗಳೂ ಪ್ರಾಪ್ತವಾಗಿರುತ್ತವೆ.

ನಮ್ಮ ಜನರು ಅನೇಕ ಸಂದರ್ಭಗಳಲ್ಲಿ ತಮ್ಮ ಸಹಜವಾದ ಉದ್ಯೋಗಗಳಿಗೆ ಹೋಗದೆ ಕೆಲಸ ಬಿಟ್ಟು ಸಿಟ್ಟು ಪಟ್ಟಿದ್ದಾರೆ, ಅನೇಕರು ತಮ್ಮ ಹದ್ದುಬಸ್ತುಗಳನ್ನು ದಾಟಿ, ಹೋಗದಂತೆ ನಿರ್ಬಂಧಮಾಡಲ್ಪಟ್ಟಿರುವ ಸ್ಥಳಗಳಿಗೆ ಗುಂಪು ಗುಂಪಾಗಿ ಹೋಗುತ್ತಾ ಬಂದಿದ್ದಾರೆ. ಇದನ್ನೆಲ್ಲಾ ಸೈರಿಸಲಾರದೆ ಸ್ಥಳಾಧಿಕಾರಿಗಳು ಅಂಥವರನ್ನು ನೂರಾರು ಗಟ್ಟಲೆ ಹಿಡಿದು ಬಂದಿಖಾನೆಯಲ್ಲಿ ಹಾಕಿಬಿಟ್ಟಿರುವರು. ಇನ್ನು ಒಂದೆರಡು ಕಡೆ ಪೋಲೀಸಿನವರಿಗೂ ನಮ್ಮ ದೇಶೀಯರಿಗೂ ಹೋರಾಟ ನಡೆದು ಕೆಲವರು ಕೊಲ್ಲಲ್ಪಟ್ಟರು, ಹಲವರಿಗೆ ಗಾಯಗಳಾದವು. ಇದನ್ನೆಲ್ಲಾ ನೋಡುವಲ್ಲಿ ಈಗ ಅಲ್ಲಿನ ಸ್ಥಿತಿಯು ವ್ಯಸನವನ್ನುಂಟುಮಾಡುತ್ತಿದೆ. ಎರಡು ಪಕ್ಷದವರೂ ಈ ದುಃಸ್ಥಿತಿಗೂ ಗಲಭೆಗೂ ತಾವು ಕಾರಣರಲ್ಲವೆಂದು ಹೇಳುತ್ತಾ ಎದುರು ಪಕ್ಷದವರ ಮೇಲೆ ತಪ್ಪನ್ನು ಹೊರಿಸುತ್ತಾ ಬಂದಿದ್ದಾರೆ.

ವೈಸ್‌ರಾಯ್ ಮತ್ತೂ ಗವರ್ನರ್ ಜನರಲ್ ರಾದ ಲಾರ್ಡ್ ಹಾರ್ಡಿಂಗ್ ಪ್ರಭುಗಳು ಕಳೆದ ವಾರ ಮದರಾಸಿನಲ್ಲಿದ್ದಾಗ ಮೇಲ್ಕಂಡ ವಿಷಯವನ್ನು ಕುರಿತು ಬಹು ಖಂಡಿತವಾದ ಮಾತುಗಳನ್ನು ಅಪ್ಪಣೆಕೊಡಿಸಿದರು. ಈ ವಿಷಯದಲ್ಲಿ ಧರ್ಮವೂ ನಿಷ್ಪಕ್ಷಪಾತವೂ ಆದ ತನಿಖೆಯು ಅಗತ್ಯವಾಗಿ ನಡೆಯಬೇಕಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಹೋರಾಟವು ಹೀಗಲ್ಲದೆ ಇನ್ನಾವ ರೀತಿಯಲ್ಲೂ ವ್ಯವಸ್ಥೆಯಾಗುವುದಿಲ್ಲವೆಂದು ನಮಗೆ ತೋರುತ್ತದೆ. ಈಗಿನ ಸ್ಥಿತಿಗತಿಯಿಂದ ಯಾವ ಕಕ್ಷಿಯವರಿಗಾಗಲಿ ಏನೊಂದು ಪ್ರಯೋಜನವೂ ಉಂಟಾಗುವದಿಲ್ಲ. ಒಂದು ಪಂಚಾಯತಿ ಏರ್ಪಾಡಾಗಿ ಪಂಚಾಯತರು ಉಭಯಪಕ್ಷದ ವಾದಗಳನ್ನೂ ಕೇಳಿ ತಿಳಿದು, ಇನ್ನುಮುಂದೆ ನಮ್ಮ ದೇಶೀಯರ ವಿಷಯದಲ್ಲಿ ದಕ್ಷಿಣ ಆಫ್ರಿಕದ ರಾಜನೀತಿಯು ಈ ರೀತಿ ಇರಬೇಕೆಂದು ನಿಷ್ಕರ್ಷೆಮಾಡಿದ ಪಕ್ಷದಲ್ಲಿ ನಮ್ಮ ದೇಶೀಯರೂ ಬೋಅರರೂ ಬ್ರಿಟಿಷರೂ ಸಮಾಧಾನದಿಂದಲೂ ಏಕಮತ್ಯದಿಂದಲೂ ಪರಸ್ಪರ ಪ್ರೀತಿ ವಿಶ್ವಾಸಗಳಿಂದಲೂ ಬಾಳಿ ಅಭಿವೃದ್ಧಿಗೆ ಬರಲು ಅನುಮಾನವಿಲ್ಲ. ಸದ್ಯದಲ್ಲಿ ನಾವು ದಕ್ಷಿಣ ಆಫ್ರಿಕದಿಂದ ಬರುವ ತಂತೀ ವರ್ತಮಾನಗಳನ್ನು ಓದಿ ಗಾಬರಿಪಿಡದ್ದು ಕಳವಳಪಡಬಾರದೆಂದೂ, ಆ ತಂತೀ ವರ್ತಮಾನಗಳು ಪಕ್ಷಪಾತವಾದವುಗಳೆಂದೂ, ಅವುಗಳಿಂದ ಅಲ್ಲಿನ ಯಥಾರ್ಥ ಸ್ಥಿತಿಯನ್ನಾಗಲಿ ನಿಜವಾಗಿ ನಡೆಯುವ ಕಾರ್ಯಗಳನ್ನಾಗಲಿ ತಿಳಿಯಲಾರೆವೆಂದೂ ಸೂಚಿಸುತ್ತೇವೆ.

ದೇವರು ಎಲ್ಲೆಲ್ಲಿಯೂ ಇದ್ದಾನೆ. ಆದ್ದರಿಂದ ಈ ಕಲ್ಲಿನಲ್ಲಿ ಇದ್ದಾನೆ ಎಂಬ ವಾದವು

ಕಲ್ಲು ದೇವರುಗಳನ್ನು ಪೂಜಿಸುವವರು—ದೇವರು ಎಲ್ಲೆಲ್ಲಿಯೂ ಇದ್ದಾನೆ, ನಾವು ಪೂಜಿಸುವ ಈ ಕಲ್ಲಿನಲ್ಲಿಯೂ ಇದ್ದಾನೆ ಎಂದು ಸಾಧಾರಣವಾಗಿ ವಾದಿಸುವರು. ಇದಕ್ಕೆ ನಾವು ಹೇಳುವದೇನಂದರೆ—

ದೇವರು ಇಂತಹ ಸ್ಥಳವು ಇಷ್ಟೇ ಸರಿಯೆಂದು ಗೊತ್ತುಮಾಡುವದು ಅಸಾಧ್ಯ ಎಂಬುದನ್ನು ನಾವು ಮೊದಲು ಚೆನ್ನಾಗಿ ಮನದಟ್ಟುಮಾಡಿಕೊಳ್ಳಬೇಕು. ದೊಡ್ಡ, ಚಿಕ್ಕ, ಉದ್ದ, ಗಿಡ್ಡ, ಅಗಲ, ಕಿರಿದು ಎಂಬೀ ಮಾತುಗಳು ವಸ್ತುಗಳಿಗೆ ಸಲ್ಲತಕ್ಕ ಮಾತುಗಳಾಗಿವೆಯೇ ಹೊರತು ಆತ್ಮಸ್ವರೂಪಿಯಾದ ದೇವರಿಗೆ ಸಲ್ಲತಕ್ಕವುಗಳಲ್ಲ. ಯಾಕಂದರೆ ಆತನು ಕಾಲವನ್ನೂ ಸ್ಥಳವನ್ನೂ ಅತಿಕ್ರಮಿಸಿದವನಾಗಿದ್ದಾನೆ.

ಹಾಗಾದರೆ ದೇವರು ಕಲ್ಲಿನಲ್ಲಿದ್ದಾನೆಂಬುದರ ಅಭಿಪ್ರಾಯವೇನು? ಒಂದು ರತ್ನವು ಭರಣಿಯಲ್ಲಿ, ಹಾವು ಹುತ್ತದಲ್ಲಿ, ಮನುಷ್ಯನು ಮನೆಯಲ್ಲಿ ಇರುವ ಪ್ರಕಾರ ದೇವರು ಕಲ್ಲಿನಲ್ಲಿ ಇರುತ್ತಾನೋ? ಕಲ್ಲಾಗಲಿ ಬೇರೆ ಯಾವ ವಸ್ತುವೇ ಆಗಲಿ ಅಪರಿಮಿತನಾದ ದೇವರನ್ನು ತನ್ನಲ್ಲಿ ಅಡಗಿಸಿ ಇಟ್ಟುಕೊಳ್ಳಲಾರದು. ಸೊಲೊಮೋನನೆಂಬ ಒಬ್ಬ ದೊಡ್ಡ ಅರಸನು ಒಂದು ದೊಡ್ಡ ದೇವಸ್ಥಾನವನ್ನು ಕಟ್ಟಿಸಿ, ಅದನ್ನು ಪ್ರತಿಷ್ಠೆಮಾಡುವಲ್ಲಿ ಅವನು ದೇವರಿಗೆ ಹೇಳಿದ್ದೇನಂದರೆ "ಇಗೋ ಆಕಾಶಗಳೂ ಆಕಾಶಾಕಾಶಗಳೂ ನಿನ್ನನ್ನು ಹಿಡಿಯಲಾರವು. ಹಾಗಾದರೆ ನಾನು ಕಟ್ಟಿದ ಈ ಮನೆಯು ಹಿಡಿಯುವದು ಹ್ಯಾಗೆ" ಎಂಬುವದೇ.

ದೇವರು ಕಲ್ಲಿಗಿಂತ ಎಷ್ಟೋ ಶಕ್ತನು. ಕಲ್ಲು ದೇವರ ಮರೆಹೊಗಬೇಕೇ ಹೊರತು ದೇವರು ಕಲ್ಲಿನ ಮರೆಹೊಗಲಾರನು. ಆದ್ದರಿಂದ ದೇವರು ಕಲ್ಲಿನಲ್ಲಿದ್ದಾನೆಂದು ಹೇಳುವದಕ್ಕಿಂತ ಕಲ್ಲು ದೇವರಲ್ಲಿದೆ ಎಂದು ಹೇಳುವದು ಉತ್ತಮ. ದೃಷ್ಟಾಂತವಾಗಿ ಸ್ವಂತ ಮನೆ, ನಾನಾ ತರದ ಜಂಡಿಗೆ, ದನಕರುಗಳು, ಹೆಂಡತಿ ಮಕ್ಕಳು ಇವುಗಳನ್ನು ಪಡೆದಿರುವ ಒಬ್ಬ ರೈತನ ವಿಷಯ ಯೋಚನೆಮಾಡೋಣ. ಆ ರೈತನು ತನ್ನ ಮನೆಯಲ್ಲಿ ವಾಸಮಾಡುತ್ತಾನೆಂದು ಸಾಧಾರಣವಾಗಿ ಹೇಳುವದುಂಟು. ಆದರೆ ಒಂದು ಅರ್ಥದಲ್ಲಿ ಆ ಒಟ್ಟು ಮನೆಯು ಅವರ ಯಜಮಾನನಲ್ಲಿ ಇದೆಯೆಂದು ಸಹಜವಾಗಿ ಹೇಳಬಹುದು. ಆ ಮನೆಯನ್ನು ಕಟ್ಟಿದವನು ಅವನೇ. ಅವನಿಗೆ ಬೇಕಾದರೆ ಅದನ್ನು ಇಟ್ಟುಕೊಳ್ಳಬಹುದು. ಬೇಡವಾದರೆ ಕಿತ್ತುಹಾಕಬಹುದು. ಆ ಮನೆಯಲ್ಲಿರುವ ಅನೇಕ ಸಾಮಾನುಗಳು ಅವನ ಸ್ವಂತ ಕೈಯಿಂದ ಮಾಡಿದವುಗಳು. ದನಕರುಗಳನ್ನು ಇಟ್ಟುಕೊಳ್ಳುವದಕ್ಕಾದರೂ ಮಾರುವದಕ್ಕಾದರೂ ಅವನಿಗೆ ಸರ್ವ ಸ್ವತಂತ್ರವಿದೆ. ಆಳುಗಳು ಅವನ ಆಜ್ಞೆಗೆ ಒಳಪಟ್ಟಿರುತ್ತಾರೆ. ಹೆಂಡತಿಯು ಅವನನ್ನು ತನ್ನ ಒಡೆಯನೆಂದು ಸನ್ಮಾನಿಸುವಳು. ಮಕ್ಕಳು ಅವನಿಂದಲೇ ಹುಟ್ಟಿ, ಅವನ ಕೈ ಅನ್ನಕ್ಕಾಗಿ ಕಾದಿರುತ್ತವೆ. ಹೀಗೆ ಆ ಒಟ್ಟು ಕುಟುಂಬವು ಆ ರೈತನಲ್ಲೇ ಇರುತ್ತದೆ. ಇದೇ ಅರ್ಥದಲ್ಲಿ, ಆದರೆ ನಿರಂಕುಶವಾಗಿಯೂ ಪರಿಪೂರ್ಣವಾಗಿಯೂ, ಈ ಲೋಕವೆಲ್ಲವೂ ದೇವರಲ್ಲಿ ಇರುತ್ತದೆ. "ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ, ಇರುತ್ತೇವೆ" ಎಂದು ಸೇಂಟ್ ಪೌಲನು ಹೇಳುತ್ತಾನೆ. "ನಿಮ್ಮ ತಂದೆಯ (ದೇವರ) ಚಿತ್ತವಿಲ್ಲದೆ ಒಂದು ಗುಬ್ಬಿಯಾದರೂ ನೆಲಕ್ಕೆ ಬೀಳದು" ಎಂದು ಯೇಸು ಕ್ರಿಸ್ತನು ಹೇಳಿದನು.

ದೇವರು ಕಲ್ಲಿನಲ್ಲಿ ಇದ್ದಾನೆಂದು ಹೇಳುವಲ್ಲಿ ದೇವರ ಸರ್ವಸಂಪೂರ್ಣತೆಯನ್ನು ಈ ಕಲ್ಲು ತನ್ನಲ್ಲಿ ಅಡಗಿಸಿಕೊಂಡಿದೆ ಎಂಬ ಅಭಿಪ್ರಾಯವಲ್ಲ. ದೇವರ ಯಾವದೋ ಒಂದು ಅಂಶವು ಈ ಕಲ್ಲಿನಲ್ಲಿ ಇದೆ. ಇದು ದೇವರ ಗುಣಲಕ್ಷಣಗಳನ್ನು ಸ್ವಲ್ಪಮಟ್ಟಿಗೆ ಪ್ರಕಾಶಪಡಿಸುತ್ತದೆ ಎಂಬುದೇ ಇದರ ಅಭಿಪ್ರಾಯವೆನ್ನುವ ಕೆಲವರು ವಾದಿಸುವರು. ದೇವರ ಒಂದು ಅಂಶವು ಇದರಲ್ಲಿ ಮತ್ತೊಂದು ಅದರಲ್ಲಿ ಇದೆ, ಒಂದರಲ್ಲಿ ದೇವರ ಅಂಶವು ಹೆಚ್ಚಾಗಿದೆ, ಮತ್ತೊಂದರಲ್ಲಿ ಕಡಮೆಯಾಗಿದೆ ಎಂಬೀ ರೀತಿಯಾಗಿ ದೇವರನ್ನು ಭಾಗಿಸುವದಕ್ಕೆ ಆಗುವದಿಲ್ಲ. ಹೀಗಿದ್ದಾಗ್ಯೂ ದೇವರು ತನ್ನ ಮಹಿಮೆಯನ್ನು ಕೆಲವು ವಸ್ತುಗಳ ಮೂಲಕ ಹೆಚ್ಚಾಗಿಯೂ ಬೇರೆ ಕೆಲವು ವಸ್ತುಗಳ ಮೂಲಕ ಕಡಮೆಯಾಗಿಯೂ ವ್ಯಕ್ತಪಡಿಸುತ್ತಾನೆಂದು ನಾವು ವಾಸ್ತವವಾಗಿ ಹೇಳಬಹುದು.

ಮೇಲೆ ಹೇಳಿದ ಆ ರೈತನು ಮನೆಯನ್ನು ಬಿಟ್ಟು ದೂರ ಹೋಗಿರುವ ಕಾಲದಲ್ಲಿ ಅವನ ಆಳುಗಳಲ್ಲಿ ಒಬ್ಬನು—ಈ ನಾಗಲು ನಮ್ಮ ಗೌಡರು ಮಾಡಿದ್ದು. ಇದು ಅವರ ಶಕ್ತಿಯನ್ನೂ ಜ್ಞಾನವನ್ನೂ ಪ್ರಕಾಶಪಡಿಸುತ್ತದೆ. ಆದ್ದರಿಂದ ಇದನ್ನೇ ನಮ್ಮ ಗೌಡರೆಂದು ಭಾವಿಸಿ ಅವರಿಗೆ ಸಲ್ಲಿಸತಕ್ಕ ಮಾನಮರ್ಯಾದೆಗಳನ್ನು ಈ ನೇಗಿಲಿಗೆ ಸಲ್ಲಿಸುತ್ತೇನೆಂದು ಹೇಳಿದರೆ; ಅಥವಾ ಆ ರೈತನ ಹೆಂಡತಿಯು—ಈ ಎಮ್ಮೇ ಕರುವು ನಮ್ಮ ಯಜಮಾನರ ಮನೆಯಲ್ಲಿ ಹುಟ್ಟಿದ್ದು. ಇದಕ್ಕೆ ರೋಗರುಜಿನ ಬಂದ ಕಾಲದಲ್ಲಿ ನಮ್ಮ ಯಜಮಾನರೇ ಇದಕ್ಕೆ ತಕ್ಕ ಚಿಕಿತ್ಸೆಮಾಡಿ, ಇದರ ಪ್ರಾಣವನ್ನು ಉಳಿಸಿರುತ್ತಾರೆ. ಆದ್ದರಿಂದ ಇದನ್ನೇ ನಮ್ಮ ಯಜಮಾನರೆಂದು ಭಾವಿಸುತ್ತೇನೆಂದು ಹೇಳಿದರೆ, ಆ ಸೇವಕನೂ ಹೆಂಡತಿಯೂ ಬುದ್ಧಿ ಹೀನರು. ಆ ನೇಗಿಲಾದರೂ ಎಮ್ಮೇ ಕರುವಾದರೂ ಗೌಡನ ಗುಣಲಕ್ಷಣಗಳನ್ನೂ ಸಾಮರ್ಥ್ಯವನ್ನೂ ಹೆಚ್ಚಾಗಿ ಪ್ರಕಾಶಪಡಿಸುವದಿಲ್ಲವೆಂದು ನಾವು ಹೇಳುವೆವಷ್ಟೆ. ಮಸಲ, ಆ ಗೌಡನಿಗೆ ಒಬ್ಬ ಪ್ರಾಯದ ಮಗನು ಇದ್ದಾನೆಂದು ಇಟ್ಟುಕೊಳ್ಳೋಣ. ಅವನು ಆ ತಂದೆಯಿಂದಲೇ ಹುಟ್ಟಿದವನು. ಅವನ ಮುಖವೂ ಬಲವೂ ಮನಸ್ಸೂ ತಂದೆಯದರಂತೆ ಇರುತ್ತವೆ. ಗೌಡನಿಗೆ ಬದಲಾಗಿ ಗೌಡನಾಗುವದಕ್ಕೆ ಅವನೇ ಶಕ್ಯವನಲ್ಲವೇ?

ಇದರಂತೆಯೇ ಜಡವಸ್ತುಗಳಿಗಿಂತ ಪ್ರಾಣಿಗಳು ದೇವರ ಶಕ್ತಿಯನ್ನು ಹೆಚ್ಚಾಗಿ ಪ್ರಕಾಶಪಡಿಸುತ್ತವೆಂದೂ, ಪ್ರಾಣಿಗಳಲ್ಲಿ ಜ್ಞಾನವುಳ್ಳವರು ಮೂಗಪ್ರಾಣಿಗಳಿಗಿಂತ ದೇವರ ಮಹಿಮೆಯನ್ನು ಹೆಚ್ಚಾಗಿ ವ್ಯಕ್ತಪಡಿಸುತ್ತಾರೆಂದೂ, ಜ್ಞಾನವುಳ್ಳವರಲ್ಲಿ ಪವಿತ್ರನಾಗಿಯೂ ಪಾಪರಹಿತನಾಗಿಯೂ ಇರುವವನು ಅತ್ಯಧಿಕವಾಗಿ ದೇವರ ಮಹಿಮೆಯನ್ನು ಪ್ರಕಾಶಪಡಿಸುವನೆಂದೂ ನಾವು ತೀರ್ಮಾನಿಸಬೇಕಾಗಿದೆ. ಒಂದು ಕಲ್ಲಾದರೂ ಮೂಗಪ್ರಾಣಿಯಾದರೂ ಜ್ಞಾನಿಯಾದಾಗ್ಯೂ ಪಾಪಿಯಾಗಿರುವವನಾದರೂ ದೇವರ ಪ್ರತಿನಿಧಿಯಾಗುವುದು ಅಸಾಧ್ಯ. ದೇವರ ಮಹಿಮೆಯು ತನ್ನ ಅತ್ಯುತ್ತಮವಾದ ರೂಪದಲ್ಲಿ ಎಂದಾದರೂ ಲೋಕದಲ್ಲಿ ಪ್ರತ್ಯಕ್ಷವಾಗಿದ್ದರೆ, ಅದು ಪಾಪರಹಿತವಾದಂಥ ನರಾವತಾರದಲ್ಲಿಯೇ ಪ್ರತ್ಯಕ್ಷವಾಗಿದ್ದಿರಬೇಕು. ಯೇಸು ಕ್ರಿಸ್ತನೇ ಹಾಗೆ ಪ್ರತ್ಯಕ್ಷನಾದ ದೇವರಾಗಿದ್ದಾನೆಂದು ಕ್ರೈಸ್ತರು ನಂಬುತ್ತಾರೆ.

ಆತನ ಶಿಷ್ಯರಲ್ಲಿ ಒಬ್ಬನು ಬರೆದಿರುವದೇನಂದರೆ—"ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು. ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು." ಮತ್ತೊಬ್ಬನು ಬರೆದಿರುವದೇನಂದರೆ—"ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ." ಮೂರನೆಯವನು ಹೇಳುವದೇನಂದರೆ—"ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ಆಗಿದ್ದಾನೆ."

ಸ್ವದೇಶದ ವೃತ್ತಾಂತಗಳು.

...ಸ್ಥಾನದಲ್ಲಿ ಚಾಲ್ತಿ ಸಾಲಿನಲ್ಲಿ ಸಣ್ಣ ಕೆರೆಗಳನ್ನು ದುರಸ್ತುಮಾಡುವುದಕ್ಕೆ ...ವರು ರೈತರಿಗೆ ಅಡ್ವಾನ್ಸು ಕೊಡುವುದಕ್ಕೋಸ್ಕರ 20 ಸಾವಿರ ರೂಪಾ... ...ಮಂಜೂರ್ ಮಾಡಿರುತ್ತಾರೆ.

...ಳೂರು ಬಿನ್ನಿ ಕಾರ್ಖಾನೆಯಲ್ಲಿ ಕ್ಯಾಷಿಯರಾಗಿದ್ದ ಎಂ. ಎ. ಶ್ರೀನಿವಾ... ...ಎಂಬುವರು ಕಂಪನಿಯ ಹಣದಲ್ಲಿ ಸುಮಾರು 30,000 ರೂಪಾ... ...ದುರುಪಯೋಗಪಡಿಸಿರುತ್ತಾರೆಂದು ಕಂಪನಿ ಏಜಂಟರವರು ತಿಳಿಸಿದ್ದರ ಮೇಲೆ ...ರವರು ತನಿಖೆಮಾಡುತ್ತಿದ್ದಾರೆ.

...ರಾಜಧಾನಿಯ ವೆಸ್ಲಿಯನ್ ಮಿಷನ್ ಸಂಘದ ಕಾರ್ಯಗಳನ್ನು ನೋಡಿ ...ತ್ತಿದ್ದ ಮಿಸ್ ಸ್ಟುವರ್ಟ್ ಎಂಬಾಕೆಯು ಕಳೆದ ವಾರ ಸೀಮೆಗೆ ಪ್ರಯಾಣ ...ದರು. ಅವರ ಕೆಲಸಗಳಲ್ಲಿ ಕೆಲವನ್ನು ಸುಮಿತ್ರಮ್ಮ ಲಾಮೋಕ್ ರವರು ...ಕೊಂಡು ಪ್ರತಿಫಲಾಪೇಕ್ಷೆಯಿಲ್ಲದೆ ನಡಿಸುತ್ತಿದ್ದಾರೆ.

...ಮ್ಮ ಮಹಾರಾಜರವರ ಹುಜೂರು ಸೆಕ್ರೆಟರಿಯಾಗಿರುವ ಮ|| ಪಿ. ರಾಘ... ...ದ್ರರಾಯರು ಕಲ್ಕತ್ತೆಯಿಂದ ವಾಪಸು ಬಂದ ಮೇಲೆ ಮೂರು ತಿಂಗಳ ...ರಜಾ ತೆಗೆದುಕೊಳ್ಳುವರು. ಅದು ಪೂರೈಸಿದ ಬಳಿಕ ಅವರಿಗೆ ಸಂಸ್ಥಾನದ ...ರೆವಿನ್ಯೂ ಕಮಿಷನರ ಕೆಲಸವು ವಹಿಸಲ್ಪಡುವುದೆಂದು ತಿಳಿದುಬಂದಿದೆ.

...ಗಳೂರಿನಲ್ಲಿ ಅಡ್ವೊಕೇಟರಾಗಿರುವ ಮ|| ವೈ. ಪೊನ್ನಯ್ಯನವರು ...ದಿನ ಕ್ಲಬ್ಬಿನಿಂದ ವಾಪಸು ಬರುವಾಗ್ಗೆ ತಮ್ಮ ಬೈಸಿಕಲ್‌ಗೆ ದೀಪ ಹಚ್ಚಿರಲಿಲ್ಲ ...ವು ಮೊಕದ್ದಮೆ ಆಗಿ ದರ್ಯಾಫ್ತಿಯಲ್ಲಿ ಅವರು ಒಪ್ಪಿಕೊಂಡದ್ದರಿಂದ ...ಮ್ಯಾಜಿಸ್ಟ್ರೇಟರು ಅವರಿಗೆ ಎರಡು ರೂಪಾಯಿ ಜುಲ್ಮಾನೆ ವಿಧಿಸಿದರು.

...ಟೂರಿನಲ್ಲಿ ಭಾರೀ ಜಮೀನ್ದಾರರೂ ಸಾಹುಕಾರರೂ ಆಗಿದ್ದ ಮ|| ತಂಗ್ಲಿ ...ಸಮ್ಮಂಗಾರು ಬೆನ್ನುಫಣಿ ಎದ್ದು ಹಿಂದಿನ ಶನಿವಾರ ಕಾಲವಾದರೆಂದು ...ವಿಷಾದಿಸುತ್ತೇವೆ. ಇವರು ತುಂಬಾ ಉದಾರಿಗಳಾಗಿಯೂ ಗುಣಜ್ಞರಾಗಿ ...ದ್ದು ಆ ಸುತ್ತುಮುತ್ತಿನ ಪ್ರಜೆಗಳ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂ... ...ದ್ದರು.

...ವೈಸರಾಯ್ ಪ್ರಭುಗಳು ಅಪ್ಪಣೆ ಕೊಡಿಸಿರುವ ಕಪನಾಮೆಯು ಬೆಂಗ... ...ಳೂರಿನಲ್ಲಿ ಬರೆಯಲ್ಪಟ್ಟು ನಮ್ಮ ಮಹಾರಾಜರವರ ಮತ್ತು ಬ್ರಿಟಿಷ್ ರೆಸಿಡೆಂಟ... ...ರವರುಗಳ ಮೂಲಕ ವೈಸರಾಯರವರ ಬಳಿಗೆ ರವಾನೆಯಾಗುವುದೆಂದೂ, ಅವರು ...ರೂ ಅದನ್ನು ವಾಪಸು ಕಳುಹಿಸಿದ ಮೇಲೆ ಅದು ಪ್ರಕಟವಾದೀತೆಂದೂ ...ತ್ತಿದೆ.

...ಕೋಟೆ ಸಂಸ್ಥಾನದ ರಾಜಧಾನಿಯಲ್ಲಿ ಈ ತಿಂಗಳು 1 ನೇ ತಾ... ...ರಂಭಿಸಿ ಒಂದು ವಿಶೇಷವಾದ ವಸ್ತುಪ್ರದರ್ಶನವು ನಡೆಯುತ್ತದೆಂದೂ, ...ಕೆ, ವ್ಯವಸಾಯ, ವಿದ್ಯಾಭ್ಯಾಸ, ಈ ಬಾಬುಗಳಿಗೆ ಸಂಬಂಧಪಡುವ ...ವಸ್ತುಗಳನ್ನು ಆ ಪ್ರದರ್ಶನಕ್ಕೆ ಕಳುಹಿಸಬಹುದೆಂದೂ ನಮ್ಮ ಸರ್ಕಾರ ...ಪ್ರಕಟಮಾಡಿರುತ್ತಾರೆ.

...ಗಳೂರು ಕಬ್ಬನ್ ಪಾರ್ಕಿನಲ್ಲಿ ವೈಸರಾಯಿ ಪ್ರಭುಗಳು ತೆರೆದು ಪ್ರತಿ... ...ಷ್ಠಿತ ಲೇಟ್ ದಿವಾನ್ ಸರ್ ಕೆ. ಶೇಷಾದ್ರಿ ಅಯ್ಯರವರ ಲೋಹ ಪ್ರತಿಮೆ ...ಲಂಡನ್ ಪಟ್ಟಣದ ಮಿ. ಡಬ್ಲಿಯು ಆರ್ ಕೊಲ್‌ಟನ್ ಎಂಬ ...ಕೆಲಸಗಾರರು ತಯಾರ್ಮಾಡಿದರೆಂದೂ, ಅದಕ್ಕೆ 23,000 ರೂಪಾಯಿ ...ಯಿತೆಂದೂ ತಿಳಿಯುತ್ತದೆ.

...ಳೆದ ಭಾನುವಾರ ಮಧ್ಯಾಹ್ನ ಶ್ರೀಮನ್ ಮಹಾರಾಜರವರೂ ಅರಮನೆಯ ...ವರೂ 8 10 ಮೋಟರುಗಳಲ್ಲಿ ಪರಿವಾರ ಸಮೇತ ರಾಜಧಾನಿಯಿಂದ ...ಗೆ ದಯಮಾಡಿಸಿದರು. ಅಲ್ಲಿ ಮರುದಿನ ಬೆಳಗ್ಗೆ ಗೌರವಾರ್ಥವಾದ ...ಕೋವಿಗಳು ಹಾರಿಸಲ್ಪಟ್ಟವು. ಶ್ರೀಮನ್ ಯುವರಾಜರು ನೆನ್ನೆ ಮೋಟರು ...ರಾಜಧಾನಿಯಿಂದ ಕುಣಿಗಲಿಗೆ ತೆರಳುವವರಾಗಿದ್ದರು.

...ದ ಶನಿವಾರ ಬೆಳಿಗೆ ನಡೆದ ಬೆಂಗಳೂರು ಸಿಟಿ ಮ್ಯುನಿಸಿಪಲ್ ಮೀಟಿಂಗಿ... ...ಮೆಂಬರುಗಳು ಅಲ್ಲಿನ ಕಾಸ್ಮೊಪಾಲಿಟನ್ ಕ್ಲಬ್ಬಿನವರಿಗೆ ಒಂದು ಕಟ್ಟಡ ...ಕಟ್ಟಿಕೊಳ್ಳುವುದಕ್ಕೆ ಕಬ್ಬನ್ ಪಾರ್ಕಿನಲ್ಲಿ 7 ಎಕರೆ ನಿವೇಶನವನ್ನು ...ಮಂಜೂರ್ ಮಾಡಿದರು. 200 ರೂಪಾಯಿಸೊಳಗಿರುವ ಕಾಮಗಾರಿಗಳನ್ನು ...ಮ್ಯಾನೇಜಿಂಗ್ ಕಮಿಟಿಯವರೇ ಸ್ಯಾಂಕ್ಷನ್ ಮಾಡಬಹುದೆಂದು ...ತೀರ್ಮಾನಮಾಡಿದರು.

...ಮುಂದೆ 1915 ನೇ ಇಸವಿ ಆರಂಭ ಭಾಗದಲ್ಲಿ ಚಕ್ರವರ್ತಿ ಸಾರ್ವಭೌಮರ ...ಜ್ಯೇಷ್ಠಪುತ್ರರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ನಮ್ಮ ಸಂಸ್ಥಾನಕ್ಕೆ ...ದಯಮಾಡಿಸಿದಾಗಿದ್ದಾರೆಂದೂ, ಅಷ್ಟರೊಳಗಾಗಿ ಕಾರಾಪುರದ ಕೆಡ್ಡಾ ಕ್ಯಾಂಪಿ... ...ಸಂಬಂಧಪಟ್ಟ ಪಕ್ಕಾ ಬಂಗಲೆ ಮೊದಲಾದ ಕಟ್ಟಡಗಳನ್ನು ಸಿದ್ಧಪಡಿಸು... ...ನಮ್ಮ ಸರ್ಕಾರದವರು ಸುಮಾರು 50,000 ರೂಪಾಯಿ ತನಕ ಖರ್ಚು ...ಮಾಡಲಿದ್ದಾರೆಂದೂ ವರ್ತಮಾನವಿದೆ.

...ಸೂರು ಸಂಸ್ಥಾನದೊಳಗಿರುವ ಯೂರೋಪಿಯನ್ ಪ್ರಜೆಗಳ ಮೇಲೆ ...ಮೊಕದ್ದಮೆ ಬಂದರೆ ಅಂಥವರನ್ನು ದರ್ಯಾಫ್ತಿ ಮಾಡುವುದಕ್ಕೆ ...ಗವರ್ನ್‌ಮೆಂಟಿನವರು ನಮ್ಮ ಚೀಫ್ ಕೋರ್ಟ್ ಜಡ್ಜರಾದ ಮಿ. ...ಪಾರ್ಸನ್ ರವರಿಗೂ, ಕೋಲಾರ್ ಚಿನ್ನದ ಗಣಿಗಳ ಪೋಲೀಸ್ ...ಟೆಂಡೆಂಟ್ ಮಿ|| ಎಸ್ ಎಂ ಪ್ರಿಚರ್ಡ್‌ರವರಿಗೂ ಜಸ್ಟಿಸ್ ಆಫ್ ...ಪೀಸ್ ಎಂಬ ಅಧಿಕಾರವನ್ನು ವಹಿಸಿರುತ್ತಾರೆ.

...ರಾಜಧಾನಿಯ ಈದ್ಗಾ ಬಡಾವಣೆಯಲ್ಲಿರುವ ವೆಸ್ಲಿಯನ್ ಮಿಷನ್ ಸ್ತ್ರೀಯರ ...ಡಾಕ್ಟರ್ ವಾಟ್ಸ್ ರವರೂ, ಡಾಕ್ಟರ್ ಕ್ಲಫ್ ರವರೂ ಕಳೆದ ...ವರ್ಷ ಬಂದು ತಲುಪಿದರು. ಅನುಭವಶಾಲಿಗಳಾದ ಈ ವೈದ್ಯರು ಬಂದಿ... ...ರುವುದರಿಂದ ಆ ಆಸ್ಪತ್ರೆಯ ಹೆಸರು ಇನ್ನೂ ಪ್ರಸಿದ್ಧವಾಗಲು ತುಂಬಾ ...ಅವಕಾಶವಾಯಿತು. ಆಸ್ಪತ್ರೆಯವರೂ ಇತರರೂ ಸೇರಿ ಅವರಿಗೆ ಸುಸ್ವಾಗಮನ ...ಕೋರುವುದಕ್ಕಾಗಿ ಈ ವಾರ ಒಂದು ಸಂತೋಷಕೂಟವನ್ನು ನಡಿಸುವವ... ...ರು.

...ಕೃಷ್ಣರಾಜಪೇಟೆಯಲ್ಲಿ ಕೆಲವರು ಸೇರಿ ಸಾಧು ಸಜ್ಜನ ಸಂಘವೆಂಬ ಕೂಟ ...ವನ್ನೇರ್ಪಡಿಸಿಕೊಂಡು ಸುತ್ತುಮುತ್ತಿನ ಗ್ರಾಮಗಳಲ್ಲಿ ಸಂಚರಿಸುತ್ತಾ ರೈತರೇ ...ಮುಂತಾದ ಗ್ರಾಮಸ್ಥರಿಗೆ ವಿದ್ಯೆ ಬುದ್ಧಿ ವಿವೇಕಾದಿಗಳನ್ನು ಕಲಿಸಬೇಕೆಂದೂ, ಅಲ್ಲಲ್ಲಿ ಪಾಠಶಾಲೆಗಳನ್ನು ಸ್ಥಾಪಿಸಿಕೊಂಡು ವಿದ್ಯಾವಂತರಾಗಿ ವೃದ್ಧಿಹೊಂದುವಂತೆ ಪ್ರಜೆಗಳನ್ನು ಪ್ರೋತ್ಸಾಹಪಡಿಸಬೇಕೆಂದೂ ಸಾಹಸಪಡುತ್ತಿರುವುದಾಗಿ ತಿಳಿದು, ಅವರ ಇಂಥಾ ಉದ್ದೇಶವೂ ಪ್ರಯತ್ನಗಳೂ ಸಾರ್ಥಕವಾಗಲೆಂದು ಹಾರೈಸುತ್ತೇವೆ.

ಶ್ರೀರಂಗಪಟ್ಟಣದಲ್ಲಿ ಪೂರ್ಣಯ್ಯನವರ ಬೀದಿ ಭಾಸ್ಕರಶೆಟ್ಟಿ ಕೋಳದ ಎದುರುಸಾಲಿನ ನಾಲ್ಕು ಮನೆಗಳಿಗೆ ಕಳೆದ ಶನಿವಾರ ರಾತ್ರಿ ಕಳ್ಳರು ನುಗ್ಗಿ ಮಾಲುಗಳನ್ನು ಅಪಹರಿಸಿರುವಂತೆ ಕೇಳುತ್ತೇವೆ. ಅಂಥಾ ಸಣ್ಣ ಸ್ಥಳಗಳಲ್ಲಿ ಪೋಲೀಸಿನವರು ಚಟುವಟಿಕೆಯಾಗಿ ಪತ್ತೆ ತರದೂದು ನಡಿಸಿ ಬೇಗ ಕಳ್ಳರನ್ನು ಹಿಡಿದು ಶಿಕ್ಷೆಗೆ ಗುರಿಪಡಿಸುತ್ತಾರೆಂದು ನಿರೀಕ್ಷಿಸುವೆವು. ಆದರೆ ಸಾವಧಾನ್ಯವಾಗಿ ಪೋಲೀಸಿನವರಿಗೂ ಪ್ರಜೆಗಳಿಗೂ ಪರಸ್ಪರ ಪ್ರೀತಿ ವಿಶ್ವಾಸ ಭರವಸೆಗಳು ಉಂಟಾದಲ್ಲದೆ ಇಂಥಾ ಅಕೃತ್ಯಗಳು ಪತ್ತೆ ಆಗುವುದು ಕಷ್ಟ.

ಬೆಂಗಳೂರು ದಂಡಿನ ಉತ್ಪತ್ತಿಯ ಪಿಲ್ಕಿಹಣದ ವಿನಿಯೋಗದ ವಿಷಯದಲ್ಲಿ ವೈಸ್‌ರಾಯಿ ಪ್ರಭುಗಳು ಅಪ್ಪಣೆಕೊಡಿಸಿದ ಜವಾಬು ದಂಡಿನ ಮ್ಯುನಿಸಿಪಲ್ ಕೌನ್ಸಿಲರುಗಳಿಗೆ ತೃಪ್ತಿಯನ್ನುಂಟುಮಾಡದೆ, ಅವರು ತಾ 21 ರಲ್ಲಿ ಒಂದು ಸ್ಪೆಷಲ್ ಮೀಟಿಂಗನ್ನು ನಡಿಸಿ ಆ ವಿಷಯವನ್ನು ಚರ್ಚೆಮಾಡಿ, ತಮ್ಮ ಪ್ರತಿನಿಧಿಗಳ ಮೂಲಕ ವೈಸ್‌ರಾಯರವರಿಗೆ ಅದೇ ವಿಷಯವನ್ನು ಕುರಿತು ಅರಿಕೆ ಮಾಡಿಕೊಳ್ಳಲು ಅವಕಾಶವನ್ನು ಕೊಡಿಸಿಕೊಡಬೇಕೆಂದು ಬ್ರಿಟಿಷ್ ರೆಸಿಡೆಂಟರನ್ನು ಕೇಳಿಕೊಳ್ಳುವಂತೆ ತೀರ್ಮಾನಮಾಡಿದರು. ಈ ತೀರ್ಮಾನವನ್ನು 13 ಮಂದಿ ಒಪ್ಪಿ ಪ್ಯಾಸ್ ಮಾಡಿದರು. ಮ್ಯುನಿಸಿಪಲ್ ಪ್ರೆಸಿಡೆಂಟರೂ, ಮ|| ಅಣ್ಣಾಸಾಮಿ ಮುದಲಿಯಾರ್ರೂ, ಡಾಕ್ಟರ್ ವಿಂಕ್ಲೇರ್‌ಯವರೂ ಅದಕ್ಕೆ ಒಪ್ಪಲಿಲ್ಲ.

ಮೈಸೂರು ನ್ಯಾಯವಿಧಾಯಕ ಸಭೆಗೆ ಮ|| ಕೆ ಕೃಷ್ಣಮೂರ್ತಿರಾಯರನ್ನು ಪ್ರಜಾಪ್ರತಿನಿಧಿಗಳು ಚುನಾಯಿಸಿದಂಪ್ರೆ, ಮಾಗಡಿ ತಾಲ್ಲೂಕಿನ ಪ್ರಜೆಗಳು ಕಳೆದ ಭಾನುವಾರ ಮಾಗಡಿಯಲ್ಲಿ ಅವರನ್ನು ಕರಸಿಕೊಂಡು ಒಂದು ಯಂಟರ್‌ಟೇನ್‌ಮೆಂಟ್ ಮಾಡಿ ಅವರಲ್ಲಿ ತಮಗಿರುವ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಿದರು. ಆ ದಿನ ಸಂತೋಷಾರ್ಥವಾಗಿ ಅಲ್ಲಿನ ದೇವಸ್ಥಾನದಲ್ಲಿ ಪೂಜೆ ಅಭಿಷೇಕ ಉತ್ಸವಾದಿಗಳೂ, ಬಾಲಕರ ಆಟಪಾಟಗಳೂ, ಸಂಗೀತಾದಿಗಳೂ ಬಹು ತೃಪ್ತಿಕರವಾಗಿ ನಡೆದವೆಂದೂ, ಬೆಂಗಳೂರು ಮುಂತಾದ ಕಡೆಗಳಿಂದ ಬಹುಮಂದಿ ದೊಡ್ಡಮನುಷ್ಯರು ಅಲ್ಲಿ ಸೇರಿದ್ದರೆಂದೂ ತಿಳಿದುಬರುತ್ತದೆ.

ಮೈಸೂರು ಸಂಸ್ಥಾನದ ನ್ಯಾಯಸ್ಥಾನಗಳಲ್ಲಿ ಆಚರಣೆಗೆ ತರಬೇಕಾದ ರೂಲ್ಸುಗಳನ್ನು ಆಗಿಂದಾಗ್ಗೆ ಯೋಜಿಸಿ ಗೊತ್ತುಮಾಡುವುದಕ್ಕೋಸ್ಕರ ಚೀಫ್ ಜಡ್ಜರವರು ಒಂದು ಕಮಿಟಿಯನ್ನು ನೇಮಕಮಾಡಿದಾರೆ. ಅದರ ಮೆಂಬರುಗಳ್ಯಾರೆಂದರೆ ಮ|| ಕೆ ಎಸ್ ಚಂದ್ರಶೇಖರ ಅಯ್ಯರವರು (ಪ್ರೆಸಿಡೆಂಟರು), ಡಿಸ್ಟ್ರಿಕ್ಟ್ ಜಡ್ಜ್ ಮಿ. ಆರ್ ಬಿ ಪ್ಲಮರವರು, ಸಬ್ ಜಡ್ಜ್ ಮ|| ಬಿ ಸುಬ್ಬಣ್ಣನವರು, ಗವರ್ನ್‌ಮೆಂಟ್ ಅಡ್ವೊಕೇಟ್ ಮ|| ಸಿ ಎಸ್ ದೊರೆಸಾಮಿ ಅಯ್ಯರವರು, ಅಡ್ವೊಕೇಟ್ ಮ|| ಎಸ್ ಆರ್ ಬಾಲಕೃಷ್ಣರಾಯರು, ರೆಜಿಸ್ಟ್ರಾರ್ ಮ|| ವಿ ಎ ರಾಜರತ್ನ ಮುದಲಿಯಾರ್ರು (ಸೆಕ್ರೆಟರಿ). ಇವರೆಲ್ಲಾ ಎರಡು ವರುಷಕಾಲ ಈ ಕಮಿಟಿಯ ಮೆಂಬರುಗಳಾಗಿರತಕ್ಕದ್ದೆಂದು ನಿಷ್ಕರ್ಷೆಯಾಗಿದೆ.

ಕಲ್ಕತ್ತಾ ಪಟ್ಟಣದಲ್ಲಿರುವ ಬರ್ನ್ ಕಂಪೆನಿಯಲ್ಲಿ ನಮ್ಮ ಮಹಾರಾಜರವರು ಎರಡು ಭಾರೀ ರೈಲ್ ಗಾಡಿಗಳನ್ನು ಮಾಡಿಸುವಂತೆ ಅಪ್ಪಣೆಕೊಟ್ಟಿದ್ದಾರೆ. ಅವರಲ್ಲಿ ಸ್ನಾನ, ಪೂಜೆ, ಭೋಜನಾದಿಗಳನ್ನು ಮಾಡಲು ಬಹು ಅನುಕೂಲವಾದ ಏರ್ಪಾಡುಗಳು ಮಾಡಲ್ಪಟ್ಟಿವೆ. ಆ ಗಾಡಿಗಳಲ್ಲಿ ಚರ್ಮವನ್ನಾಗಲಿ, ಚಿಕ್ಕವನ್ನಾಗಲಿ ಉಪಯೋಗಿಸಿಲ್ಲ. ಒಂದು ಗಾಡಿಯು ದೊಡ್ಡ ರೈಲ್ ಕಂಬಿಗಳಿಗೂ, ಇನ್ನೊಂದು ಸಣ್ಣ ರೈಲ್ ಕಂಬಿಗಳಿಗೂ ಹಿಡಿಯುವಂತೆ ಮಾಡಲ್ಪಟ್ಟಿವೆ. ಹುಜೂರ್ ಸೆಕ್ರೆಟರಿ ಮ|| ಪಿ ರಾಘವೇಂದ್ರರಾಯರು ಅವುಗಳನ್ನು ನೋಡಿ ಬಣ್ಣ ಮೊದಲಾದವುಗಳನ್ನು ಹಾಕುವಂತೆ ಕಂಪೆನಿಯವರಿಗೆ ಹೇಳಿಬರುವುದಕ್ಕಾಗಿ ಹಿಂದಿನ ವಾರ ಕಲ್ಕತ್ತೆಗೆ ಪ್ರಯಾಣಮಾಡಿದರು. ಈ ಎರಡು ಗಾಡಿಗಳಿಗೂ ಸುಮಾರು 1,20,000 ರೂಪಾಯಿ ಖರ್ಚಾಗುವುದೆಂದು ಹೇಳುವರು.

ಕಾವೇರಿ ಕಟ್ಟಾವಿನ ಎರಡನೇ ಭಾಗದ ಕಾಮಗಾರಿಗೆ ಇಂಡಿಯಾ ಗವರ್ನ್‌ಮೆಂಟಿನವರು ಅಪ್ಪಣೆ ಕೊಟ್ಟಲ್ಲಿ ವ್ಯವಸಾಯಕ್ಕೆ ತುಂಬಾ ನಷ್ಟವಾಗುವುದೆಂದು ತಂಜಾವೂರಿನ ರೈತರು ಮ್ಯಾಸ್‌ರ ಯರವರಿಗೆ ಹಿಂದಿನ ವಾರ ಅರಿಕೆ ಮಾಡಿಕೊಂಡರು. ವೈಸ್‌ರಾಯರವರು ಅವರಿಗೆ ನಷ್ಟವಾಗದಂತೆಯೂ, ಮೈಸೂರು ಗವರ್ನ್‌ಮೆಂಟಿನ ಹಕ್ಕಿಗೆ ಲೋಪಬಾರದಂತೆಯೂ ಪಂಚಾಯತರನ್ನು ನೇಮಕಮಾಡಿರುತ್ತೇವೆಂದೂ, ಅವರ ತೀರ್ಮಾನವು ಉಭಯಕಕ್ಷಿಯವರಿಗೂ ನ್ಯಾಯವಾಗಿದ್ದೀತೆಂದೂ ಅಪ್ಪಣೆಯನ್ನಿತ್ತರು. ಈ ಜವಾಬು ಆ ರೈತಪ್ರಜೆಗಳಿಗೆ ತೃಪ್ತಿಯನ್ನುಂಟುಮಾಡಲಿಲ್ಲ. ಅವರು ಕಳೆದ ವಾರ ತಂಜಾವೂರಿನಲ್ಲಿ ಭಾರೀ ಸಭೆಯನ್ನು ನಡಿಸಿ ತಮ್ಮ ಅಸಮಾಧಾನವನ್ನು ಮದರಾಸ್ ಗವರ್ನ್‌ಮೆಂಟಿನವರ ಮೂಲಕ ಇಂಡಿಯಾ ಗವರ್ನ್‌ಮೆಂಟಿಗೂ, ಮೇಲ್ಕಂಡ ಪಂಚಾಯತರಿಗೂ ತಿಳಿಸಬೇಕೆಂದು ತೀರ್ಮಾನ ಮಾಡಿರುತ್ತಾರೆ. ಇತ್ತಲಾಗಿ ಆ ಪಂಚಾಯತಿಗೆ ಸೇರಿದ ಸರದಾರರು ಕಳೆದ ತಾ 27 ರಿಂದ 30 ರ ತನಕ ರಾಜಧಾನಿಯ ಗವರ್ನ್‌ಮೆಂಟ್ ಹೌಸ್ ಬಂಗಲೆಯಲ್ಲಿ ಕಲೆತು ಮೈಸೂರು ಚೀಫ್ ಇಂಜನಿಯರವರ ಕೂಡ ಪಕ್ಷ ಪರಪಕ್ಷಗಳ ಸಾಧನಗಳನ್ನು ಹಿಡಿದು ಚರ್ಚೆಮಾಡಿಕೊಂಡು ಕಳೆದ ಭಾನುವಾರ ವಾಪಸು ಪ್ರಯಾಣಮಾಡಿದರು. ಇವರ ತೀರ್ಮಾನವನ್ನು ಇತ್ತಲಾಗಿ ಮೈಸೂರಿನವರೂ, ಅತ್ತಲಾಗಿ ತಂಜಾವೂರು ತಿರುಚ್ನಾಪಲ್ಲಿಯವರೂ ಬಹು ಕುತೂಹಲದಿಂದ ಎದುರುನೋಡುತ್ತಿದ್ದಾರೆ. ಮೈಸೂರು ಗವರ್ನ್‌ಮೆಂಟಿನವರು ಈ ಎರಡನೇ ಭಾಗದ ಆಣೆಯ ದೆಸೆಯಿಂದ ತಂಜಾವೂರು ತಿರುಚನಾಪಲ್ಲಿ ಜಿಲ್ಲೆಗಳಿಗೆ ಏನಾದರೂ ನಷ್ಟ ನೀರು ನದಿಯಲ್ಲಿ ಒದಗದೆಹೋಗುವ ಪಕ್ಷದಲ್ಲಿ ಅದಕ್ಕಾಗಿ ಮದರಾಸ್ ಗವರ್ನ್‌ಮೆಂಟಿಗೆ ನಷ್ಟವನ್ನು ಕಟ್ಟಿಕೊಡಲು ಒಪ್ಪಿಕೊಂಡಿದ್ದಾರೆ. ಆ ಜಿಲ್ಲೆಗಳ ರೈತರು ಈ ಪ್ರತಿಫಲವು ಗವರ್ನ್‌ಮೆಂಟಿಗೆ ದೊರಕುವುದಲ್ಲದೆ ನಮಗೆ ಕಡಮೆಯಾಗುವುದರಿಂದ ತಮ್ಮ ನಷ್ಟಕ್ಕೆ ಯಾವ ಪ್ರತಿಫಲವೂ ಆಗುವುದಿಲ್ಲವೆಂದೂ, ಈ ಎರಡನೇ ಭಾಗದ ಕಾಮಗಾರಿಯನ್ನು ಸ್ಯಾಂಕ್ಷನ್ ಮಾಡಲೇ ಕೂಡದೆಂದೂ ವಾದಿಸುತ್ತಾರೆ.

ವಿವಾಹಮಂಟಪದಲ್ಲಿ ವರನ ಅತಿದುಃಖಕರವಾದ ಮರಣವು

ಈಗಿನ ಕಾಲದಲ್ಲಿ ಹೆಮ್ಮಕ್ಕಳನ್ನು ಪಡೆಯುವ ದೌರ್ಭಾಗ್ಯವುಳ್ಳ, ಮುಖ್ಯವಾಗಿ ಬ್ರಾಹ್ಮಣ ಕುಲದವರೆಲ್ಲರಲ್ಲಿಯೂ ಅತಿ ವಿಷಾದವನ್ನುಂಟುಮಾಡುವ ಒಬ್ಬ ವರನ ಅಕಾಲ ಮರಣವು ಕಳೆದ ಬುಧವಾರ ರಾತ್ರಿ ಮಂಗಳೂರಿನಲ್ಲಿ ಸಂಭವಿಸಿತು. ಅಲ್ಲಿಯ ಮಿಷನ್ ಹೈಸ್ಕೂಲಿನ ಎದುರಿಗಿರುವ ಛತ್ರದಲ್ಲಿ ಒಂದು ಮದುವೆಯ ಪ್ರಸ್ತವು ನಡೆಯುತ್ತಲಿತ್ತು. ವರನು ಗೌಡಸಾರಸ್ವತ ಬ್ರಾಹ್ಮಣ ಜಾತಿಯ ಅಡ್ಯಾರ ಸುಬ್ರಾಯ ಹೆಗ್ಗಡೆಯವರ ಮಗ ವೆಂಕಟ್ರಾಯ ಹೆಗ್ಗಡೆ, ವಧುವು ಶ್ರೀನಿವಾಸ ಮಲ್ಯರ ಮಗಳು. ಪಾಣಿಗ್ರಹಣ ಧಾರೆಯು ಎರೆದು ಮದುವೆಯ ಚಾತುರ್ಥಿಯು ಆಚರಿಸಲ್ಪಡುವಷ್ಟರಲ್ಲಿಯೇ ವರನು ಪ್ಲೇಗು ರೋಗಕ್ಕೆ ತುತ್ತಾದನು. ದಾಂಪತ್ಯ ಸೌಭಾಗ್ಯದ ಹೊಸ್ತಿಲಿನಲ್ಲಿಯೇ, ಘೋರತರದ ಸಂಸಾರ ಸುಖದುಃಖಗಳೇನೆಂಬುವುದನ್ನು ತಿಳಿಯುವ ಮೊದಲೇ ಆ ಬಡ ಕುವರಿಗೆ ಪ್ರಾಪ್ತವಾದಂಥಾ ದುರ್ದೆಸೆಯು ಅತಿ ಕಠಿಣವಾಗಿರುವುದು. ಸಹಸಂಬಾಶಾಪಗಳಿಂದ ಈ ವಧುವಿನ ಮತ್ತೂ ವಧುವರರ ಕುಟುಂಬದವರ ದುಃಖವು ಶಮನವಾಗಾವುದಾದರೆ ಸರ್ವರ ಅಂತಃಕರಣಗಳಿಂದ ದ್ರವಿಸುವ ಸಹಸಂತಾಪವು ಈ ದುಃಖಿತರ ಪರವಾಗಿ ಧಾರಾಳವಾಗಿರುವುದು. ಆದರೆ ಸಮಾಜದ ಈಗಿನ ಸ್ಥಿತಿಯಲ್ಲಿ ಭಾಗ್ಯಹೀನಳಾದ ಆ ವಧುವಿನ ಮುಂದಿನಗತಿಯು ಹೇಗಿರುವುದೋ ಎಂಬುವ ಅತಿಕಠಿಣ ಪ್ರಶ್ನೆಗೆ ಉತ್ತರವನ್ನು ಕೊಡಲು ಪ್ರಯತ್ನಿಸುವ ಮನಸ್ಸಾಕ್ಷಿಯು ನಿರಂತರ ಬಡಿದಾಟದಿಂದ ಈ ದುಃಖವಾರ್ತೆಯನ್ನು ಕೇಳಿದ ಹೆತ್ತವರ ಹೃದಯಗಳಲ್ಲಿ ಸದಾ ಇರಬೇಕಾಗಿದೆ.—ಸ್ವ

ವೈಸ್‌ರಾಯರವರು ದಯಪಾಲಿಸಿದ ಬಹುಮಾನಗಳು.

ವೈಸ್‌ರಾಯಿ ಪ್ರಭು ದಂಪತಿಗಳು ಕಳೆದ ತಿಂಗಳು ತಾ 3 ರಿಂದ 23 ರ ವರೆಗೆ ಮೈಸೂರು ಸಂಸ್ಥಾನದ ಬೇರೆ ಬೇರೆ ಕಡೆಗಳಲ್ಲಿ ಕೆಲಕೆಲವು ಕಾಲ ದಯಮಾಡಿ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ತೃಪ್ತಿಯನ್ನೂ ಸಂತೋಷವನ್ನೂ ಹೊಂದಿ ಚಿತ್ತೈಸಿದರಷ್ಟೆ. ಅವರ ಸತ್ಕಾರದಲ್ಲಿ ನಿರತರಾಗಿದ್ದು ಬಹು ತೃಪ್ತಿಕರವಾಗಿ ಕೆಲಸಮಾಡಿ ಅವರ ಮೆಚ್ಚುಗೆಗೆ ಪಾತ್ರರಾದ ಈ ಕೆಳಗೆ ಕಂಡ ನಮ್ಮ ಸಂಸ್ಥಾನದ ಉದ್ಯೋಗಸ್ಥರುಗಳಿಗೆ ತಮ್ಮ ಜ್ಞಾಪಕಾರ್ಥವಾಗಿ ಒಂದೊಂದು ಬಹುಮಾನವನ್ನು ದಯಪಾಲಿಸಿರುತ್ತಾರೆ. ಅವರು ಯಾರೆಂದರೆ—ಮ|| ದಿವಾನ್ ಎಂ ವಿಶ್ವೇಶ್ವರಯ್ಯನವರು, ಮಹಾರಾಜರವರ ಮಿಲಿಟರಿ ಸೆಕ್ರೆಟರಿಯವರ ಅಸಿಸ್ಟೆಂಟ್ ಕರ್ನಲ್ ಎ ಜೋನ್ಸ್ ರವರು, ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಮಿ| ಆರ್. ಎಚ್. ಕ್ಯಾಂಬೆಲ್ ರವರು, ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಮ|| ಸಿ ಶ್ರೀಕಂಠೇಶ್ವರ ಅಯ್ಯರವರು, ಮಹಾರಾಜರವರ ಅಸಿಸ್ಟೆಂಟ್ ಸೆಕ್ರೆಟರಿ ಮಿ|| ಮಿರ್ಜಾ ಇಸ್ಮೈಲ್ ರವರು, ಫಾರೆಸ್ಟ್ ಕನ್ಸರ್ವೇಟರ್ ರಾವ್ ಬಹದ್ದೂರ್ ಮುತ್ತಣ್ಣನವರು, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮ|| ಯತಿರಾಜುಲು ನಾಯುಡುಯವರು, ಯುವರಾಜರವರ ಅಸಿಸ್ಟೆಂಟರು ಮ|| ಎಂ ಎ ಸಿಂಗರಾಚಾರ್ಯರು, ನೀರಿನ ಇಲಾಖಾ ಸೂಪರಿನ್‌ಟೆಂಡೆಂಟ್ ಮ|| ಎಂ ಎ ಶ್ರೀನಿವಾಸಾಚಾರ್ಯರು, ಮೈಸೂರು ವಿದ್ಯುಚ್ಛಕ್ತಿಯ ಇಲಾಖಾ ಸೂಪರಿನ್‌ಟೆಂಡೆಂಟ್ ಮ|| ದ್ವಾರಕಾನಾಥರವರು, ಅ|| ಇಂಜನಿಯರ್ ಮ|| ರಾಮಕೃಷ್ಣಯ್ಯನವರು, ರಿಸರ್ವ್ ಪೋಲೀಸ್ ಇನ್‌ಸ್ಪೆಕ್ಟರ್ ಮಿ|| ಎಡ್ವರ್ಡ್ಸ್‌ರವರು, ಫಾರೆಸ್ಟ್ ಡೆಪ್ಯುಟಿ ಕನ್ಸರ್ವೇಟರ್ ಮ|| ಹಿರಾಸಿಂಗರವರು, ಶಿಕಾರಿ ಅಧಿಕಾರಿಯಾದ ಮ|| ಮುತ್ತಯ್ಯನವರು, ಗವರ್ನ್‌ಮೆಂಟ್ ಹೌಸ್ ಸೂಪರಿನ್‌ಟೆಂಡೆಂಟ್ ಮ|| ಎಸ್ ವಿಷಕಂಠಯ್ಯನವರು, ಪೋಲೀಸ್ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಮಿ|| ಎಸ್ ಎಂ ಪ್ರಿಚರ್ಡ್ ರವರು, ಕೋಲಾರದ ಪೋಲೀಸ್ ಇನ್‌ಸ್ಪೆಕ್ಟರ್ ಮಿ|| ಎಚ್ ಜಿ. ಸರರ್, ಮಹಾರಾಜರವರ ಖಾಸಾ ಬ್ಯಾಂಡ್ ಮಾಸ್ಟರ್ ಮಿ|| ಎಂ ಜಿ ಟಿ. ಡೆಪ್ರಿಸ್ ರವರು, ಇವರಿಗೆಲ್ಲಾ ಇನಾಮುಗಳು ದೊರಕಿರುತ್ತವೆ.

ಮಿಸ್ ತಾರಾಬಾಯಿಯವರ ಅಂಗಸಾಧನೆ

ರಾಜಧಾನಿಯಲ್ಲಿ ವಿದ್ಯಾವಂತರೂ ಇತರರೂ ಸೇರಿ ಮ|| ಎಂ ವೆಂಕಟಕೃಷ್ಣಯ್ಯನವರ ಹೆಸರಿನ ಮೇಲೆ ಒಂದು ವಿದ್ಯಾವರ್ಧಕ ಫಂಡನ್ನು ಏರ್ಪಾಡುಮಾಡಿ ಅದಕ್ಕೆ ಹಣವನ್ನು ಕೂಡಿಸುತ್ತಿದ್ದಾರೆ. ಈ ಫಂಡಿನಿಂದ ಜಾತಿಕುಲಗಳ ಪಕ್ಷಪಾತವಿಲ್ಲದೆ ಬಡವಿದ್ಯಾರ್ಥಿಗಳಿಗೆ ಸ್ಕೂಲ್ ಫೀಜುಕೊಡುವುದು, ವೇತನಗಳನ್ನು ಕೊಟ್ಟು ಬಾಲಕರನ್ನು ಕೈಗಾರಿಕೆಗಳಲ್ಲಿ ತರಪೇತುಮಾಡುವುದು, ಪಾಠಶಾಲೆಗಳನ್ನಿಟ್ಟು ನಡಿಸುವುದು, ಈ ಮೊದಲಾದ ವಿದ್ಯಾವರ್ಧಕ ಕಾರ್ಯಗಳನ್ನು ನಡಿಸಬೇಕೆಂದು ನಿಶ್ಚಯ ಮಾಡಿಕೊಂಡಿರುವರು. ಕೆಲವು ಕಾಲದಿಂದ ರಾಜಧಾನಿಯಲ್ಲಿರುವ ಮಿಸ್ ತಾರಾಬಾಯಿ ಎಂಬ ಉತ್ತರ ದೇಶದ ಮರಾಠಾ ಸ್ತ್ರೀಯು ಈ ಫಂಡಿಗೆ ದ್ರವ್ಯಸಹಾಯ ಮಾಡುವುದಕ್ಕಾಗಿ ಕಳೆದ ಭಾನುವಾರ ರಾತ್ರಿ ಟೌನ್ ಹಾಲ್ ಬಂಗಲೆಯಲ್ಲಿ ಅಂಗಸಾಧನೆ ಮೊದಲಾದ ಆಟಗಳನ್ನು ಏರ್ಪಡಿಸಿ ನಡಿಸಿದಳು. ಆ ವಿನೋದಗಳನ್ನೂ ಸಾಧನೆಗಳನ್ನೂ ನೋಡಲು ಟೌನ್ ಹಾಲ್ ಬಂಗಲೆಯು ಕಿಕ್ಕಿರಿಯುವಂತೆ ಸೇರಿದ್ದರು. ಅರಸುಗಳೂ, ಅಧಿಕಾರಿಗಳೂ, ವರ್ತಕರೂ, ಸಾಹುಕಾರರೂ, ಸಾಮಾನ್ಯಪ್ರಜೆಗಳೂ, ನೂರಾರುಮಂದಿ ಸ್ತ್ರೀಯರೂ ಬಹು ಉತ್ಸಾಹದಿಂದ ಕೂಡಿ ವಿನೋದಗಳನ್ನೂ ಸಾಧನೆಗಳನ್ನೂ ನೋಡಿ ಆನಂದವನ್ನೂ ವಿಸ್ಮಯವನ್ನೂ ಪಟ್ಟರು. ಮಿಸ್ ತಾರಾಬಾಯಿ ಮಾಡಿ ತೋರಿಸಿದ ಸಾಮರ್ಥ್ಯ ಕಾರ್ಯಗಳು ಅನೇಕ ವರುಷ ಬ್ರಹ್ಮಚಾರಿಗಳಾಗಿದ್ದು ಸಾಧನೆ ಮಾಡಿದ ಪುರುಷರಿಗೂ ಅಸಾಧ್ಯವಾಗಿದ್ದವು. ನಾಲ್ಕು ಜನ ಗಂಡಸರು ಸೇರಿ ಎತ್ತಲಾರದಷ್ಟು ಭಾರವುಳ್ಳ ಕಲ್ಲುಚಪ್ಪಡಿಯನ್ನು ಆಕೆ ತನ್ನ ಜುಟ್ಟಿನಿಂದ ಎತ್ತಿಬಿಟ್ಟದ್ದೂ, 6 ಮಂದಿ ಕುಳಿತಿದ್ದ ಗಾಡಿಯನ್ನು ಆಕೆ ತನ್ನ ಜುಟ್ಟಿಗೆ ಕಟ್ಟಿಕೊಂಡು ಎಳೆದದ್ದೂ, ಎರಡು ಕುರ್ಚಿಗಳ ಮೇಲೆ ಅಂತರಾಳದಲ್ಲಿ ಆಕೆ ಮಲಗಿಕೊಂಡು ಎದೆಯ ಮೇಲೆ ಭಾರೀ ಚಪ್ಪಡಿಯನ್ನು ಹೊತ್ತದ್ದಲ್ಲದೆ ಅದರ ಮೇಲೆ ಇಬ್ಬರು ಭಾರೀ ಸುತ್ತಿಗೆಗಳಿಂದ ಅನೇಕಾವರ್ತಿ ಹೊಡೆದ ಮರಣಕರವಾದ ಏಟುಗಳನ್ನು ಸಹಿಸಿಕೊಂಡದ್ದೂ, ನಾಲ್ವರು ಪುರುಷರು ಬಹು ಬಲವಾಗಿ ತನ್ನ ಎರಡು ಕೈಗಳನ್ನೂ ಹಿಡಿದದ್ದನ್ನು ಆಕೆ ಬಹು ಸಾಮರ್ಥ್ಯದಿಂದ ಝಟಕಾಯಿಸಿ ಬಿಡಿಸಿಕೊಂಡದ್ದೂ, 6 ಜನ ಕುಳಿತಿದ್ದ ಗಾಡಿಯ ಚಕ್ರವನ್ನು ಆಕೆ ಅಂಗತಂಗನಾಗಿ ಮಲಗಿ ಎದೆಯ ಮೇಲೆ ನಿರಾಯಾಸವಾಗಿ ಎಳೆಯಿಸಿಕೊಂಡದ್ದೂ, ಇನ್ನೂ ಆಕೆಯ ಹಲವು ಪರಾಕ್ರಮಕಾರ್ಯಗಳು ನೋಟಕರಲ್ಲಿ ವಿಸ್ಮಯವನ್ನುಂಟುಮಾಡಿದವು. ಆಕೆಯ ಅದ್ಭುತ ಸಾಮರ್ಥ್ಯವನ್ನು ನೋಟಕರೆಲ್ಲಾ ಜಯಧ್ವನಿಗಳಿಂದ ಮೆಚ್ಚಿಕೊಂಡದ್ದಲ್ಲದೆ, ಹಿಂದೂ ಸ್ತ್ರೀಯರು ಉಪ್ಪರಿಗೆಯ ಮೇಲಿನಿಂದ ಆಕೆಗೆ ಪುಷ್ಪಗಳನ್ನು ಎರಚಿದರು, ಪಾರಸೀ ಸ್ತ್ರೀಯರು ಸ್ಟೇಜಿನ ಮೇಲಕ್ಕೆ ಹತ್ತಿ ಹೋಗಿ ಆಕೆಯ ಕತ್ತನ್ನು ಪುಷ್ಪಹಾರಗಳಿಂದ ಜಗಿಸಿಬಿಟ್ಟರು.

ಈ ಸಾಧನೆಗಳ ಮಧ್ಯೆ ಮ|| ಚಿಕ್ಕರಾಮರಾಯರ ಮನೋಹರವಾದ ಹಾಡುಗಾರಿಕೆಯೂ, ಇನ್ನಿಬ್ಬರು ಪ್ರವೀಣರ ಕತ್ತಿ ವರಸೆಗಳೂ, ಇಬ್ಬರ ನಕಲಿಗಳೂ ರಸಯುಕ್ತಗಳಾಗಿ ಸಭಿಕರಿಗೆ ಸಂತೋಷವನ್ನುಂಟುಮಾಡಿದವು. ನೋಟಕರ ಟಿಕೇಟುಗಳನ್ನು ಮಕ್ಕಳಿಂದ ಎತ್ತಿಸಿ 4 ಆಣೆ ಟಿಕೆಟ್ ಪಡೆದ ಒಬ್ಬ ನೋಟಕನಿಗೆ ವಾಗ್ದಾನದ ಪ್ರಕಾರ ಒಂದು ಗಡಿಯಾರವನ್ನು ಇನಾಮು ಕೊಟ್ಟರು. ಕಡೆಯಲ್ಲಿ ಮ|| ಎಂ. ವೆಂಕಟಕೃಷ್ಣಯ್ಯನವರು ಮಿಸ್ ತಾರಾಬಾಯಿಯ ಪ್ರಚಂಡ ಸಾಮರ್ಥ್ಯ, ಆಕೆಯ ಪರೋಪಕಾರಬುದ್ಧಿ, ಬಾಲ್ಯವಿವಾಹ, ಬ್ರಹ್ಮಚರ್ಯವಂತರ ಕರ್ತವ್ಯ, ಹಿಂದೂ ವಿದ್ಯಾವರ್ಧಕ ಫಂಡು, ಈ ಮೊದಲಾದ ವಿಚಾರಗಳನ್ನು ಕುರಿತು ಬಹು ಸ್ತೋತ್ರಾರ್ಹವಾದ ಉಪನ್ಯಾಸಮಾಡಿದರು. ಆ ದಿನ ಟಿಕೆಟ್ಟಿನ ಮೂಲಕ ವಸೂಲಾಗಿದ್ದ ಸುಮಾರು 100 ರೂಪಾಯನ್ನು ಮಿಸ್ ತಾರಾಬಾಯಿಯು ಹಿಂದೂ ವಿದ್ಯಾವರ್ಧಕ ಫಂಡಿನ ಸೆಕ್ರೆಟರಿಯವರಿಗೆ ಉಚಿತವಾಗಿ ಕೊಟ್ಟು ಸಭಿಕರ ಪ್ರೀತಿಗೂ ಸ್ತುತಿಗೂ ಪಾತ್ರಳಾದಳು.

ಆಕೆ ಇಲ್ಲಿನ ದಳವಾಯಿ ಎ ವಿ ಸ್ಕೂಲ್ ಕಟ್ಟಡದ ಫಂಡಿಗೆ ಸಹಾಯ ಮಾಡುವುದಕ್ಕೋಸ್ಕರ ನಾಳೆ ರಾತ್ರಿ ಟೌನ್ ಹಾಲಿನಲ್ಲಿ ತನ್ನ ಸಾಮರ್ಥ್ಯವನ್ನು ಪ್ರದರ್ಶನಮಾಡುವವಳಾಗಿದ್ದಾಳೆ.

ಬ್ರಾಹ್ಮಣರ ಶ್ರೇಣಿಯಲ್ಲಿರುವ ಮನೆ.

ಮೈಸೂರು ಹಳ್ಳದಕೇರಿಯಲ್ಲಿ ನಾರ್ಮಲ್ ಸ್ಕೂಲಿಗೆ ಪಶ್ಚಿಮ ಭಾಗದಲ್ಲಿರುವ ಎರಡು ಅಂತಸ್ತಿನ ಖಾಸಗೀ ಮಹಡಿಮನೆ ಕ್ಯಾಗದಮರ ಸುಟ್ಟ ಇಟ್ಟಿಗೆ ಗಾರೆಯಿಂದ ಮಜಬೂತಾಗಿ ಕಟ್ಟಿರುವ ಕಟ್ಟಡವು ಖರೀದಿಗೆ ಕೊಡಲ್ಪಡುತ್ತೆ. ಇಷ್ಟವುಳ್ಳವರು ಕೆಳಗಿನ ವಿಳಾಸದಾರರಿಗೆ ಬರೆದು ಬೆಲೆಯನ್ನು ತಿಳಿದು ತೆಗೆದುಕೊಳ್ಳಿರಿ

ಜಿ. ರಾಮಯ್ಯ, ಕ್ಯಾಷ್ ಬಜಾರ್, ಬೆಂಗಳೂರು ಸಿಟಿ.

ಭತ್ತ ಕುಟ್ಟುವ ಯಂತ್ರಗಳು.

ಡಗ್ಲಸ್ ಮತ್ತು ಗ್ರ್ಯಾಂಟ್ ಕಂಪನಿಯಲ್ಲಿ ತಯಾರಾಗುವ ಭತ್ತ ಕುಟ್ಟುವ ಯಂತ್ರಗಳೇ ಉತ್ತಮೋತ್ತಮವಾದುವು. ಈ ಕಂಪನಿಗೆ 60 ವರುಷದ ಅನುಭವವುಂಟು. ಅವರೇ ಪ್ರಪಂಚದ ಕಾರೇಗಾರರಲ್ಲಿ ಬಹಳ ಪ್ರಖ್ಯಾತಿಪಡೆದವರು ಅವರ ಯಂತ್ರಗಳು ಎಲ್ಲೆಲ್ಲೂ ಉಪಯೋಗದಲ್ಲಿವೆ.

ಹೆಚ್ಚು ವಿಷಯ ತಿಳಿಯಬೇಕಾದವರು

ಡಗ್ಲಸ್ ಅಂಡ್ ಗ್ರ್ಯಾಂಟ್, ಲಿಮಿಟೆಡ್,
ತಂಜಾವೂರು ಎಂಬೀ ವಿಳಾಸಕ್ಕೆ ಬರೆದುಕೊಳ್ಳಿ.

ಅವರು ನಿಪುಣರಾದ ಕಾರೇಗಾರರನ್ನು ಕಳುಹಿಸುತ್ತಾರೆ. ಎಲ್ಲಾ ತರದ ಮಿಲ್ಲು (ಯಂತ್ರ) ಗಳನ್ನೂ ಒದಗಿಸಬಲ್ಲರು. [255-1]

Bangalore Christmas Fete and INDUSTRIAL EXHIBITION OF 1913.

ಬೆಂಗಳೂರು ಕ್ರಿಸ್ತಮಸ್ ಫೀಟ್ ಅಂಡ್
ಇಂಡಸ್ಟ್ರಿಯಲ್ ಎಕ್ಸಿಬಿಷನ್ ೧೯೧೩.

[253-1]

ಇದೇ ಡಿಸೆಂಬರ್ ತಿಂಗಳು 30 ನೆಯ ತಾರೀಖಿನಿಂದ ನಡೆಯುವ ಪ್ರದರ್ಶನದಲ್ಲಿ ಕೈಗಾರಿಕೆ ಮತ್ತು ಇತರ ಸಾಮಾನುಗಳನ್ನು ಪ್ರದರ್ಶಿಸಲಿಚ್ಛೈಸುವವರು ಕೂಡಲೆ ಈ ಕೆಳಗೆ ನಮೂದಿಸಿರುವ ಯಾರಾದರೂ ಒಬ್ಬರಿಗೆ ಅವರವರಿಗೆ ಬೇಕಾಗುವ ಸ್ಥಳದ ವಿಚಾರದಲ್ಲೂ ಮತ್ತು ಇತರ ವಿಷಯಗಳಲ್ಲೂ ಬರೆದುಕೊಳ್ಳಬಹುದು ಸ್ಥಳಸಂಕೋಚವಿರುವದರಿಂದ ಜಾಗ್ರತೆಮಾಡಿದರೆ ಅನುಕೂಲವುಂಟು

ಬಿ. ಕೆ. ಗರುಡಾ ಐರ್, ಚಿಕ್ಕಪೇಟೆ, ಬೆಂಗಳೂರು ಸಿಟಿ,
ಯಂ ಯೂನಸ್ ಸೇಟ್, ಇನ್‌ಫೆಂಟ್ರಿ ರೋಡ್, ಬೆಂಗಳೂರು,
(ವೈಸ್ ಪ್ರೆಸಿಡೆಂಟರು, ಇಂಡಸ್ಟ್ರಿಯಲ್ ಇಲಾಖೆ)

ಬೆಂಗಳೂರು,
1-12-1913

ದಿ ನ್ಯಾಷನಲ್ ಇನ್ಷುರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿ, ಲಿಮಿಟೆಡ್, ಅಮೃತಸರ್.

ನೋಟೀಸ್.

ಮ॥ ಗಳಾದ ಎನ್. ರಾಮರಾಯರನ್ನೂ ಕೆ. ಅನಂತರಾಮಯ್ಯನವರನ್ನೂ ಮೈಸೂರು ಮತ್ತೂ ಕೊಡಗು ಸೀಮೆಗಳ ಚೀಫ್ ಏಜೆಂಟರುಗಳಾಗಿಯೂ, ಮ॥ ಡಿ. ಶೇಷಗಿರಿರಾಯರನ್ನು ಕೋಲಾರ ಮತ್ತೂ ಬೆಂಗಳೂರು ಡಿಸ್ಟ್ರಿಕ್ಟುಗಳ ಚೀಫ್ ಏಜೆಂಟರಾಗಿಯೂ ನೇಮಕಮಾಡಲಾಗಿದೆ ಎಂದು ತಿಳಿಯತಕ್ಕದ್ದು.

ಪಿ. ಎಲ್. ರಾಜವಾಲ್,
ಚೀಫ್ ಮ್ಯಾನೇಜರ್.

[219-1]

ಜ್ವರದ ಔಷಧ ಪುಗಸಟ್ಟೆ ಕೊಡುವುದು.

ಮಲೇರಿಯಾ ಎಂಬ ಛಳಿಜ್ವರವನ್ನು ಸುವಾರಮಾಡತಕ್ಕ "ಕ್ವಿನೈನ್" ಎಂಬ ಔಷಧ ಪೊಟ್ಟಣಗಳನ್ನು ಸರ್ಕಾರದವರು ಎಲ್ಲಾ ಗ್ರಾಮಗಳ ಪಟೇಲರಲ್ಲಿ ವಿಕ್ರಯಮಾಡುವುದಕ್ಕೆ ಕೊಟ್ಟಿದ್ದ ಅಂಶವು ಸರ್ವರಿಗೂ ತಿಳಿದೇ ಇರುತ್ತದೆ. ಆದರೆ ಈಗ ಸರ್ಕಾರದವರು ಅಂಥ ಔಷಧ ಪೊಟ್ಟಣಗಳನ್ನು ಧರ್ಮಾರ್ಥವಾಗಿ ಕೊಡುವ ಮೇರೆಗೆ ಏರ್ಪಾಡುಮಾಡಿರುತ್ತಾರೆ. ಆದ್ದರಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಅನೇಕ ಗ್ರಾಮಸ್ಥರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—ಅವರು ವಾಸಿಸತಕ್ಕ ಗ್ರಾಮಗಳಲ್ಲಿ ಮಲೇರಿಯಾ ಎಂಬ ಛಳಿಜ್ವರ ವ್ಯಾಧಿಯು ಇದ್ದಲ್ಲಿ ಅಂಥ ಗ್ರಾಮಸ್ಥರು ಸದರಿ ಗ್ರಾಮದ ಪಟೇಲರ ಮೂಲಕವೇ ಆಗಲಿ, ಅಥವಾ ಶ್ಯಾನುಭೋಗರ ಮೂಲಕವೇ ಆಗಲಿ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಕಾಗದ ಬರೆದಲ್ಲಿ "ಕ್ವಿನೈನ್" ಎಂಬ ಔಷಧ ಪೊಟ್ಟಣಗಳನ್ನು ಉಚಿತವಾಗಿ ಕಳುಹಿಸಲಾಗುವುದು.

ಬೆಂಗಳೂರು, ವಿ. ಮುತ್ತುಸಾಮಿದಾಸ್,
2-12-1913. ಡಿ॥ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರ್.

ನಿಮ್ಮ ಹತ್ತಿರ ಹೂವಿನ ತೋಟವಿರಬೇಕೋ?

ಹಾಗಾದರೆ

ಅಟೋ ಮೋಹಿನಿ

ಎಂಬ ಲೋಕಪ್ರಖ್ಯಾತವಾದ ಪರಿಮಳವನ್ನೇ ಕೊಂಡುಕೊಳ್ಳಿ. ನಾಲ್ಕೇ ತೊಟ್ಟು ನಿಮ್ಮ ಕರವಸ್ತ್ರಕ್ಕೆ ಚಿಮುಕಿಸಿಕೊಂಡರೆ ನಾಲ್ಕು ದಿನ ಜಾಜಿ ಪರಿಮಳದ ಸುಗಂಧವಿದ್ದೀತು. ಅದರ ಮನೋಹರ ವಾಸನೆಯನ್ನೂ ಪುಷ್ಪಶ್ರೇಷ್ಠತೆಯನ್ನೂ ಶಾಶ್ವತಸ್ವಭಾವವನ್ನೂ ಮೆಚ್ಚಿ ಬಹು ಸಂತೋಷದಿಂದ 1911 ನೇ ಮೈಸೂರು ದಸರಾ ಎಗ್ಜಿಭಿಷನ್‌ನಲ್ಲಿ ಅದಕ್ಕೆ ಭಂಗಾರದ ಮೆಡಲನ್ನು ಬಹುಮಾನ ಕೊಟ್ಟಿದಾರೆ ಆ ರೀತಿ ಈ ಸುವಾಸನೆಯು ಇಲ್ಲದೆ ಆರಿಹೋದದ್ದನ್ನು ರುಜುವಾದತಕ್ಕವರಿಗೆ ನಾಣ್ಯದಲ್ಲಿ 100 ರೂಪಾಯಿ ಬಹುಮಾನಕೊಡುವವೆಂದು ಚಾಲೆಂಜ್ ಕೊಡುತ್ತೇವೆ. ಸಣ್ಣ ಸೀಸೆಯ ಪರಿಮಳವನ್ನು ತರಿಸಿ ಪರೀಕ್ಷೆಯಿಂದ ಇನಾಂ ಪಡೆಯಿರಿ.

ಕ್ರಯ ಅರ್ಧ ಔನ್ಸ್ ಸೀಸೆಗೆ ರೂ. 2-0-0
,, ಒಂದು ಡ್ರಾಮ್ ,, ,, 0-12-0
ಅಟೋ ಮೋಹಿನಿ ಪರಿಮಳವುಳ್ಳ ಕಾರ್ಡು 1 ಡಜನ್‌ಗೆ 0-12-0.

ಪ್ರೊಪ್ರೈಟರು—ದಿ ಓರಿಯಂಟಲ್ ಡ್ರಗ್ ಕೆಮಿಕಲ್ ಕಂಪನಿ,
ಏಜಂಟರು—ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
[251-1] 177, ಜೈನಾ ಬಜಾರ್ ರೋಡ್, ಮದರಾಸ್.

ವೃತ್ತಾಂತ ಪತ್ರಿಕೆ.

ಸನ್ ೧೯೧೩ ನೇ ಇಸವಿ ಡಿಸೆಂಬರ್, ತಾ. ೪ ನೇ ಗುರುವಾರ

ದಕ್ಷಿಣ ಆಫ್ರಿಕದಲ್ಲಿ ನಮ್ಮ ದೇಶೀಯರ ಪಾಡು.

ದಕ್ಷಿಣ ಆಫ್ರಿಕದಿಂದ ದಿನವಹಿ ಅನೇಕ ತಂತೀವರ್ತಮಾನಗಳು ಬರುತ್ತಲಿವೆ; ಈ ವರ್ತಮಾನಗಳು ಒಂದಕ್ಕೊಂದು ಅಸಮಂಜಸವಾಗಿಯೂ, ವಿರೋಧವಾಗಿಯೂ ಇರೋಣದರಿಂದ ಅಲ್ಲಿರುವ ನಮ್ಮ ಸಹೋದರ ವರ್ಗಕ್ಕೆ ಸೇರಿದ ಭಾರತೀಯರ ಸ್ಥಿತಿಗತಿ ಏನಾಗಿದೆಯೋ ನಿಚಿತವಾಗಿ ತಿಳಿದು ಹೇಳುವುದು ಕಷ್ಟವಾಗಿದೆ. ನಮಗೆ ತಿಳಿದಿರುವ ಮಟ್ಟಿಗೆ ಅಲ್ಲಿನ ಸ್ಥಿತಿಗತಿಯನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸುವೆವು.

ನಮ್ಮ ದೇಶದ ಬೇರೆ ಬೇರೆ ಕೋಮುಗಳ ಮತ್ತೂ ಕಸಬುಗಳ ಪ್ರಜೆಗಳು ಆಪೇಕ್ಷೆಯದಿಂದಲೂ ದಕ್ಷಿಣ ಆಫ್ರಿಕಕ್ಕೆ ಹೋಗಿ ಬರುವುದುಂಟು. ಅವರಿಗೆ ಅಲ್ಲಿ ನಾನಾ ಜೀವನೋಪಾಯಗಳು ದೊರಕುವವು. ಮತ್ತೂ ಅಂಥಾ ಅನೇಕ ಜನರು ಅಲ್ಲಿ ತಕ್ಕಮಟ್ಟಿಗೆ ದ್ರವ್ಯಸಂಪಾದನೆಯನ್ನೂ ಮಾಡಿಕೊಂಡಿದಾರೆ ಅಲ್ಲಿ ಒಳ್ಳೇ ಸಂಪಾದನೆ ಇದೆ ಎಂದು ಮದರಾಸ್ ಅಧಿಪತ್ಯದಲ್ಲೂ ನಮ್ಮ ದೇಶದ ಇತರ ಕಡೆಗಳಲ್ಲೂ ಪ್ರಚಾರವಾಗಿ, ಅನೇಕಾನೇಕರು ದಕ್ಷಿಣ ಆಫ್ರಿಕಕ್ಕೆ ಹೋದರು ಇವರೆಲ್ಲಾ ಸಾಮಾನ್ಯವಾಗಿ ಕೀಳು ಜಾತಿಯವರಾಗಿದ್ದು, ಸಮುದ್ರಯಾನದ ಕಟ್ಟನ್ನು ಲಕ್ಷ್ಯ ಮಾಡತಕ್ಕವರಲ್ಲವೆಂದು ಹೇಳಬಹುದು

ಈ ಪ್ರಕಾರ ನಮ್ಮ ದೇಶದಿಂದ ಹೋದವರು ದಕ್ಷಿಣ ಆಫ್ರಿಕದಲ್ಲಿ ಸಾಮಾನ್ಯವಾಗಿ ಕೂಲಿಪಾಡು ಮಾಡುವವರಾಗಿಯೂ, ಕೆಲವರು ಅಂಗಡಿಮುಂಗಟ್ಟುಗಳನ್ನಿಟ್ಟುಕೊಂಡು ವ್ಯಾಪಾರ ಮಾಡುವವರಾಗಿಯೂ ಇರುತ್ತಾರೆ ಈ ಕಲಸಗಳಲ್ಲಿ ಕ್ರಮೇಣ ಇವರಿಗೂ, ಅಲ್ಲಿನ ಸ್ಥಳದಂಥಗರಾದ ಬೋಯರುಗೂ, ಗ್ರೇಟ್ ಬ್ರಿಟನ್‌ನಿಂದ ಹೋಗಿರುವ ಇಂಗ್ಲಿಷ್ ಜನರಿಗೂ ಪ್ರೋಟಾಪ್ರೋಟಿಯು ಸ್ವಭಾವವಾಗಿ ಉಂಟಾಗಿ, ಅವರಿಗೂ ನಮ್ಮ ದೇಶೀಯರಿಗೂ ಪರಸ್ಪರ ಹೋರಾಟಕ್ಕೂ ವೈಷಮ್ಯಗಳಿಗೂ ಅವಕಾಶ ಹುಟ್ಟಿ ಬೆಳೆಯುತ್ತಾ ಬಂದವು.

ಈ ಹೋರಾಟಗಳಲ್ಲಿ ಅಲ್ಲಿರುವ ನಮ್ಮ ದೇಶೀಯರಾಗಲಿ ಅವರ ಎದುರುಪಕ್ಷದವರಾಗಲಿ ಧರ್ಮವಾಗಿಯೂ ವಿವೇಕದಿಂದಲೂ ವರ್ತಿಸಲಿಲ್ಲವೆಂದು ನಮಗೆ ತೋರುತ್ತದೆ. ಆಗರೆ ಅಲ್ಲಿನವರು ನಮ್ಮ ದೇಶೀಯರನ್ನು ಅಧರ್ಮವಾದ ಕೆಲವು ನಿರ್ಬಂಧಗಳಿಗೆ ಗುರಿಮಾಡಿ, ಅವರ ಮೇಲೆ ಅನ್ಯಾಯವಾದ ತಲೆಪಟ್ಟಿ ಮುಂತಾದ ಪದಗಳನ್ನು ಹಾಕಿ ವಸೂಲ್ಮಾಡುವರು ನಮ್ಮ ದೇಶೀಯರು ಈ ಪಕ್ಷಪಾತವುಳ್ಳ ನಿರ್ಬಂಧಗಳನ್ನು ನಿವಾರಣೆ ಮಾಡಿಕೊಳ್ಳಬೇಕೆಂಬ ಕುತೂಹಲದಿಂದ ಕಾರ್ಯಸಾಧನೆಮಾಡುತ್ತಾ ಬಂದದ್ದರಲ್ಲಿ ಅವರು ನಡೆದ ಕಾರ್ಯಗಳೆಲ್ಲಾ ಅಲ್ಲಿನ ರಾಜನೀತಿಗೆ ಅನುಸಾರವಾಗಿಯೂ, ವಿವೇಕಪೂರ್ವಕವಾಗಿಯೂ ಇದ್ದವೆಂದು ಹೇಳಲು ನಮಗೆ ಒಪ್ಪಿತವಾಗಿಲ್ಲ ಹ್ಯಾಗೂ ಈ ಎರಡು ಪಕ್ಷಗಳಿಗೂ ಪರಸ್ಪರವಾದ ವಿಂಗಿತಗಳೂ ಅಭಿಪ್ರಾಯಗಳೂ ದಿನಕ್ರಮೇಣ ಕಠಿಣವಾಗುತ್ತಾ ಬಂದು, ಈಗ ನಮ್ಮ ದೇಶೀಯರಿಗೆ ಅಲ್ಲಿ ವಿಶೇಷವಾದ ಕಷ್ಟನಷ್ಟಗಳೂ ಮನೋವ್ಯಥೆಗಳೂ ಪ್ರಾಪ್ತವಾಗಿರುತ್ತವೆ.

ನಮ್ಮ ಜನರು ಅನೇಕ ಸಂದರ್ಭಗಳಲ್ಲಿ ತಮ್ಮ ಸಹಜವಾದ ಉದ್ಯೋಗಗಳಿಗೆ ಹೋಗದೆ ಹಟ ಹಿಡಿದು ನಿಂತು ಬಿಟ್ಟಿದಾರೆ; ಅನೇಕರು ತಮ್ಮ ಹದ್ದುಬಸ್ತುಗಳನ್ನು ಮೀರಿ, ಹೋಗದಂತೆ ನಿರ್ಬಂಧಮಾಡಲ್ಪಟ್ಟಿರುವ ಸ್ಥಳಗಳಿಗೆ ಗುಂಪು ಗುಂಪಾಗಿ ಹೋಗುತ್ತಾ ಬಂದಿದಾರೆ. ಇದನ್ನೆಲ್ಲಾ ನೈಸರ್ಗಿಕ ಸ್ಥಳಾಧಿಕಾರಿಗಳು ಅಂಥವರನ್ನು ನೂರಾರು ಗಟ್ಟಲೆ ಹಿಡಿದು ಬಂಧನದಲ್ಲಿ ಹಾಕಿಬಿಟ್ಟಿರುವರು ಇನ್ನು ಒಂದೆರಡು ಕಡೆ ಪೋಲೀಸಿನವರಿಗೂ ನಮ್ಮ ದೇಶೀಯರಿಗೂ ಹೋರಾಟ ನಡೆದು ಕೆಲವರು ಕೊಲ್ಲಲ್ಪಟ್ಟರು, ಹಲವರಿಗೆ ಗಾಯಗಳಾದವು. ಇದನ್ನೆಲ್ಲಾ ನೋಡುವಲ್ಲಿ ಈಗ ಅಲ್ಲಿನ ಸ್ಥಿತಿಯು ವ್ಯಥೆಯನ್ನುಂಟುಮಾಡುತ್ತಿದೆ ಎರಡು ಪಕ್ಷದವರೂ ಈ ದುಃಸ್ಥಿತಿಗೂ ಗಲಭೆಗೂ ತಾವು ಕಾರಣರಲ್ಲವೆಂದು ಹೇಳುತ್ತಾ ಎದುರು ಪಕ್ಷದವರ ಮೇಲೆ ತಪ್ಪುಹೊರಿಸುತ್ತಾ ಬಂದಿದಾರೆ.

ವೈಸ್‌ರಾಯ್ ಮತ್ತೂ ಗವರ್ನರ್ ಜನರಲ್ ರಾದ ಲಾರ್ಡ್ ಹಾರ್ಡಿಂಗ್ ಪ್ರಭುಗಳು ಕಳೆದ ವಾರ ಮದರಾಸಿನಲ್ಲಿದ್ದಾಗ ಮೇಲ್ಕಂಡ ವಿಷಯವನ್ನು ಕುರಿತು ಬಹು ಬಂಡಿತವಾದ ಮಾತುಗಳನ್ನು ಅಪ್ಪಣೆಕೊಡಿಸಿದರು. ಈ ವಿಷಯದಲ್ಲಿ ಧರ್ಮವೂ ನಿಷ್ಪಕ್ಷಪಾತವೂ ಆದ ತನಿಖೆಯು ಅಗತ್ಯವಾಗಿ ನಡೆಯಲೇ ಬೇಕಾಗಿದೆಯೆಂದು ಅಭಿಪ್ರಾಯಪಟ್ಟಿದಾರೆ ಈ ಹೋರಾಟವು ಹೀಗಲ್ಲದೆ ಇನ್ನಾವ ರೀತಿಯಲ್ಲೂ ವ್ಯವಸ್ಥೆಯಾಗುವುದಿಲ್ಲವೆಂದು ನಮಗೆ ತೋರುತ್ತದೆ. ಈಗಿನ ಸ್ಥಿತಿಗತಿಯಿಂದ ಯಾವ ಪಕ್ಷಕ್ಕಾಗಲಿ ಏನೊಂದು ಪ್ರಯೋಜನವೂ ಉಂಟಾಗುವದಿಲ್ಲ. ಒಂದು ಪಂಚಾಯತಿ ಏರ್ಪಾಡಾಗಿ ಪಂಚಾಯತರು ಉಭಯ ಪಕ್ಷದ ವಾದಗಳನ್ನೂ ಕೇಳಿ ತಿಳಿದು, ಇನ್ನುಮುಂದೆ ನಮ್ಮ ದೇಶೀಯರ ವಿಷಯದಲ್ಲಿ ದಕ್ಷಿಣ ಆಫ್ರಿಕದ ರಾಜನೀತಿಯು ಈ ರೀತಿ ಇರಬೇಕೆಂದು ನಿಷ್ಕರ್ಷೆಮಾಡಿದ ಪಕ್ಷದಲ್ಲಿ ನಮ್ಮ ದೇಶೀಯರೂ ಬೋಯರರೂ ಬ್ರಿಟಿಷರೂ ಸಮಾಧಾನದಿಂದಲೂ ಐಕಮತ್ಯದಿಂದಲೂ ಪರಸ್ಪರ ಪ್ರೀತಿ ವಿಶ್ವಾಸಗಳಿಂದಲೂ ಬಾಳಿ ಅಭಿವೃದ್ಧಿಗೆ ಬರಲು ಅನುಮಾನವಿಲ್ಲ. ಸದ್ಯದಲ್ಲಿ ನಾವು ದಕ್ಷಿಣ ಆಫ್ರಿಕದಿಂದ ಬರುವ ತಂತೀ ವರ್ತಮಾನಗಳನ್ನು ಓದಿ ಗಾಬರಿಬಿದ್ದು ಕಳವಳಪಡಬಾರದೆಂದೂ, ಆ ತಂತೀ ವರ್ತಮಾನಗಳು ಪಕ್ಷಪಾತವಾದವುಗಳೆಂದೂ, ಅವುಗಳಿಂದ ಅಲ್ಲಿನ ಯಥಾರ್ಥ ಸ್ಥಿತಿಯನ್ನಾಗಲಿ ನಿಜವಾಗಿ ನಡೆಯುವ ಕಾರ್ಯಗಳನ್ನಾಗಲಿ ತಿಳಿಯಲಾರೆವೆಂದೂ ಸೂಚಿಸುತ್ತೇವೆ.

ದೇವರು ಎಲ್ಲೆಲ್ಲಿಯೂ ಇದ್ದಾನೆ; ಆದ್ದರಿಂದ ಈ ಕಲ್ಲಿನಲ್ಲಿದ್ದಾನೆ ಎಂಬ ವಾದವು.

ಕಲ್ಲು ದೇವರುಗಳನ್ನು ಪೂಜಿಸುವವರು—ದೇವರು ಎಲ್ಲೆಲ್ಲಿಯೂ ಇದ್ದಾನೆ, ನಾವು ಪೂಜಿಸುವ ಈ ಕಲ್ಲಿನಲ್ಲಿಯೂ ಇದ್ದಾನೆ. ಎಂದು ಸಾಧಾರಣವಾಗಿ ವಾದಿಸುವರು ಇದಕ್ಕೆ ನಾವು ಹೇಳುವದೇನಂದರೆ—

ದೇವರು ಇಂತಕ್ಕ ಸ್ಥಳವು ಇಷ್ಟೇ ಸರಿಯೆಂದು ಗೊತ್ತುಮಾಡುವದು ಅಸಾಧ್ಯ ಎಂಬುದನ್ನು ನಾವು ಮೊದಲು ಚೆನ್ನಾಗಿ ಮುಂದಟ್ಟುಮಾಡಿಕೊಳ್ಳಬೇಕು. ದೊಡ್ಡ, ಚಿಕ್ಕ, ಉದ್ದ, ಗಿಡ್ಡ, ಅಗಲ, ಕಿರಿದು ಎಂಬೀ ಮಾತುಗಳು ವಸ್ತುಗಳಿಗೆ ಸಲ್ಲತಕ್ಕ ಮಾತುಗಳಾಗಿವೆಯೇ ಹೊರತು ಆತ್ಮಸ್ವರೂಪಿಯಾದ ದೇವರಿಗೆ ಸಲ್ಲತಕ್ಕವುಗಳಲ್ಲ ಯಾಕೆಂದರೆ ಆತನು ಕಾಲವನ್ನೂ ಸ್ಥಳವನ್ನೂ ಅತಿಕ್ರಮಿಸಿದವನಾಗಿದ್ದಾನೆ.

ಹಾಗಾದರೆ ದೇವರು ಕಲ್ಲಿನಲ್ಲಿದ್ದಾನೆಂಬುದರ ಅಭಿಪ್ರಾಯವೇನು? ಒಂದು ರತ್ನವು ಭರಣಿಯಲ್ಲಿ, ಹಾವು ಹುತ್ತದಲ್ಲಿ, ಮನುಷ್ಯನು ಮನೆಯಲ್ಲಿ ಇರುವ ಪ್ರಕಾರ ದೇವರು ಕಲ್ಲಿನಲ್ಲಿ ಇರುತ್ತಾನೋ? ಕಲ್ಲಾಗಲಿ ಬೇರೆ ಯಾವ ವಸ್ತುವೇ ಆಗಲಿ ಅಪರಿಮಿತನಾದ ದೇವರನ್ನು ತನ್ನಲ್ಲಿ ಅಡಗಿಸಿ ಇಟ್ಟುಕೊಳ್ಳಲಾರದು. ಸೊಲೊಮೋನನೆಂಬ ಒಬ್ಬ ದೊಡ್ಡ ಅರಸನು ಒಂದು ದೊಡ್ಡ ದೇವಸ್ಥಾನವನ್ನು ಕಟ್ಟಿಸಿ, ಅದನ್ನು ಪ್ರತಿಷ್ಠೆಮಾಡುವಲ್ಲಿ ಅವನು ದೇವರಿಗೆ ಹೇಳಿದ್ದೇನಂದರೆ "ಇಗೋ, ಆಕಾಶಗಳೂ ಆಕಾಶಾಕಾಶಗಳೂ ನಿನ್ನನ್ನು ಹಿಡಿಯಲಾರವು, ಹಾಗಾದರೆ ನಾನು ಕಟ್ಟಿಸಿದ ಈ ಮನೆಯು ಹಿಡಿಯುವದು ಹ್ಯಾಗೆ" ಎಂಬುವದೇ

ದೇವರು ಕಲ್ಲಿಗಿಂತ ಎಷ್ಟೋ ಶಕ್ತನು ಕಲ್ಲು ದೇವರ ಮರೆಹೋಗಬೇಕೇ ಹೊರತು ದೇವರು ಕಲ್ಲಿನ ಮರೆಹೊಗಲಾರನು ಆದ್ದರಿಂದ ದೇವರು ಕಲ್ಲಿನಲ್ಲಿದ್ದಾನೆಂದು ಹೇಳುವದಕ್ಕಿಂತ ಕಲ್ಲು ದೇವರಲ್ಲಿದೆ ಎಂದು ಹೇಳುವದು ಉತ್ತಮ ದೃಷ್ಟಾಂತವಾಗಿ ಸ್ವಂತ ಮನೆ, ನಾನಾ ತರದ ಜಂದಿಗೆ, ದನಕರುಗಳು, ಹೆಂಡತಿ ಮಕ್ಕಳು ಇವುಗಳನ್ನು ಪಡೆದಿರುವ ಒಬ್ಬ ರೈತನ ವಿಷಯ ಯೋಚನೆಮಾಡೋಣ ಆ ರೈತನು ತನ್ನ ಮನೆಯಲ್ಲಿ ವಾಸಮಾಡುತ್ತಾನೆಂದು ಸಾಧಾರಣವಾಗಿ ಹೇಳುವದುಂಟು ಆದರೆ ಒಂದು ಅರ್ಥದಲ್ಲಿ ಆ ಒಟ್ಟು ಮನೆಯು ಅವರ ಯಜಮಾನನಲ್ಲಿ ಇದೆಯೆಂದು ಸಹಜವಾಗಿ ಹೇಳಬಹುದು, ಆ ಮನೆಯನ್ನು ಕಟ್ಟಿದವನು ಅವನೇ. ಅವನಿಗೆ ಬೇಕಾದರೆ ಅದನ್ನು ಇಟ್ಟುಕೊಳಬಹುದು ಬೇಡವಾದರೆ ಕಿತ್ತುಹಾಕಬಹುದು ಆ ಮನೆಯಲ್ಲಿರುವ ಅನೇಕ ಸಾಮಾನುಗಳು ಅವನ ಸ್ವಂತ ಕೈಯಿಂದ ಮಾಡಿದವುಗಳು ದನಕರುಗಳನ್ನು ಇಟ್ಟುಕೊಳ್ಳುವದಕ್ಕಾದರೂ ಮಾರುವದಕ್ಕಾದರೂ ಅವನಿಗೆ ಸರ್ವ ಸ್ವತಂತ್ರವಿದೆ ಆಳುಗಳು ಅವನ ಆಜ್ಞೆಗೆ ಒಳಪಟ್ಟಿರುತ್ತಾರೆ ಹೆಂಡತಿಯು ಅವನನ್ನು ತನ್ನ ಒಡೆಯನೆಂದು ಸನ್ಮಾನಿಸುವಳು ಮಕ್ಕಳು ಅವನಿಂದಲೇ ಹುಟ್ಟಿ, ಅವನ ಕೈ ಅನ್ನಕ್ಕಾಗಿ ನೋಡಿರುತ್ತವೆ ಹೀಗೆ ಆ ಒಟ್ಟು ಕುಟುಂಬವು ಆ ರೈತನಲ್ಲೇ ಇರುತ್ತದೆ ಇದೇ ಅರ್ಥದಲ್ಲಿ ಆದರೆ ನಿರಂಕುಶವಾಗಿಯೂ ಪರಿಪೂರ್ಣವಾಗಿಯೂ, ಈ ಲೋಕವೆಲ್ಲವೂ ದೇವರಲ್ಲಿ ಇರುತ್ತದೆ. "ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ, ಇರುತ್ತೇವೆ" ಎಂದು ಸ್ರೀ ಪೌಲನು ಹೇಳುತ್ತಾನೆ "ನಿಮ್ಮ ತಂದೆಯ (ದೇವರ) ಚಿತ್ತವಿಲ್ಲದೆ ಒಂದು ಗುಬ್ಬಿಯಾದರೂ ನೆಲಕ್ಕೆ ಬೀಳದು" ಎಂದು ಯೇಸು ಕ್ರಿಸ್ತನು ಹೇಳಿದನು

ದೇವರು ಕಲ್ಲಿನಲ್ಲಿ ಇದ್ದಾನೆಂದು ಹೇಳುವಲ್ಲಿ ದೇವರ ಸರ್ವಸಂಪೂರ್ಣತೆಯನ್ನು ಈ ಕಲ್ಲು ತನ್ನಲ್ಲಿ ಅಡಗಿಸಿಕೊಂಡಿದೆ ಎಂಬ ಅಭಿಪ್ರಾಯವಲ್ಲ; ದೇವರ ಯಾವದೋ ಒಂದು ಅಂಶವು ಈ ಕಲ್ಲಿನಲ್ಲಿ ಇದೆ, ಇದು ದೇವರ ಗುಣಲಕ್ಷಣಗಳನ್ನು ಸ್ವಲ್ಪಮಟ್ಟಿಗೆ ಪ್ರಕಾಶಪಡಿಸುತ್ತದೆ ಎಂಬುದೇ ಇದರ ಅಭಿಪ್ರಾಯವೆಂದು ಕೆಲವರು ವಾದಿಸುವರು ದೇವರ ಒಂದು ಅಂಶವು ಇದರಲ್ಲಿ ಮತ್ತೊಂದು ಅದರಲ್ಲಿ ಇದೆ, ಒಂದರಲ್ಲಿ ದೇವರ ಅಂಶವು ಹೆಚ್ಚಾಗಿದೆ, ಮತ್ತೊಂದರಲ್ಲಿ ಕಡಿಮೆಯಾಗಿದೆ ಎಂಬೀ ರೀತಿಯಾಗಿ ದೇವರನ್ನು ಭಾಗಿಸುವದಕ್ಕೆ ಆಗುವದಿಲ್ಲ ಹೀಗಿದ್ದಾಗ್ಯೂ ದೇವರು ತನ್ನ ಮಹಿಮೆಯನ್ನು ಕೆಲವು ವಸ್ತುಗಳ ಮೂಲಕ ಹೆಚ್ಚಾಗಿಯೂ ಬೇರೆ ಕೆಲವು ವಸ್ತುಗಳ ಮೂಲಕ ಕಡಮೆಯಾಗಿಯೂ ವ್ಯಕ್ತಪಡಿಸುತ್ತಾನೆಂದು ನಾವು ವಾಸ್ತವವಾಗಿ ಹೇಳಬಹುದು

ಮೇಲೆ ಹೇಳಿದ ಆ ರೈತನು ಮನೆಯನ್ನು ಬಿಟ್ಟು ದೂರ ಹೋಗಿರುವ ಕಾಲದಲ್ಲಿ ಅವನ ಆಳುಗಳಲ್ಲಿ ಒಬ್ಬನು— ಈ ನೇಗಲು ನಮ್ಮ ಗೌಡರು ಮಾಡಿದ್ದು, ಇದು ಅವರ ಶಕ್ತಿಯನ್ನೂ ಜ್ಞಾನವನ್ನೂ ಪ್ರಕಾಶಪಡಿಸುತ್ತದೆ ಆದ್ದರಿಂದ ಇದನ್ನೇ ನಮ್ಮ ಗೌಡರೆಂದು ಭಾವಿಸಿ ಅವರಿಗೆ ಸಲ್ಲಿಸತಕ್ಕ ಮಾನಮರ್ಯಾದೆಗಳನ್ನು ಈ ನೇಗಲಿಗೆ ಸಲ್ಲಿಸುತ್ತೇನೆಂದು ಹೇಳಿದರೆ, ಅಥವಾ ಆ ರೈತನ ಹೆಂಡತಿಯು ಈ ಎಮ್ಮೆ ಕರುವು ನಮ್ಮ ಯಜಮಾನರ ಮುಂದೆಯಲ್ಲಿ ಹುಟ್ಟಿದ್ದು ಇದಕ್ಕೆ ರೋಗರುಜಿನ ಬಂದ ಕಾಲದಲ್ಲಿ ನಮ್ಮ ಯಜಮಾನರೇ ಇದಕ್ಕೆ ಚಿಕಿತ್ಸೆಮಾಡಿ, ಇದರ ಪ್ರಾಣವನ್ನು ಉಳಿಸಿರುತ್ತಾರೆ; ಆದ್ದರಿಂದ ಇದನ್ನೇ ನನ್ನ ಯಜಮಾನರೆಂದು ಭಾವಿಸುತ್ತೇನೆಂದು ಹೇಳಿದರೆ, ಆ ಸೇವಕನೂ ಹೆಂಡತಿಯೂ ಬುದ್ಧಿ ಹುಚ್ಚರು; ಆ ನೇಗಲಾದರೂ ಎಮ್ಮೆಕರುವಾದರೂ ಗೌಡನ ಗುಣಲಕ್ಷಣಗಳನ್ನೂ ಸಾಮರ್ಥ್ಯವನ್ನೂ ಹೆಚ್ಚಾಗಿ ಪ್ರಕಾಶಪಡಿಸುವದಿಲ್ಲವೆಂದು ನಾವು ಹೇಳುವೆವಷ್ಟೆ ಮಸಲ, ಆ ಗೌಡನಿಗೆ ಒಬ್ಬ ಪ್ರಾಯದ ಮಗನು ಇದ್ದಾನೆಂದಿಟ್ಟುಕೊಳ್ಳೋಣ, ಅವನು ಆ ತಂದೆಯಿಂದಲೇ ಹುಟ್ಟಿದವನು, ಅವನ ಮುಖವೂ ಸ್ವಭಾವವೂ ಮನಸ್ಸೂ ತಂದೆಯದರಂತೆ ಇರುತ್ತವೆ ಗೌಡನಿಗೆ ಬದಲಾಗಿ ಗೌರವಿಸಿಕೊಳ್ಳುವದಕ್ಕೆ ಅವನೇ ಶಕ್ಯನಲ್ಲವೇ?

ಇದರಂತೆಯೇ ಜಡವಸ್ತುಗಳಿಗಿಂತ ಪ್ರಾಣಿಗಳು ದೇವರ ಶಕ್ತಿಯನ್ನು ಹೆಚ್ಚಾಗಿ ಪ್ರಕಾಶಪಡಿಸುತ್ತವೆಂದೂ, ಪ್ರಾಣಿಗಳಲ್ಲಿ ಜ್ಞಾನವುಳ್ಳವರು ಮೂಕಪ್ರಾಣಿಗಳಿಗಿಂತ ದೇವರ ಮಹಿಮೆಯನ್ನು ಹೆಚ್ಚಾಗಿ ವ್ಯಕ್ತಪಡಿಸುತ್ತಾರೆಂದೂ ಜ್ಞಾನವುಳ್ಳವರಲ್ಲಿ ಪವಿತ್ರನಾಗಿಯೂ ಪಾಪರಹಿತನಾಗಿಯೂ ಇರುವವನು ಅಧಿಕವಾಗಿ ದೇವರ ಮಹಿಮೆಯನ್ನು ಪ್ರಕಾಶಪಡಿಸುವನೆಂದೂ ನಾವು ತೀರ್ಮಾನಿಸಬೇಕಾಗಿದೆ. ಒಂದು ಕಲ್ಲಾದರೂ ಮೂಕಪ್ರಾಣಿಯಾದರೂ ಜ್ಞಾನಿಯಾದಾಗ್ಯೂ ಪಾಪಿಯಾಗಿರುವವನಾದರೂ ದೇವರ ಪ್ರತಿನಿಧಿಯಾಗುವುದು ಅಸಾಧ್ಯ ದೇವರ ಮಹಿಮೆಯು ತನ್ನ ಅತ್ಯುತ್ತಮವಾದ ರೂಪದಲ್ಲಿ ಎಂದಾದರೂ ಲೋಕದಲ್ಲಿ ಪ್ರತ್ಯಕ್ಷವಾಗಿದ್ದರೆ, ಅದು ಪಾಪರಹಿತವಾದಂಥ ನರಾವತಾರದಲ್ಲಿಯೇ ಪ್ರತ್ಯಕ್ಷವಾಗಿದ್ದಿರಬೇಕು ಯೇಸು ಕ್ರಿಸ್ತನೇ ಹಾಗೆ ಪ್ರತ್ಯಕ್ಷನಾದ ದೇವರಾಗಿದ್ದಾನೆಂದು ಕ್ರೈಸ್ತರು ನಂಬುತ್ತಾರೆ

ಆತನ ಶಿಷ್ಯರಲ್ಲಿ ಒಬ್ಬನು ಬರೆದಿರುವದೇನಂದರೆ—"ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು ನಾವು ಆತನ ಮಹಿಮೆಯನ್ನು ನೋಡಿದೆವು ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು." ಮತ್ತೊಬ್ಬನು ಬರೆದಿರುವದೇನಂದರೆ—"ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ" ಮೂರನೆಯವನು ಹೇಳುವದೇನಂದರೆ—"ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ಆಗಿದ್ದಾನೆ"

ಒಳದೇಶದ ವೃತ್ತಾಂತಗಳು.

ಸಂಸ್ಥಾನದಲ್ಲಿ ಚಾಲ್ತಿ ಸಾಲಿನಲ್ಲಿ ಸಣ್ಣ ಕೆರೆಗಳನ್ನು ದುರಸ್ತುಮಾಡುವುದಕ್ಕೆ ಸರ್ಕಾರದವರು ರೈತರಿಗೆ ಅಡ್ವಾನ್ಸು ಕೊಡುವುದಕ್ಕೋಸ್ಕರ 20 ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿರುತ್ತಾರೆ.

* * *

ಬೆಂಗಳೂರು ಬಿನ್ನಿ ಕಾರ್ಖಾನೆಯಲ್ಲಿ ಕ್ಯಾಷಿಯರಾಗಿದ್ದ ಎಂ. ಎ. ಶ್ರೀನಿವಾಸಯ್ಯಂಗಾರ್ ಎಂಬುವರು ಕಂಪನಿಯ ಹಣದಲ್ಲಿ ಸುಮಾರು 30,000 ರೂಪಾಯಿ ದುರುಪಯೋಗಪಡಿಸಿರುತ್ತಾರೆಂದು ಕಂಪನಿ ಏಜಂಟರವರು ತಿಳಿಸಿದ್ದರ ಮೇಲೆ ಪೋಲೀಸಿನವರು ತನಿಖೆಮಾಡುತ್ತಿದ್ದಾರೆ.

* * *

ರಾಜಧಾನಿಯ ವೆಸ್ಲಿಯನ್ ಮಿಷನ್ ಸಂಘದ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದ ಮಿಸ್ ಸ್ಟುವರ್ಟ್ ಎಂಬಾಕೆಯು ಕಳೆದ ವಾರ ಸೀಮೆಗೆ ಪ್ರಯಾಣಮಾಡಿದರು. ಅವರ ಕೆಲಸಗಳಲ್ಲಿ ಕೆಲಸವನ್ನು ಸುಮಿತ್ರಮ್ಮ ಲಾವೋಕ್ ರವರು ವಹಿಸಿಕೊಂಡು ಪ್ರತಿಫಲಾಪೇಕ್ಷೆಯಿಲ್ಲದೆ ನಡಿಸುತ್ತಿದ್ದಾರೆ.

* * *

ನಮ್ಮ ಮಹಾರಾಜರವರ ಹುಜೂರು ಸೆಕ್ರೆಟರಿಯಾಗಿರುವ ಮ|| ಪಿ. ರಾಘವೇಂದ್ರರಾಯರು ಕಲ್ಕತ್ತೆಯಿಂದ ವಾಪಸು ಬಂದ ಮೇಲೆ ಮೂರು ತಿಂಗಳ ರಜ ಪಡೆದುಕೊಳ್ಳುವರು. ಅದು ಪೂರೈಸಿದ ಬಳಿಕ ಅವರಿಗೆ ಸಂಸ್ಥಾನದ ರೈಸ್ ಕಮಿಷನರ ಕೆಲಸವು ವಹಿಸಲ್ಪಡುವುದೆಂದು ತಿಳಿದುಬಂದಿದೆ.

* * *

ಬೆಂಗಳೂರಿನಲ್ಲಿ ಅಡ್ವೊಕೇಟರಾಗಿರುವ ಮ|| ವೈ. ಪೊನ್ನಯ್ಯನವರು ಕುಣಿಗಲಿನಿಂದ ವಾಪಸು ಬರುವಾಗ್ಗೆ ತಮ್ಮ ಬೈಸಿಕಲ್‌ಗೆ ದೀಪ ಹಚ್ಚಿರಲಿಲ್ಲವೆಂದು ಮೊಕದ್ದಮೆ ಆಗಿ ದರ್ಯಾಪ್ತಿಯಲ್ಲಿ ಅವರು ಒಪ್ಪಿಕೊಂಡದ್ದರಿಂದ ಮ್ಯಾಜಿಸ್ಟ್ರೇಟರು ಅವರಿಗೆ ಎರಡು ರೂಪಾಯಿ ಜುಲ್ಮಾನೆ ವಿಧಿಸಿದರು.

* * *

ಕಡೂರಿನಲ್ಲಿ ಭಾರೀ ಜಮೀನ್‌ದಾರರೂ ಸಾಹುಕಾರರೂ ಆಗಿದ್ದ ಮ|| ತಂಗ್ಲಿ ತಿಮ್ಮಯ್ಯಂಗಾರ್ರು ಬೆನ್ನುಫಣಿ ಎದ್ದು ಹಿಂದಿನ ಶನಿವಾರ ಕಾಲವಾದರೆಂದು ತಿಳಿಯಲು ವಿಷಾದಿಸುತ್ತೇವೆ. ಇವರು ತುಂಬಾ ಉದಾರಿಗಳಾಗಿಯೂ ಗುಣಜ್ಞರಾಗಿಯೂ ಇದ್ದು ಆ ಸುತ್ತುಮುತ್ತಿನ ಪ್ರಜೆಗಳ ಪ್ರೀತಿ ಗೌರವಗಳನ್ನು ಸಂಪಾದಿಸಿಕೊಂಡಿದ್ದರು.

* * *

ವೈಸ್‌ರಾಯ್ ಪ್ರಭುಗಳು ಅಪ್ಪಣೆ ಕೊಡಿಸಿರುವ ತಹನಾಮೆಯು ಬೆಂಗಳೂರಿನಲ್ಲಿ ಬರೆಯಲ್ಪಟ್ಟು ನಮ್ಮ ಮಹಾರಾಜರವರ ಮತ್ತು ಬ್ರಿಟಿಷ್ ರೆಸಿಡೆಂಟರವರ ಮುಖಾಂತರವಾಗಿ ವೈಸ್‌ರಾಯರವರ ಬಳಿಗೆ ರವಾನೆಯಾಗುವುದೆಂದೂ, ಅವರು ರುಜುಮಾಡಿ ಅದನ್ನು ವಾಪಸುಕಳುಹಿಸಿದ ಮೇಲೆ ಅದು ಪ್ರಕಟವಾದೀತೆಂದೂ ತಿಳಿಯುತ್ತೇವೆ.

* * *

ಪುದುಕೋಟೆ ಸಂಸ್ಥಾನದ ರಾಜಧಾನಿಯಲ್ಲಿ ಈ ತಿಂಗಳು 19 ನೇ ತಾ. ಯಿಂದ ಪ್ರಾರಂಭವಾಗಿ ಒಂದು ವಿಶೇಷವಾದ ವಸ್ತುಪ್ರದರ್ಶನವು ನಡೆಯುತ್ತದೆಂದೂ, ವ್ಯವಸಾಯ, ವ್ಯಾಪಾರ, ವಿದ್ಯಾಭ್ಯಾಸ, ಈ ಬಾಬುಗಳಿಗೆ ಸಂಬಂಧಪಡುವ ಪದಾರ್ಥ ವಸ್ತುಗಳನ್ನು ಆ ಪ್ರದರ್ಶನಕ್ಕೆ ಕಳುಹಿಸಬಹುದೆಂದೂ ನಮ್ಮ ಸರ್ಕಾರದವರು ಪ್ರಕಟಮಾಡಿರುತ್ತಾರೆ.

* * *

ಬೆಂಗಳೂರು ಕಬ್ಬನ್ ಪಾರ್ಕಿನಲ್ಲಿ ವೈಸ್‌ರಾಯಿ ಪ್ರಭುಗಳು ತೆರೆದು ಪ್ರತಿಷ್ಠಾಪಿಸಿದ ಲೇಟ್ ದಿವಾನ್ ಸರ್ ಕೆ. ಶೇಷಾದ್ರಿ ಅಯ್ಯರವರ ಲೋಹ ಪ್ರತಿಮೆಯನ್ನು ಲಂಡನ್ ಪಟ್ಟಣದ ವಿ|| ಡಬ್ಲಿಯು ಆರ್. ಕೊಲ್‌ಟನ್ ಎಂಬ ಪ್ರಸಿದ್ಧ ಕಾರಿಗಾರರು ತಯಾರುಮಾಡಿದರೆಂದೂ, ಅದಕ್ಕೆ 23,000 ರೂಪಾಯಿ ಖರ್ಚಾಯಿತೆಂತಲೂ ತಿಳಿಯುತ್ತದೆ.

* * *

ಕಳೆದ ಭಾನುವಾರ ಮಧ್ಯಾಹ್ನ ಶ್ರೀಮನ್ ಮಹಾರಾಜರವರೂ ಅರಮನೆಯ ಪರಿವಾರದವರೂ 8 10 ಮೋಟರುಗಳಲ್ಲಿ ಪರಿವಾರ ಸಮೇತ ರಾಜಧಾನಿಯಿಂದ ಕುಣಿಗಲಿಗೆ ದಯಮಾಡಿದರು. ಅಲ್ಲಿ ಮರುದಿನ ಬೆಳಗ್ಗೆ ಗೌರವಾರ್ಥವಾದ 11-19 ತೋಫುಗಳು ಹಾರಿಸಲ್ಪಟ್ಟವು. ಶ್ರೀಮನ್ ಯುವರಾಜರು ನೆನ್ನೆ ಮೋಟರಿನಲ್ಲಿ ರಾಜಧಾನಿಯಿಂದ ಕುಣಿಗಲಿಗೆ ತೆರಳುವವರಾಗಿದ್ದರು.

* * *

ಕಳೆದ ಶನಿವಾರ ಬೆಳಗ್ಗೆ ನಡೆದ ಬೆಂಗಳೂರು ಸಿಟಿ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಮೆಂಬರುಗಳು ಅಲ್ಲಿನ ಕಾಸ್ಮಾಪಾಲಿಟನ್ ಕ್ಲಬ್ಬಿನವರಿಗೆ ಒಂದು ಕಟ್ಟಡವನ್ನು ಕಟ್ಟಿಕೊಳ್ಳುವುದಕ್ಕೆ ಕಬ್ಬನ್ ಪಾರ್ಕಿನಲ್ಲಿ 7 ಎಕರೆ ನಿವೇಶನವನ್ನು ಸ್ಯಾಂಕ್ಷನ್ ಮಾಡಿದರು. 300 ರೂಪಾಯಿನೊಳಗಿರುವ ಕಾಮಗಾರಿಗಳನ್ನು ಮ್ಯುನಿಸಿಪಲ್ ಮ್ಯಾನೇಜಿಂಗ್ ಕಮಿಟಿಯವರೇ ಸ್ಯಾಂಕ್ಷನ್ ಮಾಡಬಹುದೆಂದು ನಿಷ್ಕರ್ಷೆ ತೀರ್ಮಾನಮಾಡಿದರು.

* * *

ಮುಂದೆ 1916 ನೇ ಇಸವಿ ಅಂತ್ಯಭಾಗದಲ್ಲಿ ಚಕ್ರವರ್ತಿ ಸಾರ್ವಭೌಮರ ಜ್ಯೇಷ್ಠಪುತ್ರರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ನಮ್ಮ ಸಂಸ್ಥಾನಕ್ಕೆ ದಯಮಾಡಿಸುವ ಸಂಭವವಾದರೆ, ಅವರಿಗೋಸ್ಕರವಾಗಿ ಕಾರಾಪುರದ ಕೆಡ್ಡಾ ಕ್ಯಾಂಪಿನಲ್ಲಿ ಅನುಕೂಲವಾದ ಪಕ್ಕಾ ಬಂಗಲೆ ಮೊದಲಾದ ಕಟ್ಟಡಗಳನ್ನು ಸಿದ್ಧಪಡಿಸುವುದಕ್ಕೆ ನಮ್ಮ ಸರ್ಕಾರದವರು ಸುಮಾರು 50,000 ರೂಪಾಯಿ ತನಕ ಖರ್ಚು ಮಾಡುವವರಾಗಿದ್ದಾರೆಂದೂ ವರ್ತಮಾನವಿದೆ.

* * *

ಮೈಸೂರು ಸಂಸ್ಥಾನದೊಳಗಿರುವ ಯೂರೋಪಿಯನ್ ಪ್ರಜೆಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಬಂದರೆ ಅಂಥವರನ್ನು ದರ್ಯಾಪ್ತಿ ಮಾಡುವುದಕ್ಕೆ ಇಂಡಿಯಾ ಗವರ್ನ್‌ಮೆಂಟಿನವರು ನಮ್ಮ ಚೀಫ್ ಕೋರ್ಟ್ ಜಡ್ಜರಾದ ಮ|| ಎಚ್. ವಾಟ್ಸನ್ ರವರಿಗೂ, ಕೋಲಾರ್ ಚಿನ್ನದ ಗಣಿಗಳ ಪೊಲೀಸ್ ಸೂಪರಿಂಟೆಂಡೆಂಟ್ ಮಿ|| ಎಸ್. ಎಂ. ಪ್ರಿಚರ್ಡ್‌ರವರಿಗೂ ಜಸ್ಟಿಸ್ ಆಫ್ ದಿ ಪೀಸ್ ಎಂಬ ಅಧಿಕಾರವನ್ನು ವಹಿಸಿರುತ್ತಾರೆ.

* * *

ರಾಜಧಾನಿಯ ಈದ್ಗಾ ಬಡಾವಣೆಯಲ್ಲಿರುವ ವೆಸ್ಲಿಯನ್ ಮಿಷನ್ ಸ್ತ್ರೀಯರ ಆಸ್ಪತ್ರೆಗೆ ಡಾಕ್ಟರ್ ವಾಟ್ಸನ್ ರವರೂ, ಡಾಕ್ಟರ್ ಕ್ಲಾಫ್ ರವರೂ ಕಳೆದ ಗುರುವಾರ ಬಂದು ತಲುಪಿದರು. ಅನುಭವಶಾಲಿಗಳಾದ ಈ ವೈದ್ಯರು ಬಂದಿರುವುದರಿಂದ ಈ ಆಸ್ಪತ್ರೆಯ ಹೆಸರು ಇನ್ನೂ ಪ್ರಸಿದ್ಧವಾಗಲು ತುಂಬಾ ಅನುಕೂಲವಾಯಿತು. ಆಸ್ಪತ್ರೆಯವರೂ ಇತರರೂ ಸೇರಿ ಅವರಿಗೆ ಸುಖಾಗಮನವನ್ನು ಬಯಸುವುದಕ್ಕಾಗಿ ಈ ವಾರ ಒಂದು ಸಂತೋಷಕೂಟವನ್ನು ನಡಿಸುವವರಾಗಿದ್ದಾರೆ.

* * *

ಚಿತ್ರದುರ್ಗದಲ್ಲಿ ಕೆಲವರು ಸೇರಿ ಸಾಧು ಸಜ್ಜನ ಸಂಘವೆಂಬ ಕೂಟವನ್ನು ಮಾಡಿಕೊಂಡು ಸುತ್ತುಮುತ್ತಿನ ಗ್ರಾಮಗಳಲ್ಲಿ ಸಂಚರಿಸುತ್ತಾ ರೈತರೇ ಮೊದಲಾದ ಗ್ರಾಮಸ್ಥರಿಗೆ ವಿದ್ಯೆ ಬುದ್ಧಿ ವಿವೇಕಾದಿಗಳನ್ನು ಕಲಿಸಬೇಕೆಂದೂ, ಅಲ್ಲಲ್ಲಿ ಪಾಠಶಾಲೆಗಳನ್ನು ಸ್ಥಾಪಿಸಿಕೊಂಡು ವಿದ್ಯಾವಂತರಾಗಿ ವೃದ್ಧಿಹೊಂದುವಂತೆ ಪ್ರಜೆಗಳನ್ನು ಪ್ರೋತ್ಸಾಹಪಡಿಸಬೇಕೆಂದೂ ಸಾಹಸಪಡುತ್ತಿರುವುದಾಗಿ ತಿಳಿದು, ಅವರ ಇಂಥಾ ಉದ್ದೇಶವೂ ಪ್ರಯತ್ನಗಳೂ ಸಾರ್ಥಕವಾಗಲೆಂದು ಹಾರೈಸುತ್ತೇವೆ.

* * *

ಶ್ರೀರಂಗಪಟ್ಟಣದಲ್ಲಿ ಪೂರ್ಣಯ್ಯನವರ ಬೀದಿ ಭಾಸ್ಕರಶೆಟ್ಟಿ ಕೊಳದ ಎದುರುಸಾಲಿನ ನಾಲ್ಕು ಮನೆಗಳಿಗೆ ಕಳೆದ ಶನಿವಾರ ರಾತ್ರಿ ಕಳ್ಳರು ನುಗ್ಗಿ ಸಾಮಾನುಗಳನ್ನು ಅಪಹರಿಸಿರುವಂತೆ ಕೇಳುತ್ತೇವೆ. ಅಂಥಾ ಸಣ್ಣ ಸ್ಥಳಗಳಲ್ಲಿ ಪೋಲೀಸಿನವರು ಚಟುವಟಿಕೆಯಾಗಿ ಪತ್ತೆಹರದೂರು ನಡಿಸಿ ಬೇಗ ಕಳ್ಳರನ್ನುಹಿಡಿದು ಶಿಕ್ಷೆಗೆ ಗುರಿಪಡಿಸುತ್ತಾರೆಂದು ನಿರೀಕ್ಷಿಸುವೆವು. ಆದರೆ ಸಾಮಾನ್ಯವಾಗಿ ಪೋಲೀಸಿನವರಿಗೂ ಪ್ರಜೆಗಳಿಗೂ ಪರಸ್ಪರ ಪ್ರೀತಿ ವಿಶ್ವಾಸ ಭರವಸೆಗಳು ಉಂಟಾದಲ್ಲದೆ ಇಂಥಾ ಅಕೃತ್ಯಗಳು ಪತ್ತೆ ಆಗುವುದು ಕಷ್ಟ.

* * *

ಬೆಂಗಳೂರು ದಂಡಿನ ಉತ್ಪತ್ತಿಯ ಶಿಲ್ಕು ಹಣದ ವಿನಿಯೋಗದ ವಿಷಯದಲ್ಲಿ ವೈಸ್‌ರಾಯ್ ಪ್ರಭುಗಳು ಅಪ್ಪಣೆಕೊಡಿಸಿದ ಜವಾಬು ದಂಡಿನ ಮ್ಯುನಿಸಿಪಲ್ ಕೌನ್ಸಿಲರುಗಳಿಗೆ ತೃಪ್ತಿಯನ್ನುಂಟುಮಾಡದೆ, ಅವರು ತಾ 21 ರಲ್ಲಿ ಒಂದು ಸ್ಪೆಷಲ್ ಮೀಟಿಂಗನ್ನು ನಡಿಸಿ ಆ ವಿಷಯವನ್ನು ಚರ್ಚೆಮಾಡಿ, ತಮ್ಮ ಪ್ರತಿನಿಧಿಗಳ ಮೂಲಕ ವೈಸ್‌ರಾಯರವರಿಗೆ ಅದೇ ವಿಷಯವನ್ನು ಕುರಿತು ಅರಿಕೆ ಮಾಡಿಕೊಳ್ಳಲು ಅವಕಾಶವನ್ನು ಕೊಡಿಸಿಕೊಡಬೇಕೆಂದು ಬ್ರಿಟಿಷ್ ರೆಸಿಡೆಂಟರನ್ನು ಕೇಳಿಕೊಳ್ಳುವಂತೆ ತೀರ್ಮಾನಮಾಡಿದರು. ಈ ತೀರ್ಮಾನವನ್ನು 13 ಮಂದಿ ಒಪ್ಪಿ ಪ್ಯಾಸ್‌ಮಾಡಿದರು. ಮ್ಯುನಿಸಿಪಲ್ ಪ್ರೆಸಿಡೆಂಟರೂ, ಮ|| ಅಣ್ಣಸಾಮಿ ಮುದಲಿಯಾರ್ರೂ, ಡಾಕ್ಟರ್ ವಿಂಕ್ಲೇರ್‌ಯವರೂ ಅದಕ್ಕೆ ಒಪ್ಪಲಿಲ್ಲ.

* * *

ಮೈಸೂರು ನ್ಯಾಯವಿಧಾಯಕ ಸಭೆಗೆ ಮ|| ಕೆ. ಕೃಷ್ಣಮೂರ್ತಿರಾಯರನ್ನು ಪ್ರಜಾಪ್ರತಿನಿಧಿಗಳು ಚುನಾಯಿಸಿದರಷ್ಟೆ. ಮಾಗಡಿ ತಾಲ್ಲೂಕಿನ ಪ್ರಜೆಗಳು ಕಳೆದ ಭಾನುವಾರ ಮಾಗಡಿಯಲ್ಲಿ ಅವರನ್ನು ಕರಸಿಕೊಂಡು ಒಂದು ಯಂಟರ್‌ಟೇನ್‌ಮೆಂಟ್ ಮಾಡಿ ಅವರಲ್ಲಿ ತಮಗಿರುವ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಿದರು. ಆ ದಿನ ಸ್ಮರಣಾರ್ಥವಾಗಿ ಅಲ್ಲಿನ ದೇವಸ್ಥಾನದಲ್ಲಿ ಪೂಜೆ ಅಭಿಷೇಕ ಉತ್ಸವಾದಿಗಳೂ, ಬಾಲಕರ ಆಟಪಾಟಗಳೂ, ಸಂಗೀತಾದಿಗಳೂ ಬಹು ತೃಪ್ತಿಕರವಾಗಿ ನಡೆದವೆಂದೂ, ಬೆಂಗಳೂರು ಮುಂತಾದ ಕಡೆಗಳಿಂದ ಬಹುಮಂದಿ ದೊಡ್ಡಮನುಷ್ಯರು ಅಲ್ಲಿ ಸೇರಿದ್ದರೆಂದೂ ತಿಳಿದುಬರುತ್ತದೆ.

* * *

ಮೈಸೂರು ಸಂಸ್ಥಾನದ ನ್ಯಾಯಸ್ಥಾನಗಳಲ್ಲಿ ಆಚರಣೆಗೆ ತರಬೇಕಾದ ರೂಲುಸುಗಳನ್ನು ಆಗಿಂದಾಗ್ಗೆ ಯೋಚಿಸಿ ಗೊತ್ತುಮಾಡುವುದಕ್ಕೋಸ್ಕರ ಚೀಫ್ ಜಡ್ಜರವರು ಒಂದು ಕಮಿಟಿಯನ್ನು ನೇಮಕಮಾಡಿದ್ದಾರೆ. ಅದರ ಮೆಂಬರುಗಳ್ಯಾರೆಂದರೆ —ಮ|| ಕೆ. ಎಸ್. ಚಂದ್ರಶೇಖರ ಅಯ್ಯರವರು (ಪ್ರೆಸಿಡೆಂಟರು), ಡಿಸ್ಟ್ರಿಕ್ಟ್ ಜಡ್ಜ್ ಮಿ|| ಆರ್ ಬಿ. ಪ್ಲಮರವರು, ಸಬ್ ಜಡ್ಜ್ ಮ|| ಬಿ. ಸುಬ್ಬಣ್ಣನವರು, ಗವರ್ನ್‌ಮೆಂಟ್ ಅಡ್ವೊಕೇಟ್ ಮ|| ಸಿ. ಎಸ್. ದೊರಸಾಮಿ ಅಯ್ಯರವರು, ಅಡ್ವೊಕೇಟ್ ಮ|| ಎಸ್. ಆರ್. ಬಾಲಕೃಷ್ಣರಾಯರು, ರೆಜಿಸ್ಟ್ರಾರ್ ಮ|| ವಿ. ಎ. ರಾಜರತ್ನ ಮುದಲಿಯಾರ್ರು (ಸೆಕ್ರೆಟರಿ). ಇವರೆಲ್ಲಾ ಎರಡು ವರುಷಕಾಲ ಈ ಕಮಿಟಿಯ ಮೆಂಬರುಗಳಾಗಿರತಕ್ಕದ್ದೆಂದು ನಿಷ್ಕರ್ಷೆಯಾಗಿದೆ.

* * *

ಕಲ್ಕತ್ತಾ ಪಟ್ಟಣದಲ್ಲಿರುವ ಬರ್ನ್ ಕಂಪನಿಯಲ್ಲಿ ನಮ್ಮ ಮಹಾರಾಜರವರು ಎರಡು ಭಾರೀ ರೈಲ್ ಗಾಡಿಗಳನ್ನು ಮಾಡಿಸುವಂತೆ ಅಪ್ಪಣೆಕೊಟ್ಟಿದ್ದಾರೆ. ಅವರಲ್ಲಿ ಸ್ನಾನ ಪೂಜೆ, ಭೋಜನಾದಿಗಳನ್ನು ಮಾಡಲು ಬಹು ಅನುಕೂಲವಾದ ಏರ್ಪಾಡುಗಳು ಮಾಡಲ್ಪಟ್ಟಿವೆ. ಆ ಗಾಡಿಗಳಲ್ಲಿ ಚರ್ಮವನ್ನಾಗಲಿ, ಚಿತ್ರವನ್ನಾಗಲಿ ಉಪಯೋಗಿಸಿಲ್ಲ. ಒಂದು ಗಾಡಿಯು ದೊಡ್ಡ ರೈಲ್ ಕಂಬಿಗಳಿಗೂ, ಇನ್ನೊಂದು ಸಣ್ಣ ರೈಲ್ ಕಂಬಿಗಳಿಗೂ ಹಿಡಿಯುವಂತೆ ಮಾಡಲ್ಪಟ್ಟಿವೆ. ಹುಜೂರ್ ಸೆಕ್ರೆಟರಿ ಮ|| ಪಿ. ರಾಘವೇಂದ್ರರಾಯರು ಅವುಗಳನ್ನು ನೋಡಿ ಬಣ್ಣ ಮೊದಲಾದವುಗಳನ್ನು ಹಾಕುವಂತೆ ಕಂಪನಿಯವರಿಗೆ ಹೇಳಿಬರುವುದಕ್ಕಾಗಿ ಹಿಂದಿನ ವಾರ ಕಲ್ಕತ್ತೆಗೆ ಪ್ರಯಾಣಮಾಡಿದರು. ಈ ಎರಡು ಗಾಡಿಗಳಿಗೂ ಸುಮಾರು 1,20,000 ರೂಪಾಯಿ ಖರ್ಚಾಗುವುದೆಂದು ಹೇಳುವರು.

* * *

ಕಾವೇರಿ ತಲಾವಿನ ಎರಡನೇ ಭಾಗದ ಕಾಮಗಾರಿಗೆ ಇಂಡಿಯಾ ಗವರ್ನ್‌ಮೆಂಟಿನವರು ಅಪ್ಪಣೆ ಕೊಟ್ಟಲ್ಲಿ ವ್ಯವಸಾಯಕ್ಕೆ ತುಂಬಾ ನಷ್ಟವಾಗುವುದೆಂದು ತಂಜಾವೂರಿನ ರೈತರು ವೈಸ್‌ರಾಯರವರಿಗೆ ಹಿಂದಿನ ವಾರ ಅರಿಕೆ ಮಾಡಿಕೊಂಡರು. ವೈಸ್‌ರಾಯರವರು ಅವರಿಗೆ ನಷ್ಟವಾಗದಂತೆಯೂ, ಮೈಸೂರು ಗವರ್ನ್‌ಮೆಂಟಿನ ಹಕ್ಕಿಗೆ ಲೋಪಬಾರದಂತೆಯೂ ಪಂಚಾಯತರನ್ನು ನೇಮಕಮಾಡಿರುತ್ತೇವೆಂದೂ, ಅವರ ತೀರ್ಮಾನವು ಉಭಯಕಕ್ಷಿಯವರಿಗೂ ನ್ಯಾಯವಾಗಿದ್ದೀತೆಂದೂ ಅಪ್ಪಣೆಯನ್ನಿತ್ತರು. ಈ ಜವಾಬು ಆ ರೈತಪ್ರಜೆಗಳಿಗೆ ತೃಪ್ತಿಯನ್ನುಂಟುಮಾಡಲಿಲ್ಲ. ಅವರು ಕಳೆದ ವಾರ ತಂಜಾವೂರಿನಲ್ಲಿ ಭಾರೀ ಸಭೆಯನ್ನು ನಡಿಸಿ ತಮ್ಮ ಅಸಮಾಧಾನವನ್ನು ಮದರಾಸ್ ಗವರ್ನ್‌ಮೆಂಟಿನವರ ಮೂಲಕ ಇಂಡಿಯಾ ಗವರ್ನ್‌ಮೆಂಟಿಗೂ, ಮೇಲ್ಕಂಡ ಪಂಚಾಯತರಿಗೂ ತಿಳಿಸಬೇಕೆಂದು ತೀರ್ಮಾನ ಮಾಡಿರುತ್ತಾರೆ. ಇತ್ತಲಾಗಿ ಆ ಪಂಚಾಯತಿಗೆ ಸೇರಿದ ಸರದಾರರು ಕಳೆದ ತಾ 27 ರಿಂದ 30 ರ ತನಕ ರಾಜಧಾನಿಯ ಗವರ್ನ್‌ಮೆಂಟ್ ಹೌಸ್ ಬಂಗಲೆಯಲ್ಲಿ ಕಲೆತು ಮೈಸೂರು ಚೀಫ್ ಇಂಜನಿಯರವರ ಕೂಡ ಪಕ್ಷ ಪರಪಕ್ಷಗಳ ಸಾಧನಗಳನ್ನು ಹಿಡಿದು ಚರ್ಚೆಮಾಡಿಕೊಂಡು ಕಳೆದ ಭಾನುವಾರ ವಾಪಸು ಪ್ರಯಾಣಮಾಡಿದರು. ಇವರ ತೀರ್ಮಾನವನ್ನು ಇತ್ತಲಾಗಿ ಮೈಸೂರಿನವರೂ, ಅತ್ತಲಾಗಿ ತಂಜಾವೂರು ತಿರುಚನಾಪಲ್ಲಿಯವರೂ ಬಹು ಕುತೂಹಲದಿಂದ ಎದುರುನೋಡುತ್ತಿದ್ದಾರೆ. ಮೈಸೂರು ಗವರ್ನ್‌ಮೆಂಟಿನವರು ಈ ಎರಡನೇ ಭಾಗದ ಆಣೆಯ ದೆಸೆಯಿಂದ ತಂಜಾವೂರು ತಿರುಚನಾಪಲ್ಲಿ ಜಿಲ್ಲೆಗಳಿಗೆ ಎಂದಿನಷ್ಟು ನೀರು ನದಿಯಲ್ಲಿ ಒದಗದೆಹೋಗುವ ಪಕ್ಷದಲ್ಲಿ ಅದಕ್ಕಾಗಿ ಮದರಾಸ್ ಗವರ್ನ್‌ಮೆಂಟಿಗೆ ನಷ್ಟವನ್ನು ಕಟ್ಟಿಕೊಡಲು ಒಪ್ಪಿಕೊಂಡಿದ್ದಾರೆ. ಆ ಜಿಲ್ಲೆಗಳ ರೈತರು ಈ ಪ್ರತಿಫಲವು ಗವರ್ನ್‌ಮೆಂಟಿಗೆ ದೊರಕುವುದಲ್ಲದೆ ಬೆಳೆ ಕೆಡುವುದರಿಂದ ತಮಗಾಗುವುದರಿಂದ ತಮ್ಮ ನಷ್ಟಕ್ಕೆ ಯಾವ ಪ್ರತಿಫಲವೂ ಆಗುವುದಿಲ್ಲವೆಂದೂ, ಈ ಎರಡನೇ ಭಾಗದ ಕಾಮಗಾರಿಯನ್ನು ಸ್ಯಾಂಕ್ಷನ್ ಮಾಡಲೇ ಕೂಡದೆಂದೂ ವಾದಿಸುತ್ತಾರೆ.

ವಿವಾಹಮಂಟಪದಲ್ಲಿ ವರನ ಅತಿದುಃಖಕರವಾದ ಮರಣವು.

ಈಗಿನ ಕಾಲದಲ್ಲಿ ಹೆಣ್ಮಕ್ಕಳನ್ನು ಪಡೆಯುವ ದೌರ್ಭಾಗ್ಯವುಳ್ಳ, ಮುಖ್ಯವಾಗಿ ಬ್ರಾಹ್ಮಣ ಕುಲದವರೆಲ್ಲರಲ್ಲಿಯೂ ಅತಿ ವಿಷಾದವನ್ನುಂಟುಮಾಡುವ ಒಬ್ಬ ವರನ ಅಕಾಲ ಮರಣವು ಕಳೆದ ಬುಧವಾರ ರಾತ್ರಿ ಮಂಗಳೂರಿನಲ್ಲಿ ಸಂಭವಿಸಿತು. ಅಲ್ಲಿಯ ಮಿಷನ್ ಹೈಸ್ಕೂಲಿನ ಎದುರಿಗಿರುವ ಮಠದಲ್ಲಿ ಒಂದು ಮದುವೆಯ ಪ್ರಸ್ತವು ನಡೆಯುತ್ತಲಿತ್ತು. ವರನು ಗೌಡಸಾರಸ್ವತ ಬ್ರಾಹ್ಮಣ ಜಾತಿಯ ಅಡ್ಯಾರ ಸುಬ್ರಾಯ ಹೆಗ್ಗಡೆಯವರ ಮಗ ವೆಂಕಟ್ರಾಯ ಹೆಗ್ಗಡೆ, ವಧುವು ಶ್ರೀನಿವಾಸ ಮಲ್ಯರ ಮಗಳು. ಪಾಣಿಗ್ರಹಣ ಧಾರೆಯು ಎರೆದು ಮದುವೆಯ ಚಾತುರ್ಥಿಯು ಆಚರಿಸಲ್ಪಡುವಷ್ಟರಲ್ಲಿಯೇ ವರನು ಪ್ಲೇಗು ರೋಗಕ್ಕೆ ತುತ್ತಾದನು. ದಾಂಪತ್ಯ ಸೌಭಾಗ್ಯದ ಹೊಸ್ತಿಲಿನಲ್ಲಿಯೇ, ಘೋರತರದ ಸಂಸಾರ ಸುಖದುಃಖಗಳೇನೆಂಬುವುದನ್ನು ತಿಳಿಯುವ ಮೊದಲೇ ಆ ಬಡ ಕುವರಿಗೆ ಪ್ರಾಪ್ತವಾದಂಥಾ ದುರ್ದೆಸೆಯು ಅತಿ ಕಠಿಣವಾಗಿರುವುದು. ಸಹಸಂತಾಪಗಳಿಂದ ಈ ವಧುವಿನ ಮತ್ತೂ ವಧುವರರ ಕುಟುಂಬದವರ ದುಃಖವು ಶಮನವಾಗಾವುದಾದರೆ ಸರ್ವರ ಅಂತಃಕರಣಗಳಿಂದ ದ್ರವಿಸುವ ಸಹಸಂತಾಪವು ಈ ದುಃಖಿತರ ಪರವಾಗಿ ಧಾರಾಳವಾಗಿರುವುದು. ಆದರೆ ಸಮಾಜದ ಈಗಿನ ಸ್ಥಿತಿಯಲ್ಲಿ ಭಾಗ್ಯಹೀನಳಾದ ಆ ವಧುವಿನ ಮುಂದಿನಗತಿಯು ಹೇಗಿರುವುದೋ ಎಂಬುವ ಅತಿಕಠಿಣ ಪ್ರಶ್ನೆಗೆ ಉತ್ತರವನ್ನು ಕೊಡಲು ಪ್ರಯತ್ನಿಸುವ ಮನಸ್ಸಾಕ್ಷಿಯು ನಿರಂತರ ಹಿಡಿದಾಟದಿಂದ ಈ ದುಃಖವಾರ್ತೆಯನ್ನು ಕೇಳಿದ ಹೆತ್ತವರ ಹೃದಯಗಳಲ್ಲಿ ಸದಾ ಇರಬೇಕಾಗಿದೆ.—ಸ್ವ

ವೈಸ್‌ರಾಯರವರು ದಯಪಾಲಿಸಿದ ಬಹುಮಾನಗಳು.

ವೈಸ್‌ರಾಯಿ ಪ್ರಭು ದಂಪತಿಗಳು ಕಳೆದ ತಿಂಗಳು ತಾ. 3 ರಿಂದ 23 ರ ವರೆಗೆ ಮೈಸೂರು ಸಂಸ್ಥಾನದ ಬೇರೆ ಬೇರೆ ಕಡೆಗಳಲ್ಲಿ ಕೆಲಕೆಲವು ಕಾಲ ದಯಮಾಡಿ ನಮ್ಮ ಮಹಾರಾಜರವರ ಆತಿಥ್ಯವನ್ನು ಸ್ವೀಕರಿಸಿ ತೃಪ್ತಿಯನ್ನೂ ಸಂತೋಷವನ್ನೂ ಹೊಂದಿ ಚಿತ್ತೈಸಿದರಷ್ಟೆ. ಅವರ ಸತ್ಕಾರದಲ್ಲಿ ನಿರತರಾಗಿದ್ದು ಬಹು ತೃಪ್ತಿಕರವಾಗಿ ಕೆಲಸಮಾಡಿ ಅವರ ಮೆಚ್ಚಿಕೆಗೆ ಪಾತ್ರರಾದ ಈಕೆಳಗೆ ಕಂಡ ನಮ್ಮ ಸಂಸ್ಥಾನದ ಉದ್ಯೋಗಸ್ಥರುಗಳಿಗೆ ತಮ್ಮ ಜ್ಞಾಪಕಾರ್ಥವಾಗಿ ಒಂದೊಂದು ಬಹುಮಾನವನ್ನು ದಯಪಾಲಿಸಿರುತ್ತಾರೆ. ಅವರು ಯಾರೆಂದರೆ—ಮ|| ದಿವಾನ್ ಎಂ. ವಿಶ್ವೇಶ್ವರಯ್ಯನವರು, ಮಹಾರಾಜರವರ ಮಿಲಿಟರಿ ಸೆಕ್ರೆಟರಿಯವರ ಅಸಿಸ್ಟೆಂಟ್ ಕರ್ನಲ್ ಎ. ಜೋನ್ಸ್ ರವರು, ಮಹಾರಾಜರವರ ಪ್ರೈವೆಟ್ ಸೆಕ್ರೆಟರಿ ಮಿ|| ಆರ್. ಎಚ್. ಕ್ಯಾಂಬೆಲ್ ರವರು, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಮ|| ಸಿ. ಶ್ರೀಕಂಠೇಶ್ವರ ಅಯ್ಯರವರು, ಮಹಾರಾಜರವರ ಅಸಿಸ್ಟೆಂಟ್ ಸೆಕ್ರೆಟರಿ ಮಿ|| ಮಿರ್ಜಾ ಇಸ್ಮೈಲ್ ರವರು, ಫಾರೆಸ್ಟ್ ಕನ್ಸರ್ವೇಟರ್ ರಾವ್ ಬಹದ್ದೂರ್ ಮುತ್ತಣ್ಣನವರು, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮ|| ಯತಿರಾಜುಲು ನಾಯುಡುಯವರು, ಯುವರಾಜರವರ ಅಸಿಸ್ಟೆಂಟರು ಮ|| ಎಂ. ಎ. ಸಿಂಗರಾಚಾರ್ಯರು, ನೀರಿನ ಇಲಾಖಾ ಸೂಪರಿನ್‌ಟೆಂಡೆಂಟ್ ಮ|| ಎಂ. ಎ. ಶ್ರೀನಿವಾಸಾಚಾರ್ಯರು, ಮೈಸೂರು ವಿದ್ಯುಚ್ಛಕ್ತಿಯ ಇಲಾಖಾ ಸೂಪರಿನ್‌ಟೆಂಡೆಂಟ್ ಮ|| ದ್ವಾರಕಾನಾಥರವರು, ಅ|| ಇಂಜನಿಯರ್ ಮ|| ರಾಮಕೃಷ್ಣಯ್ಯನವರು, ರಿಸರ್ವ್ ಪೊಲೀಸ್ ಇನ್ಸ್‌ಪೆಕ್ಟರ್ ಮಿ|| ಎಡ್ವರ್ಡ್ಸ್‌ರವರು, ಫಾರೆಸ್ಟ್ ಡೆಪ್ಯುಟಿ ಕನ್ಸರ್ವೇಟರ್ ಮ|| ಹಿರಾಸಿಂಗರವರು, ಷಿಕಾರಿ ಅಧಿಕಾರಿಯಾದ ಮ|| ಮುತ್ತಯ್ಯನವರು, ಗವರ್ನ್‌ಮೆಂಟ್ ಹೌಸ್ ಸೂಪರಿನ್‌ಟೆಂಡೆಂಟ್ ಮ|| ಎಸ್. ವಿಷಕಂಠಯ್ಯನವರು, ಪೊಲೀಸ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಮಿ|| ಎಸ್. ಎಂ. ಪ್ರಿಚರ್ಡ್ ರವರು, ಕೋಲಾರದ ಪೊಲೀಸ್ ಇನ್ಸ್‌ಪೆಕ್ಟರ್ ಮಿ|| ಎಚ್. ಜಿ. ಸರಲ್, ಮಹಾರಾಜರವರ ಖಾಸಾ ಬ್ಯಾಂಡ್ ಮಾಸ್ಟರ್ ಮಿ|| ಎಂ. ಜೆ. ಟಿ. ಡೆಪ್ರಿಸ್ ರವರು. ಇವರಿಗೆಲ್ಲಾ ಇನಾಮುಗಳು ದೊರಕಿರುತ್ತವೆ.

ಮಿಸ್ ತಾರಾಬಾಯಿಯವರ ಅಂಗಸಾಧನೆ.

ರಾಜಧಾನಿಯಲ್ಲಿ ವಿದ್ಯಾವಂತರೂ ಇತರರೂ ಸೇರಿ ಮ|| ಎಂ. ವೆಂಕಟಕೃಷ್ಣಯ್ಯನವರ ಹೆಸರಿನ ಮೇಲೆ ಒಂದು ವಿದ್ಯಾವರ್ಧಕ ಫಂಡನ್ನು ಏರ್ಪಾಡುಮಾಡಿ ಅದಕ್ಕೆ ಹಣವನ್ನು ಕೂಡಿಸುತ್ತಿದ್ದಾರೆ. ಈ ಫಂಡಿನಿಂದ ಜಾತಿಕುಲಗಳ ಪಕ್ಷಪಾತವಿಲ್ಲದೆ ಬಡವಿದ್ಯಾರ್ಥಿಗಳಿಗೆ ಸ್ಕೂಲ್ ಫೀಜುಕೊಡುವುದು, ವೇತನಗಳನ್ನು ಕೊಟ್ಟು ಬಾಲಕರನ್ನು ಕೈಗಾರಿಕೆಗಳಲ್ಲಿ ತರಪೇತುಮಾಡುವುದು, ಪಾಠಶಾಲೆಗಳನ್ನಿಟ್ಟು ನಡಿಸುವುದು, ಈ ಮೊದಲಾದ ವಿದ್ಯಾವರ್ಧಕ ಕಾರ್ಯಗಳನ್ನು ನಡಿಸಬೇಕೆಂದು ನಿಶ್ಚಯ ಮಾಡಿಕೊಂಡಿರುವರು. ಕೆಲವು ಕಾಲದಿಂದ ರಾಜಧಾನಿಯಲ್ಲಿರುವ ಮಿಸ್ ತಾರಾಬಾಯಿ ಎಂಬ ಉತ್ತರ ದೇಶದ ಮರಾಠಾ ಸ್ತ್ರೀಯು ಈ ಫಂಡಿಗೆ ದ್ರವ್ಯಸಹಾಯ ಮಾಡುವುದಕ್ಕಾಗಿ ಕಳೆದ ಭಾನುವಾರ ರಾತ್ರಿ ಟೌನ್ ಹಾಲ್ ಬಂಗಲೆಯಲ್ಲಿ ಅಂಗಸಾಧನೆ ಮೊದಲಾದ ಆಟಗಳನ್ನು ಏರ್ಪಡಿಸಿ ನಡಿಸಿದಳು. ಆ ವಿನೋದಗಳನ್ನೂ ಸಾಧನೆಗಳನ್ನೂ ನೋಡಲು ಟೌನ್ ಹಾಲ್ ಬಂಗಲೆಯು ಕಿಕ್ಕಿರಿಯುವಂತೆ ಸೇರಿದ್ದರು. ಅರಸುಗಳೂ, ಅಧಿಕಾರಿಗಳೂ, ವರ್ತಕರೂ, ಸಾಹುಕಾರರೂ, ಸಾಮಾನ್ಯಪ್ರಜೆಗಳೂ, ನೂರಾರುಮಂದಿ ಸ್ತ್ರೀಯರೂ ಬಹು ಉತ್ಸಾಹದಿಂದ ಕೂಡಿ ವಿನೋದಗಳನ್ನೂ ಸಾಧನೆಗಳನ್ನೂ ನೋಡಿ ಆನಂದವನ್ನೂ ವಿಸ್ಮಯವನ್ನೂ ಪಟ್ಟರು. ಮಿಸ್ ತಾರಾಬಾಯಿ ಮಾಡಿ ತೋರಿಸಿದ ಸಾಮರ್ಥ್ಯ ಕಾರ್ಯಗಳು ಅನೇಕ ವರುಷ ಬ್ರಹ್ಮಚಾರಿಗಳಾಗಿದ್ದು ಸಾಧನೆ ಮಾಡಿದ ಪುರುಷರಿಗೂ ಅಸಾಧ್ಯವಾಗಿದ್ದುವು. ನಾಲ್ಕು ಜನ ಗಂಡಸರು ಸೇರಿ ಎತ್ತಲಾರದಷ್ಟು ಭಾರವುಳ್ಳ ಕಲ್ಲುಚಪ್ಪಡಿಯನ್ನು ಆಕೆ ತನ್ನ ಜುಟ್ಟಿನಿಂದ ಎತ್ತಿಬಿಟ್ಟದ್ದೂ, 6 ಮಂದಿ ಕುಳಿತಿದ್ದ ಗಾಡಿಯನ್ನು ಆಕೆ ತನ್ನ ಜುಟ್ಟಿಗೆ ಕಟ್ಟಿಕೊಂಡು ಎಳೆದದ್ದೂ, ಎರಡು ಕುರ್ಚಿಗಳ ಮೇಲೆ ಅಂತರಾಳದಲ್ಲಿ ಆಕೆ ಮಲಗಿಕೊಂಡು ಎದೆಯ ಮೇಲೆ ಭಾರೀ ಚಪ್ಪಡಿಯನ್ನು ಹೊತ್ತದ್ದಲ್ಲದೆ ಅದರ ಮೇಲೆ ಇಬ್ಬರು ಭಾರೀ ಸುತ್ತಿಗೆಗಳಿಂದ ಅನೇಕಾವರ್ತಿ ಹೊಡೆದ ಮರಣಕರವಾದ ಏಟುಗಳನ್ನು ಸಹಿಸಿಕೊಂಡದ್ದೂ, ನಾಲ್ವರು ಪುರುಷರು ಬಹು ಬಲವಾಗಿ ತನ್ನ ಎರಡು ಕೈಗಳನ್ನೂ ಹಿಡಿದದ್ದನ್ನು ಆಕೆ ಬಹು ಸಾಮರ್ಥ್ಯದಿಂದ ಝಟಕಾಯಿಸಿ ಬಿಡಿಸಿಕೊಂಡದ್ದೂ, 6 ಜನ ಕುಳಿತಿದ್ದ ಗಾಡಿಯ ಚಕ್ರವನ್ನು ಆಕೆ ಅಂಗತಂಗನಾಗಿ ಮಲಗಿ ಎದೆಯ ಮೇಲೆ ನಿರಾಯಾಸವಾಗಿ ಎಳೆಯಿಸಿಕೊಂಡದ್ದೂ, ಇನ್ನೂ ಆಕೆಯ ಹಲವು ಪರಾಕ್ರಮಕಾರ್ಯಗಳು ನೋಟಕರಲ್ಲಿ ವಿಸ್ಮಯವನ್ನುಂಟುಮಾಡಿದವು. ಆಕೆಯ ಅದ್ಭುತ ಸಾಮರ್ಥ್ಯವನ್ನು ನೋಟಕರೆಲ್ಲಾ ಜಯಧ್ವನಿಗಳಿಂದ ಮೆಚ್ಚಿಕೊಂಡದ್ದಲ್ಲದೆ, ಹಿಂದೂ ಸ್ತ್ರೀಯರು ಉಪ್ಪರಿಗೆಯ ಮೇಲಿನಿಂದ ಆಕೆಗೆ ಪುಷ್ಪಗಳನ್ನು ಎರಚಿದರು; ಪಾರಸೀ ಸ್ತ್ರೀಯರು ಸ್ಟೇಜಿನ ಮೇಲಕ್ಕೆ ಹತ್ತಿ ಹೋಗಿ ಆಕೆಯ ಕತ್ತನ್ನು ಪುಷ್ಪಹಾರಗಳಿಂದ ಅಲಂಕರಿಸಿಬಿಟ್ಟರು.

ಈ ಸಾಧನೆಗಳ ಮಧ್ಯೆ ಮ|| ಚಿಕ್ಕರಾಮರಾಯರ ಮನೋಹರವಾದ ಹಾಡುಗಾರಿಕೆಯೂ, ಇನ್ನಿಬ್ಬರು ಪ್ರವೀಣರ ಕತ್ತಿ ವರಿಸೆಗಳೂ, ಇಬ್ಬರ ನಕಲಿಗಳೂ ರಸಯುಕ್ತಗಳಾಗಿ ಸಭಿಕರಿಗೆ ಸಂತೋಷವನ್ನುಂಟುಮಾಡಿದವು. ನೋಟಕರ ಟಿಕೇಟುಗಳನ್ನು ಮಕ್ಕಳಿಂದ ಎತ್ತಿಸಿ 4 ಆಣೆ ಟಿಕೆಟ್ ಪಡೆದ ಒಬ್ಬ ನೋಟಕನಿಗೆ ವಾಗ್ದಾನದ ಪ್ರಕಾರ ಒಂದು ಗಡಿಯಾರವನ್ನು ಇನಾಮು ಕೊಟ್ಟರು. ಕಡೆಯಲ್ಲಿ ಮ|| ಎಂ. ವೆಂಕಟಕೃಷ್ಣಯ್ಯನವರು ಮಿಸ್ ತಾರಾಬಾಯಿಯ ಪ್ರಚಂಡ ಸಾಮರ್ಥ್ಯ, ಆಕೆಯ ಪರೋಪಕಾರಬುದ್ಧಿ, ಬಾಲ್ಯವಿವಾಹ, ಐಶ್ವರ್ಯವಂತರ ಕರ್ತವ್ಯ, ಹಿಂದೂ ವಿದ್ಯಾವರ್ಧಕ ಫಂಡು, ಈ ಮೊದಲಾದ ವಿಚಾರಗಳನ್ನು ಕುರಿತು ಬಹು ಸ್ತೋತ್ರಾರ್ಹವಾದ ಉಪನ್ಯಾಸಮಾಡಿದರು. ಆ ದಿನ ಟಿಕೆಟ್ಟಿನ ಮೂಲಕ ವಸೂಲಾಗಿದ್ದ ಸುಮಾರು 300 ರೂಪಾಯನ್ನು ಮಿಸ್ ತಾರಾಬಾಯಿಯು ಹಿಂದೂ ವಿದ್ಯಾವರ್ಧಕ ಫಂಡಿನ ಸೆಕ್ರೆಟರಿಯವರಿಗೆ ಉಚಿತವಾಗಿ ಕೊಟ್ಟು ಸಭಿಕರ ಪ್ರೀತಿಗೂ ಸ್ತುತಿಗೂ ಪಾತ್ರಳಾದಳು.

ಆಕೆ ಇಲ್ಲಿನ ದಳವಾಯಿ ಎ. ವಿ. ಸ್ಕೂಲ್ ಕಟ್ಟಡದ ಫಂಡಿಗೆ ಸಹಾಯ ಮಾಡುವುದಕ್ಕೋಸ್ಕರ, ನಾಳೆ ರಾತ್ರಿ ಟೌನ್ ಹಾಲಿನಲ್ಲಿ ತನ್ನ ಸಾಮರ್ಥ್ಯವನ್ನು ಪ್ರದರ್ಶನಮಾಡುವವಳಾಗಿದ್ದಾಳೆ.

ಆತ್ಮಹತ್ಯಮಾಡಿಕೊಳ್ಳುವುದು.

ಬೆಂಗಳೂರು ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫೀಸರಾದ ಮ|| ವಿ. ಮುತ್ತುಸಾಮಿದಾಸ್ ರವರು ಮೇಲ್ಕಂಡ ವಿಚಾರವಾಗಿ ಬರೆಯುವು ದೇನೆಂದರೆ—

ಈಚೆಗೆ ನಮ್ಮ ಜನರಲ್ಲಿ ಮುಖ್ಯವಾಗಿ ಸ್ತ್ರೀಯರಲ್ಲಿ ಆತ್ಮಹತ್ಯವನ್ನು ಮಾಡಿಕೊಳ್ಳುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ ಹೀಗೆ ಜನರು ತಮ್ಮ ಪ್ರಾಣವನ್ನು ತಾವೇ ತೆಗೆದುಕೊಳ್ಳುವುದಕ್ಕೆ ಕಾರಣವು ಅವರಿಗೆ ಸುಲಭವಾಗಿಯೇ ತೋರಿದರೂ ಅಂಥಾ ತುಚ್ಛವಾದ ಮತ್ತು ಹಾನಿಕರವಾದ ಕೃತ್ಯವನ್ನು ನಡಿಸುವವರು ತಿಳಿಗೇಡಿಗಳೆಂದು ಕಂಠೋಕ್ತವಾಗಿ ಹೇಳಬಹುದು. ಗೃಹಕೃತ್ಯದ ನಿಮಿತ್ತವಾದ ತೊಂದರೆಯಿಂದಲಾಗಲಿ, ಜನರಿಗೆ ತಮ್ಮ ಜೀವನವು ನಿಸ್ಸಾರವಾಗಿ ಕಂಡುಬಂದು ಅದರಲ್ಲಿ ಜುಗುಪ್ಸೆ ಹುಟ್ಟಿ ಆಗಲಿ ಆತ್ಮಹತ್ಯವನ್ನು ಮಾಡಿಕೊಳ್ಳುತ್ತಾರೆ. ಪ್ರಾಣ ಹೋದ ಮೇಲೆ ನಿಶ್ಚಿಂತೆಯಾಗಿರಬಹುದೆಂಬ ತಪ್ಪು ಅಭಿಪ್ರಾಯವು ಅವರಿಗೆ ಇರುವಂತೆ ತೋರುತ್ತದೆ ಅಂಥವರ ಮರಣಾನಂತರ ಅವರ ದೇಹಕ್ಕೂ, ಬಂಧು ಬಳಗದವರಿಗೂ ಉಂಟಾಗಬಹುದಾದ ಕಷ್ಟಪರಂಪರೆಗಳಿಗೆ ಅವರು ಸ್ವಲ್ಪ ಲಕ್ಷ್ಯಕೊಟ್ಟಲ್ಲಿ ಅವರು ಇಂಥಾ ಹೇಯವಾದ ಮತ್ತೂ ಅಪಮಾನಕರವಾದ ಕೃತ್ಯವನ್ನು ಮಾಡುವುದಕ್ಕೆ ಅವರ ಮನಸ್ಸು ಎಂದಿಗೂ ಒಡಂಬಡಲಾರದು. ನಮ್ಮ ಶಾಸ್ತ್ರರೀತಿಯಾಗಿಯೂ ಕೂಡ ಆತ್ಮಹತ್ಯಮಾಡಿಕೊಂಡವರಿಗೆ ನರಕ ಪ್ರಾಪ್ತಿಯೇ ಹೊರತು ಅಂಥವರಿಗೆ ಸ್ವರ್ಗವು ಎಂದಿಗೂ ಲಭಿಸುವುದಿಲ್ಲ. ಇದೂ ಅಲ್ಲದೆ ಆತ್ಮಹತ್ಯಮಾಡಿಕೊಂಡವರ ಶರೀರವನ್ನು ಮೊದಲು ಪೋಲೀಸ್ ಇಲಾಖೆಯವರು ಅಪಮಾಯಿಷಿಮಾಡಿ, ಪಂಚಾಯಿತರ ಸಮಕ್ಷಮ ಮಹಜರ್ ಮಾಡುವವರು ಅನಂತರ ಸರ್ಕಾರಿ ವೈದ್ಯ ಇಲಾಖೆಯವರು ಆ ದೇಹವನ್ನು ಕೊಯ್ದು ನೋಡಿಸಿ ಮರಣಕ್ಕೆ ಕಾರಣವನ್ನು ನಿಷ್ಕರ್ಷಿಸುವಂತೆ ಮಾಡುವರು ಇಷ್ಟೆಲ್ಲಾ ಆಗುವುದರೊಳಗೆ ಮೃತನ ಬಂಧು ಬಳಗದವರಿಗೆ ಅನೇಕ ಕಷ್ಟಗಳೂ, ನಷ್ಟಗಳೂ, ಮಾನಕ್ಕೆ ಕುಂದಕವೂ ಉಂಟಾಗುತ್ತವೆ ಆದ್ದರಿಂದ ಮಾನವಂತರ್ಯಾರೂ ಇಂಥಾ ಕೆಟ್ಟ ಕೃತ್ಯಕ್ಕೆ ಎಂದಿಗೂ ಮನಸ್ಸು ಕೊಡಕೂಡದು. ಅಂಥ ಸಹಿಸಲಾರದ ಸಂಕಟವೇನಾದರೂ ಇದ್ದರೆ ಅದನ್ನು ಬುದ್ಧಿವಂತರಾದ ಮುಖಂಡ ಜನರಿಗಾಗಲಿ, ತಮ್ಮ ಹಿರಿಯರಿಗಾಗಲಿ, ಇಲ್ಲವೇ ಸರ್ಕಾರದವರಿಗಾಗಲಿ ತಿಳಿಸಿ ಕ್ರಮಪಡಿಸಿಕೊಳ್ಳಬೇಕು ಈ ಲೋಕದಲ್ಲಿ ಪ್ರತಿ ಒಬ್ಬರಿಗೂ ಕಷ್ಟಸುಖಗಳು ಒಂದರನ್ನೊಂದು ಹಿಂಬಾಲಿಸಿಕೊಂಡು ಬರುತ್ತವೆ. ಜೀವಂತರಾಗಿದ್ದರೆ ಎಂದಾದರೂ ಒಂದು ದಿವಸ ಸುಖಪಡಬಹುದು ಆದ್ದರಿಂದ ಅಕಾಲಮರಣವನ್ನು ಹೊಂದಲಿಚ್ಛಿಸುವವರೆಲ್ಲರೂ ಧೈರ್ಯಾವಲಂಬಿಗಳಾಗಿಯೂ, ಸ್ಥಿರ ಸಾಹಸಿಗಳಾಗಿಯೂ ಇದ್ದರೆ ದಯಾಮಯನಾದ ಭಗವಂತನು ಸೌಖ್ಯವನ್ನುಂಟುಮಾಡುವನು.

ಮೈಸೂರು ಸರ್ಕಾರಿ ಹುಕುಮುಗಳು

ರೇಷ್ಮೆ ಕಸಬಿನಲ್ಲಿ ನಿಪುಣನಾದ ಅಧಿಕಾರಿ —ನಮ್ಮ ಸಂಸ್ಥಾನದಲ್ಲಿ ರೇಷ್ಮೆ ವ್ಯವಸಾಯವನ್ನು ಕ್ರಮಪಡಿಸಿ ಅಭಿವೃದ್ಧಿ ಮಾಡಬೇಕೆಂಬ ಉದ್ದೇಶದಿಂದ ಮೈಸೂರು ಸರ್ಕಾರದವರು ಯೂರೋಪ್ಪಿಯನ್ ರಾಜ್ಯಗಳಲ್ಲಿ ಒಂದಾದ ಇಟಲಿಯ ಸೀನಾರ್ ವಾಷಿಂಗ್‌ಟನ್ ಮಾರಿ ಎಂಬಾತನನ್ನು ಹೊಸದಾಗಿ ನೇಮಕ ಮಾಡಿರುತ್ತಾರೆ ಈ ಹೊಸ ಅಧಿಕಾರಿಗೆ ಮಾಹೆಯಾನಾ 600 ರೂಪಾಯಿ ಸಂಬಳವಲ್ಲದೆ ಬಂಗಲೆ ಬಾಡಿಗೆಗಾಗಿ 60 ರೂಪಾಯಿ ಸಲ್ಲತಕ್ಕದ್ದೆಂದು ಸ್ಯಾಂಕ್ಷನ್ ಮಾಡಿ ಹುಕುಂ ಕೊಟ್ಟಿದಾರೆ ಈತನು ಇಷ್ಟರಲ್ಲೇ ಸೀಮೆಯಿಂದ ಬಂದು ಕೆಲಸದ ಮೇಲೆ ಹಾಜರಾಗುತ್ತಾನೆ ಮೈಸೂರು ಸೀಮೆಯಲ್ಲಿ ರೇಷ್ಮೆ ವ್ಯವಸಾಯ ನಡೆಯುವ ಸ್ಥಳಗಳಲ್ಲೆಲ್ಲಾ ಆತನು ಸಂಚಾರಮಾಡಿ, ನಮ್ಮ ಜನರು ಆ ಕಸಬನ್ನು ಯಾವ ರೀತಿ ನಡಿಸುತ್ತಿದಾರೆಯೋ, ಅದರ ಸ್ಥಿತಿಗತಿ ಗಿರಾಕಿಗಳು ಯಾವ ರೀತಿ ಇರುವವೋ, ಈ ಭಾಗಗಳನ್ನು ತನಿಖೆಯಿಂದ ಗೊತ್ತು ಮಾಡಿಕೊಂಡು ಗವರ್ನ್‌ಮೆಂಟಿಗೆ ಒಂದು ರಿಪೋರ್ಟನ್ನು ಬರೆದು ಒಪ್ಪಿಸುವನು. ಇವಲ್ಲದೆ ಆತನಿಗೆ ಅನುಕೂಲವೆಂದು ಕಂಡು ಬರತಕ್ಕ ಒಂದು ಸ್ಥಳದಲ್ಲಿ ಆತನ ಮೇಲ್ವಿಚಾರಣೆಯಲ್ಲಿ ಹಿಪ್ಪುನೇರಳೆ ವ್ಯವಸಾಯ, ರೇಷ್ಮೆ ಗೂಡುಗಳ ಸಾಕಾಣಿಕೆ, ಈ ಮೊದಲಾದವುಗಳಿಗೋಸ್ಕರ ಒಂದು ಫಾರಮನ್ನು ಪ್ರಾರಂಭ ಮಾಡಿ, ಮುಂದೆ ಈ ಕಸಬನ್ನು ಅಭಿವೃದ್ಧಿಗೆ ತರುವ ಭಾಗದಲ್ಲಿ ಸಮರ್ಥರಾಗುವಂಥಾ ಜನರನ್ನು ನಮ್ಮ ಪ್ರಜೆಗಳಲ್ಲಿ ಆರಿಸಿ ಇಟ್ಟುಕೊಂಡು ತರಪೇತು ಮಾಡುತ್ತಾನೆ ಪ್ರಾರಂಭದಲ್ಲಿ ಈತನು ಒಂದು ವರುಷ ಅಧಿಕಾರದಲ್ಲಿರತಕ್ಕದ್ದೆಂದು ಷರತ್ತಿನ ಮೇಲೆ ಸರ್ಕಾರದವರು ನೇಮಕ ಮಾಡಿಕೊಂಡಿದಾರೆ—ನಮ್ಮ ಸಂಸ್ಥಾನದಲ್ಲಿ ರೇಷ್ಮೆಯನ್ನು ಬೆಳೆಯುವುದಕ್ಕೆ ವಿಶೇಷ ಸೌಕರ್ಯಗಳುಂಟೆಂದು ಅನುಮಾನವಿಲ್ಲದೆ ಹೇಳಬಹುದು ಈ ಉದ್ದೇಶದಿಂದ ದೊಡ್ಡಬಳ್ಳಾಪುರದಲ್ಲೂ, ಬೆಂಗಳೂರಿನಲ್ಲೂ, ಇತರ ಕಡೆಗಳಲ್ಲೂ ಇದುವರೆಗೆ ನಾನಾ ಪ್ರಯತ್ನಗಳು ನಡೆದು ಬಹಳ ಹಣ ಖರ್ಚಾಗಿರುತ್ತದೆ. ಇದರಿಂದ ಯಾತಕ್ಕಾಗಿ ಪ್ರಯೋಜನವಾಗಲಿಲ್ಲವೋ, ಆ ಪ್ರಯತ್ನಗಳಲ್ಲಿ ಲೋಪದೋಷಗಳೇನುಂಟಾದವೋ ತಿಳಿದು ಹೇಳುವುದು ಸಾಧ್ಯವಲ್ಲ ಈಗ ಹೊಸದಾಗಿ ಬರತಕ್ಕ ಸಿನಾರ್ ಮಾರಿ ಎಂಬಾತನು ಸರಿಯಾದ ಸಾಮರ್ಥ್ಯವಂತನಾಗಿರುವ ಪಕ್ಷದಲ್ಲಿ ಆತನ ಕಾರ್ಯಗಳಿಂದ ನಮ್ಮ ಸಂಸ್ಥಾನದಲ್ಲಿ ಈ ರೇಷ್ಮೆ ಕಸಬು ಅಭಿವೃದ್ಧಿಗೆ ಬಂದು, ಆ ಕಸಬುದಾರರೂ ಅವರ ಮೂಲಕ ಸಂಸ್ಥಾನವೂ ಶ್ರೇಯಸ್ಸಿಗೆ ಬರುವುದರಲ್ಲಿ ಅನುಮಾನವಿಲ್ಲ. ಈಗ ನಮ್ಮ ಸಂಸ್ಥಾನದಲ್ಲಿ ಮನೆಗಳೊಳಗಿರುವಂಥಾ ಹೆಂಗಸರಿಗೆ ಅಡಿಗೆಯೇ ಮೊದಲಾದ ಮನೆ ಕೆಲಸಗಳನ್ನು ಬಿಟ್ಟರೆ ಬೇರೆ ಯಾವ ಸಹಜವಾದ ಕಸಬೂ ಇರುವುದಿಲ್ಲ. ಈ ರೇಷ್ಮೆ ಕಸಬು ವೃದ್ಧಿಮಾಡಿದ ಪಕ್ಷದಲ್ಲಿ ನಮ್ಮ ಹೆಂಗಸರಿಗೆ ತುಂಬಾ ಹಿತಕರವಾದ ಕಸಬನ್ನು ಕಲ್ಪಿಸಿಕೊಟ್ಟಂತಾದೀತು. ಇದರಿಂದ ಸಂಸಾರದ ಸುಖಸಂತೋಷಗಳೂ ಸುಖಜೀವನೋಪಾಯವೂ ಉಂಟಾಗಿ ಅನೇಕ ಬಡಬಗ್ಗರು ಬದುಕಿಕೊಂಡಾರು ಆದಕಾರಣ ನಮ್ಮ ಗವರ್ನ್‌ಮೆಂಟಿನವರು ಈಗ ಮಾಡಿರುವ ಹೊಸ ಪ್ರಯತ್ನವೂ ಏರ್ಪಾಡೂ ಸಾರ್ಥಕ ಹೊಂದಿ ಫಲಕಾರಿಯಾಗಲೆಂದು ಹಾರೈಸುತ್ತೇವೆ.

ಮೈಸೂರು ಸಂಸ್ಥಾನದ ಕಾರ್ಖಾನೆಗಳು —ಮೈಸೂರು ಸಂಸ್ಥಾನದಲ್ಲಿರುವ ಕಸಬುದಾರಿ ಕಾರ್ಖಾನೆಗಳ ವಿಷಯದಲ್ಲಿ ನಮ್ಮ ಸರ್ಕಾರದವರು ಪದ್ಧತಿಯ ಪ್ರಕಾರ ವಾರ್ಷಿಕ ರಿಪೋರ್ಟನ್ನು ಪ್ರಕಟಿಸಿರುತ್ತಾರೆ. ನಮ್ಮ ಮುಂದಿರುವ ರಿಪೋರ್ಟಿನಿಂದ ಕಾರ್ಖಾನೆಗಳ ವಿಚಾರದಲ್ಲಿ ಹೆಚ್ಚು ಸಂಗತಿಗಳೇನೂ ತಿಳಿಯುವಂತಿಲ್ಲ. ಸಂಸ್ಥಾನದಲ್ಲಿ ಹನ್ನೊಂದು ಕಾರ್ಖಾನೆಗಳಿರುವವು; ಅಂದರೆ ಹಿಂದಿನ ವರುಷದಲ್ಲಿದ್ದದ್ದಕ್ಕಿಂತ ನಾಲ್ಕು ಹೆಚ್ಚು ಈ ಪೈಕಿ ಮೂರು ದಾವಣಗೆರೆಯಲ್ಲಿ ಹತ್ತಿ ಬಿಡಿಸುವ ಕಾರ್ಖಾನೆಗಳು, ಇನ್ನೊಂದು ಬೆಂಗಳೂರಿನಲ್ಲಿರುವ ಇಟ್ಟಿಗೆ ಮತ್ತು ಹೆಂಚುಗಳ ಕಾರ್ಖಾನೆ. ಈ ಕಾರ್ಖಾನೆಗಳಲ್ಲೆಲ್ಲಾ ಸರಾಸರಿ 1,657 ಗಂಡಸರೂ, 154 ಹೆಂಗಸರೂ, 638 ಮಕ್ಕಳೂ ಕೆಲಸ ಮಾಡುತ್ತಾರೆಂದು ತಿಳಿಯುತ್ತೇವೆ ಈ ಪೈಕಿ ಬೆಂಗಳೂರಲ್ಲಿರುವ ಹತ್ತಿಯ, ಕಂಬಳಿಯ ಮತ್ತೂ ರೇಷ್ಮೆಯ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರ ಸಂಖ್ಯೆಯೇ ಬಹಳ ಹೆಚ್ಚು. ಸಂಸ್ಥಾನದೊಳಗೆ ಕಸಬುಗಳಿಂದ ಜೀವನಮಾಡತಕ್ಕವರ ಸಂಖ್ಯೆ ಇಷ್ಟು ಸ್ವಲ್ಪವೇ ಸರಿ ಎಂದು ತಿಳಿಯಲಾಗದು ಇನ್ನೂ ಅನೇಕಸಾವಿರ ಪ್ರಜೆಗಳು ಮರಗೆಲಸ, ಕಬ್ಬಿಣಗೆಲಸ, ಚಿತ್ರಕೆಲಸ, ಇವೇ ಮೊದಲಾದ ಹಲವು ಕಸಬುಗಳಲ್ಲಿ ಜೀವನಮಾಡುತ್ತಿದಾರೆ —ಈ ರಿಪೋರ್ಟನ್ನು ಓದುತ್ತಾ ಬರುವಲ್ಲಿ ನಮಗೆ ಇನ್ನೊಂದು ಸಂಗತಿ ಗೊತ್ತಾಯಿತು. ಬೆಂಗಳೂರಿನಲ್ಲಿರುವ ಬಿನ್ನಿ ಕಾರ್ಖಾನೆಯವರು ಮೈಸೂರು ಗವರ್ನ್‌ಮೆಂಟಿಗೆ 2,50,000 ರೂಪಾಯಿ ಸಾಲಕೊಡಬೇಕಾಗಿದೆ ಈ ಕಂಪನಿಯವರು 1908-9 ನೇ ಸಾಲಿನಿಂದೀಚೆಗೆ ಅಸಲಿಗಾಗಲಿ ಬಡ್ಡಿಗಾಗಲಿ ಒಂದು ಕಾಸೂ ಪಾವತಿಮಾಡಿರುವುದಿಲ್ಲ. ಕಸಬುಗಳು ಅಭಿವೃದ್ಧಿಗೆ ಬರುವುದಕ್ಕೆ ಏನೋ ಅಡಚಣೆಗಳುಂಟೆಂದೂ, ಈ ವಿಚಾರವನ್ನು ಚೆನ್ನಾಗಿ ಪರಿಶೋಧಿಸಬೇಕಾದದ್ದು ಅತ್ಯಾವಶ್ಯಕವೆಂದೂ ನಮಗೆ ತೋರುತ್ತದೆ ಕಸಬುಗಳ ಇಲಾಖಾ ಮುಖ್ಯಾಧಿಕಾರಿಯಾದ ಮಿ|| ಚಾಟರ್‌ಟನ್ ರವರು ನಮ್ಮ ಸಂಸ್ಥಾನದಲ್ಲಿ ಹಾಲಿ ಇರುವ ಕಸಬುದಾರಿ ಕಾರ್ಖಾನೆಗಳ ಸ್ಥಿತಿಗತಿಯನ್ನು ಅಭಿವೃದ್ಧಿಗೆ ಬರುವಂತೆ ಮಾಡುವ ಭಾಗವನ್ನು ಪರ್ಯಾಲೋಚಿಸಿ ಕ್ರಮಪಡಿಸಬೇಕಾದದ್ದು ಅವಶ್ಯವೆಂದು ಸೂಚಿಸುತ್ತೇವೆ

ಮೈಸೂರು ಸಿಟಿ ಮ್ಯುನಿಸಿಪಲ್ ಮೀಟಿಂಗು.

ಕಳೆದ ತಾ 29 ನೇ ಶನಿವಾರ ಬೆಳಿಗ್ಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸೆಲರುಗಳು ಟೌನ್ ಹಾಲ್ ಬಂಗಲೆಯಲ್ಲಿ ಸಭೆ ಸೇರಿ ತಿಂಗಳುಕಟ್ಲೆಯ ಮೀಟಿಂಗನ್ನು ನಡಿಸಿದರು. ಕಳೆದ ಅಕ್ಟೋಬರ್ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ಎಲ್ಲಾ ಬಾಬುಗಳಿಂದಲೂ ರೂ. 10,13೮-15-4 ಪೈ ಉತ್ಪತ್ತಿಯೂ, ರೂ. 17,220 1-2 ಪೈ ಖರ್ಚೂ ಆಗಿದೆ. ಆ ತಿಂಗಳಲ್ಲಿ ಜನನ 207, ಮರಣ—ಪ್ಲೇಗ್ 2, ಸಿಡುಬು 1, ಜ್ವರ 13, ಇತರ ಕಾರಣಗಳು 141, ಒಟ್ಟು 157 ಎಂದೂ, ಆ ಪೈಕಿ ಕ್ಷಯರೋಗದಲ್ಲಿ 17 ಮರಣಗಳಾದವೆಂದೂ ತಿಳಿಯಿತು ಈ ರೋಗವು ಪಟ್ಟಣದಲ್ಲಿ ಈಚೆಗೆ ಹರಡುತ್ತಾ ಬಂದಿರುವುದರಿಂದ ಅದರ ನಿವಾರಣೆಗೆ ಉಪಾಯಗಳನ್ನು ಯೋಚಿಸಬೇಕೆಂದು ಮೆಂಬರುಗಳು ಹೆಲ್ತ್ ಕಮಿಟಿಗೆ ತಿಳಿಸಿದರು —ರೈಲ್ವೆ ಕಂಪನಿಯವರು ರಾಜಧಾನಿಯಲ್ಲಿರುವ ತಮ್ಮ ಕಟ್ಟಡ, ಆವರಣ ಮುಂತಾದವುಗಳಿಗಾಗಿ ಮ್ಯುನಿಸಿಪಾಲಿಟಿಗೆ ಕೆಲವು ತೆರಿಗೆಗಳನ್ನು ಕೊಟ್ಟು, ಇನ್ನು ಕೆಲವನ್ನು ಕೊಡಲೊಲ್ಲದೆ ಇದಾರೆ ಈ ವಿಚಾರವನ್ನು ಗವರ್ನ್‌ಮೆಂಟಿನವರಿಗೆ ತಿಳಿಸಿ, ಕಂಪನಿಯವರು ಎಲ್ಲಾ ತರದ ಮ್ಯುನಿಸಿಪಲ್ ಕಂದಾಯಗಳನ್ನೂ ಪಾವತಿ ಮಾಡುವಂತೆ ರೂಲಸು ಬದಲಾವಣೆ ಮಾಡಿಕೊಡಬೇಕೆಂದು ಕೇಳಬೇಕೆಂಬದಾಗಿ ನಿಷ್ಕರ್ಷಿಸಿದರು —ಮ್ಯುನಿಸಿಪಲ್ ಇಂಜನಿಯರ್ ಕೆಲಸಕ್ಕೆ ಹೊಸದಾಗಿ ನೇಮಿಸಲ್ಪಟ್ಟಿರುವ ಮ|| ರಾಮಸ್ವಾಮಯ್ಯನವರ ತಲಬನ್ನು 110 ರೂಪಾಯಿನಿಂದ 150 ರೂಪಾಯಿನ ವರೆಗೆ ಬಡ್ತಿ ಆಗುವಂತೆ ನಿಗದಿಮಾಡಬೇಕೆಂದೂ, ಅವರಿಗೆ ಅಲೋಯನ್ಸು 35 ರೂಪಾಯಿನಂತೆ ಪಾವತಿ ಆಗಬೇಕೆಂದೂ ಮ್ಯಾನೇಜಿಂಗ್ ಕಮಿಟಿಯವರು ಶಿಫಾರಸು ಮಾಡಿದ್ದನ್ನು ಮೆಂಬರುಗಳು ಒಪ್ಪಿಕೊಂಡರು

ಬೀದಿಗಳಲ್ಲಿ ದಿಕ್ಕಿಲ್ಲದಂತೆ ಅಲೆಯುತ್ತಾ ತಿರುಗುವ ಜನಗಳಿಗೂ ಓಡಾಡುವ ಗಾಡಿಗಳಿಗೂ ತೊಂದರೆಪಡಿಸುವ ಗೋಕಾಯಿಗಳನ್ನು ಯಾರಾದರೂ ಹಿಡಿದು ದೊಡ್ಡಿಗಳಿಗೆ ಕೂಡಿದರೆ ಅವರಿಗೆ ಮ್ಯುನಿಸಿಪಾಲಿಟಿಯಿಂದ ಇನಾಂ ಕೊಟ್ಟು ಆ ಹಣವನ್ನು ಗೋಕಾಯಿಗಳ ಮಾಲೀಕರಿಂದ ದೊಡ್ಡಿ ರುಸುಮಿನ ಕೂಡ ವಸೂಲ್ಮಾಡಬೇಕೆಂದು ಮ್ಯಾನೇಜಿಂಗ್ ಕಮಿಟಿಯವರು ಸೂಚಿಸಿದ್ದರು ಮೆಂಬರುಗಳು ಈ ವಿಚಾರವನ್ನು ಚರ್ಚೆಮಾಡಿ, ಇಂಥಾದ್ದನ್ನು ಜಾರಿಗೆ ತಂದರೆ ದುಷ್ಟರಿಗೆ ಹೊಸದಾಗಿ ಜೀವನವನ್ನು ಕಲ್ಪಿಸಿಕೊಟ್ಟಂತಾಗುವುದೆಂದೂ, ಈ ಇನಾಮಿನ ಏರ್ಪಾಡೇ ಅವಶ್ಯವಿಲ್ಲವೆಂದೂ, ಪೋಲೀಸಿನವರ ಮೂಲಕ ಅದನ್ನು ಬಂದೋಬಸ್ತು ಮಾಡಿಸುವತೆಯೂ, ಬೆಳಕಿಲ್ಲದೆ ಬೈಸಿಕಲ್ ಸವಾರಿ ಮಾಡುವುದನ್ನು ದರ್ಪನಿಟ್ಟು ತಪ್ಪಿಸುವಂತೆಯೂ ಡೆಪ್ಟಿ ಕಮಿಷನರ್‌ರವರಿಗೆ ಬರೆದು ತಿಳಿಸಬೇಕೆಂದು ಇತ್ಯರ್ಥಮಾಡಿದರು —ಮ|| ಅಂಬಳೆ ಅಣ್ಣಯ್ಯಪಂಡಿತರವರು ಸುಬ್ರಾಯನಕೆರೆಯೊಳಗೆ ಎರಡು ಸ್ನಾನಘಟ್ಟಗಳನ್ನೂ, ಈರನಗೆರೆಯಲ್ಲಿ ಆಸ್ಪತ್ರೆ ಕಟ್ಟಡವನ್ನೂ ಸ್ವಂತ ಲಾಗೋಡಿನಿಂದ ಕಟ್ಟಿಸಿ ಧರ್ಮಾರ್ಥವಾಗಿ ಮ್ಯುನಿಸಿಪಾಲಿಟಿಗೆ ವಹಿಸಿದರು ಮೆಂಬರುಗಳು ಇದಕ್ಕಾಗಿ ಮ|| ಪಂಡಿತರವರನ್ನು ಕೊಂಡಾಡಿರುತ್ತಾರೆ —ಮ್ಯುನಿಸಿಪಾಲಿಟಿಯವರು ಒಪ್ಪಿಸಿದ ಅಡ್ರೆಸ್ಸನ್ನೂ ಕೈಪೆಟ್ಟಿಗೆಯನ್ನೂ ವೈಸ್‌ರಾಯಿ ಪ್ರಭುಗಳು ಸ್ವೀಕರಿಸಿ, ಅವುಗಳ ಚಿತ್ರಕೆಲಸವು ಬಹು ಅಪೂರ್ವವಾದದ್ದಾಗಿದೆ ಎಂದು ಅಪ್ಪಣೆ ಕೊಡಿಸಿದ್ದ ಲೇಖನವನ್ನು ಮೆಂಬರುಗಳು ಓದಿ ಸಂತೋಷಪಟ್ಟರು — ನಜರ್‌ಬಾದ್ ಆಸ್ಪತ್ರೆ ಕಟ್ಟಡದ ಬಾಡಿಗೆಯನ್ನು 10 ರಿಂದ 12 ರೂಪಾಯಿಗೆ ಹೆಚ್ಚಿಸಿಕೊಡಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದಾರೆ —ಚಾಮರಾಜಪೇಟೆಯಲ್ಲಿ ಲೇಟ್ ದರ್ಬಾರ್ ಬಕ್ಷಿ ಲಿಂಗರಾಜೆ ಅರಸಿನವರ ದರ್ಮದ ಆಸ್ಪತ್ರೆ ಕಟ್ಟಡದ ಬಳಿ ಒಂದು ಬಾಲಿಕಾ ಪಾಠಶಾಲೆಯನ್ನು ಕಟ್ಟಿಸಬೇಕೆಂದು ಸರ್ಕಾರದವರು 9,800 ರೂಪಾಯಿನ ಅಂದಾಜು ಪಟ್ಟಿಯನ್ನು ಸ್ಯಾಂಕ್ಷನ್ ಮಾಡಿ ಆ ಪೈಕಿ ಅರ್ಧ ಹಣವನ್ನು ಮ್ಯುನಿಸಿಪಾಲಿಟಿಯಿಂದ ಪಾವತಿ ಮಾಡುವಂತೆ ಅಪ್ಪಣೆ ಕೊಟ್ಟಿದಾರೆ ಅದರ ಪಕ್ಕದಲ್ಲೇ ಸರ್ಕಾರದವರು ಬಾಲಕರಿಗಾಗಿ ಒಂದು ಎ. ವಿ. ಸ್ಕೂಲನ್ನೂ ಕಟ್ಟಿಸುವವರಾಗಿದಾರೆ

ಇನ್ನು ಮುಂದೆ ಮ್ಯುನಿಸಿಪಾಲಿಟಿಗೆ ಕಂದಾಯಗಳ ವಸೂಲಾತಿಯನ್ನು ನೋಡಿಕೊಳ್ಳುವುದಕ್ಕೆ ಮ ಹನುಮಂತರಾಯರಂಥಾ ದೊಡ್ಡ ಅಧಿಕಾರಿಯ ಅವಶ್ಯವಿಲ್ಲವೆಂದೂ, ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಕೆಲಸಕ್ಕೆ ಅಸಿಸ್ಟೆಂಟ್ ಕಮಿಷನರುಗಳ ದರ್ಜೆಯುಳ್ಳ ಅಧಿಕಾರಿಯನ್ನೇ ನೇಮಿಸಿಕೊಡಬೇಕೆಂದೂ ಸರ್ಕಾರದವರಿಗೆ ಅರಿಕೆಮಾಡುವಂತೆ ಇತ್ಯರ್ಥವಾಯಿತು — ಮೆಂಬರುಗಳ ಪೈಕಿ ಮ|| ಎನ್. ಪ್ರೇಮಯ್ಯನವರು ಮೈಸೂರು ತಾಲ್ಲೂಕ್ ಬೋರ್ಡಿನಲ್ಲಿ ಮ್ಯುನಿಸಿಪಾಲಿಟಿಯ ಪ್ರತಿನಿಧಿಯಾಗಿರಬೇಕೆಂದು ನೇಮಿಸಲ್ಪಟ್ಟರು —ರೈಲ್ವೆ ಸ್ಟೇಷನ್‌ಗೆ ದಕ್ಷಿಣ ಭಾಗದಲ್ಲಿರುವ ಹಳ್ಳಪ್ರದೇಶವನ್ನು ಭರ್ತಿ ಕಟ್ಟುವ ಕಾರ್ಖಾನೆ ಕಟ್ಟುವುದಕ್ಕೆಂದು ಮ್ಯುನಿಸಿಪಾಲಿಟಿಯವರು ಸ್ಥಳೀಯ ವರ್ತಕರಾದ ಮ|| ಅಣ್ಣಯ್ಯ ಮುಂತಾದವರಿಗೆ ಕೊಟ್ಟಿದ್ದರು ಅವರು ಕಾರ್ಖಾನೆ ಕಟ್ಟುವ ಭಾಗದಲ್ಲಿ ಪ್ರಯತ್ನಪಡಲಿಲ್ಲವಾಗಿ ಆ ಸ್ಥಳದಲ್ಲಿ ಚರ್ಮದ ಹದಮಾಡುವ ಕಾರ್ಖಾನೆ ಕಟ್ಟುವುದಕ್ಕೆ ಕೊಡಬೇಕೆಂದು ಮಿ|| ಬಿಯೊಭಾಲ್ ರವರು ಅರ್ಜಿ ಹಾಕಿದರು ಅಂಥಾ ಕಾರ್ಖಾನೆಯನ್ನು ಅಲ್ಲಿ ಇಡುವುದು ಹಿತಕರವಾದದ್ದೇ ಎಂದು ಹೆಲ್ತ್ ಆಫೀಸರನ್ನು ಕೇಳಿ ತಿಳಿಯಬೇಕೆಂದು ಮೆಂಬರುಗಳು ಇತ್ಯರ್ಥಮಾಡಿದರು —ಕರ್ನಾಟಕ ಮತ್ತು ಯೂನಾನಿ ಆಸ್ಪತ್ರೆಗಳಲ್ಲಿ ಸಹಾಯ ವೈದ್ಯರಾಗಿರುವವರಿಗೆ ಬಡ್ತಿ ಕೊಡಬೇಕೆಂಬ ಮ್ಯುನಿಸಿಪಲ್ ಬೋರ್ಡಿನ ಶಿಫಾರಸನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಲಿಲ್ಲ —ಟವನ್‌ನಲ್ಲಿ ಮನೆಗಳ ಸರ್ವೆ ಕೆಲಸವನ್ನು ಪೂರೈಸುವುದಕ್ಕೆ ಸಿಬ್ಬಂದಿ ಮೊದಲಾದ ಖರ್ಚಿಗೆ 400 ರೂಪಾಯಿ ಖರ್ಚುಮಾಡಿ, ಆ ಕೆಲಸವನ್ನು ಪೂರೈಸಬೇಕೆಂದು ಮೆಂಬರುಗಳು ಒಪ್ಪಿಕೊಂಡರು —ದೇವರಾಜ ಮಾರ್ಕೆಟಿನ ಪಶ್ಚಿಮ ಪಾರ್ಶ್ವದ ಹೊರ ಪ್ರಾಕಾರದ ಕಾಮಗಾರಿಗೆ 1,313 ರೂಪಾಯಿ ಖರ್ಚುಮಾಡಬಹುದೆಂದು ಸರ್ಕಾರದವರು ಸ್ಯಾಂಕ್ಷನ್ ಮಾಡಿದರು ಈ ಹೊಸ ಮಳಿಗೆಗಳನ್ನೂ, ಪೂರ್ವ ಪಾರ್ಶ್ವದ ಹೊಸ ಮಳಿಗೆಗಳನ್ನೂ ಈ ತಿಂಗಳ ಮೊದಲನೇ ವಾರದೊಳಗಾಗಿ ವರ್ತಕರಿಗೆ ಹರಾಜುಹಾಕಿ, ಜನವರಿ ಪ್ರಾರಂಭದಿಂದ ಹೊಸ ಬಾಡಿಗೆಗಳು ವಸೂಲಾಗುವಂತೆ ಏರ್ಪಾಡಾಗಬೇಕೆಂದು ಮೆಂಬರುಗಳು ನಿಷ್ಕರ್ಷೆ ಮಾಡಿದರು —ಗೋಕಾಯಿಗಳಿಗಾಗಿ ನೀರಿನ ತೊಟ್ಟಿಗಳನ್ನು 20 ಕಡೆ ಕಟ್ಟಿಸಬೇಕೆಂದು ಗೊತ್ತಾಗಿದೆ ಈ ಪೈಕಿ 7 ತೊಟ್ಟಿಗಳು ದೊಡ್ಡ ಚೌಕಗಳಲ್ಲಿ ಆಗಬೇಕಾಗಿರೋಣದರಿಂದ ಅವು ಅಲಂಕಾರವಾಗಿ ಕಟ್ಟಲ್ಪಡುವವು ಸಾಹುಕಾರ್ ಎಂ ಎಲ್ ವರ್ಧಮಾನಯ್ಯನವರು 7 ರ ಪೈಕಿ 2 ನ್ನೂ, ಸಾಹುಕಾರ್ ಬನಮಯ್ಯನವರು 1 ನ್ನೂ ಧರ್ಮಾರ್ಥವಾಗಿ ಕಟ್ಟಿಸಿ ಮ್ಯುನಿಸಿಪಾಲಿಟಿಗೆ ವಹಿಸುವುದಾಗಿಯೂ, ಸಾ|| ಬನಮಯ್ಯನವರು ಸಾಧಾರಣವಾದ ತೊಟ್ಟಿಗಳು ಎಷ್ಟು ಬೇಕಾಗಿದ್ದರೂ ತಾವೇ ಉಚಿತವಾಗಿ ಮಾಡಿಸಿಕೊಡುವುದಾಗಿಯೂ ಒಪ್ಪಿಕೊಂಡಿರುತ್ತಾರೆ

"ನನ್ನ ಮೊದಲನೇ ಅನುಭವವು"

[ನಮ್ಮ ದಿವಾನ್ ಸಾಹೇಬರವರು ನಮ್ಮ ದೇಶದ ರೈತರ ಮತ್ತು ವರ್ತಕರ ಉಪಯೋಗಾರ್ಥವಾಗಿ ನನ್ನ ಅನುಭವವನ್ನು ಆಗಿಂದಾಗ್ಗೆ ಪತ್ರಿಕೆಗಳಲ್ಲಿ ಬರೆಯುತ್ತಿರಬೇಕೆಂದು ಆಜ್ಞಾಪಿಸಿರುತ್ತಾರೆ ಆದ್ದರಿಂದ ಇನ್ನುಮೇಲೆ ತಿಂಗಳಿಗೆ ಒಂದು ಕಾಗದವನ್ನಾದರೂ ತಪ್ಪದೆ ಬರೆಯಲು ಯತ್ನಿಸುತ್ತೇನೆ. ನನಗೆ ಕಾಗದ ಬರೆದು ಯಾವ ಸಂಗತಿಯನ್ನಾದರೂ ತಿಳಿಯಲಪೇಕ್ಷೆಯುಳ್ಳವರ ಉಪಯೋಗಾರ್ಥವಾಗಿ ನನ್ನ ಅಡ್ರೆಸ್ಸನ್ನು ಈ ಕೆಳಗೆ ಕೊಟ್ಟಿದೇನೆ:- Mr. K. H. Ramayya, London School of Economics, London.

ಪ್ರಿಯ ಮಿತ್ರರೇ,—ಪಾಶ್ಚಿಮಾತ್ಯ ದೇಶಗಳಿಗೆ ಸಂಚಾರಮಾಡಿ ವಿದ್ಯಾಸಂಗವನ್ನು ಮಾಡಲು ನನಗೆ ಅವಕಾಶವನ್ನುಂಟುಮಾಡಿದುದಕ್ಕಾಗಿ ನಮ್ಮ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರವರ ಸರ್ಕಾರಕ್ಕೆ ನಾನು ಅತ್ಯಂತ ಕೃತಜ್ಞನಾಗಿರುತ್ತೇನೆ ಇದೂ ಅಲ್ಲದೆ ನಾನು ಬೆಂಗಳೂರಿಂದ ಪ್ರಯಾಣಮಾಡುವಾಗ್ಗೆ ರೈಲ್ವೆ ಸ್ಟೇಷನ್ ಬಳಿಗೆ ಪುರನಿವಾಸಿಗಳು ದಯವಿಟ್ಟು ಬಂದು ನನ್ನ ಯೋಗ್ಯತೆಗೆ ಮೀರಿ ಸನ್ಮಾನವನ್ನು ಮಾಡಿದ್ದಲ್ಲದೆ ನಾನು ಸುರಕ್ಷಿತವಾಗಿ ಲಂಡನ್ ಪಟ್ಟಣವನ್ನು ಸೇರಬೇಕೆಂದು ಆಶೀರ್ವದಿಸಿ, ಜಯಘೋಷದಿಂದ ಕಳುಹಿಸಿಕೊಟ್ಟದ್ದನ್ನು ನಾನು ಎಂದಿಗೂ ಮರೆಯಲಾರೆನು

ನಮ್ಮ ದೇಶದ ಜನರು ಮುಂದಕ್ಕೆಬರಲು ಇದು ಒಳ್ಳೇ ಸಮಯವಾಗಿದೆ. ಪ್ರಜಾಕ್ಷೇಮವೇ ತಮ್ಮ ಕ್ಷೇಮವೆಂದು ಭಾವಿಸಿಕೊಂಡು ರಾಜ್ಯಭಾರ ಮಾಡುತ್ತಿರುವ ಸಾರ್ವಭೌಮ ಚಕ್ರವರ್ತಿಯವರನ್ನು ನಾವು ಪಡೆದಿರುತ್ತೇವೆ. ಇದೇ ರೀತಿ ಪ್ರಜೆಗಳಲ್ಲಿ ಅತ್ಯಂತ ಅನುರಾಗವುಳ್ಳ ಶ್ರೀ ಕೃಷ್ಣರಾಜ ಒಡೆಯರ್, ಜಿ. ಸಿ. ಎಸ್ ಐ ರವರು ನಮ್ಮನ್ನಾಳುವ ಮಹಾಸ್ವಾಮಿಯವರಾಗಿದಾರೆ ಸಹೋದರಭಾವದಲ್ಲಿ ಶ್ರೀ ಲಕ್ಷ್ಮಣನಂತಿರುವ ನಮ್ಮ ಶ್ರೀಮನ್ ಯುವರಾಜರವರು ತಾವೇ ತಾನೇ ಪಾಶ್ಚಿಮಾತ್ಯ ದೇಶಗಳಲ್ಲಿ ಸಂಚಾರಮಾಡಿ, ನಮ್ಮ ದೇಶದ ಕೀರ್ತಿಯನ್ನು ಈ ಪ್ರಾಂತ್ಯಗಳಲ್ಲಿ ಪ್ರಸರಿಸುವಹಾಗೆ ಮಾಡಿರುವುದಲ್ಲದೆ ಈ ದೇಶಗಳ ಪದ್ಧತಿಗಳನ್ನೂ, ನವನಾಗರಿಕತೆಯನ್ನೂ ನೋಡಿದುದರಿಂದ ತಮಗುಂಟಾಗಿರುವ ಅನುಭವವನ್ನು ನಮ್ಮ ಸಂಸ್ಥಾನದ ಪ್ರಜೆಗಳ ಅಭ್ಯುದಯಕ್ಕಾಗಿ ಉಪಯೋಗಿಸಲು ಕುತೂಹಲವುಳ್ಳವರಾಗಿರುತ್ತಾರೆ ಸಕಲ ದೇಶಗಳಲ್ಲಿ ಸಂಚಾರಮಾಡಿ, ರಾಜಕೀಯ ವಿಷಯಗಳಲ್ಲಿ ನಿಪುಣತೆಯನ್ನು ಪಡೆದಿರುವ ನಮ್ಮ ಮಂತ್ರಿವರ್ಯರಾದ ಮ|| ಎಂ ವಿಶ್ವೇಶ್ವರಯ್ಯ, ಬಿ ಎ., ಸಿ ಐ ಇ ರವರು ಪ್ರಜಾಸಾಮಾನ್ಯಕ್ಕೆ ಸುಖಸಂಪತ್ತುಗಳನ್ನುಂಟುಮಾಡಬೇಕೆಂಬ ಸಂಕಲ್ಪವುಳ್ಳವರಾಗಿರುತ್ತಾರೆ, ಇದಲ್ಲದೆ ನಮ್ಮ ದೇಶದ ಹವಾ ಉತ್ತಮೋತ್ತಮವಾದದ್ದೆಂದು ಹೇಳುವುದರಲ್ಲಿ ಸಂದೇಹವೇ ಇಲ್ಲ

ಇಷ್ಟು ಅನುಕೂಲಗಳು ನಮಗೆ ದೈವಾನುಗ್ರಹದಿಂದ ದೊರೆತಿದ್ದಾಗ್ಯೂ ನಾವು ಅವುಗಳನ್ನು ಯಾವ ರೀತಿ ಉಪಯೋಗಮಾಡಿಕೊಳ್ಳಬೇಕೆಂಬುವುದನ್ನು ಅರಿಯದಹೋದರೆ ನಮಗೆ ಯಾವ ಪ್ರಯೋಜನವೂ ಉಂಟಾಗುವುದಿಲ್ಲ ತಂದೆಯು ಎಷ್ಟು ಒಳ್ಳೆಯವನಾದಾಗ್ಯೂ ಮಕ್ಕಳು ಆತನ ಬುದ್ಧಿಮಾತನ್ನು ಕೇಳಲು ಇಷ್ಟಪಡದೆಹೋದರೆ ತಂದೆಯಿಂದ ಮಕ್ಕಳಿಗೆ ಯಾವ ಸಹಾಯವೂ ಆದಂತೆ ತೋರುವುದಿಲ್ಲ. ಆದ್ದರಿಂದ ಯಾವ ದೇಶ ಅಭಿವೃದ್ಧಿಗೆ ಬರಬೇಕಾದರೂ ಅಲ್ಲಿನ ಪ್ರಜೆಗಳು ವಿವೇಕಶಾಲಿಗಳಾಗಿರಬೇಕು ಉಪನ್ಯಾಸಗಳನ್ನು ಕೇಳುವುದರಿಂದಲೂ, ವರ್ತಮಾನ ಪತ್ರಿಕೆಗಳನ್ನು ಓದುವುದರಿಂದಲೂ ಸಾಮಾನ್ಯ ಜನರು ಅನೇಕ ಸಂಗತಿಗಳನ್ನು ತಿಳಿಯಕೊಳ್ಳಬಹುದು ಈ ಲಂಡನ್ ಪಟ್ಟಣದಲ್ಲಿ ಪ್ರತಿನಿತ್ಯ ಅನೇಕ ಸ್ಥಳಗಳಲ್ಲಿ ಉಪನ್ಯಾಸಗಳು ಕೊಡಲ್ಪಡುತ್ತಲೇ ಇವೆ ಗಾಡಿ ಹೊಡೆಯುವವನೂ, ಕೂಲಿ ಮಾಡುವವನೂ ವರ್ತಮಾನ ಪತ್ರಿಕೆಯನ್ನು ಕೈಯಲ್ಲಿ ಹಿಡಿದೇ ಇರುತ್ತಾನೆ ಪ್ರಪಂಚದ ನಾನಾ ದೇಶಗಳಲ್ಲಿ ನಡೆಯುತ್ತಿರುವ ಸಂಗತಿಗಳನ್ನು ವರ್ತಮಾನ ಪತ್ರಿಕೆ ಓದಿ ತಿಳಿದುಕೊಳ್ಳಬೇಕೆಂಬ ಕುತೂಹಲವುಳ್ಳವನಾಗಿದಾನೆ ಬೆಂಗಳೂರಿನಲ್ಲಿರುವ ನಮ್ಮ ಲಾಲ್ ಬಾಗಿನಂತೆ ಇಲ್ಲಿ ಬಹು ವಿಸ್ತಾರವಾದ ಹ್ಯಡ್ ಪಾರ್ಕ್ (Hyde Park) ಎಂಬ ವಿಹಾರಸ್ಥಳವಿದೆ ಇಂಥಾ ಸ್ಥಳದಲ್ಲಿಯೂ ಭಾನುವಾರದ ದಿವಸ ಅನೇಕ ಉಪನ್ಯಾಸಗಳು ಮೈದಾನದಲ್ಲಿ ನಾನಾ ವಿಷಯಗಳನ್ನು ಕುರಿತು ಕೊಡಲ್ಪಡುತ್ತಲಿವೆ ಜನರು ಆತುರದಿಂದ ಕೇಳುತ್ತಲೇ ಇರುತ್ತಾರೆ ಇದಿಂಗ ವಿದ್ಯಾಕಾಂಕ್ಷೆ ಎಂದು ಹೇಳಬೇಕು ಸ್ಕೂಲಿಗೆ ಹೋಗತಕ್ಕವನೇ ವಿದ್ಯಾರ್ಥಿ ಎಂದು ಹೇಳಬಾರದು. ಹೊಸ ವಿಷಯಗಳನ್ನು ತಿಳಿಯಬೇಕೆಂಬ ಕುತೂಹಲವುಳ್ಳವರೆಲ್ಲರೂ ವಿದ್ಯಾರ್ಥಿಗಳೆಂದು ತಿಳಿಯಬೇಕು.

ನಮ್ಮ ದೇಶದಲ್ಲಿ ಉಪನ್ಯಾಸಗಳನ್ನು ಕೊಡತಕ್ಕವರೂ, ಕೇಳತಕ್ಕವರೂ ಬಹಳವಾಗಿ ಹೆಚ್ಚಬೇಕು. ಈ ಲಂಡನ್ ಪಟ್ಟಣದಲ್ಲಿ ಉಪನ್ಯಾಸ ಕೊಡುವುದು ನಿಂತುಹೋದರೆ ಸರ್ಕಾರವೇ ನಡೆಯುವುದಿಲ್ಲ ಪಾರ್ಲಿಮೆಂಟ್ (Parliament) ಎಂಬ ಪ್ರಜೆಗಳ ಪ್ರತಿನಿಧಿಸಭೆಯು ಉಪನ್ಯಾಸದ ಶಕ್ತಿಯಿಂದ ನಡೆಯುತ್ತಲಿದೆ. ಅಂದರೆ, ಈ ಇಂಗ್ಲಿಷ್ ಜನರು ಹರಟೆ ಮಲ್ಲರೆಂದು ಭಾವಿಸಬಾರದು ಇವರು ಕಷ್ಟಪಟ್ಟು ಕೆಲಸಮಾಡುವುದರಲ್ಲಿ ಸ್ತ್ರೀಯರು ಕೂಡ ತಮ್ಮ ವಾಗ್ಮಿತೆಯನ್ನು ಎಲ್ಲೆಲ್ಲಿಯೂ ತೋರಿಸಿಕೊಳ್ಳಬೇಕೆಂಬ ದುರಹಂಕಾರವುಳ್ಳವರಲ್ಲ ತಮಗೆ ತಿಳಿದಿರುವ ಸಂಗತಿಗಳನ್ನು ತಮ್ಮ ಸಹೋದರರಿಗೆ ತಿಳಿಸಿ ಸಹಾಯ ಮಾಡಬೇಕೆಂಬುವುದೇ ಇವರ ಉದ್ದೇಶ. ಇಂಥಾ ಪ್ರಚಾರಕರಾದ ಮತ್ತು ಪ್ರಜೆಗಳಲ್ಲಿ ವಿವೇಕವನ್ನುಂಟುಮಾಡುವ ಉಪನ್ಯಾಸಗಳು ಎಷ್ಟು ಹೆಚ್ಚಿದರೂ ಅಷ್ಟು ವಿದ್ಯಾಪ್ರಾಚುರ್ಯಕ್ಕೆ ಕಾರಣವಾಗುತ್ತದೆ ಒಳ್ಳೇ ವಿಷಯಗಳುಳ್ಳ ವರ್ತಮಾನ ಪತ್ರಿಕೆಗಳೂ ಕೂಡ ಜನರಲ್ಲಿ ವಿದ್ಯಾಭಿರುಚಿಯನ್ನು ಹೆಚ್ಚಿಸುತ್ತದೆ

ನಮ್ಮ ದಿವಾನ್ ಸಾಹೇಬರವರು ಅಪ್ಪಣೆಕೊಡಿಸಿರುವಂತೆ ಪ್ರತಿ ಗ್ರಾಮದಲ್ಲಿಯೂ ಒಂದೆರಡು ವರ್ತಮಾನ ಪತ್ರಿಕೆಗಳು ಇದ್ದೇ ಇರಬೇಕು. ಇವುಗಳನ್ನು ಗ್ರಾಮಚಾವಡಿಯಲ್ಲಿ ಪಟೇಲರು, ಅಥವಾ ಶ್ಯಾನುಭೋಗರು ಗ್ರಾಮಸ್ಥರಿಗೆ ಓದಿ ಹೇಳುವ ಹಾಗೆ ಮಾಡಬೇಕು. "ಒಕ್ಕಲಿಗರ ಪತ್ರಿಕೆ" ಮತ್ತು "ವೃತ್ತಾಂತ ಪತ್ರಿಕೆ" ಇವೆರಡನ್ನೂ ಗ್ರಾಮಸ್ಥರು ತರಿಸಿಕೊಳ್ಳಬೇಕು. ಪಟೇಲರು ಒಂದಕ್ಕೆ ಚಂದಾ ಕೊಡುವ ಹಾಗೂ, ಶ್ಯಾನುಭೋಗರು ಮತ್ತೊಂದಕ್ಕೆ ಕೊಡುವ ಹಾಗೆ ಮಾಡಬೇಕು ದಯಾಳುಗಳಾದ ನಮ್ಮ ಸರ್ಕಾರದವರು ನಮ್ಮ ದೇಶದಲ್ಲಿ ಎಷ್ಟು ಗ್ರಾಮಗಳಿವೆಯೋ ಅಷ್ಟು ಒಕ್ಕಲಿಗರ ಪತ್ರಿಕೆಗಳನ್ನೂ, ವೃತ್ತಾಂತ ಪತ್ರಿಕೆಗಳನ್ನೂ ಕೊಂಡುಕೊಂಡು, ಅರ್ಧ ಬೆಲೆಗೆ ಪಟೇಲರಿಗೂ, ಶ್ಯಾನುಭೋಗರಿಗೂ ಕಳುಹಿಸಿ, ಅವರು ಗ್ರಾಮಸ್ಥರಿಗೆ ಓದಿ ಹೇಳುವಂತೆ ಕಟ್ಟುಮಾಡಿದರೆ ಬಹಳ ಉಪಕಾರವಾಗುವುದು ಇಲ್ಲವಾದರೆ ನಮ್ಮ ಜನರು ದೀರ್ಘನಿದ್ರೆಯಿಂದ ಏಳುವುದಕ್ಕೆ ಇನ್ನೂ ಅನೇಕ ವರ್ಷಗಳಾಗುವವು

ಇದೇ ರೀತಿ ಗ್ರಾಮಾಂತರಗಳಿಗೆ ಹೋಗಿ ಉಪನ್ಯಾಸಮಾಡಲು ಕೆಲವರನ್ನು ಸರ್ಕಾರದವರು ಆರಿಸಿ ಕಳುಹಿಸಬೇಕು ಇಂಥಾ ಉಪನ್ಯಾಸಕರಲ್ಲಿ ವಿದ್ಯಾಪಾಂಡಿತ್ಯವು ಮುಖ್ಯವಾದದ್ದಲ್ಲವಾದರೂ ಇದೂ ಸ್ವಲ್ಪ ಬೇಕೇ ಬೇಕು ಆದರೆ ಮುಖ್ಯವಾಗಿರಬೇಕಾದದ್ದೇನೆಂದರೆ ಉತ್ತಮ ಜಾತಿ, ಕೀಳು ಜಾತಿ, ಶ್ರೀಮಂತರು, ಬಡವರು ಎಂಬ ಭೇದವನ್ನೆಣಿಸದೆ ಪ್ರೀತಿಯಿಂದ ಜನರಿಗೆ ಉಪದೇಶಿಸುವ ದೇಶಬಾಂಧವರಾಗಬೇಕು ನಯ, ವಿನಯ ಮುಂತಾದ ಸದ್ಗುಣಗಳಿಂದ ಕೂಡಿದವರಾಗಬೇಕು. ಸದ್ಯದಲ್ಲಿ ನಮ್ಮ ಸರ್ಕಾರದವರು ಕೆಲವು ಉಪನ್ಯಾಸಗಳನ್ನು ಬರೆಸಿ ಅಚ್ಚುಹಾಕಿಸಿ ಪ್ರತಿ ಗ್ರಾಮಕ್ಕೂ ಕೂಡಲೆ ಕಳುಹಿಸಿಕೊಡಬೇಕಾದದ್ದು ಅತ್ಯಾವಶ್ಯಕ. ಅವು ಯಾವವೆಂದರೆ—ಘನವನ್ನು ಹೊಂದಿದ ನಮ್ಮ ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್ ಪ್ರಭುಗಳು ಮೈಸೂರಿನಲ್ಲಿ ಕೊಟ್ಟಿರುವ ಉಪನ್ಯಾಸ, ಶ್ರೀಮನ್ ಮಹಾರಾಜರವರು ಆ ಸಮಯದಲ್ಲಿ ಮಾಡಿರುವ ಉಪನ್ಯಾಸ ಮತ್ತು ಸಂಪದಭಿವೃದ್ಧಿ ಸಮಾಜದ ಉಪಕ್ರಮಣದಲ್ಲಿ ಮಾಡಿರುವ ಉಪನ್ಯಾಸ, ಶ್ರೀಮನ್ ಯುವರಾಜರವರು ಸ್ವದೇಶವನ್ನು ಸುರಕ್ಷಿತವಾಗಿ ತಲಪಿದಾಗ ಬೆಂಗಳೂರಿನಲ್ಲಿ ಕೊಟ್ಟ ಉಪನ್ಯಾಸ, ದಿವಾನ್ ಸಾಹೇಬರವರು ಪ್ರಜಾಪ್ರತಿನಿಧಿ

...ಕೊಟ್ಟ ಉಪನ್ಯಾಸ ಮತ್ತು ರಾಜ ಸಭಾ ಭೂಷಣ ದಿವಾನ್ ಬಹದ್ದೂರ್ ... ಪಿ ಪಟ್ಟಣ್ಣಶೆಟ್ಟರವರು ಪರಸ್ಪರ ಸಹಾಯಕ ಸಂಘಗಳ ವಾರ್ಷಿಕ ...ಸಭೆಯಲ್ಲಿ ಕೊಟ್ಟ ಉಪನ್ಯಾಸ, ಇತ್ಯಾದಿ

ನಮ್ಮ ಪೂರ್ವಿಕರ ಕಾಲದಲ್ಲಿ ರೈಲು ಮುಂತಾದ ಅನುಕೂಲಗಳು ಇಲ್ಲದೆ ...ಯಿಂದೊಂದಿಗೆ ಪ್ರಯಾಣಮಾಡುವುದು ಬಹಳ ಕಷ್ಟವಾಗಿದ್ದಿತು ಮೈಸೂರಿ ...ವ ಮದರಾಸಿಗೆ ಹೋಗಬೇಕಾದರೇನೇ ಎಷ್ಟೋ ಯೋಚನೆ ಮಾಡಬೇಕಾಗಿತ್ತು ...ಲ್ಲಿ ಕಾಶಿಗೆ ಹೋಗಿ ತೀರ್ಥಯಾತ್ರೆ ಮಾಡಿಕೊಂಡು ಬರಬೇಕಾದರೆ ಮನೆ ...ಯನ್ನೇ ತೊರೆದು—"ನಾನು ಪುನಃ ಕ್ಷೇಮವಾಗಿ ಬರುತ್ತೇನೋ, ಇಲ್ಲವೇ ...ಯಲ್ಲಿ ಹುಲಿ ಬಾಯಿಗೆ ತುತ್ತಾಗುತ್ತೇನೋ" ಎಂಬ ಕಳವಳದಿಂದ ಪ್ರಯಾಣಮಾಡುತ್ತಿದ್ದರು ಪ್ರಯಾಣಕ್ಕೆ ಈಗಿರುವಷ್ಟು ಸೌಕರ್ಯಗಳು ಹಿಂದೆ ...ವಾಗಲೂ ಇರಲಿಲ್ಲ 16 ದಿನಗಳಲ್ಲಿ 6,000 ಮೈಲಿ ಆಚೆ ಇರುವ ಲಂಡನ್ ...ವನ್ನೇ ತಲಪಬಹುದು ಹೀಗಿರುವಾಗ ಹಳೇ ಪದ್ಧತಿಗಳನ್ನೇ ದೊಡ್ಡದಾಗಿ ...ಕೊಂಡು—ಪಾಶ್ಚಿಮಾತ್ಯ ದೇಶಗಳ ಜನರು ಅಂತರಿಕ್ಷದಲ್ಲಿ ಸಂಚರಿಸು ...ವಾಗ—ನಾವು ಇನ್ನೂ ಮಕ್ಕಳಂತೆ ಅಂಬುಗಾಲನ್ನಿಡುತ್ತಾ ತವಿಯುತ್ತಲಿರು ...ದು ಆಶ್ಚರ್ಯವಾಗಿದೆ "ಆಕಾಶವಿಮಾನಗಳಲ್ಲಿ ಜನರು ಸಂಚರಿಸುತ್ತಿರು ...ಗ ನಾವು ಪಾಶ್ಚಿಮಾತ್ಯ ದೇಶಗಳಿಗೆ ಹೋಗಿಬಂದದ್ದೇ ದೊಡ್ಡ ವಿಷಯವೆಂದು ...ವು ಭಾವಿಸುವುದನ್ನು ನೋಡಿದರೆ ನಮ್ಮ ದೇಶವು ಎಷ್ಟು ಹಿಂದೆಬಿದ್ದಿದೆ ...ಎಂಬುವದು ನಮಗೆ ಗೋಚರವಾಗದೆ ಇರಲಾರದು" ಎಂಬದಾಗಿ ಕೆಲವು ದಿನಗಳ ...ಂದೆ ಶ್ರೀಮನ್ ಯುವರಾಜರವರು ಅಪ್ಪಣೆಕೊಡಿಸಿರುವುದು ತಮ್ಮೆಲ್ಲರಿಗೂ ...ದೇ ಇದೆ ನಮ್ಮ ದೊರೆಗಳೇ ನಮಗೆ ಮೇಲ್ಪಂಙ್ತಿ ಹಾಕಿ ಕೊಟ್ಟಿರುವಾಗ ...ವಲ ರಾಜಭಕ್ತಿಯುಳ್ಳ ಪ್ರಜೆಗಳಾದ ನಾವು ಅವರಂತೆ ಅನುಸರಿಸಿ ನಡೆಯು ...ವುದು ನಮ್ಮ ಮುಖ್ಯ ಧರ್ಮವಾಗಿದೆ

ನಮ್ಮ ದೇಶದ ಜನರು ತಂಡೋಪತಂಡವಾಗಿ ಇಲ್ಲಿಗೆ ಬಂದು ಹೋಗು ...ವರೆ ನಮ್ಮ ಸಂಸ್ಥಾನವು ಬಹಳ ಜಾಗ್ರತೆಯಾಗಿ ಉನ್ನತ ಸ್ಥಿತಿಗೆ ಬರುವುದ ...ಲ್ಲಿ ಸಂದೇಹವೇ ಇಲ್ಲ ಬಡವಿದ್ಯಾರ್ಥಿಗಳು ಮಾತ್ರ ಇಲ್ಲಿಗೆ ಬಂದು ...ದರೆ ಸಾಲದು ರಾಜವಂಶಸ್ಥರು, ಸರ್ಕಾರದ ದೊಡ್ಡದೊಡ್ಡ ಅಧಿಕಾರಿ ...ಗಳು, ಭಾರಿವರ್ತಕರು ಜಮೀನ್ದಾರರು, ಈ ಮುಂತಾದ ದೊಡ್ಡಮನು ...ಷ್ಯರು ಈ ದೇಶಗಳಿಗೆ ಆರು ತಿಂಗಳ ಮಟ್ಟಿಗಾದರೂ ಬಂದು ಇಲ್ಲಿನ ಅಭಿವೃದ್ಧಿ ಸ್ಥಿತಿಯನ್ನು ಕಣ್ಣಿಂದ ನೋಡಿ ಅನುಭವಪಡೆದುಹೋದರೆ ನಮ್ಮ ದೇಶಕ್ಕೆ ...ಷ್ಟೋ ಉಪಕಾರಮಾಡಿದಂತಾಗುವುದು

...ತಾತ್ಪರ್ಯವೇನೆಂದರೆ —(1) ಪಾಠಶಾಲೆಗಳಿಗೆ ಹೋಗುವುದರಿಂದಲೂ, ...ಸ್ತಕಗಳನ್ನು ಓದುವುದರಿಂದಲೂ ಕಲಿಯತಕ್ಕದ್ದೇ ವಿದ್ಯೆ ಎಂದು ಭಾವಿಸ ...ದು ಯಾವ ವಿಧದಿಂದಲಾದರೂ ಹೊಸ ವಿಷಯಗಳನ್ನು ತಿಳಿದುಕೊಂಡು ...ಷಯಗಳನ್ನು ಗ್ರಹಿಸುವುದೇ ವಿದ್ಯೆಯೆಂದು ಭಾವಿಸಬೇಕು, (2) ತಿಳಿದವರು ...ಮಗೆ ವೇದ್ಯವಾದ ವಿಷಯಗಳನ್ನು ಇತರ ಸಹೋದರರಿಗೆ ತಿಳಿಸತಕ್ಕದ್ದು ತಮ್ಮ ...ರ್ತವ್ಯವೆಂದು ಅರಿತಿರಬೇಕು (3) ಹೊಸ ಸಂಗತಿಗಳನ್ನು ಉಪನ್ಯಾಸಗಳ ...ಮತ್ತು ವರ್ತಮಾನಪತ್ರಿಕೆಗಳ ಮೂಲಕ ತಿಳಿದುಕೊಳ್ಳಬೇಕೆಂಬ ಕುತೂಹಲವು ...ಶೇಷವಾಗಿ ನಮ್ಮ ಜನರಲ್ಲಿ ಉಂಟಾಗಬೇಕು (4) ನಮ್ಮ ದೇಶದ ದೊಡ್ಡ ಮನುಷ್ಯರನೇಕರು ಪಾಶ್ಚಿಮಾತ್ಯ ದೇಶಗಳಲ್ಲಿ ಆರು ತಿಂಗಳು ಮಟ್ಟಿಗಾದರೂ ...ಸಂಚಾರಮಾಡಬೇಕು

ಕೆ ಎಚ್ ರಾಮಯ್ಯ

ಖಾತ್ರಿದಾರರಿಗೆ ನೋಟೀಸ್

ಖಾತ್ರಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗುವುದಿಲ್ಲ ಈ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಕರಸ್ಪಾಂಡೆನ್ಸ್.

ಒಂದು ಪತ್ರಿಕೆಯ ಮೇಲೆ ಆಕ್ಷೇಪಣೆ.

ಅಯ್ಯಾ,

ಕಳೆದ ಮಾರ್ಚಿ ತಾ 5 ರಲ್ಲು ಎರಡು ರೂಪಾಯಿಗಳನ್ನು ಚಂದಾ ...ಬಾಬಲಿಗಾಗಿ "ಸರ್ವಜನಹಿತೋಪಕಾರಣೀ" ಯ ಪ್ರೊಪ್ರೈಟರವರಿಗೆ ಕಳುಹಿಸಿದ್ದ ...ಬಿ ಅನುವಾರ ಪತ್ರಿಕೆಯನ್ನು ಪ್ರಕಟಿಸುತ್ತ, ಕೂಡ್ಲೆ ಕಳುಹಿಸುತ್ತೇವೆ ವಗೈರೆ ...ಯು ಬರೆದರು 2 3 ತಿಂಗಳು ನೋಡಿ ಮೊಬಲಗನ್ನು ವಾಪಸು ಮಾಡಲಿಕ್ಕೆ ...ಸ್ಟರ್ ಎಂತ ರಿಜಿಸ್ಟರು ನೋಟೀಸ್ ಕೊಟ್ಟೆನು 4 5 ತಿಂಗಳಾದಾಗ್ಯೂ ಜವಾ ...ಬು ಇಲ್ಲ ಹೀಗೆ ಮೋಸಮಾಡಿದರೆ ವೃತ್ತ ಪತ್ರಿಕೆಗಳಿಗೆ ಚಂದಾದಾರರಾಗುವ ...ಬಗ್ಗೆ ಸದರಿ ಪತ್ರಿಕೆಯು ಪ್ರಕಟವಾಗುವದನ್ನಾಗಲಿ, ಅಥವ ಮೊಲ್ಕಂಡ ...ಮೊಬಲಗನ್ನು ವಾಪಸುಮಾಡುವ ತೆರವನ್ನಾಗಲಿ ತಾವು ಇಲ್ಲವೇ ತಮ್ಮ ವಾಚ ...ಕರು ತಿಳಿಸಬೇಕಾಗಿ ಬೇಡುತ್ತೇನೆ ಇವರಿಂದ ಮೋಸ ಹೋಗಲಿಲ್ಲವೇ?

ಚಿಕ್ಕಡಿಗನಹಳ್ಳಿ, ಹುಣಸೂರು ಬಿ ನೀಲಕಂಠರಾವ್ ಸಾಲಂಕೆ

[ನಮ್ಮ ಖಾತ್ರಿದಾರರು ಹೇಳುವ ಪತ್ರಿಕೆಯು ನಮಗೆ ತಿಳಿದಮಟ್ಟಿಗೆ ಪ್ರಕಟವಾಗುತ್ತಾ ಇಲ್ಲ ಎಡಿ]

ಪರಸ್ಪರ ವಿರೋಧಕ್ಕಿಂತಲೂ ಪರಸ್ಪರ ಸಹಾಯವೇ ಕ್ಷೇಮ

ಅಯ್ಯಾ,

ತಿಪ್ಟೂರು ತಾಲ್ಲೂಕು ನಾಗಸಗೆರೆಯಲ್ಲಿ 10 ಅಂ ಮನೆಗಳಿವೆ ಈಗ್ಗೆ 10-12 ವರುಷಗಳಿಂದ ಪಾರ್ಟಿಗಳನ್ನು ಮಾಡಿಕೊಂಡು ವ್ಯಾಜ್ಯವ್ಯವಹಾರಗಳಿಗಾಗಿ 10 12 ಸಾವಿರ ರೂಪಾಯಿಗಳನ್ನು ವ್ಯರ್ಥವಾಗಿ ಹಾಳುಮಾಡಿರುವದೂ, ...ನ್ನೂ ಮಾಡುತ್ತಿರುವದೂ ತಿಳಿದಿದೆ ಈಗ ಎರಡು ವರುಷದಿಂದ ಸಮಾಧಾನ ಸ್ಥಿತಿಯಲ್ಲಿದ್ದು, ಕೆಲವು ಮಹನೀಯರು ಗ್ರಾಮದಲ್ಲಿ ಐಕಮತ್ಯವನ್ನು ನೆಲೆಗೊ ...ಳಿಸಬೇಕೆಂಬಷ್ಟರಲ್ಲಿಯೇ ಗೋಮುಖ ವ್ಯಾಘ್ರರಂಥಾವರಿಂದ ಪರಸ್ಪರ ದ್ವೇಷಾ ...ಗ್ನಿಯು ಹುಟ್ಟಿ ತಮ್ಮ ತನು ಮನ ಧನಗಳನ್ನು ಪರರ ಶ್ರೇಯೋಭಿವೃದ್ಧಿಗೆ ...ವಿನಿಯೋಗಿಸುವುದಕ್ಕೆ ಬದಲಾಗಿ ಒಬ್ಬರನ್ನೊಬ್ಬರು ದುಃಖಕ್ಕೂ ನಷ್ಟಕ್ಕೂ ಗುರಿ ...ಮಾಡುವುದರಲ್ಲಿ ವ್ಯಯಮಾಡುವದನ್ನು ನೋಡಿದರೆ ಈ ನವನಾಗರಿಕ ಕಾಲದಲ್ಲಿ ...ಬಹಳ ಹೇಯವಾಗಿದೆ ಈ ಗ್ರಾಮದಲ್ಲಿರತಕ್ಕ 30 ಮನೆಗಳೂ ಒಂದೇ ವಿಧವಾದ ...ಒಕ್ಕಲಿಗ ಜನಾಂಗದವರಾಗಿದ್ದಾಗ್ಯೂ ಐಕಮತ್ಯವಿಲ್ಲದಿರುವದು ನಿಂದಾಸ್ಪದವಾ ...ದ್ದೆಂದು ಹೇಳಬೇಕಾಗಿಲ್ಲ ನಮ್ಮ ದಯಾಳುಗಳಾದ ಶ್ರೀಮನ್ ಮಹಾರಾಜಾ ...ಸರ್ಕಾರದವರು ಸಂಸ್ಥಾನದ ಪುರೋಭಿವೃದ್ಧಿಗಾಗಿ ಗ್ರಾಮಪಂಚಾಯಿತಿ, ಬಲಾ ...ತ್ಕಾರ ವಿದ್ಯಾಭ್ಯಾಸ ಮೊದಲಾದ ಅನೇಕ ಏರ್ಪಾಡುಗಳನ್ನು ಮಾಡುತ್ತಿರುವ ಈ ...ಸುಯೋಗದ ಕಾಲದಲ್ಲಿಯೂ ಹೀಗಿರುವದನ್ನು ನೋಡಿ ವಿಷಾದಿಸುತ್ತೇನೆ ...ಈ ಗ್ರಾಮದವರು ಶೇಕಡ 99 ಜನರಂತೆ ವಿದ್ಯಾಹೀನರಾಗಿರುವದೇ ಹೀಗಿರುವ ...ದಕ್ಕೆ ಕಾರಣವೆಂದು ಹೇಳಲು ಯಾವ ಸಂಶಯವೂ ಇಲ್ಲ ನಮ್ಮ ದಯಾಳು ...ಸರ್ಕಾರದವರು ಒಂದು ಸ್ಕೂಲನ್ನು ಈ ಗ್ರಾಮಕ್ಕೆ ದಯಪಾಲಿಸಿ, ವಿದ್ಯಾಹೀನ ...ರಾದವರ ಮಕ್ಕಳನ್ನಾದರೂ ವಿದ್ಯಾವಂತರನ್ನಾಗಿ ಮಾಡುತ್ತಾರೆಂದು ನಂಬಿದ್ದೇನೆ ...ಈ ವಿಷಯದಲ್ಲಿ ವಿದ್ಯಾಭ್ಯಾಸದ ಡೆಪ್ಯುಟಿ ಇನ್‌ಸ್ಪೆಕ್ಟರಿಗೆ ಹುಡುಗರ ಸಂಖ್ಯೆಯಿಂದ ...ಕೂಡಿದ ಅರ್ಜಿ ಸಹಾ ಗ್ರಾಮಸ್ಥರಿಂದ ಕೊಟ್ಟಿದೆ ಗ್ರಾಮಸ್ಥರು ತಮ್ಮ ಗ್ರಾ ...ಮದ ದುಸ್ಥಿತಿಯನ್ನು ಯೋಚಿಸದೆ ಈ ರೀತಿ ಧನಮಾನಹಾನಿ ಮಾಡಿಕೊಳ್ಳುವದ ...ರಿಂದ ತಮ್ಮಗಳಿಗೆ ಏನು ಕೀರ್ತಿ ಬಂದೀತು? ವ್ಯಾಜ್ಯ ಹೋರಾಟಗಳಿಗೆ ದುರ್ವ್ಯ ...ಯ ಮಾಡುವದು ಯಾವ ನ್ಯಾಯ? ತಮ್ಮ ತನುಮನಧನಗಳನ್ನು ವಿದ್ಯಾಭಿವೃದ್ಧಿ ಮೊದಲಾದ ಧರ್ಮಕಾರ್ಯಗಳಿಗೆ ವಿನಿಯೋಗಿಸಿ ಕೀರ್ತಿಹೊಂದುತ್ತಾರೆಂದು ನಂಬಿದೇನೆ

ಗ್ರಾಮವಾಸಿ

[ಮುಖಂಡರಾದವರು ಅಲ್ಪವಿಷಯಗಳಿಗೆಲ್ಲಾ ಪರಸ್ಪರ ವಿರೋಧವನ್ನು ಬೆಳಸಿ ಕಕ್ಷಿಗಳನ್ನು ಕಟ್ಟಿಕೊಂಡಿರುವುದೇ ಅನೇಕಾನೇಕ ಗ್ರಾಮಗಳು ಅಭಿವೃದ್ಧಿಗೆ ಬಾರದೆ ಇರುವುದಕ್ಕೆ ಕಾರಣವಾಗಿದೆ, ವಿದ್ಯೆಯ ಪ್ರಕಾಶವು ಹರಡಿದ ಹೊರತು ಕ್ಷೇಮಾಭಿವೃದ್ಧಿಗಳು ನೆಲೆಗೊಳ್ಳುವುದಿಲ್ಲ ಅಧಿಕಾರಿಗಳು ಗ್ರಾಮಾಂತರ ಸರ್ಕೀಟು ಹೋದ ಸಂದರ್ಭದಲ್ಲಿ ಪ್ರಜೆಗಳ ಮೇಲೆ ಪ್ರೀತಿಯನ್ನಿಟ್ಟು ಕಕ್ಷಿಗಳ ಮುಖಂಡರನ್ನು ಕರೆಸಿ ವಿವೇಕಹೇಳುತ್ತಾ ಬಂದರೆ ಎಷ್ಟೋ ಮೇಲಾದೀತೆಂದು ನಂಬಬಹುದು —ಎಡಿ]

ತಾಲ್ಲೋಕು ವರ್ತಮಾನಗಳು.

ಅರಸಿಕೆರೆ —ಕಳೆದ ಬುಧವಾರ ರಾತ್ರಿ ಅರಸಿಕೆರೆ ಟವನ್ನಲ್ಲಿ ನಾಲ್ಕಾರು ಮನೆಗಳಿಗೆ ಕಳ್ಳರು ನುಗ್ಗಿ ಸಿಕ್ಕಿದ್ದನ್ನೆಲ್ಲಾ ಹೊತ್ತುಕೊಂಡು ಹೋಗುವಾಗ ಎದುರುಗಡೆ ಸಿಕ್ಕಿದ ಮೂರು ಜನ ಮಾಲೀಕರಿಗೆ ಜಖಂ ಮಾಡಿ ಪರಾರಿಯಾದರು ಏಟುತಿಂದವರ ಪೈಕಿ ಒಬ್ಬ ಮುದುಕಿಗೆ ಕಳ್ಳರ ಗುರುತು ಇದ್ದದ್ದರಿಂದ ಪೋಲೀಸಿನವರು ಮರುದಿನ ಬೆಳಿಗ್ಗೆ ಕಳ್ಳಕೊರಮರ ಪಾಳ್ಯಕ್ಕೆ ಹೋಗಿ ಆಸಾಮಿಗಳನ್ನು ದಸ್ತಗಿರಿಮಾಡಿ ತಂದು, ಲಾಕಪ್ಪಿನಲ್ಲಿ ಇಟ್ಟಿದಾರೆ ಬಹುಕಾಲದಿಂದಲೂ ಟವನ್ನೊಳಗೆ ಇಂಥಾ ಕಳವು ನಡೆಯಲಿಲ್ಲವೆಂದು ಹೇಳುವರು ವರ್ಗಹೊಟ್ಟ ಇನ್‌ಸ್ಪೆಕ್ಟರಾದ ಸುಬ್ರಾಯರ ಕಾಲದಲ್ಲಿ ಕೊರಮರ ಪುಂಡನ್ನು ಅಡಗಿಸಿದ್ದರು ಊರೊಳಗೆ ನುಗ್ಗಲು ಅವರಿಗೆ ಧೈರ್ಯವಿರಲಿಲ್ಲ ಈಗಲಾದರೋ ರಾತ್ರಿಯೆಲ್ಲಾ ಸ್ಟೇಷನ್ ಮುಂದೆ ಕೂಗಿಕೊಂಡರೂ ಕೇಳುವವರೇ ಇಲ್ಲವಾಗಿದೆ

ಕಡೂರು —ಈ ತಾಲ್ಲೂಕಿಗೆಲ್ಲಾ ಸಪ್ಲೈ ಆಗತಕ್ಕ ಮದಗದ ಕೆರೆಯಲ್ಲಿನ ನೀರೆಲ್ಲಾ ಇನ್ನು ಒಂದು ತಿಂಗಳಿನ ಒಳಗಾಗಿ ಖಾಲೀ ಮಾಡಿ, ನಾಲಾ ನೌಕರರೇ ಕ್ಷಾಮ ತರುವವರಾಗಿದಾರೆ ಮಳೆ ಇಲ್ಲದೆ ಪೈರೆಲ್ಲಾ ಒಣಗಿಹೋಗುತ್ತಾ ಇದೆ ಇಂಥಾದ್ದರಲ್ಲಿ ಮುಂದೆ ಬರುತ್ತಾ ಇರುವ ಬೇಸಗೆಯಲ್ಲಿ ಜನಗಳಿಗೂ, ಪಕ್ಷಿ ಪಕ್ಷಿಗಳಿಗೂ ಕುಡಿಯುಲಿಕ್ಕೆ ನೀರಿಲ್ಲದಂತಾಗುವುದಕ್ಕೆ ತುಂಬಾ ವ್ಯಸನಪಡಬೇಕಾಗಿದೆ ಮೇಲ್ಪಟ್ಟ ಆಫೀಸರುಗಳು ಪ್ರಜೆಗಳ ಮೇಲೆ ಕನಿಕರವಿಟ್ಟು, ಕೆರೆಯ ನೀರನ್ನು ದುರುಪಯೋಗಪಡಿಸದಂತೆ ತಪ್ಪಿಸುವರೆಂದು ನಂಬಿರುತ್ತೇನೆ —ಕೆಲವು ಕಡೆ ಇಲಿಗಳು ಸಾಯುತ್ತಾ ಇವೆ ಸ್ಯಾನಿಟರಿ ಇಲಾಖೆಯವರು ದಯಮಾಡಿ ಇಲ್ಲಿಯ ಜನಗಳಿಗೆ ಇನಾಕ್ಯುಲೇಷನ್ ಮಾಡುವುದಕ್ಕೆ ಬುದ್ಧಿವಂತರಾದ ಡಾಕ್ಟರನ್ನು ಕಳುಹಿಸಿ ನಮ್ಮಗಳ ಕಷ್ಟನಿವಾರಣೆಮಾಡಿಯಾರೆಂದು ನಂಬಿರುತ್ತೇನೆ

ಕಾವೇರಿ ರಿಜರ್ವಾಯರ್ —ಮಾಗಿಕಾಲವಾದ್ದರಿಂದ ಹವಾ ಸುಮಾರಾಗಿದೆ ...ದುತ್ತದ ಧಾರಣೆವಾಸಿ ಮತ್ತ ಒಂದೇ ಸಮನಾಗಿದೆ —ಕಳೆದ 22 ನೇ ತಾ ಶನಿವಾರ ಸಾಯಂಕಾಲ ಇಲ್ಲಿಯ ಸೌತ್ ಬ್ಯಾಂಕ್ ಮರಾಮತ್ ಶೈಲಸಲ್ಲಿ ಒಬ್ಬ ಮರಾಮತಿಯವನು ತನ್ನ ಮನೆಯಲ್ಲಿ ನೇಣುಹಾಕಿಕೊಂಡು ಮೃತನಾದನು ಕಾರಣ ಗೊತ್ತಿಲ್ಲ —ಇಲ್ಲಿಗೆ ಟಪ್ಪಾಲು ಪ್ರತಿ ದಿನವೂ 4 ಗಂಟೆಗೆ ಬರುತ್ತಿದೆ ಇದರಿಂದ ಜನಗಳಿಗೂ, ಇರತಕ್ಕ ಒಬ್ಬನೇ ಪೋಸ್ಟ್ ಮೆನ್‌ಗೂ ತುಂಬಾ ತೊಂದರೆಯಾಗಿದೆ ಇದನ್ನು ನೋಡಿ ಇಲ್ಲಿಯ ಮ|| ಬಿ ಗಿರಿಯಪ್ಪನೆಂಬುವರು ಜಟ್ಕಾ ಇಡಲು ಅರ್ಜಿ ಬರೆದುಕೊಂಡಿದ್ದರು ಇನ್ನೂ ಇತ್ಯರ್ಥವಾಗಲಿಲ್ಲ ಜಾಗ್ರತೆಯಲ್ಲಿ ಪೋಸ್ಟ್ ಇಲಾಖೆಯವರು ಮಂಜೂರುಮಾಡಿ ಕೊಟ್ಟಲ್ಲಿ ಸರ್ವರಿಗೂ ತುಂಬಾ ಅನುಕೂಲವಾದೀತು —ಹೊಳೆಯಲ್ಲಿ ನೀರು ಕಡಮೆಯಾಗಿರುವದರಿಂದ ಕಾಮಗಾರಿಗಳು ತುಂಬಾ ಚುರುಕಾಗಿ ನಡೆಯುತ್ತಾ ಇವೆ

ಮೇಲುಕೋಟೆ —ಕಳೆದ 38 ವರ್ಷಗಳಿಂದ ಪೋಸ್ಟ್ ಮಾಸ್ಟರಾಗಿದ್ದ ಮ|| ನರಸಿಂಗರಾಯರು ನವಂಬರ್ ತಾ 24 ರಿಂದ ಸರ್ಕಾರಿ ಕೆಲಸದಿಂದ ವಿಶ್ರಾಂತಿ ಹೊಂದಿದ ಪ್ರಯುಕ್ತ ಇಲ್ಲಿನ ಪ್ರಜೆಗಳು ಸಂಜೀವ್ ಮಂಟಪದಲ್ಲಿ 25 ನೇ ತಾ ಮಂಗಳವಾರ ಅವರಿಗೆ ಎಂಟರ್‌ಟೇನ್‌ಮೆಂಟ್ ಕೊಡುವ ಉದ್ದಿಶ್ಯ ಸಭೆಸೇರಿದ್ದರು ಆ ಕಾಲದಲ್ಲಿ ಸರ್ಕಾರಿ ನೌಕರರೂ, ಊರಿನ ಮಹನೀಯರೂ ಸೇರಿದ್ದರು ಇಲ್ಲಿನ ಸಂಗೀತ ವಿದ್ವಾನ್ ಪಿ ರಂಗಣ್ಣನವರು, ಬಹಳ ಸ್ವಾರಸ್ಯವಾಗಿ ಸಂಗೀತದಿಂದ ಸಭಿಕರ ಮನಸ್ಸಂತೋಷಪಡಿಸಿದರು ಇಂಥಾ ಸಂತೋಷ ಕೂಟಗಳಿಗೆ ಜನಕರಾದ ಮ ಎಂ ಜಿ ಶಾಮಯ್ಯಂಗಾರ್ರು, ಮ|| ರಾಯರ ಗುಣಕಥನವನ್ನು ಹೃದಯಂಗಮವಾಗಿ ವಿವರಿಸಿದರು ಅಲ್ಲದೆ ಮ|| ಸಿ ನರಸಿಂಹಾಚಾರ್ರು ಪೋಸ್ಟ್ ಮಾಸ್ಟರ ಸೌಲಭ್ಯವನ್ನೂ, ಎಲ್ಲರಲ್ಲೂ ಅವರಿಗೆ ಒಂದೇ ಸಮನಾಗಿದ್ದ ವಾತ್ಸಲ್ಯವನ್ನೂ, ಅವರ ಕಾರ್ಯದಕ್ಷತೆಯನ್ನೂ ವಿವರಿಸಿದ್ದಲ್ಲದೆ ಇವರ ನಿಷ್ಪಕ್ಷಪಾತವಾದ ಕಾರ್ಯಗಳನ್ನು ನಮ್ಮ ಸರ್ಕಾರದವರು ಮೆಚ್ಚಿ ಇಲ್ಲಿನ ಧರ್ಮದರ್ಶಿಯಾಗಿ ನೇಮಿಸಿರುವದರಿಂದ ಅವನ್ನು ಸರಿಯಾಗಿ ನೆರವೇರಿಸಿ ದೇವಾಲಯದ ಕಾರ್ಯಗಳನ್ನು ಕ್ರಮಪಡಿಸಿ, ಶ್ರೇಯೋಭಾಗಿಗಳಾಗುತ್ತಾರೆಂದು ವಗೈರೆ ಉಪನ್ಯಸಿಸಿದರು ಇವರ ಸಹಜವಾದ ಗುಣಗಳೇ ಇಲ್ಲಿನ ಪ್ರಜೆಗಳನ್ನು ಪ್ರೇರೇಪಿಸಿ ಈ ರೀತಿಯಾದ ಸಂತೋಷಕ್ಕೆ ಕಾರಣವನ್ನುಂಟುಮಾಡಿದೆ ಕಡೆಯಲ್ಲಿ ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳು ವಿನಿಯೋಗಿಸಲ್ಪಟ್ಟು ಸಭೆ ಮುಕ್ತಾಯವಾಯಿತು

ಮಂಜರಾಬಾದು ತಾ| ಬೆಳಗೋಡು —ಕಳೆದ ತಾ 21 ನೇ ಸೋಮವಾರ ಬೆಳಿಗ್ಗೆ ಈ ಗ್ರಾಮದಲ್ಲಿ ಗ್ರಾಮಸ್ಥರಿಂದ ಹೊಸದಾಗಿ ಕಟ್ಟಲ್ಪಟ್ಟ ಸ್ಕೂಲು ಕಟ್ಟಡದ ಪ್ರಾರಂಭೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ನೂತನ ಸ್ಕೂಲು ಕಟ್ಟಡವು ಸಾಲಿನ ಕಿರಣಗಳಿಂದಲೂ, ಪಲ್ಲವ ತೋರಣಗಳಿಂದಲೂ, ಧ್ವಜಗಳಿಂದ ಯುಕ್ತವಾದ ಚಪ್ಪರದಿಂದಲೂ ಅಂದವಾಗಿ ಅಲಂಕರಿಸಲ್ಪಟ್ಟಿತ್ತು ಗ್ರಾಮದಲ್ಲಿರುವ ಸರ್ಕಾರಿ ನೌಕರರೂ, ಶ್ಯಾ ಮೈಲಾರಯ್ಯನವರು, ಬಸವಲಿಂಗಪ್ಪಶೆಟ್ಟರು, ಕೋರಿಬಸಪ್ಪಶೆಟ್ಟರು, ಅಪ್ಪಣ್ಣಶೆಟ್ಟರು, ಮುದ್ದಪ್ಪಶೆಟ್ಟರು ಮೊದಲಾದ ಪುರಪ್ರಮುಖರೂ ಹಳೇ ಸ್ಕೂಲು ಕಟ್ಟಡದಲ್ಲಿ ಸೇರಿ ಸ್ಕೂಲ್ ಬಾಲಕರ ಕೂಡ ಬಾಜಾಬಜಂತ್ರಿಯೊಂದಿಗೆ ಹೊರಟು ಹೊಸ ಸ್ಕೂಲ್ ಕಟ್ಟಡವನ್ನು ಪ್ರವೇಶಿಸಿದರು ಶ್ರೀಮದಿಂಡಿಯಾ ಚಕ್ರವರ್ತಿಯವರ ಮತ್ತೂ ಶ್ರೀಮನ್ ಮಹಾರಾಜರವರ ಛಾಯಾಚಿತ್ರಗಳನ್ನು ಉನ್ನತಾಸನಗಳಲ್ಲಿ ಉಚಿತವಾದ ಮರ್ಯಾದೆಗಳೊಂದಿಗೆ ನೆಲೆಗೊಳಿಸಿ, ಬಾಲಕ ಬಾಲಕಿಯರಿಂದ ಶ್ರೀಚಕ್ರವರ್ತಿಯವರ ಮತ್ತೂ ಮಹಾರಾಜರವರ ಶ್ರೇಯಃಪ್ರಾರ್ಥನೆಗಳು ಗಾಯನಮಾಡಲ್ಪಟ್ಟವು ಸ್ಕೂಲ್ ಮಾಸ್ಟರ್ ಕೇಶವಯ್ಯನವರು ವಿದ್ಯೆಯೇ ಧನ ಎಂಬ ವಿಷಯದಲ್ಲಿ ಉಪನ್ಯಾಸಮಾಡಿದರು ಶೇಕದಾರ್ ರಂಗಣ್ಣನವರೂ, ವಸೇದಾರ್ ಆಚಪ್ಪಶೆಟ್ಟರೂ ಸ್ಕೂಲಿನ ಪುರೋಭಿವೃದ್ಧಿ ವಿಷಯದಲ್ಲಿ ಉಪನ್ಯಾಸಮಾಡಿದ್ದನ್ನು ಸಭಿಕರೆಲ್ಲರೂ ಉದರದಿಂದ ಕೇಳಿ ಅನುಮೋದಿಸಿದರು ಸಭಿಕರಿಗೆ ಅಲ್ಪಾಹಾರ, ಗಂಧ ಪುಷ್ಪ ತಾಂಬೂಲಾದಿಗಳು ವಿನಿಯೋಗವಾದ ನಂತರ ಜಯಘೋಷದಿಂದ ಸಭೆಯು ಮುಕ್ತಾಯವಾಯ್ತು

ತುರುವೇಕೆರೆ ತಾ|| ದೊಡ್ಡಸೆಟ್ಟಿಗೆರೆ —ಈ ಊರಿಗೆ ದಕ್ಷಿಣದಲ್ಲಿರುವ ಸರ್ಕಾರಿ ಅಮೃತಮಹಲ್ ಕಾವಲಿನಲ್ಲಿ ಮಾದೇಶ್ವರ ಎಂಬ ದೇವಸ್ಥಾನವಿದೆ ಈ ದೇವಸ್ಥಾನ ಉತ್ಪತ್ತಿಯಾಗಿ ಸುಮಾರು ಸಾವಿರ ವರ್ಷವಿರಬಹುದೆಂದು ಪೂರ್ವಿಕರು ಹೇಳುತ್ತಿದ್ದರು ಇಂಥಾ ಪುರಾತನ ದೇವಸ್ಥಾನಕ್ಕೆ ಇದುವರೆಗೂ ಜಾತ್ರೆ ಇರಲಿಲ್ಲ ಕಳೆದ ವರ್ಷ ಈ ಊರಿನಲ್ಲಿ ಸ್ಕೂಲು ಮಾಸ್ಟರಾಗಿ ಹೆಸರುಪಡೆದಿದ್ದ ಸಾಕೇನಹಳ್ಳಿ ನಂಜುಂಡಯ್ಯನವರು ಬಹಳ ಧನವ್ಯಯದಿಂದ ಇಲ್ಲಿ ಒಂದು ಜಾತ್ರೆ ನಡಿಸಿ ಅದರ ಮೇಲೆ ಈ ದೇವಸ್ಥಾನಕ್ಕೆ ಹಕ್ಕುದಾರರೆಂದು ತಿಳಿಸಿದರೆಂದು ಸುತ್ತುಮುತ್ತಿನ ಗ್ರಾಮಸ್ಥರು ಸೇರಿ ಸಬ್ ತಾಲ್ಲೂಕಿನಲ್ಲಿ ಅರ್ಜಿ ಬರೆದು ಅಹವಾಲ್ ಹೇಳಿಕೊಂಡದ್ದರ ಮೇಲೆ ಸರ್ಕಾರದವರು ಗ್ರಾಮಸ್ಥರದಾಗಿ ಇರತಕ್ಕದೆಂದು ಹುಕುಂ ದಯಪಾಲಿಸಿದರು ಆ ಗ್ರಾಮಸ್ಥರು ಯಾರೆಂದರೆ ದೊಡ್ಡಸೆಟ್ಟಿಗೆರೆ ಗ್ರಾಮದ ಪಟೇಲ್ ಮುದ್ದೆಗೌಡ, ಮಲಿಯಪ್ಪಗೌಡ, ಬೀಚನಹಳ್ಳಿ ರಂಗೆಗೌಡ, ಹುಚ್ಚೆಗೌಡ, ಮೂಡಲಗಿರಿ ಗೌಡರ ನಂಜೆಗೌಡ, ಕಲಕೆರೆ ರಂಗೆಗೌಡ, ವೈಸೂರು ದಾಸಪ್ಪಗೌಡ, ಬೇದ್ರಹಳ್ಳಿ ಪಟೇಲ್ ರಂಗೆಗೌಡ, ಆನಹಗಿನ ಪಟೇಲ್ ಕೆಂಪೆಗೌಡ, ಇವರೂ ಫಿರ್ಯಾದುದಾರರಾದ ಸಾಕೇನಹಳ್ಳಿ ನಂಜುಂಡಯ್ಯನವರೂ ಸೇರಿ ಬಹಳ ಮುತುವರ್ಜಿಯಿಂದಲೂ, ಧನವ್ಯಯದಿಂದಲೂ ಕಳೆದ ತಿಂಗಳು 24 ನೇ ಸೋಮವಾರ ಜಾತ್ರೆ ನಡಿಸಿದರು ಈ ಜಾತ್ರೆಯಲ್ಲಿ ಸುಮಾರು 20,000 ಪ್ರಜೆಗಳು ಕೂಡಿದ್ದರು 10,000 ದನಗಳು ಬಂದಿದ್ದವು ಸಾವಿರಾರು ರೂಪಾಯಿನ ವ್ಯಾಪಾರ ನಡೆಯಿತು. ಮೂರು ದಿವಸ ಜಾತ್ರೆ ನಡೆದು ಪ್ರಜೆಗಳೆಲ್ಲಾ ತುಂಬಾ ಸುಖವನ್ನೂ ಆನಂದವನ್ನೂ ಪಟ್ಟರು ದೇವಸ್ಥಾನವನ್ನು ಕಟ್ಟಲು ಪ್ರಜೆಗಳು ಅನುಕೂಲಮಾಡಿದಾರೆಂದು ಕೇಳುತ್ತೇನೆ

ಚಿಂತಾಮಣಿ —ಈಚೆಗೆ ಮಳೆ ಇಲ್ಲ ಬೆಳೆಗಳು ಸಾಧಾರಣವಾಗಿವೆ, ಧಾರಣೆವಾಸಿಗಳು ಪ್ರತಿ ಸಂತೆಗೂ ಹೆಚ್ಚುಕಡಮೆಯಾಗುತ್ತಾ ಇವೆ —ರಾ|| ಕಾರುಪಾಕುಲ ಲಕ್ಷ್ಮೀನಾರಾಯಣಯ್ಯನವರ ಮನೆಗೆ ಸುಮಾರು 3 4 ತಿಂಗಳ ಕೆಳಗೆ ಕಳ್ಳರು ಇಳಿಬಿದ್ದು ಮೂರುಸಾವಿರ ರೂಪಾಯಿ ಬೆಲೆಬರೆ ಒಡವೆಗಳನ್ನು ಅನಾಯಾಸವಾಗಿ ತೆಗೆದುಕೊಂಡುಹೋಗಿದ್ದರು. ಈಚೆಗೆ ಇವುಗಳು ಪತ್ತೆ ಆಗಿ ಸುಮಾರು ಮುನ್ನೂರು ರೂಪಾಯಿನ ಮಾಲುಗಳು ಮಾತ್ರ ಖೈದಿಗಳ ಮುಖಾಂತರ ದೊರಕಿ ತಾಲ್ಲೂಕು ಮ್ಯಾಜಿಸ್ಟ್ರೇಟರಲ್ಲಿ ಕೇಸು ನಡೆದು 5 6 ಜನರುಗಳು ಆದನಂತರ ಕೆಲವು ಖೈದಿಗಳಿಗೆ ಖುಲಾಸಾಯಿತು ಪುನಹ ಕಳ್ಳರು ಸದರಿಯವರ ಮನೆಗೆ 10-15 ದಿನಗಳ ಕೆಳಗೆ ಒಂದು ದಿನ ರಾತ್ರಿ ಮಾಳಿಗೆ ಮೇಲೆ ಕನ್ನಾ ಹಾಕುವಷ್ಟರಲ್ಲೇ ಮನೆ ಜನಗಳು ಗಾಬರಿಮಾಡಿದ್ದರಿಂದ ಕಳ್ಳರು ಓಡಿಹೋದರು ಇನ್ನೂ ಅಲ್ಲಲ್ಲಿ ಕಳ್ಳತನಗಳಾದಾಗ್ಯೂ ಲೆಕ್ಕಕ್ಕೆ ಬರಲಿಲ್ಲ ಜನಗಳು ತುಂಬಾ ಚಿಂತೆಪಡುತ್ತಿದಾರೆ —ನಮ್ಮ ಗೌರ್ನಮೆಂಟಿನವರು ಜನಗಳ ಸುಖಕ್ಕಾಗಿ ಭಾರಿ ಲಾಗವಿಟ್ಟು ಒಂದು ದೊಡ್ಡ ಕೆರೆ ಮತ್ತು ಅದರ ನೀರು ಟವನ್ ಜನಗಳಿಗೆ ಸಪ್ಲೈ ಆಗುವಂತೆ ಕೊಳಾಯಿಗಳನ್ನು ಏರ್ಪಡಿಸಿರುತ್ತಾರೆ ಈಚೆಗೆ ನೀರಿನ ಅವಸ್ಥೆಗಳಿಲ್ಲದಂತೆ ಸಹಾಯಮಾಡಿದ್ದಕ್ಕಾಗಿ ತುಂಬಾ ಕೃತಜ್ಞತೆಯುಳ್ಳವರಾಗಿದಾರೆ ಈಗ ನೀರು ಸ್ವಲ್ಪ ಮಡ್ಡಿಯಾಗಿ ಬರುತ್ತಿರುವದರಿಂದ ಜನಗಳಿಗೆ ಅನಾರೋಗ್ಯವನ್ನುಂಟುಮಾಡುತ್ತದೆ ಮ್ಯುನಿಸಿಪಾಲಿಟಿಯಲ್ಲಿ ಬಹಳ ಹಣ ಡಿಪಾಜಿಟ್ಟು ಇರುವುದೂ ಅಲ್ಲದೆ ಪ್ರತಿ ವರ್ಷವೂ ಹುಟ್ಟುವಳಿ ಹೆಚ್ಚುತ್ತಾ ಇದೆ ನಮ್ಮ ಸರ್ಕಾರದವರು ಮ್ಯುನಿಸಿಪಾಲಿಟಿಯಿಂದ ನೀರು ಶೋಧಿಸುವ ಯಂತ್ರವನ್ನು ತರಿಸಿ ಇಡಿಸಬೇಕಾಗಿ ಕೋರಿಕೆ ಇರುತ್ತದೆ ಈ ರೀತಿ ಮಾಡುವುದರಿಂದ ಜನಗಳಿಗೆ ತುಂಬಾ ಉಪಕಾರವಾಗಿ ಬಹು ಜನಗಳನ್ನು ಕಾಪಾಡಿದಂತೆ ಆಗುತ್ತದೆ

ತಿಪ್ಟೂರು —ತಿಪ್ಟೂರು ಟವನ್ನಲ್ಲಿ ಸುಮಾರು ಇನ್ನೂರು ಮಹಮ್ಮದಿಯರ ಮನೆಗಳ ವರೆಗೆ ಇರುತ್ತವೆ ಇಲ್ಲಿನ ಮಹಮ್ಮದೀಯರು ಕೆಲವುಕಾಲದಿಂದ ಈ ಊರಲ್ಲಿ ಅಂಜುಮನ್ ಸ್ಥಾಪನೆ ಮಾಡಬೇಕೆಂದು ಆಲೋಚನೆಮಾಡುತ್ತಾ ಇದ್ದವರು ಕಳೆದ ತಾ 18 ರಲ್ಲಿ ಅಂಜುಮನೆ ಇಸಾದುಲ್ ಮುಸಲಮಾನ್ ಎಂಬ ಹೆಸರಿನಿಂದ ಸ್ಥಾಪನೆಮಾಡಿದರು ಇದಕ್ಕೆ ಮುತವಲ್ಲಿ ಅಬ್ದುಲ್ ಜಬ್ಬಾರ್ ಸಾಬರು ಪ್ರೆಸಿಡೆಂಟರಾಗಿಯೂ, ಸಾಹುಕಾರ್ ಮಹಮ್ಮದ್ ದಸ್ತಗಿರಿ ಸಾಬರೂ, ಕಂಟ್ರಾಕ್ಟರ್ ಹಜರತ್ ಬೇಗ್ ಸಾಬರೂ ಸೆಕ್ರೆಟರಿಗಳಾಗಿಯೂ, ಹತ್ತು ಜನಗಳು ಮೆಂಬರುಗಳಾಗಿಯೂ ನೇಮಕವಾಗಿರುತ್ತಾರೆ ಈ ಮತದ ಆಚಾರಗಳು ಕ್ರಮವಾಗಿ ನಡೆಸುವದೂ, ಮತದ ಅನಾದಾರಿಯಾಗಿರುವವರಿಗೆ ಸಹಾಯಮಾಡುವುದೂ, ಅನಾಥರಾದ ಮಕ್ಕಳಿಗೆ ವಿದ್ಯೆ ಕಲಿಸುವದಕ್ಕೆ ಸಹಾಯ ಮಾಡುವದೂ ಈ ಸಂಘದ ಮುಖ್ಯ ಉದ್ದೇಶವಾಗಿರುತ್ತೆ ಅಂಜುಮನ್ ಸ್ಥಾಪನೆಯಾದ ದಿವಸವೇ ಜಲ್ಸಾ ಎಂಬ ಸಭೆ ಸೇರಿ ಸದರಿ ಅಂಜುಮನ್‌ನಿಂದ ಮತಸ್ಥರಿಗೆ ಉಂಟಾಗುವ ಪ್ರಯೋಜನಗಳೆಲ್ಲಾ ಹಜರತ್ ಬೇಗ್ ಸಾಬರು ಹಿಂದುಸ್ಥಾನಿಯಲ್ಲಿ ಸಭಿಕರಿಗೆ ತಿಳಿಯಪಡಿಸಿದನಂತರ ವಿಧವಿಧವಾದ ಉಪನ್ಯಾಸಗಳು ಓದಲ್ಪಟ್ಟವು ಹಿಂದೂ ಮಹನೀಯರ ಪೈಕಿ ಸಾಹುಕಾರ್ ತಿಂಗ್ರಿ ನಂಜಪ್ಪನವರು, ಸಾಹುಕಾರ್ ಕೊಟ್ರೈರಪ್ಪನವರು, ಯಜಮಾನ್ ಬಸಪ್ಪನವರು, ವಗೈರೇರು ಆ ಸಭೆಗೆ ದಯಮಾಡಿಸಿದ್ದರು ಆ ಪೈಕಿ ಯಜಮಾನ್ ಬಸಪ್ಪನವರು ಈ ಸ್ಥಳದ ಹಿಂದೂ ಮಹಮದೀಯರಲ್ಲಿ ಇರತಕ್ಕ ಅನ್ಯೋನ್ಯ ಪ್ರೀತಿ ವಿಶ್ವಾಸಗಳನ್ನೂ, ಈ ಸಂಘದಿಂದ ಮಹಮ್ಮದಿಯರಿಗೆ ಉಂಟಾಗುವ ಪ್ರಯೋಜನಗಳನ್ನೂ ಕುರಿತು ಕನ್ನಡದಲ್ಲಿ ಉಪನ್ಯಾಸ ಮಾಡಿದರು ಅನಂತರ ಕಂಟ್ರಾಕ್ಟರ್ ಹಜರತ್ ಬೇಗ್ ಸಾಬರು ಸಭಿಕರ ಪ್ರೀತಿ ವಿಶ್ವಾಸಗಳನ್ನು ಹಿಂದುಸ್ಥಾನಿಯಲ್ಲಿ ಹೊಗಳಿದರು ಪೂಲ್ ಸಂದಲ್ ಹಂಚಿದ ಬಳಿಕ ಸಭೆಯು ಬರಖಾಸ್ತಾಯಿತು

ನಂಜನಗೂಡು —ಹವಾ ಅನುಕೂಲವಾಗಿದೆ ಧಾರಣೆವಾಸಿಗಳು ಭಡಾವಾಗಿವೆ ಕಳೆದ ತಾ 22 ನೇ ಶನಿವಾರ ಚಾಮುಂಡೇಶ್ವರಿ ಘಟ್ಟದಲ್ಲಿ ಛಾತ್ರಿಹವನ ಸಂತರ್ಪಣೆಯು ತ್ರಿಮತಸ್ಥರಿಗೂ ನಡೆದು ಸಾವಿರಾರು ಜನರು ಸುಭಿಕ್ಷಭೋಜನ ಮಾಡಿದರು ಅಮಲ್ದಾರ್ ಮ|| ಭೀಮರಾಯರು ಖುದ್ದು ನಿಂತು ಸಂತರ್ಪಣೆಯನ್ನು ವಿತರಣೆಯಾಗಿ ನಡಿಸಿದರು ಮ| ನಾರಣಪ್ಪನವರೂ, ಕೃಷ್ಣರಾಯರೂ, ಪಿ. ಹಿರಣ್ಣಯ್ಯನವರೂ, ವೆಂಕಟರಾಯರೂ ಸಹ ಬಹಳ ಮೆಹನತ್ತಿನಿಂದ ಸಂತರ್ಪಣೆಯನ್ನು ತೃಪ್ತಿಕರವಾಗಿ ನಡಿಸಿದರು —ತಾ 24 ನೇ ಸೋಮವಾರ ದೇವಸ್ಥಾನದಲ್ಲಿ ದೀಪೋತ್ಸವವು ವಿಜೃಂಭಣೆಯಿಂದ ನಡೆದು ನಮ್ಮ ಶ್ರೀಮನ್ ಮಹಾರಾಜರವರ ಶ್ರೇಯಃ ಪ್ರಾರ್ಥನೆಯನ್ನು ಮಾಡಿದರು —ತಾ 27 ನೇ ಗುರುವಾರ ರಾತ್ರಿ ಅಧ್ಧಿಕವೆಂಕಟರಾಮಯ್ಯನವರ ಮನೆಯಲ್ಲಿ ತುಂಬಿದ್ದ ತೋಳದ ಕಡ್ಡಿ ಮೆದೆಗೆ ಆಕಸ್ಮಾತ್ತು ಬೆಂಕಿ ಬಿದ್ದು ಮನೆ ಹತ್ತಿ ಉರಿದುಹೋಗಿ ಮಾಲೀಕರಿಗೆ ಸುಮಾರು 100 ರೂಪಾಯಿ ನಷ್ಟವಾಯಿತು ಒಕ್ಕಲಗೇರಿ ಜನಗಳು ಬಹಳ ಕಷ್ಟಪಟ್ಟು ಆರಿಸದಿದ್ದರೆ ಆ ಸಾಲು ಮನೆಗಳೆಲ್ಲಾ ಬೆಂದು ಜನಗಳಿಗೆ ಬಹಳ ಲುಕ್ಸಾನು ಆಗುತ್ತಿತ್ತು —ಅಂಗಡಿ ಬೀದಿಯಲ್ಲಿ ಕೆಲವು ವೈಶ್ಯವರ್ತಕರು ಮಿಶ್ರವಾದ ಎಣ್ಣೆ, ಕೆಟ್ಟ ತುಪ್ಪಗಳನ್ನು ಬಿಕರಿಮಾಡುತ್ತಿದ್ದು, ಇದನ್ನು ಉಪಯೋಗಿಸಿದ ಜನಗಳಿಗೆ ವಾಂತಿ ಜುಲಾಬ್ ಸಹ ಆದಷ್ಟರ ಮೇಲೆ ಅಜಮಾಯಿಸಿ ಬಗ್ಗೆ ಎಣ್ಣೆ, ತುಪ್ಪಗಳನ್ನು ಬೆಂಗಳೂರಿಗೆ ಕಳುಹಿಸಿದರು ಈಚೆಗೆ ಅದರ ಪ್ರೋಫೇತ್ತರವೇನಾಯಿತೋ ತಿಳಿಯಲಿಲ್ಲ ಇದಲ್ಲದೆ ಮೊದಲು ಮೋಸದ ವ್ಯಾಪಾರ ಮಾಡುತ್ತಿದ್ದ ವರ್ತಕರೇ ಬಹಳ ಸಸ್ಯಹರಂತೆ ನಟಿಸುತ್ತಾ ತಮ್ಮಲ್ಲಿ ತರತೀವಾರಿ ತುಪ್ಪವಿದೆ ಎಂದು ಪಟ್ಟಿ ಬರೆದು ಅಂಗಡಿಗಳಲ್ಲಿ ದೊಡ್ಡದಾಗಿ ಹತ್ತಿಸಿ ಜನಗಳು ಖಾಯಿಷ್ ಮಾಡಿದ ತುಪ್ಪವನ್ನೇ ಕೊಡುವದಾಗಿ ಹೇಳುತ್ತಾ, ಕಾಣದ ಇರುವ ಜನಗಳಿಗೆ ಮೋಸಪಡಿಸುತ್ತಾ ಇದಾರೆ ಅಮಲ್ದಾರ್ರು ಈ ವಿಚಾರದಲ್ಲಿ ನಿಗಾ ತಗೆದುಕೊಂಡಾರೆಂದು ನಿರೀಕ್ಷಿಸುತ್ತೇವೆ

ಚಿತ್ರದುರ್ಗ —ಈಗ 2_3 ದಿನದಿಂದ ಚಳಿ ಆರಂಭವಾಗಿದೆ ಬಿಸಲು ಜಾಸ್ತಿ ಈ ವರ್ಷ ಒಳ್ಳೇ ಆಯಾಂ ಕಾಲದಲ್ಲಿ ಮಳೆ ಬಾರದೆ ಫಸಲುಗಳೆಲ್ಲಾ ಕೆಟ್ಟು ರೈತಾಪಿ ಜನಗಳು ಸಂಕಟಪಡುತ್ತಲಿದಾರೆ ದಿನಸಿಗಳ ಬೆಲೆಯಂತು ದಿನೇ ದಿನೇ ಹೆಚ್ಚುತ್ತಲಿದೆ ನೀರಿನ ಕ್ಷಾಮ ಆಗಲೇ ಆರಂಭವಾಯಿತು ಮುಂದೆ ಜನ ಜಾನುವಾರುಗಳಿಗೆ ಬಹಳ ಕಷ್ಟವಾದೀತು ಊರಲ್ಲಿ ಚಳಿಜ್ವರ, ಶೀತಸಂಬಂಧವಾದ ಕೆಮ್ಮು, ಸಿಡುಬು ಮುಂತಾದ ಕಾಯಿಲೆಗಳು ಇದ್ದೇ ಇವೆ ಮ್ಯುನಿಸಿಪಾಲಿಟಿಯವರು ಹೈ ರೋಡುಗಳಿಗೆ ಗ್ರಾವಲ್ ಹಾಕಿಸುತ್ತಿದಾರೆ ಈ ಊರೇ ಕೆಸರಾಗದ ಕರಲು ಭೂಮಿಯ ಮೇಲೆ ಕಟ್ಟಿರುವುದರಿಂದ ರೋಡಿಗೆ ಹೆಚ್ಚಾಗಿ ಕರಲುಹಾಕತಕ್ಕ ಅವಶ್ಯಕ ಕಾಣುವುದಿಲ್ಲ ಅದಕ್ಕಿಂತಲೂ ಕೇವಲ ಒತ್ತಾಗಿ ಮನೆಗಳು ಕಟ್ಟಿ ಅನಾರೋಗ್ಯಕ್ಕೆ ಕಾರಣವಾಗಿರತಕ್ಕ ಪ್ರದೇಶಗಳನ್ನು ಒಂದೊಂದಾಗಿ ಆರೋಗ್ಯಕರವಾಗಿ ಮಾಡುತ್ತಾ ಬಂದರೆ ಅನುಕೂಲವಾದೀತು ಈ ತಿಂಗಳು 23 ನೇ ತಾ. ಮ್ಯುನಿಸಿಪಲ್ ಮೆಂಬರುಗಳ ಚುನಾವಣೆ ನಡೆಯಿತು.

ಇದು ಮೆಂಬರುಗಳಲ್ಲೀ ಒಬ್ಬರನ್ನು ವೈಸ್ ಪ್ರೆಸಿಡೆಂಟರಾಗಿ ನೇಮಿಸತಕ್ಕ ಸಂದರ್ಭವಾದ್ದರಿಂದ ಈ ದಫೆ ಸ್ಥಳವಂದಿಗರಾದ ಪರ್ತಕ ದೊಡ್ಡಮನುಷ್ಯರು ಮೆಂಬರುಗಳು ಅಪ್ಲಿಕೇಷನ್ ಹಾಕಿದ್ದರು ಅವರಿಗೆಲ್ಲಾ ತಪ್ಪಿ ನಾಲ್ಕು ಜನ ಪ್ಲೀಡರುಗಳಿಗೂ, ಇಬ್ಬರು ಸರ್ಕಾರಿ ಉದ್ಯೋಗಸ್ಥರಿಗೂ ಚುನಾವಣೆಯಾಗಿದೆ ಇಲ್ಲಿಗೆ 6 ಮೈಲಿಯಲ್ಲಿರುವ ಹೊಸದಾಮವ್ವನಹಳ್ಳಿ ಬಳಿ ಲೇಟ್ ರಾ|| ಲಿಂಗಪ್ಪನವರ ಕುಟುಂಬ ಚಾಮುಂಡಮ್ಮನೆಂಬಾಕೆಯು ಕಲ್ಲಿನಿಂದ ಒಂದು ದೇವಸ್ಥಾನವನ್ನು ಕಟ್ಟಿಸಿ ಪ್ರತಿಷ್ಠೆಮಾಡಿಸಿದ್ದಲ್ಲದೆ ಗಣಂಗಳಿಗೂ ಬಡವರಿಗೂ ಇತರ ಜನಗಳಿಗೂ ಧಾರಾಳವಾಗಿ ಅನ್ನದಾನಮಾಡಿಸಿವರು ಉತ್ಸವದಲ್ಲಿ ದಂಪತಿ ಸಹಿತರಾದ ನಮ್ಮ ಚಕ್ರವರ್ತಿಸಾರ್ವಭೌಮರವರ ಮತ್ತು ನಮ್ಮ ಮಹಾರಾಜ ಯುವರಾಜರುಗಳ ತಸ್ವೀರುಗಳನ್ನು ದೇವಸ್ಥಾನದಲ್ಲಿಟ್ಟು ಪೂಜಿಸಿದರು ಆ ದೇವಸ್ಥಾನಕ್ಕೆ ಒಂದು ಹೊಲವನ್ನು ಬಿಟ್ಟುಕೊಟ್ಟು, ಆ ಗ್ರಾಮದಲ್ಲಿ ಸರ್ಕಾರದ ಸ್ಕೂಲು ಇಡುವುದಾದರೆ ಅದಕ್ಕಾಗಿ ಸ್ವಂತ ಉಗ್ರಾಣದಿಂದ ಒಂದು ಮನೆ ಕಟ್ಟಿಸಿಕೊಡುತ್ತೇನೆಂತಲೂ ಆಕೆ ವಾಗ್ದಾನಮಾಡಿರುವುದಾಗಿ ತಿಳಿಯಬರುತ್ತೆ ನಮ್ಮ ಅಮಲ್ದಾರರ ವರ್ಗವು ಗೆಜೆಟ್ಟಿನಲ್ಲೀ ನಿಂತಿತು ಇದನ್ನು ಸರ್ಕಾರದವರು ಇನ್ನೂ ಯಾತಕ್ಕಾಗಿ ಜಾರಿಮಾಡಲಿಲ್ಲವೋ ತಿಳಿಯದೆ ಇದೆ

ಔಷಧಿ ತಕ್ಕೊಂಡು ಗುಣವಾಗುವದಕ್ಕಿಂತಲೂ

ತಕ್ಕ ಕ್ರಮದಲ್ಲಿರುವದು ಉತ್ತಮ

·SCOTT'S EMULSION. 2-19

(ಸ್ಕಾಟ್ಸ್ ಇಮಲ್ಷನ್)

ಪುಷ್ಟಿ ಶರೀರವುಳ್ಳವರ್ಯಾರೂ ಪ್ಲೇಗ್, ಮಹಾಮಾರಿರೋಗ, ಪಾಂತಿಭೇದಿ ಅಥವಾ ಶ್ವಾಸಕೋಶದ ರೋಗಗಳ ಭಯಕ್ಕೆ ಒಳಪಡುವ ಅಗತ್ಯವಿಲ್ಲ

ರೋಗವು ಬಲಹೀನರನ್ನೂ ದುರ್ಬಲರನ್ನೂ ಬೇಗನೆ ತಗಲಿ ಒಡಿಯುತ್ತದೆ

ಅಸ್ವಸ್ಥವನ್ನು ದೂರ ಹೋಗಲಾಡಿಸಿ, ಶರೀರದಲ್ಲಿರುವ ಬಲಹೀನ ಭಾಗಗಳನ್ನು ಬಲಪ್ರಾಣಗೊಳಿಸಿ, ಸಂಪೂರ್ಣ ಸೌಖ್ಯವನ್ನು ಉಂಟುಮಾಡುತ್ತದೆ

ಕೈಸೋಕದೆ ತಯಾರಾದದ್ದು

ಎಲ್ಲಾ ಔಷಧಿ ವ್ಯಾಪಾರಗಾರರಲ್ಲೂ ಮಾರಾಟವಾಗುತ್ತವೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್,

Always get the Emulsion with this mark—the Fishman—the mark of the 'Scott' process!

ಈ ಮೀನುಮನುಷ ಇರುವ ಔಷಧವನ್ನೇ ಕೊಂಡುಕೊಳ್ಳಿ

ಕುಂತಳಾನಂದ ತೈಲವು

1 2 11

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಚಿನ್ನದ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಗೊಳಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಪಿ ಎಸ್ ನಾಥ ಮತ್ತು ಕಂಪೆನಿ,
ವೇಪೇರಿ, ಮದರಾಸ್

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿಗ್ಗೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ ಎದೆ ತಲ್ಲಣಿಸುವುದು ತಲೆನೋವು ಗಾಬರಿ, ಕಣ್ಣುಮೊಬ್ಬು ತಲೆ ತಿರುಗುವಿಕೆ ಮೈನೋವು, ಕೀಲುನೋವು, ಮಹವು, ನಿತ್ರಾಣ ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವವು

ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [181 13]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦ ಅಥವಾ ೬ ಬುಡ್ಡಿಗಳಿಗೆ ರೂ ೧೦ ೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುವು ಅಥವಾ ಫೋರ್ಸ್ ಪಿ ಓ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುತ್ತವೆ

ಶಿಕಾರಿಪುರ ಶಿರಾಳಕೊಪ್ಪ ಪ್ರಾಂತಗಳಲ್ಲಿ ವೃತ್ತಾಂತ ಪತ್ರಿಕೆಗಳ ವಿನಿಯೋಗ ಪ್ರಕಟನೆ

ಶಿಕಾರಿಪುರ, ಶಿರಾಳಕೊಪ್ಪ ತಾಲ್ಲೂಕ್ ಹೋಬಳಿ ಗ್ರಾಮಗಳ ಪ್ರಜೆಗಳೇಕರು ಪ್ರಕೃತಕಾಲದ ನಾಗರಿಕತೆಯನ್ನು ಅನುಸರಿಸಿ ವರ್ತಮಾನ ಪತ್ರಿಕೆಗಳನ್ನು ಓದಲು ಅಪೇಕ್ಷಿಸುವವರಾಗಿರುವದರಿಂದ ನಾವು ಆ ಹಾವರುಗಳಿಗೆ ಟಪ್ಪಾಲು ಖರ್ಚು ಬೀಳದಂತೆಯೂ ಪತ್ರಿಕೆಗಳು ಸಕಾಲಕ್ಕೆ ಕ್ರಮವಾಗಿ ಸಿಕ್ಕುವಂತೆಯೂ ಅನುಕೂಲಪಡಿಸಿರುತ್ತೇವೆ ಹಾಗೆಂದರೆ—

ಶಿಕಾರಿಪುರ —ಪ್ರತಿ ಶನಿವಾರ ಸಂತೆಯ ದಿವಸ ಅಲ್ಲಿನ ವೆಸ್ಲಿಯನ್ ಮಿಷನ್ ಗರಲ್ಸ್ ಸ್ಕೂಲಿನಲ್ಲಿ "ವೃತ್ತಾಂತ ಪತ್ರಿಕೆ"ಗಳು ಮಾರಲ್ಪಡುವವು ಜನರು ಸಂತೆಗೆ ಹೋದಾಗ್ಗೆ ಬಹು ಸುಲಭವಾಗಿ ಪತ್ರಿಕೆಗಳನ್ನು ಪಡೆಯಬಹುದು

ಶಿರಾಳಕೊಪ್ಪ —ಪ್ರತಿ ಭಾನುವಾರವೂ (ಸಂತೆಯ ದಿನ) ಶಿರಾಳಕೊಪ್ಪದ ಟವನ್ ಪಟೇಲರಾಗಿರುವ ಮ|| ರಾ ಗುರುಸಿದ್ದಪ್ಪನವರ ಮೂಲಕ ಪತ್ರಿಕೆಗಳನ್ನು ಸುಲಭವಾಗಿ ಹೊಂದಬಹುದು

ವೈ ಅಬ್ರಹಾಂ ಏಜೆಂಟ್ ಶಿಕಾರಿಪುರ

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು ಕೀಲು, ಅರತಲೆ, ತಲೆನೋವುಗಳು ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಟ್ಟಿ ಗಾರೆಸ್ಸುವುದು ಕೆಮ್ಮುಗಳು ಶೀತನೆಗಡಿ, ಶ್ವಾಸರೋಗ ಜಡ ಉಳುಕು ಛಳುಕು ನೀರು ಕಡಿದ ಬಾಧೆ ಈ ಮೊದಲಾದ ಎಲ್ಲಾ ತರದ ನೋವನ್ನೂ ನಾವು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ನ್ಯೂರಾಜಿಕ್ ಬಾಂ ಒಂದು ಬಾಟ್ಲು ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಈ ಕ್ಷಣಾಂತರ ಜನರು ಗುಣಹೊಂದಿದಾಗೆ ನಿಮಗೂ ಖಂಡಿತವಾಗಿ ಗುಣವಾಗುತ್ತದೆ [101 24]

"ಕ್ಲೆಮೆಂಟರ ನ್ಯೂರಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ ಅದರ ಕ್ರಯ ಬಾಟ್ಲಿಗೆ 12 ಆಣೆ ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲು ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು (1) ಎಸ್ ಪೀಟರ್ಸ್, 31 ವಡಮಲಿಪಿಳ್ಳೆ ಬೀದಿ, ಪುಸೀನಾಕಂ, ವೇಪೇರಿ, ಮದರಾಸ್ (2) ಟಿ ಎಸ್ ಕೃಷ್ಣಯ್ಯಶೆಟ್ಟರು, ಜನರಲ್ ಮರ್ಚಂಟ್, ತುಮಕೂರು

ಗೃಹಕೃತ್ಯದ ನೋಟೀಸ್

ಚನ್ನಪಟ್ಟಣದ ತಾಲ್ಲೂಕು ಅಬ್ಬೂರು ಗ್ರಾಮದಲ್ಲಿರುವ ಶ್ರೀನಿವಾಸಾಚಾರ್ರು ಮತ್ತು ಹಾಲಿ ಮೃತಪಟ್ಟು ಇರುವ ಭೀಮಣ್ಣ, ಗೋವಿಂದಪ್ಪನವರ ಸಹ ಅವಿಭಕ್ತ ಸಹೋದರರು ನನ್ನ ಗಂಡ ಗೋವಿಂದಪ್ಪನವರು ಕೆಲಸಕ್ಕಾಗಿ ಪರಸ್ಥಳಗಳಲ್ಲಿ ವಾಸವಾಗಿರುತ್ತಿದ್ದುದರಿಂದ ಮೇಲ್ಕಂಡ ಊರು ಗ್ರಾಮದಲ್ಲಿರುವ ಕುಟುಂಬದ ಆಸ್ತಿಗಳನ್ನೂ, ಮನೆ ಎನೂ ಸರ್ವ ವಿಚಾರವನ್ನು ಸೀನಿವಾಸಾಚಾರ್ಯರ ವಶ ಸೇರಿಸಿ ಹೋಗಿ ಎಂದರು ಈ ಶ್ರೀನಿವಾಸಾಚಾರ್ಯರು ಪತ್ರಕ್ಕನ್ನು ಪಿಂಗಿ ಮೂಲಕ ಕಳೆದುಕೊಂಡು ಇರುವದರಿಂದಲೂ ಮೃತರಾದ ಭೀಮಣ್ಣನವರಿಗೆ ಮಕ್ಕಳಿಲ್ಲದ್ದರಿಂದಲೂ ವಿಶಿಷ್ಟ ಸ್ವತ್ತುಗಳೂ ಗೋವಿಂದಪ್ಪನವರ ಫಾಕ್ಕಳಿಗೆ ಮಾತ್ರ ಸಮಭಾಗವಾಗಿ ಸೇರತಕ್ಕದ್ದಾಗಿವೆ ಹೀಗಿರುವಲ್ಲಿ ಮಾತ್ರಕ್ಕೆ ವಿಶಿಷ್ಟ ಸ್ವತ್ತು ನಿಗಾವಣೆ ನೋಡುತ್ತಿದ್ದ ಶ್ರೀನಿವಾಸಾಚಾರ್ರು ಕೆಲವರ ದುರ್ಬೋಧನೆಯಿಂದ ಪರಭಾರೆ ಮಾಡುವದಾಗಿ ತಿಳಿಯಬರುವದರಿಂದ ಸದರಿಯವರಿಂದ ಕ್ರಯ ಆಧಾರ ಭೋಗ್ಯ ವಿಲ್ ವಗೈರೆ ಯಾರೊಬ್ಬರೇ ಬರಸಿಕೊಂಡಲ್ಲಿ ಅದು ಊರ್ಜಿತವಾಗಲಾರದು ಎಂದು ತಿಳಿಯಪಡಿಸಿದೆ

[-511] ವೆಂಕಟಲಕ್ಷ್ಮಮ್ಮನ ರುಜು.

NOTICE

Wanted at once an active and efficient hand for the place of Assistant Secretary Bangalore City Co operative Society Ltd Salary Rs 40 rising to Rs 60 by five equal annual instalments of Rs. 4 each after each year's approved service.

QUALIFICATIONS REQUIRED (1) Good knowledge of English and Kanarese to attend to correspondence work (2) Fair knowledge of accounts Book keeping, Banking and Commerce (3) Certificate of good moral character and respectability (4) Ability to furnish cash security of Rs 2 000.

Preference will be given to graduates from the Colleges in the Mysore State The candidate selected will be appointed on probation for six months.

Apply with the testimonials to the Honorary Secretary Bangalore City Co operative Society, Ltd so as to reach him on or before the 15th December 1913 [-405]

BANGALORE } C RAMA RAO,
Dated 17th N 1913 } Hon Secretary

ಸ್ಪ್ರಿಂಗ್ ಟ್ರಾವೆಲರ್ಸ್ ಲೀವರ್ ವಾಚ್.

ಇದರ ಕ್ರಯ ನಿರ್ಣಯ ಮತ್ತು ವಿಪಿಯಲ್ಲಿ ೪ ಬಹುಮಾನ ... ಸಹಿತ ರೂ 1 8 0 ಮಾತ್ರ [77-...

ಘನತರ ತರೇ ... ಇದು ಬಹು ... ದ ಯಂತ್ರಸ ಮಾನುಗಳಿಂದಲೂ ಮತ್ತು ಶ್ರೇಷ್ಠವಾದ ಮತ್ತು ...



...

ಇದರ ಜೊತೆ ...

(1) ... (2) ... (3) ... (4) ... ವಾಚ್ ಮುತ್ತಿನ ... (6) ... (7) ... (8) ...

ವಿಳಾಸ ... ಸಂತೋಷರಾಮ ಅಂಡ್ ಕಂಪೆನಿ
ನಂ 7 ... ಮುತ್ತಯ್ಯರ್ ಬೀದಿ, ಮದರಾಸ್

ಒಡಲ ಮೇಲಿಂದ ಬಿಚ್ಚಿ ಕರೀ ಒಕ್ಕಿದ ಮಧುರೆ ಜಿಂಗಡಿ ಸೀರೆಗಳು.

ಅವಲ್ ರಬು ಕ್ರಯ ರೂ 2 6 0



ಇವರಿ ದ ... ಭಾಗ್ಯವಂತರಿಗೂ, ಬಡವರಿಗೂ ... ದರೆ—ನಮ್ಮಲ್ಲಿನ ಕರಿಯ ... ದ ಮಧುರೆ ಜಿಂಗಡಿ ಸೀರೆಗಳು ... ಧರಾತಿಯಾಗಿಯೂ, ನೋಡುವುದಕ್ಕೆ ನಯವಾಗಿಯೂ, ... ಗಿಯೂ, ಕೊಳ್ಳಲು ಅತಿ ಬಹಳ ಸುಲಭವಾಗಿಯೂ ತಯಾರಿಸಿದೆ ಎಷ್ಟು ಒಗೆದು ಉಟ್ಟರೂ ಬಣ್ಣವ ಸ್ವಲ್ಪವೂ ಬದಲಾಯಿಸುವುದಿಲ್ಲ ಇದರ ... ಎಷ್ಟು ಪಸಂದಾಗಿವೆ ... ಉದ್ದವು ಧಾರಾಳವಾಗಿ 18 ಮೊಳ ... ಕ್ವಾರ್ಧ ಒಂದನ್ನು ತರಿಸಿದಲ್ಲಿ ನಮ್ಮ ... ಬರೆಯುವರು ... ಆಲ್ ರೈಟ್ ರೆಗ್ಯುಲೇಟೆಡ್ ವಾಚ್ ರೂ 1 ... ಪುಷ್ಪಕಾಂತಿ ... ಬುಡಿ 1 ಕ್ಕೆ 0 8 0 [-381]

ವಿಳಾಸ —ಏಕಾಂಬರಂ ಕಂಪೆನಿ ಸೆಕೆಂಡ್ ಲೈನ್ ಬೀದಿ, ಮದರಾಸ್

MELLIN'S FOOD

ಮಕ್ಕಳಿಗೂ
ರೋಗಿಷ್ಟರಿಗೂ
[266 1]

ಮೆಲ್ಲಿನ್ಸ್ ಆಹಾರ

ಕೈ ಸೋಕದೆ ತಯಾರಾದದ್ದು ಸಸ್ಯಾಹಾರ

ಈಗ ಸಿದ್ಧವಾಗಿದೆ

1914 ನೇ ವರುಷದ ಮೆಲ್ಲಿನ್ಸ್ ಕ್ಯಾಲೆಂಡರು

ಎರಡು ಆಣೆ ಪಾವತಿಮಾಡಿದರೆ ಅಥವಾ ಕಳುಹಿಸಿಕೊಟ್ಟರೆ ಈ ಒಂದು ಕ್ಯಾಲೆಂಡರನ್ನು ಕೊಡುವೆವು, ಅಥವಾ ಪೋಸ್ಟಿನಲ್ಲಿ ಕಳುಹಿಸುವೆವು

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್

ಮಕ್ಕಳ ತಾಯಿಗೆ—"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ"—ಅಂಚೆ ಖರ್ಚಿಗೆ ಎರಡು ಆಣೆ ಕಳುಹಿಸುವವರಿಗೆ ಈ ಪುಸ್ತಕವನ್ನು ಕಳುಹಿಸಿಕೊಡುತ್ತೇವೆ

ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

Printed and Published by the Rev H Gou... Proprietor and Manager Wesleyan Mission Press Mysore 4/12/1913

REGISTERED
M. 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೧೩ ನೇ ಇಸವಿ ಡಿಸೆಂಬರ್ ತಾರೀಖು ೧೧ ನೇ ಗುರುವಾರ. ಸಂಚಿಕೆ ೨೮

ಬ್ರಾಹ್ಮಣರ ಶ್ರೇಣಿಯಲ್ಲಿರುವ ಮನೆ.

ಮೈಸೂರು ಹಳ್ಳದಕೇರಿಯಲ್ಲಿ ನಾರ್ಮಲ್ ಸ್ಕೂಲಿಗೆ ಸ್ವಲ್ಪ ದೂರದಲ್ಲಿ ಇರುವ ಎರಡು ಅಂತಸ್ತಿನ ತಾರಸಿ ಮಹಡಿಮನೆ ತಾ ಗಡಮರ ಸುಟ್ಟ ಇಟ್ಟಿಗೆ ಗಾರೆಯಿಂದ ಮಜಬೂತಾಗಿ ಕಟ್ಟಿರುವ ಕಟ್ಟಡವು ಬಾಡಿಗೆಗೆ ಕೊಡಲ್ಪಡುತ್ತೆ. ಇಷ್ಟವುಳ್ಳವರು ಕೆಳಗಿನ ವಿಳಾಸದಂತೆ ಬರೆದು ಬೆಲೆಯನ್ನು ತಿಳಿದು ತೆಗೆದುಕೊಳ್ಳಿರಿ.

ಜಿ. ರಾಮಯ್ಯ, ಕ್ಯಾಷ್ ಬಜಾರ್, ಬೆಂಗಳೂರು ಸಿಟಿ.

ಶಬ್ದಾದರ್ಶನದ ನೋಟ್ಸ್.

ನಕಲಿಗಳು, ಕಥೆಗಳು ಬಹುಮಾನ ಸಿಕ್ಕುತ್ತೆ!!

ಲೋವರ್ ಸೆಕಂಡರಿ ವಿದ್ಯಾರ್ಥಿಗಳಿಗೆ ಬಹು ಉಪಯುಕ್ತವಾದ - ಶಬ್ದಾದರ್ಶಕ್ಕೆ ಸುಲಭವಾದ ದಾರಿಯಾದ ಈ ನೋಟ್ಸಿನ ಬೆಲೆ 3 ಆ. 4 ಪ್ರತಿ ಒಟ್ಟಿಗೆ ತರಿಸಿಕೊಂಡರೆ ಯೋಗನಿದ್ರಾಪ್ರಹಸನವೆಂಬ ನಕಲಿ ಉಚಿತ 6 ಪ್ರತಿ ತರಿಸಿಕೊಂಡರೆ ಮಹಾರಣ್ಯಪುರಾಧಿಪತ್ಯವೆಂಬ ನಕಲಿ ಉಚಿತ 8 ಪ್ರತಿ ತರಿಸಿಕೊಂಡರೆ ಚಂದ್ರಮತಿಯೆಂಬ ಕಥೆಯ ಪುಸ್ತಕ ಉಚಿತ ಇದಲ್ಲದೆ ನಮ್ಮಲ್ಲಿ ಇನ್ನೂ ಅನೇಕ ನಾಟಕ, ನಕಲಿ, ಬಂಗಾಲಿಯ ನಾವೆಲ್‌ಗಳು ಕ್ರಯಕ್ಕೆ ದೊರೆಯುತ್ತೆ

[167–52] ವಿಳಾಸ ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಭತ್ತ ಕುಟ್ಟುವ ಯಂತ್ರಗಳು.

ಡಗ್ಲಸ್ ಮತ್ತು ಗ್ರಾಂಟ್ ಕಂಪನಿಯಲ್ಲಿ ತಯಾರಾಗುವ ಭತ್ತ ಕುಟ್ಟುವ ಯಂತ್ರಗಳೇ ಉತ್ತಮೋತ್ತಮವಾಗಿವೆ. ಈ ಕಂಪನಿಗೆ 100 ವರುಷದ ಅನುಭವವುಂಟು ಅವರೇ ಪ್ರಪಂಚದ ಕಾರೇಗಾರರಲ್ಲಿ ಬಹಳ ಪ್ರಖ್ಯಾತಿ ಪಡೆದವರು ಅವರ ಯಂತ್ರಗಳು ಎಲ್ಲೆಲ್ಲೂ ಉಪಯೋಗದಲ್ಲಿವೆ.

ಹೆಚ್ಚು ವಿಷಯ ತಿಳಿಯಬೇಕಾದವರು

ಡಗ್ಲಸ್ ಅಂಡ್ ಗ್ರಾಂಟ್, ಲಿಮಿಟೆಡ್, ತಂಜಾವೂರು ಎಂಬೀ ವಿಳಾಸಕ್ಕೆ ಬರೆದುಕೊಳ್ಳಿ.

ಅವರು ನಿಪುಣರಾದ ಕಾರೇಗಾರರನ್ನು ಕಳುಹಿಸುತ್ತಾರೆ ಎಲ್ಲಾ ತರದ ಮಿಲ್ಲು (ಯಂತ್ರ) ಗಳನ್ನೂ ಒದಗಿಸಬಲ್ಲರು. [255 2]

Bangalore Christmas Fete and INDUSTRIAL EXHIBITION OF 1913.

ಬೆಂಗಳೂರು ಕ್ರಿಸ್ತಮಸ್ ಫೀಟ್ ಅಂಡ್ ಇಂಡಸ್ಟ್ರಿಯಲ್ ಎಕ್ಸಿಬಿಷನ್ ೧೯೧೩.

[253 2]

ಈಬರುವ ಡಿಸೆಂಬರ್ ತಿಂಗಳು 26 ನೆಯ ತಾರೀಖಿನಿಂದ ನಡೆಯುವ ಪ್ರದರ್ಶನದಲ್ಲಿ ಕೈಗಾರಿಕೆ ಮತ್ತು ಇತರ ಸಾಮಾನುಗಳನ್ನು ಪ್ರದರ್ಶಿಸಲಿಚ್ಛಿಸುವವರು ಕೂಡಲೆ ಈ ಕೆಳಗೆ ನಮೂದಿಸಿರುವ ಯಾರಾದರೂ ಒಬ್ಬರಿಗೆ ಅವರವರಿಗೆ ಬೇಕಾಗುವ ಸ್ಥಳದ ವಿಚಾರದಲ್ಲೂ ಮತ್ತು ಇತರ ವಿಷಯಗಳಲ್ಲೂ ಬರೆದುಕೊಳ್ಳಬಹುದು ಸ್ಥಳಸಂಕೋಚವಿರುವದರಿಂದ ಜಾಗ್ರತೆಮಾಡಿದರೆ ಅನುಕೂಲವುಂಟು

ಬೆಂಗಳೂರು, 1 12-1913. ಬಿ ಕೆ ಗರುಡಾ ಛಾರ್, ಚಿಕ್ಕಪೇಟೆ, ಬೆಂಗಳೂರು ಸಿಟಿ, ಯಂ ಯೂನಸ್ ಸೇಟ್, ಇನ್‌ಫೆಂಟ್ರಿ ರೋಡ್, ಬೆಂಗಳೂರು; (ವೈಸ್ ಪ್ರೆಸಿಡೆಂಟರು, ಇಂಡಸ್ಟ್ರಿಯಲ್ ಇಲಾಖೆ)

ನಿಮ್ಮ ಹತ್ತಿರ ಹೂವಿನ ತೋಟವಿರಬೇಕೋ?

ಹಾಗಾದರೆ

ಆಟೋ ಮೋಹಿನಿ

ಎಂಬ ಲೋಕಪ್ರಖ್ಯಾತವಾದ ಪರಿಮಳವನ್ನೇ ಕೊಂಡುಕೊಳ್ಳಿ ನಾಲ್ಕೇ ತೊಟ್ಟು ನಿಮ್ಮ ಕರವಸ್ತ್ರಕ್ಕೆ ಚಿಮುಕಿಸಿಕೊಂಡರೆ ನಾಲ್ಕು ದಿನ ಜಾಜಿ ಪರಿಮಳದ ಸುಗಂಧವಿದ್ದೀತು. ಅದರ ಮನೋಹರ ವಾಸನೆಯನ್ನೂ ಪುಷ್ಪಸ್ರೇಷ್ಠತೆಯನ್ನೂ ಶಾಶ್ವತ ಸ್ವಭಾವವನ್ನೂ ಮೆಚ್ಚಿ ಬಹು ಸಂತೋಷದಿಂದ 1913 ನೇ ಮೈಸೂರು ದಸರಾ ಎಗ್ಜಿಭಿಷನ್‌ನಲ್ಲಿ ಅದಕ್ಕೆ ಭಂಗಾರದ ಮೆಡಲನ್ನು ಬಹುಮಾನ ಕೊಟ್ಟಿದಾರೆ. ಆ ರೀತಿ ಈ ಸುವಾಸನೆಯು ಇಲ್ಲದೆ ಆರಿಹೋದದ್ದನ್ನು ರುಜುಮಾಡತಕ್ಕವರಿಗೆ ತಕ್ಷಣದಲ್ಲಿ 100 ರೂಪಾಯಿ ಬಹುಮಾನಕೊಡುವೆವೆಂದು ಚಾಲೆಂಜ್ ಕೊಡುತ್ತೇವೆ. ಸಣ್ಣ ಸೀಸೆಯ ಪರಿಮಳವನ್ನು ತರಿಸಿ ಪರೀಕ್ಷಿಸಿ ಇನಾಂ ಪಡೆಯಿರಿ.

ಕ್ರಯ ಅರ್ಧ ಔನ್ಸ್ ಸೀಸೆಗೆ ರೂ. 2-0-0

,, ಒಂದು ಡ್ರಾಮ್ ,, ,, 0-12-0

ಆಟೋ ಮೋಹಿನಿ ಪರಿಮಳವುಳ್ಳ ಕಾರ್ಡು 1 ಡಜನ್‌ಗೆ 0-12 0.

ಪ್ರೊಪ್ರೈಟರು—ದಿ ಓರಿಯಂಟಲ್ ಡ್ರಗ್ ಕೆಮಿಕಲ್ ಕಂಪನಿ, ಏಜಂಟರು—ಭಗವಾನ್‌ದಾಸ್ ಚೂನಿಲಾಲ್ ಕಂಪನಿ, [251–2] 177, ಚೈನಾ ಬಜಾರ್ ರೋಡ್, ಮದರಾಸ್.

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತು ಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ" ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿಕೊಡುತ್ತೆ, ಪ್ರಾಣಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ. ಕೂದಲು ಇದರಿಂದ ವಿಪುಲವಾಗಿ, ನಯವಾಗಿ ಚಕಚಕಿಸುವವು; ನಿಬಿಡವಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ತುಂಡು ಬಿದ್ದು ಹೋಗದೆ ದಟ್ಟವಾಗಿ ಬೆಳೆಯುವವು. ಕೂದಲಿಗೆ ಹೊಳಪುಕೊಡುತ್ತೆ. ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ. ಸುಂಡಿನ ಹೊಟ್ಟನ್ನು ಅಳಿಗಿಸುತ್ತೆ. ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ. ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು. ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ. ಇದರ ಬೆಲೆ 1 ಸೀಸೆಗೆ ರೂ 1-0-0 ಅಂಚೆಯ ವೆಚ್ಚ 0-4-0 ಬೇರೆ ಕರ್ಚೇನು

3 ಸೀಸೆಗಳಿಗೆ ರೂ 2-10-0 ಅಂಚೆಯ ವೆಚ್ಚ 0-7-0

ನಮೂನೆಯು ಬೇಕೆಂಪರೆ ಒಂದು ಅಣೆಯ ಚೀಟನ್ನು ಕಳುಹಿಸಿರಿ.

ಮೈಸೂರು ಎಗ್ಜಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು.

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ|| ದಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ. ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ."

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ. ನೀವು ಕೊಳ್ಳುವಾಗ್ಗೆ ಮೋಸಗಾರರಾದ ಅನೇಕ ಎಣ್ಣೆಗಾರರು ಇದೇ ಹೆಸರಿಟ್ಟು ಕಿಫಾಯಿತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೆಯದು" ಎಂದು ಹೇಳಿ ಮೋಸಮಾಡುವರು ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕೆಪಿಟೋಬಾಮ್"—ಮಳೆ ಮತ್ತು ಚಳಿಯ ಥಂಡೀ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ "ಕೆಪಿಟೋಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ನೋಯುವುದು, ಸಂಧುವಾತ, ಮಸ್ತಕಶೂಲೆ, ಹೆಚ್ಚಾಗಿ ಮೈಮನಸ್ಸು ಪಟ್ಟಿದ್ದರಿಂದ ಕ್ಷೀಣವಾಗುವದು, ಸೊಂಟನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ ಬಾಟ್ಲಿ 1ಕ್ಕೆ ಕ್ರಯ 0-8-0 ಟಪಾಲು ಪ್ರತ್ಯೇಕ.

ಒಡಮುನ್ನ ಮಲೇರಿಯ ಪಿಲ್ಸ್.—ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮುನ್ನ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿವೆ ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ ಇದು ದೇಶದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ. ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ. ದಫಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1-0-0. 3 ಬಾಟ್ಲಿಗಳಿಗೆ ರೂ. 2-8-0 ಡಿ. ಪಿ. ಖರ್ಚು ಪ್ರತ್ಯೇಕ.

ಮೇಲೆಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ :— [8-48]

ಆಂಗ್ಲೊ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ, ಜುಮ್ಮಾಮಸ್‌ಜಿದ್, ಬೊಂಬಾಯಿ.

ಏಜೆಂಟ್, ದಿ. ಉಲನ್ ಮಾರ್ಟ್, ಮಂಗಳೂರು.

ಓರಿಯಂಟಲ್ ಗ॥ ಸೆಕ್ಯೂರಿಟಿ ಲೈಫ್ ಅಷೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು............ರೂ 4,25,00,000

ಕಂಪನಿಯಿಂದ ಪಾವತಿ ಆಗಿರುವದು ,, 3,60,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದದ್ದನ್ನು ಕಳುಹಿಸುತ್ತಾರೆ.—ಮಿ|| ಎಂ. ಎಸ್. ರೆಡ್ಡಿ, ಚೀಫ್ ಏಜಂಟ್, ಬೆಂಗಳೂರು; ಮ|| ಎಂ. ಎಸ್. ನಂಜಪ್ಪನವರು ಅಥವಾ ಮ|| ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು; ಅಥವಾ

[194-11] ಬ್ರಾಂಚ್ ಸೆಕ್ರೆಟರಿ, ಮದರಾಸ್.

ಬಿ. ವಿ. ಪಂಡಿತರಿಂದ

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟು ಆಬಾಲವೃದ್ಧರಿಗೂ ಆಮೋದವನ್ನುಂಟುಮಾಡುತ್ತಿರುವ

ಆಮೋದಿನಿ

150 ಮಾತ್ರೆಯುಳ್ಳ ಸೀಸೆಗೆ 4 ಆ.; 5 ಸೀಸೆಗಳಿಗೆ 1 ಇನಾಂ.

ಈ ಮಾತ್ರೆಗಳು 1-2 ನ್ನು ಬಾಯಿನಲ್ಲಿ ಹಾಕಿಕೊಂಡ ಕೂಡಲೆ ಮನಸ್ಸಿಗೆ ಅಪೂರ್ವವಾದ ಆನಂದವುಂಟಾಗುವುದು ಎಷ್ಟು ಮಾಡಿದರೂ ದಣುವಾಗದಂತೆ ಸಂಗೀತಗಾರರ ಕಂಠವನ್ನು ಕಾಪಾಡುವುದರಲ್ಲಿ ಪ್ರಖ್ಯಾತಿ ಪಡೆದಿರುವುದು ಬಾಯಿ ನಾತವನ್ನು ಹೋಗಲಾಡಿಸಿ ಬಾಯಾರಿಕೆಯನ್ನು ಶಮನಮಾಡಿ ತಾಂಬೂಲವನ್ನು ರಂಜಿಸಿ ಜೀರ್ಣಶಕ್ತಿಯನ್ನು ಹೆಚ್ಚಿಸಿ ಅಸಾಧ್ಯವಾದ ಕೆಮ್ಮು-ದಮ್ಮು-ಅರೋಚಕ ಹೊಟ್ಟೆನೋವು-ಮಲಬಂಧ-ಶರೀರದಲ್ಲಿ ದೌರ್ಬಲ್ಯ-ಇವುಗಳನ್ನು ಗುಣಮಾಡುವ ಅಮೋಘವಾದ ಗುಣವನ್ನು ಹೊಂದಿರುವದು ಮಲೆನಾಡಿನಲ್ಲಿರುವವರಿಗೂ ಪ್ರಯಾಣಿಕರಿಗೂ ಇದರ ಸೇವನೆಯು ಅಮೃತಕ್ಕೆ ಸಮವಾದುದು ಟಪಾಲ್ ಖರ್ಚು 12 ಸೀಸೆ ವರೆಗೆ 4 ಆಣೆ [220-7]

ಶ್ರೀಕರ ಕಸ್ತೂರಿ ಮಾತ್ರೆ.—ಅನುಪಾನಪತ್ರ ಸಹಿತ 250 ಮಾತ್ರೆ 4 ಆಣೆ. ಐದು ಸೀಸೆಗೆ ಒಂದು ಇನಾಮು

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು.

1906 ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಬಹಳ ಅಭಿವೃದ್ಧಿಸ್ಥಿತಿಯಲ್ಲಿರುವ ಭೀಮನೀ ಪಟ್ಟಣದ ಸರ್ಕಾರದ ಭರವಸೆಯುಳ್ಳ "ದಿ ಕೋಲೋಮಾಂಡಲ್ ಜೀವ ವಿಮೆ ಕಂಪೆನಿ" ಲಿಮಿಟೆಡ್ ನಲ್ಲಿ ಮದುವೆ ಮತ್ತು ಜೀವ ವಿಮೆ ಬ್ರಾಂಚಿನ ಮೊದಲನೇ ತರಗತಿಯಲ್ಲಿ ಮಾಹೆಯಾನ ರೂ 1-8-0, ರೂ 1-0-0 ಗಳ ಮೇರೆ ಪಾಲಿಸಿಗೆ ಕೊಟ್ಟು ಚಂದಾದಾರರು ಕೊಡುವ ಹಣಕ್ಕೆ ಎರಡರಷ್ಟು ಹಣಕ್ಕೆ ಕಡಮೆಯಿಲ್ಲದೆ ಬೋನಸ್ ಕೊಡುವುದಕ್ಕೆ ಭರವಸೆಯುಳ್ಳದ್ದಾಗಿರುತ್ತೆ ನಂಬಿಕೆ ಮತ್ತು ಚಟುವಟಿಕೆಯುಳ್ಳ ಏಜೆಂಟರುಗಳು ಧಾರಾಳವಾದ ಕಮಿಷನ್ ಏರ್ಪಾಡು ಮೇರೆ ಬೇಕಾಗಿದೆ ಮತ್ತು ಇದರಲ್ಲಿ ಪ್ರತಿವರ್ಷವೂ ಮದುವೆ ಮತ್ತು ಜೀವ ವಿಮೆ ಬ್ರಾಂಚಿನಲ್ಲಿ ಲಕ್ಷಾಂತರ ರೂಪಾಯಿಗಳು ಹಂಚಲ್ಪಡುತ್ತೆ ಹೆಚ್ಚು ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಒಂದಾಣೆ ಸ್ಟಾಂಪಿನೊಡನೆ ಕಾಗದ ಬರೆಯಿರಿ [243-3]

Hindustan Co-operative Insurance Society, Limited,
Hindustan Buildings, Calcutta.

Authorized capital- **One Crore.** Policies effected—over Rs. 2,20,00,00. Subscribed capital—Rs. 87,00,000. Funds exceed Rs. 20,80,000.

Paid up Capital over Rs. 10,00,000.

This famous Society's Premiums are the lowest and the insurance value, therefore, the highest. Bonus exceptionally advantageous and preferential. Financial conditions based on sound principles. Rs 2,00,000 deposited with the Government, as per new Insurance Act of 1912.

Wanted Immediately

Active and influential District and Taluk Agents on liberal terms of commission or pay. Bonus and rewards, a speciality. This is the only business which requires no capital or higher education to earn a handsome amount daily. For further particulars and agency prospectus, &c., apply with one anna stamp to

Messrs. Venkatachalam & Son,
Chief Agents,
166, Dodpeta, *Mysore.*

ಪ್ಯಾಕೆಟ್ ಶಿಗರೆಟ್ ಲೈಟರ್.

ಕ್ರಯ ರೂ 2-8-0

ಶಿಗರೇಟ್, ಬೀಡಿ ಸೇದುವವರಿಗೆ ಬಹಳ ಉಪಯೋಗ ಉಳ್ಳದ್ದು ದೀಪದ ಕಡ್ಡಿಯೇ ಬ್ಯಾಡ ಜರ್ಮನ್ ಸಿಲ್ವರ್‌ನಲ್ಲಿ ನಶ್ಯದ ಡಬ್ಬಿ ನಮೂನೆ ತಯಾರಿಸಿ ಬಂದಿರುತ್ತದೆ ಜನರು ನೋಡಿದರೆ ನಶ್ಯದ ಡಬ್ಬಿ ಎಂದೇ ಭಾವಿಸುವರು ಇದನ್ನು ಉಪಯೋಗಿಸುವ ವಿಧಾನವನ್ನು ನಮ್ಮ ಡೈರೆಕ್ಷನ್‌ನಲ್ಲಿ ವಿವರಿಸಿರುತ್ತೇವೆ ಬೇಗನೆ ಒಂದನ್ನು ತರಿಸಿ ಪರೀಕ್ಷಿಸಬಹುದು [259 1]

ವಿಳಾಸ —ಶ್ರೀ ಕೃಷ್ಣಾ ಅಂಡ್ ಬ್ರದರ್ಸ್,
93, ಮಿಂಟ್ ಸ್ಟ್ರೀಟ್, ಮದರಾಸು

ಕನ್ನಡ ಲಾ ಪುಸ್ತಕಗಳು

ಗೌರ್ನರ್ ಜನರಲ್‌ರವರ ಹುಕುಂ ಪ್ರಕಾರ ಎಲ್ಲಾ ದೇಶಗಳಲ್ಲಿಯೂ ಜಾರಿಯಲ್ಲಿರುವ ಕನ್ನಡ ಇಂಡಿಯನ್ ಪೆನಲ್ ಕೋಡು ಕ್ರಯ ರೂ 3 0-0, ವ್ಯವಹಾರನಿರ್ಣಯ ವಿಧಿ ಎಂಬ ಸಿವಲ್ ಪ್ರೊಸಿಜೂರ್ ಯಾನೆ 3 ಭಾಗಗಳುಳ್ಳದ್ದು ರೂ 3-0 0, ವ್ಯವಹಾರ ಪರಿಹಾರವಿಧಿ ಎಂಬ ಸ್ಪೆಸಿಫಿಕ್ ರಿಲೀಫ್ ಆಕ್ಟು ರೂ 1 8 0, ಇಂಡಿಯನ್ ಲಾ ಆಫ್ ಕಂಟ್ರಾಕ್ಟ್ ರೂ 2 0 0, ಪ್ರಶ್ನೋತ್ತರ ಲೆಂಖ್ಯಬೋಧಿನಿ—ಈ ಪುಸ್ತಕದಲ್ಲಿ ಸಿವಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ವ್ಯವಹಾರ ವಿಧಿಗಳನ್ನು ಬೋಧಿಸುವದು ಕ್ರಯ ರೂ 1 4 0, ತಾನಾಗಿ ಸ್ವತಃ ಇಂಗ್ಲೀಷ್ ಕಲಿಯುವದು ರೂ 1 8 0 ಇವುಗಳಲ್ಲಿ ಕೆಲವು ಮುದ್ರಣವಾಗುತ್ತಿವೆ ಇನ್ನೂ ಪುಸ್ತಕಗಳು ಅಪೇಕ್ಷಿಸುವವರು ನಮ್ಮ ಪುಸ್ತಕಗಳ ಕ್ಯಾಟಲಾಗಿಗೆ ಬರೆಯಿರಿ [160 18]

ವಿಳಾಸ—ಬಿ. ನರಸಿಂಗರಾವ್,
ಎಡಿಟರ್, "ಲಾ ಗೆಜೆಟ್" ಬೆಂಗಳೂರು.

ಒಡವೆಗಳೂ ಗಡಿಯಾರಗಳೂ.

ಈ ಚಂದ್ರಹಾರವು ನೋಡುವುದಕ್ಕೆ ಬಹಳ ಅಂದವಾಗಿರುತ್ತ ಇವನ್ನು ಒಳ್ಳೇ ಚತುರರಾದ ತಂಜಾವೂರಿನ ಕೆಲಸಗಾರರಿಂದ ತಯಾರಿಸಿರುತ್ತೇವೆ ಇವಕ್ಕೆ

ಎಂದೂ ಹೋಗದ ಹಾಗೆ ಬಂಗಾರದ ಗಿಲ್ಟು ಕೊಡಲ್ಪಟ್ಟಿರುತ್ತ ಇದನ್ನು ಹಜಗಾರರೂ ಹಾಕಿಕೊಳ್ಳಬಹುದು ಒಳ್ಳೆಯ ಬಂಗಾರದಿಂದ ತಯಾರಿಸಿದಂತೆಯೇ ಬಹಳ ಪ್ರಕಾಶಮಾನವಾಗಿರುತ್ತ ಇದುವರೆಗೆ ಇದನು ಅನೇಕರು ತರಿಸಿಕೊಂಡಿರುತ್ತಾರೆ ೦ ಸರಗಳುಳ್ಳದ್ದು ಬೆಲೆ ರೂ 1 9 1 4 ಸರಗಳುಳ್ಳದ್ದು ಬೆಲೆ ರೂ 1 0 0 3 ಸರಗಳುಳ್ಳದ್ದು ಬೆಲೆ ರೂ 1-8 0 ಸಾದ ಮೋಪಿನ ಬೆಲೆ ರೂ 0 12 0

ಕಲ್ಲುಗಳಿಂದ ತಯಾರಿಸಿದ ಮೋಪಿನ ಬೆಲೆ 1 0 0 ನಿಮಗೆ ಸಾದಾ ಮೋಪಿನಬೇಕೋ ಅಥವಾ ಕಲ್ಲುಗಳುಳ್ಳ ಮೋಪಿನಬೇಕೋ ಅಥವಾ ಮೋಪೇ ಅವ್ಯಶವಿಲ್ಲವೇ ಬರೆಯುವುದು [261 1]

ಪದಕ ಸಹಿತವಾದ ನಾಲ್ಕು ಎಳೆ ಮುತ್ತಿನ ಕಂಠಿಗೆ ರೂ 1 7 0 ಪದಕವಿಲ್ಲದ ಹಾರಕ್ಕೆ 0 11 0 ಆಣೆ ಜಂಟಲ್‌ಮೆನ್ ಲೀವರ್ ವಾಚು ಕ್ರಯ ರೂ 1 15 0 ಲೇಡೀಸ್ ಸಿಲ್ವರ್ ವಾಚ್ ಕ್ರಯ ರೂ 3 8 0 ಶ್ರೀ ಸೀತಾರಾಘವ ಗಡಿಯಾರ ಸುಂದರವಾದ ಗಡಿಯಾರದ ಸರಪಣಿ ಸಮೇತ ಇದರ ಕ್ರಯ ರೂ 4 0 0 ಮಾತ್ರ 3 ವರುಷಗಳ ಗ್ಯಾರೆಂಟಿ

ಅಚ್ಚ ಕರೀ ಬಣ್ಣದ ಮೂರು ಚಿಕ್ಕೆಯ ಮದುರೆ ಚುನ್ನಡಿ ಸೀರೆಗಳು — ಅವಲ್ ರಖಂ ಕ್ರಯ ರೂ 2 6 0 ದುಯಂ ರಖಂ ಕ್ರಯ ರೂ 2 3 0

ವಿಳಾಸ —[illegible] ಶೇಷಾ ಅಂಡ್ ಬ್ರದರ್ಸ್,
ನಂದಂಬಾಕಂ, ಸೆಂಟ್ ಥಾಮಸ್ ಮೌಂಟ್ ಪೋಸ್ಟ್, ಮದರಾಸ್

ಪಂಡಿತ್ ಎಸ್. ಗರಳಪುರಿಯವರ

ಪ್ರಖ್ಯಾತಿ ಹೊಂದಿದ ಓರಿಯಂಟಲ್

ಫಾರ್ಮಸಿ, ಮೈಸೂರು.

ಕಸ್ತೂರಿ ಮಾತ್ರೆ —ಶ್ರೇಷ್ಠತರ ವನಸ್ಪತಿಗಳು, ಮುತ್ತು ಹವಳ, ಕಸ್ತೂರಿಗಳಿಂದ ತಯಾರಿಸಿದ್ದು ಜಲದೋಷ, ಅರುಚಿ, ಮೈ ಕೈ ತಲೆನೋವುಗಳಿಗೆ ಸಂಜೀವನ ಇದನ್ನು ತಾಂಬೂಲದ ಸಂಗಡ ಪ್ರತಿ ದಿನವೂ ಸೇವಿಸಿದರೆ ಪ್ಲೇಗು ಕಾಲರಾ ಮುಂತಾದ ಸಾಂಕ್ರಾಮಿಕ ವ್ಯಾಧಿಗಳಿಂದ ಖಂಡಿತ ಕಾಪಾಡುತ್ತೆ 300 ಮಾತ್ರೆಗೆ 1 ಆಣೆ 6 ಶೀಷೆಗೆ ರೂ 1-4 0

ಬಾಲಸಂಜೀವಿನಿ —8 ವರ್ಷದೊಳಗೆ ಮಕ್ಕಳಿಗೆ ಬರುವ ಎಲ್ಲಾ ವಿಧ ಜ್ವರ, ಶೀತ ನೆಗಡಿ, ಕೆಮ್ಮಲು, ವಾಯು, 3 ಪಕ್ಕೆ ಎಳತ, ಸೆಳತ, ಇವಕ್ಕೆಲ್ಲಾ ಅಮೃತ 100 ವರ್ಷದ ಅನುಭವಸಿದ್ಧವಾದದ್ದು 20 ಸಲದ ಔಷಧಿಗೆ 4 ಆಣೆ 1 ಡೊಳಿಗೆ ರೂ 1-8 0

ಜ್ವರದ ಮಾತ್ರೆ —ಸಮಸ್ತವಿಧ ಜ್ವರಗಳಿಗೂ ಖಾತರಿ ಅಮೃತ ಬಹಳ ಜನರು ಇದರ ಗುಣವನ್ನು ಕಂಠೋಕ್ತವಾಗಿ ಹೊಗಳುವರು 24 ಮಾತ್ರೆಗೆ 8 ಆಣೆ 12 ಶೀಷೆಗೆ ರೂ 5 [222 7]

ಇನ್ನೂ ಅನೇಕ ದಿವ್ಯೌಷಧಿಗಳು ನಮ್ಮಲ್ಲಿ ಸಿಕ್ಕುತ್ತವೆ ½ ಆಣೆ ಸ್ಟಾಂಪಿಟ್ಟು ಬರೆದರೆ ಕ್ಯಾಟಲಾಗ್ ಕಳುಹಿಸುತ್ತೇವೆ ಪೋಸ್ಟೇಜ್, ಪ್ಯಾಕಿಂಗ್ ಛಾರ್ಜು ಅಲಾಯಿದ

ವಿಳಾಸ —ಪಂಡಿತ್ ಎಸ್ ಗರಳಪುರಿ,
ಓರಿಯಂಟಲ್ ಫಾರ್ಮಸಿ, ಬಂಡಿಕೇರಿ, ಮೈಸೂರು

ಕೆಲವು ದಿನಗಳು ಮಾತ್ರ ! ಕೊಂಚ ದಿನಗಳು ಮಾತ್ರ !

ವೃತ್ತಾಂತ ಪತ್ರಿಕೆಯನ್ನು ಓದುವವರೆಲ್ಲರಿಗೂ ಸಂತೋಷಕರವಾದ ಪ್ರಕಟನೆ

ಖಾತ್ರಿಯಾದ ವಾಚ್ ಖಾತ್ರಿಯಾದ ಕಂಪನಿ ! ಖಾತ್ರಿಯಾದ ಖರೀದಿ !!

ಸ್ಟ್ರಾಂಗ್ ಮೋಟಾರ್ ರೆಗ್ಯುಲೇಟರ್ ವಾಚ್

ಇದರ ಕ್ರಯ ಪಿಯುಳ್ 1 ಬಹುಮಾನ ಸಮೇತ ರೂ 3 8 0 ಮಾತ್ರ ಘನವಂತರೇ, [77 34]



ಈ ವಾಚ್ ಈಗತಾನೇ ಬಂದಿರುತ್ತದೆ, ಬಲವಾದದ್ದು ಬಲಿಷ್ಟವಾದ ಚಕ್ರಗಳಿಂದಲೂ, ಮತ್ತು ಬಲಿಷ್ಟವಾದ ಯಂತ್ರಗಳಿಂದಲೂ ಸುಪ್ರಸಿದ್ಧವಾದ ಲೀವರ್ ಕೆಲಸಗಳಿಂದಲೂ ತಯಾರಾದದ್ದು ಸರಿಯಾದ ಕಾಲವನ್ನು, ಸ್ವಲ್ಪವೂ ವ್ಯತ್ಯಾಸವಿಲ್ಲದೇ ತೋರಿಸತಕ್ಕದ್ದು ಖಾತ್ರಿಯಾದ ವಾಚ್ ಸುಂದರವಾದದ್ದು

ಇದರ 3 ಬಹುಮಾನಗಳ ತಪ್ಸೀಲು

1 ಸುಂದರವಾದ ಉತ್ತರಮುಖಿ

2 ನಾಜೂಕಾದ ವಾಚ್ ಸರಪಣಿ

3 1911 ನೇ ಇಸವಿಯ ಪಾಕೆಟ್ ಡೈರಿ

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ

ವಿಳಾಸ—ವಿ ಆರ್ ವೆಂಕಟರಮಣ ಅಂಡ್ ಕಂಪೆನಿ,
ನಂ 7, ಕೋಪ್ ಸಂಕಟಾ ಲೈಯರ್ ವೀದಿ, ಮದರಾಸು

ಪಾರ್ಸಿ ಟೋಪಿ ಹೊಲಿಯುವ ಊಲ್‌ದಾರಗಳು.

ನಂ 1ನೇ ಸುಪೀರಿಯರ್ ಊಲ್ 10 ಟೋಪಿಗಳಾಗುವ 8 ಲಡಿಗಳ ಬಂಡ್ಲು 1 ಕ್ಕೆ ರೂ 3 6-0 ಬಣ್ಣದಲ್ಲಿ ಎಣ್ಣೆಗೆಂಪು ಮತ್ತು ಘೇಟ ಕಪ್ಪು ನಂ 7ನೇ ಊಲ್ ದಾರ ಪೌಂಡು 1 ಕ್ಕೆ ರೂ 2 ಮಿಶ್ರ ಊಲ್ ದಾರ ಪೌಂಡು 1 ಕ್ಕೆ ರೂ 2 12 0 ಪಾರ್ಸಿ ಟೋಪಿಗಳು ಡಜನ್ 1 ಕ್ಕೆ ರೂ 10 ಮತ್ತು ರೂ 13-4 0 ಪಾರ್ಸಿ ಟೋಪಿ ವಗೈರೆ ಹಾಕುವ ಕೊಕ್ಕೆ ಸೂಜಿಗಳು 1 ಕ್ಕೆ 0 1 6, 2 ಆಣೆ, ಮತ್ತು 3 ಆಣೆ ಛಳಿಗಾಲಕ್ಕೆ ಅನುಕೂಲವಾದ ಹೊಸ ನಮೂನೆಯ ಬಾಲಕ್ಲಾವಾ (ಮುಸುಕಿನ ಟೋಪಿಗಳು) ದೊಡ್ಡವರಿಗೆ ಉಪಯೋಗದಕ್ಕೆ ರೂ 1 ಗೃಹಸ್ಥರ ಮತ್ತು ಸ್ತ್ರೀಯರ ಸಿಲ್ಕ್ ಕೈ ಟುವಾಲುಗಳು 1 ಕ್ಕೆ ಆಣೆ 6 8 ಸುಶೀಲ ಮಾಲತಿ —ಇದು ಉತ್ತಮ ರೀತಿಯ ಪರಿಮಳವಿದ್ದು ಮುಖಕ್ಕೆ ಲೇಪಿಸಿದ್ದಲ್ಲಿ ಮುಡುಮೆಗಳು ಹೋಗಿ ಚರ್ಮವು ಮೃದುವಾಗುವದು ಟಿನ್ 1 ಕ್ಕೆ ಆಣೆ 3, ಡಜನ್ 1 ಕ್ಕೆ ರೂ 1 8-0 ಸುಗಂಧ ನಶ್ಯ ಚೂರ್ಣ ಡಬ್ಬಿ 1 ಕ್ಕೆ ಆಣೆ 1 ಪ್ರಖ್ಯಾತಿಪಟ್ಟ ಪ್ರೊಫೆಸರ್ ಜೇಮ್ಸರವರ ವಿದ್ಯುಚ್ಛಕ್ತಿಯ ಮಾತ್ರೆಗಳು ಇದರ ಉಪಯೋಗದಿಂದ ಕೆಟ್ಟುಹೋದ ರಕ್ತವನ್ನು ಶುದ್ಧಮಾಡಿ ಕ್ಷಯಿಸಿದ ದೇಹವನ್ನು ಪುಷ್ಟಿಮಾಡುವದು ಜೀರ್ಣಶಕ್ತಿ ಹುಟ್ಟುವದು ಈ ಕುರಿತು ಸವಿಸ್ತಾರವಾದ ಸಾವಿರಾರು ಯೋಗ್ಯತಾ ಪತ್ರಗಳಿವೆ 20 ಮಾತ್ರೆಗಳಿರುವ ಶೀಸೆ 1 ಕ್ಕೆ ರೂ 1-4 0 40 ಮಾತ್ರೆಗಳಿರುವ ಶೀಸೆ 1 ಕ್ಕೆ ರೂ 2 ಜಗತ್ ಪ್ರಸಿದ್ಧವಾದ ಕಾಮಿನಿಯಾ ತೈಲ—ಶೀಸೆ 1 ಕ್ಕೆ ರೂ 1-0-0, ಟ ಕ 1 ಆಣೆ ಶೀಶೆ 3 ಕ್ಕೆ ರೂ 2 10-0 ಟ ಕ 7 ಆಣೆ ಶೀಸೆ 12 ಕ್ಕೆ ರೂ 9 9 0 ಟ ಕ ರೂ 1 8 0 ಸೆನ್ಸನ್ ಮಾತ್ರೆಗಳು —ಇವನ್ನು ಉಪಯೋಗಿಸಿದ್ದಲ್ಲಿ ಬಾಯಿಗೆ ರುಚಿಯಾಗಿ ಮಾತಾಡುವವರಿಗೆ ವಾಕ್ಶುದ್ಧಿಯಕ್ಕೆ ಗುಣಕಾರ್ಯವಾದ ಔಷಧಿ 100 ಮಾತ್ರೆಗಳಿರುವ ಪೆಕೆಟ್ 1 ಕ್ಕೆ 3 ಆಣೆ

[160 1] ವಿಳಾಸ— ದಿ ಊಲ್ ಮಾರ್ಟ್, ಮಂಗಳೂರು

ಬಹು ಉತ್ಕೃಷ್ಟವಾದ ಸಾಮಾನುಗಳು

ಇದು ನೋಡುವದಕ್ಕೆ ಬಹಳ ಚಿಕ್ಕದಾಗಿಯೂ, ಅಲಂಕಾರರೂಪಿಯೂ ಸರಿಯಾದ ಕಾಲವನ್ನು ತೋರಿಸುವದಾಗಿಯೂ ಇದೆ ಈ ಗಡಿಯಾರ ಜೇಬಿನಲ್ಲಿ

Rs 3-15-0

ಮತ್ತು ಕೈಯಲ್ಲಿ ಆಭರಣದಂತೆ ಇಟ್ಟುಕೊಳ್ಳಲು ಅನುಕೂಲವಾಗಿದೆ ಇದನ್ನು ಹಾದು ಕಚೇರಿಗಳಿಗೆ ಸ್ನೇಹಿತರ ಜೊತೆಗಳಲ್ಲಿ ಉಲ್ಲಾಸವಾಗಿ ಹೋಗುವಾಗಲೂ ಮೀಟಿಂಗ್ ಮುಂತಾದ ಸ್ಥಳಗಳಿಗೆ ಹೋಗುವದಕ್ಕೆ ಬಹಳ ಉಪಯೋಗವಾದದ್ದು ಅನೇಕ ದೊಡ್ಡ ಮನುಷ್ಯರು ಇದನ್ನು ಜೇಬಿನಲ್ಲಿ ಮತ್ತು ಕೈಯಲ್ಲಿ ಉಪಯೋಗಿಸಬಹುದು

ಗೋಡೆಗೆ ಹಾಕುವ ಎಂಟು ದಿನದ ಗಡಿಯಾರ ರೂ 7 12 0 ಮನೋಹರವಾದ ಪಿಟೀಲು ರೂ 9 ಮೂರಪ್ಪಟ್ಟಿಯ ಘನ ಕನ್ನಡಿ ರೂ 1 8 0, ಪ್ಯಾರ ಫೂಟ ಹಾರ್ಮೋನಿಯಂ ರೂ 37 ಸುಂದರವಾದ ಟೇಬಲ್ ಗಡಿಯಾರ ರೂ [illegible] 1 0 ಎಂಟು ದಿನಗಳ ಬೆಳ್ಳಿ ಗಡಿಯಾರ ರೂ 9 8 0 ನಿಕ್ಕಲ್ ಲೇಡಿ ವಾಚ್ ಚಕ್ಕಳ ಪಟ್ಟಿ ಕೂಡ ರೂ 2 15 0, 14 ಕ್ಯಾರೆಟ್ ಸಣ್ಣ ವಾಚ್‌ಗೆ ಒಂದು ಸ್ಪ್ರೆಂ 1 ಸವರಿನ್ ಬಹುಮಾನ ಸಮೇತ ಕ್ರಯ ರೂ 19 12-0 [263 1]

ವಿಳಾಸ—ಪತ್ತಿ ಅಂಡ್ ಕೋ, 10, ಜನರಲ್ ಮುತ್ಯಾ
ಮೊದಲಿ ವೀದಿ ಸಾಹುಕಾರ್ ಪೇಟೆ, ಮದ್ರಾಸ್

A MANUAL OF CRIMINAL LAW. ಕ್ರಿಮಿನಲ್ ಲಾ ಸಂಗ್ರಹ.

[257 1]

ಕ್ರಯ 2-ರೂಪಾಯಿ. ಟಪಾಲ್ ಖರ್ಚು 3 ಆಣೆ.

ಕೆಲವು ಕಾಪಿಗಳು ಮಾತ್ರ ಉಳಿದಿವೆ ಜಾಗ್ರತೆಪಡದಿದ್ದರೆ ಪುನಃ ಪ್ರಿಂಟಾಗುವ ವರೆಗೂ ದೊರೆಯಲಾರದು ಒಂದು ಪುಸ್ತಕವನ್ನು ತರಿಸಿಕೊಂಡವರು ಅನೇಕ ಪ್ರತಿಗಳಿಗೆ ಬರೆಯುವದೇ ಪ್ರತಿಗಳು ಜಾಗ್ರತೆ ಮುಗಿದುಹೋಗುವದಕ್ಕೆ ನಿದರ್ಶನವಾಗಿದೆ (ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ —1 ಪಿನಲ್‌ಕೋಡು, 2 ಮೈಸೂರು ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ದನ್ನಪಸ್ತುಗಳ ರೆಗ್ಯುಲೇಷನ್ 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಚುಟ್ಟಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್, ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿದೆ

ಪ್ರತಿ ಪಿನಲ್ ಸೆಕ್ಷನ್‌ಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ ? ಯಾ ಕೂಡದೆ ? ಮೊದಲು ಸಮನ್ ಹುಟ್ಟಬೇಕೋ ? ಯಾ ವಾರಂಟು ಹುಟ್ಟಬೇಕೋ ? ಜಾಮೀನ್ ತೆಗೆದುಕೊಳ್ಳಬಹುದೇ ಯಾ ಕೂಡದೆ ? ರಾಜಿಯಾಗಬಹುದೆ ಯಾ ಕೂಡದೆ ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 24 ೦ 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ

ಅಭಿಪ್ರಾಯಗಳು —(1) ಮ॥ ರಾ॥ ಶ್ರೀ ಬಿ ಸೂರ್ಯನಾರಾಯಣರಾವ್, ಎ ಎ ಎಂ ಆರ್ ಎ ಎಸ್ ಯವರು ಬರೆಯುಸುವದೇನೆಂದರೆ — ಮ॥ ರಾ॥ ಶ್ರೀ ವೆಂಕಾರೆಡ್ಡಿಯವರು ಇದಕ್ಕಿಂತಲೂ ಅತಿಶಯವಾದ ಕ್ರಿಮಿನಲ್ ಲಾ ಸಂಗ್ರಹ ಎಂಬ ಮತ್ತೊಂದು ಪುಸ್ತಕವನ್ನು ರಚಿಸಿರುತ್ತಾರೆ ಈ ಪುಸ್ತಕವು ಎಷ್ಟು ದೊಡ್ಡದಾಗಿದ್ದಾಗ್ಯೂ ಈ ಸಂಬಂಧವಾದ ಪುಸ್ತಕಗಳಲ್ಲಿ ಇದು ಅತ್ಯುತ್ತಮವಾದದ್ದಾಗಿದೆ ವಿಷಯಗಳನ್ನು ಬಹಳ ಚೆನ್ನಾಗಿ ವಿಂಗಡಿಸಿರುವುದಲ್ಲದೆ ಅನೇಕ ಉದಾಹರಣೆಗಳನ್ನೂ ಪ್ರಕರಣಾನುಸಾರವಾದ ಹೈ ಕೋರ್ಟು ತೀರ್ಮಾನಗಳನ್ನೂ ಕೊಟ್ಟಿರುತ್ತಾರೆ ಭಾಷಾ ಶೈಲಿಯು ಅತಿ ಸರಳವಾಗಿಯೂ ಮನೋರಂಜಕವಾಗಿಯೂ ಇರುತ್ತದೆ " (2) ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟಾದ ಮ॥ ರಾ॥ ಶ್ರೀ ಬಿ ವಿ ಕುಮಾರಸ್ವಾಮಿನಾಯಕರು ಬಿ ಎ , ಯವರು ಬರೆಯುಸುವದೇನೆಂದರೆ — ಕ್ರಿಮಿನಲ್ ಲಾ ಸಂಗ್ರಹವೆಂಬ ಪುಸ್ತಕದ ಇವರ ಪ್ರಕಟನೆಯೂ ಬಹಳ ದೊಡ್ಡ ಪ್ರಯತ್ನವೆಂಬ ವಿಷಯದಲ್ಲಿ ಸಂದೇಹವಿಲ್ಲ ಇವರು ಈ ವಿಷಯದಲ್ಲಿ ವಸ್ತುತಃ ಬಹಳ ಶ್ರಮತೆಗೆದುಕೊಂಡಿರುತ್ತಾರೆ ಇದು ಸುಲಭವಾದ ಕನ್ನಡ ಭಾಷೆಯಲ್ಲಿ ಬರೆಯಲ್ಪಟ್ಟಿರುತ್ತದೆ ಪ್ರತಿಯೊಬ್ಬರೂ ಸುಲಭವಾಗಿ ತಿಳಿದುಕೊಳ್ಳಬಹುದು " (3) ಮ॥ ರಾ॥ ಶ್ರೀ ಬಿ ರಾಮಣ್ಣನವರು, ಬಿ ಎ , ಎಲ್ ಎಲ್ ಬಿ, ಹೈ ಕೋರ್ಟ್ ವಕೀಲ್ ಮತ್ತು ಅಡ್ವೊಕೇಟರವರು ಬರೆಯುಸುವದೇನೆಂದರೆ — ತಮ್ಮ ಕ್ರಿಮಿನಲ್ ಲಾ ಸಂಗ್ರಹದ ಕೆಲವು ಭಾಗಗಳನ್ನು ಓದಿ ನೋಡಿದ್ದರಲ್ಲಿ ಈ ಪುಸ್ತಕವು ಬಹಳ ಮನೋರಂಜಕವಾಗಿಯೂ ಸುಬೋಧಕವಾಗಿಯೂ ಇರುತ್ತದೆ ಎಂದು ತಿಳಿಯಲಾಯಿತು ಇದು ಗ್ರಾಮಾಂತರಗಳಲ್ಲಿರತಕ್ಕವರಿಗೆ ಮಾತ್ರವಲ್ಲದೆ ಪಟ್ಟಣವಾಸಿಗಳಿಗೂ ಸಹ ಕ್ರಿಮಿನಲ್ ಲಾ ವಿಷಯವನ್ನು ತಿಳಿದುಕೊಳ್ಳುವದಕ್ಕೆ ಉಪಯೋಗವಾದದ್ದಾಗಿರುತ್ತದೆ ಇಂಥಾ ಉತ್ತಮವಾದ ಕಾರ್ಯವನ್ನು ಕೈಗೊಳ್ಳುವವರಲ್ಲಿ ಜಯವನ್ನು ಹೊಂದುವಿರೆಂದು ಕೇವಲ ಅಪೇಕ್ಷಿಸುತ್ತೇನೆ " (4) ಮ॥ ರಾ॥ ಶ್ರೀ ಸಿ ಕೃಷ್ಣಶಾಸ್ತ್ರಿಗಳು, ಬಿ ಎ , ಅಸಿಸ್ಟೆಂಟ್ ಕಮಿಷನರ್ ಮತ್ತು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರವರು ಬರೆಯುಸುವದೇನೆಂದರೆ — ತಮ್ಮ ಕ್ರಿಮಿನಲ್ ಲಾ ಸಂಗ್ರಹ ಪುಸ್ತಕವನ್ನು ಸಂಪೂರ್ಣವಾಗಿ ಓದಲು ಅವಕಾಶ ದೊರೆಯದ್ದರಿಂದ ಇದರ ಕೆಲವು ಭಾಗಗಳನ್ನು ಓದಿದೇನೆ ಈ ಪುಸ್ತಕವನ್ನು ನೀವು ರಚಿಸಿದ್ದಕ್ಕಾಗಿ ನಾನು ಬಹಳ ಸಂತೋಷಪಡುತ್ತೇನೆ ಇಂಗ್ಲೀಷಿನಲ್ಲಿ ಲಾ ಪುಸ್ತಕಗಳನ್ನು ತಿಳಿದುಕೊಳ್ಳುವಷ್ಟು ಇಂಗ್ಲೀಷ್ ವಿದ್ಯೆ ಸಾಲದ ಅನೇಕ ಜನರಿಗೆ ಇದು ಉಪಯೋಗವಾಗಿರುವದೆಂದು ನಾನು ಅಭಿಪ್ರಾಯಪಡುತ್ತೇನೆ ಕನ್ನಡದಲ್ಲಿ ಉತ್ತಮವಾದ ಲಾ ಪುಸ್ತಕಗಳಿಲ್ಲದ್ದರಿಂದ ಗ್ರಾಮಾಂತರಗಳಲ್ಲಿರುವ ಇಂಗ್ಲೀಷ್ ತಿಳಿಯದ ಜನರಿಗೆ ಕ್ರಿಮಿನಲ್ ಲಾ ವಿಷಯ ಗೊತ್ತಿರುವದಿಲ್ಲ ಇಂಥವರಿಗೆಲ್ಲಾ ನಿಮ್ಮ ಕ್ರಿಮಿನಲ್ ಲಾ ಸಂಗ್ರಹವು ನಿಶ್ಚಯವಾಗಿಯೂ ಬಹಳ ಪ್ರಯೋಜನಕಾರಿಯಾಗಿರುತ್ತದೆ " (5) ಅಡ್ವೊಕೇಟರಾದ ಮ॥ ರಾ॥ ಶ್ರೀ ಸುಬ್ರಾಯಮೊದಲಿಯಾರ್ರವರು ಬರೆಯುವದೇನೆಂದರೆ — ತಮ್ಮ ಕ್ರಿಮಿನಲ್ ಲಾ ಸಂಗ್ರಹವೆಂಬ ಪುಸ್ತಕವನ್ನು ಓದಿ ನೋಡಿದೆನು ನೀವು ಇದನ್ನು ಜಾಗರೂಕತೆಯಿಂದ ರಚಿಸಿರುವಿರೆಂದು ಇದನ್ನು ನೋಡಿದ್ದರಿಂದ ನನಗೆ ತಿಳಿಯಲಾಯಿತು ಇಂತಾದ್ದೊಂದು ಪುಸ್ತಕವು ಅವಶ್ಯಕವಾಗಿತ್ತು ಈ ನ್ಯೂನತೆಯನ್ನು ಹೋಗಲಾಡಿಸುವದಕ್ಕಾಗಿ ತಾವು ಮಾಡಿದ ಪ್ರಯತ್ನಕ್ಕೆ ನಾನು ಸಂತೋಷಿಸುತ್ತೇನೆ ಅನೇಕ ಪ್ರಕರಣಗಳ ಕೆಳಗೆ ಹೈ ಕೋರ್ಟು ತೀರ್ಮಾನಗಳನ್ನು ಕೊಟ್ಟಿರುವ ನೋಟುಗಳು ಬಹಳ ಉಪಯುಕ್ತಗಳಾಗಿವೆ ಈ ಪುಸ್ತಕವು ಮುಖ್ಯವಾಗಿ ಗ್ರಾಮಾಂತರಗಳಲ್ಲಿರುವ ಇಂಗ್ಲೀಷ್ ತಿಳಿಯದ ಲಾಯರುಗಳಿಗೂ ಮತ್ತು ಇತರರಿಗೂ ಬಹಳ ಉಪಯುಕ್ತವಾಗಿದೆ " (6) ಅಮಲ್ದಾರರೂ ಮತ್ತು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರೂ ಆದ ಮ॥ ರಾ॥ ಶ್ರೀ ಬಿ ಕೇಸರ್‌ಸಿಂಗರವರು ಬರೆಯುಸುವದೇನೆಂದರೆ — ತಮ್ಮ ಕ್ರಿಮಿನಲ್ ಲಾ ಸಂಗ್ರಹ ಪುಸ್ತಕವನ್ನು ಓದಿ ನೋಡಿದೆನು ಆಂಗ್ಲೇಯ ಭಾಷೆಯ ಪರಿಚಯವಿಲ್ಲದವರಿಗೆ ಕನ್ನಡ ತರ್ಜುಮೆಯಲ್ಲಿ ಕ್ರಿಮಿನಲ್ ಬಾಬಿನ ಕಾನೂನುಗಳನ್ನು ಒಳಗೊಂಡಿರುವ ಪುಸ್ತಕವು ಅತ್ಯವಶ್ಯಕವಾಗಿತ್ತು ಈಗ ನೀವು ರಚಿಸಿರುವ ಕ್ರಿಮಿನಲ್ ಲಾ ಸಂಗ್ರಹ ಎಂಬ ಪುಸ್ತಕದಿಂದ ಈ ಅನಾನುಕೂಲವು ನಿವಾರಣೆಯಾಗಿರುತ್ತದೆ ತಿಳಿದುಕೊಳ್ಳಲು ಕಷ್ಟಸಾಧ್ಯವಾದ ಸೆಕ್ಷನ್‌ಗಳ ಕೆಳಭಾಗದಲ್ಲಿ ಹೈ ಕೋರ್ಟ್ ರೂಲಿಂಗ್ಸ್‌ಗಳನ್ನು ನಮೂದಿಸಿರುವುದರಿಂದಲೂ, ಆಂಗ್ಲೇಯ ಶಬ್ದಗಳ ಅರ್ಥಕ್ಕೆ ನ್ಯೂನತೆಯುಂಟಾಗದಂತೆ ಸರಳಭಾಷೆಯಲ್ಲಿ ತಾವು ಈ ಪುಸ್ತಕವನ್ನು ಬರೆದಿರುವುದರಿಂದಲೂ ಮತ್ತು ಶಿಕ್ಷೆಯನ್ನು ಉದಹರಿಸುವ ಪ್ರತಿ ಸೆಕ್ಷನಿನ ಕೆಳಗೆ ಆಪರಣೆಯನ್ನು ಕಾಣಿಸಿರುವುದರಿಂದಲೂ ಈ ಪುಸ್ತಕವನ್ನು ಓದುವವರಿಗೆ ಬಹಳ ಸೌಕರ್ಯವನ್ನು ಉಂಟುಮಾಡಿದ್ದೀರಿ " (7) ಪೋಲೀಸ್ ಇನ್ಸ್‌ಪೆಕ್ಟರಾದ ಮ॥ ರಾ॥ ಶ್ರೀ ಎ ಚನ್ನಂರಾಜಯ್ಯನವರು ಬರೆಯುಸುವದೇನೆಂದರೆ — ತಮ್ಮ ಕ್ರಿಮಿನಲ್ ಲಾ ಸಂಗ್ರಹವೆಂಬ ಪುಸ್ತಕವನ್ನು ನೋಡಿದೆನು ಇದಕ್ಕೋಸ್ಕರ ತಾವು ತೆಗೆದುಕೊಂಡಿರುವ ಶ್ರಮವು ಶ್ಲಾಘ್ಯಕರವಾಗಿರುತ್ತದೆ ಈ ಪುಸ್ತಕದಲ್ಲಿ ಅನೇಕ ಕ್ರಿಮಿನಲ್ ಲಾ ವಿಷಯಗಳು ಬಂದಿರುವದರಿಂದ ಕನ್ನಡವನ್ನು ಸಾಧಾರಣವಾಗಿ ತಿಳಿದವರೆಲ್ಲರಿಗೂ ಈ ಪುಸ್ತಕದಿಂದ ಬಹಳ ಅನುಕೂಲ ಕಲ್ಪಿಸಿದಂತೆ ಆಯಿತು ಇದರಲ್ಲಿ ನೋಟುಗಳೆಂದು ಅಲ್ಲಲ್ಲಿ ಉದಹರಿಸಿರುವ ಹೈ ಕೋರ್ಟು ತೀರ್ಮಾನಗಳೂ ಮತ್ತು ಪ್ರತಿಯೊಂದು ವಿವಾದ ತಪ್ಪಿತಗಳನ್ನೂ ಬೇರೆಬೇರೆ ತಂಡವಾಗಿ ವಿಂಗಡಿಸಿ ಸೂಚಿಸಿರುವದು ಸಹಾ ಪ್ರಜೆಗಳಿಗೂ, ಪೋಲೀಸಿನವರಿಗೂ ಮತ್ತು ಕ್ರಿಮಿನಲ್ ಪರೀಕ್ಷೆಗೆ ಓದುವವರಿಗೂ ಸಹಾ ಬಹಳ ಉಪಯುಕ್ತಕರವಾಗಿರುತ್ತದೆ ಇಂಥಾ ಪುಸ್ತಕವನ್ನು ನಾನು ಇದುವರೆಗೂ ನೋಡಿರಲಿಲ್ಲ " ಇವುಗಳಲ್ಲದೆ ಇನ್ನೂ ಅನೇಕ ದೊಡ್ಡ ಮನುಷ್ಯರ ಒಳ್ಳೇ ಅಭಿಪ್ರಾಯಗಳಿವೆ.

ವಿಳಾಸ:—ಎಲ್. ವೇಮಾರೆಡ್ಡಿ, ಕಂಟ್ರಾಕ್ಟರ್ ಮತ್ತು ಕ್ರಿ॥ ಪ್ಲೀಡರ್, ಮಾಲೂರು, ಕೋಲಾರ ಡಿಸ್ಟ್ರಿಕ್ಟ್.

ವಿದ್ಯಾಸಾಗರ ಬುಕ್ ಡಿಪೋ
ಚಿಕ್ಕಪೇಟೆ, ಬೆಂಗಳೂರು ಸಿಟಿ

ಇಲ್ಲಿ ಇಂಗ್ಲೀಷು ಮತ್ತು ಕನ್ನಡ ಸ್ಕೂಲ್ ಪುಸ್ತಕಗಳೂ, ಸ್ಟೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ (1) ವೈದ್ಯಸಾರಸಂಗ್ರಹ— ದೊಡ್ಡ ವೈದ್ಯಗ್ರಂಥ, ಟಪಾಲು ಖರ್ಚು ಸೇರಿ ಈಗ ರೂ 3 6 0 (2) ಶಿವಾನಂದ ಲಹರಿ, ಟೀಕಾ ತಾತ್ಪರ್ಯ ಸಹಿತ—6 ಆಣೆ (3) ಸಂಗ್ರಹ ರಾಮಾಯಣ— [illegible] ಆಣೆ (4) ವಿಷ್ಣುಸಹಸ್ರನಾಮಸ್ತೋತ್ರ ಶ್ರೀಮಚ್ಛಂಕರಭಾಷ್ಯದೊಡನೆ ಸಹ—1 ರೂ [illegible] ಆಣೆ (5) ವೃಷಭೇಂದ್ರವಿಜಯ —3 ರೂ (6) ಸೂರ್ಯನಮಸ್ಕಾರ—[illegible] ಆಣೆ (7) ಉದರಕಾಂತಿ ಮಾತ್ರೆ—3 ಆಣೆ (8) ಸಹಾಯವಿಲ್ಲದೆ ಇಂಗ್ಲೀಷ್ ಕಲಿಯುವ ಪುಸ್ತಕ ರೂ 1 8 0 (9) ಜಮಾ ಖರ್ಚಿನ ಪದ್ಧತಿ 12 ಆಣೆ [265 1]

ಕುಂತಲಾನಂದ ತೈಲವು

192 1?

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಬೆಳ್ಳಿಯ ಪದಕಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳನ್ನು ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ಶೀಘ್ರವಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ

ನಮ್ಮ ವಿಳಾಸ —ಪಿ ಎಮ್ ನಾಥ ಮತ್ತು ಕಂಪೆನಿ

ವೇಪೇರಿ, ಮದರಾಸ್

ಜೈಕ್ ರವರ ಉತ್ತಮೋತ್ತಮ ಆಯಿಂಟ್‌ಮೆಂಟು

ಇದು ವೈದ್ಯಶಾಸ್ತ್ರ ಪ್ರಕಾರ ತಯಾರಾದ ಉತ್ತಮವಾದ ತೈಲವು ಇದನ್ನು ಹಚ್ಚಿದರೆ ಬಹಳ ದಿನಗಳಿಂದಲೂ ಇರತಕ್ಕ ಪಡೆ, ಕೆಂಪು, ಕಪ್ಪು, ತುರಿ, ಹುಳುಕಡ್ಡಿ, ಸಡುವಿನ ಕೆಸತ, ಎಲ್ಲಾ ತರದ ರಣಗಳು, ಯುಣ್ಣುಗಳು ಬಹು ವೇಗವಾಗಿ ಬೆಂಕಿಯಲ್ಲಿ ಬಿದ್ದ ಪತ್ತಿಯಂತೆ ಧ್ವಂಸವಾಗಿ ಮಾಯವಾಗುತ್ತವೆ ಕತ್ತಿ ಚಾಕು ಮೊದಲಾದ ಆಯುಧಗಳಿಂದ ಉಂಟಾಗುವ ಗಾಯಗಳಿಗೆ ಪಟ್ಟಿಗೆ ಬದಲಾಗಿ ಈ ತೈಲವನ್ನೇ ಉಪಯೋಗಿಸಬಹುದು ಇದನ್ನು ಗೋಶಾಲೆಗಳ ಹುಣ್ಣುಗಳಿಗೂ ಕುದುರೆ ನಾಯಿ ಮೊದಲಾದ ಪ್ರಾಣಿಗಳ ಗಾಯಗಳಿಗೂ ಯುಕ್ತವಾದ ಔಷಧ ಈ ಔಷಧವನ್ನು ಕಂಡುಹಿಡಿದು ತಯಾರ್ ಮಾಡುವುದಕ್ಕೆ ಬಹಳ ಶ್ರಮವನ್ನೂ ಕಾಲವನ್ನೂ ಹಣವನ್ನೂ ವಿನಿಯೋಗಿಸಿರುತ್ತೇವೆ ಈ ಆಯಿಂಟ್‌ಮೆಂಟು ದಸಾವಿರಾರು ಜನಗಳಿಗೆ ಗುಣಮಾಡಿರುತ್ತದೆ ನಕ್ಕಲ್ ತೈಲಗಳನ್ನು ನೋಡಿ ಮೋಸಹೋಗಬೇಡಿ ನಮ್ಮ ಗುರುತಿರುವುದನ್ನು ನೋಡಿ ಕೊಂಡುಕೊಳ್ಳಿ ಔಷಧದ ಕೂಡ ಅನುಪಾನ ಪತ್ರಿಕೆ ಉಂಟು ಕ್ರಯ 1 ಬಾಟ್ಲಿಗೆ ರೂ 1 ಸಣ್ಣ ಬಾಟ್ಲಿಗೆ 10 ಆಣೆ ವಿ ಪಿ ಛಾರ್ಜಿ ಬೇರೆ

ಜೈಕ್ ಗುಲಾಬ್ ಬಲಕರಿ ಇದು ನರಗಳನ್ನು ಬಲಪಡಿಸುವುದರಲ್ಲಿ ಪ್ರಖ್ಯಾತವಾದದ್ದು ಕ್ರಯ ರೂ 2 ಇದನ್ನು ಒಂದು ಸಲ ತರಿಸಿ ಪರೀಕ್ಷಿಸಿ

[213 3] ವಿಳಾಸ—ಜೆ ಗುಲಾಬ್ ಚಂದ್ ಪೌವಾರ್

60 ನೆ ನಸ್ಪನಾಯಕ್ ಬೀದಿ ಪಾರ್ಕ್ ಟೌನ್, ಮದರಾಸ್

ನಿನಗೆ ಸ್ವಸ್ಥವಿಲ್ಲವೋ ?

ನನಗೆ ಸ್ವಸ್ಥವಿಲ್ಲವೆಂದು ತೋರಿದಾಗ—ಎಂದರೆ, ನನಗೆ ಯಾವ ನೋವೇ ಉಂಟಾಗಿರಲಿ— ನನಗೆ ದಿನಕ್ಕೆ ಒಂದು ಸಲವಾದರೂ ಕಾಲಪ್ರವೃತ್ತಿಯಾಗುತ್ತಿದೆಯೋ ? ಎಂದು ನನ್ನನ್ನು ನಾನೇ ಕೇಳಿಕೊಂಡು ಹಾಗೆ ಆಗದಿದ್ದರೆ ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳಲ್ಲಿ ಎರಡೋ ಅಥವಾ ಮೂರೋ ರಾತ್ರಿ ಮಲಗುವುದಕ್ಕೆ ಮುಂಚೆ ತೆಗೆದುಕೊಂಡು ಮಾರನೇ ದಿನ ಬೆಳಿಗ್ಗೆ ಸುಖವಾಗಿ ಕಾಲಪ್ರವೃತ್ತಿಯಾಗಿ ನನಗೆ ಸ್ವಸ್ಥವಾಗುವುದು ಮಲಬಂಧವೆಂಬುವುದರ ಅರ್ಥವೇನೆಂದರೆ ಮಲಾಶಯದಿಂದ ಮಲವು ಹೊರಗೆ ಬಾರದೆ ಅಲ್ಲಿಯೇ ಬಹಳ ಹೊತ್ತು ತಡೆಯಲ್ಪಟ್ಟು ವಿಷವಾಗಿ ಕೆಡುತ್ತಿರುವುದು ಈ ವಿಷವೇ ಪ್ರಪಂಚದ ರೋಗಗಳೊಳಗೆ ಅರ್ಧರೋಗಕ್ಕೆ ಮೂಲಕಾರಣವಾಗಿರುವುದು ಮಲಬಂಧದಿಂದ ರೋಗಗಳೇಕೆ ಉಂಟಾಗುವುವೆಂಬುದನ್ನು ಇದರಿಂದ ತಿಳಿಯಬಹುದು ಆ ರೋಗಗಳಾವುವೆಂದರೆ —ಪಿತ್ತಕೋಶರೋಗ ಪಿತ್ತ ಪಿತ್ತಜ್ವರ ಅಜೀರ್ಣ ಅಗ್ನಿಮಾಂದ್ಯ ಗಾಬರಿ ಅಶಕ್ತಿ ಎದೆಯು ತಲ್ಲಣಿಸುವುದು ತಲೆತಿರುಗುವುದು ತಲೆನೋವು ಹೊಟ್ಟೆಯುಬ್ಬರ ಕುಳಿತೇಗಿನ ಹೊಟ್ಟೆನೋವು ಹೆಂಗಸರ ವ್ಯಾಧಿಗಳು ಇವೇ ಮೊದಲಾದವು ಹೀಗೆಯೇ ಬಿಟ್ಟುಬಿಟ್ಟರೆ ರಕ್ತವು ಕೆಟ್ಟು ಆರೋಗ್ಯವೇ ನಾಶವಾಗಿ ಹೋಗುವುದು

(ಗಿ ಆಣೆ ಬುಡ್ಡಿ ಪರಿಮಾಣ)

ಡೋನ್ ರವರ ಜೀರ್ಣಕಾರಿಯಾದ ಗುಳಿಗೆಗಳು ಗಿಡಮೂಲಿಕೆಗಳಿಂದಲೇ ತಯಾರಾದುವು ಗಂಡುಸರಿಗಾಗಲಿ ಹೆಂಗುಸರಿಗಾಗಲಿ ಮಕ್ಕಳಿಗಾಗಲಿ ಶರೀರದಲ್ಲಿರುವ ಮಲವನ್ನೂ ಕಶ್ಮಲವಾದ ವಾಯುವನ್ನೂ ಮಲಾಶಯದಿಂದ ಹೊರಕ್ಕೆ ತೆಗೆ, ಪಿತ್ತಕೋಶವನ್ನು ಬಲಪಡಿಸಿ, ಪಿತ್ತದ ನೀರು ಚೆನ್ನಾಗಿ ಇಳಿಯುವಂತೆ ಮಾಡಿ ಅಂಗವನ್ನೆಲ್ಲಾ ಶುಚಿಯಾಗಿಯೂ ಹಿತವಾಗಿಯೂ ಇಟ್ಟು, ತಪ್ಪದೆ ರೋಗವನ್ನು ಪರಿಹರಿಸಿ, ಆರೋಗ್ಯವನ್ನುಂಟುಮಾಡುವುವು [181 14]

ಬೆಲೆ ೪ ಆಣೆ, ೮ ಆಣೆ ಮತ್ತು ೧೨ ಆಣೆ ೧೨ ಆಣೆ ಬುಡ್ಡಿಗಳಲ್ಲಿ ೬೦ ಮಾತ್ರೆಗಳು ಎಂದರೆ ೪ ಆಣೆ ಬುಡ್ಡಿಗಳಲ್ಲಿರುವುದಕ್ಕೆ ೫ ರಷ್ಟು ಹೆಚ್ಚು ಮಾತ್ರೆಗಳಿರುವುವು ಔಷಧಗಳನ್ನು ಮಾರುವವರ ಬಳಿಯಲ್ಲಾ ದೊರೆಯುವುವು ಅಥವಾ ಡೋನ್, ಪಿ ಪಿ ಬಾಕ್ಸ್ ೩೦, ಬೊಂಬಾಯಿ—ಇವರಲ್ಲಿ ದೊರೆಯುವುದು

The National Insurance & Banking Co., Ltd.,
Amristsar.

NOTICE TO INSURANCE POLICY HOLDERS

It is hereby requested that those who have not received the Head Office receipts for the amounts paid by them on account of premiums or advances either to Mr M L Nagannah who was formerly our Chief Agent and whose services have now been dispensed with or to his sub agents should immediately communicate with the undersigned and send under registerd post any temporary receipt they might have received from the aforesaid Mr Nagannah or his sub agent

I understand that Mr M L Nagannah who is no more our agent has been informing the policy holders of the National Insurance and Banking Co, Ltd Amritsar that he is authorised to get the policies assigned to his company This information you will be surprised to learn is quite un authenticated Any one acting up to the advices of Mr M L Naganah will do so at his own risk

In this connection I may inform the policy holders and the public in general that the "Mysore Government Security is published by the managing agent of the Mysore Government Security Life and Marriage Assurance Co Ltd **does not mean** that the Mysore Government will stand as security for the clients of that company but probably it was intended to mean that any available funds of the company will be invested in the Mysore Government securities This is done by almost all the companies

NOTICE TO PROVIDENT FUND POLICY HOLDERS

The policy holders of the Provident Fund Department of the company will be surprised to learn that the clause reading Bonus to the assured under the marriage scheme will not be less than double and not more than 15 times the premiums paid in the prospectus circulated to the public over the signature of Mr M L Naganah our late Chief agent for the provinces of Mysore and Coorg was quite unauthorised and unapproved by the company The reading of the prospectus issued by the company is— Double the premiums paid are advanced by the Directors on the day of the marriage when the state of funds permit and when there is a reliable agent in the station This advance is discretionary but not compulsory

T S. R. Iyer,
Secretary,
Amritsar National Insurance Buildings, Mysore.

[216 8]

ಗೃಹಕೃತ್ಯದ ನೋಟೀಸ್

ಚನ್ನಪಟ್ಟಣದ ತಾಲ್ಲೂಕು ಅಬ್ಬೂರು ಗ್ರಾಮದಲ್ಲಿರುವ ಶ್ರೀನಿವಾಸಾಚಾರ್ರು ಮತ್ತು ಕಾಲ ಮೃತಪಟ್ಟ ಇರುವ ಭೀಮಣ್ಣ, ಗೋವಿಂದಪ್ಪನವರು ಸಹ ಅವಿಭಕ್ತ ಸಹೋದರರು ನನ್ನ ಗಂಡ ಗೋವಿಂದಪ್ಪನವರು ಸರ್ಕಾರಿ ಕೆಲಸಕ್ಕಾಗಿ ಪರಸ್ಥಳಗಳಲ್ಲಿ ವಾಸವಾಗಿರುತ್ತಿದ್ದ ಕಾರಣದಿಂದ ಮೇಲ್ಕಂಡ ಅಬ್ಬೂರು ಗ್ರಾಮದಲ್ಲಿರುವ ಕುಟುಂಬದ ಆಸ್ತಿಗಳನ್ನೂ ಮನೆಯನ್ನೂ ಸದರಿ ಶ್ರೀನಿವಾಸಾಚಾರ್ರ ವಶ ಮೇನೇಜ್‌ಮೆಂಟಿಗೆ ಬಿಟ್ಟಿರು ಈ ಶ್ರೀನಿವಾಸಾಚಾರ ರೂ ತಮ್ಮ ಹಕ್ಕನ್ನು ವಿಕ್ರಿ ಮೂಲಕ ಕಳೆದುಕೊಂಡು ಇರುವದರಿಂದಲೂ, ಮೃತಪಟ್ಟ ಭೀಮಣ್ಣನವರಿಗೆ ಮಕ್ಕಳಿಲ್ಲದ್ದರಿಂದಲೂ ವಿಶಿಷ್ಟ ಸ್ವತ್ತುಗಳೂ ಗೋವಿಂದಪ್ಪನವರ ಮಕ್ಕಳಿಗೆ ಮಾತ್ರ ಸಮಭಾಗವಾಗಿ ಸೇರತಕ್ಕದ್ದಾಗಿವೆ ಹೀಗಿರುವಲ್ಲಿ ನೆಪಮಾತ್ರಕ್ಕೆ ವಿಶಿಷ್ಟ ಸ್ವತ್ತು ನಿಗಾವಣೆ ನೋಡುತ್ತಿದ್ದ ಶ್ರೀನಿವಾಸಾಚಾರ್ರು ಹಾಲಿ ಕೆಲವರ ದುರ್ಬೋಧನೆಯಿಂದ ಪರಭಾರೆ ಮಾಡುವದಾಗಿ ತಿಳಿಯಬರುವದರಿಂದ ಸದರಿಯವರಿಂದ ಕ್ರಯ ಆಧಾರ ಭೋಗ್ಯ ವಿಲ್ ವಗೈರೆ ಯಾರೊಬ್ಬರೇ ಆದರೂ ಬರಸಿಕೊಂಡಲ್ಲಿ ಅದು ಊರ್ಜಿತವಾಗಲಾರದು ಎಂದು ತಿಳಿಯಪಡಿಸಿದೆ

[201 ?] ವೆಂಕಟಸುಬ್ಬಮ್ಮನ ರುಜು

ಗೃಹಕೃತ್ಯದ ನೋಟೀಸು

ನೆಲಮಂಗಲದ ಗ॥ ಎ ವಿ ಸ್ಕೂಲ್ ಹೆಡ್ ಮಾಸ್ಟರಾದ ನಿವಾರಣಪ್ಪನು ಇದರಿಂದ ಸರ್ವರಿಗೂ ತಿಳಿಯಪಡಿಸುವುದೇನೆಂದರೆ—ನನ್ನ ತಂದೆ ಸೆಟ್ಟಿ ಸಿದ್ಧಣ್ಣನವರೂ ನನ್ನ ಚಿಕ್ಕ ತಂದೆ ಚೆನ್ನವೀರಸೆಟ್ಟರೂ ಅವಿಭಕ್ತ ಸಹೋದರರಾಗಿ ಮೃತಪಟ್ಟರು ಚಿಕ್ಕ ತಂದೆಯ ಮಗ ಅವಿಭಕ್ತನಾದ ಸಿದ್ಧನಂಜಪ್ಪ ಸೆಟ್ಟಿಯೂ ಅಪುತ್ರವಂತನಾಗಿ ಮೃತಪಟ್ಟನು ನಮ್ಮ ಅವಿಭಕ್ತ ಕುಟುಂಬಕ್ಕೆ ಸೇರಿದ ಸೊತ್ತುಗಳು ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು, ಇಸುವನಹಳ್ಳಿ, ಕಳಲಘಟ್ಟ, ನಿಡುವಂದ, ದಾಸೇನಹಳ್ಳಿ ಗ್ರಾಮಗಳ ಬಳಿ ನನ್ನ ಮತ್ತು ನನ್ನ ಚಿಕ್ಕಪ್ಪಂದಿರ ಮತ್ತು ಚಿಕ್ಕಪ್ಪನವರ ಮಗನ ಹೆಸರಿಗೆ ಖಾತೆ ಇರುತ್ತೆ ಮೇಲೆ ನಮೂದಾಗುವ ನಮ್ಮ ಒಟ್ಟು ಕುಟುಂಬದ ಸೊತ್ತುಗಳನ್ನು ಅಪುತ್ರವತಿ ನನ್ನ ಚಿಕ್ಕಮ್ಮ ಚಿನ್ನಬಸವಮ್ಮನೂ ಈಕೆಯ ಸೊಸೆ ಚೆನ್ನವೀರಮ್ಮನೂ ಸಹ ಕ್ರಯ ಭೋಗ್ಯ ದಾನ ಆಧಾರ ವಗೈರೆ ಪರಭಾರೆ ಮಾಡುವ ಹಕ್ಕುಳ್ಳವರಾಗಿಲ್ಲ ಇದರಿಂದ ಆ ಸೊತ್ತುಗಳನ್ನು ಯಾರು ಯಾವ ವಿಧವಾಗಿ ಪಡೆದರೂ ಅದು ಊರ್ಜಿತವಾಗದೆ ಕೊಟ್ಟ ಹಣವನ್ನು ಕಳೆದುಕೊಳ್ಳುತ್ತಾರಲ್ಲದೆ ನನ್ನ ಎಲ್ಲಾ ನಷ್ಟಗಳಿಗೂ ಗುರಿಯಾಗಬೇಕಾಗುತ್ತೆ [262 1]

1 12 1913 ನಿವಾರಣಪ್ಪ

ಗೃಹಕೃತ್ಯದ ನೋಟೀಸು

ಮೇಲೂರು ತಾಲ್ಲೂಕು ಅರೆಹಳ್ಳಿ ಹೋಬಳಿ ಕಸಬಾದಲ್ಲಿರುವ ಮೊಹಿದೀನ್ ಮಲ್ಲಿಕ್ ಸಾಹೇಬರ ಮಗ ಫಕೀರುದ್ದೀನ್ ಸಾಬಿಯು ಇದರಿಂದ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ—ಸದರಿ ಅರೆಹಳ್ಳಿ ಹೋಬಳಿ ತುಂಬದೇವನಹಳ್ಳಿ ಗ್ರಾಮದಲ್ಲಿ ನಾಲ್ಕುಕಡೆ ಕಾಫಿ ಪ್ಲಾಂಟರ್ ಮಿ॥ ಮಹಮ್ಮದ್ ಹುಸೇನ್ ಸಾಹೇಬರ ತೋಟದ ಮಧ್ಯೆ ಇರುವ ಸರ್ವೆ ನಂಬರು 57 ನೇ ಎಕರೆ 23, ಅ ಕಾರ ರೂ 23 ಉಳ್ಳ ಕಾಫಿ ತೋಟವು ನನ್ನ ಸ್ವಯಾರ್ಜಿತವಾಗಿ, ನನ್ನ ಸ್ವಾಧೀನಾನುಭವದಲ್ಲಿರುತ್ತದೆ ಹೀಗಿರುವಲ್ಲಿ ನನ್ನ ತೋಟದ ಸುತ್ತಲೂ ಇರುವ ಮೇಲ್ಕಂಡ ಕಾಫಿ ಪ್ಲಾಂಟರ ತೋಟವು ಯೂರೋಪಿಯನ್ನರಿಗೆ ವಿಕ್ರಿಯಾಗುವುದಾಗಿ ವರ್ತಮಾನ ಕೇಳುತ್ತೇನೆ ಮೇಲ್ಕಂಡ ಪ್ಲಾಂಟರ ತೋಟವನ್ನು ವಿಕ್ರಿಗೆ ಪಡೆಯುವವರು ನನ್ನ ಬಾಬತು 57 ನೇ ನಂಬರು ತೋಟ ವಿನಹಾ ಮಿಕ್ಕದನ್ನು ಪಡೆಯುವುದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ ಹಾಗೆ ಮಾಡದೆ ಒಬ್ಬೆನಲ್ಲಿ ಸದರಿ ನನ್ನ ನಂಬರ್ ತೋಟವನ್ನೂ ಸೇರಿಸಿ ತೆಗೆದುಕೊಂಡರೆ ಅವರು ಕೊಡುವ ಮೊಬಲಗಿಗೂ ನನ್ನ 57ನೇ ನಂಬರು ತೋಟಕ್ಕೂ ಯಾವ ಸಂಬಂಧವೂ ಉಂಟಾಗುವುದಿಲ್ಲ ಅದಕ್ಕಾಗಿಯೇ ಮೊದಲು ಈ ಮೂಲಕ ಎಚ್ಚರಿಸಿರುತ್ತೇನೆ ಇದರ ಮೇಲೂ ಯಾರಾದರೂ ಮೇಲ್ಕಂಡ ನನ್ನ ತೋಟವನ್ನು ಸೇರಿಸಿ ವಿಕ್ರಿಗೆ ಪಡೆದರೆ ಅದು ಊರ್ಜಿತವಾಗದೆ ನನ್ನ ಎಲ್ಲಾ ನಷ್ಟಗಳಿಗೂ ಅವರು ಗುರಿಯಾಗಬೇಕಾಗುತ್ತದೆಂದು ಈ ಮೂಲಕ ಪ್ರಕಟಪಡಿಸಿದೆ [264 1]

20 11 13 ಫಕೀರುದ್ದೀನ್ ಸಾಬಿಯ ಗೆರೆ ರುಜು

ದರ್ಬಾರಿಗೋಸ್ಕರಲೇ ತಯಾರ್ ಮಾಡಿದ್.

ಈ ಸಮಯವನ್ನು ಕಳೆದುಕೊಳ್ಳಬೇಡಿ ಬಹಳ ಸ್ವಲ್ಪವೇ ಉಳಿದಿವೆ

ರೈಲ್ವೆ ರೆಗ್ಯುಲೇಟರ್

ಬಹಳ ಒಳ್ಳೇ ವಾಚು ಸರಪಣಿ ಉತ್ತರವಾದಿ ಸಮೇತ ಕ್ರಯ ರೂ 2 4-0, ಐದು ವರುಷ ಜಾಮೀನ್ ಗುಂಡಿಗೆ ಸರಿಯಾದ ಕಾಲ ತೋರಿಸುತ್ತದೆ ಒಳ್ಳೆ ಓದ ಉಪಯೋಗಕ್ಕೆ ತಡೆಯುತ್ತೆ ಎರಡು ಕಡೆಗಳಲ್ಲೂ ಮುಂದವಾದ ಕನ್ನಡಿ ಹಾಕಿದೆ ಇಷ್ಟು ಅಲ್ಪ ಕ್ರಯಕ್ಕೆ ಇಂಥಾ ಉತ್ಕೃಷ್ಟವಾದ ವಾಚ್ ಇನ್ನೆಲ್ಲಿ ಸಿಕ್ಕುವುದಿಲ್ಲ ಬೇಗ ಬರೆಯಿರಿ [208 1]



ವಿಳಾಸ—ಪಿ ಎ ರಜಾಕ್ ಕಂಪನಿ, ಗವರ್ನ್‌ಮೆಂಟ್ ಕಂಟ್ರಾಕ್ಟರ್ಸ್, ರತನ್ ಬಜಾರ್, ಮದರಾಸ್

ಹಿಂದುಸ್ಥಾನದಲ್ಲಿ ಮಕ್ಕಳು

ಬಹಳ ಉಷ್ಣರಾಷ್ಟ್ರವಾದದ್ದರಿಂದ ನಾನಾ ಬಾಧೆಗಳನ್ನು ಸಹಿಸಿಕೊಂಡು ಬೆಳೆಯಬೇಕಾಗಿದೆ

ಅವರ ಸ್ನಾಯುಗಳೂ ಮೂಳೆಗಳೂ ಮಾಂಸಖಂಡಗಳೂ ಸರಿಯಾಗಿ ಬಲಹೊಂದಿ ಬೆಳೆಯುವದಕ್ಕೆ ಅವರಿಗೆ ಬಹಳ ಉಪಕಾರಿಯಾದ ಸೇವನಾ ಔಷಧವನ್ನು ಕೊಡುವುದು ಅವಶ್ಯಕ

SCOTT'S EMULSION 2 0

(ಸ್ಕಾಟ್ಸ್ ಇಮಲ್‌ಷನ್)

ಎಂಬ ಸೇವನಾ ಔಷಧದಲ್ಲಿ ಮಕ್ಕಳ ಸಮಸ್ತ ಅಂಗಗಳನ್ನೂ ಬಲಪಡಿಸಿ ಬೆಳೆಸುವಂಥಾ ಬಹು ಉತ್ಕೃಷ್ಟವಾದ ಗುಣಗಳಿರುತ್ತವೆ

Always get the Emulsion with this mark—the Fishman—the mark of the "Scott" process

ಮೀನುಮನುಷ್ಯ ಇರುವ ಈ ಔಷಧದ ಗುರುತು

ಇದಕ್ಕೆ ಸಮಾನವಾದದ್ದು ಮತ್ತ್ಯಾವುದೂ ಇಲ್ಲ.

ಈ ಔಷಧವನ್ನು ಸೇವನೆ ಮಾಡುತ್ತಾ ಬಂದ ಒಡನೆಯೇ ಅದರ ಗುಣಗಳು ಕಾಣುತ್ತವೆ

ಕೈಯಿಂದ ಮುಟ್ಟಿದರೇನೇ ತಿಳಿಯುವುದು

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ಬಿಕರಿಯಾಗುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ವೃತ್ತಾಂತ ಪತ್ರಿಕೆ.

—:o:—

ಸ. ೧೯೧೩ ನೇ ಇಸವಿ ಡಿಸೆಂಬರ್, ತಾ. ೧೧ ನೇ ಗುರುವಾರ.

ವ್ಯವಸಾಯವಿದ್ಯಾ ಶಿಕ್ಷಣವು.

ನಮ್ಮ ಮೈಸೂರು ಸಂಸ್ಥಾನವು ಶ್ರೇಯಸ್ಸಿಗೆ ಬರಬೇಕಾದರೆ ಮುಖ್ಯವಾಗಿ ಇಲ್ಲಿನ ವ್ಯವಸಾಯ ಕ್ರಮಗಳು ಬಹಳ ಮಟ್ಟಿಗೆ ಚೆನ್ನಾಗಬೇಕು. ಯಾಕಂದರೆ ವ್ಯವಸಾಯವೇ ನಮ್ಮ ಸೀಮೆಯ ಮೊದಲನೇ ಕಸಬಾಗಿರುತ್ತದೆ. ನಮ್ಮ ಗವರ್ನಮೆಂಟಿನವರು ಇದನ್ನು ತಿಳಿದು, ವ್ಯವಸಾಯದ ಇಲಾಖೆಯನ್ನು ಪ್ರತ್ಯೇಕವಾಗಿ ಮಾಡಿಟ್ಟು, ಅದಕ್ಕೆ ಡಾಕ್ಟರ್ ಕೋಲ್‌ಮೆರ್‍ರವರನ್ನು ಮುಖ್ಯಾಧಿಕಾರಿಯಾಗಿ ನೇಮಿಸಿರುತ್ತಾರೆ. ಈ ಅಧಿಕಾರಿಯು ನಮ್ಮ ಸರ್ಕಾರದವರ ಅನುಮತಿಯನ್ನು ಪಡೆದು ಕೆಲವು ದಿನಗಳ ಹಿಂದೆ ಯೂರೋಪ್, ಅಮೇರಿಕ, ಜರ್ಪಾನ್ ರಾಜ್ಯಗಳಲ್ಲಿ ಸಂಚಾರಮಾಡಿ, ಅಲ್ಲಲ್ಲಿ ಪ್ರಜೆಗಳಿಗೆ ವ್ಯವಸಾಯವಿದ್ಯೆಯನ್ನು ಕಲಿಸುವುದಕ್ಕೆ ಆಯಾ ಗವರ್ನಮೆಂಟಿನವರು ಯಾವ ವಿಧವಾದ ಏರ್ಪಾಡುಗಳನ್ನು ಮಾಡಿಕೊಂಡಿದಾರೆಂಬುವುದನ್ನು ಸಾಕ್ಷಾತ್ತಾಗಿ ನೋಡಿಕೊಂಡು ಬಂದರು. ಮೈಸೂರು ಗವರ್ನಮೆಂಟಿನವರು ಡಾ॥ ಕೋಲ್‌ಮೆರ್‍ರವರು ಬರೆದಿರುವ ಅನುಭವಪೂರ್ವಕವಾದ ಅಭಿಪ್ರಾಯಗಳನ್ನು ಇಂಗ್ಲಿಷಿನಲ್ಲಿ ಈಗತಾನೇ ಪ್ರಕಟಮಾಡಿದಾರೆ. ಈ ಪುಸ್ತಕವು ಓದುವುದಕ್ಕೆ ಬಹು ಸ್ವಾರಸ್ಯವಾಗಿರೋಣದರಿಂದ ಚೆನ್ನಾಗಿ ಓದಿ ಗ್ರಹಿಸುವುದಕ್ಕೆ ಅರ್ಹವಾಗಿದೆ. ಆದರೆ ಮೈಸೂರು ಗವರ್ನಮೆಂಟಿನವರು ಪ್ರಕಟಿಸುವ ಇತರ ಹುಕುಮುಗಳ ಗತಿಯೇ ಇದಕ್ಕೂ ಎಲ್ಲಿ ಪ್ರಾಪ್ತವಾಗುವುದೋ ಎಂದು ಶಂಕೆಪಡುತ್ತೇವೆ. ಕ್ರಮಪಟ್ಟು ರಿಪೋರ್ಟುಗಳನ್ನು ಬರೆಯುವರು; ಅವು ಹೆಚ್ಚಾಗಿ ಎಲ್ಲಾ ಕಡೆಗಳಿಗೂ ಕಳುಹಿಸಲ್ಪಡುತ್ತವೆ. ಅವುಗಳನ್ನು ಚೆನ್ನಾಗಿ ಓದಿ ತಿಳಿದುಕೊಳ್ಳುವವರ ಸಂಖ್ಯೆ ಬಹಳ ಕಡಮೆ. ಈ ವ್ಯವಸಾಯದ ರಿಪೋರ್ಟಿನ ವಿಷಯದಲ್ಲಿ ಎಲ್ಲರೂ ಉತ್ಸಾಹವನ್ನೂ ಪ್ರೀತಿಯನ್ನೂ ಇಟ್ಟು ಚೆನ್ನಾಗಿ ಓದಿ ತಿಳಿದುಕೊಂಡು ಪ್ರಯೋಜನ ಪಡೆಯಬೇಕೆಂದು ಪ್ರಾರ್ಥಿಸುತ್ತೇವೆ. ಇದು ಬಹು ಪ್ರಾಮುಖ್ಯವಾದ ವಿಚಾರವಾದಕಾರಣ ಯಥಾರ್ಥವಾಗಿಯೂ ನಮ್ಮ ಸೀಮೆಯನ್ನು ಅಭಿವೃದ್ಧಿಗೆ ತರಬೇಕೆಂದು ಕುತೂಹಲಪಡತಕ್ಕವರೆಲ್ಲಾ ಈ ರಿಪೋರ್ಟನ್ನು ತರಿಸಿಕೊಂಡು ಓದಿ, ಅದರಲ್ಲಿ ವಿವರಿಸಲ್ಪಟ್ಟಿರುವ ವಿಶೇಷಾಂಶಗಳನ್ನು ಹೃದ್ಗಟಮಾಡಿಕೊಳ್ಳಬೇಕಾದದ್ದು ಪರಮಾವಶ್ಯವಾಗಿದೆ

ಡಾಕ್ಟರ್ ಕೋಲ್‌ಮೆರ್‍ರವರು ಈ ವ್ಯವಸಾಯ ವಿಷಯವನ್ನು ಕುರಿತು ಸಮಗ್ರವಾಗಿ ಜಾಗರೂಕತೆಯಿಂದ ಪರ್ಯಾಲೋಚನೆಮಾಡುವುದಕ್ಕೆ ಈಗ ಅತ್ಯಂತ ಅನುಕೂಲವಾದ ಸಮಯಪ್ರಾಪ್ತವಾಗಿದೆ ಎಂದು ಹೇಳಿರುವ ಮಾತು ಯಥಾರ್ಥವಾಗಿರುತ್ತದೆ. ಈಗ ನಮ್ಮ ಸೀಮೆಯಲ್ಲಿ ವ್ಯವಸಾಯವು ತೃಪ್ತಿಕರವಾಗಿ ನಡೆಯುತ್ತಿದೆ ಎಂದು ಹೇಳಿದರೆ ಯಾರೂ ಒಪ್ಪುವುದಿಲ್ಲ. ವ್ಯವಸಾಯವು ಅಭಿವೃದ್ಧಿಗೆ ಬರುವಂಥಾ ಹೊಸ ಕ್ರಮಗಳನ್ನು ರೂಢಿಗೆ ತರಬೇಕಾದದ್ದು ಪರಮಾವಶ್ಯಕವಾಗಿದೆ. ಇದಕ್ಕೆ ಅಂಥಾ ಹೊಸ ಕ್ರಮಗಳನ್ನು ಶಾಸ್ತ್ರವತ್ತಾಗಿ ಪಾಠಶಾಲೆಯ ಮೂಲಕ ಶಿಕ್ಷಣವನ್ನು ಏರ್ಪಡಿಸಿ ಸರಿಯಾಗಿ ಕಲಿಸಿಯೇ ತೀರಬೇಕು. ಈ ಶಿಕ್ಷಣವು ಸಾಮಾನ್ಯ ವಿದ್ಯಾ ಶಿಕ್ಷಣದ ಜೊತೆಗೆ ನಡೆಯಬೇಕು. ಇದಕ್ಕೆ ವ್ಯವಸಾಯದ ಇಲಾಖೆಯವರು ಅವಶ್ಯವಾದ ಸಲಹೆಗಳನ್ನು ಕೊಟ್ಟು ಕ್ರಮಗಳನ್ನು ರಚಿಸಿ ಮೇಲ್ವಿಚಾರಣೆಯಿಟ್ಟು ನೋಡಿಕೊಳ್ಳುತ್ತಾ ಬರಬೇಕಾಗಿದೆ.

ಡಾಕ್ಟರ್ ಕೋಲ್‌ಮೆರ್‍ರವರು ಈ ವ್ಯವಸಾಯಶಿಕ್ಷಣವನ್ನು ಎರಡು ರೀತಿಗಳಲ್ಲಿ ಮಾಡಬಹುದೆಂದು ಸೂಚಿಸಿರುತ್ತಾರೆ. ಮದರಾಸ್ ಗವರ್ನಮೆಂಟಿನವರು ಈಗ ಕೊಯಮುತ್ತೂರಿನಲ್ಲಿ ಇಟ್ಟು ನಡಿಸುತ್ತಿರುವ ದೊಡ್ಡ ವ್ಯವಸಾಯ ವಿದ್ಯಾಶಾಲೆ (ಕಾಲೇಜ್) ಯಂಥಾದ್ದನ್ನು ಮೈಸೂರು ಸಂಸ್ಥಾನದಲ್ಲೂ ಸ್ಥಾಪನೆಮಾಡಿ ವ್ಯವಸಾಯವನ್ನು ಶಾಸ್ತ್ರವತ್ತಾಗಿ ಕಲಿಸುತ್ತಾ ಬರುವುದು ಮೊದಲನೆಯ ರೀತಿಯಾಗಿದೆ. ಆದರೆ ಇದಕ್ಕೆ ಬಹಳ ಹಣ ಖರ್ಚಾಗಬೇಕಲ್ಲದೆ ಇಂಥಾ ಪ್ರೌಢ ವಿದ್ಯಾಶಾಲೆಗೆ ರೈತರ ಮಕ್ಕಳು ಹೋಗತಕ್ಕವರಾಗಿಲ್ಲ. ಸರ್ಕಾರದ ನೌಕರಿಯನ್ನು ಪಡೆಯಬೇಕೆಂಬುವರೇ ವಿಶೇಷವಾಗಿ ಅಂಥಾ ವಿದ್ಯಾಶಾಲೆಗಳಿಗೆ ಹೋಗಿ ಕಲಿತು ಯೋಗ್ಯತೆಯನ್ನು ಸಂಪಾದಿಸಿಕೊಂಡು ಬರುತ್ತಾರೆ. ಈ ರೀತಿಯಾಗಿ ಕಲಿತು ಬಂದವರಿಂದ ಸಾಮಾನ್ಯ ರೈತಪ್ರಜೆಗಳಿಗೆ ಪ್ರಯೋಜನವುಂಟಾಗಿ ಹೊಸ ವ್ಯವಸಾಯಕ್ರಮಗಳು ರೂಢಿಗೆ ಬರುವುದಕ್ಕೆ ಬಹಳ ಕಾಲ ಹಿಡಿದೀತೆಂದು ನಮಗೆ ತೋರುವುದು.

ವ್ಯವಸಾಯ ಶಾಸ್ತ್ರ ಪಂಡಿತರಾದ ಡಾಕ್ಟರ್ ಕೋಲ್‌ಮೆರ್‍ರವರು ಸಂಸ್ಥಾನದಾದ್ಯಂತ ಇರತಕ್ಕ ಗ್ರಾಮಪಾಠಶಾಲೆಗಳಲ್ಲಿ ವ್ಯವಸಾಯ ವಿದ್ಯೆಯನ್ನೂ ಕ್ರಮವಾಗಿ ಕಲಿಸುತ್ತಾ ಬಂದರೆ ಒಳ್ಳೇದಾಗುವುದೆಂದು ಹೇಳಿ, ಅಂಥಾ ಕ್ರಮವನ್ನು ಪರಿಷ್ಕಾರವಾಗಿ ವಿವರಿಸಿ ತೋರಿಸಿರುತ್ತಾರೆ. ಮೊದಲು ವ್ಯವಸಾಯವನ್ನು ಕಲಿಸುವಂಥಾ ತರಪೇತಾದ ಜನರು ಒದಗಬೇಕು. ಇವರು ವ್ಯವಸಾಯವನ್ನು ಪುಸ್ತಕಪಾಠವಾಗಿ ಕಲಿತಿದ್ದರೆ ಪ್ರಯೋಜನವಿಲ್ಲ; ಕಾರ್ಯತಃ ಅದರ ಕ್ರಮಗಳನ್ನು ರೂಢಿಸಿ ತೋರಿಸಿಕೊಡುವಂತಿರಬೇಕು. ಪ್ರತಿ ಒಂದು ಪಾಠಶಾಲೆಯ ಸೆರೆಯಲ್ಲೂ ಒಂದು ವಿಸ್ತಾರವಾದ ಜಮೀನು ಇದ್ದು, ಅದರಲ್ಲಿ ಮಕ್ಕಳಿಂದಲೇ ವ್ಯವಸಾಯ ಕಾರ್ಯಗಳನ್ನು ಮಾಡಿಸುತ್ತಾ ಬರಬೇಕು.

ಇದಕ್ಕಿಂತಲೂ ಮೇಲ್ತರದ ವ್ಯವಸಾಯ ಬೋಧನಾಶಾಲೆಯು ಈಗ ಬೆಂಗಳೂರಿನಲ್ಲಿ ಪ್ರಾರಂಭವಾಗಿ, ಡಾಕ್ಟರ್ ಕೋಲ್‌ಮೆರ್‍ರವರು ಅಲ್ಲಿ ವಿದ್ಯಾರ್ಥಿಗಳನ್ನು ತರಪೇತು ಮಾಡುತ್ತಿದಾರೆ. ಅಲ್ಲಿ ಶಿಕ್ಷಣವನ್ನು ಹೊಂದಿ ಯೋಗ್ಯತೆಯನ್ನು ಸಂಪಾದಿಸಿಕೊಳ್ಳತಕ್ಕವರನ್ನು ಸರ್ಕಾರದವರು ಮೇಲ್ವಿಚಾರಣೆಯ ನೌಕರಿಗಳಿಗೆ ನೇಮಕಮಾಡಿಕೊಳ್ಳಬಹುದು. ಅವರು ಗ್ರಾಮಾಂತರಗಳ ಮೇಲೆ ಸಂಚಾರಮಾಡಿ ಉಪಾಧ್ಯಾಯರು ಮಕ್ಕಳಿಗೆ ವ್ಯವಸಾಯದ ಬಾಲಪಾಠಗಳನ್ನೂ ಕ್ರಮಗಳನ್ನೂ ಸರಿಯಾಗಿಯೂ ತೃಪ್ತಿಕರವಾಗಿಯೂ ಹೇಳಿ ಕೊಡುತ್ತಾರೆಯೋ ಇಲ್ಲವೋ ವಿಚಾರಿಸಿಕೊಳ್ಳುತ್ತಾ ಬಂದಾರು.

ಡಾಕ್ಟರ್ ಕೋಲ್‌ಮೆರ್‍ರವರು ಸೂಚಿಸಿರುವ ಏರ್ಪಾಡುಗಳನ್ನು ಅನುಕೂಲವಾದ ಕೆಲವು ಸ್ಥಳಗಳಲ್ಲಿ ಗವರ್ನಮೆಂಟಿನವರು ಬೇಗನೆ ಪ್ರಾರಂಭ ಮಾಡುತ್ತಾರೆಂದು ನಿರೀಕ್ಷಿಸುತ್ತೇವೆ ಮೈಸೂರು ಗವರ್ನಮೆಂಟಿನ ವಿದ್ಯಾಭ್ಯಾಸದ ಇಲಾಖೆಯವರು ಗ್ರಾಮಾಂತರ ಪಾಠಶಾಲೆಗಳಲ್ಲಿ ನಡೆಯಬೇಕಾದ ಪಾಠದ ಕ್ರಮಗಳನ್ನು (ಕರಿಕ್ಯುಲಂ) ಬದಲಾಯಿಸಬೇಕೆಂದು ಆಲೋಚನೆಮಾಡುತ್ತಿದಾರೆ. ಅದರ ಜೊತೆಗೆ ವ್ಯವಸಾಯಶಿಕ್ಷಣಕ್ರಮಗಳನ್ನೂ ಗೊತ್ತುಮಾಡಿ ಪಾಠದ ಪಟ್ಟಿಗೆ ಈಗಲೇ ಸೇರಿಸಿಬಿಟ್ಟರೆ ಅನುಕೂಲವಾದೀತು ಆದರೆ ಸರಿಯಾಗಿ ಶಿಕ್ಷಣವನ್ನು ಪಡೆದ ಉಪಾಧ್ಯಾಯರು ಒದಗುವ ತನಕ ವ್ಯವಸಾಯ ಬೋಧನಾ ಭಾಗವು ನಡೆಯಲೇ ಬೇಕೆಂದು ವಿಧಿಸುವುದಕ್ಕಾಗುವುದಿಲ್ಲ. ಈಗ ಗವರ್ನಮೆಂಟಿನವರು ನಾರ್ಮಲ್ ಸ್ಕೂಲಿನಲ್ಲಿ ಸ್ವಲ್ಪಸ್ವಲ್ಪ ವ್ಯವಸಾಯ ಶಿಕ್ಷಣವನ್ನು ಇಟ್ಟು ನಡಿಸುತ್ತಿದ್ದಾರೆ. ಈ ಶಿಕ್ಷಣವನ್ನು ವ್ಯವಸಾಯದ ಇಲಾಖೆಯವರು ಒಪ್ಪುವ ರೀತಿಯಲ್ಲಿ ಮಾಡಿದರೆ ಸಮಯದಲ್ಲೂ ಖರ್ಚಿನಲ್ಲೂ ಕೂಡಿಬಂದೀತು. ಹ್ಯಾಗೂ ಡಾಕ್ಟರ್ ಕೋಲ್‌ಮೆರ್‍ರವರ ಸಾಹಸ ಪ್ರಯತ್ನದಿಂದ ಈ ಸೀಮೆಯ ವ್ಯವಸಾಯವು ವೃದ್ಧಿಹೊಂದಿ ರೈತರಿಗೆ ಶ್ರೇಯಸ್ಸುಂಟಾಗಲೆಂದು ಪ್ರಾರ್ಥಿಸುತ್ತೇವೆ.

ಸತ್ಯವನ್ನು ತಿಳಿದು ಅನುಸರಿಸಬೇಕು.

ಸತ್ಯವು ಒಳ್ಳೆಯದು; ನಾವು ಅದನ್ನು ನಂಬಬೇಕು. ಅಸತ್ಯವು ಕೆಟ್ಟದು, ನಾವು ಅದನ್ನು ತ್ಯಾಜ್ಯಮಾಡಬೇಕು. ಈ ಮಾತುಗಳು ಸರ್ವರೂ ಒಪ್ಪತಕ್ಕವುಗಳಾಗಿರುತ್ತವೆ. ಆದರೆ ಇದರಂತೆ ನಡೆಯುವವರು ಕೇವಲ ವಿರಳ. ಈ ಕಾಲದ ನಡವಳಿಕೆಯು ಒಬ್ಬನು ತನ್ನ ಮನಸ್ಸು ಒಂದಂತೆ ಯೋಚಿಸಬಹುದು, ತನ್ನ ಬಾಯಿಗೆ ಒಂದಂತೆ ಮಾತಾಡಬಹುದು; ಆದರೆ ಅವನು ತನ್ನ ಯೋಚನೆಗಳಂತೆಯೂ ಮಾತುಗಳಂತೆಯೂ ನಡೆದುಕೊಳ್ಳಬಾರದು ಎಂಬಂತೆ ತೋರುತ್ತದೆ. ಇಂಥವನು ಯಥಾರ್ಥವಂತನಲ್ಲ. ಅವನು ಶುದ್ಧ ಹೇಡಿ.

ಸ್ತ್ರೀ ವಿದ್ಯಾಭ್ಯಾಸವು ಒಳ್ಳೆಯದೂ ಅವಶ್ಯಕವಾದುದೂ ಎಂದು ಹೇಳುವವರು ಎಷ್ಟೋ ಮಂದಿ ಇರುತ್ತಾರೆ. ಆದರೆ ಅವರು ತಮ್ಮ ಹೆಣ್ಣು ಮಕ್ಕಳನ್ನು ಮರಶಾಲೆಗೆ ಕಳುಹಿಸುವುದಿಲ್ಲ; ಒಂದು ವೇಳೆ ಕಳುಹಿಸಿದಾಗ್ಯೂ ಆ ಮಕ್ಕಳು ತಮ್ಮ ಪಾಠಗಳಲ್ಲಿ ಕ್ರಮೇಣ ಅಭಿವೃದ್ಧಿಯನ್ನು ಹೊಂದುತ್ತಾ ಬರುತ್ತಾರೋ ಇಲ್ಲವೋ ಎಂಬೀ ವಿಷಯ ಸ್ವಲ್ಪವಾದರೂ ಚಿಂತಿಸುವುದಿಲ್ಲ

ವಿತಂತುಗಳಿಗೆ ಮುಖ್ಯವಾಗಿ ಬಾಲವಿತಂತುಗಳಿಗೆ ಪುನರ್ವಿವಾಹವಾಗಬೇಕೆಂದು ವಾದಿಸುವವರು ನೂರಾರು ಮಂದಿ ಇರುತ್ತಾರೆ; ಆದರೆ ಅವರು ಈ ವಿಷಯದಲ್ಲಿ ಇರತಕ್ಕ ಅಭ್ಯಂತರಗಳನ್ನು ನಿವಾರಣೆಮಾಡಿ ಈ ಕಾರ್ಯವನ್ನು ಸುಲಭಸಾಧ್ಯವಾಗಮಾಡುವುದಕ್ಕೆ ತಿಲಾಂಶವಾದರೂ ಪ್ರಯತ್ನಪಡುವುದಿಲ್ಲ. ಇದಕ್ಕೆ ಬದಲಾಗಿ ಅವರು ತಮ್ಮ ಮಿತ್ರಮಂಡಲಿಯಲ್ಲಿ ಯಾರಾದರೂ ಒಬ್ಬನು ಒಬ್ಬ ವಿಧವೆಯನ್ನು ಲಗ್ನಮಾಡಿಕೊಂಡರೆ, ಅಂಥವನ ಜೊತೆಯಲ್ಲಿ ಧಾರಾಳವಾಗಿ ಹೊಕ್ಕುಬಳಕೆಮಾಡುವುದಿಲ್ಲ. ಅವನು ಸ್ವಲ್ಪ ಹೆಚ್ಚು ಕಡಮೆ ಬಹಿಷ್ಕೃತನಾದವನೋ ಎಂಬಂತೆ ಇರಬೇಕಾಗುತ್ತದೆ. ಇದಕ್ಕೆ ಕಾರಣವೇನೆಂದರೆ ಅವನಂತೆ ವಿಧವಾವಿವಾಹವು ಒಳ್ಳೆಯದೆಂದು ನಂಬುವವರು ತಮ್ಮ ನಂಬಿಕೆಗನುಸಾರವಾಗಿ ನಡೆದುಕೊಳ್ಳುವಷ್ಟು ಧೈರ್ಯಶಾಲಿಗಳಾಗಿರುವುದಿಲ್ಲ.

ಇದುಮಾತ್ರವಲ್ಲದೆ ಬಾಲ್ಯವಿವಾಹವು ಕೆಟ್ಟದೆಂದು ಹೇಳುವವರು ಸಾವಿರಾರು ಮಂದಿ ಇರುತ್ತಾರೆ. ಹೀಗಿದ್ದರೂ ಅವರು ದಾಂಪತ್ಯ ಸ್ಥಿತಿಯು ಏನೆಂದು ಗ್ರಹಿಸಿಕೊಳ್ಳಲಾರದ ಬಾಲಕರಿಗೂ ಬಾಲೆಯರಿಗೂ ನಡೆಯುವ ವಿವಾಹಮಹೋತ್ಸವಗಳಿಗೆ ಪ್ರತಿವರುಷದಲ್ಲಿಯೂ ಹೋಗಿ ಆ ಮಂಗಳಕಾರ್ಯದಲ್ಲಿ ಭಾಗಿಗಳಾಗುವರು. ಇಷ್ಟೇ ಅಲ್ಲ ಇಂತಹ ಲಗ್ನಗಳನ್ನು ತಮ್ಮ ತಮ್ಮ ಮನೆಗಳಲ್ಲಿಯೂ ಕೂಡ ನಡಿಸುವರು.

ಪ್ರತಿ ವರುಷದಲ್ಲಿಯೂ ನಮ್ಮ ದೇಶೀಯರಲ್ಲಿ ಕಲವರು ವಿದೇಶಗಳನ್ನು ಕುರಿತು ಪ್ರಯಾಣಬೆಳಸುತ್ತಿರುವರು. ಇಂತಹ ಪ್ರಯಾಣಮಾಡಲಪೇಕ್ಷೆಯುಳ್ಳವರು ಇನ್ನೂ ನೂರಾರು ಮಂದಿ ಇರುತ್ತಾರೆ ದೇಶಾಟನಮಾಡುವುದು ಒಳ್ಳೆಯದೆಂದೂ ಸಮುದ್ರಯಾನ ಮಾಡುವುದು ಪಾಪವಲ್ಲವೆಂದೂ ಇವರು ನಂಬಿಕೊಂಡಿರುವರು. ಹೀಗಿದ್ದರೂ ಇವರಲ್ಲಿ ಕೆಲವರು ತಾವು ಹಿಂದಿರುಗಿ ಬಂದ ಮೇಲೆ ಸಮುದ್ರಯಾನಮಾಡಿದುದಕ್ಕಾಗಿ ತಕ್ಕ ಪ್ರಾಯಶ್ಚಿತ್ತಮಾಡುವರು. ತಾವು ಯಾವ ಅಪರಾಧವನ್ನಾದರೂ ಮಾಡಿರುವುದಿಲ್ಲವೆಂದು ಅವರಿಗೆ ಸ್ಪಷ್ಟವಾಗಿ ತಿಳಿದಿದ್ದಾಗ್ಯೂ ಸಮಾಧಾನವನ್ನು ಕಾಪಾಡುವುದಕ್ಕಾಗಿ ತಮಗೆ ನಂಬಿಕೆ ಇಲ್ಲದಂಥ ಆಚಾರವನ್ನು ಕೈಕೊಳ್ಳುವರು.

ಇಂತಹ ಅನೇಕ ದೃಷ್ಟಾಂತಗಳನ್ನು ಹೇಳಬಹುದು ಸತ್ಯವು ಒಳ್ಳೆಯದು, ನಾವು ಅದನ್ನು ಅನುಸರಿಸಿ ನಡೆಯಬೇಕು ಎಂದು ಹೇಳುವಂಥ ನೂರು ಜನರಲ್ಲಿ ಅದರಂತೆ ಕಾರ್ಯತಃ ನಡೆಯುವವನು ಒಬ್ಬನು ಸಿಕ್ಕುವುದು ಕಷ್ಟವೆಂದು ತೋರಿಸುವುದಕ್ಕೆ ನಾವು ಮೇಲೆ ಹೇಳಿರುವ ದೃಷ್ಟಾಂತಗಳೇ ಸಾಕಾಗಿರುತ್ತವೆ.

ಮತವಿಷಯಗಳಲ್ಲಿ ಹೀಗೆ ನಡೆಯುವುದು ಬಹು ವಿಶೇಷವಾಗಿದೆ. ಅನೇಕಯುದಿಂದಲೂ ನಡೆದುಬಂದಿರುವ ಅನೇಕ ಮತಾಚಾರಗಳು ಕೈಕೊಳ್ಳತಕ್ಕವುಗಳಲ್ಲ; ಅವುಗಳನ್ನು ಬಿಟ್ಟುಬಿಡುತ್ತೇವೆ ಎಂದು ಹೇಳುವವರು ಈ ಕಾಲದಲ್ಲಿ ಸಾವಿರಾರು ಮಂದಿ ಇರುತ್ತಾರೆ. ಆದರೆ ಮತವಿಷಯಗಳನ್ನು ಪರಿಶೀಲನೆಮಾಡಿ ಅವುಗಳ ಸಾರಾಂಶವನ್ನು ಸಂಗ್ರಹಿಸುವುದಕ್ಕೆ ಪ್ರಯತ್ನಿಸುವವರು ಕೇವಲ ವಿರಳ. ಮತಾಂತರವನ್ನು ಹೊಂದುವುದು ಮಹಾ ಪಾತಕವೆಂದು ಭಾವಿಸುವರು. ಆದರೆ ನಾವು ಯಾವ ಮತದಲ್ಲಿ ಹುಟ್ಟಿರುತ್ತೇವೋ ಆ ಮತವಲ್ಲದೆ ಬೇರೊಂದು ಮತವು ಸತ್ಯವಾದ ಮತವಾಗಿದ್ದರೆ, ಮತ್ತು ಅದರಲ್ಲಿ ನಮಗೆ ಯಥಾರ್ಥವಾದ ನಂಬಿಕೆಯು ಇದ್ದರೆ, ನಾವು ಸ್ವಂತ ಮತವನ್ನು ಬಿಡಬಾರದೋ? ಸತ್ಯವು ಒಳ್ಳೆಯದಾಗಿದ್ದು, ನಾವು ಅದನ್ನು ಅನುಸರಿಸಬೇಕಾಗಿದ್ದರೆ, ಮತ್ತು ಸತ್ಯವು ಅನ್ಯ ಮತದಲ್ಲಿ ಸಿಕ್ಕುವದಾಗಿದ್ದರೆ, ನಾವು ಆ ಮತವನ್ನು ಅವಲಂಬಿಸಬಾರದೋ?

ಹೊರಗಿನ ಕಾರ್ಯಗಳು ಅಷ್ಟು ವಿಶೇಷವಾದುವುಗಳಲ್ಲ. ನನ್ನ ಮನದಲ್ಲಿ ಸತ್ಯವಿದ್ದರೆ, ಅಷ್ಟೇ ಸಾಕು ಎಂದು ಹೇಳುವವರು ಅನೇಕರಿರುತ್ತಾರೆ ಹೀಗೆ ಭಾವಿಸುವುದು ಎಂದಿಗೂ ಸರಿಯಲ್ಲ. ಮನದಲ್ಲಿ ಸಹಜವಾಗಿ ಸತ್ಯವು ಇರುವ ಪಕ್ಷದಲ್ಲಿ ಅದು ಕಾರ್ಯತಃ ತನ್ನನ್ನು ಪ್ರಕಾಶಪಡಿಸಿಕೊಳ್ಳುವುದು. ಒಬ್ಬನು ತನ್ನ ಮನದಲ್ಲಿ ಯಥಾರ್ಥವಾದ ಮುಸಲ್ಮಾನನಾಗಿದ್ದುಕೊಂಡು, ಹಿಂದು ಆಚಾರಗಳನ್ನು ಕೈಕೊಳ್ಳುವುದು ಅಸಾಧ್ಯ ಒಬ್ಬನು ಬಹಿರಂಗದಲ್ಲಿ ಯೇಸು ಕ್ರಿಸ್ತನನ್ನು ತನ್ನ ಒಡೆಯನನ್ನಾಗಿಯೂ ಸ್ವಾಮಿಯನ್ನಾಗಿಯೂ ಅಂಗೀಕಾರಮಾಡಿಕೊಳ್ಳುವುದಕ್ಕೆ ಸಿದ್ಧನಾಗಿರದಿದ್ದರೆ, ಅಂಥವನು ಅಂತರ್ಯದಲ್ಲಿ ಕ್ರೈಸ್ತನಾಗಿರಲಾರನು. ಯಾವ ಮನುಷ್ಯನಾದರೂ ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು ಎಂದು ಕ್ರಿಸ್ತನು ಹೇಳಿದ ಮಾತು ಯಾವಾಗಲೂ ಸತ್ಯವಾದುದಾಗಿಯೇ ಇರುತ್ತದೆ. ಆದಕಾರಣ ನಾವು ಸತ್ಯವನ್ನು ಸಂಗ್ರಹಿಸಿದವರಾಗಿದ್ದರೆ, ಅದನ್ನು ಅನುಸರಿಸಿ ನಡೆಯುತ್ತಾ ಬರೋಣ. ದೇವರು ನಮ್ಮನ್ನು ನಡಿಸಿ, ಸಂರಕ್ಷಿಸುವನೆಂದು ನಾವು ಬಲ್ಲೆವು.

ಒಳದೇಶದ ವೃತ್ತಾಂತಗಳು.

ಶ್ರೀಮನ್ ಮಹಾರಾಜರವರು ಯುವರಾಜರವರ ಸಮೇತ ಕೋಲಾರದಲ್ಲಿ ಸಿದ್ಧವಾಗಿರುವ ಡಿಸ್ಟ್ರಿಕ್ಟ್ ಬೋರ್ಡ್ ರೈಲ್ವೆಯನ್ನು ತಾ. 15 ನೇ ಸೋಮವಾರ ಮಧ್ಯಾಹ್ನ 2 30 ಗಂಟೆಗೆ ಪ್ರಾರಂಭಮಾಡುವರು

***

ಬೆಂಗಳೂರು ಚಿನ್ನಿಕಾಬಜಾರನೆಯ ಕ್ಯಾಷಿಯರಾಗಿದ್ದು 31 ಸಾವಿರ ರೂಪಾಯಿ ತಿಂದುಹಾಕಿ ಪರಾರಿಯಾಗಿದ್ದ ಎಂ. ಎ. ಶ್ರೀನಿವಾಸಯ್ಯಂಗಾರ್‍ರನ್ನು ಕಳೆದವಾರ ಪೋಲೀಸಿನವರು ಮದರಾಸಿನಲ್ಲಿ ಹಿಡಿದಿರುತ್ತಾರೆಂದು ತಿಳಿಯುತ್ತದೆ.

***

ಸರ್ಕಾರದವರು ಮೈಸೂರು ಸಬ್ ಡಿವಿಜನ್ ಅ॥ ಕಮಿಷನರಾದ ಮ॥ ಕೆ ಮೈಲಾರಿರಾಯರನ್ನು ಮೈಸೂರು-ಹಾಸನ-ಅರಸೀಕೆರೆ ರೈಲ್ವೆ ಕಾಮಗಾರಿಗೆ ಜಮೀನುಗಳನ್ನು ಸರ್ಕಾರಕ್ಕೆ ಕೊಂಡುಕೊಳ್ಳುವ ಅಧಿಕಾರಿಯಾಗಿ ನೇಮಕಮಾಡಿರುತ್ತಾರೆ.

***

ಬೆಂಗಳೂರು ಒಕ್ಕಲಿಗರ ಪತ್ರಿಕೆಯ ಮೇಲೆ ಬಂದಿರುವ ಮಾನನಷ್ಟ ಮೊಕದ್ದಮೆಯು ಕಳೆದ ಗುರುವಾರ ನಡೆದು ಮ॥ ಶ್ಯಾಮಗೌಡರ ಕೈಫಿಯತ್ತು

ಟೋಟಯ್ಯನಿಂದ ಬಂದ ಮೊದಲನೇ ಬಾಕ್ಸಿ ಕಾಗದವನ್ನು ಹಾಜರುಮಾಡುವುದಾಗಿ ಒಪ್ಪಿಕೊಂಡರು ಈ ದಿನ ಹಿಯರಿಂಗು ನಡೆಯುವುದಾಗಿದೆ

• •
•

ಗುಬ್ಬಿ ಟವರ್ ಮ್ಯುನಿಸಿಪಲ್ ಸರಹದ್ದಿನೊಳಗೆ ಯಳನೀರು, ತೆಂಗಿನ ಕಾಯಿ, ವೀಳ್ಯದೆಲೆ, ಹೊಗೆಸೊಪ್ಪು, ಈ ಪದಾರ್ಥಗಳ ಮೇಲೆ ಸುಂಕವನ್ನು ಹಾಕಿ ವಸೂಲ್ಮಾಡಬೇಕಾದ ಅಗತ್ಯವಿಲ್ಲವೆಂದು ಮ್ಯುನಿಸಿಪಾಲಿಟಿಯವರು ಶಿಫಾರಸು ಮಾಡಿದ್ದನ್ನು ಸರ್ಕಾರದವರು ಒಪ್ಪಿ ಅದರಂತೆ ಸ್ಯಾಂಕ್ಷನ್ ಮಾಡಿರುತ್ತಾರೆ

• •
•

ರಾಜಧಾನಿಯಲ್ಲಿ ಮೊಹರಂ ಹಬ್ಬದ ಉತ್ಸವಾದಿಗಳು ಕಳೆದ ಮಂಗಳವಾರಕ್ಕೆ ಮುಕ್ತಾಯವಾದವು ಈ ಸಲ ಗಿರೋವುಗಳೂ ಆಟಗಳೂ ತಾಬೂತುಗಳೂ ಎಂದಿಗಿಂತ ಹೆಚ್ಚಾಗಿದ್ದವು ಪೊಲೀಸ್ ಬಂದೋಬಸ್ತು ಮೇಲ್ವಿಚಾರಣೆಯೂ ತೃಪ್ತಿಕರವಾಗಿದ್ದದ್ದರಿಂದ ಯಾವ ವಿಧವಾದ ಗಲಭೆಗೂ ಅವಕಾಶವಾಗದೆ ಎಲ್ಲಾ ಶಾಂತವಾಗಿ ಜರುಗಿತು

• •
•

ಕಳೆದ ವಾರ ರಾಮಪಿಳ್ಳೆ ಎಂಬೊಬ್ಬ ಗುಮಾಸ್ತನು ಬೌರಿಂಗ್ ಪೇಟೆಯಿಂದ ಮಾರಿಕುಪ್ಪಕ್ಕೆ ಬರುತ್ತಿದ್ದ ರೈಲ್ ಗಾಡಿಯ ಕೆಳಕ್ಕೆ ಅಕಸ್ಮಾತ್ತಾಗಿ ಸಿಕ್ಕಿ ಮೃತಪಟ್ಟನು ಅತ್ತಲಾಗಿ ನಂದಿದುರ್ಗದ ಮೈಸೂರ್ ರಿಚರ್ಡ್ ಗಣಿಯೊಳಗೆ ಆಕಸ್ಮಿಕವಾಗಿ ಒಬ್ಬ ಕೂಲಿಯವನು ಮೃತಪಟ್ಟನು, ಇನ್ನು ನಾಲ್ಕು ಮಂದಿಗೆ ಗಾಯಗಳಾದವು

• •
•

ಕನ್ನಂಬಾಡಿ ತಲಾವಿನ ಎರಡನೇ ಭಾಗದ ಕಾಮಗಾರಿ ವಿಚಾರದಲ್ಲಿ ದಕ್ಷಿಣ ದೇಶದ ಕುಂಭಕೋಣ, ತಿರುಚನಾಪಲ್ಲಿ ಪಟ್ಟಣಗಳ ರೈತರ ಪ್ರತಿನಿಧಿಗಳಾದ ಕೆಲವು ದೊಡ್ಡ ಮನುಷ್ಯರು ನಮ್ಮ ದಿವಾನ್‌ರವರನ್ನು ಮೊಜಾಕ್ತ ಕಂಡು ಮಾತನಾಡುವುದಕ್ಕಾಗಿ ಬೆಂಗಳೂರಿಗೆ ಬಂದು, ಮಾಜಿ ದಿವಾನ್ ಮ|| ಮಾಧವರಾಯರ ಅತಿಥಿಗಳಾಗಿರುತ್ತಾರೆ ಈ ದಿನ ಅವರಿಗೆ ನಮ್ಮ ದಿವಾನ್‌ರವರು ಭೇಟಿಕೊಡುತ್ತಾರೆಂದು ತಿಳಿಯುವುದು

• •
•

ಟಿ ನರಸೀಪುರದ ಪ್ರಾಂತ್ಯ ಮಾದಿ ಎಂಬೊಬ್ಬ ಹೆಂಗಸು ಮನೆಯಲ್ಲಿ ಹಿಂಸೆಯನ್ನು ತಾಳಲಾರದೆ ತನ್ನ ಮಗುವನ್ನು ಕಾವೇರಿಗೆ ಎಸೆದು, ತಾನೂ ಆತ್ಮಹತ್ಯ ಮಾಡಿಕೊಳ್ಳಲು ಪ್ರಯತ್ನಪಟ್ಟಳೆಂಬ ಮೊಕದ್ದಮೆಯಲ್ಲಿ ಮೈಸೂರು ಸೆಷನ್ಸ್ ಜಡ್ಜರು ಅವಳಿಗೆ ಮರಣಾವಧಿ ಸಜಾ ಶಿಕ್ಷೆಯನ್ನು ವಿಧಿಸಿದ್ದರು ಈ ಮೊಕದ್ದಮೆಯು ಚೀಫ್ ಕೋರ್ಟಿನಲ್ಲಿ ಅಪೀಲಾಯಿತು ಜಡ್ಜಿಯವರು ಮೊಕದ್ದಮೆಯ ಕಟ್ಟನ್ನು ಗವರ್ನ್‌ಮೆಂಟಿಗೆ ಕಳುಹಿಸಿ, ಅಪರಾಧಿಗೆ ಶಿಕ್ಷೆಯನ್ನು ಕಡಮೆ ಮಾಡಬಹುದೆಂದು ಶಿಫಾರಸು ಮಾಡಿದಾರೆ

• •
•

ಕಳೆದ ಮಂಗಳವಾರ ಸಾಯಂಕಾಲ ರಾಜಧಾನಿಯ ವೀರನಗೆರೆ ಕೋಟೆ ಬಾಗಿಲ ಬಳಿ ಒಬ್ಬ ಮುಸಲ್ಮಾನರ ಮನೆ ಮುಂದೆ ಬಾಬಯ್ಯನ ಹಬ್ಬಕ್ಕಾಗಿ ಹಾಕಿದ್ದ ಚಪ್ಪರವು ಹತ್ತಿಕೊಂಡು ಚಪ್ಪರವೂ ಅದರ ಹಿಂದಿದ್ದ ದೊಡ್ಡ ಗುಡಿಸಲು ಸುಟ್ಟುಹೋದವು ಜನರು ಸಾಹಸಪಟ್ಟು ಉರಿ ಅಕ್ಕಪಕ್ಕದ ಮನೆಗಳಿಗೆ ವ್ಯಾಪಿಸದಂತೆ ಆರಿಸಿ, ಉರಿದುಹೋದ ಮನೆಯೊಳಗಿದ್ದ ಒಬ್ಬ ಮುಸಲ್ಮಾನ್ ಮುದುಕನನ್ನು ಹೊರಕ್ಕೆ ಸಾಗಿಸಿ ಬದುಕಿಸಿದರು ಆ ಮುದುಕನಿಗೆ ಕೆಲವು ಸುಟ್ಟ ಗಾಯಗಳಾದವೆಂದು ಕೇಳುತ್ತೇವೆ

• •
•

ಕಣ್ಣಾಗಾಲದ ದಂಗೇ ಮೊಕದ್ದಮೆಯಲ್ಲಿ ಸೆಷನ್ಸ್ ಜಡ್ಜರಿಂದ ಶಿಕ್ಷೆ ವಿಧಿಸಲ್ಪಟ್ಟಿರುವ ಪುಟ್ಟಸುಬ್ಬೆಗೌಡನೂ ಕಾಶೀಪತಯ್ಯನೂ ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದಾರೆ ಮದರಾಸಿನ ಬ್ಯಾರಿಸ್ಟರು ಬಂದು ವಾದಿಸಿದ್ದರ ಮೇಲೆ ಜಡ್ಜಿಯವರು ಸರ್ಕಾರಿ ತರಫಿನ ಅಡ್ವೊಕೇಟರಾದ ಮ|| ಎಂ ಸಿ ರಂಗಯ್ಯಂಗಾರ್ರವರ ಒಪ್ಪಿಗೆಯನ್ನು ಪಡೆದು ಪುಟ್ಟಸುಬ್ಬೆಗೌಡನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದರು ಆದರೆ, ಅವನು ಬಂದೀಖಾನೆಯೊಳಗೇ ಖೈದಿಯಾಗಿರುವಂತಾಯಿತು ಈ ಅಪೀಲ್ ವಿಚಾರಣೆಯು ಜನವರಿ ತಾ ೫ ನೇ ಸೋಮವಾರದಿಂದ ಪ್ರಾರಂಭವಾಗುವುದಾಗಿದೆ ಇತ್ತಲಾಗಿ ಈ ದಂಗೇ ಮೊಕದ್ದಮೆಗೆ ಸಂಬಂಧಪಟ್ಟವರೆಂದು ಈಚೆಗೆ ಸಿಕ್ಕಿರುವ ಏಳು ಮಂದಿ ಅಪರಾಧಿಗಳನ್ನು ನಂಜನಗೂಡು ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರು ದರ್ಯಾಫ್ತು ಮಾಡುತ್ತಿದಾರೆ

• •
•

ಈ ಸಲ ಕಾರಾಪುರದ ಕೆಡ್ಡಾ ಕ್ಯಾಂಪಿನಲ್ಲಿ ಮೈಸೂರು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ ಮ ಬಿ ಕೃಷ್ಣರಾಯರು ತಮ್ಮ ತೈನಾತಿಯಲ್ಲಿದ್ದ ಒಬ್ಬ ನೌಕರನನ್ನು ಹೊಡೆದುಬಡಿದು ಗಾಬರಿಪಡಿಸಿದರೆಂದೂ, ಆ ನೌಕರನು ತನಗಾದ ಕಷ್ಟವನ್ನು ಅಲ್ಲಿದ್ದ ಮೇಲ್ಪಟ್ಟ ಅಧಿಕಾರಿಗಳಲ್ಲಿ ಅರಿಕೆಮಾಡಿಕೊಂಡನೆಂದೂ "ಮೈಸೂರು ಸ್ಟಾರ್" ಪತ್ರಿಕೆಯಲ್ಲಿ ಕೆಲವು ವಾರಗಳ ಹಿಂದೆ ಪ್ರಕಟವಾಯಿತು ಹೀಗೆ ಪ್ರಕಟಮಾಡಿದ್ದು ತಮಗೆ ಅವಮಾನವಾಯಿತೆಂದೂ, ಸಂಪಾದಕರಿಗೆ ಕಾನೂನ್ ಪ್ರಕಾರ ಶಿಕ್ಷೆಮಾಡಬೇಕೆಂದೂ ಮ|| ಬಿ ಕೃಷ್ಣರಾಯರು ಆ ಪತ್ರಿಕೆಯ ಎಡಿಟರ ಮೇಲೆ ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕಳೆದ ಶನಿವಾರ ಅಡ್ವೊಕೇಟ್ ಮ|| ಬಿ ರಾಮಚಂದ್ರಯ್ಯನವರ ಮೂಲಕ ಫಿರ್ಯಾದು ಮಾಡಿದರು ಮ್ಯಾಜಿಸ್ಟ್ರೇಟರು ಜಾಮೀನ್ ವಾರಂಟನ್ನು ಎಡಿಟರಿಗೆ ಕೊಟ್ಟು, ಮೊಕದ್ದಮೆಯ ಹಿಯರಿಂಗನ್ನು 20 ನೇ ತಾರೀಖಿಗೆ ಇಟ್ಟಿದಾರೆ ಈ ಮೊಕದ್ದಮೆಯಲ್ಲಿ ಕೌನ್ಸೆಲರುಗಳು, ಅಸಿಸ್ಟೆಂಟ್ ಕಮಿಷನರು, ಡೆಪ್ಯುಟಿ ಕಮಿಷನರೇ ಮೊದಲಾದ ದೊಡ್ಡ ಅಧಿಕಾರಿಗಳು ಸಾಕ್ಷಿಗಳಾಗಿ ಕೋರಲ್ಪಟ್ಟಿದಾರೆ

• •
•

ರಾಜಧಾನಿಯಲ್ಲಿರುವ ದಳವಾಯರ ಎ ವಿ ಸ್ಕೂಲ್ ಹೆಡ್ ಮಾಸ್ಟರ್ ಮ|| ಎನ್ ಕೃಷ್ಣರಾಯರು ಬರೆಯುವುದು - "ಇಂಡಿಯನ್ ಲೇಡಿ ಸ್ಯಾಂಡೋ" ಮಿಸ್ ತಾರಾಬಾಯಿಯವರು ಕಳೆದ ಶುಕ್ರವಾರ ರಾತ್ರಿ ಇಲ್ಲಿನ ಟೌನ್ ಹಾಲಿನಲ್ಲಿ ತಮ್ಮ ಅದ್ಭುತವಾದ ಕಾಯಶಕ್ತಿಯನ್ನು ಪ್ರದರ್ಶನಮಾಡಿ ಉತ್ಪತ್ತಿಯಾದ ರೂ 30-10 ಯನ್ನು ದಳವಾಯಿ ಸ್ಕೂಲ್ ಕಟ್ಟಡದ ಖರ್ಚಿಗೆ ಧರ್ಮಾರ್ಥವಾಗಿ ಕೊಟ್ಟರು ಈಕೆಯ ಪರೋಪಕಾರ ಚಿತ್ತವೃತ್ತಿಯು ಬಹಳ ಶ್ಲಾಘ್ಯವಾಗಿರುತ್ತದೆ • ಇದಲ್ಲದೆ ಈಕೆ ಕಳೆದ ಭಾನುವಾರ ಟೌನ್ ಹಾಲಿನಲ್ಲಿ ನಾಟಕಾದಿಗಳನ್ನು ನಡಿಸಿ ತನ್ನ ಸಾಮರ್ಥ್ಯವನ್ನು ಪ್ರದರ್ಶನಮಾಡಿ ಉತ್ಪತ್ತಿಯಾದ ದ್ರವ್ಯವೆಲ್ಲಾ ದಕ್ಷಿಣ ಆಫ್ರಿಕಾ ರಿಲೀಫ್ ಫಂಡಿಗೆ ಧರ್ಮ ಮಾಡಿರುತ್ತಾರೆ ಕಳೆದ ವಾರ ವೈಣಿಕ ಶಿಖಾಮಣಿ ಮ|| ಶೇಷಣ್ಣನವರು ಈಕೆಯನ್ನು ತಮ್ಮ ಮನೆಗೆ ಬರಮಾಡಿಕೊಂಡು ಟೀ ಪಾರ್ಟಿ ನಡಿಸಿ ಸನ್ಮಾನ ಮಾಡಿದರು ಮಿಸ್ ತಾರಾ ಬಾಯಿಯವರು ರಾಜಧಾನಿಯಲ್ಲಿ ಇನ್ನೂ ಕೆಲವು ಕಾಲ ಇದ್ದು ತಮ್ಮ ಸಾಮರ್ಥ್ಯವನ್ನು ತೋರಿಸಿ ಹುಟ್ಟುವಳಿ ಹಣವನ್ನು ಇಲ್ಲಿನ ಇನ್ನು ಕೆಲವು ಧರ್ಮಕಾರ್ಯಗಳಿಗೆ ಕೊಡುವವರಾಗಿದಾರೆಂದು ಕೇಳುತ್ತೇವೆ

ವ್ಯಾಪಾರವೂ ಕೈಗಾರಿಕೆಯೂ—ಒಂದು ಸಲಹೆ.

ಮೇಲ್ಕಂಡ ವಿಷಯವನ್ನು ಕುರಿತು ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಮ|| ಎಚ್ ವೆಂಕಟರಮಣಯ್ಯನವರು ಬರೆಯುವುದೇನೆಂದರೆ—

ಪೂರ್ವವಿವೇಕ, ಪ್ರಜಾಪ್ರೀತಿ, ದೇಶವಾತ್ಸಲ್ಯ, ಇತ್ಯಾದಿ ಸದ್ಗುಣಶೀಲರಾದ ಮ|| ವಿಶ್ವೇಶ್ವರಯ್ಯನವರು ನಮ್ಮ ಸಂಸ್ಥಾನದ ದಿವಾನ್ ಪದವಿಯನ್ನು ವಹಿಸಿಕೊಂಡ ಮೇಲೆ ಅವರ ಅನುಮತಿ ಪ್ರೋತ್ಸಾಹಗಳಿಂದ ಮೈಸೂರು ಸಂಗದಭ್ಯುದಯ ಸಮಾಜದವರು ಬೆಂಗಳೂರು ಸಿಟಿಯ ಮಧ್ಯರಾಷ್ಟ್ರದಲ್ಲಿ ಕೈಗಾರಿಕೆಗಳ ಒಂದು ಡಿಪೋ (ಪ್ರದರ್ಶನದ ಅಂಗಡಿ) ವನ್ನೂ, ಸೌತ್ ಪೆರೇಡಿನಲ್ಲಿ ಅದಕ್ಕೆ ಸಂಬಂಧಪಟ್ಟ ಒಂದು ಆಫೀಸನ್ನೂ ಪ್ರಾರಂಭಮಾಡಿದ್ದು ಸ್ತೋತ್ರಾರ್ಹವಾಗಿರುತ್ತದೆ ಸಾಮಾನ್ಯವಾಗಿ ಪ್ರಜೆಗಳಲ್ಲಿ ವಿಶೇಷವಾಗಿ ಐಶ್ವರ್ಯವಂತರಲ್ಲಿ ಸ್ವದೇಶ ಪ್ರೀತಿಯು ಕ್ಷೀಣವಾಗುತ್ತಾ ಬಂದಿರೋಣದರಿಂದಲೇ ನಮ್ಮ ಸೀಮೆಯ ಪ್ರಾಚೀನವಾದ ಕಸಬುಗಳೂ ಕೈಗಾರಿಕೆಗಳೂ ಬೇಗಬೇಗನೆ ಕೆಟ್ಟು ಹಾಳಾಗುತ್ತಿವೆ ಈ ಕೈಗಾರಿಕೆಗಳನ್ನು ಜೀರ್ಣೋದ್ಧಾರಮಾಡಿ ಅಭಿವೃದ್ಧಿಗೆ ತರಬೇಕಾದ ಪಕ್ಷದಲ್ಲಿ ಎಲ್ಲರೂ ಏಕೀಭವಿಸಿ ಸಾಹಸಪಡಬೇಕೆಂದು ಯಾರಿಗೆ ತಾನೇ ತಿಳಿಯದು ?

ಯಾವ ಕಸಬನ್ನು ಪ್ರಾರಂಭಿಸುವುದಕ್ಕೂ ವೃದ್ಧಿಪಡಿಸುವುದಕ್ಕೂ ಹಣದ ಸಹಾಯ ಬೇಕೇಬೇಕು ದ್ರವ್ಯಸಹಾಯವಿಲ್ಲದೇನೂ ಸರಿಯಾದ ಪ್ರೋತ್ಸಾಹ ದೊರಕದೇನೂ ಕೈಗಾರಿಕೆಗಳು ಕ್ಷೀಣಗತಿಗೆ ಬಂದು ನಿರ್ನಾಮವಾಗುತ್ತಲಿವೆ ಇದೂ ಅಲ್ಲದೆ ಪಾಶ್ಚಿಮಾತ್ಯ ದೇಶಗಳಲ್ಲೂ, ಮದರಾಸ್ ಬೊಂಬಾಯಿ ಮೊದಲಾದ ಅಧಿಪತ್ಯಗಳಲ್ಲೂ ಕೈಗಾರಿಕೆ, ಕಸಬು, ವ್ಯಾಪಾರಾದಿಗಳಲ್ಲಿ ಪ್ರಜೆಗಳಿಗಿರುವ ಉತ್ಸಾಹವೂ ಕುತೂಹಲವೂ ಪ್ರೀತಿಯೂ ಮೈಸೂರು ಸಂಸ್ಥಾನದ ಪ್ರಜೆಗಳಲ್ಲಿ ಕಾಣುವುದಿಲ್ಲ, ಒಂದುವೇಳೆ ಇದ್ದರೂ ಬಹಳ ಕಡಮೆ ಕೈಗಾರಿಕೆ ವ್ಯಾಪಾರಾದಿಗಳಲ್ಲಿ ಹೊರಡುವುದಕ್ಕೆ ಕಾಯಪುಷ್ಟಿ, ವಿವೇಕ, ಕಾರ್ಯಸಾಧನಾ ಶಕ್ತಿ, ಸತ್ಯತೆಯಿಂದ ಸಾಹಸಪಟ್ಟು ಏಳಿಗೆಯನ್ನು ಹೊಂದಬೇಕೆಂಬ ಉತ್ಸಾಹ, ಇತ್ಯಾದಿಗಳನ್ನು ನಮ್ಮಲ್ಲಿ ಪಡೆದಿರುವಂಥಾ ಅನೇಕ ಜನರಿಗೆ ಬಂಡವಾಳವಿಲ್ಲ ಇವರ ದೆಸೆಯಿಂದ ಬಹುಮಂದಿ ಸರ್ಕಾರದ ನೌಕರಿಯಲ್ಲೂ, ವರ್ತಕನ ಅಂಗಡಿಯಲ್ಲೂ, ದೊಡ್ಡ ಮನುಷ್ಯ ಇಲ್ಲವೇ ಐಶ್ವರ್ಯವಂತನ ಚಾಕರಿಯಲ್ಲೂ ಸೇರಿಕೊಂಡು ವ್ಯಥೆಪಡುತ್ತಿದಾರೆ ಸ್ವತಂತ್ರವಾಗಿದ್ದರೆ 10 15 ರೂಪಾಯಿಯಾದರೂ ಸಂಪಾದಿಸಿಕೊಳ್ಳತಕ್ಕವರು 6-7 ರೂಪಾಯಿನ ಸಂಬಳಕ್ಕೆ ಸೇರಿಕೊಂಡಿರುವರು ಇಂಥವರಿಗೆ 50-100 ರೂಪಾಯಿ ಬಂಡವಾಳ ದೊರಕಿದರೆ ಸ್ವತಂತ್ರವಾಗಿ ಸುಖಜೀವನವನ್ನು ಮಾಡಿಕೊಂಡು ಅಭಿವೃದ್ಧಿಗೆ ಬಂದಾರೆನ್ನುವುದಕ್ಕೆ ಸಂಶಯವಿಲ್ಲ ಅಂಥಾ ಬಂಡವಾಳದಿಂದ, ಬೆಳೆಯುವವನಿಂದ ಹಣ್ಣು ಹಂಪಲುಗಳನ್ನೋ ಇತರ ಪದಾರ್ಥಗಳನ್ನೋ ಒಟ್ಟೊಟ್ಟಾಗಿ ಕೊಂಡು, ಪೇಟೆಗಳಲ್ಲೂ ಕೇರಿಗಳಲ್ಲೂ ಚಿಲ್ಲರೆಯಾಗಿ ಬಿಕರಿಮಾಡಿಕೊಂಡು ಮುಂದಕ್ಕೆ ಬರಬಹುದು ಒಂದು ಸಣ್ಣ ಅಡಿಕೆಲೆ ಅಂಗಡಿ ಇಡಬಹುದು ಒಂದು ಜಟ್ಕಾ ಗಾಡಿ ಕುದುರೆ, ಇಲ್ಲವೇ ಒಂದೆತ್ತಿನ, ಜೋಡೆತ್ತಿನ ಗಾಡಿ ಇಟ್ಟುಕೊಂಡು ಬಾಡಿಗೆ ಸಂಪಾದಿಸಬಹುದು ಈ ರೀತಿ ಸ್ವತಂತ್ರ ಜೀವನವನ್ನು ಹುಡುಕತಕ್ಕವರಿಗೆ ಮೈಸೂರು ಬ್ಯಾಂಕಿನಿಂದಾಗಲಿ, ಸಿಟಿ ಕೋಆಪರೇಟಿವ್ ಬ್ಯಾಂಕಿನಿಂದಾಗಲಿ, ಕೋಆಪರೇಟಿವ್ ಸೊಸೈಟಿಯಿಂದಾಗಲಿ 50-75 100 ರೂಪಾಯಿ ಬಂಡವಾಳಕ್ಕೆ ಸಾಲ ದೊರಕುವುದಿಲ್ಲ ಅಂಥವರು ದುಬಾರಿ ಬಡ್ಡಿ ಹಾಕಿ ಲೇವಾದೇವಿ ಮಾಡತಕ್ಕ ಸಾಹುಕಾರರ ಬಳಿಗೆ ಹೋಗಿ ಅವರ ದಾಸರಾಗಿ ಸಾಲ ತಂದು ಈ ಸಾಹುಕಾರರಿಗೆ ದಿನಗಟ್ಲೆ ವಾರಗಟ್ಲೆ ಅಥವಾ ತಿಂಗಳಗಟ್ಲೆ ಕಂತುಗಳನ್ನು ಪಾವತಿಮಾಡುವುದರಲ್ಲಿ ಚೈತನ್ಯ ಸಾಲದೆ ಕೆಟ್ಟುಹೋಗುತ್ತಾರೆ

ನಾಲ್ಕಾರು ಸಾವಿರ ರೂಪಾಯಿಗಳನ್ನು ಮಾತ್ರ ಇಟ್ಟುಕೊಂಡು ಲೇವಾದೇವಿ ನಡಿಸುವಂಥಾ ಒಂದು ಬ್ಯಾಂಕು ಏರ್ಪಾಡಾಗಿ ಅಂಥಾ ಸಣ್ಣಸಾಲುಗಳನ್ನು ಅಪೇಕ್ಷಿಸತಕ್ಕವರಿಗೆ ಹಣ ಒದಗುವಂತೆ ಮಾಡಿಕೊಟ್ಟರೆ ಎಷ್ಟೋ ಪ್ರಯೋಜನವಾಗುತ್ತದೆ ಈ ಬ್ಯಾಂಕಿನ ಬಡ್ಡಿದರಗಳು ಬಡಬಗ್ಗರಿಗೆ ಅನುಕೂಲವಾಗಿರಬೇಕು ಬ್ಯಾಂಕಿನವರು ಸಾಲಗಳನ್ನು ಮೇಲ್ಕಂಡ ಸಾಹುಕಾರರಂತೆಯೇ ದಿನಗಟ್ಲೆ, ವಾರಗಟ್ಲೆ, ತಿಂಗಳಗಟ್ಲೆ ಕಂತುಗಳ ಮೂಲಕ ವಸೂಲ್ಮಾಡಿಕೊಳ್ಳುವುದಕ್ಕೆ ತೃಪ್ತಿಕರವಾದ ಏರ್ಪಾಡಾಗಬೇಕು ಹೀಗೆ ಮಾಡಿದಪಕ್ಷದಲ್ಲಿ ಅಭಿವೃದ್ಧಿಗೆ ಬರಬೇಕೆಂದು ಕುತೂಹಲ ಪಡತಕ್ಕವರಿಗೆ ಪ್ರೋತ್ಸಾಹವಾಗುತ್ತದೆ ಅಂದಾ ಜನರು ಹೆಚ್ಚುವುದಕ್ಕೆ ಸಹಾಯವಾಗುತ್ತದೆ ಈ ಪ್ರಕಾರ ವರುಷ ಒಂದಕ್ಕೆ 100 ಸಂಸಾರಗಳ ಪ್ರಕಾರ ಅಭಿವೃದ್ಧಿಗೆ ಬಂದರೆ ಸಂಸ್ಥಾನದ ಏಳಿಗೆಯು ಖಂಡಿತವಾಗಿ ನೆಲೆಗೊಳ್ಳುತ್ತದೆ ಇಂಥಾ ಏರ್ಪಾಡು ಪಟ್ಟಣಗಳಲ್ಲೂ ತಾಲ್ಲೂಕುಗಳಲ್ಲೂ ಪ್ರಾರಂಭವಾಗಬೇಕು ಈ ಬಾಗವನ್ನು ಸಂಪದಭ್ಯುದಯ ಸಮಾಜದ ಕಾರ್ಯಕರ್ತರು ಪರ್ಯಾಲೋಚಿಸಿ ಬೇಗನೆ ಏರ್ಪಾಡುಗಳನ್ನು ಮಾಡಿ ಜಾರಿಗೆ ತಂದರೆ ಬಹಳ ಅನುಕೂಲ ಪ್ರಜೆಗಳೆಲ್ಲಾ ಪ್ರಯೋಜನ ಹೊಂದಿ ಅವರನ್ನು ಕೊಂಡಾಡುತ್ತಾರೆ ಕೈಗಾರಿಕೆ ನಡಿಸತಕ್ಕವನು ತನ್ನ ಕಸಬಿಗೆ ಅವಶ್ಯವಾದ ಪದಾರ್ಥಗಳನ್ನು ಕೊಂಡುಕೊಳ್ಳುವುದಕ್ಕೆ ಸಹಾಯವಾದರೆ ಮತ್ತು ಪ್ರಜೆಗಳೂ ಐಶ್ವರ್ಯವಂತರೂ ಸ್ವದೇಶ ವತ್ಸಲರಾಗಿ ಅಂಥಾ ದೇಶೀಯ ಕಸಬುದಾರರು ತಯಾರುಮಾಡತಕ್ಕ ಪದಾರ್ಥಗಳನ್ನು ಹೆಚ್ಚು ಹೆಚ್ಚಾಗಿ ಕೊಂಡು ಉಪಯೋಗಿಸುತ್ತಾ ಬಂದರೆ ಕ್ಷೀಣವಾಗಿರುವ ಕಸಬುಗಳು ಅಭಿವೃದ್ಧಿಗೆ ಬರುವುದಕ್ಕೂ, ಪ್ರಜೆಗಳು ನೆಮ್ಮದಿ ಸುಖ ಸಂತೋಷಗಳನ್ನು ಪಡೆದು ಜೀವನ ಮಾಡುವುದಕ್ಕೂ ಎಷ್ಟೋ ಸಹಾಯವಾದೀತು

ತಾಲ್ಲೂಕು ವರ್ತಮಾನಗಳು

ಅರಸೀಕೆರೆ—ಸಂತೇಮೂಳದ ಸಮೀಪದಲ್ಲಿ ಮ್ಯುನಿಸಿಪಾಲಿಟಿಯವರು ಒಂದು ಭಾವಿಯನ್ನು ತೆಗಿಸಿ ಅದಕ್ಕೆ ಡೆಲ್ಯೂಜ್ ಪಂಪನ್ನು ಇಟ್ಟಿದಾರೆ ಇದು ಆರ್ಟೀಸನ್ ಭಾವಿಯನ್ನು ಹೋಲುವಂಥಾದ್ದಾಗಿದೆ ಇದರಿಂದ ನಲ್ಲಿಯಲ್ಲಿ ನೀರು ಹೊರಡುತ್ತದೆ ಜನಗಳಿಗೂ ದನಕರಗಳಿಗೂ ಅನುಕೂಲವಾಯಿತು ಯಂತ್ರದ ಮೂಲಕ ರಚಿತವಾದ ಈ ಭಾವಿಯ ಉಪಯೋಗವನ್ನು ನೋಡಬೇಕೆಂದು ನಲ್ಲಿಯನ್ನು ಕ್ರಮಕ್ಕೆ ತರುವ ವಿಷಯದಲ್ಲಿ ಅಮಲ್ದಾರ್ ಮ|| ಸೀತಾರಾಮಯ್ಯನವರು ಪಟ್ಟಶ್ರಮವು ಶ್ಲಾಘನೀಯವಾದ್ದು —ಈ ಊರಿನ ಉತ್ತರ ದಿಕ್ಕಿನಲ್ಲಿ ವಾಸಮಾಡುವ ತಮಿಳು ಪಂಚಮರ ನೀರಿನ ವಸತಿಗಾಗಿ ಮ್ಯುನಿಸಿಪಾಲಿಟಿಯವರು ಒಂದು ಭಾವಿ ತೆಗಿಸಿ ಅದರ ಕಲ್ಲು ಕಟ್ಟಡಕ್ಕಾಗಿ ಮುನ್ನೂರೂ ಚಿಲ್ಲರೆ ರೂಪಾಯಿ ಸ್ಯಾಂಕ್ಷನ್ ಮಾಡಿರುವದು ಮ್ಯುನಿಸಿಪಾಲಿಟಿಯ ಔದಾರ್ಯವನ್ನೂ ದಯಾರ್ದ್ರಗುಣವನ್ನೂ ವ್ಯಕ್ತ ಪಡಿಸುವದು ಈ ಬಡಜನರು ಸದ್ಯಕ್ಕೆ ಜೋಪಡಿಗಳಲ್ಲಿ ವಾಸ ಮಾಡುತ್ತಾರೆ ಬೆಂಕಿಯಿಂದಲೂ, ಕಳ್ಳ ಕಾಕರಿಂದಲೂ ಅವರಿಗೆ ನಷ್ಟ ಉಂಟು ಮುಂದೆ ಇವರು ಬಂದೋಬಸ್ತಾದ ಮನೆಗಳನ್ನು ತಮ್ಮ ಯೋಗ್ಯತಾನುಸಾರ ಕಟ್ಟಿಕೊಳ್ಳಲು ಅನುಕೂಲಿಸುವಂತೆ ಸರಕಾರದವರು ಜಾಗ್ರತೆಯಲ್ಲಿಯೇ ನಿವೇಶನಗಳನ್ನು ಹಂಚಿಕೊಟ್ಟು ಬಡಜನರನ್ನು ಕಾಪಾಡುವವರಾಗಲಿ. ಸಾಹುಕಾರ್ ಚೌಡಪ್ಪನವರು ಇವರಿಗಾಗಿ ಒಂದು ಸ್ಕೂಲ್ ಕಟ್ಟಡವನ್ನು ಮಾಡಿಸಿಕೊಡುವವರಾಗಿ ಕಾಗದಪತ್ರ ನಡೆಯುತ್ತಿದೆ —ಶ್ರೀ ಶಿವಗಂಗಾ ಸ್ವಾಮಿಗಳ ಸವಾರಿಯು ತಿಪಟೂರು ಮೊಕ್ಕಾಮಿನಿಂದ ಈ ಊರಿಗೆ ದಯಮಾಡಿಸುವದೆಂದು ಇಲ್ಲಿನ ಶಿಷ್ಯಾದಿಗಳು ಅವರ ಬಿಡಾರವಸತಿಗೆ ತಕ್ಕ ಏರ್ಪಾಡುಗಳನ್ನು ಮಾಡಿಸುವವರಾಗಿದಾರೆ ಸ್ವಾಮಿಗಳವರು ತಮ್ಮ ಘನತರವಾದ ಉಪನ್ಯಾಸಗಳ ಮೂಲಕ ಶಿಷ್ಯಾದಿಗಳಿಗೆ ಸನ್ಮಾರ್ಗ ಪ್ರವರ್ತನೆಯಲ್ಲಿ ಉತ್ತೇಜನವನ್ನು ಕೊಡುವವರಾಗಲೆಂದು ಹಾರೈಸುತ್ತೇವೆ —ಇಲ್ಲಿಂದ ಹಾಸನದ ಮಾರ್ಗವಾಗಿ ಮೈಸೂರಿಗೆ ರೈಲ್ ರಸ್ತೆ ಹಾಕಲು ಏರ್ಪಾಡು ಮಾಡುವದಕ್ಕಾಗಿ ಇಂಜನಿಯರ್ ಮ|| ಅನಂತಾಚಾರ್ರು ಇಲ್ಲಿಗೆ ದಯಮಾಡಿಸಿದಾರೆ ಜನವರಿ ಲಾಗಾಯತು ಕಾಮಗಾರಿ ಪ್ರಾರಂಭವಾಗುವದೆಂದು ತಿಳಿದುಬಂದಿದೆ

ದಾವಣಗೆರೆ ತಾ|| ಮಾಯಕೊಂಡ—ಋತುಧರ್ಮ ಅನುಸರಿಸಿ ಅಲ್ಲಲ್ಲೀ ಜನಗಳು ಕಾಯಿಲೆಯಿಂದ ನರಳುತ್ತಲಿದಾರೆ ಇಲ್ಲಿನ ನೇಟಿವ್ ಪಂಡಿತರು ಮುತುವರ್ಜಿಯಿಂದ ಕೆಲಸಮಾಡುತ್ತಾರಾದ್ದರಿಂದ ಕಾಯಿಲೆ ಪ್ರಾಬಲ್ಯಕ್ಕೆ ಅವಕಾಶವಿಲ್ಲ —ಗ್ರಾಮಾಂತರಗಳಲ್ಲೂ, ಇಲ್ಲಿಯೂ ಮೈಲಿ ಎದ್ದು ಅನೇಕ ಹುಡುಗರು ಮೃತಪಟ್ಟಿದಾರೆ ವ್ಯಾಕ್ಸಿನೇಟರು ಬಂದಿರುವದಿಲ್ಲ ಇವರು ಬಂದಾಗ್ಯೂ ಹಳ್ಳಿಗಳಲ್ಲಿ ಮೌಢ್ಯದಿಂದ ಮೈಲಿ ಹಾಕಿಸದೆ ನಷ್ಟಹೊಂದುತ್ತಲಿದಾರೆ ಗ್ರಾಮಾಧಿಕಾರಿಗಳು ಈ ವಿಷಯದಲ್ಲಿ ಮುತುವರ್ಜಿ ವಹಿಸಿದರೆ ಇಷ್ಟರ ಮಟ್ಟಿಗೆ ಅನಾಹುತಕ್ಕೆ ಅವಕಾಶವಾಗಲಾರದೆಂತ ತೋರುತ್ತೆ —ಇಲ್ಲಿನ ಗರಲ್ಸ್ ಸ್ಕೂಲ್ ಸಂಗೀತದ ಮಾಸ್ತರು ಮ|| ವೆಂಕಣ್ಣಾಚಾರ್ಯರಿಗೆ ಹೊಗ್ಗನಾಳಿಗೆ ವರ್ಗವಾಯಿತು ಇವರು ಆಚಾರಶೀಲರು ಸಂಗೀತದಲ್ಲಿ ಪರಿಶ್ರಮವುಳ್ಳವರು ಇವರು ಬಂದ ಮೇಲೆ ಬಾಲಕಿಯರನ್ನು ತರಪೇತುಮಾಡಿದರು ಇಂಥವರನ್ನು ಕ್ಷಿಪ್ರದಲ್ಲಿಯೇ ವರ್ಗಮಾಡಿದ್ದು ವ್ಯಸನಕರವಾಗಿದೆ ಇವರ ಬದಲಿಗೆ ಬಾಯ್ಸ್ ಸ್ಕೂಲ್ ಅ|| ಮಾಸ್ತರನ್ನು ವರ್ಗಮಾಡಿದಾರೆ ಇವರು ಮೊದಲು ಗರಲ್ಸ್ ಸ್ಕೂಲಿನಿಂದ ಬಾಯ್ಸ್ ಸ್ಕೂಲಿಗೆ ವರ್ಗಪಟ್ಟವರು ಮುಖ್ಯವಾಗಿ ಸಂಗೀತ ಬಲ್ಲವರನ್ನು ಇಲ್ಲಿಗೆ ನೇಮಕಮಾಡಿದರೆ ಸ್ಕೂಲ್ ಅಭಿವೃದ್ಧಿಗೆ ಬರುತ್ತೆ —ಇಲ್ಲಿದ್ದ ಫಾರೆಸ್ಟರ್ ಮ|| ಶಂಕರಯ್ಯನವರು ಮಾಣಿಕಣಿವೆಗೆ ವರ್ಗಪಟ್ಟು ಪ್ರಯಾಣಮಾಡಿದರು ಇವರು ಬಂದು 7½ ವರುಷವಾಯಿತು, ಎಲ್ಲರನ್ನೂ ಸಹೋದರರಂತೆ ಭಾವಿಸಿಕೊಂಡು ಸರ್ಕಾರಿ ಕೆಲಸವನ್ನು ಮುತುವರ್ಜಿ ವಹಿಸಿ ಮಾಡುತ್ತಿದ್ದ ಇವರಿಗೆ ಶೇಖದಾರ್ ಮ|| ಸೀತಾರಾಮಯ್ಯನವರು ಔತನವನ್ನು ಮಾಡಿ, ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಸಭೆ ಸೇರಿಸಿ ಸನ್ಮಾನಮಾಡಿದರು, ಅನೇಕ ಮಂದಿ ದೊಡ್ಡಮನುಷ್ಯರು ಅವರವರ ಯೋಗ್ಯತೆ ಮೇರೆ ಮರ್ಯಾದೆ ನಡಿಸಿ ಮಿತ್ರಮಂಡಲಿಯವರೊಂದಿಗೆ ರೈಲ್ವೆ ಸ್ಟೇಷನ್ ವರೆಗೆ ಅವರನ್ನು ಸಾಗಕಳುಹಿಸಿ ಬಂದರು —ನಮ್ಮ ಶೇಖದಾರ್ ಮ|| ಸೀತಾರಾಮಯ್ಯನವರು ಇಲ್ಲಿಗೆ ಬಂದ ಮೇಲೆ ಇಲ್ಲಿನ ಸ್ಥಳೀಯರಲ್ಲಿದ್ದ ಪರಸ್ಪರ ವೈಷಮ್ಯವನ್ನು ತಪ್ಪಿಸಿ ಎಲ್ಲರನ್ನೂ ಐಕಮತ್ಯಮಾಡಿ ದೇವರ ಕಾರ್ಯಗಳು ನಿರ್ವಿಘ್ನವಾಗಿ ನೆರವೇರುವಂತೆ ಮಾಡಿದರು—ಈ ಗ್ರಾಮದಲ್ಲಿ ಜೂಜಾಡುವದೂ ಹೆಡ್‌ಬಗುಸೂ ಅನ್ಯ ಗ್ರಾಮದಿಂದ ಬಂದು ಆಡುವ ಪದ್ಧತಿಯೂ ಇತ್ತು, ಇದರಿಂದ ಅಲ್ಲಲ್ಲಿ ಕಳ್ಳತನವೂ ನಡೆಯುತ್ತಿತ್ತು ದಫೇದಾರ್ ರಾಜಾರಾಯರು ಬಂದ ಮೇಲೆ ಅವರು ಈ ಗಂಡಾಂತರವಾದ ಗಲಾಟೆಗೆ ಅವಕಾಶಕೊಡದೆ ಇಟ್ಟಿದಾರೆ ಇವರು ಇನ್ನೂ ಕೆಲವು ಕಾಲ ಇಲ್ಲೇ ಇದ್ದರೆ ಯಾವ ವಿಧವಾದ ತೊಂದರೆಗೂ ಅವಕಾಶ ದೊರೆಯಲಾರದು —ಇಲ್ಲಿನ ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರ್ ಮ|| ಶ್ರೀಕಂಠಯ್ಯನವರು ಬಾಲಕರಿಗೆ ಚೆನ್ನಾಗಿ ಬೋಧನೆಮಾಡುತ್ತಾರೆ ಈಗ ಸ್ಕೂಲು ದಿನೇ ದಿನೇ ಅಭಿವೃದ್ಧಿ ಸ್ಥಿತಿಗೆ ಬರುತ್ತಲಿದೆ ಪ್ರತಿ ವರ್ಷವೂ 3 4 ಜನ ಪರೀಕ್ಷೆಯಲ್ಲಿ ತೇರ್ಗಡೆಹೊಂದುತ್ತಲಿದಾರೆ, ಸ್ಕೂಲಿಗೆ ಕಂಪೌಂಡು ಗೋಡೆ ಕಟ್ಟಿಸದೆಹೋದದ್ದು ಗಲೀಜಿಗೆ ಅವಕಾಶವಾಗಿದೆ ಸರ್ಕಾರದವರು ಜಾಗ್ರತೆ ಕಟ್ಟಿಸಿಕೊಟ್ಟರೆ ಅನುಕೂಲವಾದೀತು

ಹುಣಸೂರು—ಹಿಮ ಸುರಿಯುತ್ತಾ ಶೀತಗಾಳಿ ಬೀಸುತ್ತಾ ಇರುವುದು ಊರಿನ ಆರೋಗ್ಯ ಚೆನ್ನಾಗಿಯೇ ಇರುತ್ತೆ ಆದರೆ ಇಲಿಗಳು ಸತ್ತವೆಂದೂ, ಒಂದೆರಡು ಮರಣಗಳಾದವೆಂದೂ ಕೇಳಿ ಜನರು ಹೆದರಿ ಎಲ್ಲಿ ಊರು ಬಿಟ್ಟು ಜೋಪಡಿಗಳನ್ನು ಹಾಕಿಕೊಂಡು ವಾಸಮಾಡಬೇಕೋ ಎಂದು ಚಿಂತೆಪಡುತ್ತಿದಾರೆ ಕಲ್ಕುಣಿಕೆರೆ ಮತ್ತು ಕಿರುಸಾಜಿ ಎಂಬ ಗ್ರಾಮಗಳಲ್ಲಿ ಜನಗಳು ಊರು ಬಿಡುವ ತರಹೂದಿನಲ್ಲಿರುತ್ತಾರೆ ಭತ್ತವು ಕಟಾವಾಗಿ ಆಗಲೇ ಹಲವರು ಭತ್ತವನ್ನು ಮನೆಗೆ ತಂದುಕೊಳ್ಳುತ್ತಾ ಇದಾರೆ —ಮಾರೀ ಗುಡಿ ಬೀದಿಗಳಲ್ಲಿ ರಸ್ತೆ ಚೆನ್ನಾಗಿಲ್ಲ ಅಲ್ಲಲ್ಲಿ ಹಳ್ಳಕೊಳ್ಳಗಳು ಜನಕರುಗಳ ಮತ್ತು ಗಾಡಿಗಳ ಸಂಚಾರಕ್ಕೆ ಬಹಳ ತೊಂದರೆ ತಕ್ಕಷ್ಟು ಬೆಳಕು ಇಲ್ಲದೆ ಕತ್ತಲೆಯಲ್ಲಿ ಅನೇಕರು ಎಡವಿಯೂ ಬಿದ್ದಿರುತ್ತಾರೆ —ನೀರಿನ ಕಷ್ಟದ ವಿಷಯ ಹೇಳಬೇಕಾದರೆ ಇರುವ 1–2 ನಲ್ಲಿಗಳಲ್ಲಿ ನೀರು ಸಲೀಸು ಬರುವುದಿಲ್ಲ ಇದರಲ್ಲಿ ಜನಗಳು ಮೇಲಾಟದಿಂದ ಗದ್ದಲವಾಡಿ ಹೊಡೆದಾಡುತ್ತಾರೆ ನಿರಾಕ್ಷೇಪ್ಯವಾಗಿ ಜನಗಳು ದುರ್ಭಾಷೆಗಳನ್ನಾಡುತ್ತಾ, ಹೆಂಗಸರು ಮಕ್ಕಳೆಂದು ನೋಡದೆ ಕೊಡಗಳನ್ನು ಹಲವು ಸಾರಿ ಕಾಲಿನಿಂದ ಒದ್ದು, ಬಲವಾಗಿರುವವರು ಮುಂಚೆ ಕೊಡಗಳಲ್ಲಿ ನೀರು ತುಂಬಿಕೊಂಡು ಹೋಗುತ್ತಾರೆ ಮ್ಯುನಿಸಿಪಾಲಿಟಿಯವರು ಇದಕ್ಕೆ ಸ್ವಲ್ಪ ಗಮನಕೊಡಬೇಕು ಪ್ರಜಾಕ್ಷೇಮದಲ್ಲಿ ಆಸಕ್ತರಾದ ನಮ್ಮ ದಯಾಳು ಅಮಲ್ದಾರರು ಇದನ್ನೆಲ್ಲಾ ಪರಾಂಬರಿಸಿ ಕ್ರಮಪಡಿಸುವಂತೆ ಆಕಡೆಯ ಪ್ರಜೆಗಳು ನಿರೀಕ್ಷಿಸುತ್ತಾರೆ—ನಮ್ಮ ಅಮಲ್ದಾರರು ಕಳೆದ 1-2 ತಿಂಗಳಿಂದ ಇಲ್ಲಿಗೆ 5½ ಮೈಲಿ ಫಾಸಲೆಯಲ್ಲಿರುವ ನೆಲ್ಲೂರುಪಾಲದ ಹತ್ತಿರದ ಜಂಗಲಿನಲ್ಲಿ ಸುತ್ತುಮುತ್ತಣ ಅನೇಕ ಗ್ರಾಮಸ್ಥರ ಸಹಾಯವನ್ನು ಪಡೆದು ತುಂಬಾ ಮೆಹನತ್ತಿನಿಂದ ವೈಸ್‌ರಾಯ್ ಲಾರ್ಡ್ ಹಾರ್ಡಿಂಗ್ ಪ್ರಭುಗಳ ಶಿಕಾರಿಗೆಂದು ಎರಡು ಭಾರೀ ಹುಲಿಗಳನ್ನು ಮುತ್ತಿಗೆ ಹಾಕಿಕೊಂಡಿದ್ದರು ಆದರೆ ಕಳೆದ ತಿಂಗಳ 15 ನೇ ತಾ, ಅವರ ಕಡೆಯವರ್ಯಾರೋ ಸರದಾರರು ಗುರಿ ಕಟ್ಟಿ 7-8 ಗುಂಡುಗಳನ್ನು ಹೊಡೆದರೂ ಹುಲಿಗಳಿಗೆ ಏಟುಬೀಳದೆ ಅವು ತಪ್ಪಿಸಿಕೊಂಡು ಓಡಿಹೋದವು ಅಲ್ಲಿ ಈ ಕಾರ್ಯಕ್ಕಾಗಿ ಸಹಾಯಮಾಡುತ್ತಿದ್ದ ಸುಮಾರು 2,000 ಜನಗಳಿಗೆ ರಾಮೇನಹಳ್ಳಿ ಪಟೇಲ್ ಬಸವೇಗೌಡ, ಸಿದ್ದಲಿಂಗೇಗೌಡನ ಮಗ ಗೋವಿಂದೇಗೌಡ, ಕಾಳೇಗೌಡನ ಮಗ ಕಾಳೇಗೌಡ, ಬಸವೇಗೌಡನ ಮಗ ಪುಟ್ಟೇಗೌಡ, ತಿರುಮಲೇಗೌಡ, ಗೂಳೀಗೌಡ, ಮೊದಲಾದವರು 4 ದಿನಗಳ ವರೆಗೆ ವಿಶೇಷ ಹಣ ಖರ್ಚು ಮಾಡಿ ತುಂಬಾ ಶ್ರಮಪಟ್ಟು ಭೋಜನ ತಾಂಬೂಲಗಳನ್ನು ಕೊಟ್ಟು ಸಂತೃಪ್ತಿಪಡಿಸಿದ್ದು ಹೊಗಳತಕ್ಕದ್ದಾಗಿರುತ್ತದೆ—ಕಳೆದ ತಿಂಗಳ ಮಧ್ಯದಲ್ಲಿ ಸ್ಟೋರ್ ಬೀದಿಯಲ್ಲಿ ಒಬ್ಬ ಮಡಿವಾಳರ ಸ್ತ್ರೀಯು ತನ್ನ ಗಂಡನು ಕಾಫೀ ತೋಟಕ್ಕೆ ಹೋಗಿರುವಾಗ ಯಾತಕ್ಕಾಗಿಯೋ ಮಚ್ಚುಕತ್ತಿಯಿಂದ ತನ್ನ ಕತ್ತನ್ನು ತಾನೇ ಕೊಯ್ದುಕೊಳ್ಳುತ್ತಿದ್ದಳು ಆಷ್ಟರಲ್ಲಿ ಗದ್ದಲವಾಗಿ ಡಾಕ್ಟರವರೂ, ಪೊಲೀಸಿನವರೂ ಕೋಗಿ ಕಾರ್ಯಿಯಿಂದ ಆಕೆಯನ್ನು ಆಸ್ಪತ್ರೆಗೆ ಸಾಗಿಸಿಕೊಂಡು ಹೋದರು ಈಗ ಡಾಕ್ಟರ ಚಿಕಿತ್ಸೆಯಲ್ಲಿರುತ್ತಾಳೆ ಬೇಗನೇ ಗುಣವಾಗಬಹುದು —ಈ ತಿಂಗಳ 13 ನೇ ತಾ ನಿಂದ ಹುಣಸೂರು ಸಂತಲ್ ಕೋಠಿಯಲ್ಲಿ 400 ಟನ್‌ಗಳಷ್ಟು ಗಂಧವನ್ನು ಹರಾಜುಹಾಕುತ್ತಾರೆ.

ಪಾಠಶಾಲೆ ಮತ್ತು ವಾಚಕಶಾಲೆ

ಈ ಪ್ರಪಂಚದಲ್ಲಿ ಜ್ಞಾನಾಭಿವೃದ್ಧಿಗೆ ಮುಖ್ಯ ಕಾರಣವಾಗಿರುವುದು ವಿದ್ಯೆಯೇ ವಿದ್ಯೆಯನ್ನು ಕಲಿತು ಜ್ಞಾನವನ್ನು ಸಂಪಾದಿಸಬೇಕು ಇಂತಹ ವಿದ್ಯೆಯನ್ನು ಒಂದು ಪಾಠಶಾಲೆಯಲ್ಲಿ ಕಲಿಯಬೇಕು ಮನುಷ್ಯನಿಗೆ ವಿದ್ಯೆಯೇ ಆಭರಣ, ಮತ್ತು ವಿದ್ಯೆಯೇ ಧನ ನಾವು ಸಂಪಾದಿಸಿದ ಹಣವನ್ನು ಸ್ವಲ್ಪ ಕಾಲದಲ್ಲಿ ಕಳೆದುಕೊಂಡುಬಿಡಬಹುದು ಆದರೆ ವಿದ್ಯೆ ಎಂಬ ಧನವನ್ನು ಹಾಗೆ ಕಳೆದುಕೊಳ್ಳುವುದಕ್ಕಾಗುವುದಿಲ್ಲ ವಿದ್ಯೆ ಇಲ್ಲದ ಮನುಷ್ಯನು ನಾಗರಿಕನಾಗಿರುವುದಿಲ್ಲ ಪ್ರಪಂಚದ ವ್ಯಾಪಾರವೆಂಬುದೇ ಅವನಿಗೆ ಗೊತ್ತಿರುವುದಿಲ್ಲ ವಿದ್ಯಾಹೀನನು ಅಜ್ಞಾನವೆಂಬ ಕತ್ತಲೆಯಲ್ಲಿ ಮುಳುಗಿ ಪ್ರಪಂಚದ ಸುಖವನ್ನರಿಯದೆ ಕಾಲಾನುಕಾಲಕ್ಕೆ ಮರಣವನ್ನು ಹೊಂದುವನು ಪ್ರಾರಂಭದಲ್ಲಿ ನಾವು ಸಣ್ಣ ಪಾಠಶಾಲೆಗಳಲ್ಲಿ ವಿದ್ಯೆಯನ್ನು ಕಲಿಯಬೇಕು ಇಂತಹ ಪಾಠಶಾಲೆಗಳು ಪ್ರತಿಯೊಂದು ಊರಿನಲ್ಲಿಯೂ ಇರಬೇಕು ಒಂದು ಊರಿನಲ್ಲಿ ಪಾಠಶಾಲೆ ಇಲ್ಲದಿದ್ದರೆ ಆ ಊರಿನ ಜನರು ಇತರ ಊರುಗಳಿಗೆ ಹೋಗಿ ಕಲಿತುಕೊಳ್ಳಲು ಅಪೇಕ್ಷಿಸುವುದಿಲ್ಲ ಇದೂ ಅಲ್ಲದೆ ಬಹಳ ಜನಗಳಿಗೆ ವಿದ್ಯೆಯನ್ನು ಕಲಿತುಕೊಳ್ಳಬೇಕೆಂಬ ಆಸೆಯೂ ಇರುವುದಿಲ್ಲ ಯಾವಾಗ ಅಪೇಕ್ಷೆ ಇಲ್ಲವೋ ಆ ಊರಿನಲ್ಲಿ ಒಂದು ಪಾಠಶಾಲೆ ಇಲ್ಲದಿದ್ದರೂ ತಾವೇ ಒಂದನ್ನು ಕಲ್ಪಿಸಿಕೊಳ್ಳಲು ಅಪೇಕ್ಷಿಸುವುದಿಲ್ಲ ಆದುದರಿಂದ ಸರ್ಕಾರದವರು ಪ್ರತಿಯೊಂದು ಗ್ರಾಮದಲ್ಲಿಯೂ ಒಂದೊಂದು ಸ್ಕೂಲನ್ನು ಸ್ಥಾಪಿಸಿ, ಇಂಗ್ಲೆಂಡಿನಲ್ಲಿರುವಂತೆ ಎಲ್ಲಾ ಹುಡುಗರೂ ವಯಸ್ಕರಾಗುವವರೆಗೆ ವಿದ್ಯಾಭ್ಯಾಸ ಮಾಡಬೇಕೆಂಬ ಕಾನೂನೊಂದನ್ನು ಮಾಡಿದರೆ ಮೈಸೂರು ಸೀಮೆಯ ಜನರು ಸ್ವಲ್ಪ ಕಾಲದಲ್ಲಿ ತಕ್ಕಮಟ್ಟಿಗೆ ವಿದ್ಯಾವಂತರಾಗಬಹುದು

ಒಂದು ಊರಿನಲ್ಲಿ ಸ್ಕೂಲು ಒಂದೇ ಇದ್ದರೆ ವಿದ್ಯಾವಂತರಾಗಲು ಸಾಧ್ಯವಿಲ್ಲ ಈಗಿನ ಕಾಲದಲ್ಲಿ ವೃತ್ತಾಂತ ಪತ್ರಿಕೆಗಳಲ್ಲಿ ಪ್ರಪಂಚದೊಳಗಿರುವ ಪ್ರತಿಯೊಂದು ದೇಶದ ವಿಷಯವನ್ನೂ, ಅಲ್ಲಿನ ವಿಶೇಷ ಸಂಗತಿಗಳನ್ನೂ ಅಚ್ಚುಹಾಕುತ್ತಾರೆ ಈ ಪ್ರಪಂಚದಲ್ಲಿ ಏನೇನು ನಡೆಯುತ್ತಿದೆ ಎಂಬ ಸಂಗತಿಯನ್ನು ತಿಳಿದುಕೊಳ್ಳುವುದು ಅತ್ಯವಶ್ಯಕವು ಹೀಗೆ ತಿಳಿದುಕೊಳ್ಳುವುದಕ್ಕೆ ಒಂದು ವಾಚಕಶಾಲೆಯು ಅತ್ಯವಶ್ಯಕವಾಗಿರುತ್ತದೆ ಆದುದರಿಂದ ಊರಿನವರೆಲ್ಲರೂ ಸೇರಿ ಒಂದು ವಾಚಕಶಾಲೆಯನ್ನು ಏರ್ಪಡಿಸಿ, ಅದಕ್ಕೆ ವಾರ ಪತ್ರಿಕೆಗಳು, ಮಾಸ ಪತ್ರಿಕೆಗಳು ಮುಂತಾದವುಗಳು ಬರುವಂತೆ ಮಾಡಿಕೊಳ್ಳಬೇಕು ತಮ್ಮ ಕೆಲಸಗಳಿಂದ ಬಿಡುವು ಆದಾಗ ಅಲ್ಲಿಗೆ ಹೋಗಿ ಅವುಗಳನ್ನು ಓದಿ ಈಗಿನ ಪ್ರಾಪಂಚಿಕ ಜ್ಞಾನವನ್ನು ದಿನೇ ದಿನೇ ಅಭಿವೃದ್ಧಿಪಡಿಸಿಕೊಳ್ಳಬೇಕು

ಆದಕಾರಣ ಸರ್ಕಾರದವರು ಪ್ರತಿಯೊಂದು ಗ್ರಾಮದಲ್ಲಿಯೂ ಪ್ರೈಮರಿ ಸ್ಕೂಲುಗಳನ್ನು ಸ್ಥಾಪಿಸಿ, ವಿದ್ಯಾಭ್ಯಾಸವನ್ನು ಹೆಚ್ಚಿಸಬೇಕು ಜನಗಳು ಒಂದೊಂದು ವಾಚಕಶಾಲೆಯನ್ನು ಏರ್ಪಡಿಸಿಕೊಂಡು ತಮ್ಮ ತಮ್ಮ ಕಾಲವನ್ನು ಸದ್ವಿನಿಯೋಗಪಡಿಸಬೇಕು ಹೀಗೆ ಮಾಡಿದರೆ ಸ್ವಲ್ಪ ಕಾಲದಲ್ಲಿ ಮೈಸೂರು ಸೀಮೆಯಲ್ಲಿ ವಿದ್ಯಾಭಿವೃದ್ಧಿಯಾಗುವುದು.

ಸಿ ಆರ್ ಎಸ್

ಸುಶಿಕ್ಷಣವೂ ಅದರ ಅಂಗಗಳೂ

ಮೇಲ್ಕಂಡ ವಿಷಯಗಳನ್ನು ಕುರಿತು ಮಿ॥ ಅರ್ನಸ್ಟರವರು ಮಂಗಳೂರು "ಸತ್ಯದೀಪಿಕೆ" ಯಲ್ಲಿ ಬರೆಯುವುದೇನೆಂದರೆ—

ಸುಶಿಕ್ಷಣವೆಂದರೆ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಲಿಕ್ಕೆ ಅನುಕೂಲಿಸುವ ಮೇಲಾದ ಶಿಕ್ಷಣವು ಮನುಷ್ಯಜನ್ಮಸಾಫಲ್ಯವೇ ಸುಶಿಕ್ಷಣದ ಗುರಿಯು ಈ ರೀತಿಯಾಗಿ ನಡಿಸಲ್ಪಡುವ ಶಿಕ್ಷಣವು ಸ್ವಾರ್ಥ ದೃಷ್ಟಿಯಿಂದಲೂ ಪರಾರ್ಥ ದೃಷ್ಟಿಯಿಂದಲೂ, ವ್ಯಕ್ತಿ ದೃಷ್ಟಿಯಿಂದಲೂ, ಸಮಾಜ ದೃಷ್ಟಿಯಿಂದಲೂ ನೋಡಿದರೆ ಸರ್ವಸಮ್ಮತವಾದದ್ದೆಂದು ಎಣಿಸಲ್ಪಡುತ್ತದೆ ಇಂಥಾ ಶ್ರೇಷ್ಠವಾದ ಉದ್ದೇಶದಿಂದ ಈ ಶಿಕ್ಷಣವನ್ನು ಕುರಿತು ಸೂಕ್ಷ್ಮವಾಗಿ ವಿಚಾರಮಾಡಿ ನೋಡಿದ್ದರಲ್ಲಿ ಅದರ ನಾಲ್ಕು ಭಾಗಗಳು ಕಾಣುತ್ತವೆ ಅವು ಯಾವವೆಂದರೆ —ಶಾರೀರಿಕ ಶಿಕ್ಷಣ, ಮನೋವೃತ್ತಿ ಶಿಕ್ಷಣ, ಬುದ್ಧಿ ಶಿಕ್ಷಣ, ಧರ್ಮಶಿಕ್ಷಣ.

ಶಾರೀರಿಕ ಶಿಕ್ಷಣವು —ಮನುಷ್ಯನ ಊರ್ಜಿತವಾದ ಜೀವನಕ್ರಮಕ್ಕೆ ಬುದ್ಧಿ ಎಂಬದೊಂದೇ ಸಾಧನವು ಇದ್ದರೆ ಸಾಲದು ಅದಕ್ಕೆ ಶರೀರಬಲದ ಸಾಧನವೂ ಬೇಕು ಬುದ್ಧಿಯಿಂದ ಸರಿಯಾದ ಪ್ರಯೋಜನವಾಗಬೇಕಾದರೆ ಶರೀರಬಲವು ಅತ್ಯವಶ್ಯಕವಾದದ್ದು ಆದಕಾರಣ ಬುದ್ಧಿಯನ್ನೇ ವಿಶೇಷವೆಂದು ಲಕ್ಷಿಸಿ ಶರೀರವನ್ನು ಅಲಕ್ಷ್ಯಭಾವದಿಂದ ನೋಡಿಸುವದು ಹಾನಿಕಾರಕವಾಗಿರುತ್ತದೆ ಬುದ್ಧಿಬಲಕ್ಕೆ ಪ್ರೋತ್ಸಾಹಕಾರಕವಾದದ್ದು ಶರೀರಬಲ ಬಲವಾದ ಶರೀರಸಾಧನದಿಂದಲೇ ಬುದ್ಧಿಬಲದ ಫಲವನ್ನು ಅನುಭವಿಸಬೇಕು ಆದುದರಿಂದ ಶರೀರಬಲವನ್ನು ಕಾಪಾಡಿಕೊಂಡು ಯೋಗ್ಯವಾದ ರೀತಿಯಲ್ಲಿ ಬೆಳಸಿ ವರ್ಧಿಸುವದು ಸುಶಿಕ್ಷಣದ ಮೊದಲನೇ ಅಂಗವಾಗಿರುತ್ತದೆ

ಮನೋವೃತ್ತಿ ಶಿಕ್ಷಣವು —ಮನುಷ್ಯನು ಏಕಾಂಗಿಯಾಗಿ ಬದುಕಿರುವ ಜೀವಿಯಲ್ಲ ಇವನಿಗೆ ನಾಲ್ವರ ಹೊಕ್ಕುಬಳಕೆಯು ಯಾ ಕೂಡಿಕೆಯು ಬೇಕೇ ಬೇಕು ನಾಲ್ವರ ಸಮ್ಮೇಳನಕ್ಕೆ ಕುಟುಂಬವೆಂದು ಹೆಸರು ಈ ಕುಟುಂಬದ ಸುಸ್ಥಿತಿಯು ಪ್ರತಿ ಒಬ್ಬ ಮನುಷ್ಯನ ಮನೋವೃತ್ತಿಯನ್ನೂ ಅವಲಂಬಿಸಿರುತ್ತದೆ ಪ್ರೇಮ ನೊದಲಾದ ಸದ್ಗುಣಗಳು ಅಂದರೆ ಪ್ರಮುಖ್ಯವಾಗಿ ಪ್ರೀತಿ, ತಾಳ್ಮೆ, ನಂಬಿಕೆ, ಬೆಚ್ಚು ಹಾ ಕಡಮೆ ಇದ್ದಂತೆ ಗಂಡಹೆಂಡರೂ, ತಂದೆ ಮಕ್ಕಳೂ, ಅಪ್ತಮಿತ್ರರೂ ಕೂಡುವರು ಮತ್ತು ಅಗಲುವರು ಮನೋವೃತ್ತಿ ಶಿಕ್ಷಣದಿಂದ ಗೃಹಸೌಖ್ಯವು ಸಮೃದ್ಧಿಯಾಗುತ್ತದೆ ಪ್ರೇಮವೂ ಪ್ರೀತಿಯೂ ವ್ಯಕ್ತವಾಗಿ ನೆಮ್ಮದಿಯುಂಟಾಗುವುದು —ಮನೋವೃತ್ತಿಗಳು ಯಥಾರ್ಥಪಡಿಸಲ್ಪಟ್ಟು ಬೆಳೆಯುವದಕ್ಕೆ ಪರಸ್ಪರ ನಂಬಿಕೆಯೂ, ವಿಶ್ವಾಸವೂ, ಸಂಪತ್ತೂ ನೆಲೆಗೊಳ್ಳುತ್ತವೆ ಇವು ನೆಲೆಗೊಂಡ ಹಾಗೆ ಕುಟುಂಬಗಳು ಒಟ್ಟಾಗಿ ಸೇರಿ ಒಂದು ಸಮಾಜವನ್ನುಂಟುಮಾಡುವವು ಅನೇಕ ಸಮಾಜಗಳು ಒಡಗೂಡಿ ಒಂದು ರಾಷ್ಟ್ರವಾಗುತ್ತದೆ ಆ ರಾಷ್ಟ್ರದ ಪ್ರೌಢಿಯು ದೇಶಪ್ರೀತಿ, ಸತ್ಯಪ್ರೀತಿ, ಸಾರ್ವಜನಿಕಹಿತ ಮುಂತಾದ ಶ್ರೇಷ್ಠಗುಣಗಳನ್ನು ಅವಲಂಬಿಸುತ್ತದೆ ಆದ ಪರಿಂದ ಮನೋವೃತ್ತಿಗಳು ಸುಧಾರಣೆಯಾಗದಿದ್ದರೆ ಕುಟುಂಬವೇ ನಾಶವಾಗುವುದು ಇಷ್ಟು ಮಾತ್ರವಲ್ಲ, ರಾಷ್ಟ್ರವೆಂಬ ಶಬ್ದವನ್ನು ಎತ್ತುವದೇ ಅಸಾಧ್ಯ

ಬುದ್ಧಿಶಿಕ್ಷಣವು —ಇದು ಸುಶಿಕ್ಷಣದ ಮೂರನೇ ಅಂಗವು ಅಲ್ಪ ಸಂಗತಿಗಳನ್ನು ತಲೆಯೊಳಗೆ ಸೇರಿಸಿಟ್ಟುಕೊಳ್ಳುವದೂ, ಕೆಲವು ಸಂಗತಿಗಳನ್ನು ಪಾಠಮಾಡಿಸುವದೂ ಸಹಜವಾದ ಬುದ್ಧಿಶಿಕ್ಷಣವಲ್ಲ ಪದಾರ್ಥಗಳನ್ನು ಲಕ್ಷ್ಯಪೂರ್ವಕವಾಗಿ ನೋಡುವದೂ, ಪರೀಕ್ಷಿಸುವದೂ, ನೋಡಿದ ಸಂಗತಿಗಳನ್ನು ಯಥಾರ್ಥವಾಗಿ, ಲಕ್ಷ್ಯದಲ್ಲಿಡುವದೂ ತಾರತಮ್ಯವನ್ನೂ ಭೇದಾಭೇದವನ್ನೂ ತಿಳಿಯುವದೂ, ಅವುಗಳನ್ನು ಕುರಿತು ನಿಷ್ಪಕ್ಷಪಾತಿಯಾಗಿ ಸತ್ಯವಿಚಾರ ಮಾಡುವದೂ, ನಿರ್ದುಷ್ಟವಾದ ಅನುಮಾನಗಳನ್ನು ಸಂಗ್ರಹಿಸುವದೂ, ಹೊಸ ಸ್ವತಂತ್ರವಾದ ಸಿದ್ಧಾಂತಗಳನ್ನು ಸ್ಥಾಪಿಸುವದೂ, ಈ ಮೊದಲಾದ ಸಾಮರ್ಥ್ಯವಿಕಾಸನೇ ಬುದ್ಧಿಶಿಕ್ಷಣವಾಗಿದೆ ಐಹಿಕ ಜೀವನ, ಕಾಲ, ಕಾರ್ಯಗಳನ್ನು ಯುಕ್ತಿಯಿಂದ ನೆರವೇರಿಸಿ ಜಯಹೊಂದುವದೇ ಪ್ರತಿ ಒಬ್ಬ ಶಿಕ್ಷಿತನ ವಿಶೇಷ ಕಾರ್ಯವಾಗಿದೆ ನಿರೀಕ್ಷಣ, ಪರೀಕ್ಷಣ, ವಿಚಾರಾದಿ ಸಾಮರ್ಥ್ಯಗಳ ಸಂಪೂರ್ಣತೆಯು ಜೊತೆಗೆ ದೇಶವತ್ಸಲನೂ ದೇಶಭಕ್ತನೂ ಆಗಿ ತನ್ನ ಸಮಾಜದವರ ಮತ್ತೂ ರಾಷ್ಟ್ರದವರ ಹಿತವನ್ನು ಬಯಸಿ ಸಾಧಿಸುವದೇ ಅವನು ಸಾಧಿಸತಕ್ಕ ದ್ವಿತೀಯ ಕಾರ್ಯವು ಗಿಳಿಪಾಠವು ಈ ಕಾರ್ಯಗಳನ್ನು ಸಾಧಿಸಲಾರದು ಕೆಲವು ಇತಿಹಾಸದ ಸಂಗತಿಗಳನ್ನು ಬಾಯಿಪಾಠ ಮಾಡಿದಂಥಾ ಕೆಲವು ವಾಙ್ಮಯದ ಪುಸ್ತಕಗಳನ್ನು ಹ್ಯಾಗಾದರೂ ಓದಿದಂಥಾ ಮನುಷ್ಯನಿಂದ ಇಂಥಾ ಕಾರ್ಯಗಳು ಸಾಧ್ಯವಾಗುವ ಯಾ ಕೊನೆಗಾಣುವ ಬಗೆಯು ಕಾಣುವದಿಲ್ಲ ಇಂಥವನಿಗೆ ಸಂಸಾರದ ಕಷ್ಟಗಳು ಪ್ರಾಪ್ತವಾದರೆ ಅವುಗಳಿಂದ ಬಿಡುಗಡೆ ಹೊಂದುವ ಬಗೆ ಹ್ಯಾಗೆ? ಇವನಿಂದ ಸಮಾಜಕ್ಕಾಗಲಿ, ದೇಶಕ್ಕಾಗಲಿ ಲಾಭವಾದೀತೇ? ಯಾವನೊಬ್ಬನಿಂದ ಸಮಾಜಕ್ಕೂ ದೇಶಕ್ಕೂ ಹಿತವೂ ಕ್ಷೇಮವೂ ಪ್ರಯೋಜನವೂ ಆಗಬೇಕಾದರೆ ಅವನು ಬುದ್ಧಿಸಾಮರ್ಥ್ಯಗಳನ್ನು ಪರಿಪಕ್ವಮಾಡಿಕೊಂಡಿರಬೇಕೆಂಬದು ಸ್ಪಷ್ಟವಾಗಿದೆ

ಧರ್ಮಶಿಕ್ಷಣವು—ಧರ್ಮವೆಂದರೆ ಆತ್ಮವಿಚಾರವು ಅಂದರೆ, ಮನುಷ್ಯನು ತಾನು ಸೃಷ್ಟಿಸಲ್ಪಟ್ಟ ತನ್ನ ಅಧಿಕಾರವನ್ನು ಯಾ ಸೃಷ್ಟಿಕರ್ತನ ಚಿತ್ತವನ್ನು ಹುಡುಕಿ ತಿಳಿದು ಅದರಲ್ಲಿ ಅನ್ಯೋನ್ಯತೆಯನ್ನು ಹೊಂದುವ ವಿಚಾರವು ಇದು ಮನುಷ್ಯ ಜನ್ಮದಲ್ಲಿ ಸಾಧಿಸತಕ್ಕ ಪರಮಾರ್ಥವು ಲೌಕಿಕಾರ್ಥವನ್ನು ಸಾಧಿಸಲಿಕ್ಕೆ ಬುದ್ಧಿಶಿಕ್ಷಣವು ಅವಶ್ಯವಾಗಿರುವಂತೆ ಪಾರಮಾರ್ಥಿಕವಾದವುಗಳನ್ನು ಸಾಧಿಸಲಿಕ್ಕೆ ಧರ್ಮಶಿಕ್ಷಣವು ಅತ್ಯಗತ್ಯವಾಗಿರುವದು ಶಿಕ್ಷಣದ ಮೂರು ಅಂಗಗಳಿಂದ ನಿರ್ಮಿತವಾದ ದೇವಾಲಯಕ್ಕೆ ಈ ನಾಲ್ಕನೇ ಅಂಗವು ಅಂದರೆ ಧರ್ಮಶಿಕ್ಷಣವು ಕಲಶದಂತೆ ಒಪ್ಪುವದು

ಮೈಸೂರು ಸರ್ಕಾರದ ವ್ಯವಸಾಯದ ಇಲಾಖೆಯವರಿಂದ ಬರೆಯಲ್ಪಟ್ಟ ಸಂಗತಿಗಳು

[ವ್ಯವಸಾಯದ ವಿಚಾರವಾಗಿ ತಿಳಿಯಬೇಕಾದ ಸಂಗತಿಗಳ ಮತ್ತು ವ್ಯವಸಾಯಾಭಿವೃದ್ಧಿಗೆ ಬೇಕಾಗುವ ಸಹಾಯದ ವಿಷಯವಾಗಿ ಬರೆಯುವ ಕಾಗದಗಳನ್ನು ಬೆಂಗಳೂರಲ್ಲಿರುವ ವ್ಯವಸಾಯದ ಇಲಾಖಾ ಡೈರೆಕ್ಟರವರಿಗೆ ಬರೆಯಬೇಕು]

ಕಣತೆಲಸದ ಯಂತ್ರ

ಕುಪ್ಪೆ ಹಾಕಿದ ಅರಿಯಿಂದ ಕಾಳುಗಳನ್ನು ವಿಂಗಡಿಸುವುದು ವ್ಯವಸಾಯ ಕೆಲಸದಲ್ಲಿ ಮುಖ್ಯವಾದದ್ದು ಇದನ್ನು ಈಗ ನಮ್ಮ ದೇಶದಲ್ಲಿ ಎತ್ತುಗಳ ಕಾಲಿನಿಂದ ತುಳಿಸುವುದರಿಂದಲೂ, ಕೋಲುಗಳಿಂದ ಬಡಿಯುವುದರಿಂದಲೂ ಮಾಡುತ್ತಾರೆ ಈ ಪದ್ಧತಿಗಳನ್ನು ಯೂರೋಪ್, ಅಮೆರಿಕಾ ದೇಶಗಳವರು ತ್ಯಜಿಸಿ, ಅದಕ್ಕೆ ಬದಲಾಗಿ ಯಂತ್ರಗಳನ್ನು ಉಪಯೋಗಿಸುತ್ತಲಿದ್ದಾರೆ ಎತ್ತು ಮತ್ತು ಆಳುಗಳ ಕೈಯಿಂದ ಮಾಡುವ ಕಣ ಕೆಲಸವು ಬಹು ಕಷ್ಟವಾದ ಮತ್ತೂ ಬಹು ನಿಧಾನವಾಗಿ ನಡೆಯುವುದು ತಥಾಪಿ ಘಟ್ಟಿ ಗುಣಗುಳ್ಳ ನಮ್ಮ ಮುಖ್ಯ ಧಾನ್ಯವಾದ ರಾಗಿಯನ್ನು ಬಿಡಿಸುವುದು ಮತ್ತಷ್ಟು ಕಷ್ಟ ಈ ಕಷ್ಟವನ್ನು ಸ್ವಲ್ಪಮಟ್ಟಿಗೆ ನಿವಾರಣೆಮಾಡುವುದಕ್ಕಾಗಿ ಮೈಸೂರ್ ಸರ್ಕಾರದ ವ್ಯವಸಾಯದ ಇಲಾಖೆಯವರು ಒಂದು ಯಂತ್ರವನ್ನು ಅಮೆರಿಕಾ ದೇಶದಿಂದ ತರಿಸಿ, ಹೆಬ್ಬಾಳದ ಫಾರಂನಲ್ಲಿ ಆದರಿಂದ ಕೆಲವು ವರ್ಷಗಳಿಂದ ಕೆಲಸವನ್ನು ಮಾಡುತ್ತಿದ್ದಾರೆ ಇದೇ ನಮೂನೆಯಲ್ಲಿ ಕೋಲಾರ್ ಜಿಲ್ಲೆಯಲ್ಲಿಯೂ ತಯಾರಾದ ಮತ್ತು ಇದರಂತೆಯೇ ಕೆಲಸಮಾಡುವ ಕೆಲವು ಯಂತ್ರಗಳನ್ನು ಈ ಇಲಾಖೆಯವರು ತಮ್ಮ ಡಿಪೋವಿನಲ್ಲಿ ಇಟ್ಟಿರುತ್ತಾರೆ ಮೈಸೂರು ಸಂಸ್ಥಾನದ ಕೆಲವು ದೊಡ್ಡ ರೈತರು ಈ ಮಾದರಿ ಕಣ ಕೆಲಸದ ಯಂತ್ರಗಳನ್ನು ಕೊಂಡುಕೊಂಡಿರುತ್ತಾರೆ

ಈ ಯಂತ್ರವನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು ಅರಿಯನ್ನು ಬಡಿಯುವುದೊಂದು ಭಾಗ ಕಾಳನ್ನು ತೂರಿ ಚೊಕ್ಕಟಮಾಡುವುದೊಂದು ಭಾಗ ಅರಿ ಹೊಡೆಯುವ ಕೆಲಸ ಮಾತ್ರ ಸಾಕೆಂದು ತೋರಿದಾಗ ತೂರುವ ಭಾಗವನ್ನು ಬಿಟ್ಟು ಅದೊಂದನ್ನೇ ಉಪಯೋಗಿಸಬಹುದು ಅರಿ ಹೊಡೆಯುವ ಭಾಗವನ್ನು ಮಾತ್ರ ನಡಿಸುವುದಕ್ಕೆ ಪೂರಾ ಯಂತ್ರವನ್ನು ನಡಿಸುವುದಕ್ಕಿಂತಲೂ ಕಮ್ಮಿಯಾದ ಶಕ್ತಿಯು ಬೇಕಾಗುವುದು ಇದಲ್ಲದೆ ಅದರ ಖರೀದಿಯೂ ಸುಲಭವಾಗುವುದು

ಅರಿಹೊಡೆಯುವ ಭಾಗದಲ್ಲಿ ಅತಿ ವೇಗವಾಗಿ ತಿರುಗುವ ಒಂದು ಪಂಜರದಂತಿರುವ "ಸಿಲಿಂಡರು" ಇರುವುದು ಮಧ್ಯದಲ್ಲಿಯೂ ಕೊನೆಗಳಲ್ಲಿಯೂ ದಪ್ಪ ದುಂಡು ತಗಡುಗಳಿಗೆ ಗಾತ್ರವಾದ ಒಂಬತ್ತು ಸಲಾಕೆಗಳನ್ನು ಜೋಡಿಸಿ ಈ ಸಿಲಿಂಡರನ್ನು ಮಾಡಿರುತ್ತದೆ ಮೊನಚಾದ ಉಕ್ಕಿನ ಹಲ್ಲುಗಳನ್ನು ಈ ದಪ್ಪ ಸಲಾಕೆಗಳ ಮೇಲೆ ಬೋಲ್ಟುಗಳಿಂದ ಭದ್ರವಾಗಿ ಬಿಗಿದಿರುತ್ತದೆ ಬಡಿದ ಅರಿಯನ್ನು ಕಾಳು ಗುಣಗುಣವಾಗಿ ಮುಂದಕ್ಕೆ ತಳ್ಳುವುದು

ಸಿಲಿಂಡರು ತಿರುಗಿ ಹೊಡೆಯುವ ಕೆಲಸವು ಈ ಭಾಗವನ್ನು ಉಪಯೋಗಿಸಿದರೆ ಹುಲ್ಲು, ಹೊಟ್ಟು, ಧಾನ್ಯ, ಇವುಗಳೆಲ್ಲಾ ತತ್‌ಕ್ಷಣವೇ ಸಿಲಿಂಡರಿನ ಹಿಂಭಾಗದಲ್ಲಿ ಮಿಶ್ರವಾಗಿ ಬರುವವು ಒಂದು ಸ್ಕ್ರೂಮೊಳೆಯ ಸಹಾಯದಿಂದ ಮೇಲ್ಭಾಗದ ಎರಡನೆ ಇರುವ ಹಲ್ಲುಗಳನ್ನು ಮೇಲಕ್ಕೆ ಎತ್ತಲೂ ಬಹುದು, ಕೆಳಕ್ಕೆ ಇಳಿಸಲೂ ಬಹುದು ಮೇಲಕ್ಕೆ ಎತ್ತುವುದರಿಂದ ಸಿಲಿಂಡರಿಗೂ ಮೇಲ್ಭಾಗದ ತಗಡಿಗೂ ಮಧ್ಯೆ ಇರುವ ಪ್ರದೇಶವು ಜಾಸ್ತಿಯಾಗುತ್ತದೆ ಇದರಿಂದ ಯಂತ್ರದಲ್ಲಿ ಹುಲ್ಲು ಸಿಕ್ಕಿಕೊಳ್ಳುವುದು ಕಮ್ಮಿಯಾಗುತ್ತದೆ ಇದಲ್ಲದೆ ಎರಡುಪಕ್ಕದ ಹಲ್ಲುಗಳ ಮಧ್ಯದಲ್ಲಿರುವ ಉಜ್ಜುವ ಪ್ರದೇಶವು ಕಡಮೆಯಾಗುವುದರಿಂದ ಕಾಳುಗಳೂ ಒಡೆಯುವುದಿಲ್ಲ ಹಲ್ಲುಗಳು ಕೆಳಗೆ ದಪ್ಪವಾಗಿ ಮೇಲೆ ಸಣ್ಣವಾಗಿರುವುದರಿಂದ ಹಲ್ಲುಗಳ ಮಧ್ಯದಲ್ಲಿರುವ ಜಾಗವು ಮೇಲ್ಭಾಗದ ಹಲ್ಲುಗಳನ್ನು ಎತ್ತುವುದರಿಂದ ಜಾಸ್ತಿಯೂ, ಇಳಿಸುವುದರಿಂದ ಕಡಮೆಯೂ ಆಗುತ್ತದೆ ಆದುದರಿಂದ ಕಾಳು ಒಡೆದಾಗ ಈ ಹಲ್ಲುಗಳನ್ನು ಮೇಲಕ್ಕೆ ಎತ್ತತಕ್ಕದ್ದು, ತೆನೆಗಳು ಚೊಕ್ಕಟವಾಗದೆ ಕಾಳುಗಳಿಂದ ಸಹಿತವಾಗಿ ಹೊರಕ್ಕೆ ಬಂದರೆ ಹಲ್ಲುಗಳನ್ನು ಇಳಿಸತಕ್ಕದ್ದು

ಇನ್ನು ಯಂತ್ರದ ಇತರ ಭಾಗಗಳಿಗೆ ಹೋಗೋಣ ಹಿಂದೆ ಹೇಳಿದಂತೆ ಬಡಿದ ಅರಿಯೆಲ್ಲಾ ತೂತುಗಳಿರುವ ತಗಡಿನ ಮೇಲೆ ಜೋರಾಗಿ ಬೀಳುತ್ತದೆ ಇಲ್ಲಿ ದಂಪದ ಹಲ್ಲುಗಳಿರುವ ಇನ್ನೊಂದು ಸಿಲಿಂಡರು ಇರುವುದು ಈ ಸಿಲಿಂಡರು ತಿರುಗುವುದರಿಂದ ಹುಲ್ಲೆಲ್ಲಾ ಬಾಚಣಿಗೆಯಿಂದ ಬಾಚಿದಂತಾಗಿ ಅದರಲ್ಲಿರುವ ಕಾಳುಗಳು ಹೊರಗೆ ಬರುವವು ಇದು ಹುಲ್ಲನ್ನೂ ಸಹ ಮುಂದಕ್ಕೆ ನೂಕುವುದು ಕೆಳಭಾಗದ ತಗಡು ಮುಂದಕ್ಕೂ ಹಿಂದಕ್ಕೂ ಅಲುಗಾಡುವುದರಿಂದ ಹುಲ್ಲೆಲ್ಲಾ ಹಿಂದಕ್ಕೆ ಹೋಗುವುದು ಸಣ್ಣ ಚೂರಾಗಿರುವ ಹೊಟ್ಟು ಮತ್ತು ಕಾಳು ತಗಡಿನಲ್ಲಿರುವ ತೂತುಗಳಿಂದ ಕೆಳಭಾಗಕ್ಕೆ ಇಳಿಯುತ್ತವೆ ಇವು ಹುಲ್ಲಿನ ಜೊತೆಗೆ ಯಂತ್ರದ ಹಿಂಭಾಗಕ್ಕೆ ಹೋಗದೆ ಇರುವ ಹಾಗೆ ತೂತುಳ್ಳ ತಗಡುಗಳವು ಮೇಲೋಟವುಳ್ಳದ್ದಾಗಿರುವುದು

ಮೇಲೆ ಕೆಳಗಾಗುವ ಎರಡು ಸಣ್ಣ ಹಲಿಗೆಗಳು ಈ ತಗಡಿನ ಮೇಲಿದ್ದು ಆದರ ಮೇಲೆ ಹೋಗುವ ಹುಲ್ಲನ್ನು ಕೆದಕಿ ಚೂರುಚೂರಾಗಿರುವ ಹೊಟ್ಟನ್ನೂ ಕಾಳನ್ನೂ ಸಹ ಬೇರೆಮಾಡುತ್ತವೆ ತೂತುಗಳಿಂದ ಕೆಳಕ್ಕೆ ಇಳಿದು, ಹೊಟ್ಟು ನುಸುಗೂ, ಕಾಳೂ ಕೆಳಗಿರುವ ಒಂದು ಜಲ್ಲಡಿಯ ಮೇಲೆ ಬೀಳುತ್ತವೆ ಈ ಸಮಯದಲ್ಲಿ ಒಂದು ಮರದ ಚಕ್ರವು ಅತಿವೇಗವಾಗಿ ತಿರುಗುವುದರಿಂದ ಗಾಳಿಯು ಬೀಸುತ್ತದೆ ಇದರಿಂದ ಹೊಟ್ಟೆಲ್ಲಾ ಆಚೆಗೆ ತೂರಲ್ಪಡುವುದು ಗಾಳಿಯ ವೇಗವನ್ನು ಹೆಚ್ಚು ಕಡಮೆ ಮಾಡುವುದಕ್ಕೆ ಬಾಗಿಲುಗಳನ್ನು ಇಟ್ಟಿರುವುದು ಭಾರವಿಲ್ಲದ ಹೊಟ್ಟೆಲ್ಲಾ ಆಚೆಗೆ ಹೋಗಿ ಸುಮಾರಾಗಿ ಚೊಕ್ಕಟವಾದ ಕಾಳು ಜಲ್ಲಡಿಯ ಕೆಳಕ್ಕಿಳಿದು ಪಕ್ಕದಲ್ಲಿರುವ ಒಂದು ಮೂತಿಯಿಂದ ಹೊರಕ್ಕೆ ಬರುವುದು ಭಾರವಾದ ಘಟ್ಟಿ ಗುಣಗು ಜಲ್ಲಡಿಯ ಮುಂಭಾಗದಿಂದ ಹೊರಟು ಅಲ್ಲಿರುವ ಇನ್ನೊಂದು ಮೂತಿಯಿಂದ ಹೊರಕ್ಕೆ ಬರುವುದು ಈ ಘಟ್ಟಿ ಗುಣಗನ್ನು ಮತ್ತೆ ಮಿಷೀನಿನಲ್ಲಿ ಅರಿಯ ಜೊತೆಗೆ ಕೊಡಬಹುದು ಬೇರೆಬೇರೆ ಕಾಳುಗಳಿಗೋಸ್ಕರ ಅದಕ್ಕೆ ರಂಧ್ರಗಳುಳ್ಳ ಜಲ್ಲಡಿಗಳು ಮಿಷಿನ್ ಜೊತೆಗೆ ಇವೆ ಹುಲ್ಲನ್ನೂ ಹೊಟ್ಟನ್ನೂ ಬೇರೆಬೇರೆಯಾಗಿಡುವುದಕ್ಕೆ ಇವೆರಡರ ಮಧ್ಯೆ ಒಂದು ಹಲಗೆಯನ್ನು ಇಟ್ಟಿರುತ್ತದೆ

ಈ ಯಂತ್ರವನ್ನು ಎತ್ತಿನ ಪವರಿನಿಂದಾಗಲೀ, ಒಂದು ಚಿಕ್ಕ ಇಂಜನ್ನಿನಿಂದಾಗಲಿ ನಡಿಸಬಹುದು ಘಂಟೆಗೆ 200 ರಿಂದ 300 ಸೇರು ರಾಗಿಯೂ 400 ರಿಂದ 600 ಸೇರು ಭತ್ತವೂ ಇದರಲ್ಲಿ ಆಗುವುದು ಇದಕ್ಕೆ 4 ಜೊತೆ ಎತ್ತುಗಳು, ಅಥವಾ 3½ ಕುದುರೆ ಶಕ್ತಿಯುಳ್ಳ ಇಂಜನ್ನು ಬೇಕಾಗುವುದು ಅಮೇರಿಕಾ ದೇಶದಿಂದ ತರಿಸಿದ ಯಂತ್ರಕ್ಕೆ 105 ರೂಪಾಯಿಗಳ ಕ್ರಯವೂ, ಕೋಲಾರದ ಯಂತ್ರಕ್ಕೆ 350 ರೂಪಾಯಿಗಳ ಕ್ರಯವೂ ಆಗುವುದು ಎತ್ತಿನ ಪವರಿಗೆ 100 ರೂಪಾಯಿಗಳೂ ಇಂಜನ್ನಿಗೆ ಸುಮಾರು 600 ರೂಪಾಯಿಗಳೂ ಕ್ರಯವಾಗುವುದು

ಈ ಮಿಷೀನಿನಲ್ಲಿ ದಿನಕ್ಕೆ 10 ರಿಂದ 20 ಖಂಡುಗದ ವರಿಗೆ ರಾಗಿಯು ಆಗುವುದರಿಂದ ಅತಿಜಾಗ್ರತೆಯಾಗಿ ಕಣಕೆಲಸವು ನೆರವೇರುವುದು ಇದರಿಂದಾಗುವ ಮೊದಲನೆಯ ಪ್ರಯೋಜನವು ಬಹಳ ಕಮ್ಮಿ ಖರ್ಚಿನಿಂದ ಕೆಲಸ ನಡೆಯುವುದು ಇದರ ಎರಡನೆಯ ಪ್ರಯೋಜನವು ಕಬ್ಬು ಅಧಿಕವಾಗುವುದು ಬಿತ್ತನೆ ಹಾಕುವುದು, ಇವೇ ಮುಂತಾದ ಕೆಲಸಗಳು ಕಾಲದಲ್ಲಿ ಒದಗುತ್ತವೆ ಕಣಕೆಲಸದ ನಿಮಿತ್ತ ಇವುಗಳನ್ನು ನಿಲ್ಲಿಸಿರುತ್ತಾರೆ ಆದುದರಿಂದ ಈ ಕೆಲಸವನ್ನು ಜಾಗ್ರತೆಯಾಗಿ ಪೂರೈಸುವ ಅನುಕೂಲ ಸಿಕ್ಕಿದರೆ ಕಬ್ಬಿನ ವ್ಯವಸಾಯಕ್ಕೆ ವಿಶೇಷ ಗಮನಕೊಡಲು ಅವಕಾಶವಾಗುವುದು

ಎತ್ತುಗಳಿಂದ ತುಳಿಸುವುದರಿಂದಲೂ ಮಿಷೀನಿನಿಂದಲೂ ಅರಿಯನ್ನು ಪಾಕುಮಾಡುವುದಕ್ಕೆ ತಗಲುವ ಖರ್ಚನ್ನು ಕೆಳಗೆ ಬರೆದಿದೆ—

(1) ಎತ್ತಿನಿಂದ ತುಳಿಸುವುದು —೪ ಎತ್ತುಗಳು ಆರು ಆಳು ಮನುಷ್ಯರು ಒಂದು ಪವಗನ್ನು ಮೂರುದಿವಸದಲ್ಲಿ ಪೂರೈಸುತ್ತಾರೆ 6 ಎತ್ತುಗಳು 3 ದಿನಗಳಿಗೆ ದಿನಕ್ಕೆ ಒಂದೆತ್ತಿಗೆ 4 ಆಣೆ ಪ್ರಕಾರ ರೂ 1 0 0 ; 3 ಜನ 3 ದಿನಗಳು ದಿನಕ್ಕೆ ಒಬ್ಬನಿಗೆ 1 ಆಣೆ ಪ್ರಕಾರ ರೂ 1 8 0 ಒಟ್ಟು ರೂ 10 8 0 ; 1 ಜನ ಒಂದುದಿನ ತೂರುವುದಕ್ಕೆ ರೂ 1 ಜುಮ್ಲಾ ರೂ 11 8 0 ಇದರಿಂದ 200 ಸೇರಿನ ಆರು ಖಂಡುಗ ಆಗುವುದರಿಂದ ಪ್ರತಿಖಂಡುಗಕ್ಕೂ ರೂ 1 14 0 ಆಗುವುದು

(2) ಎತ್ತಿನ ಪವರಿನ ಸಹಾಯದಿಂದ ಮಿಷೀನಿನಲ್ಲಿ ಕಣಮಾಡುವುದು — 6 ಜನ ದಿನಕ್ಕೆ 4 ಆಣೆ ಪ್ರಕಾರ ರೂ 1 8 0 4 ಜೊತೆ ಎತ್ತುಗಳಿಗೆ ರೂ 4, ಸವೆದುಹೋಗುವ ನಷ್ಟದ ಬಗ್ಗೆ ಮಿಷೀನ್ ರಿಪೇರಿ ಮತ್ತು ವರ್ಷಕ್ಕೆ ಶೇಕಡ 20 ರಂತೆ ಮಿಷೀನ್‌ಗೆ 700 ರೂಪಾಯಿ ಬೆಲೆಯಾದರೆ ಅದು ವರ್ಷಕ್ಕೆ 100 ದಿನ ಕೆಲಸಮಾಡಿದರೆ ದಿನ ಒಂದಕ್ಕೆ ರೂ 1 8 0 ಜುಮ್ಲಾ 7 ರೂಪಾಯಿ ಆಗುತ್ತೆ ಪ್ರತಿದಿನವೂ ಹದಿನಾಲ್ಕು ಖಂಡುಗಗಳಾದರೆ ಖಂಡುಗ ಒಂದಕ್ಕೆ 8 ಆಣೆ ಆಗುವುದು

(3) ಆಯಿಲ್ ಇಂಜಿನ್ ಸಹಾಯದಿಂದ ಮಿಷಿನ್‌ನಲ್ಲಿ ಅರಿ ಹೊಡೆಯುವುದು — 6 ಜನ 4 ಆಣೆ ಪ್ರಕಾರ ರೂ 1 8 0 3 ಗ್ಯಾಲನ್ ಎಣ್ಣೆಗೆ ರೂ 1 8 0 ಎಣ್ಣೆ, ರಿಪೇರಿ ಮತ್ತು ಸವೆದುಹೋಗುವ ನಷ್ಟ ವರ್ಷಕ್ಕೆ ಶೇಕಡ 20 ರ ಪ್ರಕಾರ 1,300 ರೂಪಾಯಿಗೆ ರೂ 3 ಜುಮ್ಲಾ ರೂ 6 ಇದೂ ಸಹ ಹದಿನಾಲ್ಕು ಖಂಡುಗ ಮಾಡುವುದರಿಂದ ಖಂಡುಗಕ್ಕೆ 6 ಆಣೆಗೆ ಕಮ್ಮಿಯಾಗಿಯೇ ಬೀಳುವುದು

ವಿಶೇಷ ಸೂಚನೆ —ವ್ಯವಸಾಯದ ಇಲಾಖೆಯವರು ಶೀಘ್ರದಲ್ಲಿಯೇ ಎರಡು ಚಿಕ್ಕ ಯಂಜನ್‌ಗಳನ್ನು ತರಿಸಿ, ಅವುಗಳನ್ನು ಕಣಕೆಲಸದ ಯಂತ್ರಕ್ಕಾಗಿ ಬಾಡಿಗೆಗೆ ಕೊಡಲು ಸಿದ್ಧವಾಗಿರುವರು ಡಿಸೆಂಬರು ತಿಂಗಳು ಮಧ್ಯಕಾಲಕ್ಕೆ ಒಂದು ಯಂಜನ್ನು, ಜನವರಿ ಮಧ್ಯಕ್ಕೆ ಮತ್ತೊಂದು ಯಂಜನ್ನು ಒದಗುವುವು ಯಂತ್ರ ಮತ್ತು ಯಂಜನ್ನು ಕೆಲಸಮಾಡುವ ಖರ್ಚು ಅದು ಸವೆದುಹೋಗುವ ಬಗ್ಗೆ ಖರ್ಚು ಮುಂತಾದದ್ದು ಹೊರಡುವ ಹಾಗೆ ಸ್ವಲ್ಪ ಬಾಡಿಗೆಯನ್ನು ವಸೂಲು ಮಾಡುವರು ಅನುಭವಶಾಲಿಗಳಾದ ಜನಗಳನ್ನು ಯಂತ್ರದ ಜೊತೆಗೆ ಸರ್ಕಾರದ ಪರವಿನಿಂದ ಕಳುಹಿಸಲಾಗುವುದು ತಮ್ಮ ರಾಗಿಯ ಅರಿಯನ್ನು ವಿಂಗಡಿಸಲಪೇಕ್ಷೆಯುಳ್ಳವರು ಅತಿ ಜಾಗ್ರತೆಯಾಗಿ ವ್ಯವಸಾಯದ ಇಲಾಖೆ ಡೈರೆಕ್ಟರುಗಳಿಗೆ ಬರೆದುಕೊಳ್ಳಬಹುದು ಇವರು ಇದನ್ನು ಕುರಿತು ಇನ್ನೂ ಹೆಚ್ಚಿನ ಯತಕ್ಕೆ ಇತರ ವಿಷಯಗಳನ್ನು ಸೂಚಿಸುವರು

ಖಾತ್ರಿದಾರರಿಗೆ ನೋಟೀಸ್

ಹೆಸರು ವಿಳಾಸವಿಲ್ಲದೆ ಬರತಕ್ಕ ಖಾತ್ರಿಗಳಿಗೆ ನಾವು ನಿಗಾ ಕೊಡಲಾರೆವು ಆದಕಾರಣ ಖಾತ್ರಿದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು

ವಿಷಯವನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಯನ್ನು ಕಾಗದದ ಎರಡು ಕಡೆಗಳಲ್ಲೂ ಬರೆಯಕೂಡದು, ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಪ್ರಚುರಪಡಿಸುವುದಕ್ಕೆ ಬರತಕ್ಕ ಬಾತ್ಮಿಗಳನ್ನು ಪ್ರತಿ ವಾರವೂ ಸೋಮವಾರದೊಳಗಾಗಿ ನಮಗೆ ತಲಪುವಂತೆ ಕಳುಹಿಸಬೇಕು ಮಂಗಳವಾರ, ಬುಧವಾರಗಳಲ್ಲಿ ನಮಗೆ ಬರುವ ಬಾತ್ಮಿಗಳು ಆಯಾ ವಾರದಲ್ಲೇ ಪ್ರಕಟವಾಗುವವೆಂಬ ಭರವಸೆ ಕಡಮೆ ಬಾತ್ಮಿಗಳು ತುಂಬಾ ಸಂಕ್ಷೇಪವಾಗಿರಬೇಕೆಂದು ಒತ್ತಿ ಹೇಳುತ್ತೇವೆ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ನಾವು ಹೊಣೆಗಾರರಾಗುವುದಿಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದ್ದು

ಅರಗದ ಕಲಾನಾಥಸ್ವಾಮಿ ದೇವಸ್ಥಾನದ ಕಾರುಕರ್ದಿಗಳು ತೃಪ್ತಿಕರವಾಗಿಲ್ಲವೆಂಬ ಅರ್ಥಕ್ಕೆ ಪ್ರಕಟನೆಗಾಗಿ ನಮ್ಮಲ್ಲಿಗೆ ಒಂದು ಬಾತ್ಮಿಯು ಬಂದಿರುತ್ತದೆ ಸ್ಥಳದ ಮುಖಂಡರು ಸೇರಿ ಅಮಲ್ದಾರರಿಗೂ ಮುಜರಾಯಿ ಅಧಿಕಾರಿಗಳಿಗೂ ಅರಿಕೆಮಾಡಿಕೊಂಡಲ್ಲಿ ಅವರು ತನಿಖೆಯಿಂದ ಕ್ರಮಪಡಿಸುತ್ತಾರೆನ್ನುವುದಕ್ಕೆ ಸಂಶಯವಿಲ್ಲ

ಅನಾಥ ಹಿತ್ಯೈಷಿ, ಹಾಸನ —ನಿಮ್ಮ ಸಂಪೂರ್ಣವಾದ ಹೆಸರು ವಿಳಾಸಗಳ ಸಮೇತ ಪ್ರಕಟಿಸಬಹುದಾದರೆ ನಿಮ್ಮ ಬಾತ್ಮಿಯನ್ನು ಪ್ರಕಟಮಾಡುವೆವು

ಕೆ ಆರ್, ಮಾಗಡಿ—ಕಥೆಗಳನ್ನು ಪ್ರಕಟಿಸಲು ನಮ್ಮ ಪತ್ರಿಕೆಯಲ್ಲಿ ಸ್ಥಳ ದೊರಕಲಾರದೆಂದು ವಿಷಾದಿಸುತ್ತೇವೆ

—ಎಡಿಟರ್]

ಕರೆಸ್‌ಪಾಂಡೆನ್ಸ್

ಅರಗದ ದುಃಸ್ಥಿತಿಯು

ಆಯ್ಯಾ,

ಇಲ್ಲಿಯ ಪುರನಿವಾಸಿಗಳಲ್ಲಿ ಕೆಲವರು ಮಾತ್ರ ಅಧರ್ಮಪರಿಪಾಲಕರೂ, ಅಕೃತ್ಯಶೀಲರೂ, ಪರರನಿಂದಾಸಕ್ತರೂ, ಅಸೂಯಾಪರರೂ ಆಗಿದಾರೆಂಬುದು ಸಾಮಾನ್ಯವಾಗಿ ಎಲ್ಲಾ ಜನಗಳಿಗೂ ಗೊತ್ತಿರಬಹುದು ಆದರೆ ಇಲ್ಲಿಗೊಂದು ಪೋಲೀಸುಠಾಣೆಯವನ್ನು ಸರ್ಕಾರದವರು ಸ್ಥಾಪಿಸಿದ್ದಾದರೆ ತುಂಬಾ ಉಪಕಾರವಾಗುತ್ತಿತ್ತು ಈ ಭಾಗದಲ್ಲಿ ಈ ಊರಿನ ಕೆಲವರು ಸೇರಿ ಒಂದು ನೇಟಿವ್ ಪುಸ್ತಕಾಲಯನ್ನು ಒಂದು ಪೋಲೀಸುಠಾಣೆ, ಮ್ಯುನಿಸಿಪಾಲಿಟಿ ವಗೈರೆ ಸ್ಥಾಪಿಸಿಕೊಡುವರೆ ಸರ್ಕಾರದವರಿಗೆ ಮನವಿಮಾಡಿಕೊಂಡಿದ್ದರು ಈ ತಹಲುವರೆಗೂ ಬಡ ಪ್ರಜೆಗಳ ಮನವಿಯನ್ನು ಸರ್ಕಾರದವರು ಮನ್ನಿಸದಿರುವದನ್ನು ನೋಡಿದ್ದಾಗ ಆಶ್ಚರ್ಯವುಂಟಾಗುತ್ತೆ ಈ ಊರಿನಂಥಾ ಹಲವು ಕುತಂತ್ರ ಪಂಡಿತರ ವಾಸಸ್ಥಳಕ್ಕೆ ಸರ್ಕಾರದವರು ತಕ್ಕ ಬಂದೋಬಸ್ತ ಮಾಡಿ ಪ್ರಜಾರಕ್ಷಣೆಗೆ ಅನುಕೂಲವಾದ ಏರ್ಪಾಟುನಡಿಸುವರೆಂದು ನಂಬಿದೇವೆ

ಅನಂತಪುರದಿಂದ ಈ ಮಾರ್ಗವಾಗಿ ರೈಲ್ವೇ ಲೈನು ಮಾಡಿಸುವದೆ ಇಲ್ಲಿಯ ಸಾಹುಕಾರ್ ಮ ರರಜಾಮಂಜಪ್ಪನವರು ಐದು ಸಾವಿರ ರೂಪಾಯಿ ಚಂದಾವನ್ನೂ, ಮ॥ ಶ್ರೀಮಂತ ಕಾಸ್ರವಳ್ಳಿ ಶೇಷಪ್ಪ ನಾಗಪ್ಪನವರು ಇಪ್ಪತ್ತು ಸಾವಿರ ರೂಪಾಯಿ ಚಂದಾವನ್ನೂ ಕೊಟ್ಟಿರುತ್ತಾರೆಂದು ಕೇಳುತ್ತೇವೆ

ಎಚ್ ಎಸ್ ಆರ್

ಅಮೃತಸಾರದ ನ್ಯಾಷನಲ್ ಇನ್ಷೂರೆನ್ಸ್ ಕಂಪನಿ

ಆಯಾ

ಮೃತಪಟ್ಟ ನಮ್ಮ ತಂದೆ ವೇ॥ ಯಷ್ಣಂ ಲಕ್ಷ್ಮೀನರಸಿಂಹಾಚಾರ್ಯರವರು ಅಮೃತಸಾರದ ನ್ಯಾಷನಲ್ ಇನ್ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯಲ್ಲಿ ಒಂದು ಸಾವಿರ ರೂಪಾಯಿಗೆ ಜೀವವಿಮೆಯನ್ನು ಮಾಡಿ 75,631 ನೇ ನಂಬರುಳ್ಳ ಪಾಲಿಸಿ ಹೋಲ್ಡರಾಗಿದ್ದರು ಅವರು ಕೆಲವು ತಿಂಗಳಿಗೆ ಹಿಂದೆ ರಕ್ತಭೇದಿಯಿಂದ ಮೃತಪಟ್ಟರು ಆಗ್ಗೆ ಅವರು ನಾಲ್ಕು ಪ್ರೀಮಿಯಂಗಳನ್ನು ಮಾತ್ರ ಪ್ರೀಮಿಯಂ ಒಂದಕ್ಕೆ ರೂ 17 1೬ 0 ಮೇರೆ ಕೊಟ್ಟಿದ್ದರು ಅವರ ಸಂಬಂಧವಾದ ಕಾಗದಪತ್ರಗಳನ್ನು ಪ್ರಚುರಪಡಿಸಿದೊಡನೆಯೇ ಕಂಪನಿಯ ಪ್ರತಿನಿಧಿಗಳಾದ, ಮುದ್ರಾಸ್ ಬ್ರಾಂಚ್ ಸೆಕ್ರೆಟರಿ ಮ॥ ಟ ಎಸ್ ಆರ್ ಅಯ್ಯರವರು ನಮ್ಮ ಮನೆಗೆ ದಯಮಾಡಿ ಮೃತಪಟ್ಟವರ ಸಂಗತಿಯನ್ನು ಆಜೂಬಾಜೂ ವಿಚಾರಮಾಡಿ, ಸ್ವಲ್ಪ ಕಾಲದಲ್ಲಿಯೇ ನನಗೆ ಸಲ್ಲಬೇಕಾದ ಒಂದು ಸಾವಿರ ರೂಪಾಯಿಗಳನ್ನು ಸ್ವಲ್ಪ ತೊಂದರೆಯೂ ಇಲ್ಲದೆ ಈ ದಿವಸ ಪಾವತಿಮಾಡಿರುತ್ತಾರೆ ಆದ್ದರಿಂದ ನಾನು ಮೈಸೂರು ನಿವಾಸಿಗಳಿಗೆ ತಿಳಿಯಪಡಿಸುವುದೇನಂದರೆ ದೃಢವಾಗಿಯೂ ಸ್ವದೇಶದ ಅಭಿಮಾನವುಳ್ಳ ಅಮೃತಸರ್ ನ್ಯಾಷನಲ್ ಇನ್ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯಲ್ಲಿ ಜೀವವಿಮೆ ಮಾಡಲು ಸ್ವಲ್ಪವೂ ಅನುಮಾನವಿಲ್ಲದೆ ಪಾಲಿಸಿ ಹೋಲ್ಡರ್ ಆಗಬಹುದೆಂದು ಈ ಮೂಲಕ ಸೃತಪಡಿಸುತ್ತೇನೆ

ಮೈಸೂರು, ವೈ ಗೋಪಾಲಕೃಷ್ಣನ್,

8-12 1913 141, ಡಿ ಸುಬ್ಬಯ್ಯ ರೋಡ್

ಸಮಾಜಕ್ಕೆ ಐಕಮತ್ಯವೇ ಪ್ರಥಮಕಾರಣ

ಅಯ್ಯಾ,

ಪ್ರಿಯರೇ, ನೀವು ಅನೇಕ ಸಾರಿ ಪರರಿಗೆ ಸಹಾಯಮಾಡಬೇಕೆಂಬುವಿರಿ ದೀನರನ್ನು ಕಂಡಾಗ ಬಹಳ ದಯೆಯನ್ನು ತೋರಿಸುವಿರಿ ಅರ್ತರಿಗೆ ಸಹಾಯ ಮಾಡುವಿರಿ ಆಗ ನಿಮ್ಮ ಮುಖವು ವಿಕಸಿತವಾಗುವುದು ಒಬ್ಬರನ್ನು ನೋಡಿ ಒಬ್ಬರು ಸಂತೋಷಪಡುವಿರಿ ನ್ಯಾಯವಾಗಿ ಧನವನ್ನು ಸಂಪಾದಿಸಿ, ಪರರ ಶ್ರೇಯೋಭಿವೃದ್ಧಿಗೆ ವೆಚ್ಚಮಾಡುವಾತನೇ ಉದಾರಿ ಎಂದು ಹೇಳುವಿರಿ ಒಂದು ಜೇನುಗೂಡಿನಲ್ಲಿ ಒಂದು ರಾಣಿಜೇನೂ 10 ಸಾವಿರದ ಮೇಲೆ 20 ಸಾವಿರದೊಳಗೆ ಕೆಲಸಗಾರರೂ, 2 ಸಾವಿರ ಗಂಡುಜೇನೂ ಇರುವವು ರಾಣಿಜೇನಿನ ಅಪ್ಪಣೆಯಂತೆ ಕೆಳದ ಜೇನುಗಳು ನಡೆಯುವವು ರಾಣಿಜೇನು ಎಲ್ಲಿಗಾದರೂ ಹೊರಟರೆ ಅದರ ಹಿಂಗಾವಲಾಗಿ ಅನೇಕ ಜೇನುಹುಳಗಳು ಹೋಗುವವು ರಾಣಿಜೇನನ್ನು ಮರ್ಯಾದೆಯಿಂದ ಕಾಣವವು ಹೂವಿನ ರಸವನ್ನು ಕೊಡಿಹಾಕುವವು ಗೂಡನ್ನು ಕಟ್ಟುವವು ಮೊಟ್ಟೆಗಳನ್ನು ಕಾಪಾಡುವವು ಮರಿಗಳನ್ನು ಸಾಕುವವು ಜೇನುಗೂಡಿನಲ್ಲಿ ನಡೆಯುವ ಎಲ್ಲಾ ಕೆಲಸಗಳನ್ನೂ ಐಕಮತ್ಯದಿಂದ ನಡಿಸುವವು ತಾನು ಕಷ್ಟಪಟ್ಟು ಸಂಪಾದಿಸಿದ ಜೇನುತುಪ್ಪವನ್ನು ಪರರಿಗೆ ಕೊಟ್ಟು ಸಂತೋಷಪಡುವವು ಇಷ್ಟೇ ಅಲ್ಲ ರಾಣಿಜೇನಿನ ಅಪ್ಪಣೆಗೆ ವಿರೋಧವಾಗಿ ಎಳ್ಳಷ್ಟೂ ಕಾರ್ಯವನ್ನು ಮಾಡುವದಿಲ್ಲ ಜ್ಞಾನೇಂದ್ರಿಯವಿಲ್ಲದಿರುವ ಜೇನುಹುಳಗಳಲ್ಲೇ ಇಷ್ಟು ಐಕ್ಯಮತ್ಯವೂ, ಕಾರ್ಯವೂ ಇದ್ದು ನಡೆಯುವಲ್ಲಿ ಬುದ್ಧಿ ವಿವೇಕ ಜ್ಞಾನಾದಿಗಳನ್ನು ಪಡೆದಿರುವ ಮನುಷ್ಯರಾದ ನಮ್ಮಗಳಿಗೆ ಯಾವುದುತಾನೇ ಅಸಾಧ್ಯವೆಂದು ಹೇಳುವಿರಿ? ನೆಪೋಲಿಯನ್ ಎಂಬ ಫ್ರೆಂಚ್ ಸೇನಾಪತಿಯು—"ಜೇನುಗೂಡೂ ಸಮಾಜವೂ ಒಂದೇ" ಎಂದು ಹೇಳಿರುವನು ಮತ್ತು ಅಸಾಧ್ಯವೆಂಬ ಪದವನ್ನೇ ಭಾಷೆಯಿಂದ ತೆಗೆದುಹಾಕಿ ಬಿಡಬೇಕೆಂದೂ, ಒಗ್ಗಟ್ಟಿನಿಂದ ಎಂಥಾ ಅಸಾಧ್ಯಕಾರ್ಯವನ್ನಾದರೂ ನೆರವೇರಿಸಬಹುದೆಂದೂ ಒಬ್ಬ ಇಂಗ್ಲಿಷ್ ಮಹನೀಯನು ಹೇಳಿರುವನು ಈ ಪ್ರಕಾರ ಹೇಳುತ್ತಾ ನೀವು ಸಂತೋಷದಿಂದ ಹಿಗ್ಗುವಿರಿ ಐಕಮತ್ಯವಿಲ್ಲದವರನ್ನು ಕಂಡರೆ ಅಸಮಧಾನವೂ, ಆಗ್ರಹವೂ ಉಳ್ಳವರಾಗುವಿರಿ ಪ್ರಿಯರೇ, ಐಕಮತ್ಯವಿಲ್ಲದೆ ಕಷ್ಟನಷ್ಟಗಳಿಗೆ ಗುರಿಯಾಗುವವರಲ್ಲಿ ಮುಂದಾದರೂ ಐಕಮತ್ಯವನ್ನು ನೆಲೆಗೊಳಿಸಿ ಸುಖಸಂತೋಷಗಳನ್ನುಂಟುಮಾಡಬೇಕೆಂದು ಕೋರುತ್ತೇನೆ

ತಿಪ್ಪೂರು ತಾ॥ ಮಾರನಗೆರೆ ವ॥ ಚನ್ನೇಗೌಡ್ರಮಗ ಎಂ ಚೆನ್ನೆಗೌಡ

ತಾಲ್ಲೋಕು ವರ್ತಮಾನಗಳು

ಸಿಕಾರಿಪುರ —ಈಗಿನ ಹವಾ ಬಹಳಮಟ್ಟಿಗೆ ಕೆಟ್ಟು ಎಲ್ಲಿ ನೋಡಿದರೂ ಜನರು ಒಂದು, ಒಂದೂವರೆ ತಿಂಗಳಿಂದಲೂ ಛಳಿ ಜ್ವರಗಳಿಂದ ಕಷ್ಟಪಡುತ್ತಿರುವರು ಅಲ್ಲಲ್ಲಿ ಇಲಿಗಳು ಸಾಯುತ್ತಾ ಇರುತ್ತವೆ ಜನರು ಮರೆಮಾಡುತ್ತಾ ಕಾಲಕಳೆಯುವರು 15 ದಿನಗಳಿಂದ ಈಚೆಗೆ 7 8 ಮರಣಗಳಾಗಿವೆ ಈ ಪೈಕಿ ಒಂದೇ ಮನೆಯಲ್ಲಿ 5 ಮರಣಗಳು ಈಗಲೂ ಒಂದೆರಡು ಕಾಯಿಲೆಗಳಿರುತ್ತೆ ಮಧ್ಯಾಹ್ನದ ಬಿಸಿಲು ತೀಕ್ಷ್ಣ, ಸಾಯಂಕಾಲವಾಗುತ್ತಲೂ ಹಿಮ ಪ್ರಾರಂಭವಾಗುತ್ತೆ —ಸ್ಕೂಲ್ ಡೆಪ್ಯುಟಿ ಇನ್‌ಸ್ಪೆಕ್ಟರು ಮ॥ ಶಾಮರಾಯರು ನಾಲ್ಕಾರು ದಿನಗಳಿಂದಲೂ ಇಲ್ಲಿನ ಸ್ಕೂಲುಗಳನ್ನು ಪರೀಕ್ಷಿಸುತ್ತಲಿರುವರು ಮಳೆ ಮೊಡಗಳಾಗುತ್ತಾ ಇರುತ್ತವೆ

ದೊಡ್ಡಬಳ್ಳಾಪುರ ತಾ॥ ದೊಡ್ಡಬೆಳವಂಗಲ —ಇಲ್ಲಿ ಒಂದು ತಿಂಗಳಾಗಾಯ್ತು ಮಳೆಯೇ ಇಲ್ಲ ಜನಗಳು ಅಂತರಿಕ್ಷವನ್ನೇ ನೋಡುತ್ತಲಿದಾರೆ ಹೊಲಗಳ ಕಟಾವಿಗೆ ಆರಂಭಮಾಡಿರುತ್ತಾರೆ ಆದರೆ ರಾಗಿ ತೆನೆ ಎಳೇ ತೆನೆಗಳು ಒಣಗಿಹೋಗಿವೆ—ಈ ಊರಿನಲ್ಲಿ ಸರ್ಕಾರಿ ಸ್ಕೂಲಿನ ಹೆಡ್ ಮಾಸ್ಟರ್ ಮ॥ ರಾಮರಾಯರು ಕಷ್ಟಪಟ್ಟು ಪಾಠಹೇಳುತ್ತಾರೆ ಈ ಹೋಬಳಿಯಲ್ಲಿದ್ದ ಶೇಖ್ದಾರರಿಗೆ ವರ್ಗವಾಯಿತು ಇವರು ತುಂಬಾ ದಯಾಳುಗಳಾಗಿಯೂ, ಸರ್ಕಾರಿ ಕೆಲಸಗಳಲ್ಲಿ ಜಾಗರೂಕರಾಗಿಯೂ, ಬುದ್ಧಿವಂತರಾಗಿಯೂ ಇದ್ದರು ಇವರಿಗೆ ಹೋದ ವಾರ ಈ ಊರಿನ ಸ್ಕೂಲಿನಲಿ ಪ್ರಜೆಗಳು ಸೇರಿ ಸನ್ಮಾನಗಳನ್ನು ಮಾಡಿದರು —ಈ ತಾಲ್ಲೂಕಿನಲ್ಲಿ ವಿಲೇಜು ಪೋಸ್ಟ್ ಮೆನ್‌ಗಳು ಸರಿಯಾಗಿ ಕೆಲಸಮಾಡುವದಿಲ್ಲ ವೃತ್ತಾಂತ ಪತ್ರಿಕೆಗಳಂತೂ ದರ್ಶನವೇ ಇಲ್ಲ —ಈಗ ಬಂದಿರುವ ಹೊಸ ಶೇಕ್ದಾರ್ರು ತುಂಬಾ ಒಳ್ಳೇಯವರಾಗಿರುತ್ತಾರೆ

ಹರಿಹರ ತಾ॥ ಮಿಟ್ಲೆಬೆನ್ನೂರು —ಸಕಾಲಕ್ಕೆ ಸರಿಯಾಗಿ ಮಳೆ ಬಾರದೆ ಹೋದ್ದರಿಂದ ಪೈರು ಚೆನ್ನಾಗಿ ಬೆಳೆಯಲಿಲ್ಲ ಬೆಳೆದ ಪೈರನ್ನೆಲ್ಲಾ ಕೊಯ್ದು ಬಣವೆಗಳನ್ನು ಹಾಕಿರುತ್ತಾರೆ —ಈ ಗ್ರಾಮಕ್ಕೆ ಸಮೀಪದಲ್ಲಿರುವ ಕೊಮಾರನಹಳ್ಳಿಯಲ್ಲಿ ಕಳೆದ ವಾರ ರಂಗನಾಥ ದೇವರ ಉತ್ಸವವು ಬೆಟ್ಟದ ಮೇಲಿನ ತಪಸ್ಸಳ ಹತ್ತು ಹನ್ನೆರಡು ಸಾವಿರ ದೀಪಗಳನ್ನಿಟ್ಟು ನಡಿಸಲ್ಪಟ್ಟಿತು ಅಲ್ಲಿ ಮಂಗಳಾರತಿ ವಗೈರೆ ನಡೆದ ಮೇಲೆ ಅಲ್ಲಿ ಸೇರಿದ್ದ 200 300 ಜನಗಳಿಗೆ 7 8 ಮಣ ಸಕ್ಕರೆ ಹಂಚಲಾಯ್ತು ಕೆಲಸವನ್ನೆಲ್ಲಾ ಮುಕುವಣಿಯಿಂದ ಶೇಕದಾರ್ ಮ॥ ಕೃಷ್ಣಯ್ಯಂಗಾರ್ರು, ಪಾಳಾಚಾರ್ಯರೂ, ಇನ್ನೂ ಅನೇಕ ಶ್ರೀಮಂತರೂ ನಡಿಸಿದರು ಮರುದಿವಸ ಆ ಸಜ್ಜನರು ಮಿಟ್ಲೆಬೆನ್ನೂರು ಗ್ರಾಮದಲ್ಲಿರುವ ದೇವಸ್ಥಾನದಿಂದ ದೇವರ ಮೆರವಣಿಗೆಯನ್ನು ಉದ್ದಕ್ಕೂ ಸಾವಿರಾರು ದೀಪಗಳನ್ನು ಹಚ್ಚಿ ನಡಿಸಿ ಮಂಗಳಾರತಿ ವಗೈರೆ ನಡಿಸಿ ಅನೇಕ ಜನಗಳಿಗೆ ಸಕ್ಕರೆ ತಾಂಬೂಲಾದಿಗಳನ್ನು ಹಂಚಿದರು

ಹಿಂದೂಪುರ ತಾ॥ ಚೌಳೂರು —ಇಲ್ಲಿ ಹವಾ ಚೆನ್ನಾಗಿದೆ ಪಸಲು ಸಹಾ ಚೆನ್ನಾಗಿದೆ ರಾಗಿ ರೂಪಾಯಿಗೆ 16 17 ಸೇರೂ, ಅಕ್ಕಿ 7-8 ಸೇರೂ ಮಾರುತ್ತೆ ಇಲ್ಲಿ ಕಳೆದ 30 ನೇ ತಾರೀಖಿನಿಂದ ಹ॥ ಖಾಜೀ ಸಯ್ಯದ್ ಹುಸೇನ್ ಸಾಬರ ಮನೆಯಲ್ಲಿ ಅವರ ಮಕ್ಕಳಾದ ಖಾಜೀ ಸಯ್ಯದ್ ಇಸ್ಮಾಲ್ ಸಾಬರ ಮದುವೆ ಒಂದು ವಾರದ ವರಿವಿಗೂ ಬಹು ವಿಜೃಂಭಣೆಯಿಂದ ನೆರವೇರಿಸಿ ಎಲ್ಲಾ ಕೋಮುಗಳ ಬಡಬಗ್ಗರಿಗೂ ಅನ್ನವನ್ನು ಹಾಕಿದರು ಇದು ವರೆಗೂ ಇಂಥಾ ಧರ್ಮ ಖರ್ಚು ಯಾರೂ ಮಾಡಿರಲಿಲ್ಲ ಹೆಣ್ಣು ಮಕ್ಕಳವರು ದೊಡ್ಡಬಳ್ಳಾಪುರದ ಜವಳಿ ಅಂಗಡಿ ಸಯ್ಯದ್ ಪೀರ್ ಸಾಹೇಬರ ಮನೆಯಿಂದ ಬಂದಿದ್ದರು —ಟಿಪ್ಪು ಸುಲ್ತಾನರ ಕಾಲದಲ್ಲಿ ಕಟ್ಟಿದ್ದ ಇಲ್ಲಿನ ಆಸೂರ್‌ಖಾನೆಯು ಹಳೇದಾಗಿ ಬಿದ್ದುಹೋಗಿದೆ ಇಲ್ಲಿನ ಮಹಮ್ಮದೀಯರಲ್ಲಿ ಮುಖಂಡರಾದ ಹ॥ ಖಾಜೀ ಸಾಹೇಬರು ಮಿ॥ ಪಟೇಲ್ ಅಬ್ದುಲ್ಲಾ ಖಾನ್ ಸಾಬರು ಸೇರಿ ಕಟ್ಟಿಸುವದಾಗಿ ನಿಶ್ಚಯಿಸಿದಾರೆ ಬೇಗನೆ ಕಟ್ಟಿಸಿದರೆ ಮೇಲಾದೀತು—ಇಲ್ಲಿಗೆ ಮೂರು ಮೈಲಿ ದೂರದಲ್ಲಿರುವ ಒಂದು ಗ್ರಾಮದಲ್ಲಿ ಒಬ್ಬ ಮಹಮ್ಮದೀಯ ಮುದುಕನಿಗೆ 110 ವರುಷವಾದಾಗ್ಯೂ ತನ್ನ ಜರಾಯಿತಿ ಕೆಲಸಗಳನ್ನು ಮುಂಚಿನ ಹಾಗೆ ಈಗ್ಯೂ ನಡಿಸುತ್ತಾನೆ ಕಣ್ಣುಗಳು ಚೆನ್ನಾಗಿ ಕಾಣುತ್ತವೆ ಇದು ಬಹಳ ಆಶ್ಚರ್ಯವಾಗಿದೆ

ಚಿಂತಾಮಣಿ —ಈಗ ಟೌನ್‌ನಲ್ಲಿ ಕಳ್ಳರ ಗಲಾಟೆಯೇ ದೊಡ್ಡ ವ್ಯಾಪಾರವಾಗಿ ಪರಿಣಮಿಸಿರುತ್ತೆ ಇದೇ ಡಿಸೆಂಬರು ತಾ 3 ನೇ ಬುಧವಾರ ರಾತ್ರಿ ಈ ಗ್ರಾಮದ ಮಧ್ಯ ಇರುವ ದರ್ಜಿ ಚಿಕ್ಕಲಕ್ಷ್ಮೋಜಿರಾವು ಮನೆಗೆ ಕಳ್ಳರು ನುಗ್ಗಿ ಊರಿನ ಮತ್ತು ಹೊರಗಿನ ಜನಗಳು ಹೊಲಿದುಕೊಡುವದಕ್ಕೆ ಕೊಟ್ಟಿದ್ದ ಕುಪ್ಪಸದ ಕಣಗಳನ್ನೂ ಆತನ ಸ್ವಂತ ಬಟ್ಟೆಬರೆಗಳನ್ನೂ ತೆಗೆದುಕೊಂಡು ಹೋಗಿರುತ್ತಾರೆ ಪತ್ತೆಹಚ್ಚುವದು ನಡೆಯುತ್ತಾ ಇದೆ ಆದರೆ ಜನಗಳು ಭಯಪಡುವುದಕ್ಕೆ ಪೋಲೀಸು ಇಲಾಖೆಯ ದರ್ಪವಿಲ್ಲದಿರುವುದು 1 ನೇ ಕಾರಣವಾಗಿದೆ ನೆನ್ನೆದಿನ ಅಂದರೆ ತಾ 5 ನೇ ಶುಕ್ರವಾರ ರಾತ್ರಿ ಸುಮಾರು 7 ಘಂಟೆ ಸಮಯದಲ್ಲಿ ಹಳೆಪೇಟೆಯಲ್ಲಿ ಮ॥ ಕಾರುಹಾಳ್ಳ ರಾಮಯ್ಯನವರ, ಮ॥ ಚಕ್ಕತಿಮ್ಮರಾಜಯ್ಯನವರ ಮತ್ತು ಮ॥ ಲಕ್ಷ್ಮೀನಾರಣಯ್ಯನವರ ಮನೆಗಳ ಹತ್ತಿರ ಯಾವನೋ ಅನ್ನಭಿಕ್ಷಾಟನೆಮಾಡುವ ನೆಪದಿಂದ ಅಂದಾಜು ನೋಡುತ್ತಿರುವಲ್ಲಿ ಮನೆ ಜನಗಳು ಗಾಬರಿಪಟ್ಟು ಅವನನ್ನು ಮಾತನಾಡಿಸಿದರು ಸರಿಯಾದ ಜವಾಬುಕೊಡದೆ ಓಡಿಹೋಗಿರುತ್ತಾನೆ ಹೀಗಿರುವಲ್ಲಿ ಟೌನ್‌ನಲ್ಲಿ ಪೋಲೀಸಿನವರು ಏನು ಸಹಾಯವನ್ನೂ ಜನಗಳ ಸುಖಕ್ಕೆ ಮಾಡದಿರುವುದು ಆಶ್ಚರ್ಯವನ್ನುಂಟುಮಾಡುತ್ತಿದೆ. ಆದರೆ ಈ ಊರಿನಲ್ಲಿ ಈಗ ಕಳ್ಳತನ ಮಾಡುವುದು ಲೇಸು ಇದಕ್ಕಿಂತ ಬೇರೆ ಯಾವ ಕಸುಬಿನಲ್ಲೂ ಪ್ರಯೋಜನವಿಲ್ಲ ಇದು ಜನಗಳಲ್ಲಿ ತುಂಬಾ ಭೀತಿಯನ್ನುಂಟುಮಾಡಿದೆ

ಫ್ರೆಂಚ್‌ರಾಕ್ಸ್ —ಮಾಗಿಯ ಕಾಲವಾದ್ದರಿಂದ ಅಲ್ಲಲ್ಲೇ ಜ್ವರ, ಛಳಿನ್ಮೂಲು, ನೆಗಡಿ ಮುಂತಾದ ರೋಗಗಳಿಂದ ಜನಗಳು ನರಳುತ್ತಿದಾರೆ ನಮ್ಮ ಡಾಕ್ಟರಾದ ಲಕ್ಷ್ಮಣರಾಯರು ಕಾಯಿಲೆ ಜನಗಳನ್ನು ತುಂಬಾ ಪ್ರೀತಿಯಿಂದ ಕಾಣುತ್ತಾ ಒಳ್ಳೇ ಔಷಧಗಳನ್ನು ಕೊಡುತ್ತಿರುವದು ಸಂತೋಷಕರವಾಗಿದೆ ಸುತ್ತುಮುತ್ತಲಿನ ಗ್ರಾಮಾಂತರಗಳಲ್ಲಿದ್ದ ಅನೇಕ ಹಳೇರೋಗಿಗಳು ನಮ್ಮ ಆಸ್ಪತ್ರೆಗೆ ಬಂದು ಗುಣಹೊಂದಿ ಹೋಗುತ್ತಿದಾರೆ ಈಗ ಆಸ್ಪತ್ರೆಗೆ ಬರತಕ್ಕ ಜನಗಳ ಸಂಖ್ಯೆಯು ಹೆಚ್ಚಾಗಿದೆ —ಈ ಊರಿನ ಸ್ಯಾನಿಟೇಷನ್ ಸ್ವಲ್ಪವೂ ತೃಪ್ತಿಕರವಾಗಿಲ್ಲ ಸಂದುಗೊಂದುಗಳಲ್ಲಿ ಅಲ್ಲಲ್ಲೇ ನೀರು ನಿಂತು ದುರ್ವಾಸನೆಯಾಗಿದೆ ಇನ್ನು ಕೆಲವು ಕಾಲ ಹೀಗೆಯೇ ಇದ್ದರೆ ಸಾಂಕ್ರಾಮಿಕ ಜಾಡ್ಯಗಳು ಉತ್ಪತ್ತಿಯಾಗುವುದರಲ್ಲಿ ಸಂಶಯ ಕಾಣುವದಿಲ್ಲ ಮ್ಯುನಿಸಿಪಾಲಿಟಿಯವರು ಇದಕ್ಕೆ ನಿಗಾಕೊಡುವರೆಂದು ನಂಬಿದೇವೆ—ಕಳೆದ ತಾ 6ನೇ ಶನಿವಾರ ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರವರು ಇಲ್ಲಿನ ಮಿಷನ್ ಗರಲ್ಸ್ ಸ್ಕೂಲ್, ಇಂಗ್ಲಿಷ್ ಸ್ಕೂಲುಗಳನ್ನೂ ಪರೀಕ್ಷಿಸಿಕೊಂಡು ವಾಪಸು ತೆರಳಿದರು ಈಗ ಮಿಷನ್ ಗರಲ್ಸ್ ಸ್ಕೂಲಿನಲ್ಲಿ ಪ್ರತಿ ದಿನವೂ 1 ಘಂಟೆಹೊತ್ತು ಮಕ್ಕಳಿಗೆ ಇಂಗ್ಲಿಷ್ ಪಾಠಹೇಳುವಂತೆ ಪ್ರಾರಂಭಿಸಿರುತ್ತಾರೆ—ಈ ಊರಿನ ಪೋಸ್ಟು ಆಫೀಸಿಗೆ ಟೆಲಿಗ್ರಾಫ್‌ತಂತಿಯನ್ನು ತಂದು ಜಂಟಿಸಿದ್ದು ವ್ಯಾಪಾರಿಗಳಿಗೂ ಪ್ರಜೆಗಳಿಗೂ ತುಂಬಾ ಪ್ರಯೋಜನವಾಯಿತು

ಅರಸಿಕೆರೆ —ಈ ಟೌನ್‌ನಲ್ಲಿ ಯಾವಾಗಲೂ ನೀರಿಗೆ ದುರ್ಭಿಕ್ಷ, ತಕ್ರಾರು ಬೇಸಗೆಯಲ್ಲಂತೂ ಹೇಳತೀರದು ಇದಕ್ಕಾಗಿ ಸರ್ಕಾರದವರು ಈ ಹಿಂದೆ ನಾನಾ ವಿಧವಾದ ಏರ್ಪಾಡುಗಳನ್ನು ಮಾಡಿದರೂ ಸಾರ್ಥಕವಾಗಲಿಲ್ಲ ಇದನ್ನೆಲ್ಲಾ ನೋಡಿ ನಮ್ಮ ಅಮಲ್ದಾರ್ ಮ॥ ಬಿ ಟಿ ಸೀತಾರಾಮಯ್ಯನವರು ಮದರಾಸಿನಿಂದ ಈಗತಾನೇ ಹೊಸನೀರಿನ ಯಂತ್ರವನ್ನು ತರಿಸಿ ಇಟ್ಟಿದಾರೆ ಈ ಯಂತ್ರದಿಂದ ಸುಲಭಸಾಧ್ಯವಾಗಿ ನೀರನ್ನು ಮೇಲಕ್ಕೆ ತೆಗೆದುಕೊಂಡು ಸರ್ವರೂ ಬಳಸಲು ಅನುಕೂಲವಾಗಿದೆ ಟೌನ್‌ನಲ್ಲಿ ಇರತಕ್ಕ ಮತ್ತು ಸಂತೆಗೆ ಬರತಕ್ಕ ಜನಗಳಿಗೂ ದನಕರುಗಳಿಗೂ ಕೇವಲ ಉಪಯೋಗಕರವಾಗಿದೆ ಈ ಭಾಗದಲ್ಲಿ ನಮ್ಮ ಅಮಲ್ದಾರರ ಏರ್ಪಾಡು ಸ್ತುತ್ಯವಾದದ್ದು —ಹೀಗೆಯೇ ನೀರಿಗೆ ತೊಂದರೆಯಾಗಿರುವ ಬಾಣಾವಾರದಲ್ಲಿ ಪ್ರಜೆಗಳಿಗೆ ಪ್ರೋತ್ಸಾಹಕೊಟ್ಟು ಅಲ್ಲಿಗೂ ಒಂದು ನೀರಿನ ಯಂತ್ರವನ್ನು ತರಿಸಿ ಇಟ್ಟಲ್ಲಿ ತುಂಬಾ ಅನುಕೂಲ —ನಮ್ಮ ಅಮಲ್ದಾರವರು ಅರಸಿಕೆರೆಯಲ್ಲಿ ಏರ್ಪಾಟು ಮಾಡಬೇಕೆಂದಿರುವ ಕ್ಷೀರಾಬ್ಧಿ ನಿಲಯಕ್ಕೆ (ಡಾಯರಿ) ನೂರು ದೊಡ್ಡಮನುಷ್ಯರು ಜಾಸ್ತಿ ಉಳಿಕೆ ಷೇರುಗಳನ್ನು ತೆಗೆದುಕೊಂಡು ಇದಕ್ಕೆ ಪ್ರೋತ್ಸಾಹ ಮಾಡುತ್ತಾರೆಂತ ನಂಬಿದೇನೆ—ಈ ತಾಲ್ಲೂಕಿನಲ್ಲಿ ಹತ್ತಿ ಬೆಳೆ ಎಂಟು ಹತ್ತು ಎಕರೆ ಸಾಗುವಳಿ ಆಗುತ್ತಾ ಇದ್ದದ್ದು ಈಗ ಒಂದೂವರೆಸಾವಿರ ಎಕರೆ ವರೆಗೂ ಸಾಗುವಳಿ ಆಗಿರುವುದಕ್ಕೆ ನಮ್ಮ ಅಮಲ್ದಾರ್ರವರ ಪ್ರೋತ್ಸಾಹವೇ ಕಾರಣವಾಗಿರುತ್ತದೆ —ಬಾಣಾವಾರದಲ್ಲಿರುವ ಅನ್ನಸತ್ರವನ್ನು 2 ಮೈಲಿ ದೂರದಲ್ಲಿರುವ ರೈಲ್ವೆ ಸ್ಟೇಷನ್ ಹತ್ತಿರ ಇಡುತ್ತಾರೆಂಬ ವದಂತಿ ಇದೆ ಹೀಗಾಗುವಪಕ್ಷ ಪ್ರಯಾಣಿಕರಿಗೆ ಅನನುಕೂಲವಾಗಿ ಛತ್ರದ ಉದ್ದೇಶಕ್ಕೆ ಭಂಗಬರುವ ಸಂಭವ ಒದಗಬಹುದು ಮಧ್ಯರಾಷ್ಟ್ರವಾಗಿಯೂ, ನಾಲ್ಕುರಸ್ತೆಗಳು ಕೂಡಿಯೂ, ದೊಡ್ಡ ಗ್ರಾಮವಾಗಿಯೂ ಇರುವ ಬಾಣಾವಾರದ ಟೌನ್‌ನಲ್ಲಿಯೇ ಎಂದಿನಂತೆ ಛತ್ರ ಇಡುವಹಾಗೆ ನಮ್ಮ ಅಮಲ್ದಾರ್ರವರು ಏರ್ಪಡಿಸಿಕೊಟ್ಟು ಸರಿಯಾದ ಮ್ಯಾನೇಜುಮೆಂಟಿನಿಂದ ಪ್ರಯಾಣಿಕರಿಗೆ ಅನುಕೂಲಪಡಿಸುತ್ತಾರೆಂದು ನಂಬಿದೇನೆ

ಮಾಗಡಿ —ಈ ಪ್ರಾಂತ್ಯ ಹವಾ ಚೆನ್ನಾಗಿದೆ ಬೆಳೆಗಳು ಕೆಲವು ಕಡೆಗಳಲ್ಲಿ ಉತ್ತಮವಾಗಿದ್ದರೂ ಅನೇಕ ಕಡೆಗಳಲ್ಲಿ ಕಾಲುವಾಲು ಬೆಳೆ ಸುದಾ ಆಗಿಲ್ಲ ಸ್ವಾತಿ ಅಥವಾ ವಿಶಾಖೆಯಲ್ಲಿ ಒಂದ ಹದ ಮಳೆಯಾಗಿದ್ದರೆ ಪೂರಾ ಬೆಳೆಯಾಗುತ್ತಿತ್ತೆಂದು ಹೇಳುವರು ಮೊನ್ನೆಯ ದಿನ ಸುಮಾರು ಒಂದು ಹದ ಮಳೆಯಾದ್ದರಿಂದ ಹುರುಳಿ, ಹುಚ್ಚೆಳ್ಳು ಮುಂತಾದ ಪೈರುಗಳಿಗೆ ಸ್ವಲ್ಪ ಮಟ್ಟಿಗೆ ಅನುಕೂಲವಾಯಿತೆಂದು ಹೇಳುವರು ಜನಗಳಿಗೂ ದನಕರುಗಳಿಗೂ ಆರೋಗ್ಯವು ಚೆನ್ನಾಗಿದೆ—ಕಳೆದ 30 ನೇ ತಾ ಭಾನುವಾರ ಮಾಗಡಿ ಕರಣಿಕರು ಮ॥ ಕೃಷ್ಣಮೂರ್ತಿಯವರಿಗೆ ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರುತನ ದೊರಕುದಕ್ಕಾಗಿ ಈ ತಾಲ್ಲೂಕಿನ ಜನರು ಇಲ್ಲಿಯ ಪ್ರೈಮರಿ ಸ್ಕೂಲ್ ಕಟ್ಟಡದಲ್ಲಿ ಒಂದು ವಿನೋದೋತ್ಸವವನ್ನು ಮಾಡಿ ಸತ್ಕರಿಸಿದರು ಆ ದಿನ ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ಸ್ಕೂಲಿನಲ್ಲಿ ಸಂಗೀತವು ಆರಂಭವಾಯಿತು 3 ರಿಂದ 4 ಗಂಟೆ ವರೆಗೆ ಫಲಹಾರಗಳೂ, ಸ್ಕೂಲು ವಿದ್ಯಾರ್ಥಿಗಳಿಗೆಲ್ಲಾ ಲಾಡು ಉಂಡೆಗಳೂ ಹಂಚಲ್ಪಟ್ಟವು ತರುವಾಯ ಹುಡುಗರ ಆಟಪಾಟಗಳು ನಡೆದು ಪ್ರತಿ ಒಬ್ಬ ವಿದ್ಯಾರ್ಥಿಗೂ ಇನಾಂ ಕೊಡಲ್ಪಟ್ಟಿತು ಸಾಯಂಕಾಲವಾದ ಮೇಲೆ ಸ್ಕೂಲಲ್ಲಿ ಇಬ್ಬರು ಬಾಲಕರು ಪಿತೃಪ್ರೀತಿಯನ್ನು ಕುರಿತು ಒಂದು ನಾಟಕದ ಅಂಕವನ್ನು ಪ್ರದರ್ಶಿಸಿದರು ಬಳಿಕ ಕರಣಿಕರಿಗೆ ನಾಲ್ಕೈದು ಅಡ್ರೆಸ್ಸುಗಳು ಒಪ್ಪಿಸಲ್ಪಟ್ಟು, ಜಯಘೋಷದೊಂದಿಗೆ ಸಭೆ ಮುಕ್ತಾಯವಾಯಿತು ಇಲ್ಲಿ ಇಷ್ಟರಮಟ್ಟಿಗೆ ಸತ್ಕಾರಗಳು ನಡೆದುದು ಶ್ಲಾಘ್ಯವಾದದ್ದು ಸಭೆಯು ಮನೋರಂಜಕವಾಗಿತ್ತು. ಈಗ್ಗೆ ಎರಡು ವಾರಗಳಿಂದ ಈ ಊರಿನಲ್ಲಿ ಒಂದು ನೈಟ್ ಸ್ಕೂಲ್ ಸ್ಥಾಪಿಸಲ್ಪಟ್ಟು ಅದರಲ್ಲಿ 50 ಮಂದಿ ಕಸಬುದಾರರ ಯುವಕರು ವಿದ್ಯಾಭ್ಯಾಸ ಮಾಡುತ್ತಿರುವರು ಈ ಸ್ಕೂಲು ಇನ್ನೂ ಅಭಿವೃದ್ಧಿಗೆ ಬರಬಹುದೆಂದು ತೋರುತ್ತಲಿದೆ. ಆದರೆ ಸರಕಾರದ ಸಹಾಯ ಸಿಕ್ಕುವ ತನಕ ಮಾಸ್ತರುಗಳು ಸಂಬಳವಿಲ್ಲದೆ ಕೆಲಸ ನಡಿಸಲು ಸ್ಮರಣೆಯನ್ನು ಪಡೆಯಬೇಕಾಗಿದೆ ಇಲ್ಲಿಯ ಸ್ಕೂಲುಗಳೂ, ಕೋಆಪರೇಟಿವ್ ಸೊಸೈಟಿಯೂ, ಆಸ್ಪತ್ರೆಯೂ ಚೆನ್ನಾಗಿ ಕೆಲಸವನ್ನು ನಡಿಸುತ್ತಲಿವೆ —ಧಾರಣೆವಾಸಿಗಳು ಸ್ವಲ್ಪ ಸ್ವಲ್ಪವಾಗಿ ಏರುತ್ತಲಿವೆ

ಹಾಸನ —ಮದರಾಸ್ ಪ್ರಾಂತ್ಯದಿಂದ ಬಂದಿದ್ದ ಮ॥ ಪಲ್ಲಿಮೂರ್ತಿ ಎಂಬ ಜಟ್ಟಿಯು ಕಳೆದ ವಾರ ಹೈ ಸ್ಕೂಲಿನಲ್ಲೂ, ರೆಟೈರ್ಡ್ ಅ॥ ಕಮಿಷನರ್ ಮ॥ ಅಮಿರ್ ಹುಸೇನ್ ಸಾಹೇಬರ ವಠಾರದಲ್ಲೂ ಅಂಗಸಾಧನೆ ಸಾಮರ್ಥ್ಯ ಕೌಶಲ್ಯಾದಿಗಳನ್ನು ಪ್ರದರ್ಶನಪಡಿಸಿ ಪರಮಾಶ್ಚರ್ಯವನ್ನೂ ಸಂತೋಷವನ್ನೂ ಉಂಟುಮಾಡಿದರು ಇವರು ಪ್ರೊಫೆಸರ್ ರಾಮಮೂರ್ತಿಯವರ ಶಿಷ್ಯರೆಂದು ತಿಳಿದುಬಂದಿತು ಎದೆಯ ಮೇಲೆ ತುಂಬಿದ ಗಾಡಿಯನ್ನು ಎಳಸಿಕೊಂಡದ್ದು ಎದೆಯ ಮೇಲೆ ನಾಲ್ಕಾರು ಜನರು ಶ್ರಮೆಯಿಂದ ಎತ್ತಿಟ್ಟ ದೊಡ್ಡ ಕಲ್ಲನ್ನು ಚಮಟಿಗೆಯಿಂದ ಹೊಡಸಿಕೊಂಡದ್ದು, ಇತ್ಯಾದಿ ಮಹಾ ಸಾಹಸಕಾರ್ಯಗಳನ್ನು ಸಾಧಿಸಿಯೂ ಕೂಡ ಆಯಾಸಪಡದೆ ಹೋದುದು ನೋಟಕರನ್ನೆಲ್ಲಾ ಬೆರಗಾಗು

ವಂತೆ ನೂಡಿತು. ಮತ್ತು ದೇಹದ ಅವಯವಗಳು, ಎಲುಬು, ನರಗಳು ಇವುಗಳನ್ನೆಲ್ಲಾ ಎತ್ತಿ ಎತ್ತಿ ತೋರಿಸಿದ್ದು ಇನ್ನೂ ಆಶ್ಚರ್ಯಕರವಾಗಿತ್ತು —ಈ ಟವರ್ನಲ್ಲೂ ಹೊಳೆನರಸಿಪುರದಲ್ಲೂ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯ ಮಾಡತಕ್ಕ ಕಾನೂನನ್ನು ಜಾರಿಯಲ್ಲಿ ತರುವವರಾಗಿರುವಂತೆ ತೋರುತ್ತದೆ, ಇದಕ್ಕಾಗಿ ಇಲ್ಲಿ ಏಳರಿಂದ ಹನ್ನೊಂದು ವರ್ಷ ವಯಸ್ಸಿನೊಳಗಾಗಿರುವ ಬಾಲಕ ಬಾಲಕಿಯರ ಸಂಖ್ಯೆಯು ಎಷ್ಟಿನ್ನಿದೆ ಎಂಬುದನ್ನು ಕಂಡುಹಿಡಿಯಲು ಖಾನೇಸುಮಾರಿ ಮಾಡಿದರು ಇದರಿಂದ ಈ ಟವರ್ನಲ್ಲಿ ಬಾಲಕರು 614 ಮಂದಿ, ಬಾಲಕಿಯರು 609 ಮಂದಿ ಎಂತಲೂ, ಇವರಲ್ಲಿ ಈಗ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವರು 394 278 ಎಂತಲೂ ತಿಳಿದುಬಂದಿದೆ—ಕಳೆದ ಭಾನುವಾರ ಸಾಯಂಕಾಲ ಘನ ಟಾಂಲಿನ್ಸನ್ ದೊರೆಯವರು ಇಲ್ಲಿನ ಮಿಷನ್ ಆಸ್ಪತ್ರೆಯ ಕಂಪೌಂಡಿನಲ್ಲಿ ಯೇಸುಸ್ವಾಮಿಯ ಮರಣ ವೃತ್ತಾಂತವನ್ನು ಚಿತ್ರಪಟಗಳನ್ನು ಮ್ಯಾಜಿಕ್ ಲ್ಯಾಂಟರ್ನ್ನಲ್ಲಿ ಪ್ರದರ್ಶನಮಾಡಿ ಸರಳವಾದ ಕನ್ನಡ ಭಾಷಾಶೈಲಿಯಲ್ಲಿ ಉಪನ್ಯಾಸ ಮಾಡಿದರು ಸುಮಾರು 400 ಮಂದಿಗೂ ಮೇಲ್ಪಟ್ಟು ಸ್ತ್ರೀ ಪುರುಷರೂ, ಬಾಲಬಾಲೆಯರೂ ಸೇರಿ ನೋಡಿ ಕೇಳಿ ಸಂತೋಷಹೊಂದಿದರು ಅವರು ಈಗ ಹೊಳೆನರಸಿಪುರದ ಪ್ರಾಂತ್ಯಕ್ಕೆ ಹೊರಟಿದಾರೆ —ಮಳೆ ನಿಂತು ಹೋಗಿದ್ದು ನೆನ್ನೆ ಮಾತ್ರ ಸ್ವಲ್ಪ ಮಟ್ಟಿಗೆ ಸುರಿಯಿತು ಇದುವರೆಗೆ ಒಣಗಿಹೋಗಿರುವ ಪೈರಿನಲ್ಲಿ ಸುಮಾರು ಕಾಲುಪಾಲಿನಷ್ಟು ಕೈಸೇರಬಹುದು ಈಗ ಮಳೆ ಬಂದು ಅದೂ ಕೈಸೇರದಂತೆ ಆಗುವುದಲ್ಲಾ ಎಂಬ ಚಿಂತೆಯುಂಟಾಗಿದೆ —ಇಲ್ಲಿ ಪ್ಲೇಗ್ ರೋಗದ ಹಾವಳಿಯು ಈಚೆಗೆ ಬಹುಮಟ್ಟಿಗೆ ಕಡಮೆಯಾಗಿದೆ—ಊರೊಳಗೆ ಖಾಲಿ ಇರುವ ಮನೆಗಳಲ್ಲಿ ಕನ್ನಾ ಚೋರಿಗಳಿಗಾರಂಭವಾಗಿದೆ. ಪೋಲೀಸು ಬಂದೋಬಸ್ತು ಬಲವಾಗಬೇಕು ಮ|| ಲಕ್ಷ್ಮೀನಾರಣಪ್ಪನವರ ಮನೆಯಲ್ಲಿ ಕನ್ನಾಕೊರೆದು ಸಾಮಾನುಗಳನ್ನು ದೋಚಿಕೊಂಡುಹೋದರು ಮ|| ಶ್ರೀಕಂಠಯ್ಯನವರ ಮನೆಯಲ್ಲಿ ಹಣ ಒಡವೆಗಳನ್ನಿಟ್ಟಿದ್ದ ಪೆಟ್ಟಿಗೆಯನ್ನು ಅಪಹರಿಸಿದಾರೆ ಪೋಲೀಸಿನವರು ಪತ್ತೆಮಾಡಿ ಕೀರ್ತಿಪಡೆಯಬೇಕು —ಧಾರಣೆವಾಸಿ ಬಹು ಜಾಸ್ತಿಯಾಗಿದೆ ಇಲ್ಲಿನ ವಾಣೀವಿಲಾಸ ಬಾಲಿಕಾ ಶಾಲೆಯಲ್ಲಿ ಚಿಕ್ಕಮಗುವಿನ ಕೈಯಲ್ಲಿದ್ದ ಚಿನ್ನದ ಬಳೆಗಳನ್ನು ಯಾರೋ ಅಪಹರಿಸಿದರೆಂದೂ, ಈಚೆಗೆ ಒಂದು ಬಳೆ ಸಿಕ್ಕಿತೆಂದೂ ವರ್ತಮಾನವಿದೆ

ಇಂಡಿಯಾ ದೇಶದ ವೃತ್ತಾಂತಗಳು

ಪರ್ಷಿಯಾ ಎಂಬ ಹಡಗು 51,12,000 ರೂಪಾಯಿನ ಚಿನ್ನವನ್ನು ಹಿಂದುಸ್ಥಾನಕ್ಕೆ ತರುತ್ತಿದೆ

ಸಿಂಲಾ ಪಟ್ಟಣಕ್ಕೆ ಸುಮಾರು 600 ಮೈಲಿ ಫಾಸಲೆಯಲ್ಲೆಲ್ಲೋ ಭೂಕಂಪ ಸಂಭವಿಸಿದಂತೆ ಕಳೆದ ಭಾನುವಾರ ರಾತ್ರಿ 10 ಗಂಟೆಯಲ್ಲಿ ಆ ಪಟ್ಟಣದಲ್ಲಿ ಇಟ್ಟಿರುವ ಯಂತ್ರಗಳು ಸೂಚಿಸಿದವು

ಕೊಚ್ಚಿ ಸಂಸ್ಥಾನದ ರಾಜರವರು ಸಂಸ್ಥಾನದ ಆಳ್ವಿಕೆಯ ಜವಾಬ್ದಾರಿಯನ್ನು ನಿರಾಕರಿಸಿ ಬಿಟ್ಟು ಇರುತ್ತಾರೆಂಬ ವಿಶೇಷ ವಾರ್ತೆಯು ಅಲ್ಲಿನ ಸರ್ಕಾರಿ ಗೆಜೆಟ್ಟಿನಲ್ಲಿ ಕಳೆದ ಶನಿವಾರ ಪ್ರಕಟವಾಗಿದೆ

ತಿರುಚೂರಿನಲ್ಲಿ ಕಳೆದ ವಾರ ಒಂದು ಮನೆಯೊಳಗೆ ಕೆಲವರು ಸೇರಿ ಬಾಣಗಳನ್ನು ಮಾಡುತ್ತಿದ್ದಾಗ ಅಕಸ್ಮಾತ್ತಾಗಿ ಮದ್ದು ಹತ್ತಿಕೊಂಡು ಮಹಾ ಶಬ್ದದಿಂದ ಹಾರಿ ಆ ಮನೆಯನ್ನೇ ಕೆಡವಿಬಿಟ್ಟಿತು ಅದರಲ್ಲಿದ್ದ ಏಳು ಜನರು ತತ್ಕ್ಷಣ ಮೃತಪಟ್ಟರು

ಹಿಂದುಸ್ಥಾನದಲ್ಲಿ ಇಂಗ್ಲಿಷ್ ಸೈನ್ಯಗಳನ್ನು ಇಟ್ಟಿರುವ ಸ್ಥಳಗಳಲ್ಲೆಲ್ಲಾ ಆ ಸೈನಿಕರಿಗೋಸ್ಕರ ಅವರ ಸಂಖ್ಯೆಗೆ ಅನುಸಾರವಾಗಿ ಒಂದೆರಡು ನಾಟಕಶಾಲೆಗಳನ್ನು ಕಟ್ಟಿಸಿಕೊಡಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಇಂಡಿಯಾ ಗವರ್ನ್‌ಮೆಂಟಿಗೆ ತಿಳಿಸಿ ಸ್ಯಾಂಕ್ಷನ್ ಮಾಡಿರುತ್ತಾರೆ

ಬಂಗಾಳ ಆಧಿಪತ್ಯದೊಳಗೆಲ್ಲಾ ಕಳೆದ ಐದು ವರುಷಗಳಲ್ಲಿ ಭಾರಿ ಡಕಾಯಿತಿಗಳು 1511 ನಡೆದವೆಂದೂ, ಈ ಪೈಕಿ 52 ಡಕಾಯಿತಿಗಳನ್ನು ವಿದ್ಯಾವಂತರಾದ ಯೌವನಸ್ಥರು ಅಪಹರಿಸಿದ ದ್ರವ್ಯವನ್ನು ರಾಜದ್ರೋಹ ಕಾರ್ಯಗಳಿಗೆ ವಿನಿಯೋಗಿಸುವ ಉದ್ದೇಶದಿಂದ ನಡಿಸಿರುತ್ತಾರೆಂದೂ ಸರ್ಕಾರದವರು ತಿಳಿಸಿದರು

ಪಿಷಾವರ್ ಬ್ಯಾಂಕಿನ ಡೈರೆಕ್ಟರುಗಳು ಸರ್ಕಾರದ ಕಾನೂನ್ ಪ್ರಕಾರ ಬ್ಯಾಂಕಿನ ಛಮಾಹಿ ರಿಪೋರ್ಟನ್ನು ಸರ್ಕಾರಕ್ಕೆ ಕಳುಹಿಸದೆ ಹೋದದ್ದಕ್ಕಾಗಿ ಡೆಪ್ಯುಟಿ ಕಮಿಷನರ್‌ರವರು ನಾಲ್ಕು ಮಂದಿ ಡೈರೆಕ್ಟರುಗಳನ್ನು ಕರಸಿ ದರ್ಯಾಫ್ತು ಮಾಡಿ ಅವರಿಗೆ ತಲಾ 2,000 ರೂಪಾಯಿನಂತೆ ಜುಲ್ಮಾನೆ ಹಾಕಿದರು ಈಗ ಈ ಬ್ಯಾಂಕು ದಿವಾಳಿ ಆಯಿತು

ಶೇಕಡಾ 4 ರೂ ಬಡ್ಡಿಗೆ ಹತ್ತೊಂಬತ್ತು ಲಕ್ಷ ರೂಪಾಯಿ ಸಾಲ ಬೇಕೆಂದು ರಂಗೂನ್ ಮ್ಯುನಿಸಿಪಾಲಿಟಿಯವರು ಇಸ್ತಿಹಾರು ಕೊಟ್ಟಿದ್ದಂತೆ ಅನೇಕರು ಹಣ ಕೊಡುವುದಾಗಿ ದರಖಾಸ್ತುಗಳನ್ನು ಕಳುಹಿಸಿದರು ಈಗ ಯಾವಕಾರಣದಿಂದಲೋ ಮ್ಯುನಿಸಿಪಾಲಿಟಿಯವರು ಯಾರ ದರಖಾಸ್ತನ್ನೂ ಅಂಗೀಕರಿಸದೆ ಸದ್ಯ ತಮಗೆ ಸಾಲ ಬೇಕಾಗಿಲ್ಲವೆಂದು ಪ್ರಕಟಿಸಿರುತ್ತಾರೆ

ಮೊಗಲಾಯಿ ಚಕ್ರವರ್ತಿಯಾಗಿದ್ದ ಷಹಜಹಾನನ ದೌಲತ್ತಿನಲ್ಲಿ ಆತನ ರಾಜಧಾನಿಯಾದ ದೆಹಲಿನಗರದ ಕೋಟೆಯೊಳಗೆ ಅರಮನೆಯ ಒಂದು ಭಾಗವು ಯಾವ ರೀತಿ ಅಲಂಕರಿಸಲ್ಪಟ್ಟಿತ್ತು ಎಂಬುವುದನ್ನು ಈಗಿನ ಜನರಿಗೆ ತೋರಿಸುವುದಕ್ಕಾಗಿ ಆ ಅರಮನೆಯಲ್ಲಿ ಇಂಡಿಯಾ ಗವರ್ನ್‌ಮೆಂಟಿನವರು ಒಂದು ಕಿರುಮನೆಯನ್ನು ದಿವ್ಯವಾಗಿ ಅಲಂಕರಿಸಿ ಸಿದ್ಧಪಡಿಸಿರುತ್ತಾರೆ

ಮದರಾಸಿನಲ್ಲಿರುವ ಗುಜರಾತಿ ವೈಶ್ಯರ ಪ್ರಮುಖರಾದ ದಿವಾನ್ ಬಹದ್ದೂರ್ ಗೋವಿಂದದಾಸ್ ಚತುರ್ಭುಜದಾಸ್ ರವರನ್ನು ಮುಂದಿನ ವರುಷ ಆ ಪಟ್ಟಣದ ಷೆರಿಫರಾಗಿ ನೇಮಕಮಾಡಿರುತ್ತಾರೆ ಇವರು ಅನೇಕ ಪುಣ್ಯಕೆಲಸಗಳಿಗೆ ದ್ರವ್ಯ ಸಹಾಯಮಾಡಿ ಕೀರ್ತಿಪಡೆದವರಾಗಿಯೂ, ಚಕ್ರವರ್ತಿಸಾರ್ವಭೌಮರವರ ಲೋಹಪ್ರತಿಮೆಯನ್ನು ಮದರಾಸ್ ಪಟ್ಟಣಕ್ಕೆ ವಿಲಾಯತಿಯಲ್ಲಿ ಮಾಡಿಸಿ ತರಿಸಿ ಒಪ್ಪಿಸುವವರಾಗಿಯೂ ಇದಾರೆ ಮೂಗುಪ್ರಾಣಿಗಳ ಪೋಷಣೆಗೆ ಇವರು ಮಾಡಿರುವ ಮತ್ತು ಮಾಡುತ್ತಿರುವ ದ್ರವ್ಯ ಸಹಾಯವು ಪ್ರಶಂಸಾರ್ಹವಾಗಿದೆ

ಬೊಂಬಾಯಿನಲ್ಲಿ ಗುಂಜಿಯಾ ಬಾಯಿ ಎಂಬೊಬ್ಬ ಹಿಂದೂ ಸ್ತ್ರೀಯನ್ನು ಒಂದು ಚೇಳು ಕಡಿಯಿತು ಒಂದೆರಡು ವಾರಗಳ ತನಕ ಮನೆಯಲ್ಲಿ ಕೈಕಂಡ ಚಿಕಿತ್ಸೆಗಳನ್ನು ಮಾಡಿದರು ವಾಸಿಯಾಗದೆ ಹೋದದ್ದರಿಂದ ಅವಳನ್ನು ಸರ್ ಜೆ ಜೆ ಆಸ್ಪತ್ರೆಗೆ ಸಾಗಿಸಿದರು ಅಲ್ಲಿ ಮಾಡಿದ ಯಾವ ಚಿಕಿತ್ಸೆಯಿಂದಲೂ ಆಕೆಗೆ ಪ್ರಯೋಜನವಾಗದೆ ಹುಬ್ಬು ಹಿಡಿದು ಚೇಳು ಕಡಿಗುವಂತೆ ಅರಚುತ್ತಾ ಆಸ್ಪತ್ರೆಯಲ್ಲೇ ಸತ್ತುಹೋದಳು

ಕಲ್ಕತ್ತಾ ಪಟ್ಟಣದ ಸೂಕಿಯಾ ಮೊಹಲ್ಲಾ ಬೃಂದಾವನಮಲಿಕ್ ಸಂದಿಯಲ್ಲಿ ಐದು ಕತ್ತಿಗಳೂ, ಕತ್ತಿಯುಳ್ಳ ಒಂದು ದೊಣ್ಣೆಯೂ ರಸ್ತೆಯಲ್ಲಿ ಬಿದ್ದಿದ್ದವು ಅವನ್ನು ನೋಡಿ ಸಾವಿರಾರು ಪ್ರಜೆಗಳು ಆಶ್ಚರ್ಯವನ್ನೂ ಭೀತಿಯನ್ನೂ ಪಡುತ್ತಿರುವಾಗ್ಗೆ ಪೋಲೀಸಿನವರು ಹೋಗಿ ಅವನ್ನು ಕೂಡಿಸಿ ತೆಗೆದುಕೊಂಡು ಹೋದರು ಲೈಸೆನ್ಸು ಇಲ್ಲದವರಾರೋ ಭೀತಿಪಟ್ಟು ತಮ್ಮ ಬಳಿ ಇದ್ದ ಆ ಆಯುಧಗಳನ್ನು ಬೀದಿಗೆ ತಂದುಹಾಕಿರಬೇಕೆಂದು ಊಹಿಸಲ್ಪಟ್ಟಿದೆ

ಅಲಹಾಬಾದಿನಲ್ಲಿರುವ ಬ್ರಿಟಿಷ್ ಇಂಡಿಯನ್ ಬ್ಯಾಂಕಿನೊಳಗೆ ಖಜಾಂಚಿಯಾಗಿದ್ದ ನೌಕರನು ತನ್ನ ನೌಕರಿಗಾಗಿ ಬ್ಯಾಂಕಿನಲ್ಲಿ 5,000 ರೂಪಾಯಿನ ಸರ್ಕಾರಿ ಪತ್ರಗಳನ್ನು ಜಾಮೀನ್ ತರೀಖು ಒಪ್ಪಿಸಿದ್ದನು ಆ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರಾಗಿದ್ದ ಶಿವೇಶ್ವರ ಘೋಸ್ ಎಂಬುವನು ಆ ಪತ್ರಗಳನ್ನು ಗುಟ್ಟಾಗಿ ಮಾರಿ ಹಣವನ್ನು ದುರುಪಯೋಗಪಡಿಸಿಕೊಂಡನು ಕಳೆದ ವಾರ ಸೆಷನ್ಸ್ ಜಡ್ಜರು ಆ ಡೈರೆಕ್ಟರನ್ನು ದರ್ಯಾಫ್ತು ಮಾಡಿ ಅವನಿಗೆ ಎರಡು ವರುಷ ಕಠಿಣ ಸಜಾ ವಿಧಿಸಿರುತ್ತಾರೆ

ವಿದ್ಯಾಭ್ಯಾಸಕ್ಕಾಗಿ ಇಂಗ್ಲಾಂಡಿಗೆ ಹೋಗಿರುವ ಮತ್ತೂ ಮುಂದೆ ಹೋಗುವ ಹಿಂದುಸ್ಥಾನದ ವಿದ್ಯಾರ್ಥಿಗಳಿಗೆ ಈಗ ಅಲ್ಲಿರುವ ಅನಾನುಕೂಲಗಳೂ, ಅಡಚಣೆಗಳೂ, ಕಷ್ಟನಷ್ಟಗಳೂ ಯಾವ ರೂಪವಾದವುಗಳು ? ಅವನ್ನು ಪರಿಹರಿಸುವ ಉಪಾಯಗಳೇನು ? ಎಂಬೀ ವಿಷಯಗಳನ್ನು ವಿಚಾರಣೆಯಿಂದ ಗೊತ್ತುಮಾಡಿ, ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೆ ಅರಿಕೆಮಾಡುವುದಕ್ಕೋಸ್ಕರ ಇಂಡಿಯಾ ಆಫೀಸಿನವರು ಒಂದು ಪಂಚಾಯತಿಯನ್ನು ನೇಮಕಮಾಡಿದಾರೆ ಈ ಪಂಚಾಯತಿಯಲ್ಲಿ ಸರ್ ಮಂಚರ್ಜಿ ಭೌನಗಿರಿ, ಮಿ| ಮಿರ್ಜಾ ಅಲಿಬೇಗ್, ಮಿ ಅಬ್ದುಲ್ ಲತೀಫ್ ಎಂಬುವರು ಮೆಂಬರುಗಳಾಗಿರುತ್ತಾರೆ

ಬೊಂಬಾಯಿ ಪಟ್ಟಣದ ಮ| ಭಗವಾನ್‌ದಾಸ್ ಮಾಧವದಾಸ್ ರವರ ಬಂಗಲೆಯಲ್ಲಿ ಕಳೆದ ವಾರ ಒಂದು ವಿಧವಾ ಪುನರ್ವಿವಾಹವು ಜರುಗಿತು 27 ವರುಷದ ಮ| ಲಕ್ಷ್ಮೀನಾರಾಯರು 23 ವರುಷದ ತುಂಗಾಬಾಯಿ ರಾಧಳರಣಿ ಎಂಬ ವಿಧವೆಯನ್ನು ವರಿಸಿ ವಿವಾಹವನ್ನು ವೈದಿಕವಿಧಿಗನುಸಾರವಾಗಿ ಮಾಡಿಕೊಂಡರು ಇವರು ಸ್ಮಾರ್ತ ಬ್ರಾಹ್ಮಣರ ಬೇರೆಬೇರೆ ಒಳಪಂಗಡಗಳಿಗೆ ಸೇರಿದವರು ಆ ದಿನ ಬೊಂಬಾಯಿನ ಬಹು ಮಂದಿ ಸಾಹುಕಾರರೂ ವಿದ್ವಾಂಸರೂ ಪರಹಿತಚಿಂತಕರೂ ವಿವಾಹಮಂಟಪದಲ್ಲಿ ಹಾಜರಾಗಿದ್ದು ಬಹು ಸಂತೋಷದಿಂದ ನೂತನದಂಪತಿಗಳಿಗೆ ಬಗೆಬಗೆಯ ಉಡುಗೆರೆಗಳನ್ನು ಕೊಟ್ಟು ಪ್ರೋತ್ಸಾಹಮಾಡಿದರು

ಅಫ್ಘಾನಿಸ್ಥಾನದಲ್ಲಿ ಕೆಲವು ಜನರು ಸೇರಿ ತಮ್ಮ ಅಮೀರರನ್ನು ಕೊಂದು ಹಾಕಬೇಕೆಂದು ಪ್ರಯತ್ನಪಟ್ಟರು ಅದು ಹ್ಯಾಗೋ ಪತ್ತೆ ಆದಾಗ ಅಮೀರರು ಆ ಫಿತೂರಿಯ ಮುಖಂಡರನ್ನು ಹಿಡಿಸಿ ಕೊಲ್ಲಿಸಿಬಿಟ್ಟರು ಈಗ ಆ ಫಿತೂರಿಕೋರರಿಗೆ ಸಹಾಯಕರಾಗಿದ್ದರೆಂದು ತಿಳಿದುಬಂದ ಸುಮಾರು 15 ಜನರನ್ನು ತಮ್ಮ ಸಂಸ್ಥಾನದಿಂದ ಗಡೀಪಾರು ಮಾಡಿರುತ್ತಾರೆ ಇವರ ಜೀವನಕ್ಕೆ ಅಮೀರರು ತಿಂಗಳಿಗೆ 500 ರೂಪಾಯಿ ಅಲೋಯನ್ಸು ಸ್ಯಾಂಕ್ಷನ್ ಮಾಡಿ ಅವರ್ಯಾರೂ ಲಾಹೋರ್ ಪಟ್ಟಣದಲ್ಲಿರಕೂಡದೆಂದು, ಅಲ್ಲಿರುವ ಸರ್ದಾರ್ ಆಯೂಬ್‌ಖಾನ್‌ರವರ ಕೂಡ ಕಾಗದಪತ್ರಗಳನ್ನು ನಡಿಸಕೂಡದೆಂದೂ, ಆ ಪಟ್ಟಣದಿಂದ ಬಹಳ ದೂರಪ್ರದೇಶದಲ್ಲಿ ವಾಸಮಾಡಬೇಕೆಂದೂ ಆಜ್ಞೆಮಾಡಿದಾರೆ

ಪೂರ್ವಬಂಗಾಳಕ್ಕೆ ಸೇರಿದ ಮಿದ್ನಪುರದ ಡಿಸ್ಟ್ರಿಕ್ಟಿನಲ್ಲಿ ಕೆಲವು ವಾರಗಳ ಕೆಳಗೆ ಅಪಾರವಾದ ಮಳೆಗಳು ಸುರಿದು ಪ್ರವಾಹಗಳ ದೆಸೆಯಿಂದ ಸಾವಿರಾರು ಬಡಬಗ್ಗರ ಮನೆಮಠಗಳೂ ಸಾಮಾನುಗಳೂ ಕೊಚ್ಚಿ ನಾಶವಾದವು ಬೆಳೆಗಳೆಲ್ಲಾ ಕೊಚ್ಚಿಹೋದವು ಕೆಲವು ಪ್ರಜೆಗಳೂ ನೂರಾರು ಗೋಕಾಯಿಗಳೂ ಲಯವಾದವು ಗವರ್ನ್‌ಮೆಂಟಿನವರು ಆ ಪ್ರಾಂತ್ಯದ ರೈತರಿಗೆ ತಕಾವಿ ಸಾಲಗಳನ್ನು ಕೊಡುವ ಉದ್ದೇಶ್ಯ ಎರಡುವರೆ ಲಕ್ಷ ರೂಪಾಯಿಯನ್ನೂ, ಎಲ್ಲವನ್ನೂ ಕಳೆದು ಕೊಂಡವರಿಗೆ ಜೀವನ ನಡಿಸುವುದಕ್ಕೆ ಒಂದು ಲಕ್ಷ ರೂಪಾಯಿಯನ್ನೂ ಸ್ಯಾಂಕ್ಷನ್ ಮಾಡಿದರು ಇದಲ್ಲದೆ ದೇಶವತ್ಸಲರಾದ ಅನೇಕ ದೊಡ್ಡಮನುಷ್ಯರು ಕಲ್ಕತ್ತಾ ಮೊದಲಾದ ಕಡೆಗಳಲ್ಲಿ ದರ್ಮದ ಹಣವನ್ನು ಪ್ರಜೆಗಳಿಂದ ಕೂಡಿಸಿ ಅಲ್ಲಿಗೆ ಕಳುಹಿಸಿಕೊಟ್ಟು, ಬಹುಮಟ್ಟಿಗೆ ಕಷ್ಟ ನಿವಾರಣೆಮಾಡಿರುತ್ತಾರೆ

ಬೊಂಬಾಯಿನಲ್ಲಿದ್ದ ಇಂಡಿಯನ್ ಸ್ಪೀಸಿ ಬ್ಯಾಂಕು, ಕರಾಚಿಯಲ್ಲಿದ್ದ ಅದರ ಶಾಖೆಯೂ, ಬೊಂಬಾಯಿನ ಪಯೊನಿಯರ್ ಬ್ಯಾಂಕು, ಕರಾಚಿಯ ಸಿಂಧುಬೆಲೂಚಿಸ್ಥಾನ್ ಬ್ಯಾಂಕು ಕಳೆದ ವಾರ ದಿವಾಳಿಯಾದವು ಇವುಗಳ ದೆಸೆಯಿಂದ ಷೇರುದಾರರಿಗೂ ಡಿಪಾಜಿಟ್‌ದಾರರಿಗೂ ಕೋಟ್ಯಾಂತರ ರೂಪಾಯಿ ನಷ್ಟವಾಗಿ ವ್ಯಥೆಯುಂಟಾಯಿತು ದಿವಾಳಿಯಾದ ಬೊಂಬಾಯಿನ ಇಂಡಿಯನ್ ಸ್ಪೀಸಿ ಬ್ಯಾಂಕು ಕಳೆದ 1906 ರಲ್ಲಿ ಪ್ರಾರಂಭವಾಯಿತು ಇದರ ಶಾಖೆಗಳು ಲಂಡನ್, ಕಲ್ಕತ್ತಾ, ಅಹಮದಾಬಾದ್, ಪೂನ, ಲಕ್ನೊ, ಕರಾಚಿ, ನಾಗಪುರ, ಸೂರತ್, ಸಕ್ಕರ್, ಬರೋಡ, ಬ್ರೋಚ್, ಇಂದೂರ್, ಭಾವಾನಗರ, ಕೊಲ್ಹಾಪುರ, ನಾಸಿಕ್, ರಾಜಕೋಟ್, ಶಿಕಾರ್‌ಪೂರ್, ಧೂಲಿಯಾ, ಯೋತ್ಮಾಳ್ ಎಂಬೀ ಸ್ಥಳಗಳಲ್ಲಿ ಏರ್ಪಾಡಾಗಿ ಅನೇಕ ಸಹಸ್ರದ್ರವ್ಯವನ್ನು ಠೇವಣಿಟ್ಟು ಹಿಡಿದು ಲೇವಾದೇವಿ ನಡಸುತ್ತಿದ್ದರು ಅದರ ಮ್ಯಾನೇಜಿಂಗ್ ಡೈರೆಕ್ಟರಾಗಿದ್ದ ಮಿ|| ಚುನಿಲಾಲ್ ಡಿ ಸರಾಯ ಎಂಬಾತನು ಅಕಸ್ಮಾತ್ತಾಗಿ ಕಳೆದ ವಾರ ಎದೆಶೂಲೆಯಿಂದ ಮೃತಪಟ್ಟಕಾರಣ ಈ ಬ್ಯಾಂಕು ದಿವಾಳಿಯಾಗಲು ಕಾರಣವಾಯಿತು ಆತನು ಬಹಳ ಬುದ್ಧಿವಂತನಾಗಿದ್ದರೂ ಬ್ಯಾಂಕಿನ ಲಕ್ಷಾಂತರ ರೂಪಾಯಿನಿಂದ ಬೆಳ್ಳಿಯನ್ನು ಕೊಂಡು ಇಟ್ಟುಕೊಂಡು ಅದರಲ್ಲಿ ನಷ್ಟಪಟ್ಟದ್ದು ಈಗ ಪ್ರಕಟವಾಗಿದೆ, ಕೋರ್ಟಿನವರು ಅಧಿಕಾರಿಯನ್ನು ನೇಮಕಮಾಡಿ ಈ ಬ್ಯಾಂಕಿನ ಲೇವಾದೇವಿಗಳನ್ನು ಕ್ರಮಪಡಿಸುವಂತೆ ತಿಳಿಸಿದಾರೆ

ಕಳೆದ ಬುಧವಾರ ರಾತ್ರಿ ಮದರಾಸಿನಲ್ಲಿ ನಾಲ್ಕು ಅಂಗುಲ ಮಳೆ ಸುರಿಯಿತು ಕ್ಲೈವ್ ಬತೇರಿಯ ಬಳಿ ಕನ್ನಿಕೋವಿಲ್ ಕೇರಿಯಲ್ಲಿ ಕೊಟ್ಟಿಷ್ಟ ನಾಯ್ಡುವಿನ ಸಾಮಾನು ತುಂಬಿದ್ದ ಒಂದು ಕಟ್ಟಡವು ಕಳಚಿ ಪಕ್ಕದ ಎರಡು ಮನೆಗಳ ಮೇಲೆ ಮಗುಚಿಕೊಂಡಿತು ಆ ಎರಡು ಮನೆಗಳಲ್ಲೂ ಮಲಗಿ ನಿದ್ರೆಮಾಡುತ್ತಿದ್ದ ನಾಲ್ವರು ಹೆಂಗಸರೂ ಒಬ್ಬ ಹುಡುಗನೂ ಒಳಗೆ ಸಿಕ್ಕಿ ಮೃತಪಟ್ಟರು ಇನ್ನೊಬ್ಬ ಹೆಂಗಸೂ ಒಬ್ಬ ಹುಡುಗನೂ ತಪ್ಪಿಸಿಕೊಂಡರು. ಅರ್ಧರಾತ್ರಿಯಲ್ಲಿ ನಡೆದ ಈ ದುಃಖಕರವಾದ ಅನಾಹುತವು ಆ ಕೂಡಲೇ ತಿಳಿದು ಪೋಲೀಸಿನವರು ಅಲ್ಲಿಗೆ ಹೋದರೂ ಬಿದ್ದ ಗೋಡೆಗಳನ್ನು ಎಳಸಿ ಕೆಳಗಿದ್ದವರನ್ನು ಬಿಡಿಸುವುದು ಸಾಧ್ಯವಾಗಲಿಲ್ಲ ಮರುದಿನ ಬೆಳಿಗ್ಗೆ ಜನರು ಸೇರಿ ಹೆಣಗಳನ್ನು ಬಿಡಿಸಿ ತಂದು ಮಹಜರುಮಾಡಿ ದಫನ್‌ಗೆ ಅಪ್ಪಣೆಕೊಟ್ಟರು

ಮದರಾಸ್ ಪಟ್ಟಣದ ರೈಲ್ವೆ ಸ್ಟೇಷನ್‌ನಲ್ಲಿ ಕಳೆದ ನವಂಬರ್ 18 ನೇ ತಾರೀಖು ಯರಣಿ ಜಹಗೀರ್ದಾರರು ಪರಿವಾರ ಸಮೇತ ಬೆಂಗಳೂರಿಗೆ ಬರಬೇಕೆಂದು ಕಾದಿದ್ದಾಗ ಮಿ|| ಎಚ್ ಎಂ ಜಬ್‌ಸನ್ ಎಂಬೊಬ್ಬ ಸಾಹೇಬನು ಹೋಗಿ ಜಹಗೀರ್ದಾರರನ್ನು ನಿಲ್ಲಿಸಿಕೊಂಡು ಅವರು ಮೋಟರನ್ನು ಬಹು ವೇಗವಾಗಿ ಓಡಿಸಿದರೆಂದು ಅವರ ಮೇಲೆ ಆಕ್ಷೇಪಣೆಮಾಡಿ ಕೋಪದಿಂದ ಅವರನ್ನು ಎಲ್ಲರ ಎದುರಿನಲ್ಲೂ ಎರಡಾವರ್ತಿ ಒದ್ದು ಅಪಮಾನಪಡಿಸಿದನು ಇದಕ್ಕಾಗಿ ಜಹಗೀರ್ದಾರರು ಆತನ ಮೇಲೆ ಫಿರ್ಯಾದು ತಂದರು ದರ್ಯಾಫ್ತಿಯ ಕಾಲದಲ್ಲಿ ಆ ಸಾಹೇಬನು ಅವರನ್ನು ಒದ್ದದ್ದು ನಿಜವೆಂದು ಒಪ್ಪಿ, ತನಗೆ ಕೋಪಬಂದ್ದ ಕಾರಣ ಆ ರೀತಿ ಮಾಡಿದ್ದಾಗಿ ಹೇಳಿಕೊಂಡನು ಮ್ಯಾಜಿಸ್ಟ್ರೇಟರು ದರ್ಯಾಫ್ತಿಮಾಡಿ ಹಾಗೆ ಒದೆಯಲು ನ್ಯಾಯವಾದ ಕಾರಣವಿಲ್ಲವೆಂದು ತೀರ್ಮಾನಮಾಡಿ ಆ ಸಾಹೇಬನಿಗೆ 50 ರೂಪಾಯಿ ಜುಲ್ಮಾನೆ ವಿಧಿಸಿದರು

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಆಗ್ರಾ, ರೋಹಿಲ್‌ಖಂಡ, ಬುಂದೆಲ್‌ಖಂಡ, ಅಲಹಾಬಾದ್, ಲಕ್ನೋ ಎಂಬೀ ಐದು ಡಿವಿಜನ್‌ಗಳಲ್ಲೂ ಮೊರಲನೇ ಮಳೆಗಳು ಸುರಿಯದೆ ಯಾವ ಬೆಳೆಯೂ ಆಗಲಿಲ್ಲ ಸುಮಾರು 46,000-ಚದರಮೈಲಿ ಭೂಪ್ರದೇಶದಲ್ಲಿರುವ ಎರಡು ಕೋಟಿ ಪ್ರಜೆಗಳಿಗೆ ಬರಗಾಲದ ಕಷ್ಟ ಸೂಚನೆಗಳು ಪ್ರಾಪ್ತವಾಗಿರುತ್ತವೆ ದಿನಸಿಗಳ ಧಾರಣೆಗಳು ಶೇಕಡ 50, 60, 70 ರಂತೆ ಹೆಚ್ಚಿರುವವು ಗವರ್ನ್‌ಮೆಂಟಿನವರು ಗೋಕಾಯಿಗಳಿಗೋಸ್ಕರ ಆಗಲೇ ಇತರ ಕಡೆಗಳಿಂದ ಮೇವನ್ನು ತರಿಸಿ ಹಂಚಿಕೊಡುತ್ತಿದ್ದಾರೆ ರೈತರಿಗೆ ತಕಾವಿ ಸಾಲಗಳನ್ನು ಕೊಡುವುದಕ್ಕಾಗಿ ಒಂದು ಕೋಟಿ ರೂಪಾಯಿ ಸ್ಯಾಂಕ್ಷನ್ ಮಾಡಿದರು ಸುಮಾರು 56½ ಲಕ್ಷ ರೂಪಾಯಿನಷ್ಟು ಕಂದಾಯಗಳನ್ನು ಒಂದೆರಡು ವರುಷ ತಡೆದು ವಸೂಲ್ಮಾಡುವಂತೆ ನಿಲ್ಲಿಸಿದಾರೆ ಈ ಪೈಕಿ ಸುಮಾರು 20 ಲಕ್ಷ ರೂಪಾಯಿ ಕಂದಾಯ ರಿಮಿಷನ್‌ಗೆ ಬರಬಹುದೆಂದು ಊಹಿಸಲ್ಪಟ್ಟಿದೆ ಇದಲ್ಲದೆ ರಾಜಪುಟಾನಾಕ್ಕೆ ಸೇರಿದ ದೇಶೀಯಸಂಸ್ಥಾನಗಳಲ್ಲಿ ಕೂಡ ಈ ಬರಗಾಲದ ಚಿಹ್ನೆಗಳು ಕಾಣಿಸಿಕೊಂಡು, ಕಳವು, ಚೋರಿ, ದಕಾಯತಿ ಮುಂತಾದ ಅಕೃತ್ಯಗಳು ನಡೆಯಲಾರಂಭವಾಗಿರುತ್ತವೆ ಸರ್ಕಾರದವರು ಇನ್ನೊಂದು ವರ್ಷಾಕಾಲವು ಸರಿಯಾಗಿ ನಡಿಸದೆಹೋದರೆ ಆ ಪ್ರಾಂತ್ಯಗಳಲ್ಲಿ ಬರಕ್ಷಾಮವು ಪ್ರಾಪ್ತವಾಗುವುದೆಂದು ಊಹಿಸಿ, ಅದರ ನಿವಾರಣೆಗೋಸ್ಕರ ಆಗಲೇ ಅನೇಕ ಏರ್ಪಾಡುಗಳನ್ನೂ ಸನ್ನಾಹಗಳನ್ನೂ ಮಾಡುತ್ತಾ ಒಂದಿದಾರೆ

ಕಾಶೀ ಪಟ್ಟಣದಲ್ಲಿ ಮೂರುನಾಲ್ಕು ಮಂದಿ ಸೇರಿ ಬರೋದಾ ಎಂಬೊಬ್ಬ ಹಿಂದುವಿನ ಹೆಸರಿನ ಮೇಲೆ ಇನ್‌ಷೂರೆನ್ಸ್ ಕಂಪನಿಯಲ್ಲಿ ಕೆಲವು ಕಾಲ ಚಂದಾ ಹಾಕುತ್ತಾಬಂದು ಅವನು ಸತ್ತರೆ 10 000 ರೂಪಾಯಿ ಕಂಪನಿಯಿಂದ ಬರುವಂತೆ ಏರ್ಪಾಡುಮಾಡಿದರು ಕೆಲವು ದಿವಸಗಳ ಹಿಂದೆ ಅವರು ಆ ಬರೋದನು ಸತ್ತುಹೋದನೆಂದು ನಟಿಸಿ ಅವನನ್ನು ಜೀವವಿರುವಾಗಲೇ ಅವನ ಸಮ್ಮತಿಯ ಮೇಲೆ ಚಟ್ಟದಮೇಲೆ ಅರ್ಧರಾತ್ರಿಯಲ್ಲಿ ಸ್ಮಶಾನಕ್ಕೆ ಹೊತ್ತುಕೊಂಡುಹೋಗಿ ಅವನನ್ನು ಚಟ್ಟದಿಂದ ಬಿಡಿಸಿ ಅಂಗಡಿಯಲ್ಲಿ ಬಿಕರಿಯಾಗುತ್ತಿದ್ದ ಮಾಂಸವನ್ನು ಕೊಂಡುಹೋಗಿ ಚಿತೆಗೆ ಹಾಕಿ ಸುಟ್ಟುಬಂದರು ಬರೋದನನ್ನು ಕಣ್ಣಿಗೆ ಬೀಳದಂತೆ ಬಚ್ಚಿಟ್ಟು, ಅವನು ಸತ್ತುಹೋದನೆಂದೂ, ಅವನಿಗೆ ಇಂಥವರು ವಿಷ ಕೊಡುತ್ತಿದ್ದರೆಂದೂ, ಇಂಥಿಂಥವರು ಅವನ ಶವವನ್ನು ಹೊತ್ತುಕೊಂಡು ಹೋಗಿ ಸುಟ್ಟುಬಂದರೆಂದೂ, 10,000 ರೂಪಾಯನ್ನು ಕರಾರಿನ ಪ್ರಕಾರ ಕಂಪನಿಯವರು ಕಳುಹಿಸಬೇಕೆಂದೂ ಅರ್ಜಿ ಬರೆದುಕೊಂಡರು ಕಂಪನಿಯವರು ಅದ ನಿಜವೆಂದು ನಂಬಿ, ಮರಣವನ್ನು ಸಿದ್ಧಾಂತಪಡಿಸುವುದಕ್ಕೆ ತಕ್ಕ ರುಜುವಾತುಗಳನ್ನು ಬರೆದು ಕಳುಹಿಸುವಂತೆ ಕೆಲವು ಫಾರಮುಗಳನ್ನು ಕಳುಹಿಸಿದಾಗ ಅವು ಭರ್ತಿಮಾಡಿ ಕಂಪನಿಗೆ ರವಾನೆಮಾಡಿದರು ಈ ಮಧ್ಯೆ ಬರೋದನು ಸಾಯಲಿಲ್ಲವೆಂದೂ, ಅದೆಲ್ಲಾ ಮೋಸವೆಂದೂ ಹ್ಯಾಗೋ ಹೊರಪಟ್ಟಿತು ಕಂಪನಿಯವರು ಆ ಮೂರುನಾಲ್ಕು ಮಂದಿಯ ಮೇಲೆ ಕ್ರಿಮಿನಲ್ ಮೊಕದ್ದಮೆ ತಂದಿದಾರೆ ಅಲಹಾಬಾದ್ ಪಟ್ಟಣದಲ್ಲಿ ಇದು ವಿಚಾರಣೆಗೆ ಪ್ರಾರಂಭವಾಗಿ ಸಾಕ್ಷಿಗಳ ಕೈಯುತ್ತು ನಡೆಯುತ್ತಿದೆ



ಜನವರಿ ಮಹೋತ್ಸವದ ಕೈ ಗಡಿಯಾರ

[253-

ಅರ್ಧ ಕ್ರಯ ರೂ 1-14-0

ಬರುವ ಜನವರಿ ಹಬ್ಬದ ಮಹೋತ್ಸವಕ್ಕಾ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜನವರಿ ಆಖೈರು ಒಳಗಾಗಿ ತರಿಸಿಕೊಳ್ಳುವವರಿಗೆ ರೂಪಾಯಿ 1-14-0 ಆಣೆಗೆ ಕೊಡಲ್ಪಡುತ್ತೆ

ವಿಳಾಸ—ಏಕಾಂಬರಂ ಕಂಪನಿ, ಸೆಕೆಂಡ್ ಲೈನ್ ಬೀಚು, ಮದರಾಸ್

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು. ವಾಯು, ಕೀಲು, ಆರತಲೆ, ತಲೆನೋವುಗಳು, ಯಾವ ಕಾರಣದಿಂದ ಹುಟ್ಟುವ ಬಾಧೆ ಹೊಗಳೆ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮುಗಳು ಗ್ರಹಣಿ, ಶ್ವಾಸರೋಗ, ಜಜ್ಜು, ಉಳುಕು, ಥಳುಕು, ಚೇಳು ಕಡಿದ ಬಾಧೆ, ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ. ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬುಡ್ಡಿ ಕೊಡಿ ಎಂದು ಕೇಳು. ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ. ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ. ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ. ಲಕ್ಷಾಂತರ ಜನರು ಸುಖಹೊಂದಿದಾರೆ; ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [104-29]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಇದರ ಕ್ರಯ ಬಾಟ್ಲಿಗೆ 12 ಆಣೆ; ಅಂಚೆ ವೆಚ್ಚ 4 ಆಣೆ. 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ. ವಿಳಾಸಗಳು:—(1) ಎಸ್ ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ಪೆರಂಬೂರ್, ಮದರಾಸ್. (2) ಜೆ. ಎಸ್ ಕೃಷ್ಣಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ಬಹಳ ಮೇಲಾದ ಅಚ್ಚು ಕರೀ ಬಣ್ಣದ ಮಧುರೆ ಚುಂಗಡಿ ಅಂಚಿನ ಸೀರೆಗಳು.

ಆದರ ಬೆಲೆ ಕೇವಲ ರೂ 2-6-0



ಇದರಿಂದ ವರ್ತಕರಿಗೂ, ಬಾಗ್ಯವಂತರಿಗೂ, ಬಡವರಿಗೂ ತಿಳಿಸುವದೇನೆಂದರೆ—ನಮ್ಮಲ್ಲಿನ ಕರಿಯ ಬಣ್ಣದ ಮಧುರೆ ಚುಂಗಡಿ ಸೀರೆಗಳು ಉಡುವುದಕ್ಕೆ ಭೂಷಣವಾಗಿಯೂ, ನೋಡುವುದಕ್ಕೆ ನಯವಾಗಿಯೂ, ಸರ್ವರಿಗೂ ಅನುಕೂಲವಾಗಿಯೂ, ಕೊಳ್ಳಲು ಬೆಲೆ ಬಹಳ ಸುಲಭವಾಗಿಯೂ ತಯಾರಿಸಿದೆ. ಎಷ್ಟು ವರ್ತನೆ ಬಿಡದು ಉಟ್ಟರೂ ಬಣ್ಣವು ಸ್ವಲ್ಪವೂ ಬದಲಾಯಿಸುವುದಿಲ್ಲ. ಇದರ ಸೆರಗುಗಳು ಬಹು ಪಸಂದಾಗಿವೆ. ಸೀರೆಯು ಉದ್ದವು ಧಾರಾಳವಾಗಿ 18 ಮೊಳವಿದೆ. ಪರೀಕ್ಷಾರ್ಥ ಒಂದನ್ನು ತರಿಸಿದಲ್ಲಿ ನಿಮ್ಮ ನೆರೆಹೊರೆಯವರು ಅನೇಕ ಸೀರೆಗಳಿಗೆ ಆರ್ಡರು ಕಳುಹಿಸುವರು.—ಡಿಸ್ಕೋ ಆಲ್ ರೈಲ್ವೆ ರೆಗ್ಯುಲೇಟರ್ ವಾಚ್ ರೂ. 1-15-0. ಪುಷ್ಪರಾಜ ಹೇರಾಯಿಲ್ ಬುಡ್ಡಿ 1 ಕ್ಕೆ 0-8-0 [252 2]

ವಿಳಾಸ:—ಏಕಾಂಬರಂ ಕಂಪೆನಿ, ಸೆಕೆಂಡ್ ಲೈನ್ ಬೀದಿ, ಮದರಾಸ್

THE PLACE FOR HASSAN CAPS IS HASSAN.

ನಿಮ್ಮ ತಲೆಯು ಮೋಳಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3.50

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು? ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ.

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇರಾದದು. ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು.

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು. (೨) ಟೋಪಿಗಳನ್ನು ಶುದ್ಧವಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ. ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ.

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ. ಅಗ್ಗವಾದವೂ ಚನ್ನಾಗಿಲ್ಲದವೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ; ೧ ರೂ ೬ ಆ,

ಚುಕ್ಕೆಯುಳ್ಳ ಟೋಪಿಗಳು ರೂ ೧–೮; ರೂ ೧–೧೨.

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ.; ೧ ರೂ. ೮ ಆ., ೧ ರೂ. ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ., ೧ ರೂ ೬ ಆ.

"In addition to cap making we are giving special attention to knitting stockings. All our stockings, for adults and children, are hand-made. Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,
ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply:—

MANAGER, CAP WORKS,
GIRLS' INDUSTRIAL SCHOOL, HASSAN.

CHAMBERLAIN'S PAIN BALM.



ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವು.

1-50

ಬೆನ್ನೆಲುಬಿನ ನೋವು, ಪಕ್ಕೆಗಳಲ್ಲಿ ಆಗುವ ನೋವು, ಖಂಡಗಳಲ್ಲಿ ಹುಟ್ಟುವ ನೋವು, ತಲೆನೋವು, ಜಜ್ಜಾದ ಕಡೆಗಳ ನೋವು, ವಾಯುನೋವು—ಇವುಗಳನ್ನೆಲ್ಲಾ ಸಂಪೂರ್ಣವಾಗಿ ವಾಸಿಮಾಡುವಂಥಾ ಔಷಧ

ವಾಯುನೋವೆಂದರೇನು?

ಕೀಲುಗಳಲ್ಲೂ ಮಣಿಕಟ್ಟುಗಳಲ್ಲೂ ಗಾಯವಾಗುವುದು, ಊದಿಕೊಳ್ಳುವುದು, ಕಠಿಣವಾಗಿ ಸೆಳೆಯುವ ಬಾಧೆ, ಖಂಡಗಳಲ್ಲಿ ಇರಿಯುವುದು, ವಿಶ್ರಾಂತಿ ಕೊಡದೆ ಇರುವುದು, ನಿದ್ದೆ ಹತ್ತದೆ ಇರುವುದು—ಇವೇ. ಇವೆಲ್ಲಾ ನಿಮಗೆ ಯಾವಾಗ ಉಂಟಾಗುವುದೋ ಆಗ್ಗೆ ನಿಮಗೆ ವಾಯುರೋಗ ಬಂದಿದೆ ಎಂದು ತಿಳಿಯತಕ್ಕದ್ದು.

ಆಗ ಚೇಂಬರ್ಲಿನ್ ಯವರು ಮಾಡಿದ ನೋವುಹರ ಔಷಧವನ್ನು ಉಪಯೋಗಿಸಿ.

ಮೊದಲನೇ ಸಲ ಇದನ್ನು ಹಾಕಿ ಉಜ್ಜಿದ ಕೂಡಲೆ ಹಿತಕರವಾದ ಒಂದು ತರಹಾ ಕಾವು ಮೂಳೆಯೊಳಕ್ಕೆ ವ್ಯಾಪಿಸುತ್ತದೆ. ಒಡನೆಯೇ ನೋವೆಲ್ಲಾ ಸಂಪೂರ್ಣವಾಗಿ ಪರಿಹರಿಸಲ್ಪಡುತ್ತದೆ. ಮನಸ್ಸಿಗೆ ಉಲ್ಲಾಸವಾಗುತ್ತದೆ. ಅದನ್ನೇ ಆಗಿಂದಾಗ್ಗೆ ಹಾಕಿ ಉಜ್ಜುತ್ತಾ ಬಂದರೆ ಈ ವಾಯುವಿನ ಹುಟ್ಟನ್ನೇ ಕಿತ್ತುಹಾಕಿಬಿಡುವುದು.

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ,

ಕೈಯಿಂದ ಮುಟ್ಟಿದ್ದೇನೂ ಅಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು. ಸಣ್ಣ ಸೀಸೆಗೆ ೧ ರೂಪಾಯಿ. ದೊಡ್ಡ ಸೀಸೆಗೆ ೨ ರೂಪಾಯಿ.

ಡೋಂಗರೆ

ಇವರ ಬಾಲಾಮೃತ

[150-21]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ. ಒಂದು ಬಾಟ್ಲಿಗೆ ೧೦ ಆಣೆ. ಟಪಾಲ್ ಖರ್ಚು ೪ ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೋ, ಪಾರ್ಕ್ ಟವರ್, ಮದರಾಸು ಇವರಲ್ಲೂ ದೊರೆಯುವುದು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಶ್ರೇಷ್ಠ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಸೂತಕಶೂಲೆ, ಮಕ್ಕಳ ಎಳವು, ಜ್ವರ, ನಟ್ಟುಜ್ವರ, ಕೈಸೆಳವುಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವವಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ. [179-15]

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2 4-0 ಮಾತ್ರ. 5 ವರುಷಗಳ ಗ್ಯಾರೆಂಟಿ.

ಟಪಾಲು ಖರ್ಚು ಪ್ರತ್ಯೇಕ. 1 ಕ್ಕೆ 4 ಆಣೆ.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರು ಮಾಡಲ್ಪಟ್ಟಿದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು. ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ಬಿಕರಿಯಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ ಕೂಡ್ಲೆ ಬರೆದು ತರಿಸಿಕೊಳ್ಳಿ.

ವಿಳಾಸ:—ಸುಪೀರಿಯರ್ ವಾಚ್ ಕಂಪೆನಿ,
[129-34] ಪೋಸ್ಟ್ ಬಾಕ್ಸ್, ನಂ 167, ಮದರಾಸು.

ಮುಖ್ಯವಾಗಿ ಗಮನಿಸಿ ಓದಿರಿ.

೧. ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.



ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೇಲಿಸ್ ಲಿವರ್ ಚಿಕ್ಕ ಸೈಜು ಕಂಪೆನ್‌ಸೇಟೆಡ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ. 5-0-0. ಇದನ್ನು ಸೆಪ್ಟಂಬರ್ ಆಕ್ಟೋಬರ್‌ಗಳಾಗಿ ತರಿಸಿಕೊಳ್ಳುವವರಿಗೆ 10 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ.

ವಿಳಾಸ:—ಧನಲಕ್ಷ್ಮಿ ಅಂಡ್ ಕಂಪೆನಿ,
[129-24] ಸಾಹುಕಾರ್ ಪೇಟೆ ಪೋಸ್ಟು, ಮದರಾಸು.

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್–ಅಜ್ಮೀರ್ ಬ್ರಾಂಚಾಫೀಸ್–ಬೆಂಗಳೂರು ಸಿಟಿ.

ಮೇಲ್ಕಂಡ ವಿಮೇ ಸಂಘದ ಆಡಳಿತಗಳು 1913 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಶಾಸನಕ್ಕೆ ಒಳಪಟ್ಟಿರುವುದರಿಂದಲೂ, ಈ ಕಾನೂನಿನನುಸಾರವಾಗಿ ಭದ್ರತೆಯ ಠೇವಣಾತಿ ಮೊಬಲಗು ಸಹಾ ಇಂಡಿಯಾ ಸರಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ವಾಪತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ. ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಹಿಸಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು.

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[129-28] ಎಸ್ ಕಬ್ಬೂರ್, ಬ್ರಾಂಚ್ ಸೆಕ್ರೆಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ.

ಶಿಕಾರಿಪುರ, ಶಿರಾಳಕೊಪ್ಪ ಪ್ರಾಂತ್ಯಗಳಲ್ಲಿ ವೃತ್ತಾಂತ ಪತ್ರಿಕೆಗಳ ವಿಲೇವಾರಿ ಪ್ರಕಟಣೆ.

ಶಿಕಾರಿಪುರ, ಶಿರಾಳಕೊಪ್ಪ ತಾಲ್ಲೋಕ್ ಹೋಬಳಿ ಗ್ರಾಮಗಳ ಪ್ರಜೆಗಳು ಈಗಿನ ಪ್ರಕೃತಕಾಲದ ನಾಗರಿಕತೆಯನ್ನು ಅನುಸರಿಸಿ ವರ್ತಮಾನ ಪತ್ರಿಕೆಗಳನ್ನು ಓದಲು ಅಪೇಕ್ಷಿಸುವವರಾಗಿರುವದರಿಂದ ನಾವು ಇಂಥಾವರುಗಳಿಗೆ ಟಪಾಲು ಖರ್ಚು ಬೀಳದಂತೆಯೂ, ಪತ್ರಿಕೆಗಳು ಸಕಾಲಕ್ಕೆ ಕ್ರಮವಾಗಿ ಸಿಕ್ಕುವಂತೆಯೂ ಅನುಕೂಲಪಡಿಸಿರುತ್ತೇವೆ. ಹ್ಯಾಗೆಂದರೆ—(1) ಶಿಕಾರಿಪುರ—ಪ್ರತಿ ಶನಿವಾರ ಸಂತೆಯ ದಿವಸ ಅಲ್ಲಿ ನವೆಸ್ಲಿಯನ್ ಮಿಷನ್ ಗರಲ್ಸ್ ಸ್ಕೂಲಿನಲ್ಲಿ "ವೃತ್ತಾಂತ ಪತ್ರಿಕೆ"ಗಳು ಮಾರಲ್ಪಡುವವು. ಜನರು ಸಂತೆಗೆ ಹೋದಾಗ್ಗೆ ಬಹು ಸುಲಭವಾಗಿ ಪತ್ರಿಕೆಗಳನ್ನು ಪಡೆಯಬಹುದು. (2) ಶಿರಾಳಕೊಪ್ಪ—ಪ್ರತಿ ಭಾನುವಾರವೂ (ಸಂತೆಯ ದಿನ) ಶಿರಾಳಕೊಪ್ಪದ ಟವನ್ ಪಟೇಲರಾಗಿರುವ ಮ|| ರಾ|| ಗುರುಶಾಂತಪ್ಪಯ್ಯನವರ ಮೂಲಕ ಪತ್ರಿಕೆಗಳನ್ನು ಸುಲಭವಾಗಿ ಹೊಂದಬಹುದು.

ವೈ. ಅಬ್ರಹಾಂ, ಏಜಂಟ್, ಶಿಕಾರಿಪುರ.

1914ನೇ ವರ್ಷದ ಕೆಲೆಂಡರು 1914.

ರಮಣೀಯಕರವಾದ ಸ್ತ್ರೀಯ ಸಕ್ಷೆಯುಳ್ಳದು.

ಇಂಥಾ ಸುಂದರವಾದ ಕೆಲೆಂಡರು ಎಲ್ಲೆಲ್ಲಿಯೂ ದೊರಕಲಾರದು. ಒಂದರ ಕಿಮ್ಮತು 0–4–0 6 ಕ್ಕೆ 1–0–0 12 ಕ್ಕೆ 1–10–0. ಪೋಸ್ಟು ಖರ್ಚು ಮಾಫಿ ಜನವರಿ ಆಖೈರು ವರೆಗೆ

ಅಮೃತಾಂಜನ್.

ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಡುತ್ತವೆ ಎಲ್ಲಾ ತರದ ನೋವುಗಳ ಮೇಲ ದಿವ್ಯಾಮೃತ. ಬಾಟ್ಲಿ ಒಂದಕ್ಕೆ 0–8–0, ಡಜನ್ 1 ಕ್ಕೆ 5–1–0 ಟಪಾಲ್ ಖರ್ಚು ಪ್ರತ್ಯೇಕ [12–15]

ವಿಳಾಸ —ಅಮೃತಾಂಜನ ಡಿಪೋ, ಪೋರ್ಟ್, ಬೊಂಬಾಯಿ.

೧೯೧೪ನೇ ಇಸವಿಯ ಪಾಕೆಟ್ ಡೈರಿ



[127 26]

ಇದರಂತೆ 6 ನಮೂನೆಯ ಡೈರಿಗಳು ಬಹು ಸುಂದರವಾಗಿರುವಂತೆ ನುಣುಪಾದ ದಪ್ಪ ಕಾಗದದಲ್ಲಿ ಮುದ್ರಿಸಿ, ಪ್ರತಿ ಪುಟಕ್ಕೂ ರೂಲು ಹಾಕಿ ಬಹಳ ಸೊಗಸಾದ ಸೀಮೆ (ಕ್ಯಾಲಿಕೊ) ಬಟ್ಟೆಯಿಂದ, ವಿಲಾಯಿತಿ ಯಂತ್ರಗಳಲ್ಲಿ ಬೈಂಡು ಮಾಡಿ ಮೇಲುಗಡೆಯಲ್ಲಿ ಆರ್ನಮೆಂಟಲ್ ಅಕ್ಷರಗಳನ್ನು ಬಿಡಿಸಿದೆ

ಇವು ವರ್ತಕರು, ಲಾಯರುಗಳು, ಕಂಟ್ರಾಕ್ಟರರು, ಸರ್ಕಾರಿ ಉದ್ಯೋಗಸ್ಥರು, ಹುದ್ದೇದಾರರು, ಜಮೀನ್ ದಾರರು, ಸ್ಕೂಲ್ ಕಾಲೇಜು ವಿದ್ಯಾರ್ಥಿಗಳು, ಪೋಲೀಸ್ ಇಲಾಖೆಯವರು ಮೊದಲಾದ ಸಮಸ್ತ ಜನರಿಗೂ ಉಪಯೋಗವಾಗಿರುವ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಂಡಿವೆ

ಎ ನಂ|| ಪೆನ್ಸಿಲ್ ಇದಕ್ಕೆ ಚಿಕ್ಕ ಡೈರಿ 1 ಕ್ಕೆ 3 ಆಣೆ — ಸಿ ನಂ|| ಪೆನ್ಸಿಲ್ ಇದಕ್ಕೆ ದೊಡ್ಡ ಡೈರಿ 1ಕ್ಕೆ 6 ಆಣೆ

ಬಿ ನಂ|| ಪೆನ್ಸಿಲ್ ಇಟ್ಟಿರುವ ಚಿಕ್ಕ ಫ್ಲಾಪು ಡೈರಿ 1 ಕ್ಕೆ 6 ಆಣೆ — ಡಿ ನಂ|| ಪೆನ್ಸಿಲ್ ಇಟ್ಟಿರುವ ದೊಡ್ಡ ಫ್ಲಾಪು ಡೈರಿ 1 ಕ್ಕೆ 8 ಆಣೆ.

ಸರ್ಕಾರದಲ್ಲಿ ರಿಜಿಸ್ಟರಾಗಿ ಪ್ರಖ್ಯಾತಿಹೊಂದಿರುವ "ಜನಿವಾ ಡೈರಿ"

ಈ ಡೈರಿಯು ಮೊಲ್ಕಂಡ ಡೈರಿಗಳಿಗಿಂತ ಉತ್ತಮ, ದಪ್ಪ ಕಾಗದ, ಹಸರ್ ಬೈಂಡು

"ಜನಿವಾ" ನಂ|| 1 ಚಿಕ್ಕ ಡೈರಿ 1 ಕ್ಕೆ 4 ಆಣೆ | "ಜನಿವಾ" ನಂ 2 ಚಿಕ್ಕ ಫ್ಲಾಪು ಡೈರಿ 1 ಕ್ಕೆ 6 ಆಣೆ

12 ಪ್ರತಿಗಳು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಉಚಿತವಾಗಿ ಕೊಡಲ್ಪಡುವುದು

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪನಿ, ಬುಕ್ಕು ಸಪ್ಲೈಯರ್ಸ್ ಬೆಂಗಳೂರು ಸಿಟಿ

MELLIN'S FOOD

ಮಕ್ಕಳಿಗೂ ರೋಗಿಷ್ಟರಿಗೂ

[256-2]

ಮೆಲ್ಲಿನ್ಸ್ ಆಹಾರವ

ಕೈ ಸೋಕದೆ ತಯಾರಾದದ್ದು ಸಸ್ಯಾಹಾರ

ಈಗ ಸಿದ್ಧವಾಗಿದ

1914 ನೇ ವರುಷದ ಮೆಲ್ಲಿನ್ಸ್ ಕ್ಯಾಲೆಂಡರು

ಎರಡು ಆಣೆ ಖಾವತಿಮಾಡಿದರೆ ಅಥವಾ ಕಳುಹಿಸಿಕೊಟ್ಟರೆ ಈ ಒಂದು ಕ್ಯಾಲೆಂಡರನ್ನು ಕೊಡುವೆವು, ಅಥವಾ ಪೋಸ್ಟಿನಲ್ಲಿ ಕಳುಹಿಸುವೆವು

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್

ಮಕ್ಕಳ ತಾಯಿಗೆ— ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ —ಅಂಚೆ ಖರ್ಚಿಗೆ ಎರಡು ಆಣೆ ಕಳುಹಿಸುವವರಿಗೆ ಈ ಪುಸ್ತಕವನ್ನು ಕಳುಹಿಸಿಕೊಡುತ್ತೇವೆ

ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No III OF 1895)

CAUTION:—Before you go in for a Provident Life or Marriage Policy, please ask for a copy of our Company's prospectus, which will explain to you the mode of the working of the present day provident companies in India, and enables you to select a good institution, where your hard-earned money will be safe.

Absolute Security, Attractive Schemes, Soundest Principles

Wanted Chief Agents and agents throughout India on Commission and Salary For prospectuses, etc, please apply to

Mr. M. L. NAGANNAH,
Managing Agent, MYSORE.

A NOVELTY OF THE TWENTIETH CENTURY!

THE MYSORE GOVERNMENT SECURITY

MUTUAL PROPERTY INVESTMENT COMPANY, LTD.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No III OF 1895.)

BANKING:—Every sort of banking business transacted The company's shares are most valuable and are within the reach of all

Land and house purchase and investment policies are a speciality of the company, by which the company advances loans on the security of immovable properties to purchase houses and lands, or to liquidate prior debts, and recovers the same by easy monthly instalments.

WANTED

Four local directors for each and every taluk of the Mysore Province on liberal terms to represent the company. Only men of position and influence need apply. For prospectuses, etc, please apply to

Mr. M. L. NAGANNAH,
Managing Agent, MYSORE.

[161-19]

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

21—11—1913 ರಿಂದ 28—11—1913 ರ ವರೆಗೆ

ಸ್ಥಳ	ಪ್ಲೇಗ್ ತಗಲಿದ್ದು	ಪ್ಲೇಗ್ ಸತ್ತದ್ದು	ಕಾಲರಾ ತಗಲಿದ್ದು	ಕಾಲರಾ ಸತ್ತದ್ದು
ಬೆಂಗಳೂರು ಸಿಟಿ	1	0	0	0
ಮೈಸೂರು ,,	3	2	0	0
ಬೆಂಗಳೂರು ಡಿಸ್ಟ್ರಿಕ್ಟ್	26	21	0	0
ಮೈಸೂರು ,,	60	50	0	0
ಕೋಲಾರ್ ,,	18	15	2	1
ಕೋಲಾರ್ ಚಿನ್ನದ ಗಣಿಗಳು	8	3	0	0
ತುಂಕೂರು ಡಿಸ್ಟ್ರಿಕ್ಟ್	7	2	0	0
ಹಾಸನ ,,	1	2	0	0
ಚಿತ್ರದುರ್ಗ ,,	0	0	21	7
ಕಡೂರ್ ,,	38	23	0	0
ಶಿವಮೊಗ್ಗ ,,	27	19	6	5
ಜುಮ್ಲಾ	192	137	29	13

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ಹೇಮಂತಋತೌ ಮಾರ್ಗಶಿರ ಶುದ್ಧ ಚತುರ್ದಶಿ ಶುಕ್ರವಾರದಿಂದ ಮಾರ್ಗಶಿರ ಬಹುಳ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ-

1913 ನೇ ಡಿಸೆಂಬರ್

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಶ್ಚಿಕ ಧನಸ್ಸು ಶೇಖ
12	ಶುಕ್ರ	ಚತುರ್ದಶಿ	33-19	ಕೃತ್ತಿಕೆ	9 16	27
13	ಶನಿ †	ಪೌರ್ಣಮಿ	34 53	ರೋಹಿಣಿ	11 8	28
14	ಭಾನು	ಪಾಡಮಿ	34 35	ಮೃಗಶಿರ	12-15	29
15	ಸೋಮ §	ಬಿದಿಗೆ	33 0	ಆರಿದ್ರಾ	13 7	1
16	ಮಂಗಳ *	ತದಿಗೆ	31-37	ಪುನರ್ವಸು	12-15	2
17	ಬುಧ ,,	ಚೌತಿ	27 14	ಪುಷ್ಯ	10 27	3
18	ಗುರು ‡	ಪಂಚಮಿ	23-1	ಆಶ್ಲೇಷ	7-56	4

ಮಳೆ ನಕ್ಷತ್ರ—ಜ್ಯೇಷ್ಠ 1 ನೇ ಪಾದ † ವಿಷ್ಣುದೀಪ, ದತ್ತಾತ್ರೇಯ ಜಯಂತಿ, ಅಮೃತಸಿದ್ಧಿಯೋಗ § ಪರಶುರಾಮಜಯಂತಿ, ಸದಾಶಿವಪ್ರದೋಷ, ಮಳೆ ನಕ್ಷತ್ರ—ಮೂಲ 1 ನೇ ಪಾದ * ನಾತಕಾಭಾವ, ಸಂಕಟಹರಚತುರ್ಥಿ, ‚ ಚತುರ್ಥೀ ತಿಥಿ ‡ ತಿಥಿಕ್ಷಯಂ, ಮಾರ್ಗಶಿರಲಕ್ಷ್ಮೀ ವ್ರತ

ಪೇಟೇ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ	ರೂ ೧೫-೦-೦	೧೬ ೦-೦
ಕೆಂಬೂತಿ ಅಕ್ಕಿ ಅವಲ್	೧೫ ೭ ೦	೧೭-೮-೦
ಜಾಪ್ರಾಣಿ ಅಕ್ಕಿ	೧೫ ೦-೦	೧೬ ೮ ೦
ಸಣ್ಣಕ್ಕಿ ಅವಲ್	೨೭-೦ ೦	೧೭-೮ ೦
,, ದುಯಂ	೧೬-೦-೦	೧೬ ೧೨ ೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೨೬-೦-೦	೧೬ ೪-೦
,, ದುಯಂ ,,	೧೪-೦-೦	೧೪-೦ ೦
ಹೈಕ ರಾಗಿ ಪಲ್ಲಾ ೧ಕ್ಕೆ	೭-೧೨-೦	೫-೧೦-೦
ಸಾಧ್ರಾಗಿ ,,	೬-೮-೦	೪-೧೨-೦
ಜೋಳ ,,	೭-೪-೦	೭-೪-೦
ಹಲಸಂದೆ ಪಲ್ಲಾ ೧ಕ್ಕೆ	೨೩-೪-೦	೧೪-೦-೦
ಬೇಳೆ ಅವರೆ ,,	೧೩ ೦ ೦	೧೨-೦-೦
ಹೆಸರು ,,	೨೩-೪-೦	೧೪-೦-೦
ಉದ್ದು ,,	೧೪-೦-೦	೧೬ ೮-೦
ಕಡಲೆ ,,	೧೪-೦-೦	೧೩-೦-೦
ಎಳ್ಳು ಸೇರು ೧೨೭ಕ್ಕೆ	೨೧-೮-೦	೨೪ ೦-೦
ಹುರುಳಿ ಪಲ್ಲಾ ೧ಕ್ಕೆ	೭-೧೨-೦	೭-೧೦-೦
ಹರಳು ೧೨೭ ಸೇರಿಗೆ	೧೨-೮-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೨-೪-೦	೩-೬-೦
ಮೆಣಸಿನಕಾಯಿ ,,	೩-೪-೦	೩-೪-೦
,, ದುಯಂ	೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫ ೦-೦	ಮಣ ೬-೪-೦
ಒಳ್ಳೆಣ್ಣೆ ಮಣ ೧ಕ್ಕೆ	೬-೨-೦	೬-೮-೦
ಹರಳೆಣ್ಣೆ ,, ,,	೫-೨-೦	೬-೦-೦
ಕಡಲೇಕಾಯಿ ಯೆಣ್ಣೆ	೫-೦-೦	೬-೪ ೦
ಕೊಬ್ಬರಿ ಪಲ್ಲಾ ೧ಕ್ಕೆ	೫-೦-೦	೬-೪-೦
ಉಪ್ಪು ,, ,,	೬-೮-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೨-೮-೦	೧-೪-೦
ತುಪ್ಪ—ಧಾರಾಪುರದ್ದು ಮಣ ೧ಕ್ಕೆ	೧೭-೮-೦	೨೨-೮-೦
,, ಬೆಣ್ಣೆ ಕಾಸಿದ್ದು ,, ,,	೧೯-೧೨-೦	
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೧೨-೦	೫ ೦-೦
ತೆಂಗಿನಕಾಯಿ ೧೦೦ಕ್ಕೆ	೬-೪-೦	೬-೪-೦
ಅರಲೇಕಾಯಿ ಮಣ ೧ಕ್ಕೆ	೧-೦-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೧-೧೨-೦	೧-೮-೦
ಚರ್ಮ (ಪೌಂಡ್) ಕೆಂಪು	೧೫-೮-೦	೧೫-೮-೦
,, ,, ಹಸಿರು	೧೫ ೧೪-೬	೧೫-೧೪-೬
,, ,, ಗಟ್ಟಿ ಕೋಲು ೧ಕ್ಕೆ	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೋಲ ೧೦೦ಕ್ಕೆ	೮೧-೦-೦	೮೧-೩-೦

Printed and Published by the Rev. H Gulliford, Proprietor and Manager, Wesleyan Mission Press, Mysore. 11/12/1913.

REGISTERED
M 20

ವೃತ್ತಾಂತ ಪತ್ರಿಕೆ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು

ಕ್ರಯ ೧ ದುಡ್ಡು. ಕ್ರಯ ೧ ದುಡ್ಡು.

ಸಂಪುಟ ೨೨ ಮೈಸೂರು—ಸನ್ ೧೯೧೩ ನೇ ಇಸವಿ ಡಿಸೆಂಬರ್ ತಾರೀಖು ೧೮ ನೇ ಗುರುವಾರ. ಸಂಚಿಕೆ ೫೧

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು ರೂ 4,21,00 000

ಕಂಪನಿಯಿಂದ ಪಾವತಿ ಆಗಿರುವದು „ 3,50 00 000

ಸಂಪೂರ್ಣವಾದ ಖಾತರಿಯುಳ್ಳದ್ದು, ದಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವನ್ನು ಕಳುಹಿಸುತ್ತಾರೆ —ಮಿ ಎಂ ಎಸ್ ಗಿರಿ ರಾವ್, ಚೀಫ್ ಏಜೆಂಟ್, ಬೆಂಗಳೂರು ಮ|| ಎ ಎಸ್ ಸಂಜಪ್ಪನವರು ಅಥವಾ ಮ|| ವೆಂಕಟಪತಯ್ಯನವರು, ಕಂಪನಿ ಏಜಂಟರು, ಮೈಸೂರು ಅಥವಾ

[194 12] ಬ್ರಾಂಚ್ ಸಕ್ರೆಟರಿ, ಮದರಾಸ್

ಬಿ. ವಿ. ಪಂಡಿತರ ಶ್ರೀಕರ ಕಸ್ತೂರಿಮಾತ್ರೆ.

60 ಮಾತ್ರೆಯುಳ್ಳ ಸೀಸೆಗೆ 4 ಆ, 5 ಸೀಸೆಗಳಿಗೆ 1 ಇನಾಂ

ಈ ಮಾತ್ರೆಗಳ ಬಣ್ಣವನ್ನು ನೋಡಿ ಇವರ ಗುಣವನ್ನು ಊಹಿಸಲಾಗದು ಇವು ದೇಶದ ಕಸ್ತೂರಿಯಿಂದಲೇ ಶಾಸ್ತ್ರೋಕ್ತವಾಗಿ ತಯಾರಾದಲ್ಲದೆ ಮತ್ತು ಈ ಶ್ರೀಕರ ಕಸ್ತೂರಿ ಮಾತ್ರೆಗಳು ಸುವಾಸನೆಯಾಗಿರುವುದು ಮಾತ್ರವಲ್ಲದೆ ಹಾಲಿನೊಡನೆ ಅಥವಾ ಹಾಗೆಯೇ ಸೇವಿಸಿದರೆ ಎಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸುವುದು ಮಕ್ಕಳಿಗೆ ಉಂಟಾಗುವ ಅಜೀರ್ಣ ಭೇದಿ, ಕೆಮ್ಮು ಗೂರಲು ಹೊಟ್ಟೆಯುಬ್ಬರ ಈ ರೋಗಗಳನ್ನು ಸಮಾಪದಲ್ಲಿ ವೈದ್ಯನಿದ್ದಂತೆ ತಕ್ಷಣ ಗುಣಪಡಿಸುವುದು ಪ್ರಯಾಣಿಕರಿಗೂ ಸೋಕು ಗ್ರಾಮಗಳಲ್ಲಿರುವವರಿಗೂ ಮನೆ ಮಾಡಿಸಲ್ಪಡುವವರಿಗೂ ಇದರ ತೆ ಮತ್ತಾವ ಔಷಧವನ್ನು ಕಾಪಾಡಲಾರದು [25-15]

ವಿಷಮಜ್ವರಗಳು ನೆಗಡಿ ಕೆಮ್ಮು ತಲೆನೋವು ಅಗ್ನಿಮಾಂದ್ಯ ಶೀತವಾಯು ಕೈಕಾಲು ನೋವು ಮಲಬದ್ಧ ಅರೋಚಕ ನರಗಳ ದೌರ್ಬಲ್ಯ—ಈ ರೋಗಗಳನ್ನು ಸುಲಭವಾಗಿ ಗುಣಪಡಿಸಿ ರಕ್ತವೃದ್ಧಿಯನ್ನುಂಟುಮಾಡುವದು ಸಾವಿರಾರು ಜನ ಪರೀಕ್ಷಿಸಿದ್ದಾರೆ ಟಪಾಲ್ ಖರ್ಚು 12 ಸೀಸೆ ವರೆಗೆ 1 ಆಣೆ

ಬಿಜಿನೆಸ್—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು

1906 ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಬಹಳ ಅಭಿವೃದ್ಧಿ ಸ್ಥಿತಿಯಲ್ಲಿರುವ ಮೈಸೂರು ಪಟ್ಟಣದ ಸರ್ಕಾರದ ಭರವಸೆಯುಳ್ಳ "ದಿ ಕೋಲಾರ್ ಜೀವ ವಿಮೆ ಕಂಪೆನಿ" ಲಿಮಿಟೆಡ್ ನಲ್ಲಿ ಮದುವೆ ಮತ್ತು ಜೀವ ವಿಮೆ ಬ್ರಾಂಚಿನ ಮೊದಲನೇ ತರಗತಿಯಲ್ಲಿ ಮಾಸೆಯಾನ ರೂ 1 8-0, ರೂ 100 ಗಳ ಮೇರೆ ಪಾಲಿಸಿಗೆ ಕೊಟ್ಟು ಚಂದಾದಾರರು ಕೊಡುವ ಹಣಕ್ಕೆ ಅಷ್ಟು ಹಣಕ್ಕೆ ಕಡಮೆಯಿಲ್ಲದೆ ಬೋನಸ್ ಕೊಡುವುದಕ್ಕೆ ಭರವಸೆಯುಳ್ಳ ನಿಮಿತ್ತ ನಂಬಿಕೆ ಮತ್ತು ಚಟುವಟಿಕೆಯುಳ್ಳ ಏಜೆಂಟರುಗಳು ಧಾರಾಳವಾದ ಕಮಿಷನ್ ವಿಚಾರದು ಮೇರೆ ಬೇಕಾಗಿದೆ ಮತ್ತು ಇದರಲ್ಲಿ ಪ್ರತಿ ವರ್ಷ ಮದುವೆ ಮತ್ತು ಜೀವ ವಿಮೆ ಬ್ರಾಂಚಿನಲ್ಲಿ ಲಕ್ಷಾಂತರ ರೂಪಾಯಿ ಹುಟ್ಟುತ್ತ ಹೆಚ್ಚು ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಒಂದಾಣೆ ಸ್ಟಾಂಪಿನೊಡನೆ ಕಾಗದ ಬರಿಯಿರಿ [213-4]

Hindustan Co-operative Insurance Society Limited,
Hindustan Buildings Calcutta

Author zed capital—One Crore Policies effect —over Rs 2,20 00,00 Subscribed capital—Rs 7,00 000 Funds exceed—Rs 20,50 000

Paid up Capital—over Rs 10,00,000

This famous Society s Premiums are the lowest and the assurance value therefore the highest Rules exceptionally advantageous and preferential Financial conditions based on sound principles Rs 2 00 000 deposited with the Government, as per new Insurance Act of 1912

Wanted Immediately

Active and influential District and Taluk Agents on liberal terms of commission or pay Bonus and rewards, a speciality This is the only business which requires no capital or higher education to earn a handsome amount monthly For further particulars and agency prospectus &c, apply with one anna stamp to

Messrs. Venkatachalam & Son,
Chief Agents,
166, Dodpeta, Mysore.

ಬ್ರಾಹ್ಮಣರ ಶ್ರೇಣಿಯಲ್ಲಿರುವ ಮನೆ.

ಮೈಸೂರು ಹಳ್ಳದಕೇರಿಯಲ್ಲಿ ನಾರ್ಮಲ್ ಸ್ಕೂಲಿಗೆ ಪಶ್ಚಿಮ ಭಾಗದಲ್ಲಿರುವ ಎರಡು ಅಂತಸ್ತಿನ ತಾರಸಿ ಮಹಡಿಮನೆ ಕ್ರಾಗದ ಸುತ್ತು ಇಟ್ಟಿಗೆ ಗಾರೆಯಿಂದ ಮಜಬೂತಾಗಿ ಕಟ್ಟಿರುವ ಕಟ್ಟಡವು ಖರೀದಿಗೆ ಕೊಡಲ್ಪಡುತ್ತ ಇಷ್ಟವುಳ್ಳವರು ಕೆಳಗಿನ ವಿಳಾಸದಾರರಿಗೆ ಬರೆದು ಬೆಲೆಯನ್ನು ತಿಳಿದು ತೆಗೆದುಕೊಳ್ಳಿರಿ

ಬಿ ರಾಮಯ್ಯ, ಕ್ಯಾಷ್ ಬಜಾರ್, ಬೆಂಗಳೂರು ಸಿಟಿ

ಶಬ್ದಾದರ್ಶದ ನೋಟ್ಸ್.

ನಕಲಿಗಳು, ಕದೆಗಳು ಬಹುಮಾನ ಸಿಕ್ಕುತ್ತೆ"

ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಬಹು ಉಪಯುಕ್ತವಾದ ಶಬ್ದಾದರ್ಶಕ್ಕೆ ಸುಲಭವಾದ ದಾರಿಯಾದ ಈ ನೋಟ್ಸಿನ ಬೆಲೆ 3 ಆ 1 ಪ್ರತಿ ಒಟ್ಟಿಗೆ ತರಿಸಿಕೊಂಡರೆ ಯೋಗಿದ್ವಾಪ್ರಕರಣವೆಂಬ ನಕಲಿ ಉಚಿತ 6 ಪ್ರತಿ ತರಿಸಿಕೊಂಡರೆ ಮಹಾರಣ್ಯಪ್ರಾದುರ್ಭಾವವೆಂಬ ನಕಲಿ ಉಚಿತ 8 ಪ್ರತಿ ತರಿಸಿಕೊಂಡರೆ ಚಂದ್ರಮತಿಯ ಬಿ ಕಥೆಯ ಪುಸ್ತಕ ಉಚಿತ ಇದಲ್ಲದೆ ನಮ್ಮಲ್ಲಿ ಇನ್ನೂ ಅನೇಕ ನಾಟಕ, ನಕಲಿ, ಇಂಗ್ಲಿಷಿನ ನಾವೆಲ್‌ಗಳು ಕ್ರಯಕ್ಕೆ ದೊರೆಯುತ್ತೆ

[211 1] ವಿಲಾಸ-ಚಂದ್ರಿಕಾ ಬುಕ್ ಸ್ಟಾಲ್ ಮೈಸೂರು

ಭತ್ತ ಕುಟ್ಟುವ ಯಂತ್ರಗಳು.

ಡಗ್ಲಸ್ ಮತ್ತು ಗ್ರಾಂಟ್ ಕಂಪನಿಯಲ್ಲಿ ತಯಾರಾಗುವ ಭತ್ತ ಕುಟ್ಟುವ ಯಂತ್ರಗಳೇ ಉತ್ತಮೋತ್ತಮವಾಗಿವೆ ಈ ಕಂಪನಿಗೆ 60 ವರುಷದ ಅನುಭವವುಂಟು ಅವರೇ ಪ್ರಪಂಚದ ಕಾರ್ಖಾನೆಗಳಲ್ಲಿ ಬಹಳ ಪ್ರಖ್ಯಾತಿಪಡೆದವರು ಅವರ ಯಂತ್ರಗಳು ಎಲ್ಲೆಲ್ಲೂ ಉಪಯೋಗದಲ್ಲಿವೆ

ಹೆಚ್ಚು ವಿಷಯ ತಿಳಿಯಬೇಕಾದವರು

ಡಗ್ಲಸ್ ಅಂಡ್ ಗ್ರಾಂಟ್, ಲಿಮಿಟೆಡ್, ತಂಜಾವೂರು ಎಂಬೀ ವಿಳಾಸಕ್ಕೆ ಬರೆದುಕೊಳ್ಳಿ.

ಅವರು ನಿಪುಣರಾದ ಕಾರಿಗಾರರನ್ನು ಕಳುಹಿಸುತ್ತಾರೆ ಎಲ್ಲಾ ತರದ ಮಿಲ್ಲು (ಯಂತ್ರ) ಗಳನ್ನೂ ಒದಗಿಸಬಲ್ಲರು [205 1]

Bangalore Christmas Fete and INDUSTRIAL EXHIBITION OF 1913

ಬೆಂಗಳೂರು ಕ್ರಿಸ್ತಮಸ್ ಫೀಟ್ ಅಂಡ್ ಇಂಡಸ್ಟ್ರಿಯಲ್ ಎಕ್ಸಿಬಿಷನ್ ೧೯೧೩.

[253 2]

ಇದೇ ಡಿಸೆಂಬರ್ ತಿಂಗಳು 26 ನೆಯ ತಾರೀಖಿನಿಂದ ನಡೆಯುವ ಪ್ರದರ್ಶನದಲ್ಲಿ ಕೈಗಾರಿಕೆ ಮತ್ತು ಇತರ ಸಾಮಾನುಗಳನ್ನು ಪ್ರದರ್ಶಿಸಲಿಚ್ಛಿಸುವವರು ಕೂಡಲೆ ಈ ಕೆಳಗೆ ನಮೂದಿಸಿರುವ ಯಾರಾದರೂ ಒಬ್ಬರಿಗೆ ಅವರವರಿಗೆ ಬೇಕಾಗುವ ಸ್ಥಳದ ವಿಚಾರದಲ್ಲೂ ಮತ್ತು ಇತರ ವಿಷಯಗಳಲ್ಲೂ ಬರೆದುಕೊಳ್ಳಬಹುದು ಸ್ಥಳಸಂಕೋಚವಿರುವದರಿಂದ ಜಾಗ್ರತೆಮಾಡಿದರೆ ಅನುಕೂಲವುಂಟು

ಬೆಂಗಳೂರು, 1 12 1913

ಬಿ ಕೆ ಗರುಡಾಚಾರ್, ಚಿಕ್ಕಪೇಟೆ, ಬೆಂಗಳೂರು ಸಿಟಿ
ಯಂ ಯೂನಸ್ ಸೇಟ್, ಇನ್ಫೆಂಟ್ರಿ ರೋಡ್, ಬೆಂಗಳೂರು
(ವೈಸ್ ಪ್ರೆಸಿಡೆಂಟರು, ಇಂಡಸ್ಟ್ರಿಯಲ್ ಇಲಾಖೆ)

ನಿಮ್ಮ ಹತ್ತಿರ ಹೂವಿನ ತೋಟವಿರಬೇಕೋ? ಹಾಗಾದರೆ

ಆಟೋ ಮೋಹಿನಿ

ಎಂಬ ಲೋಕಪ್ರಖ್ಯಾತವಾದ ಪರಿಮಳವನ್ನೇ ಕೊಂಡುಕೊಳ್ಳಿ ನಾಲ್ಕೇ ತೊಟ್ಟು ನಿಮ್ಮ ಉಡುವಸ್ತ್ರಕ್ಕೆ ಚಿಮುಕಿ ಕೊಂಡರೆ ನಾಲ್ಕು ದಿನ ಜಾಜಿ ಪರಿಮಳದ ಸುಗಂಧವಿದ್ದೀತು ಅದರ ಮನೋಹರ ವಾಸನೆಯನ್ನೂ ಪುಷ್ಪಶ್ರೇಷ್ಠತೆಯನ್ನೂ ಶಾಶ್ವತ ಸ್ವಭಾವವನ್ನೂ ಮೆಚ್ಚಿ ಬಹು ಸಂತೋಷದಿಂದ 1913 ನೇ ಮೈಸೂರು ದಸರಾ ಎಗ್ಸಿಬಿಷನ್ನಲ್ಲಿ ಅದಕ್ಕೆ ಭಂಗಾರದ ಮೆಡಲನ್ನು ಬಹುಮಾನ ಕೊಟ್ಟಿದಾರೆ ಆ ರೀತಿ ಈ ಸುವಾಸನೆಯು ಇಲ್ಲದೆ ಆರಿಹೋದದ್ದನ್ನು ರುಜುವಾತು ಮಾಡತಕ್ಕವರಿಗೆ ನಾಡದಲ್ಲಿ 100 ರೂಪಾಯಿ ಬಹುಮಾನ ಕೊಡುವೆವೆಂದು ಜಾಮೀನ್ ಕೊಡುತ್ತೇವೆ ಸಣ್ಣ ಸೀಸೆಯ ಪರಿಮಳವನ್ನು ತರಿಸಿ ಪರೀಕ್ಷೆಯಿಂದ ಇನಾಂ ಪಡೆಯಿರಿ

ಕ್ರಯ ಅರ್ಧ ಔನ್ಸ್ ಸೀಸೆಗೆ ರೂ 2 0 0
„ ಒಂದು ಡ್ರಾಮ್ „ „ 0 12 0

ಆಟೋ ಮೋಹಿನಿ ಪರಿಮಳವುಳ್ಳ ಕಾರ್ಡು 1 ಡಜನ್ ಗೆ 0 12 0

ಪ್ರೊಪ್ರೈಟರು—ದಿ ಓರಿಯಂಟಲ್ ಡ್ರಗ್ ಕೆಮಿಕಲ್ ಕಂಪನಿ,
ಏಜಂಟರು—ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
[251—3] 177, ಚೈನಾ ಬಜಾರ್ ರೋಡ್, ಮದರಾಸ್.

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ ಕೂದಲು ಸತ್ತುಹೋಗುತ್ತೆ ಆದಕಾರಣ ಸರ್ವೋತ್ತಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣ ಕೊಡುತ್ತೆ ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ ಕೂದಲು ಇದರಿಂದ ವಿಪುಲವಾಗಿ, ನಯವಾಗಿ ಚಕಚಕಿಸುವವು, ನಿಬಿಡವಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು ಕೂದಲಿಗೆ ಹೊಳಪುಕೊಡುತ್ತೆ. ನೆತ್ತಿ ಉರುಪೆಯನ್ನು ಶುದ್ಧ ಮಾಡುತ್ತೆ ಸುಂದರ ಹೊಳಪನ್ನು ಆಗಿಸುತ್ತೆ. ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ. ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0-4 0 ಬೇರೆ ತರಬೇಕು

3 ಸೀಸೆಗಳಿಗೆ ರೂ 2 10-0 ಅಂಚೆಯ ವೆಚ್ಚ 0 7-0

ನಮೂನೆಯು ಬೇಕೆಂದರೆ ಒಂದು ಆಣೆಯ ಚೀಟನ್ನು ಕಳುಹಿಸಿರಿ

ಮೈಸೂರು ಎಗ್ಸಿಬಿಷನ್ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಸಿಬಿಷನ್ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ ಮನ್ನಾರ್‌ಗುಡಿ ಮಿಷನ್ ಸೆಕ್ರೆಟರಿ ಮಿ|| ಡಿ ಸಾಲೊಮನ್‌ರವರು ಬರೆಯುವದು—"ದಯಮಾಡಿ ಆರು ಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ"

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಫಾಯತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವರು ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ

"ಕೆಪಿಟೋಲ್‌ಬಾಮ್"—ಮಳೆ ಮತ್ತು ಚಳಿಯ ಥಂಡೀ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಲ್‌ಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ ಕೈಕಾಲು ನೋಯುವುದು, ಸಂಧುವಾತ, ಮಸ್ತಕಶೂಲೆ, ಹೆಚ್ಚಾಗಿ ಮೆಹನತ್ತು ಪಟ್ಟದ್ದರಿಂದ ಕ್ಷೀಣವಾಗುವದು, ಸೊಂಟನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ ಬಾಟ್ಲಿ 1ಕ್ಕೆ ಕ್ರಯ 0 8 0 ಟಪಾಲು ಪ್ರತ್ಯೇಕ

ಒಡಮುನ್ಸ ಮಲೇರಿಯ ಪಿಲ್ಸ—ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆ ಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮುನ್ಸ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿವೆ ಮೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ ಇದು ದೇಹದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ ಥಟಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದು

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1 0-0 3 ಬಾಟ್ಲಿಗಳಿಗೆ ರೂ 2 8-0 ಟಿ ಪಿ ಖರ್ಚು ಪ್ರತ್ಯೇಕ.

ಮೇಲೆಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ — [8-49]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್‌ಜಿದ್, ಬೊಂಬಾಯಿ.
ಏಜಂಟ್, ಡಿ. ಕುಲಕರ್ಣಿ ಮಾರ್ಟ್, ಮಂಗಳೂರು

ಮೈಸೂರು ಸೀಮೆಯಲ್ಲಿ ಪ್ಲೇಗ್, ಕಾಲರಾ ಸ್ಥಿತಿ.

21—11—1913 ರಿಂದ 28—11—1913 ರ ವರೆಗೆ

ಸ್ಥಳ	ಪ್ಲೇಗ್		ಕಾಲರಾ	
	ತಗಲಿದ್ದು	ಸತ್ತದ್ದು.	ತಗಲಿದ್ದು.	ಸತ್ತದ್ದು
ಬೆಂಗಳೂರು ಪಟ್ಟಣ	1	0	0	0
ಮೈಸೂರು ,,	3	2	0	0
ಬೆಂಗಳೂರು ಡಿಸ್ಟ್ರಿಕ್ಟು	26	21	0	0
ಮೈಸೂರು ,,	60	50	0	0
ಕೋಲಾರ್ ,,	18	15	2	1
ಕೋಲಾರ್ ಚಿನ್ನದ ಗಣಿಗಳು	8	3	0	0
ತುಂಕೂರು ಡಿಸ್ಟ್ರಿಕ್ಟು	7	2	0	0
ಹಾಸನ ,,	1	2	0	0
ಚಿತ್ರದುರ್ಗ ,,	0	0	21	7
ಕಡೂರ್ ,,	38	23	0	0
ಶಿವಮೊಗ್ಗಾ ,,	27	19	6	5
ಜುಮ್ಲಾ .	192	137	29	13

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೆ ಹೇಮಂತಋತೌ ಮಾರ್ಗಶಿರ ಬಹುಳ ಷಷ್ಠಿ ಶುಕ್ರವಾರದಿಂದ ಮಾರ್ಗಶಿರ ಬಹುಳ ತ್ರಯೋದಶಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ.

1913 ನೇ ಡಿಸೆಂಬರ್.

ತಾ	ವಾರ	ತಿಥಿ.	ಘಳಿಗೆ	ನಕ್ಷತ್ರ.	ಘಳಿಗೆ	ಧನುಸ್ಸು ಶೇದ
19	ಶುಕ್ರ	ಷಷ್ಠಿ	16-51	ಮಘಾ	4-36	5
20	ಶನಿ †	ಸಪ್ತಮಿ	11 12	ಪುಬ್ಬಾ	0-48	6
21	ಭಾನು §	ಅಷ್ಟಮಿ	5-20	ಉತ್ತರೆ	54-8	7
22	ಸೋಮ	ದಶಮಿ	53 37	ಚಿತ್ತ	48-25	8
23	ಮಂಗಳ *	ಏಕಾದಶಿ	49-0	ಸ್ವಾತಿ	44-31	9
24	ಬುಧ ,,	ದ್ವಾದಶಿ	43 9	ವಿಶಾಖ	41 19	10
25	ಗುರು ‡	ತ್ರಯೋದಶಿ	39-5	ಅನೂರಾಧ	38-51	11

† ತಿಸ್ರೋಷ್ಟಕಾ, ಭೈರವಾಷ್ಟಮಿ. § ಅಮೃತಸಿದ್ಧಿಯೋಗ, ಮಳೆ ನಕ್ಷತ್ರ—ಮೂಲ 3 ನೇ ಪಾದ * ಮಕರಾಯಣಂ, ಸ್ಮಾರ್ತ ಶ್ರೀವೈಷ್ಣವ ಏಕಾದಶಿ ,, ಮಾಧ್ವ ಏಕಾದಶಿ, ಹರಿವಾಸರ. ‡ ಪ್ರದೋಷ, ಮಾರ್ಗಶಿರಲಕ್ಷ್ಮೀ ವ್ರತಂ, ಮಹಾರಾಜಕುಮಾರ್ ಚಲುವಾಜಮ್ಮಣ್ಣೀಯವರ ವರ್ಧಂತಿ, ಮಾಸಶಿವರಾತ್ರಿ, ಮಳೆ ನಕ್ಷತ್ರ—ಮೂಲ 4 ನೇ ಪಾದ

ಪೇಟೇ ಧಾರಣೆ.

ದಿನಸಿ.	ಮೈಸೂರು.	ಬೆಂಗಳೂರು
ಸಣ್ಣ ಅಕ್ಕಿ ಪಲ್ಲಾ ೧ಕ್ಕೆ ರೂ.	೧೫-೦-೦	೧೭-೦-೦
ಕೆಂಬೂತಿ ಅಕ್ಕಿ ಅವಲ್	೧೫-೮-೦	೧೭-೮-೦
ಜಾಪತ್ರಿಣಿ ಅಕ್ಕಿ	೧೪-೮-೦	೧೬-೮-೦
ಸಣ್ಣಕ್ಕಿ ಅವಲ್	೧೭ ೦-೦	೧೭ ೮-೦
,, ದುಯಂ	೧೬-೦-೦	೧೬ ೧೨-೦
ತೊಗರೀ ಬೇಳೆ ಅವಲ್ ಪಲ್ಲ ೧ಕ್ಕೆ	೨೬ ೦-೦	೧೬-೪-೦
,, ದುಯಂ ,,	೧೪-೦-೦	೧೪-೦-೦
ಹೈದ್ರ ರಾಗಿ ಪಲ್ಲಾ ೧ಕ್ಕೆ	೭-೬ ೦	೫ ೧೦-೦
ಹಾರ್ತಾಗಿ ,,	೬ ೮-೦	೪-೧೨-೦
ಜೋಳ ,,	೭-೦-೦	೭-೪-೦
ಹುಲಸಂದೆ ಪಲ್ಲಾ ೧ಕ್ಕೆ	೨೩ ೪-೦	೧೪-೦-೦
ಬೇಳೇ ಅವರೆ ,,	೧೨-೧೨ ೦	೧೨-೦-೦
ಹೆಸರು ,,	೨೩-೪ ೦	೧೪-೦ ೦
ಉದ್ದು ,,	೧೪-೦-೦	೧೬-೮-೦
ಕಡಲೆ ,,	೧೪-೦-೦	೧೩-೦-೦
ಎಳ್ಳು ಸೇರು ೧೨೭ಕ್ಕೆ	೨೧-೮-೦	೨೪-೦-೦
ಹುರುಳಿ ಪಲ್ಲಾ ೧ಕ್ಕೆ	೮-೬-೦	೭-೧೦-೦
ಹರಳು ೧೨೭ ಸೇರಿಗೆ	೧೨-೮-೦	೧೪-೦-೦
ಹಿಣೇಕಾಯಿ ಮಣ ೧ಕ್ಕೆ	೨ ೪-೦	೩-೬-೦
ಮೆಣಸಿನಕಾಯಿ ,,	೩-೪-೦	೩-೪-೦
,, ದುಯಂ	೩-೦-೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫-೦-೦	ಮಣ ೬-೪-೦
ಒಳ್ಳೆಣ್ಣೆ ಮಣ ೧ಕ್ಕೆ	೫ ೧೨-೦	೬-೮-೦
ಹರಳೆಣ್ಣೆ ,, ,,	೫-೨-೦	೬-೦-೦
ಕಡಲೇಕಾಯಿ ಎಣ್ಣೆ	೫-೦-೦	೭-೩-೦
ಕೊತ್ತುಂಬರಿ ಪಲ್ಲಾ ೧ಕ್ಕೆ	೫-೦-೦	೬-೪-೦
ಉಪ್ಪು ,, ,,	೬-೪-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೨-೮-೦	೧-೪-೦
ತುಪ್ಪ—ಧಾರಾಪುರದ್ದು ಮಣ ೧ಕ್ಕೆ	೧೭-೮-೦	೨೨-೮-೦
,, ಬೆಣ್ಣೆ ಕಾಸಿದ್ದು ,, ,,	೧೯-೧೨-೦	
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೧೨-೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೬-೪-೦	೬-೪-೦
ಅಡಕೇಕಾಯಿ ಮಣ ೧ಕ್ಕೆ	೧-೦-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೧ ೧೨-೦	೧-೮-೦
ಚಿನ್ನ (ಸಾ॰ರ) ತೊಲ	೧೫-೮-೦	೧೫-೮-೦
,, ,, ಪವನು	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦-೦	೮೧-೩-೦

ಹೊಸ ಮಾಸ ಪತ್ರಿಕೆ ! ದ್ವಿತೀಯ ವರ್ಷಾರಂಭ

ಭಾರತೀವಿಲಾಸ.

ಇದೊಂದು ಕನ್ನಡ ಮಾಸ ಪತ್ರಿಕೆ, ಪ್ರತಿಮಾಸದಲ್ಲಿಯೂ ಕ್ರಮವಾಗಿ ಪ್ರಚಾರವಾಗುವುದು. ಕಾದಂಬರಿಗಳೂ, ನಾಟಕಗಳೂ, ವಚನಗ್ರಂಥಗಳೂ ನೀತಿವಿದ್ಯಾವಿಷಯಕವಾದ ಉಪನ್ಯಾಸಗಳೂ ಬೇರೆಬೇರೆ ಪುಟಸಂಖ್ಯೆಯಿಂದ ಬೈಂಡ್ ಕಟ್ಟಿಸಿಕೊಳ್ಳಲು ಅನುಕೂಲವಾಗಿ ಮುದ್ರಿಸಲ್ಪಡುತ್ತವೆ ವಿದ್ಯಾರ್ಥಿಗಳಿಗೂ ಸ್ತ್ರೀಯರಿಗೂ ಅತ್ಯವಶ್ಯಕವಾದುದು ವಾರ್ಷಿಕ ಚಂದಾ 1 8-0, ಮಾದರಿ ಸಂಚಿಕೆ 2 ಆ.

[272-1] ವಿಳಾಸ—ಮ್ಯಾನೇಜರ್, ಭುವನೇಶ್ವರೀ ಪ್ರೆಸ್, ಮೈಸೂರು

English Papers with Text Summary, Special Papers, and Monthly Tests, etc. Subscription Rupees 2 (in advance). **Student's Spelling Book** As 4 (Postage Extra) **Postal Tution**—Monthly Fees English Rs. 2; Arithmetic Rs. 1, the rest As 6 (all in advance) *Apply to,*

[273-1] **M. N. SITARAMA RAO,**

Krishnaraja Mohalla, Mysore.

ಅಮೃತಸಾರದ ನ್ಯಾಷನಲ್ ಇನ್ಷುರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯ

ಇನ್ಷುರೆನ್ಸ್ ಪಾಲಿಸಿ ಹೋಲ್ಡರುಗಳಿಗೆ ನೋಟೀಸು.

ಯಾವ ಪಾಲಿಸಿ ಹೋಲ್ಡರುಗಳಾಗಲಿ ಮೊದಲು ನಮ್ಮ ಕಂಪನಿಯ ಚೀಫ್ ಏಜಂಟರಾಗಿದ್ದು ಈಚೆಗೆ ನಮ್ಮ ಕಂಪನಿಯ ನೌಕರಿಯಿಂದ ವಜಾಮಾಡಲ್ಪಟ್ಟಿರುವ ಮ|| ಎಂ ಎಲ್ ನಾಗಣ್ಣನವರಿಗೋ ಅಥವಾ ಅವರ ಸಬ್ ಏಜಂಟರುಗಳಿಗೋ ತಮ್ಮ ಬಾಬತು ಪಾಲಿಸಿಗಳ ಪ್ರೀಮಿಯಂಗಳಾಗಲಿ, ಇಲ್ಲವೇ ಅಡ್ವಾನ್ಸುಗಳಾಗಲಿ ಹಣಗಳನ್ನು ಪಾವತಿಮಾಡಿದ್ದು ಅಂಥಾ ಹಣಗಳಿಗೆ ಹೆಡ್ ಆಫೀಸಿನಿಂದ ಕ್ರಮವಾದ ಹಣಸಂದ ರಸೀತಿಗಳನ್ನು ಪಡೆಯದೆ ಇರುವ ಪಕ್ಷದಲ್ಲಿ ಅಂಥವರು ಮ|| ನಾಗಣ್ಣನವರಿಂದ ಅಥವಾ ಅವರ ಸಬ್ ಏಜಂಟರಿಂದ ಕೊಡಲ್ಪಟ್ಟಿರುವ ಷರಟ್ (ಹಂಗಾಮಿ) ರಸೀತಿಗಳನ್ನು ಸ್ವಲ್ಪವೂ ಸಾವಕಾಶಮಾಡದೆ ಕೂಡಲೇ ರೆಜಿಸ್ಟರ್ ಪೋಸ್ಟು ಕವರಿನಲ್ಲಿ ಕೆಳಗೆ ರುಜುಮಾಡಿರುವವರಿಗೆ ಕಳುಹಿಸಿ ಅವರ ಕೂಡ ಕಾಗದಪತ್ರಗಳನ್ನು ನಡಿಸಬೇಕು ಎಂಬದಾಗಿ ಈ ಮೂಲಕ ಪ್ರಾರ್ಥಿಸಲ್ಪಟ್ಟಿದೆ ಮತ್ತು

ನಮ್ಮ ಕಂಪನಿಗೆ ಇನ್ನು ಮುಂದೆ ಏಜಂಟರಲ್ಲದೆ ಇರುವಂಥಾ ಮ|| ಎಂ ಎಲ್ ನಾಗಣ್ಣನವರು ಅಮೃತಸಾರದ ನ್ಯಾಷನಲ್ ಇನ್ಷುರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯ ಪಾಲಿಸಿ ಹೋಲ್ಡರುಗಳಿಗೆ ಅಂಥಾ ಪಾಲಿಸಿಗಳನ್ನು ತಮ್ಮ ಸ್ವಂತ ಕಂಪನಿಗೆ ವರ್ಗಮಾಡಿಕೊಳ್ಳುವಂತೆ ಅಧಿಕಾರ ವಹಿಸಲ್ಪಟ್ಟಿರುವುದಾಗಿ ತಿಳಿಯಪಡಿಸುತ್ತಿದಾರೆಂದು ನನಗೆ ಗೊತ್ತಾಗಿದೆ. ಅವರು ಈ ರೀತಿ ಹೇಳಿ ತಿಳಿಸುವುದಕ್ಕೆ ಅವರಿಗೆ ನಮ್ಮ ಕಂಪನಿಯ ಯಾವ ಅನುಮತಿ ಅಥವಾ ಅಪ್ಪಣೆಯನ್ನು ಕೊಟ್ಟಿಲ್ಲವೆಂದು ನಿಮಗೆ ತಿಳಿಸುವೆನು, ಇದನ್ನು ತಿಳಿದು ನೀವು ಆಶ್ಚರ್ಯಪಡುವಿರಿ ಮ|| ಎಂ ಎಲ್ ನಾಗಣ್ಣನವರ ಹೇಳಿಕೆಯಂತೆ ಮತ್ತು ಅವರು ತಿಳುವಳಿಕೆ ಕೊಟ್ಟಂತೆ ನಂಬಿ ನಡೆಯತಕ್ಕ ನಮ್ಮ ಪಾಲಿಸಿ ಹೋಲ್ಡರುಗಳು ತಮ್ಮ ನಷ್ಟಗಳಿಗೆ ತಾವೇ ಗುರಿಯಾಗುವರು

ಈ ಸಂದರ್ಭದಲ್ಲಿ ಪಾಲಿಸಿ ಹೋಲ್ಡರುಗಳಿಗೂ, ಸಾಮಾನ್ಯವಾಗಿ ಎಲ್ಲಾ ಪಬ್ಲಿಕ್ ಜನಗಳಿಗೂ ನಾನು ತಿಳಿಯಪಡಿಸ ಬಹುದಾಗಿರುವ ಇನ್ನೊಂದು ಸಂಗತಿ ಏನೆಂದರೆ—ಮೈಸೂರು ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಮತ್ತು ಮ್ಯಾರಿಯೇಜ್ ಅಷೂರೆನ್ಸ್ ಕಂಪನಿಯ ಮ್ಯಾನೇಜಿಂಗ್ ಏಜಂಟರು ಪ್ರಕಟಮಾಡಿರುವ "ಮೈಸೂರು ಗವರ್ನ್ಮೆಂಟ್ ಸೆಕ್ಯೂರಿಟಿ" ಎಂಬ ಪದಗಳ ಅರ್ಥವು ಆ ಕಂಪನಿಯ ಕಕ್ಷಿಗಾರರ ಹಣಗಳಿಗೆ ಮೈಸೂರು ಗವರ್ನ್ಮೆಂಟಿನವರು ಜಾಮೀನ್ದಾರ (ಹೊಣೆಗಾರ) ರಾಗಿ ನಿಲ್ಲುತ್ತಾರೆಂದಲ್ಲ, ಆ ಕಂಪನಿಯಲ್ಲಿ ಖರ್ಚು ಮುಂತಾದವು ಕಳೆದು ಹಣಗಳೇನಾದರೂ ಉಳಿದರೆ ಅಂಥಾ ಉಳಿಕೆ ಹಣಗಳನ್ನು ಮೈಸೂರು ಗವರ್ನ್ಮೆಂಟ್ ಸೆಕ್ಯೂರಿಟಿಗಳಲ್ಲಿ ಡಿಪಾಜಿಟ್ಟು ಮಾಡಲಾಗುತ್ತದೆ ಎಂಬುವುದು ಬಹುಶಃ ಆ ಕಂಪನಿಯ ಅರ್ಥವೂ ಅಭಿಪ್ರಾಯವೂ ಆಗಿದೆ ಸಾಮಾನ್ಯವಾಗಿ ಎಲ್ಲಾ ಕಂಪನಿಗಳ ನಡವಳಿಕೆಯೂ ಇದೇ ರೀತಿಯಾಗಿರುವುದು.

ಪ್ರಾವಿಡೆಂಟ್ ಫಂಡಿನ ಪಾಲಿಸಿ ಹೋಲ್ಡರುಗಳಿಗೆ ನೋಟೀಸು.

ನಮ್ಮ ಕಂಪನಿಯ ಪ್ರಾವಿಡೆಂಟ್ ಫಂಡ್ ಬಾಬಿನ ಪಾಲಿಸಿ ಹೋಲ್ಡರುಗಳು ಮತ್ತೊಂದು ವಿಶೇಷ ಸಂಗತಿಯನ್ನು ತಿಳಿದು ಆಶ್ಚರ್ಯಪಡುವವರಾಗುತ್ತಾರೆ ಅದೇನೆಂದರೆ—ಮೈಸೂರು ಮತ್ತು ಕೊಡಗು ಸೀಮೆಗಳಲ್ಲಿ ನಮ್ಮ ಕಂಪನಿಯ ಚೀಫ್ ಏಜಂಟರಾಗಿದ್ದ ಮ|| ಎಂ ಎಲ್ ನಾಗಣ್ಣನವರು ರಚಿಸಿ ತಮ್ಮ ರುಜುವಿನ ಮೇಲೆ ಪಬ್ಲಿಕ್ ಜನರಿಗೆಲ್ಲಾ ಪ್ರಕಟಮಾಡಿ ತಿಳಿಸಿದ್ದ ಪ್ರೊಸ್ಪೆಕ್ಟಸಿನಲ್ಲಿ "ಮದುವೆ ಬಾಬಿನಲ್ಲಿ ವಿಮೆಮಾಡಿದವರಿಗೆ ಅವರು ಕೊಡತಕ್ಕ ಪ್ರೀಮಿಯಂಗಳ (ಕಂತು) ಮೊತ್ತಕ್ಕೆ ಎರಡರಷ್ಟಕ್ಕಿಂತ ಕಡಮೆಯಾಗದೇನೂ, 15 ರಷ್ಟಕ್ಕಿಂತ ಜಾಸ್ತಿಯಾಗದೇನೂ ಬೋನಸ್ ಹಣ ಕೊಡಲಾಗುತ್ತೆ" ಎಂಬದಾಗಿ ಬರೆದಿದೆ. ಅವರು ಈ ರೀತಿ ನಮೂದು ಮಾಡಲು ನಮ್ಮ ಕಂಪನಿಯವರು ಅವರಿಗೆ ಎಷ್ಟುಮಾತ್ರಕ್ಕೂ ಅಧಿಕಾರ ವಹಿಸಲಿಲ್ಲ, ಮತ್ತೂ ನಮ್ಮ ಕಂಪನಿಯವರು ಆ ಬರವಣಿಗೆಯನ್ನು ಸಮ್ಮತಿಸಲೂ ಇಲ್ಲ ನಮ್ಮ ಕಂಪನಿಯವರು ಪ್ರಕಟಿಸಿರುವ ಪ್ರಾಸ್ಪೆಕ್ಟಸಿನಲ್ಲಿ ಕಾಣಿಸಿರುವ ನಿಬಂಧನೆ ಏನೆಂದರೆ —"ಕಂಪನಿಯ ಫಂಡಿನಲ್ಲಿ ಅವಕಾಶ ದೊರಕಿ, ಸ್ಥಳದಲ್ಲಿ ನಂಬಿಕೆಗೆ ಅರ್ಹರಾದ ಏಜಂಟರು ಇರುವ ಪಕ್ಷದಲ್ಲಿ ಕಂತುಹಣಗಳ ಎರಡರಷ್ಟು ಹಣವನ್ನು ಡೈರೆಕ್ಟರುಗಳಿಂದ ಮದುವೆಯ ದಿನ ಬೋನಸ್ಸು ಅಡ್ವಾನ್ಸು ಕೊಡಲ್ಪಡುತ್ತದೆ ಹೀಗೆ ಕೊಡುವ ಅಡ್ವಾನ್ಸು ಸಂದರ್ಭಾನುಸಾರವಾದದ್ದೇ ಹೊರತು ಕೊಟ್ಟೇ ಕೊಡುತ್ತಾರೆಂಬ ಯಾವ ವಿಧಿಯೂ ಬಲಾತ್ಕಾರವೂ ಇಲ್ಲ "

[216—9] ಟಿ ಎಸ್ ಆರ್ ಅಯ್ಯರ್, ಸೆಕ್ರೆಟರಿ, ಅಮೃತಸಾರದ ಇನ್ಷುರೆನ್ಸ್ ಆಫೀಸು, ಮೈಸೂರು.

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

[270-1]

With reference to the notices published in the *Vrittanta Patrike*, dated 11th instant by Mr T S R Iyer, Branch Secretary, of the National Insurance and Banking Company, Limited, Amritsar, to the Insurance and Provident Policy Holders, the undersigned begs to inform all the policy-holders and the public in general as follows —

The policy-holders will be surprised to know that the notice does not apply to the policy-holders whose bonuses and claims have not yet been settled by the Amritsar Company for months together in spite of urgent telegrams and repeated registered notices But he wants such receipts of the undersigned, the amount of which has not yet been duly acknowledged by the Head Office at Amritsar The policy holders should please note that the undersigned has dealt with the said Company fairly and squarely, and as such Mr T S R Iyer is after a wild-goose chase, as he cannot find out **even a single discrepancy in his life time.** If he is referred to my resignation letter of the Chief *Agency, dated 12th August, 1913* and Mr P. L. Rajpal's *requisition* letter, dated 30-8-1913/1-9-1913, asking me not to open the Insurance Department in our new Company but to continue the Chief Agency of the Insurance Department of his Company, he shall have to admit that he is in the wrong, if he means that my services have been dispensed with voluntarily by the said Company

Mr T S R. Iyer shall have to admit that he is in the wrong in saying that the undersigned being authorized to get the Insurance Policies assigned to the new Company is unathenticated if he is referred to the new Company's Article No 48

Our old and would-be policy-holders and agents should please note very clearly that there is a **world of difference** between an Insurance Company with the words Government Security and a company without it The Companies of the former kind, such as ours and the Oriental, are bound to invest a **fixed percentage of the total premium collections** in the Government Securities every year, whereas the Companies of the latter kind **may** invest their collections **according to the whims and fancies of their Directors** The Companies, without the words Government Security, might boast of their having deposited a certain amount in the India Government as per Insurance Act, according to which more than 2 lakhs of Rupees cannot be deposited with the Government, even if the collections of the Company go above twenty lakhs, fifty lakhs, and so on Whereas the Companies with the words Government Security are bound to continue investing a fixed percentage of the total collections in Government Securities **every year** *Moreover, there is no Company in India which will invest its funds in the Mysore* Government Securities just as our Company does

The Provident Policy Holders will be surprised to learn that Mr. T S R Iyer had not yet entered service of the Company when the Company had fixed its minimum bonus to be double the premiums paid by the marriage policy-holders In the last para of his notice he has been alluding only to the latest prospectus, published by the Company after very many changes The policy-holders will please note that the undersigned holds the authority of the *Head Office* to pay double the premiums *paid on* the marriage day, without which, and if the undersigned had known that the bonus would be less than the actual premiums paid to the Company, he would **not** have canvassed any cases for that Company

In brief, one most curious point in the whole of the notice of Mr T S R Iyer is that it contains little or almost no information regarding the Company of which he is the Branch Secretary The undersigned has to thank Mr Iyer for introducing our newly started Company, unintentionally but yet prominently, to the notice of the public by even paying the advertising charges from the Amritsar Company alone.

MYSORE,
Dated 14th December, 1913

M. L. NAGANNAH,
Managing Director.

A MANUAL OF CRIMINAL LAW. ಕ್ರಿಮಿನಲ್ ಲಾ ಸಂಗ್ರಹ.

[467-3]

ಕ್ರಯ 2 ರೂಪಾಯಿ. ಟಪಾಲ್ ಖರ್ಚು 3 ಆಣೆ.

ಕೆಲವು ಕಾಪಿಗಳು ಮಾತ್ರ ಉಳಿದಿವೆ ಜಾಗ್ರತೆಪಡದಿದ್ದರೆ ಪುನಃ ಪ್ರಿಂಟಾಗುವ ವರೆಗೂ ದೊರೆಯಲಾರದು ಒಂದು ಪುಸ್ತಕವನ್ನು ತರಿ ಕೊಂಡವರು ಅನೇಕ ಪ್ರತಿಗಳಿಗೆ ಬರೆಯುವದೇ ಪ್ರತಿಗಳು ಜಾಗ್ರತೆ ಮುಗಿದುಹೋಗುವದೆಂಬುವದಕ್ಕೆ ನಿದರ್ಶನವಾಗಿದೆ (ಕನ್ನಡದಲ್ಲಿ ಇಂತಹ ಪುಸ್ತಕ ಇದುವರೆಗೂ ಇರಲಿಲ್ಲ)

ಈ ಪುಸ್ತಕದಲ್ಲಿ —1 ಪಿನಲ್‌ಕೋಡು, 2 ದೊಡ್ಡೀ ಆಕ್ಟ್, 3 ಎಕ್ಸೈಜು ರೆಗ್ಯುಲೇಷನ್, 4 ಆಯುಧಗಳ ರೆಗ್ಯುಲೇಷನ್, 5 ದಸ್ತವಸ್ತುಗಳ ರೆಗ್ಯುಲೇಷನ್, 6 ಬೇಟೆಗೆ ಸಂಬಂಧಪಟ್ಟ ರೆಗ್ಯುಲೇಷನ್, 7 ಚಿಕ್ಕವಯಸ್ಸಿನವರು ಹುಕ್ಕಾ ಸೇದಕೂಡದೆಂಬ ರೆಗ್ಯುಲೇಷನ್, 8 ಬಾಲ್ಯ ವಿವಾಹಗಳ ರೆಗ್ಯುಲೇಷನ್, 9 ರೈಲ್ವೆ ರೆಗ್ಯುಲೇಷನ್, 10 ಟೆಲಿಗ್ರಾಫ್ ಆಕ್ಟ್, 11 ಪೋಸ್ಟ್ ಆಫೀಸ್ ಆಕ್ಟ್ ಪ್ರಕಾರ ಆಗುವ ತಪ್ಪಿತಗಳೂ ಮತ್ತು ಶಿಕ್ಷೆಗಳೂ ವಿವರಿಸಲಾಗಿವೆ

ಕ್ರಿ ಪೆನಲ್ ಸರ್ಕ್ಯುಗೂ —ವಿಚಾರಣೆಯಾಗತಕ್ಕ ಕೋರ್ಟು, ಪೋಲೀಸಿನವರು ವಾರಂಟಿಲ್ಲದೆ ಹಿಡಿಯಬಹುದೆ ? ಯಾ ಕೂಡದೆ ? ಮೊದಲು ಸಮನ್ ಹುಟ್ಟಬೇಕೇ ? ಯಾ ವಾರಂಟು ಹುಟ್ಟಬೇಕೇ ? ಜಾಮೀನ್ ತೆಗೆದುಕೊಳ್ಳಬಹುದೆ ಯಾ ಕೂಡದೆ ? ರಾಜಿಯಾಗಬಹುದೆ ? ಯಾ ಕೂಡದೆ ? ಎಂಬ ಸಂಗತಿಗಳನ್ನೆಲ್ಲಾ ಅಲ್ಲಲ್ಲಿಯೇ ವಿವರಿಸಲಾಗಿದೆ ನೋಡಿದ ಕೂಡಲೇ ಸಂಗತಿಗಳು ದೊರೆಯುವದಕ್ಕಾಗಿ ವಿಷಯ ಸೂಚಿಕೆ ಬಹಳ ಚೆನ್ನಾಗಿದೆ 22 5 1913 ನೇ ವೃತ್ತಾಂತ ಪತ್ರಿಕೆಯನ್ನು ನೋಡಿ

ಅಭಿಪ್ರಾಯಗಳು —(1) ಮ|| ರಾ|| ಶ್ರೀ ಬಿ ಸೂರ್ಯನಾರಾಯಣರಾವ್, ಬಿ ಎ, ಎಂ ಆರ್ ಎ ಎಸ್ ಯವರು ಬರೆಯುವದೇನೆಂದರೆ —"ಮ|| ರಾ|| ಶ್ರೀ ವೇಮಾರೆಡ್ಡಿಯವರು ಇದಕ್ಕಿಂತಲೂ ಅತಿಶಯವಾದ ಕ್ರಿಮಿನಲ್ ಲಾ ಸಂಗ್ರಹ ಎಂಬ ಮತ್ತೊಂದು ಪುಸ್ತಕವನ್ನು ರಚಿಸಿರುತ್ತಾರೆ ಈ ಪುಸ್ತಕವು ಬಹಳ ದೊಡ್ಡದಾಗಿದ್ದಾಗ್ಯೂ ಈ ಸಂಬಂಧವಾದ ಪುಸ್ತಕಗಳಲ್ಲಿ ಇದು ಅತ್ಯುತ್ತಮವಾದದ್ದಾಗಿದೆ ವಿಷಯಗಳನ್ನು ಬಹಳ ಚೆನ್ನಾಗಿ ವಿಂಗಡಿಸಿರುವುದಲ್ಲದೆ ಅನೇಕ ಉದಾಹರಣೆಗಳನ್ನೂ ಪ್ರಕರಣಾನುಸಾರವಾದ ಹೈ ಕೋರ್ಟು ತೀರ್ಮಾನಗಳನ್ನೂ ಕೊಟ್ಟಿರುತ್ತಾರೆ ಭಾಷಾ ಶೈಲಿಯು ಅತಿ ಸರಳವಾಗಿಯೂ ಮನೋರಂಜಕವಾಗಿಯೂ ಇರುತ್ತದೆ" (2) ಡೆಪ್ಯುಟಿ ಕಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಆದ ಮ|| ರಾ|| ಶ್ರೀ ಬಿ ಜೆ ಕುಮಾರಸ್ವಾಮಿನಾಯಕರು, ಬಿ ಎ, ಯವರು ಬರೆಯುವದೇನೆಂದರೆ —"ಕ್ರಿಮಿನಲ್ ಲಾ ಸಂಗ್ರಹವೆಂಬ ಪುಸ್ತಕದ ಇವರ ಪ್ರಕಟನೆಯೂ ಬಹಳ ದೊಡ್ಡ ಪ್ರಯತ್ನವೆಂಬುವದರಲ್ಲಿ ಸಂದೇಹವಿಲ್ಲ ಇವರು ಈ ವಿಷಯವನ್ನು ಬಹಳ ಕ್ರಮವಾಗಿ ತೆಗೆದುಕೊಂಡಿರುತ್ತಾರೆ ಇದು ಸುಲಭವಾದ ಕನ್ನಡ ಭಾಷೆಯಲ್ಲಿ ಬರೆಯಲ್ಪಟ್ಟಿರುತ್ತದೆ ಪ್ರತಿಯೊಬ್ಬರೂ ಸುಲಭವಾಗಿ ತಿಳಿದುಕೊಳ್ಳಬಹುದು" (3) ಮ|| ರಾ|| ಶ್ರೀ ಬಿ ದಾಮಣ್ಣನವರು, ಬಿ ಎ, ಎಲ್ ಎಲ್ ಬಿ, ಹೈ ಕೋರ್ಟ್ ವಕೀಲ್ ಮತ್ತು ಅಡ್ವೋಕೇಟರವರು ಬರೆಯುವದೇನೆಂದರೆ —"ತಮ್ಮ ಕ್ರಿಮಿನಲ್ ಲಾ ಸಂಗ್ರಹದ ಕೆಲವು ಭಾಗಗಳನ್ನು ಓದಿ ನೋಡಿದ್ದರಲ್ಲಿ ಈ ಪುಸ್ತಕವು ಬಹಳ ಮನೋರಂಜಕವಾಗಿಯೂ ಸಮರ್ಪಕವಾಗಿಯೂ ಇರುತ್ತದೆ ಎಂದು ತಿಳಿಯಲಾಯಿತು ಇದು ಗ್ರಾಮಾಂತರಗಳಲ್ಲಿರತಕ್ಕವರಿಗೆ ಮಾತ್ರವಲ್ಲದೆ ಪಟ್ಟಣವಾಸಿಗಳಿಗೂ ಸಹ ಕ್ರಿಮಿನಲ್ ಲಾ ವಿಷಯವನ್ನು ತಿಳಿದುಕೊಳ್ಳುವದಕ್ಕೆ ಉಪಯೋಗವಾದದ್ದಾಗಿರುತ್ತದೆ ಇಂಥಾ ಉತ್ತಮವಾದ ಕಾರ್ಯವನ್ನು ಕೈಗೊಳ್ಳುವದರಲ್ಲಿ ಜಯಪ್ರದರಾಗುವಿರೆಂದು ಕೇವಲ ಅಪೇಕ್ಷಿಸುತ್ತೇನೆ" (4) ಮ|| ರಾ|| ಶ್ರೀ ಸಿ ಕೃಷ್ಣಸ್ವಾಮಿಗಳು, ಬಿ ಎ, ಅಸಿಸ್ಟೆಂಟ್ ಕಮಿಷನರ್ ಮತ್ತು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರವರು ಬರೆಯುವದೇನೆಂದರೆ —"ತಮ್ಮ ಕ್ರಿಮಿನಲ್ ಲಾ ಸಂಗ್ರಹ ಪುಸ್ತಕವನ್ನು ಸಂಪೂರ್ಣವಾಗಿ ಓದಲು ಅವಕಾಶ ದೊರೆಯದ್ದರಿಂದ ಇದರ ಕೆಲವು ಭಾಗಗಳನ್ನು ಓದಿದೇನೆ ಈ ಪುಸ್ತಕವನ್ನು ನೀವು ರಚಿಸಿದ್ದಕ್ಕಾಗಿ ನಾನು ಬಹಳ ಸಂತೋಷಪಡುತ್ತೇನೆ ಇಂಗ್ಲೀಷಿನಲ್ಲಿ ಲಾ ಪುಸ್ತಕಗಳನ್ನು ಓದಿ ತಿಳಿದುಕೊಳ್ಳುವಷ್ಟು ಇಂಗ್ಲೀಷ್ ವಿದ್ಯೆ ಸಾಲದ ಅನೇಕ ಜನರಿಗೆ ಇದು ಉಪಯೋಗವಾಗಿರುವದೆಂದು ನಾನು ಅಭಿಪ್ರಾಯಪಡುತ್ತೇನೆ ಕನ್ನಡದಲ್ಲಿ ಉತ್ತಮವಾದ ಲಾ ಪುಸ್ತಕಗಳಿಲ್ಲದ್ದರಿಂದ ಗ್ರಾಮಾಂತರಗಳಲ್ಲಿರುವ ಇಂಗ್ಲೀಷ್ ತಿಳಿಯದ ಜನರಿಗೆ ಕ್ರಿಮಿನಲ್ ಲಾ ವಿಷಯ ಗೊತ್ತಿರುವದಿಲ್ಲ ಇಂಥಾವರಿಗೆಲ್ಲಾ ನಿಮ್ಮ ಕ್ರಿಮಿನಲ್ ಲಾ ಸಂಗ್ರಹವು ನಿಶ್ಚಯವಾಗಿಯೂ ಬಹಳ ಪ್ರಯೋಜನಕಾರಿಯಾಗಿರುತ್ತದೆ" (5) ಅಡ್ವೋಕೇಟರಾದ ಮ|| ರಾ|| ಶ್ರೀ ಸುಬ್ರಾಯಮೊದಲಿಯಾರ್‌ರವರು ಬರೆಯುವದೇನೆಂದರೆ —"ತಮ್ಮ ಕ್ರಿಮಿನಲ್ ಲಾ ಸಂಗ್ರಹವೆಂಬ ಪುಸ್ತಕವನ್ನು ಓದಿ ನೋಡಿದೆನು ನೀವು ಇದನ್ನು ಜಾಗರೂಕತೆಯಿಂದ ರಚಿಸಿರುವಿರೆಂದು ಇದನ್ನು ನೋಡಿದ್ದರಿಂದ ನನಗೆ ತಿಳಿಯಲಾಯಿತು ಇಂಥಾದ್ದೊಂದು ಪುಸ್ತಕವು ಅವಶ್ಯಕವಾಗಿತ್ತು ಆ ನ್ಯೂನತೆಯನ್ನು ಹೋಗಲಾಡಿಸುವದಕ್ಕಾಗಿ ತಾವು ಮಾಡಿದ ಪ್ರಯತ್ನಕ್ಕೆ ನಾನು ಸಂತೋಷಿಸುತ್ತೇನೆ ಅನೇಕ ಪ್ರಕರಣಗಳ ಕೆಳಗೆ ಹೈ ಕೋರ್ಟು ತೀರ್ಮಾನಗಳನಿತ್ತಿ ಕೊಟ್ಟಿರುವ ನೋಟುಗಳು ಬಹಳಷ್ಟೆ ಉಪಯುಕ್ತಗಳಾಗಿವೆ ಈ ಪುಸ್ತಕವು ಮುಖ್ಯವಾಗಿ ಗ್ರಾಮಾಂತರಗಳಲ್ಲಿರುವ ಇಂಗ್ಲೀಷ್ ತಿಳಿಯದ ಲಾಯರುಗಳಿಗೂ ಮತ್ತು ಇತರರಿಗೂ ಬಹಳ ಉಪಯುಕ್ತವಾಗಿದೆ" (6) ಅಮಲ್ದಾರರೂ ಮತ್ತು 2 ನೇ ಕ್ಲಾಸ್ ಮ್ಯಾಜಿಸ್ಟ್ರೇಟರೂ ಆದ ಮ|| ರಾ|| ಶ್ರೀ ಬಿ ಕೇಸರ್‌ಸಿಂಗರವರು ಬರೆಯುವದೇನೆಂದರೆ —"ತಮ್ಮ ಕ್ರಿಮಿನಲ್ ಲಾ ಸಂಗ್ರಹ ಪುಸ್ತಕವನ್ನು ಓದಿ ನೋಡಿದೆನು ಆಂಗ್ಲೇಯ ಭಾಷೆಯ ಪರಿಚಯವಿಲ್ಲದವರಿಗೆ ಕನ್ನಡ ತರ್ಜುಮೆಯಲ್ಲಿ ಕ್ರಿಮಿನಲ್ ಬಾಬಿನ ಕಾನೂನುಗಳನ್ನು ಒಳಗೊಂಡಿರುವ ಪುಸ್ತಕವು ಅತ್ಯವಶ್ಯಕವಾಗಿತ್ತು ಈಗ ನೀವು ರಚಿಸಿರುವ ಕ್ರಿಮಿನಲ್ ಲಾ ಸಂಗ್ರಹ ಎಂಬ ಪುಸ್ತಕದಿಂದ ಈ ಅನಾನುಕೂಲವು ನಿವಾರಣೆಯಾಗಿರುತ್ತದೆ ತಿಳಿದುಕೊಳ್ಳಲು ಕಷ್ಟಸಾಧ್ಯವಾದ ಸೆಕ್ಷನ್‌ಗಳ ಕೆಳಭಾಗದಲ್ಲಿ ಹೈ ಕೋರ್ಟ್ ರೂಲಿಂಗ್ಸ್‌ಗಳನ್ನು ಸೂಚಿಸಿರುವುದರಿಂದಲೂ, ಆಂಗ್ಲೇಯ ಶಬ್ದಗಳ ಅರ್ಥಕ್ಕೆ ನ್ಯೂನತೆಯುಂಟಾಗದಂತೆ ಸರಳಭಾಷೆಯಲ್ಲಿ ತಾವು ಈ ಪುಸ್ತಕವನ್ನು ಬರೆದಿರುವುದರಿಂದಲೂ ಮತ್ತು ಶಿಕ್ಷೆಯನ್ನು ಉದಹರಿಸುವ ಪ್ರತಿ ಸೆಕ್ಷನಿನ ಕೆಳಗೆ ಆಚರಣೆಯನ್ನು ಕಾಣಿಸಿರುವುದರಿಂದಲೂ ಈ ಪುಸ್ತಕವನ್ನು ಓದುವವರಿಗೆ ಬಹಳ ಸೌಕರ್ಯವನ್ನು ಉಂಟುಮಾಡಿದ್ದೀರಿ" (7) ಪೋಲೀಸ್ ಇನ್ಸ್‌ಪೆಕ್ಟರಾದ ಮ|| ರಾ|| ಶ್ರೀ ಎ ಚನ್ನಂರಾಜಯ್ಯನವರು ಬರೆಯುವದೇನೆಂದರೆ —"ತಮ್ಮ ಕ್ರಿಮಿನಲ್ ಲಾ ಸಂಗ್ರಹವೆಂಬ ಪುಸ್ತಕವನ್ನು ನೋಡಿದೆನು ಇದಕ್ಕೋಸ್ಕರ ತಾವು ತೆಗೆದುಕೊಂಡಿರುವ ಶ್ರಮವು ಶ್ಲಾಘ್ಯತರವಾಗಿರುತ್ತದೆ ಈ ಪುಸ್ತಕದಲ್ಲಿ ಅನೇಕ ಕ್ರಿಮಿನಲ್ ಲಾ ವಿಷಯಗಳು ಬಂದಿರುವದರಿಂದ ಕನ್ನಡವನ್ನು ಸಾಧಾರಣವಾಗಿ ತಿಳಿದವರೆಲ್ಲರಿಗೂ ಈ ಪುಸ್ತಕದಿಂದ ಬಹಳ ಅನುಕೂಲ ಕಲ್ಪಿಸಿದಂತೆ ಆಯಿತು ಇದರಲ್ಲಿ ನೋಟುಗಳೆಂದು ಅಲ್ಲಲ್ಲಿ ಉದಹರಿಸಿರುವ ಹೈ ಕೋರ್ಟು ತೀರ್ಮಾನಗಳೂ ಮತ್ತು ಪ್ರತಿಯೊಂದು ವಿಧವಾದ ತಪ್ಪಿತಗಳನ್ನೂ ಬೇರೆಬೇರೆ ತಿ ಪವಾಗಿ ವಿಂಗಡಿಸಿ ಸೂಚಿಸಿರುವದು ಸಹಾ ಪ್ರಜೆಗಳಿಗೂ, ಪೋಲೀಸಿನವರಿಗೂ ಮತ್ತು ಕ್ರಿಮಿನಲ್ ಪರೀಕ್ಷೆಗೆ ಓದುವವರಿಗೂ ಸಹಾ ಬಹಳ ಉಪಯುಕ್ತಕರವಾಗಿರುತ್ತದೆ ಇಂಥಾ ಪುಸ್ತಕವನ್ನು ನಾನು ಇದುವರೆಗೂ ನೋಡಿರಲಿಲ್ಲ" ಇವುಗಳಲ್ಲದೆ ಇನ್ನೂ ಅನೇಕ ದೊಡ್ಡಮನುಷ್ಯರ ಒಳ್ಳೇ ಅಭಿಪ್ರಾಯಗಳಿವೆ.

ವಿಳಾಸ:—ಎಲ್. ವೇಮಾರೆಡ್ಡಿ, ಕಂಟ್ರಾಕ್ಟರ್ ಮತ್ತು ಕ್ರಿ|| ಪ್ಲೀಡರ್, ಮಾಲೂರು, ಕೋಲಾರ್ ಡಿಸ್ಟ್ರಿಕ್ಟ್.

ಶ್ವಾಸಕೇಸರಿ ಲೇಹ.

ಆಶ್ಚರ್ಯಕ್ಕೆ ತಪ್ಪದೆ ತತ್‌ಕ್ಷಣ ಗುಣಕೊಡುತ್ತೆ.

ಆಸ್ತ್ಮಾ ಕಾಯಿಲೆಯು ಎಷ್ಟೇ ಹಳೇದಾಗಿದ್ದರೂ ಎಷ್ಟೇ ಕಠಿಣವಾಗಿದ್ದರೂ ಈ ಲೇಹವನ್ನು ಮೂರು ವಾರ ಸೇವಿಸುವುದರೊಳಗೆ ನಿಂದಿತವಾಗಿ ಪೂರ್ಣ ಗುಣ ಮಾಡುತ್ತೆ ಇದು ಚೆನ್ನಾಗಿ ಪರೀಕ್ಷಿಸಿ ನೋಡಿದ ಔಷಧ ಸಾವಿರಾರು ಜನರು ಉಪಯೋಗಿಸಿ ಸೌಖ್ಯಹೊಂದಿದಾರೆ ದೃಷ್ಟಾಂತಕ್ಕಾಗಿ ಈಗತಾನೇ ನಮಗೆ ತಲುಪಿರುವ ಯೋಗ್ಯತಾ ಪತ್ರಿಕೆಯನ್ನು ಕೆಳಗೆ ಪ್ರಕಟಿಸಿರುತ್ತೇವೆ ಓದಿನೋಡಿ

20 ತೊಲಾ ಲೇಹದ ಟಿನ್ ಡಬ್ಬಾಕ್ಕೆ ಕ್ರಯ ರೂ 1–8 0

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,
17 ಓನಾ ಬಜಾರ್ ರೋಡ್ ಮದ್ರಾಸು

ಈ ಯೋಗ್ಯತಾ ಪತ್ರವನ್ನು ಜಬ್ಬಲ್‌ಪುರದ ಸೂಪರಿಂಟೆಂಡಿಂಗ್ ಇಂಜನಿಯರ್ ಆಫೀಸ್ ಕ್ಲಾರ್ಕ್ ಮ|| ಎ ಭೀಮರಾವ್ ಮೊದಲಿಯಾರ್‌ರು ತಾ 31 10 1913 ರಲ್ಲಿ ಬರೆಯುತ್ತಾರೆ— ನಾನು ಬಹುಕಾಲದಿಂದ ಆಸ್ತ್ಮಾ ರೋಗದಲ್ಲಿ ನರಳುತ್ತಿದ್ದೆನು ಅನೇಕ ಹೆಸರುವಾಸಿಯಾದ ಡಾಕ್ಟರುಗಳಿಂದಲೂ ವೈದ್ಯರಿಂದಲೂ ಅನೇಕ ವಿಷಧಗಳನ್ನು ತೆಗೆದುಕೊಂಡಾಗ್ಯೂ ನನ್ನ ಉಬ್ಬಸರೋಗವು ಹೋಯಲಿಲ್ಲ ಕಡೆಗೆ ನಿಮ್ಮ ಶ್ವಾಸಕೇಸರಿ ಲೇಹವನ್ನು ಸೇವಿಸನೋಡೋಣವೆಂದು ಕುತೂಹಲಪಟ್ಟು ತೆಗೆದುಕೊಂಡೆನು ನಿಮ್ಮ ಈ ಎರಡು ಟಿನ್ ಲೇಹ ಮುಗಿಯುವಷ್ಟರಲ್ಲಿ ನನ್ನ ಭಯಂಕರವಾದ ರೋಗವು ವಾಸಿಯಾಗಿದೆ ಎಂದು ತಿಳಿಸಲು ಆನಂದಪಡುತ್ತೇನೆ ಈ ನನ್ನ ಅಭಿಲಾಷೆಯನ್ನೂ ಅನುಭವವನ್ನೂ ದಯವಿಟ್ಟು ಪಬ್ಲಿಕ್ ಜನರಿಗೆಲ್ಲಾ ತಿಳಿಸಿ" [82–31]

ನೋಟೀಸ್.

ಹಾಸನದಲ್ಲಿ ದನಗಳ ಪ್ರದರ್ಶನವು.

1914 ನೇ ಇಸವಿ ಜನವರಿ ತಾರೀಖು 5 ನೇ ಸೋಮವಾರ ಮತ್ತು 6 ನೇ ಮಂಗಳವಾರ ಸಹಾ ಹಾಸನ ಟವನ್ನಲ್ಲಿ ಡಿಸ್ಟ್ರಿಕ್ಟ್ ಪೋಲೀಸ್ ಆಫೀಸ್ ಬಾಜೂ ಮೈದಾನದಲ್ಲಿ ದನಗಳ ಪ್ರದರ್ಶನವು ನಡೆಯುತ್ತೆ ಈ ಪ್ರದರ್ಶನದಲ್ಲಿ ದನ ಎಮ್ಮೆ, ಕೋಣ, ಆಡು, ಕುರಿ ಮತ್ತು ತಟ್ಟು ಮುಂತಾದ ಉತ್ಕೃಷ್ಟವಾದ ಎಲ್ಲಾ ತರಹ ಜಾನವಾರುಗಳಿಗೂ ಇನಾಂ ಕೊಡಲ್ಪಡುತ್ತೆ ಬರುವ ಜನವರಿ 4 ನೇ ತಾರೀಖಿಗೆ ಮುಂಚೆಯೇ ಪ್ರದರ್ಶಿಸತಕ್ಕ ಜಾನವಾರುಗಳು ಪ್ರದರ್ಶನದ ಮೈದಾನದಲ್ಲಿ ಬಂದಿರಬೇಕು [207 1]

ಹೆಚ್ಚು ಸಂಗತಿಯನ್ನು ಹಾಸನದಲ್ಲಿ ದನಗಳ ಪ್ರದರ್ಶನದ ಜಾಯಿಂಟ ಆನರರಿ ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಳ್ಳಬಹುದು

ಎಸ್ ವೆಂಕಟೇಶಯ್ಯಂಗಾರ್,
ಎಸ್ ಎನ್ ಅಪ್ಪಣ್ಣಯ್ಯಂಗಾರ್,
ವಿ ಎಸ್ ರಾಜಗೋಪಾಲಾಚಾರ್,
ಜಾಯಿಂಟ್ ಆನರರಿ ಸೆಕ್ರೆಟರಿಗಳು, ದನಗಳ ಪ್ರದರ್ಶನದ ಕಮಿಟಿ
ತಾ 5–7 ನೇ ಡಿಸೆಂಬರ್ 1913, ಹಾಸನ

ಬಹು ಉತ್ಕೃಷ್ಟವಾದ ಸಾಮಾನುಗಳು

ಇದು ನೋಡುವದಕ್ಕೆ ಬಹಳ ಚಿಕ್ಕದಾಗಿಯೂ, ಅಲಂಕಾರರೂಪಿಯೂ ಸರಿಯಾದ ಕಾಲವನ್ನು ತೋರಿಸುವದಾಗಿಯೂ ಇದೆ ಈ ಗಡಿಯಾರ ಜೇಬಿನಲ್ಲಿ

Rs 3-15-0

ಮತ್ತು ಕೈಯಲ್ಲಿ ಆಭರಣದಂತೆ ಇಟ್ಟುಕೊಳ್ಳಲು ಅನುಕೂಲವಾಗಿದೆ ಇದನ್ನು ಹಾದು ಹೆಂಗಸರಿಗೆ ಸ್ನೇಹಿತರ ಜೊತೆಗಳಲ್ಲಿ ಉಲ್ಲಾಸವಾಗಿ ಹೋಗುವಾಗಲೂ ವಿವಾಹ ಮುಂತಾದ ಸ್ಥಳಗಳಿಗೆ ಹೋಗುವದಕ್ಕೆ ಬಹಳ ಉಪಯೋಗವಾದದ್ದು ಅನೇಕ ದೊಡ್ಡ ಮನುಷ್ಯರು ಇದನ್ನು ಜೇಬಿನಲ್ಲಿ ಮತ್ತು ಕೈಯಲ್ಲಿ ಉಪಯೋಗಿಸಬಹುದು

ಗೋಡೆಗೆ ಹಾಕುವ ಎಂಟು ದಿನದ ಗಡಿಯಾರ ರೂ 7 12 0 ವ ನೋಹರವಾದ ಪಿಟೀಲು ರೂ 9 ದೂರದೃಷ್ಟಿಯ ಮತ್ತ ಕನ್ನಡಿ ರೂ 3 9 0 ಸ್ವರ ಪೆಟ್ಟಿ ಹಾರ್ಮೋನಿಯಂ ರೂ 27 ಸುಂದರವಾದ ಟೇಬಲ್ ಗಡಿಯಾರ ರೂ 1 0 ಎಂಟು ದಿನಗಳ ವಿಳ್ಳೆ ಗಡಿಯಾರ ರೂ 1 8 0 ನಿಕ್ಕಲ್ ರಿಸ್ಟ್ ವಾಚ್ ಚಳ್ಳ ಪಟ್ಟಿ ಕೂಡ ರೂ 3 15 0 14 ಕ್ಯಾರೆಟ್ ಸ್ಟ್ಯಾಂಡ್ ವಾಚ್‌ಗೆ ಒಂದು ಸ್ವದೇಶಿ ಸವರಿನ್ ಬಹುಮಾನ ಸಮೇತ ಕ್ರಯ ರೂ 19 12 0 [263 21]

ವಿಳಾಸ—ಸತ್ತಿ ಆಂಡ್ ಕೋ, 10, ಜೆನರಲ್ ಮುತ್ಯಾ ಮೊದಲಿ ವೀದಿ ಸಾಹುಕಾರ್ ಪೇಟೆ ಮದ್ರಾಸ್

ಹಾರ್ಸ್‌ಟೋಪಿ ಹೆಣಿಯುವ ಊಲ್‌ದಾರಗಳು

ನಂ 1 ನೇ ಸುಪೀರಿಯರ್ ಊಲ್ 10 ಟೋಪಿಗಳ ಗುರ 8 ಲಡಿಗಳ ಬಂಡಲ್ 1 ಕ್ಕೆ ರೂ 1 6 0 ಬಣ್ಣದಲ್ಲಿ ಎಣ್ಣೆಕೆಂಪು ಮತ್ತು ಘಂಟೆ ಕಪ್ಪು ನಂ 7 ನೇ ಊಲ್ ದಾರ ಪೌಂಡು 1 ಕ್ಕೆ ರೂ 3 ಮಿಶ್ರ ಊಲ್ ದಾರ ಪೌಂಡು 1 ಕ್ಕೆ ರೂ 3 12 0 ಹಾರ್ಸ್ ಟೋಪಿಗಳು ಡಜನ್ 1 ಕ್ಕೆ ರೂ 10 ಮತ್ತು ರೂ 13 4 0 ಹಾರ್ಸ್ ಟೋಪಿ ಮಗ್ಗರ ಹಾಕುವ ಕೊಕ್ಕೆ ಸೂಜಿಗಳು 1 ಕ್ಕೆ 0 1 6 2 ಆಣೆ ಮತ್ತು 3 ಆಣೆ ಛಳಿಗಾಲಕ್ಕೆ ಅನುಕೂಲವಾದ ಹೊಸ ನಮೂನೆಯ ಬ್ಲಾಂಕೆಟ್ (ಮುಸುಕಿನ ಟೋಪಿಗಳು) ದೊಡ್ಡವರಿಗೆ ಆಗುವದಕ್ಕೆ ರೂ 1 ಗೃಹಸ್ಥರ ಮತ್ತು ಸ್ತ್ರೀಯರ ಎಲ್ಕ್ ಕೆ ಟವೇಲುಗಳು 1 ಕ್ಕೆ ಆಣೆ 6 8 ಸುಶೀಲ ವಾಲತಿ —ಇದು ಉತ್ತಮ ರೀತಿಯ ಪರಿಮಳವಿದ್ದು ಮುಖಕ್ಕೆ ಲೇಪಿಸಿದ್ದಲ್ಲಿ ಮೊಡವೆಗಳು ಹೋಗಿ ಚರ್ಮವು ಮೃದುವಾಗುವದು ಟಿನ್ 1 ಕ್ಕೆ ಆಣೆ 3 ಡಜನ್ 1 ಕ್ಕೆ ರೂ 1 8-0 ಸುಗಂಧ ನಾಸಿಕ ಚೂರ್ಣ ಡಬ್ಬಿ 1 ಕ್ಕೆ ಆಣೆ 4 ಪ್ರಖ್ಯಾತಿಪಟ್ಟ ಪ್ರೊಫೆಸರ್ ಜೇಮ್ಸರವರ ವಿದ್ಯುಚ್ಛಕ್ತಿಯ ಪಿಲ್ಸ್ ಗಳು ಇದರ ಉಪಯೋಗದಿಂದ ಕೆಟ್ಟುಹೋದ ರಕ್ತವನ್ನು ಶುದ್ಧಮಾಡಿ ಕ್ಷಯಿಸಿದ ದೇಹವನ್ನು ಪುಷ್ಟಿಮಾಡುವದು ಜೀರ್ಣಶಕ್ತಿ ಹೆಚ್ಚುವದು ಈ ಕುರಿತು ಸವಿಸ್ತಾರವಾದ ಸಾವಿರಾರು ಯೋಗ್ಯತಾ ಪತ್ರಗಳಿವೆ 20 ಮಾತ್ರೆಗಳಿರುವ ಶೀಸೆ 1 ಕ್ಕೆ ರೂ 1-4 0 40 ಮಾತ್ರೆಗಳಿರುವ ಶೀಸೆ 1 ಕ್ಕೆ ರೂ 2 ಜಗತ್ ಪ್ರಸಿದ್ಧವಾದ ಕಾಮಿನಿಯಾ ತೈಲ—ಶೀಸೆ 1 ಕ್ಕೆ ರೂ 1 0 0 ಟ ಕ 1 ಆಣೆ ಶೀಸೆ 3 ಕ್ಕೆ ರೂ 2 10 0 ಟ ಕ 7 ಆಣೆ ಶೀಸೆ 12 ಕ್ಕೆ ರೂ 1 8 0 ಟ ಕ ರೂ 1 8-0 ಸೆನ್‌ಸೆನ್ ಮಾತ್ರೆಗಳು —ಇವನ್ನು ಉಪಯೋಗಿಸಿದಲ್ಲಿ ಬಾಯಿಗೆ ರುಚಿಯಾಗಿ ಮಾತಾಡುವವರಿಗೆ ವಾಕ್ಚತುರ್ಯಕ್ಕೆ ಗುಣಕಾರಿಯಾದ ಔಷಧಿ 300 ಮಾತ್ರೆಗಳಿರುವ ಪೆಕೆಟ್ 1 ಕ್ಕೆ 3 ಆಣೆ

[100–2] ವಿಳಾಸ—ದಿ ಊಲನ್ ಮಾರ್ಟ್, ಮಂಗಳೂರು

ಕೆಲವು ದಿನಗಳು ಮಾತ್ರ ಕೆಲವು ದಿನಗಳು ಮಾತ್ರ !

ವೃತ್ತಾಂತ ಪತ್ರಿಕೆಯನ್ನು ಓದುವವರೆಲ್ಲರಿಗೂ ಸಂತೋಷಕರವಾದ ಪ್ರಕಟನೆ

ಖಾತ್ರಿಯಾದ ವಾಚ್ ! ಖಾತ್ರಿಯಾದ ಕಂಪನಿ ಖಾತ್ರಿಯಾದ ಖರೀದಿ !!!

ಸ್ಪ್ರಿಂಗ್ ಮೋಟಾರ್ ರೆಗ್ಯುಲೇಟರ್ ವಾಚ್

ಇದರ ಕ್ರಯ ವಿ ಪಿಯು ಖರ್ಚು ಬಹುಮಾನ ಸಮೇತ ರೂ 3-8 0 ಮಾತ್ರ ವನವಂತರೇ [77 35]



ಈ ವಾಚ್ ಈಗತಾನೇ ಬಂದಿರುತ್ತದೆ ಬಲವಾದದ್ದು ಬಲಿಷ್ಠವಾದ ಬಿಡಿಭಾಗಗಳಿಂದಲೂ ಮತ್ತು ಬಲಿಷ್ಠವಾದ ಯಂತ್ರಗಳಿಂದಲೂ ಸುಪ್ರಸಿದ್ಧವಾದ ಲೀವರ್ ಕೇಸಗಳಿಂದಲೂ ಕೂಡಿರುವದದ್ದು ಸರಿಯಾದ ಕಾಲವನ್ನು ಸ್ವಲ್ಪವೂ ವ್ಯತ್ಯಾಸವಿಲ್ಲದೇ ತೋರಿಸತಕ್ಕದ್ದು ಖಾತ್ರಿಯಾದ ವಾಚ್ ಸುಂದರವಾದದ್ದು

ಇದರ 3 ಬಹುಮಾನಗಳ ಪಟ್ಟಿಯು
1 ಸುಂದರವಾದ ಉತ್ತರಮುಖಿ
2 ನಾಜೂಕಾದ ವಾಚ್ ಸರಪಣಿ
3 1914 ನೇ ಇಸವಿಯ ಪಾಕೆಟ್ ಡೈರಿ

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ

ವಿಳಾಸ—ಪಿ ಆರ್ ವೆಂಕಟರಮಣ ಅಂಡ್ ಕಂಪೆನಿ,
ನಂ 7, ಕೋಪ್ ವೆಂಕಟಾಚಲೈಯರ್ ವೀದಿ, ಮದರಾಸು.

ನರೆಕೂದಲಿಟ್ಟುಕೊಂಡು

ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷದ ಪ್ರಾಯಸಮರ್ಥರಂತೆ ಕಾಣುತ್ತೀರಿ ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚಕಪ್ಪಾಗಿ ಹೊಳೆಯುತ್ತೆ ಈಗ

ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆ ಹಚ್ಚುವ ಬಣ್ಣಗಳೂ ರಂಗುಗಳೂ ಹುಟ್ಟು ಕೀಳುಜಾತಿಯವು ಹ ದವು ಆ ಕೂದಲು ಕೆಂಚಾಗಿಯೂ ಅಸಹ್ಯವಾಗಿ ಕಾಣುತ್ತದೆ ನಮ್ಮ ದರ್ಬಾರ್ ಕೂದಲ ರಂಗು ಅಂಥಾದ್ದಲ್ಲ ಬಹು ಮೇಲಾದದ್ದು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷಪಡುವಿರಿ ಕ್ರಯ ಬುರುಡೆ ಸಮೇತ ಪೆಟ್ಟಿ ಒಂದಕ್ಕೆ ರೂಪಾಯಿ 1, ಅ ಚೆ ಹಾಸಲು 4 ಆಣೆ [208 1]

ವಿಳಾಸ—ವಿ ಎ ಎಸ್
ಸಾಕೆ 4, ಇರುಳಪ್ಪನ್
ವೀದಿ, ಮದರಾಸ್.

ಸಾವಿರದೊಂದುರಾತ್ರಿ ಅರೇಬಿಯನ್ ನೈಟ್ಸ್.

ಸಾವಿರ ಪುಟಗಳುಳ್ಳ ಈ ಗ್ರಂಥ ಹತ್ತು ಭಾಗಗಳಲ್ಲಿ ಪ್ರಿಂಟಾಗುತ್ತಿದೆ. ಚಂದಾದಾರರಿಗೆ 1 ಭಾಗಕ್ಕೆ 4 ಆಣೆ, ಇತರರಿಗೆ 6 ಆಣೆ ಹಾಸ್ಟೇಜು ಬೇರೆ 1 ನೇ ಭಾಗ ಸಿದ್ಧವಾಗಿದೆ ಎಲ್ಲಾ ತರದ ಕನ್ನಡ ಪುಸ್ತಕಗಳೂ, 1914 ರ ಡೈರಿಗಳೂ ನಮ್ಮಲ್ಲುಂಟು. [276-1]

ವಿಳಾಸ-ಮರ್ಕೆಂಟೈಲ್ ಯೂನಿಯನ್, ಮೈಸೂರು.

ಪ್ರಾಕೃತಿಕ್ ಭೂಗೋಳ್.

೨ ನೆಯ ಮುದ್ರಣ.

1 ನೆಯ ಭಾಗ 0-4-6 (ಕೆಲವು ಮಾತ್ರ ಉಳಿದಿವೆ.)

2 ನೆಯ ಭಾಗ 0-4-6 (ಜನವರಿ ತಿಂಗಳಲ್ಲಿ ಬಿಕರಿಗೆ ಸಿದ್ಧವಾಗುವುದು. ಫಿಸಿಕಲ್, ಕಮರ್ಷಿಯಲ್, ಪೊಲಿಟಿಕಲ್, ಮತ್ತು ಪರೀಕ್ಷೆಯ ಪ್ರಶ್ನೋತ್ತರಗಳು ಹೆಚ್ಚಾಗಿ ಸೇರಿಸಲ್ಪಟ್ಟಿರುವವು)

ನಂ 1, 3, 4 ಹೊಸ ಕನ್ನಡ ಲೇಖನ ಪುಸ್ತಕಗಳು—1 ಕ್ಕೆ 0-1 3. (ಮೇಲ್ಪಂಕ್ತಿಗಳು ಕೈಬರವಣಿಗೆಯಂತೆ ಅಂದವಾಗಿ ಪ್ರಿಂಟಾಗಿರುತ್ತವೆ ಅನೇಕ ಸ್ಕೂಲುಗಳಲ್ಲಿ ಇವುಗಳನ್ನು ಉಪಯೋಗಿಸುತ್ತಿದ್ದಾರೆ) [276-1]

ವಿಳಾಸ-ಎಂ. ಪಿ ಲಿಂಗಪ್ಪಯ್ಯ, ಹೆಡ್ ಮಾಸ್ಟರ್,
ಇಟ್ಟಿಗೆಗೂಡು ಎ ವಿ ಸ್ಕೂಲ್, ಮೈಸೂರು.

ಗೃಹಕೃತ್ಯದ ನೋಟೀಸು.

ತೀರ್ಥಹಳ್ಳಿ ತಾಲ್ಲೂಕು ಕಸಬಾ ಹೋಬಳೀ ಕಲ್ಲುಕೊಡಗಿ ಮಾಗಣೆ ಬೊಬ್ಬಳ್ಳಿ ಗ್ರಾಮದ ಮಜರೆ ಗುಮ್ಮನಗುಂಡಿ ವಾಸಿ ಮಂಜಣ್ಣಗೌಡನ ಮಗ ತಿಮ್ಮಪ್ಪಗೌಡನು ಸಕಲರಿಗೂ ತಿಳಿಯಪಡಿಸುವದೇನಂದರೆ—ನನ್ನ ಖಾಸಾ ತಮ್ಮ ಸುಬ್ಬಯ್ಯಗೌಡನು ಈಗ ಸುಮಾರು ಎರಡು ವರುಷಗಳಲ್ಲಿ ಫೌತಿಯಾದನು ಈತನ ಹೆಂಡತಿ ಹುಚ್ಚಮ್ಮನು ಎರಡು ಹೆಣ್ಣುಮಕ್ಕಳು ಸಹ ಇದ್ದಾರೆ ಈ ಹುಚ್ಚಮ್ಮ ಎಂಬುವಳು ಈಗ್ಗೆ ಸುಮಾರು 6-7 ವರ್ಷಗಳಿಂದಲೂ ದುರ್ಜನರ ಪ್ರೇರಣೆಗೊಳಪಟ್ಟು ಗೃಹಕೃತ್ಯದ ಕೆಲಸಕಾರ್ಯಗಳನ್ನು ಮಾಡದೆ ವ್ಯರ್ಥವಾಗಿ ಕಾಲಹರಣ ಮಾಡುತ್ತಾ, ನಮ್ಮ ಕುಟುಂಬಕ್ಕೆ ಸೇರಿದ ಪಿತ್ರಾರ್ಜಿತವಾಗಿರತಕ್ಕ ಸ್ಥಿರಚರ ಆಸ್ತಿಗಳನ್ನೆಲ್ಲಾ ಪರಭಾರೆ ಮಾಡುವ ಹವಣಿನಲ್ಲಿರುತ್ತಾಳೆಂದು ತಿಳಿಯಬರುತ್ತೆ ಇಂಥಾ ದುರಾಲೋಚನೆಗೊಳಪಟ್ಟು ನನ್ನನ್ನು ವೃಥಾ ಕಷ್ಟನಷ್ಟಗಳಿಗೆ ಗುರಿಪಡಿಸಬೇಕೆಂಬ ಇರಾದೆಯಿಂದ ಸದರಿ ಹುಚ್ಚಮ್ಮನಿಂದ ಸ್ಥಿರಚರ ಸ್ವತ್ತಿಗೆ ಯಾರಾದರೂ ಯಾವ ವಿಧವಾದ ಹಕ್ಕನ್ನೇ ಆಗಲಿ ಉಂಟುಮಾಡಿಕೊಂಡರೆ ಅದು ಊರ್ಜಿತವಾಗತಕ್ಕದ್ದಲ್ಲ ಮತ್ತು ಅಂಥಾ ದುರಾಲೋಚನೆಯಿಂದ ಪಡಕೊಂಡಾಗ್ಯೂ ಅದು ನನ್ನ ಹಕ್ಕಿಗೆ ಲೋಪವಾಗತಕ್ಕದ್ದಲ್ಲ ಇದೂ ಇಲ್ಲದೆ ಹಾಗೆ ಪಡೆದುಕೊಂಡವರು ನನಗೆ ಉಂಟಾಗತಕ್ಕ ಎಲ್ಲಾ ಲುಕ್ಸಾನಿಗೂ ಗುರಿಯಾಗುತ್ತಾರೆಂಬದಾಗಿ ಈ ಮೂಲಕ ಎಚ್ಚರಿಸಿರುತ್ತೇನೆ [271-1]

15-12-1913 ತಿಮ್ಮಪ್ಪಗೌಡನ ರುಜು

Notice dated 8th December, 1913.

Sealed tenders for the supply of good and cleaned kulthi required for the horses, etc, at the Kunigal Stud Farm, will be received up to 2 P.M on Monday the 22nd December, 1913, in the Office of the Military Secretary to H. H. the Maharaja of Mysore, Bangalore.

CONDITIONS.

1. About 2,000 pallas of kulthi will be required, which may be supplied at 170 pallas a month, or the whole lot at once before the 5th January, 1914.
2. The kulthi is to be delivered at the premises of the Government Stud Farm, Kunigal.
3. The tenders should be accompanied by Currency Notes for Rs 500, which will be forfeited to the Government, if the tenderer, whose tender is accepted, fails to execute the agreement for the due fulfilment of the contract. If the tender is not accepted, the amount will be refunded.

(Sd.) H. A. JONES, Lt.-Col.,
Offg. Military Secretary
to H. H. the Maharaja of
MYSORE.

[269-1]

ವೃತ್ತಾಂತ ಪತ್ರಿಕೆ.

ಸನ್ ೧೯೧೩ ನೇ ಇಸವಿ ಡಿಸೆಂಬರ್, ತಾ. ೧೮ ನೇ ಗುರುವಾರ.

ಮೈಸೂರು ಸಂಸ್ಥಾನದ ತಹನಾಮೆಯು.

ಸಾರ್ವಭೌಮ ಸರ್ಕಾರದವರಿಗೂ ನಮ್ಮ ಶ್ರೀಮನ್ಮಹಾರಾಜರವರಿಗೂ ನಡೆದಿರುವ ಹೊಸಕರಾರಿನ ಮುಖ್ಯಭಾಗಗಳನ್ನು ಮಾತ್ರ ದೆಹಲಿಯಿಂದ ಬಂದ ತಂತೀವರ್ತಮಾನಗಳ ಜೊತೆಯಲ್ಲಿ ಇಂಗ್ಲಿಷ್ ಪತ್ರಿಕೆಗಳು ಪ್ರಕಟಮಾಡಿರುತ್ತವೆ. ಅದರಲ್ಲಿ ಕಂಡುಬರುವ ಬದಲಾವಣೆಗಳೇನೆಂದು ಚೆನ್ನಾಗಿ ನೋಡುವಲ್ಲಿ ಮೊದಲಿದ್ದ ವರ್ಗಪತ್ರಿಕೆ (ಇನ್‌ಸ್ಟ್ರುಮೆಂಟ್ ಆಫ್ ಟ್ರಾನ್ಸ್‌ಫರ್) ಗೂ ಈಗಿನ ತಹನಾಮೆ (ಟ್ರೀಟಿ) ಗೂ ವಿಶೇಷ ವ್ಯತ್ಯಾಸವೇನೂ ಇರುವಂತೆ ಕಾಣುವುದಿಲ್ಲ. ಹೆಸರಿನ ಬದಲಾವಣೆ ಎಷ್ಟೋ ಅಷ್ಟಲ್ಲದೆ ಅವೆರಡರ ಹೂರ್ಣವೂ ಒಂದೇ ಆಗಿರುವುದು. ಆದಾಗ್ಯೂ ಹೆಸರು ಬದಲಾವಣೆಯಾಗಿರುವುದೇ ತುಂಬಾ ಸಹಾಯವಾಯಿತೆಂದು ನಾವು ಸಂತೋಷಪಡುತ್ತೇವೆ.

ಬ್ರಿಟಿಷ್ ಸಾರ್ವಭೌಮ ಸರ್ಕಾರದವರು ನಮ್ಮ ಲೇಟ್ ಮಹಾರಾಜರವರಿಗೆ ಈ ಸಂಸ್ಥಾನದ ಆಳ್ವಿಕೆಯನ್ನು ವಹಿಸಿದ ಕಾಲದಲ್ಲಿ ಸುಮಾರಾಗಿ ಪರೀಕ್ಷಾರ್ಥವಾಗಿಯೇ ವಹಿಸಿರುವರೆಂದು ಎಲ್ಲರೂ ತಿಳಿದಿದ್ದರು. ಆದಕ್ಕೋಸ್ಕರಲೇ ಆ ವರ್ಗಪತ್ರಿಕೆಯ ಕಲಮುಗಳನ್ನು ಅಷ್ಟು ವಿಸ್ತಾರವಾಗಿಯೂ ಸ್ಪಷ್ಟವಾಗಿ ರಚಿಸಿಡಬೇಕಾಯಿತು. ಇದರಿಂದ ಬಹಳ ಒಳ್ಳೇ ಫಲವುಂಟಾಯಿತೆಂದು ನಾವು ನಂಬುತ್ತೇವೆ ನಮ್ಮ ಗವರ್ನಮೆಂಟಿನವರು ರಾಜ್ಯಭಾರಕ್ರಮಗಳನ್ನು ಬಹಳ ಚೆನ್ನಾಗಿ ಮಾಡಿಟ್ಟು ರೂಢಿಸಬೇಕೆಂಬದಾಗಿ ತಿಳಿದುಕೊಳ್ಳುವಂತಾಯಿತು. ಕಳೆದ ಮುವತ್ತೆರಡು ವರುಷಗಳ ಕಾರುಬಾರುಗಳನ್ನು ನೋಡುತ್ತಾ ಬರುವಲ್ಲಿ ಮೈಸೂರು ಸರ್ಕಾರದವರು ಸಂಸ್ಥಾನವನ್ನು ವಿವೇಕದಿಂದಲೂ ತೃಪ್ತಿಕರವಾಗಿಯೂ ಪರಿಪಾಲನೆಮಾಡುತ್ತಾ ಬಂದಿದ್ದಾರೆನ್ನುವುದು ಪ್ರಕಾಶವಾಗಿದೆ. ಸಾರ್ವಭೌಮ ಸರ್ಕಾರದವರು ಪರೀಕ್ಷಾರ್ಥವಾದ ಈ ಆಳ್ವಿಕೆಯು ವಿಚಕ್ಷಣೆಯಿಂದ ನಡೆಯುತ್ತಿರುವುದನ್ನು ನೋಡಿ ಪರಮಾನಂದಪಟ್ಟು, ಆ ವರ್ಗಪತ್ರಿಕೆಯನ್ನು ಅಲ್ಲಲ್ಲಿ ಅಲ್ಪಸ್ವಲ್ಪ ಬದಲಾವಣೆಮಾಡಿ, ಗೌರವಯುಕ್ತವಾದ ತಹನಾಮೆಯನ್ನು ಕಲ್ಪಿಸಿಕೊಟ್ಟಿರುತ್ತಾರೆಂದು ನಾವು ನಂಬುತ್ತೇವೆ.

ಮೊದಲಿದ್ದ ವರ್ಗಪತ್ರಿಕೆಗೂ ಈಗಿನ ತಹನಾಮೆಗೂ ಇರುವ ಪ್ರಾಮುಖ್ಯವಾದ ವ್ಯತ್ಯಾಸವೇನೆಂದರೆ, ವರ್ಗಪತ್ರಿಕೆಯ ಪ್ರಕಾರ ಮಹಾರಾಜರವರು ಸಂಸ್ಥಾನದ ಪೋಶಾಸಿನ ವಿಚಾರ, ಕಂದಾಯ ಕೌಳಿಗೆಗಳನ್ನು ಹಾಕಿ ವಸೂಲ್ಮಾಡುವ ವಿಚಾರ, ಹೊಸ ಕಂದಾಯಗಳನ್ನು ಹಾಕುವ ವಿಚಾರ, ನ್ಯಾಯವಿಚಾರಣೆಯ ಏರ್ಪಾಡು, ವ್ಯಾಪಾರದ ಒದಲಾಣೆ, ವ್ಯಾಪಾರವನ್ನೂ ವ್ಯವಸಾಯವನ್ನೂ ಕೈಗಾರಿಕೆಗಳನ್ನೂ ಪ್ರೋತ್ಸಾಹಿಸುವುದು, ಶ್ರೀಮನ್ಮಹಾರಾಜರವರ ಮತ್ತು ಅವರ ಪ್ರಜೆಗಳ ಶ್ರೇಯಸ್ಸು ಸುಖ ಸಂತೋಷಗಳನ್ನೂ, ಅವರ ಮತ್ತೂ ಬ್ರಿಟಿಷ್ ಸರ್ಕಾರದವರ ಪರಸ್ಪರ ಸಂಬಂಧಾದಿಗಳನ್ನೂ ಕುರಿತ ಇತರ ಎಲ್ಲಾ ವಿಚಾರಗಳು ಈ ಭಾಗಗಳಲ್ಲಿ ಮಂತ್ರಾಲೋಚನಾ ಸಭಿಕರೊಡಗೂಡಿದ ಗವರ್ನರ್ ಜನರಲ್ ರವರ ಸಮ್ಮತಿ ಮತ್ತು ಅಭಿಮತಾನುಸಾರ ನಡೆದುಕೊಳ್ಳಬೇಕಾಗಿತ್ತು. ವರ್ಗಪತ್ರಿಕೆಯಲ್ಲಿ ಕಂಡ ಈ ಭಾಗವು ಬ್ರಿಟಿಷ್ ರೆಸಿಡೆಂಟರಿಗೆ ಸಂಸ್ಥಾನದ ಒಳಕಾರುಬಾರುಗಳಲ್ಲಿ ಪ್ರವರ್ತಿಸುವುದಕ್ಕೆ ವಿಶೇಷವಾದ ಅಧಿಕಾರವನ್ನೂ ಅವಕಾಶವನ್ನೂ ಕಲ್ಪಿಸಿಕೊಟ್ಟಿತ್ತು. ಈಗಿನ ಹೊಸಕರಾರು ಗವರ್ನರ್ ಜನರಲ್ ರವರು ವಿಶೇಷವಾಗಿಯೂ ಅಪ್ರಕೃತವಾಗಿಯೂ ಸಂಸ್ಥಾನದೊಳಗಣ ಆಳ್ವಿಕೆಯ ವಿಚಾರಗಳಲ್ಲಿ ಪ್ರವರ್ತಿಸುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸುತ್ತದೆ ಆದ ಕಾರಣ ಸಾರ್ವಭೌಮ ಸರ್ಕಾರದವರು ನಮ್ಮ ಸಂಸ್ಥಾನದ ರಾಜ್ಯಭಾರಕ್ರಮಗಳೂ ರೀತಿಗಳೂ ತೃಪ್ತಿಕರವಾಗಿವೆ ಎಂದು ಅನುಮೋದಿಸಿ, ನಮ್ಮ ಮಹಾರಾಜರವರಿಗೆ ಹೆಚ್ಚಾದ ಸ್ವತಂತ್ರಾಧಿಕಾರಗಳನ್ನು ವಹಿಸಲು ಸಂತೋಷದಿಂದ ಒಪ್ಪಿಕೊಂಡಿರುತ್ತಾರೆ. ಈಗಲೂ ರಾಜ್ಯಭಾರಕ್ರಮಗಳು ಕೆಟ್ಟು ಅತೃಪ್ತಿಕರವಾದ ಸ್ಥಿತಿಗೆ ಬಂದಲ್ಲಿ ಸಾರ್ವಭೌಮ ಸರ್ಕಾರದವರಿಗೆ ಪ್ರವೇಶಮಾಡಲು ಅವಕಾಶವಿದ್ದೇ ಇದೆ ಹ್ಯಾಗೂ ಈ ಹೊಸಕರಾರಿನ ರೂಪವು ಘನತರವಾದದ್ದಾಗಿಯೂ ನಮ್ಮ ಮಹಾರಾಜರವರಿಗೆ ಗೌರವಾವಹವಾದದ್ದಾಗಿಯೂ ಆಯಿತೆಂದು ಒಪ್ಪಿಕೊಂಡು, ಇಂಥಾ ಬದಲಾವಣೆಯ ವಿಷಯದಲ್ಲಿ ಅವರ ಮತ್ತೂ ಸಂಸ್ಥಾನದ ಪ್ರಜೆಗಳಕೂಡ ನಾವೂ ಆನಂದಪಡುತ್ತೇವೆ.

ಕಾರ್ಯತಃ ನೋಡುವಲ್ಲಿ ನಮ್ಮ ಸರ್ಕಾರಕ್ಕೂ ಸಾರ್ವಭೌಮ ಸರ್ಕಾರಕ್ಕೂ ಇದುವರೆಗೆ ನಡೆದು ಬಂದಿರುವ ಕಾರ್ಯಭಾಗಗಳೂ ಸಂಬಂಧಗಳೂ ಎಷ್ಟುಮಟ್ಟಿಗೂ ವ್ಯತ್ಯಾಸವಾಗುವುದಿಲ್ಲ. ಆಚರಣೆಗಳೆಲ್ಲಾ ಇದುವರೆಗೆ ಇದ್ದಂತೆಯೇ ಇನ್ನು ಮುಂದೆಯೂ ನಡೆದು ಬರುವವು ಪ್ರೋಗದಿ ಹಣದಲ್ಲಿ ವ್ಯತ್ಯಾಸವೇನೂ ಆದಂತೆ ಕಾಣಬರುವುದಿಲ್ಲ. ಆದರೆ ಇನ್ನು ಮುಂದೆ ಇಂಡಿಯಾ ಗವರ್ನಮೆಂಟಿನವರು ನಮ್ಮ ಸೀಮೆಯ ಮೇಲೆ ರೈಲ್ ಮಾರ್ಗಗಳನ್ನು ಹಾಕುವ ಸಕ್ಷದಲ್ಲಿ ಅದಕ್ಕೆ ಬೇಕಾಗುವ ಜಮೀನುಗಳಿಗೆ ನ್ಯಾಯವಾದ ಪ್ರತಿಫಲವನ್ನು ಪಾವತಿಮಾಡುತ್ತಾರೆಂಬುವುದು ಖಚಿತವಾಯಿತು ಇದುವರೆಗೆ ನಮ್ಮ ಸರ್ಕಾರದವರು ಪ್ರತಿಫಲವಿಲ್ಲದೇನೇ ಅವರು ಅಪೇಕ್ಷಿಸುವಷ್ಟು ಜಮೀನನ್ನು ಅವರಿಗೆ ವಹಿಸಿಬಿಡಬೇಕೆಂಬ ವಿಧಿ ಇತ್ತು. ಸಾರ್ವಭೌಮ ಸರ್ಕಾರದವರು ನಮ್ಮ ಸೀಮೆಯ ಮೇಲೆ ರೈಲು ಹಾಕುತ್ತಾರೆಂಬ ಸಂಭವವೇನೂ ಹುಟ್ಟುವಂತೆ ಕಾಣುವುದಿಲ್ಲ.

ಈ ಹೊಸಕರಾರಿನಿಂದ ಆಚರಣೆಯಲ್ಲಿ ಅಷ್ಟೇನೂ ಫಲಪ್ರಯೋಜನಗಳು ಉಂಟಾಗುವುದಿಲ್ಲವಾದರೂ ಈ ಬದಲಾವಣೆಯ ದೆಸೆಯಿಂದ ಕಳೆದ ಮುವತ್ತೆರಡು ವರುಷಗಳಲ್ಲಿ ಮೈಸೂರು ಸೀಮೆಯ ಪರಿಪಾಲನಾ ಕ್ರಮಗಳು ಶ್ರೇಯಸ್ಕರವಾದ ಸ್ಥಿತಿಗೆ ಬಂದಿರುತ್ತವೆಂದೂ, ಪೂರ್ವದಲ್ಲಿದ್ದ ವರ್ಗಪತ್ರಿಕೆಗಿಂತಲೂ ಈ ಕರಾರಿನ ಅಂಶಗಳು ಘನತರವಾಗಿಯೂ ಗೌರವಾವಹವಾಗಿಯೂ ಇರುತ್ತವೆಂದೂ ತಿಳಿದು ಸಂತೋಷಪಡುತ್ತೇವೆ. ಈ ಹೊಸಕರಾರಿನ ದೆಸೆಯಿಂದ ಮೈಸೂರು ಸೀಮೆಗೂ ಬ್ರಿಟಿಷ್ ಸಾಮ್ರಾಜ್ಯಕ್ಕೂ ಇರುವ ಪರಸ್ಪರ ಪ್ರೀತಿ ಅನುರಾಗಗಳು ಬಹುಮಟ್ಟಿಗೆ ವೃದ್ಧಿ ಹೊಂದುವುದಾದಕಾರಣ ಈ ಭಾಗವು ನಿಜವಾಗಿಯೂ ನಮಗೆಲ್ಲಾ ಆನಂದವನ್ನುಂಟುಮಾಡತಕ್ಕದ್ದಾಗಿದೆ.

ಹಿಂದು ದೇಶಕ್ಕಾಗಿ ಪ್ರಾರ್ಥನೆಮಾಡತಕ್ಕ ದಿನಗಳು.

ಡಿಸೆಂಬರ್ 20, 21 ನೆಯ ಶನಿವಾರವೂ ಭಾನುವಾರವೂ ಹಿಂದು ದೇಶದಲ್ಲಿರುವ ಕ್ರೈಸ್ತರು ಹಿಂದು ದೇಶಕ್ಕಾಗಿ ಪ್ರಾರ್ಥನೆಮಾಡಬೇಕೆಂದು ಏರ್ಪಾಡಾಗಿರುತ್ತದೆ ದೇವರು ಈ ಕಾಲದಲ್ಲಿ ಹಿಂದು ದೇಶವನ್ನು ಆಶೀರ್ವದಿಸುತ್ತಾ ಬರುವವನಾಗಲಿ ಎಂಬೀ ಪ್ರಾರ್ಥನೆಯನ್ನು ಮಾಡುವುದರಲ್ಲಿ ಪ್ರತಿಯೊಬ್ಬ ದೇಶಾಭಿಮಾನಿಯೂ ಭಾಗಿಯಾಗಬಹುದು ನಮ್ಮ ವಾಚಕ ಮಹಾಶಯರುಗಳಲ್ಲಿ ಪ್ರತಿಯೊಬ್ಬರೂ ತಮ್ಮ ದೇಶಕ್ಕಾಗಿ ಪ್ರಾರ್ಥನೆಮಾಡಲು ಬದ್ಧರಾಗಿರುತ್ತಾರೆ ಹೀಗೆ ಮಾಡುವುದಕ್ಕೆ ಅನೇಕ ಕಾರಣಗಳು ಇರುತ್ತವೆ

ಮೊದಲನೆಯ ಕಾರಣವೇನೆಂದರೆ—ಒಂದು ಜನಾಂಗವನ್ನು ಉನ್ನತಿಗೆ ತಂದು, ಅದನ್ನು ಯಥಾರ್ಥವಾಗಿ ದೊಡ್ಡದಾಗಮಾಡುವಂಥದು ಯಾವದು? ನೀತಿಯೇ ಅಲ್ಲವೇ? ಧರ್ಮವನ್ನು ಉಪೇಕ್ಷೆಮಾಡಿ, ನೀತಿ, ಸತ್ಯತೆ ಇವುಗಳ ವಿಷಯ ಕೇವಲ ನಿಶ್ಚಿಂತೆಯಿಂದಿರುವಂಥ ಯಾವ ಜನಾಂಗವಾದರೂ ಸಹಜವಾಗಿ ಒಂದು ದೊಡ್ಡ ಜನಾಂಗವಾಗಲಾರದು. ಅದು ವಿಸ್ತಾರವಾದ ದೇಶಗಳನ್ನು ತನ್ನ ಸ್ವಾಧೀನಪಡಿಸಿಕೊಂಡಿರಬಹುದು, ಪ್ರಜಾಕೋಟಿಯಿಂದ ತುಂಬಿದುದಾಗಿಯೂ ಇರಬಹುದು, ಆದರೆ ಆ ಸೀಮೆಗಳಲ್ಲಿ ಪರಪೀಡನೆಯೂ ಅನ್ಯಾಯವೂ ಮೋಸವೂ ಪ್ರಬಲವಾಗಿದ್ದ ಪಕ್ಷದಲ್ಲಿ ಆ ದೇಶೀಯರು ಸುಖಾನುಭವಿಗಳಾಗಿರಲಾರರು, ಮತ್ತು ಆ ಜನಾಂಗವು ದೊಡ್ಡದಾಗಿರಲಾರದು ಕೆಲವು ವರುಷಗಳಿಂದೀಚೆಗೆ ಹಿಂದು ದೇಶದಲ್ಲಿ ನೀತಿಯು ಹೆಚ್ಚುತ್ತಾ ಬರುತ್ತಿದೆ ಎಂದೂ ಇನ್ನು ಬಹಳ ಮಟ್ಟಿಗೆ ಹೆಚ್ಚುವುದಕ್ಕೆ ಆಸ್ಪದವು ಇರುತ್ತದೆಂದೂ ನಾವು ನಂಬುತ್ತೇವೆ ಅನ್ಯಾಯವೂ ಕೆಡುಕುತನವೂ ಅಸತ್ಯವೂ ಮೋಸವೂ ಇನ್ನೂ ಅಧಿಕವಾಗಿಯೇ ಇರುತ್ತವೆ ಇವುಗಳು ನಿರ್ಮೂಲವಾಗಿ ತೊಡೆದುಹೋಗಿ, ನೀತಿಯೂ ಸತ್ಯತೆಯೂ ಇವುಗಳ ಸ್ಥಾನವನ್ನು ಆಕ್ರಮಿಸಿಕೊಳ್ಳಬೇಕು ನೀತಿಯು ದೇವರು ದಯಪಾಲಿಸುವ ಒಂದು ವರಪ್ರಸಾದವಾಗಿರುತ್ತದೆ ನೀತಿವಂತರಾಗಬೇಕೆಂಬ ಕಾಂಕ್ಷೆಯುಳ್ಳವರಿಗೆ ದೇವರು ಅದನ್ನು ಅನುಗ್ರಹಿಸುತ್ತಾನೆ ದೇವರು ಎಲ್ಲಾ ಜನರ ಮನಸ್ಸುಗಳಲ್ಲಿ ತನ್ನ ಕೆಲಸವನ್ನು ನಡಿಸಿ, ಅವರ ಮನಸ್ಸುಗಳನ್ನು ಪಾಪ, ಕೆಟ್ಟತನ ಇವುಗಳ ಕಡೆಯಿಂದ ತಿರುಗಿಸಿ, ಅವರು ತನ್ನಲ್ಲಿ ಭರವಸವಿಟ್ಟು, ನೀತಿಯನ್ನೂ ಸತ್ಯತೆಯನ್ನೂ ಅನುಸರಿಸುತ್ತಾ ಬರುವಂತೆ ಅವರನ್ನು ನಡಿಸುವವನಾಗಲೆಂದು ನಾವೆಲ್ಲರೂ ಪ್ರಾರ್ಥನೆಮಾಡೋಣ ಹಿಂದು ದೇಶೀಯರು ಒಂದು ದೊಡ್ಡ ಜನಾಂಗವಾಗಬೇಕೆಂದು ನಾವು ಹಾರೈಸುವವರಾಗಿದ್ದರೆ, ದೇವರು ನಮ್ಮನ್ನು ಎಲ್ಲಾ ಜನರನ್ನೂ ನೀತಿವಂತರನ್ನಾಗಮಾಡಲೆಂದು ಪ್ರಾರ್ಥನೆಮಾಡುತ್ತಾ ಬರೋಣ.

ಹಿಂದು ದೇಶವು ಬಹು ವೇಗವಾಗಿ ನೂತನ ಸುಧಾರಣೆಯನ್ನು ಹೊಂದುತ್ತಾ ಬರುತ್ತಲಿದೆ ಜನಗಳು ಆಸೇತುಯಿಂದಲೂ ನಡೆದು ಬಂದಿರುವ ಪದ್ಧತಿಗಳನ್ನು ಬಿಟ್ಟು ಬಿಡುತ್ತಲೂ ವೃದ್ಧಾಚಾರಬಂಧನಗಳನ್ನು ಕಿತ್ತುಹಾಕುತ್ತಲೂ ಇದ್ದಾರೆ ಅನೇಕಾನೇಕರು ತಮ್ಮನ್ನು ನಡಿಸುವುದಕ್ಕೆ ಸಹಜವಾದ ಯಾವ ಮತವನ್ನಾದರೂ ಇಟ್ಟುಕೊಂಡಿರುವುದಿಲ್ಲ ಅನೇಕರು ಮೂರ್ತಿಪೂಜೆಯನ್ನು ವರ್ಜಿತಮಾಡಿರುತ್ತಾರೆ ಆದರೆ ಅವರು ದೇವಾರಾಧನೆಯನ್ನು ಸಹ ಬಿಟ್ಟುಬಿಟ್ಟಿರುತ್ತಾರೆ ಅನೇಕರು ತಮ್ಮ ಪೂರ್ವದ ಮತಾಚಾರ ಪದ್ಧತಿಗಳನ್ನು ತೊರೆದು ಬಿಟ್ಟಿರುತ್ತಾರೆ, ಆದರೆ ಈಗ ದೈವಜ್ಞಾನೋಪದೇಶವನ್ನು ಮಾಡುವ ಯಾವುದನ್ನಾದರೂ ಕೈಕೊಂಡಿರುವುದಿಲ್ಲ ಇಂತಹ ಬದಲಾವಣೆಯಾಗುತ್ತಿರುವ ಕಾಲದಲ್ಲಿ ನಮ್ಮ ದೇಶವು ದೊಡ್ಡ ದೊಡ್ಡ ಕೇಡುಗಳಿಗೆ ತಪ್ಪಿಸಿಕೊಳ್ಳಬೇಕಾದರೆ, ದೇವರು ಈ ಕಾಲದಲ್ಲಿ ನಮ್ಮ ದೇಶವನ್ನೂ ಅದರಲ್ಲಿರುವ ಜನಗಳನ್ನೂ ನಡಿಸುತ್ತಾ ಬರಬೇಕೆಂದು ನಾವು ಯಥಾರ್ಥಮನಸ್ಸಿನಿಂದಲೂ ಪೂರ್ಣವೈರಾಗ್ಯದಿಂದಲೂ ಪ್ರಾರ್ಥನೆ ಮಾಡಬೇಕು

ಜನರು ದೇವರನ್ನು ಬಿಟ್ಟುಬಿಡದೆ, ಆತನ ಸ್ವಭಾವವನ್ನರಿತು, ಪ್ರತಿದಿನದಲ್ಲಿಯೂ ಆತನನ್ನು ಮೆಚ್ಚಿಸುವುದಕ್ಕಾಗಿ ಪ್ರಯತ್ನಪಡುತ್ತಾ ಬರುವಂತೆ ನಾವು ಪ್ರಾರ್ಥಿಸಬೇಕಾಗಿದೆ ದೇವರು ಜನಗಳ ಮನೋನೇತ್ರಗಳಿಗೆ ತನ್ನನ್ನು ಪ್ರದರ್ಶನಪಡಿಸಿ, ಅವರನ್ನು ಪಾಪಭೀತರನ್ನಾಗಮಾಡಿ, ಅವರು ತನ್ನಲ್ಲಿ ದೃಢನಂಬಿಕೆಯನ್ನಿಡುವಂತೆ ಅವರನ್ನು ನಡಿಸುತ್ತಾ ಬರಬೇಕೆಂದು ನಾವು ಪ್ರಾರ್ಥಿಸಬೇಕಾಗಿದೆ ಈ ನೂತನ ಸುಧಾರಣೆಯ ಕಾಲದಲ್ಲಿ ದೇವರು ಜನಗಳನ್ನು, ಮುಖ್ಯವಾಗಿ ಯುವಕರನ್ನೂ ಯುವತಿಯರನ್ನೂ ಸತ್ಯತೆ, ನೀತಿ, ಪವಿತ್ರತೆ ಎಂಬೀ ಸನ್ಮಾರ್ಗದಲ್ಲಿ ನಡಿಸುತ್ತಾ ಬರುವಂತೆ ನಾವು ಪ್ರಾರ್ಥನೆಮಾಡಬೇಕು

ಈ ಕಾಲದಲ್ಲಿ ಅನೇಕಾನೇಕರು ಈ ಲೋಕದ ಆಸ್ತಿಪಾಸ್ತಿಗಳಿಂದ ಸಂತೋಷವು ಲಭ್ಯವಾಗುತ್ತದೆಂದು ಭಾವಿಸಿ, ಹಣ, ಮನೆಮಠಗಳು, ಭೂಮಿ ಕಾಣಿ, ಒಳ್ಳೊಳ್ಳೆಯ ಉದ್ಯೋಗಗಳು ಇವೇ ಮುಂತಾದ ಐಹಿಕ ಭಾಗ್ಯಗಳನ್ನು ಹಾರೈಸುತ್ತಿರುವರು ಇವೆಲ್ಲವುಗಳು ಒಳ್ಳೆಯವುಗಳೇ ಇವುಗಳನ್ನು ತಿರಸ್ಕರಿಸಬಾರದು ಆದರೆ ಇವುಗಳು ಸಂತೋಷಕ್ಕೆ ಸಹಜವಾದ ಕಾರಣಗಳಾಗುವುದಿಲ್ಲ ದೇವತಾಸೇವೆಮಾಡುವುದರಿಂದಲೂ ಆತನ ಆಜ್ಞೆಗಳನ್ನು ಕೈಕೊಳ್ಳುವದರಿಂದಲೂ ನಿಜಾನಂದವು ಲಭ್ಯವಾಗುತ್ತದೆ ಅನೇಕರು ದ್ರವ್ಯಾರ್ಜನೆಮಾಡಬೇಕು, ಉದ್ಯೋಗದಲ್ಲಿ ಮೇಲಿನ ದರ್ಜೆಗೆ ಬರಬೇಕು ಎಂಬೀ ಪ್ರಯತ್ನಗಳಲ್ಲಿ ದೇವರ ಆಜ್ಞೆಗಳನ್ನು ಅತಿಕ್ರಮಿಸಿ ನಡೆಯುವರು ಹೀಗೆ ಅವರು ಮಾಡುತ್ತಾ ಬಂದಿರುವ ಅನೇಕ ಪಾಪಗಳು ಅವರ ಮನಸ್ಸಾಕ್ಷಿಯ ಮೇಲೆ ಒಂದು ಹೊರೆಯಂತಿದ್ದು ಅವರನ್ನು ಬಾಧೆಪಡಿಸುತ್ತಿರುವವು ಈ ಕಾಲದಲ್ಲಿ ಅನೇಕರು ದೇವರನ್ನು ಮರೆತು ಹಣವನ್ನೇ ತಮ್ಮ ದೇವರನ್ನಾಗಮಾಡಿಕೊಂಡಿರುತ್ತಾರೆ, ಪುರುಷರೂ ಸ್ತ್ರೀಯರೂ ಐಹಿಕ ವಸ್ತುಗಳ ಸಹಜವಾದ ಬೆಲೆಯನ್ನು ತಿಳಿದುಕೊಳ್ಳುವಂತೆಯೂ ಅವರು ಸಹಜವಾಗಿ ಸುಖಿಗಳಾಗುವ ಹಾಗೆ ದೇವರನ್ನೂ ಆತನ ದಯವನ್ನೂ ಪ್ರಾಮುಖ್ಯವಾಗಿ ಹುಡುಕುತ್ತಾ ಬರುವಂತೆಯೂ ನಾವು ಪ್ರಾರ್ಥನೆಮಾಡೋಣ.

ಗಾಂತದ ಬದಲಾವಣೆಯಾಗುತ್ತಿರುವ ಕಾಲದಲ್ಲಿ ನಮ್ಮ ದೇಶಕ್ಕಾಗಿ ಪ್ರಾರ್ಥನೆ ಮಾಡುವುದು ಒಳ್ಳೆಯದು. ನೀತಿಯನ್ನು ಕೈಕೊಳ್ಳುವುದರಿಂದ ನಮ್ಮ ದೇಶವು ಉನ್ನತಸ್ಥಿತಿಗೆ ಬರುವಂತೆಯೂ, ಈ ಬದಲಾವಣೆಯ ಕಾಲದಲ್ಲಿ ದೇವರು ಜನರಿಗೆ ತನ್ನ ವಿಷಯ ಸಹಜವಾದ ತಿಳುವಳಿಕೆಯನ್ನು ಹುಟ್ಟಿಸುತ್ತಾ ಬರುವಂತೆಯೂ, ಜನರು ದ್ರವ್ಯಾಶೆ, ಲೋಕಭೋಗ ಮುಂತಾದ ಸೆಳವಿಗೆ ಸಿಕ್ಕಿಬಿದ್ದು ಕೆಟ್ಟು ಹೋಗದೆ ದೇವರಲ್ಲಿ ಸಿಕ್ಕುವ ಸತ್ಯಸುಖವನ್ನು ಹುಡುಕುತ್ತಾ ಬರುವಂತೆಯೂ ನಾವು ಪ್ರಾರ್ಥನೆಮಾಡೋಣ.

ಒಳದೇಶದ ವೃತ್ತಾಂತಗಳು.

ನಮಗೆ ತಲಪಿರುವ ಅನೇಕ ವರ್ತಮಾನಗಳನ್ನು ಸ್ಥಳಸಂಕೋಚದಿಂದ ಈ ವಾರ ಪ್ರಕಟಿಸಲು ಸಾಧ್ಯವಾಗದೆಹೋಯಿತೆಂದು ವಿಷಾದಿಸುತ್ತೇವೆ.

ದಕ್ಷಿಣ ಆಫ್ರಿಕದ ರಿಲೀಫ್ ಫಂಡಿಗೆ ನಮ್ಮ ಮಹಾರಾಜರವರೂ, ಯುವರಾಜರವರೂ ತಲಾ ಎರಡೆರಡು ಸಾವಿರ ರೂಪಾಯಿನಂತೆ ಚಂದಾ ಹಣವನ್ನು ದಯಪಾಲಿಸಿರುತ್ತಾರೆ.

ಮಿ|| ರೈಸ್ ವಿಲ್ಲಿಯಂಸ್ ಎಂಬ ಸರ್ದಾರರು ಹಿಂದಿನ ವಾರ ಚಾಮರಾಜನಗರದ ಕಾಡಿಗೆ ಹೋಗಿ ಒಂದು ಹುಲಿ, ಎರಡು ಚಿರತೆಗಳು, ಕೆಲವು ಸಾರಗಗಳನ್ನು ಶಿಕಾರಿಮಾಡಿಕೊಂಡು ನೀಲಗಿರಿಗೆ ಪ್ರಯಾಣಮಾಡಿದರು.

ಬೆಂಗಳೂರಿನಲ್ಲಿ ಮುಂದಿನ ವಾರ ನಡೆಯುವ ಕ್ರಿಸ್ಮಸ್ ಫೀಟ್ ಮತ್ತು ಕೈಗಾರಿಕೆಗಳ ಪ್ರದರ್ಶನವನ್ನು ಶ್ರೀಮನ್ ಮಹಾರಾಜರವರು ಕೃಪೆಯಿಟ್ಟು ಪ್ರಾರಂಭಮಾಡುವುದಾಗಿ ಸಮ್ಮತಿ ದಯಪಾಲಿಸಿರುತ್ತಾರೆಂದು ತಿಳಿದು ಬಂದಿದೆ.

ಕಣ್ಣಗಾಲದ ದಂಗೆ ಮೊಕದ್ದಮೆಯಲ್ಲಿ ಶಿಕ್ಷೆವಿಧಿಸಲ್ಪಟ್ಟ ನಂಜುಂಡಪ್ಪ, ಮರಿಶೆಟ್ಟಿ ಮೊದಲಾದ ಇಪ್ಪತ್ತು ಮಂದಿ ಖೈದಿಗಳು ಕಳೆದ ವಾರ ಚೀಫ್ ಕೋರ್ಟಿನಲ್ಲಿ ಅಪೀಲ್ ದಾಖಲ್ಮಾಡಿದರು. ವಿಚಾರಿಸಿದವರು ಅಪೀಲಿಗೆ ಕಾಲವಿಳಂಬವಾದ ಅರ್ಜಿಯನ್ನು ಓದಿಯದೆ ವಜಾ ಮಾಡಿರುತ್ತಾರೆ.

ಹಿಂದೂಪುರ ತಾಲ್ಲೂಕಿಗೆ ಸೇರಿದ ಮುನಿಂಪಲ್ಲಿಯಲ್ಲಿ ಗೋವಿಂದ, ದಾಸಪ್ಪ ಎಂಬುವರು ಹೊಲದಲ್ಲಿ ದನಗಳನ್ನು ಕಾಯುತ್ತಿದ್ದಾಗ ಹುಲಿ ಬಂದು ಅವರ ಮೇಲೆ ಬಿದ್ದು ತುಂಬಾ ಗಾಯಮಾಡಿದ್ದರಿಂದ ಅವರೀಗ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಬಂದು ಚಿಕಿತ್ಸೆಹೊಂದುತ್ತಿದ್ದಾರೆ.

ರಜದಮೇಲಿರುವ ಸೆಷನ್ಸ್ ಜಡ್ಜ್ ಮ್ಮ|| ಟಿ. ಪರಮಶಿವ ಅಯ್ಯರವರ ಪತ್ನಿಯವರು ಎರಡು ತಿಂಗಳಿಂದ ಕಾಯಿಲೆ ಇದ್ದು ಹಿಂದಿನ ಬುಧವಾರ ರಾತ್ರಿ ಬೆಂಗಳೂರು ಚಾಮರಾಜಪೇಟೆಯಲ್ಲಿ ಕಾಲವಾದರೆಂದು ತಿಳಿದು, ವಯಸ್ಸು ಬಂದ ದೆಸೆಯಲ್ಲಿ ಮ|| ಅಯ್ಯರವರಿಗೆ ಪತ್ನೀವಿಯೋಗದುಃಖವು ಪ್ರಾಪ್ತವಾಯಿತಲ್ಲಾ ಎಂದು ವಿಷಾದಿಸುತ್ತೇವೆ.

ಕನ್ನಂಬಾಡಿಗೆ ಸೇರಿದ ಕಾವೇರಿ ಕಟ್ಟೆಯ ಕಾಮಗಾರಿ ನಡೆಯುವ ಪ್ರಾಂತ್ಯದಲ್ಲಿ ಪ್ಲೇಗ್ ಮೊದಲಾದ ಅಂಟು ಜಾಡ್ಯಗಳು ವ್ಯಾಪಿಸದಂತೆ ಹೊರಗಿನಿಂದ ಅಲ್ಲಿಗೆ ಹೋಗುವ ಎಲ್ಲಾ ತರದ ಕೆಲಸಗಾರರನ್ನೂ 14 ದಿನಗಳ ತನಕ ಬೇರೆ ಸ್ಥಳದಲ್ಲಿಟ್ಟು ಅವರ ಆರೋಗ್ಯ ಸ್ಥಿತಿಯನ್ನು ಪರೀಕ್ಷೆ ಮಾಡಬೇಕೆಂದು ಸರ್ಕಾರದವರು ರೂಲುಮಾಡಿ ಕಳೆದ 10 ನೇ ತಾರೀಖಿನಿಂದ ಜಾರಿಗೆ ತಂದಿರುತ್ತಾರೆ.

ಬೆಂಗಳೂರು ರೆಸಿಡೆನ್ಸಿ ಬಂಗಲೆಯಲ್ಲಿ ಕಳೆದ ಶುಕ್ರವಾರ ಸಾಯಂಕಾಲ ಮಿಸ್ಟರ್ ರೆವ್ ಇ ಡಬ್ಲ್ಯು. ಥಾಮ್ಸನ್‌ರವರು ಬೌದ್ಧರ ದೇವಾಲಯಗಳ ಕಟ್ಟಡ ಎಂಬ ಪ್ರಾಚೀನ ವಿಷಯವನ್ನು ಕುರಿತು ನಕ್ಷೆಗಳನ್ನು ಪ್ರದರ್ಶನಮಾಡಿ ಉಪನ್ಯಾಸಮಾಡಿದರು. ನಮ್ಮ ಶ್ರೀಮನ್ ಮಹಾರಾಜರವರೂ, ಯುವರಾಜರವರೂ ಯೂರೋಪಿಯನ್ ಮತ್ತು ದೇಶೀಯ ಪಂಡಿತ ಮಂಡಲಿಯನ್ನಲಂಕರಿಸಿ ಉಪನ್ಯಾಸವನ್ನು ಕೇಳಿ ಬಂದರು.

ಕಳೆದ ಶನಿವಾರ ಸಾಯಂಕಾಲ ಬೆಂಗಳೂರು ಸೆಂಟ್ರಲ್ ಕಾಲೇಜ್ ಕಟ್ಟಡದಲ್ಲಿ "ಕಾಲೇಜ್ ಡೇ" ಎಂಬ ವಾರ್ಷಿಕ ಕೂಟವು ಜರುಗಿತು. ದಿವಾನ್ ಬಹದೂರ್ ರಾಜಸಭಾ ಭೂಷಣ ಮ|| ಕೆ. ಪಿ ಪುಟ್ಟಣ್ಣಶೆಟ್ಟರವರು ವಿದ್ವತ್ ಸಭೆಯ ಅಗ್ರಾಸನವನ್ನು ವಹಿಸಿ, ನಮ್ಮ ಸಂಸ್ಥಾನದಲ್ಲಿ ಇದುವರೆಗೆ ನಡೆದಿರುವ ವಿದ್ಯಾಭಿವೃದ್ಧಿಯನ್ನೂ, ಗವರ್ನ್‌ಮೆಂಟಿನವರು ವಿದ್ಯೆಯನ್ನು ಹರಡುವುದಕ್ಕೆ ಮಾಡುತ್ತಿರುವ ಹೊಸ ಏರ್ಪಾಡುಗಳನ್ನೂ ಕುರಿತು ಸ್ವಾರಸ್ಯವಾದ ಭಾಷಣವನ್ನು ಮಾಡಿದರು.

ಒಬ್ಬ ವಾರ್ತಾದಾರರಿಂದ—ನೆಲಮಂಗಲದ ತಾಲ್ಲೂಕು ಮಾಚೋಹಳ್ಳಿ ಗ್ರಾಮದ ಪಟೇಲ್ ಚನ್ನೇಗೌಡರ ಹಿರಿ ಸೊಸೆ ನಂಜಮ್ಮನೆಂಬ 18 ವರ್ಷದ ಹುಡುಗಿಯೂ, ಅದೇ ಗ್ರಾಮದ ತಳವಾರಹಳ್ಳಿ ಎಂಬುವನ ಮಗಳು ಕೊಂತಮ್ಮನೆಂಬ 18 ವರ್ಷದ ಹುಡುಗಿಯೂ ಸೇರಿ ಮೊನ್ನೆ ಶುಕ್ರವಾರದ ರಾತ್ರಿ ಊರ ಹಿಂದೆ ಹೊರಟು ಹೋದರು. ಬೆಳಗ್ಗೆ ಮನೆಯವರು ನೋಡಿಕೊಂಡ ವೇಳೆಯಲ್ಲಿ ಒಡವೆವಸ್ತುಗಳೇನೂ ಹೋಗಿರಲಿಲ್ಲ. ಆ ಹುಡುಗಿಯರನ್ನು ಇದುವರೆಗೆ ನಾನಾ ಕಡೆಗಳಲ್ಲಿ ಹುಡುಕುತ್ತಾ ಇದ್ದಾರೆ. ಇದುವರೆಗೂ ಸಿಕ್ಕಲಿಲ್ಲ.

ಒಬ್ಬ ವಾರ್ತಾದಾರರಿಂದ—ಬೇಲೂರು ತಾಲ್ಲೂಕು. ಬಿಕ್ಕೋಡು ಹೋಬಳಿ ಕೆಸಗೋಡಿನ ಫಿರಕಾ ಅಂಕೆಹಳ್ಳಿ ಗ್ರಾಮದಲ್ಲಿರುವ ವೆಂಕಟಶೆಟ್ಟಿಯು ತನ್ನ ಜಮೀನ್ ಬಳಿ ಭತ್ತದ ಫಸಲು ಉಸ್ತುವಾರಿ ಬಗ್ಗೆ ಕಾವಲು ಕಾಯುತ್ತಾ ಇರುವಾಗ ಕಳೆದ 7 ನೇ ಭಾನುವಾರ ರಾತ್ರಿ ಸುಮಾರು 8 ಗಂಟೆ ಹೊತ್ತಿನಲ್ಲಿ ಒಂದು ಭಾರಿ ಹುಲಿ ಬಂತು. ಅದನ್ನು ಅತಿಧೈರ್ಯದಿಂದ ಸದರಿ ವೆಂಕಟಶೆಟ್ಟಿಯು ತುಪಾಕಿಯಿಂದ ಹೊಡೆದು ಕೊಂದನು. ಅದರ ಶವವನ್ನು ಮರುದಿನ ಮೆರವಣಿಗೆ ಮಾಡಲಾಯಿತು. ಈ ಮೃಗವು ಆ ಬಾಜು ಗ್ರಾಮಗಳಲ್ಲಿ ಅನೇಕ ದನಗಳನ್ನೂ ಮೇಕೆಗಳನ್ನೂ ಹೊಡೆದು ನಷ್ಟಪಡಿಸಿದ್ದಲ್ಲದೆ ಜನಗಳಲ್ಲಿ ಬಹಳ ಭಯವನ್ನುಂಟುಮಾಡುತ್ತಿತ್ತು.

ಮಿಸ್ ಕಾರಾದೇವಿ ಎಂಬ ಉತ್ತರದೇಶದ ರಾಜಪುತ್ರಸ್ತ್ರೀಯು ಕಳೆದ ಎರಡು ವರೆ ತಿಂಗಳಿಂದ ರಾಜಧಾನಿಯಲ್ಲಿದ್ದು ತಮ್ಮ ದೇಹಶಕ್ತಿಯನ್ನು ಪ್ರಕಾಶಪಡಿಸಿದ್ದಲ್ಲದೆ ಇಲ್ಲಿನ ಸ್ಕೂಲುಗಳಿಗೂ, ವಿದ್ಯಾವರ್ಧಕ ಫಂಡಿಗೂ, ದಕ್ಷಿಣ ಆಫ್ರಿಕಾ ಫಂಡಿಗೂ ಸುಮಾರು 1,800 ರೂಪಾಯಿ ತನಕ ಹುಟ್ಟುವಳಿ ಮಾಡಿ ಧರ್ಮಾರ್ಥವಾಗಿ ಕೊಟ್ಟಿದ್ದಲ್ಲದೆ ಅನೇಕ ಬಡ ಬಾಲಕರಿಗೆ ದ್ರವ್ಯಸಹಾಯ ಮಾಡಿದ್ದನ್ನು ನೋಡಿ ಇಲ್ಲಿನ ಸ್ತ್ರೀಮಂಡಲಿಯವರು ಒಂದು ದಿನವೂ, ಪುರಜನರು ಒಂದು ದಿನವೂ ಸೇರಿ ಆಕೆಗೆ ಟೌನ್ ಹಾಲ್ ಬಂಗಲೆಯಲ್ಲಿ ಒಡವೆ ಮೆಡಲುಗಳ ಸಮೇತ ಅಡ್ರೆಸ್ಸನ್ನು ಕೊಟ್ಟು ಆಕೆಯಲ್ಲಿ ತಮಗುಂಟಾದ ಭಕ್ತಿ ವಿಶ್ವಾಸಗಳನ್ನು ಪ್ರಕಾಶಪಡಿಸಿದರು. ಆಕೆಯು ಮೊನ್ನೆ ಸೋಮವಾರ ರಾಜಧಾನಿಯಿಂದ ಮದರಾಸಿಗೆ ಪ್ರಯಾಣಮಾಡಿದರು.

ಮೈಸೂರು ಕೃಷ್ಣರಾಜ ಮೊಹಲ್ಲಾ ಮ|| ಎಂ. ಎಸ್. ಸಿದ್ದಪ್ಪನವರು ನಮ್ಮಲ್ಲಿಗೆ ಕಳುಹಿಸಿರುವ 1914 ನೇ ಇಸವಿಯ ಲಕ್ಷ್ಮೀಚಿತ್ರಪಟಸಹಿತವಾದ ಕ್ಯಾಲೆಂಡರು ಎರಡು ತರಹಾ ಕಾಯಿಯಲ್ಲಿ ಪ್ರಿಂಟಾಗಿ ಸುಂದರವಾಗಿರುತ್ತದೆ. ಹಿಂಭಾಗದಲ್ಲಿ ತಮ್ಮ ಕಂಪನಿಯೊಳಗೆ ಬಿಕರಿಯಾಗತಕ್ಕ ಗಡಿಯಾರ ಮುಂತಾದ ಪದಾರ್ಥಗಳ ನೋಟೀಸನ್ನು ಮುದ್ರಿಸಿರುತ್ತಾರೆ.—ಬೊಂಬಾಯಿನ ಪ್ರಸಿದ್ಧ ಅಮೃತಾಂಜನ ಡಿಪೋವಿನವರು ನೇತ್ರಾನಂದಕರವಾದ ಚಿತ್ರವನ್ನು ಕೂಡಿಸಿ ತಯಾರುಮಾಡಿಸಿರುವ ಮುಂದಿನ ವರುಷದ ಕ್ಯಾಲೆಂಡರು ನಮಗೆ ಕಳುಹಿಸಿಕೊಟ್ಟಿದ್ದಾರೆ.—ಇದಲ್ಲದೆ ಬೆಂಗಳೂರು ಚಿಕ್ಕಪೇಟೆ ಸಿಟಿ ಮಾರ್ಟಿನ ಮ|| ಬಿ. ಕೆ. ಗರುಡಾಚಾರ್ಯರು ತಮ್ಮ ಸಾಪಿನ ವಸ್ತುಗಳ ವಿವರಣೆಯುಳ್ಳ ಮುಂದಿನ ವರುಷದ ಕ್ಯಾಲೆಂಡರನ್ನು ಕಳುಹಿಸಿರುತ್ತಾರೆ.

ಯಳಂದೂರು, ಚಾಮರಾಜನಗರ, ಟಿ. ನರಸೀಪುರ ತಾಲ್ಲೂಕುಗಳಲ್ಲಿ ವಕಾಲತ್ತು ನಡಿಸುತ್ತಿರುವ ಮ|| ವೈ. ಶ್ರೀನಿವಾಸಯ್ಯಂಗಾರ್ರವರ ಮೇಲೆ ಅವರು ನಡಿಸಿದ ಒಂದು ಮೊಕದ್ದಮೆಯಲ್ಲಿ ಯಳಂದೂರು ತಾಲ್ಲೂಕ್ ಮ್ಯಾಜಿಸ್ಟ್ರೇಟರವರು ಅವರ ನಡತೆಯು ಅನುಮಾನಾಸ್ಪದವಾಗಿದೆ ಎಂದೂ, ಮುಂದೆ ಇದೇ ತರದ ಅಭಿಪ್ರಾಯವು ಉಂಟಾದಲ್ಲಿ ಅವರಿಗೆ ಕೆಡಕಾಗಬಹುದೆಂದೂ ಕಾಣಿಸಿದ್ದರು. ಮ|| ವೈ ಶ್ರೀನಿವಾಸಯ್ಯಂಗಾರ್ರು ಈ ಅಭಿಪ್ರಾಯವನ್ನು ವಜಾಮಾಡಿಸಿಕೊಡಬೇಕೆಂದು ಅಡ್ವೊಕೇಟ್ ಮ|| ಸಿ ಶೇಷಾಚಾರ್ಯರ ಮೂಲಕ ಚೀಫ್ ಕೋರ್ಟಿನಲ್ಲಿ ಅಪೀಲ್ಮಾಡಿದ್ದರ ಮೇಲೆ ಚೀಫ್ ಕೋರ್ಟ್ ಜಡ್ಜರಾದ ಮ|| ಕೆ. ಎಸ್ ಚಂದ್ರಶೇಖರ ಅಯ್ಯರವರು ತನಿಖೆಯಿಂದ ಅಮಲ್ದಾರ್ ಮ್ಯಾಜಿಸ್ಟ್ರೇಟರು ಬರೆದಿದ್ದ ಅಭಿಪ್ರಾಯವನ್ನು ರದ್ದುಪಡಿಸಿ ಅವರು ತಮ್ಮ ಮಾರ್ಗವನ್ನು ಬಿಟ್ಟು ಹೋಗಿರುತ್ತಾರೆಂದೂ, ಆ ದೋಷಾರೋಪಣೆಯು ಸ್ವತಃ ಅರ್ಜಿದಾರರಿಗೆ ವಿರೋಧ ಮಾಡುವಂತೆ ಎಳೆಸಲ್ಪಡುವುದಿಲ್ಲವಾದಕಾರಣ ಈ ವಿಚಾರದಲ್ಲಿ ಯಾವ ನಡವಳಿಕೆಯೂ ನಡಿಸಬೇಕಾಗಿಲ್ಲವೆಂದೂ ತೀರ್ಮಾನ ಮಾಡಿರುತ್ತಾರೆ.

ಭವಸಾರಕ್ಷತ್ರಿಯರ 2 ನೇ ಮಹಾ ಸಭೆಯು ರಾಜಧಾನಿಯು ಟೌನ್ ಹಾಲ್ ಬಂಗಲೆಯಲ್ಲಿ ಈ ತಿಂಗಳು ತಾ 25 ನೇ ಗುರುವಾರ ಪ್ರಾರಂಭವಾಗಿ ಮೂರು ದಿನ ನಡೆಯುವಂತೆ ಏರ್ಪಾಡಾಗಿದೆ. ಬೆಂಗಳೂರು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್ ಮ|| ಬಿ ಎಸ್. ರಾಣೋಜೀರಾಯರು ರಿಸೆಪ್ಷನ್ ಕಮಿಟಿಯ ಅಧ್ಯಕ್ಷರಾಗಿ ಸಮಾಜದ ಪ್ರತಿನಿಧಿಗಳಿಗೆ ಸುಸ್ವಾಗತವನ್ನು ಬಯಸುತ್ತಾರೆ. ಬೆಳ್ಗಾವದ ಮ|| ಎಂ. ವಿ. ಕೇಲ್ಕರರವರು ಪ್ರೆಸಿಡೆಂಟರಾಗಿ ನಿಂತು ಮಹಾಸಭೆಯ ಕಾರ್ಯಗಳನ್ನು ಜರುಗಿಸುವವರಾಗಿದ್ದಾರೆ. ಈ ಸಮಾಜಕ್ಕೆ ಇತರ ಕಡೆಗಳಿಂದ ಸುಮಾರು ಒಂದು ಸಾವಿರ ಪ್ರತಿನಿಧಿಗಳು ಬರುವವರಾಗಿರೋಣದರಿಂದ ಅವರ ಬಿಡಾರಕ್ಕೂ ಭೋಜನಾದಿಗಳಿಗೂ ಮರಿಮಲ್ಲಪ್ಪನವರ ಹೈಸ್ಕೂಲ್ ಕಟ್ಟಡವನ್ನು ಬಿಡಿಸಿಕೊಳ್ಳುವಂತೆ ಏರ್ಪಾಡಾಗಿದೆ. ಭವಸಾರಕ್ಷತ್ರಿಯಕುಲದವರ ಸಮಾಜಸುಧಾರಣೆಗೂ ಅವರ ಮಕ್ಕಳ ವಿದ್ಯಾಭಿವೃದ್ಧಿಗೂ ತಕ್ಕ ಏರ್ಪಾಡುಗಳನ್ನು ಚರ್ಚಿಸಿ ರೂಢಿಸಬೇಕೆಂಬುವುದೇ ಈ ಮಹಾಸಭೆಯ ಉದ್ದೇಶವಾಗಿದೆ. ಈ ಮಹಾಸಭೆಯು ಸರಾಗವಾಗಿ ನಡೆದು ಅದರ ಉದ್ದೇಶಗಳು ಸಾರ್ಥಕವಾಗಲೆಂದು ಹಾರೈಸುತ್ತೇವೆ.

ಮೈಸೂರು ಚೀಫ್ ಕೋರ್ಟಿನ ಚೀಫ್ ಜಡ್ಜರಾಗಿದ್ದ ರಾವ್ ಬಹದ್ದೂರ್ ಮ|| ಪಿ ಎಸ್. ಕೃಷ್ಣರಾಯರು ಕಳೆದ ಸೋಮವಾರ ಮಧ್ಯಾಹ್ನ 3½ ಗಂಟೆಗೆ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿದ್ದು ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ಹಿಂದಿನ ಮಂಗಳವಾರ ಬೆಳಗ್ಗೆ ಅಕಸ್ಮಾತ್ತಾಗಿ ಪಾರ್ಶ್ವವಾಯು ರೋಗಪ್ರಾಪ್ತವಾಗಿ, ಕೂಡಲೇ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಡಾಕ್ಟರುಗಳು ಮಾಡಿದ ಚಿಕಿತ್ಸೆಗಳ್ಯಾವೂ ಫಲಕಾರಿಯಾಗದೆ ಹೋಯಿತು. ಇವರು ತುಂಬಾ ಸಭ್ಯರಾಗಿಯೂ, ಗುಣಾಢ್ಯರಾಗಿಯೂ, ನ್ಯಾಯತೀರ್ಮಾನದಲ್ಲಿ ಸಮರ್ಥರಾಗಿಯೂ ಇದ್ದು, ಯೂರೋಪ್ಯನ್ ಮತ್ತು ದೇಶೀಯ ವಿದ್ಯಾವಂತರುಗಳಲ್ಲಿ ಒಳ್ಳೇ ಹೆಸರನ್ನು ಸಂಪಾದಿಸಿಕೊಂಡಿದ್ದರು. ಗತಿಸಿದ ಮ|| ಕೃಷ್ಣರಾಯರು 1856 ನೇ ಇಸವಿಯಲ್ಲಿ ಕಡಪಾದಲ್ಲಿ ಹುಟ್ಟಿ 1875 ರಲ್ಲಿ ಬಿ ಎ ಪರೀಕ್ಷೆಯಲ್ಲೂ, 1883 ರಲ್ಲಿ ಬಿ. ಎಲ್ ಪರೀಕ್ಷೆಯಲ್ಲೂ ತೇರ್ಗಡೆಹೊಂದಿ, ಎರಡು ವರುಷ ಮದರಾಸಿನಲ್ಲಿ ವಕೀಲರಾಗಿದ್ದರು. 1890 ನೇ ಇಸವಿಯಲ್ಲಿ ನಮ್ಮ ಸೀಮೆಯ ನೌಕರಿಗೆ ಬಂದು ಸಬ್ ಜಡ್ಜರಾಗಿ ಕೆಲಸಮಾಡಿ, ಮೂರನೇ ವರುಷ ಬೆಂಗಳೂರು ದಂಡಿನ ಡಿಸ್ಟ್ರಿಕ್ಟ್ ಜಡ್ಜರಾಗಿ, ಅಲ್ಲೇ 15 ವರುಷ ನೌಕರಿಮಾಡಿದರು. ಬಳಿಕ 1906 ನೇ ಇಸವಿಯಲ್ಲಿ ಅವರು ಚೀಫ್ ಕೋರ್ಟ್ ಜಡ್ಜರಾಗಿಯೂ, ಈಚೆಗೆ 1912 ನೇ ಜೂಲೈನಿಂದ ಚೀಫ್ ಜಡ್ಜರಾಗಿಯೂ ನೇಮಕವಾಗಿ ಕೆಲಸಮಾಡುತ್ತಾ ಬಂದಿದ್ದರು.

ಮ|| ಎಂ. ವೆಂಕಟಕೃಷ್ಣಯ್ಯರವರು ನ್ಯಾಯವಿಧಾಯಕ ಸಭೆಗೆ ಮೆಂಬರಾಗಿ ಚುನಾಯಿಸಲ್ಪಟ್ಟಿದ್ದರ ಸಂತೋಷಕ್ಕಾಗಿ ಅವರಿಗೆ ರಾಜಧಾನಿಯ ಬಾಲಬೋಧಿನಿ ಸ್ಕೂಲಿನಲ್ಲಿ ಕಳೆದ ಶನಿವಾರ ಸಾಯಂಕಾಲವೂ, ಶ್ರೀರಂಗಪಟ್ಟಣದಲ್ಲಿ ಭಾನುವಾರವೂ ಎಂಟರ್‌ಟೇನ್‌ಮೆಂಟುಗಳು ನಡೆದವು. ಬಾಲಬೋಧಿನಿ ಸ್ಕೂಲಿನಲ್ಲಿ ಮಕ್ಕಳು ಬಹು ಇಂಪಾಗಿಯೂ ಮನೋಹರವಾಗಿಯೂ ಹಾಡುಗಳನ್ನು ಹೇಳಿ, ವಿಣಾಗಾನವನ್ನು ಮಾಡಿದರು. ಮಕ್ಕಳು ಜಡೆಕೋಲಾಟವಾಡಿದ್ದೂ ಒಬ್ಬ ವಿದ್ಯಾರ್ಥಿಯು ಹಾರ್ಮೋನಿಯಂ ನುಡಿಸಿ ಹಾಡಿದ್ದೂ ಆಹ್ಲಾದಕರವಾಗಿತ್ತು. ಹೆಡ್ ಮಾಸ್ಟರ್ ಮ|| ವಿ ಶ್ರೀಕಂಠಯ್ಯನವರು ಒಂದು ಅಡ್ರೆಸ್ಸನ್ನೂ, ಸ್ಕೂಲ್ ರಿಪೋರ್ಟನ್ನೂ ಓದಿ ಒಪ್ಪಿಸಿದ್ದನ್ನು ಮ|| ವೆಂಕಟಕೃಷ್ಣಯ್ಯನವರು ಆದರದಿಂದ ಅಂಗೀಕರಿಸಿ, ಪ್ರಜೆಗಳ ಶ್ರೇಯಸ್ಸಿಗೆ ಸಹಾಯಮಾಡುವ ಕಾರ್ಯಗಳಲ್ಲಿ ತಾವು ತಮ್ಮ ಕೈಲಾಗುವಮಟ್ಟಿಗೂ ಸಹಾಸಪಡುತ್ತಾ ಬಂದಿರುವುದಾಗಿಯೂ, ತಮ್ಮ ಪ್ರಯತ್ನಗಳು ಸ್ವಲ್ಪಮಾತ್ರವಾದರೂ ಫಲಕಾರಿಗಳಾದರೆ ತೃಪ್ತಿಪಟ್ಟುಕೊಳ್ಳುವುದಾಗಿಯೂ ಸಮಯೋಚಿತವಾದ ಮಾತುಗಳನ್ನು ಹೇಳಿ, ಹೆಡ್ ಮಾಸ್ಟರವರನ್ನು ಅವರು ಆ ದಿನ ಮಾಡಿದ್ದ ದಿವ್ಯವಾದ ಏರ್ಪಾಡುಗಳಿಗಾಗಿ ಬಹಳವಾಗಿ ವಂದಿಸಿದರು.—ಮರುದಿನ ಶ್ರೀರಂಗಪಟ್ಟಣದ ಮತ್ತು ಗಂಜಾಮದ ಪುರವಾಸಿಗಳು ಮ|| ವೆಂಕಟಕೃಷ್ಣಯ್ಯನವರನ್ನೂ ಅವರ ಇಷ್ಟಮಿತ್ರರಾದ 30-40 ಮಂದಿ ದೊಡ್ಡಮನುಷ್ಯರನ್ನೂ ರಾಜಧಾನಿಯಿಂದ ಕರೆದುಕೊಂಡು ಹೋಗಿ ದೇವಸ್ಥಾನಗಳಲ್ಲಿ ಅವರ ಹೆಸರಿನ ಮೇಲೆ ಪೂಜಾದಿಗಳನ್ನುಮಾಡಿಸಿ, ರಾಜಬೀದಿಗಳಲ್ಲಿ ಮೆರವಣಿಗೆ ಮಾಡಿಸಿಕೊಂಡು ನೇತ್ರಾನಂದಕರವಾದ ದರಿಯಾ ದೌಲತ್ ಬಾಗ್ ಎಂಬ ಉದ್ಯಾನವನದಲ್ಲಿ ಇಳಿಸಿ ಭಕ್ಷ್ಯಭೋಜ್ಯಾದಿಗಳಿಂದ ತೃಪ್ತಿಪಡಿಸಿ, ಪಾಟಕಚೇರಿಗಳನ್ನು ನಡಿಸಿ ಸಂತೋಷಪಡಿಸಿ, ಸಂಸ್ಕೃತ ಕನ್ನಡ ಹಿಂದುಸ್ಥಾನಿ ಭಾಷೆಗಳಲ್ಲಿ ಅಡ್ರೆಸ್ಸುಗಳನ್ನು ಓದಿ ಒಪ್ಪಿಸಿದರು. ಮ|| ವೆಂಕಟಕೃಷ್ಣಯ್ಯನವರು ಸಮಯೋಚಿತವಾದ ಪ್ರತ್ಯುತ್ತರವನ್ನು ಹೇಳಿ, ಆ ಸಂತೋಷಕೂಟವನ್ನು ನಡಿಸಿದವರನ್ನೆಲ್ಲಾ ಬಹಳವಾಗಿ ವಂದನೆಮಾಡಿದರು. ಶ್ರೀರಂಗಪಟ್ಟಣ ಮತ್ತು ಗಂಜಾಮದ ಪ್ರಜೆಗಳು ಅವರನ್ನು ಈ ರೀತಿ ಉಚಿತಸಾದಿಗಳಿಂದ ಸತ್ಕರಿಸಿ ಸನ್ಮಾನಮಾಡಿದ್ದು ಸಂತೋಷಪ್ರದವಾಗಿರುತ್ತದೆ.

ಮೈಸೂರು ಗೆಜೆಟ್ ಸಂಗ್ರಹ.

ಮದ್ದಗಿರಿ ತಾಲ್ಲೂಕು ಬಡವನಹಳ್ಳಿಯಲ್ಲೂ; ತಿಪ್ಟೂರು ತಾಲ್ಲೂಕಿಗೆ ಸೇರಿದ ಸಾರ್ಥವಳ್ಳಿ, ಹುಚ್ಚನಹಳ್ಳಿ, ಮಾಲೀಹಳ್ಳಿ, ಮಾಲೂರು, ಹಾಲ್ಕುರಿಕೆ ಈ ಗ್ರಾಮಗಳಲ್ಲೂ ಪ್ಲೇಗ್ ಉಪದ್ರವಿದೆ ಎಂದು ತಿಳಿಯತಕ್ಕದ್ದು.

ಬಲಾತ್ಕರಿಸಿ ದೇವೀ ಶಿಡುಬು ಹಾಕುವ ಕಾನೂನು ತುಮಕೂರು ಮ್ಯುನಿಸಿಪಲ್ ಸರಹದ್ದಿನೊಳಗೆ 1915 ನೇ ಜೂನ್ ಆಖೈರು ತನಕ ಜಾರಿಯಲ್ಲಿರತಕ್ಕದ್ದು.

ಚಿಕ್ಕಮಗಳೂರು ತಾಲ್ಲೂಕು ಮಲ್ಲದೇವರಹಳ್ಳಿ, ವಸ್ತಾರ, ಚೋಳದಾಳು ಗ್ರಾಮಗಳಲ್ಲೂ, ತರೀಕೆರೆ ತಾಲ್ಲೂಕು ನಾರಣಾಪುರ, ತಡಗ, ಅಜ್ಜಂಪುರ, ಅನುವನಹಳ್ಳಿ ಗ್ರಾಮಗಳಲ್ಲೂ; ಕಡೂರು ತಾಲ್ಲೂಕು ಹುಲಿಕೆರೆಯಲ್ಲೂ ಪ್ಲೇಗ್ ಉಪದ್ರವಿದೆ ಎಂದು ತಿಳಿಯತಕ್ಕದ್ದು.

ಪರ್ಷನ್ ಡೆಪ್ಟಿ ಅಮಲ್ದಾರ್ ಮ|| ಬಿ. ಜಗನ್ನಾಥರಾಯರನ್ನೂ, ಪರ್ಷನ್ ಅಮಲ್ದಾರ್ ಮ|| ಬಿ. ಸುಬ್ರಾಯುಲು ನಾಯುಡುಯವರನ್ನೂ ಬೆಂಗಳೂರು ಸಿಟಿಯಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನೇಮಕಮಾಡಿದೆ.

ಮ|| ವಿ. ರಾಮಪ್ಪನವರನ್ನು ಶ್ರೀನಿವಾಸಪುರದ ತಾಲ್ಲೂಕು ಬೋರ್ಡಿಗೂ, ಮಂಚನೀಲಕೋಟೆ ಶ್ಯಾನುಭೋಗ್ ಮ|| ರಾಮಪ್ಪನವರನ್ನು ಕೋಲಾರ್ ಡಿಸ್ಟ್ರಿಕ್ಟ್ ಬೋರ್ಡಿಗೂ ಮೆಂಬರಾಗಿ ನೇಮಿಸಿದೆ.

ಮ|| ಚನ್ನಬಸಪ್ಪನವರನ್ನೂ, ಮ|| ಷೇಕ್ ಹೊನ್ನೂರು ಸಾಹೇಬರನ್ನೂ ಮೊಳಕಾಲ್ಮುರು ಮ್ಯುನಿಸಿಪಲ್ ಬೋರ್ಡ್ ಮೆಂಬರರಾಗಿ ನೇಮಿಸಿದೆ.

ನಂಜನಗೂಡಿನಲ್ಲಿರುವ ಅಡ್ವೋಕೇಟ್ ಮತ್ತು ಮ್ಯುನಿಸಿಪಲ್ ಕೌನ್ಸಿಲರ್ ಮ|| ಕೆ. ವೆಂಕಟಸಾಮಿ ಅಯ್ಯನವರನ್ನು 1914 ನೇ ಜನವರಿ ತಾ. 1 ರಿಂದ ಒಂದು ವರುಷದ ವರೆಗೆ ನಂಜನಗೂಡು ಮ್ಯುನಿಸಿಪಾಲಿಟಿಯ ವೈಸ್ ಪ್ರೆಸಿಡೆಂಟರಾಗಿ ನೇಮಕಮಾಡಿದೆ.

ಪೂರ್ವದಲ್ಲಿ ಕೊರಟಗೆರೆ ತಾಲ್ಲೂಕಾಗಿದ್ದು ಈಗ ತುಮಕೂರು, ಸೀರ್ಯ, ನೆಲಮಂಗಲ, ಗೋರಿಬಿದನೂರು, ದೊಡ್ಡಬಳ್ಳಾಪುರ, ಕೊರಟಗೆರೆ ತಾಲ್ಲೂಕುಗಳಿಗೆ ಹಂಚಿಹಾಕಲ್ಪಟ್ಟಿರುವ ಮುನ್ನೂರು ಮೂವತ್ತು ಗ್ರಾಮಗಳಲ್ಲಿ ಜಮೀನುಗಳ ರೀಸರ್ವೆ ಮತ್ತು ಸೆಟಲ್‌ಮೆಂಟು ಆಗಿ ಹೊಸ ಕಂದಾಯದ ದರಗಳು ನಿಗದಿಮಾಡಲಾಗಿವೆ. ಈ ಹೊಸ ದರಗಳು 1914-15 ನೇ ಸಾಲಿನಿಂದ ಮೂವತ್ತು ವರುಷಗಳಕಾಲ ಬಾಯಮಾಗಿರತಕ್ಕದ್ದು.

ಶೃಂಗೇರಿ ಜಹಗೀರಿ ಡೆಪ್ಟಿ ಅಮಲ್ದಾರ್ ಮಿ|| ಕೆ. ಕೆನ್ನಯ್ಯಶಾಸ್ತ್ರಿಯವರಿಗೆ ಎರಡು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಕಡೂರು ಡಿಸ್ಟ್ರಿಕ್ಟ್ ಆಫೀಸ್ ಮಿ|| ಸಿ. ಎನ್. ಗರುಡಯ್ಯಂಗಾರ್ರು ಡೆಪ್ಟಿ ಅಮಲ್ದಾರ್ ಮತ್ತು 3 ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ.—ತಿಪ್ಟೂರು ತಾಲ್ಲೂಕು ಅಮಲ್ದಾರ್ ಮಿ|| ಎಚ್. ಬಸವರಾಜೆ ಅರಸಿನವರಿಗೆ ನೊವೆಂಬರ್ ತಾ. 19 ರಿಂದ ಒಂದೂವರೆ ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ತುರುವೇಕೆರೆ ಡೆಪ್ಟಿ ಅಮಲ್ದಾರ್ ಮಿ|| ಎಸ್. ಸೀತಾರಾಮಯ್ಯನವರು ತಿಪ್ಟೂರು ಅಮಲ್ದಾರರಾಗಿಯೂ, ಮಿ|| ಟಿ. ವಿ. ಎ. ಈಶ್ವರನ್‌ರವರು ತುರುವೇಕೆರೆ ಡೆಪ್ಟಿ ಅಮಲ್ದಾರರಾಗಿಯೂ ಬದಲಿ ನೇಮಿಸಲ್ಪಟ್ಟಿದ್ದಾರೆ.

ಶಿವಮೊಗ್ಗಾ ಅ|| ಸರ್ಜನ್ ಮಿ|| ಬಿ. ಕೃಷ್ಣಮೂರ್ತಿರಾಯರಿಗೆ ಎರಡು ವಾರಗಳ ಪ್ರಿವಿಲೆಜ್ ರಜಾ ಕೊಟ್ಟಿದೆ; ಇವರು ಕ್ರಿಸ್ಮಸ್‌ರಜವನ್ನೂ ಉಪಯೋಗಿಸಿಕೊಳ್ಳಬಹುದು.—ಹಾಸನದ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಮಿ|| ಎಸ್. ಜಿ. ಆಶೀರ್ವಾದಂರವರಿಗೆ ಡಿಸೆಂಬರ್ ತಾ. 15 ರಿಂದ ಒಂಭತ್ತು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ, ಇವರು ಕ್ರಿಸ್ಮಸ್‌ರಜವನ್ನೂ ಉಪಯೋಗಿಸಿಕೊಳ್ಳಬಹುದು. ಅ|| ಸರ್ಜನ್ ಮಿ|| ಸಿ. ರಾಜಾರಾಮರಾಯರನ್ನು ಮೈಸೂರಿನಿಂದ ಹಾಸನದ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಾಗಿ ವರ್ಗಮಾಡಿದೆ.—ಅ|| ಸರ್ಜನ್ ಮಿ|| ಕೆ. ಅನಂತರಾಮಯ್ಯಂಗಾರ್ರಿಗೆ ಕೊಟ್ಟಿರುವ ಒಂದು ತಿಂಗಳು ಹದಿನಾರು ದಿನಗಳ ಪ್ರಿವಿಲೆಜ್ ರಜಾದ ಜೊತೆಗೆ ನಾಲ್ಕೂವರೆ ತಿಂಗಳ ಕಾಯಿಲೆ ರಜಾ ಕೊಟ್ಟಿದೆ.

ಮಿ|| ಎ ರಾಜಾರಾಯರಿಗೆ 4 ನೇ ಕ್ಲಾಸ್ ಅಮಲ್ದಾರಿಯನ್ನೂ, ಮಿ|| ಡಿ. ಎಂ. ನರಸಿಂಗರಾಯರಿಗೆ ಗವರ್ನ್‌ಮೆಂಟ್ ಡೆಪ್ಟಿ ಸೆಕ್ರೆಟರಿ ಕೆಲಸವನ್ನೂ ಖಾಯಂ ಮಾಡಿದೆ.—ರೆವಿನ್ಯೂ ಸರ್ವೆ ಅ|| ಸೂಪರಿಂಟೆಂಡೆಂಟ್ ಮಿ|| ಕೆ ಜಿ. ರಾಮಣ್ಣನವರನ್ನು ಸೆಪ್ಟಂಬರ್ ತಾ. 12 ರಿಂದ ಅ|| ಕಮಿಷನರ ದರ್ಜೆಯಲ್ಲಿ 2 ನೇ ಕ್ಲಾಸಿಗೆ ಬಡ್ತಿಮಾಡಿದೆ.

ಮುಂದೆ ಹೇಳುವ ಮುನ್ಸಿಫರುಗಳ ವರ್ಗಾವರ್ಗಿ ಹುಕುಂ ಮಾಡಿದೆ—ಮಿ|| ಗಳಾದ ಜಿ. ಸತ್ಯಾಜಿರಾಯರು ಬೆಂಗಳೂರಿಂದ ಚಿಕ್ಕಬಳ್ಳಾಪುರ; ಡಿ. ಅರಳಸಿಂಗ್ರಾಚಾರ್ರು ಚಿಕ್ಕಬಳ್ಳಾಪುರದಿಂದ ಸಾಗರ; ಬಿ ರಂಗಯ್ಯಂಗಾರ್ರು ಸಾಗರದಿಂದ ತುಮಕೂರು; ಎಸ್. ಕೃಷ್ಣರಾಯರು ತುಮಕೂರಿಂದ ಬೆಂಗಳೂರು.

ಮುಂದೆ ಹೇಳುವ ಅಮಲ್ದಾರ್ರುಗಳ ವರ್ಗಾವರ್ಗಿ ಹುಕುಂಮಾಡಿದೆ—ಮಿ|| ಗುಲಾಂಮಹಮದ್‌ಮೆಕ್ಕೆಯವರು ಶ್ರೀರಂಗಪಟ್ಟಣದಿಂದ ಬೇಲೂರು, ಎಂ. ಕೇಶವಯ್ಯನವರು ಬೇಲೂರಿಂದ ಚಿತ್ರದುರ್ಗ, ಜಿ ವೆಂಕಟರಾಯರು ಚಿತ್ರದುರ್ಗದಿಂದ ಹೊಳೆನರಸಿಪುರ, ಆರ್. ತಿರುನಾರಣಯ್ಯಂಗಾರ್ರು ಹೊಳೆನರಸಿಪುರದಿಂದ ಮಂಜರಾಬಾದು, ಎನ್. ಗೋಪಾಲಕೃಷ್ಣಯ್ಯಂಗಾರ್ರು ಮಂಜರಾಬಾದಿನಿಂದ ಶ್ರೀರಂಗಪಟ್ಟಣ, ಎಚ್. ಬಸವರಾಜೆಅರಸಿನವರು ತಿಪ್ಟೂರಿನಿಂದ ಮಳವಳ್ಳಿ, ಕೆ. ಲಿಂಗೋಪಂತ್ ಬಾದಾಮಿಯವರು ಮಳವಳ್ಳಿಯಿಂದ ಚನ್ನರಾಯಪಟ್ಟಣ, ಸಿ. ನಾರಾಯಣರಾಯರು ಚನ್ನರಾಯಪಟ್ಟಣದಿಂದ ಅರಸಿಕೆರೆ, ಬಿ ಟಿ. ಸೀತಾರಾಮಯ್ಯನವರು ಅರಸಿಕೆರೆಯಿಂದ ಸಾಗರ, ಬಿ. ಕೃಷ್ಣರಾಯರು ಸಾಗರದಿಂದ ತಿಪ್ಟೂರು, ಎಂ ರಂಗನಾಥರಾಯರು ಮಾಗಡಿಯಿಂದ ಕಡೂರು, ಎ. ರಾಜಾರಾಯರು ಕಡೂರಿನಿಂದ ಮಾಗಡಿ, ಕೆ. ಶ್ರೀನಿವಾಸಚಾರಿಯರು ಯಡತೊರೆಯಿಂದ ಹೊಸದುರ್ಗ, ಜಿ. ನಾರಾಯಣರಾಯರು ಹೊಸದುರ್ಗದಿಂದ ಯಡತೊರೆ, ಕೆ. ಕೆ. ವೆಂಕಟಸಾಮಿ ಅಯ್ಯರವರು ಕುಣಿಗಲಿನಿಂದ ಚಾಮರಾಜನಗರ, ಜಿ. ನಾರಾಯಣರಾಯರು ಚಾಮರಾಜನಗರದಿಂದ ಕುಣಿಗಲು.

ಸಬ್ ಅ||ಇಂಜನಿಯರ್ ಮಿ|| ಗುರುರಾವ್ ಎಸ್. ಸಿರ್ಸಿಯವರನ್ನು ಶಿವಮೊಗ್ಗೆಯಿಂದ ಕೋಲಾರ್ ಡಿವಿಜನ್‌ಗೆ ವರ್ಗಮಾಡಿದೆ.

ಮಳವಳ್ಳಿ ತಾಲ್ಲೂಕು ಅಮಲ್ದಾರ್ ಮಿ|| ಕೆ. ಲಿಂಗೋಪಂತ್ ಬಾದಾಮಿಯವರಿಗೆ ಕೊಟ್ಟಿದ್ದ ಹದಿನೈದು ದಿನಗಳ ಪ್ರಿವಿಲೆಜ್ ರಜವನ್ನು ಇನ್ನೂ ಎರಡು ವಾರ ಜಾಸ್ತಿ ಮಾಡಿದೆ. ಮಿ|| ಕೆ. ನಾಗೇಶಶಾಸ್ತ್ರಿಗಳು ತಾಲ್ಲೂಕ್ ಛಾರ್ಜನ್ನು ವಹಿಸಿರತಕ್ಕದ್ದು.

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು.

1913 ನೇ ಇಸವಿ ಡಿಸೆಂಬರ್ 4 ನೇ ತಾ. ವರೆಗಿನ ಬ್ಯಾಂಕಿನ ಲೆಕ್ಕ

ಲೇಣಿ —(1) ಷೇರು ಮೊಬಲಗು	ರೂ	5,83,625
,, (2) ಡಿಪಾಜಿಟ್ಟುಗಳು	,,	3,75,371
,, (3) ಇತರೆ	,,	2,779
(ಆಣೆ, ಕಾಸು ಬಿಟ್ಟಿರುತ್ತೆ) ಜುಮ್ಲಾ	ರೂ	9,61,775

ದೇಣಿ —(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ	ರೂ	2,70,584
,, (2) ಖಾತೆ ಮತ್ತು ಇತರ ಸಾಲಗಳು	,,	2,59,515
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,,	1,10,500
,, (4) ಇನ್‌ವೆಸ್ಟ್‌ಮೆಂಟುಗಳು	,,	2,25,000
,, (5) ಏಜನ್ಸಿಗಳಲ್ಲಿರುವ ಮೊಬಲಗು	,,	60,735
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	6,650
,, (7) ಇತರೆ	,,	10,782
(ಆಣೆ, ಕಾಸು ಬಿಟ್ಟಿರುತ್ತೆ) ಜುಮ್ಲಾ	ರೂ	9,61,775

ಇಂಡಿಯಾ ದೇಶದ ವೃತ್ತಾಂತಗಳು

ಮೋರಿಯಾ ಎಂಬ ಹಡಗು 4,13,400 ರೂಪಾಯಿ ಚಿನ್ನವನ್ನು ಬೊಂಬಾಯಿಗೆ ಸಾಗಿಸಿಕೊಂಡು ಬರುತ್ತಿದೆ

ಹಿಂದುಸ್ಥಾನದ ಆರೋಗ್ಯ (ಸ್ಯಾನಿಟರಿ) ವಿಚಾರಗಳನ್ನು ಕುರಿತು ಚರ್ಚೆ ಮಾಡುವುದಕ್ಕಾಗಿ ಈ ರಾಷ್ಟ್ರದ ಎಲ್ಲಾ ವಿಭಾಗಗಳಿಂದಲೂ 119 ಮಂದಿ ಅಧಿಕಾರಿಗಳೂ ದೊಡ್ಡಮನುಷ್ಯರೂ ಹೋಗಿ ಲಕ್ನೋಪಟ್ಟಣದಲ್ಲಿ ಸೇರುತ್ತಾರೆ ಈ ಮಹಾಸಭೆಯು ನಾಳೆಯಿಂದ ಪ್ರಾರಂಭವಾಗಿ ತಾ 27 ನೇ ಶನಿವಾರಕ್ಕೆ ಮುಕ್ತಾಯವಾಗುತ್ತದೆ

ಸಂಯುಕ್ತ ಆಧಿಪತ್ಯಗಳಿಗೆ ಸೇರಿದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಬರಗಾಲದ ಸೂಚನೆಗಳು ಕಡಮೆಯಾಗುವಂತೆ ಕಾಣುವುದಿಲ್ಲ ಗವರ್ನ್‌ಮೆಂಟಿನವರು ಪ್ರಜೆಗಳ ಮತ್ತು ಗೋಕಾಯಿಗಳ ಕಷ್ಟ ನಿವಾರಣೆಗೆ ಬಹಳ ಸಾಹಸಪಟ್ಟು ಅವಶ್ಯವಾದ ಮುಂಜಾಗ್ರತೆಯ ಏರ್ಪಾಡುಗಳನ್ನು ಮಾಡುತ್ತಿದಾರೆ ಸಾಲಿಯಾನಾ ತಕಾವಿ ಸಾಲಕ್ಕಾಗಿ ಕೊಡುತ್ತಿದ್ದ 80 ಲಕ್ಷ ರೂಪಾಯಿಗೆ ಬದಲಾಗಿ ಈಸಲ 105 ಲಕ್ಷ ರೂಪಾಯನ್ನು ಸ್ಯಾಂಕ್ಷನ್ ಮಾಡಿರುವರು

ಆ ರಾಜಕ ಕಾರ್ಯಗಳಿಗೋಸ್ಕರ ದ್ರವ್ಯವನ್ನು ಒದಗಿಸುವುದಕ್ಕೆ ಬಂಗಾಳಾ ಆಧಿಪತ್ಯದ ಅನೇಕ ಕಡೆಗಳಲ್ಲಿ ದೊಡ್ಡ ಮನುಷ್ಯರ ಮಕ್ಕಳಾಗಿ ದುರ್ಮಾರ್ಗಗಳಲ್ಲಿ ಬಿದ್ದಿರುವ ಯೌವನಸ್ಥರು ಮುಖವಾಡಗಳನ್ನು ಹಾಕಿಕೊಂಡು ಆಯುಧಪಾಣಿಗಳಾಗಿ ಐಶ್ವರ್ಯವಂತರ ಮನೆಗಳಿಗೆ ನುಗ್ಗಿ ಡಕಾಯತಿಗಳನ್ನು ನಡಿಸಿ ಹಣ ಕಾಸನ್ನು ಹೊತ್ತುಕೊಂಡು ಹೋಗುತ್ತಿದಾರೆ ಫರೀದ್‌ಪೂರ್ ಡಿಸ್ಟ್ರಿಕ್ಟಿನೊಳಗೆ ಇಂಥಾ ಎರಡು ಡಕಾಯತಿಗಳು ನಡೆದದ್ದರಲ್ಲಿ ಮ್ಯಾಜಿಸ್ಟ್ರೇಟರು 35 ವಾರಂಟುಗಳನ್ನು ಕೊಟ್ಟರು ಪೋಲೀಸಿನವರು ಪತ್ತೆ ತರದೂದು ನಡಿಸಿ ಇದುವರೆಗೆ 24 ಮಂದಿ ಯೌವನಸ್ಥರನ್ನು ಹಿಡಿದಿರುತ್ತಾರೆ ಈ ಮೊಕದ್ದಮೆಯು ಮುಂದಿನ ಮಂಗಳವಾರದಿಂದ ವಿಚಾರಣೆಗೆ ಪ್ರಾರಂಭವಾಗುವುದು

ಇಂದೋರ್ ಸಂಸ್ಥಾನದ ದಿವಾನ್‌ರಾಗಿರುವ ಸರ್ ನಾರಾಯಣ ಚಂದಾವರ್ಕರವರು ಕಳೆದ ವಾರ ಬೊಂಬಾಯಿನಲ್ಲಿ ನಡೆದ ದಕ್ಷಿಣ ಆಫ್ರಿಕಾ ರಿಲೀಫ್ ಫಂಡಿನ ಮೀಟಿಂಗಿಗಾಗಿ ಅಲ್ಲಿಗೆ ಬಂದಿದ್ದರು ಇದನ್ನು ನೋಡಿ ಅವರು ದಿವಾನ್‌ಗಿರಿಗೆ ರಾಜೀನಾಮೆ ಕೊಟ್ಟುಬಿಟ್ಟರೆಂದು ಕೆಲವರು ವರ್ತಮಾನವನ್ನು ಹುಟ್ಟಿಸಿದರು ಈ ಸುದ್ದಿಯು ನಿಜವಲ್ಲವೆಂದೂ, ಎರಡು ತಿಂಗಳ ರಜಾ ಪಡೆದಿಲ್ಲವೆಂದೂ ಅವರೇ ತಿಳಿಯಪಡಿಸಿ, ಕಳೆದ ಬುಧವಾರ ರಾತ್ರಿ ಬೊಂಬಾಯಿನಿಂದ ಇಂದೋರ್ ಸಂಸ್ಥಾನವನ್ನು ಕುರಿತು ಪ್ರಯಾಣ ಮಾಡಿದರು ಆ ಸಂಸ್ಥಾನದ ಮಹಾರಾಜಾಧಿರಾಜ ತುಕೋಜಿರಾವ್ ಹೋಲ್ಕರ್ ರವರು ಕಳೆದ 3 ನೇ ತಾ ಸೋಮವಾರ ಬೊಂಬಾಯಿನ ರಾವ್ ಬಹದೂರ್ ಆನಂದರಾವ್ ಆರ್ ತಾಲಚೇರ್ಕರವರ ಮೊಮ್ಮಗಳಾದ ಇಂದಿರಾಬಾಯಿ ಎಂಬ ಯುವತಿಯನ್ನು ಎರಡನೇ ಪತ್ನಿಯಾಗಿ ವರಿಸಿ ಇಂದೋರಿನ ಹೊಸ ಅರಮನೆಯಲ್ಲಿ ವಿವಾಹ ಮಾಡಿಕೊಂಡರು ಈ ಮಹಾರಾಜರವರಿಗೆ ಕಳೆದ ನವಂಬರ್ ತಾ 13 ಕ್ಕೆ 23 ವರುಷ ತುಂಬಿತು ಕಳೆದ ಜನವರಿ ತಾ 11 ರಲ್ಲಿ ಮಹಾರಾಜಾ ಶಿವಾಜಿರಾಯರವರು ಸಂಸ್ಥಾನದ ಆಳ್ವಿಕೆಯ ಭಾರವನ್ನು ತ್ಯಜಿಸಿಬಿಟ್ಟದ್ದರಿಂದ ಅಂದಿನಿಂದ ಮಹಾರಾಜಾ ತುಕೋಜಿರಾಯರವರು ಸಿಂಹಾಸನವನ್ನು ಹತ್ತಿ ಆಳ್ವಿಕೆಯನ್ನು ನಡಿಸುತ್ತಾ ಬಂದಿದಾರೆ ಇವರಿಗೆ ಮೊದಲನೇ ಪತ್ನಿಯವರಲ್ಲಿ ಒಬ್ಬ ಕುಮಾರನೂ ಒಬ್ಬ ಕುಮಾರಿಯೂ ಜನಿಸಿ ಬೆಳೆಯುತ್ತಿರುವರು ಈಚೆಗೆ ಏನೋ ಕಾಯಿಲೆ ಇದ್ದದ್ದರಿಂದ ಮಕ್ಕಳ ಸಮೇತ ವೈದ್ಯರ ಮಾತಿನಂತೆ ಸೀಮೆಗೆ ಹೋಗಿ ದೇಶಾಟನ ಮಾಡಿಕೊಂಡು ಕಳೆದ ನವಂಬರ್ ತಾ 28 ರಲ್ಲಿ ಬಂದು ಬೊಂಬಾಯಿ ಪಟ್ಟಣವನ್ನು ತಲಪಿದರು ಈ ಮೊದಲನೇ ಪತ್ನಿಯು ಇರುವಾಗ್ಗೆ ಮಹಾರಾಜರು ಎರಡನೇ ಪತ್ನಿಯನ್ನು ಮಾಡಿಕೊಂಡ ವಿಷಯದಲ್ಲಿ ಮಹಾರಾಜರಿಗೂ ಮೇಲ್ಕಂಡ ಅವರ ದಿವಾನ್‌ರವರಿಗೂ ಚರ್ಚೆ ನಡೆದಹಾಗೂ, ದಿವಾನ್‌ರವರು ಆ ಎರಡನೇ ಮದುವೆ ನಡೆಯುವಾಗ್ಗೆ ತಾವು ಇಂದೋರಿನಲ್ಲಿ ಹಾಜರಾಗಿರುವುದು ತಮಗೆ ಸಮ್ಮತವಲ್ಲವೆಂದು ತಿಳಿಸಿದಹಾಗೂ, ಅದರಮೇಲೆ ಮಹಾರಾಜರವರು ದಿವಾನ್‌ರವರನ್ನು ಬೊಂಬಾಯಿಗೆ ಹೋಗುವಂತೆ ಕಳುಹಿಸಿದಹಾಗೂ ದಿವಾನ್‌ರವರೇ ತಿಳಿಯಪಡಿಸಿದಾರೆ.

ಉತ್ತರದೇಶಕ್ಕೆ ಸೇರಿದ ಕೆಲವು ಸ್ಥಳಗಳಲ್ಲಿ ಮೊಹರಂ ಹಬ್ಬದ ಕಡೆಯ ದಿನ ಹಿಂದೂ ಮಹಮ್ಮದೀಯರಿಗೆ ಕೆಲವು ಗಲಭೆಗಳೂ ಕಾದಾಟಗಳೂ ನಡೆದಿರುವದಾಗಿ ಕಳೆದ ವಾರ ಬಂದಿರುವ ತಂತಿವರ್ತಮಾನಗಳಿಂದ ಗೊತ್ತಾಗುತ್ತದೆ ಆಗ್ರಾ, ಅಲಹಾಬಾದ್ (ಪ್ರಯಾಗ) ಪಟ್ಟಣಗಳಲ್ಲಿ ಗಲಭೆಗಳಾಗುವುದನ್ನು ತಪ್ಪಿಸಬೇಕೆಂದು ಸರ್ಕಾರದವರು ಹಿಂದೂ ದೊಡ್ಡಮನುಷ್ಯರನ್ನು ಆರಿಸಿ ಪೋಲೀಸಿನವರಂತೆ ನೇಮಿಸಿಕೊಂಡು ಪ್ರಜಾ ನೆಮ್ಮದಿಯನ್ನು ಕಾಪಾಡಬೇಕೆಂದು ನೇಮಕ ಮಾಡಿದ್ದರು ಆದರೂ ಅನೇಕ ಕಡೆಗಳಲ್ಲಿ ಜನಗಳ ಗುದ್ದಾಟಗಳು ನಡೆದವು ಷಹಜಾನ್‌ಪುರದಲ್ಲಿ ಮಹಮ್ಮದೀಯರು ಸೂಚನೆಕೊಡದೇನೇ ಹಿಂದುಗಳ ಮೇಲೆ ಬಿದ್ದು ಜಗಳವಾಡಿದ್ದಲ್ಲದೆ ಅಂಗಡಿ ಮುಂಗಟ್ಟುಗಳನ್ನು ಲೂಟಿಮಾಡಿ, ಜನಾನಾದೊಳಕ್ಕೆ ನುಗ್ಗಿ ರಾಂಗ್‌ಮಾಡಿದರು ಈ ಜಗಳ ಹೋರಾಟಗಳಲ್ಲಿ 100 ಜನಗಳಿಗೆ ಗಾಯಗಳಾದವು ವರ್ತಕರು ಅಂಗಡಿಗಳ ವ್ಯಾಪಾರವನ್ನು ನಿಲ್ಲಿಸಿಬಿಟ್ಟರು ಅತ್ತಲಾಗಿ ಕಲ್ಕತ್ತಾ ಪಟ್ಟಣದ ಬಳಿ ಇರುವ ಬಡ್ಜ್‌ಬಡ್ಜ್ ಎಂಬ ಸ್ಥಳದಲ್ಲಿ ಮಹಮ್ಮದೀಯರಲ್ಲೇ ಎರಡು ಗುಂಪುಗಳು ಹುಟ್ಟಿ ಪರಸ್ಪರ ಹೊಡೆದಾಡಿದರು ಅನೇಕರಿಗೆ ಗಾಯಗಳಾದವು ಈ ಗಲಭೆಯನ್ನು ಅಣಗಿಸುವುದಕ್ಕೆ ಪೋಲೀಸಿನವರು ಹೋದಾಗ ಮುಸಲ್ಮಾನರು ಏಕವಾಗಿ ಅವರ ಮೇಲೆ ಬಿದ್ದು ಹೊಡೆದು ಐದುಮಂದಿ ಪೋಲೀಸಿನವರಿಗೆ ತುಂಬಾ ಗಾಯಮಾಡಿದರು ಸರ್ಕಾರದವರು ಆಯುಧಸಮೇತ ಹೊಸ ಪೋಲೀಸಿನವರನ್ನು ಕಳುಹಿಸಿ, ತನಿಖೆ ಮಾಡುತ್ತಿದಾರೆ ಇನ್ನೊಂದು ಕಡೆ ಅಂದರೆ ಮಿರ್ಜಾಪುರದಲ್ಲಿ ಮಂಗಳವಾರ ರಾತ್ರಿ ತಾಬೂತುಗಳ ಮೆರವಣಿಗೆ ಹೋಗುತ್ತಿದ್ದಾಗ ಅಬ್ದುರ್ ರಹಿಮಾನ್ ಎಂಬುವನನ್ನು ಕೊಲ್ಲಬೇಕೆಂದು ಯಾರೋ ಸಿಡಿಮದ್ದಿನ ಗುಂಡನ್ನು ಎಸೆದರು ಇವನು ಹಿಂದೆ ಒಂದು ಸಿಡಿಮದ್ದಿನ ಗುಂಡಿನ ಮೊಕದ್ದಮೆಯಲ್ಲಿ ಸರ್ಕಾರದ ಕಡೆ ಸಾಕ್ಷಿ ಮುಂತಾದದ್ದು ಹೇಳಿದವನು ಆ ದಿನ ಆ ಗುಂಡು ಒಡೆಯದೆ ಹೋಯಿತು ಪೋಲೀಸಿನವರು ಅದನ್ನೆತ್ತಿ ನೀರಿನಲ್ಲಿ ಹಾಕಿ, ಎಸೆದವನನ್ನು ಹಿಡಿಯುವ ತರದೂದು ನಡಿಸುತ್ತಿದಾರೆ ಆ ಮಹಮ್ಮದೀಯನನ್ನು ಕೊಲ್ಲಬೇಕೆಂದು ಕಳೆದ ವರುಷ ಇದೇ ದಿನಗಳಲ್ಲಿ ಅವನು ಮನೆಯಲ್ಲಿದ್ದಾಗ ಯಾರೋ ಸಿಡಿಮದ್ದಿನ ಗುಂಡನ್ನು ಎಸೆದರು ಅದು ಒಡೆದಾಗ್ಯೂ ಆತನಿಗೆ ಅಪಾಯವೇನೂ ಸಂಭವಿಸಲಿಲ್ಲ

ತಾಲ್ಲೋಕು ವರ್ತಮಾನಗಳು

ಹುಣಸೂರು ತಾ|| ಚಿಕ್ಕಾಡಿಗನಹಳ್ಳಿ—ಅರಮನೆ ಕಂಟ್ರೋಲರ್ ಮ|| ರಾಮಕೃಷ್ಣರಾಯರೂ, ಲ್ಯಾಂಡ್ ಅಕ್ವಿಜಿಷನ್ ಸ್ಪೆಷಲ್ ಆಫೀಸರ್ ಮ|| ಎಲ್ ಕೃಷ್ಣರಾಯರೂ ತಾ 6 ರಲ್ಲಿ ದಯಮಾಡಿ ಆ ರಾತ್ರಿ ತಂಗಿ ಬೆಳಿಗ್ಗೆ ಹೊಡಕೆಕಟ್ಟೆ ಕಾವಲನ್ನು ಪರಾಂಬರಿಸಿ ವಾಪಸು ತೆರಳಿದರು ಇಲ್ಲಿಗೆ ಸಮೀಪವಾದ ಗಾವಡಿಗೆರೆ ಗ್ರಾಮವು 250 ಕ್ಕೆ ಮೇಲ್ಪಟ್ಟು ಮನೆ ಉಳ್ಳದ್ದಾಗಿಯೂ, 2,500 ಕ್ಕೆ ಜಾಸ್ತಿ ಪ್ರಜಾಸಂಖ್ಯೆ ಉಳ್ಳದ್ದಾಗಿಯೂ ಇರುತ್ತೆ ಇಲಿಗಳು ಸತ್ತದ್ದರಿಂದಲೂ, 4 5 ಮರಣವಾದ್ದರಿಂದಲೂ ಜನರು ಊರು ಬಿಟ್ಟು ಜೋಪಡಿಗಳಿಗೆ ಹೋಗಿದಾರೆ ಇಷ್ಟು ಭಾರಿ ಗ್ರಾಮಕ್ಕೆ ಯೂನಿಯನ್ ಇಲ್ಲದೆ ಇರುವದನ್ನು ನೋಡಿದರೆ ಗ್ರಾಮಸ್ಥರು ಏಕಮತ್ಯ ಉಳ್ಳವರಾಗಿಲ್ಲವೆಂದು ಚಿಂತೆಪಡಬೇಕು—ಈ ಗ್ರಾಮದ ಸಂತೆಯಲ್ಲಿ ಪಿಕ್ಪಾಕೆಟ್ ನವರ ಓಡಾಟವೇ ಜಾಸ್ತಿಯಾಗಿರೋಣದರಿಂದ ನಮ್ಮ ಪೋಲೀಸ್‌ದಫೇದಾರರು ನಿಗಾಕೊಟ್ಟಲ್ಲಿ ಬಡವರ ಕಷ್ಟನಷ್ಟಗಳು ಕಡಮೆಯಾಗುವವು—1 2 ತಿಂಗಳಿಂದ ಮಳೆ ಇಲ್ಲದ್ದರಿಂದ ಹುರಳಿ ಪಸಲು ಕೆಟ್ಟುಹೋಯಿತು

ಚನ್ನಪಟ್ಟಣ—ಸಕಾಲಕ್ಕೆ ಮಳೆ ಬಾರದ್ದರಿಂದ ಬೆಳೆಯುವುದೂ ಹುಲುಸಾಗಿಲ್ಲ ಧಾರಣೆ ಭಡಾವಾಗುತ್ತಿದೆ ಅಕ್ಕಿ ರೂಪಾಯಿಗೆ 6 ಸೇರೂ, ರಾಗಿ 13—14 ಸೇರೂ ಮಾರುತ್ತದೆ ರೇಷ್ಮೆಯು ಚೆನ್ನಾಗಿಲ್ಲ ಯಾಕೆಂದರೆ ಉಪ್ಪುನೀರಳಿಸೊಪ್ಪಿಗೆ ತಂಪಿಲ್ಲ ಇದೂ ಅಲ್ಲದೆ ಬೆಳಮಾಡುವ ಕ್ರಮವೂ ಚೆನ್ನಾಗಿಲ್ಲ ವಿಶೇಷವಾಗಿ ಈ ತಾಲ್ಲೂಕಿನಲ್ಲಿ ಈ ಕೆಲಸ ಮಾಡುವವರಿವಾರೆ ಸರ್ಕಾರದವರು ಮೊದಲು ಈ ತಾಲ್ಲೋಕಿನಲ್ಲಿರುವವರಿಗೆ ರೇಷ್ಮೆ ಸಾಕುವ ಕ್ರಮವನ್ನು ಕಲಿಸಿದರೆ ಉತ್ತಮ ಇಲ್ಲಿನ ಇಂಡಸ್ಟ್ರಿಯಲ್ ಸ್ಕೂಲಿನಲ್ಲಿ ರೇಷ್ಮೆ ವೃತ್ತಿಗಾಗಿ ಒಂದು ರೀಲಿಂಗ್ ಯಂತ್ರವನ್ನು ತಯಾರುಮಾಡುತ್ತಿರುವರು—ಚನ್ನಪಟ್ಟಣದ ಸುತ್ತುಮುತ್ತಲೂ ಪಂಚಮರ ಗ್ರಾಮಗಳಿವೆ ಸರ್ಕಾರದವರು ಅಂಥಾಗ್ರಾಮಗಳಲ್ಲಿ ಪಾಠಶಾಲೆಯನ್ನಿಡಿಸಿದರೆ ಕುರುಡರಿಗೆ ಕಣ್ಣು ಕೊಟ್ಟಂತಾಗುವದು ಮಂಗಳವಾರಪೇಟೆ ಪಂಚಮಸ್ಕೂಲು ಅಭಿವೃದ್ಧಿಸ್ಥಿತಿಯಲ್ಲಿರುವದು ನೀರಿನ ಸರಬರಾಯಿಗಾಗಿ 75,000 ರೂಪ ಯಿ ಅಂದಾಜಾಗಿ ಪ್ಲಾನೂ ಕೂಡಾ ತಯಾರಾಗಿದೆಯಂತೆ ವರ್ತಕಮಂಡಲಿಯವರು ಏನಾದರೂ ಕೊಟ್ಟಾರೋ ಎಂದು ನಿರೀಕ್ಷಿಸುತ್ತಿರುವಲ್ಲಿ ಯಾರೂ ಮುಂದರಿದು ಬರಲಿಲ್ಲ ಸರ್ಕಾರದವರು ತಾವೇ ಯೋಚಿಸುತ್ತಿರುವ ಈ ಕಾರ್ಯವನ್ನು ಪೂರೈಸಿ, ಉಳಿಗೆಯ ಮೂಲಕ ಮೊಬಲಗನ್ನು ವಸೂಲ್ಮಾಡುವದು ಸಾಧ್ಯ ಇಂಥಾ ದೊಡ್ಡ ಊರಿನಲ್ಲಿ ಒಂದು ಮಾರ್ಕೆಟ್ಟು ಇಲ್ಲದಿರುವದು ಶೋಚನೀಯವಾಗಿದೆ ಸಿವಿಲ್ ಸರ್ಜನ್‌ರು ಬಂದು ಪುರಾಭಿವೃದ್ಧಿಗೂ ಮಾರ್ಕೆಟ್ಟಿಗೂ ಸ್ಥಳವನ್ನು ಅಜಮಾಯಿಷಿಮಾಡಿಕೊಂಡು ಹೋದರು ಈಚೆಗೆ ಅದರ ಸುದ್ದಿಯೇ ಇಲ್ಲ ಮಾರ್ಕೆಟ್ಟು ತುಂಬಾ ಆವಶ್ಯಕವಾಗಿದೆ—ಈಗ ಕುರಿ ದನ ಕೊಯ್ಯುವಸ್ಥಳಗಳು ಅವರವರ ಮನೆಗಳೇ ಆಗಿವೆ ಇದರಿಂದ ಅನಾರೋಗ್ಯಕ್ಕೆ ಆಸ್ಪದವುಂಟು—30 ನೇ ತಾ ಭಾನುವಾರ ಶ್ರೀಮನ್‌ಮಹಾರಾಜರವರು ಮೈಸೂರಿಂದ ಬೆಂಗಳೂರಿಗೆ ಹೋಗುತ್ತಾ ಚನ್ನಪಟ್ಟಣದ ರಾಜಬೀದಿಯಲ್ಲಿ ಕೆಟ್ಟುಹೋದ ಮೋಟರ್ ಗಾಡಿಯನ್ನು ರಿಪೇರಿ ಮಾಡುತ್ತಿದ್ದವರನ್ನು ನೋಡಿ ತಮ್ಮ ಗಾಡಿಯನ್ನು ನಿಲ್ಲಿಸಿ ಅವರಿಗೆ ಬೇಕಾದ ಸಾಮಾನನ್ನು ಕೊಟ್ಟರು ಆ ಸಮಯದಲ್ಲಿ ಪೋಲೀಸ್ ಜವಾನನು ನೋಡುತ್ತಿದ್ದ ಜನರನ್ನು ಓಡಿಸುತ್ತಿದ್ದದ್ದನ್ನು ಕಂಡು "ಯಾಕೆ ಗದರಿಸುತ್ತಿ? ಸುಮ್ಮನಿರು ನೋಡಲಿ" ಎಂದು ಆತನಿಗೆ ಹೇಳಿದರು ಇದರಿಂದ ಅವರು ಎಷ್ಟುಮಟ್ಟಿಗೆ ದೀನ ದಯಾಪರರಾಗಿದಾರೆಂಬುವದು ವ್ಯಕ್ತವಾಗುತ್ತದೆ—ಪೋಸ್ಟ್ ಆಫೀಸು ಹಳೇಮನೆಯಿಂದ ಹೊಸ ಮನೆಗೆ ವರ್ಗವಾಯಿತು ಬಹಳ ಅಲಂಕಾರವಾಗಿರುವ ಈ ಕಟ್ಟಡದ ಹತ್ತಿರ ಹೆಂಡದ ಪಡಖಾನೆಯೂ ಅದರ ಸ್ನೇಹಿತರಿಂದ ಓಡ್ತರಗುಡಿಸಲುಗಳೂ ಇವೆ ಮ್ಯುನಿಸಿಪಲ್ ಪ್ರೆಸಿಡೆಂಟರು ಇವನ್ನೂ ಇವರನ್ನೂ ಬೇರೆ ಕಡೆಗೆ ವರ್ಗಾಯಿಸಿದರೆ ಉತ್ತಮ—ಬೇಕಾದ ಸ್ಥಳದಲ್ಲಿದ್ದ ದೀಪವನ್ನು ತೆಗೆದು ಅವಶ್ಯವಿಲ್ಲದ ಸ್ಥಳದಲ್ಲಿ ಇಟ್ಟಿರುವದು ಆಶ್ಚರ್ಯವಾಗಿದೆ, ಅಂದರೆ, ಒಂದೇ ಸ್ಥಳದಲ್ಲಿ ಎರಡು ದೀಪಗಳನ್ನಿಟ್ಟಂತಾಯಿತು ಇನ್ನು ಕೆಲವು ಸ್ಥಳಗಳಲ್ಲಿ ಬರೀಕಂಭಗಳು ನಿಂತಿವೆ ಕೆರೆ ಹತ್ತಿರ ಮುಖ್ಯವಾಗಿ ಇಡಬೇಕು ಅನೇಕರು ರಾತ್ರಿಕಾಲದಲ್ಲಿ ನೀರಿಗೆ ಹೋಗುತ್ತಾರೆ ದೀಪವಿಲ್ಲದೆ ಅನಾಹುತಕ್ಕೆ ಕಾರಣವಾಗಿರುವದು—ಕೆಂದು ಗೊಂದುಗಳಲ್ಲಿ ಜನರು ಹೇಸಿಕೆ ಮಾಡುವದನ್ನು ಬಿಟ್ಟಿಲ್ಲ ಮನೆಯ ಮುಂದೆ ಸ್ಥಳವಿದ್ದರೆ ಮನೆಯವರಿಗೆ ಅದೇ ಹೇಸಿಕೆ ಮನೆಯಾಗಿರುವದು ಸರ್ಕಾರದವರು ಊರಾಚೆ ಕೆಲವು ಪಬ್ಲಿಕ್ ಕಕ್ಕಸುಗಳನ್ನು ಕಟ್ಟಿಸಿದರೆ ಪ್ರಜಾಕ್ಷೇಮಕ್ಕೆ ಮಾಡಬೇಕಾದ ಒಂದು ಮುಖ್ಯಕಾರ್ಯವನ್ನು ಮಾಡಿದಂತಾಗುವದು ಅಲ್ಲದೆ ಆರೋಗ್ಯವನ್ನು ಕಾಪಾಡಿಕೊಳ್ಳುವ ಭಾಗದಲ್ಲಿ ಜನರೂ ವಿಶೇಷ ಲಕ್ಷ್ಯಕೊಡಬೇಕು—ಮೊಹರಂ ಹಬ್ಬದ ಕತಲ್‌ದಿವಸ ಅಂದರೆ 9 ನೇ ತಾ ಮಂಗಳವಾರ ಸಾಯಂಕಾಲ ಒಂದು ಅನಾಹುತ ನಡೆಯಿತು ಏನಂದರೆ ಜನರೆಲ್ಲರೂ ಈ ಊರ ಕೆರೆಗೆ ಹೊತ್ತುಕೊಂಡು ಬರುವ ತಾಬೂತುಗಳನ್ನೂ ನಡೆಯುವ ತಮಾಷೆಗಳನ್ನೂ ನೋಡತೋಸುಗ ಕೆರೆಯ ಏರಿಯ ಮೇಲೆ ಕಿಕ್ಕಿರಿಯುವಂತೆ ನಿಂತಿದ್ದರು ಹಾಗೆ ಇಬ್ಬರು ಹುಡುಗರು ಏರಿಯ ಮೇಲಿರುವ ಕಲ್ಲು ಮಂಟಪದ ಮೇಲೆ ನಿಂತು ನೋಡೋಣ ಎಂದು ಮಂಟಪದ ಮೇಲೆ ಹತ್ತಿದಾಗ ಹುಡುಗರ ಭಾರವನ್ನು ಹೊರಲಾರದೆ ಆ ಮಂಟಪದ ಕಲುಪ್ರಗಲ್ಲುಗಳೂ ಹಾಸುಗಲ್ಲುಗಳೂ ಸಹ ತುಂಡು ತುಂಡಾಗಿ ಮುರಿದು ಬಿದ್ದು ಆ ಹುಡುಗರು ಕಲ್ಲುಗಳ ಅಡಿಯಲ್ಲಿ ಸಿಕ್ಕಿದರು ಅಮಲ್ದಾರ್ರು ಬಂದು ಜನಗಳ ಸಮ್ಮುಖದಿಂದ ಕಲ್ಲುಗಳನ್ನೆತ್ತಿಸಿ ನೋಡುವಾಗ್ಗೆ ಇಬ್ಬರೂ ಮಡುವ ದೀಯರೆಂತಲೂ, ಒಬ್ಬನಿಗೆ ತಲೆಯೂ, ಮತ್ತೊಬ್ಬನಿಗೆ ಮೈಯೂ ಜಖಮಾಗಿರುವಂತಲೂ ಕಂಡುಬಂದಿತು ಪೋಲೀಸ್ ಜವಾನನು ಅವರನ್ನು ಎರಡು ಸಲ ಓಡಿಸಿದಾಗ್ಯೂ ಅವರು ಆ ಮಂಟಪದ ಮೇಲೆ ಹತ್ತಿದರು ಕೆಳಗೆ ಎಳೆದವರು ಇರಲಿಲ್ಲ ವೈಸ್ ಪ್ರೆಸಿಡೆಂಟರು ಈ ಮಂಟಪವನ್ನೂ ಕೆಡಹಿಸುತ್ತಾರೆಂದು ನಂಬುತ್ತೇವೆ ಮೊಹರಂ ಹಬ್ಬದ ಫಲ ತಾಂಡವಿಷ್ಟೆ ಇನ್ನು ಕಾಮನ ಹಬ್ಬದ ಪರಿಣಾಮಕ್ಕೆ ಕಾದಿಷ್ಟೇವೆ

ದರ್ಬಾರ್ ಡೇ ಉತ್ಸವಗಳು

—೧—

ಕದಾರು

ತಾ 1 ನೆ ಶುಕ್ರವಾರ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ಕಿರೀಟಧಾರಣೆ ಉತ್ಸವದ ಜ್ಞಾಪಕಾರ್ಥವಾಗಿ ನಮ್ಮ ಎ ವಿ ಸ್ಕೂಲ್ ಹೆಡ್ ಮಾಸ್ಟರವರು ಊರಿನ ಅಧಿಕಾರಿಗಳನ್ನೂ ದೊಡ್ಡಮನುಷ್ಯರನ್ನೂ ಬರಮಾಡಿಕೊಂಡು ಬಾಲಕರ ಆಟ ಪಾಟ ವಿನೋದಗಳನ್ನು ನಡಿಸಿದರು ಅನಂತರ ಸ್ಕೂಲಿನೊಳಗೆ ಎಲ್ಲರೂ ಸಭೆಸೇರಿದರು ನಮ್ಮ ಅಮಲ್ದಾರ್ರವರು ಅಗ್ರಾಸನವನ್ನು ಅಂಗೀಕರಿಸಿದನಂತರ ಬಹು ಸ್ವಾರಸ್ಯವಾಗಿ ಬ್ರಿಟಿಷ್ ಸಾಮ್ರಾಜ್ಯ ವೈಭವವನ್ನು ಮ|| ಶ್ರೀನಿವಾಸರಾಯರು ಓದಿ ಹೇಳಿದ ಬಳಿಕ ಮಂಗಳ ಬೆಳಿದು ಪಾನ್ ಸುಪಾರಿ ಹಂಚಿಕೆಯಾಗಿ ಸಭೆ ಮುಕ್ತಾಯವಾಯಿತು

ನಂಜನಗೂಡು

ದರ್ಬಾರ್ ಡೇ ಉತ್ಸವವು ಇಲ್ಲಿನ ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿ ಅತಿ ವಿಜೃಂಭಣೆಯಾಗಿ ಆಚರಿಸಲ್ಪಟ್ಟಿತು ಸಬ್ ಡಿವಿಜನ್ ಸಾಹೇಬರಾದ ಎನ್ ಸುಬ್ಬರಾಯರು ಸಭೆಯ ಅಗ್ರಾಸನವನ್ನು ವಹಿಸಿದ್ದರು ಅಮಲ್ದಾರರವರೂ, ಲಾಯರುಗಳೂ, ಕೆಲವು ಮಂದಿ ದೊಡ್ಡಮನುಷ್ಯರೂ ಸಹ ಬಂದಿದ್ದರು ಮ|| ಸುಬ್ರಹ್ಮಣ್ಯಯ್ಯನವರು ರಾಜಭಕ್ತಿಯನ್ನು ಕುರಿತು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು ಪುಷ್ಪಾದ್ಯಲಂಕಾರಗಳಿಂದ ಪ್ರಕಾಶಿಸುತ್ತಿದ್ದ ಸಾರ್ವಭೌಮರವರ ಪಟದ ಸಮುಖದಲ್ಲಿ ಇಂತು ಸರ್ವರೂ ಮುಜರೆಮಾಡಿ ಮೂರಾವರ್ತಿ ಚಕ್ರವರ್ತಿ ದಂಪತಿಗಳಿಗೂ ನಮ್ಮ ಶ್ರೀಮನ್ಮಹಾರಾಜರವರಿಗೂ ಜಯಘೋಷಪೂರ್ವಕವಾಗಿ ಶ್ರೇಯಸ್ಸನ್ನು ಕೋರಿ, ಸಭೆಯನ್ನು ಕೊನೆಮುಟ್ಟಿಸಿದರು

ಹೊಸಕೋಟೆ

ಇಲ್ಲಿ ಹವ ಚೆನ್ನಾಗಿದೆ ಬೆಳೆಗಳೂ ತಕ್ಕಮಟ್ಟಿಗೆ ಚೆನ್ನಾಗಿಯೇ ಇವೆ ಸುತ್ತಮುತ್ತಣ ಹಳ್ಳಿಗಳಲ್ಲಿ ಪ್ಲೇಗ್ ವಿಶೇಷವಾಗಿರುತ್ತದೆ ಮ್ಯುನಿಸಿಪಲ್ ಕೆಲಸಗಳು ಸಮರ್ಪಕವಾಗಿ ನಡೆಯುವವು ನಮ್ಮ ಅಮಲ್ದಾರ್ ಮ|| ಸೋಮಣ್ಣರಯ್ಯನವರೂ, ಗ್ರಾಮದ ದೊಡ್ಡಮನುಷ್ಯರುಗಳೂ ಸೇರಿ ಧಾತ್ರಿಹವನವನ್ನು ಬಹಳ ವಿಜೃಂಭಣೆಯಿಂದ ನಡಿಸಿದರು—ತಾ 12 ನೇ ಶುಕ್ರವಾರ ಕಾರೊನೇಷನ್ ದಿನವಾದ್ದರಿಂದ ಹೆಡ್ ಮಾಸ್ಟರ್ ಮ|| ರಾಮಕೃಷ್ಣಯ್ಯನವರೂ, ಇತರ ಮಾಸ್ಟರುಗಳೂ ಸ್ಕೂಲನ್ನು ತಳಿರುತೋರಣಗಳಿಂದಲೂ, ಧ್ವಜಗಳಿಂದಲೂ ಬಹು ಚೆನ್ನಾಗಿ ಅಲಂಕರಿಸಿದರು ಹೆಡ್ ಮಾಸ್ಟರವರು ನೀತಿ, ರಾಜಭಕ್ತಿ ಮುಂತಾದ ವಿಷಯ ಬಹಳ ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು ಬಾಲಕರು ಕಿಂಡರ್ ಗಾರ್ಟನ್ನಲ್ಲಿ ಮಾಡಿದ ಕೆಲಸಗಳೂ, ಬಾಲಕಿಯರು ಹಾರ್ಮೋನಿಯಂನಿಂದ ಹಾಡಿದ ಸಂಗೀತವೂ ಕರ್ಣಾನಂದವಾಗಿತ್ತು ನಮ್ಮ ಅಮಲ್ದಾರರೇ ಛೇರ್‌ಮ್ಯಾನ್ ರಾಗಿದ್ದರು ಬಾಲಕಿಯರಿಂದ ಮಂಗಳವು ಪಾಡಲ್ಪಟ್ಟಿತು ಸಭಿಕರಿಗೆ ಹುರಿಹಿಟ್ಟು ಪಾನ್‌ಸುಪಾರಿಯೂ, ಬಾಲಕಬಾಲಕಿಯರಿಗೆ ಮಿಠಾಯಿಯೂ ಹಂಚಲ್ಪಟ್ಟು ಸಭೆ ಮುಕ್ತಾಯ ಹೊಂದಿತು

ಚನ್ನರಾಯಪಟ್ಟಣ

ಕಳೆದ 12 ತಾ ಶುಕ್ರವಾರ ನಮ್ಮ ಚಕ್ರವರ್ತಿ ಸಾರ್ವಭೌಮರು ಮುದ್ದಾಗಿ ದರ್ಬಾರು ನಡಿಸಿ ತಮಗೆ ಹಿಂದೂದೇಶದವರಲ್ಲಿಯೂ, ನಮ್ಮ ಪ್ರಾಚೀನ ಪದ್ಧತಿಗಳಲ್ಲಿಯೂ ಇರುವ ವಿಶ್ವಾಸವನ್ನು ತೋರ್ಪಡಿಸಿದ ಜ್ಞಾಪಕಾರ್ಥವಾಗಿ ಇಲ್ಲಿನ ಎ ವಿ ಸ್ಕೂಲಿನಲ್ಲಿ ಉಪಾಧ್ಯಾಯರೂ ಬಾಲಕರೂ ಸೇರಿ ಚಕ್ರವರ್ತಿ ದಂಪತಿಗಳ ಮತ್ತು ನಮ್ಮ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಮಾಡಿ ಚಕ್ರವರ್ತಿ ದಂಪತಿಗಳಿಗೆ ಮುಜರೆಮಾಡಿ ಸಭೆಯನ್ನು ಮುಕ್ತಾಯಮಾಡಿದರು ಆ ದಿನ ಸಾಯಂಕಾಲ 4 ಗಂಟೆಯಲ್ಲಿ ವೆಸ್ಲಿಯನ್ ಮಿಷನ್ ಗರಲ್ಸ್ ಸ್ಕೂಲ್ ಕಟ್ಟಡದಲ್ಲಿ ಹೆಡ್ ಮಾಸ್ಟರ್ ಮ|| ಛಾಯಾ ಸಾಸಿ ಹಯ್ಯನವರ ಕೋರಿಕೆಯಂತೆ ಶಿರಸ್ತೇದಾರ್ರು, ಸಬ್ ರಜಿಸ್ಟ್ರಾರವರೂ, ಪೋಲೀಸ್ ಇನ್ಸ್‌ಪೆಕ್ಟರೂ, ಮಾಸ್ಟರುಗಳೂ ಸೇರಿದರು ಬಾಲಿಕೆಯರಲ್ಲಿ ಇಬ್ಬರು ಬಹು ಇಂಪಾಗಿ ಗಾನಮಾಡಿದರು ಹೆಡ್ ಮಾಸ್ಟರು ಸಭೆಯ ಉಪಕ್ರಮದಲ್ಲೇ ಸಭೆಯ ಉದ್ದೇಶವನ್ನು ಬಹಳ ವಿಶದವಾಗಿ ಎಲ್ಲರಿಗೂ ತಿಳಿಸಿದರು ಬಾಲಕಿಯರಿಗೆ ಮಿಠಾಯಿ ತಿಂಡಿ ಹಂಚಲ್ಪಡುತ್ತಿರುವಾಗ ಮ|| ಸಬ್ ರಿಜಿಸ್ಟ್ರಾರ್ ಎ ಕೃಷ್ಣಮೂರ್ತಿಶಾಸ್ತ್ರಿಗಳೂ, ಮ ಶಿರಸ್ತೇದಾರ್ ಬಿ ಗರುಡಾಚಾರ್ರವರೂ ಬಾಲಕಿಯರಿಗೆ ತಿಂಡಿ ತರಿಸಿ ಹಂಚಿಸಿದರು ಬಾಲಕಿಯರಿಂದ ಚಕ್ರವರ್ತಿ ದಂಪತಿಗಳ, ನಮ್ಮ ಶ್ರೀಮನ್ಮಹಾರಾಜ ದಂಪತಿಗಳ, ಯುವರಾಜ ದಂಪತಿಗಳ ಶ್ರೇಯಃಪ್ರಾರ್ಥನೆಮಾಡಲ್ಪಟ್ಟು ಸಭೆಯು ಮುಕ್ತಾಯವಾಯಿತು

ಬೆಂಗಳೂರು ತಾಲ್ಲೂಕು ಕೆಂಗೇರಿ

ಕಳೆದ 12 ನೇ ತಾ ಶುಕ್ರವಾರ ದೆಹಲಿಯಲ್ಲಿ ನಡೆದ ಜಾರ್ಜ್ ಸಾರ್ವಭೌಮರವರ ಕಿರೀಟಧಾರಣೆಯ ದರ್ಬಾರ್ ಮಹೋತ್ಸವದ ಜ್ಞಾಪಕಾರ್ಥವಾಗಿ ಈ ಊರಿನ ಗೌರ್ನಮೆಂಟ್ ಸ್ಕೂಲ್ ಕಟ್ಟಡದಲ್ಲಿ ಈ ಗ್ರಾಮದ ಶೇಖ್ದಾರ್ ಮ|| ನರಸಿಂಹಯ್ಯನವರೂ, ಸ್ಟೇಷನ್ ಹೌಸ್ ಮಾಸ್ಟರ್ ಮ ನಾರಾಯಣಯ್ಯನವರೂ ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರ್ ಮ ಡಿ ರಾಮಾಚಾರ್ರೂ, ಆ ಮೇಷ್ಟರುಗಳೂ, ಗರ್ಲ್ ಸ್ಕೂಲ್ ಮಾಸ್ಟರುಗಳೂ, ಕೆಲವು ವೆ ಲಗಳೂ, ಇತರ ಗ್ರಾಮ ಮುಖಂಡರುಗಳೂ, ಸುಮಾರು 100 ಮಂದಿ ಬಾಲಕರೂ, 10 ಮಂದಿ ಬಾಲಕಿಯರೂ ಸಹಾ ಆ ದಿನ ಮೂರುಗಂಟೆಗೆ ಸೇರಿದರು ಮ ಶೇಖ್ದಾರ್ ನರಸಿಂಹಯ್ಯನವರು ಸಭೆಯ ಅಗ್ರಾಸನವನ್ನು ವಹಿಸಿದರು ಮ ರಾಮಾಚಾರ್ಯರು ಇಂಗ್ಲಿಷ್ ರಾಜ್ಯಭಾರದಿಂದ ಜನಗಳಿಗೆ ಉಂಟಾಗಿರುವ ಪ್ರಯೋಜನಗಳನ್ನು ತಿಳಿಸಿದರು ಮ ಆರ್ ರಾಮಣ್ಣನವರು ಈ ಸ್ಕೂಲಿನ 10 ವರುಷದ ಹಿಂದಿನ ರಿಪೋರ್ಟುಗಳನ್ನು ಓದಿ ಹೇಳಿದರು ಮ ರಾಮಾಚಾರ್ಯರು ಜಾರ್ಜ್ ಸಾರ್ವಭೌಮರ ಚರಿತ್ರೆಯನ್ನು ಓದಿ ಹೇಳಿದರು ಅನಂತರ ಮೈಸೂರು ದೇವನ್ಯಾರಾಧ್ಯರ ಪಾಟ ಕಚೇರಿಯೂ, ಬಾಲಕಿಯರ ಗಾನಗಳೂ, ಬಾಲಕರ ಆಟಗಳೂ ನಡೆದವು ಸರ್ವರಿಗೂ ಗಂಧ ಪುಷ್ಪ, ತಾಂಬೂಲಾದಿಗಳೂ, ಬಾಲಕ ಬಾಲಕಿಯರಿಗೆ ತಿಂಡಿ, ಇನಾಮುಗಳೂ ಹಂಚಲ್ಪಟ್ಟು ಕಡೆಯಲ್ಲಿ ಚಕ್ರವರ್ತಿ ಸಾರ್ವಭೌಮರ ಮತ್ತು ನಮ್ಮ ಶ್ರೀಮನ್‌ಮಹಾರಾಜರವರ ಶ್ರೇಯಃಪ್ರಾರ್ಥನೆಗಳು ನಡೆದು ಸಭೆಯನ್ನು ಮುಕ್ತಾಯ ಮಾಡಲಾಯಿತು

ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಂದಿಕೆರೆ

ಡಿಸೆಂಬರು 12 ನೇ ತಾ ಇಂಡಿಯಾ ದೇಶದ ಜಾರ್ಜ್ ಚಕ್ರವರ್ತಿಗಳವರು ಡಿಲ್ಲಿಯಲ್ಲಿ ದರ್ಬಾರುಮಾಡಿದ ಮಹೋತ್ಸವದ ದಿನವಾದ್ದರಿಂದ ಈ ಗ್ರಾಮದ ಸ್ಕೂಲ್ ಕಟ್ಟಡವು ಕದಳೀ, ತೋರಣಾದಿಗಳಿಂದ ಅಲಂಕರಿಸಲ್ಪಟ್ಟಿತು ಜಾರ್ಜ್ ಪ್ರಭುಗಳ ಮತ್ತು ಶ್ರೀಮನ್ಮಹಾರಾಜರವರ ಫೋಟೋಗಳು ಸಿಂಹಾಸನದಲ್ಲಿ ಇಡುವಾಗ ವಾದ್ಯಗಳು ಘೋಷಿಸುತ್ತಿದ್ದವು ಮ|| ಸೂಪ್ರವೈಸರು ಅಗ್ರಾಸನವನ್ನು ವಹಿಸಿ ಗಂಭೀರವಾದ ಮಾತುಗಳಿಂದ ಉಪನ್ಯಾಸಮಾಡಿದರು ಮ|| ಶೇಕದಾರ್ ಸುಬ್ಬರಾಯರು ಇಂಗ್ಲಿಷರಿಂದ ಉಂಟಾದ ಪ್ರಯೋಜನಗಳನ್ನು ಕುರಿತು ಉಪನ್ಯಾಸಮಾಡಿದರು ಮ|| ತಿಮ್ಮಪ್ಪಯ್ಯನವರು ವಿದ್ಯೆಯ ವಿಷಯವನ್ನು ಬಹು ಸ್ವಾರಸ್ಯವಾಗಿಯೂ, ಮ|| ನರಸಿಂಹರಾಯರು ಏಕಮತ್ಯದ ವಿಷಯವಾಗಿಯೂ ಜನಗಳ ಮನಸ್ಸು ಹಿಡಿಯುವಂತೆ ಪ್ರಸಂಗಿಸಿದರು ಆ ಮೇಲೆ ಸಾರ್ವಭೌಮರ, ಮಹಾರಾಜರವರ ಶ್ರೇಯಃಪ್ರಾರ್ಥನೆಗಳಾದವು ಪುಷ್ಪ ಗಂಧ ತಾಂಬೂಲಾದಿಗಳಿಂದ ಸಭಿಕರನ್ನು ಸಂತೋಷಿಸಿದ ಮೇಲೆ ಹುಡುಗರನ್ನು ಆಟ ಪಾಟಗಳಿಂದ ಉತ್ಸಾಹಪಡಿಸಿ ಫಲಹಾರಾದಿಗಳನ್ನು ಹಂಚಿ ಸಭೆಯನ್ನು ಬರಖಾಸ್ತುಮಾಡಬೇಕೆಂದು ಇರುವಾಗ ಈ ಉತ್ಸವದಿನದಲ್ಲಿ ರೀಡಿಂಗ್ ರೂಂ ಸ್ಥಾಪಿಸಬೇಕೆಂದು ಮುಸಾಫರ ಪ್ರೇರಣೆಯಿಂದ ಸ್ಥಾಪಿತವಾಯಿತು ಮ|| ಶೇಕದಾರ್ ಸುಬ್ಬರಾಯರೂ ಮ ಪೊನ್ನಪ್ಪನವರೂ ಇದಕ್ಕೆ ಅನುಮೋದಿಸಿ ಸ್ಥಾಪಿಸಿದರು ಇದು ಶಾಶ್ವತವಾಗಿ ನಡೆದು ಪ್ರಜೆಗಳಿಗೆ ಉಪಕಾರವಾಗಲೆಂದು ಪ್ರಾರ್ಥಿಸುತ್ತೇವೆ

ಚನ್ನರಾಯಪಟ್ಟಣ ತಾಲ್ಲೂಕು ಹಿರಿಸಾವೆ

ಈ ಡಿಸೆಂಬರು ಮಾಹೆ 12 ನೇ ತಾ ಶುಕ್ರವಾರ ಬೆಳಿಗ್ಗೆ ಇಲ್ಲಿನ ಕನ್ನಡ ಬಾಯ್ಸ್ ಸ್ಕೂಲ್ ಕಟ್ಟಡದಲ್ಲಿ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ಕಿರೀಟಧಾರಣೆಯ ಮಹೋತ್ಸವದ ಜ್ಞಾಪಕಾರ್ಥವಾಗಿ ಸಭಾಕೌತುಕವನ್ನು ನೆರವೇರಿಸಲು ಸ್ಕೂಲ್ ಮಾಸ್ಟರುಗಳೂ, ಕಮಿಟಿಮೆಂಬರುಗಳೂ ಮುಖ್ಯಸ್ಥರಾದವರೆಲ್ಲಾ ಸೇರಿ, ಬಾಲಕ ಬಾಲಕಿಯರಿಂದ ಚಕ್ರವರ್ತಿ ಸಾರ್ವಭೌಮರವರ ಶ್ರೇಯಃ ಪ್ರಾರ್ಥನಾಪೂರ್ವಕವಾದ ಹಾಡುಗಳನ್ನು ಹೇಳಿಸಿದರು

ಅಗ್ರಾಸನವನ್ನು ವಹಿಸಿದ್ದ ಹೋಬಳಿ ಶೇಕದಾರ್ ಮ|| ಬಿ ಆರ್. ನರಸಿಂಹಯ್ಯನವರು ಬ್ರಿಟಿಷ್ ಚಕ್ರಾಧಿಪತ್ಯದ ರಾಜ್ಯಭಾರ ವಿಷಯದಲ್ಲಿ ಉಪನ್ಯಾಸಮಾಡಿ, ಪೂರ್ವಕಾಲದಲ್ಲಿದ್ದ ದ್ವೈಕ್ಯಂಶಲೂ ಸಮಸ್ತ ಭಾಗದಲ್ಲೂ ಈಗ ಪ್ರಜೆಗಳಿಗೆ ಸೌಕರ್ಯವಿರತಕ್ಕ ಭಾಗಗಳೆಲ್ಲಾ ವಿವರಿಸಿದರು ಇಲ್ಲಿನ ಬಾಯ್ಸ್ ಸ್ಕೂಲ್ ಹೆಡ್ ಮಾಸ್ಟರು ಮ|| ಸಿ. ವೆಂಕಟರಾಮಯ್ಯನವರು ವಿದ್ಯದ ವಿಷಯದಲ್ಲಿ ಈಗ ಇರತಕ್ಕ ವಿಸ್ತಾರದಿನ ಯೋಗ್ಯತೆ ಮತ್ತು ಪ್ರಯೋಜನಗಳನ್ನು ಕುರಿತು ಉಪನ್ಯಾಸಮಾಡಿದರು ಮಧ್ಯಾಹ್ನ 1½ ಘಂಟೆಗೆ ಹುಡುಗರಿಂದ ಹುಡುಗನಾಟಕ ಇನಾಮುಗಳನ್ನೂ, ತಿಂಡಿಗಳನ್ನೂ ಹಂಚಿದರು. ಚಕ್ರವರ್ತಿ ಸಾರ್ವಭೌಮರವರಿಗೂ, ಅವರ ಕುಟುಂಬಕ್ಕೂ, ನಮ್ಮನ್ನಾಳುವ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ ರವರಿಗೂ, ಶ್ರೀಮತ್ ಯುವರಾಜರವರಿಗೂ ಆಯುರಾರೋಗ್ಯಾದಿಗಳನ್ನು ದಯಪಾಲಿಸಲೆಂದು ಸರ್ವರೂ ಭಗವಂತನನ್ನು ಪ್ರಾರ್ಥಿಸಿದರು. ಸಭೆಯವರಿಗೆಲ್ಲಾ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟ ನಂತರ ಎಲ್ಲರೂ ಸಂತೋಷಯುಕ್ತವಾಗಿ ಸಭೆಯನ್ನು ಮುಕ್ತಾಯಮಾಡಿ ತೆರಳಿದರು

ನೆಲಮಂಗಲ ತಾಲ್ಲೂಕು ಶಿವಗಂಗೆ

ಕಳೆದ ಶುಕ್ರವಾರ ದರ್ಬಾರ್ ಡೇ ಮಹೋತ್ಸವವು ನೆಲಮಂಗಲದ ತಾಲ್ಲೂಕು ಶಿವಗಂಗೆ ಸ್ಕೂಲಿನಲ್ಲಿ ಚೆನ್ನಾಗಿ ನಡಿಸಲ್ಪಟ್ಟಿತು. ಬೆಳಿಗ್ಗೆ ಮಂಗಳ ವಾದ್ಯಗಳೂ, ಬ್ರಿಟಿಷ್ ಧ್ವಜ ಸ್ಥಾಪನೆಯೂ, ಬಾಲಕರಿಂದ ಗಾನರೂಪವಾಗಿ ಹೇಳಲ್ಪಟ್ಟ ಮನ್ನುರುಗಳಾದ ಈ ಊರಿನ ಮಹಾಸ್ವಾಮಿಗಳವರ ಮೇಲೆ ವಂದನಾ ಶ್ಲೋಕಗಳೂ, ಮಹಾರಾಜಾ ಚಕ್ರವರ್ತಿಯವರ ಶ್ರೇಯಃಪ್ರಾರ್ಥನೆಯೂ ನಡಿಸಲ್ಪಟ್ಟವು ಮಧ್ಯಾಹ್ನಾಪರ ವಿಸಾಟಿಂಗಿನಲ್ಲಿ ಬಹುಮಂದಿ ದೊಡ್ಡ ಮನುಷ್ಯರು ಸೇರಿದ್ದರು ಇಲ್ಲಿನ ಮಾಸ್ಟರು ಆಂಗ್ಲರಾಜ್ಯಭಾರದ ವಿಷಯವನ್ನು ಕುರಿತು ಉಪನ್ಯಾಸಮಾಡಿ, ಈ ಉತ್ಸವವನ್ನು ನಡಿಸಲು ಸಹಾಯಮಾಡಿದ ಪಟೇಲ್ ಶ್ಯಾನುಭೋಗರನ್ನು ಪ್ರೀತಿ ಪೂರ್ವಕವಾಗಿ ವಂದಿಸಿದರು ನಂತರ ಬಾಲಕರಲ್ಲಿ ಕೆಲವು ಸಣ್ಣ ಸಣ್ಣ ಲಕ್ಚರ್ ಮಾಡಿ ಸಭಿಕರನ್ನು ಆನಂದಪಡಿಸಿದರು. ಚಿಂತಾಮಣಿ ಮ|| ಎಸ್ ರಾಮರಾಯರು ವಿದ್ಯಾವಿಷಯವನ್ನು ಕುರಿತು ಸಭಿಕರೆಲ್ಲರಿಗೂ ತಿಳಿಯುವಂತೆ ಬಹಳ ಚೆನ್ನಾಗಿ ಉಪನ್ಯಾಸಮಾಡಿದರು ಮತ್ತು ಮ|| ಡಿ. ಅನಂತರಾಮಸು ವಿದ್ಯಾವಿಷಯದಲ್ಲಿ ಕಷ್ಟಪಡುತ್ತಿರುವದಾಗಿಯೂ ಆದಕ್ಕೆ ತಕ್ಕಂತೆ ಸ್ಕೂಲ್ ಕಟ್ಟಡ ಬಾಲಕರ ಏಳಿಗೆ ಮಾಸ್ಟರ ಅನುಕೂಲ, ಇವುಗಳನ್ನು ಕಲ್ಪಿಸಿ ಮಕ್ಕಳನ್ನು ತರಪೇತು ಮಾಡಿಕೊಳ್ಳುವುದು ಉತ್ತಮವೆಂದೂ ತಿಳಿಸಿದರು. ಗಂಧ ಪುಷ್ಪ ತಾಂಬೂಲಾದಿಗಳೂ, ಬಾಲಕರಿಗೆ ತಿಂಡಿ ವಗೈರೆಗಳೂ ಹಂಚಿದ ಮೇಲೆ ಮಹಾರಾಜಾಚಕ್ರವರ್ತಿಯವರಿಗೆ ಚಿರಾಯುರಾರೋಗ್ಯಾದಿಗಳನ್ನು ಕೋರಿ ಸಭೆಯನ್ನು ಸಂಪೂರ್ಣಮಾಡಿದರು

ಮಧುಗಿರಿ

ಕಳೆದ 12 ನೇ ತಾ ಶುಕ್ರವಾರ ದರ್ಬಾರ್ ಡೆ ದಿವಸವಾದುದರಿಂದ ಇಲ್ಲಿನ ಎ ವಿ ಸ್ಕೂಲಿನಲ್ಲಿ ಉತ್ಸವಗಳು ಬಹು ವಿಜೃಂಭಣೆಯಿಂದ ಜರುಗಿದವು ಸ್ಕೂಲುಗಳ ಬಾಲಕ ಬಾಲಕಿಯರೂ ಮತ್ತು ಅನೇಕ ದೊಡ್ಡ ಮನುಷ್ಯರುಗಳೂ ಸೇರಿದ್ದರು ಪ್ರಾತಃಕಾಲ ಫುಟ್‌ಬಾಲ್ ಆಡಿದ ನಂತರ ಯೂನಿಯನ್ ಜಾಕ್ ಮತ್ತು ಮೈಸೂರು ಗಂಡಭೇರುಂಡ ಬಾವುಟಗಳ ಮೆರವಣಿಗೆಯು ಬಾಲಕರ ಸ್ಕೌಟ್ ಘೋಷ ಬ್ಯಾಂಡ್ ವಾದ್ಯದೊಡನೆ ಊರಲ್ಲಿ ಸಂಭ್ರಮದಿಂದ ಜರುಗಿಸಲ್ಪಟ್ಟಿತು. ಅನಂತರ ಎರಡು ಧ್ವಜಪತಾಕೆಗಳನ್ನೂ ಸ್ಕೂಲ್ ಮುಂಭಾಗದಲ್ಲಿ ನಿಲ್ಲಿಸಿ ಸಲಾಂ ಬಾಜಾ ಆಗುತ್ತಿರುವಲ್ಲಿ ಸಕಲರೂ ಧ್ವಜಪತಾಕೆಗಳಿಗೆ ಸೆಲ್ಯೂಟ್ ಮಾಡಿ ಸ್ಕೂಲ್ ಹಾಲಿನೊಳಗೆ ಸಭೆ ಸೇರಿದರು ಎ ವಿ. ಸ್ಕೂಲಿನ ವಿದ್ಯಾರ್ಥಿಯೊಬ್ಬನು ಬ್ರಿಟಿಷ್ ಸಾರ್ವಭೌಮರ ಆಳ್ವಿಕೆಯಿಂದ ಹಿಂದೂದೇಶದ ಜನರಿಗೆ ಉಂಟಾಗುವ ಅಪಾರವಾದ ಪ್ರಯೋಜನಗಳನ್ನು ಕುರಿತು ಉಪನ್ಯಾಸವನ್ನು ಓದಿದನು ಮ|| ಶಿವರಾಮಯ್ಯನವರು ಪ್ರಭುಭಕ್ತಿಯ ವಿಚಾರವಾಗಿ ಬಾಲಕಬಾಲಕಿಯರ ಮನಸ್ಸಿಗೆ ಚೆನ್ನಾಗಿ ನಾಟುವಂತೆ ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು ಆದ ಮೇಲೆ ಮ|| ರಾಮರಾಯರು ಆ ದಿವಸ ಸಭೆ ಸೇರಿದ ಉದ್ದೇಶ, ಪ್ರಜೆಗಳು ಪ್ರಭುಗಳ ವಿಚಾರದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬೀ ವಿಷಯದಲ್ಲಿ ಉಪನ್ಯಾಸವನ್ನು ಮಾಡಿದರು ಹೆಣ್ಣು ಮಕ್ಕಳು ಬಹಳ ಇಂಪಾಗಿ ಬ್ರಿಟಿಷ್ ಸಾರ್ವಭೌಮರವರ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯ ಪದ್ಯ ಮಂಗಳವನ್ನು ಹಾಡಿದ ನಂತರ ಸಭಿಕರು ಚಕ್ರವರ್ತಿಸಾರ್ವಭೌಮರವರ, ವೈಸರಾಯ್ ಗೌವರ್ನರ್ ಜನರಲ್ ರವರ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಜಯಘೋಷದೊಡನೆ ತೆರಳಿದರು

ಮಂಜರಾಬಾದು ತಾಲ್ಲೂಕು ಬೆಳಗೋಡು

ಕಳೆದ ತಾ 12 ನೇ ಶುಕ್ರವಾರ ಮಧ್ಯಾಹ್ನ ಇಲ್ಲಿನ ಕನ್ನಡ ಸ್ಕೂಲ್ ಕಟ್ಟಡದಲ್ಲಿ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ಕಿರೀಟಧಾರಣೆ ಉತ್ಸವವು ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಸ್ಕೂಲು ಕಟ್ಟಡವು ಕದಳೀ ಸ್ತಂಭಗಳಿಂದಲೂ, ಧ್ವಜಸಹಿತವಾದ ಚಪ್ಪರದಿಂದಲೂ, ತೋರಣಗಳಿಂದಲೂ ನೇತ್ರಾನಂದಕರವಾಗಿ ಅಲಂಕರಿಸಲ್ಪಟ್ಟಿತ್ತು ಈ ಗ್ರಾಮದಲ್ಲಿರುವ ಸರ್ಕಾರಿ ನೌಕರರೂ, ಎಲ್ಲಾ ಕೋಮುಗಳ ಮುಖಂಡ ಪ್ರಜೆಗಳೂ ಸುಮಾರು 150 ಜನರು ಸಭೆಯನ್ನಲಂಕರಿಸಿದರು ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ಮಹಾರಾಜರವರ ಭಾವಚಿತ್ರಗಳನ್ನೂ ಉನ್ನತಾಸನದಲ್ಲಿ ನೆಲೆಗೊಳಿಸಿ, ಬಾಲಕ ಬಾಲಕಿಯರುಗಳಿಂದ ಶ್ರೀ ಚಕ್ರವರ್ತಿಯವರ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಗಳು ಇಂಪಾಗಿ ಗಾಯನ ಮಾಡಲ್ಪಟ್ಟವು ಕನ್ನಡ ಸ್ಕೂಲು ಮಾಸ್ಟರು ಮ|| ಕೇಶವಯ್ಯನವರು ಬ್ರಿಟಿಷ್ ಚಕ್ರಾಧಿಪತ್ಯದ ವಿಷಯವಾಗಿಯೂ, ಬ್ರಿಟಿಷರ ಆಳ್ವಿಕೆಯಿಂದ ಪ್ರಜಾ ಸಮುದಾಯಕ್ಕೆ ಉಂಟಾಗಿರುವ ಮಹದುಪಕಾರಗಳ ವಿಷಯವಾಗಿಯೂ ದೀರ್ಘವಾದ ಉಪನ್ಯಾಸವನ್ನು ಒಂದು ಘಂಟೆಕಾಲ ಓದಿದರು ದಫೇದಾರ್ ಮ|| ಆದಪ್ಪಯ್ಯನವರೂ, ಮ|| ವೆಂಕಟಪ್ಪಯ್ಯನವರೂ ರಾಜಭಕ್ತಿಯ ವಿಷಯವಾಗಿ ಉಪನ್ಯಾಸಮಾಡಿದ್ದನ್ನು ಸಭಿಕರೆಲ್ಲರೂ ಸಾವಧಾನದಿಂದ ಆಲಿಸಿದರು. ಪೋಸ್ಟ್ ಮಾಸ್ಟರ್ ಮ|| ಎವಲಿಂಗಯ್ಯನವರು ಪಿಟೀಲಿನ ಮೇಳದೊಡನೆ ಸಭಿಕರಿಗೆ ಕರ್ಣಾನಂದವಾಗಿ ಗಾಯನಮಾಡಿದರು ಬಾಲಕರನ್ನು ವಿನೋದವಾದ ಆಟಗಳನ್ನಾಡಿಸಿ ಸಂತೋಷ ಪಡಿಸಲಾಯಿತು ಸಭಿಕರಿಗೆ ಅಲ್ಪಾಹಾರ, ಗಂಧ ಪುಷ್ಪ ತಾಂಬೂಲಾದಿಗಳು ವಿನಿಯೋಗವಾದನಂತರ ಜಯಘೋಷದಿಂದ ಸಭೆಯು ಮುಕ್ತಾಯವಾಯಿತು.

ಮೈಸೂರು

ಲಕ್ಷ್ಮೀಪುರಂ ಬಾಯ್ಸ್ ಸ್ಕೂಲು—ಚಕ್ರವರ್ತಿಯವರ ದರ್ಬಾರ್ ಡೇ ಉತ್ಸವವು ವಿಜೃಂಭಣೆಯಿಂದ ನಡೆಯಿತು ಮ|| ಎಂ ವೆಂಕಟಕೃಷ್ಣಯ್ಯನವರೂ, ಸ್ಕೂಲ್ ಕಮಿಟಿ ಮೆಂಬರು ಮ|| ಎಚ್ ಸೀತಾರಾಮಯ್ಯನವರೂ ಇನ್ನು ಅನೇಕ ಜನ ದೊಡ್ಡ ಮನುಷ್ಯರೂ ದಯಮಾಡಿಸಿದ್ದರು ಸ್ಕೂಲ್ ಒಳಗೂ ಹೊರಗೂ ಬಹು ಚೆನ್ನಾಗಿ ಅಲಂಕರಿಸಲ್ಪಟ್ಟಿತ್ತು ಒಬ್ಬ ವಿದ್ಯಾರ್ಥಿಯು ಇಂಗ್ಲಿಷರ ಆಳ್ವಿಕೆಯಿಂದುಂಟಾಗಿರುವ ಸೌಖ್ಯವನ್ನು ವರ್ಣಿಸಿದನು ಬಹುಮಾನವಾಯಿತು ಹೆಡ್ ಮಾಸ್ಟರು ರಚಿಸಿದ್ದ ಪದ್ಯರೂಪವಾದ ಚಕ್ರವರ್ತಿಗಳ ಮತ್ತು ಮಹಾರಾಜರ ಮೊದಲಾದವರ ಶ್ರೇಯಃ ಪ್ರಾರ್ಥನೆಯು ನಡೆಸಲ್ಪಟ್ಟಿತು. ಅಗ್ರಾಸನಾಸೀನರಾದ ಮ|| ವೆಂಕಟಕೃಷ್ಣಯ್ಯನವರು ಆಂಗ್ಲೇಯ ರಾಜ್ಯಭಾರದ ವಿಚಾರದಲ್ಲಿ ಉಪನ್ಯಾಸ ಮಾಡಿದರು ಬಳಿಕ ಎಲ್ಲರಿಗೂ ಹಾರಾದಿಗಳೂ, ಫಲ ತಾಂಬೂಲಗಳೂ ಹಂಚಲ್ಪಟ್ಟವು

ಗವರ್ನಮೆಂಟ್ ನಾರ್ಮಲ್ ಸ್ಕೂಲು —ಕಳೆದ 12 ನೆಯ ತಾರೀಖಿನ ದಿನವು ಶ್ರೀಮದಿಂಡಿಯಾ ಚಕ್ರವರ್ತಿಯವರ ಕಿರೀಟ ಧಾರಣ ಮಹೋತ್ಸವ ಶ್ರೇಯಸ್ಕರವಾದ ಪ್ರತಿವರ್ಷದ ಶುಭದಿನವಾದುದರಿಂದ ಆ ದಿನ ಪ್ರಾತಃಕಾಲ 8 ಗಂಟೆಗೆ ಮೈಸೂರ್ ಗೌ|| ನಾರ್ಮಲ್‌ಸ್ಕೂಲ್ ಕಟ್ಟಡದಲ್ಲಿ ಆ ಸ್ಕೂಲಿನ ಮತ್ತು ಪ್ರಾಕ್ಟಿಸಿಂಗ್ ಸ್ಕೂಲಿನ ಎಲ್ಲಾ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಸೇರಿದ್ದರು ಮೊದಲು ಬಾಲಕರು ದೇವರ ಸ್ತೋತ್ರವನ್ನು ಮಾಡಿ ಬಳಿಕ ಶ್ರೀಮದಿಂಡಿಯಾ ಚಕ್ರವರ್ತಿಯವರ ಮತ್ತು ನಮ್ಮ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯ ಗೀತಗಳನ್ನು ಗಾನಮಾಡಿದರು. ಅನಂತರ ಈ ಸ್ಕೂಲಿನ ಸಹಾಯೋಪಾಧ್ಯಾಯರಾದ ಮ|| ನಾರಣಯ್ಯಂಗಾರ್ಯರು ಕನ್ನಡದಲ್ಲೂ ಮ|| ಮಜಹರ್‌ಹಸನ್ ಖಾನ್ ಸಾಹೇಬರವರು ಹಿಂದೂಸ್ಥಾನಿಯಲ್ಲೂ ಬ್ರಿಟಿಷ್ ಚಕ್ರಾಧಿಪತ್ಯದ ಮಹತ್ವದ ಮತ್ತು ಅವರ ಪ್ರಜೆಗಳಾದ ನಮಗೆ ಉಂಟಾಗಿರುವ ಸೌಕರ್ಯದ ವಿಚಾರವಾಗಿ ಸ್ವಾರಸ್ಯವುಳ್ಳ ಉಪನ್ಯಾಸವನ್ನು ಮಾಡಿದರು. ಬಳಿಕ ಬಾಲಕರು ದೇಶಕಾ ಪ್ರಾರ್ಥನಾ ರೂಪವಾದ ಮಂಗಳ ಗೀತವನ್ನು ಗಾನಮಾಡುವುದೂ ಸಭಾಸದರೆಲ್ಲರೂ ಸಂತೋಷದಿಂದ ತೆರಳಿದರು

ತೀರ್ಥಹಳ್ಳಿ

ಡೆಹಲಿ ದರ್ಬಾರಿನಲ್ಲಿ ಆದ ಕಾರೊನೇಷನ್ ಉತ್ಸವದ ಜ್ಞಾಪಕಾರ್ಥವಾಗಿ 12 ನೇ ತಾ ಶುಕ್ರವಾರ ಬೆಳಿಗ್ಗೆ ಊರಿನ ಮುಖ್ಯಸ್ಥರೂ ಇತರರೂ ಎ. ವಿ. ಸ್ಕೂಲಿನಲ್ಲಿ ಸಭೆ ಸೇರಿ ಉತ್ಸವವನ್ನು ಬಹು ಮನೋಹರವಾಗಿ ನೆರವೇರಿಸಿದರು. ಎ. ವಿ. ಸ್ಕೂಲ್ ಹೆಡ್‌ಮಾಸ್ಟರೂ, ಬಾಲಕಿಯರ ಸ್ಕೂಲ್ ಹೆಡ್‌ಮಾಸ್ಟರೂ, ಇತರ ಮಾಸ್ಟರುಗಳೂ ಏಕೀಭವಿಸಿ ತಮ್ಮ ಸ್ಕೂಲ್ ಮಕ್ಕಳನ್ನು ಬಹು ಚಮತ್ಕಾರವಾಗಿಯೂ, ಚಟುವಟಿಕೆಯಿಂದಲೂ ತಯಾರು ಮಾಡಿ, ಅನೇಕ ರಸವತ್ತಾದ ಸಂಗೀತಗಳನ್ನು ಹಾಡಿಸಿದರು ಬಾಲಕರು ಷೇಕ್ಸ್‌ಪಿಯರ್ ನಾಟಕದ ಕೆಲವು ಭಾಗಗಳನ್ನು ಅಭಿನಯಿಸಿದರು ಮತ್ತು ಡಯಲಾಗ್ ಇತ್ಯಾದಿಗಳೂ ನಡೆದವು ಇದೆಲ್ಲಾ ಇಂಗ್ಲೀಷಿನಲ್ಲಿ ನಡೆದದ್ದನ್ನು ನೋಡಿ ಈಗ ಬಂದಿರುವ ಹೆಡ್‌ಮಾಸ್ಟರು ವಿದ್ಯಾರ್ಥಿಗಳನ್ನು ಚೆನ್ನಾಗಿ ತರಪೇತು ಮಾಡುತ್ತಿದ್ದಾರೆಂದು ಜನರು ಅವರನ್ನು ವಂದಿಸುತ್ತಿದ್ದಾರೆ ಹೆಡ್ ಮಾಸ್ಟರ್ ಇಂಗ್ಲಿಷ್ ಭಾಷೆಯಲ್ಲಿ ಬ್ರಿಟಿಷ್ ಆಳಿಕೆಯ ವಿಷಯವಾಗಿ ನೀತಿ, ಸಮಾಧಾನ, ನ್ಯಾಯ, ಜನೋಪಕಾರವಾದ ಹಲವು ವಿಷಯಗಳನ್ನು ಕುರಿತು ಬಹು ಶ್ರೇಷ್ಠವಾದ ಉಪನ್ಯಾಸ ಮಾಡಿದರು ಡೆಲ್ಲಿಯಲ್ಲಿ ಮೊದಲು ಯುಧಿಷ್ಠಿರನು ಸಿಂಹಾಸನಾಧಿಪತಿಯಾಗಿದ್ದದ್ದನ್ನು ಮೊದಲು ಮಾಡಿ ಅಕ್ಬರ್ ಎಂಬ ಮೊಗಲ್ ಚಕ್ರವರ್ತಿ, ಅನಂತರ 5 ನೇ ಜಾರ್ಜ್ ಚಕ್ರವರ್ತಿಗಳು ದರ್ಬಾರ್ ನಡಿಸುತ್ತಿರುವ ಈಗಿನ ಕಾಲದವರೆಗೂ ನಡೆದ ರಾಜ್ಯಭಾರಗಳನ್ನು ವಿವರಿಸಿದರು ಕಡೆಗೆ ಮಾಸ್ಟರುಗಳಲ್ಲಿ ಒಬ್ಬರು ಕನ್ನಡದಲ್ಲಿ ಆದೇ ಉಪನ್ಯಾಸದ ಸಾರಾಂಶವನ್ನು ವ್ಯಕ್ತಪಡಿಸಿದರು. ಬೆಳಗಿನ ಸಭೆಯಲ್ಲಿ ನಡೆದ ವಿನೋದಗಳೂ, ಸಂಗೀತ ಸಂಭಾಷಣೆಗಳೂ ಬಹು ಮನೋಹರವಾಗಿದ್ದುವು ಕಡೆಗೆ « ದೇವರು ರಾಜನನ್ನು ರಕ್ಷಿಸಲಿ » ಎಂಬ ರಾಗ ಹಾಡಿ ಮಂಗಳ ಘೋಷದೊಡನೆ ಚಕ್ರವರ್ತಿಯವರಿಗೂ ಮಹಾರಾಜರಿಗೂ ಮೂರು ಸಾರಿ ಜಯವನ್ನು ಕೋರಿ ತೆರಳಿದರು ಮಧ್ಯಾಹ್ನ ಮತ್ತೆ ಎಲ್ಲರೂ ಎ ವಿ ಸ್ಕೂಲ್ ಬಳಿ ಸೇರಿ ಬಾಲಕ ಬಾಲಕಿಯರಿಂದ ನಾನಾ ಆಟಗಳನ್ನೂ ತಮಾಷೆಗಳನ್ನೂ ಆಡಿಸಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದರು ಪಾಠಶಾಲೆಯ ಮಕ್ಕಳು ಬಹು ಸಂಭ್ರಮದಿಂದ ಆ ದಿನವನ್ನು ಕಳೆದರು —ಈ ವರುಷ ತೀರ್ಥಹಳ್ಳಿ ಗಂಧದಕೋಠಿಯಲ್ಲಿ ಶ್ರೀಗಂಧದ ಹರಾಜಿನಿಂದ ಬಹಳ ಲಾಭ ಬಂದಿದೆ. 2 ಲಕ್ಷದ 41 ಸಾವಿರ ರೂಪಾಯಿಗೆ ಹರಾಜು ನಿಂತಿತು ಡೆಪ್ಟಿ ಕಮಿಷನರ್‌ರವರು ಹರಾಜುಕಾಲಕ್ಕೆ ದಯಮಾಡಿಸಿ, ಪಟ್ಟಣವನ್ನು ಸುತ್ತಿ ನೋಡಿಕೊಂಡು ತೆರಳಿದರು.

ದೊಡ್ಡಬಳ್ಳಾಪುರ.

ಕಳೆದ ತಾ|| 12 ನೇ ಶುಕ್ರವಾರ ದೊಡ್ಡಬಳ್ಳಾಪುರದ ಎ. ವಿ ಸ್ಕೂಲ್ ಹಾಲಿನಲ್ಲಿ ದರ್ಬಾರ್ ಡೇ ಉತ್ಸವದ ನಿಮಿತ್ತ ಸಭೆ ಸೇರಿತ್ತು. ಈ ಸಭೆಗೆ ಸ್ಥಳೀಯ ಅಧಿಕಾರಿಗಳೂ, ಯೂರೋಪಿಯನ್‌ರೂ, ಎಲ್ಲಾ ಕೋಮುಗಳ ದೊಡ್ಡ ಮನುಷ್ಯರೂ, ಎಲ್ಲಾ ಸ್ಕೂಲುಗಳ ವಿದ್ಯಾರ್ಥಿಗಳೂ, ವಿದ್ಯಾರ್ಥಿನಿಯರೂ, ದಯಮಾಡಿದ್ದರು ಸ್ಕೂಲ್ ಕಟ್ಟಡವು ಚೆನ್ನಾಗಿ ಅಲಂಕರಿಸಲ್ಪಟ್ಟಿತ್ತು ಮೈದಾನದಲ್ಲಿ ಯೂನಿಯನ್ ಜಾಕ್ ಮತ್ತು ಮೈಸೂರ್ ಬಾವುಟಗಳನ್ನು ಇರಿಸಿದ್ದರು. ಸ್ಕೂಲಿನಿಂದ ಮಂಗಳ ವಾದ್ಯಗಳ ಸಮೇತ ಸ್ಕೂಲ್ ವಿದ್ಯಾರ್ಥಿಗಳೂ, ಸಭಿಕರೂ ಸೇರಿ ಯೂನಿಯನ್ ಜಾಕಿನ ಬಳಿಗೆ ಹೋಗಿ ಅಲ್ಲಿ ಪ್ರತಿ ಒಂದು ಸ್ಕೂಲಿನ ವಿದ್ಯಾರ್ಥಿಗಳೂ, ಬ್ರಿಟಿಷ್ ಮತ್ತು ಮೈಸೂರ್ ನ್ಯಾಷನಲ್ ಅಂಥಂ ಎಂಬ ರಾಷ್ಟ್ರಗೀತಗಳನ್ನು ಹೇಳಿ ವಂದಿಸಿ ಸ್ಕೂಲಿಗೆ ಹಿಂತಿರಿಗಿಬಂದರು ಡಿಸ್ಟ್ರಿಕ್ಟ್ ಸೇಷನ್ಸ್ ಜಡ್ಜ್ ಮ|| ವೆಂಕಟವರದಯ್ಯಂಗಾರ್ಯರು ಸಭೆಯ ಅಗ್ರಾಸನವನ್ನು ವಹಿಸಿದರು. ಸ್ಕೂಲ್ ವಿದ್ಯಾರ್ಥಿಗಳು ಬ್ರಿಟಿಷ್ ಸಾಮ್ರಾಜ್ಯದ ಫಲಪ್ರಯೋಜನಾದಿಗಳನ್ನು ಕುರಿತು ಸ್ವಾರಸ್ಯವಾಗಿ ಉಪನ್ಯಾಸಮಾಡಿದರು. ಹೆಡ್ ಮಾಸ್ಟರು ಮ|| ಡಿ ಕೊಂಗಾಡಿಯಪ್ಪನವರು ಬ್ರಿಟಿಷ್ ಸಾಮ್ರಾಜ್ಯದಿಂದ ಉಂಟಾಗಿರುವ ಪ್ರಯೋಜನಗಳನ್ನು ವಿವರಿಸಿದರು ವಿದ್ಯಾರ್ಥಿಗಳು ಮರ್ಚೆಂಟ್ ಆಫ್ ವೆನಿಸ್ ಎಂಬ ನಾಟಕದ ಒಂದು ಭಾಗವನ್ನು ಬಹು ಮನೋಹರವಾಗಿ ಅಭಿನಯಿಸಿದರು. ಬಳಿಕ ಅಗ್ರಾಸನಾಧಿಪತಿಗಳು ಬ್ರಿಟಿಷ್ ಸಾಮ್ರಾಜ್ಯದಿಂದ ನಾವು ಹೊಂದುತ್ತಿರುವ ಮಹೋಪಕಾರಗಳನ್ನು ಸಭಿಕರಿಗೆಲ್ಲಾ ಚೆನ್ನಾಗಿ ಗೊತ್ತಾಗುವಂತೆ ಅಪ್ಪಣೆಕೊಡಿಸಿ ಜನರೆಲ್ಲರೂ ರಾಜಭಕ್ತಿಯುಳ್ಳವರಾಗಿರಬೇಕೆಂಬ ವಿಷಯದಲ್ಲಿ ಅತ್ಯಂತ ಸ್ವಾರಸ್ಯವುಳ್ಳ ಉಪನ್ಯಾಸವನ್ನು ಮಾಡಿದರು ಅನಂತರ ಶ್ರೀಚಕ್ರವರ್ತಿ ಸಾರ್ವಭೌಮರವರಿಗೂ, ಶ್ರೀಮತ್ ಮಹಾರಾಜರವರಿಗೂ ಆಯುರಾರೋಗ್ಯಾದಿಗಳನ್ನು ಕೊಟ್ಟು ಕಾಪಾಡಬೇಕೆಂದು ದೇವರ ಪ್ರಾರ್ಥನೆಮಾಡಿದರು ಬಳಿಕ ಮೂರು ಸಾರಿ ಜಯಘೋಷವಿಸಾಡಲಾಯಿತು ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟವು ಮಧ್ಯಾಹ್ನದ ಮೇಲೆ ಪುನಃ ಸಭೆಯು ಸೇರಿತು ಮಕ್ಕಳ ಆಟಪಾಟಗಳು ನಡೆದ ಬಳಿಕ ಸ್ಕೂಲ್ ಹಾಲಿನಲ್ಲಿ ಸಭೆ ಜರುಗಿ ಸಂಗೀತವಾದನಂತರ ಬ್ರಿಟಿಷ್ ಮತ್ತು ನ್ಯಾಷನಲ್ ಅಂಥಂಗಳನ್ನು ವಿದ್ಯಾರ್ಥಿಗಳು ಹೇಳಿದರು ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟವು ಈ ಉತ್ಸವವನ್ನು ನಡಿಸಲು ಅಮಲ್ದಾರ್ ಮಿ|| ಸೈಯದ್ ಮಹಮದ್ ಷರೀಫ್ ಸಾಹೇಬರವರೂ, ಮುನ್ಸಿಫ್ ಮ|| ಎಂ ಪಿ ಮಹದೇವಯ್ಯನವರೂ, ಸಬ್ ರಿಜಿಸ್ಟ್ರಾರ್ ಮ|| ಎನ್ ಲಕ್ಷ್ಮೀಕಾಂತಯ್ಯಂಗಾರ್ಯರೂ, ಡಾಕ್ಟರ್ ವರದಯ್ಯಂಗಾರ್ಯರೂ ಅತ್ಯಂತ ಪ್ರೀತಿಯನ್ನು ವಹಿಸಿ ಕಾರ್ಯಗಳನ್ನು ಉತ್ಸಾಹದಿಂದ ನೆರವೇರಿಸಿದ್ದಕ್ಕಾಗಿ ಸಭಿಕರು ಅವರನ್ನು ವಂದಿಸಿದರು

ಕೊಪ್ಪ.

ಮೊನ್ನೆ ತಾ 12 ನೇ ಶುಕ್ರವಾರ ಕಾರೊನೇಷನ್ ಜ್ಞಾಪಕಾರ್ಥವಾದ ಉತ್ಸವವು ಕೊಪ್ಪದ ಸ್ಕೂಲಿನಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿತು ಸ್ಕೂಲ್ ಕಟ್ಟಡದ ಒಳಭಾಗದಲ್ಲಿ ಸುಂದರವಾದ ಮಂಟಪವನ್ನು ರಚಿಸಿ, ಚಕ್ರವರ್ತಿಗಳವರ ಮತ್ತು ನಮ್ಮ ರಾಜವರ್ಗದವರ ಪಟಗಳನ್ನಿಟ್ಟು ಹೂವಿನ ಮಾಲಿಕೆಗಳಿಂದ ಅಲಂಕರಿಸಿದ್ದರು, ಹೊರಭಾಗದಲ್ಲಿ ಕದಳೀ ಸ್ತಂಭಗಳೂ, ಚಿಗುರು ತೋರಣಗಳೂ ಕಟ್ಟಲ್ಪಟ್ಟು ಯೂನಿಯನ್ ಜಾಕ್ ಎಂಬ ಬಾವುಟಗಳು ಏರಿಸಲ್ಪಟ್ಟಿದ್ದವು ಬೆಳಿಗ್ಗೆ ಬಾಲಕರು ಹಾಲಿನ ಮುಂಭಾಗದಲ್ಲಿ ಸೇರಿ ಚಕ್ರವರ್ತಿಗಳವರ ಶ್ರೇಯಃ ಪ್ರಾರ್ಥನೆಯನ್ನು ಮಾಡಿ ಸದರಿ ಬಾವುಟಕ್ಕೆ ಮುಜರೆ ಮಾಡಿದರು ಹೆಡ್‌ಮಾಸ್ಟರವರ ಪ್ರಾರ್ಥನೆಯಂತೆ ತಾಲ್ಲೂಕ್ ಆಫೀಸರುಗಳೂ, ಗ್ರಾಮದ ಮುಖಂಡರೂ, ವರ್ತಕರೂ ಸ್ಕೂಲಿನಲ್ಲಿ ಸಭೆ ಸೇರಿದರು ನಮ್ಮ ಅಮಲ್ದಾರ್ ಮ|| ಶ್ರೀನಿವಾಸರಾಯರು ಅಗ್ರಾಸನವನ್ನು ವಹಿಸಿದ ಕೂಡಲೆ ಪ್ರೋಗ್ರಾಂನಂತೆ ಕಾರ್ಯಗಳು ಪ್ರಾರಂಭವಾದವು ಬಾಲಕರು ಗಣಪತಿ, ಶಾರದೆ, ಪರಮಾತ್ಮನನ್ನೂ ಸ್ತುತಿಸಿದರು ಇಂಗ್ಲಿಷ್ ರಾಜ್ಯಭಾರದ ಸುಖಕರ ರೂಪವಾಗಿ ರಾಜಭಕ್ತಿಯು ಪ್ರದರ್ಶಿಸಲ್ಪಟ್ಟಿತು ಚಕ್ರವರ್ತಿಯವರ ಮೇಲಿನ ಮಂಗಳವನ್ನು ಹುಡುಗರು ಹಾಡಿದ ಬಳಿಕ ಹೆಡ್ ಮಾಸ್ಟರು ಮ|| ಕೆ ಗಣೇಶಜೋಯಿಸರು ಸ್ಕೂಲಿನ ರಿಪೋರ್ಟನ್ನು ಓದಿ ಸ್ಕೂಲ್ ಅಭಿವೃದ್ಧಿ ಹೊಂದದೆ ಇರುವುದಕ್ಕೆ ಉಂಟಾದ ಕಾರಣಗಳನ್ನು ಸ್ಪಷ್ಟಪಡಿಸಿದರು 6 ನೇ ತರಗತಿ ವಿದ್ಯಾರ್ಥಿ ಪಿ. ತಮ್ಮಯ್ಯನು ವಿದ್ಯಾವಿಷಯವಾಗಿ ಸಂಸ್ಕೃತ ಶ್ಲೋಕಗಳನ್ನು ಉದಾಹರಿಸಿ ಬಹು ಸ್ವಾರಸ್ಯವಾಗಿ ಉಪನ್ಯಾಸ ಹೇಳಿದನು. ಬಾಲಕರು ಮಾಡಿದ ಶ್ರೀಮನ್ಮಹಾರಾಜರವರ ಮತ್ತು ಶ್ರೀಚಕ್ರವರ್ತಿಯವರ ಶ್ರೇಯಃ ಪ್ರಾರ್ಥನೆಗಳನ್ನು ಸರ್ವರೂ ಭಕ್ತಿಯಿಂದ ಕೇಳಿ, ರಾಜಭಕ್ತಿಯನ್ನು ಪ್ರದರ್ಶಿಸಿದರು. ಎಲ್ಲಾ ಬಾಲಕರುಗಳಿಗೂ ಗ್ರಾಮಸ್ಥರ ಸಹಾಯದಿಂದೊದಗಿದ ಹಣದಿಂದ ತರಿಸಿದ ಬಹುಮಾನ ಪುಸ್ತಕಗಳನ್ನು ಛೇರ್‌ಮೆನ್‌ರವರು ಸಂತೋಷದಿಂದ ಹಂಚಿದರು ಚಿಕ್ಕ ಹುಡುಗರು ಸತ್ಯದ ಮಹಿಮೆಯನ್ನು ಬಹು ಸ್ವಾರಸ್ಯವಾಗಿ ಅಭಿನಯಿಸಿ ತೋರಿಸಿದರು. ಮ|| ಬಿ. ಗುಂಡಪ್ಪನವರು ಗ್ರಾಮಸ್ಥರ ಪರವಾಗಿ ಕಾಲದ ಬೆಲೆಯನ್ನು ಕುರಿತು ಉಪನ್ಯಾಸ ಮಾಡಿದರು. ಪೋಸ್ಟ್‌ಮಾಸ್ಟರವರು ಛೇರ್‌ಮನ್‌ರ ಪರವಾಗಿ ಕೆಲವು ಮಾತನ್ನಾಡಿದರು ಅ|| ಮಾಸ್ಟರ್ ಮ|| ಕೆ. ಎಸ್. ಪರಮೇಶ್ವರಭಟ್ಟರವರು ಚಕ್ರವರ್ತಿಯರ ಮತ್ತು ಶ್ರೀಮನ್ಮಹಾರಾಜರವರ, ಹಾರ್ಡಿಂಗ್ ಪ್ರಭುಗಳವರ, ಮಂತ್ರಿವರ್ಯರ ಮತ್ತು ಸಭಿಕರ ಶ್ರೇಯಸ್ಸನ್ನು ಬಯಸಿದ ಮೇಲೆ ಅಮಲ್ದಾರ್ ಮ|| ಶ್ರೀನಿವಾಸರಾಯರವರು ಆ ದಿನ ಪ್ರೋಗ್ರಾಮಿನ ಪ್ರತಿಭಾಗಗಳನ್ನೂ ಕುರಿತು ವಿವರಿಸಿ ಹೇಳಿದ ಉಪನ್ಯಾಸವು ಸರ್ವರಿಗೂ ಆನಂದವನ್ನುಂಟುಮಾಡಿತು ಹುಡುಗರು ಮಂಗಳವನ್ನು ಹಾಡಿದರು ಸರ್ವರಿಗೂ ಗಂಧ, ಪುಷ್ಪಮಾಲಿಕೆ, ತಾಂಬೂಲ, ಸಕ್ಕರೆಯೂ , ಬಾಲಕರುಗಳಿಗೆ ಮಿಠಾಯಿಯೂ ಹಂಚಲಾಯಿತು ಜಯಧ್ವನಿಯೊಂದಿಗೆ ಸಭೆಯು ಬರಖಾಸ್ತಾಯಿತು

ಮೇಲುಕೋಟೆ.

ಕಳೆದ 12 ನೇ ತಾ ಶುಕ್ರವಾರ ಶ್ರೀಮದಿಂಡಿಯಾ ಚಕ್ರವರ್ತಿ ಮತ್ತು ಚಕ್ರವರ್ತಿನಿಯವರಿಗೆ ಡೆಲ್ಲಿಯಲ್ಲಿ ನಡೆದ ಕಿರೀಟಧಾರಣ ಮಹೋತ್ಸವವನ್ನು ಕೊಂಡಾಡುವುದಕ್ಕಾಗಿ ಇಲ್ಲಿನ ಎ. ವಿ. ಸ್ಕೂಲು ತಳಿರುತೋರಣಗಳಿಂದಲೂ, ಶ್ರೀಮತ್ ಚಕ್ರವರ್ತಿ, ಚಕ್ರವರ್ತಿನಿಯರ ಮತ್ತು ಶ್ರೀಮನ್ಮಹಾರಾಜರವರ ಭಾವಚಿತ್ರಗಳಿಂದಲೂ, ಇತರ ಚಿತ್ರಪಟಗಳಿಂದಲೂ ಅಲಂಕೃತವಾಗಿತ್ತು. ಬೆಳಿಗ್ಗೆ 10 ಘಂಟೆಯವರೆಗೆ ಶಾಲೆಯ ಕಾಂಪೌಂಡಿನಲ್ಲಿ ಮ|| ವೆಂಕೋಬರಾಯರ ಅಧ್ಯಕ್ಷತೆಯಿಂದ ಬಾಲಕರಿಗೆಲ್ಲಾ ಆಟಪಾಟಗಳು ಬಹಳ ವಿನೋದದಿಂದಲೂ ವಿಚಕ್ಷಣೆಯಾಗಿಯೂ ಮಾಸ್ಟರುಗಳೆಲ್ಲಾ ಸೇರಿ ನಡಿಸಿದರು ತರುವಾಯ ಬ್ರಿಟಿಷ್ ಧ್ವಜಕ್ಕೂ, ಮೈಸೂರು ಧ್ವಜಕ್ಕೂ ಸೆಲ್ಯೂಟ್ ಮಾಡಿ ಬಾಲಕರು ಪ್ರಭುಗಳ ಶ್ರೇಯಃ ಪ್ರಾರ್ಥನೆಯನ್ನು ಮಾಡಿದರು ಬಳಿಕ ಡಾಕ್ಟರೇ ಆದಿಯಾಗಿ ಸಮಸ್ತ ವೈದಿಕ ಲೌಕಿಕ ಮಹನೀಯರೂ 10 ಘಂಟೆಗೆ ಸಂಸ್ಕೃತ ಕಾಲೇಜಿನಲ್ಲಿ ಸಭೆ ಸೇರಿದರು ಶ್ರೀಮಾನ್ ಪೆನುಗೊಂಡೆ ಶೇಷಾಚಾರ್ಯರು ಅಗ್ರಾಸನವನ್ನು ವಹಿಸಿದರು. ಮ|| ಯಂ. ಜಿ. ರಾಮಯ್ಯಂಗಾರ್ಯರು ಬ್ರಿಟಿಷರ ಆಳ್ವಿಕೆಯನ್ನು ಕುರಿತೂ, ಡಾಕ್ಟರವರು ಬ್ರಿಟಿಷರಿಂದ ವಿದ್ಯಾಭ್ಯಾಸವು ಹೆಚ್ಚಿತೆಂದೂ ವಿವರಿಸಿದರು ಕಾಲೇಜಿನ ವಿದ್ವನ್ಮಂಡಲಿಯವರೂ, ವಿದ್ಯಾರ್ಥಿಗಳಿಂದಲೂ ಶ್ರೇಯಃ ಪ್ರಾರ್ಥನಾರೂಪವಾದ ಶ್ಲೋಕಗಳು ಓದಲ್ಪಟ್ಟು ರಾಜಾಶೀರ್ವಾದ ಬೆಳೆದು ಸಭೆಯು ಮುಕ್ತಾಯವಾಯಿತು ಮಧ್ಯಾಹ್ನಾನಂತರ ಎ. ವಿ ಸ್ಕೂಲ್ ಕಟ್ಟಡದಲ್ಲಿ ಶ್ರೀಮದಿತ್ಯಾದಿ ಪಂಡಿತ ರತ್ನಂ ಕುಪ್ಪಣ್ಣಯ್ಯಂಗಾರ್ಯರೇ ಆದಿಯಾದ ಸಮಸ್ತ ವಿದ್ವನ್ಮಂಡಲಿಯವರೂ, ವೈದಿಕ ಮಹನೀಯರೂ, ಡಾಕ್ಟರವರು ಮತ್ತು ವೇಷ್ಕಾರರೇ ಆದಿಯಾದ ಸಮಸ್ತ ಲೌಕಿಕರೂ, ಮ್ಯುನಿಸಿಪಲ್ ಕೌನ್ಸಿಲರುಗಳೂ, ವರ್ತಕರೂ, ಈ ಸ್ಕೂಲ್ ಬಾಲಕ ಬಾಲಕಿಯರು ಸಹ ಸಭೆಸೇರಿದರು ಶ್ರೀಮಾನ್ ಪಂಡಿತರತ್ನಂ ಕುಪ್ಪಣ್ಣಯ್ಯಂಗಾರ್ಯರು ಅಗ್ರಾಸನವನ್ನು ವಹಿಸಿದರು ಸ್ಕೂಲಿನ ಪರವಾಗಿ ಕೆಲವು ಮಾಸ್ಟರುಗಳು ಬ್ರಿಟಿಷರ ಚರಿತ್ರೆಯನ್ನು ವಿವರಿಸಿ ಹೇಳಿದರು ಡಾಕ್ಟರೂ ಇತರ ಮಹನೀಯರೂ ಕೆಲವು ವಿಷಯಗಳನ್ನು ಹೃದಯಂಗಮವಾಗಿ ವಿವರಿಸಿ ಹೇಳಿದರು. ಬಾಲಕರು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಸಂಭಾಷಣಾರೂಪವಾದ ಕಥೆಗಳನ್ನು ಸ್ವಾರಸ್ಯವಾಗಿ ಹೇಳಿದ ಮೇಲೆ ಬಾಲಕ ಬಾಲಕಿಯರೆಲ್ಲಾ ಸೇರಿ ಶ್ರೇಯಃಪ್ರಾರ್ಥನಾ ಗೀತಗಳನ್ನು ಹಾಡಿದರು. ಸಭಾಧ್ಯಕ್ಷರು ರಾಜಭಕ್ತಿಯನ್ನು ಕುರಿತು ಆರ್ಯರು ಹಿಂದೆ ಬರೆದು ಇಟ್ಟಿರತಕ್ಕ ಗ್ರಂಥಗಳಲ್ಲಿ ಹೇಳಿರುವ ಅಂಶಗಳ ದೃಷ್ಟಾಂತಗಳಿಂದ ಸಾಲಂಕಾರವಾಗಿ ಪಂಡಿತ ಪಾಮರರಂಜನೆಯಾಗುವಂತೆ ಉಪನ್ಯಸಿಸಿದರು ಆಟಗಳಲ್ಲಿ ಗೆದ್ದ ಬಾಲಕರಿಗೆ ಬಹುಮಾನಗಳು ಕೊಡಲ್ಪಟ್ಟು ನಂತರ ಶ್ರೀಮದಿಂಡಿಯಾ ಚಕ್ರವರ್ತಿ ಮತ್ತು ಚಕ್ರವರ್ತಿನಿಯವರಿಗೂ, ಪ್ರಜೆಗಳ ಏಳಿಗೆಯಲ್ಲಿ ತತ್ಪರರಾಗಿರುವ ಶ್ರೀಮನ್ಮಹಾರಾಜರವರಿಗೂ, ಶ್ರೀಮದ್ಯುವರಾಜರವರಿಗೂ ಶ್ರೇಯಃ ಪ್ರಾರ್ಥನೆಯು ಮಾಡಲ್ಪಟ್ಟಿತು. ಸಭಿಕರು ಗಂಧ ಪುಷ್ಪಾದಿಗಳಿಂದಲೂ, ಬಾಲಕರು ಸಕ್ಕರೆ ವಗೈರೆ ತಿಂಡಿಗಳಿಂದಲೂ ತೃಪ್ತಿಪಟ್ಟು ಬ್ಯಾಂಡ್ ಆಗುತ್ತಿರಲು ಜಯಘೋಷದಿಂದ ಸಭೆಯು ಮುಕ್ತಾಯ ವಾಯಿತು.

ಹುಣಸೂರು.

ಕಳೆದ ತಾ 12ನೇ ಶುಕ್ರವಾರ ಬೆಳಿಗ್ಗೆ ಗೌರ್ನಮೆಂಟ್ ಎ ವಿ ಸ್ಕೂಲ್ ಕಾಂಪೌಂಡಿನಲ್ಲಿ ಎಲ್ಲಾ ಸ್ಕೂಲ್ ವಿದ್ಯಾರ್ಥಿಗಳೂ ಸೇರಿದರು. ಯೂನಿಯನ್ ಜಾಕ್ ಎಂಬ ಬ್ರಿಟಿಷ್ ಧ್ವಜಪಟವನ್ನು ಎತ್ತಿ ಕಟ್ಟಿ ಮಿಷನ್‌ಸ್ಕೂಲ್ ಬಾಲೆಯರು ಇಂಗ್ಲಿಷ್ ಮತ್ತು ಮೈಸೂರು ನ್ಯಾಷನಲ್ ಅಂಥೆಮ್ ಗೀತಗಳನ್ನು ಹಾಡುತ್ತಿರಲು, ಸರ್ಕಾರಿ ಮತ್ತು ಊರಿನ ಪ್ರಮುಖರೆಲ್ಲರೂ ಬಾಲಕ ಬಾಲಕಿಯರೊಡನೆ ನಿಂತು ಮರ್ಯಾದಾಪೂರ್ವಕವಾಗಿ ಮುಜರೇ ಮಾಡಿದರು ಹೊರಪ್ರಾಕಾರವನ್ನು ದಿವ್ಯವಾಗಿ ಶೃಂಗರಿಸಿದ್ದರು ಬ್ಯಾಂಡ್ ವಾದ್ಯಗಳು ಭೋರ್ಗರೆಯುತ್ತಿದ್ದುವು ಸರ್ವರೂ ಸ್ಕೂಲ್ ಹಾಲಿನಲ್ಲಿ ಉಚಿತಾಸನಗಳಲ್ಲಿ ಕುಳಿತುಕೊಂಡರು ಮಂದಿರವನ್ನು ನಾನಾ ಚಿತ್ರ ಪಟಗಳಿಂದ ಶೋಭಿಸುವಂತೆ ಮಾಡಿದ್ದರು ಉಚ್ಚಸ್ಥಾನದಲ್ಲಿ ಜಾರ್ಜ್ ಚಕ್ರವರ್ತಿಗಳ, ಮೇರಿ ಮಹಾರಾಜ್ಞೀರವರ, ಲೇಟ್ ಚಕ್ರವರ್ತಿ ಮಹಾರಾಜ್ಞೀಯರುಗಳ, ಶ್ರೀಮನ್ಮಹಾರಾಜರವರ ಚಿತ್ರಪಟಗಳನ್ನು ಇಟ್ಟು ಪುಷ್ಪಮಾಲಿಕೆಗಳಿಂದ ಶೃಂಗರಿಸಿದ್ದರು ಸಭಿಕರ ಕುತೂಹಲದಂತೆ ಅ||ಇನ್‌ಜಿನಿಯರ್ ಮ|| ಬಿ ನಂಜುಂಡಾಚಾರ್ಯರು ಅಗ್ರಾಸನವನ್ನು ವಹಿಸಿದರು. ಸ್ಕೂಲ್ ಹೆಡ್ ಮಾಸ್ಟರ್ ಮ|| ರತ್ನಂರಾಮಯ್ಯಂಗಾರ್ಯರು ಇಂಗ್ಲಿಷಿನಲ್ಲೂ, ಮ|| ಟಿ. ಕೃಷ್ಣಯ್ಯನವರು ಕನ್ನಡದಲ್ಲೂ, ಅಪ್ಪಯ್ಯಶಾಸ್ತ್ರಿಗಳು ಸಂಸ್ಕೃತದಲ್ಲೂ ಬ್ರಿಟಿಷರ ಧರ್ಮಪರಿಪಾಲನೆಯಿಂದ ಭಾರತೀಯರಾದ ನಮ್ಮಗಳಿಗೆ ಲಭಿಸಿರುವ ಪ್ರಯೋಜನಗಳನ್ನು ಸ್ಮರಿಸುವಂತೆಮಾಡಿ ಇಂತಹ ರಾಜ್ಯಭಾರವು ಚಿರಸ್ಥಾಯಿಯಾಗಿರಲೆಂದು ಹರಸಿದರು ಸಮಸ್ತರಿಗೂ ಗಂಧ, ತಾಂಬೂಲ, ಸಕ್ಕರೆ, ಫಲಗಳನ್ನು ಹಂಚಿ ಸಂತೃಪ್ತಿಗೊಳಿಸಿದರು ಸ್ವಲ್ಪ ಗಾನವಾಯಿತು. ಒಬ್ಬ ಬಾಲಕನು ದೇವರ ಸ್ತುತಿಯನ್ನು ಹಾಡಿದನು ಸಂದಲ್ ಕೋರಿ ಮ|| ಚಿದಂಬರರಾಯರು ಪರೋಕ್ಷವಾದ ರಾಮರಾಜ್ಯವೂ ಧರ್ಮ ಪರಿಪಾಲನೆಯೂ ಈಗಿನ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಪ್ರತ್ಯಕ್ಷವಾಗಿವೆ ಎಂದು ಒಂದೆರಡು ಶ್ಲೋಕಗಳನ್ನು ಉದಾಹರಿಸಿ ಈ ರಾಜ್ಯಭಾರವು ಚಿರಕಾಲ ಬಾಳಬೇಂದು ಪ್ರಾರ್ಥಿಸಿ ಹಾರೈಸತಕ್ಕುದೆಂದು ವ್ಯಕ್ತಪಡಿಸಿದರು ಗರ್ಲ್ಸ್ ಸ್ಕೂಲ್ ಬಾಲಕಿಯರು ಕೆಲವು ಹಾಡುಗಳನ್ನು ಹೇಳಿದಮೇಲೆ ಬ್ರಿಟಿಷ್ ಮತ್ತು ಮೈಸೂರು ನ್ಯಾಷನಲ್ ಅಂಥೆಮ್ ಗೀತಗಳನ್ನು ಇಂಪಾಗಿ ಹಾಡಿದರು ಜಯಧ್ವನಿಗಳಿಂದ ಸಭೆಯು ಮುಗಿಯಿತು. ಸಾಯಂಕಾಲ 4 ಗಂಟೆಗೆ ಮಿಲಿಟರಿ ಗ್ರಾಸ್ ಫಾರಮ್ ನಲ್ಲಿ ಬಾಲಕಬಾಲಕಿಯರನ್ನು ಬರಮಾಡಿಕೊಂಡು ಅವರಿಂದ ವಿವಿಧ ಆಟಪಾಟಗಳನ್ನು ಮಾಡಿಸಿ ಜಯಹೊಂದಿದವರಿಗೆ ಬಹುಮಾನಗಳನ್ನು ದ್ರವ್ಯರೂಪವಾಗಿ ಪ್ರೆಸಿಡೆಂಟ್ ಮ ಬಿ ಎನ್ ಅರಾಧ್ಯರವರೂ, ಸುಬೇದಾರ್ ಮ|| ಆರ್. ಎ ನರಸಿಂಹಯ್ಯಂಗಾರ್ಯರವರೂ ಕೊಡಿಸಿದರು ಇಬ್ಬರು ಬಾಲಕರು ದೇವತಾ ಸ್ತುತಿ ಪದಗಳನ್ನು ಹಾಡಿದರು ಮೂರು ಸಾರಿ ಜಯಘೋಷಗಳನ್ನು ಮಾಡುತ್ತಾ ಎಲ್ಲರೂ ತಂತಮ್ಮ ಬಿಡಾರಗಳಿಗೆ ತೆರಳಿದರು ಇದಕ್ಕಾಗಿ ಚಂದಾ ರೂಪವಾಗಿ ದ್ರವ್ಯ ಸಹಾಯಮಾಡಿದ ಮಹನೀಯರುಗಳನ್ನೂ, ಈ ವಿಶೇಷ ಕಾರ್ಯಕ್ಕಾಗಿ

ಶ್ರಮಪಟ್ಟ ಎ ವಿ ಸ್ಕೂಲ್ ಹೆಡ್ ಮಾಸ್ಟರನ್ನೂ, ಪ್ರೆಸಿಡೆಂಟರಾಗಿದ್ದು ಎಲ್ಲಾ ಕಾರ್ಯಗಳನ್ನೂ ಸಾರ್ಥಕವಾಗಿ ನೆರವೇರಿಸಿದ ಮ|| ಬಿ ಎನ್ ಆರಾಧ್ಯರನ್ನೂ, ಅಮಲ್ದಾರ್ ಮ|| ಆರ್ ಎ. ನರಸಿಂಹಯ್ಯಂಗಾರ್ರವರನ್ನೂ ಇತರ ದೊಡ್ಡ ಮನುಷ್ಯರನ್ನೂ ವಂದಿಸತಕ್ಕದಾಗಿರುವುದು

ದೇವನಹಳ್ಳಿ

ಗವರ್ನ್‌ಮೆಂಟ್ ಹಿಂದುಸ್ತಾನಿ ಬಾಯ್ಸ್ ಸ್ಕೂಲಿನಲ್ಲಿ ದರ್ಬಾರ್ ದೇ ಉತ್ಸವವು ತುಂಬಾ ವಿಜೃಂಭಣೆಯಿಂದ ನಡೆಯಿತು ಸ್ಕೂಲನ್ನು ವಿವಿಧವಾಗಿ ಅಲಂಕರಿಸಿ, ಬಹಳ ರಮಣೀಯವಾಗಿ, ನೋಟಕರ ಮನಸ್ಸನ್ನು ಸೆಳೆಯುತ್ತಿತ್ತು ಆ ದಿನ ಬೆಳಿಗ್ಗೆ ಮಹಮದೀಯ ಪ್ರಜೆಗಳೂ, ಊರಿನ ದೊಡ್ಡ ಮನುಷ್ಯರೂ, ಸರ್ಕಾರಿ ಆಫೀಸರುಗಳೂ ಸಭೆಸೇರಿದ್ದರು ರೇಲ್ವೆ ಸಬ್ ಅ|| ಇಂಜನಿಯರ್ ಮ|| ಗರುಡಾಚಾರ್ಯರು ಸಭೆಯ ಅಗ್ರಾಸನವನ್ನು ವಹಿಸಿದರು ಹುಡುಗರಿಂದ ಚಕ್ರವರ್ತಿ ಸಾರ್ವಭೌಮರವರ ಮತ್ತು ಮಹಾರಾಜರವರ ಶ್ರೇಯಃಪ್ರಾರ್ಥನೆಗಳು ಹಾಡಲ್ಪಟ್ಟನಂತರ ಬ್ರಿಟಿಷ್ ಸರ್ಕಾರದಿಂದ ನಮಗೆ ಉಂಟಾಗಿರತಕ್ಕ ಪ್ರಯೋಜನಗಳ ವಿಷಯವೂ, ನಮಗೆ ಸರ್ಕಾರದ ವಿಷಯದಲ್ಲಿ ಇರತಕ್ಕ ರಾಜಭಕ್ತಿ ವಿಷಯವೂ ಉಪನ್ಯಾಸಗಳು ತುಂಬಾ ಸ್ವಾರಸ್ಯವಾಗಿದ್ದವು ಕನ್ನಡ ಪಂಡಿತರು ಕನ್ನಡದಲ್ಲೂ, ಹಿಂದೂ ಹುಡುಗರು ಹಿಂದೂಸ್ತಾನಿಯಲ್ಲೂ, ಮುಸಲ್ಮಾನ ಹುಡುಗರು ಕನ್ನಡದಲ್ಲೂ ಮಾಡಿದ ಉಪನ್ಯಾಸಗಳು ತುಂಬಾ ಶ್ಲಾಘ್ಯವಾಗಿದ್ದು ಸ್ಕೂಲಿನ ಅಭಿವೃದ್ಧಿಸ್ಥಿತಿಯನ್ನು ಪ್ರಕಾಶಪಡಿಸಿದವು ಬಳಿಕ ಹೆಡ್ ಮಾಸ್ಟರವರು ಓದಿದ ರಿಪೋರ್ಟಿನಿಂದ ಸ್ಕೂಲು ಅಭಿವೃದ್ಧಿಸ್ಥಿತಿಗೆ ಬರುತ್ತಿದೆ ಎಂದು ತಿಳಿಯಲಾಯಿತು ತರುವಾಯ ಹುಡುಗರಿಗೆ ಇನಾಂ ಪುಸ್ತಕಗಳು ಕೊಡಲ್ಪಟ್ಟವು ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳೂ, ಹುಡುಗರಿಗೆ ಮಿಠಾಯಿಯೂ ಹಂಚಲ್ಪಟ್ಟ ಮೇಲೆ ಸಭೆಯು ಜಯಘೋಷದೊಡನೆ ಬರಖಾಸ್ತಾಯಿತು

ಚಿತ್ರದುರ್ಗ

ನಮ್ಮ ಜಾರ್ಜ್ ಸಾರ್ವಭೌಮರವರ ಪಟ್ಟಾಭಿಷೇಕೋತ್ಸವದ ನಿಮಿತ್ತ ಕಳೆದ ಶುಕ್ರವಾರ ಚಿತ್ರದುರ್ಗದಲ್ಲಿ ಆರ್ಯನ್ ಸ್ಟೂಡೆಂಟ್ಸ್ ಹೋಮಿನ ಆಶ್ರಯದಲ್ಲಿ ಸ್ಥಾಪಿಸಿರುವ ಶ್ರೀಮನ್ ಮೇರಿ ಮಹಾರಾಜ್ಞಿ ಪಂಚಮ ಸ್ಕೂಲಿನ ಪರ್ಣಶಾಲೆಯಲ್ಲಿ ಆ ದಿನ ಪ್ರಾತಃಕಾಲ ಅದರ ಧರ್ಮದರ್ಶಿಗಳು ಸೇರಿ ಪ್ರಭುಭಕ್ತಿ ಪ್ರದರ್ಶನೋತ್ಸವವನ್ನು ನಡಿಸಿದರು ಈ ಸಭೆಯಲ್ಲಿ ಪ್ರಸಿದ್ಧ ಪಾಳೇಗಾರ್ ಮದಕರಿನಾಯ್ಕರ ವಂಶಸ್ಥರಾದ ಮ|| ಬಿ ಡಿ ಮದಕರಿನಾಯ್ಕರು ಅಗ್ರಾಸನವನ್ನು ವಹಿಸಿದ್ದರು 16 ಜನ ಪಂಚಮ ಬಾಲಕ ಬಾಲಕಿಯರೂ, 16 ಜನ ಹೋಮಿನ ವಿದ್ಯಾರ್ಥಿಗಳೂ ಹಾಜರಿದ್ದರು ಅವರು ಮೊದಲು ಭಗವತ್ಪ್ರಾರ್ಥನೆ ಮಾಡಿದರು ವೆಂಕಟೇಶಮೂರ್ತಿ ಎಂಬ ಹೋಮಿನ ವಿದ್ಯಾರ್ಥಿ ಸುಸ್ವರದಿಂದ ಚಕ್ರವರ್ತಿ ಸಾರ್ವಭೌಮ ದಂಪತಿಗಳ ಆಯುರಾರೋಗ್ಯವನ್ನು ಕುರಿತ ದ್ವಾದಶ ಶ್ಲೋಕಗಳನ್ನು ಹಾಡಿದನು ಬೆಂಗಳೂರು ವಿದ್ವಾನ್ ಪದವಸ್ತು ವೆಂಕಟಕೃಷ್ಣರಾಮಾನುಜಾಚಾರ್ಯರವರು ಸಹಜವಾಗಿ ಹಿಂದುಗಳಿಗಿರಬೇಕಾದ ರಾಜಭಕ್ತಿಯನ್ನು ವೇದಪ್ರಮಾಣಗಳಿಂದ ಸಿದ್ಧಾಂತಪಡಿಸಿ ಕನ್ನಡ ಸಂಸ್ಕೃತ ಭಾಷೆಗಳಲ್ಲಿ ಉಪನ್ಯಾಸಮಾಡಿದರು ಸ್ಕೂಲಿನ ವೈಸ್ ಪ್ರೆಸಿಡೆಂಟರಾದ ಮ|| ಸಿ ಕೃಷ್ಣರಾಯರು ಇಂಗ್ಲಿಷ್ ಚಕ್ರಾಧಿಪತ್ಯದಿಂದ ನಮಗೂ, ನಮ್ಮ ಪ್ರಭುತ್ವಕ್ಕೂ, ಅತಿ ಕಷ್ಟದ ಸ್ಥಿತಿಯಲ್ಲಿದ್ದ ಇಂಡಿಯಾ ದೇಶಕ್ಕೂ ಉಂಟಾಗಿರತಕ್ಕ ಸೌಕರ್ಯಗಳನ್ನು ಕುರಿತು ಉಪನ್ಯಾಸಮಾಡಿದರು ಬೆಂಗಳೂರು ಪಂಡಿತ ರಾಮಸ್ವಾಮಿಯವರು ಮಂಗಳ ಶ್ಲೋಕಗಳನ್ನು ಹಾಡಿದರು ಅನಂತರ ಸಾಹುಕಾರ್ ಕಾಡಪ್ಪನವರು ವಿದ್ಯಾರ್ಥಿಗಳಿಗೆ ಧಾರಾಳವಾಗಿ ಸಕ್ಕರೆ ಹಂಚಿಸಿದರು ಕಡೆಯಲ್ಲಿ ಅಗ್ರಾಸನಾಧಿಪತಿಗಳೂ ಸಭಿಕರೂ ಬಾಲಕ ಬಾಲಕಿಯರೂ ಸೇರಿ ಕುಟುಂಬ ಸಹಿತರಾದ ನಮ್ಮ ಚಕ್ರವರ್ತಿ ಸಾರ್ವಭೌಮರಿಗೂ, ನಮ್ಮ ಮಹಾರಾಜಾ ಸಾಹೇಬ್ ಬಹದ್ದೂರವರಿಗೂ ಆಯುರಾರೋಗ್ಯಾದಿಗಳನ್ನು ಬಯಸಿ ಮೂರು ಸಲ ಜಯಘೋಷಮಾಡಿದರು ಎಲ್ಲರಿಗೂ ಪುಷ್ಪ ತಾಂಬೂಲಗಳನ್ನಿತ್ತು ಸಭಾ ಬರಖಾಸ್ತು ಮಾಡಲ್ಪಟ್ಟಿತು ಆ ದಿನ ದೊಡ್ಡ ಹಬ್ಬದಂತೆ ಎಲ್ಲರೂ ಸುಭೋಜನ ಮಾಡಿ ಸಂತೋಷದಿಂದ ಕಳೆದರು

ಚಿಕ್ಕಬಳ್ಳಾಪುರದ ತಾಲ್ಲೂಕು ನಂದಿ

ಈ ಸ್ಕೂಲಿನಲ್ಲಿ ಡಿಸೆಂಬರ್ 13 ನೇ ತಾ ಶುಕ್ರವಾರ ದರ್ಬಾರ್ ದೇ ಉತ್ಸವವು ವಿಶೇಷ ವಿಜೃಂಭಣೆಯಿಂದ ನಡಿಸಲ್ಪಟ್ಟಿತು ಸ್ಕೂಲ್ ಹೊಸ ಕಟ್ಟಡದ ಮುಂಭಾಗದಲ್ಲಿ ಬಹು ಅಲಂಕಾರವಾಗಿ ಚಪ್ಪರವನ್ನು ಹಾಕಿ, ಬಹು ಚೆನ್ನಾಗಿ ತಳಿರು ತೋರಣಾದಿಗಳಿಂದ ಅಲಂಕರಿಸಿ, ಚಿತ್ರಾಕ್ಷರಗಳನ್ನು ಬಿಡಿಸಿ ಚಪ್ಪರದ ಮುಂಭಾಗದಲ್ಲಿ ಅಂಟಿಸಿದ್ದರು ಮೊದಲೇ ಏರ್ಪಾಡುಮಾಡಿದ್ದಂತೆ ಬಾಲಕರು 1 ಘಂಟೆಗೆ ಸರಿಯಾಗಿ ಸ್ಕೂಲ್ ಮುಂಭಾಗದಲ್ಲಿ ಬಂದು ಸೇರಿದರು ಉಪಾಧ್ಯಾಯರುಗಳೂ, ಬಾಲಕರೂ, ಊರಿನ ದೊಡ್ಡ ಮನುಷ್ಯರೂ ಚಕ್ರವರ್ತಿಗಳ ಪಟವನ್ನೂ ಯೂನಿಯನ್ ಜಾಕ್ ಎಂಬ ಧ್ವಜಪಟದೊಡನೆ ಬ್ಯಾಂಡ್ ವಾದ್ಯಸಮೇತ ಊರಿನಲ್ಲಿ ಮೆರವಣಿಗೆ ಮಾಡಿಕೊಂಡು ಬಂದರು ಬಾಲಕರು ಡ್ರಿಲ್ ಮಾಡಿ ಯೂನಿಯನ್ ಜಾಕ್‌ಗೂ, ಚಕ್ರವರ್ತಿಗಳ ಪಟಕ್ಕೂ ಮುಜರೆ ಮಾಡಿ, ಜಾರ್ಜ್ ಸಾರ್ವಭೌಮರವರಿಗೂ ಶ್ರೀಮನ್ ಮಹಾರಾಜರವರಿಗೂ ಶ್ರೇಯಃಪ್ರಾರ್ಥನೆಯನ್ನು ನಡಿಸಿದರು ಪ್ರೋಗ್ರಾಮಿನಂತೆ ಊರಿನ ದೊಡ್ಡ ಮನುಷ್ಯರೆಲ್ಲರೂ ಮಧ್ಯಾಹ್ನ 3 ಘಂಟೆಗೆ ಸಭೆಯನ್ನಲಂಕರಿಸಿದರು ಮ|| ಡಿ ಶೇಷಗಿರಿರಾಯರು ಸಭೆಯ ಅಗ್ರಾಸನಾಧಿಪತ್ಯವನ್ನು ವಹಿಸಿದರು ಬಳಿಕ ಮ|| ಎಸ್ ನಾರಾಯಣರಾಯರು ರಾಜಭಕ್ತಿ, ಮತ್ತು ಬ್ರಿಟಿಷ್ ಪ್ರಭುತ್ವದಿಂದುಂಟಾದ ಪ್ರಯೋಜನಗಳನ್ನು ಕುರಿತು ಬಹು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು ಅದು ಮುಗಿದ ಮೇಲೆ ಮ|| ಕೆ ಸುಬ್ಬಯ್ಯನವರು ಡೆಹಲಿಯಲ್ಲಿ ನಡೆದ ಉತ್ಸವದ ವಿಷಯವಾಗಿ ಉಪನ್ಯಾಸಮಾಡಿದರು ಕೆಲವು ವಿದ್ಯಾರ್ಥಿಗಳು ಆರೋಗ್ಯದ ವಿಷಯವಾಗಿ ಒಂದು ನಾಟಕವನ್ನು ಅಭಿನಯಿಸಿದರು ಉಪನ್ಯಾಸಗಳನ್ನು ಕೇಳಿ ನಾಟಕವನ್ನು ನೋಡಿ ಸಭಿಕರು ಬಹಳವಾಗಿ ಆನಂದಪಟ್ಟರು ಅನಂತರ ಅಗ್ರಾಸನಾಧಿಪತಿಗಳು ಉಪನ್ಯಾಸಗಳ ವಿಷಯನ್ನು ಕುರಿತು ಬಹು ಯುಕ್ತಿಯುಕ್ತವಾದ ಒಂದು ಭಾಷಣವನ್ನು ಮಾಡಿದರು ಸ್ವಲ್ಪ ಹೊತ್ತು ಸಂಗೀತ ಜರುಗಿ ನಂತರ ಸಭಿಕರಿಗೆ ಅಲ್ಪಾಹಾರದೊಡನೆ ಗಂಧ, ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು, ಬಾಲಕರಿಂದ ಸಲಾಂ ಬಾಜಾ ನುಡಿ ಹೇಳಿಸಲ್ಪಟ್ಟು ಕೋಲಾಹಲಧ್ವನಿಯೊಡನೆ ಸಭೆಯು ಮುಕ್ತಾಯವಾಯಿತು ಉತ್ಸವವು ಹಿಂದೆ ಯಾವಾಗಲೂ ಇಷ್ಟು ವಿಜೃಂಭಣೆಯಿಂದ ನಡೆಯಲಿಲ್ಲ [ಈ ಬಾತ್ಮಿಯ ಕೂಡ ಆ ದಿನ ಸಭೆಯಲ್ಲಿ ಓದಿ ಹೇಳಿದ ಎರಡು ಉಪನ್ಯಾಸಗಳನ್ನು ಪ್ರಕಟನೆಗಾಗಿ ಕಳುಹಿಸಿರುತ್ತಾರೆ ಸ್ಥಳ ಸಂಕೋಚದಿಂದ ಪ್ರಕಟಿಸಲು ಸಾಧ್ಯವಾಗಲಿಲ್ಲವೆಂದು ವಿಷಾದಿಸುತ್ತೇವೆ —ಎಡಿ]

ಗೌರಿಬಿದನೂರು ತಾಲ್ಲೂಕು ಮಂಚೇನಹಳ್ಳಿ

ಇಲ್ಲಿನ ಸ್ಕೂಲುಗಳಲ್ಲಿ ದರ್ಬಾರ್ ದೇ ಉತ್ಸವವು ಗಾಂಭೀರ್ಯವಾಗಿ ನಡೆಯಿತು ಆ ದಿನ ಪ್ರಾತಃಕಾಲ 7 ಘಂಟೆಗೆ ಇಂಗ್ಲಿಷ್ ಸ್ಕೂಲ್ ವಿದ್ಯಾರ್ಥಿಗಳೆಲ್ಲಾ ಸ್ಕೂಲಿಗೆ ಹಾಜರಾದರು ಹೆಡ್ ಮಾಸ್ಟರ್ ಮ|| ವಿಠಲಮೂರ್ತಾಚಾರ್ಯರು ಪ್ರಭುದಂಪತಿಗಳ ಶ್ರೇಯಃಪ್ರಾರ್ಥನೆಯನ್ನು ಪದ್ಯರೂಪವಾಗಿ ಬೋರ್ಡಿನಲ್ಲಿ ಬರೆದು ಓದಿ, ರಾಜಭಕ್ತಿಯ ವಿಷಯವಾಗಿ ವಿದ್ಯಾರ್ಥಿಗಳಿಗೆ ಉಪನ್ಯಾಸರೂಪವಾಗಿ ಉಪದೇಶಿಸಿದರು —ಇಲ್ಲಿನ ಲಂಡನ್ ಮಿಷನ್ ಗರ್ಲ್ಸ್ ಸ್ಕೂಲಿನಲ್ಲಿ ಸುಮಾರು 76 ಬಾಲಕಿಯರು ಬೆಳಿಗ್ಗೆ 8 ಘಂಟೆಗೆ ಅಲಂಕೃತರಾಗಿ ದೇವಸ್ಥಾನದಲ್ಲಿ ಸೇರಿ ಮಂಗಳಾರತಿಯನ್ನು ಮಾಡಿಸಿ ರಾಜದಂಪತಿಗಳ ಶ್ರೇಯಃಪ್ರಾರ್ಥನೆಯನ್ನು ಗಾಯನ ರೂಪವಾಗಿ ಹೇಳಿ ಪುಷ್ಪ ಹಾರಗಳಿಂದ ಅಲಂಕರಿಸಿದ್ದ ರಾಜದಂಪತಿಗಳ ಮತ್ತು ಶ್ರೀಮನ್ ಮಹಾರಾಜ ಯುವರಾಜರುಗಳ ಭಾವ ಚಿತ್ರಗಳನ್ನು ಸುಂದರವಾದ ಕೈಗಾಡಿಯಲ್ಲಿಟ್ಟು ಮೇಳ ಹಾಡುಗಳಿಂದ ಊರಲ್ಲಿ ಮೆರವಣಿಗೆ ಮಾಡಿಸಿ ಅನೇಕ ನೋಟಕರ ಸಮೇತ ಕೆರೆಯ ಪುಷ್ಪಲಾದಿಗಳಿಂದಲೂ ನಾನಾ ಬಣ್ಣದ ಬಾವುಟಗಳಿಂದಲೂ ಶೃಂಗರಿಸಲ್ಪಟ್ಟ ಸ್ಕೂಲಿಗೆ ಬಂದಾಗ ಹೆಡ್ ಮಾಸ್ಟರವರು ಸ್ಕೂಲ್ ಬಾಗಿಲಿನಲ್ಲಿ ಕಾದಿದ್ದು ರಾಜದಂಪತಿಗಳ ಮತ್ತು ಶ್ರೀಮನ್ ಮಹಾರಾಜರವರ ಶ್ರೀಯೋಕ್ತಿಗಳನ್ನು ನುಡಿದು ಆ ಭಾವಚಿತ್ರಗಳ ಮೇಲೆ ಪುಷ್ಪವನ್ನು ಸುರಿದಾಗ ಬಾಲಕಿಯರೆಲ್ಲಾ ಜಯಧ್ವನಿಮಾಡಿ ಸ್ಕೂಲನ್ನು ಪ್ರವೇಶಿಸಿದರು ಹೆಡ್ ಮಾಸ್ಟರವರು ಸಮಯೋಚಿತವಾದ ಉಪನ್ಯಾಸವನ್ನು ಪ್ರಶ್ನೋತ್ತರ ರೂಪವಾಗಿ ಮಾಡಿದನಂತರ ಬಾಲಕಿಯರೆಲ್ಲಾ ನಿಂತು ಮೂರು ವರ್ಗವಾಗಿ ರಾಜಗೀತವನ್ನು ಇಂಪಾಗಿ ಹಾಡಿದರು ಕೂಡಲೆ ವಾದ್ಯ ಘೋಷವು ಮೊಳಗಿತು ಬಾಲಕಿಯರು ಇನಾಮುಗಳನ್ನು ಪಡೆದು ಆನಂದಪಟ್ಟರು ತರುವಾಯ ಅವರಿಗೆ ಮಿಠಾಯಿ, ನೋಟಕರಿಗೆ ತಾಂಬೂಲಗಳನ್ನು ಹಂಚಿಕೊಡಲಾಯಿತು ಇಲ್ಲಿನ ಗ|| ಕನ್ನಡ ಸ್ಕೂಲಿನಲ್ಲಿ ಬಾಲಕರೂ, ಉಪಾಧ್ಯಾಯರುಗಳೂ ಪುನಃ 1½ ಘಂಟೆಗೆ ಸ್ಕೂಲನ್ನು ಸೇರಿದರು ಮ|| ಸುಬ್ಬರಾಯರು ಬ್ರಿಟಿಷರ ಆಳಿಕೆಯಿಂದ ಉಂಟಾಗುವ ಸೌಕರ್ಯಗಳನ್ನು ಬಾಲಕರಿಗೆ ವಿವರಿಸಿ ರಾಜಭಕ್ತಿಯ ವಿಷಯವಾಗಿ ಚಿಕ್ಕ ಉಪನ್ಯಾಸವನ್ನು ಮಾಡಿದ ನಂತರ ಬಾಲಕರಿಗೆ ಇನಾಮುಗಳನ್ನೂ ಫಲಹಾರವನ್ನೂ ಹಂಚಿ ಉತ್ಸವವನ್ನು ಪೂರೈಸಿದರು ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರಿಗೂ ಮೇರಿ ಮಹಾರಾಜ್ಞಿಯವರಿಗೂ ಶ್ರೀಮನ್ ಮಹಾರಾಜ ಕೃಷ್ಣರಾಜ ಒಡೆಯರ್ ಬಹದ್ದೂರವರಿಗೂ ಸಕಲ ಶ್ರೇಯಸ್ಸೂ ಚಿರಕಾಲ ಲಭಿಸಲಿ ಎಂದು ಪ್ರಾರ್ಥಿಸಿದರು

ಹಾಸನದ ತಾಲ್ಲೂಕು ಗ್ರಾಮ

ತಾ 12 ರಲ್ಲಿ ಇಲ್ಲಿನ ಕನ್ನಡ ಸ್ಕೂಲ್ ಕಟ್ಟಡದಲ್ಲಿ ದರ್ಬಾರ್ ದೇ ಜ್ಞಾಪಕಾರ್ಥವಾದ ಮಹೋತ್ಸವವೂ, 1912—13 ನೆ ಸಾಲ್ ಬಹುಮಾನ ಪುಸ್ತಕಗಳ ವಿನಿಯೋಗವೂ ಬಹು ವಿಜೃಂಭಣೆಯಿಂದ ನೆರವೇರಿದವು ಹೆಡ್ ಮಾಸ್ಟರ್ ಮ|| ಸುಬ್ಬರಾಯರು ತಮ್ಮ ಅ|| ಮಾಸ್ಟರುಗಳ ಸಹಾಯದಿಂದ ಸ್ಕೂಲನ್ನು ದಿವ್ಯವಾಗಿ ಅಲಂಕರಿಸಿ, ಊರಿನ ದೊಡ್ಡ ಮನುಷ್ಯರನ್ನೂ, ಶೆಟ್ಟಿವರ್ತಕರನ್ನೂ ಬರಮಾಡಿಕೊಂಡು, ಬಾಲಕ ಬಾಲಕಿಯರನ್ನು ಕೂಡಿಸಿ, ಮ|| ಟಿ ದರ್ಮರಾಯ ಶೆಟ್ಟರವರನ್ನು ಓಲಗ ಸಮೇತ ಸ್ಕೂಲಿಗೆ ಬೆಳಿಗ್ಗೆ 8 ಘಂಟೆಗೆ ಕರೆದು ತಂದು ಅವರಿಗೆ ಸಭೆಯ ಅಗ್ರಾಸನವನ್ನು ವಹಿಸಿದರು ಬಾಲಕ ಬಾಲಕಿಯರು ಚಕ್ರವರ್ತಿಯರ, ಶ್ರೀಮನ್ ಮಹಾರಾಜರವರ ಶ್ರೇಯ ಪ್ರಾರ್ಥನೆಗಳನ್ನು ಬಹುವಾಗಿ ನಡಿಸಿದರು ಬ್ರಿಟಿಷ್ ರಾಜ್ಯಭಾರದ ವಿತರಣೆಯನ್ನೂ, ಸೌಕರ್ಯಗಳನ್ನೂ ಕುರಿತ ಉಪನ್ಯಾಸವು ಅ|| ಮಾ| ಎನ್ ದೇಶಿಕಾಚಾರ್ಯರಿಂದ ನಡಿಸಲ್ಪಟ್ಟಿತು ಬಳಿಕ ಸ್ಕೂಲಿನ ವಾರ್ಷಿಕ ರಿಪೋರ್ಟನ್ನು ಮ ಪಿ ಸುಬ್ಬರಾಯರು ಓದಿ ಹೇಳಿದರು ಗರಲ್ಸ್ ಸ್ಕೂಲ್ ಮ|| ಟಿ ನರಸಿಂಹಾಚಾರ್ಯರು ಸಂಸ್ಕೃತ ಶ್ಲೋಕಗಳಿಂದ ಶ್ರೇಯಃಪ್ರಾರ್ಥನೆ ಮಾಡಿದ ಮೇಲೆ ವಿದ್ಯಾರ್ಥಿಗಳಿಗೆ ಬಹುಮಾನ ಪುಸ್ತಕಗಳು ಛೇರ್‌ಮೆನ್ ರಿಂದ ಹಂಚಲ್ಪಟ್ಟವು ಅಧ್ಯಕ್ಷರು ಸಭಿಕರನ್ನು ಕುರಿತು—ಬ್ರಿಟಿಷ್ ರಾಜ್ಯಭಾರವು ಎಷ್ಟು ಪ್ರಯೋಜನಕರವಾಗಿದೆ ಎಂಬುವನ್ನು ನಾನು ಹೇಳಬೇಕಾಗಿಲ್ಲ ಸರ್ವರಿಗೂ ಸ್ವಂತ ಅನುಭವವೂ, ಈ ಮೊದಲೇ ಕೇಳಿರುವ ಉಪನ್ಯಾಸವೂ ಚೆನ್ನಾಗಿ ತಿಳಿಸುತ್ತೇವೆ ಮುಂದೆ ಲೋಕದಲ್ಲಿ ಪ್ರಜೆಗಳಾಗಿ ಅನೇಕಾನೇಕ ಕಾರ್ಯಗಳನ್ನು ಮಾಡತಕ್ಕವರು ಮಕ್ಕಳೇ ಆದುದರಿಂದ ಈ ವಿಧವಾದ ಉತ್ಸವವು ಸ್ಕೂಲುಗಳಲ್ಲಿ ನಡೆಯುವುದೇ ಯುಕ್ತವೆಂದು ಭಾವಿಸಿ ಏರ್ಪಾಡಿಟ್ಟಿದೆ ಎಂದು ಮುಂತಾಗಿ ಹೇಳಿದರು ಬಳಿಕ ಬಾಲಕಿಯರು ಮಂಗಳಗಳನ್ನು ಹೇಳಿದರು ಸಭಿಕರಿಗೆಲ್ಲಾ ಗಂಧ ಪುಷ್ಪ ಫಲ ತಾಂಬೂಲಾದಿಗಳೂ, ಬಾಲಕ ಬಾಲಕಿಯರಿಗೆ ತಿಂಡಿ ಸಾಮಾನುಗಳೂ ಹಂಚಲ್ಪಟ್ಟು ಬಹಳ ಉತ್ಸಾಹದಿಂದ ಬೆಳಗಿನ ಸಭೆಯು ಮುಕ್ತಾಯವಾಯಿತು ಮಧ್ಯಾಹ್ನ 1 ಘಂಟೆಗೆ ಮೈದಾನದಲ್ಲಿ ವಿದ್ಯಾರ್ಥಿಗಳೆಲ್ಲರನ್ನೂ ಸೇರಿಸಿ ವಿನೋದಕರವಾದ ಆಟಗಳನ್ನೂ ಪಂದ್ಯಗಳನ್ನೂ ನಡಿಸಿ ಗೆದ್ದವರಿಗೆ ಬಹುಮಾನಗಳನ್ನು ಕೊಟ್ಟರು ಸರ್ವರೂ ಸಂತೋಷಕರವಾಗಿ ಚಕ್ರವರ್ತಿ ಸಾರ್ವಭೌಮರವರ, ಶ್ರೀಮನ್ ಮಹಾರಾಜರವರ ಪರಿವಾರಕ್ಕೂ, ದೇಶಕ್ಕೂ ಸುಖ ಸಂಪದಗಳನ್ನುಂಟುಮಾಡಲೆಂದು ಭಗವಂತನನ್ನು ಪ್ರಾರ್ಥಿಸಿ ತಮ್ಮ ಮನೆಗಳಿಗೆ ತೆರಳಿದರು ಆ ದಿನದ ಸಂಭ್ರಮೋತ್ಸವದಂತೆ ಹಿಂದೆ ಯಾವಾಗಲೂ ನಡೆದಿರಲಿಲ್ಲ ಇದೆಲ್ಲವೂ ನಮ್ಮ ಕನ್ನಡ ಸ್ಕೂಲ್ ಹೆಡ್ ಮಾಸ್ಟರ್ ಮ ಪಿ ಸುಬ್ಬರಾಯರ ಏರ್ಪಾಡಿನಿಂದಲೇ ಆದುದು

ಪ್ಯಾಕೆಟ್ ಸಿಗರೆಟ್ ಲೈಟರ್,

ಕ್ರಯ ರೂ 2 8 0

ಸಿಗರೇಟ್, ಬೀಡಿ ಸೇದುವವರಿಗೆ ಬಹಳ ಉಪಯೋಗ ಉಳ್ಳದ್ದು ದೀಪದ ಕಡ್ಡಿಯೇ ಬೇಡ ಜರ್ಮನ್ ಸಿಲ್ವರ್‌ನಲ್ಲಿ ನಸ್ಯದ ಡಬ್ಬಿ ನಮೂನೆ ತಯಾರಿಸಿ ಬಂದಿರುತ್ತದೆ ಜನರು ನೋಡಿದರೆ ನಶ್ಯದ ಡಬ್ಬಿ ಎಂದೇ ಭಾವಿಸುವರು ಇದನ್ನು ಉಪಯೋಗಿಸುವ ವಿಧಾನವನ್ನು ನಮ್ಮ ಕೆಟಲಾಗ್ ನಲ್ಲಿ ವಿವರಿಸಿರುತ್ತೇವೆ ಬೇಗನೆ ಒಂದನ್ನು ತರಿಸಿ ಪರೀಕ್ಷಿಸಬಹುದು [250 3]

ವಿಳಾಸ —ಶ್ರೀ ಕೃಷ್ಣಾ ಅಂಡ್ ಬ್ರದರ್ಸ್,
13, ಮಿಂಟ್ ಸ್ಟ್ರೀಟ್, ಮದರಾಸು

ಮಕ್ಕಳ ಆರೋಗ್ಯವನ್ನು

ಯಾವಾಗಲೂ ಕಾಪಾಡುವದು ಹೆತ್ತರ ಮೇಲೆ ಬಿದ್ದ ಭಾರವಾಗಿದೆ

ಸಣ್ಣ ಮಕ್ಕಳು ಹೇಳಿದಂತೆ ಕೇಳದೆ ಸಿಟ್ಟಿಗೆ ಒಳಪಡುವಂಥವರಾಗಿದ್ದು ಆಹಾರದುಚಿ ಕಡಮೆಯುಳ್ಳವರಾಗಿದಾರೆಂದು ಕಂಡ ಕೂಡಲೆ

SCOTT'S EMULSION 251

(ಸ್ಕಾಟ್ಸ್ ಇಮಲ್ಷನ್)

ಎಂಬೀ ಸೇವನಾ ಔಷಧವನ್ನು ಕೊಡಬೇಕು

Always get the Emulsion with this mark—the Fishman—the mark of the "Scott" process!

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ

ಹಾಲಿನಲ್ಲಿ ಕೆಲವು ತೊಟ್ಟು ಬೆರಸಿ ಕೊಟ್ಟ ಕೂಡಲೇ ದೊಡ್ಡ ವ್ಯತ್ಯಾಸ ತೋರುವುದು

ಅದು ಸಂತೋಷವೂ ಆನಂದವೂ ಪಡುವದಾಗಿ ಆಹಾರದ ರುಚಿ ಹೊಂದಿ ಸುಖ ಚಿಹ್ನೆ ತೋರಿಸುವದು.

ಕೈಯಿಂದ ಮುಟ್ಟದೆ ತಯಾರಿಸಿದ್ದಲ್ಲ

ಎಲ್ಲಾ ಔಷಧ ಮಾರುವವರಲ್ಲೂ ಸಿಕ್ಕುತ್ತದೆ

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,
ಔಷಧಗಳ ಕಾರ್ಖಾನೆ,
ಲಂಡನ್, ಇಂಗ್ಲೆಂಡ್,

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್,

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು

ಮೇಲ್ಕಂಡ ವಿಮೇ ಸಂಘದ ಆಡಳಿತಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಕಾನೂನಿಗೊಳಪಟ್ಟಿರುವುದರಿಂದಲೂ, ಈ ಕಾನೂನಿಗನುಸಾರವಾಗಿ ಠೇವಣಿ ಹಣವನ್ನು ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೇದಾರರು ಪಾವತಿಮಾಡುವ ಮೊಬಲಗಿಗೇ ಆಗಲೀ, ಅಥವಾ ವಿಮೇ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹಮಾಡಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು.

[109 29] ಎಸ್ ಕಟ್ಬ್ಯುರ್, ಬ್ರಾಂಚ್ ಸೆಕ್ರೆಟರಿ,
ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ.

ಕನ್ನಡ ಲಾ ಪುಸ್ತಕಗಳು

ಗೌರ್ನರ್ ಜನರಲ್‌ರವರ ಹುಕುಂ ಪ್ರಕಾರ ಎಲ್ಲಾ ದೇಶಗಳಲ್ಲಿಯೂ ಜಾರಿಯಲ್ಲಿರುವ ಕನ್ನಡ ಇಂಡಿಯನ್ ಪೆನಲ್ ಕೋಡು ಕ್ರಯ ರೂ 2-0, ವ್ಯವಹಾರನಿರ್ಣಯ ವಿಧಿ ಎಂಬ ಸಿವಿಲ್ ಪ್ರೊಸಿಜರ್ ಯಾನೆ 3 ಭಾಗಗಳುಳ್ಳದ್ದು ರೂ 3 0 0, ವ್ಯವಹಾರ ಪರಿಹಾರವಿಧಿ ಎಂಬ ಸ್ಪೆಸಿಫಿಕ್ ರಿಲೀಫ್ ಆಕ್ಟ್ ರೂ 1 8 0, ಇಂಡಿಯನ್ ಲಾ ಆಫ್ ಕಂಟ್ರಾಕ್ಟ್ ರೂ 2 0 0, ಪ್ರಶ್ನೋತ್ತರ ಲೇಖ್ಯಬೋಧಿನಿ—ಈ ಪುಸ್ತಕದಲ್ಲಿ ಸಿವಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ವ್ಯವಹಾರ ವಿಧಿಗಳನ್ನು ಬೋಧಿಸುವದು ಕ್ರಯ ರೂ 1 4 0, ಶಾನಾಗಿ ಸ್ವತಃ ಇಂಗ್ಲೀಷ್ ಕಲಿಯುವದು ರೂ 1 8 0 ಇವುಗಳಲ್ಲಿ ಕೆಲವು ಮುದ್ರಣವಾಗುತ್ತಿವೆ ಇನ್ನೂ ಪುಸ್ತಕಗಳು ಅಪೇಕ್ಷಿಸುವವರು ನಮ್ಮ ಪುಸ್ತಕಗಳ ಕ್ಯಾಟಲಾಗಿಗೆ ಬರೆಯಿರಿ [160 19]

ವಿಳಾಸ—ಜಿ. ನರಸಿಂಗರಾವ್,
ಎಡಿಟರ್, "ಲಾ ಗೆಜೆಟ್" ಬೆಂಗಳೂರು.



ಒಸವಿ ಮಹೋತ್ಸವದ ಕೈ ಗಡಿಯಾರ. [252 3]

ಅರ್ಧ ಕ್ರಯ ರೂ 1-14 0

ಬರುವ ಜನವರಿ ಹಬ್ಬದ ಮಹೋತ್ಸವಕ್ಕಾಗಿ ಈ ಭಾರೀ ಕ್ರಯದ ಕೈ ಗಡಿಯಾರವನ್ನು ಜನವರಿ ಆರರ ಒಳಗಾಗಿ ತರಿಸಿಕೊಳ್ಳುವವರಿಗೆ ರೂಪಾಯಿ 1 14-0 ಆಣೆಗೆ ಕೊಡಲ್ಪಡುತ್ತೆ

ವಿಳಾಸ—ವಿಕ್ಟೋರಿಯಾ ಕಂಪನಿ,
ಸೆಕೆಂಡ್ ಲೈನ್ ಬೀಚು, ಮದರಾಸು

ಗುಣಕಂಡ

ಮೂರು ಮಹೌಷಧಗಳು.

ಮೇಧೋವರ್ಧಿನಿ (Brain Tonic)—ಮೆದುಳಿನಿಂದ ಕೆಲಸಮಾಡುವವರಿಗೆ ಬಹು ಫಲಕಾರಿಯಾದುದು ಮೆದುಳಿಗೆ ಸೇರಿರುವ ಉಷ್ಣವನ್ನು ತಗ್ಗಿಸಿ ಬುದ್ಧಿಗೆ ಸೂಕ್ಷ್ಮತೆಯನ್ನೂ, ದೃಷ್ಟಿಗೆ ಪಟುವನ್ನೂ ಕೊಡುವುದಲ್ಲದೆ ಬಹಳ ಕಾಲದಿಂದ ಅನುಸರಿಸಿಬಂದ ನೋವುಗಳು ಈ ತೈಲವನ್ನು ಹಚ್ಚುವುದರಿಂದ ಖಂಡಿತವಾಗಿಯೂ ತೊಲಗುವವು ಸಾಧಾರಣಕಾಲದಲ್ಲಿ ನೆತ್ತಿಗೆ ಇದನ್ನು ಹಚ್ಚಿಕೊಂಡು ಸ್ನಾನಮಾಡಿದರೆ 3 4 ಅಭ್ಯಂಗನಗಳಿಂದಾಗುವ ಪ್ರಯೋಜನವಾಗುವದು

ಕ್ರಯ 1 ಸೀಸೆಗೆ 1 ರೂಪಾಯಿ, 6 ಸೀಸೆಗೆ 5 ರೂಪಾಯಿ

ಗೋರೋಜನಮಾತ್ರೆ (Children's Laxative Pills)—8 ವರ್ಷದೊಳಗಿನ ಮಕ್ಕಳಿಗೆ ಸುಖಭೇದಿಮಾಡಿಸುತ್ತೆ ಎಲ್ಲರೂ ನಿರ್ಭಯವಾಗಿ ಮಕ್ಕಳಿಗೆ ಉಪಯೋಗಿಸಿರಿ 1 2 3 ಮಾತ್ರೆಗಳನ್ನು ಜೇನಿನಲ್ಲಿ ಕಲಸಿ ಕೊಟ್ಟರೆ 2-3 ಸಲ ಸುಖಭೇದಿಯಾಗುತ್ತೆ ಕ್ರಯ 75 ಮಾತ್ರೆಗೆ 1 ಆಣೆ, 5 ಸೀಸೆಗೆ 1 ರೂಪಾಯಿ

ರೋಗನಾಶಿನಿ (Intimate Friend)—ಜಲದೋಷ, ಹವಾದೋಷ ಅತಿಯಾಗಿ ಮಳೆ, ಬಿಸಲು ಮಂಜಿನಲ್ಲಿ ಸುತ್ತುವುದರಿಂದಾಗುವ ಕೆಮ್ಮು, ಗಂಟಲನೋವು, ಜ್ವರ, ಕೆರೆತ, ಮೈ, ಕೈ, ಕಾಲು ತರಿ, ಹೊಟ್ಟೆ ಇವುಗಳ ನೋವು, ಕಜ್ಜಿ, ಅಜೀರ್ಣ ಮುಂತಾಗಿ ಎಲ್ಲಾ ಗುಣವಾಗುತ್ತೆ ಇಚ್ಛಾಪಥ್ಯ ಹೊತ್ತಿಗೆ 1 ಮಾತ್ರೆ ದಿನಕ್ಕೆ 3-4 ಸಲ ಸೇವಿಸುವುದು ಕ್ರಯ 10 ಮಾತ್ರೆಗೆ 1 ಆಣೆ 5 ಸೀಸೆಗೆ 1 ರೂಪಾಯಿ [232-8]

ವಿಳಾಸ ಓರಿಯಂಟಲ್ ಫಾರ್ಮಸಿ, ಮೈಸೂರು.

ಜಪಾನರ

ಉನ್ನತಿಗೆ ಮೂಲಾಧಾರ ನವನಾಗರಿಕ ಜನಾಂಗದವರಂತೆ ಸ್ವಗೌರವವನ್ನರ್ಜಿಸಿ ಸುಖಸಂತೋಷಗಳಿಂದ ಬಾಳಬೇಕಾದರೆ ಪ್ರತಿಯೊಬ್ಬನೂ ಈ ಕನ್ನಡ ವಚನ ಗ್ರಂಥವನ್ನು ಓದಬೇಕು ಶ್ರೀಮನ್ಮಹಾರಾಜರ ಮತ್ತು ಶ್ರೀಮದ್ಯುವರಾಜರ ರಮ್ಯ ಭಾವಚಿತ್ರಗಳೂ ಕಥೆಯ ಸಂದರ್ಭಕ್ಕನುಕೂಲಿಸುವಂತೆ ನೇತ್ರಾನಂದಕರವಾದ 12 ಹಾಫ್‌ಟೋನ್ ಚಿತ್ರಗಳೂ ಇದರಲ್ಲಿವೆ ಇದರಂತೆ ಕಣ್ಮನಗಳಿಗೆ ಉಲ್ಲಾಸವನ್ನುಂಟುಮಾಡುವ ನೀತಿಬೋಧಕವಾದ ಕಥೆಯು ಕನ್ನಡದಲ್ಲಿ ಇನ್ನಾವುದೂ ಖಂಡಿತವಾಗಿಯೂ ಇಲ್ಲ ಶ್ರೀಮನ್ಮಹಾರಾಜರವರಿಗೆ ಅನುಮತಿಯನ್ನು ಪಡೆದು ಅರ್ಪಿಸಲ್ಪಟ್ಟಿದೆ, ಮತ್ತು ನಮ್ಮ ಚೀಫ್ ಇಂಜನಿಯರ್ ಮ|| ಕರ್ಪೂರ್ ಶ್ರೀನಿವಾಸರಾಯರು ಪ್ರೌಢತರಾದ ಉಪೋದ್ಘಾತವನ್ನು ಬರೆದಿರುವರು ಪುಸ್ತಕವನ್ನು ಸಂಪೂರ್ಣವಾಗಿ ಓದದಹೊರತು ನೀವದನ್ನು ಕೆಳಗಿಡುವುದಿಲ್ಲ ಕ್ರಯ ವಿ ಪಿ ಸಹಿತ—ಚಿನ್ನದ ಗಿಲ್ಟಿನದು ರೂ 2 4 0, ಅನ್ವಲ್ ಗ್ಲೇಜ್ ರೂ 1 8 0, ದುಯ್ಯಂ ರೂ 1-4 0 [274 1]

ಧರ್ಮಪಥ —ಸಾವಿರಾರು ಗ್ರಂಥಗಳಿಂದ ಪಡೆಯಬಹುದಾದ ಜ್ಞಾನವನ್ನು ಈ ಕನ್ನಡಗ್ರಂಥವೊಂದರಿಂದಲೇ ಪಡೆಯಬಹುದು ಆಬಾಲವೃದ್ಧರಿಗೂ ಆನಂದವನ್ನುಂಟುಮಾಡುವುದು ನೇತ್ರಾನಂದಕರವಾದ ಮಹಾರಾಜರ, ಗ್ರಂಥಕರ್ತರ, ಲೋಕದಲ್ಲಿ ಅತ್ಯಂತ ದೊಡ್ಡದಾದ ಗೌತಮಮುನಿಯ ವಿಗ್ರಹದ ಭಾವಚಿತ್ರಗಳಿವೆ ಕ್ರಯ ವಿ ಪಿ ಸಹಿತ 1 ರೂಪಾಯಿ ವಿಳಾಸ—

ಸಿ ಎಲ್ ಎಸ್ ಬುಕ್ ಡಿಪೋ, ಮೈಸೂರು , ಅಥವಾ,
ಬಿ ಅಶ್ವತ್ಥನಾರಾಯಣ ಶಾಸ್ತ್ರಿಗಳು, ಚಾಮರಾಜಪೇಟೆ, ಮೈಸೂರು.

ಮರೆಯಬ್ಯಾಡಿರಿ ! ಮರೆಯಬ್ಯಾಡಿರಿ !

ದರ್ಬಾರ್ ಸಾಬೂನು.

ಏಜೆಂಟುಗಳು ಬೇಕಾಗಿದೆ!

ಒಳ್ಳೇ ಕಮಿಷನ್ ದೊರೆಯುವದು.



ಅಪಾಯವಿಲ್ಲದ ರೋಮಸಂಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ ೫ ನಿಮಿಷಗಳೊಳಗಾಗಿ ರೋಮವು ನಾಶವಾಗುವದು

ಉರಿ, ಸೆಕೆ ಮುಂತಾದ ಬಾಧೆಗಳಿಲ್ಲವು ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು ಮರೆಯಬ್ಯಾಡಿರಿ 3 ಸಾಬೂನುಗಳಿರುವ ಪೆಟ್ಟಿಗೆ 1ಕ್ಕೆ ಕ್ರಯ 14 ಆಣೆ 2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1 10-0 ಅಂಚೆ ಹಾಸಲು 4 ಆಣೆ

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ.

ವಿಳಾಸ.—ವಿ ಎ. ಎಸ್. ಪಾಣಿ ಕಂಪೆನಿ,

ನಂ 3, ಇರುಳಪ್ಪನ್ ಬೀದಿ, ಮದರಾಸು

V A S PANI,

No 3, Erulappen Street, Madras.

[266-1]

ಬಹಳ ಮೇಲಾದ ಅಚ್ಚ ಕರೀ ಬಣ್ಣದ ಮಧುರೆ ಚುಂನಡಿ ಅಂಚಿನ ಸೀರೆಗಳು.

ಅವಲ್ ರಬಿ ಕ್ರಯ ರೂ 3-6-0

ಇದರಿಂದ ವರ್ತಕರಿಗೂ, ಬೀಗ ನೆಂಟರಿಗೂ, ಬಡವರಿಗೂ ತಿಳಿಸುವದೇನೆಂದರೆ—ನಮ್ಮಲ್ಲಿನ ಕರಿಯ ಬಣ್ಣದ ಮಧುರೆ ಚುಂನಡಿ ಸೀರೆಗಳು ಉಡುವುದಕ್ಕೆ ಸುಖವಾಗಿಯೂ, ನೋಡುವುದಕ್ಕೆ ನಯವಾಗಿಯೂ, ಸರ್ವರಿಗೂ ಲಾಯಖಾಗಿಯೂ, ಕೊಳ್ಳಲು ಬೆಲೆ ಬಹಳ ಸುಲಭವಾಗಿಯೂ ತಯಾರಿಸಿದೆ ಎಷ್ಟಾವರ್ತಿ ಒಗೆದು ಉಟ್ಟರೂ ಬಣ್ಣವು ಸ್ವಲ್ಪವೂ ಬದಲಾಯಿಸುವದಿಲ್ಲ ಇದರ ಸೆರಗುಗಳು ಬಹು ಚಂದಾಗಿವೆ ಸೀರೆಯು ಉದ್ದವು ಧಾರಾಳವಾಗಿ 18 ಮೊಳವಿದೆ ಪರೀಕ್ಷಾರ್ಥ ಒಂದನ್ನು ತರಿಸಿದಲ್ಲಿ ನಿಮ್ಮ ನೆರೆಹೊರೆಯವರು ಅನೇಕ ಸೀರೆಗಳಿಗೆ ಬರೆಯುವರು —ಡಿಫೈಕ್ ಆಲ್ ಕ್ವಲ್ಟಿ ರೆಗ್ಯುಲೇಟರ್ ವಾಚ್ ರೂ 1-15 0. ಪ್ಲಾಟಿನಂ ಹೇರಾಯಲ್ ಬುಡಿ 1 ಕ್ಕೆ 0 4 0 [252-2]

ವಿಳಾಸ —ಏಕಾಂಬರಂ ಕಂಪೆನಿ, ಸೆಕೆಂಡ್ ಲೈನ್ ಬೀದಿ, ಮದರಾಸ್

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು ?

ಹಾಸನದ ಟೋಪಿ ಅಲ್ಲವೋ ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

9 51

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು ? ಎಲ್ಲಿಂದ ಇತರ ಸ್ಥಳಗಳಲ್ಲಿ ಹರಡಿಕೊಂಡವು ? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲ ಬೇಕಾದಷ್ಟು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ಬಟ್ಟೆಯೆಲ್ಲಾ ನೆಟ್ಟಗೆ ವಿಲಾಯತಿಯಿಂದಲೇ ಬರುವದು (೨) ಟೋಪಿಗಳನ್ನು ಚನ್ನಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದು ಚನ್ನಾಗಿಲ್ಲ ಅದು ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ

ಹಸಿರು ಕೆಂಪು, ಕಪ್ಪು, ಬಿಳಿಕೆ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ , ೧ ರೂ ೬ ಆ ,

ಕುಚ್ಚಿಯುಳ್ಳ ಟೋಪಿಗಳು ರೂ ೧—೮; ರೂ ೧—೧೨

ರೇಷ್ಮೆ ಕುಚ್ಚಿಯುಳ್ಳ ಟೋಪಿಗಳು ರೂ ೨

ಸಾದಾ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ

ಮಕ್ಕಳ ಟೋಪಿಗಳು ೧ ರೂ ೮ ಆ , ೧ ರೂ ೬ ಆ

"In addition to cap making we are giving special attention to knitting stockings All our stockings for adults and children, are hand-made. Prices will be sent on enquiry"

ಮ್ಯಾನೇಜರ್, ಟೋಪಿ ಕಾರ್ಖಾನೆ,

ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply —

MANAGER, CAP WORKS,

GIRLS INDUSTRIAL SCHOOL, HASSAN.

CHAMBERLAIN'S COUGH REMEDY.

ಚೇಂಬರ್ಲೇನ್‌ಯವರು ಕಂಡುಹಿಡಿದ ಕೆಮ್ಮಿನ ಔಷಧವು.



1-51

ಶೀತದ ಕೆಮ್ಮು, ಗಂಟಲು ಗಾರೆನ್ನುವುದು, ಹುಡಿಗೆಮ್ಮು, ನಾಯಿಗೆಮ್ಮು, ಎಲ್ಲಾ ತರದ ಶೀತ, ಗಂಟಲಿನಲ್ಲೂ ಎದೆಯಲ್ಲೂ ಹುಟ್ಟುವ ಸಮಸ್ತ ವ್ಯಾಧಿಗಳು— ಇವಕ್ಕೆಲ್ಲಾ ಈ ಔಷಧವು ಬಾಹ್ಯಾಯವಾಗಿದೆ

ಆ ಕೆಮ್ಮನ್ನು ಅಲಕ್ಷ್ಯ ಮಾಡಬೇಡಿ ಅದು ಮಹಾ ಅಪಾಯವನ್ನುಂಟುಮಾಡತಕ್ಕದ್ದಾಗಿದೆ ಅದರ ಮೇಲೆ ನ್ಯೂಮೋನಿಯಾ ಎಂಬ ಅತಿ ಕಠಿಣವಾದ ಜ್ವರವು ಹುಟ್ಟುವುದು ತರುವಾಯ ಉಗುಳಿನಲ್ಲಿ ರಕ್ತಬೀಳುವುದು ಹಾಗೆಯೇ ಕ್ಷಯರೋಗಕ್ಕೆ ಆಸ್ಪದವಾಗುವುದು

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧವು ಗಂಟಲಿನಲ್ಲಿ ಶ್ಲೇಷ್ಮ ಕಟ್ಟುವುದನ್ನೂ ಶ್ಲೇಷ್ಮ ಬೀಳುವುದನ್ನೂ ಖಂಡಿತವಾಗಿ ನಿವಾರಣೆಮಾಡುತ್ತದೆ ಉಸುರು ಹೊಯ್ಯುವುದು ಕಷ್ಟವಾಗಿದ್ದರೆ ಅದನ್ನು ಕೂಡಲೇ ಪರಿಹರಿಸುತ್ತದೆ ಅಪಾಯಕರವಾದ ಕೆಮ್ಮಿನ ಶಬ್ದವನ್ನು ನಿಲ್ಲಿಸಿಬಿಡುತ್ತದೆ ಎದೆ ಒಣಗುವಂಥಾ ಕೆಟ್ಟ ಸ್ಥಿತಿಯನ್ನು ಸಂಪೂರ್ಣವಾಗಿ ನಾಶಮಾಡಬಲ್ಲದು ಕೆಮ್ಮನ್ನು ಶಮನಮಾಡಿ, ನೀವು ಸುಖವಾಗಿ ನಿದ್ದೆಮಾಡುವಂತೆ ಮನಸ್ಸಿಗೆ ಉಲ್ಲಾಸಕೊಡುತ್ತದೆ

ಚೇಂಬರ್ಲೇನ್‌ರವರು ಕಂಡುಹಿಡಿದಿರುವ ಕೆಮ್ಮಿನ ಔಷಧದಲ್ಲಿ ಸ್ವಲ್ಪಮಾತ್ರವಾದರೂ ಅಫೀಮನ್ನು ಸೇರಿಸುವುದಿಲ್ಲ

ಈ ಔಷಧವು ವನಸ್ಪತಿಗಳ ತಯಾರಿ

ಕೈಯಿಂದ ಮುಟ್ಟದೆ ತಯಾರಾಗಿದೆ

ಎಲ್ಲೆಲ್ಲೂ ಬಿಕರಿಯಾಗುವುದು ಸಣ್ಣ ಶೀಸೆಗೆ ೧ ರೂಪಾಯಿ. ದೊಡ್ಡ ಶೀಸೆಗೆ ೨ ರೂಪಾಯಿ

ಡೋಂಗರೆ

ಇವರ ಬಾಲಾಮೃತ

[150 22]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧೨ ಆಣೆ ಟಪಾಲ್ ಖರ್ಚು ೪ ಆಣೆ

ಕೆ ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವರ್, ಮದರಾಸು ಇವರಲ್ಲೂ ದೊರೆಯುವುದು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ಸೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಜ್ಜುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪಿಯ ವರೆಗೆ ಪೋಸ್ಟೇಜು 4 ಆಣೆ [179-16]

೨ ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಬಿಡಿಸಿಕೊಂಡು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಪೇಚಾಡಬೇಡಿ ! ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ ! ವಿಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷಧದೊಡನೆ ಇರುವುದು ಬೆಲೆ ರೂ 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘುವ ವೈದ್ಯಶಾಲಾ, ಮೈಸೂರು.

ರಾಸ್‌ಕೋಪ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ

ಟಪಾಲು ಖರ್ಚು ಪ್ರತ್ಯೇಕ 1 ಕ್ಕೆ 4 ಆಣೆ



ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾರ್ಗಡಲ್ಪಟ್ಟಿದ್ದು ನೋಡುವವಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು ಖಾತ್ರಿಯಾದ ಗಡಿಯಾರ ಕೂಡ್ಲೆ ಬರೆದು ತರಿಸಿಕೊಳ್ಳಿ

ವಿಳಾಸ —ಸುಪೀರಿಯರ್ ವಾಚ್ ಕಂಪೆನಿ,

ಪೋಸ್ಟ್ ಬಾಕ್ಸ್, ನಂ 167, ಮದರಾಸು

[127 25]

ಮುಖ್ಯವಾಗಿ ಗಮಿನಿಸಿ ಓದಿರಿ

೧ ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್‌ಸೇಷನ್ ಬ್ಯಾಲೆನ್ಸು ಬಹು ಬಲಿಷ್ಠವಾದ ೬ ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ ಟಪಾಲು ಖರ್ಚು ಸಹಿತ ಕ್ರಯ ರೂ 5 0-0 ಇದನ್ನು ಸೆಪ್ಟಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ ೪೦ ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ —ಧನಲಕ್ಷ್ಮಿ ಅಂಡ್ ಕಂಪೆನಿ,

ಸಾಹುಕಾರ್ ಪೇಟೆ ಪೋಸ್ಟು, ಮದರಾಸು.

[129-25]

ಶಿಕಾರಿಪುರ, ಶಿರಾಳಕೊಪ್ಪ ಪ್ರಾಂತ್ಯಗಳಲ್ಲಿ ವೃತ್ತಾಂತ ಪತ್ರಿಕಗಳ ವಿಶೇಷಾದಿ ಪ್ರಕಟಣೆ

ಶಿಕಾರಿಪುರ, ಶಿರಾಳಕೊಪ್ಪ ತಾಲ್ಲೋಕ್ ಹೋಬಳಿ ಗ್ರಾಮಗಳ ಪ್ರಜೆಗಳು ಅನೇಕರು ಪ್ರಕೃತಕಾಲದ ನಾಗರಿಕತೆಯನ್ನು ಅನುಸರಿಸಿ ವರ್ತಮಾನ ಪತ್ರಿಕೆಗಳನ್ನು ಓದಲು ಅಪೇಕ್ಷಿಸುವವರಾಗಿರುವದರಿಂದ ನಾವು ಇಂಥಾವರುಗಳಿಗೆ ಟಪಾಲು ಖರ್ಚು ಬೀಳದಂತೆಯೂ, ಪತ್ರಿಕೆಗಳು ಸಕಾಲಕ್ಕೆ ಕ್ರಮವಾಗಿ ಸಿಕ್ಕುವಂತೆಯೂ ಅನುಕೂಲಪಡಿಸಿರುತ್ತೇವೆ ಹ್ಯಾಗಂದರೆ—(1) ಶಿಕಾರಿಪುರ—ಪ್ರತಿ ಶನಿವಾರ ಸಂತೆಯ ದಿವಸ ಅಲ್ಲಿ ನವೆಸ್ಲಿಯನ್ ಮಿಷನ್ ಗರಲ್ಸ್ ಸ್ಕೂಲಿನಲ್ಲಿ ವೃತ್ತಾಂತ ಪತ್ರಿಕೆಗಳು ಮಾರಲ್ಪಡುವವು ಜನರು ಸಂತೆಗೆ ಹೋದಾಗ್ಗೆ ಬಹು ಸುಲಭವಾಗಿ ಪತ್ರಿಕೆಗಳನ್ನು ಪಡೆಯಬಹುದು (2) ಶಿರಾಳಕೊಪ್ಪ —ಪ್ರತಿ ಭಾನುವಾರವೂ (ಸಂತೆಯ ದಿನ) ಶಿರಾಳಕೊಪ್ಪದ ಟವನ್ ಪಟೇಲರಾಗಿರುವ ಮ|| ರಾ|| ಗುರುಶಾಂತಪ್ಪಯ್ಯನವರ ಮೂಲಕ ಪತ್ರಿಕೆಗಳನ್ನು ಸುಲಭವಾಗಿ ಹೊಂದಬಹುದು

ವೈ ಆಬ್ರೆಹ, ಏಜಂಟ್, ಶಿಕಾರಿಪುರ.

ಸ್ವಹಕೃತ್ಯದ ನೋಟೀಸ್.

ಚನ್ನಪಟ್ಟಣದ ತಾಲ್ಲೂಕು ಅಬ್ಬೂರು ಗ್ರಾಮದಲ್ಲಿರುವ ಶ್ರೀನಿವಾಸಾಚಾರ್ರು ಮತ್ತು ಹಾಲಿ ಮೃತಪಟ್ಟು ಇರುವ ಭೀಮಣ್ಣ, ಗೋವಿಂದಪ್ಪನವರು ಸಹ ಅವಿಭಕ್ತ ಸಹೋದರರು ನನ್ನ ಗಂಡ ಗೋವಿಂದಪ್ಪನವರು ಸರ್ಕಾರಿ ಕೆಲಸಕ್ಕಾಗಿ ಪರಸ್ಥಳಗಳಲ್ಲಿ ವಾಸವಾಗಿರುತ್ತಿದ್ದುದರಿಂದ ಮೇಲ್ಕಂಡ ಅಬ್ಬೂರು ಗ್ರಾಮದಲ್ಲಿರುವ ಕುಟುಂಬದ ಆಸ್ತಿಗಳನ್ನೂ, ಮನೆಯನ್ನೂ ಸದರಿ ಶ್ರೀನಿವಾಸಾಚಾರ್ಯರ ಮ್ಯಾನೇಜ್‌ಮೆಂಟಿಗೆ ಬಿಟ್ಟಿರು ಈ ಶ್ರೀನಿವಾಸಾಚಾರ್ಯರೂ ತಮ್ಮ ಹಕ್ಕನ್ನು ವಿಕ್ರೀಡಿ ಮೂಲಕ ಕಳೆದುಕೊಂಡು ಇರುವದರಿಂದಲೂ, ಮೃತಪಟ್ಟ ಭೀಮಪ್ಪನವರಿಗೆ ಮಕ್ಕಳಿಲ್ಲದ್ದರಿಂದಲೂ ವಿಶಿಷ್ಟ ಸ್ವತ್ತುಗಳೂ ಗೋವಿಂದಪ್ಪನವರ ಮಕ್ಕಳಿಗೆ ಮಾತ್ರ ಸಮಭಾಗವಾಗಿ ಸೇರತಕ್ಕದ್ದಾಗಿವೆ ಹೀಗಿರುವಲ್ಲಿ ನಿಮಿತ್ತಕ್ಕೆ ವಿಶಿಷ್ಟ ಸ್ವತ್ತು ನಿಗಾವಣೆ ನೋಡುತ್ತಿದ್ದ ಶ್ರೀನಿವಾಸಾಚಾರ್ರು ಹಾಲಿ ಕೇವಲ ದುರಾಲೋಚನೆಯಿಂದ ಪರಭಾರೆ ಮಾಡುವದಾಗಿ ತಿಳಿಯಬರುವದರಿಂದ ಸದರಿಯವರಿಂದ ಕ್ರಯ ಆಧಾರ ಭೋಗ್ಯ ವಿಲ್ ವಗೈರೆ ಯಾರೊಬ್ಬರೇ ಆದರೂ ಬರಸಿಕೊಂಡಲ್ಲಿ ಅದು ಊರ್ಜಿತವಾಗಲಾರದು ಎಂದು ತಿಳಿಯಪಡಿಸಿದೆ

[254-3] ವೆಂಕಟಲಕ್ಷ್ಮಮ್ಮನ ರುಜು.

1914 ನೇ ವರ್ಷದ ಕೆಲೆಂಡರು 1914.

ರಮಣೀಯಕರವಾದ ಸ್ತ್ರೀಯ ನಕ್ಷೆಯುಳ್ಳದು.

ಇಂದಾ ಸುಂದರವಾದ ಕೆಲೆಂಡರು ಎಲ್ಲಿಲ್ಲಿಯೂ ದೊರಕಲಾರದು ಒಂದರ ಕಿಮ್ಮತು 0-4 0
6 ಕ್ಕೆ 1-0-0 12 ಕ್ಕೆ 1-10-0 ಪೋಸ್ಟು ಖರ್ಚ ಮಾಫಿ ಜನವರಿ ಒಮ್ಬೈರು ವರೆಗೆ

ಅಮೃತಾಂಜನ್.

ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಡುತ್ತವೆ ಎಲ್ಲಾ ತರದ ನೋವುಗಳ ಮೇಲೆ ದಿವ್ಯಾಮೃತ
ಬಾಟ್ಲಿ ಒಂದಕ್ಕೆ 0-8-0, ಡಜನ್ 1 ಕ್ಕೆ 5-1-0 ಟಪಾಲ್ ಖರ್ಚು ಪ್ರತ್ಯೇಕ [12-13]

ವಿಳಾಸ —ಅಮೃತಾಂಜನ ಡಿಪೋ, ಫೋರ್ಟ್, ಬೊಂಬಾಯಿ.

MELLIN'S FOOD

ಮಕ್ಕಳಿಗೂ ರೋಗಿಷ್ಠರಿಗೂ [156 3]

ಮೆಲ್ಲಿನ್ಸ್ ಆಹಾರವು,
ಕೈ ಸೋಕದೆ ತಯಾರಾದದ್ದು, ಸಸ್ಯಾಹಾರ

ಈಗ ಸಿದ್ಧವಾಗಿದೆ
1914 ನೇ ವರುಷದ ಮೆಲ್ಲಿನ್ಸಾ ಕ್ಯಾಲೆಂಡರು
ಎರಡು ಆಣೆ ಸಾವತಿಮಾಡಿದರೆ ಅಥವಾ ಕಳುಹಿಸಿಕೊಟ್ಟರೆ ಈ ಒಂದು ಕ್ಯಾಲೆಂಡರನ್ನು ಕೊಡುವೆವು, ಅಥವಾ ಪೋಸ್ಟಿನಲ್ಲಿ ಕಳುಹಿಸುವೆವು
ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್
ಮಕ್ಕಳ ತಾಯಿಗೆ—"ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ"—ಅಂತೆ ಖರ್ಚಿಗೆ ಎರಡು ಆಣೆ ಕಳುಹಿಸುವವರಿಗೆ ಈ ಪುಸ್ತಕವನ್ನು ಕಳುಹಿಸಿಕೊಡುತ್ತೇವೆ

ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

೧೯೧೪ನೇ ಇಸವಿಯ ಪಾಕೆಟ್ ಡೈರಿ

[127 26]

ಇದರಂತೆ 6 ನಮೂನೆಯ ಡೈರಿಗಳು ಬಹು ಸುಂದರವಾಗಿರುವಂತೆ ನುಣುಪಾದ ದಪ್ಪ ಕಾಗದದಲ್ಲಿ ಮುದ್ರಿಸಿ, ಪ್ರತಿ ಪುಟಕ್ಕೂ ರೂಲು ಹಾಕಿ ಬಹಳ ಸೊಗಸಾದ ಸೀಮೆ (ಕ್ಯಾಲಿಕೊ) ಬಟ್ಟೆಯಿಂದ ವಿಲಾಯಿತಿ ಯಂತ್ರಗಳಲ್ಲಿ ಬೈಂಡು ಮಾಡಿ ಮೇಲುಗಡೆಯಲ್ಲಿ ಆರ್ನಮೆಂಟಲ್ ಅಕ್ಷರಗಳನ್ನು ಬಿಡಿಸಿದೆ

ಇವು ವರ್ತಕರು, ಲಾಯರುಗಳು, ಕಂಟ್ರಾಕ್ಟರರು, ಸರ್ಕಾರಿ ಉದ್ಯೋಗಸ್ಥರು, ಕುಳ್ಳೆದಾರರು, ಜಮೀನ್ದಾರರು, ಸ್ಕೂಲ್ ಕಾಲೇಜು ವಿದ್ಯಾರ್ಥಿಗಳು, ಪೋಲೀಸ್ ಇಲಾಖೆಯವರು ಮೊದಲಾದ ಸಮಸ್ತ ಜನರಿಗೂ ಉಪಯೋಗವಾಗಿರುವ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಂಡಿವೆ

ಎ ನಂ॥ ಪೆನ್ಸಿಲ್ ಇಡತಕ್ಕ ಚಿಕ್ಕ ಡೈರಿ 1 ಕ್ಕೆ 3 ಆಣೆ | ಸಿ ನಂ ಪೆನ್ಸಿಲ್ ಇಡತಕ್ಕ ದೊಡ್ಡ ಡೈರಿ 1ಕ್ಕೆ 6 ಆಣೆ
ಬಿ ನಂ॥ ಪೆನ್ಸಿಲ್ ಇಟ್ಟಿರುವ ಚಿಕ್ಕ ಫ್ಲಾಪು ಡೈರಿ 1 ಕ್ಕೆ 5 ಆಣೆ | ಡಿ ನಂ। ಪೆನ್ಸಿಲ್ ಇಟ್ಟಿರುವ ದೊಡ್ಡ ಫ್ಲಾಪು ಡೈರಿ 1 ಕ್ಕೆ 8 ಆಣೆ

ಸರ್ಕಾರದಲ್ಲಿ ರಿಜಿಸ್ಟರಾಗಿ ಪ್ರಖ್ಯಾತಿಹೊಂದಿರುವ "ಜನಿವಾ ಡೈರಿ"

ಈ ಡೈರಿಯು ಮೇಲ್ಕಂಡ ಡೈರಿಗಳಿಗಿಂತ ಉತ್ತಮ, ದಪ್ಪ ಕಾಗದ, ಪರ್ಲ್ ಬೈಂಡು

"ಜನಿವಾ" ನಂ॥ 1 ಚಿಕ್ಕ ಡೈರಿ 1 ಕ್ಕೆ 4 ಆಣೆ | "ಜನಿವಾ" ನಂ। 2 ಚಿಕ್ಕ ಫ್ಲಾಪು ಡೈರಿ 1 ಕ್ಕೆ 6 ಆಣೆ

12 ಪ್ರತಿಗಳು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಉಚಿತವಾಗಿ ಕೊಡಲ್ಪಡುವುದು

ನಮ್ಮ ವಿಳಾಸ—ಎಮ್ ಆರ್ ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 1,00,000.

(INCORPORATED UNDER THE MYSORE COMPANIES REGULATION No III OF 1895)

CAUTION —Before you go in for a Provident Life or Marriage Policy, please ask for a copy of our Company's prospectus, which will explain to you the mode of the working of the present day provident companies in India, and enables you to select a good institution, where your hard earned money will be safe

Absolute Security, Attractive Schemes, Soundest Principles

Wanted Chief Agents and agents throughout India on Commission and Salary For prospectuses, etc, please apply to

Mr. M. L. NAGANNAH,
Managing Agent, MYSORE.

A NOVELTY OF THE TWENTIETH CENTURY!

THE MYSORE GOVERNMENT SECURITY

MUTUAL PROPERTY INVESTMENT COMPANY, LTD.

HEAD OFFICE · MYSORE.

CAPITAL Rs. 1,00,000.

(INCORPORATED UNDER THE MYSORE COMPANIES REGULATION No. III OF 1895)

BANKING,—Every sort of banking business transacted The company's shares are most valuable and are within the reach of all

Land and house purchase and investment policies are a speciality of the company, by which the company advances loans on the security of immovable properties to purchase houses and lands, or to liquidate prior debts, and recovers the same by easy monthly instalments

WANTED

Four local directors for each and every taluk of the Mysore Province on liberal terms to represent the company Only men of position and influence need apply For prospectuses, etc, please apply to

[161 20]

Mr. M. L. NAGANNAH,
Managing Agent, MYSORE.

ವಿದ್ಯಾಸಾಗರ ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಇಲ್ಲಿ ಇಂಗ್ಲೀಷು ಮತ್ತೂ ಕನ್ನಡ ಸ್ಕೂಲ್ ಪುಸ್ತಕಗಳೂ, ಸ್ಟೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ (1) ವೈದ್ಯಸಾರಸಂಗ್ರಹ—ದೊಡ್ಡ ವೈದ್ಯಗ್ರಂಥ, ಟಪಾಲು ಖರ್ಚು ಸೇರಿ ಈಗ ರೂ 3-6 0 (2) ... ಲಹರಿ, ಟೀಕಾ ತಾತ್ಪರ್ಯ ಸಹಿತ—6 ಆಣೆ (3) ಸಂಗ್ರಹ ರಾಮಾಯಣ—1 ಆಣೆ (4) ವಿಷ್ಣುಸಹಸ್ರನಾಮಸ್ತೋತ್ರ ತ್ರಿಮತಭಾಷ್ಯದೊಡನೆ ಸಹ—3 ... (5) ವೃಷಭೇಂದ್ರವಿಜಯ—3 ರೂ (6) ಸೂರ್ಯನಮಸ್ಕಾರ—2 ಆಣೆ (7) ಉದಕಶಾಂತಿ ಮಾತ್ರ—3 ಆಣೆ (8) ಸಹಾಯವಿಲ್ಲದೆ ಇಂಗ್ಲೀಷ್ ಕಲಿಯುವ ಪುಸ್ತಕ ರೂ 1-8 0 (9) ಜಮಾ ಖರ್ಚಿನ ಪದ್ಧತಿ 12 ಆಣೆ [186 1]

ಕುಂತಳಾನಂದ ತೈಲವು

[192-1]

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಹುದಿನ ಪದಕಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ಮಹನೀಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು ಈ ತೈಲವು ಕೂದಲನ್ನು ಚನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲೊಳಿಸುತ್ತದೆ ಸದ್ವಾಸನೆಯುಳ್ಳ ... ವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ 3 ಬಾಟ್ಲಿಗೆ 2 ರೂಪಾಯಿ 10 ಆಣೆ ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಪಟ್ಟಿಯನ್ನು ತರಿಸಿ ನೋಡಿರಿ

ನಮ್ಮ ವಿಳಾಸ —ಬಿ. ಎಮ್ ನಾಥ ಮತ್ತು ಕಂಪನಿ,
ವೇಪೇರಿ, ಮದರಾಸ್

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು"

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾತ, ಕೀಲು, ಅರತಲೆ, ತಲೆನೋವುಗಳು ಯಾವ ಕಾರಣದಿಂದ ಹುಟ್ಟಿದ ಹಲ್ಲುನೋವು, ಸುಳುಕು, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವುದು, ಕೆಮ್ಮು, ಗಂಟಲು ಕೆರೆತ, ಶ್ವಾಸರೋಗ, ಜಜ್ಜು, ಉಳುಕು, ಥಳುಕು, ಚೇಳು ಕಡಿದ ಉರಿ ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಳ್ಳುವೆ ಧೈರ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತೀರ್ಮಾನಿಸಿಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯುಕ್ತಿಯಿಂದ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದ್ದಾರೆ ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ [104-30]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡ ಇದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ ವ್ಯಾಪಾರಸ್ಥರಿಗೆ ಭಾರಿಯಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು—(1) ಎಸ್ ಪೀಟರ್ಸ್, 8 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ... ಕೃಷ್ಣಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡದೆ ಹೋದರೆ ಪ್ರಾಯಶಃ ಶರೀರಕ್ಕೇ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ—ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು ಬಿಡದೆ ಬಾಯಾರಿಕೆ, ಆಲಿಕೆ, ಎದೆ ತಲ್ಲಣಿಸುವುದು, ತಲೆನೋವು ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು, ಮರವು, ನಿತ್ರಾಣ, ಇವೇ ಮೊದಲಾದುವು ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉದುಮೂತ್ರ ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸ ಬಾಧಕ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು

ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಮತ್ತು ಕ್ರಿಯೆಗಳನ್ನೂ ಸರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [181 14]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ಡಬ್ಬಿ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ ೧೦—೮—೦ ಔಷಧಿಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್ ಪಿ ಓ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು

Printed and Published by the Rev H Gulliford Proprietor and Manager, Wesleyan Mission Press Mysore 18/12/1913.

REGISTERED
M. 20

ವೃತ್ತಾಂತ ಪತ್ರಿಕೆ

ಕ್ರಯ ೧ ದುಡ್ಡು. ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು ಕ್ರಯ ೧ ದುಡ್ಡು.

ಪುಟ ೨೭ ಮೈಸೂರು—ಸನ್ ೧೯೧೩ ನೇ ಇಸವಿ ಡಿಸೆಂಬರ್ ತಾರೀಖು ೨೫ ನೇ ಗುರುವಾರ. ಸಂಚಿಕೆ ೩೦

ಸಾವಿರದೊಂದುರಾತ್ರಿ ಅರೇಬಿಯನ್ ನೈಟ್ಸ್.

ಸಾವಿರ ಪುಟಗಳಾದ ಈ ಗ್ರಂಥ ಹತ್ತು ಭಾಗಗಳಲ್ಲಿ ಪ್ರಿಂಟಾಗುತ್ತಿದೆ ಚಂದಾದಾರರಿಗೆ 1 ಭಾಗಕ್ಕೆ 1 ಆಣೆ, ಇತರರಿಗೆ 6 ಆಣೆ ಪೋಸ್ಟೇಜು ಬೇರೆ 1 ನೇ ಭಾಗ ಸಿದ್ಧವಾಗಿದೆ ಎಲ್ಲಾ ತರದ ಕನ್ನಡ ಪುಸ್ತಕಗಳೂ, 1914 ರ ಡೈರಿಗಳೂ ನಮ್ಮಲ್ಲುಂಟು ಪ್ರತಿ ಭಾಗ ಮಾತ್ರ ವಿ ಪಿ ಮಾಡಲ್ಪಡುತ್ತೆ [276 3]

ವಿಳಾಸ—ಮರ್ಕೆಂಟೈಲ್ ಯೂನಿಯನ್, ಮೈಸೂರು

ಗೃಹಕೃತ್ಯದ ನೋಟೀಸು

ತೀರ್ಥಹಳ್ಳಿ ತಾಲ್ಲೂಕು ಕಸಬಾ ಹೋಬಳಿ ಕಲ್ಲುಕೊಡಿಗೆ ಮಾಗಣೆ ಬೊಬ್ಬಳ್ಳಿ ಗ್ರಾಮದ ಮಜರೆ ಗುಮ್ಮನಗುಂಡಿ ವಾಸಿ ಮಂಜಣ್ಣಗೌಡನ ಮಗ ತಿಮ್ಮಪ್ಪಗೌಡನು ಸಕಲರಿಗೂ ತಿಳಿಯಪಡಿಸುವದೇನಂದರೆ—ನನ್ನ ಖಾಸಾ ತಮ್ಮ ಪುಟ್ಟಯ್ಯಗೌಡನು ಈಗ ಸುಮಾರು ಎರಡು ವರುಷಗಳಲ್ಲಿ ಫೌತಿ ಆದನು. ಈತನ ಹೆಂಡತಿ ಹುಚ್ಚಮ್ಮನು ಎರಡು ಹೆಣ್ಣುಮಕ್ಕಳು ಸಹ ಇದಾರೆ ಈ ಹುಚ್ಚಮ್ಮ ಎಂಬುವಳು ಈಗ್ಗೆ ಸುಮಾರು 6 7 ವರ್ಷಗಳಿಂದಲೂ ದುರ್ಜನರ ಪ್ರೇರಣೆಗೊಳಪಟ್ಟು ಗೃಹಕೃತ್ಯದ ಕೆಲಸಕಾರ್ಯಗಳನ್ನು ಮಾಡದೆ ವ್ಯರ್ಥವಾಗಿ ಕಾಲಹರಣ ಮಾಡುತ್ತಾ, ನಮ್ಮ ಕುಟುಂಬಕ್ಕೆ ಸೇರಿದ ಪಿತ್ರಾರ್ಜಿತವಾಗಿರತಕ್ಕ ಸ್ಥಿರಚರ ಆಸ್ತಿಗಳನ್ನೆಲ್ಲಾ ಪರಭಾರೆ ಮಾಡುವ ತಂಟೆಯಲ್ಲಿರುತ್ತಾಳೆಂದು ತಿಳಿಯಬರುತ್ತೆ ಇಂಥಾ ದುರಾಲೋಚನೆಗೊಳಪಟ್ಟು ನನ್ನನ್ನು ವೃಥಾ ಕಷ್ಟನಷ್ಟಗಳಿಗೆ ಗುರಿಪಡಿಸಬೇಕೆಂಬ ಇರಾದೆಯಿಂದ ಸದರಿ ಹುಚ್ಚಮ್ಮನಿಂದ ಸ್ಥಿರಚರ ಸ್ವತ್ತಿಗೆ ಯಾರಾದರೂ ಯಾವ ವಿಧವಾದ ಹಕ್ಕನ್ನೇ ಆಗಲಿ ಉಂಟುಮಾಡಿಕೊಂಡರೆ ಅದು ಊರ್ಜಿತವಾಗತಕ್ಕದ್ದಲ್ಲ ಮತ್ತು ಅಂಥಾ ದುರಾಲೋಚನೆಯಿಂದ ಪಡೆಕೊಂಡಾಗ್ಯೂ ಅದು ನನ್ನ ಹಕ್ಕಿಗೆ ಲೋಪವಾಗತಕ್ಕದ್ದಲ್ಲ ಇದೂ ಇಲ್ಲದೆ ಹಾಗೆ ಪಡೆದುಕೊಂಡವರು ನನಗೆ ಉಂಟಾಗತಕ್ಕ ಎಲ್ಲಾ ಲುಕ್ಸಾನಿಗೂ ಗುರಿಯಾಗುತ್ತಾರೆಂಬುದಾಗಿ ಈ ಮೂಲಕ ಎಚ್ಚರಿಸಿರುತ್ತೇನೆ [271-2]

15-12 1913 ತಿಮ್ಮಪ್ಪಗೌಡನ ರುಜು

ವಿದ್ಯಾಸಾಗರ ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಇಲ್ಲಿ ಇಂಗ್ಲೀಷು ಮತ್ತು ಕನ್ನಡ ಸ್ಕೂಲ್ ಪುಸ್ತಕಗಳೂ, ಸ್ಟೇಷನರಿ ಸಾಮಾನುಗಳೂ ಸುಲಭ ಕ್ರಯಕ್ಕೆ ದೊರೆಯುತ್ತವೆ (1) ವೈದ್ಯಸಾರಸಂಗ್ರಹ—ದೊಡ್ಡ ವೈದ್ಯಗ್ರಂಥ, ಟಪಾಲು ಖರ್ಚು ಸೇರಿ ಈಗ ರೂ 3 6 0 (2) ಶಿವಾನಂದ ಲಹರಿ, ಟೀಕಾ ತಾತ್ಪರ್ಯ ಸಹಿತ—6 ಆಣೆ (3) ಸಂಗ್ರಹ ರಾಮಾಯಣ—4 ಆಣೆ (4) ವಿಷ್ಣುಸಹಸ್ರನಾಮಸ್ತೋತ್ರ ಶ್ರೀಮಚ್ಛಾಷ್ಯದೊಡನೆ ಸಹ—1 ರೂ (5) ಶುಕಸಪ್ತತಿ (ಉ ಪ್ರತಿ –2 ಎ (6) ಸೂರ್ಯನಮಸ್ಕಾರ—2 ಆಣೆ (7) ಉದಕಶಾಂತಿ ಮಾತ್ರ—2 ಆಣೆ (8) ಸಹಾಯವಿಲ್ಲದೆ ಇಂಗ್ಲೀಷ್ ಕಲಿಯುವ ಪುಸ್ತಕ ರೂ 1 8 0 (9) ಜಮಾ ಖರ್ಚಿನ ಪದ್ಧತಿ 12 ಆಣೆ [265 3]

ಗೃಹಕೃತ್ಯದ ನೋಟೀಸ್

ಚನ್ನಪಟ್ಟಣದ ತಾಲ್ಲೂಕು ಅಬ್ಬೂರು ಗ್ರಾಮದಲ್ಲಿರುವ ಶ್ರೀನಿವಾಸಾಚಾರ್ರು ಮತ್ತು ಹಾಲಿ ಮೃತಪಟ್ಟು ಇರುವ ಭೀಮಣ್ಣ, ಗೋವಿಂದಪ್ಪನವರು ಸಹ ಅವಿಭಕ್ತ ಸಹೋದರರು ನನ್ನ ಗಂಡ ಗೋವಿಂದಪ್ಪನವರು ಸರ್ಕಾರಿ ಕೆಲಸಕ್ಕಾಗಿ ಪರಸ್ಥಳಗಳಲ್ಲಿ ವಾಸವಾಗಿರುತ್ತಿದ್ದರಾದ್ದರಿಂದ ಮೇಲ್ಕಂಡ ಅಬ್ಬೂರು ಗ್ರಾಮದಲ್ಲಿರುವ ಕುಟುಂಬದ ಆಸ್ತಿಗಳನ್ನೂ, ಮನೆಯನ್ನೂ ಸದರಿ ಶ್ರೀನಿವಾಸಾಚಾರ್ಯರ ಮ್ಯಾನೇಜ್‌ಮೆಂಟಿಗೆ ಬಿಟ್ಟರು ಈ ಶ್ರೀನಿವಾಸಾಚಾರ್ಯರೂ ತಮ್ಮ ಹಕ್ಕನ್ನು ಮಾರಿದ ಮೂಲಕ ಕಳೆದುಕೊಂಡು ಇರುವದ್ದರಿಂದಲೂ, ಮೃತಪಟ್ಟ ಭೀಮಣ್ಣನವರಿಗೆ ಮಕ್ಕಳಿಲ್ಲದ್ದರಿಂದಲೂ ವಿಶಿಷ್ಟ ಸ್ವತ್ತುಗಳೂ ಗೋವಿಂದಪ್ಪನವರ ಮಕ್ಕಳಿಗೆ ಮಾತ್ರ ಸಮಭಾಗವಾಗಿ ಸೇರತಕ್ಕದ್ದಾಗಿವೆ ಹೀಗಿರುವಲ್ಲಿ, ನೆಪಮಾತ್ರಕ್ಕೆ ವಿಶಿಷ್ಟ ಸ್ವತ್ತು ನಿಗಾವಣೆ ನೋಡುತ್ತಿದ್ದ ಶ್ರೀನಿವಾಸಾಚಾರ್ರು ಹಾಲಿ ಕೆಲವರ ದುರ್ಬೋಧನೆಯಿಂದ ಪರಭಾರೆ ಮಾಡುವದಾಗಿ ತಿಳಿಯಬರುವದ್ದರಿಂದ ಸದರಿಯವರಿಂದ ಕ್ರಯ ಆಧಾರ ಭೋಗ್ಯ ವಿಲ್ ವಗೈರೆ ಯಾರೊಬ್ಬರೇ ಆದರೂ ಬರಸಿಕೊಂಡಲ್ಲಿ ಅದು ಊರ್ಜಿತವಾಗಲಾರದು ಎಂದು ತಿಳಿಯಪಡಿಸಿದೆ

[254-4] ವೆಂಕಟಸುಬ್ಬಮ್ಮನ ರುಜು

ನೋಟೀಸ್,

ಹಾಸನದಲ್ಲಿ ದನಗಳ ಪ್ರದರ್ಶನವು.

1914 ನೇ ಇಸವಿ ಜನವರಿ ತಾರೀಖು 5 ನೇ ಸೋಮವಾರ ಮತ್ತು 6 ನೇ ಮಂಗಳವಾರ ಸಹಾ ಹಾಸನ ಟೌನಿನಲ್ಲಿ ಡಿಸ್ಟ್ರಿಕ್ಟು ಪೊಲೀಸ್ ಆಫೀಸ್ ಬಾಜೂ ಮೈದಾನದಲ್ಲಿ ದನಗಳ ಪ್ರದರ್ಶನವು ನಡೆಯುತ್ತೆ. ಈ ಪ್ರದರ್ಶನದಲ್ಲಿ ದನ, ಎಮ್ಮೆ, ಕೋಣ, ಆಡು, ಕುರಿ ಮತ್ತು ತಟ್ಟು ಮುಂತಾದ ಉತ್ಕೃಷ್ಟವಾದ ಎಲ್ಲಾ ತರಹೆ ಜಾನವಾರುಗಳಿಗೂ ಇನಾಂ ಕೊಡಲ್ಪಡುತ್ತೆ. ಬರುವ ಜನವರಿ 4 ನೇ ತಾರೀಖಿಗೆ ಮುಂಚೆಯೇ ಪ್ರದರ್ಶಿಸತಕ್ಕ ಜಾನವಾರುಗಳು ಪ್ರದರ್ಶನದ ಮೈದಾನದಲ್ಲಿ ಬಂದಿರಬೇಕು [267–2]

ಹೆಚ್ಚು ಸಂಗತಿಯನ್ನು ಹಾಸನದಲ್ಲಿ ದನಗಳ ಪ್ರದರ್ಶನದ ಜಾಯಿಂಟ್ ಆನರರಿ ಸೆಕ್ರೆಟರಿಯವರಿಗೆ ಬರೆದು ತಿಳಿದುಕೊಳ್ಳಬಹುದು

ಎಸ್ ವೆಂಕಟೇಶಯ್ಯಂಗಾರ್,
ಎನ್. ಎಸ್. ಅಪ್ಪಣ್ಣಯ್ಯಂಗಾರ್,
ವಿ. ಎಸ್. ರಾಜಗೋಪಾಲಾಚಾರ್,
ಜಾಯಿಂಟ್ ಆನರರಿ ಸೆಕ್ರೆಟರಿಗಳು, ದನಗಳ ಪ್ರದರ್ಶನದ ಕಮಿಟಿ.

ತಾ. 5–7 ನೇ ಡಿಸೆಂಬರ್ 1913, ಹಾಸನ

ವಿಕರಿಗೆ ಸಿದ್ಧವಾಗಿದೆ! ಐದನೆಯ ಛಾಪೆ!! , ಬಿಕರಿಗೆ ಸಿದ್ಧವಾಗಿದೆ!!!

ಒಕ್ಕಲಿಗರ ಸಂಘದ ಮುದ್ರಾಕ್ಷರ ಮುದ್ರಣವು. ಥಳಥಳಿಸುವ ದಪ್ಪಕಾಗದ, ಬಹು ಭದ್ರವಾದ ಅಟ್ಟೆ.

ಪ್ರಶ್ನೋತ್ತರ ಲೇಖ್ಯಬೋಧಿನಿ.

ಕ್ರಯ ಒಂದು ರೂಪಾಯಿ ಎಂಟಾಣೆ; ಅಂಚೆಯ ವೆಚ್ಚ ಬೇರೆ.

ಈ ಪುಸ್ತಕದ ಪ್ರಯೋಜನವು ಹೆಚ್ಚೆಂದು ನಾವು ಹೊಗಳಬೇಕಾದ್ದಿಲ್ಲ ಅತ್ಯಲ್ಪಕಾಲದಲ್ಲಿ ನಾಲ್ಕು ಮುದ್ರಣದ ಪುಸ್ತಕಗಳು ಮುಗಿದು ಐದನೆಯ ಸಲ ಅಚ್ಚಾಗಿರುವ ಸಂಭವವೇ ಪುಸ್ತಕವು ಸರ್ವಜನೋಪಯೋಗಿ ಎಂದು ಸಾರುತ್ತಿದೆ ಒಂದು, ಎರಡು, ಮೂರು, ನಾಲ್ಕನೆಯ ಮುದ್ರಣಗಳ ಪುಸ್ತಕಗಳಿಗಿಂತಲೂ ಐದನೆಯ ಮುದ್ರಣದ ಈ ಪುಸ್ತಕವು ಎಲ್ಲಾ ಬಗೆಗಳಲ್ಲಿಯೂ ತಿದ್ದುಪಾಟಿನಿಂದ ಅನೇಕ ಹೆಚ್ಚು ಸಂಗತಿಗಳು ಸೇರಿ ಬಲು ಅಂದವಾಗಿರುವುದು—ಇದರಲ್ಲಿ ಹಗಲು ಕೋರ್ಟು ವ್ಯವಹಾರಗಳಲ್ಲಿ ಓಡಾಡುತ್ತಿರುವ ಸಿವಿಲ್, ಕ್ರಿಮಿನಲ್, ರೆವಿನ್ಯೂ ಇಲಾಖೆಗಳ ತತ್ವವನ್ನು ತಿಳಿದುಕೊಳ್ಳಲಿಚ್ಛಿಸುವವರಿಗೆ ಪರಮೋಪಕಾರಿ ಇದುವರೆಗೆ ಓದಿರುವ ಅನೇಕರಿಗೆ ಅನುಭವವೇದ್ಯವು ಮುಂದೆ ಓದುವರಿಗೆ ಅನುಮಾನ ಅನಕ್ಕಿಲ್ಲ—ಈ ಪುಸ್ತಕವು ಮೊತ್ತಮೊದಲು 22–1–1904 ರಲ್ಲಿ ಅಚ್ಚಾಯಿತು ಎರಡನೆಯ ಸಲ 2 5–1906 ರಲ್ಲಿ ಮುದ್ರಿಸಲ್ಪಟ್ಟಿತು ಮೂರನೆಯ ಸಲ 22–3–1907 ರಲ್ಲಿ ಅಚ್ಚು ಮುಗಿಯಿತು ನಾಲ್ಕನೆಯ ಸಲ 26–1–1910 ರಲ್ಲಿ ಅಚ್ಚಾದುದು ಒಟ್ಟಿನಲ್ಲಿ ಐದು ಸಾವಿರ ಪುಸ್ತಕಗಳು ಮಾರಿಗೆಯಾದುವು ಪ್ರತಿ ಮುದ್ರಣದ ಪುಸ್ತಕವೂ ಮಾರಿಗೆಯಾಗಿ ಗ್ರಾಹಕರಿಗೆ ಸಮಯಕ್ಕೆ ಪುಸ್ತಕ ದೊರೆಯದೆ ಪುನಃ ಮುದ್ರಣವಾಗುವ ವರೆಗೆ ಕಾದಿರಬೇಕಾಗುತ್ತದೆ ' ಅಪೇಕ್ಷಿತರು ಆತುರಪಡುವುದುತ್ತಮ

ಇದರೊಳಗಿರುವ ಸಂಗತಿಗಳನ್ನೋದಿನೋಡಿ.

ಕ್ಷೇಮಸಮಾಚಾರ ಕಾಗದಗಳು—ಬರೆಯುವದಕ್ಕೆ ಮೊದಲಿಡುವದು, ಮರಿಯಾದೆಗಳು, ಬಂಧುಗಳಿಗೆ, ಹಿರಿಯರು ಕಿರಿಯರಿಗೆ, ಕಿರಿಯರು ಹಿರಿಯರಿಗೆ, ಸಮಾನರಿಗೆ, ಐಶ್ವರ್ಯವಂತರು, ಮಠಾಧಿಪತಿಗಳು, ಗುರುಗಳು, ಜಗದ್ಗುರುಗಳು ಮುಂತಾದವರಿಗೆ ಆಯಾ ಮತಪದ್ಧತಿಯನ್ನನುಸರಿಸಿ ಬರೆಯುವ ಒಕ್ಕಣೆ, ಮರಿಯಾದೆಗಳು—ರೆವಿನ್ಯೂ ಕೋರ್ಟು—ದರಖಾಸ್ತು, ರಾಜೀನಾಮೆ, ವರ್ಗಾವರ್ಗಿ, ರಿಮಿಷನ್, ಚಿಲ್ಲರೆ ಇತರ ಅನೇಕ ಬಾಬಿನ ತಕರಾರುಗಳು, ಲ್ಯಾಂಡು ರೆವಿನ್ಯೂ ರೂಲ್ಸು ಅನುಸರಿಸಿ ರೈತರಿಗೆ ರಿಯಾಯಿತಿ ದೊರೆಯುವ ಬಗೆಬಗೆ ಸಂಗತಿಗಳಲ್ಲಿ ಅರ್ಜಿಗಳು—ಸಿವಿಲ್‌ಕೋರ್ಟು—ತಿಳುವಳಿಕೆ ನೋಟೀಸ್, ಬಗೆಬಗೆ ದಾವಾ ಅರ್ಜಿಗಳು, ಸಮನ್, ಸಾಕ್ಷಿ, ಮನೋ, ಪ್ರತಿವಾದಿಯ ಎದುರುತ್ತರ, ತಕರಾರುಗಳು, ವಿಚಾರಣೆ, ತೀರ್ಮಾನ, ಡಿಕ್ರಿ, ಜಡ್ಜ್‌ಮೆಂಟ್, ಜಾರಿ, ತಕರಾರು, ತೀರ್ಮಾನ, ಜಪ್ತಿ, ಹರಾಜ್, ಸ್ವತ್ತು ಸ್ವಾಧೀನ, ನಿವಾಳಿ, ವಾರಸು, ಮೈನರು, ಗಾರ್ಡಿಯನ್, ದಾಯಭಾಗ, ಮುಂತಾದ ಬಗೆಬಗೆ ವಿಷಯಗಳಲ್ಲಿ ನಡವಳಿಕೆ, ವಿಧಿ, ಸ್ಟಾಂಪು, ತಿಳುವಳಿಕೆ, ಸ್ಮಾಲ್‌ಕಾಸ್, ಒರಿಜಿನಲ್, ಅಪ್ಪೀಲು, ಸ್ಪೆಷಲ್ ಅಪ್ಪೀಲು, ರಿವ್ಯೂ ಮುಂತಾದ ವಿಷಯಗಳು ಸ್ಪಷ್ಟವಾಗಿ ಹೇಳಿರುತ್ತೆ—ಕ್ರಿಮಿನಲ್ ಕೋರ್ಟು—ಪೋಲೀಸು, ಫಿರ್ಯಾದು, ಕೆಡಕು, ಮೋಸ, ವಿಶ್ವಾಸಘಾತುಕತೆ, ಕಳವು, ಅತಿಕ್ರಮಪ್ರವೇಶ, ಅಕ್ರಮತಡೆ, ಜುಲುಮು, ದೊಂಬಿ, ಅಕ್ರಮಕೂಟ, ಮೇಜಿಸ್ಟ್ರೇಟರವರಲ್ಲಿ ಫಿರ್ಯಾದಿ, ವಿಚಾರಣೆ, ಸಾಕ್ಷಿ, ತೀರ್ಮಾನ, ಪುನರ್ವಿಚಾರಣೆ, ಅಪ್ಪೀಲು, ಅಪರಾಧಿಗಳಿಗೆ ಸರ್ಕಾರದವರ ಸಹಾಯ, ಇಂಡಿಯನ್ ಪೆನಲ್ ಕೋಡಿನ ಯಾವ ಯಾವ ಸೆಕ್ಷನುಗಳು ಯಾವ ಯಾವ ತಪ್ಪಿತಗಳಿಗೆ ಲಗಾವಾಗುತಿವೆ ಎಂಬುವದು, ಯಾವ ಯಾವ ಸೆಕ್ಷನುಗಳು ಸಂಬಂಧವಾದ ತಪ್ಪಿತಗಳನ್ನು ಯಾವ ಯಾವ ಮೆಜಿಸ್ಟ್ರೇಟರು ವಿಚಾರಿಸಬೇಕು, ಯಾವ ಯಾವ ಕೋರ್ಟಿಗೆ ಎಷ್ಟೆಷ್ಟು ಶಿಕ್ಷೆ ಕೊಡುವ ಅಧಿಕಾರವಿರುತ್ತೆ ' ಪೋಲೀಸಿನವರಿಗಿರುವ ಅಧಿಕಾರದ ಪರಿಮಿತಿ ಮುಂತಾದ ಸಂಗತಿಗಳು ವಿವರಿಸಲ್ಪಟ್ಟಿವೆ—ಇತರ ಇಲಾಖೆಗಳು—ಇಂಜನಿಯರ್, ಫಾರಸ್ಟ್, ಎಕ್ಸೈಜ್, ವಿದ್ಯಾಭ್ಯಾಸ, ವ್ಯವಸಾಯ, ಮುನಿಸಿಪಲ್ ಮುಂತಾದ ಅನೇಕ ಇಲಾಖೆಗಳಿಗೆ ಬೇರೆ ಬೇರೆ ಅವಶ್ಯಬೀಳುವ ಸಂಗತಿಗಳ ಅರ್ಜಿ—ಲೇವಾದೇವಿ—ರಶೀದಿ, ಹುಂಡಿ, ಆಧಾರ, ಭೋಗ್ಯ, ಕ್ರಯ, ದಾನ, ಪರಿವರ್ತನೆ, ಗೇಣಿ, ಪಾಲು ವ್ಯವಸ್ಥೆ, ಮರಣಶಾಸನ, ಪಾರೀಖತ್ತು, ಮುಂತಾದ ಹಲವು ಬಗೆ ಪತ್ರಗಳು, ಅವುಗಳಿಗೆ ಅಲ್ಲಲ್ಲಿಯೇ ವಿಧಿ, ಸ್ಟಾಂಪು ರಿಜಿಸ್ಟ್ರೇಷನ್ ಪಟ್ಟಿ, ಅನುಭವ ಮುಂತಾದವುಗಳನ್ನು ವಿವರಿಸಿದೆ—ವರ್ತಕರ ಲೆಖ್ಖಗಳು—ರೋಜು, ವರ್ಗ, ಆವುದು ಬುಕ್ಕು, ರವ್ವು ಬುಕ್ಕು, ಭಂಡಾರದ ಬುಕ್ಕು, ಹುಂಡಿಬುಕ್ಕು, ನಗದಿ ಸಿಲ್ಕು ಬುಕ್ಕು, ತಂಡಲ್ ಬುಕ್ಕು, ಇವುಗಳಿಡುವ ರೀತಿ, ಇವುಗಳಿಂದ ಪ್ರಯೋಜನ ಮುಂತಾದವುಗಳನ್ನು ಇಂಗ್ಲಿಷ್ ಸಿಂಗಲ್ ಯಂಟ್ರಿ, ಡಬ್ಬಲ್ ಯಂಟ್ರಿ ಪದ್ಧತಿಯನ್ನು ಸೂಕ್ಷ್ಮವಾಗಿ ವಿವರಿಸಿದೆ—ಶಾನುಭೋಗಿಕೆ ಲೆಖ್ಖಗಳು—ಲ್ಯಾಂಡು ರೆವಿನ್ಯೂ ಕೋಡಿನ ಪ್ರಕಾರ ಶಾನುಭೋಗರು ಬರೆಯುವ ಗ್ರಾಮದ ಲೆಖ್ಖಗಳು ಯಾವುದು ? ಅವುಗಳಲ್ಲಿ ಏನನ್ನು ಬರೆಯುವುದು ? ಹೇಗೆ ಬರೆಯುವುದೆಂಬುದನ್ನು ವಿವರಿಸಿದೆ—ಕಾನೂನುಗಳು— ಸಿವಿಲ್ ಪ್ರೊಸಿಡ್ಯೂರ್ ಕೋಡು, ಇಂಡಿಯನ್ ಪೆನಲ್ ಕೋಡು, ಹಿಂದೂ ಲಾ, ಮಹಮ್ಮದೀಯ ಲಾ, ಕಂಟ್ರಾಕ್ಟ್, ಡಾಮೇಜು, ವಾರಸು, ಮೈನರು, ಲಿಮಿಟೇಷನ್, ಸ್ಟಾಂಪು, ಕೋರ್ಟುಫೀಜು, ರಿಜಿಸ್ಟ್ರೇಷನ್, ಸಾಕ್ಷ್ಯ, ಗ್ರಾಮಪೋಲೀಸು, ಪಟ್ಟಣ ಪೋಲೀಸು, ಸ್ಯಾನಿಟರಿ, ಮ್ಯುನಿಸಿಪಲ್, ಕಂಪೆನೀಸ್ ಆಕ್ಟು, ಫಾರೆಸ್ಟು, ಎಕ್ಸೈಜ್, ರೆವಿನ್ಯೂಕೋಡ್, ರೂಲ್ಸ್, ಲ್ಯಾಂಡ್ ಇಂಪ್ರೂವ್ಮೆಂಟ್, ಲ್ಯಾಂಡ್ ಅಕ್ವಿಜಿಷನ್, ದೊಡ್ಡಿ, ಅರಂಸು ಮುಂತಾದ ಉಪಯೋಗವಾದ ಎಲ್ಲ ಆಕ್ಟುಗಳ ಸಾರಾಂಶವನ್ನು ಅಡಗಿಸಿದೆ—ಸ್ವಲ್ಪಮಟ್ಟಿಗೆ ಓದುಬರಹ ಬಂದವರು ಕೂಡ ಸುಲಭವಾಗಿ ತಿಳಿಯುವಹಾಗೆ ಪ್ರಶ್ನೋತ್ತರ ರೀತಿಯಾಗಿ ಬರೆಯಲ್ಪಟ್ಟಿರುವ ಈ ಪುಸ್ತಕದಲ್ಲಿರುವ ಉಪಯೋಗವಾದ ವಿಷಯಗಳಿಷ್ಟೇ ಎಂದು ವಿವರಿಸುವದು ಸಾಧ್ಯವಲ್ಲವಾದರೂ ಸೂಕ್ಷ್ಮವಾಗಿ ವಿವರಿಸಿದೆ ಈ ಅಂಶವು ಇದನ್ನು ಓದಿರುವ ಸಾವಿರಾರು ಮಂದಿಗೆ ಸ್ವತವೇ ' ಈಗಲೂ ಮೊದಲನೆಯ ನಾಲ್ಕು ಛಾಪೆಗಳಿಗಿಂತಲೂ ಈ ಐದನೆಯ ಛಾಪೆಯಲ್ಲಿ ಹೇರಳವಾದ ವಿಷಯಗಳನ್ನು ಸೇರಿಸಿರುತ್ತೆ ಕುಟುಂಬಕ್ಕೆ ಒಂದರಂತೆ ಈ ಪುಸ್ತಕವನ್ನು ಸಂಗ್ರಹಮಾಡಬೇಕು ಬರೆಯುವಂತವರು ತಾವಿರುವ ಊರು, ಆ ಊರಿನ ಬಳಿ ಇರುವ ಪೋಸ್ಟಾಫೀಸು, ಅದು ಸೇರಿರುವ ಹೋಬಳಿ, ತಾಲ್ಲೂಕು, ಇವುಗಳೊಂದಿಗೆ ತಂತಮ್ಮ ಹೆಸರುಗಳನ್ನು ಬಿಡಿಬಿಡಿಯಾದ ಅಕ್ಷರಗಳಲ್ಲಿ ಬರೆಯಲು ಪ್ರಾರ್ಥಿತರು ಕ್ರಯ ಒಂದು ರೂಪಾಯಿ ಯೆಂಟಾಣೆ ಅಂಚೆ ವೆಚ್ಚ ಬೇರೆ ಪರಸ್ಥಳದ ವ್ಯಾಪಾರಸ್ಥರಿಗೆ ದಸ್ತಾಳಿ ಸಿಕ್ಕುವುದು ಪ್ರತ್ಯುತ್ತರಾಪೇಕ್ಷಿತರು ರಿಪ್ಲೈಕಾರ್ಡು ಬರೆಯಬೇಕು [278 1]

ಪುಸ್ತಕ ದೊರೆಯುವ ಸ್ಥಳ:—

ಭಾರತಿ ಸಂಪಂಗಿರಾಮ; ಅಥವಾ ಎಸ್. ಆರ್. ಭಾರತಿ, ಸಂಪಾದಕ "ಸವಿನುಡಿ" ಮತ್ತು "ಭಾಷಾನಿಧಿ," ಬೆಂಗಳೂರು ಸಿಟಿ.

ಬಿ. ವಿ. ಪಂಡಿತರಿಂದ

ಶುದ್ಧವಾದ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟು ಆಬಾಲವೃದ್ಧರಿಗೂ ಆಮೋದವನ್ನುಂಟುಮಾಡುತ್ತಿರುವ

ಆಮೋದಿನಿ

160 ಮಾತ್ರೆಯುಳ್ಳ ಸೀಸೆಗೆ 4 ಆ , 5 ಸೀಸೆಗಳಿಗೆ 1 ಇನಾಂ

ಈ ಮಾತ್ರೆಗಳು 1 ೭ನ್ನು ಬಾಯಿನಲ್ಲಿ ಹಾಕಿಕೊಂಡ ಕೂಡಲೆ ಮನಸ್ಸಿಗೆ ಅಪೂರ್ವವಾದ ಆನಂದವುಂಟಾಗುವುದು ಎಷ್ಟು ಹಾಡಿದರೂ ದಣಿವಾಗದಂತೆ ಸಂಗೀತಗಾರರ ಕಂಠವನ್ನು ಕಾಪಾಡುವುದರಲ್ಲಿ ಪ್ರಖ್ಯಾತಿ ಪಡೆದಿರುವುದು ಬಾಯಿ ನಾತವನ್ನು ಹೋಗಲಾಡಿಸಿ ಬಾಯಾರಿಕೆಯನ್ನು ಶಮನಮಾಡಿ ತಾಂಬೂಲವನ್ನು ರಂಜಿಸಿ ಜೀರ್ಣಶಕ್ತಿಯನ್ನು ಹೆಚ್ಚಿಸಿ ಅಸಾಧ್ಯವಾದ ಕೆಮ್ಮು ದಮ್ಮು ಅರೋಚಕ ಹೊಟ್ಟೇನೋವು ಮಲಬಂಧ-ಶರೀರದಲ್ಲಿ ದೌರ್ಬಲ್ಯ-ಇವುಗಳನ್ನು ಗುಣಮಾಡುವ ಅಮೋಘವಾದ ಗುಣವನ್ನು ಹೊಂದಿರುವದು ಮಲೆನಾಡಿನಲ್ಲಿರುವವರಿಗೂ ಪ್ರಯಾಣಿಕರಿಗೂ ಇದರ ಸೇವನೆಯು ಅಮೃತಕ್ಕೆ ಸಮಾನವಾದುದು ಟಪಾಲ್ ಖರ್ಚು 12 ಸೀಸೆ ವರೆಗೆ 1 ಆಣೆ [220 ೧]

ತ್ರೀಕರ ಕಸ್ತೂರಿ ಮಾತ್ರೆ.—ಅನುಪಾನಪತ್ರ ಸಹಿತ 250 ಮಾತ್ರೆ 4 ಆಣೆ ಐದು ಸೀಸೆಗೆ ಒಂದು ಇನಾಮು

ವಿಳಾಸ—ಮ್ಯಾನೇಜರ್, ಸದ್ವೈದ್ಯಶಾಲಾ, ನಂಜನಗೂಡು

ದರ್ಬಾರಿಗೋಸ್ಕರಲೇ ತಯಾರುಮಾಡಿದ.

ಈ ಸಮಯವನ್ನು ಕಳೆದುಕೊಳ್ಳಬೇಡಿ ಬಹಳ ಸ್ವಲ್ಪವೇ ಉಳಿದಿವೆ

ರೈಲ್ವೆ ರೆಗ್ಯುಲೇಟರ್ ವಾಚ್



ಬಹಳ ಒಳ್ಳೇ ವಾಚು, ಸರಸಣ ಉತ್ತರಮುಖ ಸನೋನ ಕ್ರಯ ರೂ 2-1 0 ಐದು ವರುಷ ಜವಾಬ್ದಾರಿ ಗುಂಡಿಗೆ ಸರಿಯಾದ ಕಾಲ ತೋರಿಸುತ್ತವೆ, ಒರಟಾದ ಉಪಯೋಗಕ್ಕೆ ತಡೆಯುತ್ತೆ ಎರಡು ಕಡೆಗಳಲ್ಲೂ ಸುಂದರವಾದ ಕನ್ನಡಿ ಹಾಕಿದೆ ಇಷ್ಟು ಸುಲಭ ಕ್ರಯಕ್ಕೆ ಇಂಥಾ ಉತ್ಕೃಷ್ಟವಾದ ವಾಚ್ ಇನ್ನೆಲ್ಲೂ ಸಿಕ್ಕುವುದಿಲ್ಲ ಬೇಗ ಬರೆಯಿರಿ [277 1]

ವಿಳಾಸ—ಪಿ ಎ ರಜಾಕ್ ಕಂಪನಿ, ಗವರ್ನಮೆಂಟು ಕಂಟ್ರಾಕ್ಟರ್ಸ್, ರತ್ ಬಜಾರ್, ಮದರಾಸ್.

THE PLACE FOR HASSAN CAPS IS HASSAN.

ನಿಮ್ಮ ತಲೆಯ ಮೇಲಿರುವುದೇನು?

ಹಾಸನದ ಟೋಪಿ ಅಲ್ಲವೋ?

ಹಾಗಾದರೆ ಬೇಗ ಬರೆದು ತರಿಸಿಕೊಳ್ಳಿ

3-52

ಒಳ್ಳೇ ಟೋಪಿಗಳು ಯಾವುವು? ಯಾಕೆ? ಸಂದೇಹವೇನು?

ಹಾಸನದ ಟೋಪಿಗಳ ಸಮಾನ ಉಂಟೇ?

ಹಾಸನದ ಟೋಪಿಗಳು ಮೊದಲು ಎಲ್ಲಿ ತಯಾರಾದವು? ಎಲ್ಲಿಂದ ಇತರ ಕಡೆಗಳಿಗೆಲ್ಲಾ ಹರಡಿಕೊಂಡವು? ಖಂಡಿತವಾಗಿಯೂ ಹಾಸನದಿಂದಲೇ ಎಂದು ತಿಳಿಯಿರಿ

ಈಗ ಇತರ ಕಡೆಗಳಲ್ಲಿ ಮಾಡಿ ಬಿಕರಿಯಾಗುತ್ತಿರುವ ಟೋಪಿಗಳ ದಾರವೆಲ್ಲಾ ಬೇಳಾದದ್ದು ಅವೇ ಹಾಸನದ ಟೋಪಿಗಳೆಂದು ಎಲ್ಲರೂ ಕೊಂಡುಕೊಂಡು ಮೋಸಹೋಗುವರು

ಆದರೆ ಇಲ್ಲಿ ನೋಡಿ —(೧) ನಮ್ಮಲ್ಲಿ ತಯಾರಾಗುವ ಟೋಪಿಗಳ ದಾರವೆಲ್ಲಾ ನೆಟ್ಟಗೆ ವಿಲಾಯಿತಿಯಿಂದಲೇ ಬರುವದು (೨) ಟೋಪಿಗಳನ್ನು ಖುದ್ದಾಗಿ ನಾವೇ ನಿಂತು ಚನ್ನಾಗಿ ಹಾಕಿಸುತ್ತೇವೆ ಅಪೇಕ್ಷಿಸುವವರಿಗೆ ಬಹಳ ಚನ್ನಾಗಿರತಕ್ಕವುಗಳನ್ನೇ ಆರಿಸಿ ಕಳುಹಿಸುತ್ತೇವೆ

ಒಳ್ಳೇದಾದ, ಚನ್ನಾಗಿ ಹೆಣೆದ, ಬಹಳ ಬಾಳಿಕೆಬರುವ ಟೋಪಿಗಳು ಬೇಕಾದರೆ, ನಮಗೆ ಬೇಗ ಬರೆದು ತರಿಸಿಕೊಳ್ಳಿ ಅಗ್ಗವಾದದ್ದೂ ಚನ್ನಾಗಿಲ್ಲದ್ದೂ ಬೇಕಾದರೆ ನಮ್ಮಲ್ಲಿ ದೊರೆಯುವದಿಲ್ಲ.

ಸಾದಾ ಕೆಂಪು, ಕಪ್ಪು, ಬಿಳಿ, ಕಾಫಿ ಬಣ್ಣಗಳ ಟೋಪಿಗಳು ೧ ರೂ ೮ ಆ ; ೧ ರೂ ೬ ಆ ,

ಚುಕ್ಕೆಯುಳ್ಳ ಟೋಪಿಗಳು ರೂ ೧_೮, ರೂ ೧_೧೨

ರೇಷ್ಮೆ ಚುಕ್ಕೆಯುಳ್ಳ ಟೋಪಿಗಳು ರೂ ೨

ದಾರದ ಟೋಪಿಗಳು ೧ ರೂ ೧೨ ಆ , ೧ ರೂ ೮ ಆ , ೧ ರೂ ೬ ಆ

ಮುಸುಕಿನ ಟೋಪಿಗಳು ೧ ರೂ ೮ ಆ , ೧ ರೂ ೬ ಆ

"In addition to cap making we are giving special attention to knitting stockings All our stockings, for adults and children, are hand-made Prices will be sent on enquiry."

ಮ್ಯಾನೇಜರ್, ಟೋಪಿ ಕಾರ್ಖಾನೆ,

ಗರಲ್ಸ್ ಇಂಡಸ್ಟ್ರಿಯಲ್ ಸ್ಕೂಲ್, ಹಾಸನ.

Apply —

MANAGER, CAP WORKS,
GIRLS' INDUSTRIAL SCHOOL, HASSAN.

CHAMBERLAIN'S COLIC, CHOLERA AND DIARRHOEA REMEDY.

ಚೇಂಬರ್ಲೇನ್ ಯವರು ಹೊಟ್ಟೆಶೂಲೆ, ಕಾಲರಾ, ಭೇದಿಗಳಿಗೆ ಕಂಡುಹಿಡಿದಿರುವ ಔಷಧವು



1 52

ಕೆಳ ಹೊಟ್ಟೆಯ ನೋವು, ಬರೀ ಬೇಧಿಯಾಗುವುದು, ಆಮಶಂಕೆ, ವಾಂತಿಭೇದಿ ಉಪದ್ರ, ಕೀಲುಗಳ ನೋವು, ಹೊಟ್ಟೆಯ ನಾನಾ ತರದ ಶೂಲೆಗಳು—ಈ ರೋಗಗಳನ್ನೆಲ್ಲಾ ವಾಸಿಮಾಡುತ್ತದೆ ಈ ಪರಮಾಶ್ಚರ್ಯಯುಕ್ತವಾದ ಔಷಧವು ಜನರನ್ನು ಬದುಕಿಸಿರುವಷ್ಟು ಮತ್ತು ನೋವನ್ನೂ, ಬಾಧೆಯನ್ನೂ ನಿವಾರಣೆ ಮಾಡಿರುವಷ್ಟು ಪ್ರಪಂಚದಲ್ಲೇ ಇನ್ಯಾವ ಔಷಧವೂ ಮಾಡಿರುವುದಿಲ್ಲ

ಜ್ಞಾಪಕದಲ್ಲಿಟ್ಟುಕೊಳ್ಳಿ—ಒಂದು ಹೊತ್ತು ಈ ಔಷಧವನ್ನು ಸೇವಿಸಿದ ಕೂಡಲೇ ಹೊಟ್ಟೆಯೊಳಗಿರುವ ಎಲ್ಲಾ ನೋವನ್ನೂ ನಿಲ್ಲಿಸಿಬಿಡುತ್ತದೆ ಖಂಡಿತವಾಗಿ ವಾಸಿಮಾಡುವುದೇ ಇದರ ಗುಣ

ಇದು ವನಸ್ಪತಿಗಳಿಂದಲೇ ತಯಾರಾದ ಔಷಧ

ಕೈಯಿಂದ ಸ್ವಲ್ಪವೂ ಮುಟ್ಟಿದ್ದಲ್ಲ

ಇದು ಎಲ್ಲೆಲ್ಲೂ ಬಿಕರಿಯಾಗುವುದು | ಸಣ್ಣ ಸೀಸೆಗೆ ೧ ರೂಪಾಯಿ | ದೊಡ್ಡ ಸೀಸೆಗೆ ೨ ರೂಪಾಯಿ

1914 ನೇ ವರ್ಷದ ಕೆಲೆಂಡರು 1914.



ರಮಣೀಯಕರವಾದ ಸ್ತ್ರೀಯ ನಕ್ಷೆಯುಳ್ಳದು.

ಇಂಥಾ ಸುಂದರವಾದ ಕೆಲೆಂಡರು ಎಲ್ಲಿಲ್ಲಿಯೂ ದೊರಕಲಾರದು ಒಂದರ ಕಿಮ್ಮತು 0-4-0 6 ಕ್ಕೆ 1 0-0 12 ಕ್ಕೆ 1 10-0 ಪೋಸ್ಟು ಖರ್ಚು ಮಾಫಿ ಜನವರಿ ಆಖೈರು ವರೆಗೆ

ಅಮೃತಾಂಜನ.

ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಡುತ್ತವೆ ಎಲ್ಲಾ ತರದ ನೋವುಗಳ ಮೇಲೆ ದಿವ್ಯಾಮೃತ ಬಾಟ್ಲಿ ಒಂದಕ್ಕೆ 0-8 0, ಡಜನ್ 1 ಕ್ಕೆ 5-1 0 ಟಪಾಲ್ ಖರ್ಚು ಪ್ರತ್ಯೇಕ [12-11]

ವಿಳಾಸ —ಅಮೃತಾಂಜನ ಡಿಪೋ, ಫೋರ್ಟ್, ಬೊಂಬಾಯಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊರೆತ (ಭಾರ), ಮೈ ನಡುಕ, ಶೀತಾಂಗಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂಥ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಟ್ಟುಜ್ವರ, ಕೈಶಿತ್ಯಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ —220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1 ರಿಂದ 12 ಕುಪ್ಪೀ ವರೆಗೆ ಪೋಸ್ಟೇಜು 1 ಆಣೆ [179 17]



೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈವಿಶಾರಿತಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಕೆ, ಮೂತ್ರವು ಕಟ್ಟಿದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ ಸಮಯದಲ್ಲಿ ಬೇಟಾಡಬೇಡಿ। ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ। ವೈದ್ಯೋಪಚಾರ ಸಹಾಯವನ್ನು ಅಪೇಕ್ಷಿಸದ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ

ಅನುಪಾನ ಪತ್ರವು ಔಷದದೊಡನೆ ಇರುವುದು ಬೆಲೆ ರೂ 1 ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ —ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

THE MYSORE GOVERNMENT SECURITY

Life and Marriage Assurance Co., Ltd.

Head Office: Mysore.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No III OF 1895)

CAUTION:—Before you go in for a Provident, Life or Marriage Policy, please ask for a copy of our Company's prospectus, which will explain to you the mode of the working of the present day provident companies in India, and enables you to select a good institution, where your hard earned money will be safe.

Absolute Security, Attractive Schemes, Soundest Principles

Wanted Chief Agents and agents throughout India on Commission and Salary For prospectuses, etc, please apply to

Mr. M. L. NAGANNAH,
Managing Agent, MYSORE.

A NOVELTY OF THE TWENTIETH CENTURY!

THE MYSORE GOVERNMENT SECURITY

MUTUAL PROPERTY INVESTMENT COMPANY, LTD.

HEAD OFFICE: MYSORE.

CAPITAL Rs. 1,00,000.

(INCORPORATED UNDER THE MYSORE COMPANIES' REGULATION No. III OF 1895)

BANKING —Every sort of banking business transacted The company's shares are most valuable and are within the reach of all.

Land and house purchase and investment policies are a speciality of the company, by which the company advances loans on the security of immovable properties to purchase houses and lands, or to liquidate prior debts, and recovers the same by easy monthly instalments

WANTED

Four local directors for each and every taluk of the Mysore Province on liberal terms to represent the company. Only men of position and influence need apply. For prospectuses, etc, please apply to

[161-21]

Mr. M. L. NAGANNAH,
Managing Agent, MYSORE.

ಗುಣಕಂಡ

ಮೂರು ಮಹೌಷಧಗಳು.

ಮೇಧೋವರ್ಧಿನಿ (Brain Tonic)—ಮೆದುಳಿನಿಂದ ಕೆಲಸಮಾಡುವವರಿಗೆ ಬಹು ಫಲಕಾರಿಯಾದುದು ಮೆದುಳಿಗೆ ಸೇರಿರುವ ಉಷ್ಣವನ್ನು ತಗ್ಗಿಸಿ, ಬುದ್ಧಿಗೆ ಸೂಕ್ಷ್ಮತೆಯನ್ನೂ, ದೃಷ್ಟಿಗೆ ಪಾಟವವನ್ನೂ ಕೊಡುವುದಲ್ಲದೆ ಬಹಳ ಕಾಲದಿಂದ ಅನುಸರಿಸಿಬಂದ ನೋವುಗಳು ಈ ತೈಲವನ್ನುಜ್ಜುವುದರಿಂದ ಖಂಡಿತವಾಗಿಯೂ ತೊಲಗುವವು ಸಾಧಾರಣಕಾಲದಲ್ಲಿ ನೆತ್ತಿಗೆ ಇದನ್ನು ಹಚ್ಚಿಕೊಂಡು ಸ್ನಾನಮಾಡಿದರೆ 3-4 ಅಭ್ಯಂಗನಗಳಿಂದಾಗುವ ಪ್ರಯೋಜನವಾಗುವದು

ಕ್ರಯ 1 ಶೀಷೆಗೆ 1 ರೂಪಾಯಿ, 6 ಶೀಷೆಗೆ 5 ರೂಪಾಯಿ

ಸುರೋಚನವಟಿ (Children's Laxative Pills)—8 ವರ್ಷದೊಳಗಿನ ಮಕ್ಕಳಿಗೆ ಸುಖಭೇದಿಮಾಡಿಸುತ್ತೆ ಎಲ್ಲರೂ ನಿರ್ಭಯವಾಗಿ ಮಕ್ಕಳಿಗೆ ಉಪಯೋಗಿಸಿರಿ 1 2 3 ಮಾತ್ರೆಗಳನ್ನು ಜೇನಿನಲ್ಲಿ ಕಲಸಿ ಕೊಟ್ಟರೆ 2-3 ಸಲ ಸುಖಭೇದಿಯಾಗುತ್ತೆ. ಕ್ರಯ 75 ಮಾತ್ರೆಗೆ 4 ಆಣೆ, 6 ಶೀಷೆಗೆ 1 ರೂಪಾಯಿ.

ರೋಗನಾಶಿನಿ (Intimate Friend)—ಜಲದೋಷ, ಹವಾದೋಷ, ಹಠಯಾಗಿ ಮಳೆ, ಬಿಸಲು, ಮಂಜಿನಲ್ಲಿ ಸುತ್ತುವುದರಿಂದಾಗುವ ಕೆಮ್ಮು, ಗಂಟಲುನೋವು, ಜ್ವರ, ಚಳಿ, ಕೆರೆತ, ಮೈ, ಕೈ, ಕಾಲು, ತಲೆ, ಸೊಂಟ ಇವುಗಳ ನೋವು, ಜ್ವರ, ಅಜೀರ್ಣ ಮುಂತಾಗಿ ಎಲ್ಲಾ ಗುಣವಾಗುತ್ತೆ ಇದಾ ಪಥ್ಯ. ಹೊತ್ತಿಗೆ 1 ಮಾತ್ರೆ. ದಿನಕ್ಕೆ 3-4 ಸಲ ಸೇವಿಸುವುದು ಕ್ರಯ 10 ಮಾತ್ರೆಗೆ 1 ಆಣೆ, 1 ಶೀಷೆಗೆ 1 ರೂಪಾಯಿ [233-9]

ವಿಳಾಸ-ಓರಿಯಂಟಲ್ ಫಾರ್ಮಸಿ, ಮೈಸೂರು

ಮರೆಯಬ್ಯಾಡಿರಿ ! ಮರೆಯಬ್ಯಾಡಿರಿ !!

ದರ್ಬಾರ್ ಸಾಬೂನು.

ಏಜೆಂಟುಗಳು ಬೇಕಾಗಿದೆ!

ಒಳ್ಳೇ ಕಮಿಷನ್ ದೊರಿಯುವದು.

ಅಪಾಯವಿಲ್ಲದ ರೋಮಸಂಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು

ಉರಿ, ನೆಕೆ ಮುಂತಾದ ಬಾಧೆಗಳಿಲ್ಲವು. ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು. ಮರೆಯಬ್ಯಾಡಿರಿ. 3 ಸಾಬೂನುಗಳಿರುವ ಪೆಟ್ಟಿಗೆ 1ಕ್ಕೆ ಕ್ರಯ 11 ಆಣೆ. 2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1-10-0, ಅಂಚೆ ಹಾಸಲು 4 ಆಣೆ.

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ.

ವಿಳಾಸ.—ವಿ. ಎ. ಎಸ್. ಪಾಣಿ ಕಂಪೆನಿ,

ನಂ. 3, ಇರುಳಪ್ಪನ್ ಬೀದಿ, ಮದರಾಸು.

V. A. S. PANI,

[268-2, No 3, Erulappen Street, Madras.

ಬ್ರಾಹ್ಮಣರ ಶ್ರೇಣಿಯಲ್ಲಿರುವ ಮನೆ.

ಮೈಸೂರು ಹಳ್ಳದಕೇರಿಯಲ್ಲಿ ನಾರ್ಮಲ್ ಸ್ಕೂಲಿಗೆ ಪಶ್ಚಿಮ ಭಾಗದಲ್ಲಿರುವ ಎರಡು ಅಂತಸ್ತಿನ ತಾರಸಿ ಮಹಡಿಮನೆ ಹ್ಯಾಗದಮರ ಸುಟ್ಟ ಇಟ್ಟಿಗೆ ಗಾರೆಯಿಂದ ಮಜಬೂತಾಗಿ ಕಟ್ಟಿರುವ ಕಟ್ಟಡವು ಖರೀದಿಗೆ ಕೊಡಲ್ಪಡುತ್ತೆ. ಇಷ್ಟವುಳ್ಳವರು ಕೆಳಗಿನ ವಿಳಾಸದವರಿಗೆ ಬರೆದು ಬೆಲೆಯನ್ನು ತಿಳಿದು ತೆಗೆದುಕೊಳ್ಳಿರಿ (4)

ಜಿ. ರಾಮಯ್ಯ, ಕ್ಯಾಷ್ ಬಜಾರ್, ಬೆಂಗಳೂರು ಸಿಟಿ.

ಶಬ್ದಾದರ್ಶನದ ನೋಟ್ಸ್.

ನಕಲಿಗಳು, ಕಥೆಗಳು ಬಹುಮಾನ ಸಿಕ್ಕುತ್ತೆ !!

ಲೋವರ್ ಸೆಕೆಂಡರೀ ವಿದ್ಯಾರ್ಥಿಗಳಿಗೆ ಬಹು ಉಪಯುಕ್ತವಾದ "ಶಬ್ದಾದರ್ಶ"ಕ್ಕೆ ಸುಲಭವಾದ ದಾರಿಯಾದ ಈ ನೋಟ್ಸಿನ ಬೆಲೆ 3 ಆ 4 ಪ್ರತಿ ಒಟ್ಟಾಗಿ ತರಿಸಿಕೊಂಡರೆ ಯೋಗನಿದ್ರಾಪ್ರಹಸನವೆಂಬ ನಕಲಿ ಉಚಿತ 6 ಪ್ರತಿ ತರಿಸಿಕೊಂಡರೆ ಮಹಾರಾಷ್ಟ್ರಾಧಿಪನ್ಯನೆಂಬ ನಕಲಿ ಉಚಿತ 8 ಪ್ರತಿ ತರಿಸಿಕೊಂಡರೆ ಚಂದ್ರಮತಿಯೆಂಬ ಕಥೆಯ ಪುಸ್ತಕ ಉಚಿತ ಇದಲ್ಲದೆ ನಮ್ಮಲ್ಲಿ ಇನ್ನೂ ಅನೇಕ ನಾಟಕ, ನಕಲಿ, ಬಂಗಾಲಿಯ ನಾವೆಲ್‌ಗಳು ಕ್ರಯಕ್ಕೆ ದೊರೆಯುತ್ತೆ.

[266-2] ವಿಳಾಸ-ಚಂದ್ರಿಕಾ ಬುಕ್ ಸ್ಟಾಲ್, ಮೈಸೂರು.

ಕುಂತಳಾನಂದ ತೈಲವು.

192-14

ಹಿಂದುಸ್ಥಾನದ ಬೇರೆ ಬೇರೆ ಪ್ರದರ್ಶನಗಳಲ್ಲಿ ಮೂರು ಬಂಗಾರದ ಬಿಲ್ಲೆಗಳನ್ನೂ ಎಂಟು ಸರ್ಟಿಫಿಕೇಟುಗಳನ್ನೂ ಪಡೆದಿದೆ ಮುಖ್ಯವಾದ ಎಲ್ಲಾ ವರ್ತಮಾನ ಪತ್ರಿಕೆಗಳೂ ಅನೇಕಾನೇಕ ದೊಡ್ಡ ಮನುಷ್ಯರೂ ಇದರ ಉತ್ತಮೋತ್ತಮ ಗುಣಗಳಿಗಾಗಿ ಶ್ಲಾಘಿಸಿರುವರು. ಈ ತೈಲವು ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುತ್ತದೆ ನಿದ್ರಾಭಂಗವನ್ನು ಪರಿಹರಿಸುವಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ ಬಹಳ ಶೀತಳವೂ ಸುವಾಸಿತವೂ ಆಗಿದ್ದು ಮಾನಸಿಕ ಶ್ರಮವನ್ನು ಹೋಗಲಾಡಿಸಿ ಆಲೋಚನಾ ಶಕ್ತಿಯನ್ನು ವೃದ್ಧಿಪಡಿಸುವ ಈ ತೈಲವು ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದಾಗಿದೆ ಬೆಲೆ ಬಾಟ್ಲಿಗೆ 1 ರೂಪಾಯಿ. 3 ಬಾಟಲಿಗೆ 8 ರೂಪಾಯಿ. 10 ಆಣೆ. ಅಂಚೆ ಹಾಸಲು ಬೇರೆ ನಮ್ಮ ದೊಡ್ಡ ಕನ್ನಡ ಕ್ಯಾಟಲಾಗು ತರಿಸಿ ನೋಡಿರಿ.

ನಮ್ಮ ವಿಳಾಸ:—ಬಿ. ಎಮ್. ನಾಥ ಮತ್ತು ಕಂಪೆನಿ,

ವೇಪೇರಿ, ಮದರಾಸ್.

ಡೋಂಗರೆ

ಇವರ ಬಾಲಾಮೃತ

[150-23]

ಸೇವನದಿಂದ ಹುಡುಗರು ಸಶಕ್ತರೂ ನಿರೋಗಿಗಳೂ ಆಗಿ ಅವರ ಭಾರವು ಬೆಳೆಯುತ್ತದೆ ಒಂದು ಬಾಟ್ಲಿಗೆ ೧೦ ಆಣೆ. ಟಪಾಲ್ ಖರ್ಚು 8 ಆಣೆ.

ಕೆ. ಟಿ. ಡೋಂಗರೆ ಮತ್ತು ಕಂಪನಿ, ಗಿರಗಾಂವ, ಮುಂಬಾಯಿ ಇವರಲ್ಲೂ ಮತ್ತು ಎಸ್. ವೈದ್ಯ ಅಂಡ್ ಕೊ, ಪಾರ್ಕ್ ಟವರ್, ಮದರಾಸು ಇವರಲ್ಲೂ ದೊರೆಯುವದು.

MELLIN'S FOOD

ಮಕ್ಕಳಿಗೂ ರೋಗಿಷ್ಠರಿಗೂ

[256-4]

ಮೆಲ್ಲಿನ್ಸ್ ಆಹಾರವು,

ಕೈ ಸೋಕದೆ ತಯಾರಾದದ್ದು : ಸಸ್ಯಾಹಾರ

ಈಗ ಸಿದ್ಧವಾಗಿದೆ.

1914 ನೇ ವರುಷದ ಮೆಲ್ಲಿನ್ಸ್ ಕ್ಯಾಲೆಂಡರು.

ಎರಡು ಆಣೆ ಪಾವತಿಮಾಡಿದರೆ ಅಥವಾ ಕಳುಹಿಸಿಕೊಟ್ಟರೆ ಈ ಒಂದು ಕ್ಯಾಲೆಂಡರನ್ನು ಕೊಡುವೆವು, ಅಥವಾ ಪೋಸ್ಟಿನಲ್ಲಿ ಕಳುಹಿಸುವೆವು

ವಿಳಾಸ—ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್

ಮಕ್ಕಳ ತಾಯಿಗೆ— ಹಿಂದುಸ್ಥಾನದಲ್ಲಿ ಮಕ್ಕಳ ಪೋಷಣೆ"—ಅಂಚೆ ಖರ್ಚಿಗೆ ಎರಡು ಆಣೆ ಕಳುಹಿಸುವವರಿಗೆ ಈ ಪುಸ್ತಕವನ್ನು ಕಳುಹಿಸಿಕೊಡುತ್ತೇವೆ.

ಮೆಸ್ಸರ್ಸ್ ಓಕ್ಸ್ ಅಂಡ್ ಕಂಪನಿ, ಮೌಂಟ್ ರೋಡ್, ಮದರಾಸ್.

೧೯೧೪ನೇ ಇಸವಿಯ ಪಾಕೆಟ್ ಡೈರಿ

[127-27]

ಇವರಂತೆ 6 ನಮೂನೆಯ ಡೈರಿಗಳು ಬಹು ಸುಂದರವಾಗಿರುವಂತೆ ನುಣುಪಾದ ದಪ್ಪ ಕಾಗದದಲ್ಲಿ ಮುದ್ರಿಸಿ, ಪ್ರತಿ ಪುಟಕ್ಕೂ ರೂಲು ಹಾಕಿ ಬಹಳ ಸೊಗಸಾದ ಸೀನು (ಕ್ಯಾಲಿಕೋ) ಬಟ್ಟೆಯಿಂದ, ವಿಲಾಯಿತಿ ಯಂತ್ರಗಳಲ್ಲಿ ಬೈಂಡು ಮಾಡಿ ಮೇಲುಗಡೆಯಲ್ಲಿ ಆರ್ನಮೆಂಟಲ್ ಅಕ್ಷರಗಳನ್ನು ಬಿಡಿಸಿದೆ.

ಇವು ವರ್ತಕರು, ಲಾಯರುಗಳು, ಕಂಟ್ರಾಕ್ಟರರು, ಸರ್ಕಾರಿ ಉದ್ಯೋಗಸ್ಥರು, ಹುದ್ದೇದಾರರು, ಜಮೀನ್‌ದಾರರು, ಸ್ಕೂಲ್ ಕಾಲೇಜು ವಿದ್ಯಾರ್ಥಿಗಳು, ಪೊಲೀಸ್ ಇಲಾಖೆಯವರು ಮೊದಲಾದ ಸಮಸ್ತ ಜನರಿಗೂ ಉಪಯೋಗವಾಗಿರುವ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಂಡಿವೆ.

ಎ. ನಂ|| ಪೆನ್ಸಿಲ್ ಇಡತಕ್ಕ ಚಿಕ್ಕ ಡೈರಿ 1 ಕ್ಕೆ 3 ಆಣೆ. | ಸಿ. ನಂ|| ಪೆನ್ಸಿಲ್ ಇಡತಕ್ಕ ದೊಡ್ಡ ಡೈರಿ 1ಕ್ಕೆ 6 ಆಣೆ.

ಬಿ. ನಂ|| ಪೆನ್ಸಿಲ್ ಇಟ್ಟಿರುವ ಚಿಕ್ಕ ಫ್ಲ್ಯಾಪು ಡೈರಿ 1 ಕ್ಕೆ 5 ಆಣೆ. | ಡಿ. ನಂ|| ಪೆನ್ಸಿಲ್ ಇಟ್ಟಿರುವ ದೊಡ್ಡ ಫ್ಲ್ಯಾಪು ಡೈರಿ 1 ಕ್ಕೆ 8 ಆಣೆ

ಸರ್ಕಾರದಲ್ಲಿ ರಿಜಿಸ್ಟರಾಗಿ ಪ್ರಖ್ಯಾತಿಹೊಂದಿರುವ "ಜಿನಿವಾ ಡೈರಿ"

ಈ ಡೈರಿಯು ಮೇಲ್ಕಂಡ ಡೈರಿಗಳಿಗಿಂತ ಉತ್ತಮ, ದಪ್ಪ ಕಾಗದ, ವರ್ಕ್ ಬೈಂಡು.

"ಜಿನಿವಾ" ನಂ|| 1 ಚಿಕ್ಕ ಡೈರಿ 1 ಕ್ಕೆ 4 ಆಣೆ. | "ಜಿನಿವಾ" ನಂ|| 2 ಚಿಕ್ಕ ಫ್ಲ್ಯಾಪು ಡೈರಿ 1 ಕ್ಕೆ 6 ಆಣೆ

12 ಪ್ರತಿಗಳು ಒಟ್ಟಿಗೆ ತರಿಸಿಕೊಂಡರೆ 1 ಪ್ರತಿ ಉಚಿತವಾಗಿ ಕೊಡಲ್ಪಡುವುದು

ನಮ್ಮ ವಿಳಾಸ—ಎಮ್. ಆರ್. ಕೃಷ್ಣಸ್ವಾಮಿಶೆಟ್ಟಿ ಕಂಪೆನಿ, ಬುಕ್ಕು ಪಬ್ಲಿಷರ್ಸ್, ಬೆಂಗಳೂರು ಸಿಟಿ.

"ವಾಸಿಮಾಡಿಕೊಳ್ಳುತ್ತೇನೆಂದು ಹೇಳು."

ಎಂಥಾ ನೋವಿದ್ದರೂ ವಾಸಿಮಾಡಿಕೊಳ್ಳುವೆನೆಂದು ಹೇಳು ವಾಯು, ಕೀಲು, ಅರತಲೆ, ತಲೆನೋವುಗಳು; ಯಾವ ಕಾರಣದಿಂದ ಹುಟ್ಟುವ ಬಾಧೆಯಾಗಲಿ, ಉಬ್ಬಸ, ಹಲ್ಲುನೋವು, ಗಂಟಲು ಗಾರೆನ್ನುವದು, ಕೆಮ್ಮುಗಳು, ಶೀತನೆಗಡಿ, ಶ್ವಾಸರೋಗ, ಜಜ್ಜು, ಉಳಕು, ಥಳುಕು, ಚೇಳು ಕಡಿದ ಬಾಧೆ, ಈ ಮೊದಲಾದ ಎಲ್ಲಾ ತರದ ನೋವನ್ನೂ ನಾನು ವಾಸಿಮಾಡಿಕೊಂಡು ಆರೋಗ್ಯದಿಂದ ಸಂತೋಷವಾಗಿ ಕೆಲಸ ಮಾಡುತ್ತೇನೆಂದು ತಿಳಿದುಕೋ ಸಮೀಪದಲ್ಲಿರುವ ವೈದ್ಯನ ಅಂಗಡಿಗೆ ಹೋಗು. ಕ್ಲೆಮೆಂಟರ ಮ್ಯಾಜಿಕ್ ಬಾಂ ಒಂದು ಬಾಟ್ಲಿ ಕೊಡಿ ಎಂದು ಕೇಳು ಅದಕ್ಕೆ ಪ್ರತಿಯಾಗಿ ಬೇರೊಂದನ್ನು ಕೊಟ್ಟರೆ ತಿರಸ್ಕರಿಸಿ ಅದನ್ನೇ ಕೊಡೆಂದು ಕೇಳಿ ತೆಗೆದುಕೋ ಈ ಯಕ್ಷಿಣಿಯೋಪಾದಿ ವಾಸಿಮಾಡುವ ಔಷಧವು 12 ಆಣೆಗೆ ಸಿಕ್ಕುತ್ತದೆ ಸಮಸ್ತ ವಿಧದ ನೋವು ಬಾಧೆಗಳಿಗೂ ಇದು ಉತ್ತಮೋತ್ತಮವಾದ ಪರಿಹಾರ ಲಕ್ಷಾಂತರ ಜನರು ಗುಣಹೊಂದಿದಾರೆ, ನಿಮಗೂ ಖಂಡಿತವಾಗಿ ವಾಸಿಯಾಗುತ್ತದೆ. [104-31]

"ಕ್ಲೆಮೆಂಟರ ಮ್ಯಾಜಿಕ್ ಬಾಂ" ಎಂಬ ಹೆಸರನ್ನು ಮರೆಯಬೇಡಿ. ಅದರ ಕ್ರಯ ಬಾಟ್ಲಿಗೆ 12 ಆಣೆ, ಅಂಚೆ ವೆಚ್ಚ 4 ಆಣೆ 3 ಅಥವಾ ಹೆಚ್ಚು ಬಾಟ್ಲಿ ಬೇಕಾದರೆ ಪ್ಯಾಕಿಂಗ್ ಪೋಸ್ಟೇಜ್ ಮಾಫಿ. ವ್ಯಾಪಾರಸ್ಥರಿಗೆ ಧಾರಾಳವಾದ ಡಿಸ್ಕೌಂಟು ಸಿಗುತ್ತೆ ವಿಳಾಸಗಳು—(1) ಎಸ್. ಪೀಟರ್ಸ್, 37 ವಡಮಲೆಪಿಳ್ಳೆ ಬೀದಿ, ಪುರಸವಾಕಂ, ವೇಪೇರಿ, ಮದರಾಸ್, (2) ಜೆ. ಎಸ್. ಕೃಷ್ಣಯ್ಯಶೆಟ್ಟರು, ಜನರಲ್ ಮರ್ಚೆಂಟ್, ತುಮಕೂರು.

ರಾಸ್‌ಕೋಫ್ ಸಿಸ್ಟಂ ಲೀವರ್ ರಿಜಿಸ್ಟರ್ ಗಡಿಯಾರ.

ಇದರ ಕ್ರಯ ಸುಂದರವಾದ ಗಡಿಯಾರದ ಸರಪಣಿ ಸಮೇತ

ರೂ. 2-4-0 ಮಾತ್ರ 5 ವರುಷಗಳ ಗ್ಯಾರೆಂಟಿ.

ಟಪಾಲು ಖರ್ಚು ಪ್ರತ್ಯೇಕ : 1 ಕ್ಕೆ 1 ಆಣೆ.

ಈ ಗಡಿಯಾರವು ಬಲವಾದ ಸಾಮಾನುಗಳಿಂದ ತಯಾರಾಗಲ್ಪಟ್ಟಿದ್ದು ನೋಡುವದಕ್ಕೆ ಗಂಭೀರವಾಗಿಯೂ ಬಹು ಸುಂದರವಾಗಿಯೂ ಇರುತ್ತೆ. ಒರಟು ಕೆಲಸಮಾಡುವವರಿಗೆ ಅನುಕೂಲವಾದದ್ದು, ಇದನ್ನು ಧರಿಸಿಕೊಂಡು ಎಷ್ಟುದೂರ ಸಂಚಾರಮಾಡಿದಾಗ್ಯೂ ನಿಲ್ಲದೇ ನಡೆಯುತ್ತದೆ. ಸಾವಿರಗಟ್ಲೆ ಗಡಿಯಾರಗಳು ಖರ್ಚಾಗಿರುತ್ತೆ. ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದ ಗಡಿಯಾರ. ಕೂಡಲೆ ಬರೆದು ತರಿಸಿಕೊಳ್ಳಿ.

ವಿಳಾಸ.—ಸುಪೀರಿಯರ್ ವಾಚ್ ಕಂಪೆನಿ,

[129-26] ಪೋಸ್ಟ್ ಬಾಕ್ಸ್, ನಂ 167, ಮದರಾಸು.

ಮುಖ್ಯವಾಗಿ ಗಮಿಸಿಸಿ ಓದಿರಿ.

೧. ಬಹುಮಾನ ಸಹಿತ ಕೈಯಲ್ಲಿ ಕಟ್ಟಿಕೊಳ್ಳುವ ಗಡಿಯಾರ.

ಈ ನಕ್ಷೆಯಲ್ಲಿ ಕಂಡ ಲೇಡಿ ವಾಚ್ ಕೀಲೆಸ್ ಲಿವರ್ ಚಿಕ್ಕ ಸೈಜು ಕಂಪೆನ್ಸೇಟೆಡ್ ಬ್ಯಾಲೆನ್ಸು ಬಹು ಬಲಿಷ್ಠವಾದ 5 ವರುಷಗಳ ಗ್ಯಾರಂಟಿ ಉಳ್ಳ ಗಡಿಯಾರ. ಕೈಗೆ ಕಟ್ಟಿಕೊಳ್ಳುವ ಚರ್ಮದ ಪಟ್ಟಿ ಸಹಿತ. ಟಪಾಲು ಖರ್ಚು ಸಹಿತ ಕ್ರಯ ರೂ. 5-0-0. ಇದನ್ನು ಸೆಪ್ಟಂಬರ್ ಆಖೈರೊಳಗಾಗಿ ತರಿಸಿಕೊಳ್ಳುವವರಿಗೆ 10 ಗಂಟೆಗೊಂದಾವರ್ತಿ ಬೀಗ ಕೊಡತಕ್ಕ ಮೇಲಾದ ಟೈಂಪೀಸು ಒಂದನ್ನು ಇನಾಮಾಗಿ ಕೊಡಲ್ಪಡುತ್ತೆ

ವಿಳಾಸ :—ಧನಲಕ್ಷ್ಮಿ ಅಂಡ್ ಕಂಪೆನಿ,

[129-26] ಸಾಹುಕಾರ್ ಪೇಟೆ ಪೋಸ್ಟು, ಮದರಾಸು.

ಉತ್ತಮವಾದ ತರೀ ಜಮೀನ್ ಬಿಕರಿಗೆ ಸಿದ್ಧವಾಗಿದೆ.

ಹುಣಸೂರು ಟೌನ್‌ಗೆ ೧ ಫರ್ಲಾಂಗ್ ದೂರದಲ್ಲಿರುವ ಚಿಕ್ಕಹುಣಸೂರು ಕೆರೆ ಏರಿ ಕೆಳಗಿನ 12 ಎಕರೆ ತರೀ ಜಮೀನು ಗೋವಿಂದನಹಳ್ಳಿ ನಾಲಾ ನೀರಿನಿಂದ ಸಾಗುವಳಿಯಾಗುತ್ತಲಿದೆ ಪೈಕಿ ಏಳು ಎಕರೆ ಸಾಗುವಳಿಯಲ್ಲಿರತಕ್ಕದ್ದು ಬಾಕಿ 5 ಎಕರೆಯು ಹಾಲಿ ಸಾಗಿನಲ್ಲಿರುವ 7 ಎಕರೆಯ ಮಧ್ಯದಲ್ಲಿರುವ ಉಬ್ಬಿಯ ಮೂಲಕ ನೀರು ಸಪ್ಲೈ ಆಗಿ ಸಾಗುವಳಿಯಲ್ಲಿರತಕ್ಕದ್ದು 12 ಎಕರೆಗೂ ಸಂಪೂರ್ಣ ನೀರಿನ ಆಸರೆ ಇರುತ್ತೆ. ನಾಲಾ ನೀರಿನಿಂದಲೂ ಕೆರೆಯ ಆಶ್ರಯದಿಂದಲೂ ತರೀ ಮತ್ತು ಬಾಗಾಯಿತು ಸಹ ಆಗತಕ್ಕದ್ದು 7 ಎಕರೆಯು ಎಕರೆ 1 ಕ್ಕೆ 600 ರೂಪಾಯಿನಂತೆಯೂ, 5 ಎಕರೆಯು ಎಕರೆ 1 ಕ್ಕೆ 400 ರೂಪಾಯಿನಂತೆಯೂ ಬಿಕರಿಗೆ ಸಿದ್ಧವಾಗಿದೆ ತ್ವರೆಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ [2822.1]

23 12 1913, ಗುಲಾಂ ಮೊಹದೀನ್ ಸಾಹೇಬ್,
ಹುಣಸೂರು ಪೆನ್‌ಷನ್ಡ್ ದಪೇದಾರ್, ಹುಣಸೂರು

ವೃತ್ತಾಂತ ಪತ್ರಿಕೆ.

ಸನ್ ೧೯೧೩ ನೇ ಇಸವಿ ಡಿಸೆಂಬರ್, ತಾ ೨೫ ನೇ ಗುರುವಾರ.

ಮೈಸೂರಿನಲ್ಲಿ ರೈಲ್ವೆ ಬಡಾವಣೆಗಳು

ಬೌರಿಂಗ್‌ಪೇಟೆಯಿಂದ ಕೋಲಾರಕ್ಕೆ ರೈಲ್ ರಸ್ತೆ ಕಾಮಗಾರಿಯು ಇಷ್ಟು ಬೇಗನೆ ಪೂರೈಸಿ, ಅಲ್ಲಿಂದಲ್ಲಿಗೆ ಜನಗಳ ಮತ್ತೂ ಸಾಮಾನುಗಳ ಆಮದು ರಫ್ತಿಗೆ ಗಾಡಿಗಳ ಸಂಚಾರವನ್ನು ಪ್ರಾರಂಭಮಾಡಿದ್ದು ನೋಡಿದ್ದರಲ್ಲಿ ನಮಗೆ ತುಂಬಾ ಆನಂದವೂ ತೃಪ್ತಿಯೂ ಉಂಟಾಗಿದೆ ಹನ್ನೊಂದು ಮೈಲಿ ಇರುವ ಈ ರೈಲ್ ರಸ್ತೆಯ ಕಾಮಗಾರಿಯು ೧೯೧೦ ನೇ ಡಿಸೆಂಬರ್ ಮೊದಲನೆಯ ವಾರ ಪ್ರಾರಂಭವಾಗಿ ೧೯೧೩ ನೇ ಡಿಸೆಂಬರ್ ಮೊದಲನೆಯ ವಾರಕ್ಕೆ ಪೂರೈಸಿರುವುದರಿಂದ ಕಾರ್ಯಗಳು ಬಹು ಬೇಗನೆ ನಡೆದಿರುವವೆಂದು ಹೇಳಬಹುದಾಗಿದೆ ಈ ರೈಲ್ವೆಯ ಖರ್ಚಿಗೆ ಬೇಕಾದಷ್ಟಕ್ಕಿಂತಲೂ ಹೆಚ್ಚಾಗಿಯೇ ಕೋಲಾರ್ ಡಿಸ್ಟ್ರಿಕ್ಟ್ ಪ್ರಜೆಗಳು ಒದಗಿಸಿಕೊಟ್ಟಿರುತ್ತಾರೆ, ಅಂದರೆ, ಬೇಕಾಗಿದ್ದ ೪ ಲಕ್ಷ ರೂಪಾಯಿ ಮೂಲಧನದ ಪೈಕಿ ಕೋಲಾರ್ ಡಿಸ್ಟ್ರಿಕ್ಟಿನೊಳಗೆ ೧,೦೦೦ ರೂಪಾಯಿನ ೨೦೦ ಷೇರುಗಳನ್ನೂ, ೫೦೦ ರೂಪಾಯಿನ ೨೫೦ ಷೇರುಗಳನ್ನೂ, ೧೦೦ ರೂಪಾಯಿನ ೭೩೩ ಷೇರುಗಳನ್ನೂ ೫೮೩ ಮಂದಿ ತೆಗೆದುಕೊಂಡು ಹಣವನ್ನು ಒದಗಿಸಿರುತ್ತಾರೆ ಇದಲ್ಲದೆ ಬೆಳ್ಳಂಬರಿಯ ಜೋಡಿದಾರ್ ಮತ್ತೂ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾದ ಮ|| ಹನುಮಪ್ಪನವರು ಒಬ್ಬರೇ ೧,೫೦,೦೦೦ ರೂಪಾಯಿನ ಷೇರುಗಳನ್ನು ಪಡೆದುಕೊಂಡಿರುವರು ಈ ಹಣವು ದೇಶೋನ್ನತಿಯ ಕಾರ್ಯಕ್ಕೆ ವಿನಿಯೋಗವಾಗಿ ಅದರ ಫಲ ಪ್ರಯೋಜನಾದಿಗಳನ್ನು ವಿಶೇಷವಾಗಿ ಆ ಡಿಸ್ಟ್ರಿಕ್ಟಿನ ಪ್ರಜೆಗಳೇ ಅನುಭವಿಸುವಂತಾದದ್ದು ತುಂಬಾ ಸಂತೋಷಕರವಾಗಿರುತ್ತದೆ.

ಶ್ರೀಮನ್ಮಹಾರಾಜಾ ಶ್ರೀಕೃಷ್ಣರಾಜ ಒಡೆಯರವರು ಶ್ರೀಮದ್ಯುವರಾಜರವರ ಸಹಿತ ಪ್ರಜೆಗಳ ಕ್ಷೇಮಚಿಂತನೆಯಲ್ಲೇ ಆಸಕ್ತರಾಗಿರುವುದನ್ನು ಕಾರ್ಯತಃ ಪ್ರಕಾಶಪಡಿಸುವುದಕ್ಕಾಗಿ ಕೋಲಾರದಲ್ಲಿ ಕಳೆದ ೧೫ ನೇ ತಾರೀಖು ಸೋಮವಾರ ಈ ರೈಲ್ ರಸ್ತೆಯಲ್ಲಿ ಗಾಡಿಬಿಡುವುದನ್ನು ಪ್ರಾರಂಭಮಾಡಿ, ಅಲ್ಲಿ ನಡೆದ ಈ ದೇಶೋನ್ನತಿಯ ಕಾರ್ಯವನ್ನು ಮೆಚ್ಚಿಕೊಂಡು ಆ ಕೆಲಸಕ್ಕೆ ಸಹಾಯಮಾಡಿದವರನ್ನೂ ಅದನ್ನು ಜಾಗ್ರತೆಯಿಂದ ನೆರವೇರಿಸಿದ ಅಧಿಕಾರಿಗಳನ್ನೂ ತಕ್ಕ ಹಾಗೆ ಕೊಂಡಾಡಿದರು

ಕೋಲಾರದ ಪ್ರಜೆಗಳು ಈ ಸಂಸ್ಥಾನದ ಇತರ ಪ್ರಜೆಗಳಿಗೆ ಬಹು ಒಳ್ಳೆಯ ಮೇಲ್ಪಂಙ್ತಿಯನ್ನು ಹಾಕಿಕೊಟ್ಟಿದಾರೆನ್ನುವುದಕ್ಕೆ ಸಂಶಯವಿಲ್ಲ. ಅವರು ಹಣವನ್ನು ಕೂಡಿಸಿಕೊಟ್ಟು ಗವರ್ನಮೆಂಟ್ ರೈಲ್ವೆ ಇಲಾಖೆಯವರ ಮೂಲಕ ಕಾಮಗಾರಿ ಮುಂತಾದದ್ದನ್ನು ಬಹಳ ಬೇಗನೆ ಮಾಡಿಸಿಕೊಂಡರು. ಈಗ ಸಂಸ್ಥಾನದಲ್ಲಿರುವ ರೈಲ್ವೆ ಲೈನಿಗೆ ಇಂಥಾ ಕಿರುರೈಲುಗಳನ್ನು ಅನೇಕ ಕಡೆಗಳಲ್ಲಿ ಮಾಡಿಸಿಕೊಳ್ಳಬಹುದೆಂದು ನಾವು ಧಾರಾಳವಾಗಿ ಹೇಳಬಲ್ಲೆವು ಪ್ರಜಾವತ್ಸಲರಾದ ಅಧಿಕಾರಿಗಳೂ ಪರಹಿತಚಿಂತಕರಾದ ಸ್ಥಳೀಯ ಮುಖಂಡ ಪ್ರಜೆಗಳೂ ಏಕೀಭವಿಸಿ ಪ್ರೋತ್ಸಾಹಪಡಿಸುತ್ತಾ ಬಂದ ಪಕ್ಷದಲ್ಲಿ ಇಂಥಾ ಕಿರು ರೈಲ್ ರಸ್ತೆಗಳು ಹೆಚ್ಚಾಗಿ ಆಗುವುದೇನೂ ಕಷ್ಟವಲ್ಲ.

ಬೆಂಗಳೂರು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ವಿಚಾರವು ಬಹಳ ದಿನಗಳಾದರೂ ಇನ್ನೂ ನಡೆಯುವುದರಲ್ಲೇ ಇದೆ; ಆದರೆ ಅದು ಕೂಡ ಬೇಗನೆ ಕಾಮಗಾರಿ ಪೂರೈಸಿ ಸಿದ್ಧವಾದೀತೆಂಬ ಭರವಸೆಯುಂಟು. ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಚಿಂತಾಮಣಿ, ಶ್ರೀನಿವಾಸಪುರ, ಚಿಕ್ಕಬಳ್ಳಾಪುರ, ಈ ಸ್ಥಳಗಳಿಗೂ ರೈಲ್ ರಸ್ತೆಯನ್ನು ಬಡಾವಣೆಮಾಡಬೇಕೆಂದು ಅಲ್ಲಿನವರು ಕುತೂಹಲಪಟ್ಟು ಆಲೋಚನೆಮಾಡುತ್ತಿರುವುದಾಗಿ ತಿಳಿಯುತ್ತೇವೆ ಇದು ಬೇಗನೆ ನೆರವೇರುವ ಪಕ್ಷದಲ್ಲಿ ಆ ಡಿಸ್ಟ್ರಿಕ್ಟಿನ ದೊಡ್ಡ ಊರು ಪಟ್ಟಣಗಳ ಆಮದು ರಫ್ತು ವ್ಯಾಪಾರಾದಿಗಳೂ ವೃದ್ಧಿಹೊಂದಲು ಅನುಮಾನವಿಲ್ಲ. ಈ ರೀತಿಯಿಂದ ರೈಲ್ ರಸ್ತೆಗಳನ್ನು ಮಾಡಿಸುವುದಕ್ಕೆ ಇತರ ಡಿಸ್ಟ್ರಿಕ್ಟುಗಳಲ್ಲೂ ವಿಶೇಷ ಅವಕಾಶವುಂಟು.

ಮೈಸೂರು ಡಿಸ್ಟ್ರಿಕ್ಟಿನೊಳಗೆ ನಂಜನಗೂಡು ರೈಲ್ ರಸ್ತೆಯನ್ನು ಬಡಾವಣೆಮಾಡಿ ಚಾಮರಾಜನಗರ, ಗುಂಡ್ಲುಪೇಟೆಯ ತನಕ ಹಾಕಿಸಬೇಕಾದದ್ದು ಬಹಳ ಅವಶ್ಯವೆಂದು ಕಾಣುವುದು ಈ ಭಾಗದ ಪ್ರಜಾಸಂಖ್ಯೆಯು ಬಹಳ ಹೆಚ್ಚಾಗಿರೋಣದರಿಂ ಅವರಿಗೆ ತುಂಬಾ ಹಿತವಾದೀತು, ಇದಲ್ಲದೆ ಈಗ ಹೋಗಿಬರಲು ಸಾಧ್ಯವಿಲ್ಲದಿರುವ ಅಥವಾ ತುಂಬಾ ಕಷ್ಟವಾಗಿರುವ ಭಾಗವೆಲ್ಲಾ ಆಮದು ರಫ್ತಿಗೆ ಸರಾಗವಾಗುವುದು ಮತ್ತು ಕಾವೇರಿ ಕಪಿಲಾ ನಾಲೆಗಳಿಂದ ತುಂಬಾ ಫಲವತ್ತಾಗಿರುವ ತಲಕಾಡು—ಟಿ ನರಸೀಪುರದಿಂದ ನಂಜನಗೂಡಿಗೂ ಒಂದು ಕಿರು ರೈಲನ್ನು ಹಾಕಬೇಕಾಗಿದೆ ಮದ್ದೂರಿನಿಂದ ಶಿವಸಮುದ್ರಕ್ಕೂ ಅಲ್ಲಿಂದ ಕೊಳ್ಳೇಗಾಲಕ್ಕೂ ರೈಲ್ ರಸ್ತೆ ಹಾಕಿದಪಕ್ಷದಲ್ಲಿ ಆ ಸುತ್ತುಮುತ್ತಿನಲ್ಲಿರತಕ್ಕ ಸಕಲ ಪ್ರಜೆಗಳಿಗೂ ಎಷ್ಟೋ ಅನುಕೂಲವಾಗುವುದು.

ಇತರ ಡಿಸ್ಟ್ರಿಕ್ಟುಗಳನ್ನು ಅಭಿವೃದ್ಧಿಗೆ ತರುವ ಭಾಗದಲ್ಲಿ ಇಂಥಾ ಏರ್ಪಾಡುಗಳನ್ನು ಮಾಡಿಕೊಳ್ಳಬಹುದಾಗಿದೆ ಇವರಿಂದ ಪ್ರಯಾಣದ ಸೌಕರ್ಯಗಳು ಹೆಚ್ಚುವವು ಊರಿಂದೂರಿಗೆ ಸ್ವಲ್ಪ ಖರ್ಚಿನಿಂದ ಬಹು ಬೇಗನೆ ಸಂಚಾರ ಮಾಡಬಹುದು, ಅಗ್ಗವಾಗಿಯೂ ಜಾಗ್ರತೆಯಿಂದಲೂ ಎಲ್ಲಾ ಸರಕುಗಳನ್ನೂ ಸ್ಥಳದಿಂದ ಸ್ಥಳಕ್ಕೆ ಸಾಗಿಸಬಹುದು

ಈ ವಿಚಾರವನ್ನು ಎಲ್ಲಾ ಡಿಸ್ಟ್ರಿಕ್ಟ್ ಬೋರ್ಡುಗಳವರೂ ಪರ್ಯಾಲೋಚನೆಮಾಡುವರೆಂದು ನಿರೀಕ್ಷಿಸುತ್ತೇವೆ ಇದಕ್ಕಾಗಿ ಆಯಾ ಡಿಸ್ಟ್ರಿಕ್ಟಿನಲ್ಲಿ ವಿವೇಕಿಗಳಾಗಿಯೂ ಪುಣ್ಯವಂತರಾಗಿಯೂ ಗಣ್ಯರಾಗಿಯೂ ಇರುವಂಥಾ ಕೆಲಕೆಲವು ದೊಡ್ಡಮನುಷ್ಯರು ಕಲೆತು ಯೋಚಿಸಿ ಪ್ಲಾನ್ ಅಂದಾಜುಗಳನ್ನು ಮಾಡಿಸಿ ದ್ರವ್ಯವನ್ನು ಕೂಡಿಸಲಾರಂಭಿಸಿದರೆ ಈ ಕಾರ್ಯವು ಜಾಗ್ರತೆಯಾಗಿಯೂ ತೃಪ್ತಿಕರವಾಗಿಯೂ ನೆರವೇರುವುದೆಂದು ತೋರುತ್ತದೆ ಈ ಭಾಗದಲ್ಲಿ ಶ್ರೀಮನ್ಮಹಾರಾಜರವರ ಗವರ್ನಮೆಂಟಿನವರು ಇಂಥಾ ಏರ್ಪಾಡುಗಳಿಗೆ ಪ್ರೋತ್ಸಾಹವನ್ನೂ ಸಹಾಯವನ್ನೂ ಕೊಡುತ್ತಾರೆಂದು ನಾವು ದೃಢವಾಗಿ ನಂಬುತ್ತೇವೆ

ಕ್ರಿಸ್‌ಮಸ್

ನಮ್ಮ ಹಿಂದು ದೇಶದಲ್ಲಿ ಎಲ್ಲಾ ಕಡೆಗಳಲ್ಲಿಯೂ ಕ್ರಿಸ್‌ಮಸ್ ರಜಾ ಕೊಡಲ್ಪಟ್ಟಿರುತ್ತದೆ ಕಚೇರಿಗಳೂ ಪಾಠಶಾಲೆಗಳೂ ಮುಚ್ಚಲ್ಪಟ್ಟಿರುತ್ತವೆ ನ್ಯಾಷನಲ್ ಕಾಂಗ್ರೆಸ್, ಸೋಷಿಯಲ್ ಕಾಂಗ್ರೆಸ್, ಥೀಯಿಸ್ಟಿಕ್ ಕಾಂಗ್ರೆಸ್ ಇವೇ ಮುಂತಾದ ದೊಡ್ಡ ದೊಡ್ಡ ಸಮಾಜಗಳು ವಿರಾಮಸುಖವನ್ನನುಭವಿಸಿ ಸೇರುತ್ತಲಿವೆ ಯಾವ ಕಡೆಯಲ್ಲಿ ನೋಡಿದರೂ ಜನಗಳು ಸಂತೋಷಪಡುತ್ತಿರುವಂತೆ ತೋರುತ್ತಿರುವುದು

ಕ್ರಿಸ್‌ಮಸ್ ಎಂಬುದು ಕ್ರೈಸ್ತರ ಹಬ್ಬವಾಗಿರುತ್ತದೆ ಇದನ್ನು ಯೇಸು ಕ್ರಿಸ್ತನ ಜ್ಞಾಪಕಾರ್ಥವಾಗಿ ಆಚರಿಸುವರು ಆತನು ಲೋಕ ಚರಿತ್ರೆಯನ್ನು ಬದಲಾವಣೆ ಮಾಡಿದ್ದಾನೆ ಆತನ ಜೀವಮಾನವು ಹಳೆಯ ಲೋಕವನ್ನೂ ಹೊಸ ಲೋಕವನ್ನೂ ಪ್ರತ್ಯೇಕಿಸುವ ರೇಖೆಯನ್ನು ಗುರುತುಮಾಡುತ್ತದೆ ಇಂತಹ ಮಹನೀಯನು ಯಾರಾಗಿರಬಹುದು? ಆತನ ಆಗಮನದಲ್ಲಿ ಲೋಕವು ಸಂತೋಷಪಡುವುದಕ್ಕೆ ಕಾರಣವೇನು?

ಯೇಸು ಕ್ರಿಸ್ತನು 1900 ವರುಷಗಳ ಹಿಂದೆ ಜೀವಿಸುತ್ತಿದ್ದನೆಂಬುದು ಸರ್ವರಿಗೂ ತಿಳಿದೇ ಇರುತ್ತದೆ ಆತನು ಪಾಲಿಸ್ತೀನ್ ಎಂಬ ಒಂದು ಚಿಕ್ಕ ದೇಶದಲ್ಲಿ ತನ್ನ ಸ್ವಜನರಾದ ಯೆಹೂದ್ಯರ ಮಧ್ಯದಲ್ಲಿ ಕಾಲಕ್ಷೇಪಮಾಡುತ್ತಿದ್ದನು ಲೋಕದವರು ಯಾವುದನ್ನು ಪಾಂಡಿತ್ಯವೆಂದು ಕರೆಯುತ್ತಾರೋ ಅಂತಹ ಪಾಂಡಿತ್ಯವನ್ನು ಆತನು ಸಂಪಾದಿಸಿಕೊಂಡಿರಲಿಲ್ಲ ಆತನು ಯಾವ ಗ್ರಂಥವನ್ನಾದರೂ ರಚಿಸಿರುವುದೇ ಇಲ್ಲ ಆತನು ಬಡವನಾಗಿದ್ದು ತನ್ನ ಜೀವಮಾನದಲ್ಲಿ ಹೆಚ್ಚಿನ ಕಾಲವನ್ನು ಬಡಗಿ ಕೆಲಸ ಮಾಡುವುದರಲ್ಲಿ ಕಳೆದನು ಇಂಥವನು ಇಷ್ಟು ದೊಡ್ಡ ಶಿಷ್ಯಮಂಡಲಿಯನ್ನೂ ಇಷ್ಟು ಅಪಾರವಾದ ಕೀರ್ತಿಯನ್ನೂ ಸಂಪಾದಿಸಿಕೊಳ್ಳುವುದಕ್ಕೆ ಆತನು ಮಾಡಿದುದು ಏನು?

ಆತನು ಪ್ರಖ್ಯಾತನಾದ ಗುರುವಾಗಿದ್ದನು ಐಶ್ವರ್ಯ, ಕೀರ್ತಿ, ಪದವಿ ಇವುಗಳನ್ನು ಆರ್ಜನೆಮಾಡುವುದು ಹೇಗೆ ಎಂದು ಆತನು ಜನಗಳಿಗೆ ಉಪದೇಶ ಮಾಡಲಿಲ್ಲ. ಆತನು ತತ್ವಜ್ಞಾನವನ್ನಾಗಲಿ ವಿವಿಧಶಾಸ್ತ್ರಗಳನ್ನಾಗಲಿ ಬೋಧನೆಮಾಡಿರುವುದೂ ಇಲ್ಲ ಆದರೆ ಆತನು ಜನಗಳು ಸತ್ಪುರುಷರೂ ತ್ರಿಕರಣಶುದ್ಧರೂ ಸತ್ಯಸಂಧರೂ ಆಗುವುದು ಹೇಗೆಂದು ಪ್ರಬೋಧನೆಮಾಡಿದನು ಆತನು ದೇವರ ಬಳಿಯಿಂದ ಬಂದಿದ್ದನಾದ ಕಾರಣ ದೇವರ ನೈಜ ಸ್ವಭಾವವನ್ನು ಮನುಷ್ಯರಿಗೆ ಕಲಿಸಿಕೊಟ್ಟನು ಆತನ ಮಾತುಗಳು ಜ್ಞಾನದಿಂದ ತುಂಬಿದ್ದುವು ಆದಾಗ್ಯೂ ತನ್ನ ಬೋಧನೆಯಿಂದ ಮಾಡಿದುದಕ್ಕಿಂತಲೂ ತನ್ನ ಸ್ವಂತ ಮಾದರಿಯಿಂದ ಇದನ್ನು ಹೆಚ್ಚಾಗಿ ಪ್ರಕಾಶಪಡಿಸಿದನು ಆತನ ಮಾತುಗಳನ್ನು ಕೇಳಿದವರು—"ಈ ಮನುಷ್ಯನು ಮಾತಾಡುವ ರೀತಿಯಲ್ಲಿ ಯಾರೂ ಎಂದೂ ಮಾತಾಡಿದುದಿಲ್ಲ" ಎಂದು ಹೇಳಿದರು ಹೀಗಿದ್ದಾಗ್ಯೂ ಆತನ ಬೋಧನೆಯಲ್ಲಿ ಹೆಚ್ಚಿನ ಭಾಗವು ಕಥಾರೂಪವಾಗಿ ಚಿಕ್ಕ ಮಕ್ಕಳೂ ಕೂಡ ಗ್ರಹಿಸಿಕೊಳ್ಳುವಷ್ಟರಮಟ್ಟಿಗೆ ಸುಲಭವಾಗಿದ್ದಿತು. ಆತನ ಬೋಧನೆಯೂ ಆತನ ಮಾದರಿಯೂ ದೇವರು ಎಂಥವನಾಗಿರುತ್ತಾನೆಂಬುದನ್ನು ಲೋಕದವರಿಗೆ ವ್ಯಕ್ತಪಡಿಸಿರುತ್ತವೆ

ಮನುಷ್ಯರ ವಿಷಯದಲ್ಲಿ ಯೇಸುವಿಗೆ ತುಂಬಾ ಕಾರುಣ್ಯವೂ ಪ್ರೀತಿಯೂ ಇದ್ದುವು. ಆತನು ಎಲ್ಲಾ ವಿಧವಾದ ಕೆಟ್ಟತನಗಳನ್ನೂ ವಿರೋಧಿಸುವವನಾಗಿದ್ದನು ದೇವರು ಲೋಕಕ್ಕೆ ಇಷ್ಟು ಅಪಾರವಾಗಿ ದಯಪಾಲಿಸಿರುವ ವರಪ್ರಸಾದಗಳನ್ನು ನೋಡಿ ಹರ್ಷಿತನಾಗಿದ್ದನು ಆತನು ಯಾವಾಗಲೂ ದೇವರಿಗೆ ಅತ್ಯುಮೆಚ್ಚಾಗಿ ನಡೆಯುತ್ತಿದ್ದನು ಮಾನವರು ಎಷ್ಟರ ಮಟ್ಟಿಗೆ ತ್ರಿಕರಣಶುದ್ಧರಾಗಿಯೂ ಸತ್ಯಸಂಧರಾಗಿಯೂ ಸತ್ಪುರುಷರಾಗಿಯೂ ಜೀವಿಸುವುದು ಸಾಧ್ಯವಾಗಿದೆ ಎಂಬುದನ್ನು ಆತನು ಪ್ರಕಾಶಪಡಿಸಿದನು ಆತನು ಪಾಪರಹಿತನಾಗಿ ಬದುಕಿದನು ಆತನ ಹೊರತು ಬೇರೆ ಯಾವ ಮನುಷ್ಯನ ವಿಷಯದಲ್ಲಾದರೂ ಹೀಗೆ ಹೇಳುವುದಕ್ಕಾಗುವುದಿಲ್ಲ

ಆದರೆ ಅಧರ್ಮವು ಯಾವಾಗಲೂ ಧರ್ಮಕ್ಕೆ ವಿರೋಧಿಯಾಗಿರುತ್ತದೆಯಷ್ಟೆ ಯೇಸು ಕ್ರಿಸ್ತನು ಸತ್ಪುರುಷನಾಗಿಯೂ ನಿಷ್ಕಪಟನಾಗಿಯೂ ದೇವರಿಗೆ ಅತ್ಯುಮೆಚ್ಚಾಗಿಯೂ ನಡೆಯುವವನಾಗಿದ್ದ ಕಾರಣ ದುಷ್ಟರು ಆತನನ್ನು ದ್ವೇಷಿಸಿ ಆತನಿಗೆ ವಿರೋಧವಾಗಿ ತಿರುಗಿಬಿದ್ದು, ಕಡೆಗೆ ಮಹಾಕ್ರೂರವಾದ ರೀತಿಯಲ್ಲಿ ಆತನನ್ನು ಕೊಂದುಹಾಕಿದರು ಆತನು ಹೇಗೆ ಜೀವಿಸಿ ಜನಗಳಿಗೆ ಉಪದೇಶಮಾಡುತ್ತಿದ್ದನೋ ಹಾಗೆಯೇ ಸಾಯುವಾಗಲೂ ಕೂಡ ತನ್ನ ಶತ್ರುಗಳನ್ನು ಪ್ರೀತಿಮಾಡುತ್ತಲೂ ತನ್ನನ್ನು ಕೊಲ್ಲುತ್ತಿದ್ದವರಿಗಾಗಿ ಪ್ರಾರ್ಥನೆಮಾಡುತ್ತಲೂ ಇದ್ದು ಸತ್ತುಹೋದನು

ಯೇಸು ಕ್ರಿಸ್ತನು ದೇವರ ಪ್ರೀತಿಯ ವಿಷಯವಾಗಿಯೂ ಆತನ ಒಳ್ಳೆಯತನದ ವಿಷಯವಾಗಿಯೂ ಲೋಕದವರಿಗೆ ತಿಳುವಳಿಕೆಯನ್ನು ಕೊಟ್ಟಿರುತ್ತಾನೆ ಮಾನವರು ದೇವರನ್ನು ತಿಳಿದು, ಪ್ರೀತಿಸಿ, ಸೇವಿಸುವಂಥ ಮಾರ್ಗವನ್ನು ಆತನು ಕಲ್ಪಿಸಿಕೊಟ್ಟಿರುತ್ತಾನೆ ಈ ಕಾರಣದಿಂದ ಲೋಕದ ಚತುರ್ದಿಕ್ಕುಗಳಲ್ಲಿಯೂ ಇರುವ ಜನಗಳು ಯೇಸು ಕ್ರಿಸ್ತನ ವಾರ್ಷಿಕ ವರ್ಧಂತಿಯ ಉತ್ಸವವು ಬರುವ ಕಾಲದಲ್ಲಿ ಸಂತೋಷಪಡುತ್ತಾರೆ ಈ ಕಾಲವು ಯೇಸು ಕ್ರಿಸ್ತನು ತಾನೇ ದಾರಿಯನ್ನು ತೋರಿಸಿಕೊಟ್ಟಿರುವ ಪ್ರಕಾರ, ಜನಗಳು ಇತರರು ತಮಗೆ ಮಾಡಿದ ಅಪರಾಧಗಳನ್ನು ಕ್ಷಮಿಸಿಬಿಟ್ಟು, ಅವರೊಂದಿಗೆ ಸಮಾಧಾನವಾಗಿ, ಐಕಮತ್ಯದಿಂದ ಜೀವಿಸಲು ಪ್ರಯತ್ನಪಡುವಂಥ ಕಾಲವಾಗಿರುತ್ತದೆ ನಮ್ಮ ವಾಚಕ ಮಹಾಶಯರುಗಳಿಗೆಲ್ಲಾ ಕ್ರಿಸ್‌ಮಸ್ ಹಬ್ಬದ ಸಹಜವಾದ ಸಂತೋಷವು ಲಭ್ಯವಾಗಲೆಂದೂ ಅವರು ನಮ್ಮ ಮೈಸೂರು ಸೀಮೆಯ ಪ್ರತಿಯೊಂದು ಗ್ರಾಮದಲ್ಲಿಯೂ ಪ್ರತಿಯೊಂದು ಮನೆಯಲ್ಲಿಯೂ ಸಮಾಧಾನವನ್ನೂ ಐಕಮತ್ಯವನ್ನೂ ಉಂಟುಮಾಡಲು ಪ್ರಯತ್ನಪಡುವವರಾಗಲೆಂದೂ ಹಾರೈಸುತ್ತೇವೆ

ಒಳದೇಶದ ವೃತ್ತಾಂತಗಳು.

ಈ ವಾರ ನಮ್ಮ ಪತ್ರಿಕೆಯು ಹತ್ತು ಪುಟಗಳುಳ್ಳದ್ದಾಗಿದೆ

ಈ ವಾರ ನಮಗೆ ತಲಪಿರುವ ಹಲವು ಜಾಬ್ತಿಗಳನ್ನು ಸ್ಥಳಸಂಕೋಚದಿಂದ ಪ್ರಕಟಿಸಲು ಸಾಧ್ಯವಾಗದೆಹೋಯಿತೆಂದು ವಿಷಾದಿಸುತ್ತೇವೆ

ಈ ವಾರ ಶ್ರೀಮನ್ಮಹಾರಾಜರವರು ಅರಮನೆಯ ರಾಣಿವಾಸದವರ ಸಮೇತ ಚಿಕ್ಕಮಗಳೂರು ಪ್ರಾಂತ್ಯ ದಯಮಾಡಿ, ಕಲ್ಹತ್ತಿಗಿರಿ ಬಾಬಾಬುಡನ್‌ಗಿರಿ ಮೊದಲಾದವುಗಳನ್ನು ಪರ್ಯಟನ ಮಾಡುವರೆಂದು ತಿಳಿದುಬಂದಿದೆ

ಬೆಂಗಳೂರು ಸಿಟಿ ರೈಲ್ವೆ ರೋಡಿನಲ್ಲಿ ಅಲಪ್ಪನೆಂಬಾತನ ಹೆಂಡತಿ 28 ವರುಷದ ಪಾರ್ವತಮ್ಮನೆಂಬಾಕೆಗೆ ಒಲೆಯ ಉರಿ ತಗಲಿ ಸೀರೆ ಹತ್ತಿಕೊಂಡು ಮೈಯೆಲ್ಲಾ ಸುಟ್ಟಗಾಯಗಳಾಗಿ ಆಸ್ಪತ್ರೆಯಲ್ಲಿ ತೀರಿಹೋದಳು

ಮೈಸೂರು ಸ್ಟಾರ್ ಪತ್ರಿಕೆಯ ಮೇಲೆ ಡಿ|| ಹೆಲ್ತ್ ಆಫೀಸರ್ ಮ|| ವಿ ಕೃಷ್ಣರಾಯರು ಮಾಡಿರುವ ಮಾನನಷ್ಟದ ಮೊಕದ್ದಮೆಯು ತಾ 20 ನೇ ಶನಿವಾರ ರಾಜಧಾನಿಯ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಯಾಗಲಿಲ್ಲ ಜನವರಿ ತಾ 10 ಕ್ಕೆ ಹಿಂದಿಂಗು ಇಟ್ಟಿರುತ್ತಾರೆ

ಎರಡನೇ ಕೌನ್ಸಿಲರಾದ ಸರ್ದಾರ್ ಎ ಕಾಂತರಾಜೆ ಅರಸಿನವರು ಮೊನ್ನೆ ಮಂಗಳವಾರ ಸಾಯಂಕಾಲ ರಾಜಧಾನಿಯ ಮಿಷನ್ ಹೈಸ್ಕೂಲಿನಲ್ಲಿ ಬಹುಮಾನ ಸಭೆಯ ಅಗ್ರಾಸನವನ್ನು ವಹಿಸಿ ಬಾಲಕರಿಗೆ ಇನಾಮುಗಳನ್ನು ಕೊಟ್ಟು ಸಂತೋಷಪಡಿಸಿದರು

ಬೆಂಗಳೂರು ಸಿಟಿ ಮುನಿಸಿಪಾಲಿಟಿಯು ಶಿಲ್ಕು ಹಣಗಳನ್ನೆಲ್ಲಾ ಇದುವರೆಗೆ ಸರ್ಕಾರದ ಖಜಾನೆಯಲ್ಲಿ ಇಡುತ್ತಿದ್ದರು ಇನ್ನು ಮುಂದೆ ಅಂಥಾ ಶಿಲ್ಕು ಹಣವನ್ನೆಲ್ಲಾ ಅಲ್ಲಿರುವ ಮೈಸೂರು ಬ್ಯಾಂಕಿನಲ್ಲಿ ಡಿಪಾಜಿಟ್ಟಾಗಿ ಇಟ್ಟಿರಬೇಕೆಂದು ಕಳೆದವಾರ ನಡೆದ ಮುನಿಸಿಪಲ್ ಮೀಟಿಂಗಿನಲ್ಲಿ ಮೆಂಬರುಗಳು ಒಪ್ಪಿ ತೀರ್ಮಾನ ಮಾಡಿರುತ್ತಾರೆ

ಮಾಜಿ ದಿವಾನ್ ಮ|| ವಿ ಪಿ ಮಾಧವರಾಯರು ಕಳೆದ ವಾರ ಬೆಂಗಳೂರಿನಿಂದ ಬರೋಡೆಗೆ ಅಲ್ಲಿನ ಯುವರಾಜರ ವಿವಾಹೋತ್ಸವಕ್ಕಾಗಿ ಪ್ರಯಾಣಮಾಡಿದರು ಅವರು ಅಲ್ಲಿಂದ ವಾಪಸು ಬಂದು ತಂಜಾವೂರಿನ ಪ್ರತಿನಿಧಿಯಾಗಿ ಕರಾಚಿ ಪಟ್ಟಣದ (ನ್ಯಾಷನಲ್ ಕಾನ್‌ಗ್ರೆಸ್) ರಾಷ್ಟ್ರಸಭೆಗೆ ಹೋಗುವರೆಂದು ತಿಳಿಯುತ್ತದೆ.

ಕಡೂರು ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದಿಸಿರುವ ತಾಲ್ಲೂಕು ಶಿರಸ್ತೇದಾರರುಗಳ ವರ್ಗಾವರ್ಗಿಯು ಮಂಜೂರಾಗಿರುತ್ತದೆ—ಮಿ|| ಟಿ. ಅಬ್ದುಲ್ ರಸೂಲ್‌ರವರನ್ನು ಮೂಡಗೆರೆಯಿಂದ ಚಿಕ್ಕಮಗಳೂರಿಗೆ, ಮ|| ಎಸ್. ಸುಬ್ಬರಾಯರನ್ನು ಚಿಕ್ಕಮಗಳೂರಿನಿಂದ ತರೀಕೆರೆಗೆ, ಮ|| ಎಚ್ ಕೋನೇರಿರಾಯರನ್ನು ತರೀಕೆರೆಯಿಂದ ಮೂಡಿಗೆರೆಗೆ

ಚೀಫ್ ಜಡ್ಜ್ ಮ|| ಪಿ ಎಸ್. ಕೃಷ್ಣರಾಯರು ಕಾಲವಾದ ಪ್ರಯುಕ್ತ ತಾ 16 ನೇ ಮಂಗಳವಾರ ಮೈಸೂರು, ಬೆಂಗಳೂರು, ಶಿವಮೊಗ್ಗೆಗಳಲ್ಲಿರುವ ಎಲ್ಲಾ ಕೋರ್ಟುಗಳನ್ನೂ ಮುಚ್ಚತಕ್ಕದ್ದೆಂದು ಸರ್ಕಾರದವರು ಹುಕುಂ ಕೊಟ್ಟಂತೆ ಪ್ರಕಟವಾಗಿದೆ. ಆದರೆ ಮೈಸೂರಿನಲ್ಲಿ ಆ ದಿನ ಸಿವಿಲ್ ಕೋರ್ಟುಗಳು ತೆರೆದಿದ್ದು ಕೆಲಸಗಳು ನಡೆದವು.

ರಾಜಧಾನಿಯ ಹಳೇ ಅಗ್ರಹಾರದಲ್ಲಿ ಕಡುಬು ಮಾರಿ ಜೀವಿಸುತ್ತಿದ್ದ 60 ವರುಷದ ಒಬ್ಬ ಹೆಂಗಸು ಒಬ್ಬಳೇ ಮನೆಯಲ್ಲಿರುವುದನ್ನು ನೋಡಿಕೊಂಡಿದ್ದ ಒಬ್ಬ ಕಳ್ಳನು ಕಳೆದ ಗುರುವಾರ ನುಗ್ಗಿ ಅವಳನ್ನು ಚೆನ್ನಾಗಿ ಹೊಡೆದು ಕೆಡವಿ, ಅವಳ ಮೈ ಮೇಲಿದ್ದ ಒಡವೆಗಳನ್ನು ಎತ್ತಿಕೊಂಡು ಓಡಿಹೋಗುತ್ತಿದ್ದನು. ಜನರು ಹಿಂದಟ್ಟಿ ಹೋಗಿ ಅವನನ್ನು ಹಿಡಿದು ಪೋಲೀಸಿಗೆ ಒಪ್ಪಿಸಿದರು ಆ

...ನನ್ನು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಮಾಡಿಸಿದರೂ ಗುಣವಾಗದೆ ಆ ರಾತ್ರಿಯೇ ...ಹೋದಳು.

* * *

...ಸ್‌ರಾಯರವರು ದಯಮಾಡಿಸಿದ್ದ ಸಂದರ್ಭದಲ್ಲಿ ಪೋಲೀಸಿನವರು ...ನಲ್ಲಿ ದಸ್ತಗಿರಿಮಾಡಿದ್ದ ಜೆ ಎನ್. ದೇವ, ಎಸ್. ಛಟರ್ಜಿ ಎಂಬ ...ಬಂಗಾಳಿಗಳೂ ಲೈಸೆನ್ಸ್ ಇಲ್ಲದೆ ಲಾಟರಿ ಟಿಕೆಟ್ಟುಗಳನ್ನು ಬಿಕರಿ ...ದ್ದರೆಂದು ಅವರ ಮೇಲೆ ಮೊಕದ್ದಮೆಮಾಡಿದ್ದರಲ್ಲಿ ಸಿಟಿ ಮ್ಯಾಜಿ ...ಟು ಅವರಿಬ್ಬರಿಗೂ ಕಳೆದ ಶುಕ್ರವಾರ 500 ರೂಪಾಯಿನಂತೆ ಜುಲ್ಮಾನೆ ...ದ್ದಾರೆ.

* * *

ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಇಂಗ್ಲಿಷ್ ಭಾಷಾಬೋಧಕ ...ನ್ನು ಉತ್ತರದೇಶದಲ್ಲಿ ಬೀಹಾರ್ ಅಧಿಪತ್ಯದ ವಿದ್ಯಾ ಇಲಾಖೆಯ ನೌಕರಿ ...ನ್ನು ಒಪ್ಪಿಕೊಂಡು ಹೋಗಿರುವ ಮಿ|| ರಾಬರ್ಟ್ ಮೆಕೊಂಬ್‌ರವರಿಗೆ ...ದ ಖಾಯಿಲೆಯಾಗಿ ಕಲ್ಕತ್ತೆಯ ಒಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದು ...ದ್ದರೆಂದು ತಿಳಿದು ಸಂತಾಪಪಟ್ಟು, ಅವರಿಗೆ ಬೇಗನೆ ವಾಸಿಯಾಗಲೆಂದು ...ರ್ಥಿಸುತ್ತೇವೆ.

* * *

ಒಬ್ಬ ಬಾತ್ಮಿದಾರರಿಂದ—ಕಳೆದ 14 ನೇ ತಾ. ಭಾನುವಾರ ಸಾಯಂಕಾಲ ...ದ ಜಾತಿಯ ಒಬ್ಬ ಸ್ತ್ರೀಯು ರಾಜಧಾನಿಯ ದೊಡ್ಡಕೆರೆಯಲ್ಲಿ ಏನೋ ...ದಿಂದ ಬಿದ್ದು ಸತ್ತಳು ಮಂಗಳವಾರ ಬೆಳಗ್ಗೆ ಅವಳ ಶವವು ತೇಲಿ ...ದನ್ನು ಕೆರೆಗೆ ಬಂದಿದ್ದ ಜನಗಳು ನೋಡಿದರು ಈ ಕೆರೆಯಲ್ಲಿ ಜನರು ...ಗ ಬಿದ್ದು ಸಾಯುತ್ತಲೇ ಇದಾರೆ. ಸರ್ಕಾರದವರು ಇದಕ್ಕೆ ತಕ್ಕ ಪರಿಹಾರ ...ನ್ನು ಕಲ್ಪಿಸಬೇಕಾಗಿ ಕೋರುತ್ತೇನೆ

* * *

ಮೈಸೂರು ಗವರ್ನಮೆಂಟಿನವರು ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ...ಕಲ್ ಆಫೀಸರಾಗಿರುವ ಮ|| ಟಿ ವಿ ಆರುಮುಗಂಮುದಲಿಯಾರ್, ರಾವ್ ...ಬ್, ಯವರನ್ನು ಜನವರಿ ತಾ 1 ರಿಂದ ಸಂಸ್ಥಾನದ ಸೀನಿಯರ್ ಸರ್ಜನ್ ...ಮತ್ತು ಸ್ಯಾನಿಟರಿ ಕಮಿಷನರ್‌ರಾಗಿ ನೇಮಕ ಮಾಡಿರುತ್ತಾರೆಂದು ಕೇಳಿ ...ಸಂತೋಷಪಡುತ್ತೇವೆ ಅವರ ಸ್ಥಾನಕ್ಕೆ ಮ|| ಟಿ ಎಸ್. ಸಂಜಪ್ಪನವರು ಬದಲಿ ...ಮಕವಾದರು

* * *

...ಹುಜೂರು ಸೆಕ್ರೆಟರಿ ಮ|| ಪಿ. ರಾಘವೇಂದ್ರರಾಯರು ಕಳೆದ ಭಾನುವಾರ ...ಸಮೇತ ರಾಮೇಶ್ವರ ಮುಂತಾದ ದಕ್ಷಿಣ ಪ್ರಾಂತ್ಯದಲ್ಲಿ ಸಂಚಾರ ...ಕೊಂಡು ಬರುವುದಕ್ಕಾಗಿ ಪ್ರಯಾಣಮಾಡಿದರು ಇವರ ಕೂಡ ಡಾಕ್ಟರ್ ...ಸ್. ಸುಬ್ಬರಾಯರೂ ಸಂಸಾರಸಮೇತ ಹೋಗಿರುವರು ಮ|| ರಾಘವೇಂದ್ರ ...ಯರು ವಾಪಸು ಬಂದು ಫೆಬ್ರವರಿ ಪ್ರಾರಂಭದಲ್ಲೇ ಎಕ್ಸೈಜ್ ಕಮಿಷನರ್ ...ವ ಛಾರ್ಜನ್ನು ವಹಿಸಿಕೊಳ್ಳುವವರಾಗಿದಾರೆ

* * *

ಬೆಂಗಳೂರು ಸಿಟಿಯಲ್ಲಿ ಭಾವಿ ಇಳಿಯುವುದರಲ್ಲಿ ಗಟ್ಟಿಗನಾಗಿದ್ದ ...ಸಾಮಿ ಎಂಬೊಬ್ಬ 19 ವರುಷದ ಯೌವನಸ್ಥನು ಕಳೆದ ಭಾನುವಾರ ತರಗು ...ಮುನಿಸಾಮಪ್ಪನವರ ಭಾವಿಯೊಳಕ್ಕೆ ಎರಡಾವರ್ತಿ ಮುಳುಗಿ ಎದ್ದರೂ ...ದೊಳಗೆ ಬಿದ್ದು ಹೋಗಿದ್ದ ಒಡವೆಯು ಸಿಕ್ಕಲಿಲ್ಲವಾದ್ದರಿಂದ ಮೂರನೇ ಸಲ ...ಗಿದವನು ಎಷ್ಟು ಹೊತ್ತಾದರೂ ಮೇಲಕ್ಕೆ ಬರಲೇ ಇಲ್ಲ. ತರುವಾಯ ...ಶವನನ್ನು ಭಾವಿಯಿಂದ ಹೊರಕ್ಕೆ ತಂದು ದಫನ್‌ಮಾಡಿದರು.

* * *

ಒಬ್ಬ ಬಾತ್ಮಿದಾರರಿಂದ—ಬೆಂಗಳೂರು ಮಾಮೂಲ್‌ಪೇಟೆ ಜಂಗಮಮಠ ...ಗಂಚಾಸ್ಮರದ ಕರ್ತರಾದ ಚಿದ್ರೂಪಶಿವಾಚಾರ್ಯ ಪೂಜ್ಯಪಾದರ ಎರ ...ವರ್ಷದ ವರ್ಧಂತ್ಯುತ್ಸವವು ಈ ತಿಂಗಳ ಮೊದಲನೇ ವಾರ ನಡಿಸಲ್ಪಟ್ಟಿತು. ...ಸಭೆಗೆ ಶಿವಪ್ಪಶಾಸ್ತ್ರಿಗಳವರು ಸಭಾಧ್ಯಕ್ಷರಾಗಿದ್ದರು. ಸದರಿ ಮಠದ ...ಯುಂಟು ನೋಡುತ್ತಿರುವ ಶಿವಕುಮಾರಸ್ವಾಮಿಶರ್ಮರವರು ಮಠದ ...ತ್ರವನ್ನೂ, ಗುರುಗಳ ಮಹತ್ವಗಳನ್ನೂ ಕುರಿತು ಸವಿಸ್ತಾರವಾಗಿ ...ನ್ಯಾಸಮಾಡಿದರು.

* * *

...ವ ನ್ಯಾಷನಲ್ ಇನ್‌ಷುರೆನ್ಸ್ ಕಂಪನಿಯ ಬ್ರಾಂಚ್ ಸೆಕ್ರೆಟರಿ ...ಎಸ್. ಆರ್. ಅಯ್ಯನವರು ರಾಜಧಾನಿಯಲ್ಲಿ ಆ ಕಂಪನಿಗೆ ಚೀಫ್ ...ಗಿದ್ದ ಎಂ. ಎಲ್ ನಾಗಣ್ಣನವರ ಮೇಲೆ ಇವರು ಕಂಪನಿಗೆ ದ್ರೋಹ ...ರೆಂದು ಇಲ್ಲಿನ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊನ್ನೆ ಸೋಮ ...ಫಿರ್ಯಾದು ದಾಖಲ್ ಮಾಡಿದರು ನಾಗಣ್ಣನವರು ತಾವೇ ಕೋರ್ಟಿಗೆ ...ಗಿ ಸಮಾಧಾನ ಹೇಳಿ ಜಾಮೀನ್ ಕೊಟ್ಟು ಬಂದರು. ಈಚೆಗೆ ಅವರ ...ಶೋಧನೆಮಾಡಿ ಕೆಲವು ಕಾಗದಪತ್ರಗಳನ್ನು ತೆಗೆದುಕೊಂಡು ಹೋದರು. ...ತಾ. 10 ಕ್ಕೆ ಹೀರಿಂಗು ಇಟ್ಟಿದಾರೆ.

* * *

ಚಿಕ್ಕಬಳ್ಳಾಪುರದಲ್ಲಿ ತಾ 28 ನೇ ಭಾನುವಾರ ಮಧ್ಯಾಹ್ನ ಜೋಡಿದಾರ ...ಸಭೆಯೊಂದು ಜರುಗುವಂತೆ ಏರ್ಪಾಡಾಗಿದೆ. ಮೈಸೂರು ಸಂಸ್ಥಾನದೊ ...ರುವ ಜೋಡಿದಾರರುಗಳೆಲ್ಲಾ ಸೇರಿ ಒಂದು ಸಂಘವನ್ನು ಮಾಡಿಕೊಂಡು ...ಗೂ ತಮ್ಮ ರೈತಪ್ರಜೆಗಳಿಗೂ ಇರುವ ಕಷ್ಟನಷ್ಟಗಳನ್ನು ಚರ್ಚೆಯಿಂದ ...ತ್ತು ಮಾಡಿ, ಗವರ್ನಮೆಂಟಿನವರಿಗೆ ಅರಿಕೆ ಮಾಡಿಕೊಳ್ಳಬೇಕೆಂಬುವುದೇ ...ಭೆಯ ಮುಖ್ಯ ಉದ್ದೇಶವಾಗಿದೆ ಎಂದೂ, ಜೋಡಿದಾರರುಗಳೆಲ್ಲಾ ಆ ಸಭೆಗೆ ...ಬರಬೇಕೆಂದೂ ಸ್ವಾಗತಸಂಘದ ಸೆಕ್ರೆಟರಿಗಳಾದ ಮ|| ಇಂಡಾರಸ್ ರಾಮ ...ಯ್ಯನೂ, ಮ|| ರಮ್ಯವರಾಚಾರ್ಯರೂ ತಿಳಿಸುತ್ತಾರೆ.

* * *

ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೆ ವರ್ಗವಾಗಿರುವ ಮುನ್‌ಸಿಫ್ ಮ|| ...ಸ್ವಾಮಿರಾಯರಿಗೆ ಕಳೆದ ಭಾನುವಾರ ಬೆಂಗಳೂರಿನ ಲಾಯರ್ ಸಂಘದ ...ನಿಲಯದಲ್ಲಿ ಕೃತಜ್ಞತಾಪೂರ್ವಕವಾದ ಔತನವನ್ನು ಮಾಡಿ, ಅವರಲ್ಲಿ ...ರುವ ಭಕ್ತಿ ಪ್ರೀತಿಗಳನ್ನು ಪ್ರಕಾಶಪಡಿಸಿದರು. ಔತನವಾದ ಬಳಿಕ ...ಕೇಟ್ ಮ|| ಡಿ. ರಾಘವಾಚಾರ್ಯರ ಸಂಗೀತವೂ, ಅಡ್ವೊಕೇಟ್ ಮ|| ...ಕೆ. ನರಸಿಂಹಯ್ಯಂಗಾರ್ಯರ ಸಕಲಿಯೂ ನಡೆದು, ಗವರ್ನಮೆಂಟ್ ...ಕೇಟ್ ಮ|| ಸಿ. ಎಸ್. ದೊರೆಸಾಮಿ ಅಯ್ಯರವರು ಮ|| ಸತ್ಯಾದಿರಾ ...ಗುಣಕಥನವನ್ನು ಮಾಡಿದರು. ಬೆಂಗಳೂರಿನಲ್ಲಿ ನೌಕರಿಮಾಡಿದ ಮುನ್ ...ಯಾರೂ ಅಲ್ಲಿನ ಲಾಯರ್ ಸಂಘದವರಿಂದ ಇಂಥಾ ಔತನಾದಿ ಸತ್ಕಾರಗ ...ಹೊಂದಲಿಲ್ಲ. ಮ|| ಸತ್ಯಾಜಿರಾಯರು ಅವರನ್ನೆಲ್ಲಾ ಕೃತಜ್ಞತಾಪೂರ್ವ ...ಗಿ ವಂದಿಸಿದರು. ಬಳಿಕ ಏಳು ಮಂದಿ ಅಡ್ವೊಕೇಟರು ಟೈನಿಕಲ್ ಪಂದ್ಯ ...ಸೇರಿ ಬಿಟ್ಟವನ್ನು ಸುತ್ತಿದ್ದರಲ್ಲಿ ಮ|| ನಾಗೇಶ್ವರಯ್ಯರವರು ಗೆದ್ದು ಬಹು ...ವನ್ನು ಪಡೆದರು.

* * *

ಮ|| ಪಿ. ಎಸ್. ಅಚ್ಯುತರಾಯರು ಮೈಸೂರು ಸೀಮೆಯ ಸೀನಿಯರ್ ...ರ್ ಮತ್ತು ಸ್ಯಾನಿಟರಿ ಆಫೀಸರ್ ಕೆಲಸದಿಂದ ನಾಳೆ ಜನವರಿ ಲಾಗಾಯತು ಬಿಡುಗಡೆಹೊಂದಿ ವಿಶ್ರಾಂತಿಸುಖವನ್ನು ಅನುಭವಿಸುವವರಾಗಿದಾರೆ. ದೇಶೀಯ ದೊಡ್ಡಮನುಷ್ಯರು ನಮ್ಮ ಸಂಸ್ಥಾನದ ವೈದ್ಯ ಇಲಾಖೆಯಲ್ಲಿ ಪ್ರಥಮಸ್ಥಾನಕ್ಕೆ ಹತ್ತಿದ್ದಿಲ್ಲ. ಇದಕ್ಕೆ ಮ|| ಅಚ್ಯುತರಾಯರೇ ಮೊದಲನೆಯವರಾಗಿದಾರೆ, ಇವರು ಕಳೆದ 1884 ನೇ ಇಸವಿ ಏಪ್ರೆಲ್ ತಾ. 1 ರಲ್ಲಿ ಬೆಂಗಳೂರು ಟವನ್ ಆಸ್ಪತ್ರೆಯ ವೈದ್ಯರಾಗಿಯೂ, ವೈದ್ಯ ಪಾಠಶಾಲಾ ಬೋಧಕರಾಗಿಯೂ ಸರ್ಕಾರಿ ನೌಕರಿಯನ್ನು ಸೇರಿ, 1891 ನೇ ಡಿಸೆಂಬರ್ ತಾ. 11 ರಲ್ಲಿ ಸಿವಿಲ್ ಸರ್ಜನ್‌ರ ದರ್ಜೆಗೆ ಬಡ್ತಿಹೊಂದಿ, ಈಚೆಗೆ 1905 ನೇ ಜೂನ್ ತಾ. 12 ರ ಲಾಗಾಯತು ಅನೇಕ ವೇಳೆ ಸೀನಿಯರ್ ಸರ್ಜನ್‌ರಾಗಿ ಬದಲಿ ನೇಮಿಸಲ್ಪಟ್ಟು, ಕಡೆಗೆ ಆ ಕೆಲಸವು ಅವರಿಗೆ ಖಾಯಂ ಮಾಡಲ್ಪಟ್ಟಿತು. ಮ|| ಅಚ್ಯುತರಾಯರು ಧೈರ್ಯಶಾಲಿಗಳು, ಬಡವರ ಹಿತಚಿಂತಕರು, ಅನುಭವವುಳ್ಳ ವೈದ್ಯರು, ಮತ್ತೂ ಪರೋಪಕಾರಿಗಳು. ಹಿಂದೆ ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ತುಂಬಾ ಪ್ರಬಲವಾಗಿ ದಿನ ಒಂದಕ್ಕೆ 40-50 ಜನರಂತೆ ಸಾಯುತ್ತಿದ್ದಾಗ ಮ|| ಅಚ್ಯುತರಾಯರು ಪ್ರಜೆಗಳಿಗೆ ಧೈರ್ಯ ಹೇಳಿ ಬಡವರ ಜೀವನಕ್ಕೂ ಶವಗಳ ಸಂಸ್ಕಾರಕ್ಕೂ ಸ್ವಲ್ಪವೂ ಕಷ್ಟ ಅಡಚಣೆಗಳುಂಟಾಗದಂತೆ ಬಹು ಕನಿಕರದಿಂದ ತಮ್ಮ ಸಮಯವನ್ನೂ ಸ್ವಂತ ದ್ರವ್ಯವನ್ನೂ ಬಹು ಧಾರಾಳವಾಗಿ ವಿನಿಯೋಗಿಸಿ ಬಡವರ ಆಧಾರ ಎಂಬ ಹೆಸರನ್ನೂ ಪ್ರೀತಿಯನ್ನೂ ಸಂಪಾದಿಸಿಕೊಂಡರು. ಇವರ ಖಂಡಿತಸ್ವಭಾವವನ್ನೂ ಪ್ರಜಾಹಿತಚಿಂತನೆಯನ್ನೂ ಈಚೆಗೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಸಂಸ್ಥಾನಾಮಳೆಯ ಪ್ರತಿನಿಧಿಗಳು ಸಾಕ್ಷಾತ್ತಾಗಿ ಕೇಳಿ ತಿಳಿದಿರುತ್ತಾರೆ. ಇಂಥಾ ಪ್ರಜಾವತ್ಸಲರಾದ ಅಧಿಕಾರಿಗಳು ನಮ್ಮ ಸಂಸ್ಥಾನದಲ್ಲಿ ಹೆಚ್ಚಿದ್ದನ್ನು ನೋಡಲು ಕುತೂಹಲಪಡುತ್ತೇವೆ ಈಗ ಲಭಿಸುವ ವಿಶ್ರಾಂತಿಯನ್ನು ಮ|| ಅಚ್ಯುತರಾಯರು ಆರೋಗ್ಯದಿಂದಲೂ, ಸುಖವಾಗಿಯೂ ಬಹುಕಾಲ ಅನುಭೋಗಿಸಲೆಂದು ಹಾರೈಸುವೆವು.

ಮೈಸೂರು ಗೆಜೆಟ್ ಸಂಗ್ರಹ.

ಬಲಾತ್ಕರಿಸಿ ದೇವೀಶಿಡುಬು ಹಾಕಬೇಕೆಂಬ ಕಾನೂನು 1914 ನೇ ಜನವರಿ ತಾ 1 ರಿಂದ ಒಂದು ವರುಷಕಾಲ ಜಗಲೂರು ಮ್ಯುನಿಸಿಪಾಲಿಟಿಯೊಳಗೆ ಜಾರಿಗೆ ತರಲ್ಪಡುವುದು.

ಮ|| ಹನುಮಂತಶೆಟ್ಟರನ್ನು ಹುಣಸೂರು ಮ್ಯುನಿಸಪಲ್ ಕೌನ್ಸಿಲ್‌ನಿಂದ ಹುಣಸೂರು ತಾಲ್ಲೂಕ್ ಬೋರ್ಡಿನ ಮೆಂಬರಾಗಿ ಚುನಾಯಿಸಿರುತ್ತಾರೆ.

ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮಿ|| ಕೆ. ಕೃಷ್ಣ ಅಯ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ಎರಡು ತಿಂಗಳು ಆರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಸೀನಿಯರ್ ಅ|| ಕಮಿಷನರ್ ಮತ್ತು ಗವರ್ನ್‌ಮೆಂಟ್ ಅಂಡರ್ ಸೆಕ್ರೆಟರಿ ಮಿ|| ಬಿ. ರಾಮಸ್ವಾಮಯ್ಯನವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕಡೂರು ಡೆಪ್ಯುಟಿ ಕಮಿಷನ್‌ರಾಗಿ ಬದಲಿ ನೇಮಿಸಲ್ಪಟ್ಟಿದಾರೆ.

ಕಸಬುಗಳ ಸೂಪರಿನ್‌ಟೆಂಡೆಂಟ್ ಮಿ|| ಬಿ ಸೀತಾರಾಮಾಚಾರ್ರಿಗೆ ಕೊಟ್ಟಿರುವ ಒಂದು ತಿಂಗಳ ಪ್ರಿವಿಲೆಜ್ ರಜವನ್ನು ಇನ್ನೊಂದು ವಾರ ಜಾಸ್ತಿಮಾಡಿದೆ

ಶ್ರೀಮನ್‌ಮಹಾರಾಜರವರು ಮೊದಲನೇ ಕೌನ್ಸಿಲರ್ ಮಿ|| ಎಚ್. ವಿ. ನಂಜುಂಡಯ್ಯನವರನ್ನು ಚೀಫ್ ಜಡ್ಜರಾಗಿಯೂ ಬದಲಿ ನೋಡುವಂತೆ ಹಂಗಾಮಿಯಾಗಿ ನೇಮಕಮಾಡಿರುತ್ತಾರೆ.

ಅ|| ಅ|| ಸರ್ಜನ್ ಮಿ|| ಪಿ. ಎಸ್. ರಾಮಚಂದ್ರ ಅಯ್ಯರವರನ್ನು ಜೂಲೈ ತಾ. 1 ರಿಂದ 4 ನೇ ಕ್ಲಾಸಿಗೆ ಬಡ್ತಿಮಾಡಿದೆ. ಮಿ|| ಎಂ. ಡಿ. ಶ್ರೀನಿವಾಸಯ್ಯಂಗಾರ್‍ರನ್ನೂ, ಮಿ|| ಎಫ್ ಚೆ ಂಬರ್ಸ್‌ಯವರನ್ನೂ ಜೂಲೈ ತಾ 1 ರಿಂದ ಅ|| ಅ|| ಸರ್ಜನ್‌ರಾಗಿ ನೇಮಿಸಲಾಗಿದೆ.

ಶ್ರೀಮನ್‌ಮಹಾರಾಜರವರ ಅ|| ಸೆಕ್ರೆಟರಿ ಮಿ|| ಮಿರ್ಜಾ ಎಂ. ಇಸ್ಮೈಲ್ ರವರನ್ನು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮಹಾರಾಜರವರ ಹುಜೂರು ಸೆಕ್ರೆಟರಿಯಾಗಿ ಬದಲಿ ನೇಮಕಮಾಡಿದೆ.

ತೀರ್ಥಹಳ್ಳಿ ತಾಲ್ಲೂಕು ಅಮಲ್ದಾರ್ ಮ್ಯಾಜಿಸ್ಟ್ರೇಟ್ ಮಿ|| ಎಸ್ ಧರ್ಮರಾಯರಿಗೆ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿನಲ್ಲಿ ಕಂಡ ತಕ್ಸೀರುಗಳನ್ನು ಹಿಡಿದು ದರ್ಯಾಪ್ತಿಮಾಡುವ ಅಧಿಕಾರ ವಹಿಸಲ್ಪಟ್ಟಿದೆ

ಮೈಸೂರು ಮಹಾರಾಣಿಯವರ ಕಾಲೇಜ್ ಲೇಡಿ ಸೂಪರಿನ್‌ಟೆಂಡೆಂಟ್ ಮಿಸ್ ಎ. ಪಾರ್ಕರ್‌ಯವರಿಗೆ ಕೊಟ್ಟಿರುವ ಕಾಯಿಲೆ ರಜವನ್ನು ಅಕ್ಟೋಬರ್ ತಾ. 20 ರಿಂದ ನಾಲ್ಕು ತಿಂಗಳು ಜಾಸ್ತಿಮಾಡಿದೆ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶ್ರೀ ಕೆ ಡಿ. ರುಕ್ಮಿಣಿಯಮ್ಮನವರೇ ಲೇಡಿ ಸೂಪರಿನ್‌ಟೆಂಡೆಂಟರಾಗಿ ಬದಲಿ ನೋಡತಕ್ಕದ್ದು.

ಶಿವಮೊಗ್ಗ ಡಿಸ್ಟ್ರಿಕ್ಟ್ ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರ್ ಮಿ|| ಎನ್. ರಾಮರಾಯರಿಗೆ ಕ್ರಿಸ್ಮಸ್ ರಜಾ ಜೊತೆಗೆ ಜನವರಿ ತಾ 3 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿದೆ ಅ|| ಡೆಪ್ಯುಟಿ ಇನ್‌ಸ್ಪೆಕ್ಟರ್ ಮಿ|| ಕೆ ಸುಬ್ಬರಾಯರು ಡೆಪ್ಯುಟಿ ಇನ್‌ಸ್ಪೆಕ್ಟರ್ ಆಫೀಸ್ ಛಾರ್ಜನ್ನು ವಹಿಸಿರತಕ್ಕದ್ದು.

ಮೈಸೂರು ಭೂಗರ್ಭ ಶೋಧನಾ ಇಲಾಖೆಯ ರೆಜಿಸ್ಟ್ರಾರ್ ಮಿ|| ಬಿ. ಸುಬ್ಬರಾಯರಿಗೆ ನೊವೆಂಬರ್ ತಾ. 10 ರಿಂದ ಹದಿಮೂರು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು. ಹೆಡ್ ಕ್ಲಾರ್ಕ್. ಮಿ|| ಎಂ. ವರದಯ್ಯನವರು ರೆಜಿಸ್ಟ್ರಾರಾಗಿ ಬದಲಿ ನೇಮಿಸಲ್ಪಟ್ಟಿದ್ದರು

ಹಾಸನದ ಡಿವೀಜನ್ ಸಬ್ ಅ|| ಇನ್‌ಜನಿಯರ್ ಮಿ|| ಬಿ. ಕೃಷ್ಣಸ್ವಾಮಿ ಅಯ್ಯಂಗಾರ್ರಿಗೆ ನೊವೆಂಬರ್ ತಾ. 18 ರಿಂದ ಒಂದು ತಿಂಗಳ ಪ್ರಿವಿಲೆಜ್ ರಜಾ ಕೊಟ್ಟಿತ್ತು.

ಮೈಸೂರಿನಲ್ಲಿ ಮುಂದೆ ಹೇಳುವವರು ಆನರರಿ ಮ್ಯಾಜಿಸ್ಟ್ರೇಟರಾಗಿ ಕೆಲಸ ಮಾಡತಕ್ಕದ್ದೆಂದು ನೇಮಿಸಲಾಗಿದೆ—1914 ನೇ ಜನವರಿ ತಿಂಗಳಲ್ಲಿ ಮಿ|| ಗಳಾದ ಡಿ. ನರಸಿಂಗರಾಯರು (ಛೇರ್‌ಮೆನ್), ಎ. ನರಸಿಂಹಸ್ವಾಮಿಯವರು, ದರ್ವೇಷ್ ಪೀರ್‌ಯವರು, ಫೆಬ್ರವರಿ ತಿಂಗಳಲ್ಲಿ ಮಿ|| ಗಳಾದ ಎಚ್. ಸೀತಾರಾಮಯ್ಯನವರು (ಛೇರ್‌ಮೆನ್), ಎ ಅಣ್ಣಾಯ್ಯಪಂಡಿತರು, ಚಿಕ್ಕೆ ಅರಸಿನವರು; ಮಾರ್ಚಿ ತಿಂಗಳಲ್ಲಿ ಮಿ|| ಗಳಾದ ಟಿ. ಎನ್. ಮಿರ್ ನಿಜಾಮುದೀನ್ ಅಲಿಖಾನ್‌ರವರು (ಛೇರ್‌ಮೆನ್), ವೆನ್ ನಾರಾಯಣರಾಯರು, ಎಂ. ಎಲ್. ವಾಸುದೇವಯ್ಯನವರು, ಏಪ್ರಿಲ್ ತಿಂಗಳಲ್ಲಿ ಮಿ|| ಗಳಾದ ವಿ ಕೃಷ್ಣರಾಯರು (ಛೇರ್‌ಮೆನ್), ಡಿ. ಬನುಮಯ್ಯನವರು, ಪುಟ್ಟಯ್ಯಾಜಅರಸಿನವರು.

ಇಂಡಿಯಾ ದೇಶದ ವೃತ್ತಾಂತಗಳು.

ಕಾಶೀ ಪಟ್ಟಣದಲ್ಲಿ ಏರ್ಪಾಡಾಗುವ ಹಿಂದೂ ಯೂನಿವರ್ಸಿಟಿ (ವಿದ್ಯಾನಿಲಯದ) ಫಂಡಿಗೆ ಇದುವರೆಗೆ 12,38,720 ರೂಪಾಯಿ ಚಂದಾ ವಸೂಲಾಗಿರುತ್ತದೆ.

* * *

ಕಳೆದ ತಾ. 13 ಕ್ಕೆ ಆಖೈರಾದ ಒಂದು ವಾರದಲ್ಲಿ ಹಿಂದುಸ್ಥಾನದೊಳಗೆ ಪ್ಲೇಗ್ ಉಪದ್ರದಿಂದ 3,409 ಜನರು ಕಾಲವಾಗಿರುತ್ತಾರೆ. ಈ ಸಂಖ್ಯೆಯ ವಿವರವೇನೆಂದರೆ—ಬೊಂಬಾಯಿ ಅಧಿಪತ್ಯ 869, ಮದರಾಸ್ 201, ಬೀಹಾರ್ 507, ಸಂಯುಕ್ತ ಅಧಿಪತ್ಯಗಳು 1,476, ಪಂಜಾಬ್ 99, ಬರ್ಮಾ 79, ಮೈಸೂರು 101, ಹೈದರಾಬಾದ್ 66, ವಾಯುವ್ಯಸರಹದ್ದು ಪ್ರಾಂತ್ಯ 1, ರಾಜಪುಟಾನಾ 17, ಈ ರೀತಿ ಮರಣಗಳಾಗಿವೆ.

* * *

ಆಗ್ರಾ ಪಟ್ಟಣದಲ್ಲಿ ಹದಿನೇಳನೇ ವರುಷದ ರಾಜಪುತ್ರ ಮಹಾಸಭೆಯು ತಾ. 28 ರಲ್ಲಿ ಪ್ರಾರಂಭವಾಗಿ ಮೂರು ದಿನ ಜರುಗುವುದು. ಕಾಶ್ಮೀರಸಂಸ್ಥಾನದ ಮಹಾರಾಜರವರು ಅಗ್ರಾಸನವನ್ನು ವಹಿಸಿ ಮಹಾಸಭೆಯನ್ನು ನಡಿಸುವವರಾಗಿದಾರೆ.

* * *

ಏಳನೆಯ ಮಹರಾಷ್ಟ್ರ ವಿದ್ಯಾ ಪ್ರೋತ್ಸಾಹಕ ಮಹಾ ಸಭೆಯು ಮುಂದಿನ ಭಾನುವಾರದಿಂದ ನಾಸಿಕ್ ಪಟ್ಟಣದಲ್ಲಿ ಪ್ರಾರಂಭವಾಗಿ ಮೂರು ದಿನಗಳು ನಡೆಯುತ್ತದೆ. ಧಾರ್ ಸಂಸ್ಥಾನದ ಮಹಾರಾಜರವರಾದ ಸರ್ ಉದಯರಾವ್ ಪವಾರ್, ಕೆ. ಸಿ. ಎಸ್. ಐ. ರವರು ಪ್ರೆಸಿಡೆಂಟರಾಗಿ ನಿಂತು ಈ ಸಭೆಯ ಕಾರ್ಯಗಳನ್ನು ನಡಿಸುವಂತೆ ಒಪ್ಪಿಕೊಂಡಿದಾರೆ.

* * *

ಮದರಾಸ್ ಪಟ್ಟಣದ ತಿರುವಲಕ್ಕೇಣಿಯ ಬಳಿ ಇರುವ ಸುಬಾರಿಗುಂಟಾ ಎಂಬ ಭಾಗದಲ್ಲಿರುವ ಖಾಲಿ ನಿವೇಶನವನ್ನು 30,000 ರೂಪಾಯಿಗೆ ಕೊಂಡುಕೊಂಡು, ಅಲ್ಲಿ 1,20,000 ರೂಪಾಯಿ ಖರ್ಚು ಮಾಡಿ 200 ಆರೋಗ್ಯಕರವಾದ ಮಾದ್ರಿ ಮನೆಗಳನ್ನು ಕಟ್ಟಿಸಬೇಕೆಂದು ಮದರಾಸ್ ಪಟ್ಟಣದ ಮ್ಯುನಿಸಿಪಾಲಿಟಿಯವರು ಒಪ್ಪಿ ಸ್ಯಾಂಕ್ಷನ್‌ಮಾಡಿದಾರೆ. ಈ ಏರ್ಪಾಡು 1914-16 ನೇ ಸಾಲಿನಲ್ಲಿ ಜಾರಿಗೆ ಬರತಕ್ಕದ್ದಾಗಿದೆ

* * *

100 ಮಂದಿ ದೊಡ್ಡಮನುಷ್ಯರು ರುಜುವಾಡಿ, ಮ|| ಜಿ. ಕೆ. ಗೋಖಲೆಯವರನ್ನು ಒಂದು ದಿನದ ಮಟ್ಟಿಗಾದರೂ ಕರಾಚಿಯಲ್ಲಿ ನಡೆಯುವ ರಾಷ್ಟ್ರಕೂಟಕ್ಕೆ ಬಂದು ಹೋಗಬೇಕೆಂದು ಕಾಗದ ಬರೆದು ಕೇಳಿಕೊಂಡದ್ದಕ್ಕೆ ಅವರು ತಮ್ಮ ದೇಹಸ್ಥಿತಿ ಚೆನ್ನಾಗಿಲ್ಲದಿರೋಣದರಿಂದ ವಿಶ್ರಾಂತಿಗೋಸ್ಕರ ಪೂನಾಪಟ್ಟಣಕ್ಕೆ ಹೋಗುವೆನೆಂದೂ, ಆರೋಗ್ಯವಾಗಿದ್ದರೆ ಖಂಡಿತವಾಗಿಯೂ ಉತ್ಸಾಹದಿಂದಲೂ ಬರುತ್ತಿದ್ದೇನೆಂದು ಜವಾಬುಕೊಟ್ಟಿದಾರೆ.

* * *

ಮದರಾಸ್ ಹೈ ಕೋರ್ಟಿನ ಜಡ್ಜರಾದ ಮ|| ಪಿ. ಆರ್. ಸುಂದರ ಅಯ್ಯರವರು ಕಳೆದ ಭಾನುವಾರ ಬೆಳಗ್ಗೆ ಮೂತ್ರರೋಗ ಪೀಡಿತರಾಗಿ ಚಿಕ್ಕ ವಯಸ್ಸಿನಲ್ಲೇ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಪತ್ನಿಯೂ ಐದು ಮಂದಿ ಮಕ್ಕಳೂ ಇದಾರೆ. ನಮ್ಮ ದೇಶದ ವಿದ್ಯಾವಂತರು ವಿಶೇಷವಾಗಿ ಈ ರೋಗಕ್ಕೆ ತುತ್ತಾಗುತ್ತಿರುವುದು ಈಚೆಗೆ ಹೆಚ್ಚುತ್ತಿದೆ. ಈ ರೋಗದ ಪೂರ್ವೋತ್ತರವನ್ನೂ ಚಿಕಿತ್ಸೆಯನ್ನೂ ಇಂಡಿಯಾ ಗವರ್ನಮೆಂಟಿನವರು ವೈದ್ಯರನ್ನು ನೇಮಿಸಿ ತನಿಖೆಮಾಡಿಸುತ್ತಿದಾರೆ. ಇದು ಬೇಗನೆ ಪೂರೈಸಿ ತಕ್ಕ ಪರಿಹಾರವು ಸೂಚಿಸಲ್ಪಟ್ಟರೆ ಈ ದೇಶಕ್ಕೆ ಎಷ್ಟೋ ಹಿತವಾದೀತು.

* * *

ಬಂಗಾಳಾ ಅಧಿಪತ್ಯದಲ್ಲಿ ಡಕಾಯಿತಿಗಳು ಇನ್ನೂ ಶಮನವಾಗಲಿಲ್ಲ. ಕಳೆದ ಎರಡು ವಾರಗಳಲ್ಲಿ ಹತ್ತು ಕಡೆ ಡಕಾಯಿತಿಗಳು ನಡೆದು, ಒಂದರಲ್ಲಿ ಕೊಲೆಯೂ ಆಯಿತು. ಫರಿದ್‌ಪುರದಲ್ಲಿ ನಾಲ್ಕು; ಬ್ಯಾಂಕುರ, ಬರ್ದ್ವಾನ್, ರಾಜಷಾಹಿ, ಪಬ್ನಾ, ಜಸ್ಸೋರ್, ಜಲ್ಪಿಗೋರಿಗಳಲ್ಲಿ ಒಂದೊಂದು ಡಕಾಯಿತಿಗಳು ನಡೆದವು. ಒಂದು ಕಡೆ ಕಳ್ಳರು ಮನೆಯ ಜನರನ್ನು ಚಿತ್ರಹಿಂಸೆಗೆ ಗುರಿಮಾಡಿದರು. ಒಟ್ಟು 10,000 ರೂಪಾಯಿನ ನಗನಾಣ್ಯಗಳು ಲೂಟಿಯಾಗಿರುತ್ತವೆ. ಈ ದುಷ್ಕೃತ್ಯಗಳನ್ನು ಕೀಳುದರ್ಜೆಯ ಹಿಂದು ಮಹಮದೀಯರು ನಡಿಸಿದಾರೆಂದೂ, ಇನ್ನೂ ಯಾರನ್ನೂ ಹಿಡಿದಿಲ್ಲವೆಂದೂ ತಿಳಿದುಬಂದಿದೆ.

* * *

ಬೊಂಬಾಯಿನಲ್ಲಿ ಪ್ರಕಟವಾಗುವ ಡೈಲಿ ಟೈಂಸ್ ಎಂಬ ಪತ್ರಿಕೆಯಲ್ಲಿ ಕಲರ್ ಸಾರ್ಜಂಟ್ ಮಾರ್ಟಿನ್ ಎಂಬ ಇಂಗ್ಲಿಷ್ ಸಿಪಾಯಿಯ ಮೇಲೆ ಅವಮಾನಕರವಾದ ಸುದ್ದಿಯನ್ನು ಬರೆದು ಪ್ರಕಟಿಸಿದರೆಂದು ಆ ಸಿಪಾಯಿಯು ಆ ಪತ್ರಿಕೆಯ ಸಂಪಾದಕರ ಮೇಲೆ ಫಿರ್ಯಾದು ಮಾಡಿದಾಗ ಅಪರಾಧಿಯು ತಪ್ಪನ್ನು ಒಪ್ಪಿಕೊಂಡು ಮಾನನಷ್ಟಕ್ಕಾಗಿ 2,800 ರೂಪಾಯನ್ನು ಕೋರ್ಟಿಗೆ ಹಾಜರ್‌ಮಾಡಿದನು. ಮ್ಯಾಜಿಸ್ಟ್ರೇಟರು ಅಂಥಾ ಕೆಟ್ಟ ಅಪವಾದವನ್ನು ಪ್ರಕಟಿಸಿದ್ದಕ್ಕೆ ಆ ಪ್ರತಿಫಲ ಸಾಲದೆಂದೂ, ಅಪರಾಧಿಯು ಫಿರ್ಯಾದಿಗೆ 4,000 ರೂಪಾಯಿ ದಾಮಾಜನ್ನು ಕೋರ್ಟು ಖರ್ಚು ಸಮೇತ ಪಾವತಿಮಾಡಬೇಕೆಂದು ಜಡ್ಜಮೆಂಟು ಹೇಳಿದಾರೆ.

* * *

ದಕ್ಷಿಣ ಆಫ್ರೀಕಾ ಗವರ್ನಮೆಂಟಿನವರು ಆ ದೇಶದಲ್ಲಿ ಹಿಂದುಸ್ಥಾನದ ಜನರಿಗೆ ಇರುವಂಥಾ ಕಷ್ಟ ನಷ್ಟ ಅನನುಕೂಲಗಳನ್ನೆಲ್ಲಾ ವಿಚಾರಮಾಡುವುದಕ್ಕೆ ಒಂದು ಪಂಚಾಯತಿಯನ್ನು ನೇಮಕಮಾಡಿದಾರೆ, ಈ ವಿಚಾರಣೆಯು ತೃಪ್ತಿಕರವಾಗಿ ನಡೆಯುವುದಕ್ಕೋಸ್ಕರ ಮಿ|| ಗಂಧಿ, ಮಿ|| ಪಾಲಕ್ ಮೊದಲಾದ ಮುಖಂಡರನ್ನು ಬಂದೀಖಾನೆಯಿಂದ ಬಿಡುಗಡೆಮಾಡಿದರು. ಆದರೆ ಅಲ್ಲಿರುವ ಹಿಂದುಸ್ಥಾನದ ಜನರೂ ಆ ಮುಖಂಡರೂ ಪಂಚಾಯತಿಗೆ ನೇಮಕವಾಗಿರುವ ಮೆಂಬರುಗಳು ಸರಿಯಾಗಿಲ್ಲವೆಂದೂ, ಅವರು ಪಕ್ಷಪಾತಿಗಳೆನ್ನುವುದಕ್ಕೆ ಕಾರಣವುಂಟೆಂದೂ, ಹಿಂದುಸ್ಥಾನದವರ್‍ಯಾರೂ ಅವರ ಮುಂದೆ ಹೋಗಿ ಕೈಫಿಯತ್ತು ಹೇಳಬಾರದೆಂದೂ ಪ್ರತಿಭಟಿಸಿ, ನಿಷ್ಪಕ್ಷಪಾತಿಗಳನ್ನು ಪಂಚಾಯತಿಗೆ ನೇಮಿಸದೆ ಹೋದರೆ ಈಗಿನಂತೆಯೇ ಮುಷ್ಕರಹಿಡಿದು ಕೆಲಸಗಳನ್ನು ಬಿಟ್ಟುಬಿಡಬೇಕೆಂದೂ ಹೇಳುತ್ತಿದಾರೆ.

* * *

ಪಿಷಾವರಿನಿಂದ ಕಲ್ಕತ್ತೆಗೆ ಹೋಗುತ್ತಿದ್ದ ರೈಲ್ ಗಾಡಿಗೆ ಸರಹದ್ದಿನ ಬಳಿ ಇರುವ ಡಕಾಯಿತಿಕೋರರು ಕಳೆದ ಭಾನುವಾರ ಬೆಳಗಿನ ಝಾಮದ 1 ಗಂಟೆ ಹೊತ್ತಿನಲ್ಲಿ ಗಾಡಿಯು ಜಂಗೀರಾ ಸ್ಟೇಷನ್ ತಲಪಿದ ಕೂಡಲೆ ಒಂದು ಪೊದೆಯಿಂದ ಹೊರಟು ಗಾಡಿಯೊಳಕ್ಕೆ ನುಗ್ಗಿ, ವಿಲ್‌ಸನ್ ಎಂಬ ಗಾರ್ಡನ್ನು ಗುಂಡಿನಿಂದ ಹೊಡೆದು ಕೊಂದರು ಬಳಿಕ ಎನ್‌ಜಿನ್ ಗಾಡಿಗೆ ಹತ್ತಿ ಫೈರ್‌ಮೆನ್ ಎಂಬ ನೌಕರನನ್ನು ಕೊಂದು, ಗಾಡಿ ನಡಿಸುವ ಡ್ರೈವರ್ ಎಂಬವನನ್ನು ಹೊಡೆದು ಪೂರಾ ಗಾಯಮಾಡಿದರು. ಬಳಿಕ ಗಾಡಿಯನ್ನೇ ಲೂಟಿಮಾಡಬೇಕೆಂದು ತುಂಬಾ ಸಾಹಸಪಡುತ್ತಿರುವಷ್ಟರೊಳಗಾಗಿ ದೈವವಶಾತ್ತು ಇಂಗ್ಲಿಷ್ ಸೈನಿಕರು ಆ ಮಾರ್ಗವಾಗಿ ಬಂದು ಈ ದರೋಡೆಯನ್ನು ಕಂಡು, ದರೋಡೆಕೋರರನ್ನು ಹಿಡಿಯಬೇಕೆಂದು ಪ್ರಯತ್ನಪಟ್ಟರು. ಆದರೆ ಅವರ್‍ಯಾರೂ ಸಿಕ್ಕದೆ ಓಡಿಹೋದರು. ಗಾಯಪಟ್ಟ ಡ್ರೈವರೂ ತೀರಿಹೋದನು. ಸೈನಿಕರು ಆ ಸ್ಟೇಷನ್ ಕಾಯುತ್ತಿದಾರೆ.

ಬಾತ್ಮೀದಾರರಿಗೆ ನೋಟೀಸ್.

ಎಲ್ ಭಾಸ್ಕರರಾವ್, ತರೀಕೆರೆ—ನಿಮ್ಮ ಬಾತ್ಮಿಯಲ್ಲಿ ಹೊಸ ವಿಷಯಗಳೇನೂ ಕಂಡುಬರುವುದಿಲ್ಲ

ವಿದ್ಯಾಭಿಲಾಷಿ, ಮಾಲೂರು ತಾಲ್ಲೂಕು ಲಕ್ಕೂರು—ಇದಾಖೆಗೆ ಗ್ರಾಮದ ಮುಖಂಡರು ಸೇರಿ ಬರೆದುಕೊಂಡರೆ ಒಳ್ಳೇದು

ದೈವಸೇವಕ, ರಾಮಗಿರಿ—ಈ ಬಾತ್ಮೀದಾರರು ಗ್ರಾಮದಲ್ಲಿ ಎರಡು ಪಂಗಡಗಳುಂಟಾಗಿರುವುದರಿಂದ ಪಾಮೂಲಾಗಿ ನಡೆಯುತಕ್ಕ ಉತ್ಸವಾದಿಗಳು ನಿಂತುಹೋದವೆಂದು ಮುಂತಾಗಿ ಬರೆಯುತ್ತಾರೆ ಸಣ್ಣ ಸ್ಥಳಗಳಲ್ಲಿ ಇಂಥಾ ಪಂಗಡಗಳುಂಟಾದರೆ ಇನ್ನೂ ಅನೇಕ ಕೇಡುಗಳು ಪ್ರಾಪ್ತವಾಗುವವೆಂದು ಹೇಳಬೇಕಾಗಿಲ್ಲ ಇಂಥಾ ಗ್ರಾಮಸ್ಥರ ಮೇಲೆ ಅಧಿಕಾರಿಗಳಿಗಾಗಲಿ ಪರಸ್ಥಳದವರಿಗಾಗಲಿ ಪ್ರೀತಿಯೂ, ಸಹನವೂ ಉಂಟಾಗಲಾರದು

ಅರಕೆರೆಕೋಟೆ ಫಕೀರಯ್ಯನವರು ಗ್ರಾಮಾಂತರಗಳಲ್ಲಿ ಪಲ್ಲಿ (ಹಲ್ಲಿ) ಶಕುನದ ಪಾವಳಿ ಹೆಚ್ಚಾಗಿ, ಜನರನ್ನು ಅನಾವಶ್ಯಕವಾಗಿ ಭಯ, ಸಂಶಯ, ಕಳವಳಪಡಿಸುತ್ತಿದೆ ಎಂದೂ, ಆ ಶಕುನದ ಫಲಾಫಲಗಳನ್ನು ನಂಬಬಹುದೇ ಎಂದೂ ಕೇಳುತ್ತಾರೆ ವಿದ್ಯಾಹೀನತೆಯಿಂದ ಮೌಢ್ಯಾಚಾರಗಳು ಹೆಚ್ಚಿದ ಕಡೆಗಳಲ್ಲಿ ಜನರು ಇಂಥಾ ಶಕುನಗಳನ್ನು ನಂಬುವರಲ್ಲದೆ ವಿದ್ಯೆ ಕಲಿತು ವಿವೇಕಿಗಳಾಗಿಯೂ ಸದ್ವರ್ತರಾಗಿಯೂ ಇರತಕ್ಕವರ್‍ಯಾರೂ ಅದಕ್ಕೆ ಮನಕೊಡುವುದಿಲ್ಲ ಅನೇಕ ಸಂದರ್ಭಗಳಲ್ಲಿ ಮನುಷ್ಯನ ಕೃತ್ಯಗಳ ದೆಸೆಯಿಂದಲೇ ಅವನಿಗೆ ಒಳ್ಳೇದಾಗಲಿ ಕೆಟ್ಟದ್ದಾಗಲಿ ಪ್ರಾಪ್ತವಾಗುತ್ತದೆ

ಚಾಮರಾಜನಗರದ ತಾಲ್ಲೂಕು ಕುದೇರು ಗ್ರಾಮದಲ್ಲಿ ಸ್ಕೂಲಿನ ಸ್ಥಿತಿಯು ಅಕ್ರಮಕ್ಕೆ ಬಿದ್ದು ಕೆಡುತ್ತಿದೆ ಎಂದೂ, ಕೋಆಪರೆಟಿವ್ ಸೊಸೈಟಿಯ ಕಾರುಬಾರುಗಳು ಬೈಲಾಗಳಿಗೆ ಅನುಸಾರವಾಗಿಲ್ಲದೆ ಮೆಂಬರುಗಳಲ್ಲಿ ಅಸಮಾಧಾನ ಉಂಟಾಗಿದೆ ಎಂದೂ ಒಬ್ಬ ಬಾತ್ಮೀದಾರರು ತಿಳಿಸುತ್ತಾರೆ ಗ್ರಾಮಸ್ಥರಲ್ಲಿ ಮುಖಂಡರಾದವರು ಇಂಥಾ ಸ್ಥಳವೃತ್ತಾಂತಗಳನ್ನು ಆಯಾ ಇಲಾಖಾ ಅಧಿಕಾರಿಗೆ ಮೊದಲು ತಿಳಿಸಿದರೆ ಉತ್ತಮ ಹಾಗೆ ತಿಳಿಸದೆ ಇರುವ ಇಂಥಾ ಆಕ್ಷೇಪಣೆಗಳನ್ನು ನಾವು ಪ್ರಕಟಿಸಲಾರೆವು

—ಎಡಿ]

ಮೈಸೂರು ಬ್ಯಾಂಕ್, ಲಿಮಿಟೆಡ್, ಬೆಂಗಳೂರು

1913 ನೇ ಇಸವಿ ಡಿಸೆಂಬರ್ 11 ನೇ ತಾ ವರೆಗಿನ ಬ್ಯಾಂಕಿನ ಲೆಕ್ಕ

ಲೇಣಿ —(1) ಷೇರು ಮೊಬಲಗು	ರೂ	5,83,965
,, (2) ಡಿಪಾಜಿಟ್ಟುಗಳು	,,	3,64,117
,, (3) ಇತರೆ	,,	2,937
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ	9,53,019
ದೇಣಿ —(1) ಕೈಯಲ್ಲಿರುವ, ಬ್ಯಾಂಕುಗಳಲ್ಲಿರುವ ಹಣ	ರೂ	2,21,931
,, (2) ಖಾತೆ ಮತ್ತು ಇತರ ಸಾಲಗಳು	,,	1,26,719
,, (3) ಡಿಸ್ಕೌಂಟು ಮಾಡಿದ ವಾಯಿದೆ ಹುಂಡಿಗಳು	,,	1,15,500
,, (4) ಇನ್‌ವೆಸ್ಟ್‌ಮೆಂಟುಗಳು	,,	2,25,000
,, (5) ಏಜನ್ಸಿಗಳಲ್ಲಿರುವ ಮೊಬಲಗು	,,	46,307
,, (6) ಬ್ಯಾಂಕಿನಲ್ಲಿರುವ ಸಾಮಾನುಗಳು	,,	6 672
,, (7) ಇತರೆ	,,	10 901
(ಆಣೆ, ಕಾಸು ಬಿಟ್ಟಿರುತ್ತೆ)	ಜುಮ್ಲಾ ರೂ	9,53,019

ಡಬ್ಲ್ಯು. ಎ ರಾಸ್,

ಮ್ಯಾನೇಜರ್

ವಿದ್ಯಾವಿಲಾಸ ಸಭಾ, ಅಕ್ಕಿಹೆಬ್ಬಾಳು

ಪ್ರಥಮ ವಾರ್ಷಿಕೋತ್ಸವವು

ಈ ಸಭೆಯವರಿಂದ ಸ್ಥಾಪಿಸಲ್ಪಟ್ಟಿರುವ ಗ್ರ್ಯಾಂಟ್ ಇನ್ ಏಡ್ ಇಂಗ್ಲಿಷ್ ಸ್ಕೂಲಿನ ವರ್ಧಂತ್ಯುತ್ಸವವು ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ ಆಫೀಸರ್ ಮ|| ಎನ್ ರಾಮರಾಯರ ಅಧ್ಯಕ್ಷತೆ ಮತ್ತು ತಾಲ್ಲೂಕ್ ಅಮಲ್ದಾರ್ ಮ|| ಟಿ ವೆಂಕಟರಾಮಯ್ಯನವರ ಪ್ರೋತ್ಸಾಹದಿಂದ ಕಳೆದ ತಾ 15 ನೇ ಸೋಮವಾರ ಬೆಳಗ್ಗೆ ಸಂಭ್ರಮದಿಂದ ನೆರವೇರಿಸಲ್ಪಟ್ಟಿತು ಸಭೆಯವರು ಉತ್ಸವಕ್ಕೆ ಪ್ರಕೃತೋಚಿತವಾದ ಏರ್ಪಾಟುಗಳನ್ನೆಲ್ಲಾ ಮಾಡಿದ್ದರು ಸ್ಥಳ ಪರಸ್ಥಳಗಳ ಮಹಾಜನಗಳಿಂದಲೂ, ಅಧಿಕಾರಿಗಳಿಂದಲೂ ಸಭೆಯು ಅಲಂಕರಿಸಲ್ಪಟ್ಟಿದ್ದಿತು ಕಮಿಟಿಯ ಪರ ಕೃಷ್ಣರಾಜಪೇಟೆ ಮ|| ಎಚ್ ಕೃಷ್ಣಶಾಸ್ತ್ರಿಗಳು ಸಭೆಯನ್ನು ವಂದಿಸಿ ಉತ್ಸವಕಾರಣವನ್ನು ಸಭಿಕರಲ್ಲಿ ವಿವರಿಸಿದರು ಅನಂತರ ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆಯ ಕೆಲವು ನೀತಿಬೋಧಕ ಪ್ರಸಂಗವನ್ನು ಅಭಿನಯಿಸಿ ಸಭಿಕರಿಗೆ ಆನಂದಪಡಿಸಿದರು ಬಳಿಕ ಕಮಿಟಿ ಪರ ಮ|| ಎಂ ಶ್ರೀಕಂಠಯ್ಯನವರು ಸ್ಕೂಲ್ ರಿಪೋರ್ಟನ್ನು ಓದಿದರು ಅದರಿಂದ ಅಕ್ಕಿಹೆಬ್ಬಾಳು ಪಟ್ಟಣಿಗರಿಗೆ ಇಂಗ್ಲಿಷ್ ವಿದ್ಯೆಯಲ್ಲಿ ಇರುವ ಕುತೂಹಲವೂ, ಅವರುಗಳ ಅನ್ಯೋನ್ಯಭಾವವೂ, ಆತ್ಮಾವಲಂಬನೆಯೂ ಬಹುಮಟ್ಟಿಗೆ ವ್ಯಕ್ತವಾಗುವುದು ಸ್ಕೂಲ್ ಸ್ಥಾಪಿತವಾಗಿ ಸ್ವಲ್ಪ ದಿವಸದ ದರೂ ಅದರ ಪುರೋಭಿವೃದ್ಧಿಯು ಹೆಡ್ ಮಾಸ್ಟರ್ ಮ|| ಕೆ ಶ್ರೀನಿವಾಸರಾಯರ ಬೋಧನಾ ಸಾಮರ್ಥ್ಯದಿಂದ ತೃಪ್ತಿಕರವಾಗಿರುವುದನ್ನು ನೋಡಿ ಸಂತೋಷಪಡಬೇಕಾಗಿದೆ ಸಭಾಧ್ಯಕ್ಷರು ಬಾಲಕರ ಚಟುವಟಿಕೆಗೂ ಅವರ ಉತ್ಸಾಹಕ್ಕೂ ಮೆಚ್ಚಿ ಬಾಲಕರ ಪುರೋಭಿವೃದ್ಧಿಗೆ ಬೇಕಾದ ತಿದ್ದುಪಾಟುಗಳನ್ನು ಸೂಚಿಸಿದ್ದರಿಂದ ಎಲ್ಲರೂ ಕೃತಜ್ಞರಾಗಿದ್ದಾರೆ ತರುವಾಯ ಬಾಲಕರಿಗೆ ಬಹುಮಾನವು ಕೊಡಲ್ಪಟ್ಟಿತು ಇದಕ್ಕಾಗಿ ಸೋಮನಹಳ್ಳಿ ಶೇಕ್ದಾರ್ ಮ|| ಎಂ ಶ್ರೀನಿವಾಸಯ್ಯಂಗಾರ್ಯ, ಮ|| ಕೃಷ್ಣರಾಜಪೇಟೆ ಕೃಷ್ಣಶಾಸ್ತ್ರಿಗಳೂ ಸಹಾಯಮಾಡಿದ್ದಕ್ಕಾಗಿ ಸಭೆಯವರು ಕೃತಜ್ಞರಾಗಿದ್ದಾರೆ ಸ್ಕೂಲಿಗೆ ತಕ್ಕ ಕಟ್ಟಡವು ಇಲ್ಲದಿರುವ ಲೋಪವನ್ನು ಶೀಘ್ರದಲ್ಲಿಯೇ ಪರಿಹರಿಸಿಕೊಡುವ ಭಾಗದಲ್ಲಿ ಸಬ್ ಡಿವಿಜನ್ ಆಫೀಸರವರೂ, ಅಮಲ್ದಾರ್‌ರವರೂ ವಾಗ್ದಾನ ಮಾಡಿದ್ದರಿಂದ ಸಭಿಕರಿಗೆ ತುಂಬಾ ತೃಪ್ತಿಯುಂಟಾಗಿದೆ ಮಾಸ್ಟರ್ ಮ|| ಆರ್ ರಾಮಸ್ವಾಮಯ್ಯನವರಿಂದ ಇಂಪಾದ ಗಾನವು ಜರುಗಿ, ಶ್ರೀಮನ್ ಮಹಾರಾಜರವರಿಗೂ, ಶ್ರೀಮದ್ಯುವರಾಜರವರಿಗೂ, ರಾಜಕುಟುಂಬದವರಿಗೂ ಶ್ರೇಯಃಪ್ರಾರ್ಥನೆಗಳು ನಡೆದು, ಸಭಿಕರನ್ನೂ ಸಭಾಧ್ಯಕ್ಷರನ್ನೂ ವಂದಿಸುವುದರೊಡನೆ ಸಭೆಯು ಮುಕ್ತಾಯಮಾಡಲ್ಪಟ್ಟಿತು

ಹೇಮಾವತಿ ಕಬ್ಬಿನ ಯಂತ್ರಸ್ಥಾಪನೆಯ ವಿಷಾರಿಡು.

ಕೃಷ್ಣರಾಜಪೇಟೆ ತಾಲ್ಲೂಕು ಅಕ್ಕಿಹೆಬ್ಬಾಳು

ಕಳೆದ ತಾ 15 ನೇ ಸೋಮವಾರ ಜಮಾಬಂದಿ ಆಫೀಸರ್ ಮ|| ಎನ್ ರಾಮರಾಯರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಅಮಲ್ದಾರ್ ಮ|| ಟಿ ವೆಂಕಟರಾಮಯ್ಯನವರೂ, ಸಂಪದಭ್ಯುದಯ ಸಮಾಜದ ಮೆಂಬರು ಮ|| ಎಚ್ ಕೃಷ್ಣಶಾಸ್ತ್ರಿಗಳೂ ಅಕ್ಕಿಹೆಬ್ಬಾಳು ಪ್ರಾಂತ್ಯದಲ್ಲಿ ಒಂದು ಕಬ್ಬಿನ ಯಂತ್ರವನ್ನು ಅನ್ಯೋನ್ಯ ಸಹಾಯ ಸಂಘ ಕ್ರಮದಲ್ಲಿ ಏರ್ಪಡಿಸುವುದು ಆವಶ್ಯಕವೆಂಬುದನ್ನು ಉಪನ್ಯಾಸದಿಂದ ವ್ಯಕ್ತಪಡಿಸಿದರು ಆಗ್ಗೆ ಸಾವಿರಾರು ಮಂದಿ ರೈತ ಪ್ರಜೆಗಳು ಹಾಜರಿದ್ದರು ಡಿಸ್ಟ್ರಿಕ್ಟ್ ಕಮಿಟಿ ಮೆಂಬರಾದ ಮ|| ಬೈರಪ್ಪನವರೂ, ಅಕ್ಕಿಹೆಬ್ಬಾಳು ಮಹಾಜನಗಳೂ ಖಾಲಿ ಚುನಾಯಿಸಿರುವ ಸ್ಥಳವು ಅದಕ್ಕೆ ಪ್ರಶಸ್ತವಾಗಿರುವುದೆಂದು ಸಭಾಧ್ಯಕ್ಷರಾದ ಮ|| ಎನ್ ರಾಮರಾಯರು ಅಪ್ಪಣೆಕೊಡಿಸಿ ಇದಕ್ಕೆ ಸರ್ಕಾರದಿಂದ ಆಗಬಹುದಾದ ಪ್ರೋತ್ಸಾಹಕ್ಕಾಗಿ ತಾವೂ, ಅಮಲ್ದಾರ್ ಮ|| ಟಿ ವೆಂಕಟರಾಮಯ್ಯನವರೂ ಸಿಫಾರಸು ಮಾಡುವುದಾಗಿ ಅಪ್ಪಣೆಕೊಡಿಸಿದ್ದನ್ನು ಕೇಳಿ ಪ್ರಜೆಗಳು ಬಹಳ ಕೃತಜ್ಞರಾಗಿದ್ದಾರೆ ಒಡನೆ ಇದಕ್ಕಾಗಿ ಒಂದು ಕಮಿಟಿಯು ಏರ್ಪಾಟಾಗಿ ಅದಕ್ಕೆ ತಾಲ್ಲೂಕು ಅಮಲ್ದಾರ್ರು ಪ್ರೆಸಿಡೆಂಟರಾಗಿಯೂ, ರಾ|| ಅ|| ಮ|| ಎಂ ಶ್ರೀಕಂಠಯ್ಯನವರು ವೈಸ್ ಪ್ರೆಸಿಡೆಂಟರಾಗಿಯೂ, ಮ|| ಗಳಾದ ಶ್ಯಾನುಭಾಗ ಬೈರಪ್ಪನವರೂ ಲಿಂಗೇಗೌಡರೂ ಸೆಕ್ರೆಟರಿಗಳಾಗಿಯೂ, ಮ|| ಬಿ ರಾಮಯ್ಯನವರು ಟ್ರೆಜರರಾಗಿಯೂ ಏರ್ಪಡಿಸಲ್ಪಟ್ಟು, ಈ ಪ್ರಾಂತ್ಯದ ಭಾರೀ ಜಮೀನ್‌ದಾರರಲ್ಲಿ ಏಳು ಮಂದಿ ಡೈರೆಕ್ಟರುಗಳಾಗಿ ಚುನಾಯಿಸಲ್ಪಟ್ಟರು ಈ ಕೆಲಸಕ್ಕೆ ಪ್ರಕೃತ 20,000 ರೂಪಾಯಿ ಆವಶ್ಯಕವೆಂದು ಸಭಾಧ್ಯಕ್ಷರು ತಿಳಿಸಿದ್ದರ ಮೇಲೆ ಷೇರ್ ಒಂದಕ್ಕೆ 250 ರೂಪಾಯಿನಂತೆ 10 ಷೇರುಗಳ ವರಿವಿಗೂ ಆಗಲೇ ವಾಗ್ದಾನ ಮಾಡಲ್ಪಟ್ಟಿತು ಮುಂದೆ ಅಪೇಕ್ಷಿಸುವ ಈ ಪ್ರಾಂತ್ಯದ ಪ್ರಜೆಗಳಿಗೆ ಈ ಸಂಬಂಧವಾಗಿ ಅನುಕೂಲವಾದ ರೂಲ್ಸುಗಳು ಏರ್ಪಾಡು ಮಾಡುವ ಅಧಿಕಾರವು ಕಮಿಟಿಯವರಿಗೆ ವಹಿಸಲ್ಪಟ್ಟಿರುತ್ತೆ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಫಲವತ್ತಾದ ಈ ಹೋಬಳಿಯಲ್ಲಿ ಇಂತಾ ಒಂದು ಕಾರ್ಖಾನೆಯನ್ನು ಸ್ಥಾಪಿಸಿಕೊಡಬೇಕೆಂದು ಪ್ರಾರ್ಥಿಸಿದ ಅಕ್ಕಿಹೆಬ್ಬಾಳು ವಿದ್ಯಾವಿಲಾಸ ಸಭೆಯವರ ಪ್ರಯತ್ನವು ಸ್ತೋತ್ರಾರ್ಹವಾಗಿದೆ ಮೈಸೂರು ಸಂಸ್ಥಾನದ ಸಂಪದಭ್ಯುದಯ ಸಮಾಜದವರಿಂದಲೂ, ಕೋಆಪರೆಟಿವ್ ಸೊಸೈಟಿಗಳ ರಿಜಿಸ್ಟ್ರಾರವರಿಂದಲೂ ಇದಕ್ಕೆ ಒಡನೆಯೇ ಹೆಚ್ಚು ಗಮನವು ಕೊಡಲ್ಪಟ್ಟಲ್ಲಿ ಇದರ ಪುರೋಭಿವೃದ್ಧಿಯು ಬಹು ಜಾಗ್ರತೆಯಲ್ಲಿಯೇ ನೆರವೇರುವುದಾಗಿದೆ ತಾಲ್ಲೂಕು ಅಮಲ್ದಾರ್ರು ಈ ಕಮಿಟಿಗೆ ಪ್ರೆಸಿಡೆಂಟರಾಗಿರಲು ಅನುಮೋದಿಸಿದ್ದಕ್ಕೆ ಇಲ್ಲಿನ ಪ್ರಜೆಗಳಿಗೆ ಈ ಕಾರ್ಯದಲ್ಲಿ ಹೆಚ್ಚು ಭರವಸೆಯೂ, ಉತ್ಸಾಹವೂ ಉಂಟಾಗಿರುತ್ತದೆ

ವಾಚಕಶಾಲಾ ಸ್ಥಾಪನೆಯು

ಕಡೂರು ತಾಲ್ಲೂಕು ದೇವನೂರು

ಈ ಗ್ರಾಮದಲ್ಲಿ ಈ ತಿಂಗಳು ತಾ ೫ ನೇ ಶುಕ್ರವಾರ ಸಾಯಂಕಾಲ ಸ್ಕೂಲ್ ಕಮಿಟಿ ಮೆಂಬರುಗಳು ಮ|| ಗಳಾದ ಚಲುವಯ್ಯಂಗಾರ್ಯ, ಸಂಪತ್ತಯ್ಯಂಗಾರ್ಯ, ನ ಕಾರಿಮಯ್ಯಂಗಾರ್ಯ, ಪಟೇಲ್ ಚನ್ನಕೇಶವಯ್ಯ ಗ ರ್‍ಯ, ಪೆನ್‌ಷನ್ ಶೇಕ್ದಾರ್ ರಾಮರಾಯರೂ ಸ್ಕೂಲ್ ಮಾಸ್ಟರ್ ಎ ರಂಗಯ್ಯನವರೂ, ರೂಮ್ ಮೆಂಬರುಗಳೂ, ಇತರ ಅನೇಕ ಗೊಪ್ಪಮನುಷ್ಯರೂ ಸಭೆ ಸೇರಿದ್ದರು ಸದರಿ ರೀಡಿಂಗ್ ರೂಮಿನ ಸೆಕ್ರೆಟರಿ ಮ|| ರಂಗಯ್ಯನವರು ಬಹಳ ದಿನಗಳಿಂದಲೂ ರೀಡಿಂಗ್ ರೂಮ್ ಸ್ಥಾಪನೆಮಾಡಬೇಕೆಂದು ಗ್ರಾಮದ ಎಲ್ಲಾ ಜನಗಳಿಗೂ ಪ್ರೋತ್ಸಾಹಪಡಿಸಿ 9 ಜನ ಮೆಂಬರುಗಳನ್ನು ಚುನಾಯಿಸಿ ತಮ್ಮ ಉದ್ದೇಶವನ್ನು ಪೂರ್ತಿಮಾಡಿದರು ಇದು ಸರ್ವದಾ ನಡೆಯುತ್ತೆಂದು ಎಲ್ಲರೂ ಪ್ರಾರ್ಥಿಸಿದರು ಅನಂತರ ರೀಡಿಂಗ್ ರೂಮಿನಿಂದ ಉಂಟಾಗುವ ಪ್ರಯೋಜನವನ್ನು ಕುರಿತು ಪೆನ್‌ಷನ್ ಶೇಕ್ದಾರ್ ಮ|| ರಾಮರಾಯರು ಎಲ್ಲರಿಗೂ ತಿಳಿಯುವಂತೆ ಉಪನ್ಯಾಸಮಾಡಿದರು ಆ ಮೇಲೆ ಅಲ್ಲಿ ಸೇರಿದ್ದ ಸ್ಕೂಲ್ ಬಾಲಕರು ನಮ್ಮ ಶ್ರೀಮನ್ ಮಹಾರಾಜ ಸಾಹೇಬ್ ಬಹದೂರವರ ಮತ್ತು ಶ್ರೀಮದ್ಯುವರಾಜರವರ ಶ್ರೇಯಃಪ್ರಾರ್ಥನಾ ಗಾನಗಳನ್ನು ಹಾಡಿದರು ಅನಂತರ ಅಲ್ಲಿ ಸೇರಿದ್ದ ದೊಡ್ಡಮನುಷ್ಯರುಗಳನ್ನು ಗಂಧ ಪುಷ್ಪ ತಾಂಬೂಲಗಳಿಂದ ಆದರಿಸಿ, ಬಾಲಕರಿಗೆ ಸಕ್ಕರೆ ಕಡಲೆಹಿಟ್ಟು ಮುಂತಾದದ್ದು ವಿನಿಯೋಗಿಸಿ, ಕೂಟವನ್ನು ಮುಕ್ತಾಯಮಾಡಿದರು

ಕೃಷ್ಣರಾಜಪೇಟೆ ತಾಲ್ಲೂಕು ಸಂತೆ ಬಾಚಹಳ್ಳಿ

ಪಟ್ಟವನ್ನು ಹೊಂದಿದ 5 ನೇ ಜಾರ್ಜ್ ಸಾರ್ವಭೌಮರವರ ಪಟ್ಟಾಭಿಷೇಕ ಮಹೋತ್ಸವದ ಜ್ಞಾಪಕಾರ್ಥವಾಗಿ ಕಳೆದ ತಾ 12 ನೇ ಶುಕ್ರವಾರ ಇಲ್ಲಿನ ಸ್ಕೂಲ್ ಕಟ್ಟಡದಲ್ಲಿ ಗ್ರಾಮದ ಬ್ರಾಹ್ಮಣರು, ವೀರಶೈವರು, ಮಹಮ್ಮದೀಯರೇ ಮುಂತಾದ ಗ್ರಾಮಸ್ಥರು ಸೇರಿ ಬಹಳ ಸಂಭ್ರಮದಿಂದ ಮಹೋತ್ಸವವನ್ನು ನೆರವೇರಿಸಿದ ನಂತರ ಮ|| ಶೇಕ್ದಾರ್ ಕೆ ವೇದಾಂತಾಚಾರ್ಯ ಆಗ್ರಾಸನವನ್ನು ವಹಿಸಿದರು ಮ|| ಹೆಡ್ ಮಾಸ್ಟರ್ ವೆಂಕಟೇಶಯ್ಯನವರು ಜಾರ್ಜ್ ಸಾರ್ವಭೌಮರ ಮತ್ತು ನಮ್ಮ ಶ್ರೀಮನ್ ಮಹಾರಾಜರವರ ಗುಣಕಥನಮಾಡಿದರು ಮ|| ಕೆ ವೆಂಕಟೇಶಯ್ಯನವರೂ ಮ|| ರಾ|| ಶ್ರೀಕಂಠಯ್ಯನವರೂ ಆ ಉತ್ಸವದ ಜ್ಞಾಪಕಾರ್ಥವಾಗಿ ಈ ಗ್ರಾಮದಲ್ಲಿ ಒಂದು ವಾಚಕಶಾಲೆಯನ್ನು ಸ್ಥಾಪಿಸಬೇಕೆಂದೂ, ಪತ್ರಿಕೆಗಳನ್ನು ತರಿಸಿ ಓದುವುದರಿಂದ ಉಂಟಾಗತಕ್ಕ ಪ್ರಯೋಜನಗಳನ್ನು ಕುರಿತೂ ಸವಿಸ್ತಾರವಾಗಿ ಉಪನ್ಯಾಸಮಾಡಿದರು ಸಭಿಕರೆಲ್ಲಾ ಒಪ್ಪಿ ವಾಚಕಶಾಲೆಯನ್ನು ಸ್ಥಾಪಿಸಿದರು ವಾಚಕಶಾಲೆಗೆ ಈಗ 1 ವಾರಪತ್ರಿಕೆಗಳೂ, 2 ಮಾಸಪತ್ರಿಕೆಗಳೂ, ಸರ್ಕಾರಿ ಗೆಜೆಟೂ ಬರುತ್ತಲಿವೆ ಬಳಿಕ ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳೂ ಬಾಲಕ ಬಾಲಕಿಯರಿಗೆ ತಿಂಡಿಯೂ ಹಂಚಲ್ಪಟ್ಟು, ಎಲ್ಲರೂ ಏಕವಾಗಿ ಶ್ರೀಮದಿಂಡಿಯಾ ಸಾರ್ವಭೌಮರವರಿಗೂ ಶ್ರೀಮನ್ ಮಹಾರಾಜರವರಿಗೂ ಭಗವಂತನು ಆಯುರಾರೋಗ್ಯ ದಿಗ್ವಿಜಯತ್ತ ಕಾಪಾಡಲೆಂಬ ಜಯಘೋಷದೊಡನೆ ಸಭೆಯು ಬರಖಾಸ್ತಾಯಿತು

ಬಹುಮಾನ ವಿನಿಯೋಗ

ಆಂಗ್ಲೋ-ಹಿಂದೂಸ್ಥಾನಿ ಸ್ಕೂಲ್, ತುಮಕೂರು

ಕಳೆದ ತಿಂಗಳ ಅಂತ್ಯಭಾಗದಲ್ಲಿ ತುಮಕೂರು ಆಂಗ್ಲೋ ಹಿಂದೂಸ್ಥಾನಿ ಸ್ಕೂಲಿನಲ್ಲಿ ಊರಿನ ಪ್ರಮುಖರಿಂದ ಸಭೆ ಸೇರಿಸಲ್ಪಟ್ಟು ಸೂಚನೆ ಇದ್ದಂತೆ ಶ್ರೀಮನ್ ಮಹಾರಾಜರವರ ಮುಸಾಹೇಬ್ ಮಿ|| ಟಿ ಎನ್ ವಿರಾರ್ ಕಮಾಲುದ್ದೀನ್ ಅಲಿಖಾನ್ ಸಾಹೇಬರವರು ಅಗ್ರಾಸನವನ್ನು ವಹಿಸಿ, ಈ ಸ್ಕೂಲ್ ವಿದ್ಯಾರ್ಥಿಗಳಿಗೆ ಸರ್ಕಾರದವರು ದಯಪಾಲಿಸಿದ್ದ ಸುಮಾರು 70 ಪುಸ್ತಕಗಳನ್ನು ಸ್ವಹಸ್ತ ಬಹುಮಾನವಾಗಿ ವಿನಿಯೋಗಿಸಿದ ನಂತರ ಹೆಡ್ ಮಾಸ್ಟರ್ ಮಿ|| ಅಬ್ದುಲ್ ಮಜೀದ್ ಸಾಹೇಬರು ಸ್ಕೂಲಿನ ರಿಪೋರ್ಟನ್ನು ಓದಿದರು ಅದರಲ್ಲಿ ಸ್ಕೂಲು ಅಭಿವೃದ್ಧಿ ಸ್ಥಿತಿಗೆ ಬರುತ್ತಿರುವುದು ಕಂಡುಬಂತು ಈ ಸ್ಕೂಲಿನಲ್ಲಿ ಹಿಂದೆ ಯಾವಾಗಲೂ ಇಂಗ್ಲಿಷ್ ಲೋವರ್ ಸೆಕೆಂಡರಿ ಪರೀಕ್ಷೆಗೆ ಬಾಲಕರು ಹೋದದ್ದೇ ಇಲ್ಲ ಕ್ಲಾಸುಗಳಿಗೆ ತಕ್ಕಷ್ಟು ಮಾಸ್ಟರುಗಳು ಇಲ್ಲದಿದ್ದಾಗ್ಯೂ ಹೆಡ್ ಮಾಸ್ಟರವರು ೬ ನೇ ತರಗತಿಯನ್ನಿಟ್ಟು, ಕಳೆದ ವರ್ಷ ಇಬ್ಬರನ್ನು ಇಂಗ್ಲಿಷ್ ಲೋ ಸೆಕೆಂಡರಿಯಲ್ಲಿ ಪ್ಯಾಸ್‌ಮಾಡಿಸಿರುವುದು ತುಂಬಾ ಸ್ತೋತ್ರಾರ್ಹವಾಗಿದೆ ಕೆಲವು ಬಾಲಕರು ಇಂಗ್ಲಿಷಿನಲ್ಲಿಯೂ, ಉರ್ದುವಿನಲ್ಲಿಯೂ, ಸರ್ವಶಕ್ತನಾದ ದೇವರ, ಚಕ್ರವರ್ತಿ ಸಾರ್ವಭೌಮರವರ ಶ್ರೀಮನ್ ಮಹಾರಾಜರವರ ಪ್ರಾರ್ಥನೆಗಳನ್ನು ಹೇಳಿದ್ದನ್ನೂ, ಮೂರು ಮಂದಿ ಇಂಗ್ಲಿಷಿನಲ್ಲಿ ಒಬ್ಬರಿಗೊಬ್ಬರು ಸಂವಾದಮಾಡಿದ್ದನ್ನೂ ಕೇಳಿ ಸಭಿಕರೆಲ್ಲಾ ಬಹಳ ಸಂತೋಷಪಟ್ಟರು

ಕಡೆಯಲ್ಲಿ ಅಗ್ರಾಸನಾಧಿಪತಿಗಳು ಅಪ್ಪಣೆಕೊಡಿಸಿದ್ದೇನೆಂದರೆ—ಈ ಸ್ಕೂಲಿಗೆ 4 ಭಾಷೆಗಳಲ್ಲಿ ಮುಖ್ಯವಾಗಿ ಇಂಗ್ಲಿಷ್, ಉರ್ದುವಿನಲ್ಲಿ ಪ್ಯಾಸಾಗಿರುವ ಹಿಂದೂ ಮತಸ್ಥರಾದ ಮ|| ಸುಬ್ಬರಾಯಪ್ಪನವರನ್ನು ಗೌರ್ನಮೆಂಟಿನವರು ಮಾಸ್ಟರನ್ನಾಗಿ ನೇಮಿಸಿರುವುದೂ, ಇವರು ಕಷ್ಟಪಟ್ಟು ಕೆಲಸಮಾಡುತ್ತಿರುವುದೂ ತುಂಬಾ ಸ್ತೋತ್ರಾರ್ಹವಾಗಿದೆ ಎಲ್ಲಾ ಮಾಸ್ಟರುಗಳೂ ತಮ್ಮ ಅಲ್ಪಸಂಬಳವನ್ನು ಲಕ್ಷ್ಯಮಾಡದೆ ಸ್ಕೂಲನ್ನು ಅಭಿವೃದ್ಧಿಗೆ ತಂದಿರುತ್ತಾರೆ ಇವರ ಸಂಬಳದ ವಿಚಾರದಲ್ಲಿ ಇಲಾಖೆಯವರು ಗಮನಕೊಡ್ತಾರೆಂದು ನಿರೀಕ್ಷಿಸುತ್ತೇನೆ ಈ ಸ್ಕೂಲಿನ ಅಭಿವೃದ್ಧಿಗಾಗಿ ಮಿ|| ಗಳಾದ ದಾವೂದ್ ಸೇಟರೂ, ಮೀರ್ ... ರವರೂ, ಮಹಮ್ಮದ್ ಇಸೂಫ್ ರವರೂ, ಪೀರ್ ಖಾನ್ ರವರೂ ಬಹಳ ಸಹಾಯಮಾಡುತ್ತಾ ಬಂದಿದ್ದಾರೆ ಇಲಾಖಾ ಅ|| ಡೆಪ್ಯುಟಿ ಇನ್ಸ್‌ಪೆಕ್ಟರ್ ... ಅಹಮ್ಮದ್ ಹುಸೇನ್ ರವರು ಬಾಲಕರ ಪ್ರೋತ್ಸಾಹಕ್ಕಾಗಿ ತಮ್ಮ ಸ್ವಂತ ... ದಿಂದ ಇಂಗ್ಲಿಷಿನಲ್ಲಿ ತೇರ್ಗಡೆಯಾದ ಒಬ್ಬ ವಿದ್ಯಾರ್ಥಿಗೆ ಒಂದು ಗಡಿಯಾರವನ್ನು ಇನಾಮು ಕೊಟ್ಟಿದ್ದಾರೆ ಈ ಸ್ಕೂಲಿಗೆ ಜಾಗ್ರತೆ ಕಡಪಾ ಕಲ್ಲುಗಳನ್ನು ಹಾಕಿಸುವಂತೆ ಮಂಜೂರು ಮಾಡಿದ ಇನ್ಸ್‌ಪೆಕ್ಟರ್ ಜನರಲ್ ಮ|| ಎಂ ಶಾಮರಾಯರಿಗೂ, ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಮ|| ಸಿ ಕೃಷ್ಣರಾಯರಿಗೂ ವಂದನೆಗಳನ್ನು ಸಲ್ಲಿಸತಕ್ಕದ್ದೆಂದು ಹೇಳಿದರು

ತರುವಾಯ ಚಕ್ರವರ್ತಿ ಸಾರ್ವಭೌಮರವರ, ಶ್ರೀಮನ್ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ ಸಿ ಎಸ್ ಐ ರವರ ಶ್ರೇಯಃಪ್ರಾರ್ಥನೆಗಳು ನಡೆದು ಕಡೆಯಲ್ಲಿ ಗಂಧ ಪುಷ್ಪ ತಾಂಬೂಲಗಳನ್ನು ಹಂಚಿ ಸಭೆಯನ್ನು ಮುಕ್ತಾಯಮಾಡಿದರು

ವಿದ್ಯೆ ಹೆಚ್ಚೋ, ಸದ್ಗುಣ ಹೆಚ್ಚೋ

ದೇವರು ಪ್ರಾಣಿಗಳಲ್ಲೆಲ್ಲಾ ಮನುಷ್ಯನನ್ನು ಶ್ರೇಷ್ಠನನ್ನಾಗಿ ಮಾಡಿ ಅವನಿಗೆ ಜ್ಞಾನವೆಂಬ ಮಹಾ ವರವನ್ನು ದಯಪಾಲಿಸಿರುತ್ತಾನೆ ಹೀಗಿರಲು ಪ್ರತಿ ಒಬ್ಬನೂ ದೇವರ ಕೃಪೆಗೆ ಪಾತ್ರನಾಗಬೇಕೆಂಬ ಉದ್ದೇಶದಿಂದಲೂ, ತನ್ನ ಹೆಸರು ಲೋಕದಲ್ಲೆಲ್ಲಾ ಹರಡಬೇಕೆಂತಲೂ ತನ್ನ ಕೈಲಾದ ಸಾಹಸವನ್ನೆಲ್ಲಾ ಮಾಡುವನು ವಿದ್ಯೆಯೇ ಇವನಿಗೆ ಸುಲಭವಾದ ಸ್ನೇಹಿತನು ಆದರೆ "ಅಲ್ಪವಿದ್ಯೋ ಮಹಾಗರ್ವೀ" ಎಂಬಂತೆ ಅಸಂಪೂರ್ಣವಿದ್ಯೆಯಿಂದ ಮನುಷ್ಯನಿಗೆ ಡಂಭವೂ, ಸೊಕ್ಕು, ಅಸೂಯೆಯೂ ಉಂಟಾಗಿ ಅನೇಕ ಕಷ್ಟಗಳಿಗೆ ಗುರಿಯಾಗುವನು ಅಲ್ಪವಿದ್ಯೆಯುಳ್ಳವನಿಗೆ ಯಾವುದೇ ಒಂದು ಕೆಲಸಮಾಡುವುದಕ್ಕೂ ಅನುಭವವಿರುವುದಿಲ್ಲ ಆದರೆ ಬೇರೆಯವರು ಬುದ್ಧಿವಾದ ಎಚ್ಚರಿಕೆಗಳನ್ನು ಹೇಳಿದರೆ ಅವುಗಳನ್ನು ಲಕ್ಷ್ಯಮಾಡುವುದೂ ಇಲ್ಲ ಹೀಗಾಗಿ ಅವನು ಮಾಡುವ ಕೆಲಸಗಳೆಲ್ಲವೂ ಕೊನೆಗೆ ಕೆಟ್ಟೇ ಹೋಗುವುವು ಅಂಥವನು ಪರರ ಸುಖವನ್ನು ಹಾಳುಮಾಡುವುದಲ್ಲದೆ ತನ್ನ ಸುಖವನ್ನೂ ತಾನೇ ಕಳೆದುಕೊಳ್ಳುವನು ಹೀಗೆ ಮನುಷ್ಯನಿಗೆ ಅಲ್ಪವಿದ್ಯೆಯು ಶತ್ರುವಾಗಿದೆ

ಸಂಪೂರ್ಣವಿದ್ಯೆಯಿಂದ ಮನುಷ್ಯನು ಸುಖವಾಗಿ ಜೀವಿಸುವನು ಅವನು ತನ್ನ ಕೆಲಸಗಳನ್ನು ತಾನು ಮಾಡಿಕೊಳ್ಳುವುದಲ್ಲದೆ ಪರರಿಗೆ ತನ್ನ ಕೈಲಾದ ಸಹಾಯವನ್ನೂ ಮಾಡುವನು ಇವನ ಕೀರ್ತಿಯು ಪ್ರಪಂಚದಲ್ಲೆಲ್ಲಾ ಹಬ್ಬುವುದು ಆದರೆ ಇಂಥ ವಿದ್ಯಾವಂತನಿಗೆ ಸದ್ಗುಣಗಳು ಇಲ್ಲದಿದ್ದರೆ ಯಾವ ಜನರೂ ಇವನನ್ನು ಲಕ್ಷ್ಯಮಾಡುವುದಿಲ್ಲ ಇವನಾದರೋ ತನ್ನ ವಿದ್ಯಾಗರ್ವದಿಂದ ಜನಗಳನ್ನು ಆದರಿಸದೆ ಅವರ ದೂಷಣೆಗೆ ಗುರಿಯಾಗುವನು ಇವನು ಸದ್ಗುಣವಿಲ್ಲದುದರಿಂದ ಜನಗಳ ಕೋಪಕ್ಕೆ ಪಾತ್ರನಾಗಿ ಬಹಳ ಕಷ್ಟಪಡುವನು ಪೂರ್ವದಲ್ಲಿ ರಾವಣನು ಆ ಕಾಲದ ಜನಗಳಿಗಿಂತಲೂ ಎಷ್ಟೋ ವಿದ್ಯಾವಂತನಾದಾಗ್ಯೂ ಸದಾಚಾರನಲ್ಲದುದರಿಂದ ಅರಿಷಡ್ವರ್ಗಗಳ ವಶನಾಗಿ ಕೊನೆಗೆ ದುರ್ಗತಿಯನ್ನು ಹೊಂದಿದನು ತನ್ನ ಬಂಧುವರ್ಗಕ್ಕೂ, ತನ್ನ ಪ್ರಜೆಗಳಿಗೂ ತಾನೇ ಮೃತ್ಯುವಾಗಿ ಯುಗಯುಗಾಂತರದಲ್ಲಿಯೂ ಕೂಡ ಲೋಕಕಂಟಕನೆಂಬ ಹೆಸರಿನಿಂದ ಕರೆಯಲ್ಪಡುವನು

ಸದ್ಗುಣಿಯಾದರೋ ಬೇಗನೆ ಜನಗಳ ವಿಶ್ವಾಸಕ್ಕೆ ಪಾತ್ರನಾಗುವನು ಸದ್ಗುಣಿಯು ದರಿದ್ರನಾದರೂ, ವಿದ್ಯಾಹೀನನಾದರೂ ಕುರೂಪಿಯಾದರೂ ಕುಲಹೀನನಾದರೂ ತನ್ನ ಸದ್ಗುಣದಿಂದ ಪ್ರಕಾಶಿಸುವನು ದುರ್ಗುಣದಿಂದ ನರಕವೂ, ಸದ್ಗುಣದಿಂದ ಮೋಕ್ಷವೂ ಉಂಟಾಗುತ್ತವೆ ಹೀಗಿರಲು ದುರ್ಗುಣಿಯ ವಿಷ್ಣುಪೂರ್ತಿಗಿಂತಲೂ ಸದ್ಗುಣಿಯ ಬಡತನವೇ ಒಳ್ಳೆಯದಲ್ಲವೇ?

ಕಂ ಗುಣವಾನಿಯಿಂದಭೋಗತಿ

ಗುಣದಿಂ ಸ್ವರ್ಗಾಪವರ್ಗ ಸುಖಮುಕ್ತ್ಯಮೆನಲ್

ಗುಣಹೀನನ ಸಿರಿಯಿಂದಂ

ಗುಣಿಗಳ ಬಡತನಮೆ ನಾಡೆಯುಂ ಲೇಸಲ್ತೆ

ಎಂದು ಒಬ್ಬ ಮಹಾ ಕವಿಯು ಹೇಳಿರುವನು

ಸದ್ಗುಣದಿಂದ ಸಕಲ ವಸ್ತುಗಳೂ ಪೂಜ್ಯವಾಗುವುವು ನೀರು ಹಾಲಿನೊಡನೆ ಸೇರಿ, ಹಾಲು ಮೋಸ ದೊರಕುವುದಕ್ಕೆ ಹೇಗೆ ಯೋಗ್ಯವಾಗುವುದೋ ಹಾಗೆ ಸದ್ಗುಣಿಗಳ ಸಹವಾಸದಿಂದ ಒಬ್ಬ ದುರ್ಗುಣಿಯು ಸೇರಿದರೆ ಆ ದುರ್ಗುಣಿಯು ಸದ್ಗುಣಿಯ ಮರ್ಯಾದೆಯನ್ನೇ ಹೊಂದುವನು ಅನೇಕ ಹಂಸೆಗಳ ಗುಂಪಿನಲ್ಲಿ ಒಂದು ಹದ್ದು ಸೇರಿದರೆ ನೋಡುವವರು ಅದನ್ನು ಹಂಸೆಯೆಂದೇ ಎಣಿಸುತ್ತಾರಲ್ಲದೆ ಹದ್ದೆಂದು ಎಣಿಸುತ್ತಾರೆಯೇ?

ಹಾವಿನ ತಲೆಯ ಮೇಲಿದೆ ಎಂದು ಹೇಳುವ ಮಣಿಯು ಎಷ್ಟೇ ಪವಿತ್ರವಾಗಿದ್ದರೂ ಅದು ದುಷ್ಟಜಂತುವಾದುದರಿಂದ ಜನಗಳು ಅದನ್ನು ಕಂಡು ಹೆದರಿ ನಿರಾಕರಿಸುವ ಹಾಗೆ ದುಷ್ಟಜನರು ಎಷ್ಟೇ ವಿದ್ಯಾವಂತರಾಗಿದ್ದರೂ ಅವರನ್ನು ಜನರು ನೋಡಿ ಹೆದರುವುದಲ್ಲದೆ ಅವರಿಗೆ ಯಾವಾಗಲೂ ಹಾನಿಯನ್ನೇ ಕೋರುತ್ತಿರುವರು

ಸದ್ಗುಣಿಯು ವಿದ್ಯಾವಂತನಲ್ಲದಿದ್ದರೂ, ಏನೂ ತಿಳಿದವನಲ್ಲದಿದ್ದರೂ ಮತ್ತೊಬ್ಬರು ಹೇಳುವಂತೆ ಕೇಳುವುದರಿಂದ ಸುಖವಾಗಿ ಜೀವಿಸುತ್ತಾ, ಯಾವಾಗಲೂ ಬೇರೆಯವರಿಗೆ ಸಹಾಯಕನಾಗಿರುತ್ತಾ, ಹತ್ತಾರು ಜನಗಳು ಮೆಚ್ಚುವಂಥ ಕೆಲಸಗಳನ್ನು ಮಾಡುವನು ಶೀಘ್ರವಾಗಿ ದೇವರ ದಯೆಗೆ ಪಾತ್ರನಾಗಿ ನಿರಂತರವಾದ ಸುಖವನ್ನು ಪಡೆಯುವನು ಆದುದರಿಂದ ವಿದ್ಯೆಗಿಂತಲೂ ಸದ್ಗುಣವೇ ಹೆಚ್ಚು

ಎಸ್ ವಿ ಭಾವೆ, ಚನ್ನಪಟ್ಟಣ

ಲೇಡಿ ಸ್ಯಾಂಡೊ ಮಿಸ್ ತಾರಾದೇವಿಯವರು

[ರಾಜಧಾನಿಯ ಒಬ್ಬ ಹಿಂದೂ ವಿದ್ಯಾವತಿಯು ಬರೆದದ್ದು]

ದೇಶಾಭಿಮಾನಿಗಳಾ,—ಈ ನಮ್ಮ ಭರತಖಂಡವು ಎಂಥಾದ್ದೆಂದು ದಯವಿಟ್ಟು ಒಂದು ಗಳಿಗೆ ಜ್ಞಾಪಿಸಿಕೊಳ್ಳಿ ಪ್ರಪಂಚದಲ್ಲಿ ಸತ್ಯ, ಧರ್ಮಗಳನ್ನು ಪ್ರಕಟಪಡಿಸಲು ಶ್ರೀಮನ್ನಾರಾಯಣನು ಲಕ್ಷ್ಮೀಸಮೇತನಾಗಿ ಇಕ್ಷ್ವಾಕುವಂಶದಲ್ಲಿ ಅವತರಿಸಿ ಅನೇಕ ಕಾಲ ರಾಜ್ಯಭಾರಮಾಡಿದ್ದು ಈ ಭೂಮಿಯಲ್ಲೇ ಅಲ್ಲವೇ? ಧರ್ಮರಾಜನು, ತನ್ನ ಸಹೋದರರೊಡನೆಯೂ ಸತೀಮಣಿಯಾದ ದ್ರೌಪದಿಕುಮಾರಿಯೊಡನೆಯೂ ಇಂದ್ರಪ್ರಸ್ಥದಲ್ಲಿ ರಾಜ್ಯವಾಳಿ ಮಹಾ ಯಜ್ಞಗಳನ್ನು ಮಾಡಿ ಧರ್ಮಸ್ಥಾಪನೆ ಮಾಡಿದ್ದು ಈ ಭರತಖಂಡದಲ್ಲಿಯೇ ಅಲ್ಲವೇ? ಭಾರತಮಾತೆಯು ಅನೇಕ ವೀರಪುತ್ರರನ್ನು ಪಡೆದು ಅತಿ ವೈಭವದಲ್ಲಿರಲಿಲ್ಲವೇ? ಆ ವೀರರಾದ ಮಕ್ಕಳಾದರೋ ಜನನಿಯಾದ ಭಾರತಮಾತೆಗೆ ಸಲುವಾಗಿ ತಮ್ಮ ಪ್ರಾಣಗಳನ್ನು ತೃಣವಾಗಿ ಭಾವಿಸಿದ್ದು ಹೊಸ ವಿಚಾರವಿಲ್ಲ, ಅಲ್ಲದೆ ಏಕಮತ್ಯವೆಂಬುದು ಅವರಲ್ಲಿ ಎಷ್ಟರಮಟ್ಟಿಗೆ ಇದ್ದಿತೆಂಬುವುದನ್ನು ಕೇಳಬಲ್ಲೆವು ಇಂಥ ಭಾರತ ಜನನಿಗೆ ಈಗ ಎಂತಹ ವಿಪತ್ತು? ಅಂಥ ವೀರರಾದ ಮಕ್ಕಳೆಲ್ಲಿ ಹೋದರು? ಅಂತಹ ಶೌರ್ಯ, ಕಾಯಪುಷ್ಟಿಗಳನ್ನುಳ್ಳ ತನಯರು ಎಲ್ಲಿ ಮರೆಯಾಗಿರುವರು? ಹೀಗೆ ಭಾರತ ಜನನಿಯು ವ್ಯಸನಪಡುತ್ತಿರುವ ಸಮಯದಲ್ಲಿ ಒಂದು ನಕ್ಷತ್ರವು ಆಕಾಶದಲ್ಲಿ ಹೊಳೆಯಿತು! ಎಂತಹ ನಕ್ಷತ್ರ! ಹಿಂದಿನ ವೀರತನಯರು ತಮ್ಮ ಜನನಿಯನ್ನು ಸಮಾಧಾನ ಪಡಿಸುವುದಕ್ಕಾಗಿ ಒಂದು

[illegible] ಪ್ರಧಮವಾಗಿ ಭಾರತಜನರಿಗೆ ಕಳುಹಿಸಿಕೊಟ್ಟರು ಹೀಗೆಂದು [illegible] ಪ್ರಕಾರವಾಗಿ ಸ್ತೋತ್ರಮಾಡಲು ಅರ್ಹರಾದ ಸೌ॥ ತಾರಾಬಾಯಿ [illegible]ಯವರಿಗೆ ಮೈಸೂರಿನ ಸ್ತ್ರೀಯರೆಲ್ಲರೂ ಏಕಮನಸ್ಕರಾಗಿ ಒಂದು [illegible]ಮಾನವನ್ನು ಕೊಟ್ಟು ಸಂತೋಷಪಡಿಸಿದ್ದು ಎಷ್ಟು ಆನಂದಕರವಾಗಿದೆ! [illegible] ಕೆಲಸಕ್ಕೆ ಪ್ರಮುಖರಾಗಿ ನಿಂತು ಕೆಲಸಮಾಡಿದ ಸೌ॥ ಶ್ರೀರಂಗಮ್ಮನವರಿಗೆ [illegible] ಪೂರ್ವಕವಾದ ವಂದನೆಗಳನ್ನು ಸಮರ್ಪಿಸೋಣ

ಈ ಉತ್ಸವದ ಸಂಭ್ರಮವನ್ನು ಕೊಂಚ ವಿವರಿಸುವೆನು —ಡಿಸೆಂಬರ್ [illegible] 11 ನೇ ಗುರುವಾರ ಸಾಯಂಕಾಲ ಸೌ॥ ತಾರಾಬಾಯಿಯವರಿಗೆ ಬಹುಮಾ[illegible] ಕೊಡುವುದಾಗಿ ನಿಶ್ಚಯಿಸಿ, ಆ ದಿವಸ ಸಾಯಂಕಾಲ ಅನೇಕ ದೊಡ್ಡ [illegible] ಮನುಷ್ಯರ ಸ್ತ್ರೀಯರು ಟೆಂಟ್ ಹಾಲಿನಲ್ಲಿ ಹಾಜರಾಗಿದ್ದರು ಸುಮಾರು [illegible] ಬಯಾಸ್ಕೋಪ್ ಪ್ರಾರಂಭವಾಯಿತು ಒಂದು ಪ್ರವೇಶವು ಮುಗಿದ [illegible] ಸೌ॥ ತಾರಾಬಾಯಿಯವರು ಬಂದು ಕೆಲವು ಮಾತುಗಳನ್ನು ಹೇಳುವು[illegible] ಅವರು ಹೇಳಿದ ಮುಖ್ಯ ವಿಷಯಗಳೇನೆಂದರೆ—

ಪ್ರಿಯ ಮಾತೃ, ಸಹೋದರಿಯರೇ,—ಈ ದಿನ ನಿಮ್ಮಗಳನ್ನೆಲ್ಲಾ ನೋಡಿ [illegible] ಸಂತೋಷವನ್ನು ನನ್ನ ಮಾತುಗಳು ವಿವರಿಸಲಾರವು ನೀವೆಲ್ಲರೂ [illegible] ನನ್ನಲ್ಲಿ ಅಭಿಮಾನವಿಟ್ಟು ನಾನು ಮಾಡುವ ಈ ಅಲ್ಪ ಕಾರ್ಯ[illegible] ಮುಖ್ಯವಾಗಿ ತಿಳಿವು ಇಲ್ಲ ಈ ದಿನ ನನಗೆ ದೊರಕಿದಷ್ಟು ಸಂತೋಷಪಡಿ[illegible] ಇಂತಹ ನಿಮ್ಮ ಉದಾರ ಬುದ್ಧಿಗೆ ನಾನು ಎಂದೆಂದಿಗೂ ಕೃತಜ್ಞಳಾಗಿ [illegible]ಶ್ಚರ್ಯ ನಾನು ಈಗ ಮಾಡುವ ಅಲ್ಪ ಕೆಲಸಗಳಿಗಿಂತ ಎಷ್ಟೋ [illegible] ಕೆಲಸಗಳನ್ನು ಮಾಡಿ ಅನೇಕ ಜನ ವೀರರು ಪ್ರಸಿದ್ಧಿಪಡೆದಿರು[illegible] ಇನ್ನು ನಾನು ಮಾಡುವುದೇನಿದೆ? ನಾನು ಇಲ್ಲಿಗೆ ಬಂದು ನಿಮ್ಮಗಳ [illegible] ನನ್ನ ಸಾಹಸಕಾರ್ಯಗಳನ್ನು ಪ್ರದರ್ಶಿಸುವುದು ಒಂದು ಉದ್ದೇಶವಿದ್ದ[illegible] ಅದೇನೆಂದರೆ ಅಬಲೆಯರೆಂದು ಹೇಳಿಕೊಳ್ಳುವ ಸ್ತ್ರೀಯರಾದ [illegible] ಕೂಡ ಅಭ್ಯಾಸದಿಂದ ಪುರುಷರಂತೆ ಬಲಶಾಲಿಗಳಾಗಿಯೂ, ದೃಢಕಾ[illegible] ಇರಬೇಕೆ ಬುವುದೊಂದೇ ನನ್ನ ಆಶಯವಾಗಿದೆ ಸ್ತ್ರೀಯರಿಂದ [illegible] ದೇಶವು ಅಭಿವೃದ್ಧಿಗೆ ಬಂದರೂ ಬರಬಹುದು, ಹಾಳಾದರೂ ಆಗಬಹುದು [illegible] ದೇಶವು ಇಷ್ಟು ಉನ್ನತಸ್ಥಿತಿಗೆ ಬಂದಿರುವುದು ಆ ದೇಶದ ಸುಗುಣ[illegible] ಸ್ತ್ರೀಯರಿಂದಲೇ ಅಲ್ಲವೇ? ಸ್ತ್ರೀಯರಿಂದ ಏನೂ ಆಗುವುದಿಲ್ಲವೆಂದು [illegible] ಹೇಳಬಹುದು ಆ ಸಂದರ್ಭದಲ್ಲಿ ದೇಶೋನ್ನತಿಗೆ ಕಾರಣರಾದ ಪುರು[illegible] ಬಾಲ್ಯದಿಂದಲೂ ಬೆಳಸಿ ಅವರಿಗೆ ವಿದ್ಯಾಭ್ಯಾಸ ಮುಂತಾದವುಗಳ ಭಾರ[illegible] ಸ್ತ್ರೀಯರಲ್ಲವೇ ವಹಿಸಬೇಕು? ತಾಯಿಯು ಆರೋಗ್ಯವುಳ್ಳವಳಾಗಿಯೂ, [illegible]ಯುಳ್ಳವಳಾಗಿಯೂ ಇದ್ದರೆ ಮಕ್ಕಳು ಕೂಡ ಹಾಗೇ ಆಗುವುದರಲ್ಲಿ ಸಂದೇಹ [illegible] ದೇಶೋನ್ನತಿಗೆ ಕಾರಣರಾದ ಪುರುಷರು ಬಲಶಾಲಿಗಳಾಗಿಯೂ, ಆರೋ[illegible]ವಂತರಾಗಿಯೂ ಇರಬೇಕು "ಆರೋಗ್ಯವೇ ಭಾಗ್ಯ" ಎಂತಹ ಐಶ್ವರ್ಯ[illegible] ಕೂಡ ಅಂತಹ ಸುಖವನ್ನು ಕೊಡಲಾರದು ಆರೋಗ್ಯವೇ ದೇಶೋನ್ನತಿಗೆ [illegible] ಇಂತಹ ಭಾಗ್ಯವು ಅಂಗಸಾಧಕೆಯಿಂದಲ್ಲದೆ ಮತ್ಯಾ[illegible]ವುದರಿಂದಲೂ ಉಂಟಾಗುವುದಿಲ್ಲವೆಂಬುವುದು ಖಂಡಿತ —ಈಚೀಚೆಗೆ ನಮ್ಮ [illegible] ದೇಶದಲ್ಲಿ ಕೆಲವು ಚಿಕ್ಕ ವಯಸ್ಸಿನ ಹುಡುಗರೆಲ್ಲರೂ ಅಕಾಲಮರಣಕ್ಕೆ [illegible]ಗುತ್ತಲೂ ನಾನಾ ವಿಧವಾದ ವ್ಯಾಧಿಗಳಿಂದ ಪೀಡಿತರಾಗಿಯೂ, [illegible] ಕೌಪಮನೆಯಾದ ಗೃಹಗಳಲ್ಲಿ ಶಾಂತಿ ಸುಖಗಳಿಲ್ಲದೆ ನರಳುತ್ತಿರುವರು [illegible] ಕಾರಣವನ್ನು ಪರ್ಯಾಲೋಚಿಸಿ ನೋಡಿದರೆ ಬಾಲ್ಯದಿಂದಲೂ ಸರಿಯಾದ [illegible] ಇಲ್ಲದೆ ಇರುವುದೆಂದು ಖಂಡಿತವಾಗಿಯೂ ಹೇಳಬಹುದು ಭಗಿನಿ[illegible] ಇನ್ನು ಮೇಲಾದರೂ ನೀವುಗಳೆಲ್ಲಾ ನಿಮ್ಮ ಮಕ್ಕಳಿಗೆ ಸರಿಯಾದ ಅಂಗ[illegible]ವನ್ನು ಮಾಡಿ ಬೆಳಸುವುದರಿಂದ ಅನೇಕ ರೋಗಗಳ ಹುಟ್ಟನ್ನು ಅವರಿ[illegible]ದೆ ಪ್ರಾರಂಭದಲ್ಲೇ, ಧನ ರಕ್ಷಣೆಗಳನ್ನು ಮಾಡಬಹುದು ಅಂಗಸಾಧ[illegible] ರೋಗಗಳು ಬೇಗ ಗುಣವಾಗುವವೆಂಬ ಸಂದೇಹವು ನಮ್ಮ ಮನಸ್ಸ[illegible] ಬಾಧಿಸಬಹುದು ಅದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ [illegible] ದಿವಸಗಳ ಹಿಂದೆ ಒಬ್ಬ [illegible] ದೊಡ್ಡ ಮನುಷ್ಯರು ಪಾರ್ಶ್ವವಾಯುವಿ[illegible] ಬಹಳ ಬಾಧೆಪಡುತ್ತಿದ್ದರು ಆಗ ಒಬ್ಬ ದೊಡ್ಡ ಡಾಕ್ಟರೊಬ್ಬರು ಅವರ [illegible]ವನ್ನು ಪರಿಹರಿಸುವುದೆಂಬ ಭರವಸೆಕೊಟ್ಟು ಅವರಿಂದ ದಿವಸಾ ಅಂಗಸಾಧ[illegible]ವನ್ನು ಮಾಡಿಸುತ್ತಾ ಬಂದರು ಕೆಲವು ದಿನಗಳಲ್ಲೇ ಅವರ ರೋಗವು [illegible]ವಾಗಿ ಗುಣವಾಯಿತು ಹೀಗೆ ಅತಿ ಶ್ರೇಷ್ಠವಾದ ಯೋಚನೆಯನ್ನು [illegible] ಆ [illegible] ಮೊದಲಿಗೆ ಆ ಪಾರಸಿ ದೊಡ್ಡ ಮನುಷ್ಯರು ಯಾವ [illegible]ವನ್ನು ತಾನೇ ಮಾಡಿದ್ದಾರು? ನಾನೇನೂ ಬಹಳ ತಿಳಿದವಳಲ್ಲ, ವಿದ್ಯಾವ[illegible] ಅಲ್ಲ ನೀವುಗಳೆಲ್ಲಾ ನಾನು ಬುದ್ಧಿ ಹೇಳುತ್ತಿರುವೆನೆಂದು ಭಾವಿಸಕೂ[illegible] ನನ್ನ ಅನುಭವವು ಎಷ್ಟರಮಟ್ಟಿಗೆ ಇದೆ ಎಂಬುವುದನ್ನು ಮಾತ್ರ ತಿಳಿಯ[illegible] ಸುಮ್ಮನೆ ಮಾತನಾಡುತ್ತಾ ನಿಮ್ಮ ಕಾಲವನ್ನು ಕಳೆಯುತ್ತಿದೇನೆ [illegible] ನೀವು ನನ್ನನ್ನು ಸಹೋದರಿಯಂತೆಯೂ, ಮಗಳಂತೆಯೂ [illegible], ನಾನಾಡಿದ ಮಾತುಗಳಲ್ಲಿಯೂ, ಮಾಡುವ ಕೆಲಸಗಳಲ್ಲಿಯೂ ಏನು [illegible]ದ್ದರೂ ಕ್ಷಮಿಸಿ ಸಂತೋಷಿಸಬೇಕೆಂದು ಪ್ರಾರ್ಥಿಸುತ್ತೇನೆ

ಮೇಲೆ ಹೇಳಿದ ರೀತಿಯಾಗಿ ಉಪಕಾರಿಯಾದ ಸೌ॥ ತಾರಾಬಾಯಿಯವರು [illegible] ತಮ್ಮ ಶಕ್ತಿಯನ್ನು ತೋರ್ಪಡಿಸತಕ್ಕ ಆಟಗಳಿಲ್ಲವೂನ್ನೂ ತೋರಿ[illegible] ಮಧ್ಯಮಧ್ಯೆ ಬಯಾಸ್ಕೋಪಿನ ವಿಚಿತ್ರವೂ, ಮನೋರಂಜಕವೂ ಆದ [illegible] ಪ್ರದರ್ಶನವು ನಡೆಯುತ್ತಿತ್ತು

[illegible] ಸೌ॥ ಶ್ರೀರಂಗಮ್ಮನವರು ಸೌ॥ ತಾರಾಬಾಯಿಯವರ ಚರಿತ್ರೆ[illegible] ಸಂಕ್ಷೇಪವಾಗಿ ಸಭಿಕರಿಗೆ ವಿಜ್ಞಾಪಿಸಿ ಎಲ್ಲರ ಅಭೀಷ್ಟದಂತೆ ಒಂದು [illegible] ವೇಷಗಳಿಂದಲೂ ಪುಷ್ಪಮಾಲಿಕೆಯಿಂದಲೂ ಅವರನ್ನು ಅಲಂಕರಿಸಿ [illegible] ಆಗ ಸೌ॥ ತಾರಾಬಾಯಿಯವರು ಸಭಿಕರಿಗೆ ನಮಸ್ಕರಿಸಿ [illegible]—ಭಗಿನಿಯರಿರಾ ನೀವುಗಳೆಲ್ಲಾ ಇಲ್ಲಿ ಸೇರಿ ಮೈಸೂರಿ[illegible] ಧರ್ಮಪ್ರಕಾರವಾದ ಏಕಮತ್ಯವಿದೆ ಎಂದು ತೋರಿಸುವಂತೆ ನನಗೆ ಈ [illegible]ವನ್ನು ನೀಡಿರುವಿರಿ ಇದಕ್ಕೆ ನಾನು ಯೋಗ್ಯಳೆಂದು ಎಂದಿಗೂ [illegible] ಆದರೆ ಇದನ್ನು ನಾನು ಪರಿಗ್ರಹಿಸುವುದಕ್ಕೆ ಒಂದು ಕಾರಣವುಂಟು [illegible] ಅಂತಹ ಯೋಗ್ಯತೆಯನ್ನು ಪಡೆಯಲು "ಹೀಗೆ ಹೋಗು" ಎಂಬ [illegible]ವನ್ನು ಈ ಬಹುಮಾನವು ತೋರಿಸುವುದು ಇದನ್ನು ನಾನು ಎಂದೆಂ[illegible] ಅಗಲಲಾರೆನು ಯಾವಾಗಲೂ ನನ್ನ ಬಳಿಯಲ್ಲಿಟ್ಟುಕೊಂಡು ನೋಡಿದಾ[illegible] ಇದು ಮೈಸೂರಿನಲ್ಲಿರುವ ನನ್ನ ಭಗಿನಿಯರಿಂದ ಕೊಡಲ್ಪಟ್ಟದ್ದೆಂದು [illegible]ತ್ತೇನೆ ಇಂತಹ ಉಪಕಾರಿಗಳಾದ ನಿಮಗೆ ನಾನು ನನ್ನ ಕೃತಜ್ಞತೆಯನ್ನು [illegible] ರೀತಿಯಿಂದ ತೋರ್ಪಡಿಸಲಿ? ಇನ್ನು ನಿಮ್ಮ ಅನುಜ್ಞೆಯಾದರೆ ಶೀಘ್ರ[illegible] ಮದರಾಸನ್ನು ಕುರಿತು ಹೊರಡುತ್ತೇನೆ ಈ ಕೆಲಸದಲ್ಲಿ ಬಹಳ [illegible]ಯನ್ನು ವಹಿಸಿದ ಸೌ॥ ಶ್ರೀರಂಗಮ್ಮನವರಿಗೂ ಇತರರಿಗೂ ನನ್ನ [illegible]ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇನೆ

[illegible] ಬಯಾಸ್ಕೋಪಿನ ಪ್ರದರ್ಶನದೊಡನೆ ಆ ದಿನ ಆಟವು ಮುಗಿ[illegible] ಈ ತಾರಾಬಾಯಿಯವರು ಉದಾರಿಗಳು, ಸದ್ಗುಣಿಗಳು, ಬಹು ದೂರ[illegible] ಇಲ್ಲಿಗೆ ಬಂದವರು ಇಂತಹವರಿಗೆ ನಮ್ಮ ಮೈಸೂರು ಸ್ತ್ರೀಮಂಡಲಿ[illegible] ಹೀಗೆ ಬಹುಮಾನಮಾಡಿ ಉತ್ತೇಜನಕೊಟ್ಟದ್ದು ಶ್ಲಾಘ್ಯವಾಗಿದೆ

ತಾಲ್ಲೋಕು ವರ್ತಮಾನಗಳು

[illegible] ನರಸೀಪುರ ತಾ॥ ಶ್ರೀರಂಗರಾಜಪುರ —ಈ ಊರಿನಲ್ಲಿ ಹವ ಬಹಳ [illegible] ಆದರೆ ಈಗ 5 6 ದಿವಸಗಳಿಂದ ಗಾಳಿ ಬಹಳ ಜಾಸ್ತಿಯಾಗಿದೆ [illegible] ಆರೋಗ್ಯವಾಗಿರುತ್ತೆ ಭತ್ತದ ಬೆಳೆ ಬಹಳ ಚೆನ್ನಾಗಿದೆ ರೈತರು ಬೆಳೆಯನ್ನು ಕೊಯ್ಲು ಮಾಡುತ್ತಾ ಇದಾರೆ —ಮ॥ ತಿರುಮಲೆ ಸುಂದರಸುಬ್ಬ[illegible]ಯ್ಯಂಗಾರ್ರು ಕಳೆದ ತಾ 12 ನೇ ಶುಕ್ರವಾರ ಮಧ್ಯಾಹ್ನ ಧಾತ್ರೀಹವನದ ಸಮಾರಾಧನೆಯನ್ನೂ, ರಾತ್ರಿ ಉತ್ಸವವನ್ನೂ ಬಹಳ ವಿಜೃಂಭಣೆಯಾಗಿ ನಡಿಸಿ[illegible] ಇದಕ್ಕಾಗಿ ಸೋಸಲೆ, ಕೃಷ್ಣಾಪುರ, ಟಿ ನರಸೀಪುರದಿಂದ ಅನೇಕ ಮಹನೀಯರು ಬಂದು ಇದ್ದರು ಸ್ಕೂಲ್ ಇಲಾಖಾ ಡೆಪ್ಯುಟಿ ಇನ್ಸ್‌ಪೆಕ್ಟರೂ, ಸಬ್ ರಿಜಸ್ಟ್ರಾರವರೂ ಬಂದಿದ್ದರು —ಇಲ್ಲಿನ ದೇವಸ್ಥಾನಕ್ಕೆ 100 150 ಖಂಡಗ ಭತ್ತ ಹುಟ್ಟುವಳಿ ಆಗತಕ್ಕ ಇನಾಂ ಜಮೀನು ಸರ್ಕಾರದವರ ಆಧೀನದಲ್ಲಿದೆ ಕಳೆದ ನವಂಬರ್ ತಾ 28 ರಲ್ಲಿ ಮುಜರಾಯಿ ಸೂಪರಿಂಟೆಂಡೆಂಟರವರು ಬಂದು ಈ ದೇವಸ್ಥಾನವನ್ನು ಪರಾಂಬರಿಸಿ ರಿಪೇರಿ ಮಾಡಿಸಿಕೊಡುವದಲ್ಲದೆ ಸರಿಯಾದ ಏರ್ಪಾಡು ಮಾಡಿಕೊಡುತ್ತೇವೆಂದು ಅಪ್ಪಣೆಕೊ[illegible]ದರು [illegible] ದೇವಸ್ಥಾನದ ಧಾರುಪತ್ತೇಗಾರ್ ಮ॥ ಶ್ರೀನಿವಾಸ ರಾಘವಾಚಾರ್ರು ಕೂಡ ಇದಕ್ಕಾಗಿ ಬಹಳ ಮುತವರ್ಜಿ ಮಾಡುತ್ತಾ ಇದಾರೆ

ಮದ್ದಗಿರಿ ತಾ॥ ಬಡಚೌಡನಹಳ್ಳಿ —ಇಲ್ಲಿ ಮಳೆಯಿಲ್ಲದೆ ಮುಸ್ಸು ಬೆಳೆಗಳೆಲ್ಲವೂ ಒಣಗಿಹೋದವು ಅಕ್ಕಿ, ರಾಗಿ ಮುಂತಾದ ದಿನಸಿಗಳ ಧಾರಣೆಗಳು ಕ್ಷಾಮಕಾಲದ ಸೂಚನೆಯನ್ನೇ ತೋರಿಸುತ್ತವೆ ಬಡ ಜನಗಳು ಬದುಕುವುದು ತುಂಬಾ ಕಷ್ಟವಾಗಿದೆ —ನಿಟ್ರಹಳ್ಳಿ ರೈತರಿಗೂ ಚನ್ನಸಾಗರದ ರೈತರಿಗೂ ಒಂದು ಕಾಲುವೆ ವ್ಯಾಜ್ಯವು 6 7 ವರುಷಗಳಿಂದಲೂ ನಡೆಯುತ್ತಿತ್ತು ಈಗ ಬಂದಿರತಕ್ಕ ಅ॥ ಕಮಿಷನರವರು 4 5 ತಿಂಗಳ ಹಿಂದೆ ಕೊಡಗದೂಲವೆಂಬ ಗ್ರಾಮದ ಪೋಲೀಸ್ ಸ್ಟೇಷನಲ್ಲಿ ಮೊಕ್ಕಾಂ ಮಾಡಿ ಉಭಯ ಪಾರ್ಟಿಗಳ ರೈತರನ್ನೂ ಕರಸಿಕೊಂಡು ಕಾಲುವೆ ಬಳಿಗೆ ಹೋಗಿ ಖುದ್ದು ನೋಡಿ ಈ ವ್ಯಾಜ್ಯವನ್ನು ಫೈಸಲ್ ಮಾಡಿ ಹೋದರು ಅವರ ತೀರ್ಮಾನದಂತೆ ಕಳೆದ ತಾ 11 ರಲ್ಲಿ ನಮ್ಮ ಅಮಲ್ದಾರ್ರು ಟ್ಯಾಂಕ್ ಇನ್ಸ್‌ಪೆಕ್ಟರು ಮತ್ತು ಶೇಖ್ದಾರರುಗಳ ಸಮೇತ ವ್ಯಾಜ್ಯದ ಕಾಲುವೆಯ ಬಳಿಗೆ ಹೋಗಿ ಸದರಿ ಗ್ರಾಮಗಳ ರೈತರುಗಳನ್ನು ಕರಸಿಕೊಂಡು ಅ॥ ಕಮಿಷನರವರ ಹುಕುಂ ಪ್ರಕಾರ ರೈತರು ಬೇರೆಬೇರೆ ಕಾಲುವೆಗಳನ್ನು ಮಾಡಿಕೊಳ್ಳಬೇಕೆಂದೂ, ರೆವಿನ್ಯೂ ಕಮಿಷನರವರ ಆರ್ಡರಿನಂತೆ ನಿಟ್ರಹಳ್ಳಿ ಕಾಲುವೆಯಲ್ಲಿರುವ ಕೀಳುಕಾಲುವೆಯನ್ನು ಮುಚ್ಚಿಸಿರುತ್ತೇವೆಂದೂ, ನಿಟ್ರಹಳ್ಳಿ ಕಾಲುವೆಗೆ ಚನ್ನಸಾಗರದವರ ಕಾಲುವೆಯು 30 ಗಜಗಳ ಕೆಳಗೆ ಇರಬೇಕೆಂತಲೂ ತೀರ್ಮಾನಮಾಡಿದರು ಬಹುಕಾಲದಿಂದಲೂ ಅನುಭವಿಸುತ್ತಿದ್ದ ನಿಟ್ರಹಳ್ಳಿ ರೈತರ ಕಷ್ಟಗಳನ್ನು ತಪ್ಪಿಸಿದ್ದಕ್ಕಾಗಿ ಅವರೆಲ್ಲಾ ಸಂತೋಷಪಡುತ್ತಾರೆ

ಕಡೂರು —ಮಳೆ ಇಲ್ಲದೆ ದೇಸಗೆ ಜೋಳದ ಪೈರೂ ಕೂಡ ಕೈಸೇರುವಂತಿಲ್ಲ ಜನಸಾಧಾರಣ ಕ್ಷಾಮಕಾಲವನ್ನು ಅತಿಕ್ರಮಿಸಿದೆ ಬಡವರ ಜೀವನ ಬಹು ಕಷ್ಟ 3 4 ದಿವಸದ ಛಳಿ ವಿಶೇಷ —ಕೆಲವು ದಿವಸಗಳ ಹಿಂದೆ ದಿಕ್ಕಿಲ್ಲದ ಒಬ್ಬ ಮುದುಕಿ ಮನುಷ್ಯನು ಆಸ್ಪತ್ರೆಯಲ್ಲಿದ್ದು ಔಷಧಿ ತೆಗೆದುಕೊಳ್ಳಬೇಕಾಗಿ ಬಂದವನಿಗೆ ಇರಲು ಸ್ಥಳವಿಲ್ಲವೆಂದು ಮುಸಾಫರಖಾನೆಗೆ ಸಾಗಿಸಿದಂತೆ ಶಿಳಿಯಿತು ಇವನಿಗೆ ಔಷಧಿ ಉಪಚಾರಗಳು ಇಲ್ಲದೆ ಮೊನ್ನೆ ತೀರಿಹೋದನು ಆಸ್ಪತ್ರೆಯಲ್ಲಿ ಸರ್ಕಾರದವರು ದಾಯಿಯವರಿಗಾಗಿ ಕಟ್ಟಿಸಿರುವ ಮನೆಯಲ್ಲಿ ಡಾಕ್ಟರು ವಾಸವಾಗಿರುವದರಿಂದ ಈ ರೀತಿ ತೊಂದರೆಗೆ ಕಾರಣವಾಗುತ್ತೆ ಮೇಲ್ಪಟ್ಟ ಆಫೀಸರವರು ಇದನ್ನು ಸರಿಪಡಿಸುತ್ತಾರಾಗಿ ನಂಬಿದೆ —ನಮ್ಮ ಅಮಲ್ದಾರ್ ಮ। ಎ ರಾಜಾರಾಯರಿಗೆ ಮಾಗಡಿಗೆ ವರ್ಗವಾದ ಹುಕುಂ ಬಂದಿದೆ ಇವರು ಕೇವಲ ಸಭ್ಯರು, ಪ್ರಜೆಗಳಲ್ಲಿ ತುಂಬಾ ಅನುರಾಗವುಳ್ಳವರು —ಈ ಊರು ಮಹಮದೀಯ ಗಿರೋ ಸಂಪದವರು ಮೊನ್ನೆ ಅಧಿಕಾರಿಗಳನ್ನೂ ದೊಡ್ಡ ಮನುಷ್ಯರುಗಳನ್ನೂ ಬರಮಾಡಿಕೊಂಡು ಮೊಹರಿಕ್ [illegible] ಕಾಟಾ[illegible]ಯಲ್ಲಿ ಹಾಡುಗಾರಿಕೆ ನಾಚು ಮುಂತಾದ್ದರಿಂದ ಆನಂದಪಡಿಸಿದರು ಇದಕ್ಕೆ ಮಿ॥ ಅನಿವಾರ್ [illegible] ಸಾಬರು ಮಾಡಿದ ಕವಿತಾ ಕೀರ್ತನೆಗಳು ಶ್ಲಾಘನೀಯವಾಗಿತ್ತು ಮಾರನೆ ದಿನ ಮಿ॥ ಮೊಹದಿನ್ [illegible] ಸಾಬರು ಮಹಮದೀಯರಿಗೆಲ್ಲಾ ಸುಭೋಜನ ಮಾಡಿಸಿದರು ಈ ಸಲ ಮಹಮದೀಯರೆಲ್ಲಾ ಒಗ್ಗಟ್ಟಾಗಿ ಮಾಡಿದ ಕೆಲಸಗಳು ತೃಪ್ತಿಕರವಾಗಿವೆ

ತಿಪ್ಟೂರು —ಈ ಊರಿಗೆ ಶಿಜಸಳ್ಳ ಮಾರ್ಗವಾಗಿ ಶ್ರೀಶಿವಗಂಗಾ ಸ್ವಾಮಿಗಳವರು ತಾ 6 ರಲ್ಲಿ ಚಿತ್ತೈಸಿ, ಮೂರು ದಿನ ಮೊಕ್ಕಾಂಮಾಡಿ ಶಿಷ್ಯಮಂಡಲಿಯಿಂದ ಕಾಣಿಕೆಗಳನ್ನು ಪರಿಗ್ರಹಿಸಿ ಕಡೇ ದಿನ ಭಕ್ತಿ, ವೇದಾಂತ ವಿಷಯಗಳ ವಿಚಾರವಾಗಿ ಸರ್ವರಿಗೂ ಬೋಧೆಮಾಡಿ ಹೊನ್ನವಳ್ಳಿ ಮಾರ್ಗವಾಗಿ ಹುಳಿಯಾರು ಕಡೆ ಪ್ರಯಾಣ ಬೆಳಸಿದರು ಇವರ ಸತ್ಕಾರಕ್ಕಾಗಿ ಡೆಪ್ಯುಟಿ ಕಮಿಷನರ್ ಮ॥ ಎ ಪಿ ಕುಮಾರಸ್ವಾಮಿನಾಯಕರೂ, ಪೊಲೀಸ್ ಸೂ॥ ಮಿ॥ ಬಾಲ್‌ಸಾಹೇಬರೂ, ಸ್ಥಳೀಯ ಅಧಿಕಾರಿಗಳೂ, ಶಿಷ್ಯಮಂಡಲಿಯವರೂ ಬಹುಜನ ಸೇರಿದ್ದರು ಸಾಹುಕಾರ್ ಮ। ಲಿಂಗಿನಂಜಪ್ಪನವರೂ, ಮುಷ್ಟೂರು ಮ ರಾಮಯ್ಯನವರೂ ಶ್ರೀಯವರಿಗೆ ಮಾಡಿದ ಸತ್ಕಾರಗಳು ಬಹು ಅಪೂರ್ವವಾಗಿದ್ದವು ಶ್ರೀಸ್ವಾಮಿಗಳು ಪ್ರಯಾಣಮಾಡುವಾಗ್ಗೆ ತಿಪಟೂರಲ್ಲಿ ಲಿಂಗಾಯಿತರು ಕಟ್ಟತಕ್ಕ ವೀರಶೈವಾಶ್ರಮಕ್ಕೆ 16 ರೂಪಾಯಿ ಶ್ರೀರಾಮಮಂದಿರಕ್ಕೆ 20 ರೂಪಾಯಿ ಅನುಗ್ರಹಿಸಿದರು ಉಪನ್ಯಾಸಮಾಡುವಾಗ ಅನೇಕ ಹಿಂದೂ ಮಹಮದೀಯ ಮತಸ್ಥರು ಸೇರಿದ್ದರು ಸದ್ಯಕ್ಕೆ ಟೌನ್‌ನಲ್ಲಿ ಪ್ಲೇಗಿನ ಆತಂಕ, ಇಲಿಗಳು ಬೀಳುವುದು ನಿಂತು, ಪ್ರಜಾ ನೆಮ್ಮದಿ ಚೆನ್ನಾಗಿದೆ ಟೌನ್‌ನಲ್ಲಿ ಕುಡಿಯುವ ನೀರಿಗೆ ತುಂಬಾ ಅಭಾವವಾಗಿದೆ ಕೆರೆ ಬತ್ತಿ ನೆಲಮಟ್ಟವಾಗಿದೆ ಕೆಲವು ಭಾವಿಗಳಲ್ಲಿ ನೀರಿಲ್ಲ ಗೌರ್ನ್‌ಮೆಂಟಿನವರು ಕ್ಷಿಪ್ರದಲ್ಲೇ ನೀರಿನ ತೊಂದರೆ ತಪ್ಪಿಸ್ತಾರೆಂದು ನಂಬಿದೇವೆ — ಮ್ಯುನಿಸಿಪಾಲಿಟಿ ವಿಚಾರಣೆಗೆ ಒಬ್ಬರಿದ್ದ ಸ್ಯಾನಿಟರಿ ಇನ್ಸ್‌ಪೆಕ್ಟರು ಇಬ್ಬರಾದರೂ ಸಾಕೀಜು ವಿಚಾರ ತೃಪ್ತಿಕರವಾಗಿಲ್ಲ ಕೆರೆ ಅಂಗಳದಲ್ಲಿ ಹೇಸಿಗೆ ತುಂಬಿ ಗಲೀಜಾಗಿದೆ ಕೇಳುವವರೇ ದಿಕ್ಕಿಲ್ಲ —ಇಲ್ಲಿ 3-4 ವರ್ಷಗಳಿಂದಲೂ ಇದ್ದ ಅಮಲ್ದಾರ್ ಮ ಬಸವರಾಜೇಅರಸಿನವರಿಗೆ ಮಳವಳ್ಳಿಗೆ ವರ್ಗವಾಯಿತು ಇವರ ಸ್ಥಳಕ್ಕೆ ಸಾಗರದ ಅಮಲ್ದಾರ್ರು ಬರುತ್ತಾರಂತೆ ಇವರ ದಿನದಲ್ಲಾದರೂ ಎಲ್ಲಾ ವಿಚಾರಗಳೂ ಕ್ರಮಪಡಿಂದರೆ ಸಾರ್ಥಕವಾದೀತು—ಟೌನ್‌ನಲ್ಲಿ 1 3 ಕಡೆ ಕಳ್ಳತನಗಳು ಬೇರೆ ನಡಿಯಿತು ಜಾರ ಸ್ತ್ರೀಯರ ಅವಾಂತ್ರ ಹೆಚ್ಚು ಜೂಜುಗಾರರ ಹಾವಳಿ ಜೋರಾಗಿದೆ ಈಗಲೇ ನಮ್ಮ ಪೊಲೀಸ್ ಇನ್ಸ್‌ಪೆಕ್ಟರವರು ತಮ್ಮ ದರ್ಪವನ್ನು ಚಲಾಯಿಸದೆ ಇದ್ದಲ್ಲಿ ಕಳ್ಳರ ಅವಾಂತ್ರ, ಪುಂಡು, ಮನಸ್ವೀ ಬೈಸಿಕಲ್ ಓಡಿಸುವದು ಹೆಚ್ಚಾಗುತ್ತವೆ —ಕಳೆದ ತಾ 8 ರಲ್ಲಿ ಈ ಊರು ಖಿದಾಯು ಅಂಗಡಿ ಸಿದ್ದಪ್ಪನ ಅಣ್ಣನು ಅಕಸ್ಮಾತ್ ಕೆರೆ ಹಿಂದಿನ ಬಾವಿಯಲ್ಲಿ ಬಿದ್ದು ಆತ್ಮಹತ್ಯಮಾಡಿಕೊಂಡಿದಾನೆ ಇದಕ್ಕೆ ಕಾರಣವೇನೋ ತಿಳಿಯಲಿಲ್ಲ ಅವನ ಹೆಂಡರು ಮಕ್ಕಳು ಹತ್ತಿರ ಇರಲಿಲ್ಲ —ಈ ತಾಲ್ಲೂಕಿನ ಸುತ್ತುಮುತ್ತಣ ಅನೇಕ ಗ್ರಾಮಗಳ ಜನರು ಪ್ಲೇಗಿನ ಹಾವಳಿಯಿಂದ ಹೊರಗೆ ವಾಸಮಾಡುತ್ತಿದಾರೆ

ಚಿತ್ರದುರ್ಗ ತಾ॥ ಸುರುವನೂರು —ಈ ಪ್ರಾಂತ್ಯ ಹವ ಚೆನ್ನಾಗಿದೆ ಬೆಳೆ ತಕ್ಕಮಟ್ಟಿಗೆ ಅನುಕೂಲವಾಗಿದೆ ದಿನಸಿ ಧಾರಣೆ ಮಾತ್ರ ಬಹಳ ಪ್ರಿಯವಾಗಿದ್ದು ಬಡಬಗ್ಗರ ಜೀವನ ತುಂಬಾ ಕಷ್ಟವಾಗಿದೆ —ಮ। ನಾಡಿಗ ಭೀಮಯ್ಯನವರು ತಮ್ಮ ಮಗನ ಲಗ್ನದಲ್ಲಿ ಎಲ್ಲಾ ಕೋಮುಗಳ ಬಡಬಗ್ಗರಿಗೂ ಅನ್ನ ಹಾಕಿ ಸಂತೋಷಪಡಿಸಿದರು ಹೊಸ ಸ್ಕೂಲ್ ಕಟ್ಟಡವು ಪೂರೈಸುತ್ತಾ ಬಂದಿದೆ ಕಂಟ್ರ್ಯಾಕ್ಟರ್ ಮ॥ ಹೇಮಣ್ಣನವರು ಈ ಕೆಲಸವನ್ನು ಜಾಗರೂಕತೆಯಿಂದ ಮಾಡಿಸುತ್ತಿರುವದಲ್ಲದೆ ಹಳೇ ಸ್ಕೂಲ್ ಕಟ್ಟಡವನ್ನೂ ಮುಸತ್ತಾಗಿ ರಿಪೇರಿ ಮಾಡಿಸಿಕೊಡುತ್ತೇವೆಂದು ಹೇಳುತಾರೆ —ಬಾಯ್ಸ್ ಸ್ಕೂಲ್ ಮತ್ತು ಗರಲ್ಸ್ ಸ್ಕೂಲ್ ಕೆಲಸಗಳು ತೃಪ್ತಿಕರವಾಗಿ ನಡೆಯುತ್ತಿವೆ ಗರಲ್ಸ್ ಸ್ಕೂಲಿನಲ್ಲಿ 40 ಮಂದಿ ಬಾಲಕಿಯರಿದ್ದಾಗ್ಯೂ ಒಬ್ಬ ಉಪಾಧ್ಯಾಯರಿರುತ್ತಾರೆ ಅಲ್ಲಿನ ಸಿಂಗಿಂಗ್ ಮಾಸ್ಟರನ್ನು ಯಾವ ಕಾರಣದಿಂದಲೋ ಬಾಯ್ಸ್ ಸ್ಕೂಲಿಗೆ ವರ್ಗಾಯಿಸಿದರು ಈ ವಿಷಯವನ್ನು ಬೇಗನೆ ಇತ್ಯರ್ಥಪಡಿಸುವರೆಂದು ನಂಬಿರುವೆನು —ಮೂ[illegible]ಯರ್ ಬಾಬಿನಲ್ಲಿ ಸಾಲಿಯಾನಾ 600 ರೂಪಾಯಿ ವರೆಗೂ ಹುಟ್ಟುವಳಿ ಇದ್ದರೂ ಒಂದು ಲಾಂದ್ರವಾದರೂ ಇಲ್ಲದಿರುವುದು ಶೋಚನೀಯವಾಗಿದೆ ಈ ವಿಷಯವನ್ನು ಯೂನಿಯನ್ ಮೆಂಬರುಗಳು ಯಾತಕ್ಕೆ ಕೇಳಬಾರದೋ ತಿಳಿಯದು.—600 700 ಮನೆಗಳಿರುವ ಈ ದೊಡ್ಡ ಗ್ರಾಮದಲ್ಲಿ ಒಂದಾದರೂ ಕೋಆಪರೇಟಿವ್ ಸೊಸೈಟಿ ಇಲ್ಲ ಆ ಇಲಾಖಾ ಆಫೀಸರು ಬಂದು ಪ್ರಜೆಗಳನ್ನು ಪ್ರೋತ್ಸಾಹಿಸಿ ಒಂದು ಸೊಸೈಟಿ ಏರ್ಪಡಿಸಿದರೆ ತುಂಬಾ ಅನುಕೂಲ —ಅರ್ಧ ಮೈಲ್ ದೂರವಿರುವ ಭಾವಿಯ ರಸ್ತೆ ಕೆಟ್ಟು ನೊರಜುಕಲ್ಲಿನಿಂದ ತುಂಬಿದೆ ಅಧಿಕಾರಿಗಳು ಇದನ್ನು ಬೇಗನೆ ಸರಿಮಾಡಿಸುತ್ತಾರೆಂದು ನಂಬಿರುತ್ತೇನೆ —ಕುಡಿಯುವ ನೀರಿನ ಭಾವಿಯಲ್ಲಿ ನೀರು ಸಮೃದ್ಧಿಯಾಗಿದೆ ಭಾವಿಯು ಊರಿಗೆ 4-5 ಫರ್ಲಾಂಗ್ ದೂರದಲ್ಲಿರುವುದರಿಂದ ಜನರು ಎತ್ತು, ಬಂಡಿಗಳ ಮೇಲೆ ನೀರನ್ನು ಸಾಗಿಸಿಕೊಂಡು ಬರುತ್ತಾರೆ ಈ ಊರಿಗೆ ನಲ್ಲಿ ಏರ್ಪಾಡು ಮಾಡಬೇಕೆಂದು ಅನೇಕ ಸರ್ಕಾರಿ ನೌಕರರು ಬಂದು ಅಂದಾಜು ಮಾಡಿಕೊಂಡು ಹೋದರು ಬೇಗ ಕಾಮಗಾರಿ ಆದೀತೆಂಬ ನಿರೀಕ್ಷಣೆ ಇದೆ —ಇಲ್ಲಿಗೆ 4 ಮೈಲಿ ದೂರದಲ್ಲಿರುವ ಚಿಕ್ಕಣ್ಣನಹಳ್ಳಿ ಎಂಬ ಊರಿನ ಹೊರಭಾಗದ ಕೋಪಿನಲ್ಲಿ ಒಂದು ಸಸಿಯಾದ ಬೇವಿನ ಮರದಲ್ಲಿ 20 ದಿನಗಳಿಂದಲೂ ಹಾಲು ಸುರಿಯುತ್ತಾ ಇದೆ ಈ ಹಾಲು ಬಿಳುಪಾಗಿಯೂ, ಸೊರೆಯಾಗಿಯೂ, ಸಿಹಿಯಾಗಿಯೂ ಇದೆ ಪ್ರತಿ ದಿನವೂ ಒಂದು ಸರ್ಪವು ಬಂದು ಮರ ಹತ್ತಿ ಹಾಲುಕುಡಿದು ಹೋಗುತ್ತಿದೆ ಇದನ್ನು ನೋಡಿ ಜನರು ಆಶ್ಚರ್ಯಪಡುತ್ತಿದಾರೆ

ನಂಜನಗೂಡು —ಪ್ಲೇಗು ಬಾಯಿಲೆ ನಿಂತಿದೆ ಊರಿಗೆ ಜನಗಳು ಬಂದು ಸೇರುತ್ತಾ ಇದಾರೆ ಕೆಲವು ಕಡೆ ಭತ್ತದ ಪೈರು ಕಟಾವು ಆಗುತ್ತಾ ಇದೆ —ಇಲ್ಲಿ ರಥೋತ್ಸವಕ್ಕೆ ಅಂಕುರಾರ್ಪಣವಾದ ಮೇಲೆ ನಾಲ್ಕು ಬೀದಿಗಳಲ್ಲಿ ಇತರ ಮೆರವಣಿಗೆ ವಗ್ಯರೆ ಆಗಕೂಡದೆಂಬ ನಿರ್ಬಂಧವಿದ್ದಾಗ್ಯೂ ಮೊಹರಂ ಹಬ್ಬದ 7 ನೇ ದಿವಸ ರಾತ್ರಿ ಮುಸಲ್ಮಾನರು ಅಕ್ರಮವಾಗಿ ಬೀದಿಗಳಲ್ಲಿ ತಾಬೂತು ಹೊರಡಿಸಿದ್ದರಿಂದ ಮಾರನೇ ದಿವಸ ಸಂಪ್ರೋಕ್ಷಣೆಯಾಗಿ ಉತ್ಸವ ಹೊರಡಲು ಮಧ್ಯಾಹ್ನ 1 ಗಂಟೆಯಾಯ್ತು ಅನಂತರ ಮೊಹರಂ ಆಖೈರು ದಿವಸ ಗಲಾಟೆ ಆಗಬಹುದಾದ ಸಂಭವ ತೋರಿ ಡೆಪ್ಯುಟಿ ಕಮಿಷನರ್ ಸಾಹೇಬರವರು ದಯಮಾಡಿ ಸ್ಥಳವಿದ್ಯಮಾನವನ್ನು ನೋಡಿ ತಿಳಿದು, ಹಿಂದೆ 1872 ನೇ ಇಸವಿಯಲ್ಲಿ ಮುಸಲ್ಮಾನರು ಉತ್ಸವ ವಿಚಾರದಲ್ಲಿ ಬರೆದುಕೊಟ್ಟದ್ದ ಮುಚ್ಚಳಿಕೆಯಂತೆ ನಡೆಯಬೇಕೆಂದು ತೀರ್ಮಾನಿಸಿದರು ಪೊಲೀಸ್ ಸೂಪರೆಂಟರವರು ತಕ್ಕ ಸಿಬ್ಬಂದಿ ಸಮೇತ ಇದ್ದು ಗಲಾಟೆಗೆ ಅವಕಾಶವಾಗದಂತೆ ಉತ್ಸವವನ್ನು ನಡಿಸಿದರು ಸಬ್ ಡಿವಿಜನ್ ಆಫೀಸರವರು ಮತ್ತು ಅಮಲ್ದಾರ್ರವರು ಸಹ ಮುತುವರ್ಜಿಯಿಂದ ರಥೋತ್ಸವವನ್ನು ನಡಿಸಿದರು —ರಿಟೈರ್ಡ್ ಅ। ಕಮಿಷನರ್ ಲೇಟ್ ಶ್ರೀಕಂಠಯ್ಯನವರ ಮಕ್ಕಳು ಸ್ಥಳ ಪರಸ್ಥಳಿಕರಿಗೆ ದೇವಸ್ಥಾನದಲ್ಲಿ ಸುಭೋಜನ ಮಾಡಿಸಿದರು ಆಗ್ಗೆ ಸುಮಾರು 1,000 ಜನಕ್ಕೆ ಕಡಮೆ ಇಲ್ಲದೆ ಸೇರಿದ್ದರು.—ಇಲ್ಲಿನ ಮ್ಯುನಿಸಿಪಾಲಿಟಿಗೆ ಮ॥ ವೆಂಕಟಸಾಮಯ್ಯನವರು ವೈಸ್ ಪ್ರೆಸಿಡೆಂಟರಾಗಿ ನಿಯಮಿಸಲ್ಪಟ್ಟಿರುವರೆಂದು ಕೇಳಿ ಸಂತೋಷಿಸುತ್ತೇನೆ ಇನ್ನಾದರೂ ಉದಾರಭಾವದಿಂದ ಇಲ್ಲಿನ ಸತ್ಕಾರ್ಯಗಳನ್ನು ಅಭಿವೃದ್ಧಿಗೆ ತಂದು ಮ್ಯುನಿಸಿಪಾಲಿಟಿಯ ದುರವಸ್ಥೆಯನ್ನು ದೂರಮಾಡಿ ಕೀರ್ತಿಭಾಜನರಾಗುವರೆಂದು ನಂಬಿರುವೆವು —ಇಲ್ಲಿನ ಸಂಪದಭ್ಯುದಯ ಸಮಾಜದ ಪ್ರೋಗ್ರೆಸ್ ಕಮಿಟಿಯವರು ತಾ 12 ರಲ್ಲಿ ಅಮಲ್ದಾರ್ರ ಅಧ್ಯಕ್ಷತೆಯಲ್ಲಿ ಮೀಟಿಂಗನ್ನು ನಡಿಸಿದರು ಕಾರ್ಯದಕ್ಷರೂ ಅನುಭವಿಗಳೂ ವಿದ್ಯಾವಂತರೂ ಆದ ಮ॥ ಸುಬ್ರಹ್ಮಣ್ಯಯ್ಯನವರ ಹೇಳಿಕೆಗೆ ವಿಶೇಷ ಗಮನಕೊಟ್ಟರೆಂದು ಕೇಳುತ್ತೇವೆ ಇವರ ಅಭಿಪ್ರಾಯದಂತೆ ತಾಲ್ಲೂಕು ಕಮಿಟಿಯ ಕೆಳಗೆ ಒಂದೊಂದು ಭಾಗಕ್ಕೂ ಒಂದೊಂದು ಸಬ್ ಕಮಿಟಿಯನ್ನು ಗೊತ್ತುಮಾಡಿ, ಅದಕ್ಕೆ ಎಲ್ಲಾ ಯೂನಿಯನ್‌ಗಳಿಂದಲೂ ಒಬ್ಬೊಬ್ಬರು ಮುಖಂಡರನ್ನು ಮೆಂಬರಾಗಿ ಮಾಡಿ, ಈ ಊರಿನ ವಿಶೇಷ ಕಾಲಗಳಲ್ಲಿ ಆ ಕಮಿಟಿಯು ಸೇರಿ ಕಾರ್ಯಕ್ರಮವನ್ನು ಯೋಚಿಸಬಹುದು ಇವರ ಸೂಚನೆಯಂತೆ ಸ್ವಲ್ಪಕಾಲದಲ್ಲಿಯೇ ನಮ್ಮ ತಾಲ್ಲೂಕು ಇತರ ತಾಲ್ಲೂಕುಗಳಿಗೆ ಮಾದರಿಯಾಗಿ ಪರಿಣಮಿಸಬಹುದೆಂದು ತೋರುತ್ತೆ

ಹುಣಸೂರು —ಕಳೆದ 3 ಗಳ ಅಂತ್ಯಭಾಗದಲ್ಲಿ ಬಯಾಸ್ಕೋಪ್ ಕಂಪನಿಯವರು ಇಲ್ಲಿಗೆ ಬಂದು ವ್ಯಾಧಿಸರ್ [illegible] ವರ್ಕ್‌ಷಾಪಿನಲ್ಲೂ, ಅಮೃತಮಹಲ್ ಕಟ್ಟಡದಲ್ಲೂ 5 ದಿನ ಚಲಿಸುವ ಅನೇಕ ಚಿತ್ರಪಟಗಳನ್ನು ಪ್ರದರ್ಶನಮಾಡಿ ನೋಟಕರಿಗೆ ಆನಂದವನ್ನೂ ಆಶ್ಚರ್ಯವನ್ನೂ ಉಂಟುಮಾಡಿದರು —ಈ ಸಲ ಮೊಹರಂ ಹಬ್ಬವು ಗಲಭೆಯಿಲ್ಲದೆ ನಡೆಯಿತು ಬೆಂಗಳೂರಿನಿಂದ ಬ್ಯಾಂಡ್, ಗಿರೋ, ವಸ್ತಾದಿಗಳನ್ನು ಕರೆಸಿದ್ದರು ಕೆಲವು ದೊಡ್ಡ ಮನುಷ್ಯರೂ, ಅಮಲ್ದಾರರೂ, ಪೋಲೀಸಿನವರೂ ಮುತುವರ್ಜಿ ವಹಿಸಿ ಸಮಾಧಾನ, ವಿವೇಕಾದಿಗಳನ್ನು ಹೇಳುತ್ತಾ ಬೆಳಗಿನ 4 ಗಂಟೆಯ ತನಕ ಶ್ರಮಪಟ್ಟದ್ದರಿಂದ ಈ ಉತ್ಸವವು ನಿರಾತಂಕವಾಗಿ ನೆರವೇರಿತು ಮಾರಾಮಾರಿಮಾಡಬೇಕೆಂಬ ಮಸಲತ್ತು ನಡೆದಿತ್ತೆಂದು ಕೇಳುತ್ತೇನೆ —ಮೈಸೂರಿನಿಂದ ಬರುತ್ತಿದ್ದ ಕೊಪ್ಪಲಿನ ಗಾಡಿಗೆ ಅಕಸ್ಮಾತ್ತಾಗಿ ಇಳವಾಲದ ಬಳಿ ಬುಡ್ಡಿಯ ಮೂಲಕ ಬೆಂಕಿಹತ್ತಿಕೊಂಡು ಬಟ್ಟೆ ಬರೆಗಳು ಸುಟ್ಟುಹೋಗಿ ಸ್ವಲ್ಪ ನಷ್ಟವಾಯಿತು ಯಾರಿಗೂ ಬಾಧೆಯುಂಟಾಗಲಿಲ್ಲ —ಕಳೆದ ಮಾರ್ಚಿ ತಿಂಗಳ ಸುಮಾರಿನಲ್ಲಿ ಹುಣಸೂರಿನಿಂದ ವಿಲಾಯತಿಗೆ ಪ್ರಯಾಣಮಾಡಿದ್ದ ಇಲ್ಲಿನ ವರ್ಕ್‌ಷಾಪ್ ಪ್ರೊಪ್ರೈಟರು ಮಿ॥ ಡಬ್ಲ್ಯೂ ಸಿ. ಪೇಪ್ರಿಹೇ ಪೊರೆಯವರು ತಮ್ಮ ವಿವಾಹವನ್ನು ನೆರವೇರಿಸಿಕೊಂಡು, ಸದ್ಯಕ್ಕೆ ಪತ್ನಿಯವರನ್ನು ಅಲ್ಲೇ ಬಿಟ್ಟು ಕಳೆದ ತಾ 11 ನೇ ಗುರುವಾರ ರಾತ್ರಿ ತಮ್ಮ ಹೊಸ ಮೋಟರಿನಲ್ಲಿ ವಾಪಸ್ ದಯಮಾಡಿದರು ಇವರ ಕಾರ್ಖಾನೆಯಲ್ಲಿ ಕೆಲಸ ಮಾಡಿ ಜೀವನಮಾಡುತ್ತಿರುವವರಿಗೂ, ಇತರ ಹುಣಸೂರು ಪ್ರಜೆಗಳಿಗೂ ಇವರು ಸುರಕ್ಷಿತವಾಗಿ ಬಂದದ್ದು ತುಂಬಾ ಸಂತೋಷಕರವಾಗಿದೆ ಯಾಕೆಂದರೆ ಇವರು ಅನೇಕರಿಗೆ ಉಪಕಾರಿಯಾಗಿರುತ್ತಾರೆ —ಹುಣಸೂರು ತಾಲ್ಲೂಕು ಚಿಕ್ಕಾಡಿಗನಹಳ್ಳಿಯಲ್ಲಿ ತಾ 12 ನೇ ರಾತ್ರಿ ಪೋಸ್ಟ್ ಆಫೀಸಿನ ರಿಕಾರ್ಡು ಮತ್ತು ಡೇಟ್ ಸ್ಟಾಂಪು ಕಳುವಾಗಿ ಬೆಳಿಗ್ಗೆ ಗ್ರಾಮದ ಸಮೀಪದ ಕೊಳದಲ್ಲಿ ರಿಕಾರ್ಡು ಸಿಕ್ಕಿದೆ ಡೇಟ್ ಸ್ಟಾಂಪು ಸಿಕ್ಕಿಲ್ಲ ಪ್ರಯುಕ್ತ ಸದರಿ ಸ್ಟಾಂಪು ವಿನಹ ಪೋಸ್ಟಾಫೀಸಿನ ಕೆಲಸಕಾರ್ಯಗಳು ಸಲೀಸಾಗಿ ನಡೆಯುತ್ತಲಿವೆ ನಮ್ಮ ಪೋಲೀಸ್ ಇನ್ಸ್‌ಪೆಕ್ಟರವರು ಪತ್ತೆತರದೂದು ನಡಿಸುತ್ತಿದಾರೆ —ಹೊಸ ನಾಡಿಯು ಎಡತೊರೆ ತಾಲ್ಲೂಕಿನ ಕೆಲವು ಗ್ರಾಮಗಳಿಗೂ, ಹುಣಸೂರು ತಾಲ್ಲೂಕಿನ ಕೆಲವು ಗ್ರಾಮಗಳಿಗೂ ಬರುತ್ತೆಂದು ಸರ್ವೆ ಮಾಡಿ ಕೆಲಸಕಾರ್ಯಗಳ ಅನುಕೂಲಕ್ಕಾಗಿ ಎಡತೊರೆ ಪ್ರಾಂತ್ಯ ಒಬ್ಬ ಡೆಪ್ಯುಟಿ ಅಮಲ್ದಾರರೂ, ಈ ಪ್ರಾಂತ್ಯ ಒಬ್ಬ ಸ್ಪೆಷಲ್ ಶಿರಸ್ತೆದಾರರೂ ಬಂದು ಆಫೀಸ್ ಮಾಡುತ್ತಿದಾರೆ

ಚಿತ್ರದುರ್ಗದ ತಾ॥ ದೊಡ್ಡ ಸಿದ್ದವ್ವನಹಳ್ಳಿ —ಮಳೆ ಇಲ್ಲದೆ ಪೈರುಗಳೆಲ್ಲಾ ಬಾಡಿಹೋಗುತ್ತಾ ಇದ್ದವು 5 10 ದಿನಗಳ ಕೆಳಗೆ ಕೊಂಚ ಮಳೆಯಾದ್ದರಿಂದ ಹಸುರಾಗಿರುತ್ತವೆ ಜನಗಳು ಸ್ವಲ್ಪಮಟ್ಟಿಗಾದರೂ ಬೆಳೆಯಾದೀತೆಂದು ನಂಬಿಕೊಂಡಿದಾರೆ ಧಾರಣೆವಾಸಿಗಳು ಹೆಚ್ಚುತ್ತಾ ಇರುವದರಿಂದ ಬಡಬಗ್ಗರ ಜೀವನ ದುಸ್ತರವಾಗಿದೆ ಈಗಲೇ ಭಾವಿಗಳಲ್ಲಿ ನೀರಿಗೆ ದುರ್ಭಿಕ್ಷ ಬಂದಿದೆ ಬೇಸಗೆಯಲ್ಲಿ ಜನ ಜಾನುವಾರುಗಳಿಗೆ ತುಂಬಾ ಕಷ್ಟವಾಗಬಹುದು —ಈ ಗ್ರಾಮವು ಬಹಳ ದೊಡ್ಡದು ಪರಸ್ಥಳದವರು ಬಂದರೆ ಇಳಿಯುವುದಕ್ಕೆ ಅನುಕೂಲವಾಗಿ ಸತ್ರ ವಗ್ಯರೆ ಸ್ಥಳಗಳಿಲ್ಲದ ಬಹಳ ತೊಂದರೆಯಾಗಿದೆ ಸರ್ಕಾರದವರು ಇಲ್ಲಿನ ಯೂನಿಯನ್ ಫಂಡಿನಿಂದ ಸದರಿ ಏರ್ಪಾಟು ಮಾಡಿಕೊಡುವ ಭಾಗದಲ್ಲಿ ತುಂಬಾ ಅನುಕೂಲವಾಗುತ್ತೆ —ಹುಜೂರ್ ಜಮಾಬಂದಿಗೋಸ್ಕರ ಅ॥ ಕಮಿಷನರ್ ಮ॥ ಎಂ ಎಸ್ ರಾಮಚಂದ್ರರಾಯರು ಅಮಲ್ದಾರ್ ಮ॥ ವೆಂಕಟರಾಯರ ಸಮೇತ ತಾ 13 ನೇ ಶನಿವಾರ ದಯಮಾಡಿದರು ಪ್ರಜೆಗಳು ಅವರಿಗೆ

ತಮ್ಮ ಕಷ್ಟಸುಖಗಳನ್ನು ಹೇಳಿಕೊಂಡರು. ಮರುದಿನ ಅವರು ಕೆಲವು ಗ್ರಾಮಗಳಿಗೆ ಹೋಗಿ ಪ್ರಜೆಗಳ ಕಷ್ಟಸುಖಗಳನ್ನು ವಿಚಾರಿಸಿ ಬಂದರು. ರೈತರು ಅರ್ಜಿ ಮೂಲಕ ಅಂಕಿಮಾಡಿಕೊಂಡ ಅಹವಾಲುಗಳನ್ನು ಅವರು ಆದರದಿಂದ ಕೇಳಿ ಸಾಧ್ಯವಾದಮಟ್ಟಿಗೂ ತಕ್ಷಣವೇ ಕೆಲವನ್ನು ಫೈಸಲ್ಮಾಡಿದ್ದಲ್ಲದೆ ಶ್ಯಾನುಭೋಗರ ಲೆಕ್ಕಪತ್ರಗಳನ್ನೆಲ್ಲಾ ತನಿಖೆಮಾಡಿ ತೃಪ್ತಿಕರವಾಗಿ ಬರೆದಿದ್ದಾರೆಂದು ತಿಳಿದು ಸಂತೋಷಪಟ್ಟರು ಆ ರಾತ್ರಿ ಅವರು ಅಮಲ್ದಾರೊಡನೆ ಇಲ್ಲಿನ ದೇವಸ್ಥಾನಕ್ಕೆ ದಯಮಾಡಿಸಿದರು. ಅಲ್ಲಿ ಸ್ವಲ್ಪಹೊತ್ತು ಸಂಗೀತ ನಡೆಯಿತು ಮ|| ರಂಗಾಚಾರ್ಯ್ರ ದೈವಭಕ್ತಿ ವಿಚಾರವಾಗಿಯೂ, ಹೆಡ್ ಮಾಸ್ಟರವರು ಹಣದ ವಿಚಾರವಾಗಿಯೂ ಸ್ವಾರಸ್ಯವಾಗಿ ಉಪನ್ಯಾಸ ಮಾಡಿದರು. ತರುವಾಯ ಮ|| ರಾಮಚಂದ್ರರಾಯರು ಅಲ್ಲಿ ಸೇರಿದ್ದವರನ್ನು ಕುರಿತು—ನಮ್ಮ ರಾಜಭಕ್ತಿಯು ನಮ್ಮ ಏಳಿಗೆಗೆ ಶುಭಸೂಚನೆಯಾಗಿದೆ, ಜ್ಞಾನಸಂಪಾದನೆಗೂ, ಸಮಸ್ತ ಐಹಿಕಾಮುಷ್ಮಿಕ ಸುಖಗಳಿಗೂ, ದೇಶೋನ್ನತಿಗೂ ವಿದ್ಯೆಯೇ ಆಧಾರವಾದದ್ದು. ನಮ್ಮ ಸರ್ಕಾರದವರು ಬಾಲ್ಯವಿದ್ಯಾ ಪ್ರಚಾರಕ್ಕಾಗಿ ಲಕ್ಷಾಂತರ ರೂಪಾಯನ್ನು ವೆಚ್ಚಮಾಡುತ್ತಿದ್ದಾರೆ. ನೀವು ಸಹ ವಿದ್ಯಾವಿಚಾರದಲ್ಲಿ ಶ್ರದ್ಧೆ ವಹಿಸಿ ನಿಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲು ಸುಸಮಯವಾಗಿದೆ ಎಂಬೀ ರೀತಿ ಹಿತಬೋಧೆಯನ್ನು ಮಾಡಿದರು. ಆ ಮೇಲೆ ಮಂಗಳಾರತಿ ಬೆಳಿದು, ನಮ್ಮನ್ನು ಆಳುವ ಜಾರ್ಜ್ ಚಕ್ರವರ್ತಿ ದಂಪತಿಗಳಿಗೂ, ಶ್ರೀಮನ್ಮಹಾರಾಜರವರಿಗೂ ಆಯುರಾರೋಗ್ಯಗಳನ್ನು ಕೋರಿದರು. ಮಾರನೇ ಬೆಳಗ್ಗೆ ಅವರು ಸ್ಕೂಲುಗಳಿಗೆ ಹೋಗಿ ಅಲ್ಲಿ ನಡೆಯುವ ಕಾರ್ಯಗಳನ್ನು ನೋಡಿ ಸಂತೋಷಪಟ್ಟು, ಮಕ್ಕಳಿಂದ ಕೈತೋಟ ಮಾಡಿಸುವ ವಿಚಾರವಾಗಿ ಪ್ರೋತ್ಸಾಹಕೊಟ್ಟು ಸರ್ಕಾರದಿಂದ ಸ್ಥಳ ಅನುಕೂಲಪಡಿಸುತ್ತವೆ ಎಂದು ತಿಳಿಸಿ ಚಿತ್ರದುರ್ಗಕ್ಕೆ ಅಮಲ್ದಾರೊಡನೆ ಪ್ರಯಾಣಮಾಡಿದರು.

ದೆಹಲಿ ದರ್ಬಾರ್ ಡೇ ಉತ್ಸವಗಳು.

ಚನ್ನಪಟ್ಟಣ

ಕಳೆದ 12 ನೇ ತಾ. ಶುಕ್ರವಾರ ಇಲ್ಲಿನ ಕನ್ನಡ ಸ್ಕೂಲಿನಲ್ಲಿ ಚಕ್ರವರ್ತಿ ಸಾರ್ವಭೌಮರವರ ಕಾರೊನೇಷನ್ ಮಹೋತ್ಸವವನ್ನು ನೆರವೇರಿಸಿದರು. ಸಂಸ್ಕೃತ ಮುನ್ಷಿಗಳಾದ ವೇ|| ವರದಾಚಾರ್ಯ್ರ ಭಗವತ್ಪ್ರಾರ್ಥನೆಯನ್ನೂ, ಮ|| ಟಿ. ರಂಗಯ್ಯಂಗಾರ್ಯ್ರ ಸಾರ್ವಭೌಮರ ಶ್ರೇಯಃ ಪ್ರಾರ್ಥನೆಯನ್ನೂ, ಮ|| ಟಿ. ಗೋವಿಂದಾಚಾರ್ಯ್ರ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯನ್ನೂ ಬಾಲಕರಿಂದ ಹೇಳಿಸಿದರು. ಮ|| ರಾಮಚಂದ್ರಯ್ಯನವರು ಶಾಲಾ ವರದಿಯನ್ನು ಓದಿದರು. ಮ|| ಲಕ್ಷ್ಮೀನರಸಿಂಹಯ್ಯನವರು ಬ್ರಿಟಿಷರ ಸಾಮ್ರಾಜ್ಯದಿಂದ ಈ ದೇಶಕ್ಕೆ ಉಂಟಾಗಿರುವ ಪ್ರಯೋಜನಗಳನ್ನು ವಿವರಿಸಿದರು. ವೇ|| ಕೋದಂಡರಾಮಶಾಸ್ತ್ರಿಗಳು ಸಂಸ್ಕೃತದಲ್ಲಿ ಕೆಲವು ಛಂದಪದ್ಯಗಳನ್ನು ರಚಿಸಿ ವಿವರಿಸಿ ಹೇಳಿದರು. ತರುವಾಯ ಅಗ್ರಾಸನಾಧಿಪರಾದ ಮ|| ಆನಂದರಾವ್ ಸಿಸಿರಯವರು ಸರ್ವಸಮ್ಮತವಾದ ಕೆಲವು ಹಿತೋಕ್ತಿಗಳನ್ನು ಹೇಳಿದರು. ಬಳಿಕ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು, ಪಂದ್ಯಗಳಲ್ಲಿ ಗೆದ್ದ ಬಾಲಕರಿಗೆ ಬಹುಮಾನಗಳನ್ನು ಕೊಟ್ಟ ಮೇಲೆ ಸಭೆಯು ಜಯಘೋಷದೊಡನೆ ಬರಖಾಸ್ತಾಯಿತು. ಹೀಗೆ ಇತರ ಸ್ಕೂಲುಗಳವರೂ ಈ ದಿವಸವನ್ನು ಸಂಭ್ರಮದಿಂದ ಕಳೆದರು.

ತೀರ್ಥಹಳ್ಳಿ ತಾಲ್ಲೂಕು ಮೇಗರವಳ್ಳಿ

ಈ ಗ್ರಾಮದ ವಿ. ಇ. ಸ್ಕೂಲಿನಲ್ಲಿ ದರ್ಬಾರ್ ಡೇ ಸಂಬಂಧವಾದ ಉತ್ಸವವು ವಿಜೃಂಭಣೆಯಿಂದ ನಡೆಯಿತು. ಸ್ಕೂಲ್ ಕಟ್ಟಡವು ಕದಳೀ ಸ್ತಂಭಗಳಿಂದಲೂ, ಮಾವಿನ ತಳಿರುಗಳಿಂದಲೂ ಬಗೆಬಗೆಯ ಪುಷ್ಪಗಳಿಂದಲೂ ಶೃಂಗರಿಸಲ್ಪಟ್ಟಿತ್ತು ಮಧ್ಯೆ ಉನ್ನತವಾದ ಆಸನದಲ್ಲಿ ಶ್ರೀಮದಿಂಡಿಯಾ ಚಕ್ರವರ್ತಿ ಚಕ್ರವರ್ತಿನಿಯವರ ಮತ್ತು ಶ್ರೀಮನ್ಮಹಾರಾಜರವರ ಫೋಟೋಗಳು ಉಚಿತವಾದ ಮರ್ಯಾದೆಗಳೊಂದಿಗೆ ಅಲಂಕರಿಸಲ್ಪಟ್ಟಿದ್ದವು. ಬೆಳಗ್ಗೆ ಪ್ರಭುಗಳ ಶ್ರೇಯಃ ಪ್ರಾರ್ಥನೆ ಮುಂತಾದವು ನಡೆದವು ಮಧ್ಯಾಹ್ನಾನಂತರ ಸ್ಕೂಲ್ ಹಾಲ್‌ನಲ್ಲಿ ದರ್ಬಾರ್ ನಡಿಸಲ್ಪಟ್ಟು ದೇವರ ಪ್ರಾರ್ಥನೆಗಳೂ, ಕನ್ನಡ ಮತ್ತು ಇಂಗ್ಲಿಷ್ ರೆಸಿಟೇಷನ್‌ಗಳೂ, ಹಾಸ್ಯಲಹರಿಗಳೇ ಮುಂತಾದ ಅನೇಕ ವಿನೋದಗಳೂ ಶ್ಲಾಘನೀಯವಾಗಿ ಜರುಗಿದವು ಕೊನೆಯಲ್ಲಿ ಸಾರ್ವಭೌಮರವರ ಮತ್ತು ಮಹಾರಾಜರವರ ಶ್ರೇಯಃ ಪ್ರಾರ್ಥನೆ ನಡೆದು, ಸಭಿಕರಿಗೆ ಗಂಧ, ಪುಷ್ಪ, ತಾಂಬೂಲಾದಿಗಳನ್ನು ಹಂಚಿ ಸಭೆಯು ಬರಖಾಸ್ತಾಯಿತು ಸಮಸ್ತರೂ ಜಯಘೋಷವನ್ನು ಮಾಡುತ್ತಾ ತೆರಳಿದರು. ಆ ರಾತ್ರಿ ವಿದ್ಯಾರ್ಥಿಗಳಿಂದ ಅಭಿನಯಿಸಲ್ಪಟ್ಟ "ಮರ್ಚಂಟ್ ಆಫ್ ವೆನಿಸ್" ಎಂಬ ನಾಟಕದ ಒಂದು ಭಾಗವನ್ನೂ, ಇನ್ನೂ ಕೆಲವು ವಿನೋದಗಳನ್ನೂ ನೋಡಿ ಸಕಲರೂ ಆನಂದಭರಿತರಾದರು.

ಸಿರಾ ತಾಲ್ಲೂಕು ಮದಲೂರು

ಈ ಗ್ರಾಮದಲ್ಲಿ 12 ನೇ ತಾ ಶುಕ್ರವಾರ ಗೌರ್ನಮೆಂಟ್ ವಿ ಇ ಸ್ಕೂಲಿನಲ್ಲಿ ಗ್ರಾಮದ ಮುಖಂಡ ಜನಗಳೂ, ಕೋಆಪರೇಟಿವ್ ಸೊಸೈಟಿ ಮೆಂಬರುಗಳೂ ಸಭೆ ಸೇರಿದರು. ಸ್ಕೂಲ್ ಮಾಸ್ಟರ್ ಮ|| ಕೆ. ವೆಂಕಟರಾಮಯ್ಯನವರಿಂದ ವಿದ್ಯಾವಿಷಯಕವಾದ ಉಪನ್ಯಾಸವೂ, ಸಾಹುಕಾರ್ ಮ|| ವೆಂಕಟನಾರಣಪ್ಪನವರಿಂದ ಪರಸ್ಪರ ಸಹಾಯಸಂಘಗಳಿಂದುಂಟಾಗುವ ಪ್ರಯೋಜನದ ಉಪನ್ಯಾಸವೂ, ಮ|| ಕರಣಂ ಎಂ. ರಾಮಣ್ಣನವರಿಂದ ನೂತನ ವ್ಯವಸಾಯ ಮತ್ತು ವರ್ತಮಾನ ಪತ್ರಿಕೆಗಳ ಉಪನ್ಯಾಸವೂ, ಮ|| ಕರಣಂ ಪುಟ್ಟರಂಗಪ್ಪನವರಿಂದ ದನಗಳ ಇನ್ಷೂರೆನ್ಸ್ ವಿಚಾರದ ಉಪನ್ಯಾಸವೂ ನಡಿಸಲ್ಪಟ್ಟವು. ಲೋ. ಸೆ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗೆ ಯೋಗ್ಯತಾ ಪತ್ರಿಕೆ ಕೊಡಲ್ಪಟ್ಟಿತು ವೈಶ್ಯರ ಸಾಹುಕಾರ್ ಮ|| ವೆಂಕಟನಾರಣಪ್ಪನವರು ಬ್ರಿಟಿಷ್ ರಾಜ್ಯಭಾರದಿಂದ ಉಂಟಾಗಿರುವ ಪ್ರಯೋಜನಗಳನ್ನೂ, ಶ್ರೀಮದ್ಯುವರಾಜರವರ ವಿದೇಶಸಂಚಾರದ ಪ್ರಯೋಜನಗಳನ್ನೂ ಕುರಿತು ವಿಸ್ತರಿಸಿದರು. ಬಾಲಕರು ಚಕ್ರವರ್ತಿಗಳವರ ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡಿದನಂತರ ಬಾಲಕರಿಗೆ ಸಕ್ಕರೆಯೂ, ಸಭಾಸದರಿಗೆ ಗಂಧ ಪುಷ್ಪ ತಾಂಬೂಲಾದಿಗಳೂ ಹಂಚಲ್ಪಟ್ಟವು. ಬಳಿಕ ಸ್ಕೂಲ್ ಬಾಲಕರಿಂದ ವಿನೋದಕರವಾದ ಆಟಗಳನ್ನಾಡಿಸಿ, ಯಥೋಚಿತವಾದ ಬಹುಮಾನಗಳು ಕೊಡಲ್ಪಟ್ಟವು.

ಬೆಂಗಳೂರು ತಾಲ್ಲೂಕು ತಾವರೆಕೆರೆ.

ಕಳೆದ 12 ನೆ ತಾ. ಶುಕ್ರವಾರ ಶ್ರೀಮದಿಂಡಿಯಾ ಚಕ್ರವರ್ತಿಯವರು ದಹಲಿ ದರ್ಬಾರು ನಡಿಸಿದ ಎರಡನೇ ವರ್ಷದ ಉತ್ಸವವು ಬಹಳ ವೈಭವದಿಂದ ನಡಿಸಲ್ಪಟ್ಟಿತು. ಸ್ಕೂಲ್ ಮಾಸ್ಟರ್ ಮ|| ಬಿ ನರಸಪ್ಪನವರೂ, ಗ್ರಾಮಸ್ಥರೂ ಆ ದಿನ ಸ್ಕೂಲು ಕಟ್ಟಡವನ್ನು ತೋರಣಾದಿಗಳಿಂದಲೂ ಅನೇಕ ಚಿತ್ರಪಟಗಳಿಂದಲೂ ಮನೋಹರವಾಗಿ ಅಲಂಕರಿಸಿ, ಬೆಳಗ್ಗೆ ಬ್ರಿಟಿಷ್ ಬಾವುಟವನ್ನು ಸ್ಕೂಲ್ ಮನೆಯ ಮೇಲೆ ಸ್ಥಾಪಿಸಿ, ಬಾಲಕರಿಂದ ಕಿಂಡರ್‌ಗಾರ್ಟನ್ ಮೊದಲಾದ ಆಟಪಾಟಗಳನ್ನು ಆಡಿಸಿ ಡ್ರಿಲ್ ವಗೈರೆ ಮಾಡಿಸಿ, ಸ್ಕೂಲಿನೊಳಕ್ಕೆ ಬಾಲಕರನ್ನು ಬಿಟ್ಟರು. ಮಧ್ಯಾಹ್ನ ಚಕ್ರವರ್ತಿ ದಂಪತಿಗಳ ಮತ್ತು ಶ್ರೀಮನ್ಮಹಾರಾಜರವರ ಚಿತ್ರಪಟಗಳನ್ನು ವಾದ್ಯಘೋಷದೊಡನೆ ಬೀದಿಗಳಲ್ಲಿ ಮೆರವಣಿಗೆಮಾಡಿಕೊಂಡು ಬಂದು ಸ್ಕೂಲಿನಲ್ಲಿ ಅಲಂಕರಿಸಿದ್ದ ಶ್ರೇಷ್ಠಾಸನದಲ್ಲಿ ಇಡಿಸಿದರು. ಈ ಉತ್ಸವವು ಸ್ಕೂಲಿನಿಂದ ಹೊರಟಾಗಲೂ, ಸ್ಕೂಲನ್ನು ತಲಪಿದಾಗಲೂ ಬಂದೂಕಿನಿಂದ ತೋಪುಗಳು ಹಾರಿಸಲ್ಪಟ್ಟವು. ಮ|| ಬಿ. ನರಸಪ್ಪನವರು ಬ್ರಿಟಿಷ್ ರಾಜ್ಯಭಾರದಿಂದ ನಮಗುಂಟಾಗಿರುವ ಸೌಕರ್ಯಗಳು, ವಿದ್ಯಾಭ್ಯಾಸ, ನೀತಿಮಾರ್ಗಗಳನ್ನು ಕುರಿತು ಉಪನ್ಯಾಸಮಾಡಿ, ಸ್ಕೂಲ್ ಅಭಿವೃದ್ಧಿಯ ರಿಪೋರ್ಟನ್ನು ಓದಿದರು ಸಭಾಧ್ಯಕ್ಷರಾದ ಮ|| ರಾ. ನರಸಣ್ಣನವರೇ ಮುಂತಾಗಿ ಸರ್ವರೂ ಈ ಗ್ರಾಮದ ಸ್ಕೂಲು ಬಹಳ ಹೀನಸ್ಥಿತಿಯಲ್ಲಿದ್ದದ್ದು ಮ|| ಬಿ ನರಸಪ್ಪನವರು ನಾರ್ಮಲ್ ಸ್ಕೂಲಿನಲ್ಲಿ ತರಪೇತಾಗಿ ಬಂದು ಸರ್ವರಿಗೂ ಪ್ರೋತ್ಸಾಹ ಕೊಡುತ್ತಾ ಸ್ಕೂಲನ್ನು ಬಹಳ ಅಭಿವೃದ್ಧಿಗೆ ತಂದಿರುತ್ತಾರೆಂದು ತಿಳಿಸಿ ಸಂತೋಷಪಟ್ಟರು. ಬಾಲಕ ಬಾಲಕಿಯರು ಚಕ್ರವರ್ತಿಯವರ ಮತ್ತು ಶ್ರೀಮನ್ಮಹಾರಾಜರವರ ಶ್ರೇಯೋಭಿವೃದ್ಧಿಯನ್ನು ಕೋರಿ ಹಾಡುಗಳನ್ನು ಗಾನಮಾಡಿದರು. ವಾದ್ಯಘೋಷಗಳೊಡನೆ ಮಂಗಳವಾಯಿತು ಸರ್ವರಿಗೂ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟು, ಸಭೆಯು ಬರಖಾಸ್ತಾಯಿತು.

[ಮೇಲ್ಕಂಡ ಉತ್ಸವ ನಡೆದ ವೃತ್ತಾಂತಗಳು ಬೆಳ್ಳಾವಿ, ಚಕ್ರಭಾವಿ, ಲಕ್ಕೂರು, ದೊಡ್ಡಮೇಟಿಕುರಿಕೆ, ಖಿಲೇರ, ಇವೇ ಮುಂತಾದ ಅನೇಕ ಸ್ಥಳಗಳಿಂದ ಬರೆದು ಬಂದಿರುತ್ತವೆ ಸ್ಥಳಸಂಕೋಚದಿಂದ ಪ್ರಕಟಿಸಲು ಸಾಧ್ಯವಾಗಲಿಲ್ಲವೆಂದು ಶೃತಪಡಿಸುತ್ತೇವೆ.—ಎಡಿ]

ಮಕ್ಕಳ ಹಿತಕಾರಿ

ಎಂದು

SCOTT'S EMULSION 3-52

(ಸ್ಕಾಟ್ಸ್ ಇಮಲ್‌ಷನ್)

ಎಂಬೀ ಸೇವನಾ ಔಷಧಕ್ಕೆ ಕೋಟ್ಯಾಂತರ ತಂದೆತಾಯಿಗಳು ಹೆಸರಿಟ್ಟಿದಾರೆ. ಯಾಕೆಂದರೆ ಇದು ಮಕ್ಕಳ ಆರೋಗ್ಯವನ್ನು ವೃದ್ಧಿಪಡಿಸಿ, ದೇಹವನ್ನು ಪುಷ್ಟಿಯಾಗಿ ಬೆಳೆಸಿರುತ್ತದೆ.

ಇದು ತುಂಬಾ ರುಚಿಯಾಗಿರುವುದರಿಂದ ಮಕ್ಕಳು ಬಹಳ ಸಂತೋಷವಾಗಿ ಸೇವನೆಮಾಡುತ್ತಾರೆ

ಇದು ಕಾಯಿಲೆ ಮಕ್ಕಳನ್ನು ಆರೋಗ್ಯಮಾಡುವುದು , ಅಶಕ್ತರಾದ ಮಕ್ಕಳನ್ನು ಬಲಿಷ್ಠರನ್ನಾಗಿ ಮಾಡುವುದು

ಕೈಸೋಕದೆ ತಯಾರಾದದ್ದು.

ಎಲ್ಲಾ ಔಷಧ ವ್ಯಾಪಾರಸ್ಥರಲ್ಲೂ ವಿಕರಿಯಾಗುತ್ತದೆ.

ಸ್ಕಾಟ್ ಅಂಡ್ ಬೌನ್, ಲಿಮಿಟೆಡ್,

ಔಷಧಗಳ ಕಾರ್ಖಾನೆ,

ಲಂಡನ್, ಇಂಗ್ಲೆಂಡ್.

ಈ ಮೀನುಮನುಷ್ಯ ಇರುವ ಔಷಧವನ್ನೇ ಕೊಂಡುಕೊಳ್ಳಿ.

ಅತ್ಯುತ್ತಮವಾದ ನೀಲಿ ಕಪ್ಪು ಶಾಯಿಪುಡಿ

ಮೊದಲು ಸ್ವಲ್ಪ ತರಿಸಿನೋಡಿ ಒಂದು ಪೊಟ್ಟಣದಲ್ಲಿ ಒಂದು ಕುಪ್ಪಿ ಶಾಯಿ ಆಗುತ್ತೆ ಚಿಲ್ಲರೆ ಮಾರುವರಿಗೆ ಒಳ್ಳೇ ಲಾಭವಿದೆ ಬೆಲೆ ಸುಲಭ; 100 ಕ್ಕೆ ... ಆಣೆ; 300 ಕ್ಕೆ 11 ಆಣೆ, 500 ಕ್ಕೆ 1-9-0, 1,000ಕ್ಕೆ 2-8-0. ಹಾಸಲು ...

ವಿಳಾಸ—"ವಿಕಟಪ್ರತಾಪ" ಆಫೀಸ್, ತುಪ್ಪಂ ಪೋಸ್ಟ್

ಪ್ಯಾಕೆಟ್ ಸಿಗರೆಟ್ ಲೈಟರ್

ಕ್ರಯ ರೂ. 2-8-0.

ಸಿಗರೇಟ್, ಬೀಡಿ ಸೇದುವವರಿಗೆ ಬಹಳ ಉಪಯೋಗ ಉಳ್ಳದ್ದು ... ಕಡ್ಡಿಯೇ ಬ್ಯಾಡ ಜರ್ಮನ್ ಸಿಲ್ವರ್‌ನಲ್ಲಿ ನಶ್ಯದ ಡಬ್ಬಿ ನಮೂನೆ ... ಬಂದಿರುತ್ತವೆ ಜನರು ನೋಡಿದರೆ ನಶ್ಯದ ಡಬ್ಬಿ ಎಂದೇ ಭಾವಿಸುವರು ... ಉಪಯೋಗಿಸುವ ವಿಧಾನವನ್ನು ನಮ್ಮ ಡೈರೆಕ್ಷನ್‌ನಲ್ಲಿ ವಿವರಿಸಿರುತ್ತೇವೆ ... ಒಂದನ್ನು ತರಿಸಿ ಪರೀಕ್ಷಿಸಬಹುದು. [289-3]

ವಿಲಾಸ —ಶ್ರೀ ಕೃಷ್ಣಾ ಅಂಡ್ ಬ್ರದರ್ಸ್,
93, ಮಿಂಟ್ ಸ್ಟ್ರೀಟ್, ಮದರಾಸು

ಪ್ರಾಕೃತಿಕ ಭೂಗೋಳ

೨ ನೆಯ ಮುದ್ರಣ.

1 ನೆಯ ಭಾಗ 0-4 6 (ಕೆಲವು ಮಾತ್ರ ಉಳಿದಿವೆ)

2 ನೆಯ ಭಾಗ 0-4-6 (ಜನವರಿ ತಿಂಗಳಲ್ಲಿ ಬಿಕರಿಗೆ ಸಿದ್ಧವಾಗುವುದು ... ಫಿಸಿಕಲ್, ಕಮರ್ಷಿಯಲ್, ಪೊಲಿಟಿಕಲ್, ಮತ್ತು ಪರೀಕ್ಷೆಯ ಪ್ರಶ್ನೋತ್ತರ ... ಹೆಚ್ಚಾಗಿ ಸೇರಿಸಲ್ಪಟ್ಟಿರುವವು) [276-3]

ಲೇಖನ ಪುಸ್ತಕಗಳು

ವಿದ್ಯಾಭ್ಯಾಸದ ಇಲಾಖೆಯವರು ಸರ್ಕಾರೀ ಪುಸ್ತಕಗಳಿಗೆ ಪ್ರತಿಯಾಗಿ ... ಕಾಪೀ ಪುಸ್ತಕಗಳನ್ನೂ ಎಲ್ಲಾ ಸ್ಕೂಲುಗಳಲ್ಲೂ ಉಪಯೋಗಿಸಬಹುದೆಂದು ... ಕೊಂಡಿರುತ್ತಾರೆ. ನಂ 1, 2, 3, 4 ಹೊಸ ಕನ್ನಡ ಲೇಖನ ಪುಸ್ತಕಗಳು—1 ... 0-1-3. ಮೇಲ್ಪಜ್ಜೆಗಳು ಕೈಬರವಣಿಗೆಯಂತೆ ಅಂದವಾಗಿ ಪ್ರಿಂಟಾಗಿವೆ

10 ರೂ. ಬೆಲೆ ಬಾಳುವ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ರೂ 1 ... 2 ಆಣೆಯಂತೆಯೂ, 50 ಪುಸ್ತಕಗಳಿಗೆ ಕಡಮೆ ಇಲ್ಲದಂತೆ ತರಿಸಿಕೊಳ್ಳುವವರಿಗೆ ರೂ. 1 ಕ್ಕೆ 1 ಆಣೆಯಂತೆಯೂ ಡಿಸ್ಕೌಂಟು ಕೊಡಲ್ಪಡುತ್ತದೆ.

ವಿಳಾಸ—ಎಂ. ಪಿ. ಲಿಂಗಪ್ಪಯ್ಯ, ಹೆಡ್ ಮಾಸ್ಟರ್,
ಇಟ್ಟಿಗೆಗೂಡು ಎ. ವಿ. ಸ್ಕೂಲ್, ಮೈಸೂರು

ಅನುಭವಸಿದ್ಧವಾದ ಷರಬತ್ತುಗಳು

ಸೊಗದೇಬೇರಿನ ಷರಬತ್ತು.—ರಕ್ತವನ್ನು ಶುದ್ಧಿಮಾಡಿ ದೇಹವನ್ನು ... ಮ ರೀತಿಯಲ್ಲಿಟ್ಟುಕೊಂಡಿರುವುದಕ್ಕೆ ಶ್ರೇಷ್ಠವಾದದ್ದು ರಕ್ತ ಕೆಡುವುದರಿಂದ ಹುಟ್ಟುವ ಕಜ್ಜಿ, ತುರಿ, ವ್ರಣ, ಹುರುಪು, ಹುಳುಕಡ್ಡಿ ಮೊದಲಾದ ಚರ್ಮ ರೋಗಗಳೂ, ಉಷ್ಣಾಧಿಕ್ಯದಿಂದುಂಟಾಗುವ ಮೂತ್ರದಲ್ಲಿ ಉರಿ, ಅರೆತಲೆನೋವು, ನಿದ್ರೆಬಾರದಿರುವಿಕೆ, ವಾಯುವಿನಿಂದುಂಟಾಗುವ ಅತಿನಿದ್ರೆ, ಬಾಯಿ ದುರ್ವಾಸನೆ, ಕೈ ಕಾಲು ಉರಿ, ಗರ್ಭವೆಟ್ಟು, ಮುಂತಾದ ರೋಗಗಳೂ ಇದರ ಸೇವನೆಯಿಂದ ಖಾತ್ರಿಯಾಗಿ ಗುಣವಾಗುತ್ತವೆ ಇದು ಕುಡಿಯುವುದಕ್ಕೆ ಸಮಾಧಾನ ದಾಹಶಮನ, ಹಿತಕರ, ಮೇಲ್ಕಂಡ ರೋಗಗಳಿಗೆ ಗುಣಕಾರಿ ಕ್ರಯ-8 ಔನ್ಸ್ ಬಾಟ್ಲಿಗೆ 8 ಆಣೆ, 12 ಔನ್ಸ್ ಬಾಟ್ಲಿಗೆ 12 ಆಣೆ

ಅಮೃತ ಸಿರಪ್.—ರಕ್ತಕೆಡುವಿಕೆ, ಧಾತುನಷ್ಟ, ದುರ್ಬಲತ್ವ, ಮುಖ ... ಅಗ್ನಿಮಾಂದ್ಯ, ಜಡತ್ವ, ಪಿತ್ಥದಿಂದುಂಟಾಗುವ ಸಂಕಟ, ಅರೆತಲೆನೋವು, ಬಾಯಿ ದುರ್ವಾಸನೆ, ಮೊದಲಾದವು ಇದರ ಸೇವನೆಯಿಂದ ಖಾತ್ರಿಯಾಗಿ ಗುಣವಾಗುತ್ತವೆ ಕ್ರಯ 8 ಔನ್ಸ್ ಬಾಟ್ಲಿಗೆ 8 ಆಣೆ; 12 ಔನ್ಸ್ ಬಾಟ್ಲಿಗೆ 12 ಆಣೆ

ಪ್ರಸಿದ್ಧವೂ ಶ್ರೇಷ್ಠವೂ ಆದ ಊದುಬತ್ತಿಗಳು —ಸೇರು 1 ಕ್ಕೆ ರೂ. ... 12, 10, 8, 6, 4, 3, 2½, 2, 1½ ಬಳ್ಳಿಗಳು 1 ಕ್ಕೆ 1½ ಆಣೆ ... 2 ರೂ ವರೆಗೆ. ಹಸಿಗಂಧ ತೊಲ 1 ಕ್ಕೆ ರೂ 2, 1, ಮತ್ತು 12 ಆಣೆ. ಅಲ್ಲದೆ ಅನೇಕ ಅತ್ತರುಗಳೂ ನಮ್ಮಲ್ಲಿ ಸಿಗುತ್ತೆ. ಅರಮನೆಗೆ ಒಪ್ಪಿಸುವ ಸುಗಂಧಗಳು ಇವೇ ಇಂಥಾ ಶ್ರೇಷ್ಠವಾದ ಬತ್ತಿಗಳೂ ಬಳ್ಳಿಗಳೂ ಇನ್ನೆಲ್ಲಿಯೂ ದೊರೆಯುವದಿಲ್ಲ ಅರ್ಧಾಣೆ ಸ್ಟಾಂಪು ಕಳಿಸಿ ನಮ್ಮ ಕ್ಯಾಟಲಾಗು ತರಿಸಿಕೊಳ್ಳಿ

ವಿಳಾಸ —ಶ್ರೀ ವೆಂಕಟೇಶ್ವರ್ ಕಂಪನಿ,
[280-1] 171 ಚಾಮರಾಜ ರೋಡ್, ಮೈಸೂರು

ಜನವರಿ ಪ್ರಜೆಂಟೇಷನ್ ವಾಚ್.



ಜನವರಿ 5 ನೇ ತಾರೀಖಿನೊಳಗಾಗಿ ಆರ್ಡರ್ ಕೊಡುವವರಿಗೆ ಮಾತ್ರ 1914ನೇ ಇಸವಿಯ ಕ್ಯಾಲೆಂಡರನ್ನು ಚಿತ್ರಕೆಲಸದಲ್ಲಿ ಪ್ರಖ್ಯಾತರಾದ ರಾಜಾ ರವಿವರ್ಮರವರ ಪ್ರೆಸ್ಸಿನಲ್ಲಿ ನಾನಾ ಬಣ್ಣಗಳಿಂದ ತಯಾರಿಸಲ್ಪಟ್ಟ ಪಿಕ್ಚರ್‌ಗಳನ್ನಿಟ್ಟು 3-4 ಬಣ್ಣಗಳಿಂದ ಮೈಸೂರ್ ಕ್ರೌನ್ ಪ್ರೆಸ್ಸಿನಲ್ಲಿ ಅಂದವಾಗಿ ಪ್ರಿಂಟುಮಾಡಿಸಿ ಗೌರ್ನಮೆಂಟ್ ರಜಾ ದಿವಸಗಳನ್ನೂ ಸಹ ಸೂಚಿಸಿರುವ ಕ್ಯಾಲೆಂಡರ್ 1 ಕ್ಕೆ 0-1 0, 6 ಕ್ಕೆ 1-0-0; 17 ಕ್ಕೆ 1-11-0, ಪ್ಯಾಕಿಂಗ್ ಪೋಸ್ಟೇಜು ಮಾಫಿ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿವೆ ಜಾಗ್ರತೆ ಆರ್ಡರ್ ಕೊಟ್ಟು ತರಿಸಿಕೊಳ್ಳಿ ನಿಮ್ಮ ಹಣವನ್ನು ಅಲ್ಪಕ್ರಯದ ವಾಚುಗಳಿಗೆ ಹಾಕಿ ಏಕೆ ಅನ್ಯಾಯಮಾಡಿಕೊಳ್ಳುವಿರಿ ? ಈಗತಾನೇ ಸೀಮೆಯಿಂದ ಬಂದಿರತಕ್ಕ 8-12-0 ರೂಪಾಯಿ ಬಾಳ್ವ ಜಂಟಲ್ಮೆನ್ ಲೀವರ್ ಡ್ರೆಲ್ ವಾಚೆಂಬ ಹೊಸ ನಮೂನೆ ವಾಚಿಗೆ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿ. ಸ್ಥಳಸಂಕೋಚದಿಂದ ಇದರಲ್ಲಿರತಕ್ಕ ಸಾಮಾನಿನ ಗುಣಗಳನ್ನು ವಿವರಿಸಲವಕಾಶವಾಗಲಿಲ್ಲ. ಅತ್ಯುತ್ತಮವಾದ "ದಿ ನ್ಯಾಷನಲ್ ಟ್ಯೂಬ್ಲಾಕ್ ಇಂಕ್ ಪೌಡರ್" ಪೊಟ್ಲ 1 ಕ್ಕೆ 0-2 0, 1 ಡಜನ್ ಪೊಟ್ಲಗಳಿಗೆ 1-5-0, ಪ್ಯಾಕಿಂಗ್ ಪೋಸ್ಟೇಜು ಮಾಫಿ. 1 ಡಜನ್ ಪೊಟ್ಲಗಳಿಗಿಂತಲೂ ಕಡಮೆ ಪರಸ್ಥಳಕ್ಕೆ ರವಾನಿಸುವದಿಲ್ಲ "ಜುಮಲಿ" ಇದೊಂದು ಆಶ್ಚರ್ಯಕರವಾದ ಹೊಸ ಕಾದಂಬರಿ. ಕ್ರಯ ಪ್ರತಿ 1 ಕ್ಕೆ 0 6-0. ಪ್ರತಿಯೊಬ್ಬರಿಗೂ ಅತ್ಯವಶ್ಯಕ ಬೇಕಾದ 6 ನಮೂನೆ ಹಿಂದೂ ದೇವರ ಪ್ರತಿಮೆಗಳನ್ನು ರಬ್ಬರ್ ಮೊಹರಿನಂತೆ ತಯಾರ್‌ಮಾಡಿಸಿಧೇವೆ. ಕ್ರಯ 1-0 0. 6 ವಿಗ್ರಹಗಳನ್ನು ಒಂದೇಸಾರಿ ತೆಗೆದುಕೊಳ್ಳುವವರಿಗೆ ಸಿಲ್ಕಿಂಕ್ ಪ್ಯಾಡ್ (ಸ್ವತಹ ಸದಾ ಶಾಯಿ ಇರುವ ಮೆತ್ತೆ 1) ಸುಂದರವಾದ ಪೆಟ್ಟಿ 1 ಇವೆರಡನ್ನೂ ಬಹುಮಾನ ಕೊಡುತ್ತದಲ್ಲದೆ ಪೋಸ್ಟೇಜು ಪ್ಯಾಕಿಂಗ್ ಸಹ ಮಾಫಿಮಾಡಿಧೇವೆ, ಜಾಗ್ರತೆ ಆರ್ಡರ್ ಕೊಡಿ. ಇದೊಂದು ಹೊಸ ನಮೂನೆ ವಾಚ್, ಈಗತಾನೇ ಸೀಮೆಯಿಂದ ಬಂದಿಧೆ. ಘಂಟೆ, ನಿಮಿಷ ತೋರಿಸಿ ವಾರ, ತಾರೀಖು, ತಿಂಗಳು ಸಹ ತೋರಿಸತಕ್ಕ ವಾಚ್ 1 ಕ್ಕೆ 5-12-0, ಇಷ್ಟು ಕಡಮೆ ಬೆಲೆಗೆ ಇಷ್ಟು ಸೌಕರ್ಯವುಳ್ಳ ವಾಚ್ ಇದುವರಿಗೂ ಯಾರೂ ಬಿಕರಿ ಮಾಡಿಲ್ಲ. [281 1]

ನಮ್ಮ ವಿಳಾಸ .—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕನ್ನಡಾಸ್ತೊಹಲ್ಲಾ, ಮೈಸೂರು.

ಜಪಾನರ

ಉನ್ನತಿಗೆ ಮೂಲಾಧಾರ—ನವನಾಗರಿಕ ಜನಾಂಗದವರಂತೆ ಸ್ವಗೌರವವನ್ನೂ ಸುಖಸಂತೋಷಗಳಿಂದ ಬಾಳಬೇಕಾದರೆ ಪ್ರತಿಯೊಬ್ಬನೂ ಈ ಕನ್ನಡ ಗ್ರಂಥವನ್ನು ಓದಬೇಕು ಶ್ರೀಮನ್ಮಹಾರಾಜರ ಮತ್ತು ಶ್ರೀಮದ್ಯುವರಾಜರ ಭಾವಚಿತ್ರಗಳೂ, ಕಥೆಯ ಸಂದರ್ಭಕ್ಕನುಕೂಲಿಸುವಂತೆ ನೇತ್ರಾನಂದಕರವಾದ 12 ಹಾಫ್‌ಟೋನ್ ಚಿತ್ರಗಳೂ ಇದರಲ್ಲಿವೆ ಇದರಂತೆ ಕಣ್ಮನಗಳಿಗೆ ಆನಂದವನ್ನುಂಟುಮಾಡುವ ನೀತಿಬೋಧಕವಾದ ಕಥೆಯು ಕನ್ನಡದಲ್ಲಿ ಇನ್ನಾವುದೂ ಮುಂಡಿತವಾಗಿಯೂ ಇಲ್ಲ ಶ್ರೀಮನ್ಮಹಾರಾಜರವರಿಗೆ ಅನುಮತಿಯನ್ನು ಪಡೆದು ಅರ್ಪಿಸಲ್ಪಟ್ಟಿದೆ , ಮತ್ತು ನಮ್ಮ ಚೀಫ್ ಇನ್‌ಜನಿಯರ್ ಮ|| ಕೆ. ಶ್ರೀನಿವಾಸರಾಯರು ಪ್ರೌಢತರವಾದ ಉಪೋದ್ಘಾತವನ್ನು ಬರೆದಿರುವರು. ಪುಸ್ತಕವನ್ನು ಸಂಪೂರ್ಣವಾಗಿ ಓದಿದಹೊರತು ನೀವದನ್ನು ಕೆಳಗಿಡುವುದಿಲ್ಲ. ಕ್ರಯ ವಿ. ಪಿ. ಸಹಿತ—ಚಿನ್ನದ ಗಿಲ್ಟಿನದು ರೂ. 2-4 0 ; ಅವ್ವಲ್ ಗ್ಲೇಜ್ ರೂ. 1-8-0 , ದುಯ್ಯಂ ರೂ. 1-4-0. [374-

ಧರ್ಮಪದ:—ಸಾವಿರಾರು ಗ್ರಂಥಗಳಿಂದ ಪಡೆಯಬಹುದಾದ ಜ್ಞಾನವನ್ನು ಈ ಕನ್ನಡಗ್ರಂಥವೊಂದರಿಂದಲೇ ಪಡೆಯಬಹುದು. ಆಬಾಲವೃದ್ಧರಿಗೂ ಆನಂದವನ್ನುಂಟುಮಾಡುವುದು ನೇತ್ರಾನಂದಕರವಾದ ಮಹಾರಾಜರ, ಗ್ರಂಥಕರ್ತರ ಲೋಕದಲ್ಲಿ ಅತ್ಯಂತ ದೊಡ್ಡದಾದ ಗೌತಮಮುನಿಯ ವಿಗ್ರಹದ ಭಾವಚಿತ್ರಗಳಿವೆ. ಕ್ರಯ ವಿ. ಪಿ. ಸಹಿತ 1 ರೂಪಾಯಿ.

ವಿಳಾಸ—
ಸಿ ಎಲ್. ಎಸ್. ಬುಕ್ ಡಿಪೋ, ಮೈಸೂರು , ಅಥವಾ,
ಬಿ. ಅಶ್ವತ್ಥನಾರಾಯಣ ಶಾಸ್ತ್ರಿಗಳು, ಚಾಮರಾಜಪೇಟೆ, ಮೈಸೂರು

ಅಜ್ಮೀರ್ ಜನರಲ್ ಅಷೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ಡಾಫೀಸ್—ಅಜ್ಮೀರ್ ಬ್ರಾಂಚಾಫೀಸ್—ಬೆಂಗಳೂರು ಸಿಟಿ

ಮೇಲ್ಕಂಡ ವಿಮಾ ಸಂಘದ ಅಧಿಕಾರಿಗಳು 1912 ನೇ ಇಸವಿಯಲ್ಲಿ ಜಾರಿಗೆ ಬಂದ "ಇಂಡಿಯನ್ ಲೈಫ್ ಇನ್ಷೂರೆನ್ಸ್ ಕಂಪನೀಸ್ ಆಕ್ಟ್" ಎಂಬ ಶಾಸನಕ್ಕೊಳಪಟ್ಟಿರುವುದರಿಂದಲೂ, ಈ ಶಾಸನದನುಸಾರವಾಗಿ ಧರವಸೆಯು ಹಣವನ್ನು ಮೊಬಲಗು ಸಹಾ ಇಂಡಿಯಾ ಸರ್ಕಾರದಲ್ಲಿ ಇಡಲ್ಪಟ್ಟಿರುವುದರಿಂದಲೂ ವಿಮೆದಾರರು ಪಾವತಿಮಾಡುವ ಮೊಬಲಗಿಗೆ ಆಗಲೀ, ಅಥವಾ ವಿಮೆ ಸಂಘದ ಸ್ಥಿರತ್ವದ ವಿಚಾರದಲ್ಲೇ ಆಗಲಿ, ಯಾವ ಸಂದೇಹವೂ ಇರುವುದಿಲ್ಲ ಸಂಘದ ಕಾರ್ಯವು ಬಹಳ ಮಿತವ್ಯಯದಿಂದ ನಿರ್ವಾಹವಾದಲ್ಪಟ್ಟು ವಿಮೇದಾರರಿಗೆ ಬಹಳ ಕಮ್ಮಿಯಾಗಿ ಪ್ರೀಮಿಯಂ ದರಗಳು ಬೀಳುವಂತೆ ಮಾಡಲ್ಪಟ್ಟಿರುವುದು

ಏಜಂಟರು ಎಲ್ಲಾ ಕಡೆಯಲ್ಲಿಯೂ ಬೇಕಾಗಿರುತ್ತದೆ ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಬಹುದು

[109 30] ಎಸ್ ಕಟ್ಬೂರ್, ಬ್ರಾಂಚ್ ಸೆಕ್ರೆಟರಿ,

ಮದ್ರಾಸ್ ಮತ್ತು ದಕ್ಷಿಣ ಇಂಡಿಯಾ ಬ್ರಾಂಚ್, ಬೆಂಗಳೂರು ಸಿಟಿ

ಕನ್ನಡ ಲಾ ಪುಸ್ತಕಗಳು

ಗೌರ್ನರ್ ಜನರಲ್‌ರವರ ಹುಕುಂ ಪ್ರಕಾರ ಎಲ್ಲಾ ದೇಶಗಳಲ್ಲಿಯೂ ಜಾರಿಯಲ್ಲಿರುವ ಕನ್ನಡ ಇಂಡಿಯನ್ ಪೀನಲ್ ಕೋಡು ಕ್ರಯ ರೂ 2 0-0, ವ್ಯವಹಾರ ನಿರ್ಣಯ ವಿಧಿ ಎಂಬ ಸಿವಿಲ್ ಪ್ರೊಸೀಜರ್ ಕೋಡ್ ರೂಪಗಳುಳ್ಳದ್ದು ರೂ 3 0 0, ವ್ಯವಹಾರ ಪರಿಹಾರವಿಧಿ ಎಂಬ ಸ್ಪೆಸಿಫಿಕ್ ರಿಲೀಫ್ ಆಕ್ಟು ರೂ 1 8 0, ಇಂಡಿಯನ್ ಲಾ ಆಫ್ ಕಂಟ್ರಾಕ್ಟ್ ರೂ 2 0 0, ಪ್ರಿಸ್ಕ್ರಿಪ್ಶ್ಯನ್ ಲಿಮಿಟೇಶನ್—ಈ ಪುಸ್ತಕದಲ್ಲಿ ಸಿವಿಲ್, ಕ್ರಿಮಿನಲ್, ರೆವಿನ್ಯೂ ಮುಂತಾದ ವ್ಯವಹಾರ ವಿಧಿಗಳನ್ನು ಬೋಧಿಸುವದು ಕ್ರಯ ರೂ 1 1 0, ತಾನಾಗಿ ಕನ್ನಡ ಇಂಗ್ಲೀಷ್ ಕಲಿಯುವದು ರೂ 1-8 0 ಇವುಗಳಲ್ಲದೆ ಕೆಲವು ಮುದ್ರಣವಾಗುತ್ತಿವೆ ಇನ್ನು ಪುಸ್ತಕಗಳು ಅಪೇಕ್ಷಿಸುವವರು ನಮ್ಮ ಪುಸ್ತಕಗಳ ಕ್ಯಾಟಲಾಗಿಗೆ ಬರೆಯಿರಿ [160 20]

ವಿಳಾಸ ಪಿ. ನರಸಿಂಗರಾವ್,

ಎಡಿಟರ್, "ಲಾ ಗೆಜೆಟ್" ಬೆಂಗಳೂರು.

Notice dated 8th December, 1913.

Sealed tenders for the supply of good and cleaned kulthi required for the horses etc, at the Kunigal Stud Farm will be received up to 2 P M on Monday the 22nd December 1913 in the Office of the Military Secretary to H H the Maharaja of Mysore, Bangalore.

CONDITIONS

1 About 1000 pallas of kulthi will be required, which may be supplied at 170 pallas a month, or the whole lot at once before the 5th January, 1914

2 The kulthi is to be delivered at the premises of the Government Stud Farm, Kunigal

3 The tenders should be accompanied by Currency Notes for Rs 500 which will be forfeited to the Government if the tenderer whose tender is accepted fails to execute the agreement for the due fulfilment of the contract If the tender is not accepted the amount will be refunded

(Sd.) A. A. JONES, Lt.-Col.,
Offg Military Secretary
to H. H the Maharaja of
MYSORE.

[269 2]

1907 ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಬಹಳ ಅಭಿವೃದ್ಧಿಸ್ಥಿತಿಯಲ್ಲಿರುವ ಮೈಸೂರು ಸರ್ಕಾರದ ಧರವಸೆಯುಳ್ಳ 'ದಿ ಕೋಲಾರ್ ಗೋಲ್ಡ್‌ಫೀಲ್ಡ್ ಜೀವ ವಿಮೆ ಕಂಪನಿ' ಲಿಮಿಟೆಡ್ ನಲ್ಲಿ ಮದುವೆ ಮತ್ತು ಜೀವ ವಿಮೆ ಪ್ಲಾನಿನ ಮೊದಲನೇ ತರಗತಿಯಲ್ಲಿ ವಾಷಿಯಾನ ರೂ 1-8 0, ರೂ 1 0 0 ಗಳ ಮೇರೆ ಪಾಲಿಸಿಗೆ ಕೊಟ್ಟು ಚಂದಾದಾರರು ಕೊಡುವ ಹಣಕ್ಕೆ ಎಷ್ಟು ಹಣಕ್ಕೆ ಕಡಮೆಯಿಲ್ಲದೆ ಬೋನಸ್ ಕೊಡುವುದಕ್ಕೆ ಧರವಸೆಯುಳ್ಳದ್ದಾಗಿರುತ್ತೆ ನಂಬಿಕೆ ಮತ್ತು ಚಟುವಟಿಕೆಯುಳ್ಳ ಏಜೆಂಟರುಗಳು ಧಾರಾಳವಾದ ಕಮಿಷನ್ ಏರ್ಪಾಡು ಮೇರೆ ಬೇಕಾಗಿದೆ ಮತ್ತು ಇದರಲ್ಲಿ ಪ್ರತಿ ವರ್ಷವೂ ಮದುವೆ ಮತ್ತು ಜೀವ ವಿಮೆ ಪ್ಲಾನಿನಲ್ಲಿ ಲಕ್ಷಾಂತರ ರೂಪಾಯಿಗಳು ಹಂಚಲ್ಪಡುತ್ತೆ ಹೆಚ್ಚು ವಿಷಯಗಳಿಗೆ ಈ ಕೆಳಗಿನ ವಿಳಾಸಕ್ಕೆ ಒಂದಾಣೆ ಸ್ಟಾಂಪಿನೊಡನೆ ಕಾಗದ ಬರೆಯಿರಿ [213 5]

Hindustan Co-operative Insurance
Society, Limited,
Hindustan Buildings, Calcutta

Authorized capital—**One Crore** Policies effected—over Rs 2,20 00,00 Subscribed capital Rs 87,00,000 Funds exceed—Rs 20 80 000

Paid up Capital—over Rs 10,00,000

This famous Society's Premiums are the lowest and the insurance value, therefore the highest Rules exceptionally advantageous and preferential Financial conditions based on sound principles Rs 2 00 000 deposited with the Government, as per new Insurance Act of 1912

Wanted Immediately

Active and influential District and Taluk Agents on liberal terms of commission or pay Bonus and rewards, a speciality This is the only business which requires no capital or higher education to earn a handsome amount daily For further particulars and agency prospectus &c, apply with one anna stamp to

Messrs. Venkatachalam & Son,
Chief Agents,
166, Dodpeta, Mysore.

English **Papers** with Text Summary, Special Papers, and Monthly Tests, etc Subscription Rupees 2 (in advance) **Student's Spelling Book** As 4 (Postage Extra) **Postal Tution**—Monthly Fees English **Rs. 2**; Arithmetic **Re 1, the rest As 6** (all in advance) *Apply to,*

[273-2] **H N SITARAMA RAO,**
Krishnaraja Mohalla, Mysore.

ಹೊಸ ಮಾಸ ಪತ್ರಿಕೆ । ದ್ವಿತೀಯ ವರ್ಷಾರಂಭ

ಭಾರತೀವಿಲಾಸ

ಇದೊಂದು ಕನ್ನಡ ಮಾಸ ಪತ್ರಿಕೆ ಪ್ರತಿಮಾಸದಲ್ಲಿಯೂ ಕ್ರಮವಾಗಿ ಪ್ರಚಾರವಾಗುವುದು ಪ್ರಬಂಧಗಳೂ, ನಕಲಿಗಳೂ, ವಚನಗ್ರಂಥಗಳೂ ನೀತಿವಿದ್ಯಾವಿಷಯಕವಾದ ಉಪನ್ಯಾಸಗಳೂ ಬೇರೆಬೇರೆ ಪುಟಸಂಖ್ಯೆಯಿಂದ ಬೈಂಡ್ ಕಟ್ಟಿಸಿಕೊಳ್ಳಲು ಅನುಕೂಲವಾಗಿ ಮುದ್ರಿಸಲ್ಪಡುತ್ತವೆ ವಿದ್ಯಾರ್ಥಿಗಳಿಗೂ ಸ್ತ್ರೀಯರಿಗೂ ಅತ್ಯವಶ್ಯಕವಾದುದು ವಾರ್ಷಿಕ ಚಂದಾ 1 8 0, ಮಾದರಿ ಸಂಚಿಕೆ 2 ಅ

[272 2] ವಿಳಾಸ—ಮ್ಯಾನೇಜರ್, ಭುವನೇಶ್ವರೀ ಪ್ರೆಸ್, ಮೈಸೂರು

ಶಿಕಾರಿಪುರ, ಶಿರಾಳಕೊಪ್ಪ ಪ್ರಾಂತ್ಯಗಳಲ್ಲಿ ವೃತ್ತಾಂತ ಪತ್ರಿಕೆಗಳ ವಿಲೇವಾರಿ ಪ್ರಕಟಣೆ.

ಶಿಕಾರಿಪುರ, ಶಿರಾಳಕೊಪ್ಪ ತಾಲ್ಲೂಕ್ ಹೋಬಳಿ ಗ್ರಾಮಗಳ ಪ್ರಜೆಗಳ ಸೇಕರು ಪ್ರಕೃತಕಾಲದ ನಾಗರಿಕತೆಯನ್ನು ಅನುಸರಿಸಿ ವರ್ತಮಾನ ಪತ್ರಿಕೆಗಳನ್ನು ಓದಲು ಅಪೇಕ್ಷಿಸುವವರಾಗಿರುವದರಿಂದ ನಾವು ಇಂಥಾವರುಗಳಿಗೆ ಟಪಾಲು ಖರ್ಚು ಬೀಳದಂತೆಯೂ, ಪತ್ರಿಕೆಗಳು ಸಕಾಲಕ್ಕೆ ಕ್ರಮವಾಗಿ ಸಿಕ್ಕುವಂತೆಯೂ ಅನುಕೂಲಪಡಿಸಿರುತ್ತೇವೆ ಹ್ಯಾಗಂದರೆ—(1) ಶಿಕಾರಿಪುರ—ಪ್ರತಿ ಸೋಮವಾರ ಸಂತೆಯ ದಿವಸ ಅಲ್ಲಿ ನವೆಸ್ಲಿಯರ್ ಮಿಷನ್ ಗರಲ್ಸ್ ಸ್ಕೂಲಿನಲ್ಲಿ ವೃತ್ತಾಂತ ಪತ್ರಿಕೆಗಳು ಮಾರಲ್ಪಡುವವು ಜನರು ಸಂತೆಗೆ ಹೋದಾಗ್ಗೆ ಬಹು ಸುಲಭವಾಗಿ ಪತ್ರಿಕೆಗಳನ್ನು ಪಡೆಯಬಹುದು (2) ಶಿರಾಳಕೊಪ್ಪ—ಪ್ರತಿ ಭಾನುವಾರವೂ (ಸಂತೆಯ ದಿನ) ಶಿರಾಳಕೊಪ್ಪದ ಟವರ್ ಪಟೇಲರಾಗಿರುವ ಮ॥ ರಾ॥ ಗುರುಶಾಂತಪ್ಪಯ್ಯನವರ ಮೂಲಕ ಪತ್ರಿಕೆಗಳನ್ನು ಸುಲಭವಾಗಿ ಹೊಂದಬಹುದು

ವೈ ಅಪ್ಪಯ, ಏಜಂಟ್, ಶಿಕಾರಿಪುರ

ನರೆಕೂದಲಿಟ್ಟುಕೊಂಡು
ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒ ಮು ಕಲ ಪಟ ಪರೆ 40 ವರುಷದ ಪ್ರಾಯಸಮರ್ಥರಂತೆ ಕಾಣುತ್ತೀರಿ ಈ ರಂಗು ಪಚ್ಚ ಕೆಂದರೆ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ ಈಗ

ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆ ಹಚ್ಚುವ ಬಣ್ಣಗಳೂ ರಂಗುಗಳೂ ತುಂಬಾ ಕೀಳುಜಾತಿಯವು ಹಚ್ಚಿದ ಮೇಲೆ ಕೂದಲು ಕೆಂಚುಕರುಗಿ ಅಸಹ್ಯವಾಗಿ ಕಾಣುತ್ತದೆ ನಮ್ಮ "ದರ್ಬಾರ್ ಕೂದಲ ರಂಗು" ಅಂಥಾದ್ದಲ್ಲ ಬಹು ಮೇಲಾದದ್ದು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷಪಡುವಿರಿ ಕ್ರಯ ಬುರುಸು ಸಮೇತ ಬಾಟ್ಲು ಒಂದಕ್ಕೆ ರೂಪಾಯಿ 1, ಅಂಚೆ ಹಾಸಲು 4 ಆಣೆ [268-2]

ವಿಳಾಸ—ವಿ ಎ ಎಸ್.
ಹಾಣೆ, 1, ಒರುಳಪ್ಪನ್
ಬೀದಿ, ಮದರಾಸ್.

ಸ್ವಸ್ಥವಾಗುವುದಕ್ಕೆ ಉಪಾಯವು

ಮೂತ್ರಕೋಶವು ಮೂತ್ರಾಮ್ಲವಿಷವನ್ನು ಎಂದಿನಂತೆ ರಕ್ತದಿಂದ ಬೇರ್ಪಡಿಸಿ ಹೊರಕ್ಕೆ ತಳ್ಳುತ್ತಿರುವವರೆಗೂ ಶರೀರವು ಆರೋಗ್ಯವಾಗಿರುವುದು ದೌರ್ಬಲ್ಯದಿಂದಲೋ ವ್ಯಾಧಿಯಿಂದಲೋ ಮೂತ್ರಕೋಶವು ಆ ಕಾರ್ಯವನ್ನು ಮಾಡಲಾರದೆ ಹೋದರೆ ಪ್ರಾಯಶಃ ಶರೀರಕ್ಕೆ ರೋಗವುಂಟಾಗುವುದು

ಮೂತ್ರಕೋಶದ ದೌರ್ಬಲ್ಯಕ್ಕೆ ಅಥವಾ ವ್ಯಾಧಿಗೆ ಲಕ್ಷಣಗಳೇನೆಂದರೆ — ಬೆನ್ನಿನಲ್ಲಿ ಛಳುಕು, ನಿದ್ರೆಯಿಲ್ಲದೆ ಇರುವುದು, ಮೂತ್ರವು ಸ್ವಲ್ಪವಾಗಿಯೋ ವಿವರ್ಣವಾಗಿಯೋ ಬಿಳುಪಾಗಿಯೋ ಇಳಿಯುವುದು, ಬಿಡದೆ ಬಾಯಾರಿಕೆ, ಬಳಲಿಕೆ, ಎದೆ ತಲ್ಲಣಿಸುವುದು ತಲೆನೋವು, ಗಾಬರಿ, ಕಣ್ಣುಮೊಬ್ಬು, ತಲೆ ತಿರುಗುವಿಕೆ, ಮೈನೋವು, ಕೀಲುನೋವು ಮರವು, ನಿತ್ರಾಣ, ಇವೇ ಮೊದಲಾದುವು. ಅಲಕ್ಷ್ಯಮಾಡಿದರೆ ಮೂತ್ರೋಪದ್ರವ, ವಾಯು, ಮೈಬಾವು, ಉರುಮೂತ್ರ, ಮೂತ್ರಕೋಶವೇ ಕ್ಷಯಿಸಿಹೋಗುವುದು, ಸ್ತ್ರೀಯರಲ್ಲಿ ಸ್ತ್ರೀಸಂಬಂಧವಾದ ರೋಗಗಳೆಂದು ಸಂದೇಹಿಸಬಹುದಾದ ರೋಗಗಳು, ಇವೆಲ್ಲಾ ಉಂಟಾಗುವುವು.

ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನೂ ಮೂತ್ರೇಂದ್ರಿಯಗಳನ್ನೂ ಪರಿಪಡಿಸಿ, ರಕ್ತದಿಂದ ಮೂತ್ರಾಮ್ಲವಿಷವನ್ನು ಹೊರಕ್ಕೆ ತಳ್ಳುವಂತೆ ಮಾಡಿ, ಶರೀರಕ್ಕೆ ಆರೋಗ್ಯವನ್ನುಂಟುಮಾಡುವುವು [181 16]

ಆರೋಗ್ಯವು ಬೇಕಾದರೆ ಮೂತ್ರಕೋಶವು ಆರೋಗ್ಯವಾಗಿರಬೇಕು ಡೋನ್ಸ್‌ರವರ ಮೂತ್ರಕೋಶದ ಗುಳಿಗೆಗಳು ಮೂತ್ರಕೋಶವನ್ನು ಆರೋಗ್ಯವಾಗಿಡುವುವು



ರೂ ೨—೦—೦, ಅಥವಾ ೬ ಬುಡ್ಡಿಗಳಿಗೆ ರೂ. ೧೦—೮—೦ ಔಷಧಗಳನ್ನು ಮಾರುವವರೆಲ್ಲರಲ್ಲಿಯೂ ದೊರೆಯುವುದು ಅಥವಾ ಡೋನ್ಸ್, ಪಿ. ಒ ಬಾಕ್ಸ್ ೨೦, ಬೊಂಬಾಯಿ—ಇವರಲ್ಲಿ ದೊರೆಯುವುದು.

ಮೈಸೂರು ಸೀಮೆಯಲ್ಲಿ ಪ್ಲೇಗ್. ಕಾಲರಾ ಸ್ಥಿತಿ.

5—12—1913 ರಿಂದ 12—12—1913 ರ ವರೆಗೆ

ಸ್ಥಳ		ಪ್ಲೇಗ್		ಕಾಲರಾ	
		ತಗಲಿದ್ದು	ಸತ್ತದ್ದು	ತಗಲಿದ್ದು	ಸತ್ತದ್ದು
ಬೆಂಗಳೂರು	ಪಟ್ಟಣ	3	0	0	0
ಮೈಸೂರು	,,	2	1	0	0
ಬೆಂಗಳೂರು ಡಿಸ್ಟ್ರಿಕ್ಟು		9	6	0	0
ಮೈಸೂರು	,,	59	38	0	0
ಕೋಲಾರ್	,,	3	3	1	1
ಕೋಲಾರ್ ಚಿನ್ನದ ಗಣಿಗಳು		5	3	0	0
ತುಂಕೂರು ಡಿಸ್ಟ್ರಿಕ್ಟು		8	7	0	0
ಹಾಸನ	,,	3	2	0	0
ಚಿತ್ರದುರ್ಗ	,,	0	0	5	1
ಕಡೂರ್	,,	10	10	0	0
ಶಿವಮೊಗ್ಗ	,,	27	20	2	2
	ಜುಮ್ಲಾ	129	90	8	4

ಶಾಲಿವಾಹನ ಶಕ ವರುಷಂಗಳು 1836 ನೇ ಪ್ರಮಾದೀಚ ಸಂವತ್ಸರೇ ದಕ್ಷಿಣಾಯನೇ ಹೇಮಂತಋತೌ ಮಾರ್ಗಶಿರ ಬಹುಳ ಚತುರ್ದಶಿ ಶುಕ್ರವಾರದಿಂದ ಪುಷ್ಯ ಶುದ್ಧ ಪಂಚಮಿ ಗುರುವಾರದ ವರೆಗಿನ ಒಂದು ವಾರದ ಪಂಚಾಂಗ

1913 ನೇ ಡಿಸೆಂಬರ್ ಮತ್ತು 1914 ನೇ ಜನವರಿ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಧನಸ್ಸು ತೇದಿ
26	ಶುಕ್ರ	ಚತುರ್ದಶಿ	35 50	ಜ್ಯೇಷ್ಠ	37 9	12
27	ಶನಿ †	ಅಮಾವಾಸ	33 39	ಮೂಲ	36 37	13
28	ಭಾನು §	ಪಾಡ್ಯಮಿ	32 40	ಪೂರ್ವಾ	38-10	14
29	ಸೋಮ *	ಬಿದಿಗೆ	32-18	ಉತ್ತರಾ	39 17	15
30	ಮಂಗಳ	ತದಿಗೆ	34 37	ಶ್ರವಣ	41 59	16
31	ಬುಧ ,,	ಚೌತಿ	37 27	ಧನಿಷ್ಠ	16 16	17
1	ಗುರು ‡	ಪಂಚಮಿ	41 27	ಶತಭಿಷ	46 16	18

† ಪ್ರಾತಃಭಾವ, ಸರ್ವತ್ರ ಅಮಾವಾಸ್ಯೆ § ಮಳೆ ನಕ್ಷತ್ರ—ಪೂರ್ವಾಷಾಢ 1 ನೇ ಪಾದ * ವ್ಯತೀಪಾತಯೋಗ ,, ದೂರ್ವಾಗಣಪತಿ ವ್ರತ, ಮಳೆ ನಕ್ಷತ್ರ—ಪೂರ್ವಾಷಾಢ 3 ನೇ ಪಾದ ‡ ಮಾರ್ಗಶಿರಲಕ್ಷ್ಮೀ ವ್ರತ

ಪೇಟೆ ಧಾರಣೆ.

ದಿನಸಿ	ಮೈಸೂರು	ಬೆಂಗಳೂರು
ಕಡ್ಡಿ ಅಕ್ಕಿ ಪಲ್ಲಾ ೧ಕ್ಕೆ ರೂ	೧೫ ೦ ೦	೧೭ ೦
ಕೆಂಬೂತಿ ಅಕ್ಕಿ ಅವಲ್	೧೫ ೮ ೦	೧೭-೮-
ಬಾಪಾಲಿ ಅಕ್ಕಿ	೧೪-೮-೦	೧೬-೮ ೦
ಸಣ್ಣಕ್ಕಿ ಅವಲ್	೨೭-೦-೦	೧೭ ೮-೦
,, ದುಯಂ	೧೬-೦-೦	೧೬ ೧೨ ೦
ತೊಗರೀ ಬೇಳೆ ಅವಲ್ ಪಲ್ಲಾ ೧ಕ್ಕೆ	೨೬-೦-೦	೧೬ ೪-೦
,, ದುಯಂ ,,	೧೪-೦-೦	೧೪-೦-೦
ಹೈಕ್ ರಾಗಿ ಪಲ್ಲಾ ೧ಕ್ಕೆ	೭ ೬ ೦	೫-೧೦-೦
ಕಾರ್‌ರಾಗಿ ,,	೬-೮-೦	೪-೧೨ ೦
ಜೋಳ ,,	೭-೪-೦	೭-೪ ೦
ಹುಲಸಂದೆ ಪಲ್ಲಾ ೧ಕ್ಕೆ	೧೩ ೪-೦	೧೪-೦-೦
ಬೀರೀ ಅವರೆ ,,	೧೨-೧೨ ೦	೧೨-೦-೦
ಹೆಸರು ,,	೧೩-೪ ೦	೧೪-೦-೦
ಉದ್ದು ,,	೧೪-೦-೦	೧೬-೮-೦
ಕಡಲೆ ,,	೧೪ ೦ ೦	೧೩-೦-೦
ಎಳ್ಳು ಸೇರು ೧೨೭ಕ್ಕೆ	೨೨ ೦ ೦	೨೪-೦ ೦
ಹುರುಳಿ ಪಲ್ಲಾ ೧ಕ್ಕೆ	೮- ೦	೭-೧೦-೦
ಹರಳು ೧೨೭ ಸೇರಿಗೆ	೧೨-೮-೦	೧೪-೦-೦
ಸೀಗೇಕಾಯಿ ಮಣ ೧ಕ್ಕೆ	೨ ೪-೦	೩-೬-೦
ಮೆಣಸಿನಕಾಯಿ ,,	೩ ೪-೦	೩-೪-೦
,, ದುಯಂ	೩-೦ ೦	೧-೮-೦
ಬೆಲ್ಲ ದೊಡ್ಡ ಅಚ್ಚು ೧೦೦ಕ್ಕೆ	೫-೦-೦	ಮಣ ೬-೪-೦
ಒಳ್ಳೆಣ್ಣೆ ಮಣ ೧ಕ್ಕೆ	೫-೧೨-೦	೬-೮-೦
ಹರಳೆಣ್ಣೆ ,, ,,	೫ ೨ ೦	೬-೦-೦
ಕಡಲೇಕಾಯಿ ಎಣ್ಣೆ	೫-೦-೦	೬-೪-೦
ಕೊತ್ತಂಬರಿ ಪಲ್ಲಾ ೧ಕ್ಕೆ	೫-೦ ೦	೬-೪-೦
ಉಪ್ಪು ,, ,,	೬-೪-೦	೬-೦-೦
ಹುಣಸೇ ಹಣ್ಣು ಮಣ ೧ಕ್ಕೆ	೨-೮-೦	೧-೪-೦
ತುಪ್ಪ—ಧಾರಾಪುರದ್ದು ಮಣ ೧ಕ್ಕೆ	೧೭ ೮-೦	೨೨-೮-೦
,, ಬೆಣ್ಣೆ ಕಾಸಿದ್ದು ,, ,,	೧೯-೧೨-೦	
ಸೀಮೆಯೆಣ್ಣೆ ಪೆಟ್ಟಿ ೧ಕ್ಕೆ	೫-೧೨ ೦	೫-೦-೦
ತೆಂಗಿನಕಾಯಿ ೧೦೦ಕ್ಕೆ	೬-೪-೦	೬-೪-೦
ಅಳಲೇಕಾಯಿ ಮಣ ೧ಕ್ಕೆ	೧-೦-೦	೧-೦-೦
ಅಂಟ್ವಾಳದಕಾಯಿ ಮಣ ೧ಕ್ಕೆ	೧-೧೨-೦	೧ ೮-೦
ಚಿನ್ನ (ಪೌನ್) ಕೆಂಪು	೧೫ ೮-೦	೧೫ ೮-೦
,, ,, ಪಸಿಮೆ	೧೫-೧೪-೬	೧೫-೧೪-೬
,, ,, ಗಟ್ಟಿ ತೊಲ ೧ಕ್ಕೆ	೨೪-೩-೦	೨೪-೦-೦
ಬೆಳ್ಳಿ ಗಟ್ಟಿ ತೊಲ ೧೦೦ಕ್ಕೆ	೮೧-೦-೦	೮೧ ೩-೦

Printed and Published by the Rev H Gulliford, Proprietor and Manager, Wesleyan Mission Press, Mysore. 25/12/1913.

ನೋಟೀಸು

ಅಮೃತಸಾರದ ನ್ಯಾಷನಲ್ ಇನ್ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪೆನಿಯ

ಷೇರುದಾರರಿಗೂ, ಡಿಪಾಜಿಟ್‌ದಾರರಿಗೂ, ಪಾಲಿಸಿ ಹೋಲ್ಡರುಗಳಿಗೂ, ಇತರ ಕಕ್ಷಿಗಾರರಿಗೂ ತಿಳಿಯಪಡಿಸುವುದೇನೆಂದರೆ:

ಪೀಪಲ್ಸ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅಮೃತಸಾರ ಬ್ಯಾಂಕು—ಇವೆರಡು ಬ್ಯಾಂಕೂ ಲೇವಾದೇವಿಯನ್ನು ನಿಲ್ಲಿಸಿ ಬಿಟ್ಟವೆಂದು ನಮ್ಮ ಕಂಪನಿಯ ಡೈರೆಕ್ಟರುಗಳು ನಿಮಗೆ ತಿಳಿಸಲು ವಿಷಾದಪಡುತ್ತಾರೆ. ಈ ಸಮಾಚಾರವು ಇತರ ಬ್ಯಾಂಕುಗಳ ಡಿಪಾಜಿಟ್‌ದಾರರಲ್ಲೂ ಷೇರುದಾರರಲ್ಲೂ ಬಹಳ ಗಾಬರಿಯನ್ನೂ ಕಳವಳವನ್ನೂ ಉಂಟುಮಾಡಿರಬೇಕು. ಈಗ ನಿಮಗೆ ನಿಮ್ಮ ಬ್ಯಾಂಕಿನ ವಿಷಯದಲ್ಲೂ ಕಳವಳ ಉಂಟಾಗಿರುವುದು ಸ್ವಾಭಾವಿಕವಾಗಿಯೇ ಇದೆ. ಇಂಥಾ ಸಮಯದಲ್ಲಿ ನಿಮ್ಮ ಡೈರೆಕ್ಟರುಗಳು ನಿಮಗೆ ನಂಬಿಕೆಯಾಗಿ ಹೇಳುವುದೇನೆಂದರೆ—ನಿಮ್ಮ ಬ್ಯಾಂಕಿನ ಸ್ಥಿತಿಗತಿಯು ಬಹಳ ಭದ್ರವಾಗಿಯೂ, ಸುರಕ್ಷಿತವಾಗಿಯೂ ಇರುವುದು. ಎಷ್ಟು ಮಟ್ಟಿನ ಡಿಮಾಂಡುಗಳು ಬಂದಾಗ್ಯೂ ಪಾವತಿಮಾಡಲು ನಿಮ್ಮ ಬ್ಯಾಂಕಿನಲ್ಲಿ ಬೇಕಾದಷ್ಟು ದ್ರವ್ಯವನ್ನು ಇಟ್ಟುಕೊಂಡಿದಾರೆ. ಈ ಭಾಗದಲ್ಲಿ ನಿಮ್ಮ ಬ್ಯಾಂಕಿಗೆ ಯಾವ ಕಷ್ಟದೆಸೆಯೂ ಬರುವಹಾಗಿಲ್ಲವೆಂದು ಖಂಡಿತವಾಗಿ ತಿಳಿಯಿರಿ. ನ್ಯಾಷನಲ್ ಇನ್‌ಷೂರೆನ್ಸ್ ಮತ್ತು ಬ್ಯಾಂಕಿಂಗ್ ಕಂಪನಿಯು ಈಚೆಗೆ ಒಂದು ಲಕ್ಷ ರೂಪಾಯನ್ನು ಇಂಡಿಯಾ ಗವರನ್‌ಮೆಂಟಿನಲ್ಲಿ ಠೇವಣಿ ಇಟ್ಟಿರುತ್ತದೆ.

ಇದಲ್ಲದೆ ಪೀಪಲ್ಸ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅಮೃತಸಾರ ಬ್ಯಾಂಕ್—ಇವೆರಡರಿಂದಲೂ ನಿಮ್ಮ ಬ್ಯಾಂಕಿಗೆ ಯಾವ ಹಣವೂ ಸಾಲ ಬರಬೇಕಾದ ಬಾಕಿ ಇರುವುದಿಲ್ಲವೆಂಬುದನ್ನು ನಿಮ್ಮ ಡೈರೆಕ್ಟರುಗಳು ಈ ಸಂದರ್ಭದಲ್ಲಿ ನಿಮಗೆ ತಿಳಿಸದೆ ಇರಲಾರರು.

ನಮ್ಮ ಬ್ಯಾಂಕೂ ಅಮೃತಸಾರ ಬ್ಯಾಂಕೂ ಅಮೃತಸಾರ ನಗರದಲ್ಲೇ ಹೆಡ್ ಕ್ವಾರ್ಟರ್ ಆಫೀಸುಗಳನ್ನು ಪಡೆದಿರೋಣದರಿಂದ ಕೆಲವು ಜನರು ಅದೇ ನಮ್ಮ ಬ್ಯಾಂಕೆಂದು ಭ್ರಾಂತಿಪಡುತ್ತಿದಾರೆ. ಅಮೃತಸಾರ ಬ್ಯಾಂಕ್ ಎನ್ನುವುದು ಬೇರೆ, ನಮ್ಮದು ಬೇರೆ, ನಮ್ಮ ಬ್ಯಾಂಕಿಗೂ ಅದಕ್ಕೂ ಸ್ಥಳದ ಹೆಸರು ಒಂದೇ ಆಗಿದೆಯಲ್ಲದೆ ಇನ್ನಾವ ವಿಧದಲ್ಲೂ ಒಂದಕ್ಕೊಂದಕ್ಕೆ ಏನೇನೂ ಸಂಬಂಧವಿಲ್ಲ.

ನಿಮ್ಮ ಡೈರೆಕ್ಟರುಗಳು ನಿಮ್ಮ ಬ್ಯಾಂಕಿನ ಕಾರುಬಾರುಗಳನ್ನು ಸಾಧ್ಯವಾದ ಮಟ್ಟಿಗೂ ಒಳ್ಳೇ ಹಿತಕರವಾದ ರೀತಿಯಲ್ಲಿ ನಡಿಸುತ್ತಾ ಬಂದಿದಾರೆಂದೂ, ನೀವು ಅವರ ವಿಷಯದಲ್ಲೂ ನಿಮ್ಮ ಬ್ಯಾಂಕಿನ ವಿಷಯದಲ್ಲೂ ಇದುವರೆಗೆ ಯಾವ ರೀತಿಯಲ್ಲಿ ಸಂಪೂರ್ಣವಾದ ನಂಬಿಕೆ ಭರವಸೆಗಳನ್ನಿಟ್ಟುಕೊಂಡು ಬಂದಿದೀರೋ ಇನ್ನು ಮುಂದೆಯೂ ಅದೇ ರೀತಿ ಇರುತ್ತೀರೆಂದೂ ಭರವಸೆಯುಳ್ಳವರಾಗಿದಾರೆ. [216–10]

ಟಿ. ಎಸ್. ಆರ್. ಅಯ್ಯರ್,
ಸೆಕ್ರಿಟರಿ, ಮದರಾಸ್ ಬ್ರಾಂಚ್

ಪಿ. ಎಲ್. ರಾಜಪಾಲ್, ಬಿ.ಎ.,
ಚೀಫ್ ಮ್ಯಾನೇಜರ್

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪನಿ, ಹೆಡ್ ಆಫೀಸ್—ಬೊಂಬಾಯಿ.

ಕಂಪನಿಯ ಫಂಡು	..	ರೂ 4,25,00,000
ಕಂಪನಿಯಿಂದ ಪಾವತಿ ಆಗಿರುವದು	,,	3,60,00,000

ಸಂಪೂರ್ಣವಾದ ಖಾತರಿಯುಳ್ಳದ್ದು, ಧಾರಾಳವಾದ ದರಗಳು, ಹಣ ಬಹಳ ಬೇಗನೆ ಪಾವತಿಯಾಗುವದು.

ಈ ಕಂಪನಿಗೆ ಸೇರಲಪೇಕ್ಷಿಸುವವರು ಈ ವಿಳಾಸದಾರರಿಗೆ ಬರೆದುಕೊಂಡರೆ ಅವರು ಫಾರಂ ಮುಂತಾದವನ್ನು ಕಳುಹಿಸುತ್ತಾರೆ—ಮಿ॥ ಎಂ. ಎಸ್. ರತ್ನಂ, ಚೀಫ್ ಏಜೆಂಟ್, ಬೆಂಗಳೂರು, ಮ॥ ಎಂ. ಎಸ್. ನಂಜಪ್ಪನವರು ಅಥವಾ ಮ॥ ವೆಂಕಟಪತಯ್ಯನವರು, ಕಂಪನಿ ಏಜೆಂಟರು, ಮೈಸೂರು, ಅಥವಾ

[191 13] ಬ್ರಾಂಚ್ ಸೆಕ್ರೆಟರಿ, ಮದರಾಸ್

ಜಗತ್ಪ್ರಸಿದ್ಧ

"ಕಾಮಿನಿಯಾ ತೈಲವು."

(ರಿಜಿಸ್ಟರ್ಡ್)

ಅಗ್ಗವಾಗಿ ಸಿಕ್ಕುವ ಕೀಳು ಎಣ್ಣೆಯನ್ನು ತಲೆಗೆ ಒಂದಾವರ್ತಿ ಹಚ್ಚಿದರೆ ತಲೆನೋವು ಹುಟ್ಟುತ್ತದೆ. ಕೂದಲು ಸತ್ತುಹೋಗುತ್ತೆ. ಆದಕಾರಣ ಶ್ರೇಷ್ಠತ್ರಮವಾಗಿಯೂ ಪ್ರಖ್ಯಾತವಾಗಿಯೂ ಇರುವ "ಕಾಮಿನಿಯಾ ತೈಲ"ವನ್ನೇ ಹಚ್ಚಿಕೊಳ್ಳಿ. ಇದು ಕೂದಲಿಗೆ ಪುಷ್ಟಿ ಕೊಡುತ್ತೆ, ಪ್ರಾಣಕೊಡುತ್ತೆ, ಸತ್ತ ಮತ್ತು ಸಾಯುವ ಕೂದಲನ್ನು ಮತ್ತೆ ಹುಟ್ಟಿಸಿ ಬೆಳಸುತ್ತೆ. ಕೂದಲು ಇದರಿಂದ ವಿಪುಲವಾಗಿ, ನಯವಾಗಿ ಚಕಚಕಿಸುವವು, ನಿಬಿಡವಾದ ನೀಲಬಣ್ಣದಿಂದ ಕೂಡಿ, ಆಗಾಗ್ಗೆ ಹರಿದು ಬಿದ್ದುಹೋಗದೆ ದಟ್ಟವಾಗಿ ಬೆಳೆಯುವವು. ಕೂದಲಿಗೆ ಹೊಳಪುಕೊಡುತ್ತೆ, ನೆತ್ತಿ ಬುರುಡೆಯನ್ನು ಶುದ್ಧಮಾಡುತ್ತೆ, ಸುಂಡಿನ ಹೊಟ್ಟನ್ನು ಅಡಗಿಸುತ್ತೆ. ಉತ್ತಮೋತ್ತಮವಾದ ಸುಗಂಧವುಳ್ಳದ್ದಾದ ಕಾರಣ ಕೂದಲಿಗೆ ಹಚ್ಚಿಕೊಳ್ಳಲು ಮನಸ್ಸಿಗೆ ಆನಂದವನ್ನೂ ಹರ್ಷವನ್ನೂ ಕೊಡುತ್ತದೆ. ಬೀಳುವ ಕೂದಲನ್ನು ತಡೆದು ಬಲಪಡಿಸಿ, ನರೆಕೂದಲನ್ನು ಕಪ್ಪುಛಾಯೆಗೆ ತಿರುಗಿಸಿ ಕೇಶ ರಾಶಿಯನ್ನು ನಿಬಿಡವಾಗಿಯೂ ಸುಂದರವಾಗಿಯೂ ಕೋಮಲವಾಗಿಯೂ ಇಟ್ಟು ಬೆಳಸುವದು. ಕಾಮಿನಿಯಾ ತೈಲಕ್ಕಿಂತ ಉತ್ತಮವಾದ ಕೂದಲೆಣ್ಣೆ ಇಲ್ಲವೇ ಇಲ್ಲ. ಇದನ್ನು ಸ್ತ್ರೀಪುರುಷರೆಲ್ಲಾ ಸಕಲ ವಯಸ್ಸಿನವರೂ ಉಪಯೋಗಿಸಲು ಅರ್ಹವಾಗಿರುತ್ತೆ. ಇದರ ಬೆಲೆ 1 ಸೀಸೆಗೆ ರೂ 1 0 0 ಅಂಚೆಯ ವೆಚ್ಚ 0 4 0 ಬೇರೆ ತರಬೇಕು.

3 ಸೀಸೆಗಳಿಗೆ ರೂ 2 10 0 ಅಂಚೆಯ ವೆಚ್ಚ 0 7-0

ನಮೂನೆಯು ಬೇಕೆಂದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಮೈಸೂರು ಎಗ್ಜಿಭಿಷನ್‌ನಲ್ಲಿ ಈ ಎಣ್ಣೆಗೆ ಚಿನ್ನದ ಮೆಡಲೂ, ಅಲ್ಲಹಾಬಾದ್ ಎಗ್ಜಿಭಿಷನ್‌ನಲ್ಲಿ ಯೋಗ್ಯತಾ ಪತ್ರಿಕೆಯೂ ದೊರಕಿರುತ್ತವೆ. ಇದರಿಂದಲೇ ಈ ಎಣ್ಣೆ ಉತ್ತಮೋತ್ತಮವಾದದ್ದೆಂದು ತಿಳಿಯಬೇಕು.

ಯೋಗ್ಯರಾದ ದೊಡ್ಡ ಮನುಷ್ಯರು ಸ್ವಲ್ಪವೂ ಮರೆಮಾಚದೆ ನಮಗೆ ಈ ಎಣ್ಣೆಯ ಗುಣವನ್ನು ಹೊಗಳಿ ಪತ್ರವನ್ನು ಬರೆಯುತ್ತಿದಾರೆ. ಮನ್ನಾರ್‌ಗುಡಿ ಮಿಷನ್ ಸೆಕ್ರಿಟರಿ ಎಂ. ಡಿ. ಸಾತೊಮರ್ ರವರು ಬರೆಯುವದು—"ದಯಮಾಡಿ ಇರುಬಾಟ್ಲಿ ಕಾಮಿನಿಯಾ ತೈಲವನ್ನು ನನಗೆ ಕಳುಹಿಸಿಕೊಡಿ. ನನ್ನ ಮನೆಯವರೆಲ್ಲಾ ಅದನ್ನು ಬಹಳವಾಗಿ ಮೆಚ್ಚಿಕೊಂಡಿದಾರೆ. ನಮ್ಮ ಮನೆ ಹೆಂಗಸರು ಅದನ್ನು ವಿಶೇಷವಾಗಿ ಆನಂದಪಟ್ಟು ಹಚ್ಚಿಕೊಳ್ಳುತ್ತಾರೆ."

ಎಚ್ಚರಿಕೆ—ಹೊಸದಾಗಿ ಇಟ್ಟಿರುವ ಷಾಪುಗಳಲ್ಲೆಲ್ಲಾ ಕಾಮಿನಿಯಾ ಎಣ್ಣೆ ಸಿಕ್ಕುತ್ತೆ. ನೀವು ಕೊಳ್ಳುವಾಗ್ಗೆ ಮೋಸಕರವಾದ ಅನೇಕ ಎಣ್ಣೆಗಳನ್ನು ಇದೇ ಹೆಸರಿಟ್ಟು ಕಿಫಾಯತುಕೋಸ್ಕರ ಬಿಕರಿಮಾಡುತ್ತಾರೆನ್ನುವುದನ್ನು ಮರೆಯಬೇಡಿ. "ಇದು ಅಗ್ಗ, ಇದು ಒಳ್ಳೇದು" ಎಂದು ಹೇಳಿ ಮೋಸಮಾಡುವವರ ಇಂಥಾ ಮೋಸಕ್ಕೆ ನೀವು ಸಿಕ್ಕಬೇಡಿ. ಯಾವಾಗಲೂ ಯಥಾರ್ಥವಾದ ಕಾಮಿನಿಯಾ ತೈಲವನ್ನೇ ನೋಡಿ ಕೊಂಡುಕೊಳ್ಳಿ.

"ಕೆಪಿಟೋಲ್‌ಬಾಮ್"—ಮಳೆ ಮತ್ತು ಚಳಿಯ ಥಂಡೀ ಹವೆಯಿಂದ ಶರೀರದಲ್ಲಿ ಉತ್ಪನ್ನವಾಗುವ ವಾತವಿಕಾರಕ್ಕೆ, "ಕೆಪಿಟೋಲ್‌ಬಾಮ್" ಎಂಬ ಈ ಮುಲಾಮು ರಾಮಬಾಣವಾಗಿದೆ. ಕೈಕಾಲು ನೋಯುವುದು, ಸಂಧುವಾತ, ಮಸ್ತಕಶೂಲೆ, ಹೆಚ್ಚಾಗಿ ಮೆಹನತ್ತು ಪಟ್ಟದ್ದರಿಂದ ಕ್ಷೀಣವಾಗುವದು, ಸೊಂಟನೋವು, ಎದೆಯನೋವು ವಗೈರೆ ವ್ಯಾಧಿಗಳ ಮೇಲೆ ಈ ಮುಲಾಮು ಅತ್ಯಂತ ಗುಣಕಾರಿಯಾಗಿದೆ. ಬಾಟ್ಲು 1ಕ್ಕೆ ಕ್ರಯ 0 8-0 ಟಪಾಲು ಪ್ರತ್ಯೇಕ.

ಒಡಮನ್ಸ್ ಮ್ಯಾಲೇರಿಯ ಪಿಲ್ಸ್—ಶೀತಜ್ವರ, ಥಂಡಿಯಿಂದ ಬರುವ ಜ್ವರ, ಅಸ್ಥಿಜ್ವರ, ಮತ್ತು ಒಂದೇ ಸಮನೆ ಬಿಡದೆ ಬರುವ ಜ್ವರ, ಇವೇ ಮೊದಲಾದವುಗಳ ಮೇಲೆ ಈ "ಒಡಮನ್ಸ್ ಮಲೇರಿಯನ್" ಗುಳಿಗೆಗಳು ರಾಮಬಾಣವಾಗಿದೆ. ನೈಯಲ್ಲಿ ಜ್ವರವಿದ್ದರೂ ಈ ಗುಳಿಗೆಗಳನ್ನು ಕೊಟ್ಟಲ್ಲಿ ಜ್ವರವು ಪುನಃ ಬರಲಿಕ್ಕಿಲ್ಲ. ಇದು ದೇಶದಲ್ಲಿನ ಉತ್ತಮ ಗುಣದ ಸಾಕ್ಷಿಭೂತವಾಗಿದೆ. ಬೇರೆ ಗುಳಿಗೆಗಳನ್ನು ತಕ್ಕೊಳ್ಳುವ ಮೊದಲು ಈ ಗುಳಿಗೆಗಳನ್ನು ತಕ್ಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ. ದಫೆಗೆ ಎರಡು ಗುಳಿಗೆಗಳಂತೆ ದಿವಸಕ್ಕೆ 3 ಸಲ ನೀರಿನೊಳಗೆ ತಕ್ಕೊಳ್ಳತಕ್ಕದು.

30 ಗುಳಿಗೆಗಳುಳ್ಳ ಬಾಟ್ಲಿಗೆ ರೂ 1-0-0 3 ಬಾಟ್ಲಿಗಳಿಗೆ ರೂ. 2-8 0 ವಿ. ಪಿ. ಖರ್ಚು ಪ್ರತ್ಯೇಕ.

ಮೇಲೆಕಂಡ ಎಲ್ಲಾ ಔಷಧಗಳು ಸಿಕ್ಕುವ ಪತ್ತೆ— [8 50]

ಆಂಗ್ಲೋ—ಇಂಡಿಯನ್ ಡ್ರಗ್ ಕೆಮಿಕಲ್ ಕಂಪನಿ,
ಜುಮ್ಮಾಮಸ್ಜಿದ್, ಬೊಂಬಾಯಿ.
ಏಜೆಂಟ್, ದಿ ಉಲ್ಫ್ ಮಾರ್ಟ್, ಮಂಗಳೂರು.

ಭತ್ತ ಕುಟ್ಟುವ ಯಂತ್ರಗಳು.

ಡಗ್ಲಸ್ ಮತ್ತು ಗ್ರಾಂಟ್ ಕಂಪನಿಯಲ್ಲಿ ತಯಾರಾಗುವ ಬತ್ತ ಕುಟ್ಟುವ ಯಂತ್ರಗಳೇ ಉತ್ತಮೋತ್ತಮವಾಗಿವೆ. ಈ ಕಂಪನಿಗೆ 60 ವರುಷದ ಅನುಭವವುಂಟು. ಅವರು ಪ್ರಪಂಚದ ಕಾರ್ಖಾನೆಗಾರರಲ್ಲಿ ಬಹಳ ಪ್ರಖ್ಯಾತಿಪಡೆದವರು. ಅವರ ಯಂತ್ರಗಳು ಎಲ್ಲೆಲ್ಲಿ ಉಪಯೋಗದಲ್ಲಿವೆ.

ಹೆಚ್ಚು ವಿಷಯ ತಿಳಿಯಬೇಕಾದವರು

ಡಗ್ಲಸ್ ಅಂಡ್ ಗ್ರಾಂಟ್, ಲಿಮಿಟೆಡ್, ತಂಜಾವೂರು ಎಂಬೀ ವಿಳಾಸಕ್ಕೆ ಬರೆದುಕೊಳ್ಳಿ.

ಅವರು ನಿಪುಣರಾದ ಕಾರೀಗಾರರನ್ನು ಕಳುಹಿಸುತ್ತಾರೆ. ಎಲ್ಲಾ ತರದ ಮಿಲ್ಲು (ಯಂತ್ರ) ಗಳನ್ನು ಒದಗಿಸಬಲ್ಲರು. [255 1]

Bangalore Christmas Fete and INDUSTRIAL EXHIBITION OF 1913

ಬೆಂಗಳೂರು ಕ್ರಿಸ್ತಮಸ್ ಫೀಟ್ ಅಂಡ್ ಇಂಡಸ್ಟ್ರಿಯಲ್ ಎಕ್ಸಿಬಿಷನ್ ೧೯೧೩.

[253 3]

ಇದೇ ಡಿಸೆಂಬರ್ ತಿಂಗಳು 26 ನೆಯ ತಾರೀಖಿನಿಂದ ನಡೆಯುವ ಪ್ರದರ್ಶನದಲ್ಲಿ ಕೈಗಾರಿಕೆ ಮತ್ತು ಇತರ ಸಾಮಾನುಗಳನ್ನು ಪ್ರದರ್ಶಿಸಲಿಚ್ಛಿಸುವವರು ಕೂಡಲೆ ಈ ಕೆಳಗೆ ನಮೂದಿಸಿರುವ ಯಾರಾದರೂ ಒಬ್ಬರಿಗೆ ಅವರವರಿಗೆ ಬೇಕಾಗುವ ಸ್ಥಳದ ವಿಚಾರದಲ್ಲೂ ಮತ್ತು ಇತರ ವಿಷಯಗಳಲ್ಲೂ ಬರೆದುಕೊಳ್ಳಬಹುದು. ಸ್ಥಳಸಂಕೋಚವಿರುವದರಿಂದ ಜಾಗ್ರತೆಮಾಡಿದರೆ ಅನುಕೂಲವುಂಟು.

ಬೆಂಗಳೂರು, 1-12 1913

ಬಿ. ಕೆ. ಗರುಡಾಚಾರ್, ಚಿಕ್ಕಪೇಟೆ, ಬೆಂಗಳೂರು ಸಿಟಿ,
ಯಂ. ಯೂನಸ್ ಸೇಟ್, ಈಸ್ಟ್ ಪೆರೇಡ್ ರೋಡ್, ಬೆಂಗಳೂರು,
(ವೈಸ್ ಪ್ರೆಸಿಡೆಂಟರು ಇಂಡಸ್ಟ್ರಿಯಲ್ ಇಲಾಖೆ)

ನಿಮ್ಮ ಹತ್ತಿರ ಹೂವಿನ ತೋಟವಿರಬೇಕೋ?

ಹಾಗಾದರೆ

ಆಟೋ ಮೋಹಿನಿ

ಎಂಬ ಲೋಕಪ್ರಖ್ಯಾತವಾದ ಪರಿಮಳವನ್ನೇ ಕೊಂಡುಕೊಳ್ಳಿ. ನಾಲ್ಕೇ ತೊಟ್ಟು ನಿಮ್ಮ ಕರವಸ್ತ್ರಕ್ಕೆ ಚಿಮುಕಿಸಿಕೊಂಡರೆ ನಾಲ್ಕು ದಿನ ಜಾಜಿ ಪರಿಮಳದ ಸುಗಂಧವಿದ್ದೀತು. ಅದರ ಮನೋಹರ ವಾಸನೆಯನ್ನೂ ಪುಷ್ಪಶ್ರೇಷ್ಠತೆಯನ್ನೂ ಶಾಶ್ವತ ಸ್ವಭಾವವನ್ನೂ ಮೆಚ್ಚಿ ಬಹು ಸಂತೋಷದಿಂದ 1913 ನೇ ಮೈಸೂರು ದಸರಾ ಎಗ್ಜಿಭಿಷನ್‌ನಲ್ಲಿ ಅದಕ್ಕೆ ಬಂಗಾರದ ಮೆಡಲನ್ನು ಬಹುಮಾನ ಕೊಟ್ಟಿದಾರೆ. ಆ ರೀತಿ ಈ ಸುವಾಸನೆಯು ನಿಲ್ಲದೆ ಆರಿಹೋದದ್ದನ್ನು ರುಜುಮಾಡತಕ್ಕವರಿಗೆ ನ್ಯಾಯದಲ್ಲಿ 100 ರೂಪಾಯಿ ಬಹುಮಾನಕೊಡುವೆವೆಂದು ಚಾಲೆಂಜ್ ಕೊಡುತ್ತೇವೆ. ಸಣ್ಣ ಸೀಸೆಯ ಪರಿಮಳವನ್ನು ತರಿಸಿ ಪರೀಕ್ಷೆಯಿಂದ ಇನಾಂ ಪಡೆಯಿರಿ.

ಕ್ರಯ ಅರ್ಧ ಔನ್ಸ್ ಸೀಸೆಗೆ ರೂ 2 0 0
,, ಒಂದು ಡ್ರಾಮ್ ,, ,, 0 12 0

ಆಟೋ ಮೋಹಿನಿ ಪರಿಮಳವುಳ್ಳ ಕಾರ್ಡು 1 ಡಜನ್‌ಗೆ 0-12-0

ಪ್ರೊಪ್ರೈಟರು—ದಿ ಓರಿಯಂಟಲ್ ಡ್ರಗ್ ಕೆಮಿಕಲ್ ಕಂಪನಿ,
ಏಜಂಟರು—ಭಗವಾನ್‌ದಾಸ್ ಚೂನಿಲಾಲ್ ಕಂಪನಿ,
[261–1] 177, ಜೈನಾ ಬಜಾರ್ ರೋಡ್, ಮದರಾಸ್

ಶ್ವಾಸಕೇಸರಿ ಲೇಹ.

ಅಸ್ತ್ಮಕ್ಕೆ ತಪ್ಪದೆ ತತ್‌ಕ್ಷಣ ಗುಣಕೊಡುತ್ತೆ.

ಅಸ್ತ್ಮಾ ರೋಗವು ಎಷ್ಟೇ ಹಳೇದಾಗಿದ್ದರೂ ಎಷ್ಟೇ ಕಠಿಣವಾಗಿದ್ದರೂ ಈ ಲೇಹವನ್ನು ಮೂರು ವಾರ ಸೇವಿಸುವದರೊಳಗೆ ಖಂಡಿತವಾಗಿ ಪೂರ್ಣ ಗುಣಮಾಡುತ್ತೆ. ಇದು ಚೆನ್ನಾಗಿ ಪರೀಕ್ಷಿಸಿ ನೋಡಿದ ಔಷಧ. ಸಾವಿರಾರು ಜನರು ಉಪಯೋಗಿಸಿ ಸುಖಪಟ್ಟಿದಾರೆ. ದೃಷ್ಟಾಂತಕ್ಕಾಗಿ ಈಗ ತಾನೇ ನಮಗೆ ತಲುಪಿರುವ ಯೋಗ್ಯತಾ ಪತ್ರಿಕೆಯನ್ನು ಕೆಳಗೆ ಪ್ರಕಟಿಸಿರುತ್ತೇವೆ. ಓದಿನೋಡಿ.

20 ತೊಲಾ ಲೇಹದ ಟಿನ್ ಡಬ್ಬಕ್ಕೆ ಕ್ರಯ ರೂ 1–8–0

ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,
177 ಜೇನಾ ಬಜಾರ್ ರೋಡ್, ಮದ್ರಾಸು.

ಈ ಯೋಗ್ಯತಾ ಪತ್ರವನ್ನು ಜಬ್ಬಲ್‌ಪುರದ ಸೂಪರಿಂಟೆಂಡಿಂಗ್ ಇಂಜನಿಯರ್ ಆಫೀಸ್ ಕ್ಲಾರ್ಕ್ ಮ॥ ಎ. ಭೀಮರಾವ್ ಮೊದಲಿಯಾರ್ರವರು ತಾ 21 10 1913 ರಲ್ಲಿ ಬರೆಯುತ್ತಾರೆ—"ನಾನು ಬಹುಕಾಲದಿಂದ ಅಸ್ತ್ಮಾ ರೋಗದಲ್ಲಿ ನರಳುತ್ತಿದ್ದೆನು. ಅನೇಕ ಹೆಸರುವಾಸಿಯಾದ ಡಾಕ್ಟರುಗಳಿಂದಲೂ ಹಕೀಮರಿಂದಲೂ ಅನೇಕ ಔಷಧಗಳನ್ನು ತೆಗೆದುಕೊಂಡಾಗ್ಯೂ ನನ್ನ ಉಬ್ಬಸರೋಗವು ಹರಿಯಲಿಲ್ಲ. ಕಡೆಗೆ ನಿಮ್ಮ ಶ್ವಾಸಕೇಸರಿ ಲೇಹವನ್ನು ಸೇವಿಸಿನೋಡೋಣವೆಂದು ಕುತೂಹಲಪಟ್ಟು ತೆಗೆದುಕೊಂಡೆನು. ನಿಮ್ಮ ಈ ಎರಡು ಟಿನ್ ಲೇಹ ಮುಗಿಯುವಷ್ಟರಲ್ಲಿ ನನ್ನ ಭಯಂಕರವಾದ ರೋಗವು ವಾಸಿಯಾಗಿದೆ ಎಂದು ತಿಳಿಸಲು ಆನಂದಪಡುತ್ತೇನೆ. ಈ ನನ್ನ ಅಭಿಲಾಷೆಯನ್ನೂ ಅನುಭವವನ್ನೂ ನೀವು ದಯವಿಟ್ಟು ಪಬ್ಲಿಕ್ ಜನರಿಗೆಲ್ಲಾ ತಿಳಿಸಿ." [83–32]

ಕೆಲವು ದಿನಗಳು ಮಾತ್ರ ! ಕೊಂಚ ದಿನಗಳು ಮಾತ್ರ !!

ವೃತ್ತಾಂತ ಪತ್ರಿಕೆಯನ್ನು ಓದುವವರೆಲ್ಲರಿಗೂ ಸಂತೋಷಕರವಾದ ಪ್ರಕಟನೆ.

ಖಾತ್ರಿಯಾದ ವಾಚ್ ! ಖಾತ್ರಿಯಾದ ಕಂಪನಿ !! ಖಾತ್ರಿಯಾದ ಖರೀದಿ !!!

ಸ್ಪ್ರಿಂಗ್ ಮೋಟಾರ್ ರೆಗ್ಯುಲೇಟರ್ ವಾಚ್

ಇದರ ಕ್ರಯ ಬೆಲೆಯುಳ್ಳ 3 ಬಹುಮಾನ ಸಮೇತ ರೂ 3 8 0 ಮಾತ್ರ ಘನವಂತರೇ [77 36]



ಈ ವಾಚ್ ಈಗತಾನೇ ಬಂದಿರುತ್ತದೆ, ಬಲವಾದದ್ದು. ಬಲಿಷ್ಟವಾದ ಚಕ್ರಗಳಿಂದಲೂ, ಮತ್ತು ಬಲಿಷ್ಟವಾದ ಯಂತ್ರಗಳಿಂದಲೂ, ಸುಪ್ರಸಿದ್ಧವಾದ ಲೀವರ್ ಕೆಲಸಗಳಿಂದಲೂ ತಯಾರಾದದ್ದು. ಸರಿಯಾದ ಕಾಲವನ್ನು, ಸ್ವಲ್ಪವೂ ವ್ಯತ್ಯಾಸವಿಲ್ಲದೇ ತೋರಿಸತಕ್ಕದ್ದು. ಖಾತ್ರಿಯಾದ ವಾಚ್ ಸುಂದರವಾದದ್ದು.

ಇದರ 3 ಬಹುಮಾನಗಳ ಪಟ್ಟೀಲು
1. ಸುಂದರವಾದ ಉತ್ತರಮುಖಿ
2. ನಾಜೂಕಾದ ವಾಚ್ ಸರಪಣಿ
3. 1914 ನೇ ಇಸವಿಯ ಪಾಕೆಟ್ ಡೈರಿ

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ—ಎ. ಆರ್. ವೆಂಕಟರಮಣ ಅಂಡ್ ಕಂಪನಿ,
ನಂ 7, ಕೋಪ್ ವೆಂಕಟಾಚಲೈಯರ್ ಬೀದಿ, ಮದರಾಸು.